

Reg. No. M. 1890.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 4-8-0.

ಸಂಪುಟ ೨೭ | ತಾರೀಖು ೭-೧-೧೯೪೯ನೇ ಶುಕ್ರವಾರ | ಸಂಚಿಕೆ ೩೧

೧೯೪೮

— ಲೇ:—ಶ್ರೀ ಬಿ. ಡಿ. ಗಣಪತಿ. —

ಕೊಲೆಗಡಲು

೧೯೪೮ ಮುಗಿಯಿತು. ಈ ಒಂದು ವರ್ಷದ ಆಗು ಹೋಗುಗಳನ್ನು ವಿಹಂಗಮ ದೃಷ್ಟಿಯಿಂದ ನೋಡಿದರೆ ಇದೊಂದು ವರ್ಷವಲ್ಲ; ಒಂದು ಯುಗವೆಂದು ತೋರುತ್ತದೆ. ಈ ವರ್ಷದಲ್ಲಾದಂಥಾ ಘಟನೆಗಳು, ನಡೆದ ದುರಂತ ಪ್ರಕರಣಗಳು ಸೂರ್ಯಚಂದ್ರರಿರುವ ವರೆಗೆ ಉಳಿಯುವಂಥಾವು. ೧೯೪೮ ಪ್ರಾರಂಭವಾಗುವಾಗ ವರ್ಷದ ಶುಭಾಶಯಗಳನ್ನು ಸರ್ವರಿಗೂ ಬಯಸಿ ಹೊಸ ವರ್ಷದಲ್ಲಿ ಕಾಲಿಟ್ಟೆವು. ಆದರೆ ಪ್ರಥಮ ತಿಂಗಳು ಎಂದರೆ ೧೯೪೮ ನೇ ಜನವರಿಯಲ್ಲೇ ಜಗತ್ತಿನ ಜ್ಯೋತಿಯಾದ ಮಹಾತ್ಮಾಗಾಂಧೀಯವರ ಕೊಲೆ ನಡೆಯಿತು. ಈ ಯುಗದ ಅವತಾರ ಪುರುಷನೆನಿಸಿದ ಇವರ ಕೊಲೆಯಿಂದ ಜಗತ್ತಿಗೆ ಕತ್ತಲು ಕವಿಯಿತು. ಜಗತ್ತಿನ ಶಾಂತಿಯ ದೂತನ ಜೀವನ ಸಮಾಪ್ತಿಗೊಳಿಸಲ್ಪಟ್ಟಿತು. ಮಹಾತ್ಮಾ ಗಾಂಧೀಜಿಯವರ ಕೊಲೆಯಿಂದ ಪ್ರಾರಂಭವಾದ ಪರಂಪರೆಯು ಅನೇಕ ಮಹಾಮುತ್ಸದ್ಧಿಗಳನ್ನು ಈ ವರ್ಷದಲ್ಲಿ ಆಹುತಿಗೊಂಡಿತು. ಪಾಲೆಸ್ತೀನದಲ್ಲಿ ಶಾಂತಿ ದೂತನಾಗಿ ಕೆಲಸ ಮಾಡುತ್ತಿದ್ದ ಕೌಂಟ್ ಬರ್ನಾಡಟ್ಟರ ಕೊಲೆ ನಡೆಯಿತು. ಈ ವರ್ಷ ಯಾವ ರೀತಿ ಕೊಲೆಯಿಂದ ಪ್ರಾರಂಭವಾಯಿತೋ ಅದೇ ರೀತಿ ಕೊಲೆಯಿಂದಲೇ ಅಂತ್ಯವಾಯಿತು. ಈಜಿಪ್ಟಿನ ನಿರ್ಮಾಪಕರೊಬ್ಬರಾಗಿ ಅದರ ಜೀವದ ಜೀವಾಳವಾಗಿದ್ದ ನಕ್ರಾಶಿ ಪಾಶಾರವರ ಕೊಲೆಯು ವರ್ಷದ ಕಡೇ ತಿಂಗಳು ಡಿಸೆಂಬರಿನ ಅಂತ್ಯದಲ್ಲಿ ನಡೆಯಿತು.

ಕಣ್ಮರೆಯಾದವರು

ಈ ಮಹಾವ್ಯಕ್ತಿಗಳನ್ನು ಬಲಾತ್ಕಾರದಿಂದ ಈ ಜಗತ್ತಿನಿಂದ ತಿರಸ್ಕರಿಸಿದರೆ ವಿಧಿಯ ಕೈಚಳಕದಿಂದ ಈ ವರ್ಷ ಅನೇಕ ಮುಂದಾಳುಗಳು ಪರಲೋಕವಾಸಿಗಳಾದರು. ಪ್ರಜಾಪ್ರಭುತ್ವದ ಮಹಾ ಆಧಾರವಾಗಿದ್ದ ಝೆಕೊಸ್ಲೊವಾಕಿಯಾದ ಡಾ. ಬೆನೆಸ್‌ರವರು ಸೆಪ್ಟೆಂಬರ್ ತಿಂಗಳಲ್ಲಿ ಮೃತರಾದರು. ಪಾಕಿಸ್ಥಾನದ ನಿರ್ಮಾಪಕರಾದ ಮಹಮ್ಮದಾಲಿ ಜಿನ್ನಾರವರೂ ಸೆಪ್ಟೆಂಬರ್ ತಿಂಗಳಲ್ಲೇ ಪೈಗಂಬರವಾಸಿಗಳಾದರು. ಹುಟ್ಟಿನಲ್ಲಿ ಯೂರೋಪಿಯರಾಗಿ, ಜೀವಿತದಲ್ಲಿ ಭಾರತೀಯರಾಗಿ ಕಡೇ ಉಸಿರಿನ ವರೆಗೆ ಭರತ ಖಂಡದ ಸೇವೆ ನಡೆಸಿದ ಖದ್ದರ್ ಪಂಚೆ ಕಟ್ಟಿನ ಬಿ. ಜಿ. ಹಾರ್ನಿಮನರು ಅಕ್ಟೋಬರಿನಲ್ಲಿ ಸ್ವರ್ಗಸ್ಥರಾದರು. ರಷ್ಯಾದ ಮಹಾ ರಾಜಕಾರಣಿಗಳಲ್ಲಿ ಒಬ್ಬರಾದ ಝುಡನೋವ್‌ರವರೂ ಇಹದಿಂದ ಕಾಲ್ತೆಗೆದರು. ಈ ಮಹಾವ್ಯಕ್ತಿಗಳ ನಿಧನದಿಂದ ೧೯೪೮ರಲ್ಲಿ ಜಗತ್ತು ಬಹುಮಟ್ಟಿಗೆ ಬಡವಾಯಿತು.

ಯುದ್ಧ ಪರಂಪರೆ

ಪಾಲೆಸ್ತೀನದ ಪವಿತ್ರ ಯುದ್ಧವು ಪ್ರಾರಂಭವಾಗಿ ಬರ್ನಾಡಟ್ಟರನ್ನು ಆಹುತಿ ತೆಗೆದುಕೊಂಡರೂ ಶಾಂತವಾಗದೆ ಇಂದೂ ಭೀಕರ ರೀತಿಯಿಂದ ಯುದ್ಧ ನಡೆಯುತ್ತಿದೆ. ಚೈನಾದ ಅಂತರ್ಯುದ್ಧವು ಅನೇಕ ವರ್ಷಗಳಿಂದ ಸಾಗುತ್ತಿದ್ದರೂ ಈ ವರ್ಷ ಅದು ಪ್ರಖರವಾಗತೊಡಗಿ ಇದೇ — ಚೈನಾವು ಕಮ್ಯೂನಿಷ್ಟರ ವಶವಾಗಲಿದೆ. ಚಿಯಾಂಗ್ ಕೈಶೇಕರ ಸರಕಾರದ ಕೈಸೋತು ಒಪ್ಪಂದಕ್ಕೆ ಸಿದ್ಧವಾಗಿದೆ. ಚಿಯಾಂಗರಿಗೆ ಹೆಚ್ಚಿನ ಸಹಾಯ ಮಾಡಿದರೆ ರಷ್ಯಾದೊಡನೆ ಹೋರಾಡಬೇಕಾಗಿ ಬರಬಹುದೆಂಬ ಹೆದರಿಕೆಯಿಂದಲೋ ಏನೋ ಅಮೇರಿಕಾವು ಸಾಕಷ್ಟು ಸಹಾಯವನ್ನು ಚಿಯಾಂಗ್ ಸರಕಾರಕ್ಕೆ ಕೊಡುತ್ತಿಲ್ಲ. ಇಂಡೋನೇಶಿಯಾದಲ್ಲಿ ಡಚ್ಚರು ಸ್ವಾತಂತ್ರ್ಯಪ್ರಿಯ ಇಂಡೋನೇಶಿಯನರ ಮೇಲೆ ಭೀಕರ ಯುದ್ಧ ಸಾರಿದ್ದಾರೆ. ಇಂಡೋನೇಶಿಯಾದ ಮುಂದಾಳುಗಳಾದ ಡಾ. ಸೊಕರ್ನೊ ಮೊದಲಾದವರನ್ನು ದಸ್ತಗಿರಿ ಮಾಡಿ ಹತ್ಯಾಕಾಂಡಕ್ಕೆ ಪ್ರಾರಂಭಿಸಿದ್ದಾರೆ. ಕಾಶ್ಮೀರದಲ್ಲಿ ಪಾಕಿಸ್ಥಾನವು ಪ್ರಾರಂಭಿಸಿದ ಯುದ್ಧವು ಹದಿನಾಲ್ಕು ತಿಂಗಳುಗಳ ವರೆಗೆ ನಡೆದು ಇದೀಗ ಹೊಸ ವರ್ಷಕ್ಕೆ ಕಾಲಿಕ್ಕುವ ಈ ಸಂದರ್ಭದಲ್ಲಿ ನಿಂತಿದೆ. ದಕ್ಷಿಣ ಆಫ್ರಿಕಾದಲ್ಲಿ ಕಪ್ಪು ಜನರ ಮೇಲೆ ಡಾ. ಮಲನ್ ಸರಕಾರವು ಪ್ರಾರಂಭಿಸಿರುವ ವರ್ಣ ಕಲಹವು ತಡೆಯಿಲ್ಲದೆ ನಡೆದಿದೆ. ಮಧ್ಯಯುರೋಪಿನಲ್ಲಿ ಪರಿಸ್ಥಿತಿ ಭೀಕರವಾಗಿದೆ. ಅಲ್ಲಿ ಯುದ್ಧ ನಡೆಯದಿದ್ದರೂ ಒಳಗಿಂದೊಳಗೆ ಭಯಂಕರ ಸಿದ್ಧತೆ ಸಾಗಿದೆ. ಅಲ್ಲಿ ಸ್ಫೋಟನ ಯಾವಾಗ ನಡೆಯುವದೋ ಹೇಳಲು ಬರುವದಿಲ್ಲ. ಝೆಕೊಸ್ಲೊವೇಕಿಯಾವು ಕಮ್ಯೂನಿಷ್ಟರ ವಶವಾಯಿತು. ಬೊಹೆಮಿಯಾವು ರಷ್ಯದ ರೆಕ್ಕೆಯಡಿಯನ್ನು ಸೇರಿತು. "ಬೊಹೇಮಿಯವನ್ನು ಹಿಡಿದವರು ಯೂರೋಪನ್ನು ಗೆಲ್ಲುವರು" ಎಂದು ಬಿಸ್ಮಾರ್ಕರು ಒಮ್ಮೆ ಹೇಳಿದ್ದರು. ಆದ್ದರಿಂದ ರಷ್ಯಾದ ಬೆಳೆಯುತ್ತಿರುವ ಪ್ರತಿಷ್ಠೆಯು ಪಶ್ಚಿಮ ಪ್ರಜಾಪ್ರಭುತ್ವವಾದಿ ರಾಷ್ಟ್ರಗಳಿಗೆ ಗಾಬರಿ ಹುಟ್ಟಿಸಿದೆ. ಸ್ಟಾಲಿನರ ಕಬ್ಬಿಣ ಪರದೆಯೊಳಗೆ ಏನು ನಡೆಯುತ್ತಿದೆ ಎಂಬುದರ ಅರಿವಿಲ್ಲದೆ ಅದರೊಡನೆ ಒಪ್ಪಂದಕ್ಕಾಗಿ ಈ ಐರೋಪ್ಯ ರಾಜ್ಯಗಳು ಪ್ರಯತ್ನಿಸುತ್ತಿವೆ.

ಬೇಲಿಯ ಬೆರ್ಚಪ್ಪ

ಯುದ್ಧ ಮುಗಿದು ಮೂರು ವರ್ಷಗಳು ದಾಟಿದವು. ಮುಂದೆ ಜಗತ್ತಿನಲ್ಲಿ ಶಾಂತಿ ಸಂಸ್ಥಾಪಿಸಬೇಕೆಂದು ಸಂಯುಕ್ತ ರಾಷ್ಟ್ರ ಸಂಘವೊಂದರ ಸ್ಥಾಪನೆಯಾಯಿತು. ಈ ಸಂಘ ಸ್ಥಾಪನೆಯಾಗಿದ್ದರೂ ಯುದ್ಧ ಮುಗಿದಿಲ್ಲ. ಶಾಂತಿಯ ಸುಳಿವು ಜಗತ್ತಿನಲ್ಲಿಲ್ಲವೆಂದು ಮೇಲಿನ ಯುದ್ಧ ಪರಂಪರೆಯಿಂದ ತಿಳಿದು ಬರುತ್ತದೆ. ದಕ್ಷಿಣ ಆಫ್ರಿಕಾದ ಬಗ್ಗೆ ಈ ಸಂಸ್ಥೆಯು ಒಂದು ಠರಾವು ಮಾಡಿತು ಆದರೆ ಅದನ್ನು ಜಾರಿಯಲ್ಲಿ ತರುವ ಚೇತನವಿಲ್ಲದೆ ಆಕಾಶ ನೋಡುತ್ತಿದೆ. ಪಾಲೆಸ್ತೀನದಲ್ಲಿಯೂ ಹೀಗೆಯೇ. ಇಂಡೋನೇಶಿಯಾದಲ್ಲಿ ನಡೆಯುತ್ತಿರುವ ಪಾಶವೀ ನೀತಿಯನ್ನು ನಿಸ್ಸಹಾಯಕವಾಗಿ ನಿಂತು ನೋಡುತ್ತಿದೆ. ಕಾಶ್ಮೀರ ಕದನದಲ್ಲೂ ಪಾಕಿಸ್ಥಾನದ ಕೈತೋರಿ ಬಂದು, ಪಾಕಿಸ್ಥಾನವು ಅದನ್ನು ಒಪ್ಪಿಕೊಂಡಿದ್ದರೂ ಈ ಸಂಘದ ಏನೂ ತಿಳಿಯದಂತೆ ನಟಿಸುತ್ತಿದೆ. ತೋಟದೊಳಗೆ ಲೂಟಿಯಾದರೆ ಬೇಲಿಯ ಬೆರ್ಚಪ್ಪ ಹೇಗೆ ಅಸಹಾಯಕವಾಗಿ ನೋಡಬೇಕೋ ಅದೇ ರೀತಿ ಸಂಯುಕ್ತರಾಷ್ಟ್ರಗಳ ಸಂಘವು ಪರಿಣಮಿಸಿದೆ.

ರೋಗಗ್ರಸ್ತ ಜಗತ್ತು

ಸ್ವಾರ್ಥ, ಆಸಕ್ತ ರಾಜಕಾರಣಿಗಳ ಈ ಕಿತ್ತಾಟದಲ್ಲಿ ಸಿಕ್ಕು ಜಗತ್ತಿನ ಜನತೆ ತಲ್ಲಣಗೊಂಡಿದೆ. ಎರಡನೇ ಮಹಾಯುದ್ಧದಿಂದಾದ ಗಾಯ, ಜಖಂಗಳು ಇನ್ನೂ ವಾಸಿಯಾಗಿಲ್ಲ. ಹುಣ್ಣಿನ ಮೇಲೆ ಬರೆ ಎಳೆದಂತೆ ಕಷ್ಟದ ಆಗರವಾಗಿದ್ದ ಅಂದಿನ ನೋವಿನ ಜೊತೆಗೆ ಇಂದಿನ ಜೀವನ ಕಷ್ಟವು ಸಮರಸವಾಗಿ ಸಾಮಾನ್ಯ ಜನಜೀವನವು ಮುಳ್ಳಿನ ಹಾಸಿಗೆಯಾಗಿದೆ. ಇವರ ಜೊತೆಗೆ ಒಂದೆಡೆ ಉಗ್ರಸಮತಾವಾದಿ (ಕಮ್ಯೂನಿಷ್ಟ)ಗಳ ಕಿತ್ತಾಟ, ಮತ್ತೊಂದೆಡೆ ಪ್ರಜಾಪ್ರಭುತ್ವವಾದಿಗಳ ಜಗ್ಗಾಟ, ಮಗದೊಂದೆಡೆ ಸಮತಾವಾದಿಗಳ ನುಗ್ಗಾಟ ಈ ಘರ್ಷಣೆಯಿಂದಾಗಿ ಜನತೆಯ ಜೀವನ ಇನ್ನಷ್ಟು ದುಃಖಮಯವಾಗಿದೆ. ಆರ್ಥಿಕ ರಂಗದಲ್ಲೂ ಬಂಡವಾಳಗಾರರ ಮತ್ತು ಕೂಲಿಗಾರರೊಳಗಿನ ಘರ್ಷಣೆ ವಿಪರೀತವಾಗಿದೆ. ಹಣದ ಬೆಲೆ ಇಳಿದು ಪದಾರ್ಥಗಳ ಅಭಾವ ಹೆಚ್ಚಾಗಿ ದೈನಂದಿನ ಜೀವನವು ಕಷ್ಟಮಯವಾಗಿದೆ. ಜಗತ್ತಿಗೆ ಈ ರೀತಿ 'ಇಜಂ'ಗಳ ಸ್ವಾರ್ಥತೆಯು, ಪ್ರತಿಷ್ಠೆಯು ರೋಗಬಡಿದು ಶಾಂತಿ, ಸುಖ ಜೀವನಗಳು ಗತಪ್ರಾಣವಾಗಿವೆ. ಈ ಕಾಯಿಲೆಗ್ರಸ್ತ ಜಗತ್ತು ಶಾಂತಿಯ ಸಂಜೀವಿನಿಯ ಕಡೆಗೆ ಸಾಗದೆ ಕ್ರಾಂತಿಯ ಕಾರ್ಗತ್ತಲೆಡೆ ನಡೆಯುತ್ತಿದೆ. ಜಗತ್ತು ಎರಡು ಪಕ್ಷವಾಗಿ ಮುಂದಿನ ಮಹಾ ಸಂಗ್ರಾಮಕ್ಕೆ ಸಿದ್ಧವಾಗತೊಡಗಿದೆ. ಪಂಡಿತ ಜವಾಹರರೆಂದಂತೆ ಇಂದು ನಾಳೆ ಈ ಬು

ದ್ಧವಾಗದಿದ್ದರೂ ಎಂದಾದರೊಮ್ಮೆ ನಡೆಯಲೇ ಬೇಕಾದ ಆ ಯುದ್ಧಕ್ಕೆ ಬಿರುಸಿನಿಂದ ಸಿದ್ಧತೆಗಳು ನಡೆಯುತ್ತಿವೆ. ಒಂದೆಡೆ ರಷ್ಯಾ ತನ್ನನ್ನು ಬಲಪಡಿಸಿಕೊಳ್ಳುತ್ತಿದೆ. ಯುರೋಪಿನಲ್ಲಿ ತನ್ನ ವರ್ಚಸ್ಸನ್ನು ಚೆಲ್ಲಿದೆ. ಅದರೊಂದಿಗೆ ಪೂರ್ವದಲ್ಲಿಯೂ ಮೇರೆ ಮೀರಿ ಬೆಳೆಯುತ್ತಿದೆ. ವರ್ಷದ ಮಹಾ ಘಟನೆಗಳಲ್ಲೊಂದಾದ ಜಪಾನ್ ಯುದ್ಧ ಕೈದಿಗಳು ಅದರಲ್ಲೂ ಜನರಲ್ ಟೋಜೋ ಮುಂತಾದವರ ಕೊಲೆಯು ಪೂರ್ವರಾಷ್ಟ್ರಗಳಲ್ಲಿ ಒಂದು ಬಗೆಯ ಜಿಗುಪ್ಸೆಯನ್ನು ಹುಟ್ಟಿಸಿದೆ. ರಷ್ಯಾಕ್ಕೆ ಈ ಅನುವು ತುಂಬಾ ಅನುಕೂಲ ಮಾಡಿದೆ.

ಎಲ್ಲಾ ದುರಂತವಲ್ಲ.

೧೯೪೮ ರಲ್ಲಿ ನಡೆದುದೆಲ್ಲಾ ವಿನಾಶಕಾರಕ ದುರಂತವೇ ಅಲ್ಲ. ಹಿಂದೂದೇಶಕ್ಕೆ ಅನ್ವಯಿಸುವಂತೆ ಹೇಳುವದಾದರೆ ಸ್ವತಂತ್ರ ಸರಕಾರವನ್ನು ಜಾಣ್ಮೆಯಿಂದ ನಡೆಸುತ್ತಿರುವ ಜವಾಹರ್, ಪಟೇಲರಿಗೆ ಉತ್ಕರ್ಷದ ಕಾಲವಿದು. ಭಾರತದ ಚಿತ್ರವನ್ನು ಜಗತ್ತಿನ ರಂಗದಲ್ಲಿ ಈ ವರ್ಷ ಎತ್ತಿಕಟ್ಟಲಾಗಿದೆ. ಜಗತ್ತು ಆ ಕಡೆ ಕಾತುರದೃಷ್ಟಿಯಿಂದ ನೋಡುವಂತಾಗಿದೆ. ಈ ವರ್ಷವೇ ಬ್ರಿಟಿಷ್ ಕಪಿಮುಷ್ಟಿ ಆಡಳಿತದ ಚಿಹ್ನೆ ಉಳಿಯದಂತೆ ಮಾರ್ಚ್ ತಿಂಗಳಲ್ಲಿ ಬ್ರಿಟಿಷ್ ಸೇನೆಯೆಲ್ಲವೂ ಹಿಂತೆರಳಿದುದು. ಈ ವರ್ಷದ ಜೂನ್ ತಿಂಗಳಲ್ಲೇ ಬ್ರಿಟಿಷ್ ಆಡಳಿತದ ಕುರುಹಾಗಿ ಭಾರತದ ಗುಲಾಮಗಿರಿಯ ದ್ಯೋತಕವಾಗಿದ್ದ ಮೌಂಟ್‌ಬೆಟನ್‌ರವರು ತೆರಳಿದುದು. ಈ ವರ್ಷವೇ ಎರಡಾದ ಭಾರತವು ತನ್ನ ಅಂತರಿಕ ವಿವಿಧ ಭಾಗಗಳನ್ನು ಒಂದುಗೂಡಿಸಿ ಬಲಗೊಂಡುದು. ಹೈದರಾಬಾದಿನ ಮಹಾಕಾಯಿಲೆಗೆ ಮದ್ದರೆದು ಗುಣಪಡಿಸಿದುದೂ ಈ ವರ್ಷವೇ. ಅಮೂಲ್ಯ ತ್ಯಾಗದಿಂದ ಗಳಿಸಿದ ಸ್ವರಾಜ್ಯವು ಈ ವರ್ಷದಲ್ಲಿ ತಳವೂರಿದೆ.

ಹೊಸ ನೋಟ.

ಗತವರ್ಷದ ಈ ಏರಿಳಿತಗಳನ್ನೂ ನಾವು ನೋವುಗಳನ್ನೂ ಸಹಿಸಿ ಹೊಸ ವರ್ಷಕ್ಕೆ ಕಾಲಿಕ್ಕಿರುವೆವು. ನೂತನ ವರ್ಷದಲ್ಲಿ ಸುಖ ಜೀವನದ ಹೊಂಗನಸುಗಳನ್ನು ಕಾಣುವದು ರೂಢಿ. ಗತಕಾಲದ ಜೀವನದಿಂದ ಹೊಸ ಪಾಠ ಕಲಿತು ಎಚ್ಚರಿಕೆಯಿಂದ ಮುನ್ನಡೆಯುವದರಲ್ಲಿ ಪ್ರಗತಿ ಇದೆ. ಭಾರತೀಯರಾದ ನಮ್ಮ ಸರಕಾರವನ್ನು ಪಂಡಿತ ನೆಹರೂ, ಸರ್ದಾರ್ ಪಟೇಲರಂಥಾವರು ನಡೆಸುತ್ತಿರುವರಾದರೂ, ಕೇಂದ್ರ ಹಾಗೂ ಪ್ರಾಂತೀಯ ಸರಕಾರಗಳಲ್ಲಿ ಎಲ್ಲವೂ ಸುಗಮವಾಗಿದೆಯೆಂದು ಭಾವಿಸಬಾರದು. ಕಾಂಗ್ರೆಸ್ಸಿಗರು ಅಧಿಕಾರ ವಹಿಸಿದ್ದರೂ ತಮ್ಮ ಹಿಂದಿನ ವಚನದಂತೆ ಆಡಳಿತ ನಡೆಸುವದು ಸಾಧ್ಯವಾಗಿಲ್ಲ. ದೇಶದಲ್ಲಿ ನಿಜವಾದ ಎರಡು ಕಾಂಗ್ರೆಸ್ ಸರಕಾರಗಳೇರ್ಪಟ್ಟಿದ್ದವು. ಒಂದು ಮದ್ರಾಸಿನ ಪ್ರಕಾಶಂ ಮಂತ್ರಿ ಮಂಡಳ; ಮತ್ತೊಂದು ಬಂಗಾಲದ ಘೋಷ್ ಮಂತ್ರಿ ಮಂಡಳ. ಇವೆರಡೂ, ಕಾಂಗ್ರೆಸು ಈ ಹಿಂದೆ ಜನತೆಗೆ ಕೊಟ್ಟ ಭರವಸೆಯ ಪ್ರಕಾರ ಕೆಲಸ ಮಾಡುತ್ತಿದ್ದವು. ಆದರೆ ಇವುಗಳನ್ನು ಬಹು ಕಾಲ ಬಾಳಲು ಬಿಡಲಿ

ಶರೀರದ ಮೇಲೆ ಮನಸ್ಸಿನ ಪರಿಣಾಮ.

ಕಾಳಹಸ್ತಿಯ ಉಪನಿಷದ್ ವಿಹಾರ ಆಶ್ರಮದ ಸ್ವಾಮಿ ಶ್ರೀ. ರಾಜೇಶ್ವರಾನಂದಜೀಯವರು ಹೀಗೆ ಬರೆಯುತ್ತಾರೆ:

ನಿಮ್ಮ ಮನಸ್ಸೆಂಬುದೊಂದು ತೋಟ. ಅದನ್ನು ನೀವು ಬುದ್ಧಿ ವಿವೇಕದಿಂದ ಚೆನ್ನಾಗಿ ವ್ಯವಸಾಯಗೊಳಿಸಬಹುದು, ಇಲ್ಲವೆ ಉದ್ದೇಶರಹಿತವಾದ ಅದನ್ನು ಹಾಳು ಬೀಳಿಸಬಹುದು. ಅದರಲ್ಲಿ ಉಪಯುಕ್ತವಾದ ಬೀಜಗಳನ್ನು ಹಾಕದಿದ್ದರೆ ನಿಷ್ಪ್ರಯೋಜಕವಾದ ಕಳೆಗಳು ಅದರಲ್ಲಿ ಬಿದ್ದು ತಮ್ಮ ನಿಷ್ಪ್ರಯೋಜಕವಾದ ಬೆಳೆಯನ್ನು ಬೆಳೆಸುತ್ತವೆ. ನಿಮ್ಮ ತೋಟದಲ್ಲಿ ಶುದ್ಧ ಸುವಿಚಾರದ ಹೂ ಹಣ್ಣುಗಳನ್ನು ಬೆಳೆಸಿ ನೀವದನ್ನೊಂದು ಸ್ವರ್ಗವನ್ನಾಗಿ ಮಾಡಬಹುದು. ಇಲ್ಲವೆ ಅವಿಚಾರದ ಅಶುದ್ಧ ವಿಚಾರಗಳನ್ನು ಅದರಲ್ಲಿ ಬೆಳೆಯ ಬಿಟ್ಟು ಅದನ್ನೊಂದು ನರಕವನ್ನಾಗಿ ಮಾಡಬಹುದು. ನೀವೇ ನಿಮ್ಮ ಮನಸ್ಸೆಂಬ ವನದ ತೋಟಗಾರರು, ನೀವೇ ನಿಮ್ಮ ಜೀವನದ ನಿರ್ದೇಶಕರು.

ನಿಮ್ಮ ಯೋಚನೆಗಳು ಯಾವದೊಂದು ಪರಿಣಾಮವಿಲ್ಲದವುಗಳಾಗಿ ಮಾಡಲು ಒಂದು ಕ್ಷಣವೂ ಸಾಧ್ಯವಿಲ್ಲ. ಅದು ಸಾಧ್ಯವೇ ಇಲ್ಲ. ಯೋಜನೆಗಳು ಭರದಿಂದ ಅಭ್ಯಾಸವಾಗಿ ಪರಿಣಮಿಸುತ್ತವೆ. ಅಭ್ಯಾಸವು ಸಂದರ್ಭವಾಗಿ ರೂಪುಗೊಳ್ಳುತ್ತವೆ. ಉತ್ತಮ ವಿಚಾರಗಳು ಉತ್ತಮ ಫಲವನ್ನೀಯುತ್ತವೆ. ಕೆಟ್ಟ ವಿಚಾರಗಳು ದುಷ್ಫಲಗಳನ್ನು ಕೊಡುತ್ತವೆ. ನೀವು ಮೊದಲು ನಿಮ್ಮ ವಿಚಾರಗಳ್ಯಾವುವೆಂದು ಚುನಾಯಿಸಿರಿ. ಆ ಮೇಲೆ ಅಪ್ರತ್ಯಕ್ಷವಾಗಿಯಾದರೂ ಖಂಡಿತವಾಗಿ ನೀವು ನಿಮ್ಮ ಸಂದರ್ಭಗಳನ್ನು ರೂಪುಗೊಳಿಸುವಿರಿ.

ವ್ಯಾಧಿ ಆರೋಗ್ಯಗಳು ವಿಚಾರದಲ್ಲಿ ಬೇರು ಬಿಡುತ್ತವೆ. ದುರ್ವಿಚಾರಗಳು ಶರೀರವನ್ನು ವ್ಯಾಧಿ, ನಾಶದಲ್ಲಿ ಮುಳುಗಿಸುತ್ತವೆ. ಸುವಿಚಾರದ ಸುಂದರ ಯೋಚನೆಗಳು ಅದನ್ನು ಸುಕುಮಾರತ್ವ ಸೌಂದರ್ಯದಿಂದ ಭೂಷಿಸುತ್ತವೆ. ವ್ಯಾಧಿಯ ಭೀತಿಯಲ್ಲಿ ವಾಸಿಸಿದರೆ ನೀವದನ್ನು ಖಂಡಿತ ಹೊಂದುವಿರಿ. ಆತಂಕಿಯು ಇಡೀ ಶರೀರವನ್ನು ಅನೈತಿಕತೆಯಲ್ಲಿ ಮುಳುಗಿಸುತ್ತದೆ. ಅಶುದ್ಧ ವಿಚಾರಗಳು ಸರ್ವವ್ಯವಸ್ಥೆಯನ್ನು ಭಗ್ನಗೊಳಿಸಿ ರಕ್ತವನ್ನು ವಿಷಮಯವನ್ನಾಗಿ ಮಾಡುತ್ತವೆ. ವಿಚಾರವು ಕರ್ತವ್ಯ, ಜೀವನ ಮತ್ತು ಅಸ್ತಿತ್ವದ ಮೂಲಸ್ಥಾನವಾಗಿದೆ. ಆದ್ದರಿಂದ ನಿಮ್ಮ ಶರೀರವನ್ನು ರಕ್ಷಿಸಬೇಕಾದಾಗ ನಿಮ್ಮ ವಿಚಾರಗಳನ್ನು ಕಾದುಕೊಳ್ಳಿರಿ. ಶರೀರವನ್ನು ಪುನರುಜ್ಜೀವನಗೊಳಿಸಲು ನಿಮ್ಮ ಮನಸನ್ನು ಸೌಂದರ್ಯಗೊಳಿಸಿರಿ. ಆ ಮೇಲೆ ಸುಶೀಲದ ವಿಚಾರಗಳಿಂದ ನಿಮ್ಮ ಶರೀರವನ್ನು ಚೈತನ್ಯಯುಕ್ತವಾಗಿಯೂ, ಕಾಂತಿಯುಕ್ತವಾಗಿಯೂ ರಚಿಸಿಕೊಳ್ಳಿರಿ.

ಭಯ, ಸಂದೇಹ ಮತ್ತು ಚಿಂತೆಗಳು ಪ್ರಾರಂಭದಲ್ಲಿ ಅಷ್ಟೇನು ದೊಡ್ಡ ವಿಷಯಗಳಲ್ಲ. ಅವು ಕೇವಲ ಚಿಕ್ಕ ವಿಷಬೀಜಗಳಂತಿರುತ್ತವೆ. ಕಾಡಿನ ಮಧ್ಯದಲ್ಲಿ ಒಂದು ಬೆಂಕಿಕಡ್ಡಿಯನ್ನು ಹಚ್ಚಿ ಹಾಕಿ. ಅದು ಎಷ್ಟಾದರೂ ಚಿಕ್ಕ ವಿಷಯವೆ. ಆದರೂ ಕ್ರಮೇಣ ಅದು ಅಭಿವೃದ್ಧಿಯಾಗಿ ಸಾವಿರಾರು ಮೈಲುಗಳ ತನಕವೂ ಉರಿಯುವುದು. ಕೊನೆಗೆ ಇಡೀ ಕಾಡನ್ನೇ ಅದು ದಹಿಸುವುದು. ಕಾಡ್ಕಿಚ್ಚನ್ನು ಇಲ್ಲದಂತೆ ಮಾಡಬೇಕಾದರೆ ಅಗರ ಮೊದಲ ಕಿಡಿಯನ್ನು ಪ್ರಾರಂಭದಲ್ಲೇ ಆರಿಸಬೇಕು. ಭೀತಿಗಳನ್ನು ತೊಡೆದು ಹಾಕಲೂ ಅದೇ ರೀತಿ. ಅವುಗಳನ್ನು ಪ್ರಾರಂಭದಲ್ಲೇ ತಡೆಗಟ್ಟಬೇಕು. ಮನಸ್ಸಿನ ಮೂಲೆಯಲ್ಲವು ಬೇರೂರದಂತೆ ನೋಡಿಕೊಳ್ಳಬೇಕು. ಅವಕ್ಕೇ ತಡೆಗಟ್ಟುವಿಕೆಯು ನಿವಾರಣೆಗಿಂತ ಉತ್ತಮವೆಂದು ಹೇಳುವುದು.

ಭಯ, ಕಳವಳ, ಸಂದೇಹ ಮತ್ತು ಚಿಂತೆಗಳು ಭಾವಿ ಘಟನೆಗಳ ಕುರಿತಾಗಿ ಉಂಟಾದವುಗಳು. ಅವು ಮನೋವ್ಯಾಧಿಗಳು. ಅವು ಮನೋಪಟಲದಲ್ಲಿ ತಮ್ಮ ಭೀಕರ ಚಿತ್ರಗಳನ್ನು ಬಿಡಿಸಲು ಕುಂಚ ಬಣ್ಣಗಳತ್ತ ತಮ್ಮ ಕೈಯನ್ನಾಡಿಸುತ್ತವೆ. ಅವುಗಳನ್ನು ಅಲ್ಲಿಂದಲ್ಲಿಯೇ ತಡೆಗಟ್ಟಿರಿ. ಆ ಕುಂಚ ಬಣ್ಣಗಳನ್ನು ಹಿಡಿದು ಅವು ವಿನಾಶಕಾರಕ ಚಿತ್ರಗಳನ್ನು ಬರೆಯುವಲ್ಲಿ ರಚನಾತ್ಮಕವಾದ ಚಿತ್ರವನ್ನು ಬರೆಯಿರಿ. ಅವುಗಳಿಗೆ ಆ ಭೀಕರ ಚಿತ್ರವನ್ನು ಬರೆಯಲು ಸಾಧಕವಾದ ಉಪಕರಣಗಳನ್ನು ಕಿತ್ತುಕೊಳ್ಳಿರಿ. ಆಗ ನಾಳೆಯ ಸಂಕಷ್ಟದ ಸ್ಥಾನದಲ್ಲಿ ಇಂದಿನ ಸುಖವನ್ನು ನೀವು ಕಾಣುವಿರಿ. ಜೀವನವು ಸುಪ್ರಕಾಶಗೊಂಡು ಹರ್ಷದಾಯಕವಾಗುತ್ತದೆ.

ಮನುಷ್ಯನೆಂದರೆ ಅಕ್ಷರಶಃ ಅವನ ಯೋಚನೆಗಳೇ ಎಂದು ಅರ್ಥವಾಗುತ್ತದೆ. ಅವನ ಪ್ರತಿಯೊಂದು ಕಾರ್ಯವೂ ಅವನಲ್ಲಿ ಗುಪ್ತವಾಗಿರುವ ವಿಚಾರಗಳಿಂದ ಉದ್ಭವಿಸಿದ್ದಿರುತ್ತವೆ. ಅವನ ಕ್ರಿಯೆಯು ಆ ವಿಚಾರದಿಂದಲೇ ಅರಳಿದ್ದಾಗಿರುತ್ತದೆ. ಸುಖ ಇಲ್ಲವೆ ದುಃಖವೆಂಬುದು ಅದರ ಫಲಗಳು. ಮನುಷ್ಯನ ಜೀವನವು ಮನೋಸೂತ್ರಕ್ಕನುಸಾರ ಅಭಿವೃದ್ಧಿ ಹೊಂದುವಂತಹುದು, ಅದನ್ನು ಇತರ ಯಾವ ಕೈಚಾತುರ್ಯದಿಂದ ರಚಿಸಲಾಗುವುದಿಲ್ಲ. ಘನಶೀಲವುಳ್ಳ ದೈವೀಕ ಲಕ್ಷಣವು ತನ್ನಷ್ಟಕ್ಕೇ ಉಂಟಾದುದಲ್ಲ. ಅದು ಸುವಿಚಾರದ ಪ್ರಯತ್ನದ ಫಲವಾಗಿ ಉಂಟಾದೊಂದು ಫಲಿತಾಂಶ. ಮೇಲಿಂದ ಮೇಲೆ ಮಾಡಿದ ವಿಚಾರವೊಂದು ಕಾರ್ಯವಾಗಿ ಪರಿಣಮಿಸುತ್ತದೆ. ಪುನರ್ ಪುನರಾವರ್ತಿಸಲ್ಪಟ್ಟ ಕ್ರಿಯೆಯು ಒಂದು ಅಭ್ಯಾಸ ವಿಶೇಷವಾಗಿದೆ. ಆ ಅಭ್ಯಾಸವೇ ಒಂದು ವಿಶಿಷ್ಟ ಲಾಕ್ಷಣಿಕ ಗುಣವಾಗುವುದು. ಆ ಗುಣವೇ ಮನುಷ್ಯನ ವಿಧಿಯನ್ನು ರೂಪಿಸುತ್ತದೆ.

ವಿಚಾರದ ದೋಣಿಯನ್ನು ಜೀವನ ಸಾಗರದಲ್ಲಿ ಸ್ವೇಚ್ಛೆಯಾಗಿ ತೇಲಾಡಲು ಬಿಡದಿರಿ. ದೃಢ ಉದ್ದೇಶವೆಂಬ ಗಿರಿ ನಾವೆಯನ್ನು ವಿನಾಶಕಾರಿ ಪ್ರವಾಹದ ಪಥದಿಂದ ಬೇರೆ ಕಡೆ ತಿರುಗಿಸಿರಿ. ನಿಮ್ಮ ಉದ್ದೇಶವನ್ನು ಒಂದು ಆಧ್ಯಾತ್ಮಿಕ ಧ್ಯೇಯವನ್ನಾಗಿ ಮಾಡಿರಿ. ನಿಮ್ಮ ವಿಚಾರಗಳು ನಿಷ್ಫಲವಾದ ಕಲ್ಪನಾ ರಾಜ್ಯದಲ್ಲಿ ಹರಿಯಬಿಡದಿರಿ. ಆಸೆ ಆಸಕ್ತಿಗಳನ್ನು ಬದಿಗೊತ್ತಿರಿ, ಅಲುಗಾಡುವ ವಿಚಾರಗಳಿಂದಲೂ, ಅಸ್ಥಿರವಾದ ಯೋಚನೆಗಳಿಂದಲೂ ಕೂಡಿದ ಒಂದು ಕಟ್ಟಿಗೆ ನೀವಿರಬಾರದು.

ಸ್ವ. ಮಾ.

ಲ್ಲ. ಕಾರಣವಿಷ್ಟೆ; ಇಂದಿನ ಮಂತ್ರಿಮಂಡಳಗಳಲ್ಲಿ ಬಹು ಜನರು ತಮ್ಮ ಮುಂದಿನ ಆಯ್ಕೆಯ ದೃಷ್ಟಿಯಿಂದ ತಮ್ಮ ಮತದಾರರತ್ತ ಕಣ್ಣಿಟ್ಟು ಸರಿಯಾಗಿ ಕಾಣುತ್ತಿದ್ದಾರೆಯೇ ವಿನಹ ರಾಷ್ಟ್ರದ ಸರ್ವತೋಮುಖ ಹಿತದೃಷ್ಟಿಯಿಂದಲ್ಲ. ತಮ್ಮ ಸ್ಥಾನ, ಸ್ವಾರ್ಥತೆ ಇವೇ ರಾಷ್ಟ್ರೀಯ ಹಿತಕ್ಕಿಂತಲೂ ಹಿರಿದಾಗಿವೆ. ಹೀಗೆ ಅಧಿಕಾರ ಪೀಠಸ್ಥರು ಮತದಾರರ ಮುಷ್ಟಿಯೊಳಗಿರುವವರಿಂದ ಸ್ಥಳೀಕ್ಯಾಗಿ ಅತಿ ಸುಭಗರಿರುವ ತನಕ ಆಡಳಿತ ಚೆನ್ನಾಗಿ ನಡೆಯದು. ಹಿಂದೆ ಬ್ರಿಟಿಷ್ ಆಡಳಿತ ನಡೆಯುತ್ತಿದ್ದಾಗ ಆ ಸರಕಾರದ ಭಕ್ತರಾಗಿದ್ದವರು ಇಂದು ಈ ಸರಕಾರದ ಬಲಗೈಯಾಗಿದ್ದಾರೆ. ಅಂದು ಚರ್ಚಿಲರ ದಾಸರಾಗಿದ್ದರೆ ಇಂದು ಅವರೇ ನೆಹರೂರವರ ಸ್ನೇಹಿತರು. ಅಂದು ಮಹಾತ್ಮಾ ಗಾಂಧೀಜಿಯವರನ್ನು ಹಿಂಬಾಲಿಸಿ ನಾವಿಕನ ಹೆಗಲೇರಿ ಎಂದೂ ಇಳಿಯದ ಸಮುದ್ರದ ಮುದುಕನಂತವರು ಇಂದು ರಾಷ್ಟ್ರೀಯ ಸರಕಾರದಲ್ಲಿ ಪ್ರಮುಖರು. ಈ ಅವಸ್ಥೆಯಿಂದಾಗಿ ಇಂದಿನ ಸರಕಾರ ಗೌರವ ಕಳೆದುಕೊಂಡಿದೆ. ಇವರ ಪರಿಶುದ್ಧಿಯಿಲ್ಲದೆ ರಾಷ್ಟ್ರದ ಪ್ರಗತಿಯಾಗದು. ಕಳೆದ ಅ. ಭಾ. ಕಾ. ಸಮಿತಿಯಲ್ಲಿ ಈ ಪರಿಶುದ್ಧಿಯ ವಿಚಾರದಲ್ಲಿ ತಂದ ಠರಾವನ್ನು ಪ್ರಜಾಪ್ರಭುತ್ವ ನೀತಿಗೆ ವಿರುದ್ಧ ನೆಹರೂ ಹರಿಯಲು ಮಾಲೆ ಹೊತ್ತಿದುದು ಶೋಚನೀಯ. ಇದು ಪ್ರಗತಿಯ ಮಾರ್ಗವಲ್ಲ. ಹೊಸ ವರ್ಷದಲ್ಲಿ ಕಾಂಗ್ರೆಸ್ಸಿನ, ಹಾಗೂ ದೇಶದ ಆಡಳಿತ ಶುದ್ಧೀಕರಣವಾಗಿ ನಾವು ಕಲ್ಪಿಸಿದ ಸ್ವರಾಜ್ಯವು ಪ್ರತಿ ಗುಡಿಸಲಿನ ಕಡೆ ಈ ವರ್ಷ ಧಾವಿಸುವಂತಾಗಲೀ.

ಹಳ್ಳಿಯ ರೂಪರೇಷೆ ಹೇಗೆ?

ಡಾ. ಕುಮಾರಪ್ಪನವರ ವಿವರಣೆ.

ಘಟನಾ ಸಮಿತಿಯಲ್ಲಿ ಘಟನೆಯ ಕರಡಿನ ಮೇಲೆ ಚರ್ಚೆ ನಡೆಯುತ್ತಿದ್ದಾಗ ಈ ಪ್ರಶ್ನೆಗೆ ಉತ್ತರವನ್ನಾಗಿ ಡಾ|| ಅಂಬೇಡ್ಕರರು 'ಹಳ್ಳಿಯೆಂದರೆ ಸ್ಥಳೀಯ ಆಚಾರಗಳ ಹೇಳಿಯು ಕೂಡ ಮತ್ತು ಅಜ್ಞಾನ ಸಂಕುಚಿತ ಬುದ್ಧಿ ಮತ್ತು ಜಾತೀಯತೆಯ ಗವಿ' ಎಂದರು. ವಾಸ್ತವಿಕವಾಗಿ ಇದೇನು ನಿಜವೇ? ಗಾಂಧೀಜಿ ಎಂದರೇನು? ಎಂಬುದಕ್ಕೆ 'ಅವರು ಅಸಂಖ್ಯ ನದಿಗಳಲ್ಲಿ ಚೆಲ್ಲಿದ ಧೂಳು ಮತ್ತು ಬೂದಿ' ಎಂದರೆಂತೋ ಅಂತೆಯೇ ಇದು ಬಹುದು. ಆದರೆ ಸಂಖ್ಯಾ ಭಾಗದಿಂದಾದರೂ ಇದು ಪ್ರತೀಕವೆನಿಸುವುದೇ? ನಿಜವಾಗಿ ನೋಡಿದರೆ ಜೀವಿತ ಮತ್ತು ಜೀವನಗಳ ಒಂದು ಬಗೆಯ ಬೆಳೆಗಾರಿಕೆಯ ದೃಷ್ಟಿಯಿಂದ ಈ ಉತ್ತರಗಳು ಬರೀ ಅರ್ಥ ಬಗಳೇದೇ ನಾವು ಹೇಳಬೇಕಾಗಬಹುದು.

ಹಳ್ಳಿಯು ಒಂದು ಆರ್ಥಿಕ ಘಟಕ ಮತ್ತು ನಿಸರ್ಗಕ್ಕೆ ನೀಡುವ ಮಾನವನ ಸಹಕಾರದಿಂದ ಆಗುವ ಸಂಪತ್ತಿನ ನಿಜವಾದ ಉತ್ಪಾದಕವೆನಿಸಿತ್ತು. ಪಾಶ್ಚಾತ್ಯರದ್ದೆಲ್ಲ ಬೇಕೆಂಬ ನಮ್ಮ ಹುಚ್ಚು ಓಟದ ದಸೆಯಿಂದ ಆ ಘಟಕದ ರಚನೆಯಲ್ಲಿ ಕೈ ಹಾಕಿ ನಾವು ಅದರ ಸ್ವಭಾವ ಮತ್ತು ಉತ್ಪಾದಕ ಶಕ್ತಿಗಳು ಕುಂದುವಂತೆ ಮಾಡಿದ್ದೇವೆ.

ಒಂದು ರಾಷ್ಟ್ರದ ಇಡೀ ಸಂಸ್ಕೃತಿ ಹಳ್ಳಿಯಿಂದ ಸ್ಫೂರ್ತಿ ಪಡೆಯುತ್ತಿದೆ. ಹಳ್ಳಿಗಳನ್ನು ಅಲಕ್ಷಿಸಿದ್ದರಿಂದಲೇ ಭಾರತ ಇಂದು ಈ ಪರಿಸ್ಥಿತಿಯಲ್ಲಿದೆ. ನಮ್ಮ ಲೋಭದ ಪೋಷಣೆಗಾಗಿ ಹಳ್ಳಿಗಳನ್ನು ನಾವು ಸೂರೆಗೈದೆವು. ಹಿಂದಿನ ತಪ್ಪನ್ನು ಸುಧಾರಿಸಲು ನಾವೀಗ ಹಳ್ಳಿಗಳತ್ತ ಲಕ್ಷ್ಯ ಕೊಡುವದೊಂದೇ ಕರ್ತವ್ಯ.

ಇಂದಿರುವ ಆಯೋಗ್ಯ ಸ್ಥಿತಿಯಲ್ಲೇ ಹಳ್ಳಿಗಳು ಉಳಿಯುವಂತೆ ಮಾಡಿದರೆ ನಮ್ಮ ನೆಲಗಳೇ ಕೊಳೆತಿರುವದರಿಂದ ನಮ್ಮ ದೇಶಕ್ಕೆ ಉದ್ಧಾರದ ಆಶೆಯೇ ಇರದು. ಹಳ್ಳಿಯು ನಮ್ಮ ರಾಷ್ಟ್ರದ ಒಂದು ಅವಿಭಾಜ್ಯ ಅಂಗ ಮತ್ತು ಅದರ ಯೋಗ್ಯ ಮಾನದಂಡ ರಾಷ್ಟ್ರದ ಮೇಲೆ ಪರಿಣಾಮವಾಗುತ್ತದೆ. ಅಂತೆ ನಮ್ಮ ನಾಡಿನ ಮುತ್ಸದ್ದಿಗಳ ಶಿಕ್ಷಣ ಶಾಲೆ, ರಾಷ್ಟ್ರಕ್ಕೆ ಆರ್ಥಿಕ ಉಣಿಸನ್ನೀಯುವ ಕೈಯೇ ಇದು. ನಮ್ಮ ರಾಷ್ಟ್ರದ ಪುನರ್ನಿರ್ಮಾಪಕ. ಅದು ತನ್ನ ಅಮೂಲ್ಯ ಸೇವೆಯನ್ನು ಸಲ್ಲಿಸಬೇಕಾದರೆ ಅದನ್ನು ಅದರ ಹಿಂದಿನ ವೈಭವ ಪೂರ್ಣ ಮತ್ತು ಕರ್ತವ್ಯಭರ ಸ್ಥಿತಿಗೆ ಎತ್ತಬೇಕು. ಒಟ್ಟಾರೆ ಅದು ನಮ್ಮ ದೇಶದ ಮುಖ್ಯಾಂಗವಾಗಿದೆ.

ಎಂಪೈರ್ ಆಫ್ ಇಂಡಿಯಾ

ಲೈಫ್ ಎಷ್ಯೂರೆನ್ಸ್ ಕಂಪನಿ ಲಿಮಿಟೆಡ್.

ಸ್ಥಾಪನೆ,—1897

48ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು.	ಒಟ್ಟು ಆದಾಯ	1,07,09,000	ರೂಗಳು
	ಚಾಲ್ತಿಯಿರುವ ವಿಮೆ	17,74,52,000	,,
	ಆಸ್ತಿ	6,67,60,000	,,
ಕಂಪನಿಯು ಆದಿಯಲ್ಲಿ ಕೊಟ್ಟ ಕ್ಲೈಮುಗಳು	....	8,88,62,000	,,

ಬ್ರಾಂಚ ಆಫೀಸ:	ಏಜೆನ್ಸಿ	ಪ್ರಧಾನ ಆಫೀಸ.
ಡಿಸ್ಟ್ರಿಕ್ಟ್ ಬೋರ್ಡ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು.	ಅರ್ಜಿಗಳನ್ನು ಸ್ವಾಗತಿಸಿದೆ.	ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ.

॥ ನಾನೇಕೆ ಪ್ರತ್ಯೇಕವಾದಿ ॥

[ಲೇ:— ಶ್ರೀ ಬಿ. ಡಿ. ಗಣಪತಿ]

ಪಂಡಿತ ಜವಾಹರ್‌ಲಾಲ್ ನೆಹರೂರವರು ಬೆಂಗಳೂರಿಗೆ ಬಂದಿದ್ದಾಗ ಅವರನ್ನು ಕೊಡಗಿನ ಎರಡು ನಿಯೋಗಗೋಷ್ಠಿಗಳು ಕಂಡು ಕೊಡಗಿನ ಭವಿಷ್ಯದ ಬಗ್ಗೆ ಮಾತಾಡಿದವಷ್ಟೆ. ಆ ಸಂದರ್ಭದಲ್ಲಿ ಪ್ರತ್ಯೇಕವಾದಿಗಳ ನಿಯೋಗದಲ್ಲಿ ನಾನೂ ಇದ್ದ ಕಾರಣ ಆ ವಿಚಾರ ಅನೇಕರು ನನಗೆ ಪತ್ರ ಬರೆದಿರುವರು. ಆ ಪತ್ರಗಳ ಸಾರವನ್ನು ಇಲ್ಲಿ ಕೊಟ್ಟು ನಾನೇಕೆ ಪ್ರತ್ಯೇಕವಾದಿ ಎಂಬುದನ್ನು ವಿವರಿಸುವದೇ ಈ ಲೇಖನದ ಉದ್ದಿಶ್ಯ. ಬೆಂಗಳೂರಿನ ಮಿತ್ರರೊಬ್ಬರ ಪತ್ರದಿಂದ ತೆಗೆದ ಅಂಶವಿದು.

'ಕೊಡಗು' ಪತ್ರಿಕೆಯಲ್ಲಿ ನೀವು ಈವರೆಗೆ ಬರೆದ ಲೇಖನಗಳನ್ನು ಓದಿದ್ದೇನೆ. ಅವಾವುದರಲ್ಲೂ ಸಂಕೀರ್ಣತೆಯ ಸುಳಿವು ನನಗೆ ಕಂಡು ಬರಲಿಲ್ಲ. ಕೋಮುವಾರು ಭಾವನೆಯನ್ನು ನೀಗಿಸಿ, ಇನ್ನೊಬ್ಬನನ್ನೂ ತನ್ನಂತೆಯೇ ತಿಳಿದು ವರ್ತಿಸಬೇಕೆಂಬ ವಿಚಾರದ ನಿಮ್ಮ ಉದಾತ್ತ ಲೇಖನಗಳನ್ನೂ ಓದಿರುವೆನು. ನಾನು ಕೊಡಗಿನಲ್ಲಿದ್ದಾಗ ಹಲವಾರು ಕಡೆ ಸಾರ್ವಜನಿಕ ಹಿತದೃಷ್ಟಿಯ ನಿಮ್ಮ ಭಾಷಣಗಳನ್ನೂ ಕೇಳಿರುವೆನು. ಈ ಲೇಖನಗಳ ಮತ್ತು ನಿಮ್ಮ ಭಾಷಣಗಳ ತಳಹದಿಯಿಂದ ನಿಮ್ಮ ಬಗ್ಗೆ ನಾನೊಂದು ನಿರ್ಣಯಕ್ಕೆ ಬಂದದ್ದೆನು. ಅದೇನೆಂದರೆ ಕೊಡಗಿನಲ್ಲಿ ರಾಜಕೀಯ ಕ್ಷೇತ್ರದಲ್ಲಿರುವವರೆಲ್ಲರೂ ಒಂದಿಲ್ಲೊಂದು ಪಕ್ಷಕ್ಕೆ ಸೇರಿದವರಾದರೂ ನೀವೊಬ್ಬರು ಪಕ್ಷಾತೀತರಾಗಿರುವಿರೆಂದು ನಂಬಿದ್ದೆ. ಆದರೆ ಇತ್ತಲಾಗಿ ನೀವು ಪ್ರತ್ಯೇಕವಾದಿಗಳ ಜೊತೆಯಲ್ಲಿ ನಿಯೋಗ ಗೋಷ್ಠಿ ಹೋಗಿರುವದರಿಂದ ನಿಮ್ಮ ವಿಶಾಲ ಭಾವನೆಯು ಸಂಕೀರ್ಣ ಪಕ್ಷ ರಾಜಕೀಯದ ಕೊಚ್ಚೆಯಲ್ಲಿ ಸಿಲುಕಿದಂತೆ ತೋರುತ್ತದೆ. ಕೊಡಗು, ಕರ್ನಾಟಕಗಳ ಗಡಿಯನ್ನು ಮೀರಿದ್ದ ನಿಮ್ಮ ವಿಶಾಲತೆ ಈ ರೀತಿ ಆಗಲು ಕಾರಣವೇನು? ಸಾಧ್ಯವಾದರೆ ಪತ್ರಿಕೆಯ ಮೂಲಕವೇ ಬಹಿರಂಗವಾಗಿ ಉತ್ತರಕೊಡಿ."

ಇಂಗ್ಲಿಷ್ ಭಾಷೆಯಲ್ಲಿದ್ದ ಈ ಪತ್ರದ ಭಾಷಾಂತರ ನನ್ನದಾದರೂ ಆಶಯವನ್ನು ವ್ಯತ್ಯಾಸ ಮಾಡದೆ ಕೊಡಲಾಗಿದೆ. ಇದೇ ರೀತಿಯ ಇನ್ನೂ ಕೆಲವು ಪತ್ರಗಳು ಬಂದಿರುವದರಿಂದ ಕೊಡಗಿನ ಭವಿಷ್ಯದ ಬಗ್ಗೆ ನನ್ನ ಅಭಿಪ್ರಾಯ ಮತ್ತು ನಾನು ಪ್ರತ್ಯೇಕವಾದಿಗಳ ಜೊತೆಯಲ್ಲಿ ನಿಯೋಗಗೋಷ್ಠಿ ಹೋದುದರ ಕಾರಣಗಳನ್ನು ಈ ಮೂಲಕ ಬರೆಯುತ್ತಿರುವೆನು.

ನಾನು ಮಹಾತ್ಮಾಗಾಂಧೀಜಿಯವರ ವಿಕೇಂದ್ರೀಕೃತ ಗ್ರಾಮ ಆಡಳಿತ ಯೋಜನೆಯಲ್ಲಿ ಅಚಲ ವಿಶ್ವಾಸವಿರುವವನು. ಕೇಂದ್ರೀಕೃತ ಆಡಳಿತದಲ್ಲಿ ಅಧಿಕಾರ ಒಂದೆಡೆ ಸೇರಿ ಆ ಅಧಿಕಾರ ಪಡೆದವರ ಅಂಕಿತದಲ್ಲಿ ಜನತೆ ಕುಣಿಯಬೇಕಾಗುತ್ತದೆ. ಆಳುವ ಮತ್ತು ಆಳಿಸಿಕೊಳ್ಳುವ ಪಂಗಡ ಉದ್ಭವವಾಗಿ ಕ್ರಮಶಃ ಘರ್ಷಣೆಗೆ ಎಡೆಕೊಟ್ಟು ಇದರಿಂದ ದೇಶದ ಶಾಂತಿಗೂ, ಜನತೆಯ ಪ್ರಗತಿಗೂ ಭಂಗಬರುತ್ತದೆ. ಆದ್ದರಿಂದ ಕೇಂದ್ರೀಕೃತ ಆಡಳಿತವು ಹಾನಿಕಾರಕವೆಂದು ಇತಿಹಾಸವೇ ಸಾಕ್ಷಿ ನೀಡುತ್ತಿದೆ. ಅದರಂತೆಯೇ ಕೇಂದ್ರೀಕೃತ ಔದ್ಯೋಗಿಕ ವಿಧಾನದಲ್ಲೂ ದುಡ್ಡು ಒಂದೆಡೆ ಸೇರಿ ಬಂಡವಾಳ ವಾದಕ್ಕೆ ಎಡೆಕೊಡುತ್ತದೆ. ಬಂಡವಾಳವಾದವೇ ಸಾಮ್ರಾಜ್ಯವಾದದ ಅಡಿಗಲ್ಲಾಗಿ ಅದೇ ಜಗತ್ತಿನ ಯುದ್ಧಗಳಿಗೂ, ಅಶಾಂತಿಗೂ ಕಾರಣವಾಗಿದೆ. ಯಾವದೇ ಅಧಿಕಾರವಾಗಲೀ, ಯಾವದೇ ಸಂಪತ್ತಾಗಲೀ, ಯಾವದೇ ವಿದ್ಯೆಯಾಗಲೀ ಕೆಲವೇ ಜನರಲ್ಲಿ ಕೇಂದ್ರೀಕೃತವಾಗುವದರಿಂದ ಅಪಾಯವಿದೆ. ಇಂದು ಪರಮಾಣು ಬಾಂಬಿನ ಗುಟ್ಟು ಕೆಲವು ರಾಷ್ಟ್ರಗಳ ಹಕ್ಕಾಗಿ ಪರಿಗಣಿಸಲ್ಪಟ್ಟಿರುವದರಿಂದ ಜಗತ್ತು ತಲ್ಲಣಗೊಳ್ಳಬೇಕಾಗಿ ಬಂದಿದೆ. ಈ ಕೇಂದ್ರೀಕೃತ ಯೋಜನೆಯ ಅಪಾಯವನ್ನು ಕಂಡೇ ಮಹಾತ್ಮಾಗಾಂಧೀಜಿಯವರು ವಿಕೇಂದ್ರೀಕೃತ ಗ್ರಾಮಪಂಚಾಯಿತ ಆಡಳಿತ ಪದ್ಧತಿಯ ರೂಪರೇಷೆಯನ್ನು ಚಿತ್ರಿಸಿ ಭಾರತೀಯರಾದ ನಮ್ಮ ಮುಂದೆ ಇಟ್ಟರು. ಈ ಯೋಜನೆಯ ಪ್ರಕಾರ ಹಳ್ಳಿಗಳೇ ಆಡಳಿತ ಘಟಕಗಳಾಗಿ ಸ್ವಯಂಪೂರ್ಣ ಆಡಳಿತ ನಡೆಸುವವು. ಇಂದಿನಂತೆ ಡೆಲ್ಲಿಯಿಂದ ಹೊರಡುವ ಒಂದು ಆಜ್ಞೆ ಇಡೀ ಜನತೆಯನ್ನು ಅಲ್ಲಾಡಿಸುವದರ ಬದಲು ಗ್ರಾಮದ ಜನರ ಅಭಿಪ್ರಾಯವು ಡೆಲ್ಲಿಯನ್ನು ಅಲ್ಲಾಡಿಸುವ ಪರಿಸ್ಥಿತಿ ಇದರಲ್ಲಿದೆ. ರಾಷ್ಟ್ರದ ಅಸ್ತಿವಾರವೇ ಗ್ರಾಮಗಳಾಗಿ ಈ ಅಸ್ತಿವಾರದ ಮೇಲೆ ತಾಲೂಕು, ಜಿಲ್ಲೆ, ಪ್ರಾಂತ, ದೇಶಗಳೆಂಬ ಗೋಪುರಗಳು ಕಟ್ಟಲ್ಪಡುವವು. ಆಗ ಆಳುವವರು ಗ್ರಾಮದ ಮತದಾರರು. ಅಧಿಕಾರ ಹೊತ್ತವರು ಈ ಮತದಾರರ ಸೇವಕರು. ಅಯೋಗ್ಯರಾದವರನ್ನು ತೆಗೆದು ಯೋಗ್ಯರಾದವರನ್ನು ಆರಿಸುವ ಹಕ್ಕು ಮತದಾರರಲ್ಲಿ. ಸರಕಾರದ ಎಲ್ಲ ಇಲಾಖೆಗಳೂ ಗ್ರಾಮಗಳಲ್ಲಿ. ನ್ಯಾಯ ತೀರ್ಪು, ಕಂದಾಯ ವಸೂಲಿ, ಪ್ರತಿಯೊಂದೂ ಗ್ರಾಮಗಳಲ್ಲಿ ಆಗುವದು. ಈ ರೀತಿಯ ಆಡಳಿತ ಕ್ರಮವನ್ನು ಭಾರತದಲ್ಲಿ ಜಾರಿಗೆ ತಂದರೆ ಅದೇ ರಾಮರಾಜ್ಯವಾಗುವದೆಂದು ಗಾಂಧೀಜಿಯವರ ಕಲ್ಪನೆ ಇತ್ತು. ಇದರಿಂದ ಭರತಖಂಡ ಮಾತ್ರ ಉದ್ಧಾರವಾಗಬೇಕೆಂಬುದು ಗಾಂಧೀಜಿಯವರ ಕಲ್ಪನೆಯಾಗಿರಲಿಲ್ಲ. ಇದರ ಮೂಲಕ ಜಗತ್ತಿನ ಯುದ್ಧಗಳಿಗೂ, ಪಾಶವೀ ಪಾಶ್ಚಿಮಾತ್ಯ ಕೋಳ ಸಂಸ್ಕೃತಿಗೂ ಅವರು ಉತ್ತರ ಕೊಟ್ಟಿದ್ದರು. ಬಾಪೂಜಿಯವರು ಭರತಖಂಡಕ್ಕೆ ಸ್ವಾತಂತ್ರ್ಯವನ್ನು ಒದಗಿಸಿಕೊಟ್ಟರಾದರೂ ಅದನ್ನು ರಾಮರಾಜ್ಯವಾಗಿ ಮಾಡಿ ಜಗತ್ತಿನ ಉದ್ಧಾರ ಮಾಡುವ ಸಂದರ್ಭವನ್ನು ನಾವು ಅವರಿಗೆ ಬಿಡಲಿಲ್ಲ. ಅವರ ಮಹಾಕಾರ್ಯದ ಮಧ್ಯದಲ್ಲೇ ಅವರ ಪವಿತ್ರ ಜೀವನವನ್ನು ಸಮಾಪ್ತಿಗೊಳಿಸಿದೆವು.

ಗಾಂಧೀಜಿಯವರು ಜೀವಂತ ಇದ್ದಿದ್ದರೆ ಈ ರೀತಿಯ ಆಡಳಿತ ಕ್ರಮಕ್ಕೆ ಹೆಚ್ಚಿನ ಚಾಲನೆ ದೊರೆಯುತ್ತಿತ್ತು. ಈ ದೃಷ್ಟಿಯಿಂದಲೇ ನಾನು ೧-೯-೪೭ ರಲ್ಲಿ 'ಕೊಡಗಿನ ಭವಿಷ್ಯ'ವೆಂಬ ಹೆಸರಿನಿಂದ ಬರೆದ ಪುಸ್ತಕದಲ್ಲಿ ಈ ರೀತಿ ಬರೆದೆನು. 'ಭಾರತ ಸರಕಾರದ ರೂಪರಚನೆ ಗಾಂಧೀ ಆಡಳಿತ ಯೋಜನೆಯಂತೆ ಆಗದಿದ್ದರೆ ಕೊಡಗಿನವರು ಆ ರೀತಿಯ ಯೋಜನೆಯೊಂದನ್ನು ಕೊಡಗಿನಲ್ಲಿ ಜಾರಿಗೆ ತರುವ ಪ್ರಯತ್ನ ಮಾಡಿದರೆ ಅದರ ಫಲಿತಾಂಶದಿಂದ ಇಡೀ ಭರತಖಂಡಕ್ಕೆ ಲಾಭವಾಗುವದು. ಕೊಡಗಿನವರು ಇಂದಿರುವ ಭಿನ್ನಭಾವಗಳನ್ನು ಬಿಟ್ಟು ಏಕೀಕೃತರಾಗಿ ಈ ಯೋಜನೆಯನ್ನು ಆಡಳಿತದಲ್ಲಿ ತರಬೇಕು. ಕೊಡಗು ಅದಕ್ಕೆ ಆದರ್ಶಪ್ರಾಂತವಾಗಿದೆ. ಇಂದಿಗೂ ಕೊಡಗಿನಲ್ಲಿ ಹಳೆಯ ಗ್ರಾಮ ಪಂಚಾಯಿತ ಸಭೆಗಳಿವೆ'

ಕೇಂದ್ರ ಸರಕಾರವು ಗಾಂಧೀ ಆಡಳಿತ ಯೋಜನೆಯನ್ನು ಜಾರಿಯಲ್ಲಿ ತರುವ ಸಾಧ್ಯತೆಯ ಬಗ್ಗೆ ನನ್ನ ಮನಸ್ಸಿನಲ್ಲಿ ಸಂಶಯವಿದ್ದರೂ ಇಂದಿನಂತೆ ಅದನ್ನು ಪೂರ್ಣ ಮರೆತುಬಿಡುವರೆಂಬ ಕಲ್ಪನೆ ನನ್ನಲ್ಲಿರಲಿಲ್ಲ. ಆದ್ದರಿಂದಲೇ ಈ ಯೋಜನೆಯನ್ನು ಸರಕಾರವು ಅನುಸರಿಸಿದರೆ ಸಂಯೋಜನೆಯ ವಿಭಜನೆಯ ಪ್ರಶ್ನೆಗಳು ಬಾರವು ಎಂದು ಬರೆದಿದ್ದೆನು. ಯಾಕೆಂದರೆ ಪ್ರತಿ ಗ್ರಾಮಗಳು ಸ್ವತಂತ್ರವಾಗಿದ್ದರೂ ತಾಲೂಕೆಂಬ ವೇದಿಕೆಯಲ್ಲಿ ಒಂದಾಗಿ, ಪ್ರತಿ ತಾಲೂಕುಗಳು ಬೇರೆಯಾದರೂ ನಾಡೆಂಬ ವೇದಿಕೆಯಲ್ಲಿ ಏಕವಾಗಿ, ಪ್ರತಿ ನಾಡುಗಳು ಪ್ರಾಂತದಲ್ಲಿ, ಪ್ರಾಂತಗಳು ದೇಶೀ ಆಡಳಿತ ವೇದಿಕೆಯಲ್ಲಿ ಸಮಾವೇಶವಾಗಿ ವಿವಿಧತೆಯಲ್ಲಿ ಏಕತೆಯನ್ನು ಹೊಂದುವು ಅನುವಿತ್ತು.

ರಾಜ್ಯ ಘಟನಾ ಸಭೆಯು ರಾಜ್ಯಘಟನೆಯಲ್ಲಿ ಗ್ರಾಮ ರಾಜ್ಯಾಡಳಿತ ಪದ್ಧತಿಗೆ ಅನುಮಾಡುವ ತಿದ್ದುಪಡಿಯನ್ನು ಸೇರಿಸಿದ ಸಹಜ. ಆದರೆ ಕೇಂದ್ರವಾಗಲೀ ಪ್ರಾಂತಗಳಾಗಲೀ ಈ ರಾಜ್ಯ ಯೋಜನೆಯನ್ನು ಜಾರಿಯಲ್ಲಿ ತರಲು ಬದ್ಧವಾಗಿಲ್ಲ. ಆದ್ದರಿಂದ ಕೇಂದ್ರ ಸರಕಾರವು ಈ ತಳಹದಿಯಿಂದ ರಚಿಸಲ್ಪಡುವ ಸಾಧ್ಯತೆ ಇಲ್ಲ. ಪ್ರಾಂತಗಳೂ ಕೂಡ ಸದ್ಯದ ಪರಿಸ್ಥಿತಿಯಲ್ಲಿ ಈ ಯೋಜನೆಯನ್ನು ಒಪ್ಪುವಂತಿಲ್ಲ. ಕೊನೆಗೆ ಗಾಂಧೀ ಆಡಳಿತ ಯೋಜನೆಗೆ ಘಟನೆಯಲ್ಲಿ ಆಸ್ಪದ ಕೊಟ್ಟಿದ್ದರೂ ಪ್ರಾಂತಗಳಲ್ಲಾದರೂ ಅದು ಜಾರಿಯಲ್ಲಿ ಬಂದೀತೆಂಬುದು ಸಂಶಯದ ಮಾತು. ಅಂದರೆ ಭಾಷಾವಾರು ತಳಹದಿಯ ಮೇಲೆ ಕರ್ನಾಟಕ ಪ್ರಾಂತವಾದರೆ ಅದಾಗಲೀ, ಮೈಸೂರಾಗಲೀ ಈ ಯೋಜನೆಯನ್ನು ಜಾರಿಯಲ್ಲಿ ತರುವಂತೆ ತೋರುವದಿಲ್ಲ. ಸೂಕ್ಷ್ಮದಲ್ಲಿ ಹೇಳಬೇಕಾದರೆ ಗಾಂಧೀಜಿಯವರನ್ನು ನಾವು ಮರೆಯುತ್ತಿರುವೆವು. ಅವರು ಹಾಕಿಕೊಟ್ಟ ಆದರ್ಶಗಳನ್ನು ಗಾಳಿಗೆ ಚೆಲ್ಲುತ್ತಿರುವೆವು. ಅಹಿಂಸೆಯ ಕೊಲೆಯಾಗುತ್ತಿದೆ. ಸತ್ಯದ ಸಾವು ಸಾವಿರ ದಿಕ್ಕುಗಳಲ್ಲಿಯೂ ಆಗುತ್ತಿದೆ. ಅವರ ಜೀವದ ಜೀವಾಳವಾಗಿದ್ದ ಸತ್ಯ, ಅಹಿಂಸೆಗಳ ಗತಿಯೇ ಹೀಗಾದ ಮೇಲೆ ಈ ತಳಹದಿಯಲ್ಲಿ ಕಟ್ಟಲ್ಪಟ್ಟ ಸ್ವದೇಶೀ ರಾಜ್ಯ ಯೋಜನೆಗೆ ಉಳಿವೆಲ್ಲಿ?

ಆದ್ದರಿಂದ ಕೊಡಗು ಭಾವೀ ಕರ್ನಾಟಕದ ಇಲ್ಲವೇ ಮೈಸೂರಿನ ಅಂಗವಾದರೆ ಆಯಾ ಪ್ರಾಂತಗಳ ಆಡಳಿತ ಪದ್ಧತಿಯೇ ಜಾರಿಯಲ್ಲಿ ಬರುವದು. ಗಾಂಧೀ ರಾಜ್ಯ ಆಡಳಿತ ಯೋಜನೆಯನ್ನು ಕೊಡಗಿನಲ್ಲಿ ಜಾರಿಯಲ್ಲಿ ತರುವ ಸಾಧ್ಯತೆಯು ತಪ್ಪುವದು. ಇದರಿಂದ ಕೊಡಗಿಗೆ ಮಾತ್ರವಲ್ಲ; ಕರ್ನಾಟಕ, ಭರತಖಂಡ ಏಕೆ? ಜಗತ್ತಿಗೇ ಹಾನಿಯಾಗುವದು. ಕೊಡಗಿನಲ್ಲಿ ಈ ರಾಜ್ಯಭಾರ ಪದ್ಧತಿಯನ್ನು ಜಾರಿಯಲ್ಲಿ ತಂದು ಕೊಡಗಿನ ಯಾವದಾದರೂ ಕೋಮಿಗೆ ಹಿತಮಾಡುವ ಸಾಧ್ಯತೆ ಇಲ್ಲ. ಏಕೆಂದರೆ ಮೇಲೆ ಹೇಳಿದಂತೆ ಇದು ಜನತೆಯ ಆಡಳಿತ; ಅಧಿಕಾರ ಹೊತ್ತವರು ಜನರ ಸೇವಕರು. ಇಲ್ಲವೇ ಇದು ಕೊಡಗನ್ನು ಹೇಗಾದರೂ ಮಾಡಿ ಪ್ರತ್ಯೇಕ ಇಟ್ಟುಕೊಳ್ಳಬೇಕೆಂಬ ಸೋಗೂ ಅಲ್ಲ. ತಾ. ೧-೯-೪೭ರಲ್ಲಿ 'ನ 'ಕೊಡಗಿನ ಭವಿಷ್ಯ' ಪುಸ್ತಕ ಬರೆದುದನ್ನೇ ಇಲ್ಲಿ ಪುನಃ ಉದ್ಧರಿಸುವೆನು.

'ಕೊಡಗಿನವರಿಗೆ ಅಮೂಲ್ಯವಾದ ಒಂದು ಅವಕಾಶ ದೊರೆಯಲಿದೆ. ಅದನ್ನು ಒದಗಿಸಿಕೊಳ್ಳುವದು ಕೊಡಗಿನವರಾದ ನಮ್ಮ ಕೈಯಲ್ಲಿದೆ. ಗಾಂಧೀಜಿಯವರ ಸ್ವದೇಶೀ ರಾಜ್ಯಘಟನಾ ಯೋಜನೆಯನ್ನು ರಾಜ್ಯಘಟನಾ ಸಮಿತಿಯು ಒಪ್ಪದೆ ಭಾರತಕ್ಕೆ ಬೇರೊಂದು ರಾಜ್ಯಪದ್ಧತಿಯನ್ನು ರೂಪಿಸುವದಾದರೆ ಗಾಂಧೀ ಯೋಜನೆಯನ್ನು ಕೊಡಗಿನಲ್ಲಿಯಾದರೂ ಜಾರಿಗೆ ತರುವ ಯತ್ನವನ್ನು ಕೊಡಗಿನವರು ಮಾಡಬೇಕು....... ಕೊಡಗಿನಲ್ಲಿ ಈ ರೀತಿಯ ಒಂದು ಸರಕಾರವಾದರೆ ಅದು ಭರತಖಂಡಕ್ಕೆ ಮಾತ್ರ ಆದರ್ಶಪ್ರಾಯವಾಗುವದಲ್ಲ. ಇಡೀ ಜಗತ್ತಿಗೆ ಮಾದರಿಯಾಗುವದು. ಕೊಡಗು ಜಗತ್ತಿನ ಚಿತ್ರಭಿತ್ತಿಯಲ್ಲಿ ತನ್ನದೇ ಆದ ಒಂದು ಸ್ಥಾನವನ್ನು ಪಡೆದು ಜಗತ್ತಿಗೆ ಮಾರ್ಗದರ್ಶಕವಾಗುವ ಒಂದು ಸೌಭಾಗ್ಯವನ್ನು ಒದಗಿಸಿಕೊಡುವ ಜವಾಬ್ದಾರಿ ಕೊಡಗಿನ ನಿವಾಸಿಗಳಾದ ನಮ್ಮ ಮೇಲಿದೆ. ನಾವು ನಮ್ಮ ಕಿಂಚಿತ್ ದೃಷ್ಟಿಯನ್ನು ಬಿಟ್ಟು ಪ್ರಯತ್ನಿಸಿದರೆ ಇದಕ್ಕೆ ಮಹಾತ್ಮಾಗಾಂಧೀಜಿಯವರು ಒಪ್ಪಿಗೆ ಕೊಟ್ಟಾರು. ಈ ಯೋಜನೆಯ ಕರ್ತಗಳಾದ ಶ್ರೀ ಮನ್ನಾರಾಯಣ ಅಗರ್‌ವಾಲಾ ಮೊದಲಾದವರು ಮಾರ್ಗದರ್ಶನ ಮಾಡಿಯಾರು.'

ಹಿಂದೂದೇಶದ ಯಾವದೇ ಪ್ರಾಂತಗಳು ಈ ರಾಜ್ಯಯೋಜನೆಯನ್ನು ಜಾರಿಯಲ್ಲಿ ತರುವ ಸಾಧ್ಯತೆ ಸದ್ಯಕ್ಕೆ ತೋರಿಬಾರದಿರುವ ಕಾರಣ

(೬ನೇ ಪುಟ ನೋಡಿರಿ)

ಕೊಡಗು

ತಾ. ೭-೧-೧೯೪೯ನೇ ಶುಕ್ರವಾರ

ಬತ್ತದ ಬೆಲೆ.

ಕೇಂದ್ರ ಮತ್ತು ಪ್ರಾಂತೀಕ ಸರಕಾರಗಳ ಆರ್ಥಿಕ ಮಂತ್ರಿಗಳ ಸಮ್ಮೇಳನವೊಂದು ಆಹಾರ ಧಾನ್ಯಗಳ ಬೆಲೆ ನಿಶ್ಚಯಿಸುವ ಬಗ್ಗೆ ಕೆಲವು ತಿಂಗಳ ಹಿಂದೆ ಡೆಲ್ಲಿಯಲ್ಲಿ ನಡೆದು ಆಹಾರ ಪದಾರ್ಥಗಳ ಬೆಲೆಯನ್ನು ಏರಿಸುವದು ಅನವಶ್ಯವೆಂದೂ, ೧೯೪೭ ರಲ್ಲಿದ್ದ ಬೆಲೆಯ ಶೇಕಡ ೨೫ ರಷ್ಟು ಸಾಧಾರಣವಾಗಿ, ಶೇಕಡ ೫೦ ರಷ್ಟು ವಿಶೇಷ ಸಂದರ್ಭದಲ್ಲಿ ಏರಿಸಬಹುದೆಂದು ತೀರ್ಮಾನಿಸಿದ್ದರು. ಈ ತೀರ್ಮಾನದಂತೆ ನಮ್ಮ ಸ್ಥಳೀಯ ಸರಕಾರದವರು ೧೯೪೭ ರಲ್ಲಿದ್ದ ಬೆಲೆ ಗಾಡಿಗೆ ರೂ. ೧೨೫ ರ ಶೇಕಡ ೨೫ ರಷ್ಟು ಅಂದರೆ ಗಾಡಿಗೆ ರೂ. ೧೫೬|- ರೂಪಾಯಿ ಏರಿಸಲು ಶಿಫಾರಸ್ಸು ಮಾಡಿದರು. ನಂತರ ಕೊಡಗು ನ್ಯಾಯವಿಧಾಯಕ ಸಭೆಯಲ್ಲಿ ಬತ್ತದ ಬೆಲೆಯನ್ನು ಗಾಡಿಗೆ ರೂ ೨೦೦ ಕ್ಕೆ ಏರಿಸಬೇಕೆಂದು ಸರ್ವಸಮ್ಮತದಿಂದ ಪಾಸಾಯಿತು. ಇದನ್ನು ಕೇಂದ್ರ ಸರಕಾರಕ್ಕೆ ಸ್ಥಳೀಯ ಸರಕಾರವು ಕಳುಹಿಸಿತ್ತು. ಆದರೆ ಸ್ಥಳೀಯ ಸರಕಾರವು ಮೊದಲೇ ಗಾಡಿಗೆ ರೂ. ೧೫೬ ಎಂದು ಶಿಫಾರಸ್ಸು ಮಾಡಿದ್ದ ಕಾರಣ ಕೌನ್ಸಿಲ್ ನಿರ್ಣಯಕ್ಕೆ ತಮ್ಮ ಶಿಫಾರಸ್ಸನ್ನು ಕೊಟ್ಟಿರಲಿಲ್ಲ. ಇಷ್ಟರಲ್ಲಿ ಕೊಡಗು ಸಹಕಾರಿ ಫೆಡರೇಶನ್ ಮತ್ತು ಕಾಮರ್ಸ್ ಎಸೋಸಿಯೇಶನ್‌ನ ಪ್ರತಿನಿಧಿಗಳು ಬತ್ತದ ಕ್ರಯವನ್ನು ರೂ. ೨೦೦ ಕ್ಕೆ ಏರಿಸಬೇಕೆಂದು ಇಂಡಿಯಾ ಸರಕಾರದ ಆಹಾರ ಮಂತ್ರಿಗಳಲ್ಲಿಗೆ ನಿಯೋಗಗೋಷ್ಠಿ ಹೋಗಿದ್ದರು. ಆದರೆ ಅಷ್ಟರೊಳಗೆ ಇಂಡಿಯಾ ಸರಕಾರದವರು ಸ್ಥಳೀಯ ಸರಕಾರದ ಶಿಫಾರಸ್ಸಾದ ರೂ. ೧೫೬ನ್ನು ಮಂಜೂರುಮಾಡಿದ್ದರು.

ಅದೇ ಸಮಯದಲ್ಲಿ ಮೈಸೂರಿನಲ್ಲಿ ಗಾಡಿಗೆ ರೂ ೨೨೦|-, ಮಲಬಾರಿನಲ್ಲಿ ರೂ. ೨೦೦|-, ಮತ್ತು ಮದ್ರಾಸಿನಲ್ಲಿ ಸರಾಸರಿ ರೂ. ೧೬೩-೮-೦ ಯಂತೆ ಬೆಲೆ ನಿಶ್ಚಯಿಸಿದೆಯೆಂದು ತಿಳಿದು ಬಂತು. ಕೂಡಲೇ ಸ್ಥಳೀಯ ಸರಕಾರದವರು ತಮ್ಮ ಮುಖಾಂತರ ನಿಯೋಗಗೋಷ್ಠಿಯವರು ಇಂಡಿಯಾ ಸರಕಾರಕ್ಕೆ ಕಳುಹಿಸಿದ ಅಪೀಲಿನ ಮೇಲೆ ಕೊಡಗಿನಲ್ಲಿ ಗಾಡಿಗೆ ರೂ. ೧೮೭-೮-೦ ಯಷ್ಟು ನಿಶ್ಚಯಮಾಡಬೇಕೆಂದು ಶಿಫಾರಸ್ಸು ಮಾಡಿದರು. ಆದರೂ ಕೂಡ ಇಂಡಿಯಾ ಸರಕಾರದವರು ಬೆಲೆಯನ್ನು ೧೯೪೭ರ ಬೆಲೆಯ ಶೇಕಡ ೫೦ ರಷ್ಟು ಏರಿಸಲು ತಯಾರಾಗಿರಲಿಲ್ಲ. ನಿಯೋಗ ಗೋಷ್ಠಿಯವರು ಕೊಡಗಿನ ರೈತರ ಸ್ಥಿತಿಗತಿಯನ್ನು ವಿವರಿಸಿ ಮತ್ತು ನೆರೆ ಪ್ರಾಂತಗಳಲ್ಲಿರುವ ಬೆಲೆಯನ್ನು ಹೋಲಿಸಿ ಕೊಡಗಿಗೆ ಕಡಿಮೆ ೧೮೭-೮-೦ ಯಷ್ಟಾದರೂ ಮಂಜೂರು ಮಾಡದಿದ್ದರೆ ರೈತರ ಸ್ಥಿತಿಯು ಬಹುಮಟ್ಟಿಗೆ ಕೆಡುವದೆಂದು ಇಂಡಿಯಾ ಸರಕಾರಕ್ಕೆ ಮನದಟ್ಟು ಮಾಡಿದುದರಿಂದ ಈ ಬೆಲೆಯನ್ನು ಮಂಜೂರ್ಮಾಡಿರುವರು

ಈ ಪ್ರಯತ್ನದ ಫಲಿತಾಂಶವಾಗಿ ಅಂದರೆ ಕೊಡಗಿನಿಂದ ಹೊರಗೆ ಮಾರಲು ಅಂದಾಜು ಮಾಡಿರುವ ಸುಮಾರು ೨೫೦೦೦ ಗಾಡಿ ಬತ್ತಕ್ಕೆ ಸ್ಥಳೀಯ ಸರಕಾರದ ಮೊದಲಿನ ಶಿಫಾರಸಿನ ಮೇರೆ ಸುಮಾರು ೩೯ ಲಕ್ಷ ರೂಪಾಯಿ, ನಂತರ ನಿಯೋಗಗೋಷ್ಠಿಯವರ ಪ್ರಯತ್ನದಿಂದ ೭¾ ಲಕ್ಷ ರೂಪಾಯಿ ಹೆಚ್ಚು ದೊರೆಯುವಂತಾಗಿದೆ. ಈ ಆದಾಯಕ್ಕಾಗಿ ದೇಶದವರು ಸ್ಥಳೀಯ ಮತ್ತು ಕೇಂದ್ರ ಸರಕಾರಗಳಿಗೂ, ನಿಯೋಗ ಗೋಷ್ಠಿಯವರಿಗೂ ಕೃತಜ್ಞರಾಗಿರಬೇಕು.

ಈ ಏರಿಕೆಯಿಂದ ಕೊಂಡುಕೊಂಡು ಉಪಯೋಗಿಸುವವರ ಸ್ಥಿತಿಯನ್ನೂ ಮರೆಯಕೂಡದೆಂದು ನಿಯೋಗದವರು ಸರಕಾರಕ್ಕೆ ಮನದಟ್ಟು ಪಡಿಸಿರುವರು. ಕನಿಷ್ಟಪಕ್ಷ ರೂಪಾಯಿಗೆ ಮೂರರಿಂದ ಮೂರುವರೆ ಸೇರಿನಂತೆ ಅಕ್ಕಿಯನ್ನು ಪೂರುವ ಏರ್ಪಾಡನ್ನು ಸರಕಾರದವರು ಮಾಡಬೇಕೆಂದೂ, ಇದರಿಂದಾಗುವ ಹೆಚ್ಚಿನ ಖರ್ಚನ್ನು ಸರಕಾರದವರೇ ವಹಿಸಿಕೊಳ್ಳಬೇಕೆಂದೂ, ಇದಕ್ಕಾಗಿ ಇಂಡಿಯಾ ಸರಕಾರದಿಂದ ದೊರೆಯುವ "ಫುಡ್ ಬೋನಸ್" ನ್ನು ಉಪಯೋಗಿಸುವ ಏರ್ಪಾಡು ಮಾಡಬೇಕೆಂದೂ ಸೂಚಿಸಿರುವರು. ಸರಕಾರದವರು ಇದಕ್ಕೆ ಗಮನವಿತ್ತು ಕೊಂಡುಕೊಳ್ಳುವವರಿಗೂ ಕಷ್ಟ ಬಾರದಂತೆ ನೋಡಿಕೊಳ್ಳುವರಾಗಿ ಆಶಿಸಲಾಗಿದೆ.

ವರ್ತಮಾನ.

ಐಯ್ಯಂಗೇರಿ ಗ್ರಾಮದ ಶ್ರೀ ಚಿನ್ನತಪ್ಪ ದೇವರ ವರ್ಷಾವಧಿ ಹಬ್ಬವು ಇದೇ ೧೯೪೯ನೇ ಇಸವಿ ಫೆಬ್ರುವರಿ ೧೯ರಿಂದ ಪ್ರಾರಂಭವಾಗಿ ದೊಡ್ಡ ಹಬ್ಬವು ತಾರೀಕು ೨೧-೨-೪೯ರಲ್ಲೂ, ಕಡೇ ಹಬ್ಬವು ತಾ. ೨೨-೨-೪೯ರಲ್ಲು ನಡೆಯುವದು.

'ಬೆಂಗಳೂರು ಸೆಂಟ್ರಲ್ ಕಾಲೇಜು ಉತ್ಸವದಲ್ಲಿ ನಡೆದ ಆಟೋಟಗಳ ಸ್ಪರ್ಧೆಯಲ್ಲಿ ಅಲ್ಲಿಯೇ ಬಿ. ಎಸ್‌ಸಿ. (ಆನರ್ಸ್) ವ್ಯಾಸಂಗ ಮಾಡುತ್ತಿರುವ ಶ್ರೀ ಮಾಟೀರಿ ಪಿ. ಮಂಜುನಾಥರವರು ಭಾರದ ಕಲ್ಲು ಎಸೆಯುವದು ಮತ್ತು ಡಿಸ್ಕಸ್ ಎಸೆಯುವದರಲ್ಲಿ ಮೊದಲನೆ ಬಹುಮಾನಗಳನ್ನು ಪಡೆದಿರುವರು.

ಹೆಚ್ಚು ಆಹಾರ ಬೆಳೆಯುವ ಯೋಜನೆ ಮೇರೆ ಆಹಾರ ಪದಾರ್ಥಗಳನ್ನು ಬೆಳೆಯಲು ನೀರು ಹಾಯಿಸುವ ಎಂಜಿನು ಮತ್ತು ಪಂಪು ಇಟ್ಟುಕೊಂಡಿರುವ ರೈತರಿಗೆ ಸಕಾಲದಲ್ಲಿ ಅವರವರ ಎಂಜಿನಿಗೆ ಬೇಕಾದ ಎಣ್ಣೆಯನ್ನು ಒದಗಿಸಿಕೊಡಲು ತಕ್ಕ ಏರ್ಪಾಡು ಮಾಡುವ ಬಗೆ ಎಂಜಿನು ಇಟ್ಟುಕೊಂಡಿರುವವರು ಈ ಕೆಳಗಿನ ತಪಶೀಲುಗಳೊಡನೆ ಕೊಡಗು ವ್ಯವಸಾಯ ಇಲಾಖೆಗೆ ಅರ್ಜಿ ಹಾಕಿಕೊಳ್ಳಬಹುದೆಂದು ಈ ಮೂಲಕ ತಿಳಿಸಿದ್ದಾರೆ. ಅರ್ಜಿಯಲ್ಲಿ ಅವರವರು ಇಟ್ಟುಕೊಂಡಿರುವ ಎಂಜಿನು ಯಾವ ಮಾದರಿಯದು, ಅದಕ್ಕೆ ಉಪಯೋಗಿಸಲ್ಪಡುವ ಎಣ್ಣೆ ಎಂಥಾದು ಮತ್ತು ಅಂಥಾ ಎಂಜಿನಿಗೆ ಒಂದು ವರ್ಷಕ್ಕೆ ಎಷ್ಟು ಎಣ್ಣೆ ಬೇಕಾಗುತ್ತದೆ, ಎಂಬುವುದನ್ನು ಕೋರಿಸಬೇಕು. ಎಣ್ಣೆಯ ಲೆಕ್ಕಾಚಾರವನ್ನು ತಿಂಗಳುವಾರು ಕೊಡುವುದು ಉತ್ತಮ. ಮತ್ತು ಬರುವ ವರ್ಷ ಎಂಜಿನು ಮತ್ತು ಪಂಪು ತರಿಸುವ ಅಭಿಪ್ರಾಯವಿದ್ದಲ್ಲಿ ಇಷ್ಟೇ ಎಂಜಿನು ತರಿಸುವದು ಅದಕ್ಕೆ ಎಷ್ಟು ಗೆಲನ್ ಎಣ್ಣೆ ಬೇಕಾದೀತು ಎಂಬುವುದನ್ನು ಸಹ ತಿಳಿಸಬೇಕಾಗಿ ಈ ಮೂಲಕ ಕೋರಿದೆ.

ತಾ. ೨೨-೧-೪೯ರಿಂದ ಮೂರು ವರ್ಷಗಳ ವರೆಗೆ ಶ್ರೀ ಎನ್. ಆರ್. ಗೋಪಾಲಕೃಷ್ಣರವರನ್ನು ಗವರ್ನಮೆಂಟ್ ಲಾಯರು ಮತ್ತು ಪಬ್ಲಿಕ್ ಪ್ರಾಸಿಕ್ಯೂಟರಾಗಿ ನೇಮಿಸಲಾಗಿದೆ.

ಮದ್ರಾಸ್ ಏರ್ಯಾದ ಮಿಲಿಟರಿ ಅಧಿಕಾರಿಗಳು ದಕ್ಷಿಣ ಮತ್ತು ಉತ್ತರ ಭಾರತದ ಮಿಲಿಟರಿ ಕೇಂದ್ರಗಳಲ್ಲಿ ಸಂಗೀತ ಖಚೇರಿಗಾಗಿ ಶ್ರೀ ಚೆಕ್ಕೆರ ಅಪ್ಪಯ್ಯನವರನ್ನು ಆಹ್ವಾನಿಸಿರುವರು.

ಮಡಿಕೇರಿ ಮಹದೇವ ಪೇಟೆಯಲ್ಲಿ ಚಿನ್ನದ ಕೆಲಸಮಾಡುತ್ತಿರುವ ಶ್ರೀ ಶ್ಯಾಮಾಚಾರಿ ಎಂಬವರ ಮನೆಗೆ ತಾ. ೩ರಲ್ಲಿ ಯಾರೋ ನುಗ್ಗಿ ಸುಮಾರು ೨½ ಸಾವಿರ ರೂಪಾಯಿಗಳನ್ನೂ ಸುಮಾರು ೧ ಸಾವಿರ ರೂಪಾಯಿಯ ಚಿನ್ನ ಮತ್ತು ನಗಗಳನ್ನು ಅಪಹರಿಸಿರುವರು. ಪೋಲೀಸ್ ತನಿಖೆ ನಡೆಯುತ್ತಿದೆ.

ಮಡಿಕೇರಿ ರಾಜರ ಗದ್ದುಗೆಯ ಪೂಜೆಗಾರರ ಮನೆಯಿಂದ ತಾ. ೫ರಲ್ಲಿ ಸುಮಾರು ೨೦೦೦ ರೂಪಾಯಿಗಳನ್ನು ಅಪಹರಿಸಲಾಗಿದ್ದು ಕಳವು ಮಾಡಿದವರನ್ನು ಪೋಲೀಸರು ಸಿದ್ದಾಪುರದಲ್ಲಿ ದಸ್ತಗಿರಿ ಮಾಡಿರುವದಾಗಿ ವರ್ತಮಾನ.

ಕೊಡಗಿನ ಚೀಫ್ ಕಮಿಷನರಾದ ದಿ. ಬ. ಸಿ. ಟಿ. ಮೊದಲಿಯಾರರು ಪಳನಿ ದೇವಸ್ಥಾನಕ್ಕೆ ಹೋಗುತ್ತಿದ್ದಾಗ ತಾ ೩ರಲ್ಲಿ ಹುಣಸೂರಿನಲ್ಲಿ ಆಕಸ್ಮಾತ್ ಹತ್ತು ವರ್ಷದ ಹುಡುಗಿಯೊಂದು ಅವರ ಕಾರಿಗೆ ಸಿಕ್ಕಿ ಮೃತವಾಯಿತೆಂದು ತಿಳಿದು ಬಂದಿದೆ.

ಡಾ. ತೀತಿರ ಮೇದಪ್ಪನವರನ್ನು ಕಳೆದ ತಾ. ೧೨-೭-೪೮ ರಿಂದ ಕೊಡಗಿನ ಸಿವಿಲ್ ಸರ್ಜನರಾಗಿ ಖಾಯಂ ಮಾಡಿರುವದಾಗಿ ಇಂಡಿಯಾ ಗಜೆಟಿನಲ್ಲಿ ಪ್ರಕಟವಾಗಿದೆಯೆಂದು ತಿಳಿಯ ಬರುತದೆ.

ಲೆ. ಜ. ಕೆ. ಎಂ. ಕಾರ್ಯಪ್ಪನವರಿಗೆ ತಾರೀಕು ೩ರಲ್ಲಿ ಪೊಳ್ಳಿಬೆಟ್ಟ, ವೀರಾಜಪೇಟೆ, ಪೊನ್ನಂಪೇಟೆ, ಬಿಟ್ಟಂಗಾಲದಲ್ಲೂ, ತಾ. ೪ರಲ್ಲಿ ಮೂರ್ನಾಡಿನಲ್ಲೂ ಬಿನ್ನವತ್ತಳೆಯನ್ನರ್ಪಿಸಿ ಸ್ವಾಗತಿಸಿದರು.

ಕೊಡಗಿನಲ್ಲಿ ಬತ್ತದ ಬೆಲೆಯನ್ನು ಗಾಡಿಗೆ ರೂ. ೧೮೭-೮-೦ ನಿಶ್ಚಯಿಸಿರುವರು.

ಅ. ಭಾ. ಕಾಂ ವರ್ಕಿಂಗ್ ಕಮಿಟಿ ರಚನೆ.

ಕೆಳಗೆ ಕಂಡ ಸದಸ್ಯರನ್ನೊಳಗೊಂಡ ಅಖಿಲ ಭಾರತ ಕಾಂಗ್ರೆಸ್ಸಿನ ವರ್ಕಿಂಗ್ ಕಮಿಟಿಯನ್ನು ಕಾಂಗ್ರೆಸ್ ಅಧ್ಯಕ್ಷರು ರಚಿಸಿದ್ದಾರೆ.

ಪಂಡಿತ ಜವಾಹರ್‌ಲಾಲ್ ನೆಹರೂ, ಸರ್ದಾರ್ ವಲ್ಲಭಭಾಯಿ ಪಟೇಲ್, ಮೌಲಾನಾ ಅಜಾದ್, ರಾಫಿ ಅಹಮದ್ ಕಿದ್ವಾಯಿ, ಜಗಜೀವನ ರಾಂ, ಪಂಡಿತ್ ಗೋವಿಂದ್ ವಲ್ಲಭ್ ಪಂತ್, ಸರ್ದಾರ್ ಪ್ರತಾಪ್ ಸಿಂಗ್, ಡಾ. ರಾಜೇಂದ್ರ ಪ್ರಸಾದ್, ಡಾ. ಪಿ. ಸಿ. ಘೋಷ್, ಶಂಕರ್‌ರಾವ್‌ದೇವ್, ಶ್ರೀಮತಿ ಸುಚೇತಾ ಕೃಪಲಾನಿ, ಕಾಳಾ ವೆಂಕಟರಾವ್, ಎಸ್. ಕೆ. ಪಾಟೀಲ್, ಎನ್. ಜಿ. ರಂಗಾ, ಕಾಮರಾಜ ನಾದಾರ್, ದೇವೇಶ್ವರ ಶರ್ಮ (ಅಸ್ಸಾಂ ಪ್ರಾಂತ ಸಮಿತಿ ಅಧ್ಯಕ್ಷರು) ಎಸ್. ನಿಜಲಿಂಗಪ್ಪ (ಕರ್ನಾಟಕ) ರಾಮ್ ಸಹಾಯ್ (ಮಾಳ್ವಾ) ಇವರುಗಳು.

ಸಾರ್ವಜನಿಕ ಮೀಟಿಂಗು.

ಈ ತಾ. 5ನೇ ಬುಧವಾರ ಮಧ್ಯಾಹ್ನ 2 ಗಂಟೆಗೆ ವೀರಾಜಪೇಟೆ ರೀಡಿಂಗ್ ರೂಮ್ ಎದುರುಗಡೆಯಲ್ಲಿ ಒಂದು ಸಾರ್ವಜನಿಕ ಮೀಟಿಂಗು ನಡೆಯಿತು. ಶ್ರೀ. ಬಿದ್ದಂಡ ಸುಬ್ಬಯ್ಯನವರು ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದರು. ಅಧ್ಯಕ್ಷರ ಕೋರಿಕೆ ಮೇರೆ ಶ್ರೀ. ಪಿ. ಐ. ಬೆಳ್ಯಪ್ಪನವರು, ಶ್ರೀ. ಬಿ. ಪಿ. ಬೋಪಯ್ಯನವರು ಮತ್ತು ತಾವು ಕೆಲವು ದಿನಗಳ ಹಿಂದೆ ಡೆಲ್ಲಿಗೆ ಹೋಗಿ, ಬತ್ತದ ಬೆಲೆಯನ್ನು ಗಾಡಿಗೆ ರೂ. ೧೮೭-೮-೦ ಕ್ಕೆ ಏರಿಸಲು ಮಾಡಿದ ಪ್ರಯತ್ನವನ್ನೂ, ಅದೇ ಸಮಯದಲ್ಲಿ ಕೊಡಗಿನ ಕಾಲೇಜಿಗೆ ಇಂಡಿಯಾ ಸರ್ಕಾರದ ಮಂಜೂರಾತಿಗಾಗಿ ಮಾಡಿದ ಯತ್ನವನ್ನೂ ಮತ್ತು ಪಂಡಿತ ನೆಹರೂರವರನ್ನು ಬೆಂಗಳೂರಿನಲ್ಲಿ ಭೇಟಿಯಾಗಿ ಕೊಡಗಿನ ಭವಿಷ್ಯತ್ತಿನ ವಿಚಾರ ಡೆಪ್ಯುಟೇಶನಿನವರು ನಡೆಸಿದ ಮಾತುಕತೆಯನ್ನೂ ವಿವರಿಸಿ ಹೇಳಿದರು.

ನಂತರ ಶ್ರೀ ಪಳಂಗಂಡ ನಂಜಪ್ಪನವರು 'ಬತ್ತದ ಬೆಲೆಯನ್ನು ಗಾಡಿಗೆ ರೂ. ೧೮೭-೮-೦ ಏರಿಸಿ ಕೊಡಗಿನ ರೈತರಿಗೆ ಸುಮಾರು ರೂ. ೧೦ ಲಕ್ಷದಷ್ಟು ಉತ್ಪತ್ತಿ ಹೆಚ್ಚಿಸಲು ಶ್ರಮಪಟ್ಟ ಕೊಡಗು ಪ್ರಾಂತೀಕ ಸಹಕಾರಿ ಮಾರ್ಕೆಟಿಂಗ್ ಸಂಘದ ಪ್ರೆಸಿಡೆಂಟರಾದ ಶ್ರೀ ಪಿ. ಐ. ಬೆಳ್ಯಪ್ಪನವರಿಗೂ ಮತ್ತು ಕೊಡಗು ಕಾಮರ್ಸ್ ಸಂಘದ ಕಾರ್ಯದರ್ಶಿಯವರಾದ ಶ್ರೀ ಬಿ. ಪಿ. ಬೋಪಯ್ಯನವರಿಗೂ ಮತ್ತು ಸ್ಥಳೀಯ ಸರಕಾರಕ್ಕೂ ಈ ಸಭೆಯು ತಮ್ಮ ಹೃತ್ಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತದೆ.' ಎಂಬ ಠರಾವನ್ನು ಸೂಚಿಸಿ ಡೆಲ್ಲಿಗೆ ಡೆಪ್ಯುಟೇಶನ್ ಹೋದವರ ಸೇವೆಯನ್ನು ಕುರಿತು ಮಾತಾಡಿದರು. ಶ್ರೀ ಮಾಚೆಟ್ಟಿರ ಮುತ್ತಣ್ಣನವರು ಅನುಮೋದಿಸಲಾಗಿ ಠರಾವು ಸರ್ವಸಮ್ಮತದಿಂದ ಪಾಸಾಯಿತು. ಅಧ್ಯಕ್ಷರ ಮುಕ್ತಾಯದ ಭಾಷಣದನಂತರ ಅಧ್ಯಕ್ಷರಿಗೆ ವಂದನೆಗಳಿಂದ ಸಭೆ ಮುಕ್ತಾಯಗೊಂಡಿತು.

ಮಾರಾಟಕ್ಕಿದೆ.

ಮಡಿಕೇರಿ ಮೂರ್ನಾಡು ರಸ್ತೆಯ ಮೂರು ಮೈಲು ಆರು ಫರ್ಲಾಂಗ್ ದೂರದಲ್ಲಿ ರಸ್ತೆಯ ಹತ್ತಿರ ಕಗ್ಗೋಡ್ಲು ಗ್ರಾಮಕ್ಕೆ ಸೇರಿದ ೧೯. ೪ ಎಕರೆ ಭೂಮಿ, ೩.೨ ಎಕರೆ ಬಾಣೆ, ಜಾಗ ವಾಸಕ್ಕೆ ಯೋಗ್ಯವಾದ ಮನೆಯೊಡನೆ ಮಾರಾಟಕ್ಕಿದೆ. ಖಾಯಿಸ್‌ದಾರರು ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

'X'
C/O. "ಕೊಡಗು"
ಮಡಿಕೇರಿ.

Office of the Assistant Commissioner of Coorg, Mercara, January 3, 1949.

NOTICE.

A meeting of the Land-Grants Selection Board constituted for the grant of land to Ex-servicemen in Coorg will be held on the 10th January 1949 at 11-30 A. M. in the Council Hall at mercara. All the applicants whose lands have been surveyed by the Special Survey party are requested to appear for further enquiry before the Selection Board on that day.

Sd. K. T. Uthappa,
Assistant Commissioner.

NOTICE.

Notice is here by given that Policy No, 158730 for Rs. 1000/- issued by the Bharat Insurence Co Ltd. Delhi in favour of Puchimada M Appiya, Danugala village has been lost

Such of the persons who are in possession of it or who come by the possession of it are requested to hand over the same to me (Puchimada Appiya) The policy is not encumbered in any manner

ನೋಟಿಸು.

ಧನುಗಾಲ ಗ್ರಾಮದ ಪುಚ್ಚಿಮಾಡ ಅಪ್ಪಯ್ಯನವರು ಕೊಡುವ ನೋಟೀಸು ಏನೆಂದರೇ

ನನ್ನ ಬಾಪ್ತು 'ದಿ ಭಾರತ್ ಇನ್ಶೂರೆನ್ಸ್ ಕಂಪೆನಿಯ (ಡೆಲ್ಲಿ) ಪಾಲಿಸಿ ನಂಬರು 158730 ರೂಪಾಯಿ 1000 ಕಾಣದೆ ಆಗಿರುತ್ತೆ ಅದರ ಸ್ವಾಧೀನಪಡೆದವರು, ಅಥವಾ ಅದು ಯಾರಿಗಾದರು ಸಿಕ್ಕಿದರೆ ಅದನ್ನು ನನಗೆ ಕಳುಹಿಸಿಕೊಡಬೇಕಾಗಿ ಕೇಳಿಕೊಳ್ಳುತ್ತೇನೆ ಈ ಪಾಲಿಸಿಯಲ್ಲಿ ಯಾರಿಗೂ ಯಾವದರ ಹಕ್ಕು ಇಲ್ಲ

ಪುಚ್ಚಿಮಾಡ ಅಪ್ಪಯ್ಯ,
ದನುಗಾಲ ಗ್ರಾಮ,
ಗೋಣಿಕೊಪ್ಪ

ಬಟ್ಟೆ ಬೇಕೆ?

ಮಹನಿಯರೇ,

ನಮ್ಮಲ್ಲಿ ಸ್ಪೆಶಲಾಗಿ ಮದುವೆಗೆ ಬೇಕಾಗುವಂಥಾ ನಾನಾ ತರಹದ ಒಳ್ಳೆ ಒಳ್ಳೆ ಫ್ಯಾನ್ಸಿ, [illegible] ಬೆಂಗಾಲ್ ಸಿಲ್ಕು, ಬನಾರಸ್, ಸೇಲಂ, ಕೊಯಮುತ್ತೂರು, ಮತ್ತು ಮಧುರಾ ಮುಂತಾದ ಅನೇಕ ಸ್ಥಳಗಳಿಂದ ತಯಾರಾದ ಜವುಳಿಗಳು ದೊರೆಯುತ್ತೆ

ಒಂದಾವರ್ತಿ ದಯವಿಟ್ಟು ಬಂದು ಪರೀಕ್ಷಿಸಿರಿ!

ಮದುವೆಗೋಸ್ಕರ ನಾನೂರು ರೂಪಾಯಿ ಮೇಲ್ಪಟ್ಟು ಮಾಲುಗಳಿಗೆ ನಮ್ಮ ಈ ಕೆಳಗಿನ ಅಡ್ರೆಸಿಗೆ ಆರ್ಡರ್ ಮಾಡಿದಲ್ಲಿ, ನಾವುಗಳು ತಮಗಳ ಬಂಗ್ಲೆಗಳಿಗಾಗಲೀ, ಅಥವಾ ಮನೆಗಳಿಗಾಗಲೀ ತಂದು ಕೊಡುವೆವು

Valki Mohidin Saheb & Bro:
Silk & Cotton Merchants,
VIRAJAPET (S COORG)

12-1

SUPPLY OF PADDY AND RAGI.

Tenders are invited to reach the undersigned by 15th January for the supply of clean, well dried Billia type Paddy and of Ragi delivered to Estates in

	Paddy.	Ragi.
(a) Pollibetta area	660 cartloads of 1200 seers	750 pallas
(b) Morgolly Siddapur	,, 215 ,, ,, ,, ,,	153 ,,
(c) Nullore	,, 160 ,, ,, ,, ,,	75 ,,
(d) Sunticoppa	,, 230 ,, ,, ,, ,,	40 ,,
(e) Jamboor	,, 135 ,, ,, ,, ,,	125 ,,

Bags will be supplied on loan by the Company and must be returned on completion of deliveries Any bags lost, damaged or exchanged will have to be paid for at Rs 1-8-0 each

All paddy and ragi will be measured on delivery on the Estates

Payment will be made at the Company's Head Office, Pollibetta against Estates receipts for deliveries

Each tender is to be accompanied by a deposit of Rs 10/-per cartload. Deposits of unsuccessful tenderers will be refunded immediately after final deliveries of paddy or ragi are made

Tenders should be for not less than 5 cartloads of paddy or 1 cartload of Ragi.

A B. HILL,
Secretary
Consolidated Coffee Estates (1943) Ltd

Pollibetta,

ಕಾಶ್ಮೀರ ಯುದ್ಧ ನಿಂತಿತು.

೧೯೪೯ ಜನವರಿ ೧ನೇ ತಾರೀಕಿನ ಮಧ್ಯರಾತ್ರಿ ಪ್ರಾರಂಭವಾಗುವ ೧ ನಿಮಿಷ ಮುನ್ನ 'ಸೀಸ್‌ಫೈರ್' ಆಜ್ಞೆ ಕಾಶ್ಮೀರದಲ್ಲಿ ಜಾರಿಯಾಗಿದೆ ಎಂದು ಅಧಿಕೃತ ಪ್ರಕಟಣೆಯೊಂದು ತಿಳಿಸುತ್ತದೆ

ಪಾಕಿಸ್ತಾನದಿಂದ ಸೂಕ್ತ ಭರವಸೆ ದೊರೆಯುವುದಾದರೆ ಭಾರತ ಸೇನೆಗಳು 'ಸೀಸ್‌ಫೈರ್' ಆಜ್ಞೆ ಜಾರಿಮಾಡುವುವು ಎಂದು ಭಾರತ ಸೇನೆಗಳ ದಂಡನಾಯಕ ಸರ್ ರಾಯ್ ಬುಷರ್‌ರವರು ಪಾಕೀಸ್ತಾನ್ ದಂಡನಾಯಕ ಗ್ರೇಸಿಯವರಿಗೆ ತಿಳಿಸಿ ಅವರಿಂದ ಭರವಸೆ ಪಡೆದು ನಂತರ 'ಸೀಸ್ ಫೈರ್' ಆಜ್ಞೆ ಜಾರಿಮಾಡುವರೆಂದು ಈ ಪ್ರಕಟಣೆಯಲ್ಲಿ ತಿಳಿಸಲಾಗಿದೆ

ವಿಶ್ವಸಂಸ್ಥೆ ಕಾಶ್ಮೀರ ನಿಯೋಗದ ಸದಸ್ಯರಾದ ಲೋಜಾನೋರವರ ಪ್ರಯತ್ನದಿಂದ 'ಸೀಸ್‌ಫೈರ್' ಆಜ್ಞೆಗೆ ಭಾರತ ಮತ್ತು ಪಾಕಿಸ್ತಾನ್ ಸರ್ಕಾರಗಳ ಒಪ್ಪಿಗೆ ದೊರಕಿತೆಂದೂ ಪ್ರಕಟಣೆಯಲ್ಲಿ ತಿಳಿಸಲಾಗಿದೆ

ಪರಿಸ್ಥಿತಿಯನ್ನು ತಹಬಂದಿಗೆ ತಂದು ನಂತರ 'ಪ್ಲೆಬಿಸೈಟ್' ಏರ್ಪಡಿಸಬೇಕೆಂಬ ವಿಷಯದಲ್ಲಿ ಡಾ॥ ಲೋಜಾನೋರವರು ಸಂಧಾನ ನಡಸಿದರು. ಈ 'ಸೀಸ್‌ಫೈರ್' ಆಜ್ಞೆಯೇ ಅವರ ಪ್ರತಿಫಲ. ಇದರಿಂದ ಕಾಶ್ಮೀರದಲ್ಲಿ ಚಿರಶಾಂತಿ ನೆಲೆಸುವುದೆಂದು ಆಶಿಸಲಾಗಿದೆ—ಎಂದು ಅಧಿಕೃತ ಪ್ರಕಟಣೆಯಲ್ಲಿ ತಿಳಿಸಲಾಗಿದೆ

ಸರ್ ಅಕ್ಬರ್ ಹೈದರಿಯವರ ನಿಧನ.

ಅಸ್ಸಾಮಿನ ಗವರ್ನರರಾದ ಸರ್ ಅಕ್ಬರ್ ಹೈದರಿಯವರು ತಾ॥ ೨೮ರಲ್ಲಿ ಮಣಿಪುರ ಸಂಸ್ಥಾನದ ಸಂಚಾರಾರ್ಥ ಹೋದಾಗ, ಇಂಫಾಲದಿಂದ ೩೦ ಮೈಲು ದೂರವಿರುವ ಒಂದು ಸ್ಥಳದಲ್ಲಿ ರಕ್ತದ ಒತ್ತಡದಿಂದುಂಟಾದ ಸ್ರಾವದಿಂದ ಮರಣಪಟ್ಟರು.

ಏಷ್ಯಾ ದೇಶಗಳ ಸಮ್ಮೇಳನ ಪರಿಶೀಲನೆ.

ಇಂಡೊನೇಷ್ಯಾ ಸಮಸ್ಯೆಯನ್ನು ಮತ್ತು ಇಂಡೊನೇಷ್ಯಾದಲ್ಲಿ ಡಚ್ಚರು ಈಚೆಗೆ ನಡೆಸಿದ ಧಾಳಿಯನ್ನು ಪರಿಶೀಲಿಸಲು ಮತ್ತು ಡಚ್ಚರ ಮೇಲೆ ತಕ್ಕ ಕ್ರಮ ಕೈಕೊಳ್ಳಲು ಭಾರತ ಸರಕಾರವು ಏಷ್ಯಾ ಖಂಡದ ದೇಶಗಳ ಪ್ರತಿನಿಧಿಗಳ ಸಮ್ಮೇಳನವನ್ನು ಸದ್ಯದಲ್ಲಿ ನಡೆಸುವುದು ವಿವಿಧ ದೇಶಗಳ ಸರಕಾರಗಳ ಅಧಿಕೃತ ಪ್ರತಿನಿಧಿಗಳು ರಾಯಭಾರ ತನದ ಮಟ್ಟದಲ್ಲಿ ಈ ಸಮ್ಮೇಳನದಲ್ಲಿ ಭಾಗವಹಿಸುವರು ಎಂಬುದಾಗಿ ಪಂಡಿತ ನೆಹರೂರವರು ಇಲ್ಲಿ ಈ ಸಂಜೆ ನಡೆದ ಸಾರ್ವಜನಿಕ ಸಭೆಯಲ್ಲಿ ಭಾಷಣಮಾಡುತ್ತ ನುಡಿದರು. ಸಮ್ಮೇಳನಕ್ಕೆ ಟರ್ಕಿ, ಈಜಿಪ್ಟ್, ಸಿರಿಯಾ, ಲೆಬನಾನ್, ಇರಾನ್, ಇರಾಕ್, ಆಫಘನಿಸ್ಥಾನ್, ಪಾಕಿಸ್ಥಾನ್, ಸಿಲೋನ್, ಬರ್ಮಾ, ಸಯಾಂ, ಚೀನಾ ಪ್ರತಿನಿಧಿಗಳನ್ನು ಆಹ್ವಾನಿಸಲಾಗುತ್ತೆ.

ರಿಜರ್ವ್ ಬ್ಯಾಂಕಿನ ರಾಷ್ಟ್ರೀಕರಣ

ರಿಜರ್ವ್ ಬ್ಯಾಂಕ್ ಆಫ್ ಇಂಡಿಯವನ್ನು ಇದೇ ಜನವರಿ ಒಂದನೆಯ ತಾರೀಕಿನಿಂದ ರಾಷ್ಟ್ರೀಕರಣ ಮಾಡಲಾಗಿದೆ ಈ ಬ್ಯಾಂಕು ಸ್ಥಾಪನೆಯಾಗಿ ೧೪ ವರ್ಷಗಳಾದವು ಷೇರ್ ಹೋಲ್ಡರುಗಳಿಗೆ ಪ್ರತಿ ನೂರು ರೂಪಾಯಿಗಳ ಷೇರು ಒಂದಕ್ಕೆ ೧೧೮-೧೦-೦ ರೂಪಾಯಿಗಳಂತೆ ೧೯೭೦-೧೯೭೫ನೆಯ ಇಸವಿಗಳಲ್ಲಿ ಪಾವತಿ ಆಗುವ ಶೇಕಡಾ ೩ರ ಬಡ್ಡಿಯ ಸರ್ಕಾರದ ಸ್ಟಾಕ್ ಬಾಂಡುಗಳನ್ನು ಕೊಡಲಾಗುವುದು. ನೂರು ರೂಪಾಯಿಗಳ ಈ ಬಾಂಡುಗಳನ್ನು ಷೇರುಗಳ ಲೆಕ್ಕಾಚಾರಕ್ಕೆ ಸರಿಹೋಗುವಂತೆ ಕೊಡಲಾಗುವುದು ೧೯೪೮ನೆ ಇಸವಿಗೆ ಜುಲೈನಿಂದ ಡಿಸೆಂಬರ್ ವರೆಗಿನ ಆರು ತಿಂಗಳ ಡಿವಿಡೆಂಡ್ ಮೊಬಲಗನ್ನು ಶೇಕಡಾ ೪ ರಂತೆ ಕೊಡಲಾಗುವುದು ಈ ಬ್ಯಾಂಕಿನ ಷೇರುಗಳೆಲ್ಲವನ್ನು ಭಾರತ ಸರಕಾರವೇ ತೆಗೆದುಕೊಂಡಿದೆ ಸರ್ಕಾರವೇ ಬ್ಯಾಂಕನ್ನು ನಡೆಸುವುದು ಈ ವಿಚಾರ ಕಳೆದ ಫೆಬ್ರವರಿ ೪ರಲ್ಲಿ ಭಾರತದ ಪಾರ್ಲಿಮೆಂಟನಲ್ಲಿ ನಿರ್ಧಾರವಾಗಿತ್ತು.

ರೈಲ್ವೆ ಮುಷ್ಕರ ತಡೆಯಲು.

ಅಖಿಲ ಭಾರತ ರೈಲ್ವೇ ಕೆಲಸಗಾರರ ಫೆಡರೇಷನಿನ ಅಧ್ಯಕ್ಷ ಶ್ರೀ ಜಯಪ್ರಕಾಶ ನಾರಾಯಣರು ಭಾರತದ ರೈಲ್ವೇ ಮತ್ತು ಟ್ರಾನ್ಸ್‌ಪೋರ್ಟ್ ಸಚಿವ ಶ್ರೀ ಎನ್ ಗೋಪಾಲಸ್ವಾಮಿ ಅಯ್ಯಂಗಾರರನ್ನು ಜನವರಿ ತಾ ೩ ಮತ್ತು ೪ ಈ ಎರಡು ದಿನಗಳಲ್ಲಿ ಕಂಡು, ಭಾರತ ಸರಕಾರದೊಡನೆ ರೈಲ್ವೇ ಕೆಲಸಗಾರರಿಗಿದ್ದ ಜಗಳವನ್ನು ಇತ್ಯರ್ಥಿಸುವ ಪ್ರಸ್ತಾಪ ನಡೆಸಿದರೆಂದು ತಿಳಿದುಬಂದಿದೆ ಜಯಪ್ರಕಾಶ ಮತ್ತು ಭಾರತ ಸಚಿವರೊಳಗೆ ಈ ಮೊದಲು ಈ ಸಂಬಂಧವಾಗಿ ಪತ್ರವ್ಯವಹಾರ ನಡೆದೇ ಈ ಭೇಟಿ ನಿಶ್ಚಯಿಸಿದುದಾಗಿದೆ

೧೯೫೦ರ ಆರಂಭದಲ್ಲಿ ಹೊಸ ಚುನಾವಣೆ.

ಭಾರತ ರಚನಾ ಸಭೆಯು ಜನವರಿ ೧೭ರಲ್ಲಿ ಮುಂದುವರೆಯಲ್ಪಟ್ಟು ಪ್ರಸಕ್ತ ಮೇ ಮೊದಲನೆ ವಾರದಲ್ಲಿ ಸೇರಬಹುದು. ಮೇ ಮತ್ತು ಜೂನ್ ತಿಂಗಳುಗಳಲ್ಲಿ ರಾಜ್ಯಾಂಗದ ಬಗ್ಗೆ ಚರ್ಚೆ ನಡೆದು ಆಗಸ್ಟನಲ್ಲಿ ಅದು ಅಂಗೀಕರಿಸಲ್ಪಡಬಹುದು ಮತ್ತು ಭಾರತವು ಸರ್ವಾಧಿಕಾರ ಹೊಂದಿದ ರಿಪಬ್ಲಿಕ್ ಎಂದು ಆಗಸ್ಟ್ ೧೫ರಲ್ಲಿ ಸಾರಬಹುದು. ೧೯೪೭ರ ಆಗಸ್ಟ್ ೧೫ ಎಂಬರೆ ಭಾರತಕ್ಕೆ ಡೊಮಿನಿಯನ್ ಸ್ಟೇಟಸ್ ದೊರೆತು ಸರಿಯಾಗಿ ಎರಡು ವರ್ಷವಾಗುವದು. ೧೯೫೦ರ ಮೊದಲು ಮೂರು ತಿಂಗಳುಗಳಲ್ಲಿ ಹೊಸ ರಾಜ್ಯಾಂಗದ ಪ್ರಕಾರ ಚುನಾವಣೆ ನಡೆಯಬಹುದು.

ಚಿಕ್ಕ ಕಥೆ

ತಾಯ್ತನದ ಪರೀಕ್ಷೆ.

ಲೇ:—ಪ್ರೇಮಯೋಗಿ.

ಶಶಿಯು ಕೋಣೆಯೊಳಗೆ ಬಂದಾಗ ಆಕೆಯನ್ನು ತಿಂದುಬಿಡುವಂತೆ ಎರಡು ಕಣ್ಣುಗಳು ನೋಡುತ್ತಿದ್ದವು. ಶಶಿಯು ಆ ಮನೆಯ ಮುಂದಿನ ಯಜಮಾನಿ. ಈ ಯಜಮಾನಿಕೆ ಮುಳ್ಳಿನ ಹಾಸಿಗೆಯೆಂದು ಆಕೆಗೆ ತಿಳಿದಿತ್ತು. ಆ ಮನೆಯಲ್ಲಿ ತನ್ನ ಗಂಡನ ಹಿಂದಿನ ಹೆಂಡತಿಯ ಮಕ್ಕಳಿದ್ದರು. ಚಿಕ್ಕ ಮಗು ನಿರ್ಮಲ ಮಾತಿಗಾರಂಭಿಸಿದಳು. ತನ್ನ ನಗು, ಚೆಲ್ಲಾಟಗಳಿಂದ ಶಶಿಯ ಹೃದಯವನ್ನಾಕರ್ಷಿಸಿದಳು. ಹಿರಿಯ ಮಗ ವಾಸುವಿನ ಕಣ್ಣುಗಳು ಎವೆಯಿಕ್ಕದೆ ಶಶಿಯನ್ನು ನೋಡುತ್ತಿದ್ದವು.

'ಈಕೆ ನಿಮ್ಮ ಹೊಸ ತಾಯಿ' ಆತನ ತಂದೆಯು ನಿಧಾನವಾಗಿ ಹೇಳಿದರು.

'ಆದರೆ ಅಪ್ಪಾ, ಈಕೆ ನಮ್ಮ 'ಆಂಟಿ' ಯೆಂದು ಅಜ್ಜಿ ಹೇಳಿದರು. ಆಕೆ ನಮ್ಮ ತಾಯಿ ಹೇಗೆ? ತಾಯಿ ಹಿಂದಕ್ಕೆ ಬರುವದಿಲ್ಲವೆಂದು ಅಜ್ಜಿ ಹೇಳುತ್ತಾರೆ' ವಾಸು ಎಂದ

ಶಶಿಗೆ ಅಲ್ಲಿ ನಿಲ್ಲಲಾಗಲಿಲ್ಲ

'ಆಗಲಿ, ಈಕೆ ನಿಮ್ಮ 'ಆಂಟಿ'. ನಿಮ್ಮೆಲ್ಲರನ್ನು ತಾಯಿಯಂತೆ ನೋಡಿಕೊಳ್ಳುವಳು. ನೀವು ಆಕೆಗೆ ವಿಧೇಯರಾಗಿರಬೇಕು ' ಎಂದು ತಂದೆ ಹೇಳಿದರು.

'ಆಕೆ ನಮ್ಮನ್ನು ಹೊಡೆಯುವಳೆ? ಅಜ್ಜಿ ಹೇಳುತ್ತಿದ್ದರು.' ವಾಸು ಎಂದ.

ಶಶಿಯ ಕಣ್ಣಿನಲ್ಲಿ ನೀರು ತುಂಬಿತ್ತು.

'ಇಲ್ಲ; ಆಕೆ ಹೊಡೆಯಲಾರಳು. ಈಗ ಆಟಕ್ಕೆ ಹೋಗಿರಿ' ತಂದೆ ಎಂದರು.

ಶಶಿಯ ಮನಸ್ಸಿನಲ್ಲಿ ಮೂಡಿದ ಸಂಶಯ ಕ್ರಮಶಃ ಹೆಚ್ಚಾಗತೊಡಗಿತು. ಚಿಕ್ಕಮ್ಮನ ಪಾತ್ರವನ್ನು ವಹಿಸಿ ಎಲ್ಲರಿಗೂ ಸರಿ ಎನಿಸುವಂತೆ ನಡೆಯುವದು ಸುಲಭದ ಕೆಲಸವಲ್ಲ. ಶಶಿಯು ಎಚ್ಚರಿಕೆಯಿಂದ ವರ್ತಿಸುತ್ತಿದ್ದಳು.

ವಾಸು ತನ್ನ ತಾಯಿಯ ಪ್ರೀತಿಯ ಮಗು. ಆತನಿಗೆ ಏಳು ವರ್ಷ ಪ್ರಾಯ. ಸ್ವಭಾವದಲ್ಲಿ ತುಂಟನಾಗಿದ್ದ. ಏನಾದರೊಂದು ಹೇಳಿದರೆ ಥಟ್ಟನೆ ಮನಸ್ಸಿಗೆ ಹಚ್ಚಿಕೊಳ್ಳುವ ಸ್ವಭಾವ. ಆತನಿಗೆ ತನ್ನ ತಾಯಿ ಸತ್ತ ದಿನದ ನೆನಪು ಚೆನ್ನಾಗಿತ್ತು. ಆತನಿಗೆ ಸಾವೆಂದರೇನೆಂದು ತಿಳಿಯದಿದ್ದರೂ, ತನ್ನ ತಾಯಿ ಮನೆಬಿಟ್ಟು ಹೋದದ್ದೂ ಎಲ್ಲರೂ ಹಿಂತಿರುಗಿದಾಗ ತಾಯಿ ಬಾರದಿದ್ದುದೂ ಆತನಿಗೆ ತಿಳಿದಿತ್ತು. ತಾಯಿಯ ಬಗ್ಗೆ ಯಾರೂ ಆತನ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ಕೊಟ್ಟಿರಲಿಲ್ಲ. ಅಜ್ಜಿ ಮಾತ್ರ ತಾಯಿ ಮರಳಿ ಬಾರಳೆಂದು ಖಚಿತಪಡಿಸಿದ್ದಳು. ತಾಯಿ ಇಲ್ಲದ ಈ ಮಗು ಅಜ್ಜಿಯ ಅನುಪಮ ಔದಾರ್ಯದಲ್ಲಿ ಬೆಳೆದಿತ್ತು. ಆದ್ದರಿಂದಲೇ ಶಶಿಬಂದಾಗ ಆ ನೆಟ್ಟ ದೃಷ್ಟಿ. ದಿನ ಹೀಗೆ ಸಾಗುತ್ತಿತ್ತು.

ಶಶಿಯು ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳುವ ಪ್ರಯತ್ನದಲ್ಲಿ ಅಜ್ಜಿಯನ್ನು ಮರೆತಿದ್ದಳು. ಇದರಿಂದ ತನ್ನ ಅಧಿಕಾರಕ್ಕೆ ಶಶಿಯ ಶಿರಬಾಗಿಸಲು ಅಜ್ಜಿಯು ವಾಸುವನ್ನು ಉಪಯೋಗಿಸಿಕೊಳ್ಳುತ್ತಿದ್ದಳು. ಶಶಿಗೆ ನಿರ್ಮಲಳನ್ನು ನೋಡಿಕೊಳ್ಳುವದು ಕಷ್ಟವಾಗುತ್ತಿರಲಿಲ್ಲ. ಆಕೆ ಶಶಿಯನ್ನೇ ತನ್ನ ತಾಯಿಯೆಂದು ನಂಬಿದ್ದಳು. ಆದರೆ ವಾಸುವನ್ನು ಸುಧಾರಿಸುವದು ಪ್ರಯಾಸವಾಗುತ್ತಿತ್ತು. ಆದ್ದರಿಂದ ಆತನ ಮೇಲೆ ಇಲ್ಲದ ಪ್ರೇಮವನ್ನು ಚೆಲ್ಲುತ್ತಿದ್ದಳು. ಆತನ ಮಾತಿಗೆ ವ್ಯತಿರಿಕ್ತ ನುಡಿಯುತ್ತಿರಲಿಲ್ಲ. ಆತನನ್ನು ಮೀಯಿಸಿ, ಶೃಂಗರಿಸುವದರಲ್ಲಿ ಹೆಚ್ಚಿನ ಆಸಕ್ತಿ ತೋರುತ್ತಿದ್ದಳು. ಆದರೂ ಕೂಡ ವಾಸುವು ಅಜ್ಜಿಯ ಕೈಗೊಂಬೆಯಾಗಿದ್ದನು. ಅಜ್ಜಿಯ ಪ್ರೇರಣೆಯಿಂದ ಶಶಿಯು ಮಧ್ಯೆ ಬಂದವಳು, ಅವಳ ಮಾತನ್ನು ಮನ್ನಿಸಬಾರದೆಂದೆಂಬ ಭಾವನೆ ವಾಸುವಿನಲ್ಲಿ ಮೂಡಿತ್ತು. ಚಿಕ್ಕಮ್ಮನು ಮಕ್ಕಳನ್ನು ಸರಿಯಾಗಿ ನೋಡಲಾರಳೆಂಬುದೇ ಅಜ್ಜಿಯ ಸಿದ್ಧಾಂತವಾಗಿತ್ತು. ತನ್ನ ಸರ್ವ ಬೇಡಿಕೆಗಳಿಗಾಗಿ ಆತನು ಅಜ್ಜಿಯನ್ನೇ ಆಶ್ರಯಿಸತೊಡಗಿದ್ದನು.

ಆದರೆ ತನ್ನ ಭವಿಷ್ಯವು ಈ ಮಕ್ಕಳೊಡನೆ ಬೆರೆತಿದೆಯೆಂದು ಶಶಿಗೆ ತಿಳಿದಿತ್ತು. ಆದ್ದರಿಂದ ತನ್ನ ಅಸೀಮ ಪ್ರೇಮದಿಂದ ತುಂಟ ವಾಸುವನ್ನು ಗೆಲ್ಲಲು ಆಕೆ ಯತ್ನಿಸುತ್ತಿದ್ದಳು. ವಾಸ್ತವವಾಗಿ ಚಿಕ್ಕಮ್ಮ ಮತ್ತು ಅಜ್ಜಿ ಇವರಲ್ಲಿ ವಾಸುವಿನ ಬಗ್ಗೆ ಇರುವ ಪ್ರೇಮದ ಪರೀಕ್ಷೆ ನಡೆದಿತ್ತು. ಕೆಲವೇ ದಿನಗಳಲ್ಲಿ ವಾಸುವಿನ ರೀತಿ ನೀತಿ, ಆಶೆ, ಆಕಾಂಕ್ಷೆಗಳನ್ನು ಶಶಿಯು ತಿಳಿದುಕೊಂಡಳು. ಆದರೆ ಆಕೆಯ ಎಲ್ಲಾ ಪ್ರಯತ್ನಗಳನ್ನು ಅಜ್ಜಿಯು ಕ್ಷಣದಲ್ಲಿ ಮಣ್ಣುಗೂಡಿಸುತ್ತಿದ್ದಳು. ಒಂದು ದಿನ ವಾಸುವಿನ ಸಂತೋಷದ ವಸ್ತುವಾದ ಜಿಲೇಬಿಯನ್ನು ಮಾಡಿದ್ದಳು. ಆದರೆ ಅದನ್ನು ತಿಂದರೆ ವಾಸುವಿನ ಹೊಟ್ಟೆಗೆ ಆಗದೆಂದು ಗದರಿಸಿ ಅದನ್ನು ವಾಸುವಿಗೆ ಕೊಡಲು ಅಜ್ಜಿಯು ಬಿಡಲಿಲ್ಲ. ಈ ರೀತಿ ಶಶಿಯ ಪ್ರತಿ ಪ್ರಯತ್ನವನ್ನೂ ಅಜ್ಜಿ ಮಣ್ಣುಗೂಡಿಸುತ್ತಿದ್ದಳು. ಇದರಿಂದಾಗಿ ಶಶಿಯ ಗಂಡನಿಗೂ ಜಿಗುಪ್ಸೆ ಬರತೊಡಗಿತು. ಶಶಿಗೆ ಮಕ್ಕಳನ್ನು ನೋಡಿಕೊಳ್ಳಲು ತಿಳಿಯದೆಂದೆನಿಸಿತು. ಆದ್ದರಿಂದ ವಾಸುವಿನ ಗೋಜಿಗೆ ಹೋಗಬಾರದೆಂದು ಶಶಿಯನ್ನು ಗದರಿಸಿದನು. ಶಶಿಯು ಕೇಳದಿರಲು ಒಂದೆರಡು ಬಾರಿ ಆಕೆಯನ್ನು ಹೊಡೆದೂ ಇದ್ದನು. ಇದರಿಂದ ಅಜ್ಜಿಗೆ ಅಮಿತ ಆನಂದವಾಗಿತ್ತು. ಆದರೂ ಶಶಿಯು ತನ್ನ ಪ್ರಯತ್ನವನ್ನು ಬಿಡಲಿಲ್ಲ. ವಾಸುವು ಶಾಲೆಗೆ ಹೋಗದಿರುವಾಗ ಶಶಿಯು ಒಳ್ಳೆಯವನಾಗಬೇಕೆಂದು ಬೋಧನೆ ಮಾಡಿ ಶಾಲೆಗೆ ಕಳುಹಿಸುತ್ತಿದ್ದಳು. ಇದಕ್ಕೂ ಕೂಡ ಒಮ್ಮೊಮ್ಮೆ ಅಜ್ಜಿ ಆತಂಕ ಮಾಡುತ್ತಿದ್ದಳು. ಕ್ರಮಶಃ ವಾಸುವು ಶಶಿಯ ಹತ್ತಿರ ಬರುವ ಅವಕಾಶವನ್ನು ಅಜ್ಜಿಯು ತಪ್ಪಿಸತೊಡಗಿದಳು. ಆದರೆ ಶಶಿಯು ಹತಾಶಳಾಗಲಿಲ್ಲ. ಒಂದಿಲ್ಲೊಂದು ದಿನ ಪವಿತ್ರ ಪ್ರೇಮಕ್ಕೆ ಜಯವಿದೆಯೆಂದು ಆಕೆ ನಂಬಿದ್ದಳು.

ಸ್ವಾಭಾವಿಕವಾಗಿ ನಮ್ಮ ಪ್ರತಿ ಕಾರ್ಯದಲ್ಲೂ ಕಾಣದ ಕೈಯೊಂದು ಕಾರ್ಯ ನಡೆಸುತ್ತದೆಯೆಂಬುದು ಬಹುಜನರಿಗೆ ಗೋಚರವಾಗದು. ಫಾಸಿಗೆ ಏರಿಸಲು ಸಿದ್ಧವಾಗಿರುವ ಕೈದಿ, ಅಪಘಾತಗೊಳಗಾಗಿ ಬದುಕಲೆತ್ನಿಸುವ ವೈಮಾನಿಕ, ನೀರಿನಲ್ಲಿ ಮುಳುಗಿದಾಗ ಮರವೊಂದು ದೊರೆತ ಅಂಬಿಗ ಇಂಥಾವರಿಗೆ ಆ ಶಕ್ತಿಯ ಅರಿವಾಗುತ್ತದೆ. ದೇವರಿದ್ದಾನೆಂದು ನಂಬಿಕೆಯಾಗುತ್ತದೆ. ಆತನ ಶಕ್ತಿಯಿಂದಲೇ ಸರ್ವವೂ ನಡೆಯುವದೆಂದು ಮನವರಿಕೆಯಾಗುತ್ತದೆ ಅದೇ ರೀತಿ ಶಶಿಯು ಈ ಮಹಾ ಕಷ್ಟ ಪರಂಪರೆಯಲ್ಲಿ ಆ ಅಚಲ ಶಕ್ತಿಯ ಮೇಲೆ ಅನುಪಮ ವಿಶ್ವಾಸವಿಟ್ಟು ವರ್ತಿಸುತ್ತಿದ್ದಳು

ಕೆಲವು ದಿನಗಳ ನಂತರ ವಾಸುವಿಗೆ ನೆಗಡಿಯಾಗಿ ತಕ್ಕ ಔಷಧಿ ಮಾಡದ ಕಾರಣ ಭಯಂಕರ ಜ್ವರದಲ್ಲಿ ಪರಿಣಮಿಸಿತು. ಎಲ್ಲರೂ ಗಾಬರಿಗೊಂಡರು. ಹಾಸಿಗೆಯಲ್ಲಿ ಮಗು ಪ್ರಜ್ಞೆ ಇಲ್ಲದೆ ಬಿದ್ದಿತ್ತು ಶಶಿಯು ಹಗಲು ರಾತ್ರಿ ಎನ್ನದೆ ಹಾಸಿಗೆಯ ಬದಿಯಲ್ಲಿ ಕುಳಿತು ಆರೈಕೆಗೆ ತೊಡಗಿದಳು ಅಜ್ಜಿ ಮತ್ತು ಗಂಡ ಇಬ್ಬರೂ ವಿಶ್ರಾಂತಿ ತೆಗೆದುಕೊಳ್ಳಲು ಶಶಿಗೆ ಹೇಳಿದರು. ಆಕೆ ಕದಲಲಿಲ್ಲ. ಆ ದಿನ ರಾತ್ರಿ ವಾಸುವು ಜ್ವರದ ತಾಪದಲ್ಲಿ ಬಾಯಿಗೆ ಬಂದಂತೆ ಆಡುತ್ತಿದ್ದನು. ಆತನು ಹೇಳತೊಡಗಿದನು "ಅಮ್ಮಾ, ನೋಡು, ಅವರು ಬರುತ್ತಿದ್ದಾರೆ. ನನ್ನನ್ನು ಬಿಡಿಸಲಾರೆಯಾ, ಕಪ್ಪು ಚೇಳುಗಳು.' ನೀನು ಬರುವದಿಲ್ಲವೇ?"

ಶಶಿಯು ವಾಸುವನ್ನು ತನ್ನ ತೊಡೆಯ ಮೇಲೆ ಮಲಗಿಸಿಕೊಂಡು ಹೇಳಿದಳು 'ವಾಸು, ನೋಡು, ನಾನು ಬಂದಿರುವೆನು. ನಿನ್ನ ತಾಯಿ ನನ್ನನ್ನು ನೋಡುವದಿಲ್ಲವೇ?' ಹೀಗೆ ಹೇಳುತ್ತಿರುವಾಗ ಶಶಿಯ ಕಣ್ಣಿನಿಂದ ನೀರು ಹನಿಹನಿಯಾಗಿ ಬೀಳುತ್ತಿದ್ದವು. ಆಕೆಗೆ ಅದರ ಗೋಚರವಿರಲಿಲ್ಲ

ಶೀತಲಗಾಳಿ ಕೋಣೆಯೊಳಗೆ ಬೀಸುತ್ತಿತ್ತು. ಶಶಿಗೆ ಎಚ್ಚರವಾಯಿತು. ಬೆಳಗ್ಗಿನ ಮೂರು ಗಂಟೆಯಾಗಿತ್ತು. ತಾನು ಹೇಗೆ ನಿದ್ದೆ ಹೋದೆನೆಂದು ಶಶಿಗೆ ಆಶ್ಚರ್ಯವಾಗಿತ್ತು. ವಾಸುವು ಆಕೆಯ ತೊಡೆಯ ಮೇಲೆಯೇ ಇದ್ದನು. ಆತನು ಎಚ್ಚರಗೊಂಡಿದ್ದನು. ಹಿಂದಿನ ಅಳುವು ಗಲಾಟೆಗಳಿರಲಿಲ್ಲ. ಶಶಿಯು ಆತನ ಮೈಮೇಲೆ ಕೈಸವರಿದಳು. ಜ್ವರವು ಸ್ವಲ್ಪ ಕಡಿಮೆಯಾಗಿತ್ತು.

'ಆಂಟಿ', ವಾಸು ಕಿರುಧ್ವನಿಯಿಂದ ಕರೆದನು.

'ಏನೂ ಬೇಕು, ವಾಸೂ' ಶಶಿ ಕೇಳಿದಳು.

'ನಾನು ನಿನ್ನ ಬಗ್ಗೆ ಆಲೋಚನೆ ಮಾಡುತ್ತಿದ್ದೆ. ನೀನು ತಾಯಿಯಂತೆಯೇ ಇದ್ದಿ. ಇಂದಿನ ವರೆಗೆ ನಾನದನ್ನು ತಿಳಿಯಲೇ ಇಲ್ಲ.' ಎಂದು ವಾಸು ಹೇಳಿದ.

ನಿರ್ಮಲೆ ಮಾತಾಡಲಿಲ್ಲ.

'ನಿನ್ನ ಕೈಗಳು ಅಮ್ಮನ ಕೈಗಳಂತೆಯೇ ಮೃದು. ನಿನ್ನ ವಾಣಿಯೂ ಆಕೆಯ ವಾಣಿಯಂತೆಯೇ? "ಆಂಟಿ" ನಿನ್ನನ್ನು ನಾನು "ಅಮ್ಮಾ" ಎಂದು ಏಕೆ ಕರೆಯಬಾರದು. ಅಜ್ಜಿ ಹೇಳುತ್ತಾಳೆ ಹಾಗೆ ಕರೆಯಬಾರದೆಂದು. ಆಕೆ ಕೆಟ್ಟವಳು' ವಾಸು ಹೇಳಿದ.

'ಇಲ್ಲ, ವಾಸೂ, ಅಜ್ಜಿಯನ್ನು ಕೆಟ್ಟವಳೆಂದು ಹೇಳಬಾರದು.'

'ಆಕೆ ಕೆಟ್ಟವಳು! ನಿನ್ನನ್ನು 'ಅ[illegible]' ಎಂದು ಕರೆಯಲೇ?' ವಾಸು ನುಡಿದ.

'ನಿನಗಿಷ್ಟವಾದರೆ ಹಾಗೆ ಕರೆ[illegible] ವಾಸೂ' ಶಶಿ ಹೇಳಿದಳು.

'ಅಮ್ಮಾ, ನಾನೊಂದು ಮಾತು ಹೇಳುತ್ತೇನೆ. ನೀನು ಕೋಪಿಸಬಾರದು. ಅಂದು ತಂದೆ ನಿನ್ನನ್ನು ಹೊಡೆದಾಗ ಅಜ್ಜಿಯೊಡನೆ ಸೇರಿ ನಾನು ನಗಾಡಿದೆನು. ಅದಕ್ಕಾಗಿ ನನಗೆ ಹೊಡೆಯುವದಿಲ್ಲವೆಂದು ನನ್ನನ್ನು ಮನ್ನಿಸುವೆಯಾ?'

ಶಶಿಯ ಹೃದಯ ತುಂಬಿತ್ತು ಕಣ್ಣಿನಿಂದ ಆನಂದಾಶ್ರುಗಳು ಹರಿಯತೊಡಗಿದವು. ಅವುಗಳನ್ನು ಒರಸುವ ಪ್ರಯತ್ನವನ್ನೂ ಆಕೆ ಮಾಡಲಿಲ್ಲ. ಆಕೆಯು ತಪಸ್ಸಿನ ದಿನ ಇಂದು ಬಂತು. ಆಕೆಯ ಗಾಯಗೊಂಡ ಹೃದಯಕ್ಕೆ 'ಅಮ್ಮಾ' ಎಂಬ ಕೂಗು ಶಾಂತಿಯನ್ನು ಕೊಟ್ಟಿತು. ಶಶಿಯು ಅಚಲ ಪ್ರಯತ್ನದಿಂದ ಮಾತೃತ್ವದ ಪವಿತ್ರ ಗದ್ದುಗೆಯನ್ನೇರಿದಳು.

ನಾನೇಕೆ ಪ್ರತ್ಯೇಕವಾದಿ.

(೩ನೇ ಪುಟದಿಂದ ಸಾಗಿದ್ದು)

ಕೊಡಗಿನವರು ಈ ಸಂದರ್ಭವನ್ನು ಉಪಯೋಗಿಸಿಕೊಳ್ಳಬೇಕೆಂಬುದು ನನ್ನ ಸದಿಚ್ಛೆ. ಅದಕ್ಕಾಗಿ ಕೊಡಗು ಪ್ರತ್ಯೇಕವಾಗಿರಬೇಕಾಗಿದೆ. ಆ ಕಾರಣಕ್ಕಾಗಿಯೇ ನಾನು ಪ್ರತ್ಯೇಕವಾದಿಯಾಗಿದ್ದೇನೆ. ಯಾವದೇ ಪ್ರಾಂತದೊಡನೆ ಕೊಡಗು ವಿಲೀನವಾದರೆ ಇದು ಸಾಧ್ಯವಾಗದು. ಈ ದೃಷ್ಟಿಯಿಂದ ಕೊಡಗು ಪ್ರತ್ಯೇಕವಿರಬೇಕೆನ್ನುವ ನನ್ನ ವಾದವು ಸಂಕೀರ್ಣತೆಯಾಗಲಾರದೆಂದು ನನ್ನ [illegible]ಕೆ. ಕೊಡಗಿನ ಯಾವದೇ ಕೋಮಿನ, ಇಲ್ಲವೇ ಕೊಡಗಿನವರ ಹಿತಕ್ಕಾಗಿ ಈ ಪ್ರತ್ಯೇಕತೆ ಅಲ್ಲ; ಜಮ್ಮಾ ಜಹಗೀರು ಉಳಿಸಿಕೊಳ್ಳಲೂ ಅಲ್ಲ ಇದು. ಭರತಖಂಡದ ಉತ್ಕರ್ಷಕ್ಕಾಗಿ, ಜಗತ್ತಿಗೆ ಭಾರತವು ಸಾರತಕ್ಕದ್ದಿರುವ ಸಂದೇಶದ ಪುರವಣೆಯಾಗಿ. ಪ್ರತ್ಯೇಕವಾದಿಗಳ ಜೊತೆಯ ನನ್ನ ನಿಯೋಗಗೋಷ್ಠಿಯ ಉದ್ದೇಶವಿಷ್ಟೆ !

ಕೊಡಗಿನ ರಾಜಕೀಯ ರಂಗದಲ್ಲಿ ನಾನೇನು ಗಣಿಸಲ್ಪಡುವ ವ್ಯಕ್ತಿಯಲ್ಲದಿರಬಹುದು ಗಾಂಧಿ ತತ್ವಾನುಯಾಯಿ ಎಂದು ಹೇಳಿಕೊಳ್ಳುವಷ್ಟು ಧೈರ್ಯವುಳ್ಳವನೂ ಆಗಿರಲಿಕ್ಕಿಲ್ಲ. ಆದರೆ ಮಹಾತ್ಮಾಗಾಂಧೀಜಿಯವರ ಕೊಲೆ ಮಾಡಿದ ನಾಥೂ ಅವರ ಸಾರ್ವದೈಶಿಕ ತತ್ವಗಳ ಕೊಲೆಯನ್ನೂ ಮಾಡಬಾರದು. ಮಡಿಕೇರಿಯ ಸಂತಾಪ ಸೂಚನಾ ಸಭೆಯಲ್ಲಿ ರಾಜಸೀಟಿನ ಬೆಟ್ಟದ ಮೇಲೆ ನಿಂತು ಬಾಪುವಿನ ತತ್ವಗಳನ್ನು ಪಾಲಿಸಿ, ಕಾರ್ಯರಂಗದಲ್ಲಿ ತರುವ ಪ್ರತಿಜ್ಞೆಯನ್ನು ಕಾಂಗ್ರೆಸ್ಸಿಗರು ಮಾಡಿದ್ದು ಜ್ಞಾಪಕಕ್ಕೆ ಬರುತ್ತದೆ. ಆ ಪ್ರತಿಜ್ಞೆಗೆ ಬೆಲೆ ಇಲ್ಲವೇ? ನಿಜ ಗಾಂಧೀಜಿಯವರ ಹೆಸರಿನಿಂದ ಸ್ಮಾರಕ ನಿಧಿಯನ್ನು ಸ್ಥಾಪಿಸಿ ಧನ ಸಂಗ್ರಹ ಮಾಡುತ್ತಿರುವೆವು. ಆದರೆ ಅವರ ಈ ವಿಕೇಂದ್ರೀಕೃತ ಆಡಳಿತವನ್ನು ಜಾರಿಗೆ ತಂದು ಗಾಂಧೀ ಸಂದೇಶವನ್ನು ಜಗತ್ತಿಗೆ ಸಾರುವದಕ್ಕಿಂಥಾ ಮಹಾ ಸ್ಮಾರಕ ಬೇರಿರಲಾರದೆಂದು ನನ್ನ ಭಾವನೆ. ಈ ದೃಷ್ಟಿಯಿಂದ ಕೊಡಗು ಬೇರೆ ಇರಬೇಕು. ಇದಕ್ಕಾಗಿಯೇ ನಾನು ನಿಯೋಗ ಗೋಷ್ಠಿಯೊಡನೆ ಹೋದದ್ದು. ಇದಕ್ಕಾಗಿಯೇ ನಾನಿಂದು ಪ್ರತ್ಯೇಕವಾದಿಯಾಗಿರುವದು.

ಕ್ಯಾಲೆಂಡರ್ ೧೯೪೯. ಕೊಡಗು CALENDAR 1949.

ವಾರ	ಜನವರಿ	ಫೆಬ್ರವರಿ	ಮಾರ್ಚ್	ಏಪ್ರಿಲ್	ಮೇ	ಜೂನ್	ಜುಲೈ	ಆಗಸ್ಟು	ಸೆಪ್ಟೆಂಬರ್	ಅಕ್ಟೋಬರ್	ನವೆಂಬರ್	ಡಿಸೆಂಬರ್
					1							
					2			1				
		1	1		3			2			1	
		2	2		4	1		3			2	
		3	3		5	2		4	1		3	1
		4	4	1	6	3	1	5	2		4	2
	1 ಹೊಸ ವರ್ಷಾರಂಭ	5	5	2	7	4	2	6	3	1	5 ○ ಹುಣ್ಣಿಮೆ	3
	2	6	6	3	8	5	3	7	4	2	6	4
	3	7	7	4	9	6	4	8 ○ ಹುಣ್ಣಿಮೆ	5	3	7	5
	4	8	8	5	10	7	5	9	6	4	8	6
	5	9	9	6	11	8	6	10	7 ○ ಹುಣ್ಣಿಮೆ	5	9	7
	6	10	10	7 ಶ್ರೀರಾಮನವಮಿ	12	9	7	11	8	6	10	8
	7	11	11	8	13	10 ○ ಹುಣ್ಣಿಮೆ	8	12	9	7 ○ ಹುಣ್ಣಿಮೆ	11	9
	8	12	12	9	14 ವೃಷಭ ಸಂಕ್ರಮಣ	11	9	13	10	8	12	10
	9	13 ○ ಹುಣ್ಣಿಮೆ	13 ಮೀನ ಸಂಕ್ರಮಣ	10	15	12	10 ○ ಹುಣ್ಣಿಮೆ	14	11	9	13	11
	10	14	14 ○ ಹುಣ್ಣಿಮೆ	11	16	13	11	15 ಸ್ವಾತಂತ್ರ್ಯ ದಿನಾಚರಣೆ	12	10	14	12
	11	15	15	12	17	14 ಮಿಥುನ ಸಂಕ್ರಮಣ	12	16 ಸಿಂಹ ಸಂಕ್ರಮಣ	13	11	15 ವೃಶ್ಚಿಕ ಸಂಕ್ರಮಣ	13
	12	16	16	13 ○ ಹುಣ್ಣಿಮೆ ಮೇಷ ಸಂಕ್ರಮಣ	18	15	13	17	14	12	16	14
	13 ಮಕರ ಸಂಕ್ರಮಣ	17	17	14	19	16	14	18	15	13	17	15 ಧನು ಸಂಕ್ರಮಣ
ಶುಕ್ರ	14 ○ ಹುಣ್ಣಿಮೆ	18	18	15	20	17	15	19	16 ಕನ್ಯಾ ಸಂಕ್ರಮಣ	14	18	16
ಶನಿ	15	19	19	16	21	18	16 ಕರ್ಕಾಟಕ ಸಂಕ್ರಮಣ	20	17	15	19	17
ಆದಿತ್ಯ	16	20	20	17	22	19	17	21	18	16	20 ● ಅಮಾವಾಸ್ಯೆ	18
ಸೋಮ	17	21	21	18	23	20	18	22	19	17 ತುಲಾ ಸಂಕ್ರಮಣ	21	19 ● ಅಮಾವಾಸ್ಯೆ
ಮಂಗಳ	18	22	22	19	24	21	19	23	20	18	22	20
ಬುಧ	19	23	23	20	25	22	20	24 ● ಅಮಾವಾಸ್ಯೆ	21	19	23	21
ಗುರು	20	24	24	21	26	23	21	25	22 ● ಅಮಾವಾಸ್ಯೆ	20	24	22
ಶುಕ್ರ	21	25 ಮಹಾ ಶಿವರಾತ್ರಿ	25	22	27 ● ಅಮಾವಾಸ್ಯೆ	24	22	26	23	21 ● ಅಮಾವಾಸ್ಯೆ	25	23
ಶನಿ	22	26	26	23	28	25	23	27	24	22	26	24
ಆದಿತ್ಯ	23	27 ● ಅಮಾವಾಸ್ಯೆ	27	24	29	26 ● ಅಮಾವಾಸ್ಯೆ	24	28	25	23	27	25 ಕ್ರಿಸ್ಮಸ್
ಸೋಮ	24	28	28 ● ಅಮಾವಾಸ್ಯೆ	25	30	27	25 ● ಅಮಾವಾಸ್ಯೆ	29	26	24	28	26
ಮಂಗಳ	25		29	26	31	28	26	30	27	25	29	27
ಬುಧ	26		30 ಚಾಂದ್ರಮಾನ ಯುಗಾದಿ	27		29	27	31	28	26	30	28
ಗುರು	27		31	28 ● ಅಮಾವಾಸ್ಯೆ		30	28		29	27		29
ಶುಕ್ರ	28			29			29		30	28		30
ಶನಿ	29 ● ಅಮಾವಾಸ್ಯೆ			30			30			29		31
ಆದಿತ್ಯ	30						31			30		
ಸೋಮ	31									31		

ದಿ ಟ್ರಾಪಿಕಲ್

ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಮುಖ್ಯ ಕಚೇರಿ:— ಹೊಸ ಡೆಲ್ಲಿ.

ಅದ್ವಿತೀಯ ಜನನಾಯಕರಾಗಿದ್ದ ಮೋತಿಲಾಲ್ ನೆಹರೂ, ನೇತಾಜಿ ಇಂಥವರಿಂದ ಸ್ಥಾಪಿಸಲ್ಪಟ್ಟು ವಿಮಾ ಕಂಪೆನಿಗಳಲ್ಲೆಲ್ಲಾ ಅತ್ಯಂತ ಪ್ರಗತಿಶೀಲ ಎನಿಸಿದ ಒಂದೇ ರಾಷ್ಟ್ರೀಯ ವಿಮಾ ಕಂಪೆನಿ "ಟ್ರಾಪಿಕಲ್." ದಿನ ದಿನಕ್ಕೆ ಬೆಳೆದು ಹಿಂದೂಸ್ಥಾನದ ಮಹಾ ಕಂಪೆನಿಗಳಲ್ಲೊಂದಾಗಿದೆ.

ಕೊಡಗಿನ ಎಲ್ಲಾ ಕಡೆಗಳಿಗೂ ವಿಶೇಷ ಏಜಂಟರುಗಳೂ ಏಜಂಟರೂ ಬೇಕಾಗಿದ್ದಾರೆ. ವಿವರಗಳಿಗೆ ಈ ಪತ್ರಗೆ ಬರೆಯಿರಿ.

THE TROPICAL INSURANCE Co. Ltd.

ಏಜಂಟುಗಳ ಸುಪರಿಂಟೆಂಡೆಂಟರು.
ಕೊಡಗು, ಮಡಿಕೇರಿ.

ಎಂ. ಎ. ಬೆಳ್ಯಪ್ಪ,
ಬ್ರಾಂಚ್ ಸೆಕ್ರೆಟರಿ
ಹಂಪನ ಕಟ್ಟೆ, ಮಂಗಳೂರು.

CRESCENT

FOR PROTECTION AND SERVICE.

For life assurance of all kinds consult

The CRESCENT Insurance Co., Ltd.

H: O: BOMBAY.] [*Established 1919*

BRANCHES ALL OVER INDIA.

South Indian Branches:—
MADRAS, BANGALORE & MANGALORE.

For particulars write to **P. C. Karmbaya,**
Branch, Manager.
22—B. MAHATHMA GANDHI ROAD.
BANGALORE CANT.

ಸುರಕ್ಷಿತವಾದ ಜೀವವಿಮೆ ಪಡೆಯಲು

ಕ್ರೆಸೆಂಟ್

ಇನ್ಶ್ಯೂರೆನ್ಸ್ ಕಂಪೆನಿಗೆ ಬರೆಯಿರಿ.

ಹೆ. ಆ: ಬೊಂಬಾಯಿ] [ಸ್ಥಾಪನೆ: 1919.

ಬೆಂಗಳೂರು ಬ್ರಾಂಚ್ ಆಫೀಸು:—
22—ಬಿ. ಮಹಾತ್ಮಗಾಂಧಿ ರೋಡು, ಬೆಂಗಳೂರು.

ವಿಮೆ ಮಾಡಲು ಇಲ್ಲವೇ ಪ್ರತಿನಿಧಿಸಲು

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.

ಇವರ ಸಲಹೆಗಿಂತ ಉತ್ತಮ ಮಾರ್ಗವಿಲ್ಲ.
ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದೂಸ್ಥಾನದ ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು.

ದಿ ಬೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

39 ಮೌಂಟ್ ರೋಡ್,
ಪೊ. ಬಾ. ನಂ. 337,
ಮದ್ರಾಸು 2

ಬೋಂಬೆ ಲೈಫ್ ಬಿಲ್ಡಿಂಗ್,
ಪೊ. ಬಾ. ನಂ. 1,
ಉಡುಪಿ.

(ಟೆಲಿಫೋನ್ ನಂ 8398)

ಇತರ ಆಫೀಸುಗಳು:—ಬೆಂಗಳೂರು, ತಿರುವೇಂದ್ರಂ, ಕಲ್ಲಿಕೋಟೆ, ಮಂಗಳೂರು, ಮಧುರೆ, ಮತ್ತು ಬೊಂಬಾಯಿ.

THE ANDHRA INSURANCE CO., L[illegible]

H. O MASULIPATAM: Estd. 1925.

A progressive composite Office transacting Life, Fire, Motor, Marine etc. assuring fairest treatment to Policyholders.

RESERVE FUNDS MORE THAN ONE CRORE.

1947 Life Business only comes Rs.1,50,00,000

Branches all over India, such as:

Delhi, Calcutta, Bombay, Nagpur, Jam[illegible]
Secunderabad, Ananthapur, Ernakulam, [illegible]
Belgaum, Bangalore, Berhampore, B[illegible]
Guntur, Coimbatore & Vizagapatam.

WANTED INFLUENTIAL AGENTS IN COOR[illegible]
SOUTH KANARA, etc.,

For particulars please apply to:—
B MADHAVA,
Inspector,
BEKAL P. O, MANGALORE.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

[illegible] (1921ನೇ [illegible]

ವಸೂಲಾದ ಶೇರು ಮೂಲಧನ ರೂ. 1,33,740, ಜಮಾ [illegible] ಆಗಿ ಕಾದಿರಿಸಿದ ನಿಧಿ 3,30,268-1-8, ವಸೂಲಾದ ಕ್ಷೇಮನಿಧಿ 2,36,454-0-3, ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು 3,03,222-13-2.

ಈ ಬ್ಯಾಂಕಿನಿಂದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡಲ್ಪಡುವದಲ್ಲದೆ, ಡಿಪಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟು ಆಧಾರದ ಮೇಲೆ 9% [illegible] ಗುತ್ತೆ. ನಿರಖು ಠೇವಣಾತಿಯನ್ನು ತಾ. 1-1-46ರಿಂದ ಹೊಂದಿಕೊಳ್ಳಲಾಗುವುದು. ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ಶೇಕಡ 0-8-0 ರಂತೆ ಬಡ್ಡಿ ಕೊಡಲಾಗುತ್ತೆ. ಚಿನ್ನ, ಬೆಳ್ಳಿ ಆಭರಣಗಳ ಮೇಲೆ ಸಾಲ ಕೊಡಲಾಗುವುದು. ಸರ್ಕಾರ್ [illegible] ರಿಜಿಸ್ಟ್ರಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ. 1-12-46.

ಎಂ. ಎಸ್. ಸೋಮಯ್ಯ,
ಗೌ. ಕಾರ್ಯದರ್ಶಿ,

ಸಿ. ಪಿ. ಅಪ್ಪಯ್ಯ, M. L. C.
ಪ್ರೆಸಿಡೆಂಟ್ ಮತ್ತು [illegible].

THE WARDEN INSURANCE CO., Ltd.

(H. O. BOMBAY)

Managing Director:—J. H. THAKER Esq.,

Business in Force	Rs.	4,50,00,000
New Business	„	1,35,00,000
Assets	„	75,00,000

Transacts:
LIFE, FIRE, ACCIDENT, etc.,

For particulars please apply to.
A. S. Aiyappa,
Branch secretary,
GANDHI NAGAR,
BANGALORE CITY.

ದಿ ವಾರ್ಡನ್ ಇನ್ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
ಗಾಂಧಿನಗರ, ಬೆಂಗಳೂರು ಸಿಟಿ.

Edited, Printed and Publishd by P. I. Belliappa at 'Kodagu' Press, Mercara for 'Kodagu' Ltd.

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 4-8-0

ಸಂಪುಟ ೨೭ | ತಾರೀಖು ೨೮-೧-೧೯೪೯ ಶುಕ್ರವಾರ | ಸಂಚಿಕೆ ೩೪

॥ ಜನವರಿ - ಗಾಂಧೀ ಮಾಸ ॥

ಜನವರಿ ತಿಂಗಳನ್ನು 'ಗಾಂಧೀ ಮಾಸ' ಎನ್ನಬಹುದು. ಇದೇ ತಿಂಗಳಲ್ಲಿ ಮಹಾತ್ಮರ ಹಾಗೂ ರಾಷ್ಟ್ರದ ಸ್ಮರಣೆ ಮತ್ತು ಆ ಸಂಬಂಧದ ಕಾರ್ಯಾಚರಣೆಗಳ ಹೊಣೆ ಭಾರತೀಯರ ಪಾಲಿಗಿದೆ. ಭಾರತವು ಸ್ವಾತಂತ್ರ್ಯ ಹೋರಾಟದಲ್ಲಿದ್ದ ಹಿಂದಿನ ವರ್ಷಗಳಲ್ಲಿ ಜನವರಿ ತಾ ೨೬ 'ಸ್ವಾತಂತ್ರ್ಯ ದಿನ'ವಾಗಿ ಆಚರಿಸಲ್ಪಡುತ್ತಿದ್ದಿತು. ಕಳೆದ ವರ್ಷದಿಂದ ಅದು 'ರಾಷ್ಟ್ರೀಯ ಸ್ಮಾರಕ ದಿನ'ವಾಗಿ ಮಾರ್ಪಟ್ಟಿದೆ. ಈ ವರ್ಷವಂತೂ ಜನವರಿ ತಾ ೨೬ 'ವಿಧಾಯಕ ಕಾರ್ಯಾಚರಣಾ ದಿನ'—ಜನವರಿ ತಾ. ೩೦ 'ಗಾಂಧೀಜೀ ಬಲಿದಾನ ದಿನ' ಆದರೆ '[illegible] ದಿನ'. ಜನವರಿ ತಾ ೧೬ರಿಂದ ೩೦ರ ವರೆಗೆ 'ಗಾಂಧೀ ಸ್ಮಾರಕ ಪಕ್ಷ'ವಾಗಿ ನಮ್ಮ ಪಾಲಿಗೊದಗಿವೆ. ಇವುಗಳ ಆಚರಣೆ ಘಟ್ಟವುಗಳಲ್ಲಿ ತ[illegible] ಮಾತ್ಮ್ಯವೊಂದುವುದರಿಂದ ಕರ್ತವ್ಯಪಾಲನೆ ಮತ್ತು ಕೃತಜ್ಞತಾ ಪ್ರದರ್ಶನವೆರಡನ್ನೂ ನಾವು ಮಾಡಬೇಕಾದಂತಾಗುವುದು. ಆದ್ದರಿಂದ ಆ ಸಂಬಂಧದ ಅಧಿಕೃತ ಸೂಚನೆಗಳನ್ನು ಇಲ್ಲಿ ಕೊಟ್ಟಿದ್ದೇವೆ.

ಗಾಂಧೀ ಸ್ಮಾರಕ ನಿಧಿ

ಗಾಂಧೀ ಸ್ಮಾರಕ ನಿಧಿಯ ಅಧ್ಯಕ್ಷರಾದ ಬಾ ಬಾ ರಾಜೇಂದ್ರ ಪ್ರಸಾದರು ಭಾರತದ ಸರ್ವ ಸ್ತ್ರೀಪುರುಷರೊಂದಿಗೆ ಈ ಕೆಳಗಿನ ವಿನಂತಿಯನ್ನು ಮಾಡಿಕೊಂಡಿದ್ದಾರೆ:

'ಜನವರಿ ತಿಂಗಳು ಭಾರತೀಯರ ಪಾಲಿಗೆ ಅತ್ಯಂತ ವೇದನಾತ್ಮಕ ಸ್ಮರಣೆಯ ತಿಂಗಳಾಗಿದೆ. ಕಳೆದ ವರ್ಷದ ಇದೇ ತಿಂಗಳ ೩೦ನೇ ತಾರೀಕಿನಲ್ಲಿ ಮಹಾತ್ಮ ಗಾಂಧಿಯವರ ಬಲಿದಾನವಾಯಿತು. ಅವರು ತನ್ನ ಅಜೇಯ ಸತ್ಯಾಗ್ರಹ ಅಸ್ತ್ರದ ಮೂಲಕ ನಾವು ರಾಜಕೀಯ ಸ್ವಾತಂತ್ರ್ಯ ಸಂಪಾದಿಸಿಕೊಳ್ಳುವಂತೆ ನೆರವಾದುದಷ್ಟೇ ಅಲ್ಲ, ನಮ್ಮ ಜೀವನದಲ್ಲಿ ಹೊಸ ಅಪ ಮೌಲ್ಯಗಳನ್ನೂ ತುಂಬಿದರು. ನಮ್ಮ ಸಾಮಾಜಿಕ ಹಾಗೂ ರಾಜಕೀಯ ರೀತಿ ನೀತಿಗಳನ್ನು ಸುಧಾರಿಸಿ ಅವುಗಳನ್ನು ಸತ್ಯ, ಪ್ರೇಮಗಳ ಪವಿತ್ರಾಸ್ತಿಭಾರದ ಮೇಲೆ ಕಟ್ಟಿ ಬೆಳೆಸಿದರು. ಈ ಗುರಿ ಸಾಧನೆಗಾಗಿಯೇ, ಅವರು ಭಾರತದ ಮೂಲೆ ಮೂಲೆಯ ಜನತೆಯ ಹಿತಸಾಧಕಗಳಾದ ಹಲವಾರು ವಿಧಾಯಕ ಕಾರ್ಯರೀತಿಗಳನ್ನು ಮುಂದಿಟ್ಟರು. ಗಾಂಧಿಜೀಯ ಈ ಅಮೂಲ್ಯ ತತ್ವಗಳನ್ನು ಊರ್ಜಿತದಲ್ಲಿರಿಸಲು ಅವರ ಈ ಕಾರ್ಯಕ್ರಮಗಳನ್ನು ಮುಂದೊತ್ತಬೇಕೆಂಬ ಮುಖ್ಯೋದ್ದೇಶದಿಂದಲೇ, ಕಳೆದ ಫೆಬ್ರವರಿಯಲ್ಲಿ 'ಗಾಂಧಿ ರಾಷ್ಟ್ರೀಯ ಸ್ಮಾರಕ ನಿಧಿ' ಆರಂಭಿಸಿತು. ಬಡ ಜನರ ಪ್ರಯೋಜನಕ್ಕಾಗಿ ಆಸ್ಪತ್ರೆಗಳು, ಹೆಂಗಸರು ಮತ್ತು ಮಕ್ಕಳಿಗಾಗಿ ಅನಾಥಾಲಯಗಳು, ಪ್ರಸೂತಿ ಗೃಹಗಳು ಮತ್ತು ದಕ್ಕೆ ಸಂಬಂಧಿಸಿದ ಇತರ ಸಂಸ್ಥೆಗಳು, ಕುಷ್ಠ ನಿವಾರಕ ಸಾಧನಗಳು, ಆರೋಗ್ಯಪ್ರದ [illegible], ಮುಖ್ಯವಾಗಿ ಗ್ರಾಮ ವಲಯಗಳಿಗಾಗಿ, ಹಳ್ಳಿ ಕೈಗಾರಿಕೆಗಳಲ್ಲಿ [illegible] ಕೈಗಾರಿಕೆಗಳಲ್ಲಿ ಶಿಕ್ಷಣ ಮತ್ತು ತರಬೇತಿ, ಮತ್ತು ಇಂತಹ ಚಟುವಟಿಕೆಗಳನ್ನು [illegible] ರಚನೆ, [illegible] ಉದ್ದೇಶಗಳಿಗೆ [illegible] ಯೋಗಿಸಲಿದೆ. [illegible] ಆಸ್ತಿ [illegible] ಪ್ರಯತ್ನಪಟ್ಟು [illegible] ದು ವರೆಗೆ [illegible] ಕಡಿಮೆ. ಇದೇ ಜನವರಿ ತಾ ೧೬ರಿಂದ ೩೦ರ ವರೆಗಿನ ಎರಡು ವಾರಗಳನ್ನು ಇಡೀ ರಾಷ್ಟ್ರವು 'ಗಾಂಧೀ ಸ್ಮಾರಕ ಪಕ್ಷ'ವಾಗಿ ಆಚರಿಸ[illegible] ಲ್ಲಿ ಇವನ್ನು [illegible] ಅತಿ ಭರದಿಂದ ನಿಧಿಸಂಗ್ರಹಕ್ಕೆ [illegible] ಕಾರ್ಯಕರ್ತರಿಗೂ ನಾನಿಂದು ಈ ಕೆಳಗಿನ ವಿಜ್ಞಾಪನೆಯನ್ನು ಮಾಡಿಕೊಳ್ಳುತ್ತೇನೆ. [illegible], ನಮ್ಮ ರಾಷ್ಟ್ರಜನಕರ [illegible] ಕರ್ತವ್ಯ [illegible] ನಾವು ಸಲ್ಲಿಸಬೇಕಾದ ಕೃತಜ್ಞತಾ ಗೌರವವಾಗಿಯೂ, ಯಾವುದರ ಸಾಧನೆಗಾಗಿ ಅವರು ಜೀವನದ [illegible] ಆ ಅಸಾಮಾನ್ಯ ಕಾರ್ಯಭಾರ ನಿರ್ವಹಣೆಗಾಗಿಯೂ ಭಾರತೀಯ ಸ್ತ್ರೀ ಪುರುಷರು, ಶ್ರೀಮಂತರು ಮತ್ತು ಬಡವರು ಈ ನಿಧಿಗೆ ಮುಕ್ತಹಸ್ತದಿಂದ ಸಹಾಯ ಮಾಡಬೇಕೆಂದು ನಾನು ಎಲ್ಲರೊಡನೆಯೂ ವಿನಂತಿಸಿಕೊಳ್ಳುತ್ತೇನೆ. ಈ ಸಹಾಯಧನವನ್ನು ಸಮೀಪದ ಪೋಸ್ಟಾಫೀಸಿನಲ್ಲಾಗಲೀ, ಸಂಗ್ರಹಾಧಿಕಾರ ಪಡೆದವರೊಡನಾಗಲೀ ಕೊಡಬಹುದು.'

'ಗಾಂಧೀ ವಸ್ತುಪ್ರದರ್ಶನ'

ಗಾಂಧಿ ಮ್ಯೂಸಿಯಮ್ ಒಂದನ್ನು ಸ್ಥಾಪಿಸುವ ಕುರಿತು ಬಾಬೂ ರಾಜೇಂದ್ರ ಪ್ರಸಾದರು ಈ ಕೆಳಗಿನ ವಿನಂತಿ ಮಾಡಿಕೊಂಡಿದ್ದಾರೆ:

'ತೀರಾ ತಡವಾಗುವ ಮೊದಲೇ ಮಹಾತ್ಮ ಗಾಂಧಿಯವರಿಗೆ ಸಂಬಂಧಿಸಿದ ಎಲ್ಲಾ ವಸ್ತುಗಳನ್ನೂ ಸಂಗ್ರಹಿಸಿಕೊಳ್ಳುವದು ಅತ್ಯಗತ್ಯವಿದೆ. ತನ್ನ ಚರಿತ್ರೋಚಿತ ಸಾಮಗ್ರಿಗಳನ್ನು ಅಸಡ್ಡೆ ಮಾಡಿಬಿಡುವ ಭಾರತದ ಅಭ್ಯಾಸವು ಗಾದೆಯ ಮಾತಾಗಿ ಟೀಕೆಗೀಡಾಗಿದೆ. ಗಾಂಧಿಜೀಯ ಜೀವಿತ [illegible] ಸಂಬಂಧಿಸಿದ ಅಮೂಲ್ಯ ವಸ್ತುಗಳ [illegible] ಇಂತಹ ಅಪಾಯ [illegible] ಗಾಂಧೀ 'ಮ್ಯೂಸಿಯಂ'ನ್ನು ಸ್ಥಾಪಿಸಿ [illegible] ಗಾಂಧೀ ಸ್ಮಾರಕ ನಿಧಿಯು [illegible] ಗಾಂಧೀಜಿ ಉಪಯೋಗಿಸಿದ್ದ ಮತ್ತು ಅವರಿಗೆ ಸಂಬಂಧಿಸಿ [illegible] ಸಂಗ್ರಹಿಸಿಟ್ಟುಕೊಳ್ಳಬೇಕಾಗಿದೆ. [illegible] ಗಳು, ಲೇಖನಗಳ ಮತ್ತೆಲ್ಲಾ ದಾಖಲೆಗಳು, [illegible] ಗಳು, ಅವರ ಭಾವಚಿತ್ರಗಳು, ತೈಲ ಚಿತ್ರಗಳು, ವ್ಯಂಗ್ಯಚಿತ್ರಗಳೇ ಮೊದಲಾದುವು, ಮಹಾತ್ಮ ಗಾಂಧಿಯವರ ಜೀವನ ಹಾಗೂ ಅವರ ಕಾರ್ಯಗಳಿಗೆ ಸಂಬಂಧಿಸಿದ [illegible] ಇತ್ಯಾದಿ ಜನಪದ ರೂಪಗಳು, [illegible] ಗಾಂಧಿಯವರಿಂದ [illegible] ಎಲ್ಲಾ [illegible] ಕೊಂಡು, [illegible] ನೋಡಿ [illegible] ಅವುಗಳ [illegible] ಹೇಳಿ [illegible] ಅವುಗಳನ್ನು ಸಂಗ್ರಹಿಸುವ ಮತ್ತು [illegible] ಅನುಕೂಲವಾದ ಸ್ಥಳದಲ್ಲಿ ಜಮಾಯಿಸಿಟ್ಟುಕೊಳ್ಳುವ ಅಧಿಕಾರವನ್ನು ಗಾಂಧಿ ಸ್ಮಾರಕ ನಿಧಿಯು [illegible] ಈ ಸಂದರ್ಭದಲ್ಲಿ ಎಲ್ಲರೂ ತಮ್ಮ ವಶವಿರುವ ಇಂತಹ ಸಾಮಗ್ರಿಗಳೆಲ್ಲವನ್ನೂ ಕಳುಹಿಸಿ ಅಥವಾ ಕಾಣಿಕೆ [illegible] ಅವುಗಳ ಸಂಗ್ರಹ ವ್ಯವಸ್ಥೆ ಮಾಡಲಾಗುವಂತೆ ಅವುಗಳೆಲ್ಲಿವೆ ಎಂಬ ಸುದ್ದಿಗಳನ್ನಾದರೂ [illegible] ಶ್ರೀ [illegible] ಹೆಂಟ್ [illegible] ಸಹಕರಿಸಬೇಕೆಂದು ಆಗ್ರಹಪೂರ್ವಕ ವಿಜ್ಞಾಪನೆ. ಒಂದು ಪ್ರತ್ಯೇಕ ಮ್ಯೂಸಿಯಂ ಸ್ಥಾಪನೆಯಾಗುವ ವರೆಗೆ ಇವೆಲ್ಲವನ್ನು ಬೊಂಬಾಯಿಯ 'ಪ್ರಿನ್ಸ್ ಓಫ್ ವೇಲ್ಸ್ ಮ್ಯೂಸಿಯಂ'ನಲ್ಲಿ ಮತ್ತು 'ರೋಯಲ್ ಏಸಿಯಾಟಿಕ್ ಸೊಸೈಟಿ'ಯಲ್ಲಿಡುವ ಸರಿಯಾದ ವ್ಯವಸ್ಥೆಯನ್ನು ಅವರು ಮಾಡಿದ್ದಾರೆ. ಮಹಾತ್ಮ ಗಾಂಧಿಯವರಿಗೆ ಸಂಬಂಧಿಸಿದ ಎಲ್ಲಾ ಪುಸ್ತಕಗಳ ಸಾಕಷ್ಟು ಸಂಖ್ಯೆಯ ಪ್ರತಿಗಳನ್ನು ಅವುಗಳ ಮುದ್ರಣ ಪ್ರತಿ ಮುಗಿದು ಹೋಗುವ ಮೊದಲೇ ಸಂಗ್ರಹಿಸಬೇಕೆಂಬ ಬಯಕೆ ವಿಶೇಷವಿದೆ. ಹೀಗಾಗಿ ಭಾರತ ಮತ್ತು ಹೊರದೇಶಗಳಲ್ಲಿ ಪರಿಪೂರ್ಣ ಗಾಂಧೀ ವಾಙ್ಮಯಗಳನ್ನು ಸ್ವಲ್ಪ ಸಂಖ್ಯೆಯಲ್ಲಿ ದಗೊಳಿಸುವ ಬಯಕೆ ಫಲಿಸಲು ಕಷ್ಟವಾಗದು. ಆದ್ದರಿಂದ ಮಹಾತ್ಮ ಗಾಂಧಿಯವರ ಜೀವನ, ತತ್ವ ಮತ್ತು ಚಟುವಟಿಕೆಗಳಿಗೆ ಸಂಬಂಧಿಸಿದ ತಮ್ಮ ಪ್ರಕಟಿತ ಗ್ರಂಥಗಳ ಪ್ರತಿಗಳನ್ನು ಶ್ರೀ ಕಾಕಾ ಕಾಲೇಲ್ಕರ್, ಗಾಂಧೀ ಸ್ಮಾರಕ ನಿಧಿ, ಬಿರ್ಲಾ ಹೌಸ್, ಬೊಂಬಾಯಿ—ಈ ವಿಳಾಸಕ್ಕೆ ಕಳುಹಿಸಿಕೊಡಬೇಕೆಂದು ಸರ್ವ ಗ್ರಂಥಕರ್ತರಲ್ಲಿ [illegible] ವಿಜ್ಞಾಪನೆಯಿದೆ.'

ಸ್ಮಾರಕ ದಿನ

ಜನವರಿ ತಾ ೨೬ನ್ನು, ಸ್ವಾತಂತ್ರ್ಯ ಹೋರಾಟದಲ್ಲಿ ಬಲಿಗೊಂಡವರ ಪವಿತ್ರ ಸ್ಮರಣೆಯ 'ಸ್ಮಾರಕ ದಿನ'ವಾಗಿ ಆಚರಿಸಬೇಕೆಂದು ಇತ್ತೀಚೆಗೆ ನವ ದಿಲ್ಲಿಯಲ್ಲಿ ಸೇರಿದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ನಿರ್ಣಯಿಸಿದೆ. ೧೯೨೯ನೇ ಡಿಸೆಂಬರಿನಲ್ಲಿ ಸೇರಿದ್ದ ಲಾಹೋರ್ ಕಾಂಗ್ರೆಸು ಪಂಡಿತ ನೆಹರೂರವರ ಮುಖಂಡತ್ವದಲ್ಲಿ 'ಪೂರ್ಣ ಸ್ವಾತಂತ್ರ್ಯ'ವನ್ನೇ ತನ್ನ ಗುರಿಯಾಗಿ ಸ್ವೀಕರಿಸಿತೆಂಬ [illegible] ಆ ಮುಂದಿನ ಪ್ರತಿ ಜನವರಿ ೨೬ನೇ ತಾರೀಕನ್ನು ರಾಷ್ಟ್ರವು 'ಸ್ವಾತಂತ್ರ್ಯ ದಿನ'ವಾಗಿ ಆಚರಿಸಿಕೊಂಡು ಬಂದಿದ್ದಿತು. ಕಳೆದ ವರ್ಷ ಈ ದಿನ ಬರುವ ವೇಳೆಗೆ ಸ್ವಾತಂತ್ರ್ಯ ಬಂದಿದ್ದುದರಿಂದ, ಆ ತಾರೀಕು 'ಸ್ವಾತಂತ್ರ್ಯ [illegible]' ದಿನವಾಗಿ [illegible], ಕಳೆದ ಬಾರಿ 'ಸ್ವಾತಂತ್ರ್ಯ ಸ್ಮಾರಕ ದಿನ'ವಾಗಿ ಮಾರ್ಪಟ್ಟಿದ್ದಿತು. ಸ್ವಾತಂತ್ರ್ಯಕ್ಕಾಗಿ ಹೋರಾಡಿ ಪ್ರಾಣಬಲಿ ಕೊಟ್ಟವರಿಗೆ ಮತ್ತು ಕಷ್ಟನಷ್ಟಗಳನ್ನು ಅನುಭವಿಸಿದವರಿಗೆ ಕೃತಜ್ಞತಾ ಸೂಚಕವಾಗಿ ಆ ದಿನವು ಆಚರಿಸಲಾಗಿತ್ತು. ಈ ವರ್ಷ [illegible] 'ವಿಧಾಯಕ ಕಾರ್ಯಾಚರಣೆಯ ದಿನ'ವಾಗಿರುವಂತೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ನಿರ್ದೇಶಿಸಿದೆ. ಸ್ವಾತಂತ್ರ್ಯವನ್ನು ಸಂಪಾದಿಸಿಕೊಳ್ಳಲು ನಾವು [illegible] ಕಾಲ ಹೋರಾಡಬೇಕಾಗಿತ್ತು. ಆ ಅವಧಿಯಲ್ಲಿ ಜನತೆಗೆ ತನ್ನ ಕರ್ತವ್ಯ ಮರೆತುಹೋಗದಂತೆ ಮಾಡಲು ಸ್ವಾತಂತ್ರ್ಯ ನಿರ್ಧಾರವನ್ನು ಘೋಷಿಸಿಕೊಳ್ಳಲು ಜನವರಿ ೨೬ ಮೀಸಲಿತ್ತು. ಈಗ ಸ್ವಾತಂತ್ರ್ಯ ದೊರೆತಿದೆ. ಆದರೆ ಅದರ ಸರಿಯಾದ ಪ್ರಯೋಜನ ಪಡೆಯಲು ಈ ವರೆಗಾಗಲಿಲ್ಲ. ಈ ಸ್ವಾತಂತ್ರ್ಯದ ನಿಜವಾದ ಗುರಿಯಾದ ಸಾಮಾನ್ಯ ಜನರ ಜೀವನಮಟ್ಟವನ್ನು ಸುಧಾರಿಸಲಾಗಲಿಲ್ಲ. ಸ್ವಾತಂತ್ರ್ಯವನ್ನು ಸಾರ್ಥಕಗೊಳಿಸುವುದು ಸ್ವಾತಂತ್ರ್ಯ ಸಂಪಾದನೆಗಿಂತಲೂ ಪ್ರಯಾಸದ ಕಾರ್ಯವಾಗಿ ಕಾಣುತ್ತಿದೆ. ಆದ್ದರಿಂದ ಕಾಂಗ್ರೆಸ್ ಈ ದಿನದಲ್ಲಿ ಎಲ್ಲರ ಲಕ್ಷ್ಯವೂ ಆ ಕಡೆ ಬೀಳಬೇಕೆಂದು ಸಾರಿದೆ. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಮಾಡಿರುವ ನಿರ್ಣಯಕ್ಕನುಸಾರವಾಗಿ ಕಾರ್ಯಾಲಯವು ಹೊರಡಿಸಿರುವ ಸರ್ಕ್ಯುಲರಿನ ಸಾರಾಂಶ ಹೀಗಿದೆ:—

'ಜನವರಿ ೨೬ನ್ನು ನಾವು [illegible] ದಿನವಾಗಿ ಆಚರಿಸುತ್ತಿದ್ದೆವು [illegible] ಪ್ರತಿ ವರ್ಷವೂ ಸ್ವಾತಂತ್ರ್ಯ ಪ್ರತಿಜ್ಞೆ ಸ್ವೀಕರಿಸುತ್ತಿದ್ದ ದಿನವದು. ಆದ್ದರಿಂದ ಈ ಸ್ವಾತಂತ್ರ್ಯವನ್ನು ವಿಧಾಯಕ ಕಾರ್ಯ ರೀತಿಯ ಜನತೆಯ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯದ ರೂಪಾಂತರಿಸುವುದನ್ನಾರಂಭಿಸಲು ಈ ದಿವಸಕ್ಕಿಂತ ಯೋಗ್ಯವಾದ ಬೇರೊಂದಿರಲಾರದು. ಕಾಂಗ್ರೆಸಿನ ಸಾಮಾಜಿಕ ಕ್ರಾಂತಿ ಕಾರ್ಯಕ್ರಮವನ್ನು [illegible] ಮೇಲೆ ಮುಂದೆಗೂ ಹಬ್ಬುವಂತೆ ಆ ದಿವಸ ಪ್ರತಿಯೊಂದು ನಗರ ಮತ್ತು ಹಳ್ಳಿಯಲ್ಲಿಯೂ ಸಾರ್ವಜನಿಕ ಸಭೆಗಳು ಸೇರಿ ಕಾಂಗ್ರೆಸಿನ ಆರ್ಥಿಕ ಕಾರ್ಯಕ್ರಮಗಳನ್ನು ಮಂಡಿಸಿ ಪ್ರಚುರಪಡಿಸಬೇಕು. ಮು

ಮುಖ್ಯತಃ ತರುಣ ಸ್ತ್ರೀಪುರುಷ ಕಾಂಗ್ರೆಸ್ ಕಾರ್ಯಕರ್ತರು ಕಳ್ಳಸಂತೆ, ಕಳ್ಳ ಸಂಗ್ರಹ, ದುರ್ವರ್ತನೆ, ದುಶ್ಚಾಳಿಗಳ ನಿವಾರಣೆಗೆ ನಡು ಬಿಗಿ ಹಿಡಿಯಬೇಕು. ಜೈಪುರ ಕಾಂಗ್ರೆಸ್ಸಿನಲ್ಲಾದ 'ಸಾರ್ವಜನಿಕ ಗುಣ ನಡತೆಯ' ನಿರ್ದೇಶಗಳಿಗನುಸಾರವಾಗಿ ಎಲ್ಲಾ ಕಾಂಗ್ರೆಸ್ ಕೆಲಸಗಾರರು ಶಿಸ್ತುಬದ್ಧ ಆಚರಣೆಗಿಳಿಯಬೇಕು.

ಸರ್ವೋದಯ ದಿನ.

ಜನವರಿ ೩೦ ಬರುತ್ತಿದೆ; ಬಾಪೂಜಿಯನ್ನು ಬಲಿ ಪಡೆದು ಇಡೀ ರಾಷ್ಟ್ರವನ್ನು ಅನಾಥಗೊಳಿಸಿದ ಕರಾಳ ದಿನ ಸಮೀಪಿಸುತ್ತಿದೆ; ಆ ಬಾರಿ ಇಡೀ ದೇಶಕ್ಕೆ ಅಂಥಾ ಸಿಡಿಲನ್ನೆರಗಿಸಿದ ಆ ದಿನ ಮತ್ತೊಮ್ಮೆ ತಲೆ ಹಾಕುವದು ಇದೇ ಮೊದಲನೇ ಬಾರಿ; ಗಾಂಧೀಜಿಯ ಬಲಿದಾನದ ಪ್ರಥಮ ವರ್ಧಂತಿ ಇದು. ಅದನ್ನು ಆಚರಿಸುವ ಕುರಿತು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಮಾಡಿರುವ ನಿರ್ಣಯ—ರಾಷ್ಟ್ರಕ್ಕದರ ದಿಗ್ದರ್ಶಕತ್ವ—ಹೀಗಿದೆ.

ಮಹಾತ್ಮಾ ಗಾಂಧಿಯವರು ಹೊರಟು ಹೋಗಿ ಬಹುತೇಕ ಒಂದು ವರ್ಷ ಕಳೆದುಹೋಯಿತು. ಅವರ ಮರಣ ವರ್ಧಂತಿ ದಿನ ಜನವರಿ ೩೦ನ್ನು 'ಸರ್ವೋದಯ ದಿನ'ವಾಗಿ ಇಡೀ ರಾಷ್ಟ್ರದಲ್ಲಿ ಅತ್ಯಂತ ನಿಷ್ಠೆಯಿಂದ ಆಚರಿಸಬೇಕು; ಗಾಂಧೀಜಿ ಕಲಿಸಿದ ಮತ್ತು ಅವರು ತನ್ನ ಆಯುಷ್ಯವಿಡೀ ಬೋಧಿಸಿದ ಹಾಗೂ ಆಚರಿಸಿ ತೋರಿಸಿದ ತತ್ವಗಳಿಗೇನೇ ಈ ದಿನವು ವಿಮಲವಿರಬೇಕು. ಸತ್ಯ ಮತ್ತು ಅಹಿಂಸೆಯ ಮೂಲಕ ರಾಷ್ಟ್ರದ ಎಲ್ಲಾ ಸ್ತ್ರೀಪುರುಷರೊಳಗೆ ಸದ್ಭಾವನೆ ಮತ್ತು ಒಕ್ಕಟ್ಟು ಸ್ಥಾಪಿಸಬೇಕೆಂಬ ಮಹಾತ್ಮರ ಮಹಾ ಸಂದೇಶದ ಕಡೆಗೇನೇ ಆ ದಿನದಲ್ಲಿ ಮುಖ್ಯತಃ ರಾಷ್ಟ್ರದ ಲಕ್ಷ್ಯವನ್ನು ಎಳೆಯಬೇಕು. ಮಹಾತ್ಮರ ಪವಿತ್ರ ಹಾಗೂ ಜೀವಂತ ನೆನಪಿಗನುಗುಣವಾಗಿ ಆ ದಿವಸವನ್ನು ಭಕ್ತಿಪೂರ್ವಕವಾಗಿ ಆಚರಿಸಬೇಕು; ತ್ಯಾಗ ತೀಲ ನಡುವಳಿಕೆ ಮತ್ತು ಸಾಮಾಜಿಕ ಸೇವೆಗಳೇ ಅಂದಿನ ಕಾರ್ಯಕ್ರಮದಲ್ಲಿರಬೇಕು. ಸಾರ್ವಜನಿಕ ಸಭೆಗಳೂ ಸೇರಬಹುದು. ಆ ಸಭೆಗಳಲ್ಲಿ ಈ ಕೆಳಗಿನ ಸಂದೇಶವನ್ನು ಮಾತ್ರ ಓದತಕ್ಕದ್ದು;—

'ಶತಮಾನಗಳಿಂದ ನಡೆದಿದ್ದ ಸ್ವಾತಂತ್ರ್ಯ ಸಂಗ್ರಾಮದ ಸುದೀರ್ಘ ಚರಿತ್ರೆಯಲ್ಲಿ ಭಾರತವು ಹಲವಾರು ವಿಧ ದುಃಖ ಪಟ್ಟು, ಸುಖ, ಹಲವು ಜಯ ಮತ್ತು ಅಪಜಯಗಳನ್ನು ಅನುಭವಿಸಿದ್ದಿತು. ಆದರೆ ರಾಷ್ಟ್ರಪಿತನ ಅಮೋಘ ನಾಯಕತ್ವದಡಿಯಲ್ಲಿ ದುಃಖವೆಂಬುದು ಜನತೆಯನ್ನು ಶುದ್ಧೀಕರಿಸುವ ಸಾಧನವಾಯಿತು. ಪ್ರತಿಯೊಂದು ಸೋಲೂ ಇಮ್ಮಡಿ ಪ್ರಯತ್ನಗಳಿಗೆ ಪ್ರೇರಣೆ ಮತ್ತು ವಿಜಯದ ಮುಂಬೆಳಕಾಗಿ ಪರಿಣಮಿಸಿತು. ಇತ್ತೀಚಿನ ವರ್ಷಗಳು ಕಠೋರ ಪರೀಕ್ಷಾ ಕಾಲ ಮತ್ತು ಕಷ್ಟದ ಅವಧಿಯಾಗಿದ್ದವು. ಆದರೆ ಇಲ್ಲಿಯೂ ಗಾಂಧೀಜಿಯ ಸಂದೇಶವು ರಾಷ್ಟ್ರವನ್ನು ಉತ್ತೇಜಿಸಿತು. ಈ ವರುಷಗಳು ಅನೇಕ ಪರಿಣಾಮದ ಸಾಫಲ್ಯವನ್ನು ತಂದುವು. ತಲಾತಲಾಂತರದಲ್ಲಿ ಹೋರಾಡಿದ್ದ ಮತ್ತು ಕಷ್ಟನಷ್ಟ ಅನುಭವಿಸಿದ್ದವರ ತ್ಯಾಗದ ಫಲವಾಗಿ ಸ್ವಾತಂತ್ರ್ಯವು ಸಾಧಿಸಲ್ಪಟ್ಟಿತ. ಆದರೆ ಆ ಸಾಧನೆಗೆ ತೆತ್ತ ಬೆಲೆಯೇನೋ ನಿಜಕ್ಕೂ ಅತಿ ಹೆಚ್ಚಿನದು. ಮಾತೃಭೂಮಿಯು ಎರಡಾಗಿ ತುಂಡರಿಸಲ್ಪಟ್ಟಿತು. ಈ ದುರ್ದೈವೀ ವಿಭಜನೆಯನ್ನನುಸರಿಸಿ, ಜನತೆಯ ಬುದ್ಧಿಭ್ರಮೆಗೊಂಡು, ಗಾಂಧೀಜಿಯ ಅಮೋಘ ತತ್ವಗಳಿಗೆ ಆಗೊಮ್ಮೆ ಗ್ರಹಣ ಹಿಡಿದಂತಾಯಿತು. ಈ ಕತ್ತಲೆಯನ್ನು ಕೂಡಾ ಗಾಂಧೀಜಿಯ ಹೃದಯೋತ್ತೇಜಕ ಸಂದೇಶವು ಜ್ಯೋತಿಯಾಗಿ ಬೆಳಗಿತಲ್ಲದೆ, ದುಃಖಾವರಿತ ಅಸಂಖ್ಯಾತ ಹೃದಯಗಳಿಗೆ ಅದು ಶಕ್ತಿ ಮತ್ತು ಸಮಾಧಾನವನ್ನು ಕೊಟ್ಟಿತು. ಆಗಲೇ ಎಲ್ಲರ ಮೇಲಿನ ಅತಿ ದೊಡ್ಡ ಹೊಡೆತ. ಯಾರು ಭಾರತದ ಆಜೇಯ ಸ್ಫೂರ್ತಿ, ಪ್ರೇಮ ಮತ್ತು ನಾಗರಿಕತೆಯ ಪ್ರತಿಬಿಂಬವೋ ಅವರೇ ಕೊಲೆಯಾದರು ಹೀಗಾಗಿ ಭಾರತವು ಯಾವುದಕ್ಕಾಗಿ ಅಷ್ಟೆಲ್ಲಾ ಶ್ರಮಿಸಿದ್ದಿತೋ, ಯಾವುದು ದೀರ್ಘ ಹೋರಾಟವೊಂದರ ಪ್ರತಿಫಲವೋ ಆ ಸ್ವಾತಂತ್ರ್ಯವೇ ಸ್ವಾತಂತ್ರ್ಯ ಸಹಜ ತೇಜಸನ್ನು ಬೀರಲಿಲ್ಲ. ಬದಲಿಗೆ ದುಃಖ ಮತ್ತು ವೇದನೆಯನ್ನು ಕವಿಸಿತು. ಗಾಂಧೀಜಿಯ ಪವಿತ್ರ ಸ್ಮರಣೆ ಮತ್ತು ನಮಗವರು ಕಲಿಸಿಕೊಟ್ಟ ಪಾಠಗಳ ಮೇಲಿನ ಭಕ್ತಿಪೂರ್ಣ ನಿಷ್ಠೆಯ ಬಲದಿಂದ ರಾಷ್ಟ್ರವು ಈ ಭೀಕರ ಬಿಕ್ಕಟ್ಟನ್ನು ಇದಿರಿಸಿತು. ರಾಷ್ಟ್ರಕ್ಕೆ ಸ್ವಾತಂತ್ರ್ಯವನ್ನು ತಂದವನು ಮತ್ತದಕ್ಕೆ ಜೀವ ಬರಿಸಿದವನು ನಮ್ಮನ್ನಗಲಿ ಹೋಗಿ ಪೂರ್ಣ ಒಂದು ವರ್ಷ ಕಳೆಯಿತ. ಈ ಪ್ರಥಮ ವರ್ಧಂತಿಯ ದಿವಸ ಆ ಮಹಾ ಆತ್ಮಕ್ಕೂ ಆವರ ಮಹಾ ಸಂದೇಶಕ್ಕೂ ನಾವು ಅತ್ಯಂತ ಭಕ್ತಿವಿಶ್ವಾಸದಿಂದ ತಲೆಬಾಗುತ್ತೇವೆ. ಮತ್ತು ಆ ಪ್ರಾಣದಾತನ ಸಂದೇಶದ ಪ್ರಕಾಶಕ್ಕನುಗುಣವಾಗಿ ಭಾರತ ಜನತೆ ಮತ್ತು ಮಾನವ ಜನಾಂಗದ ಸೇವೆಯನ್ನು ಮಾಡುತ್ತಾ ಹೋಗುತ್ತೇವೆ ಎಂದು ಪ್ರತಿಜ್ಞೆ ಮಾಡುತ್ತೇವೆ.'

ಗಾಂಧೀಜಿಯ ನಾಯಕತ್ವದಲ್ಲಿ ಅಹಿಂಸಾತ್ಮಕವಾಗಿ ರಾಷ್ಟ್ರದ ರಾಜಕೀಯ ಸ್ವಾತಂತ್ರ್ಯವನ್ನು ಸಂಪಾದಿಸಿಕೊಂಡ ನಾವೀಗ, ಜಾತಿ, ಮತ ವ್ಯತ್ಯಾಸವಿಲ್ಲದೆ ಭಾರತದ ಎಲ್ಲಾ ಜನತೆಗೂ ಸಮಾನ ಸಂದರ್ಭ ಮತ್ತು ಪ್ರಗತಿದಾಯಕವಾದ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯಕ್ಕಾಗಿ ಶ್ರಮಿಸಬೇಕಾಗಿದೆ. ಈ ಕಾರ್ಯಕ್ಕೆ ಸುಸ್ಪಷ್ಟ ಹೊಸ ವಿಧಾನ ಮತ್ತು ವಿಧಾಯಕ ಸ್ಫೂರ್ತಿಯಿಂದ ಮಾತೃಭೂಮಿಯ ಸೇವೆ ಕೈಗೊಳ್ಳುವ ಏಕನಿಷ್ಠೆ ಅಗತ್ಯವಿದೆ. ಭಾರತದ ಜನತೆಗೆ ಸ್ವಾತಂತ್ರ್ಯವೇನೋ ದೊರಕಿದೆ. ಆದರೆ ಅದರ ಫಲವುಣ್ಣಬೇಕಾದರೆ ಅವರು ತಮ್ಮ ಮೇಲಿರುವ ಹೊಣೆ ಮತ್ತು ಕಾರ್ಯಭಾರಗಳನ್ನು ನಿರ್ವಹಿಸುವುದೇ ಅತಿ ಹೆಚ್ಚಿನ ಹಕ್ಕು ಬಾಧ್ಯತೆಗಳ ಗಿಡ್ಡುದು ಮತ್ತು ಮುಂದಕ್ಕೂ ಆಗಿರಬೇಕು. ಹುದ್ದೆ ಅದವಾ ಅಧಿಕಾರಕ್ಕಾಗಿ ಓದ್ದಾಡುವವರು ರಾಷ್ಟ್ರಕ್ಕೆ ಹಾನಿ ಮಾಡುತ್ತಿದ್ದಾರೆ. ವರ್ಗಬೇಧಗಳನ್ನೂ, ಜನ್ಮ, ಜಾತಿ ಧರ್ಮಗಳನ್ನಾಧರಿಸಿ ನಿಂತ ವ್ಯತ್ಯಾಸಗಳನ್ನೂ ನಿರ್ಮೂಲಿಸಿ ಶಾಂತ ರೀತಿಯಿಂದ ವರ್ಗರಹಿತ ಪ್ರಜಾಸತ್ತಾ ಸಮಾಜವನ್ನು ಸ್ಥಾಪಿಸುವದು. ಭಾರತದ ಎಲ್ಲಾ ಜನರೊಳಗೆ ಒಕ್ಕಟ್ಟು ಮತ್ತು ಸದ್ಭಾವನೆಗಳನ್ನು ನಿರ್ಮಾಣಿಸುವ ಕಡೆಗೆ ಸೇವೆ ಹರಿಯಬೇಕೆಂಬುದೇ ಗಾಂಧೀಜಿ ಒತ್ತಿ ಹೇಳಿದ್ದ ಪಾಠ ಎಲ್ಲಕ್ಕಿಂತ ಹೆಚ್ಚಾಗಿ ಗಾಂಧೀಜಿ ಕಲಿಸಿದ್ದೆಂದರೆ ಎಲ್ಲಾ ಸನ್ನಿವೇಶಗಳಲ್ಲೂ ಎಂಥಾ ಬೆಲೆಯನ್ನಾದರೂ ತೆತ್ತು, ಜೀವಕ್ಕೆ ಬೆಲೆ ತರುವ ನೈತಿಕತೆಗೆ ಕಟ್ಟು ಬೀಳಬೇಕೆಂಬುದೇ ಆಗಿದೆ. ಅವರ ಈ ಸಂದೇಶದ ಬೆಳಕಿನಿಂದಲೇ ಇಂದಿನ ಅಂತರ್ರಾಷ್ಟ್ರೀಯ ಮತ್ತು ರಾಷ್ಟ್ರೀಯ ಸಂಕಷ್ಟ ಬಿಕ್ಕಟ್ಟುಗಳನ್ನು ಇದಿರಿಸಿ ಭಾರತವು ತನ್ನ ಸ್ವಾತಂತ್ರ್ಯ, ಮತ್ತು ನೈತಿಕ ಮಟ್ಟದಲ್ಲಿ ಪ್ರಗತಿ ಹೊಂದುವಂತೆಯೂ, ಗಾಂಧೀಜಿಯ ಮಹತ್ವಾದ ಗುರಿಗಳು ಸಿದ್ಧಿಸುವಂತೆಯೂ ನಾವು ಏಕನಿಷ್ಠೆಯಿಂದ ಪ್ರಯತ್ನಿಸುತ್ತೇವೆ.'

'ನ. ಯು.'

ಲಂಚಗುಳಿತನ.

[‘ಹರಿಜನ’ ಪತ್ರಿಕೆಯಲ್ಲಿ ಶ್ರೀ ಕೆ. ಜಿ. ಮಶ್ರುವಾಲಾರವರ ಪತ್ರ]

ಸರಕಾರೀ ಇಲಾಖೆಗಳಲ್ಲಿ ನಡೆಯುವ ಅಸಹನೀಯ ಲಂಚಗುಳಿತನದ ಕುರಿತು ವಿಚಾರಾತ್ಮಕ ಪತ್ರವೊಂದನ್ನು ಶ್ರೀ ಕೆ. ಜಿ. ಮಶ್ರುವಾಲಾರವರು ‘ಹರಿಜನ’ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ. ಅದರ ಸಾರಾಂಶವನ್ನು ಈ ಕೆಳಗೆ ಕೊಡಲಾಗಿದೆ:

‘ಈ ಕೆಳಗಿನ ತೊಡಕುಗಳಿಂದ ನನಗೆ ನಿವಾರಣೆ ತೋರಿಸಲಾರಿರಾ ?

‘ಗಾಂಧೀಜಿಯವರ ಅವಿರಾಮ ಯತ್ನದಿಂದ ಉಪ್ಪು ತೆರಿಗೆ ವಿನಾಯತಿಗೊಳಗಾಯಿತು. ಆದರೆ ಉಪ್ಪನ್ನು ಸಂಗ್ರಹಿಸಿಡುವ ಬಗ್ಗೆ ಲೈಸೆನ್ಸ್ ಫೀ ರೂಪಾಯಿ ೨೦ ತೆರಬೇಕಾಗಿದೆ. ಈ ಫೀ ತೆರಬೇಕಾದರೆ ಟ್ರೆಜರಿ ಆಫೀಸಿನಲ್ಲಿ ದರೋಘನಿಗೆ ರೂ ೨ ಮತ್ತು ಚಪರಾಸಿಗೆ ರೂ. ೧ ಪ್ರತ್ಯೇಕ ತೆರಬೇಕು. ಅರ್ಜಿಯನ್ನು ಮೌಲ್ಯದ ರಶೀತಿ ಸಹಿತ ಹಾಜರ ಪಡಿಸಬೇಕಾದರೆ ಶಿರಸ್ತೇದಾರರಿಗೆ ರೂ. ೫ರಿಂದ ೭ರ ವರೆಗೆ ಕೊಡಬೇಕಾಗುತ್ತದೆ. ಮೊದಲು ಅದು ರೂ. ೨ರಿಂದ ೪ರ ವರೆಗಿತ್ತು. ಆದರೆ ಇದೀಗ ಆಹಾರ ಸಾಮಗ್ರಿಗಳಿಗೆ ತುಟ್ಟಿ ಬಿದ್ದುದರಿಂದ ಕಾರಕೂನನೂ ತನ್ನ ಫೀ ಇಮ್ಮಡಿಮಾಡಿದ್ದಾನೆ. ಈ ಫೀಯಿಂದ ವಿನಾಯತಿ ಪಡೆಯಲು ಪ್ರಯೋಗಿಕ ದಾರಿಯೊಂದೂ ತೋರುವುದಿಲ್ಲ ಕಾರಣ ಈ ರೀತಿಯ ಭಕ್ಷೀಸುಗಳ ಹೊರತು ಒಬ್ಬನು ಅರ್ಜಿ ಹಿಡಕೊಂಡು ತಿಂಗಳು ಗಟ್ಟಲೆ ಅಲೆದಾಡಬೇಕಾಗುವುದ. ಆದರೂ ಅವರ ಅರ್ಜಿಗೆ ಮನ್ನಣೆ ದೊರೆಯುವುದು ಅಸಂಭವ. ಶಿರಸ್ತೇದಾರರು ಯಾವಾಗಲೂ ಬಿಡುವಿಲ್ಲದ ಅಧಿಕಾರಿಗಳು.

ಇನ್ನಿತರ ಉದಾಹರಣೆಗಳು.

‘ಇದೇ ರೀತಿಯ ಕಥೆಗಳು ಚಿಮಿಣಿ ಎಣ್ಣೆ, ಬಟ್ಟೆ, ಸಕ್ಕರೆ ಇತ್ಯಾದಿಗಳಿಗೂ ಸಂಬಂಧಿಸಿವೆ. ಬಟ್ಟೆಯ ತಂಗತಿಯ. ಬಟ್ಟೆ ಒಚ್ಚಿಡಲ್ಪಟ್ಟ ಕಳ್ಳಸಂತೆಯ ಮೂಲಕ ಮಾತ್ರ ಹೊರಬರುತ್ತದೆ. ಕೊಂಡುಕೊಳ್ಳುವವನಿಗೆ ಅತ್ಯಗತ್ಯವಿದೆಯೆಂದು ಕಂಡು ಬಂದರೆ ಚಿಮಿಣಿ ಎಣ್ಣೆಯ ಬಾಟ್ಲಿಗೆ ೧೦ರಿಂದ ೧೨ ಆಣೆಯ ವರೆಗೆ ಮಾರಲ್ಪಡುವುದುಂಟು. ಉಪ್ಪು ಸೇರಿಗೆ ೦-೧-೬ ಯಂತೆ ಮಾರಾಟವಾಗುತ್ತದೆ; ಅದರ ನಿಜವಾದ ಬೆಲೆ ಸೇರಿಗೆ ೦-೦-೬ ಪೈ ಮಾತ್ರ.

‘ಕಂಟ್ರೋಲ್ ಸೂತ್ರಗಳನ್ವಯ ನನ್ನ ಅಂಗಡಿಯಲ್ಲಿ ಚಿಮಿಣಿ ಎಣ್ಣೆ ಮತ್ತು ಉಪ್ಪು ಮಾರಾಟಕ್ಕಿಡಬೇಕೆಂಬ ಬಯಕೆಯಿದೆ. ಆದರೆ ಅದಕ್ಕೆ ಬೇಕಾಗುವ ಲೈಸೆನ್ಸ್ ಫೀ ಮತ್ತು ಇನ್ನಿತರ ರೀತಿಬದ್ಧ ಸಂಪ್ರದಾಯಗಳನ್ನು ಸಲ್ಲಿಸಲು ಸಾಕಷ್ಟು ಹಣ ನನ್ನೊಡನಿಲ್ಲ.’

ಮೇಲಿನ ಪತ್ರದ ಕುರಿತು ಶ್ರೀ. ಮಶ್ರುವಾಲಾ ಹೀಗೆ ಬರೆಯುತ್ತಾರೆ: ‘ಮೇಲಿನ ದೂರು ತಂದವರು ಚಾಪದಾಸ್ ಎಂಬ ಚಿಕ್ಕ ಗ್ರಾಮಕ್ಕೆ ಸೇರಿದವರಿರುತ್ತಾರೆ; ಆದರೆ ಅವರು ಸೂಚಿಸಿದಂತಹ ಲಂಚಗುಳಿತನದ ಕಥೆ ಭಾರತದಲ್ಲಿ ಸರ್ವತ್ರ—ನ್ಯೂ ಡಿಲ್ಲಿ, ಮುಂಬಯಿ., ಮತ್ತು ಕಲ್ಕತ್ತೆಯಂತಹ ಶಹರುಗಳನ್ನೂ ಬಿಡದೆ ವ್ಯಾಪಿಸಿದೆ. ನಾನು ವಕೀಲಿ ನಡೆಸುತ್ತಿದ್ದಾಗ ಒಂದು ಡಿಕ್ರಿ ತಡವಾಗಿ ಹಾಜರಾದ ಬಗ್ಗಿನ ಅರ್ಜಿಯೊಂದು ನನ್ನಲ್ಲಿ ಬಂದ ನೆನಪು ಈಗಲೂ ಇದೆ ನನಗೆ ಜಡ್ಜರ ಕ್ಲಾರ್ಕರಿಗೆ ಫೀ (ಲಂಚ) ದೊರೆಯದ ಬಗ್ಗೆ ಡಿಕ್ರಿ ಹಾಜರಾಗಲು ತಡವಾದ ಸನ್ನಿವೇಶವು ಈ ವಿಷಯವನ್ನು ಜಡ್ಜರ ಪರಾಮರಿಕೆಗೆ ತಂದುದೂ ವ್ಯರ್ಥವಾಯಿತು. ಕೊನೆಗೆ ನಾನು ಸೋಲು ಒಪ್ಪಿಕೊಂಡು ಆ ಮನುಷ್ಯನನ್ನು ಕಣ್ಣಿನ ನೀರು ತಂದು ಸಮುಜಾಯಿಸಬೇಕಾಯಿತು. ಅನಂತರ ಅಂತಹ ವಿಷಯಗಳನ್ನೆಲ್ಲಾ ನನ್ನ ಕ್ಲಾರ್ಕರಿಗೆ, ಕಕ್ಷಿಗಾರರಿಗೆ ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೇನೇ ಇತ್ಯರ್ಥಕ್ಕೆ ಬಿಡುವುದು ಲೇಸೆಂದು ನನಗೆ ತೋರಿತು.

‘ಹಾಗಾದರೆ ಇದಕ್ಕೆ ಪರಿಹಾರವೇನ? ಚಿಕ್ಕ ಆಫೀಸರರ ಮೇಲೆ ತಕ್ಕ ಬಂದೋಬಸ್ತು ಇರುವುದು ಒಳ್ಳೆಯದೆಂದು ಮೇಲಿನ ದೂರು ತಂದವರು ಸೂಚಿಸುತ್ತಾರೆ. ಆದರೆ ಅದರಿಂದ ಹೆಚ್ಚಿಗ ಪ್ರಯೋಜನವಾದೀತೆಂದು ನನಗನ್ನಿಸುವುದಿಲ್ಲ ಅಧಿಕಾರಿಗಳ ಮೇಲೆ ಗೂಢಚಾರ ನಡೆಸುವ ಏಜಂಟರ, ಒಂದೊತ್ತಿಂದು ಆ ಲಂಪಟ ತಪ್ಪಿಸಹೋದರಂತೆ ಹೆಚ್ಚಿಗೆ ಪ್ರಮಾಣಕರಾಗಲಾರರು ಮೇಲಾಗಿ ಲಂಚ ಕೊಡುವವರೇ, ತಾವು ಎಷ್ಟು ಮಾತ್ರಕ್ಕೂ ಯಾರಿಗೂ ಯಾವುದೇ ರೀತಿಯಲ್ಲಿ ಲಂಚ ಕೊಡುವುದಿಲ್ಲವೆಂಬ ಘೋಷ್ಯ ನಿರ್ಧಾರ ಕೈಕೊಳ್ಳುವುದು ಅತ್ಯಗತ್ಯ. ಸಾರ್ವಜನಿಕ ಕಚೇರಿಗಳಿಗೆ ಹೋಗುವವರು, ಯಾವುದೇ ಸರಕಾರಿ ಅಧಿಕಾರಿಗಳಿಗೆ ಒಂದೇ ಒಂದು ಪೈ ಲಂಚ ಕೊಡದ ಹಾಗೆ ಪಿಕೆಟಿಂಗ್ ನಡೆಸುವ ಸ್ವಯಂ ಸೇವಕರು ತಯಾರಾಗಬೇಕು. ಅಲ್ಲಿಗೆ ಹೋಗುವವರಿಗೆ ಯಾವ್ಯಾವ ತೊಡಕುಗಳು ಒದಗುತ್ತದೆಂಬುದನ್ನು ಅವರು ಸ್ವಯಂ ಸೇವಕರು ಅವಗಾಹನೆಗೆ ತರತಕ್ಕದ್ದು. ಜನರೇ ಲಂಚಗುಳಿತನದ ನಿರ್ಮೂಲನವನ್ನು ಸಾಧಿಸಬೇಕಾಗಿದೆ. ಸಾರ್ವಜನಿಕರು ಕಡೆಯಿಂದ ಲಂಚಗುಳಿತನದ ನಿರ್ಮೂಲನಕ್ಕಾಗಿ ವ್ಯವಸ್ಥಿತ ಯತ್ನಗಳು ನಡೆಯಬೇಕು. ಸಾರ್ವಜನಿಕ

ಮುಖ್ಯತಃ ತರುಣ ಸ್ತ್ರೀಪುರುಷ ಕಾಂಗ್ರೆಸ್ ಕಾರ್ಯಕರ್ತರು ಕಳ್ಳಸಂತೆ, ಕಳ್ಳ ಸಂಗ್ರಹ, ದುರ್ವರ್ತನೆ, ದುಶ್ಚಾಳಿಗಳ ನಿವಾರಣೆಗೆ ನಡು ಬಿಗಿ ಹಿಡಿಯಬೇಕು. ಜೈಪುರ ಕಾಂಗ್ರೆಸ್ಸಿನಲ್ಲಾದ 'ಸಾರ್ವಜನಿಕ ಗುಣ ನಡತೆ'ಯ ನಿರ್ದೇಶಗಳಿಗನುಸಾರವಾಗಿ ಎಲ್ಲಾ ಕಾಂಗ್ರೆಸ್ ಕೆಲಸಗಾರರು ಶಿಸ್ತುಬದ್ಧ ಕಾರ್ಯಾಚರಣೆಗಿಳಿಯಬೇಕು.

ಸರ್ವೋದಯ ದಿನ.

ಜನವರಿ ೩೦ ಬರುತ್ತಿದೆ; ಬಾಪೂಜಿಯನ್ನು ಬಲಿ ಪಡೆದು ಇಡೀ ರಾಷ್ಟ್ರವನ್ನು ಅನಾಥಗೊಳಿಸಿದ ಕರಾಳ ದಿನ ಸಮೀಪಿಸುತ್ತಿದೆ; ಆ ಬಾರಿ ಇಡೀ ದೇಶಕ್ಕೆ ಅಂಥಾ ಸಿಡಿಲನ್ನೆರಗಿಸಿದ ಆ ದಿನ ಮತ್ತೊಮ್ಮೆ ತಲೆ ಹಾಕುವದು ಇದೇ ಮೊದಲನೇ ಬಾರಿ; ಗಾಂಧೀಜಿಯ ಬಲಿದಾನದ ಪ್ರಥಮ ವರ್ಧಂತಿ ಇದು. ಅದನ್ನು ಆಚರಿಸುವ ಕುರಿತು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಮಾಡಿರುವ ನಿರ್ಣಯ—ರಾಷ್ಟ್ರಕ್ಕದರ ದಿಗ್ದರ್ಶಕತ್ವ—ಹೀಗಿದೆ.

"ಮಹಾತ್ಮಾ ಗಾಂಧಿಯವರು ಹೊರಟು ಹೋಗಿ ಬಹತೇಕ ಒಂದು ವರ್ಷ ಕಳೆದು ಹೋಯಿತು. ಅವರ ಮರಣ ವರ್ಧಂತಿ ದಿನ ಜನವರಿ ೩೦ನ್ನು 'ಸರ್ವೋದಯ ದಿನ'ವಾಗಿ ಇಡೀ ರಾಷ್ಟ್ರದಲ್ಲಿ ಅತ್ಯಂತ ನಿಷ್ಠೆಯಿಂದ ಆಚರಿಸಬೇಕು; ಗಾಂಧೀಜಿ ಕಲಿಸಿದ ಮತ್ತು ಅವರು ತನ್ನ ಆಯುಷ್ಯವಿಡೀ ಬೋಧಿಸಿದ ಹಾಗೂ ಆಚರಿಸಿ ತೋರಿಸಿದ ತತ್ವಗಳಿಗೇನೇ ಆ ದಿನವು ಮೀಸಲಿರಬೇಕು. ಸತ್ಯ ಮತ್ತು ಅಹಿಂಸೆಯ ಮೂಲಕ ರಾಷ್ಟ್ರದ ಎಲ್ಲಾ ಸ್ತ್ರೀಪುರುಷರೊಳಗೆ ಸದ್ಭಾವನೆ ಮತ್ತು ಒಕ್ಕಟ್ಟು ಸ್ಥಾಪಿಸಬೇಕೆಂಬ ಮಹಾತ್ಮರ ಮಹಾ ಸಂದೇಶದ ಕಡೆಗೇನೇ ಆ ದಿನದಲ್ಲಿ ಮುಖ್ಯತಃ ರಾಷ್ಟ್ರದ ಲಕ್ಷ್ಯವನ್ನು ಎಳೆಯಬೇಕು. ಮಹಾತ್ಮರ ಪವಿತ್ರ ಹಾಗೂ ಜೀವಂತ ನೆನಪಿಗಸ್ತಾನವಾಗಿ ಆ ದಿನವನ್ನು ಭಕ್ತಿಪೂರ್ವಕವಾಗಿ ಆಚರಿಸಬೇಕು; ತ್ಯಾಗ ತೀಲ ನೂಲುವಿಕೆ ಮತ್ತು ಸಾಮೂಹಿಕ ಸೇವೆಗಳ ಅಂದಿನ ಕಾರ್ಯಕ್ರಮದಲ್ಲಿರಬೇಕು. ಸಾರ್ವಜನಿಕ ಸಭೆಗಳೂ ಸೇರಬಹುದು. ಆ ಸಭೆಗಳಲ್ಲಿ ಈ ಕೆಳಗಿನ ಸಂದೇಶವನ್ನು ಮಾತ್ರ ಓದತಕ್ಕದ್ದು;—

'ತಲೆತಲಾಂತರಗಳಿಂದ ನಡೆದಿದ್ದ ಸ್ವಾತಂತ್ರ್ಯ ಸಂಗ್ರಾಮದ ಸುದೀರ್ಘ ಚರಿತ್ರೆಯಲ್ಲಿ ಭಾರತವು ಹಲವಾರು ವಿಧ ದುಃಖ ಮತ್ತು ಸುಖ, ಹಲವು ಜಯ ಮತ್ತು ಅಪಜಯಗಳನ್ನು ಅನುಭವಿಸಿದ್ದಿತು. ಆದರೆ ರಾಷ್ಟ್ರಪಿತನ ಅಮೋಘ ನಾಯಕತ್ವದ ಅಡಿಯಲ್ಲಿ ದುಃಖವೆಂಬುದು ಜನತೆಯನ್ನು ಶುದ್ಧೀಕರಿಸುವ ಸಾಧನವಾಯಿತು. ಪ್ರತಿಯೊಂದು ಸೋಲೂ ಇಮ್ಮಡಿ ಪ್ರಯತ್ನಗಳಿಗೆ ಪ್ರೇರಣೆ ಮತ್ತು ವಿಜಯದ ಮೆಟ್ಟಿಲಾಗಿ ಪರಿಣಮಿಸಿತು. ಇತ್ತೀಚಿನ ವರ್ಷಗಳು ಕಠೋರ ಪರೀಕ್ಷೆ ಕಾಲ ಮತ್ತು ಕಷ್ಟದ ಅವಧಿಯಾಗಿದ್ದವು. ಆದರೆ ಇಲ್ಲಿಯೂ ಗಾಂಧೀಜಿಯು ಸಂಪೂರ್ಣ ರಾಷ್ಟ್ರವನ್ನು ಉತ್ತೇಜಿಸಿತು. ಈ ವರುಷಗಳು ಅನೊಂದು ಪರಿಣಾಮದ ಫಲವನ್ನು ತಂದುವು. ತಲೆತಲಾಂತರಗಳಲ್ಲಿ ಹೋರಾಡಿದ್ದ ಮತ್ತು ಕಷ್ಟ ಕಷ್ಟ ನುಭವಿಸಿದ್ದವರ ತ್ಯಾಗದ ಫಲವಾಗಿ ಸ್ವಾತಂತ್ರ್ಯವು ಸಾಧಿಸಲ್ಪಟ್ಟಿತು. ಆದರೆ ಆ ಸಾಧನೆಗೆ ತಕ್ಕ ಬೆಲೆಯೇನೋ ನಿಜಕ್ಕೂ ಅತಿ ಹೆಚ್ಚಿನದು. ಮಾತೃಭೂಮಿಯು ಎರಡಾಗಿ ತುಂಡರಿಸಲ್ಪಟ್ಟಿತು. ಈ ದುರ್ದೈವೀ ವಿಭಜನೆಯನ್ನನುಸರಿಸಿ, ಜನತೆಯು ಬುದ್ಧಿಭ್ರಮೆಗೊಂಡು, ಗಾಂಧೀಜಿಯ ಅಮೋಘ ತತ್ವಗಳಿಗೆ ಆಗೊಮ್ಮೆ ಗ್ರಹಣ ಹಿಡಿದಂತಾಯಿತು. ಈ ಕತ್ತಲೆಯನ್ನು ಕೂಡಾ ಗಾಂಧೀಜಿಯು ಹೃದಯೋತ್ತೇಜಕ ಸಂದೇಶವು ಜ್ಯೋತಿಯಾಗಿ ಬೆಳಗಿತಲ್ಲದೆ, ದುಃಖಾವರಿತ ಅಸಂಖ್ಯಾತ ಹೃದಯಗಳಿಗೆ ಅದು ಶಕ್ತಿ ಮತ್ತು ಸಮಾಧಾನವನ್ನು ಕೊಟ್ಟಿತು. ಆಗಲೇ ಎಲ್ಲರ ಮೇಲಿನ ಅತಿ ದೊಡ್ಡ ಹೊಡೆತ. ಯಾರು ಭಾರತದ ಆತ್ಮೀಯ ಸ್ಫೂರ್ತಿ, ಪ್ರೇಮ ಮತ್ತು ನಾಗರಿಕತೆಯ ಪ್ರತಿಬಿಂಬವೋ ಅವರೇ ಕೊಲೆಯಾದರು. ಹೀಗಾಗಿ ಭಾರತವು ಯಾವುದಕ್ಕಾಗಿ ಅಷ್ಟೆಲ್ಲಾ ಶ್ರಮಿಸಿದ್ದಿತೋ, ಯಾವುದು ದೀರ್ಘ ಹೋರಾಟವೊಂದರ ಪ್ರತಿಫಲವೋ ಆ ಸ್ವಾತಂತ್ರ್ಯವೇ ಸ್ವಾತಂತ್ರ್ಯ ಸಹಜ ತೇಜಸನ್ನು ಬೀರಲಿಲ್ಲ. ಬಗಲಿಗೆ ದುಃಖ ಮತ್ತು ವೇದನೆಯನ್ನು ಕವಿಸಿತು. ಗಾಂಧೀಜಿಯ ಪವಿತ್ರ ಸ್ಮರಣೆ ಮತ್ತು ಅವರು ಕಲಿಸಿಕೊಟ್ಟ ಪಾಠಗಳ ಮೇಲಿನ ಭಕ್ತಿಪೂರ್ಣ ನಿಷ್ಠೆಯ ಬಲದಿಂದ ರಾಷ್ಟ್ರವು ಈ ಭೀಕರ ಬಿಕ್ಕಟ್ಟನ್ನು ಎದುರಿಸಿತು. ರಾಷ್ಟ್ರಕ್ಕೆ ಸ್ವಾತಂತ್ರ್ಯವನ್ನು ತಂದವನು ನುತ್ತದಕ್ಕೆ ಜೀವ ಬರಿಸಿದವನು ನಮ್ಮನ್ನಗಲಿ ಹೋಗಿ ಪೂರ್ಣ ಒಂದು ವರ್ಷ ಕಳೆಯಿತು. ಈ ಪ್ರಥಮ ವರ್ಧಂತಿಯ ದಿವಸ ಆ ಮಹಾ ಆತ್ಮಕ್ಕೂ ಅವರ ಮಹಾ ಸಂದೇಶಕ್ಕೂ ನಾವು ಅತ್ಯಂತ ಭಕ್ತಿವಿಶ್ವಾಸದಿಂದ ತಲೆಬಾಗುತ್ತೇವೆ ಮತ್ತು ಆ ಪ್ರಾಣದಾತನ ಸಂದೇಶದ ಪ್ರಕಾಶಕ್ಕನುಗುಣವಾಗಿ ಭಾರತ ಜನತೆ ಮತ್ತು ಮಾನವ ಜನಾಂಗದ ಸೇವೆಯನ್ನು ಮಾಡುತ್ತಾ ಹೋಗುತ್ತೇವೆ ಎಂದು ಪ್ರತಿಜ್ಞೆ ಮಾಡುತ್ತೇವೆ.'

ಗಾಂಧೀಜಿಯ ನಾಯಕತ್ವದಲ್ಲಿ ಅಹಿಂಸಾತ್ಮಕವಾಗಿ ರಾಷ್ಟ್ರದ ರಾಜಕೀಯ ಸ್ವಾತಂತ್ರ್ಯವನ್ನು ಪಡೆದುಕೊಂಡ ನಾವೀಗ, ಜಾತಿ, ಮತ ವ್ಯತ್ಯಾಸವಿಲ್ಲದೆ ಭಾರತದ ಎಲ್ಲಾ ಜನತೆಗೂ ಸಮಾನ ಸಂದರ್ಭ ಮತ್ತು ಪ್ರಗತಿದಾಯಕವಾದ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯಕ್ಕಾಗಿ ಶ್ರಮಿಸಬೇಕಾಗಿದೆ. ಈ ಕಾರ್ಯಕ್ಕೆ ಸುಸ್ಪಷ್ಟ ಹೊಸ ವಿಧಾನ ಮತ್ತು ವಿಧಾಯಕ ಸ್ಫೂರ್ತಿಯಿಂದ ಮಾತೃಭೂಮಿಯ ಸೇವೆ ಕೈಗೊಳ್ಳುವ ತದೇಕನಿಷ್ಠೆ ಅಗತ್ಯವಿದೆ. ಭಾರತದ ಜನತೆಗೆ ಸ್ವಾತಂತ್ರ್ಯವೇನೋ ದೊರಕಿದೆ. ಆದರೆ ಅದರ ಫಲವುಣ್ಣಬೇಕಾದರೆ ಅವರು ತಮ್ಮ ಮೇಲಿರುವ ಹೊಣೆ ಮತ್ತು ಕಾರ್ಯಭಾರಗಳನ್ನು ನಿರ್ವಹಿಸುವುದೇ ಅತಿ ಹೆಚ್ಚಿನ ಹಕ್ಕು ಬಾಧ್ಯತೆಗಳೆಂದು ಗೊತ್ತು ಮತ್ತು ಮಂದಿರಕ್ಕೂ ಆಗಿರಬೇಕು. ಹುದ್ದೆ ಅಥವಾ ಅಧಿಕಾರಕ್ಕಾಗಿ ಒದ್ದಾಡುವವರು ರಾಷ್ಟ್ರಕ್ಕೆ ಹಾನಿ ಮಾಡುತ್ತಿದ್ದಾರೆ. ವರ್ಗಭೇದಗಳನ್ನೂ, ಜನ್ಮ, ಜಾತಿ ಧರ್ಮಗಳನ್ನಾಧರಿಸಿ ನಿಂತ ವ್ಯತ್ಯಾಸಗಳನ್ನೂ ನಿರ್ಮೂಲಿಸಿ ಶಾಂತ ರೀತಿಯಿಂದ ವರ್ಗರಹಿತ ಪ್ರಜಾಸತ್ತ ಸಮಾಜವನ್ನು ಸ್ಥಾಪಿಸುವದು. ಭಾರತದ ಎಲ್ಲಾ ಜನರೊಳಗೆ ಒಕ್ಕಟ್ಟು ಮತ್ತು ಸದ್ಭಾವನೆಗಳನ್ನು ನಿರ್ಮಾಣಿಸುವ ಕಡೆಗೆ ಸೇವೆ ಹರಿಯಬೇಕೆಂಬುದೇ ಗಾಂಧೀಜಿ ಒತ್ತಿ ಹೇಳಿದ್ದ ಪಾಠ. ಎಲ್ಲಕ್ಕಿಂತ ಹೆಚ್ಚಾಗಿ ಗಾಂಧೀಜಿ ಕಲಿಸಿದ್ದೆಂದರೆ ಎಲ್ಲಾ ಸನ್ನಿವೇಶಗಳಲ್ಲೂ ಎಂಥಾ ಬೆಲೆಯನ್ನಾದರೂ ತೆತ್ತು, ಜೀವಕ್ಕೆ ಬೆಲೆ ತರುವ ನೈತಿಕತೆಗೆ ಕಟ್ಟು ಬೀಳಬೇಕೆಂಬುದೇ ಆಗಿದೆ. ಅವರ ಈ ಸಂದೇಶದ ಬೆಳಕಿನಿಂದಲೇ ಇಂದಿನ ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ಸಂಕಷ್ಟ ಬಿಕ್ಕಟ್ಟುಗಳನ್ನು ಎದುರಿಸಿ ಭಾರತವು ತನ್ನ ಸ್ವಾತಂತ್ರ್ಯ ಮತ್ತು ನೈತಿಕ ಮಟ್ಟದಲ್ಲಿ ಪ್ರಗತಿ ಹೊಂದುವಂತೆಯೂ, ಗಾಂಧೀಜಿಯ ಮಹತ್ವಾದರ್ಶಗಳು ಸಿದ್ಧಿಸುವಂತೆಯೂ ನಾವು ತದೇಕ ನಿಷ್ಠೆಯಿಂದ ಪ್ರಯತ್ನಿಸುತ್ತೇವೆ.'

'ಸ ಯು.'

ಲಂಚಗೂಳಿತನ.

['ಹರಿಜನ' ಪತ್ರಿಕೆಯಲ್ಲಿ ಶ್ರೀ ಕೆ. ಜಿ. ಮಶ್ರುವಾಲಾರವರ ಪತ್ರ.]

ಸರಕಾರೀ ಇಲಾಖೆಗಳಲ್ಲಿ ನಡೆಯುವ ಅಸಹನೀಯ ಲಂಚಗೂಳಿತನದ ಕುರಿತು ವಿಚಾರಾತ್ಮಕ ಪತ್ರವೊಂದನ್ನು ಶ್ರೀ ಕೆ. ಜಿ. ಮಶ್ರುವಾಲಾರವರು 'ಹರಿಜನ' ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ. ಅದರ ಸಾರಾಂಶವನ್ನು ಈ ಕೆಳಗೆ ಕೊಡಲಾಗಿದೆ:

'ಈ ಕೆಳಗಿನ ತೊಡಕುಗಳಿಂದ ನನಗೆ ನಿವಾರಣೆ ತೋರಿಸಲಾರಿರಾ ?

'ಗಾಂಧೀಜಿಯವರ ಅವಿರಾಮ ಯತ್ನದಿಂದ ಉಪ್ಪು ತೆರಿಗೆ ವಿನಾಯತಿಗೊಳಗಾಯಿತು. ಆದರೆ ಉಪ್ಪನ್ನು ಸಂಗ್ರಹಿಸಿಡುವ ಬಗ್ಗೆ ಲೈಸೆನ್ಸ್ ಫೀ (ಶುಲ್ಕ)ಯನ್ನು ೨೦ ತೆರಬೇಕಾಗಿದೆ. ಈ ಫೀ ತುಂಬೇಕಾದರೆ ಟ್ರೆಜರಿ ಆಫೀಸಿನಲ್ಲಿ ದರಖಾಸ್ತಿಗೆ ರೂ. ೩ ಮತ್ತು ಚಲನಿಗೆ ರೂ. ೧ ಪ್ರತ್ಯೇಕ ತೆರಬೇಕು. ಅರ್ಜಿಯನ್ನು ಮೌಲ್ಯದ ರಶೀತಿ ಸಹಿತ ಹಾಜರ ಪಡಿಸಬೇಕಾದರೆ ಶಿರಸ್ತೇದಾರರಿಗೆ ರೂ. ೫ರಿಂದ ೭ರ ವರೆಗೆ ಕೊಡಬೇಕಾಗುತ್ತದೆ. ಮೊದಲು ಅದು ರೂ. ೨ರಿಂದ ೪ರ ವರೆಗಿತ್ತು. ಆದರೆ ಇದೀಗ ಆಹಾರ ಸಾಮಗ್ರಿಗಳಿಗೆ ತುಟ್ಟಿ ಬಿದ್ದುದರಿಂದ ಕಾರಕೂನನೂ ತನ್ನ ಫೀ ಇಮ್ಮಡಿಮಾಡಿದ್ದಾನೆ. ಈ ಫೀಯಿಂದ ವಿನಾಯತಿ ಪಡೆಯಲು ಪ್ರಾಯೋಗಿಕ ದಾರಿಯೊಂದೂ ತೋಚುವುದಿಲ್ಲ. ಕಾರಣ ಈ ರೀತಿಯ ಭಕ್ಷೀಸುಗಳ ಹೊರತು ಒಬ್ಬನು ಅರ್ಜಿ ಹಿಡಕೊಂಡು ತಿಂಗಳು ಗಟ್ಟಲೆ ಅಲೆದಾಡಬೇಕಾಗುವುದು. ಅದರೂ ಅವರ ಅರ್ಜಿಗೆ ಮನ್ನಣೆ ದೊರೆಯುವುದು ಅಸಂಭವ. ಶಿರಸ್ತೇದಾರರು ಯಾವಾಗಲೂ ಬಿಡುವಿಲ್ಲದ ಅಧಿಕಾರಿಗಳು.

ಇನ್ನಿತರ ಉದಾಹರಣೆಗಳು.

'ಇದೇ ರೀತಿಯ ಕಥೆಗಳು ಚಿಮಣಿ ಎಣ್ಣೆ, ಬಟ್ಟೆ, ಸಕ್ಕರೆ ಇತ್ಯಾದಿಗಳಿಗೂ ಸಂಬಂಧಿಸಿವೆ. ಒಳ್ಳೆಯ ತರಗತಿಯ ಬಟ್ಟೆ ಬಚ್ಚಿಡಲ್ಪಟ್ಟು ಕಳ್ಳ ಸಂತೆಯ ಮೂಲಕ ಮಾತ್ರ ಹೊರಬರುತ್ತದೆ. ಕೊಂಡುಕೊಳ್ಳುವವನಿಗೆ ಅತ್ಯಗತ್ಯವಿದೆಯೆಂದು ಕಂಡು ಬಂದರೆ ಚಿಮಣಿ ಎಣ್ಣೆಯ ಬಾಟ್ಲಿಗೆ ೧೦ರಿಂದ ೧೨ ಆಣೆಯ ವರೆಗೆ ಮಾರಲ್ಪಡುವುದುಂಟು. ಉಪ್ಪು ಸೇರಿಗೆ ೦-೧-೬ ಯಂತೆ ಮಾರಾಟವಾಗುತ್ತದೆ; ಅದರ ನಿಜವಾದ ಬೆಲೆ ಸೇರಿಗೆ ೦-೦-೬ ಪೈ ಮಾತ್ರ.

'ಕಂಟ್ರೋಲ್ ಸೂತ್ರಗಳನ್ವಯ ನನ್ನ ಅಂಗಡಿಯಲ್ಲಿ ಚಿಮಣಿ ಎಣ್ಣೆ ಮತ್ತು ಉಪ್ಪು ಮಾರಾಟಕ್ಕಿಡಬೇಕೆಂಬ ಬಯಕೆಯಿದೆ. ಆದರೆ ಅವಕ್ಕೆ ಬೇಕಾಗುವ ಲೈಸೆನ್ಸ್ ಫೀ ಮತ್ತು ಇನ್ನಿತರ ರೀತಿಯ ದಸ್ತುರಿಗಳನ್ನು ಸಲ್ಲಿಸಲು ಸಾಕಷ್ಟು ಹಣವನ್ನೊದಗಿಸಿಲ್ಲ.'

ಮೇಲಿನ ಪತ್ರದ ಕುರಿತು ಶ್ರೀ. ಮಶ್ರುವಾಲಾ ಹೀಗೆ ಬರೆಯುತ್ತಾರೆ: 'ಮೇಲಿನ ದೂರು ತಂದವರು ಚಾಪದಾಸ್ ಎಂಬ ಚಿಕ್ಕ ಗ್ರಾಮಕ್ಕೆ ಸೇರಿದವರಿರುತ್ತಾರೆ; ಆದರೆ ಅವರು ಸೂಚಿಸಿದಂತಹ ಲಂಚಗೂಳಿತನದ ಕಥೆ ಭಾರತದಲ್ಲಿ ಸರ್ವತ್ರ—ನ್ಯೂ ದಿಲ್ಲಿ, ಮುಂಬಾಯಿ, ಮತ್ತು ಕಲ್ಕತ್ತೆಯಂತಹ ಶಹರುಗಳನ್ನೂ ಬಿಡದೆ ವ್ಯಾಪಿಸಿದೆ. ನಾನು ವಕೀಲಿ ನಡೆಸುತ್ತಿದ್ದಾಗ ಒಂದು ಡಿಕ್ರಿ ಜಾರಿಗಾಗಿ ಹಜರಾದ ಬಗ್ಗಿನ ಅರ್ಜಿಯೊಂದು ನನ್ನಲ್ಲಿ ಬಂದ ನೆನಪು ಈಗಲೂ ಇದೆ ನನಗೆ. ಜಡ್ಜರ ಕ್ಲಾರ್ಕರಿಗೆ ಫೀ (ಲಂಚ) ದೊರೆಯದ ಬಗ್ಗೆ ಡಿಕ್ರಿ ಹಾಜರಾಗಲು ತಡವಾದ ಸನ್ನಿವೇಶವಿದು. ಈ ವಿಷಯವನ್ನು ಜಡ್ಜರ ಪರಾಮರಿಕೆಗೆ ತಂದುದೂ ವ್ಯರ್ಥವಾಯಿತು. ಕೊನೆಗೆ ನಾನು ಸೋಲು ಒಪ್ಪಿಕೊಂಡು ಆ ಮನುಷ್ಯನನ್ನು ಕಣ್ಣಿಗೆ ಸೇರು ತಂದು ಸಮಾಜಾಯಿಸಬೇಕಾಯಿತು. ಅನಂತರ ಅಂತಹ ವಿಷಯಗಳನ್ನೆಲ್ಲಾ ನನ್ನ ಕ್ಲಾರ್ಕರಿಗೆ, ಕಕ್ಷಿಗಾರರಿಗೆ ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೇನೇ ಇತ್ಯರ್ಥಕ್ಕೆ ಬಿಡುವುದು ಲೇಸೆಂದು ನನಗೆ ತೋರಿತು.

'ಹಾಗಾದರೆ ಇದಕ್ಕೆ ಪರಿಹಾರವೇನ? ಚಿಕ್ಕ ಆಫೀಸರರ ಮೇಲೆ ತಕ್ಕ ಬಂದೋಬಸ್ತು ಇಡುವುದು ಒಳ್ಳೆಯದೆಂದು ಮೇಲಿನ ದೂರು ತಂದವರು ಸೂಚಿಸುತ್ತಾರೆ. ಆದರೆ ಅದರಿಂದ ಹೆಚ್ಚಿಗೆ ಪ್ರಯೋಜನವಾದೀತೆಂದು ನನಗನಿಸುವುದಿಲ್ಲ. ಅಧಿಕಾರಿಗಳ ಮೇಲೆ ಗೂಢಚಾರ ನಡೆಸುವ ಏಜಂಟರು, ಏಂಟ್ರೊಂದು ಇಲಾಖೆಯ ತಪ್ಪು ಹೋದರೆ ಇಂತ ಹೆಚ್ಚಿಗೆ ಪ್ರಾಮಾಣಿಕರಾಗಲಾರರು. ಮೇಲಿಂಗಿ ಲಂಚ ಕೊಡುವವರೇ, ತಾವು ಎಷ್ಟು ಮಾತ್ರಕ್ಕೂ ಯಾರಿಗೂ ಯಾವುದೇ ರೀತಿಯಲ್ಲಿ ಲಂಚ ಕೊಡುವುದಿಲ್ಲವೆಂಬ ಘೋಷ್ಟ ನಿರ್ಧಾರ ಕೈಕೊಳ್ಳುವುದು ಅತ್ಯಗತ್ಯ. ಸಾರ್ವಜನಿಕ ಕಚೇರಿಗಳಿಗೆ ಹೋಗುವವರು, ಯಾವುದೇ ಸರಕಾರಿ ಅಧಿಕಾರಿಗಳಿಗೆ ಒಂದೇ ಒಂದು ಪೈ ಲಂಚ ಕೊಡದ ಹಾಗೆ ಪಿಕೆಟಿಂಗ್ ನಡೆಸುವ ಸ್ವಯಂಸೇವಕರು ತಯಾರಾಗಬೇಕು. ಅಲ್ಲಿಗೆ ಹೋಗುವವರಿಗೆ ಯಾವ್ಯಾವ ತೊಡಕುಗಳು ಒದಗುತ್ತವೆಂಬದನ್ನು ಅವರು ಸ್ವಯಂ ಸೇವಕರು ಅವಗಾಹನೆಗೆ ತರತಕ್ಕದ್ದು. ಜನರೇ ಲಂಚಗೂಳಿತನದ ನಿರ್ಮೂಲವನ್ನು ಸಾಧಿಸಬೇಕಾಗಿದೆ. ಸಾರ್ವಜನಿಕರ ಕಡೆಯಿಂದ ಲಂಚಗೂಳಿತನದ ನಿರ್ಮೂಲನಕ್ಕಾಗಿ ವ್ಯವಸ್ಥಿತ ಯತ್ನಗಳು ನಡೆಯಬೇಕು. ಸಾರ್ವಜನಿಕ

ಕಾಲೇಜು ಅಸ್ತಿವಾರ ಹಾಕಲು ಪಂ. ನೆಹರೂರವರಿಗೆ ಆಹ್ವಾನ.

ನಾಪೋಕ್ಲು ಶಾಲಾ ವಾರ್ಷಿಕೋತ್ಸವದಲ್ಲಿ ಅಧ್ಯಕ್ಷಸ್ಥಾನ ವಹಿಸಿದ್ದಾಗ ಕೊಡಗಿನ ಚೀಫ್ ಕಮಿಷನರ್ ದಿವಾನ್ ಬಹದ್ದೂರ್ ಸಿ. ಟಿ. ಮೊದಲಿಯಾರ್‌ರವರು ಮಾಡಿದ ಭಾಷಣದ ಸಾರಾಂಶ

ಆರಂಭ ಭಾಷಣ.

ನಿಮ್ಮ ಶಾಲೆಯ ವಾರ್ಷಿಕೋತ್ಸವದಲ್ಲಿ ಅಧ್ಯಕ್ಷಸ್ಥಾನ ವಹಿಸಲು ನನ್ನನ್ನೂ ಬಹುಮಾನ ವಿತರಣೆಗೆ ನನ್ನ ಪತ್ನಿಯನ್ನೂ ಆಹ್ವಾನಿಸಿ ಗೌರವಿಸಿದುದಕ್ಕೆ ನಿಮ್ಮೆಲ್ಲರನ್ನೂ ವಂದಿಸುತ್ತೇನೆ. ಅಧಿಕ ಸಂಖ್ಯೆಯಲ್ಲಿ ನೆರೆದಿರುವುದಕ್ಕೆ ಈ ನಾಡಿನವರಾದ ನಿಮ್ಮೆಲ್ಲರನ್ನೂ ವಂದಿಸುತ್ತೇನೆ. ಅಧಿಕ ಸಂಖ್ಯೆಯಲ್ಲಿ ನೆರೆದಿರುವುದಕ್ಕೆ ಈ ನಾಡಿನವರ ನನ್ನ ನಿತ್ಯದ ಒಡನಾಟದ ಈ ಸಂಯೋಗವು ನನ್ನ ಭಾಗ್ಯವೆಂದು ಎಣಿಸುತ್ತೇನೆ.

ಕವಿ ಳ ಭ ಸಮ. ಕವಿ ಕ್ರೀಸ್ತರಾದ ಭಾರತೀಯ ವರು ತಮ್ಮ ಒಂದು ಕೃತಿಯಲ್ಲಿ 'ಒಬ್ಬನು ಸಹಸ್ರ ಛತ್ರಗಳನ್ನು ಕಟ್ಟಿಸಬಹುದು; ಆದರೆ ವಿದ್ಯಾದಾನಕ್ಕಿಂತ ಶ್ರೇಷ್ಠವಾದ ದಾನ ಬೇರೊಂದಿಲ್ಲ' ಎಂದಿರುವುದು ನನಗೆ ನೆನಪು ಬರುತ್ತದೆ. ಈ ಪ್ರೌಢ ಶಾಲೆಯ ಸ್ಥಾಪನೆಗಾಗಿ ನೀವು ಸರ್ವತೋಮುಖವಾದ ಸಾಹಸ, ನಿಸ್ವಾರ್ಥ ತ್ಯಾಗಗಳನ್ನು ವ್ಯಕ್ತಪಡಿಸಿರುವಿರಿ. ಅಂತಹ ನಿಸ್ವಾರ್ಥರಾದ ಹೆಸರುಗಳನ್ನೆತ್ತಿ ಹೇಳಲು ಸಮಯವಿಲ್ಲ. ಆದರೂ ಶ್ರೀಮಾನ್ ಕೆ. ಎಸ್. ನಂಜುಂಡನವರ ಮತ್ತು ಶ್ರೀಮಾನ್ ಪೊನ್ನಪ್ಪನವರ ಹೆಸರುಗಳು ಈ ಪ್ರೌಢ ಶಾಲೆಯ ಸಂಬಂಧದಲ್ಲಿ ಚಿರಸ್ಮರಣೀಯವಾಗಿ ನಿಲ್ಲತಕ್ಕವುದರಲ್ಲಿ ಸಂದೇಹವಿಲ್ಲ. ಅತಿಯೋಗ್ಯ ಶ್ರೀಮಾನ್ ರಾಮಣ್ಣರವರೂ, ಈಗಿನ ಮುಖ್ಯೋಪಾಧ್ಯಾಯರೂ ಅಧ್ಯಾಪಕರೂ, ತಮ್ಮ ಶಕ್ತಿಮೀರಿ ದುಡಿದು ಈ ಸಂಸ್ಥೆಯ ಏಳಿಗೆಗೆ ಒಳ್ಳೇ ಪಟ್ಟಿಗೆ ಕಾರಣರಾಗಿದ್ದಾರೆ.

ಸರಕಾರದ ಪರವಾಗಿ ನೀವು ಒಪ್ಪಿಸಿರುವ ಈ ಶಾಲೆಯನ್ನು ಒಂದು ಆದರ್ಶನಾದ ವಿದ್ಯಾಪೀಠವಾಗಿ ಮಾಡಬೇಕೆಂಬ ಬಯಕೆಯು ನನಗಿದೆ. ಇದರ ವಿಚಾರದಲ್ಲಿ ನೀವು ಚಿಂತೆ ಪಡಬೇಕಾಗಿಲ್ಲ. ಅದಕ್ಕೆ ಬೇಕಾಗಿರುವ ಭವ್ಯ ಕಟ್ಟಡಗಳ ರಚನೆಯು ಭರದಿಂದ ಸಾಗುತ್ತಿರುವುದು ನಿಮಗೆಲ್ಲ ತಿಳಿದಿರುವ ವಿಷಯವಾಗಿದೆ.

ಕೊಡಗಿನ ಯುವಕ ಯುವತಿಯರ ವಿದ್ಯಾಪ್ರೇಮ, ಮೇಧಾಶಕ್ತಿ, ಸಾಹಸಗಳನ್ನು ನಾನು ಇಲ್ಲಿ ಕಮಿಶನರ್ ಆಗಿ ನೇಮಕ ಹೊಂದುವ ಮೊದಲೇ ತಿಳಿದಿದ್ದೆ. ಅದಕ್ಕೆ ನಿದರ್ಶನವೆಂಬಂತೆ ಮದ್ರಾಸು ವಿಶ್ವವಿದ್ಯಾಲಯದ ಕಳೆದ ಪರೀಕ್ಷೆಯಲ್ಲಿ ಕೊಡಗಿನ ಯುವತಿಯೊಬ್ಬಳು ರಾಜಕೀಯ (politics) ಮತ್ತು ಆಡಳಿತ (Administration) ಎಂಬ ವಿಷಯಗಳ ವ್ಯಾಸಂಗ ಮಾಡಿ ಮೊದಲನೆ ತರಗತಿಯಲ್ಲಿ ಮಾತ್ರವಲ್ಲ ಇಡೀ ಸಂಸ್ಥಾನದಲ್ಲೇ ಪ್ರಥಮಳಾಗಿ ಪದವಿ ಪಡೆದಿರುವುದೇ ಸಾಕ್ಷಿ. ದರ ತಿಳಿದು ನಿಮ್ಮ ಊರಿನ ಯುವತಿಯರ ವ್ಯಾಸಂಗಕ್ಕಾಗಿ ಒಂದು ಕಾಲೇಜನ್ನು ಸ್ಥಾಪಿಸಬೇಕೆಂಬ ಸಂಕಲ್ಪವು ನನ್ನ ಮನಸ್ಸಿನಲ್ಲಿ ನಾನು ಕೊಡಗಿಗೆ ಬರುವ ಮೊದಲೇ ಆಗಿತ್ತು. ಉಚ್ಚ ದರ್ಜೆಯ ಪ್ರೌಢ ಶಿಕ್ಷಕರನ್ನು ನಿಯಮಿಸಬೇಕೆಂಬ ನನ್ನ ಬಯಕೆಯು ಪತ್ರಿಕೆಗಳಲ್ಲಿ ನಾನು ಪ್ರಕಟಿಸಿದ್ದ ಜಾಹೀರಾತುಗಳಿಂದ ನಿಮಗೆ ತಿಳಿದಿರಬಹುದು.

ಹಾಗೆಯೇ ಕಾಲೇಜಿನ ಅಸ್ತಿವಾರದ ಸ್ಥಾಪನೆಗೆ ಪಂಡಿತ ನೆಹರೂರಂಥ ಮಹಾ ವ್ಯಕ್ತಿಯನ್ನೇ ಆಮಂತ್ರಿಸಬೇಕೆಂದಿರುವೆನು. ನನ್ನ ಆ ಬಯಕೆಯು ಸಫಲವಾದರೆ ಅದು ನಮ್ಮ ಭಾಗ್ಯವಿಶೇಷವೆಂದು ಬೇರೆ ಹೇಳಬೇಕಾಗಿಲ್ಲ. ಒಂದು ಮಾತಿನಲ್ಲಿ ಹೇಳುವುದಾದರೆ ಸರ್ವವಿಧದಿಂದಲೂ ಆದರ್ಶವಾದ ಒಂದು ಕಾಲೇಜನ್ನು ನಿರ್ಮಿಸಬೇಕೆಂಬುದೇ ನನ್ನ ಪ್ರತಿಜ್ಞೆ.

ನನ್ನ ಪ್ರಿಯರಾದ ವಿದ್ಯಾರ್ಥಿಗಳಿಗೆ ಕೆಲವು ಹಿತೋಕ್ತಿಗಳನ್ನು ಹೇಳಬಯಸುತ್ತೇನೆ. ವಿಶ್ವವಿಖ್ಯಾತನಾದ ವರಕವಿ ಆ ದೇವರ ಪ್ರಾರ್ಥನೆಯನ್ನು ಮಾಡುವುದರಿಂದ ಭಗವಂತನ ಪ್ರಾರ್ಥನೆಯಿಂದ ನನ್ನ ತಂದೆತಾಯಿಗಳ ಸೇವೆಯೇ ಪವಿತ್ರವಾಗಿರುವುದು. ಎಂತಹ ಆಪತ್ತಿನಲ್ಲೇ ಆದರೂ ಕೈಬಿಡದ ಗೆಳೆಯನೆಂದರೆ ಪ್ರೇಮ ಸ್ವರೂಪನಾದ ಆ ಪರಮಾತ್ಮನೊಬ್ಬನೇ. ಮಕ್ಕಳಿಗೆ ದೇವರ ಸೇವೆಗಿಂತ ಮಿಗಿಲಾದುದು ತಂದೆ ತಾಯಿಗಳ ಸೇವೆ. ಸಂಪನ್ನನಾದ ಬಾಲಕನೊಬ್ಬನು ಮಾತಾಪಿತೃಗಳ ಸೇವೆಯಲ್ಲಿ ನಿರತನಾಗಿದ್ದಾಗ ಆತನ ಸತ್ವ ಪರೀಕ್ಷೆಗಾಗಿ ಶ್ರೀಕೃಷ್ಣ ಪರಮಾತ್ಮನು ಪ್ರತ್ಯಕ್ಷನಾಗಿ ಬಾಲಕನನ್ನು ಕರೆಯಹತ್ತಿದನು. ಆ ಬಾಲಕನು ತನ್ನ ಮಾತಾಪಿತೃಗಳ ಸೇವೆಯು ಮುಗಿಯುವ ತನಕ ದೇವರನ್ನು ಕಾಯುವಂತೆ ಹೇಳಿಕಳುಹಿಸಿದನು. ಆ ಪರಮಾತ್ಮನ ಬಳಿಗೆ ಹೋಗಿ ತನ್ನ ತಂದೆ ತಾಯಿಗಳ ಸೇವೆಗೆ ಕಚ್ಚ ಅಂತರ್ಧಾನನಾದ ಹಾಗೆಯೇ ಪ್ರಸಿದ್ಧ ಇಂಗ್ಲಿಷ್ ಕವಿಯಾದ ಷೇಕ್ಸ್‌ಪಿಯರನ ಗ್ರಂಥಗಳನ್ನು ಓದಿದವರಿಗೆ ಆತನ ಅಪರಿಮಿತ ಮಾತೃಪ್ರೇಮದ ಅರಿವಾಗುವುದು.

ನಿಮ್ಮ ಗುಣ ನಡತೆಗಳನ್ನು ತಿದ್ದಿಕೊಳ್ಳಿರಿ. ಒಳ್ಳೆಯ ಗುಣವಿಲ್ಲದವನ ಬಾಳು ವ್ಯರ್ಥ. ವಿಚಾರಗಳಲ್ಲಿ ಮನಸ್ಸು ಹೊಯ್ದಾಡುತ್ತಿರುವಾಗ, ಒಂದಿಯು ಚಂಚಲವಾದಾಗ, ಅದನ್ನು ನಿರೋಧಿಸಿರಿ, ನಿಗ್ರಹಿಸಿರಿ. ನೆಪೋಲಿಯನನು ಪ್ರಪಂಚದ ಒಬ್ಬ ಮಹಾಪುರುಷನಾಗಲು ಕಾರಣವಾದ ಎರಡು ಗುಣಗಳೆಂದರೆ ಅವನ ಶಿಸ್ತು ಮತ್ತು ಸಮಯದ ಬೆಲೆಯರಿತ ನಡತೆ. ಚಿಕ್ಕವಯಸ್ಸಿನಲ್ಲೇ ಶಿಸ್ತನ್ನು ಸಂಪಾದಿಸಲು ಸಾಧನೆ ಮಾಡಿರಿ.

ಹಿಂದೂದೇಶದ ಸೇನಾಧಿಕಾರಿಯಾದ ಜನರಲ್ ಕಾರ್ಯಪ್ಪನವರೂ ಆ ದಿನ ತಮ್ಮ ಭಾಷಣದಲ್ಲಿ ನೆಪೋಲಿಯನನ ಆದರ್ಶಗಳನ್ನೇ ಎತ್ತಿ ಮಾತನಾಡಿದರು. ನಾವು ಆತ್ಮಸಂಯಮವನ್ನು ಅಭ್ಯಾಸ ಮಾಡಿದರೆ, ಮನೋನಿಗ್ರಹವನ್ನು ಸಾಧಿಸಿದರೆ, ನಮಗೆ ಯಾವುದೂ ಅಸಾಧ್ಯವಲ್ಲ.

ಅಪಾರ ತ್ಯಾಗ, ಸೇವೆ, ಮತ್ತು ಕಷ್ಟಗಳ ಫಲವಾಗಿ ಹಿಂದೂದೇಶದ ಸ್ವಾತಂತ್ರ್ಯವನ್ನು ಸಂಪಾದಿಸಿದ ಅಮರ ಬಾಪೂಜಿಯವರ ಆದರ್ಶಗಳ ದ ಸತ್ಯ, ಅಹಿಂಸೆಗಳ ಪಾಲನೆಯಿಂದ ಹಲವು ದಶಮಾನಗಳ ಅವಿರತ ಶ್ರಮ, ಅಪಾರ ತ್ಯಾಗಗಳ ಫಲವಾಗಿ ದೊರೆತ ಸ್ವಾತಂತ್ರ್ಯವನ್ನು ಶಾಶ್ವತವಾಗಿ ಉಳಿಸಿಕೊಳ್ಳಲು ಸಾಧ್ಯವಾಗುವಂತೆ ದೇಶವನ್ನು ಭದ್ರಗೊಳಿಸಿರಿ. ಪಂ. ನೆಹರೂ, ಪಟೇಲ್ ಮುಂತಾದ ಮಹೋದಯರೂ ಪ್ರಭಾವಶಾಲಿಗಳೂ ಆದ ನಾಯಕರ ತತ್ವಗಳನ್ನು, ಆಜ್ಞೆಗಳನ್ನು ವಿರೋಧಿಸದೆ ಅವುಗಳನ್ನು ಶಿರಸಾವಹಿಸಿ ಪಾಲಿಸಿರಿ. ಇದರಿಂದ ಮಾತ್ರವೇ ನಮ್ಮ ವಿಶಾಲವಾದ ದೇಶವನ್ನು ಭದ್ರಪಡಿಸಲು ಸಾಧ್ಯ. ಈ ತತ್ವಗಳನ್ನರಿಯದೆ ಕೇವಲ 'ಜೈಹಿಂದ್' 'ಭಾರತಮಾತಾಕಿ ಜೈ' ಎಂದು ಕೂಗುವುದರಿಂದ ಯಾವ ಪ್ರಯೋಜನವೂ ದೊರೆಯಲಾರದು.

ಕೊನೆಯದಾಗಿ ನಿಮ್ಮ ಅತಿ ಪ್ರಮುಖವಾದ ಧ್ಯೇಯವೆಂದರೆ ಇನ್ನು ಸ್ವಲ್ಪವೇ ಸಮಯದನಂತರ ಬರಲಿರುವ ಪರೀಕ್ಷೆಗೆ ಚೆನ್ನಾಗಿ ಅಭ್ಯಾಸಮಾಡಿ ಅಧಿಕ ಸಂಖ್ಯೆಯಿಂದ ಉತ್ತೀರ್ಣ ಹೊಂದಿ ನಿಮ್ಮ ತಂದೆ ತಾಯಿಗಳ ಧನ ಮತ್ತು ಪ್ರಯತ್ನ, ನಿಮ್ಮ ಬೋಧಕರ ಶ್ರಮ, ಇವುಗಳಿಗೆ ಸತ್ಫಲವನ್ನು ದೊರಕಿಸಿ, ಅವರೆಲ್ಲರ ಪ್ರೇಮಾದರಗಳಿಗೆ ಪಾತ್ರರಾಗಿರಿ.

ಸಮಾರೋಪ ಭಾಷಣ.

ನಿಮ್ಮ ಶಾಲೆಯ ಮುಖ್ಯೋಪಾಧ್ಯಾಯರ, ಶಾಲಾ ಆಡಳಿತ ಸಮಿತಿಯ ಮತ್ತು ಶಾಲೆಯ ಚಂದಾ ಕೂಟದ ಕಾರ್ಯದರ್ಶಿಗಳವರ ವರದಿಗಳಿಂದ ನನಗೆ ತುಂಬಾ ಸಂತೋಷವಾಗಿದೆ. ನಿಮ್ಮ ಕೋರಿಕೆಯ ಪ್ರಕಾರವಾಗಿ ರೂ. ೫೦೦೦ಗಿಂತ ಮೇಲ್ಪಟ್ಟ ಧನ ಸಹಾಯ ಮಾಡಿದ ಮಾನನೀಯರುಗಳ ಗೌರವಾರ್ಥವಾಗಿ ಶಿಲಾ ಶಾಸನದ ವ್ಯವಸ್ಥೆಯನ್ನು ಸರಕಾರವು ಕೈಕೊಳ್ಳುವದು. ಅಂತೆಯೇ ಶಾಲೆಗಾಗಿ ಸ್ಥಳವನ್ನು ಕೊಟ್ಟಿರುವ ಮಹನೀಯರುಗಳ ಕುಟುಂಬದವರಿಗೆ ಶಾಲಾ ಫೀಜಿನಲ್ಲಿ ರಿಯಾಯಿತಿ ಕೊಡುವ ವ್ಯವಸ್ಥೆಯನ್ನು ಮಾಡಲಾಗುವುದು. ಶಾಲೆಯ ಒಳಿಯಲ್ಲಿಯೇ ಮಕ್ಕಳ ಆಟಕ್ಕಾಗಿ ಸ್ಥಳವನ್ನು ಒದಗಿಸಲು ವಿಚಾರಿಸಲಾಗುವುದು.

ನಿಮ್ಮೆಲ್ಲರ ಪ್ರೇಮದ ಸಂಸ್ಥೆಯಾದ ಈ ಪ್ರೌಢಶಾಲೆಯು ದಿನೇದಿನೇ ಉನ್ನತವಾದ ಅಭಿವೃದ್ಧಿ ಪಡೆಯಲೆಂದು ಹಾರೈಸುತ್ತೇನೆ. 'ಜೈ ಹಿಂದ್'

ಈ ಯತ್ನಕ್ಕೆ ಸಹಾಯಕವಾಗಿ ಸರಕಾರವು ಸರ್ಕಾರಿ ಕಚೇರಿಗಳಲ್ಲಿ ದೊಡ್ಡ ದೊಡ್ಡ ಬೋರ್ಡುಗಳನ್ನು ತಗಲಿಸಿ ಅವುಗಳ ಮೇಲೆ ಎಲ್ಲರಿಗೆ ಕಾಣುವಂತೆ, ಯಾವ್ಯಾವ ಅಧಿಕಾರಿಗಳಿಗೆ ಯಾವುದೇ ಬಗೆಯ ರೀತಿಯ ಭಕ್ಷೀಸನ್ನು ಜನರು ಕೊಡಬಾರದೆಂದು ಸೂಚಿಸತಕ್ಕದ್ದು. ಅಲ್ಲದೆ ಪ್ರತಿಯೊಂದು ಸರಕಾರಿ ಕಚೇರಿಯ ಪ್ರವೇಶ ದ್ವಾರದಲ್ಲೇ, ಜನರ ದೂರುಗಳನ್ನು ಕೇಳುವ ಬಗ್ಗೆ ಹಾಗೂ ಜನರಿಗೆ ಬೇಕಾದ ವಿವರಗಳನ್ನು ತಿಳಿಸುವ ಬಗ್ಗೆ ಒಂದು ಪ್ರತ್ಯೇಕ ಆಫೀಸು ತೆರೆಯಲ್ಪಟ್ಟು ಅಲ್ಲಿ ಜವಾಬುದಾರಿ ಅಧಿಕಾರಿಗಳೊಬ್ಬರನ್ನು ನೇಮಿಸಿರಬೇಕು. ಯಾವ ಕೆಲಸದ ಬಗ್ಗೆ ಯಾವ ಅಧಿಕಾರಿಗಳೊಡನೆ ಹೋಗಬೇಕು ಎಂಬ ವಿವರವನ್ನು ಆ ಅಧಿಕಾರಿಗಳು ಜನರಿಗೆ ತಿಳಿಸತಕ್ಕದ್ದು. ಮಾತ್ರವಲ್ಲ ಅಂತಹ ಅಧಿಕಾರಿಗಳಲ್ಲಿ ಅವರು ಹೋದಾಗ ಅವರಿಗೆ ಯಾವುದೇ ರೀತಿಯ ಆತಂಕವಾಗುವುದಿದ್ದರೆ ಜನರು ಜವಾಬುದಾರಿ ಆಫೀಸರೊಡನೆ ಅದನ್ನು ತಿಳಿಸತಕ್ಕದ್ದು; ಅವರು ಕೂಡಲೇ ಅದರ ಇತ್ಯರ್ಥ ಮಾಡತಕ್ಕದ್ದು. ಈ ವ್ಯವಸ್ಥೆಯೂ ಒಂದು ವೇಳೆ ಜಯಶಾಲಿಯಾಗದಿರಬಹುದು. ಕಾರಣ ಮುಖ್ಯವಾದ ಪ್ರಶ್ನೆಯೆಂದರೆ ನೈತಿಕ ಮಟ್ಟವನ್ನು ಊರ್ಜಿತಗೊಳಿಸುವುದು ಮತ್ತು ಜನರಲ್ಲಿ ನಾಗರಿಕ ಕರ್ತವ್ಯಗಳ ಕಡೆಗೆ ಜಾಗೃತಿಯುಂಟಾಗುವಂತೆ ಮಾಡುವುದು. ಯಾವುದೇ ಪ್ರಜೆಗಳಿಗೆ ನೈತಿಕತೆ ಅಥವಾ ಯೋಗ್ಯತೆ ಬೇರೆಯಿಂದ ಸಿಗಲಾರದು.

ಪ್ರಭಾತ.

ಟೌನ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ವೀರರಾಜಪೇಟೆ.

ಈ ಬ್ಯಾಂಕಿನ ವರ್ಷಾವಧಿ ವಹಿವಾಟು ರೂ ೫,೦೦,೦೦೦/-
ವಹಿವಾಟಿನ ಭಂಡವಾಳ ೧,೭೦,೦೦೦/-

ಎಲ್ಲಾ ತರಹದ ಬ್ಯಾಂಕಿಂಗ್ ವಹಿವಾಟುಗಳು ನಡೆಯುತ್ತಲಿವೆ. ಚಿನ್ನದ ನಗಗಳ ಆಧಾರದ ಮೇಲೆ, ಸ್ಥಿರಸೊತ್ತುಗಳ ಆಧಾರದ ಮೇಲೆ, ಮತ್ತು ಭತ್ತ ಮತ್ತಿತರ ಸರಕುಗಳ ಮೇಲೆ ಸಾಲಗಳು ಕೊಡಲ್ಪಡುತ್ತವೆ. ಚೆಕ್ಕು ಹುಂಡಿಗಳು ಡಿಸ್ಕೌಂಟು ಮಾಡಲ್ಪಡುತ್ತವೆ. ಪಾರ್ಸೆಲುಗಳ ಬಿಲ್ಲುಗಳನ್ನು ಕಂಪೆನಿಗಳಿಗೆ ರವಾನಿಸಲ್ಪಡುತ್ತವೆ.

ಹಂಗಾಮಿಯಾಗಿ ಫೆಬ್ರುವರಿ ೧ರಿಂದ ಜೂನ್ ಅಂತ್ಯದ ವರೆಗಿನ ೫ ತಿಂಗಳ ಮುಯಾದೆಗೆ ಡಿಪಾಜಿಟ್ಟುಗಳು ಶೇಕಡ ನಾಲ್ಕೂವರೆ ರೂಪಾಯಿಗಳ ದರದ ಬಡ್ಡಿಯಲ್ಲಿ ೧೯೪೯ನೇ ಫೆಬ್ರುವರಿ ಅಂತ್ಯದ ವರೆಗೆ ಸ್ವೀಕರಿಸಲ್ಪಡುತ್ತವೆ.

ವೀರರಾಜಪೇಟೆ,
ತಾ. ೨೬-೧-೧೯೪೯. } 4-1

ಪ್ರೆಸಿಡೆಂಟ್,
ಟೌನ್ ಕೋ-ಆಪರೇಟಿವ್ ಬ್ಯಾಂಕ್.

ಕೊಡಗು

ತಾ. ೨೮-೧-೧೯೪೯ನೇ ಶುಕ್ರವಾರ

ಕೊಡಗಿನಲ್ಲಿ ಪಾನನಿರೋಧ

ಕೊಡಗಿನಲ್ಲಿ ಪಾನನಿರೋಧವನ್ನು ಜಾರಿಗೆ ತರುವ ಬಗ್ಗೆ ಮಾತುಕತೆಗಳು ಹಲವಾರು ವರ್ಷಗಳಿಂದಲೇ ನಡೆಯುತ್ತಿವೆ. ಹೊಸ ಚೀಫ್ ಕಮಿಷನರು ಬಂದ ನಂತರ ಈ ಮಾತುಕತೆ ಇನ್ನೂ ಬಿರುಸಾಗಿ ನ[illegible]ದಗಿ ೧೯೪೯ನೇ ಏಪ್ರಿಲಿನಿಂದ ಪಾನನಿರೋಧ ಖಡ್ಡಾಯವಾಗಿ ಜಾರಿಯಲ್ಲಿ ಬರುವದೆಂದು ನಂಬಲು [illegible]. ಕೊಡಗಿಗೆ ಬೇಕಾದ ಸಾರಾಯಿಯನ್ನು ಮೊದಲು ನಲ್ಲಿಕುಪ್ಪದಿಂದ ತರುತ್ತಿದ್ದರು. ಮದ್ರಾಸಿಗೆ ಸೇರಿದ ಈ ಭಾಗದಲ್ಲಿ ಪಾನನಿರೋಧ ಜಾರಿಯಲ್ಲಿ ಬಂದ ಕಾರಣ ಇದೇ ಕಂಪೆನಿಯವರು ತಿರುವಾಂಕೂರಿನ ನಗರ್‌ಕೊಯ್ಲಿನಿಂದ ಸರಬರಾಯಿ ಮಾಡುವ ಏರ್ಪಾಡು ಮಾಡಿರುವರು. ಆದರೆ ನಗರ್‌ಕೋಯಿಲಿನಿಂದ ಸಾರಾಯಿ ಬರಬೇಕಾದರೆ ಪಾನನಿರೋಧ ಜಾರಿಯಲ್ಲಿರುವ ಮದ್ರಾಸಿನ ಜಿಲ್ಲೆಗಳನ್ನು ದಾಟಿ ಬರಬೇಕು. ಮದ್ರಾಸು ಸರಕಾರವು ಹೀಗೆ ಸಾಗಿಸಲು ಬಿಡುವದೋ ಎಂದು ನೋಡಬೇಕಿದೆ. ಬಿಡದಿದ್ದರೆ ಕೊಡಗಿನಲ್ಲಿ ಸಾರಾಯಿಯ ಮಟ್ಟಿಗೆ ತನ್ನಷ್ಟಕ್ಕೆ ತಾನೇ ಪಾನನಿರೋಧ ಜಾರಿಯಲ್ಲಿ ಬರುವದು.

ಬೇರೆ ಕಡೆಯಿಂದ ಸಾರಾಯಿಯ ಸರಬರಾಯಿಯು ಸಾಧ್ಯವಾದರೆ ಈ ಬರುವ ಏಪ್ರಿಲ್ ತಿಂಗಳಿಂದ ಪೂರ್ಣ ಪಾನನಿರೋಧವನ್ನು ಜಾರಿಗೆ ತರುವ ಇಚ್ಛೆಯು ಇತ್ತೀಚೆಗೆ ಸ್ಥಳೀಯ ಸರಕಾರಕ್ಕೆ ಇಲ್ಲವೆಂದು ವಾರ್ತೆಗಳು ಹಬ್ಬಿವೆ. ಪಾನನಿರೋಧದಿಂದುಂಟಾಗುವ ಆರ್ಥಿಕ ನಷ್ಟವನ್ನು ತುಂಬಿಕೊಡಲು ಕೇಂದ್ರ ಸರಕಾರವು ತಯಾರಿಲ್ಲದ ಕಾರಣ ಸ್ಥಳೀಯ ಸರಕಾರವು ಈ ಉದಾಸೀನ ಭಾವವನ್ನು ತಳೆದಿರುವದಂತೆ. ಏನೇ ಆರ್ಥಿಕ ನಷ್ಟವಾದರೂ ಪಾನನಿರೋಧವನ್ನು ಜಾರಿಯಲ್ಲಿ ತರುವದು ಅತ್ಯವಶ್ಯವೆಂಬುದನ್ನು ಎಲ್ಲರೂ ಒಪ್ಪಬೇಕು. ಒಂದು ವೇಳೆ ಈ ವರ್ಷ ಅದು ಸಾಧ್ಯವಿಲ್ಲವೆಂದು ಸರಕಾರವು ಅಭಿಪ್ರಾಯಪಡುವದಾದರೆ ಈ ವರ್ಷದ ಮಟ್ಟಿಗೆ ಸಾರಾಯಿಯ ನಿಯಂತ್ರಣವನ್ನು ಮಾಡಬೇಕು. [illegible] ಎಲ್ಲ[illegible]ರಿಗೆ ರೇಶನ್ ಕಾರ್ಡು ಕೊಟ್ಟು ಅದರ ಮಾರಾಟವನ್ನು ಸರಕಾರಿ ಅಂಗಡಿಗಳಲ್ಲಿ, ಸೀಲುಹಾಕಿದ ಬಾಟ್ಲಿಗಳಲ್ಲಿ ಮಾಡಬೇಕು. ಅಂಗಡಿಯಲ್ಲಾಗಲೀ ಪಬ್ಲಿಕ್ ಸ್ಥಳ, ತೋಟಕೋವಿಗಳಲ್ಲಾಗಲೀ ಕುಡಿದವರನ್ನು ಶಿಕ್ಷಿಸಬೇಕು. ಗೆಲನುಗಳ [illegible] ಮಾರಾಟಮಾಡಬಾರದು. ಹಬ್ಬ, ಉತ್ಸವಗಳ ಸಂದರ್ಭದಲ್ಲಿ ಅಂಗಡಿ ಮುಚ್ಚಬೇಕು. ಮದುವೆ ಮುಂಜಿ ಮೊದಲಾದ ಸಾಮಾಜಿಕ ಕೂಟಗಳಲ್ಲಿ ನಿಷೇಧವನ್ನು [illegible]. ಸಾರಾಯಿಯ ಬೆಲೆಯನ್ನೂ ಹೆಚ್ಚಿಸಬೇಕು. ಕೊಡಗಿನಲ್ಲಿ ಕಳೆದ ವರ್ಷ ಬಜೆಟ್ ೫೦೦೦೦ ಗೆಲನುಗಳಲ್ಲಿ ಅರ್ಧವನ್ನು ಕಡಿಮೆ ಮಾಡಬೇಕು. ಉಳಿದ ಅರ್ಧವನ್ನು ಮೇಲಿನಂತೆ ಮಾರಾಟಮಾಡಬೇಕು. ಹೀಗೆ ಮಾಡುವದರಿಂದ ಕುಡುಕರ ಸಂಖ್ಯೆಯೂ ಕಡಿಮೆಯಾಗುತ್ತದೆ. ಏಕೆಂದರೆ ನಮ್ಮಲ್ಲಿ [illegible] ಶಿಷ್ಟಾಚಾರ [illegible] ಕುಡಿಯುವ [illegible] ಸಭ್ಯರೂ [illegible] ಕುಡಿಯುತ್ತೇನೆಂದು ರೇಶನ್ ಕಾರ್ಡಿಗಾಗಿ ಮುಂದೆ ಬರಲಾರರು. ಸಾರಾಯಿಯ ಮಟ್ಟಿಗೆ ಈ ವರ್ಷ ಇಷ್ಟಾದರೂ ಸರಕಾರವು ಮಾಡಬೇಕು. ಸೇಂದಿಯ ಬಗ್ಗೆ ಈ ವರ್ಷ ಶೇಕಡ ೫೦ರಷ್ಟು ಅಂಗಡಿಗಳನ್ನು ಕಡಿಮೆಮಾಡಿ ಈಗಿರುವ ದರವನ್ನು ಎರಡರಷ್ಟು ಹೆಚ್ಚಿಸಿದರೆ ಹಿತ. ಕ್ರಮಶಃ ಇದು ಜಾರಿಯಲ್ಲಿ ಬಂದು ಒಂದೆರಡು ವರ್ಷಗಳಲ್ಲಿ ಎಲ್ಲವನ್ನೂ ಸಮೂಲ ನಿಲ್ಲಿಸುವ ಏರ್ಪಾಡು ಮಾಡಬೇಕು. ಸ್ಥಳೀಯ ಸರಕಾರದವರು ಇಷ್ಟಾದರೂ ಮಾಡುವರೇ?

ವರ್ತಮಾನ.

ತಾರೀಕು ೧೩-೨-೪೯ನೇ ಆದಿತ್ಯವಾರ ಮಧ್ಯಾಹ್ನ ೩ ಗಂಟೆಗೆ ಕೊಡ್ಲಿಪೇಟೆಯಲ್ಲಿ ನಡೆಯುವ ಹರಿಜನ ದ್ವಿತೀಯ ವಾರ್ಷಿಕ ಸಮ್ಮೇಳನವು ಕೊಡಗು ಚೀಫ್ ಕಮಿಶನರಾದ ದಿವಾನ್ ಬಹದೂರ್ ಸಿ. ಟಿ. ಮೊದಲಿಯಾರರವರ ಅಧ್ಯಕ್ಷತೆಯಲ್ಲಿ ನಡೆಯುವುದು. ದೇಶದ ಸರ್ವ ಮಹನೀಯರು ಈ ಸಮ್ಮೇಳನಕ್ಕೆ ದಯಮಾಡಿಸಿ, ಪ್ರೋತ್ಸಾಹಿಸಬೇಕಾಗಿ ಹರಿಜನೋದ್ಧಾರ ಸಂಘದ ಪ್ರೆಸಿಡೆಂಟರು ಪ್ರಾರ್ಥಿಸುತ್ತಾರೆ.

ಅಮ್ಮತ್ತಿನಾಡು ನಲವತ್ತೊಕ್ಲು ಗ್ರಾಮದ ಮಂಡೇಡ ಪೊಂಬಣ್ಣನವರು ತಾರೀಕು ೧೮-೧-೪೯ರಲ್ಲು ತಮ್ಮ ೭೨ನೇ ವಯಸ್ಸಿನಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವ್ಯಸನಪಡುತ್ತೇವೆ.

ಕಳೆದ ಸ್ಕೂಲ್ ಫೈನಲ್ ಸಪ್ಲಿಮೆಂಟರಿ ಪರೀಕ್ಷೆಯಲ್ಲಿ ಕಳೆದ ವಾರ ಪ್ರಕಟಿಸಿದವರಲ್ಲದೆ ಶ್ರೀ ಸಿ. ಕೆ. ವೆಂಕಟನಾರಣ, ಪೈಪಿರ ಮುದ್ದಣ್ಣ ಇವರುಗಳೂ ತೇರ್ಗಡೆಯಾಗಿರುವರು.

ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯ ಕಾರ್ಯದರ್ಶಿಯವರಾಗಿದ್ದ ಶ್ರೀ ಪುಲಿಯಂಡ ಜಿ. ಮುತ್ತಪ್ಪನವರನ್ನು ವಯಸ್ಕರ ಶಿಕ್ಷಣದ ಚಿಕ್ಕಮಗಳೂರು ಡಿವಿಜನಲ್ ಆಫೀಸರಾಗಿ ನೇಮಿಸಲಾಗಿದೆ.

ಸರ್ವೋದಯ ದಿನವಾದ ತಾ. ೩೦ರಂದು ಮಧ್ಯಾಹ್ನ ೩-೧೦ ಗಂಟೆಯಿಂದ ಪೂಜ್ಯ ಮಹಾತ್ಮರ ಚಿತಾಭಸ್ಮವನ್ನು ಸಾರ್ವಜನಿಕರ ದರ್ಶನಕ್ಕಾಗಿ ಮಡಿಕೇರಿ ಕೋಟೆಯ ಹೊರಾಂಗಣದಲ್ಲಿ ಇಡಲಾಗುವದೆಂದೂ ಪ್ರಾರ್ಥನೆ, ಭಜನೆಗಳು ನಡೆಯುವವಾಗಿಯೂ ತಿಳಿದು ಬಂದಿದೆ.

ಮಡಿಕೇರಿ ವಿದ್ಯಾರ್ಥಿ ಕಾಂಗ್ರೆಸ್ಸಿನ ಆಶ್ರಯದಲ್ಲಿ ಸರ್ವೋದಯ ದಿನವು ತಾ. ೩೦ರಲ್ಲಿ ಆಚರಿಸಲ್ಪಡುವದು. ಬೆಳಗ್ಗೆ ೯ ಗಂಟೆಗೆ ಮೌನಮೆರವಣಿಗೆ, ನಂತರ [illegible], ಭಜನೆಗಳು ನಡೆಯುವವು.

ಅದೇ ದಿನ ವೀರಾಜಪೇಟೆಯಲ್ಲಿ ಕಾವೇರಿ ಆಶ್ರಮದಲ್ಲಿ ದಿನವಿಡೀ ಭಜನೆ, ಸಾಯಂಕಾಲ ೪ ಗಂಟೆಗೆ ಭಜನಾ ಮೆರವಣಿಗೆ, ನಂತರ ಮುನ್ಸಿಪಲ್ ಹಾಲಿನಲ್ಲಿ ಮೌನ, ಪ್ರಾರ್ಥನೆ, ಪ್ರತಿಜ್ಞಾ ಸ್ವೀಕಾರವೂ, ಬೆಳಿಗ್ಗೆ ಬಡವರಿಗೆ ಅಕ್ಕಿ ದಾನವೂ ನಡೆಯುವದೆಂದೂ ತಿಳಿಯಬರುತ್ತದೆ.

ಕೊಡಗಿನ ಫೈನಾನ್ಸ್ ಕಮಿಟಿ ಮೀಟಿಂಗು ತಾ. ೧೦-೨-೪೯ರಲ್ಲಿ ನಡೆಯುವದು. ಶ್ರೀ ಪಿ. ಐ. ಬೆಳ್ಯಪ್ಪನವರನ್ನು ಮತ್ತು ಚೀಫ್ ಫಾರೆಸ್ಟ್ ಆಫೀಸರಾದ ಶ್ರೀ ಸಿ. ಎಂ. ಕುಶಾಲಪ್ಪನವರನ್ನು ಈ ಕಮಿಟಿಯ ಸದಸ್ಯರಾಗಿ ನೇಮಿಸಲಾಗಿದೆ.

ವೀರಾಜಪೇಟೆ ಸಿವಿಲ್ ಆಸ್ಪತ್ರೆಯಲ್ಲಿಯೂ ಮಡಿಕೇರಿ ಆಸ್ಪತ್ರೆಯಲ್ಲಿದ್ದಂತೆ ಕಾಯಿಲೆಯವರ ಉಪಯೋಗಕ್ಕೆ ಮೋಟಾರ್ ವಾಹನ ಒಂದರ ಸೌಕರ್ಯ ಏರ್ಪಡಿಸಲಾಗುವದೆಂದು ತಿಳಿಯಬರುತ್ತದೆ.

೧೯೪೯ನೇ ಏಪ್ರಿಲ್‌ನಲ್ಲಿ ಕೊಡಗಿನ ಸಂಪೂರ್ಣ ಪಾನನಿಷೇಧ ಜಾರಿಗೆ ಬಾರದಿದ್ದರೆ ಯಾವ ರೀತಿಯಲ್ಲಿ ಅದರ ಸೇವನೆಯನ್ನು ಕಡಿಮೆ ಮಾಡಬೇಕೆಂಬುದನ್ನು ಪರ್ಯಾಲೋಚಿಸಲು ಜನರಲ್ ಪರ್ಪಸ್ ಕಮಿಟಿಯು ಮತ್ತು ಎಕ್ಸೈಸ್ ಎಡ್ವಯಿಸರಿ ಬೋರ್ಡಿನ ಮೀಟಿಂಗು ಈ ದಿನ ಸಾಯಂಕಾಲ ಕೌನ್ಸಿಲು ಹಾಲ್‌ನಲ್ಲಿ ಚೀಫ ಕಮಿಷನರ ಅಧ್ಯಕ್ಷತೆಯಲ್ಲಿ ನಡೆಯುವದು.

ಚೀಫ್ ವೆಟರ್ನರಿ ಆಫೀಸರಾಗಿದ್ದ ಶ್ರೀ ಕುಪ್ಪಂಡ ಕಾಳಪ್ಪನವರನ್ನು ಕಾರಣಾಂತರದಿಂದ 'ಸಸ್ಪೆಂಡ್' ಮಾಡಿ ಅವರ ಬದಲು ಶ್ರೀ ಅಂಜಪರವಂಡ ಮುತ್ತಪ್ಪನವರನ್ನು ಹಂಗಾಮಿಯಾಗಿ ತಾ. ೨೬ರಿಂದ ನೇಮಿಸಲಾಗಿದೆ.

ಬತ್ತದ ಕ್ರಯ.

ಈ ತಾರೀಕು ೨೪ರಲ್ಲಿ ಮೈಸೂರು ಸರಕಾರದ ಪ್ರತಿನಿಧಿಗಳು ಮತ್ತು ತಾ. ೨೫ರಲ್ಲಿ ಮದ್ರಾಸು ಸರಕಾರದ ಪ್ರತಿನಿಧಿಯು ಮಡಿಕೇರಿಗೆ ಬಂದು ಕೊಡಗಿನ ಸರಕಾರದ ಮತ್ತು ಬತ್ತ ಮಹಿವಾಟಿನ ಮುಖ್ಯ ಏಜಂಟರುಗಳೊಡನೆ ಚರ್ಚೆಮಾಡಿ ಈ ತೀರ್ಮಾನಕ್ಕೆ ಬಂದಿರುವರು.

(೧) ಇಂಡಿಯಾ ಸರಕಾರವು ನಿರ್ಣಯಿಸಿದಂತೆ (ಬೀಜ) ಬತ್ತದ ಕ್ರಯ ಗಾಡಿಗೆ ರೂ ೧೮೭-೮-೦. ಇದು ಲೋಡಿಂಗ್ ಸೆಂಟರ ಗಳಲ್ಲಿ ರೈತನಿಗೆ ದೊರೆಯತಕ್ಕದ್ದು.

(೨) ಗಾಡಿಬಾಡಿಗೆ ಗಾಡಿಗೆ ರೂ. ೩-೬-೦ ಇದ್ದದ್ದನ್ನು ೪-೧೪-೦ ಗೆ ಏರಿಸಲಾಗಿದೆ. ಇದು ಲೋಡಿಂಗ್ ಸೆಂಟರುಗಳಲ್ಲಿ ರೈತನಿಗೆ ದೊರೆಯತಕ್ಕದ್ದು. ಆದರೆ ಕಣದಿಂದ ಲೋಡಿಂಗ್ ಸೆಂಟರಿನ ವರೆಗಿನ ಗಾಡಿ ಬಾಡಿಗೆ ಮತ್ತಿತರ ಖರ್ಚನ್ನು ರೈತನೇ ಕೊಡತಕ್ಕದ್ದು.

(೩) ಸಬ್ ಏಜಂಟರ ಕಮಿಷನು ಗಾಡಿಗೆ ರೂ. ೪-೧೨-೦ ಇದ್ದುದನ್ನು ರೂ. ೫-೮-೦ ಕ್ಕೆ ಏರಿಸಲಾಗಿದೆ. ಇದು ಲೋಡಿಂಗ್ ಸೆಂಟರಿನಲ್ಲಿ ರಾಶಿಗಳಿಗೆ ಬತ್ತ ತುಂಬಿಕೊಡುವ ಸಬ್ ಏಜಂಟರುಗಳಿಗೆ ದೊರೆಯುವದು.

ತತ್ಕಾಲ ದಕ್ಷಿಣ ಕೊಡಗಿನ ಬತ್ತವೆಲ್ಲವೂ ಅಕ್ಕಿಯ ರೂಪದಲ್ಲಿ ಮಲಬಾರು ಮೈಸೂರುಗಳಿಗೂ, ಉತ್ತರ ಕೊಡಗಿನ ಬತ್ತವು ಬತ್ತದ ರೂಪದಲ್ಲಿ ಮೈಸೂರಿಗೂ ರವಾನಿಸಲ್ಪಡುವದು. ರವಾನೆಯು ಮೈಸೂರಿಗೆ ಈ ತಾ. ೨೮ರಿಂದ ಮತ್ತು ಮಲಬಾರಿಗೆ ಫೆಬ್ರವರಿ ೧ರಿಂದ ಪ್ರಾರಂಭವಾಗುವದು.

ಮಾರಾಟಕ್ಕಿದೆ.

ಉತ್ತರ ಕೊಡಗು ತಾಲೋಕು ಶನಿವಾರಸಂತೆ ಹೋಬಳಿ [illegible] ಗ್ರಾಮದಲ್ಲಿ 5 ಎಕ್ರೆ ತರಿಗದ್ದೆ, ಇದಕ್ಕೆ ಒತ್ತಾಗಿ 2 ಎಕ್ರೆ [illegible], ಇದೇ ಗ್ರಾಮದ ಮಧ್ಯದಲ್ಲಿ ½ ಎಕ್ರೆ ಜಾಗದಲ್ಲಿ ವಾಸಕ್ಕೆ ಚೆನ್ನಾಗಿರುವ ಹಂಚಿನ ಮನೆ. 30 ಫಲಬರುವ ತೆಂಗಿನ ಗಿಡ. ಇವು ಮಾರಾಟಕ್ಕಿವೆ. ಪಬ್ಲಿಕ್ ರಸ್ತೆ ಮನೆಯ ಹತ್ತಿರವಾಗಿ ಇದೆ. ಖಾಯಿಷ್‌ದಾರರು ಖುದ್ದಾಗಿ ನನ್ನಲ್ಲಿ ವಿಚಾರಿಸುವದು.

ಉಪ್ಪೂರು ಸೋಮಣ್ಣ,
ಮುನ್ಸಿಪಲ್ ಮೆಂಬರ್,
3-1 ಕೊಡ್ಲಿಪೇಟೆ.

TENDER.

C. C. CO-OPERATIVE STORES LIMITED POLLIBETTA.

Sealed Tenders are invited upto 5 P. M Friday 11th February 1949 for the lease and running of the Stores' shops at Balmany, Benjigherry, Cannoncadoo, Devaracadoo, Jumboor, Kudige, Margolly, Nullore, Pollibetta, Woshully and Yemmigoondi Estates as individual Estate shops.

The terms and Conditions are.

1 The Committee reserve the right to accept or reject the highest or any other tender as regards (a) rent and (b) business goodwill without giving any reason for their decision

2 The successful person must take over all the stocks in the Branch for which his tender is accepted according to their valuation in the Liability Register within ten days of the acceptance against immediate cash payment

3. He should undertake to sell rationed articles at controlled Prices and other articales at prices current in neighbouring Shandies adjoining each shop.

4. An agreement for the lease of the shop must be executed in favour of the owners of the premises before occupation. The cost of the upkeep of the premises must be borne by the tenant

Separate Tenders for each shop will have to be sent and a deposit of Rs. 100/ must accompany each tender. The name of the shop must be written clearly on the cover containing the tender and addressed to the President, C. C. E. Co operative Stores Ltd - Pollibetta, and sent by Registered Post. If the tender is not accepted the deposit will be refunded.

Deposit money may be sent by Money Order to the undersigned or paid in person at the Head Office of the Stores taking a receipt therefor.

The tenders will be opened by the undersigned in the presence of a Committee constituted for it on Wenderday 16th February at 10 A M.

The agreement will be for a period of three years with the option of renewal at the end of this period

Copies of the agreement to be signed are available at the Office of the C. C. E. (1943) Ltd., Pollibetta.

POLLIBETTA, 25-1-1949. IVOR BULL PRESIDENT.

॥ ಪತ್ರವ್ಯವಹಾರಗಳು ॥

ಮೈಸೂರೂ ಕೊಡಗಿನ ಸಂಯೋಜನೆಯೂ.

ಲೇ: —'ಸಾರಥಿ'

ಧ ರ್ ಸಮಿತಿಯ ಶಿಫಾರಸ್ಸಿನ ಮೇ ರೆ ಭಾಷಾವಾರು ಪ್ರಾಂತರಚನೆಯ ಬ ದಿಗೊತ್ತಲ್ಪಟ್ಟದ್ದರಿಂದ ಕೊಡಗ ಕರ್ನಾಟಕವನ್ನು ಸೇರುವುದು ಸ್ವಲ್ಪ ಗಿರೀ ಉಳಿಯಿತು. ಇತ್ತೀಚೆಗೆ ಸಂಯೋಜನೆ ಯ ಮಾತು ಬರಲಿ ಗಿದೆ. ನಾವು ಕ ನ್ನಡಿಗರು ಕನ್ನಡದ ಪ್ರಗತಿಗಾಗಿ ನಾವು ಕರ್ನಾಟಕವನ್ನು ಸೇರಿಕೊಳ್ಳಬೇಕೆಂದು ಆಗಿನ ವಾದ. ಈ ಸಂಸ್ಥಾನಗಳು ಏ ಕಿಯೂಂದವನ್ನು ಪ್ರತಿಪಾದಿಸಿದ ಸಂಶಯದ ವಾದವು ಬೆಳೆಯುಗಿದೆ. ಈಗಿನದು [illegible] ವಿ ಪಕ್ಷಿ ಪ್ರಯೋಜನ ಬೇ ಡವೇ, ಕೊಡಗಿಗೆ ಕೈತ್ರಿ ಬಗದೇ, ನ ಮ್ಮ ಹೊಲಗಳ ಸಂತ ನಗಳ ಗ ಟಿಡವೇ [illegible] ಆಗಬೇಡವೇ ಆದ್ದ [illegible] ನ್ಯಾಯ [illegible] ಕೊಡಗ [illegible] ಸಂಯೋಜನೆಯು [illegible] ಪಕ್ಷವಾದಲ್ಲಿ ಸಮಯದ [illegible] ಕರ್ನಾಟಕಕ್ಕೆ ಕೆಲವು ವಿಷಯಗಳ ಹಿಂದೆ, [illegible] ಕೊಡಗ [illegible] ಜಿಲ್ಲೆ [illegible] ಕೇಳಿ ನಾನು [illegible] ಬಲಿಗೆ ಸರಳ ಸ್ವಭಾವದ ಕೊಡಗಿನ ಜನರು ಎಷ್ಟು ಬೇಗನೆ [illegible]!

ತಾ ೧೯-೧-೪೯ರ ಜನ್ಮಭೂಮಿ ಪತ್ರಿಕೆಯಲ್ಲಿ [illegible] ಕೊಡಗು [illegible] ಹೋಲಿಕೆಗಳಿಂದ ಕೂಡಿದ [illegible] ಸಂಯೋಜನ ವ ದಿಗಳು [illegible] ಕೊಡಗಿನ [illegible] ಸಂಗತಿ [illegible] ಉದಾಹರಣೆ [illegible] ದಿನ ಒಂದು ಜಿಲ್ಲೆಯಾದ [illegible] ಬರ ಲಿ. ಇಡೀ ಮೈಸೂರು [illegible] ಗೆದುಕೊಳ್ಳು [illegible] ಯಾಕೆಂದರೆ [illegible] ಒಂದು ಜಿಲ್ಲೆಯ [illegible] ಬರಲು. ಆಂದರೆ ಮಲೆನಾಡು ಜಿಲ್ಲೆಗಳ [illegible] ಒಂದು ಜಿಲ್ಲೆಯ [illegible] ಯಲ್ಲಿರಬಹುದು. ಮೈಸೂರು ನಗರ ಅವ ಕ್ಕಿಂತಲೂ ಉತ್ತಮವಾಗಿಲ್ಲವೇ? ಗೋಲಿಕೆಗೆ ಕೇವಲ [illegible] ಜಿಲ್ಲೆಯ [illegible] ತೆಗೆದುಕೊಂಡಿದ್ದರೆ ಅವರಲ್ಲಿ ಸ್ವಲ್ಪವಾದ ರೂ ಆದ [illegible] ಬಹು [illegible] ಹೋಲಿಕೆ [illegible] (ವಿದ್ಯೆ, ಮತ್ತು ವೈದ್ಯಕೀಯ ವ್ಯವಸ್ಥೆಗಳ ನ್ನು) ಜನಸಂಖ್ಯೆಯನ್ನು ತೆಗೆದುಕೊಳ್ಳ ವುದರ ಬದಲು ವಿಸ್ತೀರ್ಣವನ್ನು [illegible] ಕೋಟಿದ್ದಾರೆ [illegible] ಸ್ಥಿತಿ [illegible] ನ್ಯೂನತೆಗಳಿರಬಹುದು. ವೈದ್ಯಕೀಯ [illegible] ಎಂಬ ಪ್ರವಾದಲ್ಲಿ [illegible] ಅವರೆ ಅಧಿಕಾರವು ಪ್ರಜೆಗಳಿಗೆ

ಸಿಕ್ಕದಾಗ [illegible] ಹೋಲಿಕೆಗಳಲ್ಲಿಗ ದೇ? ವಿದ್ಯೆಯ ವಿಷಯದಲ್ಲಿ ನ ವ್ಪು ಇ ಡೀ ಹಿಂದೂಸ್ಥಾನದಲ್ಲಿ ತಿರುವಾಂಕೂರು ಮತ್ತು ಕಲ್ಯಚ್ಚಿನ್ ಸಂಸ್ಥಾನಗಳನ್ನು ಬಿ ಟ್ಟರೆ ಯಾರಿಗೂ ಕಡಿಮೆಯಾಗಿರ [illegible] ಕಾಲೇಜು [illegible] ಆದರೆ ಈ ವರ್ಗ [illegible] ಯ [illegible] ಶಿಕ್ಷಣ [illegible] ಪರಿಹಾರವಾ ಗುವುದ [illegible] ಗಳು, ಸಂಯೋಜನೆಯಾಗಲಿ [illegible] ವಿಷಯಗಳು [illegible] ಕೆಲಸವು [illegible] ನಿರ್ಣಯದಂತೆಯೇ [illegible] ಅವರ [illegible] ಅಲ್ಲದೆ [illegible] ಯೋಜನೆಗಳಿಗೂ, [illegible] ಅಧಿಕ ಬಲವು [illegible] ಇದ್ದು [illegible] ಸಂಯೋಜನೆಯಿಂದ [illegible] ಇದನ್ನು [illegible] ಇರಬೇಕು [illegible] ಲಕ್ಷ ರೂಪಾಯಿ [illegible] ಬಹ [illegible] ಕಂಡು [illegible] ವಿಚಾರ [illegible] (ನ [illegible]) [illegible] ನಿಜವಾದ [illegible] ಸಂಸ್ಥಾನದ [illegible] ಆದರೆ [illegible] ವಿಷಯದಲ್ಲಿ [illegible] ಯೋಜನೆ [illegible] ಕಾರ್ಯಕ್ರಮ [illegible] ದಾದರೆ ಆಗ ಜನಜೀವನವು [illegible] ನೆ ಯಾಗಬಹುದು [illegible] ಆರ್ಥಿಕ [illegible] ಇಂದಿನ [illegible] ಯೋಜನೆಯ [illegible] ಹಲವು [illegible] ಹೆಚ್ಚಿನ [illegible] ಕಾನೂನು [illegible] ಆರ್ಥಿಕ ಸ್ಥಿತಿಯ [illegible]

ಅವು ಎಂದೂ ಕೇಂದ್ರಕ್ಕೆ ಹೊರೆಯಾಗಿರ ಲಾರದ. ಆರ್ಥಿಕ ನೈತಿಕ ಉಳಿವಿಗ [illegible] ಹಿಂದೂಸ್ಥಾನದ [illegible] ಸಂದೇಹವೇನು? [illegible] ಪ್ರತೀಕವ ದಿಗಳಲ್ಲಿ [illegible] ಸಂಗತಿಗಳಿದ್ದರೆ [illegible] ಬಳಿದಿದ್ದರೆ [illegible] ಕರ್ನಾಟಕ [illegible] ವನ್ನು ಪ್ರೌಢವಿದ್ಯಾಭ್ಯಾಸಿಗಳು [illegible] (Only the fools and the dead do not change their opinion) [illegible] ಸಂಯೋಜನೆಯ [illegible] ಪ್ರತೀಕ [illegible] ನವ್ಯಲ್ಲಿ [illegible] ಸಂಯೋಜನೆ [illegible] ಕೊಡಗೇ ಅಲ್ಲ, ಯಾವ ಪ್ರಾಂತ್ಯವು ಪ್ರತೀಕ [illegible] ಬಂದ, [illegible] ಜನರ [illegible] ಇಲ್ಲ [illegible] ಕೊಡಗಿನ [illegible] ಹಿಂದಿ [illegible] ಇಲ್ಲ, [illegible] ಗಳಿಗೆ [illegible] ವನಗಳ ಮತ್ತು ಕಾರ್ಯ ಆದೀ! ಎರ ಡ [illegible] ಇವೆ. ನಿಮ್ಮ ರಾಜಕೀಯ ವ

ಈ ಪ್ರಚಾರ [illegible] ಪ್ರತಿಷ್ಠೆ [illegible] ರಾಜಕೀಯ [illegible] ಕೊಡಗಿನ ದೃಷ್ಟಿಯ [illegible] ಕೊಡಗಿನ ಸಾ ಮಾನ್ಯ ಜನರು [illegible] ಅಭಿಪ್ರಾಯಗಳ [illegible] ವಿಷಯ [illegible] ಮನ್ನು [illegible] ಹೊಟ್ಟೆ [illegible] ನಮ್ಮ [illegible] ಜೀವನ [illegible] ಪ್ರಾಮುಖ್ಯವಾ ದುದ [illegible] ಆ [illegible] ಉತ್ತ [illegible] ಪತ್ರ [illegible] ಜ ನಾಂಗದ [illegible] ಹೋರಾಡಿ [illegible] ಸಿದ್ಧರಿರುವುದಿಲ್ಲ. ಈ ಸಮಯದಲ್ಲಿ [illegible] ಆದ [illegible] ಆ [illegible] ಸುದೇಶ [illegible] ನಮ್ಮ [illegible] ಪ್ರತಿನಿಧಿಗಳಿಂದ [illegible] ಮೈಸೂರು [illegible] ಯುದ [illegible] ಒಂದು [illegible]

"ಬಡವ ಮಂಡಿಗೆ"

ಈ [illegible] ಪ್ರಶ್ನೆ [illegible] ಬೆ [illegible] ೧೯-೨-೪೯ಗೆ [illegible] ರಕ್ಕಸ [illegible] ಸಂಸ್ಥೆ [illegible] ಎಲ್ಲ [illegible] ಕೆಲ [illegible] ಇಲ್ಲ [illegible] ಅರ್ಥ [illegible] ದೊರೆಯ [illegible] ಇಲ್ಲ. [illegible] ರೆ [illegible] ಆಗ [illegible]

ಟ ನೋಡದೆ ನಿಶ್ಚಯಿಸಿಬಿಟ್ಟು ಹುತ್ತಿ ಖನು ಯದಲ್ಲಿ ಸೂಚಿದ ಶ್ರೀಮಂತರಿಗೆ ಗಾಡಿಗೆ ರೂ. ೨೦೦-೦-೦೦ ವರೆಗೆ ದೊರೆತಿದೆ. ಈ ವರ್ಷವೂ ಹಾಗೆಯೇ ಆಗಬಹುದು. ಅಂಥ ಶ್ರೀಮಂತನಿಗೇ ಜೀವನ ಹಗುರ. ಬಡ ರೈತರಿಗೆ ಪೇಟೆಯಿಂದ ಇತರ ವಸ್ತುಗಳೂ ಯೋಗ್ಯ ಬೆಲೆಗೆ ದೊರೆಯುವುದು ಶ್ರೀಮಂತನು ತೃಪ್ತನಾದ ನಂತರ ಬಡವನ ಬಾರಿ ಬರುತ್ತದೆ.

ಬಡವನಿಗೆ ದನ ಕರು ಸಾಕಲು ಅನುಕೂಲ ಕಡಿಮೆ. ದನಗಳಿಗೆ ನೆಲಗಡಲೆ ಹಿಂಡಿ ಹಾಕುವವೆಂದರೆ ಕಳೆದ ವರ್ಷ ಚೀಲಕ್ಕೆ ರೂ. ೫/- ಇದ್ದರೆ ಈ ವರ್ಷ ೧೨/-. ಹೆಚ್ಚು ಬೆಳೆಯುವ ಎಂದು ನೆನಸಿ ಭೂಮಿಗೆ ಗೊಬ್ಬರಕ್ಕೆ ಬರೆದುಕೊಂಡರೆ ಗೊಬ್ಬರ ಬರುವದು ಜೂನ್ ತಿಂಗಳಲ್ಲಿ. ಮಳೆಗಾಲವಾಗಿ ಗಾಡಿ ಸಂಚಾರ ನಿಂತಿರುವಾಗ ಬಡವನು ಹೇಗೆ ಇದನ್ನು ಉಪಯೋಗಿಸಿಕೊಳ್ಳಬೇಕು.

ಎತ್ತುಗಳನ್ನು ತೆಗೆಯಲು ಸಂತೆಗೆ ಹೋದರೆ ಹದ್ದುಮೀರಿದ ಬೆಲೆಯೊಡನೆ ದಳ್ಳಾಳಿಗಳ ಕಿರುಕುಳ. 'ಹೆಚ್ಚಿಗೆ ಬೆಳೆಸಿ' ಎಂಬ ಬೋಧನೆಯಂತೆ ರೈತನು ದುಡಿದರೂ ಆತನಿಗೆ ಸಲ್ಲತಕ್ಕ ಬೆಲೆಯನ್ನು ದೊರೆಯಬೇಕಾದರೂ ಮಹಾ ತಪಸ್ಸು ನಡೆಯಬೇಕು. ಇವುಗಳೆಲ್ಲವುಗಳ ಜೊತೆಗೆ ಶಾಲೆಯಲ್ಲಿ ಮಕ್ಕಳಿಗೆ ಫೀಜು ಹೆಚ್ಚು. ಬಟ್ಟೆ ಅಂಗಡಿಗಳಲ್ಲಿ ಬೆಲೆ ಹೆಚ್ಚು. ಈ ಕಷ್ಟ ಪರಂಪರೆಗಳಲ್ಲಿ ರೈತನು ಮಾಡುವದೇನು? ಇಷ್ಟೆಲ್ಲ ಕಷ್ಟಪಟ್ಟು ವರ್ಷಾಂತ್ಯದಲ್ಲಿ ಊಟಕ್ಕೆ ಅನ್ನವಿಲ್ಲದಾದರೆ ಅವನು ಬದುಕುವದೆಂತು? ಹೇಗೂ ರೈತನು ಬದುಕಿರುವದು ದೇವರ ಕೃಪೆಯಿಂದಲೇ ಎನ್ನಬೇಕು!

ಇದೆಲ್ಲದರ ಜೊತೆಗೆ ಇರುವ ಅಲ್ಪ ಶಾಂತಿಯನ್ನು ಕೆಡಿಸುವಂತೆ ದೇಶದ ಭವಿಷ್ಯದ ಕೂಗು! ಬಡ ಜನರನ್ನು ಕೇಳುವವರೇ ಇಲ್ಲ. ದೇಶದ ಭವಿಷ್ಯ ತೀರ್ಮಾನಿಸಲು ಮಡಿಕೇರಿ, ವೀರಾಜಪೇಟೆಯಲ್ಲಿರುವವರು (ಯಾವ ಜವಾಬ್ದಾರಿಯಿಂದಲೋ ದೇವರೇ ಬಲ್ಲ) ಡೆಲ್ಲಿಗೆ ಹೋಗುತ್ತಾರೆ, ನೆಹರೂರವರನ್ನು ಕಾಣುತ್ತಾರೆ! ಹಳ್ಳಿಗೆ ಬಂದು ಬಡ ರೈತನ ಅಭಿಪ್ರಾಯ ಕೇಳುವವರಿಲ್ಲ. ಹೌದು ಬಡವನಿಗೆಲ್ಲಿ ಈ ಸ್ವಾತಂತ್ರ್ಯ. 'ಬಡವ ನೀ ಮಡಗಿದಂಗಿರು'.

Pan.

ಮಾಜಿ ಸಿಪಾಯಿಗಳು.

ಕೊಡಗು, ಸೈನ್ಯಕ್ಕೆ ಪಟ್ಟಿಗೆ ಖ್ಯಾತಿ ಪಡೆದಿದೆ. ಈ ಸೈನಿಕರೇ ಕೊಡಗಿನ ಚರಿತ್ರೆಯನ್ನು ಭೂಪಟದಲ್ಲಿ ಸ್ಪಷ್ಟವಾಗಿ ತೋರುವಂತೆ ಮಾಡಿದ್ದಾರೆ. ಹಿಂದಿನಿಂದಲೂ ಕೊಡಗಿನವರು ಸರಕಾರಕ್ಕೊದಗಿದ ಕಷ್ಟ ಕಾಲದಲ್ಲಿ ಸಹಾಯಕರಾಗಿ ಜಮ್ಮಾ, ಜಹಗೀರುಗಳನ್ನು ಪಡೆದಿದ್ದಾರೆ. ಇತ್ತಲಾಗಿ ಕಳೆದ ಯುದ್ಧದಲ್ಲಿ ನಾನಾ ಭರವಸೆ ಕೊಟ್ಟು ಜನರನ್ನು ಸೈನ್ಯಕ್ಕೆ ಸೇರಿಸಲಾಯಿತು. ಆ ಭರವಸೆಗಳೆಲ್ಲ ಹೊರಟು ಹೋದ ಬ್ರಿಟಿಷ್ ಆಡಳಿತದೊಂದಿಗೆ ಮರೆಯಾಯಿತೇ? ಸೈನ್ಯದಿಂದ ನಿವೃತ್ತಿ ಪಡೆದವರಿಗೆ ವಾಸಿಸುವ ಮನೆ, ವ್ಯವಸಾಯಕ್ಕೆ ಜಾಗ, ದೂಪಿತಕ್ಕೆ ಧನಸಹಾಯ ಕೊಡಲಾಗುವುದೆಂಬ ಭರವಸೆ ಇದ್ದ ಕಾರಣ ಅನೇಕರು ಯುದ್ಧ ಮುಗಿದ ನಂತರ ಸೈನ್ಯದಿಂದ ನಿವೃತ್ತಿ ಪಡೆದು ಬಂದರು. ವರ್ಷಗಳು ಕಳೆದರೂ ಅವರಿಗೆ ಯಾವ ಸಹಾಯವೂ ದೊರೆಯುತ್ತಿಲ್ಲ. ಅವರು ಬರುವಾಗ ಅವರಲ್ಲಿದ್ದ ಅಲ್ಪಸ್ವಲ್ಪ ಹಣವೂ ಈಗ ಕರಗಿ ಹೋಗಿದೆ.

ಜಾಗ ಸರ್ವೆ ಮಾಡುತ್ತಿದ್ದಾರೆ. ಮೀಟಿಂಗು, ಪರಿಶೀಲನೆ, ನಡೆದಿವೆ. ಆದರೆ ಕಾರ್ಯತಃ ಏನೂ ನಡೆದಿಲ್ಲ. ಯಾವ 'ಎಮೆನಿಟಿ' ಕೇಂದ್ರವೂ ತೆರೆಯಲ್ಪಟ್ಟಿಲ್ಲ. ಬದಲು ಸರಕಾರದಲ್ಲಿ ಯಾ ಜಿಲ್ಲಾ ಬೋರ್ಡಿನಲ್ಲಿ ಉದ್ಯೋಗ ಸ್ವೀಕರಿಸಿದ ಮಾಜಿ ಸಿಪಾಯಿಗಳು ಮಾಜಿ ಸಿಪಾಯರ ಸಂಘದಲ್ಲಿ ಸದಸ್ಯರಾಗಬಾರದೆಂದು ಹೊರಡಿಸಿರುವರು. ಇದೇ ದೇಶದ ಸ್ವಾತಂತ್ರ್ಯ ಉಳಿಸಲು ಪ್ರಯತ್ನಿಸಿದ, ಮುಂದೆ ಪ್ರಯತ್ನಿಸಬಹುದಾದ ಯೋಧರಿಗೆ ದೊರೆತ ಸ್ವಾತಂತ್ರ್ಯ! ದೇಶದ ಪಾಳು ಬಿದ್ದ ಭಾಗಗಳ ಉತ್ಪನ್ನಗೊಂಡು ಕೊಡಗಿನ ಉತ್ಪತ್ತಿ ಹೆಚ್ಚಾಗಿ ಜನಜೀವಾಳವು ಸರಿಯಾಗಿ ನಡೆಯಬೇಕಾದರೆ ಮಾಜಿ ಸಿಪಾಯಿಗಳಿಗೂ, ರಾಜಕೀಯ ಚಳವಳದಲ್ಲಿ ದುಡಿದವರಿಗೂ, ಭೂಮಿ ಇಲ್ಲದ ಸಳತ್ರ ವರ್ಗದವರಿಗೂ ಇರುವ ಪೈಸಾರಿ, ಸರ್ಕಾರಿ ಜಾಗಗಳನ್ನು ಹಂಚಿ, ಅಲ್ಲಿ ಯೋಗ್ಯ ವ್ಯವಸಾಯ ನಡೆಸುವಂತೆ ಸಹಾಯ ಕೊಟ್ಟು ಸರಕಾರವು 'ರಿಹೆಬಿಲಿಟೇಶನ್' ಕೆಲಸವನ್ನು ಹೆಚ್ಚು ಆಸಕ್ತಿಯಿಂದ ಕೈಕೊಳ್ಳಬೇಕು.

'ಮಾಜಿ ಸಿಪಾಯಿ'

'ದುಡಿದಷ್ಟೇ ದೊರೆತೀತು.'

ಯಾರಿಗಾದರೂ ದುಡಿದಷ್ಟೇ ದೊರೆಯುವದು. ಬ್ರಿಟಿಷರ ಆಡಳಿತ ನಡೆದದ್ದಾಗ ಅವರ ಕೈಯಾಳುಗಳಾಗಿ, ಅವರ ತಾಳಕ್ಕೆ ಕುಣಿದವರು ಈಗ ಜನ ಮುಂದಾಳುಗಳಾಗ ತೊಡಗಿದ್ದಾರೆ. ನಾಡಿಗೆ ಹೋದಾಗ ಸರಕಾರವನ್ನು ದೂರುವದು; ನಗರಕ್ಕೆ ಬಂದಾಗ ಸರಕಾರದ ಗುಣಪ್ರಚಾರ ಮಾಡುತ್ತಿರುವವರು ಕೆಲವರಿದ್ದಾರೆ. ರಾಜಕೀಯ ಚಳವಳ ನಡೆದು ದಸ್ತಗಿರಿಗೆ ವಾರಂಟು ಬಂದಾಗ 'ದಮ್ಮಯ್ಯ' ಎಂದು ಹೇಳಿ ಬಿಡಿಸಿಕೊಂಡವರೂ ಇದ್ದಾರೆ. ನಾಡಿನಲ್ಲಿ ಪ್ರಚಾರ ಮಾಡುತ್ತಾ, ಕೌನ್ಸಿಲಿನಲ್ಲಿ ಗಟ್ಟಿಯಾಗಿ ಕೂಗುತ್ತಾ, ಸರಕಾರಿ ಉದ್ಯೋಗ ಪಡೆದವರೂ ಇದ್ದಾರೆ. ಮಹಾತ್ಮ ಗಾಂಧೀಜಿಯವರು ಬಂದಿದ್ದಾಗ ಗಾಂಧೀಜಿಯವರನ್ನು ಬಹಿಷ್ಕರಿಸಿ, ಸೂರ್ಯನಿಗೆ ಉಗುಳಲೆತ್ನಿಸಿ ಮುಖ ಪ್ರಕ್ಷಾಲನ ಮಾಡಿಕೊಂಡವರೂ ಇದ್ದಾರೆ. ಇವರನ್ನೆಲ್ಲಾ ನೋಡುತ್ತಿರುವ ಸಾರ್ವಜನಿಕರ ಮರೆಯೋ ಏನೋ ಈಗ ಇವರಲ್ಲಿ ಕೆಲವರು ಹೆಸರು ಪಡೆದು ಬಂದಿದ್ದಾರೆ. ಉಟ್ಟ ಶರ್ಟು ಮಡಿಕೆ ಬದಲಾದರೂ, ಬೆಡ್ ಕಾಫಿ ಇಲ್ಲದೆ ಎದ್ದಿರದವರು ಮುಂದಾಳತನಕ್ಕಾಗಿ ಹೆಣಗುತ್ತಿದ್ದಾರೆ. ಇವರು ಮುಂದಾಳುಗಳಾಗಬಾರದೆಂದಲ್ಲ. ಆದರೆ ಒಂದನ್ನು ಮಾತ್ರ ಇವರು ತಿಳಿಯಬೇಕು. ದುಡಿಯಲ್ಲದೆ ಫಲಬಾರದು. ಬಡ ರೈತರ ನಾಡಾದ ಕೊಡಗಿನಲ್ಲಿ ಬಡ ರೈತರ ಹಿತಗಳನ್ನು ಲಕ್ಷಿಸಿ ಆತನಲ್ಲಿ ಸಮರಸವಾದವನೇ ನಿಜವಾದ ಮುಂದಾಳು. ಗುಲ್ಲನ್ನಲ್ಲದೆ ಓಟಿನ ಸಮಯದಲ್ಲಿ ಕಾರು ಹತ್ತಿಕೊಂಡು ಗ್ರಾಮ ಸುತ್ತುವವರಲ್ಲ. ದೇಶವು ಸ್ವಾತಂತ್ರ್ಯ ಪಡೆದು ನಮ್ಮ ಮನೆಯನ್ನು ನಾವು ಸರಿಪಡಿಸಿಕೊಳ್ಳುವ ಕಾಲದಲ್ಲಿ ಈ ಹಿಂದೆ ಜನ ಹಿತಕ್ಕೆ ವಿರೋಧ ಮಾಡುವವರೇ ಇಂದು ಮೈಸೂರು ಬಲ ಕೆಟ್ಟಿನ ಆಸೆಯಿಂದಲೋ, ಇಲ್ಲವೇ ದೊಡ್ಡ ಉದ್ಯೋಗದ ಕಾಂಕ್ಷೆಯಿಂದಲೋ ಮೈಸೂರಿಗೆ ಸೇರುವ ವಾದ ಹೂಡಿದ್ದಾರೆ. ಇವರ ಅಪಪ್ರಚಾರವನ್ನು ತಿಳಿಯುವದಷ್ಟು ಜನರು ಮತಿಹೀನರಾಗಿರುವರೇ?

K. G; C. T.

ಕೆ. ಬಿ. ಮೋಟಾರ್ ಸರ್ವಿಸ್. ಮೈಸೂರು.

ಮಹಾಜನಗಳ ತಿಳುವಳಿಕೆಗೆ ಬಗೆ ಮೇಲ್ಕಂಡ ಸರ್ವಿಸ್ ಹುಣಸೂರು, ಫ್ರೇಸರ್‌ಪೇಟೆ, ಗೋಣಿಕೊಪ್ಪಲು, ಆನೆಚೌಕೂರು ಮೂಲಕ ಮೈಸೂರಿಗೆ ಹೋಗುವುದಲ್ಲದೆ, ಈಗ ಅದರ ಆ ಏರ್ಪಾಟಿನ ಮತ್ತೊಂದು ಸರ್ವಿಸ್ ಮೈಸೂರಿನಿಂದ ಬೆಳಗ್ಗೆ 8-30ಕ್ಕೆ ಹೊರಟು ಆನೆಚೌಕೂರು ಗೋಣಿಕೊಪ್ಪಲು ಮಾರ್ಗವಾಗಿ ವೀರಾಜಪೇಟೆಗೆ ಬೆಳಗ್ಗೆ 12-30ಕ್ಕೆ ಗಂಟೆಗೆ ತಲಪಿ ಪುನಹ ಮಧ್ಯಾಹ್ನ ವೀರಾಜಪೇಟೆಯಿಂದ ಗ. 1-30 ಹೊರಟು, ಅದೇ ಮಾರ್ಗವಾಗಿ ವಾಪಾಸು ಮೈಸೂರಿಗೆ ಸಾಯಂಕಾಲ 6 ಗಂಟೆಗೆ ತಲಪುವಂತೆ ಘನ ಸರ್ಕಾರದವರು ಪ್ರಯಾಣಿಕರ ಸೌಖ್ಯರ್ಕ್ಕಾಗಿ ಮಂಜೂರು ಮಾಡಿರುತ್ತಾರೆ. ಮಹಾಜನಗಳು ಪ್ರೋತ್ಸಾಹಿಸಬೇಕಾಗಿ ವಿನಯದಿಂದ ಕೋರುತ್ತೇನೆ.

ಕೆ. ಬಿ. ಬಿದ್ದಯ್ಯ,
ಪ್ರೊಪ್ರೈಟರ್,
ಕೆ. ಬಿ. ಮೋಟಾರ್ ಸರ್ವಿಸ್, ಮೈಸೂರು

THE WARDEN INSURANCE CO., Ltd.
(H. O. BOMBAY)

Managing Director:—S. H. THAKER Esq.

Business in Force	Rs.	4,50,00,000
New Business	,,	1,35,00,000
Assets	,,	75,00,000

Transacts:
LIFE, FIRE, ACCIDENT, etc.,

For particulars please apply to.

A. S. Aiyappa,
Branch secretary,
GANDHI NAGAR,
BANGALORE CITY.

ದಿ ವಾರ್ಡನ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,
ಗಾಂಧಿನಗರ್, ಬೆಂಗಳೂರು ಸಿಟಿ.

ಬಟ್ಟೆ ಬೇಕೆ?

ಮಹಾಶಯರೇ,

ನಮ್ಮಲ್ಲಿ ಸ್ಪೆಶಲಾಗಿ ಮದುವೆಗೆ ಇರುವಂಥಾ ನಾನಾ ತರಹದ ಒಳ್ಳೇ ಒಳ್ಳೇ ಫ್ಯಾನ್ಸೀ, ರಮಣೀಯವಾದ ಬೆಂಗಾಲ್ ಸಿಲ್ಕು, ಬನಾರಸ್, ಸೇಲಂ, ಕೊಯಮುತ್ತೂರು, ಮತ್ತು ಮಧುರಾ ಮುಂತಾದ ಅನೇಕ ಸ್ಥಳಗಳಿಂದ ತರಿಸಿದ ಜವಳಿಗಳು ದೊರೆಯುತ್ತೆ.

ಒಂದಾವರ್ತಿ ದಯವಿಟ್ಟು ಬಂದು ಪರೀಕ್ಷಿಸಿರಿ!

ಮದುವೆಗೋಸ್ಕರ ನಾನೂರು ರೂಪಾಯಿ ಮೇಲ್ಪಟ್ಟ ವ್ಯಾಪಾರಿಗಳಿಗೆ ನಮ್ಮ ಈ ಕೆಳಗಿನ ಅಡ್ರೆಸಿಗೆ ಆರ್ಡರ್ ಮಾಡಿದಲ್ಲಿ, ನಾವುಗಳು ತಮಗಳ ಬಂಗ್ಲೆಗಳಿಗಾಗಲೀ, ಅಥವಾ ಮನೆಗಳಿಗಾಗಲೀ ತಂದು ಕೊಡುವೆವು.

Valki Mohidin Saheb & Bro;
Silk & Cotton Merchants,
12-4 VIRAJAPET (S. COORG.)

WANTED

A good Coffee Estate with all its accessories and scope for expansion at a reasonable price so a party prepared to invest Rs 2 to 3 lakhs if proper returns are guaranteed. Furnish details and price.

X
C/o. "KODAGU"
3-2 *Mercara.*

ಬೇಕಾಗಿವೆ.

ಕೊಡಗಿನ ಜೇನು, ಏಲಕ್ಕಿ ಮತ್ತು ಇತರ ಸಾಮಾನುಗಳು ಬೇಕಾಗಿವೆ.

ಬರೆಯಿರಿ:-

RAJAKALA MANDIR,
Post Box 1301,
BOMBAY 1.

ಸರ್ವೋದಯ ದಿನ

(ಧೂಲಿಯಾ ಗಾಂಧೀ ತತ್ವಜ್ಞಾನ ಸಂಸ್ಥೆಯ ಆಶ್ರಯದಲ್ಲಿ ಜನವರಿ ೭ನೇ ತಾರೀಕು ಸೇರಿದ ಪ್ರಾರ್ಥನಾ ಸಭೆಯಲ್ಲಿ ಶ್ರೀ ವಿನೋಬಾ ಇವರು ಸರ್ವೋದಯ ದಿನದ ಕಾರ್ಯಕ್ರಮವನ್ನು ವಿವರಿಸಿದರು.)

ಗಾಂಧೀಜಿ ಮರೆಯಾದ ದಿನ ಅಂದರೆ ಶುಕ್ರವಾರ ದಿನ ಸಾಮೂಹಿಕ ಪ್ರಾರ್ಥನೆಗಳನ್ನು ನಡೆಸುವುದು ಹಲವು ಕಡೆ ವಾಡಿಕೆಯಾಗಿದೆ. ಪ್ರಾರ್ಥನೆಯು ಪ್ರತಿ ಮನೆಯಲ್ಲಿ ಪ್ರತಿ ಗುಂಪಿನಲ್ಲಿ ಜೀವನದಲ್ಲಿ ಮಾಡತಕ್ಕ ಒಂದು ಕಾರ್ಯ ಕ್ರಮವಾಗತಕ್ಕದ್ದು. ಆದರೆ ಸ್ವಯಂ ಇಟ್ಟುಕೊಂಡ ಈ ಕಾರ್ಯಕ್ರಮವನ್ನು ಕಾರ್ಯಬಾಹುಳ್ಯದ ಮೂಲಕ ಆಚರಿಸಲು ಕಠಿಣವೆನಿಸ ಹತ್ತಿದರೆ ವಾರಕ್ಕೊಂದು ಸಲವಾದರೂ ಅವರು ಒಂದೆಡೆ ಸಮ್ಮಿಲಿತರಾಗತಕ್ಕದ್ದು.

ಆದರೆ ಇಂದು ನಾನು ಬೇರೆ ವಿಷಯದ ಬಗ್ಗೆ ಮಾತಾಡಬಯಸುವೆ. ಜನವರಿ ಮೂವತ್ತನೆಯ ತಾರೀಕು ಗಾಂಧೀಜಿಯ ಕೊನೆಯ ಪ್ರಯಾಣ ದಿನವು. ಅಂದು ಅವರ ಮೊದಲನೆಯ ಪುಣ್ಯತಿಥಿ. ದೇಶದಲ್ಲಿಯ ಪ್ರತಿಯೊಂದು ಹಳ್ಳಿಯಲ್ಲಿ ಅಂದು ಒಂದಲ್ಲೊಂದು ಬಗೆಯ ಕಾರ್ಯಕ್ರಮವನ್ನು ಇಟ್ಟುಕೊಳ್ಳಲಾಗುವದು; ಹಾಗೆ ಮಾಡುವದು ನ್ಯಾಯವೇ ಆಗಿದೆ. ಪುಣ್ಯಪುರುಷರ ಸ್ಮರಣೆಯೆಂದರೆ ನಮ್ಮಂಥ ಪಾಮರರಿಗೆ ಒಂದು ಬಗೆಯ ಸ್ಫೂರ್ತಿಪ್ರದಾಯಕವೇ: ಇಂಥ ಮಹಾತ್ಮರ ಪುಣ್ಯಸ್ಮರಣೆ ಮಾಡುವುದು ಮತ್ತಷ್ಟು ಅವಶ್ಯವೇ. ಆದರೆ ಇದಕ್ಕೆ ಗಾಂಧಿ ದಿನವೆಂದು ನಾನು ಕರೆಯದೆ ಸರ್ವೋದಯ ದಿನವೆಂದು ಕರೆಯುವೆ. ಏಕೆಂದರೆ ಯಾವುದೊಂದು ವ್ಯಕ್ತಿಯನ್ನು ಲಕ್ಷ್ಯವಾಗಿಟ್ಟುಕೊಳ್ಳದೆ ಧ್ಯೇಯವನ್ನು ಮುಂದಿಟ್ಟುಕೊಂಡು ನಡೆಯುವದು ಹೆಚ್ಚು ಸಹಾಯಕವಾದುದು. ಕೆಲ ದಿನಗಳ ಹಿಂದೆ ಸಾಧೂ ಸಮಾಜದ ಒಂದು ಕಾರ್ಯಕ್ರಮಕ್ಕೆ ನಾನು ಹೋಗಿದ್ದೆ. ಅಲ್ಲಿ ನನ್ನ ಗೆಳೆಯರಿಗೆ ನಾನು ಹೇಳಿದೆ, 'ದಾದೂಲಿನ ಹೆಸರು ಮಾಯವಾಗಿ ಪರಮಾತ್ಮನ ಹೆಸರು ಸ್ಥಿರವಾಗಿ ಉಳಿಯಲಿ' ಎಂದು. ಇಲ್ಲಿಯೂ ಅದನ್ನೆ ನಾನು ಮತ್ತೆ ಹೇಳಬಯಸುವೆ. ಗಾಂಧೀಜಿ ಈ ಬಗ್ಗೆ ಬಹಳ ದಕ್ಷತೆ ವಹಿಸುತ್ತಿದ್ದರು. ಅವರ ಜನ್ಮದಿನಕ್ಕೆ ಗಾಂಧೀ ಜಯಂತಿ ಎಂದು ಕರೆಯಬೇಕೆಂದು ಜನ ಬಹಳ ಪ್ರಯತ್ನಪಟ್ಟರು. ಆದರೆ ಅದಕ್ಕೆ ಚರಖಾ ಜಯಂತಿ ಎಂದು ಕರೆಯಲು ಗಾಂಧೀಜಿ ಸಲಹೆ ಇತ್ತರು. ಏಕೆಂದರೆ ಹಾಗೆ ಕರೆಯುವದರಿಂದ ವ್ಯಕ್ತಿಯ ಸ್ಮರಣೆಗಿಂತ ಹೆಚ್ಚು ಮಹತ್ವದ್ದಾದ ಒಂದು ತತ್ವವನ್ನು ವ್ಯಾವಹಾರಿಕ ರೀತಿಯಲ್ಲಿ ಮನ್ನಿಸಿದಂತಾಗುವದೆಂದು ಅವರ ಅಭಿಪ್ರಾಯವಾಗಿತ್ತು. ಅವರು ದಕ್ಷಿಣ ಆಫ್ರಿಕೆಯಿಂದ ಬರೆದ ಪತ್ರಗಳಲ್ಲಿ ಒಂದನ್ನು ತೀರ ಇತ್ತೀಚೆ ನೋಡುವ ಪ್ರಸಂಗ ನನಗೆ ಬಂದಿತು. ಅದರಲ್ಲಿ ಅವರು 'ನನ್ನ ಹೆಸರು ಮಾಯವಾದ ಬಳಿಕವೇ ನನ್ನ ಧ್ಯೇಯವು ಪ್ರಗತಿ ಹೊಂದುವದು' ಎಂದು ಬರೆದಿದ್ದಾರೆ. 'ನನ್ನ ಹೆಸರು ಅಳಿದು ಹೋಗುವಂತೆ ಪರವನ್ನು ದಯಪಾಲಿಸು' ಎಂದು ಜ್ಞಾನೇಶ್ವರರು ಬೇಡಿಕೊಂಡಿರುವರು. ತನ್ನ ಹೆಸರು ದೆಸೆ ಮತ್ತು ದೇಹ ಕೂಡ ಮಾಯವಾಗಿ ಹೋಗಲಿ ಎಂದು ಅವರು ಬಯಸಿದರು. ಮನುಷ್ಯ ಸಾಯಲೇ ಬೇಕಾದ್ದರಿಂದ ಅವನ ತತ್ವಗಳು ಮಾತ್ರ ಉಳಿಯಲಿ. ವ್ಯಕ್ತಿಗಳ ಸ್ಮರಣೆಯನ್ನೆ ನಾವು ಮಾಡುತ್ತ ನಡೆದರೆ, ಗೊಂದಲದಲ್ಲಿ ಬೀಳುವ ಸಂಭವವಿದೆ. ಸಂಕುಚಿತ ಭಾವನೆ ನಮ್ಮಲ್ಲಿ ಬೆಳೆದು ಸಮಾಜವು ಛಿನ್ನವಿಚ್ಛಿನ್ನವಾಗಿ ಹೋಗಬಹುದು. ಈಗಾಗಲೇ ನಮ್ಮ ದೇಶದಲ್ಲಿ ಒಂದಕ್ಕಿಂತ ಹೆಚ್ಚು ಜೀವಂತ ಅವತಾರಗಳು ಇರುವುವು. ಅವರು ಜೀವಂತ ಇರುವ ಕಾಲದಿಂದಲೇ ಭಕ್ತರು ಅವರ ಪೂಜೆಯನ್ನು ಮಾಡುತ್ತ ಬಂದಿರುವರು. ಇದು ಯಾವ ರೀತಿಯಿಂದಲೂ ನ್ಯಾಯವಲ್ಲ.

ತಾವೊಬ್ಬ ಸಾಮಾನ್ಯ ಮಾನವ ಪ್ರಾಣಿಯೆಂದು ಗಾಂಧೀಜಿ ತಿಳಿದುಕೊಂಡಿದ್ದರು. ಅವರೂ ಒಬ್ಬ ಮನುಷ್ಯರೆಂದೇ ನಾವು ಭಾವಿಸಿಕೊಳ್ಳುವಾ, ಅದರಲ್ಲಿ ಗಾಂಭೀರ್ಯವಿದೆ, ಗೌರವವಿದೆ. ಆ ದಿನ ಪವಿತ್ರ ನಾಮಸ್ಮರಣೆ ಮಾಡುವದೇ ಆದರೆ, ಆ ಘಾತಕನ ಗುಂಡು ಗಾಂಧೀಜಿಯವರ ಎದೆಯಲ್ಲಿ ನಡುವಾಗ ಅವರ ಬಾಯಿಂದ ಯದೃಚ್ಛೆಯಿಂದ ಮತ್ತು ಭಕ್ತಿಪೂರ್ವಕವಾಗಿ ಯಾವ ಪವಿತ್ರ ನಾಮವು ಹೊರಹೊಮ್ಮಿತ್ತೋ ಅದೇ ನಾಮವನ್ನು ನಾವೇಕೆ ಆರಿಸಿಕೊಳ್ಳಬಾರದು? ಆದುದರಿಂದ ಅವರ ವರ್ಷಾಂತ್ಯ ದಿವಸಕ್ಕೆ ನಾನು ಸರ್ವೋದಯ ದಿನವೆಂದು ಕರೆಯುವೆ. ಕಾರ್ಯಕಾರಿಯಾದ ಧ್ಯಾನದಲ್ಲಿಯೆ ನಾವು ಆ ದಿನವನ್ನು ಕಳೆಯುವದರಿಂದ ಹೆಚ್ಚು ಕಲ್ಯಾಣವಾಗಬಲ್ಲುದು. ನಮ್ಮ ಜೀವನದಲ್ಲಿ ನಿಷ್ಕ್ರಿಯ ಧ್ಯಾನಾಚರಣೆ ಬೇಕಾದಷ್ಟಿದೆ. ಕಾರ್ಯ ಮೂಲಕವೇ ಪೂಜಿಸಿರಿ, ಎಂಬುದು ಎಲ್ಲ ಧರ್ಮಗಳ ಸಂದೇಶ. ಆದರೆ ನಾವದನ್ನು ಮರೆಯುತ್ತಿದ್ದೇವೆ.

ಗಾಂಧೀಜಿ ಸಾಕ್ಷಾತ್ತಾಗಿ ಸಂದೇಶವಾಗಿದ್ದರು. ನಮ್ಮ ಜೀವನದಲ್ಲಿ ಅದನ್ನು ಅರಗಿಸಿಕೊಳ್ಳಬೇಕು. ಆದುದರಿಂದ ಆ ದಿನ ಎಲ್ಲರೂ ಸಾರ್ವಜನಿಕವಾಗಿ ಭಂಗಿ ಮತ್ತು 'ಸಫಾಯಿ' ಕೆಲಸವನ್ನು ಮಾಡಬೇಕೆಂದು ನಾನು ಸೂಚಿಸುತ್ತೇನೆ. ನಾವೆಲ್ಲರೂ ಕಸಗುಡಿಸುವವರಾಗುವಾ ಮತ್ತು ದೇಶದಲ್ಲಿಯ ಹೊಲಸು ಮತ್ತು ಕೊಳೆಯನ್ನು ಹೋಗಲಾಡಿಸುವಾ. ಕಸಗುಡಿಸುವವರು ಅಸ್ಪೃಶ್ಯರು ಎಂದು ಭಾವಿಸಿ ನಾವು ಭಯಂಕರ ಪಾಪ ಮಾಡಿದ್ದೇವೆ ಮತ್ತು ಅದರಿಂದ ಯಾವ ನಾಗರಿಕ ರಾಷ್ಟ್ರದಲ್ಲಿಯೂ ಕಾಣಸಿಗಲಾರದಷ್ಟು ನಮ್ಮ ದೇಶದಲ್ಲಿ ಕೊಳೆಯನ್ನು ತುಂಬಿದ್ದೇವೆ. ಅದಕ್ಕಾಗಿ ನಾವು ಪ್ರಾಯಶ್ಚಿತ್ತವನ್ನು ತೆಗೆದುಕೊಳ್ಳಬೇಕಾಗಿದೆ. ಎಲ್ಲ ಹಿರಿಕಿರಿಯರು ವಿನಮ್ರರಾಗಿ, ಜಗತ್ತಿನಲ್ಲಿ 'ಪಾಮರರೊಳು ಪಾಮರ ನಾನೆಲೈ' ಎಂಬ ಭಾವನೆಯಿಂದ ನಾವೀ ಕಾರ್ಯವನ್ನು ಮಾಡತಕ್ಕದ್ದು.

ಅದೇ ರೀತಿಯಾಗಿ ನಮ್ಮ ದೇಶದಲ್ಲಿ ಉತ್ಪಾದನೆಯನ್ನು ಹೆಚ್ಚಿಸುವದು ಅತ್ಯವಶ್ಯವಾಗಿದೆ. ಆದುದರಿಂದ ಪ್ರತಿಯೊಬ್ಬನು ನೂಲು ತೆಗೆಯಬೇಕು ಮತ್ತು ನಮ್ಮೆಲ್ಲರ ಹೃದಯಗಳು ಪ್ರೇಮದಿಂದ ಬದ್ಧವಾಗಿ ಕೂಡಿಕೊಳ್ಳಲಿ. ನೂಲುವದು ಬದ್ಧವಾಗಿ ಕೂಡಿಕೊಳ್ಳಲಿ. ನೂಲುವದು ಬೇನೆಯಿಂದ ಬಳಲುವವರ ಹೊರತು ಪ್ರತಿಯೊಬ್ಬ ಹಿರಿಯಕಿರಿಯರು ಮಾಡತಕ್ಕ ಕರ್ತವ್ಯವು. ಆದುದರಿಂದ ಅದನ್ನು ಉತ್ಪಾದನೆಯ ಉದ್ಯೋಗವಲ್ಲಿ ಪರಿಗಣಿಸಲಿಕ್ಕೆ ಬೇಕು.

ಮೇಲಿನ ಎರಡು ಕ್ರಿಯಾತ್ಮಕವಾದ ಕಾರ್ಯಕ್ರಮಗಳು. ಇವಲ್ಲದೆ ಸಾಮೂಹಿಕ ಪ್ರಾರ್ಥನೆಗಳನ್ನು ನಡೆಸಬೇಕು, ಅವುಗಳಲ್ಲಿ ನಾವೆಲ್ಲರೂ ಸೇರತಕ್ಕದ್ದು ನಮ್ಮ ಪರಮಾತ್ಮನ ಸ್ಮರಣೆ ಮಾಡಿ ನಮ್ಮ ಅಂತಃಕರಣಗಳನ್ನು ವಿಶುದ್ಧಗೊಳಿಸಿ ನಮ್ಮ ಹೃದಯಗಳನ್ನು ಒಂದುಗೂಡಿಸಿಕೊಳ್ಳಬೇಕು.

ಈ ಕಾರ್ಯಕ್ರಮದಲ್ಲಿ ಸರ್ವೋದಯ ಧ್ಯೇಯದ ನಿದಿಧ್ಯಾಸವನ್ನು ಕೂಡಿಸಬೇಕು. ನಿದಿಧ್ಯಾಸದ ಮಾರ್ಗಗಳು ಒಂದಕ್ಕಿಂತ ಹೆಚ್ಚು ಇವೆ. ಸರ್ವೋದಯ ಶಬ್ದವು ಅತ್ಯಂತ ಅರ್ಥಪೂರ್ಣವಾಗಿದ್ದು ಅದರಲ್ಲಿ ಬೇಕಾದಷ್ಟು ಆಳವಾಗಿ ವಿಹರಿಸಬಲ್ಲೆವು. ಉದಾಹರಣಾರ್ಥವಾಗಿ ಯಾವದೊಂದೇ ವರ್ಗದ ಜನರ ಉದ್ಧಾರಕ್ಕಾಗಿ ಪ್ರಯತ್ನಿಸುವದು ನಮ್ಮ ಧ್ಯೇಯವಲ್ಲ ಎಂಬುದು ನಮ್ಮ ಸ್ಮರಣೆಯಲ್ಲಿ ಇರಬಹುದು. ಸರ್ವ ಮಾನವ ಪ್ರಪಂಚದ ಹಿತಕ್ಕಾಗಿಯೆ ನಾವು ದುಡಿಯುತ್ತೇವೆ. ತತ್ವತಃ ಸತ್ಯವಾಗಿರುವ ಹಿತಸಂಬಂಧಗಳಲ್ಲಿ ಯಾವದೇ ಬಗೆಯ ಕಿತ್ತಾಟವಿಲ್ಲ ಎಂಬುದನ್ನೂ ನಾವು ನೆನಪಿನಲ್ಲಿಡತಕ್ಕದ್ದು. ಆಯಾ ವ್ಯಕ್ತಿಗಳ ಮಾನಸಿಕ ಬೆಳವಣಿಗೆಗೆ ಅನುಸಾರವಾಗಿ ಸುಖದ ಕಲ್ಪನೆಯಲ್ಲಿ ಮಾತ್ರ ಭಿನ್ನಾಭಿಪ್ರಾಯಗಳಿರುವವು. ಚಿಂತನೆಯ ಮೂರನೆಯ ಮಾರ್ಗವೆಂದರೆ ಜೀವನದ ಏಕತೆಯನ್ನು ತಿಳಿದುಕೊಳ್ಳುವದು ಮತ್ತು ಆದುದರಿಂದಲೆ ಸ್ವಾರ್ಥವನ್ನು ಮರೆತು ಎರಡನೆಯವರ ಸೇವೆಯಲ್ಲಿಯೇ ನಿರತರಾಗುವದು ಕರ್ತವ್ಯವಾಗಿದೆ. ಸತ್ಯಪ್ರತಿಜ್ಞರಾಗುವದು ಮತ್ತು ಎರಡನೆಯವರ ಮೇಲೆ ಆಕ್ರಮಣ ಮಾಡದಿರುವುದು ಇದಕ್ಕೆ ಮುಖ್ಯ ಸಾಧನಗಳೆಂಬುದು ಇದರಿಂದ ಹೊರಡತಕ್ಕ ದುರ್ನಿವಾರ್ಯವಾದ ನಿಷ್ಪತ್ತಿ. ಸಂಯಮವನ್ನೂ ಅನುಷ್ಠಾನದಲ್ಲಿ ಇಳಿಸಬೇಕು. ಈ ರೀತಿಯಾಗಿ ಈ ದಿನವು ಸರ್ವೋದಯ ಚಿಂತನೆಯಲ್ಲಿಯೇ ಕಳೆಯಲಿ.

ಪರಮಾತ್ಮನು ಕರುಣಾಪೂರ್ಣನು, ಯುಗಯುಗಗಳಿಂದ ಅವನು ಕಾಲಕಾಲಕ್ಕೆ ನಮ್ಮ ದೇಶಕ್ಕೆ ಸಾಧುಸಂತರನ್ನು ಕಳಿಸುತ್ತಿರುವನು. ಇಂದಿನ ನಿರಾಶಾಮಯ ಸ್ಥಿತಿಯಲ್ಲಿಯೂ ಅವನು ನಮ್ಮಲ್ಲಿ ಅನೇಕ ಸತ್ಪುರುಷರ ಮಳೆಗರೆದಿರುವನೆಂದು ಹೇಳಬಹುದು. ನಮ್ಮ ಹೃದಯವನ್ನು ತೆರೆದಿದ್ದಾದರೆ ಅವರ ಚೈತನ್ಯವು ಒಳಹೊಕ್ಕು ನಮ್ಮ ಜೀವನವನ್ನೇ ಮಾರ್ಪಡಿಸುವದು. ಪರಮಾತ್ಮನ ಅನುಗ್ರಹವಿದ್ದರೆ ಯಾವುದು ತಾನೇ ಅಶಕ್ಯ?

ಡಿ. ಎಂ.

ಎಂಪೈರ್ ಆಫ್ ಇಂಡಿಯಾ
ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.
ಸ್ಥಾಪನೆ,—1897

48ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು.	ಒಟ್ಟು ಆದಾಯ	1,07,09,000	ರೂಪಾ
	ಚಾಲ್ತಿಯಿರುವ ವಿಮೆ	17,74,52,000	,,
	ಆಸ್ತಿ	6,67,60,000	,,
ಕಂಪೆನಿಯ ಆದಿಯಲ್ಲಿ ಕೊಟ್ಟ ಕ್ಲೈಮುಗಳು	....	8,83,62,000	,,

ಬ್ರಾಂಚ್ ಆಫೀಸು. ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡ ರಸ್ತೆ, ಬೆಂಗಳೂರು. | ಏಜೆನ್ಸಿ ಅರ್ಜಿಗಳನ್ನು ಸ್ವಾಗತಿಸಿದೆ. | ಪ್ರಧಾನ ಕಛೇರಿ: ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ವಸೂಲಾದ ಶೇರು ಮೊಬಲಗು ರೂ. 1,33,740, ಜಮಾ ಬಂದ ಠೇವಣಾತಿ 3,30,268-1-8, ವಸೂಲಾದ ಕ್ಷೇಮನಿಧಿ 2,36,454-0-3, ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು 3,03,222-13-2.

ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೆ ಹೆಚ್ಚಾಗಿ ಸಾಲ ಕೊಡುವುದಲ್ಲದೆ, ಡಿಪಾಜಿಟ್ದಾರರಿಗೆ ಅವರ ಡಿಪಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನಿರಖು ಠೇವಣಾತಿಯನ್ನು ತಾ. 1-12-46ರಿಂದ ತೊಡಗಿಸಿಕೊಳ್ಳಲಾಗುವುದು. ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ಸೇಕಡ 0-8-0 ವರೆಗೆ ಬಡ್ಡಿ ಕೊಡಲಾಗುತ್ತೆ. ಚಿನ್ನ, ಬೆಳ್ಳಿ ಆಭರಣಗಳ ಮೇಲೆ ಸಾಲ ಕೊಡಲಾಗುವುದು. ವರ್ಷಕ್ಕೊಮ್ಮೆ ರಿಜಿಸ್ಟ್ರಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ. 1-12-46.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ. — ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಖಜಾಂಚಿ.

ದಿ ಟ್ರಾಪಿಕಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮುಖ್ಯ ಕಚೇರಿ:– ಹೊಸ ಡೆಲ್ಲಿ.

ಅದ್ವಿತೀಯ ಜನನಾಯಕರಾಗಿದ್ದ ಮೋತಿಲಾಲ್ ನೆಹರೂ, ನೇತಾಜಿ ಇಂಥವರಿಂದ ಸ್ಥಾಪಿಸಲ್ಪಟ್ಟ ವಿಮಾ ಕಂಪೆನಿಗಳಲ್ಲೆಲ್ಲಾ ಅತ್ಯಂತ ಪ್ರಗತಿಶೀಲ ಎನಿಸಿದ ಒಂದೇ ರಾಷ್ಟ್ರೀಯ ವಿಮಾ ಕಂಪೆನಿ "ಟ್ರಾಪಿಕಲ್." ದಿನ ದಿನಕ್ಕೆ ಬೆಳೆದು ಹಿಂದೂಸ್ಥಾನದ ಮಹಾ ಕಂಪೆನಿಗಳಲ್ಲೊಂದಾಗಿದೆ

ಕೊಡಗಿನ ಎಲ್ಲಾ ಕಡೆಗಳಿಗೂ ವಿಶೇಷ ಏಜಂಟರುಗಳೂ ಏಜಂಟರೂ ಬೇಕಾಗಿದ್ದಾರೆ. ವಿವರಗಳಿಗೆ ಈ ಪತ್ತೆಗೆ ಬರೆಯಿರಿ.

THE TROPICAL INSURANCE Co. Ltd.

ಏಜನ್ಸಿಗಳ ಸುಪರಿಂಟೆಂಡೆಂಟರು, ಕೊಡಗು, ಮಡಿಕೇರಿ

ಎಂ. ಎ. ಬೆಳ್ಯಪ್ಪ, ಬ್ರಾಂಚ್ ಸೆಕ್ರೆಟರಿ, ಹಂಪನ ಕಟ್ಟೆ, ಮಂಗಳೂರು

CRESCENT

FOR PROTECTION AND SERVICE.

For life assurance of all kinds consult

The CRESCENT Insurance Co., Ltd.

H. O. BOMBAY] [*Established 1919*

BRANCHES ALL OVER INDIA.

South Indian Branches:—

MADRAS, BANGALORE & MANGALORE.

For particulars write to P. C. Karmbaya, *Branch Manager*

22—B MAHATHMA GANDHI ROAD

BANGALORE CANT

ಸುರಕ್ಷಿತವಾದ ಜೀವವಿಮೆ ಪಡೆಯಲು

ಕ್ರೆಸೆಂಟ್

ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.

ಹೆ. ಆ: ಬೊಂಬಾಯಿ] [ಸ್ಥಾಪನೆ: 1919.

ಬೆಂಗಳೂರು ಬ್ರಾಂಚ್ ಆಫೀಸು:—

22—ಬಿ ಮಹಾತ್ಮಗಾಂಧಿ ರೋಡು, ಬೆಂಗಳೂರು.

ವಿಮೆ ಮಾಡಲು ಇಲ್ಲವೇ ಪ್ರತಿನಿಧಿಸಲು

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.

ಇವರ ಸಲಹೆಗಿಂತ ಉತ್ತಮ ಮಾರ್ಗವಿಲ್ಲ.

ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದೂಸ್ಥಾನದ ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು

ದಿ ಬೊಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

30 ಪಾಂಟ್ ರೋಡ್, ಪೋ ಬಾ. ನಂ. 337, ಮದ್ರಾಸು 2.

ಬೊಂಬೆ ಲೈಫ್ ಬಿಲ್ಡಿಂಗ್, ಪೋ ಬಾ ನಂ 1, ಉಡುಪಿ.

(ಟೆಲಿಫೋನ್ ನಂ 8398)

ಇತರ ಆಫೀಸುಗಳು:—ಬೆಂಗಳೂರು, ತಿರುವನಂತಪುರಂ, ಕಲ್ಲಿಕೋಟೆ, ಮಂಗಳೂರು, ಮಧುರೆ, ಮುಂಬಯಿ, ಬೊಂಬಾಯಿ.

Edited, Printed and Publishd by P. I. Bellıappa at 'Kodagu' Press, Mercara for 'Kodagu' Ltd

ನೇತಾಜಿಯವರ ನೆನಪು.

ನೇತಾಜಿ ಸುಭಾಸಚಂದ್ರ ಬೋಸರು ಭಾರತೀಯರನ್ನಗಲಿ ಹೋಗಿ ಇಂದಿಗೆ ಏಳೆಂಟು ವರ್ಷಗಳು ಸಂದಿ ಹೋದವು. ಸುಭಾಸಬಾಬುಗಳು ನಮ್ಮಿಂದ ದೂರವಾಗಿ ಹೋದರೂ ಅವರ ನೆನಹು ಮಾತ್ರ ಪ್ರತಿಯೋರ್ವ ಭಾರತ ಪುತ್ರನ ಅಂತರಾಳದಲ್ಲಿ ಹುದುಗಿಕೊಂಡಿದೆ. ಅನೇಕ ವೃತ್ತಪತ್ರಿಕೆಗಳು ಮೇಲಿಂದ ಮೇಲೆ ಅವರ ನೆನಪು ಮಾಡಿಕೊಂಡು ತಮ್ಮಲ್ಲಿರುವ ಆದರ ಭಾವವನ್ನು ಹೊರಗೆಡಹುತ್ತಿದ್ದಾವೆ. ಅವರು ಅಮರ ಜೀವಿಗಳಾಗಿದ್ದರೆ ಮಾತ್ರ ಸರ್ವೆಲ್ಲರ ಸುದೈವವೆಂದೇ ಹೇಳಬಹುದು. ಸ್ವಾತಂತ್ರ್ಯವೀರ ಸುಭಾಸಚಂದ್ರರ ೫೬ನೇ ಹುಟ್ಟುಹಬ್ಬವು ಭಾರತದಲ್ಲೆಲ್ಲ ತಾಣಗಳಲ್ಲಿ ಒಳ್ಳೇ ವಿಜೃಂಭಣೆಯಿಂದ ಜರುಗಿತು. ಇಂತಹ ಅದ್ವಿತೀಯ ಹಿಂದ್‌ಮಾತೆಯ ಪುತ್ರನ ಹುಟ್ಟುಹಬ್ಬವನ್ನಾಚರಿಸಿ ಅವರಲ್ಲಿರತಕ್ಕ ಸದ್ಗುಣಗಳನ್ನೇ ಪಾನಮಾಡಿ ಅವರ ಬಗ್ಗೆ ಕೃತಜ್ಞತೆಯನ್ನು ವ್ಯಕ್ತಪಡಿಸುವದು ನಮ್ಮಗಳ ಪವಿತ್ರ ಕರ್ತವ್ಯವಾಗಿದೆ.

ಸುಭಾಸ ಬಾಬುಗಳು ಕಟಕ ಪಟ್ಟಣದಲ್ಲಿ ೧೮೯೭ ಜನವರಿ ೨೩ನೇ ತಾರೀಕಿನ ದಿನ ಜನ್ಮವೆತ್ತಿದರು. ಅವರ ತಂದೆ ಜಾನಕಿದಾಸ, ತಾಯಿ ಪ್ರಭಾವತೀದೇವಿ. ಈ ದಂಪತಿಗಳ ಹೊಟ್ಟೆಯಿಂದ ಜನ್ಮತಳೆದ ಸುಭಾಸರ ಕೀರ್ತಿಯು ಹಿಮಾಲಯದಿಂದ ಕನ್ಯಾಕುಮಾರಿಯ ವರೆಗೆ ಈಗ ಪಸರಿಸಿದೆ. ಸುಭಾಸಚಂದ್ರರು ೧೯೧೩ರಲ್ಲಿ ತಮ್ಮ ಮ್ಯಾಟ್ರಿಕ್ ಅಭ್ಯಾಸ ಮುಗಿಸಿ ಬಂಗಾಲ ವಿಶ್ವವಿದ್ಯಾನಿಲಯಕ್ಕೇ ೨ನೇ ನಂಬರು ಬಂದು ಎಲ್ಲರ ಪ್ರೀತಿಗೆ ಪಾತ್ರರಾದರು. ಹೈಸ್ಕೂಲಿನಲ್ಲಿರುವಾಗಲೇ ಬಂಗಾಲಿ ತರುಣರ ಮೇಲೆ ದೇಶಭಕ್ತಿಯ ತೆರೆಗಳು ಒಂದೊಂದೆಯಾಗಿ ಹಾಯತೊಡಗಿದವು. ಆ ಪರಿಣಾಮವು ಬಲವಾಗಿ ದೇಶೋದ್ಧಾರದ ಕಾರ್ಯದಲ್ಲಿ ತಲ್ಲೀನರಾದವರು. ಕಾಲೇಜ ವಿದ್ಯಾರ್ಥಿಯಾಗಿಯೂ ತಮ್ಮ ವಿದ್ಯಾರ್ಥಿ ಜೀವನವನ್ನು ದೇಶಸೇವೆಯೊಂದಿಗೆ ಮುಂದುವರಿಸಿ ೧೯೧೫ರಲ್ಲಿ ಐ. ಸಿ. ಎಸ್. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಕಾಲೇಜಿನಲ್ಲಿ ಕಲಿಯುವಾಗ ಕಾಲೇಜ ಪ್ರಿನ್ಸಿಪಾಲನು ಯುರೋಪಿಯನ್ನನಿದ್ದುದರಿಂದ ಹಿಂದೀಯರನ್ನು ಹೀಗಳೆಯುವದನ್ನು ಕಂಡು ಅವರ ಮೇಲೆ ಸಿಟ್ಟಿನ ಕೆಂಡವನ್ನು ಕಾರಿ ಹೊರಬೀಳಬೇಕಾಯಿತು. ಆವರೂ ಅವರು ಅಭ್ಯಾಸವನ್ನು ಅಲ್ಲಿಗೆ ನಿಲ್ಲಿಸದೆ ತಾಯಿ ತಂದೆಗಳ ಒಲುಮೆಗೊಳಗಾಗಿ 'ವಿದ್ಯಾರ್ಥಿ ಜೀವನವನ್ನು ಭಾರತ ಮಾತೆಗೆ ಅರ್ಪಿಸುವೆ; ಸ್ವಾತಂತ್ರ್ಯ ಪ್ರಾಪ್ತಿಗಾಗಿ ನನ್ನ ದೇಹ ಮತ್ತು ಪ್ರಾಣವನ್ನೇ ಮುಡಿಪಾಗಿಟ್ಟಿದ್ದೇನೆ. ಜನತೆಯು ಹೊಗಳಿಕೆಗೆ ಲಕ್ಷ್ಯಗೊಡುವುದಿಲ್ಲ. ನನ್ನ ಮಾರ್ಗ ಹಿಡಿದೇ ನಾನು ಸಾಗುವೆ' ಎಂದು ತಮ್ಮ ಗೆಳೆಯರ ಗುಂಪಿನಲ್ಲಿ ಅಷ್ಟೊಂದು ಸ್ಫೂರ್ತಿ ತುಂಬಿದವರಾಗಿ ಅನ್ನುತ್ತಿದ್ದರು.

ಮಹಾತ್ಮಾಗಾಂಧಿಯವರಿಗೂ ಮತ್ತು ಸುಭಾಸರಿಗೂ ಮೊದಲ ಸಲ ಭೆಟ್ಟಿಯಾದದ್ದೆಂದರೆ ೧೯೨೧ರಲ್ಲಿ. ಬಂಗಾಲದಲ್ಲಿ ಭಯಂಕರ ಚಳುವಳಿ ಎದ್ದಾಗ, ಇವರು ಅದರಲ್ಲಿ ಮುಖ್ಯ ಭಾಗವಹಿಸಿ, ಪ್ರಿನ್ಸ್ ಆಫ್ ವೇಲ್ಸರು ಬರುವವರಿದ್ದಾರೆಂದು ತಿಳಿದು, ಅವರ ಮೇಲೆ ಬಹಿಷ್ಕಾರ ಹಾಕುವ ಯೋಜನೆಯನ್ನು ಮಾಡಿಕೊಂಡು, ಒಂದು ಸ್ವಯಂಸೇವಕ ಸಂಘವನ್ನು ಸ್ಥಾಪಿಸಿ ಅದರ ಮುಖ್ಯ ನಾಯಕರಾದರು. ಕಾಯಿದೆಗೆ ವಿರೋಧ ಬಗೆದುದಕ್ಕಾಗಿ ಆಗ ಅವರು ಜೇಲು ಕಾಣಬೇಕಾಯಿತು. ಹೀಗೆಯೇ ಬಾಬುಗಳು ಐದಾರು ಸಾರೆ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಜೈಲುವಾಸವನ್ನು ಅನುಭವಿಸಿದರು.

ತಮ್ಮ ಜೀವನವನ್ನೇ ಸ್ವಾತಂತ್ರ್ಯ ಸಾಧನೆಗೆ ಮುಡಿಪಾಗಿಟ್ಟು ಅವರು ಎಲ್ಲದರಲ್ಲಿಯೂ ತಮ್ಮ ವ್ಯಕ್ತಿತ್ವ ತೋರಿಸಿ ಪ್ರಭಾವಶಾಲಿಗಳಾದ್ದರಿಂದ ೧೯೩೭ರಲ್ಲಿ ಹರಿಪುರದಲ್ಲಿ ಕೂಡಿದ ಅ. ಭಾ. ಕಾಂಗ್ರೆಸ್ ಅಧಿವೇಶನದಲ್ಲಿ ಇವರನ್ನೂ, ಜವಾಹರಲಾಲರನ್ನೂ ಗೌರವ ಕಾರ್ಯದರ್ಶಿಗಳನ್ನಾಗಿ ಮಾಡಿದರು. ಅಲ್ಲದೆ ೧೯೩೮ರಲ್ಲಿ ಪುಣೆಯಲ್ಲಿ ಸೇರಿದ ಪ್ರಾಂತಿಕ ಅಧಿವೇಶನದ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಹೀಗೆ ಬಾಬುಗಳು ತಮ್ಮ ಪ್ರಭಾವದಿಂದ ಮೇಲಿನ ಹುದ್ದೆಗಳನ್ನೇ ಒಂದರಂತೆಯಾಗಿ ಏರುತ್ತಿದ್ದರು.

ದೀನದರಿದ್ರರ ಒಡಲುಕಿಚ್ಚನ್ನು ನೋಡಿ ಸಹಿಸಲಾರದೆ ಹಿಂಸೆಯಿಂದಲೇ ಸ್ವಾತಂತ್ರ್ಯ ಪ್ರಾಪ್ತಿ ಎಂಬುದನ್ನು ಮನಗಂಡು ಕೆಲವು ಕಾಲದ ನಂತರ 'ಫಾರ್ವರ್ಡ್ ಬ್ಲಾಕ್' ಎಂಬ ಪಕ್ಷವನ್ನು ಸ್ಥಾಪಿಸಿ ಭಾರತದ್ಯಂತ ಪ್ರಚಾರಕಾರ್ಯ ಕೈಕೊಂಡರು. ಯಾರ ಮಾತನ್ನೂ ಲೆಕ್ಕಿಸದೆ ಭಾರತದಿಂದ ಮಾಯವಾಗಿ ಸಿಂಗಾಪುರಕ್ಕೆ ಹೋಗಿ ತಮ್ಮ ಹುರುಪನ್ನು ಭಾರತೀಯರಲ್ಲಿ ಹುಟ್ಟಿಸಿ ಬಹು ದೊಡ್ಡ ಸೇನೆಕಟ್ಟಿ ಬ್ರಿಟಿಷರ ವಿರುದ್ಧ ಹೋರಾಡಿ ಸ್ವಾತಂತ್ರ್ಯವೇ ನಮಗೆ ಜನ್ಮಸಿದ್ಧ ಹಕ್ಕು ಎಂದು ಲೋಕಮಾನ್ಯರು ಉಸುರಿದಂತೆ ಬಾಬುಗಳಾದರೂ ಪ್ರತಿಜ್ಞೆಮಾಡಿ ಆಜಾದ ಹಿಂದ್ ಸೇನೆಯ ಮುಖ್ಯ ನಾಯಕರಾಗಿ ಹೋರಾಡಿದರು. ಒಮ್ಮೆ ವಿಮಾನಾರೂಢರಾದಾಗ ಬಿದ್ದು ಪ್ರಾಣತ್ಯಜಿಸಿದರೆಂದು ಕೆಲವರೂ, ಇನ್ನೂ ಅಮರರಾಗಿಯೇ ಪರದೇಶದಲ್ಲಿ ಇದ್ದಾರೆಂದು ಕೆಲವರೂ ತರ್ಕವಿತರ್ಕಗಳ ಬಿರುಗಾಳಿಗೆ ಸಿಕ್ಕಿ ಅವರ ಬರುವಿಕೆಯ ಮಾರ್ಗವನ್ನೇ ಕಾಣುತ್ತಿದ್ದಾರೆ. ಇಂತಹ ವಿದ್ವನ್ಮಣಿಗಳಾದ, 'ಸ್ವಾತಂತ್ರ್ಯ ಸ್ವಾತಂತ್ರ್ಯ'ವೆಂದು ಉಸುರಿದ ಸುಭಾಸರು ಆ ಸ್ವಾತಂತ್ರ್ಯ ಸವಿಯನ್ನು ಸವಿಯಲಿಲ್ಲವಲ್ಲಾ ಎಂಬ ಮನಸ್ಸಿನ ಹಳಹಳಿ ದುಃಖದ ರೂಪಗೊಂಡು ಎಲ್ಲ ಭಾರತೀಯರನ್ನೂ, ಪರ್ವತ ಪ್ರಾಯವಾಗಿ ಮೇಲೇಳುವ ಶೋಕದ ಬಂಡೆಗಲ್ಲುಗಳಿಗೆ ಅಪ್ಪಳಿಸುತ್ತಿದೆ. ಸ್ವಾತಂತ್ರ್ಯ ವೀರಪುತ್ರನನ್ನು ಕಳೆದುಕೊಂಡುದಕ್ಕಾಗಿ ಭಾರತಾಂಬೆ ಕಳಾಹೀನಳಾಗಿ ಚಿಂತಾತುರಳಾಗಿದ್ದಾಳೆ. ಕಾರಣ ಆ ಚಿಂತೆಯ ಚಿತೆಯನ್ನು ತಮ್ಮ ಪ್ರಭಾವದಿಂದ ನಂದಿಸಲು ನೇತಾಜಿಯವರ ಆಗಮನಕ್ಕೆ ಮೂವತ್ತುಮೂರು ಕೋಟಿ ಭಾರತೀಯರು ಸ್ವಾಗತ ಕೋರುತ್ತೇವೆ.

ಸಂದೇಶ.

Reg. No. M. 1550.
'KODAGU' MERCARA. (Coorg).

ಕೊಡಗು

ಸಂಪಾದಕರು— ಹಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 4-8-0.

ಸಂಪುಟ ೨೭ | ತಾರೀಕು ೬-೨-೧೯೪೮ನೇ ಶುಕ್ರವಾರ | ಸಂಚಿಕೆ ೩೫

ಕಂಬನಿ ತಂದ ಆ ಶುಕ್ರವಾರ.

ಲೇ:— ಶ್ರೀ ಜಿ. ನಾರಾಯಣ.

ಗುರುವಾರ.

೧೯೪೮ನೇ ಜನವರಿ ೨೯ನೇ ತಾರೀಕಿನ ದಿನವೆಲ್ಲಾ ಮಹಾತ್ಮರಿಗೆ ಬಿಡುವಿಲ್ಲದಷ್ಟು ಕೆಲಸ. ಹಗಲೆಲ್ಲಾ ಕೆಲಸ ಮಾಡಿದ ಗಾಂಧೀಜಿಗೆ ಸಂಜೆಯ ಹೊತ್ತಿಗೆ ತುಂಬಾ ದಣಿವಾಯಿತು. 'ನನ್ನ ತಲೆ ಸುತ್ತುತ್ತಿದೆ. ಅದರೂ ನಾನೂ ಇದನ್ನು ಮುಗಿಸಲೇಬೇಕು' ಎಂದು ಅವರು ತಯಾರಿಸಿದ್ದ ಕಾಂಗ್ರೆಸ್ಸಿನ ಅಂಗರಚನೆಯ ಕರಡು ಪ್ರತಿಯನ್ನು ಆಭಾಗಾಂಧಿಗೆ ತೋರಿಸುತ್ತಾ 'ನಾನು ರಾತ್ರಿ ಬಹಳ ಹೊತ್ತಿನ ವರೆಗೆ ಎಚ್ಚರಬೇಕಾಗ ಬಹುದೇ? ಏನೋ' ಎಂದರು.

ಆಗ ಮಾಯ ರಾತ್ರಿ ಒಂಭತ್ತುವರೆ ಗಂಟೆಗೆ ಇಬ್ಬರು ಹುಡುಗಿಯರ ಭುಜದ ಮೇಲೆ ಕೈಯಿಟ್ಟುಕೊಂಡು ತಮ್ಮ ದಿನಗಟ್ಟಲೆಯ ವ್ಯಾಯಾಮವನ್ನು ಮುಗಿಸಿದರು ಇದೇ ಅವರ ಪಾಲಿಗೆ ಕಡೇ ವ್ಯಾಯಾಮವಾಯಿತು.

ರಾತ್ರಿ ತಮ್ಮ ಕೈಕಾಲುಗಳನ್ನು ಎಂದಿನಂತೆ ತಿಕ್ಕಿಸಿಕೊಳ್ಳುವಾಗ, ಗಾಂಧೀಜಿ ಆಶ್ರಮದಿಂದ ಬಂದಿದ್ದ ಮಹಿಳಾ ನಿವಾಸಿನಿಯೊಬ್ಬಳ ಆರೋಗ್ಯ ಕೆಟ್ಟಿರುವುದನ್ನು ತಿಳಿಸುತ್ತಾ ಆಕೆಯು ಹೃದಯದಲ್ಲಿ ರಾಮನಾಮವ ನೆಲೆಸಿದ್ದರೆ ಖಾಯಿಲೆಯೇ ಬರುತ್ತಿರಲಿಲ್ಲವೆಂದು ಹೇಳಿದರು. ಆ ದಿನ ಸಾಯಂಕಾಲ ಗಾಂಧೀಜೀಯವರ ಹಸ್ತಾಕ್ಷರ ಪಡೆಯಲು ಬಂದಿದ್ದ ಯುವಕನನ್ನು ತಮಾಷೆಮಾಡಿ ಕಳುಹಿಸಿದರು.

ರಾತ್ರಿ ಮಲಗುವಾಗ ಅಕ್ಕನು ಸಿಪಾಯಿಯೊಬ್ಬರ ಸಂಗಡ ಮಾತನಾಡುತ್ತಾ ಪಕ್ಕದಲ್ಲಿದ್ದ ಇಬ್ಬರು ಹುಡುಗಿಯರನ್ನು ಅವರಿಗೆ ತೋರಿಸುತ್ತಾ 'ಈ ಹುಡುಗಿಯರು ನನಗೆ 'ವಾಕಿಂಗ್ ಸ್ಟಿಕ್'ಗಳಿದ್ದಂತೆ ಇದ್ದಾರೆ. ಅವರು ನನ್ನ ಬಳಿಗೆ ತಂದೆಯ ಹತ್ತಿರ ಬರುವಂತೆ ಬರುತ್ತಾರೆ. ನನಗಮ್ಮ ಇಷ್ಟ. ಅವರೂ ನನಗೆ ಆ ಕಡೆ ಗಮನವೇ ಇಲ್ಲ' ಎಂದು ಹೇಳುತ್ತ ನಿದ್ದೆ ಹತ್ತುವ ವರೆಗೂ ಮಾತನಾಡುತ್ತಿದ್ದರು.

ಮಾರನೆ ಶುಕ್ರವಾರ.

ಕಂಬನಿ ತಂದ ಆ ಶುಕ್ರವಾರವೂ, ಎಂದಿನಂತೆ ಗಾಂಧೀಜಿಯವರು ೩-೩೦ಕ್ಕೆ ಎದ್ದು ಬೆಳಗಿನ ಪ್ರಾರ್ಥನೆ ಮುಗಿಸಿದರು. ಅನಂತರ ಸ್ವಲ್ಪ ಹೊತ್ತು ನಿದ್ದೆ ಮಾಡಲು ಮಲಗಿದರು. ಎಂಟು ಗಂಟೆಗೆ ಮೈ ಉಜ್ಜಿಸಿಕೊಳ್ಳುವ ಸಮಯ ಕಾಂಗ್ರೆಸ್ಸಿನ ಅಂಗರಚನೆಯ ಕರಡು ಪ್ರತಿಯನ್ನು ಕೈಯಲ್ಲಿ ಹಿಡಿದುಕೊಂಡು ಪ್ಯಾರೇಲಾಲರ ಕೊಠಡಿಯಿಂದ ಹೋಗುತ್ತಾ 'ನಾನು ಬಲು ಆಯಾಸದಿಂದ ಇದನ್ನು ಬರೆದೆ; ಏನಾದರೂ ಭಾವನೆ ಬಿಟ್ಟು ಹೋಗಿದ್ದರೆ ಸೇರಿಸು' ಎಂದು ಹೇಳಿ ಆ ಕರಡು ಪ್ರತಿಯನ್ನು ಪ್ಯಾರೇಲಾಲರ ಕೈಗೆ ಕೊಟ್ಟರು.

ಮೈ ಉಜ್ಜಿಸಿಕೊಂಡ ಮೇಲೆ ಪುನಃ ಬಂದು ಕರಡು ಪ್ರತಿಯನ್ನು ನೋಡಿದ್ದಾಯಿತೆ ಎಂದು ಪ್ಯಾರೇಲಾಲರನ್ನು ಕೇಳಿದರು

ನೌಖಾಲಿಯಲ್ಲಿ ನಡೆದ ಅನುಭವ ಮತ್ತು ಮಾಡಿದ ಪ್ರಯೋಗಗಳ ಫಲವಾಗಿ ಪ್ರಾರಂಭಿಸಿದ ಆಹಾರ ಬಿಕ್ಕಟ್ಟನ್ನು ಪರಿಹರಿಸಲು ಏನಾದರೂ ಉಪಾಯ ಹೇಳಲು ಸಾಧ್ಯವೆ ಎಂದು ಪ್ಯಾರೇಲಾಲರು ಗಾಂಧಿಯವರನ್ನು ಕೇಳಿದರು

ಅದಕ್ಕೆ ಗಾಂಧಿಯವರು ಮದ್ರಾಸಿನಂತಹ ಸಮೃದ್ಧವಾದ ಪ್ರಾಂತವು ಆಹಾರವಿಲ್ಲದೆ ಕೊರಗಬೇಕಾಗಿಲ್ಲ. ದೊರೆಯುವ ಆಹಾರವನ್ನು ಹೇಗೆ ಉಪಯೋಗಿಸಿಕೊಳ್ಳಬೇಕೆಂಬುದನ್ನು ಜನರು ಸರಿಯಾಗಿ ಅರಿತಿದ್ದರೆ ಸಾಕು ಎಂದು ಹೇಳಿ ಆ ವಿಷಯವಾಗಿ ಒಂದು ಲೇಖನ ಬರೆಯುವಂತೆ ಶ್ರೀ. ಪ್ಯಾರೇಲಾಲರಿಗೆ ತಿಳಿಸಿ ಗಾಂಧೀಜಿಯವರು ಸ್ನಾನಮಾಡಲು ಹೋದರು.

ಸ್ವಲ್ಪ ಹೊತ್ತು, ಬಂಗಾಳೀ ಭಾಷೆಯನ್ನು ಅಭ್ಯಾಸಮಾಡುತ್ತಿದ್ದು ೯-೩೦ ಗಂಟೆಗೆ ಬೆಳಗಿನ ಊಟ ಮಾಡಲು ಕುಳಿತರು.

ಆ ವೇಳೆಗೆ ಪ್ಯಾರೇಲಾಲರು ಕಾಂಗ್ರೆಸ್ಸಿನ ಅಂಗರಚನೆಯ ತಿದ್ದುಪಡಿ ಕಾರ್ಯವನ್ನು ಮುಗಿಸಿ ಗಾಂಧೀಜಿಯವರ ಬಳಿಗೆ ತಂದೊಪ್ಪಿಸಿ, ಅವರ ಪಕ್ಕದಲ್ಲಿ ಕುಳಿತರು. ಗಾಂಧೀಜಿ ಪ್ಯಾರೇಲಾಲರು ಸೇರಿಸಿದ್ದ ಪ್ರತಿಯೊಂದು ಅಂಶವನ್ನು ನೋಡಿದರು. ಇದ್ದ ಒಂದು ತಪ್ಪನ್ನು ಕೂಡ ತಿದ್ದಿದರು.

ತರುವಾಯ ಗಾಂಧೀಜಿಯವರು ಡಾ. ರಾಜೇಂದ್ರ ಪ್ರಸಾದರ ಮೇಹಸ್ತಿತಿ ವಿಚಾರ, ಪೂರ್ವ ಬಂಗಾಳದ ಪರಿಸ್ಥಿತಿ ವಿಚಾರ ಇವುಗಳನ್ನೆಲ್ಲಾ ಪ್ಯಾರೇಲಾಲರಿಂದ ತಿಳಿದುಕೊಂಡು, ಪ್ಯಾರೇಲಾಲರು ಯಾವಾಗಲೂ ತಮ್ಮ ಬಳಿಯೇ ಇರಬೇಕಾದ ಅಗತ್ಯವಿದೆಯೆಂದು ತಿಳಿಸಿ ಕರ್ತವ್ಯ ತನ್ನ ಕರ್ತವ್ಯ ಮಾಡದೆ ಹೋದಾಗ ಅವನ್ನು ಸ್ವಾತಂತ್ರ್ಯ ಕಾರ್ಯೊಡನೆ ಹೇಗೆ ನಿರ್ವಹಿಸಬೇಕೆಂಬುದನ್ನು ತಿಳಿಸಿದರು

ಮಧ್ಯಾಹ್ನ ನಿದ್ದೆಯಾದ ಮೇಲೆ ಗಾಂಧೀಜಿಯವರೊಡನೆ ಗೂನಾ ಹಸ್ತ 'ಲಂಡನ್ ಟೈಮ್ಸ್' ಪತ್ರಿಕೆಯಿಂದ ಕತ್ತರಿಸಿದ್ದ ಸಾದಿಯನ್ನು ಓದಿಸಿ ಕೇಳಿದರು. ತರುವಾಯ ಅನೇಕರಿಗೆ ಭೇಟಿ ದಯಪಾಲಿಸಿದರು.

ಮಧ್ಯಾಹ್ನ ೪-೩೦ ಗಂಟೆ ವೇಳೆಗೆ ಆಭಾ ಗಾಂಧೀಜಿಯವರಿಗೆ ಸಂಜೆಯ ಊಟ ತಂದರು; ಇದೇ ಇಹಲೋಕದಲ್ಲಿ ಅವರ ಕೊನೆಯ ಊಟವಾಯಿತು. ತರುವಾಯ ಸರ್ದಾರ್ ಪಟೇಲರ ಭೇಟಿಯೂ ಯಿತು. ಸರ್ದಾರರದೇ ಕೊನೆಯ ಭೇಟಿ.

ಇನ್ನು ಗಾಂಧೀಜಿಯವರಿಗೂ ಸರ್ದಾರರಿಗೂ ಗಂಭೀರ ಚರ್ಚೆ ನಡೆಯುತ್ತಿರುವಾಗಲೇ ಆಭಾಗಾಂಧಿ ಗಡಿಯಾರವನ್ನು ಗಾಂಧೀಜಿಯವರ ಮುಂದಿಟ್ಟು ಪ್ರಾರ್ಥನಾ ಸಭೆಗೆ ತಡವಾಯಿತೆಂದು ತೋರಿಸಿದರು. ನಂತರ ಗಾಂಧೀಜಿಯವರು ಸರಸರನೆ ಎದ್ದು ಬಚ್ಚಲು ಮನೆಗೆ ಹೋಗಿ ಅಲ್ಲಿಂದ ಪ್ರಾರ್ಥನಾ ಸಭೆಗೆ ಮನು, ಆಭಾ ಇಬ್ಬರೊಡನೆ ಎಂದಿನಂತೆ ತಮಾಷೆ ಮಾಡಿಕೊಂಡು ಹೊರಟರು.

ಹತ್ತು ನಿಮಿಷ ತಡವಾಗಿ ಹೋಗುತ್ತಿದ್ದರು. ಪ್ರಾರ್ಥನಾ ಸಭೆಯಲ್ಲಿ ೫ ಗಂಟೆ ಹೊಡೆಯುವ ಹೊತ್ತಿಗೆ ಸರಿಯಾಗಿ ಇರಬೇಕೆಂಬುದೇ ನನಗೆ ಅಭಿಲಾಷೆ' ಎಂದು ಅವರು ಪ್ರಾರ್ಥನಾಸ್ಥಳದ ಹತ್ತಿರ ಬರಬರುತ್ತಾ ನುಡಿದರು. ಇಲ್ಲಿಗೆ ಅವರ ಇಹಲೋಕದ ಸಂಭಾಷಣೆಗಳೆಲ್ಲಾ ಮುಗಿದವು.

ಅಂದು ಪ್ರಾರ್ಥನಾ ಸಭೆಗೆ ವಿಶೇಷ ಜನಸಂದಣಿ ಕೂಡಿತ್ತು. ಮಹಾತ್ಮರು ಜನಸಂದಣಿಯ ಮಧ್ಯದ ದಾರಿಯಲ್ಲಿ ಪ್ರಾರ್ಥನಾ ಸ್ಥಳಕ್ಕೆ ಹೋಗುತ್ತಿದ್ದಾಗ ಅವರು ತಮ್ಮ ಕೈಗಳನ್ನು ಹುಡುಗಿಯರ ಭುಜದಿಂದ ಎತ್ತಿ ಜನರ ನಮಸ್ಕಾರಗಳಿಗೆ ಪ್ರತಿ ನಮನ ಮಾಡುತ್ತಾ ಸಾಗಿದರು ಗೋಂಚು ಹಾಕಿ ಕಾಯುತ್ತಿದ್ದ ಕೊಲೆಪಾತಕನು ಇದ್ದಕ್ಕಿದ್ದ ಹಾಗೆಯೇ ಗುಂಪನ್ನು ಭೇದಿಸಿಕೊಂಡು ನುಗ್ಗಿ ಬಲಭಾಗದಿಂದ ಬಂದನು ಆ ರೀತಿ ಬಂದ ಕೊಲೆಗಡುಕನು ಗಾಂಧೀಜಿಯ ಪಾದವನ್ನು ಮುಟ್ಟಲು ಬರುತ್ತಿರುವನೆಂದು ಭಾವಿಸಿ ಪಕ್ಕದಲ್ಲಿದ್ದ ಮನು ಗಾಂಧಿಯವರು, ಆಗಾಗಲೇ ಗಾಂಧೀಜಿ ತಡವಾಗಿ ಬಂದಿದ್ದಾರೆ ಎಂದು ಹೇಳಿ ಅವನನ್ನು ಕೈಹಿಡಿದು ನಿಲ್ಲಿಸಲು ಪ್ರಯತ್ನಪಟ್ಟಳು. ಕೊಲೆಪಾತಕಿ ಮನುವನ್ನು ಜೋರಾಗಿ ಪಕ್ಕಕ್ಕೆ ನೂಕಿ ಮುಂದೆ ನುಗ್ಗಿದನು. ಅವನು ನುಗ್ಗಿದ ರಭಸದಲ್ಲಿ ಮನುವಿನ ಕೈಲಿದ್ದ ಆಶ್ರಮಭಜನಾವಳಿ, ಗಾಂಧೀಜಿಯ ಉಗುಳುವ ಪಾತ್ರೆ ಹಾಗೂ ಜಪಮಾಲೆಗಳು ಕೈಯಿಂದ ಕೆಳಕ್ಕೆ ಬಿದ್ದವು. ತರುವಾಯ ಆ ಕೊಲೆಪಾತಕಿ ಗಾಂಧೀಜಿಯ ಮುಂದೆ ಬಂದು ಮೂರ್ಛೆಯಾದರೂ ಜಾಗವೇ ಬಿಡದಷ್ಟು ಹತ್ತಿರ ನಿಂತುಕೊಂಡು 'ಆಟೋಮ್ಯಾಟಿಕ್ ಪಿಸ್ತೂಲ'ನ್ನು[illegible]ದ ಬಂದಾದ ಮೇಲೊಂದರಂತೆ ಮೂರು ಏಟುಗಳನ್ನು [illegible] ಪ್ರದೇಶದೊಳಗೆ ಗಾಂಧೀಜಿಯ [illegible] ಜೆದನು. [illegible], ಎದೆಯ [illegible] ಗಾಂಧೀಜಿಯವರ [illegible] ಕ್ಕೆ ಹೊಕ್ಕ [illegible] ಬಂದವು. [illegible] ಎಲ್ಲೋ ಉಳಿಯಿತು. [illegible] ಅವರು [illegible] ಬಿಳಿತು. [illegible] 'ಹೇ ರಾಮ್' [illegible] ಗೆಯೇ [illegible] ಕನ್ನಡಕ [illegible] 'ಹೇ ರಾಮ' [illegible] ಅವರ ಕೊನೆಯ [illegible] ರಕ್ತ [illegible] ಮೇಲೆಲ್ಲಾ [illegible] ಕೃಶ ಶರೀರ [illegible]

[illegible] ಯಾದರು. [illegible] ಕ್ಷದಲ್ಲಿದ್ದ [illegible] ವಾಯಿತು [illegible]

ಗಾಂಧೀಜಿಗೆ ಗುಂಡೇಟು ಬಿದ್ದ ಸಂಗತಿ [illegible] ಯಿತು. [illegible] ಬಂಧಿಸಲಾಗಿತ್ತು [illegible]

[illegible]

[illegible] ಹಾರಿಹೋಗಿತ್ತು [illegible]

[illegible] ಕುಟುಂಬಗಳಿಗೆ [illegible]

WANTED

A good Coffee Estate with all its accessories and scope for expansion at a reasonable price to a party prepared to invest Rs. 2 to 3 lakhs if proper returns are guaranteed. Furnish details and price.

X

C/o. "KODAGU"
3-3 Mercara.

ಸ್ವತಂತ್ರ ಬುದ್ಧಿ ಬೆಳೆಯಲಿ.

ಅಖಿಲ ಕೊಡಗು ಉಪಾಧ್ಯಾಯರ ಸಂಘದ ಆಶ್ರಯದಲ್ಲಿ ತಾ ೨೯ರಲ್ಲಿ ನಡೆದ ಸತ್ಕಾರಕೂಟದಲ್ಲಿ ಶ್ರೀ. ಪಿ. ಕೆ. ಉತ್ತಯ್ಯನವರು ಮಾಡಿದ ಭಾಷಣದ ಸಾರಾಂಶ.

ನೀವು ನನ್ನನ್ನು ಈ ರೀತಿ ಗೌರವಿಸಿದುದಕ್ಕಾಗಿ ತುಂಬಾ ವಂದನೆಗಳು. ಈಗ ಸಮಯವೆಲ್ಲವನ್ನೂ ನನ್ನದಾಗಿಯೇ ಉಪಯೋಗಿಸ ಹಾ, ನನ್ನ ಕಾಲವನ್ನು ಕಳೆಯುತ್ತಿರುವೆನು. ಸಮಯ ಮಾತ್ರವೇ ಅಲ್ಲ; ಆಲೋಚನೆಗಳೂ ನನ್ನದಾಗಿಯೇ ಇವೆ. ನಾನು ಹುದ್ದೆಯಲ್ಲಿದ್ದಾಗ ನನ್ನ ಆಲೋಚನೆಗೂ ಸ್ವಾತಂತ್ರ್ಯವಿರಲಿಲ್ಲ. ಅಥವಾ ಹೆಚ್ಚಿನ ಆಲೋಚನೆಗೂ ಅವಕಾಶವಿರಲಿಲ್ಲ ಏಕೆಂದರೆ ಯಾರದೋ ಒಂದು ಆಲೋಚನೆಯ ಮಾರ್ಗವನ್ನು ನಡೆಸುವ ಪ್ರತೀಕವಾಗಿದ್ದೆನು. ಆದರೆ ಇಂದಿನ ನನ್ನ ಜೀವನವು ಹೀಗಾ ನನ್ನದು. ಪ್ರಾಣಿವರ್ಗ ಹಾಗೂ ಮಾನವ ಜೀವನದೊಡನೆ ಬೆರೆತು ಅವುಗಳ ಮತ್ತು ನನ್ನ ಜೀವನದೊಡನೆ ಲೋಕವನ್ನು ಕುರಿತು ಆಲೋಚಿಸುವುದೇ ಇಂದಿನ ನನ್ನ ಕೆಲಸವಾಗಿದೆ.

ಅನೇಕ ಬಾರಿ ನಾವು ತಪ್ಪು ರೀತಿಯಲ್ಲಿ ಆಲೋಚಿಸುತ್ತಿರುವೆವು. ಆದರೆ ನಮ್ಮ ಯೋಚನೆಯ ನೇರಿಯನ್ನು ಮೀರಿ ಲೋಕವು ಈಗ ಧಾವಿಸುತ್ತಿದೆ. ವೈಜ್ಞಾನಿಕ ಬೆಳವಣಿಗೆಯೇ ಲೋಕದ ಸುಧಾರಣಾ ಚಕ್ರವಾಗಿದೆ. 19ನೇ ಶತಮಾನದ ವರೆಗೆ ಅತಿ ಮತ್ತು ಅನಾದಿಕಾಲದಿಂದಲೇ ಜನಿಸಿ ಬೆಳೆದು ಬಂದ ಬೆಳವಣಿಗೆಯೆಲ್ಲವು ಈ ೨೦ನೇ ಶತಮಾನದಲ್ಲಿ ಶೀಘ್ರವಾಗಿ ಬೆಳೆದಿದೆ. ಆದುದರಿಂದ ಆ ಕಾಲದ ವೇಗದೊಡನೆ ನಮ್ಮ ಆಲೋಚನೆಯು ಧಾವಿಸಬೇಕು. ಈ ವರೆಗೆ ನಾವು ನಡೆಸುತ್ತ ಸಮಾಜ ಜೀವನಕ್ರಮವೂ ಸಹ ಬಹು ತಪ್ಪಾದುದು. ಯಜಮಾನ ಆಳು ಎಂಬ ಭಾವನೆ ತೊಲಗಬೇಕು. ಅಧಿಕಾರಚಾಲನೆ ಮತ್ತು ಅಧಿಕಾರ ಪಾಲನೆ ತತ್ತ್ವ ನೀಗಬೇಕು. ಸಂಗಡ ಮತ್ತು ಕೋಮುವಾರು ಭಾವನೆಯನ್ನು ಕಿತ್ತುಹಾಕಬೇಕು. ವಿಶ್ವಖಂಡದ ಪ್ರತಿನಿಧಿಗಳ ಪರಿಷತ್ತು ಇದೇ ತತ್ವವನ್ನು ಲೋಕದ ಮುಂದಿಟ್ಟಿದೆ. ನಾವು ಇಂದು ಮಾಡುವ ಕೆಲಸಗಳೂ ನಮ್ಮ ವಿದ್ಯಾಕ್ರಮವೂ ದ್ರಾವಿಡ ಯುಗದಲ್ಲಿ ಇದ್ದಂತೆಯೇ ಇದೆ. ನಾವು ಈ ಕ್ರಮದಿಂದ ಬದಲಾವಣೆ ಹೊಂದಿದ್ದೇ ಆದರೆ ಪ್ರಪಂಚವಿಡೀ ಎಷ್ಟು ಚಿಕ್ಕದಾಗುತ್ತಾ ಬರುತ್ತದೆಂದು ನಾವು ಗಮನಿಸಲೇಬೇಕು. ಆಕಾಶವಾಣಿಯು ಚತುಸ್ಸಾಗರವನ್ನೂ ಲೋಕದ ಸುಧಾರಣೆಯ ವೇಗವನ್ನೂ ನೀವು ಒಂದೇ ಕಾಲದಲ್ಲಿ ಕಾಣಬೇಕು.

ಇಂದಿನ ವಿದ್ಯಾಕ್ರಮವು ಸಂಪೂರ್ಣ ಅನಾಗರಿಕವಾದುದ್ದು. ಅದನ್ನು ಮಾರ್ಪಡಿಸಿದ ಕ್ರಮವೂ ಸಮರ್ಪಕವಾಗಿಲ್ಲ. ಗಾಂಧೀಜಿಯವರ ವಿದ್ಯಾಯೋಜನೆಯೂ ಯೋಗ್ಯವಾದ ಇನ್ನೊಂದು ಕ್ರಮಕ್ಕೆ ಸಂದರ್ಭವನ್ನು ಕಲ್ಪಿಸಬೇಕು. ಅಂದಿನ ಗುಲಾಮಗಿರಿಯ ಕಾಲವಾಗಿತ್ತು. ಇಂದು ನಾವು ಸಮಾನರೆಂದು ಪರಸ್ಪರವಾಗಿ ತಿಳಿಯಲೇಬೇಕು. ನಾವು ಇರುವೆ ಜೇನುನೊಣಗಳ ಹಾಗೆ ತಲೆ ತಾಕು ಗ್ಗಿಯುವ ಪ್ರಾಣಿವರ್ಗವೇನೂ ಅಲ್ಲ. ಆದರೂ ನಾವು ದುಡಿಯಬೇಕು. ದುಡಿದು ಸಮಾನ ಜೀವನ ಮಾರ್ಗವನ್ನು ವ್ಯಕ್ತಪಡಿಸಬೇಕು.

ಸ್ವತಂತ್ರ ಯೋಚನೆ ಬರಲೇಬೇಕು. ಯೋಚನೆಯಲ್ಲೂ ಇತರರ ಯೋಚನೆಯಂತೆ ನಡೆಯುವ ದಾಸರಾಗಿರಬಾರದು. ಈ ವಿಷಯದಲ್ಲಿ ವಿಜ್ಞಾನವು ನಮಗೆ ಬಹು ಮಟ್ಟಿಗೆ ಸಹಾಯಮಾಡಿದೆ. ವಾರ್ಧಾ ವಿದ್ಯಾಕ್ರಮವು ಮಕ್ಕಳ ಸ್ವತಂತ್ರ ಆಲೋಚನೆಗೆ ತಕ್ಕ ದಾರಿಯನ್ನು ಕಲ್ಪಿಸಿದೆ. ಆದರೆ ಅದೂ ಸಾಲದೆಂದು ನನಗನ್ನಿಸಿದೆ. ಸಹಜ ಪ್ರವೃತ್ತಿಯ ಗುಣದ ಬೆಳವಣಿಗೆಗೆ ತಕ್ಕ ಅವಕಾಶವನ್ನು ನಮ್ಮ ವಿದ್ಯಾಯೋಜನೆಯಲ್ಲಿ ಕಲ್ಪಿಸಬೇಕು. ಈ ವರೆಗೆ ನಮ್ಮ ವಿದ್ಯೆಯು ಓದು ಬರೆಹ ಲೆಕ್ಕಗಳಲ್ಲಿ ಅಡಕವಾಗಿತ್ತು. ಆದರೆ ಸ್ವತಂತ್ರ ಯೋಚನೆಗೆ ಅವಕಾಶಕೊಟ್ಟು ಅದರ ಮೂಲಕ ಅದನ್ನು ಬೆಳೆಯಿಸುವ ಶಕ್ತಿಯೇ ಯೋಗ್ಯವಾದ ವಿದ್ಯೆ.

ನಮ್ಮ ಗ್ರಾಮ, ಪ್ರಾಂತ ಎಂಬೀ ಭಾವನೆಗಳು ತೊಲಗಿ ನಾವೆಲ್ಲಾ ಒಂದೇ ಎಂಬ ರೀತಿಯಲ್ಲಿ ಸಾಗಿಸುವ ಕ್ರಮವು ಮುಂಬರಬೇಕು. ರೈತರಿಗೆ ಹೊಸ ಸಾಹಿತ್ಯ ಸಲಕರಣೆಗಳ ಅವಕಾಶಕೊಡಬೇಕಲ್ಲದೆ ಅಜ್ಜಂದಿರ ಕಾಲದಲ್ಲಿನ ಹಳೆಯ ಕ್ರಮವನ್ನೇ ತರುವುದು ಈಗ ಹಿತವಲ್ಲ. ನಮ್ಮ ವೈಜ್ಞಾನಿಕ ವಿದ್ಯೆ ಈ ದೃಷ್ಟಿಯಲ್ಲಿ ಬಹು ಹಿಂದುಳಿದಿದೆ. ನಾವು ಒಂದು ವರ್ಗವೆಂಬ ದೃಷ್ಟಿಯಿಂದ ಕೆಲಸ ಮಾಡಬೇಕಲ್ಲದೆ ವೈಯಕ್ತಿಕ ಲಾಭದ ಭಾವನೆಯನ್ನು ಬಿಡಬೇಕು. ಇದರಲ್ಲಿ ರಷ್ಯಾದೇಶದ ದೃಷ್ಟಾಂತವನ್ನು ನಾವು ಕಲಿಯಬೇಕು. ಅಲ್ಲಿ ವ್ಯಕ್ತಿ ತಾನಾಗಿ ದುಡಿಯುತ್ತಿದ್ದ ಕಾಲವಿತ್ತು. ಈಗ ಅದು ಹೋಗಿ ಜನಾಂಗಕ್ಕಾಗಿ ಜನ ಒಟ್ಟಾಗಿ ದುಡಿಯುವ ಕಾಲವಾಗಿದೆ. ಹೀಗೆ ಕೆಲಸ ಮಾಡಿದರೆ ೩೦,೦೦೦ ಟನ್ ಬತ್ತ ಬೆಳೆಯುವ ಈ ಕೊಡಗಿನಲ್ಲಿ ಮೂವತ್ತು ಸಾವಿರ ಟನ್ನು ಬತ್ತ ತೆಗೆಯಬಹುದೆಂದು ನಾನು ನಂಬಿರುವೆನು.

ನಮ್ಮ ಶಾಲಾ ಪ್ರವಚನಗಳಲ್ಲೂ ಸಹ ಅಧಿಕಾರಶಾಹೀ ಇನ್ನೂ ಇದೆ. ಇದು ಹಿಂದೂಸ್ಥಾನದಲ್ಲೆಲ್ಲಾ ಇರುವ ಕ್ರಮವಾಗಿದೆ. ನಮ್ಮ ಇಲ್ಲಿಯ ವಿದ್ಯಾಕ್ರಮವನ್ನು ಇಂದು ಆಲೋಚಿಸಿದರೆ ಅವಿನಾಶಲಿಂಗಂ ಚೆಟ್ಟಿಯಾರರಂಥಾ ಒಬ್ಬ ವಿದ್ಯಾಮಂತ್ರಿಯ ತಲೆಯಿಂದ ಹೊರಳಿ ಬಂದದ್ದಾಗಿದೆ. ಆದರೆ ಇದರಲ್ಲಿ ಸಾಂಘಿಕ ಕ್ರಮವನ್ನು ತಂದು ಎಲ್ಲರೂ ಒಟ್ಟು ಸೇರಿ ತಕ್ಕ ಕ್ರಮವನ್ನು ತಂದು ಭವಿಷ್ಯ ಜನಾಂಗವನ್ನು ತಯಾರಿಸಬೇಕು. ನಮ್ಮ ಮಕ್ಕಳಲ್ಲಿ ಸ್ವತಂತ್ರ ಆಲೋಚನೆಗೆ ಅವಕಾಶಕೊಡಬೇಕು. ಇಂದಿನ ಪರಿಸ್ಥಿತಿಯಲ್ಲಿ ಇದೇ ನನ್ನ ಮನಸ್ಸಿನಲ್ಲಿ ಬಹು ಮಟ್ಟಿಗೆ ದೊಡ್ಡದಾದ ವಿಚಾರ. ನಮ್ಮ ಹಾದಿಯಲ್ಲಿ ನಾವು ಹಿಂದೆ ಬಿದ್ದಿದ್ದೇವೆ. ಏಕೆಂದರೆ ವೈಜ್ಞಾನಿಕ ದೃಷ್ಟಿಯಿಂದ ವಿಷಯಗಳನ್ನು ತೆಗೆದುಕೊಳ್ಳಲಿಲ್ಲ.

ನಮ್ಮ ಈ ಸ್ಥಳವು ಬಹು ಫಲವತ್ತಾದುದು. ಸ್ವಿಟ್ಸರ್‌ಲೇಂಡಿನಂತೆ ಈ ಭೂಮಿಯನ್ನು, ಈ ಬೆಟ್ಟಗುಡ್ಡ ಕಾಡುಗಳನ್ನು ವೈಜ್ಞಾನಿಕ ರೀತಿಯಲ್ಲಿ ಉಪಯೋಗಿಸಿದರೆ ಇಲ್ಲಿಯೂ ಕೈಗಾರಿಕೆ, ವಿದ್ಯುಚ್ಛಕ್ತಿ, ಕಾಖಾರ್ನೆ ಇತ್ಯಾದಿ ವಿಷಯಗಳಲ್ಲಿ ನಾವು ಇತಿಮಿತಿಯಿಲ್ಲದೆ ಮುಂದಕ್ಕೆ ಹೋಗಬಹುದು. ಇದನ್ನೆಲ್ಲಾ ಆಲೋಚಿಸುವಾಗ ಕಾಲದ ಬೆಳವಣಿಗೆಯೊಡನೆ, ಲೋಕದ ಸುಧಾರಣೆಯೊಡನೆ ನಾವು ಹೋಗುತ್ತಿಲ್ಲ ಎಂದು ತಿಳಿಯಬಹುದು. ಆದರೆ ನಾವು ಒಂದು, ಪರಸ್ಪರ ಸಂಬಂಧವನ್ನು ಕಟ್ಟಿ, ಒಬ್ಬನಿಲ್ಲದೆ ಒಬ್ಬನಿಲ್ಲ ಎಂಬೀ ರೀತಿಯಲ್ಲಿ ನಡೆದರೆ ಮಾತ್ರ ಉಳಿಗಾಲವಿದೆ ಎಂಬುದಾಗಿ ನನಗೆ ಖಚಿತವಾಗಿ ತೋರಿಬಂದಿದೆ.

ಹಣ್ಣುಗಳನ್ನು ಬೆಳೆಸಿರಿ.

ಲೇ: - ಶ್ರೀ ಕೆ. ಎಂ. ಗಣಪತಿ, ಬಿ. ಎಸ್‌ಸಿ; ಐ ಡೆಪ್. ಎ

ಹಣ್ಣುಗಳು ಜೀವನಕ್ಕೆ ಅತ್ಯವಶ್ಯಕವಾದ ಆಹಾರವಲ್ಲವೆಂದೂ, ಅವುಗಳು ದುಂದುಗಾರಿಕೆಯ ವೈಭವದ ಪದಾರ್ಥಗಳೆಂದೂ, ಅವುಗಳು ಅಗತ್ಯವಾಗಿ ತಿನ್ನಲೇಬೇಕಾದವುಗಳಲ್ಲವೆಂದೂ ತಿಳಿಯುವದು ತಪ್ಪು ಭಾವನೆಯಾಗಿದೆ. ಉಚಿತ ಪ್ರಮಾಣಗಳಲ್ಲಿ ಹಣ್ಣುಗಳನ್ನು ಸೇವಿಸುವದು ಆರೋಗ್ಯಭಾಗ್ಯಕ್ಕೂ, ಬೆಳವಣಿಗೆಗೂ, ಅತ್ಯವಶ್ಯಕವಾದ ಪದಾರ್ಥಗಳೆಂದು ಆರೋಗ್ಯ ಶಾಸ್ತ್ರವೂ, ವೈದ್ಯಕೀಯ ವಿಜ್ಞಾನವೂ ಸಿದ್ಧಾಂತಪಡಿಸಿವೆ. ನಿರ್ಬಲರಿಗೂ, ಮಕ್ಕಳಿಗೂ ಮತ್ತು ಗರ್ಭಿಣಿಯರಿಗೂ ಹಣ್ಣುಗಳು ಸೇವಿಸಲೇಬೇಕಾದ ಆಹಾರ. ಹಣ್ಣುಗಳಲ್ಲಿ ಜೀವಾತುಗಳೂ ಶರ್ಕರ ಪಿಷ್ಟಗಳೂ, ಸಸಾರ ಜನಕವೂ, ಲವಣಗಳೂ ಇರುವವು. ಹಣ್ಣು ತಿನ್ನುವ ಜನಾಂಗದವರು ದೃಢಕಾಯರಾಗಿಯೂ, ದೀರ್ಘಾಯುಷಿಗಳಾಗಿಯೂ, ರೋಗರುಜನೆಗಳಿಗೆ ತುತ್ತಾಗದವರಾಗಿಯೂ ಇರುವರು.

ನಮ್ಮ ದೇಶದಲ್ಲಿ ಬಡವರ ಸಂಖ್ಯೆಯು ವಿಪರೀತವಾಗಿರುವದರಿಂದಲೂ ಈ ಹಣ್ಣುಗಳ ಬೆಲೆ ಹೆಚ್ಚಾಗಿರುವದರಿಂದಲೂ ಹಣ್ಣುಗಳನ್ನು ನಿತ್ಯ ಜೀವನದಲ್ಲಿ ಉಪಯೋಗಿಸುವದು ಕೇವಲ ಅಸಾಧ್ಯ. ಕೊಂಡುಕೊಳ್ಳುವವರು ಹೆಚ್ಚಾಗಿರುವದೂ ಉತ್ಪತ್ತಿ ಕಡಿಮೆಯಾಗಿರುವದೂ ಇವುಗಳ ವಿಪರೀತ ಬೆಲೆಗೆ ಕಾರಣವು. ಆದ್ದರಿಂದ ರಾಷ್ಟ್ರದ ಆರೋಗ್ಯ ದೃಷ್ಟಿಯಿಂದ ಹಣ್ಣು ಬೆಳೆಯುವಿಕೆಯನ್ನು ವೃದ್ಧೀಕರಿಸಿ ಹೆಚ್ಚು ಹಣ್ಣು ತೋಟಗಳನ್ನು ನಿರ್ಮಿಸುವದು ನಮ್ಮ ಪ್ರಥಮ ಕರ್ತವ್ಯ. ಇದರಿಂದ ಬಡವರಿಗೂ ಕೂಡ ಜೀವನವಾಗಿ ಕಡಿಮೆ ಬೆಲೆಗೆ ಹಣ್ಣುಗಳು ದೊರೆಯಲು ಅವಕಾಶವಾಗುವದು. ಅಮೇರಿಕಾ, ಇಂಗ್ಲೇಂಡ್ ಮತ್ತು ಆಸ್ಟ್ರೇಲಿಯಾದ ಜನರು ಕಡಿಮೆಯೆಂದರೆ ಪ್ರತಿ ವ್ಯಕ್ತಿಗೆ ೧೫ ಔನ್ಸಿನಂತೆ ಪ್ರತಿ ದಿನ ಹಣ್ಣುಗಳನ್ನು ಉಪಯೋಗಿಸುವರು. ಭಾರತದಲ್ಲಿ ಈ ಪ್ರಮಾಣವು ಕೇವಲ ೩ ಔನ್ಸು ಆಗಿದೆ. ಕಡಿಮೆ ಪಕ್ಷ ದಿನಂಪ್ರತಿ ೬ ಔನ್ಸು ಹಣ್ಣು ಪ್ರತಿಯೊಬ್ಬ ವ್ಯಕ್ತಿಗೂ ಅವಶ್ಯಕ. ಈ ಪ್ರಮಾಣವು ಎಲ್ಲರಿಗೂ ಸಿಗುವಂತೆ ಮಾಡುವದು ನಮ್ಮ ಧ್ಯೇಯ.

ಆಹಾರದ ಪೋಷಕಾಂಶಗಳ ವಿಷಯ ಜರ್ಮನಿಯಲ್ಲಿ ನಡೆದ ಒಂದು ಪ್ರಯೋಗದಿಂದ ಹೆಚ್ಚು ಹಣ್ಣುಗಳನ್ನು ಸೇವಿಸಿದರೆ ಮೇದಸ್ಸು ಯಾ ಕೊಬ್ಬು ತೈಲಗಳ ಅಂಶವನ್ನು ಆಹಾರದಲ್ಲಿ ಕಡಿಮೆ ಮಾಡಬಹುದೆಂದು ಕಂಡು ಬಂತು. ಭಾರತದಲ್ಲಿ ಕೂಡ ಇದು ಸಾಧ್ಯ. ಹೆಚ್ಚಾಗಿ ಹಣ್ಣನ್ನು ತಿನ್ನುವದರಿಂದ ಶರ್ಕರ ಪಿಷ್ಟ ಮೇದಸ್ಸು ಮುಂತಾದ ಪೋಷಕಾಂಶಗಳು ಸೇರಿರುವ ಆಹಾರಗಳನ್ನು ಕಡಿಮೆಮಾಡಬಹುದು. ದವಸಧಾನ್ಯಗಳ ಅಭಾವವಿದ್ದು ಆಹಾರದ ಕೊರತೆ ಇರುವ ನಮ್ಮ ದೇಶದಲ್ಲಿ ಹಣ್ಣನ್ನು ಹೆಚ್ಚಾಗಿ ಬೆಳೆದು ಆಹಾರವಾಗಿ ಉಪಯೋಗಿಸಿದರೆ ಅವಶ್ಯವಾದ ದವಸ ಧಾನ್ಯಗಳ ಕೊರತೆಯನ್ನು ನಿವಾರಿಸಬಹುದು.

ಅನೇಕ ಹಣ್ಣುಗಳು ಇತರ ಧಾನ್ಯಗಳು ಕೊಡುವದಕ್ಕಿಂತ ಹೆಚ್ಚು ಕೆಲರಿ ಉಷ್ಣವನ್ನು ಕೊಡುವವು. ಉದಾಹರಣೆಗಾಗಿ ಒಂದೇ ಕ್ಷೇತ್ರದಲ್ಲಿ ಬೆಳೆಸಿದ ಗೋದಿಗಿಂತ ಮಾವಿನ ಹಣ್ಣು 1.7ರಷ್ಟು, ಬಾಳೆ ಹಣ್ಣು 1.5ರಷ್ಟು, ದ್ರಾಕ್ಷಿ ಹಣ್ಣು 2.5 ರಷ್ಟು, ಕಿತ್ತಳೆ ಹಣ್ಣು 3.7ರಷ್ಟು ಜಾಸ್ತಿ ಉಷ್ಣವನ್ನು ಕೊಡುವವು. ಹಣ್ಣುಗಳನ್ನು ಬೆಳೆಸುವದರಿಂದ ಮಣ್ಣನ್ನು ನಾವು ಉತ್ತಮರೀತಿಯಲ್ಲಿ ಉಪಯೋಗಿಸಿದಂತಾಗುವದಲ್ಲದೆ, ಹೆಚ್ಚು ಪೋಷಕಾಂಶವಿರುವ ಆಹಾರವನ್ನು ಉತ್ಪಾದಿಸಿದಂತೆಯೂ ಆಗುವದು. ಹೆಚ್ಚಾಗಿ ಪಾಳುಬಿಟ್ಟ, ಉಪಯೋಗಪಡದ ಸ್ಥಳಗಳು ಇರುವ ಕೊಡಗಿನಲ್ಲಿ ಉಚಿತ ರೀತಿಯ ಹಣ್ಣಿನ ವ್ಯವಸಾಯ ಮಾಡಿ ಮಣ್ಣನ್ನು ಸದುಪಯೋಗ ಮಾಡುವದು ನಮ್ಮ ಕರ್ತವ್ಯ. ಹೀಗೂ ಆಹಾರದ ಅಭಾವವನ್ನು ನೀಗಿಸಲು ಹೆಚ್ಚು ಪೋಷಣಾಂಶಗಳನ್ನು ಒಳಗೊಂಡ ಹಣ್ಣುಗಳನ್ನು ನಾವು ಬೆಳೆಸಬೇಕೆಂಬುದು ನಿಸ್ಸಂದೇಹ.

ಆರ್ಥಿಕ ದೃಷ್ಟಿಯಿಂದ ನೋಡಿದರೂ ಹಣ್ಣುಗಳು ಇತರ ಕೃಷಿಗಳಿಗಿಂತ ರೈತರಿಗೆ ಹೆಚ್ಚು ಲಾಭದಾಯಕವಾದುದು. ಸಾಧಾರಣ ಕೃಷಿಯ ಉತ್ಪತ್ತಿಗಿಂತ ೫ ಪಾಲು ಹೆಚ್ಚಾದ ಲಾಭವನ್ನು ಹಣ್ಣುಗಳು ತರುವವು. ಉತ್ತಮವಾದ ಫಲವತ್ತಾದ ಮಣ್ಣು, ಹವಾಗುಣವು, ಕೂಲಿಕಾರರ ಸೌಕರ್ಯವೂ ಇರುವ ನಮ್ಮ ಕೊಡಗಿನಲ್ಲಿ ಹೆಚ್ಚಾಗಿ ಹಣ್ಣು ಬೆಳೆದು ದೇಶದ ಸುಭಿಕ್ಷತೆಯನ್ನು ನಾವೇಕೆ ಮಾಡಬಾರದು.

"ಅಜೀಬ್ ದುನಿಯಾ"

[ಲೇ—ಶ್ರೀ ಬಿ. ಡಿ. ಗಣಪತಿ]

ಚೈನಾದಲ್ಲಿ ಕಮ್ಯೂನಿಸ್ಟರ ಸರಕಾರ ಶೀಘ್ರ ಸ್ಥಾಪಿಸಲ್ಪಡಲಿದೆ. ಒಂದೆರಡು ವರ್ಷಗಳ ಹಿಂದೆ ಕಮ್ಯೂನಿಸ್ಟರೆಂದರೆ ದರೋಡೆಗಾರರಿಗೂ ಕಡೆ ಎಂದು ಭಾವಿಸಲ್ಪಟ್ಟರು. ಆದರೆ ಇಂದು ಅಮೇರಿಕನ್ ಸರಕಾರವು ಚೈನಾದಲ್ಲಿ ಕಮ್ಯೂನಿಸ್ಟರೊಡನೆ ಸಂಧಾನ ಮಾಡಿಕೊಂಡು ಮಿತ್ರರಂತೆ ಕೈ ಕುಲುಕಲು ತಯಾರಾಗಿದೆ. ಕೆಲವು ವರ್ಷಗಳಿಗೆ ಹಿಂದೆ ರಷ್ಯಾದ ಕೆಂಪು ಜನರನ್ನು ಎಲ್ಲೆಲ್ಲೂ ತಿರಸ್ಕರಿಸಲಾಗುತ್ತಿತ್ತು. ಕಳೆದ ಯುದ್ಧದ ನಂತರ ರಷ್ಯಾವು ಜಗತ್ತಿನ ಮಹಾಶಕ್ತಿಗಳಲ್ಲೊಂದಾಗಿ ಅದರ ಸ್ನೇಹಕ್ಕೆ ಸರ್ವರೂ ಹಾತೊರೆಯುವ ಪರಿಸ್ಥಿತಿ ಬಂದಿದೆ. ಆಗ ಜೈಲಿನಲ್ಲಿ ಕಷ್ಟಪಟ್ಟು ತಲೆಮರೆಸಿ ಜೀವನ ಮಾಡಿದ ಸ್ಟಾಲಿನನು ಇಂದು ಜಗತ್ತಿನ ಪ್ರಸಿದ್ಧ ರಾಜಕಾರಣಿ!

ಎಂದೂ ಬಹಳ ಹೆಚ್ಚಿಲ್ಲಾರದ, ಹಿಂದೆ ಹುಟ್ಟಿದ ಮಹಾತ್ಮಾ ಗಾಂಧೀಜಿಯವರನ್ನು 'ನಗ್ನ ಫಕೀರ'ನೆಂದು ಚರ್ಚಿಲ್ಲರು ಕರೆದರು. ಈ 'ಫಕೀರ'ನಿಂದ ನಡೆಸಲ್ಪಡುತ್ತಿದ್ದ ಕಾಂಗ್ರೆಸ್ಸಿನವರನ್ನು 'ಗೂಂಡಾ'ಗಳೆಂದು ಕರೆಯುವಷ್ಟಕ್ಕೆ ತಳ್ಳಲಾಗಿತ್ತು. ಆದರೆ ಅಂದಿನ 'ಗೂಂಡಾ'ಗಳಲ್ಲೊಬ್ಬನೇ ಇಂದು ಹಿಂದೂದೇಶದ ಅನಭಿಷಿಕ್ತ ಅರಸನಾಗಿದ್ದಾನೆ. ಅಂದು ಅಪಹಾಸ್ಯವನ್ನು ಮಾಡಿದ ಚರ್ಚಿಲ್ಲರು ಹಿನ್ನೆಲೆಗೆ ತಳ್ಳಲ್ಪಟ್ಟು ಈ 'ನಗ್ನ ಫಕೀರ'ನ ಶಿಷ್ಯನು ಅತ್ಯಂತ ತೇಜಸ್ಸಿನಿಂದ ಜಗತ್ತಿನ ರಂಗದಲ್ಲಿ ಬೆಳಗುತ್ತಿದ್ದಾನೆ.

ಇಂದು ಯಾರೇ ಏನು ಹೇಳಲಿ ಕಾಲ ಮಹಿಮೆ ಮುಂದೆ ಸಾಗುತ್ತಿರಬೇಕು. ಇಂದು ಶತ್ರುಗಳಾದವರು ನಾಳೆ ಮಿತ್ರರಾಗುತ್ತಾರೆ. ಜಗತ್ತಿನಲ್ಲಿ ಕಷ್ಟ ಸುಖ ಪ್ರತಿಷ್ಠೆ, ಗೌರವ, ಯಾವುದೂ ಸ್ಥಿರವಲ್ಲ.

ಪಂಡಿತ ಜವಾಹರರ ಜನ್ಮದಿನದಂದು ಮಾರ್ಶಲ್ ಸ್ಟಾಲಿನರು ಪಂಡಿತರಿಗೆ ಶುಭಾಶಯವನ್ನು ಬಯಸಿ ಸಂದೇಶ ಕಳುಹಿಸಿದ್ದರು. ಪಂಡಿತರೂ ನಮ್ರತಾಪೂರ್ವಕ ಪ್ರತಿವಂದನೆ ಕಳುಹಿಸಿದ್ದರು. ಕಮ್ಯೂನಿಸ್ಟ್ ರಷ್ಯಾ ಸರಕಾರದ ಸ್ಟಾಲಿನರು ಆ ರೀತಿ ಸಂದೇಶ ಕಳುಹಿಸುತ್ತಿರುವಾಗ ನಮ್ಮ ದೇಶದಲ್ಲೇ ಇರುವ ಕಮ್ಯೂನಿಸ್ಟ್ ಸೆಕ್ರೆಟರಿ ಶ್ರೀ ಬಿ. ಟಿ. ರಣದಿವೆಯವರು ಹಾಗೆ ಮಾಡಲಿಲ್ಲ. ಅವರಿಗೆ ಸಮ್ಮಾನಪೂರ್ವಕ ವಂದಿಸುವದರ ಬದಲು ನೆಹರೂ ಸರಕಾರವು ಭಾರತ ಕಮ್ಯೂನಿಸ್ಟರನ್ನು ಬಂಧನಗಳಲ್ಲಿರಿಸಿದೆ. ದೇಶದೊಳಗೆ ಕಮ್ಯೂನಿಸ್ಟರನ್ನು ಬಂಧಿಸಿದರೂ ಹೊರಗಿನ ಕಮ್ಯೂನಿಸ್ಟರೊಡನೆ ಕೈ ಕುಲುಕುವ ನೀತಿ ಆಶ್ಚರ್ಯಕರವಾಗಿದೆ.

ವಿಚಿತ್ರ ಜಗತ್ತಿದು. ರಷ್ಯಾದ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಸ್ಟಾಲಿನರು ಪಂಡಿತರನ್ನು ವಂದಿಸುವರು. ಪಂಡಿತರು ಅವರನ್ನು ಪ್ರತಿವಂದಿಸುವರು. ಬದಲು ಹಿಂದೂದೇಶದ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಮಾತ್ರ ನೆಹರೂ ಸರಕಾರದಲ್ಲಿ ಆ ಸೌಹಾರ್ದತೆ ಇದ್ದದ್ದರೆ ದೇಶದಲ್ಲಿ ಕ್ಷೋಭೆಗೆ ಎಡೆಕೊಡುತ್ತಿರಲಿಲ್ಲ 'ಜೈ ಹಿಂದ್ ಆಗೆನ್ಸ್ಟೈಲ್' ಎಂಬುದು ಗೊತ್ತಿದೆ. ಬ್ರಾಹ್ಮಣರು, ಬ್ರಾಹ್ಮಣೇತರರು, ಸ್ಪೃಶ್ಯರು, ಸ್ಪೃಶ್ಯರಲ್ಲದ ಜನಾಂಗಗಳಿರುವ ಅನೇಕ ಭಾರತೀಯರು ಭಾರತೀಯರೊಳಗೆ ಐಕ್ಯತೆಯಿಂದ, ಪ್ರೇಮ ಸೌಹಾರ್ದತೆಯಿಂದಿರಲಾರರೇ?

ಹೌದು ವಿಚಿತ್ರ ಜಗತ್ತು. ಹಿಂದೂ ಮುಸ್ಲಿಮರ ಜಗಳ ಅಷ್ಟು ನಡೆಯುತ್ತ ಇಂದು ಜಿನ್ನಾ ಪಾಕಿಸ್ತಾನ ಪ್ರಸವ ಮಾಡಿ ಕೊಡಲ್ಪಟ್ಟಿದ್ದೇ ಆಗಿದೆ. ಇಂದು ಎಲ್ಲಾ ಕಡೆ ನಿರಾಶ್ರಿತರಾಗಿ ಮುಸ್ಲಿಮರು ಹೊರಟು ಹೋಗುತ್ತಿದ್ದಾರೆ. ಇವರ ಸಂಖ್ಯೆಯು ಒಂದೆರಡಲ್ಲ ನಿವೃತ್ತಿ ಮಾಡಿದ್ದರೆ ಬೇಕಾದರೆ ಯಾವುದೇ ರಾಜನನ್ನು ಯಾವುದೇ ರಾಜ್ಯ ಬಿಟ್ಟು ಹೋಗಿ ಪಡೆಯುವುದು ಇಂದಿನ ಸಂಧ್ಯಾಗಿದೆ!

ಕೆಲವು ವರ್ಷಗಳ ಹಿಂದೆ [illegible] ಆಫ್ ವಿಂಡ್ಸರ್ ಹೆಸರು ಮೊದಲು ಬರುತ್ತಿತ್ತು. ಇವರು ಪ್ರೇಮಕ್ಕಾಗಿ ರಾಜ್ಯ ಬಿಟ್ಟರು. ರಾಜ್ಯ ಬಿಟ್ಟುದುದಕ್ಕೆ ಕಾರಣ ವ್ಯಸನಪಡುತ್ತಿರುವರಂತೆ ತೋರುವದಿಲ್ಲ. ಬ್ರಿಟಿಷ್ ಸಮಾಜವು ಇವರಿಗೆ ಸಂಕಷ್ಟ ಜೀವನಕ್ಕೆ ವ್ಯವಸ್ಥೆ ಮಾಡುವ ಸ್ಥಿತಿಯಿಂದ ಹಿಂದಿನ ಚಕ್ರವರ್ತಿಯನ್ನು [illegible] ಅಪ್ರಿಯವಾಗಿ ಕಂಡಿದ್ದಾರೆ. ರಾಜ ಕುಟುಂಬದವರು ಇನ್ನೂ ನೆಲೆ ಇಲ್ಲದ ಅಲೆಮಾರಿಯಾದ ಅರಸ ಮನೆತನದವರನ್ನು ಸ್ವಾಗತಿಸಿದ ರಷ್ಯಾದ ಸ್ಟಾಲಿನರು ಅದೃಷ್ಟಶಾಲಿ. ಯೂರೋಪಿನಲ್ಲಿ ಬ್ರಿಟನ್ ಒಂದನ್ನು ಬಿಟ್ಟು ಆ ಸ್ಥಿತಿಗೆ ಎಲ್ಲಿಯೂ ನೆಲೆ ಇಲ್ಲದಾಗಿದೆ.

ಅದೃಷ್ಟವೂ, ದುರದೃಷ್ಟವೂ ಅರಸರ ಈ ದುರಂತ ಕಥೆ ಭಾರತದಲ್ಲಿ ಪುನರಾವರ್ತಿಸುತ್ತಿದೆ. ಯೂರೋಪಿನ ಕಿರೀಟವಿಲ್ಲದ ರಾಜರ ಕಥೆ ನಮ್ಮ ಸಂಸ್ಥಾನಗಳ ಅರಸರಿಗೆ ಅನ್ವಯಿಸ ತೊಡಗಿದೆ. ಹೈದರಾಬಾದಿನ ನೈಜಾಮರು ಅರಸುತನ ಅವರೊಂದಿಗೆ ಸಮಾಪ್ತಿಗೊಳ್ಳಲಿದೆ. ಚಿನ್ನಾಭರಣಗಳ ರಾಶಿಯ ಮೇಲೆ ಕಾವಲಿನಂತೆ ಮಲಗುತ್ತಿದ್ದ ಇವರು ನಿಜಾಮರಾಗಿದ್ದು ಇಂಗ್ಲೆಂಡಿನ ಬ್ಯಾಂಕಿನ ಸ್ಟೋರ್ ಕೀಪರ್ ಆಗಬಹುದು. ಪಾಕಿಸ್ತಾನದ ಮಹಾರಾಜರಿಗೆ ಕುದುರೆ ತರಬೇತಿ ಮುಂದಿನ ಕಲ್ಯಾಣವೆನಿಸಿತು. ಜೋಧಪುರ ಮಹಾರಾಜರು ನಾಯಿ ಸಾಕುವವರು. ಬೋಪಾಲಿನ ಪಿಳ್ಳೆಯಲ್ಲಿ ಪ್ರಿಯ ರಾಜರು ವೈನ್ ಅಂಗಡಿ ಇಡಬಹುದು. ಈ ರೀತಿ ಭಾರತದ ಅರಸೊತ್ತಿಗಳು ಸ್ಥಿತಿಯಾಗಿದೆ!

ಈ ಬದಲಾವಣೆ ಒಂದು ಕ್ಷೇತ್ರದಲ್ಲಲ್ಲ, ಸರ್ವ ದಿಕ್ಕುಗಳಲ್ಲೂ ನಡೆಯುತ್ತಿದೆ. ಜನತೆಯು ಅಧಿಕಾರಿಗಳಾಗಿದ್ದವರು ಒನಪಿಯ ಸೇವಕರಾಗಿದ್ದರೆ. ಸರಕಾರವೆಂದಾಗ ಊರ ಗೌಡರು, ಬಡಜನರಿಗೆ ಕಾವಾಲಾಗಿ ತೊಡಗಿದ ಜಮೀನ್ದಾರರ ಬಿಟ್ಟುಕೊಡಬೇಕಾಗಿ ತೋರುತ್ತದೆ. ಉತ್ತಮರು, ಎಂಬ ಭಾವನೆ ಬಲವಾಗುತ್ತಿದೆ. ಸರ್ವವೂ ಒಂದು ಎಂಬ ಕಡೆ ಜಗತ್ತು ಧಾವಿಸುತ್ತಿದೆ.

ಸಾಕ್ಷ್ಯವಾಗಿ ಪರಿಶೀಲಿಸಿದರೆ ಜಗತ್ತಿನ ಈ ಬಗೆಯ ಆವಿರ್ಭಾವ ಹೊಸದೇನಲ್ಲ. ಇದನ್ನು ನೋಡಿದರೆ ಆಶ್ಚರ್ಯವೂ ಆಗುವದಿಲ್ಲ. ಜನತೆಯನ್ನು ಬೇರೆ ಬೇರೆಯಾಗಿ ವಿಂಗಡಿಸಿದ ಸಮಾಜಕಟ್ಟುಗಳು, ಜಾತಿ, ಮತದ ಗೋಡೆಗಳು ಕುಸಿಯತೊಡಗಿವೆ. ಇದನ್ನು ಕಣ್ಣಾರೆ ಕಂಡವರು ನಾವು.

ಈ ವಿಚಿತ್ರ ಜಗತ್ತಿನಲ್ಲಿ ಬದಲಾವಣೆ ಸ್ಥಿರವೇ? ಬದಲಾಗುತ್ತಿದ ಹಿಂದುಸ್ತಾನವು ಅತ್ಯಧಿಕ ಐಶ್ವರ್ಯವನ್ನು ಸಕಲ ಐಶ್ವರ್ಯವನ್ನು ಗೂಢಿಸಿಕೊಂಡ ಸನ್ಯಾಸಿ, ಭಕ್ತರನ್ನು ಕರೆದು ಗಳಿಸಿಟ್ಟ ಧನಸಿರಿ ತರ್ಕ ಶೋಭಿಸಿ ಸತ್ಯವನ್ನರಿತ ತ್ರಿಗುಣವು ಆಗ ಜೀವನದ ರಹಸ್ಯವನ್ನು, ಅವರದೇ ವಿನಾಶದ ಈ ಆತ್ಮಬಲವಿರಲು ಅಳಿಯುತ್ತ ನಂತರ ಕೋಟ್ಯಾಂತರ ಅಗ್ರಸ್ಥಾನ ಸ್ಥಿರ ಉತ್ಕರ್ಷದ ಕಾಲವಾಯಿತು. ಇದೂ ಕಾಲದ ಹಿರಿಯ ಹಿನ್ನೆಲೆ ಸೇರಬೇಕಾಗಿದೆ. ಪರಿಷ್ಕಾರ, ಮೇಲ್ದರ್ಜೆ ಮಹಾ ಕಾಲ ಬಂದಿದೆ. ಇಂದು ಮಧ್ಯದ ಪ್ರಾಣ ದೊಡ್ಡವನ ಆಜ್ಞೆಗೆ ಸರ್ವ ಎಡೆಯಲ್ಲಿಯೂ ಗಾಂಧಿ ವ್ಯಾಪಕವೇ ಸರಕಾರಗಳನ್ನು ಕಟ್ಟಿದ ಶಕ್ತಿ. ಇದೂ ಇಳಿಮುಖವಾಗತೊಡಗಿ ಬಂಡವಾಳವಾದದ ಕೈಗೆ ಉಣ್ಣಲು ಕೈಲಿ ಎಂಬ ಸಿದ್ಧಾಂತ ಒರತೊಡಗಿ ಕೆಲಸಗಾರರ ರಾಜ್ಯಸ್ಥಾಪನೆಯಾಗಿದೆ. ಇದನ್ನು ಸಮತಾವಾದವೆನ್ನಿ, ಕಮ್ಯೂನಿಜಂ ಎನ್ನಿ ಮುಂದಿನ ಜಗತ್ತು ಇವರದು. ದೇವದೂತರದು. ಶ್ರಮದ ಬೆವರಿನಿಂದ ಜೀವಿಸುವವರದು. ಈ ಮಹಾ ಪರಿವರ್ತನೆಯು ಭಯಂಕರ ಘೋರ ಪ್ರವಾಹದಂತೆ. ಈ ರಭಸದಲ್ಲಿ ಸಿಲುಕಿದವರು, ಬೆಟ್ಟಗುಡ್ಡಗಳನ್ನು ಸಹಿಸಿ ನಿಂತಂತೆ ರಾಜ ಮಹಾರಾಜರು, ಶ್ರೀಮಂತ ಬಂಡವಾಳದಾರರು, ಜಮೀನ್ದಾರರು ನಾಶವಾಗಿಹೋಗುವರು. ಈ ಮಾರ್ಗಕ್ಕೆ ಶರಣಾಗತರಾಗಿ ಅರಿತು ಆದರ್ಶಾನುಸಾರ ಪರಿವರ್ತನೆಗೊಳ್ಳುವುದರಲ್ಲಿಯೇ ಜಾಣ್ಮೆ ಇದೆ.

> "ಬೆಂಕಿಯಿಂದ ಗೂಡಿಯು ಕೈ
> ಧರ್ಮದ ಧಾಳಕ್ಕೆ ಬೆಂಕಿಯ ಶಿಕ್ಷೆ
> ಜಗತ್ತಿನ ಶಾಶ್ವತದ
> ಸ್ವಾತಂತ್ರ್ಯದ ಪ್ರಭು ಗರ್ವ ಸ್ವಾತಂತ್ರ್ಯ ಪ್ರಭು
> ಬಡವರ ಬಾಗ ರಕ್ಷಕ ದ ಬಲ
> ಬಳಗದ ಬಾಗಿನ ಬಾಗಿಲಿನಿಂದು"

ಹೋರಾಟಕ್ಕಿದೆ.

ಈ ಪರಿ ಪ್ರಪಂಚದ ಸರ್ವ ವಿವರಗಳನ್ನೊಳಗೊಂಡ ಎಂಥ ಚಿತ್ರವನ್ನು ಪಡೆದ ಬಾಗಿ ಮರೆಯಿಕ್ಕಿದ ಅಪೇಕ್ಷೆ ಇವರ ಈ ಪತ್ರಿಕೆ ಒದಗಿ ಬರಲಿ.

A.

Co 'ಕೊಡಗು'

ಮಡಿಕೇರಿ

TENDER.

C. C. CO OPERATIVE STORES LIMITED

POLLIBETTA

Sealed Tenders are invited upto 5 P. M. Friday 11th February 1949 for the lease and running of the Stores' shops at Balmani, Benjigherry, Cannoneadoo, Devaracadoo, Jumboor Kudige, Margolly, Nullore, Pollibetta, Woshully and Yemmigoondi Estates as individual Estate shops.

The terms and Conditions are.

1. The Committee reserve the right to accept or reject the highest or any other tender as regards (a) rent and (b) business goodwill without giving any reason for their decision.

2. The successful person must take over all the stocks in the Branch for which his tender is accepted according to their valuation in the Liability Register within ten days of the acceptance against immediate cash payment.

3. He should undertake to sell rationed articles at controlled Prices and other articles at prices current in neighbouring Shandies adjoining each shop.

4. An agreement for the lease of the shop must be executed in favour of the owners of the premises before occupation. The cost of the upkeep of the premises must be borne by the tenant.

Separate Tenders for each shop will have to be sent and a deposit of Rs 100/ must accompany each tender. The name of the shop must be written clearly on the cover containing the tender and addressed to the President C. C. E. Co operative Stores Ltd. Pollibetta, and sent by Registered Post. If the tender is not accepted the deposit will be refunded.

Deposit money may be sent by Money Order to the undersigned or paid in person at the Head Office of the Stores taking a receipt therefor.

The tenders will be opened by the undersigned in the presence of a Committee constituted for it on Wednesday 16th February at 10 A. M.

The agreement will be for a period of three years with the option of renewal at the end of this period.

Copies of the agreement to be signed are available at the Office of the C. C. L. (1943) Ltd., Pollibetta.

POLLIBETTA JACK BULL
-1-1949 PRESIDENT

ಕೊಡಗು

ತಾ. ೪-೨-೧೯೪೯ನೇ ಶುಕ್ರವಾರ

ನಿಷಾ ನಿಶೇಧ.

ನಿಷಾನಿಷೇಧವನ್ನು ಆಗುವಷ್ಟು ಶೀಘ್ರವಾಗಿ ಜಾರಿಗೆ ತರಬೇಕೆಂದು ಕಾಂಗ್ರೆಸ್ಸ್ ಸಂಸ್ಥೆಯ ತೀರ್ಮಾನ ಮಾಡಿದ್ದರೂ ಬಹುಶಃ, ಸ್ವತಂತ್ರ, ಇಂಡಿಯಾ ಸರ್ಕಾರದವರು ಈ ವಿಚಾರದಲ್ಲಿ ಉತ್ಸುಕತೆಯನ್ನು ತೋರಿಸದೆ ಇರುವುದು ವಿಷಾದಕರ. ಕೇಂದ್ರ ಸರ್ಕಾರದ ಈ ಬಾಬಿಗಾಗಿ ದ್ರವ್ಯಸಹಾಯ ಕೊಡಲಾಗುವುದಿಲ್ಲವೆಂದು ಹೇಳಿದ ಕಾರಣ ಈ ವರ್ಷ ನಿಷಾನಿಷೇಧವನ್ನು ಕೊಡಗಿನಲ್ಲಿ ಜಾರಿಯಲ್ಲಿ ತರಲುಸಾಧ್ಯವಿಲ್ಲವೆಂದು ಸ್ಥಳೀಯಸರ್ಕಾರದವರು ನಿಶ್ಚಯ ಮಾಡಿರುವಂತೆ ಕಂಡುಬರುತ್ತದೆ. ಕೊಡಗಿನಲ್ಲಿ ಪ್ರಜಾ ಜವಾಬ್ದಾರಿ ಸರ್ಕಾರವಿಲ್ಲದ್ದರಿಂದ ಈ ಬಗ್ಗೆ ಈ ಪರಿಸ್ಥಿತಿಯೇ ಕೊಡಗಿನ ದುರಾದೃಷ್ಟವೆನ್ನಬೇಕಾಗಿದೆ. ಹೇಗೂ ಸ್ಥಳೀಯ ಸರ್ಕಾರದವರು ದೇಶದಲ್ಲಿ ಕುಡುಕತನವನ್ನು ಕಡಿಮೆ ಮಾಡಲು ಆಲೋಚಿಸಿ, ನಾವು ಕಳೆದ ವಾರ ಸೂಚಿಸಿದಂತೆ, ಮಾಡಿರುವ ಕೆಳಗಿನ ತೀರ್ಮಾನಗಳನ್ನು ಸಂಪೂರ್ಣವಾಗಿ ಜಾರಿಗೆ ತಂದು, ಮದುವೆ ಹಬ್ಬ ಮತ್ತೈರೆ ಸಾಮಾಜಿಕ ಕೂಟಗಳಲ್ಲಿಯೇ ಸ್ತ್ರೀಯರು, ಮಕ್ಕಳು, ಹಾಗೂ ಕುಡಿಯುವ ಅಭ್ಯಾಸವಿಲ್ಲದವರೇ ಮೊದಲಾದವರಿಗೆ ನಿಷಾಸೇವನೆ ಕಲಿಯುವ ಅವಕಾಶವಿರುವದರಿಂದ ಅಲ್ಲಿ ಖಡ್ಡಾಯವಾಗಿ ನಿಷಾಸೇವನೆಯನ್ನು ಮನ್ನಮಾಡಿ ಇಂಡಿಯಾ ಸರಕಾರದ ಸೂಚನೆಗಳನ್ನನುಸರಿಸಿ ಹಣದ ಉಪ್ಪತ್ತಿಯನ್ನು ಒದಗಿಸಿಕೊಂಡು ಆದಷ್ಟು ಬೇಗನೆ ಸಂಪೂರ್ಣ ನಿಷಾನಿಷೇಧವನ್ನು ಜಾರಿಯಲ್ಲಿ ತರಲು ಯತ್ನಿಸುವರಾಗಿ ಹಾರೈಸುತ್ತೇವೆ.

ಸಾರಾಯಿ ರೇಶನಿಂಗ್.

ತಾ. ೨೮-೧-೪೯ರಲ್ಲಿ ಮಡಿಕೇರಿ ಕೌನ್ಸಿಲ್ ಹಾಲ್‌ನಲ್ಲಿ ಚೀಫ್ ಕಮಿಷನರವರ ಅಧ್ಯಕ್ಷತೆಯಲ್ಲಿ ನಡೆದ ಜನರಲ್ ಪರ್ಪಸಸ್ ಕಮಿಟಿಯ ಮತ್ತು ಎಕ್ಸೈಸ್ ಅಡ್ವಯಿಸರಿ ಬೋರ್ಡಿನ ಮೆಂಬರುಗಳ ಮೀಟಿಂಗಿನಲ್ಲಿ ಈ ಕೆಳಗಿನ ತೀರ್ಮಾನಗಳಾದುವೆಂದು ತಿಳಿಯ ಬರುತ್ತದೆ.

ಇಂಡಿಯಾ ಸರ್ಕಾರದವರು ನಿಷಾನಿಷೇಧಕ್ಕಾಗಿ ದ್ರವ್ಯ ಸಹಾಯ ಕೊಡಲಾಗುವುದಿಲ್ಲವೆಂದು ತಿಳಿಸಿದ್ದರಿಂದ ಬರುವ ವರ್ಷ ಪೂರ್ತಿ ನಿಷಾವರ್ಜನೆ ಮಾಡಲಾಗುವುದಿಲ್ಲ. ಮತ್ತು ಈ ಕಾರಣ ೧೯೪೯-೫೦ ನೇ ವರ್ಷಕ್ಕೆ ಮೈಸೂರು ಕಂಪೆನಿಯವರು ತಿರುವಾಂಕೂರಿನ ನಗರ್ ಕೊಯಿಲ್ ಎಂಬಲ್ಲಿಂದ ೫೦,೦೦೦ ಗೆಲನ್ ವರೆಗೆ ಸಾರಾಯಿ ಕೊಡಲು ಒಪ್ಪಿರುವರು. ಆದರೆ ಅದನ್ನು ನಿಷಾನಿಷೇಧಿಸಿರುವ ಮದ್ರಾಸು ಪ್ರಾಂತ್ಯಕ್ಕಾಗಿ ಕೊಡಗಿಗೆ ಸಾಗಿಸಲು ಬಿಡುತ್ತಾರೋ ಎಂಬುದಕ್ಕೆ ಇನ್ನೂ ಉತ್ತರ ಬಂದಿಲ್ಲ. ಹಾಗೆ ಸಾಗಿಸಲು ಬಿಡದಿದ್ದರೆ ಕೊಡಗಿನಲ್ಲಿ ತನ್ನಷ್ಟಕ್ಕೇ ನಿಷಾನಿಷೇಧವಾಗುವುದು. ಸಾಗಿಸಲು ಬಿಟ್ಟರೆ ಈ ಕೆಳಗಿನ ರೀತಿ ನಿಷಾ ಸೇವನೆಯನ್ನು ಕಡಿಮೆ ಮಾಡಲು ಯತ್ನಿಸತಕ್ಕದ್ದು.

೧. ೫ ರಾಯಿ ಕುಡಿಯುವ ಅಭ್ಯಾಸವಿರುವವನಿಗೆ ತಿಂಗಳಿಗೆ ಅರ್ಧ ಕುಪ್ಪಿಯಂತೆ ಒಂದು ವರ್ಷಕ್ಕೆ ೬ ಕುಪ್ಪಿಗೆ ಕೂಪನ್ ಕೊಡಲಾಗುವುದು.

೨. ಇಂಥಾ ಕೂಪನ್ ಪಡೆಯುವದಕ್ಕೆ ಲೈಸನ್ಸ್ ಫೀ ಒಂದು ರೂಪಾಯಿ ವಸೂಲಿ ಮಾಡತಕ್ಕದ್ದು.

೩. ೨೧ ವರ್ಷದೊಳಗಿನ ಪ್ರಾಯದವರಿಗೆ ಕೂಪನ್ ಕೊಡಕೂಡದು.

೪. ಸಾರಾಯದ ಕ್ರಯ ಕುಪ್ಪಿಗೆ ೪ ರೂ. ೩.

೫ ಗೋಣಿಕೊಪ್ಪಲು, ವೀರಾಜಪೇಟೆ ನಾಪೋಕ್ಲು, ಮಡಿಕೇರಿ ಮತ್ತು ಸೋಮವಾರಪೇಟೆ—ಈ ಐದು ಗಡಂಗಗಳಲ್ಲಿ ಸರ್ಕಾರಿ ನೌಕರರಿಂದ ಕೂಪನ್‌ಗಳಿಗೆ ಸಾರಾಯಿ ಕೊಡಲಾಗುವುದು. (ಸಾಧ್ಯವಿದ್ದರೆ ಸೀಲ್ ಕುಪ್ಪಿಗಳಲ್ಲಿ ಮಾರತಕ್ಕದ್ದು.) ಸರಕಾರ ರಜೆ ದಿನಗಳಲ್ಲಿ ಈ ಗಡಂಗಗಳು ಮುಚ್ಚಲ್ಪಡುವವು. ಗಡಂಗಗಳಲ್ಲಾಗಲೀ, ಪೇಟೆ ಬೀದಿಗಳಲ್ಲಾಗಲೀ ಯಾರೂ ಸಾರಾಯಿ ಸೇವಿಸಕೂಡದು.

೬. ಹಬ್ಬ ಹುಣ್ಣಿಮೆ, ಮದುವೆ ಮುಂಜಿ ಮೊದಲಾದ ಸಾಮಾಜಿಕ ಕೂಟಗಳಲ್ಲಿ ನಿಷಾಸೇವನೆಯನ್ನು ಬಿಡಬೇಕೋ, ಯಾ ಬೇಡವೋ ಎಂಬ ವಿಚಾರ ಚರ್ಚೆ ನಡೆದು, ಸ್ವಲ್ಪ ಭಿನ್ನಾಭಿಪ್ರಾಯವಿದ್ದುದರಿಂದ ಇದನ್ನು ಚೀಫ್ ಕಮಿಷನರು ತನ್ನ ತೀರ್ಮಾನಕ್ಕೆ ಇಟ್ಟುಕೊಂಡರು.

ಆದುದರಿಂದ ಈ ವರ್ಷ ಸಾರಾಯಿ ಅಂಗಡಿಗಳ ಹರಾಜು ಮಾಡಕೂಡದು. ಆದರೆ ಸೇಂದಿ ಅಂಗಡಿಗಳ ಹರಾಜು ಎಂದಿನಂತೆ ನಡೆಯುವುದು. ಸೇಂದಿಯ ಕ್ರಯ ಸೇರಿಗೆ ೨ ಆಣೆಯಿಂದ ೩ ಆಣೆಗೆ ಏರಿಸತಕ್ಕದ್ದು. ಪರದೇಶೀ ನಿಷಾಪದಾರ್ಥಗಳ ಮಾರಾಟದ ನಿಯಂತ್ರಣವನ್ನು ಸರ್ಕಾರದವರು ಯುಕ್ತತೋರಿದ ರೀತಿ ಮಾಡತಕ್ಕದ್ದು.

ವರ್ತಮಾನ.

ಕಳೆದ ಸೆಪ್ಟಂಬರಿನಲ್ಲಿ ನಡೆದ ಬಿ ಈ. ಪರೀಕ್ಷೆಯಲ್ಲಿ ಶ್ರೀ ಕೊಕ್ಕೇಂಗಡ ಬಿ. ಸುಬ್ಬಯ್ಯನವರು ತೇರ್ಗಡೆಯಾಗಿರುವರು.

ಅಮೇರಿಕದ ಓಹಿಯೋ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡುತ್ತಿದ್ದ ಪೆಟ್ರಿಸರಿ ಡಾ. ಚೆಂಬಾಂಡ ಡಿ. ಕಾಳಪ್ಪನವರು ಪ್ರಥಮ ತರಗತಿಯಲ್ಲಿ ಎಂ. ಎಸ್‌ಸಿ. ಪಾಸಾಗಿರುವರು.

ಮದ್ರಾಸು ಸರಕಾರದ ಸಹಕಾರ ಮತ್ತು ಸ್ಥಳೀಯ ಸಂಸ್ಥೆಗಳ ಮಂತ್ರಿಗಳಾದ ಶ್ರೀ ಕೆ ಚಂದ್ರಮೌಳಿಯವರು ತಾ. ೧೪-೨-೪೯ ರಲ್ಲು ಕೊಡಗಿಗೆ ಬಂದು ಕೊಡಗಿನಲ್ಲಿ ನಾಲ್ಕು ದಿವಗಳವರೆಗಿದ್ದು ಇಲ್ಲಿಯ ಸಹಕಾರ ಸಂಸ್ಥೆಗಳನ್ನು ಸಂದರ್ಶಿಸುವರೆಂದೂ, ತಾ ೧೪-೨-೪೯ ರಲ್ಲು ಕೊಡಗು ಪ್ರಾಂತೀಕ ಸಹಕಾರ ಬ್ಯಾಂಕ್ ಮತ್ತು ಮಾರ್ಕೆಟಿಂಗ್ ಫೆಡರೇಶನಿನ ಪ್ರೆಸಿಡೆಂಟ್ ಡೈರೆಕ್ಟರುಗಳು ಅವರಿಗೆ ಕೌನ್ಸಿಲ್ ಹಾಲ್‌ನಲ್ಲಿ ಒಂದು ಬಿನ್ನವತ್ತಳೆಯನ್ನೂ, ನಂತರ ಅತಿಥಿ ಗೃಹದಲ್ಲಿ ಒಂದು ಟೀ ಪಾರ್ಟಿಯನ್ನೂ ಕೊಡುವರಾಗಿ ತಿಳಿದು ಬಂದಿದೆ.

ವೀರಾಜಪೇಟೆಯ ಇಷ್ಟಮಿತ್ರರು ತಾ. 22-1-49 ರಲ್ಲಿ ರಿಟೈರ್ಡ್ ವಿದ್ಯಾಧಿಕಾರಿಯಾದ ಶ್ರೀ. ಪಟ್ಟಡ ಸಿ ಉತ್ತಯ್ಯನವರಿಗೂ, ಮಗ ಬಿದ್ದ ಶ್ರೀ. ಸಿ. ಯಂ. ಭೀಮಯ್ಯನವರಿಗೂ—ಅವರಿಗೆ ದಕ್ಷಿಣದಲ್ಲಿ ಅವರಿಗೆ ಹೊಸ ಹುದ್ದೆ ದೊರಕಿದ ಕ್ಕಾಗಿ—ಟೀಪಾರ್ಟಿಗಳನ್ನು ಕೊಟ್ಟರೆಂದು ತಿಳಿಯಬರುತ್ತದೆ.

ಮಡಿಕೇರಿಯಲ್ಲಿ ಚಿನ್ನದ ಕೆಲಸ ಮಾಡುತ್ತಿರುವ ಶ್ಯಾಮಾಚಾರಿಯವರ ಅಂಗಡಿಯಿಂದ ಕೆಲವು ದಿನಗಳ ಹಿಂದೆ ಕಳವಾದ ಹಣದ ಸಂಬಂಧ ಮೂರು ಜನರ ದಸ್ತಗಿರಿಯಾಗಿ ವಿಚಾರಣೆ ನಡೆಯುತ್ತಿದೆ.

ಕೆಲವು ತಿಂಗಳುಗಳ ಹಿಂದೆ ಸಿದ್ದಾಪುರದ ಹತ್ತಿರ ಅಗಸರ ಬೋರಯ್ಯನವರನ್ನು ಕೊಂದರೆಂಬ ಅಪಾದನೆಯಿಂದ ಮರಣದಂಡನೆಗೆ ಗುರಿಪಡಿಸಿದ್ದ ದೇವಾಂಗದ ಹುಚ್ಚಪ್ಪಶೆಟ್ಟರನ್ನು ತಾ ೩೧ ರಲ್ಲಿ ಗಲ್ಲಿಗೇರಿಸಲಾಯಿತು.

ಕೊಡಗಿನ ಜಿಲ್ಲಾ ವಿದ್ಯಾಧಿಕಾರಿಗಳ ಕೆಲಸಕ್ಕೆ ಹೊರಗಿನಿಂದ ಒಬ್ಬರನ್ನು ತರುವ ವಿಷಯ ಯಾವ ತೀರ್ಮಾನವೂ ಆಗಿರುವುದಿಲ್ಲ. ಈ ವಿಷಯ ಇಂಡಿಯಾ ಸರಕಾರದೊಡನೆ ಪತ್ರವ್ಯವಹಾರ ನಡೆಯುತ್ತಿದೆ. ಈ ಸಂಬಂಧವಾಗಿ ದೇಶದ ಹಿತಕ್ಕೆ ವಿರೋಧವಾಗಿ ಯಾವ ಕಾರ್ಯವನ್ನು ಕೈಗೊಳ್ಳುವುದಿಲ್ಲವೆಂದು ಮಡಿಕೇರಿ ಪಬ್ಲಿಕ್‌ನ ಪರವಾಗಿ ಹೋಗಿದ್ದ ಡೆಪ್ಯುಟೇಷನ್ನಿಗೆ ಚೀಫ್ ಕಮಿಷನರವರು ತಿಳಿಸಿರುವರೆಂದು ತಿಳಿಯ ಬರುತ್ತದೆ.

ಸರ್ವೋದಯ ದಿನಾಚರಣೆ.

ವೀರಾಜಪೇಟೆ.

ತಾ. ೩೦-೧-೪೯ ರಲ್ಲಿ ಸರ್ವೋದಯ ದಿನ ಆಚರಣೆಗಾಗಿ ವೀರಾಜಪೇಟೆಯಲ್ಲಿ ಪ್ರಾತಃಕಾಲ ೫-೩೦ ಗಂಟೆಗೆ ಪ್ರಭಾತ್‌ಫೇರಿ ಪೇಟೆಯ ಬೀದಿಗಳಲ್ಲೆಲ್ಲಾ ನಡೆಯಿತು. ಶ್ರೀ ಕಾವೇರಿ ಆಶ್ರಮದಲ್ಲಿ ಇಡೀ ದಿನ ಅಖಂಡ ಭಜನೆಯಾಯಿತು. ಮುನ್ಸಿಪಲ್ ಹಾಲ್‌ನಲ್ಲಿ ಮಧ್ಯಾಹ್ನ ಬಡಬಗ್ಗರಿಗೆ ಅಕ್ಕಿ ಹಂಚಲಾಯಿತು. ಸಾಯಂಕಾಲ ೩½ ಗಂಟೆಗೆ ಶ್ರೀ ಕಾವೇರಿ ಆಶ್ರಮದಿಂದ ರಾಮಧುನ್ ಮೆರವಣಿಗೆ ಹೊರಟು ಮುನ್ಸಿಪಲ್ ಮೈದಾನಕ್ಕೆ ತಲಪಿತು. ಅಲ್ಲಿ ಶ್ರೀ ಪಿ ಐ. ಬೆಳ್ಳಿಯಪ್ಪನವರ ಅಧ್ಯಕ್ಷತೆಯಲ್ಲಿ ಸಾಮೂಹಿಕ ಪ್ರಾರ್ಥನಾ ಸಭೆ ಜರಗಿತು. 'ವೈಷ್ಣವಜನತೋ' ಹಾಡಿದ ನಂತರ ಜನಾಬ್ ಅಬ್ದುಲ್ ಸತ್ತಾರ್ ಮತ್ತು ಮೌಲ್ವಿ ಅಬ್ದುಲ್ ಖಾದರ್‌ರವರಿಂದ ಕುರಾನಿನ ಪಠನವಾಯಿತು. ಗೀತಾಪ್ರವಚನವನ್ನು ಡಾ. ಅಣ್ಣಯ್ಯನವರು ಮಾಡಿದರು. ಬೈಬಲ್ ವಾಚನವು ರೆ ಫಾದರ್ ಡಿಸೋಜರವರಿಂದ ಮಾಡಲ್ಪಟ್ಟಿತು. ನಂತರ ಅಧ್ಯಕ್ಷರು-ಕಾಂಗ್ರೆಸು ವರ್ಕಿಂಗ್ ಕಮಿಟಿಯವರು ತಯಾರಿಸಿದ ಸಂದೇಶವನ್ನು ಓದಿದರು. 'ವಂದೇಮಾತರಂ' ರಾಷ್ಟ್ರಗೀತೆಯಿಂದ ಸಭೆಯು ಬರಖಾಸ್ತಾಯಿತು. ಅಲ್ಲಿಂದ ಎಲ್ಲರೂ ಗಣಪತಿ ದೇವಾಲಯಕ್ಕೆ ಹೋಗಿ ಪೂಜೆ ಮತ್ತು ಮಂಗಳಾರತಿ ನಡಿಸಲ್ಪಟ್ಟಿತು.

ಮಡಿಕೇರಿ

ಸರ್ವೋದಯ ದಿನ ಚರಣೆಯು ಮಡಿಕೇರಿ ವಿದ್ಯಾರ್ಥಿ ಕಾಂಗ್ರೆಸ್ಸಿನವರಿಂದ ಆಚರಿಸಲ್ಪಟ್ಟಿತು. ಬೆಳಗ್ಗೆ ಧ್ವಜಾರೋಹಣದ ನಂತರ ಶಾಲಾ ಮಯ್ದಾನದಲ್ಲಿ ವಿದ್ಯಾರ್ಥಿಗಳಿಗೆ ಕೆಲವು ಹಿತವಚನಗಳನ್ನು ನುಡಿದರು. ನಂತರ ಶಾಲಾ ಆವರಣವನ್ನು ಚೊಕ್ಕಟಗೊಳಿಸಲಾಯಿತು. ೮ ಗಂಟೆಗೆ ಮೌನ ಮೆರವಣಿಗೆಯಾಗಿ ಶಾಲಾ ಹಾಲ್‌ನಲಿ ಸಭೆಯು ಶ್ರೀ ಸಿ. ಎಂ ರಾಮಯ್ಯರ ಅಧ್ಯಕ್ಷತೆಯಲ್ಲಿ ನಡೆದು ಪ್ರತಿಜ್ಞಾ ಸ್ವೀಕಾರವಾಯಿತು. ಭಜನೆಯ ನಂತರ ಕಾರ್ಯಕ್ರಮ ಮುಕ್ತಾಯಗೊಂಡಿತು.

ಸಾರ್ವಜನಿಕರ ಸಭೆಯು ಸಾಯಂಕಾಲ ಕೋಟೆಯ ಹೊರ ಅಂಗಣದಲ್ಲಿ ನೆರೆದಿತ್ತು. ಮಹಾತ್ಮರ ಚಿತಾ ಭಸ್ಮವನ್ನು ರಾಜ ಮರ್ಯಾದೆಯಿಂದ ಹೊರ ತಂದು ಸಾರ್ವಜನಿಕರ ಸಂದರ್ಶನೆಗಿಡಲಾಯ್ತು. ಪ್ರಾರ್ಥನೆಯ ನಂತರ ಭಗವದ್ಗೀತೆ, ತುಳಸೀರಾಮಾಯಣ, ಬೈಬಲ್ ಖುರಾನ್‌ಗಳಿಂದ ಪಠನವಾಯಿತು. "ರಘುಪತಿರಾಘವ ರಾಜಾ ರಾಂ' ಭಜನೆಯಾದ ನಂತರ ಸಭೆ ಸಮಾಪ್ತಿಗೊಂಡಿತು.

ಬೇಂಗೂರು

ಬೇಂಗೂರು ಗ್ರಾಮಸ್ಥರು ಕೃಷ್ಣ ದೇವಸ್ಥಾನದಲ್ಲಿ ಸೇರಿ ಕೆಲವು ನಿಮಿಷ ಮೌನವಾಗಿ ಪ್ರಾರ್ಥಿಸಿದರು. ದೇವರಿಗೆ ಕ್ಷೀರಾಭಿಷೇಕದನಂತರ ಮಹಾತ್ಮರ ಅಮರ ಆತ್ಮಕ್ಕೆ ಚಿರಶಾಂತಿಯನ್ನು ಒಯಲಾಯಿತು.

ಹುದಿಕೇರಿ

ಶ್ರೀ ಕೆ. ಎಸ್ ನಂಜಪ್ಪನವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕರ ಸಭೆ ನೆರೆದು 'ಸರ್ವೋದಯ ದಿನ' ಆಚರಿಸಲಾಯಿತು. ಹುದಿಕೇರಿಯ ಎಲ್ಲಾ ಅಂಗಡಿಗಳು ಮುಚ್ಚಲ್ಪಟ್ಟಿದ್ದವು. ಮೌನ ಪ್ರಾರ್ಥನೆ, ಪ್ರತಿಜ್ಞಾ ಸ್ವೀಕಾರ ನಡೆಯಿತು.

ಬೆಕ್ಕೆಸೊಡ್ಲೂರು.

ಬೆಕ್ಕೆಸೊಡ್ಲೂರು ಗ್ರಾಮದ ಶಾಲೆಯ ಬಳಿಯಲ್ಲಿರುವ ತೋಪಿನಲ್ಲಿ ಶ್ರೀ ಕೆ. ಜಿ. ಪೂವಯ್ಯನವರ ಅಧ್ಯಕ್ಷತೆಯಲ್ಲಿ ನಡೆಸಲಾಯ್ತು. ಧ್ವಜ ವಂದನೆಯನಂತರ ಪ್ರತಿಜ್ಞೆಯನ್ನು ಸ್ವೀಕರಿಸಲ ಯಿತು.

ನಂತರ ಅಧ್ಯಕ್ಷರೂ, ಪೊನ್ನಂಪೇಟೆ ವಿದ್ಯಾರ್ಥಿ ಕಾಂಗ್ರೆಸ್ಸಿನವರೂ, ಗ್ರಾಮದ ಶುಚಿತ್ವ ಕಮಿಟಿಯವರೂ ಮತ್ತು ಇನ್ನಿತರ ಮಹನೀಯರೂ ಗ್ರಾಮ ಸುತ್ತ ಶುಚಿತ್ವದ ವಿಷಯದಲ್ಲಿ ಬೋಧನೆ ಮಾಡಿದರ.

ಮಾರಾಟಕ್ಕಿದೆ.

ಮಡಿಕೇರಿ ಮಹದೇವಪೇಟೆ ಎ ವಿ. ಸ್ಕೂಲ್ ಸಮೀಪ ಉತ್ತಮವಾದ ಮತ್ತು ಕುಟುಂಬ ವಾಸಕ್ಕೆ ಯೋಗ್ಯವಾದ ಒಂದು ಮನೆ ಮಾರಾಟಕ್ಕಿದೆ. ಈ ಮನೆಗೆ ಸಂಬಂಧಪಟ್ಟ ಒಂದು ಔಟ್‌ಹೌಸ್, ನೀರಿನ ಅನುಕೂಲತೆಗೆ ಒಂದು ಬಾವಿ, ಎಲೆಕ್ಟ್ರಿಕ್ ದೀಪದ ಸಲಕರಣೆ ಮತ್ತು ತರಕಾರಿ ವಗೈರೆ ಮಾಡಲು ಅನುಕೂಲವಾದ ಸ್ವಲ್ಪ ಜಾಗವೂ ಇದೆ. ಬೆಲೆ ರೂಪಾಯಿ 4500/- ಅಥವಾ ಅದರ ಸಮೀಪ. ಖಾಯಿಸ್‌ದಾರರು ಹೆಚ್ಚಿನ ಮಾಹಿತಿಗೆ ಕೆಳಗಿನ ಪತ್ತೆಗೆ ಬರೆಯಿರಿ.

ಎನ್. ಎಂ. ಬೋಪಯ್ಯ,
ನೇಶನಲ್ ಸ್ಟೋರ್ಸ್,
3-1 ಚೌಕಿ, ಮಡಿಕೇರಿ.

ಮಾರಾಟಕ್ಕಿದೆ.

ಮಡಿಕೇರಿ ಮಹದೇವ ಪೇಟೆಯಲ್ಲಿ ಉತ್ತಮ ಆವರಣವುಳ್ಳ ಅಂಗಡಿಗೂ ಮತ್ತು ವಾಸಕ್ಕೂ ಯೋಗ್ಯವಾದ ಮನೆಯು ಮಾರಾಟಕ್ಕಿದೆ. ವಾಸದ ಮನೆಯು ಮಹಡಿ ಮನೆಯಾಗಿದ್ದು ನೀರಿನ ವ್ಯವಸ್ಥೆ ಚೆನ್ನಾಗಿದೆ. ಅಂದಾಜು ಬೆಲೆ ರೂ 7000/ ಖಾಯಷ್ ದಾರರು ಹೆಚ್ಚಿನ ವಿವರಗಳಿಗೆ ಈ ಪತ್ರಿಗೆ ಪತ್ರವ್ಯವಹಾರ ಮಾಡಬಹುದು

N

C/o 'ಕೊಡಗು'

2-1 ಮಡಿಕೇರಿ

Season Deposits

of Rs 1000/-and above are accepted from 1-2 49 upto 15-2 49 for a period of three months at the rate of four percent interest per annum

K. P. APPAIYA,
President,
The Coorg Provincial
Co operative Bank L'd
Mercara.

WANTED

Fitter conversant with Crossley Kerosene Engine, knowledge of Blacksmith and general fitting work. Apply with reference to –

THE MANAGER,
Jumboor Estate,
Madapur Post, Coorg

ಕೊಡಗು ಜೇನು ಮತ್ತು ಮೇಣ ಕೃಷಿಕರ ಸಹಕಾರ ಸಂಘ, ವೀರಾಜಪೇಟೆ.

ಪ್ರಬಂಧ ಸ್ಪರ್ಧೆ.

ಕೊಡಗಿನ ಜೇನು ಕೃಷಿಯ ಕುರಿತು ಒಂದು ಪ್ರಬಂಧ ಸ್ಪರ್ಧೆಯನ್ನು ನಡಿಸಲಾಗುವುದು. ಜೇನು ಕೃಷಿಯ ಸದ್ಯದ ಸ್ಥಿತಿ ಮತ್ತು ಮುಂದಿನ ಅಭಿವೃದ್ಧಿಯ ಸೂಚನೆಗಳು ಅಡಕವಾಗಿರತಕ್ಕದ್ದು. ಬರೆಯುವವರು ತಮ್ಮ ಪ್ರಬಂಧವನ್ನು (ಪ್ರೂಫ್ ಕಾಗದದ ಒಂದು ಬದಿಯಲ್ಲಿ ಬರೆದ) ತಾರೀಕು 15 ರೊಳಗೆ ಸಂಘದ ಪ್ರೆಸಿಡೆಂಟರವರಿಗೆ ಕಳುಹಿಸತಕ್ಕದ್ದು. ಪುರಸ್ಕಾರವಿತಿಯಲ್ಲಿ ಉತ್ತಮವಾದ ಎರಡು ಪ್ರಬಂಧಗಳಿಗೆ ರೂ 15 ಮತ್ತು ರೂ 10 ರ ಬಹುಮಾನಗಳನ್ನು ತಾರೀಕು 19 ರ ಮಹಾಸಭೆಯಲ್ಲಿ ಕೊಡಲಾಗುವದು. ಪ್ರಬಂಧಗಳನ್ನು ವಾಪಸು ಕಳುಹಿಸುವ ಭಾರವನ್ನು ಸಂಘವು ಹೊರಲಾರದು.

ಟಿ ಎಂ ಕಾರ್ಯಪ್ಪ,
1 2 49 ಪ್ರೆಸಿಡೆಂಟ್

ಟೌನ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ವೀರರಾಜಪೇಟೆ.

ಈ ಬ್ಯಾಂಕಿನ ವರ್ಷದವಧಿ ವಹಿವಾಟು ರೂ ೫,೦೦,೦೦೦
ವಹಿವಾಟಿನ ಭಂಡವಾಳ ೧ ೭೦,೦೦೦/

ಎಲ್ಲಾ ತರಹದ ಬ್ಯಾಂಕಿಂಗ್ ವಹಿವಾಟುಗಳು ನಡೆಯುತ್ತಲಿವೆ. ಚಿನ್ನದ ನಗಗಳ ಈಡಿನ ಮೇಲೆ, ಸ್ಥಿರಸ್ವತ್ತುಗಳ ಆಧಾರದ ಮೇಲೆ, ಮತ್ತು ಭತ್ತ ಮಗ್ಗರೆ ಸರಕುಗಳ ಮೇಲೆ ಸಾಲಗಳು ಕೊಡಲ್ಪಡುತ್ತವೆ. ಚೆಕ್ಕು ಯೂ ಡ್ರಾಫ್ಟುಗಳು ಡಿಸ್ಕೌಂಟು ಮಾಡಲ್ಪಡುತ್ತವೆ. ಸಾಹುಕಾರರ ಬಿಲ್ಲುಗಳನ್ನು ಕಂಪನಿಗಳಿಗೆ ರವಾನಿಸಲ್ಪಡುತ್ತವೆ.

ಹೆಂಗಸರಿಯೂಗಿ ಫೆಬ್ರವರಿಯಿಂದ ಜೂನ್ ಆಖೈರದ ವರೆಗಿನ ತಿಂಗಳ ವಾಯಿದೆಗೆ ಡಿಪಾಜಿಟ್ಟುಗಳು ಶೇಕಡ ಸಲಿಗೆಯ ಬಡ್ಡಿ ಯಲ್ಲಿ ೧೯೪೯ನೇ ಮೇ ತಿಂಗಳ ವರೆಗೆ ಸ್ವೀಕರಿಸಲ್ಪಡುತ್ತವೆ

ವೀರಾಜಪೇಟೆ, ತಾ. ೨೬-೧-೧೯೪೯. } 4-2

ಪ್ರೆಸಿಡೆಂಟ್,
ಟೌನ್ ಕೋ-ಆಪರೇಟಿವ್ ಬ್ಯಾಂಕ್

ಬಟ್ಟೆ ಬೇಕೆ?

ಮಹನೀಯರೇ,

ನಮ್ಮಲ್ಲಿ ಸ್ಪೆಶಲಾಗಿ ಮಾರುವಿಗೆ ಇರುವ ಧಾನಾನಾ ತರಹದ ಒಳ್ಳೇ ಒಳ್ಳೇ ಫ್ಯಾನ್ಸಿ, ರಬುವಿನ ಬೆಂಗಾಲ್ ಸಿಲ್ಕು, ಬನಾರಸ್, ಸೇಲಂ, ಕೊಯಮುತ್ತೂರು, ಮತ್ತು ಮಧುರಾ ಮುಂತಾದ ಅನೇಕ ಸ್ಥಳಗಳಿಂದ ತಯಾರಾದ ಜವಳಿಗಳು ದೊರೆಯುತ್ತೆ

ಒಂದಾವರ್ತಿ ದಯವಿಟ್ಟು ಬಂದು ಪರೀಕ್ಷಿಸಿರಿ!

ಮದುವೆಗೋಸ್ಕರ ನಾನೂರು ರೂಪಾಯಿ ಮೇಲ್ಪಟ್ಟು ಮಾಲುಗಳಿಗೆ ನಮ್ಮ ಈ ಕೆಳಗಿನ ಅಡ್ರೆಸಿಗೆ ಆರ್ಡರ್ ಮಾಡಿದಲ್ಲಿ, ನಾವುಗಳು ತಮಗಳ ಬಂಗ್ಲೆಗಳಿಗಾಗಲೀ, ಅಥವಾ ಮನೆಗಳಿಗಾಗಲೀ ತಂದು ಕೊಡುವವು

Valki Mohidin Saheb & Bro,
Silk & Cotton Merchants,
12-5 VIRAJAPET (S COORG)

॥ ಪತ್ರವ್ಯವಹಾರಗಳು ॥

ಕೊಡಗಿನ ಸಂಯೋಜನೆ.

ಸ್ವಾಮಿಗಳೆಂದು ಸಂತೆಗೆ ಹೋದರೆ ಅಲ್ಲಿಯೂ ಕೊಡಗಿನ ಭವಿಷ್ಯದ ಮಾತು ಬಸ್ಸು ಹತ್ತಿದರೆ ಅದೇ ಕೂಗಾಟ. ಈ ಭವಿಷ್ಯದ ಮಾತು ಕೇಳಿ ಕೇಳಿ ಕಿವಿಯು ಪರವಶವಾಗಿ ಹೋಗಿದೆ. ಮನೆಯಲ್ಲೂ ಇದೇ ಮಾತು. ನನಗೆ ಸಾಕಾಗಿತ್ತು. ಅಂತು ಕಚೇರಿಯಲ್ಲಿ ಕೂತು ಮಾಜನ ಸೇರಿದ ಪತ್ರಿಕೆಯನ್ನು ತೆಗೆದುಕೊಂಡೆ. ಅದರಲ್ಲೂ ಕೊಡಗಿನ ಭವಿಷ್ಯದ ವಿಚಾರವೇ ಇರಬೇಕೆ? ಎನಿದು? ಈ ಭವಿಷ್ಯದ ವಿಚಾರವೇನ? ಎಂದು ಮನದಲ್ಲಿ ಪ್ರಶ್ನೆ ನಿಂತಿತು. ಈ ಪ್ರಶ್ನೆಯನ್ನು ಬಗೆಹರಿಸಿದ ನನ್ನ ಅನುಭವ ಕುರಿತ ಎರಡು ಎಳುವುಗಳನ್ನು ಇಲ್ಲಿ ಕೊಡುವೆನು

(೧) ಅಂದು ಊರಿನ ಜನರು ನರೆದಿದ್ದರು. ಮಕ್ಕಳು ಇಬ್ಬರು ಸಹಿತ, ಮಾದಪೂಸ್ಸಿ ಘೋಷಿತ ನಗರದವರಿದ್ದರು. ಅವರೀಗ ಬಸ್ಸು ತಟ್ಟಲ್ಪಟ್ಟ ಕೆಲವು ಕಟ್ಟಿರೂ ಕೂತಿದ್ದರು. ಒಬ್ಬರು ಭಾಷಣ ಪ್ರಾರಂಭಿಸಿದರು 'ಮೈಸೂರಿಗೆ ಕೊಡಗಿನ ಸಂಯೋಜನೆ ಆದಂತೆ ಈ ಸಂಯೋಜನೆಯಿಂದ ಹೀರಂಗಿ ನಿರಾವರಿ ಯೋಜನೆ ಬೇಗನೆ ಆಗುವದು. ಮೈಸೂರಿನವರು ನಮಗೆ ಬೇಕಾದ ಮನೆನ್ನೆಲಾ ಮಾಡಿಕೊಡಲು ಒಪ್ಪಿದ್ದಾರೆ. ಸಂಯೋಜನೆಯಿಂದ ಕೊಡಗನ್ನು ಎತ್ತಿಕೊಂಡು ಹೋಗಿ ಎಲ್ಲಿಯೂ ಹಾಕುವದಿಲ್ಲ. ಮುಂದೆ ಮೈಸೂರು ಮಂತ್ರಿಗಳ ನಿರ್ದೇಶದಂತೆ ಕೊಡಗಿನ ಆಡಳಿತ ನಡೆಯುವದು. ಮೈಸೂರು ಮಂತ್ರಿಮಂಡಲದಲ್ಲಿ ಕೊಡಗಿನ ಒಬ್ಬರಿಗೆ ಸ್ಥಳಕೊಡಬೇಕೆಂದು ಕೇಳಿರುವೆವು' ಎಂದು ಸಾರಲಾಗಿ ಕೇಳಿ ಹರ್ಷಿಸಿದರು. ನನ್ನ ಜೊತೆಗೆ ಒಬ್ಬ ಮೈಸೂರಿನವನಿದ್ದ. ಕಮಾರಿ ನದಿಯ ಆಚೆ ನನ್ನ ಜೊತೆಗಿದ್ದವನು ಮೈಸೂರಿನವ. ಆ ದಿನ ಈ ಗಡಿಯಲ್ಲಿ ಅಂದಿನ ಪರಿಯೂಪಟೆದಿಂದ ಹಿಡಿದು ಅರಕಲಗೋಡಿನವರೆಗಿನ ಮೈಸೂರು ಪ್ರಜೆಗಳು ನಿಂತಿದ್ದ ನಮಗೆ ಹತ್ತಿರದಲ್ಲ ಕೊಡಗಿನ ಪರಿವರ್ತನದಿಂದ ಈ ಬಗದ ಮೈಸೂರು ಜನರು ಬದುಕುತ್ತಿದ್ದಾರೆ. ಇಂದೂ ಕೂಡ ನಮ್ಮ ಕಡೆಯಿಂದ ಹೋಗಿದ ಟಿಕ್ಕಿ ಸಗಿತ್ತಿದೆ. ಆದರಿಂದಾಗಿ ಅಲ್ಲಿಯವರ ಜೀವನ ಮೈಸೂರಿನ ಮುಂದರಿಗೆ ಸರಕಾರ ಇವರ ಬಗ್ಗೆ ಮಾಡಿರುವದೇನು? ಉಪವಾಸವಿದ್ದು ಸಾಯುತಿರುವ ಜನರಿಗೆ ಬೇಕಾದುದನ್ನು ಒದಗಿಸಲಾರದ ಸರಕಾರ ಕೊಡಗಿಗೆ ಬೇಕಾದುದನ್ನೆಲ್ಲಾ ಹೇಗೆ ಮಾಡಿ ಕೊಟ್ಟೀತು?

(೨) ಅಂದು ಬಸಿನಲ್ಲಿ ಪ್ರಯಾಣ ಮಾಡುತ್ತಿದ್ದೆ. ಹಿಂದಿನ ಸೀಟಿನಲ್ಲಿ ಇದ್ದ ಆ ಕಲ್ಲಿಗಳು ಒಂದು ಗಳು. ಕೊಡಗಿನವ ಅವರಂಗದ ಸಮ್ಮುಖದಲ್ಲಿ 'ಮಲ್ಲ' ಇದ್ದರು. 'ನೇಷ್ಟ' ಎಂದು ಹೇಳಿ ನಮ್ಮನ್ನು ವಿಧ್ವಂಸಿಗೆ ಧಿಕ್ಕರಿಸಿದವರು ತಾವು ಹೋಗುತಿದ್ದ ದಾರಿಯಲ್ಲಿ ಎರಡು ಜನ ಮೈಸೂರು ಪೋಲೀಸರು ದನ ಕಾಯುವ ಮಕ್ಕಳನ್ನು ಏನೋ ಕೇಳುತ್ತಿದ್ದರು. ಬಸ್ಸಿನಲ್ಲಿದ್ದ ಕ್ರೈಸ್ತರೊಬ್ಬರು 'ಏನ್ರಿ', ಇಲ್ಲಿ ಮೈಸೂರು ಪೋಲೀಸರನ್ನು ಕಾಣುತ್ತಿದೆ' ಎಂದರು. ಪಕ್ಕದಲ್ಲಿ ಕೂತ 'ಮೇಸ್ತ್ರಿ', 'ಮುತ್ತೇನ್ರಿ' ಮೈಸೂರಿಗೆ ಕೊಡಗು ಸೇರಿ ಹೋಯಿತು. ಅದೇ ಪೋಲೀಸರು ಇಲ್ಲಿ' ಎಂದರು

ನನಗೆ ತಡೆಯಲಾಗಲಿಲ್ಲ. 'ನೀವು ತಾ. ೨೭ರಲ್ಲಿ ಬೆಂಗಳೂರಿಗೆ ಜವಾಹರರನ್ನು ಕಾಣಲು ಹೋಗಿದ್ದ ಪ್ರತಿನಿಧಿಗಳೇನು?' ಏನೆಂದು ಕೇಳಿದೆ. ಅವರು ತಪ್ಪನ್ನು ತಿಳಿದು ಮೌನ ತಾಳಿದರು. ನಾನು ಹೇಳಿದೆ, 'ರಾಯರೇ, ನಿಮ್ಮಂದಾ ವಿಪರೀತ ಬುದ್ಧಿಯವರು ಇಲ್ಲದ ಪ್ರಚಾರವನ್ನು ಹಳ್ಳಿಯ ಜನರಿಗೆ ಮಾಡಿ ದೇಶದ್ರೋಹ ಮಾಡುತ್ತಿರುವಿರಿ. ಮೈಸೂರಿನ ನಾಲ್ಕು ಮೂಲೆ ನೋಡದವನೂ ಮೈಸೂರಿಗೆ ಸೇರಬೇಕೆನ್ನುವನೇ! ಕೊಡಗಿನ ಜನರ ಪರಿಚಯವಿಲ್ಲದವನೂ, ಕೊಡಗು ಸರಕಾರದ ಸ್ಥಿತಿ ತಿಳಿಯದವನೂ ಪ್ರತ್ಯೇಕವಿದ್ದರೆ ಸರ್ವನಾಶವೆನ್ನುವದೇ! ಈ ರೀತಿಯ ಬೇಜವಾಬ್ದಾರಿ ವರ್ತನೆಯು ದಯಾರಿಗೂ ಹಿತವಾಗದು. ಅಧಿಕಾರಕ್ಕಾಗಿ ಬಟ್ಟೆ ದೋಚುವ ಅಲ್ಲಿನ ನಾಯಕರನ್ನು ಮೈಸೂರಿಗೆ ಸೇರಿಸಬೇಕೆ? ಎಲ್ಲಿಯೋ ಒಬ್ಬ ಅಂಥ ಅಧಿಕಾರಿ ಧಿಕ್ಕಾರ ದಸರೆಯಲ್ಲಿ ಮತ್ತೀನ ಕೊಡಗನ್ನು ಬಂದಿ ಸುಖ ತಕ್ಕ ಸೇರಿಸಬೇಕೇ? ಅವರು ಮಾತೆತ್ತಲಿಲ್ಲ

(೩) ನಮ್ಮ ನೆರೆಯಲ್ಲಿ ಒಬ್ಬರ ಇದ್ದರೆ. ಹರಿಜನರಿಂದ ರವಾಗದೆ ಅಂದು ಅವರ ಕಡೆಯಿಂದ ಗಲಿಬಿಲಿ ಕೂಗುತ್ತಿದೆ. ಹುಡುಗಿಯ ಹುಡುಗನ ಅಧಿಕ ಸಂಕಷ್ಟವೇ! ನೋಸ್ವೆಯಾಗಿ ಮಲೆಯ ನಿಮ ದಾರಿ ಇಲ್ಲ ಬೆಳವ ಪತಿಗೆ ನೋಡಲು ಬರಗಿ ಜಾತಿಯನ್ನು ವಂಶ ಕೇಳಿದಾಗ ಕವರಿ ದಾಖಲು ಹರಿಜನರಿಲ್ಲದ ಮನೆಗೆ ಪ್ರವೇಶ ಕೊಡದುದು ಅವರೂ ಸಧರ್ಮರೇ! ಇವರು ಹರಿಜನರಾಗಿದ್ದರೆ! ಇವರು ಕಾಂಗ್ರೆಸ್ಸು ಪುಢಾರಿಗಳು. ದೇಶದ ಭವಿಷ್ಯದ ವಿಚಾರ ಕಂಡ ಕಂಡವರೊಡನೆ ಹೇಳುತ್ತಾರೆ. ಮೈಸೂರಿನೊಡನೆ ಸೇರಿದಿದ್ದರೆ ಕೊಡಗು ಉಳಿಗಾಲವಿಲ್ಲವೆನ್ನುತ್ತಾರೆ. ಪ್ರಜಾಸಂಘಗಳಿಂದ ಪ್ರತ್ಯೇಕವಿದ್ದ ಮೈಸೂರಿನ ಪ್ರಜೆಗಳಿಂಥ ಚೆನ್ನಾಗಿ ಬದುಕಿದ್ದಾ. ಇಂದು ಬದುಕುತ್ತಿರುವ ಕೊಡಗಿನವರಿಗೆ ಉಗಿ ಉಳಿಗಾಲವಿಲ್ಲದಾಗಲು ಕಾರಣವೇನು? ಎಂದರೆ ಗಲ, ಇಲ್ಲವೇ ಉಚಿತವಾದ ಪಡೆದಲ, ಇಲ್ಲಿಯ ಯಾವುದೇ ಕೆಲವಿನ ಮೇಲಿನ ದೊಟ್ಟಿ ಚಿತ್ತವನ್ನು ತಿಳಿಸಲು ಈ ಕಾಗದವನ್ನು ಒಬರ ಹಿಡಿದ್ದು ಸಿಯಿಂದಲ್ಲಿ ಬರೆದು ಕಳುಹಿಸಬೇಕಾಗಿದೆ

ಕಾವೂರ ಶಿವಯ್ಯ ಎನ

ಬತ್ತ ವಹಿವಾಟು.

ಕೊಡಗು ಸರಕಾರವು ಕೊಡಗಿನ ಉಳುವರಿ ಬತ್ತವನ್ನು ಮೈಸೂರು ಮತ್ತು ಮಲಬಾರು ಸರ್ಕಾರಕ್ಕೆ ಕೊಡುವಾಗ್ಗೆ ಬರೇ ಅಕ್ಕಿಯ ರೂಪದಲ್ಲಿ ಕೊಡಬೇಕೆಂದೂ ಮತ್ತು ಕೊಡಗಿನ ವಿಲ್ಲಿನ ಮಾಲೀಕರೇ ಬತ್ತವನ್ನು ಬತ್ತದ ಏಜಂಟರಿಂದಲೂ ಮತ್ತು ಬೆಳೆಸುವವರಿಂದಲೂ ಕ್ರಯಕ್ಕೆ ಕೊಂಡು ಕೊಳ್ಳಬೇಕೆಂದೂ ವಿಧಿಸಿದ್ದರಿಂದ ದೇಶದಲ್ಲಿ ಈಗಾಗಲೇ ತೊಂದರೆ ಹೆಚ್ಚುತ್ತಲಿದೆ. ವಿಲ್ಲಿನ ಮಾಲೀಕರು ವಿಲ್ಲಿನ ಸಮೀಪದಲ್ಲೇ ಬತ್ತವು ಕಡಿಮೆ ಕ್ರಯಕ್ಕೂ ಮತ್ತು ಸಾಲವಾಗಿಯೂ ಸಿಕ್ಕುವದರಿಂದ ವಿಲ್ಲಿನಿಂದ ದೂರದಲ್ಲಿರುವ ಮಾರ್ನಾಡು, ನಾಪೋಕ್ಲು, ಶಾಂತಳ್ಳಿ(?), ಬೆಟ್ಟಗೇರಿ, ಭಾಗಮಂಡಲ ಈ ಸೆಂಟರುಗಳ ಕಡೆ ಅವರ ದೃಷ್ಟಿ ಬೀಳುತ್ತಿಲ್ಲ. ವಿಲ್ಲಿನ ಮಾಲೀಕರಿಗೆ ಹತ್ತಿರದಲ್ಲಿಲ್ಲೂ ಬತ್ತ ದೊರೆಯದೆ ಇದ್ದರೆ ಮಾತ್ರ ಇವರು ಈ ಸೆಂಟರುಗಳಿಗೆ ಲಾರಿ ಕಳುಹಿಸಿ ಬತ್ತವನ್ನು ಕೊಂಡುಕೊಳ್ಳುತ್ತಾರೆ. ಇದರಿಂದ ರೈತನಿಂದ ಬತ್ತವನ್ನು ಕ್ರಯಕ್ಕೆ ಈ ಸೆಂಟರುಗಳಲ್ಲಿ ಪಡಕೊಂಡ ಏಜಂಟರುಗಳಿಗಾಗಲೀ ಅಥವ ಸ್ಟೋರುಗಳಿಗಾಗಲೀ ಪೂರ್ತಿ ಹಣವನ್ನು ರೈತನಿಗೆ ಕೊಡಲು ಸಾಧ್ಯವಿಲ್ಲದೆ, ರೈತನ ಆರ್ಥಿಕ ಸ್ಥಿತಿಯು ಬಹಳ ಪಟ್ಟಿಗೆ ಬಟ್ಟು ಹೋಗುವ ಸಂಧರ್ಭವು ಕಂಡು ಬರುತ್ತದೆ. ಸರಕಾರವು ಈ ರೀತಿಯಲ್ಲಿ ಕಲವು ವಿಲ್ಲಿನ ಮಾಲೀಕರನ್ನು ತೃಪ್ತಿಪಡಿಸುವ ದೃಷ್ಟಿಯಿಂದ ಮಾಡಿದ ಈ ನೂನಿನಿಂದ ದೇಶದ ಸಾವಿರಗಟ್ಟಲೆ ರೈತರನ್ನು ಗೋಳಿಗೆ ಈಡುಮಾಡಿರುವದು ಯೋಗ್ಯವಲ್ಲ ಈಗಾಗಲೇ ಮಾರ್ನಾಡು ಸೆಂಟರಿನಲ್ಲಿ ಪಟಯಲ್ಲೇ ಏಜಂಟರ ಹತ್ತಿರ ಮತ್ತು ಸ್ಟೋರುಗಳಲ್ಲಿ 300 ಗಾಡಿ ಮೇಲೆ ಬತ್ತವಿದೆ. ಈ ರೀತಿ ಇತರ ಸೆಂಟರುಗಳಲ್ಲೂ ಇದೆ. ನಾಪೋಕ್ಲು ಸೆಂಟರಿನಲ್ಲಿ ಬತ್ತವನ್ನೇ ತೆಗೆಯುವವರಿಲ್ಲವಂತೆ. ಆದುದರಿಂದ ಇನ್ನಾದರೂ ಸರ್ಕಾರವು ಕಣ್ಣು ತೆರೆದು ಕೊಡಗಿನಿಂದ ಮೈಸೂರು ಮಲಬಾರುಗಳಿಗೆ ಬತ್ತ ಮತ್ತು ಅಕ್ಕಿ ರೂಪದಲ್ಲಿ ಹೋಗುವಂತೆಯೂ ಮತ್ತು ವಿಲ್ಲಿನಿಂದ ದೂರದ ಸೆಂಟರುಗಳ ಏ ಮಾರ್ನಾಡು, ನಾಪೋಕ್ಲು, ಬೆಟ್ಟಗೇರಿ, ಭಾಗಮಂಡಲಗಳಿಗೆ ಒಡನೆ ಮೈಸೂರು ಯೂ ಮಲಬಾರು ಸರ್ಕಾರದ ಲಾರಿಗಳನ್ನು ಕಳುಹಿಸಿ ಬತ್ತದ ರೂಪದಲ್ಲೇ ಈ ಸೆಂಟರುಗಳಿಂದ ರವಾನಿಸುವ ಏರ್ಪಾಡು ಮಾಡಬೇಕೆಂಗಿಯೂ ಪ್ರಾರ್ಥನೆ

'ನೊಂದ ರೈತ'

ಗುಡುಗಳಲೆ ಜಾನುವಾರು ಜಾತ್ರೆ.

1949ನೇ ಇಸವಿ ಜನವರಿ ತಾರೀಕು ೯ರಲ್ಲು ಶನಿವಾರಸಂತೆ ಗುಡುಗಳಲೆ ಜಯದೇವ ಬಾಣೆ ಜಾನುವಾರುಗಳ ಜಾತ್ರೆಯ ಸಮ್ಮಂಧ ಶನಿವಾರಸಂತೆ ನಾಡು ಕಚೇರಿ ಬಳಿ ಸಾರ್ವಜನಿಕರು ಸೇರಿ ನಡಿಸಿದ ಮೀಟಿಂಗಿನ ಪ್ರೊಸೀಡಿಂಗ್ಸ್.

ಈ ದಿನದ ಮೀಟಿಂಗಿಗೆ ಅಧ್ಯಕ್ಷರನ್ನಾಗಿ ಶ್ರೀ ಎಚ್ ಎಂ. ಪುಟ್ಟಪ್ಪನವರನ್ನು ಆರಿಸಲಾಯಿತು. ಅಧ್ಯಕ್ಷರು ಆ ದಿನದ ಮೀಟಿಂಗಿನ ವಿಶಯಗಳನ್ನು ಕುರಿತು ಮಾತಾಡಿದರು.

ಈ ಹಿಂದೆ ಮೇಲ್ಕಂಡ ಜಾತ್ರೆಯ ಕಮಿಟಿಯಲ್ಲಿದ್ದ ಮಹನೀಯರುಗಳು ಸೇರಿ ಈ ದಿವಸ ಜನರಲ್ ಮೀಟಿಂಗು ನಡೆಸಬೇಕೆಂದು ತಾರೀಕು 25-12-48 ರಲ್ಲು ಮೀಟಿಂಗು ಮಾಡಿ ನಿಶ್ಚಯಿಸಿದ್ದರೂ ಕೂಡ ಈ ದಿನ ಸಹಕರಿಸದೆ ಇದ್ದ ಪ್ರಯುಕ್ತ ಈ ದಿನ ಸಭೆ ನಡೆಸಿ ಹಾಜರಿದ್ದವರಲ್ಲಿ ಈ ಕೆಳಗಿನ ಮೇರೆ ಕಾರ್ಯಕಾರಿ ಮಂಡಳಿಯವರನ್ನು ಮುಂದಿನ ಕಾರ್ಯಕ್ರಮವನ್ನು ನಡೆಸಲು ಸರ್ವ ಸಮ್ಮತದಿಂದ ಆರಿಸಲಾಯಿತು

ಕಾರ್ಯಕಾರಿ ಮಂಡಳಿಯವರ ಹೆಸರು.

ಶ್ರೀಗಳಾದ ಜೆ ಬಿ. ಬಸವಣಯ್ಯ, ಎಚ್. ಎಂ ಪುಟ್ಟಪ್ಪ, ಶಿಡಿಗಳಲೆ ಸ, ಬಸಲಿಂಗಗೌಡ, ಕಿತ್ತೂರು ವೀರಪ್ಪ, ಆಲೂರು ಶಾಂತವೀರಪ್ಪ, ಹೆಬ್ಬಾಲೆ ಸ ಬಸಪ್ಪ, ಬಿ ಕೆ ಶಾಂತವೀರಪ್ಪ, ಹೆಮ್ಮನೆ ತಮ್ಮಯ್ಯ, ಕೆ ಎ ಮಹಮದ್ ಅಮೀರ್ ಸಾಹೇಬ್, ಬೆಂಬಳೂರು ಕಾಳಪ್ಪ, ಬೀಡಗೊಟ್ಟೆ ಬಸವಣಯ್ಯ, ಒಡುಬನಳ್ಳಿ ಮಲ್ಲಪ್ಪ, ಎಸ್ ಪಿ ರಹಿಮಾನ್ ಖಾನ್ ಸಾಹೇಬ್, ಮುಳ್ಳೂರು ಚನ್ನಪ್ಪ, ಎಸ್ ಎನ್ ರಾಜಪ್ಪ, ಬಿ ಡಿ ಚಲುವಶೆಟ್ಟರು, ಹುಲುಕೋಡು ಬಸವರಾಜಪ್ಪ, ಸಂಪಿಗೆದಾಳು ಮಲ್ಲಪ್ಪ, ಎಸ್ ಸಣ್ಣಮಲ್ಲಪ್ಪ, ನಾಗಾಪುರ ನಿರುವಾಣಪ್ಪ, ಹೆಬ್ಬಾಲೆ ದೊಡ್ಡಪ್ಪಯ್ಯ, ಎಡೇರಪುರ ಮಲ್ಲಪ್ಪ, ಮೇಣಸ ಶಾಂತಪ್ಪ, ಮಣಗಲಿ ನಿರುವಾಣಪ್ಪ, ಬಿ ಶಕುನಪುರಿ ಶೆಟ್ಟರು, ಜಿ ಆರ್ ಬಸಪ್ಪ, ಎಚ್ ಎಂ. ಶಾಂತಪ್ಪ, ತ ಳೂರು ಕೇಶವೇಗೌಡ, ಸಿದ್ದ ಚ ಮಾಂತಯ್ಯ ಮತ್ತು ತಾಳೂರು ಹರಿಜನ ಚೆನ್ನ ಇವರುಗಳು.

ಈ ಮೇಲ್ಕಂಡವರ ಪೈಕಿ ವರ್ಕಿಂಗ್ ಕಮಿಟಿಗೆ ಶ್ರೀಗಳಾದ ಎಚ್ ಎಂ ಪುಟ್ಟಪ್ಪ (ಪ್ರೆಸಿಡೆಂಟ್), ಜಿ ಬಿ ಬಸವಣ್ಣಯ್ಯ, ಕೆ ಆರ್ ವೀರಪ್ಪ, ಎಂ ಪಿ. ರಹಿಮಾನ್ ಖಾನ್, ಎಚ್ ಎಂ ತಮ್ಮಯ್ಯ (ಕಾರ್ಯದರ್ಶಿ), ಬಿ ಆರ್. ಮಲ್ಲಪ್ಪ, ಎಸ್. ಎನ್ ರಾಜಪ್ಪ, ಜಿ ಆರ್. ಬಸಪ್ಪ, ಪಟೇಲ್ ಬಸಲಿಂಗೇಗೌಡ ಇವರನ್ನು ಆರಿಸಲಾಯಿತು

ಈ ಪ್ರೊಸೀಡಿಂಗ್ಸಿನ ಯಥಾ ನಕಲನ್ನು ಚೀಫ್ ಕಮಿಶನರ್ ಸಾಹೇಬರವರಿಗೂ ಅಸಿಸ್ಟೆಂಟ್ ಕಮೀಶನರ್‌ರವರಿಗೂ ಪೋಲೀಸ್ ಸೂಪರಿಂಟೆಂಡೆಂಟರವರಿಗೂ ಕಳಿಸುವಂತೆ ತೀರ್ಮಾನಿಸಲಾಯಿತು

ಈ ವರ್ಷ ಜಾತ್ರೆ ಮಾಡಿದವರ ಕ್ಲಿರಿಕಲ್‌ಛಾರ್ಜು ಮತ್ತು ಹಣವನ್ನು ಒತ್ತಾಯಮಾಡಿ ಕೇಳುವಂತೆ ತೀರ್ಮಾನಿಸಲಾಯಿತು.

ಪೋಲೀಸ್ ಸರ್ಕಲ್ ಮತ್ತು ಸಬ್ ಇನ್‌ಸ್ಪೆಕ್ಟರವರು, ಕಾಲೋಕಾಸ ಬಿದಾರರವರು ಮತ್ತು ಅಸಿಸ್ಟೆಂಟ್ ಕಮಿಶನರ್ ಸಾಹೇಬರವರು ಈ ದಿವಸ ಹಾಜರಿದ್ದು ಮೀಟಿಂಗಿನ ಹೋಗೆ ಸೂಕ್ತ ಸಲಹೆಗಳನ್ನು ಹೇಳಿದ್ದಕ್ಕೆ ಅವರಿಗೆ ವಂದಿಸಲಾಯಿತು.

ಹೆಚ್ ಎಂ ಪುಟ್ಟಪ್ಪ
ಅಧ್ಯಕ್ಷರು

ದಿ ಟ್ರಾಪಿಕಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮುಖ್ಯ ಖಚೇರಿ:— ಹೊಸ ಡಿಲ್ಲಿ.

ಅದ್ವಿತೀಯ ಜನನಾಯಕರಾಗಿದ್ದ ಮೋತೀಲಾಲ್ ನೆಹರೂ, ನೇತಾಜಿ ಇವರಿಂದ ಸ್ಥಾಪಿಸಲ್ಪಟ್ಟು ವಿಮಾ ಕಂಪನಿಗಳಲ್ಲೆಲ್ಲಾ ಅತ್ಯಂತ ಪ್ರಗತಿಶೀಲ ಎನಿದ ಒಂದೇ ರಾಷ್ಟ್ರೀಯ ವಿಮಾ ಕಂಪೆನಿ "ಟ್ರಾಪಿಕಲ್." ದಿನ ದಿನಕ್ಕೆ ಬೆಳೆದು ಹಿಂದೂಸ್ಥಾನದ ಮಹಾ ಕಂಪೆನಿಗಳಲ್ಲೊಂದಾಗಿದೆ

ಕೊಡಗಿನ ಎಲ್ಲಾ ಕಡೆಗಳಿಗೂ ವಿಶೇಷ ಏಜಂಟರುಗಳೂ ಏಜಂಟರೂ ಬೇಕಾಗಿದ್ದಾರೆ. ವಿವರಗಳಿಗೆ ಈ ಪತ್ರಿಗೆ ಬರೆಯಿರಿ.

THE TROPICAL INSURANCE Co. Ltd.

ಏಜನ್ಸಿಗಳ ಸುಪರಿಂಟೆಂಡೆಂಟರು
ಕೊಡಗು, ಮಡಿಕೇರಿ.

ಎಂ. ಎ. ಬೆಳ್ಳಪ್ಪ,
ಬ್ರಾಂಚ್ ಸೆಕ್ರೆಟರಿ
ಹಂಪನ ಕಟ್ಟೆ, ಮಂಗಳೂರು.

THE WARDEN INSURANCE CO., Ltd.
(H O BOMBAY)

Managing Director:—S H· THAKER Esq·,

Business in Force	Rs.	4,50,00,000
New Business	„	1,35,00,000
Assets	„	75,00,000

Transacts:

LIFE, FIRE, ACCIDENT, etc.,

For particulars please apply to.

A. S, Aiyappa,
Branch secretary,
GANDHI NAGAR,
BANGALORE CITY·

ದಿ ವಾರ್ಡನ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,
ಗಾಂಧಿನಗರ, ಬೆಂಗಳೂರು ಸಿಟಿ.

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿ (1931)ರಲ್ಲಿ ಸ್ಥಾಪಿತವಾಗಿದೆ

ಅಧಿಕೃತ ಶೇರು ಭಂಡವಾಳ	ರೂ	10,00,000
ವಸೂಲಾದ ಶೇರು ಮೊಬಲಗು	ರೂ	1,65,000
ಕ್ಷೇಮನಿಧಿ	ರೂ.	50,000

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಆಡವಿನ ಮೇಲೆ ಸಹ ಸಾಲ ಕೊಡಲಾಗುವುದು ಚೆಕ್‌ಯೂ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು ಟ್ರೆಸಿಟಿ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ರೂ 1000/- ಯೂ ಮೇಲ್ಪಟ್ಟು ಠೇವಣಿ ಡಿಪಾಜಿಟ್ಟನ್ನು ತಾ. 1-2-49 ರಿಂದ 15-2-49ರ ವರೆಗೆ ಶೇಲಿಯಾನ ಶೇಕಡ ರೂ 4/ ರ ಬಡ್ಡಿ ದರದಲ್ಲಿ ಮೂರು ತಿಂಗಳ ಅವಧಿಗೆ ಹೊಂದಿಕೊಳ್ಳಲಾಗುವುದು ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು

ಎಂ. ಎಸ್. ಸೋಮಯ್ಯ,
ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ. M L C
ಪ್ರೆಸಿಡೆಂಟ್ ಮತ್ತು ಖಜಾನ್ಚಿ.

ವೀರಾಜಪೇಟೆಗೆ 'ಕೊಡಗು' ಏಜೆಂಟರು
ಶ್ರೀ ಟಿ. ಎನ್. ಗೋವಿಂದರಾಜುರವರು.

ಚಿಕ್ಕ ಕಥೆ.

"ಜನ್ಮ ಜನ್ಮ ಕೆ ಸಾಥಿ!"

ಲೇ:-"ಪ್ರೇಮಯೋಗಿ" ಮಡಿಕೇರಿ.

'ಈಕೆಯೇ ಮುಂದೆ ನನ್ನ ಜೀವನದ ಜೊತೆಗಾತಿಯಾಗಲಿರುವವಳು' ಹತ್ತಿರದಲ್ಲಿ ನಿಂತಿದ್ದ ಸುಂದರಿ ಯುವತಿಯೊಬ್ಬಳನ್ನು ತೋರಿಸುತ್ತಾ ಮೈಕೇಲನೆಂದನು. ಮತ್ತೆ ಆಕೆಯ ಕಡೆಗೆ ತಿರುಗಿ ನನ್ನನ್ನು ತೋರಿಸುತ್ತಾ, 'ಈತನು ನನ್ನ ಮಿತ್ರನು. ದಕ್ಷಿಣದಿಂದ ಹೆಚ್ಚಿನ ವ್ಯಾಸಂಗಕ್ಕಾಗಿ ಇಲ್ಲಿಗೆ ಬಂದಿರುವನು.'

'ಓ, ನೀವು ದಕ್ಷಿಣದಿಂದ ಬಂದಿರುವಿರಾ?' ಲೂಸಿ ಕೇಳಿದಳು. ನಾನು ಹೌದೆಂದೆ.

'ದಕ್ಷಿಣದ ಜನರೆಂದರೆ ನನಗೆ ತುಂಬಾ ಮಮತೆ. ಅವರು ತೀಕ್ಷ್ಣ ಬುದ್ಧಿಯುಳ್ಳವರೆನ್ನುತ್ತಾರೆ. ಡೆಲ್ಲಿಯ ಸೆಕ್ರೆಟರಿಯೇಟಿನಲ್ಲೇ ಆಗಲಿ, ಇತರ ಸರಕಾರಿ ಆಫೀಸುಗಳಲ್ಲೇ ಆಗಲಿ ಅವರೇ ತುಂಬಿದ್ದಾರೆ. ಅವರ ವಿಚಾರ ಹೆಚ್ಚು ತಿಳಿದುಕೊಳ್ಳಬೇಕೆಂಬ ಕುತೂಹಲವಿದೆ. ಮೈಕೇಲ್ ಡಾರ್ಲಿಂಗ್, ನಾಳೆ ಸಾಯಂಕಾಲ ದಯವಿಟ್ಟು ಇವರನ್ನು ಕರೆದುಕೊಂಡು ಚಹಪಾನಕ್ಕೆ ನಮ್ಮಲ್ಲಿಗೆ ಬರಬೇಕು' ಲೂಸಿ ಎಂದಳು.

'ಡೀಯರ್, ನಾಳೆ ನನಗೆ ವಿಪರೀತ ಕೆಲಸವಿದೆ. ಇವರನ್ನು ಖಂಡಿತಾ ಕಳುಹಿಸುವೆನು; ಅವರು ರಸಿಕರು. ಬೇಕಾದ ವಿಷಯಗಳನ್ನು ಹೇಳುವರು.' ಮತ್ತೆ ನನ್ನ ಕಡೆಗೆ ತಿರುಗಿ 'ಈ ರೀತಿಯ ನನ್ನ ಉಪದ್ವಟತನಕ್ಕೆ ನೀನು ಸಿಟ್ಟಾಗಬಾರದು. ನೀನು ದಯವಿಟ್ಟು ಆಕೆಯಲ್ಲಿಗೆ ಹೋಗಲು ಒಪ್ಪಬೇಕು.' ಮೈಕೇಲ್ ಹೇಳಿದ.

ನಿರ್ವಾಹವಿಲ್ಲದೆ 'ಆಗಲಿ' ಎಂದೆ. ಮೈಕೇಲನು ಲೂಸಿಯ ಮನೆ ತೋರಿಸಿಕೊಟ್ಟನು.

* * *

ಮರುದಿನ ಸಾಯಂಕಾಲ ನಾನು ಲೂಸಿಯ ಮನೆಗೆ ಹೋದೆನು. ಲೂಸಿಯು ನನಗಾಗಿ ಬಾಗಿಲಿನಲ್ಲಿ ಕಾದಿದ್ದಳು. ಸಂತೋಷದಿಂದ ವಿಶಾಲವಾಗಿರುವ ಬಂಗ್ಲೆಯೊಳಗೆ ಕರೆದೊಯ್ದಳು. ಕುಳಿತುಕೊಂಡ ಮೇಲೆ 'ನೀವು ದಕ್ಷಿಣದವರಾದರೂ ಎಷ್ಟು ಭಿನ್ನವಾಗಿದ್ದೀರಿ. ನಾನು ಯೋಚನೆ.....................'

ನಾನು ಮಧ್ಯೆ ಬಾಯಿ ಹಾಕಿ ಹೇಳಿದೆ. 'ದಕ್ಷಿಣದವರೆಂದರೆ ಅವರೂ ಮನುಷ್ಯರೆ! ಭಾರತೀಯರೆಲ್ಲರೂ ಹಾಗೆಯೇ. ಅವರಿಗೆ ಕೋಡು, ಬಾಲಗಳೇನು ಇಲ್ಲ. ನಿಮ್ಮವರಿಗಿಂತ ಸ್ವಲ್ಪ ಕಪ್ಪು. ಅದು ಸೂರ್ಯನ ಕಾರಣದಿಂದಿರಬಹುದು' ನಾನೆಂದೆ.

'ಸಿಟ್ಟಾಗದಿರಿ. ನನಗೆ ಭಾರತೀಯರ ಅವರಲ್ಲೂ ದಕ್ಷಿಣದವರ ನಿಕಟ ಪರಿಚಯವಿಲ್ಲ. ನಿಮ್ಮ ಮೂಲಕ ಎಲ್ಲವನ್ನೂ ತಿಳಿದುಕೊಳ್ಳಬೇಕು. ನಾನು ಹುಟ್ಟಿದ್ದು ಇಂಗ್ಲೆಂಡಿನಲ್ಲಿ. ತಂದೆಯು ಭಾರತದಲ್ಲಿ ಕಲೆಕ್ಟರಾದ ಕಾರಣ ಇಲ್ಲಿಗೆ ನಾನು ಬರಬೇಕಾಯಿತು. ಭಾರತೀಯರ ವಿಚಾರ ನನಗೆ ತುಂಬಾ ಮಮತೆಯಿದೆ. ಅವರ ವಿಚಾರ ಅನೇಕ ಗ್ರಂಥಗಳನ್ನು ಓದಿರುವೆನು. 'ಮದರ್ ಇಂಡಿಯಾ' ಪುಸ್ತಕವು ಜನಪ್ರಿಯವಾದುದಲ್ಲವೇ?'

'ನೀವು ಭಾರತೀಯರು ಬರೆದ ಯಾವುದಾದರೂ ಗ್ರಂಥಗಳನ್ನು ಓದಿರುವಿರಾ? ಮಹಾತ್ಮಾ ಗಾಂಧೀ, ಜವಾಹರರ ಹೆಸರು ಕೇಳಿರುವಿರಾ?' ನಾನು ಕೇಳಿದೆ.

'ಭಾರತೀಯರು ಬರೆದ ಪುಸ್ತಕ ಓದದಿದ್ದರೂ ಭಾರತದ ವಿಚಾರ ಅಲ್ಪಸ್ವಲ್ಪ ತಿಳಿದಿದೆ. ಗಾಂಧೀ, ನೆಹರೂರವರ ಹೆಸರು ಕೇಳಿದ್ದೇನೆ. ಗಾಂಧೀಜಿಯವರು ಮಂತ್ರವಾದಿಯೆಂದು ನಮ್ಮವರು ಹೇಳುತ್ತಾರೆ. ಅವರಿಗೆ ಚಳಿ ಬಿಸಿಲು ತಾಗದಂತೆ. ಇಂಗ್ಲೆಂಡಿಗೆ ಹೋದಾಗಲೂ ಮೈತುಂಬ ಬಟ್ಟೆ ಹಾಕಲಿಲ್ಲವಂತೆ! ಅವರ ಶಿಷ್ಯ ಜವಾಹರರೂ ಕ್ರಮೇಣ ಗಾಂಧಿಯವರಂತೆ ಮಂತ್ರವಾದಿಯಾಗಬಹುದಲ್ಲವೇ?' ಲೂಸಿ ಕೇಳಿದಳು.

'ಆಕೆಯ ತಪ್ಪಭಿಪ್ರಾಯವನ್ನು ಸರಿಪಡಿಸಲು ಒಂದು ಗಂಟೆ ಬೇಕಾಯಿತು.

'ಭಾರತದಲ್ಲಿ ಸ್ತ್ರೀಯರ ಸ್ಥಿತಿ ಅಡಿಗೆ ಮನೆಯ ಆಳಿನಂತಲ್ಲವೇ?' ಹಠಾತ್ತಾಗಿ ಲೂಸಿ ಕೇಳಿದಳು.

'ಸ್ತ್ರೀಯರಿಗೆ ಭಾರತದಲ್ಲಿ ಕೊಡಲ್ಪಟ್ಟಿರುವ ಗೌರವ, ಸ್ಥಾನಮಾನಗಳು ಜಗತ್ತಿನ ಯಾವ ದೇಶದಲ್ಲೂ ಬಹುಶಃ ಕೊಡಲ್ಪಟ್ಟಿರಲಿಕ್ಕಿಲ್ಲ. ಭಾರತದಲ್ಲಿ ಪ್ರಾಣಿಪಕ್ಷಿಗಳ ಬಗ್ಗೆ ನಾವು ತೋರಿಸುವ ದಯೆಯನ್ನು ನಿಮ್ಮವರು ಯುರೋಪಿನಲ್ಲಿ ಮನುಷ್ಯರಿಗೆ ತೋರಿಸುತ್ತಿಲ್ಲ.' ಸ್ವಲ್ಪ ಬಿಗುವಿನಿಂದ ನಾನೆಂದೆ.

'ನಿಮಗೆ ವಿವಾಹವಾಗಿದೆಯೇ?' ಆಕೆ ಕೇಳಿದಳು. 'ಇಲ್ಲ' ಎಂದೆ.

'ಯಾರನ್ನಾದರೂ 'ಎಂಗೇಜ್' ಆಗಿದೆಯೇ?'

'ಇಲ್ಲ' ಎಂದೆ

'ನಿಮಗೆ ಯಾವದೇ ಹುಡುಗಿಯ ಮೇಲೆ ಪ್ರೇಮವಿದೆಯೇ?'

'ನಮ್ಮಲ್ಲಿ ಪ್ರೇಮಿಸಿ ಮದುವೆಯಾಗುವ ಪದ್ಧತಿ ಇಲ್ಲ; ಮದುವೆಯಾಗಿ ಪ್ರೇಮಿಸುವದು ಇಲ್ಲಿಯ ರೂಢಿ' ನಾನೆಂದೆ.

'ಅದು ಹೇಗೆ?'

'ಭಾರತದಲ್ಲಿ ವಿವಾಹಕ್ಕೆ ಮೊದಲು ಹುಡುಗ ಹುಡುಗಿಯರಿಗೆ ಪರಿಚಯವಿರುವದಿಲ್ಲ. ತಂದೆ ತಾಯಿಗಳು ವಧೂವರರನ್ನು ನಿಶ್ಚಯಿಸುತ್ತಾರೆ.'

'ಎಂಥಾ ಭಯಾನಕ ವಿಚಾರ! ತನ್ನ ಮಗನಿಗೆ ಯಾ ಮಗಳಿಗೆ ಇಂಥಾ ವರ ಯಾ ವಧು ಬೇಕೆಂಬುದು ತಂದೆ ತಾಯಿಂದಿರಿಗೇನು ಗೊತ್ತು?'

'ಆದರೆ ಇದು ಪ್ರಪಂಚವನ್ನೇ ತಿಳಿಯದ ೨೦ ವಯಸ್ಸಿನೊಳಗಿನ ಯುವತಿ, ಯಾ ೨೫ ವಯಸ್ಸಿನೊಳಗಿನ ಯುವಕನ ನಿರ್ಣಯಕ್ಕಿಂತಾ ಉತ್ತಮವೆಂದು ಅನುಭವದಿಂದ ಕಂಡು ಬಂದಿದೆ.' ನಾನು ಹೇಳಿದೆ.

'ದೇವರಿಗೆ ಧನ್ಯವಾದವಿರಲಿ, ನನಗೆ ಮೈಕೇಲನು ದೊರೆತದು ನನ್ನ ಸುದೈವ. ಮುಂದಿನ ಆದಿತ್ಯವಾರ ನಮ್ಮ ವಿವಾಹವು ಆಗುವದು. ನೀವು ಬರಬೇಕು. ಒಂದು ವಿಚಾರ; ನೀವು ಸತ್ತ ಮನುಷ್ಯನು ಪುನಃ ಹುಟ್ಟುತ್ತಾನೆಂದು ನಂಬುವವರೆಂದು ಕೇಳಿದೆ ನಿಜವೇ?' ಎಂದಳು.

'ಸತ್ತ ಮನುಷ್ಯನು ಪುನಹ ಹುಟ್ಟುವನೆಂದು ನಮ್ಮ ಧರ್ಮ ಹೇಳದು. ಆದರೆ ಆತ್ಮಕ್ಕೆ ನಾಶವಿಲ್ಲವೆಂಬನು ನಮ್ಮ ಸಿದ್ಧಾಂತ. ಹಳೆ ಕೋಟು ತೆಗೆದು ಹೊಸ ಕೋಟು ಧರಿಸುವಂತೆ ಆತ್ಮವು ಶರೀರ ಧಾರಣೆ ಮಾಡುವದು ಇದೇ ನಮ್ಮ ಜನರ ಪುನರ್ಜನ್ಮವಾದವಾಗಿದೆ.'

'ನಿಮ್ಮ ಹಾಗೆ ನಾನೂ ಈ ಪುನರ್ಜನ್ಮದಲ್ಲಿ ವಿಶ್ವಾಸವಿಡುವವಳಾದರೆ ಮೈಕೇಲನು ನನ್ನ ಜನ್ಮ ಜನ್ಮದ ಜೊತೆಗಾರನು. ಹೇಗೆ ಭಾರತೀಯ ಸ್ತ್ರೀಯರು ತಮ್ಮ ಪತಿಯೇ ಇಹದಲ್ಲೂ, ಪರದಲ್ಲೂ ತಮ್ಮ ದೈವವೆಂದು ಬಗೆವರೋ ಹಾಗೆಯೇ ನನ್ನ ಮೈಕೇಲ್. ನಮ್ಮ ಮದುವೆಗೆ ಅವಶ್ಯ ಬನ್ನಿ.' ಲೂಸಿ ಎಂದಳು.

ನಾನು ಆಗಲೀ ಎಂದು ಹೊರಟೆನು.

* * *

ಎರಡು ದಿನಗಳ ನಂತರ ಲೂಸಿಯನ್ನು ಪುನಹ ಕಂಡೆನು. ಆಕೆಯ ಮದುವೆಗೆ ಉಡುಗೊರೆಯಾಗಿ ಭಾರತೀಯರ ಜೀವನ ಚಿತ್ರವನ್ನು ಚಿತ್ರಿಸಿದ ಪ್ರಸಿದ್ಧ ಕಲಾಕಾರರೊಬ್ಬರ ಚಿತ್ರಗಳ 'ಆಲ್ಬಮ್' ಒಂದನ್ನು ಕೊಡಲು ನಿಶ್ಚಯಿಸಿದ್ದೆನು. ಮದುವೆಯ ವಿಚಾರ ಮಾತು ಬಂತು. ಲೂಸಿ ಹೇಳಿದಳು. 'ಆ ಮದುವೆಯ ವಿಚಾರ ಮಾತಾಡದಿ' ಎಂದು.

'ಮೈಕೇಲನಿಗೆ ಸೌಖ್ಯವಿಲ್ಲವೇ?' ನಾನು ಕೇಳಿದೆ

'ಆತನ ಸುದ್ದಿ ಎತ್ತದಿರಿ. ಆತನು ಮೋಸಗಾರ' ಎಂದಳು.

ಏಕೆಂದು ಸಮಾಧಾನದಿಂದ ಕೇಳಿದೆ, ಆಕೆ ಹೇಳತೊಡಗಿದಳು.

'ಮೈಕೇಲನು ನನ್ನನ್ನು ಪ್ರೀತಿಸುತ್ತಿಲ್ಲ. ಆತನು ನನ್ನೊಡನೆ ಕಪಟನಾಟಕವಾಡಿದನು. ಮದುವೆ ಹತ್ತಿರ ಬಂದಂತೆ ಆತನು ದೂರವಾಗುತ್ತಿದ್ದಾನೆ. ನಿನ್ನೆ ದಿನ "ಡಾನ್ಸ್" ಕ್ಲಬ್ಬಿನಲ್ಲಿ ಬೇರೊಬ್ಬ ಯುವತಿಯೊಡನೆ ನೃತ್ಯ ಮಾಡುತ್ತಿದ್ದನು. ನಾನೂ ನೃತ್ಯ ಕೂಟಕ್ಕೆ ಹೋಗಿದ್ದೆ. ಮೈಕೇಲನು ಮೋಸಗಾರ. ಆದರೆ ಜಾರ್ಜ್ ಎಂಥಾ ಸುಂದರ ಮತ್ತು ಸಗುಣನು. ಆತನ ಪ್ರೇಮಕ್ಕೆ ಅಂತ್ಯವಿರಲಾರದು. ಆತನನ್ನೇ ನಾನು ವರಿಸುವೆನು. ನಮ್ಮಲ್ಲಿ ನಿಜವಾದ ಪ್ರೇಮವಿದೆ. ನಮ್ಮ ಮದುವೆಗೆ ತಪ್ಪದೆ ನೀವು ಬರಬೇಕು. ನಮ್ಮ ಮದುವೆಯಲ್ಲಿ ಭಾರತೀಯ ಮಿತ್ರರಾದ ನೀವಿದ್ದರೆ ನನಗೂ ಹೆಮ್ಮೆ.'

'ಪ್ರಯತ್ನಿಸುತ್ತೇನೆ. ನಿಮ್ಮ ಜೀವನ ಹೇಗೂ ಸುಖಮಯವಾಗಲೀ' ಎಂದು ಹೊರಟೆ.

ಅದಾದ ಮೇಲೆ ಕಳೆದ ಹದಿನೈದು ದಿನಗಳನಂತರ ಪುನಹ ಲೂಸಿಯನ್ನು ಕಂಡೆನು. ಆಕೆ ಕ್ರೋಧದಿಂದ ಹೇಳತೊಡಗಿದಳು 'ಗಂಡಸರೆಲ್ಲ ಹೀಗೆಯೇ ಎಂದು ತೋರುತ್ತದೆ. ಜಾರ್ಜನು ಬಹು ಸ್ವಾರ್ಥಿಯು. ಯಾವಾಗಲೂ ತನ್ನ ಕಾರಿನಲ್ಲಿ ತಿರುಗುತ್ತಾನೆ. ಒಂದು 'ಡಿನ್ನರಿ'ಗೆ ಇಲ್ಲವೇ 'ಡಾನ್ಸಿ'ಗೆ ಹೋಗಬೇಕಾದರೆ ನನಗೆ ಕಾರು ದೊರೆಯುವದಿಲ್ಲ. ಆದ್ದರಿಂದ ನಿನ್ನೆ ವಿವಾಹ ವಿಚ್ಛೇದಕ್ಕೆ ಬರೆದಿರುವೆನು!

ಆದರೆ ನಮ್ಮ ನೆರೆಮನೆ ಕಾರ್ಡೆಲ್‌ನನ್ನು ನಿಮಗೆ ತಿಳಿದಿದೆಯೇ? ಎಂಥಾ ಮಹಾನ್‌ವ್ಯಕ್ತಿ. ಎಲ್ಲಿ ಹುಡುಕಿದರೂ ಆತನಂಥಾ ಸುಂದರರು ದೊರೆಯಲಾರರು. ಆತನ ನೋಟದಲ್ಲಿ, ಆಳ ಅರಿಯದ ಮಹಾ ಪ್ರೀತಿ ಅಡಗಿದೆ. ಕಾರ್ಡೆಲ್‌ನಂಥಾವರು ಸಾವಿರಕ್ಕೊಬ್ಬ. ಆತನು ಬಹುಶಃ ನನ್ನ ಕೈ ಬಿಡಲಾರ!

ನನಗೆ ಆಶ್ಚರ್ಯವಾಗಲಿಲ್ಲ, ಈ 'ಜನ್ಮ ಜನ್ಮಕೇ ಸಾಥಿ'ಗಳನ್ನು ನೆನೆದು ಆಶ್ಚರ್ಯವಾಯಿತು. ಪ್ರೀತಿಸಿ ಮದುವೆಯಾಗುವ ಪದ್ಧತಿಯೇ ಇದು? ಎಂಬ ಸಂಶಯ ಇನ್ನೂ ಮನಸ್ಸಿನಲ್ಲಿದೆ. ————

ಹಿಂದೀ ಪರೀಕ್ಷಾ ಫಲಿತಾಂಶ

ನವಂಬರ್ ೧೯೪೮ರಲ್ಲಿ ಮಡಿಕೇರಿ ಕೇಂದ್ರದಲ್ಲಿ ನಡೆದ ವಿಭಿನ್ನ ಹಿಂದೀ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರು.

ಪ್ರಾಥಮಿಕ.

ಶ್ರೀಗಳಾದ ಕೋಟೆರ ಎಂ. ಕುಟ್ಟಯ್ಯ, ಕೋಟೆರ ಎಂ. ಭೀಮಯ್ಯ, ಸಿ. ಆರ್. ನಾರಾಯಣ (ಪ್ರಥಮಶ್ರೇಣಿ) ಕಂಗಂಡ ಕೆ. ಬೊಳ್ಳಮ್ಮ, ಮೊಣ್ಣಂಡ ಪಿ. ಅಕ್ಕಮ್ಮ, ಕೆ. ಎಸ್. ಚಂಪಾವತಿ, ಮೊಣ್ಣಂಡ ಪಿ. ಗೌರಮ್ಮ, ಮೇಕೇರಿರ ಎಂ. ಪಾರಿಜ, ಕೊಡಂದೇರ ಎಂ. ಗಣಪತಿ ಮತ್ತು ದೇವಿ ಪರಮೇಶ್ವರಿ.

ಮಧ್ಯಮಾ.

ಶ್ರೀಗಳಾದ ಎ. ಕೆ. ದೇಚಮ್ಮ, ಮಣವಟ್ಟಿರ ಎಂ. ಸುಬ್ಬಮ್ಮ, ಮಣವಟ್ಟಿರ ಎಂ. ಮುತ್ತಮ್ಮ, ಕೆ. ಟಿ. ಪಾರ್ವತಿ, ಡಿ. ಎನ್. ಯಶೋದ, ಬಿ. ಸಿ. ಕುಂಜ್ಞಮ್ಮ, ಐ. ಎಂ. ಪೂವಮ್ಮ, ಪಿ. ಕೆ. ಅಬ್ದುಲ್ ಮುನಾಫ್ ಸಾಹೆಬ್, ಎಂ. ಕೆ. ಚಂಗಪ್ಪ ಮತ್ತು ಕೋಟೆರ ಮೇದಪ್ಪ.

ರಾಷ್ಟ್ರಭಾಷಾ.

ಶ್ರೀಗಳಾದ ಕೋಟೆರ ಎಂ. ಅಕ್ಕಮ್ಮ, ಸಿಸಿಲಿಯಾ ಡಿಸೋಜ, ರೋಸಿ ಡಿಸೋಜ, ಎನ್. ಡಿ. ನಾಗವೇಣಿ, ಎಂ. ಎಸ್. ಧರಣಿ, ಹೆಚ್. ವಿ. ಇಂದುಮತಿ, ಜಿ. ಕೆ. ಮೈಥಿಲಿ ಮತ್ತು ಕೆ. ಎಸ್. ರಾಧಾ.

ಭಾಗಮಂಡಲ ಕೇಂದ್ರ, ಮಧ್ಯಮಾ.

ಶ್ರೀಗಳಾದ ಕೆ. ಎಸ್. ಚಕ್ರಪಾಣಿ ನಾಯರ್ (ಪ್ರಥಮಶ್ರೇಣಿ) ಟಿ. ಎಸ್. ವೇದಾವತಿ, ಟಿ. ಆರ್. ಕೃಷ್ಣಮೂರ್ತಿ, ಪಿ. ಎ. ಅಯ್ಯಪ್ಪ ಮತ್ತು ಎ. ಎಸ್. ಉತ್ತಯ್ಯ.

ಪೊನ್ನಂಪೇಟೆ ಕೇಂದ್ರ, ಪ್ರಾಥಮಿಕ.

ಶ್ರೀಗಳಾದ ಮಚ್ಚಮಾಡ ಬೋಪಯ್ಯ, ಕೊಕ್ಕಂಗಡ ಕರುಂಬಯ್ಯ, ಬೋಪಣ್ಣ, ಕರ್ತಮಾಡ ಸೋಮಯ್ಯ, ಬಯವಂಡ್ರ ಗಣಪತಿ, ಗುಂಬೀರ ಅಪ್ಪಣ್ಣಮಯ್ಯ, ಕಾಡ್ಯಮಾಡ ರಾಮು, ಬಿ. ಆರ್. ಪದ್ಮನಾಭ, ಸುಶೀಲ, ಅಳ್ಳಾರಂಡ ಬೊಳ್ಳವ್ವ ಮತ್ತು ಪಟ್ಟಂಡ ಕಾವೇರಮ್ಮ ಇವರುಗಳು.

ಮಾರಾಟಕ್ಕಿದೆ.

ಉತ್ತರ ಕೊಡಗು ತಾಲೋಕು ಶನಿವಾರಸಂತೆ ಹೋಬಳಿ ಕೊಡ್ಲೂರು ಲಕನಿ ಗ್ರಾಮದಲ್ಲಿ 5 ಎಕ್ರೆ ತರಿಗದ್ದೆ, ಇದಕ್ಕೆ ಬತ್ತಾಗಿ 2 ಎಕ್ರೆ ಕಷ್ಟಿ, ಇದೇ ಗ್ರಾಮದ ಮಧ್ಯದಲ್ಲಿ $\frac{1}{4}$ ಎಕ್ರೆ ಜಾಗದಲ್ಲಿ ವಾಸಕ್ಕೆ ಚೆನ್ನಾಗಿರುವ ಹಂಚಿನ ಮನೆ 30 ಫಲಬರುವ ಕಿತ್ತಳೆ ಗಿಡ. ಇವು ಮಾರಾಟಕ್ಕಿವೆ. ಪಬ್ಲಿಕ್ ರಸ್ತೆ ಮನೆಯ ಹತ್ತಿರದಲ್ಲಾಗಿ ಇದೆ. ಖಾಯಿಸ್‌ದಾರರು ಖುದ್ದು ನನ್ನಲ್ಲಿ ವಿಚಾರಿಸುವದು.

ಉದ್ದೂರು ಸೋಮಪ್ಪ,
ಮುನ್ಸಿಪಲ್ ಮೆಂಬರ್.
3-2 ಕೊಡ್ಲಿಪೇಟೆ.

ಕರುಣಾಹೃದಯಿ ಮಹಾತ್ಮಾ ಗಾಂಧಿ.

(ಲೇಖಕ:-ಡಾ. ಸುರೇಶಚಂದ್ರ ಬೆನರ್ಜೀ.)

೧೯೪೧ರಲ್ಲಿ ವೈಯಕ್ತಿಕ ಅಸಹಕಾರ ಚಳವಳಕ್ಕೆ ಆರಂಭವಾದ ಕಾಲ. ಗಾಂಧೀಜಿಯವರನ್ನು ಕಾಣಲು ಸೇವಾಗ್ರಾಮದಲ್ಲಿರುವ ಅವರ ಆಶ್ರಮಕ್ಕೆ ನನಗೆ ಹೋಗಬೇಕಾಗಿ ಬಂತು. ಮಧ್ಯಾಹ್ನ ಸುಮಾರು ಮೂರು ಗಂಟೆಗೆ ಅವರ ಚೊಕ್ಕವಾದ ಚಿಕ್ಕ ಕೋಣೆಯೊಳಗೆ ನಾನು ಕಾಲಿಟ್ಟೆ. ಗಾಂಧೀಜಿಯವರು ಆಗ ಒಂದು ಸಾಮಾನ್ಯ ಚಿಂದಿ ವಸ್ತ್ರವನ್ನು ತಮ್ಮ ಬಲ ಹೆಬ್ಬೆಟ್ಟಿಗೆ ಸುತ್ತುತಿದ್ದರು 'ಸ್ಲಿಪರ್'ದಿಂದ ಉಜ್ಜುವ ಕಾರಣದಿಂದ ಉಂಟಾದ ಒಂದು ಚಿಕ್ಕ ಹುಣ್ಣಿಗೆ ಚಿಂದಿ ವಸ್ತ್ರ ಸುತ್ತುತ್ತಿದ್ದೇನೆಂದು ಗಾಂಧೀಜಿಯವರ ಉತ್ತರಬಂತು. ಆಗ ನಾನು ಕೇಳಿದೆ 'ಒಂದು ಒಳ್ಳೆಯ ಬೇಂಡೇಜ್ ಮಾಡಿರುವದಿಲ್ಲವೇಕೆ?' ಆಗ ಅವರ ಬಾಯಿಂದ ಹೊರಟ ಮಾತುಗಳು ಸುವರ್ಣಾಕ್ಷರದಿಂದ ಬರೆದಿಡ ಪಡುವ ಯೋಗ್ಯತೆ ಹೊಂದಿದ್ದವು. 'ನೀನು ನನ್ನಿಂದು ನಿಜ ಒಳ್ಳೆಯ ಬೇಂಡೇಜ್ ಮಾಡಿಸುವುದು ನನಗೆ ಸಾಧ್ಯವಿದೆ. ಭಾರತದಲ್ಲಿಯ ಅತ್ಯಂತ ಜಾಣ ಶಸ್ತ್ರವೈದ್ಯನ ನನ್ನನ್ನು ನನ್ನ ಚಿಕಿತ್ಸೆಗಾಗಿ ಕರೆಸಬಹುದಾಗಿದೆ. ಆದರೆ ಸೇವಾಗ್ರಾಮದ ಬಡ ಜನತೆಗೆ ಈ ರೀತಿಯ ಸವಲತ್ತುಗಳುಂಟೇ? ಇದಕ್ಕಿಂತ ಒಳ್ಳೆಯದನ್ನು ಬಳಸುವ ಯೋಗ್ಯತೆ ಅವರಿಗಿಲ್ಲದಿಯೇ?' ಎಂದು ಕೇಳಿದಾಗ ಮುಂದೇನೆನ್ನುವದೆಂದು ನನಗೇನೆ ತೋಚದಂತಾಯಿತು. ಮೌನನಾದೆ.

ಆದರೆ ಅವರು ಮಾಡುತ್ತಿರುವ ಕಾರ್ಯಾಚರಣೆ, ನನ್ನ ಪ್ರಶ್ನೆಗೆ ಕೊಟ್ಟ ಉತ್ತರ ಇವುಗಳನ್ನು ಗಮನಿಸುವಾಗ ಬಡ ಮಂದಿಯ ಕಷ್ಟ ಸಂಕಷ್ಟಗಳ ಕುರಿತು ಅವರ ಹೃದಯದಲ್ಲಿ ಎಷ್ಟು ಕರುಣೆಯಿತ್ತು, ಹಳ್ಳಿಯ ಅತಿ ಬಡವನ ಮೇಲೆ ಅವರಿಗೆಷ್ಟು ಕಹಾನ ಬೂಕೆಯಿತ್ತು ಎಂಬುವದರ ಆಳ ಕಂಡುಹಿಡಿಯಲು ಕಷ್ಟವಾಗಲಿಲ್ಲ. ಹೆಬ್ಬೆಟ್ಟಿಗೆ ವಸ್ತ್ರದ ಚಿಂದಿ ಸುತ್ತಿಯಾದ ನಂತರ ಅವರು ಹತ್ತಿರದ ಒಂದು ಗುಡಿಸಲಿಗೆ ನನ್ನನ್ನು ಕರೆದೊಯ್ದರು.

ಇಡೀ ಮೈಯಲ್ಲೆಲ್ಲ ಹುಣ್ಣುಗಳು ಬಿದ್ದ ಕುಷ್ಟರೋಗಿಯನ್ನು ನಾನಲ್ಲಿ ಕಂಡೆ. ಆ ದೃಶ್ಯ ಕಂಡು ಎದೆ ಜುಮ್ಮೆಂದಿತು ಅತ್ಯಂತ ಅಸಹ್ಯ ಕಂಡಿತು ನನಗೆ ವೃತ್ತಿಯಲ್ಲಿ ಪ್ರಸಿದ್ಧನಾದ ನಾನು ಓರ್ವ ಕುಷ್ಟರೋಗಿಯನ್ನು ಕಂಡ ಮಾತ್ರಕ್ಕೆ ಅಸಹ್ಯಪಡಬಾರದಾಗಿತ್ತು. ಆದರೆ ನನ್ನ ಆ ಜುಗುಪ್ಸೆ ಗಾಂಧೀಜಿಯವರಿಗಾಗಿ. ದಯಭರಿತ ಧ್ವನಿಯಿಂದ, 'ನೀವು ಏನು ಮಾಡಿದಿರಿ?' ಎಂದು ಕೇಳಿದೆ ಆಗ ಗಾಂಧೀಜಿಯವರು ನಮಗಳಿಗೆ ಬೀರುತ, 'ಬೇರೆ ಏನನ್ನು ತಾನೆ ಮಾಡಲಿ ಒಂದು ದಿನ ಈ ಕುಷ್ಟರೋಗಿ ನನ್ನ ಬಳಿಗ ಬಂದು ತನ್ನವರೆಲ್ಲಾ ಅಂದರೆ ತನ್ನ ಪತ್ನಿ, ಪುತ್ರ, ಪುತ್ರಿಯರೆಲ್ಲಾ ತನ್ನ ಕೈ ಬಿಟ್ಟುದರಿಂದ ನನ್ನ ಬಳಿಗೆ ಬರಬೇಕಾಯಿತು ಎಂದು ಬಿನ್ನವಾಣಿಯಿಂದ ಹೇಳಿದ. ಅಂಥಾವನಿಗೆ ಆಶ್ರಯವನ್ನು ನಾನು ಒಲ್ಲೆನೆನ್ನುವದು ಹೇಗೆ? ಒಂದು ವೇಳೆ ನಾನು ಅವನಿಗೆ ಆಶ್ರಯ ನಿರಾಕರಿಸಿದರೆ ಮತ್ತೆ ಅವನಿಗೆ ಆಶ್ರಯ ಕೊಡುವವರು ಬೇರೆ ಯಾರು?' ಎಂದರು. ನಾನು ಆ ರೋಗಿಯ ಚಿಕಿತ್ಸೆಯ ಬಗ್ಗೆ ಕೆಲವು ಇಂಜಕ್ಷನ್‌ಗಳನ್ನು ಶಿಫಾರಸು ಮಾಡಿದೆ ಅವನಿಗೆ ಅವು ಬಹಳ ಕೊಡಲ್ಪಟ್ಟವು ಮತ್ತೊಮ್ಮೆ ನಾನು ಅವನನ್ನು ಕಂಡಾಗ ಅವನ ರೋಗ ಸಾಕಷ್ಟು ವಾಸಿಯಾಗಿತ್ತು.

ಮತ್ತೆ ಕೆಲಮಂದಿ ರೋಗಿಗಳು.

ಅಲ್ಲಿಂದ ಗಾಂಧೀಜಿಯವರ ಆಶ್ರಮಕ್ಕೆ ಮರಳಿ ಬಂದಾಗ ಅಲ್ಲಿ ಸುಮಾರು ಅರುವತ್ತು ಮಂದಿ ವಯಸ್ಸು ಮೀರಿದವರು ಅರ್ಧ ಪ್ರತಿಭಾಶಾಲಿಗಳಾಗಿ ಗಾಂಧೀಜಿಯವರ ಆಸನದ ಎದುರುಗಡೆ ಕುಳಿತಿರುವದನ್ನು ಕಂಡೆ ಅವರು ದೀರ್ಘ ಕಾಲ ತನ್ನ ಜೊತೆಯಲ್ಲಿ ಸಹಕರಿಸಿರುವವರಾಗಿದ್ದು, ಇದೀಗ ಅವರು ಜೀವನ ಬಿದ್ದ ಕಾರಣ ಅವರ ಆರೈಕೆ ನೋಡುವದು ತನ್ನ ಪಾಲಿನ ಕರ್ತವ್ಯವೆಂದೂ ಗಾಂಧೀಜಿ ನನ್ನೊಡನೆ ಅವರ ಪರಿಚಯಮಾಡಿದರು. ಆ ಮೇಲೆ ಬಾಪೂಜಿ ಮಮತೆಯ ಪೂತಿಯಂತೆ ಅವರು ಮಂದಿಗೆ ಊಟ ಬಡಿಸಿದರು. ನಡುವೆ ಸಾಧಾರಣವಾದ ಪ್ರಶ್ನೆಗಳನ್ನೂ ಅವರೊಡನೆ ಕೇಳುತ್ತಿದ್ದರು ನಾನು ವಯಸ್ಸಾದ ಗಾಂಧೀಜಿಯವರನ್ನೇ ದಿಟ್ಟಿಸುತ್ತಿದ್ದೆ ಅವರ ಮುಖದ ಮೇಲೆ ಮಮತೆ ಮತ್ತು ಕರುಣೆಗಳ ಪ್ರಕಾಶ ಹೊಳೆಯುತಿತ್ತು.

ಸಹೋದ್ಯೋಗಿಗಳೊಡನೆ ಸಹಕಾರ

ಜೀವನ ಬಿದ್ದ ಸಹಕಾರ್ಯಕರ್ತರೊಡನೆ ಗಾಂಧೀಜಿಯವರು ಕರುಣೆ ಪ್ರದರ್ಶಿಸುವ ಸನ್ನಿವೇಶವನ್ನು ವರ್ಣಿಸುವಾಗ ನಾನು ನನ್ನ ಸ್ವಂತ ಅನುಭವವೊಂದನ್ನು ಅವಶ್ಯ ವರ್ಣಿಸಬೇಕಾಗುವದು. ೧೯೩೦ರ ಉಪ್ಪಿನ ಸತ್ಯಾಗ್ರಹಕ್ಕೆ ಸಂಬಂಧಪಟ್ಟು ನನ್ನನ್ನು ೨॥ ವರ್ಷಗಳ ಕಠಿಣ ಶಿಕ್ಷೆಗೊಳಪಡಿಸಿದರು. ಬಲಿಪುರ ಸೆಂಟ್ರಲ್ ಜೈಲಿನಲ್ಲಿ ಕೈದಿಯಾಗಿದ್ದಾಗ ನನಗೆ ಬೆನ್ನೆಲುಬಿನ ಕ್ಷಯ ಹಿಡಿದಿತ್ತು. ನನ್ನ ಆರೋಗ್ಯ ಸ್ಥಿತಿ ದಿನೇ ದಿನೇ ಕೆಡುತ್ತ ಬಂತು, ಕೊನೆಗೆ ಜೈಲಿನ ಅಧಿಕಾರಿಗಳು ಹೇಗೆ ಎಂತ್ರ ಮಾತ್ರ ಒಂದು ಖಾರರಿಸಿ ಮಾಡಿ ನನ್ನನ್ನು ಜೈಲಿನಿಂದ ಬಿಡುವ ಮನಸ್ಸು ವ್ಯಕ್ತಪಡಿಸಿದರು. ಆದರೆ ಈ ರೀತಿ ಶರ್ತಿಗೊಳಪಟ್ಟು ಬಿಡುಗಡೆಯಾಗುವದು ನನಗೆ ಹಿತತೋರಲಿಲ್ಲ. ಆದುದರಿಂದ ಯಾವದೇ ರೀತಿಯ ಬರಹಾರಿಗ ಸಹಿ ಮಾಡಲು ಸಾಧ್ಯವಿಲ್ಲವೆಂದು ನಿರಾಕರಿಸಿದೆ. ಹೀಗಾಗಿ ಒಂದು ಸಮಸ್ಯೆ ಎದ್ದಿತು. ಇದೇ ಕಾಲದಲ್ಲಿ ನನಗೊಂದು ಕಾರ್ಡ ಮಹಾತ್ಮಾಜೀಯವರಿಂದ ಬಂತು. ಅದರಲ್ಲಿ, 'ಜೈಲಿನಿಂದ ಬಿಡುಗಡೆಹೊಂದಿದಾಕ್ಷಣ ಬಂದು ನೋಡಲು ಕೇಳಿದ ಸುದ್ದಿ ನಿಮ್ಮ ಸ್ಥಿತಿ ಚಿಂತಾಜನಕವಾಗಿದೆಯೆಂದು. ನಿಮ್ಮ ಈಗಿನ ಸ್ಥಿತಿ ಹೇಗಿದೆ ಎಂದು ಕೂಡಲೇ ತಿಳಿಸಿರಿ. ಶೈಸ್ತ್ರೈಯರನ್ನು ನಾನು ಈ ಕ್ಷಣ ಮಾಗಿ ಮೊದಲಾಗಿ ನಿಮ್ಮ ಬಿಡುಗಡೆಯ ಪ್ರಸ್ತಾಪ ಎತ್ತುವೆ' ಎಂದು ಬರೆದ್ದರು ಬಾಪು. ಜೈಲು ಅಧಿಕಾರಿಗಳು ಈ ಪತ್ರ ಕಂಡು ಕಂಪಿತರಾದಗಿದರು. ಮರುದಿನವೇ ನನ್ನ ಬಿಡುಗಡೆಯಾಯಿತು.

ಪ್ರತೀ ವಾರಕ್ಕೊಂದು ಪತ್ರ.

ಗಾಂಧೀಜಿಯವರು ಯಾವದೇ ರೋಗಿಯನ್ನು ಅರ್ಧ ಪ್ರೀತಿಸಿ ಬಾಕಿ ಇಡುವ ಕ್ರಮವಿಲ್ಲ ಅವರ ಕರುಣಾಭರಿತ ಹೃದಯಕ್ಕೆ ಜೈಲಿನಿಂದ ಬಿಡುಗಡೆ ಹೊಂದಿದ ಕ್ಷಣ ನನ್ನಲ್ಲಿ ಚಿಕ್ಕಾಸೂ ಇದ್ದಿಲ್ಲ; ನನಗೆ ಅಂಟಿದಂಥ ಭಯಂಕರ ರೋಗದ ಚಿಕಿತ್ಸೆಗೆ ವಿಪರೀತ ಖರ್ಚು ಬೇಕು ಎಂಬುದು ತಿಳಿದಿರಬೇಕು ಹೀಗಾಗಿ ಅವರೆ ಕ್ಷೇತ್ರದಲ್ಲಿರುವ ತಮ್ಮ ಮಿತ್ರರಿಗ ನನ್ನ ಆರೋಗ್ಯದ ಕುರಿತು ವಿಶೇಷ ಜಾಗ್ರತೆ ತೆಗೆದುಕೊಳ್ಳುವಂತೆ ಬರೆದರು. ನಾನು ಸ್ವಿಜರ್ಲೆಂಡಿಗೆ ಚಿಕಿತ್ಸೆ ಬಗ್ಗೆ ಹೋಗಬೇಕೆಂದೂ ಬರೆದಿದ್ದರು ನಾನು ಇದಕ್ಕೆ ಒಪ್ಪಿದ್ದಾದರೆ ಅದಕ್ಕೆ ಬೇಕಾದ ಹಣದ ವ್ಯವಸ್ಥೆ ಮಾಡದಿರುತ್ತಿರಲಿಲ್ಲ

'ಪ್ಲಸ್ಟರ್ ಆಫ್ ಪೇರಿಸ್ ಜಾಕೆಟ' ದನಬ ತೊಟ್ಟುಕೊಂಡು ನಾನು ಕಾಮಿಲ್ಲಾ ಆರೋಗ್ಯ ಆಶ್ರಮದಲ್ಲಿ ಚಿಕಿತ್ಸೆ ಹೊಂದುತ್ತಿರುವ ಕಾಲದಲ್ಲಿ ಪ್ರತೀ ವಾರ ತಪ್ಪದೆ ಗಾಂಧೀಜಿಯವರು ನನಗೆ ಪತ್ರ ಬರೆಯುತ್ತಿದ್ದರು. ಮಾತ್ರವಲ್ಲ, ನಾನು ಪತ್ರಗಳ ಉತ್ತರ ಬರೆಯಲು ವಿಳಂಬ ಮಾಡಿದರೆ ಅವರಿಗೆ ಬೇಸರವಾಗುತ್ತಿತ್ತು ಅಂಥಾ ಒಂದು ಪತ್ರಗಳಲ್ಲಿ 'ನೀವೇಕೆ ನಿಮ್ಮ ಆರೋಗ್ಯದ ಕುರಿತು ಸರಿಯಾಗಿ ನನಗೆ ಪತ್ರ ಬರೆಯುವದಿಲ್ಲ?' ಎಂದು ಕೂಡ ಕೇಳಿದ್ದರು.

ಗಾಂಧೀಜಿಯವರ ಹೃದಯದಲ್ಲಡಗಿದ್ದ ಅಪಾರ ಕರುಣೆ ಮತ್ತು ಪ್ರೇಮದ ಕುರಿತು ಸಾವಿರಾರು ಕಥೆಗಳಿವೆ.

ಎಂಪೈರ್ ಆಫ್ ಇಂಡಿಯಾ

ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

೪೮ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು	ಒಟ್ಟು ಆದಾಯ ..	1,07,09,000	ಮೇಲ್ಪಟ್ಟು
	ಚಾಲ್ತಿಯಿರುವ ವಿಮೆ ..	17,74,52,000	,,
	ಆಸ್ತಿ	6,67,60,000	,,
ಕಂಪನಿಯ ಆದಿಯಲ್ಲಿ ಕೊಟ್ಟ ಕ್ಲೈಮುಗಳು		8,83,62,000	,,

ಶಾಖಾ ಕಛೇರಿ: ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು. | ಏಜನ್ಸಿ ಅರ್ಜಿಗಳನ್ನು ಸ್ವಾಗತಿಸಿದೆ. | ಪ್ರಧಾನ ಕಛೇರಿ: ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ

ವಿಮೆ ಮಾಡಲು ಇಲ್ಲವೇ ಪ್ರತಿನಿಧಿಸಲು

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.

ಇವರ ಸಲಹೆಗಿಂತ ಉತ್ತಮ ಮಾರ್ಗವಿಲ್ಲ

ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದೂಸ್ಥಾನದ ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು

ದಿ ಬೊಂಬಾಯಿ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

30 ಮೌಂಟ್ ರೋಡ್, ಪೊ ಬಾ. ನಂ. 337, ಮದ್ರಾಸು 2 — ಬೊಂಬಾಯಿ ಲೈಫ್ ಬಿಲ್ಡಿಂಗ್, ಪೊ ಬಾ ನಂ 1, ಉಡುಪಿ

(ಟೆಲಿಫೋನ್ ನಂ 8398)

ಇತರ ಆಫೀಸುಗಳು:—ಬೆಂಗಳೂರು, ತಿರುವಾಂಡ್ರಂ, ಕಲ್ಲಿಕೋಟೆ, ಮಂಗಳೂರು, ಮಧುರೆ, ಮತ್ತು ಬೊಂಬಾಯಿ

CRESCENT

FOR PROTECTION AND SERVICE.

It is best to represent and insure with

The CRESCENT Insurance Co., Ltd.

H. O: BOMBAY. [*Established 1919.*

BRANCHES ALL OVER INDIA

For particulars write to: THE BRANCH MANAGER.
22—B. MAHATHMA GANDHI ROAD.
BANGALORE CANT.

ಸುರಕ್ಷಿತ ಹಾಗೂ ಸೇವೆಗಾಗಿ ವಿಮೆ ಪಡೆಯಲು

ಕ್ರೆಸೆಂಟ್

ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.

Edited, Printed and Published by P. I. Belliappa at 'Kodagu' Press, Mercara for 'Kodagu' Ltd

Reg. No. M. 1550.
'KODAGU' MERCARA. (Coorg).
ಕೊಡಗು
ಸಂಪಾದಕರು—ಬಿ. ಡಿ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 4-8-0
ಸಂಪುಟ ೨೭ | ತಾರೀಖು ೧೧-೩-೧೯೪೯ನೇ ಶುಕ್ರವಾರ | ಸಂಚಿಕೆ ೩೭

ಸ್ಟಾಲಿನ್ನರ ಶಾಂತಿ ಘೋಷಣೆ.

[ಲೇ:- ಶ್ರೀ ಶಂಕರ್‌ರವರಿಂದ]

'ನೀವು ನಡೆಸಿದ ಹಿಂಸಾಕೃತ್ಯಗಳನ್ನು ಮರೆಯಲು ಹಲವು ಶತಮಾನಗಳಾದರೂ ಬೇಕು. ಫ್ಯಾಸಿಸ್ಟ್ ಜರ್ಮನಿ ಮಾನವ ವರ್ಗದ ಮೇಲೆ ನಡೆಸಿದ ಅತ್ಯಾಚಾರದ ಪಾಪವನ್ನು ತೊಳೆದುಕೊಳ್ಳಲು ಸಾವಿರ ವರ್ಷಗಳಾದರೂ ಸಾಕಾಗುವುದಿಲ್ಲ. ನೀವು ನಡೆಸಿದ ಘೋರಕೃತ್ಯಗಳಿಗೆ ವಿಧಿಸಬಹುದಾದ ಅತ್ಯಂತ ಕಡಿಮೆ ಶಿಕ್ಷೆಯೆಂದರೆ ಮರಣದಂಡನೆ!' ಎಂಬುದಾಗಿ ಅಂದು ನ್ಯೂರೆಂಬರ್ಗ್‌ನಲ್ಲಿ, ಮಿತ್ರ ರಾಷ್ಟ್ರಗಳ ನ್ಯಾಯಾಧೀಶರುಗಳು, ಯುದ್ಧಪಾತಕಿಗಳಾದ, ಹರ್‌ವಾನ್ ರಿಬ್ಬನ್ ಟ್ರಾಪ್, ಫೀಲ್ಡ್ ಮಾರ್ಷಲ್ ಗೋರಿಂಗ್, ಕೀಟೆಲ್, ರೋಸೆನ್‌ಬರ್ಗ್ ಮೊದಲಾದವರಿಗೆ ಮರಣದಂಡನೆಯನ್ನು ವಿಧಿಸುತ್ತಾ ನುಡಿದರು.

ನಿಜ, ಜಗತ್ತನ್ನು ಸಂಗ್ರಾಮಕ್ಕೆ ದೂಡಿ, ಕೋಟಿ ಕೋಟಿ ಜನತೆಯನ್ನು ಚಿತ್ರಹಿಂಸೆಗೆ ಗುರಿಮಾಡಿ, ನಿರಪರಾಧಿಗಳ ವಧೆ ನಡೆಸಿ, ಕೊನೆಗೆ ನಿರ್ನಾಮವಾದ ಫ್ಯಾಸಿಸ್ಟ್ ಶಾಹಿಯ ಅತ್ಯಾಚಾರಗಳನ್ನು ಮರೆಯಲು ಶತಮಾನಗಳಾದರೂ ಸಾಕಾಗುವುದಿಲ್ಲ. ಜರ್ಮನಿ ಮತ್ತು ಜಪಾನ್ ಫ್ಯಾಸಿಸ್ಟ್ ರಾಷ್ಟ್ರಗಳ ಪಾಶವೀ ಶಕ್ತಿಗೆ ಸಿಕ್ಕಿ ತೊಳಲಿದ ರಾಷ್ಟ್ರಗಳ ಗಾಯ ಮಾಗಲು ನೂರಾರು ವರ್ಷಗಳು ಬೇಕು. ರಣರಂಗಗಳಲ್ಲಿ ಮೂರು ಕೋಟಿಗೂ ಹೆಚ್ಚು ಮಂದಿ ಸತ್ತರು. ಫ್ಯಾಸಿಸ್ಟ್ ಬಂಧನ ಶಿಬಿರಗಳಲ್ಲಿ ಎರಡು ಲಕ್ಷಕ್ಕೂ ಹೆಚ್ಚಿಗೆ ಜನತೆಯನ್ನು ಚಿತ್ರಹಿಂಸೆಗಳಿಗೆ ಗುರಿಮಾಡಿ ಕೊಲೆಮಾಡಲಾಯಿತು. ವಿಮಾನ ಧಾಳಿಗಳಿಂದ ಒಂದು ಕೋಟಿಗೂ ಹೆಚ್ಚಿಗೆ ಸ್ತ್ರೀಯರು, ಪುರುಷರು, ಮಕ್ಕಳು ಮೃತರಾದರು. ಅಲ್ಲದೆ, ಯುದ್ಧದಿಂದಾದ ಗಾಯಗಳಿಂದ, ವ್ಯಾಧಿಗಳಿಂದ, ಯುದ್ಧದ ಪರಿಣಾಮದಿಂದಾದ ಭೀಕರ ಕ್ಷಾಮಗಳಿಂದ ಈ ಸಂಖ್ಯೆಗೆ ಎರಡರಷ್ಟು ಮಂದಿ ಸತ್ತಿದ್ದಾರೆ, ಸಾಯುತ್ತಿದ್ದಾರೆ. ಈ ಘೋರ ಪ್ರಾಣ ಹಾನಿಯ ಜೊತೆ ಊಹಿಸಲಾರದಷ್ಟು ಸಂಪತ್ತಿನ ನಾಶವಾಯಿತು. ಸುಂದರ ನಗರಗಳು ಸ್ಮಶಾನ ಭೂಮಿಗಳಾದುವು. ಗ್ರಾಮಗಳು ನಿರ್ನಾಮವಾದವು. ಮೊದಮೊದಲು ಅಮೇರಿಕಾ, ಬ್ರಿಟನ್‌ಗಳ ಉತ್ತೇಜನಗಳಿಂದ ಕೂಡಿ, ಕೊನೆಗೆ ಇಡೀ ಜಗತ್ತನ್ನೇ ಫ್ಯಾಸಿಸ್ಟ್ ಜರ್ಮನಿ, ಮತ್ತು ಜಪಾನು ಕಂಟಕಕ್ಕೆ ದೂಡಿದಾಗ ರಾಜಕಾರಣಿಗಳು ಯುದ್ಧದ ಬಿಸಿಯನ್ನರಿತರು. ಸಂಗ್ರಾಮದಲ್ಲಾದ ಹತ್ಯೆ, ಸರ್ವನಾಶ ಜಗತ್ತನ್ನೇ ಕಂಪಿಸಿತು. ಮಾನವ ಕೋಟಿ ಇನ್ನು ಖಂಡಿತ ಜಗತ್ತಿನಲ್ಲಿ ಯುದ್ಧ ಕೂಡದು ಎಂದು ಸಾರಿ ಹೇಳಿತು. ಫ್ಯಾಸಿಸ್ಟ್ ಜರ್ಮನಿ, ಜಪಾನ್‌ಗಳ ಪತನವಾಗಿ ಮಿತ್ರರಾಷ್ಟ್ರಗಳು ವಿಜಯ ಘೋಷಿಸಿದಾಗ, ಜನತೆ ಚಿರಶಾಂತಿಯ ಸವಿಸ್ವಪ್ನ ಕಲ್ಪಿಸಿತು.

ಮೂರನೆಯ ಮಹಾ ಯುದ್ಧ.

ಆದರೆ, ದ್ವಿತೀಯ ಮಹಾಯುದ್ಧ ಮುಗಿದ ಒಂದೆರಡು ವರ್ಷಗಳಲ್ಲಿಯೇ ಜನತೆಯ ಚಿರಶಾಂತಿಯ ಕನಸು, ಕನಸಾಗಿಯೇ ಉಳಿಯುವ ಸೂಚನೆಗಳು ಕಂಡುಬಂದುವು. ಘೋರ ಯುದ್ಧದ ವಾರ್ತೆ ಜಗತ್ತಿನಲ್ಲಿ ಹಬ್ಬಿತು. ಹಿಟ್ಲರ್, ಟೋಜೋ ಮೊದಲಾದವರನ್ನೇ ಪೂಜಿಸಿ, ಕೊನೆಗೆ ತಾವೂ ತೊಂದರೆಗೊಳಗಾಗಿ, ಜಗತ್ತನ್ನು ಕಂಟಕಕ್ಕೆ ನೂಕಿದ ಪ್ರಜಾಪ್ರಭುತ್ವದ ನಗಾರಿ ಬಾರಿಸುತ್ತಿರುವ ಅಮೇರಿಕಾ, ಬ್ರಿಟನ್‌ಗಳು ಅಟಮಿಕ್ ಬಾಂಬನ್ನು ಕೈಯಲ್ಲಿ ಹಿಡಿದು ಮೂರನೆಯ ಮಹಾಯುದ್ಧ ಸಂಭವವೆಂದು ಜನತೆಯನ್ನು ಹೆದರಿಸುತ್ತಿದ್ದಾರೆ. ಯುದ್ಧಕಾಲದಲ್ಲಿ ಫ್ಯಾಸಿಸ್ಟ್ ರಾಕ್ಷಸನನ್ನು ನಿರ್ಮೂಲ ಮಾಡಲು ಜನತೆಯೊಡನೆ ಸಹಕರಿಸಿದ ಬ್ರಿಟನ್ನಿನ ಮಾಜಿ ಮುಖ್ಯಮಂತ್ರಿ ಚರ್ಚಿಲರು ಯುದ್ಧ ಮುಗಿದ ಒಂದು ವರ್ಷದಲ್ಲಿ ಅಮೇರಿಕಾದ ಫಲ್ಟನ್‌ನಲ್ಲಿ ಭಾಷಣ ಮಾಡುತ್ತಾ ಮೂರನೆಯ ಯುದ್ಧ ಅನಿವಾರ್ಯವೆಂದು ಸಾರಿ ಹೇಳಿದರು. ರಷ್ಯಾ ಅಟಂ ಬಾಂಬ್ ಕಂಡು ಹಿಡಿಯುವ ಮೊದಲೇ ಯುದ್ಧ ಸಾರಿ ಬಿಡಬೇಕೆಂದು ಅಮೇರಿಕಾ ಬ್ರಿಟನ್‌ಗಳನ್ನು ಎಚ್ಚರಿಸಿದರು. ಬ್ರಿಟನ್ನಿನ ವಿದೇಶಾಂಗ ಮಂತ್ರಿ ಬೆವಿನರು ರಷ್ಯದ ಮೇಲೆ ಸಾಮ್ರಾಜ್ಯದ ಹಸಿವಿನ ಅಪವಾದ ಹೊರಿಸಿ, ಜಗತ್ತನ್ನೇ ಸರ್ವನಾಶ ಮಾಡುವ ಮೂರನೆಯ ಮಹಾ ಯುದ್ಧವಾದಲ್ಲಿ, ಜವಾಬ್ದಾರಿಯು ರಷ್ಯಾದ ಹೆಗಲಲ್ಲಿ ಎಂದು ಘೋಷಿಸಿದರು. ಅಮೇರಿಕದಲ್ಲಿ ಅಧ್ಯಕ್ಷ ಟ್ರೂಮನ್ ಹಿಟ್ಲರನ್ನು ಮೀರಿಸಿ ಭಾಷಣಗಳನ್ನು ಮಾಡಿದರು; ಹೇಳಿಕೆಗಳನ್ನಿತ್ತರು. ಜನತೆಯಲ್ಲಿ ಯುದ್ಧದ ಭೀತಿ ಹುಟ್ಟಿಸಿದರು. ಅಮೇರಿಕನ್, ಬ್ರಿಟಿಷ್ ಪತ್ರಿಕೆಗಳೂ, ಬಂಡವಾಳಗಾರರೂ ಯುದ್ಧ ಯುದ್ಧವೆಂದು ಪ್ರಚಾರ ಮಾಡಿದರು. ದ್ವಿತೀಯ ಯುದ್ಧ ಮುಗಿದ ಕೂಡಲೇ, ಜಗತಿನಲ್ಲಿ ಇನ್ನು ಎಂದೆಂದಿಗೂ ಯುದ್ಧವಾಗದಂತೆ, ಚಿರಶಾಂತಿಯ ಅಡಿಪಾಯವನ್ನು ಹಾಕುವ ಪೋಟ್ಸ್‌ಡಾಂ, ಯಾಲ್ಟಾ ಒಪ್ಪಂದಗಳನ್ನು ಮಹಾ ರಾಷ್ಟ್ರಗಳ ನಾಯಕರು ತೃಣೀಕರಿಸಿ, ಒಪ್ಪಂದದ ಕಾಗದ ಪತ್ರಗಳನ್ನು ಚಿಂದಿ ಚಿಂದಿ ಮಾಡಿ ಎಸೆದರು. ವಿಶ್ವಸಂಸ್ಥೆಯ ಜನನಕ್ಕೆ ಕಾರಣವಾದ ಅಟ್ಲಾಂಟಿಕ್ ಘೋಷಣೆಗೆ ದ್ರೋಹ ಮಾಡಿದರು. ಗ್ರೀಸ್, ಚೀನಾಗಳಲ್ಲಿ ಅಂತರಯುದ್ಧಕ್ಕೆ ಪ್ರೋತ್ಸಾಹ ಕೊಟ್ಟರು. ಅಮೇರಿಕ ಅಧ್ಯಕ್ಷ ದಿವಂಗತ ರೂಸ್‌ವೆಲ್ಟರ ಪ್ರಜಾಪ್ರಭುತ್ವ ಧ್ಯೇಯಗಳಿಗೆ ಅಧ್ಯಕ್ಷ ಟ್ರೂಮನರು ತಿಲಾಂಜಲಿಯಿತ್ತರು. ಮಲಯಾ, ವಿಯಟ್‌ನಾಂ, ಇಂಡೋನೇಷಿಯಾಗಳಲ್ಲಿ ಜನತೆಯ ಸ್ವಾತಂತ್ರ್ಯ ಹೋರಾಟವನ್ನು ಫ್ಯಾಸಿಸ್ಟ್ ರಾಕ್ಷಸೀ ಕೃತ್ಯಗಳಿಂದ ಮಟ್ಟಹಾಕಲು ಯತ್ನಿಸುತ್ತಿರುವ ಬ್ರಿಟನ್, ಫ್ರಾನ್ಸ್, ಹಾಲೆಂಡ್ ದೇಶಗಳಿಗೆ ಡಾಲರುಗಳ, ಶಸ್ತ್ರಾಸ್ತ್ರಗಳ ಹೊಳೆ ಹರಿಸಿದರು. ರಾಷ್ಟ್ರಗಳ ಒಳರಾಜಕೀಯದಲ್ಲಿ ಅಮೇರಿಕಾ, ಬ್ರಿಟನ್‌ಗಳು ಪ್ರವೇಶಿಸಿ ತಮ್ಮ ಪ್ರಭಾವ ಬೀರಿದುವು. ಇದಕ್ಕೆ ನಿದರ್ಶನವಾಗಿ ಅಖಂಡ ಭಾರತದಲ್ಲಿ ಪಾಕಿಸ್ತಾನದ ಜನನ, ಭಾರತದ ವಿಭಾಗ, ಹಿಂದೂ, ಮುಸ್ಲಿಂ ಹೋರಾಟ, ಲಕ್ಷಾಂತರ ಮಂದಿಯ ಕೊಲೆ, ರಕ್ತಪಾತ, ಮತ್ತು ಹೈದರಾಬಾದ್, ಕಾಶ್ಮೀರ ಗೊಂದಲಗಳು. ಚೀನಾದಲ್ಲಿ ಚಿಯಾಂಗ್ ಕೈಷೆಕ್, ಕ್ಯುಮಿನ್ ಟಾಂಗ್ ಸರ್ಕಾರ, ಗ್ರೀಸಿನಲ್ಲಿ ಫ್ಯಾಸಿಸ್ಟರಿಗೆ ಅಮೇರಿಕ ಡಾಲರುಗಳ ದಾನ, ಶಸ್ತ್ರಾಸ್ತ್ರಗಳ ಸರಬರಾಜು. ಜರ್ಮನಿಯ ವಿಭಜನೆ.

ಇವೆಲ್ಲಾ ತಲ್ಲದೆ ವಿಶ್ವಶಾಂತಿ ಸ್ಥಾಪನೆಯ ಉದ್ದೇಶದಿಂದ ನಿರ್ಮಿಸಿದ ವಿಶ್ವಸಂಸ್ಥೆಯನ್ನು (ಯು. ಎನ್. ಓ) ಮಹಾ ರಾಷ್ಟ್ರಗಳು ರಾಜಕೀಯ ಕಲಹಕೂಟವನ್ನಾಗಿ ಮಾರ್ಪಡಿಸಿದವು. ಭದ್ರತಾ ಸಮಿತಿ (ಸೆಕ್ಯೂರಿಟಿ ಕೌನ್ಸಿಲ್) ತನ್ನ ಹೆಸರಿಗೆ ಅಪಾರ್ಥ ಕಲ್ಪಿಸಿತು. ಇದಕ್ಕೆ ನಿದರ್ಶನ ಇಂದು ಹೈದ್ರಾಬಾದ್, ಕಾಶ್ಮೀರ, ಪ್ಯಾಲಿಸ್ಟೈನ್ ಇಂಡೋನೇಷಿಯಾ. ವಿಶ್ವಸಂಸ್ಥೆಯಿಂದು ಮತ್ತೊಂದು ಲೀಗ್ ಆಫ಼್ ನೇಶನ್ಸ್ ಆಗುತ್ತಿದೆ. ವಿಶ್ವಸಂಸ್ಥೆಯನ್ನು ದುರುಪಯೋಗಿಸಿ ಮಹಾರಾಷ್ಟ್ರಗಳು ಪರಸ್ಪರ ವಿರುದ್ಧ ಪಂಗಡಗಳನ್ನು ರಚಿಸುತ್ತಿವೆ. ಪಶ್ಚಿಮ ಯೂರೋಪಿನ ರಾಷ್ಟ್ರಗಳ ಪಂಗಡ, ಅಟ್ಲಾಂಟಿಕ್ ರಕ್ಷಣಾ ಕರಾರು, ಈಗೀಗ ಏಷ್ಯನ್ ರಾಷ್ಟ್ರಗಳ ಪಂಗಡದ ಮಾತೂ ಕೇಳಿಬರುತ್ತಿದೆ. ಅಮೇರಿಕಾ ತನಗೆ ಸಾಧ್ಯವಾದ ಕಡೆಗಳಲ್ಲೆಲ್ಲಾ ನೌಕಾ, ವಿಮಾನಯಾನಗಳನ್ನು ಸ್ಥಾಪಿಸುತ್ತಿದೆ. ಡಾಲರ್ ಮೂಲಕ ಕೂಡಾ ತನ್ನ ಪ್ರಭಾವವನ್ನು ಹರಡುತ್ತಿದೆ. ಇವಿಷ್ಟು ಯೋಜನೆಗಳಿಗೂ, ಇಷ್ಟು ಸೈನಿಕ ಒಪ್ಪಂದಗಳಿಗೂ ಕಾರಣವೇನು? ಜಗತ್ತನ್ನೇ ಆಕ್ರಮಿಸಲು ರಷ್ಯಾ ಸನ್ನದ್ಧವಾಗಿದೆ ಎಂಬ ಆಪಾದನೆ!

ಸ್ಟಾಲಿನ್ನರ ಶಾಂತಿ ಘೋಷಣೆ

'ಕಮ್ಯೂನಿಸ್ಟ್ ರಷ್ಯಾದೊಂದಿಗೆ ಸಹಕಾರ ಅಸಾಧ್ಯ. ಯುದ್ಧ ಅನಿವಾರ್ಯ' ಎಂದು ಸಾರುತ್ತಿರುವ ಅಮೇರಿಕ, ಬ್ರಿಟನ್ ಯುದ್ಧ ಪಿಪಾಸುಗಳಿಗೆ ಸೋವಿಯಟ್ ರಷ್ಯಾದ ಜನತೆಯ ನಾಯಕ ಸ್ಟಾಲಿನರು ಇತ್ತೀಚೆಗೆ ಒಂದು ಸವಾಲ್ ಹಾಕಿದ್ದಾರೆ. ಅಮೇರಿಕ ಬ್ರಿಟನ್‌ಗಳ ಪಿತೂರಿಯನ್ನು ಬಯಲುಮಾಡಿ, 'ಯುದ್ಧ! ಯುದ್ಧ! ಎಂದು ಜನತೆಯಲ್ಲಿ ಭೀತಿ ಹುಟ್ಟಿಸುತ್ತಿರುವುದು, ಯುದ್ಧದ ತಯಾರಿ ನಡೆಸುತ್ತಿರುವುದು ರಷ್ಯವಲ್ಲ, ಅದು ಅಮೇರಿಕನ್ ಸಾಮ್ರಾಜ್ಯಶಾಹಿ. ರಷ್ಯಾ ಯುದ್ಧ ತಪ್ಪಿಸುವ ಯೋಜನೆಯಲ್ಲಿ ಸಹಕರಿಸಲು ಸಿದ್ಧ. ರಷ್ಯಾ ಶಾಂತಿ ಪ್ರೇಮಿ.' ಎಂದು ಸ್ಟಾಲಿನ್ ಸಾರಿದ್ದಾರೆ.

ಅಮೇರಿಕನ್ ಪತ್ರಿಕೋದ್ಯೋಗಿಯ ಪ್ರಶ್ನೆಗಳಿಗೆ ಉತ್ತರ ಕೊಡುತ್ತಾ, ಸ್ಟಾಲಿನರು (೧) ಅಮೇರಿಕ ಮತ್ತು ರಷ್ಯ ಪರಸ್ಪರ ಯುದ್ಧ ಮಾಡಬೇಕೆಂಬ ಅಭಿಪ್ರಾಯ ಹೊಂದಿಲ್ಲ ಎಂಬುದನ್ನು ನಿದರ್ಶನಗೊಳಿಸುವ ಮಾತುಕತೆಗಳಲ್ಲಿ ಭಾಗವಹಿಸಲು ಸಿದ್ಧ. (೨) ಜಗತಿನ ಶಾಂತಿ ಸ್ಥಾಪನೆಗೆ ಅನುಕೂಲವಾಗುವ ಒಪ್ಪಂದಕ್ಕೆ ಮತ್ತು ಅದಕ್ಕೆ ಅನುಗುಣವಾಗಿ ಕ್ರಮೇಣ ನಿಃಶಸ್ತ್ರೀಕರಣಕ್ಕೆ ರಷ್ಯದ ಸಂಪೂರ್ಣ ಸಮ್ಮತಿಯಿದೆ. (೩) ಸಂಪೂರ್ಣ ಜರ್ಮನಿಯ ಭವಿಷ್ಯತ್ತನ್ನು ನಿರ್ಧರಿಸುವ ತನಕ ಪ್ರತ್ಯೇಕ ಪಶ್ಚಿಮ ಜರ್ಮನ್ ರಾಷ್ಟ್ರ ನಿರ್ಮಾಣದ ಯೋಚನೆಯನ್ನು ಅಮೇರಿಕ ಬ್ರಿಟನ್ ಫ್ರಾನ್ಸ್ ಸರಕಾರಗಳು ಮುಂದೂಡಿದಲ್ಲಿ, ಬರ್ಲಿನ್ ನಗರದಲ್ಲಿರುವ ಸಂಚಾರ ದಿಗ್ಬಂಧವನ್ನು ರದ್ದುಗೊಳಿಸಿದಲ್ಲಿ ಬರ್ಲಿನ್ ದಿಗ್ಬಂಧವನ್ನು ಸೋವಿಯಟ್ ರಷ್ಯ ಸಹಾ ಕೂಡಲೇ ರದ್ದುಗೊಳಿಸಲು ಸಿದ್ಧವಿದೆ. (೪) ಜಗತ್ತಿಗೆ ಶಾಂತಿ ಸ್ಥಾಪನೆಗಾಗಿ ಅಧ್ಯಕ್ಷ ಟ್ರೂಮನ್ನರನ್ನು ಭೇಟಿಮಾಡಲು ನಾನು ಸಿದ್ಧನಾಗಿದ್ದೇನೆ' ಎಂಬುದಾಗಿ ಸಾರಿ ಹೇಳಿದರು.

ಮಾನವತೆ ಕೋರುವುದು ಶಾಂತಿ.

ಸ್ಟಾಲಿನ್ನರ ಈ ಘೋಷಣೆ, ಸಾಮ್ರಾಜ್ಯಶಾಹಿಗಳ ಯುದ್ಧ ಪ್ರಚಾರದಿಂದ ಕಂಪಿತರಾಗಿದ್ದ ಜನತೆಯಲ್ಲಿ ಆಶಾ ಕಿರಣವನ್ನು ಮೂಡಿಸಿದೆ. ಅಮೇರಿಕ ಮಾಜಿ ಉಪಾಧ್ಯಕ್ಷ ಮತ್ತು ಪ್ರಗತಿಶೀಲ ಪಕ್ಷದ ನಾಯಕ ಶಾಂತಿಪ್ರೇಮಿ ಹೆನ್ರಿ ವ್ಯಾಲೇಸ್, ಸ್ಟಾಲಿನ್ನರ ಘೋಷಣೆಯ ಮೇಲೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾ, 'ಕಳೆದ ಎರಡು ವರ್ಷಗಳಲ್ಲಿ, [illegible] ಸ್ಟಾಲಿನ್ ತಮ್ಮ ಶಾಂತಿಪ್ರಿಯತೆ ಸಾರಿದ್ದಾರೆ. ಅಮೇರಿಕದೊಡನೆ ಕಲೆತು, ಬಹು ಮುಖ್ಯವಾದ ಬಿಕ್ಕಟ್ಟುಗಳನ್ನು ಬಗೆಹರಿಸಲು ಸಮಾಲೋಚನೆ ನಡೆಸಲು ರಷ್ಯ ಸಿದ್ಧವಿದೆಯೆಂದು ಅವರು ಹೇಳಿದ್ದಾರೆ. ಈಗ ಪತ್ರಿಕಾ ಸ್ಟಾಲಿನ್ ಸಮಾಲೋಚನೆಗೆ ಕರೆ [illegible]. ಈಗ ಮಾನವತೆ ಕೋರುತ್ತಿರುವುದು [illegible] ಒಪ್ಪಂದಗಳಲ್ಲ. ಶಾಂತಿ ಸಮಾಲೋಚನೆ' ಎಂದು ತಿಳಿಸಿದ್ದಾರೆ.

ಸ್ಟಾಲಿನ್ ಆಹ್ವಾನಕ್ಕೆ ನಿರಾಕರಣೆ.

ಆದರೆ ಬ್ರಿಟಿಷ್ ವಿದೇಶಾಂಗ ಮಂತ್ರಿ ಬೆವಿನರು ಸ್ಟಾಲಿನರ ಘೋಷಣೆಗೆ

ಚಿಕ್ಕ ಕಥೆ.

ಸಂಪಿಗೆ ಗಿಡ.

ಲೇಖಕಿ:-ಮಿಸ್. ಸಿ. ಎಂ. ಅಮ್ಮಕ್ಕಿ, ಮಡಿಕೇರಿ.

ನಾನೂ ಮತ್ತು ಶಶಿ ಇಬ್ಬರು ಸಾಯಂಕಾಲ ತಿರುಗಾಡಲು ಹೋಗಿದ್ದೆವು. ಹೂವುಗಳಿಂದ ತುಂಬಿದ ಸಂಪಿಗೆ ಗಿಡವೊಂದು ಸುಂದರವಾಗಿ ಕಂಗೊಳಿಸುತಿತ್ತು. ಅದರ ಹೂವಿನ ಸುಗಂಧವು ಆವರಣವನ್ನೆಲ್ಲಾ ತುಂಬಿತ್ತು. ನಾವು ಅದರಡಿಯಲ್ಲಿ ಕುಳಿತೆವು. ಶಶಿ ಹೇಳಿದಳು. 'ಈ ಮರದ ಹಿನ್ನೆಲೆಯಲ್ಲಿ ಕಥೆಯೊಂದಿದೆಯೆಂದು. ಆಕೆ ಹೇಳಿದ ಕಥೆಯನ್ನೇ ಇಲ್ಲಿ ಬರೆಯುತ್ತಿರುವೆನು. ಮೂವತ್ತು ವರ್ಷಕ್ಕೆ ಹಿಂದೆ ನಡೆದ ಕಥೆ ಇದು.

'ಸುಧಾಮನು ಕಾಲೇಜು ಸೇರಿದ ಆರೇಳು ತಿಂಗಳುಗಳಲ್ಲಿ ಆರೇಳು ಖಾಯಿಲೆಗಳಿಂದ ನರಳಿ ಸುಖವಿಲ್ಲದೆ ಕಾಲೇಜು ತ್ಯಜಿಸಿ ಮನೆಗೆ ಬಂದಿದ್ದನು. ತಂದೆ ತಾಯಿಗಳಿಗೆ ಆರನೆ ಮಗನಾಗಿದ್ದು ಅಣ್ಣಂದಿಯರೆಲ್ಲರೂ ನೌಕರಿಯಲ್ಲೇ ಇದ್ದ ಕಾರಣ ಮನೆಯಲ್ಲಿ ಆತನ ಇರವು ತಂದೆ ತಾಯಿಗಳಿಗೆ ಸಂತೋಷವೆನಿಸಿರಲಿಲ್ಲ. ಪಿತ್ರಾರ್ಜಿತವಾದ ಕುಟುಂಬದ ಭೂಮಿಯು ಒಂದು ಜೋಡಿಗೆ ತಾನೂ ಹಕ್ಕುದಾರನೆಂದು ಹೊಡೆದಾಡುವದು ಸುಧಾಮನಿಗೂ ಇಷ್ಟವಿರಲಿಲ್ಲ. ಅದೇ ಆಗ ಯುದ್ಧದ ಸಮಯವಾಗಿತ್ತು. ಸೈನ್ಯಕ್ಕೆ ಸೇರಿದನು. ಸೈನ್ಯಕ್ಕೆ ಸೇರಿದ ಎರಡು ವರ್ಷಗಳಲ್ಲಿ ಯುದ್ಧ ಮುಗಿದ ಕಾರಣ ಹಿಂತಿರುಗಬೇಕಾಯಿತು. ಸೈನ್ಯಕ್ಕೆ ಸೇರುವಾಗ ಆಶೆ ಭರವಸೆ ತೋರಿಸಿದ ಸರಕಾರದ ನೌಕರಿಗಳೊಂದೂ ಜಾರಿಯಲ್ಲಿ ಬಾರದ ಕಾರಣ ಸುಧಾಮನಿಗೆ ದಿನ ಕಳೆದಂತೆ ಬೇಸರ ಹೆಚ್ಚಾಗತೊಡಗಿತು. ನಿರುದ್ಯೋಗದ ಈ ಅವಧಿಯಲ್ಲಿ ತಾನು ಸೈನ್ಯದಲ್ಲಿ ಉಳಿಸಿದ್ದ ಅಲ್ಪಸ್ವಲ್ಪ ಗಂಟೂ ಕರಗಿಹೋಯಿತು

ಕೆಲಸವಿಲ್ಲದ ನಿರುದ್ಯೋಗಿಗಳೂ ಕಲೆಯ ಆರಾಧಕರಾಗುವದುಂಟು. ಸುಧಾಮನು ತನ್ನ ಸಂಜೆಗಳನ್ನು ರಾಜಾಸೀಟಿನ ನಂದೀ ಮರದ ಕೆಳಗೋ, ಗಾಲ್ಫ್ ಗ್ರೌಂಡಿನ ಸರಳ ಮುಗ್ಧತೆಯನ್ನು ನೋಡುತ್ತಲೋ ಕಳೆಯುತ್ತಿದ್ದನು. ಪ್ರಕೃತಿ ಸೌಂದರ್ಯದ ಮಡಿಲಲ್ಲಿ ಆತನು ಕುಳಿತರೂ ಆತನ ದೃಷ್ಟಿಯಲ್ಲಿ ಶೂನ್ಯತೆ ಇರುತಿತ್ತು. ಮನಸ್ಸಿನ ನಿರಾಶೆ ಮುಖದಲ್ಲಿ ಹೊರಚಿಮ್ಮುತಿತ್ತು.

ಅಂದು ಆದಿತ್ಯವಾರ. ಪಟ್ಟಣದ ಅಂಗಡಿಗಳೆಲ್ಲಾ ಮುಚ್ಚಿದ್ದ ಕಾರಣ ಹೆಚ್ಚಿನ ಜನರು ರಾಜಾಸೀಟಿನತ್ತ ವಾಯು ಸೇವನೆಗೆ ಬಂದಿದ್ದರು. ಸುಧಾಮನು ಬೆಟ್ಟದ ತುದಿಯಲ್ಲಿ ಕುಳಿತು ಕೆಳಗಿನ ಗದ್ದೆಗಳನ್ನು ನೋಡುತ್ತಿದ್ದನು. ಒಮ್ಮೆ ಹಸುರಾಗಿ ಮನೋಲ್ಲಾಸಕರವಾಗಿ ಕಂಗೊಳಿಸುತ್ತಿದ್ದ ಅವು ತಮ್ಮ ಸರ್ವಸ್ವವನ್ನೂ ದಾನ ಮಾಡಿ ವಿಧವೆಯಂತೆ ಶೋಭಾರಹಿತವಾಗಿವೆ. ಅಂದಿನ ಹಸರು ದೃಶ್ಯಕ್ಕೂ ಇಂದಿನ ದೃಶ್ಯಕ್ಕೂ ಎಷ್ಟು ಅಂತರ. ಅಂದು ಗದ್ದೆಯಲ್ಲಿ ನೀರಿತ್ತು. ಬೇಕಾದಾಗ ಮೇಲಿಂದ ಮಳೆ ಬೀಳುತಿತ್ತು. ಬತ್ತದ ಸಸಿಯು ಆನಂದದಿಂದ ಬೆಳೆಯುತಿತ್ತು. ಅದೇ ರೀತಿ ನನಗೆ ಹಣವಿದ್ದು, ನೆರವಿದ್ದದ್ದರೆ ನನ್ನ ಜೀವನವೂ ಬಹುಶಃ ಹಸುರು ಹಚ್ಚಗೆ ಶೋಭಿಸುತ್ತಿತ್ತೇನೊ ಎಂಬ ಭಾವನೆ ಆತನಲ್ಲಿತ್ತು. ಆದರೆ ಆತನ ಇಂದಿನ ಜೀವನ ಬರಡು ಗದ್ದೆಯಂತೆ! ಸಹಾಯಕರಿಲ್ಲ; ಕೈಹಿಡಿದು ಮೇಲೆತ್ತುವವರಿಲ್ಲ

ಮಡಿಕೇರಿಯ ಮಹಾ ವ್ಯಾಪಾರಿಗಳಾದ ರಾಮರಾಯರು ಅದೇ ಬೆಟ್ಟಕ್ಕೆ ಬಂದಿದ್ದರು ಚಿಂತಾಮಗ್ನನಾಗಿ, ಜಗತ್ತಿನ ಮೇಲೆ ಜಿಗುಪ್ಸೆಗೊಂಡ ಚಿಕ್ಕ ಪ್ರಾಯದ ಸುಧಾಮನನ್ನು ಪ್ರಶ್ನಿಸಿದರು. ಆತನ ಸ್ಥಿತಿಯನ್ನೂ, ಮನೆಯಲ್ಲಿರುವ ಕಷ್ಟವನ್ನೂ ತಿಳಿದು ತಮ್ಮ ಕೈ ಕೆಳಗೆ ಮಾಸಿಕ ರೂ ೬೦/–ರ ಒಂದು ಕೆಲಸವನ್ನು ಕೊಟ್ಟರು. ಸುಧಾಮನ ಕತ್ತಲು ಜೀವನದಲ್ಲಿ ಸೂರ್ಯೋದಯವಾದಂತಾಯಿತು. ನಿರುದ್ಯೋಗದ ಬೇಗೆಯಿಂದ ಬಾಡಿದ ಗಿಡವು ಹೊಸ ಚಿಗುರುಗಳಿಂದ ಬೆಳಗತೊಡಗಿತು.

ಮನುಷ್ಯನ ಶರೀರವು ಎಂದೂ ತೃಪ್ತಿಪಟ್ಟುಕೊಳ್ಳುವಂಥಾದಲ್ಲ. ಅದರ ಆಶೆಗೆ ಅಂತ್ಯವಿಲ್ಲ. ಸುಧಾಮನು ಗುಣವಂತನು. ರಾಮರಾಯರ ಮನೆಯವನೊಬ್ಬನಾಗಿ ಬೆರೆತುಹೋದನು. ರಾಮರಾಯರು ಸುಧಾಮನ ಕೆಲಸವನ್ನು ಮೆಚ್ಚಿದರು ತಮ್ಮ ಕೆಲಸದ ಸರ್ವ ಜವಾಬ್ದಾರಿಯನ್ನೂ ಆತನಿಗೆ ವಹಿಸಿದ್ದರು ಸುಧಾಮನು ಕೇವಲ ವ್ಯಾಪಾರದಲ್ಲಿ ಮಾತ್ರವಲ್ಲ; ಸಾಮಾಜಿಕ ರಂಗದಲ್ಲೂ ಬೆಳಗತೊಡಗಿದನು. ರಾಮರಾಯರ ಪುತ್ರಿ ಸುಲೀಲಳು ಆತನ ಯೋಗ್ಯತೆಯನ್ನು ಗುರುತಿಸದೆ ಹೋಗಲಿಲ್ಲ. ಆತನೊಡನೆ ಅನುದಿನ ಬೆರೆಯುತಿದ್ದ ಆಕೆಗೆ ತನ್ನ ಮನಸ್ಸಿನ ಇಂಗಿತವನ್ನು ಆತನಿಗೆ ಹೇಳುವದು ಕಷ್ಟವಾಗಲಿಲ್ಲ

ಅಂದು ಶನಿವಾರ. ರಾಮರಾಯರು ತಮ್ಮ ಪತ್ನಿಯೊಡನೆ ಸಿನೆಮಾಕ್ಕೆ ಹೋಗಿದ್ದರು. ಮನೆಯಲ್ಲಿ ಸುಶೀಲ ಮತ್ತು ಆಕೆಯ ಚಿಕ್ಕ ತಂಗಿ ಮತ್ತು ಸುಧಾಮನಿದ್ದರು. ಅಂದು ಸುಲೀಲಳು ತನ್ನ ಮನಸ್ಸಿನ ಅಭಿಪ್ರಾಯವನ್ನು ಅಂಜುತ್ತಾ ಹೇಳಿದಳು. ಸುಧಾಮನು ಮೊದಲೇ ಸುಲೀಲಳನ್ನು ಬಯಸಿದ್ದನು. ತನ್ನ ಒಪ್ಪಿಗೆಯನ್ನಿತ್ತನು. ತಮ್ಮಿಬ್ಬರ ಪ್ರೇಮದ ಕುರುಹಾಗಿ ಮನೆಯ ಹೂ ತೋಟದಲ್ಲಿ ಸಂಪಿಗೆ ಗಿಡವೊಂದನ್ನು ಇಬ್ಬರೂ ನೆಟ್ಟು ಅನುಪಮ ವಾತ್ಸಲ್ಯದಿಂದ ಅದನ್ನು ಸಾಕುತ್ತಿದ್ದರು. ಅನು ದೊರೆತಾಗ ಅದರ ಹತ್ತಿರ ಕುಳಿತು ತಮ್ಮ ಹೃದಯದ ಮಾತುಗಳನ್ನಾಡಿಕೊಳ್ಳುತ್ತಿದ್ದರು. ಗಿಡ ಚಿಗುರಿ ಬೆಳೆದಂತೆಯೇ ಇವರ ಪ್ರೇಮವೂ ಗಾಢವಾಗಿ ಬೆಳೆದಿತ್ತು.

ರಾಮರಾಯರು ವೃತ್ತಿಯಲ್ಲಿ ಹೇಗೋ ಹಾಗೆಯೇ ಜೀವನದ ಪ್ರತಿಯೊಂದು ವಿಚಾರವನ್ನು ಕೂಡ ತೂಗಿ ನೋಡಿ ಲಾಭದ ಕಡೆ ತಿರುಗುವವರು. ಸುಲೀಲಳ ಮದುವೆಯ ವಿಚಾರದಲ್ಲೂ ಅವರ ಆ ವ್ಯಾಪಾರ ದೃಷ್ಟಿಗೇ ಮೇಲ್ಮೆ ದೊರೆಯಿತು. ಸುಲೀಲಳು ತನ್ನ ಆಶೆಯನ್ನು ತಂದೆಗೆ ಹೇಳಿಕೊಂಡಳು. ಆದರೆ ಮಿಲಿಟರಿಯಲ್ಲಿ ಮೇಜರನಾಗಿರುವ ವರನು ದೊರಕಿರುವಾಗ ಸುಧಾಮನ ಪ್ರೇಮಕ್ಕೆ ಬೆಲೆಯಲ್ಲಿ? ಮಗಳನ್ನು ಗದರಿಸಿ 'ಮೇಜರ'ನೊಡನೆ ಲಗ್ನದ ಏರ್ಪಾಡು ಮಾಡಿದರು.

ಸುಧಾಮನ ಹೃದಯ ಒಡೆದು ಹೋಯಿತು. ಸುಲೀಲೆಯೂ ಕಣ್ಣೀರ ಕಾಲುವೆ ಹರಿಸಿದಳು. ರಾತ್ರಿ ಹನ್ನೆರಡು ಗಂಟೆಯ ಸಮಯ. ಇಬ್ಬರೂ ತಮ್ಮ ಪ್ರೇಮವೃಕ್ಷದಡಿಯಲ್ಲಿ ಕಲೆತರು. ಸುಲೀಲಳು ಸುಧಾಮನ ಎದೆಗೊರಗಿ ಹೇಳಿದಳು "ನಾನು ಬೇರೊಬ್ಬನೊಡನೆ ಜೀವಿಸೆನು. ನನ್ನನ್ನು ಬಲಾತ್ಕಾರದಿಂದ ಮದುವೆ ಮಾಡಿದರೂ ಈ ಪ್ರೇಮ ವೃಕ್ಷವು ಒಣಗದಂತೆ ನೀನು ಕಾಪಾಡಬೇಕು. ತನ್ನ ತಂದೆಯನ್ನು ವಿರೋಧಿಸಿ ನಿನಗೆ ನನ್ನನ್ನು ಕೈ ಹಿಡಿಯುವುದು ಸುಲಭವಲ್ಲ. ನಾವು ರಾತ್ರಿ ಕಾಣದೆ ಇಲ್ಲಿಂದ ಓಡಿಹೋಗಬಹುದು ಆದರೆ ಅದು ಯೋಗ್ಯವೆಂದು ನನಗೆ ತೋರುವುದಿಲ್ಲ. ಎದುರು ಬಂದ ಕಷ್ಟವನ್ನು ತಪ್ಪಿಸಲು ತಲೆ ಮರೆಸಿಕೊಳ್ಳುವುದು ನಿಜವಾದ ಪ್ರೇಮವಾಗಲಾರದು".

ಸುಧಾಮನಿಗೆ ಏನು ಮಾಡುವದೆಂಬುದೇ ತೋಚದಂತಾಗಿ ಆತನು ಹುಚ್ಚನಂತೆ ವರ್ತಿಸುತ್ತಿದ್ದನು.

ಮದುವೆಯು ವಿಜೃಂಭಣೆಯಿಂದ ಕಳೆಯಿತು. ವಧೂವರರು "ಮನೆವೊಕ್ಕಲು" ಬಂದಿದ್ದಾರೆ! ಎಲ್ಲೆಲ್ಲೂ ಆನಂದ. ಎಂದಿನಂತೆ ಸೂರ್ಯನು ಮಾರಣೆ ದಿನವೂ ಉದಯಿಸಿದನು. ರಾಮರಾಯರ ಮನೆಯಲ್ಲಿ ಆನಂದರವವು ನಿಶ್ಶಬ್ದವಾಗಿತ್ತು. ಮನೆಯವರೆಲ್ಲರೂ ತೋಟದ ಸಂಪಿಗೆ ಮರದ ಸುತ್ತಲೂ ನಿಂತಿದ್ದರು. ಸುಲೀಲಳು ಮರದ ಬುಡಕ್ಕೊರಗಿ ಕಣ್ಮುಚ್ಚಿ ಧ್ಯಾನ ಸಮಾಧಿಯಲ್ಲಿ ಕೂತಂತೆ ಕಾಣುತಿದ್ದಳು. ಶರೀರವು ಮರಕಟ್ಟಿದಂತಿತ್ತು. ಶರೀರದಲ್ಲಿ ಪ್ರಾಣವಿರಲಿಲ್ಲ. ಡಾಕ್ಟರರು ಪರಿಶೀಲಿಸಿ ಹೇಳಿದರು. "ವಿಷ ಕುಡಿದು ಸತ್ತಿರುವಳು" ಎಂದು.

ಮದುವೆ ನಿಶ್ಚಯವಾದಂದಿನಿಂದ ಹುಚ್ಚನಂತಾಗಿದ್ದ ಸುಧಾಮನು ರಾಮರಾಯರ ಮನೆಯನ್ನು ತ್ಯಜಿಸಿದ್ದನು. ಆತನು ಸುಲೀಲಳ ಮದುವೆಗೂ ಬಂದಿರಲಿಲ್ಲ ಸುಲೀಲಳ ಈ ಹೃದಯದ್ರಾವಕ ಮರಣವಾರ್ತೆಯನ್ನು ಕೇಳಿದ ನಂತರ ಆತನಿಗೆ ತಡೆಯಲಾಗಲಿಲ್ಲ. ಪ್ರೇಮದ ವೇದಿಕೆಯಲ್ಲಿ ಅಮರಳಾದ ಆಕೆಯನ್ನು ನೆನೆದು ಆಕೆಯ ಹಿಂದಿನ ಮಾತುಗಳು ನೆನಪಿಗೆ ಬಂದವು. ಆತನಿಗೆ ತಮ್ಮ ಪ್ರೇಮ ವೃಕ್ಷವನ್ನು ನೋಡಬೇಕೆನಿಸಿತು.

ರಾತ್ರಿ ಹನ್ನೆರಡು ಗಂಟೆ. ಸುಧಾಮನು ಆ ಸಂಪಿಗೆ ಗಿಡದಡಿಯನ್ನು ಸಾರಿಸಿ ಚೊಕ್ಕಟಗೊಳಿಸಿದನು ಹೂಗಳನ್ನು ತಂದು ರಂಗೋಲಿಯಂತೆ ಶೃಂಗರಿಸಿದನು. ಆ ಮರದಡಿಯಲ್ಲಿ ಹೂಗಳ ಎಸಳುಗಳಿಂದ 'ಸುಲೀಲಳೆಡೆಗೆ' ಎಂದು ಬರೆದು ಅಲ್ಲಿಯೇ ಕುಳಿತು ಪ್ರಾರ್ಥಿಸಿದನು. ಮಾರಣೆ ದಿನ ಅಂದೊಮ್ಮೆ ನೆರೆದಿದ್ದಂತೆ ಜನರೆಲ್ಲರೂ ಸಂಪಿಗೆ ಮರದ ಸುತ್ತಲೂ ನೆರೆದಿದ್ದರು ಸುಧಾಮನು ಮರಕ್ಕೆ ನೇಣು ಹಾಕಿಕೊಂಡು ತನ್ನ ಪ್ರೇಯಸಿಯಲ್ಲಿಗೆ ತೆರಳಿದ್ದನು. ಇವರ ಪ್ರೇಮ ಸಂಕೇತವಾದ ಸಂಪಿಗೆ ಮರ ಇಂದಿಗೂ ಸದಾ ಹೂವಿನಿಂದ ತುಂಬಿ ಬೆಳಗುತ್ತಿದೆ. ರಾಮರಾಯರ ಮನೆಯ ಸುಳಿವು ಈಗ ಇಲ್ಲಿಲ್ಲ. ಎಲ್ಲಾ ನಾಶವಾಗಿ ಹೋಗಿದೆ. ಪಾರ್ಥಿವ ಶರೀರ ನಾಶವಾದರೂ ಪವಿತ್ರ ಪ್ರೇಮಕ್ಕೆ ನಾಶವಿಲ್ಲವೆಂಬುದನ್ನು ಈ ಗಿಡವು ಕೈ ಎತ್ತಿ ಸಾರುತ್ತಿದೆ".

ಕಥೆ ಮುಗಿಯುವಾಗ ಕತ್ತಲಾಗಿತ್ತು. ನಾವು ತಡವರಿಸುತ್ತಾ ಕಾನ್ವೆಂಟಿಗೆ ತೆರಳಿದೆವು.

ವು ಮಹತ್ವವನ್ನೇ ಕೊಡಲು ಸಿದ್ಧರಿಲ್ಲವೆಂದು ಹೇಳಿಕೆಯಿತ್ತಿದ್ದಾರೆ. ಅಧ್ಯಕ್ಷ ಟ್ರೂಮನರು, 'ನಾನು ಸ್ಟಾಲಿನ್ನರೊಂದಿಗೆ ಸಮಾಲೋಚನೆ ನಡೆಸಲು ಸಿದ್ಧ. ಆದರೆ ಸ್ಟಾಲಿನ್ ವಾಶಿಂಗ್ಟನ್ನಿಗೇ ಬರಬೇಕು' ಎಂದು ತಿಳಿಸಿದ್ದಾರೆ.

ಈಗಾಗಲೇ, ಅಮೇರಿಕದ ವಿದೇಶಾಂಗ ಮಂತ್ರಿ ಡೀನ್ಅಶಿನ್ಸನ್, ಸ್ಟಾಲಿನ್ನರ ಆಹ್ವಾನವನ್ನು ನಿರಾಕರಿಸಿ, ಅಮೇರಿಕದ ಅಧ್ಯಕ್ಷರು ನಾಲ್ಕು ಬಾರಿ ಸ್ಟಾಲಿನ್ನರನ್ನು ಭೇಟಿಮಾಡಲು ಅಮೇರಿಕ ಬಿಟ್ಟು ತೆರಳಿದಾರೆಂದೂ ಅಲ್ಲದೆ ಸ್ಟಾಲಿನ್‌ರವರ ಸೂಚನೆಗಳ ಪ್ರಕಾರ ಹೊರ ರಾಷ್ಟ್ರಗಳ ಆಡಳಿತದ ಬಗ್ಗೆ ಅಮೇರಿಕ ಚರ್ಚೆ ನಡೆಸಲು ಸಿದ್ಧವಿಲ್ಲವೆಂದೂ ತಿಳಿಸಿದ್ದಾರೆ. ಈ ಮಧ್ಯೆ ಸ್ಟಾಲಿನರು, ಶಾಂತಿಸ್ಥಾಪನೆಯ ಬಗ್ಗೆ ಅಧ್ಯಕ್ಷ ಟ್ರೂಮನ್‌ರೊಂದಿಗೆ ಸಮಾಲೋಚನೆ ನಡೆಸಲು ತಾವು ಎಂದೋ ವಾಶಿಂಗ್ಟನ್ನಿಗೆ ಬರಲು ಸಿದ್ಧರಿದ್ದರೆಂದೂ ಆದರೆ ತಮ್ಮ ವೈದ್ಯರ ಸಲಹೆ ಪ್ರಕಾರ ಅಷ್ಟು ದೂರ ವಿಮಾನ ಪ್ರಯಾಣ ಬೆಳೆಸಲು ಸಾಧ್ಯವಾಗಲಿಲ್ಲವೆಂದೂ, ಆದುದರಿಂದ ಮಾಸ್ಕೋ, ಸ್ಟಾಲಿನ್‌ಗ್ರಾಡ್, ಯಾಲ್ಟಾ, ಒಡೆಸ್ಸಾ ಅಥವಾ ಪೋಲೇಂಡ್ ಮತ್ತು ಜೆಕೋಸ್ಲೋವೇಕಿಯದ ಯಾವುದೇ ಪ್ರದೇಶದಲ್ಲಾಗಲೀ ತಾವು ಅಧ್ಯಕ್ಷ ಟ್ರೂಮನ್ನರನ್ನು ಭೇಟಿಮಾಡಲು ಸಿದ್ಧರಿರುವುದಾಗಿಯೂ ಅಮೇರಿಕದ ಅಂತರಾಷ್ಟ್ರೀಯ ವಾರ್ತಾ ಸಂಸ್ಥೆಗೆ ಟೆಲಿಗ್ರಾಂ ಕಳುಹಿಸುತ್ತಾ ತಿಳಿಸಿದ್ದಾರೆ.

ಜಗತ್ತಿನ ಮೇಲೆ ಮಹಾ ಪರಿಣಾಮವನ್ನುಂಟುಮಾಡಿರುವ ಸ್ಟಾಲಿನ್ ಶಾಂತಿಘೋಷಣೆ ಯಾವ ರೀತಿ ರೂಪುಗೊಳ್ಳುತ್ತೆಂಬುದನ್ನು ಕಾದುನೋಡಬೇಕಾಗಿದೆ.

'ತಾಯಿನಾಡು' ಪತ್ರಿಕೆಯಿಂದ.

ಶಿಕ್ಷಣ ಮತ್ತು ಶಿಕ್ಷಕ.

ಲೇ:— ಶ್ರೀ ಕೆ ಎಸ್ ನೊಣಾಸಿ

ಸರಕಾರದವರು ನೌಕರರಿಗೆ ತುಟ್ಟಿ ಭತ್ಯೆಯನ್ನು ಕೊಟ್ಟಿರುವರು. ಅದನ್ನು ಇನ್ನೂ ಹೆಚ್ಚಿಸುವ ಆಲೋಚನೆಯಲ್ಲಿಯೂ ಇರುವರು. ಆದರೂ ಅದು ರಾವಣನ ಹೊಟ್ಟೆಗೆ ಕಾಸಿನ ಕುರಿ ಎಂಬಂತೆ ಯಾತಕ್ಕೂ ಮುಟ್ಟಲೊಲ್ಲದು. ಅದರಲ್ಲಿಯೂ ಶಿಕ್ಷಕನ ಸ್ಥಿತಿ ಎಲ್ಲಕ್ಕೂ ಬೇಡಾಗಿದೆ. ಮೊದಲೇ ಕಡಿಮೆ ಸಂಬಳ, ತುಟ್ಟಿ ಭತ್ಯೆಯೂ ಅಷ್ಟಕ್ಕಷ್ಟೇ. ಹೀಗಾಗಿ ಉಪಾಧ್ಯಾಯರಾಗಿ ಬಾಳಿ ಬದುಕುವದೇ ಕಠಿಣವಾದ ಸಮಸ್ಯೆಯಾಗಿದೆ. ಇಂಥ ಪ್ರಸಂಗದಲ್ಲಿಯೂ ನಮ್ಮ ಸರಕಾರಕ್ಕೆ ಕನಿಕರ ಹುಟ್ಟುವದಿಲ್ಲ ... ಬೆಳಗಿಸಲು ಹವ್ಯಾಸ. ದೇವರು ನಿತ್ಯವೂ ಬೆಳಗು ಮಾಡುತ್ತಾನೆ, ಸ್ವಲ್ಪ ಕೂಳೇಕೆ ಮುಳುಗಬಾರದ? ಎಂದು ಪ್ರತಿಯೊಬ್ಬನಿಗೂ ಎನಿಸದೆ ಇರದು. ಇದಕ್ಕೆ ನಮ್ಮ ಶಿಕ್ಷಣ ವಿಭಾಗವೇನೂ ಅಪವಾದವಿಲ್ಲ. ಒಮ್ಮೊಮ್ಮೆ ಹೈಸ್ಕೂಲುಗಳ ಕೆಳಗಿನ ಈಯತ್ತೆಗಳಿಂದ ಇಂಗ್ಲೀಷನ್ನು ಹಾರಿಸಿದರೂ, ಎರಡು ಟರ್ಮುಗಳನ್ನು ಮೂರಾಗಿ ಹಿಗ್ಗಿಸಿದರು. ಕೈ ಕೆಲಸವನ್ನು ಎಲ್ಲ ಶಾಲೆಗಳಲ್ಲಿ ಕೂಡಲೇ ಆರಂಭಿಸಬೇಕೆಂದು ಸಾರಿದರು. ಈ ಶಿಕ್ಷಣ ... ಯೆಂಬ ಗೊಂದಲ ಉಂಟಾಗಲು ಅವುಗಳ ಬಗ್ಗೆ ವಿಚಾರಮಾಡಿ ಈ ಗೊಂದಲದಿಂದ ಪಾರಾಗುವ ಹಂಚಿಕೆಗಳನ್ನು ಹುಡುಕಲು ಒಂದೊಂದು ವಿಷಯಕ್ಕೆ ಒಂದೊಂದು ಸಮಿತಿಯನ್ನು ನೇಮಿಸುತ್ತ ನಡೆದಿರುವರು. ಅವರ ಮನಸ್ಸಿನಲ್ಲಿ ಸ್ವರ್ಗವನ್ನೇ ಭೂಮಿಗಿಳಿಸುವದು ಇರಬಹುದು. ಸ್ವರ್ಗವು ಯಾರಿಗೆ ಬೇಡ? ಆದರೆ ಭೂಮಿಯಲ್ಲಿ ಸ್ವರ್ಗವು ಹಿಡಿಸಬಹುದೇ? ಎಂಬ ಮಾತನ್ನು ಸ್ವಲ್ಪವಾದರೂ ವಿಚಾರ ಮಾಡಬೇಕಲ್ಲವೇ?

ಸಮಾಜದಲ್ಲಿ ಶಿಕ್ಷಕರಿಗೆ ಪ್ರಥಮ ಸ್ಥಾನ ಸಲ್ಲತಕ್ಕದ್ದೆಂಬ ಮಾತಿನ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಶಿಕ್ಷಕರ ವ್ಯಕ್ತಿಯನ್ನು ಎಲ್ಲರೂ ಕೂಡ ಮರ್ಯಾದೆ, ಆದರೆ ವ್ಯವಹಾರದಲ್ಲಿ ಇದಕ್ಕೆ ವಿಪರೀತವಾದ ರೀತಿಯು ಕಂಡುಬರುವದು. ಅನಾದಿ ಕಾಲದಿಂದಲೂ ನಮ್ಮ ದೇಶದ ಸಂಸ್ಕೃತಿಯಲ್ಲಿ ಶಿಕ್ಷಕರಿಗೆ ಅಂದರೆ ಗುರುಗಳಿಗೆ ಶ್ರೇಷ್ಠವಾದ ಸ್ಥಾನಮಾನಗಳು ಇದ್ದವೆಂಬ ಮಾತು ಕಿಂಚಿತ್ ಇತಿಹಾಸ ಜ್ಞಾನವಿದ್ದವರಿಗೆ ತಿಳಿದದ್ದಾಗಿದೆ. ರಾಜಾಧಿರಾಜರುಗಳು ಕೂಡ—ಅವರೊಡನೆ ಭಯ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದರು. ಆಗಿನ ಗುರುಗಳಿಗೆ ವೇತನವಿರಲಿಲ್ಲ. ಆದರೂ ಅವರ ಶಾಂತಿ ಸಮಾಧಾನಗಳಿಂದ ಯಂತ್ರಾಗಿ ತಮ್ಮ ಮನಸ್ಸಿನ ತೂಕವನ್ನು ಕಾಯ್ದುಕೊಂಡು ನಡೆಯುತ್ತಿದ್ದರು. ಇದರ ಗುಟ್ಟೇನ? ಆಗಿನ ಕಾಲಕ್ಕೆ ಸರಕಾರವೂ ಸಮಾಜವೂ ಶ್ರೀಮಂತರೂ ಕೂಡಿಯಾಗಲಿ, ಬೇರೆ ಬೇರೆಯಾಗಲಿ ಶಿಕ್ಷಕರ ಜೀವನದ ಭಾರವನ್ನು ಸಮಾಜದ ಹಿತದೃಷ್ಟಿಯಿಂದ ಸ್ವಯಂಪ್ರೇರಿತರಾಗಿ ಹೊರುತ್ತಿದ್ದರು. ಆದ್ದರಿಂದ ಹಿಂದಿನ ಕಾಲದಲ್ಲಿ ಗುರುಗಳಾಗಿ ವಿದ್ಯಾದಾನ ಮಾಡುತ್ತಿದ್ದ ಶಿಕ್ಷಕವರ್ಗಕ್ಕೆ ತಮ್ಮ ಹಾಗೂ ತಮ್ಮ ಕುಟುಂಬದ ಉದರಂಭರಣದ ಚಿಂತೆಯೇ ಇರುತ್ತಿರಲಿಲ್ಲ. ಇವತ್ತಿಗೆ ಬೇಕು ನಾಳೆಗೆ ಬೇಕು ಎಂಬ ಚಿಂತೆ, ಅವರನ್ನು ದಹಿಸುತ್ತಿರಲಿಲ್ಲ. ಆದ್ದರಿಂದ ಶಾಂತಚಿತ್ತರಾಗಿ ಅವರು ವಿದ್ಯಾದಾನ ಮಾಡುತ್ತ, ಸಮಾಜದ ಕಲ್ಯಾಣವನ್ನೇ ಚಿಂತಿಸುತ್ತ ಸ್ವಕರ್ತವ್ಯ ನಿರತರಾಗಿರುತ್ತಿದ್ದರು. ಅವರ ಯೋಗ್ಯತೆಯಾದರೂ ಅಷ್ಟೇ ದೊಡ್ಡದಿರುತ್ತಿತ್ತು. ಕಾಪಾಡಬೇಕೆಂಬುದು ಪರಿಸ್ಥಿತಿಯನ್ನು ಅವರು ಎದುರಿಸ ಬಲ್ಲವರಾಗಿದ್ದರು.

ಮುಂದೆ ಬರುಬರುತ್ತ ಸರಕಾರವೂ ಸಮಾಜವೂ ಶಿಕ್ಷಕರ ಕೈಬಿಡುತ್ತ ಬಂದ ಹಾಗೆ ಶಿಕ್ಷಕರ ಅವನತಿಯೂ ಅದರ ಪರಿಣಾಮವಾಗಿ ಸಮಾಜದ ಅವನತಿಯೂ ಉಂಟಾಗುತ್ತ ನಡೆಯಿತು. ಇದು ಹಿಂದಿನ ಕಾಲದ ಮಾತು. ಸದ್ಯಕ್ಕೆ ಶಿಕ್ಷಕರ ಸ್ಥಾನಮಾನವೇನೆಂಬುದನ್ನು ನೋಡಿದರೆ ಪ್ರತಿ ನಿತ್ಯವೂ ಅವರು ಕಷ್ಟಗಳನ್ನು ಅನುಭೋಗಿಸುತ್ತಲೇ ಇರುವರು. ಆದರೆ ಭಟ್ಟಂಗಿಗಳಂತೆ ... ದನ ... ಅಗೌರವವನ್ನು ... ಇಂದಿನ ... ಪಡೆಯುತ್ತಿರುವ ... ಆಗಿನ ಸ್ಥಿತಿಯನ್ನು ನೆನೆದು ಅಳುತ್ತ ಕುಳಿತರೆ ನಮ್ಮ ಉದ್ಧಾರವಾಗುವದಿಲ್ಲ. ಸ್ವಾಮಿ ವಿವೇಕಾನಂದರು ಹೇಳಿದಂತೆ "ಎಚ್ಚರಿಯಿರಿ, ಏಳಿರಿ, ಕರ್ತವ್ಯ ಪರರಾಗಿರಿ" ಗುರಿಯನ್ನು ಸಾಧಿಸುವ ವರೆಗೆ ನಮ್ಮ ಮೇಲೆ ಹಿಂದೆ ಎಂದೂ ಇಲ್ಲದ ಹೊಣೆಯು ಈಗ ಬಿದ್ದಿದೆ. ಅದನ್ನರಿತು, ನಾವು ವರ್ತಿಸಿದರೆ ನಮ್ಮ ಪೂರ್ವಜರಾದ ಋಷಿಗಳು ಪಡೆದ ಸ್ಥಾನಮಾನಗಳನ್ನು ಪಡೆಯಲು ಯಾವ ಸಂಶಯವೂ ಇಲ್ಲವೆಂದು ಧಾರಾಳವಾಗಿ ಹೇಳಬಹುದು.

ನಮ್ಮ ಪೂರ್ವದ ಋಷಿಗಳ ಆಚಾರವಿಚಾರ ಹಾಗೂ ಧ್ಯೇಯಗಳನ್ನು ನಾವಾದರೂ ನಮ್ಮ ಮುಂದಿಟ್ಟುಕೊಂಡು ನಡೆಯಬೇಕು. ಅವರಂತೆ ನಿಸ್ವಾರ್ಥ ಬುದ್ಧಿಯಿಂದ ಸಮಾಜ ಸೇವಾತತ್ಪರರಾಗಬೇಕು. "ಉದ್ಧರೇದಾತ್ಮನಾತ್ಮಾನಂ" ಎಂಬುದಾಗಿ ಗೀತಾ ವಚನದಂತೆ ವರ್ತಿಸಬೇಕು. ಮಧ್ಯಕಾಲದಲ್ಲಿ ನಮ್ಮ ಸಂಸ್ಕೃತಿಗೆ ಚ್ಯುತಿಯುಂಟಾಗಿ ಬೀಳಲ್ಲಿ ದುರವಸ್ಥೆ ಇತ್ತು. ಇವತ್ತು ನಾವು ಸ್ವತಂತ್ರರು. ನಮ್ಮ ಭವಿಷ್ಯವನ್ನು ನಾವೇ ನಿರ್ಮಿಸಬಲ್ಲೆವು, ಅಂತೆಯೇ ರಾಷ್ಟ್ರನಿರ್ಮಾಪಕರೆಂದ ನಮ್ಮ ಮೇಲೆ ದೊಡ್ಡ ಹೊಣೆ ಬಿದ್ದಿದೆ. ಇಂದು ಪ್ರತಿಯೊಬ್ಬ ಪ್ರಜೆಯೂ ಸ್ವಾಮಾಧಿಕಾರಿಯು. ಅಧಿಕಾರದ ಜೊತೆಗೆ ಪ್ರತಿಯೊಬ್ಬ ಪ್ರಜೆಯೂ ತನ್ನ ಹೊಣೆಗಾರಿಕೆಯನ್ನು ಅರಿತು ಸಮಾಜದ ಹಿತದ ದೃಷ್ಟಿಯಿಂದ ರಾಷ್ಟ್ರದ ಐಕ್ಯಾಭಿವೃದ್ಧಿಗಳ ದೃಷ್ಟಿಯಿಂದ ಕಾರ್ಯಮಾಡಬೇಕಾಗಿದೆ. ಇಲ್ಲವೆಂದರೆ ಆ ಸ್ವಾತಂತ್ರ್ಯದ ಹಣ್ಣು ಹುಣ್ಣಾಗಿ ಪರಿಣಮಿಸುವದು. ಇಷ್ಟಾದ ಪ್ರತಿಯೊಬ್ಬ ಪ್ರಜೆಯೂ ಅಷ್ಟು ಬುದ್ಧಿವಂತನಾಗಬೇಕಾದರೆ ಅವನಿಗೆ ಆವಶ್ಯಕತಕ್ಕ ಶಿಕ್ಷಣವು ದೊರೆಯಲೇಬೇಕು. ಅಂಥ ಶಿಕ್ಷಣವನ್ನು ಕೊಡಲು ಯೋಗ್ಯರಾದ ಶಿಕ್ಷಕರು ಬೇಕೇ ಬೇಕು. ಅಂಥ ಶಿಕ್ಷಕರಿದ್ದರೇನೇ ನಾವು ಬಲಿಷ್ಠವಾದ ಐಶ್ವರ್ಯಸಂಪನ್ನವಾದ, ವಿವೇಕಿಯಾದ ಭಾರತವನ್ನು ಪರಿಯಾಣ—ರಾಷ್ಟ್ರವನ್ನು ಕಟ್ಟಬಲ್ಲೆವು. ಹಗಲಿರುಳೂ ಕೂಳು ಕಾಳಿಂದು ಹಲಬುವ ಶಿಕ್ಷಕರ ಸೈನ್ಯವನ್ನು ನಿರ್ಮಿಸಿದರೆ ಅದರಿಂದ ಯಾವ ಕಾರ್ಯವೂ ಸಾಧಿಸದು. ಅಯೋಗ್ಯ ಶಿಕ್ಷಕರು ರಾಷ್ಟ್ರಕ್ಕೆ ಗಂಡಾಂತರವೆಂದು ಹೇಳುವದುಂಟು. ಅತೃಪ್ತರಾದ ಶಿಕ್ಷಕರು ಅದಕ್ಕೂ ಹೆಚ್ಚು ಗಂಡಾಂತರಪ್ರಾಯವಾಗಿರುವರೆಂಬ ಮಾತನ್ನು ನಮ್ಮ ಸರಕಾರದವರು ನೆನಪಿನಲ್ಲಿಟ್ಟು, ಶಿಕ್ಷಕರ ಆರ್ಥಿಕ ಸ್ಥಿತಿಯನ್ನು ಸುಧಾರಿಸುವದು ತಮ್ಮ ಆದ್ಯ ಕರ್ತವ್ಯವೆಂದು ತಿಳಿಯಬೇಕು.

ಶಿಕ್ಷಕ ವೃತ್ತಿಯು ಯಾವ ದೇಶದಲ್ಲಿಯೇ ಆಗಲಿ ಯಾವ ಕಾಲದಲ್ಲಿಯೇ ಆಗಲಿ ಐಶ್ವರ್ಯವನ್ನುಂಟುಮಾಡುವ ವೃತ್ತಿಯಲ್ಲ. ಶಿಕ್ಷಕರು ದವರು ಸಿರಿಯೊಡೆಯರು ಬೇಕೆಂದು ಬಯಸುತ್ತಲೂ ಇಲ್ಲ. ಅವರ ಯೋಗ್ಯತೆಗನುಗುಣವಾಗಿ ಸಮರ್ಪಕವಾಗಿ ಜೀವಿತ ಧಾರಣೆಗನುಸಾರವಾಗಿ ವೇತನವು ದೊರೆಯಬೇಕಾದದ್ದು ಇಂದು ಬೇರೆ ... ರಾಷ್ಟ್ರದ ಶಿಕ್ಷಣದ ... ಹೊಣೆಯನ್ನು ಸರಕಾರವೇ ಸಂಪೂರ್ಣವಾಗಿ ಹೊರಬೇಕು. ದುಡ್ಡಿನ ಕೊರತೆಯ ನೆಪದಿಂದ ಶಿಕ್ಷಣದ ವಿಭಾಗವನ್ನು ನೊರಗಿಸಿದರೆ ರಾಷ್ಟ್ರವೇ ನೊರಗಿ ಸಾಯಬೇಕಾಗುವದು. ಈ ಬಗ್ಗೆ ಮೊದಲೇ ಜಾಗರೂಕರಾಗಿ ಕೆಲಸ ಮಾಡಬೇಕಾಗಿದೆ. ರೋಗ ಬಲಿತ ಮೇಲೆ ಔಷಧೋಪಚಾರ ಮಾಡಿ ಫಲವೇನು?

ರಾಷ್ಟ್ರದ ಹಿತದ ದೃಷ್ಟಿಯಿಂದ ಶಿಕ್ಷಣವು ರಾಜಕಾರಣದ ಪ್ರಭಾವದಿಂದ ಸಂಪೂರ್ಣವಾಗಿ ಸ್ವತಂತ್ರವಾಗಿರಬೇಕು. ಇಲ್ಲವಾದರೆ ಆ ರಾಷ್ಟ್ರದ ಅಧಃಪತನ ಕಟ್ಟಿಟ್ಟದ್ದು. ಇದಕ್ಕೆ ಕ್ಷಣಿಕ ಪ್ರಾಬಲ್ಯವನ್ನು ಪಡೆದು ಹೇಳಹೆಸರಿಲ್ಲದಂತಾದ ಜರ್ಮನಿ, ಜಪಾನ್, ಇಟಲಿಗಳೇ ಸಾಕ್ಷಿ. ಅದ್ದರಿಂದ ರಾಜಕಾರಣಿಗಳೂ ಸಮಾಜದ ಧುರೀಣರೂ ಈ ಮಾತನ್ನು ನೆನಪಿನಲ್ಲಿಟ್ಟು ವರ್ತಿಸಬೇಕು. ಶಿಕ್ಷಣದ ಹೊಣೆಯನ್ನು ಸಂಪೂರ್ಣವಾಗಿ ಸರಕಾರ ಹಾಗೂ ಸಮಾಜಗಳು ಹೊತ್ತು, ಶಿಕ್ಷಣದ ಧೋರಣ, ಕ್ರಮ ಆಡಳಿತಗಳಲ್ಲಿ ಕೈ ಹಾಕದೆ ಸಂಪೂರ್ಣವಾಗಿ ಸಮಾಜ ಹಿತಚಿಂತಕರಾದ ಶಿಕ್ಷಣತಜ್ಞರಿಗೆ ಮತ್ತು ಶಿಕ್ಷಕರಿಗೆ ಆ ಸ್ವಾತಂತ್ರ್ಯವನ್ನು ಬಿಟ್ಟು ಕೊಡಬೇಕು.

ರಾಷ್ಟ್ರ ನಿರ್ಮಾಣದ ಹಾಗೂ ಅದರ ಕಲ್ಯಾಣ ಮತ್ತು ಸಮಾಜದ ಅಭಿಮಾನ ಹಿತದ ಹೊಣೆಯನ್ನು ಹೊತ್ತ ಶಿಕ್ಷಕನ ಹೊಣೆಯು ... ಸರಕಾರದ ಮೇಲಿರುವದಕ್ಕಿಂತ ಹೆಚ್ಚಿನ ಹೊಣೆಯು ಅವನ ಮೇಲೆ ಇರುವದು. ಕಾರಣ ಶಿಕ್ಷಕರು ಯಾವ ರೀತಿಯ ಸರಕಾರದ ... ಭಯ ಒಂದ ನಿಷ್ಠುರತೆಯಿಂದ ವ್ಯಾಕ್ತಿಕರಾಗಿ ನಾವು ಬಾಳಬೇಕು. 'ಭಾರತಭೂಮಿಯ ... ನಿನ್ನಲ್ಲಿ ಏನೂ ಅಂತರವಿಲ್ಲ ... ಸಮಾನತ್ವ ... ಅಗತ್ಯವನ್ನು ಕೊಡಿದರೆ ... ನನಗೆ ನಿನ್ನದಾದರೂ ಏನು ದಕ್ಕಿತು?" ಎನ್ನುವ ಯೋಗ್ಯತೆಯನ್ನು ಯಾವ ದಿನ ನಾವು ಪಡೆಯುವೆವೋ ಆ ದಿನ ನಾವು ಯಾರಿಗೂ ದಾಸರಾಗುವ ಕಾರಣವು ಉಳಿಯಲಿಕ್ಕಿಲ್ಲ. ನಮ್ಮ ಪೂರ್ವಜರಿದ್ದ ಇದೇ ತರಹದ ಯೋಗ್ಯತೆಯನ್ನು ನಾವು ಪಡೆದು ನಮ್ಮ ರಾಷ್ಟ್ರ ಜನನಿಯು ಜಗತ್ತಿಗೆ ಗುರುವಾಗುವ ಯೋಗವನ್ನು ತಂದು ಕೊಡಬೇಕು. ಅದೇ ನಮ್ಮ ಸಂಸ್ಕೃತಿಯು ಅದರ ಪುನರುಜ್ಜೀವನಗೊಳಿಸುವದೇ ಪ್ರತಿಯೊಬ್ಬ ಶಿಕ್ಷಕನ ಆದ್ಯ ಕರ್ತವ್ಯ.

"ಜೈ ಹಿಂದ್"

THE CAUVFRY PAPER MILLS & FOKEST INDUS-T^IES, LTD.

(Incorporated in Coorg-Dominion of India)

We have pleasure in informing our constituents that in order to meet the growing accommodation requirements the office of the above company has been recently shifted to No 27 Lal-Bagh Road, Bangalore The office of Vijai Vel & Co, however, continues to be at 'SIVAM' 7 Sampangi Tank Road, Bangalore

for THE CAUVERY PAPER MILLS & FOREST INDUS-TRIES LTD.

for VIJAI VEL & CO

(Sd) J V. Doddaveerappa.

Managing Partner.

Bangalore,

2nd Feb 1949

AUCTION SALE

Two half bred bull Calves, one Scindi bull Calf and one Scindi heifer-Calf, all aged about one year will be sold in the public auction on 18-2-49 at the Dairy Farm premises at [illegible]

By the order of the Chief Commissioner of Coorg

T S RAMANUJAM

Dairy Officer, Mercara.

ಕೊಡಗು

ತಾ. ೧೧-೨-೧೯೪೯ನೇ ಶುಕ್ರವಾರ

ಸ್ತುತ್ಯಾರ್ಹ.

ಮದ್ರಾಸ್ ಸರಕಾರವು ಈ ಹಿಂದೆ ಒಂದು ಕಾನೂನು ಹೊರಡಿಸಿ ಸಿನೆಮಾ, ನಾಟಕ ಮೊದಲಾದವುಗಳಲ್ಲಿ ದೇವರ ಪಾತ್ರವನ್ನು ಮನುಷ್ಯನು ವಹಿಸ ಕೂಡದೆಂದು ವಿಧಿಸಿತ್ತು. ಮೊನ್ನೆಯಾಗಿ ಮತ್ತೊಂದು ಮಸೂದೆಯನ್ನು ತಂದು ದೇವರ ಹೆಸರಲ್ಲಿ ಕೋಳಿ, ಕುರಿ, ಆಡು, ಕೋಣ ಇತ್ಯಾದಿ ಬಲಿ ಕೊಡಲಿಕೂಡದೆಂದು ವಿಧಿಸಿದೆ. ಈ ಮಸೂದೆಯು ಮದ್ರಾಸು ಶಾಸನ ಸಭೆಯಲ್ಲಿ ಚರ್ಚೆಯಾಗಿ ಅಂಗೀಕಾರವಾಗಿ ಮುಂದೆ ಇದಕ್ಕೆ ಗವರ್ನರರ ಸಮ್ಮತಿ ದೊರೆತು ಅದು ಕಾನೂನಾಗಿ ಜಾರಿಯಲ್ಲಿ ಬರಲಿದೆ. ಈ ಕಾನೂನಿನನ್ವಯ ದೇವರಿಗೆ ಯಾವದೇ ರೂಪದಲ್ಲಿ ಪ್ರಾಣಿ ಬಲಿಕೊಡುವವರೆಲ್ಲರೂ ತಪ್ಪಿತಸ್ಥರೆಂದು ಪರಿಗಣಿಸಲ್ಪಟ್ಟು ಶಿಕ್ಷೆಗೊಳಗಾಗುವರು.

ಅಹಿಂಸಾಮೂರ್ತಿ ಬಾಪೂರವರ ಪ್ರಥಮ ವರ್ಷಾಬ್ದಿಯ ಕಾಲಕ್ಕೆ ಈ ಕಾನೂನು ಮಂಡಿಸಲ್ಪಟ್ಟಿದ್ದು ಉತ್ತಮವಾಯಿತು. ಈ ಮಸೂದೆಗೆ ಹಲಕೆಲವರು ವಿರೋಧ ಮಾಡಿದರೂ ಭೂತದಯೆ ಇರುವವರಾರೂ ವಿರೋಧ ಮಾಡಲಿಕ್ಕಿಲ್ಲ. ಇಂಥಾ ಒಂದು ಸುಧಾರಣೆಯನ್ನು ಜಾರಿಯಲ್ಲಿ ತರಲಿರುವ ಮದ್ರಾಸ್ ಸರಕಾರವನ್ನು ಹೊಗಳಬೇಕಿದೆ.

ಅದು ಯಾವದೇ ಧರ್ಮವಾಗಿರಲಿ, ಹಿಂದೂ ಮತವೇ, ಕ್ರಿಶ್ಚಿಯನ್ನೇ ಇಸ್ಲಾಮೇ ಯಾವುದೇ ಆಗಲೊಲ್ಲದೇಕೆ, ಪ್ರತಿಯೊಂದು ಧರ್ಮದ ಮೂಲವೂ ಪ್ರಾಣಿದಯೇ ಇದೆಯೆಂಬುದನ್ನು ಯಾರೂ ಅಲ್ಲಗಳೆಯಲು ಸಾಧ್ಯವಿಲ್ಲ. ಇಂಥಾ ಭೂತದಯಾಪರ ಧರ್ಮಗಳ ಹೆಸರಿನಲ್ಲಿ ಪ್ರಾಣಿವಧೆ ನಡೆಸುವದು ಧರ್ಮಕ್ಕೆ ಕಳಂಕವಾಗಿದೆ. ರಕ್ತ, ಮಾಂಸ ಭಕ್ಷಕಳಾಗಿ ಭಯಂಕರ ತೋರುತ್ತಿದ್ದ ತಾಮಸ ರೂಪದ ದೇವಿಯು ಮುಂದೆ ಶಾಂತಿಯ ಆಗರವಾಗಿ ಸಾತ್ವಿಕ ರೂಪದಲ್ಲಿ ಪೂಜಿಸಲ್ಪಡುವಂತಾದುದು ಕಲ್ಯಾಣಕಾರಕವಾಗಿದೆ.

ಈ ಆವಶ್ಯ ಸುಧಾರಣೆಯು ಪ್ರತಿ ಪ್ರಾಂತಕ್ಕೆ ಬೇಗನೆ ಬರಬೇಕು. ಕೊಡಗೂ ಮದ್ರಾಸಿನ ಈ ಮಾದರಿಯನ್ನು ಅನುಸರಿಸಬೇಕೆಂದು ನಮ್ಮ ಅಭಿಪ್ರಾಯ. ಕೊಡಗಿನಲ್ಲಿ ಈ ಚಳವಳಿ ಅನೇಕ ದಿನಗಳಿಂದಲೇ ನಡೆಯುತ್ತಿದೆಯೆಂದರೆ ತಪ್ಪಾಗಲಾರದು. ಅನೇಕ ಕಡೆ ಕೋಣಗಳನ್ನು ಬಹುತೇಕವಾಗಿ ಕಡಿಯುತ್ತಿದ್ದುದು ನಿಂತಿದೆ. ಈ ಚಳವಳಿ ಕೇವಲ ಕೋಣಗಳ ಮಟ್ಟಿಗೆ ಸೀಮಿತವಾಗಿರದೆ ಯಾವದೇ ಪ್ರಾಣಿಯನ್ನು ದೇವರ ಹೆಸರಿನಲ್ಲಿ ಬಲಿ ಕೊಡಕೂಡದೆಂದು ನಡೆಯಬೇಕಿದೆ. ಸರಕಾರವೂ ಇದಕ್ಕೆ ತಕ್ಕ ಶಾಸನವನ್ನು ಮಾಡುವದು ಹಿತವಿದೆ.

ಮದ್ರಾಸಿನಲ್ಲಿ ಪ್ರಾಣಿಬಲಿ ನಿಷೇಧ ಕಾನೂನನ್ನು ಮಂಜೂರ್ಮಾಡಿದ್ದನ್ನು ಕೊಂಡಾಡಿ ಮಹಾತ್ಮರ ಪ್ರಮುಖ ಧರ್ಮಶಿಷ್ಯರಾದ ಶ್ರೀ ವಿನೋಬಾ ಭಾವೆಯವರು ಮದ್ರಾಸ್ ಸರಕಾರವನ್ನು ಮನಃಪೂರ್ವಕ ಅಭಿನಂದಿಸಿದ್ದಾರೆ. ಕೊಡಗಿನಲ್ಲಿ ಪ್ರಾಣಿಬಲಿ ಕೊಡುವ ಅಭ್ಯಾಸ ಹೆಚ್ಚಾಗಿದೆ. ಜನತೆಯು ಈ ಅಂಧಶ್ರದ್ಧೆಯನ್ನು ಕಳೆದುಕೊಂಡು ಪ್ರಾಣಿವರ್ಗದಲ್ಲಿಯೂ ತಾವು ಪೂಜಿಸುವ ಭಗವಂತನ ಅಂಶವನ್ನು ಕಂಡು ಪ್ರಾಣಿಬಲಿಯನ್ನು ನಿಲ್ಲಿಸುವದು ಅತ್ಯಗತ್ಯ. ಇಂಥಾ ಮನೋಭಾವನೆಯಿಂದ, ದಯಾಭಾವನೆಗೆ ಪ್ರಚೋದನೆ ದೊರೆತು ಮಾನವ ವರ್ಗದಲ್ಲಿಯೂ ಪರಸ್ಪರ ಸ್ನೇಹವು ಹೆಚ್ಚಿ ದೇಶದ ಕಲ್ಯಾಣವಾಗುವದರಲ್ಲಿ ಸಂಶಯವಿಲ್ಲ.

ವರ್ತಮಾನ.

ತಾ. ೩೧ರಲ್ಲಿ ಅಮ್ಮತ್ತಿಯಲ್ಲಿ ನಡೆಯಲಿರುವ ಅಖಿಲ ಕೊಡಗು ಆರನೇ ಜಾನುವಾರು ಪ್ರದರ್ಶನದ ಅಧ್ಯಕ್ಷತೆಯನ್ನು ಇಂಡಿಯಾ ವ್ಯವಸಾಯ ಸಂಶೋಧನಾ ಸಭೆಯ ಉಪಾಧ್ಯಕ್ಷರಾದ ಸರ್ದಾರ್ ಬಹದೂರ್ ಸರ್ ದತಾರ್ ಸಿಂಗರವರು ವಹಿಸುವರು. ಇಂಡಿಯಾ ಸರಕಾರದ ಡೈರಿ ಸಲಹೆಗಾರರಾದ ಡಾ|| ಕೊತವಾಲರವರೂ, ಇಜ್ಜತ್ ನಗರದ ವೆಟರ್ನರಿ ಸಂಶೋಧನಾ ಸಂಸ್ಥೆಯ ಡೈರೆಕ್ಟರಾದ ಮೇಜರ್ ದತ್ತಾರವರೂ ಸಮ್ಮೇಳನಕ್ಕೆ ದಯಮಾಡಿಸುವರೆಂದು ತಿಳಿದು ಬಂದಿದೆ.

ಶ್ರೀ ಮನ್ನಹಂಸ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳು ಶ್ರೀ ಮಹಾ ಪೀಠದ ಸ್ವರ್ಣ ಮಹೋತ್ಸವವನ್ನೂ, ಅದರ ಉತ್ತರಾಧಿಕಾರ ವಹಿಸಿಕೊಡುವ ಮಹೋತ್ಸವನ್ನೂ ತಾ. ೧೮-೨-೪೯ರಲ್ಲಿ ನಡೆಸುವದಾಗಿ ಶಿಷ್ಯ ಭಕ್ತಾದಿಗಳಿಗೂ, ಅಭಿಮಾನಿಗಳಿಗೂ ತಿಳಿಸುತ್ತಾರೆ.

ಕೊಡಗು ಜಿಲ್ಲಾ ಬೋರ್ಡಿನ ಬಜೆಟ್ ಮೀಟಿಂಗು ತಾ. ೧೪-೨-೪೯ರಲ್ಲಿ ನಡೆಯುವದು.

ಸೋಮವಾರಪೇಟೆಯಲ್ಲಿ ನಡೆದ ಅಂತರ್ ಹೈಸ್ಕೂಲ್ ಆಟೋಟಗಳ ಸ್ಪರ್ಧೆಯಲ್ಲಿ ಬಾಲಕರ ಛಾಂಪಿಯನ್ ಶಿಪ್ಪನ್ನು ವೀರರಾಜೇಂದ್ರಪೇಟೆ ಹೈಸ್ಕೂಲೂ, ಬಾಲಕಿಯರ ಛಾಂಪಿಯನ್ ಶಿಪ್ಪನ್ನು ಮಡಿಕೇರಿ ಹುಡುಗಿಯರ ಹೈಸ್ಕೂಲೂ ಪಡೆದವು.

ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ವಾರ್ಷಿಕೋತ್ಸವವು ಈ ದಿನ ನಡೆಯುವದು. ಮೈಸೂರು ಮಹಾರಾಜಾ ಕಾಲೇಜಿನ ರಾಜನೀತಿ ಶಾಖೆಯ ಮುಖ್ಯಾಧ್ಯಾಪಕರಾದ ಶ್ರೀ ಎಂ. ವಿ. ಕೃಷ್ಣರಾವ್‌ರವರು ಅಧ್ಯಕ್ಷತೆ ವಹಿಸುವರು.

ಕೊಡಗು ನ್ಯಾಯ ವಿಧಾಯಕ ಸಭೆಯ ಬಜೆಟ್ ಮೀಟಿಂಗು ತಾ. ೨೩, ೨೪, ೨೫ರಲ್ಲಿ ನಡೆಯುವದೆಂದೂ, ಸದಸ್ಯರು ಠರಾವುಗಳನ್ನು ಕಳುಹಿಸುವ ಕಡೇ ತಾರೀಕು ಮಾರ್ಚ್ ೫ ಎಂದೂ ನಿಶ್ಚಯವಾಗಿದೆ.

ಕೊಡಗಿನ ದಲಿತ ವರ್ಗದವರ ಪರಿಸ್ಥಿತಿಯನ್ನು ವಿಚಾರಿಸಿ ಅವರನ್ನು ಮೇಲೆತ್ತುವ ಸೂಕ್ತ ಕಾರ್ಯಕ್ರಮ ಕೈಕೊಳ್ಳಲು ಕೊಡಗಿನ ಅ. ಕಮಿಷನರು (ಅಧ್ಯಕ್ಷ) ಶ್ರೀಗಳಾದ ಎನ್. ಸೋಮಣ್ಣ, ಪಿ. ಐ. ಬೆಳ್ಯಪ್ಪ, ಅಬ್ದುಲ್ ರಹಮಾನ್ ಖಾನ್, ಓ. ಕೆ. ಚಿನ್ನಯ್ಯ, ಮತ್ತು ಗ್ರಾಮಾಭಿವೃದ್ಧಿ ಅಫೀಸರು (ಕಾರ್ಯದರ್ಶಿ) ಇವರುಗಳಿಂದ ಕೂಡಿದ ಒಂದು ಸಮಿತಿಯನ್ನು ನೇಮಿಸಲಾಗಿದೆ.

ಫ್ರೇಜರ್ ಪೇಟೆ ಬೆಂಚ್ ಕೋರ್ಟಿನ ಸದಸ್ಯರಾದ ಶ್ರೀಗಳಾದ ಎಸ್. ಎನ್. ರಾಮಶೆಟ್ಟಿ, (ಅಧ್ಯಕ್ಷ) ಮೈಲಾರ್ ಶೆಟ್ಟಿ, ಹೆಚ್. ಹೊನ್ನಪ್ಪ, ಮತ್ತು ನಲ್ಲೂರು ಕಾಳೇಗೌಡರ ಅವಧಿಯನ್ನು ಐದು ವರ್ಷ ಹೆಚ್ಚಿಸಿರುವದಲ್ಲದೆ ಇಸ್ಮೈಲ್ ರಾವುತರನ್ನು ಒಬ್ಬ ಸದಸ್ಯರಾಗಿ ನೇಮಿಸಲಾಗಿದೆ.

ಕೊಡಗಿನಲ್ಲಿ ಡಿಸೆಂಬರ್ ತಿಂಗಳಲ್ಲಿ ೨೫೧ ಜನನಗಳೂ, ೧೪೮ ಮರಣಗಳೂ ಸಂಭವಿಸಿರುವದಾಗಿ ಪ್ರಕಟವಾಗಿದೆ.

ತಾರೀಕು ೬-೨-೪೯ರಲ್ಲಿ ಹಾತೂರಿನ ಸುತ್ತಲಿನ ಆರು ಗ್ರಾಮಸ್ಥರು ಶ್ರೀ. ಕೇಳಪಂಡ ಚಂಗಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಈಗಿರುವ ಹಂಗಾಮಿ ವಿದ್ಯಾಧಿಕಾರಿಯ ಹುದ್ದೆಯನ್ನು ಅವರಿಗೇ ಖಾಯಂಮಾಡಬೇಕೆಂದು ಚೀಫ್ ಕಮಿಷನರನ್ನು ಕೇಳಿಕೊಳ್ಳಲು ನಿರ್ಣಯಿಸಿರುವರೆಂದು ವಾರ್ತೆ.

ರಾಜಮುದ್ರೆಗೆ ಬದಲು ಅಶೋಕಸ್ತಂಭ ಚಿತ್ರ!

ಎರಡು ರೂಪಾಯಿ, ಐದುರೂಪಾಯಿ ಮತ್ತು ನೂರು ರೂಪಾಯಿ ನೋಟುಗಳಲ್ಲಿ ಈಗಿರುವ ರಾಜಮುದ್ರೆಗೆ ಬದಲು ಭಾರತ ಸರ್ಕಾರದ ಅಧಿಕೃತ ಮುದ್ರೆಯಾದ ಅಶೋಕಸ್ತಂಭ ಚಿತ್ರವನ್ನು ಅಚ್ಚುಹಾಕಬೇಕೆಂಬ ರಿಜರ್ವ್ ಬ್ಯಾಂಕಿನವರ ಸಲಹೆಯನ್ನು ಸರ್ಕಾರದವರು ಅಂಗೀಕರಿಸಿರುವರೆಂದು ತಿಳಿದುಬಂದಿದೆ.

ಈ ಮಹತ್ವ ಪೂರ್ಣವಾದ ಬದಲಾವಣೆಯ ಜೊತೆಯಲ್ಲಿ ನೋಟುಗಳ ಅಕ್ಷರಗಳು ಮತ್ತು ವರ್ಣಗಳ ಬದಲಾವಣೆಯನ್ನೂ ಮಾಡಲಾಗುವುದು.

ಎರಡು ರೂಪಾಯಿ ನೋಟಿನ ಹಿಂದುಗಡೆ ಒಂದು ವಲಯದಲ್ಲಿ ಹುಲಿಯ ಕಲೆಯಿರುವುದು, ಐದು ರೂ. ನೋಟಿನ ಹಿಂದುಗಡೆ ಮೂರು ಹುಲ್ಲೆಗಳ ಚಿತ್ರವಿರುವುದು ಮತ್ತು ನೂರು ರೂ. ನೋಟಿನ ಹಿಂದುಗಡೆ ೨ ಆನೆಗಳ ಚಿತ್ರವಿರುವುದು.

ಹೊಸ ಹತ್ತು ರೂ. ನೋಟಿನ ಸ್ವರೂಪವನ್ನು ಸರ್ಕಾರದವರು ಇಷ್ಟರಲ್ಲೇ ನಿರ್ಧರಿಸುವರು.

ಬರುವ ಆಗಸ್ಟಿನಿಂದ ಚಲಾವಣೆಗೆ ಬರಲಿರುವ ಹೊಸ ಒಂದು ರೂ. ನೋಟಿನಲ್ಲೂ ರಾಜಮುದ್ರೆಗೆ ಬದಲು ಅಶೋಕಸ್ತಂಭದ ಚಿತ್ರವಿರುವುದು ಮತ್ತು ಹಣಕಾಸು ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ. ಕೆ. ಆರ್. ಕೆ. ಮೆನನ್‌ರವರ ಸಹಿ ಇರುವುದು.

ವೀರಾಜಪೇಟೆ ಮುನ್ಸಿಪಲ್ ಆಫೀಸು,
ತಾರೀಕು 9-2-1949.

ಮಾರಾಟಕ್ಕಿದೆ.

ವೀರಾಜಪೇಟೆ ಮುನ್ಸಿಪಾಲಿಟಿಯ ಗಾಡಿ ಮತ್ತು ಒಂದು ಜತೆ ಗಾಡಿ ಎತ್ತುಗಳು ಮಾರಲ್ಪಡುತ್ತವೆ. ಖಾಯಿಷ್ ದಾರರು ಈ ಆಫೀಸಿಗೆ ಬರಕೊಳ್ಳತಕ್ಕದ್ದು.

ಮೊಹಿದುಸೇನ್ ಸಾಹೇಬ್,
ಪ್ರೆಸಿಡೆಂಟರು

ಮಾರಾಟಕ್ಕಿದೆ.

ಮಡಿಕೇರಿ ಮಹದೇವಪೇಟೆ ಎ. ವಿ. ಸ್ಕೂಲ್ ಸಮೀಪ ಉತ್ತಮವಾದ ಚಿಕ್ಕ ಕುಟುಂಬ ವಾಸಕ್ಕೆ ಯೋಗ್ಯವಾದ ಒಂದು ಮನೆ ಮಾರಾಟಕ್ಕಿದೆ. ಈ ಮನೆಗೆ ಸಮ್ಮಂಧಪಟ್ಟ ಒಂದು ಔಟ್‌ಹೌಸ್, ನೀರಿನ ಅನುಕೂಲಕ್ಕೆ ಒಂದು ಬಾವಿ, ಎಲೆಕ್ಟ್ರಿಕ್ ದೀಪದ ಸಲಕರಣೆ ಮತ್ತು ತರಕಾರಿ ವಗೈರೆ ಮಾಡಲು ಅನುಕೂಲವಾದ ಸ್ವಲ್ಪ ಜಾಗವೂ ಇದೆ. ಬೆಲೆ ರೂಪಾಯಿ 4500/- ಅಥವಾ ಅದರ ಸಮೀಪ. ಖಾಯಿಸ್‌ದಾರರು ಹೆಚ್ಚಿನ ಮಾಹಿತಿಗೆ ಕೆಳಗಿನ ಪತ್ತೆಗೆ ಬರೆಯಿರಿ.

ಎನ್. ಎಂ. ಬೋಪಯ್ಯ,
ನೇಶನಲ್ ಸ್ಟೋರ್ಸ್,
3-2 ಚೌಕಿ, ಮಡಿಕೇರಿ.

WANTED

20.000 cft of Match-wood required for Stocking.

For further particulars please apply.

M. S. AIYAPPA,
WIMCO Representative
VIRAJPET Coorg.

NOTICE.

The things worth about 5 to 6 thousand rupees belonging to the mercara branch of the Coorg Teachers' Co-operative Stores Ltd., will be disposed off in wholesale. Intending purchaser will please negotiate with the President of the Coorg Teachers' Co-operative Stores Ltd., Virajpet, by 20-2-1949 at the latest. (The official bid is Rs. 3500/-)

ಸರ್ವೋದಯ ದಿನ.

ನಾಪೋಕ್ಲು.

ತಾ. ೩೦-೧-೪೯ರಲ್ಲಿ ಇಗ್ಗುತಪ್ಪ ದೇವಸ್ಥಾನದಲ್ಲಿ ನಾಪೋಕ್ಲು ಭಕ್ತಜನ ಸಂಘದವರು ಸೇರಿ ಮಹಾ ಪೂಜೆ ನಡೆಸಿ ಪುಣ್ಯಮೂರ್ತಿ ಗಾಂಧೀಜಿಯವರ ಆತ್ಮಕ್ಕೆ ಅಮರ ಶಾಂತಿಯನ್ನು ಕೋರಿ ಪ್ರಾರ್ಥಿಸಲಾಯಿತು. ಈ ಸಂದರ್ಭದಲ್ಲಿ ನಾಪೋಕ್ಲು ನಾಡು ಪಾರುಪತ್ಯಗಾರರಾದ ಶ್ರೀ ಕೋಟೆರ ನಂಜುಂಡನವರು ಗಾಂಧೀಯವರ ಗುಣಕಥನ ಮಾಡಿದರು.

ನಂತರ ನಡೆದ ಸಭೆಯಲ್ಲಿ ಕೊಡಗನ್ನು ಬೇರೆ ಪ್ರಾಂತಕ್ಕೆ ಸೇರಿಸದೆ ಪ್ರತ್ಯೇಕವಿಡಬೇಕೆಂಬ ವಿಚಾರ ಶ್ರೀ ಉದಿಯಂಡ ಪೊಣಚಯ್ಯನವರು ಮಾತಾಡಿದರು. ಎಲ್ಲರೂ ಒಮ್ಮತದ ಅಭಿಪ್ರಾಯವಿತ್ತರು. ನಂತರ ಬೋಜನ ಸತ್ಕಾರದಿಂದ ಸಭೆ ಮುಕ್ತಾಯವಾಯಿತು.

ನಾಪೋಕ್ಲು ಹೈಸ್ಕೂಲು

ತಾರೀಕು ೩೦-೧-೪೯ನೇ ಸೋಮವಾರ ಮಧ್ಯಾಹ್ನದ ವೇಳೆ ೩. ೩೦ ಗಂಟೆಗೆ ಶಾಲೆಯ ಅಧ್ಯಾಪಕರು, ವಿದ್ಯಾರ್ಥಿಗಳೂ ಸಭೆ ಸೇರಿ 'ಸರ್ವೋದಯ' ದಿನಾಚರಣೆಯನ್ನು ನಡೆಸಿದರು 'ವೈಷ್ಣವ ಜನತೋ' ಹಾಡಿ ನಂತರ ಶ್ರೀ ಜೆ. ಎಸ್. ಕೃಷ್ಣರಾಜು ಇವರು ಈ ದಿನದ ಅರ್ಥ, ಪಾವಿತ್ರ್ಯಗಳ ವಿಷಯ ಮಾತಾಡಿದರು ನಂತರ 'ರಘುಪತಿ ರಾಘವ ರಾಜಾ ರಾಂ' ಭಜನೆ ನಡೆಯಿತು ವಿದ್ಯಾರ್ಥಿಗಳಿಂದಲೂ, ಉಪಾಧ್ಯಾಯರುಗಳಿಂದಲೂ ಗಾಂಧಿ ಸ್ಮಾರಕ ನಿಧಿಗೆ ರೂ. ಹತ್ತು ಜಮೆಯಾಯಿತು.

ಟಾಕ್ಸ್.

ವಿದ್ಯಾಧಿಕಾರಿಯ ನೇಮಕ.

ಕೊಡಗಿನ ವಿದ್ಯಾಧಿಕಾರಿಯ ನೇಮಕವನ್ನು ಕುರಿತು ನಡೆದ ಕೆಲವು ವಿವಾದಗಳ ತಿರ್ಮಾನಗಳನ್ನೂ, ಮಡಿಕೇರಿ ವಿಧಾನ ಸಭೆಯ ಡೆಪ್ಯುಟಿ ಕಮಿಶನರವರಿಗೆ ಚೀಫ್ ಕಮಿಶನರವರು ಕೊಟ್ಟ ಜವಾಬನ್ನೂ ಪತ್ರಿಕೆಗಳಲ್ಲಿ ನೋಡಿದೆನು. ಈ ವಿಚಾರ ಕುರಿತು ಕೆಲವು ಜನರಲ್ಲಿ ಒಂದು ತಪ್ಪಭಿಪ್ರಾಯ ಹುಟ್ಟಿದಂತೆ ತೋರುತ್ತದೆ. ಈ ಉದ್ಯೋಗಕ್ಕೆ ಹೊರಗಿನವರನ್ನು ಕರೆಸಬಾರದಾಗಿತ್ತೆಂಬುದೇ ಈ ತಪ್ಪಭಿಪ್ರಾಯಕ್ಕೆ ಕಾರಣ. ನನಗೆ ಅಂತಹ ಅಭಿಪ್ರಾಯಕ್ಕೆ ಎಡೆಯೇ ಇಲ್ಲ. ಕೊಡಗಿನ ಮುಂದಿನ ಹಿತದೃಷ್ಟಿಯಿಂದ ವಿದ್ಯಾ ಇಲಾಖೆಯನ್ನು ಪುನರ್ವ್ಯವಸ್ಥೆ ಮಾಡಬೇಕೆಂಬ ಉದ್ದೇಶದಿಂದ ಈ ಇಲಾಖೆಯಲ್ಲಿ ಒಳ್ಳೆಯ ಅನುಭವವುಳ್ಳ ಮತ್ತು ತಜ್ಞರಾದ ಒಬ್ಬರನ್ನು ಹೊರಗಿನಿಂದಾದರೂ ಕರೆಸಿ ಒಂದು ವರ್ಷದವರೆಗೆ 'ಎಜ್ಯುಕೇಶನಲ್ ಎಡ್ವೈಸರ್' ಆಗಿ ನೇಮಿಸಿ ಅವರಿಂದ ಪುನರ್ವ್ಯವಸ್ಥೆಯ ಕಾರ್ಯವನ್ನು ನಡೆಸಬೇಕೆಂಬುವದೇ ಈ ಯೋಜನೆಯ ಉದ್ದೇಶವೆಂದು ತಿಳಿದುಬರುತ್ತದೆ. ಒಂದು ವರ್ಷದಲ್ಲಿ ಪುನರ್ವ್ಯವಸ್ಥೆಯ ಕಾರ್ಯ ಮುಗಿದ ಮೇಲೆ ಕೊಡಗಿನವರನ್ನೇ ವಿದ್ಯಾಧಿಕಾರಿಯಾಗಿ ನೇಮಿಸಲಾಗುವದೆಂದೂ ಹೇಳಲಾಗಿದೆ. ಈ ಕಾರಣದಿಂದಲೇ ಈ ಮೊದಲಿನ ವಿದ್ಯಾಧಿಕಾರಿಯಾದ ಶ್ರೀ ಪಿ. ಸಿ ಉತ್ತಯ್ಯನವರನ್ನು ಉದ್ಯೋಗದಿಂದ ನಿವೃತ್ತಿಗೊಳಿಸಿದ್ದಾಗಿದೆಯೆಂದೂ ವರ್ತಮಾನ.

ಇಲ್ಲಿಯ ವಿದ್ಯಾ ಇಲಾಖೆಯು ಮಕ್ಕಳ ಹಿತದೃಷ್ಟಿಯಿಂದ ಪುನರ್ವ್ಯವಸ್ಥೆಯಾಗಬೇಕಾದದ್ದು ಅವಶ್ಯವಾಗಿದೆ. ಆ ಕಾರ್ಯವನ್ನು ಹೊರ ಪ್ರಾಂತದ ಅನುಭವವಿರುವ ಒಬ್ಬರಿಂದ ಮಾಡಿಸುವದು ಯುಕ್ತವಾಗಿದೆ ಇದಕ್ಕೆ ಇಂಡಿಯಾ ಸರಕಾರದ ತಜ್ಞರೊಬ್ಬರು ದೊರೆತರೆ ಉತ್ತಮವಾಗುವದು. ಹೇಗೂ ಒಂದು ವರ್ಷದನಂತರ ವಿದ್ಯಾಧಿಕಾರಿಯ ಹುದ್ದೆಯು ಕೊಡಗಿನವರಿಗೇ ಕಾದಿಟ್ಟಿರುವ ಕಾರಣ ಯಾರೂ ಗಾಬರಿಪಡಬೇಕಾಗಿಲ್ಲ ನಮ್ಮ ಮಕ್ಕಳ ಮುಂದಿನ ವಿದ್ಯಾಭಿವೃದ್ಧಿಯನ್ನು ಕೋರುವವರು ಯಾರು ಈ ಯೋಜನೆಗೆ ಆಕ್ಷೇಪಿಸಲಿಕ್ಕಿಲ್ಲವಾಗಿ ನಂಬುತ್ತೇನೆ

ಪಿ ನಂಜಪ್ಪ.

ನೋಟೀಸ್

ಮಂದಪಂಡ್ರ ಪೌತಿ ಕುಞಪ್ಪನವರ ಮಗ ಸೋಮಪ್ಪನು ಈ ಮೂಲಕ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ:—

ನನ್ನ ಅಣ್ಣ ಪೊನ್ನಪ್ಪನವರು ಮತ್ತು ಅಪ್ಪಚ್ಚಿರ ಪೌತಿ ಮುದ್ದಪ್ಪನವರ ಉಭಯತ್ತರೂ ಒಪ್ಪಿಕೊಂಡು ನನ್ನನ್ನು ಮೋಸಪಡಿಸುವ ಉದ್ದಿಶ್ಯ ಅಯ್ಯಂಗೇರಿ ಗ್ರಾಮದಲ್ಲಿರುವ ಕಂಪಿ ಸಾಗುವಳಿ ಮಲೆಯನ್ನು ಹೆಳೆ ಪ್ಲಾಸ್ ನಂಬ್ರ ೩೦೮೫ ಕೊಲ್ಲಿಪೊಡತಾಂಡ ಗಿ ಕಡಿಮೆ ಮಾಡಿದ ಇಲಾಖೆ ಏಕರೆ ೧೩.೩೫ರ ಜುಮ್ಮ ಗಂದಾಯ ರೂ ೧೫೦-೧-೦ ಯ ಆಸ್ತಿಯನ್ನು ಪರಾಬಾರೆ ಮಾಡುವುದೆಂಬ ಸಂಗ್ತಿ ತಿಳಿದು ಬಂದ ಕಾರಣ, ಹಾಗೆ ಈ ಮೇಲಿನ ಆಸ್ತಿಯನ್ನು—ನನ್ನ ಭಾಗಕ್ಕೆ ಹಕ್ಕಾಗಿರುವ ಕಾರಣ—ನನ್ನ ತಿಳಿವಳಿಯಿಲ್ಲದೆ, ಬೇರೆಯಾರೂ ಈ ಆಸ್ತಿಯನ್ನು ಈ ಮೇಲಿನ ಪೊನ್ನಪ್ಪನವರಿಂದಾಗಲೀ ಅದವಾ ಅಪ್ಪಚ್ಚಿರ ಮುದ್ದಪ್ಪನವರಿಂದಾಗಲೀ, ಗಿರ್ವಿ, ಭೋಗ್ಯ, ಕ್ರಯ ಸಾಧನ, ಮತ್ಯಾವ ಆಧಾರ ಮಾಡಿಸಿಕೊಳ್ಳಕೂಡದಾಗಿಯೂ, ಹಾಗೆ ಮಾಡಿಸಿಕೊಂಡಲ್ಲಿ ಅದು ರದ್ದಾಗಿ ರತಕ್ಕದ್ದೆಂಬ ಸಂಗ್ತಿಯನ್ನು ಈ ಮೂಲಕ ಎಚ್ಚರಿಸಿರುತ್ತೇನೆ

ನಾಪೋಕ್ಲು, ಎಂ. ಕೆ. ಸೋಮಪ್ಪ,
ತಾ. ೮-೨-೪೯.

Mr. B. Madhva, Inspector, ANDHRA INSURANCE Co, Ltd. Kotikulam, Bekul Post, will stay from 15th to 20th instant at the under-mentioned address:

C/o. Mr. P. K KARUMBIAH, M A, B Sc.
Kottoli Veerajpet, Coorg

AND WILL BE GLAD TO INTERVIEW APPLICANTS.

for Agency from influential persons

Andhra Insurance Company Ltd.,

H. O. Masulipatam

ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್, ಮಡಿಕೇರಿ.



ಇವರ ಫ್ರೇಜರ್‌ಪೇಟೆ ಕಾರ್ಖಾನೆಯು ಶೀಘ್ರದಲ್ಲೇ ತೆರೆಯಲ್ಪಡುವುದು ಮತ್ತು ಈ ಕೆಳಗಿನ ಕೆಲಸಗಳನ್ನು ಸಮ್ಮತಿ ಕೈಗೊಳ್ಳುವರು (1) ಭತ್ತ ಮಿಲ್ ಮಾಡುವುದು, (2) ಧಾನ್ಯಗಳನ್ನು ಹುಡಿ ಮಾಡುವುದು. (3) ಕಾಫಿ ಹುರಿದು ಹುಡಿ ಮಾಡುವುದು (4) ಮೆಣಸು ಹುಡಿ ಮಾಡುವುದು, (5) ಸೀಗೆ ಹುಡಿ ಮಾಡುವುದು.

ಪ್ರಕಟಣೆ

ನಾಪೋಕ್ಲು ನಾಡು ಕೊಳಕೇರಿಗ್ರಾಮದ ಉದಿಯಂಡ ಮುತ್ತಪ್ಪನವರ ಹೆಸರಿನಲ್ಲಿ ಜಮಾಬಂದಿ ನಡೆದು ಬರುವ ಜಮ್ಮಾ ಜಹಗೀರು ಮತ್ತು ಉಂಬಳಿ ಭೂಮಿ ಮತ್ತು ಇದಕ್ಕೆ ಸೇರಿದ ಬಾಣೆ, ಕಾಡು, ಜಾಗ, ಈ ಮೇಲ್ಕಂಡ ಮುತ್ತಪ್ಪನವರಿಗೆ ಪಾಲಿನ ಜಾತಿಗೆ ಬಂದವರು ಎಂಟು ಜನ ಹಕ್ಕುದಾರರು ಇರುತ್ತೇವೆ.

ಈ ಮೇಲ್ಕಂಡ ಸೊತ್ತನ್ನು ಯಾರಾದರೂ ಸರಕಾರಿ ಹರಾಜಿನಲ್ಲಿ ಪಡೆಯುವುದಾಗಲೀ ಯಾ ಶುದ್ಧಕ್ರಯಕ್ಕೆ ಪಡೆಯುವದಾಗಲೀ ಪಾಲಿಗೆ ಬಂದ ಪ್ರತಿಯೊಬ್ಬರ ಸಮ್ಮತಿಯಿಲ್ಲದೆ ಕೂಡದೆಂದೂ ಹಾಗೆ ಪಡಕೊಂಡದ್ದೇ ಆದರೆ ಜಮಾಬಂದಿಯನ್ನು ಪಡಕೊಂಡವರ ಹೆಸರಿನಲ್ಲು ನಡೆಸ ಕೂಡದೆಂದೂ, ೧೯೪೩ನೇ ಇಸವಿಯಲ್ಲಿ ಕೊಡಗು ಅಸಿಸ್ಟೆಂಟ್ ಕಮಿಶನರ್‌ರವರಿಗೆ ಬರಕೊಂಡ ಅರ್ಜಿಗೆ ಸರಿಯಾದ ಎಂಡಾರ್ಸ್‌ಮೆಂಟು ೧೯೪೩ನೇ ಇಸವಿಯಲ್ಲಿ ಸಿಕ್ಕಿರುತ್ತೆ.

ಇದೇ ಮೇಲ್ಕಂಡ ಪಟ್ಟೆದಾರರ ಕೆಸವಿನಲ್ಲಿ ಪೊಲೀಸ್ ಸ್ಟೇಶನ್ ಅತ್ತು ವೀರಾಜಪೇಟೆ ಬೇಟೋಳಿ ಗ್ರಾಮಕ್ಕೆ ಸೇರಿದ ೩೦೦ ಬಟ್ಟಿ ಜಹಗೀರು ಭೂಮಿ ಇದಕ್ಕೆ ಸರಿಯಾದ ಜಾಗವು ಇರುತ್ತೆ ಈಗ ಕೇಡು ಬಂದಲ್ಲಿ ಶ್ರೀಗಳಾದ (೧) ಬಟ್ಟೆಮಂಡ (೨) ಪಟ್ಟೆಡ (೩) ಪೊಣಚಪಂಡ (೪) ಗೌಳಿಗರ ಗೋವಿಂದ ಇವರುಗಳು ನಮ್ಮ ಜಾಗವನ್ನು ಆಕ್ರಮಿಸಿಕೊಂಡು ಮನೆಗಳನ್ನು ಕಟ್ಟಿಕೊಂಡು ವಾಸವಿರುವುದು ಕಂಡುಬಂದಿದೆ.

೧೯೩೩ ನೇ ಇಸವಿಯಿಂದ ಅರ್ಮಿ ಸರ್ವಿಸಿನಲ್ಲಿ ನಾನು ಹೊರಗ ಇರುತ್ತೇನೆ. ಈಗಲೂ ಕೊಡಗು ಎಂಟುಬ್ಯಾಂಕ್ ರಜಿಮೆಂಟಿನಲ್ಲಿ ರೆಗ್ಯುಲರ್ ಹವಲ್ದಾರನಾಗಿದ್ದೇನೆ. ಪರಾಧೀನ ಆದ ಈ ಜಾಗದ ವಿಷಯ ನನ್ನ ಕಮಾಂಡಿಂಗ್ ಸಾಹೇಬರ ಮೂಲಕ ಕೊಡಗು ಅ. ಕಮಿಶನರ್ ಸಾಹೇಬರಿಗೆ ಬರಕೊಂಡ ಅರ್ಜಿಗೆ ಇದೇ ಮಾರ್ಚಿ ಅಪ್ಪಿಗೆ ಒಳಗೆ ಪಹೀ ಸರ್ವೆಯು ತೆಮಾಡಿ ಕೊಡಲು ನಾನು ಹೊರಗೆ ಇರುವದರಿಂದ ನನ್ನ ಬದಲು ಒಬ್ಬ ಏಜಂಟರನ್ನು ನನ್ನ ಪರವಾಗಿ ನೇಮಕ ಮಾಡಬೇಕಾಗಿ ಹುಕುಂ ಕೊಟ್ಟದರ ಮೇರೆ ನಮ್ಮ ಕುಟುಂಬದ ಪಿಂಚಿನ್‌ದಾರ್ ಪೊಣಚಯ್ಯನವರನ್ನೇ ನೇಮಕ ಮಾಡಿ ನಾಡು ಕಚೇರಿ ಪಾರುಪತ್ತೆಗಾರರಿಗೆ ಮುಚ್ಚಳಿಕೆ ಕೊಟ್ಟಿರುತ್ತೇನೆ. ನನ್ನ ಜಹಗೀರು ಜಾಗವನ್ನು ಆಕ್ರಮಿಸಿಕೊಂಡವರು ದಯಮಾಡಿ ಏನೆಂದರೂ ತೊಂದರೆಯಿಲ್ಲದೆ ಬಿಟ್ಟುಕೊಡಬೇಕಾಗಿ ಕೇಳಿಕೊಂಡಿದ್ದೇನೆ. ಹಾಗೆ ಮಾಡದೆ ಹೋದಲ್ಲಿ ಅದರಿಂದ ಉಂಟಾಗುವ ಸರ್ವ ಖರ್ಚಿಗೂ, ನಷ್ಟಕ್ಕೂ ಗುರಿಯಾಗಬೇಕಾಗಿ ತಿಳಿಸಿದೆ.

ಉದಿಯಂಡ ಎನ್. ಪೊಣಚಯ್ಯ.
ಹವಲ್ದಾರ್.

The Warden Insurance Co., Ltd.,
H. O. Bombay.

Branch Office: GANDHI NAGAR, BANGALORE.
Sub Branch Office; MERCARA.

WANTED.

Influential and Active Persons to represent Motor and Accident Insurance Business in Coorg on attractive terms. Please apply for particulars to:

Sri A. S. Aiyappa,
Branch Secretary.

ಎಂಪೈರ್ ಆಫ್ ಇಂಡಿಯಾ
ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.
ಸ್ಥಾಪನೆ,—1897

48ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು.	ಒಟ್ಟು ಆದಾಯ	1,07,09,000	ರೂಪಾಯಿ
	ಚಾಲ್ತಿಯಿರುವ ವಿಮೆ	17,74,52,000	,,
	ಆಸ್ತಿ	6,67,60,000	,,
ಕಂಪೆನಿಯ ಆದಿಯಲ್ಲಿ ಕೊಟ್ಟ ಕ್ಲೈಮುಗಳು	....	8,83,62,000	,,

ಅಂಗ ಕಛೇರಿ: ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು.
ಏಜೆನ್ಸಿ: ಅರ್ಜಿಗಳನ್ನು ಸ್ವಾಗತಿಸಿದೆ.
ಪ್ರಧಾನ ಕಛೇರಿ: ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ

ಬಟ್ಟೆ ಬೇಕೆ?

ಮಹನಿಯರೇ,

ನಮ್ಮಲ್ಲಿ ಸ್ಪೆಶಲಾಗಿ ಮದುವೆಗೆ ಬೇಕಾಗುವ ನಾನಾ ತರಹದ ಒಳ್ಳೇ ಒಳ್ಳೇ ಫ್ಯಾನ್ಸಿ, ರಮಣೀಯವಾದ ಬೆಂಗಾಲ್ ಸಿಲ್ಕು, ಬನಾರಸ್, ಸೇಲಂ, ಕೊಯಮುತ್ತೂರು, ಮತ್ತು ಮಧುರಾ ಮುಂತಾದ ಅನೇಕ ಸ್ಥಳಗಳಿಂದ ತಯಾರಾದ ಜವಳಿಗಳು ದೊರೆಯುತ್ತೆ.

ಒಂದಾವರ್ತಿ ದಯವಿಟ್ಟು ಬಂದು ಪರೀಕ್ಷಿಸಿರಿ!

ಮದುವೆಗೋಸ್ಕರ ನಾನೂರು ರೂಪಾಯಿ ಮೇಲ್ಪಟ್ಟು ಸ್ಯಾಲುಗಳಿಗೆ ನಮ್ಮ ಈ ಕೆಳಗಿನ ಅಡ್ರೆಸಿಗೆ ಆರ್ಡರ್ ಮಾಡಿದಲ್ಲಿ, ನ ವುಗಳು ತಮಗಳ ಬಂಗ್ಲೆಗಳಿಗಾಗಲೀ, ಅಥವಾ ಮನೆಗಳಿಗಾಗಲೀ ತಂದು ಕೊಡುವೆವು.

Valki Mohidin Saheb & Bro;
Silk & Cotton Merchants,
12-6 VIRAJAPET (S. COORG.)

ವಿಮೆ ಮಾಡಲು ಇಲ್ಲವೇ ಪ್ರತಿನಿಧಿಸಲು
ಕೊಟ್ಟಿಕಾರ್ ಬ್ರದರ್ಸ್, ಲಿಮಿಟೆಡ್.
ಇವರ ಸಲಹೆಗಿಂತ ಉತ್ತಮ ಮಾರ್ಗವಿಲ್ಲ.
ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದೂಸ್ಥಾನದ ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು.

ದಿ ಬೊಂಬಾಯಿ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

30 ಮೌಂಟ್ ರೋಡ್, ಪೊ. ಬಾ. ನಂ. 337, ಮದ್ರಾಸು 2.
ಬೊಂಬಾಯಿ ಲೈಫ್ ಬಿಲ್ಡಿಂಗ್, ಪೊ. ಬಾ. ನಂ. 1, ಉಡುಪಿ.
(ಟೆಲಿಫೋನ್ ನಂ. 8398)

ಇತರ ಆಫೀಸುಗಳು:—ಬೆಂಗಳೂರು, ತಿರುವಂದರಂ, ಕಲ್ಲಿಕೋಟೆ, ಮಂಗಳೂರು, ಮಧುರೆ, ಮತ್ತು ಬೊಂಬಾಯಿ.

ಸಾರ್ವಜನಿಕ ಸಭೆಗಳು.

ನಾಪೋಕ್ಲುನಾಡು.

ತಾರೀಕು 23-1-49ರಲ್ಲಿ ಕಕ್ಕಬೆ ಪ್ರಾಂತ್ಯದ, ಕುಂಜಿಲ, ನಾಲಡಿ, ಯವಕಪಾಡಿ ಮತ್ತು ನೆಲಜಿ ಗ್ರಾಮಸ್ಥರು ಸೇರಿ, ಶ್ರೀ ಕೆ. ಯಸ್. ಕುಟ್ಟಪ್ಪನವರ ಅಧ್ಯಕ್ಷತೆಯಲ್ಲಿ ಕಕ್ಕಬೆ ಬಳಿ ನಡೆಸಿದ ಸಾರ್ವಜನಿಕ ಮೀಟಿಂಗಿನ ಸಾರಾಂಶ.

ಕಕ್ಕಬೆಯಲ್ಲಿ ಒಂದು ವರ್ಷದ ಮಟ್ಟಿಗೆ ವಾರಕ್ಕೆ 2 ದಿನ ಆಸ್ಪತ್ರೆ ತೆರೆಯುತ್ತಿದ್ದರು. ಈಗ ವಾರಕ್ಕೆ ಒಂದೇ ದಿನ ತೆರೆಯುವಂತಾಗಿದೆ. ಆದುದರಿಂದ ಮೊದಲಿನಂತೆ ವಾರಕ್ಕೆ 2 ದಿನ ತೆರೆಯಬೇಕಾಗಿಯೂ ಮತ್ತು ಒಬ್ಬ ನರ್ಸನ್ನು ಸಹ ನೇಮಿಸಿ ಬಡ ರೈತರ ತೊಂದರೆಯನ್ನು ನಿವಾರಿಸಬೇಕಾಗಿಯೂ ತೀರ್ಮಾನವಾಯಿತು.

ಕೊಡಗು ಡಿ. ಇ. ಓ. ರವರ ಉದ್ಯೋಗಕ್ಕೆ ತರಬೇಕಾದವರು ಕೊಡಗಿನಲ್ಲೇ ಇರುವದರಿಂದ ಹೊರಗಿನಿಂದ ಕರಿಸುವ ಸಂಗತಿ ಪೂರಾ ವ್ಯಸನಕರ. ಅಂಥದಿದ್ದರೆ ವಜಮಾಡಿ ಈಗ ಇರುವವರನ್ನೇ ಕಾಯಂಮಾಡಲಿಕ್ಕಾಗಿಯೂ, ಕಕ್ಕಬೆ ಶಾಲೆಗೆ ಹಿಂದೀ ಕಲಿಸಲು ಬೇರೊಬ್ಬ ಅಧ್ಯಾಪಕರನ್ನು ಕಳುಹಿಸದೆ, ಇಲ್ಲಿರುವವರನ್ನೇ ನೇಮಿಸಿರುವದರಿಂದ ಇಲ್ಲಿಯ ಪಾಠದ ಅಭಿವೃದ್ಧಿಗೆ ತೊಂದರೆಯಾದರಿಂದ ಬೇರೆ ಎಲ್ಲಾ ಕಡೆ ಹೆಚ್ಚಿಗೆ ಉಪಾಧ್ಯಾಯರನ್ನು ಕೊಟ್ಟಂತೆ ಈ ಶಾಲೆಗೂ ಒಬ್ಬ ಹೆಚ್ಚಿಗೆ ಉಪಾಧ್ಯಾಯರನ್ನು ಕಳುಹಿಸಿಕೊಡಬೇಕಾಗಿಯೂ ಕೇಳಲು ನಿರ್ಣಯವಾಯಿತು. ಈ ಪ್ರಾಂತ್ಯವು ಕಾಡು ಮಲೆಯಾದ ಕಾರಣದಿಂದಲೂ ಇಲಾಖೆ ವೈವಾಟು ಹೆಚ್ಚಾಗಿರುವದರಿಂದಲೂ, ಈಗಾಗಲೇ ಒಂದೆರಡು ಬೀಗ ಮುರಿದು ಯೂಲಕ್ಸಿ ಕಳವು ನಡೆದಿರುವದರಿಂದಲೂ ಇಲ್ಲಿಗೆ ಒಂದು ಪೋಲೀಸ್ ಔಟ್ ಪೋಸ್ಟು ಇಡಿಸಿ ಕೊಡುವಂತೆ ಕೇಳಬೇಕಾಗಿಯೂ ಸರ್ವಸಮ್ಮತದಿಂದ ತೀರ್ಮಾನವಾಯಿತು.

ಉದಿಯಂಡ ಮಾಚಯ್ಯ.

ಶಾಕೋಟೆಪರಂಬು.

೧

ತಾರೀಕು ೨೭-೧-೪೯ ನೇ ಶುಕ್ರವಾರ ದಿನ ಶಾಕೋಟೆಪರಂಬು ಶಾಲೆಯಲ್ಲಿ ನಡೆದ ಸಾರ್ವಜನಿಕ ಸಭೆಯ ನಡವಳಿಕೆ.

ಈ ದಿನದ ಸಭೆಗೆ ಶ್ರೀ. ಮಾತಂಡ ಚಂಗಪ್ಪನವರನ್ನು ಅಧ್ಯಕ್ಷರನ್ನಾಗಿ ಸೂಚಿಸಿದಲ್ಲಿ ಅವರು ಸರ್ವಸಮ್ಮತದಿಂದ ಅಧ್ಯಕ್ಷಸ್ಥಾನವನ್ನು ವಹಿಸಿದರು. ಸಭೆಗೆ ಸುಮಾರು ೧೫೦ ಜನರು ಹಾಜರಿದ್ದರು.

ಶ್ರೀ ನಡಿಕೇರಿಯಂಡ ಸುಬ್ಬಯ್ಯನವರು ಈ ಶಾಲೆಯ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗಿರುವ ತೊಂದರೆಯನ್ನು ಅವರ ಅಭಿವೃದ್ಧಿಯ ಕುಂದಕಗಳನ್ನು ಕುರಿತು ಮಾತಾಡಿದರು. ಇವರನ್ನು ಅನುಮೋದಿಸಿ ಶ್ರೀ. ಪಳಂಗಂಡ ಸಂಜಪ್ಪನವರು ಇನ್ನೂ ಅನೇಕರು ಮಾತಾಡಿದರು.

ಶಾಲೆಯ ಅಭಿವೃದ್ಧಿಗೋಸ್ಕರ ಒಂದು ಸಂಘವನ್ನು ಏರ್ಪಡಿಸುವಂತೆ ಕೇ ವರ್ಣಿಸಿ, ಒಂದು ಸಮಿತಿಯನ್ನು ಆರಿಸಲಾಯಿತು.

ಈ ಶಾಲೆಯಲ್ಲಿ ೧ನೇ ಮತ್ತು ೫ನೇ ತರಗತಿಗಳಲ್ಲಿ ಮಕ್ಕಳು ಹೆಚ್ಚಾಗಿರುವುದರಿಂದ ಆ ಎರಡು ತರಗತಿಗಳನ್ನು ಇಬ್ಭಾಗಿಸಿ ಎರಡು ಉಪಾಧ್ಯಾಯರುಗಳನ್ನು ಹೆಚ್ಚಿಗೆ ನೇಮಕ ಮಾಡಲು ಜಿಲ್ಲಾ ಬೋರ್ಡನ್ನು ಕೇಳುವಂತೆಯೂ ಅಲ್ಲದೆ ಸಾಧ್ಯವಾದಷ್ಟು ಮಟ್ಟಿಗೆ ಗ್ರಾಮಸ್ಥರು ತೆಂಗೆ ಎತ್ತುವಂತೆಯೂ ತೀರ್ಮಾನವಾಯಿತು. ಅಲ್ಲದೆ ಈ ವರ್ಷ ಈ ಶಾಲೆಯಲ್ಲಿ ಸುಮಾರು ೩೦ ಮಕ್ಕಳು ಮೂರನೇ ಫಾರಂನಲ್ಲಿ ಪಾಸಾಗುವ ಭರವಸೆಯಿರುವುದರಿಂದ ಪಾಸಾಗುವ ಗರೀಬ ಮಕ್ಕಳು ವಿರಾಜಪೇಟೆ ಹೈಸ್ಕೂಲಿಗೆ ನಡೆಯುವುದು ಕಷ್ಟವಾಗಿರುವುದರಿಂದಲೂ ಬೋರ್ಡಿಂಗಿನಲ್ಲಿರುವುದಕ್ಕೆ ಅನುಕೂಲ ಇಲ್ಲದಿರುವುದರಿಂದಲೂ ಈ ವರ್ಷಕ್ಕೆ ಈ ಶಾಲೆಯಲ್ಲಿ IV ಫಾರಂ ತೆರೆಯಲು ಸರಕಾರವನ್ನು ಕೇಳುವಂತೆಯೂ ತೀರ್ಮಾನವಾಯಿತು.

ಈ ಬಗ್ಗೆ ತಾ. ೧೩-೩-೪೯ರಲ್ಲಿ ನಾಡಿನವರ ಸಾರ್ವಜನಿಕ ಸಭೆ ನಡೆಸಲು ನಿಶ್ಚಯವಾಯಿತು.

೨

೧೯೪೯ ನೇ ಇಸವಿ ಜನವರಿ ತಾ. ೨೭ ರಲ್ಲಿ ನಾಲ್ಕೇರಿ ಗ್ರಾಮಸ್ಥರು ಶಾಕೋಟೆಪರಂಬು ಮೈದಾನದಲ್ಲಿ ಸಭೆ ಸೇರಿ ಶ್ರೀ ಐಚೆಟ್ಟಿರ ಸೋಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಸಿದ ಮೀಟಿಂಗಿನ ಸಾರಾಂಶ. ಕೊಡಗು ದೇಶವನ್ನು ಬೇರೆ ಪ್ರಾಂತ್ಯಗಳಿಗೆ ಸೇರಿಸುವ ವಿಷಯವಾಗಿ ಅನೇಕ ಜನರೂ, ಗ್ರಾಮಸ್ಥರೂ ತಮ್ಮ ತಮ್ಮ ಅಭಿಪ್ರಾಯಗಳನ್ನು ಪತ್ರಿಕೆಗಳ ಮೂಲಕ ವ್ಯಕ್ತಪಡಿಸಿದ್ದು ಸರಿಯಷ್ಟೆ. ಕೊಡಗು ದೇಶವು ಇತರ ಪ್ರಾಂತ್ಯಗಳೊಡನೆ ಸಂಯೋಜನೆಯಾಗುವುದರಿಂದ ಯಾವ ಪ್ರಯೋಜನವೂ ಇಲ್ಲವೆಂಬುದಾಗಿಯೂ ಆದುದರಿಂದ ಕೊಡಗು ದೇಶವು ಪ್ರತ್ಯೇಕವಾಗಿಯೇ ಇರಬೇಕೆಂದೂ ಮಂಡೇಟ್ಟಿರ ಶ್ರೀ ಕಾಳಪ್ಪನವರು ತಂದ ಠರಾವನ್ನು ಶ್ರೀ ಕಳ್ಳೀರ ಬೋಯಪ್ಪನವರು ಅನುಮೋದಿಸಲಾಗಿ ಸರ್ವಸಮ್ಮತದಿಂದ ಪಾಸಾಯಿತು. ಅಲ್ಲದೆ ಕೊಡಗಿನ ವಿದ್ಯಾ ಇಲಾಖೆಯ ಮುಖ್ಯಾಧಿಕಾರಿಯವರ ಉದ್ಯೋಗವನ್ನು ನಿವೃತ್ತಪಡಿಸಿ ಅವರ ಬದಲಿಗೆ ಬೇರೆ ಪ್ರಾಂತ್ಯದಿಂದ ಒಬ್ಬರನ್ನು ತರುವ ಏರ್ಪಾಡನ್ನು ಚೀಫ್ ಕಮೀಷನರ್‌ರವರು ಮಾಡಿರುವರೆಂದು ತಿಳಿದು ಬಂದದ್ದು ಪೂರಾ ಆಶ್ಚರ್ಯಕರ ಮತ್ತು ಈಗಿರುವವರು ನ್ಯಾಯವಾದ ಡಿಗ್ರಿಯನ್ನು ಪಡೆದು ಪಾಂಡಿತ್ಯಮಾತ್ರದಿಂದಲೇ ನ್ಯಾಯವಾದ ತಂಖೇತು ಹೊಂದಿರುವಾಗ ಅವರನ್ನೇ ಖಾಯಂ ಮಾಡುವುದಲ್ಲದೆ ಕೊಡಗಿನಲ್ಲಿಯೇ ಸರಿಯಾಗಿ ವ್ಯಾಸಂಗ ಮಾಡಿದ ವಿದ್ಯಾವಂತರನ್ನು ಕಟ್ಟ ಉದ್ಯೋಗಕ್ಕೆ ನೇಮಿಸಬೇಕೆಂಬುದಾಗಿ ಶ್ರೀ ಮೇವಡ ಅಪ್ಪಯ್ಯನವರು ತಂದ ಠರಾವನ್ನು ಶ್ರೀ ಮಾಳೇರ ಮಾಚಯ್ಯನವರು ಅನುಮೋದಿಸಲಾಗಿ ಈ ಠರಾವು ಸರ್ವಸಮ್ಮತದಿಂದ ಪಾಸಾಯಿತು.

ನೇತಾಜಿ ಜೀವಂತ ಇರುವರೆ?

ಸುಭಾಷಚಂದ್ರ ಬೋಸರು ಜಪಾನಿನ ಒಂದು ವಿಮಾನದ ಅಪಘಾತದಲ್ಲಿ ಸಿಕ್ಕಿ ಮೃತಪಟ್ಟರೆಂದು ಕೆಲವು ವರ್ಷಗಳ ಹಿಂದೆಯೇ ಸುದ್ದಿಯಾಗಿತ್ತು. ಆದರೆ ಆ ಮೇಲೆ ಆ ಬಗ್ಗೆ ಬಹಳ ಸಂಶಯಪಡತಕ್ಕಂಥಾ ಘಟನೆಗಳು ಮತ್ತು ಸುದ್ದಿಗಳು ನಡೆದವು.

ಕೆಲವರು ಸುಭಾಷರು ಮೃತಪಟ್ಟಿದ್ದೇ ನಿಶ್ಚಯವೆಂದು ಹೇಳುತ್ತ ಬಂದಿದ್ದಾರೆ. ಇನ್ನು ಕೆಲವರು 'ಅವರು ಮರಣ ಹೊಂದಿಲ್ಲ. ಜೀವಂತರಾಗಿಯೇ ಇದ್ದಾರೆ. ಪ್ರಸಂಗ ಬಂದಾಗ ಹೊರಬೀಳುವರು' ಎಂದೂ ಹೇಳಿದ್ದಾರೆ. ಇನ್ನು ಹಲಕೆಲವು ಸಲ ಅವರು ಕಣ್ಣಿಗೆ ಬಿದ್ದರೆಂಬ ಸುದ್ದಿಯೂ ಪ್ರಕಟವಾಯಿತು.

ಮಹಾತ್ಮ ಗಾಂಧೀಯವರು ಯಾವುದನ್ನೂ ಹೇಳದೆ, ನಿಜ ಸಂಗತಿಯು ಹೊರಬೀಳುವತನಕ ದಾರಿ ನೋಡೋಣವೆಂಬ ಧೋರಣವನ್ನು ವಹಿಸಿದ್ದರು. ಒಂದು ಸಲ ಪಂ. ನೆಹರೂರವರು ಅವರು ಮೃತಪಟ್ಟಿದ್ದೇ ನಿಶ್ಚಯ ಎಂಬರ್ಥದ ಹೇಳಿಕೆ ಕೊಟ್ಟರು.

ನಡುವೆ ಈ ವಿಷಯವು ಯಾರ ಲಕ್ಷ್ಯವನ್ನೂ ಸೆಳೆಯದೆ ಹಾಗೆಯೇ ಉಳಿದುಬಿಟ್ಟಿತ್ತು. ಇತ್ತಕಡೆಗೆ ಪುನಃ ಆ ವಿಷಯಕ್ಕೆ ಪುಟ ಸಿಕ್ಕಿದೆ.

ತಾ. ೨೪-೧-೪೯ನೇ ದಿವಸ ಹಿಂದೂಸ್ಥಾನದ ಅನೇಕ ಕಡೆಗೆ ಸುಭಾಷರ ಜಯಂತಿಯು ಆಚರಿಸಲ್ಪಟ್ಟಿತು. ಮದರಾಸ್ ಪ್ರಾಂತದ ಮಧುರಾ ಪಟ್ಟಣದಲ್ಲಿ ಆ ಉತ್ಸವವು ನಡೆದಾಗ್ಯೆ ತಮಿಳುನಾಡು ಫಾರ್ವರ್ಡ್ ಬ್ಲಾಕ್ ಪಕ್ಷದ ಅಧ್ಯಕ್ಷರೂ ಮತ್ತು ಸುಭಾಷರ ನಿಕಟವರ್ತಿಗಳೂ ಆದ ಶ್ರೀ. ಮಧುರಾಮಲಿಂಗ ದೇವರವರು ಭಾಷಣ ಮಾಡುತ್ತಾ 'ಸುಭಾಷರು ಇನ್ನೂ ಜೀವಂತರಿರುವರೆಂದು ಹೇಳಲು ನನಗೆ ಆನಂದವೆನಿಸುತ್ತದೆ. ಮೂರನೆಯ ಜಾಗತಿಕ ಯುದ್ಧವು ಪ್ರಾರಂಭವಾದನಂತರ ಅವರು ಹೊರಬೀಳುವರು' ಎಂಬರ್ಥದ ಮಾತುಗಳನ್ನು ಆಡಿದ್ದು ವರದಿಮಾಡಲ್ಪಟ್ಟಿದೆ. ಇಂಥಾ ಹೇಳಿಕೆಗಳಿಂದ ಜನತೆಯಲ್ಲಿ ಸುಭಾಷರ ಅಸ್ತಿತ್ವ ಅಥವಾ ಮರಣದ ಬಗ್ಗೆ ಮತ್ತಷ್ಟು ಸಾಶಂಕವೃತ್ತಿಯು ಹುಟ್ಟುವದು ಸ್ವಾಭಾವಿಕವಾಗಿದೆ. ಅದರಲ್ಲೂ ಸುಭಾಷರ ಸಹೋದರ ಶರತ್ ಬೋಸರವರೂ ಅವರು ಜೀವಂತರಿರುವರೆಂದು ಹೇಳಿರುವದರಿಂದ ಜನತೆಯ ಮನಸ್ಸಿನಲ್ಲಿ ನಾನಾ ಆಶೆ ತಲೆದೋರಿದೆ.

ಸುಭಾಷರೆಂದರೆ ಮಹಾ ವ್ಯಕ್ತಿ. ಆಝಾದ್ ಹಿಂದ್ ಸೇನೆಯ ರಚನೆಯ ನಂತರವಂತೂ ಅವರು ಹಿಂದೀಯರಿಗೆ ಬಹಳ ಪ್ರಿಯರಾದರು. ಅವರು ಉಚ್ಚರಿಸಿದ 'ಜಯ ಹಿಂದ್' ಘೋಷಣೆಯೇ ಹಿಂದೂಸ್ಥಾನದ ಇತ್ತಕಡೆಯ ಸಾರ್ವತ್ರಿಕ ಘೋಷಣೆಯಾಗಿ ಪರಿಣಮಿಸಿದೆ. ಪಂ. ನೆಹರೂರವರಂಥವರೂ ಕೂಡ ಅದನ್ನು ಸ್ವತಃ ಪ್ರತ್ಯೇಕ ಪ್ರಸಂಗಗಳಲ್ಲಿ ಉಪಯೋಗಿಸುತ್ತಾ ಅದರ ಲೋಕಪ್ರಿಯತೆಯನ್ನು ಬೆಳೆಸಹತ್ತಿದ್ದಾರೆ.

ಭಾರತೀಯ ಮುಖಂಡರು ಸುಭಾಷರ ಬಗ್ಗೆ ಬಹಳ ಆದರ ಭಾವವನ್ನು ತಳೆದವರಾಗಿದ್ದಾರೆ. ಅಂಥಾ ಅಸಾಮಾನ್ಯ ಕೆಲಸವನ್ನು ಮಾಡಿದ ವ್ಯಕ್ತಿಯ ಬಗ್ಗೆ ಈ ತರಹದ ತಿಳುವಳಿಕೆಯುಂಟಾಗುವದು ಸ್ವಾಭಾವಿಕವೇ ಆಗಿದೆ. ಸುಭಾಷರು ಹಿಂಸೆ ಅಹಿಂಸೆಗಳ ತಾರತಮ್ಯವನ್ನು ಕೂಡ ಬದಿಗಿಟ್ಟು ವರ್ತಿಸಿದರೂ ಮಹಾತ್ಮ ಗಾಂಧೀಜಿಯವರು ಆ ಭಾವನೆಯನ್ನು ಗಮನಿಸದೆ ಅವರನ್ನು ಗೌರವಿಸಿದರು. ಹಿಂಸೆ ಅಹಿಂಸೆಗಳು ಸಾಧನಗಳೇ ಹೊರತು, ಅವುಗಳಿಂದ ಸಾಧಿಸಬೇಕಾದ ಗುರಿಯು ಉದಾತ್ತತೆಯ ಬಗ್ಗೆ ಮತ್ತು ಅದಕ್ಕಾಗಿ ಆ ವ್ಯಕ್ತಿಯು ಮಾಡಿದ ತ್ಯಾಗದ ಬಗ್ಗೆ ಯಾವನೂ ಅಲ್ಲಗಳೆಯಲಾರನು.

ಈಗ ಬಂದಿರುವದು ಸುಭಾಷರು ನಿಜವಾಗಿಯೂ ಜೀವಂತವಿರುವರೇ ಅಥವಾ ಮೃತಪಟ್ಟಿರುವರೇ? ಎಂಬ ಪ್ರಶ್ನೆ. ಅದು ಇನ್ನೂ ಸಂಶಯದಲ್ಲಿಯೇ ಇಡಲ್ಪಟ್ಟಿದೆ. ಇಂಥಾ ಪರಿಸ್ಥಿತಿಯಲ್ಲಿ ಆ ಬಗ್ಗೆ ಜನತೆಯ ಕುತೂಹಲವು ಇನ್ನೂ ಹೆಚ್ಚಾಗುತ್ತದೆ.

ಸುಭಾಷರು ನಿಜವಾಗಿಯೂ ಜೀವಂತವಿದ್ದರೆ, ಅವರು ಇಷ್ಟರಲ್ಲಿಯೇ ಹೊರಗೆ ಬರಬೇಕಾಗಿತ್ತು. ಹೀಗೆ ಮರೆಸಿಕೊಳ್ಳುವ ಪರಿಸ್ಥಿತಿಯು ಹಿಂದೂಸ್ಥಾನದಲ್ಲಿ ಈಗ ಇಲ್ಲ.

ಮತ್ತೊಂದು ಆಶ್ಚರ್ಯದ ಸಂಗತಿಯೆಂದರೆ, ಜಪಾನಿಗೆ ಇಂದು ಹೋಗಿ ಬರಲು ಅವಕಾಶವಿದ್ದರೂ ಈ ಸಂಗತಿಯ ಸಲುವಾಗಿ ಒಂದು ನಿಶ್ಚಿತ ಕಲ್ಪನೆಯನ್ನು ಜನರಿಗೆ ಕೊಡುವದು ಇನ್ನೂ ಈ ವರೆಗೆ ಯಾರಿಗೂ ಆಗದಿರುವದು, ಅಲ್ಲಿಯವರೆಗೆ ಹೋದವರು ಅಲ್ಲಿ ಆ ಬಗ್ಗೆ ಪೂರ್ಣ ವಿಚಾರಮಾಡಿ ನಿಜ ಸಂಗತಿಯನ್ನು ತಿಳಿದುಕೊಂಡುಬರದಿರುವದು ಆಶ್ಚರ್ಯವೇ!

ಅಲ್ಲಿಯೂ ಆ ಸಂಗತಿಯ ಬಗ್ಗೆ ನಿಶ್ಚಿತ ಕಲ್ಪನೆಯನ್ನು ಕೊಡುವುದು ಸಾಧ್ಯವಿರಲಿಕ್ಕಿಲ್ಲ. ಒಂದು ಸಂಗತಿಯನ್ನು ಮುಚ್ಚಿಡಬೇಕೆಂದು ನಿರ್ಧರಿಸಿದರೆ ಅದು ಹೇಗೆ ಸಾಧ್ಯವಿದೆಯೆಂಬ ಮಾತನ್ನು ಈ ಉದಾಹರಣೆಯಿಂದಲೇ ನೋಡಬಹುದು.

ಆ ವಿಮಾನ ಅಪಘಾತವು ಸಂಭವಿಸಿದ ಸ್ಥಳದಲ್ಲಿ ಯಾರು ಇದ್ದರೋ ಇದ್ದಿಲ್ಲವೋ ದೇವರೇ ಬಲ್ಲ. ಮತ್ತು ಅದು ನಡೆಯಿತೋ ಇಲ್ಲವೋ ಅದು ಕೂಡ ನಿಶ್ಚಿತವಾಗಿ ಹೇಳಲು ಸಾಧ್ಯವಿಲ್ಲ. ಒಂದು ವೇಳೆ ನಡೆದಿದ್ದರೆ ಅದರ ಸುದ್ದಿಯು, ವಿವರಗಳು ಇತರರಿಗೆ ತಿಳಿಯದ ಹಾಗೆ ವ್ಯವಸ್ಥೆ ಮಾಡಿದ್ದರೆ ಆ ಬಗ್ಗೆ ಕೂಡ ಆಶ್ಚರ್ಯಪಡಬೇಕಾಗುವ ಕಾರಣವಿಲ್ಲ.

ಹೀಗಿರುವಾಗ ಮಧುರಾದಲ್ಲಿಯ ಭಾಷಣದಲ್ಲಿ ಶ್ರೀ. ಮಧುರಾಮಲಿಂಗ ದೇವರವರು ಹಾಗೆ ಹೇಳಿದುದನ್ನು ನೋಡಿದರೆ ಸಾರ್ವಜನಿಕರಿಗೆ ಆನಂದವೂ ಅದೇ ಕಾಲಕ್ಕೇ ಅಸಹಾಯಕತೆಯೂ ಅನುಭವಕ್ಕೆ ಬರದೆ ಇರಲಾರವು.

ಇನ್ನೂ ಸುಭಾಷರು ಜೀವಂತ ಇದ್ದಾರೆ ಎಂದು ಅವರು ನಿಶ್ಚಿತವಾಗಿ ಹೇಳಿದ್ದಾರೆ. ಇದಕ್ಕೂ ಹೆಚ್ಚಿನ ವಿವರಗಳನ್ನು ಕೊಡಲು ಅವರು ಸಿದ್ಧರಿರಲಿಕ್ಕಿಲ್ಲ. ಹಾಗಿದ್ದರೆ ಅವರ ಮಾತಿನ ಮೇಲೆ ವಿಶ್ವಾಸವಿಟ್ಟು ಆ ವ್ಯಕ್ತಿಯು ಜೀವಂತ ಇರುವುದೆಂದು ಕೆಲವರು ಆನಂದವನ್ನು ಪಡೆಯುವ ಸಂಭವವಿದೆ.

ಉಳಿದವರು, ಈ ಇಬ್ಬಗೆಯ ಸುದ್ದಿಗಳನ್ನು ಕಂಡು ಸಂಶಯಪಡಲು ಕಾರಣವಾಗುತ್ತದೆ. ಎರಡು ಗುಂಪುಗಳು ಈ ರೀತಿ ಹೇಳುತ್ತ, ಏನೂ ನಿಶ್ಚಿತ ಜ್ಞಾನಕ್ಕೆ ಅವಕಾಶಕೊಡದೆ ಜನರನ್ನು ತ್ರಿಶಂಕು ಸ್ವರ್ಗದಲ್ಲಿ ತೂಗಿಸುತ್ತಿದ್ದಾರಲ್ಲ? ಎಂದು ಅವರು ಮಿಡುಕುವ ಸಂಭವವಿದೆ.

ಶ್ರೀ. ಮಧುರಾಮಲಿಂಗರವರು ಹೇಳಿದ ಮತ್ತೊಂದು ಮಾತನ್ನು ನೋಡಿದರೆ, ಸುಭಾಷರು ಮೂರನೆಯ ಯುದ್ಧದ ಸಿದ್ಧತೆಗೆ ಸಹಾಯಮಾಡುತ್ತಿರುವರೆಂದು ಅವರಲ್ಲಿ ಅರ್ಥವಾಗುತ್ತದೆ. ಅದರ ವಿಷಯದಲ್ಲಿಯೇ ವಿಚಾರಮಾಡಿದರೆ, ಅದೇನೂ ಅಸಂಭವನೀಯವಾಗಿ ತೋರುತ್ತಿಲ್ಲ. ಇಂದು ಹಿಂದೂಸ್ಥಾನವು ಸ್ವತಂತ್ರವಾಗಿದ್ದರೂ, ಅದರ ಸ್ವಾತಂತ್ರ್ಯವು ಬಹು ದಿವಸ ಕಡೆಯಬೇಕಾದರೆ, ರಶಿಯಾ ಮತ್ತು ಅಮೇರಿಕಗಳು ಮತ್ತೊಂದು ಯುದ್ಧವಾಡಿ ಸೋಲ್ಬೇಕಾಗಬೇಕೆಂದು ಯಾರಾದರೂ ಹೇಳಬಹುದು. ಆ ವಿಚಾರವನ್ನೇ ಸುಭಾಷರೂ ಇಟ್ಟುಕೊಂಡಿರುವರೆಂದು ನೇವರರ ಮಾತಿನ ಮೇಲಿಂದ ಹೇಳಬೇಕಾಗುತ್ತದೆ. ಆ ಯುದ್ಧವಾಗುವವರೆಗೆ ತಾವು ಗುಪ್ತವಾಗಿ ಇರಬೇಕೆಂದು ಸುಭಾಷರು ಇಟ್ಟುಕೊಂಡಿದ್ದರೋ ತಿಳಿಯದು. ಪ್ರಕಟವಾಗಿ ಕಾರ್ಯಮಾಡುತ್ತ ಹೋದರೆ ಅದಕ್ಕೆ ವಿಘ್ನಗಳು ಬರಬಹುದೆಂದು ಅವರು ಆ ಅಭಿಪ್ರಾಯವನ್ನಿಟ್ಟುಕೊಂಡಿರಬಹುದೇ?

ಏನೋ ಇದೆಲ್ಲ ಕಲ್ಪನಾ ಸಾಮ್ರಾಜ್ಯವಾಗಿ ತೋರುತ್ತಿದೆ. ಸುಭಾಷರು ಜೀವಂತ ಇರುವರೋ ಇಲ್ಲವೋ ಎಂಬ ಮಾತು ಯಾವುದೇ ಪ್ರಯತ್ನದಿಂದ ನಿಶ್ಚಿತವಾಗಿ ತಿಳಿಯುವಂತಿಲ್ಲ. ಯಾರು ಏನು ಹೇಳುತ್ತಾರೋ ಅದನ್ನು ಕೇಳುತ್ತ 'ಹಾಗೇ ಆಗಲಿ' ಎಂದು ಅನ್ನುತ್ತಾ ಇರುವುದು ಯೋಗ್ಯವಾಗಿ ತೋರುತ್ತದೆ. ಅವರು ಇದ್ದರೂ ಬೆಲೆಯಿದೆ. ಹೋಗಿದ್ದರೂ ಬೆಲೆಯಿದೆ ಎಂಬ ಮಾತು ಮಾತ್ರ ಸತ್ಯಸಿದ್ಧವಾದದ್ದು. 'ಜೈಹಿಂದ್.'

ಮಾರಾಟಕ್ಕಿದೆ.

ಮಡಿಕೇರಿ ಮಹದೇವ ಪೇಟೆಯಲ್ಲಿ ಉತ್ತಮ ಆವರಣವುಳ್ಳ ಅಂಗಡಿಗೂ ಮತ್ತು ವಾಸಕ್ಕೂ ಯೋಗ್ಯವಾದ ಮನೆಯು ಮಾರಾಟಕ್ಕಿದೆ. ವಾಸದ ಮನೆಯು ಮಹಡಿ ಮನೆಯಾಗಿದ್ದು ನೀರಿನ ವ್ಯವಸ್ಥೆ ಚೆನ್ನಾಗಿದೆ. ಅಂದಾಜು ಬೆಲೆ ರೂ. 7000/- ಖಾಯಿಶ್‍ದಾರರು ಹೆಚ್ಚಿನ ವಿವರಗಳಿಗೆ ಈ ಪತ್ರಿಗೆ ಪತ್ರವ್ಯವಹಾರ ಮಾಡಬಹುದು.

N.
C/o 'ಕೊಡಗು'
2–2 ಮಡಿಕೇರಿ.

ಮಾರಾಟಕ್ಕಿದೆ.

ಉತ್ತರ ಕೊಡಗು ತಾಲೋಕು ಶನಿವಾರಸಂತೆ ಹೋಬಳಿ ಕೊಡ್ಲಿಪೇಟೆ ಲಕಸಿ ಗ್ರಾಮದಲ್ಲಿ 5 ಎಕ್ರೆ ತರಿಗದ್ದೆ, ಇದಕ್ಕೆ ಒತ್ತಾಗಿ 2 ಎಕ್ರೆ ಕುಷ್ಕಿ, ಇದೇ ಗ್ರಾಮದ ಮಧ್ಯದಲ್ಲಿ 3¾ ಎಕ್ರೆ ಜಾಗದಲ್ಲಿ ವಾಸಕ್ಕೆ ಚೆನ್ನಾಗಿರುವ ಹಂಚಿನ ಮನೆ 30 ಫಸಲು ಬರುವ ಕಿತ್ತಳೆ ಗಿಡ. ಇವು ಮಾರಾಟಕ್ಕಿವೆ. ಪಬ್ಲಿಕ್ ರಸ್ತೆ ಮನೆಯ ಹತ್ತಿರಕ್ಕಾಗಿ ಇದೆ ಖಾಯಿಶ್‍ದಾರರು ಖುದ್ದು ನನ್ನಲ್ಲಿ ವಿಚಾರಿಸುವದು.

ಉದ್ದೂರು ಸೋಮಪ್ಪ,
ಮುನ್ಸಿಪಲ್ ಮೆಂಬರ್,
3–3 ಕೊಡ್ಲಿಪೇಟೆ.

ಬೇಕಾಗಿವೆ.

ಕೊಡಗಿನ ಜೇನು, ಏಲಕ್ಕಿ ಮತ್ತು ಇತರ ಸಾಮಾನುಗಳು ಬೇಕಾಗಿವೆ.

ಬರೆಯಿರಿ–
RAJAKALA MANDIR,
Post Box 1301,
BOMBAY 1

CRESCENT

FOR PROTECTION AND SERVICE.

It is best to represent and insure with

The CRESCENT Insurance Co., Ltd.

H: O: BOMBAY. *Established 1919.*

BRANCHES ALL OVER INDIA.

For particulars write to: THE BRANCH MANAGER.
22—B. MAHATHMA GANDHI ROAD.
BANGALORE CANT.

ಸುರಕ್ಷಿತವಾದ ಜೀವವಿಮೆ ಪಡೆಯಲು

ಕ್ರೆಸೆಂಟ್

ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.

ಭಾರತದ ಭಾಗ್ಯ ಭಂಡಾರ.

ಲೇ—ಶ್ರೀ ಬಿ ಎಸ್ ರಾಮಕೃಷ್ಣ, ಬಿ ಎಸ್‌ಸಿ (ಆನರ್ಸ್) ಬಿ ಟಿ

ಸಿಂಧೂ ಬಯಲು ಪ್ರದೇಶದ ನಾಗರೀಕತೆ

ಸಿಂಧೂ ನದಿಯ ಬಯಲು ಪ್ರದೇಶದ ನಾಗರೀಕತೆಯ ಅವಶೇಷಗಳಾಗಿ ಮಹೆಂಜೋದಾರೋ ಮತ್ತು ಹರಪ್ಪ ಎಂಬ ಸ್ಥಳಗಳಲ್ಲಿ ನಮಗೆ ಕಾಣಸಿಗುವ ವಸ್ತುಗಳು ಪ್ರಾಚೀನ ಭಾರತದ ವಿಷಯ ನಮಗೆ ಅನೇಕ ಸಂಗತಿಗಳನ್ನು ತಿಳಿಸುತ್ತವೆ. ಈ ಪ್ರದೇಶಗಳು ಪಶ್ಚಿಮ ಪಂಜಾಬದಲ್ಲಿವೆ ಈ ಸ್ಥಳಗಳಲ್ಲಿ ಅಗೆದು ತೆಗೆದ ವಸ್ತುಗಳಿಂದ ಪ್ರಾಚೀನ ಭಾರತದ ಚರಿತ್ರೆಯ ವಿಷಯದ ನಮ್ಮ ಜ್ಞಾನದಲ್ಲಿ ಕ್ರಾಂತಿಯುಂಟಾಗಿದೆ ಇವುಗಳ ಅನ್ವೇಷಣೆಯು ಕಲವು ಸಮಯ ನಡೆದು ಆ ಬಳಿಕ ದುರಾದೃಷ್ಟವಶಾತ್ ನಿಂತುಹೋಯಿತು ಇಲ್ಲಿ ಅಗೆದು ಮೇಲೆ ಹಾಕಿದ ಅವಶೇಷಗಳು ಕೂಡ ಗಾಳಿ ಮಳೆಗಳ ಬಿರುಸಿಗೆ ಸಿಕ್ಕಿ ಅವುಗಳ ಮೂಲ ಸ್ವಭಾವವನ್ನು ಕಳೆದುಕೊಂಡಿವೆ.

ಮಹೆಂಜೋದಾರೋ ಮತ್ತು ಹರಪ್ಪಗಳು ಬಹಳ ದೂರದಲ್ಲಿವೆ ಇವುಗಳ ಅನ್ವೇಷಣೆಯು ಕೇವಲ ಪ್ರಸಂಗವಶಾತ್ ನಡೆಯಿತು ಈ ಎರಡು ಪ್ರದೇಶಗಳ ಮಧ್ಯೆ ಪ್ರಾಚೀನ ಜನರ ಕಲಾ ಕೌಸಲ್ಯವನ್ನು ಪ್ರದರ್ಶಿಸುವ ಅನೇಕ ನಗರಗಳು ಭೂಗತವಾಗಿರಬಹುದೆಂದು ಹೇಳಲು ಅಡ್ಡಿಯಿಲ್ಲ ಪ್ರಾಯಶಃ ಭಾರತದಾದ್ಯಂತವೂ ಮುಖ್ಯವಾಗಿ ಉತ್ತರ ಹಿಂದೂಸ್ಥಾನದಲ್ಲಿ ಈ ಕೌಶಲ್ಯದ ನಾಗರೀಕತೆಯು ಹಬ್ಬಿದ್ದಿತು. ಇದಕ್ಕೆ ನಿದರ್ಶನವಾಗಿ ಕಾಥೇವಾಡದಲ್ಲೂ, ಪಂಜಾಬಿನ ಅಂಬಾಲದಲ್ಲಿಯೂ ಈ ವಿಧದ ಪ್ರಾಚೀನ ಅವಶೇಷಗಳು ದೃಗ್ಗೋಚರವಾಗಿವೆ. ಇವುಗಳು ಗಂಗಾ ನದಿಯ ಬಯಲು ಪ್ರದೇಶಕ್ಕೂ ಹಬ್ಬಿದ್ದುದರಿಂದ ಪ್ರಾಚೀನ ಭಾರತದ ನಾಗರೀಕತೆಯನ್ನು ಕೇವಲ ಸಿಂಧೂ ಬಯಲು ಪ್ರದೇಶದ ನಾಗರೀಕತೆಯೆಂದು ಕರೆಯುವದು ತಪ್ಪಾಗುವದು

ಆದರೆ ಸಿಂಧೂ ಬಯಲು ಪ್ರದೇಶದ ನಾಗರೀಕತೆ ಅತಿ ವಿಕಾಸಗೊಂಡದ್ದೆಂದು ಹೇಳಲು ಸಂಶಯವಿಲ್ಲ ಅದು ಅನೇಕ ಸಹಸ್ರ ವರ್ಷಗಳ ಪರಿಶ್ರಮದಿಂದ ಪರಿಪಕ್ವವಾದುದು ಈ ನಾಗರೀಕತೆಯು ಕೇವಲ ಏಕಮುಖೀಯವಾಗಿರದೆ ಬಹು ಸಂಗಡಗಳ ಮಿಲನದಿಂದ ಉಂಟಾಗಿದ್ದಿತು ಸಿಂಧೂ ಪ್ರದೇಶದ ಈ ನಾಗರೀಕತೆ ಭಾರತದಲ್ಲಿ ಮುಂಬಂದ ಅನೇಕ ಸಾಂಸ್ಕೃತಿಕ ಕ್ರಾಂತಿಗಳ ತಳಹದಿಯೂ ಆಯಿತು ಈಜಿಪ್ಟ್, ಪರ್ಶಿಯಾ, ಮೆಸೊಪೊಟೇಮಿಯಾ ದೇಶಗಳ ನಾಗರೀಕತೆಗೆ ಭಾರತದ ಈ ಪ್ರಾಚೀನ ನಾಗರೀಕತೆ ಕೇವಲ ಸಾಟಿಯಾದದು ಸಿಂಧೂ ಬಯಲು ಪ್ರದೇಶದ ಜನರು ಇತರ ಆದಿನ ನಾಗರೀಕ ದೇಶಗಳಿಗೆ ಹೋಗಿ ಅಲ್ಲಿ ಬಾಂಧವ್ಯವನ್ನು ಬೆಳಸಿದ್ದರು ಪಾಶ್ಚಾತ್ಯ ಪ್ರಪಂಚಕ್ಕೆ ಹತ್ತಿಯ ಬಟ್ಟೆಯ ಉಪಯೋಗ ತಿಳಿಯುವ ಬಹು ಕಾಲ ಮೊದಲೇ ಈ ಭಾಗದ ಜನರಿಗೆ ಅದರ ಉಪಯೋಗವು ಗೊತ್ತಿತ್ತು ಮಹೆಂಜೋದಾರದ ಭಗ್ನಾವಶೇಷ ಮನೆಗಳಿಗೂ ಸ್ನಾನ ಗೃಹಗಳಿಗೂ ಸಾಟಿಯಾದ ಪ್ರಾಚೀನ ಐತಿಹಾಸಿಕ ವೈಶಿಷ್ಟ್ಯ ಇನ್ನಾವ ದೇಶದಲ್ಲೂ ಕಂಡು ಬರಲಾರದು. ಬೇರೆ ದೇಶಗಳಲ್ಲಿ ಐಶ್ವರ್ಯವಂತರಿಗಾಗಿ ಸೌಧಗಳನ್ನೂ ದೊಡ್ಡ ದೇವಾಲಯಗಳನ್ನೂ ಅತಿ ಮನೋಹರವಾಗಿ ನಿರ್ಮಿಸುತ್ತಿದ್ದರು ಆದರೆ ಸಾಮಾನ್ಯರು ಹುಲ್ಲಿನ ಗೋಡೆಗಳಿಂದ ಮಾಡಿದ ಮನೆಗಳಲ್ಲಿ ವಾಸಿಸಬೇಕಾಗಿದ್ದಿತು ಮಹೆಂಜೋದಾರೋದ ಸ್ಥಿತಿಯು ಇದಕ್ಕೆ ಶುದ್ಧ ವಿರುದ್ಧವಾದದ್ದು ಇಲ್ಲಿನ ಮನೆಗಳು ಸಾರ್ವಜನಿಕರಿಗೆ ಬಡವ ಬಲ್ಲಿದನೆಂಬ ಭೇದವಿಲ್ಲದೆ ನಿರ್ಮಾಣವಾಗಿದ್ದವು ಇಲ್ಲಿ ಕಲಾ ವೈಶಿಷ್ಟ್ಯವನ್ನು ಸಾರುವ ಅನೇಕ ಕೆತ್ತನೆ ಕೆಲಸಗಳು, ಚಿತ್ರಗಳೂ, ಗೊಂಬೆಗಳೂ, ಆಕೃತಿಗಳೂ ಈ ಭಾಗದ ನಾಗರೀಕತೆಯ ಅಮರ ಚಿಹ್ನೆಗಳಾಗಿವೆ

ಮಹೆಂಜೋದಾರೋ ನಗರವು ಕುಶಲರಾದ ಅನೇಕ ವ್ಯಾಪಾರಿಗಳಿಗೆ ನೆಲೆವೀಡಾಗಿದ್ದಿತು ವಾಣಿಜ್ಯವು ಇಲ್ಲಿನ ಪ್ರಧಾನ ಪ್ರವೃತ್ತಿ ಇಲ್ಲಿ ಐಶ್ವರ್ಯವು ವಿಪುಲವಾಗಿದ್ದಿತು ನಗರ ನೈರ್ಮಲ್ಯವು ಉತ್ತಮ ಶ್ರೇಣಿಯ ಪೌರ ಸಭೆಯಿಂದ ಅತ್ಯುತ್ಕೃಷ್ಟವಾಗಿ ಪರಿಶೀಲಿಸಲ್ಪಡುತ್ತಿತ್ತು. ನಗರ ರಚನೆಯು ಶಿಲ್ಪ ಶಾಸ್ತ್ರಕ್ಕೆ ಸರಿಯಾಗಿದ್ದು ವೈಜ್ಞಾನಿಕವಾಗಿದ್ದಿತು

ಈ ಪ್ರಾಚೀನ ನಾಗರೀಕತೆಗೂ ಭಾರತದ ಆಧುನಿಕ ನಾಗರೀಕತೆಗೂ ಏನು ಸಾಮ್ಯವೂ ಹೇಳಲಸಾಧ್ಯ. ಇವುಗಳ ಮಧ್ಯೆ ಅನೇಕ ಘಟನೆಗಳು ನಡೆದು ಹೋಗಿವೆ. ಆದರೆ ಇವುಗಳಲ್ಲಿ ಸಂಪರ್ಕವಿಲ್ಲದೆ ಇಲ್ಲ ಇಂದಿನ ಆಧುನಿಕ ಭಾರತಕ್ಕೂ ಮಹೆಂಜೋದಾರೋದ ನಾಗರೀಕತೆಯು ಆರಂಭಿಸಿದ ಆರು ಅಥವಾ ಏಳು ಸಹಸ್ರ ವರುಷಗಳ ಹಿಂದಿನ ನಾಗರೀಕತೆಗೂ ಒಂದು ನಿಕಟ ಸಂಬಂಧವು ಇದ್ದೇ ಇದೆ ಆಧುನಿಕ ಪದ್ಧತಿಗಳು ಕಲ ಕೌಶಲ್ಯಗಳೂ ಅನೇಕ ರೀತಿ ವಿನ್ಯಾಸಗಳಲ್ಲಿ ಮಹೆಂಜೋದಾರೋದ ನಾಗರೀಕತೆಯನ್ನು ಅನುಸರಿಯುದೆ ಹೋಲುತ್ತದೆ

ಆಶ್ಚರ್ಯಕರ ವಿಷಯವೇನೆಂದರೆ ಇತಿಹಾಸದ ಈ ಪ್ರಭಾತದಲ್ಲಿಯೇ ಭಾರತೀಯ ನಾಗರೀಕತೆ ವೈಶಿಷ್ಟ್ಯವನ್ನು ತೋರ್ಪಡಿಸುವುದರ ಒದಲು ಪ್ರೌಢಾವಸ್ಥೆಯನ್ನು ಪ್ರದರ್ಶಿಸುತ್ತದೆ ಭಾರತವು ಆ ಪ್ರಾಚೀನ ಯುಗದಲ್ಲೇ ಅನೇಕ ಸೌಲಭ್ಯ ಸಲಕರಣೆಗಳನ್ನು ಕಲ್ಪಿಸಿಕೊಂಡು ಇತರ ರಾಷ್ಟ್ರಗಳಿಗೆ ಮಾರ್ಗದರ್ಶಕವಾಗಿದ್ದಿತು

[ಇನ್ನು ಮುಂದೆ ಇವರ ಲೇಖನಗಳನ್ನು "ದೇವಕೀ ಕಂದ" ಎಂಬ ಗುಪ್ತನಾಮದಿಂದ ಪ್ರಕಟಿಸಲಾಗುವುದು.]

ದಿ ಟ್ರಾಪಿಕಲ್
ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್.
ಮುಖ್ಯ ಕಚೇರಿ:— ಹೊಸ ಡೆಲ್ಲಿ.

ಅದ್ವಿತೀಯ ಜನನಾಯಕರಾಗಿದ್ದ ಮೋತಿಲಾಲ್ ನೆಹರೂ, ನೇತಾಜಿ ಇಂಥಾವರಿಂದ ಸ್ಥಾಪಿಸಲ್ಪಟ್ಟ ವಿಮಾ ಕಂಪನಿಗಳಲ್ಲೆಲ್ಲಾ ಅತ್ಯಂತ ಪ್ರಗತಿಶೀಲ ಎನಿದ ಒಂದೇ ರಾಷ್ಟ್ರೀಯ ವಿಮಾ ಕಂಪೆನಿ "ಟ್ರಾಪಿಕಲ್." ದಿನ ದಿನಕ್ಕೆ ಬೆಳೆದು ಹಿಂದೂಸ್ಥಾನದ ಮಹಾ ಕಂಪನಿಗಳಲ್ಲೊಂದಾಗಿದೆ

ಕೊಡಗಿನ ಎಲ್ಲಾ ಕಡೆಗಳಿಗೂ ವಿಶೇಷ ಏಜಂಟರುಗಳೂ ಏಜಂಟರೂ ಬೇಕಾಗಿದ್ದಾರೆ ವಿವರಗಳಿಗೆ ಈ ಪತ್ತೆಗೆ ಬರೆಯಿರಿ

THE TROPICAL INSURANCE Co. Ltd.

ಏಜನ್ಸಿಗಳ ಸುಪರಿಂಟೆಂಡೆಂಟರು
ಕೊಡಗು, ಮಡಿಕೇರಿ

ಎಂ. ಎ. ಬೆಳ್ಯಪ್ಪ,
ಬ್ರಾಂಚ್ ಸೆಕ್ರೆಟರಿ
ಹಂಪನ ಕಟ್ಟೆ, ಮಂಗಳೂರು

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್,
ಲಿಮಿಟೆಡ್, ಮಡಿಕೇರಿ.

ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ (1921ರಲ್ಲಿ ಸ್ಥಾಪಿತವಾಗಿದೆ

ಅಧಿಕೃತ ಶೇರು ಬಂಡವಾಳ	ರೂ	10,00 000
ವಸೂಲಾದ ಶೇರು ಮೊಬಲಗು	ರೂ	1,65,000
ಕ್ಷೇಮನಿಧಿ	ರೂ	50,000.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಅಡವಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ಕು ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು ಟ್ರಿನಿಟಿ ಮತ್ತು ವಾರ್ಡನ್ ಇನ್ಸೂರೆನ್ಸ್ ಕಂಪನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ರೂ 1000/- ಯೂ ಮೇಲ್ಪಟ್ಟ ಹಂಗಾಮಿ ಡಿಪಾಜಿಟ್ಟನ್ನು ತಾ 1-2-49 ರಿಂದ 15-2-49ರ ವರೆಗೆ ಶಾಲಿಯಾನ ಶೇಕಡ ರೂ 4/-ರ ಬಡ್ಡಿ ದರದಲ್ಲಿ ಮೂರು ತಿಂಗಳ ಅವಧಿಗೆ ಹೊಂದಿಕೊಳ್ಳಲಾಗುವುದು ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದು ಕೊಳ್ಳಬಹುದು

ಎಂ ಎಸ್ ಸೋಮಯ್ಯ,
ಗೌ ಕಾರ್ಯದರ್ಶಿ

ಕೆ. ಪಿ. ಅಪ್ಪಯ್ಯ, M L C.
ಪ್ರೆಸಿಡೆಂಟ್ ಮತ್ತು ಏಜೆಂಟ್

ಟೌನ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್,
ವೀರರಾಜಪೇಟೆ.

ಈ ಬ್ಯಾಂಕಿನ ವರ್ಷಾವಧಿ ವಹಿವಾಟು ರೂ. ೫,೦೦,೦೦೦ -
ವಹಿವಾಟಿನ ಭಂಡವಾಳ . ೧,೭೦,೦೦೦/-

ಎಲ್ಲಾ ತರಹದ ಬ್ಯಾಂಕಿಂಗ್ ವಹಿವಾಟುಗಳು ನಡೆಯುತ್ತಲಿವೆ ಚಿನ್ನದ ನಗಗಳ ಅಡವಿನ ಮೇಲೆ, ಸ್ಥಿರಸೊತ್ತುಗಳ ಆಧಾರದ ಮೇಲೆ, ಮತ್ತು ಬೆತ್ತ ವಸ್ಕೆರೆ ಸರಕುಗಳ ಮೇಲೆ ಸಾಲಗಳು ಕೊಡಲ್ಪಡುತ್ತವೆ ಚೆಕ್ಕು ಡ್ರಾಫ್ಟುಗಳು ಡಿಸ್ಕೌಂಟು ಮಾಡಲ್ಪಡುತ್ತವೆ ಪಾರ್ಸಲುಗಳ ಬಿಲ್ಲುಗಳನ್ನು ಕಂಪನಿಗಳಿಗೆ ರವಾನಿಸಲ್ಪಡುತ್ತವೆ

ಕಂಗ ಮಿಯೂಗಿ ಫೆಬ್ರವರಿಯಿಂದ ಜೂನ್ ಅಂತ್ಯದ ವರೆಗೆ ೫ ತಿಂಗಳ ಅವಧಿಗೆ ಡಿಪಾಜಿಟ್ಟುಗಳು ಶೇಕಡ ಸಾಲಿಯಾನ ೫ ರೂಪಾಯಿಗಳ ದರದ ಬಡ್ಡಿಯಲ್ಲಿ ೧೯೪೯ನೇ ಫೆಬ್ರವರಿ ಅಂತ್ಯದ ವರೆಗೆ ಸ್ವೀಕರಿಸಲ್ಪಡುತ್ತವೆ

ವೀರರಾಜಪೇಟೆ,
ತಾ. ೨೭-೧-೧೯೪೯. } 4-3

ಪ್ರೆಸಿಡೆಂಟ್,
ಟೌನ್ ಕೋ-ಆಪರೇಟಿವ್ ಬ್ಯಾಂಕ್.

Edited, Printed and Publisha by P. I Belliappa at 'Kodagu' Press, Mercara for 'Kodagu' Ltd

**ವೀರಾಜಪೇಟೆಗೆ 'ಕೊಡಗು' ಏಜೆಂಟರು
ಶ್ರೀ ಟಿ. ಎನ್. ಗೋವಿಂದರಾಜುರವರು.**

Reg. No. M. 1500.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 4-8-0

ಸಂಪುಟ ೨೭ | ತಾರೀಕು ೧೮-೨-೧೯೪೯ನೇ ಶುಕ್ರವಾರ | ಸಂಚಿಕೆ ೩೭

ಗೋಡ್ಸೆ-ಆಪ್ಟೆಗೆ ಫಾಶಿ ಶಿಕ್ಷೆ.

ಐವರಿಗೆ ಆಜೀವಶಿಕ್ಷೆ-ಸಾವರ್ಕರರ ಬಿಡುಗಡೆ.

ಮಹಾತ್ಮ ಗಾಂಧೀಜಿಯವರ ಕೊಲೆ ಪಾತಕನಾದ ನಾಥೂರಾಂ ಗೋಡ್ಸೆಗೆ ಮರಣದಂಡನೆಯನ್ನು ಸ್ಪೆಷಲ್ ಜಡ್ಜ್ ಶ್ರೀ ಆತ್ಮಚರಣ್‌ರವರು ಕಳೆದ ಗುರುವಾರ ವಿಧಿಸಿದರು. ಕೊಲೆಗೆ ಪ್ರೇರಕನೆಂದು ಆಪ್ಟೆಗೂ ಮರಣದಂಡನೆ ವಿಧಿಸಿದ್ದಾರೆ.

ಕರಕರೆ, ಮದನಲಾಲ್, ಶಂಕರ್ ಕಿಷ್ಟಯ್ಯ, ಗೋಪಾಲಗೋಡ್ಸೆ ಮತ್ತು ಪರಚುರೆ ಇವರೆಲ್ಲರಿಗೂ ಆಜೀವ ಶಿಕ್ಷೆ ವಿಧಿಸಲಾಗಿದೆ. ಶ್ರೀ ವಿ. ಡಿ. ಸಾವರ್ಕರರು ತಪ್ಪಿತಸ್ಥರಲ್ಲವೆಂದು ಅವರನ್ನು ಖುಲಾಸೆ ಮಾಡಿದೆ. ಎಪ್ರೂವರ್ ಬಾಡ್ಗೆಗೆ ಕ್ಷಮೆ ತೋರಿ ಆತನನ್ನೂ ಖುಲಾಸೆ ಮಾಡಿದೆ.

ಸ್ಪೆಷಲ್ ಜಡ್ಜರಾದ ಶ್ರೀ ಆತ್ಮಚರಣ್‌ರವರು ೨೦೦ ಪುಟಗಳ ಗ್ರಂಥ ತೀರ್ಪನ್ನಿತ್ತು ಮಹಾತ್ಮ ಗಾಂಧಿಯವರ ಕೊಲೆಗಾಗಿ ಪಿತೂರಿ ನಡೆದಿತ್ತೆಂಬುದು [illegible] ೧೯೪೮ನೇ ಜನವರಿಯ ಆರಂಭದಲ್ಲಿ ಪಿತೂರಿಯಿತ್ತೆಂಬುದು ಸ್ಪಷ್ಟಪಟ್ಟಿದೆಯೆಂದೂ ಸ್ಪೆಷಲ್ ಜಡ್ಜರು ತಮ್ಮ ತೀರ್ಪಿನಲ್ಲಿ ತಿಳಿಸಿದ್ದಾರೆ.

ಪೊಲೀಸರು ತಮ್ಮ ಕೆಲಸ ಸರಿಯಾಗಿ ಮಾಡಲಿಲ್ಲ.

ಪೊಲೀಸರ ವಿಷಯವಾಗಿ ಜಡ್ಜರು ಟೀಕಿಸುತ್ತಾ 'ಮದನ್‌ಲಾಲನನ್ನು ೧೯೪೮ನೇ ಜನವರಿ ೨೦ರಲ್ಲಿ ದಸ್ತಗಿರಿ ಮಾಡಿದ ಮೇಲೆ ಆತನು ಕೊಟ್ಟ ಹೇಳಿಕೆಯಿಂದಲೂ, ಪ್ರೊ|| ಜೆ. ಸಿ. ಜೈನ್‌ರವರು ಬೊಂಬಾಯಿ ಗೃಹ ಮಂತ್ರಿ ಶ್ರೀ. ಮೊರಾರ್ಜಿ ದೇಸಾಯಿಯವರಿಗಿತ್ತ ಸಮಾಚಾರದಿಂದಲೂ ಏನೊಂದೂ ಉಪಯೋಗ ಪಡೆಯದಿರುವುದನ್ನು ನೋಡಿದರೆ ಪೊಲೀಸರು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಪರಾಭವ ಹೊಂದಿದ್ದಾರೆಂದು ಸ್ಪಷ್ಟಪಡುವದು. ಆ ಸಮಯದಲ್ಲಿಯೇ ಪೊಲೀಸರು ಸರಿಯಾಗಿ ಗಮನವಿಟ್ಟು ತನಿಖೆ ನಡೆಸಿದ್ದಲ್ಲಿ ಬಹುಶಃ ಈ ದುರ್ಘಟನೆಯನ್ನು ತಪ್ಪಿಸಬಹುದಾಗಿತ್ತು' ಎಂದು ಜಡ್ಜರು ತಿಳಿಸಿದ್ದಾರೆ.

ಪಿತೂರಿಯು ನಡೆದಿತ್ತೆಂಬುದು ಸ್ಪಷ್ಟ

ಮೊಕದ್ದಮೆಯ ವಿದ್ಯಮಾನಗಳನ್ನು ಕುರಿತು ಜಡ್ಜರು ಪ್ರಸ್ತಾಪಿಸಿ ತಾ. ಈ ರೀತಿ ತಿಳಿಸಿದರು:—

ಮಹಾತ್ಮ ಗಾಂಧಿಯವರನ್ನು ಕೊಲೆ ಮಾಡಲು ಪಿತೂರಿಯೊಂದು ನಡೆದಿತ್ತು. ಈ ಪಿತೂರಿಯಲ್ಲಿ ಕೊನೆಯ ಶಿಕ್ಷೆ ನಾಥೂರಾಂ ಗೋಡ್ಸೆ, ನಾರಾಯಣ ಆಪ್ಟೆ, ವಿಷ್ಣು ಕರಕರೆ, ಮದನ್‌ಲಾಲ್ ಪಹ್ವಾ, ಶಂಕರ ಕಿಷ್ಟಯ್ಯ, ಗೋಪಾಲಗೋಡ್ಸೆ ಮತ್ತು ದತ್ತಾತ್ರೇಯ ಪರಚುರೆ ಇವರುಗಳು ಸೇರಿದ್ದರೆಂದು ಸ್ಪಷ್ಟ ಪಡು

ಜನವರಿ ೨೦ರ ಅನಂತರವೂ ಪಿತೂರಿಯಿತ್ತು.

'ಜನವರಿ ೨೦ರಲ್ಲಿ ಡೆಲ್ಲಿಯಲ್ಲಿ ಪ್ರಾರ್ಥನಾ ಸಭೆಯಲ್ಲಿ ನಡೆದ ಬಾಂಬು ಆಸ್ಫೋಟನೆಯನ್ನು ನೋಡಿದರೆ—ಪಿತೂರಿಯೇನಾದರೂ ಇದ್ದಲ್ಲಿ ಅದು ಅಲ್ಲಿಗೇ ಮುಕ್ತಾಯವಾಗಿದೆಯೆಂದೂ ಜನವರಿ ೩೦ರಲ್ಲಿ ನಥೂರಾಂ ಗೋಡ್ಸೆ ಮಹಾತ್ಮ ಗಾಂಧಿಯವರನ್ನು ಕೊಂದ ಕೃತ್ಯ ಆತನೊಬ್ಬನ ವ್ಯಕ್ತಿಗತ ಕೃತ್ಯವೆಂದೂ ಮತ್ತಾರಿಗೂ ಯಾವ ರೀತಿಯಲ್ಲಿಯೂ ಅದರಲ್ಲಿ ಸಂಬಂಧವಿಲ್ಲವೆಂದೂ ಶ್ರೀ. ಪಿ. ಆರ್. ದಾಸ್‌ರವರು ವಾದಿಸಿದ್ದಾರೆ. ಪಿತೂರಿಯೆಂದರೆ ಇಬ್ಬರು ಅಥವಾ ಅದಕ್ಕಿಂತ ಹೆಚ್ಚು ಸಂಖ್ಯೆಯಲ್ಲಿ ಜನರು ಒಟ್ಟಿಗೇ ಸೇರಿ ಅಕೃತ್ಯವೊಂದನ್ನು ಎಸಗುವುದರಲ್ಲಿ ಪರಸ್ಪರ ಒಪ್ಪಂದ ಮಾಡಿಕೊಳ್ಳುವದು ಎಂಬ ವಿವರಣೆಯಿದೆ. ಜನವರಿ ೨೦ರಲ್ಲಿ ಪ್ರಯತ್ನ ವಿಫಲವಾದ ಮೇಲೆ ಅಪರಾಧಿಗಳು ಮಹಾತ್ಮ ಗಾಂಧಿಯವರನ್ನು ಕೊಲೆ ಮಾಡುವ ಯತ್ನವನ್ನು ಬಿಟ್ಟಿರೆಂಬುದಕ್ಕೆ ಯಾವ ಆಧಾರವೂ ಇಲ್ಲ.

ಗೋಡ್ಸೆಯೂ ನಾರಾಯಣ ಆಪ್ಟೆಯೂ ಬೊಂಬಾಯಿನಲ್ಲಿ [illegible] ಸ್ಥಳಗಳಲ್ಲಿಯೇ ಇದ್ದರು. ನಾಥೂರಾಂ ಗೋಡ್ಸೆ, ಆಪ್ಟೆ, ಕರಕರೆ ಮತ್ತು ಗೋಪಾಲಗೋಡ್ಸೆ ಇವರುಗಳು ಥಾನಾದಲ್ಲಿ ಶ್ರೀ. ಜಿ. ಎಂ. ಜೋಷಿಯವರ ಮನೆಯಲ್ಲಿ ಒಟ್ಟಿಗೇ ಸೇರಿದ್ದರು. ಒಂದು ರಿವಾಲ್ವರ್ ಬೇಕೆಂದು ನಾಥೂರಾಂ ಗೋಡ್ಸೆಯೂ ಆಪ್ಟೆಯೂ ದಾದಾ ಮಹಾರಾಜರನ್ನೂ ದೀಕ್ಷಿತ್ ಮಹಾರಾಜರನ್ನೂ ಕೇಳಿದರು. ನಾಥೂರಾಂ ಮತ್ತು ಆಪ್ಟೆ ಗುಪ್ತನಾಮಧೇಯಗಳಿಂದಲೇ ಬೊಂಬಾಯಿಯಿಂದ ಡೆಲ್ಲಿಗೆ ವಿಮಾನದಲ್ಲಿ ಹೋದರು. ಅವರು ಅಲ್ಲಿಂದ ಗ್ವಾಲಿಯರಿಗೆ ಹೋಗಿ, ಪರಚುರೆಯ ಮೂಲಕ ಒಂದು ಪಿಸ್ತೂಲನ್ನು ಪಡೆದರು. ನಾಥೂರಾಂ ಗೋಡ್ಸೆಯು ಡೆಲ್ಲಿ ಮೇಯಿನ್ ರೈಲ್ವೆ ಸ್ಟೇಷನ್ನಿನ ರಿಟೈರಿಂಗ್ ರೂಮಿನಲ್ಲಿ ಇಳಿದುಕೊಂಡಿದ್ದನು. ಆಪ್ಟೆಯೂ ವಿಷ್ಣು ಕರಕರೆಯೂ ಅವನೊಡನೆ ಇದ್ದರು. ಅನಂತರ ನಾಥೂರಾಮನು ಬಿರ್ಲಾ ಭವನಕ್ಕೆ ಹೋಗಿ, ತಾನು ಗ್ವಾಲಿಯರಿನಿಂದ ತಂದಿದ್ದ ಪಿಸ್ತೂಲಿನಿಂದ ಮಹಾತ್ಮ ಗಾಂಧಿಯವರನ್ನು ಕೊಂದನು. ಜನವರಿ ೨೦ರಲ್ಲಿ ತಮ್ಮ ಪ್ರಯತ್ನ ವಿಫಲವಾದುದರಿಂದ ಇವರು ಅದೇ ಪಿತೂರಿಯನ್ನೇ ಮುಂದುವರಿಸಿಕೊಂಡು ಬಂದು ಮಹಾತ್ಮ ಗಾಂಧಿಯವರನ್ನು ಕೊಂದರು ಎಂದು ಸ್ಪಷ್ಟ ಪಡುವುದು.'

ಪಿತೂರಿ ನಡೆದದ್ದು ಹೇಗೆ ಮತ್ತು ಯಾವಾಗ.

'ಮೊದಲು ಪಿತೂರಿ ಹೇಗೆ ಆರಂಭವಾಯಿತು, ಎಂಬುದು ಪ್ರಾಸಿಕ್ಯೂಷನ್ ಪರ ಸಾಕ್ಷ್ಯಗಳಿಂದ ಸ್ಪಷ್ಟವಾಗಿ ಗೋಚರವಾಗುವುದಿಲ್ಲ. ಆದರೆ ೧೯೪೮ನೇ ಜನವರಿ ೯ರ ಹೊತ್ತಿಗೆ ಪಿತೂರಿಯಿದ್ದಿತೆಂದು ಗೊತ್ತಾಗುವದು. ಆ ದಿನ ನಾರಾಯಣ ಆಪ್ಟೆಯು ದಿಗಂಬರ ಬಾಡ್ಗೆಯ ಮನೆಯಲ್ಲಿ ಸಾಮಾನನ್ನು ಪರೀಕ್ಷಿಸಲು ವಿಷ್ಣು ಕರಕರೆ ಮತ್ತು ಮದನ್ ಲಾಲ್ ಪಹ್ವಾರನ್ನು ಇನ್ನಿಬ್ಬರೊಡನೆ ಬಾಡ್ಗೆಯ ಮನೆಗೆ [illegible]. ನಾರಾಯಣ ಆಪ್ಟೆ, ವಿಷ್ಣು ಕರಕರೆ ಮತ್ತು ಮದನ್‌ಲಾಲ್ ಪಹ್ವಾ ಇವರುಗಳು ಅಷ್ಟು ಹೊತ್ತಿಗೆ ಪಿತೂರಿಯಲ್ಲಿ ಸೇರಿದ್ದರೆಂದು ಸ್ಪಷ್ಟವಾಗುವದು. ನಾಥೂರಾಂ ಗೋಡ್ಸೆಯು ಜನವರಿ ೧೦ರಲ್ಲಿ ಅವನ ಹತ್ತಿರ ಹೋಗಿದ್ದನು. ಆ ದಿನ ನಾಥೂರಾಮನೂ ಆಪ್ಟೆಯೂ ದಿಗಂಬರ ಬಾಡ್ಗೆಯನ್ನು ಎರಡು ಗನ್‌ಕಾಟನ್ ಸ್ಲಾಬ್‌ಗಳನ್ನೂ ಐದು ಹ್ಯಾಂಡ್ ಬಾಂಬುಗಳನ್ನು ಒದಗಿಸಬೇಕೆಂದು ಕೇಳಿದರು. ಅಷ್ಟು ಹೊತ್ತಿಗೆ ನಾಥೂರಾಂ ಗೋಡ್ಸೆಯು ಪಿತೂರಿಯಲ್ಲಿ ಇದ್ದಿರಬೇಕು. ಬಾಡ್ಗೆಯು ಜನವರಿ ೧೪ರಲ್ಲಿ ಪಿತೂರಿಗೆ ಸೇರಿದನು. ಆ ದಿನ ಆತನು ನಾಥೂರಾಂ ಗೋಡ್ಸೆ ಮತ್ತು ಆಪ್ಟೆಯೊಡನೆ ಡೆಲ್ಲಿಗೆ ಹೊರಡಲೊಪ್ಪಿದ್ದಾನೆ. ಗೋಪಾಲಗೋಡ್ಸೆಯು ಪಿತೂರಿಯಲ್ಲಿ ಜನವರಿ ೧೪ರಲ್ಲಿ ಸೇರಿರಬೇಕು. ಆ ದಿನ ಆತ ತನಗೆ ೧೫ ದಿವಸಗಳ ಕ್ಯಾಜುವಲ್ ರಜ ಬೇಕೆಂದು ಅರ್ಜಿ ಹಾಕಿದ್ದನು. ಶಂಕರ್ ಕಿಷ್ಟಯ್ಯನು ಜನವರಿ ೧೫ರಲ್ಲಿ ಪಿತೂರಿಗೆ ಸೇರಿರಬೇಕು. ಬಿರ್ಲಾ ಭವನಕ್ಕೆ ತಾವು ಹೋಗುವುದಾಗಿ [illegible] ಕಿಷ್ಟಯ್ಯನಿಗೆ ಆ ದಿನ ತಾನೇ ಬಾಡ್ಗೆ ತಿಳಿಸಿದ್ದನು. ನಾಥೂರಾಂ ಗೋಡ್ಸೆಗೂ ಆಪ್ಟೆಗೂ ಪಿಸ್ತೂಲನ್ನೊದಗಿಸಲು ಪರಚುರೆ ಜನವರಿ ೨೭ರಲ್ಲಿ ಒಪ್ಪಿದ್ದರಿಂದ ಆಗಲೇ ಆತ ಪಿತೂರಿಯಲ್ಲಿ ಸೇರಿದವನೆಂದು ಹೇಳಬಹುದು.'

ನಾಥೂರಾಂ ಗೋಡ್ಸೆ, ಆಪ್ಟೆ, ಕರಕರೆ, ಮದನ್‌ಲಾಲ್, ಶಂಕರ್, ಗೋಪಾಲ ಗೋಡ್ಸೆ ಮತ್ತು ಬಾಡ್ಗೆ ಇವರುಗಳು ಜನವರಿ ೨೦ರಲ್ಲಿ ಅಪರಾಧಿಗಳ ಬಳಿ ಡೆಲ್ಲಿಯಲ್ಲಿ ಈ ಆಸ್ಫೋಟಕ ವಸ್ತುಗಳಿದ್ದವು. ಆದ್ದರಿಂದ ಇವರು 'ಎಕ್ಸ್‌ಪ್ಲೋಸಿವ್ಸ್ ಸಬ್‌ಸ್ಟೆನ್ಸ್ ಆಕ್ಟ್' ಪ್ರಕಾರ ತಪ್ಪಿತಸ್ಥರಾಗುತ್ತಾರೆ.

ಗೋಪಾಲಗೋಡ್ಸೆಯು ಪಾತ್ರ.

'ಬಿರ್ಲಾ ಭವನದಲ್ಲಿ ಜನವರಿ ೨೦ರಲ್ಲಿ ಆಸ್ಫೋಟನೆಯಾದ ಮೇಲೆ ಬಾಡ್ಗೆ ಮತ್ತು ಶಂಕರ ಕಿಷ್ಟಯ್ಯ ಇವರಿಬ್ಬರೂ ಪಿತೂರಿಯಿಂದ ಪೂರ್ಣವಾಗಿ ಪ್ರತ್ಯೇಕವಾದರೆಂದು ಸುಲಭವಾಗಿ ತೀರ್ಮಾನಿಸಬಹುದು. ಆದರೆ ಗೋಪಾಲ ಗೋಡ್ಸೆಯು ಬಿರ್ಲಾ ಭವನದ ಘಟನೆಯ ನಂತರ ಪಿತೂರಿಯಿಂದ ದೂರವಾದನೆಂಬುದಕ್ಕೆ ಏನೂ ಆಧಾರವಿಲ್ಲ. ಅದಕ್ಕೆ ಬದಲಾಗಿ ಗೋಪಾಲ ಗೋಡ್ಸೆಯು ಜನವರಿ ೨೫ರಲ್ಲಿ ಬೊಂಬಾಯಿಯಲ್ಲಿ ನಾಥೂರಾಂ ಗೋಡ್ಸೆ ಮತ್ತು ಆಪ್ಟೆಯನ್ನು ಕಂಡಿದ್ದನೆಂದು ಗೊತ್ತಾಗಿದೆ. ಜನವರಿ ೨೭ರಲ್ಲಿ ಪರಚುರೆ ಪಿತೂರಿಗೆ ಸೇರಿದನು. ಪರಚುರೆಯು ಬ್ರಿಟಿಷ್ ಪ್ರಜೆಯಾಗಿದ್ದು, ಸಂಸ್ಥಾನದಲ್ಲಿ ಬಂದು ನೆಲಸಿದ್ದನೆ. ಆತ ಗ್ವಾಲಿಯರ ಪ್ರಜೆಯೆಂದು ವಾದಿಸಿದರೂ ಕೂಡ, ಅಕೃತ್ಯ ನಡೆದುದು ಡೆಲ್ಲಿಯಲ್ಲಾದುದರಿಂದ ಡೆಲ್ಲಿಯಲ್ಲಿ ಆದ ವಿಚಾರಣೆಗೆ ಒಳಪಡಲು ಬಾಧ್ಯ.

'ಮಹಾತ್ಮ ಗಾಂಧಿಯವರನ್ನು ನಾಥೂರಾಂ ಗೋಡ್ಸೆಯು ಕೊಲೆ ಮಾಡಿದುದು ಉದ್ದೇಶಪೂರ್ವಕವಾದದು ಮತ್ತು ಹಂಚಿಕೆ ಹಾಕಿಕೊಂಡು ನಡಸಿದುದು. ಆತನ ದುಷ್ಕೃತ್ಯಕ್ಕೆ ಬೇರಾವ ವಿಶೇಷ ಪರಿಸ್ಥಿತಿಯೂ ಇಲ್ಲ. ಈ ಸಂದರ್ಭದಲ್ಲಿ ಆತನಿಗೆ ೩೦೨ನೇ ಸೆಕ್ಷನ್ ಪ್ರಕಾರ ಮರಣ ದಂಡನೆಯನ್ನೇ ವಿಧಿಸಬೇಕಾಗಿದೆ.

ಆಪ್ಟೆಯ ಮುಖ್ಯ ಪಾತ್ರ.

'ನಾರಾಯಣ ಆಪ್ಟೆಯು ಮಹಾತ್ಮ ಗಾಂಧಿಯವರ ಕೊಲೆಗೆ ಪ್ರೇರಕನಾಗಿದ್ದುದು ಕಡಿಮೆಯ ಅಕೃತ್ಯವೇನೂ ಅಲ್ಲ. ಈ ಅಕೃತ್ಯಕ್ಕೆ ಸಂಬಂಧಿಸಿದ ಪ್ರತಿಯೊಂದು ಹಂತದಲ್ಲಿಯೂ ಆಪ್ಟೆಯು ಕೈವಾಡ ತೋರಿದ್ದನು. ಕೊನೆಯ ಸಂದರ್ಭದಲ್ಲಿ ಅಂದರೆ ಕೃತ್ಯ ನಡೆಯುವ ಸಮಯದಲ್ಲಿ ಆತನು ಆ ಸ್ಥಳದಿಂದ ಓಡಿಹೋಗಿರಬೇಕು, ಇಲ್ಲವೇ ಅಕೃತ್ಯದ ಸ್ಥಳದಿಂದ ದೂರವಾಗಿರಬೇಕು.

'ಆಪ್ಟೆಯ ಬುದ್ಧಿವಂತಿಕೆಯ ಸಹಾಯವಿಲ್ಲದಿದ್ದಲ್ಲಿ, ಮಹಾತ್ಮ ಗಾಂಧಿಯವರ ಕೊಲೆ ಬಹುಶಃ ನಡೆಯುತ್ತಿರಲಿಲ್ಲವೆಂದು ಹೇಳಬಹುದು. ಆತನಿಗೆ ಮರಣದಂಡನೆಯನ್ನೇ ವಿಧಿಸಬೇಕಾಗಿದೆ.

'ಕರಕರೆ, ಗೋಪಾಲ ಗೋಡ್ಸೆ ಮತ್ತು ಪರಚುರೆ ಇವರುಗಳಿಗೆ ೧೨೦ನೇ ಸೆಕ್ಷನ (೩೦೨ನೇ ಸೆಕ್ಷನಿನೊಡನೆ) ಪ್ರಕಾರ ಜೀವಾವಧಿ ಶಿಕ್ಷೆ ವಿಧಿಸಿದಲ್ಲಿ ನ್ಯಾಯ ದೊರಕಿಸಿದಂತಾಗುವುದು. ಆಗಿನ ಸಂದರ್ಭದಲ್ಲಿ ಅದು ಅತ್ಯಂತ ಕನಿಷ್ಠಶಿಕ್ಷೆಯೆಂದೆನ್ನಬಹುದು.

'ಮದನ್‌ಲಾಲ್ ಮತ್ತು ಶಂಕರ ಕಿಷ್ಟಯ್ಯ ಇವರುಗಳಿಗೂ ೧೨೦ ಬಿ. (೩೦೨ನೇ ಸೆಕ್ಷನಿನೊಡನೆ) ಪ್ರಕಾರ ಜೀವಾವಧಿ ಶಿಕ್ಷೆ ವಿಧಿಸುವುದು ನ್ಯಾಯವಾಗಿದೆ.

'ಶಂಕರನು ಬಾಡ್ಗೆಯ ಸೇವಕ. ಆತ ಏನು ಮಾಡಿದರೂ [illegible] ಯಜಮಾನನ ಆಜ್ಞಾಪಾಲನೆಗಾಗಿಯೇ ಮಾಡಿದನು. ಬಾಡ್ಗೆಯ [illegible] ಕಿಷ್ಟಯ್ಯನನ್ನು [illegible] ಪಿತೂರಿಗೆ ಸೇರಲು ಆಹ್ವಾನಿಸಲಾಯಿತು. ಆದ್ದರಿಂದ ಶಂಕರಕಿಷ್ಟಯ್ಯನಿಗೆ ಸ್ವಲ್ಪ ರಿಯಾಯಿತಿ ತೋರಿಸಬೇಕಾದುದು ಯುಕ್ತವಾಗಿದೆ. ಆತನಿಗೆ ವಿಧಿಸುವ ಜೀವಾವಧಿ ಶಿಕ್ಷೆಯನ್ನು ೭ ವರ್ಷಗಳ ಕಠಿ

ಚಿಕ್ಕ ಕಥೆ.

ಗೃಹಸ್ಥನ ಜೀವನ.

ಲೇ:—"ಅಪ್ಪಣಿ" ಮಡಿಕೇರಿ.

ರಾಮು ಕಿರನಳ್ಳಿಯೂರಿನ ರಾಘವನ ಒಬ್ಬನೇ ಮಗ. ರಾಘವ ಬಡವನಾಗಿದ್ದರೂ ಮಗನನ್ನು ಸ್ಕೂಲ್ ಫೈನಲ್ ಪಾಸುಮಾಡಿಸಿದ್ದನು. ಹನಿಲವು ರಾಮುವಿನ ನೆರೆ ಜಿಲ್ಲೆ ಶಿವಸಾಗರವೆಂಬುದೊಂದು ಅಲ್ಲಿಯ ಪಟ್ಟಣ. ರಾಮುವಿಗೆ ಅಲ್ಲಿ ಒಂದು ಸರಕಾರಿ ಉದ್ಯೋಗವು ದೊರೆಯಿತು. ರಾಮುವು ಒಳ್ಳೆಯ ಗುಣಶೀಲ. ಊರಿನ ಜನರೆಲ್ಲರೂ ಆತನನ್ನು ಪ್ರೀತಿಸುತ್ತಿದ್ದರು. ಬಾಡಿಗೆಗೆ ಮನೆ ಸಿಕ್ಕುವುದು ಕಷ್ಟವಾಗಿದ್ದುದರಿಂದ ರಾಮು ಹೋಟೇಲಿನಲ್ಲಿಯೇ ಊಟದ ಮತ್ತು ಮಲಗುವ ವ್ಯವಸ್ಥೆ ಮಾಡಿಕೊಳ್ಳಬೇಕಾಯಿತು. ಒಂದು ದಿನ ಶಿವಸಾಗರದ ಚಂದು ಎಂಬ ಸಾಧಾರಣ ಕೊಬ್ಬ ಧನಿಯ ಭೇಟಿಯಾಯಿತು. ರಾಮುವಿನ ಸರಳತೆಯನ್ನು ನೋಡಿ ತನ್ನ ಮನೆಗೆ ಹತ್ತಿರದಲ್ಲಿದ್ದ ಇನ್ನೊಂದು ಮನೆಯನ್ನು ಆತನಿಗೆ ಬಾಡಿಗೆಗೆ ಕೊಟ್ಟರು. ಚಂದುವಿಗೆ ಮೂರು ಹೆಣ್ಣು ಮಕ್ಕಳು ಮಾತ್ರ. ಇಬ್ಬರನ್ನು ಮೊದಲೇ ಮದುವೆ ಮಾಡಿದ್ದರು. ಸೀತೆ ಆತನ ಕಿರಿಯ ಮಗಳು. ಇಬ್ಬರು ಅಕ್ಕಂದಿಯರಿಗಿಂತಲೂ ವಿದ್ಯಾವಂತೆ ಮತ್ತು ರೂಪವಂತೆ. ರೂಪಿನೊಂದಿಗೆ ಸುಗುಣಗಳೂ ಸೇರಿದ್ದವು. ವಿದ್ಯಾವಂತಳಾಗಿದ್ದರೂ ಇತರರಂತೆ ಚಾಕರಿಗೆ ಹೋಗಲು ಇಷ್ಟಪಡಲಿಲ್ಲ. ತಂದೆ ತಾಯಿಯರು ಅನುಕೂಲಸ್ಥರಾಗಿದ್ದರೂ ಗೃಹಕೃತ್ಯಗಳನ್ನು ಆಕೆಯೇ ನೋಡಿಕೊಳ್ಳುತ್ತಿದ್ದಳು. ಬೆಳಗ್ಗೆ ೫ ಗಂಟೆಗೆ ತಪ್ಪದೆ ಏಳುವಳು. ಎಲ್ಲರೂ ಮಲಗಿದ ನಂತರ ಎಲ್ಲಾ ಕೆಲಸಗಳನ್ನು ತೀರಿಸಿ ಮಲಗುವಳು. ಪ್ರತಿಯೊಂದು ಕೆಲಸದಲ್ಲಿಯೂ ಶಿಸ್ತು ಇಟ್ಟುಕೊಂಡಿದ್ದಳು. ತಿಂಡಿ ಪದಾರ್ಥಗಳನ್ನು ಮಾಡುವುದರಲ್ಲಿ ನಿಪುಣಳು. ಏನಾದರು ತಿಂಡಿ ಮಾಡಿದಳೆಂದರೆ ಅದರ ಒಂದು ಭಾಗ ರಾಮುವಿಗೂ ತಲಪುತ್ತಿತ್ತು. ಸೀತಾಳ ಗುಣವನ್ನು ನೋಡಿ ರಾಮುವಿಗೆ ಹಿಡಿಸಲಾರದ ಸಂತೋಷ. 'ಆಕೆ ಬಡ ಕುಟುಂಬದಲ್ಲಿ ಜನಿಸಿದ್ದರೆ ಆಕೆಯನ್ನ ಮದುವೆಯಾಗುವ ಸಂಯೋಗ ದೊರಕಬಹುದಿತ್ತು. ಆಕೆಯ ಇಬ್ಬರು ಅಕ್ಕಂದಿರನ್ನು ಒಳ್ಳೆಯ ಸ್ಥಳಕ್ಕೆ ಮದುವೆ ಮಾಡಿಕೊಟ್ಟಿರುವರು. ನಾನು ಆಕೆಯನ್ನು ಪಡೆಯುವುದೆಂತು?' ಎಂದು ಮೊದಲಾಗಿ ರಾಮುವು ತನ್ನ ಮನಸ್ಸಿನಲ್ಲೇ ಅಂದುಕೊಳ್ಳುತ್ತಿದ್ದನು.

ರಾಮುವಿನ ನಡೆನುಡಿಗಳನ್ನು ಪರೀಕ್ಷಿಸುತ್ತಿದ್ದ ಸೀತಳ ಮನಸ್ಸು ಆತನ ಕಡೆ ಒಲಿಯಲಾರಂಭಿಸಿತು. ಒಂದು ದಿನ ತಾಯಿಯು ನೆಂಟರ ಮನೆಗೆ ಹೋಗಿದ್ದ ಸಂದರ್ಭವನ್ನು ನೋಡಿಕೊಂಡು ತಿಂಡಿ ಪದಾರ್ಥ ತಯಾರಿಸಿ ಸೀತಳು ರಾಮುವಿನ ರೂಮಿಗೆ ತೆಗೆದುಕೊಂಡು ಹೋದಳು. ಆತನ ಜೊತೆಯಲ್ಲಿ ಮಾತನಾಡಬೇಕೆಂದು ಇಚ್ಛೆ ಇದ್ದರೂ ರಾಮುವಿನ ನೋಟವು ಆಕೆಯ ತಲೆ ತಗ್ಗಿಸಿತು. ನಾಚಿಕೆಯಿಂದ ಮಾತನಾಡದೆ ಹಿಂತಿರುಗಿದಳು. ಮಾರನೆ ದಿನ 'ನಿನ್ನೆ ತಯಾರಿಸಿದ ತಿಂಡಿ ಬಹಳ ರುಚಿಯಾಗಿತ್ತು. ತಿಂಡಿ ಮಾಡಲು ಎಲ್ಲರಿಗೂ ತಿಳಿದಿದ್ದರೂ ಎಲ್ಲಾ ತಿಂಡಿ ಒಂದೇ ರೀತಿ ರುಚಿಸಲಾರದು. ತಿಂಡಿಯ ರುಚಿಯೊಂದಿಗೆ ಮಾಡಿದ ಕೈಯ ಹೃದಯದ ಒಲವೂ ಸೇರಿದರೆ ಅದರ ರುಚಿಯನ್ನು ಹೇಳಲು ಸಾಧ್ಯವಾಗದು' ಎಂದು ರಾಮು ಹೇಳುತ್ತಿದ್ದಂತೆಯೇ, ಸೀತೆ 'ಅದೆಲ್ಲ ಸುಳ್ಳು' ಎಂದಿಷ್ಟೇ ಹೇಳಿ ರೂಮಿನಿಂದ ಓಡಿಹೋದಳು. ಆ ದಿನದಿಂದ ಸೀತಳ ಪ್ರೇಮ ಹೆಚ್ಚುತ್ತಾ ಬಂತು. ರಾಮುವನ್ನಲ್ಲದೆ ಇತರರನ್ನು ಮದುವೆಯಾಗಲಾರೆನೆಂದು ನಿರ್ಧರಿಸಿಕೊಂಡಳು. ಸೀತೆ ತನ್ನನ್ನು ಪ್ರೀತಿಸುತ್ತಿರುವಳೆಂದು ರಾಮುವಿಗೆ ತಿಳಿಯದಿರಲಿಲ್ಲ. ಆಕೆಯೇ ಇದರ ವಿಷಯ ಮಾತಾಡಿದ್ದರೆ ಒಳ್ಳೆಯದಿತ್ತು ಎಂದು ಯೋಚಿಸಿದ್ದ. ಆದರೆ ಸ್ತ್ರೀಯರು ತನ್ನ ಬಯಕೆಯನ್ನು ಬಚ್ಚಿಡುವರೇ ವಿನಹ ಬಾಯಿಲಿಗೆ ತರುವುದು ವಿರಳ. ಪುರುಷರು ಮನಸ್ಸಿನಲ್ಲಿ ತೋರಿದನ್ನು ಬಾಯಲ್ಲಿ ಅಂದುಬಿಡುವರು. ಸ್ತ್ರೀಯರು ಮುಖದಲ್ಲಿ ತನ್ನ ಅಭಿಮತವನ್ನು ತೋರಿಸುವರೇ ವಿನಹ ಬಾಯಲ್ಲಿ ಎಂದಿಗೂ ಹೇಳಲಾರರು. ಅದ್ದರಿಂದ ಸ್ತ್ರೀಯರ ಮನಸನ್ನು ಪರೀಕ್ಷಿಸುವುದು ಕಷ್ಟ. ಸೀತಳು ಮದುವೆಯ ವಿಷಯ ಎಂದಿಗೂ ಪ್ರಸ್ತಾಪಿಸಲಾರಳು. ಆದ್ದರಿಂದ ಈ ಕೆಲಸ ತನ್ನ ಪಾಲಿಗೆ ಬಿದ್ದಿದೆ ಎಂದು ರಾಮು ನಿರ್ಧರಿಸಿಕೊಂಡು ಆ ವಿಷಯ ಮಾತಾಡಲು ಸಮಯ ಕಾದಿದ್ದನು.

ಒಕ್ಕಲು ಕೆಲಸ ಮುಗಿಯುತ್ತಾ ಬಂದಿತ್ತು. ಯಾರ ಮನೆಯಲ್ಲಿ ನೋಡಿದರೂ ದವಸ ಧಾನ್ಯಗಳ ರಾಶಿ. ಸಂತೆಯ ದಿನ ಎಲ್ಲಿ ನೋಡಿದರೂ ಮದುವೆಯ ಮಾತು ಕಥೆ. ರಾಮುವಿಗೂ ಸಹ ತನ್ನ ಮದುವೆಯ ವಿಷಯ ಬೇಗನೆ ತೀರ್ಮಾನಿಸಬೇಕೆಂದು ಅನ್ನಿಸಿತು. ಒಂದು ದಿನ ಸೀತಳು ತನ್ನ ರೂಮಿಗೆ ಬಂದಿದ್ದವಳನ್ನು ಹತ್ತಿರದ ಕುರ್ಚಿಯಲ್ಲೇ ಕುಳ್ಳಿರಿಸಿ ಇತರ ವಿಷಯಗಳನ್ನು ಪ್ರಸ್ತಾಪಿಸುತ್ತಾ, 'ನಾನು ನಿನ್ನನ್ನು ಒಂದು ವಿಷಯ ಕೇಳಬೇಕೆಂದಿದ್ದೇನೆ. ಈ ವರ್ಷ ನಿನ್ನ ಮದುವೆ ಇದೆಯೇ'? ಎಂದನು.

ಸೀತೆ— 'ನಿಮ್ಮಂಥಾ .. . ಅಪ್ಪ, ಎಲ್ಲಾ ವಿಷಯ ತಂದೆಯನ್ನು ಕೇಳಬೇಕು.'

ಸೀತಳ ಮನಸ್ಸಿನ ಬಯಕೆ ಹೊರಬಿದ್ದಂತಾಯಿತು.

ರಾಮು:—'ಅದೇನು ಸೀತಾ, ನೀನು ನನ್ನನ್ನು ಪ್ರೀತಿಸುವೆಯಾ? ನಾನು ಗರೀಬನೆಂದು ನೀನು ತಿಳಿಯೆಯಾ? ನನ್ನ ಕೈ ಹಿಡಿದು ನೀನು ಹೇಗೆ ಸುಖಿಯಾಗುವೆ?'

ಸೀತೆ:— ಹಣಕ್ಕಿಂತಲೂ ಗುಣ ಹೆಚ್ಚಲ್ಲವೇ. ನೀವು ಎಷ್ಟು ಗುಣವಂತರೋ ಅಷ್ಟೇ ಬುದ್ಧಿವಂತರು. ಇದಕ್ಕಿಂತ ಹೆಚ್ಚಿಗೆ ನನಗೇನು ಬೇಕಿದೆ. ಹಣದ ಮೇಲಿನ ಆಶೆ ದುಃಖಕ್ಕೆ ಕಾರಣ. ಅದ್ದರಿಂದ ನಾನು ಹಣಕ್ಕೆ ಆಪೇಕ್ಷಿಸೆನು.'

ರಾಮು:— ಈಗಿನ ಕಾಲದಲ್ಲಿ ಹಣವೇ ಸರ್ವಸ್ವ. ಹಣವಿಲ್ಲದವನು ಹೆಣದಂತೆಯೇ. ನನ್ನ ಮೇಲಿನ ಪ್ರೇಮವು ದುಃಖಕ್ಕೆ ಕಾರಣವೆಂದು ತಿಳಿಯೆಯಾ?

ಸೀತೆ:— ಬುದ್ಧಿಶಾಲಿಯೂ ವಿದ್ಯಾವಂತನೂ ಆಗಿರುವವನಿಗೆ ಹಣ ಸಂಪಾದನೆ ಮಾಡುವುದು ಕಷ್ಟದ ಕೆಲಸವೇ. ನಿಮ್ಮನ್ನು ವಿನಹ ಬೇರೆ ಯಾರನ್ನೂ ವರಿಸೆನು.'

ಇವರಿಬ್ಬರ ಪ್ರೇಮ ಬಂಧನವು ಸೀತಳ ತಂದೆಗೂ ತಿಳಿಯಿತು. ರಾಮುವು ಸುಶೀಲನಾದುದರಿಂದ ಸೀತಳನ್ನು ಆತನಿಗೆ ಕೊಟ್ಟು ಮದುವೆ ಮಾಡಿದರು. ಮದುವೆಯಾದ ಮಾರನೆ ವರ್ಷವೇ ಸೀತಳಿಗೆ ಒಂದು ಗಂಡುಮಗು ಜನಿಸಿತು. ದಂಪತಿಗಳಿಗೆ ಹಿಡಿಸಲಾರದ ಆನಂದ. ದಿನ ಕಳೆಯುತ್ತಿತ್ತು. ಆದರೆ ವಿಧಿಯ ಲೀಲೆ ವಿಚಿತ್ರವಾದುದು. ಮಗುವಿನ ದಶಮಾನ ವಯಸ್ಸಿನಲ್ಲಿ ಮಲೇರಿಯಾ ಜ್ವರದಲ್ಲಿ ಮಗುವು ತೀರಿಹೋಯಿತು. ಹೆತ್ತ ಕರುಳಿನ ಬೇನೆಯನ್ನು ಹೆತ್ತ ತಾಯಿಯಲ್ಲದೆ ಬೇರೆ ತಿಳಿಯುವರಾರು. ಮಗು ಸತ್ತು ಆರು ತಿಂಗಳಾದರೂ ಸೀತೆಯ ದುಃಖ ಬಿಡಲಿಲ್ಲ.

'ಪ್ರೇಮವು ದುಃಖಕ್ಕೆ ಕಾರಣವೆಂದು ನಾನು ಮದುವೆಯಾಗುವ ಮುನ್ನ ಆಡಿದ ಮಾತನ್ನು ನೆನಪಿಡೆಯಾ? ಮಗುವಿನ ಮೇಲಿನ ಪ್ರೇಮವನ್ನು ಬಿಡು; ಅದೇ ಪ್ರೇಮವನ್ನು ದೇವರ ಮೇಲಿಡು. ಆತನು ನಮ್ಮನ್ನು ಕಾಪಾಡುವನು.'

ರಾಮು ಹೇಳಿದ ಈ ಮಾತು ಸೀತಳಿಗೆ ನಿಜವೆನಿಸಿತು. ಅಂದಿನಿಂದ ರಾತ್ರಿ ವೇಳೆಯಲ್ಲಿ ಭಗವದ್ಗೀತೆಯ ಒಂದು ಅಧ್ಯಾಯವನ್ನು ಓದುತ್ತಿದ್ದಳು. ದೇವರು ಮನುಷ್ಯನನ್ನು ಕಷ್ಟಕೊಟ್ಟು ಪರೀಕ್ಷಿಸುತ್ತಿರುವನೋ ಎಂಬಂತೆ ಅದೇ ವರ್ಷ ರಿಟ್ರೆಂಚ್‌ಮೆಂಟ್ ಬಂದು ರಾಮುವನ್ನು ನೌಕರಿಯಿಂದ ತೆಗೆದುಬಿಟ್ಟರು. ಆತನ ಜೀವನವು ತಿಂಗಳ ಸಂಬಳದ ಮೇಲೆ ಹೊಂದಿಕೊಂಡಿತ್ತು. ಈಗ ಆತನ ಪಾಡೇನು? ಏನೊಂದು ಆಲೋಚನೆಯೂ ಹೊಳೆಯಲಿಲ್ಲ. ಚಿಂತಾಕ್ರಾಂತನಾದವನಿಗೆ ಮನಸ್ಸಿನ ಚಟಪಟಿಕೆ ಕೆರೆತ ಕಡಿತ ಎನ್ನುವಂತೆ ಏನೊಂದೂ ತೋಚದೆ ವ್ಯಸನದಿಂದ ವಿಷಯವನ್ನು ಸೀತಾಳಿಗೆ ತಿಳಿಸಿದನು. 'ಹಣದ ಮೇಲಿನ ಆಶೆಯೇ ದುಃಖಕ್ಕೆ ಕಾರಣ' ಎಂದು ತಾನು ಆಡಿದ ಮಾತನ್ನು ಸೀತೆಯು ಜ್ಞಾಪಕಕ್ಕೆ ತಂದುಕೊಟ್ಟಳು. ತಾನು ತಂದೆಯ ಮನೆಯಿಂದ ತಂದ ಆಭರಣಗಳನ್ನು ಮಾರಿ ಒಂದು ಏಲಕ್ಕಿ ತೋಟ ಮಾಡಲು ಹೇಳಿದಳು. ಸೀತಾಳ ಬುದ್ಧಿವಂತಿಕೆಯನ್ನೂ, ಉದಾರತೆಯನ್ನು ನೋಡಿ ರಾಮುವಿಗೆ ಸಂತೋಷವಾಯಿತು. ಗಂಡ ಹೆಂಡಿರು ಎರಡು ಶರೀರವಾದರೂ ಒಂದೇ ಆತ್ಮವೆಂಬುದು ರಾಮುವಿಗೆ ಆ ದಿನ ತಿಳಿಯಿತು.

'ಸೀತಾ, ನಿನ್ನಂತ ಗುಣಸಂಪನ್ನೆಯನ್ನು ಪಡೆದ ನಾನು ಧನ್ಯನು. ನೀನು ಸಾಧಾರಣದ ಸೀತೆಯಲ್ಲ. ಶ್ರೀರಾಮಚಂದ್ರನ ಹೆಂಡತಿ ಸೀತಾದೇವಿಗೆ ಸಮಾನಳು. ನನ್ನ ಗೃಹಲಕ್ಷ್ಮಿ' ಎಂದು ಪತ್ನಿಯನ್ನು ಕೊಂಡಾಡಿದನು.

'ಗೃಹಸ್ಥ ಧರ್ಮದಲ್ಲಿ ಗಂಡನ ಸುಖದುಃಖಗಳ ಸಮಭಾಗವನ್ನು ಅನುಭವಿಸುವುದು ಹೆಂಡತಿಯ ಧರ್ಮ. ಇದು ಪ್ರತಿಯೊಬ್ಬ ಸ್ತ್ರೀಯ ಕರ್ತವ್ಯ. ಇದರಲ್ಲಿ ನನ್ನದು ಹೆಚ್ಚಿನದೇನಿದೆ' ಸೀತೆ ನುಡಿದಳು.

ಅದೇ ವರ್ಷ ಕಾಡು ಕಡಿದು ಹತ್ತು ಎಕ್ರೆಗೆ ಏಲಕ್ಕಿ ಹಾಕಲಾಯಿತು. ಆ ವರ್ಷ ಏಲಕ್ಕಿಯ ಬೆಲೆ ರೂ ೨೫/- ಮಾರನೆ ವರ್ಷವಲ್ಲಿ ಆತನ ತೋಟದಲ್ಲಿ ಒಂದು ಖಂಡಿ ಏಲಕ್ಕಿ ಬೆಳೆ -49 [illegible] ರೂ ೧೦೦/- [illegible] ಆ ವರ್ಷವೇ ಒಂದು ಮಗು ಜನಿಸಿತು. ಆ ಮಗುವಿನ ಅದೃಷ್ಟವೋ ಎನ್ನುವಂತೆ ಆ ವರ್ಷ ಖಂಡಿ ಏಲಕ್ಕಿ ಬೆಲೆ ಎರಡು ಸಾವಿರ ರೂಪಾಯಿಗೆ ಏರಿತು. ಈಗ ರಾಮುವಿನ ಮತ್ತು ಸೀತಳ ಸುಖಜೀವನ. ಒಂದು ದಿನ ಮಾತಾಡುತ್ತಿದ್ದಾಗ ರಾಮು ಹೇಳಿದನು 'ಸೀತಾ, ಬುದ್ಧಿವಂತನಿಗೆ ಹಣ ಸಂಪಾದನೆ ಕಷ್ಟದ ಕೆಲಸವೇ?' ಎಂದು ನೀನು ಆಡಿದ ಮಾತು ಈ ದಿನ ನೆನಪಿಗೆ ಬಂತು. ನೀನು ಆಡಿದ ಮಾತು ಸತ್ಯ. ಆದರೆ ನಮ್ಮ ಉನ್ನತಿಗೆ ಶ್ರೀಕೃಷ್ಣ ಪರಮಾತ್ಮನ ದಯೆಯೇ ಕಾರಣ. ಅದ್ದರಿಂದ ನಮ್ಮಂತೆಯೇ ಇತರರು ಶ್ರೀಕೃಷ್ಣ ಪರಮಾತ್ಮನು ಗೀತೆಯಲ್ಲಿ ಹೇಳಿದಂತೆ—

'ಶ್ರೇಯಾನ್ ಸ್ವಧರ್ಮೋ ವಿಗುಣಃ
ಪರಧರ್ಮಾತ್ ಸ್ವನುಷ್ಠಿತಾತ್ |
ಸ್ವಧರ್ಮೇ ನಿಧನಂ ಶ್ರೇಯಃ
ಪರಧರ್ಮೋ ಭಯಾವಹಃ ||

ಪ್ರತಿಯೊಬ್ಬನೂ ತನ್ನ ಕರ್ತವ್ಯ, ಧರ್ಮಗಳನ್ನು ಪಾಲಿಸಲಿ; ಗೃಹಸ್ಥಾಶ್ರಮ ಧರ್ಮವು ಸ್ತ್ರೀಯರ ಕರ್ತವ್ಯವಾದ್ದರಿಂದ ಪ್ರತಿ ಸ್ತ್ರೀಯೂ ಒಳ್ಳೆಯ ಗೃಹಧರ್ಮಿಯಾಗಲಿ.'

ಣ ಶಿಕ್ಷೆಗೆ ಒಳಪಡಿಸಬೇಕೆಂದು ನಾನು ಶಿಫಾರಸು ಮಾಡುತ್ತೇನೆ.'

ಅನಂತರ ಜಡ್ಜರು ಮರಣ ದಂಡನೆಯು ಹೈಕೋರ್ಟಿನಿಂದ ಕನ್‌ಫರ್ಮ್ ಆಗಬೇಕಾದ ಪ್ರಮೇಯವಿಲ್ಲ ಎಂದು ಸ್ಪಷ್ಟಪಡಿಸಿದರು.

ಸಾವರ್ಕರರ ಮೇಲಿನ ಆಪಾದನೆ ನಿಲ್ಲುವುದಿಲ್ಲ

ಸಾವರ್ಕರರ ವಿಷಯವನ್ನು ಜಡ್ಜರು ಪ್ರಸ್ತಾಪಿಸುತ್ತಾ, 'ಅಪ್ರೂವರ್ ಹೇಳಿಕೆಯ ಆಧಾರದ ಮೇಲೆಯೇ ಸಾವರ್ಕರರ ಮೇಲಿನ ಆಪಾದನೆಗಳನ್ನು ನಿಜವೆಂದು ಹೇಳಲು ಸಾಧ್ಯವಿಲ್ಲ. ೧೯೪೮ನೇ ಜನವರಿ ೨೦ ಮತ್ತು ೩೦ರಲ್ಲಿ ನಡೆದ ಘಟನೆಗಳಿಗೂ ಸಾವರ್ಕರರಿಗೂ ಏನಾದರೂ ಸಂಬಂಧವಿದೆಯೆಂದು ಹೇಳಲು ಸಾಧ್ಯವಿಲ್ಲ. ಸಾವರ್ಕರರನ್ನು ಭೇಟಿ ಮಾಡುವುದಕ್ಕಾಗಿಯೇ ಆಪ್ಟೆ ಮತ್ತು ನಾಥೂರಾಂ ಗೋಡ್ಸೆಯು ಸಾವರ್ಕರ್ ಸದನಕ್ಕೆ ಹೋದರೆಂಬುದು ಸ್ಪಷ್ಟಪಟ್ಟಿಲ್ಲ. ಸಾವರ್ಕರ್ ಸದನದಲ್ಲಿ ಸಾವರ್ಕರರೇ ಅಲ್ಲದೆ ಭಿಡೆ ಮತ್ತು ದಾಮ್ಲೆ ಇವರುಗಳೂ ಇದ್ದರು. ಸಾವರ್ಕರರು 'ಯಶಸ್ವಿಗಳಾಗಿ' ಎಂಬುದಾಗಿ ಆಪ್ಟೆ ಮತ್ತು ಗೋಡ್ಸೆಗೆ ಆಶೀರ್ವಾದ ಮಾಡಿದರೆಂದು ಹೇಳಿರುವುದಾಗಿ ಬಡ್ಗೆ ಹೇಳುತ್ತಾನೆ. ಆದರೆ ಅದಕ್ಕೆ ಸಮರ್ಥನೆಯೇನೂ ದೊರೆಯಲಿಲ್ಲ. ಅವರ ಭೇಟಿ ಸಮಯದಲ್ಲಿ ನಾಥೂರಾಂ ಗೋಡ್ಸೆ, ಆಪ್ಟೆ ಮತ್ತು ಸಾವರ್ಕರರಿಗೆ ಏನು ಮಾತುಕತೆ ನಡೆಯಿತೆಂಬುದೂ ಗೊತ್ತಾಗಿಲ್ಲ. ಅಂದ ಮೇಲೆ 'ಯಶಸ್ವಿಗಳಾಗಿ' ಎಂಬುದಾಗಿ ಸಾವರ್ಕರರು ಹೇಳಿದುದು ಮಹಾತ್ಮ ಗಾಂಧಿಯವರ ಕೊಲೆಯ ಸಂಬಂಧವಾಗಿ ಎಂದು ಹೇಳುವುದಕ್ಕಾಗುವುದಿಲ್ಲ' ಎಂದು ಹೇಳಿದರು. ಶಂಕರ ಕಿಸ್ಟಯ್ಯನ ವಿನಹ ಎಲ್ಲರೂ ಪಂಜಾಬ್ ಹೈಕೋರ್ಟಿಗೆ ಅಪೀಲು ಮಾಡಿರುವರು.

ಲಂಡನ್ನಿನಲ್ಲಿ ಭಾರತದ ಹೈಕಮಿಷನರ್ ?.

ಮದರಾಸಿನ ಮಾಜಿ ಸಚಿವ ಡಾ|| ಪಿ ಸುಬ್ಬರಾಯನ್‌ರವರಿಗೆ ಸದ್ಯದಲ್ಲೇ ಒಂದು ರಾಯಭಾರಿಯ ಹುದ್ದೆ ಲಭಿಸಬಹುದೆಂದು ನಂಬಲರ್ಹವಾದ ವೃತ್ತಗಳಲ್ಲಿ ಹೇಳಲಾಗುತ್ತಿದೆ. ಶ್ರೀಮತಿ ವಿಜಯಲಕ್ಷ್ಮಿ ಪಂಡಿತರವರನ್ನು ಅಮೇರಿಕದಲ್ಲಿ ಭಾರತದ ರಾಯಭಾರಿ ಸ್ಥಾನಕ್ಕೆ ನೇಮಿಸುವ ಸಂಭವವಿದ್ದು ಅವರ ಪದದಿಂದ ಶ್ರೀ ವಿ ಕೆ ಕೃಷ್ಣಮೇನನ್‌ರವರನ್ನು ಮಾಸ್ಕೋಗೆ ವರ್ಗಾಯಿಸಲಾಗುವುದೆಂದು ಹೇಳಲಾಗಿದೆ. ಡಾ|| ಪಿ. ಸುಬ್ಬರಾಯನ್‌ರವರನ್ನು ಲಂಡನ್ನಿನಲ್ಲಿ ಭಾರತದ ಹೈಕಮಿಷನರ್ ಸ್ಥಾನಕ್ಕೆ ನೇಮಿಸಬಹುದೆಂದು ಹೇಳಲಾಗುತ್ತಿದೆ.

ಕೊಡಗಿನ ಚೀಫ್ ಕಮಿಷನರವರು.

ಇಸ್ತಿಹಾರುನಾಮೆ.

ನಂ. A. 6. 1390 48. ಮಡಿಕೇರಿ, ತಾ. 26-1-49.

ಸಂಯುಕ್ತ ರಾಷ್ಟ್ರಗಳಿಂದ ನಿಯಮಿಸಲ್ಪಟ್ಟ ಅಮಲು ಪದಾರ್ಥಗಳ ಸಮಿತಿಯು 1947ನೇ ಇಸವಿಯ ಜುಲೈ ಮತ್ತು ಆಗಸ್ಟ್ ತಿಂಗಳುಗಳಲ್ಲಿ ನಡೆಸಿದ ದ್ವಿತೀಯ ಅಧಿವೇಶನದಲ್ಲಿ ಈಗ ಜಾರಿಯಲ್ಲಿರುವ ಒಪ್ಪಂದಕ್ಕೆ ಒಳಪಡದಂತ ಅಮಲು ದ್ರವ್ಯಗಳನ್ನು ಅಂತರ್‌ರಾಷ್ಟ್ರೀಯ ನಿಯಂತ್ರಣಕ್ಕೆ ಒಳಪಡಿಸುವದಕ್ಕಾಗಿ ಒಂದು ಪ್ರಣಾಳಿಕೆಯನ್ನು (Protocol) ಆದಷ್ಟು ಬೇಗನೆ ಜಾರಿಗೆ ತರಬೇಕೆಂದು ಆರ್ಥಿಕ ಮತ್ತು ಸಾಮಾಜಿಕ ಸಮಿತಿಗೆ ಸೂಚಿಸಿತು. ಈ ಸೂಚನೆಯನ್ನು ಪ್ರಾಂತೀಕ ಸರಕಾರಗಳು ಗಮನಕ್ಕೆ ತರುವ ಸಂದರ್ಭದಲ್ಲಿ ಭಾರತದ ಕೇಂದ್ರ ಸರಕಾರವು ಅಮಲು ಪದಾರ್ಥಗಳ ಸೇವನೆಯ ಅಭ್ಯಾಸವನ್ನು (Addiction) ತಡೆದು ಹಾಕಲು ಬೇಕಾಗುವ ಕ್ರಮಗಳನ್ನು ಕೈಕೊಳ್ಳಬೇಕೆಂದು ಪ್ರಾಂತೀಕ ಸರಕಾರಗಳನ್ನು ಕೇಳಿಕೊಂಡಿದೆ.

ನಮ್ಮ ಈ ಕೊಡಗಿನಲ್ಲಿ ತಿನ್ನುವದಕ್ಕೂ, ಹೊಗೆ ಸೇದುವದಕ್ಕೂ ಉಪಯೋಗಿಸಲ್ಪಡುತ್ತಿರುವ ಅಮಲು ಪದಾರ್ಥಗಳಲ್ಲಿ ಅಫೀಮು, ಮತ್ತು ಗಾಂಜಾ, ಇವು ಮುಖ್ಯವಾದವುಗಳು. ಅಫೀಮಿನ ಉಪಯೋಗವನ್ನು ತಡೆಗಟ್ಟುವ ವಿಚಾರದಲ್ಲಿ ಬೇರೆ ಏರ್ಪಾಡು ಮಾಡಲಾಗುತ್ತಿದೆ. ಗಾಂಜಾದ ವಿಚಾರದಲ್ಲಿ ಅದರ ಸೇವನೆಯನ್ನು ಕಡಿಮೆಗೊಳಿಸುವದಕ್ಕಾಗಿ ಒಂದು ವಿಧವಾದ 'ಲೈಸನ್ಸ್' ಪದ್ಧತಿಯನ್ನು ಜಾರಿಗೆ ತರಬೇಕೆಂದು ನಿರ್ಧರಿಸಲಾಗಿದೆ. ಅದಕ್ಕಾಗಿ ಸಾರ್ವಜನಿಕರ ತಿಳುವಳಿಕೆ ಬಗ್ಗೆ 1945ನೇ ಇಸವಿಯ ಎಕ್ಸೈಸ್ ರೆಗ್ಯುಲೇಷನಿನ (1915ನೇ ಇಸವಿಯ ಒಂಪನೆ ರೆಗ್ಯುಲೇಷನ್) 16ನೇ ಪ್ರಕರಣದ ಮೇರೆಗೆ ಈ ಮೂಲಕ ತಿಳುಹಪಡಿಸುವದೇನಂದರೆ:—

ಗಾಂಜಾವನ್ನು ಸೇವಿಸುವ (ತಿನ್ನುವದಕ್ಕಾಗಲೀ ಯಾ ಹೊಗೆ ಸೇದುವದಕ್ಕಾಗಲೀ) ಚಟವುಳ್ಳ ಎಲ್ಲಾ ಜನರೂ ಮತ್ತು ಔಷಧಿಗಳಿಗೋಸ್ಕರವಾಗಿ ಗಾಂ cash depo… ಜಾ ಆವಶ್ಯವಿರುವ ಜನರೂ ಆಯಾ ಅಧಿಕಾರ ವ್ಯಾಪ್ತಿಗೊಳಪಟ್ಟ ಎಕ್ಸೈಸ್ ಸಬ್ Such … depo… … the Ch… ಕಮಿಷನರವರಿಗೆ ಗಾಂಜಾ ಲೈಸನ್ಸ್ ಕಾರ್ಡುಗಳಿಗೋಸ್ಕರ ಅರ್ಜಿ … ಕೊಳ್ಳತಕ್ಕದ್ದು. ಸದರಿ ಅರ್ಜಿಯಲ್ಲಿ ಈ ಕೆಳಗೆ ನಮೂದಿಸಿರುವ ವಿವರಗಳನ್ನು ಕೊಡತಕ್ಕದ್ದು:—

(a) ಕಳೆದ ಮೂರು ವರ್ಷಗಳಿಂದ ಸರಾಸರಿ ತಿಂಗಳೊಂದಕ್ಕೆ ಉಪಯೋಗಿಸಲ್ಪಡುತ್ತಿರುವ ಗಾಂಜಾದ ಪರಿಮಾಣ.

(b) ಈಗ ತಿಂಗಳೊಂದಕ್ಕೆ ಬೇಕಾಗುವ ಗಾಂಜಾದ ಪರಿಮಾಣ.

(c) ಅರ್ಜಿದಾರನ ಪ್ರಾಯ ಮತ್ತು ಅವನು ತಿಂಗಳೊಂದರ ಎಷ್ಟು ಪರಿಮಾಣದ ಗಾಂಜಾವನ್ನು ಸೇವಿಸಲು (ಆರೋಗ್ಯ ದೃಷ್ಟಿಯಿಂದ) ಸಮರ್ಥನು ಎಂಬ ವಿಷಯಗಳನ್ನು ತೋರಿಸುವ ಒಬ್ಬ ಅಧಿಕಾರ ಹೊಂದಿದ ವೈದ್ಯನ (ರಿಜಿಸ್ಟರ್ಡ್ ಮೆಡಿಕಲ್ ಪ್ರಾಕ್ಟಿಷನರ್) ಯೋಗ್ಯತಾ ಪತ್ರ (Certificate) ಬೇಕು.

(d) ಔಷಧಗಳಿಗೆ ಗಾಂಜಾ ಬೇಕಾಗುವ ಸಂದರ್ಭಗಳಲ್ಲಿ ಸದರಿ ಜನರು ತಾವೇ ಒಂದು ಸ್ಟೇಟ್‌ಮೆಂಟು ಕೊಡಬೇಕು ಮತ್ತು ಸದರಿ ಸ್ಟೇಟ್‌ಮೆಂಟಿಗೆ ಮೇಲೆ ಹೇಳಿದ ಪ್ರಕಾರದ ಅಧಿಕಾರ ಹೊಂದಿದ ವೈದ್ಯನಿಂದ ರುಜು ಹಾಕಿಸತಕ್ಕದ್ದು.

ಮೇಲ್ಕಂಡ ಅರ್ಜಿಗಳೆಲ್ಲಾ ಈ. ಕಮಿಷನರವರಿಗೆ 1949ನೇ ಇಸವಿ ಫೆಬ್ರವರಿ 28ರೊಳಗೆ ತಲುಪಬೇಕು. ಅನಂತರ ಬರತಕ್ಕಂತ ಅರ್ಜಿಗಳನ್ನು ಪರಿಶೀಲನೆಗೆ ತೆಗೆದುಕೊಳ್ಳಲಾಗುವದಿಲ್ಲ.

ಟಿಪ್ಪಣಿ:— 1930ನೇ ಇಸವಿ ನವಂಬರು ತಾರೀಕು 26ನೇ 149ನೇ ನಂಬರಿನ ಚೀಫ್ ಕಮಿಷನರವರ ಇಸ್ತಿಹಾರುನಾಮೆಯ ಪ್ರಕಾರ ಒಬ್ಬ ಮನುಷ್ಯನು ತನ್ನ ಸ್ವಂತ ಉಪಯೋಗಕ್ಕಾಗಿ ತನ್ನಲ್ಲಿ ಇಟ್ಟುಕೊಳ್ಳುವ ಗಾಂಜಾದ ಪರಿಮಿತಿಯು 3 (ಮೂರು) ತೊಲಗಳು.

ಸಿ. ಟಿ ಮೊದಲಿಯಾರ್,
ಚೀಫ್ ಕಮಿಷನರ್.

Coorg Forest Department, Mercara, 18th February 49.

Timber Sale Notice

About 90,000 cft of teak, rosewood, honne (vengai), nandi (venteak), mathi (karimaradu) and other jungle wood species already transported to Hunsur will be sold by public auction at the Coorg Timber Depot at Hunsur on Saturday the 5th March 1949, commencing at 10 30 A. M. Timber will be sold in small lots to suit the convenience of private consumers. For further details apply to the Chief Forest Officer, Coorg, Mercara.

C. M. Kushalappa,
Chief Forest Officer, Coorg.

ಪಂಡಿತ ಜವಾಹರಲಾಲರಿಗೆ ಅಮೇರಿಕದ ಆಹ್ವಾನ

ಭಾರತಕ್ಕೆ ಕಮ್ಯೂನಿಸ್ಟರಿಂದ ಭೀತಿ ಮತ್ತು ಭಾರತದ ರಕ್ಷಣೆಗೆ ಅವಶ್ಯವಾದ ಕಾರ್ಯಕ್ರಮಗಳನ್ನು ಚರ್ಚಿಸುವುದಕ್ಕಾಗಿ ಅಮೇರಿಕಕ್ಕೆ ಬರಲು ಪಂ. ಜವಹರಲಾಲರನ್ನು ಅಧ್ಯಕ್ಷ ಟ್ರೂಮನ್ನರು ಆಹ್ವಾನಿಸಿರುವರೆಂದು ಅಮೇರಿಕದ ಡೈಲಿ ಮೈಲ್ ಪತ್ರಿಕೆಯ ವಿದೇಶ ಸುದ್ದಿಗಾರರು ಬರೆದಿರುವರು.

The Cauvery Paper Mills & Forest Industries, Limited.
(Incorporated in Coorg.)

The is to inform all concerned that the Register of Members of the above Company, is closed for fifteen days from the 16th February 1949.

For *The Cauvery Paper Mills & Forest Industries, Ltd.*
For **Vijai Vel & Co.**
(*Sd*) **J. V. Doddaveerapa,**
B'lore. Managing Agent.
9 2-49.

ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್, ಮಡಿಕೇರಿ.

ಇವರ ಫ್ರೇಜರ್‌ಪೇಟೆ ಕಾರ್ಖಾನೆಯು ಶೀಘ್ರದಲ್ಲೇ ತೆರೆಯಲ್ಪಡುವುದು ಮತ್ತು ಈ ಕೆಳಗಿನ ಕೆಲಸಗಳನ್ನು ವಹಿಸಿಕೊಳ್ಳುವರು (1) ಭತ್ತ ಮಿಲ್ ಮಾಡುವುದು, (2) ಧಾನ್ಯಗಳನ್ನು ಹಿಟ್ಟು ಮಾಡುವುದು, (3) ಕಾಫಿ ಹುರಿದು ಪುಡಿ ಮಾಡುವುದು (4) ಮೂಳೆ ಪುಡಿ ಮಾಡುವುದು, (5) ಸೀಗೆ ಪುಡಿ ಮಾಡುವುದು.

ಟೌನ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ವೀರರಾಜಪೇಟೆ.

ಈ ಬ್ಯಾಂಕಿನ ವರ್ಷಾವಧಿ ವಹಿವಾಟು ರೂ ೫,೦೦,೦೦೦/-
ವಹಿವಾಟಿನ ಭಂಡವಾಳ ೧,೭೦,೭೦೦-

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟುಗಳ ನಡೆಸಲ್ಪಡುವವು. ಚಿನ್ನದ ನಗಗಳ ಆಧಾರದ ಮೇಲೆ, ಸ್ಥಿರಸೊತ್ತುಗಳ ಆಧಾರದ ಮೇಲೆ, ಮತ್ತು ಭತ್ತ ವಗೈರೆ ಸರಕುಗಳ ಮೇಲೆ ಸಾಲಗಳು ಕೊಡಲ್ಪಡುತ್ತವೆ. ಚೆಕ್ಕು ಯಾ ಡ್ರಾಫ್ಟುಗಳು ಡಿಸ್ಕೌಂಟು ಮಾಡಲ್ಪಡುತ್ತವೆ. ವಾರ್ಷಿಕಗಳ ಬಿಲ್ಲುಗಳನ್ನು ವಸೂಲಿಗೆ ವಹಿಸಲ್ಪಡುತ್ತವೆ.

ಹೆಚ್ಚಿನ ವಿವರಗಳಿಗೆ ಮ್ಯಾನೇಜರ್ ... ಬರೆಯಿರಿ. ... ಮತ್ತು ... ... ಕೊಡಲ್ಪಡುತ್ತವೆ.

ವೀರರಾಜಪೇಟೆ, ತಾ. ೭೬-೧-೧೯೪೯. } 4-4

ಪ್ರೆಸಿಡೆಂಟ್,
ಟೌನ್ ಕೋ-ಆಪರೇಟಿವ್ ಬ್ಯಾಂಕ್

CRESCENT

FOR PROTECTION AND SERVICE.

It is best to represent and insure with

The CRESCENT Insurance Co., Ltd.

H: O: BOMBAY. [*Established 1919.*

BRANCHES ALL OVER INDIA.

For particulars write to: THE BRANCH MANAGER.
22—B MAHATHMA GANDHI ROAD.
BANGALORE CANT.

ಸುರಕ್ಷಿತವಾದ ಜೀವವಿಮೆ ಪಡೆಯಲು

ಕ್ರೆಸೆಂಟ್

ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ. 10,00,000.
ವಸೂಲಾದ ಶೇರು ಮೊಬಲಗು	ರೂ. 1,65 000.
ಕ್ಷೇಮನಿಧಿ	ರೂ. 50,000.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡಲ್ಪಡುವ ಹೊರತು ಚಿನ್ನ, ಬೆಳ್ಳಿ ನಗಗಳ ಆಧಾರದ ಮೇಲೆ ಗಹ ಸಾಲ ಕೊಡಲಾಗುವುದು. ಚೆಕ್ಕಿನ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವದು. ಟ್ರಿನಿಟಿ ಮತ್ತು ಗಾರ್ಡನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ರೂ 1000/- ಯಿಂದ ಮೇಲ್ಪಟ್ಟ ಹಂಗಾಮಿ ಡಿಪಾಜಿಟ್ಟನ್ನು ತಾ. 1-2-49 ರಿಂದ 28-2-49ರ ವರೆಗೆ ಶಾಲಿನೂರು ಶೇಕಡ ರೂ. 4/-ರ ಬಡ್ಡಿ ದರದಲ್ಲಿ ಮೂರು ತಿಂಗಳ ಅವಧಿಗೆ ಹೊಂದಿಕೊಳ್ಳಲಾಗುವುದು. ಹೆಚ್ಚಿನ ವಿವರಗಳನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,

ಕೆ. ಬಿ. ಅಪ್ಪಯ್ಯ, M L C. ಪ್ರೆಸಿಡೆಂಟ್ ಮತ್ತು ಮನೇಜರ್.

ದಿ ಟ್ರಾಪಿಕಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮುಖ್ಯ ಕಚೇರಿ:— ಹೊಸ ದಿಲ್ಲಿ.

ರಾಷ್ಟ್ರೀಯ ಜನನಾಯಕರಾಗಿದ್ದ ಮೋತಿಲಾಲ್ ನೆಹರು, ನೇತಾಜಿ ಸುಭಾಷ ಚಂದ್ರ ಬೋಸ್ ಮೊದಲಾದವರಿಂದ ಸ್ಥಾಪಿಸಲ್ಪಟ್ಟ ವಿಮಾ ಕಂಪೆನಿಗಳಲ್ಲೆಲ್ಲಾ ಅತ್ಯುತ್ತಮ ಸ್ಥಾನ ಪಡೆದಿರುವ ಒಂದೇ ರಾಷ್ಟ್ರೀಯ ವಿಮಾ ಕಂಪೆನಿ "ಟ್ರಾಪಿಕಲ್." ದಿನ ದಿನಕ್ಕೆ ಬೆಳೆದು ಹಿಂದೂಸ್ಥಾನದ ಮುಖ್ಯ ಕಂಪೆನಿಗಳಲ್ಲೊಂದಾಗಿದೆ.

ಕೊಡಗಿನ ಎಲ್ಲಾ ಕಡೆಗಳಿಗೂ ವಿಶೇಷ ಏಜಂಟರುಗಳೂ ಏಜಂಟರೂ ಬೇಕಾಗಿದ್ದಾರೆ. ವಿವರಗಳಿಗೆ ಈ ಪತ್ತೆಗೆ ಬರೆಯಿರಿ.

THE TROPICAL INSURANCE Co. Ltd.

ಜಿಲ್ಲೆಗಳ ಸುಪರಿಂಟೆಂಡೆಂಟರು. ಎ. ಕೊಡಗು, ಮಡಿಕೇರಿ.

ಎಂ. ಎ. ಬೆಳ್ಳಪ್ಪ, ಬ್ರಾಂಚ್ ಸೆಕ್ರೆಟರಿ. ಕೆಂಪನ ಕಟ್ಟೆ, ಬೆಂಗಳೂರು.

ವಾರ್ತೆ.

ಬಟ್ಟೆ ವಿತರಣೆ.

ಮಿಲ್ ಬಟ್ಟೆಗಳ ಮಾರಾಟದ ಬಗ್ಗೆ ಸರಕಾರದವರು ಕೆಲವಂಶವನ್ನು ಸಹಕಾರ ಸಂಸ್ಥೆಗಳ ಮೂಲಕ ಮಾರಾಟ ಮಾಡುವ ವ್ಯವಸ್ಥೆ ಮಾಡಿರುವುದು ಸ್ತುತ್ಯಾರ್ಹವಾದುದಾಗಿದೆ. ಆದರೆ ಲೋಕಲ್ ವ್ಯಾಪಾರಸ್ಥರಿಗೆ ಲೈಸನ್ಸು ಕೊಡುವಾಗ ಕಲೆ ನೋಡಿ ಎಲೆ ಹಾಕಿದಂತೆ ಕಂಡು ಬರುತ್ತದೆ. ಅಧಿಕಾರಿಗಳ ಈ ಧೋರಣೆಯಿಂದ ಹಲವರಿಗೆ ಕೋಟಾ ಬಟ್ಟೆಯನ್ನು ಕಣ್ಣಿನಿಂದ ಸಹ ನೋಡುವ ಅವಕಾಶವಿಲ್ಲದಾಗಿದೆ. ಲೈಸನ್ಸುದಾರರು ಈದೇ ಸಂದರ್ಭವನ್ನು ಸಾಧಿಸಿ ತಮ್ಮಲ್ಲಿ ಸ್ಟಾಕ್ ಇರುವ ಇತರ ಬಟ್ಟೆಗಳನ್ನು ಮಾರಲು ... ಲೈಸನ್ಸು ... ಅಂಗಡಿಯಲ್ಲಿ ... ಯುಕ್ತವಾಗಿ ಕಂಡುಬರುತ್ತದೆ. ತಿಂಗಳಿಗೆ ಒಂದು ಲಕ್ಷ ರೂಪಾಯಿ ಕ್ರಯದ ಮಿಲ್ಲು ಬಟ್ಟೆ ಬರುತ್ತಿದ್ದಾಗ ಅದನ್ನು ೧೬೦ ಸಂಘದ ಮೂಲಕ ಮಾರಾಟ ಮಾಡಿಸುತ್ತಿದ್ದ ಸರಕಾರವು ಇಂದು ತಿಂಗಳಿಗೆ ಎರಡು ಲಕ್ಷಕ್ಕಿಂತಲೂ ಹೆಚ್ಚಿನ ಬೆಲೆಯ ಬಟ್ಟೆ ದೊರಕುವ ಸಾಧ್ಯತೆ ಇರುವಾಗ ಅದನ್ನು ಬರೇ ಆರು ವ್ಯಾಪಾರಿಗಳ ವಶಕ್ಕೊಪ್ಪಿಸಿ ಅರ್ಧ ಜನರಿಗೆ ಕೋಟಾ ಬಟ್ಟೆ ... ದೊರೆಯದಂತೆ ಮಾಡಿ ... ಜನರಿಗೂ, ವ್ಯಾಪಾರಿಗಳಿಗೂ ತೊಂದರೆಯಾಗಿ ಪರಿಣಮಿಸಿದೆ. ಎಲ್ಲಾ ವ್ಯಾಪಾರಿಗಳಿಗೂ ಸಮಾನ ರೀತಿಯಿಂದ ಲೈಸನ್ಸು ಕೊಟ್ಟಿದ್ದರೆ ಎಲ್ಲಾ ವ್ಯಾಪಾರಿಗಳ ... ಬಾಳುತ್ತಿದ್ದರು. ಎಲ್ಲಾ ಪ್ರಜೆಗಳಿಗೂ ಸಮವಾಗಿ ಬಟ್ಟೆಯೂ ದೊರೆಯುತ್ತಿತ್ತು. ... ಕ್ಕೆ ಯಾವ ತೊಡಕೂ ಉಂಟಾಗುತ್ತಿರಲಿಲ್ಲ. ಇದನ್ನೆಲ್ಲಾ ಬದಿಗೊತ್ತಿ ಕೆಲವರನ್ನು ತುಳಿದು ಉಳಿದವರಿಗೆ ನೀಡುವ ನೀತಿ ಯೋಗ್ಯವಲ್ಲ. ಲೈಸನ್ಸು ಸಿಕ್ಕದ ವ್ಯಾಪಾರಿಯು ಜನರಿಂದಲೂ ತಿರಸ್ಕರಿಸಲ್ಪಟ್ಟು ತನ್ನ ಬಾಳುವೆಯನ್ನು ... ಹಾಗಿ ಇವರು ಬೇರೆ ಏನಾದರೂ ವೃತ್ತಿಗೆ ಕೈಹಾಕಬೇಕಾಗಿ ಬಂದಿರುವಂತೆ ಪ್ರಜೆಗಳ ... ಲ್ಲಿ ... ಇದೆಯೆಂದು ... .

ಇದಕ್ಕೆ ಉದಾಹರಣೆಯಾಗಿ ಮಾರ್ಕೆಟಿನಲ್ಲಿ ಸದಾ ಕಾಲ ಅಂಗಡಿ ತೆರೆದಿಟ್ಟು ಇದ್ದುದನ್ನು ಎಲ್ಲಾ ಜನರಿಗೂ ನಂಬಿಕೆಯಿಲ್ಲದೆ ಹಂಚುತ್ತಿದ್ದ ವ್ಯಾಪಾರಿಯೊಬ್ಬರಿಗೆ ಲೈಸನ್ಸ್ ಕೊಡದೆ, ಮನೆಯಲ್ಲಿಂದ ... ತಿಂಗಳಿಗೆ ... ಕೋಟಾ ಬಟ್ಟೆಯನ್ನು ತಲೆ ನೋಡಿ ಹಂಚುವವರಿಗೆ 'ಬಿನ್ನಿ' ಕೋಟಾ ಮತ್ತು ಇತರ 'ಅಹಮದಾಬಾದ್' ಬಟ್ಟೆ ಕೋಟಾಗಳೂ ದೊರೆಯುವಂತಾಗಿದೆಯೆಂತೆ. ಇದು ರೀತಿಯಾ? ಯಾವ ಕಟ್ಟಳೆ ... ಯಾರಿಗೆ ಗೊತ್ತು?

... ನಯನಗಳನ್ನು ತೊಂದು ಬಂದು ... ಪ್ರಜಾ ... ಯೋಗ್ಯವಲ್ಲ. ಇನ್ನು ... ಇಂಥ ಸಂದರ್ಭಗಳಲ್ಲಿ ಸರಕಾರ ... ಎಲ್ಲಾ ಪ್ರಜೆಗಳನ್ನು ಸಮಾನ ರೀತಿಯಿಂದ ಕಂಡು ... ಗಮನಿಸಬೇಕಾಗಿ ...?

'ಸಮತಾಪ್ರಿಯ'

ಗೃಹಕೃತ್ಯ ನೋಟೀಸು.

ಉತ್ತರ ಕೊಡಗು ತಾಲೋಕು ಸೋಮವಾರಪೇಟೆ ನಾಡು ಕಿರಗಂದೂರು ಗ್ರಾಮದಲ್ಲಿರುವ ಆಕ್ಕಸಾಲಿಗರ ಬಸಪ್ಪನಾದ ನಾನು ಸರ್ವರಿಗೂ ತಿಳಿಯಪಡಿಸುವದೇನೆಂದರೆ. ಪೌತಿ ಪುಟ್ಟಾಚಾರ್ಯರವರ ಮಕ್ಕಳು 1ನೇ ಅಣ್ಣಯ್ಯಾಚಾರ್ಯರು ಮತ್ತು 2ನೇಯವನಾದ ನಾನು ಈ ಎರಡು ಜನಗಳು ಒಂದೆ ತಂದೆ ಒಂದೆ ತಾಯಿ ಮಕ್ಕಳಾಗಿರುತ್ತೇವೆ. ಬಸಪ್ಪಾಚಾರ್ಯನಾದ ನಾನು ... ಕಾಲದಲ್ಲಿ ಚಿಕ್ಕವನಾಗಿದ್ದು ನಮ್ಮ ತಂದೆಯ ಹೆಸರಿನಲ್ಲಿ ಜಾಗಮನೆ ತೋಟಗಳು ಜಮಾಬಂದಿ ನಡೆದು ಬರುತ್ತಿತ್ತು. ತಂದೆ ಸ್ವರ್ಗಸ್ಥರಾದ ತರುವಾಯ ನನ್ನ ಅಣ್ಣ ಅಣ್ಣಯ್ಯಾಚಾರ್ಯರವರ ಹೆಸರಿಗೆ ಜಮಾಬಂದಿ ನಡೆದು ಬಂತು. ಇವರು ನನ್ನ ಅನುಮತಿ ಇಲ್ಲದ ಸೋಮವಾರಪೇಟೆಯಿಂದ ಸ್ವಲ್ಪ ದೂರದಲ್ಲಿ ಒಂಟಿಅಂಗಡಿ ದಕ್ಷಿಣದಲ್ಲಿ ಒಂದು ಎಕ್ರೆ ಜಾಗವನ್ನು ಮತ್ತು ... ರು ಗ್ರಾಮದಲ್ಲಿ ... ಭೂಮಿಯನ್ನೂ ನಮ್ಮ ಕಿರಗಂದೂರು ಗ್ರಾಮಕ್ಕೆ ಸಮೀಪದ ಬಿಳಿಗೇರಿಯಲ್ಲಾ ಒಂದು ಬಂಜಮ ಕಾಫಿ ತೋಟವನ್ನೂ ಮಾರಾಟಮಾಡಿ ತಮ್ಮ ಸ್ವಂತಕ್ಕಾಗಿ ಉಪಯೋಗಿಸಿಕೊಂಡಿದ್ದಾರೆ.

ಈಗ ನಮ್ಮ ಅಣ್ಣನು ವಾಸವಿರುವ ಮನೆ ಅವನ ಹೆಸರಿನಲ್ಲಿ ಜಮಾಬಂದಿ ನಡೆದು ಬಂದಿರುವ ಸೊತ್ತುಗಳು ನಮ್ಮ ತಂದೆಯ ಪಿತ್ರಾರ್ಜಿತದ ಸೊತ್ತಾಗಿರುತ್ತದೆ. ಈ ಸೊತ್ತಿಗೆ ಬಸಪ್ಪಾಚಾರ್ಯನಾದ ನಾನೂ ಹಕ್ಕುದಾರನಾಗಿರುತ್ತೇನೆ. ನಾನು ಕೈಗಾರಿಕೆ ಕೆಲಸದವನಾಗಿದ್ದು ... ರಿಂದ ಕರಗಂದೂರು ಗ್ರಾಮ ತೋಟದಲ್ಲಿ ... ಕಾರ್ ... ಎಲಕ್ಕೆ ... ಈ ಸೊತ್ತುಗಳನ್ನು ... ಅಣ್ಣಯ್ಯಾಚಾರ್ಯರು ... ಮಾಡುವ ಮಾತು ಕೇಳಬರುತ್ತದೆ. ಈ ಸೊತ್ತುಗಳನ್ನು ಮಾರಾಟಮಾಡುವ ಹಕ್ಕು ಅವರಿಗಿಲ್ಲ ... ಯಾರಾದರೂ ತೆಗೆದುಕೊಂಡರೆ ... ಸಂಭವಿಸಿ ... ... ತಿಳಿಯಪಡಿಸಿದ್ದೇನೆ.

ಡಿ ಎ ಬಸಪ್ಪ,
ಮಾದಾಪುರ.

ಬೇಕಾಗಿದ್ದಾರೆ.

ರೋಬಸ್ಟಾ ಕಾಫಿ ತೋಟದಲ್ಲಿ ಕವಾತ್ (Pruning) ಕೆಲಸ ಸರಿಯಾಗಿ ಗೊತ್ತಿರುವ ಒಬ್ಬ ತೋಟದ ರೈಟರು ಒಡನೆ ಬೇಕಾಗಿದ್ದಾರೆ. ಸಂಬಳ ಅವರ ಕೆಲಸದ ಅನುಭವ (Experience) ಅನುಸರಿಸಿ ಕೊಡಲಾಗುವುದು. ಇಷ್ಟವುಳ್ಳವರು ಕೂಡಲೇ ... ಕೆಳಗಿನ ವಿಳಾಸಕ್ಕೆ ಅರ್ಜಿ ಕಳುಹಿಸಬೇಕಾಗಿದೆ.

The Manager
Maniyankod Group Estate,
Kalpatta—Wynad,
2-1 *MALABAR.*

TENDER NOTICE

COORG CIVIL VETERINARY DEPARTMENT.

Mercara, the 10th February 1949

Notice is hereby given that sealed tenders will be received at the Office of the Chief Veterinary Officer, Coorg, up to 15th March 1949, by the Chief Veterinary Officer for the supply by contract of the following articles required for the use of the livestock stationed at the Veterinary Dispensaries at Mercara, Somwarpet, Fraserpet, Ammatti, Ponnampet and Napoklu and at the concentration camp at Hudgur from 1st April 1949 to the 31st March 1950, both days inclusive

Name of the articles required	Places at which the articles are required to be supplied						
	Mercara	Somwarpet	Fraserpet	Ammatti	Ponnampet	Napoklu	Hudgur
Paddy in batties of 80 seers a batty	10	60		36	25		.
Paddy straw in pullahs, each pullah weighing 2½ to 3 lbs	9500	6200	2400	4000	2500	2200	22000
G N Cake in bags of 140 lbs a bag	14	34	6	10	18	8	6
Rice bran in bags of 100 lbs a bag	37	53	11	50	18	14	15
Cotton seeds in bags 140 lbs a bag	5	6	3	6	3	3	3
Gram crushed in bags of 80 lbs a bag	18	10	14	5	3	5	
Greens in Pounds	730	3375		2000		2000	
Fish (dried) in lbs	365	3375		800	500		

2 No tender will be received after the date above mentioned

3 Tenders to be superscribed "Tender for the supply of cattle feed for the Civil Veterinary Dispensary at"

4 No tender will be received unless accompanied by a cash deposit of Rs 50 as earnest money for each tender Such a deposit may be waived under the special orders of the Chief Commissioner in case of firms of established repute

5 All tenders must specify the rates at which the articles can be supplied in pound per rupee or in bags at a cost . .

6 The Chief commissioner does not bind himself to accept the lowest or any tender and he may reject any tender without assigning any reason for so doing

7. The deposit of the successful tenders will be retained and will be forfeited if he fails to execute the contract bond

8 No advance of cash will be made to the contractor. Payment for the articles supplied will be made by the Chief Veterinary Officer, Coorg, as soon as possible after the 7th of each month on producing the necessary accounts and vouchers and counterfoils with a bill, in duplicate, in English accompanied by a certificate signed by the Veterinary Officer in charge of the Veterinary Dispensary stating the articles, the cost of which is claimed in the bill-have been supplied to the dispensary during the month, correctly prepared which should be submitted before 5th of every month. Persons who are unable to do this need not compete

9 This contract should not be sublet

10. Articles should be supplied as per specimen accepted by the Veterinary Officer in charge of the dispensary and if inferior articles were supplied, they may either be returned or the cost of the articles will be reduced and fixed by the Chief Veterinary Officer and if frequently violated the contract may be cancelled and the security confiscated to Government

11 The Contract will be subject to confirmation by the Chief commissioner of Coorg who reserves himself the right of rejecting all or any of the tenders

12. The decision of the Chief commissioner will be final in all cases of the failure of the contract

13 In case the contractor, after taking contract is not willing to carry out his agreement, he shall give at least a month's notice and shall forfeit the security money to Government

14. The contractor will also be bound to make good to Government any loss which may arise from his failure or by Government having to purchase the articles in the local markets at the higher rates than those contracted for

15 The contractorr should be able to supply the required quantity of greens daily and they should be quite fresh.

16 The tenders will be opened by the Chief commissioner of Coorg, after the due date for the receipt of the tenders

(*Sd*) **A. M. MUTHAPPA**
Offg Chief Veterinary Officer

ದೇವಸ್ಥಾನದ ಸೊತ್ತುಗಳ

ದುರ್ವ್ಯಯ ಕೂಡದು.

ಮದ್ರಾಸು ಪ್ರಧಾನರ ಎಚ್ಚರಿಕೆ.

"ಭಾರತವು ಜಾತ್ಯತೀತ ರಾಷ್ಟ್ರವಾಗಿದ್ದು ಅದರಲ್ಲಿ ಮತ [illegible] ಪ್ರಜಾ ರಕ್ಷೆ, ಬೆಳವಣಿಗೆ, ಧರ್ಮಪಾಲನೆಗೆ ಯಾವದೇ ತರಹದ ಆತಂಕಗಳು ಇರುವದಿಲ್ಲ ಆದರೆ ದೇವಸ್ಥಾನಗಳ ಸೊತ್ತುಗಳನ್ನು ದುರ್ವ್ಯಯ ಪಡಿಸುವ ಹಾಗೂ ದುರುಪಯೋಗಿಸುವದನ್ನು ಮಾತ್ರ ಸರಕಾರವು ಸಹಿಸಲಾರದು ನನಗೆ ನನ್ನ ಧರ್ಮದ ಮೇಲೆ ಅಚಲ ಶ್ರದ್ಧೆಯುಂಟು. ನನ್ನ ಜೀವನಕ್ಕಿಂತ ನನ್ನ ಧರ್ಮವೇ ಮೇಲೆಂದು ಬಗೆಯುವೆ. ನಮ್ಮ ದೇವಸ್ಥಾನಗಳು ಕೇವಲ ಆರಾಧನೆಯ ಸ್ಥಳ ಮಾತ್ರವಲ್ಲ, ನಮ್ಮ ಸಂಸ್ಕೃತಿಯ ಮೂಲವೂ ಆಗಿರುತ್ತವೆ. ದೇವಳದ ಆವರಣದಲ್ಲಿಯೇ ಸಮಾಜದ ಆರ್ಥಿಕ, ಸಾಮಾಜಿಕ, [illegible] ಹಾಗೂ ಧಾರ್ಮಿಕ ಜೀವನವು ಬೆಳೆದು ಬಂದಿದೆ. ಮುಂದಕ್ಕೂ ದೇವಸ್ಥಾನಗಳು ಸಂಸ್ಕೃತಿಯ ಕೇಂದ್ರಗಳಾಗಿರುವವು, ನಮ್ಮ ಧಾರ್ಮಿಕ ಮತ್ತು ದೇವಸ್ಥಾನಗಳ ದೇವರ ಹಾಗೂ ಜನರ [illegible], ಇವುಗಳ [illegible] ಆ [illegible] ಸಂಬಂಧವು [illegible] ಜೀವದ ಸಂಬಂಧವನ್ನು [illegible] ಬೇಕಾಗುವದು

ಧರ್ಮದ ರಕ್ಷಣೆಯು ಅಗತ್ಯದ ವಿಷಯು, ದೇವಸ್ಥಾನದ ಆವರಣಗಳಲ್ಲಿ ಪೂಜೆಗಳು ಧರ್ಮ ಶಾಸ್ತ್ರದ ಪ್ರಕಾರ ನಡೆಯಬೇಕು ಇಂದು ತೀವ್ರವಾಗಿ ಅಳಿಯಲು ಪ್ರಾರಂಭಿಸಿರುವ ವಿಲ್ಲೆ ಕಲೆಯು ಪುನರುಜ್ಜೀವನವಾಗಬೇಕು ಈ ಕರ್ತವ್ಯವನ್ನು ನೆರವೇರಿಸುವದು ಒಂದು ಮುಖ್ಯ ಕರ್ತವ್ಯ

ಈಗ ಮದ್ರಾಸು ಪ್ರಾಂತದಲ್ಲಿ ಸುಮಾರು [illegible] ದೊಡ್ಡ ಮಠಗಳೂ, [illegible] ದೊಡ್ಡ ದೇವಸ್ಥಾನಗಳೂ, [illegible] ಮಠಗಳೂ, [illegible] ದೇವಸ್ಥಾನಗಳೂ ಇರುವವು. ಇವುಗಳಲ್ಲದೆ ಈ ಮಸೂದೆಯು ಲಗಾವಾಗುವ ಅನೇಕ ಮಠಗಳಿವೆ ಇವುಗಳಿಗೆ [illegible] ಲಕ್ಷ ಎಕ್ರೆ ಭೂಮಿಯು ಇದ್ದು [illegible] ರೂ. [illegible] ಇವರಿಂದ ಬಗ [illegible] ಇಷ್ಟು ದೊಡ್ಡ [illegible] [illegible]

ಸರಕಾರವು ಯೋಗ್ಯ ರೀತಿಯ ವ್ಯವಸ್ಥೆಯನ್ನು ಈ ಮಸೂದೆಯ ಮೂಲಕ ಮಾಡಬೇಕೆಂದಿದೆ

ಹಿಂದೂ ರಿಲಿಜಿಯಸ್ ಎಂಡೋಮೆಂಟ್ಸ್ ಮಸೂದೆಯ ವಿಷಯದಲ್ಲಿ ಅನೇಕ ಸೂಚನೆಗಳು ಬಂದಿವೆ ಆ ಸೂಚನೆಗಳನ್ನು ಸರಕಾರವು ಸಂಪೂರ್ಣವಾಗಿ ಪರಿಶೀಲಿಸುವದು ಇಂಥ ಸೂಚನೆಗಳನ್ನು ಸರಕಾರವು ಯಾವಾಗಲೂ ಆದರಿಸುವದು [illegible], ಮಸೂದೆಯಲ್ಲಿದ್ದ ನಿಷೇಧಿತ ಭಾಗಗಳು ಸರಿಗೊಳಿಸಲ್ಪಡುವವು

ಈ ಮಸೂದೆಗೆ ತೀವ್ರ ವಿರೋಧಗಳು ಕೇಳಿಬರುತ್ತಿವೆ. ನಮ್ಮ ದೇಶದಲ್ಲಿ [illegible] ರಾಜಕೀಯ, ಸಾಮಾಜಿಕ, ಹಾಗೂ ಆರ್ಥಿಕ ಪರಿಸ್ಥಿತಿಗಳನ್ನು ಉನ್ನತಿಗೆ ತರುವ ಪ್ರಯತ್ನಗಳು ಸರಕಾರದ ಕಡೆಯಿಂದ ನಡೆದ ಕೂಡಲೇ ಇವುಗಳಿಂದ ಧರ್ಮಕ್ಕೆ ಭಂಗ ಬರುವದೆಂದು ಕೂಗು ಕೇಳಿಬರುತ್ತದೆ

ಮಸೂದೆಯ ವಿರೋಧ [illegible] ಜನರ [illegible] ವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ಬಂತು ಎಂಬ [illegible] ಇದು ಸರಿಯಲ್ಲ. [illegible] ಧರ್ಮದ ಹೆಸರಿನಲ್ಲಿ [illegible] ಉನ್ನತಿಯನ್ನು ಕುಂಠಿಸಲು ಪ್ರಯತ್ನಿಸುವವರು ಭಾರತದ ಅವನತಿಗೆ ಕಾರಣರು ಎಂದು ಮದ್ರಾಸಿನ ಮುಖ್ಯ ಮಂತ್ರಿಗಳು ಹೇಳಿದರು. ಮುಂದೆ ಅವರು ಮಸೂದೆಯ ವಿಷಯದಲ್ಲಿ ಮಾತನಾಡುತ್ತ :-

ದೇವಸ್ಥಾನ ಹಾಗೂ ಮಠಗಳ ಆಸ್ತಿಪಾಸ್ತಿಗಳನ್ನು ಕೆಲವು ಧರ್ಮದ ಕೈಗೆ ಬಿಟ್ಟು, ಅವರು ಅವರವರ ಕೈ [illegible] ರೀತಿಯನ್ನು [illegible] ಮಾಡುವರು, ಅವರಲ್ಲಿ [illegible] ಹಣವನ್ನು [illegible] ಸರಕಾರವು [illegible] ದೇವಸ್ಥಾನಗಳ [illegible] ಗಳನ್ನು [illegible] ಯಾಗೊಳಿಸುವ [illegible] ನ್ನು ಹಾಗೂ [illegible] ಪರಿಶೀಲಿಸಿ ನಡೆಸಿದೆನೆ. ಈ ಮಸೂದೆಯನ್ನು [illegible] ರು [illegible] ಪರಿಶೀಲನೆ ನಡೆಸಿ [illegible] ಈ [illegible] [illegible] ಎಂದು [illegible] ?

The Warden Insurance Co., Ltd.,

H. O. Bombay.

Branch Office: GANDHI NAGAR, BANGALORE.

Sub-Branch Office; MERCARA.

WANTED.

Influential and Active Persons to represent Motor and Accident Insurance Business in Coorg on attractive terms. Please apply for particulars to:

Sri A. S. Aiyappa,
Branch Secretary.

ಎಂಪೈರ್ ಆಫ್ ಇಂಡಿಯಾ

ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

೪೮ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು	ಒಟ್ಟು ಆದಾಯ ...	1,07,09,000 ರೂಪಾಯಿ
	ಚಾಲ್ತಿಯಲ್ಲಿರುವ ವಿಮೆ ...	17,74,52,000 ,,
	ಆಸ್ತಿ	6,67,60,000 ,,
ಕಂಪೆನಿಯು ಆರಂಭದಲ್ಲಿ ಕೊಟ್ಟ ಕ್ಲೇಮುಗಳು ...		8,83,62,000 ,,

ಅಂಗ ಕಛೇರಿ: ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು. | ಏಜೆನ್ಸಿ ಅರ್ಜಿಗಳನ್ನು ಸ್ವಾಗತಿಸಿದೆ. | ಪ್ರಧಾನ ಕಛೇರಿ: ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ.

ಬಟ್ಟೆ ಬೇಕೆ?

ಮಹನೀಯರೇ,

ನಮ್ಮಲ್ಲಿ ವಿಶೇಷವಾಗಿ ಮದುವೆಗೆ ಬೇಕಾದಂಥ ನಾನಾ ತರಹದ ಸೀರೆ ಬಳ್ಳೇ ಫ್ಯಾನ್ಸಿ, ರಮಣೀಯವಾದ ಬೆಂಗಾಲ್ ಸಿಲ್ಕ್, ಬನಾರಸ್, ಸೇಲಂ, ಕೊಯಮುತ್ತೂರು, ಮತ್ತು ಮಧುರೆ ಮುಂತಾದ ಅನೇಕ ಸ್ಥಳಗಳಿಂದ ತಯಾರಾದ ಜವಳಿಗಳು ದೊರೆಯುತ್ತೆ.

ಒಂದಾವರ್ತಿ ದಯವಿಟ್ಟು ಬಂದು ಪರೀಕ್ಷಿಸಿರಿ!

ಮದುವೆಗೋಸ್ಕರ ನಾನೂರು ರೂಪಾಯಿ ಮೇಲ್ಪಟ್ಟು ಸಾಮಾನುಗಳಿಗೆ ನಮ್ಮ ಈ ಕೆಳಗಿನ ಆಫೀಸಿಗೆ ಆರ್ಡರ್ ಮಾಡಿದಲ್ಲಿ, ನಾವುಗಳು ತಮಗಳ ಬಂಗ್ಲೆಗಾಗಲೀ, ಅಥವಾ ಮನೆಗಳಿಗಾಗಲೀ ತಂದು ಕೊಡುವೆವು.

Valki Mohidin Saheb & Bro,
Silk & Cotton Merchants,
VIRAJAPET (S. COORG)

12-7

ವಿಮೆ ಮಾಡಲು ಇಲ್ಲವೇ ಪ್ರತಿನಿಧಿಸಲು

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.

ಇವರ ಸಲಹೆಗಿಂತ ಉತ್ತಮ ಮಾರ್ಗವಿಲ್ಲ.

ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದೂಸ್ಥಾನದ ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು.

ದಿ ಬೊಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

30 ಮೌಂಟ್ ರೋಡ್, ಪೋ. ಬಾ. ನಂ. 337, ಮದ್ರಾಸು 2.

ಬೊಂಬೆ ಲೈಫ್ ಬಿಲ್ಡಿಂಗ್, ಪೋ. ಬಾ. ನಂ. 1, ಉಡುಪಿ.

(ಟೆಲಿಫೋನ್ ನಂ. 8398)

ಇತರ ಆಫೀಸುಗಳು:—ಬೆಂಗಳೂರು, ತಿರುವಾಂದ್ರಂ, ಕಲ್ಲಿಕೋಟೆ, ಮಂಗಳೂರು, ಮಧುರೆ, ಮತ್ತು ಬೊಂಬಾಯಿ.

ಭಾರತದ ಭಾಗ್ಯ ಭಂಡಾರ

ಲೇ:—ಶ್ರೀ ಪಿ. ಎಸ್. ರಾಮಕೃಷ್ಣ ಬಿ. ಎಸ್‌ಸಿ. (ಆನರ್ಸ್) ಬಿ. ಟಿ.

ಲೇಖನ ೨

ಭಾರತಕ್ಕೆ ಆರ್ಯರ ಆಗಮನ.

ಸಿಂಧೂ ಬಯಲು ಪ್ರದೇಶದ ಜನರು ಯಾರು? ಅವರು ಎಲ್ಲಿಂದ ಬಂದು ಅಲ್ಲಿ ನೆಲೆನಿಂತರು? ಎಂಬಿತ್ಯಾದಿ ವಿಷಯಗಳನ್ನು ನಾವು ಸ್ಪಷ್ಟವಾಗಿ ಅರಿಯೆವು. ಬಹುತೇಕ ಅವರು ಅನಾದಿಯಿಂದಲೇ ಭಾರತೀಯರಾಗಿದ್ದು ಅವರ ಸಂಸ್ಕೃತಿಯು ಭಾರತದಾದ್ಯಂತವೂ ಪಸರಿಸಿದ್ದಿರಬಹುದು. ದಕ್ಷಿಣ ಭಾರತ ನಿವಾಸಿಗಳಾದ ದ್ರಾವಿಡರಿಗೂ ಇವರಿಗೂ ಕೆಲವು ಹೋಲಿಕೆಗಳಿವೆ ಎಂದು ತಜ್ಞರು ಅಭಿಪ್ರಾಯಪಡುತ್ತಾರೆ. ಅವರು ಇತರ ದೇಶಗಳಿಂದ ಅಲ್ಲಿಗೆ ಬಂದವರಾಗಿದ್ದರೆ ಆ ಹೇಂಜೊದಾರೊ ನಗರದ ಸಂಸ್ಕೃತಿಯ ಕಾಲಕ್ಕಿಂತಲೂ ಅನೇಕ ಸಹಸ್ರ ವರುಷಗಳ ಹಿಂದೆ ಬಂದು ಅಲ್ಲಿ ನೆಲೆನಿಂತಿರಬಹುದು. ಎಲ್ಲ ಪ್ರಾಯೋಗಿಕ ವಿಷಯಗಳಿಗೂ ಸಿಂಧೂ ಬಯಲು ಪ್ರದೇಶದ ಈ ಜನರು ಅನಾದಿಯಾದ ಭಾರತ ನಿವಾಸಿಗಳೆನ್ನಲು ಅಡ್ಡಿಯಿಲ್ಲ.

ಮಹೇಂಜೊದಾರೊ ನಾಗರೀಕತೆಯು ಹೇಗೆ ನಾಶವಾಯಿತೆಂದು ಹೇಳುವುದು ಕಷ್ಟಸಾಧ್ಯ. ಪ್ರಾಯಶಃ ಸಿಂಧೂ ನದಿಯಲ್ಲಿ ಆಗಾಗ ಬರುವ ನೆರೆಯ ಹಾವಳಿಯಿಂದ ಅಥವಾ ಹವಾ ಬದಲಾವಣೆಯಿಂದಾಗಿ ಹೆಚ್ಚು ಪ್ರದೇಶ ಮರುಭೂಮಿಯಾದುದರಿಂದ ಈ ನಾಗರೀಕತೆ ನಾಶವಾಗಿರಬಹುದು. ಪ್ರಾಚೀನ ಕಾಲದಲ್ಲಿ ಸಿಂಧೂ ಬಯಲು ಫಲಭರಿತವಾಗಿದ್ದು ಕ್ರಮೇಣ ಮರುಭೂಮಿಯಾಗುತ್ತಾ ಬಂದಿತು. ಹವಾ ಬದಲಾವಣೆ ಜನಜೀವನದ ಮೇಲೆ ಹೆಚ್ಚು ಪರಿಣಾಮವನ್ನುಂಟು ಮಾಡದಿರಲಿಲ್ಲ.

ಸಿಂಧೂ ಬಯಲು ಪ್ರದೇಶದ ನಾಗರೀಕತೆಗೂ ಇತ್ತೀಚಿನ ಭಾರತವರ್ಷದ ಚರಿತ್ರೆಯ ಘಟನಾವಳಿಗಳಿಗೂ ಕೆಲವು ಹೋಲಿಕೆ ತೋರಿ ಬರುವುದಾದರೂ ಈ ನಾಗರೀಕತೆ ಅದರ ತರುವಾಯ ಅದರ ಬೆನ್ನ ಹಿಂದೆಯೇ ಬಂದ ಸಂಸ್ಕೃತಿಗೂ ಅವಕ್ಕೂ ಹೆಚ್ಚಿನ ಸಂಬಂಧವೇನೂ ಕಂಡು ಬರುವುದಿಲ್ಲ. ಆ ನವೀನ ಸಂಸ್ಕೃತಿಯು ಬಹಳ ಮಟ್ಟಿಗೆ ಕೃಷಿ ಪ್ರಧಾನವಾದ್ದಾಗಿದ್ದಿತು. ಸಿಂಧೂ ನದಿಯ ಪ್ರಾಚೀನ ನಾಗರೀಕತೆಯು ವಾಣಿಜ್ಯ ಪ್ರಧಾನವಾಗಿದ್ದು ನಗರಗಳಲ್ಲಿ ಕೇಂದ್ರೀಕೃತವಾಗಿದ್ದಿತು. ಹೊಸ ನಾಗರೀಕತೆಯು ಸ್ವಲ್ಪ ಮಟ್ಟಿಗೆ ಮಾತ್ರ ನಗರಗಳಲ್ಲಿ ವ್ಯಾಪಿಸಿದ್ದು ಹೆಚ್ಚಿನಂಶ ಹಳ್ಳಿ ದೇಶಗಳನ್ನು ಆಶ್ರಯಿಸಿ ವ್ಯವಸಾಯವನ್ನೇ ಪ್ರಧಾನ ವೃತ್ತಿಯಾಗಿ ಅಂಗೀಕರಿಸಿತ್ತು. ಕೃಷಿಯೇ ಪ್ರಧಾನವಾದ ಈ ನಾಗರೀಕತೆಗೆ ಭಾರತದ ವಾಯುವ್ಯ ಕಣಿವೆಗಳ ಮಾರ್ಗವಾಗಿ ಮಧ್ಯ ಏಷ್ಯದಿಂದ ಭಾರತದ ಬಯಲು ಪ್ರದೇಶಗಳಿಗೆ ಬಂದ ಆರ್ಯರು ಮೂಲ ಪುರುಷರಾಗಿದ್ದರು.

ಸಿಂಧೂ ನಾಗರೀಕತೆ ಭೂಗತವಾದ ತರುವಾಯ ಒಂದು ಸಾವಿರ ವರ್ಷದಲ್ಲಿ ಆರ್ಯರು ಆಗಮಿಸಿದರೆಂದು ಊಹಿಸಲಾಗಿದೆ. ಆ ಸಹಸ್ರ ವರುಷದ ಅವಕಾಶದಲ್ಲಿ ಏಷಿಯಾದ ವಿವಿಧ ದೇಶಗಳಿಂದ ಕಣಿವೆ ಮಾರ್ಗವಾಗಿ ಇತರ ಪಂಗಡದ ಜನರು ಭಾರತಕ್ಕೆ ಬರುತ್ತಾ ಭಾರತ ಜನಾಂಗದಲ್ಲಿ ಕಲೆತು ಹೋಗಿದ್ದರು. ಸಿಂಧೂ ನಾಗರೀಕತೆಗೆ ಮೂಲರಾದ ದ್ರಾವಿಡರಿಗೂ ಭಾರತಕ್ಕೆ ಆಗಮಿಸಿದ ಆರ್ಯರಿಗೂ ಪ್ರಥಮಾವಸ್ಥೆಯ ಬಹು ಪ್ರಾಚೀನ ಸಾಂಸ್ಕೃತಿಕ ವಿಲೀನದಿಂದಲೇ ಭಾರತದ ಅನೇಕ ಪಂಗಡಗಳೂ, ಕುಲಗಳೂ, ವರ್ಣಗಳೂ ಭಾರತದ ವಿಶಿಷ್ಟವಾದ ಮಿಶ್ರ ಸಂಸ್ಕೃತಿಯೂ ಉಗಮವಾದುದು. ಆರ್ಯರ ಆಗಮನದ ತರುವಾಯ ಇರಾನರು, ಗ್ರೀಕರು, ಪಾರ್ಥಿಯನರು, ಹೂಣರು, ಇಸ್ಲಾಂ ಧರ್ಮ ಪ್ರವರ್ತಕ ತುರುಕ್ಕರು, ಪ್ರಾಚೀನ ಕ್ರಿಶ್ಚಿಯನ್ನರು, ಎಹೂದ್ಯರು ಜಂತೂಸ್ತ ಪಂಥಿಗಳು ಮುಂತಾದವರೆಲ್ಲ ಭಾರತಕ್ಕೆ ಕ್ರಮವಾಗಿ ಬಂದು ನೆಲೆನಿಂತು ವಿಲೀನವಾಗಿ ಹೋದರು. ಭಾರತದ ವರ್ಣ ವೈಷಮ್ಯವನ್ನೂ ಜಾತೀಯ ಕಲಹವನ್ನೂ ವಿದೇಶ ಸಂಸ್ಕೃತಿಗಳನ್ನು ಹೀರಿಕೊಳ್ಳುವ ಭಾರತದ ವೈಶಿಷ್ಟ್ಯದೊಂದಿಗೆ ಹೋಲಿಸಿ ನೋಡಿದಾಗ ಸೋಜಿಗವಾಗಿ ಕಾಣುವುದು. ಹೀಗಿಂತು ಭಾರತದ ಈ ನೈಜ ವೈಶಿಷ್ಟ್ಯದಿಂದ ಅನೇಕ ಪರರಾಷ್ಟ್ರಗಳ ಜನರು ಭಾರತದ ಸಂಸ್ಕೃತಿಗೆ ಶರಣು ಹೊಂದು ಅಪ್ಪಟ ಭಾರತೀಯರಾದರು.

ಹೊಸ ಅಕ್ಕಿಯ ಉಪಯೋಗ.

ಹೊಸ ಅಕ್ಕಿಯನ್ನು ಊಟಕ್ಕೆ ಉಪಯೋಗಿಸಿದ ಕಾರಣ ಹೊಟ್ಟೆಯಲ್ಲಿ ಒಂದು ಬಗೆಯ ನೋವೂ, ಭೇದಿಯೂ ಉಂಟಾಗುವುದು ಪ್ರತಿಯೊಬ್ಬರ ಅನುಭವವಾಗಿದೆ. ಈ ಅನುಭವದ ದೆಸೆಯಿಂದ ತಿಳುವಳಿಕೆಯುಳ್ಳವರು [illegible] ಹೊಸ ಅಕ್ಕಿಯ ಉಪಯೋಗ ಮಾಡುವದಿಲ್ಲ.

ಒಂದು ಸೇರು ಹೊಸ ಅಕ್ಕಿಯನ್ನೂ, ಒಂದು ಸೇರು ಹಳೇ ಅಕ್ಕಿಯನ್ನೂ ತೂಕ ಮಾಡಿದರೆ ಹೊಸ ಅಕ್ಕಿಯೇ ಹಳೇ ಅಕ್ಕಿಗಿಂತಲೂ ತೂಕ ಹೆಚ್ಚು. ಹೊಸ ಅಕ್ಕಿಯಲ್ಲಿ ನೀರಿನ ಅಂಶವು ಹೆಚ್ಚಾಗಿರುವುದೇ ಇದಕ್ಕೆ ಕಾರಣ. ಎರಡು ಬಗೆಯ ಅಕ್ಕಿಯ ರಸವೂ, ಗುಣವೂ ಒಂದೆ. ಆದರೆ ಹೊಸ ಅಕ್ಕಿಯಲ್ಲಿ ನೀರಿನ ಅಂಶವು ಅಧಿಕವಾದ ಕಾರಣ ಹೊಟ್ಟೆಯ ಉದರ ರೋಗಕ್ಕೆ ಕಾರಣವಾಗುವದು. ಮಳೆ ಹೆಚ್ಚಾದ ಪ್ರದೇಶದಲ್ಲಿ ಬೆಳೆ ಅಕ್ಕಿಯು ದವಿಯಿಂದ ಹೊಟ್ಟೆಯ ವ್ಯಾಧಿ ಹುಟ್ಟುತ್ತದೆಂದು ಅನುಭವಶಾಲಿಗಳ ಮತದ ಅಭಿಪ್ರಾಯವಾಗಿದೆ.

ಈ ರೋಗವನ್ನು ಎರಡು ಬಗೆಯ ಉಪಾಯಗಳಿಂದ ನಿವಾರಣೆ ಮಾಡಿಕೊಳ್ಳಬಹುದು.

(೧) ಭತ್ತವನ್ನು ಅಕ್ಕಿ ಮಾಡುವದಕ್ಕಿಂತ ಮೊದಲು ಎರಡು ದಿವಸ ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಬೇಕು.

(೨) ಮೇಲೆ ಹೇಳಿದಂತೆ ಒಣಗಿಸಲು ಅವಕಾಶವಿಲ್ಲದೆ ಹೋದರೆ ಅಕ್ಕಿಯನ್ನು ಅನ್ನ ಮಾಡುವದಕ್ಕೆ ಮೊದಲು ಅದರ ನೀರಿನ ಅಂಶವು ಆರುವಂತೆ ಬಾಣಲೆಯಲ್ಲಿ ಸ್ವಲ್ಪ ಹೊತ್ತಿಗೆ ಬೆಚ್ಚಗೆ ಮಾಡಬೇಕು.

ಡಾ|| ಸಿ. ಬಿ. ಕಾರ್ಯಪ್ಪ,
ಮಲೇರಿಯಾ ಆಫೀಸರು,
ಮಡಿಕೇರಿ, ಇನ್ ಚಾರ್ಜ ಆರೋಗ್ಯ ಇಲಾಖೆ
ತಾ. 12-2-49.

Edited, Printed and Published by P. I. Bellhappa at 'Kodagu' Press, Mercara, for 'Kodagu' Ltd.

Reg. No. M. 1580.
'KODAGU' MERCARA. (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 4-8-0

ಸಂಪುಟ ೨೭ | ತಾರೀಕು ೧-೪-೧೯೪೯ನೇ ಶುಕ್ರವಾರ | ಸಂಚಿಕೆ ೩೩

ಜಾರಿಗೆ ತಂದು ಈ ತೆರಿಗೆ ಹಾಕಿದ್ದರೆ ಒಪ್ಪಬಹುದಿತ್ತು. ಅದನ್ನು ಮಾಡದೆ ಈ ತೆರಿಗೆಗೆ ಅವಕಾಶಕೊಡಬಾರದು. ಈ ಮಸೂದೆಯನ್ನು ಸರಕಾರವು ಹಿಂತೆಗೆದುಕೊಳ್ಳಬೇಕು. ಕೊಡಗಿನಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವು ಜಿಲ್ಲಾ ಬೋರ್ಡಿನ ಜವಾಬ್ದಾರಿಯಾಗಿದೆ. ಜಿಲ್ಲಾ ಬೋರ್ಡಿನ ಆರ್ಥಿಕ ಸ್ಥಿತಿಯು ಚೆನ್ನಾಗಿಲ್ಲ. ಅದರ ಉದ್ಯೋಗಿಗಳಿಗೆ ಕೊಡುವ ವೇತನವು ತೃಪ್ತಿಕರವಾಗಿಲ್ಲ. ಗ್ರಾಮೀಣ ಜನತೆಗೆ ಯೋಗ್ಯ ವಿದ್ಯೆ ಕೊಡಲ್ಪಡಬೇಕು. ಸ್ವರಾಜ್ಯ ಬಂದಿದ್ದರೂ ಕೊಡಗಿನ ಸರಕಾರವು ಜನತೆಯ ಸರಕಾರವಾಗಿಲ್ಲ.'

ಗಳನ್ನು ಮೆಚ್ಚದಿರಲಾರೆ. ಹಿಂದಿನ ಜಿಲ್ಲಾ ವಿದ್ಯಾಧಿಕಾರಿಯನ್ನು ಬಲಾತ್ಕಾರದಿಂದ ನಿವೃತ್ತಿಗೊಳಿಸಿದ್ದು ಅನ್ಯಾಯ.'

ಶ್ರೀ ಕೆ. ಬಿ. ಅಪ್ಪಯ್ಯನವರು.

ಯುದ್ಧೋತ್ತರ ಪುನರ್ರಚನಾ ಇಲಾಖೆಗೆ ೩೩ ಲಕ್ಷ ಹಣವಿರಿಸಿದರೂ ಕೊಡಗು ಸರಕಾರದ ಉಳಿತಾಯ ೪೮ ಲಕ್ಷದಷ್ಟು ಇರುವದೆಂಬುದು ಕೊಡಗಿನ ಆರ್ಥಿಕ ಉತ್ತಮ ಸ್ಥಿತಿಯನ್ನು ಸೂಚಿಸುತ್ತದೆ. ಈ ವರ್ಷವು ಸ್ಮರಣೀಯವಾದುದು. ೧೦ ಲಕ್ಷ ಖರ್ಚಿನಿಂದ ಕೊಡಗಿಗೊಂದು ಕಾಲೇಜಾಗಲಿದೆ. ಕೊಡಗಿನಲ್ಲಿ ತಾರೀಕು ೧-೪-೪೯ ರಿಂದ ಪ್ರಾರಂಭಗೊಳ್ಳಲಿರುವ ಪಾನನಿ-

ಕೊಡಗು ನ್ಯಾಯ ಶಾಸನ ಸಭೆಯ ಬಡ್ಜೆಟ್ ಮೀಟಿಂಗು.

ತಾರೀಕು ೨೮-೩-೪೯ರಿಂದ ಕೊಡಗು ನ್ಯಾಯಶಾಸನ ಸಭೆಯ ಬಡ್ಜೆಟ್ ಮೀಟಿಂಗು ಪ್ರೆಸಿಡೆಂಟರಾದ ಚೀಫ್ ಕಮಿಷನರ ಅಧ್ಯಕ್ಷತೆಯಲ್ಲಿ ನಡೆಯಿತು. ಖಾ. ಬ. ಅಬ್ದುಲ್ ರಹಮಾನ್ ಖಾನ್ ಮತ್ತು ಶ್ರೀ ಸಿ. ಎಂ. ಪೂಣಚ್ಚನವರಲ್ಲದೆ ಎಲ್ಲಾ ಸದಸ್ಯರೂ ಹಾಜರಿದ್ದರು. ಮೀಟಿಂಗು ಪ್ರಾರಂಭವಾಗುವ ಮೊದಲು ಅಧ್ಯಕ್ಷರು ಶ್ರೀಮತಿ ಸರೋಜಿನಿದೇವಿಯವರ ನಿಧನಕ್ಕೆ ಸಂತಾಪ ಸೂಚಿಸುವ ಠರಾವನ್ನು ಮುಂದಿಟ್ಟು ಅವರ ಅಮೂಲ್ಯ ಸೇವೆ, ತ್ಯಾಗ, ಅಡಳಿತ ದಕ್ಷತೆಗಳ ವಿಚಾರ ಮಾತಾಡಿದರು. ಶ್ರೀ ಪಿ. ಐ. ಬೆಳ್ಯಪ್ಪನವರು ಕೋಮುವಾರು ಐಕ್ಯದ ಪ್ರತೀಕವಾಗಿದ್ದ ಅವರ ಗುಣಗಾನ ಮಾಡಿದರು. ಠರಾವು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು. ನಂತರ ಪ್ರಶ್ನೋತ್ತರಗಳು ನಡೆದುವು. ಇದಾದ ಮೇಲೆ ಸರಕಾರದ ಆರ್ಥಿಕ ಸದಸ್ಯರು ಕೊಡಗು ಸರಕಾರದ ೧೯೪೯–೫೦ನೇ ಸಾಲಿನ ಬಡ್ಜೆಟ್ಟನ್ನು ಸಭೆಯ ಮುಂದಿಟ್ಟರು. ಇವರ ಭಾಷಣದ ಸಾರಾಂಶವನ್ನು ಬೇರೊಂದೆಡೆ ಕೊಡಲಾಗಿದೆ. ಬಡ್ಜೆಟ್ಟನ್ನು ಸಭೆಯ ಮುಂದಿಟ್ಟ ನಂತರ ಸದಸ್ಯರು ಬಡ್ಜೆಟ್ಟಿನ ಮೇಲೆ ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡಿದರು.

ಶ್ರೀ. ಎಸ್. ಎಸ್. ನಾರಾಯಣ ಮೂರ್ತಿಯವರು.

'ಸಭೆಯ ಮುಂದಿರಿಸಲ್ಪಟ್ಟಿರುವ ಬಡ್ಜೆಟ್ಟಿನಲ್ಲಿ ಹೊಸ ವಿಚಾರಗಳೇನೂ ಇರುವದಿಲ್ಲ. ಬಡ್ಜೆಟ್ಟಿನಲ್ಲಿ ಇಡಲ್ಪಟ್ಟ ಹಣವು ಖರ್ಚು ಮಾಡಲ್ಪಡುವದಿಲ್ಲ. ಖರ್ಚು ಮಾಡಲ್ಪಟ್ಟ ಕೆಲವು ವಿಚಾರದಲ್ಲಿ ಅನಾವಶ್ಯಕ ಖರ್ಚು ಮಾಡಲ್ಪಟ್ಟಿದೆ. ರಾಷ್ಟ್ರದ ಪ್ರತಿಯೊಂದು ಕಾಸನ್ನೂ ಸದುಪಯೋಗಗೊಳಿಸುವ ಜವಾಬ್ದಾರಿ ಸರಕಾರಕ್ಕಿಲ್ಲ. ಮಡಿಕೇರಿಯ ಡ್ರೈನೇಜಿಗೆ ಹಾಕಿದ ಹಣ ವ್ಯರ್ಥ. ಸರಕಾರವು ಹೆಚ್ಚು ದಕ್ಷವಾಗಿ ಇದನ್ನು ನಡೆಸಬೇಕಿತ್ತು. ಇದು ಜನತೆಗೆ ಆದರ್ಶವಾಗಿಲ್ಲ. ಬದಲು ಸರಕಾರವು ಜನರಿಂದ ದನ ಸಾಕುವದನ್ನು ಕಲಿಯಬೇಕಿದೆ. ಹೆಚ್ಚು ಬೆಳೆ ಬೆಳೆಸುವ ವಿಚಾರದಲ್ಲಿ ಕೇಂದ್ರ ಸರಕಾರವು ಧಾರಾಳತನ ತೋರಿಸಿದರೂ ನಮ್ಮ ಸರಕಾರವು ಅನುಸರಿಸಿದ ನೀತಿಯು ಅಸಹನೀಯವಾಗಿದೆ. ವ್ಯವಸಾಯ ಇಲಾಖೆಗೆ ಕೊಟ್ಟ ಸಹಾಯ ಸಾಲದು. ಜಾನುವಾರು ಇಲಾಖೆ ಮತ್ತು ಪಿ. ಡಬ್ಲ್ಯು. ಡಿ. ಇವುಗಳ ಸ್ಥಿತಿ ಶೋಚನೀಯವಾಗಿದೆ. ಪ್ರತಿಯೊಂದಕ್ಕೂ ಕೆಲಸಗಾರರು ಮತ್ತು ಸಾಹಿತ್ಯಗಳು ದೊರೆಯುವದಿಲ್ಲವೆಂಬ ಮಾತನ್ನು ನಂಬಲಾಗುವದಿಲ್ಲ.'

ಶ್ರೀ ಜೆ. ಎಚ್. ಸ್ಮಾಟ್ ಇವರು.

'ಖರ್ಚು ಮಾಡಲ್ಪಡುವ ಹಣವು ದೇಶದ ಸಾರ್ವಜನಿಕ ಹಿತಕ್ಕಾಗಿ ಖರ್ಚು ಮಾಡಲ್ಪಡಬೇಕು. ವ್ಯವಸಾಯಗಾರರ ನಾಡಾಗಿರುವ ಕೊಡಗಿನಲ್ಲಿ ವ್ಯವಸಾಯವು ಬಿದ್ದು ಹೋಗುತ್ತಿದೆ. ನೀರಾವರಿ ಯೋಜನೆಯು ತೃಪ್ತಿಕರವಾಗಿಲ್ಲ. ಕೊಡಗಿನ ಜಾನುವಾರುಗಳ ಸ್ಥಿತಿ ದಿನೇ ಕೆಳದರ್ಜೆಗಿಳಿಯುತ್ತಿದೆ. ಸರಕಾರವು ಸರಬರಾಯಿ ಮಾಡುವ ಗೊಬ್ಬರವು ಯೋಗ್ಯರೀತಿಯಲ್ಲಿ ಉಪಯೋಗಿಸಲ್ಪಡುವಂತೆ ನೋಡಬೇಕು. ಹೆಚ್ಚು ಬೆಳೆಯ ಪ್ರಚಾರವು ನಡೆಯುತ್ತಿದ್ದರೂ ವಾಸ್ತವವಾಗಿ ಈ ವರ್ಷ ಬೆಳೆ ಕಡಿಮೆಯಾಗಿದೆ. ಕಿತ್ತಳೆ, ಕಾಫಿ, ಏಲಕ್ಕಿಗೆ ಬರುವ ಖಾಯಿಲೆಯ ವಿಚಾರ ಸರಕಾರವು ಹೆಚ್ಚು ಆಸಕ್ತಿ ವಹಿಸಿದಂತೆ ತೋರುವದಿಲ್ಲ. ಕಳೆದ ಮೀಟಿಂಗಿನಲ್ಲಿ ಮೈಸೂರಿನಿಂದ ವಿದ್ಯುಚ್ಛಕ್ತಿ ತರುವ ವಿಚಾರ ಪ್ರೆಸಿಡೆಂಟರು ಹೇಳಿದರು. ಆದರೆ ಈ ವಿಚಾರ ಈ ವರೆಗೆ ಯಾವದೂ ಆದಂತೆ ತೋರುವದಿಲ್ಲ. ಕೊಡಗಿನಲ್ಲಿ ತೆಗೆದು ಉಣ್ಣುವವರ ಉಪಯೋಗಕ್ಕಾಗಿ ಪ್ರಾಂತೀಯ ನಿಕ್ಷೇಪವೊಂದನ್ನು ಇಡಬೇಕು. ಅಬ್ಕಾರಿ ಪದಾರ್ಥಗಳನ್ನು ನಿಕ್ಷೇಪವಿಡಲು ಅಲ್ಲಲ್ಲಿ ಯೋಗ್ಯ ಕಟ್ಟಡಗಳನ್ನು ಮಾಡಬೇಕು. ಸುಲಭ ದರದಲ್ಲಿ ಉಪಯೋಗಿಸುವವರಿಗೆ ಧಾನ್ಯ ಒದಗಿಸಿ ಬರುವ ನಷ್ಟವನ್ನು ಸರಕಾರವು ವಹಿಸಿಕೊಳ್ಳಬೇಕು. ವೈದ್ಯಕೀಯ ಮತ್ತು ಸಾರ್ವಜನಿಕ ಆರೋಗ್ಯದ ಬಗ್ಗೆ ಇನ್ನೂ ಹೆಚ್ಚು ಕೆಲಸ ಮಾಡುವದು ಸಾಧ್ಯವಿದೆ. ಮಲೇರಿಯಾವು ನಾವು ನೆನಸಿದಕ್ಕಿಂತಲೂ ಕಡಿಮೆಯಾಗಿದೆ. ಈ ಪ್ರಯತ್ನ ಮುಂದರಿಯಬೇಕು.'

ಶ್ರೀ. ಕೆ. ಎಂ ದೇವಯ್ಯನವರು.

'ಉಳಿತಾಯ ಬಡ್ಜೆಟ್ಟಿಗಾಗಿ ವಂದಿಸುತ್ತೇನೆ. ರಾಷ್ಟ್ರರಚನಾ ಕಾರ್ಯಕ್ರಮಗಳಿಗೆ ಸಂಕಷ್ಟ ಹಣ ಖರ್ಚು ಮಾಡದೆ ಉಳಿತಾಯ ತೋರಿಸಿದ್ದಾಗಿದೆ. ಬಡ್ಜೆಟ್ಟಿನಲ್ಲಿ ಹಣವಿಟ್ಟರೂ ಅದನ್ನು ಖರ್ಚು ಮಾಡದ ನೀತಿ ಯೋಗ್ಯವಲ್ಲ. ಸರಕಾರದಲ್ಲಿ ಉಳಿತಾಯ ಹಣ ೪೮ ಲಕ್ಷವಿದ್ದರೂ ಇದರ ಮೇಲೆ ವ್ಯವಸಾಯ ಆದಾಯ ತೆರಿಗೆ ಹಾಕಲು ಯೋಚಿಸಿದ್ದು ಸಮರ್ಥನೀಯವಲ್ಲ. ಪಾನನಿರೋಧವನ್ನು ಸಂಪೂರ್ಣ

ಶ್ರೀ. ಎಚ್. ಬಿ. ಅಣ್ಣಯ್ಯನವರು.

'ಬಡ್ಜೆಟ್ಟಿನಲ್ಲಿ ಬೇಕಷ್ಟು ಅಂಕೆಸಂಖ್ಯೆಗಳಿವೆ. ಆದರೆ ಅವು ಜಾರಿಯಲ್ಲಿ ಬರುತ್ತಿಲ್ಲ. ಸರಕಾರವು ಮಾಡುತ್ತಿರುವ ಖರ್ಚು ಯೋಗ್ಯ ಮಾರ್ಗದಿಂದ ಆಗುತ್ತಿಲ್ಲ. ರಾಷ್ಟ್ರದ ಆರ್ಥಿಕ ಪರಿಸ್ಥಿತಿಯ ಬಗ್ಗೆ ಸರಕಾರದ ನೀತಿ ಹೊಗಳಲರ್ಹವಾಗಿಲ್ಲ. [illegible] ಇಲಾಖೆ ಬಡ್ತಿಯಾಗಿ [illegible] ಸಿಬ್ಬಂದಿಗಳಿದ್ದರೂ ಜನರ [illegible] ಉಪಯುಕ್ತವಾದ ಕೆಲಸ ಮಾಡುತ್ತಿಲ್ಲ. ಕೆಲಸಕ್ಕೆ ಯೋಗ್ಯ [illegible] ಒದಗಿಸದೆ ಸಿಬ್ಬಂದಿಗಳನ್ನು ಹೆಚ್ಚಿಸುವದರಿಂದ ಫಲವೇನು? ಶಾಸ್ತ್ರೀಯ ವ್ಯವಸಾಯ ಕ್ರಮವು ಜಾರಿಯಲ್ಲಿ ಬರುವಂತಾಗಬೇಕು. ಗೊಬ್ಬರ ಮತ್ತು ಇತರ ಹತ್ಯಾರುಗಳ ಸರಬರಾಯಿಯು ಸಕಾಲದಲ್ಲಿ ಆಗಬೇಕು. ನೀರಾವರಿ ಯೋಜನೆಯ [illegible] ಇಲ್ಲವೆನ್ನಬಹುದು. ಸರಕಾರವು ಈ ಪ್ರಾಮುಖ್ಯ ವಿಚಾರಗಳನ್ನು ಕಡೆಗಣಿಸಬಾರದು. ಇರುವ ನೀರಾವರಿ ಯೋಜನೆಯ ಕಾಲುವೆಗಳು ಮುಚ್ಚಿ ಅಯೋಗ್ಯವಾಗಿವೆ. ಚೀಫ್ ಕಮಿಷನರು ಜನರ ಹಿತಕ್ಕಾಗಿ ಪ್ರಯತ್ನಿಸುತ್ತಿರುವದು ಸ್ತುತ್ಯಾರ್ಹ.'

ಶ್ರೀ. ಕೆ. ಎಂ. ಕುಶಾಲಪ್ಪನವರು.

'ಬಡ್ಜೆಟ್ಟಿನಲ್ಲಿ ಹಣವಿಟ್ಟರೂ ಕಾರ್ಯ ಕೈಗೂಡುವದರಲ್ಲಿ ಬಹು ವಿಳಂಬವಾಗುತ್ತಿದೆ. ಪಿ. ಡಬ್ಲ್ಯು. ಡಿ. ಇಲಾಖೆಯು ಎಚ್ಚರಗೊಳ್ಳಬೇಕು. ಇದು ಕೇಂದ್ರ ಸರಕಾರದ ಅಧೀನವಾಗಿದ್ದು ಚೀಫ್ ಕಮಿಷನರಿಗೆ ಇದರ ಮೇಲೆ ಹಿಡಿತವಿಲ್ಲದೆ ತೊಂದರೆಯಾಗತೊಡಗಿದೆ. ಮಲೇರಿಯಾ ಇಲಾಖೆಗಾಗಿ ಕೇಂದ್ರ ಸರಕಾರವನ್ನು ವಂದಿಸಬೇಕಾಗಿದೆ. ಈ ಇಲಾಖೆಯು ಮಾಡಿದ ಕೆಲಸವು ಅಷ್ಟೇನು ತೃಪ್ತಿಕರವಾಗಿಲ್ಲ. ಅವರು ಕೇವಲ ಮುನಿಸಿಪಾಲಿಟಿ ಮತ್ತು ಪಟ್ಟಣಗಳಲ್ಲಿ ಕೆಲಸ ಮಾಡುತ್ತಾರೆ. ಗ್ರಾಮಗಳ ಕಡೆ [illegible] ಮನ ಕಡಿಮೆ. ಈಗ ಇವರು ಉಪಯೋಗಿಸುವ ಡಿ. ಡಿ. ಟಿ. [illegible] ಷ್ಟು ಫಲಪ್ರದವಾಗಿಲ್ಲ. [illegible] ಲಾಖೆಗಿಂಥಾ ಕೊಡಗಿನ [illegible] ಸಹಾಯದ ಬಗ್ಗೆ ಹೆಚ್ಚಿನ [illegible] ಯೇನ್ನ ಬೇಕು! ಸರ[illegible] ಕಾರ್ಯಕ್ರಮ ಕೈಕೊ[illegible] ಅನೇಕ ಕಿತ್ತಳೆ ತೋ[illegible] ವಾಗುವವು [illegible] ಲೇಜಿನ ವಿಚಾರ

ರೋಧವನ್ನು ತರಲು ನಿಶ್ಚಯಿಸಿದ್ದು ತೃಪ್ತಿಕರವಾಗಿದೆ. ಫಾರೆಸ್ಟ್ ಇಲಾಖೆಯ ಬಗ್ಗೆ ಈಗಿರುವ ಮರದ ಬೆಲೆ ಮುಂದೆಯೂ ಇರಲಾರದು. ಆದ್ದರಿಂದ ಇಲಾಖೆಯ ಬಗ್ಗೆಯ ಅನಾವಶ್ಯಕ ಖರ್ಚು ಕಡಿಮೆ ಮಾಡಬೇಕು. ವ್ಯವಸಾಯ ಇಲಾಖೆ ಹದ್ದುಮೀರಿ ಬೆಳೆದು ಇಂದು ನೂರಾರು ೯ ಲಕ್ಷ ರೂಪಾಯಿಗಳನ್ನು ವೆಚ್ಚಮಾಡುತ್ತಿದೆ. ಈ ಇಲಾಖೆಯು ಗ್ರಾಮೋತ್ತರಗಳಲ್ಲಿ ದುಡಿಯಬೇಕು. ಕಿತ್ತಳೆ, ಕಾಫಿ ಮೊದಲಾದವುಗಳಿಗೆ ಬರುವ ವಿವಿಧ ಖಾಯಿಲೆಗಳನ್ನು ತಡಗಟ್ಟಬೇಕು. [illegible] ಮತ್ತು ಹಾಲು ಸರಬರಾ[illegible] ಕೇಂದ್ರಗಳು ತೃಪ್ತಿಕರವಾಗಿ [illegible] ಬೇಕು [illegible] ಮಡಿಕೇರಿಯ [illegible] ಡ್ರೈನೇಜಿನ ವಿಚಾರ [illegible] ಸ ಇಟ್ಟಿದ್ದರು. ಆದರೆ [illegible] ಯಾಯಿತು. ಈಗಿನ [illegible] ಯು ತಕ್ಕ ಮುತುವರ್ಜಿ [illegible] ದು ಆಶಿಸಲಾಗಿದೆ. [illegible] ಯ ಸಾಲದ ವಿಚಾರ [illegible] ದು ತೃಪ್ತಿಕರ. [illegible] ಧಾನ್ಯಗಳನ್ನು [illegible] ಯೋಗ್ಯ ಕಟ್ಟಡಗಳ [illegible] ರ್ಚನ್ನು [illegible] ಪಿ. ಡಬ್ಲ್ಯು. [illegible] ತಕ್ಕ [illegible]

'ಬಡ್ಜೆಟ್ಟಿನಲ್ಲಿಟ್ಟ ಹಣ ಖರ್ಚಾಗಬೇಕು'

ತೆ ಇಲ್ಲದೆ. ಕೊಡಗಿನಲ್ಲಿಯು ಜಾನುವಾರುಗಳ ಸ್ಥಿತಿ ಚೆನ್ನಾಗಿಲ್ಲ. ಸಂಖ್ಯೆಗೆ ಲಕ್ಷಗಟ್ಟಲೆ ಇದ್ದರೂ ಪ್ರಯೋಜನಕಾರಿಯಾಗಿಲ್ಲ. ಈ ಸನಿರೋಧದ ನೀತಿಗಾಗಿ ಕೊಡಗು ಆಡಳಿತವನ್ನು ಪ್ರಶಂಸಿಸುತ್ತೇನೆ. ಇದು ಬಡ ಜನರ ಸಂಕಷ್ಟಗಳನ್ನು ಸಾಮಾನ್ಯಮಟ್ಟಿಗೆ ನಿವಾರಿಸಬಹುದು. ಕಿತ್ತಳೆ, ಕಾಫಿ, ಬೆಳೆಯ ಮಟ್ಟಿಗೆ ಸರಕಾರವು ಹೆಚ್ಚಿನ ಗಮನವನ್ನೂ ಮಾಡುತ್ತಿಲ್ಲ. ಈ ಬಗ್ಗೆ ಹೆಚ್ಚು ಆಸಕ್ತಿ ವಹಿಸಿ ಸಹಾಯ ಮಾಡಬೇಕು.'

ಶ್ರೀ ಪಿ. ಎಂ. ನಾಣಮ್ಮಯ್ಯನವರು

'ಸಾಂಪ್ರದಾಯಿಕವಾದ ಬಡ್ಜೆಟ್ಟಿದು. ಸರಕಾರದ ಇಚ್ಛೆಯಂತೆ ಮಾಡಿಕೊಂಡದ್ದು. ಇದರ ಹಿನ್ನೆಲೆಯಲ್ಲಿ ಯಾವುದೇ ಆರ್ಥಿಕ ನೀತಿ ಇದ್ದಂತೆ ತೋರುವದಿಲ್ಲ. ಸ್ವರಾಜ್ಯ ಬಂದಿದ್ದರೂ ನಮಗೆ ದೇಶದ ಆರ್ಥಿಕ ವಿಚಾರದಲ್ಲಿ ಕೈ ಇಲ್ಲ. ಹಳೇ ಸಾಮ್ರಾಜ್ಯಶಾಹೀ ನೀತಿಯೇ ನಡೆಯುತ್ತಿದೆ. ಸರಕಾರಿ ಉದ್ಯೋಗಿಗಳು ತಾವು ಜನತೆಯ ಸೇವಕರೆಂದು ತಿಳಿದಂತಿಲ್ಲ. ಪಂ. ನೆಹರೂ ಮತ್ತು ರಾಜಾಜಿಯವರ ಉದಾಹರಣೆಯಿಂದಲಾದರೂ ಇವರು ಪಾಠ ಕಲಿಯಬೇಕು. ಕೊಡಗಿನ ಅತಿಭಾರ ಆಡಳಿತ ಯಂತ್ರವು ಅನಾವಶ್ಯಕ. ಅನಾವಶ್ಯದ ಅನೇಕ ಇಲಾಖೆಗಳನ್ನ ಇವನ್ನು ತೆಗೆದು ಹಾಕಿ ಆ ಹಣವನ್ನು ರಾಷ್ಟ್ರರಚನಾ ಕಾರ್ಯಕ್ಕೆ ವಿನಿಯೋಗಿಸುವದೊಳಿತು. ಗ್ರಾಮಾಭಿವೃದ್ಧಿ ಅಧಿಕಾರಿಯೊಬ್ಬರನ್ನು ನೇಮಿಸಲಾಗಿದೆ. ಗ್ರಾಮ ಸುಧಾರಣೆಯ ಮಾರ್ಗವಿಲ್ಲ. ಗ್ರಾಮದ ಅಭಿವೃದ್ಧಿ ಮಾಡಬೇಕಾದರೆ ಗ್ರಾಮದ ಜನತೆಯ ತೊಂದರೆ ಬಡತನಗಳ ಕಾರಣವನ್ನು ಮೊದಲು ಕಂಡುಹಿಡಿಯಬೇಕು. ಇದಕ್ಕೆ ಗ್ರಾಮಗಳ ಪರಿಶೀಲನೆಯಾಗಬೇಕು. ಇದಕ್ಕಾಗಿ ನಾಡು ಕಮಿಟಿಗಳನ್ನು ಸ್ಥಾಪಿಸಿ ಪ್ರಶ್ನಾ ಪ್ರಣಾಳಿಕೆಯೊಂದನ್ನು ತಯಾರಿಸಿ ಪರಿಸ್ಥಿತಿಯನ್ನು ಅಭ್ಯಾಸ ಮಾಡಬೇಕು. ಗ್ರಾಮಾಭಿವೃದ್ಧಿಯ ಯಾವ ಕೆಲಸ ಮಾಡಲು ಈ ಕಮಿಟಿಗಳ ಆಲೋಚನೆಯನ್ನು ಸರಕಾರ ತೆಗೆದುಕೊಳ್ಳಬೇಕು. ಕೊಡಗು ಜಿಲ್ಲಾ ಕಾಂಗ್ರೆಸ್ಸಿನ ಸಲಹೆಯನ್ನು ಚೀಫ್ ಕಮಿಷನರು ತೆಗೆದುಕೊಳ್ಳಬೇಕು. ಹರಿಜನ ಕಾರ್ಯದ [illegible] ಕಾಂಗ್ರೆಸ್ಸಿಗೆ ಹೆಚ್ಚಿನ ಜವಾಬ್ದಾರಿ [illegible] ಸರಕಾರವು ಇದನ್ನು ತಿಳಿದು [illegible] ಕೆಲಸ ಮಾಡಬೇಕಾಗಿದೆ."

ಶ್ರೀ [illegible] ಸೋಮಯ್ಯನವರು

'[illegible] ನಾಣಮ್ಮಯ್ಯನವರ ಅಭಿಪ್ರಾಯಕ್ಕೆ ನನ್ನ ಪೂರ್ಣ ಬೆಂಬಲವಿದೆ. [illegible] ಸಾಂಪ್ರದಾಯಿಕ ಬಡ್ಜೆಟ್ಟು. ಬ[illegible] ಕೇವಲ ಅಂಕೆ ಸಂಖ್ಯೆಗ[illegible] ಆರ್ಥಿಕ ನೀತಿ ಇಲ್ಲ. [illegible] ಅನೇಕ ವರ್ಷಗಳಂತೆಯೇ ಇದೊಂ[illegible] ಬಡ್ಜೆಟ್ಟಿನಲ್ಲಿ ಹಣ ಇಟ್ಟರೂ [illegible] ಮಾಡುವದಿಲ್ಲ. ಯಾವ [illegible] ಬಗ್ಗೆ ಕಾಣಿಸುವ [illegible] ತರುವ ಶಕ್ತಿ [illegible] ಮಾಡಬೇಕು? ೧೯೪೯— [illegible] ರೂ. ೧೦ ಲಕ್ಷವಿಟ್ಟಿರುವರು. ಇದನ್ನು ಖರ್ಚು ಮಾಡುವರೋ ತಿಳಿಯದು. ಸಾರ್ವಜನಿಕರಿಗೆ ತೋರಿಸಲಿಕ್ಕಾಗಿ ಈ ರೀತಿಯ ಹಣವಿಡುವದರಿಂದ ಪ್ರಯೋಜನವಿಲ್ಲ. ಕೊಡಗಿನಂಥಾ ಚಿಕ್ಕ ಪ್ರಾಂತದಲ್ಲಿ ಯೋಗ್ಯ ಜನರನ್ನೂ, ಸಾಹಿತ್ಯಗಳನ್ನೂ ಪಡೆಯುವದು ಕಷ್ಟವೆಂಬುದು ಗೊತ್ತು. ಕಳೆದ ೫ ವರ್ಷಗಳ ಅನುಭವದಿಂದ ಹೇಳುವದಾದರೆ ಬಡ್ಜೆಟ್ಟಿನಲ್ಲಿಟ್ಟ ಹಣದ ಶೇ. ೩೫ ರಷ್ಟು ಖರ್ಚು ಮಾಡಿಲ್ಲ. ಈ ವರ್ಷವೂ ಹಾಗೆಯೇ ಆಗುವದು. ಇಂದು ದೇಶದ ಕೂಗೆಂದರೆ ಆಹಾರ. ನಮ್ಮ ಪ್ರಾಂತವು ಈ ಮಾರ್ಗದಲ್ಲಿ ಇನ್ನೂ ಹೆಚ್ಚಿನದನ್ನು ಸಾಧಿಸುವದು ಸಾಧ್ಯವಿದೆ. ಈ ಮಾರ್ಗದಲ್ಲಿ ಖರ್ಚು ಮಾಡುವ ಹಣವು ಅದೂರದೃಷ್ಟಿಯ ಕಾರಣ ವ್ಯರ್ಥವಾಗುತ್ತಿದೆ. ಕಳೆದ ನಾಲ್ಕು ವರ್ಷಗಳಿಂದಲೂ ಹೆಚ್ಚಿಗೆ ಬೆಳೆಯಲು ಮಾಡಿದ ಪ್ರಯತ್ನದಿಂದ ಈ ವರ್ಷ ಬೆಳೆ ಕಡಿಮೆಯೆಂದರೆ? ನಮ್ಮಲ್ಲಿ ಉಳುವರಿ ಕಾಣಿಸದೆ ಈಗ ಪ್ರಯತ್ನಿಸದಿದ್ದರೆ ಮತ್ತಾವಾಗ? ಜಾನುವಾರು ಇಲಾಖೆಯಲ್ಲಿ ಅವ್ಯವಸ್ಥೆ ಇದೆ. ಚೀಫ್ ಕಮಿಷನರು ಅದನ್ನು ಪರಿಶೀಲಿಸುತ್ತಿರುವದು ತೃಪ್ತಿಕರ. ಡಿ. ಡಿ. ಟಿ. ಸ್ಪ್ರೇ ಮಾಡುವದು ಇತ್ತೀಚೆಗೆ ಯಶಸ್ವಿಯಲ್ಲ. ಅವರು ಉಪಯೋಗಿಸುತ್ತಿರುವ ಔಷಧಿಯು ಹಿಂದಿನಂತಿರಲಿ. ಗ್ರಾಮಾಂತರಗಳಲ್ಲಿ ಈ ಕೆಲಸ ಸಾಗಬೇಕು. ಇದಕ್ಕೆ ಯೋಗ್ಯ ಅನುಕೂಲತೆಗಳನ್ನು ಈ ಇಲಾಖೆಗೆ ಕೊಡಬೇಕು. ವ್ಯವಸಾಯ ಇಲಾಖೆಗೆ ಇರಿಸಿದ ೮ ಲಕ್ಷದಲ್ಲಿ ೩ ಲಕ್ಷವು ಗೊಬ್ಬರ ಮತ್ತಿತರ ಸರಬರಾಯಿಗಾಗಿ, ಉಳಿದ ರೂ. ೫ ಲಕ್ಷ ಕೇವಲ ಸಿಬ್ಬಂದಿ ಖರ್ಚಾಗಿದೆ. ಈ ಇಲಾಖೆಯು ಜನತೆಗಾಗಿ ಹೆಚ್ಚಿನದೇನನ್ನೂ ಮಾಡಿಲ್ಲ. ಕಾಲೇಜಿಗಾಗಿ ಮಂದನೆ ಪ್ರಾಥಮಿಕ ಮತ್ತು ವಯಸ್ಕರ ಶಿಕ್ಷಣಕ್ಕಾಗಿ ಹಣವಿಟ್ಟಿದ್ದು ಸಾಲದು. ಪ್ರೌಢ ಮತ್ತು ದನ ಪದ್ಧತಿಯು ಬರುವ ಕಾಲಕ್ಕೆ ನಿಶ್ಚಯ ಇಲ್ಲದಿದ್ದರೆ ಅದು ನಿಷ್ಪ್ರಯೋಜಕವಾಗುವದು. ಈ ಬಗ್ಗೆ ಸರಕಾರದ ದೃಷ್ಟಿ ಸಾಲದು. ವ್ಯಾಪಾರಿಕೆಯ ಶಬ್ದವೇ ಈ ಬಡ್ಜೆಟ್ಟಿನಲ್ಲಿಲ್ಲ. ಮೀನು ಸಾಕುವದನ್ನು ವ್ಯಾಪಾರಿಕೆ [illegible] ಇದು ಸ್ವಾಸ್ಥ್ಯದ ಆಹಾರ ಧಾನ್ಯಗಳ ಬೆಲೆ ಇಳಿದಾಗ ಬೇರೆ ಕೈಗಾರಿಕೆ ಇಲ್ಲದಿದ್ದರೆ ಜೀವನ ಕಷ್ಟವಾಗುವದು. ಶ್ರೀ ನಾಣಮ್ಮಯ್ಯನವರು ಸೂಚಿಸಿದ ನಾಡು ಸಮಿತಿಗಳು ಈ ಗುಡಿ ಕೈಗಾರಿಕೆಗಳನ್ನು ಸ್ಥಾಪಿಸುವ ಪ್ರಯತ್ನ ಮಾಡಿದರೆ ಹಿತವಾಗುವದು. ಇದು ಸಾಮಾನ್ಯ ಬಡ್ಜೆಟ್ಟು. ನೀರಾವರಿ ಮತ್ತಿತರ ಉಪಯುಕ್ತ ಯೋಜನೆಗಳು ಕಡೆಗಣಿಸಲ್ಪಟ್ಟಿವೆ.'

ಶ್ರೀ ಕೆ. ಮಲ್ಲಪ್ಪನವರು

'ಕೊಡಗಿನ ಸರಕಾರಕ್ಕೆ ಬೇರೆ ಸರಕಾರಗಳಿಗಿದ್ದಂತೆ ನಿರಾಶ್ರಿತರ ಸಮಸ್ಯೆ ಮೊದಲಾದ ತೊಂದರೆಗಳಿಲ್ಲ. ಆದರೂ ಸರಕಾರವು ತನ್ನ ಧೈರ್ಯ ಮತ್ತು ಸಂಪತ್ತನ್ನು ಯೋಗ್ಯ ರೀತಿ ಜನಹಿತಕ್ಕಾಗಿ ಉಪಯೋಗಿಸದಿರುವದು ವ್ಯಸನಕರ. ಕೋಳಿ, ಹಂದಿ ಸಾಕುವ, ಮಡಿಕೇರಿ ಹಾಲು ಸರಬರಾಯಿಯಂಥಾ ವಿಚಾರಗಳಿಗೆ ಹಣ ವೆಚ್ಚ ಮಾಡಿದ್ದು ವ್ಯರ್ಥ. ಕೊಡಗಿನ ಜನತೆಯು ಶೇಕಡ ೮೫ ರಷ್ಟು ಅವಿದ್ಯಾವಂತರು. ಇವರ ಬಗ್ಗೆ ಸರಕಾರ ಏನೂ ಮಾಡಿಲ್ಲ. ಕಾಲೇಜು ಆಗುವದು ಒಳ್ಳೆಯದು. ಅದಕ್ಕೆ ಹತ್ತು ಲಕ್ಷ ವೆಚ್ಚಮಾಡಿದರೆ ಪ್ರಾಥಮಿಕ ಮತ್ತು ವಯಸ್ಕರ ಶಿಕ್ಷಣಕ್ಕಾಗಿ ೨೦ ಲಕ್ಷ ವೆಚ್ಚವಾಗಬೇಕಿತ್ತು. ಬಡ್ಡಿಯ ಶಿಕ್ಷಣಕ್ಕೆಂದು ಇಟ್ಟ ಒಂದು ಲಕ್ಷ ರೂಪಾಯಿ ವೆಚ್ಚವಾಗದೆ [illegible] ವಿದ್ಯಾಯೋಜನೆಯನ್ನೇ ಬದಲು ಮಾಡಬೇಕು. ಮೂಲ ವಿದ್ಯಾಕ್ರಮವು ಜಾರಿಯಲ್ಲಿ ಬರಬೇಕು. ಉಳುವರಿ ಹಣವಿರುವ ಈ ಕಾಲದಲ್ಲೇ ಅದನ್ನು ಜಾರಿಯಲ್ಲಿ ತರಬೇಕು. ಸರಕಾರಿ ಶಾಲೆಯ ಅಧ್ಯಾಪಕರಿಗೂ ಬೋರ್ಡಿನ ಅಧ್ಯಾಪಕರಿಗೂ ವೇತನದಲ್ಲಿ ವ್ಯತ್ಯಾಸವಿಟ್ಟಿರುವದು ತಪ್ಪು. ಇವರ ಬೇಡಿಕೆ ಸಲ್ಲಿಸಲ್ಪಡದಿದ್ದರೆ ವಿದ್ಯಾಪ್ರಗತಿಯಾಗದು. ಒಂದೋ ಸರಕಾರವು ಬೋರ್ಡಿಗೆ ಯೋಗ್ಯ ಹಣ ಸಹಾಯ ಮಾಡಬೇಕು. ಇಲ್ಲದಿದ್ದರೆ ಪ್ರಾಥಮಿಕ ವಿದ್ಯೆಯ ಜವಾಬ್ದಾರಿಯನ್ನು ತಾನೇ ವಹಿಸಿಕೊಳ್ಳಬೇಕು. ಇಂಡಿಯಾ ಸರಕಾರವು ಹೊರಗಿನಿಂದ ಆಹಾರ ತರಿಸಲು ೧೩೦ ಕೋಟಿ ವೆಚ್ಚ ಮಾಡುತ್ತಿದೆ. ಕೊಡಗಿನಂಥಾ ಪ್ರಾಂತದಲ್ಲಿ ಆಹಾರ ಧಾನ್ಯದ ಬೆಳೆಯನ್ನು ಇನ್ನೂ ಹೆಚ್ಚಿಸಿ ಈ ಖರ್ಚನ್ನು ಕಿಂಚಿತ್ತಾದರೂ ಕಡಿಮೆ ಮಾಡುವದು ಸಾಧ್ಯವಿದೆ. ನೀರಾವರಿ ಯೋಜನೆ ತೃಪ್ತಿಕರವಾಗಿಲ್ಲ. ಪಶುವೈದ್ಯ ಇಲಾಖೆಯ ಒಳ್ಳೆ ಕೆಲಸವು ಶಾಶ್ವತ ಉಳಿಯುವಂತೆ ಮಾಡಬೇಕು. ಮುನ್ಸಿಪಾಲಿಟಿಗಳಿಗೆ ಧನ ಸಹಾಯ ಕೊಡಬೇಕು. ಕೊಡಗಿನಲ್ಲಿ ಕೈಗಾರಿಕೆಯೇ ಇಲ್ಲ. ಮೈಸೂರಿನಿಂದ ಇಲೆಕ್ಟ್ರಿಕ್ ಶಕ್ತಿ ತರುವ ಯೋಜನೆ ಬೇಗ ಆಗಬೇಕು. ಮಡಿಕೇರಿಯ ವಿದ್ಯುಚ್ಛಕ್ತಿ ಕಂಪನಿಯ ಕೆಲಸ ತೃಪ್ತಿಕರವಾಗಿಲ್ಲ. ಸರಕಾರವು ಇದನ್ನು ವಹಿಸಿಕೊಳ್ಳುವದು ಸೂಕ್ತವಾಗಿದೆ."

ಶ್ರೀ ಎಚ್. ಟಿ. ಮುತ್ತಣ್ಣನವರು

'ಬಡ್ಜೆಟ್ಟಿನ ವಿಚಾರ ನಂಬಿ ಅಭಿಪ್ರಾಯ ಕೊಡುತ್ತೇವೆ. ಇದರಿಂದ ಯಾರಿಗೆ ಹಿತವೋ ನನಗೆ ತಿಳಿಯದು. ಸರಕಾರವು ಅವನ್ನು ಗಮನಕ್ಕೆ ತೆಗೆದುಕೊಂಡಂತೆ ತೋರುವದಿಲ್ಲ. ತಾನು ಹಣ ಇಟ್ಟ ಕೆಲಸವನ್ನು ಮಾಡಲಾರದಿದ್ದರೆ ಈ ತೋರಿಕೆಯ ಆಡಂಬರವೇಕೆ? [illegible] ಇಲಾಖೆಗೆ ತುಂಬಾ ಕೆಲಸವಿದೆ. [illegible] ಸಂಬಳದ ದರ ನಿಶ್ಚಯಿಸಿದ್ದು ಕಡಿಮೆಯಾಯಿತು. ಪೂರ್ಣ ಪಾನನಿರೋಧವೆಂದು ನಾವು ಕೂಗುತ್ತಿರುವಾಗ ಸರಾಯಿ ಮಾರಾಟಮಾಡುವ ಹೊಸ ವಿಧಾನ ಒಂದನ್ನು ಸರಕಾರ ಕಂಡುಹಿಡಿದಿದೆ. ಕೊಡಗಿನ ಬಸ್ಸುಗಳ ಪ್ರಯಾಣ [illegible] ಸರಕಾರದ ಅಧಿಕಾರಿಗಳಿಗಾಗಿ ಬಸ್ಸುಗಳು ಗಂಟೆಗಳ ಕಾಲ ಕಾಯುವ ಪರಿಪಾಟಿ ಇನ್ನೂ ಇದೆ. ಬಸ್ಸುಗಳ ಸಂಖ್ಯೆ ಹೆಚ್ಚಾಗಬೇಕು. ವಿದ್ಯೆಯಲ್ಲಿ ಉತ್ತರ ಕೊಡಗು ಹಿಂದಿದೆ. ಸೋಮವಾರಪೇಟೆ ಹೈಸ್ಕೂಲ್ ಕಟ್ಟಡ ಇನ್ನೂ ಪ್ರಾರಂಭವಾಗದೆ ಹಾಗೆಯೇ ಇದೆ. ಕಾಲೇಜಾಗುವದು ಸಂತೋಷ. ಆಸ್ಪತ್ರೆಗಳಲ್ಲಿ ಔಷಧಿ ಇಲ್ಲ, ಸ್ಥಳವಿಲ್ಲ. ಆಸ್ಪತ್ರೆಗಳು ಸುಧಾರಣೆ ಆಗದಿದ್ದರೆ ನಿಷ್ಪ್ರಯೋಜಕ. ಬೇರೆ ಉದ್ಯೋಗಿಗಳು ಇಲ್ಲದಿರುವಾಗ ಸೋಮವಾರಪೇಟೆಯಿಂದ ವರ್ಗಾಯಿಸುವ ಪದ್ಧತಿ ನಿಲ್ಲಬೇಕು. ಆರೋಗ್ಯ ಇಲಾಖೆಯು ಯಾವ ಕೆಲಸ ಮಾಡುತ್ತಿದೆಯೋ ದೇವರಿಗೆ ಗೊತ್ತು. ಸೇನಿಟರಿ ಸಿಬ್ಬಂದಿಗಳು ಪಟ್ಟಣಗಳಲ್ಲಿ ಅಲೆದಾಡುತ್ತಿರುತ್ತಾರೆ. ಗ್ರಾಮಗಳಲ್ಲಿ ಹೆಚ್ಚಿನ ಕೆಲಸ ನಡೆಯಬೇಕು. ವ್ಯವಸಾಯ ಇಲಾಖೆ ಇರುವದು ಜನರಿಗೆ ತಿಳಿದಿಲ್ಲ. ಸಹಕಾರ ಚಳವಳಿಯು ಉತ್ತಮ ಕೆಲಸ ಮಾಡುತ್ತಿದೆ. ಹೊರಗಿನಿಂದ ಬಂದ ಅನೇಕ ಮಹನೀಯರು ಮುಕ್ತಕಂಠದಿಂದ ಇದನ್ನು ಹೊಗಳಿದ್ದಾರೆ. ಆದರೆ ಸರಕಾರವು ಇದಕ್ಕೆ ಸಾಕಷ್ಟು ಸಹಾಯ ಮಾಡುತ್ತಿಲ್ಲ. ಒಬ್ಬ ಅ. ರಿಜಿಸ್ಟ್ರಾರರನ್ನು ನೇಮಿಸಬೇಕು. ಪಿ. ಡಬ್ಲ್ಯು. ಡಿ. ಕೆಲಸ ಸಮರ್ಪಕವಿಲ್ಲ. ಖಾಸಗಿ ಜನರಿಗೆ ಕೆಲಸಗಾರರು ದೊರೆಯುತ್ತಿರುವಾಗ ಸರಕಾರಕ್ಕೆ ದೊರೆಯುತ್ತಿಲ್ಲವೆಂಬುದು ಹಾಸ್ಯಾಸ್ಪದ. ಈ ಇಲಾಖೆಯನ್ನು ಚೀಫ್ ಕಮಿಷನರ ಕೈಕೆಳಗೆ ತರಬೇಕು. ಅಕ್ಕಿ ಸರಬರಾಯಿ ಚೆನ್ನಾಗಿ ಆಗದ ಈ ಹಿಂದಿನ ಅನುಭವ ನಮಗಿದೆ. ಅದ್ದರಿಂದ ಸೋಮವಾರಪೇಟೆ ಮಡಿಕೇರಿಗಳಂಥಾ ಕಡೆ ಪ್ರಾಂತೀಕ ನಿಕ್ಷೇಪವಿಡಬೇಕು."

ಶ್ರೀ ಪಿ. ಐ. ಬೆಳ್ಯಪ್ಪನವರು

"ವಿಧಾಯಕವಾದ ಈ ಬಡ್ಜೆಟ್ಟಿಗಾಗಿ ಸರಕಾರಿ ಮೆಂಬರರನ್ನು ಶ್ಲಾಘಿಸುತ್ತೇನೆ. ಯುದ್ಧೋತ್ತರ ಪುನರ್ರಚನಾ ಯೋಜನೆಗೆ ಈ ವರ್ಷ ೩೭ ಲಕ್ಷ ರೂಪಾಯಿ ಇಟ್ಟಿರುವದು ತೃಪ್ತಿಕರ. ಈ ಮಹಾ ಖರ್ಚಿನ ನಂತರವೂ ೪೮ ಲಕ್ಷ ಉಳುವರಿ ಇದೆ. ಕಳೆದ ಕೆಲವು ವರ್ಷಗಳಿಂದ ಹೆಚ್ಚಾಗುತ್ತಿರುವ ಕೊಡಗಿನ ಆದಾಯವು ಕೊಡಗಿನ ಭವಿಷ್ಯದ ಮಟ್ಟಿಗೆ ತೃಪ್ತಿಕರವಾಗಿದೆ. ಯುದ್ಧೋತ್ತರ ಇಲಾಖೆಗೆ ಇಟ್ಟ ೩೭ ಲಕ್ಷವು ಈ ವರ್ಷ ಖರ್ಚಾದರೆ ಜನೋಪಯೋಗಿ ಅನೇಕ ಕೆಲಸಗಳಾಗುವವು. ಕೊಡಗಿಗೆ ಪ್ರಥಮ ದರ್ಜೆಯ ಕಾಲೇಜಾಗುವದು ಸ್ತುತ್ಯ. ಇದಕ್ಕಾಗಿ ನಮ್ಮ ಚಳವಳಿಯನ್ನು ಹಿಂದೆಯೇ ನಡೆಸಿದರೂ ಯಾರು ಇದನ್ನು ಸ್ಥಾಪಿಸಬೇಕೆಂಬ ಬಗ್ಗೆ ಭಿನ್ನಾಭಿಪ್ರಾಯ ಹುಟ್ಟಿ ವಿಳಂಬವಾಯಿತು. ಕಡೆಗೂ ಸರಕಾರವು ಮಾಡಬೇಕೆಂದಾದುದು ದೇಶದ ದೃಷ್ಟಿಯಿಂದ ಉತ್ತಮ. ಯೋಗ್ಯ ಪ್ರಿನ್ಸಿಪಾಲರು ಮತ್ತು ದಕ್ಷ ಬೋಧಕರಿಂದ ಕಾಲೇಜು ಶೀಘ್ರ ಕಾರ್ಯ ಪ್ರಾರಂಭಿಸುವಂತಾಗಲಿ. ಕೊಡಗು ವಿದ್ಯೆಯಲ್ಲಿ ಬೇರೆ ಪ್ರಾಂತಗಳಿಗಿಂಥಾ ಮುಂದಿದ್ದರೂ ಇನ್ನೂ ಆಗತಕ್ಕದ್ದು ಬಹಳ ಇದೆ. ಉತ್ತರ ಕೊಡಗಿನ ಬಗ್ಗೆ ಹೆಚ್ಚು ಆಸಕ್ತಿ ವಹಿಸಬೇಕಿದೆ. ಬಡ್ಡಿಯ ಶಿಕ್ಷಣಕ್ಕಾಗಿ ಇಟ್ಟ ಒಂದು ಲಕ್ಷ ರೂಪಾಯಿಯ ಯೋಜನೆಯನ್ನು ವಿಳಂಬವಿಲ್ಲದೆ ಜಾರಿಗೆ ತರಬೇಕು. ಹರಿಜನರ ವಿದ್ಯಾಪ್ರಗತಿಗಾಗಿ ಹೆಚ್ಚಿನ ಶ್ರದ್ಧೆ ವಹಿಸಬೇಕು. ಮಹಾತ್ಮರಿಗೆ ತುಂಬಾ ಆಸ್ಥೆಯಿದ್ದ ಈ ವಿಚಾರಕ್ಕೆ ಯೋಗ್ಯ ರೀತಿ ಹಣ ಒದಗಿಸಿದ್ದು ಉತ್ತಮವಾಯಿತು. ವಯಸ್ಕರ ಶಿಕ್ಷಣವು ಬಿರುಸಿನಿಂದ ನಡೆಯಬೇಕು. ವಿದ್ಯೆಯೇ ಮಾನವನ ಜೀವಕ

(೫ನೇ ಪುಟಕೆ ಸಾಗಿದೆ)

ಚಿಕ್ಕ ಕಥೆ.

"ಮಹಾಲಕ್ಷ್ಮಿ"

ಲೇಖಕ:- ಬಿ. ಡಿ. ಸುಬ್ಬಯ್ಯ, ಬೊಂಬಾಯಿ.

ಬೊಂಬಾಯಿ ನಗರವನ್ನೆಲ್ಲಾ ನೋಡಬೇಕೆಂದರೆ, ಒಬ್ಬನಿಗೆ ಕಡಿಮೆ ಪಕ್ಷ ಒಂದು ತಿಂಗಳ ಸಮಯ ಹಿಡಿಯುತ್ತದೆ. ನಾನು ಹೊಸಬನಾದುದರಿಂದ, ಎಲ್ಲ ಸ್ಥಳವನ್ನೆಲ್ಲಾ ನೋಡಬೇಕೆಂಬ ಆಶೆಯುಂಟಾಗಿ ಹಳವಿತ್ತ. ಅಂದು ಶನಿವಾರ, ಅರ್ಧ ದಿವಸ ರಜೆಯಿದ್ದುದರಿಂದ, ಊಟ ಮುಗಿಸಿ ಹಾಗೆಯೇ ಗಾಳಿ ಸವಾರಿ ಹೊರಟೆ. ಬರುತ್ತಾ, ಬರುತ್ತ ಜನರು ಕಿಕ್ಕಿರಿದು ತುಂಬಿದ ಒಂದು ಸ್ಥಳಕ್ಕೆ ಬಂದೆನು. ಜನರ ಗದ್ದಲವೇ ಗದ್ದಲ. ದೊಡ್ಡ ಒಂದು ಗೇಟಿತ್ತು. ಗೇಟಿನ ಮೇಲೆ 'ಮಹಾಲಕ್ಷ್ಮಿ' ಎಂಬ ದೊಡ್ಡದೊಂದು ಬೋರ್ಡ್ ತೂಗುತ್ತಿತ್ತು. ಸುಮಾರು ಒಂದು ಫರ್ಲಾಂಗಿನಷ್ಟು ದೂರ ಸೂಟುಬೂಟಿನ ದೊಡ್ಡ ದೊಡ್ಡ ಮನುಷ್ಯರನ್ನೇ ಆರಿಸಿ ನಿಲ್ಲಿಸಿದಂತೆ ಒಂದು 'ಕ್ಯೂ' ಇತ್ತು. ಇದು ದೊಡ್ಡ ಪವಿತ್ರ ದೇವಸ್ಥಾನವೇ ಇರಬೇಕೆಂದು ಯೋಚಿಸಿ, 'ಕ್ಯೂ'ನಲ್ಲಿ ನಾನೂ ನಿಂತೆನು. ನಾನು ಒಂದು ಸಾಧಾರಣ ಕಂಬಳಿಯ ಸೂಟು ಹಾಕಿದ್ದೆನು. ಅಂದೇ ಸಂಬಳ ಸಿಕ್ಕಿದ್ದರಿಂದ, ಯಾರಾದರೂ ಪ್ರಶ್ನಿಸಿದರೆ, ನಾನೂ ದೊಡ್ಡ ಮನುಷ್ಯನೇ ಎಂದು ಹೇಳಿ ಆತನ ಬಾಯಿ ಮುಚ್ಚಿಸುವಷ್ಟು ನನ್ನಲ್ಲಿ ಧೈರ್ಯವಿತ್ತು. ನನಗಾರು ಅಲ್ಲಿ ಸ್ನೇಹಿತ, ಯಾ ಪರಿಚಿತರಿಲ್ಲದ್ದರಿಂದ ಯಾರ ಜತೆಯಲ್ಲ ಮಾತಾಡಲು ಅನುವಿರಲಿಲ್ಲ. ಒಬ್ಬೊಬ್ಬರೇ ಒಳಗೆ ನುಗ್ಗ ತೊಡಗಿದರು. ನನ್ನ ಭಾರಿಯು ಒಂತು ನಾನೂ ನುಗ್ಗಲು ಮುಂದಾದೆ. ಅಲ್ಲಿಯೆ ನಿಂತಿದ್ದವನು, 'ಟಿಕೇಟು' ಎಂದ. ಟಿಕೇಟಿಲ್ಲವೆಂದೆ. ತೆಗೆದುಕೊಳ್ಳಿ, ಎಂದು ಒಂದು ಕಿಡಿಕಿಯ ಕಡೆಗೆ ಕೈತೋರಿಸಿದನು. ಅಯ್ಯೋ, ಕಲಿ ಮಹಿಮೆಯೇ ದೇವರ ದರ್ಶನಕ್ಕೂ ಟಿಕೇಟೆ? ನಮ್ಮ ಸಂಸ್ಕೃತಿ ಎಷ್ಟು ಮುಂದವರಿದಿದೆ. ದೇವರ ಹೆಸರನ್ನು ಹೇಳಿ ವ್ಯಾಪಾರ ವಿಧದಲ್ಲಿ ಹಣಗಳಿಸುವರು ಎಂದು ಮನಸ್ಸಿನಲ್ಲೇ ಯೋಚಿಸುತ್ತಾ, ಕಿಡಿಕಿಯ ಬಳಿಗೆ ಬಂದೆನು. 'ಐದು ರೂಪಾಯಿ' ಎಂದ ಟಿಕೇಟಿನ ದರ ನೋಡಿ ಸಿಟ್ಟು ಬಂದರೂ, ಐದು ರೂಪಾಯಿ ಟಿಕೇಟಿನಬೇಕಾದರೆ ಏನೋ ಆಶ್ಚರ್ಯ ಸಂಗತಿ ಒಳಗೆ ನಡೆಯುತಿರಬೇಕೆಂದು, ಟಿಕೇಟು ತೆಗೆದು ಒಳಗೆ ನುಗ್ಗಿದೆ.

ಎಲ್ಲಿ ನೋಡಿದರೂ, ಜನರು ಕೈಯಲ್ಲಿ ಒಂದೊಂದು ಚಿಕ್ಕ ಪುಸ್ತಕಗಳನ್ನು ಹಿಡಿದು ಕೊಂಡು ಗುಂಪು ಗುಂಪಾಗಿ ಮಾತಾಡುತ್ತಿದ್ದರು. ಇಲ್ಲೇನೋ ಹಾಡು ಯಾ ಕಾರ್ಯಕ್ರಮವಿದ್ದೀತು ಇದಾದೀತೆಂದು ಯೋಚಿಸಿ, ಪುಸ್ತಕವ ನೋಡುತ್ತಾ ಮುಂದರಿಯುತಿದ್ದೆ 'ತಿತಿ ೧೧ ಸಾಬ್, ಅಟಾಕ್' ಎಂದ ಒಬ್ಬ ಕರೆದಾಗ. ಎಂಟಣೆ ಕೊಟ್ಟು ಓದತೊಡಗಿದೆ 'My fair Lady, Duniya Diwani, I love you, you love me, Make merry, Take divorce' ಇವೆಲ್ಲ ಕುದುರೆಗಳ ಹೆಸರೆಂದು ಗೊತ್ತಾಯಿತು. ನಾನು ಬಂದದ್ದು ದೇವಿ ದರ್ಶನಕ್ಕಲ್ಲ. ಕುದುರೆ ಜೂಜಿನ ಮೈದಾನಕ್ಕೆಂದು, ಆಗ ಆ ಬೋರ್ಡು ತಲೆಗೆ ಹೊಕ್ಕಿತು. 'ಮಹಾಲಕ್ಷ್ಮಿ' ಕುದುರೆ ಮೈದಾನದ ಹೆಸರೆಂದು ಗೊತ್ತಾಯಿತು. ಆದದ್ದಾಯಿತು. ಆಗ ಒಂದು ಅನುಭವವಿರಲೆಂದು ಹೇಳಿ, ಕೂಡಲು ಏರ್ಪಡಿಸಿದ (Pavilion) ಸ್ಥಳಕ್ಕೆ ಹೋದೆನು. ಜನರ ಗದ್ದಲವೇ ಗದ್ದಲ. ವಿದ್ಯಾರ್ಥಿಗಳು ಪರೀಕ್ಷೆಗೆ ಏಕಮನಸ್ಸಿನಿಂದ ಓದುವಂತೆ ಕೆಲವರು ಪುಸ್ತಕವನ್ನು ಮನನ ಮಾಡುತಿದ್ದರು. ಕೆಲವರು ದೂರದರ್ಶಕ ಯಂತ್ರವನ್ನು ಹಿಡಿದು ಕುದುರೆಗಳನ್ನು ನೋಡುತಿದ್ದರು. ಕೆಳಗಡೆ ಜನರು ಕೈಯಲ್ಲಿ ನೋಟುಗಳ ಕಂತೆಗಳನ್ನು ಹಿಡಿದು, ನುಗ್ಗಾಡುವುದು ಕಾಣುತಿತ್ತು. ಏನೋ ವಿಶೇಷವಿದೆಯೆಂದು ಅಲ್ಲಿ ಹೋದೆ. ಹತ್ತು, ನೂರು, ಸಾವಿರವೆಂದು ಜನರು ನೋಟಿನ ಕಂತೆಗಳನ್ನು ಕೊಟ್ಟು ಟಿಕೇಟು ಪಡೆದುಕೊಳ್ಳುತಿದ್ದರು. ಹಣಕೇಳಿಕೊಳ್ಳುವವನು (Booky) ಕಾಗದ ಬುಟ್ಟಿಗೆ ಕಾಗದ ಚೂರುಗಳನ್ನು ಎಸೆಯುವಂತೆ, ನೋಟುಗಳ ಕಂತೆಗಳನ್ನು ಎಸೆಯುತಿದ್ದನು. ವರ್ಷವಿಡೀ ರಕ್ತವನ್ನು ಬೆವರು ಮಾಡಿ, ಕೆಲಸ ಮಾಡಿದರೂ ಒಂದು ನೂರು ರೂಪಾಯಿ ನೋಟು ಕಾಣದ ಅದೃಷ್ಟಶಾಲಿಗಳೆಷ್ಟಿಲ್ಲ? ತನ್ನ ಜೀವನ ವಿಡೀ ಪಚಾಡಿದರೂ ಒಂದು ಸಾವಿರ ರೂಪಾಯಿಗಳಿಸಲಾರದವರೆಷ್ಟಿಲ್ಲ? ಗಳಿಸಲಿಕ್ಕಾಗದಿದ್ದರೂ, ಒಮ್ಮೆ ನೋಡಿ ಪ್ರಾಣಬಿಡುವೆನೆನ್ನುವವರು ಕುದುರೆ ಮೈದಾನಕ್ಕೊಮ್ಮೆ ಹೋಗಲಿ!

ಕುದುರೆ ಜೂಜು ಶುರುವಾಗುವುದಕ್ಕೆ ಮುಂಚೆ ನೀಳವಾದ ಗಂಟೆ ಧ್ವನಿಯಾಯಿತು. ಜನರೆಲ್ಲರೂ ಸ್ವಸ್ಥಾನಕ್ಕೆ ಓಡುತಿದ್ದರು. ನಾನು ಓಡಿ ಒಂದು ಮೂಲೆಯಲ್ಲಿ ಕೂತು ಕೊಂಡೆನು. ಜನರ ಕೋಲಾಹಲವೇ ಕೋಲಾಹಲ. Duniya Diwani, Son of Gun, Stylish Lady, ಏನೇನೊ ಬಾಯಿ ಬಡಿಯುತಿದ್ದರು. ಕಡೇಗೆ ಗೆಲ್ಲಲು ಬಂದದ್ದು 'ದುನಿಯಾ ದಿವಾನಿ' ಜನರ ಕೋಲಾಹಲ, ಕೂಗು, ಆವೇಶ, ಇದೆಲ್ಲಾ ನೋಡಿ, ನಿಜವಾಗಿಯೂ 'ದುನಿಯಾ ದಿವಾನಿ'ಯೆಂದೇ ಮನಸ್ಸಿನಲ್ಲಿ ಹೇಳಿಕೊಂಡೆ. ಕೆಳಗಿಳಿದು ಬರುತಿದ್ದೆನು ನಾಲ್ಕು ಮೆಟ್ಟಲುಗಳ ಇದ್ದಿರಬಹುದು. ಒಬ್ಬ ಯುವತಿ, ನವೀನ ಅಲಂಕಾರಗಳಿದ್ದರೂ, ಅಂದ, ಚಂದದಿಂದ ಮೈತುಂಬಿದವಳು ಕೆಳಗಿಳಿಯುತಿದ್ದಳು. ಜನರ ನೂಕಾಟ, ಜಗ್ಗಾಟ, ತಿಕ್ಕಾಟದಲ್ಲಿ ಎಲ್ಲಿಯೋ ಮೂಲೆಯಲ್ಲಿದ್ದ ಬಾಳೆ ಸಿಪ್ಪೆಯ ಮೇಲೆ ಕಾಲಿಕ್ಕಿ ಜಾರಿಬಿದ್ದಳು. 'ಹಾಸಿ ಹೋದಲ್ಲಿ ಪಾತಾಳ' ಎಂದಂತೆ, ಜಾರಿದವಳು ನನ್ನ ಮೇಲೆ ಬಿದ್ದು ನನ್ನನ್ನು ಹತ್ತು ಹನ್ನೆರಡು ಮೆಟ್ಟಲುಗಳ ಕೆಳಗುರುಳಿಸಿ ಬಿಟ್ಟಳು. ಬಿದ್ದದ್ದೊಂದು ಗೊತ್ತಿದೆ. ಆ ಮೇಲೇನಾಯಿತೆಂದು ನನಗರಿಯದು.

ನನಗೆ ಎಚ್ಚರವಾಗುವಾಗ, ಸುಮಾರು ರಾತ್ರಿ ಎಂಟು ಗಂಟೆಯಾಗಿರಬಹುದು. ಒಬ್ಬ ನರ್ಸಳು ನನ್ನ ಬದಿಯಲ್ಲಿ ಏನೋ ಓದುತ್ತಾ ಕೂತಿದ್ದಳು. ನನ್ನ ಗಾಬರಿಗೆ ಮಿತಿಯಿಲ್ಲ. ಎದ್ದು ಕೂಗುವೆನೆಂದು ಪ್ರಯತ್ನಿಸಿದೆನು. ಕೈ ಅಲುಗಿಸಲಾಗಲಿಲ್ಲ. ನನ್ನ ಕೈ ಮುರಿದಿದೆ ಎಂದು ಆಗ ತಿಳಿದು ಕೊಂಡೆನು. ನರ್ಸಳನ್ನು ಕರೆದೆ. ಚಕಿತಳಾಗಿ ಆಕಸ್ಮಿಕದಿಂದ ಬದಿಯಲ್ಲಿ ಬಂದು ಕುಳಿತುಕೊಂಡಳು. ಆಕೆಯ ಮುಖವನ್ನು ಎಂದೋ ನೋಡಿದಂತೆ ಇತ್ತು. ಆದರೆ ಗುರುತು ಸಿಕ್ಕದೆ ಪೇಚಾಡುತ್ತಿದ್ದೆನು. ಆಕೆಯ ಕಣ್ಣಲ್ಲಿ ನೀರು ತುಂಬಿತ್ತು. ಏಕಾಏಕಿಯಾಗಿ ಅಳುವಿಯೆಂದು ಕೇಳಿದಾಗ ಆಕೆಯೇ ಈ ನನ್ನ ದುರ್ಗತಿಗೆ ಕಾರಣಳೆಂದು ಅಳತೊಡಗಿದಳು. ನಾನು ಬೀಳಲು ಕಾರಣಳಾದ ಆ ಕುಲೀನ ಯುವತಿಯೇ ಈ ನರ್ಸಳೆಂದು ಆಗ ನನಗೆ ಅರಿವಾಯಿತು.

ದಿನಗಳುರುಳುತ್ತಾ ನಮ್ಮ ಸ್ನೇಹವು ಬಿಗುವಾಗ ತೊಡಗಿತು. ಆಕೆಯು ತನ್ನ ಕೆಲಸವನ್ನು ಮುಗಿಸಿದ ನಂತರ, ನನ್ನ ಬದಿಯಲ್ಲೇ ಕೂತು ಕಾಲ ಕಳೆಯುತಿದ್ದಳು. ಆಕೆಯ ಮಾತು, ನೀತಿ, ನಡತೆಗಳು ನನ್ನ ಮನಸ್ಸನ್ನು ಬಹಳವಾಗಿ ಆಕರ್ಷಿಸ ತೊಡಗಿದವು. ಆಕೆಯಾಗು ಎಂದಾ ಕಣ್ಣುಗಳು. ಆ ಕಣ್ಣುಗಳಲ್ಲಿ ಅದ್ಭುತ ಸ್ವಾರಸ್ಯ ಅಡಗಿತ್ತು. ಹೃದಯದ ನಿಜ ಕಲೆ ಆ ಕಣ್ಣುಗಳಲ್ಲಿ ಪ್ರತಿಬಿಂಬವಾಗುತಿತ್ತು. ಆಕೆಯ ಕಣ್ಣುಗಳನ್ನು ನೋಡುವಾಗ ಒಬ್ಬ ಕವಿಯ ಮಾತುಗಳು ಜ್ಞಾಪಕಕ್ಕೆ ಬರುತಿದ್ದವು.

-The eyes are deep as ocean and as high as stars that shine up in the sky. And as I stare into their depths I feel eternal instants pause. I seem to live through births and deaths, Till to the ground I see them fly-

ಇಷ್ಟು ಪರಿವರ್ತನೆ ನನ್ನ ಮನಸ್ಸಿನಲ್ಲಿ ಉಂಟಾಗಿದ್ದರೂ, ನಾನು ಆಕೆ ಯಾರು? ಆಕೆಯ ಹೆಸರೇನೆಂಬುದು ಸಹ ತಿಳಿದಿರಲಿಲ್ಲ.

ದಿನ ಹೋದಂತೆ ನಾನು ಗುಣ ಹೊಂದ ತೊಡಗಿದೆನು. ಅಂದು ರಾತ್ರಿ ಹತ್ತು ಗಂಟೆಯಾಗಿರಬಹುದು, ಎಲ್ಲೆಲ್ಲೂ ನಿಶ್ಶಬ್ದ. ನಾನು ಆಸ್ಪತ್ರೆಯ ಹೂತೋಟದೊಳಗೆ ಕೂತು ಏನೇನೊ ಯೋಚಿಸುತ್ತಿದ್ದೆನು. ಆಕೆಯು ಬಂದು ನನ್ನ ಬಳಿಯಲ್ಲಿ ಕೂತ ಪರಿವೆಯೇ ನನಗಿರಲಿಲ್ಲ. ತನ್ನ ಕೈಯನ್ನು ಮೆತ್ತನೆ ನನ್ನ ಮುಖದಲ್ಲಿ ಸವರಿದಳು. ಎಚ್ಚರಗೊಂಡು ನೋಡಿದಾಗ, ನರ್ಸಳು ಹತ್ತಿರದಲ್ಲಿ ಕೂತಿದ್ದಳು. ಇದೇ ಆಕೆಯ ವಿಷಯವನ್ನು ಕೇಳಲು ತಕ್ಕ ಸಮಯವೆಂದು ಯೋಚಿಸಿ 'ಅಕ್ಕಾ ಬಹಳ ದಿವಸಗಳಿಂದ, ನಿನ್ನ ವೃತ್ತಾಂತವನ್ನು ಕೇಳಬೇಕೆಂದು ಮನಸಿನಲ್ಲಿದೆ' ಎಂದೆ. ತಲೆಯನ್ನು ಜೋಲು ಹಾಕಿ, ನೆಲವನ್ನೇ ನೋಡುತಿದ್ದವಳು, ನನ್ನನ್ನು 'ಅಕ್ಕಾ' ಎಂದು ಕರೆಯದಿರಿ. ನನಗೆ ಅಂಥ ತಮ್ಮಂದಿರ ಭಾಗ್ಯವೆಲ್ಲಿ? ನಿಮ್ಮ ಕರೆಯುವಿಕೆಯಿಂದ ನನಗೆ ಸಹಿಸಲಾಗದ ನೋವಾಗುತ್ತದೆ. ನನ್ನ ಹೆಸರು 'ಲಕ್ಷ್ಮಿ' ಎಂದಳು. ನಾನು ನಿನ್ನನ್ನು ಕಂಡಂದಿನಿಂದ ನನ್ನ ಮನಸ್ಸು ನನ್ನ ಸ್ವಾಧೀನದಲ್ಲಿಲ್ಲ. ಎಷ್ಟೋ ಸಾರಿ ನಿನ್ನಲ್ಲಿ ಮನಬಿಚ್ಚಬೇಕೆಂದರೂ, ಧೈರ್ಯಸಾಲದೆ ಸುಮ್ಮನಿದ್ದೆನು. ಎರಡು ಮೂರು ದಿನಗಳಲ್ಲಿ ನಾನು ಹೊರಡಬೇಕಾಗಿದೆ. ಈಗಲು ಅದಕ್ಕೆ ತಕ್ಕ ಸಮಯವೆಂದು ಹೇಳಬೇಕಾಗಿದ್ದನ್ನೆ ಹೇಳಲೆ?" ಎಂದು ಸಂಕೋಚದಿಂದ ಕೇಳಿದೆ. ಆಕೆಯು ಸೂಕ್ಷ್ಮ ದೃಷ್ಟಿಯಿಂದ ನನ್ನ ಮುಖವನ್ನೊಮ್ಮೆ ನೋಡಿ, ತಲೆ ಜೋಲು ಹಾಕಿಬಿಟ್ಟಳು. ನನ್ನ ಮನಸ್ಸು ಇನ್ನೂ ತವಕಗೊಂಡಿತು. 'ಲಕ್ಷ್ಮಿ, ನಿನಗೆ ವಿವಾಹವಾಗಿದೆಯೋ?' ಎಂದೆ. ಆಕೆ ಬೆಚ್ಚಿಬಿದ್ದವಳಂತೆ ನನ್ನ ಮುಖವನ್ನೊಮ್ಮೆ ದಿಟ್ಟಿಸಿ ನೋಡಿ, ನನ್ನೆದೆಗೆ ಒರಗಿಕೊಂಡು ಬಿಕ್ಕಿ ಬಿಕ್ಕಿ ಅಳಲು ಪ್ರಾರಂಭಿಸಿ ಬಿಟ್ಟಳು. ಅರ್ಧ ಗಂಟೆಯ ನಂತರ ತನ್ನ ಕತೆ ಹೇಳ ತೊಡಗಿದಳು. 'ನನ್ನ ತಂದೆ ತಾಯಿಗಳ್ಯಾರೆಂದು ನನಗೆ ತಿಳಿಯದು. ನನ್ನನ್ನು ಬೆಳೆಸಿ, ವಿದ್ಯಾ ಬುದ್ಧಿ ಕೊಟ್ಟವರು, ಈ ಆಸ್ಪತ್ರೆಯಲ್ಲಿದ್ದ ಒಬ್ಬ ಡಾಕ್ಟರರು. ಅವರ ದಾದಿಯೊಬ್ಬಳು ನನ್ನನ್ನು ಸಾಕಿದಳು. ಅವಳೇ ನನ್ನ ಪಾಲಿಗೆ ತಾಯಿ ತಂದೆ, ಸರ್ವಸ್ವದಂತಿದ್ದಳು. ಅವಳು ಸಾಯುವ ಮೊದಲು ನನ್ನನ್ನು ಮದುವೆ ಮಾಡಬೇಕೆಂದು ಬಹಳ ಪ್ರಯತ್ನಿಸಿದಳು. ಆದರೆ ವಿಧಿಯಿಚ್ಛೆ ಬೇರೆಯಾಗಿತ್ತು. ಆಕೆಗೆ ಅದು ಸಾಧ್ಯವಾಗಲಿಲ್ಲ. ಆ ದಿವಸದಿಂದ ನಾನು ಏಕಾಂಗಿಯಾಗಿಯೇ ಇರುವೆನು. ಈ ಆಸ್ಪತ್ರೆಯೇ ನನ್ನ ಮನೆ ಮಠ, ಸರ್ವಸ್ವವೆಂದು ನಂಬಿರುವೆನು. ನನ್ನಂತಹ ಅನಾಥೆಗೆ ಸಮಾಜದಲ್ಲಿ ಎಲ್ಲಿ ಸ್ಥಾನ? ನಾನು ನನ್ನ ಈ ಶರೀರವನ್ನು ಈ ಆಸ್ಪತ್ರೆಯ ಸೇವೆಗೆ ಮುಡಿಪಾಗಿಟ್ಟಿರುವೆನು. ಹುಟ್ಟಿದಂದಿನಿಂದ ಇಷ್ಟರ ವರೆಗೂ ಇದೇ ನನಗೆ ಆಶ್ರಯ. ನನ್ನ ಜೀವಮಾನವನ್ನು ಇಲ್ಲೇ ಸವೆದು, ಪ್ರಾಣಬಿಟ್ಟರೆ ನನಗೆ ಶಾಂತಿ' ಎಂದು ನೀಳವಾದ ಉಸಿರು ಬಿಟ್ಟಳು. ಈ ಮಾತುಗಳಿಂದ ನನಗೆ ಬಹಳ ನೋವಾಯಿತು. 'ಲಕ್ಷ್ಮೀ ನಾನು ನಿನಗಾಗಿ ಎಂತಹ ಕಾರ್ಯಮಾಡಲು ಹಿಂಜರಿಯೆನು. ನಿನ್ನ ನಿಶ್ಚಲ ಪ್ರೇಮವೊಂದಿದ್ದರೆ, ಇದೋ ಇಂದೇ ಆಣೆಯಿಡುವೆನು. ನಾನು ನಿನ್ನ ಜೀವನದ ಸುಖ ದುಃಖಗಳ ಸಾಥಿ. ಇದಕ್ಕೆ ಒಪ್ಪುವೆಯಾ?' ಲಕ್ಷ್ಮಿಯಲ್ಲಿ ಈ ನನ್ನ ಮಾತುಗಳು ಯಾವ ಪರಿವರ್ತನೆಯನ್ನೂ ಉಂಟು ಮಾಡಿದಂತೆ ಕಾಣಲಿಲ್ಲ. ಆಕೆಯ ಉತ್ತರಕ್ಕಾಗಿ ಎವೆಯಿಕ್ಕದೆ, ಅವಳನ್ನೇ ನೋಡುತಿದ್ದೆನು. ಉತ್ತರವಿಲ್ಲ. 'Desire knows not shame' ಎಂಬ ಹಾಗೆ ಆಕೆಯನ್ನು ಒತ್ತಾಯ ಮಾಡಿದೆನು. ಕಡೆಗೆ ಕೆಲವು ದಿವಸಗಳ ನಂತರ ಉತ್ತರ ಕೊಡುವೆನು ಎಂದು ಹೇಳಿದಳು.

ಇದಾದ ಮೂರು ದಿನಗಳಲ್ಲಿ ನಾನು ಆಸ್ಪತ್ರೆಯಿಂದ ಮನೆಗೆ ಬಂದೆನು. ಸಮಯ ಸಿಕ್ಕಿದಾಗಲೆಲ್ಲಾ 'ಲಕ್ಷ್ಮಿ'ಯನ್ನು ಕಾಣಲು ಹೋಗುತಿದ್ದೆನು. ಆದರೆ ಲಕ್ಷ್ಮಿಯು ಕಾಣಿಸುತ್ತಿರಲಿಲ್ಲ. ಎಷ್ಟು ಪ್ರಯತ್ನಿಸಿದರೂ ಅವಳ ದರ್ಶನವಾಗಲಿಲ್ಲ. ದಿನಗಳೆದಂತೆ ನನ್ನ ಮನಸ್ಸು ಭಾರವಾಗ ತೊಡಗಿತು. ಎಷ್ಟು ಹುಡುಕಿದರೂ ಪ್ರಯತ್ನಿಸಿದರೂ ಯಾರನ್ನು ಕೇಳಿದರೂ ಅವಳ ವಿಷಯ ತಿಳಿಯಲಿಲ್ಲ. ಅದೊಂದು ದಿನ ಅನಿರೀಕ್ಷಿತವಾಗಿ ನನಗೊಂದು ಪತ್ರ ಬಂತು. ಅದನ್ನೇ ನಿಮ್ಮ ಮುಂದಿಡುವೆನು. ಓದಿರಿ.

ಪ್ರಿಯ ಸಹೋದರಾ!

ನೀನು ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಡಲು ಇಷ್ಟು ದಿವಸ ಯೋಚಿಸಬೇಕಾಯಿತು. ಬೇಕೆಂದೇ ನಾನು ನಿನಗೆ ಕಾಣಿಸಿಕೊಳ್ಳುತ್ತಿರಲಿಲ್ಲ. ಕಡೆಗೆ ಈ ಇತ್ಯರ್ಥಕ್ಕೆ ಬಂದಿರುವೆನು. ನಾನೊಬ್ಬ ಹರಿಜನ ಯುವತಿಯೆಂದು ಜನರೆಲ್ಲರೂ ಹೇಳುತಿದ್ದಾರೆ. ಸಮಾಜದಲ್ಲಿ ನನಗೆ ಸ್ಥಾನವಿಲ್ಲ. ನನ್ನನ್ನು ಉದ್ಧರಿಸಲು ಹಾತೊರೆದು ನಿನ್ನ ಅರಳಲಿರುವ ಜೀವನ ಕುಸುಮವನ್ನು ಹಾಳುಮಾಡಬೇಡ. ಅದು ನನ್ನ ಮನಸ್ಸಿಗೂ ಹಿಡಿಸದ ವಿಷಯ. ನಾನು ಜನ್ಮ ಜನ್ಮಾಂತರಕ್ಕೂ ನಿನ್ನನ್ನು ನನ್ನ ಸ್ವಂತ ಸಹೋದರನೆಂದು ತಿಳಿಯುವೆನು. ನಿನ್ನ ಪ್ರೇಮವನ್ನು ನಾನು ನಿನ್ನ ಸಹೋದರಿಯಂತೆ ಸ್ವೀಕರಿಸುವೆನು. ಲೋಕದಲ್ಲಿ ನನಗೆ ಸ್ನೇಹಿತ ಬಂಧು ಬಳಗವೆಂದರೆ ನೀನೊಬ್ಬನೇ. ನಿನ್ನ ಮನಸ್ಸಿಗೆ ನಾನು [illegible] ನನ್ನ ಸಹೋದರಿಗಾಗಿ [illegible] ನಿನ್ನ ಮನಸ್ಸಿಗೆ ಎರಡು ಬಗೆದೆನೆಂದು ತಿಳಿಯಬೇಡ. ನೀನು ಇನ್ನೂ ಸಮಾಜದ ಅನುಭವವಿಲ್ಲದ ಎಳೆಯ ತರುಣ, ನನಗೆ ಚಿಕ್ಕ ವಯಸ್ಸಾದರೂ, ಸಮಾಜದ ಅನುಭವ

ಚಿನ್ನಾಗಿದೆ. ನಿನ್ನ ಪ್ರೀತಿಗ ಬೆಲೆಕೊಟ್ಟು ನಿನ್ನ ಜೀವನವನ್ನು ಹಾಳುಮಾಡಲು ನಾನು ಎಂದೂ ಸಿದ್ಧಳಲ್ಲ. ಸಮಾಜದ ನಿಂದೆಯನ್ನೆದುರಿಸಲು ನಾನೆಂದು ಶಕ್ತಳಲ್ಲ. ಜೀವವಿರುವ ವರೆಗೆ ನಿನ್ನ ಶ್ರೇಯೋಭಿವೃದ್ಧಿಯನ್ನು ನಾನು ನೋಡಿ ಆನಂದಪಡುತ್ತೇನೆ. ಯಾವಾಗಲೂ ನಿನ್ನ ಯೋಗಕ್ಷೇಮವನ್ನು ತಿಳಿಸುತ್ತಿರು. ದೇವರು ನಿನ್ನ ಜೀವನವನ್ನು ಸುಖದಾಯಕವಾಗಿ ಮಾಡಲೆಂದು ನನ್ನ ಆಶಿಸುತ್ತೇನೆ.

ನಿನ್ನ ಸಹೋದರಿ,

ಲಕ್ಷ್ಮಿ.

ಕಾಗದ ಓದಿದಂತೆ ನನ್ನ ಮನಸ್ಸು ಶಕ್ತಿಹೀನವಾಗ ತೊಡಗಿತು. ಸಮಾಜ, ಸಮಾಜದ ಮೂಢ ನ್ಯಾಯಗಳು ಎಷ್ಟು ಕ್ರೂರವಾಗಿವೆಯೆಂಬುದು ಚಿತ್ರಪಟಗಳಂತೆ ನನ್ನ ಮನಸ್ಸಿಗೆ ಬರತೊಡಗಿತು. ಗುಣ, ನೀತಿ, ನಡತೆ, ವಿದ್ಯೆ ಎಲ್ಲಾ ಮೇಲ್ಪರಗತಿಯಲ್ಲಿದ್ದು, ಕುಲಹೀನನಾದರೆ ಸಮಾಜದಲ್ಲಿ ಅವನಿಗ ಸ್ಥಾನವಿಲ್ಲ! ಪ್ರಾಣಿಗಳಿಗಿಂತಲೂ ಕಡೆಯಾಗಿದ್ದು, ಉಚ್ಚ ಕುಲದಲ್ಲಿ ಹುಟ್ಟಿದರೆ ಅವರಿಗೆ ಒಂದು ಸ್ಥಾನ, ಮನ್ನಣೆ! ಸಮಾಜ ಸಂಪ್ರದಾಯಗಳ ತತ್ವಗಳು ಬೇರುಸಹಿತ ನಾಶವಾಗಬೇಕು. ಎಲ್ಲಿ ನೋಡಲಿ ಕುಲ, ಜಾತಿಗಳ ಗಣನೆ. ಪ್ರಪಂಚವು ನಾಗರೀಕತೆಯ ಮೆಟ್ಟಿಲನ್ನು ಮುಟ್ಟಿದೆ ಎನ್ನುತ್ತಾರೆ. ಆದರೆ ಸಮಾಜದ ಅಂಧ, ಮೂಢ ನ್ಯಾಯವು ಅವರನ್ನು ಅಂಧಕಾರದಲ್ಲಿಯೇ ಇರಿಸಿದೆ!

'ಮಹಾಲಕ್ಷ್ಮಿ' ದೇವಾಲಯವೆಂದೂ ದೇವಿಯ ದರ್ಶನಕ್ಕೆಂದೂ ಹಾತೊರೆದ ಈ ಹೃದಯಕ್ಕೆ, ಮಹಾಲಕ್ಷ್ಮಿಯ ದರ್ಶನವಾಯಿತು. ಇಂದು, ಲಕ್ಷ್ಮಿಯಂತಹ ರತ್ನಗಳು ಲಕ್ಷಕ್ಕೊಂದಿರಬಹುದು. ಅವಳನ್ನೇ ಈ ಹೃದಯ ಯಾವಾಗಲೂ ಜಪಿಸುತ್ತಿದೆ.

'Tis better to have loved and lost, than never to have loved at all'

ಬಜೆಟ್ಟಿನ ಮೇಲೆ ಟೀಕೆ.

(ಎರಡನೇ ಪುಟದಿಂದ ಸಾಗಿದ್ದು)

ಪ್ರ... ರೂಪಿಸುವ ಕಾರಣ ಮಹಾತ್ಮರ ಮೂಲ ಶಿಕ್ಷಣ ಕ್ರಮವು ಜಾರಿಗೆ ಬರಬೇಕು. ಕೊಡಗಿನ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಸಂಪೂರ್ಣ ಪಾನ ನಿರೋಧವು ಜಾರಿಗೆ ಬಂದಿದ್ದರೂ ಇಲ್ಲಿ ಬಾರದಿರುವುದು ವಿಷಾದ. ಸಂಪೂರ್ಣ ಪಾನ ನಿರೋಧದ ದಾರಿಯಲ್ಲಿ ಪ್ರಥಮ ಹೆಜ್ಜೆಯಾಗಿ ರೇಶನ್ ಪದ್ಧತಿ ತಂದದು ಯೋಗ್ಯ. ಫಾರೆಸ್ಟ್ ಇಲಾಖೆಯ ಉತ್ಪತ್ತಿ ಹೆಚ್ಚಾಗಿಲ್ಲ. ಅದರ ಸಿಬ್ಬಂದಿಯ ವೇತನ ಏರಿದೆ. ಬದಲು ... ಇರುವ ... ಸಿಬ್ಬಂದಿಗಾಗಿ ವಿಪರೀತ ಖರ್ಚಾಗುತ್ತಿದೆ. ಅದನ್ನು ಕಡಿಮೆ ಮಾಡಬೇಕು. ರಾಷ್ಟ್ರ ರಚನಾ ಕಾರ್ಯಕ್ಕೆ ಹಣ ವಿನಿಯೋಗವಾಗಬೇಕು. ಇಲಾಖೆಯ ಆಡಳಿತದಲ್ಲಿ ಅನೇಕ ದೂರುಗಳು ಕೇಳಿಬರುತ್ತಿವೆ. ಯೋಗ್ಯ ಫಾರೆಸ್ಟರ್‌ರೂ ಗಾರ್ಡ್‌ಗಳನ್ನು ರೇಂಜರರಾಗಿ ಮಾಡಿದ ಉದಾಹರಣೆಗಳಿವೆ! ಈ ರೀತಿಯ ... ಆಡಳಿತ ದಕ್ಷತೆಗೆ ವಿನಾಶಕಾರಕ. ಈಗಿರುವ ರೇಂಜರುಗಳಲ್ಲಿ ಅರ್ಧಕರ್ಧ ಕರಬೇತಾಗದವರು. ತರಬೇತಾದವರನ್ನು ಕಡೆಗಣಿಸಿ ತರಬೇತಾಗದವರಿಗೆ ಪ್ರೋತ್ಸಾಹ ಕೊಟ್ಟ ನಿದರ್ಶನಗಳಿವೆ. ಚೀಫ್ ಕಮೀಷನರು ಈ ಇಲಾಖೆಯ ... ದೃಷ್ಟಿ ಇಡಬೇಕಾಗಿದೆ.

ಪಿ. ಡಬ್ಲ್ಯು. ಡಿ ಇಲಾಖೆಯ ಮಾಡಿ ... ಹೊರತು ಬೇರೆ ಎಲ್ಲಾ ಯೋಗ್ಯ ಕೆಲಸವಾಗುತ್ತಿಲ್ಲ. ಅನಾವಶ್ಯ ವಿಳಂಬವಾಗುತ್ತಿದೆ. ಕಿಗ್ಗಟ್ಟು ನಾಡು ಹೈಸ್ಕೂಲು ಕಟ್ಟಡದ ವಿಚಾರದ ಅಂದಾಜು ಕೇಂದ್ರ ಸರಕಾರಕ್ಕೆ ಹೋಗಿ ಹದಿನಲ್ಕು ತಿಂಗಳ ನಂತರ ಅದಕ್ಕೆ ಮಂಜೂರಾತಿ ದೊರೆಯಿತೆಂದರೆ ಈ ಇಲಾಖೆಯನ್ನು ಕೇಂದ್ರದ ವಶ ಮಾಡಿದ ತಪ್ಪು ಕಂಡುಬರುತ್ತದೆ. ಆದ್ದರಿಂದ ಈ ಇಲಾಖೆಯನ್ನು ಪ್ರಾಂತೀಯ ಸರಕಾರದ ಅಧೀನಕ್ಕೆ ತರುವದು ಅವಶ್ಯ. ವ್ಯವಸಾಯ ಇಲಾಖೆಯ ಉಪಯುಕ್ತತೆ, ಖರ್ಚಾಗುವ ಹಣ ದೂ ಕೆಲಸ ಮಾಡುವ ಸಿಬ್ಬಂದಿಯ ಸಂಖ್ಯೆಯ ಮೇಲೆ ನಿಂತಿಲ್ಲ. ಜಾಗರೂಕರು ಇರುವ ಈಗಿನ ಅನುಭವಿ ಅಧಿಕಾರಿಯ ನೇತೃತ್ವದಲ್ಲಿ ವಿಸ್ತಾರಗೊಳ್ಳುತ್ತಿದೆ. ಸ್ವಾತಂತ್ರ್ಯದ ನಂತರ ಸಹಕಾರವು ಬಲಗೊಳ್ಳುತ್ತಿದೆ. ಇಂಡಿಯಾ ಸರಕಾರವು ಪೂರ್ಣ ಬೆಂಬಲಕೊಡುತ್ತಿದೆ. ಸ್ಥಳೀಯ ... ಪೂರ್ಣ ಸಹಾಯವನ್ನು ಈ ಇಲಾಖೆಗೆ ಕೊಡಬೇಕು. ಈ ಇಲಾಖೆಯ ಕೆಲಸದ ವಿಚಾರ ಹೊರಗಿನಿಂದ ಬಂದವರೆಲ್ಲರೂ ಮುಕ್ತಕಂಠದಿಂದ ಹೊಗಳಿದ್ದಾರೆ. ವೈದ್ಯಕೀಯ ಇಲಾಖೆಗೆ ಯುದ್ಧ ಸಮಯದಲ್ಲಿದ್ದ ಡಾಕ್ಟರ ತೊಂದರೆ ನೀಗುತ್ತಾ ಬರುತ್ತದೆ. ಆದರೆ ವೈದ್ಯಕೀಯ ಇಲಾಖೆಯಿಂದ ಆರೋಗ್ಯ ಇಲಾಖೆಯನ್ನು ಬೇರ್ಪಡಿಸಿದ ಸರಕಾರದ ಜಾಣತನವನ್ನು ಶಂಕಿಸಬೇಕಾಗಿದೆ. ಹೊಸಗಿ ಮತ್ತೆ ಯಾ ಇಲಾಖೆಗೆ ... ಆರೋಗ್ಯ ಇಲಾಖೆಯನ್ನು ಜೋಡಿಸುವದರಲ್ಲಿ ಅರ್ಥವಿಲ್ಲ. ಎಳೆಮಕ್ಕಳು ಬೀಡಿ, ಸಿಗರೇಟು ಸೇದುವದನ್ನು ಕಾನೂನಿಂದ ಪ್ರತಿಬಂಧಿಸಬೇಕು. ಸರಕಾರದ ಆಡಳಿತ ಖರ್ಚು ಹೆಚ್ಚುತ್ತಿದೆ. ಯೋಗ್ಯ ಪರಿಶೀಲನೆಯ ನಂತರ ಸಿಬ್ಬಂದಿ ಭರ್ತಿ ಮಾಡುವದು ಅವಶ್ಯಕ. ಚೀಫ್ ಕಮೀಷನರಿಗೆ ಸೆಕ್ರೆಟರಿ, ಡ್ಯೂಟಿ ಸರ್ವೆ ಆಫೀಸರ್ ಮೊದಲಾದ ಹೊಸ ಹುದ್ದೆಯ ವಾರ್ತೆ ಕೇಳುತ್ತಿದೆ. ಖರ್ಚು ಹೆಚ್ಚಿಸುವದು ಸುಲಭ. ಆದರೆ ಕಡಿತಮಾಡುವದು ಕಷ್ಟ. ಆದ್ದರಿಂದ ಎಚ್ಚರಿಕೆಯಿಂದ ವರ್ತಿಸಬೇಕು. ಕೊಡಗಿನ ಜನತೆಯ ಅಭಿಪ್ರಾಯವನ್ನು ತೆಗೆಯದೆ ಕೊಡಗಿನ ಭವಿಷ್ಯವನ್ನು ನಿರ್ಣಯಿಸಿಬಿಡುವ ಪ್ರಯತ್ನಗಳನ್ನು ಕೆಲವರು ಮಾಡುತ್ತಿದ್ದಾರೆ. ಇದು ಪ್ರಜಾಪ್ರಭುತ್ವಕ್ಕೆ ವಿರೋಧವಾದುದು. ಆದ್ದರಿಂದ ಜನತೆಯ ಅಭಿಪ್ರಾಯ ತೆಗೆಯದ ಈಗಿರುವ ಸ್ಥಿತಿಯನ್ನು ಬದಲಾಯಿಸಬಾರದೆಂದು ಸ್ಥಳೀಯ ಸರಕಾರವು ಕೇಂದ್ರ ಸರಕಾರಕ್ಕೆ ಮನದಟ್ಟು ಮಾಡಿಸಬೇಕೆಂದು ಕೇಳುತ್ತೇನೆ'

ಶ್ರೀ ಕೆ. ಕೆ. ಬೆಳ್ಯಪ್ಪನವರು.

'ನಮಗೆ ಈಗಿರುವವರು ಎರಡನೇ ಭಾರತೀಯ ಚೀಫ್ ಕಮೀಷನರು. ಬಹು ಯೋಗ್ಯತೆಯಿಂದ ಆಡಳಿತ ನಡೆಸುವವರು. ನಮಗೆ ಸುಮಾರು ಅರ್ಧ ಕೋಟಿ ಹಣ ಉಳಿಸಿ ಹೋದ ಹಿಂದಿನ ಚೀಫ್ ಕಮೀಷನರನ್ನು ವಂದಿಸಬೇಕಿದೆ. ಆಡಳಿತವು ತಲೆ ಭಾರದ್ದಾಗಿದೆ. ಆಡಳಿತ ದಕ್ಷವಾಗಿಲ್ಲ. ಕಾಂಗ್ರೆಸ್ಸಿಗರನೇಕರು ಆಡಳಿತದಲ್ಲಿ ಕೈ ಹಾಕಿ ಅಧಿಕಾರಿಗಳ ಮೇಲೆ ತಮ್ಮ ವರ್ಚಸ್ಸನ್ನು ಬೀರುತ್ತಿರುವರು. ಇದಕ್ಕೆ ಎಡೆ ಕೊಡಬಾರದು. ಕೊಡಗಿನ ಬಗ್ಗೆ ಸರ್ದಾರ್ ಪಟೇಲರು ಹೇಳಿದ ಮಾತುಗಳಿಗೆ ವಿಷಾದಪಡುತ್ತೇನೆ. ಇಂಥಾ ಅಭಿಪ್ರಾಯವನ್ನು ಅವರಿಗೆ ಯಾರು ಕೊಟ್ಟರೋ ತಿಳಿಯದು. ಸ್ಥಳೀಯ ಸರಕಾರವು ಸರ್ದಾರರಲ್ಲಿರುವ ತಪ್ಪಭಿಪ್ರಾಯವನ್ನು ಬೇಗ ಹೋಗಲಾಡಿಸಬೇಕು. ಆಹಾರ ಸಮಿತಿಯಲ್ಲಿ ವ್ಯವಸಾಯ ಅಧಿಕಾರಿಯನ್ನು ಸೇರಿಸದ್ದು ಸರಿಯಲ್ಲ. ರೈತರು ಮಿಲ್ ಮಾಲೀಕರ ಹಿಡಿತದಲ್ಲಿದ್ದಾರೆ. ರೈತರಿಗೆ ಗೊಬ್ಬರ ಮುಂತಾದ ವ್ಯವಸಾಯ ಹತ್ಯಾರುಗಳು ಸಕಾಲದಲ್ಲಿ ದೊರೆಯುತ್ತಿಲ್ಲ. ಮದ್ರಾಸ್ ಸರಕಾರದಂತೆ ರೈತರಿಗೆ ಹಣದ ರೂಪದಲ್ಲಿ ಬೋನಸ್ಸು ಕೊಡುವದೊಳಿತು. ಕೊಡಗು ಪೊಲೀಸು ತನ್ನ ಹಿಂದಿನ ಗೌರವಕ್ಕನುಗುಣ ಕೆಲಸ ಮಾಡುತ್ತಿದೆ. ಕೋಮುವಾರು ತತ್ವದಂತೆ ನೌಕರಿಗೆ ಆಯ್ಕೆ ಮಾಡುವದು ತಪ್ಪು. ಬಸ್ ಡ್ರೈವರ್ ಮತ್ತು ಕಂಡಕ್ಟರರು ತಾವೇ ಕಾಲ... ವರ್ತಿಸುತ್ತಾರೆ. ಇದಕ್ಕೆ ವಿದ್ಯಾವಂತರನ್ನು ನೇಮಿಸುವಂತೆ ಮಾಡಬೇಕು. ವೀರಾಜಪೇಟೆ ಮುನ್ಸಿಪಾಲಿಟಿ ರಸ್ತೆ ಚೆನ್ನಾಗಿಲ್ಲ. ಪರೆಸ್ಟ್ ಇಲಾಖೆ ಚೆನ್ನಾಗಿ ಕೆಲಸ ಮಾಡುತ್ತಿದೆ. ಸಹಕಾರ ರಂಗದಲ್ಲಿ ವಿವಿಧೋದ್ದೇಶ ಸಂಘಗಳನ್ನು ಹೆಚ್ಚು ಮಾಡಬೇಕು. ಈಗಿನ ಹೆಚ್ಚಿಸಿದ ಶಾಲಾ ಫೀಜಿನಿಂದ ಅನೇಕ ಬಡ ವಿದ್ಯಾರ್ಥಿಗಳು ಶಾಲೆ ಬಿಡಬೇಕಾಗಿದೆ. ಪಾನನಿರೋಧ ಜಾರಿಯಲ್ಲಿ ತರಬಾರದು. ಈ ಬಗ್ಗೆ ಸರಕಾರದ ತೀರ್ಮಾನವನ್ನು ಪುನರಾಲೋಚಿಸಬೇಕು'

ಶ್ರೀ ಕೆ. ಪಿ. ಕರುಂಬಯ್ಯನವರು.

ಕೊಡಗಿನ ಸರಕಾರದ ಉತ್ಪತ್ತಿಯನ್ನು ನೋಡಿದರೆ ಪ್ರತಿಯೊಬ್ಬ ಪ್ರಜೆಗೆ ತಲಾ ರೂ. ... ಬೀಳುತ್ತದೆ. ಬೇರೆ ಯಾವ ಪ್ರಾಂತದ ಸರಕಾರದ ಆದಾಯ ಇಷ್ಟಿಲ್ಲ. ಈ ವರ್ಷದ ಬಜೆಟ್ಟಿನಂತೆ ತಲಾ ರೂಪಾಯಿ ... ರಂತೆ ಖರ್ಚು ನಿಶ್ಚಯಿಸಲ್ಪಟ್ಟಿದೆ. ಸರ್ದಾರ್ ಪಟೇಲರು ಯಾವ ಆಧಾರದಲ್ಲೇ ಹೇಳಿದರೂ ರಾಮರಾಜ್ಯವೇ ಇದು. ... ಗಳಿಂದಲೂ ಕೂಡ ಕೊಡಗಿನ ಆಡಳಿತ ರಚನೆಯ ಬಗ್ಗೆ ನಮ್ಮ ತೃಪ್ತರಾಗಿರಲಿಲ್ಲ. ಕೌನ್ಸಿಲಿನ ಸದಸ್ಯರನ್ನು ... ಸಿದರೆ ಅಂದಿನಿಂದಲೂ ನಮ್ಮ ಕೂಗು 'ಇದ್ದೇ ಇದೆ'. ಇಲ್ಲಿಯವರ ದೂರಿಲ್ಲವೆಂದು ಸರ್ದಾರರು ಹೇಳಿದ್ದು ತಪ್ಪು. ... ದ ಖರ್ಚು ಜನತೆಯ ಅಭಿವೃದ್ಧಿಯಂತೆ ಆಗಬೇಕು. ಕೊಡಗಿನ ಭವಿಷ್ಯದ ವಿಚಾರದಲ್ಲಿ ದೇಶದ ಜನತೆಯ ಅಭಿಪ್ರಾಯ ತಿಳಿಯಲ್ಪಡಬೇಕು. ಯಾವುದೇ ನಿಯೋಗ ಗೋಷ್ಠಿ ಇರಲೀ, ಯಾವುದೇ ಮಹಾಶಕ್ತಿಯಿರಲಿ ಜನತೆಯ ಅಭಿಪ್ರಾಯ ತೆಗೆಯದೆ ದೇಶದ ಭವಿಷ್ಯ ನಿರ್ಣಯಿಸುವದು ಕೂಡದು. ರಾಜ್ಯಘಟನಾ ಸಭೆಯಲ್ಲಿರುವ ಕೊಡಗಿನ ಪ್ರತಿನಿಧಿಯು ತನ್ನ ಚುನಾವಣೆಯ ಕಾಲಕ್ಕೆ ಹೇಳಿದಂತೆ ವರ್ತಿಸಬೇಕು. ದೇಶದ ಜನರ ಅಭಿಪ್ರಾಯ ತೆಗೆಯದೆ ಯಾವ ಭವಿಷ್ಯ ನಿರ್ಣಯವೂ ಸಲ್ಲದು. ದೇಶದ ಉತ್ಪತ್ತಿಯನ್ನು ಹೆಚ್ಚು ಮಾಡಬಹುದು. ಕಂದಾಯ ಪದ್ಧತಿ ಸಮರ್ಪಕವಾಗಿಲ್ಲ. ಅದನ್ನು ಪರಿಶೀಲಿಸಿ ಯೋಗ್ಯ ರೀತಿ ನಿಶ್ಚಯಿಸಬೇಕು. ವ್ಯವಸಾಯ ತೆರಿಗೆ ಹಾಕಬೇಕು. ಆದಾಯ ತೆರಿಗೆ, ಎಕ್ಸೈಸ್ ತೆರಿಗೆಯ ಬಾಪ್ತು ಕೇಂದ್ರದಿಂದ ಒಂದು ಭಾಗವನ್ನು ಪಡೆಯಬೇಕು. ಪೂರ್ತಿ ಪಾನನಿರೋಧದಿಂದಾಗುವ ನಷ್ಟವನ್ನು ಈ ಬಾಬುಗಳಿಂದ ಭರ್ತಿ ಮಾಡಬಹುದು. ಕಳೆದ ಮಳೆಗಾಲದಲ್ಲಿ ರೈತರಿಗಾದ ನಷ್ಟಕ್ಕಾಗಿ ಸರಕಾರವು ಕೊಟ್ಟಿರುವ ರೂ. ೪೫೦೦೦ದಲ್ಲಿ ರೂ. ೫೦ರವರೆಗಿನದನ್ನು ಮಾಫಿ ಮಾಡಬೇಕು. ವಿದ್ಯೆಯ ಮಟ್ಟಿಗೆ ಕಳೆದ ನಾಲ್ಕು ವರ್ಷಗಳಿಂದ ಅಮೋಘ ಕೆಲಸ ನಡೆದಿದೆ. ನಾಲ್ಕು ಹೈಸ್ಕೂಲುಗಳಾಗಿ ಕಾಲೇಜಾಗುತ್ತಿದೆ. ಪ್ರಾಥಮಿಕ ಶಿಕ್ಷಣದ ಬಗ್ಗೆ ಹೆಚ್ಚು ನಿಗವಹಿಸಬೇಕು. ಜಿಲ್ಲಾ ಬೋರ್ಡಿನಧೀನದಲ್ಲಿರುವ ಹೈ ಎ ಶಾಲೆಗಳನ್ನು ಸರಕಾರವು ತೆಗೆದುಕೊಂಡರೆ ಪ್ರಾಥಮಿಕ ವಿದ್ಯೆಯನ್ನು ಹೆಚ್ಚು ದಕ್ಷವಾಗಿ ನಡೆಸುವದು ಜಿಲ್ಲಾ ಬೋರ್ಡಿಗೆ ಸಾಧ್ಯವಾಗುವದು. ಹಳೇ ವಿದ್ಯಾಧಿಕಾರಿಯನ್ನು ತೆಗೆದು ಬೇರೊಬ್ಬರ ನೇಮಕದಿಂದ ಹೆಚ್ಚಿನದೇನೂ ಸಾಧಿಸಲಿಲ್ಲ. ಜಿಲ್ಲಾ ವಿದ್ಯಾಧಿಕಾರಿ ಸಲಹೆಗಾರರಾಗಿ ಬೇರೊಬ್ಬರನ್ನು ಕೆಲವು ತಿಂಗಳ ವರೆಗೆ ಕರೆಸಿದರಲ್ಲಿ ಯಾರ ವಿರೋಧವೂ ಇರಲಾರದು. ಹೇಗೂ ವಿದ್ಯಾಕ್ರಮದಲ್ಲಿ ಪುನರ್ವ್ಯವಸ್ಥೆಯಾಗಬೇಕು. ಫಾರೆಸ್ಟ್ ಇಲಾಖೆಯ ಕೆಲಸ ಶ್ಲಾಘನೀಯವಿದೆ. ಈ ವರ್ಷ ಕಡಿಮೆ ನೂರು ಎಕ್ರೆ ಗಂಧದ ಮರ ನೆಡಬೇಕೆಂದು ನಾನು ಸೂಚಿಸುತ್ತೇನೆ. ಭವಿಷ್ಯದಲ್ಲಿ ಇದು ನಮ್ಮ ದೇಶವನ್ನು ಕಾಪಾಡಬಲ್ಲದು. ಬಸ್ ವಹಿವಾಟುಗಳನ್ನು ರಾಷ್ಟ್ರೀಕರಿಸುವದು ಯೋಗ್ಯವಾಗಿದೆ. ಕೋರ್ಟಿಗೆ ಸಾಕ್ಷಿಯಾಗಿ ಬರುವವರ ಭತ್ಯವನ್ನು ಏರಿಸುವದು ಅತ್ಯವಶ್ಯವಾಗಿದೆ.'

ಫೈನಾನ್ಸ್ ಮೆಂಬರರ ಉತ್ತರ.

'ಸಭೆಯ ಸಮಕ್ಷಮ ಈ ರೀತಿ ವಂದಿಸುತ್ತೇನೆ. ಕೆಲವು ಯೋಗ್ಯ ಟೀಕೆಗಳು, ಹಲವಕ್ಕೆ ಪರಸ್ಪರ ಸದಸ್ಯರೇ ಉತ್ತರ ಕೊಟ್ಟುಕೊಂಡಿದ್ದಾರೆ. ಉಪಯುಕ್ತ ಸಲಹೆಗಳನ್ನು ಆಡಳಿತವು ಅಂಗೀಕರಿಸುವದು. ಈ ಆಡಳಿತವು ಗ್ರಾಮೋದ್ಧಾರ ಯೋಜನೆಯ ಸಂಪರ್ಕ ಬೆಳೆಸಲಿಲ್ಲವೆಂಬುದು ತಪ್ಪು. ... ಹಿಂದೂಸ್ಥಾನದಲ್ಲಿ ಗ್ರಾಮೀಣ ಜನತೆಯಲ್ಲಿ ಏಳಿಗೆಗಾಗಿ ಪರ್ತಿಸ... ಸರಕಾರವಿರುವದಾದರೆ ಅದು ಕೊಡಗು ಸರಕಾರ. ಹರಿಜನರ ಬಗ್ಗೆ ಈ ಸರಕಾರವು ಅಸಾಧಾರಣ ಆಸಕ್ತಿಯನ್ನು ವಹಿಸಿದೆ. ... ಸಮಯದಲ್ಲಿ ಹರಿಜನರಿಗಾಗಿ ಹುಟ್ಟಿದ ... ಜನರ ಬಾಯಿಂದಲೇ ಬರತೊಡಗಿದೆ. ಗ್ರಾಮಾಭಿವೃದ್ಧಿ ಇದಕ ... ಸಾಮಾಜಿಕ ... ಈ ... ಲ್ಲಿ ... ಬಾವಿಗಳನ್ನು ತೋಡಲಾಗಿದೆ. ಉತ್ತಮ ನೀರು ಸರಬರಾಯಿಗಾಗಿ ರೂ. ೩೦೦೦೦ ಇಡಲಾಗಿದೆ. ಇದನ್ನು ಯೋಗ್ಯ ರೀತಿ ವಿನಿಯೋಗಿಸಲಾಗುವುದು. ಪ ... ಯ ... ವೈಲುದೂರ ... ಹೊಸ ಹರಿಜನ ಕಾಲನಿಯೊಂದು ... ಸರಕಾರ ನಡೆಸುತ್ತಿರುವ ಗ್ರಾಮಾಭಿವೃದ್ಧಿ ಕೆಲಸ ... ಬೇಕಾದರೆ ... ಬಜೆಟ್ಟಿನಲ್ಲಿ ಹಣ ... ಕೆಲಸ ಸಾಗಿಸಬೇಕೆಂಬ ಸದಿಚ್ಛೆಯಿಂದಲೇ. ಆವರೆ ಕೇಸಗಾರರ ... ಚಿಕ್ಕ ನೀರಾವರಿ ಯೋಜನೆಗಾಗಿ ಹೊಸ ಇಲಾಖೆಯೊಂದನ್ನು ತೆರೆಯಲಾಗಿದೆ. ಕೇಂದ್ರ ಸರಕಾರದ ಇಂಜನಿಯರೊಬ್ಬರು, ಹಾರಂಗಿ, ಬರಪೊಳೆ ಮೊದಲಾದ ಯೋಜನೆಗಳನ್ನು ಪರಿಶೀಲಿಸಲು ಇಲ್ಲಿಗೆ ಬಂದು ತಾ ೧೭ರಿಂ ೧೮ರ ವರೆಗೆ ಇರುವರು. ಆಗ ಮಾನ್ಯ ಸದಸ್ಯರು ಅವರನ್ನು ಕಂಡು ಈ ಯೋಜನೆಗಳ ಆವಶ್ಯಕತೆಯನ್ನು ವ್ಯಕ್ತಪಡಿಸಿದರೆ ಉತ್ತಮವಾಗುವದು.'

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಟಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 4–8–0.

ಸಂಪುಟ ೨೭	ತಾರೀಕು ೮-೪-೧೯೪೯ನೇ ಶುಕ್ರವಾರ	ಸಂಚಿಕೆ ೩೪

ದೈವಿಕ ಭಾವನೆ.

ಲೇ:— ಶ್ರೀ. ಉತ್ತಪ್ಪ, ಕುಂಬೆರ.

ಸತ್ಯವೇ ದೇವರು. ಋಜುಮಾರ್ಗದಲ್ಲಿ ನಡೆಯಬೇಕೆಂಬುದೇ ಎಲ್ಲಾ ಧರ್ಮದ ಬೋಧನೆ. ಆದರೆ ಪ್ರತಿಯೊಬ್ಬನೂ ತಾನು ಮಾಡಿದ, ಕೆಲಸ ಕಾರ್ಯಗಳಲ್ಲಿ ಹಲವು ಮಾಡಬಾರದಂಥ ಕಾರ್ಯಗಳನ್ನು ತಿಳಿದೋ ಯಾ ತಿಳಿಯದೆಯೋ ಮಾಡಿದ್ದರಿಂದ ಪಾಪ ಮತ್ತು ಪುಣ್ಯದ ವಿಚಾರಕ್ಕೆ ಹೆಚ್ಚು ಗಮನಕೊಡುವನು ಎಂದೇ ಹೇಳಬಹುದು. ತಮ್ಮ ಪಾಪವನ್ನು ಹೋಗಲಾಡಿಸಿ, ಪುಣ್ಯವನ್ನು ಕೊಡೆಂದೂ ಸದ್ಗುಣಸಂಪನ್ನರಾಗಿಯೂ, ಆಯುರಾರೋಗ್ಯ ಐಶ್ವರ್ಯವಂತರಾಗಿಯೂ ಕಾಪಾಡೆಂದೂ ದೇವರನ್ನು ಪ್ರಾರ್ಥಿಸುವೆವು. ಈ ಪ್ರಾರ್ಥಿಸುವ ವಿಧಾನವು ಇಲ್ಲಿಯ ಹಿಂದುಗಳಾದ ನಮ್ಮಲ್ಲಿ ಎರಡು ತರಹದಲ್ಲಿದೆ.

(1) ಒಂದನೆಯದಾಗಿ – ಜಪತಪ ಹೋಮಗಳಿಂದ ದೇವರನ್ನು ಪ್ರಾರ್ಥಿಸುವುದು.

(2) ಎರಡನೆಯ ವಿಧಾನದಲ್ಲಿ ಕಾರಣ, ಬೀರ, ಚಾಮುಂಡಿ, ಪಾಷಾಣಮೂರ್ತಿ, ಕಾಳಿಯ, ಕಲ್ಲುರುಟಿ, 'ಪಂಜುರುಳಿ' ಪೊಟ್ಟತೆರೆ ಎಂಬಿತ್ಯಾದಿ ಹಲವು ರೀತಿಯ ಹೆಸರನ್ನು ಕೊಟ್ಟು ಅವುಗಳಿಗೆ ಒಂದೊಂದು ರೀತಿಯ ಆಕಾರವನ್ನು ಕೊಟ್ಟು, ಅವುಗಳಿಗೆ ಮಾದಕ ಪದಾರ್ಥಗಳನ್ನು ಅರ್ಪಿಸಿ, ಅವುಗಳನ್ನು ನರ್ತಿಸಿ, ಅವುಗಳ ಕರುಣಾಕಟಾಕ್ಷವನ್ನು ಅಪೇಕ್ಷಿಸುವದು.

ಪೂರ್ಣ ನಂಬಿಕೆಯಿಂದ ಭಜಿಸಿದರೆ ಎಲ್ಲಾ ವಸ್ತುಗಳೂ ದೇವರೇ. ಆದರೆ ವಿಚಾರಿಸಿದಲ್ಲಿ ಈ ತರಹದ ದೈವಿಕ ಭಕ್ತಿಯು ಜನರಲ್ಲಿ ಭೀತಿಯನ್ನು ಹುಟ್ಟಿಸಿ, ದೇವರೆಂದರೆ ಮನುಷ್ಯನಿಗೆ ಉಪದ್ರ ಕೊಡುವ ಒಂದು ಶಕ್ತಿಯೆಂಬ ಭಾವನೆಯನ್ನು ಬೀರಿರುವುದು. ಅವುಗಳ ಆ ಆಕಾರ, ಆ ಭಯಾನಕ ನೃತ್ಯ, ಭಯಂಕರ ಕೂಗು, ಯಾರಿಗೆ ತಾನೇ ಭೀತಿ ಹುಟ್ಟಿಸಲಿಕ್ಕಿಲ್ಲ?

ಪರಿಶೀಲಿಸಿ ನೋಡಿದಲ್ಲಿ 'ಬೀರ'ನೆಂದರೆ 'ವೀರ' ಎಂಬುದರ ತದ್ಭವವೆಂದು ಹೇಳಬಹುದು. ಈ ದೇವರ ಅಥವಾ ದೈವಗಳ ಎಲ್ಲಾ ಪಿಷ್ಟಬಟೆಯ ಆಕಾರ ನೋಡಿದಲ್ಲಿ, ಅವು ಬಹುವು ಶತಮಾನಗಳ ಹಿಂದೆ, ಮನುಷ್ಯವರ್ಗದವರು ಕಾಡಿನಲ್ಲಿ ವಾಸಿಸುತಿದ್ದು, ಬಟ್ಟೆ ನೇಯುವುದನ್ನು ಕಂಡುಹಿಡಿಯುವ ಮೊದಲ, ಸೊಪ್ಪು ಸದೆಯನ್ನು ಹೊದ್ದುಕೊಂಡು ವಿಚಿತ್ರ ರೀತಿಯ ಬಣ್ಣ ಬಳಿದುಕೊಂಡು, ಇಷ್ಟ ಸಮಯದಿಂದಲೇ, ಏರ್ಪಡಿಸಿದಂಥ ಒಂದು ಕ್ರಮವೆನ್ನಬಹುದು.

ಇದನ್ನು ಚಾಮುಂಡಿ ದೇವತೆಯ ತೆಂಗಿನ ಓಲೆಯ ಕೊಡಿಗೆಯು ಸ್ಪಷ್ಟೀಕರಿಸುವುದು. ತೆಂಗಿನ ಓಲೆಯನ್ನು ಚೆನ್ನಾಗಿ ನೆಯ್ದು ಅತಿಪೂರ್ವದಲ್ಲಿ ಮೈಮುಚ್ಚುತಿದ್ದರೆನ್ನಬಹುದು. ಆ ಕಾಲದಲ್ಲಿ ಕಾಡಿನಲ್ಲಿ ಜೀವಿಸಿ [illegible], ಕಾಡುಮೃಗಗಳ ಜೊತೆ ಇದ್ದಾಗ, ಆ ಸಂಗಡದಲ್ಲಿ ವೀರನಾಗಿ, ಅಥವ 'ಬೀರ'ನಾಗಿದ್ದವನನ್ನು, ಶೌರ್ಯ ಧೈರ್ಯದಿಂದ ಕೂಡಿದ್ದ ಹೆಂಗಸನ್ನೂ ಅಲಂಕರಿಸಿ (ಎಂಗಟೆ, ಚಪ್ಪಡಿ, ಇತ್ಯಾದಿ) ಅವರಿಗೆ ಪ್ರಿಯವಾದ ವಸ್ತುವನ್ನು ಅರ್ಪಿಸಿ, ಸಂಗಡದ ಜನರನ್ನೆಲ್ಲಾ ಪ್ರಾಣಿ ಬಾಧೆಯಿಂದ ತಪ್ಪಿಸಬೇಕೆಂಬ ಅರ್ಥದ ಪ್ರಾರ್ಥನಾಗರ ಅನಾದಿಯಿಂದ ಬಂದ ಸತ್ಕಾರ ಕೂಟವೆಂದೇ ಹೇಳಬಹುದು.

ಕಾಡುಬಿಟ್ಟು ಊರಿಗೆ ಬಂದಾಗಲೂ, ಕಾಡಲ್ಲಿ ಸಂರಕ್ಷಿಸಿದವರ ಜ್ಞಾಪಕಾರ್ಥವಾಗಿ, ಹಾಗೆಯೇ ಆ ಸತ್ಕಾರಕೂಟವನ್ನು ವಿಜೃಂಭಣೆಯಿಂದ ಸಾಗಿಸಿದ್ದು, ಈಗಲೂ ಅದೊಂದು ಸಂಪ್ರದಾಯವಾಗಿಯೇ ಉಳಿದಿದೆ.

ಊಟಕ್ಕೆ ಇಲ್ಲದೆ ಕಷ್ಟಪಡುತ್ತಿರುವ ಜನರೂ ಸಹ ಈ ಸಂಪ್ರದಾಯವನ್ನು ಬಿಟ್ಟರೆ ತಮ್ಮ ವಂಶವೇ ಅಳಿದು ಹೋಗಬಹುದೆಂಬ ಹೆದರಿಕೆಯಿಂದ ಸಾಲಮಾಡಿಯಾದರೂ ಒಂದು ತಿಂಗಳಿಗೆ ತಮಗೆ ಸಾಕಾಗುವಷ್ಟು ಹಣವನ್ನು ಒಂದೆರಡು ದಿನದಲ್ಲಿ ಈ ಸಂಪ್ರದಾಯದ ಸತ್ಕಾರಕೂಟಕ್ಕೆ ಖರ್ಚು ಮಾಡುವರು!

ಬರೀ ಅವಿದ್ಯಾವಂತರೂ, ವಿಚಾರಶಕ್ತಿಹೀನರೂ ಈ ವಿಚಿತ್ರ ರೀತಿಯಲ್ಲಿ ಬಣ್ಣ ಬಳಿದುಕೊಂಡು ಮಾದ್ಯಕ ಸೇವನೆಯಿಂದ ಮತ್ತರಾಗಿ ಕುಣಿಯುವ ಆ ದೈವ ಯಾ ದೇವರುಗಳು ಅದ್ಭುತ ಶಕ್ತಿಯನ್ನು ಹೊಂದಿದವುಗಳೆಂದೂ ಅವುಗಳಿಗೆ ಹಿಂದೆ ಆದ ಮತ್ತು ಮುಂದೆ ಆಗುವ ವಿಷಯಗಳು ತಿಳಿದಿರುವುವೆಂದೂ, ನಂಬಿದ್ದರೆ ಇದು ಮಾಫರೆ ತಿಳಿಗೇಡಿತನ ಎಂದೆನ್ನಬಹುದಾಗಿತ್ತು. ಆದರೆ ವಿದ್ಯಾವಂತರೂ, ನಾಗರೀಕರಾದವರೂ 'ತನಗೆ ಮಕ್ಕಳಾಗುವಂತೆ ಮಾಡಿದರೆ, ಯಾ ಕೈ ಬಿಟ್ಟುಹೋದ ಹಣ ದೊರಕುವಂತೆ ಮಾಡಿದರೆ, ಆ ದೇವರಿಗೆ ದೊಡ್ಡ ಹರಕೆ ಕೊಡುವೆನು' ಎಂದು ದೇವರಿಗೂ ಹಣಕಾಸಿನ ಆಶೆ ಹುಟ್ಟಿಸುವುದನ್ನು ನಾವು ಕಾಣುತ್ತೇವೆ!

ಈ ಹಣಕಾಸನ್ನು ದೊರಕಿಸಿಕೊಡಲು ಶಕ್ತಿಯುಳ್ಳ ದೇವರಿಗೆ ಆ ಹಣಕಾಸಿನ ಹರಕೆಯಿಂದ ಪ್ರಯೋಜನವಾದರೂ ಏನು? ದೇವರಿಗೆ ಬೇಕಾದದ್ದು ಭಕ್ತಿ; ಭಕ್ತಿಯಿಂದ ಅರ್ಪಿಸಿದ ಯಾವುದೇ ವಸ್ತುವೂ, ಪ್ರಿಯವಾದುದೆಂದು ಕೇಳಿದ್ದೇವೆ. ದೊಡ್ಡ ಹರಕೆಯನ್ನು ಒಪ್ಪಿಸಿದವನು ದೊಡ್ಡಪ್ಪನಾಗುವುದಾಗಿದ್ದರೆ ಭೂಲೋಕವು ಹೀಗೆ ಇರುತಿತ್ತೇ? ಇಂಥಾ ದೇವರ ಹತ್ತಿರ ಯಾರಾದರೂ ತಮ್ಮ ಕಷ್ಟಪರಂಪರೆ ನಿವಾರಿಸುವ ಬಗ್ಗೆ ಹೋದಲ್ಲಿ ಆ ದೇವರ ತಕ್ಕಮುಖ್ಯಸ್ಥನು, 'ನಿನ್ನ ಕಷ್ಟಪರಂಪರೆಯನ್ನು ನೀಗಿಸಿದರೆ ದೇವರಿಗೆ ಏನು ಕೊಡುತ್ತೀ?' ಎಂದು ಒಂದು ಪ್ರಶ್ನಿಸುವದನ್ನು ನಾವು ಕೇಳುತ್ತಾ ಇದ್ದೇವೆ. ಇದರಲ್ಲಿ ಏನು ಅರ್ಥವೋ-ಅನರ್ಥವೋ ಆ ದೇವರೇ ಬಲ್ಲ.

ಇನ್ನೂ ವಿಚಾರಿಸಿದಲ್ಲಿ ಇಂಥಾ ದೇವರುಗಳನ್ನು ಅಭಿಷೇಕಮಾಡಿ ಪೂಜೆ ಮಾಡುವ ಪೂಜಾರಿಯು, ಆ ದೇವರುಗಳ ಕಣ್ಣು ಕಟ್ಟಿಬಿಟ್ಟು, ಅವನ್ನು ಬಂಧಿಸಿ, ನೆಲದೊಳಗೆ ಹೂತುಬಿಡುವದಿದ್ದ ವಿಷಯವೂ; ತರುವಾಯ ಮಹಾ, ಮಹಾ ಶಕ್ತಿಗಳ ಭಗೀರಥ ಪ್ರಯತ್ನದಿಂದ ಆ ದೇವರ ಕಣ್ಣುಗಳನ್ನು ಬಿಡಿಸಿ, ದೇವರನ್ನು ಮೇಲಕ್ಕೆ ತಂದರೆಂಬ ವಿಷಯವೂ ಕೇಳಿಬರುತ್ತದೆ.

ದೇವರ ಕಣ್ಣನ್ನು ಕಾಣದೆ ಮಾಡುವವನು ಮನುಷ್ಯನೇ? ಅಥವಾ ಹುಟ್ಟಿ ಸಾಯುವ ಮನುಷ್ಯನಿಂದ ಕಣ್ಣುಕಾಣದೆ ಮಾಡಲು ಸಾಧ್ಯವಾಗುವಂಥ ದೇವರು ದೇವರೇ?

ಪರಿಶೀಲಿಸಿ ನೋಡಿದಲ್ಲಿ ಹಲ ಕೆಲವು ಪುರಾಣ ಕಥೆಯು ಸಹ ಈಗಿನ ಜನರ ತಿಳುವಳಿಕೆಗೆ ಅತಂಕವನ್ನು ಉಂಟುಮಾಡಿ, ಪುರಾಣವು ಸುಳ್ಳೇ ಎಂಬ ಭಾವನೆಯನ್ನು ಪ್ರೇರೇಪಿಸುತ್ತವೆ—ಎಂದೆನ್ನಬಹುದು. ಉದಾಹರಣೆಯಾಗಿ–ಸ್ವರ್ಗವೆಂದರೆ ಹಸಿವು, ನೀರಡಿಕೆ, ಕಾಮ ಕ್ರೋಧ ಯಾವುದೂ ಇಲ್ಲದೆ, ಸದಾ ತೃಪ್ತಿಯಿಂದಿರುವ ಲೋಕವೆಂದು ಬರೆದಿರುವರು. ಆ ಸ್ವರ್ಗದಲ್ಲಿಯ ನಿವಾಸಿಗಳು ಅಷ್ಟು ತೃಪ್ತರಾಗಿರುವಾಗ ಅವರ ಅರಸ ದೇವೇಂದ್ರನು ಸದಾಕಾಲ ತೃಪ್ತನೇ ತಾನೇ? ಇಂಥಾ ದೇವೇಂದ್ರನು ಪಾಪಗಳ ಬೀಡಾದ ನರಲೋಕಕ್ಕೆ ಬಂದು, ಗೌತಮ ಮುನಿಯಿಂದ ಶಾಪಹಾಕಿಸಿಕೊಂಡನೆಂದರೆ, ಆ ಸ್ವರ್ಗಲೋಕವೂ, ಅದರ ಅರಸ ದೇವೇಂದ್ರನೂ, ಕಟ್ಟುಕಥೆಯೋ ಎಂಬ ಸಂಶಯವನ್ನು ಹುಟ್ಟಿಸುತ್ತದೆ.

ಮಾತಾಪಿತೃವಾಕ್ಯ ಪರಿಪಾಲನೆಮಾಡಬೇಕೆಂಬುದನ್ನು ಪುರಾಣದಲ್ಲಿ ನಿವೇದಿಸಿರುವರು. ಶ್ರೀರಾಮನು ಪಿತೃವಾಕ್ಯ ಪರಿಪಾಲನೆಗೆ ಅರಣ್ಯಕ್ಕೆ ತೆರಳಿ ಶ್ರೇಯಸ್ಸನ್ನು ಪಡೆದನು. ಆದರೆ ಭರತನು ತನ್ನ ಮಾತೆ ಕೈಕೇಯಿಯ ಅಭಿಲಾಷೆಯನ್ನು ಈಡೇರಿಸದೆ ತನ್ನ ಮಾತೆಯ ಮಾತಿಗೆ ವಿರುದ್ಧವಾಗಿ ವರ್ತಿಸಿದ್ದು ತಪ್ಪೆಂದು ಪುರಾಣದಲ್ಲಿ ಎಲ್ಲಿಯೂ ಹೇಳಲಿಲ್ಲ. ಮಹಾಭಾರತದಲ್ಲಿ ಮಾತೆಯ ವಚನದಂತೆ ಒಬ್ಬ ಹೆಂಗಸನ್ನು ಐದು ಮಂದಿ ಗಂಡಂದಿಯರು ವರಿಸಿದ್ದು ಮಾತೃವಾಕ್ಯ ಪರಿಪಾಲನೆಗಾಗಿಯೇ!

ರಾಮಾಯಣದಲ್ಲಿ ಒಬ್ಬ ಗಂಡನು ಒಬ್ಬಳೇ ಹೆಂಗಸನ್ನು ಮದುವೆಯಾಗತಕ್ಕದೆಂದು ಸತಿಪತಿ ಧರ್ಮವನ್ನೂ, ಏಕಪತ್ನೀವ್ರತವನ್ನು ನಿವೇದಿಸಿರುವರು. ಭಾರತದಲ್ಲಿ ಒಬ್ಬ ಹೆಂಗಸಿಗೆ ಐದುಮಂದಿ ಗಂಡಂದಿಯರಿದ್ದರೂ, ಒಬ್ಬ ಗಂಡಸಿಗೆ ಅನೇಕ ಜನ ಹೆಂಗಸರಿದ್ದರೂ ಪತಿವ್ರತಾಧರ್ಮವೂ ಪತಿವ್ರತಾಧರ್ಮವೂ ಸಾಧ್ಯವಿದೆಯೆಂದು ನಿವೇದಿಸಿರುವ ಹಾಗೆ ಕಾಣುತ್ತದೆ. ಇದೆಲ್ಲಾ ಕವಿಗಳ ಕವಿತಾಶಕ್ತಿಯೋ ಏನೋ?

ನಮಗೆ ದೇವರಿರುವನು ಎಂದು ತಿಳಿದಿರುವುದು, ದೇವಸ್ಥಾನ ಇರುವುದು ಎಂದೂ ತಿಳಿದಿರುವುದು. ಆದರೆ ಈ ಮೇಲೆ ಹೇಳಿದ ಕೆಲವು ವಿಚಾರಗಳಿಂದಾಗಿ ಆ ದೇವರನ್ನು ಅರ್ಚಿಸುವ ರೀತಿಯಲ್ಲಿ ನೀತಿಯು ಸಿಕ್ಕಿಲ್ಲ.

ಮುಸಲ್ಮಾನರು ಶುಕ್ರವಾರ 'ಪಳ್ಳಿ'ಗೆ ಹೋಗಿಯೇ ಹೋಗುವರು. ಕ್ರೈಸ್ತರಿಗೆ ಆದಿತ್ಯವಾರ ಚರ್ಚಿಗೆ ಹೋಗದೆ ಇದ್ದಲ್ಲಿ ಸಮಾಧಾನವಿಲ್ಲ. ಅವರ ಅಲ್ಲಿಯ ಗುರುಗಳು ವಿದ್ಯಾಹೀನರಿಗೆ ಸಹ ಉಪಯೋಗವಾಗುವಂಥ ಹಲವು ಸದುಪದೇಶ ಮಾಡುವರು. ಇದರಿಂದ ಜ್ಞಾನಶಕ್ತಿ ವಿಚಾರಶಕ್ತಿ ಹೆಚ್ಚುವುದು.

ನಾವುಗಳು ಪೂಜೆಗೆ ಹೋದಲ್ಲಿ ಪೂಜಾರಿಯು ಮಂತ್ರ ಹೇಳುತ್ತಾ ದೇವರಿಗೆ ಅಭಿಷೇಕಮಾಡುತ್ತಾ ಪೂಜೆ ಮಾಡುವನು, ಅದು ಏನು ಮಂತ್ರ ಆದರ ಅರ್ಥವೇನೆಂದು ಅಲ್ಲಿ ನೆರೆದ ಹೆಚ್ಚಿನ ಜನರಿಗೆ ತಿಳಿದಿರುವುದಿಲ್ಲ. ಬರೀ ಕೈ ಕಟ್ಟಿ ನಿಂತರೆ ಮನಸ್ಸು ಎಲ್ಲಿಯೋ ಚಲಿಸುತ್ತಿರುವುದು. ಅಲ್ಲಿ ಹೇಳುವ ಮಂತ್ರದ ಅರ್ಥವನ್ನಾದರೂ ನಮಗೆ ತಿಳಿಯುವ ಹಾಗೆ ಹೇಳಿಕೊಟ್ಟು, ಆ ಮಂತ್ರ ಹೇಳಿದರೆ, ನೆರೆದ ಜನರೂ ಅದನ್ನು ತಿಳಿದುಕೊಂಡು ನೆಟ್ಟಮನಸಿನಲ್ಲಿ ಪ್ರಾರ್ಥಿಸಬಹುದು. ಅದರ ಬದಲು ಪೂಜಾರಿಯು ಮಾತ್ರ ಪೂಜೆ ಮಾಡುವನು. ಇದರಿಂದಾಗಿ ಗ್ರಾಮಗಳಲ್ಲಿ, ಪೂಜೆ ನಡೆಯುವಾಗ ಸುಮ್ಮನೆ ನಿಲ್ಲುವ ಬದಲು, ಹಲವು ವೇಳೆ ಗ್ರಾಮದ ಕಲಹ ಕಕ್ಷಿಯ ಸಂಬಂಧ ತೀರ್ಮಾನದ ಪಂಚಾಯತಿ ಕೂಟವನ್ನು ಅಲ್ಲಿಗೆ ಇಟ್ಟುಕೊಳ್ಳುವರು. ಅವು ಜಗಳ ಮಾಗದೆ ತೀರ್ಮಾನವಾದರೆ ಪುಣ್ಯ. ಹಾಗಾಗಿ ದೇವಸ್ಥಾನಕ್ಕೆ ಹೋಗಲು ಊರಲ್ಲಿಯ ಜನರು ಹಿಂಜರಿಯುವರು.

ನಮ್ಮ ಜನರಲ್ಲಿ, ದೈವಿಕ ಭಾವನೆ ಮತ್ತು ಒಗ್ಗಟ್ಟು ಬರಬೇಕಾದರೆ, ಗ್ರಾಮದಲ್ಲಿ ಇರುವ ಪ್ರತಿ ದೇವಸ್ಥಾನದಲ್ಲಿ, ವಿದ್ಯಾವಂತರಾದ, ಪಂಡಿತರನ್ನೋ, ಪುರೋಹಿತರನ್ನೋ, ನೇಮಿಸಿ, ವೇದಪುರಾಣ, ಉಪದೇಶಗಳನ್ನು ಬಹಿರಂಗವಾಗಿ ಓದಿ ಅದರ ಅರ್ಥ ಹೇಳಿಕೊಡುವಂತೆ ಏರ್ಪಡಿಸಿ ಗ್ರಾಮಸ್ಥರೆಲ್ಲರೂ ತಿಂಗಳಿಗೆ ಎರಡು ಬಾರಿಯಾದರೂ ದೇವಸ್ಥಾನಕ್ಕೆ ನಿಯಮಿತ ದಿನದಲ್ಲಿ ಹೋಗಿ ಕೂಡುವ ಏರ್ಪಾಡು ಮಾಡಬೇಕು. ಎಲ್ಲಾ ದೇವಸ್ಥಾನದಲ್ಲಿಯೂ ಪೌರಾಣಿಕ ಶಾರೀರಿಕ, ಚಾರಿತ್ರಿಕ, ಮತ್ತು ಸಾಮಾಜಿಕ ಪುಸ್ತಕಗಳಿರುವ ಪುಸ್ತಕ ಭಂಡಾರವನ್ನು ತೆರೆಯುವ ಏರ್ಪಾಡು ಮಾಡಬೇಕು. ಮುಖ್ಯವಾದ ವರ್ತಮಾನ ಪತ್ರಿಕೆಗಳು ಬರುವ ಏರ್ಪಾಡೂ ಆಗಬೇಕು. ಹೀಗೆ ಆದಲ್ಲಿ ಜನರಿಗೆ ಅಲ್ಲಿಗೆ ಹೋಗಲು ಉತ್ಸಾಹವು ಬರುವುದು. ಜನರಲ್ಲಿ ಜ್ಞಾನಾಭಿವೃದ್ಧಿಗೂ, ಐಕ್ಯತೆಗೂ, ಎಲ್ಲಿಗೂ ಪ್ರೋತ್ಸಾಹವು ದೊರೆಯುವುದು.

ಕಾಲ ಬದಲಾಯಿಸಿತೇ?

ಲೇ:—"ಸರಸ್ವತಿ" ಮಡಿಕೇರಿ.

ರಾಮಚಂದ್ರ ಪುರದಲ್ಲಿ ಒಂದು ವಿಹಾರ ಮಂದಿರ. ಅದರಲ್ಲಿ ಉದ್ಯೋಗಸ್ಥರಿಗೆ ಮಾತ್ರ ಸ್ಥಳ. ಆ ಮಂದಿರಕ್ಕೆ ಸೇರಿದವರು ಬೇರೆ ಸ್ಥಳೀಕ ಮಂದಿರಗಳಲ್ಲಿ ಸೇರಬಾರದೆಂಬುವದೇ ಅಲ್ಲಿಯ ಒಂದನೇ ನಿಯಮ. ಅಲ್ಲಿ ಕದ್ದು ಕೇಳಿದ ಈ ಸಂಭಾಷಣೆಯನ್ನು ವಾಚಕರಿಗಾಗಿ ಇಲ್ಲಿ ಬರೆದಿರುವೆನ

ಗೋವಿಂದ:— ಏನಯ್ಯಾ ಈಗಿನ ಕಾಂಗ್ರೆಸ್ ಕಾಲದ ದೈತರು; ಗಾಂಧೀ ಟೋಪ್ಪಿ ಹಾಕಿದರೆ ಸಾಕು, ನಾವೆಲ್ಲಾ ಅವರ ಗುಲಾಮರು ಎಂದು ಅವರ ಗಣನೆ. ಮೊನ್ನೆ ನಾನು ನನ್ನ ಕಾಬೀಲನ್ನು ಕಳುಹಿಸಿ ಪಟೇಲ ಕೃಷ್ಣನನ್ನು ಠಾಣೆಗೆ ಬರ ಹೇಳಿದರೆ, ಒಹಳ ನಯ ನುಡಿಯಿಂದ 'ಬರಲಾಗುವದಿಲ್ಲ. ಈ ದಿನ ದೊಡ್ಡ ನಾಟಗೆ ಏರ್ಪಾಡು ಮಾಡಿದ್ದೇನೆ' ಎಂದು ಹೇಳಿ ಕಳುಹಿಸಿದನಲ್ಲಾ ಎನು ಗರ್ವ! ಐದು ವರ್ಷಕ್ಕೆ ಹಿಂದೆಯಾಗಿದ್ದರೆ ಅವನನ್ನು ೨೪ ಗಂಟೆಯಾದರೂ ಜೈಲಿನಲ್ಲಿರಿಸುತ್ತಿದ್ದೆ!

ಚಂದ್ರಪ್ಪ:— ಪೋಲೀಸ್ ಇಲಾಖೆಯು ನೀನು, ಹೇಳುವದಿರಲಿ. ವೈದ್ಯರೆಂದರೆ ದೇವರೆಂದು ತಿಳಿಯುವ ಕಾಲವಿತ್ತು. ಅದೇ ಕಳಚಿಬಿದ್ದಿದೆ. ಮೊನ್ನೆ ಕೊಳಗೊಳ ರಾಮ ಶೆಟ್ಟಿ ನನ್ನನ್ನು ರಾತ್ರಿ ೧೨ ಗಂಟೆಗೆ ಬರಬೇಕೆಂದು ಕರೆಕಳುಹಿಸಿದ್ದ. ನಾನು ಒಂದು ದಿನಕ್ಕೆ ಹಿಂದೆ ಒಂದು ಕೊಲೆ ಕೇಸಿಗೆ ಹೋಗಿ ನಿದ್ರೆ ಕೆಟ್ಟಿದ್ದೆ. ಆಗುವದಿಲ್ಲವೆಂದು ಹೇಳಿಕಳುಹಿಸಿದೆ. ಅರ್ಧ ಗಂಟೆಯಲ್ಲಿ ಗಾಡಿ ಹಾಕಿಕೊಂಡು, ದುಪಟಿ ಹೊದ್ದುಕೊಂಡು ಬಂದು ರಾವಣನಂತೆ ವೈದ್ಯಶಾಲೆಯ ಎದುರು ನಿಂತು ಕೂಗಲಾರಂಭಿಸಿದ. ನಾನು ಬರಲು ಸಾಧ್ಯವೇ ಇಲ್ಲವೆಂದು ಹೇಳಿದೆ. ಹಾಗೆಯೇ ಬರೆದು ಕೊಡಿ ಎನ್ನುತ್ತಾನಲ್ಲ! ಬರಲಾರದೆ ಹೋದರೆ ಮೇಲಧಿಕಾರಿಗೆ ಬರೆದು ನಿಮ್ಮನ್ನು ವರ್ಗ ಮಾಡಿಸುವದು ಖಂಡಿತವೆಂದು ನನ್ನ ಮುಖಕ್ಕೆ ಹೇಳಿದನಲ್ಲಾ!

ರಂಗಪ್ಪ:— ಅದೇನು ದೊಡ್ಡದು? ಮೊನ್ನೆ ನಾನೂ, ಮುನ್ಸೀಫರೂ ಒಂದು ಕೇಸಿಗೆ ಸಂಬಂಧಿಸಿದ ಜಾಗ ನೋಡಬೇಕಾಗಿತ್ತು. ಪಿರ್ಯಾದಿಯಾಗಲೀ, ಅಪರಾಧಿಯಾಗಲೀ ನಮ್ಮನ್ನು ಕರೆದುಕೊಂಡು ಹೋಗಬೇಕು ಬಂಡಬೇಡವೇ? ನಾವು ಒಂದು ಕಾರು ಮಾಡಿಕೊಂಡು ಹೋದೆವು. ಅಲ್ಲಿ ನಮಗೆ ಕುಡಿಯಲು ಒಂದು ಕಪ್ಪು ಹಾಲಾದರೂ ಕೊಡಬೇಡವೇ? ನಾವು ಹೋದ ವಾರ್ತೆ ತಿಳಿದು ಎರಡು ಪಂಗಡದವರು ಜೊತೆಯಲ್ಲಿ ಬಂದು 'ನ್ಯಾಯಾಧೀಶರುಗಳು ಬಂದಿರುವಿರಿ. ನ್ಯಾಯ ತೀರ್ಪು ಕೊಡಿರೆಂದರು.' ನಾನು ವಕೀಲನಾದ ಕಾರಣ ನನ್ನ ಪಕ್ಷದವರನ್ನು ಬೇರೆ ಕರೆದು 'ನಾನು ಕಾರು ತಂದೆನು ಕಾರಿನವರ ಬಾಡಿಗೆ ಕೊಡಿರೆಂದನು. ಪ್ರತಿಪಕ್ಷದ ವಕೀಲರೂ ಅದೇ ರೀತಿ ಕೇಳಿದರಂತೆ. ಆದರೆ ಎರಡು ಕಡೆಯವರೂ ನಿರಾಕರಿಸಿದರು. ಮುನ್ಸೀಫರ ಎದುರಿನಲ್ಲಿಯೇ 'ಸ್ವಾಮಿ, ನಿಮ್ಮ ಕಾರಿನಲ್ಲಿ ಬಂದು ಎರಡು ವಕೀಲರು ನಮ್ಮಿಂದ ಬಾಡಿಗೆ ಕೇಳುವದು ಯಾವ ನ್ಯಾಯ? ನಿಮಗೆ ಸರಕಾರದವರು ರೈತರ ಹಣದಿಂದ ಬತ್ಯ ಕೊಡುತ್ತಾರಲ್ಲವೇ' ಎಂದು ಹೇಳಲು ಮುನ್ಸೀಫರೂ, ನಾವೂ ಬೆಚ್ಚಿದೆವು. ಲೋಕ ವಿಪರೀತಕ್ಕೆ ಳಿಯಿತು, ಇದು ವಿದ್ಯೆಯ ಪ್ರಭಾವ. ಎಲ್ಲರೂ ಓದಿದರೆ ಏನಾಗುವದೋ!

ಚೆನ್ನಪ್ಪ:— ಅಯ್ಯೋ ನನ್ನ ಮನೆಯಲ್ಲಿ ಹತ್ತು ವರ್ಷ ಊಳಿಗ ಮಾಡುತ್ತಿದ್ದ ಕೋಮನಿಗೆ ಈಗ ಮೂರು ವರ್ಷದಿಂದ ಪ್ಯೂನ್ ಕೆಲಸ ಕೊಡಿಸಿದೆ. ಅಲ್ಲ, ಕೊಡೆ ಎಲ್ಲ ವರ್ಷ ವರ್ಷವೂ ಕೊಡುತ್ತಿರುವದಲ್ಲದೆ ಅವನ ಎಲ್ಲಾ ಖರ್ಚು ನಾನೇ ತೀರಿಸಿ ತಿಂಗಳಿಗೆ ಮೂರು ರೂಪಾಯಿಯಂತೆ ಮಲಯಾಳಕ್ಕೆ ಕಳುಹಿಸುತ್ತಿದ್ದೆ. ಮೂರು ತಿಂಗಳ ಹಿಂದೆ ಅವನಿಗೆ ಸೌಖ್ಯವಿಲ್ಲವೆಂದು ರಜದಲ್ಲಿ ಹೋಗಲು, ಸ್ವಂತದಿಂದ ಹಿಂದಿರುಗಿದ ಒಬ್ಬನನ್ನು ಆ ಸ್ಥಳಕ್ಕೆ ನೇಮಿಸಿಕೊಂಡೆ. ಈತನು ಗಟ್ಟಿ ಮುಟ್ಟಾಗಿಯೂ, ಚೊಕ್ಕಟವಾಗಿಯೂ ಇದ್ದಾನೆ. ನಯ ನುಡಿ ತುಂಬ ಕೈ ಜೋಡಿಸಿ 'ಜೈ ಹಿಂದ್' ಅನ್ನುತ್ತಾನೆ. ನಾನು ಆಫೀಸಿಗೆ ಹೊರಡಲು ಅರ್ಧ ಗಂಟೆ ಮೊದಲು ಬರುತ್ತಾನೆ. ಮನೆಯವಳು ಕೆಲಸ ಹೇಳಲು ಅಂಜುತ್ತಾಳೆ ಅವನೂ ಮನೆಯ ಒಳಗೆ ಹೋಗನು. ಒಂದು ದಿನ ಸಂತೆಯಿಂದ ಸಾಮಾನು ತರಲು ಕಳುಹಿಸಿದೆ. ಒಬ್ಬ ಆಳಿನವನ ಕೈಯ್ಯಲ್ಲಿ ಹೊರಿಸಿಕೊಂಡು ಒಂದು ನಮ್ಮಿಂದ ಅರಂಣೆ ದಂಡ ತೆರಿಸಿದ!

ಕೃಷ್ಣಪ್ಪ:— ಮೊನ್ನೆ ಒಂದು ಶಾಲೆ ಸಂದರ್ಶಿಸಿದೆ. ಎಲ್ಲವೂ ಚೊಕ್ಕಟವಾಗಿತ್ತು. ನಾನು ಹಿಂದಕ್ಕೆ ಬರುವಾಗ ಒಬ್ಬ ವಿದ್ಯಾರ್ಥಿ ಬಂದು 'ನೋಡಿ ಸ್ವಾಮಿ, ನೀವು ಬಂದದಕ್ಕಾಗಿ ರಜೆ ಕೇಳಬೇಕೆಂದು ನಮ್ಮ ಉಪಾಧ್ಯಾಯರೊಬ್ಬರು ಹೇಳಿದರು' ಎಂದ. 'ನಿಮಗೆ ಮಕ್ಕಳಿಗೆ ರಜೆ ಬೇಕೋ, ಯಾ ಉಪಾಧ್ಯಾಯರಿಗೋ?' ನಾನು ಕೇಳಿದೆ. 'ನಮಗೆ ರಜೆ ಬೇಕಿಲ್ಲ ಸಾರ್. ಆದರೆ ಉಪಾಧ್ಯಾಯರು ರಜೆ ಬೇಕೆಂದು ಹೇಳುತ್ತಾರೆ!' ಹುಡುಗ ನುಡಿದ

ಮಾತು ಮುಗಿಸಿ ಬ್ರಿಜ್ ಆಡಲು ಕುಳಿತರು. ಕುಳಿತಿದ್ದಂತೇ ಹೊರಗೆ ಕೂಗು ಕೇಳಿತು.

ಚಂದ್ರಪ್ಪ:— ಏನದೋ ಕೂಗೇ ದು? ಮಾರ್ಕರ್ ಹೊರಹೋಗಲಿಕ್ಕೆ ಹೇಳು—ಅರ್ಧ ಗಂಟೆ ಸಹ ಸುಮ್ಮನೆ ಬಿಡುವದಿಲ್ಲ.

ಮಾರ್ಕರ್:— ಮನೆಯಲ್ಲಿ ಮಗುವಿಗೆ ಹಾಲು ಗಂಟಲಿಗೆ ಸಿಕ್ಕಿಕೊಂಡು ಬೆಂದು ಹೋಗಿದೆಯಂತೆ. ಮುಂದಕ್ಕೆ ಡಾಕ್ಟರನ್ನು ಕಾಣಬೇಕೆಂದು ಕೂಗುತ್ತಾಳೆ.

ಚಂದ್ರಪ್ಪ:— ಆದದ್ದು ಆಗಿಹೋಯಿತು. ನಾಳೆ ಬೆಳಗ್ಗೆ ಆಸ್ಪತ್ರೆಗೆ ಕರೆದು ತರಲು ಹೇಳು. ಏನೋ ದೊಡ್ಡ ಕಾರ್ಯದಲ್ಲಿ ಅಧಿಕಾರಿಗಳೆಲ್ಲಾ ಇರುವರೆಂದು ತಿಳಿಸು

ಮಾರ್ಕರ್:— ('ಸ್ವಲ್ಪ ಹೊತ್ತಿನ ಮೇಲೆ) ಮುದುಕಿ ಅಳುತ್ತಾರೆ. ಅವರು ನಿಮ್ಮ ತಾಯಿಯಂತೆ ಸಾರ್.'

ಎಲ್ಲರೂ ಮುಖ ಮುಖ ನೋಡಿದರು. ಡಾಕ್ಟರರೂ ಆಟ ಬಿಟ್ಟು ಆತುರದಿಂದ ಹೊರಗೆ ಓಡಿದರು. ಬೇರೆಯವರ ಮಗು ಎಂದಾಗ ಅಲಕ್ಷ್ಯ ಮಾಡಿದ ಡಾಕ್ಟರು ತಮ್ಮ ಮನೆಯ ಮಗು ಎಂದಾಗ ಪ್ರಾಣಬಿಟ್ಟು ಓಡಿದರು! ಸ್ವರಾಜ್ಯ ಬಂದರೇನು? ದೈತರು ಇವರು, ಹಳ್ಳಿಯವರಿವರು ಎಂಬ ತಾರತಮ್ಯ ಇರುವವರೆಗೆ ಸ್ವರಾಜ್ಯಕ್ಕೆ ಅರ್ಥವಿಲ್ಲ ಶ್ರೀಮಂತರು ಬಂದು ಕೂಗಿದರೆ ಡಾಕ್ಟರೂ ಏಳುತ್ತಾರೆ! ಅಧಿಕಾರಿಗಳೂ ಓಡಾಡುತ್ತಾರೆ. ಆದರೆ ಬಡವನ ಕೂಗು ಸ್ವತಂತ್ರ ಬಂದ ಈ ದೇಶದಲ್ಲಿ ಇನ್ನೂ ಅಧಿಕಾರಿಗಳಿಗೆ ಕೇಳುತ್ತಿಲ್ಲ ದೇಶದ ಶ್ರೀಮಂತ, ಬಡವ, ಹರಿಜನ, ಬ್ರಾಹ್ಮಣ, ಉದ್ಯೋಗಿ, ದೈತ ಸರ್ವರೂ ಒಂದೇ ಕುಟುಂಬವೆಂದು 'ಎಂದು ತಿಳಿಯುವದೋ' ಮನಾಜ ಕಲ'

Edited, Print d and Published by P. I. Belliappa at 'Kodagu' Press, Mercara, or 'Kodagu' Ltd

ದಿ ಟ್ರಾಪಿಕಲ್

ಇನ್ಶೂರೆನ್ಸ್ ಕಂಪನಿ ಲಿಮಿಟೆಡ್.

ಮುಖ್ಯ ಕಚೇರಿ:— ಹೊಸ ಡೆಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್

ಹಕೀಮ್ ಅಜಮುಲಖಾನ್. ಡಾ|| ಎಂ. ಎ. ಅನ್ಸಾರಿ.

(1) ದೇಶದಲ್ಲಿ ಪ್ರಮುಖ ದೇಶ ಭಕ್ತರಿಂದ ಸ್ಥಾಪಿಸಲ್ಪಟ್ಟಿದೆ.
(2) ಪೂರೈಸಿದ ಕಾರ್ಯವು 310 ಲಕ್ಷಕ್ಕಿಂತ ಹೆಚ್ಚು.
(3) ಕ್ಲೇಮು ಕೊಟ್ಟ ಹಣವು ರೂ 35 ಲಕ್ಷಕ್ಕಿಂತ ಹೆಚ್ಚು
(4) ಜೀವವಿಮಾ, ಬೆಂಕಿ, ಮರಾಯಿನ್ ಮತ್ತು ಅಪಘಾತ ಇವೆಲ್ಲ ಕಾರ್ಯಗಳನ್ನು ಮಾಡುತ್ತಿದೆ
(5) ಪ್ರಾರಂಭದಿಂದ ವಿಮಾದಾರರಿಗೆ ಬೋನಸ್ಸು ಕೊಡುತ್ತಿದೆ.
(6) ಯೋಗ್ಯ ಏಜೆಂಟು ಮತ್ತು ಆರ್ಗನೈಜರುಗಳಿಗೆ ತಮ್ಮ ಉದ್ಯೋಗದಲ್ಲಿ ಶಿಖರವನ್ನು ಮುಟ್ಟಲು ಒಳ್ಳೆ ಸಂದರ್ಭವನ್ನು ಒದಗಿಸಿಕೊಟ್ಟು ಎಲ್ಲಾ ಕಾಲದಲ್ಲಿಯೂ ದಯಾಳುತನದಿಂದ ಮತ್ತು ಯೋಗ್ಯವಾದ ರೀತಿಯಲ್ಲಿ ಅವರನ್ನು ನಡಿಸಿಕೊಳ್ಳಲಾಗುತ್ತದೆ

ನಮ್ಮ ಹೊಸ ವಿಸ್ತಾರದ ಯೋಜನೆಯಲ್ಲಿ ಆಕರ್ಷಕ ಕಮಿಷನ್ ಮೇಲೆ ಆರ್ಗನೈಜರರನ್ನು ನಿಯಮಿಸಿಕೊಳ್ಳತಕ್ಕದಿದೆ. ದಯವಿಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ಎ ಬೆಳ್ಯಪ್ಪ, ಬ್ರಾಂಚ್ ಸೆಕ್ರೆಟರಿ,
ದಿ ಟ್ರಾಪಿಕಲ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್;
ಹಂಪನಕಟ್ಟಾ, ಮಂಗಳೂರು.

THE TROPICAL INSURANCE Co. Ltd.
Head Office: NEW DELHI.

ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್,
ಮಡಿಕೇರಿ.



ನಮ್ಮ ವೀರಾಜಪೇಟೆ ಕಾರ್ಖಾನೆಯಲ್ಲಿ ಸದ್ಯಕ್ಕೆ ಈ ಕೆಳಗಿನ ಕೆಲಸಗಳನ್ನು ಕೈಕೊಂಡಿರುತ್ತೇವೆ ಸರ್ವರೂ ಪ್ರೋತ್ಸಾಹಿಸಬೇಕಾಗಿ ವಿನಂತಿ.
(1) ಭತ್ತ ಮಿಲ್ ಮಾಡುವುದು, (2) ಅಕ್ಕಿ ಮತ್ತು ಧಾನ್ಯಗಳನ್ನು ಪುಡಿಮಾಡುವುದು, (3) ಕಾಫಿ ಹುರಿದು ಹುಡಿ ಮಾಡುವುದು, (4) ಮಾಳೆ ಹುಡಿಮಾಡುವುದು.

ವೀರಾಜಪೇಟೆಗೆ 'ಕೊಡಗು' ಪತ್ರಿಕೆಯ ಏಜೆಂಟರು ಶ್ರೀ ಟಿ. ಎಸ್. ಗೋವಿಂದರಾಜುರವರು.

Reg. No. M. 1030.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ ಐ ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ 4-8-0

ಸಂಪುಟ ೨೭ | ತಾರೀಕು ೮-೪-೧೯೪೯ನೇ ಶುಕ್ರವಾರ | ಸಂಚಿಕೆ ೩೪

ದೈವಿಕ ಭಾವನೆ.

ಲೇ —ಶ್ರೀ ಉತ್ತಪ್ಪ, ಕುಂಬೆರ

ಸತ್ಯವೇ ದೇವರು. ಋಜುಮಾರ್ಗದಲ್ಲಿ ನಡೆಯಬೇಕೆಂಬುದೇ ಎಲ್ಲಾ ಧರ್ಮದ ಬೋಧನೆ. ಆದರೆ ಪ್ರತಿಯೊಬ್ಬನೂ ತಾನು ಮಾಡಿದ, ಕಲಸ ಕಾರ್ಯಗಳಲ್ಲಿ ಹಲವು ಮಾಡಬಾರದಂದ ಕಾರ್ಯಗಳನ್ನು ತಿಳಿದೋ ಯಾ ತಿಳಿಯದೆಯೋ ಮಾಡಿದ್ದರಿಂದ ಪಾಪ ಮತ್ತು ಪುಣ್ಯದ ವಿಚಾರಕ್ಕೆ ಹೆಚ್ಚಾಗಿ ಗಮನಕೊಡುವನು ಎಂದೇ ಹೇಳಬಹುದು. ತನ್ನ ಪಾಪವನ್ನು ಹೋಗಲಾಡಿಸಿ, ಪುಣ್ಯವನ್ನು ಕೊಡೆಂದೂ ಸದ್ಗುಣ ಸಂಪನ್ನರಾಗಿಯೂ, ಆಯುರಾರೋಗ್ಯ ಐಶ್ವರ್ಯವಂತರಾಗಿಯೂ ಕಾಪಾಡೆಂದೂ ದೇವರನ್ನು ಪ್ರಾರ್ಥಿಸುವವು. ಈ ಪ್ರಾರ್ಥಿಸುವ ವಿಧಾನವು ಇಲ್ಲಿಯ ಹಿಂದುಗಳಾದ ನಮ್ಮಲ್ಲಿ ಎರಡು ತರಹದಲ್ಲಿದೆ.

(1) ಒಂದನೇದಾಗಿ - ಜಪತಪ ಹೋಮಗಳಿಂದ ದೇವರನ್ನು ಪ್ರಾರ್ಥಿಸುವುದು.

(2) ಎರಡನೆಯ ವಿಧದಲ್ಲಿ ಕಾರಣ, ಬೀರ, ಚಾಮುಂಡಿ, ಪಾಷಾಣಮೂರ್ತಿ, ಕಾಳಿಯ, ಕಲ್ಲುರ್ಟಿ, 'ಪಂಜುರುಳಿ' ಪೊಟ್ಟತರ ಎಂಬಿತ್ಯಾದಿ ಹಲವು ರೀತಿಯ ಹೆಸರನ್ನು ಕೊಟ್ಟು ಅವುಗಳಿಗೆ ಒಂದೊಂದು ರೀತಿಯ ಆಕಾರವನ್ನು ಕೊಟ್ಟು ಅವುಗಳಿಗೆ ಮಾದಕ ಪದಾರ್ಥಗಳನ್ನು ಅರ್ಪಿಸಿ, ಅವುಗಳನ್ನು ನರ್ತಿಸಿ, ಅವುಗಳ ಕರುಣಾಕಟಾಕ್ಷವನ್ನು ಅಪೇಕ್ಷಿಸುವುದು.

ಪೂರ್ಣ ನಂಬಿಕೆಯಿಂದ ಭಜಿಸಿದರೆ ಎಲ್ಲಾ ವಸ್ತುಗಳೂ ದೇವರೇ. ಆದರೆ ವಿಚಾರಿಸಿದಲ್ಲಿ ಈ ತರಹದ ದೈವಿಕ ಭಕ್ತಿಯು ಜನರಲ್ಲಿ ಭೀತಿಯನ್ನು ಹುಟ್ಟಿಸಿ, ದೇವರೆಂದರೆ ಮನುಷ್ಯನಿಗೆ ಉಪದ್ರ ಕೊಡುವ ಒಂದು ಶಕ್ತಿಯೆಂಬ ಭಾವನೆಯನ್ನು ಬೀರಿರುವುದು. ಅವುಗಳ ಆ ಆಕಾರ, ಆ ಭಯಾನಕ ನೃತ್ಯ, ಭಯಂಕರ ಕೂಗು, ಯಾರಿಗೆ ತಾನೇ ಭೀತಿ ಹುಟ್ಟಿಸಲಿಕ್ಕಿಲ್ಲ?

ಪರಿಶೀಲಿಸಿ ನೋಡಿದಲ್ಲಿ 'ಬೀರ'ನೆಂದರೆ 'ವೀರ' ಎಂಬುದರ ತದ್ಭವವೆಂದು ಹೇಳಬಹುದು. ಈ ದೇವರ ಅಥವಾ ದೆವ್ವಗಳ ಎಲ್ಲಾ ವಿಜೃಂಭಣೆಯ ಆಕಾರ ನೋಡಿದಲ್ಲಿ, ಅವು ಬಹುಶಃ ಶತಮಾನಗಳ ಹಿಂದೆ, ಮನುಷ್ಯವರ್ಗದವರು ಕಾಡಿನಲ್ಲಿ ಜೀವಿಸುತ್ತಿದ್ದು, ಬಟ್ಟೆ ನೇಯುವುದನ್ನು ಕಂಡುಹಿಡಿಯುವ ಮೊದಲ, ಸೊಪ್ಪು ಸದೆಯನ್ನು ಹೊದ್ದುಕೊಂಡು ವಿಚಿತ್ರ ರೀತಿಯ ಬಣ್ಣ ಬಳಿದುಕೊಂಡು, ಇದ್ದ ಸಮಯದಿಂದಲೇ, ಏರ್ಪಡಿಸಿದಂಥ ಒಂದು ಕ್ರಮವೆನ್ನಬಹುದು.

ಇದನ್ನು ಚಾಮುಂಡಿ ದೇವತೆಯ ತೆಂಗಿನ ಓಲೆಯ ಗೊದಿಕೆಯ ಪ್ರತೀಕರಿಸುವುದು. ತೆಂಗಿನ ಓಲೆಯನ್ನು ಜನನ್ನಾಗಿ ನೆಯ್ದು ಆರ್ಯಪೂರ್ವದಲ್ಲಿ ವೈವಚ್ಛಿದ್ದರೆನ್ನಬಹುದ. ಆ ಕಾಲದಲ್ಲಿ ಕಾಡಿನ ಪ್ರಜೆಗಳಿಗೆ ಕಾಡುಮೃಗಗಳ ಹೆದರಿಕೆ ಇದ್ದಾಗ, ಆ ಸಂದರ್ಭದಲ್ಲಿ ವೀರನಾಗಿ, ಅವನ 'ಬೀರ'ನಾಗಿದ್ದು ತನ್ನ ಶೌರ್ಯ ಧೈರ್ಯದಿಂದ ಕಾಪಾಡಿದ್ದ ಹೇಗ ಸನ್ನೂ ಅಲ್ಲ ಕರಿ (ಎ[illegible], ಜಪ[illegible], ಇತ್ಯಾದಿ) ಅವರಿಗೆ ಪ್ರಿಯವಾದ ವಸ್ತುವನ್ನು ಅರ್ಪಿಸಿ, ಹಂಗಿಸದ ಒಸರನ್ನೆಲ್ಲಾ [illegible] ಬೇಕೆಂಬ ಆದರದ ಪ್ರೋತ್ಸಾಹದ ಅನಾದಿಯಿಂದ ಬಂದ ಸತ್ಕಾರ ಕೂಟವೆಂದು ಹೇಳಬಹುದು.

ಕಾಡುಬಿಟ್ಟು ಊರಿಗೆ ಬಂದಾಗಲೂ, ಕಾಡಲ್ಲಿ ಸಂರಕ್ಷಿಸಿದವರ ಜ್ಞಾಪಕಾರ್ಥವಾಗಿ, ಹಾಗೆಯೇ ಆ ಸತ್ಕಾರಕೂಟವನ್ನು ವಿಜೃಂಭಣೆಯಿಂದ ಸಾಗಿಸಿದ್ದು, ಈಗಲೂ ಅದೊಂದು ಸಂಪ್ರದಾಯವಾಗಿಯೇ ಉಳಿದಿವೆ.

ಊಟಕ್ಕೆ ಇಲ್ಲದೆ ಕಷ್ಟಪಡುತ್ತಿರುವ ಜನರೂ ಸಹ ಈ ಸಂಪ್ರದಾಯವನ್ನು ಬಿಟ್ಟರೆ ತಮ್ಮ ವಂಶವೇ ಅಳಿದು ಹೋಗಬಹುದು ಹೆದರಿಕೆಯಿಂದ ಸಾಲಮಾಡಿಯಾದರೂ ಒಂದು ತಿಂಗಳಿಗೆ ನಮಗೆ ಸಾಕಾಗುವಷ್ಟು ಹಣವನ್ನು ಒಂದೆರಡು ದಿನದಲ್ಲಿ ಈ ಸಂಪ್ರದಾಯದ ಸತ್ಕಾರಕೂಟಕ್ಕೆ ಖರ್ಚು ಮಾಡುವರು!

ಬರೀ ಅವಿದ್ಯಾವಂತರೂ, ವಿಚಾರಶಕ್ತಿಹೀನರೂ ಈ ವಿಚಿತ್ರ ರೀತಿಯಲ್ಲಿ ಬಣ್ಣ ಬಳಿದುಕೊಂಡು ಮಾದ್ಯಕ ಸೇವನೆಯಿಂದ ಮತ್ತರಾಗಿ ಕುಣಿಯುವ ಆ ದೆವ್ವ ಯಾ ದೇವರುಗಳು ಅದ್ಭುತ ಶಕ್ತಿಯನ್ನು ಹೊಂದಿದವುಗಳೆಂದೂ ಅವುಗಳಿಗೆ ಹಿಂದೆ ಆದ ಮತ್ತು ಮುಂದೆ ಆಗುವ ವಿಷಯಗಳು ತಿಳಿದಿರುವುವೆಂದೂ, ನಂಬಿದ್ದರೆ ಇದು ಮೂಢರ ತಿಳಿಗೇಡಿತನ ಎಂದೆನ್ನಬಹುದಾಗಿತ್ತು. ಆದರೆ ವಿದ್ಯಾವಂತರೂ, ನಾಗರೀಕರಾದವರೂ 'ತನಗೆ ಮಕ್ಕಳಾಗುವಂತೆ ಮಾಡಿದರೆ, ಯಾ ಕೈ ಬಿಟ್ಟುಹೋದ ಹಣ ದೊರಕುವಂತೆ ಮಾಡಿದರೆ, ಆ ದೇವರಿಗೆ ದೊಡ್ಡ ಹರಕೆ ಕೊಡುವೆನು' ಎಂದು ದೇವರಿಗೂ ಹಣಕಾಸಿನ ಆಶೆ ಹುಟ್ಟಿಸುವುದನ್ನು ನಾವು ಕಾಣುತ್ತೇವೆ!

ಈ ಹಣಕಾಸನ್ನು ದೊರಕಿಸಿಕೊಡಲು ಶಕ್ತಿಯುಳ್ಳ ದೇವರಿಗೆ ಆ ಹಣಕಾಸಿನ ಹರಕೆಯಿಂದ ಪ್ರಯೋಜನವಾದರೂ ಏನು? ದೇವರಿಗೆ ಬೇಕಾದದ್ದು ಭಕ್ತಿ, ಭಕ್ತಿಯಿಂದ ಅರ್ಪಿಸಿದ ಯಾವುದೇ ವಸ್ತುವೂ, ಪ್ರಿಯವಾದುದೆಂದು ಕೇಳಿದ್ದೇವೆ. ದೊಡ್ಡ ಹರಕೆಯನ್ನು ಒಪ್ಪಿಸಿದವನು ದೊಡ್ಡಪ್ಪನಾಗಬೇಕಾಗಿದ್ದರೆ ಭೂಲೋಕವು ಹೀಗೆ ಇರುತಿತ್ತೇ? ಇಂಥಾ ದೇವರ ಹತ್ತಿರ ಯಾರಾದರೂ ತಮ್ಮ ಕಷ್ಟಪರಂಪರೆ ನಿವಾರಿಸುವ ಬಗ್ಗೆ ಹೋದಲ್ಲಿ ಆ ದೇವರ ಪಕ್ಕಮುಖ್ಯಸ್ಥನು, 'ನಿನ್ನ ಕಷ್ಟಪರಂಪರೆಯನ್ನು ನೀಗಿಸಿದರೆ ದೇವರಿಗೆ ಏನು ಕೊಡುತ್ತೀ?' ಎಂದು ಒಂದು ಪ್ರಶ್ನಿಸುವುದನ್ನು ನಾವು ಕೇಳುತ್ತಾ ಇದ್ದೇವೆ. ಇದರಲ್ಲಿ ಏನು ಅರ್ಥವೋ-ಅನರ್ಥವೋ ಆ ದೇವರೇ ಬಲ್ಲ.

ಇನ್ನೂ ವಿಚಾರಿಸಿದಲ್ಲಿ ಇಂಥಾ ದೇವರುಗಳನ್ನು ಅಭಿಷೇಕಮಾಡಿ ಪೂಜೆ ಮಾಡುವ ಪೂಜಾರಿಯು, ಆ ದೇವರುಗಳ ಕಣ್ಣು ಕಟ್ಟಿಬಿಟ್ಟು, ಅವನ್ನು ಬಂಧಿಸಿ, ನೆಲದೊಳಗೆ ಹೂತುಬಿಡುವದಿದೆ. ವಿಷಯವು, ತರುವಾಯ ವರ್ಷ, ವರುಷಾಂತ್ಯಗಳ ಭಾಗೀರಥ ಪ್ರಯತ್ನದಿಂದ ಆ ದೇವರುಗಳನ್ನು ಬಿಡಿಸಿ, ದೇವರ ಸನ್ನಿಧಿಗೆ ತಂದರೆಂಬ ವಿಷಯವೂ ಕೇಳಿಬರುತ್ತದೆ.

ದೇವರ ಕಣ್ಣನ್ನು ಬಂಧನ ಮಾಡುವವನು ಮನುಷ್ಯನೇ? ಅಥವಾ ಹುಟ್ಟಿಸಿದ ಯಾವ ಮನುಷ್ಯನಿಂದ ಕಣ್ಣು ಕಾಣಿಸದೆ ಮಾಡಲು ಸಾಧ್ಯವಾಗುವಂಥ ದೇವರು ದೇವರೇ?

ಪರಿಶೀಲಿಸಿ ನೋಡಿದಲ್ಲಿ ಹಲ ಕೆಲವು ಪುರಾಣ ಕಥೆಯು ಸಹ ಈಗಿನ ಜನರ ತಿಳಿಭಾವನೆಗೆ ಆತಂಕವನ್ನು ಉಂಟುಮಾಡಿ, ಪುರಾಣವು ಸುಳ್ಳೇ ಎಂಬ ಭಾವನೆಯನ್ನು ಪ್ರೇರೇಪಿಸುತ್ತವೆ ಎಂದೆನ್ನಬಹುದು. ಉದಾಹರಣೆಯಾಗಿ - ಸ್ವರ್ಗವೆಂದರೆ ಹಸಿವು, ನೀರಡಿಕೆ, ಕಾಮ ಕ್ರೋಧ ಯಾವುದು ಇಲ್ಲದ, ಸದಾ ತೃಪ್ತಿಯಿಂದಿರುವ ಲೋಕವೆಂದು ಬರೆದಿರುವರು. ಆ ಸ್ವರ್ಗದಲ್ಲಿಯ ನಿವಾಸಿಗಳು ಅಷ್ಟು ತೃಪ್ತರಾಗಿರುವಾಗ ಅವರ ಅರಸ ದೇವೇಂದ್ರನು ಸದಾಕಾಲ ತೃಪ್ತನೇ ತಾನೇ? ಅಂದಾ ದೇವೇಂದ್ರನು ಪಾಪಗಳ ಬೀಡಾದ ನರಲೋಕಕ್ಕೆ ಬಂದು, ಗೌತಮ ಮುನಿಯಿಂದ ಶಾಪಹಾಕಿಸಿಕೊಂಡನೆಂದರೆ, ಆ ಸ್ವರ್ಗಲೋಕವೂ, ಅದರ ಅರಸ ದೇವೇಂದ್ರನೂ, ಕಟ್ಟುಕತೆಯೋ ಎಂಬ ಸಂಶಯವನ್ನು ಹುಟ್ಟಿಸುತ್ತದೆ.

ಮಾತಾಪಿತೃವಾಕ್ಯ ಪರಿಪಾಲನೆಮಾಡಬೇಕೆಂಬುದನ್ನು ಪುರಾಣದಲ್ಲಿ ನಿವೇದಿಸಿರುವರು. ಶ್ರೀರಾಮನು ಪಿತೃವಾಕ್ಯ ಪರಿಪಾಲನೆಗೆ ಅರಣ್ಯಕ್ಕೆ ತೆರಳಿ ಶ್ರೇಯಸ್ಸನ್ನು ಪಡೆದನು. ಆದರೆ ಭರತನು ತನ್ನ ಮಾತೆ ಕೈಕೇಯಿಯ ಅಭಿಲಾಷೆಯನ್ನು ಈಡೇರಿಸದೆ ತನ್ನ ಮಾತೆಯ ಮಾತಿಗೆ ವಿರುದ್ಧವಾಗಿ ವರ್ತಿಸಿದ್ದು ತಪ್ಪೆಂದು ಪುರಾಣದಲ್ಲಿ ಎಲ್ಲಿಯೂ ಹೇಳಲಿಲ್ಲ. ಮಹಾಭಾರತದಲ್ಲಿ ಮಾತೆಯ ವಚನದಂತೆ ಒಬ್ಬ ಹೆಂಗಸನ್ನು ಐದು ಮಂದಿ ಗಂಡಂದಿರು ವರಿಸಿದ್ದು ಮಾತೃವಾಕ್ಯ ಪರಿಪಾಲನೆಗಾಗಿಯೇ!

ರಾಮಾಯಣದಲ್ಲಿ ಒಬ್ಬ ಗಂಡನು ಒಬ್ಬಳೇ ಹೆಂಗಸನ್ನು ಮದುವೆಯಾಗತಕ್ಕದೆಂದು ಸತಿಪತಿ ಧರ್ಮವನ್ನೂ, ಏಕಪತ್ನೀವ್ರತವನ್ನು ನಿರೂಪಿಸಿರುವರು. ಭಾರತದಲ್ಲಿ ಒಬ್ಬ ಹೆಂಗಸಿಗೆ ಐದುಮಂದಿ ಗಂಡಂದಿಯರಿದ್ದರೂ, ಒಬ್ಬ ಗಂಡಸಿಗೆ ಅನೇಕ ಜನ ಹೆಂಗಸರಿದ್ದರೂ ಸತಿವ್ರತಾಧರ್ಮವೂ ಪತಿವ್ರತಾಧರ್ಮವೂ ಸಾಧ್ಯವಿದೆಯೆಂದು ನಿವೇದಿಸಿರುವ ಹಾಗೆ ಕಾಣುತ್ತದೆ. ಇದೆಲ್ಲಾ ಕವಿಗಳ ಕವಿತಾಶಕ್ತಿಯೋ ಏನೋ?

ನಮಗೆ ದೇವರಿರುವನು ಎಂದು ತಿಳಿದಿರುವುದು, ದೇವಸ್ಥಾನ ಇರುವುದು ಎಂದೂ ತಿಳಿದಿರುವುದು. ಆದರೆ ಈ ಮೇಲೆ ಹೇಳಿದ ಕೆಲವು ವಿಚಾರಗಳಿಂದಾಗಿ ಆ ದೇವರನ್ನು ಅರ್ಚಿಸುವ ರೀತಿಯಲ್ಲಿ ನೀತಿಯು ತಪ್ಪಿಲ್ಲ.

ಮುಸಲ್ಮಾನರು ಶುಕ್ರವಾರ 'ಪಳ್ಳಿ'ಗೆ ಹೋಗಿಯೇ ಹೋಗುವರು. ಕ್ರೈಸ್ತರಿಗೆ ಆದಿತ್ಯವಾರ ಚರ್ಚಿಗೆ ಹೋಗದೆ ಇದ್ದಲ್ಲಿ ಸಮಾಧಾನವಿಲ್ಲ. ಅವರ ಅಲ್ಲಿಯ ಗುರುಗಳು ವಿದ್ಯಾಹೀನರಿಗೆ ಸಹ ಉಪಯೋಗವಾಗುವಂಥ ಹಲವು ಸದುಪದೇಶ ಮಾಡುವರು. ಇದರಿಂದ ಜ್ಞಾನಶಕ್ತಿ ವಿಚಾರಶಕ್ತಿ ಹೆಚ್ಚುವುದು.

ನಾವುಗಳು ಪೂಜೆಗೆ ಹೋದಲ್ಲಿ ಪೂಜಾರಿಯು ಮಂತ್ರ ಹೇಳುತ್ತಾ ದೇವರಿಗೆ ಅಭಿಷೇಕ ಮಾಡುತ್ತಾ ಪೂಜೆ ಮಾಡುವನು. ಅದು ಏನು ಮಂತ್ರ, ಅದರ ಅರ್ಥವೇನೆಂದು ಅಲ್ಲಿ ನೆರೆದ ಹೆಚ್ಚಿನ ಜನರಿಗೆ ತಿಳಿದಿರುವುದಿಲ್ಲ. ಬರೀ ಕೈಕಟ್ಟಿ ನಿಂತರೆ ಮನಸ್ಸು ಎಲ್ಲಿಯೋ ಚಲಿಸುತ್ತಿರುವುದು. ಅಲ್ಲಿ ಹೇಳುವ ಮಂತ್ರದ ಅರ್ಥವನ್ನಾದರೂ ನಮಗೆ ತಿಳಿಯುವ ಹಾಗೆ ಹೇಳಿಕೊಟ್ಟು, ಆ ಮಂತ್ರ ಹೇಳಿದರೆ, ನೆರೆದ ಜನರೂ ಅದನ್ನು ತಿಳಿದುಕೊಂಡು ನೆಮ್ಮದಿ ಮನಸಿನಲ್ಲಿ ಪ್ರಾರ್ಥಿಸಬಹುದು. ಅದರ ಬದಲು ಪೂಜಾರಿಯು ಮಾತ್ರ ಪೂಜೆ ಮಾಡುವನು. ಇದರಿಂದಾಗಿ ಗ್ರಾಮಗಳಲ್ಲಿ, ಪೂಜೆ ನಡೆಯುವಾಗ ಸುಮ್ಮನೆ ನಿಲ್ಲುವ ಬದಲು, ಹಲವು ವೇಳೆ ಗ್ರಾಮದ ಕಲಹ ಕಕ್ಷಿಯ ಸಂಬಂಧ ತೀರ್ಮಾನದ ಪಂಚಾಯಿತಿ ಕೂಟವನ್ನು ಅಲ್ಲಿಗೆ ಇಟ್ಟುಕೊಳ್ಳುವರು. ಇವು ಜಗಳ ಮಾಗದೆ ತೀರ್ಮಾನವಾದರೆ ಪುಣ್ಯ. ಹಾಗಾಗಿ ದೇವಸ್ಥಾನಕ್ಕೆ ಹೋಗಲು ಊರಲ್ಲಿಯ ಜನರು ಹಿಂಜರಿಯುವರು.

ನಮ್ಮ ಜನರಲ್ಲಿ, ದೈವಿಕ ಭಾವನೆ ಮತ್ತು ಒಗ್ಗಟ್ಟು ಬರಬೇಕಾದರೆ, ಗ್ರಾಮದಲ್ಲಿ ಇರುವ ಪ್ರತಿ ದೇವಸ್ಥಾನದಲ್ಲಿ, ವಿದ್ಯಾವಂತರಾದ, ಪಂಡಿತರನ್ನೋ, ಪುರೋಹಿತರನ್ನೋ, ನೇಮಿಸಿ, ವೇದಪುರಾಣ, ಉಪದೇಶಗಳನ್ನು ಬಹಿರಂಗವಾಗಿ ಓದಿ ಅದರ ಅರ್ಥ ಹೇಳಿಕೊಡುವಂತೆ ಏರ್ಪಡಿಸಿ ಗ್ರಾಮಸ್ಥರೆಲ್ಲರೂ ವಾರಗಳಿಗೆ ಎರಡು ಸಾರಿಯಾದರೂ ದೇವಸ್ಥಾನಕ್ಕೆ ನಿಯಮಿತ ದಿನದಲ್ಲಿ ಹೋಗಿ ಕೂಡುವ ಏರ್ಪಾಡು ಮಾಡಬೇಕು. ಎಲ್ಲಾ ದೇವಸ್ಥಾನದಲ್ಲಿಯೂ ಪೌರಾಣಿಕ ಶಾರೀರಿಕ, ತಾಂತ್ರಿಕ, ಮತ್ತು ಸಾಮಾಜಿಕ ಪುಸ್ತಕಗಳಿರುವ ಪುಸ್ತಕ ಭಂಡಾರವನ್ನು ತೆರೆಯುವ ಏರ್ಪಾಡು ಮಾಡಬೇಕು. ಮುಖ್ಯವಾದ ವರ್ತಮಾನ ಪತ್ರಿಕೆಗಳು ಬರುವ ಏರ್ಪಾಡೂ ಇರಬೇಕು. ಹೀಗೆ ಆದಲ್ಲಿ ಜನರಿಗೆ ಅಲ್ಲಿಗೆ ಹೋಗಲು ಉತ್ಸಾಹವು ಬರುವುದು. ಜನರಲ್ಲಿ ಜ್ಞಾನಾಭಿವೃದ್ಧಿಗೂ, ಐಕ್ಯತೆಗೂ, ಏಳ್ಗೆಗೂ ಪ್ರೋತ್ಸಾಹವು ದೊರೆಯುವುದು.

ಕಾಲ ಬದಲಾಯಿಸಿತೇ?

ಲೇ.—"ಸರಸ್ವತಿ" ಮಡಿಕೇರಿ.

ರಾಮಚಂದ್ರಪುರದಲ್ಲಿ ಒಂದು ವಿಹಾರ ಮಂದಿರ. ಅದರಲ್ಲಿ ಉದ್ಯೋಗಸ್ಥರಿಗೆ ಮಾತ್ರ ಸ್ಥಳ. ಆ ಮಂದಿರಕ್ಕೆ ಸೇರಿದವರು ಬೇರೆ ಸ್ಥಳೀಕ ಮಂದಿರಗಳಲ್ಲಿ ಸೇರಬಾರದೆಂಬುವದೇ ಅಲ್ಲಿಯ ಒಂದನೇ ನಿಯಮ. ಅಲ್ಲಿ ಕದ್ದು ಕೇಳಿದ ಈ ಸಂಭಾಷಣೆಯನ್ನು ವಾಚಕರಿಗಾಗಿ ಇಲ್ಲಿ ಬರೆದಿರುವೆನು.

ಗೋಪಿನಾಥ:— ಏನಯ್ಯಾ ಈಗಿನ ಕಾಂಗ್ರೆಸ್ ಕಾಲದ ರೈತರು, ಗಾಂಧೀ ಟೋಪ್ಪಿ ಹಾಕಿದರೆ ಸಾಕು, ನಾವೆಲ್ಲಾ ಅವರ ಗುಲಾಮರು ಎಂದು ಅವರ ಗಣನೆ. ಮೊನ್ನೆ ನಾನು ನನ್ನ ಶಾಬೀಲನ್ನು ಕಳುಹಿಸಿ ಪಟೇಲ ಕೃಷ್ಣನನ್ನು ಠಾಣೆಗೆ ಬರ ಹೇಳಿದರೆ, ಬಹಳ ನಯ ನುಡಿಯಿಂದ 'ಬರಲಾಗುವದಿಲ್ಲ. ಈ ದಿನ ದೊಡ್ಡ ನಾಟಗೆ ಏರ್ಪಾಡು ಮಾಡಿದ್ದೇನೆ' ಎಂದು ಹೇಳಿ ಕಳುಹಿಸಿದನಲ್ಲಾ ಏನು ಗರ್ವ! ಐದು ವರ್ಷಕ್ಕೆ ಹಿಂದೆಯಾಗಿದ್ದರೆ ಅವನನ್ನು ೨೪ ಗಂಟೆಯಾದರೂ ಜೈಲಿನಲ್ಲಿರಿಸುತ್ತಿದ್ದೆ!

ಚಂದ್ರಪ್ಪ:— ಪೊಲೀಸ್ ಇಲಾಖೆಯು ನೀನು, ಹೇಳುವದಿರಲಿ. ವೈದ್ಯರೆಂದರೆ ದೇವರೆಂದು ತಿಳಿಯುವ ಕಾಲವಿತ್ತು. ಅದೇ ಕಳೆದುಬಿದ್ದಿದೆ. ಮೊನ್ನೆ ಕೋಳಿಗೋಳಿ ರಾಮ ಶೆಟ್ಟಿ ನನ್ನನ್ನು ರಾತ್ರಿ ೧೨ ಗಂಟೆಗೆ ಬರಬೇಕೆಂದು ಕರೆಕಳುಹಿಸಿದ್ದ. ನಾನು ಒಂದು ದಿನಕ್ಕೆ ಹಿಂದೆ ಒಂದು ಕೊಲೆ ಕೇಸಿಗೆ ಹೋಗಿ ನಿದ್ರೆ ಕಟ್ಟಿದ್ದೆ. ಆಗುವದಿಲ್ಲವೆಂದು ಹೇಳಿಕಳುಹಿಸಿದೆ. ಅರ್ಧ ಗಂಟೆಯಲ್ಲಿ ಗಾಡಿ ಹಾಕಿಕೊಂಡು, ದುಪಟಿ ಹೊದ್ದುಕೊಂಡು ಬಂದು ರಾವಣನಂತೆ ವೈದ್ಯಶಾಲೆಯ ಎದುರು ನಿಂತು ಕೂಗಲಾರಂಭಿಸಿದ. ನಾನು ಬರಲು ಸಾಧ್ಯವೇ ಇಲ್ಲವೆಂದು ಹೇಳಿದೆ. ಹಾಗೆಯೇ ಒರೆಸು ಕೂಡ ಎನ್ನುತ್ತಾನಲ್ಲ! ಬರಲಾರದೆ ಹೋದರೆ ಮೇಲಧಿಕಾರಿಗೆ ಬರೆದು ನಿಮ್ಮನ್ನು ನಗ್ನ ಮಾಡಿಸುವದು ಖಂಡಿತವೆಂದು ನನ್ನ ಮುಖಕ್ಕೆ ಹೇಳಿದನಲ್ಲಾ!

ರಂಗಪ್ಪ:— ಅದೇನು ದೊಡ್ಡದು? ಮೊನ್ನೆ ನಾನೂ, ಮುನ್ಸೀಫರೂ ಒಂದು ಕೇಸಿಗೆ ಸಂಬಂಧಿಸಿದ ಜಾಗ ನೋಡಬೇಕಾಗಿತ್ತು. ಪಿರ್ಯಾದಿಯಾಗಲೀ, ಅಪರಾಧಿಯಾಗಲೀ ನಮ್ಮನ್ನು ಕರೆದುಕೊಂಡು ಹೋಗಲು ಬರಬೇಡವೇ? ನಾವು ಒಂದು ಕಾರು ಮಾಡಿಕೊಂಡು ಹೋದೆವು. ಅಲ್ಲಿ ನಮಗೆ ಕುಡಿಯಲು ಒಂದು ಕಪ್ಪು ಹಾಲಾದರೂ ಕೊಡಬೇಡವೇ? ನಾವು ಹೋದ ವಾರ್ತೆ ತಿಳಿದು ಎರಡು ಪಂಗಡದವರು ಜೊತೆಯಲ್ಲಿ ಬಂದು 'ನ್ಯಾಯಾಧೀಶರುಗಳು ಬಂದಿರುವಿರಿ. ನ್ಯಾಯ ತೀರ್ಪು ಕೊಡಿರೆಂದರು' ನಾನು ವಕೀಲನಾದ ಕಾರಣ ನನ್ನ ಪಕ್ಷದವರನ್ನು ಬೇರೆ ಕರೆದು 'ನಾನು ಕಾರು ತಂದನು ಕಾರಿನವರ ಬಾಡಿಗೆ ಕೊಡಿರೆಂದನು. ಪ್ರತಿವಾದಿಯ ವಕೀಲರೂ ಅದೇ ರೀತಿ ಕೇಳಿದರಂತೆ. ಆದರೆ ಎರಡು ಕಡೆಯವರೂ ನಿರಾಕರಿಸಿದರು. ಮುನ್ಸೀಫರ ಎದುರಿನಲ್ಲಿಯೇ 'ಸ್ವಾಮಿ, ನಿಮ್ಮ ಕಾರಿನಲ್ಲಿ ಬಂದು ಎರಡು ವಕೀಲರು ನಮ್ಮಿಂದ ಬಾಡಿಗೆ ಕೇಳುವದು ಯಾವ ನ್ಯಾಯ? ನಿಮಗೆ ಸರಕಾರದವರು ರೈತನ ಹಣದಿಂದ ಬತ್ತ ಕೊಡುತ್ತಾರಲ್ಲವೇ' ಎಂದು ಹೇಳಲು ಮುನ್ಸೀಫರೂ, ನಾವೂ ಜೆಚ್ಚಾದೆವು. ಲೋಕ ವಿಪರೀತಕ್ಕೆಳೆಯಿತು. ಇದು ವಿದ್ಯೆಯ ಪ್ರಭಾವ. ಎಲ್ಲರೂ ಓದಿದರೆ ಏನಾಗುವದೋ!

ಚಿನ್ನಪ್ಪ:— ಅಯ್ಯೋ ನನ್ನ ಮನೆಯಲ್ಲಿ ಹತ್ತು ವರ್ಷ ಊಳಿಗ ಮಾಡುತ್ತಿದ್ದ ಕೋಮನಿಗೆ ಈಗ ಮೂರು ವರ್ಷದಿಂದ ಪ್ಯೂನ್ ಕೆಲಸ ಕೊಡಿಸಿದೆ. ಅಂಗಿ, ಕೂಡೆ ಎಲ್ಲ ವರ್ಷ ವರ್ಷವೂ ಕೊಡುತ್ತಿರುವದಲ್ಲದೆ ಅವನ ಎಲ್ಲಾ ಖರ್ಚು ನಾನೇ ತೀರಿಸಿ ತಿಂಗಳಿಗೆ ನೂರು ರೂಪಾಯಂತೆ ಮಲಯಾಳಕ್ಕೆ ಕಳುಹಿಸುತ್ತಿದ್ದೆ. ಮೂರು ತಿಂಗಳ ಹಿಂದ ಅವನಿಗೆ ಸೌಖ್ಯವಿಲ್ಲವೆಂದು ರಜದಲ್ಲಿ ಹೋಗಲು, ಸೈನ್ಯದಿಂದ ಹಿಂದಿರುಗಿದ ಒಬ್ಬನನ್ನು ಈ ಸ್ಥಳಕ್ಕೆ ನೇಮಿಸಿಕೊಂಡೆ. ಅತನು ಗಟ್ಟಿ ಮುಟ್ಟಾಗಿಯೂ, ಚೊಕ್ಕಟವಾಗಿಯೂ ಇದ್ದನು. ನಯ ನುಡಿ ತುಂಬ. ಕೈ ಜೋಡಿಸಿ 'ಜೈ ಹಿಂದ್' ಅನ್ನುತ್ತಾನೆ. ನಾನು ಆಫೀಸಿಗೆ ಹೊರಡಲು ಅರ್ಧ ಗಂಟೆ ಮೊದಲು ಬರುತ್ತಾನೆ. ಮನೆಯವಳು ಕೆಲಸ ಹೇಳಲು ಅಂಜುತ್ತಾಳೆ. ಅವನೂ ಮನೆಯ ಒಳಗೆ ಹೋಗನು. ಒಂದು ದಿನ ಸಂತೆಯಿಂದ ಸಾಮಾನು ತರಲು ಕಳುಹಿಸಿದೆ. ಒಬ್ಬ ಆಳಿನವನ ಕೈಯಲ್ಲಿ ಹೊರಿಸಿಕೊಂಡು. ಒಂದು ಪಸ್ಸಿಂದ ಅರಾಣೆ ದಂಡ ತೆರಿಸಿದ!

ಕೃಷ್ಣಪ್ಪ — ಮೊನ್ನೆ ಒಂದು ಶಾಲೆ ಸಂದರ್ಶಿಸಿದ. ಎಲ್ಲವೂ ಚೊಕ್ಕಟವಾಗಿತ್ತು. ನಾನೆ ಹಿಂದಕ್ಕೆ ಬರುವಾಗ ಒಬ್ಬ ವಿದ್ಯಾರ್ಥಿ ಬಂದು 'ನೋಡಿ ಸ್ವಾಮಿ, ನೀವು ಒಂದಕ್ಕಾಗಿ ರಜ ಕೊಡಬೇಕೆಂದು ನಮ್ಮ ಉಪಾಧ್ಯಾಯರೊಬ್ಬರು ಹೇಳಿದರು' ಎಂದ. 'ನಿಮಗೆ ಏಕೆ ರಜ ಬೇಕೂ, ಯಾ ಉಪಾಧ್ಯಾಯರೋ?' ಎಂದು ಕೇಳಿದೆ. 'ನಮಗೆ ರಜ ಬೇಕಿಲ್ಲ ಸಾರ್ ಆದರೆ ಉಪಾಧ್ಯಾಯರು ರಜೆ ಬೇಕೆಂದು ಹೇಳುತ್ತಾರೆ!' ಹುಡುಗ ನುಡಿದ.

ಮಾಲು ಮಗಿಸಿ ಬ್ರಿಜ್ ಆಡಲು ಕುಳಿತರು. ಕುಳಿತಿದ್ದಂತೇ ಹೊರಗೆ ಕೂಗು ಕೇಳಿತು.

ಚೆನ್ನಪ್ಪ:— ಯಾರೋ ಕೂಗಿದುದು? ಮಾರ್ಕರ್ ದಾಂಬೋಗಿಲಕ್ಕೆ ಹೇಳ—ಅರ್ಧ ಗಂಟೆ ಇವ ಸುಮ್ಮನೆ ಬಿಡುವದಿಲ್ಲ

ಮಾರ್ಕರ್:— ಮನೆಯಲ್ಲಿ ಮಗುವೈಗೆ ಹಾಲು ಮಗುಚಿಕೊಂಡು ಬೆಂದು ಹೋಗಿದೆಯಂತೆ. ಮನಾಶಿ ಡಾಕ್ಟರನು ಕಾಣಬೇಕೆಂದು ಕೂಗಿ ತ್ತಾಳೆ.

ಚಂದ್ರಪ್ಪ:— ಆದದ್ದು ಆಗಿಹೋಯಿತು ನಾಳೆ ಬೆಳಗ್ಗೆ ಆಸ್ಪತ್ರೆಗೆ ಕರೆದು ತರಲು ಹೇಳು. ಏನೋ ದೊಡ್ಡ ಕಾರ್‍ಯದಲ್ಲಿ ಅಧಿಕಾರಿಗಳೆಲ್ಲಾ ಇರುವರೆಂದು ತಿಳಿಸು

ಮಾರ್ಕರ್:— (ಸ್ವಲ್ಪ ಹೊತ್ತಿನ ಮೇಲೆ) ಮುದುಕಿ ಅಳುತ್ತಾರೆ ಅವರು ನಿಮಗೆ ತಾಯಿಯಂತೆ ಸಾರ್'

ಎಲ್ಲರೂ ಮುಖ ಮುಖ ನೋಡಿದರು. ಡಾಕ್ಟರರೂ ಆಟ ಬಿಟ್ಟು ಆತುರದಿಂದ ಹೊರಗೆ ಓಡಿದರು. ಬೇರೆಯವರ ಮಗು ಎಂದಾಗ ಅಲಗಾಡದ ಡಾಕ್ಟರು ತಮ್ಮ ಮನೆಯ ಮಗು ಎಂದಾಗ ಪ್ರಾಣಬಿಟ್ಟು ಓಡಿದರು! ಸ್ವರಾಜ್ಯ ಬಂದರೇನು? ರೈತರು ಇವರು, ಹಳ್ಳಿಯವರಿವರು ಎಂಬ ತಾರತಮ್ಯ ಇರುವವರೆಗೆ ಸ್ವರಾಜ್ಯಕ್ಕೆ ಅರ್ಥವಿಲ್ಲ ಶ್ರೀಮಂತರು ಬಂದು ಕೂಗಿದರೆ ಡಾಕ್ಟರೂ ಏಳುತ್ತಾರೆ! ಅಧಿಕಾರಿಗಳೂ ಓಡಾಡುತ್ತಾರೆ. ಆದರೆ ಬಡವನ ಕೂಗು ಸ್ವತಂತ್ರ ಬಂದ ಈ ದೇಶದಲ್ಲಿ ಇನ್ನೂ ಅಧಿಕಾರಿಗಳಿಗೆ ಕೇಳುತ್ತಿಲ್ಲ. ದೇಶದ ಶ್ರೀಮಂತ, ಬಡವ, ಹಂಜನ, ಬ್ರಾಹ್ಮಣ, ಉದ್ಯೋಗಿ, ರೈತ ಸರ್ವರೂ ಒಂದೇ ಕುಟುಂಬವೆಂದು ಎಂದು ತಿಳಿಯುವದೋ ಮನುಜಕುಲ'

Edited, Printed and Published by P. I. Bellhappa at 'Kodagu' Press Mercara, for 'Kodagu' Ltd

ದಿ ಟ್ರಾಪಿಕಲ್

ಇನ್ಸ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಮುಖ್ಯ ಕಛೇರಿ:— ಹೊಸ ಡೆಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್ ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮಲಖಾನ್. ಡಾ|| ಎಂ. ಎ. ಅನ್ಸಾರಿ.

(1) ದೇಶದಲ್ಲಿ ಪ್ರಮುಖ ದೇಶಭಕ್ತರಿಂದ ಸ್ಥಾಪಿಸಲ್ಪಟ್ಟಿದೆ
(2) ಪೂರೈಯಾದ ಕಾರ್ಯವು 340 ಲಕ್ಷಕ್ಕಿಂತ ಹೆಚ್ಚು
(3) ಕ್ಲೈಮು ಕೊಟ್ಟ ಹಣವು ರೂ 3೦ ಲಕ್ಷಕ್ಕಿಂತ ಹೆಚ್ಚು.
(4) ಜೀವವಿಮಾ, ಬೆಂಕಿ, ಮರೀಯನ್ ಮತ್ತು ಅಪಘಾತ ಇವೆಲ್ಲ ವಿಮೆಗಳನ್ನು ಮಾಡುತ್ತಿದೆ
(5) ಪ್ರಾರಂಭದಿಂದ ವಿಮಾದಾರರಿಗೆ ಬೋನಸ್ಸು ಕೊಡುತ್ತಿದೆ
(6) ಯೋಗ್ಯ ಏಜೆಂಟು ಮತ್ತು ಆರ್ಗನೈಜರುಗಳಿಗೆ ತಮ್ಮ ಉದ್ಯೋಗದಲ್ಲಿ ಶಿಖರವನ್ನು ಮುಟ್ಟಲು ಒಳ್ಳೆ ಸಂದರ್ಭವನ್ನು ಒದಗಿಸಿಕೊಟ್ಟು ಎಲ್ಲಾ ಕಾಲದಲ್ಲಿಯೂ ದಯಾಳುತನದಿಂದ ಮತ್ತು ಯೋಗ್ಯವಾದ ರೀತಿಯಲ್ಲಿ ಅವರನ್ನು ನಡಿಸಿಕೊಳ್ಳಲಾಗುತ್ತದೆ

ನಮ್ಮ ಹೊಸ ವಿಸ್ತಾರದ ಯೋಜನೆಯಲ್ಲಿ ಆಕರ್ಷಕ ಕಮಿಷನ್ ಮೇಲೆ ಆರ್ಗನೈಜರರನ್ನು ನಿಯಮಿಸಿಕೊಳ್ಳತಕ್ಕದದೆ, ದಯವಿಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ

ಎಂ. ಎ ಬೆಳ್ಳಪ್ಪ, ಬ್ರಾಂಚ್ ಸೆಕ್ರೆಟರಿ,
ದಿ ಟ್ರಾಪಿಕಲ್ ಇನ್ಸ್ಯೂರೆನ್ಸ ಕಂಪೆನಿ, ಲಿಮಿಟೆಡ್;
ಹಂಪನಕಟ್ಟೆ, ಮಂಗಳೂರು.

THE TROPICAL INSURANCE Co. Ltd.
Head Office NEW DELHI.

ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್,
ಮಡಿಕೇರಿ.



ನಮ್ಮ ಫ್ಯಾಕ್ಟರೀಯ ಕಾರ್ಖಾನೆಯಲ್ಲಿ ಸದ್ಯಕ್ಕೆ ಈ ಕೆಳಗಿನ ಕೆಲಸಗಳನ್ನು ಕೈಕೊಂಡಿರುತ್ತೇವೆ ಸರ್ವರೂ ಪ್ರೋತ್ಸಾಹಿಸಬೇಕಾಗಿ ವಿನಂತಿ.
(1) ಭತ್ತ ಮಿಲ್ ಮಾಡುವುದು, (2) ಅಕ್ಕಿ ಮತ್ತು ಧಾನ್ಯಗಳನ್ನು ಹುಡಿಮಾಡುವುದು, (3) ಕಾಫಿ ಹುರಿದು ಹುಡಿ ಮಾಡುವುದು, (4) ಮೆಣಸು ಹುಡಿ ಮಾಡುವುದು

ವೀರಾಜಪೇಟೆಗೆ 'ಕೊಡಗು' ಪತ್ರಿಕೆಯ ಏಜೆಂಟರು ಶ್ರೀ ಟಿ. ಎನ್. ಗೋವಿಂದರಾಜುರವರು.

"ಡಿಗ್ರಿ"ಯ ಮೀಮಾಂಸೆ.

ಲೇ:- ಶ್ರೀ ಕೆ ಸಿ ಭೀಮಯ್ಯ, ಫಿಲೋಮಿನಾ ಕಾಲೇಜು ಮೈಸೂರು.

ಇಂಟರ್ ಮೀಡಿಯೇಟ್ ಪರೀಕ್ಷೆಯು ಮುಗಿದಿತ್ತು. ನಾನೂ, ಮತ್ತು ನನ್ನ ಮಿತ್ರ ಕಿಟ್ಟು, ಪರೀಕ್ಷೆ ಮುಗಿದ ಮೇಲೆ ನಮ್ಮ ನಮ್ಮ ನಾಡಿಗೆ ಹಿಂತಿರುಗಲು ಮೈಸೂರಿನ ಬಸ್ಸು ನಿಲ್ದಾಣಕ್ಕೆ ಬಂದು, ಮಡಿಕೇರಿಗೆ 'ಟಿಕೇಟ್'ಗಳನ್ನು ಕೊಂಡುಕೊಂಡು ಬಸ್ಸು ಬಂದೊಡನೆಯೇ 'ಫಸ್ಟ್ ಸೀಟ'ನಲ್ಲಿ ಹತ್ತಿ ಕುಳಿತೆವು. ನಾವಿಬ್ಬರೂ ಎರಡು ವರ್ಷಗಳನ್ನು ಅತಿ ಸಂತೋಷದಿಂದ ಕಳೆದಿದ್ದು, ಈಗ ಒಬ್ಬರನ್ನೊಬ್ಬರು ಅಗಲಬೇಕಾದ ಪ್ರಸಂಗ ಬಂದಿರುವದರಿಂದ ಬಹು ವ್ಯಸನಗೊಂಡಿದ್ದೆವು. ಆದರೆ ಮಡಿಕೇರಿಯ ವರೆಗೆ ಇಬ್ಬರೂ ಒಟ್ಟಿಗೆ ಕಳ್ಳಕಡೆಯ ಸವಿನುಡಿಗಳನ್ನು ಆಡಿಕೊಳ್ಳಬಹುದೆಂಬ ಒಂದು ಸಮಾಧಾನ. ಹೇಗೂ ನಿರೀಕ್ಷಿತ ಸಮಯಕ್ಕೆ ಸರಿಯಾಗಿ 'ಬಸ್ಸ್' ಮೈಸೂರು ನಿಲ್ದಾಣವನ್ನು ಬಿಟ್ಟು ಹೊರಡಲಾರಂಭಿಸಿತು.

ನಮ್ಮ ಮನಸ್ಸನ್ನು ಸೆರೆಹಿಡಿದಿರುವ ಚಿಂತೆಯನ್ನು ತೊಲಗಿಸಲಿಕ್ಕೋಸ್ಕರ ನಮ್ಮ ಭವಿಷ್ಯ ಜೀವನದ ಗುರಿಯನ್ನು ಕುರಿತು ಸಂಭಾಷಣೆಗೆ ತೊಡಗಿದೆವು. ನಾನೇ ಮೊದಲು ಮಾತಿಗಾರಂಭಿಸಿ, "ಕಿಟ್ಟು, ಇಂಟರ್ ಮೀಡಿಯೇಟ್ ಪರೀಕ್ಷೆ ಪಾಸಾದ ಮೇಲೆ ಏನು ಮಾಡಬೇಕೆಂದಿರುವೆ?"

ಕಿಟ್ಟು:- "ನನಗೇನೋ ಇಂಟರ್ ಮೀಡಿಯೇಟ್ ಆದ ಮೇಲೆ ಹೆಚ್ಚು ಓದಬೇಕೆಂಬ ಇಚ್ಛೆಯಿಲ್ಲ. ನನಗೆ ಈಗಿನ ಕಾಲದ ಈ ಹಾಳು ಪೊಳ್ಳು 'ಡಿಗ್ರಿ'ಯ ಮೇಲೆ ಪ್ರೀತಿ ಇಲ್ಲ. ಹೇಗೂ ನನ್ನ ಜೀವನವನ್ನು ನಡೆಸಿಕೊಂಡು ಹೋಗಬಹುದೆಂಬ ಧೈರ್ಯವಿದೆ."

ನಾನು:- ಕಿಟ್ಟು, ಏನಂತೆ? 'ಡಿಗ್ರಿ'ಯು ಪೊಳ್ಳೆ? ನಿನ್ನ ಅಭಿಪ್ರಾಯವೇನು? ಈಗಿನ ಕಾಲ ಸ್ಥಿತಿಗತಿಯಲ್ಲಿ 'ಡಿಗ್ರಿ' ಇಲ್ಲದವನಿಗೆ ಸಮಾಜದಲ್ಲಿ ಉಚಿತ ಸ್ಥಾನವೇ ಸಿಗಲಾರದೆಂಬುದನ್ನು ಬಲ್ಲೆಯಾ?

ಕಿಟ್ಟು:- ಹೌದು, ಬಲ್ಲೆನು. ಇಂದಿನ ನಮ್ಮ [illegible] ಸಮಾಜವು ಪದವೀಧರರನ್ನು ಸರ್ವಜ್ಞರೆಂದು ತಿಳಿದಿರುವುದರಿಂದಲೂ, 'ಡಿಗ್ರಿ' ಇಲ್ಲದವರನ್ನು ಅಜ್ಞಾನಿಗಳೆಂದು ತಿಳಿದುಕೊಂಡಿದೆ. ಈಗಿನ ಕಾಲದ 'ಡಿಗ್ರಿ'ಗಳ ಯೋಗ್ಯತೆಯ ಕುಂದುಕೊರತೆಗಳನ್ನು ನಮ್ಮ ಸಮಾಜವು ಅರಿತುಕೊಂಡಿಲ್ಲದಿರುವುದೇ ಕಾರಣ.

ನಾನು:- ಅದೇನು ಕಿಟ್ಟು, 'ಡಿಗ್ರಿ'ಗಳಲ್ಲಿ ಏನು ಕುಂದುಕೊರತೆಗಳವೆ? ಅವರವರ ವಿದ್ಯಾ ಸಾಮರ್ಥ್ಯಕ್ಕೆ ಸರಿಯಾಗಿ 'ಡಿಗ್ರಿ'ಗಳನ್ನು ಕೊಡುತ್ತಾರೆ. ಅವುಗಳ ಕುಂದುಕೊರತೆಯೇನಿದೆ?

ಕಿಟ್ಟು:- ಮಿತ್ರಾ, ನೀನಿದೆಲ್ಲವನ್ನು ತಿಳಿದೂ [illegible] ತಮಾಷೆಗೋಸ್ಕರ ಕೇಳುತ್ತಿರುವೆಯಷ್ಟೆ. ಇದರ ಗುಟ್ಟನ್ನು ಕೇಳು. ಈಗಿನ ಕಾಲದಲ್ಲಿ [illegible] ವಿದ್ಯಾ ಸಾಮರ್ಥ್ಯಕ್ಕೂ, ಈ 'ಡಿಗ್ರಿ'ಗಳಿಗೂ ಒಂದಿಷ್ಟೂ ಸಾಮ್ಯವಿಲ್ಲ. ಕೇವಲ ಸಿರಿವಂತರಾಗಿದ್ದರೆ ಸಾಕು. ನಾವು 'ಡಿಗ್ರಿ'ಗಳನ್ನು ಹೊಂದಬಹುದು. ಈಗಿನ ವಿಶ್ವವಿದ್ಯಾನಿಲಯಗಳಲ್ಲಿ ಎಷ್ಟೋ ಪರೀಕ್ಷಾ ಕರ್ತರು ವಿದ್ಯಾರ್ಥಿಗಳಿಂದ ಹಣವನ್ನು ಕಸಿದುಕೊಂಡು (ಕೇಳಿಕೊಳ್ಳುವರೆಂದರೆ ಅರ್ಥ ಹಿಡಿಸಬಹುದೇನೋ) ಅವರಿಗೆ ಪರೀಕ್ಷೆಗೆ ಬರುವಂಥಾ ಪ್ರಬಂಧಗಳನ್ನು ಬರೆದುಕೊಟ್ಟು ಬಿಡುತ್ತಾರಂತೆ!

ನಾನು:- ಹಾಗೆಯೇ, ಈ 'ಅಂತೆ' ಮಾತುಗಳನ್ನು ನಂಬುವದು ಸ್ವಲ್ಪ ಕಷ್ಟವೇ ಕಿಟ್ಟು.

ಕಿಟ್ಟು:- ಈ ವಿಚಾರದಲ್ಲಿ ನಿನಗೆ ನಂಬಿಕೆ ಇಲ್ಲದಿದ್ದರೆ ಬೇರೆ ವಿಚಾರ ಕೇಳು:- ಈಗಿನ ಪರೀಕ್ಷಾ ಕರ್ತರು ವಿದ್ಯಾರ್ಥಿಗಳ ಪರೀಕ್ಷಾ ಪತ್ರಗಳನ್ನು ತಿದ್ದಲು ಅವಕ್ಕೆ ಸರಿಯಾಗಿ ವೇತನ ಒದಗುತ್ತಿಲ್ಲವೆಂಬುವದು ನಿಜ. ಹಾಗೆ ವೇತನವನ್ನು ಪಡೆದೂ ಸಹ ಅವರು ಪರೀಕ್ಷಾ ಪತ್ರಗಳನ್ನು ತಿದ್ದುವ ರೀತಿಯನ್ನು ನೋಡಿದರೆ ನೀನು ಬೆರಗಾಗುವೆ! ಕೆಲವು ಪರೀಕ್ಷಕರು ವಿದ್ಯಾರ್ಥಿಗಳು ಬರೆದಿರುವ ಪುಟಗಳನ್ನು ಎಣಿಸಿಯೇ ನಂಬರು ಹಾಕುವರಂತೆ! ಇನ್ನು ಕೆಲವರು, ಬರೆದ ಪ್ರಬಂಧಗಳ ಯಾ ಉತ್ತರಗಳ ಮೊದಲಿನ ವಾಕ್ಯವನ್ನೂ ಅಂತ್ಯದ ವಾಕ್ಯವನ್ನೂ ನೋಡಿ ನಂಬರು ಹಾಕುತ್ತಾರೆ. ಇದನ್ನು ನಾನೇ ಕಣ್ಣಾರೆ ನೋಡಿದ್ದೇನೆ. ಈ ರೀತಿ ವಿದ್ಯಾರ್ಥಿಗಳ ವಿದ್ಯೆಯ ಸಮರ್ಥತೆಯನ್ನು ಅರಿಯಲು ಸಾಧ್ಯವಿದೆಯೇ? ಇದೆಂಥಾ ಅಸಭ್ಯ ವರ್ತನೆ! ಒಬ್ಬ ವಿದ್ಯಾರ್ಥಿಯು ತನಗೆ ತಿಳಿದಿರುವ ವಿಷಯವನ್ನೆಲ್ಲಾ ಕೆಲವೇ ಪುಟಗಳಲ್ಲಿ ಸಂಕ್ಷಿಪ್ತವಾಗಿ ಬರೆದಿರಲಿಕ್ಕೂ ಸಾಕು. ಇನ್ನೊಬ್ಬನು ಬೇಕಾದಷ್ಟು ಪುಟಗಳಲ್ಲಿ ತುಂಬ ಬರೆದಿರಲಿಕ್ಕೂ ಸಾಕು. ಒಬ್ಬನ ಉತ್ತರದ ಮಧ್ಯಭಾಗವು ಒಳ್ಳೆಯ ಮುಖ್ಯವಾದ ವಿಷಯಗಳನ್ನೊಳಗೊಂಡಿರಲಿಕ್ಕೂ ಸಾಕು. ಏನನ್ನುವೆ?

ನಾನು:- ಹೌದು ಕಿಟ್ಟು, ಅದು ನಿಜ. ಹಾಗಾದರೆ ಈ ದಿನ ಕಾಲದಲ್ಲಿ 'ಡಿಗ್ರಿ'ಗಳಿಂದ ಪ್ರಯೋಜನವಿಲ್ಲವೆಂದು ನಿನ್ನ ಅಭಿಪ್ರಾಯವೇ?

ಕಿಟ್ಟು:- ಹೌದು, ಒಬ್ಬನಲ್ಲಿ ಅಡಕವಾಗಿರುವ ಜ್ಞಾನವು ಅವನ ವಿದ್ಯಾ ಸಮರ್ಥತೆಯನ್ನು ಪ್ರಕಟಪಡಿಸುವುದೇ ಹೊರತು, ಬರಿಯ 'ಡಿಗ್ರಿ'ಗಳಲ್ಲ. ಆ 'ಡಿಗ್ರಿ'ಗಳು ಒಳಗೆ ಏನೂ ಇಲ್ಲದ, ಹೊರಗೆ [illegible] ಕಾಣುತ್ತವೆ. ಆದರೆ ನನ್ನ ಈ ಅಭಿಪ್ರಾಯವು ಎಲ್ಲಾ ಸಂದರ್ಭದಲ್ಲಿಯೂ ಸರಿಹೋಗುವುದೆಂದು ಹೇಳಲಾರೆ. ಕೆಲವು ಕಡೆ ಸರಿಹೋಗದಿರಲಿಕ್ಕೂ ಸಾಕು. ನೋಡು, ಶ್ರೀ ರಾಮಕೃಷ್ಣ ಪರಮಹಂಸರನ್ನು ಈಗಿನ [illegible] ವಿದ್ಯಾ [illegible] ಹೇಳಬಹುದು. ಆದರೆ ಅವರ ತತ್ತ್ವಜ್ಞಾನವು ಇಂದೂ ಲೋಕದ ಮಹಾತ್ಮರ [illegible] ಮೀರಿಸುತ್ತಿದೆ. ಅವರಿಗೆ ಈಗಿನಂತೆ 'ಡಿಗ್ರಿ'ಗಳಿದ್ದುವೇ? ಇದನ್ನು ನಮ್ಮ ಇಂದಿನ ಸಮಾಜವು ಇನ್ನೂ ಅರಿತುಕೊಂಡಿಲ್ಲ. ಈಗಿನ ಕಾಲದಲ್ಲಿ ಪ್ರಪಂಚದ ನಾನಾ ರಾಷ್ಟ್ರಗಳ ವಿಜ್ಞಾನ ಸಂಪತ್ತನ್ನೂ, ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗಳನ್ನೂ ಒಬ್ಬನು ತಿಳಿದಿದ್ದ ಪಕ್ಷಕ್ಕೆ ಅವನನ್ನು ನಾವು ಜ್ಞಾನಿಯೆಂದು ಕರೆಯಬಹುದು. ಅದು ಬಿಟ್ಟು ಒಬ್ಬನು 'ಡಿಗ್ರಿ'ಯನ್ನು ಗಳಿಸಿಬಿಟ್ಟ ಮಾತ್ರಕ್ಕೆ ಅವನನ್ನು ಹೆಚ್ಚಿನವನೆಂದು ಭಾವಿಸುವದು ಮರುಳುತನ!

ನಾನು:- ಕಿಟ್ಟು, ನಿನ್ನ ಅಭಿಪ್ರಾಯದ ಪ್ರಕಾರ ಇದು 'ಡಿಗ್ರಿ' ಗಳಿಸಿಕೊಳ್ಳುವವರ ತಪ್ಪಲ್ಲ. ಬದಲು ಕೊಡುವವರ ನ್ಯೂನತೆ. ಇಂದಿನ ಕಾಲದಲ್ಲಿ ಒಬ್ಬನು ಎಷ್ಟೇ ವಿದ್ಯಾವಂತನಾಗಿರಲಿ, ಎಷ್ಟೇ ಜ್ಞಾನಿಯಾಗಿರಲಿ, ಎಷ್ಟೇ ಗುಣಸಂಪನ್ನನಾಗಿರಲಿ ಅವನಿಗೆ ಬಿ. ಎ., ಎಂದೋ, ಐ. ಸಿ. ಎಸ್. ಎಂದೋ, ಬಾರ್-ಎಟ್-ಲಾ ಎಂದೋ ಏನಾದರೊಂದು 'ಡಿಗ್ರಿ' ಇಲ್ಲದಿದ್ದರೆ ಅವನಿಗೆ ಗೌರವವೇ ಇಲ್ಲ. ಇದನ್ನು ತಿಳಿದುಕೊಂಡು ಇಂದಿನವರು ಹೇಗಾದರೂ ಮಾಡಿ ಒಂದು 'ಡಿಗ್ರಿ'ಯನ್ನು ಸಂಪಾದಿಸಿಕೊಂಡರೆ ಸನ್ಮಾನ, ಗೌರವಗಳು ದೊರೆಯುವವೆಂದು, ಅದಕ್ಕಾಗಿ ಯತ್ನಿಸುತ್ತಾರಷ್ಟೇ!

ಕಿಟ್ಟು:- ಹೌದು, ಈ 'ಡಿಗ್ರಿ'ಗಳಿಗೆ ಆಂಗ್ಲೇಯರ ಆಳ್ವಿಕೆಯ ಕಾಲದಲ್ಲಿ ವಿಶೇಷ ಗೌರವಗಳಿದ್ದುದರಿಂದ ಅದೇ ಘನತೆ ಗೌರವಗಳು ಈಗಲೂ ದೊರೆಯಬಹುದೆಂದು ಎಷ್ಟೋ ಜನರು ತಿಳಿದುಕೊಂಡು, ತಮ್ಮ ಮಕ್ಕಳನ್ನು ಹೇಗಾದರೂ ಮಾಡಿ ಒಂದು 'ಡಿಗ್ರಿ' ಪರೀಕ್ಷೆ ತೇರ್ಗಡೆ ಮಾಡಿಸಬೇಕೆಂದು ಪ್ರಯತ್ನಿಸುತ್ತಾರೆ. ಆದರೆ ನಮ್ಮ ಇಂದಿನ ಸ್ವತಂತ್ರ ಸರಕಾರವು ಈ 'ಡಿಗ್ರಿ'ಗಳ ನಿಷ್ಪ್ರಯೋಜಕತೆ, ಈಗಿನ ವಿದ್ಯಾಭ್ಯಾಸ ಕ್ರಮದ ಕುಂದು ಕೊರತೆ, ಮುಂತಾದವುಗಳನ್ನು ಕಂಡು ಹಿಡಿದು ಸರಿಯಾದ ಮಾರ್ಪಾಡುಗಳನ್ನು ಮಾಡಬೇಕಾಗಿದೆ. ಹಾಗೆ ಮಾರ್ಪಾಡಾಗಿ ಜಾರಿಗೆ ಬರುವಂಥಾ ವಿದ್ಯೆಯು ಸ್ವತಂತ್ರ ಹಿಂದೂಸ್ಥಾನದ ಪ್ರಜೆಗಳನ್ನು ದೇಶಪ್ರೇಮಿಗಳನ್ನಾಗಿ ಮಾಡಬೇಕೇ ಹೊರತು, ಪರರಾಷ್ಟ್ರಾನುಕರಣಗಳನ್ನಾಗಿ ಮಾಡಬಾರದು.

ನಾನು:- ಹೌದು, ನಮ್ಮ ಮಾನ್ಯ ವಿದ್ಯಾ ಸಚಿವರಾದ ಅಬ್ದುಲ್ ಕಲಾಂ ಆಜಾದರು ಈ ವಿಷಯವನ್ನು ರಾಜ್ಯಾಂಗ ಸಭೆಯಲ್ಲಿ ಪ್ರಸ್ತಾಪಿಸಿರುವರಂತೆ. ಮುಂದೆ ನಮ್ಮ ಸ್ವತಂತ್ರ ದೇಶದಲ್ಲಿ ನೀನು ಹೇಳಿದಂತೆ ವಿದ್ಯಾ ಕ್ರಮವು ಮಾರ್ಪಟ್ಟು, ದೇಶವು ಶ್ರೇಷ್ಠ ಜ್ಞಾನಿಗಳನ್ನೊಳಗೊಂಡು ಸುಭಿಕ್ಷವಾಗಲೆಂದು ಹಾರೈಸುವ.

ಕಿಟ್ಟು:- ಹೌದು, ನಾನೂ ಅದನ್ನೇ ಹಾರೈಸುತ್ತಿರುವೆನು. ಮಿತ್ರಾ, ಇವೆಲ್ಲ ಕಾರಣಗಳಿಂದ ನನಗೆ 'ಡಿಗ್ರಿ'ಯನ್ನು ಹೊಂದಬೇಕೆಂಬ ಆಶೆಯೂ ಇಲ್ಲ. ನಮ್ಮ ಸ್ವಂತ [illegible] ಕನ್ನಡ ಸಾಹಿತ್ಯದಲ್ಲಿರುವ, ಮತ್ತು ಇಂಗ್ಲಿಷ್ ಭಾಷೆಯಲ್ಲಿರುವ ಶ್ರೇಷ್ಠ ಲೇಖಕರ ಗ್ರಂಥಗಳನ್ನು ಓದುವದರಿಂದ ನಮ್ಮ ಜ್ಞಾನವನ್ನು ಸ್ವಲ್ಪವಾದರೂ ಹೆಚ್ಚಿಸಿಕೊಳ್ಳಬಹುದು. ಈಗಿನ ಕಾಲದಲ್ಲಿ ವರ್ತಮಾನ ಪತ್ರಿಕೆಗಳೇ ಜ್ಞಾನ ದೀಪಗಳಾಗಿವೆ. ಹೀಗಿರಲು ಬಿ. ಎ. ಎಂದೋ, ಎಂ. ಎ. ಎಂದೋ 'ಡಿಗ್ರಿ'ಯೊಂದರ ಮೂಲಕವೇ ಜ್ಞಾನಾರ್ಜನೆ ಸಾಧ್ಯವೆಂದು ತಿಳಿದುಕೊಳ್ಳುವದು ನಮ್ಮ ಅಜ್ಞಾನದ ಕುರುಹು.

ಅಷ್ಟರಲ್ಲಿ ನಮ್ಮ ಬಸ್ಸು ಮಡಿಕೇರಿಯ ಬಸ್ಸು ನಿಲ್ದಾಣದಲ್ಲಿ ನಿಂತಿತು. ಬಸ್ಸಿನಿಂದಿಳಿದು ಪರಸ್ಪರ ಹಸ್ತಲಾಘವಗಳನ್ನು ಮಾಡಿ ಒಂದಾಗಿದ್ದ ಹೃದಯಗಳನ್ನು ಒಡೆದು ಎರಡು ಮಾಡಿಕೊಂಡು, ವಿರಹದುಃಖವನ್ನನುಭವಿಸಲಾರೆನೆಂದು ಮರುಗುತ್ತಿರುವ ಹೃದಯವನ್ನು ಚಿತ್ರವೆಂಬ ಪಾಶದಿಂದ ಬಿಗಿದು ಇಬ್ಬರೂ ಬೇರೆ ಬೇರೆ ದಾರಿ ಹಿಡಿದು ಹೋದೆವು. ಆದರೂ ನಾವು, ಒಬ್ಬರಿಗೊಬ್ಬರು ಮರೆಯಾಗುವವರೆಗೂ ನಮ್ಮ ನೇತ್ರಗಳು ಒಬ್ಬರನ್ನೊಬ್ಬರು ತಿರುತಿರುಗಿ ನೋಡುತ್ತಿದ್ದವು!

ಎಂಪೈರ್ ಆಫ್ ಇಂಡಿಯಾ
ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.
ಸ್ಥಾಪನೆ.—1897

೪೮ನೇ ವಾರ್ಷಿಕ ವರದಿಯಲ್ಲಿನ ಕೆಲವು ಮುಖ್ಯ ಸಂಗತಿಗಳು	ವಾರ್ಷಿಕ ಆದಾಯ ...	1,07,09,000	ರೂಪಾಯಿ
	ಜಾರಿಯಲ್ಲಿರುವ ವಿಮೆ ..	17,74,52,000	,,
	ಆಸ್ತಿ	6,67,60,000	,,
ಕಂಪೆನಿಯ ಆದಿಯಿಂದ ಕೊಟ್ಟ ಕ್ಲೇಮುಗಳು ...		8,83,62,000	,,

ಬ್ರಾಂಚ್ ಆಫೀಸ್: ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡ ರೋಡ್, ಬೆಂಗಳೂರು | ಏಜನ್ಸಿ: ಅರ್ಜಿಗಳನ್ನು ಸ್ವಾಗತಿಸಿದೆ. | ಪ್ರಧಾನ ಕಛೇರಿ: ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ

ವಿಮೆ ಮಾಡಲು ಇಲ್ಲವೇ ಪ್ರತಿನಿಧಿಸಲು
ಕೊಶ್ಚಿಕಾರ್ ಬ್ರದರ್ಸ್, ಲಿಮಿಟೆಡ್.
ಇವರ ಸಲಹೆಗಿಂತ ಉತ್ತಮ ಮಾರ್ಗವಿಲ್ಲ
[illegible] ಗಳನ್ನೊಳಗೊಂಡ ದಕ್ಷಿಣ ಹಿಂದೂಸ್ಥಾನದ ಮದ್ರಾಸ್ ಪ್ರಾಂತದ [illegible]

ದಿ ಓರಿಯಂಟಲ್ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

30 ಮೌಂಟ್ ರೋಡ್, ಪೋ. ಬಾ. ನಂ. 337, ಮದ್ರಾಸ 2 | ಓರಿಯಂಟಲ್ ಲೈಫ್ ಬಿಲ್ಡಿಂಗ್, ಪೋ. ಬಾ. ನಂ. 1, ಉಡುಪಿ.

(ಟೆಲಿಫೋನ್ ನಂ 5338)

ಇತರ ಆಫೀಸುಗಳು:—ಬೆಂಗಳೂರು, ತಿರುವನಂತಪುರ, ಕಲ್ಲಿಕೋಟೆ, ಮಂಗಳೂರು, ಮಧುರೆ, ಮತ್ತು ಬೊಂಬಾಯಿ

ಭಾರತದ ಭಾಗ್ಯ ಭಂಡಾರ

— ಪುರಾಣಗಳು —

ಲೇ — ಶ್ರೀ ಎ. ಎಸ್. ರಾಮಕೃಷ್ಣ ಬಿ ಎಸ್‌ಸಿ (ಆನರ್ಸ್) ಬಿ. ಟಿ

ಲೇಖನ ೮

ಉಪನಿಷತ್ತುಗಳು ಶಾರೀರಿಕ ಮಾನಸಿಕ ಸಂಯಮನದಿಂದುಂಟಾದ ಚಿತ್ತ ಶುದ್ಧಿಯು ಆತ್ಮವಿಕಸನಕ್ಕೆ ಅತ್ಯಾವಶ್ಯಕವೆಂದು ಸಾರಿ ನುಡಿದವು. ಸಾಧನೆಯೂ ಕಷ್ಟ ಸಹಿಷ್ಣುತೆಯೂ, ತ್ಯಾಗವೂ ಜ್ಞಾನಾರ್ಜನೆಗೆ ಅಗತ್ಯವೆಂದು ವಾದಿಸಿದುವು ಉಪನಿಷತ್ತುಗಳಲ್ಲಿ ಅಡಕವಾಗಿರುವ ಈ ಬ್ರಹ್ಮ ವಿದ್ಯೆಯ ತತ್ವವು ಪ್ರಾಜ್ಞರಾದ ಸನಾತನ ಆರ್ಯರಿಗೆ ಮಾತ್ರ ಅನುಭವಪೂರ್ಣ ಸಿದ್ಧಾಂತವಾಗಿದ್ದಿತು. ಆದರೆ ಸಾಮಾನ್ಯ ಜನರಿಗೆ ಈ ನಿಗೂಢ ತತ್ವದ ಅರ್ಥವನ್ನು ತಿಳಿದುಕೊಳ್ಳುವ ಶಕ್ತಿ ಕೇವಲ ಅಲ್ಪವಾಗಿದ್ದಿತು. ತೀವ್ರ ಯೋಚನಾ ಸಾಮರ್ಥ್ಯವಿಲ್ಲದ ಜನಸಾಮಾನ್ಯರಿಗೆ ಉಪನಿಷತ್ತುಗಳ ಜ್ಞಾನವು ಉಪಯೋಗಕರವಲ್ಲದ್ದರಿಂದ ಪಂಡಿತ ಪಾಮರರಲ್ಲಿ ಸಾಮರಸ್ಯ ಉಂಟಾಗಲು ಕಷ್ಟಸಾಧ್ಯವಾಗಿದ್ದಿತು. ಅನೇಕ ವೇಳೆ ಉಪನಿಷತ್ತುಗಳ ಮಹಾ ತತ್ವಗಳನ್ನು ಸುಲಭರೀತಿಯಲ್ಲಿ ಆಬಾಲ ಗೋಪಾಲರಿಗೆ ಅರ್ಥವಾಗುವಂತೆ ಹೇಳುವ ಪ್ರಯತ್ನವೂ ನಡೆಯಿತು. ಈ ಪ್ರಯತ್ನಗಳು ಅಷ್ಟೇನೂ ಪರಿಣಾಮಕಾರಿಗಳಾಗಲಿಲ್ಲ

ಉಪನಿಷತ್ತುಗಳು ಕೇವಲ ಪಂಡಿತರಂಜಕವಾದುದರಿಂದ ಹೊಸ ಆಂದೋಲನಗಳು ಆರಂಭಿಸಿದುವು. ಅನೇಕ ವೇಳೆ ಈ ನೂತನ ಕ್ರಾಂತಿಮಯ ಯೋಚನಾ ಪ್ರವಾಹವು ಜಡವಾದ, ಅರ್ಥ ಸಂದೇಹವಾದ, ನಿರೀಶ್ವರವಾದ ಮೊದಲಾದುವುಗಳಿಗೂ ಎಡೆ ಕೊಟ್ಟು ನಾಸ್ತಿಕ ವಾದದ ಬೆಳವಣಿಗೆಗೆ ಅವಕಾಶ ಕಲ್ಪಿಸಿದುವು ಈ ಹೊಸ ಬೆಳವಣಿಗೆಯ ಕಾಲದಲ್ಲೇ ಬೌದ್ಧ ಜೈನ ಧರ್ಮಗಳು ಉದಯವಾದುವು ಹಿಂದೂ ಧರ್ಮದಲ್ಲಿ ನವ ಚೈತನ್ಯವನ್ನು ಉಂಟುಮಾಡಿ ಪಂಡಿತ-ಪಾಮರರಲ್ಲಿದ್ದ ದೊಡ್ಡ ವ್ಯತ್ಯಾಸಗಳನ್ನು ಒಗ್ಗೂಡಿಸಿ ತಜ್ಞ ಅಜ್ಞರಿಗೆ ವಿಷಯಗಳು ಸುಲಭವಾಗಿ ತಿಳಿಯುವಂತೆಸಗುವ ಪ್ರಯತ್ನದ ಫಲವಾಗಿ ಪುರಾಣಗಳು ಉತ್ಪನ್ನವಾದುವು. ಸಂಸ್ಕೃತ ಪುರಾಣಗಳಾದ ರಾಮಾಯಣ ಮಹಾ ಭಾರತಗಳು ಬರೆಯಲ್ಪಟ್ಟು ಉಪನಿಷತ್ ಜನಕರಾದ ಆರ್ಯರ ತತ್ವವೇತ್ತರಿಗೂ ಬಹು ಸಂಖ್ಯಾಕರಾದ ಜನ ಸಮುದಾಯಕ್ಕೂ ನಿಕಟ ಸಂಬಂಧವನ್ನು ಕಲ್ಪಿಸಿ ಭಾರತೀಯನ ನೋಟದಲ್ಲಿ ನವ ಸುಧಾರಣೆಯನ್ನು ತಂದವು

ರಾಮಾಯಣ ಮಹಾಭಾರತಗಳು ಬಹುಕಾಲದ ಸತತ ಪ್ರಯತ್ನದ ಫಲತಾಂಶಗಳಾಗಿ ಜನ್ಮ ತಾಳಿದವು ಇವುಗಳ ನಿರ್ದಿಷ್ಟ ಕಾಲವನ್ನು ಉಲ್ಲೇಖಿಸುವುದು ಕಷ್ಟಸಾಧ್ಯ ಕಾಲಾನಂತರವೂ ಅವುಗಳಿಗೆ ಅನೇಕ ವಿಷಯಗಳು ಪೋಣಿಸಲ್ಪಟ್ಟುವು. ಅವುಗಳಲ್ಲಿ ಪ್ರಾಚೀನ ಆರ್ಯರ ರಸಪೂರ್ಣ ಜೀವನ ವಿಧಾನವೂ ಅವರ ದಿಗ್ವಿಜಯ ದಂಡ ಯಾತ್ರೆಗಳ, ಯಾದವೀಕಲಹಗಳ ರೋಮಾಂಚಕ ವೃತ್ತಾಂತವೂ ಅಡಕವಾಗಿದ್ದು ಜನಜೀವನದ ಮೇಲೆ ಪ್ರಪಂಚದ ಮತ್ತಾವ ಗ್ರಂಥವೂ ಮಾಡಲಶಕ್ಯವಾದ ಅಮಿತ ಪ್ರಭಾವವನ್ನು ಬೀರಿ ಜನತೆಯ ನಡೆ ನುಡಿ, ಆಚಾರ ವ್ಯವಹಾರಗಳ ಮೇಲೂ ತೀವ್ರ ಪರಿಣಾಮವನ್ನುಂಟುಮಾಡಿವೆ. ಬಹು ಪುರಾತನವಾಗಿದ್ದರೂ ಇಂದುಕೂಡಾ ಭಾರತೀಯನ ನಿತ್ಯ ಜೀವನದಲ್ಲಿ ಹಾಸು ಹೊಕ್ಕು ಅಳಿಯದ ಅಮರ ಸಂದೇಶವನ್ನು ಸಾರುತ್ತಾ, ವ್ಯಕ್ತಿ ಜೀವನದ ಪಥವನ್ನು ಭವ್ಯ ಮಾರ್ಗದಲ್ಲಿ ಕರೆದೊಯ್ಯುವೆ.

ಪುರಾಣಗಳು ಸರ್ವ ಜನಮೆಚ್ಚುಗೆಯನ್ನು ಪಡೆಯುವಂತೆ, ಸರ್ವಗ್ರಾಹ್ಯವಾಗುವಂತೆ, ವಿವಿಧ ಸಾಂಸ್ಕೃತಿಕ ಮಟ್ಟದ ಜನರಿಗೆ ಅರಿಯುವಂತೆ ಮನೋರಂಜಕವಾಗಿ ತೀವ್ರ ಮೇಧಾಶಕ್ತಿಯ ಪ್ರಾಜ್ಞನಿಂದ ಹಿಡಿದು ಹಳ್ಳಿಯ ಬಡರೈತನಿಗೂ ಚಿತ್ತಾಕರ್ಷಣೆಯನ್ನುಂಟುಮಾಡುತ್ತವೆ ನೈತಿಕ ಜೀವನದ ಮೂಲ ಸಾರವನ್ನು ನಿಖಿಲ ಸಮುದಾಯಕ್ಕೆ ಉಣಿಸಿ ನಾನಾ ಜಾತಿ ಪಂಗಡಗಳಿಂದ ಛಿದ್ರ ವಿಛಿದ್ರವಾದ ಹಿಂದೂ ಮತದಲ್ಲಿ ಐಕ್ಯತೆಯನ್ನೂ ಉಂಟುಮಾಡಿ ಭಾರತೀಯನಿಗೆ ಸುಧಾಪಾನದ ನಿತ್ಯ ಸವಿಯನ್ನು ಒದಗಿಸುತ್ತವೆ

ಮಹಾ ಸಾಗರದಷ್ಟು ವಿಸ್ತಾರವಾಗಿ ಅನರ್ಘ್ಯ ರತ್ನಗಳಿಂದೊಡಗೂಡಿ ಭವ್ಯವೂ ತೇಜೋಮಯವೂ ಆದ ರಾಮಾಯಣ ಮಹಾ ಭಾರತಗಳು ನಮ್ಮ ದೇಶದಲ್ಲಿ ಮಾತ್ರವಲ್ಲದೆ ನಿಖಿಲ ಪ್ರಪಂಚದ ಮನ್ನಣೆಗೆ ಪಾತ್ರವಾಗಿವೆ. ಮಹಾ ಭಾರತವು ಜಗದ್ವಿಖ್ಯಾತ ಗ್ರಂಥಗಳಲ್ಲೊಂದಾಗಿದ್ದು ಪ್ರಾಚೀನ ಭಾರತದ ಸಾಮಾಜಿಕ, ರಾಜಕೀಯ, ಆರ್ಥಿಕ ಸಮಸ್ಯೆಗಳನ್ನೊಳಗೊಂಡ ಪ್ರಕಾಂಡ ಸಮಾಜ ವಿಜ್ಞಾನವಾಗಿದೆ ಮಹಾ ಭಾರತವು ರಷ್ಯನ್ ಮುಂತಾದ ಅನೇಕ ಪರಭಾಷೆಗಳಲ್ಲೂ ರೂಪಾಂತರ ಹೊಂದಿ ಪ್ರಾಚ್ಯ-ಪಾಶ್ಚಾತ್ಯ ದೇಶಗಳಲ್ಲಿ ವ್ಯಾಪಿಸಿದೆ

ಮಹಾ ಭಾರತದ ಕಾಲವು ಭಾರತ ಸಂಸ್ಕೃತಿಯಲ್ಲಿ ಅನ್ಯ ದೇಶೀಯ ಸಂಸ್ಕೃತಿಗಳು ಮಿಲನಗೊಂಡ ಕಾಲವಿದ್ದಿರಬೇಕು ಏಕೆಂದರೆ ಆರ್ಯರಲ್ಲಿ ಒಬ್ಬ ನಾರಿಗೆ ಬಹು ಪತಿಗಳಾಗುವ ಪದ್ಧತಿಯು ಇದ್ದಿರಲಿಲ್ಲ ಮಹಾ ಭಾರತದ ಶಕ್ತಿ ಸ್ವರೂಪಿಣಿ ದ್ರೌಪದಿಯು ಐದು ಜನ ಸಹೋದರರ ಸಾಮಾನ್ಯ ಕಾಂತೆಯಾಗಿದ್ದುದು ಅನ್ಯ ಸಂಸ್ಕೃತಿಯ ಪ್ರಭಾವವೆಂದೇ ಹೇಳಬೇಕು ವೈದಿಕ ಧರ್ಮವು ಹೊಸ ನೋಟಕ್ಕೆ ಅನ್ವಯಿಸುವಂತೆ ಬದಲಾವಣೆ ಹೊಂದಿ ಸತ್ಯಾನ್ವೇಷಣೆಗೆ ಅನೇಕ ಮಾರ್ಗಗಳೋ ಎಂಬ ವಿಶಾಲ ದೃಷ್ಟಿ ಉದಯವಾದುದರಿಂದ ಪರಸ್ಪರ ವಿರುದ್ಧಗಳಾದ ನಂಬಿಕೆಗಳೂ ಸಹಿಸಲ್ಪಟ್ಟು ನವಚೇತನದಿಂದ ಹಿಂದೂ ಧರ್ಮವು ಬೆಳೆಯಲನುವಾಯಿತು

ಮಹಾ ಭಾರತದಲ್ಲಿ ಸಮಗ್ರ ಭಾರತ ವರ್ಷದ ಮೂಲ ಅಖಂಡತೆಯ ನೋಟವು ಪ್ರದೀಪ್ತವಾಯಿತು. 'ಭಾರತ ವರ್ಷ ಎಂಬ ನಾಮಾಂಕಿತವು 'ಭರತ' ಎಂಬ ಪೌರಾಣಿಕ ನರಾಧಿಪನ ಹೆಸರಿನಿಂದ ಉತ್ಪನ್ನವಾಗಿ ಅಖಂಡ ಭರತ ಖಂಡಕ್ಕೆ ಅನ್ವಯಿಸುತಿತ್ತು. 'ಆರ್ಯಾವರ್ತ' ಎಂಬ ಹಳೆ ಹೆಸರು ವಿಂಧ್ಯ, ಹಿಮಾಲಯ ಪರ್ವತಗಳ ಮಧ್ಯದ ಪುಣ್ಯ ಭೂಮಿಗೆ ಮಾತ್ರ ಸಂಬೋಧಿಸಲ್ಪಡುತ್ತಿತ್ತು. ರಾಮಾಯಣ ಕಾಲದಿಂದ ವಿಂಧ್ಯೆಯ ದಕ್ಷಿಣ ಸೀಮೆಗೆ ಆರ್ಯರ ಸಮಾವೇಶವಾಯಿತು. ಮಹಾ ಭಾರತದಲ್ಲಿ ವರ್ಣಿತವಾದ ಅದ್ಭುತ ರಮ್ಯ ಕಾಳಗವು ಅಖಿಲ ಭರತ ಖಂಡದ ಒಡೆತನದ ಮಹದಾಶೆಯಿಂದಲೇ ಉಂಟಾಗಿ ಅವಿಭಾಜ್ಯ ಭಾರತದ ದೃಷ್ಟಿಯನ್ನು ಮೂಡಿಸಿತು. ದೆಹಲಿಯ ಸಮೀಪದ ಇಂದ್ರಪ್ರಸ್ಥ ಹಸ್ತಿನ ನಗರಗಳು ಸಮಗ್ರ ಭರತ ವರ್ಷದ ರಾಜಕೀಯ ಕೇಂದ್ರವಾಗಿ ಏರ್ಪಟ್ಟಿತು

ಭಗವಂತನಾದ ಶ್ರೀಕೃಷ್ಣನ ಕಪಟ ನಾಟಕವು ಮಹಾ ಭಾರತದಲ್ಲಿ ಹೃದಯಂಗಮವಾಗಿ ವರ್ಣಿತವಾಗಿದೆ. ಭಗವದ್ಗೀತೆ ಎಂಬ ತತ್ವವು ಮಹಾ ಭಾರತ ಸಾಗರದ ಕಾಂತಿಮಯ ಜ್ಯೋತಿಯಾಗಿದೆ. ರಾಜ ನೀತಿಯಲ್ಲೂ, ಜನ ಜೀವನದಲ್ಲೂ ನೀತಿಯೇ ಪ್ರಧಾನವಾಗಿರಬೇಕೆಂದು ಮಹಾ ಭಾರತವೂ ತದಂಗವಾದ ಗೀತೆಯೂ ಒತ್ತಿ ಹೇಳುತ್ತವೆ. ಧರ್ಮವೇ ಸಮಾಜದ ಜೀವಾಳ. ಸಾಮಾಜಿಕ ಶ್ರೇಯಸ್ಸೇ ರಾಷ್ಟ್ರದ ಸಂಪತ್ತು. ಮಹಾಭಾರತವು ಯುದ್ಧ ಪ್ರಧಾನವಾಗಿದ್ದರೂ ಅದರ ವೀರಾಗ್ರಣಿಗಳಾದ ಪುರುಷ ಸಿಂಹರುಗಳಲ್ಲಿ ಆತ್ಮ ಶಾಂತಿಯೂ, ಕ್ರೋಧ ನಿಗ್ರಹವೂ, ಆತ್ಮ ಸಂಯಮನವೂ, ದ್ವೇಷಾಸೂಯೆಗಳ ಮೂಲೋತ್ಪಾಟನಾ ಪೂರ್ಣಧೀ ಶಕ್ತಿಯೂ ಒಡೆದು ಕಾಣುವುದರಿಂದ ಧರ್ಮ ಪಾಲನೆಗಾಗಿ ಯುದ್ಧ ಪ್ರವೃತ್ತರಾದರೂ ಸತ್ಯ, ಅಹಿಂಸೆ, ಶಾಂತಿಗಳ ಮೂಲ ಮಂತ್ರವು ಪ್ರಸ್ಫುಟಿಸುತ್ತದೆ

ಮಹಾಭಾರತವು ಸೀಮಾತೀತವಾದ ಅನುಭವ ಪರಂಪರೆಗಳ ಮಹಾರ್ಣವ. ಹುಡುಕಿದಷ್ಟು ರತ್ನಗಳು ಅದರಲ್ಲಿ ಸಿಗುವವು. ನೈತಿಕ ಧಾರ್ಮಿಕ ವಿಷಯ ಸಂಗ್ರಹ ಮಾತ್ರವಲ್ಲದ ರಾಜಕೀಯ, ಆರ್ಥಿಕ, ಸಾಮಾಜಿಕ ಜ್ಞಾನ ಸರಸ್ಸು ಮಹಾ ಬಂಧದಲ್ಲಿ ಅಡಕವಾಗಿವೆ ಉಪನಿಷತ್ತುಗಳು ವ್ಯಕ್ತಿ ವಿಕಸನ ಕಡೆ ದಟ್ಟಿಸಿದರೆ ಮಹಾ ಭಾರತವು ಸಾಮಾಜಿಕ ಅಭ್ಯುದಯವನ್ನು ಸಾಧಿಸಲು 'ಸಮಾಜಕ್ಕೆ ಅಹಿತವನ್ನುಂಟುಮಾಡಬೇಡ, ನಿನ್ನಂತೆಯೇ ಅನ್ಯರೆಂದು ಭಾವಿಸು ಅನ್ಯರ ಹಿತವನ್ನು ಕೋರು' ಎಂಬ ಸಾಮಾಜಿಕ ದೃಷ್ಟಿ ಮಹಾ ಭಾರತದಲ್ಲಿ ಪ್ರಕಾಶಿಸುತ್ತದೆ ಸತ್ಯ, ಸಂಯಮನ, ಶೌಚ, ಔದಾರ್ಯ, ಅಹಿಂಸೆ, ಸ್ಥೈರ್ಯ ಇವುಗಳೇ ಶ್ರೇಯಸ್ಸಿನ ಮಾರ್ಗಗಳಲ್ಲದೆ ವರ್ಣ ವೈರಗಳಲ್ಲ 'ಶುದ್ಧ ಜೀವನವು ಲೇಸು, ನಿಜವಾದ ಆನಂದವು ಶ್ರಮದಿಂದ ದೊರಕುವದು' ಎಂಬಿತ್ಯಾದಿ ಪಾವನತಮ ಜೀವನ ತತ್ವಗಳನ್ನು ಮಹಾ ಭಾರತವು ಬೋಧಿಸುತ್ತದೆ. ಮಾತ್ರವಲ್ಲದೆ ವೇದಗಳ ಬಹು ಈಶ್ವರವಾದ, ಉಪನಿಷತ್ತುಗಳ ಅದ್ವೈತವಾದ, ಏಕೇಶ್ವರವಾದ ಮೊದಲಾದ ವಿವಿಧ ತತ್ವಗಳನ್ನು ಅಳವಡಿಸಿಕೊಂಡು ವಿಶ್ವದೃಷ್ಟಿಯನ್ನು ಮೂಡಿಸಿ ವ್ಯಕ್ತಿ, ಸಮಾಜ, ರಾಷ್ಟ್ರಗಳಿಗೆ ಅನುಸರಣೀಯವಾಗಿದೆ.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್,

ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ (1921ರಲ್ಲಿ ಸ್ಥಾಪಿಸಲಾಗಿದೆ

ಅಧಿಕೃತ ಶೇರು ಭಂಡವಾಳ	ರೂ	10,00,000
ವಸೂಲಾದ ಶೇರು ಮೊಬಲಗು	ರೂ.	1 65,000.
ಕ್ಷೇಮನಿಧಿ	ರೂ.	50,000

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗಂತೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು ಚೆಕ್ಕು ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಸಿಟಿ ಮತ್ತು ನಾರ್ದನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಖಜಾನ್ಚಿ

CRESCENT

FOR PROTECTION AND SERVICE.

It is best to represent and insure with

The CRESCENT Insurance Co., Ltd.

H O: BOMBAY] [*Established 1919*

BRANCHES ALL OVER INDIA.

For particulars write to: **THE BRANCH MANAGER.**
22—B. MAHATHMA GANDHI ROAD.
BANGALORE CANT.

ಸುರಕ್ಷಿತವಾದ ಜೀವವಿಮೆ ಪಡೆಯಲು

ಕ್ರೆಸೆಂಟ್

ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.

"ಡಿಗ್ರಿ"ಯ ಮೀಮಾಂಸೆ.

ಲೇ:- ಶ್ರೀ ಕೆ ಸಿ ಭೀಮಯ್ಯ, ಫಿಲೋಮಿನಾ ಕಾಲೇಜು ಮೈಸೂರು.

ಇಂಟರ್ ಮೀಡಿಯೇಟ್ ಪರೀಕ್ಷೆಯು ಮುಗಿದಿತ್ತು. ನಾನೂ, ಮತ್ತು ನನ್ನ ಮಿತ್ರ ಕಿಟ್ಟು, ಪರೀಕ್ಷೆ ಮುಗಿದ ಮೇಲೆ ನಮ್ಮ ನಮ್ಮ ನಾಡಿಗೆ ಹಿಂತಿರುಗಲು ಮೈಸೂರಿನ ಬಸ್ ನಿಲ್ದಾಣಕ್ಕೆ ಬಂದು, ಮಡಿಕೇರಿಗೆ 'ಟಿಕೇಟು'ಗಳನ್ನು ಕೊಂಡುಕೊಂಡು ಬಸ್ಸು ಬಂದೊಡನೆಯೇ 'ಫಸ್ಟ್ ಸೀಟಿ'ನಲ್ಲಿ ಹತ್ತಿ ಕುಳಿತೆವು. ನಾವಿಬ್ಬರೂ ಎರಡು ವರ್ಷಗಳನ್ನು ಒಂದೇ ಕೋಣೆಯಿಂದ ಕಳೆದಿದ್ದು, ಈಗ ಒಬ್ಬರನ್ನೊಬ್ಬರು ಅಗಲಬೇಕಾದ ಪ್ರಸಂಗ ಬಂದಿರುವುದರಿಂದ ಬಹು ವ್ಯಸನಗೊಂಡಿದ್ದೆವು. ಆದರೆ ಮಡಿಕೇರಿಯ ವರೆಗೆ ಇಬ್ಬರೂ ಒಟ್ಟಿಗೆ ಕಟ್ಟಕಡೆಯ ಸವಿನುಡಿಗಳನ್ನು ಆಡಿಕೊಳ್ಳಬಹುದೆಂಬ ಒಂದು ಸಮಾಧಾನ. ಹೇಗೂ ನಿರೀಕ್ಷಿತ ಸಮಯಕ್ಕೆ ಸರಿಯಾಗಿ 'ಬಸ್' ಮೈಸೂರು ನಿಲ್ದಾಣವನ್ನು ಬಿಟ್ಟು ಮುಂದ ಓಡಲಾರಂಭಿಸಿತು.

ನಮ್ಮ ಮನಸ್ಸನ್ನು ಸೆರೆ ಹಿಡಿದಿರುವ ಆ ಚಿಂತೆಯನ್ನು ತೊಲಗಿಸಲಿಕೋಸ್ಕರ ನಮ್ಮ ಭವಿಷ್ಯ ಜೀವನದ ಗುರಿಯನ್ನು ಕುರಿತು ಸಂಭಾಷಣೆಗೆ ತೊಡಗಿದೆವು. ನಾನೇ ಮೊದಲು ಮಾತಿಗಾರಂಭಿಸಿ, 'ಕಿಟ್ಟು, ಇಂಟರ್ ಮೀಡಿಯೇಟ್ ಪರೀಕ್ಷೆ ಪಾಸಾದ ಮೇಲೆ ಏನು ಮಾಡಬೇಕೆಂದಿರುವೆ?'

ಕಿಟ್ಟು:- 'ನನಗೇನೋ ಇಂಟರ್‌ಮೀಡಿಯೇಟ್ ಆದ ಮೇಲೆ ಹೆಚ್ಚು ಓದಬೇಕೆಂಬ ಇಚ್ಛೆ ಇಲ್ಲ. ನನಗೆ ಈಗಿನ ಕಾಲದ ಈ ಹಾಳು ಟೊಳ್ಳು 'ಡಿಗ್ರಿ'ಯ ಮೇಲೆ ಆಶೆ ಇಲ್ಲ. ಹೇಗೂ ನನ್ನ ಜೀವನವನ್ನು ನಡೆಸಿಕೊಂಡು ಹೋಗಬಹುದೆಂಬ ಧೈರ್ಯವಿದೆ.

ನಾನು:- ಕಿಟ್ಟು, ಏನೆಂದೆ? 'ಡಿಗ್ರಿ'ಯು ಟೊಳ್ಳೆ? ನಿನ್ನ ಅಭಿಪ್ರಾಯವೇನು? ಈಗಿನ ಕಾಲದ ಸ್ಥಿತಿಗತಿಯಲ್ಲಿ 'ಡಿಗ್ರಿ' ಇಲ್ಲದವನಿಗೆ ಸಮಾಜದಲ್ಲಿ ಉಚಿತ ಸ್ಥಾನವೇ ಸಿಗಲಾರದೆಂಬುದನ್ನು ಬಲ್ಲೆ ಏನು?

ಕಿಟ್ಟು:- ಹೌದು, ಬಲ್ಲೆನು. ಇಂದಿನ ನಮ್ಮ ಸಂಸ್ಕೃತಿಯು ಸಮಾಜವು ಪದವೀಧರರನ್ನು ಸರ್ವಜ್ಞಾನ ಸಂಪನ್ನರೆಂದೂ, 'ಡಿಗ್ರಿ' ಇಲ್ಲದವರನ್ನು ಅಜ್ಞಾನಿಗಳೆಂದೂ ತಿಳಿದುಕೊಂಡಿದೆ. ಈಗಿನ ಕಾಲದ 'ಡಿಗ್ರಿ' ಗಳ ಒಳಗಿರುವ ಕುಹಕೋಪಾಯಗಳನ್ನು ನಮ್ಮ ಸಮಾಜವು ಅರಿತುಕೊಂಡಿಲ್ಲವೆಂದು ತೋರುತ್ತದೆ.

ನಾನು:- ಅದೇನು ಕಿಟ್ಟು, 'ಡಿಗ್ರಿ'ಗಳಲ್ಲಿರುವ ಕುಹಕೋಪಾಯಗಳು ಯಾವುವು? ಅವರವರ ವಿದ್ಯಾ ಸಾಮರ್ಥ್ಯಕ್ಕೆ ಸರಿಯಾಗಿ 'ಡಿಗ್ರಿ'ಗಳನ್ನು ಕೊಡುತ್ತಾರೆಯಲ್ಲವೇ? ಇದರಲ್ಲಿ ಕುಹಕೋಪಾಯವೇನಿದೆ?

ಕಿಟ್ಟು:- ಮಿತ್ರಾ, ನೀನಿದೆಲ್ಲವನ್ನು ತಿಳಿಯದಿರುವುದು ಆಶ್ಚರ್ಯವಲ್ಲ. ಆದರೂ ಹೇಳುವೆನು ಕೇಳು. ಈಗಿನ ಕಾಲದಲ್ಲಿ ಜನರ ವಿದ್ಯಾ ಸಾಮರ್ಥ್ಯಕ್ಕೆ ತಕ್ಕಂತೆ 'ಡಿಗ್ರಿ'ಗಳು ದೊರೆಯಬೇಕೆಂದೇನೂ ಸಾಮರ್ಥ್ಯವಿಲ್ಲ. ಕೇವಲ ಸಿರಿವಂತರಾಗಿದ್ದರೆ ಸಾಕು. ನಾವೂ 'ಡಿಗ್ರಿ'ಗಳನ್ನು ಹೊಂದಬಹುದು. ಈಗಿನ ವಿಶ್ವ ವಿದ್ಯಾನಿಲಯಗಳಲ್ಲಿ ಎಷ್ಟೋ ಪರೀಕ್ಷಾ ಕರ್ತರು ವಿದ್ಯಾರ್ಥಿಗಳಿಂದ ಹಣವನ್ನು ಕಸಿದುಕೊಂಡು (ಕೇಳಿಕೊಳ್ಳುವರೆಂದರೆ ಅರ್ಥ ಸಲ್ಲಿಸುವ ಮುಂಚಿತ) ಅವರಿಗೆ ಪರೀಕ್ಷೆಗೆ ಬರುವಂಥಾ ಪ್ರಬಂಧಗಳನ್ನು ಬರೆದುಕೊಟ್ಟಿರುತ್ತಾರೆ!

ನಾನು:- ಛೇ, ಈ 'ಅಂತೆ' ಮಾತುಗಳನ್ನು ನಂಬುವುದು ಸ್ವಲ್ಪ ಕಷ್ಟವೇ ಕಿಟ್ಟು.

ಕಿಟ್ಟು:- ಈ ವಿಚಾರದಲ್ಲಿ ನಿನಗೆ ನಂಬಿಕೆ ಇಲ್ಲದಿದ್ದರೆ ಬೇರೆ ವಿಚಾರ ಕೇಳು:- ಈಗಿನ ಪರೀಕ್ಷಾ ಕರ್ತರು ವಿದ್ಯಾರ್ಥಿಗಳ ಪರೀಕ್ಷಾ ಪತ್ರಗಳನ್ನು ತಿದ್ದಲು ಅದಕ್ಕೆ ಸರಿಯಾಗಿ ವೇತನ ಪಡೆಯುತ್ತಾರೆಂಬುವುದು ನಿಜ. ಹಾಗೆ ವೇತನವನ್ನು ಪಡೆದೂ ಸಹ ಅವರು ಪರೀಕ್ಷಾ ಪತ್ರಗಳನ್ನು ತಿದ್ದುವ ರೀತಿಯನ್ನು ನೋಡಿದರೆ ನೀನು ಬೆರಗಾಗುವೆ! ಕೆಲವು ಪರೀಕ್ಷಕರು ವಿದ್ಯಾರ್ಥಿಗಳು ಬರೆದಿರುವ ಪುಟಗಳನ್ನು ಎಣಿಸಿಯೇ ನಂಬರು ಹಾಕುವರಂತೆ! ಇನ್ನು ಕೆಲವರು, ಬರೆದ ಪ್ರಬಂಧಗಳ ಉತ್ತರಗಳ ಮೊದಲಿನ ವಾಕ್ಯವನ್ನೂ ಅಂತ್ಯದ ವಾಕ್ಯವನ್ನೂ ನೋಡಿ ನಂಬರು ಹಾಕುತ್ತಾರೆ. ಇದನ್ನು ನಾನೇ ಕಣ್ಣಾರೆ ನೋಡಿದ್ದೇನೆ. ಈ ರೀತಿ ವಿದ್ಯಾರ್ಥಿಗಳ ವಿದ್ಯಾ ಸಾಮರ್ಥ್ಯವನ್ನು ಅರಿಯಲು ಸಾಧ್ಯವಿದೆಯೇ? ಇದೆಂಥಾ ಅಸಭ್ಯ ವರ್ತನೆ! ಒಬ್ಬ ವಿದ್ಯಾರ್ಥಿಯು ತನಗೆ ತಿಳಿದಿರುವ ವಿಷಯವನ್ನೆಲ್ಲಾ ಕೆಲವೇ ಪುಟಗಳಲ್ಲಿ ಸಂಕ್ಷಿಪ್ತವಾಗಿ ಬರೆದಿರಲಿಕ್ಕೂ ಸಾಕು. ಇನ್ನೊಬ್ಬನು ಬೇಕಾದಷ್ಟು ಪುಟಗಳನ್ನು ತುಂಬಿಸಿ ಹಾಳೆಗಳನ್ನು ಬರೆದಿರಲಿಕ್ಕೂ ಸಾಕು. ಒಬ್ಬನ ಉತ್ತರದ ಮಧ್ಯ ಭಾಗವು ಒಳ್ಳೆಯ ಮುಖ್ಯವಾದ ವಿಷಯಗಳನ್ನೊಳಗೊಂಡಿರಲಿಕ್ಕೂ ಸಾಕು ಎನ್ನುವೆಯಾ?

ನಾನು:- ಹೌದು ಕಿಟ್ಟು, ಇದು ನಿಜ. ಹಾಗಾದರೆ ಇಂದಿನ ಕಾಲದ 'ಡಿಗ್ರಿ'ಗಳಿಂದ ಪ್ರಯೋಜನವಿಲ್ಲವೆಂಬ ನಿನ್ನ ಅಭಿಪ್ರಾಯವೇ?

ಕಿಟ್ಟು:- ಹೌದು; ಒಬ್ಬನಲ್ಲಿ ಅಡಕವಾಗಿರುವ ಜ್ಞಾನವು ಅವನ ವಿದ್ಯೆಯ ಸಮರ್ಥತೆಯನ್ನು ವ್ಯಕ್ತಪಡಿಸುವುದೇ ಹೊರತು, ಬರಿಯ 'ಡಿಗ್ರಿ'ಗಳಲ್ಲ. ಈ 'ಡಿಗ್ರಿ'ಗಳು ಒಳಗೆ ತಿರುಳಿಲ್ಲದ, ಹೊರಗೆ ಥಳಥಳಿಸುತ್ತಿರುವ ಕಾಯಿಯಂತೆ. ಆದರೆ ನನ್ನ ಈ ಅಭಿಪ್ರಾಯ ಎಲ್ಲಾ ಸಂದರ್ಭದಲ್ಲಿಯೂ ಸರಿಹೋಗುವುದೆಂದು ಹೇಳಲಾರೆ. ಕೆಲವು ಕಡೆ ಸರಿಹೋಗದಿರಲಿಕ್ಕೂ ಸಾಕು. ನೋಡು, ಶ್ರೀ ರಾಮಕೃಷ್ಣ ಪರಮಹಂಸರನ್ನು ಈಗಿನ ರೀತಿಯಲ್ಲಿ ಹೇಳುವುದಾದರೆ ಸಾಮಾನ್ಯ ವಿದ್ಯಾರ್ಥಿಗಳಾಗಿದ್ದರೆಂದೇ ಹೇಳಬೇಕಾದೀತು. ಆದರೆ ಅವರ ತತ್ವಜ್ಞಾನವು ಇಂದೂ ಲೋಕದ ಮಹಾತ್ಮರ ಹೃದಯವನ್ನು ಆಕರ್ಷಿಸುತ್ತಿದೆ. ಅವರಿಗೆ ಈಗಿನಂತೆ 'ಡಿಗ್ರಿ'ಗಳಿದ್ದವೇ? ಇದನ್ನು ನಮ್ಮ ಇಂದಿನ ಸಮಾಜವು ಇನ್ನೂ ಅರಿತುಕೊಂಡಿಲ್ಲ. ಈಗಿನ ಕಾಲದಲ್ಲಿ ಪ್ರಪಂಚದ ನಾನಾ ರಾಷ್ಟ್ರಗಳ ವಿಜ್ಞಾನ ಸಂಪತ್ತನ್ನೂ, ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗಳನ್ನೂ ಒಬ್ಬನು ತಿಳಿದಿದ್ದಕ್ಕೆ ಅವನನ್ನು ನಾವು ಜ್ಞಾನಿಯೆಂದು ಕರೆಯಬಹುದು. ಅದು ಬಿಟ್ಟು ಒಬ್ಬನು 'ಡಿಗ್ರಿ'ಯನ್ನು ಗಳಿಸಿಬಿಟ್ಟ ಮಾತ್ರಕ್ಕೆ ಅವನನ್ನು ಹೆಚ್ಚಿನವನೆಂದು ಭಾವಿಸುವುದು ಮರುಳುತನ!

ನಾನು:- ಕಿಟ್ಟು, ನಿನ್ನ ಅಭಿಪ್ರಾಯದ ಪ್ರಕಾರ ಇದು 'ಡಿಗ್ರಿ' ಗಳಿಸಿಕೊಳ್ಳುವವರ ತಪ್ಪಲ್ಲ. ಬದಲು ಕೊಡುವವರ ನ್ಯೂನತೆ. ಇಂದಿನ ಕಾಲದಲ್ಲಿ ಒಬ್ಬನು ಎಷ್ಟೇ ವಿದ್ಯಾವಂತನಾಗಿರಲೀ, ಎಷ್ಟೇ ಜ್ಞಾನಿಯಾಗಿರಲೀ, ಎಷ್ಟೇ ಗುಣಸಂಪನ್ನನಾಗಿರಲೀ ಅವನಿಗೆ ಬಿ. ಎ; ಎಂದೋ, ಐ. ಸಿ. ಎಸ್. ಎಂದೋ, ಬಾರ್-ಎಟ್-ಲಾ ಎಂದೋ ಏನಾದರೊಂದು 'ಡಿಗ್ರಿ' ಇಲ್ಲದಿದ್ದರೆ ಅವನಿಗೆ ಗೌರವವೇ ಇಲ್ಲ. ಇದನ್ನು ತಿಳಿದುಕೊಂಡು ಇಂದಿನವರು ಹೇಗಾದರೂ ಮಾಡಿ ಒಂದು 'ಡಿಗ್ರಿ'ಯನ್ನು ಪಡೆದುಕೊಂಡರೆ ಸನ್ಮಾನ, ಗೌರವಗಳು ದೊರೆಯುವವೆಂದು, ಅದಕ್ಕಾಗಿ ಯತ್ನಿಸುತ್ತಾರಲ್ಲವೇ!

ಕಿಟ್ಟು:- ಹೌದು, ಈ 'ಡಿಗ್ರಿ'ಗಳಿಗೆ ಆಂಗ್ಲೇಯರ ಆಳ್ವಿಕೆಯ ಕಾಲದಲ್ಲಿ ವಿಶೇಷ ಗೌರವಗಳಿದ್ದುದರಿಂದ ಅದೇ ಘನತೆ ಗೌರವಗಳು ಈಗಲೂ ದೊರೆಯಬಹುದೆಂದು ಎಷ್ಟೋ ಜನರು ತಿಳಿದುಕೊಂಡು, ತಮ್ಮ ಮಕ್ಕಳನ್ನು ಹೇಗಾದರೂ ಮಾಡಿ ಒಂದು 'ಡಿಗ್ರಿ' ಪರೀಕ್ಷೆ ತೇರ್ಗಡೆ ಮಾಡಿಸಬೇಕೆಂದು ಪ್ರಯತ್ನಿಸುತ್ತಾರೆ. ಆದರೆ ನಮ್ಮ ಇಂದಿನ ಸ್ವತಂತ್ರ ಸರಕಾರವು ಈ 'ಡಿಗ್ರಿ'ಗಳ ನಿಷ್ಪ್ರಯೋಜನತೆ, ಈಗಿನ ವಿದ್ಯಾಭ್ಯಾಸ ಕ್ರಮದ ಕುಂದು ಕೊರತೆ, ಮುಂತಾದವುಗಳನ್ನು ಕಂಡು ಹಿಡಿದು, ಸರಿಯಾದ ಮಾರ್ಪಾಡುಗಳನ್ನು ಮಾಡಬೇಕಾಗಿದೆ. ಹಾಗೆ ಮಾರ್ಪಾಡಾಗಿ ಜಾರಿಗೆ ಬರುವಂಥಾ ವಿದ್ಯೆಯು ಸ್ವತಂತ್ರ ಹಿಂದೂಸ್ಥಾನದ ಪ್ರಜೆಗಳನ್ನು ದೇಶ ಪ್ರೇಮಿಗಳನ್ನಾಗಿ ಮಾಡಬೇಕೇ ಹೊರತು, ಪರರಾಷ್ಟ್ರಾನುಕರಣಗಳನ್ನಾಗಿ ಮಾಡಬಾರದು.

ನಾನು:- ಹೌದು; ನಮ್ಮ ಮಾನ್ಯ ವಿದ್ಯಾ ಸಚಿವರಾದ ಅಬ್ದುಲ್ ಕಲಾಂ ಅಜಾದರು ಈ ವಿಷಯವನ್ನು ರಾಜ್ಯಾಂಗ ಸಭೆಯಲ್ಲಿ ಪ್ರಸ್ತಾಪಿಸಿರುವರಂತೆ. ಮುಂದೆ ನಮ್ಮ ಸ್ವತಂತ್ರ ದೇಶದಲ್ಲಿ ನೀನು ಹೇಳಿದಂತೆ ವಿದ್ಯಾ ಕ್ರಮವು ಮಾರ್ಪಾಟ್ಟು, ದೇಶವು ಶ್ರೇಷ್ಠ ಜ್ಞಾನಿಗಳನ್ನೊಳಗೊಂಡು ಸುಭಿಕ್ಷವಾಗಲೆಂದು ಹಾರೈಸುವ.

ಕಿಟ್ಟು:- ಹೌದು, ನಾನೂ ಅದನ್ನೇ ಹಾರೈಸುತ್ತಿರುವೆನು. ಮಿತ್ರಾ, ಇವೆಲ್ಲಾ ಕಾರಣಗಳಿಂದ ನನಗೆ 'ಡಿಗ್ರಿ'ಯನ್ನು ಹೊಂದಬೇಕೆಂಬ ಆಶೆಯೂ ಇಲ್ಲ. ನನ್ನ ಇಷ್ಟಕ್ಕೆ ಒಳ್ಳೆಯ ಕನ್ನಡ ಸಾಹಿತ್ಯದಲ್ಲಿರುವ, ಮತ್ತು ಇಂಗ್ಲಿಷ್ ಭಾಷೆಯಲ್ಲಿರುವ ಶ್ರೇಷ್ಠ ಲೇಖಕರ ಗ್ರಂಥಗಳನ್ನು ಓದುವುದರಿಂದ ನನ್ನ ಜ್ಞಾನವನ್ನು ಸ್ವಲ್ಪವಾದರೂ ಹೆಚ್ಚಿಸಿಕೊಳ್ಳಬಹುದು. ಈಗಿನ ಕಾಲದಲ್ಲಿ ವರ್ತಮಾನ ಪತ್ರಿಕೆಗಳೇ ಜ್ಞಾನ ದೀಪಗಳಾಗಿವೆ. ಹೀಗಿರಲು ಬಿ. ಎ. ಎಂದೋ, ಎಂ. ಎ. ಎಂದೋ 'ಡಿಗ್ರಿ'ಯೊಂದರ ಮೂಲಕವೇ ಜ್ಞಾನಾರ್ಜನೆ ಸಾಧ್ಯವೆಂದು ತಿಳಿದುಕೊಳ್ಳುವುದು ನಮ್ಮ ಅಜ್ಞಾನದ ಕುರುಹು.

ಅಷ್ಟರಲ್ಲಿ ನಮ್ಮ ಬಸ್ ಮಡಿಕೇರಿಯ ಬಸ್ ನಿಲ್ದಾಣದಲ್ಲಿ ನಿಂತಿತು. ಬಸ್ಸಿನಿಂದಿಳಿದು ಪರಸ್ಪರ ಹಸ್ತಲಾಘವಗಳನ್ನು ಮಾಡಿ ಒಂದಾಗಿದ್ದ ಹೃದಯಗಳನ್ನು ಒಡೆದು ಎರಡು ಮಾಡಿಕೊಂಡು, ವಿರಹ ದುಃಖವನ್ನನುಭವಿಸಲಾರದೆ ಮರುಗುತ್ತಿರುವ ಹೃದಯವನ್ನು ಚಿತ್ತವೆಂಬ ಪಾಶದಿಂದ ಬಿಗಿದು ಇಬ್ಬರೂ ಬೇರೆ ಬೇರೆ ದಾರಿ ಹಿಡಿದು ಹೋದೆವು. ಆದರೂ ನಾವು, ಒಬ್ಬರಿಗೊಬ್ಬರು ಮರೆಯಾಗುವವರೆಗೂ ನಮ್ಮ ನೇತ್ರಗಳು ಒಬ್ಬರನ್ನೊಬ್ಬರು ತಿರುತಿರುಗಿ ನೋಡುತ್ತಿದ್ದವು!

ಎಂಪೈರ್ ಆಫ್ ಇಂಡಿಯಾ

ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ.—1897

48ನೇ ವಾರ್ಷಿಕ ವರದಿಯಲ್ಲಿನ ಕೆಲವು ಪ್ರಮುಖ ಸಂಗತಿಗಳು.	ಒಟ್ಟು ಆದಾಯ	... 1,07,09,000	ರೂಪಾಯಿ
	ಚಾಲ್ತಿಯಲ್ಲಿರುವ ವಿಮೆ	 17,74,52,000	,,
	ಆಸ್ತಿ	 6,67,60,000	,,
ಕಂಪೆನಿಯು ಆರಂಭದಿಂದ ಕೊಟ್ಟ ಕ್ಲೈಮುಗಳು		... ?,83,62,000	,,

ಬ್ರಾಂಚ್ ಆಫೀಸು: ವಿಕ್ಟೋರಿಯಾ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು. | ಏಜೆನ್ಸಿ: ಅರ್ಜಿಗಳನ್ನು ಸ್ವಾಗತಿಸಿದೆ | ಪ್ರಧಾನ ಕಛೇರಿ: ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ

ವಿಮೆ ಮಾಡಲು ಇಲ್ಲವೇ ಪ್ರತಿನಿಧಿಸಲು

ಕೋಟ್ಟಕಾರ್ ಬ್ರದರ್ಸ್, ಲಿಮಿಟೆಡ್.

ಇದರ ಸಲಹೆಗಿಂತ ಉತ್ತಮ ಮಾರ್ಗವಿಲ್ಲ

ಕಸ್ಟಮರುಗಳನ್ನೊಳಗೊಂಡ ದಕ್ಷಿಣ ಹಿಂದೂಸ್ಥಾನದ ಮದ್ರಾಸ್ ಪ್ರಾಂತ್ಯದ ಸೆಕ್ರೆಟರಿಗಳು.

ದಿ ಬೋಂಬೆ ಲೈಫ್ ಎಶ್ಯೂರೆನ್ಸ್ ಕಂ. ಲಿಮಿಟೆಡ್.

30 ಮೌಂಟ್ ರೋಡ್, ಪೊ. ಬಾ. ನಂ. 337, ಮದ್ರಾಸು 2.

ಬೊಂಬಾಯಿ ಲೈಫ್ ಬಿಲ್ಡಿಂಗ್, ಪೊ. ಬಾ. ನಂ 1, ಉಡುಪಿ.

(ರಿಜಿಸ್ಟರ್ ನಂ. 1393)

ಇತರ ಆಫೀಸುಗಳು:— ಬೆಂಗಳೂರು, ತಿರುವೇಂದ್ರಂ, ಕಲ್ಲಿಕೋಟೆ, ಮಂಗಳೂರು, ಗುಂಟೂರು, ಮತ್ತು ಬೊಂಬಾಯಿ

ಭಾರತದ ಭಾಗ್ಯ ಭಂಡಾರ

— ಪುರಾಣಗಳು —

ಲೇ:—ಶ್ರೀ ವಿ. ಎಸ್. ರಾಮಕೃಷ್ಣ ಬಿ. ಎಸ್‌ಸಿ (ಆನರ್ಸ್) ಬಿ. ಟಿ.

ಲೇಖನ ೮

ಉಪನಿಷತ್ತುಗಳು ಶಾರೀರಿಕ ಮಾನಸಿಕ ಸಂಯಮನದಿಂದುಂಟಾದ ಚಿತ್ತ ಶುದ್ಧಿಯು ಆತ್ಮವಿಕಸನಕ್ಕೆ ಅತ್ಯಾವಶ್ಯಕವೆಂದು ಸಾರಿ ನುಡಿದವು. ಸಾಧನೆಯೂ ಕಷ್ಟ ಸಹಿಷ್ಣುತೆಯೂ, ತ್ಯಾಗವೂ ಜ್ಞಾನಾರ್ಜನೆಗೆ ಅಗತ್ಯವೆಂದು ವಾದಿಸಿದುವು ಉಪನಿಷತ್ತುಗಳಲ್ಲಿ ಅಡಕವಾಗಿರುವ ಈ ಬ್ರಹ್ಮ ವಿದ್ಯೆಯ ತತ್ವವು ಪ್ರಾಜ್ಞರಾದ ಸನಾತನ ಆರ್ಯರಿಗೆ ಮಾತ್ರ ಅನುಭವಪೂರ್ಣ ಸಿದ್ಧಾಂತವಾಗಿದ್ದಿತು. ಆದರೆ ಸಾಮಾನ್ಯ ಜನರಿಗೆ ಈ ನಿಗೂಢ ತತ್ವದ ಅರ್ಥವನ್ನು ತಿಳಿದುಕೊಳ್ಳುವ ಶಕ್ತಿ ಕೇವಲ ಅಲ್ಪವಾಗಿದ್ದಿತು. ತೀವ್ರ ಯೋಚನಾ ಸಾಮರ್ಥ್ಯವಿಲ್ಲದ ಜನಸಾಮಾನ್ಯರಿಗೆ ಉಪನಿಷತ್ತುಗಳ ಜ್ಞಾನವು ಉಪಯೋಗಕರವಲ್ಲದ್ದರಿಂದ ಪಂಡಿತ ಪಾಮರರಲ್ಲಿ ಸಾಮರಸ್ಯ ಉಂಟಾಗಲು ಕಷ್ಟಸಾಧ್ಯವಾಗಿದ್ದಿತು. ಅನೇಕ ವೇಳೆ ಉಪನಿಷತ್ತುಗಳ ಮಹಾ ತತ್ವಗಳನ್ನು ಸುಲಭರೀತಿಯಲ್ಲಿ ಆಬಾಲ ಗೋಪಾಲರಿಗೆ ಅರ್ಥವಾಗುವಂತೆ ಹೇಳುವ ಪ್ರಯತ್ನವೂ ನಡೆಯಿತು. ಈ ಪ್ರಯತ್ನಗಳು ಅಷ್ಟೇನೂ ಪರಿಣಾಮಕಾರಿಗಳಾಗಲಿಲ್ಲ.

ಉಪನಿಷತ್ತುಗಳು ಕೇವಲ ಪಂಡಿತ ರಂಜಕವಾದುದರಿಂದ ಹೊಸ ಆಂದೋಲನಗಳು ಆರಂಭಿಸಿದುವು. ಅನೇಕ ವೇಳೆ ಈ ನೂತನ ಕ್ರಾಂತಿಮಯ ಯೋಚನಾ ಪ್ರವಾಹವು ಜಡವಾದ, ಅರ್ಥ ಸಂದೇಹವಾದ, ನಿರೀಶ್ವರವಾದ ಮೊದಲಾದುವುಗಳಿಗೂ ಎಡೆ ಕೊಟ್ಟು ನಾಸ್ತಿಕ ವಾದದ ಬೆಳವಣಿಗೆಗೆ ಅವಕಾಶ ಕಲ್ಪಿಸಿದುವು. ಈ ಹೊಸ ಬೆಳವಣಿಗೆಯ ಕಾಲದಲ್ಲೇ ಬೌದ್ಧ ಜೈನ ಧರ್ಮಗಳು ಉಗಯವಾದವು. ಹಿಂದೂ ಧರ್ಮದಲ್ಲಿ ನವ ಚೈತನ್ಯವನ್ನು ಉಂಟುಮಾಡಿ ಪಂಡಿತ–ಪಾಮರರಲ್ಲಿದ್ದ ದೊಡ್ಡ ವ್ಯತ್ಯಾಸಗಳನ್ನು ಒಗ್ಗೂಡಿಸಿ ತಜ್ಞ ಅಜ್ಞರಿಗೆ ವಿಷಯಗಳು ಸುಲಭವಾಗಿ ತಿಳಿಯುವಂತೆಸುವ ಪ್ರಯತ್ನದ ಫಲವಾಗಿ ಪುರಾಣಗಳು ಉತ್ಪನ್ನವಾದವು. ಸಂಸ್ಕೃತ ಪುರಾಣಗಳಾದ ರಾಮಾಯಣ ಮಹಾಭಾರತಗಳು ಬರೆಯಲ್ಪಟ್ಟು ಉಪನಿಷತ್ ಜನಕರಾದ ಆರ್ಯರ ತತ್ವವೇತ್ತರಿಗೂ ಬಹು ಸಂಖ್ಯಾಕರಾದ ಜನ ಸಮುದಾಯಕ್ಕೂ ನಿಕಟ ಸಂಬಂಧವನ್ನು ಕಲ್ಪಿಸಿ ಭಾರತೀಯನ ನೋಟದಲ್ಲಿ ನವ ಸುಧಾರಣೆಯನ್ನು ತಂದವು.

ರಾಮಾಯಣ ಮಹಾಭಾರತಗಳು ಬಹುಕಾಲದ ಸತತ ಪ್ರಯತ್ನದ ಫಲಿತಾಂಶಗಳಾಗಿ ಜನ್ಮ ತಾಳಿವು. ಇವುಗಳ ನಿರ್ದಿಷ್ಟ ಕಾಲವನ್ನು ಉಲ್ಲೇಖಿಸುವುದು ಕಷ್ಟಸಾಧ್ಯ. ಕಾಲಾನಂತರವೂ ಇವುಗಳಿಗೆ ಅನೇಕ ವಿಷಯಗಳು ಪೋಣಿಸಲ್ಪಟ್ಟುವು. ಅವುಗಳಲ್ಲಿ ಪ್ರಾಚೀನ ಆರ್ಯರ ಐಸಿರಿಪೂರ್ಣ ಜೀವನ ವಿಧಾನವೂ ಅವರ ದಿಗ್ವಿಜಯ ದಂಡ ಯಾತ್ರೆಗಳು, ಯಾದವೀಕಲಹಗಳ ರೋಮಾಂಚಕ ವೃತ್ತಾಂತವೂ ಅಡಕವಾಗಿದು ಜನಜೀವನದ ಮೇಲೆ ಪ್ರಪಂಚದ ಇನ್ನಾವ ಗ್ರಂಥವೂ ಮಾಡಲಶಕ್ಯವಾದ ಅಮಿತ ಪ್ರಭಾವವನ್ನು ಬೀರಿ ಜನತೆಯ ನಡೆ ನುಡಿ, ಆಚಾರ ವ್ಯವಹಾರಗಳ ಮೇಲೂ ತೀವ್ರ ಪರಿಣಾಮವನ್ನುಂಟುಮಾಡಿವೆ. ಬಹು ಪುರಾತನವಾಗಿದ್ದರೂ ಇಂದುಕೂಡಾ ಭಾರತೀಯನ ನಿತ್ಯ ಜೀವನದಲ್ಲಿ ಹಾಸು ಹೊಕ್ಕು ಅಳಿಯದ ಅಮರ ಸಂದೇಶವನ್ನು ಸಾರುತ್ತಾ ವ್ಯಕ್ತಿ ಜೀವನದ ಪಥವನ್ನು ಭವ್ಯ ಮಾರ್ಗದಲ್ಲಿ ಕರೆದೊಯ್ದಿವೆ.

ಪುರಾಣಗಳು ಸರ್ವ ಜನಮೆಚ್ಚುಗೆಯನ್ನು ಪಡೆಯುವಂತೆ, ಸರ್ವಗ್ರಾಹ್ಯವಾಗುವಂತೆ, ವಿವಿಧ ಸಾಂಸ್ಕೃತಿಕ ಮಟ್ಟದ ಜನರಿಗೆ ಅರಿಯುವಂತೆ ಮನೋರಂಜಕವಾಗಿ ತೀವ್ರ ಮೇಧಾಶಕ್ತಿಯ ಪ್ರಾಜ್ಞನಿಂದ ಹಿಡಿದು ಹಳ್ಳಿಯ ಬಡರೈತನಿಗೂ ಚಿತ್ತಾಕರ್ಷಣೆಯನ್ನುಂಟುಮಾಡುತ್ತವೆ. ನೈತಿಕ ಜೀವನದ ಮೂಲ ಸಾರವನ್ನು ನಿಖಿಲ ಸಮುದಾಯಕ್ಕೆ ಉಣಿಸಿ ನಾನಾ ಜಾತಿ ಪಂಗಡಗಳಿಂದ ಛಿಪ್ರ ವಿಛಿದ್ರವಾದ ಹಿಂದೂ ಮತದಲ್ಲಿ ಐಕ್ಯತೆಯನ್ನೂ ಉಂಟುಮಾಡಿ ಭಾರತೀಯನಿಗೆ ಸುಧಾಪಾನದ ನಿತ್ಯ ಸವಿಯನ್ನು ಒದಗಿಸುತ್ತವೆ.

ಮಹಾ ಸಾಗರದಷ್ಟು ವಿಸ್ತಾರವಾಗಿ ಅನರ್ಘ್ಯ ರತ್ನಗಳಿಂದೊಡಗೂಡಿ ಭವ್ಯವೂ ತೇಜೋಮಯವೂ ಆದ ರಾಮಾಯಣ ಮಹಾಭಾರತಗಳು ನಮ್ಮ ದೇಶದಲ್ಲಿ ಮಾತ್ರವಲ್ಲದೆ ನಿಖಿಲ ಪ್ರಪಂಚದ ಮನ್ನಣೆಗೆ ಪಾತ್ರವಾಗಿವೆ. ಮಹಾಭಾರತವು ಜಗದ್ವಿಖ್ಯಾತ ಗ್ರಂಥಗಳಲ್ಲೊಂದಾಗಿದ್ದು ಪ್ರಾಚೀನ ಭಾರತದ ಸಾಮಾಜಿಕ, ರಾಜಕೀಯ, ಆರ್ಥಿಕ ಸಮಸ್ಯೆಗಳನ್ನೊಳಗೊಂಡ ಬ್ರಹ್ಮಾಂಡ ಸಮಾಜ ವಿಜ್ಞಾನವಾಗಿದೆ. ಮಹಾಭಾರತವು ರಸ್ಯ ಮಂತ್ರವಾದ ಅನೇಕ ಪಂಭಾಷೆಗಳಲ್ಲೂ ರೂಪಾಂತರ ಹೊಂದಿ ಪ್ರಾಚ್ಯ–ಪಾಶ್ಚಾತ್ಯ ದೇಶಗಳಲ್ಲಿ ವ್ಯಾಪಿಸಿದೆ.

ಮಹಾಭಾರತದ ಕಾಲವು ಭಾರತ ಸಂಸ್ಕೃತಿಯಲ್ಲಿ ಅನ್ಯ ದೇಶೀಯ ಸಂಸ್ಕೃತಿಗಳು ವಿಲಸಗೊಂಡ ಕಾಲವಿದ್ದಿರಬೇಕು. ಏಕೆಂದರೆ ಆರ್ಯರಲ್ಲಿ ಒಬ್ಬ ನಾರಿಗೆ ಬಹು ಪತಿಗಳಾಗುವ ಪದ್ಧತಿಯು ಇದ್ದಿರಲಿಲ್ಲ. ಮಹಾಭಾರತದ ಶಕ್ತಿ ಸ್ವರೂಪಿಣಿ ದ್ರೌಪದಿಯು ಐದು ಜನ ಸಹೋದರರ ಸಾಮಾನ್ಯ ಕಾಂತೆಯಾಗಿದ್ದುದು ಅನ್ಯ ಸಂಸ್ಕೃತಿಯ ಪ್ರಭಾವವೆಂದೇ ಹೇಳಬೇಕು. ವೈದಿಕ ಧರ್ಮವು ಹೊಸ ನೋಟಕ್ಕೆ ಅನ್ವಯಿಸುವಂತೆ ಬದಲಾವಣೆ ಹೊಂದಿ ಸತ್ಯಾನ್ವೇಷಣೆಗೆ ಅನೇಕ ಮಾರ್ಗಗಳೋ ಎಂಬ ವಿಶಾಲ ದೃಷ್ಟಿ ಉದಯವಾದುದರಿಂದ ಪರಸ್ಪರ ವಿರುದ್ಧಗಳಾದ ನಂಬಿಕೆಗಳೂ ಸಹಿಸಲ್ಪಟ್ಟು ಸಮತೋಲದಿಂದ ಹಿಂದೂ ಧರ್ಮವು ಬೆಳೆಯಲನುವಾಯಿತು.

ಮಹಾಭಾರತದಲ್ಲಿ ಸಮಗ್ರ ಭಾರತ ವರ್ಷದ ಮೂಲ ಅಖಂಡತೆಯ ನೋಟವು ಪ್ರದೀಪ್ತವಾಯಿತು. 'ಭಾರತ ವರ್ಷ' ಎಂಬ ನಾಮಾಂಕಿತವು 'ಭರತ' ಎಂಬ ಪೌರಾಣಿಕ ನರಾಧಿಪನ ಹೆಸರಿನಿಂದ ಉತ್ಪನ್ನವಾಗಿ ಅಖಂಡ ಭರತ ಖಂಡಕ್ಕೆ ಅನ್ವಯಿಸುತಿತ್ತು. 'ಆರ್ಯಾವರ್ತ' ಎಂಬ ಹಳೆ ಹೆಸರು ವಿಂಧ್ಯ ಹಿಮಾಲಯ ಪರ್ವತಗಳ ಮಧ್ಯದ ಪುಣ್ಯ ಭೂಮಿಗೆ ಮಾತ್ರ ಸಂಬೋಧಿಸಲ್ಪಡುತ್ತಿತ್ತು. ರಾಮಾಯಣ ಕಾಲದಿಂದ ವಿಂಧ್ಯೆಯು ದಕ್ಷಿಣ ಸೀಮೆಗೆ ಆರ್ಯರ ಸಮಾವೇಶವಾಯಿತು. ಮಹಾಭಾರತದಲ್ಲಿ ವರ್ಣಿತವಾದ ಅದ್ಭುತ ರಮ್ಯ ಕಥೆಗಳು ಅಖಿಲ ಭರತ ಖಂಡದ ಒಡೆತನದ ಮಹದಾಶೆಯಿಂದಲೇ ಉಂಟಾಗಿ ಅವಿಭಾಜ್ಯ ಭಾರತದ ದೃಷ್ಟಿಯನ್ನು ಮೂಡಿಸಿ ದೆಹಲಿಯ ಸಮೀಪದ ಇಂದ್ರಪ್ರಸ್ಥ ಹಸ್ತಿನ ನಗರಗಳು ಸಮಗ್ರ ಭರತ ವರ್ಷದ ರಾಜಕೀಯ ಕೇಂದ್ರವಾಗಿ ಏರ್ಪಟ್ಟಿತು.

ಭಗವಂತನಾದ ಶ್ರೀಕೃಷ್ಣನ ಕಪಟ ನಾಟಕವು ಮಹಾಭಾರತದ ಹೃದಯಾಂಗವಾಗಿ ವರ್ಣಿತವಾಗಿದೆ. ಭಗವದ್ಗೀತೆ ಎಂಬ ತತ್ವವು ಮಹಾಭಾರತ ಸಾಗರದ ಕಾಂತಿಯ ಜ್ಯೋತಿಯಾಗಿದೆ. ರಾಜನೀತಿಯಲ್ಲೂ, ಜನಜೀವನದಲ್ಲೂ ನೀತಿಯೇ ಪ್ರಧಾನವಾಗಿರಬೇಕೆಂದು ಮಹಾಭಾರತವೂ ಭಗವದ್ಗೀತೆಯೂ ಒತ್ತಿ ಹೇಳುತ್ತವೆ. ಧರ್ಮವೇ ಸಮಾಜದ ಜೀವಾಳ. ಸಾರ್ವಜನಿಕ ಶ್ರೇಯಸ್ಸೇ ರಾಷ್ಟ್ರದ ಸಂಪತ್ತು. ಮಹಾಭಾರತವು ಯುದ್ಧ ಪ್ರಧಾನವಾಗಿದ್ದರೂ ಅದರ ವೀರಾಗ್ರಣಿಗಳಾದ ಪುರುಷಸಿಂಹರುಗಳಲ್ಲಿ ಆತ್ಮ ಶಾಂತಿಯೂ, ಕ್ರೋಧ ನಿಗ್ರಹವೂ, ಆತ್ಮ ಸಂಯಮನವೂ, ದ್ವೇಷಾಸೂಯೆಗಳ ನಿರ್ಮೂಲೋತ್ಪಾಟನಾ ಪ್ರಾರ್ಥನೆಯ ಶಕ್ತಿಯೂ ಒಡಮೂಡಿರುವುದರಿಂದ ಧರ್ಮ ಪಾಲನೆಗಾಗಿ ಯುದ್ಧ ಪ್ರವೃತ್ತರಾದರೂ ಸತ್ಯ, ಅಹಿಂಸೆ, ಶಾಂತಿಗಳ ಮೂಲ ಮಂತ್ರವು ಪ್ರಸ್ಫುಟಿಸುತ್ತದೆ.

ಮಹಾಭಾರತವು ಸೀಮಾತೀತವಾದ ಅನುಭವ ಪರಂಪರೆಗಳ ಮಹಾರ್ಣವ. ಹುಡುಕಿದಷ್ಟು ರತ್ನಗಳು ಅದರಲ್ಲಿ ಸಿಗುವವು. ನೈತಿಕ ಧಾರ್ಮಿಕ ವಿಷಯಗಳಲ್ಲದೆ ಮಾತ್ರವಲ್ಲದೆ ರಾಜಕೀಯ, ಆರ್ಥಿಕ, ಸಾಮಾಜಿಕ ವಿಷಯಗಳು ಮಹಾಭಾರತದಲ್ಲಿ ಅಡಕವಾಗಿವೆ. ಉಪನಿಷತ್ತುಗಳು ವ್ಯಕ್ತಿ ವಿಕಸನ ಕಡೆ ದೃಷ್ಟಿಸಿದರೆ ಮಹಾಭಾರತವು ಸಾಮಾಜಿಕ ಅಭ್ಯುದಯವನ್ನು ಸಾಧಿಸಿತು. "ಸಮಾಜಕ್ಕೆ ಅಹಿತವನ್ನುಂಟುಮಾಡಬೇಡ; ತನ್ನಂತೆಯೇ ಅನ್ಯರೆಂದು ಭಾವಿಸು. ಅನ್ಯರ ಹಿತವನ್ನು ಕೋರು" ಎಂಬ ಸಾಮಾಜಿಕ ದೃಷ್ಟಿ ಮಹಾಭಾರತದಲ್ಲಿ ಪ್ರಕಾಶಿಸುತ್ತದೆ. ಸತ್ಯ, ಸಂಯಮನ, ಶೌಚ, ಔದಾರ್ಯ, ಅಹಿಂಸೆ, ಸ್ಥೈರ್ಯ ಇವುಗಳು ಶ್ರೇಯಸ್ಸಿನ ಮಾರ್ಗಗಳಲ್ಲದೆ ವರ್ಣ ವೈರಗಳಲ್ಲ. ಶುದ್ಧ ಜೀವನವು ಲೇಸು; ನಿಜವಾದ ಆನಂದವು ಶ್ರಮದಿಂದ ದೊರಕುವದು" ಎಂಬಿತ್ಯಾದಿ ಪಾವನತಮ ಜೀವನ ತತ್ವಗಳನ್ನು ಮಹಾಭಾರತವು ಬೋಧಿಸುತ್ತದೆ. ಮಾತ್ರವಲ್ಲದೆ ವೇದಗಳ ಬಹು ಈಶ್ವರವಾದ, ಉಪನಿಷತ್ತುಗಳ ಅದ್ವೈತವಾದ, ಏಕೇಶ್ವರವಾದ ಮೊದಲಾದ ವಿವಿಧ ತತ್ವಗಳನ್ನು ಅಳವಡಿಸಿಕೊಂಡು ವಿಶ್ವ ದೃಷ್ಟಿಯನ್ನು ಮೂಡಿಸಿ ವ್ಯಕ್ತಿ, ಸಮಾಜ, ರಾಷ್ಟ್ರಗಳಿಗೆ ಆಚರಣಾರ್ಹವಾಗಿದೆ.

—

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್,

ಲಿಮಿಟೆಡ್, ಮಡಿಕೇರಿ.

ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ (1921ರಲ್ಲಿ ಸ್ಥಾಪನವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1 65,000.
ಕ್ಷೇಮನಿಧಿ	ರೂ.	50,000.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ, ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯೂ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು ಟ್ರೆಸಿಟಿ ಮತ್ತು ವಾರ್ಡನ್ ಇನ್ಶ್ಯೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M L C. ಪ್ರೆಸಿಡೆಂಟ್ ಮತ್ತು ಛೇರ್ಮನ್.

CRESCENT

FOR PROTECTION AND SERVICE.

It is best to represent and insure with

The CRESCENT Insurance Co., Ltd.

H: O: BOMBAY.] [Established 1919.

BRANCHES ALL OVER INDIA.

For particulars write to: THE BRANCH MANAGER. 22—B. MAHATHMA GANDHI ROAD. BANGALORE CANT.

ಸುರಕ್ಷಿತವಾದ ಜೀವವಿಮೆ ಪಡೆಯಲು

ಕ್ರೆಸೆಂಟ್

ಇನ್ಶ್ಯೂರೆನ್ಸ್ ಕಂಪೆನಿಗೆ ಬರೆಯಿರಿ.

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 4—8—0.

ಸಂಪುಟ ೨೭. | ತಾರೀಕು ೧೫—೪—೧೯೪೯ನೇ ಶುಕ್ರವಾರ | ಸಂಚಿಕೆ ೩೫

ಹೊಸ ಪ್ರಾಂತರಚನೆ ಸದ್ಯಕ್ಕೆ ಸಾಧ್ಯವಿಲ್ಲ.

ತ್ರಿಮೂರ್ತಿಗಳ ವರದಿಯ ವಿವರಗಳು.

ಭಾಷಾವಾರು ಪ್ರಾಂತ ರಚನೆಯ ಪ್ರಶ್ನೆಯನ್ನು ಕೆಲವು ವರ್ಷ ಮುಂದೂಡಬೇಕೆಂದು ಪಂಡಿತ ಜವಾಹರಲಾಲ್ ನೆಹರೂ, ಸರದಾರ ವಲ್ಲಭಭಾಯಿ ಪಟೇಲ್, ಡಾ. ಪಟ್ಟಾಭಿ ಸೀತಾರಾಮಯ್ಯ ಈ ತ್ರಿಮೂರ್ತಿಗಳ ಸಮಿತಿಯು ಒಪ್ಪಿಸಿದ ವರದಿಯನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಶನಿವಾರ ಅಂಗೀಕರಿಸಿತು.

ವಾರ್ಕಿಂಗ್ ಕಮಿಟಿಯು ವರದಿಯು ಪ್ರಸಿದ್ಧವಾದ ನಂತರ ಜಯಪುರ ಕಾಂಗ್ರೆಸ್ ಅಧಿವೇಶನದಲ್ಲಿ ತ್ರಿಮೂರ್ತಿಗಳ ಸಮಿತಿಯನ್ನು ಭಾಷಾವಾರು ಪ್ರಾಂತರಚನೆಯ ಪ್ರಶ್ನೆಯನ್ನು ಕುರಿತು ಪುನರ್ವಿಚಾರಿಸಿ ವರದಿ ಮಾಡಲು ನೇಮಿಸಲಾಗಿತ್ತು. ಸದ್ಯದ ಪರಿಸ್ಥಿತಿಯಲ್ಲಿ ಅತಿ ಮಹತ್ವದ ಇತರ ವಿಷಯಗಳತ್ತ ಸಂಪೂರ್ಣ ಲಕ್ಷ್ಯ ಹಾಕುವ ಅವಶ್ಯವಿರುವದರಿಂದ ಸದ್ಯಕ್ಕೆ ಕೆಲವೊಂದು ವರ್ಷ ಭಾಷಾವಾರು ಪ್ರಾಂತರಚನೆಯನ್ನು ಮುಂದೂಡಬೇಕೆಂದು ತ್ರಿಮೂರ್ತಿ ಸಮಿತಿಯು ತಮ್ಮ ವರದಿಯಲ್ಲಿ ಸೂಚಿಸಿದೆ.

ಆಂಧ್ರ ಪ್ರಾಂತ ರಚನೆಯನ್ನು ಮೊದಲು ವಿಚಾರ ಮಾಡಬೇಕು. ಉಳಿದ ಯಾವದೇ ಭಾಷಾನ್ವಯ ಪ್ರಾಂತರಚನೆಯ ಮುನ್ನ ಆಂಧ್ರ ಪ್ರಾಂತರಚನೆಯ ಪ್ರಶ್ನೆಯನ್ನು ಪರಿಶೀಲಿಸಬೇಕು. ಎಂದೂ ತ್ರಿಮೂರ್ತಿ ಸಮಿತಿಯವರು ಸೂಚಿಸಿದ್ದಾರೆ.

ಮುಂಬಯಿ ಪ್ರಾಂತವು ವಿಭಜಿಸಲ್ಪಟ್ಟು ಪ್ರತ್ಯೇಕ ಮಹಾರಾಷ್ಟ್ರ ಪ್ರಾಂತ ರಚನೆಮಾಡುವದಾದಲ್ಲಿ ಮುಂಬಯಿ ನಗರವನ್ನು ಪ್ರತ್ಯೇಕ ರಾಜಕೀಯ ಘಟಕವನ್ನಾಗಿ ಮಾಡತಕ್ಕದ್ದು. ಮುಂಬಯಿ ನಗರವು ಯಾವದೇ ಭಾಷಾನ್ವಯ ಪ್ರಾಂತದಲ್ಲಿ ಮುಂಬಯಿ ನಗರವನ್ನು ಸೇರಿಸುವದರಿಂದ ಅದಕ್ಕಿರುವ ಈಗಿನ ಮಹತ್ವದ ಸ್ಥಾನಮಾನವನ್ನು ಕಸಿದುಕೊಂಡಂತಾಗುವದು ಎಂದೂ ಸಮಿತಿಯವರು ತಮ್ಮ ವರದಿಯಲ್ಲಿ ಹೇಳಿದ್ದಾರೆ. ಮುಂಬಯಿ ನಗರಕ್ಕೆ ಅನ್ವಯಿಸುವ ನೂತನಗಳೇ ಹೆಚ್ಚಾಗಿ ಮದ್ರಾಸು ನಗರಕ್ಕೂ ಅನ್ವಯಿಸುವವೆಂದೂ ಆಂಧ್ರ ಪ್ರಾಂತ ಪುರಸ್ಕರ್ತರು ಆಂಧ್ರ ಪ್ರಾಂತರಚನೆಯಾಗಬೇಕಿದ್ದರೆ ಮದ್ರಾಸ ನಗರದ ಬಗ್ಗೆ ಇರುವ ಆಂಧ್ರರ ಹಕ್ಕನ್ನು ಬಿಟ್ಟುಕೊಡಲು ಸಿದ್ಧರಾಗತಕ್ಕದ್ದೆಂದೂ ವರದಿಯಲ್ಲಿ ಸಾರಿದ್ದಾರೆ.

ಸಮಿತಿಯ ವರದಿಯ ಸೂಚನೆಗಳಲ್ಲಿರುವ ಇತರ ಮುಖ್ಯಾಂಶಗಳು ಇಂತಿವೆ

ಉತ್ತರ ಹಿಂದುಸ್ತಾನದ ಪ್ರಾಂತಗಡಿಗಳ ಪುನರ್ವಿಚಾರಣೆಯನ್ನು ಸದ್ಯಕ್ಕೆ ಮಾಡಲಾಗದು. ಪ್ರತಿಭಾಸಂಪನ್ನ ಅಧಿಕಾರಿಗಳ ಕೊರತೆ, ಕಡಿಮೆಯಾದ ಕಾರಣದಿಂದ ದಂಗೆ ಆಡಳಿತ ವ್ಯವಸ್ಥೆ [illegible] ಸಾಗದಂತಾಗಿರುವಾಗ ಹೊಸ ಪ್ರಾಂತರಚನೆ ಮಾಡಿ ಆಡಳಿತ ಯಂತ್ರದ ಮೇಲೆ ಹೆಚ್ಚಿನ ಭಾರ ಹಾಕುವದು ಸಮಂಜಸವಾಗಿರದಿಲ್ಲ.

ರಚನೆ ಮಾಡಬೇಕಾಗಿರುವ ಗಡಿಗಳ ದೇಶದಲ್ಲಿರುವ ದ್ವಿಭಾಷಾ ಪ್ರದೇಶದ ಬಗ್ಗೆ [illegible] ವಾದವಿವಾದ ಹೆಚ್ಚು ಮನಸ್ತಾಪಕ್ಕೆ ಕಾರಣವಾಗದಿರದು.

ದೇಶದ ಆರ್ಥಿಕ ಪರಿಸ್ಥಿತಿಯು ಈಗಾಗಲೇ ಸಮಸ್ಯಾತ್ಮಕವಾಗಿರುವಾಗ ಹೊಸ ಪ್ರಾಂತರಚನೆ ಮಾಡುವದರಿಂದ ಆ ಹೊಸ ಪ್ರಾಂತಗಳ ಕೊರತೆ ಪ್ರಾಂತಗಳಾಗಿ ಮೊದಲೇ ಸೂಕ್ಷ್ಮವಾಗಿರುವ ಆರ್ಥಿಕ ಪರಿಸ್ಥಿತಿ ತೀರ ಹದಗೆಡುವ ಸಂಭವವಿದೆ.

ಭಾಷಾವಾರು ಪ್ರಾಂತರಚನೆಗೆ ಈ ರೀತಿ ಪ್ರತಿಕೂಲ ಪರಿಸ್ಥಿತಿ ಇರುವದರಿಂದ ಸದ್ಯಕ್ಕೆ ಈ ಪ್ರಶ್ನೆ ಮುಂದೂಡಬೇಕು. ಒಂದು ವೇಳೆ ಭಾಷಾವಾರು ಪ್ರಾಂತರಚನೆಯ ಬಗ್ಗೆ ಜನಾಭಿಪ್ರಾಯವು ತೀರ ದೊಡ್ಡ ಪ್ರಮಾಣದಲ್ಲಿ ಸಂಘಟಿತವಾಗಿ ಅಗ್ರಹಪಡಿಸುವದಾದರೆ ಇಂದ ಬೇಡಿಕೆಯನ್ನು ಮನ್ನಿಸಿ ಅದನ್ನು ಕಾರ್ಯರೂಪಕ್ಕಿಳಿಸುವದರಿಂದ ಆಗುವ ಪರಿಣಾಮಗಳನ್ನು ಕೂಲಂಕಷವಾಗಿ ವಿಚಾರಿಸಿ ಮನ್ನಿಸಬೇಕಾಗುವದು.

ವರದಿಯಲ್ಲಿಯ ವಿವರಗಳು

ಭಾಷಾವಾರು ಪ್ರಾಂತರಚನೆಯ ಪ್ರಶ್ನೆಯನ್ನು ಪರಿಶೀಲಿಸಿ ಸಮಿತಿಯವರು ತಮ್ಮ ವರದಿಯಲ್ಲಿ ಕೆಳಗಿನಂತೆ ಅಭಿಪ್ರಾಯ ವ್ಯಕ್ತ ಮಾಡಿದ್ದಾರೆ.

ಈಗ ದೊರಕಿಸಿದ ರಾಜಕೀಯ ಮತ್ತು ಇತರ ಲಾಭಗಳನ್ನು ದೃಢೀಕರಿಸಿಕೊಳ್ಳುವತ್ತ ಲಕ್ಷ್ಯವನ್ನೀಯುವದೇ ಈಗಿನ ಪರಿಸ್ಥಿತಿಯಲ್ಲಿ ಮಹತ್ವದ್ದು. ನಾವು ಇದನ್ನು ಬಿಟ್ಟು ನಮ್ಮ ಮನಸ್ಸನ್ನು ಬೇರೆ ವಿಷಯಗಳತ್ತ ಹರಿಸಿಬಿಟ್ಟರೆ ನಾವು ಹಿಂದೂಸ್ಥಾನದ ದ್ರೋಹ ಬಗೆದಂತಾಗುವದಲ್ಲದೆ ಹಿಂದಿನ ತಲೆಮಾರಿನ ಮತ್ತು ಇಂದಿನ ಜನತೆಯ ಅನಂತ ಸ್ವಾರ್ಥ ತ್ಯಾಗದಿಂದ ಗಳಿಸಿದ ಸ್ವಾತಂತ್ರ್ಯವನ್ನು ಗಂಡಾಂತರಕ್ಕೀಡು ಮಾಡಿದಂತಾಗದಿರದು. ಆದುದರಿಂದ ಉಳಿದ ವಿಷಯಗಳು ಎಷ್ಟೇ ಮಹತ್ವದವೂ ಹಾಗೂ ಅವಶ್ಯವೂ ಆಗಿದ್ದರೂ ಅವುಗಳಿಗೆ ಅಗ್ರಸ್ಥಾನ ಕೊಡಲು ಬರಲಾರದು.

ಇಂದು ನಮ್ಮ ದೇಶದ ಆಡಳಿತದ ಯಂತ್ರದ ಮೇಲೆ ಬಹಳ ಭಾರ ಬಿದ್ದಿದೆ. ಮುಂಬಯಿ ಮಧ್ಯಪ್ರಾಂತ, ಓರಿಸಾ ಮೊದಲಾದ ಪ್ರಾಂತಗಳಲ್ಲಿ ಸಂಸ್ಥಾನಗಳು ವಿಲೀನ ಹೊಂದಿ ಆ ಪ್ರಾಂತಗಳ ಆಡಳಿತ ಯಂತ್ರದ ಮೇಲೆ ಇದೀಗ ಹೆಚ್ಚಿನ ಭಾರವೂ ಬಿದ್ದಿದೆ. ಸಾಮಾನ್ಯ ಕಾಲದಲ್ಲಿ ಕೂಡ ಒಂದು ಪ್ರಾಂತವನ್ನು ವಿಭಜಿಸಿ ಬೇರೆ ಬೇರೆ ಹೊಸ ಪ್ರಾಂತಗಳನ್ನು ರಚಿಸುವದೂ ಅವುಗಳ ಆಡಳಿತ ವ್ಯವಸ್ಥಿತವಾಗಿ ಸಾಗಿಸುವಂತೆ ಅಗತ್ಯವಿದ್ದ ಅಧಿಕಾರಿಗಳನ್ನು ಒದಗಿಸುವದು ತೊಡಕಿನ ಮತ್ತು ಕಠಿಣವಾದ ಕಾರ್ಯ. ಹೀಗಿರುವಾಗ ಇದ್ದ ಪ್ರಾಂತಗಳ ಆಡಳಿತ ಸಾಗಿಸಲು ಸಮರ್ಥ ಅಧಿಕಾರಿಗಳ ಕೊರತೆ ಇರುವಾಗ ಈ ವಿಷಯ ಇನ್ನೂ ಹೆಚ್ಚು ತೊಡಕಿನದಾಗುವದರಲ್ಲಿ ಸಂದೇಹವಿಲ್ಲ.

ಭಾಷಾವಾರು ಪ್ರದೇಶಗಳ ಗಡಿಗಳು ಇಂಥಲ್ಲಿಯೇ ಎಂದು ನಿರ್ಧರಿಸುವದು ಕಠಿಣ. ಒಂದು ಭಾಷೆಯ ಪ್ರದೇಶ ಇಂತಿಷ್ಟು ಇದೆ ಎಂದು ಸ್ಥೂಲವಾಗಿ ಹೇಳಬಹುದಾದರೂ ಬೇರೆ ಭಾಷಾ ಪ್ರದೇಶದ ಗಡಿಯ ಭಾಗವೂ ಅದರ ಪ್ರದೇಶವು ಸೇರಿಕೊಂಡು ದ್ವಿಭಾಷಾ ಪ್ರದೇಶವಾಗುವದುಂಟು. ಭಾಷಾವಾರು ಪ್ರಾಂತರಚನೆಯ ಗಡಿ ನಿರ್ಣಯ ಮಾಡುವಾಗ ಈ ದ್ವಿಭಾಷಾ ಪ್ರದೇಶಗಳ ಯಾವ ಭಾಷಾ ಪ್ರಾಂತದಲ್ಲಿ ಸೇರಬೇಕೆಂಬ ಬಗ್ಗೆ ವಾದವಿವಾದವೆದ್ದು ಕಲಹ ಪ್ರಾರಂಭವಾಗುವದು. ಹೀಗಾಗಿ ಜನರ ಲಕ್ಷ್ಯವು ಈಗ ಅತಿ ಮಹತ್ವದ ಆರ್ಥಿಕ ಸಮಸ್ಯೆಗಳಿಂದ ಪರಾವೃತ್ತ ಹೊಂದಿ ಈ ದ್ವಿಭಾಷಾ ಪ್ರದೇಶದ ಅನವಶ್ಯಕವಾದ ತಂಟೆಯಲ್ಲಿ ತೊಡಗುವದು. ಆದುದರಿಂದ ಪರಿಸ್ಥಿತಿ ಹೆಚ್ಚು ಶಾಂತವಿದ್ದಾಗ ಹೊಸ ಪ್ರಾಂತ ರಚನೆಯ ಕಾರ್ಯ ಕೈಕೊಂಡರೆ ಆಗ ಹೆಚ್ಚು ಮನಸ್ತಾಪಕ್ಕೆ ಆಸ್ಪದವಿಲ್ಲದೆ ಈ ಪ್ರಶ್ನೆ ಬಿಡಿಸಲು ಸಾಧ್ಯವಾಗಬಹುದು

ಕೇರಳ, ಕರ್ನಾಟಕ ಪ್ರಾಂತ ರಚನೆ.

ಕೇರಳ, ಕರ್ನಾಟಕ ಈ ಪ್ರಾಂತಗಳನ್ನು ರಚಿಸಬೇಕಾದರೆ ಕೆಲವೊಂದು ಸಂಸ್ಥಾನಗಳು ವಿಲೀನ ಹೊಂದುವದು ಅಗತ್ಯವಿದೆ. ವಿಲೀನ ಹೊಂದುವ ಸಂಸ್ಥಾನಗಳು ಈ ಪ್ರಾಂತಗಳ ಮುಖ್ಯ ಭಾಗಗಳಾಗುವವು. ಈ ಪ್ರಾಂತಗಳ ರಚನೆಯಾಗಲು ಸದ್ಯದ ಪ್ರಾಂತಗಳಲ್ಲಿದ ಮಲೆಯಾಳ ಮತ್ತು ಕನ್ನಡ ಪ್ರದೇಶಗಳನ್ನು ನೆರೆಯ ಸಂಸ್ಥಾನಗಳಲ್ಲಿ ವಿಲೀನಗೊಳಿಸುವದು ಶಕ್ಯವಿಲ್ಲ. ಸಂಸ್ಥಾನಗಳೇ ಈ ಪ್ರದೇಶಗಳಲ್ಲಿ ಲೀನಹೊಂದಿದಾಗ ಮಾತ್ರ ಈ ಪ್ರಾಂತಗಳ ರಚನೆ ಮಾಡಲು ಶಕ್ಯವಾಗುವದು. ಆದುದರಿಂದ ಸಂಸ್ಥಾನಗಳ ಬಗ್ಗೆ ಕೊನೆಯ ನಿರ್ಣಯವಾಗುವ ವರೆಗೆ ಈ ಪ್ರಾಂತಗಳ ರಚನೆಯು ತಡೆಯಬೇಕಾಗುವದು. ಸಂಸ್ಥಾನಗಳ ಪ್ರಶ್ನೆ ಒಮ್ಮೆ ಕೊನೆಯದಾಗಿ ನಿರ್ಧರಿಸಲ್ಪಟ್ಟ ನಂತರ ಆ ಸಂಸ್ಥಾನಗಳ ಜನರು ಈ ಭಾಷಾವಾರು ಪ್ರಾಂತಗಳಲ್ಲಿ ಸೇರಲು ಸಮ್ಮತಿಸಿದರೆ ಈ ಪ್ರಾಂತಗಳ ರಚನೆಯು ಸುಲಭವಾಗುವದು. ಇಂಥ ಹೊಸ ಪ್ರಾಂತರಚನೆಯನ್ನು ಮಾಡುವಾಗ ಯಾವ ಪ್ರದೇಶಗಳು ಈ ಭಾಷಾವಾರು ಪ್ರಾಂತದಲ್ಲಿ ಸೇರಲು ಒಪ್ಪುವವೋ ಅಷ್ಟೇ ಪ್ರದೇಶದಿಂದ ಭಾಷಾನುಗುಣ ಪ್ರಾಂತ ರಚಿಸಲು ಈ ಪ್ರಾಂತಗಳ ಜನರು ಒಪ್ಪಬೇಕಾಗುವದು

ಇದರ ಅರ್ಥವು ಮೊದಲು ಮಾಡಿದ ವಿಭಜನೆಯೇ ಕೊನೆಯದೆಂದು ಗ್ರಹಿಸಲಾಗುವದೆಂದು ತಿಳಿಯಬೇಕಿಲ್ಲ. ಹಿಂದಿನಿಂದ ಗಡಿಪ್ರದೇಶದ ನಿರ್ಣಯವಾಗಿ ಹೊಸ ಗಡಿಯನ್ನು ನಿರ್ಧರಿಸಲಾಗುವದು. ಆದರೆ ಪ್ರಾರಂಭದಲ್ಲಿ ಯಾವದೇ ಭಾಷಾನ್ವಯ ಪ್ರಾಂತ ರಚನೆ ಮಾಡುವಾಗ ಇದ್ದ ಪ್ರಾಂತದ ವಿಭಜನ ಮಾಡಿ ಹೊಸ ಪ್ರಾಂತ ರಚಿಸುವ ಮುಂದೆ ಎಲ್ಲರಿಗೂ ಒಪ್ಪಿತವಾದ ಭಾಷಾ ಪ್ರದೇಶದ ಮಟ್ಟಿಗೆ ಮಾತ್ರ ಹೊಸ ಪ್ರಾಂತ ರಚಿಸಲಾಗುವದು. ಬೇರೆ ಪ್ರಾಂತ, ಅಥವಾ ಸಂಸ್ಥಾನದ ತಕರಾರು ಇರುವ ಪ್ರದೇಶವನ್ನು ಪ್ರಾರಂಭದಲ್ಲಿ ಹೊಸ ಭಾಷಾನುಗುಣ ಪ್ರಾಂತದಲ್ಲಿ ಸೇರಿಸಲಾಗುವದಿಲ್ಲ.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

[illegible] ಕೋಆಪರೇಟಿವ್ ಸೊಸೈಟೀಸ್ ಆಕ್ಟು ಪ್ರಕಾರ ರಿಜಿಸ್ಟರಾಗಿದೆ (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,65,000.
ಕ್ಷೇಮನಿಧಿ	ರೂ.	50,000.

ಈ ಬ್ಯಾಂಕಿನಿಂದ ಜಾಸ್ತಿಯಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಆಧಾರದ ಮೇಲೆ ಸಹ ಸಾಲ ಕೊಡಲಾಗುವುದು. ಬಿಲ್ಲು ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಸಿಟಿ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ವಸೂಲು [illegible] ವನು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ ಎಸ್. ಸೋಮಯ್ಯ,
ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C.
ಪ್ರೆಸಿಡೆಂಟ್ ಮತ್ತು ಖಜಾಂಚಿ.

ಕೊಡಗು

ತಾ. ೧೬-೪-೧೯೪೮ನೇ ಶುಕ್ರವಾರ

ಭಾಷಾವಾರು ಪ್ರಾಂತ.

ಧಾರ್ ಕಮಿಟಿಯು ವರದಿಯು ಮೇರೆ ಭಾಷಾವಾರು ಪ್ರಾಂತರಚನೆಯು ಪ್ರಶ್ನೆಯು ಮುಂಗಾಣಲ್ಪಟ್ಟಿತ್ತು. ಇದರಿಂದ ಅತೃಪ್ತಿಗೊಂಡವರು ಕೂಗನ್ನು ಶಮನಗೊಳಿಸಲು ಕಾಂಗ್ರೆಸ್ ಮಹಾಸಭೆಯು ನೆಹರೂ-ಪಟೇಲ್-ಪಟ್ಟಾಭಿ ಸಮಿತಿಯೊಂದನ್ನು ನೇಮಿಸಿತು. ಈ ಕಮಿಟಿಯ ವರದಿಯನ್ನು ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಒಪ್ಪಿರುವರು. ಇದರ ಸಾರಾಂಶವನ್ನು ಬೇರೆಡೆ ಕೊಡಲಾಗಿದೆ. ಅದರಂತೆ 'ಈ ಪ್ರಾಂತಗಳ (ಕರ್ನಾಟಕ ಮತ್ತು ಕೇರಳರ ಚನೆಯೂಗಲು ಸದ್ಯದ ಪ್ರಾಂತಗಳಲ್ಲಿರುವ ಮಲೆಯಾಳ ಮತ್ತು ಕನ್ನಡ ಪ್ರದೇಶಗಳನ್ನು ನೆರೆಯ ಸಂಸ್ಥಾನಗಳೊಡನೆ ಸಂಯೋಜಿಸುವುದು ಶಕ್ಯವಿಲ್ಲ. ಸಂಸ್ಥಾನಗಳೇ ಈ ಪ್ರದೇಶಗಳೊಳಗೆ ಸೇರಿದಾಗ ಈ (ಭಾಷಾವಾರು) ಪ್ರಾಂತಗಳ ರಚನೆ ಮಾಡಲು ಶಕ್ಯವಾಗುವದು. ಆದ್ದರಿಂದ ಸಂಸ್ಥಾನಗಳ ಬಗ್ಗೆ ಕೊನೆಯ ನಿರ್ಣಯವಾಗುವ ವರೆಗೆ ಈ ಪ್ರಾಂತಗಳ ಪ್ರಶ್ನೆ ತಡೆಯುವದು...... ಇಂಥಾ ಹೊಸ ಪ್ರಾಂತರಚನೆಯನ್ನು ಮಾಡುವಾಗ ಯಾವ ಪ್ರದೇಶಗಳು ಈ ಭಾಷಾವಾರು ಪ್ರಾಂತವಲ್ಲಿ ಸೇರಲು ಒಪ್ಪುವವೋ ಅಷ್ಟೇ ಪ್ರದೇಶದಿಂದ ಭಾಷಾನುವಾರು ಪ್ರಾಂತ ರಚಿಸಲ್ಪಡಬೇಕು. ....ಆದರೆ ಪ್ರಾರಂಭದಲ್ಲಿ ಯಾವದೇ ಭಾಷಾನ್ವಯ ಪ್ರಾಂತ ರಚನೆಮಾಡುವಾಗ ಇದ್ದ ಪ್ರಾಂತದ ವಿಭಜನೆ ಮಾಡಿ ಹೊಸ ಪ್ರಾಂತ ರಚಿಸುವ ಮುಂದೆ ಎಲ್ಲರಿಗೂ ಒಪ್ಪಿತವಾದ ಭಾಷಾಪ್ರದೇಶದ ಮಟ್ಟಿಗೆ ಮಾತ್ರ ಹೊಸ ಪ್ರಾಂತ ರಚಿಸಲಾಗುವದು. ಬೇರೆ ಪ್ರಾಂತಯಾ ಸಂಸ್ಥಾನದ ತಕರಾರು ಇರುವ ಪ್ರದೇಶವನ್ನು ಪ್ರಾರಂಭದಲ್ಲಿ ಹೊಸ ಭಾಷಾವಾರು ಪ್ರದೇಶದಲ್ಲಿ ಸೇರಿಸುವದಿಲ್ಲ'

ಇದರಿಂದ ಭಾಷಾನುವಾರು ಪ್ರಾಂತಗಳು, ಅದರಲ್ಲೂ ಕರ್ನಾಟಕ ಮತ್ತು ಕೇರಳ ಪ್ರಾಂತಗಳ ರಚನೆಯು ಕೆಲವು ವರ್ಷಗಳ ವರೆಗೆ ಆಗುವಂತಿಲ್ಲವೆಂಬುದು ಸ್ಪಷ್ಟವಾಗಿದೆ. ಹಾಗೆ ಪ್ರಾಂತಗಳ ರಚನೆಯಾಗುವ ಕಾಲಕ್ಕೂ ಕೂಡ ಅವುಗಳೊಂದಿಗೆ ಕೊಡಗನ್ನು ಸೇರಿಸುವ ಪ್ರಶ್ನೆಯೂದರೂ ಬಹುದೂರವಿದೆ. ಏತಕೆಂದರೆ ಕೊಡಗಿನಲ್ಲಿ ಭಾಷಾವಾರು ಪ್ರಾಂತಕ್ಕೆ ಅಥವ ಬೇರೆ ದೊಡ್ಡ ಪ್ರಾಂತಕ್ಕೆ ಸೇರುವ ವಿಚಾರದಲ್ಲಿ ತುಂಬಾ ಭಿನ್ನಾಭಿಪ್ರಾಯವಿದೆ. ಈ ವಿಚಾರದಲ್ಲಿ ಜನರ ಒಮ್ಮತವಿಲ್ಲದ ವಿನಹ ಸಂಯೋಜನೆಯ ಮಾತೇ ಬರಲಾರದು. ಈ ವಿಷಯದ ಮೇರೆ ಕೊಡಗಿನ ಭವಿಷ್ಯದ ವಿಚಾರದಲ್ಲಿ ದೇಶಿಯರ ಅಭಿಪ್ರಾಯ ತಿಳಿಯಬೇಕೆಂದು ಮೊನ್ನೆ ಕೌನ್ಸಿಲಿನಲ್ಲಿ ಪಾಸಾದ ಠರಾವು ಬಹು ಪ್ರಾಮುಖ್ಯವಾಗಿದೆ. ಸಂಸ್ಥಾನಗಳೇ ಇಂಡಿಯನ್ ಪ್ರಾಂತಗಳಲ್ಲಿ ವಿಲೀನವಾಗಬೇಕೆಂದು ಈ ವರದಿಯಲ್ಲಿರುವಾಗ್ಗೆ ಕೊಡಗು ಒಂದೋ ಶಾಖೆಯೋ ಮೈಸೂರು ಸಂಸ್ಥಾನಕ್ಕೆ ಸೇರಿ ಹೋಗುವದೆಂದು ಕೂಗಿಕೊಳ್ಳುತ್ತಿರುವವರು ಇನ್ನಾದರೂ ತಮ್ಮ ಅಪಪ್ರಚಾರವನ್ನು ನಿಲ್ಲಿಸುವರಾಗಿ ನಂಬುತ್ತೇವೆ.

ಹಿಂದೂಸ್ಥಾನದ ಪ್ರಮುಖ ನಾಯಕರು ಮುಂದಾಳುಗಳು ತಮ್ಮ ವರದಿಯಲ್ಲಿ ಯಾವದೇ ಪ್ರದೇಶದ ಭವಿಷ್ಯತ್ತನ್ನು ನಿರ್ಣಯಿಸುವ ಹಕ್ಕು ಅಲ್ಲಿಯ ಜನರದ್ದಾಗಿದೆ-ಎಂಬ ಪ್ರತಿಯೊಬ್ಬನ ನಾಗರೀಕ ಹಕ್ಕನ್ನು ಸಮರ್ಥಿಸಿರುವದು ನಮಗೆಲ್ಲ ತುಂಬಾ ತೃಪ್ತಿಯನ್ನುಂಟು ಮಾಡಿದೆ.

ವರ್ತಮಾನ.

ತಾರೀಕು ೧೦-೪-೪೮ರಲ್ಲಿ ಮಡಿಕೇರಿಯಲ್ಲಿ ನಡೆದ ಕೊಡಗು ಬಾಲಚರ ರಾಲಿಯ 'ರೇಲಿ'ಯಲ್ಲಿ ಪ್ರಥಮ ಬಹುಮಾನದ ಛಾಂಪಿಯನ್ ಶೀಲ್ಡನ್ನು ವೀರರಾಜಪೇಟೆ ಟ್ರುಪ್ಪೂ, ದ್ವಿತಿಯ ಬಹುಮಾನ ಛಾಂಪಿಯನ್ ಕಪ್ಪನ್ನು ನಾಪೋಕ್ಲು ಇಗ್ಗುತಪ್ಪ ಟ್ರುಪ್ಪೂ ಗೆದ್ದವು.

ತಾರೀಕು ೨೧ನೇ ಗುರುವಾರ ಸಾಯಂಕಾಲ ೫-೩೦ ಗಂಟೆಗೆ ಮಡಿಕೇರಿ ಹುಡುಗಿಯರ ಶಾಲೆಯಲ್ಲಿ ವಿವಿಧ ವಿನೋದಾವಳಿಯು ಕೂಟವೊಂದು ನಡೆಯುವದು.

ಮೂರ್ನಾಡಿನ ಶ್ರೀರಾಮ ಮಂದಿರದಲ್ಲಿ ಶ್ರೀರಾಮ ನವಮಿಯನ್ನು ತಾರೀಕು ೩೧-೩-೪೮ರಿಂದ ೭-೪-೪೮ರ ವರೆಗೆ ನಡೆಸಲಾಯಿತು. ಹರಿಕಥೆ, ಭಜನೆ, ಭಾರತ ವಾಚನ, ಸಂಗೀತ ಮುಂತಾದ ವಿನೋದಗಳೊಂದಿಗೆ ತಾ. ೭ನೇ ಶುಕ್ರವಾರ ಮಂಟಪದೊಡನೆ ಮೆರವಣಿಗೆ ನಡೆಯಿತು.

ಡಾ. ಚೇರಂಡ ತಿಮ್ಮಯ್ಯನವರ ಪುತ್ರ ಪೊನ್ನಪ್ಪನವರು ತಾ ೧೪-೪-೪೮ರಲ್ಲಿ ಹೃದಯಕ್ರಿಯೆ ನಿಂತು ಸ್ವತಂತ್ರವಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಕೊಡಗಿನಲ್ಲಿ ಹೈಸ್ಕೂಲಿನ ಕೊನೆಯ ವರ್ಷದವರ ಪರೀಕ್ಷೆಯು ಮದ್ರಾಸ್ ವಿಶ್ವವಿದ್ಯಾಲಯದ ರೀತಿಯಂತೆ ಈ ತಿಂಗಳ ಕೊನೆಯ ... ನಡೆಯಲಿರುವದೆಂದು ತಿಳಿದುಬಂದಿದೆ.

ಸರಕಾರಿ ಉದ್ಯೋಗದಿಂದ ನಿವೃತ್ತರಾಗಿದ್ದ ಶ್ರೀ. ಮಾನೆಯಪಂಡ ತಿಮ್ಮಯ್ಯನವರನ್ನು ರಸ್ತೆಯ ಉಳಿತಾಯ ಯೋಜನೆಯ ಜಿಲ್ಲಾ ಆರ್ಗನೈಜರಾಗಿ ನೇಮಿಸಿರುವರು.

ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್,
ಮಡಿಕೇರಿ.



ನಮ್ಮ ಫ್ರೇಜರ್‌ಪೇಟೆ ಕಾರ್ಖಾನೆಯಲ್ಲಿ ಸದ್ಯಕ್ಕೆ ಈ ಕೆಳಗಿನ ಕೆಲಸಗಳನ್ನು ಕೈಕೊಂಡಿರತ್ತೇವೆ. ಸರ್ವರೂ ಪ್ರೋತ್ಸಾಹಿಸಬೇಕಾಗಿ ವಿನಂತಿ. (1) ಭತ್ತ ಮಿಲ್ ಮಾಡುವುದು, (2) ಅಕ್ಕಿ ಮತ್ತು ಧಾನ್ಯಗಳನ್ನು ಹುಡಿಮಾಡುವುದು, (3) ಕಾಫಿ ಹುರಿದು ಹುಡಿಮಾಡುವುದು, (4) ಮೆಣಸು ಹುಡಿಮಾಡುವುದು.

CRESCENT

FOR PROTECTION AND SERVICE.

It is best to represent and insure with

The CRESCENT Insurance Co., Ltd,

H: O: BOMBAY.] [Established 1919.

For particulars write to:

Sri B A Poovayya or The Branch Manager'
Organiser *22 B. Mahatma Gandhi Road,*
Pollibetta, Coorg. *Bangalore 1.*

ಸುರಕ್ಷಿತವಾದ ಜೀವವಿಮೆ ಪಡೆಯಲು

ಕ್ರೆಸೆಂಟ್

ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.

ಇಂಡಿಯಾ ಸರಕಾರದ ಟ್ರಾನ್ಸ್‌ಪೋರ್ಟ್ ಮತ್ತು ರೈಲ್ವೆ ಇಲಾಖೆಗಳ ಸ್ಟೇಟ್ ಮಂತ್ರಿಯಾದ ಶ್ರೀ ಕೆ ಸಂತಾನಮ್‌ರವರು ಈ ತಾ. ೩೩ನೇ ಶನಿವಾರ ಮಂಗಳೂರಿನಿಂದ ಮಡಿಕೇರಿಗೆ ಬಂದು, ಊಟ ಮುಗಿಸಿಕೊಂಡು ವಿಶ್ರಾಂತಿಯಿಂದ ಮೈಸೂರಿಗೆ ಹೋಗುವರೆಂದು ವರ್ತಮಾನ.

ಚಿಕ್ಕ ಕಾಫಿ ಪ್ಲಾಂಟರುಗಳ ಅವಗಾಹನೆಗೆ.

ಇಂಡಿಯನ್ ಕಾಫಿ ಬೋರ್ಡಿನವರು ಕಳೆದ ವರ್ಷದ (1947-48) ಚಿಕ್ಕ ಪ್ಲಾಂಟರುಗಳ ಅಂದರೆ 25 ಎಕ್ರೆಗಿಂತ ಕಡಿಮೆ ಇರುವವರ ಪೂಲ್ ಮಾಡುವ ಕಾಫಿಯ ಮೇಲೆ ಕಡೇ ಡಿವಿಡೆಂಡನ್ನು ಸಾರಿರುವರು. ಪ್ಲಾಂಟರುಗಳು ತಮ್ಮ ಪಾವತಿ ರಶೀತಿಯನ್ನು ಹಾಜರುಪಡಿಸಿ ಡಿವಿಡೆಂಡನ್ನು ಈ ತಿಂಗಳ ಅಂತ್ಯದೊಳಗೆ ಹೊಂದಿಕೊಳ್ಳಬೇಕೆಂದು ಈ ಮೂಲಕ ತಿಳಿಸಲಾಗಿದೆ.

ಏಜೆಂಟ್
ವೆಂಕಟ್ರಾಮನ್ ಬ್ರದರ್ಸ್
2-1 ಮಡಿಕೇರಿ

ಜಾಹೀರಾತ್ ನೋಟೀಸ್.

ಉತ್ತರ ಕೊಡಗು ತಾಲೋಕು ಶನಿವಾರಸಂತೆ ಹೋಬಳಿ ದೊಡ್ಡಕೊಳತ್ತೂರು ಗ್ರಾಮದಲ್ಲಿರುವ ಉಪ್ಪಾರ ಸೋಮಪ್ಪನವರ ಹಿರಿ ಮಗ ಈಗ ಹಾಲಿ ಬೆಂಗಳೂರಿನಲ್ಲಿರುವ ಮಲ್ಲಪ್ಪನ ಈ ಮೂಲಕ ಜನಗಳಿಗೆ ತಿಳಿಯಪಡಿಸುವುದೇನೆಂದರೆ ನನ್ನ ತಂದೆ ಸೋಮಪ್ಪನವರು ಬಹಳ ದಿವಸಗಳಿಂದಲೂ ದುರ್ವರ್ತನೆಗಳಿಗೆ ಸಿಲುಕಿ ನನಗೂ ಮತ್ತು ನನ್ನ ತಾಯಿಗೂ ಮೋಸ ಪಡಿಸಬೇಕೆಂಬ ಉದ್ದೇಶದಿಂದ ಅವರ ಹೆಸರಿನಲ್ಲಿ ಜಮಾಬಂದಿ ನಡೆದು ಬರುತ್ತಿರುವ ನಮ್ಮ ಒಟ್ಟು ಕುಟುಂಬದ ಸ್ಥಿರ ಸೊತ್ತುಗಳನ್ನು ಮತ್ತು ಚರ ಸೊತ್ತುಗಳನ್ನು ಪರಬಾರೆ ಮಾಡುವ ಏರ್ಪಾಡಿನಲ್ಲಿರುವರಾಗಿ ನಾವು ತಿಳಿಯುತ್ತೇವೆ. ಸದ್ರಿ ಸ್ಥಿರ ಮತ್ತು ಚರ ಸೊತ್ತುಗಳಲ್ಲಿ ನನಗೂ ಮತ್ತು ನನ್ನ ತಾಯಿಗೂ ಸಮನಾದ ಹಕ್ಕಿದೆ. ಸದ್ರಿ ಸೊತ್ತುಗಳನ್ನು ಯಾರಾದರೂ ಕ್ರಯ, ಭೋಗ್ಯ, ಗಿರ್ವಿ ವಗೈರೆ ವಿಧದಲ್ಲಿ ನನ್ನ ತಂದೆಯಿಂದ ಪಡೆಕೊಂಡಲ್ಲಿ, ಅವು ಅವರಿಗೆ ಖಂಡಿತ ಸಿಕ್ಕಲಾರವು. ಅಲ್ಲದೆ ಅದರಿಂದ ನಮಗಾಗುವ ಕಷ್ಟನಷ್ಟಗಳಿಗೆ ಅವರೇ ಜವಾಬ್ದಾರರಾಗಬೇಕಾಗುವುದು.

"ಜೈ ಹಿಂದ್"
ಕೆ. ಎಸ್. ಮಲ್ಲಪ್ಪ,
2-1 ಕೊಡ್ಲಿಪೇಟೆ.

ಮೊಬಾಟಿಕ್ಸ್.

ಸೋಮವಾರಪೇಟೆ ನಾಡ ಬೇಟೋಳಿ ಗ್ರಾಮದ ಶ್ರೀ ... ಇವರು ತಮ್ಮ ಬಾಬ್ತು ಈ ಗ್ರಾಮದ ... 14 ಎಕ್ರೆ ... ಭೂಮಿಯ ... 4 ಎಕ್ರೆ ... ಕಾಫಿ, ಕಿತ್ತಳೆ, ... ಫಸಲಿಗೆ ಬಂದಿದೆ. ... ಅನುಕೂಲವಾದ ... ದಿನದ ... ಅಲ್ಲದೆ ಇದಕ್ಕೆ ಸಂಬಂಧಿಸಿದ 25 ಎಕ್ರೆ ಜಾಗ ... ಕಾಫಿ ವ್ಯವಸಾಯಕ್ಕೆ ... ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ಆರ್. ... ,
ಬೇಟೋಳಿ ಗ್ರಾಮ
2-1 ಸೋಮವಾರಪೇಟೆ

ಪ್ರ ಕ ಟ ಣೆ.

ದಿ. ಬೆಂಗಳೂರು ಪ್ರಾವಿಡೆಂಟ್ ಇನ್‌ಷ್ಯೂರೆನ್ಸ್ ಕಾರ್ಪೊರೇಷನ್ ಲಿಮಿಟೆಡ್.

ಪ್ರಧಾನ ಕಚೇರಿ "ಏಷ್ಯಾಟಿಕ್ ಬಿಲ್ಡಿಂಗ್ಸ್" ಬೆಂಗಳೂರು ನಗರ

ಭಾರತದ ಪ್ರಸಿದ್ಧಿಯಾದ ಇನ್‌ಷ್ಯೂರೆನ್ಸ್ ಪತ್ರಿಕೆಗಳ ಅಭಿಪ್ರಾಯಗಳು

(Insurance Herald) ಇನ್‌ಷ್ಯೂರೆನ್ಸ್ ಹೆರಾಲ್ಡ್

1948 ರ ಸೆಪ್ಟೆಂಬರ್ 25.

ಭಾರತದಲ್ಲಿ ಪ್ರಾವಿಡೆಂಟ್ ವಿಮೆಯು ಇನ್ನೂ ಶೈಶವಾವಸ್ಥೆಯಲ್ಲಿದೆ. ಈಗ ತಾನೆ ಹಲವು ವೈವಿಧ್ಯದಿಂದ ಮುಂದುವರಿಯುತ್ತಿರುವ ವಿಮಾ ಕಂಪನಿಗಳನ್ನು ನೋಡಿದಲ್ಲಿ ತುಂಬಾ ಸಂತೋಷವಾಗುತ್ತದೆ. ಅಂತೆಯೇ 'ಬೆಂಗಳೂರು ಪ್ರಾವಿಡೆಂಟಿನ ವಾರ್ಷಿಕ ವರದಿ ಮತ್ತು ಲಾಭ ನಷ್ಟಗಳನ್ನು ನೋಡಿದಲ್ಲಿ ಕಂಪೆನಿಯು ವರ್ಷದಲ್ಲಿಯ ಆದಾಯ, ಸುಭದ್ರತೆಗಳನ್ನೂ . ಕಳೆದ ಸಾಲಿನ ವ್ಯವಹಾರಗಳಿಗಿಂತಲೂ ಶೇಕಡ 37.1ರಷ್ಟರ ಹೆಚ್ಚಳವನ್ನೂ . ಕಂಪನಿಯ ವಿಮಾನಿಧಿಯು ಶೇಕಡ 44ರಷ್ಟು ಹೆಚ್ಚಿರುವುದೂ .. ಗಣನಾರ್ಹ ಅಂಶಗಳು. ಬೆಂಗಳೂರು ಪ್ರಾವಿಡೆಂಟಿನ ಕಂಪನಿಯ ಅಧ್ಯಕ್ಷರೂ ಮತ್ತು ಮ್ಯಾನೇಜಿಂಗ್ ಡೈರೆಕ್ಟರೂ ಆದ ಶ್ರೀ ಹೆಚ್ ವೆಂಕಟರಾಮಯ್ಯನವರ ಮಾರ್ಗದರ್ಶಕತ್ವವನ್ನು . ಕಂಪನಿಯ ಅಭಿವೃದ್ಧಿಗಾಗಿ ಸಂಪೂರ್ಣವಾಗಿ ಸೇವೆ ಇತ್ತಿರುವುದನ್ನು ನಾವು ಸ್ವತಃಪೂರ್ವಕವಾಗಿ ಅಭಿನಂದಿಸುತ್ತೇವೆ

(Insurance World) ಇನ್‌ಷ್ಯೂರೆನ್ಸ್ ವರ್ಲ್ಡ್

1948 ರ ನವಂಬರ್.

ಬೆಂಗಳೂರು ಪ್ರಾವಿಡೆಂಟ್ ಕಂಪೆನಿಯ ವ್ಯಾಪಾರ ವಹಿವಾಟುಗಳನ್ನು ಪರಿಶೀಲಿಸುವ ಮತ್ತು ವಿವರಿಸುವ ಅವಕಾಶ ದೊರಕಿತು. ಮತ್ತು ಕಂಪನಿಯು ನಡೆಸುತ್ತಿರುವ ವಹಿವಾಟುಗಳನ್ನು ನೋಡಿ ತುಂಬಾ ಸಂತೋಷವಾಯಿತು 1947ರ ವರ್ಷದಲ್ಲಿಯೂ ಕಂಪೆನಿಯು ತನ್ನ ಅಭಿವೃದ್ಧಿಯನ್ನು ಸರ್ವತೋಮುಖವಾಗಿ ಹೆಚ್ಚಿಸಿಕೊಂಡಿರುವುದನ್ನು ನೋಡಿ ಹೆಮ್ಮೆ ಪಡಬೇಕಾದ ಅಂಶವೇ ಆಗಿದೆ ಹಿಂದಿನ ವರ್ಷದ ವ್ಯವಹಾರದಲ್ಲಿಯ ಅಂಕಿ ಅಂಶಗಳನ್ನು ಪ್ರಸಕ್ತ ವರ್ಷದಲ್ಲಿ ಹೋಲಿಸಿದಲ್ಲಿ ಶೇಕಡ 37.1 ರಷ್ಟು ಹೆಚ್ಚಿರುವುದೂ ಮತ್ತು ಜೀವವಿಮಾ ನಿಧಿಯು ಶೇಕಡ 11ರಷ್ಟು ಹೆಚ್ಚಿರುವುದೂ ಕಂಡು ಬರುತ್ತದೆ. ಕಂಪನಿಯ ನಿಧಿಗಳು ವಿವಿಧ ಸುಭದ್ರ ನಿಧಿಗಳಲ್ಲಿ ವಿನಿಯೋಗವಾಗಿದೆಯಲ್ಲದೆ ಹೆಚ್ಚಿಗೆಯಾಗಿ ಸರ್ಕಾರದ ನಿಧಿಗಳಲ್ಲಿ ಮತ್ತು ಸರ್ಕಾರದ ಅಂಗೀಕೃತ ಸಂಸ್ಥೆಗಳ ನಿಧಿಗಳಲ್ಲಿಯೇ ವಿನಿಯೋಗಿಸಲಾಗಿದೆ ಕಾರ್ಪೊರೇಷನ್ನಿನ ಆಡಳಿತ ವರ್ಗದವರ ಸುವ್ಯವಸ್ಥಿತ ಮೇಲ್ವಿಚಾರಣೆಯಲ್ಲಿ ಕಂಪನಿಯ ಸೆಕ್ರೆಟರಿ ಮತ್ತು ಮೇನೇಜರ್‌ರವರಾದ ಶ್ರೀ ಎನ್ ವಿ ನಾರಾಯಣ ಮೂರ್ತಿ, ಬಿ ಎ, ಬಿ ಎಲ್,' ರವರ ಸುವ್ಯವಸ್ಥಿತ ವ್ಯವಸ್ಥಾಪನೆ ಮತ್ತು ಶ್ರಮೋತ್ಸಾಹಗಳು ಅಭಿನಂದನಾರ್ಹವಾಗಿವೆ ...

ಕೊ ಡ ಗು ಪ್ರಾಂ ತ್ಯ ದ ಲ್ಲಿ

ಸಂಬಳದ ಮೇಲೆ ಏಜೆಂಟರುಗಳಿಚ್ಛಿಸುವ ಅನುಭವಿಗಳೂ ಮತ್ತು ವ್ಯಾಪಾರದಲ್ಲಿ ಪ್ರತಿಷ್ಠಿತರೂ ಆದವರಿಗೆ

ಏಜೆಂಟರಾಗಲು ಸುಸಮಯ

ನಿರ್ದಿಷ್ಟ ಖಾತರಿಯ ಮೇಲೆ ಸಂಬಳ ರೂ 100 ಮತ್ತು ಅಲೋಯನ್ಸ್ ರೂ. 25, ನವ್ಯ ವಿಮಾಯೋಜನೆಯು ಸರ್ವರ ಪರಿಸ್ಥಿತಿಗೂ ಅನುಕೂಲವಾಗಿದೆ.

ರೂ 250ರಿಂದ ರೂ. 900 ರ ವರೆಗಿನ ವಿಮಾಪಾಲಿಸಿಗಳು. ಅಧಿಕ ಬದ್ರತೆ ಮತ್ತು ವಿಮಾ ವ್ಯವಹಾರಗಳು ಹೆಚ್ಚಳವನ್ನು ತೋರಿಸಿವೆ

ಭಾರತದಲ್ಲಿಯ ಪ್ರಾವಿಡೆಂಟ್ ವಿಮಾಕಂಪೆನಿಗಳಲ್ಲಿ ಈ ಕಂಪನಿಯು

ಪ್ರ ಥ ಮ ಶ್ರೇ ಣಿ ಯ ಲ್ಲಿ

ಮುಂ ದು ವ ರಿ ಯು ತ್ತಿ ದೆ

ವಿವರಗಳಿಗೆ ಬರೆಯಿರಿ

2-2 **ಮ್ಯಾನೇಜಿಂಗ್ ಡೈರೆಕ್ಟರ್.**

WANTED

Wanted Boys between the ages of 14 and 15 years for enrolment in different Technical Training and Centres Educational standard requiread is between II Form and VI Form.

For particulars please interview Mr. A A Mandanna, Extra Assistant Recruiting officer at the following places on the dates mentioned against each:

Place	Date		
Sanivaisanthe	17	April 49	at Inspection Bunglow.
Somwarpet	18, 19, 20	,,	,,
Virajpet	22, 23	,,	,,
Napoklu	25	,,	,,
Ponnampet	26, 27	,,	,,
Mercara	29, 30	,,	at Nad office

3-2

'ನಾನು ಗವೈಯ್ಯ ಮಾತ್ರ ಆಗಲಿಲ್ಲ.'

ಪಂ. ನೆಹ್ರೂರವರು ಅಖಿಲ ಭಾರತ ರೇಡಿಯೋದಲ್ಲಿ 'ಮೇರಾ ಬಚ್ಪನ್' ಎಂಬ ಪ್ರಸಾರವನ್ನಾರಂಭಿಸಿದರು. ಮಕ್ಕಳಿಗೆ ಮಹಾಪುರುಷರುಗಳ ಜೀವನದ ಪರಿಚಯವಾಗಲೆಂದೇ ಈ ಪ್ರಸಾರ ಏರ್ಪಡಿಸಿದೆ. ಈ ಪ್ರಸಾರದಲ್ಲಿ ಒಬ್ಬ ಬಾಲಕನು ಪಂ ನೆಹ್ರೂರವರನ್ನು 'ನೀವು ಹಾಡಿ' ಎಂದು ಕೇಳಿದರು ನೆಹ್ರೂರವರಿಗೆ ಸ್ವಲ್ಪ ಇಕ್ಕಟ್ಟಿನ ಸ್ಥಿತಿಯಾಯಿತು ಅವರೆಂದರು 'ನಾನು ನನ್ನ ಜೀವನದಲ್ಲಿ ಯಾವಯಾವುದೋ ಉದ್ಯೋಗಗಳಲ್ಲಿ ತೊಡಗಿದೆ. ಆದರೆ ಗವಯ್ಯ [ಸಂಗೀತಗಾರ] ಮಾತ್ರ ಆಗಲಿಲ್ಲ'

ನೆಹ್ರೂರವರು ಒಬ್ಬ ಹುಡುಗನನ್ನು 'ನಿನ್ನ ಅಭಿಲಾಷೆಯೇನು' ಎಂದು ಕೇಳಿದರು 'ನಾನೊಬ್ಬ ಜವಹರ್ ಆಗಬೇಕೆಂದು ಆಶಿಸುತ್ತೇನೆ' ಎಂದು ಅವನು. ತಕ್ಷಣವೇ ಎಂದ ನೆಹ್ರೂರವರು ತಮಗೆ ದೊರೆತ ಹಲವು ಮಹಾ ಗುರುಗಳನ್ನು ಕುರಿತ ಪ್ರಸ್ತಾಪಿಸಿ ತಿಳಿಸುತ್ತಾ 'ಇವರೆಲ್ಲರಲ್ಲಾ ನನಗ ದೊರೆತ ದೊಡ್ಡ ಗುರುವೆಂದರೆ 'ಎಂದು ಮಕ್ಕಳು ಹೇಳಿಯಾರು ಎಂದು ಹುಡುಗರನ್ನು ಕೇಳಲಾಗಿ ತಕ್ಷಣವೇ ಅವರಲ್ಲರೂ 'ಗಾಂಧಿ ಜಿ' ಎಂದು ಉತ್ತರವಿತ್ತರು

ಮದ್ರಾಸಿನಲ್ಲಿ ಹೊಸ ಮಂತ್ರಿ ಮಂಡಳ.

ಮದ್ರಾಸಿನ ಹೊಸ ಮಂತ್ರಿಮಂಡಳವು ಕಳೆದ ಬುಧವಾರ ಪ್ರಮಾಣ ವಚನ ಸ್ವೀಕರಿಸಿ ಅಧಿಕಾರ ವಹಿಸಿಕೊಂಡಿತು.

ಮಂತ್ರಿಮಂಡಳಕ್ಕೆ ಇನ್ನೂ ಕೆಲವರನ್ನು ಸೇರಿಸಿಕೊಳ್ಳುವ ಯೋಚನೆಯಿದೆ ಎಂಬುದಾಗಿ ಮುಖ್ಯ ಮಂತ್ರಿ ಶ್ರೀ ಕುಮಾರಸ್ವಾಮಿ ರಾಜಾರವರು ತಿಳಿಸಿದರು

ಮಂತ್ರಿಮಂಡಳದಲ್ಲಿ ಪೋರ್ಟ್‌ಫೋಲಿಯೋಗಳು ಈ ರೀತಿ ಹಂಚಲ್ಪಟ್ಟಿವೆ:-

ಶ್ರೀ. ಕುಮಾರಸ್ವಾಮಿ ರಾಜಾ (ಮುಖ್ಯ ಮಂತ್ರಿ) ಪೊಲೀಸ್, ಡಾ. ರಾಜನ್-ಹಿಂದೂ ರಿಲಿಜಸ್ ಎಂಡೋಮೆಂಟ್ಸ್ ಮತ್ತು ಆಹಾರ ಶ್ರೀ ಎಂ. ಭಕ್ತವತ್ಸಲಂ-ಪಬ್ಲಿಕ್ ವರ್ಕ್ಸ್ ಮತ್ತು ಇನ್‌ಫರ್ಮೇಷನ್, ಶ್ರೀ ಬಿ ಗೋಪಾಲರೆಡ್ಡಿ-ಹಣಕಾಸು, ವ್ಯಾಪಾರಿ ತೆರಿಗೆಗಳು, ಚುನಾವಣೆಗಳು, ಮೋಟರ್ ಟ್ರಾನ್ಸ್‌ಪೋರ್ಟ್ ಶ್ರೀ, ಕೆ, ಮಾಧವ ಮೆನನ್-ಜೈಲು, ಕೋರ್ಟ್, ವ್ಯವಸಾಯ ಮತ್ತು ಅರಣ್ಯ ಶ್ರೀ ಎಚ್ ಸೀತಾರಾಮರೆಡ್ಡಿ-ಕಂದಾಯ, ಕೈಗಾರಿಕೆ ಮತ್ತು ಲೇಬರ್ ಶ್ರೀ ಎ ಬಿ ಶೆಟ್ಟಿ-ವಿದ್ಯಾಭ್ಯಾಸ ಮತ್ತು ಸಾರ್ವಜನಿಕ ಆರೋಗ್ಯ. ಶ್ರೀ ಕೆ ಚಂದ್ರಮೌಳಿ-ಸ್ಥಳೀಯ ಸಂಸ್ಥೆಗಳು, ಸಹಕಾರ ಶ್ರೀ ಬಿ. ಪರಮೇಶ್ವರನ್-ಫಿಶರೀಸ್ ಅಭಿವೃದ್ಧಿ, ಖಾದಿಗ್ರಾಮ ಕೈಗಾರಿಕೆ, ಹರಿಜನೋದ್ಧಾರ ಮುಂತಾದವು ಶ್ರೀ ಎಸ್. ಸಂಜೀವರೆಡ್ಡಿ-ಮದ್ಯನಿರೋಧ ಮತ್ತು ಗೃಹವಸತಿ

೧೯೫೧ರಲ್ಲಿ ಚು.

ಡಾ. ಪಟ್ಟಾಭಿ ... ವಿಷಯದಲ್ಲಿ ಮಾತನಾ... ಲೋಕಸಭೆಯು ನಿರ್ಧರಿಸಿರುವಂತೆ ಘಟನಾ ಸಭೆಯು ಮೇ ತಿಂಗಳಲ್ಲಿ ಜರಗಿತೆಂದಾದರೆ ಭಾರತದ ಈ ವಿಷಯದ ಚರ್ಚೆ ... ಆಗಸ್ಟ್ ಹದಿನೈದರೊಳಗೆ ನಿರ್ಧಾರಬಹುದು ಈ ಘಟನೆಗಳು ಮುಗಿಯಿತೆಂದರೆ ಅವುಗಳನ್ನು ಜನವರಿಯಲ್ಲಿ ಕೂಡಲೇ ತರಲಾಗುವುದು ಈ ಘಟನೆಯ ಕರಡಿನಲ್ಲಿ ಭಾರತ ಪ್ರಜಾ ಪ್ರಭುತ್ವಕ್ಕೆ ಅಧ್ಯಕ್ಷರನ್ನು ಚುನಾಯಿಸುವ ಹಕ್ಕು ಇರುವುದಲ್ಲದೆ ಅದನ್ನು ಕಾರ್ಯದಲ್ಲಿ ತರುವುದು ಸಾಧ್ಯವಿದೆ ಘಟನೆಗಳನ್ನು ಮಂಜೂರು ಮಾಡಿದ ನಂತರ ಅದನ್ನು ಕಾರ್ಯತಃ ತರುವುದಕ್ಕೆ ಯಾವ ಅಡ್ಡಿಯೂ ಇರುವುದಿಲ್ಲ

ಈ ಒಂದು ವರ್ಷದೊಳಗೇನೇ ಜನಗಣತಿಯು ತಯಾರಾಗಿ ಸಿದ್ಧವಿರುವುದರೂ ಇದೆಷ್ಟು ಅಪಾರವಾದ ಕೆಲಸವೆಂದು ಜನತೆಯು ತಿಳಿಯತಕ್ಕದ್ದು. ಹಳೆಯ ಘಟನೆಯ ಪ್ರಕಾರ ನಮ್ಮ ದೇಶದ ೩೫ ಕೋಟಿ ಜನರಲ್ಲಿ ಕೇವಲ ಮೂರುವರೆ ಕೋಟಿ ಜನರಿಗೆ ಮತದಾನ ಮಾಡುವ ಹಕ್ಕಿತ್ತು. ಇದು ಸಹ ಅವಿಭಾಜ್ಯ ಭಾರತದಲ್ಲಿ ಆದರೆ ಈಗಿನ ಹೊಸ ಘಟನೆಯ ಪ್ರಕಾರ ಪ್ರತಿಯೊರ್ವ ಪ್ರೌಢನಿಗೆ ಮತದಾನ ಮಾಡುವ ಹಕ್ಕು ಸಿಗುವುದು. ೩೦ ಕೋಟಿ ಜನತೆಯಲ್ಲಿ ಸುಮಾರು ೧೭ ಕೋಟಿ ಜನರಿಗೆ ಮತದಾನ ಹಕ್ಕು ಸಿಗುವುದು ಇದರ ಪ್ರಕಾರ ಪ್ರತಿಯೊರ್ವ ಪುರುಷನಿಗೂ ಸ್ತ್ರೀಗೂ ಮತದಾನದ ಹಕ್ಕು ದೊರೆಯುತ್ತದೆ.

ಈ ೧೭ ಕೋಟಿ ಜನರ ಹೆಸರುಗಳನ್ನು ಎರಡೆರಡು ಸಲ ಮತ ಪಟ್ಟಿಯಲ್ಲಿ ಛಾಪಿಸುವುದೆಂದರೆ ಅದೆಷ್ಟು ಕಷ್ಟದ ಕಾರ್ಯವೆಂದು ಅರಿತುಕೊಳ್ಳತಕ್ಕದ್ದು ಭಾರತದಲ್ಲಿರುವ ಛಾಪಖಾನೆಗಳಲ್ಲ ರಾತ್ರಿ ದಿವಸಗಳೆನ್ನದೆ ಕೆಲಸ ಮಾಡಿದರೂ ಈ ಮುದ್ರಣದ ಕಾರ್ಯವನ್ನೂ ನಡೆಸುವರೆ ಒಂದು ವರ್ಷದ ಸಮಯ ವು ತ ಗುವುದೆಂದು ಹೇಳಲು ಅಡ್ಡಿಯಿಲ್ಲ.

೧೯೫೦ರಲ್ಲಿ ಹಾಗೂ ೧೯೫೧ನೇ ವರ್ಷಗಳಲ್ಲಿ ಮಾನ್ಯವಾದ ಘಟನೆಗಳ ಪ್ರಕಾರ ಚುನಾವಣೆ ನಡೆಯಬೇಕಾದರೆ ಎರಡೆರಡು ವರ್ಷಗಳು ಬೇಕಾದವು. ಇದೇ ರೀತಿಯಲ್ಲಿ ಈ ಸಲವೂ ಘಟನೆಗಳು ಸ್ವೀಕೃತವಾದ ನಂತರ ೨ ವರ್ಷದ ಅವಧಿಯೂ ದರೂ ಚುನಾವಣೆಗಾಗಿ ಬೇಕಾಗುವುದು.

ಮತದಾರರ ಪಟ್ಟಿಯನ್ನು ಮಾತ್ರ ಮಾಡಬೇಕಲ್ಲದೆ ಈ ವಿಚಾರದಲ್ಲಿ ಬರುವ ಆಕ್ಷೇಪಣೆಗಳನ್ನು ಪರಿಶೀಲಿಸುವ ಕಾರ್ಯಗಳು ನಡೆಯಬೇಕಾಗಿವೆ ಹೀಗೆ ಮೊದಲಾಗಿ ಸಿದ್ಧವಾದ ಪ್ರಾಥಮಿಕ ಮತಪಟ್ಟಿಯನ್ನು ಪರಿಶೀಲಿಸಿ ಅನಂತರ ಎರಡನೇಯದಾಗಿ ಛಾಪಿಸಬೇಕಾಗುವುದು. ಚುನಾವಣೆಯು ನಡೆಯಬೇಕಾದರೆ ಮತದಾರರ ಪಟ್ಟಿಯ ಒಂದು ವರ್ಷ ... ದ್ದು. ಅಂತೂ ಆಗಸ್ಟ್ ೧೯೫೧ನೇಯ ಫೆಬ್ರವರಿ ತಿಂಗಳಲ್ಲಿ ಚುನಾವಣೆಗಳು ನಡೆಯುವುದೇ ಸಾಧ್ಯವಾಗುವುದು ಇದು ಈಗ ನಡೆಯುತ್ತಿರುವ ತಯಾರಿಯು ಕ್ರಮದಂತೆ ಸಾಗಿದರೆ ಮಾತ್ರ ಸಾಧ್ಯವಾಗುವುದು ಎಂದು ಅವರು ಹೇಳಿದರು.

ಕೊಡಗು

ತಾ. ೧೫-೪-೧೯೪೯ನೇ ಶುಕ್ರವಾರ

ಭಾಷಾವಾರು ಪ್ರಾಂತ.

ಧಾರ್ ಕಮಿಟಿಯು ವರದಿಯು ಮೇರೆ ಭಾಷಾವಾರು ಪ್ರಾಂತರಚನೆಯ ಪ್ರಶ್ನೆಯು ಮುಂಗಡಿಸಲ್ಪಟ್ಟಿತ್ತು. ಇದರಿಂದ ಅತೃಪ್ತಿಗೊಂಡವರು ಕೂಗನ್ನು ಶಮನಗೊಳಿಸಲು ಕಾಂಗ್ರೆಸ್ ಮಹಾಸಭೆಯು ನೆಹರೂ-ಪಟೇಲ್-ಪಟ್ಟಾಭಿ ಸಮಿತಿಯೊಂದನ್ನು ನೇಮಿಸಿತು. ಈ ಕಮಿಟಿಯ ವರದಿಯನ್ನು ಕಾಂಗ್ರೆಸ್ ವರ್ಕಿಂಗ್ ಕಮಿಟಿಯುವರು ಒಪ್ಪಿರುವರು. ಇದರ ಸಾರಾಂಶವನ್ನು ಬೇರೆಡೆ ಕೊಡಲಾಗಿದೆ. ಅದರಂತೆ ಈ ಪ್ರಾಂತಗಳ (ಕರ್ನಾಟಕ ಮತ್ತು ಕೇರಳರ ರಚನೆಯೊಗಲು ಸದ್ಯದ ಪ್ರಾಂತಗಳಲ್ಲಿರುವ ಮಲೆಯಾಳ ಮತ್ತು ಕನ್ನಡ ಪ್ರದೇಶಗಳನ್ನು ನೆರೆಯ ಸಂಸ್ಥಾನಗಳೊಡನೆ ಸಂಯೋಜಿಸುವದು ಶಕ್ಯವಿಲ್ಲ. ಸಂಸ್ಥಾನಗಳೇ ಈ ಪ್ರದೇಶಗಳೊಳಗೆ ಸೇರಿದಾಗ ಆ (ಭಾಷಾವಾರು) ಪ್ರಾಂತಗಳ ರಚನೆ ಮಾಡಲು ಶಕ್ಯವಾಗುವದು. ಆದ್ದರಿಂದ ಸಂಸ್ಥಾನಗಳ ಬಗ್ಗೆ ಕೊನೆಯ ನಿರ್ಣಯವಾಗುವ ವರೆಗೆ ಈ ಪ್ರಾಂತಗಳ ಪ್ರಶ್ನೆ ತಡೆಯುವದು. ... ಇಂಥಾ ಹೊಸ ಪ್ರಾಂತರಚನೆಯನ್ನು ಮಾಡುವಾಗ ಯಾವ ಪ್ರದೇಶಗಳು ಈ ಭಾಷಾವಾರು ಪ್ರಾಂತವಲ್ಲಿ ಸೇರಲು ಒಪ್ಪುವವೋ ಅಷ್ಟೇ ಪ್ರದೇಶದಿಂದ ಭಾಷಾನುವಾರು ಪ್ರಾಂತ ರಚಿಸಲ್ಪಡಬೇಕು. ....ಆದರೆ ಪ್ರಾರಂಭದಲ್ಲಿ ಯಾವದೇ ಭಾಷಾನ್ವಯ ಪ್ರಾಂತ ರಚನೆಮಾಡುವಾಗ ಇದ್ದ ಪ್ರಾಂತದ ವಿಭಜನೆ ಮಾಡಿ ಹೊಸ ಪ್ರಾಂತ ರಚಿಸುವ ಮುಂದೆ ಎಲ್ಲರಿಗೂ ಒಪ್ಪಿತವಾದ ಭಾಷಾಪ್ರದೇಶದ ಮಟ್ಟಿಗೆ ಮಾತ್ರ ಹೊಸ ಪ್ರಾಂತ ರಚಿಸಲಾಗುವದು. ಬೇರೆ ಪ್ರಾಂತಯಾ ಸಂಸ್ಥಾನದ ತಕರಾರು ಇರುವ ಪ್ರದೇಶವನ್ನು ಪ್ರಾರಂಭದಲ್ಲಿ ಹೊಸ ಭಾಷಾವಾರು ಪ್ರದೇಶದಲ್ಲಿ ಸೇರಿಸುವದಿಲ್ಲ'

ಇದರಿಂದ ಭಾಷಾನುವಾರು ಪ್ರಾಂತಗಳು, ಅದರಲ್ಲೂ ಕರ್ನಾಟಕ ಮತ್ತು ಕೇರಳ ಪ್ರಾಂತಗಳ ರಚನೆಯು ಕೆಲವು ವರ್ಷಗಳ ವರೆಗೆ ಆಗುವಂತಿಲ್ಲವೆಂಬುದು ಸ್ಪಷ್ಟವಾಗಿದೆ. ಹಾಗೆ ಪ್ರಾಂತಗಳ ರಚನೆಯಾಗುವ ಕಾಲಕ್ಕೂ ಕೂಡ ಅವುಗಳೊಂದಿಗೆ ಕೊಡಗನ್ನು ಸೇರಿಸುವ ಪ್ರಶ್ನೆ ಯಾದರೂ ಬಹುದೂರವಿದೆ. ಏತಕೆಂದರೆ ಕೊಡಗಿನಲ್ಲಿ ಭಾಷಾವಾರು ಪ್ರಾಂತಕ್ಕೆ ಅಥವ ಬೇರೆ ದೊಡ್ಡ ಪ್ರಾಂತಕ್ಕೆ ಸೇರುವ ವಿಚಾರದಲ್ಲಿ ಕುಂಬ ಭಿನ್ನಾಭಿಪ್ರಾಯವಿದೆ. ಈ ವಿಚಾರದಲ್ಲಿ ಜನರ ಒಮ್ಮತವಿಲ್ಲದ ವಿಷಯ ಸಂಯೋಜನೆಯ ಮಾತೇ ಬರಲಾರದು. ಈ ವರದಿಯ ಮೇರೆ ಕೊಡಗಿನ ಭವಿಷ್ಯದ ವಿಚಾರದಲ್ಲಿ ದೇಶೀಯರ ಅಭಿಪ್ರಾಯ ತೆಗೆಯಬೇಕೆಂದು ಮೊನ್ನೆ ಕೌನ್ಸಿಲಿನಲ್ಲಿ ಪಾಸಾದ ಠರಾವು ಬಹು ಪ್ರಾಮುಖ್ಯದ್ದಾಗಿದೆ. ಸಂಸ್ಥಾನಗಳೇ ಇಂಡಿಯನ್ ಪ್ರಾಂತಗಳಲ್ಲಿ ವಿಲೀನವಾಗಬೇಕೆಂದು ಈ ವರದಿಯಲ್ಲಿರುವಾಗ್ಗೆ ಕೊಡಗು ಇಂದೋ ನಾಳೆಯೋ ಮೈಸೂರು ಸಂಸ್ಥಾನಕ್ಕೆ ಸೇರಿ ಹೋಗುವದೆಂದು ಕೂಗಿಕೊಳ್ಳುತ್ತಿರುವವರು ಇನ್ನಾದರೂ ತಮ್ಮ ಅಪಪ್ರಚಾರವನ್ನು ನಿಲ್ಲಿಸುವರಾಗಿ ನಂಬುತ್ತೇವೆ.

ಹಿಂದೂಸ್ಥಾನದ ಗೃಹಮಂತ್ರಿ ಪಟೇಲರು ಮುಂದಾಳುಗಳು ತಮ್ಮ ವರದಿಯಲ್ಲಿ ಯಾವದೇ ಪ್ರದೇಶದ ಭವಿಷ್ಯತ್ತನ್ನು ನಿರ್ಣಯಿಸುವ ಹಕ್ಕು ಅಲ್ಲಿಯ ಜನರದ್ದಾಗಿದೆ—ಎಂಬ ಪ್ರತಿಯೊಬ್ಬನ ನಾಗರಿಕ ಹಕ್ಕನ್ನು ಸಮರ್ಥಿಸಿರುವದು ದೇಶಕ್ಕೆಲ್ಲ ತುಂಬಾ ತೃಪ್ತಿಯನ್ನುಂಟು ಮಾಡಿದೆ.

ವರ್ತಮಾನ.

ತಾರೀಕು ೧೦-೪-೪೯ ರಲ್ಲಿ ಮಡಿಕೇರಿಯಲ್ಲಿ ನಡೆದ ಕೊಡಗು ಬಾಲಚರ ಘಾವಳದ 'ರೇಲಿ'ಯಲ್ಲಿ ಪ್ರಥಮ ಬಹುಮಾನದ ಛಾಂಪಿಯನ್ ಶೀಲ್ಡನ್ನು ವೀರರಾಜಪೇಟೆ ಟ್ರುಪು, ದ್ವಿತೀಯ ಬಹುಮಾನ ಛಾಂಪಿಯನ್ ಕಪ್ಪನ್ನು ನಾಪೋಕ್ಲು ಇಗ್ಗುತಪ್ಪ ಟ್ರುಪೂ ಗೆದ್ದವು.

ತಾರೀಕು ೨ನೇ ಗುರುವಾರ ಸಾಯಂಕಾಲ ೫ ೩೦ ಗಂಟೆಗೆ ಮಡಿಕೇರಿ ಹುಡುಗಿಯರ ಶಾಲೆಯಲ್ಲಿ ವಿವಿಧ ವಿನೋದಾವಳಿಯ ಕೂಟವೊಂದು ನಡೆಯುವದು.

ಮೂರ್ನಾಡಿನ ಶ್ರೀರಾಮಮಂದಿರದಲ್ಲಿ ಶ್ರೀರಾಮ ನವಮಿಯನ್ನು ತಾರೀಕು ೩೧-೩-೪೯ರಿಂದ ೭-೪-೪೯ರ ವರೆಗೆ ನಡೆಸಲಾಯಿತು. ಹರಿಕಥೆ, ಭಜನೆ, ಭಾರತ ವಾಚನ, ಸಂಗೀತ ಕಚೇರಿ ಮೊದಲಾದ ಏರ್ಪಾಡುಗಳಿದ್ದವು. ತಾ. ೮ನೇ ಶುಕ್ರವಾರ ಪೇಟೆಸಹದೊಡನೆ ಮೆರವಣಿಗೆ ನಡೆಯಿತು.

ಡಾ. ಚೇರಂಡ ಅಪ್ಪಯ್ಯನವರ ಪುತ್ರ ಪೊನ್ನಪ್ಪನವರು ತಾ ೧೪-೪-೪೯ ರಲ್ಲಿ ಹೃದಯಕ್ರಿಯೆ ನಿಂತ ಪ್ರಯುಕ್ತದಿಂದ ನಿಧನರಾದರೆಂದು ವಿಷಾದಿಸುತ್ತೇವೆ.

ಕೊಡಗಿನಲ್ಲಿ ಕಾಲೇಜ್ ತೆರೆಯುವ ವಿಷಯದಲ್ಲಿ ಪರಿಶೀಲಿಸಲು ಮದ್ರಾಸ್ ವಿಶ್ವವಿದ್ಯಾನಿಲಯ ... ಈ ತಿಂಗಳ ಉತ್ತರಾರ್ಧದಲ್ಲಿ ಮಡಿಕೇರಿಗೆ ಬರಲಿರುವರೆಂದು ತಿಳಿದು ಬಂದಿದೆ.

ಸರಕಾರಿ ಉದ್ಯೋಗದಿಂದ ನಿವೃತ್ತರಾಗಿದ್ದ ಶ್ರೀ. ಪಟ್ಟಮಾಡ ತಿಮ್ಮಯ್ಯನವರನ್ನು ರಸ್ತೆಯ ಉಳಿತಾಯ ಯೋಜನೆಯ ಜಿಲ್ಲಾ ಆರ್ಗನೈಜರಾಗಿ ನೇಮಿಸಿರುವರು.

ಇಂಡಿಯಾ ಸರಕಾರದ ಟ್ರಾನ್ಸ್‌ಪೋರ್ಟ್ ಮತ್ತು ರೈಲ್ವೆ ಇಲಾಖೆಗಳ ಸ್ಟೇಟ್ ಮಂತ್ರಿಯವರಾದ ಶ್ರೀ ಕೆ ಸಂತಾನಮ್‌ರವರು ಈ ತಾ. ೩೦ನೇ ಶನಿವಾರ ಮಂಗಳೂರಿನಿಂದ ಮಡಿಕೇರಿಗೆ ಬಂದು, ಊಟ ಮುಗಿಸಿಕೊಂಡು ವಿಶ್ರಾಂತಿಯಿಂದ ಮೈಸೂರಿಗೆ ಹೋಗುವರೆಂದು ವರ್ತಮಾನ.

ಚಿಕ್ಕ ಕಾಫಿ ಪ್ಲಾಂಟರುಗಳ ಅವಗಾಹನೆಗೆ.

ಇಂಡಿಯನ್ ಕಾಫಿ ಬೋರ್ಡಿನವರು ಕಳೆದ ವರ್ಷದ (1947-48) ಚಿಕ್ಕ ಪ್ಲಾಂಟರುಗಳ ಅಂದರೆ 25 ಎಕ್ರೆಗೆ ಒಳಗೆ ಇರುವವರ ಪೂಲ್ ಮಾಡಿದ ಕಾಫಿಯ ಮೇಲೆ ಕಡೇ ಡಿವಿಡೆಂಡನ್ನು ಸಾರಿರುವರು. ಪ್ಲಾಂಟರುಗಳು ... ರಶೀತಿಯನ್ನು ... ಡಿವಿಡೆಂಡನ್ನು ಈ ತಿಂಗಳ ಅಂತ್ಯದೊಳಗೆ ಹೊಂದಿಕೊಳ್ಳಬೇಕೆಂದು ಈ ಮೂಲಕ ತಿಳಿಸಲಾಗಿದೆ.

ಏಜೆಂಟ್
ಮಲ್ಕೋರ್ಟ್ ಬ್ರದರ್ಸ್
2-1 ಮಡಿಕೇರಿ

ಜಾಹೀರಾತ್ ನೋಟೀಸ್.

ಉತ್ತರ ಕೊಡಗು ತಾಲೋಕು ಶನಿವಾರಸಂತೆ ಹೋಬಳಿ ದೊಡ್ಡಕುಂದ ಗ್ರಾಮದಲ್ಲಿರುವ ಉಪ್ಪಾರು ಸೋಮಪ್ಪನವರ ಹಿರಿಮಗ ಈಗ ಹಾಲಿ ಬೆಂಗಳೂರಿನಲ್ಲಿರುವ ಮಲ್ಲಪ್ಪನೆ ಈ ಮೂಲಕ ಜನಗಳಿಗೆ ತಿಳಿಯಪಡಿಸುವುದೇನಂದರೆ ನನ್ನ ತಂದೆ ಸೋಮಪ್ಪನವರು ಬಹಳ ದಿವಸಗಳಿಂದಲೂ ದುರ್ವರ್ತನೆಗಳಿಗೆ ... ನನಗೂ ಮತ್ತು ನನ್ನ ತಾಯಿಗೂ ಮೋಸಪಡಿಸಬೇಕೆಂಬ ಉದ್ದೇಶದಿಂದ ಅವರ ಹೆಸರಿನಲ್ಲಿ ಜಮೂಬಂದಿ ನಡೆದು ಬರುತ್ತಿರುವ ನಮ್ಮ ಒಟ್ಟು ಕುಟುಂಬದ ಸ್ಥಿರ ಸೊತ್ತುಗಳನ್ನು ಮತ್ತು ಚರ ಸೊತ್ತುಗಳನ್ನು ಪರಬಾರೆ ಮಾಡುವ ಏರ್ಪಾಡಿನಲ್ಲಿರುವದಾಗಿ ನಾವು ತಿಳಿಯುತ್ತೇವೆ. ಸದ್ರಿ ಸ್ಥಿರ ಮತ್ತು ಚರ ಸೊತ್ತುಗಳಲ್ಲಿ ನನಗೂ ಮತ್ತು ನನ್ನ ತಾಯಿಗೂ ಸಮನಾದ ಹಕ್ಕಿದೆ. ಸದ್ರಿ ಸೊತ್ತುಗಳನ್ನು ಯಾರಾದರೂ ಕ್ರಯ, ಬೋಗ್ಯ, ಗಿರ್ವಿ ವಗೈರೆ ವಿಧದಿಂದಲ್ಲಿ ನನ್ನ ತಂದೆಯಿಂದ ಪಡೆಕೊಂಡರೆ, ಅವು ಅವರಿಗೆ ಖಂಡಿತ ಹಕ್ಕಾಗಲಾರವು. ಅಲ್ಲದೆ ಅದರಿಂದ ನಮಗಾಗುವ ಕಷ್ಟ ನಷ್ಟಗಳಿಗೆ ಅವರೇ ಜವಾಬ್ದಾರರಾಗಬೇಕಾಗುವುದು.

"ಜೈ ಹಿಂದ್"
ಕೆ. ಎಸ್. ಮಲ್ಲಪ್ಪ,
2-1 ಸೋಮವಾರಪೇಟೆ.

ಮಾರಾಟಕ್ಕಿದೆ.

ಸೋಮವಾರಪೇಟೆ ನಾಡ ... ಗ್ರಾಮದ ಶ್ರೀ ... ಆರ್. ... ಅವರ ಪರಿ ... ಗಿನ ... ಕ್ಕಿದೆ. 14 ಎಕ್ರೆ ... ಭೂಮಿ ... 4 ಎಕ್ರೆ ... ಕಾಫಿ, ಕಿತ್ತಳೆ, ಏಲಕ್ಕಿ, ಅಡಿಕೆ ಫಸಲಿಗೆ ಬಂದಿದೆ. ವಾಸಕ್ಕೆ ಅನುಕೂಲವಾದ 3 ... ವನೆ, ... ದನದ ಕೊಟ್ಟಿಗೆ ... ಇವುಕ್ಕೆ ಸಂಬಂಧಿಸಿದ 25 ಎಕ್ರೆ ... ಕಾಫಿ ವ್ಯವಸಾಯಕ್ಕೆ ... ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ಆರ್. ... ,
ಬೇಳೂರು ಗ್ರಾಮ
2-1 ಸೋಮವಾರಪೇಟೆ

ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್,
ಮಡಿಕೇರಿ.



ನಮ್ಮ ಫ್ರೇಜರ್‌ಪೇಟೆ ಕಾರ್ಖಾನೆಯಲ್ಲಿ ಸದ್ಯಕ್ಕೆ ಈ ಕೆಳಗಿನ ಕೆಲಸಗಳನ್ನು ಕೈಕೊಂಡಿರುತ್ತೇವೆ. ಸರ್ವರೂ ಪ್ರೋತ್ಸಾಹಿಸಬೇಕಾಗಿ ವಿನಂತಿ.
(1) ಫತ್ತ ಮಿಲ್ ನಡೆಸುವುದು, (2) ಅಕ್ಕಿ ಮತ್ತು ಧಾನ್ಯಗಳನ್ನು ಹುಡಿಮಾಡುವುದು, (3) ಕಾಫಿ ಹುರಿದು ಹುಡಿ ಮಾಡುವುದು, (4) ಮರಳಿ ಹುಡಿಮಾಡುವುದು.

CRESCENT

FOR PROTECTION AND SERVICE.

It is best to represent and insure with

The CRESCENT Insurance Co., Ltd,

H: O: BOMBAY. [*Established 1919.*

For particulars write to:

Sri B A Poovayya	or The Branch Manager'
Organiser	*22 B. Mahatma Gandhi Road,*
Polibetta, Coorg.	*Bangalore 1.*

ಸುರಕ್ಷಿತವಾದ ಜೀವವಿಮೆ ಪಡೆಯಲು
ಕ್ರೆಸೆಂಟ್
ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.

ಪ್ರ ಕ ಟ ಣೆ.

ದಿ. ಬೆಂಗಳೂರು ಪ್ರಾವಿಡೆಂಟ್ ಇನ್‌ಷ್ಯೂರೆನ್ಸ್ ಕಾರ್ಪೊರೇಷನ್ ಲಿಮಿಟೆಡ್.

ಪ್ರಧಾನ ಕಚೇರಿ "ಏಷ್ಯಾಟಿಕ್ ಬಿಲ್ಡಿಂಗ್ಸ್" ಬೆಂಗಳೂರು ನಗರ

ಭಾರತದ ಪ್ರಸಿದ್ಧಿಯಾದ ಇನ್‌ಷ್ಯೂರೆನ್ಸ್ ಗೆಜೆಟ್‌ಗಳ ಅಭಿಪ್ರಾಯಗಳು

(Insurance Herald) ಇನ್‌ಷ್ಯೂರೆನ್ಸ್ ಹೆರಾಲ್ಡ್

1948 ರ ಸೆಪ್ಟಂಬರ್ 25.

ಭಾರತದಲ್ಲಿ ಪ್ರಾವಿಡೆಂಟ್ ವಿಮೆಯು ಇನ್ನೂ ಶೈಶವಾವಸ್ಥೆಯಲ್ಲಿದೆ. ಈಗ ತಾನೆ ಹಲವು ವೈವಿಧ್ಯದಿಂದ ಮುಂದುವರಿಯುತ್ತಿರುವ ವಿಮಾ ಕಂಪನಿಗಳನ್ನು ನೋಡಿದಲ್ಲಿ ತುಂಬಾ ಸಂತೋಷವಾಗುತ್ತದೆ ಅಂತೆಯೇ 'ಬೆಂಗಳೂರು ಪ್ರಾವಿಡೆಂಟಿನ ವರ್ಷಾಂತ್ಯದ ವರದಿ ಮತ್ತು ಲಾಭ ನಷ್ಟಗಳನ್ನು ನೋಡಿದಲ್ಲಿ ಕಂಪನಿಯು ವರ್ಷದಲ್ಲಿಯ ಆದಾಯ, ಸುಭದ್ರತೆಗಳನ್ನೂ, ಕಳೆದ ಸಲದ ವ್ಯವಹಾರಗಳಿಗಿಂತಲೂ ಶೇಕಡ 37 1ರಷ್ಟರ ಹೆಚ್ಚಳವನ್ನೂ ಕಂಪನಿಯ ವಿಮಾನಿಧಿಯು ಶೇಕಡ 44ರಷ್ಟು ಹೆಚ್ಚಿರುವುದೂ . ಗಣನಾರ್ಹ ಅಂಶಗಳು ಬೆಂಗಳೂರು ಪ್ರಾವಿಡೆಂಟಿನ ಕಂಪನಿಯ ಅಧ್ಯಕ್ಷರೂ ಮತ್ತು ಮ್ಯಾನೇಜಿಂಗ್ ಡೈರೆಕ್ಟರೂ ಆದ ಶ್ರೀ ಹೆಚ್ ವೆಂಕಟರಾಮಯ್ಯನವರ ಮಾರ್ಗದರ್ಶಕತ್ವವನ್ನು ಮ . ಕಂಪನಿಯ ಅಭಿವೃದ್ಧಿಗಾಗಿ ಸಂಪೂರ್ಣವಾಗಿ ಸೇವೆ ಇತ್ತಿರುವುದನ್ನು ನಾವು ಕೃತಜ್ಞತಾಪೂರ್ವಕವಾಗಿ ಅಭಿನಂದಿಸುತ್ತೇವೆ

(Insurance World) ಇನ್‌ಷ್ಯೂರೆನ್ಸ್ ವರ್ಲ್ಡ್

1948 ರ ನವಂಬರ್.

ಬೆಂಗಳೂರು ಪ್ರಾವಿಡೆಂಟ್ ಕಂಪನಿಯ ವ್ಯಾಪಾರ ಮಹಿವಾಟಗಳನ್ನು ಪರಿಶೀಲಿಸುವ ಮತ್ತು ವಿಮರ್ಶಿಸುವ ಅವಕಾಶ ದೊರಕಿತು. ಮತ್ತು ಕಂಪನಿಯು ನಡೆಸುತ್ತಿರುವ ಮಹಿವಾಟಗಳನ್ನು ನೋಡಿ ತುಂಬಾ ಸಂತೋಷವಾಯಿತು 1947ರ ವರ್ಷದಲ್ಲಿಯೂ ಕಂಪನಿಯು ತನ್ನ ಅಭಿವೃದ್ಧಿಯನ್ನು ಸರ್ವತೋಮುಖವಾಗಿ ಹೆಚ್ಚಿಸಿಕೊಂಡಿರುವುದನ್ನು ನೋಡಿ ಹೆಮ್ಮೆ ಪಡಬೇಕಾದ ಅಂಶವೇ ಆಗಿದೆ ಹಿಂದಿನ ವರ್ಷದ ವ್ಯವಹಾರದಲ್ಲಿಯ ಅಂಕಿ ಅಂಶಗಳನ್ನು ಪ್ರಸಕ್ತ ವರ್ಷದಲ್ಲಿ ಹೋಲಿಸಿದಲ್ಲಿ ಶೇಕಡ 37 1 ರಷ್ಟು ಹೆಚ್ಚಿರುವುದೂ ಮತ್ತು ಜೀವವಿಮಾ ನಿಧಿಯು ಶೇಕಡ 11ರಷ್ಟು ಹೆಚ್ಚಿರುವುದೂ ಕಂಡು ಬರುತ್ತದೆ. ಕಂಪನಿಯ ನಿಧಿಗಳು ವಿವಿಧ ಸುಭದ್ರ ನಿಧಿಗಳಲ್ಲಿ ವಿನಿಯೋಗವಾಗಿದೆಯಲ್ಲದೆ ಹೆಚ್ಚಿಗೆಯಾಗಿ ಸರ್ಕಾರದ ನಿಧಿಗಳಲ್ಲಿ ಮತ್ತು ಸರ್ಕಾರದ ಅಂಗೀಕೃತ ಸಂಸ್ಥೆಗಳ ನಿಧಿಗಳಲ್ಲಿಯೇ ವಿನಿಯೋಗಿಸಲಾಗಿದೆ ಕಾರ್ಪೊರೇಷನ್ನಿನ ಆಡಳಿತ ವರ್ಗದವರ ಸುವ್ಯವಸ್ಥಿತ ಮೇಲ್ವಿಚಾರಣೆಯಲ್ಲಿ ಕಂಪನಿಯ ಸೆಕ್ರೆಟರಿ ಮತ್ತು ಮೇನೇಜರ್‌ರವರಾದ ಶ್ರೀ ಎನ್ ವಿ ನಾರಾಯಣ ಮೂರ್ತಿ, ಬಿ ಎ, ಬಿ ಎಲ್, ರವರ ಸುವ್ಯವಸ್ಥಿತ ವ್ಯವಸ್ಥಾಪನೆ ಮತ್ತು ಪ್ರೋತ್ಸಾಹಗಳು ಅಭಿನಂದನಾರ್ಹವಾಗಿವೆ .

ಕೊ ಡ ಗು ಪ್ರಾಂ ತ್ಯ ದ ಲ್ಲಿ

ಸಂಬಳದ ಮೇಲೆ ಏಜೆಂಟರಾಗಲಿಚ್ಛಿಸುವ ಅನುಭವಿಗಳೂ ಮತ್ತು ವ್ಯಾಪಾರದಲ್ಲಿ ಪ್ರತಿಷ್ಠಿತರೂ ಆದವರಿಗೆ

ಏಜೆಂಟರಾಗಲು ಸುಸಮಯ

ನಿರ್ದಿಷ್ಟ ಬಾಬತಿನ ಮೇಲೆ ಸಂಬಳ ರೂ 100 ಮತ್ತು ಅಲೋಯನ್ಸ್ ರೂ. 25. ನಮ್ಮ ವಿಮಾ ಯೋಜನೆಯು ಸರ್ವರ ಸಂಪತ್ತಿಗೂ ಅನುಕೂಲವಾಗಿದೆ

ರೂ 25ರಿಂದ ರೂ. 900 ರ ವರೆಗಿನ ವಿಮಾಪಾಲಿಸಿಗಳು ಆರ್ಥಿಕ ಭದ್ರತೆ ಮತ್ತು ವಿಮಾ ವ್ಯವಹಾರಗಳು ಹೆಚ್ಚಳವನ್ನು ತೋರಿಸಿವೆ

ಭಾರತದಲ್ಲಿಯ ಪ್ರಾವಿಡೆಂಟ್ ವಿಮಾಕಂಪೆನಿಗಳಲ್ಲಿ ಈ ಕಂಪೆನಿಯು

ಪ್ರ ಥ ಮ ಶ್ರೇ ಣಿ ಯ ಲ್ಲಿ

ಮುಂ ದು ವ ರಿ ಯು ತ್ತಿ ದೆ

ವಿವರಗಳಿಗೆ ಬರೆಯಿರಿ

ಮ್ಯಾನೇಜಿಂಗ್ ಡೈರೆಕ್ಟರ್.

2-2

WANTED

Wanted Boys between the ages of 14 and 15 years for enrolment in different Technical Training and Centres-Educational standard requiread is between II Form and VI Form

For particulars please interview Mr. A A Mandanna, Extra Assistant Recruiting officer at the following places on the dates mentioned against each'

Place-	Date-		
Sanivarsanthe	17	April 49	at Inspection Bungalow-
Somwarpet	18, 19, 20	,,	,,
Virajpet	22, 23	,,	,,
Napoklu	25	,,	,,
Ponnampet	26, 27	,,	,,
Mercara	29, 30	,,	at Nad office

3-2

'ನಾನು ಗವೈಯ್ಯ ಮಾತ್ರ ಆಗಲಿಲ್ಲ.'

ಪಂ ನೆಹ್ರೂರವರು ಅಖಿಲ ಭಾರತ ರೇಡಿಯೋಗಳಲ್ಲಿ 'ಮಕ್ಕಳ ಬಳ್ಗನ' ಎಂಬ ಪ್ರಸಾರವನ್ನಾರಂಭಿಸಿದರು ಮಕ್ಕಳಿಗೆ ಮಹಾಪುರುಷರುಗಳ ಜೀವನದ ಪರಿಚಯವಾಗಲೆಂದೇ ಈ ಪ್ರಸಾರ ಏರ್ಪಡಿಸಿದೆ ಈ ಪ್ರಸಾರದಲ್ಲಿ ಒಬ್ಬ ಬಾಲಕನು ಪಂ ನೆಹ್ರೂರವರನ್ನು 'ನಿಮ್ಮ ಹಾಡ' ಎಂದು ಕೇಳಿದರು ನೆಹ್ರೂರವರಿಗ ಸ್ವಲ್ಪ ಇಕ್ಕಟ್ಟಿನ ಸ್ಥಿತಿಯಾಯಿತ ಅವರೆಂದರು 'ನಾನು ನನ್ನ ಜೀವನದಲ್ಲಿ ಯಾವಯಾವುದೋ ಉದ್ಯೋಗಗಳಲ್ಲಿ ತೊಡಗಿದೆ. ಆದರೆ ಗವಯ್ಯ [ಸಂಗೀತಗಾರ] ಮಾತ್ರ ಆಗಲಿಲ್ಲ'

ನೆಹ್ರೂರವರು ಒಬ್ಬ ಹುಡುಗನನ್ನು 'ನಿನ್ನ ಅಭಿಲಾಷೆಯೇನು' ಎಂದು ಕೇಳಿದರು 'ನಾನೊಬ್ಬ ಜವಹರ್ ಆಗಬೇಕೆಂದು ಆಶಿಸುತ್ತೇನೆ' ಎಂದು ಅವನು ತಕ್ಷಣವೇ ಎಂದ ನೆಹ್ರೂರವರು ತಮಗೆ ನೆರೆದ ಹಲವು ಮಹಾ ಗುರುಗಳನ್ನು ಕುರಿತ ಪ್ರಶ್ನಿಸಿ ತಿಳಿಸುತ್ತಾ 'ಇವರೆಲ್ಲಾ ನನಗೆ ದೊರೆತ ದೊಡ್ಡ ಗುರುವೆಂದರೆ 'ಎಂದು ಮಕ್ಕಳು ಹೇಳಿಯಾರು ಎಂದು ಹುಡುಗರನ್ನು ಕೇಳಲಾಗಿ ತಕ್ಷಣವೇ ಅವರಲ್ಲಿಯೂ 'ಗಾಂಧಿ ಜಿ' ಎಂದು ಉತ್ತರವಿತ್ತರು

ಮದ್ರಾಸಿನಲ್ಲಿ ಹೊಸ ಮಂತ್ರಿ ಮಂಡಳ.

ಮದ್ರಾಸಿನ ಹೊಸ ಮಂತ್ರಿಮಂಡಳವು ಕಳೆದ ಬುಧವಾರ ಪ್ರಮಾಣ ವಚನ ಸ್ವೀಕರಿಸಿ ಅಧಿಕಾರ ವಹಿಸಿಕೊಂಡಿತು.

ಮಂತ್ರಿಮಂಡಳಕ್ಕೆ ಇನ್ನೂ ಕೆಲವರನ್ನು ಸೇರಿಸಿಕೊಳ್ಳುವ ಯೋಜನೆಯಿದೆ ಎಂಬುದಾಗಿ ಮುಖ್ಯ ಮಂತ್ರಿ ಶ್ರೀ ಕುಮಾರಸ್ವಾಮಿ ರಾಜಾರವರು ತಿಳಿಸಿದರು

ಮಂತ್ರಿಮಂಡಳದಲ್ಲಿ ಪೋರ್ಟ್‌ಪೋಲಿಯೋಗಳು ಈ ರೀತಿ ಹಂಚಲ್ಪಟ್ಟವು-

ಶ್ರೀ. ಕುಮಾರಸ್ವಾಮಿ ರಾಜಾ (ಮುಖ್ಯ ಮಂತ್ರಿ) ಪೋಲೀಸ್, ಡಾ. ರಾಜನ್-ಹಿಂದೂ ರಿಲಿಜಸ್ ಎಂಡೋಮೆಂಟ್ಸ್ ಮತ್ತು ಆಹಾರ ಶ್ರೀ ಎಂ ಭಕ್ತವತ್ಸಲಂ-ಪಬ್ಲಿಕ್ ವರ್ಕ್ಸ್ ಮತ್ತು ಇನ್‌ಫರ್ಮೇಷನ್, ಶ್ರೀ ವಿ ಗೋಪಾಲರೆಡ್ಡಿ-ಹಣಕಾಸು, ವ್ಯಾಪಾರಿ ತೆರಿಗೆಗಳು, ಚುನಾವಣೆಗಳು, ಮೋಟರ್ ಟ್ರಾನ್ಸ್‌ಪೋರ್ಟ್. ಶ್ರೀ. ಕ, ಮಾಧವ ಮೆನನ್-ಜೈಲು, ಕೋರ್ಟ್, ವ್ಯವಸಾಯ ಮತ್ತು ಅರಣ್ಯ ಶ್ರೀ ಎಚ್ ಸೀತಾರಾಮರೆಡ್ಡಿ-ಕಂದಾಯ, ಕೈಗಾರಿಕೆ ಮತ್ತು ಲೇಬರ್ ಶ್ರೀ ಎ ಬಿ ಶೆಟ್ಟಿ-ವಿದ್ಯಾಭ್ಯಾಸ ಮತ್ತು ಸಾರ್ವಜನಿಕ ಆರೋಗ್ಯ ಶ್ರೀ ಕೆ ಚಂದ್ರಮೌಳಿ-ಸ್ಥಳೀಯ ಸಂಸ್ಥೆಗಳು, ಸಹಕಾರ. ಶ್ರೀ ಬಿ. ಪರಮೇಶ್ವರನ್-ಗ್ರಾಮ ಅಭಿವೃದ್ಧಿ, ಗ್ರಾಮಗೃಹ ಕೈಗಾರಿಕೆ, ಹರಿಜನೋದ್ಧಾರ ಮುಂತಾದವು ಶ್ರೀ ಎನ್ ಸಂಜೀವರೆಡ್ಡಿ-ಮದ್ಯ ನಿರೋಧ ಮತ್ತು ಗೃಹವಸತಿ

೧೯೫೧ನೆ ಫೆಬ್ರವರಿಯಲ್ಲಿ ಚುನಾವಣೆ

ಡಾ. ಪಟ್ಟಾಭಿಯವರು ಚುನಾವಣೆ ವಿಷಯದಲ್ಲಿ ಮಾತನಾಡುತ್ತ—ಈಗಾಗಲೇ ನಿರ್ಧಾರವಾದಂತೆ ಘಟನಾ ಸಮಿತಿಯ ಸಭೆಯು ಮೇ ತಿಂಗಳ ಹದಿನಾರರಲ್ಲಿ ಜರಗಿತೆಂದಾಗಲಿ ಭಾರತದ ಘಟನೆಗಳ ವಿಷಯದ ಚರ್ಚೆಯು ನಡೆದು ಅವು ಆಗಸ್ಟ್ ಹದಿನೈದರೊಳಗೆ ನಿರ್ಧಾರವಾಗಬಹುದು ಈ ಘಟನೆಗಳು ಮಾನ್ಯವಾಯಿತೆಂದರೆ ಅವುಗಳನ್ನು ಜಾರಿಯಲ್ಲಿ ಕೂಡಲೇ ತರಲಾಗುವುದು ಈ ಘಟನೆಯ ಕರಡಿನಲ್ಲಿ ಭಾರತ ಪ್ರಜಾ ಪ್ರಭುತ್ವಕ್ಕೆ ಅಧ್ಯಕ್ಷರನ್ನು ಚುನಾಯಿಸುವ ಹಕ್ಕು ಇರುವುದಲ್ಲದೆ ಅದನ್ನು ಕಾರ್ಯದಲ್ಲಿ ತರುವುದು ಸಾಧ್ಯವಿದೆ ಘಟನೆಗಳನ್ನು ಮಂಜೂರು ಮಾಡಿದ ನಂತರ ಅದನ್ನು ಕಾರ್ಯಕ್ಕೆ ತರುವುದಕ್ಕೆ ಯಾವ ಅಡ್ಡಿಯೂ ಇರುವುದಿಲ್ಲ

ಈ ಒಂದು ವರ್ಷದೊಳಗೇನೇ ಜನಗಣನೆಯು ಪೂರ್ಣವಾಗಿ ಸಿದ್ಧತೆಯಾದರೂ ಇದಷ್ಟು ಅಪಾರವಾದ ಕೆಲಸವೆಂದು ಜನತೆಯು ತಿಳಿಯುತ್ತಿದ್ದು. ಹಳೆಯ ಘಟನೆಯ ಪ್ರಕಾರ ನಮ್ಮ ದೇಶದ ೩೯ ಕೋಟಿ ಜನರಲ್ಲಿ ಕೇವಲ ಮೂರುವರೆ ಕೋಟಿ ಜನರಿಗ ಮತದಾನ ಮಾಡುವ ಹಕ್ಕಿತ್ತು, ಇದು ಸಹ ಅವಿಭಾಜ್ಯ ಭಾರತದಲ್ಲಿ ಆದರೆ ಈಗಿನ ಹೊಸ ಘಟನೆಯ ಪ್ರಕಾರ ಪ್ರತಿಯೊಬ್ಬ ಪ್ರೌಢರಿಗ ಮತದಾನ ಮಾಡುವ ಹಕ್ಕು ಸಿಗುವುದು ೩೦ ಕೋಟಿ ಜನತೆಯಲ್ಲಿ ಸುಮಾರು ೧೭ ಕೋಟಿ ಜನರಿಗ ಮತದಾನ ಹಕ್ಕು ಸಿಗುವುದು ಇದರ ಪ್ರಕಾರ ಪ್ರತಿಯೊಬ್ಬ ಪುರುಷನಿಗೂ ಸ್ತ್ರೀಗೂ ಮತದಾನದ ಹಕ್ಕು ದೊರೆತಂತಾಯಿತು.

ಈ ೧೭ ಕೋಟಿ ಜನರ ಹೆಸರುಗಳನ್ನು ಎರಡೆರಡು ಸಲ ಮತ ಪಟ್ಟಿಯಲ್ಲಿ ಛಾಪಿಸುವುದೆಂದರೆ ಅದೆಷ್ಟು ಕಷ್ಟದ ಕಾರ್ಯವೆಂದು ಅರಿತುಕೊಳ್ಳುತ್ತಿದ್ದು ಭಾರತದಲ್ಲಿರುವ ಛಾಪಖಾನೆಗಳೆಲ್ಲ ರಾತ್ರಿ ದಿವಸಗಳೆನ್ನದೆ ಕೆಲಸ ಮಾಡಿದರೂ ಈ ಮುದ್ರಣದ ಕಾರ್ಯವನ್ನೂ ನಡೆಸುವರೆ ಒಂದು ವರ್ಷದ ಸಮಯ ಹಿಡಿಯುವುದೆಂದು ಹೇಳಲು ಅಡ್ಡಿಯಿಲ್ಲ.

೧೯೧೯ರಲ್ಲಿ ಹಾಗೂ ೧೯೩೫ನೇ ವರ್ಷಗಳಲ್ಲಿ ಮಾನ್ಯವಾದ ಘಟನೆಗಳ ಪ್ರಕಾರ ಚುನಾವಣೆ ನಡೆಯಬೇಕಾದರೆ ಎರಡೆರಡು ವರ್ಷಗಳು ಬೇಕಾದವು. ಇದೇ ರೀತಿಯಲ್ಲಿ ಈ ಸಲವೂ ಘಟನೆಗಳು ಸ್ವೀಕೃತವಾದ ನಂತರ ೨ ವರ್ಷದ ಅವಧಿಯಾದರೂ ಚುನಾವಣೆಗಾಗಿ ಬೇಕಾಗುವುದು

ಮತದಾರರ ಪಟ್ಟಿಯನ್ನು ಮಾತ್ರ ಮಾಡಬೇಕಲ್ಲದೆ ಈ ವಿಚಾರದಲ್ಲಿ ಬರುವ ಆಕ್ಷೇಪಣೆಗಳನ್ನು ಪರಿಶೀಲಿಸುವ ಕಾರ್ಯಗಳು ನಡೆಯಬೇಕಾದವು ಹೀಗೆ ಮೊದಲಾಗಿ ಸಿದ್ಧವಾದ ಪ್ರಾಥಮಿಕ ಮತಪಟ್ಟಿಯನ್ನು ಪರಿಶೀಲಿಸಿ ಅನಂತರ ಎರಡನೇಯದಾಗಿ ಛಾಪಿಸಬೇಕಾಗುವುದು. ಚುನಾವಣೆಯು ನಡೆಯಬೇಕಾದರೆ ಮತದಾರರ ಪಟ್ಟಿಯು ಒಂದು ವರ್ಷ ಕ್ಕೂ ಹೆಚ್ಚು ಬೇಕಾಗುವುದು ಅಂತೂ ಆಗಸ್ಟ್ ೧೯೫೧ನೇಯ ಫೆಬ್ರವರಿ ತಿಂಗಳಲ್ಲಿ ಚುನಾವಣೆಗಳು ನಡೆಯುವದೇ ಸಾಧ್ಯವಾಗುವುದು ಇದು ಆಗ ನಡೆಯುತ್ತಿರುವ ತಯಾರಿಯು ಪ್ರಮಾಣ ತೆಗೆದುಕೊಂಡರೆ ಸಾಧ್ಯವಾಗುವುದು ಎಂದು ಅವರು ಹೇಳಿದರು

(ಇದು ಪ್ರಕಟಣೆಯೇ ಹೊರತು ಪ್ರಾಸ್ಪೆಕ್ಟಸ್ ಅಲ್ಲ)

ಕಾವೇರಿ ಪೇಪರ್ ಮಿಲ್ಸ್ ಮತ್ತು

(ಕೊಡಗು ಪ್ರಾಂತ್ಯದಲ್ಲಿ ಇಂಡಿಯನ್

(ಇಂಗ್ಲೀಷಿನ ಪ್ರಾಸ್ಪೆಕ್ಟಸ್ ಪ್ರತಿಯನ್ನು ಕೊಡಗಿನ ಜಾಯಿಂಟ್ ಸ್ಟಾಕ್ ಕಂಪೆನಿಗಳ ರಿಜಿಸ್ಟ್ರಾರ್ ಆಫೀಸಿನಲ್ಲಿ ದಾಖಲ್ಮಾಡಿದೆ. ಪ್ರಾಸ್ಪೆಕ್ಟಸ್ಸಿನ ಕಾಪಿಗಳನ್ನು ಸೌರಾಷ್ಟ್ರ, ಮತ್ತು ರಾಜಸ್ಥಾನ, ವಿಂಧ್ಯ ಪ್ರದೇಶ, ಮಧ್ಯ ಭಾರತ ಯೂನಿಯನ್ನುಗಳ ಮತ್ತು ಹೈದರಾಬಾದ್, ಹೈದರಾಬಾದ್, ಜಯಪುರ, ಭೋಪಾಲ್, ಕೊಚಿನ್, ಕೂಚ್‌ಬಿಹಾರ್ ಮತ್ತು ಪಾಟಿಯಾಲಾ, ಕಾಶ್ಮೀರ ಸಂಸ್ಥಾನಗಳ ಜಾಯಿಂಟ್ ಸ್ಟಾಕ್ ಕಂಪೆನಿಗಳ ರಿಜಿಸ್ಟ್ರಾರ್ ಆಫೀಸುಗಳಲ್ಲೂ ದಾಖಲ್ಮಾಡಲಾಗುವುದು.)

ಈ ಕಂಪನಿಗೆ ಎರಡೂವರೆಕೋಟಿ ರೂಪಾಯಿಗಳ ಬಂಡವಾಳವನ್ನು ಹಿದಗಿಸಿಕೊಳ್ಳಲು ಭಾರತ ಕೇಂದ್ರ ಸರ್ಕಾರದ ಅನುಮತಿ ದೊರೆತಿದೆ. ಅನುಮತಿ ಆಜ್ಞೆಯ ಪೂರ್ಣ ಪ್ರತಿಯನ್ನು ಕಂಪೆನಿಯ ರಿಜಿಸ್ಟರ್ಡ್ ಆಫೀಸಿನಲ್ಲಿ ಪರಿಶೀಲಿಸಬಹುದು. ಅನುಮತಿ ಕೊಟ್ಟ ಮಾತ್ರದಿಂದ ಯೋಜನೆಯ ಆರ್ಥಿಕ ಭದ್ರತೆಗಾಗಲೀ ಅದರ ವಿಚಾರವಾಗಿ ವ್ಯಕ್ತವಾಗಿರುವ ಅಭಿಪ್ರಾಯಗಳಿಗಾಗಲೀ, ಮಾಡಲಾಗಿರುವ ಹೇಳಿಕೆಗಳ ಸತ್ಯಾಂಶಕ್ಕಾಗಲೀ ಸರ್ಕಾರವು ಹೊಣೆಯಲ್ಲವೆಂಬುದನ್ನು ಗಮನಿಸಬೇಕು.

ಮೈಸೂರು ಸರ್ಕಾರದವರು ಸಂಸ್ಥಾನದಲ್ಲಿ 15 ಲಕ್ಷ ರೂಪಾಯಿಗಳ ಶೇರುಗಳನ್ನು ಮಾರಾಟಮಾಡಲು ಬಹುತರವಾಗಿ ಮೇಲೆ ಕಂಡ ಷರತ್ತಿನಂತೆಯೇ ಅನುಮತಿ ಕೊಟ್ಟಿದ್ದಾರೆ.

ಕಂಪೆನಿಯ ಶೇರುಗಳನ್ನು ತಮ್ಮ ಪಟ್ಟಿಗಳಲ್ಲಿ ಸೇರಿಸಿಕೊಳ್ಳಲು ಪ್ರಾಮುಖ್ಯ ಸ್ಟಾಕ್ ಎಕ್ಸ್‌ಛೇಂಜ್‌ಗಳನ್ನು ಕೋರಿಕೊಳ್ಳಲಾಗುವುದು.

ಅಧಿಕೃತ ಬಂಡವಾಳ	2,50,00,000	ರೂಪಾಯಿ
ಹೊರಗೆಡವಲಾದ ಬಂಡವಾಳ	2.50.00,000	,,
ಸಾರ್ವಜನಿಕರಿಗೆ ಹೊರಗೆಡವಲಾದ ಬಂಡವಾಳ	2,00,00.000	,,

ವಿಂಗಡಣೆ ಮತ್ತು ಪಾವತಿ ರೀತಿ.

ಹತ್ತುರೂಪಾಯಿ ಬೆಲೆಯ ಇಪ್ಪತ್ತುಲಕ್ಷ ಆರ್ಡಿನರಿ ಶೇರುಗಳು:—

ಪ್ರತಿ ಶೇರಿಗೂ ದರಖಾಸ್ತಿನೊಡನೆ 2 ರೂಪಾಯಿ, ಅಲಾಟ್‌ಮೆಂಟ್ ಆದಾಗ 2 ರೂಪಾಯಿ, ಉಳಿದ 6 ರೂಪಾಯಿಗಳು ಎರಡು ತಿಂಗಳ ಅಂತರವಿರುವ ಎರಡು ರೂಪಾಯಿನ ಮೂರು ಕಂತುಗಳಲ್ಲಿ:— 2,00.00,000.

ನೂರುರೂಪಾಯಿ ಬೆಲೆಯ (ಆದಾಯ ತೆರಿಗೆ ಇಲ್ಲದ) ಶೇಕಡ ಆರರಂತೆ ಕೂಡು ಬಡ್ಡಿಯ ಪ್ರಿಫರೆನ್ಸ್ ಶೇರುಗಳು ಐವತ್ತು ಸಾವಿರ:— 50,00,000.

ದರಖಾಸ್ತಿನೊಡನೆ 25 ರೂಪಾಯಿ ಅಲಾಟ್‌ಮೆಂಟ್ ಆದಾಗ 25 ರೂಪಾಯಿ, ಉಳಿದ 50 ರೂಪಾಯಿಗಳು ಎರಡು ತಿಂಗಳು ಅಂತರವಿರುವ 25ರೂಪಾಯಿನ ಎರಡು ಕಂತುಗಳಲ್ಲಿ

ಹೊರಗೆಡವಲಾದ ಬಂಡವಾಳದಲ್ಲಿ 40,00.000 ರೂಪಾಯಿ ಬೆಲೆಯ ನಾಲ್ಕು ಲಕ್ಷ ಆರ್ಡಿನರಿ ಶೇರುಗಳನ್ನೂ, 10,00,000 ರೂಪಾಯಿ ಬೆಲೆಯ ಹತ್ತು ಸಾವಿರ ಪ್ರಿಫರೆನ್ಸ್ ಶೇರುಗಳನ್ನೂ ಡೈರೆಕ್ಟರುಗಳೂ, ಪ್ರಮೋಟರುಗಳೂ, ಮತ್ತು ಅವರ ಸ್ನೇಹಿತರುಗಳೂ ತೆಗೆದುಕೊಳ್ಳಲು ಒಪ್ಪಿದ್ದಾರೆ. ಇದರ ಪೈಕಿ 10,50,320 ಮೊತ್ತದ 1,05,032 ಆರ್ಡಿನರಿ ಶೇರುಗಳೂ ಮತ್ತು 1,35,700 ರೂ. ಮೊತ್ತದ 1.357 ಪ್ರಿಫರೆನ್ಸ್ ಶೇರುಗಳೂ ಚಂದಾ ಆಗಿದೆ ಮತ್ತು 4,65,555 ರೂಪಾಯಿಗಳು ಪಾವತಿಯಾಗಿದೆ. ಉಳಿದ 1,60,00,000 ಮೊತ್ತದ ಹದಿನಾರು ಲಕ್ಷ ಆರ್ಡಿನರಿ ಶೇರುಗಳನ್ನೂ ಮತ್ತು 40,00,000 ಮೊತ್ತದ ನಲವತ್ತು ಸಾವಿರ ಪ್ರಿಫರೆನ್ಸ್ ಶೇರುಗಳನ್ನೂ ಮಾತ್ರ ಸಾರ್ವಜನಿಕರಿಗಾಗಿ ಹೊರಗೆಡವಲಾಗಿದೆ.

ಡೈರೆಕ್ಟರು ಮಂಡಲಿ.

1. **ರಾಜಮಂತ್ರ ಪ್ರವೀಣ ಹೆಚ್. ಬಿ ಗುಂಡಪ್ಪಗೌಡರು**—ಬಿ. ಎ ಬಿ ಎಲ್, ಮೈಸೂರು ಸರ್ಕಾರದ ಮಾಜಿ ಮಂತ್ರಿಗಳು, ಮೈಸೂರು ಶಾಸನ ಸಭಾಧ್ಯಕ್ಷರು, "ಭಕ್ತಿನಿಲಯ" ಬಸವನಗುಡಿ, ಬೆಂಗಳೂರು. (ಛೇರ್ಮನ್)

2. **ಸೇಟ್ ರತನ್‌ಚಂದ್ ಹೀರಾಚಂದ್**—ಎಂ ಎ., "ಕನ್‌ಸ್ಟ್ರಕ್ಷನ್ ಹೌಸ್" ಬಲರ್ಡ್ ಎಸ್ಟೇಟ್, ಫೋರ್ಟ್, ಬೊಂಬಾಯಿ (ವೈಸ್ ಛೇರ್ಮನ್) ಡೈರೆಕ್ಟರ್—ಪ್ರೀಮಿಯರ್ ಕನ್‌ಸ್ಟ್ರಕ್ಷನ್ ಕಂಪನಿ, ಲಿಮಿಟೆಡ್, ರಾವಲ್ ಗಾವ್ ಶುಗರ್ ಫಾರಂ ಲಿಮಿಟೆಡ್, ಇಂಡಿಯನ್ ಹ್ಯೂಂ ಪೈಪ್ ಕಂಪನಿ ಲಿಮಿಟೆಡ್, ದೇವಕರನ್ ನಾಂಜಿ ಬ್ಯಾಂಕಿಂಗ್ ಕಂಪೆನಿ ಲಿಮಿಟೆಡ್, ಈಸ್ಟರನ್ ಸ್ಟೀಂ ನ್ಯಾವಿಗೇಷನ್ ಕಂಪೆನಿ, ಲಿಮಿಟೆಡ್

3. **ದಿವಾನ್ ಬಹದ್ದೂರ್ ಕೆ ಎಸ್. ರಾಮಸ್ವಾಮಿ ಶಾಸ್ತ್ರಿಯರ್**—ಬಿ. ಎ. ಬಿ ಎಲ್, ರಿಟೈರ್ಡ್ ಡಿಸ್ಟ್ರಿಕ್ಟ್ ಜಡ್ಜ್, ರಾಯಪೇಟೆ, ಮದರಾಸು.

4. **ಶ್ರೀ. ಟಿ ಸಿದ್ದಲಿಂಗಯ್ಯ**—ಬಿ ಎ ಎಲ್ ಎಲ್. ಬಿ., ಮೈಸೂರು ಕಾಂಗ್ರೆಸ್ ಅಧ್ಯಕ್ಷರು ಲಾಂಗ್‌ಫರ್ಡ್ ಗಾರ್ಡನ್. ಸಿವಿಲ್ ಸ್ಟೇಷನ್, ಬೆಂಗಳೂರು.

5 **ಶ್ರೀ ವಿ ವೆಂಕಟಪ್ಪ**—ಜಮೀನ್ದಾರ್, ತಿಟಿಮೂರನಹಳ್ಳಿ, ಚನ್ನಪಟ್ಟಣ, ಪ್ರಜಾ ಪ್ರತಿನಿಧಿ ಸಭೆಯ ಸದಸ್ಯರು, ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡಿನ ಮಾಜಿ ಅಧ್ಯಕ್ಷರು, ಛೇರ್ಮನ್ ಮೈಸೂರು ಇನ್ಶೂರೆನ್ಸ್ ಕಂಪನಿ ಲಿಮಿಟೆಡ್, ಮೈಸೂರು ಪ್ರಾವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

6 **ರಾವ್‌ಬಹದ್ದೂರ್ ಕೆ ಜಿ. ಬೆಳ್ಯಪ್ಪನವರು**—ಬಿ ಎ ರಿಟೈರ್ಡ್ ಫಾರೆಸ್ಟ್ ಆಫೀಸರ್, 'ದಿ ಲಾಡ್ಜ್' ಮಡಿಕೇರಿ ಡೈರೆಕ್ಟರ್, ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್, ಕೂರ್ಗ್ ಟ್ರಾನ್ಸ್‌ಪೋರ್ಟ್ ಕಂಪನಿ ಲಿಮಿಟೆಡ್, ಕಾವೇರಿ ಎಲೆಕ್ಟ್ರಿಕ್ ಕಂಪೆನಿ ಲಿಮಿಟೆಡ್

7. **ಶ್ರೀ. ಬಿ ನಾರಾಯಣಸ್ವಾಮಿ**—ಬಿ. ಎ ಎಲ್ ಎಲ್ ಬಿ, ಅಡ್ವೋಕೇಟ್ ಹೈಕೋರ್ಟ್ ಬೊಂಬಾಯಿ 5, "ಮೌಂಟ್ ಮಾತಂಗ" ಕಿಂಗ್ಸ್ ಸರ್ಕಲ್ ಬೊಂಬಾಯಿ 19

8 **ಶ್ರೀ ಡಿ ಸಿದ್ದಣ್ಣ**—ಕಾಫಿಪ್ಲಾಂಟರು,—ಶ್ರೀಮತಿ ಡಿ ಸಾಕಮ್ಮ ಡಿ. ಸಿದ್ದಣ್ಣ—ಕಾಫಿ ಎಸ್ಟೇಟ್ಸ್, ಕೂಡಲೂರು ಎಸ್ಟೇಟ್ ಸೋಮವಾರಪೇಟೆ (ಕೊಡಗು)

9 **ರಾವ್‌ಸಾಹೇಬ್, ಎಂ, ಸುಬ್ರಹ್ಮಣ್ಯ ಮೊದಲಿಯಾರ್**—ಎಂ. ಆರ್. ಎ ಎಸ್ (ಲಂಡನ್) ಜೆ ಪಿ. ಗವರ್ನಿಂಗ್ ಡೈರೆಕ್ಟರ್, ಸುಬ್ರಹ್ಮಣ್ಯ ಅಂಡ್ ಕೊ, ಆನರರಿ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್, 15 ಜಂಬುಲಿಂಗ, ನಾಯಿಗರ್ ಸ್ಟ್ರೀಟ್, ನುಂಗಂಬಾಕಂ, ಮದರಾಸು

10 **ಶ್ರೀ ಆರ್ ವಿ ಪಾಲಿ**—ಹತ್ತಿ ವ್ಯಾಪಾರಿಗಳು ಮತ್ತು ಬ್ಯಾಂಕರು ಹುಬ್ಬಳ್ಳಿ ಮುನ್ಸಿಪಾಲಿಟಿಯ ಮಾಜಿ ವೈಸ್ ಪ್ರೆಸಿಡೆಂಟ್ ಮ್ಯಾನೇಜಿಂಗ್ ಏಜೆಂಟರು; ಹುಬ್ಬಳ್ಳಿ ಇಂಡಸ್ಟ್ರೀಸ್, ಲಿಮಿಟೆಡ್, ಡೈರೆಕ್ಟರು; ಮೈಸೂರು ಇನ್ಶೂರೆನ್ಸ್ ಕಂಪೆನಿ, ಲಿ, ಮೈಸೂರು ಪ್ರಾವಿಡೆಂಟ್ ಇನ್ಶೂರೆನ್ಸ್ ಕಂಪೆನಿ, ಲಿ

11. **ಲೋಕಸೇವಾನಿರತ, ಪಿ ನಾರಾಯಣರಾಯರು**—ಬರ್ಮಾಷೆಲ್ ಏಜೆಂಟರು, ಶಿವರಾಮಪೇಟೆ ಮೈಸೂರು, ಡೈರೆಕ್ಟರು; ಮಾಡರನ್ ಮೋಟಾರ್ಸ್, ಲಿಮಿಟೆಡ್, ಕೆನರಾ ಮೋಟಾರ್ ಮತ್ತು ಜನರಲ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

12 **ಶ್ರೀ. ಸಿ. ಡಿ. ಬೋಪಯ್ಯನವರು**—ಕಾಫಿ ಪ್ಲಾಂಟರು ಮತ್ತು ಜಮೀನ್ದಾರರು ಚಾಮರಾಜಪಿಲ್ಲಾ, ಮಡಿಕೇರಿ, ಡೈರೆಕ್ಟರ್; ಕೂರ್ಗ್ ಟ್ರಾನ್ಸ್‌ಪೋರ್ಟ್ ಕಂಪೆನಿ, ಲಿಮಿಟೆಡ್

13. **ಶ್ರೀ ಚೂಡೇಗೌಡ ಉರುಫ್ ಪುಟ್ಟಸ್ವಾಮಿಗೌಡರು**—ಜಮೀನ್ದಾರರು ಮತ್ತು ಬ್ಯಾಂಕರು, ಚಿಕ್ಕಮಂಗಳೂರು, ಚನ್ನಪಟ್ಟಣ ಪೋಸ್ಟ್, ಬೆಂಗಳೂರು ಡಿಸ್ಟ್ರಿಕ್ಟ್.

14. **ಶ್ರೀ. ಎ ಜಿ. ಚುಂಚೇಗೌಡರು**—ಜಮೀನ್ದಾರರು ಮತ್ತು ರೈಸ್‌ಮಿಲ್ ಮಾಲೀಕರು ಅರಕೆರೆ, ಶ್ರೀರಂಗಪಟ್ಟಣ ತಾಲೋಕು, ಪ್ರೊಪ್ರೈಟರ್, ಶಿವರಾಮ ರೈಸ್ ಮಿಲ್ಸ್, ಸೆಕ್ರೆಟರಿ, ಮಂಡ್ಯ ಡಿಸ್ಟ್ರಿಕ್ಟ್ ರೈಸ್‌ಮಿಲ್ ಮಾಲೀಕರ ಅಸೋಸಿಯೇಷನ್.

15. **ಶ್ರೀ. ಎಂ ಕೃಷ್ಣಸ್ವಾಮಿ ಮೊದಲಿಯಾರ್‌ರವರು**—ಟಿಂಬರ್ ವ್ಯಾಪಾರಿಗಳು ಮತ್ತು ಪಿ. ಡಬ್ಲ್ಯು ಡಿ ಕಂಟ್ರಾಕ್ಟರು ಕೋಸಾಪೇಟೆ, ವೆಲ್ಲೂರ.

16 **ಶ್ರೀ ಕೆ ಎಂ ಮುತ್ತಣ್ಣನವರು**—(ಎಕ್ಸ್ ಅಫಿಷಿಯೋ) ಏಲಕ್ಕಿ ಪ್ಲಾಂಟರು, ಪದಿನಾಡು, ಮಡಿಕೇರಿ ಪೋಸ್ಟ್, ಡೈರೆಕ್ಟರು ಕಾರ್ಡಮಂ ಗ್ರೋಯರ್ಸ್ ಅಸೋಸಿಯೇಶನ್, ಪಾರ್ಟನರ್ ವಿಜಯ ಮಿಲ್ ಕಂಪೆನಿ ಬೆಂಗಳೂರು.

17. **ಶ್ರೀ. ಜಿ. ವಿ. ದೊಡ್ಡವೀರಪ್ಪನವರು**—(ಎಕ್ಸ್ ಅಫಿಷಿಯೋ) ಮ್ಯಾನೇಜಿಂಗ್ ಪಾರ್ಟನರ್, ವಿಜಯಮಿಲ್ ಕಂಪನಿ ಬೆಂಗಳೂರು ಇಂಡಸ್ಟ್ರಿಯಲಿಸ್ಟ್ಸ್ ಮತ್ತು ಜನರಲ್ ಏಜೆಂಟರು, 'ಶಿವಂ' ಸಂಪಂಗಿ ಟ್ಯಾಂಕ್ ರೋಡು ಬೆಂಗಳೂರು ಛೇರ್ಮನ್; ಜನರಲ್ ಟ್ರೇಡಿಂಗ್ ಕಂಪೆನಿ, ಲಿಮಿಟೆಡ್, ಮ್ಯಾನೇಜಿಂಗ್ ಏಜೆಂಟರು ಮೆಸರ್ಸ್ ವಿಜಯಮಿಲ್ ಮತ್ತು ಕಂಪನಿ ಇಂಡಸ್ಟ್ರಿಯಲಿಸ್ಟ್ಸ್ ಮತ್ತು ಜನರಲ್ ಏಜೆಂಟ್ಸ್ 'ಶಿವಂ' ಸಂಪಂಗಿ ಟ್ಯಾಂಕ್ ರೋಡು ಬೆಂಗಳೂರು

ಆಡಿಟರು.

ಶ್ರೀ ಎಸ್. ಆರ್ ಮೊಂಡ್ರೆ—ಎಂ ಎ ಬಿ. ಕಾಂ ಎಫ್. ಎಸ್ ಎ ಎ. (ಲಂಡನ್) ಆರ್ ಎ ಇನ್‌ಕಾರ್ಪೊರೇಟೆಡ್ ಅಕೌಂಟೆಂಟ್ ಮತ್ತು ಆಡಿಟರ್, ಗಾಂಧಿ ನಗರ, ಬೆಂಗಳೂರು ಸಿಟಿ

ನ್ಯಾಯ ಸಲಹೆಗಾರರು.

ಡಾಕ್ಟರ್ ವಿ. ಕೆ. ಜಾನ್—ಬ್ಯಾರಿಸ್ಟರು ಮತ್ತು ಮದರಾಸಿನ ನ್ಯಾಯವಿಧಾಯಕ ಸಭೆಯ ಸದಸ್ಯರು (ಮೆಸರ್ಸ್ ಜಾನ್ ಅಂಡ್ ರಾವ್—ಅಡ್ವೊಕೇಟರು ಮತ್ತು ನೋಟರಿ ಪಬ್ಲಿಕ್, ಮದರಾಸು)

ಶ್ರೀ ಎಂ ಪಿ ಸೋಮಶೇಖರರಾವ್—ಬಿ. ಎ. ಎಲ್ ಎಲ್. ಬಿ, ಹೈಕೋರ್ಟ ಅಡ್ವೊಕೇಟ್ ಬೆಂಗಳೂರು.

ಬ್ಯಾಂಕರುಗಳು

(1) ಬ್ಯಾಂಕ್ ಆಫ್ ಮೈಸೂರ್ ಲಿಮಿಟೆಡ್
(2) ಪಂಜಾಬ್ ನ್ಯಾಷನಲ್ ಬ್ಯಾಂಕ್ ಲಿಮಿಟೆಡ್
(3) ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಲಿಮಿಟೆಡ್

ಫಾರೆಸ್ಟ್ ಇಂಡಸ್ಟ್ರೀಸ್ ಲಿಮಿಟೆಡ್.

ಕಂಪೆನೀಸ್ ಆಕ್ಟ್ ಅನುಸಾರವಾಗಿ ರಿಜಿಸ್ಟರಾಗಿದೆ.)

(4) ಇಂಡಿಯನ್ ಬ್ಯಾಂಕ್ ಲಿಮಿಟೆಡ್
(5) ಹಿಂದೂಸ್ಥಾನ್ ಕಮರ್ಷಿಯಲ್ ಬ್ಯಾಂಕ್ ಲಿಮಿಟೆಡ್
(6) ಭಾರತ್ ಬ್ಯಾಂಕ್ ಲಿಮಿಟೆಡ್
(7) ಯುನೈಟೆಡ್ ಕಮರ್ಷಿಯಲ್ ಬ್ಯಾಂಕ್ ಲಿಮಿಟೆಡ್
(8) ಇಂಡಿಯನ್ ಓವರ್‌ಸೀಸ್ ಬ್ಯಾಂಕ್ ಲಿಮಿಟೆಡ್
(9) ಆಂಧ್ರ ಬ್ಯಾಂಕ್ ಲಿಮಿಟೆಡ್
(10) ಕೆನರಾ ಬ್ಯಾಂಕ್ ಲಿಮಿಟೆಡ್
(11) ಕರ್ಣಾಟಕ ಸೆಂಟ್ರಲ್ ಕೋಆಪರೇಟಿವ್ ಬ್ಯಾಂಕ್ ಲಿಮಿಟೆಡ್
(12) ಕೆನರಾ ಬ್ಯಾಂಕಿಂಗ್ ಕಾರ್ಪೊರೇಷನ್ ಲಿಮಿಟೆಡ್
(13) ಕಾವಿಲಾ ಬ್ಯಾಂಕಿಂಗ್ ಕಾರ್ಪೊರೇಷನ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್.

ಫ್ರೇಜರ್‌ಪೇಟೆ ಕೊಡಗು

ಇತರ ಉದ್ಯಮ ಕಛೇರಿಗಳು

27 ಲಾಲ್‌ಬಾಗ್ ರಸ್ತೆ, ಬೆಂಗಳೂರು
103, ಆರ್ಮೀನಿಯನ್ ರಸ್ತೆ, ಮದರಾಸು

C 6, ಮಾಡಲ್ ಹೌಸ್, ಪ್ರಾಕ್ಟರ್ ರೋಡ್, ಬಾಂಬೆ 4

ಬ್ರೋಕರುಗಳು

(1) ಪಿ ಆರ್ ಸುಬ್ರಹ್ಮಣ್ಯಂರವರು—ಸ್ಟಾಕ್, ಶೇರ್ ಮತ್ತು ಫೈನಾನ್ಸ್ ಬ್ರೋಕರ್, ಸ್ಟಾಕ್ ಎಕ್ಸ್‌ಛೇಂಜ್ ಬಿಲ್ಡಿಂಗ, ಅಪೋಲೊ ಸ್ಟ್ರೀಟ್, ಫೋರ್ಟ್ ಬಾಂಬೆ

(2) ರಾಜಪಾಲ್ ಛಾಡಾ & ಕಂಪೆನಿ ಸ್ಟಾಕ್ ಮತ್ತು ಶೇರು ಬ್ರೋಕರು ಮತ್ತು ವ್ಯಾಪಾರಿಗಳು, ಗ್ರಿಂಡ್ಲೆ ಬ್ಯಾಂಕ್ ಬಳಿ, ಚಾಂದನಿ ಚೌಕ, ಡೆಲ್ಲಿ

(3) ಸೋಮಯಾಜಲು & ಕಂಪೆನಿ—ಸ್ಟಾಕ್ ಮತ್ತು ಶೇರ್ ಬ್ರೋಕರು 336, ತಂಬೂಚೆಟ್ಟಿ ಬೀದಿ, ಜಿ ಟಿ ಮದರಾಸ್

(4) ಬಿಷನ್‌ದ್ಯಾಲ್ ದಯಾರಾಂ—ಸ್ಟಾಕ್ ಶೇರ್ ಬ್ರೋಕರುಗಳು 5, ತಾರಾಚಂದ್ ದತ್ ಸ್ಟ್ರೀಟ್ ಕಲ್ಕತ್ತಾ

(5) ಅಯ್ಯರ್ & ಕಂಪೆನಿ ಸ್ಟಾಕ್, ಶೇರು ಬ್ರೋಕರು, ಮೈಸೂರು ಛೇಂಬರ್ ಆಫ್ ಕಾಮರ್ಸ್ ಬಿಲ್ಡಿಂಗ್ಸ್, ಕೆಂಪೇಗೌಡ ರಸ್ತೆ ಬೆಂಗಳೂರು ಸಿಟಿ

ಉದ್ದೇಶಗಳು.

ಮೆಮೋರಾಂಡಂನಲ್ಲಿ ವಿವರಿಸಿರುವ ಉದ್ಯಮಗಳನ್ನು ಕೈಗೊಳ್ಳಲೂ, ಮುಖ್ಯವಾಗಿ ಕೊಡಗಿನಲ್ಲಿ ಕಾಗದ ಮತ್ತು ಬೋರ್ಡ ಕಾರ್ಖಾನೆಯನ್ನು ಸ್ಥಾಪಿಸಿ ಉತ್ತಮ ತರದ ಮುದ್ರಣ ಕಾಗದ, ಬರೆಯುವ ಕಾಗದ, ಬಾಂಡ್ ಕಾಗದ, ಮ್ಯಾನಿಫೋಲ್ಡ್, ಕ್ರೀಂ ಲೆಯಿಡ್, ಕಾರ್ಟ್ರಿಡ್ಜ್, ಟಿಷ್ಯೂ ಕಾಗದ, ಬಟರ್‌ಗ್ಲೇಜ್ ಮುಂತಾದ ಕಾಗದಗಳನ್ನೂ ಮತ್ತು ಸ್ಟ್ರಾಬೋರ್ಡ್, ಬಾಕ್ಸ್ ಬೋರ್ಡ್, ಡೂಪ್ಲೆ, ಟ್ರಿಪ್ಲೆ, ಮುಂತಾದ ವಿವಿಧ ರಟ್ಟುಗಳನ್ನೂ ಮತ್ತು ಪಲ್ಪ್‌ಗಳನ್ನೂ ತಯಾರಿಸಿ ಮಾರಾಟ ಮಾಡುವುದು ಅಲ್ಲದೆ ಗಂಧದೆಣ್ಣೆ ತಯಾರಿಕೆ ಮತ್ತು ಮಾರಾಟ ಮಾಡುವ ಉದ್ದೇಶಗಳಿಂದ ಕಂಪೆನಿಯು ಸ್ಥಾಪನೆಯಾಗಿದೆ.

ಮುನ್ನೋಟ.

ಸ್ವತಂತ್ರ ಭಾರತದಲ್ಲಿ ಕಾಗದ ಕೈಗಾರಿಕೆಗೆ ನಿಶ್ಚಿತವಾದ ಭವಿಷ್ಯವಿದೆ. ಕಾಗದದ ಉಪಯೋಗವು ಅಮೇರಿಕ ಸಂಯುಕ್ತ ಸಂಸ್ಥಾನ, ಮತ್ತು ಗ್ರೇಟ್‌ಬ್ರಿಟನ್ ಅಲ್ಲದೆ ಇನ್ನಿತರ ಸಣ್ಣ ಸಂಸ್ಥಾನಗಳಾದ ನಾರ್ವೆ, ಡೆನ್‌ಮಾರ್ಕ್ ದೇಶಗಳಲ್ಲಿ ಸರಾಸರಿ ವ್ಯಕ್ತಿಯೊಬ್ಬನಿಗೆ ಕ್ರಮೇಣ 241,151,98 ಮತ್ತು 96 ಪೌಂಡ್‌ಗಳಂತೆ ಇರುವಾಗ ಭಾರತದಲ್ಲಿ ಮಾತ್ರ ಕೇವಲ ಒಂದೇ ಪೌಂಡಿನಷ್ಟಿದೆ. ಕೋಟ್ಯಾನುಕೋಟಿ ಭಾರತೀಯರಲ್ಲಿ ಆಗಬೇಕಾಗಿರುವ ವಿದ್ಯಾಪ್ರಸಾರ, ವ್ಯಾಪಾರ ವಾಣಿಜ್ಯಗಳ ಅಭಿವೃದ್ಧಿ ಮತ್ತು ಕೇಂದ್ರ ಸರಕಾರವು ಕೈಗೊಂಡಿರುವ ಕೈಗಾರಿಕಾಭಿವೃದ್ಧಿ ಕಾರ್ಯಕ್ರಮಗಳು ಇವೇ ಮೊದಲಾದ ಸಾಧನೆಗಳಿಗಾಗಿ ಭಾರತ ಖಂಡದಲ್ಲಿ ಕಾಗದದ ಆವಶ್ಯಕತೆ ಮತ್ತು ಬೇಡಿಕೆಗಳು ದಿನೇ ದಿನೇ ಹೆಚ್ಚುವುದರಲ್ಲಿ ಸಂದೇಹವಿಲ್ಲ.

ಈಗಾಗಲೇ ನಡೆಯುತ್ತಿರುವ ಕಾಗದ ಕಾರ್ಖಾನೆಗಳ ಸನ್ನಿವೇಶ ಮತ್ತು ದೊರಕಬಹುದಾದ ಕಚ್ಚಾಸಾಮಗ್ರಿ ಇವುಗಳ ವಿಮರ್ಶೆಯಿಂದ ಇಂಡಿಯಾ ಸರಕಾರದವರು ನಿಯಮಿಸಿದ ಕಾಗದ ಸಮಿತಿಯವರು ಕಾಗದ ತಯಾರಿಕೆಯನ್ನು ಪ್ರಾಂತೀಕರಣ ಮಾಡುವುದೇ ಸೂಕ್ತವೆಂದು ಅಭಿಪ್ರಾಯಪಟ್ಟಿದ್ದಾರೆ. ದಕ್ಷಿಣ ಇಂಡಿಯಾದಲ್ಲಿ ಬೆಳೆಯುವ ಬಿದಿರಿನ ಬಗೆಯು ಕಾಗದ ತಯಾರಿಕೆಗೆ ಅತ್ಯುತ್ತಮವಾದುದೆಂದು ಪ್ರಸಿದ್ಧವಾಗಿದೆ. ಕೊಡಗಿನ ಅರಣ್ಯಗಳಲ್ಲಿ ಯಥೇಚ್ಛವಾಗಿ ದೊರಕುವುದೆಂದು ಶಾಸ್ತ್ರೀಯ ಗಣನೆಯಿಂದ ಧೃಢಪಟ್ಟಿದೆ. ಸದ್ಯದಲ್ಲಿ ಕೊಡಗು ಪ್ರಾಂತ್ಯವು ಪಡೆಯಲಿರುವ ವಿದ್ಯುಚ್ಛಕ್ತಿಯು ಇದರೊಂದಿಗೆ ಒದಗಿ ಅಲ್ಲಿ ಕಾಗದ ಮತ್ತು ರಟ್ಟಿನ ಕೈಗಾರಿಕೆಗೆ ಅಮೋಘವಾದ ಸೌಲಭ್ಯವಿದೆ.

ಗಂಧದೆಣ್ಣೆಯು ವ್ಯಾಪಾರ ದೃಷ್ಟಿಯಿಂದ ಅತ್ಯಮೂಲ್ಯ ವಸ್ತು. ಅದಕ್ಕೆ ಭಾರತದಲ್ಲಿ ನಿಗದಿಯಾದ ಮಾರುಕಟ್ಟೆಯಿರುವುದಲ್ಲದೆ ಪರದೇಶಗಳಲ್ಲೂ ವಿಶೇಷವಾಗಿ ಡಾಲರ್ ಎಕ್ಸ್‌ಛೇಂಜ್ ಪ್ರದೇಶಗಳಲ್ಲೂ ಅದರ ಶಾಶ್ವತವಾದ ಮತ್ತು ಚಿರವರ್ಧಿನಿಯಾದ ವ್ಯಾಪಾರವಿದೆ. ಗಂಧದೆಣ್ಣೆಯಲ್ಲಿರುವ ರೋಗಪರಿಹಾರಕ ಮತ್ತು ಕಾಂತಿವರ್ಧಕ ಗುಣಗಳಿಂದ ಅನೇಕ ಔಷಧಿ ಮತ್ತು ಸುಗಂಧ ದ್ರವ್ಯಗಳ ತಯಾರಿಕೆಗಳಿಗೆ ಅದು ಮೂಲದ್ರವ್ಯವಾಗಿರುತ್ತದೆ. ಕೊಡಗಿನಲ್ಲಿ ಬೆಳೆಯುವ ಗಂಧದ ಮರದಲ್ಲಿ ಎಣ್ಣೆಯ ಅಂಶ ಹೆಚ್ಚಾಗಿರುವುದಲ್ಲದೆ, ಅದರಿಂದಾದ ಎಣ್ಣೆ ಪರಿಶುದ್ಧತೆ ಪರಿಮಳಕ್ಕೂ ಜಗತ್ಪ್ರಸಿದ್ಧಿಯಾಗಿದೆ. ಗಂಧದೆಣ್ಣೆ ತಯಾರಿಕೆಯು ಉದ್ಯಮವು ಆತಂಕದಾಯಕವಾಗಿಯೂ ಲಾಭದಾಯಕವಾಗಿಯೂ ಇರುವ ವಿಚಾರವು ಸರ್ವವಿದಿತವಾಗಿದೆ. ಇದರ ತಯಾರಿಕೆಗೆ ಬೇಕಾದ ಯಂತ್ರಗಳನ್ನು ಸ್ಥಾಪಿಸಲು ಬೇಕಾದ ಕಟ್ಟಡಗಳನ್ನು ಕಟ್ಟಿಸುವ ಕಾರ್ಯವನ್ನು ಈಗಾಗಲೇ ಕಂಪೆನಿಯವರು ಕೈಗೊಂಡಿರುವುದರಿಂದಲೂ ಮತ್ತು ತಯಾರಿಕೆಯು ಇದೇ ವರ್ಷವೇ ಆರಂಭವಾಗುವುದರಿಂದಲೂ ಡೈರೆಕ್ಟರುಗಳು ಲಾಭವನ್ನು ಜಾಗ್ರತೆಯಾಗಿಯೇ ಹಂಚಬಹುದೆಂಬ ಭರವಸೆಯುಳ್ಳವರಾಗಿದ್ದಾರೆ. ಆದುದರಿಂದ ಶೇರುದಾರರು ತಾವು ಹಾಕಿದ ಹಣದ ಮೇಲೆ ಪ್ರತಿಫಲವನ್ನು ಪಡೆಯಲು ಹೆಚ್ಚು ಕಾಲ ಕಾದಿರಬೇಕಾದ್ದಿಲ್ಲ.

ಸರ್ಕಾರದ ಸಹಾಯ ಮತ್ತು ರಿಯಾಯಿತಿಗಳು.

ಕೊಡಗು ಸರ್ಕಾರದಿಂದ ಕೆಲವು ಸಂಪೂರ್ಣಾಧಿಕಾರದ ಅನುಕೂಲಗಳನ್ನೂ ಸಹಾಯಗಳನ್ನೂ ಪಡೆದುಕೊಂಡಿರುವುದರಿಂದ ಈ ಕಂಪೆನಿಯು ಮಿತವ್ಯಯದಿಂದಲೂ ದಕ್ಷತೆಯಿಂದಲೂ ಕಾರ್ಯನಿರ್ವಹಣೆ ಮಾಡಬಹುದಾಗಿದೆ. ಸರ್ಕಾರದವರು ಕೊಟ್ಟಿರುವ ಸಹಾಯ ರಿಯಾಯಿತಿಗಳು ಈ ರೀತಿ ಇವೆ—

(1) ಕೊಡಗಿನ ವಿಶಾಲವಾದ ಅರಣ್ಯಗಳಲ್ಲಿ ಉತ್ಪತ್ತಿಯಾಗುವ ಬೊಂಬಿನ ಬೆಳೆಯೆಲ್ಲ ಕಂಪೆನಿಗೆ ರಿಯಾಯಿತಿ ದರದಲ್ಲಿ ದೊರಕುತ್ತದೆ. ಅತಿ ಮುಖ್ಯವಾದ ಮತ್ತು ವಿಶೇಷವಾಗಿ ದೊರಕುವ ಈ ಕಚ್ಚಾಮಾಲಿನ ವಿಚಾರದಲ್ಲಿ ಇಪ್ಪತ್ತು ವರ್ಷಗಳ ಕಾಲ ಮಾನೊಪಲಿ ಹಕ್ಕು (ಏಕಾನುಭೋಗ) ಈ ಕಂಪೆನಿಗೇ ಇರುತ್ತದೆ.

(2) ಕಾರ್ಖಾನೆಯ ಪಕ್ಕದಲ್ಲಿರುವ ಕಾವೇರಿ ನದಿಯ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೂ ಕೊಡಗು ಸರ್ಕಾರವು ಅನುಮತಿಯನ್ನು ದಯಪಾಲಿಸಿದೆ.

(3) ಕಾರ್ಖಾನೆಯನ್ನು ಕಟ್ಟುವುದಕ್ಕೂ ಕೆಲಸಗಾರರ ವಸತಿಗೂ ಸಾಕಾಗುವಷ್ಟು ವಿಶಾಲ ಪ್ರದೇಶವನ್ನು ಕೊಡಗು ಸರಕಾರವು ರಿಯಾಯಿತಿ ದರದಲ್ಲಿ ಕೊಟ್ಟಿದೆ.

(4) ಕೇಂದ್ರ ಸರಕಾರದಿಂದ ಅವಶ್ಯವೆನಿಸುವ ಪರ್ಮಿಟ್ಟು ಮತ್ತು ಪ್ರಯಾರಿಟಿಗಳನ್ನು ಪಡೆಯಲು ಕೊಡಗು ಸರ್ಕಾರದವರು ನೆರವಾಗುತ್ತಾರೆ.

(5) ಮೈಸೂರು ಸರ್ಕಾರದಿಂದ ವಿದ್ಯುಚ್ಛಕ್ತಿಯನ್ನು ಪಡೆದುಕೊಂಡ ಕೂಡಲೇ ಕಂಪೆನಿಗೂ ಅವಶ್ಯವಾದಷ್ಟನ್ನು ಒದಗಿಸಲು ಒಪ್ಪಿದ್ದಾರೆ.

ಇಷ್ಟಲ್ಲದೆ ಕೊಡಗು ಸರ್ಕಾರಕ್ಕೆ ಈ ಉದ್ಯಮದಲ್ಲಿ ಹೆಚ್ಚು ಆಸಕ್ತಿ ಇರುವುದರಿಂದ ಕಂಪೆನಿಯು ಕೊಡಲಿರುವ ಎರಡೂವರೆ ಲಕ್ಷ ರೂಪಾಯಿಗಳ ಶೇರುಗಳನ್ನು ತೆಗೆದುಕೊಳ್ಳುವುದಕ್ಕೂ ಸರ್ಕಾರದ ಡೈರೆಕ್ಟರೊಬ್ಬರನ್ನೂ ಸಹ ನೇಮಿಸುವಂತೆಯೂ ಕೇಳಿಕೊಳ್ಳಲಾಗಿದೆ. ಈ ವಿಚಾರಗಳು ಕೊಡಗು ಮತ್ತು ಕೇಂದ್ರ ಸರ್ಕಾರಗಳ ಪರ್ಯಾಲೋಚನೆಯಲ್ಲಿವೆ.

ವಿಶೇಷಾನುಕೂಲಗಳು.

ಕಚ್ಚಾಮಾಲು, ಜಲವಸತಿ, ಯಾನ ಸೌಕರ್ಯ, ಉತ್ತಮ ಸನ್ನಿವೇಶ ಮೊದಲಾದ ವಿಶೇಷಾನುಕೂಲಗಳುಳ್ಳ ಪ್ರದೇಶದಲ್ಲಿ ಹಿಂದಿನ ಯೋಜನೆಯಿಂದ ಸ್ಥಾಪಿತವಾಗಿರುವುದರಿಂದ, ದಕ್ಷಿಣ ಭಾರತದಲ್ಲೆಲ್ಲಾ ಈ ಕಾರ್ಖಾನೆಯು ಅತ್ಯಂತ ಹಿರಿದೆನಿಸುವುದು ಮಾತ್ರವಲ್ಲದೆ ಸ್ವಾಭಾವಿಕ ಸೌಕರ್ಯಗಳನ್ನೂ ಪಡೆದುಕೊಂಡಿದ್ದರೂ ಕೈಗಾರಿಕೋದ್ಯಮದಲ್ಲಿ ಸಾಕಷ್ಟು ಅಭಿವೃದ್ಧಿ ಹೊಂದದಿರುವ ಕೊಡಗು ಪ್ರಾಂತ್ಯವು, ಕೈಗಾರಿಕೆಗಳ ಪ್ರಗತಿಸಾಧನೆಗೆ ಸಕಲ ಸೌಲಭ್ಯಗಳನ್ನೂ ಪಡೆದಿದೆ. ಕೇಂದ್ರ ಸರ್ಕಾರದ ಸಹಾಯ ಸಹಕಾರಗಳನ್ನೂ ಪಡೆಯುವ ಅರ್ಹತೆ ಹೊಂದಿ ಈ ಯೋಜನೆಯು ಆದರ್ಶರೀತಿಯದಾಗಿದೆ.

ಆಯವ್ಯಯದ ಅಂದಾಜು.

ಕಾಗದ ತಯಾರಿಕೆ ಶಾಸ್ತ್ರಜ್ಞರಿಂದಲೂ ದೀರ್ಘಕಾಲ ರಚನಾತ್ಮಕ ಕಾರ್ಯಗಳಲ್ಲಿ ಅನುಭವಪಡೆದವರಿಂದಲೂ ಒಂದು ಮಿಲ್‌ಕಾಸ್ಟ ಸ್ಟೇಟ್ಮೆಂಟ್ (ಕಾರ್ಖಾನೆಯ ರಚನೆಯ ಖರ್ಚಿನ ಪಟ್ಟಿ ಮತ್ತು ಉತ್ಪತ್ತಿ ಮತ್ತು ವ್ಯಯ ಲಾಭಗಳ ಪಟ್ಟಿ) ತಯಾರಿಸಿಕೊಂಡಿದೆ. ಮತ್ತು ಅವುಗಳನ್ನು ದೀರ್ಘವಾಗಿ ಪರಿಶೀಲಿಸಿ ಈ ಯೋಜನೆಯು (ಸ್ಕೀಮು) ಸುಭದ್ರವಾದುದೆಂದೂ ಯಶಸ್ವಿಯಾದುದೆಂದೂ ಎಡಿಂಬರ್ಗಿನ ಕಾಗದ ಯಂತ್ರ ತಯಾರಿಕರಾದ ಮೆಸರ್ಸ್ ಬರ್ಟನ್ಸ್ ಲಿಮಿಟೆಡ್ ಕಂಪೆನಿಯ ಟೆಕ್ನಿಕಲ್ ಸೂಪರಿಂಟೆಂಡೆಂಟರಾದ ಮಿ ಎ ಜಿ ಸ್ಟ್ಯಾಯರ್‌ರವರು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ವೆಚ್ಚದ ವಿಚಾರಗಳಲ್ಲಿ ಅತ್ಯಂತ ಹೆಚ್ಚಿನ ಮಟ್ಟವನ್ನೇ ಗುರಿಯಾಗಿಟ್ಟು ಲಾಭಾಂಶಕ್ಕೆ ತಗ್ಗಿನ ಮಿತಿಯನ್ನೇ ಇಟ್ಟುಕೊಂಡು ಈ ಯೋಜನೆಯ ಆಯ, ವ್ಯಯ, ಲಾಭ, ತಖ್ತೆಯನ್ನು ತಯಾರಿಸಲಾಗಿದೆ. ಈ ವಿವರಗಳಿಂದ ದಿನಂಗಟ್ಟಲೆ ಹೊಸದಿನ ಮಟ್ಟಿಗೆ ಎಂಟೂವರೆ ರೂಪಾಯಿ ಸ್ಥಿರಲಾಭವನ್ನೂ ಮತ್ತು ರಟ್ಟಿನ ತಯಾರಿಕೆಯಲ್ಲಿ ಇನ್ನೂ ಹೆಚ್ಚಿನ ಲಾಭವನ್ನೂ ಪಡೆಯಬಹುದೆಂದು ನಿರೀಕ್ಷಿಸಲಾಗಿದೆ. ಈ ಲಾಭಾಂಶ ಲೆಕ್ಕಾಚಾರದಲ್ಲಿ ರಿಯಾಯಿತಿ ಶೇರುಗಳ (ಪ್ರಿಫರೆನ್ಸ್ ಶೇರುಗಳು) ಡಿವಿಡೆಂಡನ್ನು ಸೇರಿಸಿಕೊಂಡಿರುವುದರಿಂದ, ಸಾಮಾನ್ಯ ಶೇರುದಾರರಿಗೆ, ಅತ್ಯಂತ ಪ್ರತಿಕೂಲ ಸನ್ನಿವೇಶಗಳಲ್ಲಿಯೂ, ಸಾಕಷ್ಟು ರಿಸರ್ವ್ ನಿಧಿಯನ್ನು ತೆಗೆದಿಟ್ಟು ನಮಗೆ ನ್ಯಾಯವಾಗಿ ದೊರೆಯತಕ್ಕ ಲಾಭಾಂಶವನ್ನೇ ನಿಸ್ಸಂದೇಹವಾಗಿ ನಿರೀಕ್ಷಿಸಬಹುದಾಗಿದೆ. ಕಳೆದ ಹಲವು ಸಂವತ್ಸರಗಳಿಂದ ಈ ಕೈಗಾರಿಕೆಯು ಆಕರ್ಷಣೀಯ ಲಾಭಾಂಶಗಳನ್ನೇ ಕೊಡುತ್ತಿದೆ. ನಮ್ಮ ದೇಶೀಯ ಸರ್ಕಾರವೂ ಸ್ವತಃ ಆಸಕ್ತಿವಹಿಸಿ ದೇಶೀಯ ಕಾಗದ ಕೈಗಾರಿಕೆಗೆ ಉತ್ತೇಜನವನ್ನು ಮುಂದೆಯೂ ನಡೆಸಿಕೊಡುವುದೆಂದು ನಂಬಬಹುದಾಗಿದೆ.

ಯಂತ್ರಗಳು.

ಎಡಿನ್‌ಬರ್ಗಿನ ಮೆಸರ್ಸ್ ಬರ್ಟ್ರಾಮ್ಸ್ ಲಿಮಿಟೆಡ್ ಕಂಪೆನಿಯವರು ಹೆಸರುಗಳಿಸಿದ ಯಂತ್ರ ತಯಾರಿಕರು. ಅವರು ಪ್ರಪಂಚದಲ್ಲಿರುವ ಎಲ್ಲಾ ಕಾಗದ ಕಾರ್ಖಾನೆಗಳಿಗೂ ಯಂತ್ರಗಳನ್ನು ಒದಗಿಸುತ್ತಿರುವುದಲ್ಲದೆ ಭಾರತದಲ್ಲಿ ಬಹು ಕಾಲದಿಂದ ನಡೆಯುತ್ತಿರುವ ಅತಿ ದೊಡ್ಡದಾದ ಟಿಟಾಘರ್ ಮತ್ತು ಬೆಂಗಾಲ್ ಪೇಪರ್ ಮಿಲ್ಲುಗಳಿಗೂ ಕಾಗದ ತಯಾರಿಕಾ ಯಂತ್ರಗಳನ್ನು ನಿರ್ಮಿಸಿಕೊಟ್ಟಿದ್ದಾರೆ. ವರ್ಷೀಯೂನ ಹನ್ನೆರಡುಸಾವಿರ ಟನ್ ಕಾಗದ ಮತ್ತು ರಟ್ಟು ತಯಾರಿಕೆಗೆ ಬೇಕಾಗುವ ಸಂಕಲಿತ ಯಂತ್ರಗಳನ್ನು ಬರ್ಟ್ರಾಮ್ಸರವರು ಈ ಕಂಪೆನಿಗೆ ಯೋಜಿಸಿಕೊಟ್ಟಿದ್ದಾರೆ. ಯಂತ್ರವನ್ನು ನಿರ್ಮಿಸಿ ಒದಗಿಸಲು ಅವರೇ ಒಪ್ಪಿದ್ದಾರೆ.

ಷೇರು ಚಂದಾ ಕನಿಷ್ಟ ಪರಿಮಿತಿ.

ಆರ್ಟಿಕಲ್ಸ್ ಆಫ್ ಎಶೋಸಿಯೇಷನ್ ಪ್ರಕಾರ ಡೈರೆಕ್ಟರುಗಳು ಷೇರು ಅಲಾಟ್‌ಮೆಂಟನ್ನು (ಷೇರು ಹಂಚಿಕೆಯನ್ನು) ಕನಿಷ್ಟ ಮಿತಿಯಾದ ಹತ್ತು ಲಕ್ಷ ರೂಪಾಯಿ ಬಂಡವಾಳವು ಒದಗಿಸಿ ಕೂಡಲೇ ಪ್ರಾರಂಭಿಸಬೇಕೆಂದಿದೆ. ಈ ನಿಯಮವನ್ನು ಕಂಪೆನಿಯು ಪರಿಪಾಲಿಸಿ ಈಗಾಗಲೇ ಉದ್ಯಮ ಪ್ರಾರಂಭದ ಸರ್ಟಿಫಿಕೇಟನ್ನೂ ಸಹ ಪಡೆದಿದ್ದಾರೆ.

ಪ್ರಥಮ ವೆಚ್ಚಗಳು.

ಈ ಸಂಸ್ಥೆಯನ್ನು ರೂಪಕ್ಕೆ ತರುವದಕ್ಕೂ, ಸಂಘಟಿತ ಮಾಡುವದಕ್ಕೂ, ಸ್ಥಾಪಿಸುವದಕ್ಕೂ ಮೊಟ್ಟಮೊದಲಾಗಿ ತಗಲಬಹುದಾದ ವೆಚ್ಚವು ಒಂದು ಲಕ್ಷ ರೂಪಾಯಿ ಎಂದು ನಿರ್ಧಾರವಾಗಿದೆ. ಬ್ರೋಕರೇಜ್ ಮತ್ತು ಕಮಿಷನ್ ಇದರಲ್ಲಿ ಸೇರುವದಿಲ್ಲ.

ಮೇನೇಜಿಂಗ್ ಏಜನ್ಸಿ ಒಪ್ಪಂದ & ಅವರ ಸಂಭಾವನೆ.

ಕಂಪೆನಿಯು ರಿಜಿಸ್ಟರಾದ ತಾರೀಖಿನಿಂದ ಇಪ್ಪತ್ತು ವರ್ಷಗಳ ಅವಧಿಯ ವರೆಗೆ ಬೆಂಗಳೂರಿನ ವಿಜಯ ಮಿಲ್ ಮತ್ತು ಕಂಪೆನಿಯವರನ್ನು ಮೇನೇಜಿಂಗ್ ಏಜಂಟರನ್ನಾಗಿ ನೇಮಿಸಿದೆ. ಕಂಪೆನಿ ಖಾನೂನು ರೀತಿ 87. B. ಸೆಕ್ಷನ್ ಪ್ರಕಾರ ಕಾರಣಗಳಿದ್ದಲ್ಲಿ ಈ ಅವಧಿಗೆ ಚ್ಯುತಿ ಬರುವದು.

ಅವರ ಪ್ರತಿಫಲದ ವಿವರ.

(1) ಕಂಪೆನಿಯು ರಿಜಿಸ್ಟರಾದ ತಾರೀಖಿನಿಂದ ಮಾಹೆಯಾನ 1000/-ರೂಪಾಯಿ ಆಫೀಸ್ ಎಲೋಯನ್ಸ್

(2) ಇಂಡಿಯನ್ ಕಂಪೆನೀಸ್ ಆಕ್ಟು 87 (C) ಸಬ್ ಸೆಕ್ಷನ್ 35ರ ಪ್ರಕಾರ ಕಂಪೆನಿಯ ನಿವ್ವಳ ಆದಾಯದಲ್ಲಿ ವರ್ಷಕೊಮ್ಮೆ ಶೇ. ಹತ್ತರಷ್ಟು ಕಮಿಷನ್ ಸಂದಾಯವಾಗತಕ್ಕದ್ದು. ಮತ್ತು ಲಾಭ ವಿರಾಮ ಯಾ ಲಾಭ ಪೂರ್ಣವಿಲ್ಲದ ಕಾಲದಲ್ಲಿ 18,000/- ರೂಪಾಯಿಗಳ ವಾರ್ಷಿಕ ಮೊತ್ತದಷ್ಟು ಅಲ್ಪಮಿತಿಯಾದ ಕಮಿಷನ್ ಸಲ್ಲತಕ್ಕದ್ದು.

ಡೈರೆಕ್ಟರ ಅರ್ಹತೆ ಮತ್ತು ಸಂಭಾವನೆ.

ಸ್ಪೆಷಲ್ ಡೈರೆಕ್ಟರು ಅಥವಾ ನಾಮಕರಣ ಡೈರೆಕ್ಟರನ್ನುಳಿದು ಇತರ ಡೈರೆಕ್ಟರುಗಳು ಅರ್ಹತೆಯನ್ನು ಪಡೆಯಲು ಕನಿಷ್ಟಪಕ್ಷ ಹತ್ತು ಸಾವಿರ ರೂಪಾಯಿನ ಆರ್ಡಿನರಿ ಷೇರುಗಳನ್ನು ಪಡೆದಿರಬೇಕು. ಮೊದಲನೇ ಡೈರೆಕ್ಟರುಗಳಿಗೆ 5,000 ರೂಪಾಯಿ ಷೇರಿನ ಅರ್ಹತೆ ಸಾಕು. ಹಾಜರಾದ ಮೀಟಿಂಗಿಗೆ ಪ್ರತಿ ಡೈರೆಕ್ಟರಿಗೂ ಪ್ರಯಾಣ ವೆಚ್ಚವಲ್ಲದೆ ಒಂದು ನೂರು ರೂಪಾಯಿನ ಸಂಭಾವನೆ ಕೊಡಲಾಗುವುದು.

ಪ್ರಮೋಷನ್ ಹಣ.

ಪ್ರಮೋಷನ್ ಹಣವು ಯಾರಿಗೂ ಕೊಡಲ್ಪಟ್ಟಿಲ್ಲ.

ಬ್ರೋಕರೇಜ್ ಮತ್ತು ಕಮಿಷನ್.

ಕಂಪನಿಯ ಬ್ಯಾಂಕುಗಳಿಗೆ ಚಂದಾ ವಸೂಲಿನ ಷೇರುಗಳ ಬೆಲೆಯ (ನಾಮಿನಲ್ ವ್ಯಾಲ್ಯು) ಮೇಲೆ ಶೇಕಡ 2½ ಮೀರದಂತೆಯೂ ಇತರ ಅಧಿಕೃತ ಏಜೆಂಟರು ಮತ್ತು ಬ್ರೋಕರುಗಳಿಗೆ ಶೇಕಡ 5 ಕ್ಕೆ ಮೀರದಂತೆಯೂ, ಕಮಿಷನ್ ಕೊಡಲಾಗುವುದು.

ಶೇರು ದರಖಾಸ್ತು.

ಷೇರು ದರಖಾಸ್ತುಗಳನ್ನು (10ಆರ್ಡಿನರಿ ಷೇರಿಗೆ ಕಮ್ಮಿಯಿಲ್ಲದಂತೆ) ಪ್ರಾಸ್ಪೆಕ್ಟಸ್ಸಿಗೆ ಲಗತ್ತಿಸಿರುವ ನಮೂನೆಯಲ್ಲಿ ಭರ್ತಿಮಾಡಿ ದರಖಾಸ್ತಿನ ಹಣದೊಂದಿಗೆ ಕಂಪನಿಯ ರಿಜಿಸ್ಟರ್ಡ್ ಆಫೀಸಿಗಾಗಲಿ ಅಥವಾ ಕಂಪನಿಯ ಬೆಂಗಳೂರು ಆಫೀಸಿಗಾಗಲೀ, ಅಥವಾ ಕಂಪನಿಯ ಬ್ಯಾಂಕರುಗಳಿಗಾಗಲೀ ಕಳುಹಿಸಬೇಕು. ಶೇರು ದರಖಾಸ್ತು ಮಂಜೂರಾಗದಿದ್ದರೆ, ಪೂರ್ತಾ ಹಣವನ್ನೂ ವಾಪಾಸು ಮಾಡಲಾಗುವುದು. ದರಖಾಸ್ತಿನಲ್ಲಿ ನಮೂದಿಸಿರುವ ಷೇರಿನ ಪೈಕಿ ಒಂದು ಭಾಗವು ಮಂಜೂರಾದಲ್ಲಿ ಉಳಿಕೆಯಾದ ಹಣದಲ್ಲಿ ಮಂಜೂರಾದ ಸೇರುಗಳ ಬಾಪ್ತು ಅಲಾಟ್‌ಮೆಂಟ್ ಹಣವನ್ನು ಕಟಾಯಿಸಿ, ಉಳಿಕೆಯಾದ ಹಣವನ್ನೂ ವಾಪಾಸು ಮಾಡಲಾಗುವುದು.

(ಸಹಿ) ಎಚ್. ಬಿ. ಗುಂಡಪ್ಪಗೌಡ,	(ಸಹಿ) ಆರ್. ವಿ. ವಾಲಿ,
,, ಸೇಟ್ ರತನ್‌ಚಂದ್ ಹೀರಾಚಂದ್,	,, ಎ. ನಾರಾಯಣ ರಾವ್,
,, ಕೆ. ಎಸ್. ರಾಮಸ್ವಾಮಿ ಶಾಸ್ತ್ರಿ,	,, ಸಿ. ಡಿ. ಬೋಪಯ್ಯ,
,, ಟಿ. ಸಿದ್ದಲಿಂಗಯ್ಯ,	,, ಚೊಡೇಗೌಡ ಉರುಫ್ ಪುಟ್ಟಸ್ವಾಮಿ ಗೌಡ,
,, ವಿ. ವೆಂಕಟಪ್ಪ,	
,, ಕೆ. ಜಿ. ಬೆಳ್ಳಪ್ಪ,	,, ಎ. ಜಿ. ಚುಂಚೇಗೌಡ,
,, ಬಿ. ನಾರಾಯಣಸ್ವಾಮಿ,	,, ಕೃಷ್ಣಸ್ವಾಮಿ ಮೊದಲಿಯಾರ್,
,, ಬಿ. ಸಿದ್ದಣ್ಣ,	,, ಕೆ. ಎಂ. ಮುತ್ತಣ್ಣ,
,, ಎಂ. ಸುಬ್ರಹ್ಮಣ್ಯ ಮೊದಲಿಯಾರ್.	,, ಜೆ. ವಿ. ದೊಡ್ಡವೀರಪ್ಪ.

ಪರದೆಯ ಮರೆಯಲ್ಲಿ

— ಲೇ:—"ಭಿಕ್ಷು" —

ಜಿಲ್ಲಾ ಬೋರ್ಡು ಶಾಲೆಯ ಅಧ್ಯಾಪಕರಿಗೆ ಸಂಬಳ ಸಾಲದೆಂದು ಕೂಗಾಟ ಇದೆ. ಈ ಕೂಗಾಟಕ್ಕೆ ಎಲ್ಲರ ಸಹಾನುಭೂತಿಯೂ ಇದೆ. ಆದರೆ ನಮ್ಮ ಶಾಲೆಯ ಒಬ್ಬ ಉಪಾಧ್ಯಾಯರಿಗೆ ಹಣ ಹೆಚ್ಚಾಗಿ ಆ ಹಣದ ಕಾರಣದಿಂದಲೇ ಶಾಲೆಯಲ್ಲಿ ಪಾಠಕ್ಕೆ ಕೊಂದರೆ ಬಂದಿದೆ! ನಮ್ಮ ಅಧ್ಯಾಪಕರು ಹಲವರಿಗೆ ಸಾಲ ಕೊಟ್ಟು ಸಾಲ ವಸೂಲಾತಿಗೆ ಕೋರ್ಟು ಹತ್ತಿದ್ದಾರೆ. ಇವರ ಕೋರ್ಟು ವ್ಯವಹಾರದಲ್ಲಿ ಇವರಿಗೆ ಸಾಕ್ಷಿಗಳು ಶಾಲೆಯ ಬೇರೆ ಉಪಾಧ್ಯಾಯರು! ಹದಿನೆಂಟುವಾರ ಆರು ನೂರು ಜನ ವಿದ್ಯಾರ್ಥಿಗಳು ಓದುತ್ತಿರುವ ಹದಿಮೂರು ಸೆಕ್ಷನ್‌ಗಳಿರುವ ಶಾಲೆಯಲ್ಲಿ ಐದುಜನ ಅಧ್ಯಾಪಕರು! ಮೂರು ಜನರು ಕೋರ್ಟಿಗೆ ಹೋದರೆ ಒಬ್ಬರಿಗೆ ಹೀಂದಿ ಪರೀಕ್ಷೆ. ಒಬ್ಬರಿಗೆ ಕೇಜುವಲ್ ರಜೆ. ಈ ರೀತಿ ಹೀಗಾಗಿ ಓಬೇರಾಯನ ಕಾಲದ ಪದ್ಧತಿಯಂತೆ ಶಾಲಾ ಮಾನಿಟರುಗಳು ಅಧ್ಯಾಪಕರಾಗುವ ಸ್ಥಿತಿ ಹೀಗೆ ಬೋಧನೆ ನಡೆದರೂ ಬಡ ರೈತನ ಮೇಲೆ ವಿದ್ಯಾ ಸೆಸ್ಸು ಯಥಾ ರೀತಿ!

* * *

ನಾಣ್ಯದ ಚಲಾವಣೆ ಇಲ್ಲದೆ ಒಂದು ವಸ್ತುವನ್ನು ಕೊಟ್ಟು ಅದಕ್ಕೆ ಪ್ರತಿಯಾಗಿ ಮತ್ತೊಂದನ್ನು ಪಡೆಯುವ ವ್ಯಾಪಾರಕ್ಕೆ 'ಬಾರ್ಟರ್' ಪದ್ಧತಿ ಎನ್ನುತ್ತಾರೆ. ಇಂಡಿಯಾ ಸರಕಾರವು ಡಾಲರು ಮತ್ತು ಸ್ಟರ್ಲಿಂಗ್ ಚಲಾವಣೆ ಇಲ್ಲದ ರಾಷ್ಟ್ರಗಳೊಡನೆ 'ಬಾರ್ಟರ್' ಪದ್ಧತಿಯಂತೆ ವ್ಯಾಪಾರ ಮಾಡುತ್ತಿದೆಯಂತೆ. ಇದೇ ರೀತಿ ಮಾರ್ನಾಡಿನಲ್ಲಿ ಸೀಗೆ ಕಾಯಿ ಕೊಟ್ಟು ಸೀಮೆಣ್ಣೆ ಟಿನ್ನು ಪಡೆಯುತ್ತಿದ್ದಾರಂತೆ. ಆದರೆ ಬಹಿರಂಗವಾಗಿ ಅಲ್ಲ. ತೆರೆಯ ಮರೆಯಲ್ಲಿ!

* * *

ನಮ್ಮೂರಿನವರೊಬ್ಬರು. ಯುದ್ಧ ಸಮಯದಲ್ಲಿ ಮತ್ತು ಅದರ ನಂತರ ಎಷ್ಟೋ ಜನರು ಲಾರಿಗಾಗಿ ಬಂಕೊಂಡರೂ ಯಾರಿಗೂ ದೊರೆಯದ ಲಾರಿ ಇವರಿಗೆ ಸುಲಭದರಲ್ಲಿ ದೊರೆಯಿತು. ಬಟ್ಟೆ ವ್ಯಾಪಾರ ಆ ವರೆಗೆ ಮಾಡದಿದ್ದರೂ ಲೈಸೆನ್ಸು ದೊರೆಯಿತು. ಹೊಸದಾಗಿ ಬಟ್ಟೆ ಅಂಗಡಿ ತೆರೆದರೂ ಬಿನ್ನೀ ಕೋಟಾ ದೊರೆಯಿತು. ಇತ್ತಲಾಗಿ ತೆರೆಯ ಮರೆಯಲ್ಲಿ ಸಕ್ಕರೆ ಕೂಟಗಳಾದ ನಂತರ ಸೀಮೆಣ್ಣೆ ವ್ಯಾಪಾರ ಅವರಿಗೇ ಕೊಡಲಾಗಿದೆ. ಸಕ್ಕರೆಗೆ ನಿಯಂತ್ರಣವಿದ್ದಾಗ ಯಾರಿಗೋ ಕೊಡಲ್ಪಟ್ಟಿದ್ದ ಈ ವ್ಯಾಪಾರ ಇವರಿಗೆ ಬಂತು! ಇತ್ತಲಾಗಿ ಆಕ್ಸಿರೇಶನ್ ಅಂಗಡಿಯ ಅನುಕೂಲತೆಯನ್ನೂ ಇವರಿಗೆ ಮಾಡಿ ಕೊಟ್ಟಿರುವರು. ಇವರು ಹಲವು ಅಧಿಕಾರಿಗಳ ಸಂಬಂಧಿಕರಾಗಿರಬಹುದು. ಆದರೆ ಸ್ವರಾಜ್ಯವು ಬಂದ ಆ ಕಾಲದಲ್ಲಿ ಅಧಿಕಾರಿಗಳು ಈ ರೀತಿಯ ಪಕ್ಷಪಾತ ಮಾಡಿಯಾರೇ?

* * *

ಈಗಿನ ಲೇಬರ್ ಮತ್ತು ವೇಜಸ್ ಆಕ್ಟ್ ಪ್ರಕಾರ ಒಬ್ಬ ಕೂಲಿಯನ್ನು ಕೆಲಸದಿಂದ ನಿವೃತ್ತಿಗೊಳಿಸ ಬೇಕಾದರೆ ಕಡಿ[illegible] ಕೊಡಬೇಕು. ಆದರೆ ಕೊಡಗು ಸರಕಾರವು ಈ ವಿಚಾರದಲ್ಲಿ ಪೂರ್ಣ ಸರ್ವಾಧಿಕಾರ ವಹಿಸಿದಂತಿದೆ ತಮಗೆ ಬೇಡವೆನಿಸಿದಾಗ ೨೪ ಗಂಟೆಗಳೊಳಗೆ ಕೆಲಸದಿಂದ ನಿವೃತ್ತಿಗೊಳಿಸುವ ಉದಾಹರಣೆಗಳಿವೆ. ತೋಟದ ಕೂಲಿಗಳಿಗಿಂತಲೂ ಸರಕಾರದ ನೌಕರರು ಕಡೆ ಏನು?

* * *

ಕೊಡಗು ಸರಕಾರವು ಈ ವರ್ಷ ಕೇವಲ ಯುದ್ಧೋತ್ತರ ಇಲಾಖೆಗೆಂದು ೩೬ ಲಕ್ಷ ಹಣವಿಟ್ಟಿದೆಯಂತೆ. ಕಳೆದ ವರ್ಷವೂ ಈ ಇಲಾಖೆಗೆ ಸುಮಾರು ೨೦ ಲಕ್ಷ ಇಡಲಾಗಿತ್ತು! ಆದರೆ ಕಾರ್ಯರೂಪದಲ್ಲಿ ಬಂದದ್ದೇನು? ಪಂಚಾಂಗದಲ್ಲಿ ಹತ್ತು ಕೊಳಗ ಮಳೆ ಈ ವರ್ಷ ಎಂದಿರಬಹುದು. ಆದರೆ ಪಂಚಾಂಗವನ್ನು ಎಷ್ಟೇ ಹಿಂಡಿದರೂ ಒಂದು ಬೊಟ್ಟು ಸಹ ನೀರು ಬೀಳದಂತೆ ಸರಕಾರದ ನೀತಿ ಕಾಗದವಲ್ಲೇ ಆಗಬಹುದೇ?

* * *

ಮಡಿಕೇರಿಯಲ್ಲಿ ಡೈರಿ ಫಾರಂ ಸ್ಥಾಪಿಸುವ ಏರ್ಪಾಡಾದಾಗ್ಯೂ ಈ ವಿಚಾರದಲ್ಲಿ ಹೆಚ್ಚು ಪರಿಜ್ಞಾನವಿಲ್ಲದ ನಾನೂ ಕೂಡ ಡೈರಿ ಫಾರಮ್ಮಿಗೆ ಮಡಿಕೇರಿ ಯೋಗ್ಯ ಸ್ಥಳವಲ್ಲವೆಂದು ಬರೆದಿದ್ದೆ. ಆದರೆ ತಜ್ಞರ ಪ್ರೋತ್ಸಾಹದಂತೆ ಈ ಯೋಜನೆಗೆ ೮೩ ಸಾವಿರ ಹಾಕಿ ಅಸಲಿನಲ್ಲಿ ಕಡಿಮೆ ೧೧,೦೦೦ (ಸತ್ತ ೨೪ ಎಮ್ಮೆಗಳ ಕ್ರಯ) ಕಳೆದು ಕೊಂಡು ಉಳಿದವುಗಳ ರಕ್ಷಣೆಗೆ ವರ್ಷಕ್ಕೆ ಸರಾಸರಿ ಹತ್ತು ಸಾವಿರದಷ್ಟು ನಷ್ಟಪಟ್ಟು ಕೊಂಡು ಬಡರೈತನ ಬೆವರಿನ ಹಣದ ದುರುಪಯೋಗ ಮಾಡಿದುದಕ್ಕೆ—ಈಗಲೂ ಮಾಡುತ್ತಿರುವದಕ್ಕೆ—ಯಾರು ಜವಾಬ್ದಾರರು? ಇದರ ಪರಿಶೀಲನೆ ಮಾಡಿ ಅಯೋಗ್ಯ ಸಲಹೆಕೊಟ್ಟ ತಜ್ಞ ಅಧಿಕಾರಿಗಳಿಂದ ಈ ನಷ್ಟವನ್ನು ಭರ್ತಿ ಮಾಡಬಾರದೇಕೆ?

* * *

ಕೊಡಗಿನಲ್ಲಿ ವ್ಯವಸಾಯ ತೆರಿಗೆ ಹಾಕ ಬಾರದೆಂದು ಕೆಲವು ಕಾಂಗ್ರೆಸ್ ಸದಸ್ಯರು ಶಾಸನ ಸಭೆಯಲ್ಲಿ ವಿರೋಧಿಸಿದರಂತೆ. ವಾರ್ಷಿಕ ಅಂದಾಜು ಮೂರು ಸಾವಿರ ರೂಪಾಯಿ ಉತ್ಪತ್ತಿ ಇರುವವರಿಗಿಂಥಾ ಮೇಲಿನವರು ಈ ತೆರಿಗೆ ತೆತ್ತು ಬಡರೈತರಿಗೆ ಎಲ್ಲಿ ಹಿತವಾಗಬಹುದೋ ಎಂಬ ಅಂಜಿಕೆ ಇರಬಹುದೇನೋ ಈ ಥೋಟಾ ಬಂಡವಾಳಶಾಹೀ ದಾಕ್ಷಿಣ್ಯ, ಬಿಲ್ಲಾಗಳಿಗೆ! ಅವರೂ ಬಡಜನರ ಪ್ರತಿನಿಧಿಗಳು!

* * *

ಮನೆ ಬಾಡಿಗೆ ನಿಯಂತ್ರಣವನ್ನು ಜಾರಿಗೆ ತರಬೇಕೆಂದು ಸರಕಾರವೆಂದಾಗ ಜನ ಪ್ರತಿನಿಧಿಗಳು ಅದರಲ್ಲೂ ಕಾಂಗ್ರೆಸಿಗರು ವಿರೋಧಿಸಿದರಂತೆ. ಇವರು ಯಾವ ಜನ ಪ್ರತಿನಿಧಿಗಳೋ, ಯಾವ ಕಾಂಗ್ರೆಸ್ಸಿನವರೋ ದೇವರೇ ಬಲ್ಲ. ಪೇಟೆಯಲ್ಲಿ ಒಂದೆರಡು ಮನೆ ಇರುವ ಕಾರಣ ಈ ಕಿಂಚಿತ್ ಲಾಭಕ್ಕೆ ಬಡಜನರ ಹಿತವನ್ನೂ ಕಾಂಗ್ರೆಸ್ಸಿನ ಹೆಸರನ್ನೂ ಬಲಿಕೊಡಲು ತಯಾರಿರುವ ಈ ಜನರ ಮುಖಕ್ಕೆ ಬಿದ್ದಿರುವ ಕಲಂಕವನ್ನು ಅಳಿಸುವವರಾರು? "ಸರ್ವಂ ಸ್ವಾರ್ಥಮಯಂ ಜಗತ್"

ಈ ವಾರದ ಕಥೆ.

ಚಿರ ದುಃಖಿನಿ.

ಲೇ:- ಮಿಸ್ ಕೆ ಬಿ. ರಾಣಿ, ಮಡಿಕೇರಿ.

ಈ ಸತ್ಯಕಥೆ ಪ್ರಾರಂಭವಾಗಿ ಕೆಲವು ಸಮಯವಾಗಿದ್ದರೂ ಕಥೆ ಪೂರ್ಣವಾಗಿಲ್ಲ. ಇನ್ನು ಹಿಂದೆ ಆಕೆ ಹಳ್ಳಿಯ ಗಿರಿಜೆಯಾಗಿದ್ದಳು. ಈಗ ಆಕೆ ಪಟ್ಟಣದವಳು. ಆದರೆ ಮನೆಯವರು ಇನ್ನೂ ಹಳ್ಳಿಯವರೇ. ಆದರೂ ಗಿರಿಜೆಯಲ್ಲಿ ಪೂರ್ಣ ಪರಿವರ್ತನೆ ಆಗಿದೆ. ಆ ಪರಿವರ್ತನೆಯ ರೀತಿಗಳನ್ನು ಹೇಳುವುದೇ ನನ್ನ ಕಥೆಯ ಉದ್ದೇಶ.

ಆಕೆಯ ಊರು ಗುಡ್ಡ ಕಾಡಿನ ನಾಡೊಂದರ. ಕೊಡಗಿಗೆ ಸ್ವಾಭಾವಿಕವಾದ ನೈಸರ್ಗಿಕ ಸಂಪತ್ತು ಆ ಗ್ರಾಮದಲ್ಲಿದೆ. ಗ್ರಾಮವನ್ನು ತನ್ನ ಪವಿತ್ರ ನೀರಿನಿಂದ ಆವರಿಸಿ ಕಾವೇರಿ ನದಿ ಹರಿಯುತ್ತದೆ. ಈ ಗ್ರಾಮದಿಂದ ಹತ್ತಿರದ ಪಟ್ಟಣಕ್ಕೆ ಕಡಿಮೆ ಎಂಟು ಮೈಲು. ಈ ಹಳ್ಳಿಗೆ ಬೇರೆ ರಸ್ತೆಗಳ ಸೌಕರ್ಯ ಕಡಿಮೆ. ಅದಕ್ಕಿರುವ ಚಿರ ಸ[illegible]ಕೆಯೆಂದರೆ ಕಾವೇರಿ ನದಿ.

ಗಿರಿಜೆಯ ತಂದೆಯ ಹೆಸರು ಶ್ಯಾಮರಾಯರೆಂದು. ರೈತನಿನ ಕಾಲವಾದ್ದರಿಂದ ಕುಟುಂಬ ಜೀವನ ಸುಖಮಯವಾಗಿರಲಿಲ್ಲ. ಹೇಗೂ ತಮ್ಮ ಪತ್ನಿ ಸುನಂದೆ, ಪುತ್ರಿ ಗಿರಿಜೆಯೊಡನೆ ಜೀವನ ಸಾಗಿಸಿದ್ದರು. ಗಿರಿಜೆ ಆಗ ಏಳನೇ ಫಾರಮಿನಲ್ಲಿ ಓದುತ್ತಿದ್ದಳು. ಜೀವನದ ಕಷ್ಟ ಸುಖಗಳ ಅರಿವು ತಂದೆ ತಾಯಿಗಳ ನೆರಳಿನಲ್ಲಿ ಬೆಳೆಯುತ್ತಿದ್ದ ಆಕೆಗೆ ಇರಲಿಲ್ಲ. ಆದರೆ ಸುಖದ ಹಿನ್ನೆಲೆಯಲ್ಲೇ ದುಃಖವೂ ಇರುವುದರಿಂದ ಗಿರಿಜೆಯ ಜೀವನದಲ್ಲಿಯೂ ಪರಿವರ್ತನೆ ಆಗಬೇಕಾಯಿತು. ತಾಯಿ ಸುನಂದೆಯು ಅಲ್ಪ ಕಾಯಿಲೆಯಲ್ಲಿ [illegible] ಈಯೊಡನೆಯೇ ಶ್ಯಾಮರಾಯರ ಕುಟುಂಬ ಸೌಖ್ಯದ ಸೂರ್ಯನೂ ಅಸ್ತಂಗತನಾದನೆನ್ನಬಹುದು. [illegible] ಗಿರಿಜೆಯು ನಿರ್ಬಲಳಾಗಲು ಬಿದ್ದಳು. ಗಿರಿಜೆ ಶಾಲೆ ಬಿಡಬೇಕಾಯಿತು. ತಂದೆಗೆ ಸಾಧ್ಯವಾದ ಸಹಾಯ ಮಾಡುತ್ತಾ ದಿನ ನೂಕುತ್ತಿದ್ದಳು.

ಗಿರಿಜೆಯ ಸ್ನೇಹಿತೆ ಮಾಧವಿ. ಬೇಸರವಾದ ದಿನ ನೂಕುತ್ತಿದ್ದ ಗಿರಿಜೆಯು ಮಹಿಳಾ ಸಮಾಜ ಒಂದನ್ನು ತೆರೆಯುವ ಬಗ್ಗೆ ಮಾಧವಿಯೊಡನೆ ಆಗಾಗ ಪ್ರಸ್ತಾಪಿಸುತ್ತಿದ್ದಳು. 'ನನಗೆ ಮನೆಯಲ್ಲಿ ಕ್ಷಣ ಕಾಲ ಕೂಡ ಬಿಡುವಿಲ್ಲ. ನಮಗೆ ಸಮಾಜವೇಕೆ? ನಿನಗೂ ನಮ್ಮ ಹಾಗೆ ಮಕ್ಕಳು ಮರಿಗಳಾಗಲಿ, ಆಗ ತಿಳಿದೀತು.' ಎಂದು ಮಾಧವಿಯು ಉತ್ತರ ಕೊಡುತ್ತಿದ್ದಳು.

ಗಿರಿಜೆಯ ತಪಸ್ಸಿನ ಫಲವೋ ಎಂಬಂತೆ ಸರಕಾರದ ಇಲಾಖೆಯ ಸಹಾಯದಿಂದ ಮಹಿಳಾ ಸಮಾಜವೊಂದು ಆರು ತಿಂಗಳ ಹಿಂದೆ ಹತ್ತಿರದ ಪಟ್ಟಣದಲ್ಲಿ ಸ್ಥಾಪಿಸಲ್ಪಟ್ಟಿತು. ಅಡಿಗೆ, ಹೊಲಿಗೆ, ನೂಲುವದು, ನೇಯುವದು, ಪುಸ್ತಕ, ಪತ್ರಿಕೆಗಳನ್ನೋದುವದು, ಆಟ, ಸಂಗೀತ ಮೊದಲಾದವುಗಳ ಏರ್ಪಾಡಾಯಿತು. ಸಮಾಜದ ಕಾರ್ಯಗಳಲ್ಲಿ ಗಿರಿಜೆಯು ಪ್ರಧಾನ ಪಾತ್ರವಹಿಸತೊಡಗಿದಳು. ಆಕೆಯು ಪಟ್ಟಣದಲ್ಲಿಯೇ ಇರತೊಡಗಿದಳು. ಅಂದು ಶನಿವಾರ. ಮಹಿಳಾ ಸಮಾಜಕ್ಕೆ ಗೆಳತಿ ಮಾಧವಿಯನ್ನು ಬಲಾತ್ಕಾರದಿಂದ ಕರೆದುಕೊಂಡು ಗಿರಿಜೆ ಹೊರಟಳು. ಸಮಾಜದ ಕಟ್ಟಡವು ಊರಿನ ಅಂಚಿನ ಒಂದು ಏಕಾಂತ ಪ್ರದೇಶದಲ್ಲಿತ್ತು. ಸಮಾಜದ ಕಟ್ಟಡಕ್ಕೆ ಬೀಗ ಹಾಕಿತ್ತು. ಬೀಗವನ್ನು ತೆಗೆಯಲು ಪ್ರಯತ್ನಿಸಿದರು. ಎಷ್ಟೇ ಪ್ರಯತ್ನಿಸಿದರೂ ಗಿರಿಜೆ, ಮಾಧವಿಯರಿಗೆ ಸಾಧ್ಯವಾಗಲಿಲ್ಲ. ಮೊದಲೇ ಜಿಗುಪ್ಸೆಗೊಂಡಿದ್ದ ಮಾಧವಿಯು ಹತ್ತಿರದ ಮನೆಯಿಂದ ಯಾರನ್ನಾದರೂ ಕರೆಯುವೆನೆಂದು ಹೋದಳು.

ಅಷ್ಟರಲ್ಲಿ ಆ ಮಾರ್ಗವಾಗಿ ಯುವಕನೊಬ್ಬನು ಹೋಗುತ್ತಿದ್ದನು. ಗಿರಿಜೆಯು ಆತನನ್ನು ಉದ್ದೇಶಿಸಿ, 'ದಯವಿಟ್ಟು ಈ ಬೀಗವನ್ನು ತೆಗೆದುಕೊಡುವಿರಾ?' ಎಂದು ಕೇಳಿದಳು. ಸುಂದರಿಯೊಬ್ಬಳ ಕರೆಗೆ ಯಾರು 'ಓ' ಕೊಡುವದಿಲ್ಲ! ಯುವಕನು ಹರ್ಷ ಮುಖದಿಂದ ಬಂದು ಬೀಗ ತೆಗೆದನು. ಗಿರಿಜೆಯು ಆತನ ಉಪಕಾರ ಸ್ಮರಿಸಿದಳು. ಯುವಕನು ಗಿರಿಜೆಯ ಪರಿಚಯವನ್ನು ಕೇಳಿದನು. ಗಿರಿಜೆಯೂ ಆತನ ಸಭ್ಯತೆ, ನಡೆ, ನುಡಿ, ಸೌಂದರ್ಯ ಮೊದಲಾದುವಕ್ಕೆ ಮನಸೋತಿದ್ದಳು. ಅವರ ಮಾತು ಕೆಲ ಹೊತ್ತು ನಡೆಯಿತು. ಇಬ್ಬರೂ ಒಬ್ಬರನ್ನೊಬ್ಬರೂ ಬಹಿರಂಗವಾಗಿ ಅಲ್ಲದಿದ್ದರೂ ಮನಸಾರೆ ಮೆಚ್ಚಿದ್ದರು.

ಮಾರನೆ ದಿನವೂ ನಿಶ್ಚಿತ ಸಮಯಕ್ಕೆ ಅಲ್ಲಿ ಅವರ ಭೆಟಿಯಾಯಿತು. ಇದು ಹಾಗೆಯೇ ಮುಂದುವರಿಯಿತು. ಅವರ ಪ್ರಥಮ ಪರಿಚಯವು ಕ್ರಮೇಣ ಬೆಳೆದು ಪ್ರೇಮದಲ್ಲಿ ಕಾಲಿಟ್ಟಿತು. ಪ್ರೇಮಕ್ಕೆ ಕಣ್ಣಿಲ್ಲ ಎಂಬಂತೆ ಗಿರಿಜೆಯು ಬೇರೆ ಜಾತಿಯವನಾದ ಆ ತರುಣನನ್ನು ಮೆಚ್ಚಿದಳು. ಆತನೂ ಆಕೆಯನ್ನೇ ಮದುವೆಯಾಗುವದಾಗಿ ಭರವಸೆ ಕೊಟ್ಟನು.

ಯೌವನದ ಹೊಸ್ತಿಲಿಗೆ ಕಾಲಿಟ್ಟ ಯುವಕ ಯುವತಿಯರಲ್ಲಿ ಬುದ್ಧಿಗಿಂತಾ ಹುರುಪೇ ಹೆಚ್ಚು! ಪ್ರೇಮದ ಪವಿತ್ರತೆ [illegible] ಕಾತುರತೆಯೇ ಇರಲಿ. ಶರೀರದ ಆಕರ್ಷಣೆಯನ್ನೇ ಪ್ರೇಮವೆಂದು ನಂಬುವರು. ಈ ಹರೆಯ ಕಾಮಕ್ಕೆ ಪ್ರೇಮದ ಹೆಸರು ಹಾಕಿ ಕಾಮದ ಕಾರಿನಲ್ಲಿ ನರಳಿಂದು, ಬೆಂದು ಜೀವನವನ್ನೇ ಹಾಳುಮಾಡಿಕೊಳ್ಳುವರು. ಆದರೆ ಗಿರಿಜೆಯು ಆ ರೀತಿಯವಳಲ್ಲ.

ಗಿರಿಜೆಯು ಚಿಕ್ಕಂದಿನಿಂದಲೇ ಬಡವ [illegible] ವಿವಿಧ ಕಷ್ಟಗಳನ್ನು ತಿಳಿದಿದ್ದ ಕಾರಣ ಆಕೆಯ ಪ್ರತಿಯೊಂದು ಕಾರ್ಯದಲ್ಲಿಯೂ ತತ್ಪರತೆ, ವಿಶ್ವಾಸಗಳಿದ್ದುವು. ಆಕೆಗೆ ಪ್ರೇಮವು ಚೆಲ್ಲಾಟದ ವಸ್ತು ಆಗಿರಲಿಲ್ಲ. ಗಿರಿಜೆಯೊಬ್ಬಳೇ ಏಕೆ? ಬಡತನದಲ್ಲಿರುವ ಯುವಕ ಯುವತಿಯರೆಲ್ಲರಲ್ಲಿ ಸಿರಿತನದವರಿಗಿಂತಾ ಪ್ರೇಮ, ಪ್ರೀತಿ, ನಂಬಿಕೆಗಳು ಹೆಚ್ಚು ತೋರಿಬರುವವೆಂದರೆ ಅತ್ಯುಕ್ತಿಯಾಗಲಾರದು.

ಜೀವನದ ಯಾತ್ರೆಯಲ್ಲಿ, ಕಷ್ಟ ಬಡತನಗಳ ಕುಲುಮೆಯಲ್ಲಿ ಬೆಂದು ಜಗತ್ತನ್ನು ತಿಳಿದಿದ್ದ ಗಿರಿಜೆಯ ಪ್ರೇಮ ಚಿರಂತನವಾಗಿತ್ತು. ಈ ಪ್ರೇಮಕ್ಕೆ 'ಓ' ಕೊಟ್ಟ ತರುಣನೂ ಸಮಯಕ್ಕೆ ತಕ್ಕಂತೆ ಬಣ್ಣ ಬದಲಾಯಿಸುವವನಾಗಿರಲಿಲ್ಲ. ಗಿರಿಜೆಯು ಜೀವನದಲ್ಲಿ ಒಂದು ತೃಪ್ತಿ ತೋರತೊಡಗಿತು. ಆಕೆಯು ಭವಿಷ್ಯ ಜೀವನದ ನಾನಾ ಕನಸುಗಳನ್ನು ಕಾಣತೊಡಗಿದ್ದಳು!

ಆದರೆ ಸುಖ ಶಾಂತಿಗಳು ಶಾಶ್ವತವಾಗಿ ಎಲ್ಲಿ ಉಳಿಯುತ್ತವೆ? ಶ್ಯಾಮರಾಯರು ಮಗಳ ವಿವಾಹದ ವಿಚಾರ ಬಹು ದಿನಗಳಿಂದಲೇ ಆಲೋಚಿಸುತ್ತಿದ್ದರು. ಅಲ್ಲಿ ಇಲ್ಲಿ ಹುಡುಕಿ ತನ್ನ ಜಾತಿಯ ಬಡ ಪ್ರೌಢನಾದ ಗೋಪುವಿಗೆ ಕೊಡಲು ನಿಶ್ಚಯಿಸಿದರು. ಗಿರಿಜೆಗೆ ಈ ವಾರ್ತೆ ಸಿಡಿಲಿನಂತಾಯಿತು. ನಾನಾ ಬಗೆಯಾಗಿ ಚಿಂತಿಸಿದಳು. ಆತ್ಮಹತ್ಯೆ ಮಾಡಿಕೊಳ್ಳುವದೆಂದು ಅನೇಕ ಬಾರಿ ಭಾವಿಸುವಳು. ಆದರೆ ನಿಜವಾದ ಪ್ರೇಮಿಗೆ ಆ ಸ್ವಾತಂತ್ರ್ಯವಾದರೂ ಎಲ್ಲಿದೆ? ತನಗಾಗಿ ಜೀವಿಸುತ್ತಿರುವ ಪ್ರಿಯಕರನಿಗಾಗಿ ಜೀವಿಸಲೇಬೇಕು!

ಮೌನ ಧರಿಸಿದ್ದರೆ ಪ್ರಯೋಜನವಿಲ್ಲವೆಂದು ಗಿರಿಜೆಯು ತನ್ನ ಮನಸ್ಸಿನ ವಿಚಾರವನ್ನು ತಂದೆಗೆ ಹೇಳಿದಳು. ತಾನು ಪ್ರೀತಿಸುತ್ತಿರುವ ತರುಣನ ವರ್ಣನೆಯನ್ನೂ ಮಾಡಿದಳು. ತಂದೆಯು ಒಪ್ಪಲಿಲ್ಲ. ಅವರಲ್ಲೂ ವಿಜಾತೀಯನೊಬ್ಬನೊಡನೆ ಮದುವೆ ಅವರಿಗೆ ಸ್ವಲ್ಪವೂ ಹಿಡಿಸಲಿಲ್ಲ. ಬೇರೆಯವರನ್ನು ಮದುವೆಯಾಗಿ ವಿವಾಹವಿಚ್ಛೇದಮಾಡಿಕೊಂಡ ಅನೇಕರ ಉದಾಹರಣೆಗಳನ್ನು ಹೇಳಿದರು. ಅಂತರ್ಜಾತಿ ವಿವಾಹವು ಎಂದೂ ಜಯಪ್ರದವಾಗಿಲ್ಲವೆಂದು ನುಡಿದರು. ಗಿರಿಜೆಯು ತನ್ನ ಸ್ಥಿತಿಯನ್ನು ವಿವರಿಸಿದರು. 'ಸತ್ಯವೇ ನಮ್ಮ ತಾಯಿತಂದೆ, ಸತ್ಯವೇ ನಮ್ಮ ಬಂಧುಬಳಗವು, ಕೊಟ್ಟ ಭಾಷೆಗೆ ತಪ್ಪಿ ನಡೆದರೆ ಮೆಚ್ಚನಾ ಪರಮಾತ್ಮನು' ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದಳು. ಆದರೂ ಶ್ಯಾಮರಾಯರ ಮನಸ್ಸು ಬದಲಾಗಲಿಲ್ಲ. ಮಗಳ ಪ್ರೀತಿಗಿಂತಾ ಸಂಪ್ರದಾಯ, ತಮ್ಮ ಜಾತಿಗೆ ಹೆಚ್ಚಿನ ಬೆಲೆ ಕೊಟ್ಟರು.

ಗಿರಿಜೆಯ ಮದುವೆ ಇನ್ನೂ ಆಗಿಲ್ಲ. ಗೋಪುವಿಗೇ ಕೊಡಬೇಕೆಂದು ಶ್ಯಾಮರಾಯರು ನಿರ್ಣಯಿಸಿದ್ದಾರೆ. ಗಿರಿಜೆಯು ದುಃಖದಿಂದ ದಿನ ಕಳೆದಂತೆ ಕಂಗಾಲಾಗುತ್ತಿದ್ದಾಳೆ. ಆಕೆಯ ಕಣ್ಣಲ್ಲಿ ಸತತ ಅಶ್ರುಧಾರೆ ಹರಿಯುತ್ತಿರುತ್ತದೆ. ಚಿಕ್ಕಂದಿನಲ್ಲಿ ತಾಯಿಯನ್ನು ಕಳೆದುಕೊಂಡು ಕಷ್ಟಪಟ್ಟಳು. ಬೆಳೆದಾಗ ನಗರಕ್ಕೆ ಬಂದು ನಾನಾ ಸವಿಗನಸುಗಳನ್ನು ಕಟ್ಟಿ ಭವಿಷ್ಯದ ಪಥವನ್ನು ನಿಶ್ಚಯಿಸುವ ಕಾಲಕ್ಕೆ ಸಾಕಿದ ತಂದೆಯೇ ವಿರೋಧವಾಗಿದ್ದಾರೆ. ಚಿಕ್ಕಂದಿನಲ್ಲಿ ಬಡತನದಿಂದ ಒಳಲಿ ಬಿದ್ದ ಆಘಾತಗಳು ಇಂದೂ ಆಕೆಯ ಶರೀರದಲ್ಲಿ ತೋರಿಬರುತ್ತಿವೆ. ಈಗ ಹೃದಯದ ಮೇಲೆ ಸೈರಿಸಲಾರದ ಆಘಾತವಾಗಿ ಕೃಶವಾಗುತ್ತಿದ್ದಾಳೆ. ಅಂದಿನ ಹುರುಪು, ಉತ್ಸಾಹ, ಚೇತನ ಒಂದೂ ಆಕೆಯಲ್ಲಿಲ್ಲ. ಸಂತೋಷದ ಚಿಹ್ನೆಯೇ ಇಲ್ಲ. ನನಗೆ ಆಗಾಗ ಆಕೆಯನ್ನು ಭೇಟಿಯಾಗುವ ಸಂದರ್ಭವಿದೆ. ಆಕೆಯು ಚಿರದುಃಖಿನಿ. ಆಕೆಯ ದುಃಖೀಜೀವನ ಮುಂದಕ್ಕೆ ಏನಾಗುವದೆಂದು ಶೀಘ್ರದಲ್ಲಿಯೇ ವಾಚಕರಿಗೂ ತಿಳಿಯಬಹುದು!

Edited, Printed and Published by P. I. Belliappa at 'Kodagu' Press Mercara, for 'Kodagu' Ltd.

ವಿಮೆ ಮಾಡಲು ಇಲ್ಲವೇ ಪ್ರತಿನಿಧಿಸಲು
ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.
ಇವರ ಸಲಹೆಗಿಂತ ಉತ್ತಮ ಮಾರ್ಗವಿಲ್ಲ.
ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದೂಸ್ಥಾನದ ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು
ದಿ ಬೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.
30 ಮೌಂಟ್ ರೋಡ್, ಪೊ. ಬಾ. ನಂ. 337, ಮದ್ರಾಸು 2
ಬೋಂಬೆ ಲೈಫ್ ಬಿಲ್ಡಿಂಗ್, ಪೋ. ಬಾ. ನಂ. 1, ಉಡುಪಿ.
(ಟೆಲಿಫೋನ್ ನಂ. 8398)
ಇತರ ಆಫೀಸುಗಳು:— ಬೆಂಗಳೂರು, ತಿರುವೆಂದ್ರಂ, ಕಲ್ಲಿಕೋಟೆ, ಮಂಗಳೂರು, ಮಧುರೆ, ಮತ್ತು ಬೊಂಬಾಯಿ.

ಎಂಪೈರ್ ಆಫ್ ಇಂಡಿಯಾ
ಲೈಫ್ ಎಶ್ಯೂರೆನ್ಸ್ ಕಂಪೆನಿ. ಲಿಮಿಟೆಡ್.
ಸ್ಥಾಪನೆ.—1897

48ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು.	ಒಟ್ಟು ಆದಾಯ	1,07,09,000 ರೂಪಾಯಿ
	ಚಾಲ್ತಿಯಲ್ಲಿರುವ ವಿಮೆ	17,74,52,000 ,,
	ಆಸ್ತಿ	6,67,60,000 ,,
ಕಂಪನಿಯಿಂದ [illegible] ಕೊಟ್ಟ [illegible]		8,83,62,000 ,,

ಶಾಖಾ ಕಛೇರಿ: ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡ ರಸ್ತೆ, ಬೆಂಗಳೂರು.
ಏಜೆನ್ಸಿ ಅರ್ಜಿಗಳನ್ನು ಸ್ವಾಗತಿಸಿದೆ.
ಪ್ರಧಾನ ಕಛೇರಿ: ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ.

ಪೇ ಕಮಿಶನ್

ಪೇ ಕಮಿಶನು ಈಗಾಗಲೇ ಜಾರಿಯಲ್ಲಿ ಬಂದುದಾಯಿತು. ಅನೇಕ ಇಲಾಖೆಗಳು ಅದಾಗಲೇ ಹೊಸ ದರದ ವೇತನವನ್ನು ಪಡೆಯುತ್ತಿವೆ. ಪರಾಧೀನವಾಗಿದ್ದ ಭಾರತದಲ್ಲಿ ನ್ಯಾಯವಿಲ್ಲವೆಂದು ಹೋರಾಡಿ ಸ್ವಾತಂತ್ರ್ಯವನ್ನು ಪಡೆದುದೂ ಆಯಿತು. ಆದರೆ ಸ್ವತಂತ್ರ ಭಾರತದ ನ್ಯಾಯರೀತಿಗೆ ಮುನ್ನುಡಿಯೆನ್ನಬಹುದಾದ ಈ ಪೇ ಕಮಿಶನು ನ್ಯಾಯವಾದುದೇ ಎಂಬುವುದು ಆಲೋಚಿಸಬೇಕಾದ ಸಂಗತಿಯಾಗಿದೆ. ಯಾರೇ ಇದನ್ನು ನ್ಯಾಯವೆಂದು ಮೆಚ್ಚಿದರೂ ಉಣ್ಣುವ ಉಪ್ಪಿಗೆ ಎರಡೆಣಿಸದೆ ತಾನು ಹೊತ್ತ ನೌಕರಿಗೆ ತನ್ನ ರಕ್ತವನ್ನು ಸುರಿಯುವ ದರಿದ್ರ ನೌಕರನಿಗೆ ಇದು ನ್ಯಾಯವೆಂದು ತೋರುವುದಿಲ್ಲ. ಇದನ್ನರಿತೇ ಜ್ಞಾನಿಗಳು ಕೆಲವರು ಸರಕಾರದ ಈ ನೀತಿಯನ್ನು ಕೌನ್ಸಿಲಿನಲ್ಲಿ ಖಂಡಿಸಿದರು. ಆದರೆ ಕೌನ್ಸಿಲಿನ ಠರಾವುಗಳು ಠರಾವುಗಳಾಗಿಯೇ ಉಳಿದಿವೆ.

ಪೇ ಕಮಿಶನು ವಿದ್ಯೆ ಮತ್ತು ವೈದ್ಯಕೀಯ ಇಲಾಖೆಗಳಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಟ್ಟಂತೆ ಕಂಡು ಬರುತ್ತದೆ. ಇವೆರಡೂ ರಚನಾತ್ಮಕ ಮತ್ತು ಪ್ರಾಮುಖ್ಯವಾದ ಇಲಾಖೆಗಳೆಂದು ಎಲ್ಲರೂ ಒಪ್ಪುವರು. ಆದರೆ ಲೋವರ್ ಸೆಕಂಡರಿ ಓದಿದ ಒಬ್ಬ ಕಂಪೌಂಡರನಿಗೆ ರೂ. 55 ರಿಂದ 130ರ ವರೆಗೆಂದಾದರೆ ಸೆಕಂಡರಿ ಪರೀಕ್ಷೆಯಲ್ಲಿ ಸೋತು ಹೋದ ಒಬ್ಬ ಗುಮಾಸ್ತನಿಗೂ, ಶ್ಯಾನುಭೋಗನಿಗೂ ರೂ 45ರಿಂದ 105ರ ವರೆಗೆ! ಈ ಕೆಲಸಗಳ ಪರಸ್ಪರ ಜವಾಬ್ದಾರಿ ಮತ್ತು ಕಷ್ಟದ ತಾರತಮ್ಯವನ್ನರಿಯದೆ. ದೊಡ್ಡ ಉದ್ಯೋಗಸ್ಥರ ಕೆಲಸ ನಡೆಸುವ ಯಾ ಆಫೀಸುಗಳಲ್ಲಿ ನಾಲ್ಕು ಲಕೋಟೆಗೆ ಗೋಂದು ಅಂಟಿಸುವ ಜವಾನನಿಗೆ ರೂ. 30 ರಿಂದ 35 ರ ವರೆಗಾದರೆ ಜನರಹಿತ ಭಯಂಕರ ಕಾಡಿನಲ್ಲಿ ಅಹೋರಾತ್ರಿ ಅಲೆಯುವ ಫಾರೆಸ್ಟ್ ಗಾರ್ಡನಿಗೆ ರೂ. 20ರಿಂದ 30ರ ವರೆಗೆ! ಸಾರಾಯಿ ಕಾಯಿಸಿದವರನ್ನು ಪತ್ತೆ ಹಚ್ಚುವ ಅಬ್ಕಾರಿ ಇನ್ಸ್‌ಪೆಕ್ಟರನಿಗೆ ರೂ. 100 ರಿಂದ 150ರ ವರೆಗಾದರೆ ಒಂದು ನಾಡಿನ ಸಕಲ ಜವಾಬ್ದಾರಿಯನ್ನು ಹೊತ್ತ ಪಾರುಪತ್ಯಗಾರನಿಗೆ ರೂ. 80 ರಿಂದ 160ರ ವರೆಗೆ. ಇದು ಯಾವ ಹೋಲಿಕೆ? ಯಾವ ನ್ಯಾಯ? ಇನ್ನು ಒಂದು ತರಗತಿಯ ವ್ಯಕ್ತಿಗಳಿಗೆ ಎರಡು ವಿಧದ ಸಂಬಳ! ಒಂದೇ ಆಫೀಸಿನಲ್ಲಿ ಒಂದೇ ಮಟ್ಟದ ಜವಾಬ್ದಾರಿಯ ಕೆಲಸ ಮಾಡುವ ಗುಮಾಸ್ತರಿಗೆ (ಶ್ಯಾನುಭೋಗರಿಗೂ) ಮೆಟ್ರಿಕ್ ನಾನ್ ಮೆಟ್ರಿಕ್ ಎಂಬ ಎರಡು ದರ. ಮೆಟ್ರಿಕ್ ಆದವರೇ ಗುಮಾಸ್ತರು, ಶ್ಯಾನುಭೋಗರಾಗಬೇಕೆಂದಿದ್ದರೆ ಮೆಟ್ರಿಕ್ ಅಲ್ಲದವರನ್ನು ಸರಕಾರವು ಯಾಕೆ ಕೆಲಸಕ್ಕೆ ನೇಮಿಸಿಕೊಳ್ಳಬೇಕಿತ್ತು? ಮೆಟ್ರಿಕ್ ನಾನ್ ಮೆಟ್ರಿಕ್ ಇವರಿಬ್ಬರ ಕೆಲಸದಲ್ಲಿ ಸರಕಾರವು ವ್ಯತ್ಯಾಸ ಕಂಡು ಹಿಡಿದಿದೆಯೇ? ಅಸಿಸ್ಟೆಂಟ್ ಕಮಿಶನರರ ಆಫೀಸಿನಲ್ಲಿ ಮುಖ್ಯ ಗುಮಾಸ್ತರು ಮೆಟ್ರಿಕ್ ಪಾಸಾಗದೇ ಇರುವವರಾಗಿ, ಆ ಬಗೆಯ ಪ್ರಾಮುಖ್ಯ ಇಲಾಖೆಗಳಲ್ಲಿ ಒಂದಾದ ಇಲಾಖೆಯ ಕೆಲಸ ಕಾರ್ಯಗಳನ್ನು ಅವರು ಯಶಸ್ವಿಯಾಗಿ ನಡೆಸುತ್ತಿಲ್ಲವೇ? ಅವರಿಗೆ ಮೆಟ್ರಿಕ್ ಪಾಸಾಗದ ದರವೆಂದಾದರೆ ಚೀಫ್ ಕಮಿಶನರರ ಆಫೀಸಿನಲ್ಲಿ ಮೆಟ್ರಿಕ್ ಆಗದ ಒಬ್ಬರಿಗೆ ಸರಕಾರವು ರೂ. 160 ರಿಂದ 250 ರ ವರೆಗಿನ ದರವನ್ನು ಕೊಡುತ್ತಿಲ್ಲವೇ? ಇದು ನ್ಯಾಯವೇ? ಮೊನ್ನೆಯಾಗಿ ಮೆಟ್ರಿಕ್ ಆಗದ ಒಬ್ಬ ಗುಮಾಸ್ತರು, ಒಳ್ಳೆಯ ಕೆಲಸಗಾರರೆಂದು ತಿಳಿದು, ಅವರನ್ನು ಚೀಫ್ ಕಮಿಶನರ್ ಆಫೀಸಿಗೆ ತೆಗೆದುಕೊಂಡು ಅದೆಷ್ಟೋ ವಿರೋಧಗಳಿದ್ದರೂ ಇದು ಸೆಕ್ರೆಟ್ರಿಯೆಟ್ ಆಫೀಸಾದುದರಿಂದ ಇಲ್ಲಿ ಮೆಟ್ರಿಕ್ ನಾನ್ ಮೆಟ್ರಿಕ್ ಎಂಬ ವ್ಯತ್ಯಾಸವಿಲ್ಲವೆಂದು ಧೀರವಾಣಿಯನ್ನಿತ್ತ ಸರಕಾರವು ಕಡೆಗೆ ಅವರನ್ನು ರೂ. 45 ರಿಂದ 105 ರ ದರಕ್ಕೆ ಇಳಿಸಲು ಕಾರಣವೇನು? ಇದೆಲ್ಲಾ ಹುಡುಗಾಟಿಕೆಯೇ? ಸರಕಾರವು ಗಾಳಿ ಬಂದ ಕಡೆ ತೂರಿಕೊಳ್ಳಬಹುದೇ? ಈ ಮೆಟ್ರಿಕ್ ನಾನ್ ಮೆಟ್ರಿಕ್ ಬರೇ ಗುಮಾಸ್ತ ಶ್ಯಾನುಭೋಗರಿಗೆ ಮಾತ್ರ ಏಕೆ ಅನ್ವಯಿಸಬೇಕು. ಮೆಟ್ರಿಕ್ ಆಗದ ಎಷ್ಟು ಮಂದಿ ಬೇರೆ ಹುದ್ದೆಗಳಲ್ಲಿ ಹೀಗೆ ವ್ಯತ್ಯಾಸವಿಲ್ಲದ ಸಂಬಳ ಪಡೆಯುತ್ತಿಲ್ಲ.

ಸರಕಾರದ ಈ ನೀತಿಯು ಬಡ ನೌಕರರಲ್ಲಿ ಜಿಗುಪ್ಸೆಯನ್ನುಂಟು ಮಾಡದಿರದು. ಆ ಜಿಗುಪ್ಸೆಯು ಸರಕಾರದ ಆಡಳಿತವನ್ನು ಶಿಥಿಲಗೊಳಿಸದಿರದು. ಆದ್ದರಿಂದ ಕಂದಾಯ ತೆರುವ ಬಡ ರೈತನಿಗೇ ಕಷ್ಟ. ಜೀವನೋಪಾಯಕ್ಕೆ ಬೇರೆ ಯತ್ನವಿಲ್ಲದೆ, ಎಲ್ಲವನ್ನೂ ಭಗವಂತನ ಮೇಲಿಟ್ಟು, ಈ ತರದ ಅನ್ಯಾಯವನ್ನು ಸಹಿಸಿಕೊಂಡು ಮರುಮಾತೆತ್ತದೆ ಆ ಬಡ ನಾಯಿಗಳು ಕೆಲಸಮಾಡುತ್ತಾರಲ್ಲದೆ ಅನ್ಯಾಯದ ತೀರ್ಪಿಲ್ಲದಲ್ಲ. ಅವರ ಈ ದುರ್ಬಲತೆಯನ್ನು ನೆವಮಾಡಿ ಆಡ ಸರಕಾರವು ಉಪಯೋಗಿಸಿಕೊಳ್ಳಬಾರದು. ದೇಶದ ಮುಂದಾಳುಗಳು ಇದನ್ನು ಸರಕಾರಕ್ಕೆ ಮನದಟ್ಟು ಮಾಡಬೇಕು. ಸರಕಾರವು ಇನ್ನಾದರೂ ಸಮದೃಷ್ಟಿಯುಳ್ಳದ್ದಾಗಬೇಕು.

"ಬಡವನ ಹಿತೈಷಿ"

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕಿನ ವಾರ್ಷಿಕ ಮಹಾ ಸಭೆ.

ತಾರೀಕು ೧೦-೪-೩೬ನೇ ಆದಿತ್ಯವಾರ ದಿವಸ ಬೆಳಿಗ್ಗೆ ೧೧ ಗಂಟೆಗೆ ಮಡಿಕೇರಿ ಹೈಸ್ಕೂಲ್ ಹಾಲಿನಲ್ಲಿ ಬ್ಯಾಂಕಿನ ಪ್ರೆಸಿಡೆಂಟರಾದ ಶ್ರೀ ಕೋಂಗೆಟ್ಟಿರ ಅಪ್ಪಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಪ್ರಾರ್ಥನೆಯಾದನಂತರ ಮೀಟಿಂಗು ಪ್ರಾರಂಭವಾಯಿತು.

೧. ಅಧ್ಯಕ್ಷರು ಸಂಘಗಳ ಪ್ರತಿನಿಧಿಗಳಿಗೂ, ಬಿಡು ಮೆಂಬರುಗಳಿಗೂ, ಸಹಕಾರಿ ಸಂಘಗಳ ರಿಜಿಸ್ಟ್ರಾರವರಿಗೂ ಸ್ವಾಗತವಿತ್ತು, ಬ್ಯಾಂಕಿನ ಅಭಿವೃದ್ಧಿ ಬಗ್ಗೆ ಕೆಲವು ಸಲಹೆಗಳನ್ನು ಸೂಚಿಸಿ ಭಾಷಣ ಮಾಡಿದರು.

೨. ನಂತರ ಸರೋಜಿನಿ ದೇವಿಯವರ ಮತ್ತು ವರದಿ ವರ್ಷದಲ್ಲಿ ಮೃತಪಟ್ಟ ಸದಸ್ಯರುಗಳ ಬಗ್ಗೆ ಸಂತಾಪ ಸೂಚಿಸಿ, ಒಂದು ನಿಮಿಷ ಎದ್ದು ಪ್ರಾರ್ಥಿಸಲಾಯಿತು.

೩. ಕಳೆದ ಮಹಾ ಸಭೆಯ ನಡವಳಿಕೆಯನ್ನು ಮಂಜೂರ್ಮಾಡಲಾಯಿತು. ಆಡಿಟ್ ರಿಪೋರ್ಟನ್ನು ಓದಿ ರಿಕಾರ್ಡ ಮಾಡಲಾಯಿತು. ಡೈರೆಕ್ಟರುಗಳ ವರದಿಯನ್ನು ಒಪ್ಪಲಾಯಿತು. ಬಜೆಟ್ಟನ್ನು ಮಂಜೂರ್ಮಾಡಲಾಯಿತು.

೪. ಈ ಕೆಳಗೆ ನಮೂದುಳ್ಳವರು ಚುನಾವಣೆಗೆ ನಿಂತರು.

ಬಿಡುಮೆಂಬರುಗಳ ಪರ.

೧. ಶ್ರೀಗಳಾದ ಪಿ ಎ ಬೆಳ್ಯಪ್ಪ, (೯೧ ಓಟುಗಳು) ೨. ಕೆ. ಪಿ. ಅಪ್ಪಯ್ಯ, (೮೪) ೩. ಐ ಪಿ. ಕಾರ್ಯಪ್ಪ, (೮೩) ೪. ಪಿ. ಎಂ. ಪೊನ್ನಪ್ಪ, (೮೦) ೫. ಸಿ. ಎಸ್. ನಂಜಪ್ಪ, (೭೭) ೬. ಬಿ. ಎ. ಬೆಳ್ಯಪ್ಪ, ೭ ಎಂ. ಎಂ. ಬೆಳ್ಯಪ್ಪ, ೮. ಎಸ್. ಸೋಮಣ್ಣ, ೯. ಸಿ. ಎ ಮಂದಣ್ಣ, ೧೦. ಕೆ. ಎಂ. ದೇವಯ್ಯ, ೧೧. ಕೆ. ಜಿ. ಬೆಳ್ಯಪ್ಪ, ೧೨. ಪಿ. ಪಿ. ಮಾದಯ್ಯ ಇವರುಗಳು,

ಈ ಮೇಲ್ಕಂಡ ಉಮೇದ್ವಾರರ ಪೈಕಿ ಮೊದಲನೇ ಐವರನ್ನು ಬಿಡು ಮೆಂಬರುಗಳ ಪೈಕಿ ಡೈರೆಕ್ಟರುಗಳಾಗಿ ಚುನಾಯಿಸಲಾಯಿತು.

ಸಂಘಗಳ ಪರ.

೧ ಶ್ರೀಗಳಾದ ಎಂ. ಎಸ್. ಸೋಮಯ್ಯ, (೧೬೪) ೨ ಪಿ. ಜಿ ಮಾದಪ್ಪಯ್ಯ, (೧೫೯) ೩. ಪಳಂಗಂಡ ಐಯ್ಯಪ್ಪ, (೧೫೬) ೪ ಕೆ ಎಂ. ಮೊಣ್ಣಪ್ಪ, (೧೫೩) ೫. ಎಸ್. ಎಸ. ರಾಮ ಶೆಟ್ಟಿ, (೧೫೨) ೬. ಕೆ ಕೆ. ಗಣಪತಿ, (೧೫೧) ೭ ಎ. ಎಸ್. ಪೊನ್ನಪ್ಪ, (೧೪೫) ೮ ಬಿ. ಪಿ ಬೋಪಯ್ಯ, (೧೪೧) ೯ ಹೆಚ್. ಟಿ. ಮುತ್ತಣ್ಣ, (೧೪೦) ೧೦. ಹೆಚ್. ಎಂ. ಪುಷ್ಪಣ್ಣ, (೧೩೭) ೧೧. ಬಿ. ಕೆ. ನಂಜುಂಡೇಶ್ವರ, (೭೯) ೧೨ ಕೆ. ಕೆ ತಿಮ್ಮಯ್ಯ, ೧೩ ಕೆ. ಜಿ ಬೆಳ್ಯಪ್ಪ, ೧೪ ಎಂ. ಎನ್ ಕೃಷ್ಣರಾವ್, ೧೫. ಮಚ್ಚಿಯಂಡ ಐಯ್ಯಪ್ಪ, ೧೬. ಕುಪ್ಪಂಡ ಪೊನ್ನಪ್ಪ ಇವರುಗಳು

ಈ ಮೇಲೆ ನಮೂದು ಉಮೇದ್ವಾರರ ಪೈಕಿ ಪ್ರಥಮದ ಐವರನ್ನು ಚುನಾಯಿಸಿದ ನಂತರ ಹಳೇ ಐದು ತಾಲೂಕುಗಳಿಗೆ ಕಾಲ ಕೊಟ್ಟಿರಂತೆ ಶ್ರೀಗಳಾದ ಕೆ. ಕೆ. ಗಣಪತಿ, ಬಿ ಪಿ. ಬೋಪಯ್ಯ, ಹೆಚ್. ಟಿ ಮುತ್ತಣ್ಣ, ಬಿ ಕೆ. ನಂಜುಂಡೇಶ್ವರ, ಇವರುಗಳನ್ನು ಚುನಾಯಿಸಿದ ನಂತರ ಪಾಡಿನಾಡು ನಾಡಿಗೆ ಯಾರೂ ಇಲ್ಲದ್ದರಿಂದ ಆ ನಾಡಿನ ಪರ ಒಬ್ಬರನ್ನು ಡೈರೆಕ್ಟರುಗಳೇ ಆರಿಸಿಕೊಳ್ಳುವಂತೆ ತೀರ್ಮಾನಿಸಲಾಯಿತು

೫ ಈ ಕೆಳಗಿನ ಮುಖ್ಯ ಠರಾವುಗಳು ಮಂಜೂರಾದವು.

(೧) ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕು ದೀರ್ಘಕಾಲಿನ ಕಡಿಮೆ ಬಡ್ಡಿಯ ಸಾಲದ ಭೂಮಿ ಅಡಮಾನ ಬ್ಯಾಂಕಿನ ಕೆಲಸಗಳನ್ನು ಕೈಕೊಳ್ಳಬೇಕು. ಇದು ಸಾಧ್ಯವಿಲ್ಲದಿದ್ದರೆ ಈ ಬ್ಯಾಂಕೇ ದೀರ್ಘ ಕಂತಿನ ಸಾಲವನ್ನು ಕೊಡಬೇಕೆಂಬ ಠರಾವು ಪಾಸಾಯಿತು.

(೨) ಈಗಿರುವ ಮೇಲ್ವಿಚಾರಣಾ ನಿಧಿ ವಂತಿಗೆಯನ್ನು ಶೇ. ೧೨ ಆಣೆಯಿಂದ ೧೪ ಆಣೆಗೂ, ಇದರ ಮಿತಿಯನ್ನು ರೂ. ೨೦೦ರಿಂದ ೩೦೦ಕ್ಕೂ ಏರಿಸಲಾಯಿತು.

(೩) ಈ ಬ್ಯಾಂಕಿನಲ್ಲಿ ಚುನಾವಣೆ ಸಂದರ್ಭದಲ್ಲಿ ತೆಗೆಯುವ ಓಟಿನ ಕ್ರಮವನ್ನು ಬದಲಾಯಿಸಬೇಕೆಂಬ ಠರಾವನ್ನು ಚರ್ಚಿಸಲಾಗಿ ಈಗ ರೂಢಿಯಲ್ಲಿರುವ ಕ್ರಮವನ್ನೇ ಮುಂದಕ್ಕೂ ಅವಲಂಬಿಸಬೇಕೆಂದು ಬಹುಮತದಿಂದ ಪಾಸಾಯಿತು.

(೪) ಬ್ಯಾಂಕಿನ ಕಟ್ಟಡಕ್ಕೆ ಸಂಘಗಳು ತಮ್ಮ ಕ್ಷೇಮ ನಿಧಿಯ ಶೇ. ೧೦ರಷ್ಟು ಇಲ್ಲವೇ ೪೦೦ ರೂಪಾಯಿಗಳಿಗೆ ಮೀರದಂತೆ ವಂತಿಗೆ ಕೊಡತಕ್ಕದ್ದು ಎಂಬ ಠರಾವು ಮಂಜೂರಾಯಿತು.

(೫) ಬ್ಯಾಂಕಿನ ಹೊಸ ಕಟ್ಟಡವನ್ನು ಸಂಪೂರ್ಣಗೊಳಿಸಲು ಅವಶ್ಯವಿರುವ ವಿದ್ಯುಚ್ಛಕ್ತಿ ದೀಪದ ಏರ್ಪಾಡು, 'ಸೇನಿಟರಿ ಫಿಟ್ಟಿಂಗ್ಸ್' ಕೌಂಟರು ಮತ್ತು ಇತರ ಸುರಮುಟ್ಟು ಸಾಮಾನು, ಅಂಗಳಕ್ಕೆ ಛತ್ರಿ ವಗೈರೆಗಳಿಗಾಗಿ ೩೦,೦೦೦ ರೂ. ಮೀರದೆ ಖರ್ಚು ಮಾಡಬಹುದೆಂದು ಮಂಜೂರಾಯಿತು.

ದಿ ಟ್ರಾಪಿಕಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:— ಲಾಲ ಶಂಕರ್ ಲಾಲ್.

ಮುಖ್ಯ ಖಚೇರಿ:— ಹೊಸ ಡೆಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್

ಹಕೀಮ್ ಅಜಮುಲಖಾನ್. ಡಾ|| ಎಂ. ಎ. ಅನ್ಸಾರಿ.

(1) ದೇಶದಲ್ಲಿ ಪ್ರಮುಖ ದೇಶ ಭಕ್ತರಿಂದ ಸ್ಥಾಪಿಸಲ್ಪಟ್ಟಿದೆ.

(2) ಸ್ವತಂತ್ರ ಭಾರತದಲ್ಲಿ ಆರ್ಥಿಕ ನೆಲಗಟ್ಟನ್ನು ಭದ್ರಪಡಿಸುವುದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯವಾಗಿದೆ.

(3) ಕಳೆದ 22 ವರ್ಷಗಳ ಹಿರಿದಾದ ಅನುಭವವುಳ್ಳ ನಾವು ನಿಮ್ಮ ಜೀವವಿಮಾ ಸಂಬಂಧದ ಯಾವದೇ ಸೇವೆಸಲ್ಲಿಸಲು ಸಂತೋಷಪಡುತ್ತೇವೆ.

(4) ಜೀವವಿಮಾ, ಬೆಂಕಿ, ಮರಾಯಿನ್ ಮತ್ತು ಅಪಘಾತ ಇವೆಲ್ಲ ಕಾರ್ಯಗಳನ್ನು ಮಾಡುತ್ತಿದೆ

(5) ಪ್ರಾರಂಭದಿಂದ ವಿಮಾದಾರರಿಗೆ ಬೋನಸ್ಸು ಕೊಡುತ್ತಿದೆ.

(6) ಯೋಗ್ಯ ಏಜೆಂಟು ಮತ್ತು ಆರ್ಗನೈಜರುಗಳಿಗೆ ತಮ್ಮ ಉದ್ಯೋಗದಲ್ಲಿ ಏಳುರವನ್ನು ಮುಟ್ಟಲು ಒಳ್ಳೆ ಸಂದರ್ಭವನ್ನು ಒದಗಿಸಿಕೊಟ್ಟು ಎಲ್ಲಾ ಕಾಲದಲ್ಲಿಯೂ ದಯಾಳುತನದಿಂದ ಮತ್ತು ಯೋಗ್ಯವಾದ ರೀತಿಯಲ್ಲಿ ಅವರನ್ನು ನಡಿಸಿಕೊಳ್ಳಲಾಗುತ್ತದೆ.

ನಮ್ಮ ಹೊಸ ವಿಸ್ತಾರದ ಯೋಜನೆಯಲ್ಲಿ ಆಕರ್ಷಕ ಕಮಿಷನ್ ಮೇಲೆ ಆರ್ಗನೈಜರರನ್ನು ನಿಯಮಿಸಿಕೊಳ್ಳತಕ್ಕದಿದೆ. ದಯವಿಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಏಜೆನ್ಸಿ ಸುಪರಿಂಟೆಂಡೆಂಟ್, ಮಡಿಕೇರಿ, ಕೊಡಗು. ಅಥವಾ ಎಂ. ಎ. ಬೆಳ್ಯಪ್ಪ, ಬ್ರಾಂಚ್ ಸೆಕ್ರೆಟರಿ, ದಿ ಟ್ರಾಪಿಕಲ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್; ಹಂಪನಕಟ್ಟಾ, ಮಂಗಳೂರು.

Reg. No. M. 1080.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 4-8-0

ಸಂಪುಟ ೨೭ | ತಾರೀಖು ೨೩—೪—೧೯೪೮ನೇ ಶುಕ್ರವಾರ | ಸಂಚಿಕೆ ೩೭

ನಾರದನ ಪುನರವತಾರ!

ಲೇಖಕಳು:—ಶ್ರೀಮತಿ ತಂಗಮ್ಮ, ಮೂರ್ನಾಡು.

ಮೂರ್ನಾಡಿನ ಪಾಂಡ ಪೆ ಮಂದಿನ ಕಟ್ಟೆಯ ಮೇಲೆ ಮುದುಕರೊಬ್ಬರು ಕೂತಿರುವುದು ಗಾಳಿವಿಹಾರಕ್ಕೆ ಹೋದ ನಮಗೆ ದೂರದಿಂದಲೇ ಕಾಣುತಿತ್ತು. ಹಾಗೆ ಹಾಯಾಗಿ ತಿರುಗಾಡಿಕೊಂಡು ಮೈದಾನದತ್ತ ನಡೆಯುತ್ತಿದ್ದೆವು. ಮುದುಕನು ಏನೋ ಹೇಳುತ್ತಿದ್ದನು. ಬಾಯಲ್ಲಿ ನಾರಾಯಣ ಸ್ಮರಣೆಯು ಸ್ಪಷ್ಟವಾಗಿ ಕೇಳಬರುತ್ತಿತ್ತು. ನಾರದರೇ ಇರಬೇಕೆಂದು ನಿರ್ಧರಿಸಿದೆವು. ದೇವಮಾನವ ಸರ್ವಪೂಜಿತ ನಾರದರನ್ನು ನೋಡಲು ಸಿಕ್ಕಿತೆಂದು ಹಿಗ್ಗಿದೆವು. ನಾರದರು ಕವನ್ನು ಕರೆದಂತಾಯಿತು. ನಾವು ಹತ್ತಿರ ಹೋಗಿ ಶಿರಬಾಗಿ ನಮಸ್ಕರಿಸಿದೆವು. ನಾರದರು ನಾಡಿನ ನಾನಾ ವಿಚಾರಗಳನ್ನು ಹೇಳತೊಡಗಿದರು. ಅವರಿಗೆ ಅದೆಂಥಾ ಅಗಾಧ ಜ್ಞಾನವಿದೆ. ಮೂಲೆ ಮೂಲೆಯಲ್ಲಾಗುವ ಸರ್ವ ವಿಚಾರಗಳೂ ಅವರಿಗೆ ತಿಳಿದಿರುವಂತೆ ತೋರಿತು. ಇದು ನಾರದರು ಹೇಳಿದ ವಿಚಾರಗಳ ಸಾರಾಂಶ.

"ದೇವಲೋಕದಲ್ಲಿ ಸುತ್ತಿ ವಿಹರಿಸುತ್ತಿದ್ದ ನನಗೆ ಬಹುಕಾಲದ ನಂತರ ಭೂಲೋಕವನ್ನು ನೋಡಬೇಕೆನಿಸಿತು. ನಾನು ಈ ದೃಷ್ಟಿಯಿಂದ ಹೊರಟೆ. ಆಶ್ಚರ್ಯವೆಂದರೆ ಭೂಲೋಕವು ತಿಳಿಯಲಾಗದಂತೆ ಮಾರ್ಪಾಡು ಹೊಂದಿದೆ. ಜನತೆಯೂ ಬದಲಾಗಿ ಹೋಗಿದೆ. ಭೂಲೋಕವನ್ನು ತಿಳಿದುಕೊಳ್ಳುವುದು ಸರ್ವಜ್ಞಾನಿಯಾದ ನನಗೇ ಕಷ್ಟವಾಯಿತು. ಯೂರೋಪುಖಂಡದಲ್ಲಿ ಶಾಂತಿ ಇಲ್ಲ. ಎಲ್ಲೆಲ್ಲೂ ಸ್ಪರ್ಧೆ! ಎಲ್ಲೆಲ್ಲೂ ಪೈಪೋಟಿ. ಇದರ ಸಾಧನೆಗಾಗಿ ವಿಚಿತ್ರ ಆಯುಧಗಳನ್ನು ತಯಾರಿಸಿಕೊಂಡು ಯುದ್ಧಕ್ಕಾಗಿ ಸಮಯ ಕಾಯುತ್ತಿದ್ದಾರೆ. ಯೂರೋಪಿನ ಜನರ ಪೂರ್ವಜರು ತೋಳಗಳ ಕುಟುಂಬಕ್ಕೆ ಸೇರಿರಬೇಕು. ಅವರ ತೋಳವೃತ್ತಿ ಇನ್ನೂ ನಡೆದುಬಂದಿದೆ.

ಪೂರ್ವ ರಾಷ್ಟ್ರಗಳು ಕುರಿಗಳಂತೆ! ಹಿಂದಿನಿಂದಲೂ ಸಾಧು ಸ್ವಭಾವ. ಆದ್ದರಿಂದಲೇ ಪಾಶ್ಚಿಮಾತ್ಯರ ಕೈಗೆ ಸಿಲುಕಿ ಕಷ್ಟಪಡುತ್ತಿದ್ದಾರೆ. ಸಮಗ್ರ ಜಗತ್ತಿಗೆ ಉಪಯೋಗವಾಗಬೇಕಾದರೆ ಕುರಿಗಳಿಂದಲೇ ಆಗಬೇಕು; ತೋಳಗಳಿಂದ ಯಾರಿಗೂ ಹಿತವಾಗದೆಂಬುದು ಇತ್ತಲಾಗ ಜನತೆಗೆ ಅರಿವಾಗತೊಡಗಿದೆ. ತೋಳಗಳ ರಾಜ್ಯದಲ್ಲೂ ಈ ಜ್ಞಾನ ಉದಯವಾಗುತ್ತಿರುವುದು ಆಶ್ಚರ್ಯ.

ನಾನು ಅವತಾರವೆತ್ತಿದ ಹಿಂದೂದೇಶವನ್ನು ನೋಡದಿರಲು ಸಾಧ್ಯವಾಗಲಿಲ್ಲ. ತೋಳಗಳ ಸಂಪರ್ಕದಿಂದ ತೊಳಲಿ ಬಳಲಿದ ಈ ದೇಶ ಇಂದು ಸ್ವತಂತ್ರಗೊಂಡಿದೆ. ಬಿಡುಗಡೆ ಹೊಂದಿ ಸ್ವತಂತ್ರವಾದರೂ ಈ ವರೆಗೆ ಆಡಳಿತ ನಡೆಸಿದ ತೋಳ ಪ್ರವೃತ್ತಿ ಇನ್ನೂ ಉಳಿದಿದೆ. ಆದ್ದರಿಂದ ಸರ್ವರೂ ದೂರವಿದ್ದು ಬೇರೆಯವರ ಸಾಲಿಗೆ ಬರುತ್ತಾರೆ. ಈ ನೀತಿಯಿಂದಾಗಿ ಬಹುಜನರ ಅಭಿವೃದ್ಧಿ ಕುಂಠಿತವಾಗುತ್ತಿದೆ. ಹಿಂದೂದೇಶದ ಪ್ರತಿಭಾಗಗಳನ್ನು ಸಂಚರಿಸುತ್ತಿದ್ದಾಗ ಮಲಭೂಮಿಯ ಸರೋವರದಂತೆ ನೈಸರ್ಗಿಕ ಸಂಪತ್ತಿನಿಂದ ಕಂಗೊಳಿಸುವ ಈ ನಾಡನ್ನು (ಕೊಡಗನ್ನು) ಕಂಡು ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳುವಾ ಎನಿಸಿತು. ಇಲ್ಲಿಯ ವನಸೌಂದರ್ಯವನ್ನು ನೋಡುತ್ತಾ ತಿರುಗುತ್ತಿದ್ದಂತೆಯೇ ತನ್ನಿಂದ ತಾನೆ ಬಾಯಿಗೆ ಸಂಗೀತ ಬರುತಿತ್ತು. ಇದು ಕಾವೇರಿಯ ಜನ್ಮಸ್ಥಳವೆಂದೂ, ಮಹಾ ಅಗಸ್ತ್ಯ ಋಷಿಯ ತಪೋವನವೆಂದೂ ತಿಳಿದು ಹರ್ಷಿತನಾದೆನು. ಇಡೀ ಭರತಖಂಡಕ್ಕೆ ತಿಲಕಪ್ರಾಯವಾಗಿರುವ ಈ ದೇಶದಲ್ಲಿರುವ ನೀವೆಲ್ಲರೂ ಧನ್ಯರಿರಬೇಕು. ಈ ದೇಶದ ಸೊಬಗಿನಂತೆಯೇ ಜನರೂ ಕೂಡ ಸುಗುಣಿಗಳೆಂದು ಕೇಳಿದ್ದೆ. ಇದನ್ನು ಪರೀಕ್ಷಿಸಲು ನಾನು ಕೆಲವು ಮನೆಗಳಿಗೆ ಹೋದೆನು. ನನಗೇ ಆಶ್ಚರ್ಯವಾಗುತ್ತದೆ. ಜಗತ್ತಿನಲ್ಲಿ ಎಲ್ಲಿಯೂ ಇಲ್ಲದ ಸತ್ಕಾರ ನನಗೆ ದೊರೆಯಿತು.

ಗ್ರಾಮದ ಅದೊಂದು ಮನೆ. ಆಧುನಿಕ ದೃಷ್ಟಿಯಿಂದ ಅದು ಗುಡಿಸಲು. ಹುಲ್ಲು ಹಾಕಿದ ಮನೆ. ನಾನು ಹೋದೆನು. ಮನೆಯೊಳಗಿಂದ ಬಾಲಕಿಯೊಬ್ಬಳು ಬೆಳಗಿದ ಚೆಂಬಿನಲ್ಲಿ ನೀರಿಟ್ಟು ಕಾಲು ತೊಳೆದುಕೊಳ್ಳಲು ಹೇಳಿದಳು. ನಾನು ಹಾಗೆಯೇ ಮಾಡಿದೆ. ಬಿಸಿಲಿನ ಝಳದಲ್ಲಿ ನಡೆದು ಬೆವರಿದ್ದ ನನಗೆ ಆ ತಣ್ಣೀರಿನ ಸ್ಪರ್ಶವು ಅವಿಸ್ಮರಣಂದವನ್ನು ನೀಡಿತು. ಐದು ನಿಮಿಷಗಳ ನಂತರ ಸ್ವಲ್ಪ ಫಲಹಾರದೊಂದಿಗೆ ಸುವಾಸನಾಯುಕ್ತ ಕಾಫಿ ತರಲ್ಪಟ್ಟಿತು. ಹೃದಯತುಂಬಿದ ಈ ಸತ್ಕಾರಕ್ಕೆ ಒಲಿದು ಎಲ್ಲವನ್ನೂ ತಿಂದೆನು. ಸ್ವಲ್ಪ ಸಮಯದ ನಂತರ ಊಟದ ಏರ್ಪಾಡಾಯಿತು. ಸರಳ ಅಡಿಗೆ. ಆದರೂ ರೇಶನಿನ ತೊಂದರೆ ಇಲ್ಲ. ಹೆದರಿಕೆ ಇಲ್ಲದೆ ಊಟ ಮಾಡಿದೆ. ಮನೆಗೆ ಬಂದ ಅತಿಥಿಗೆ ಬಲಾತ್ಕಾರವಾಗಿ ಊಟ ಬಡಿಸುವ ಊರು ಇದೊಂದೇ. ನಗರಗಳಲ್ಲಿ ಧರ್ಮದ ಛತ್ರವಿದ್ದಂತೆ ಹಿಂದೂಸ್ಥಾನದಲ್ಲಿ ಕೊಡಗು!

ಇಂಥಾ ಸ್ಥಳದಲ್ಲಿಯೂ ರೋಗ ರುಜಿನಗಳೇ ಕೇಡು ಕೊಡಗಿನ ಕೆಲವು ಭಾಗಗಳನ್ನು ಇನ್ನೂ ಸುತ್ತಿದೆ. ಕೊಡಗು ಹಿಂದೂದೇಶದೊಳಗಿರುವುದರಿಂದ ಸ್ವಾತಂತ್ರ್ಯದ ಹಲಕೆಲವು ರೋಗಗಳು ಇಲ್ಲಿಯೂ ಪ್ರಾರಂಭವಾಗಿವೆ

(೧) ಕೊಡಗಿನಲ್ಲಿ ಪಕ್ಷರಾಜಕೀಯವು ಮಹಾ ಅನರ್ಥಮಾಡುತ್ತಿದೆ. ಕಾಂಗ್ರೆಸಿನವರಲ್ಲಿ ಪ್ರಾರಂಭವಾದ ಈ ಒಡಕನ್ನು ಉಪಯೋಗಿಸಿಕೊಂಡು ಕಾಂಗ್ರೆಸಿಗರಲ್ಲದ ಸಂದರ್ಭಸಾಧಕರು ಅದನ್ನು ಬೆಳೆಸಿ ದೇಶದ ಅಹಿತಕ್ಕೆ ಕಾರಣರಾಗಿರುತ್ತಾರೆ. ಬಾಣಾರೆನಿಸಿದ, ಮಹಾತ್ಮರ ಅನುಯಾಯಿಗಳೆನಿಸಿದ ಕಾಂಗ್ರೆಸ್ಸಿನವರು ಇದನ್ನು ಇಷ್ಟು ಬೆಳೆಸಲು ಬಿಡಬಾರದಿತ್ತು. ಸರಕಾರದ ಉದ್ಯೋಗಗಳಿಗೆ ಕೋಮುವಾರು ಆಯ್ಕೆ ಇದ್ದಂತೆ ರಾಜಕೀಯದಲ್ಲಿ ಸ್ಪರ್ಧೆಯ ಪೈಪೋಟಿ. ಕೇಂದ್ರದ ಶ್ರೀ ಸರದಾರರಂಥಾ ಮಂತ್ರಿಗಳು ಬರುವುದಾದರೆ ಅವರನ್ನು ಸ್ವಾಗತಿಸಲೂ ಕೂಡ ಆ ಕಡೆಯಲ್ಲಿ ಮೂವರಾದರೆ ಈ ಕಡೆಯಲ್ಲಿ ಮೂರು! ಈ ಪಕ್ಷರಾಜಕೀಯ ವಿಪರೀತಕ್ಕೆ ಏರಿದೆ. ಇದು ನಿಲ್ಲದೆ ದೇಶದ ಹಿತವಾಗದು. ಇಂದಿನ ಯುವಕರು ಪಣತೊಟ್ಟು ಈ ಕಳಂಕವನ್ನು ತೊಡೆದು ಹಾಕಲು ಮುಂದೆ ಬರಬೇಕು.

(೨) ಹೊರಗಿನಂತೆ ಲಂಚದ ಹಾವಳಿ ನಡೆಯುತ್ತಿದ್ದರೂ ಅದು ಇಲ್ಲವೆನ್ನಲಾಗುವುದಿಲ್ಲ. ತಲೆಗೆ ಕ್ರಾಪ್ ಮಾಡಬೇಕಾದರೆ 'ಫ್ರೀ' ಆಗಬೇಕು. ಒಂದು ಚಾ ಕುಡಿಯಬೇಕಾದರೆ ಪುಕ್ಸಾಟೆ ದೊರೆಯಬೇಕು. ಈ ಚಿಲ್ಲರೆ ಅಭ್ಯಾಸವೇ ಬೆಳೆದು ಮುಂದೆ ಹಸುರು ನೋಟುಗಳಿಗೆ ಕೈ ನೀಡುವುದು. ಈ ಪ್ರವೃತ್ತಿಯನ್ನು ಈಗಲೇ ನಿರ್ನಾಮ ಮಾಡಬೇಕು.

(೩) ನೋಡಿ, ನಮ್ಮ ಮುಂದಿರುವ ಈ ಪಾಂಡಾಣೆ ಮಂದಿಗೆ 'ಮಹಾತ್ಮಾಗಾಂಧಿ ಮೈದಾನ'ವೆಂದು ಹೆಸರಿಡಲು ನಡೆದ ತಕರಾರು ನನಗೆ ತಿಳಿಯಿತು. ಈ ರೀತಿಯ ತಕರಾರು ನಡೆಸಿ ಪುಣ್ಯಪುರುಷ ಮಹಾತ್ಮರ ಹೆಸರಿಗೆ ಕಳಂಕತರಲೇಕೆ? ಹಾಗೆ ಹೆಸರು ಹಾಕುವುದರಿಂದ ಆಗುವ ಲಾಭದರೂ ಏನು? ನಿಜವಾಗಿಯೂ ಗಾಂಧಿ ತತ್ವಗಳನ್ನು ಪಾಲಿಸಲು ಶಕ್ತಿ ಇರುವವರೆಲ್ಲರೂ ಗಾಂಧಿಗಳೆಂದುಕೊಳ್ಳಬಹುದು. ಅವರ ತತ್ವಗಳನ್ನು ಪಾಲಿಸದೆ ಯಾವ ಹೆಸರಿಟ್ಟುಕೊಂಡರೂ ಪ್ರಯೋಜನವೇನು? ನಾನು ಕೆಲವರನ್ನು ನೋಡಿದ್ದೇನೆ. ಗಾಂಧಿ ಭಕ್ತರು, ಕಾಂಗ್ರೆಸಿನವರೆನ್ನುತ್ತಾರೆ. ಕೈನೂಲಿನ ಖಾದಿ ಧರಿಸರು. ಜನತೆಯ ಕಣ್ಣು ಕಟ್ಟಲು ಅಸ್ಪೃಶ್ಯರ ಅನಧಿಕೃತ ಖಾದಿ ಧರಿಸುತ್ತಾರೆ! ಹೊರಗೆ ನಿಶಾನಿ ಷೇಧಕರು; ಒಳಗೆ ನಿಶಾದೇವಿಯಾರಾಧಕರು! ಹೊರಗೆ ಧರ್ಮ, ನೀತಿ, ಅಹಿಂಸೆಯ ಮಾತು; ಒಳಗೆ ಸುಲಿಗೆ, ಮೋಸ, ಅನೀತಿ. ಬಾಯಿಯಲ್ಲಿ ರಾಮಭಜನೆ, ಉಣ್ಣುವ ಪ್ರಾರ್ಥನೆ; ಆದರೂ ಎಂಟು ರೂಪಾಯಿಯ ಮನೆಗೆ ನಲುವತ್ತು ರೂಪಾಯಿ ಬಾಡಿಗೆ ಬೇಕು! ಕಪ್ಪುಸಂತೆಯಲ್ಲಿ ಒಂದಕ್ಕೆರಡು ವ್ಯಾಪಾರ ಮಾಡಬೇಕು. ಮಾಂಸ ತಿನ್ನುವುದಿಲ್ಲ ಅಹಿಂಸೆ ಪಾಲಿಸುವವರೆನ್ನುತ್ತಾರೆ; ಪ್ರತಿ ವರ್ತನೆಯಲ್ಲಿ ಬೇರೆಯವರಿಗೆ ಹಿಂಸೆ ಇನ್ನೊಬ್ಬರ ಕೇಡನ್ನೇ ಬಯಸುತ್ತಾರೆ. ಈ ರೀತಿ ವರ್ತಿಸುವ ಜನರು ತಾವು ಗಾಂಧೀ ಅನುಯಾಯಿಗಳು, ಕಾಂಗ್ರೆಸಿಗರು ಎಂದುಕೊಂಡರೆ ಆಗುವುದೇನು? ಕಾಗೆಯು ತಾನು ಕೋಗಿಲೆಯೆಂದುಕೊಂಡರೂ ಕೋಗಿಲೆಯಾದೀತೆ?

(೪) ಮೊನ್ನೆ ಸಾಯಂಕಾಲದ ಸಮಯಕ್ಕೆ ಎಪ್ಪತ್ತು ವಯಸ್ಸಿನ ಮುದುಕರೊಬ್ಬರು ಈ ದಾರಿಗಾಗಿ ಹೋಗುತ್ತಿದ್ದರು. ಅವರ ತಲೆಯ ಕೂದಲೆಲ್ಲಾ ಬೆಳ್ಳಗಾಗಿ ನೋಡುವಾಗ ಅದೊಂದು ಅನಿರ್ವಚನೀಯ ಗಾಂಭೀರ್ಯ ತೋರಿಬರುತ್ತಿತ್ತು. ಆದರೆ ಮುದುಕರ ಕಣ್ಣಿನಲ್ಲಿ ನೀರು ತುಂಬಿತ್ತು. ನನಗೆ ಕಷ್ಟ ಸುಖ, ಲಾಭ ನಷ್ಟ, ದುಃಖ ಸಂತೋಷ ಎಲ್ಲವೂ ಒಂದೇ. ಆದರೂ ಮುದುಕನ ಕಣ್ಣಿನ ನೀರನ್ನು ನೋಡಿ ಎದೆ ಕರಗಿತು. ವಿಚಾರಿಸಲಾಗಿ ಸಾಹುಕಾರರೊಬ್ಬರಿಂದ ಕಳೆದ ವಾರ ರೂ. ೫೦|—ಸಾಲ ಪಡಕೊಂಡುದಾಗಿಯೂ, ಈಗ ಅವರು ತಾನು ೧೦೦ ಕೊಟ್ಟೆನೆಂದು ಹೇಳುತ್ತಿರುವುದಾಗಿಯೂ ಹೇಳಿದರು. ಹಣ ಕೊಡದಿದ್ದರೆ ಕೋರ್ಟಿಗೆ ಹೋಗುವುದಾಗಿ ಗದರಿಸಿದರೆಂದೂ ತಾನು ಬರೆದುಕೊಟ್ಟ ಚೀಟಿಯಲ್ಲಿ ರೂ. ೫೦ ಹೋಗಿ ನೂರಾಗಿರುವುದಾಗಿಯೂ ತಿಳಿಸಿದರು. ಈ ಮೇಲೆ ವಿವರಿಸಿದಂಥಾ ಹಲವಾರು ಕಳಂಕಗಳು ಇವೆ. ಅವು ಕ್ರಮಶಃ ಬೆಳೆಯುತ್ತಿವೆ. ಅವುಗಳನ್ನು ತಿದ್ದಿ ಸಂಪಡಿಸಿಕೊಂಡು ಕೊಡಗಿನ ಪರಿಶುದ್ಧ ಮತ್ತು ಮನರಂಜಕ ನಿಸರ್ಗ ಸಂಪತ್ತಿನಂತೆಯೇ ಮನುಷ್ಯನ ಹೃದಯ ಸಂಪತ್ತನ್ನೂ ಪವಿತ್ರಗೊಳಿಸಿಕೊಂಡರೆ ಇದೇ ಇಹದಲ್ಲಿ ಸ್ವರ್ಗ, ರಾಮರಾಜ್ಯ! ಆದರೆ ಈ ಪಾವಿತ್ರ್ಯವನ್ನು ಕಾಪಾಡಿಕೊಳ್ಳದಿದ್ದರೆ ಹಿಂದೂದೇಶದ ಇತರ ಭಾಗಗಳೊಡನೆ ಬೆರೆತು ಸಮುದ್ರದ ಉಪ್ಪು ನೀರಿನಲ್ಲಿ ಪವಿತ್ರ ಗಂಗೆಯ ನೀರೂ ಮಿಶ್ರಗೊಂಡು ತನ್ನತನವನ್ನು ಕಳಕೊಳ್ಳುವಂತೆ ಈ ಚಿಕ್ಕ ನಾಡೂ ಆದೀತು.'

ನಾರದರು ನಾರಾಯಣ ನಾಮಸ್ಮರಣೆ ಮಾಡುತ್ತಾ ಎದ್ದು ನಡೆಯತೊಡಗಿದರು. ಮನೆಗೆ ಬರಬೇಕೆಂದು ಕಾತುರದಿಂದ ಆಹ್ವಾನಿಸಿದೆವು. ಅಷ್ಟರಲ್ಲಿ ಅವರು ಅದೃಶ್ಯರಾಗಿದ್ದರು. ಅವರ 'ನಾರಾಯಣ' ಧ್ವನಿಯು ದೂರದಿಂದ ಅಸ್ಪಷ್ಟವಾಗಿ ಕೇಳುತ್ತಿತ್ತು.

ಚಿಕ್ಕ ಕಾಫಿ ಪ್ಲಾಂಟರುಗಳ ಅವಗಾಹನೆಗೆ.

ಇಂಡಿಯನ್ ಕಾಫಿ ಬೋರ್ಡಿನವರು ಕಳೆದ ವರ್ಷದ (1947-48) ಚಿಕ್ಕ ಪ್ಲಾಂಟರುಗಳ ಅಂದರೆ 25 ಎಕ್ರೆಗೆ ಕಡಿಮೆ ಇರುವವರ ಪೂಲ್ ಮಾಡಿದ ಕಾಫಿಯ ವಾಲೆ ಕಡೇ ಡಿವಿಡೆಂಡನ್ನು ಸಾರಿದ್ದಾರೆ. ಪ್ಲಾಂಟರುಗಳು ತಮ್ಮ ಪಾವತಿ ರಶೀತಿಯನ್ನು ಹಾಜರ್ಮಾಡಿ ಈ ಡಿವಿಡೆಂಡನ್ನು ಈ ... ತಿಂಗಳೊಳಗೆ ಹೊಂದಿಕೊಳ್ಳಬೇಕೆಂದು ಈ ಮೂಲಕ ತಿಳಿಸಲಾಗಿದೆ.

ಏಜೆಂಟ್
ಮ್ಯಾಕ್ಟರ್ ಬ್ರದರ್ಸ್
2-2 ಮಡಿಕೇರಿ

ಸ್ವಧರ್ಮವು ಜೀವನದ ಗುಟ್ಟು

[ಶ್ರೀ ಕಾವೇರಿ ಆಶ್ರಮ, ವೀರಾಜಪೇಟೆ ಇವರಿಂದ]

ಗೀತೆಯ ಎರಡನೇ ಅಧ್ಯಾಯ ಸಾಂಖ್ಯಯೋಗವಾಗಿದೆ. ಅದರಲ್ಲಿ ನಾವು ತಿಳಿಯಬೇಕಾದ ಮುಖ್ಯ ಅಂಶಗಳೇನೆಂದರೆ (೧) ನಮ್ಮ ಈ ಶರೀರವು ನೀರಿನ ಮೇಲಿನ ಗುಳ್ಳೆಯಂತೆ ಕ್ಷಣಿಕವಾದದ್ದು. ಅದನ್ನು ಪರಮಾತ್ಮನ ಸೇವೆಗಾಗಿ ಉಪಯೋಗಿಸಬೇಕಾದುದು ನಮ್ಮ ಕರ್ತವ್ಯ. (೨) ನಮ್ಮ ಆತ್ಮವು ಜನನಮರಣಗಳಿಲ್ಲದೆ ಅಖಂಡವಾದುದು ಮತ್ತು ಶಾಶ್ವತವಾದುದು. ಶರೀರವು ನಾಶವಾಗುವುದರಿಂದ ಆತ್ಮವು ನಾಶವಾಗುವುದಿಲ್ಲ. ಇದನ್ನರಿತು ನಮ್ಮಲ್ಲಿರುವ ಸ್ವಾರ್ಥವನ್ನೂ ತನ್ನ ಮತ್ತು ಇತರ ಎಂಬ ಭೇದವನ್ನೂ ಕಿತ್ತೊಗೆಯಬೇಕು. (೩) ಈ ಮೇಲಿನ ಎರಡು ತತ್ವಗಳನ್ನೂ ಚೆನ್ನಾಗಿ ಮನಸ್ಸಿನಲ್ಲಿಟ್ಟುಕೊಂಡು ನಮ್ಮ ಸ್ವಧರ್ಮವನ್ನು ಎಂದಿಗೂ ಕೈಬಿಡದೆ ಆಚರಿಸಬೇಕು.

ಇವುಗಳ ಪೂರ್ಣ ಜ್ಞಾನವಿದ್ದು ನಡೆದದ್ದಾದರೆ ಮನುಷ್ಯನು ಒಂದಲ್ಲ ಒಂದು ದಿನ ಜೀವನದ ಅಂತಿಮ ಗುರಿಯನ್ನು ತಲಪುತ್ತಾನೆ. ದೈನಂದಿನ ಜೀವನವು ಸುಖಮಯವಾಗಿಯೂ ಶಾಂತಿಮಯವಾಗಿಯೂ ಪರಿಣಮಿಸುತ್ತದೆ. ಮನಸ್ಸು ಪರಿಶುದ್ಧವಾಗಿರುತ್ತದೆ. ಜ್ಞಾನದ ಜ್ಯೋತಿಯು ಹೊರಳುತ್ತದೆ.

ಭಗವದ್ಗೀತೆಯು ಉಪದೇಶವಾಗುವುದಕ್ಕೆ ಮೊದಲೇ ವೇದ ಮತ್ತು ಉಪನಿಷತ್ತುಗಳಲ್ಲಿ ಈ ಶರೀರ ಮತ್ತು ಆತ್ಮಗಳ ತತ್ವವನ್ನು ಹೇಳಲಾಗಿದೆ. ಅದನ್ನೇ ಭಗವದ್ಗೀತೆಯಲ್ಲೂ ಹೇಳಿದೆ. ಆದರೆ ಅವುಗಳ ಜೊತೆಯಲ್ಲಿ ಶರೀರ ಮತ್ತು ಆತ್ಮ ತತ್ವಗಳಿಗನುಸಾರವಾಗಿ ನಮ್ಮ ಸ್ವಧರ್ಮವನ್ನು ಆಚರಿಸುವ ಇನ್ನೊಂದು ಗುಟ್ಟನ್ನು ಭಗವದ್ಗೀತೆಯು ಹೇಳಿಕೊಟ್ಟಿದೆ. ಇದೇ ವೇದೋಪನಿಷತ್ತುಗಳಿಗೂ ಭಗವದ್ಗೀತೆಗೂ ಇರುವ ವ್ಯತ್ಯಾಸ. ವೇದ ಮತ್ತು ಉಪನಿಷತ್ತುಗಳು ಜೀವನ ಶಾಸ್ತ್ರವನ್ನು ಹೇಳುತ್ತವೆ ... ಗೀತೆಯು ಆ ಶಾಸ್ತ್ರದ ಜೊತೆಗೆ ಜೀವನ ಕಲೆಯನ್ನೂ ಹೇಳಿಕೊಟ್ಟಿದೆ. ಶಾಸ್ತ್ರ ಮತ್ತು ಕಲೆ ಇವೆರಡರ ಸೇರುವಿಕೆಯಿಂದಲೇ ಗೀತೆಯು ಪೂರ್ಣವಾಗಿದೆ. ಗೀತೆಯು ಶ್ರೇಷ್ಠತೆ ಇದರಲ್ಲಿಯೇ ಇರುವುದು. ಶಾಸ್ತ್ರ ಮತ್ತು ಕಲೆ ಇವೆರಡೂ ಸೇರಿದ ಹೊರತು ಜೀವನ ಸೌಂದರ್ಯವು ಅರಳುವುದಿಲ್ಲ. ಬರೀ ಶಾಸ್ತ್ರದ ಅಭ್ಯಾಸದಿಂದ ಪ್ರಯೋಜನವೇನೂ ಇಲ್ಲ. ಇದು ಬರೀ ಗಿಳಿಯ ಪಾಠ.. ಸಂಗೀತ ಶಾಸ್ತ್ರವನ್ನು ಒಬ್ಬನು ತಿಳಿದುಕೊಂಡಿರಬಹುದು, ಆದರೆ ನಾದ ಬ್ರಹ್ಮದ ಸಿದ್ಧಿಯಾಗಬೇಕಾದರೆ ಕಂಠದಿಂದ ಹಾಡಲು ಕಲಿಯಲೇ ಬೇಕು. ಅದೇ ರೀತಿ ತತ್ವಜ್ಞಾನದೊಡನೆ ಯೋಗವೂ, ಅಂದರೆ ಜೀವನ ಕಲೆಯನ್ನೂ ತಿಳಿಯಬೇಕು. ಆಗಲೇ ಜೀವನವು ಸಾರ್ಥಕವಾಗುತ್ತದೆ.

ಈಗ ನಾವು ಭಗವದ್ಗೀತೆಯಲ್ಲಿ ಹೇಳಿರುವ ಈ "ಜೀವನ ಕಲೆ" ಯಾವುದೆಂದು ತಿಳಿಯಬೇಕು. ಜಗತ್ತಿನ ಕಾಲದಲ್ಲಿ ಎರಡು ವಿಧವಾದ ಮನುಷ್ಯರನ್ನು ನಾವು ಕಾಣುತ್ತೇವೆ. ಮೊದಲನೆಯವನು ಹೇಳುತ್ತಾನೆ "ಕರ್ಮ ಮಾಡಬೇಕು, ಅದರ ಫಲವನ್ನು ನಾವು ಅನುಭವಿಸಬೇಕು" ಇನ್ನೊಬ್ಬನು ಹೇಳುತ್ತಾನೆ "ಕರ್ಮ ಮಾಡಿ ಫಲವನ್ನು ಅನುಭವಿಸದಿದ್ದರೆ ಕರ್ಮವನ್ನೇ ಮಾಡೆನು" ಇವರಲ್ಲಿ ಮೊದಲನೆಯದು 'ರಾಜಸ ಗುಣ' ಉಳ್ಳವನ ಸ್ವಭಾವ ಎರಡನೆಯದು 'ತಾಮಸ ಗುಣ' ಉಳ್ಳವರ ಸ್ವಭಾವ. ಈ ರಾಜಸ ತಾಮಸ ಗುಣಗಳು ಭಗವದ್ಗೀತೆಗೆ ಹಿಡಿಸದು, ಅದು ಕೇವಲ ಸತ್ವಗುಣಿಯಾಗು ಎಂದು ಹೇಳುತ್ತದೆ. "ಕರ್ಮ ಮಾಡು ಆದರೆ ಫಲವನ್ನು ಬಿಡು. ಮೊದಲಿಗಾಗಲಿ ಕೊನೆಗಾಗಲಿ ಫಲದ ಆಸೆ ಬೇಡ" ಎಂಬುದು ಸತ್ವಗುಣಿಯ ಸ್ವಭಾವ ಕರ್ಮ ಮಾಡಿದ ಮೇಲೆ ಫಲ ಇದ್ದೇ ಇದೆ. ಅದನ್ನು ನೀನು ಅನುಭವಿಸುವ ಹಕ್ಕು ನಿನಗಿದ್ದರೂ, ನೀನಾಗಿ ಅದನ್ನು ಬಿಟ್ಟುಕೊಡು ಎಂದು ಭಗವದ್ಗೀತೆಯು ಹೇಳುತ್ತದೆ.

ಫಲಾಪೇಕ್ಷೆಯಿಂದ ಕೆಲಸ ಮಾಡುವವನು ನಿಷ್ಕಾಮ ಕರ್ಮಯೋಗಿಯಾಗುತ್ತಾನೆ. ಒಂದು ಸ್ವಾರ್ಥತೆ, ಇನ್ನೊಂದು ನಿಸ್ವಾರ್ಥತೆ ಫಲಾಪೇಕ್ಷೆಯಿಲ್ಲದೆ ಮಾಡುವವನ ಕರ್ಮವೂ ಸ್ವಾರ್ಥದಿಂದ ಕೆಲಸ ಮಾಡುವವನ ಕರ್ಮವೂ ಎರಡೂ ಒಂದೇ ಆಗಿರಬಹುದು. ಆದರೆ ನಿಷ್ಕಾಮ ಕರ್ಮವೇ ಅತ್ಯಂತ ಶ್ರೇಷ್ಠವಾದುದು, ನಿರ್ದೋಷವಾದುದು. ಸಕಾಮಿಯು ಕೆಲಸ ಮಾಡುವಾಗಲೆಲ್ಲಾ ಅದರ ಫಲದ ಕಡೆಗೇ ಗಮನ ಕೊಡುತ್ತಾನೆ. ಇವನಿಗೆ ತನ್ನ ಕೆಲಸಕ್ಕಿಂತ ಅದರ ಫಲದ ಮೇಲೆಯೇ ಹೆಚ್ಚು ಗಮನವಿರುವುದರಿಂದ ಇವನ ಕೆಲಸವು ಸರಿಯಾಗಿ ನಡೆಯುವುದಿಲ್ಲ. ಕೂಲಿ ಮಾಡುವವನಿಗೆ ಕೆಲಸವು ಚೆನ್ನಾಗಿದ್ದರೇನು, ಇಲ್ಲದಿದ್ದರೇನು? ಇವನಿಗೆ ಬೇಕಾದುದು ಕೂಲಿ, ಸಾಯಂಕಾಲ ಎಷ್ಟು ಬೇಗ ಆದೀತು ಎಂದು ಕಾದು ಕೂರುತ್ತಾನೆ. ಕೆಲಸವು ಚೆನ್ನಾಗಿ ಆಗಬೇಕೆಂದು ಅವನು ಬಯಸುವುದಿಲ್ಲ. ಸಮಯ ಹೋಗಬೇಕು ಅಷ್ಟೇ. ಇವನ ಕೆಲಸವು ಹೇಗೆ ಚೆನ್ನಾಗಿದ್ದೀತು? ಈ ಕರ್ಮವು ದೋಷಯುಕ್ತವಾದುದು. ಇದರಲ್ಲಿ ನೈತಿಕ ದೋಷ ಇದ್ದೇ ಇದೆ. ಆದುದರಿಂದಲೇ ಸಕಾಮಿಯ ಕರ್ಮವನ್ನು ಗೀತೆಯು ಒಪ್ಪುವುದಿಲ್ಲ. ಅದನ್ನು ನಿಜವಾದ ಕರ್ಮವೆಂದು ಹೇಳುವುದೂ ಇಲ್ಲ. ಕರ್ಮದ ಗುಟ್ಟು ನಿಷ್ಕಾಮ ಕರ್ಮದಲ್ಲಿದೆ.

ನಿಷ್ಕಾಮಿಗೆ ಕರ್ಮ ಫಲದ ಯೋಚನೆಯೇ ಇಲ್ಲ. ಇವನ ದೃಷ್ಟಿಯೆಲ್ಲಾ ಇವನ ಕರ್ಮದ ಕಡೆಗೇ ಇರುತ್ತದೆ. ಎಲ್ಲಿ ಕೆಲಸ ಕೆಟ್ಟೀತೋ ಎಂದು ಪ್ರತಿ ನಿಮಿಷದಲ್ಲಿಯೂ ಇವನು ಬಹು ಎಚ್ಚರದಿಂದಿರುತ್ತಾನೆ. ಎಲ್ಲಿ ತನ್ನ ಕೆಲಸದಲ್ಲಿ ನೈತಿಕ ಲೋಪ ಬಂದೀತೋ ಎಂದು ತನ್ನ ಕರ್ಮದಲ್ಲಿಯೇ ತನ್ಮಯನಾಗಿರುತ್ತಾನೆ. ಫಲದ ಅಪೇಕ್ಷೆಯು ಮೊದಲಾಗಲೀ, ಕಡೆಗಾಗಲೀ ಯಾವಾಗಲೂ ಇರುವುದಿಲ್ಲ. ಆದುದರಿಂದ ಇವನ ಕರ್ಮವು ಬಹಳ ಉತ್ಕೃಷ್ಟವಾದುದು. ನಿರ್ದೋಷವಾದುದು.

ಹೇಗೆ ನೋಡಿದರೂ ಸಕಾಮಿಯ ಕರ್ಮಕ್ಕಿಂತಲೂ ನಿಷ್ಕಾಮಿಯ ಕರ್ಮವು ಸರ್ವಶ್ರೇಷ್ಠವಾದುದು. ಆದುದರಿಂದಲೇ ಭಗವದ್ಗೀತೆಯು ನಿಷ್ಕಾಮ ಕರ್ಮಯೋಗವನ್ನು ಎತ್ತಿ ಹಿಡಿದಿದೆ. ಎಂದೆಂದಿಗೂ ನಿಷ್ಕಾಮ ಕರ್ಮಯೋಗಿಯು ತನ್ನ ಸ್ವಧರ್ಮವನ್ನು ಬಿಡುವುದಿಲ್ಲ. ದುಃಖ ಸುಖಗಳ ಅರಿವು ಇವನಿಗಿರುವುದಿಲ್ಲ. ತನ್ನ ಕರ್ಮವು ಕಷ್ಟವಾದದ್ದೆಂದು ವ್ಯಸನಪಡುವುದಿಲ್ಲ. ಸುಲಭವಾದದ್ದೆಂದು ಸಂತೋಷಪಡುವುದೂ ಇಲ್ಲ. ನಿಷ್ಕಾಮ ಕರ್ಮಯೋಗಿಗೆ ಕಷ್ಟವೂ, ಸುಖವೂ, ಅವನು ತನ್ನ ಸ್ವಧರ್ಮವನ್ನು ಮಾತ್ರ ಆಚರಿಸುತ್ತಾನೆ. ಇವನಿಗೆ ಸ್ವಧರ್ಮಾಚರಣೆ ಒಂದೇ ಆಚರಿಸಲಿಕ್ಕೆ ಗೊತ್ತಿರುವುದು. ಇವನಿಗೆ ತನ್ನ ಸ್ವಧರ್ಮವೇ ಗೊತ್ತು ಗುರಿ. ಇಂಥವನ ಕರ್ಮ ಉತ್ಕೃಷ್ಟವಾಗದೆ ಇತರರ ಕರ್ಮ ಉತ್ಕೃಷ್ಟವಾದೀತೆ? ಚಿತ್ತದ ಸಮತೆಯು ಒಂದು ಕುಶಲ ಗುಣ. ಕರ್ಮಯೋಗಿಗೆ ಇದು ಒಂದು ಸ್ವತಃ ಆಸ್ತಿ ಇದ್ದಂತೆ. ಕರ್ಮದಲ್ಲಿಯೇ ತನ್ಮಯನಾಗಿರುವಾಗ ಸುಖದುಃಖಗಳ ಅರಿವೇ ಇವನಿಗಿಲ್ಲ. ವಿಶ್ರಾಂತಿಯೇ ಇಲ್ಲದೆ, ಸ್ವಲ್ಪವೂ ಶ್ರಮವಿಲ್ಲದೆಯೇ ಇವನು ಕೆಲಸ ಮಾಡುತ್ತಾನೆ. ಸ್ವಧರ್ಮವು ಕಷ್ಟವೆಂದು ಇವನು ಎಂದಿಗೂ ಸುಮ್ಮನಿರುವುದಿಲ್ಲ. ನದಿಯ ಪ್ರವಾಹವು ತಡೆಯೇ ಇಲ್ಲದೆ ಸತತವಾಗಿ ಹರಿಯುವಂತೆ ನಿಷ್ಕಾಮ ಕರ್ಮಯೋಗಿಯು ಸದಾ ಸೇವಾ ಕರ್ಮದಲ್ಲಿಯೇ ಇರುತ್ತಾನೆ. ಪರಮಾತ್ಮನ ಸೇವೆ ಮಾಡುವುದರಲ್ಲಿಯೇ ಇವನಿಗೆ ಆನಂದ. ಆ ಸೇವೆಯಿಂದ ಲಭಿಸುವ ಫಲವೇ ಇವನ ಸಂತೋಷದ ಗುರಿಯಲ್ಲ. ಸೇವಾ ಕರ್ಮದಲ್ಲಿಯೇ ಅವನ ಆನಂದವಲ್ಲದೆ, ಫಲದಲ್ಲಿ ಸ್ವಲ್ಪವೂ ಸಂತೋಷವಿಲ್ಲ. ಹೇಗೆ ನೋಡಿದರೂ ನಿಷ್ಕಾಮ ಕರ್ಮವು ಸಕಾಮ ಕರ್ಮಕ್ಕಿಂತಲೂ ಸರ್ವಶ್ರೇಷ್ಠವಾದುದು. ಆದುದರಿಂದಲೇ ಕರ್ಮಯೋಗಿಯ ಕರ್ಮವು "ಜೀವನ ಕಲೆ" ಎನ್ನುವುದು.

ನಿಷ್ಕಾಮ ಕರ್ಮಯೋಗಿಗೆ ತಾನು ಮಾಡುವ ಕರ್ಮವು ಸ್ವಲ್ಪವೂ ಫಲಾಪೇಕ್ಷೆ ಇಲ್ಲದಂತಾಗಬೇಕು. ಕಲೋಪಾಸಕನಾದ ಚಿತ್ರಕಾರನಿಗೆ ನೀನು ಚಿತ್ರವನ್ನು ಬರೆಯಬೇಡ, ಬೇಕಾದಷ್ಟು ಹಣವನ್ನು ಕೊಡುತ್ತೇನೆ, ಎಂದರೆ ಅವನು ಅದಕ್ಕೆ ಒಪ್ಪುವುದಿಲ್ಲ. ಅವನು ಹಣಕ್ಕಾಗಿ ಚಿತ್ರ ಬರೆಯುವುದಿಲ್ಲ. ಹಣದಲ್ಲಿ ಅವನಿಗೆ ಏನೂ ಆನಂದವಿಲ್ಲ. ಅವನಿಗೆ ಚಿತ್ರ ಬರೆಯುವುದರಲ್ಲೇ ಆನಂದ. ಹೀಗೆಯೇ ಒಬ್ಬ ಒಕ್ಕಲಿಗನಿಗೆ ನೀನು ಗದ್ದೆಯನ್ನು ಉಳಬೇಡ ಬೀಜ ಬಿತ್ತಬೇಡ, ಸುಮ್ಮನೆ ಮನೆಯಲ್ಲಿ ಕುಳಿತುಕೋ, ನಿನಗೆ ಬೇಕಾದಷ್ಟು ಧಾನ್ಯ ಕೊಡುತ್ತೇನೆಂದರೆ ಅವನು ನಿಜವಾದ ಒಕ್ಕಲಿಗನಾದರೆ ಇದಕ್ಕೆ ಒಪ್ಪುವುದಿಲ್ಲ. ಅವನು ಪ್ರತಿನಿತ್ಯವೂ ಬೆಳಗ್ಗೆ ಎದ್ದು ನೇಗಿಲನ್ನು ಹೆಗಲಮೇಲೇರಿಸಿಕೊಂಡು ಗದ್ದೆಗೆ ಹೋಗುತ್ತಾನೆ. ಸೂರ್ಯನಾರಾಯಣನು ಅವನನ್ನು ಸ್ವಾಗತಿಸುತ್ತಾನೆ. ದನಗಳನ್ನು ಹೊಡೆದುಕೊಂಡು ಹೋಗುತ್ತಾನೆ. ಅವುಗಳ ಬೆನ್ನು ಸವರುತ್ತಾನೆ. ತಾನು ಬೆಳೆದ ಗಿಡಪೈರುಗಳನ್ನು ನೋಡುತ್ತಾನೆ. ಇದೇ ಅವನಿಗೆ ಪರಮಾನಂದ. ಕರ್ಮದಲ್ಲಿರುವ ತನ್ಮಯತೆಯಲ್ಲಿ ಒಂದು ಸಾತ್ವಿಕವಾದ ಆನಂದವಿದೆ, ಫಲಾಪೇಕ್ಷೆ ಇಲ್ಲದೆ ಮಾಡುವ ಕರ್ಮದಲ್ಲಿ ಮಾತ್ರ ಆ ಆನಂದ ದೊರಕುತ್ತದೆ. ಇದೇ ಕರ್ಮಯೋಗಿಗೆ ಬೇಕಾದ ಆನಂದ. ಇದರ ಮುಂದೆ ಹಣವಾಗಲೀ, ಧಾನ್ಯವಾಗಲೀ ಹೆಚ್ಚಿನ ಆನಂದವನ್ನು ಕೊಡಲಾರದು. ಆದುದರಿಂದ ಕರ್ಮಕ್ಕೆ ನಿಷ್ಕಾಮ ಯೋಗಕ್ಕಿಂತಲೂ ಉತ್ತಮವಾದ ಫಲ ಬೇರಾವುದೂ ಇಲ್ಲ. ಮರವು ಹಣ್ಣು ಕೊಡುತ್ತದೆ. ಹಣ್ಣನ್ನು ಮರದ ಕರ್ಮದ ಫಲ. ಹಾಗೆಯೇ ಕರ್ಮಕ್ಕೆ ನಿಷ್ಕಾಮ ಯೋಗವೇ ಮಧುರ ಫಲ. ಈ ದೇಹವೆಂಬ ವೃಕ್ಷಕ್ಕೆ ನಿಷ್ಕಾಮ ಸ್ವಧರ್ಮಾಚರಣೆ ಎಂಬ ಒಳ್ಳೆ ಹಣ್ಣು ದೊರೆತ ಮೇಲೆ ಅದಕ್ಕಿಂತಲೂ ಹೆಚ್ಚಿನದನ್ನು ಏಕೆ ಬಯಸಬೇಕು? ಬಾಳೆ ಗಿಡವನ್ನು ಬೆಳೆಸಿದರೆ ಅದು ಹಣ್ಣನ್ನು ಕೊಡುತ್ತದೆ, ಆ ಬಾಳೆ ಹಣ್ಣನ್ನೇ ನಾವು ತಿನ್ನಬೇಕು. ಆದರೆ ಅದನ್ನು ಬಿಟ್ಟು ಬಾಳೆ ಗಿಡದ ಕಾಯನ್ನು ತಿನ್ನುವುದು ಹುಚ್ಚಲ್ಲವೆ? ಹಾಗೆಯೇ ನಿಷ್ಕಾಮ ಸ್ವಧರ್ಮಾಚರಣೆಯಿಂದ ಫಲ ಸಿಕ್ಕಬೇಕು ... ಬಿಟ್ಟು ಬೇರೆಯದನ್ನೇ ಬಯಸಿದರೆ ಅದೆಂತಹ ಹುಚ್ಚು! ಆದುದರಿಂದ ಕರ್ಮವನ್ನು ಮಾಡಬೇಕು ಕರ್ಮವನ್ನೇ ತಿನ್ನಬೇಕು ಅದನ್ನೇ ಕುಡಿಯಬೇಕು. ಅದರಲ್ಲಿಯೇ ಆನಂದಿಸಬೇಕು ಎಲ್ಲವೂ ಕರ್ಮ ಮಾಡುವುದರಲ್ಲಿಯೇ ಅಡಗಿದೆ. ಹುಡುಗನು ಮೈದಾನದಲ್ಲಿ ಆಟವಾಡುತ್ತಾನೆ. ಇದರಲ್ಲಿ ಅವನಿಗೆ ತುಂಬಾ ಸಂತೋಷ. ಆಟವಾಡುವುದರಿಂದ ವ್ಯಾಯಾಮದ ಫಲ ಅವನಿಗೆ ಸಿಕ್ಕಿಯೇ ಸಿಕ್ಕುತ್ತದೆ. ಆದರೆ ಹುಡುಗನಿಗೆ ಈ ಫಲದ ಕಡೆ ಗಮನವಿಲ್ಲ. ಅವನ ಆನಂದವೆಲ್ಲಾ ಆಟವಾಡುವುದರಲ್ಲಿಯೇ ಇರುತ್ತದೆ.

ಸಾಧು ಸಂತರು ತಮ್ಮ ಜೀವನದಲ್ಲಿ ಈ ರೀತಿಯ ನಿಷ್ಕಾಮ ಕರ್ಮವನ್ನು ತೋರಿಸಿದ್ದಾರೆ. ಭಕ್ತ ತುಕಾರಾಂ ಶ್ರೀಕೃಷ್ಣನ ಭಕ್ತರು. ಇವರ ಭಕ್ತಿಯನ್ನು ಕಂಡ ಶಿವಾಜಿ ಮಹಾರಾಜರಿಗೆ ಇವರಲ್ಲಿ ತುಂಬಾ ಆದರ ಹುಟ್ಟಿತು. ತುಂಬಾ ಒಡವೆ ವಸ್ತುಗಳನ್ನೂ ಹಣವನ್ನೂ ಇವರಿಗೆ ಆನೆಯ ಮೇಲಿಂದ ಕಳುಹಿಸಿ ಪಲ್ಲಕ್ಕಿಯಲ್ಲಿ ವಿಜೃಂಭಣೆಯಿಂದ ತನ್ನ ಅರಮನೆಗೆ ಬರಬೇಕೆಂದು ಅವರಿಗೆ ಆಹ್ವಾನವಿತ್ತರು. ತುಕಾರಾಂ ಇದೆಲ್ಲವನ್ನೂ ಕಂಡು ಗಾಬರಿಪಟ್ಟರು. ಈ ಐಶ್ವರ್ಯ ಆಟ್ಟಹಾಸವೆಲ್ಲವೂ ಅವರಿಗೆ ಬೇಕಾಗಿಲ್ಲ. ಅವರು ನಿಷ್ಕಾಮ ಭಕ್ತರು. ತಮ್ಮ ಭಕ್ತಿಗೆ ಅವರು ಯಾವ ಫಲವನ್ನೂ ಶ್ರೀಕೃಷ್ಣನಲ್ಲಿ ಅಪೇಕ್ಷಿಸಲಿಲ್ಲ. ಆದರೆ ಶಿವಾಜಿ ಮಹಾರಾಜರು ಈ ಐಶ್ವರ್ಯವನ್ನು ಅವರಿಗೆ ಮರ್ಯಾದೆಗಾಗಿ ಕಳುಹಿಸಿದ್ದರು. ತುಕಾರಾಂ ತುಂಬಾ ವ್ಯಸನದಿಂದ ದೇವರಲ್ಲಿ ಮೊರೆ ಇಡುತ್ತಾರೆ "ಎಲೈ ಭಗವಂತನೇ, ನಿನ್ನಲ್ಲಿ ನಾನಿಟ್ಟಿರುವ ಭಕ್ತಿಗೆ ಈ ಐಶ್ವರ್ಯ ... ಫಲವನ್ನು ಕೊಟ್ಟು ನನ್ನನ್ನು ದೂರ ಮಾಡಿಬಿಡುವೆ ಎಂದು ನಿಶ್ಚಯ ಮಾಡಿದೆಯೂ? ಇದೇನೆ ನನ್ನ ಭಕ್ತಿಗೆ ಫಲ? ಇವುಗಳ ಆಸೆಗೆ ನಾನು ಒಂದಿಷ್ಟೂ ಬೀಳುವುದಿಲ್ಲ. ನಿನ್ನ ಪಾದವನ್ನು ಇನ್ನು ಬಲವಾಗಿ ಹಿಡಿದುಕೊಳ್ಳುತ್ತೇನೆಯೇ ವಿನಹ ಇವುಗಳ ಬೋಗ ನನಗೆ ಬೇಕಾಗಿಲ್ಲ. ಎಂದು ಹೇಳಿ ಅವುಗಳನ್ನೆಲ್ಲಾ ಅರಮನೆಗೇ ಹಿಂದಕ್ಕೆ ಕಳುಹಿಸಿಬಿಟ್ಟರು. ತುಕಾರಾಂ ಅಪಕ್ವರಲ್ಲ. ಭಕ್ತಿ ಮಾಡುವುದು ಭಕ್ತನ ಲಕ್ಷಣ. ಭಕ್ತಿಯಲ್ಲಿ ಫಲ ಭಿಲಾಷೆಯ ಮೇಲಕ್ಕೆಯನ್ನು ಕಡಿದು ಹಾಕುವುದೇ ಭಕ್ತರ ಲಕ್ಷಣ. ತುಕಾರಾಂ ಮಹಾಶಯರ ಜೀವನದಲ್ಲಿ ನಾವು ನಿಷ್ಕಾಮ ಕರ್ಮವನ್ನು ಚೆನ್ನಾಗಿ ನೋಡಬಹುದು. ಹಾಗೆಯೇ ನಮ್ಮ ಜೀವನವನ್ನೂ ತಿದ್ದಿಕೊಂಡು ನಿಷ್ಕಾಮ ಸ್ವಧರ್ಮಾಚರಣೆಯನ್ನು ಮಾಡಬೇಕು. ಇದೇ ಮಾನವ ಜೀವನದ ಗುಟ್ಟು.

ಪ್ರಚಲಿತ ವಿಚಾರಗಳು.

ಲಂಚ ಗುಳಿತನಕ್ಕಾಗಿ ಮಂತ್ರಿಗಳ ಸೆರೆ.

ಲಂಚಪಡೆದುಕೊಂಡರೆಂಬ ಆರೋಪದ ಮೇಲೆ ವಿಂಧ್ಯಾ ಪ್ರದೇಶ ಯೂನಿಯನಿನ ಕೈಗಾರಿಕೆ ಮತ್ತು ನಾಗರಿಕ ಪೂರೈಕೆ ಸಚಿವರಾದ ಶ್ರೀ ಶಿವಬಹದೂರ್ ಸಿಂಘರನ್ನು ಡಿಲ್ಲಿಯ ಪೊಲೀಸರು ಕಾನ್ಸ್ಟಿಟ್ಯೂಶನ್ ಗೃಹದಲ್ಲಿ ದಸ್ತಗಿರಿ ಮಾಡಿದರು. ಮಂತ್ರಿಮಂಡಲದಲ್ಲಿರುವ ಅವರ ಇತರ ಸಹಚಾರಿಗಳು ೧ ಲಕ್ಷ ರೂಪಾಯಿಯ ಜಾಮೀನನ್ನು ಮುಚ್ಚಳಿಕೆ ಕೊಟ್ಟ ಮೇಲೆ ಅವರ ಬಿಡುಗಡೆಯಾಗಿದೆ. ಪನ್ನಾ ಮೈನಿಂಗ್ ಡಾಯಮಂಡ್ ಸಿಂಡಿಕೇಟಿನ ಶ್ರೀ ನಾಗೀನ್‌ದಾಸ್ ಮೆ.ಹತಾರವರಿಂದ ೧೦೦ ರೂಪಾಯಿಯ ೨೫೦ ಸಹಿಮಾಡಿದ ನೋಟುಗಳನ್ನು ಲಂಚ ಪಡೆದೊಂಡದ್ದೇ ಅವರ ಮೇಲಿನ ಆರೋಪ.

ಮದುವೆಯ ಮೂಲಕ ದೀರ್ಘಾಯುಷ್ಯ.

ಸಂಯುಕ್ತ ಅಮೇರಿಕಾದ ಕ್ಲೀವ್‌ಲೇಂಡಿನ ಒಬ್ಬ ವೈದ್ಯ ತಜ್ಞರ ಮಾಡಿದ ಪರಿಶೀಲನೆಗಳಿಂದ ವಿವಾಹಿತರು ಹೆಚ್ಚುಕಾಲ ಬಾಳುವರೆಂಬ ಸಂಗತಿಯು ತಿಳಿದುಬಂದಿದೆ. ವಿವಾಹಿತರಾದ ನೂರು ಮಂದಿ ಗಂಡಸರು ಸಾಯುವಾಗ ಅವಿವಾಹಿತರಾದ ೧೪೧ ಮಂದಿ ಗಂಡಸರು ಸಾಯುವರು. ವಿವಾಹಿತ ೧೦೦ ಮಂದಿ ಮಹಿಳೆಯರು ಸಾಯುವಾಗ ೧೧೭ ಮಂದಿ ಅವಿವಾಹಿತ ಮಹಿಳೆಯರು ಮೃತಿಪೊಂದುವರು. ಅಲ್ಲದೆ ವಿವಾಹಿತರಲ್ಲಿ ನರ ದೌರ್ಬಲ್ಯ, ಮನೋವ್ಯಾಧಿಗಳ ವಿಕಾರಗಳು ಕಡಿಮೆ. ಅದೇ ರೀತಿ ಹೃದಯ ಸ್ತಂಭನದ ಘಟನೆಗಳೂ ಅವರಲ್ಲಿ ಕಡಿಮೆ. ಕ್ಷಯ, ಕೇನ್ಸರ್ ಇತ್ಯಾದಿ ರೋಗಗಳು ವಿವಾಹಿತರಿಗೆ ಕಮ್ಮಿ ತಗಲುವವು. ಸಧವೆಯರಿಗಿಂತಾ ೪ ಪಾಲು ಹೆಚ್ಚು ವಿಧವೆಯರು ಕ್ಷಯ ರೋಗದಿಂದ ಸಾಯುವರೆಂದು ಗೊತ್ತಾಗಿದೆ. ವಿವಾಹಿತರಲ್ಲಿ ಆತ್ಮಹತ್ಯದ ಘಟನೆಗಳೂ ಕಡಿಮೆ.

ಕಾಶ್ಮೀರದಲ್ಲಿ ಪುನಹ ಯುದ್ಧ?

ಸಂಯುಕ್ತ ರಾಷ್ಟ್ರ ಸಂಘದವರ ಪ್ರತಿನಿಧಿಗಳು ಬಂದು ಕಾಶ್ಮೀರದಲ್ಲಿ ಸಂಧಾನ ಪ್ರಯತ್ನ ನಡೆಸುತ್ತಿರುವರಷ್ಟೆ. ಆದರೆ ಪಾಕಿಸ್ಥಾನ ಸರಕಾರವು ಒಪ್ಪಂದದ ಶರತುಗಳನ್ನು ಉಲ್ಲಂಘಿಸಿದೆ. ತಿತ್ವಾಲಿಗೆ ಐದು ಮೈಲಿ ಆಗ್ನೇಯದಲ್ಲಿ ಪಾಕಿಸ್ಥಾನ ಸೈನಿಕರು ಚೊರ್ ಕಂಜಿಯ ಎಂಬ ಹಳ್ಳಿಯಲ್ಲಿ ಗ್ರಾಮದ ಕಾವಲು ವ್ಯವಸ್ಥೆ ನೋಡಿಕೊಳ್ಳುತ್ತಿದ್ದ ಭಾರತ ಸೈನಿಕರ ಮೇಲೆ ಮೊನ್ನೆ ಗುರುವಾರ ಬೆಳಗ್ಗೆ ಮೆಷಿನ್‌ಗನ್ನುಗಳಿಂದಲೂ ಬಂದೂಕುಗಳಿಂದಲೂ ಗುಂಡು ಹಾರಿಸಿದರು. ಭಾರತ ಸೈನಿಕರು ಪ್ರತಿಯಾಗಿ ಗುಂಡು ಹಾರಿಸಲಿಲ್ಲ ಎಂದು ತಿಳಿಸಲಾಗಿದೆ. ಚೊರ್ ಕಂಜಿಯಿಂದ ಒಂದು ಮೈಲಿ ದೂರದಲ್ಲಿ ಕೊಪ್ರಾ ಎಂಬ ಗ್ರಾಮವನ್ನು ಪಾಕಿಸ್ಥಾನ ಸೈನಿಕರು ಆಕ್ರಮಿಸಿಕೊಂಡರೆಂದು ತಿಳಿಸಲಾಗಿದೆ. ಈ ವಿಚಾರದ ಇಂಡಿಯಾ ಸರಕಾರವು ತನ್ನ ನಿಷೇಧನೆಯನ್ನು ಪಾಕಿಸ್ಥಾನ ಸರಕಾರಕ್ಕೂ ಸಂಧಾನ ಸಮಿತಿಗೂ ತಿಳಿಸಿದೆ.

ಗಾಂಧಿ ಸ್ಮಾರಕ ನಿಧಿಗೆ ಐದು ಕೋಟಿ ರೂ.

ಮಹಾತ್ಮ ಗಾಂಧಿ ಸ್ಮಾರಕ ನಿಧಿಯ ಇಂಡಸ್ಟ್ರಿಯಲ್ ಕಮಿಟಿಯವರು ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾದ ಡಾ. ರಾಜೇಂದ್ರಪ್ರಸಾದರಿಗೆ ಈ ಸಂಜೆ ೫೦೭,೫೧,೧೫೧ ರೂ. ಗಳ ನಿಧಿಯ ಚೆಕ್ಕನ್ನು ಅರ್ಪಿಸಿಗರು.

ಈ ಸಮಾರಂಭವು ಸರ್ದಾರ್ ವಲ್ಲಭಾಯಿ ಪಟೇಲರ ಭವನದಲ್ಲಿ ನಡೆಯಿತು. ಭಾರತದ ಮುಖ್ಯ ಮಂತ್ರಿ, ಪಂಡಿತ ಜವಾಹರಲಾಲ್ ನೆಹರು, ಸಿ ಇತರ ಮಂತ್ರಿಗಳು, ರಾಷ್ಟ್ರಪತಿ ಪಟ್ಟಾಭಿ ಮೊದಲಾದವರ ಸಮಾರಂಭದಲ್ಲಿ ಭಾಗವಹಿಸಿದ್ದರು. ಇಂಡಸ್ಟ್ರಿಯಲ್ ಕಮಿಟಿ ಅಧ್ಯಕ್ಷರಾದ ಶ್ರೀ. ಕಸ್ತೂರಬಾಯ್ ಲಾಲಭಾಯಿಯವರು ೫ ಕೋಟಿ ರೂ. ಗಳ ಚೆಕ್ಕನ್ನು ಭಾರತದ ಕೈಗಾರಿಕಾ ಮಹಾಜನರುಗಳ ಪರವಾಗಿ ಗಾಂಧಿ ನಿಧಿಗೆ ಅರ್ಪಿಸಿದರು.

ವಿದೇಶಗಳಲ್ಲಿ ಸರ್ವೋದಯ ಸಮಾಜ ಪ್ರಚಾರ.

ಸರ್ವೋದಯ ಸಮಾಜದ ವಿದೇಶಾಂಗ ಕಾರ್ಯದರ್ಶಿ ಪ್ರಿನ್ಸಿಪಾಲ್ ಎಸ್. ಎನ್. ಅಗರವಾಲಾರವರು ಫ್ರಾನ್ಸಿಗೆ ಹೊರಟಿದ್ದಾರೆ. ಇವರು ಆರು ತಿಂಗಳ ಕಾಲ ಪ್ರಪಂಚ ಪ್ರವಾಸಮಾಡಿ ಸರ್ವೋದಯ ಸಮಾಜದ ಬಗ್ಗೆ, ಮಹಾತ್ಮ ಗಾಂಧಿಯವರ ಸತ್ಯ, ಅಹಿಂಸೆ ಮತ್ತು ರಚನಾತ್ಮಕ ಕಾರ್ಯಗಳನ್ನು ಕುರಿತು ಪ್ರಚಾರ ಕಾರ್ಯ ನಡೆಸುವರು.

ಗವರ್ನರ್ ಜನರಲ್ಲರಿಗೆ ಬರೋಡ ಪ್ರಜೆಗಳ ಮನವಿ.

ಬರೋಡ ಸಂಸ್ಥಾನವನ್ನು ಮುಂಬಾಯಿ ಪ್ರಾಂತದೊಡನೆ ವಿಲೀನ ಮಾಡುವ ವಿಷಯದ ಬಗ್ಗೆ ಪ್ರತಿಭಟನೆಯನ್ನು ವ್ಯಕ್ತಪಡಿಸುವ ಮನವಿಯೊಂದನ್ನು ಭಾರತದ ಗವರ್ನರ್ ಜನರಲ್ ಶ್ರೀ ಸಿ. ರಾಜಗೋಪಾಲಾಚಾರಿಯವರಿಗೆ ಕಳುಹಿಸಲಾಗಿದೆಯೆಂದು ತಾ. ೧೫ರಲ್ಲಿ ತಿಳಿದುಬಂದಿದೆ. ಈ ಮನವಿಗೆ ಸಂಸ್ಥಾನದ ೨೬೦೦ ಮಂದಿ ಪ್ರಜೆಗಳು ಸಹಿ ಹಾಕಿದ್ದಾರೆ. ಬರೋಡ ಸಂಸ್ಥಾನವನ್ನು ಮುಂಬಾಯಿ ಪ್ರಾಂತಕ್ಕೆ ಸೇರಿಸುವುದು ರಾಜಕೀಯ ಮತ್ತು ಕಾನೂನು ನಿಯಮಗಳಿಗೆ ವಿರುದ್ಧವೆಂದು ಮನವಿಯಲ್ಲಿ ತಿಳಿಸಲಾಗಿದೆ.

ಮೈಸೂರು ಸಂಸ್ಥಾನವು ತಮಿಳುನಾಡಿಗೆ ಸೇರುವುದೆ!

ಲಂಡನ್ 'ಟೈಮ್ಸ್' ಪತ್ರಿಕೆಯ ಮಾರ್ಚಿ ೯ನೇ ತಾರೀಕಿನ ಸಂಚಿಕೆಯಲ್ಲಿ ಈ ರೀತಿಯ ಸೋಜಿಗದ ಸುದ್ದಿಯೊಂದು ಪ್ರಕಟವಾಗಿದೆ:—

ಎಪ್ಪತ್ತು ಲಕ್ಷ ಪ್ರಜಾಸಂಖ್ಯೆಯುಳ್ಳ ಮೈಸೂರು ಸಂಸ್ಥಾನದಲ್ಲಿ ಪ್ರಜಾ ಆಡಳಿತ ನಡೆಯುತ್ತಿದೆ ಇದು ಅಲ್ಲಿನ ಪ್ರಗತಿಯುತ ಆಡಳಿತದ ಸಂಪ್ರದಾಯಕ್ಕೆ ಉಚಿತವಾದುದೇ ಸರಿ. ಮೈಸೂರು ಸಂಸ್ಥಾನವು ಎಲ್ಲೆಡೆಯಲ್ಲೂ ಮದ್ರಾಸ್ ಪ್ರಾಂತದ ಪ್ರದೇಶದಿಂದ ಸುತ್ತುವರಿಯಲ್ಪಟ್ಟಿದೆ. ಮೈಸೂರಿನ ಜನರಲ್ಲಿ ಪ್ರಾಯಶಃ ಎಲ್ಲರೂ, ನೆರೆಯ ದಕ್ಷಿಣ ಮದ್ರಾಸಿನ ಜನರಂತೆ, ತಮಿಳು ಮಾತನಾಡುವವರು. ಮದ್ರಾಸ್ ಪ್ರಾಂತವು ತಮಿಳುನಾಡು ಹಾಗೂ ಆಂಧ್ರ ದೇಶವಾಗಿ ವಿಭಾಗವಾದಂದೇ ಆದರೆ ಮೈಸೂರು ಸಂಸ್ಥಾನವು ತಮಿಳ ನಾಡಿನ ಜನತೆಗೆ ಸೇರುವುದರಲ್ಲಿ ಸಂಶಯವಿಲ್ಲ

ಜಾರ್ಜ್ ಬರ್ನಾರ್ಡ್‌ಷಾರೊಡನೆ ಪಂ. ನೆಹರೂ

ಪಂ. ನೆಹರೂರವರು ಕಾಮನ್‌ವೆಲ್ತ್ ಸಮ್ಮೇಳನದ ಬಗ್ಗೆ ಲಂಡನಿನಲ್ಲಿ ೧೦ ದಿನ ವಿಹಾರ ಮಾಡಲಿರುವರು. ಈ ಸಂದರ್ಭದಲ್ಲಿ ಒಂದು ದಿನ ಜಾರ್ಜ್ ಬರ್ನಾರ್ಡ್‌ಷಾ ರೊಡನೆ ಉಳಿಯಲು ಇಚ್ಛಿಸಿರುವುದಾಗಿ ಗೊತ್ತಾಗಿದೆ

ರಾಜೇಂದ್ರ ಪ್ರಸಾದರ ಮೈಸೂರು ಪ್ರವಾಸ.

ಗಾಂಧೀಜಿ ರಾಷ್ಟ್ರೀಯ ಸ್ಮಾರಕ ನಿಧಿಯ ಅಧ್ಯಕ್ಷರಾದ ಡಾ. ರಾಜೇಂದ್ರ ಪ್ರಸಾದರು ಮೈಸೂರು ಸಂಸ್ಥಾನದಲ್ಲಿ ಏಪ್ರಿಲ್ ೨೪ರಿಂದ ೨೯ರವರೆಗೆ ಪ್ರವಾಸ ಮಾಡುವರು.

ಪ್ರಸಾದರು ತಾ. ೨೪ನೆಯ ಸಂಜೆ ಬೆಂಗಳೂರಿಗೆ ವಿಮಾನದಲ್ಲಿ ಬರುವರು. ಬೆಂಗಳೂರಿನಲ್ಲಿ ಮತ್ತು ಸಿವಿಲ್ ಸ್ಟೇಷನಿನಲ್ಲಿ ಆ ದಿನ ಸಂಜೆ ಭಾಷಣಗಳನ್ನು ಮಾಡುವರು. ಗಾಂಧೀ ಸ್ಮಾರಕ ನಿಧಿಗಳನ್ನು ಸ್ವೀಕರಿಸುವರು. ರಾತ್ರಿ ಮೈಸೂರಿಗೆ ರೈಲಿನಲ್ಲಿ ಹೊರಡುವರು. ಬಾರಿ ಬುದ್ಧಿ ಕ್ಯಾ ಗಾಂಧೀ ನಿಧಿಗೆ ಹಣ ಸ್ವೀಕರಿಸುವರು. ಮೈಸೂರಿನಲ್ಲಿ ೨೫ರ ಸಂಜೆ ಭಾಷಣ ಮಾಡುವರು.

ಕಾಮನ್‌ವೆಲ್ತ್ ಸಂಬಂಧಕ್ಕೆ ಐರ್ಲೆಂಡಿನ ತಿಲಾಂಜಲಿ.

ತಾರೀಕು 16 ರ ಮಧ್ಯರಾತ್ರಿ ೧೨ ಗಂಟೆ ಕಳೆದು ಒಂದು ನಿಮಿಷವಾದ ಕೂಡಲೇ ಐರ್ಲೆಂಡು ಸ್ವತಂತ್ರವೆಂದು ಘೋಷಿಸಿ ರಿಪಬ್ಲಿಕ್ ರಾಷ್ಟ್ರವಾಯಿತು. ಈ ಶುಭ ಸನ್ನಿವೇಶದಲ್ಲಿ ೨೧ ಕುಶಾಲು ತೋಪುಗಳನ್ನು ಹಾರಿಸಲಾಯಿತು. ಆ ಬಳಿಕ ನಡೆದ ಮಿಲಿಟರಿ ಮೆರೆವಣಿಗೆಯಲ್ಲಿ ಅಧ್ಯಕ್ಷ ಜಾನ್ ಟಿ ಓಕೆಲ್ಲಿಯವರು ಸೆಲ್ಯೂಟ್ ಸ್ವೀಕರಿಸಿದರು.

೧೯೧೯ ರಲ್ಲಿ ಐರ್ಲೆಂಡಿನ ಸ್ವಯಂಸೇವಕ ಪಡೆಯವರು ರಿಪಬ್ಲಿಕ್ ರಾಷ್ಟ್ರದ ಕೇಂದ್ರವೆಂದು ಸಂಕಲ್ಪಿಸಿದ್ದ ಕಟ್ಟಡದ ಮೇಲೆ ತ್ರಿವರ್ಣ ಧ್ವಜವನ್ನು ಹಾರಿಸಲಾಯಿತು.

ಮಂತ್ರಿಮಂಡಲದ ಅಧ್ಯಕ್ಷರು ವಿದೇಶೀಯ ಭಾಗಿಗಳನ್ನು ಬರಮಾಡಿಕೊಂಡು ಸತ್ಕಾರ ವಿತ್ತರು. ಆದರೆ ಉತ್ತರ ಐರ್ಲೆಂಡು ಮಾತ್ರ ಇನ್ನೂ ಬ್ರಿಟನ್ನಿನೊಡನೆ ಸಂಬಂಧವಿಟ್ಟುಕೊಂಡಿರುವುದು.

ಪಂ|| ನೆಹರುವರ ಆತ್ಮಕಥೆ ಜರ್ಮನ್ ಭಾಷೆಯಲ್ಲಿ

ಪಂ. ನೆಹರೂರವರ "ಆಟೊಬಯೊಗ್ರಫಿ" ಆತ್ಮಕಥೆ ಮತ್ತು 'ಗ್ಲಿಂಪ್ಸಸ್ ಆಫ್ ವರ್ಲ್ಡ್ ಹಿಸ್ಟರಿ' ಜಗತ್ಕಥಾವಲ್ಲರಿ ಗ್ರಂಥಗಳನ್ನು ಜರ್ಮನ್ ಭಾಷೆಗೆ ತರ್ಜುಮೆ ಮಾಡಲಾಗುತ್ತಿದೆ. ಈ ಎರಡು ಪುಸ್ತಕಗಳನ್ನೂ ಶೀಘ್ರದಲ್ಲಿಯೇ ಜೂರಿಚ್‌ನಿಂದ ಪ್ರಕಟಿಸಲಾಗುವುದು. ನೆಹರೂರವರ 'ಡಿಸ್ಕವರಿ ಆಫ್ ಇಂಡಿಯಾ' ಭಾರತದ ಶೋಧೆಯನ್ನು ಈಗಾಗಲೇ ಜರ್ಮನ್ ಭಾಷೆಯಲ್ಲಿ ಪ್ರಕಟಿಸಲಾಗಿದೆ.

ಮುಸ್ಲಿಂ ಲೀಗಿನ ದುಸ್ಥಿತಿ

ಪಾಕಿಸ್ತಾನ್ ಮುಸ್ಲಿಂ ಲೀಗ್ ಸಂಸ್ಥೆಯಲ್ಲಿ ಅತೃಪ್ತಿ, ಅಸಮಾಧಾನಗಳು ತಾಂಡವಾಡುತ್ತಿವೆಯೆಂದೂ ಅನೇಕ ಮಂದಿ ರಾಜೀನಾಮೆ ಕೊಡುವ ನಿರೀಕ್ಷೆಯಿದೆಯೆಂದು ಗೊತ್ತಾಗಿದೆ.

ಲೀಗಿನ ವರ್ಕಿಂಗ್ ಕಮಿಟಿಗೆ ರಾಜೀನಾಮೆ ಯಿತ್ತಿರುವ ಆಹಮದ್ ಉಸ್ಮಾನಿಯವರು ಲೀಗಿನ ರಚನೆ ಪ್ರಜಾಪ್ರಭುತ್ವ ತತ್ವಗಳಿಗೆ ವಿರೋಧವಾಗಿದೆಯೆಂದೂ ಒಂದು ಗುಂಪಿನವರು ತಾವೇ ತಾವಾಗಿ ಆಡಳಿತ ನಡೆಸಿ ಸಾಮಾನ್ಯ ಜನರೊಡನೆ ಸಂಪರ್ಕವನ್ನು ಕೊಡೆದು ಹಾಕಿದ್ದಾರೆಂದೂ ಆಪಾದಿಸಿದ್ದಾರೆ

ಹಿಮಾಲಯದಲ್ಲಿ ವೈಜ್ಞಾನಿಕ ಸಂಶೋಧನೆ ಕೇಂದ್ರ.

ಹಿಮಾಲಯ ಪರ್ವತಗಳಲ್ಲಿ ವಿವಿದೋದ್ದೇಶ ಸಾಧನೆಗಳ ವೈಜ್ಞಾನಿಕ ಸಂಶೋಧನಾಲಯವೊಂದನ್ನು ಸ್ಥಾಪಿಸಲು ಸರಿಯಾದ ಪರ್ವತವನ್ನು ಗೊತ್ತುಮಾಡಲು ಕಲವು ಭಾರತೀಯ ವೈಜ್ಞಾನಿಕರು ಈ ಬೇಸಿಗೆಯಲ್ಲಿ ಹಿಮಾಲಯ ಯಾತ್ರೆಯನ್ನು ಕೈಗೊಳ್ಳುವರು ಈ ವ್ಯವಸ್ಥೆಯನ್ನು ಭಾರತ ಸರಕಾರವು ಮಾಡಿದ ಇಂತಹ ಯೋಜನೆಯಲ್ಲಿ ಇದು ಎರಡನೆಯದಾಗಿದೆ ಹಿಮಾಲಯದ ಉನ್ನತವಾದ ಪರ್ವತವೊಂದರಲ್ಲಿ ವೈಜ್ಞಾನಿಕ ಸಂಶೋಧನಾಲಯವೊಂದನ್ನು ಸ್ಥಾಪಿಸಬೇಕೆಂದು ೧೯೪೭ ರಲ್ಲಿ ಮೊದಲು ಗೊತ್ತುಮಾಡಲಾಯಿತು. ಹಿಮಾಲಯದ ಪರ್ವತವೊಂದರ ಮೇಲೆ ಸ್ಥಾಪಿಸಲಾಗುವ ಈ ಸಂಶೋಧನಾಲಯದಲ್ಲಿ ಹಿಮಗಡ್ಡೆಗಳು, ಹಿಮಪ್ರವಾಹಗಳು, ಇವುಗಳಿಂದ ಬರುವ ದೊಡ್ಡ ನದಿಗಳಿಗೆ ಅನ್ವಯಿಸುವ ಉಪಯೋಗ, ಮೊದಲಾದ ವೈಜ್ಞಾನಿಕ ರೀತಿಯಲ್ಲಿ ಸಂಶೋಧನೆ ಮಾಡಲಾಗುವುದು ಮತ್ತು ಈ ಸಂಶೋಧನಾಲಯದಲ್ಲಿ ಉನ್ನತ ಪ್ರದೇಶಗಳ ವಾತಾವರಣ, ವಾಯುಮಂಡಲ ಸ್ಥಿತಿ, ಗ್ರಹಗಳ ಚಲನವಲನ, ಬೀಸುವ ಗಾಳಿ ಉಷ್ಣಾಂಶಗಳ ಪರಿಸ್ಥಿತಿ, ಕಾಸ್ಮಿಕ್ ಕಿರಣಗಳು, ಪರ್ವತ ಪ್ರದೇಶಗಳ ಸಸ್ಯ ಮತ್ತು ಪ್ರಾಣಿವರ್ಗಗಳ ವಿಚಾರ ಮೊದಲಾದ ವಿಷಯಗಳಲ್ಲಿ ಸಂಶೋಧನೆ ನಡೆಸುವವು.

———

ಕೊಡಗು

ತಾ. ೨೨-೪-೧೯೪೯ನೇ ಶುಕ್ರವಾರ

ಬಟ್ಟೆ ವಿತರಣೆ.

ಕೊಡಗಿನಲ್ಲಿ ಬಟ್ಟೆ ವಿತರಣೆಯು ಸರಿಯಾಗಿ ನಡೆಯುತ್ತಿಲ್ಲವೆಂಬ ದೂರು ಆಗಾಗ ಕೇಳಬರುತ್ತದೆ. ಪತ್ರಿಕೆಗಳಲ್ಲೂ ಈ ವಿಚಾರ ಪದೇ ಪದೇ ಲೇಖನಗಳು ಬರುತ್ತಿವೆ. ನಮ್ಮ ಈ ವೊಗಲೊಮ್ಮೆ ಈ ವಿಚಾರದಲ್ಲಿ ನಮ್ಮ ಸೂಚನೆಗಳನ್ನು ಕೊಟ್ಟಿದ್ದರೂ ಪುನಹ ಆ ಬಗ್ಗೆ ಬರೆಯುವ ಆವಶ್ಯಕತೆ ತೋರಿಬಂದಿದೆ. ಕೊಡಗಿಗೆ ಬರುತ್ತಿರುವ ಬಟ್ಟೆಯನ್ನು ನಿರ್ದಿಷ್ಟ ವ್ಯಾಪಾರಸ್ಥರ ಮೂಲಕ ಮಾರಾಟ ಮಾಡಿಸುತ್ತಿದ್ದಾರೆ. ಈ ವ್ಯಾಪಾರಸ್ಥರನ್ನು ಆರಿಸಿದ ನೀತಿಯ ಬಗ್ಗೆ ವ್ಯಾಪಾರಿಗಳ ಕೂಗು ಬಹಳವಿದೆ. ಇದು ಹೇಗಿದ್ದರೂ ಕೊಡಗಿನ ಜನರಿಗೆ ಸಾಕಷ್ಟು ಬಟ್ಟೆ ಬರುವಂತೆ ಮಾಡಲು ಮತ್ತು ಬಂದುದನ್ನು ಯೋಗ್ಯರೀತಿ ವಿತರಣೆ ಮಾಡಿಸಲು ಸಂಬಂಧಿಸಿದವರು ಹೆಚ್ಚಿನ ಶ್ರಮ ವಹಿಸಿದಂತೆ ತೋರುವದಿಲ್ಲ. ಕೊಡಗಿಗೆ ಬಿನ್ನಿ ಬಟ್ಟೆ ೩೦ ಬೇಲು ಒಪ್ಪಂದದಂತೆ ಬರಬೇಕಂತೆ. ಇದರಲ್ಲಿ ೨೫ ಬೇಲು ಮದ್ರಾಸಿನಿಂದಲೂ ೫ ಬೇಲು ಬೆಂಗಳೂರಿನಿಂದಲೂ ಬರಬೇಕಾದುದಾಗಿದೆ. ಮಧ್ಯೆ ಬಟ್ಟೆ ನಿಯಂತ್ರಣವಿಲ್ಲದಿದ್ದು ನಂತರ ನಿಯಂತ್ರಣವನ್ನು ಜಾರಿಗೆ ತಂದಂದಿನಿಂದ ಕೇವಲ ಬೆಂಗಳೂರಿನಿಂದ ಮಾತ್ರ ಬಿನ್ನಿ ಕೋಟಾ ಬರುತ್ತಿದೆಯೆಂದೂ ಮದ್ರಾಸಿನ ಕೋಟಾ ಬರುತ್ತಿಲ್ಲವೆಂದೂ ತಿಳಿಯಬಂದಿದೆ. ತಿಂಗಳಿಗೆ ೨೫ ಬೇಲು ಬಿನ್ನಿ ಬಟ್ಟೆ ಪುನಹ ಬರುವಂತಾದರೆ ಕೊಡಗಿನ ಜನರ ಬೇಡಿಕೆಯನ್ನು ಇದು ಬಹುಮಟ್ಟಿಗೆ ಪೂರೈಸುವದು. ನಿಂತುಹೋದ ಈ ಬಟ್ಟೆ ಬರುವಂತೆ ಮಾಡುವದು ಸರಕಾರದ ಕರ್ತವ್ಯವಾಗಿದೆ. ಅವಶ್ಯಬಿದ್ದರೆ ಸರಕಾರವು ಯಾರನ್ನಾದರೂ ಮದ್ರಾಸಿಗೆ ಕಳುಹಿಸಿ ಇದನ್ನು ಪಡೆಯುವದು ಅವಶ್ಯವಾಗಿದೆ. ಬಿನ್ನಿ ಕಂಪೆನಿಯವರೂ ಕೂಡ ಈ ಹೇಳಿಕೆಯನ್ನು ನಿರಾಕರಿಸಲು ಕಾರಣವಿಲ್ಲ. ಏಕೆಂದರೆ ಕೊಡಗಿನ ಹೊರಗೆ ಬಿನ್ನಿ ಬಟ್ಟೆಯು ವಿಪುಲ ಸರಬರಾಯಿ ಇದೆ. ಹಾಗಿರುವಾಗ ಕೊಡಗಿಗೂ ಹಿಂದಿನ ನಿಶ್ಚಿತ ಕೋಟಾವು ದೊರೆಯುವುದರಲ್ಲಿ ಸಂಶಯವಿಲ್ಲ. ಬೊಂಬಾಯಿಯಿಂದ ಈಗ ಕೊಡಗಿಗೆ ಬರುತ್ತಿರುವ ಬಟ್ಟೆಯಲ್ಲಿ ಒಳ್ಳೆ ಶರ್ಟಿಂಗ್, ಕೋಟಿಂಗ್, ಡ್ರಿಲ್ ಮತ್ತು ಟವಲ್‌ಗಳ ಅಭಾವವಿರುವದರಿಂದ ಮದ್ರಾಸಿನಿಂದ ಬಿನ್ನಿ ಕೋಟಾವನ್ನು ಪಡೆಯುವದು ಅವಶ್ಯಕ.

ಕೊಡಗಿನಲ್ಲಿ ಟೆಕ್ಸ್‌ಟೈಲ್ ಇಲಾಖೆ ಇದೆ. ಈ ವಿಚಾರದಲ್ಲಿ ಅದು ಯಾವ ಪ್ರಯತ್ನ ಮಾಡಿದೆಯೋ ತಿಳಿಯದು. ಸರಕಾರವು ವ್ಯಾಪಾರಸ್ಥರ ಸಹಕಾರದೊಡನೆ ಮಾತುಕತೆ ನಡೆಸಿ ವ್ಯಾಪಾರಸ್ಥರು ಮಿಲ್ಲುಗಳಿಂದಲೂ ಬಟ್ಟೆ ಪಡೆಯುವ ಸಾಧ್ಯತೆ ಇದೆ. ಇಷ್ಟು ಪ್ರಯತ್ನವನ್ನು ಅವರು ಮಾಡುವರೇ?

ಇದಿಷ್ಟನ್ನು ಸಾಧಿಸಿದರೆ ಕೊಡಗಿನಲ್ಲಿ ಬಟ್ಟೆಗೆ ತೊಂದರೆಯಾಗಲಾರದು. ಬಡ ರೈತನಿಗೂ ಬಟ್ಟೆ ದೊರೆಯುವ ಅನುಕೂಲವಾಗುವದು. ಸಂಬಂಧಪಟ್ಟ ಅಧಿಕಾರಿಗಳು ಈ ವಿಚಾರ ಹೆಚ್ಚಿನ ತೊಂದರೆ ತೆಗೆದುಕೊಂಡು ಬಟ್ಟೆಗಾಗಿರುವ ಜನತೆಯ ಕೂಗನ್ನು ನಿವಾರಿಸುವಂತಾಗಿ ಆಶಿಸಲಾಗಿದೆ.

ಕಾವೇರಿ ಪೇಪರ್ ಮಿಲ್ಸ್

ಕೊಡಗಿನ ಫ್ರೇಜರ್‌ಪೇಟೆಯಲ್ಲಿ ಗಂಧದೆಣ್ಣೆಯ ಮತ್ತು ಕಾಗದ ತಯಾರಿಯ ಕಾರ್ಖಾನೆಗಳನ್ನು ತೆರೆಯುವ ಏರ್ಪಾಡನ್ನು ಕಾವೇರಿ ಪೇಪರ್ ಮಿಲ್ಸ್ ಮತ್ತು ಫಾರೆಸ್ಟ್ ಇಂಡಸ್ಟ್ರೀಸ್ ಕಂಪೆನಿಯು ನಡೆಸುತ್ತಿರುವದು ಸ್ತುತ್ಯಾರ್ಹವಾಗಿದೆ. ಎರಡುವರೆ ಕೋಟಿ ರೂಪಾಯಿ ಅಧಿಕೃತ ಬಂಡವಾಳದ ಈ ಕಂಪೆನಿಯ ಪಾಲುಗಳು ಏಪ್ರಿಲ್ ತಾರೀಕು ೬ ರಿಂದ ಮಾರಾಟಕ್ಕೆ ತೆರೆಯಲ್ಪಟ್ಟಿವೆ. ಕಾಗದ ಕೈಗಾರಿಕೆಯು ಉನ್ನತವು ದೇಶಕ್ಕೆ ಎಷ್ಟು ಆತ್ಯವಶ್ಯವೋ ಅಷ್ಟೇ ಲಾಭಕಾರಿಯೂ ಆಗಿದೆ. ಕೊಡಗು ಸರಕಾರದಿಂದ ತಮಗೆ ದೊರೆತಿದೆಯೆಂದೆನ್ನುವ ಕಚ್ಚಾಮಾಲುಗಳ ಸಲವತ್ತುಗಳು ಯೋಗ್ಯವಾಗಿವೆ. ಈ ಅನುಕೂಲತೆಗಳನ್ನು ಪಡೆದ ಈ ಕಂಪೆನಿಯು ಲಾಭದಾಯಕವಾಗಿ ಕೆಲಸ ಮಾಡಲೇಬೇಕು. ಕಂಪೆನಿಯ ನಿರ್ದೇಶಕ ಮಂಡಳಿಯಲ್ಲಿ ವಣಿಕ ತಜ್ಞರೂ, ಇತರ ಕೈಗಾರಿಕಾ ಪ್ರವೀಣರೂ ಇರುವದರಿಂದ ಕಂಪೆನಿಯನ್ನು ಸುಗಮವಾಗಿ ಮುನ್ನಡೆಸುವರೆಂದು ನಂಬಬಹುದು.

ಇದು ಕೈಗಾರಿಕೆಯ ಯುಗ. ಅದರಲ್ಲೂ ರಾಷ್ಟ್ರದ ಆರ್ಥಿಕ ಮತ್ತು ಬೌದ್ಧಿಕ ಅಭಿವೃದ್ಧಿಗೆ ತಳಹದಿಯಾದುದು ಕಾಗದದ ಕೈಗಾರಿಕೆ. ಕೊಡಗಿನಲ್ಲಿ ಕಾಗದ ತಯಾರಿಗೆ ಬೇಕಾದ ವಿಪುಲವಾದ ಬಿದಿರು ಇದೆ. ಈ ಅರಣ್ಯ ಸಂಪತ್ತಿನ ಸದುಪಯೋಗ ಮಾಡಿ ಈ ಸಂಸ್ಥೆಯು ಕೊಡಗಿಗೆ ಮಾತ್ರವಲ್ಲ; ಇಡೀ ಭರತಖಂಡಕ್ಕೆ ಹಿತ ಮಾಡಬಹುದು. ಈ ಸಂಸ್ಥೆಯ ಅಸ್ತಿತ್ವಕ್ಕೆ ಕಾರಣರಾದವರನ್ನು ಎಲ್ಲರೂ ವಂದಿಸಬೇಕಾಗಿದೆ. ಭವ್ಯ ಭವಿಷ್ಯವುಳ್ಳ ಈ ಸಂಸ್ಥೆಗೆ ಎಲ್ಲರ ಸಹಾಯ ದೊರೆಯಲೆಂದೂ ಅದು ಅಖಂಡವಾಗಿ ಬೆಳೆದು ತನ್ನ ಅಂದಾಜಿನಂತೆ ವರ್ಷಕ್ಕೆ ೧೨,೦೦೦ ಟನ್ ಕಾಗದ ಮತ್ತು ಕಾರ್ಡ್‌ಬೋರ್ಡ್ ತಯಾರಿಸುವಂತಾಗಲೆಂದೂ ಹಾರೈಕೆ.

ವರ್ತಮಾನ.

ಜೋಡುಬೀಟಿ ಗ್ರಾಮದ ಶ್ರೀ ಪಟ್ಟಚೆರವಂಡ ಉತ್ತಪ್ಪನವರಲ್ಲಿ ಯಾರದೋ ಒಂದು ಎತ್ತು ಕೆಲವು ದಿನಗಳಿಂದ ಸೇರಿಕೊಂಡಿದೆಯೆಂದೂ ತಕ್ಕ ರುಜುವಾತಿನಿಂದ ಮಾಲೀಕರು ಕೊಡತಕೊಂಡು ಹೋಗಬಹುದೆಂದೂ ತಿಳಿಸುತ್ತಾರೆ.

ಕೊಡಗಿನ ಬೆಂಚ್ ಮೆಜಿಸ್ಟ್ರೇಟರುಗಳ ಸಮ್ಮೇಳನವೊಂದನ್ನು ಕರೆಯುವ ಬಗ್ಗೆ ಪೊನ್ನಂಪೇಟೆ ಬೆಂಚ್ ಕೋರ್ಟಿನವರು ನಿರ್ಣಯಿಸಿ ಈ ಬಗ್ಗೆ ತಕ್ಕ ಏರ್ಪಾಡು ಮಾಡಲು ಶ್ರೀ ಪುಚ್ಚಿಮಾಡ ಮಾದಯ್ಯನವರನ್ನು ಕನ್ವೀನರನ್ನಾಗಿ ನೇಮಿಸಿರುವರು.

ವಿಶ್ವವಿದ್ಯಾಲಯ ಸಮಿತಿಯವರು ಕೊಡಗಿನಲ್ಲಿ ಕಾಲೇಜು ಸ್ಥಾಪಿಸುವ ವಿಚಾರ ಕಾಲೇಜಿನ ನಿವೇಶನ ಮತ್ತಿತರ ವಿಚಾರ ಪರಿಶೀಲಿಸಲು ಈ ೩೦ರಲ್ಲಿ ಮಡಿಕೇರಿಗೆ ಬರುವರೆಂದು ತಿಳಿಯಬರುತ್ತದೆ.

ಇಂಗ್ಲೆಂಡಿನಲ್ಲಿ ವ್ಯಾಸಂಗ ಮಾಡುತ್ತಿರುವ ಶ್ರೀ ಕೂಂಗಂಡ ತಮ್ಮಯ್ಯ ಅಚ್ಚಯ್ಯನವರು ಪ್ರಥಮ ದರ್ಜೆಯಲ್ಲಿ ಪಿ. ಎಚ್. ಡಿ ಡಿಗ್ರಿಯನ್ನು ಪಡೆದಿರುವರೆಂದೂ ಹೆಚ್ಚಿನ ವ್ಯಾಸಂಗಕ್ಕಾಗಿ ಇವರ ವಿದ್ಯಾರ್ಥಿ ವೇತನವನ್ನು ಮುಂದುವರಿಸಬೇಕೆಂದು ಇಂಡಿಯಾ ಸರಕಾರವನ್ನು ಇವರ ಪರೀಕ್ಷಕರು ಕೇಳಿರುವರೆಂದೂ ತಿಳಿದು ಬಂದಿದೆ. ಇವರ ಸಹೋದರ ಶ್ರೀ ಟಿಕ್ಕು ಅಚ್ಚಯ್ಯನವರು ಮದ್ರಾಸ್ ಸರಕಾರದಿಂದ ಅಸಿಸ್ಟೆಂಟ್ ಕನ್ಸರ್ವೇಟರ್ ಆಫ್ ಫಾರೆಸ್ಟ್ ತರಬೇತಿಗೆ ಆರಿಸಲ್ಪಟ್ಟಿದ್ದು ಆ ಪರೀಕ್ಷೆಯಲ್ಲಿ ಮದ್ರಾಸ್ ವಿದ್ಯಾರ್ಥಿಗಳಲ್ಲಿ ಒಂದನೆಯದಾಗಿ ತೇರ್ಗಡೆಯಾಗಿ ಪಾಲ್ಘಾಟ್ ರೇಂಜಿನಲ್ಲಿ ಅ. ಫ. ಕನ್ಸರ್ವೇಟರಾಗಿ ನೇಮಿಸಲ್ಪಟ್ಟಿರುವರು.

ನಾಳೆ ದಿನ ಮಂಗಳೂರಿನಿಂದ ಮಡಿಕೇರಿಗೆ ಬರಲಿರುವ ಕೇಂದ್ರ ಸರಕಾರದ ಟ್ರಾನ್ಸ್‌ಪೋರ್ಟ್ ಮಂತ್ರಿಗಳಾದ ಶ್ರೀ ಕೆ. ಸಂತಾನಂರವರಿಗೆ ಅದೇ ದಿನ ಕೊಡಗಿನ ಸಾರ್ವಜನಿಕರ ಪರ ಒಂದು ಬಿನ್ನವತ್ತಳೆಯನ್ನು ಅರ್ಪಿಸುವದಲ್ಲದೆ ಒಂದು ಸತ್ಕಾರ ಕೂಟವನ್ನೂ ಏರ್ಪಡಿಸಲಾಗಿದೆ.

ತಾ. ೧೨-೪-೪೯ ರಲ್ಲು ಮಡಿಕೇರಿಯಿಂದ ವೀರಾಜಪೇಟೆಗೆ ಮಧ್ಯಾಹ್ನದ ಮೇಲೆ ಹೋಗುತ್ತಿದ್ದ ಕೂರ್ಗ್ ಯೂನಿಯನ್ ಬಸ್ಸೊಂದು ಅಮ್ಮತ್ತಿಯಿಂದ ಒಂದು ಮೈಲು ಆಚೆ ಮಗುಚಿ ಬಿದ್ದು ಬಸ್ಸಿನ ಕ್ಲೀನರ್ ಅಲ್ಲೇ ಮೃತನಾದನೆಂದೂ ಕೆಲವು ಪ್ರಯಾಣಿಕರಿಗೆ ಜಖಂಗಳಾಗಿವೆಯೆಂದೂ ವಾರ್ತೆ.

ಕೊಡಗು ಶಾಸನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಸಾಂತ್ಯೇರಿ ತಿಮ್ಮಪ್ಪನವರು ತಮ್ಮ ೫೪ ನೇ ವಯಸ್ಸಿನಲ್ಲಿ ತಾ. ೧೧-೪-೪೯ ರಲ್ಲಿ ಶಿವಾಧೀನರಾದರು.

ಘೋಷಾ ಮಹಿಳೆಯರ ಹೆಸರಿನಲ್ಲಿ

ಘೋಷಾ ಹೆಣ್ಣು ಮಕ್ಕಳು ಕುಳಿತಿದ್ದರೆಂದು ಹೇಳಲಾದ ಬನಾರಸದ ಒಂದು ಎಕ್ಕಾ ಗಾಡಿಯನ್ನ ಒಬ್ಬ ಪೋಲೀಸನು ಹಿಡಿದು ನಿಲ್ಲಿಸಿ ಪರದೆಯನ್ನು ಜಗ್ಗಲು ಒಳಗೆ ಹೆಣ್ಣು ಮಕ್ಕಳ ಬದಲು ಕಳ್ಳಪೇಟೆಯಲ್ಲಿ ಕೊಂಡ ಸಿಮೆಂಟಿನ ಚೀಲಗಳು ಕಂಡುಬಂದವು. ಆ ಎಕ್ಕಾ ಗಾಡಿ ಹೊಡೆಯುವವನನ್ನೂ ಅವನೊಡನಿದ್ದ ಇನ್ನೊಬ್ಬನನ್ನೂ ಬಂಧಿಸಲಾಗಿದೆ.

ಭಾರತಕ್ಕೆ ಉಕ್ಕಿನ ಕಾರ್ಖಾನೆ.

ಭಾರತ ಸರಕಾರವು ಪರರು ಬ್ರಿಟಿಷ್ ಮತ್ತು ಅಮೇರಿಕ ಉಕ್ಕಿನ ಕಾರ್ಖಾನೆಗಳೊಡನೆ ಭಾರತದಲ್ಲಿ ಉಕ್ಕಿನ ಕಾರ್ಖಾನೆಗಳನ್ನು ನಿರ್ಮಾಣ ಮಾಡುವ ಬಗ್ಗೆ ಸಲಹೆ ಕೇಳಿದ್ದು ಈ ಕಾರ್ಖಾನೆಗಳು ತಮ್ಮ ಅಭಿಪ್ರಾಯವನ್ನು ಭಾರತ ಸರಕಾರದ ಮುಂದಿಟ್ಟಿವೆ.

ಈಗ ಭಾರತದಲ್ಲಿರುವ ಉಕ್ಕಿನ ಕಾರ್ಖಾನೆಗಳು ಉತ್ಪತ್ತಿ ಮಾಡುವ ಎಲ್ಲಕ್ಕೆ ಒಂದು ಮಿಲಿಯ ಟನ್ನು ಉಕ್ಕಿನ ಕೊರತೆಯು ಉಂಟಾಗುತ್ತಿದೆ. ಸುಮಾರು ೫,೦೦,೦೦೦ ದಿಂದ ೬,೦೦,೦೦೦ ಟನ್ನುಗಳಷ್ಟು ಉಕ್ಕನ್ನು ಉತ್ಪಾದಿಸುವ ಕಾರ್ಖಾನೆಗಳನ್ನು ಕಟ್ಟಿಸಲು ಸುಮಾರು ೫೦ರಿಂದ ೬೦ ಕೋಟಿ ರೂಪಾಯಿಗಳ ವೆಚ್ಚ ತಗಲಬಹುದೆಂದು ಯೋಜನೆ ಬಂದಿದೆಯಲ್ಲದೆ ಈ ಕಾರ್ಖಾನೆಗಳನ್ನು ಕಟ್ಟಿಸುವರೆ ಮಧ್ಯಪ್ರಾಂತ ಮತ್ತು ಒರಿಸ್ಸಾಗಳೇ ಯೋಗ್ಯ ಸ್ಥಳಗಳೆಂಬ ಸೂಚನೆಗಳು ಬಂದಿವೆ.

ಭಾರತದ ಘಟನಾ ಸಮಿತಿ

ಭಾರತದ ರಾಜ್ಯ ಘಟನಾ ಸಮಿತಿಯ ಸಭೆಯ ಮುಂದಿನ ಅಧಿವೇಶನವು ಮೇ ತಿಂಗಳ ೧೬ಕ್ಕೆ ಕೂಡಲಿರುವುದೆಂದು ತಿಳಿದು ಬರುತ್ತದೆ.

ವಾರ್ತೆ.

ಗಾಂಧಿ ಕೊಲೆ ಮೊಕದ್ದಮೆಗೆ ಸಂಬಂಧಪಟ್ಟ ನಾಥೂರಾಂ ವಿನಾಯಕಗೋಡ್ಸೆ ಮತ್ತು ಇತರ ಸಹ ಕೊಲೆಪಾತಕಿಗಳನ್ನು ಢಿಲ್ಲಿಯ ಕೆಂಪು ಕೋಟೆಯಿಂದ ಅಂಬಾಲಕ್ಕೆ ಸಾಗಿಸಿ ಅಲ್ಲಿಯ ಸೆಂಟ್ರಲ್ ಜೈಲಿನಲ್ಲಿರಿಸಲಾಗಿದೆ.

ಮಧ್ಯಪ್ರಾಂತದಲ್ಲಿ ಪ್ರಸ್ತುತ ಇಪ್ಪತ್ತು ಸಾವಿರ ಮಂದಿ ಹೋಂ ಗಾರ್ಡರು ಗಳ ಹಳ್ಳಿಗಳ ಸಾಧಾರಣಾ ಕಾರ್ಯಕ್ರಮ ಕೈಕೊಂಡಿದ್ದಾರೆ.

ಟಾಪ್ಪಿ.

ಮಡಿಕೇರಿ ಕಣ್ಣಾನೂರು ಬಸ್ಸು ಸರ್ವೀಸು.

ಮಡಿಕೇರಿಯಿಂದ ಬೆಳಗ್ಗೆ ಹೊರಟು ಕಣ್ಣಾನೂರಿಗೆ ತಲುಪಿ ವಾಪಾಸು ಬರುವ ಸಿ. ಪಿ. ಸಿ. ಬಸ್ಸನ್ನು ಸದ್ರಿ ಕಂಪೆನಿಯವರು ಸರಿಯಾಗಿ ಓಡಿಸದೆ ತಿಂಗಳಿಗೆ ಕೆಲವು ದಿನಗಳು ಮಾತ್ರ ಓಡಿಸಿ ಬಾಕಿ ದಿವಸ ನಿಲ್ಲಿಸುವದರಿಂದ ಸಾರ್ವಜನಿಕರಿಗೆ ಬಹಳ ತೊಂದರೆ ಉಂಟಾಗುತ್ತಿದೆ. ಈ ಬಸ್ಸನ್ನು ನಂಬಿಕೊಂಡು ಅನೇಕ ಜನರು ದೂರದ ಗ್ರಾಮಗಳಿಂದ ಬಂದು ಬಸ್ಸು ಇಲ್ಲದೆ ನಿರಾಶರಾಗಿ ವಾಪಾಸು ಹೋಗುತ್ತಿದ್ದಾರೆ. ಮೇಲ್ಕಂಡ ಕಂಪೆನಿಯವರಿಂದ ಬಸ್ಸನ್ನು ಓಡಿಸಲು ಸಾಧ್ಯವಿಲ್ಲದ ಪಕ್ಷಕ್ಕೆ ಲೈಸನ್ನು ಸರಿಯಾಗಿ ನಡೆಸುವವರಿಗೆ ಸರಕಾರದವರು ಕೊಟ್ಟು ಬಡ ಜನರ ಕಷ್ಟವನ್ನು ನಿವಾರಿಸಬೇಕಾಗಿದೆ.

'ಪ್ರಯಾಣಿಕ'

ಪಾಕೀಸ್ತಾನ್ ಒಪ್ಪಿಗೆ

ಕಾಶ್ಮೀರ ಗಡಿಯಲ್ಲಿ ಪಾಕಿಸ್ತಾನ್ ಸೈನಿಕರು ಸೀಸ್‌ಫೈರ್ ಒಪ್ಪಂದಕ್ಕೆ ವಿರುದ್ಧವಾಗಿ ಇತ್ತೀಚೆಗೆ ವಶಪಡಿಸಿರುವ ಕೆಲವು ನೆಲೆಗಳಿಂದ ತನ್ನ ಸೈನಿಕರನ್ನು ವಾಪಸು ಕರೆಸಲು ಪಾಕಿಸ್ತಾನ್ ಸರಕಾರವು ಒಪ್ಪಿಗೆ ಕೊಟ್ಟಿದೆಯೆಂದು ತಿಳಿದುಬಂದಿದೆ.

ಕಾಶ್ಮೀರದಲ್ಲಿ ಭಾರತ ಸೈನ್ಯದ ನೇತೃತ್ವ ವಹಿಸಿರುವ ಮೇ. ಜ. ಕೊಡಂಡೇರ ತಿಮ್ಮಯ್ಯನವರು ಪಾಕಿಸ್ತಾನ್ ಸೇನೆಯ ದಂಡನಾಯಕ ಮೇ. ಜ. ನ ಜೆರ್ ಅಹ ಮದರವರೊಡನೆ ನಡೆಸಿದ ಸಮಾಲೋಚನೆಯ ಫಲವಾಗಿ ಈ ಒಡಂಬಡಿಕೆಯು ಸಾಧ್ಯವಾಯಿತೆಂದು ಹೇಳಲಾಗಿದೆ.

ಶಿಕ್ಷಣದ ಪತನ

ದೇಶದ ವಿಶ್ವವಿದ್ಯಾನಿಲಯಗಳಲ್ಲಿ ಇತ್ತೀಚೆಗೆ ಶಿಕ್ಷಣ ಮಟ್ಟವು ತನ್ನ ಔನ್ನತ್ಯವನ್ನು ಕಳೆದುಕೊಂಡಿರುವುದು ವಿಷಾದಕರವೆಂತಲೂ ಉಪಾಧ್ಯಾಯರೂ ವಿದ್ಯಾರ್ಥಿಗಳೂ ಶಿಕ್ಷಣ ಕ್ರಮದ ಮೇಲ್ಮಟ್ಟವನ್ನು ರಕ್ಷಿಸಲು ಯತ್ನಿಸುತ್ತಿಲ್ಲವೆಂದೂ ಭಾರತ ಪ್ರಧಾನ ಮಂತ್ರಿ ಪಂಡಿತ ನೆಹರೂರವರು ಡಿಲ್ಲಿಯಲ್ಲಿ ಕೇಂದ್ರ ಶಿಕ್ಷಣ ಸಂಸ್ಥೆಯ ಕಟ್ಟಡದ ಶಂಕು ಸ್ಥಾಪನೆ ನಡೆಸುತ್ತಾ ತಿಳಿಸಿದರು.

ಹಿಂದಿ ಹಿಂದೂಸ್ಥಾನಿ ವಾದವಿವಾದದ ವಿಷಯವನ್ನು ಪ್ರಸ್ತಾಪಿಸಿ ಈ ಬಗ್ಗೆ ದೇಶದ ಜನರಲ್ಲಿ ಮೂಡಿರುವ ಭಿನ್ನಾಭಿಪ್ರಾಯಕ್ಕೆ ಕೋಮುವಾರು ಭಾವನೆಯೇ ಕಾರಣವೆಂದು ಅವರು ಹೇಳಿದರು.

ಸರಕಾರಿ ನೌಕರಿಗಳನ್ನು ಪಡೆಯಲು 'ಡಿಗ್ರಿ'ಗಳು ಆಗತ್ಯ ಎಂಬ ಸಂಭಾವನೆ ದೇಶದ ಜನರಲ್ಲಿ ಮೂಡಿದ್ದರಿಂದ ವಿದ್ಯಾರ್ಥಿಗಳು ಹೇಗಾದರೂ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿ ಪದವೀಧರರಾಗುವ ಅಂಶಕ್ಕೆ ಬಹಳ ಪ್ರಾಮುಖ್ಯತೆ ಕೊಡಲಾಗಿತ್ತೆಂದೂ ಇದರಿಂದ ವಿದ್ಯಾರ್ಥಿಯು ಮಾನವ ಜೀವನಕ್ಕೆ ಅತ್ಯವಶ್ಯಕವಾದ ಅಂಶಗಳಾದ ಸಾಮರ್ಥ್ಯ ಮತ್ತು ಶಕ್ತಿಗಳನ್ನು ಹೆಚ್ಚಿಸುವ ವಿಷಯಕ್ಕೆ ಸರಿಯಾದ ಗಮನ ಕೊಡಲಾಗಿಲ್ಲವೆಂದೂ ಪಂಡಿತ ನೆಹ್ರೂರವರು ಹೇಳಿದರು.

ವಿದ್ಯಾರ್ಥಿಯ ಸ್ವಯಂಶಕ್ತಿ ಸಾಮರ್ಥ್ಯ ಮತ್ತು ಬುದ್ಧಿಶಕ್ತಿಗಳನ್ನು ವೃದ್ಧಿಪಡಿಸಲು ಯತ್ನಿಸದೆ ಅನಸಿಗೆ 'ಡಿಗ್ರಿ' ಕೊಡಿಸುವುದರಿಂದ ಪ್ರಯೋಜನವಾಗದೆಂದು ಅವರು ತಿಳಿಸಿದರು.

ಭಾರತದಲ್ಲಿ ಯುದ್ಧಾಸ್ತ್ರಗಳ ತಯಾರಿಕೆ.

ರಕ್ಷಣಾ ವಿಜ್ಞಾನಕ್ಕೆ ಸಂಬಂಧಪಟ್ಟಂತೆ ಒಂದು ಸಮ್ಮೇಳನವು ಕಳೆದ ತಾ. ೨೦ರಲ್ಲಿ ದೆಹಲಿಯಲ್ಲಿ ಆರಂಭವಾಯಿತು. ವೈಜ್ಞಾನಿಕ ಹಾಗೂ ಕೈಗಾರಿಕಾ ಸಂಶೋಧನ ಸಂಸ್ಥೆಯ ಕಾರ್ಯದರ್ಶಿಗಳಾದ ಡಾ. ಎಸ್ ಎಸ್ ಬಾಟನಗರ್‌ರವರು ಸಮ್ಮೇಳನದ ಪ್ರಾರಂಭ ಭಾಷಣ ಮಾಡಿದರು. ಭಾರಿ ಭಾರಿ ಯುದ್ಧಾಸ್ತ್ರಗಳನ್ನು ತಯಾರಿಸುವ ಕಾರ್ಯದಲ್ಲಿ ಭಾರತ ಸರಕಾರದ ರಕ್ಷಣಾ ಶಾಖೆಯು ವಿದೇಶಿ ಮಿತ್ರ ರಾಷ್ಟ್ರಗಳಲ್ಲಿರುವ ಸಂಸ್ಥೆಗಳ ನೆರವು ಪಡೆಯುವುದು.

ಎಂದು ಡಾ. ಬಾಟನಗರ್‌ರವರು ತಮ್ಮ ಭಾಷಣದಲ್ಲಿ ತಿಳಿಸಿದರಲ್ಲದೆ ಇದರಿಂದ ದೇಶೀಯ ವಿಜ್ಞಾನಿಗಳು ಹೆಚ್ಚಿನ ಪ್ರಯೋಜನ ಹೊಂದಲು ಸಾಧ್ಯವಾಗುವುದು ಎಂದು ತಿಳಿಸಿದರು. ಹಿಂದೆ ಭಾರತೀಯ ವಿಜ್ಞಾನಿಗಳು ಹೊರದೇಶಗಳ ವಿಜ್ಞಾನಿಗಳೊಡನೆ ಶಸ್ತ್ರಾಸ್ತ್ರಗಳನ್ನು ತಯಾರಿಸುವ ಕಾರ್ಯದಲ್ಲಿ ಸಮಾಲೋಚಿಸಿ ಅವರಿಂದ ಸಲಹೆ ಪಡೆಯಲು ಅವಕಾಶವಿರಲಿಲ್ಲ. ಆದರೆ ಈಗ ನಮ್ಮದೇ ಪ್ರಭುತ್ವ ಸ್ಥಾಪಿತವಾಗಿರುವುದರಿಂದ ಈ ಕಾರ್ಯಕ್ಕೆ ಅವಕಾಶ ಲಭಿಸಿರುವುದು ಒಂದು ಸುಯೋಗ ಎಂದು ಅವರು ತಿಳಿಸಿದರು.

ಮಿಲಿಟರಿ ಹಾಗೂ ಸಿವಿಲ್ ಕ್ಷೇತ್ರಗಳಲ್ಲಿಯೂ ಅಗತ್ಯವಾಗಿ ಬೇಕಾಗಿರುವ ಟಿಯರ್ ಗ್ಯಾಸ್ ಮತ್ತು ಇನ್ನಿತರ ಗ್ಯಾಸುಗಳನ್ನು ತಯಾರಿಸುವದಕ್ಕೆ ಭಾರತದಲ್ಲಿ ವಿಶೇಷ ಗಮನಕೊಡಬೇಕಾಗಿದೆ. ೧೯೩೭-೧೯೩೮ರಲ್ಲಿ ಫಿಲಾರಿನಲ್ಲಿ ನಡೆದ ಸಂಶೋಧನೆಗಳು ಯಶಸ್ವಿಯಾಗಿವೆ. ಭಾರತದಲ್ಲಿ ಇದರಿಂದ ಟಿಯರ್ ಗ್ಯಾಸ್ ತಯಾರಿಸಲು ಸಾಧ್ಯವಿದೆ. ಕೈಗಾರಿಕಾ ಕಾರ್ಯಗಳಿಗೆ ಭಾರತವು ಪ್ರತಿ ವರ್ಷವೂ ೮೦ ಲಕ್ಷದಷ್ಟು ಬೆಲೆ ಬಾಳುವ ಆಸ್ಫೋಟಕ ವಸ್ತುಗಳನ್ನು ತಯಾರಿಸಿಕೊಳ್ಳುತ್ತಿದೆ. ಮಿಲಿಟರಿ ಮತ್ತು ಕೈಗಾರಿಕಾ ಕಾರ್ಯಗಳಿಗೆ ಬೇಕಾಗುವ ಆಸ್ಫೋಟಕ ವಸ್ತುಗಳನ್ನು ಕನಿಷ್ಟ ದರದಲ್ಲಿ ಭಾರತದಲ್ಲೇ ತಯಾರಿಸಲು ಒಂದು ಸಂಯುಕ್ತ ಯೋಜನೆಯಿಂದ ಸಾಧ್ಯವಾಗುವದು.

ಹಿಂದೀ ಪರೀಕ್ಷೆ ಫಲಿತಾಂಶ

ಕಳೆದ ಫೆಬ್ರವರಿಯಲ್ಲಿ ನಡೆದ ವಿಭಿನ್ನ ಹಿಂದೀ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರು

ಮಡಿಕೇರಿ.

ಶ್ರೀಗಳಾದ ಬಿ. ಎಂ. ಕುಶಾಲಪ್ಪ, ಬಿ. ಎಂ ಮಂದಪ್ಪ, ಎ. ಎ. ಅಪ್ಪಯ್ಯ, ಟಿ. ಕೆ. ಅಪ್ಪಣ್ಣ, ಕೆ. ಎಸ್. ದೇವರಾವು ಬಿ. ಎಸ್ ಲಕ್ಷ್ಮೀಶ. ಇವರು ಪ್ರಥಮ ಶ್ರೇಣಿಯಲ್ಲಿ. ಶ್ರೀಗಳಾದ ಕೆ. ಎಸ್. ಮಾದಯ್ಯ, ಪಿ. ಕೆ. ರಾಮಮೂರ್ತಿ, ಕೆ. ಕೆ. ನಂಜಯ್ಯ, ಎ. ಎಸ್. ಚಂಗು, ಎ. ಜಿ. ಚಿಣ್ಣಪ್ಪ, ಬಿ ಜಿ. ಬಾಬು. ಮಾದಯ್ಯಂಡ ತುಂಗಮ್ಮ, ಪಿ ಎ. ನಾಣಯ್ಯ, ಕೆ ಎ. ಸೀತಮ್ಮ. ಕೆ ಚೋಂದಮ್ಮ, ಎ. ಭವಾನಿಬಾಯಿ, ಎಂ. ಎಸ್. ಭಾರತಿ. ಇವರುಗಳು ಪ್ರಥಮಾ ಪರೀಕ್ಷೆಯಲ್ಲಿ.

ಶ್ರೀಗಳಾದ ಎಂ ಪಿ. ಗಂಗಮ್ಮ, ಎಂ. ಜಿ. ಪೊನ್ನಪ್ಪ, ಎ ಎ. ಪೂವಮ್ಮ, ಟಿ ಎಸ್ ರಾಜಗೋಪಾಲ. ಬಿ ಎ. ಈಶ್ವರಿ, ಪಿ ಪಿ. ಉಮ್ಮಯ್ಯ, ಕೆ ಎಸ್. ಗೋಪಾಲರಾವ್, ಬಿ ಎಸ್. ಕಾಂತಿ, ಬಿ. ಎಸ್ ಸರಸ್ವತಿ, ಡಿ. ಕೆ. ಅಹಲ್ಯ ಇವರುಗಳು ಮಾಧ್ಯಮಿಕದಲ್ಲೂ.

ಶ್ರೀಗಳಾದ ಮಣವಟ್ಟಿರ ಎಂ. ಸುಬ್ಬಮ್ಮ, ಮಣವಟ್ಟಿರ ಎಂ. ಮುತ್ತಮ್ಮ, ಬಿ. ಎಂ ಪೂವಮ್ಮ, ಜಿ. ಎಸ್. ಶಾರದಮ್ಮ. ಇವರುಗಳು ರಾಷ್ಟ್ರಭಾಷಾದಲ್ಲೂ.

ಶ್ರೀಗಳಾದ ಕೆ. ಕೆ. ಮಂದಣ್ಣ, ಎಸ್ ಎಸ್. ಕುಪ್ಪಮ್ಮ, ಇವರುಗಳು ಪ್ರವೇಶಿಕದಲ್ಲೂ.

ಶ್ರೀಮತಿ ಕಾಮಾಕ್ಷಿ ಭಗವಾನ್ ದಾಸ್ ಇವರು ವಿಶಾರದದಲ್ಲೂ ತೇರ್ಗಡೆಯಾಗಿರುವರು.

ಸುಂಟಿಕೊಪ್ಪ.

ಶ್ರೀಮತಿ ಕೆ. ಬಿ. ನೀಲಮ್ಮನವರು ಮಾಧ್ಯಮಿಕದಲ್ಲೂ, ಶ್ರೀಗಳಾದ ಕೆ. ಕೆ. ಗಣಪತಿ, ಬಿ. ಸಿ ಬೋಪಯ್ಯ, ಎಂ. ಪಿ. ಬಿದ್ದಪ್ಪ, ಎಂ ಎಂ ಅಪ್ಪಯ್ಯ, ಎ. ಪಿ ಗಣಪತಿ, ಕೆ. ಬಿ ಕಾರ್ಯಪ್ಪ, ಎಸ್. ಬಿ ತಿಮ್ಮಪ್ಪ, ಬಿ. ಬಿ [illegible] ಪ್ಪ, ಕೆ. ಎಸ್. ಗಂಗಾಧರನ್. ಕೆ ಬಿ ಬಿದ್ದಯ್ಯ ಇವರುಗಳು ಪ್ರಥಮಾದಲ್ಲೂ ಉತ್ತೀರ್ಣರಾಗಿದ್ದಾರೆ.

NOTICE.

Applications are invited from passed S. S. L. C. candidates below 30 years of age for undergoing training for the following courses to be conducted at Visva Bharathi, Vinaya Bhavana, Santiniketan, West Bengal, for a period of 10 months. The Course will start from July 1949. Teachers in service can also apply.

1. Arts and Crafts.
2. Basic Education.
3. Music & Dance

For items (1) & (2) only male candidates should apply and for item (3) only lady candidates should apply. Candidates selected will be paid a maintenance allowance of Rs 40/ p. m. Further details can be obtained from this office in person. All applications should reach this office not later than 30th April, 1949.

B. S. Kushalapa,
District Educational Officer,
Coorg

ವಂದನೆ.

ಮಡಿಕೇರಿ ಮಹಿಳಾ ಸಹಕಾರ ಸಮಾಜದ ಆಶ್ರಯದಲ್ಲಿ ನಾವು ತಾ. ೯ ಮತ್ತು ೧೦ರಲ್ಲಿ ಮಡಿಕೇರಿಯಲ್ಲಿ ನಡೆಸಿದ ವಿನೋದ ಕೂಟವು ಜಯಪ್ರದವಾಗಲು ಸಹಕರಿಸಿದ ಕಾವೇರಿ ಮಹಲಿನ ವ್ಯವಸ್ಥಾಪಕರಾದ ಶ್ರೀ ಎ. ಸಿ ಮಾದಪ್ಪನವರಿಗೂ, ನಾಟಕ ಮತ್ತು ವಿನೋದಗಳಲ್ಲಿ ಭಾಗವಹಿಸಲು ಬಾಲಕಿಯರನ್ನು ಬಿಟ್ಟ ಕಾನ್ವೆಂಟ್ ಮದರ್‌ಗಳಿಗೂ, ಅವರನ್ನು ತರಬೇತು ಮಾಡಿದ ಟೀಚರುಗಳಿಗೂ, ನಾಟಕ ಮತ್ತಿತರ ವಿನೋದಗಳಲ್ಲಿ ಭಾಗವಹಿಸಿದ ಮಕ್ಕಳೆಲ್ಲರಿಗೂ ವಂದಿಸುವದಲ್ಲದೆ, ತಾರೀಕು ೧೦ರಲ್ಲಿ ವಿನೋದ ಕೂಟಕ್ಕೆ ಶಾಲಾ ವೈಗಾನವನ್ನೂ ಕೆಲವು ಕೋಣೆಗಳನ್ನೂ ಬಿಟ್ಟುಕೊಟ್ಟ ಹೆಡ್ ಕವಿಷನರಿಗೂ, ಹೈಸ್ಕೂಲು ಮುಖ್ಯೋಪಾಧ್ಯಾಯರಿಗೂ ಇತರ ಸಹಾಯ ಕೊಟ್ಟ ಸಹಕಾರಿ ಇಲಾಖೆಯವರಿಗೂ ಕೊಡುಗೈಯಿಂದ ಸಹಾಯ ಮಾಡಿದ ಸಾರ್ವಜನಿಕರಿಗೂ ಹೃತ್ಪೂರ್ವಕ ವಂದನೆಯನ್ನು ಸಮಾಜವು ಈ ಮೂಲಕ ಅರ್ಪಿಸುತ್ತದೆ.

ಕುಂಡಂಡ ಸೀತಮ್ಮ ಚಂಗಪ್ಪ,
ಪ್ರೆಸಿಡೆಂಟ್.

ಬೇಕಾಗಿದ್ದಾರೆ.

ಬರುವ ಮೇ ತಿಂಗಳು ತಾ. 18 ರಿಂದ 28ರ ವರೆಗೆ ಉತ್ತರ ಕೊಡಗಿನಿಂದ ಹಿಡಿದು ಎಲ್ಲಾ ಕೇಂದ್ರಗಳಿಂದ ಒಬ್ಬೊಬ್ಬರಂತೆ ಸುಮಾರು 25 ಜನರಿಗೆ ಕೊಡಗಿನ ಬೋಳಕಾಟ್, ಕೋಲಾಟ್, ಮತ್ತಿತರ ಎಲ್ಲಾ ತರದ ಕುಣಿತಗಳನ್ನು ವೈಜ್ಞಾನಿಕ ರೀತಿಯಲ್ಲಿ ಮಡಿಕೇರಿಯಲ್ಲಿ ಕಲಿಸಲು ಏರ್ಪಡಿಸಲಾಗಿದೆ. ಆದ್ದರಿಂದ ನುರಿತ ಬೋಧಕರೊಬ್ಬರು ಬೇಕಾಗಿದ್ದಾರೆ. ಇವರಿಗೆ ಹತ್ತು ದಿವಸಗಳಿಗೆ ರೂ 25 ಪ್ರತಿಫಲವು ಕೊಡಲ್ಪಡುವುದು. ಕುಣಿತ ಕಲಿಯಲಿಚ್ಛಿಸುವ ಒಬ್ಬೊಬ್ಬರಿಗೆ ರೂ. 5 ಸಹಾಯಧನ ಕೊಡಲ್ಪಡುವುದು. ಕೊಡವೇತರ ಮತ್ತು ಉಪಾಧ್ಯಾಯ ಉಮೇದ್ವಾರರಿಗೆ ಹೆಚ್ಚಿನ ರಿಯಾಯಿತಿ ಕೊಡಲ್ಪಡುವುದು.

ಬೋಧಕರಾಗಲಿಚ್ಛಿಸುವವರೂ, ಉಮೇದ್ವಾರರೂ ತಮ್ಮ ಅರ್ಜಿಗಳನ್ನು ಈ ಕೆಳಗಿನ ವಿಳಾಸಕ್ಕೆ ಮೇ ತಾರೀಕು 5 ರ ಒಳಗೆ ಬರೆದುಕೊಳ್ಳತಕ್ಕದ್ದು.

ಐ ಮಾ. ಮುತ್ತಣ್ಣ.
ತಾ. 21-4-'49. ಮಡಿಕೇರಿ

ಎಂಪೈರ್ ಆಫ್ ಇಂಡಿಯಾ
ಲೈಫ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.
ಸ್ಥಾಪನೆ,—1897

ಹೊಸ ವ್ಯಾಪಾರ ...	...	1,07,69,600 ಮಿತಿಗೆ
ಜಾರಿಯಲ್ಲಿರುವ ಪಾಲಿಸಿಗಳ	ಚಾಲ್ತಿಯಲ್ಲಿರುವ ಮೊತ್ತ	17,74,52,000 ,,
	ಫಂಡು	6,67,60,000 ,,
ಇದುವರೆಗೆ ಕೊಡಲ್ಪಟ್ಟ ಕ್ಲೇಮುಗಳು		8,83,62,000 ,,

ಬ್ರಾಂಚ್ ಆಫೀಸು: ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡ ರಸ್ತೆ, ಬೆಂಗಳೂರು. ಏಜನ್ಸಿ ಅರ್ಜಿಗಳನ್ನು ಸ್ವಾಗತಿಸಿದೆ. ಪ್ರಧಾನ ಕಛೇರಿ: ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ.

ವಿಮೆ ಮಾಡಲು ಇಲ್ಲವೇ ಪ್ರತಿನಿಧಿಸಲು
ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.
ಇವರ ಸಲಹೆಗಿಂತ ಉತ್ತಮ ಮಾರ್ಗವಿಲ್ಲ.
ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದೂಸ್ಥಾನದ ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು.
ದಿ ಬೋಂಬೆ ಲೈಫ್ ಅಶ್ಶೂರೆನ್ಸ್ ಕಂ. ಲಿಮಿಟೆಡ್.
30 ಮೌಂಟ್ ರೋಡ್, ಪೊ. ಬಾ. ನಂ. 337. ಮದ್ರಾಸು 2.
ಬೋಂಬೆ ಲೈಫ್ ಬಿಲ್ಡಿಂಗ್, ಪೊ ಬಾ ನಂ 1, ಉಡುಪಿ.
(ಟೆಲಿಫೋನ್ ನಂ. 8398)
ಇತರ ಆಫೀಸುಗಳು:—ಬೆಂಗಳೂರು, ತಿರುವೇಂದ್ರಂ, ಕಲ್ಲಿಕೋಟೆ, ಮಂಗಳೂರು, ಪಂಡೂರ್, ಮಂಕ್ತಿ, ಬೊಂಬಾಯಿ

ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್,
ಮಡಿಕೇರಿ.



ನಮ್ಮ ಫ್ರೇಜರ್‌ಪೇಟೆ ಕಾರ್ಖಾನೆಯಲ್ಲಿ ಸದ್ಯಕ್ಕೆ ಈ ಕೆಳಗಿನ ಕೆಲಸಗಳನ್ನು ಕೈಕೊಂಡಿರುತ್ತೇವೆ ಸರ್ವರೂ ಪ್ರೋತ್ಸಾಹಿಸಬೇಕಾಗಿ ವಿನಂತಿ.
(1) ಭತ್ತ ಮಿಲ್ ಮಾಡುವುದು, (2) ಅಕ್ಕಿ ಮತ್ತು ಧಾನ್ಯಗಳನ್ನು ಹುಡಿಮಾಡುವುದು, (3) ಕಾಫಿ ಹುರಿದು ಹುಡಿ ಮಾಡುವುದು, (4) ಮೆಣಸು ಹುಡಿಮಾಡುವುದು.

ದಿ ಟ್ರಾಪಿಕಲ್
ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.
ಮೇನೇಜಿಂಗ್ ಡೈರೆಕ್ಟರ್:— ಲಾಲ ಶಂಕರ್ ಲಾಲ್
ಮುಖ್ಯ ಕಚೇರಿ:— ಹೊಸ ಡೆಲ್ಲಿ.
ಸ್ಥಾಪಿಸಿದ ಡೈರೆಕ್ಟರರು:
ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮಲಖಾನ್. ಡಾ|| ಎಂ. ಎ. ಅನ್ಸಾರಿ.
(1) ದೇಶದಲ್ಲಿ ಪ್ರಮುಖ ದೇಶ ಭಕ್ತರಿಂದ ಸ್ಥಾಪಿಸಲ್ಪಟ್ಟಿದೆ
(2) ಸ್ವತಂತ್ರ ಭಾರತದಲ್ಲಿ ಆರ್ಥಿಕ ನೆಲಗಟ್ಟನ್ನು ಭದ್ರವಾಗಿರಿಸುವುದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯವಾಗಿದೆ
(3) ಕಳೆದ 22 ವರ್ಷಗಳ ಹಿರಿದಾದ ಅನುಭವವುಳ್ಳ ನಾವು ನಿಮ್ಮ ಜೀವವಿಮಾ ಸಂಬಂಧದ ಯಾವದೇ ಸೇವೆಸಲ್ಲಿಸಲು ಸಂತೋಷಪಡುತ್ತೇವೆ
(4) ಜೀವವಿಮಾ, ಬೆಂಕಿ, ಮರೀನ್ ಮತ್ತು ಅಪಘಾತ ಇವೆಲ್ಲ ಕಾರ್ಯಗಳನ್ನು ಮಾಡುತ್ತಿದೆ
(5) ಪ್ರಾರಂಭದಿಂದ ವಿಮಾದಾರರಿಗೆ ಬೋನಸ್ಸು ಕೊಡುತ್ತಿದೆ
(6) ಯೋಗ್ಯ ಏಜೆಂಟು ಮತ್ತು ಆರ್ಗನೈಜರುಗಳಿಗೆ ತಮ್ಮ ಉದ್ಯೋಗದಲ್ಲಿ ಶಿಖರವನ್ನು ಮುಟ್ಟಲು ಒಳ್ಳೆ ಸಂದರ್ಭವನ್ನು ಒದಗಿಸಿಕೊಟ್ಟು ಎಲ್ಲಾ ಕಾಲದಲ್ಲಿಯೂ ದಯಾಳುತನದಿಂದ ಮತ್ತು ಯೋಗ್ಯವಾದ ರೀತಿಯಲ್ಲಿ ಅವರನ್ನು ನಡಿಸಿಕೊಳ್ಳಲಾಗುತ್ತದೆ
ನಮ್ಮ ಹೊಸ ವಿಸ್ತಾರದ ಯೋಜನೆಯಲ್ಲಿ ಆಕರ್ಷಕ ಕಮಿಷನ್ ಮೇಲೆ ಆರ್ಗನೈಜರನ್ನು ನಿಯಮಿಸಿಕೊಳ್ಳತಕ್ಕದಿದೆ. ದಯವಿಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ.
ಏಜೆನ್ಸಿ ಸುಪರಿಂಟೆಂಡೆಂಟ್, ಮಡಿಕೇರಿ, ಕೊಡಗ.
ಅ ಎಂ. ಎ ಬೆಳ್ಯಪ್ಪ, ಬ್ರಾಂಚ್ ಸೆಕ್ರೆಟರಿ, ಛ ದಿ ಟ್ರಾಪಿಕಲ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್; ಮಾ ಹಂಪನಕಟ್ಟಾ, ಮಂಗಳೂರು.

॥ ಪತ್ರವ್ಯವಹಾರಗಳು ॥

ಚಿಕ್ಕ ಹೊಳೆ ನಾಲೆ

ಫ್ರೇಜರ್‌ಪೇಟೆ ಹೋಬಳಿಯಲ್ಲಿರುವ ಈ ಹೊಳೆಯ ನಾಲೆಯಲ್ಲಿ ಪ್ರತಿ ವರ್ಷವೂ ಅಕ್ಟೋಬರ್, ನವಂಬರ್, ಡಿಸೆಂಬರ್ ತಿಂಗಳುಗಳಲ್ಲಿ ನೀರಿನ ಅಭಾವವಾಗಿ ಬೆಟ್ಟಗೇರಿ ಗ್ರಾಮದ ಗದ್ದೆಗಳೆಲ್ಲ ಸರಿಯಾಗಿ ಬೆಳೆಯಾಗುವುದಿಲ್ಲ. ಇದನ್ನು ರಿಪೇರಿ ಮಾಡಲು ರೈತರು ಕಳೆದ ನವಂಬರ್ ತಿಂಗಳಲ್ಲಿ ನೇರಾಗಿ ಚೀಫ್ ಕಮೀಷನರ್ ಸಾಹೇಬರನ್ನೂ ಆ ಕಮೀಷನರ್ ಸಾಹೇಬರನ್ನೂ ಕಂಡು ಅರ್ಜಿಯನ್ನು ಅರ್ಪಿಸಿದರು. ಅಸಿಸ್ಟೆಂಟ್ ಕಮೀಷನರ್ ಸಾಹೇಬರು ಖುದ್ದು ಪರಿಶೀಲಿಸಿದರು. ಪಿ. ಡಬ್ಲ್ಯು. ಡಿ. ಇಲಾಖೆಯವರ ಮುಖಾಂತರ ನಾಲೆಯನ್ನು ತೃಪ್ತಿಕರವಾಗಿ ರಿಪೇರಿ ಮಾಡಿಸಲು ಅಧಿಕಾರಿಗಳು ಬರೆದು ಕೊಟ್ಟರು. ಮೊನ್ನೆ ತಾನೆ ನಡೆದ ಕೌನ್ಸಿಲ್ ಸಭೆಯಲ್ಲೂ ಒಬ್ಬ ಮೆಂಬರಿಗೆ ಉತ್ತರವೀಯುತ್ತ ಫೈನಾನ್ಸ್ ಮೆಂಬರರು ಈ ಸಮ್ಬಂಧ ಕೆಲಸವನ್ನು ತ್ವರಿತ ಕೈಗೊಳ್ಳುವುದಾಗಿ ಹೇಳಿದರು. ವಾಡಿಕೆಯಾಗಿ ಪ್ರತಿ ವರ್ಷವೂ ಜೂನ್ ತಿಂಗಳು 15ನೇ ತಾರೀಕಿನಲ್ಲಿ ನಾಲೆಗಳಿಗೆ ನೀರು ಬಿಡುವುದು. ಬೇಸಿಗೆ ಬರೀ 3 ತಿಂಗಳು ಮಾತ್ರ ಮೀರಿ ಬಿದ್ದಿರುವುದರಿಂದ ರಿಪೇರಿ ಕೆಲಸ ತಕ್ಷಣವೇ ಪ್ರಾರಂಭಿಸದಿದ್ದರೆ ಈ ವರ್ಷವೂ ಪೂರ್ಣವಾಗಿ ನಾಲೆಯನ್ನು ದುರಸ್ತು ಮಾಡಲು ಅಸಾಧ್ಯವಾದೀತು ಹೆಚ್ಚು ಬೆಳೆಯಿರಿ! ಎನ್ನುವ ಈ ಕಾಲದಲ್ಲೂ ಇಂಥಾ ಮುಖ್ಯವಾದ ನೀರಾವರಿ ಕೆಲ್ಸಕ್ಕೆ ತಕ್ಕಷ್ಟು ಶ್ರದ್ಧ ವಹಿಸದಿದ್ದರೆ ಬೆಳೆಯುವದು ಹೇಗೆ? ರೈತರ ತೊಂದರೆಗಳನ್ನು ಗಮನಿಸುವರೆಂದು ಪ್ರಖ್ಯಾತಿಯಾಗಿರುವ ಚೀಫ್ ಕಮೀಷನರ್ ಸಾಹೇಬರು ಇದಕ್ಕೆ ತಕ್ಕ ಗಮನವನ್ನು ತಕ್ಷಣ ಕೊಡುವರೇ?

—ಬೆಟ್ಟಗೇರಿ ರೈತ.

ಮಡಿಕೇರಿ ಮಹಿಳಾ ಸಮಾಜ ಕಟ್ಟಡ ನಿಧಿ.

ಈ ಮೊದಲು ಪ್ರಕಟಿಸಿದ್ದು	ರೂ.	೫,೦೦೦
ಮಿಸ್ಟರ್ ಹಂಫ್ರೀಸ್‌ರವರು	,,	೨೫
ಜೇಳೂರು ಬಸವೇಗೌಡರು	,,	೧೦೦
ಮಿಸೆಸ್ ರಾಮಶೆಟ್ಟಿಯವರು	,,	೨೫
ಮೇಂಗಲ್ಸ್ ಕಂಪೆನಿಯವರು	,,	೧೫೦
ಶ್ರೀಮತಿ ಡಿ ಎಸ್. ದಾಸಪ್ಪನವರು	,,	೩೦
ಮಿಸ್ಟರ್ ಟಿ ಎಸ್ ಐರಿನ್‌ರವರು	,,	೩೦
ಶ್ರೀಮತಿ ಗುರುಲಿಂಗಪ್ಪನವರು	,,	೨೫
ಶ್ರೀಮಾನ್ ಸುಬ್ರಾಯ ಶೆಟ್ಟರು	,,	೧೫
ಶ್ರೀ ಡಿ. ಚಿಕ್ಕಣ್ಣನವರು	,,	೫೦
ಕೆಪ್ಟನ್ ಡಿ ಚನ್ನಬಸಪ್ಪನವರು	,,	೧೫೦
ಶ್ರೀ ಎ. ಆರ್ ಪುಟ್ಟಪ್ಪನವರು	,,	೧೫
ಶ್ರೀ ಡಿ. ನಾರಾಯಣ ಶೆಟ್ಟಿ ಇವರು	,,	೩೦
ಚೆಪ್ಪುಡಿರ ಪೊನ್ನಮ್ಮನವರು	,,	೧೦
ಚೆಕ್ಕೆರ ದೇವಮ್ಮನವರು	,,	೧೦
ಐದು ರೂಪಾಯಿಗೆ ಒಳಪಟ್ಟು	,,	೧೫
ಮಡಿಕೇರಿ ವಿನೋದ ಕೂಟದಲ್ಲಿ ಖರ್ಚು ಕಳೆದು ಬಾಕಿ		೩೨೦
ಒಟ್ಟು ಜಮ್ಮ	,,	೬,೦೦೦

ಪಾಂಡಂಡ ಸೀತಮ್ಮ ಚಂಗಪ್ಪ
ಪ್ರೆಸಿಡೆಂಟ್.

ಸಿ. ಪಿ. ಡಬ್ಲ್ಯು. ಡಿ. ವರ್ಕ್ ಚಾರ್ಜ್ಡ್ ಸಿಬ್ಬಂದಿಗಳು

ಎಲ್ಲಾ ಇಲಾಖೆಯ ನೌಕರರಿಗೆ ಪೇ ಕಮೀಷನಿನ ಸಲಕರಣೆಯು ಸಿಕ್ಕುತ್ತಾ ಬಂದು ಕಷ್ಟಪಟ್ಟುದಕ್ಕೆ ತಕ್ಕ ಫಲ ದೊರೆಯಿತೆ ದಯೆಂದು ಸ್ವಲ್ಪ ಸಂತೋಷದಿಂದಿರುವರು. ಆದರೆ ಈಗಿನ ಕೊಡಗಿನ ಸಿ ಪಿ ಡಬ್ಲ್ಯು ಡಿ. ವರ್ಕ್ ಚಾರ್ಜ್ಡ್ ಸಿಬ್ಬಂದಿಗಳ ಸ್ಥಿತಿ ಶೋಚನೀಯವಾಗಿದೆ.

ಈ ಸಿಬ್ಬಂದಿಗಳಿಗೆ ಉದ್ಯೋಗಿಗಳಿಗೆ ಹತ್ತಿರದ ರಜವಿಲ್ಲ, ಸರ್ವೀಸಿಲ್ಲ ಮತ್ತು ಪೆನ್ಷನಿಗೆ ಅರ್ಹರೇ ಅಲ್ಲವಂತೆ! ಸಂಬಳ ಲೋಚಿಸಿ ನೋಡಿದಲ್ಲಿ ಬೇರೆ ಇಲಾಖೆಯವರಂತೆ ಎಲ್ಲಾ ತರದ ಸಲಕರಣೆ ಇವರಿಗೆ ದೊರೆಯಲೇ ಬೇಕು. ಇವರು ಬೇರೆ ನೌಕರರಂತೆ ಸರಕಾರದ ಕೆಲಸವನ್ನು ನಿರ್ವಹಿಸುವುದಿಲ್ಲವೇ? ಇವರ ಕೆಲಸದಿಂದ ದೇಶದ ಜನರಿಗೆ ಪ್ರಯೋಜನವಿಲ್ಲವೇ? ಪ್ರತಿ ದಿನ ಬೇಸಿಗೆಯಲ್ಲಿ ಬಂದರೆ ಅನ್ನ ನೀರ ಸಿಕ್ಕದೆಯಿರುವ ಸ್ಥಳದಲ್ಲಿಯೂ ದೇಶದ ಹಿತಕ್ಕಾಗಿ ದುಡಿಯುವುದಿಲ್ಲವೆ?

ಇದರಲ್ಲಿ ಕೆಲವ ಮಂದಿ ಹೆಚ್ಚು ಅನುಭವಸ್ಥರಾಗಿ ಮೇಲೇರಲೂ ಅಸ್ಪದ ಇಲ್ಲವಂತೆ! ಬೇರೆ ಇಲಾಖೆಗಳಲ್ಲಿ ಹೀಗಿರುವುದೇ? ಇವನ್ನು ಖರಿಗಟ್ಟಲು ತಕ್ಕದಾದ ವಿಚಾರವನ್ನು ಸರಕಾರವು ಮಾಡುತ್ತಿಲ್ಲ ಏಕೆ? ಇದರಲ್ಲಿ ಸೇರಿದವನ ಆ ಕೆಲಸದಲ್ಲಿಯೇ ಬಿದ್ದುಕೊಂಡು ಸಾಯಬೇಕೇ? ಅಲ್ಲದೆ ಪೇ ಕಮೀಷನಿನ ದರದ ವೇತನ ಈ ಇಲಾಖೆಗೆ ಅನ್ವಯಿಸುವುದಿಲ್ಲವೇ? ಅನ್ವಯಿಸುವುದಾದರೆ ಸಬ್ ಓವರಸಿಯರುಗಳಿಗೂ ಮೆಕಾನಿಕ್ ಸ್ಟಾಫಿಗೂ ಇದುವರೆಗೂ ಯಾಕೆ ಕೊಡಲ್ಲ?

ಸಿ ಪಿ ಡಬ್ಲ್ಯು ಡಿ ಯ ಸ್ಕೇಲುಗಳ ಪ್ರಕಾರ ಸಬ್ ಓವರ್ಸಿಯರಿಗೆ 40/60/75 ರೂಪಾಯಿ ಸಂಬಳದ 3 ಗ್ರೇಡುಗಳಿವೆಯಂತೆ. ಇವನ್ನಾದರೂ ಕೊಡಬೇಡವೇ? ಈಗಲೂ ಕೊಡಗಿನ ಪಿ. ಡಬ್ಲ್ಯು. ಡಿ ಯ ಇಲಾಖೆಯ ಓವರ್‌ಸಿಯರುಗಳಿಗೆ 20 ರೂ ನಿಂದ 38 ರ ವರೆಗೆ ಸಂಬಳ ಕೊಡುತ್ತಿರುವುದು ನ್ಯಾಯವೇ?

ಸೆಂಟ್ರಲ್ ಪಿ ಡಬ್ಲ್ಯು ಡಿ ಇಂದ ಬಂದ ಓವರ್ಸಿಯರ್ ವ್ಯಕ್ತಿಗೆ 65/ ರೂ. ಸಂಬಳ ಕೊಡುತ್ತಿರುವುದು ಹೇಗೆ? ಅವರಿಗೆ ಹೆಚ್ಚಿನ ಸವಿ ಸಾಗಲೀ, ತರಬೇತಿ ಗಲೀ, ಮತ್ತು ಅಭಿಪ್ರಾಯವು ಇಲ್ಲದೆ ನಮಗಳಂತೆಯೇ ಕೆಲಸ ಮಾಡುತ್ತಿರುವಾಗ ಈ ವ್ಯತ್ಯಾಸವೇಕೆ?

ಸರಕಾರವು ಇನ್ನಾದರೂ ಒಂದೇ ಕೆಲಸ ಮಾಡುವ ಕಲಸಗಾರರಲ್ಲಿ ಈ ರೀತಿಯ ವ್ಯತ್ಯಾಸ ಮಾಡದೆ ಎಲ್ಲರನ್ನೂ ಸಮದೃಷ್ಟಿಯಿಂದ ನೋಡುವುದಲ್ಲದೆ ಈ ಇಲಾಖೆಯ ಯೋಗ್ಯರಿಗೆ ಮೇಲೇರುವ ಅಸ್ಪದ ಕಲ್ಪಿಸಿ ಕೊಡುವರೇ?

—ನೊಂದವ

ಈ ವಾರದ ಕಥೆ.

ಹಿಂದೂ ರಾಣಿಯು ಮುಸಲ್ಮಾನ ಬಂಧು.

ಲೇ:-ಶ್ರೀ ಎಂ ಜಿ ಉಸ್ಮಾನ್ ಅವರು

ಕ್ರಿ. ಶ. ೧೧೦೦ರಲ್ಲಿ ಕನೋಜಿನ ಮೇಲೆ ಸುಲ್ತಾನ್ ಮಹಮ್ಮದ್ ಘಜ್ನಾವಿಯು ಧಾಳಿ ನಡೆಯಿತು. ಆ ಸಮಯದಲ್ಲಿ ಕನೋಜ್ ಮಹಾ ಪಟ್ಟಣವಾಗಿತ್ತು. ೩೦೦೦೦ ತಾಂಬೂಲದ ಅಂಗಡಿಗಳಿದ್ದವೆಂದರೆ ಪಟ್ಟಣದ ವೈಭವವನ್ನು ಬೇರೆ ವರ್ಣಿಸಬೇಕಿಲ್ಲ. ರಾತ್ರಿಯ ಸಮಯ. ಸರೋವರದ ಕಮಲಗಳಂತೆ ನೀಲಾಂಬರದಲ್ಲಿ ತಾರೆಗಳು ಮಿನುಗುತ್ತಿದ್ದವು. ಈ ಸುಂದರ ಸಮಯದಲ್ಲಿ ವೃದ್ಧಕಾಯನಾದ ವ್ಯಕ್ತಿಯೊಬ್ಬನು ಬೀದಿಯಲ್ಲಿ ಸಾಗಿದ್ದನು. ಯಾರೂ ಈತನನ್ನು ಗಮನಿಸಿರಲಿಲ್ಲ. ವ್ಯಕ್ತಿ ಅಡ್ಡಗಲ್ಲಿಯೊಂದನ್ನು ಪ್ರವೇಶಿಸಿ ಮುನ್ನಡೆಯುತ್ತಿದ್ದನು.

ನಿಶೆಯ ನಿಶಬ್ದತೆಯನ್ನು ಬೇಧಿಸಿ ಯುವತಿಯ ಕೂಗೊಂದು ಕೇಳಿಬಂತು. 'ನಾನು ಧರ್ಮರಿಂದ ನನ್ನನ್ನು ರಕ್ಷಿಸಿರಿ' ಎಂಬ ಆರ್ತಸ್ವರವನ್ನು ಕೇಳಿ ಆಗಂತುಕನು ಅತ್ತ ಧಾವಿಸಿದನು. ಎರಡು ಜನರು ಒಬ್ಬ ಅಬಲೆಯನ್ನು ಬಲತ್ಕಾರದಿಂದ ಎತ್ತಿಕೊಂಡು ಹೋಗುತ್ತಿದ್ದರು. ಅವರು ಕರಿಯ ಅರಿವೆಯಲ್ಲಿ ಮುಖವನ್ನಡಗಿಸಿಕೊಂಡಿದ್ದ ಕಾರಣ ಅವರ ಗುರುತು ಹತ್ತುತ್ತಿರಲಿಲ್ಲ. ಒರೆಯಿಂದ ಕತ್ತಿಯನ್ನು ತೆಗೆದು ಆಗಂತುಕನು ಅವರನ್ನು ಎದುರಿಸಿದನು. ಅವರಲ್ಲಿ ಒಬ್ಬನು ಆಕೆಯನ್ನು ಬಿಟ್ಟು ಕತ್ತಿ ಝಳಪಿಸುತ್ತ ನಿಂತನು. ಕ್ಷಣಮಾತ್ರದಲ್ಲಿ ಆಗಂತುಕನ ಏಟಿನಿಂದ ಆತನು ಭೂಶಾಯಿಯಾದನು. ನಂತರ ಮತ್ತೊಬ್ಬನನ್ನು ಮೂದಲಿಸಿದನು. ಆತನು 'ನಾನಾರೆಂಬುದನ್ನು ತಿಳಿಯದೆ ನೀನು ಈ ಕೊಲೆ ಮಾಡಿರುವೆ. ರಾಜಪುತ್ರನು ನಾನೆ. ನಿನಗೆ ತಕ್ಕ ಶಿಕ್ಷೆ ವಿಧಿಸದಿರೆನು' ಎಂದನು.

ಆಗಂತುಕನು ಗಂಭೀರ ವಾಣಿಯಿಂದ 'ನೀನು ರಾಜ ಪುತ್ರ, ಇಲ್ಲವೇ ಇನ್ನಾವ ಮಹಾ ಪುರುಷನೇ ಆಗಿರು. ಕಷ್ಟಕ್ಕೊಳಗಾದವರನ್ನು ರಕ್ಷಿಸುವದು ನನ್ನ ಧರ್ಮ. ನೀನು ಆಕೆಯನ್ನು ಬಿಡದಿದ್ದರೆ ಈ ಖಡ್ಗಕ್ಕೆ ಬಲಿಯಾಗುವೆ' ಎಂದು ಅಬ್ಬರಿಸಿದನು. ರಾಜ ಪುತ್ರನು ಉಪಾಯವಿಲ್ಲದೆ ಆಕೆಯನ್ನು ಬಿಟ್ಟು ಓಡಬೇಕಾಯಿತು.

ತನ್ನ ಮಾನವನ್ನು ರಕ್ಷಿಸಿದ ಕುಲೀನನಿಗೆ ತನ್ನ ಕೃತಜ್ಞತಾಂಜಲಿಯನ್ನರ್ಪಿಸಿ ಭೀತಿ ಬಂಧಿತಳಾಗಿದ್ದ ಆ ಯುವತಿಯು ತನ್ನನ್ನು ಸುರಕ್ಷಿತವಾಗಿ ಮನೆಗೆ ಬಿಡುವಂತೆ ಬೇಡಿಕೊಂಡಳು. ಆಗಂತುಕನು ಹಾಗೆಯೇ ಮಾಡಿದನು.

* * *

ಸುಲ್ತಾನ್ ಘಜನಾವಿಯ ಧಾಳಿಯ ಕಾಲದಲ್ಲಿ ಕನೋಜಿನಲ್ಲಿ ಕುಂವರ್ ರಾಯ್ ರಾಜನು ಆಳುತ್ತಿದ್ದನು. ಆತನ ಮಗನಾದ ಯಶೋವೀರನು ಮರ್ಯಾದೆಗೆಟ್ಟು ಬಿಗ್ಗು ತನ್ನ ಯೌವನವನ್ನು ಕೆಡಿಸಿಕೊಂಡಿದ್ದನು. ಆತನು ಕೆಲವು ಜನರನ್ನು ಕಟ್ಟಿಕೊಂಡು ವ್ಯಭಿಚಾರ, ಯುವತಿಯರ ಅಪಹರಣಗಳನ್ನು ನಡೆಸುವದನ್ನೇ ಕರ್ತವ್ಯವೆಂದು ಭಾವಿಸಿದ್ದನು. ರಾಜನ ಮಗನು ಈ ಪ್ರಾಂತ್ಯ ದೇಶದಲ್ಲಿರುವ ಉತ್ತಮ ವನಿತೆಗಳೆಲ್ಲ ತನ್ನ ಭೋಗಕ್ಕಿರುವವೆಂದು ತಿಳಿದಿದ್ದನು. ಮೇಲೆ ವಿವರಿಸಿದ ಘಟನೆಯು ಈ ರಾಜ ಕುಮಾರನಿಂದಲೇ ನಡೆದಿತ್ತು.

ಘಜನಾವಿಯ ಧಾಳಿಗೆ ಕನೋಜಿನ ಅರಸನು ಶಿರಬಾಗಿದ್ದನು. ಘಜನಾವಿಯು ಉದಾರ ಚರಿತನೂ, ವೀರನೂ ಆಗಿದ್ದನು. ತನಗೆ ಶರಣು ಬಂದ ಕನೋಜಿನ ರಾಜನನ್ನು ರಾಜ ಮರ್ಯಾದೆಯಿಂದ ಕಂಡು ಗೌರವಿಸಿದ್ದನು. ಈತನ ವರ್ತನೆಯಿಂದ ರಾಜನಿಗೆ ಈತನಲ್ಲಿ ವಿಶ್ವಾಸವೂ, ಉದ್ಯೋಗಸ್ಥರಿಗೆ ನಂಬಿಕೆಯೂ, ಪ್ರಜೆಗಳಿಗೆ ಅನುರಾಗವೂ ಉಂಟಾಯಿತು. ರಾಜಧಾನಿಯಲ್ಲಿ ಏನು ನಡೆಯುತ್ತಿದೆಯೆಂಬುವದನ್ನರಿಯಲು ಸುಲ್ತಾನನು ವೇಶ ಮರೆಸಿ ಬೀದಿ, ಗಲ್ಲಿಗಳನ್ನು ತಿರುಗುತ್ತಿದ್ದಾಗ ನಡೆದದ್ದೇ ಮೇಲೆ ಉಲ್ಲೇಖಿಸಿದ ಘಟನೆ. ಅಪಹೃತ ಕನ್ಯೆಯನ್ನು ರಕ್ಷಿಸಿದವನೇ ಸುಲ್ತಾನ್ ಘಜ್ನಾವಿಯಾಗಿದ್ದನು.

. . .

ಈ ಘಟನೆ ನಡೆದ ಮರುದಿನ ಸುಲ್ತಾನನು ಹಿರಿಯೋಲಗದ ಏರ್ಪಾಡು ಮಾಡಿದ್ದನು. ಕನೋಜಿನ ಅರಸರೂ, ಇತರ ಮಾನ್ಯರೂ ಬಂದಿದ್ದರು. ನ್ಯಾಯ ವಿಚಾರಣೆಗೆ ಯಶೋವೀರನು ಹಾಜರಾಗಬೇಕೆಂದು ಸುಲ್ತಾನನು ಆಜ್ಞಾಪಿಸಿದನು. ಯಶೋವೀರನು ವಿಚಾರಣೆಗೆ ನಿಂತಿದ್ದನು. ಆತನ ಮುಖವು ವಿವರ್ಣವಾಗಿದೆ. ಯಶೋವೀರನನ್ನು ನೋಡಿ ಸುಲ್ತಾನನು ಹೇಳತೊಡಗಿದನು. 'ಮುಂದೆ ಅರಸನಾಗಲಿರುವ ನೀನು ಈ ರೀತಿ ದುಷ್ಕೃತ್ಯಗಳನ್ನು ಮಾಡಬಹುದೇ? ದೇಶದ ಶಾಂತಿ ರಕ್ಷಣೆಗೆಂದಿರುವ ರಾಜನೇ ಪ್ರಜೆಗಳಿಗೆ ತೊಂದರೆ ಕೊಟ್ಟರೆ ಪ್ರಜೆಗಳಿಗೆ ರಕ್ಷಕರಾರು? ನಿನ್ನೆ ನನ್ನನ್ನು ಗಲ್ಲಿಗೇರಿಸುವೆನೆಂದು ಹೇಳಿದೆಯಲ್ಲವೇ? ಇಗೋ, ನಾನು ನಿಂತಿರುವೆನು. ನ್ಯಾಯದ ತೀರ್ಪಿನಿಂದಾಗಲಿ ಯಾರು ಗಲ್ಲಿಗೇರಿಸಲ್ಪಡುವರೆಂಬದು ವಿಶದವಾಗಲಿ.'

ಯಶೋವೀರನು ನಾಚಿಕೆ, ದುಃಖಗಳಿಂದ ಮೌನ ಧರಿಸಿದ್ದನು. ಸುಲ್ತಾನನು ರಾಜನ ಕಡೆಗೆ ತಿರುಗಿ, 'ಮಹಾರಾಜ್, ನಿಮ್ಮ ಪುತ್ರನು ನಿರ್ದಯ ಯುವತಿಯನ್ನು ಅಪಹರಿಸಿ ಮಾನ ಭಂಗ ಮಾಡುವದರಲ್ಲಿದ್ದನು. ನಿಮ್ಮ ಪ್ರಜೆಗಳೊಬ್ಬಳಾದ ಆ ಯುವತಿಯು ಕುಲೀನೆಯು. ಈತನ ವಿಚಾರಣೆಯನ್ನು ನೀವೇ ನಡಸಿರಿ. (ಯಶೋವೀರನತ್ತ ನೋಡಿ) ನನ್ನ ಹೇಳಿಕೆಯಲ್ಲಿ ಅಸತ್ಯವಿದ್ದಲ್ಲಿ ಹೇಳು' ಎಂದು ಹೇಳಿದನು.

ಗುಣಾಢ್ಯನಾದ ರಾಜನು ಸುಲ್ತಾನನ್ನು ಉದ್ದೇಶಿಸಿ 'ಇಂಥಾ ತಪ್ಪಿಗೆ ನೀವು ವಿಧಿಸುವ ಶಿಕ್ಷೆಯೇ ಶಿಕ್ಷೆ. ಅದನ್ನು ಅನುಭವಿಸಲೇಬೇಕು' ಎಂದನು.

ಸುಲ್ತಾನನು ಯಶೋವೀರನ ಪಶ್ಚಾತ್ತಾಪವನ್ನು ನೋಡಿ ಆತನು ತನ್ನ ತಪ್ಪನ್ನು ತಿದ್ದಿಕೊಳ್ಳುವ ಚಿಹ್ನೆಯನ್ನರಿತು ಹೇಳಿದನು 'ನೀನು ಮಾಡಿದ ತಪ್ಪಿಗೆ ನೀನೇ ಆಕೆಯನ್ನು ಕೈ ಹಿಡಿದು ಪತ್ನಿಯಾಗಿ ಸ್ವೀಕರಿಸಬೇಕು. ನಿಮ್ಮಿಬ್ಬರ ಲಗ್ನದ ಏರ್ಪಾಡನ್ನು ನಾನೇ ಮಾಡುವೆನು.'

ಸುಲ್ತಾನನ ವಿಚಿತ್ರ ತೀರ್ಮಾನಕ್ಕೆ ಎಲ್ಲರೂ ತಲೆದೂಗಿದರು. ಸುಲ್ತಾನನ ಆಜ್ಞೆಯಂತೆ ತಾಯಿ ತಂದೆಯೊಡನೆ ಪಾರ್ವತಿಯು (ಯುವತಿಯ ಹೆಸರು) ಆಸ್ಥಾನಕ್ಕೆ ಬಂದಳು. ಪಾರ್ವತಿಯು ಪ್ರಸಿದ್ಧ ವ್ಯಾಪಾರಿಯೊಬ್ಬನ ಮಗಳಾಗಿದ್ದಳು. ಸುಲ್ತಾನನೇ ತನ್ನನ್ನು ರಕ್ಷಿಸಿದವನೆಂದು ತಿಳಿದ ಪಾರ್ವತಿಯಲ್ಲಿ ಸುಲ್ತಾನನ ಬಗ್ಗೆ ಅಪಾರವಾದ ಪ್ರೀತಿಯೂ, ಮೇರೆ ಮೀರಿದ ಗೌರವವೂ ಹೊರ ಸೂಸುತ್ತಿದ್ದವು. ರಾಜ ಕುಮಾರನಿಗೆ ತನ್ನ ಮಗಳನ್ನು ಕೊಟ್ಟು ವಿವಾಹ ಮಾಡುವದೆಂಬ ಸುಲ್ತಾನನ ನಿರ್ಣಯದಿಂದ ಆಕೆಯ ತಂದೆಯಾದ ವಣಿಕ ಶ್ರೇಷ್ಠನಿಗೆ ಅಪಾರ ಆನಂದವಾಗಿತ್ತು.

ಆದರೆ ರಾಜ ಕುಮಾರನಾದರೇನು? ದುಷ್ಟ ವರ್ತನೆಯ ಆತನನ್ನು ಕೈಹಿಡಿಯಲು ಪಾರ್ವತಿಯು ತಯಾರಿರಲಿಲ್ಲ. ತನ್ನನ್ನು ಅಪಾಯದಿಂದ ರಕ್ಷಿಸಿದ ಆ ಶೂರನ ಸ್ತ್ರೀ ಮಡದಿಯಾಗುವದಾಗಿ ಆಕೆ ಮನದಲ್ಲಿ ನಿಶ್ಚಯಿಸಿದ್ದಳು. ಆದರೆ ಅವನು ಸುಲ್ತಾನ ಘಜ್ನಾವಿಯೆಂಬದನ್ನು ತಿಳಿದು ಆಕೆಯ ಸವಿಗನಸುಗಳು ಮಾಯವಾಗತೊಡಗಿದ್ದವು. ಆಕೆಯು ಕಾತರ ದೃಷ್ಟಿಯಿಂದ ಸುಲ್ತಾನನನ್ನು ನೋಡತೊಡಗಿದಳು. ಆಕೆಯ ಕಣ್ಣುಗಳಲ್ಲಿ ಕಂಬನಿ ತುಂಬಿದ್ದವು. ತುಟಿಗಳು ನಡುಗುತ್ತಿದ್ದವು.

ಆಕೆಯ ಮನೋಭಾವವನ್ನರಿತ ಸುಲ್ತಾನನು ಹೇಳಿದನು 'ಮಗಳೇ, ರಾಜ ಕುಮಾರನನ್ನು ಮದುವೆಯಾಗಲು ನೀನು ಹಿಂಜರಿಯುತ್ತಿರುವೆ. ನೀನು ಆತನನ್ನು ಪ್ರೀತಿಸದಿರಬಹುದು. ಆದರೆ ಆತನಲ್ಲಿ ಪಶ್ಚಾತ್ತಾಪ ಉದಯಿಸಿದೆ. ಆತನು ಪ್ರೀತಿಯಿಂದ ನಿನ್ನನ್ನು ಕಾಣಬಲ್ಲನು. ನೀನು ಆತನನ್ನು ವಿವಾಹವಾದರೆ ದುರ್ವರ್ತನೆಯಿಂದ ರಾಜ ಕುಮಾರನನ್ನು ತಪ್ಪಿಸಿದುದು ಮಾತ್ರವಲ್ಲ; ಮುಂದೆ ರಾಣಿಯಾಗುವ ನೀನು ಯೋಗ್ಯ ಅರಸನೊಬ್ಬನನ್ನು ಈ ದೇಶಕ್ಕೆ ಒದಗಿಸುವೆ. ನಿನ್ನ ತ್ಯಾಗ ಹಿರಿದು. ಪ್ರೇಮವಿಲ್ಲದವನಲ್ಲಿ ಪ್ರೀತಿಯಿಡುವದು ಕಷ್ಟದ ಕೆಲಸ. ಆದರೆ ಈ ರಾಜವಂಶದ, ಈ ದೇಶದ ಹಿತದೃಷ್ಟಿಯಿಂದ ನೀನು ಈ ತ್ಯಾಗ ಮಾಡಬೇಕು.'

ತನ್ನ ಮಾನವನ್ನು ಕಾಪಾಡಿ ಜೀವದಾನ ಮಾಡಿದ ಸುಲ್ತಾನನ ಮಾತಿಗೆ ಪಾರ್ವತಿಯು ವಿರೋಧ ನುಡಿಯಲಿಲ್ಲ. ಸುಲ್ತಾನನ ನೇತೃತ್ವದಲ್ಲಿ ಮದುವೆಯು ಯಶಸ್ವಿಯಾಗಿ ಜರಗಿತು. ಯಶೋವೀರ ಮತ್ತು ಪಾರ್ವತಿಯರು ಆದರ್ಶ ದಂಪತಿಯರಾಗಿ ಬಾಳಿದರು.

(ಆಧಾರದಿಂದ)

ಜಾಹೀರಾತ್ ನೋಟೀಸ್.

ಉತ್ತರ ಕೊಡಗು ತಾಲೋಕು ಶನಿವಾರ ಸಂತೆ ಹೋಬಳಿ ದೊಡ್ಡಕುಂದ ಗ್ರಾಮದಲ್ಲಿರುವ ಉದ್ದಂಡ ಸೋಮಪ್ಪನವರ ಹಿರಿ ಮಗ ಈಗ ಹಾಲಿ ಬೆಂಗಳೂರಿನಲ್ಲಿರುವ ಮಲ್ಲಪ್ಪನು ಈ ಸೂಚ್ಯ ಜನಗಳಿಗೆ ತಿಳಿಯಪಡಿಸುವುದೇನಂದರೆ ನನ್ನ ತಂದೆ ಸೋಮಪ್ಪನವರು ಬಹಳ ದಿವಸಗಳಿಂದಲೂ ದುರ್ವರ್ತನೆಗಳಿಗೆ [illegible] ನನಗೂ ಮತ್ತು ನನ್ನ ತಾಯಿಗೂ ಮೋಸ ಪಡಿಸಬೇಕೆಂಬ ಉದ್ದೇಶದಿಂದ ಅವರ ಹೆಸರಿನಲ್ಲಿ ಜಮಾಬಂದಿ ನಡೆದು ಬರುತ್ತಿರುವ ನಮ್ಮ ಒಟ್ಟು ಕುಟುಂಬದ ಸ್ಥಿರ ಸೊತ್ತುಗಳನ್ನು ಮತ್ತು ಚರ [illegible]ಗಳನ್ನು ಪರಬಾರೆ ಮಾಡು[illegible] ರುವುದಾಗಿ ನಮ್ಮ ತಿಳಿವಿಗೆ ಬಂದಿದೆ. ಸದ್ರಿ ಸ್ಥಿರ ಮತ್ತು ಚರ ಸೊತ್ತುಗಳಲ್ಲಿ ನನಗೂ ಮತ್ತು ನನ್ನ ತಾಯಿಗೂ ಸಮನಾದ ಹಕ್ಕಿದೆ. ಸದ್ರಿ ಸೊತ್ತುಗಳನ್ನು ಯಾರಾದರೂ ಕ್ರಯ, ಬೋಗ್ಯ, ಗಿರ್ವಿ ವಗೈರೆ ವಿಧಾನದಲ್ಲಿ ನನ್ನ [illegible] ಪಡೆದುಕೊಂಡಲ್ಲಿ [illegible] ಕಷ್ಟ ನಷ್ಟಗಳಿಗೆ ಅವರೇ [illegible] ಜವಾಬ್ದಾರರಾಗಬೇಕಾಗುವುದು.

[illegible]

ಕೆ ಎಸ್ ಮಲ್ಲಪ್ಪ,
ಕೊಡ್ಲಿಪೇಟೆ

2-2

WANTED

Wanted Boys between the ages of 14 and 15 years for enrolment in different Technical Training and Centres. Educational standard required is between II Form and VI Form

For particulars please interview Mr. A. A Muddanna, Extra Assistant Recruiting officer at the following places on the dates mentioned against each:-

Place	Date		
Somvarsanthe	17	April 49	at Inspection Bungalow.
Somwarpet	18, 19, 20	"	"
Virajpet	22, 23	"	"
Napoklu	25	"	"
Ponnampet	26, 27	"	"
Mercara	29, 30	"	at Nad office.

3-3

ಫ್ರೇಜರ್‌ಪೇಟೆ ಹರಿಜನ ಸಮ್ಮೇಳನ.

ಈ ಸಂಘದ ಪ್ರಥಮ ವಾರ್ಷಿಕ ಸಮ್ಮೇಳನವು ತಾ. ೯-೪-೪೯ರಲ್ಲಿ ಕಣಿವೆ ರಾಮಸ್ವಾಮಿ ದೇವಾಲಯದ ಬಳಿ ಕೊಡಗು ಡಿ. ಕಮೀಷನರಾದ ರಾ. ಬ. ಕೆ. ಟಿ ಉತ್ತಪ್ಪ, ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಸುಮಾರು ೫೦೦ ಮಂದಿ ಹರಿಜನರೂ ಮತ್ತು ಸವರ್ಣ ಹಿಂದುಗಳೂ ಹಾಜರಿದ್ದರು.

ಪ್ರಥಮತಃ ಸಂಯುಕ್ತ ಪ್ರಾಂತದ ಗವರ್ನರಾದದ್ದ ಶ್ರೀಮತಿ ಸರೋಜಿನಿ ದೇವಿಯವರ ನಿಧನದ ಬಗ್ಗೆ ಸಂತಾಪವನ್ನು ಸೂಚಿಸಲಾಯಿತು.

ಸಮ್ಮೇಳನದಲ್ಲಿ ಈ ಪ್ರಾಮುಖ್ಯ ನಿರ್ಣಯಗಳು ಬಹುಮತದಿಂದ ಪಾಸಾದವು.

೧ ಮೈಸೂರು ಮತ್ತು ಮದ್ರಾಸ್ ಸರಕಾರಗಳು ಹರಿಜನರ ಏಳಿಗೆಯ ವಿಷಯದಲ್ಲಿ ಕೈಕೊಂಡಿರುವ ಯೋಜನೆಗಳ ಕರಡನ್ನು ತರಿಸಿ ಅವುಗಳನ್ನು ಪರಿಶೀಲನೆ ಮಾಡಿ ನಮ್ಮ ಕೊಡಗು ಸರಕಾರವೂ ಸಹ ಸದರಿ ಯೋಜನೆಯನ್ನು ಕೈಕೊಳ್ಳಬೇಕು.

೨. ಕೊಡಗಿನ ಮುಖ್ಯ ಕೇಂದ್ರಗಳಲ್ಲಿ ಕೈಗಾರಿಕಾ ಶಾಲೆಗಳನ್ನು ತೆರೆದು ಹರಿಜನರಿಗೆ ನೂಲುವದು, ನೇಯುವದು, ಮರಗೆಲಸ, ಹೊಲಿಗೆ ಮತ್ತಿತರ ಕೆಲಸಗಳನ್ನು ಕಲಿಸಿಕೊಡಬೇಕು.

೩. ಕೊಡಗಿನ ಹರಿಜನೋದ್ಧಾರ ಕಮಿಟಿಗೆ ಹರಿಜನರಲ್ಲೊಬ್ಬರಾದ ಶ್ರೀ ಪಿ. ಕೆ. ಚೆನ್ನಯ್ಯನವರನ್ನು ಆರಿಸಿ ಸ್ಥಾನಕೊಟ್ಟದ್ದಕ್ಕಾಗಿ ಕೊಡಗು ಸರಕಾರಕ್ಕೆ ಈ ಸಭೆಯು ವಂದಿಸುತ್ತದೆ.

೪. ಖಾಸಗಿಯಾಗಿ ನೂಲುವ ಹರಿಜನರಿಗೆ ಸರಕಾರವು ಮುಫತ್ತಾಗಿ ತಕಲಿ ಮತ್ತು ಚರಕಗಳನ್ನು ಒದಗಿಸಿಕೊಡಬೇಕು.

೫. ಹರಿಜನರು ಯಾವದೇ ಸತ್ತ ಪ್ರಾಣಿಯ ಮಾಂಸವನ್ನು ತಿನ್ನದಂತೆ ಮೈಸೂರು ಸರಕಾರವು ಪಬ್ಲಿಕ್ ಹೆಲ್ತ್ ಆಕ್ಟ್ ೧೧೦ ನೇ ಸೆಕ್ಷನ್ ಮೇರೆ ಜಾರಿಗೆ ತಂದಿರುವ ಕಾನೂನನ್ನು ಕೊಡಗು ಸರಕಾರವೂ ಸಹ ಒಡನೆ ಜಾರಿಗೆ ತರಬೇಕು.

೬. ಕೊಡಗಿನ ಪ್ರತಿಯೊಬ್ಬ ಹರಿಜನನಿಗೆ ಆಯಾಯ ಗ್ರಾಮದ ಪೈಸಾರಿಯಲ್ಲಿ ಕಾಪ್ಪಿ ಯಾ ತರಿ ವ್ಯವಸಾಯಕ್ಕೆ ಅವನನು ಕೇಳುವ ಸ್ಥಳದಲ್ಲಿ ೩ ಎಕ್ರೆಗೆ ಕಡಿಮೆ ಇಲ್ಲದಂತೆ ಮುಫತ್ತು ಜಮೀನು ಕೊಡುವ ಕಾನೂನು ಮಾಡಬೇಕು.

೭. ಕೊಡಗು ಹರಿಜನರ ಲಗ್ನಗಳು ೧೦೦ ರೂಪಾಯಿಗಳಿಗೆ ಮೀರದ ಖರ್ಚಿನಲ್ಲಿ ನಡೆಯುವಂತೆ ಒಂದು ಕಾನೂನು ಹೊರಡಿಸಬೇಕು.

೮. ಹರಿಜನರ ಸ್ಥಿತಿಗತಿಗಳು ಸುಧಾರಿಸುವರೆಗೆ ಅವರು ತಮ್ಮ ಭೂ ಸ್ವತ್ತುಗಳನ್ನು ಮಾರಾಟ ಮಾಡದಂತೆ ಕಾನೂನು ಮಾಡಬೇಕು

೯. ಮುಂಬರುವ ಕೌನ್ಸಿಲ್ ಮತ್ತು ಡಿಸ್ಟ್ರಿಕ್ಟ್ ಬೋರ್ಡು ಓಟುಗಳನ್ನು ವಿನಾಯಿಸಿ ನಾಮಿನೇಶನ್ ಮೂಲಕ ಅರ್ಹರಾದ ಹರಿಜನರಿಗೆ ಸ್ಥಾನಗಳನ್ನು ಕೊಡಬೇಕು.

೧೦. ಕೊಡಗಿನ ಹರಿಜನರ ಸಂಖ್ಯೆಯು ೨೨ ಸಾವಿರವಿದೆ, ಇದರಲ್ಲಿ ಸಾವಿರಕ್ಕೆ ಒಬ್ಬ ವಿದ್ಯಾವಂತನಿರುವದಿಲ್ಲ. ಕಾರಣವೇನೋ ತಿಳಿಯದು. ಆದುದರಿಂದ ಹರಿಜನರಿಗೆ ಕಡ್ಡಾಯ ವಿದ್ಯಾಭ್ಯಾಸವನ್ನು ಜಾರಿಗೆ ತರಬೇಕು.

೧೧. ಕೊಡಗಿನ ತಕ್ಕಮಟ್ಟಿನ ಸ್ಥಿತಿವಂತರಾದ ಹರಿಜನರಿಗೆ ಭೂಮಿ ಕೊಂಡುಕೊಳ್ಳುವದಕ್ಕೆ ವಾಸದ ಮನೆ ಕಟ್ಟಿಕೊಳ್ಳುವದಕ್ಕೆ ಮತ್ತು ಕೈಗಾರಿಕಗಳನ್ನು ಕಲಿಯುವದಕ್ಕೆ ಕಡಿಮೆ ದರದ ಬಡ್ಡಿಯಲ್ಲಿ ದೀರ್ಘ ಕಂತಿನ ಸಾಲವನ್ನು ಸರಕಾರವು ಕೊಡಬೇಕು.

೧೨. ಹೆಬ್ಬಾಲೆ ಬಳಿ ಸುಂಟವಕೊಪ್ಪಲಲ್ಲಿರುವ ಸೇಂದಿ ಅಂಗಡಿಯನ್ನು ಮುಚ್ಚಬೇಕು.

೧೩. ಅಸ್ಪೃಶ್ಯತೆಯನ್ನು ಹೋಗಲಾಡಿಸಿ ಅವರನ್ನು ನೀತಿವಂತರನ್ನಾಗಿ ಮಾಡುವ ಉದ್ದಿಶ್ಯ ಮದರಾಸು ಸರಕಾರವು ೧೯೪೯ನೇ ಇಸವಿಯ ಪ್ರತಿ ತಿಂಗಳ ೩೦ನೇ ತಾರೀಖಿನಲ್ಲಿ 'ಹರಿಜನರ ದಿನಾಚರಣೆ' ಯನ್ನು ಆಚರಿಸುವಂತೆ ನಿರಕು ಮಾಡಿರುತ್ತದೆ. ಕೊಡಗು ಸರಕಾರವೂ ಸಹ ಈ ಆಚರಣೆಯನ್ನು ಜಾರಿಗೆ ತರಬೇಕು.

೧೪ ಹರಿಜನ ವಿದ್ಯಾರ್ಥಿ ಪಿ. ಕಾಳಪ್ಪನನ್ನು ಕೊಡಗು ಜಿಲ್ಲಾ ನ್ಯಾಯಾಧೀಶರಾದ ಶ್ರೀ ನಿಡ್ಯಮಲೆ ಮುದ್ದಪ್ಪನವರು ಜಾತಿ ಬೇಧವಿಲ್ಲದೆ ತಮ್ಮ ಮನೆಯಲ್ಲೇ ಇರಿಸಿಕೊಂಡು ಹೈಸ್ಕೂಲ್ ವಿದ್ಯಾಭ್ಯಾಸವನ್ನು ಪೂರೈಸುವದಕ್ಕಾಗಿ ಈ ಸಭೆಯು ಅವರಿಗೆ ಅಭಿನಂದನೆಗಳನ್ನರ್ಪಿಸುತ್ತದೆ.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಪ್ರತಿಯೊಬ್ಬ ಹರಿಜನನೂ ಜಮೀನುದಾರನಾಗಬೇಕು. ಜಮೀನು ಇಲ್ಲದವರಿಗೆ ಜಮೀನ ಕೊಡುವ ಏರ್ಪಾಡನ್ನು ಸರಕಾರವು ಮಾಡಿರುವದು. ಹರಿಜನರ ಆರ್ಥಿಕ ಸ್ಥಿತಿಯು ಅಭಿವೃದ್ಧಿಯಾಗಬೇಕು. ಶಾಲಾ ಪ್ರಾಯದ ಮಕ್ಕಳನ್ನು ಹರಿಜನರು ಶಾಲೆಗೆ ಕಳುಹಿಸಲೇಬೇಕು. ಸರಕಾರವು ಹರಿಜನರ ಮಕ್ಕಳಿಗೆ ಪುಕ್ಕಟೆಯಾಗಿ ೩ ಜೊತೆ ಬಟ್ಟೆ, ಸ್ಲೇಟು, ಬಳಪ, ಪುಸ್ತಕ ಇತ್ಯಾದಿಗಳನ್ನು ಒದಗಿಸಿ ಕೊಟ್ಟಿದ್ದಲ್ಲದೆ ಮಧ್ಯಾಹ್ನದ ಒಂದು ಹೊತ್ತಿನ ಊಟವನ್ನು ಕೊಡುವ ಏರ್ಪಾಡನ್ನು ಮಾಡಲಿರುವದು. ಹರಿಜನೋದ್ಧಾರ ಕಾರ್ಯದಲ್ಲಿ ಸರಕಾರವೂ, ಸವರ್ಣರೂ ಸಹಕರಿಸಬೇಕು ಎಂದರು.

Edited, Printed and Published by P I. Belinappa at 'Kodagu' Press, Mercara, for 'Kodagu' Ltd.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್,
ಲಿಮಿಟೆಡ್, ಮಡಿಕೇರಿ.

೧೯೧೨ ಕೋಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಬಂಡವಾಳ ರೂ. 10,00,000.
ವಸೂಲಾದ ಶೇರು ಮೊಬಲಗು ರೂ. 1,65,000.
ಕ್ಷೇಮನಿಧಿ ರೂ. 50,000.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಆಧಾರದ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,
ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್, ಬೋರ್ಡ್ ಡೈರೆಕ್ಟರ್ಸ್.

THE WARDEN INSURANCE CO., Ltd.
(H. O. BOMBAY)

Branch Office- Bangalore City

ANNOUNCEMENT

This is to inform all over workers, policyholders medical examiners and other interested insuring public, that our office has been shifted from Mercara to Virajpet as from 1-4-1949 and request that all further communications be made to the following address only:

Chief Agency office,
Warden Insurance Co., Ltd.,
Virajpet (Coorg).

A. S. Aiyappa,
Branch secretary,
GANDHI NAGAR,
BANGALORE CITY.

ದಿ ವಾರ್ಡನ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,
ಗಾಂಧಿನಗರ, ಬೆಂಗಳೂರು ಸಿಟಿ.

CRESCENT

FOR PROTECTION AND SERVICE.

It is best to represent and insure with
The CRESCENT Insurance Co., Ltd.,
H. O. BOMBAY.] [Established 1919.

For particulars write to:

Sri B. A. Poovayya
Organiser
Polibetta, Coorg.

or

The Branch Manager,
22 B. Mahatma Gandhi Road,
Bangalore 1.

ಸುರಕ್ಷಿತವಾದ ಜೀವವಿಮೆ ಪಡೆಯಲು
ಕ್ರೆಸೆಂಟ್
ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.

ವೀರಾಜಪೇಟೆಗೆ 'ಕೊಡಗು' ಪತ್ರಿಕೆಯ ಏಜೆಂಟರು ಶ್ರೀ ಟಿ. ಎನ್. ಗೋವಿಂದರಾಜುರವರು.

Reg. No. M. 1580.
'KODAGU' MERCARA, (Coorg).

ಕೊಡಗು

ಸಂಪಾದಕರು—ಬಿ. ಪಿ. ಬೆಳ್ಳಿಯಪ್ಪನವರು] [ವಾರ್ಷಿಕ ಚಂದಾ ರೂ. 4-8-0.

ಸಂಪುಟ ೨೭ | ತಾರೀಕು ೨೯-೪-೧೯೪೯ನೇ ಶುಕ್ರವಾರ | ಸಂಚಿಕೆ ೩೭

ಮನವಿಗೆ ಮುಖ್ಯ ಮಂತ್ರಿ ಸಂತಾನಂರವರ ಉತ್ತರ.

"ಇಂದು ನೀವು ಕೊಟ್ಟ ಸನ್ಮಾನವು ವ್ಯಕ್ತಿಗತವಾಗಿ ನನಗಲ್ಲ; ನಾನು ಹೊತ್ತಿರುವ ಜವಾಬ್ದಾರಿಗೆ. ಇಂಡಿಯಾ ಸರಕಾರವು ಮಹಾ ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಈ ಬಿಕ್ಕಟ್ಟಿನ ಕಾಲದಲ್ಲಿ ಕೇಂದ್ರ ಸರಕಾರಕ್ಕೆ ನಿಮ್ಮೆಲ್ಲರ ಹೃತ್ಪೂರ್ವಕ ಸಹಾಯವು ಅಗತ್ಯವಾಗಿದೆ. ನಿಮ್ಮ ಈ ಐಕ್ಯ ಪಡುವಳಿ ತೋರುವರೆಯು ಕಾರಣ ಬರುವದು ಕಷ್ಟ. ನಿಮ್ಮಲ್ಲಿಗೆ ಬರಲು ಈ ಅಪೂರ್ವ ಸಂದರ್ಭವು ದೊರೆತುದಕ್ಕೆ ಸಂತೋಷಪಡುತ್ತೇನೆ. ಯಾವ ಭಾಗ ಹೇಳೇ ಇರಲಿ, ಇಡೀ ಭರತ ಖಂಡದ ದೃಷ್ಟಿ ಬೇಕು. ಸ್ವಾತಂತ್ರ್ಯ ಸಂಗ್ರಾಮ ನಡೆದ ಕಾಲಕ್ಕೆ ಕೊಡಗಿನವರಾದ ನೀವೂ ಯೋಗ್ಯ ರೀತಿ ಶ್ರಮಿಸಿರುವಿರಿ. ನಿಮ್ಮ ಪ್ರಾಂತದ ಬೇಕು ಬೇಡಿಕೆಗಳನ್ನು ಮುಂದಿಟ್ಟದ್ದು ಒಳ್ಳೇದಾಯಿತು. ಮಹಿವಾಟಿನ ತೊಂದರೆಯು ನನಗೆ ತಿಳಿದಿದೆ. ಬೆಂಗಳೂರಿನಿಂದ ಮಂಗಳೂರಿಗೆ ಕೊಡಗಿನ ಮೂಲಕ ಸಂಬಂಧವಾಗಬೇಕು. ಹಿಂದೂದೇಶದ ವಿಭಜನೆಯ ನಂತರ ಕೇಂದ್ರ ಸರಕಾರದ ಮುಂದೆ ನಿಂತ ಸಮಸ್ಯೆಗಳು ಒಂದೆರಡಲ್ಲ. ದೇಶದ ಮಹಿವಾಟಿನ ಯೋಜನೆಯೇ ತಲೆಕೆಳಗಾಗಬೇಕಾಯಿತು. ಅನಿರೀಕ್ಷಿತವಾಗಿ ಅನೇಕ ಹೊಳೆಗಳನ್ನು ದಾಟಬೇಕಾಯಿತು. ಅನೇಕ ಬೆಟ್ಟಗಳನ್ನು ಹತ್ತಬೇಕಾಯಿತು. ಮಹಿವಾಟನ್ನು ಸರಿಪಡಿಸುವ ಈ ಜಟಿಲ ಪ್ರಶ್ನೆಯು ನಮ್ಮ ಹೆಚ್ಚಿನ ಶಕ್ತಿ ಮತ್ತು ಸಮಯವನ್ನು ತೆಗೆದುಕೊಳ್ಳುತ್ತಿದೆ. ಮಹಾ ಬಂದರಾದ ಕರಾಚಿಯು ಪಾಕಿಸ್ಥಾನಕ್ಕೆ ಸೇರಿದ ಕಾರಣ ಪಶ್ಚಿಮ ಕರಾವಳಿಯ ಆಮದು, ರಫ್ತು ಜವಾಬ್ದಾರಿಯು ಬೊಂಬಾಯಿಯ ಮೇಲೆ ಬಿದ್ದಿದೆ. ಬೊಂಬಾಯಿಯು ಈ ಎಲ್ಲಾ ಭಾರಗಳನ್ನು ಹೊರಲಾರದ ಕಾರಣ ಪಶ್ಚಿಮ ಕರಾವಳಿಯಲ್ಲಿ ಎಂಟು ಹತ್ತು ಬಂದರವನ್ನು ಕಟ್ಟುವ ನಿರ್ಮಾಣವನ್ನು ಬೇಗ ಮಾಡಬೇಕಿದೆ. ಈ ತುರ್ತಿನ ಸಮಸ್ಯೆಗಳು ಬಗೆಹರಿದ ನಂತರ ನಿಮ್ಮ ಕೋರಿಕೆಗಳು ಸಹಾನುಭೂತಿಪರ ದೃಷ್ಟಿಯಿಂದ ವಿವೇಚಿಸಲ್ಪಡುವದರಲ್ಲಿ ಸಂಶಯವಿಲ್ಲ. ಕೊಡಗಿಗೆ ರೈಲ್ವೆ ತರುವ ವಿಚಾರದಲ್ಲಿ ನಾನು ಪ್ರಯತ್ನಪಡುವೆನು. ಇದಕ್ಕಿಂತಲೂ ರಾಷ್ಟ್ರೀಯ 'ಹೈವೇ' ಯೋಜನೆಯೊಳಗೆ ಕೊಡಗನ್ನು ಸೇರಿಸುವದು ಸುಲಭವೆಂದು ನನಗೆ ತೋರಿಬರುತ್ತದೆ. ರಾಷ್ಟ್ರಭಾಷಾ ಸಭೆಯಲ್ಲಿ ಚಟುವಟಿಕೆಯಿಂದ ಕೆಲಸ ಮಾಡುವ ನಿಮ್ಮ ಪ್ರಾಂತದ ಪ್ರತಿನಿಧಿ ಶ್ರೀ ಪೂಣಚ್ಚನವರದ್ವಾರೆ ಆದ್ದರಿಂದ ನಿಮ್ಮ ಪ್ರಾಂತದ ಬೇಕು ಬೇಡಿಕೆಗಳನ್ನು ಕೇಂದ್ರದ ಮುಂದಿಡಲು ಬೇರೆಯವರ ನೆರವಿನ ಅಗತ್ಯವಿಲ್ಲ. ಪಟ್ರೋಲಿನ ವಿಚಾರದಲ್ಲಿ ನಿಮ್ಮ ಕೋಟಾವನ್ನು ಹೆಚ್ಚಿಸಲು ಭರವಸೆ ಕೊಡಬಲ್ಲೆನು. ಕೊಡಗಿಗೆ ರೈಲಿನ ಪ್ರಶ್ನೆಯು ಪಶ್ಚಿಮ ಕರಾವಳಿಯ ಬಂದರನ್ನು ಆಧರಿಸಿ ನಿಲ್ಲುವದು. ಕೊಚ್ಚಿನ [illegible] ಬೊಂಬಾಯಿಯ [illegible] ಬಂದರೊಂದನ್ನು ಆರಿಸಿ ಅಭಿವೃದ್ಧಿಪಡಿಸಲಾಗುವದು. ಇದನ್ನು ಇದಕ್ಕಾಗಿ ನೇಮಿಸಲ್ಪಟ್ಟ 'ಪೋರ್ಟ್ ಕಮಿಟಿ'ಯು ಆಲೋಚಿಸುತ್ತದೆ. ಅಂಥಾ ಬಂದರು ಮಂಗಳೂರು ಆಗುವದಾದರೆ ಕೊಡಗು ಶೀಘ್ರ ರೈಲ್ವೆಯ 'ಮ್ಯಾಪ್' ಚಿತ್ರಪಟಕ್ಕೆ ಬರುವದು. ಯಾವದೇ ಬಂದರಿನ ಅಭಿವೃದ್ಧಿಗೆ ಅದಕ್ಕೆ ಯೋಗ್ಯ ಹಿನ್ನೆಲೆಯ ಪ್ರದೇಶ ಬೇಕಾಗಿರುವದರಿಂದ ನಿಮ್ಮ ಕೋರಿಕೆಗಳು ಸಲ್ಲಿಸಲ್ಪಡದಿರವು. 'ಹೈವೇ' ಸಮಿತಿಯ ಮುಂದೆ ಈ ಪ್ರಶ್ನೆ ಬಂದಾಗ ಕೊಡಗಿನ ವಿಚಾರವನ್ನು ಶ್ರೀ ಪೂಣಚ್ಚನವರು ಮುಂದಿಟ್ಟರು. ನಾನೂ ಈ ಸಮಿತಿಯಲ್ಲಿ ಒಬ್ಬ ಸದಸ್ಯನಾದ ಕಾರಣ ನಿಮ್ಮ ಈ ಚಿಕ್ಕ ಪ್ರಾಂತಕ್ಕೆ ಸಾಧ್ಯವಾದ ಸಹಾಯ ಮಾಡಲು ನಾನು ಹಿಂಜರಿಯೆನು.

ದೇಶಕ್ಕೆ ಸಂಬಂಧಿಸಿದ ಪ್ರಚಲಿತ ವಿಚಾರಗಳ ಬಗ್ಗೆ ನಾಲ್ಕು ಮಾತಾಡಬೇಕೆಂದು ಬಹುಶಃ ನೀವು ಆಶಿಸುತ್ತೀರಿ. ಭರತ ಖಂಡವು ಸ್ವತಂತ್ರವಾದ ನಂತರ ಇನ್ನು ದುಡಿಮೆಯ ಕಾಲ ಮುಗಿಯಿತೆಂದು ಕೆಲವರು ಭಾವಿಸುತ್ತಾರೆ. ಅದು ತಪ್ಪು. ಈಗ ಈ ಹಿಂದಿಗಿಂಥಾ ಹೆಚ್ಚಿನ ಪರಿಶ್ರಮ ಬೇಕು. ಸಂಗ್ರಾಮದ ಆ ಕಾಲದಲ್ಲಿ ಧೈರ್ಯ ಮತ್ತು ತ್ಯಾಗದಿಂದ ವಿದೇಶೀ ಆಡಳಿತವನ್ನು ಎದುರಿಸಿದೆವು. ಇಂದಿನದು ನಮ್ಮ ಸರಕಾರ. ನಮ್ಮ ಸ್ವಾತಂತ್ರ್ಯವು ಬೆಳೆದು ಹಣ್ಣಾಗಿ ಪ್ರತಿಯೊಬ್ಬನಿಗೂ ದೊರೆಯುವಂತಾಗಬೇಕು. ಸಾಮಾಜಿಕ, ಆರ್ಥಿಕ ಸ್ವಾತಂತ್ರ್ಯವು ಪ್ರತಿಯೊಬ್ಬನ ಹಕ್ಕಾಗಬೇಕು. ಇವಿಲ್ಲದ ಸ್ವಾತಂತ್ರ್ಯವು ಕೇವಲ ಪೊಳ್ಳು. ದೇಶವು ಅವ್ಯವಸ್ಥೆಗೆ ಬೀಳುವದೆಂದು ಆಶಿಸುವ ಕೆಲವರಿದ್ದಾರೆ. ಅಂಥಾವರನ್ನು ನಾವು ಎದುರಿಸಬೇಕು. ಇಂದು ಒಂದೆಡೆಯಲ್ಲಿ ಸ್ವಲ್ಪ ಅವ್ಯವಸ್ಥೆಯಾದರೆ ಅದು ಸಾವಿರಾರು ಜನರ ಪ್ರಾಣ ತೆಗೆಯಬಹುದು. ೧೯೪೩ರಲ್ಲಿ ಬಂಗಾಲದಲ್ಲಿ ಸ್ವಲ್ಪ ಅವ್ಯವಸ್ಥೆಯ ಕಾರಣ ಹದಿನೈದು ಲಕ್ಷಕ್ಕೆ ಮೀರಿ ಜನರು ಸತ್ತುದನ್ನು ನಾವು ನೋಡಬೇಕಾಯಿತು. ಬಂಗಾಳದ ಹೊಳೆಗಳ ದಡವು ಈ ಮೃತರ ಮೂಳೆಗಳಿಂದ ತುಂಬಿತ್ತು. ಇಂದೂ ಕೂಡ ರೈಲ್ವೆ ಮಹಿವಾಟು ತಡೆಯಲ್ಪಟ್ಟರೆ ಅದೇ ರೀತಿಯ ಅದಕ್ಕಿಂತಲೂ ಭೀಕರವಾದ ಜನಹಾನಿ ಆಗಬಹುದು. ಆಹಾರದ ಪ್ರಶ್ನೆ ಜಟಿಲವಾಗಿದೆ. ಅತಿ ಕುಶಲ ರೀತಿಯ [illegible] ವಿತರಣೆ ವ್ಯವಸ್ಥೆಯಿಂದ ಪರಿಸ್ಥಿತಿ ಹಿಡಿತದಲ್ಲಿದೆ. ಉಪವಾಸವು ನಿವಾರಿಸಲ್ಪಟ್ಟಿದೆ. ಜನರು ಶಾಂತಿಯಿಂದಿರುವವರೆಗೆ ಅವರಿಗೆ ತೊಂದರೆ ಬಾರದಂತೆ ಕೇಂದ್ರವು ಶ್ರಮಿಸುವದು ಸಾಧ್ಯವಾಗುವದು. ನಮ್ಮ ಧ್ಯೇಯವು ನಮ್ಮ ಆರ್ಥಿಕ ಬಲವನ್ನು ಆದಷ್ಟು ಶೀಘ್ರ ಹೆಚ್ಚಿಸಿಕೊಳ್ಳುವದಾಗಿದೆ.

ಮಹಾತ್ಮ ಗಾಂಧೀಜಿಯವರು ನಮ್ಮಲ್ಲಿ ಜನಿಸಿದರು. ಆಧುನಿಕ ಯುಗದ ಮಹಾ ಪುರುಷರವರು. ಅವರನ್ನು ಕೊನೆಗೆ ಕಳೆದೆವು. ಅವರನ್ನು ಅವರ ಶತ್ರುಗಳು ಕೊಲ್ಲಲಿಲ್ಲ. [illegible] ಯಾವ ಶತ್ರುವೂ ಕೊಲೆ ಮಾಡಲಿಲ್ಲ. ಬ್ರಿಟಿಷರ ವಿರುದ್ಧ ಹೋರಾಡಿದಾಗ ಬ್ರಿಟಿಷ್ ಸರಕಾರ ಅವರನ್ನು ಮುಟ್ಟಲಿಲ್ಲ. ಯಾವದೇ ಮುಸ್ಲಿಮನಾಗಲೀ, ಮತ್ತೊಬ್ಬನಾಗಲೀ ಕೈಮಾಡಲಿಲ್ಲ; ಬದಲು ಯಾವ ಹಿಂದೂ ಸಮಾಜದ ಉದ್ಧಾರಕ್ಕಾಗಿ, ಯಾವ ಧರ್ಮದ ಶ್ರೇಯಸ್ಸಿಗಾಗಿ ದುಡಿದರೋ ಆ ಧರ್ಮದವನೊಬ್ಬನ ಕೈಯೇ ಅವರನ್ನು ಕೊಂದಿತ್ತು. ಇದರಿಂದ ನಾವು ಹೊಸ ಪಾಠ ಕಲಿಯಬೇಕು, ಸಹನೆ ಸೌಹಾರ್ದತೆ ಹೆಚ್ಚಬೇಕು. ನೀವು ಕೊಡಗಿನವರು ಈ ಸುಂದರ ಹಾಗೂ ಶಾಂತಿಯುತ ಪ್ರದೇಶದಲ್ಲಿರುವಿರಿ. ಹೊರಗಿನ ಯಾವ ತೊಂದರೆ ತೊಡರುಗಳು ನಿಮಗಿಲ್ಲ. ನೀವು ಇಲ್ಲಿ ಆದರ್ಶ ಮಾದರಿಯನ್ನು ತೋರಿ ಭಾರತದ ಇತರ ಭಾಗಗಳಿಗೆ ಮಾರ್ಗದರ್ಶನ ಮಾಡಬೇಕು.

ಕೊಡಗಿನ ಭವಿಷ್ಯ ನಿರ್ಣಯವು ಹೇಗಾದೀತೆಂದು ನಾನು ಹೇಳಲಾರೆ. ಚೀಫ್ ಕಮಿಷನರ ಪ್ರಾಂತಗಳಿಗೆ ಮಾದರಿ ಘಟನೆಯನ್ನು ತಯಾರಿಸುವ ಸಮಿತಿಯಲ್ಲಿ ನಾನೂ ಒಬ್ಬ ಸದಸ್ಯನು. ಹಿಂದೂದೇಶದ ಉದ್ದಗಲಕ್ಕೂ ಮಹಾ ಬದಲಾವಣೆಗಳಾಗುತ್ತಿವೆ. ಮಹಾ ಮಹಾ ಸಂಸ್ಥಾನಗಳು ವಿಲೀನಗೊಳ್ಳುತ್ತಿವೆ. ಕೊಡಗು ತನ್ನ ಪ್ರತ್ಯೇಕ ವ್ಯಕ್ತಿತ್ವವನ್ನು ಇಟ್ಟುಕೊಳ್ಳಲಾಪುದೋ ತಿಳಿಯದು. ಕೊಡಗಿನ ಜನತೆಯು ತಾವು ಪ್ರತ್ಯೇಕವಿರಬೇಕೆಂದು ಒಕ್ಕೊರಲಿನಿಂದ ಹೇಳುವದಾದರೆ ಅದನ್ನು ಏಕೆ ವಿರೋಧಿಸಬೇಕೋ ತಿಳಿಯದು. ಆದ್ದರಿಂದ ಕೊಡಗಿನವರು ತಮ್ಮ ಪ್ರಶ್ನೆಯನ್ನು ತಮ್ಮಲ್ಲಿ ತೀರ್ಮಾನಿಸಿಕೊಂಡು ಕೇಂದ್ರದ ಮುಂದಿಡಬೇಕು. ನಿಮ್ಮಲ್ಲಿರುವ ಭಿನ್ನಾಭಿಪ್ರಾಯವು ದೇಶದ ಗಡಿ ದಾಟಿ ಬೇರೊಬ್ಬರು ಬಲತ್ಕಾರದ ನಿರ್ಣಯ ಕೊಡುವ ಆಸ್ಪದ ಆಗಬಾರದು. ದೇಶದ ಅಭಿಪ್ರಾಯ ತೆಗೆದು ಬಹುಮತ ಅಭಿಪ್ರಾಯದಂತೆ ಜನ ಜಾಗೃತಿ ಮಾಡಬೇಕು. ಒಂದು ಪ್ರಾಂತದ ವಿಸ್ತೀರ್ಣದಲ್ಲಿ, ಇಲ್ಲವೇ ಜನಸಂಖ್ಯೆಯಲ್ಲಿ ಆ ಪ್ರಾಂತದ ಘನತೆಯಿಲ್ಲ; ಬದಲು ಯಾವ ರೀತಿಯ ಜನರನ್ನು ಕೂಡಿದೆ ಎಂಬುದರಲ್ಲಿ ಘನತೆ ಇದೆ. ಚಿಕ್ಕ ಜನಾಂಗಗಳು ಉದಾತ್ತ ಚರಿತ್ರೆಯನ್ನು ಮಾಡಿವೆ. ಕೊಡಗೂ ಕೂಡ ಹಿಂದುಳಿಯಬಾರದು. ಕೊಡಗು ಭಾರತದ ಪ್ರಥಮ ಹಿಂದೀಯ ಮುಖ್ಯ ಸೈನ್ಯಾಧಿಕಾರಿಯನ್ನು ಒದಗಿಸಿದೆ. ಕೊಡಗಿನ ಪುತ್ರ ಪುತ್ರಿಯರು ಇದೇ ರೀತಿ ಭರತ ಖಂಡದ ಸೇವೆಯನ್ನು ಅಪೂರ್ವ ರೀತಿಯಲ್ಲಿ ಮಾಡುವರೆಂದು ಆಶಿಸುತ್ತೇನೆ. ಪುನಹ ನಿಮಗೆಲ್ಲಾ ಈ ಸತ್ಕಾರಕ್ಕಾಗಿ ವಂದಿಸುವದಲ್ಲದೆ ಈ ಪ್ರಾಂತದ ಅಭಿವೃದ್ಧಿಯನ್ನು ಹಾರೈಸುತ್ತೇನೆ."

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,65,000.
ಕ್ಷೇಮನಿಧಿ	ರೂ.	50,000.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೆಂದೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ಕು ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ ಮತ್ತು ಪಾರ್ತನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,

ಕೆ. ಸಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಖಜಾಂಚಿ.

ವೀರಾಜಪೇಟೆಗೆ 'ಕೊಡಗು' ಪತ್ರಿಕೆಯ ಏಜೆಂಟರು ಶ್ರೀ ಟಿ. ಎನ್. ಗೋವಿಂದರಾಜುರವರು.

ಕೇಂದ್ರ ಸರಕಾರದ ರೈಲ್ವೆ ಮಂತ್ರಿ ಸಂತಾನಂರವರಿಗೆ ಸ್ವಾಗತ.

ಕೇಂದ್ರ ಸರಕಾರದ ರೈಲ್ವೆ ಮತ್ತು ಟ್ರಾನ್ಸ್‌ಪೋರ್ಟ್ ಮಂತ್ರಿಗಳಾದ ಶ್ರೀ ಕೆ. ಸಂತಾನಂರವರು ಮಂಗಳೂರಿಗೆ ತಾ. ೨೩ ರಲ್ಲು ಮಡಿಕೇರಿಗೆ ದಯಮಾಡಿಸಿ ಸಾಯಂಕಾಲ ಮೈಸೂರಿಗೆ ಹೋದರು.

ಆ ಸಭೆಯಲ್ಲಿ ಕೊಡಗಿನ ಜನರ ಪರವಾಗಿ ಅವರಿಗೆ ಒಂದು ಮನವಿಯನ್ನು ಕೊಡಲಾಯಿತು. ಅದರ ಸಾರಾಂಶ ಈ ರೀತಿ ಇದೆ.

"ಸ್ವತಂತ್ರ ಭರತಖಂಡದ ರೈಲ್ವೆ ಮಂತ್ರಿಗಳಾದ ನೀವು ಈ ಪ್ರಾಂತಕ್ಕೆ ಕೊಟ್ಟ ಈ ಪ್ರಥಮ ಸಂದರ್ಶನಕ್ಕಾಗಿ ನಿಮಗೆ ಕೊಡಗಿನ ಜನರಾದ ನಾವು ಸುಸ್ವಾಗತವನ್ನು ಬಯಸುತ್ತೇವೆ. ಈ ಪ್ರಾಂತದ ಚರಿತ್ರೆಯಲ್ಲೇ ಪ್ರಥಮವಾಗಿ ನಿಮ್ಮಂಥಾ ದೊಡ್ಡ ಅಧಿಕಾರವನ್ನು ಹೊತ್ತಿರುವವರನ್ನು ಕಂಡು ಸ್ವಾಗತಿಸುವದು ಗೌರವಾಸ್ಪದವೆಂದು ಭಾವಿಸುತ್ತೇವೆ. ನಿಮ್ಮ ಅನೇಕ ಕಾರ್ಯಗಳ ಮಧ್ಯೆ ವಹಿವಾಟಿನ ಅನುಕೂಲವಿಲ್ಲದ ಈ ಪ್ರಾಂತವನ್ನು ಸಂದರ್ಶಿಸಲು ಅನುಮಾಡಿಕೊಂಡದ್ದಕ್ಕೆ ನಾವು ಋಣಿಗಳು. ತಾಯ್ನಾಡಿಗಾಗಿ ನೀವು ಮಾಡಿದ ಮತ್ತು ಮಾಡುತ್ತಿರುವ ಅಮೋಘ ಸೇವೆಯನ್ನು ಪ್ರಸಂಶಾ ದೃಷ್ಟಿಯಿಂದ ನೋಡುತ್ತಿರುವೆವು. ಮಹಾತ್ಮಾ ಗಾಂಧಿಯವರ ನೇತೃತ್ವದಲ್ಲಿ ನಡೆದ ಆಂದೋಲನದಲ್ಲಿ ಸೆರೆಮನೆ ವಾಸವನ್ನು ಅನುಭವಿಸಿದಿರಿ. ಇಂದು ಈ ತ್ಯಾಗ ಪರಿಶ್ರಮಗಳ ಫಲವನ್ನು ಭೋಗಿಸುವ ಸ್ಥಿತಿಯಲ್ಲಿರುವುದು ಸಂತೋಷದ ವಿಚಾರ.

ನೀವು ಹಿಂದೂದೇಶದ ಹೆಸರುಗೊಂಡ ಪತ್ರಿಕೋದ್ಯೋಗಿಯಾಗಿದ್ದುದಲ್ಲದೆ ಅಖಿಲ ಭಾರತ ಚರಖಾ ಸಂಘದ ಕಾರ್ಯಕಲಾಪಗಳಲ್ಲಿ ಭಾಗಿಗಳಾಗಿದ್ದು ಭಾರತದ ಬಡಜನರ ಅತಿ ಅವಶ್ಯಕತೆಗಳನ್ನು ತಿಳಿದವರು. ಈ ಸಂದರ್ಭದಲ್ಲಿ ನಮ್ಮ ಕೆಲವು ಬೇಡಿಕೆಗಳನ್ನು ಮಂಡಿಸಲು ಸಮಯ ತೆಗೆದುಕೊಂಡರೆ ಮನ್ನಿಸಬೇಕು. ಈಗಿನ ಪರಿಸ್ಥಿತಿಯಲ್ಲಿ ಭಾರತದ ಅಖಂಡ ಸಮಸ್ಯೆಗಳಿಗೇ ಹೆಚ್ಚಿನ ಗಮನ ಕೊಡಬೇಕಾದುದು ಅವಶ್ಯಕವಲ್ಲದೆ ಪ್ರಾಂತೀಯವಾದ ಚಿಕ್ಕ ಸಮಸ್ಯೆಗಳಿಗಲ್ಲವೆಂದು ನಮಗೆ ತಿಳಿದಿದೆ. ಭರತಖಂಡವನ್ನು ಹಿರಿದಾದ ದೇಶವನ್ನಾಗಿ ಮಾಡುವ ನಿಮ್ಮ ಪ್ರಯತ್ನದಲ್ಲಿ ನಮ್ಮ ಪೂರ್ಣ ಸಹಕಾರವಿದೆ. ಏಕೆಂದರೆ ಭಾರತವು ಹಿರಿದಾದರೆ ಅದರೊಳಗಿನ ಎಲ್ಲವೂ ಹಿರಿದೆನಿಸುವವು. ಆದರೆ ಅದೇ ಸಂದರ್ಭದಲ್ಲಿ ನಮಗಿರುವ ತೊಂದರೆ ತೊಡರುಗಳನ್ನು ಈ ಸುಸಮಯದಲ್ಲಿ ನಿಮ್ಮ ಮುಂದಿಡದಿದ್ದರೆ ನಾವು ನಮ್ಮ ಕರ್ತವ್ಯವನ್ನು ಮಾಡಿದಂತಾಗಲಾರದು. ಕೆಲವು ವಿಚಾರಗಳನ್ನು ಹೇಳುವದಾದರೆ ಕೊಡಗು ರೈಲ್ವೆಯ ಅನುಕೂಲತೆಗಾಗಿ ಅನೇಕ ವರ್ಷಗಳಿಂದ ಆಶಿಸಿದೆ. ಹೊರಗಿನ ರೈಲ್ವೆಯೊಂದಿಗೆ ಸಂಯೋಜಿಸುವ ಬಗ್ಗೆ ಪರಿಶೀಲನೆಗಳ ದಾಖಲೆ ಇದೆ. ಆದರೆ ಈ ಯೋಜನೆಯು ಅಲ್ಲಿಗೇ ನಿಂತು ಇಂದೂ ಕಾರ್ಯರೂಪಕ್ಕೆ ಬಾರದಿದೆ ಎಂದು ಹೇಳಲು ವ್ಯಸನವಾಗುತ್ತದೆ. ಯಾವುದೇ ಭಾಗವನ್ನು ರೈಲ್ವೆಯೊಡನೆ ಸಂಯೋಜಿಸುವಾಗ ಕೇವಲ ವಾಣಿಜ್ಯ ದೃಷ್ಟಿಯಿಂದ ಲೆಕ್ಕ ಮಾಡಬಾರದು. ಆರ್ಥಿಕ ಮತ್ತು ಸೈನಿಕ ದೃಷ್ಟಿಯನ್ನೂ ಇಟ್ಟುಕೊಳ್ಳಬೇಕಾಗುತ್ತದೆ. [illegible] ಸಂಬಂಧವು [illegible] ಭೌತಿಕ ಪ್ರಗತಿಯ ದೃಷ್ಟಿಯಿಂದ ಅಗತ್ಯವಾಗಿದೆ.

ರಾಷ್ಟ್ರೀಯ 'ಹೈವೇ' ಯೋಜನೆಗೆ ಕೊಡಗನ್ನು ಸೇರಿಸುವ ಯೋಜನೆಯೊಂದಿದೆ. ಇಂಜಿನಿಯರುಗಳ ನಾಗಪುರ ಸಮ್ಮೇಳನದಲ್ಲಿ ಕೊಡಗನ್ನೂ ಈ ಯೋಜನೆಯಲ್ಲಿ ಸೇರಿಸಲು [illegible] ಈ ಯೋಜನೆಯಿಂದ ಕೊಡಗನ್ನು [illegible] ಕೊಡಗು ಪಶ್ಚಿಮ ಕರಾವಳಿ ಮತ್ತು [illegible] ಪ್ರದೇಶಗಳನ್ನು [illegible] 'ಹೈವೇ' ಯೋಜನೆಗೆ ಸೇರ್ಪಡೆಯಾದ ಭಾಗಗಳ ಆರ್ಥಿಕ ಮತ್ತು ಭೌತಿಕ ಪ್ರಗತಿಗೆ ಹಿತಕಾರಕವಾಗುವದೇ ಅಲ್ಲ; ಹಿಂದೂದೇಶದ ಭದ್ರತೆ ಮತ್ತು ಐಕ್ಯತೆಯ ದೃಷ್ಟಿಯಿಂದಲೂ ಹಿತಕರವೆನಿಸುವದು. ಕೊಡಗನ್ನು 'ಹೈವೇ' ಯೋಜನೆಯೊಳಗೆ ತರುವ ವಿಚಾರದ ಪಶ್ಚಿಮ ಕರಾವಳಿ [illegible] ಬಂದರಿನ ಅಭಿವೃದ್ಧಿ [illegible] ಯೆಂದು ತಿಳಿಯಬಂದಿದೆ. [illegible] ಕರಾವಳಿಯ ದೊಡ್ಡ ಬಂದರನ್ನಾಗಿ ಮಾಡಬೇಕೆಂಬ ವಿಚಾರಕ್ಕೆ ನಮ್ಮ ಬೆಂಬಲವಿದೆ. ಹೀಗೆ [illegible] ಕೆಲವು [illegible] ನಗಳಿಂದ ಮಲೆನಾಡ [illegible] ಮತ್ತು ಕೊಡಗಿನ ಉತ್ಪತ್ತಿಯು ಪಡೆಗಳಿಗೆ ಮಂಗಳೂರಿನ ಮೂಲಕವೇ ಹೋಗುತ್ತದೆ. ಮಂಗಳೂರಿನ ಹಿನ್ನೆಲೆಯ ಪ್ರದೇಶದಲ್ಲ ಪೂರ್ಣ ಕೊಡಗೂ, ಪಶ್ಚಿಮ ಮೈಸೂರೂ ಇವೆ. ಈ ಭಾಗಗಳು ವ್ಯಾಪಾರ ಮತ್ತು ವ್ಯವಸಾಯದ ಉತ್ತಮ ಸಮೃದ್ಧಿಯಿಂದ ಕೂಡಿದ ಮಾರ್ಗಗಳಾಗಿ [illegible] ಸಾಧಾರಣ ಪ್ರಮಾಣದಲ್ಲಿ ಇರುವ ಒಂದರಾಗಿ [illegible] ಪಶ್ಚಿಮ ಕರಾವಳಿ [illegible] ಬಂದರಿಗೆ [illegible]

ಬೇರಡ [illegible] ಕೊಡಗಿನ [illegible] ಇದನ್ನು [illegible] ಕೊಡಗಿನ ರಸ್ತೆಗಳೂ ಕೂಡ ಉತ್ತಮವಾಗಿಲ್ಲ. ಕೊಡಗಿನಂಥಾ ಬೆಟ್ಟಪ್ರದೇಶದಲ್ಲಿ ರಸ್ತೆಗಳು ಚೆನ್ನಾಗಿಲ್ಲದಿದ್ದರೆ ದೇಶದ ಭೌತಿಕ ಪ್ರಗತಿಯಾಗಲಾರದೆಂದು ನಾವು ಹೇಳಬೇಕಿಲ್ಲ. ಆದ್ದರಿಂದ ಪ್ರಾಂತೀಕ ರಸ್ತೆ ವಹಿವಾಟುಗಳ ಬಗ್ಗೆ ನೀವು ಗಮನವಿತ್ತು ಸಹಾಯದ ಕರವನ್ನೀಡುವಿರೆಂದು ಬಿನ್ನವಿಸುತ್ತೇವೆ. ಕೊಡಗಿನಲ್ಲಿ ರೈಲ್ವೆ ಇಲ್ಲದ ಕಾರಣ ಕೊಡಗಿನ ಉತ್ಪತ್ತಿಯೆಲ್ಲವೂ ಮೈಸೂರು ಯಾ ಪಶ್ಚಿಮ ಕರಾವಳಿಗೆ ಲಾರಿಗಳ ಮೂಲಕವೇ ಹೋಗಬೇಕಾಗಿದೆ. ಈಗ ನೀವು ಕೊಡಗಿಗೆ ಕೊಡುತ್ತಿರುವ ಪೆಟ್ರೋಲ್ ಕೋಟಾಕ್ಕೆ ವಂದಿಸುವೆವು. ಆದರೆ ಈ ಕೋಟಾವನ್ನು ಕ್ಷೇತ್ರದ [illegible] ಏರಿಸಿಕೊಡಬೇಕೆಂದು ಕೇಳುವೆವು.

ನಿಮಗೆ ಹೆಚ್ಚು ಸಮಯ ನಮ್ಮೊಡನಿರಲು ಸಾಧ್ಯವಾಗದುದಕ್ಕೆ ವಿಷಾದಪಡುತ್ತೇವೆ. ಬೆಟ್ಟದೇಶವಾದ ಈ ಪ್ರಾಂತದ ನಿಮ್ಮ ಪ್ರಯಾಣವು ದೇಶದ ಅಭಿವೃದ್ಧಿಗೆ ಅವಶ್ಯವಾಗಿ ನಮ್ಮ ಮಂಡಿಸುವ ಹಲವು ವಿಚಾರಗಳನ್ನು ನಿಮ್ಮ ಸೂಕ್ಷ್ಮ ದೃಷ್ಟಿಗೆ ತಂದಿರಬಹುದೆಂದೂ, ನೀವು ನಮ್ಮೊಡನೆ ಇದ್ದ ಈ ಅಲ್ಪ ಸಮಯವು ಆನಂದದಾಯಕವಾಗಿತ್ತೆಂದೂ ಆಶಿಸುತ್ತೇವೆ. ನಿಮಗೆ ಭಗವಂತನು ದೀರ್ಘಾಯುಷ್ಯವನ್ನು ಕೊಡಲೆಂದೂ ಮಾತೃಭೂಮಿಯ ಸೇವೆಯಲ್ಲಿ ಅಪ್ರತಿಹತವಿಜಯವನ್ನು ಕೈಗೂಡಿಸಲೆಂದೂ ಬಯಸುತ್ತೇವೆ."

ಕೊಡಗಿನ ನಿವಾಸಿಗಳು.

ಎಂಪೈರ್ ಆಫ್ ಇಂಡಿಯಾ

ಲೈಫ್ ಎಷ್ಯೂರನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

48ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು.	ಒಟ್ಟು ಆದಾಯ	1,07,09,000	ರೂಪಾಯಿ
	ಚಾಲ್ತಿಯಿರುವ ವಿಮೆ	17,74,52,000	,,
	ಆಸ್ತಿ	6,67,60,000	,,
ಕಂಪೆನಿಯು ಆದಿಯಲ್ಲಿ ಕೊಟ್ಟ ಕ್ಲೈಮುಗಳು	....	8,83,62,000	,,

ಅಂಗ ಕಛೇರಿ: ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು.

ಏಜೆನ್ಸಿ ಅರ್ಜಿಗಳನ್ನು ಸ್ವಾಗತಿಸಿದೆ.

ಪ್ರಧಾನ ಕಛೇರಿ: ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ

ವಿಮೆ ಮಾಡಲು ಇಲ್ಲವೇ ಪ್ರತಿನಿಧಿಸಲು

ಕೊಟ್ಟಿಕಾರ್ ಬ್ರದರ್ಸ್, ಲಿಮಿಟೆಡ್.

ಇವರ ಸಲಹೆಗಿಂತ ಉತ್ತಮ ಮಾರ್ಗವಿಲ್ಲ.

ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದೂಸ್ಥಾನದ ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು.

ದಿ ಬೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

30 ಮೌಂಟ್ ರೋಡ್,
ಪೊ. ಬಾ. ನಂ. 337,
ಮದ್ರಾಸು 2.

ಬೋಂಬೆ ಲೈಫ್ ಬಿಲ್ಡಿಂಗ್,
ಪೊ. ಬಾ. ನಂ. 1,
ಉಡುಪಿ.

(ಟೆಲಿಫೋನ್ ನಂ. 8398)

ಇತರ ಆಫೀಸುಗಳು:—ಬೆಂಗಳೂರು, ತಿರುವೆಂದರಂ, ಕಲ್ಲಿಕೋಟೆ, ಮಂಗಳೂರು, ಪಂಢರಪುರ, ಮತ್ತು ಕೊಯಂಬತ್ತೂರು.

ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್, ಮಡಿಕೇರಿ.



ನಮ್ಮ ಫ್ರೇಜರ್‌ಪೇಟೆ ಕಾರ್ಖಾನೆಯಲ್ಲಿ ಸದ್ಯಕ್ಕೆ ಈ ಕೆಳಗಿನ ಕೆಲಸಗಳನ್ನು ಕೈಕೊಂಡಿರುತ್ತೇವೆ ಸರ್ವರೂ ಪ್ರೋತ್ಸಾಹಿಸಬೇಕಾಗಿ ವಿನಂತಿ.
(1) ಭತ್ತ ಮಿಲ್ ಮಾಡುವುದು, (2) ಅಕ್ಕಿ ಮತ್ತು ಧಾನ್ಯಗಳನ್ನು ಹುಡಿಮಾಡುವುದು, (3) ಕಾಫಿ ಹುರಿದು ಹುಡಿ ಮಾಡುವುದು, (4) ಮೂಳೆ ಹುಡಿಮಾಡುವುದು.

"ಕೊಲ್ಲುವ ದೇವರಿಗಿಂತ ಕಾಯುವ ದೇವರು ದೊಡ್ಡವನು."

ಇಂದು ನಾವು ಹಿರೋಶೀಮಾ ನಾಗಾಸಾಕಿಗಳ ಕಡೆಗೆ ನೋಡಿದರೆ ಈ ಮಾತನ್ನು ಹೇಳಬೇಕಾಗಿ ಬರುತ್ತದೆ. ೧೯೪೫ನೆಯ ಇಸ್ವಿಯ ಆಗಸ್ಟ್ ೬ನೆಯ ದಿನಾಂಕ ಬೆಳಿಗ್ಗೆ ೮-೧೫ಕ್ಕೆ ಈ ಹಿರೋಶೀಮಾ ನಾಗಸಾಕಿಗಳ ಮೇಲೆ ಅಣು ಬಾಂಬು ಪ್ರಯೋಗವನ್ನು ಮಿತ್ರ ರಾಷ್ಟ್ರದವರು ಮಾಡಿದರು. ಆಗ ಸದ್ಯಕ್ಕೆ ಹಿರೋಶೀಮಾದ ಮೇಯರಾದ ಶ್ರೀ ಶಿಂಜೋ ಹಮಾಯಿ ಎಂಬವರು ತಮ್ಮ ಮನೆಯಿಂದ ಕಚೇರಿಯ ಕಡೆಗೆ ಹೊರಟಿದ್ದರಂತೆ. ಅವರು ಈ ಅಣು ಬಾಂಬಿನ ಸ್ಫೋಟದ ಕತೆಯನ್ನು ಹೀಗೆ ಹೇಳುತ್ತಾರೆ "ಮೊಟ್ಟ ಮೊದಲು ಒಂದು ಕಣ್ಣು ಕೋರೈಸುವ ಬೆಳಕಿನ ಝಳಕ ಆಕಾಶದಲ್ಲಿ ಮಿಂಚಿದಂತಾಯಿತು. ಅದು ಸುಮಾರು ಐದು ಸಾವಿರ ಅಡಿ ಮೇಲಕ್ಕೆತ್ತೆಂದು ಹೇಳಬಹುದು. ಬಳಿಕ ಸುಮಾರು ಒಂದು ಒಂದೂವರೆ ಮಿನಿಟಿನಲ್ಲಿ ಬಲಚಿಕ್ಕೆಯಂತಹ ಆ ಅಣುಬಾಂಬು ಸ್ಫೋಟವಾಯಿತು. ಇನ್ನು ಸುಮಾರು ಒಂದು ಸಾವಿರ ಫೂಟು ಮೇಲಿರುವಾಗಲೇ ಅದು ಸ್ಫೋಟವಾಗಿ ಸುತ್ತು ಕಡೆಗೆ ಉರಿನಾಲಗೆಗಳು ಭೀಕರವಾಗಿ ಚಾಚಿದವು. ಭಯಂಕರ ಸಪ್ಪಳವಾಯಿತು. ಅದರೊಡನೆಯೇ ತಾಳಲಾರದ ಬಿಸಿದೆರೆಗಳು ಬರತೊಡಗಿದವು. ಈ ಬಿಸಿದೆರೆಗಳ ವೇಗವು ಸುಮಾರು ಐನೂರರಿಂದ ಸಾವಿರ ಮೈಲುಗಳವರೆಗೂ ಇತ್ತೆಂದು ಹೇಳಬಹುದು. ಇವೇ ಇಡೀ ಊರನ್ನೆಲ್ಲಾ ಸೂರೆಗೊಂಡವು. ಬಳಿಕ ಉರಿಯೆದ್ದಿತು. ಊರಿಗೆ ಊರೇ ಧ್ವಂಸವಾಗಿ ಹೋಯಿತು".

ಈ ಒಂದೇ ಒಂದು ಅಣು ಬಾಂಬಿನಿಂದ ಎಪ್ಪತ್ತೆಂಟು ಸಾವಿರದ ಒಂಬೈನೂರೈವತ್ತು ಜನರು ಪ್ರಾಣಹಾನಿಗೊಳಗಾದರು. ಮೂವತ್ತೇಳು ಸಾವಿರದ ನಾಲ್ಕುನೂರ ಇಪ್ಪತ್ತೊಂಭತ್ತು ಮಂದಿ ಗಾಯಗೊಂಡರು. ಏನಾಯಿತೆಂಬುದೂ ಗೊತ್ತಿಲ್ಲದಂತೆ ಹತ್ತೊಂಬತ್ತು ಸಾವಿರದ ಒಂಭತ್ತು ನೂರ ಎಂಬತ್ತು ಮೂರು ಜನರು ನೂಲು ಹರಿದ ಗಾಳಿಪಟದಂತೆ ಹಾರಿ ಹೋದರು. ಇನ್ನೂ ಈ ವರೆಗೂ, ಇವರ ಬಗ್ಗೆ ಏನೇನೂ ಗೊತ್ತಾಗಿಲ್ಲ. ಇಷ್ಟು ಭಯಂಕರ ಪರಿಣಾಮವು ಆ ಒಂದೇ ಒಂದು ಅಣು ಬಾಂಬಿನಿಂದ ಆಯಿತು.

ಅಣು ಬಾಂಬಿನಿಂದ ಧ್ವಂಸವಾಗಿ ಹೋದ ಈ ಕ್ಷೇತ್ರದಲ್ಲಿ ಇನ್ನು ಒಂದು ತಲೆಮಾರಿನ ವರೆಗೂ, ಯಾರಿಗೂ ಜೀವಿಸಲು ಸಾಧ್ಯವಿಲ್ಲವೆಂದೂ, ಅಷ್ಟೇ ಏಕೆ ಗಿಡ ಗಂಟೆಗಳ ಒಂದು ಸಸಿಯೂ ಕೂಡ ಅಲ್ಲಿ ಇನ್ನು ಬೆಳೆಯಲಾರದೆಂದೂ ಹೇಳಲಾಗುತ್ತಿತ್ತು. ಎಷ್ಟೋ ಪತ್ರಿಕೆಗಳು, ವಿಜ್ಞಾನಿಗಳು, ರಾಜಕಾರಣಿಗಳು, ಸಮಾಜ ಶಾಸ್ತ್ರಜ್ಞರೂ, ಇದೇ ಬಗೆಯ ಅಭಿಪ್ರಾಯಗಳನ್ನು ಪ್ರಕಟ ಮಾಡುತ್ತಿದ್ದರು. ಇದೆಂದು ಅನೇಕ ಪತ್ರಕರ್ತರೂ, ಚಿತ್ರಕಾರರ ದ ವಿಜ್ಞಾನಿಗಳೂ, ಅನೇಕರು ಹೇಳಿದರು. ಇದನ್ನು ಕಂಡೇ ಶತ್ರು ರಾಷ್ಟ್ರಗಳು ಶರಣು ಬಂದವು. ಮಿತ್ರ ರಾಷ್ಟ್ರಗಳು ವಿಜಯವನ್ನು ಸಂಪಾದಿಸಿದವು. ಜಾಗತಿಕ ದ್ವಿತೀಯ ಮಹಾಯುದ್ಧದ ಸ್ಮಾರಕ ಸಮಾಧಿಸ್ಥಳಗಳಂತೆ ಈ ಹಿರೋಶೀಮಾ ನಾಗಸಾಕಿಗಳವು.

ಹಿರೋಶೀಮಾದಲ್ಲಿ ಇಂದು ಎಂಭತ್ತು ಸಾವಿರ ಜನಸಂಖ್ಯೆಯಿರುತ್ತದೆ. ಇವರೆಲ್ಲರೂ, ದ್ವಿತೀಯ ಜಾಗತಿಕ ಮಹಾಯುದ್ಧದ ಅಂತಿಮಾಸ್ತ್ರವಾದ ಅಣುಬಾಂಬಿನಿಂದ ಗಾಯಗೊಂಡವರಲ್ಲ. ಅದರ ಪರಿಣಾಮವು ಇವರ ಮೇಲೆ ಏನೂ ಆಗಿಲ್ಲ. ಎಲ್ಲಿಯೋ ಅಲ್ಪ ಸ್ವಲ್ಪ ಜನ ಹಾಗೆ ಗಾಯಗೊಂಡವರಿದ್ದರೂ, ಅದರಿಂದ ಅವರೀಗ ಸ್ವಲ್ಪ ಆರೋಗ್ಯ ಹೊಂದಿದ್ದಾರೆ. ಇಷ್ಟೇ ಅಲ್ಲ. ಇಂದು ಹಿರೋಶೀಮಾದ ಶ್ರೀ ಅಣುಬಾಂಬಿನ ಸ್ಫೋಟದಿಂದ ಸಂರಕ್ಷಣೆ ಹೊಂದುವ ಮಾರ್ಗವನ್ನು ಕಂಡು ಹಿಡಿದಿದ್ದಾರೆ. ಆಳವಾದ ಪತ್ತು ಆಘಾತ ಬಿರುಗಾಳಿಗಳಿಂದ ತಡೆಯುವಂತಹ ನೆಲಮನೆಗಳೇ ಈ ಅಣುಬಾಂಬಿನ ಆಘಾತಕ್ಕೆ ತಡೆಯುವ ಸುರಕ್ಷಿತವಾದ ಉಪಾಯವೆಂದು ಅವರು ಹೇಳುತ್ತಾರೆ. ಅಲ್ಲದೆ ಗೋಲಾಕಾರದ ಕಿಡಿಕಿಗಳಿಲ್ಲದ ಸಿಮೆಂಟು ಕಾಂಕ್ರೀಟು ಮನೆಗಳೂ ತಕ್ಕಮಟ್ಟಿಗೆ ಅಣು ಬಾಂಬಿನಿಂದ ಸಂರಕ್ಷಣೆ ಕೊಡಬಲ್ಲವೆಂದೂ ಕೆಲವರ ತಿಳುವಳಿಕೆಯಿರುತ್ತದೆ.

ಅಣು ಬಾಂಬಿನ ಈ ಭೀಕರತೆಯು ಅದರಲ್ಲಿಯ ವಿತರಣ ಶಕ್ತಿಯು, 'ಗಮ್ಮಾ ಕಿರಣ'ಗಳಿಂದಲೇ ಎಂದು ಹೇಳಬಹುದು. ಈ ಕಿರಣಗಳ ತೀವ್ರತರ ಹೊಡೆತಕ್ಕೆ ಸಿಕ್ಕವರಲ್ಲಿ ಕೆಲವರು ಕೂಡಲೆ, ಕೆಲವರು ಎರಡು ಮೂರು ತಿಂಗಳುಗಳ ಬಳಿಕ ಪ್ರಾಣಕ್ಕೆರವಾದರು. ಇಂತಹ ಭೀಕರ ಅಣು ಬಾಂಬಿನ ಪ್ರಯೋಗದಿಂದಲೂ ಇಂದು ಹಿರೋಶೀಮಾವು ಮತ್ತೆ ಪೂರ್ವದಂತೆ ತಲೆಯೆತ್ತುತ್ತಿದೆ. ಹಿರೋಶೀಮಾದಲ್ಲಿ ಇಂದು ಜನರಿದ್ದು ಅವರೆಲ್ಲ ತಮ್ಮ ನಿತ್ಯ ನೈಮಿತ್ತಿಕ ವ್ಯವಹಾರಗಳನ್ನು ಎಂದಿನಂತೆ ಸಾಗಿಸುತ್ತಿದ್ದಾರೆ. ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಶಾಲೆ ಕಾಲೇಜು, ಆಸ್ಪತ್ರೆಗಳು, ತೋಟ ಪಟ್ಟಿ, ಹೊಲ ಮನೆ ಎಲ್ಲವೂ ಮೊದಲಿನಂತೆಯೇ ಕಂಗೊಳಿಸಲು ಪ್ರಾರಂಭವಾಗಿವೆ. ಇದೆಲ್ಲವೂ ಅಮೇರಿಕೆಯ 'ರಾಷ್ಟ್ರೀಯ ಆರೋಗ್ಯ ಸಂಶೋಧನಾ ಕೌನ್ಸಿಲ್'ದ 'ಅಣುಬಾಂಬು ಪರಿಣಾಮ ಕಮಿಶನ್ನ'ದ ಪ್ರಯತ್ನದ ಫಲವೆಂದೇ ಹೇಳಬೇಕು. ಈ ಕಮಿಶನ್ನಿನವರು ಹೀರೋಶೀಮಾದಲ್ಲಿ ಬಹಳ ಒಳ್ಳೆಯ ಕಾರ್ಯವನ್ನು ಮಹಾ ಪ್ರಯತ್ನದಿಂದ ಸಾಧಿಸಿದ್ದಾರೆ.

ಇದೇ ಒಂದು ಪೀಳಿಗೆಯೇ ಅಣು ಬಾಂಬು ಪರಿಣಾಮದ ವಿಷದಿಂದ ನಿರುಪಯೋಗಿಯಾಗುವದೆಂಬ ಹಿಂದಿನ ನಿರ್ಣಯವು ಇಂದು ಒಂದು ಮಾಯೆಯಂತೆ ಬಯಲಾಗಿ ಹೋಗಿದೆ. ಭೂತಾಯಿ ತನ್ನ ನಿಸರ್ಗ ಶಕ್ತಿಯ ಸಾಮರ್ಥ್ಯದಿಂದ ಮತ್ತೆ "ಸುಜಲಾಂ ಸುಫಲಾಂ" ಆಗಿದ್ದಾಳೆ. ಹಸಿರು, ಹುಲ್ಲು, ಜನ, ಧನ, ಕರು ಅಲ್ಲಲ್ಲಿ ಕಂಗೊಳಿಸುತ್ತವೆ. ಮಾನವ ವಿಧ್ವಂಸಕ ಶಕ್ತಿಗಳಿಗಿಂತಲೂ ದೈವಿ ವಿಧಾಯಕ ಶಕ್ತಿಯು ಕೈವಾಡವು ಘನತರವಾದುದೆಂಬುದಕ್ಕೆ ಈ ಹೀರೋಶೀಮಾ ಸಾಕ್ಷಿಯಾಗಿ ಕೈಯೆತ್ತಿ ಕೂಗುವಂತಿದೆ. ಅದಕ್ಕೇ, ಕೊಲ್ಲುವ ದೇವರಿಗಿಂತಲೂ ಕಾಯುವ ದೇವರು ದೊಡ್ಡವನೆಂದು ಅನುಭವಿಕರು ಹೇಳುತ್ತಾರೆ.

"ಜೈ ಹಿಂದ್"

ಚೀನದ ದುರಂತ.

ಭಾರತದಂತೆಯೇ ಚೀನವೂ ವಿಸ್ತಾರವಾದ ದೇಶ. ಬಡ ಜನರ ಬೀಡು. ಅನೇಕಾನೇಕ ಶತಮಾನಗಳಿಂದ ಏಶಿಯದಲ್ಲಿ ಪ್ರಭಾವ ಬೀರಿದ ಸಾಂಸ್ಕೃತಿಕ ನಾಡು, ಈಗ ದುರ್ಗತಿಗೀಡಾದರೂ ಪೂರ್ವದಲ್ಲಿ ನಾಗರೀಕತೆಯ ಬೀಡಾಗಿ ಮೆರೆದ ಅಖಂಡ ರಾಷ್ಟ್ರ. ಆದರೆ ಈಗ ಭೀಕರ ಯಾದವೀ ಯುದ್ಧಕ್ಕೀಡಾಗಿ ನುಚ್ಚುನೂರಾಗಿ ಹೋಗುತ್ತಿದೆ.

ಭಾರತೀಯರಂತೆಯೇ ಚೀನವೂ ಪರಕೀಯರ ದೃಷ್ಟಿಗೆ ಆಗಾಗ ಬಲಿಬಿದ್ದಿದೆ. ಹಿಂದೆ ಜಪಾನಿಯರು ಎಷ್ಟೋ ಸಲ ಚೀನದ ಮೇಲೆ ಆಕ್ರಮಣ ಮಾಡಿದ್ದಾರೆ. ಆದರೆ ಈ ವಿಶಾಲವಾದ ದೇಶದ ಪ್ರಚಂಡ ಜನತೆಯನ್ನು ಗೆಲ್ಲುವುದು ಯಾರಿಂದಲೂ ಸಾಧ್ಯವಾಗಲಿಲ್ಲ. ಆದರೆ ಚೀನದ ಭವಿತವ್ಯವೆಂದು ಪುಡಿಪುಡಿಯಾಗುವ ಪ್ರಸಂಗವು ಚೀನಿಯರಿಂದಲೇ ನಡೆದಿದೆ. ಕಮ್ಯುನಿಸ್ಟರು ಉತ್ತರದಿಂದ ದಕ್ಷಿಣಕ್ಕೆ ಸರಕಾರಕ್ಕೆ ಯಮಪ್ರಾಯರಾಗಿ ಮುಂದೊತ್ತುತಿದ್ದಾರೆ. ಇಕಡೆಗಳಲ್ಲೂ ಚೀನಿಯರು ಯುದ್ಧಭೂಮಿಗಳಲ್ಲಿ ತಮ್ಮ ರಕ್ತಮಾಂಸಗಳನ್ನು ಚೆಲ್ಲಿದ್ದಾರೆ. ಈ ಮಾರಣಹೋಮ ಇನ್ನೂ ಮುಗಿದಿರುವುದಿಲ್ಲ. ದಿನದಿಂದ ದಿನಕ್ಕೆ ಭೀಕರತೆ ಹೆಚ್ಚಾಗುತ್ತಿದೆ. ಕ್ಯೋಮಿಂಟಾಂಗ್ ಪಕ್ಷದ ಅಧ್ಯಕ್ಷರಾದ ಜನರಲಿಸಿಮೋ ಚಿಯಾಂಗರು ಅಧ್ಯಕ್ಷ ಪದವನ್ನು ತ್ಯಜಿಸಿದರು. ಹಂಗಾಮಿ ಅಧ್ಯಕ್ಷ ಲೀಯವರು ಹರಿಹಂಚಾದ ಚೀನವನ್ನು ಕಟ್ಟಲು ಕಮ್ಯುನಿಸ್ಟರೊಡನೆ ಸಂಧಾನ ನಡೆಸುವರೆ ಮುಂದಾದರು. ಆದರೆ ವಿಜಯಶಾಲಿ ಕಮ್ಯುನಿಸ್ಟರು ತಮ್ಮ ಹಟದ ದೋರಣೆಯಿಂದ ಒಂದು ಹೆಜ್ಜೆಯನ್ನಾದರೂ ಹಿಂದಿಡದೆ ತಮ್ಮ ಶರತ್ತುಗಳ ಮೇಲೆಯೆ ಸಂಧಾನವು ನಡೆಯಬೇಕೆಂದು ಆಗ್ರಹತೊಟ್ಟರು. ಜನರಲ್ ಲಿ, ಜನರಲಿಸಿಮೋ ಚಿಯಾಂಗ್ ಕೈಷೆಕ್ ಮೊದಲಾದವರನ್ನು ಯುದ್ಧಾಪರಾಧಿಗಳೆಂದು ಪರಿಗಣಿಸಲಿದ್ದು ವಿಚಾರಣೆಗೆ ಗುರಿಮಾಡಬೇಕೆಂದೂ ಚೀನಾ ಸರಕಾರಿ ಪಕ್ಷದ ಸೈನ್ಯಗಳ ಆಯಕಟ್ಟಿನ ಸಂರಕ್ಷಕ ಕೇಂದ್ರವಾದ ಯಾಂಗ್‌ಟ್ಸೆ ನದಿಯನ್ನು ತಮ್ಮ ಸೈನ್ಯಗಳು ದಾಟಲು ಬಿಡಬೇಕೆಂದೂ ಅವರು ಶರತ್ತನ್ನು ಮುಂದೆ ಹಾಕಿದರು. ಈಗ ಸಂಧಾನವು ಮುರಿದಿದೆ. ಕಮ್ಯುನಿಸ್ಟರು ಯಾಂಗ್‌ಟ್ಸೆ ನದಿಯನ್ನು ಒಂದೆಡೆಯಲ್ಲಿ ದಾಟಿ ಸರಕಾರವನ್ನು ನಿರ್ನಾಮ ಮಾಡುವರೆ ಮುಂದೊತ್ತುತಿದ್ದಾರೆ. ಈ ಪರಿಸ್ಥಿತಿಯನ್ನು ನೋಡಲಾಗ ಚೀನಾ ಸರಕಾರವು ಇನ್ನು ಹೆಚ್ಚು ದಿನಗಳವರೆಗೆ ಕಮ್ಯುನಿಸ್ಟರನ್ನು ಎದುರಿಸುವ ಹಾಗೆ ಕಾಣುವುದಿಲ್ಲ. ಅಂತೂ ಚೀನದಂತಹ ಅಗಾಧ ದೇಶವು ಕಮ್ಯುನಿಸ್ಟ ನಿಯಂತ್ರಣದ ಬಲೆಗೆ ಬಿದ್ದಂತಾಯಿತು. ಏಶಿಯಾದ ಪ್ರಬಲ ರಾಷ್ಟ್ರವು ಕಮ್ಯುನಿಸ್ಟ ಬಲಕ್ಕೆ ಸೋತಿತು. ಈ ದುಸ್ಥಿತಿಗೆ ಕಾರಣರಾರು? ಕಮ್ಯುನಿಸ್ಟ ತತ್ವವನ್ನು ಚೀನದಲ್ಲಿ ಬೆಳೆಸಿದವರಾರು? ಚೀನವು ಕಮ್ಯುನಿಸ್ಟರ ಬಲೆಗೆ ಬಿದ್ದ ನಂತರ ಜಗತ್ತಿನ ಚರಿತ್ರೆಯಲ್ಲಿ ಇನ್ನೊಂದು ಅಧ್ಯಾಯವು ಪ್ರಾರಂಭವಾಗುವುದು. ಆಂಗ್ಲೋ-ಅಮೇರಿಕನರಿಗೆ ಅಂಟಿಕೊಂಡಿದ್ದ ಪಕ್ಷವೊಂದು ಕಡೆ. ರಷ್ಯದ ವರ್ಚಸ್ಸಿಗೆ ಬಲಿಬಿದ್ದಿರುವ ರಾಷ್ಟ್ರಗಳು ಇನ್ನೊಂದು ಪಕ್ಷ. ಅಮೇರಿಕವು ಇನ್ನು ಏಶಿಯಾದ ಮೇಲಿನ ತನ್ನ ವರ್ಚಸ್ಸನ್ನು ಕಳೆದುಕೊಂಡಿತು. ಹಿಂದೆ ಅಮೇರಿಕವು ಸೈನ್ಯದಿಂದ ಮೊದಲುಗೊಂಡು ಆರ್ಥಿಕ ಸಹಾಯವನ್ನು ಚೀನಕ್ಕೆ ನೀಡಿದೆ. ಆದರೆ ಈಗ ಅಮೇರಿಕವು ಕೈಬಿಟ್ಟಿದೆ. ಇದರ ಮುಖ್ಯ ಫಲಿತಾಂಶವೇನೆಂದರೆ ಇಂಗ್ಲೆಂಡು ಮತ್ತು ಅಮೇರಿಕಗಳು ಏಶಿಯದ ಬೆಂಬಲವನ್ನು ಕಳೆದುಕೊಂಡವು ಎಂಬುದಾಗಿದೆ. ಈ ನಷ್ಟವನ್ನು ಭರ್ತಿಮಾಡುವುದು ಹೇಗೆ ಸಾಧ್ಯವೆಂಬುದನ್ನು ಅವರು ಈಗ ಆಲೋಚಿಸುತ್ತಿರಬಹುದು. ಮಧ್ಯಪೂರ್ವ ಮತ್ತು ದೂರ ಪೂರ್ವಗಳಲ್ಲಿ ರಷ್ಯವು ಎಂದಿಗಿಂತಲೂ ಪ್ರಬಲವಾಗಿ ತನ್ನ ವರ್ಚಸ್ಸನ್ನು ಬೀರುತ್ತಲಿದೆ. ಈ ಪ್ರದೇಶಗಳ ಆರ್ಥಿಕ ಪರಿಸ್ಥಿತಿಯ ಹಿಡಿತವು ರಷ್ಯಕ್ಕೆ ಸಿಕ್ಕಿದೆ. ಆದರೆ ಮುಂದೆ ಒಂದಲ್ಲ ಒಂದು ದಿನ ತನ್ನ ಭದ್ರತೆಗಾಗಿ ಅಮೇರಿಕೆ ಮತ್ತು ಬ್ರಿಟನ್ ಏಶಿಯಾದಲ್ಲಿ ತಮ್ಮ ಪ್ರತಿಭೆಯನ್ನು ಬೆಳೆಸಲೇಬೇಕಾಗುವುದು. ಇದು ಯಾರ ಉದ್ಧಾರಕ್ಕಲ್ಲವಾದರೂ ತಮ್ಮ ಇರುವಿಕೆಗಾದರೂ ಅಗತ್ಯ. ಈ ಹಂಚಿಕೆಯು ಮುಂದೆ ಏಶಿಯಾದಲ್ಲಿ ಸ್ಫೋಟನೆಯಾಗಬಹುದು. ರಷ್ಯ ಅಮೇರಿಕೆಗಳ ಬಲದ ಸ್ಪರ್ಧೆಯು ಏಶಿಯಾದಲ್ಲೆ ನಡೆಯಬಹುದು. ಚೀನದ ದುರಂತ ನಾಟಕದ ಪಾಠವನ್ನು ಈಗ ಭಾರತವು ಕಲಿಯಬೇಕು. ಚೀನದಂತೆ ಭಾರತವು ಹಿಂದುಳಿದ ಬಡ ದೇಶ. ಅಪಾರ ಜನಸಂಖ್ಯೆಯ ಭಿನ್ನ ಭಿನ್ನ ಮತಬೇಧಗಳ ಅಪಾರ ರಾಷ್ಟ್ರ. ಏಶಿಯದಲ್ಲಿ ಪ್ರಬಲ ರಾಷ್ಟ್ರ. ಭಾರತವು ಚೀನದ ದುರಂತದಿಂದ ಪಾಠ ಕಲಿತುಕೊಳ್ಳಲಿ. ತನ್ನ ಪ್ರತಿ ಹೆಜ್ಜೆಯನ್ನೂ ಜಾಗ್ರತೆಯಿಂದ ಮುಂದಿಡಲಿ.

'ನ. ಭಾ.'

ಕೊಡಗು

ತಾ. ೨೯-೪-೧೯೪೯ನೇ ಶುಕ್ರವಾರ

ರೈಲ್ವೆ ಮಂತ್ರಿಯವರ ಸಂದರ್ಶನ.

ಇಂಡಿಯಾ ಸರಕಾರದ ರೈಲ್ವೆ ಮತ್ತು ಟ್ರಾನ್ಸ್‌ಪೋರ್ಟ್ ಉಪಮಂತ್ರಿಗಳಾದ ಶ್ರೀ. ಕೆ. ಸಂತಾನಂರವರು ಈ ತಾರೀಕು ೨೩ರಲ್ಲಿ ಮಂಗಳೂರಿನಿಂದ ಮೈಸೂರಿಗೆ ಹೋಗುವ ಕಾಲಕ್ಕೆ ಕೆಲವು ಗಂಟೆಗಳ ವರೆಗೆ ಮಡಿಕೇರಿಯಲ್ಲಿ ಉಳಿದಿದ್ದರು. ಆಗ ಸಾರ್ವಜನಿಕರು ಕೊಟ್ಟ ಒಂದು ಮನವಿ ಮತ್ತು ಅದಕ್ಕೆ ಅವರು ಕೊಟ್ಟ ಉತ್ತರಗಳನ್ನು ಬೇರೆಡೆ ಕೊಡಲಾಗಿದೆ. ಅವರ ಇಲಾಖೆಗೆ ಸೇರಿದ ಮೂರು ವಿಚಾರಗಳಲ್ಲಿ ಎರಡನ್ನು ಕೂಡಲೆ ಸಲ್ಲಿಸುವ ಭರವಸೆಯನ್ನು ಕೊಟ್ಟರು. ಅಂದರೆ ರೈಲ್ವೆ ಅನುಕೂಲವಿಲ್ಲದೆ ಬರೇ ಮೋಟಾರು ವಾಹನಗಳ ಸಹಾಯದಿಂದಲೇ ವಹಿವಾಟುಗಳೆಲ್ಲ ನಡೆಯುತ್ತಿರುವ ಕೊಡಗಿಗೆ ಅವಶ್ಯವಿರುವಷ್ಟು ಪೆಟ್ರೋಲ್ ಕೊಡುತ್ತೇವೆ ಎಂದು ಅವರು ಭರವಸೆ ಕೊಟ್ಟದ್ದು ತೃಪ್ತಿಕರವಾಗಿದೆ. ಹಾಗೆಯೇ ಕೊಡಗಿನಿಂದ ನೆರೆಪ್ರಾಂತಗಳಿಗೆ ಹೋಗುತ್ತಿರುವ ಮುಖ್ಯ ಪ್ರಾಂತೀಕ ರಸ್ತೆಗಳನ್ನು 'ಹೈವೆ'ಗಳಾಗಿ ಮಾಡುವ ಜವಾಬ್ದಾರಿಯನ್ನು ಕೇಂದ್ರ ಸರಕಾರವು ವಹಿಸಿಕೊಳ್ಳುವ ಕಾರ್ಯವನ್ನು ಬೇಗ ಮಾಡಲಾಗುವದೆಂದು ಕೊಟ್ಟ ಉತ್ತರವು ಕೂಡ ಆಶಾದಾಯಕವಾಗಿದೆ. ಆದರೆ ಕಡೇ ಕೋರಿಕೆಯಾದ, ಕೊಡಗಿಗೆ ರೈಲ್ವೆ ಸಂಬಂಧವನ್ನು ತರುವ ವಿಚಾರದಲ್ಲಿ ಸ್ವಲ್ಪ ಸಾವಕಾಶವಾಗಬಹುದೆಂದೂ, ಮೈಸೂರು ರೈಲ್ವೆಯನ್ನು ಕೇಂದ್ರ ಸರಕಾರದವರು ವಹಿಸಿಕೊಂಡ ಮೇಲೆ ಮತ್ತು ಪಶ್ಚಿಮ ಕರಾವಳಿಗೆ ಯೋಗ್ಯ ಬಂದರಿನ ನಿಶ್ಚಯವಾದ ಮೇಲೆ ಈ ವಿಚಾರ ಆಲೋಚಿಸಲಾಗುವದೆಂದು ಅವರು ಹೇಳಿದರು. ಕೇಂದ್ರ ಸರಕಾರದ ಮುಂದಿರುವಂಥಾ ಅತೀ ತುರ್ತಿನ ಕೆಲಸಗಳು ಮುಗಿದ ನಂತರ ಕೂಡಲೇ ಈ ವಿಚಾರವನ್ನು ಕೈಕೊಳ್ಳುವರೆಂದು ಆಶಿಸುತ್ತೇವೆ.

ಮಂತ್ರಿಗಳು ಮಾತಾಡುತ್ತಾ ಕೊಡಗಿನ ಭವಿಷ್ಯದ ಕುರಿತೂ ನಾಲ್ಕು ಮಾತು ಹೇಳಿದರು. ಇವರು ಚೀಫ್ ಕಮಿಷನರು ಪ್ರಾಂತಗಳ ಮುಂದಿನ ಘಟನೆಯನ್ನು ತಯಾರಿಸಲು ನೇಮಕವಾಗಿರುವ ಎಡ್ಹಾಕ್ ಸಮಿತಿಯ ಒಬ್ಬ ಸದಸ್ಯರಾದುದರಿಂದ ಕೊಡಗಿನ ಭವಿಷ್ಯದ ವಿಚಾರ ಚೆನ್ನಾಗಿ ತಿಳಿದವರೆಂದರೆ ತಪ್ಪಾಗಲಾರದು. 'ಒಂದು ದೇಶದ ಭವಿಷ್ಯತ್ತಾಗಲೀ ಪ್ರಾಮುಖ್ಯತೆಯಾಗಲೀ ಅಲ್ಲಿಯ ಜನಸಂಖ್ಯೆಯನ್ನಾಗಲೀ ವಿಸ್ತೀರ್ಣವನ್ನಾಗಲೀ ಹೊಂದಿಕೊಂಡಿರುವುದಿಲ್ಲ. ಬದಲು ಅಲ್ಲಿಯ ನಿವಾಸಿಗಳ ಯೋಗ್ಯತೆಯನ್ನು ಹೊಂದಿಕೊಂಡಿದೆ. ಕೊಡಗು ಚಿಕ್ಕ ಪ್ರದೇಶವಾದರೂ ಹಿಂದೂದೇಶದ ಮುಖ್ಯ ಸೇನಾನಾಯಕರನ್ನು ಒದಗಿಸಿ ಕೀರ್ತಿಯನ್ನು ಬೆಳೆಸಿದೆ. ಮುಂದೆಯೂ ಕೊಡಗಿನ ಪುತ್ರ ಪುತ್ರಿಯರು ಕೀರ್ತಿ ಗಳಿಸಬಲ್ಲರು. ಯಾವದೇ ಪ್ರಾಂತದ ಭವಿಷ್ಯತ್ತು ಅಲ್ಲಿಯ ಜನರ ಅಭಿಪ್ರಾಯವನ್ನು ಹೊಂದಿಕೊಂಡಿದೆ. ಇದರಿಂದ ಕೆಲವರು ಬಹುಮಂದಿ ಜನತೆಯ ಅಭಿಪ್ರಾಯವನ್ನು ಲೆಕ್ಕಿಸದೆ ಭವಿಷ್ಯ ನಿರ್ಣಯ ಮಾಡಬೇಕೆಂದು ಕೆಲವರು ಕೇಳುವದರಲ್ಲಿ ಅರ್ಥವಿಲ್ಲವೆಂದೂ, ಅಧಿಕಾರದಲ್ಲಿರುವವರು ಈ ಕೇಳಿಕೆಗಳಿಗೆ ಗಮನ ಕೊಡಲಿಕ್ಕಿಲ್ಲೆಂಬುದೂ ಸ್ಪಷ್ಟವಾಗುತ್ತದೆ. ಇಂಥಾ ಜವಾಬ್ದಾರಿಯುತ ಮಹನೀಯರ ಅಭಿಪ್ರಾಯಗಳನ್ನು ಕೇಳಿಯಾದರೂ ಪ್ರಜಾಪ್ರಭುತ್ವ ನೀತಿಗೆ ವಿರುದ್ಧವಾದ ಈ ರೀತಿಯ ಅಪಪ್ರಚಾರವನ್ನು ನಿಲ್ಲಿಸುವರಾಗಿ ಆಶಿಸುತ್ತೇವೆ. ಮಂತ್ರಿಗಳು ಹೇಳಿದಂತೆ ಜನರ ಹಿತ ದೃಷ್ಟಿಯಿಂದ ಕೊಡಗನ್ನು ಪ್ರತ್ಯೇಕವಾಗಿಯೇ ಇಟ್ಟುಕೊಳ್ಳಬೇಕೆಂದು ಜನರು ಒಗ್ಗಟ್ಟಾಗಿ ಕೇಳಿದರೆ ಅದನ್ನಾದರೂ ವಿರೋಧಿಸಲಾರರು ಎಂಬುದನ್ನು ದೇಶೀಯರು ಮರೆಯದಿರಲಿ. ಈ ಬಗ್ಗೆ ದೇಶೀಯರೆಲ್ಲರೂ ಒಗ್ಗಟ್ಟಾಗಿ ಉತ್ಸಾಹದಿಂದ ತಮ್ಮ ಗುರಿಯನ್ನು ಸಾಧಿಸಲು ಪ್ರಯತ್ನಿಸುವರಾಗಿ ಆಶಿಸುತ್ತೇವೆ.

ವರ್ತಮಾನ.

ಸೋಮವಾರಪೇಟೆ ಆಸ್ಪತ್ರೆಯಲ್ಲಿ ೧-೫-೪೯ ರಿಂದ ಸ್ಥಳದಿಂದ ಸ್ಥಳಕ್ಕೆ ಸಂಚರಿಸಲು ಅನುಕೂಲವಾಗುವಂತೆ ಆಸ್ಪತ್ರೆಯ ಸಲಕರಣೆಗಳಿಂದ ಕೂಡಿದ ಅಂಬ್ಯುಲೆನ್ಸ್ ವ್ಯಾನೊಂದನ್ನು ಇಡಲಾಗುವುದೆಂದೂ ರೋಗಿಗಳನ್ನು ಆಸ್ಪತ್ರೆಗೆ ತರಲು ಮೈಲಿಗೆ ಎಂಟಾಣೆ ದರದಲ್ಲಿ ಅದು ದೊರೆಯುವುದೆಂದೂ ಪೇಟೆಯಲ್ಲಿನ ರೋಗಿಗಳನ್ನು ತರಲು ಟ್ರಿಪ್ಪಿಗೆ ಮೂರು ರೂಪಾಯಿ ಚಾರ್ಜು ಮಾಡಲಾಗುವುದೆಂದೂ ತಿಳಿಯಬರುತ್ತದೆ.

ಮದರಾಸಿನಲ್ಲಿ ಮಾರ್ಚಿ ತಿಂಗಳಲ್ಲಿ ನಡೆದ ಮದ್ರಾಸ್ ಪ್ರಾಂತದ ಹಾರ್ಡ್ ಕೋರ್ಟ್ ಜೂನಿಯರ್ಸ್ ಟೆನ್ನಿಸ್ ಆಟದಲ್ಲಿ ಮದ್ರಾಸಿನಲ್ಲಿ ಓದುತ್ತಿರುವ ಶ್ರೀ ಕೋದಂಡ ಜಿ ಸೋಮಯ್ಯನವರು ಎಲ್ಲರನ್ನೂ ಸೋಲಿಸಿ ಛಾಂಪಿಯನ್‌ಶಿಪ್ ಕಪ್ಪನ್ನು ಪಡೆದಿರುವರು.

ಶ್ರೀ ಎಂ. ಎನ್. ಗುಂಡೂರಾವ್‌ರವರನ್ನು ಜಿಲ್ಲಾ ಎಂಪ್ಲಾಯಿಮೆಂಟ್ ಅಧಿಕಾರಿಯಾಗಿಯೂ, ಶ್ರೀ ಕೆ. ತ್ರಿ ನಿವಾಸರಾಯರನ್ನು ಅಬ್ಕಾರಿ ಇನ್ಸ್‌ಪೆಕ್ಟರಾಗಿಯೂ, ಶ್ರೀ ಎಚ್ ಅಪ್ಪಣ್ಣ ಮಯ್ಯನವರನ್ನು ಗ್ರಾಮಾಭಿವೃದ್ಧಿ ಆಫೀಸರಾಗಿಯೂ, ಶ್ರೀ ಬೊಮ್ಮಂಡ ಕರ್ಯಪ್ಪನವರನ್ನು ಟಿಂಬರ್ ಸುಬೇದಾರರಾಗಿಯೂ ನೇಮಿಸಿರುವರು.

ಕೇಂದ್ರ ಸರಕಾರದ ಟ್ರಾನ್ಸ್‌ಪೋರ್ಟ್ ಮಂತ್ರಿಗಳಾದ ಶ್ರೀ ಕೆ ಸಂತಾನಂರವರು ತಾ. ೨೩-೪-೪೯ ರಲ್ಲು ಮಧ್ಯಾಹ್ನ ಮಡಿಕೇರಿಗೆ ಬಂದು ಸಾಯಂಕಾಲ ೫-೩೦ಕ್ಕೆ ಮರ್ಕಾರಾ ಗಿರಿ ಕೇಸರಿ ನೇತುವೆಯ ಸ್ಥಳ ನೋಡಿಕೊಂಡು ಮೈಸೂರಿಗೆ ಹೋದರು. ಅವರಿಗೆ ಮಡಿಕೇರಿಯಲ್ಲಿ ಕೊಡಗಿನ ಜನರ ಪರ ಒಂದು ಬಿನ್ನವತ್ತಳೆಯನ್ನು ಗಂಧದ ಕರಡಿಗೆಯಲ್ಲಿ ಅರ್ಪಿಸಲಾಯಿತು. ಚಹ ಪಾನದ ಏರ್ಪಾಡೂ ಇತ್ತು.

ಮೈಸೂರು ಶ್ರೀ ರಾಮಕೃಷ್ಣ ಆಶ್ರಮದ ಭವ್ಯ ನೂತನ ವಿದ್ಯಾರ್ಥಿ ಮಂದಿರ ಯಾದವ ಗಿರಿ ವಿಸ್ತರಣದಲ್ಲಿ ಸಿದ್ಧವಾಗಿದೆ. ಸೇರಬೇಕೆಂದು ಇಚ್ಛಿಸುವ ಮಿಡಲ್ ಸ್ಕೂಲ್ ಸರ್ಟಿಫಿಕೇಟ್ ಪಡೆದ ಹೈಸ್ಕೂಲ್ ವಿದ್ಯಾರ್ಥಿಗಳು ಮೇ ತಿಂಗಳು ಹದಿನೈದರ ಒಳಗೆ ತಿಳಿಸಬೇಕು. ಪ್ರವೇಶ ಪತ್ರಕ್ಕೆ ಅಧ್ಯಕ್ಷರು, ಶ್ರೀ ರಾಮಕೃಷ್ಣ ವಿದ್ಯಾರ್ಥಿ ಮಂದಿರ, ಯಾದವಗಿರಿ ವಿಸ್ತರಣ ಮೈಸೂರು. ಇವರಿಗ ಬರೆಯಬೇಕು.

ಅ. ಫ್ಯಾಕ್ಟರೀಸ್ ಇನ್ಸ್‌ಪೆಕ್ಟರಾಗಿರುವ ಶ್ರೀ ಸೋಮಣ್ಣ ಮುದ್ದಪ್ಪನವರನ್ನು 'ಕನ್‌ಸಿಲಿಯೇಶನ್ ಆಫೀಸರ' ಆಗಿ ನೇಮಿಸಲಾಗಿದೆ.

ಅಖಿಲ ಭಾರತ ಕಾಂಗ್ರೆಸ್ಸಿನ ಪ್ರೆಸಿಡೆಂಟರಾದ ಡಾ. ಪಟ್ಟಾಭಿ ಸೀತಾರಾಮಯ್ಯನವರು ತಾ. ೪ ಮತ್ತು ೫ರಲ್ಲಿ ಕೊಡಗಿನ ಪ್ರವಾಸವನ್ನು ಮಾಡುವರೆಂದು ತಿಳಿದು ಬರುತ್ತೆ.

ಕೊಡಗಿನಲ್ಲಿ ತರಬೇತಾಗುತ್ತಿರುವ 'ನೇಶನಲ್ ಕೇಡೆಟ್ ಕೋರ್' ವಿದ್ಯಾರ್ಥಿಗಳ ಕವಾಯಿತು, ಬೆಲೂನಿಗೆ ಗುಂಡು ಹೊಡೆಯುವ ಸ್ಪರ್ಧೆ, ತಾ ೨೪ರಲ್ಲಿ ಮಡಿಕೇರಿಯಲ್ಲಿ ಕೊಡಗಿನ ಚೀಫ್ ಕಮಿಷನರ ಅಧ್ಯಕ್ಷತೆಯಲ್ಲಿ ನಡೆದ ನಂತರ ಹೈಸ್ಕೂಲ್ ಆವರಣದಲ್ಲಿ ಒಂದು ಚಹ ಪಾನ ಕೂಟ ನಡೆಯಿತು.

ಸಂಯುಕ್ತ ಪ್ರಾಂತದ ಶ್ರೀ ಪರಮಹಂಸ ಚೈತನ್ಯದೇವ ಸ್ವಾಮಿಗಳು ತಾ. ೨೫ರಿಂದ ೨೭ರ ವರೆಗೆ ವೀರಾಜಪೇಟೆಯ ಕಾವೇರಿ ಆಶ್ರಮದಲ್ಲಿ ಭಗವದ್ಗೀತೆಯನ್ನು ಕುರಿತು ಮಾತಾಡಿದರು. ತಾ. ೨೮ರಿಂದ ೩೦ರ ವರೆಗೆ ಮಡಿಕೇರಿ ವೇದಾಂತ ಮಂದಿರದಲ್ಲಿ ಪ್ರತಿ ದಿನ ಸಾಯಂಕಾಲ ೬ ಗಂಟೆಗೆ ಭಾಷಣ ಮಾಡುತ್ತಿರುವರು.

ಮರ್ಕಾರಾ ಸಹಕಾರ ಕೂಟದ ಆಶ್ರಯದಲ್ಲಿ ಒಂದು ಸಹಕಾರಿ ಪರಿಷತ್ತು ತಾರೀಕು ೨೩ರಲ್ಲಿ ಅಲ್ಲಿಯ ಶಾಲೆಯಲ್ಲಿ ನಡೆಯಿತು. ಕೊಡಗಿನ ಚೀಫ್ ಕಮಿಷನರು ಅಧ್ಯಕ್ಷತೆ ವಹಿಸಿದ್ದರು. ವಸ್ತು ಪ್ರದರ್ಶನದಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಚೀಫ್ ಕಮಿಷನರ ಪತ್ನಿಯವರು ಹಂಚಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಅಲ್ಲಿಯ ಜನರ ಕೋರಿಕೆಗಳಲ್ಲ ಹಲವನ್ನು ನೆರವೇರಿಸುವ ಪ್ರಯತ್ನ ಮಾಡುವದಾಗಿ ಭರವಸ ಇತ್ತರು.

ಈ ಮೇ ತಿಂಗಳ ೭ನೇ ಶನಿವಾರ ದಿನ ಪೊನ್ನಂಪೇಟೆ ಶ್ರೀರಾಮಕೃಷ್ಣ ಶಾರದಾಶ್ರಮದ ಮತ್ತು ಅಲ್ಲಿಯ ಧರ್ಮದ ಔಷದಾಲಯದ ವಾರ್ಷಿಕೋತ್ಸವ ನಡೆಯುತ್ತದೆ.

ಬ್ರಿಟಿಷ್ ಯೋಗಾಭ್ಯಾಸಿಗಳು.

ಶರೀರವು ಹೆಚ್ಚು ಬೊಜ್ಜು ಬೆಳೆದರೆ ಹೃತ್ಕೋಶದ ಶಕ್ತಿಯನ್ನು ಅದು ನಿರ್ಬಲಿಸುವುದು. ಕಾರಣವೇಂದರೆ ವಿಪರೀತವಾಗಿ ಬೆಳೆದ ಮಾಂಸ ಖಂಡಗಳಿಗೆ ಅಪರಿಮಿತವಾದ ರಕ್ತವನ್ನು ಕಳುಹಿಸುವ ಕೆಲಸವನ್ನು ಎದೆಗುಂಡಿಗೆಯು ಮಾಡಬೇಕಾಗುತ್ತದೆ.

ಈಚೆಗೆ ಬ್ರಿಟಿಷ್ ಆಕಾಶವಾಣಿಯಲ್ಲಿ ಪ್ರಖ್ಯಾತ ಭಾರತೀಯ ವಿಧಾನದ ಯೋಗಾಭ್ಯಾಸಕರಾದ ಸರ್ ಪಾಲ್ ಡ್ಯೂಕ್ ಅವರು 'ನಗ ದ ತ್ರಾಬೆಜ್ಜನಿಕೆಸಿರಿ' ಎಂಬ ವಿಷಯದ ಕುರಿತು ವಿಚಾರಾತ್ಮಕ ಭಾಷಣವಿತ್ತರು.

ಕಳೆದ ವರ್ಷ ಇವರು ಬಾಣಂತಿಯ ಆರೈಕೆಸುವವರ ಮೂಲಕ ಆಸನವನ್ನು ಉಪಶ್ರಮಿಸಿಕೊಳ್ಳುವುದರ ಕುರಿತು ಟೆಲಿವಿಜನ್ ಪ್ರದರ್ಶನವನ್ನು ಏರ್ಪಡಿಸಿದ್ದರು. 'ವೈಜ್ಞಾನಿಕವಾದ ನಗುವಿನಿಂದ ಶರೀರ ತೂಕವನ್ನೂ ಕಡಿಮೆ ಮಾಡಿ ಆರೋಗ್ಯ ಸಾಧಿಸಬಹುದು. ಅದರಿಂದ ಜೀರ್ಣ ಶಕ್ತಿಯೂ ಸುವ್ಯವಸ್ಥಿತವಾಗುವುದು ಎಂದು ಸರ್ ಪಾಲರು ತಿಳಿಸುತ್ತಾರೆ.

ಮಾರಾಟಕ್ಕಿದೆ.

ಉತ್ತಮ ಸ್ಥಿತಿಯಲ್ಲಿರುವ ಎರಡು ಹೋವಿನ ಬ್ರೀಚ್ ಲೋಡಿಂಗ್ ಹನ್ನೆರಡನೇ ಬೋರ್ ಕೋವಿಯೊಂದು ಮಾರಾಟಕ್ಕಿದೆ ಕೊಂಡುಕೊಳ್ಳಲಿಚ್ಛಿಸುವವರು ಖುದ್ದಾಗಿ ಬಂದು ಪರೀಕ್ಷಿಸಬಹುದು. ಇಲ್ಲನೇ ಪತ್ರವ್ಯವಹಾರ ಮಾಡಬಹುದು.

ಅಪ್ಪಚ್ಚೆರ ಪೂವಯ್ಯ,
ನಾಯಮುಡಿ ಗೋಣಿಕೊಪ್ಪ.

ಪ್ರಕಟಣೆ.

ತಾರೀಕು ೪-೬-೪೬ ರಲ್ಲಿ ಕೊಡಗು ಕ್ಲಾತ್ ಮರ್ಚೆಂಟ್ಸ್ ಕಂಪೆನಿಯಿಂದ ಪಡೆಕೊಂಡ ೧೨೬೪ ರಿಂದ ೧೨೬೬ ರ ವರೆಗಿನ ಮೂರು ಪಾಲುಗಳ ಬಗ್ಗೆ ಕೊಡಲ್ಪಟ್ಟ ಶೇರುಸರ್ಟಿಫಿಕೇಟು ಕಾಣೆಯಾಗಿದೆ. ಸಿಕ್ಕಿದವರು ಈ ನೋಟೀಸ್ ನೋಡಿದ ಒಂದು ವಾರದೊಳಗೆ ಪತ್ರಿಗೆ ತಲ್ಪಿಸಬೇಕಾಗಿ ವಿನಂತಿ.

ಸಿ ಕೆ ಕಾರ್ಯಪ್ಪ,
ಹದಿಕೇರಿ.

Auction Notice.

Demonstration Dairy Farm Mercara

A few cows, buffaloes and young stocks will be sold in public auction on Friday the 13th May 1949 at 11 A. M. at Dairy Farm Premises.

By the orders of the Chief Commissioner Coorg,
Sd T. S. Ramanujam,
Dairy officer.

ಈ ವಾರದ ಕಥೆ.

ಅಪರಿಚಿತೆ.

ಲೇ:-ಮಿಸ್. ಸಿ. ಎಂ. ಅಮ್ಮಾಜಿ, ಮಡಿಕೇರಿ.

ನಾನು ಮತ್ತು ರತಿಯು ಕಳೆದ ಡಿಸೆಂಬರ್ ೨೭ರಲ್ಲಿ ಮೈಸೂರಿಗೆ ಹೊರಟಿದ್ದೆವು. ಭಾರತದ ನಂದಾ ಜ್ಯೋತಿಯಾದ ಪಂ. ಜವಾಹರ್‌ಲಾಲ್ ನೆಹರೂರವರು ತಾ. ೨೮ರಲ್ಲಿ ಮೈಸೂರಿಗೆ ಬರುವ ಕಾರ್ಯಕ್ರಮವಿತ್ತು. ಅವರು ಮೈಸೂರಿಗೆ ಬರುವದಾದರೂ, ಎಪ್ಪತ್ತು ಮೈಲು ದೂರದ ಮಡಿಕೇರಿಯಲ್ಲೂ ಗಲಿಬಿಲಿ ಪ್ರಾರಂಭವಾಗಿತ್ತು. ಮಡಿಕೇರಿ ಬಸ್ ನಿಲ್ದಾಣದಲ್ಲಿ ಜನರು 'ಮೈಸೂರು ಟಿಕೇಟಿ'ಗಾಗಿ ಗುಂಪು ಕಟ್ಟಿದ್ದರು. ಬಸ್ ನಿಲ್ದಾಣದ ಕೋಲಾಹಲ ಒಂದು ಫರ್ಲಾಂಗ್ ದೂರಕ್ಕೆ ಕೇಳಿಬರುತಿತ್ತು. ಇಂಥಾ ಗಡಿಬಿಡಿಯಲ್ಲಿ ನಾವೂ ಟಿಕೇಟಿಗಾಗಿ ಹೋದೆವು. ಟಿಕೇಟಿಗಾಗಿ ಪ್ರಾಣಬಿಡುತ್ತಿದ್ದ ಜನರ ಮಧ್ಯೆ ಹೋಗುವದೇ ಪ್ರಯಾಸವಾಯಿತು. ಟಿಕೇಟ್ ಕೊಡುವದರಲ್ಲೂ ಮುಂಡಾಸು ನೋಡಿ ಮಣೆ ಹಾಕುವ ಪದ್ಧತಿ ಇದೆಯೆಂಬುದು ನಮಗೆ ಆಗ ತಿಳಿಯಿತು. ಕೆಲವು ಸಮಯದ ನಂತರ ಬಸ್ ಏಜಂಟರು 'ಎಲ್ಲಾ ಭರ್ತಿಯಾಯಿತು ಇನ್ನು ಟಿಕೇಟಿಲ್ಲ' ಎಂದರು. ಭಾರತದ ಸುಪುತ್ರನನ್ನು ನೋಡಲು ಹುಮ್ಮಸ್ಸಿನಿಂದ ಹೊರಟ ನಮ್ಮ ಮುಖಕ್ಕೆ ತಣ್ಣೀರೆರಚಿದಂತಾಯಿತು. ಟಿಕೇಟು ದೊರೆಯಲು ನಾವು ಯಾವ ಅಧಿಕಾರಿಯ ಇಲ್ಲವೇ ಶ್ರೀಮಂತರ ಮಕ್ಕಳಾಗಿರಲಿಲ್ಲ!

ಸಂತೋಷದಿಂದ ಉಬ್ಬಿದ್ದ ಹೃದಯವು ಬಾಡಿಗೊಂಡಿತು. ಮನೆಗೆ ಹಿಂತಿರುಗಲೂ ಮನಸ್ಸು ಬಾರಲಿಲ್ಲ. ಹಾಗೆಯೇ ರಾಜಸೀಟಿನತ್ತ ತೆರಳಿ ಪ್ರಕೃತಿಯ ಸೌಂದರ್ಯವನ್ನಾದರೂ ನೋಡಿ ಹೃದಯದ ಭಾರವನ್ನು ಹಗುರ ಮಾಡಿಕೊಳ್ಳುವದೆಂದು ಆ ಕಡೆ ಹೊರಟೆವು. ಬೆಳಗಿನ ಎಂಟು ಗಂಟೆಯ ಸಮಯ. ಸೂರ್ಯನ ದಿವ್ಯ ಕಿರಣಗಳು ತರುಲತೆಗಳ ಮೇಲೆ ಬಿದ್ದು ಅನುಪಮ ಕಾಂತಿಯನ್ನು ನಿಸರ್ಗದೇವಿಗೆ ಕೊಟ್ಟಿವೆ. ಎಲೆಗಳಲ್ಲಿಯ ಮಂಜು ಹನಿಗಳು ಸೂರ್ಯ ರಶ್ಮಿಯನ್ನು ಪ್ರತಿಬಿಂಬಿಸಿ ವಜ್ರ ಮಣಿಗಳಂತೆ ಹೊಳೆಯುತ್ತಿವೆ. ತಂಪಾದ ಗಾಳಿ ಹೊಸ ಚೇತನ ಕೊಡುವಂತೆ ಬೀಸುತಿತ್ತು. 'ಸ್ಟೋನ್ ಪಿಲ್ಲ'ರಿನ ಹತ್ತಿರ ನಡೆದು ಅಲ್ಲೇ ಕೂತೆವು. ಜವಾಹರರ ವಿಚಾರವೇ ಮಾತಾಡುತ್ತಿದ್ದೆವು. ಅಸ್ಪಷ್ಟವಾಗಿ ದೂರದಲ್ಲಿ ಯಾರೋ ಕೂಗಿಕೊಳ್ಳುವ ಶಬ್ದ ಕೇಳಿಸಿದಂತಾಯಿತು. ನಾವು ಚಕಿತರಾಗಿ ಆ ಕಡೆ ಧಾವಿಸಿದೆವು. ನಾವು ಕಂಡ ದೃಶ್ಯವನ್ನು ನೆನೆದರೆ ಇಂದೂ ರೋಮಾಂಚವಾಗುತ್ತದೆ.

ರಾಜಾ ಸೀಟಿನ ಘನ ಸೌಂದರ್ಯದ ಮಡಿಲಲ್ಲಿ ಬೆಂಗಸೊಬ್ಬಳು. ಒಹ್, ಆ ಭಿಕ್ಷುಕಿಯೇ ಆಗಿರಬೇಕು. ಒಡತನದ ಬೇಗೆಯೋ ಏನೋ ಹೇಳಲಾರೆವು, ಆಕೆ ಮುದುರಿಕೊಂಡಿದ್ದಳು. ಶರೀರದಲ್ಲಿ ರಕ್ತದ ಹನಿಯ ಕಾಣುತ್ತಿರಲಿಲ್ಲ. ಎಲುಬು ತೊಗಲಿನ ಮೂರ್ತಿಯಾದ ಆಕೆ ಬಹಳ ಹಲವು ದಿನಗಳಿಂದ ಉಪವಾಸವಿರಬೇಕು. ಕಣ್ಣುಗಳು ತೇಜಹೀನವಾಗಿ ಒಳಗಿಳಿದಿದ್ದವು. ಮೈಯ ಬಟ್ಟೆಯು ಮರ್ಯಾದೆಯನ್ನು ಕಾಪಾಡಲಾರದಷ್ಟು ಛಿದ್ರವಾಗಿತ್ತು. ಎಂಥಾ ವಿರೋಧಾಭಾಸ! ಒಂದೆಡೆ ರಾಜಾ ಸೀಟಿನ ಸುರ ಸೌಂದರ್ಯ. ಮರಗಿಡಗಳು ಹೊಸ ಚಂದದಿಂದ ಪ್ರಭಾತದ ಸೂರ್ಯ ಪ್ರಕಾಶದಲ್ಲಿ ಬೆಳಗುತ್ತಿವೆ. ಹಕ್ಕಿಗಳು ಹರ್ಷದಿಂದ ಹಾಡುತ್ತಿವೆ. ಆದರೆ ಆಕೆಗೆ ಸೌಂದರ್ಯದ ಗೊಡವೆ ಇಲ್ಲ. ಹಕ್ಕಿಗಳ ಮಂಜುಳ ಗಾನವು ಆಕೆಗೆ ಕರ್ಣ ಕಠೋರವಾಗಿ ಕೇಳುತ್ತಿರಬೇಕು. ನನಗನಿಸಿತು, ಪ್ರಕೃತಿ ಸೌಂದರ್ಯವನ್ನು ಕಣ್ಣು ತುಂಬ ನೋಡಿ ಆನಂದಿಸಬೇಕಾದರೆ, ಹಕ್ಕಿಗಳ ಇಂಚರವನ್ನು ಕಿವಿಗೊಟ್ಟು ಕೇಳಿ ಸುಖಿಸಬೇಕಾದರೆ, ಬೀಸುವ ತಂಗಾಳಿಯ ಮಧುರ ಸ್ಪರ್ಶವನ್ನು ಶರೀರವು ಅರಿಯಬೇಕಾದರೆ ಹೊಟ್ಟೆಗೆ ಅನ್ನವಿರಬೇಕು. ಹೊಟ್ಟೆಗೆ ಅನ್ನವಿಲ್ಲದ ಈ ಸ್ತ್ರೀಗೆ ಇವುಗಳೆಲ್ಲವೂ ಅರ್ಥ ಹೀನವಾದುವು!

ಪಂ. ಜವಾಹರರು ಮೈಸೂರಿಗೆ ಬರುತ್ತಾರೆ. ಅವರನ್ನು ನೋಡಿ ಸ್ವಾಗತಿಸಲೂ ಕೂಡ ಹೊಟ್ಟೆ ತುಂಬಿದವರಿಗೇ ಸಾಧ್ಯ! ಈ ಸ್ತ್ರೀಗೆ ಅದರ ಗೊಡವೆ ಎಲ್ಲಿ? ಆಕೆಯ ಜೀವನ ಮರಣ ಸಮಸ್ಯೆ ಎಂದರೆ ಆಕೆಯ ಬಡತನ ಒಂದು ತುತ್ತು ಅನ್ನ! ಬಡವರಿಗೆ ಯಾರೂ ಇಲ್ಲ, ತೀವ್ರವಾಗಿ ಬೀಸುತ್ತಿದ್ದ ಗಾಳಿಯೂ ಕೂಡ ಆಕೆಯೊಡನೆ ಸರಸವಾಡುವಂತೆ ತೋರುತಿತ್ತು. ಆಕೆಯ ತಲೆಯ ಕೂದಲುಗಳನ್ನು, ಹರಿದ ಸೀರೆಯನ್ನು ನಿಂತಲ್ಲಿ ನಿಲ್ಲಲು ಬಿಡದೆ ಹಾರಾಡಿಸುತಿತ್ತು. ಬಡವರನ್ನು ಕಂಡರೆ ಎಲ್ಲವೂ ಹೀಗೆಯೇ ಕಾಣುತ್ತೆ. ಗಾಳಿಯು ಅಣಕವಾಡಿಸುತ್ತದೆ. ಸರ್ವಜ್ಞರೆಂದಂತೆ 'ನೀಲವೂ ಎದ್ದು ಬಡಿಯುವದು!'

ನಾನು ಆಕೆಯ ಪಕ್ಕಕ್ಕೆ ಹೋಗಿ, 'ಅಮ್ಮಾ, ಏಕೆ ರೋಧಿಸುತ್ತೀ, ನೀನ್ಯಾರು? ನಿನಗೆ ಮನೆ ಮಠ, ಬಂಧು ಬಳಗ ಇಲ್ಲವೇ?' ಎಂದು ಕೇಳಿದೆ. ಆಕೆ ಉತ್ತರ ಕೊಡಲಿಲ್ಲ. ಪುನಃ ಹತ್ತಿರ ಸರಿದು ಆಕೆಯ ಬಟ್ಟೆಯನ್ನು ಸರಿಪಡಿಸ ತಾ ಪುನಃ ಕೇಳಿದೆನು. ಆಕೆಯ ಕಣ್ಣಿನಲ್ಲಿ ಕಂಬನಿ ಹರಿಯತೊಡಗಿತು. ಆಕೆಯು ಪುನಹ ರೋಧಿಸತೊಡಗಿದಳು. ನಾನು ಕರುಣಾಸ್ವರದಿಂದ ಪುನಹ ಒತ್ತಾಯಿಸಲು ಹೇಳತೊಡಗಿದಳು. 'ನಾನು ಅಪರಿಚಿತಳು. ನನ್ನ ತಂದೆಯು ಸ್ವಾತಂತ್ರ್ಯ ಯೋಧನು. ನನ್ನ ಜಾತಿ ಮನುಷ್ಯ ಜಾತಿ. ನನ್ನ ಧರ್ಮ ಹಿಂದೂ ಧರ್ಮ. ನನ್ನ ಸ್ವಂತ ಊರು ಆದಿ ಗ್ರಾಮ". ಇಷ್ಟು ನುಡಿದು ಆಕೆಯು ಗಾಢ ಧರಿಸಿದಳು.

ನಮಗೆ ಆಶ್ಚರ್ಯವೆನಿಸಿತು. ಆಕೆಯ ವೃತ್ತಾಂತವನ್ನು ತಿಳಿಯುವ ಕುತೂಹಲ ಇನ್ನೂ ಹೆಚ್ಚಿತು. ಆಕೆಯನ್ನು ಬಿಡದೆ ಕಾಡಿದ ನಂತರ ಆಕೆ ಹೇಳತೊಡಗಿದಳು.

"ನನ್ನ ತಾಯಿಯು ನನ್ನ ಹತ್ತನೇ ವರ್ಷದಲ್ಲಿ ಮೃತಳಾದಳು. ತಬ್ಬಲಿಯಾದ ನನ್ನನ್ನು ತಂದೆಯವರು ಮಮತೆಯಿಂದ ಪೋಷಿಸುತ್ತಿದ್ದರು. ನನ್ನ ಹನ್ನೆರಡನೇ ವಯಸ್ಸಿನಲ್ಲಿ ತಂದೆ ಪುನಹ ಲಗ್ನವಾದರು. ನನಗೆ ಇಷ್ಟವಿಲ್ಲದಿದ್ದರೂ ತಂದೆಯ ಇಚ್ಛೆಗೆ ವಿರೋಧ ಮಾಡುವಂತಿರಲಿಲ್ಲ. ಚಿಕ್ಕಮ್ಮ ನನ್ನ ಹೆತ್ತಮ್ಮನಂತೆಯೇ ಕಾಣುತ್ತಿದ್ದರು. ಪ್ರಾರಂಭದಲ್ಲಿ ಚಿಕ್ಕಮ್ಮನು ಅಷ್ಟೇನು ಕೆಟ್ಟವಳಾಗಿರಲಿಲ್ಲ. ಆಕೆಗೆ ಮಕ್ಕಳಾದಂತೆ ನನ್ನನ್ನು ನೋಡುವ ಆಕೆಯ ದೃಷ್ಟಿ ಬದಲಾಯಿತು. ಮನೆಯಲ್ಲಿ ನನ್ನ ಸ್ಥಿತಿ ಅಡಿಗೆಯ ಹುಡುಗಿಗಿಂತ ಭಿನ್ನವಾಗಿರಲಿಲ್ಲ. ಚಿಕ್ಕಮ್ಮನು ಬಿಗುಪಿನ ಹೆಂಗಸು. ತಂದೆಯ ಆಟವೂ ಆಕೆಯ ಮುಂದೆ ಸಾಗುತ್ತಿರಲಿಲ್ಲ. ನನ್ನ ಜೀವನ ಮುಳ್ಳಿನ ಹಾಸಿಗೆಯಾಯಿತು. ಕಡೆಗೊಮ್ಮೆ ನನ್ನನ್ನು ಮದುವೆ ಮಾಡಿ ಕೊಟ್ಟರು. ನಾನು ವರಿಸಿದ ಪತಿಯು ಶ್ರೀಮಂತರಲ್ಲದಿದ್ದರೂ ಪ್ರೇಮಕ್ಕೆ ಬಡತನವಿರಲಿಲ್ಲ. ನಮ್ಮ ಬಡತನದ ಜೀವನ ಎರಡು ವರ್ಷ ಸುಖವಾಗಿ ಕಳೆಯಿತು. ವಿಕಸಿತವಾಗಲಿರುವ ಸುಂದರ ಕುಸುಮದ ಮೇಲೆ ಮುಂಗಾರಿನ ಕವಣೆ ಕಲ್ಲು ಬಿದ್ದು ಅದನ್ನು ನೆಲಕ್ಕುರುಳಿಸುವಂತೆ ಕೆಲವೇ ದಿನಗಳ ಜ್ವರದ ಲೆಯಿಂದ ಪತಿಯು ಪರಂಧಾಮವನ್ನೈದಿದರು. ತವರಿಗೆ ಹೋಗುವ ಯೋಚನೆ ನನಗಿರಲಿಲ್ಲ. ಪತಿಗೃಹದಲ್ಲಿ ತಿನ್ನಲು ಗಂಜಿಗೆ ಗತಿ ಇರಲಿಲ್ಲ. ನನಗೆ ಭಿಕ್ಷಾವೃತ್ತಿ, ಇತರರ ಮನೆಗೆಲಸವೇ ಮಾರ್ಗವಾಯಿತು. ಆದರೆ ಚಿಕ್ಕಮ್ಮನಿರುವ ತವರಿಗಿಂಥಾ ಇದೇ ನನಗೆ ಹಿಡಿಸಿತು.

ಈ ನನ್ನ ಜೀವನದಲ್ಲೂ ನನಗೆ ಶಾಂತಿ ದೊರೆಯುವಂತಿರಲಿಲ್ಲ. ಭಗವಂತನು ನನಗೆ ಸೌಂದರ್ಯವನ್ನು ಕೊಟ್ಟಿದ್ದೇ ನನಗೆ ಶೂಲವಾದಂತಾಯಿತು. ಬಡವರಿಗೆ ಸೌಂದರ್ಯವೂ ಶೂಲವೇ! ಸಮಾಜದ ದುಷ್ಟರು ನನ್ನನ್ನು ಶಾಂತಿಯಿಂದ ಭಿಕ್ಷೆ ಬೇಡಲೂ ಬಿಡಲಿಲ್ಲ. ಆದರೆ ನನ್ನ ಪತಿದೇವರಿಗರ್ಪಿಸಿದ ಈ ಹೂವನ್ನು ಬೇರೆ ಯಾರಿಗೂ ಅರ್ಪಿಸುವ ಇಷ್ಟ ನನಗಿರಲಿಲ್ಲ. ಅದಕ್ಕಾಗಿಯೇ ಊರನ್ನು ಬಿಟ್ಟು ಪತಿದೇವರ ಧ್ಯಾನದಲ್ಲಿ ಕಾಲ ಕಳೆಯುತ್ತಿರುವೆನು. ಇದರಲ್ಲಿ ಅವರೊಡನೆ ಹೆಚ್ಚು ಕಾಲ ಬದುಕಲು ಸ್ವರ್ಗಾಗದಿದ್ದರೂ ನನ್ನ ತಪಸ್ಸಿನ ಫಲದಿಂದ ಪರದಲ್ಲಾದರೂ ಅವರ ಜೊತೆಯಲ್ಲಿ ಚಿರಕಾಲ ಬಾಳುವೆನೆಂಬ ಬಯಕೆ ಇದೆ. ಆತ್ಮಹತ್ಯೆ ಮಾಡಿಕೊಂಡು ಅವರ ಸಾನ್ನಿಧ್ಯವನ್ನು ಬೇಗ ಸೇರಲೆಂದೆನಿಸುತ್ತದೆ. ಆದರೆ ಹಾಗೆ ಮಾಡಬೇಕಿಲ್ಲ. ನನ್ನ ದಿನಗಳು ಬಹು ಹತ್ತಿರ ಬಂದಿವೆ. ಇನ್ನು ಮೂರು ನಾಲ್ಕು ದಿನಗಳು ಬದುಕಬಹುದು. ಆ ನಂತರ............' ಆಕೆ ಮಾತಾಡಲಿಲ್ಲ. ಆಕೆಯ ಮುಖದಲ್ಲಿ ಅಪೂರ್ವ ಶಾಂತಿ ಹೊಳೆಯುತ್ತಿತ್ತು.

ಮೈಸೂರಿಗೆ ಹೋಗಲು ದಾರಿಯಲ್ಲಿ ಬೇಕಾದೀತೆಂದು ತೆಗೆದುಕೊಂಡ ಕೆಲವು ಕಿತ್ತಳೆ ಹಣ್ಣುಗಳೂ, ತಿಂಡಿ ಪದಾರ್ಥಗಳೂ ನಮ್ಮಲ್ಲಿದ್ದವು. ಆಕೆಗೆ ಅವುಗಳನ್ನು ಕೊಡಲು ಹೋದೆವು. ತಿನ್ನಬೇಕೆಂದು ಆಗ್ರಹ ಮಾಡಿದೆವು. ಆಕೆ ಒಪ್ಪಲಿಲ್ಲ. "ಶೀಘ್ರ ನನ್ನಿನಿಯನನ್ನು ಸೇರಬೇಕೆಂದಿರುವ ನನ್ನ ಮೇಲೆ ನಿಮಗೆ ಹೊಟ್ಟೆಕಿಚ್ಚೆ? ನೀವು ಕೊಡುವ ಪದಾರ್ಥಗಳನ್ನು ತಿಂದರೆ ಅಷ್ಟು ನನ್ನ ಆಯುಷ್ಯವು ಹೆಚ್ಚಿ ನನ್ನ ಪತಿದೇವನನ್ನು ಕೂಡುವದು ತಡವಾಗುವುದು. ಆದ್ದರಿಂದ ಈ ಪಾಪವನ್ನು ಮಾಡದಿರಿ" ಎಂದಳು. ನನಗೆ ಆಕೆಯ ಮೇಲೆ ಗೌರವಾದರಗಳು ಹೆಚ್ಚಾದವು. ಆಕೆ ಎಂಥಾ ಸ್ತ್ರೀ ರತ್ನ? ರಾಜಸೀಟಿನ ಸೌಂದರ್ಯ, ಅಲ್ಲಿಯ ಆವರಣದ ಪ್ರಭಾವ ಪಾವಿತ್ರ್ಯಕ್ಕೆ ಯೋಗ್ಯಳಾದವಳು. ಇಂಥಾ ಪವಿತ್ರ ಹೃದಯಿಗಳು ಅಲ್ಲಲ್ಲಿ ಇರಬಹುದಾದರೂ ಅವರೆಲ್ಲರೂ ಅಪರಿಚಿತರೇ! ಅವರ ಕಥೆಯನ್ನು ಕೇಳಿ ಅವರ ಹೃದಯದ ಆಳವನ್ನೂ, ಬಗೆಯ ಅರ್ಥವನ್ನೂ ತಿಳಿಯುವ ಸಹನೆ ಎಷ್ಟು ಜನರಿಗಿದೆ? ಆದರೂ ಇಂಥವರೇ ಮಾನವ ಕುಲಕ್ಕೆ ಶೋಭೆ ತರಬಲ್ಲ "ಜವಾಹರು" (ರತ್ನ)ಗಳು. ಭಾರತ ರತ್ನ ಜವಾಹರರನ್ನು ನೋಡಲು ದೊರೆಯದಿದ್ದರೂ ಮಹಿಳಾ ವೃಂದದ ಜವಾಹರದ ದರ್ಶನವಾಯಿತು!

ತ್ರಿಪುರದಲ್ಲಿ ಪೆಟ್ರೋಲ್ ಕಂಡುಹಿಡಿಯಲಾಯಿತು.

ತ್ರಿಪುರ ಸಂಸ್ಥಾನದಲ್ಲಿ ಎಣ್ಣೆಯ ಸಂಗ್ರಹ ಕಂಡುಹಿಡಿಯಲು ಯತ್ನ ನಡೆಸುತ್ತಿದ್ದ ತಜ್ಞರು ಸಂಸ್ಥಾನದ ಆಗ್ನೇಯ ದಿಕ್ಕಿನಲ್ಲಿ ಪೆಟ್ರೋಲಿಯಂ ಸಂಗ್ರಹ ಕಂಡುಹಿಡಿದಿದ್ದಾರೆ. ಭಾರತದ ಇತರ ಭಾಗಗಳಲ್ಲಿಯೂ ತೈಲಕ್ಕಾಗಿ ಶೋಧ ನಡೆಯುತ್ತಿದೆ. ಸದ್ಯ ಭಾರತದಲ್ಲಿ ಇಲ್ಲಿಯ ಅವಶ್ಯಕತೆಯ ಬರೇ ಶೇ. ೭ರಷ್ಟು ಮಾತ್ರ ಪೆಟ್ರೋಲ್ ಸಿಗುತ್ತದೆ.

ನಾಣ್ಯದ ಸ್ಟಾಂಪ್.

ಇತ್ತೀಚೆಗ ಪೋಸ್ಟ್ ಕಾರ್ಡಿನ ದರ ಏರಿಕೆಯಿಂದ ಮಾತ್ರಾವಾಣಿಗೆ ಏರಿದೆಯಷ್ಟೆ. ಬೆರೋಲಿಯ ಟಪ್ಪಾಲು ಕಛೇರಿಯೊಂದರಲ್ಲಿ ಕಾರ್ಡಿಗೆ ಅಂಟಿಸಲೆಂದು ಪಾವಾಣೆ ಸ್ಟಾಂಪ್ ಪಡೆಯಲು ಹೋದವನೊಬ್ಬನಿಗೆ ಅದು ಸಿಕ್ಕದಿರಲು ಕಾರ್ಡಿಗೆ ಪಾವಾಣೆ ಸ್ಟಾಂಪಿನ ಬದಲು ಪಾವಾಣೆ ನಾಣ್ಯವನ್ನೇ ಅದಾಗಿಗೆ ಅಂಟಿಸಿ ದಪ್ಪದನಂತೆ ಅದೇ ಟಪ್ಪಾಲು ಆಫೀಸಿನಲ್ಲಿ ಕಾರ್ಡ್ ಪೋಸ್ಟ್ ಮಾಡಿದನು. ಟಪ್ಪಾಲು ಅಧಿಕಾರಿಗಳಿಗೆ ಈ ಕಾರ್ಡ್ ಕಂಡು ಒಮ್ಮೆ ವಿಸ್ಮಯವಾಯಿತು. ಆದರೆ ನಂತರ ವಿಷಯ ಅವಗಾಹನೆಗೆ ಬಂದು ಒಂದು ಪಾವಾಣೆಯ ಸ್ಟಾಂಪನ್ನು ನಾಣ್ಯ ಇದ್ದಲ್ಲಿ ಹಚ್ಚಿದರು.

॥ ಪತ್ರವ್ಯವಹಾರಗಳು ॥

ಸರಕಾರ ಗಮನಿಸಲಿ.

ಕೊಡಗಿನಲ್ಲಿ ಶೇ. ೫೦ಕ್ಕಿಂತಾ ಹೆಚ್ಚಾಗಿ ಜನರು ಹಲ್ಲುಗಳಿಗೆ ಸಂಬಂಧಿಸಿದ ವ್ಯಾಧಿಯಿಂದ ತೊಂದರೆಪಡುವರೆಂದರೆ ಅತ್ಯುಕ್ತಿಯಲ್ಲ. ಅದರಲ್ಲೂ ಈಗಿನ ಪೀಳಿಗೆಯಲ್ಲಿ ಆರೋಗ್ಯಕರವಾದ ಹಲ್ಲು ಇರುವವರು ವಿರಳವೆನ್ನಬಹುದು. ಈ ರೋಗ ಪೀಡಿತರ ಅನುಕೂಲತೆಗಾಗಿ ಸದ್ಯಕ್ಕೆ ವೀರರಾಜಪೇಟೆ ಮತ್ತು ಮಡಿಕೇರಿ ಸಿವಿಲ್ ಆಸ್ಪತ್ರೆಗಳಲ್ಲಿ ಹಲ್ಲು ರೋಗ ಚಿಕಿತ್ಸೆಯ ಒಂದೊಂದು ಶಾಖೆ ತೆರೆಯಬೇಕಾಗಿದೆ. ಈಗ ವೀರರಾಜಪೇಟೆ ಮತ್ತು ಮಡಿಕೇರಿಯಲ್ಲಿ ಖಾಸಗಿ ದಂತ ವೈದ್ಯರಿದ್ದಾರೆ. ಬಡ ಜನರಿಗೆ ಇವರಿಂದ ಚಿಕಿತ್ಸೆ ಮಾಡಿಸಿಕೊಳ್ಳುವದು ಸಾಧ್ಯವಿಲ್ಲ. ಬರೀ ಹಲ್ಲುಗಳನ್ನು ಒಮ್ಮೆ ತೊಳೆದು ಶುಚಿ ಮಾಡಲು ೧೫, ೨೦ ರೂಪಾಯಿ ತೆಗೆದುಕೊಳ್ಳುವದರಿಂದ ಬಡ ಜನರು ಈ ಚಿಕಿತ್ಸೆ ಪಡೆಯುವದು ಅವರ ಶಕ್ತಿಗೆ ಮೀರಿದ್ದು. ಆದ್ದರಿಂದ ಸರಕಾರವು ಸಿವಿಲ್ ಆಸ್ಪತ್ರೆಗಳಲ್ಲಿ ಯೋಗ್ಯ ಡಾಕ್ಟರನ್ನು ಇಟ್ಟು ಜನ ಹಿತವನ್ನು ಸಾಧಿಸಬೇಕಾಗಿದೆ.

'ಜನ ಸೇವಕ'

ಬಸ್ ಸಂಖ್ಯೆ ಹೆಚ್ಚಲಿ.

ಬಸ್ಸುಗಳಲ್ಲಿ ವಿಪರೀತವಾಗಿ ಜನರನ್ನು ತುಂಬಿಸಿಕೊಂಡು ಹೋಗುವ ಪರಿಪಾಠವು ಮಾಮೂಲಾಗಿತ್ತು. ೨೫ ಜನರ ಬಸ್ಸಿನಲ್ಲಿ ೫೦ ಜನರೂ ಸಾಗಿಸಲ್ಪಡುತ್ತಿದ್ದರು. ಮೊನ್ನೆ ಅಮ್ಮತ್ತಿಯ ಹತ್ತಿರ ಯೂನಿಯನ್ ಬಸ್ಸಿಗಾದ ಅಪಾಯದ ಕಾಲದಲ್ಲೂ ಬಸ್ಸಿನಲ್ಲಿ ಇರಬೇಕಿದ್ದುದಕ್ಕಿಂತಾ ಹತ್ತು ಹದಿನೈದು ಜನರು ಹೆಚ್ಚಿದ್ದರೆಂದೂ, ಅದು ಚೀಫ್ ಕಮಿಷನರ ಅವಗಾಹನೆಗೆ ಬಂದು ಇತ್ತಲಾಗಿ ಬಸ್ಸಿನಲ್ಲಿ ಹೆಚ್ಚು ಜನರನ್ನು ಕೂರಿಸುವ ಬಗ್ಗೆ ಕಠಿಣ ನಿಯಮವಾಗಿದೆಯೆಂದೂ ರಸ್ತೆಯಲ್ಲಿ ಅಲ್ಲಲ್ಲಿ ಪೊಲೀಸರನ್ನು ನಿಲ್ಲಿಸಿ ಬಸ್ ಚೆಕ್ ಮಾಡುತ್ತಿರುವರೆಂದೂ ತಿಳಿದು ಬಂದಿದೆ. [illegible] ಯೋಗ್ಯವಾದ ಏರ್ಪಾಡೇ. [illegible] ಸರಕಾರವು ಇಷ್ಟು ಮಾಡಿ ಅದರಿಂದಲೇ ತೃಪ್ತರಾಗಬಾರದು. ಜನರು ಈ ಹಿಂದೆ ಬಸ್ಸುಗಳಲ್ಲಿ ಲಗ್ಗೆ ಹತ್ತಿಕೊಂಡು ತಿರುಗುತ್ತಿದ್ದುದು ತಮಾಷೆಗಾಗಿ ಅಲ್ಲ. ಕೊಡಗಿನಲ್ಲಿ ಬಸ್ಸು ಸಂಖ್ಯೆಗಳು ಕಡಿಮೆಯಾಗಿ ಅವಶ್ಯದ ಕೆಲಸಗಳಿಗೆ ಅತ್ತಿತ್ತ ಪ್ರಯಾಣ ಮಾಡಬೇಕಾದ ಜನ ಸಂಖ್ಯೆ ಹೆಚ್ಚಾಗಿರುವುದೇ ಕಾರಣವಾಗಿದೆ. ಆದ್ದರಿಂದ ಸರಕಾರವು ಇನ್ನೂ ಹತ್ತಾರು ಸರ್ವೀಸುಗಳನ್ನು ಅವಶ್ಯ ಕಂಡಲ್ಲೆಲ್ಲಾ ಹೆಚ್ಚಿಸಬೇಕಾಗಿದೆ. ಮೊನ್ನೆಯಾಗಿ ಇಲ್ಲಿಗೆ ದಯಮಾಡಿಸಿದ್ದ ಕೇಂದ್ರ ಸರಕಾರದ ಮಂತ್ರಿಯವರು ಕೊಡಗಿಗೆ ಇನ್ನೂ ಹೆಚ್ಚಿನ ಪೆಟ್ರೋಲ್ ಕೋಟಾವನ್ನು ಕೊಡುವ ಭರವಸೆ ಇತ್ತಿದ್ದಾರೆ. ಅದನ್ನು ಪಡೆದು ಹೊಸ ಸರ್ವಿಸ್ಸುಗಳಿಗೆ ಅನುಮಾಡಬೇಕಿದೆ. ಬಸ್ಸು ಲೈಸೆನ್ಸಿಗಾಗಿ ಅನೇಕ ಜನರು ಕಾಯುತ್ತಿರುವರು. ಲೈಸನ್ಸ್ ಕೊಟ್ಟರೆ ಲೈನು ಓಡಿಸಲು ಮುಂದೆ ಬರುವ ಅನೇಕ ಜನರಿರುವರು. ಸರಕಾರವು ಈ ವಿಚಾರ ನಿಗವಹಿಸಿ ಜನರ ಹಿತ ಸಾಧಿಸುವದಲ್ಲದೆ ತನ್ನ ಬೊಕ್ಕಸಕ್ಕೂ ನಾಲ್ಕು ಕಾಸು ಹೆಚ್ಚಿಗೆ ಬರುವ ಮಾರ್ಗ ಮಾಡುವದೇ ?

'ಪ್ರಯಾಣಿಕ'

ಚೀಫ್ ಕಮಿಷನರ ಸೂರ್ಲಬಿ ಪ್ರವಾಸ.

ಸೂರ್ಲಬಿನಾಡು ಯಾವ ಕಡೆ ನೋಡಿದರೂ ಕಲ್ಲು ಬಂಡೆಗಳಿಂದ ಆವರಿಸಿರುವ ಬೆಟ್ಟಗಳ ಸಾಲು. ಕಣಿವೆಗಳಲ್ಲಿ ಬೆಳೆಸುವ ಅಲ್ಪ ಸ್ವಲ್ಪ ಭತ್ತ, ತರಕಾರಿ ಮಾತ್ರ ಆ ಊರಿನ ಉತ್ಪತ್ತಿ. ಇವುಗಳನ್ನು ತಲೆ ಹೊರೆಯಲ್ಲಿ ೧೮-೨೦ ಮೈಲು ದೂರದ ಸೋಮವಾರಪೇಟೆ ಸುಂಟಿಕೊಪ್ಪ ಮಾರ್ಕೆಟ್ಟುಗಳಿಗೆ ಹೊತ್ತುಕೊಂಡು ಹೋಗಿ ಮಾರಿ ಸಿಕ್ಕಿದ ಅಲ್ಪ ಸ್ವಲ್ಪ ಹಣದಿಂದ ಈ ನಾಡಿನ ಜನರ ಜೀವನ. ಈ ಭಾಗದ ಜನರು ತಮ್ಮ ಕಷ್ಟಗಳನ್ನು ಈಗಿನ ಚೀಫ್ ಕಮಿಷನರವರಿಗೆ ಹೇಳಿಕೊಳ್ಳಲು ಅವರು ತಾ. ೪-೪-೪೯ಕ್ಕೆ ಗರ್ವಾಲೆಗೆ ಬಂದರು. ಗ್ರಾಮಸ್ಥರು ಆಬಾಲವೃದ್ಧರಾದಿಯಾಗಿ ಸುಮಾರು ೪೦೦ ಜನರಿಗೆ ಮೇಲ್ಪಟ್ಟು ನೆರೆದಿದ್ದರು. ಚೀಫ್ ಕಮಿಷನರು ರೈತರ ಕಷ್ಟ ಸುಖಗಳನ್ನು ವಿಚಾರಿಸಿ ಗ್ರಾಮಸ್ಥರ ಕೋರಿಕೆಗಳನ್ನು ಕೇಳಿ ಒಂದು ಶಾಲೆ ಮತ್ತು ಮಾದಾಪುರದಿಂದ ನ್ಯಾಯವಾದ ರಸ್ತೆಯನ್ನು ಮಾಡಿಸಿಕೊಡುವುದಾಗಿ ವಾಗ್ದಾನ ಮಾಡಿದರು. ಗ್ರಾಮಸ್ಥರು ಶಾಲೆ ಕಟ್ಟಡಕ್ಕೆ ರೂ. ೪೦೦೦ ತಾವು ಕೊಡುವುದಾಗಿ ಭರವಸೆ ಇತ್ತರು. ಸರಕಾರದವರು ೮೦೦೦ ಕೊಡುವ ಮಾತಿತ್ತಿದ್ದಾರೆ. ಮೀಟಿಂಗ್ ನಡೆದ ಬಳಿಕ ಚೀಫ್ ಕಮಿಷನರು ಕೆಲವು ಬಡ ಜನರ ಮನೆಗಳನ್ನು ಸಂದರ್ಶಿಸಿ ಅವುಗಳ ಸ್ಥಿತಿಯನ್ನು ನೋಡಿ ಬಹು ಕನಿಕರಪಟ್ಟರು. ತಾರೀಕು ೫-೪-೪೯ರಲ್ಲಿ ಅವರು ಸೂರ್ಲಬಿಗೆ ದಯಮಾಡಿಸಿದರು. ಅಲ್ಲಿಯೂ ಸುತ್ತಲ ಗ್ರಾಮಗಳ ರೈತರು ಕಿಕ್ಕಿರಿದು ನೆರೆದಿದ್ದರು. ಶ್ರೀ. ಸುಬ್ರಮಣ್ಯ ದೇವಸ್ಥಾನದಲ್ಲಿ ಪೂಜೆ ನಡೆದ ನಂತರ ಮೀಟಿಂಗು ನಡೆಯಿತು. ಜನರು ತಮ್ಮ ಕಷ್ಟವನ್ನು ಹೇಳಿಕೊಂಡ ನಂತರ ಚೀಫ್ ಕಮಿಷನರ್ ಸಾಹೇಬರು ಗ್ರಾಮಸ್ಥರ ದುಸ್ಥಿತಿಗೆ ವ್ಯಸನವನ್ನು ಸೂಚಿಸಿ ಗ್ರಾಮಾಭಿವೃದ್ಧಿಗೆ ಮೊದಲನೆಯದಾದ ರಸ್ತೆಗೆ ರೂ. ೨೦,೦೦೦ ಕೊಡುವದಾಗಿಯೂ ಸಾರ್ವಜನಿಕ ಪ್ರಯೋಜನಕ್ಕೆ ೩ ಬಾವಿಗಳನ್ನು ತೆಗೆಸುವದಾಗಿಯೂ ಹೇಳಿದರು. ಕ್ರಮೇಣ ಹಣ ಒದಗಿದಂತೆ ಇತರ ಸೌಕರ್ಯಗಳನ್ನು ಒದಗಿಸಿಕೊಡುವ ಭರವಸೆ ಇತ್ತರು. ಹೆಚ್ಚಿನ ಆಹಾರ ಬೆಳೆಸುವ ರಿಯಾಯಿತಿ ಮೇರೆ ತುಂಬಾ ಸಹಾಯಮಾಡುವುದಾಗಿ ಹೇಳಿದರು. ಇಂಜನಿಯರು ರಸ್ತೆ ಕೆಲಸವನ್ನು ಒಡನೆ ಪ್ರಾರಂಭಿಸುವುದಾಗಿ ಭರವಸೆ ಇತ್ತರು. ಗ್ರಾಮಸ್ಥರು ಸಹ ಸಹಕರಿಸಬೇಕಾಗಿ ಕೇಳಿಕೊಂಡರು. ಆ ನಂತರ ಚೀಫ್ ಕಮಿಷನರು ಕೃತಕ ಗೊಬ್ಬರ ತಯಾರಿಸಿದವರಿಗೆ ಇನಾಂ ಹಂಚಿ ಇನಾಂ ರೂಪದಲ್ಲಿ ಸಿಕ್ಕಿದ ಹಣವನ್ನು ವ್ಯವಸಾಯದ ಉಪಕರಣಗಳನ್ನು ಕೊಂಡುಕೊಳ್ಳಲು ಮಾತ್ರ ಉಪಯೋಗಿಸುವುದಾಗಿ ಎಲ್ಲರಿಂದ ವಾಗ್ದಾನ ತೆಗೆದುಕೊಂಡರು. ವ್ಯವಸಾಯ ಅಧಿಕಾರಿಯು ಕೃತಕ ಗೊಬ್ಬರದ ಪ್ರಯೋಜನ, ಭತ್ತದ ರೋಗಗಳು ಅವುಗಳನ್ನು ನಿವಾರಿಸುವ ವಿಷಯ ವಗೈರೆ ವಿವರಿಸಿದರು.

ಅಂಡಮಾನ್‌ನಂತಿರುವ ನಮ್ಮ ಪ್ರದೇಶದ ರೈತರ ಕಷ್ಟ ನಿವಾರಿಸಲು ಈ ಪ್ರದೇಶಕ್ಕೆ ಚೀಫ್ ಕಮಿಷನರು ಬಂದದ್ದು ಇದೇ ಮೊದಲು. ಇದೇ ಸುದಿನವೋ ಎಂಬಂತೆ ೬ ತಿಂಗಳಿಂದ ಮಳೆಯಿಲ್ಲದೆ ಇಲ್ಲಿ ಬೆಳೆಸುವ ಕೋಡೆ ಬೆಳೆಯು ಉರಿದು ನಾಶವಾಗುವ ಕಾಲಕ್ಕೆ ಸೊಗಸಾದ ಮಳೆಸುರಿದು ರೈತರು ಸಂತೋಷಗೊಂಡರು.

ಗ್ರಾಮಸ್ಥ.

ಶಿಶು ಪ್ರದರ್ಶನ

ಕೊಡಗಿನ ರೆಡ್‌ಕ್ರಾಸ್ ಸೊಸೈಟಿಯ ಆಶ್ರಯದಲ್ಲಿ, ಮಡಿಕೇರಿಯಲ್ಲಿ, ಶಿಶು ಪ್ರದರ್ಶನವು ಇದೇ ಮೇ ತಾರೀಖು ೧೨ ಮತ್ತು ೧೩ ರಲ್ಲಿ ನಡೆಯುವುದು

ಮೇ ೧೨ ನೇ ತಾರೀಕಿನಲ್ಲಿ:—ಬೆಳಗ್ಗೆ ೯ ಗಂಟೆಗೆ ಶಾಲಾ ಮಕ್ಕಳ ಮೆರವಣಿಗೆ ಕೋಟೆಯಿಂದ ಹೊರಡುವುದು. ೧೩ ನೇ ದಿನ ೯ ಗಂಟೆಗೆ ಚೊಕ್ಕಟವಾಗಿಟ್ಟಿರತಕ್ಕ ಹೋಟೆಲುಗಳನ್ನು, ದನದ ಕೊಟ್ಟಿಗೆಗಳನ್ನು, ಜನ ವಾಸವಿರುವ ಮನೆಗಳನ್ನು ಮತ್ತು ಸೊಗಸಾದ ಹೂವಿನ ತೋಟಗಳನ್ನು ಸೊಸೈಟಿಯಿಂದ ನೇಮಕವಾದ ಕೆಲವು ಮಾನ್ಯರು ಸಂದರ್ಶಿಸಿ ಬಹುಮಾನಗಳ ಬಗ್ಗೆ ತೀರ್ಮಾನಿಸುವರು.

ಸೆಂಟ್ರಲ್ ಹೈಸ್ಕೂಲಿನಲ್ಲಿ.

ಮೇ ತಾ. ೧೩ ರಲ್ಲಿ:—ಬೆಳಗ್ಗೆ ೧೦ ಗಂಟೆಗೆ ಆರೋಗ್ಯ ಪ್ರದರ್ಶನವು ತೆರೆಯಲ್ಪಡುವುದು.

೧೧ **ಘಂಟೆಗೆ;**—ಭಾಷಣ ಆರೋಗ್ಯ ಸಂಬಂಧ.

ಮಧ್ಯಾಹ್ನ:—೧೨ ಗಂಟೆಗೆ ಗರೀಬ ತಾಯಂದಿಯರಿಗೂ ಅವರ ಮಕ್ಕಳಿಗೂ, ಊಟ ಕೊಡಲಾಗುವುದು.-

ಅಪರಾಹ್ನ:—೩ ಗಂಟೆಗೆ ಶಿಶು ಪ್ರದರ್ಶನ ತೆರೆಯಲ್ಪಡುವುದು.

೪ ಗಂಟೆಗೆ ಭಾಷಣ ಗರ್ಭಿಣಿ ಸ್ತ್ರೀಯರ ಪೋಷಣೆ ಮತ್ತು ಶಿಶುಗಳ ಉಪಚಾರ—ಲೇಡಿ ಅಸಿಸ್ಟೆಂಟ್ ಸರ್ಜನರವರಿಂದ.

೫-೩೦ ಘಂಟೆಗೆ ಬಹುಮಾನ ವಿನಿಯೋಗ ಶ್ರೀಮತಿ ಯಶೋಧರಮ್ಮ ಮೊದಲಿಯೂರ್‌ರವರಿಂದ. ಲಕ್ಕಿ ಡಿಪ್, ಆನೆ ಸವಾರಿ, ಲಾಟರಿ, ಮತ್ತಿತರ ವಿನೋದಗಳು ನಡೆಯುವವು. ಸರ್ವರೂ ಭಾಗವಹಿಸಿ, ಪ್ರೋತ್ಸಾಹಿಸಬೇಕಾಗಿ ವಿನಂತಿ.

ಸೂ:—೬ ತಿಂಗಳಿನಿಂದ ೩ ವರ್ಷಕ್ಕೆ ಮೀರದ ಮಕ್ಕಳಿಗೆ ಬಹುಮಾನಗಳಿವೆ. ಎಲ್ಲಾ ತಾಯಂದಿರು ತಮ್ಮ ಶಿಶುಗಳನ್ನು ತರಬೇಕೆಂದು ಈ ಮೂಲಕ ಕೇಳಿಕೊಳ್ಳಲಾಗುವುದು.

ವಿ. ಸೂ. :—ಈ ವರ್ಷದ ಬಹುಮಾನಗಳನ್ನು ಹಿಂದಿನ ವರ್ಷಗಳಿಗಿಂತಾ ಶೇ. ೫೦ ರಷ್ಟು ಹೆಚ್ಚಿಸಲಾಗಿದೆ

ಬ್ರಿಟಿಷ್ ರಾಜರಿಗೆ ಭಾರತವು ಆಧೀನವಿಲ್ಲ.

ಕಾಮನ್‌ವೆಲ್ತ್‌ನಲ್ಲಿ ರಿಪಬ್ಲಿಕನ್ ಭಾರತವನ್ನು ಉಳಿಸಿಕೊಳ್ಳುವ ವಿಷಯದಲ್ಲಿ ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಲನದಲ್ಲಿ ಒಡಂಬಡಿಕೆ ಸಾಧ್ಯವಾಗಿದೆಯೆಂದು ಗೊತ್ತಾಗಿದೆ. ಸಮ್ಮೇಳನವು ಯಶಸ್ವಿಯಾಗಿ ಮುಕ್ತಾಯವಾಗುವ ಮೊದಲು ಇನ್ನೂ ಕೆಲವು ಮುಖ್ಯ ಸಮಸ್ಯೆಗಳು ಬಗೆಹರಿಯಬೇಕಾಗಿವೆಯೆಂದೂ ಗೊತ್ತಾಗಿದೆ. ಕಾಮನ್‌ವೆಲ್ತ್ ರಾಷ್ಟ್ರಗಳ ಮಧ್ಯೆ ಇರಬೇಕಾದ ಸಂಬಂಧ ಕುರಿತು ಚರ್ಚಿಸಲು ತಾ. ೨೫ರ ರಾತ್ರಿ ಡೊಮಿನಿಯನ್ ಪ್ರಧಾನಿಗಳು ೨ ಗಂಟೆಗಳ ಕಾಲ ಸಭೆ ಸೇರಿ ಗುಪ್ತವಾಗಿ ಮಾತುಕತೆ ನಡೆಸಿದರು.

ಕಾಮನ್‌ವೆಲ್ತ್ ರಾಷ್ಟ್ರಗಳು ಬ್ರಿಟಿಷ್ ರಾಜರೊಡನೆ ಇಟ್ಟುಕೊಳ್ಳಬೇಕಾದ ಸಂಬಂಧ ಕುರಿತು ಒಂದು ಘೋಷಣೆಯನ್ನು ಅಂಗೀಕರಿಸಲಾಗಿದೆ. ಈ ಘೋಷಣೆ ರೀತ್ಯಾ ಬ್ರಿಟಿಷ್ ರಾಜರನ್ನು ಕಾಮನ್‌ವೆಲ್ತ್ ರಾಷ್ಟ್ರಗಳ ಪರಸ್ಪರ ಸಹಕಾರದ ಸಂಕೇತನನ್ನಾಗಿ ಅಂಗೀಕರಿಸಲಾಗಿದೆಯೆಂದೂ ಭಾರತವು ಮಾತ್ರ ಈ ಸಂಕೇತವನ್ನು ಗೌರವಿಸುವದಾದರೂ ಇತರ ಕಾಮನ್‌ವೆಲ್ತ್ ರಾಷ್ಟ್ರಗಳಂತೆ ಬ್ರಿಟಿಷ್ ಮುಕುಟಕ್ಕೆ ಆಧೀನವಾಗಿರುವದಿಲ್ಲವೆಂದೂ ಗೊತ್ತಾಗಿದೆ.

೧. ಕಾಮನ್‌ವೆಲ್ತ್ ಸಂಬಂಧವನ್ನು ಸ್ಥಿರಪಡಿಸಿಕೊಳ್ಳುವ ದೃಷ್ಟಿಯಿಂದ ಭಾರತದ ಸ್ವತಂತ್ರ ರಿಪಬ್ಲಿಕ್ ಸ್ಥಾನ ಮಾನದಲ್ಲಿ ಕಿಂಚಿತ್ತೂ ಚ್ಯುತಿ ಬರಕೂಡದು.

೨. ಕಾಮನ್‌ವೆಲ್ತ್ ಸಂಬಂಧದ ಕಾರಣವಾಗಿ ಭಾರತವು ಯಾವ ಒಂದು ಮಿಲಿಟರಿ ಒಪ್ಪಂದಕ್ಕೂ ಸಹಿ ಹಾಕುವದಿಲ್ಲ.

೩. ಅಂತರ್‌ರಾಷ್ಟ್ರೀಯ ರಾಜಕೀಯ ವಿಷಯಗಳಲ್ಲಿ ಭಾರತವು ತನ್ನದೇ ಆದ ಸ್ವತಂತ್ರ ಧೋರಣೆಯನ್ನನುಸರಿಸುತ್ತದೆ.

ಇವು ಮೂರು ಷರತ್ತುಗಳನ್ನು ಭಾರತವು ಮಂಡಿಸಿರುವದಾಗಿ ಗೊತ್ತಾಗಿದೆ.

ಭಾರತದ ರಾಷ್ಟ್ರಗೀತೆ.

ಪಂ. ಸುಬ್ಬಾ ಶಾಸ್ತ್ರಿ ಮತ್ತು ಕರ್ನೂಲಿನ ಶೇಷಾಚಾರ್ ಇವರುಗಳು ಡಾ. ಪಟ್ಟಾಭಿಯವರಲ್ಲಿಗೆ ನಿಯೋಗ ಹೋಗಿ 'ಜನಗಣಮನ' ಗೀತೆಯನ್ನು ರಾಷ್ಟ್ರ ಗೀತೆಯಾಗಿ ಅಂಗೀಕರಿಸಬೇಕಾದ ಅಗತ್ಯ ಕುರಿತು ಮನವಿ ಮಾಡಿಕೊಂಡರು. 'ವಂದೇ ಮಾತರಂ' ಎಂಬ ಗೀತೆಗಿಂತಾ 'ಜನಗಣಮನ' ಗೀತೆಯು ರಾಷ್ಟ್ರ ಗೀತೆಯಾಗಲು ಹೆಚ್ಚು ಯೋಗ್ಯವಾಗಿದೆಯೆಂದು ಬಿನ್ನವಿಸಿಕೊಂಡರು.

'ವಂದೇ ಮಾತರಂ' ಗೀತೆಯನ್ನು ಪುಷ್ಟೀಕರಿಸಿ ಕೆಲವರು 'ಜನಗಣಮನ' ಗೀತೆಯನ್ನು ಪುಷ್ಟೀಕರಿಸಿ ಇನ್ನು ಕೆಲವರು ಬಿನ್ನಹ ಮಾಡಿಕೊಂಡಿರುವದರಿಂದ ಈ ಪ್ರಶ್ನೆಯು ಈಗ ರಾಜ್ಯಾಂಗ ಸಭೆಯ ಪರಿಶೀಲನೆಯಲ್ಲಿದೆಯೆಂದೂ, ಎಲ್ಲಾ ಸಾಧಕ ಬಾಧಕಗಳನ್ನೂ ಪರಿಶೀಲಿಸಿ ರಾಜ್ಯಾಂಗ ಸಭೆಯು ಈ ವಿಷಯವನ್ನು ಇತ್ಯರ್ಥಪಡಿಸಲಿದೆಯೆಂದೂ ಡಾ. ಪಟ್ಟಾಭಿಯವರು ಭರವಸೆ ಇತ್ತರು.

ಭಾರತದ ಭಾಗ್ಯ ಭಂಡಾರ

— ಭಗವದ್ಗೀತೆ —

ಲೇ:—ಶ್ರೀ ಎ. ಎಸ್. ರಾಮಕೃಷ್ಣ ಬಿ ಎಸ್‌ಸಿ (ಆನರ್ಸ್) ಬಿ. ಟಿ.

ಲೇಖನ ೯

ಮಹಾಭಾರತವೆಂಬ ವಿಶಾಲ ನಾಟಕದ ಒಂದು ದೃಶ್ಯವಾಗಿ ಪರಮ ಪಾವನವಾದ ಭಗವದ್ಗೀತೆ ದಿವ್ಯಜ್ಯೋತಿಸ್ಸಿನಿಂದ ರಂಜಿಸುತ್ತದೆ. ಭಗವದ್ಗೀತೆಯು ಮಹಾಭಾರತದ ಒಂದಂಗವಾಗಿದ್ದರೂ ಸ್ವತಃ ಪರಿಪೂರ್ಣವೂ ಸ್ವಯಂಪ್ರಭೆಯುಳ್ಳವೂ ಆಗಿದೆ. ೭೦೦ ಶ್ಲೋಕಗಳಿಂದೊಡಗೂಡಿದ ಈ ಚಿಕ್ಕ ಕೃತಿಯಲ್ಲಿ ಪ್ರಪಂಚದ ಮತ್ತಾವ ಭಾಷೆಯಲ್ಲೂ ದೊರೆಯದ ಅಪಾರ ದಿವ್ಯವೂ, ಅದ್ಭುತವೂ, ರೋಮಾಂಚಕವೂ ಆದ ತತ್ವ ವಿಚಾರಗಳು ಅಡಕವಾಗಿವೆ. ಭಗವದ್ಗೀತೆಯೆಂಬ ಜ್ಯೋತಿ ಭಾರತದ ತಾತ್ವಿಕ ಬಾನಂಗಳದಲ್ಲಿ ಉದಿಸಿದಂದಿನಿಂದ ಇಂದಿನ ವರೆಗೂ ಅವ್ಯಾಹತವಾಗಿ ತನ್ನ ವಿಮಲ ಪ್ರಭೆಯನ್ನು ಬೀರುತ್ತಾ ಇಂದು ಕೂಡಾ ಭಾರತೀಯರ ಆಧ್ಯಾತ್ಮಿಕ ವಿಕಸನಕ್ಕೆ ಅಡಿಪಾಯವನ್ನು ಕಲ್ಪಿಸುತ್ತದೆ. ತತ್ವಶಾಸ್ತ್ರದ ನಾನಾ ಮುಖಗಳು ಗೀತೆಯನ್ನೇ ತಮ್ಮ ವಾದಕ್ಕೆ ಆಧಾರವಾಗಿ ಮಾಡಿಕೊಂಡು ತಮಗೆ ಬೇಕಾದಂತೆ ಗೀತಾ ಶ್ಲೋಕಗಳನ್ನು ಅರ್ಥ ಮಾಡಿಕೊಂಡಿವೆ. ಮಾನವನ ಮನಸ್ಸು ಕ್ಲೈಬ್ಯಪೂರ್ಣವಾಗಿ ಸಂಶಯ ಪ್ರವೃತ್ತಿಯನ್ನು ತಾಳಿ ಕಿಂಕರ್ತವ್ಯಮೂಢವಾದಾಗ ಅಂತಃಸ್ಫೂರ್ತಿಯನ್ನೂ ಸದಸದ್ವಿವೇಕವನ್ನೂ ಒದಗಿಸಲೋಸುಗ ಗೀತೆಯ ಕದ ಸರ್ವದಾ ತೆರೆದಿದೆ. ಏಕೆಂದರೆ ಗೀತೆಯು ರಾಜಕೀಯ ಸಾಮಾಜಿಕ ದಾಂಧಲೆಯುಂಟಾಗಿ ಮಾನವನ ಮನಸ್ಸು ವಿಕಲ್ಪಗೊಂಡಾಗಲೇ ಜನ್ಮತಾಳಿತು. ದೈವಾಸುರ ಪ್ರವೃತ್ತಿಗಳಿಂದ ಕೂಡಿದ ಮಾನವನ ಮಾನಸಿಕ ಸಾಗರವನ್ನು ಮಥಿಸಿದ್ದರ ಪರಿಣಾಮದಿಂದ ಉಂಟಾದ ನವನೀತವೇ ಗೀತೆಯು.

ಗೀತೆಯ ನೈಜ ಸ್ವರೂಪದ ವಿಷಯ ವಿಚಾರ ಪರಿಪ್ಲುತ ವ್ಯಾಖ್ಯಾನಗಳು ಎಷ್ಟೋ ಹುಟ್ಟಿವೆ; ಹುಟ್ಟುತ್ತಲೂ ಇವೆ. ಅನೇಕ ವಿದ್ವಾಂಸರು ಗೀತೆಯ ಒಂದೊಂದು ಅಂಶವನ್ನು ತೆಗೆದುಕೊಂಡು ತಮಗೆ ಬೇಕಾದಂತೆ ಅರ್ಥಮಾಡಿ ತಮ್ಮ ಸಿದ್ಧಾಂತಗಳನ್ನು ಸಂಸ್ಥಾಪಿಸಿದ್ದಾರೆ. ಆಧುನಿಕ ಯುಗದ ಮಹಾಜ್ಞಾನಿಗಳಾದ ಲೋಕಮಾನ್ಯ ತಿಲಕ, ಮಹಾತ್ಮಾ ಗಾಂಧಿ, ಯೋಗಿ ಅರವಿಂದ ಘೋಷ್ ಮುಂತಾದವರು ಗೀತೆಯ ಮೇಲೆ ವ್ಯಾಖ್ಯಾನಗಳನ್ನೂ ಬರೆದಿದ್ದಾರೆ. ಧರ್ಮಾತ್ಮ ಗಾಂಧೀಜಿ ತಮ್ಮ ಅಹಿಂಸೆಯ ಅಮರ ತತ್ವವು ಗೀತಾ ಪ್ರಮಾಣವಾಗಿದೆಯೆಂದು ಸಾಧಿಸುತ್ತಾರೆ. ಇತರರು ಅಧ್ಯಯನದ ಮೂಲೋತ್ಪತ್ತಿಸ್ಸೋ ಸಂಗ ಹೂಡುವ ಧರ್ಮ ಸಮರವು ಗೀತೋಕ್ತವಲ್ಲವೇನು ಸಮರ್ಥಿಸುತ್ತಾರೆ.

ಮಹಾ ಸಮರವು ಪ್ರಾರಂಭಿಸುವ ಮೊದಲು ರಣಾಂಗಣದಲ್ಲೇ ಶ್ರೀಕೃಷ್ಣನಿಗೂ ಅರ್ಜುನನಿಗೂ ಆದ ಸಂಭಾಷಣೆಯಿಂದ ಗೀತೆಯು ಪ್ರಾರಂಭಿಸುತ್ತದೆ. ಪುರುಷಸಿಂಹನೂ ಪಾರ್ಥಿವಾಗ್ರೇಸರನೂ ಅಲೌಕಿಕ ಯಶಸ್ವಿಯೂ ಮಹಾಧನುರ್ಧಾರಿಯೂ ಆದ ಪಾರ್ಥನಿಗೆ ರಣರಂಗದಲ್ಲಿ ಮಾನಸಿಕ ವಿಪ್ಲವ ಉಂಟಾಗುತ್ತದೆ. ಅವನಿಗೆ ಹಿಂಸಾಪೂರ್ಣವೂ ರಕ್ತಪಾತಮಯವೂ ಆದ ರುದ್ರಯುದ್ಧವು ಅಸಹನೀಯವೆಂದು ತೋರುತ್ತದೆ. ಅಗಣಿತ ಸಂಖ್ಯೆಯಲ್ಲಿ ಜನಬಾಂಧವರನ್ನೂ ಗುರುಗಳನ್ನೂ ಆಚಾರ್ಯರನ್ನೂ ಕೊಂದು ರಕ್ತದ ಓಕುಳಿ ಹರಿಸಿ ಕಡೆಗೆ ಏನೂ ಸಾಧಿಸುವ ಪುರುಷಾರ್ಥವೇನು? ಅತಿರಥ ಮಹಾರಥರ ತನುವಿನ ಕ್ಷತರಕ್ತದಿಂದ ಪರಿಪ್ಲುತವಾದ ಇಳೆಯನ್ನು ಭೋಗಿಸುವುದರಿಂದಾದರೂ ಏನು ಸೌಖ್ಯವಿದೆ? ಇಂಥಾ ಸಂದೇಹ ಪ್ರಜ್ವಲಿತಗೊಳಗಾದ ಅರ್ಜುನನಿಗೆ ತನ್ನ ಉನ್ನತೋನ್ನತ ಗಾಂಡೀವವೂ ತತ್ತಳಿಸ ಹತ್ತಿ, ಮೈ ಕಂಪಿಸ ತೊಡಗಿ ಬೆವರು ಸುರಿದು ಅಮಾನುಷ ಪೌರುಷವು ಲುಪ್ತವಾದಂತೆ ಭಾಸವಾಗುತ್ತದೆ. ಮಾನವನ ಮನಸ್ಸಿನಲ್ಲಿ ಈ ವಿಧವಾದ ತುಮುಲ ಹೋರಾಟವು ನಿರಂತರವೂ ನಡೆಯುತ್ತಿದೆ. ಮಾನಸಿಕ ಹೋರಾಟದಿಂದ ವಿವೇಕಶೂನ್ಯನಾದ ದಲಿತ ಶಕ್ತಿಯ ಮಾನವನು ಕಿಂಕರ್ತವ್ಯಮೂಢನಾಗುವುದು ಮಾನವನ ಇತಿಹಾಸದಲ್ಲಿ ಸತತವೂ ಕಾಣಸಿಗುತ್ತದೆ. ಇಂಥಹ ಅವಸ್ಥೆಯನ್ನು ಅರ್ಜುನನೇ ತಾಳಿ ತಾನೆ ವ್ಯಾಕುಲಗ್ರಸ್ತನಾದ ಅರ್ಜುನನಿಗೂ ಶ್ರೀಕೃಷ್ಣನಿಗೂ ಪರಸ್ಪರ ಸಂಭಾಷಣೆ ನಡೆದ ವೇಳೆ ಅತಿಗಹನವೂ, ಗೂಢಾತ್ ಗೂಢತರವೂ, ಅದ್ಭುತವೂ ರೋಮಾಂಚಕವೂ ಆದ ಆಧ್ಯಾತ್ಮಿಕ ತತ್ವಗಳು ಗೀತೆಯಲ್ಲಿ ಗೋಚರಿಸುತ್ತವೆ. ವ್ಯಕ್ತಿಗತ ಕರ್ತವ್ಯ, ಸಾಮಾಜಿಕ ರೀತಿ ನೀತಿಗಳಿಂದ ಆರಂಭಿಸಿ ಮಾನವ ಜೀವನಕ್ಕೆ ಧಾರ್ಮಿಕ ಕಳೆಯನ್ನು ಕೊಟ್ಟು ಪಾರಮಾರ್ಥಿಕ ಜೀವನವನ್ನು ನಡೆಸುವ ವಿಮಲ ಮಾರ್ಗವು ವಿಶದವಾಗಿ ಕಲ್ಪಿತವಾಗಿದೆ. ಇ[illegible]ತನದ ಆಧ್ಯಾತ್ಮಿಕ ತತ್ವ ಪ್ರಧಾನವಾಗಿ ಆತ್ಮವಿಕಸನಕ್ಕೆ ಕಾರಣವಾದ ಜ್ಞಾನ, ಕರ್ಮ, ಭಕ್ತಿ ಇವುಗಳಲ್ಲಿ ಸಾಮರಸ್ಯವನ್ನು ಕಲ್ಪಿಸುವ ಪ್ರಯತ್ನವನ್ನಿಲ್ಲಿ ನೋಡುತ್ತೇವೆ. ಸಂಶಯ ಪಡುವವನಿಗೆ ಎಂದೂ ಸುಖವಿಲ್ಲ ಎಂದು ಗೀತೆಯು ಘೋಷಿಸುವುದರಿಂದ ಭಗವಂತನ ದಿವ್ಯ ಶಕ್ತಿಯಲ್ಲಿ ನಂಬಿಕೆಯಿಡಬೇಕೆಂದು ಸಾರಿ ಹೇಳುತ್ತದೆ. ಸಾಕಾರನೆಂದು ಭಗವಂತನನ್ನು ಗೀತೆಯು ಒಪ್ಪುತ್ತದೆ. ಆದರೆ ಸಗುಣ ಸಾಕಾರನಾದ ಭಗವಂತನೇ ನಿರ್ಗುಣ ನಿರಾಕಾರನಾದ ಅಖಂಡ ಬ್ರಹ್ಮನ ಒಂದು ಅವಿಭಾಜ್ಯ ವಿನಹ ಅನ್ಯಥಾ ಇಲ್ಲವೆಂದು ಗೀತೆಯ ಭಾವವಾಗಿದೆ.

ಗೀತೆಯು ಮಾನವ ಜೀವನದ ದೈವಿಕ ಹಿನ್ನೆಲೆಯನ್ನು ಸಾಧಿಸುವುದರ ಮೂಲಕ ಮನುಷ್ಯ ಜೀವನದಲ್ಲಿ ದಿನ ನಿತ್ಯ ಬರುವ ಸ್ವಭಾವಿಕ ಸಮಸ್ಯೆಗಳನ್ನು ನಿಷ್ಕರ್ಷಿಸುತ್ತದೆ. ಜೀವಿತ ಧ್ಯೇಯಗಳನ್ನು ಸಾಧಿಸಲೋಸುಗ ಕರ್ಮಯೋಗವನ್ನು ಗೀತೆಯು ಪ್ರತಿಪಾದಿಸುತ್ತದೆ. ಕರ್ತವ್ಯಪರಾಙ್ಮುಖತೆಗೆ ಇಲ್ಲಿ ಸ್ಥಳವಿಲ್ಲ. ಕರ್ತವ್ಯವು ಯುಗ ಧರ್ಮಕ್ಕೆ ಅನುಸಾರವಾಗಿದ್ದಿರಬೇಕು. ಏಕೆಂದರೆ ಕರ್ತವ್ಯ ಕರ್ಮಗಳು ವಿವಿಧ ದೇಶಗಳಲ್ಲಿ ವಿವಿಧ ಕಾಲಗಳಲ್ಲಿ ವಿವಿಧವಾಗಿರಬಹುದು. ದೇಶ ಕಾಲಕ್ಕನುಗುಣವಾದ ಯುಗ ಧರ್ಮವನ್ನು ವ್ಯಕ್ತಿ ಪಾಲಿಸಲೇ ಬೇಕು.

ಪರದಾಸ್ಯ ಶೃಂಖಲೆಯಿಂದ ಬಂಧಿತವಾಗಿ ಈಗ ತಾನೆ ಸ್ವಾತಂತ್ರ್ಯ ವಾತಾವರಣದಲ್ಲಿ ಉಸಿರಾಡುವ ಆಧುನಿಕ ಭಾರತದಲ್ಲಿ ಕರ್ತವ್ಯ ದಕ್ಷತೆಯ ವಿದ್ಯುತ್ ಸಂದೇಶವು ಸಂಚಾರವಾಗಲು ಗೀತೆಯ ಕ್ರಿಯಾಪ್ರೇರಕ ಮಂತ್ರವು ಮಹಾ ಸಾಧನವಾಗಿದೆ. ಸಾಮಾಜಿಕ ಉನ್ನತಿಗೆ ರಾಷ್ಟ್ರೀಯ ಅಭಿವೃದ್ಧಿಗೆ ಸಕಲ ಮಾನವ ಗಣದ ಅಭ್ಯುದಯಕ್ಕೆ ನಿಸ್ವಾರ್ಥ ಸೇವೆ ಅತ್ಯಾವಶ್ಯಕ. ಇಂಥಾ ಪಾರಮಾರ್ಥಿಕ ಹಿನ್ನೆಲೆಯಿಂದೊಡಗೂಡಿದ ಸೇವಾ ಬುದ್ಧಿಗೆ ಗೀತೆಯು ಸರ್ವದಾ ಪ್ರೋತ್ಸಾಹವನ್ನು ನೀಡುತ್ತದೆ. ಫಲಾಪೇಕ್ಷೆಯಿಂದ ಮಾಡಿದ ಕ್ರಿಯೆಯು ಶ್ರೇಯಸ್ಕರವಲ್ಲ. ನಿಸ್ವಾರ್ಥ ಬುದ್ಧಿ 'ರಾಜೀವಂ ಕೆಸರಲ್ಲಿ ಅಲ್ಲದ ಪೊಲ್' ಮಾಡಿದ ಕ್ರಿಯೆಯೇ ಶ್ಲಾಘನೀಯ. ಸತ್ಕ್ರಿಯೆಯು ಸತ್ಫಲವನ್ನೇ ಕೊಡಬೇಕು. ಕ್ರಿಯೆಯ ಫಲವು ತಕ್ಷಣ ದೊರಕದೆ ಹೋಗಬಹುದು. ಆದರೆ ಕೆಲಸಕ್ಕೆ ತಕ್ಕ ಫಲವು ಒಂದಲ್ಲ ಒಂದು ದಿನ ದೊರಕಲೇ ಬೇಕು.

ಗೀತೆಯ ಸಂದೇಶವು ಒಂದು ಪಂಗಡದ ಅಥವಾ ಒಂದು ನೋಟದ ಜನರ ಪರಿಪುಷ್ಟತೆಗಾಗಿ ಮೀಸಲಾದುದಲ್ಲ. ಅದು ವಿಶ್ವತೋಮುಖವಾಗಿ ಸಕಲ ಜೀವರಾಶಿಗಳಿಗೂ ಅನ್ವಯಿಸುತ್ತದೆ. ಎಲ್ಲ ನದಿಗಳೂ ಮಹಾ ಸಾಗರಕ್ಕೆ ಸೇರುವಂತೆ ಎಲ್ಲ ಮಾರ್ಗಗಳೂ ಎಲ್ಲ ವಿಧಾನಗಳೂ ಒಟ್ಟು ಭಗವಂತನೆಡೆಗೇ ಹೋಗುತ್ತವೆ. ಈ ಸಮನ್ವಯ ತತ್ವಸಾಧನೆಯಿಂದಲೇ ಗೀತೆಯು ಎಲ್ಲ ಕಾಲದಲ್ಲೂ ಎಲ್ಲ ದೇಶದಲ್ಲೂ ಖ್ಯಾತಿ ಗಳಿಸಿದೆ. ಆಯಾ ಕಾಲಕ್ಕೆ ಆಯಾ ದೇಶಕ್ಕೆ ತಕ್ಕಂತೆ ಅಳವಡಿಸಿಕೊಂಡು ಹೋಗಬಹುದಾದ ವಿಶಿಷ್ಟ ಶಕ್ತಿಯು ಗೀತಾ ತತ್ವದಲ್ಲಿ ಅಡಕವಾಗಿದೆ. ಗೀತೆಯ ಶೋಧನಾತ್ಮಕ ಪ್ರವೃತ್ತಿಯೂ, ಹೋರಾಟ ತಿಕ್ಕಾಟಗಳ ತುಮುಲ ಕಾಳಗದ ಮಧ್ಯೆ ಸಮಶೀಲನವೂ, ಸಮ ಬುದ್ಧಿಯೂ, ಸ್ಥಿತ ಪ್ರಜ್ಞೆಯೂ ಸರ್ವ ಕಾಲದಲ್ಲೂ ಅನ್ವಯಿಸುವ ತತ್ವಗಳಾಗಿವೆ.

ದುಃಖೇಷು ಅನುದ್ವಿಗ್ನಮನನಾಗಿ ಸುಖೇಷು ವಿಗತಸ್ಪೃಹನಾಗಿ ಪರಿಸ್ಥಿತಿಯ ದಾಸನಾಗಿರದೆ ಹಿಗ್ಗದೆ ಕುಗ್ಗದೆ ಮಾನಸಿಕ ದಾರ್ಢ್ಯವನ್ನು ಗಳಿಸಲು ಗೀತಾಮೃತವು ಸದಾ ಕಾಲವೂ ಸಹಕರಿಸುತ್ತದೆ. ಪರಿಸ್ಥಿತಿಯ ದೆಸೆಯಿಂದ ಪ್ರಕ್ಷುಬ್ಧ ಮಹಾ ಸಾಗರದಂತೆ ಅಲ್ಲೋಲ ಕಲ್ಲೋಲವಾದ ಮನಸ್ಸನ್ನು ಜಯಿಸಿ ಸ್ಥಿತಪ್ರಜ್ಞನಾಗಿ ಎಂಥ ಭೀಭತ್ಸ ಪರಿಸ್ಥಿತಿಯನ್ನು ಕೂಡಾ ಎದುರಿಸುವ ಧೀಶಕ್ತಿಯನ್ನು ಸಂಪಾದಿಸಲು ಗೀತೆಯಲ್ಲದೆ ಇನ್ನಾವ ತತ್ವವು ಸಹಕರಿಸಬಲ್ಲುದು? ಭಗವದ್ಗೀತೆಯನ್ನು ಬರೆದು ೨೫೦೦ ವರುಷಗಳಾದುವು. ಈ ದೀರ್ಘ ಅವಧಿಯಲ್ಲಿ ಭಾರತದ ಮಾನವಕೋಟಿ ಕಷ್ಟ ಕಾರ್ಪಣ್ಯಗಳನ್ನೂ, ಎಡರುತೊಡರುಗಳನ್ನೂ ವಿಘ್ನ ವಿಡಂಬರಗಳನ್ನೂ ಎದುರಿಸಿ ಉನ್ನತಿ–ಅವನತಿಗಳ, ಕ್ರಾಂತಿ ವಿಪ್ಲವಗಳ ಕರಾಳ ನಖಗಳಿಗೆ ಸಿಕ್ಕಿ ನುಜ್ಜುಗುಜ್ಜಾಗಿದೆ. ಆದುದರಿಂದು ಕೂಡಾ ಮಾನಸಿಕ ಕ್ಲೈಬ್ಯ ಉಂಟಾದಾಗ, ಆಧ್ಯಾತ್ಮಿಕ ಚಾಂಚಲತೆಯುಂಟಾದಾಗ, ವಿಕಸನಗೊಳ್ಳುವ ದೈವಿಕ ಪ್ರವೃತ್ತಿಯನ್ನು ಬೆಳೆಸುವ ಆಕಾಂಕ್ಷೆ ಮಾನವನಲ್ಲಿ ತಲೆದೋರಿದಾಗ ಗೀತೆಯ ೧೮ ಅಧ್ಯಾಯಗಳಿಂದ ಮಾನವನು ತನ್ನ ತಿಕ್ಕಾಟ ಹೋರಾಟಗಳನ್ನು ಜಯಿಸಿ ತನ್ನ ಮಾನಸಿಕ ಸಾಮ್ರಾಜ್ಯದ ನಿರಂಕುಶ ಪ್ರಭುವಾಗುತ್ತಾನೆ.

ದಿ ಟ್ರಾಪಿಕಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ:- ಲಾಲ ಶಂಕರ್ ಲಾಲ್.

ಮುಖ್ಯ ಕಚೇರಿ:- ಹೊಸ ಡೆಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್

ಹಕೀಮ್ ಅಜಮಲಖಾನ್. ಡಾ|| ಎಂ. ಎ. ಅನ್ಸಾರಿ.

(1) ದೇಶದಲ್ಲಿ ಪ್ರಮುಖ ದೇಶಭಕ್ತರಿಂದ ಸ್ಥಾಪಿಸಲ್ಪಟ್ಟಿದೆ.

(2) ಸ್ವತಂತ್ರ ಭಾರತದಲ್ಲಿ ಅಧಿಕ ಸಂಗ್ರಹವನ್ನು ಭದ್ರವಾಗಿರಿಸುವುದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯವಾಗಿದೆ.

(3) ಕಳೆದ 22 ವರ್ಷಗಳ ಹಿರಿಯ ಅನುಭವವುಳ್ಳ ನಾವು ನಿಮ್ಮ ಜೀವವಿಮಾ ಸಂಬಂಧ ಸಲಹೆ ನೀಡಲು ಸಂತೋಷಪಡುತ್ತೇವೆ.

(4) ಜೀವವಿಮಾ, ಬೆಂಕಿ, ಮರೈನ್ ಮತ್ತು ಅಪಘಾತ ಇವೆಲ್ಲ ಶಾಖೆಗಳನ್ನು ಮಾಡುತ್ತೇವೆ.

(5) ಆರಂಭದಿಂದ ಏಜಂಟರಿಗೆ ಬೋನಸ್ಸು ಕೊಡುತ್ತದೆ.

(6) ಏಜೆಂಟರಿಗೆ ಮತ್ತು ಆರ್ಗನೈಜರುಗಳಿಗೆ ತಮ್ಮ ಜೀವಮಾನದಲ್ಲಿ [illegible] ಒಳ್ಳೆ ಸಂದರ್ಭವನ್ನು ಒದಗಿಸಿಕೊಟ್ಟು ಎಲ್ಲಾ ಕಾಲದಲ್ಲಿಯೂ [illegible] ರೀತಿಯಲ್ಲಿ ಅವರನ್ನು ನಡೆಸಿಕೊಳ್ಳಲಾಗುತ್ತದೆ.

ನಮ್ಮ ಹೊಸ ವಿಸ್ತಾರದ ಯೋಜನೆಯಲ್ಲಿ ಆಕರ್ಷಕ ಕಮಿಷನ್ ಮೇಲೆ ಆರ್ಗನೈಜರನ್ನು ನಿಯಮಿಸಿಕೊಳ್ಳತಕ್ಕದ್ದಿದೆ. ದಯವಿಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಏಜೆನ್ಸಿ ಸುಪರಿಂಟೆಂಡೆಂಟ್, ಮಡಿಕೇರಿ, ಕೊಡಗು.

ಅಥವಾ

ಎಂ. ಎ. ಬೆಳ್ಯಪ್ಪ, ಬ್ರಾಂಚ್ ಸೆಕ್ರೆಟರಿ, ದಿ ಟ್ರಾಪಿಕಲ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್; ಹಂಪನಕಟ್ಟಾ, ಮಂಗಳೂರು.

ಹೆಂಗಸರು ಮಾಡಬಹುದಾದ ಕಾರ್ಯಗಳು.

(ಬಿಡುವಿರುವಾಗ ಮಹಿಳೆಯರು ಏನೇನು ಮಾಡಬಹುದು ಮತ್ತು ಮಾಡಬೇಕು ಎಂಬುದನ್ನು ವಿವರಿಸುವ ಈ ಲೇಖನವು ಮಂಗಳೂರಿನಿಂದ ಮಹಿಳೆಯರಿಗಾಗಿಯೇ ಹೊರಡುತ್ತಿರುವ ಸುವಾಸಿನಿ ಪತ್ರಿಕೆಯಲ್ಲಿ ಪ್ರಕಟವಾಗಿದೆ.)

ಯಾವ ಹೆಂಗಸಿಗೆ ತಮ್ಮ ಮನೆಗೆಲಸಗಳನ್ನು ಮುಗಿಸಿ ಸ್ವಲ್ಪವಾದರೂ ಬಿಡುವು ದೊರಕುತ್ತದೋ, ಅವರಿಗಾಗಿ ಈ ಲೇಖನವನ್ನು ಬರೆದುದಾಗಿದೆ. ಕೆಲವರು ತಮಗೆ ಸ್ವಲ್ಪ ಸಮಯ ಸಿಕ್ಕುತ್ತಲೇ ನೆರೆಮನೆಗೆ ಹೋಗುವರು, ಕೆಲವರು ನಿದ್ದೆ ಮಾಡುವರು. ಹೇಗಾದರೂ ತಮ್ಮ ಸಮಯವನ್ನು ಆನಂದದಿಂದ ಕಳೆಯಲು ಪ್ರಯತ್ನಿಸುವರು. ಆದರೆ ಇಂಥವರು ತಮ್ಮ ಬಿಡು ಸಮಯವನ್ನು ಏನಾದರೂ ಪ್ರೀತಿಯ ವ್ಯವಸಾಯವನ್ನು ಮಾಡುವುದರಲ್ಲಿ ಕಳೆದರೆ, ಅವರ ಸಮಯವು ವ್ಯರ್ಥವಾಗದು.

ದೊಡ್ಡ ಪಟ್ಟಣಗಳಲ್ಲಿ ವಾಸಿಸುವ ಹೆಂಗಸರು ತಮ್ಮ ಸಮಯವನ್ನು ಬ್ಯಾಡ್‌ಮಿಂಟನ್, ಟೆನ್ನಿಸ್ ಮುಂತಾದ ಆಟಗಳಲ್ಲಿಯೂ, ಸಂಗೀತ, ಹೊಲಿಗೆಯ ವರ್ಗಗಳಲ್ಲಿಯೂ ಹೊಸ ಚಿತ್ರಪಟಗಳನ್ನು ನೋಡುವುದರಲ್ಲಿಯೂ ಕಳೆಯುವರು. ಆದರೆ, ಇಂಥಾ ಸೌಕರ್ಯಗಳು ಇಲ್ಲದ ಕಡೆಗಳಲ್ಲಿ ಕಾಲವನ್ನು ಹೇಗೆ ಕಳೆಯಬಹುದೆಂಬ ಕೆಲವು ಸೂಚನೆಗಳನ್ನು ಕೊಡುವವು.

ಅಡಿಗೆ

ಯಾವ ಸ್ತ್ರೀಯರಿಗೆ ಸ್ವತಃ ಅಡಿಗೆ ಮಾಡುವ ಅಗತ್ಯ ಬೀಳುವುದಿಲ್ಲವೋ ಅವರು ಆಗಾಗ ಹೊಸ ಹೊಸ ತಿಂಡಿಗಳನ್ನೂ ಪಕ್ವಾನ್ನಗಳನ್ನೂ ಮಾಡಲು ಕಲಿಯಬಹುದು. ಒಂದು ಹೊಸ ವಿಧದ ತಿಂಡಿಯನ್ನು ಮಾಡಲು ಕಲಿತರೆ ಮನಸ್ಸಿಗೆ ಆನಂದವುಂಟಾಗುವುದು. ಅಲ್ಲದೆ ಮನೆಯಲ್ಲಿದ್ದ ಇತರರು ಅದರ ರುಚಿಯನ್ನು ತಿಳಿದುಕೊಳ್ಳಬಹುದು. ನಿತ್ಯವೂ ಹೊಸ ಪದಾರ್ಥಗಳನ್ನು ಮಾಡಬೇಕೆಂದಿಲ್ಲ ಅಗತ್ಯವಿದ್ದ ಪದಾರ್ಥವನ್ನು ನಾವು ಸ್ವತಃ ನಮ್ಮ ಕೈಯಿಂದಲೇ ಜಾಗರೂಕತೆಯಿಂದ ಮಾಡಿದರೆ ಒಳ್ಳೆಯದು. ಒಂದು ಸಲ ಪಾಕಶಾಸ್ತ್ರದ ರುಚಿಯು ಹತ್ತಿದರೆ ಮತ್ತೆ ನಮ್ಮ ಕೈಯಿಂದಲೇ ಹೊಸ ವಿಧದ ಪದಾರ್ಥಗಳನ್ನು ಮಾಡಲು ನಮಗೆ ಸ್ಫೂರ್ತಿಯು ಬರುವುದು.

ಹೊಲಿಗೆ ಕಸೂತಿ ಮುಂತಾದ ಕೆಲಸಗಳು

ಈ ವಿಷಯವು ಅನೇಕ ವಿಧಗಳಿಂದ ತುಂಬಿಕೊಂಡಿರುವುದರಿಂದ ಇದರಲ್ಲಿನ ಯಾವ ಭಾಗವನ್ನೂ ನಾವು ಚೆನ್ನಾಗಿ ಕಲಿಯಬಲ್ಲೆವು. ಸಾಧಾರಣ ಹೊಲಿಗೆ, ರೇಷ್ಮೆ ನೂಲಿನಿಂದ ಕಸೂತಿ ಹಾಕುವುದು ಮುಂತಾದ ಹೊಸನಮೂನೆಯ ಕೆಲಸಗಳನ್ನು ನಾವು ನಿತ್ಯವೂ ನೋಡುತ್ತಿರುವೆವು. ಈ ಕೆಲಸಗಳಲ್ಲಿ ನಮಗೆ ಯಾವುದು ಬೇಕೋ ಅದನ್ನು, ನಾವು ಚೆನ್ನಾಗಿ ಕಲಿಯಬಹುದು.

ನಾವು ತಯಾರು ಮಾಡುವ ವಸ್ತುಗಳು ಆದಷ್ಟು ನಮ್ಮ ನಿತ್ಯದ ಉಪಯೋಗಕ್ಕೆ ಬೀಳುವಂತಹದ್ದು ಇದ್ದರೆ ಒಳ್ಳೆಯದು. ಇದರಿಂದ ಉಪಯೋಗವೂ, ಗೃಹಶೋಭೆಯೂ ಆಗುವುದು. ಏಕೆಂದರೆ ರೇಷ್ಮೆ ನೂಲಿನಿಂದ ಹಾಕಿದ ಕಸೂತಿಯ ಚಿತ್ರಗಳನ್ನು ಗೋಡೆಗೆ ತೂಗಿಸುವುದರಿಂದ ಶೋಭೆಯು ಬರಲಾರದು. ಇದಕ್ಕಿಂತ ಒಂದೆರಡು ಕುರ್ಚಿಗಳ ಮೇಲಿನ ದಿಂಬುಗಳನ್ನು ಮಾಡಿದರೆ ಒಳ್ಳೆಯದು.

ಮಧ್ಯಮ ವರ್ಗದ ಸ್ತ್ರೀಯರಿಗೆ ಹೆಚ್ಚು ಖರ್ಚು ತಗಲುವ ಸಾಮಾನುಗಳನ್ನು ಕೊಂಡುಕೊಳ್ಳಲು ಅಶಕ್ಯವಾದುದು. ಇಂಥವರು ಅಲ್ಪ ಖರ್ಚಿನಿಂದ ಸುಂದರ ವಸ್ತುಗಳನ್ನು ತಯಾರು ಮಾಡಲು ಪ್ರಯತ್ನಿಸಬೇಕು. ಅನೇಕರೊಡನೆ ಉಪಯೋಗಿಸಿದ ಸಣ್ಣ ಸಣ್ಣ ವಸ್ತ್ರದ ಚೂರುಗಳಿರುತ್ತವೆ. ಇವುಗಳಿಂದ ಸಣ್ಣ ಚೀಲಗಳನ್ನೂ, ಎಲೆಗಳನ್ನೂ ಹೂವುಗಳನ್ನೂ ಮಾಡಬಹುದು ಹೊಸ ವಸ್ತುಗಳಿಗಿಂತ ಇಂಥ ವಸ್ತುಗಳನ್ನು ತಯಾರಿಸುವುದರಲ್ಲಿ ಹೆಚ್ಚು ಆನಂದವುಂಟಾಗುವುದು.

ಇನ್ನು ಸಣ್ಣ ಸಣ್ಣ ಮಕ್ಕಳ ಆಟದ ಗೊಂಬೆಗಳನ್ನು ತಯಾರಿಸಬಹುದು. ಇವುಗಳನ್ನು ಮಾಡುವ ಅಭ್ಯಾಸವಾಗಿ ಬಿಟ್ಟರೆ ಮತ್ತೆ ಹೊಸ ವಸ್ತುಗಳನ್ನು ತಯಾರಿಸುವ ಕಲ್ಪನೆಗಳೂ ಬರುವವು.

ಛಾಯಾ ಚಿತ್ರಗಳನ್ನು ತೆಗೆಯುವದು.

ಇದರಿಂದ ಮನಸ್ಸಿಗೆ ಬಹಳ ಸಂತೋಷವಾಗುವುದು. ಇತ್ತೀಚೆಗೆ ಹೊರಟ ಕ್ಯಾಮರಾಗಳಿಂದ ಮನುಷ್ಯನು ಈ ಕಲೆಯನ್ನು ಬಹಳ ಸುಲಭದಿಂದ ಕಲಿಯಬಹುದು ಕೆಲವು ಕ್ಯಾಮರಾಗಳೊಂದಿಗೆ ಅವುಗಳನ್ನು ಉಪಯೋಗಿಸುವ ವಿಧಾನವನ್ನು ಕೊಟ್ಟಿರುವ ಪುಸ್ತಕಗಳೂ ಸಿಕ್ಕುತ್ತವೆ ಇದರಿಂದ ತಕ್ಕಮಟ್ಟಿನ ಸಹಾಯವಾಗುತ್ತದೆ. ಇದರ ಮೂಲಕ ನಮ್ಮ ಅನುಭವದ ವಿಶೇಷ ಪ್ರಸಂಗಗಳು, ಸ್ನೇಹಿತರು, ಸುಂದರ ದೃಶ್ಯಗಳು ಮುಂತಾದುವುಗಳ ಚಿತ್ರಗಳನ್ನು ಯಾವಾಗಲೂ ನಮ್ಮ ಸಂಗ್ರಹದಲ್ಲಿಡಬಹುದು. ಸಮಯವೂ ಇಚ್ಛೆಯೂ ಇದ್ದರೆ ನಾವು ತೆಗೆದ ಚಿತ್ರಗಳನ್ನು ನಾವು ಮನೆಯಲ್ಲೇ ಛಾಪಿಸಬಹುದು. ಆದರೆ ಖರ್ಚಿನ ದೃಷ್ಟಿಯಿಂದ ಈ ಕಲೆಯು ಎಲ್ಲರಿಂದಲೂ ಸಾಧ್ಯವಾಗಲಾರದು ಇದಕ್ಕೆ ತಗಲುವ ಸಾಮಾನುಗಳು ಬೆಲೆಯುಳ್ಳವುಗಳಾಗಿವೆ, ಹೇರಳ ಹಣವಿದ್ದವರು ಮಾತ್ರ ಈ ಕಲೆಯನ್ನು ಅಭ್ಯಸಿಸಬಹುದು.

ಲೇಖನ ಕಲೆ.

ಇತ್ತೀಚೆಗೆ ಅನೇಕ ಹೆಂಗಸರು ಈ ಕಲೆಯ ವ್ಯವಸಾಯವನ್ನು ಮಾಡುತ್ತಿರುವರು. ಈ ಕಲೆಯಿಂದ ನಮ್ಮ ಮನಸನ್ನೂ ಇತರರ ಮನಸ್ಸನ್ನೂ ಸಂತೋಷಗೊಳಿಸಬಹುದು. ಯಾರು ಒಂದು ವಿಷಯವನ್ನು ವಿಚಾರ ಪೂರ್ವಕವಾಗಿ, ವ್ಯವಸ್ಥಿತವಾಗಿ, ಬೇರೆಯವರ ಮುಂದೆ ಇಡಬಲ್ಲರೋ ಅಥವಾ ತಮ್ಮ ಕಲ್ಪನಾಶಕ್ತಿಯಿಂದ ಕಥೆಗಳನ್ನು ರಚಿಸಬಲ್ಲರೋ ಅಂಥವರು ಈ ಲೇಖನ ಕಲೆಯಿಂದ ಅತ್ಯಂತವಾದ ಆನಂದವನ್ನು ಪಡೆಯುವರು. ಇದು ತಮ್ಮಿಂದ ಸಾಧ್ಯವಿಲ್ಲವೆಂದು ಗ್ರಹಿಸಿ ಸುಮ್ಮನಿರಬಾರದು. ಸಾಕಷ್ಟು ಶಿಕ್ಷಣವಿದ್ದವರು, ಬರೆವ ಅಭಿರುಚಿ ಮತ್ತು ಕುತೂಹಲವಿದ್ದವರು, ತಮಗೆ ತಿಳಿದ ವಿಷಯಗಳನ್ನು ಬರೆಯಲು ಯತ್ನಿಸಬೇಕು

ತೋಟಗಾರಿಕೆ.

ತೋಟವನ್ನು ಮಾಡುವುದು ಇನ್ನೊಂದು ಪುರುಸೊತ್ತಿನ ಸಮಯವನ್ನು ಕಳೆಯುವ ಉಪಾಯವಾಗಿದೆ. ಮನುಷ್ಯನಿಗೆ ಒಂದು ಸಲ ಇದರ ಚಟವು ಹತ್ತಿತೆಂದರೆ ಮತ್ತೆ ಇದು ಬಿಟ್ಟು ಹೋಗಲಾರದು. ಬೀಜ ಬೀಜ ಹಾಕುವುದು, ಹೂಗಿಡಗಳನ್ನು ನೆಡುವುದು, ಅವುಗಳಿಗೆ ನಿತ್ಯವೂ ನೀರು ಹಾಕುವುದು, ಅವುಗಳಲ್ಲಿ ದಿನದಿಂದ ದಿನಕ್ಕೆ ಆಗುವ ಬೆಳವಣಿಗೆಯನ್ನು ನೋಡುವುದು, ಕಡೆಗೆ ಹೂ ಬಿಟ್ಟ ಮೇಲೆ ಅದರ ಸೊಬಗನ್ನು ಉಣ್ಣುವುದು; ಇದರಲ್ಲೇ ಮನಸ್ಸು ರಮಿಸುವುದು. ತನ್ನ ಪರಿಶ್ರಮದಿಂದ ತಾನು ನೆಟ್ಟ ಗಿಡದ ಹೂವು ಅಥವಾ ಹಣ್ಣನ್ನು ನೋಡಿದರೆ ಎಷ್ಟು ಆನಂದವುಂಟಾಗುವುದೆಂದು ಅನುಭವಿಸಿದವರೇ ತಿಳಿಯಬಲ್ಲರು ತೋಟಗಾರಿಕೆಯನ್ನು ಮಾಡುವುದರಿಂದ ಹೊರಗಿನ ಹವೆಯಲ್ಲಿ ವ್ಯಾಯಾಮವೂ ಸಿಗುವುದು ಗಿಡಗಳಿಗಾಗಿ ಮಣ್ಣನ್ನು ಅಗೆಯುವುದು, ನೀರು ಹಾಕುವುದು, ಹುಲ್ಲನ್ನು ತೆಗೆದು ಅಂದವಾಗಿ ಇಡುವುದು. ಈ ಕೆಲಸಗಳನ್ನು ಮಾಡುವಾಗ ಸಾಕಷ್ಟು ವ್ಯಾಯಾಮವೂ ಸಿಕ್ಕುವುದು.

ಹೊತ್ತು ಕಳೆಯುವ ಇನ್ನೊಂದು ಸಾಧನವೆಂದರೆ ವಾಚನ. ವಾಚನದಿಂದ ಮನಸ್ಸಿಗೆ ಸಂತೋಷವಾಗುವುದಲ್ಲದೆ ನಮ್ಮ ಜ್ಞಾನವು ವೃದ್ಧಿಗೊಳ್ಳುವದು, ಬೇರೆ ಬೇರೆ ವಿಧಗಳಿಂದ ವಿಚಾರಮಾಡಿಕೊಳ್ಳುವ ಶಕ್ತಿಯುಂಟಾಗುವುದು ಈ ದೃಷ್ಟಿಯಿಂದ ನೋಡಿದರೆ ಇತರ ಎಲ್ಲಾ ವ್ಯವಸಾಯಗಳಿಗಿಂತ ಇದು ಹೆಚ್ಚಿನ ಮಹತ್ವವುಳ್ಳದ್ದು. ವಾಚನವು ಎಲ್ಲರಿಗೂ ಸಾಧ್ಯವಿದೆ ಎಲ್ಲರಿಗೂ ಎಲ್ಲಾ ಕಾಲಗಳಲ್ಲಿಯೂ ಅವಶ್ಯವಿದೆ. ಆದ್ದರಿಂದ ವಾಚನದ ಅಭ್ಯಾಸವನ್ನು ಮಾಡಿಕೊಳ್ಳಲೇಬೇಕು.

ಮೇಲೆ ಹೇಳಿದ ವ್ಯವಸಾಯಗಳೆಲ್ಲ ಮುಖ್ಯವಾಗಿ ಸಮಯವಿದ್ದವರಿಗಾಗಿವೆ. ಇವುಗಳಲ್ಲಿ ಒಂದೆರಡು ವ್ಯವಸಾಯಗಳಿಂದ ಹಣವನ್ನೂ ಗಳಿಸಬಹುದು. ಮಧ್ಯಮ ವರ್ಗದ ಸ್ತ್ರೀಯರು ಬಿಡುವಿನ ಸಮಯದಲ್ಲಿ ಸ್ವಲ್ಪ ಪರಿಶ್ರಮದಿಂದ ಹಣವನ್ನು ಗಳಿಸಿ ತಮ್ಮ ಕುಟುಂಬಕ್ಕೆ ಸಹಾಯ ಮಾಡಬಹುದು. ಲೇಖನಗಳಿಂದಲೂ ಸ್ವಲ್ಪ ಕಸೂತಿಗಳನ್ನು ಹಾಕುವದರಿಂದಲೂ ಮನೆಯಲ್ಲಿ ಕೂತಲ್ಲೇ ಸ್ವಲ್ಪ ಅರ್ಥೋತ್ಪಾದನವನ್ನು ಮಾಡುವುದರಿಂದ ಏನೂ ಕೆಡುಕಿಲ್ಲ

ಮನುಷ್ಯನಿಗೆ ಸಮಯವನ್ನು ಕಳೆಯುವ ಎಷ್ಟು ಸಾಧನಗಳಿದ್ದರೂ ಸಮವಯಸ್ಕರ ಒಳ ಕೂಟದಿಂದ ಸ್ವಲ್ಪ ಸಮಯವನ್ನು ಕಳೆಯಲೇಬೇಕಾಗುವುದು ಆಗಾಗ್ಗೆ ಸ್ನೇಹಿತರನ್ನು ಕಾಣಬೇಕು, ಕರೆಸಬೇಕು, ಮಾತುಕತೆ ನಡೆಸಬೇಕು ವಿಚಾರ ವಿನಿಮಯ ಮಾಡಬೇಕು. ನಿತ್ಯವೂ ಸ್ನೇಹಿತರನ್ನು ಕೂಡಿಕೊಂಡು ಹರಟೆ ಕೊಚ್ಚುವುದರಿಂದ ಮಾತ್ರ ಪ್ರಯೋಜನವಿಲ್ಲ. ಬದಲಾಗಿ ಮನಸ್ಸು ಚಂಚಲತೆ ಯೊಂದು ಆಗುವುದು.

ಪ್ರತಿಯೊರ್ವ ಮನುಷ್ಯನಲ್ಲಿ ವಿಧ ವಿಧ ರುಚಿಯೂ ಶಕ್ತಿಯೂ ಅಡಗಿಕೊಂಡೇ ಇದೆ. ನಾವು ನಮ್ಮಲ್ಲಿರುವ ಆ ರುಚಿ ಮತ್ತು ಶಕ್ತಿಯನ್ನು ಕಂಡುಕೊಳ್ಳಬೇಕು ಮತ್ತು ಅದನ್ನು ಕಾರ್ಯರೂಪಕ್ಕೆ ಹಚ್ಚಬೇಕು. ಹಾಗಾದರೆ, ಆಯುಷ್ಯವನ್ನು ಇನ್ನಷ್ಟು ಆನಂದದಿಂದ ಕಳೆಯಬಹುದು

ಕೆ. ವಿ. ಡಿ

Edited, Printed and Published by P. I. Belliappa at 'Kodagu' Press Mercara, for 'Kodagu' Ltd

CRESCENT

FOR PROTECTION AND SERVICE.

It is best to represent and insure with

The CRESCENT Insurance Co., Ltd,

H. O: BOMBAY. [Established 1919.

For particulars write to:

Sri B. A. Poovayya or **The Branch Manager,**
Organiser 22 B. Mahatma Gandhi Road,
Polibetta, Coorg. Bangalore 1.

ಸುರಕ್ಷಿತವಾದ ಜೀವವಿಮೆ ಪಡೆಯಲು

ಕ್ರೆಸೆಂಟ್

ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.

Reg. No. M. 1880.
'KODAGU' MERCARA. (Coorg).

ಕೊಡಗು

ಸಂಪಾದಕರು—ಕಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ 4-8-0

ಸಂಪುಟ ೨೭ | ತಾರೀಕು ೬-೫-೧೯೪೯ನೇ ಶುಕ್ರವಾರ | ಸಂಚಿಕೆ ೩೮

ನೆದ ಸತ್ಯಾಗ್ರಹವೇನು, ಎಲ್ಲದರಲ್ಲಿಯೂ ಪಟ್ಟಾಭಿಯವರದು ಮುಖ್ಯ ಹೆಜ್ಜೆ. ಸತ್ಯಾಗ್ರಹ ಸಮಯದಲ್ಲಿ ದೀರ್ಘಕಾಲ ಸೆರೆಯೊಳು ಆಗಿದ್ದರು.

ಪಟ್ಟಾಭಿಯವರ ಸಿಶ್ಚಿತ ಬುದ್ಧಿಗೆ ಒರೆಯು ಕಾಂಗ್ರೆಸ್ಸಿನ ರಚನಾತ್ಮಕ ಕಾರ್ಯಸಾಲಲಿಲ್ಲ. ಅವರ ಹುಟ್ಟೂರು ಕೃಷ್ಣಾ ಜಿಲ್ಲೆ; ಆಂಧ್ರದಲ್ಲಿ ಹಲವು ವಿಮಾಸಂಸ್ಥೆಗಳನ್ನು ಸ್ಥಾಪಿಸಿದರು. ಬ್ಯಾಂಕುಗಳನ್ನು ಹೂಡಿದರು. ಪರಸ್ಪರ ಸಹಕಾರ ಸಂಘಗಳಿಗಾಗಿ ದುಡಿದರು.

ದೇಶೀಸಂಸ್ಥಾನಗಳ ಸಮಸ್ಯೆಗೆ ಪಟ್ಟಾಭಿಯವರು ಮುಖ್ಯಾಧಾರ. ಯಾವ

ಆದರೂ ಪಟ್ಟಾಭಿಯವರ ಹೆಸರು ಭಾರತ ನಾಯಕರ ಪಟ್ಟಿಯಲ್ಲಿ ಮೇಲೇರ ಬರಬೇಕಿದ್ದಷ್ಟು ಬರಲಿಲ್ಲ. ರಾಷ್ಟ್ರಪತಿಯ ಪದವಿ ತಡವಾಗಿ ಅವರಿಗೆ ಬಂದಿದೆ. ಅಧಿಕಾರದ ಇಂದಿನ ಜಂಘಾ ಮಾರುತನ ಸುಳಿಗೆ ಸಿಲುಕದಿರಲು ಅವರ ಅಲ್ಪತೃಪ್ತಿಯೇ ಕಾರಣ. ಇಷ್ಟರಲ್ಲಿಯೇ ದೇವರನಾಮ ನೆನೆದುಕೊಂಡು ಬದುಕುವ ಜಾತಿ ಅವರಿಗೆ ಮನಃಶಾಂತಿ, ಮನಸ್ಸಿಗೆ, ಗರಿ ಇದ್ದರೂ ಹಾರುವ ಮನೀಷ.

ಗೌರವ ಸಿಗಲೀ ಯಾ ಸಿಗದಿರಲಿ, ಪಟ್ಟಾಭಿಗೆ ಸಿಕ್ಕುವ ಗೌರವ ಉಳಿದವರಿಗೆ

ರಾಷ್ಟ್ರಪತಿ ಡಾಕ್ಟರ್ ಪಟ್ಟಾಭಿ ಸೀತಾರಾಮಯ್ಯನವರು.

ಲೇ—ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮ

ಪಟ್ಟಾಭಿಯವರೊಡನೆ ಮಾತಾಡುವುದೆಂದರೆ ಅದೊಂದು ರಸ ಸಜ್ಜನಿಕೆಯ ಸುಖ. ಒಂದು ಕಥೆಯಲ್ಲ, ಒಂದು ಪುರಾಣವಲ್ಲ, ಒಂದು ವಿಷಯವಲ್ಲ, ಶಾಸ್ತ್ರವಲ್ಲ. ಪಟ್ಟಾಭಿ ಇದ್ದರೆ ವಿಶ್ವಕೋಶವೇ ಮೈತಾಳಿ ಇದುರಿಗೆ ಬಂದು ಕೂತ ಹಾಗೆ. ಅವರ ಸಲ್ಲಾಪ ಜೊಳ್ಳು ಮಾತಿನ ಹುರುಪಿಯಲ್ಲ, ಒಂದು ಅಭ್ಯಾಸ ಮಂಡಲದ ಪ್ರಾರಂಭ ಭಾಷಣ. ಅವರ ಬುದ್ಧಿಯ ರುಚಿ ಅಷ್ಟು ವ್ಯಾಪಕ. ಅವರ ವಿಷಯ ಸಂಗ್ರಹ ಅಷ್ಟು ಉತ್ತಮ, ರೀತಿ ಅಷ್ಟು ಚುರುಕು. ಇತಿಹಾಸವೇನು; ಅರ್ಥಶಾಸ್ತ್ರವೇನು, ರಾಷ್ಟ್ರೀಯ ತಿಕ್ಷಣವೇನು; ಔಷಧ ಶಾಸ್ತ್ರವೇನು, ಗ್ರಾಮೋದ್ಧಾರವೇನು; ರಾಜಕಾರಣವೇನು ಸಹಕಾರವೇನು ಎಲ್ಲವೂ ಅವರಿಗೆ ಅಂಗೈನೆಲ್ಲಿಕಾಯಿ. ಬರೀ ಬಗೆದು ಹಿಸುಕಿ ನೋಡಿದ ಕೈಯಲ್ಲ, ಎಲ್ಲವನ್ನೂ ಅರಗಿಸಿಕೊಂಡ ಜೀವ. ವಿಮರ್ಶೆಗೆ ತೊಡಗಿದರೆ ಪಟ್ಟಾಭಿಯವರ ಶಕ್ತಿಗೆ ಇದಿರಿಲ್ಲ. ಎಂಥಾ ಕ್ಲಿಷ್ಟ ಸಮಸ್ಯೆಯಾದರೂ ಅವರ ಕಣ್ಣಿಗೆ ಉತ್ತರ ಕಾಣುತ್ತದೆ.

ಪತ್ರಿಕೆ ಎಂದರೆ ಪಟ್ಟಾಭಿಗೆ ಪ್ರಾಣ. ಮೊದಲಿಂದಲೂ ಅವರಿಗೆ ಬರೆಯುವ ಚಟ ಇದೆ. ಅವರು 'ಜನ್ಮಭೂಮಿ' ಎಂಬ ಪತ್ರಿಕೆಯ ಸಂಪಾದಕರಾಗಿದ್ದರು. ಈಗ ಪತ್ರಿಕಾ ವ್ಯವಸಾಯವನ್ನು ಬಿಟ್ಟರೂ ಲೇಖನ ವ್ಯವಸಾಯವನ್ನು ಬಿಟ್ಟಿಲ್ಲ. ಬರವಣಿಗೆಯಲ್ಲಿ ಇವರ ಧಾಟಿಗೆ ಜತೆ ಇಲ್ಲ. ವ್ಯಂಗ್ಯ, ಕಟೂಕ್ತಿಗಳಿಗೆ ಎತ್ತಿದ ಕೈ. ಪುಷ್ಟ ಭಂಡಾರವಿಡೀ ಅವರ ಲೇಖನಿಯ ತುದಿಯಲ್ಲಿಯೆ! ಉದ್ದ ವಾಕ್ಯಗಳನ್ನು ಬರೆದರೂ, ಕಿರುಮಾತಿನ ಸಿಡಿಗುಂಡೂ ಉಂಟು. ಏನೇ ಬರೆಯಲಿ ಅದರಲ್ಲಿ ಸ್ಪಷ್ಟತೆ ಇದೆ. ಯಾವುದನ್ನೂ ಗಾಳಿಯಲ್ಲಿ ತೇಲಬಿಡುವದಿಲ್ಲ. ನಕ್ಕರೆ ಹೊಟ್ಟೆತುಂಬ ನಗುತ್ತಾರೆ. ಅದು ಬಣ್ಣವಿಲ್ಲದ ಹಳ್ಳಿಯ ನಗು. ಪಟ್ಟಣದ ನಾಗರೀಕತೆಯ ಮುಗುಳು ನಗೆಯಲ್ಲ.

ಪಟ್ಟಾಭಿ ನಾಲ್ಕಾರು ಪುಸ್ತಕ ಬರೆದಿದ್ದಾರೆ. ಅವರು ಬರೆದ ಕಾಂಗ್ರೆಸ್ಸಿನ ಇತಿಹಾಸವು ಜಗತ್ಪ್ರಸಿದ್ಧವಾಗಿದೆ. ಅವರಲ್ಲಿ ಸಾಹಿತ್ಯ ಗುಣವಿದೆ. ಗಾಂಧೀಜಿಯವರ ಬರಹದಂತೆ ಅವರದು ಸರಳ ಸುಂದರವಲ್ಲ. ಓನಾಹೆನರ ಬರವಣಿಗೆಯಂತೆ ಉತ್ತುಂಗ ಭಾವಪೂರ್ಣವೂ ಅಲ್ಲ, ಆದರೂ ಅದರಲ್ಲಿ ಒಂದು ಸೊಬಗು ಇದೆ. ಅದರಲ್ಲಿ ಒಂದು ಭಾವೋದ್ವೇಗವಿದೆ. ಪಟ್ಟಾಭಿಯವರು ತೆಲುಗರು. ವಾದದಲ್ಲಿ ಇವರು ಸಿಡಿಲು ಮರಿ. ಪ್ರತಿಪಕ್ಷದ ಗೆಳೆಯರಿಗೆ ಇವರ ವಾದ ಕೌಶಲ ಸವಿಯೂಟವಾಗಲಿ, ವಿರೋಧ ಪಕ್ಷಕ್ಕೆ ಅದು ನುಂಗಲಾರದ ತುತ್ತಾಗಲಿ... ಸಿಡಿಮಿಡಿಗೊಳ್ಳುವಷ್ಟು ಕಟುವಾಗಿ ಪಂಡಿತ ಮೋತೀಲಾಲರಂಥವರಿಗೂ ಕೂಡ ಪಟ್ಟಾಭಿಯ ವಿಮರ್ಶೆ ಎಂದರೆ ಸ್ವಲ್ಪ ಕಸಿವಿಸಿ.

ಇಷ್ಟೆಲ್ಲ ಅಗ್ಗಳಿಕೆ ಇದ್ದರೂ ಪಟ್ಟಾಭಿಯವರು ಗೋವಿನಂಥವರು. ಅವರ ಎದೆಯಲ್ಲಿ ಕರುಣೆ, ಸೌಜನ್ಯ, ವಿನಯ, ವಿಶ್ವಾಸ... ಸರ್ವಶಕ್ತಿಯನ್ನೂ ಅಕ್ಕ ಉಲ್ಲಾಸಕ್ಕಾಗಿ ಉಪಯೋಗಿಸಿಕೊಳ್ಳುವ ಹದ ಇವರದು. ಮುಂದೆ ಬಂದು ಮೆರೆಯಬೇಕೆಂಬ ಹಿರಿಯಾಸೆ ಇವರಿಗಿಲ್ಲ.

ಪಟ್ಟಾಭಿಯವರು ಗೋಖಲೆಯವರಂತೆ ಗಿಲ ವರ್ಷಕ್ಕೇ ಪದವೀಧರರು. ಓದಿನಲ್ಲಿ ತುಂಬಾ ಚುರುಕಾಗಿದ್ದರು. ಕಲಿತದ್ದು ವೈದ್ಯವಾದರೂ ರುಚಿ ಸಾಹಿತ್ಯದಲ್ಲಿ. ಔಷಧಿ ಕೊಡುವದಕ್ಕಿಂದಾ ಲೇಖನ ಬರೆಯುವದರಲ್ಲಿ ಒಲವು ಬಹಳ. ಇವರ ಈ ವ್ಯಾಪಕ ಚೇತನಕ್ಕೆ ವೈದ್ಯವೃತ್ತಿ ಸಾಲಲಿಲ್ಲ. ತಿಮಿಂಗಿಲವನ್ನು ಬಾವಿಯಲ್ಲಿ ಬಿಡಲು ಬಂದೀತೆ? ಹತ್ತೇ ವರ್ಷದಲ್ಲಿ ತಮ್ಮ ಇಡೀ ಜೀವನ ಕಾಲದೊಳಗಿನ ಉದರ ನಿರ್ವಾಹಕ್ಕೆ ಬೇಕಾಗುವಷ್ಟು ಗಳಿಸಿಕೊಂಡು ಸಾರ್ವಜನಿಕ ಸೇವೆಗೆ ಬಿದ್ದರು. ೧೯೧೬ರಲ್ಲೇ ಇನ್ನೂ ಅಸಹಕಾರ ಕನಸಿನಲ್ಲಿಯೂ ಹುಟ್ಟದ ದಿನಗಳಲ್ಲಿಯೇ ವೈದ್ಯವೃತ್ತಿಯನ್ನು ಬಿಟ್ಟು ರಾಜಕಾರಣದಲ್ಲಿ ಸೇರಿದರು.

ದೇಶಸೇವೆಯಲ್ಲಿ ಪಟ್ಟಾಭಿಯವರದು ಹಗಲಿರುಳು ದುಡಿತ. ಅವರ ಹಾಗೆ ಪೂರ್ಣ ಸಾರ್ವಜನಿಕ ಕೆಲಸಕ್ಕೆ ತಮ್ಮನ್ನು ಅರ್ಪಿಸಿಕೊಂಡವರು ಕಡಿಮೆ. ೧೯೧೬ರಿಂದ ಇವರಿಗೆ ಕಾಂಗ್ರೆಸ್ಸೇ ಪ್ರಾಣ. ೧೯೧೭ರಿಂದಲೂ ಅಖಿಲ ಭಾರತ ಕಾಂಗ್ರೆಸ್ ಸಮಿತಿಯಲ್ಲಿದ್ದಾರೆ. ಒಹುಶಃ ಈಗಿನ ನಾಯಕರಲ್ಲೆಲ್ಲ ಇವರೇ ಹಳೆಯ ಸದಸ್ಯರಿರಬೇಕು. ಕಾಂಗ್ರೆಸ್ಸಿನ ರಚನಾತ್ಮಕ ಚಳವಳಿಯೇನು, ಶಾಸನೋಲ್ಲಂಘ

ಸಂಸ್ಥಾನಕ್ಕೂ ಸೇರಿದವರಲ್ಲದಿದ್ದರೂ ಆ ಸಮಸ್ಯೆಯನ್ನು ಬಗೆಹರಿಸುವ ಕಾರ್ಯದಲ್ಲಿ ಇವರದು ಮುಖ್ಯಪಾತ್ರ. ಸಂಸ್ಥಾನಗಳ ಚಳವಳಿ ಒಂದು ಕಾಲಕ್ಕೆ ಯಾರಿಗೂ ಬೇಡವಾದ ತಬ್ಬಲಿಮಗುವಿನಂತಿತ್ತು. ಪಟ್ಟಾಭಿ ಅದರ ಚುಕ್ಕಾಣಿ ಹಿಡಿದ ಮೇಲೆ ಕಾಂಗ್ರೆಸ್ ಮಹಾಸಭೆ ಆ ಮಗುವಿಗೆ ರಕ್ಷಣೆ ನೀಡಿತು. ಗಾಂಧೀಜಿ ... ಆಶೀರ್ವಾದ ದೊರೆಯಿತು. ಒಬ್ಬ ಹರಲಾಲರು ಈ ಭಾರತ ಸಂಸ್ಥಾನ ಪರಿಷತ್ತಿನ ಅಧ್ಯಕ್ಷರಾದುದೂ ಪಟ್ಟಾಭಿಯವರ ಹಿಡಿತದಿಂದ ಫಲ.

ಸಿಗುವದು ಅಸಂಭವ. ಜನರ ಪಲಿಗೆ ವಿಶ್ವಾಸದ ಮಾತಲ್ಲ. ಅದು ಪಟ್ಟಾಭಿಗೆ ಎಲ್ಲರಿಗಿಂಥಾ ಹೆಚ್ಚಾಗಿಯೇ ಇದೆ. ಗಾಂಧೀಜಿಯ ವಿಶ್ವಾಸದ ಮಾತು? ತ್ರಿಪುರಿ ಕಾಂಗ್ರೆಸ್ಸಿಗಾಗಿ ಪಟ್ಟಾಭಿ ನಿಂತು ಸೋತರಷ್ಟೆ. ಆ ಸಂದರ್ಭದಲ್ಲಿ ಗಾಂಧೀಜಿ ಬರೆದದ್ದು ಏನಾ ನೆನಪು! 'ಸೋಲು ಪಟ್ಟಾಭಿಯದಲ್ಲ, ನನ್ನದು!' ಹತ್ತು ಸಲ ರಾಷ್ಟ್ರಪತಿಯಾಗಿ ಏನ ಬಂತು? ಗಾಂಧೀಜಿಯ ಈ ಹರಕೆ ಪಟ್ಟಾಭಿಯವರ ಅಂತರಂಗಕ್ಕೆ ಒಂದು ಬೆಳಕಿಗೆ ಬಂದ ಚಿರಜೀವಿ ಪಟ್ಟ.

ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್,
ಮಡಿಕೇರಿ.

ನಮ್ಮ ಫ್ರೇಜರ್‌ಪೇಟೆ ಕಾರ್ಖಾನೆಯಲ್ಲಿ ಸದ್ಯಕ್ಕೆ ಈ ಕೆಳಗಿನ ಕೆಲಸಗಳನ್ನು ಕೈಕೊಂಡಿರುತ್ತೇವೆ. ಸರ್ವರೂ ಪ್ರೋತ್ಸಾಹಿಸಬೇಕಾಗಿ ವಿನಂತಿ.
(1) ಭತ್ತ ಮಿಲ್ ಮಾಡುವುದು, (2) ಅಕ್ಕಿ ಮತ್ತು ಧಾನ್ಯಗಳನ್ನು ಹುಡಿಮಾಡುವುದು, (3) ಕಾಫಿ ಹುರಿದು ಹುಡಿ ಮಾಡುವುದು, (4) ಮೂಳೆ ಹುಡಿಮಾಡುವುದು

ವಿಮಾ ಪಾಲಿಸಿ ಇಲ್ಲದ ಪ್ರತಿನಿಧಿಗಳು
ಕೊಚ್ಚಿಕಾರ ... ಡ್.
ಅವರ ಸಲಹೆಗಳು ಉತ್ತಮ ...
ಸಂಸ್ಥಾನಗಳಿಗೆ ... ಬೇಕಾಗಿ
ದಿ ಬೊಂಬೆ ... ಲಿಮಿಟೆಡ್.
30 ಮೌಂಟ್ ರೋಡ್,
ಪೋ. ಬಾ. ನಂ. 337,
ಮದ್ರಾಸು 2.
(ಟೆಲಿಫೋನ್ ... 398).
ಇತರ ಆಫೀಸುಗಳು—ಬೆಂಗಳೂರು, ತಿರುಚನಾಪಳ್ಳಿ, ಕಲ್ಲಿಕೋಟೆ, ಮಂಗಳೂರು, ...

ಭಿಕ್ಷೆ.

ಲೇ:—"ಸಾರಥಿ"

ಭಿಕ್ಷಾಟನೆಯಲ್ಲಿ ಹಲವು ವಿಧ. ಪುಣ್ಯ ತೀರ್ಥಯಾತ್ರೆಗಾಗಿ ಹೊರಟ ಭಿಕ್ಷುಕರು ಕೆಲವರಾದರೆ, ಏಕಾದಶಿ ಮೊದಲಾದ ಪುಣ್ಯ ದಿನಗಳಲ್ಲಿ ಭಿಕ್ಷೆ ಎತ್ತಿ ಸ್ನಾನ ಪೂಜಾದಿ ಕರ್ಮಗಳನ್ನು ತೀರಿಸಿ, ಭಿಕ್ಷೆಯ ಪ್ರತಿಫಲವನ್ನು ನಾಲ್ಕಾರಿಗೆ ಉಣಿಸಿ ತಾನೂ ಒಪ್ಪತ್ತು ಉಣ್ಣುವವರು ಕೆಲವರು. ಭಿಕ್ಷೆಯನ್ನೇ ವೃತ್ತಿಯನ್ನಾಗಿ ಆರಿಸಿಕೊಂಡವರು ಸಹಸ್ರಾರು. 'ಭಗವಂತನೇ ಮಾನವನ ಸುಗುಣ ಪರೀಕ್ಷಾರ್ಥವಾಗಿ ಭಿಕ್ಷುಕನಾಗಿ ಬರುವನಂತೆ' ಎಂಬುವದು ನಮ್ಮ ಮೂಢ ನಂಬಿಕೆಗಳಲ್ಲೊಂದು!

ಈ ಲೇಖನವನ್ನೋದಬಹುದಾದ ನಮ್ಮ ಹಳೆಯ ಕಾಲಿಗೆ ಸೇರಿದ ಹಳಬರನೇಕರು ನನ್ನನ್ನು ಸಿಕ್ಕಾಬಟ್ಟೆ ನಿಂದಿಸದಿರರು. ನನ್ನಂತವರು ಹುಟ್ಟಿಯೇ ಕಾಲವೂ, ಪ್ರಕೃತಿಯೂ ಬದಲಾಯಿಸಿದೆ ಎನ್ನಬಹುದು.

ನಾನೀರೀತಿ ಬರೆಯುವದೆಂದರೆ ನನಗೆ ದೀನರಲ್ಲಿ ಕನಿಕರವಿಲ್ಲವೆಂದಲ್ಲ. ದೀನರಲ್ಲಿ ದೀನನಾದ ನನಗೆ ಪ್ರತ್ಯೇಕ ಕನಿಕರ ಬೇಕಿಲ್ಲ. ನಮ್ಮ ಮೂಢ ನಂಬಿಕೆಯೂ, ಅರ್ಥವಿಲ್ಲದ ಕನಿಕರವೂ ಭಾರತದ ಪ್ರತ್ಯೇಕವಾಗಿ ಹಿಂದೂಗಳ ಜನ ಶಕ್ತಿಯನ್ನು ಬಹುಮಟ್ಟಿಗೆ ನಾಶಗೊಳಿಸುತ್ತಿದೆ. ಭಾರತದ ಆರ್ಥಿಕ ಮತ್ತು ನೈತಿಕ ಬಡಾವಣೆಗೆ ಇದು ಮಹಾ ಅಡಚಣೆಯಾಗಿದೆ. ನಾವು ಭಿಕ್ಷೆ ನೀಡುವದರಿಂದ ಮನುಷ್ಯನಲ್ಲಿ ಸೋಮಾರಿತನವನ್ನು ಪ್ರೋತ್ಸಾಹಿಸುವದು ಮಾತ್ರವಲ್ಲದೆ ಆತನ ಜೀವಮಾನವನ್ನೇ ಹಾಳುಮಾಡುತ್ತೇವೆ. ಹೇಗೆಂದರೆ: ದೃಢಕಾಯರನ್ನು ಕಂಡರೆ ಭಿಕ್ಷೆ ಹಾಕುವವರು ಬಹು ವಿರಳ. ಆದುದರಿಂದ ಭಿಕ್ಷೆಗೆ ಇಳಿಯಹೋಗುವ ವ್ಯಕ್ತಿಯು ತನ್ನ ಯಾವದಾದರೂ ಅಂಗವನ್ನು ಊನಮಾಡಿಕೊಳ್ಳುವನು! ಅದಿಲ್ಲವೆಂದರೆ ಒಂದು ಗಾಯವನ್ನಾದರೂ ಮಾಡಿಕೊಂಡು ಅದನ್ನು ಹೆಚ್ಚಾಗಿ ಬೆಳೆಸಿಕೊಳ್ಳುವನು! ಕೈ ಇಲ್ಲದ, ಕಾಲಿಲ್ಲದ, ಕಣ್ಣಿಲ್ಲದ, ಮೈಯಲ್ಲೆಲ್ಲಾ ಹುಣ್ಣಾಗಿ ಕೊಳತು ನಾರುವ ವ್ಯಕ್ತಿಗಳನ್ನ ನಾವು ಹೆಚ್ಚಾಗಿ ಕಾಣಬಹುದು. ಇದರಿಂದ ಆವರಣಕ್ಕೆ ಕೊಳೆಯುವದು ಮಾತ್ರವಲ್ಲದೆ ಸಾಂಕ್ರಾಮಿಕ ರೋಗಕ್ಕೆ ಕಾರಣರಾಗುತ್ತಾರೆ. ಅವರು ವಾಸಿಸುವ ಆವರಣವೇ ಜನ ವಾಸಕ್ಕೆ ಹೇಯವಾದ ಸ್ಥಳವಾಗಿರುತ್ತದೆ. ಈ ಭಿಕ್ಷುಕರು ನಟಿಸಿಕೊಳ್ಳುವಷ್ಟು ಅವರ ಪರಿಸ್ಥಿತಿಗಳು ಹೃದಯ ಭೇದಕವಾಗಿರುವದಿಲ್ಲ. ಹೊಟ್ಟೆಗಿಲ್ಲವೆಂದು ನಟಿಸುತ್ತಾ, ಚೀಲಗಳಲ್ಲಿ ನಮಗಿಂಥಾ ಹಣ ಉಳಿಸಿದವರನೇಕರಿದ್ದಾರೆ. ಈ ವರ್ಗಕ್ಕೆ ಸೇರಿದ ಭಿಕ್ಷಾಟನೆಯು ಪಾರಂಪರ್ಯವಾಗಿ ಬರುವದು. ದೇವರನ್ನು ಹೊತ್ತುಕೊಂಡು ನಾವು ಬೇಡುವದಿಲ್ಲವೂ ದೇವರ ಭಂಡಾರಕ್ಕಾಗಿ ಎಂದು. ತಿರುಗುವ ಭಿಕ್ಷುಕರೂ ಇದ್ದಾರೆ. ಇವರು ಈ ವ್ಯಕ್ತಿಯನ್ನು ಬಿಟ್ಟು ರಾಷ್ಟ್ರ ರಚನೆಯ ಕಾರ್ಯಗಳಲ್ಲಿ ತೊಡಗಿದರೆ ಅವರು ಮನುಷ್ಯನಾಗಿ ಹುಟ್ಟಿದುದರ ಸಾರ್ಥಕವಾದೀತು. ದೇಶಕ್ಕೆ ಹಿತವಾದೀತು. ಇನ್ನೊಂದು ವರ್ಗವೆಂದರೆ ಕಾವಿ ಧರಿಸಿದ ಜಟಾಧಾರಿಗಳಾದ ಸನ್ಯಾಸಿಗಳು. ಹಿಂದೂ ಧರ್ಮದ ಮೂಲ ಪುರುಷರೂ ಅವರ ಪೋಷಕರೂ ಈ ವರ್ಗಕ್ಕೆ ಸೇರಿದ ಪುಣ್ಯ ಪುರುಷರಾದ ಋಷಿ ಮುನಿಗಳು. ನಮಗೆ ಧೈವಿಕ ಭಾವದ ತಿಳುವನ್ನುಂಟುಮಾಡಿದವರು. ಆದರೆ ಮಹಾಪುರುಷರ ವೃಂದಕ್ಕೆ ಸೇರಿದ ಪ್ರಕೃತದ ಹಲವು ಮುನಿವರ್ಯರು ನಮ್ಮ ಹಿಂದಿನ ಆ ಭಾಗ್ಯವನ್ನು ಅಳಿಸಿಬಿಟ್ಟಿದ್ದಾರೆ. ಹಗಲೆಲ್ಲಾ ಶಿವ ಮಂತ್ರವನ್ನು ಜಪಿಸುವರು. ಸೂರ್ಯಾಸ್ತಮಾನವಾಗುತ್ತಲೇ ಬಂಗಿ ಅಫೀಮುಗಳ ಸೇವೆ ದುಷ್ಟ ಕೃತ್ಯಗಳ ಆರಾಧನೆ. ಇವರ ಈ ಪಾಪ ಕೃತ್ಯಗಳ ಪ್ರೋತ್ಸಾಹಕರು ನಾವು. ಅವರಿಗೆ ಭಿಕ್ಷೆ ನೀಡಿ ಅವರಲ್ಲಿ ಸೋಮಾರಿತನವನ್ನುಂಟುಮಾಡಿ, ಅವರಲ್ಲಿ ದುಷ್ಕೃತ್ಯಗಳ ಮನೆಮಾಡಿಸಿದವರು! ಭಗವಂತನ ಇದಿರಿಗೆ ಇದಕ್ಕೆ ನಾವು ಉತ್ತರಕೊಡಬೇಕು. ಭಿಕ್ಷೆ ನೀಡಿದ ಮಾತ್ರಕ್ಕೆ ಭಗವಂತನು ಮೆಚ್ಚಲಾರನು.

ಕೊಡಗಿನಲ್ಲಿ ಭಿಕ್ಷುಕರ ಹಾವಳಿಯು ಹೆಚ್ಚಾಗಿಲ್ಲದ್ದರಿಂದ ನಮ್ಮಲ್ಲಿ ಬಹುಮಂದಿಗೆ ಭಿಕ್ಷಾಟನೆಯು ಭಾರತದ ಏಳಿಗೆಗೆ ಎಷ್ಟು ಮಾತ್ರ ಆತಂಕವಾಗಿದೆ, ಇದರಿಂದ ಜನರಿಗೆ ತೊಂದರೆ ಎಷ್ಟು ಇದೆ ಎಂಬಿತ್ಯಾದಿ ಸಂಗತಿಗಳ ಅರಿವಾಗದು. ಪರಪ್ರಾಂತಗಳಲ್ಲೊಮ್ಮೆ ಸಂಚರಿಸಿದರೆ ಭಿಕ್ಷುಕರಹಾವಳಿಯ ಅರಿವಾಗದಿರದು. ಅಲ್ಲಿಯ ಮುಖ್ಯ ರೈಲ್ವೆ ಸ್ಟೇಶನ್ನಿನಿಂದ ಸಾಧಾರಣ ವ್ಯಕ್ತಿಯೊಬ್ಬನು ಹೊರ ದಾಟಿದನೆಂದರೆ ಸಾಕು, ಒಂದೆರಡು ಮಾರು ಹೋಗುವದರೊಳಗಾಗಿ ನೂರಾರು ಐವತ್ತು, ಅರುವತ್ತು ಭಿಕ್ಷುಕರು ಆತನನ್ನು ಮುತ್ತಿಬಿಡುವರು. ಯುದ್ಧ ಸಮಯದಲ್ಲಿ ಸಿಪಾಯಿಗಳ ರೈಲ್ವೇ ಬಂಡಿಯು ಯಾವದಾದರೊಂದು ರೈಲ್ವೆ ನಿಲ್ದಾಣದಲ್ಲಿ ನಿಂತರಾಯ್ತು. ಮನೆಯಲ್ಲಿ ಉಂಡು ತಿಂದು ತೇಗಿದ ಹುಡುಗರ ತಂಡವು ಬಂಡಿಯನ್ನೇ ಮುತ್ತುವರು. 'ಸಾಬ್ ಬಕ್ಷೀಸ್, ಸಾಬ್ ಬಕ್ಷೀಸ್' ಎಂಬ ಕೂಗೇ ಎಲ್ಲಾ ಕಡೆಗಳಿಂದಲೂ ಕೇಳಿ ಬರುವದು. ಪರ ದೇಶದಿಂದ ಬಂದವನೊಬ್ಬನು ನಮ್ಮ ಬಂದರುಗಳಲ್ಲಿ ಬಂದು ಇಳಿದನೆಂದರೆ ಆತನಿಗೆ ಮೊದಲ ಸ್ವಾಗತವು 'ಸಾಬ್ ಬಕ್ಷೀಸ್!' ಅಹ! ಅವನು ಭಾರತವನ್ನು ಹೇಗೆ ತಿಳಿದುಕೊಂಡಾನು. ಭಾರತದಲ್ಲಿ ತಿನ್ನಲು ಅನ್ನವಿಲ್ಲವೆಂದು ಭಾವಿಸಲಾರನೇ. ಒಮ್ಮೆ ಕಲ್ಕತದಲ್ಲಿ ಮನೋಭೇದಕವಾದೊಂದು ದೃಶ್ಯವನ್ನು ನಾನು ನೋಡಿ ಮರುಗಿದೆನು. ಆ ದೃಶ್ಯವನ್ನು ಇಂದೂ ನೆನಸಿದರೆ ನನ್ನ ಕಂಟವು ಗದ್ಗದವಾಗುತ್ತದೆ. ಕಂಣಲ್ಲಿ ನೀರು ಬರುತ್ತದೆ. ಒಬ್ಬ ಅಮೇರಿಕನ್ ಸಿಪಾಯಿಯು ಎಂಟು ಹತ್ತು ರೂಪಾಯಿಗಳನ್ನು ಚಿಲ್ಲರೆ ಮಾಡಿಕೊಂಡು ಒಂದು ಮುಖ್ಯ ಸ್ಥಳದಲ್ಲಿ ತನ್ನ ಜೀಪನ್ನು ನಿಲ್ಲಿಸಿಕೊಂಡು ಹಣವನ್ನು ಚೆಲ್ಲುತ್ತಿದ್ದನು. ಬಿದ್ದ ಹಣದ ಮೇಲೆ ಹೆಂಗಸು, ಗಂಡಸು, ಮುದುಕರು, ಹುಡುಗರು ಎಂಬ ಬೇಧವಿಲ್ಲದೆ ಬಕ್ಷೀಸ್ ಬೇಟೆಗಾರರು ಹೆಣದ ಮೇಲೆ ನಾಯಿ ನರಿಗಳು ಬೀಳುವಂತೆ ಬೀಳುತ್ತಿದ್ದರು. ಅಮೇರಿಕನನು ಆ ದೃಶ್ಯವನ್ನು ನೋಡಿ ಆನಂದಿಸುತ್ತಿದ್ದನು. ಧೀರ ಪುರುಷರನ್ನೂ, ಲೋಕ ವಂದ್ಯರನ್ನೂ ಮಕ್ಕಳನ್ನಾಗಿ ಹಡೆದ ಭಾರತಾಂಬೆಯು ತನ್ನ ಪವಿತ್ರ ಉದರದಲ್ಲಿ ಈ ಮಾನವಕುಲ ಕಂಟಕರಿಗೂ, ಸೋಮಾರಿಗಳಿಗೂ ಜನ್ಮವೀಯಬಹುದಿತ್ತೇ ಎಂದು ನನಗನಿಸಿತ. ಹಾಲು, ಬೆಣ್ಣೆ, ಜೇನು ಹರಿಯುತ್ತಿದ್ದ ಭಾರತವರ್ಷದಲ್ಲಿ ಪರರು ಬಂದು ತಮ್ಮ ಜೀವನಕ್ಕಾಗಿ ಸಾಕಷ್ಟು ದೋಚಿಕೊಂಡು ಹೋಗುತ್ತಿದ್ದಂಥಾ ಪರ ರಾಷ್ಟ್ರದವರು ಈ ರೀತಿ ಆನಂದಿಸಲಿಕ್ಕಾದರಲ್ಲಾ ಎಂದು ನಾನು ಮರುಗಿದೆನು. ಇದಕ್ಕೆಲ್ಲಾ ಕಾರಣರಾದರೂ ನಾವೇ ಅಲ್ಲವೇ ಎಂದೂ ನನ್ನನ್ನು ನಾನೇ ತುಚ್ಛೀಕರಿಸಿಕೊಂಡೆನು.

ಭಿಕ್ಷೆಯು ವೃತ್ತಿಯುಷ್ಟೇ ಅಲ್ಲದೆ ವ್ಯಾಪಾರವೂ ಆಹುದು. ಮೊನ್ನೆ ಮೊನ್ನೆಯಾಗಿ ಕಲಕತ್ತೆಯಲ್ಲಿ ಶಿಶುಗಳ ಕಾಣೆಯಾಗುವಿಕೆ ವರ್ತಮಾನ ಮತ್ತು ಪೊಲೀಸ್ ಗಲಾಟೆಗಳನ್ನು ನಾವು ವೃತ್ತ ಪತ್ರಿಕೆಗಳಲ್ಲಿ ಕಂಡೆವು. ಕಾಣೆಯಾದ ಮಕ್ಕಳಲ್ಲಿ ಕೆಲವು ಭಾಗ ಹೋಗುವದಾದರೂ ಭಾವೀ ಭಿಕ್ಷುಕರಾಗಿ. ದೊಡ್ಡ ನಗರಗಳಲ್ಲಿ ಹಲವಾರು ಭಿಕ್ಷುಕರನ್ನು ತಮ್ಮ ಹತೋಟಿಯಲ್ಲಿಟ್ಟುಕೊಳ್ಳುವವರೂ ಕೆಲವರಿರುತ್ತಾರೆ. ಸಣ್ಣ ಮಕ್ಕಳನ್ನು ಹೊತ್ತುಕೊಂಡು ಹೋಗಿ ಅವುಗಳ ಯಾವದೇ ಅಂಗವನ್ನು ಊನಮಾಡಿಬಿಡುವರು. ಆ ಮೇಲೆ ಅವರನ್ನು ಭಿಕ್ಷೆಗಾಗಿ ಕಳುಹಿಸುವರು ಈ ಭಿಕ್ಷುಕರೆಲ್ಲರೂ ತಮ್ಮ ತಮ್ಮ ಧನಿಗಳಿಗೆ ದಿನದ ಅಂತ್ಯದಲ್ಲಿ ವರದಿ ಮಾಡಿಕೊಳ್ಳಬೇಕು. ಸಿಕ್ಕಿದ ಹಣವೆಲ್ಲವೂ ಧನಿಗೆ ಹೋಗುವುದು. ಅದರಿಂದ ಒಬ್ಬೊಬ್ಬರಿಗೆ ಇಷ್ಟೆಂಗು ಧನಿಯು ಬಟವಾಡೆ ಮಾಡುವನ. ಇಂತಹ ಅಮಾನುಷ ಕೃತ್ಯದ ಒಬ್ಬ ವ್ಯಕ್ತಿಯನ್ನು ಬೊಂಬಾಯಿ ನಗರದಲ್ಲಿ 1947ರಲ್ಲಿ ಗುಪ್ತ ಪೋಲೀಸರು ಹಿಡಿದರು. ಭಿಕ್ಷುಕರು ದಿನಾಂತ್ಯದಲ್ಲಿ ಗಳಿಸಿದ ಹಣವನ್ನು ಧನಿಗೆ ಒಪ್ಪಿಸುವ ದೃಶ್ಯವು ಫೋಟೋ (Running film) ತೆಗೆಯಲ್ಪಟ್ಟ ಅದರ ಕೆಲ ಅಂಶವು ಡೆಲ್ಲಿಯ 'ಸ್ಟೇಟ್ಸ್‌ಮೇನ್' ಪತ್ರಿಕೆಯಲ್ಲಿ ಹಾಕಲ್ಪಟ್ಟಿತ. ನೋಡಿದಿರಾ! ಭಿಕ್ಷುಕನಾಗಿ ಬರುವ ಭಗವಂತನಿಂದ ಆಗುವ ಕಾರುಭಾರುಗಳು!

ಭಿಕ್ಷಾಟನೆಗೆ ಮೂಲಕಾರಣವು ಆರ್ಥಿಕ ಸ್ಥಿತಿಯ ನ್ಯೂನವಾದರೆ ನಾನದಕ್ಕೆ ಒಪ್ಪಲಾರೆನು. ಬದಲು ಅದಕ್ಕೆ ಕಾರಣ ವಿಷ್ಟೆ. ನಮ್ಮ ಮೂಢ ಭಕ್ತಿ, ನಂಬಿಕೆ, ಹೆದರಿಕೆ, ಅರ್ಥವಿಲ್ಲದ ಮತ್ತು ಅವಶ್ಯವಿಲ್ಲದ ಕನಿಕರ ಮತ್ತು ಉದಾರತೆ. ಆರ್ಥಿಕ ಸ್ಥಿತಿಯಲ್ಲಿ ಭಾರತಕ್ಕಿಂತಲೂ ಎಷ್ಟೋ ಪಾಲು ಹೀನ ಸ್ಥಿತಿಯಲ್ಲಿರುವ ಮತ್ತಿತರ ಎಷ್ಟೋ ರಾಷ್ಟ್ರಗಳಿವೆ. ಅಲ್ಲಿ ಒಂದೊತ್ತು ಉಂಡು ಜೀವಿಸುವವರು ಸಹಸ್ರಾರು ಮಂದಿ ಇದ್ದಾರೆ ಆದರೆ ಅವರಿಗೆ ಭಿಕ್ಷೆ ಎಂಬುವುದು ಗೊತ್ತಿಲ್ಲ. ಬೇಡೆಂದು ಅವರ ಧರ್ಮವೂ ಹೇಳುವುದಿಲ್ಲ. 'ಭಿಕ್ಷೆ'ಯ ರೋಗ ವಿಕಸಿಸಿರುವ ದೇಶವೆಂದರೆ ಅದು ಭಾರತ.

ಇದರ ನಿವಾರಣೆಯಾಗಬೇಕಾದರೆ ಪ್ರತಿಯೊಬ್ಬ ಭಿಕ್ಷನೀಡುವವನೂ ತನ್ನ ಮೂಢ ನಂಬಿಕೆಗಳಿಗೆ ಬಲಿಯಾಗಬಾರದು ಭಿಕ್ಷೆ ಕೊಡುವುದನ್ನು ಧೃಢ ಮನಸ್ಸಿನಿಂದ ಕನಿಕರವನ್ನು ಬದಿಗೊತ್ತಿ (ಭಾರತ ಸುಪುತ್ರ ರತ್ನ, ದೀನ ದಯಾಳು ಜವಾಹರರ ಹೃದಯದಲ್ಲಿ ಕನಿಕರವಿಲ್ಲವೇ? ಕನಿಕರವೇ ಆ ಮೂರ್ತಿ. ಆದರೆ ಅವರಿಗೆ ಭಿಕ್ಷುಕರನ್ನು ಕಂಡರಾಗದು.) ಖಡ್ಡಾಯವಾಗಿ ನಿಲ್ಲಿಸಬೇಕು. ಸರಕಾರವು ಭಿಕ್ಷೆ ಎತ್ತುವುದೂ ನೀಡುವುದೂ ಕಾನೂನಿಗೆ ವಿರೋಧವೆಂದು ತಕ್ಕ ಕ್ರಮವನ್ನು ಜಾರಿಗೆ ತರಬೇಕು. ಒರಿಸ್ಸಾ ಮತ್ತು ಮಧ್ಯ ಪ್ರಾಂತಗಳ ಸರಕಾರಗಳು ಈ ರೀತಿಯ (ಭಿಕ್ಷೆ ಕಾಯಿದೆ ಭಿಕ್ಷೆ ಎತ್ತಲಾಗದೆಂಬ) ಕಾನೂನನ್ನು ಜಾರಿಯಲ್ಲಿ ತಂದಿರುವರು. ತನ್ನ ಮುಂದಿರುವ ಮಹಾ ಪ್ರಶ್ನೆಗಳು ಬಗೆಹರಿದ ನಂತರ ಕೇಂದ್ರ ಸರಕಾರವೂ ಈ ರೀತಿಯ ಕಾನೂನನ್ನು ಜಾರಿಗೆ ತಾರದಿರದು. ಭಿಕ್ಷೆ ಎಂಬ ಶಬ್ದವೇ ಇರಬಾರದೆಂಬ ಕಾಯಿದೆಯಾಗಬೇಕು. ಅಂಗ ಊನವಾಗಿ ಕೆಲಸ ಮಾಡಲು ಅಶಕ್ತರಾದ ಭಿಕ್ಷುಕರನ್ನು ಸರಕಾರವು ತನ್ನ ಪೋಷಣೆಗೆ ಕಾಲ ಕಾಲ ತೆಗೆದುಕೊಳ್ಳಬೇಕು. ಅವರವರ ದೇಹ ಬಲಾಢ್ಯತೆಗನುಸಾರವಾದ ರೀತಿಯಲ್ಲಿ ಗುಡಿ ಕೈಗಾರಿಕೆ ಮೊದಲಾದ ವೃತ್ತಿಯನ್ನು ಅವರಿಗೆ ಕಲಿಸಿ ಅದರಿಂದ ಅವರ ಜೀವನ ಸಾಗುವಂತೆ ಮಾಡಬೇಕು.

ಇತ್ತೀಚೆಗೆ ಕೊಡಗಿನಲ್ಲೂ ಭಿಕ್ಷುಕರ ಹಾವಳಿಯು ಹೆಚ್ಚಾಗತೊಡಗಿದೆ. ಪರಪ್ರಾಂತ್ಯಗಳಿಂದ ತಂಡತಂಡವಾಗಿ ಬರುವ ಹೊಸಹೊಸ ಮುಖಗಳನ್ನು ನಾವು ದಿನೇ ದಿನೇ ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ನೋಡಬಹುದು. ಸರಕಾರವು ಈ ಕಡೆ ಒಡನೇ ಗಮನಿಸಬೇಕು. ಕೊಡಗು ಸರಕಾರವು ಭಿಕ್ಷೆ ಬೇಡುವುದು ಮತ್ತು ನೀಡುವುದನ್ನು ಕಾನೂನು ಬಾಹಿರವೆಂದು ಸಾರಬೇಕು. ದೇಶದ ಮುಂದಾಳುಗಳೂ ಜನ ಹಿತ ದೃಷ್ಟಿಯಿಂದ ಇದಕ್ಕಾಗಿ ಶ್ರಮಿಸಬೇಕು.

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

ನಮ್ಮ ಸಮಾಜ.

ಲೇ -"ನಿರೀಕ್ಷಕ" ಮಡಿಕೇರಿ

ಮನಸ್ಸಿಗ [illegible] ಸರಿರಲಿಲ್ಲ. ಒಳ ಗೋಳಗೆ ಏನ [illegible] ಕುಟುಕ [illegible] ಮನ ಯಿಂದ ಹೊರಗೆ ಹೋಗಬೇಕೆಂದು ಮನ ಸ್ಸು ತವಕಿಸ ತಿತ್ತು. ಬೆಳಗಿನ ಹತ ಗಂ ಟೆಯ ಸಮಯ. ಸೂರ್ಯನು ಕ್ರಮ ಕ್ರಮವಾಗಿ ಭೀಕರತೆಯನ್ನು ತಳೆಯುತ್ತಿ ದ್ದನು. ಕೊಡಗಿನ ರಾಜರ ಗದ್ದಿಗೆಯು ಹತ್ತಿರವೇ ಇದ್ದ ಕಾರಣ ಅಲ್ಲಿಗ ಹೋ ಗೋಣವೆನಿಸಿತು. ಗದ್ದಿಗೆಯ ಮೇಲೇರಿ ಕುಳಿತೆನು. ಬಿಸಿಲಿನಾಡನಯೇ [illegible] ಗಾಳಿ ಬೀಸುತ್ತಿತ್ತು. ರಾತ್ರೆ ಮಳೆ ಹೊ ಡೆದಿದ್ದ ಕಾರಣ ಹತ್ತಿರದ ಮರದ ಎಲೆಗ ಳಲ್ಲಿ ಹನಿಗಳು ಇನ್ನೂ ಇದ್ದವು. ನ ನ [illegible] ಸ್ಥಳಕ್ಕೆ ಮಡಿಕೇರಿಯ ಮಹ ದೇವಪೇಟೆಯ ರಸ್ತೆಯು [illegible] ಣುತ್ತಿತ್ತು. ಈ ರಸ್ತೆಯ ಮಧ್ಯದಲ್ಲಿ ತಾ ರು ಹಾಕಿದ ಭಾಗಕ್ಕೆ ಅಷ್ಟೇನು ಚೆನ್ನಾಗಿ [illegible] ಕಂಡುಬರುತ್ತಿದ್ದವು. [illegible] ಬದ ಎತ್ತಿನ ಮಾಳಿಗಳು ಚರ್ಮದೊಳ ಗಿಂದ ಮೂಳೆಗಳು ಕಾಣುವಂತೆ ಅಲ್ಲ ಕಲ್ಲಿಗೆ ಳ ಮೇಲೆ [illegible] ಇದು ಪ್ರಾಂತೀಯ ರ ಸ್ತೆಯ ಚಿತ್ರ! ಈ ಗಳ ಎಷ್ಟು ಅವ್ಯವಸ್ಥೆಯ ಲ್ಲಿದೆಯೋ ಅಷ್ಟೇ ಈ ಪೇಟೆಯ ಜನರೂ ಎನ್ನಬೇಕು. ರಸ್ತೆಯ ಮಧ್ಯದ ಕಾ ಹ ಕಿದ ಭಾಗವೇ ಇವರ ಕಸದ ತೊಟ್ಟಿ ಯೋ ಏನೋ ಎಂಬಂತೆ ಮನೆಯ ಮುಂ ದ ಬಿದ್ದ ಕಸಕಡ್ಡಿಗಳನ್ನು ಗುಡಿಸಿ [illegible] ಯ ಮನೆಯ ಹಾಕಿದ್ದರೆ ರಸ್ತೆಗಾಗಿ [illegible] ಡಿಸುವದು ನ್ಯಾಯಸಮ್ಮತವೆ [illegible] ಈ ಕಸದ ರಾಶಿ ರಸ್ತೆಯುದ್ದಕ್ಕೂ ಇದೆ. ಈ ಬೀದಿಯ ಜನರಿಗೇಕೆ ಈ ಚಿಕ್ಕಬುದ್ಧಿ? ತಮ್ಮ ಮನೆಯ ಮುಂದಿನ ಕಸವನ್ನು ಗು ಡಿಸಿ ರಸ್ತೆಗೆ ಹಾಕಿ ಅಲ್ಲಿ ನಡೆಯುವ ಜನ ರಾದ ಜನರಿಗ ತೊಂದರೆ ಮಾಡುವದರ ಬದಲು ತಗದು ಹತ್ತಿರ ಕಸದ ತೊಟ್ಟಿ ಯಲ್ಲಿ ಹಾಕಿದರಾಗದೇ? ಅಂಥಾ ಪಟ್ಟ ದ ನಾಗರೀಕರೇ? ಈ ರಸ್ತೆ ಯ [illegible] ಸರಕಾರದವರೇನೋ ಕಣ್ಮುಚ್ಚಿ ಕೂತಿದೆ. ದೀಪದ ಕೆಳಗೇ ಕತ್ತಲೆ [illegible] ತೆಯೇ ಸರಕಾರದ ಮೂಗಿನಡಿಯಲ್ಲಿಯೇ ಇರುವ ಈ ಸ್ಥಿತಿ ಅವರಿಗೆ ಕಾಣಿಸಿಲ್ಲ! ಸರಕಾ ರದ್ದು ದೂರದೃಷ್ಟಿ ಇರಬೇಕು. ಹತ್ತಿರ ದ ನ್ಯೂನತೆ ಅದಕ್ಕೆ ಕಾಣಲಿಕ್ಕಿಲ್ಲ! ಸ ರಕಾರ ಈ ರೀತಿ ವರ್ತಿಸುತ್ತಿದಯೆಂದರೆ ಜನರೂ, ಅದರಲ್ಲಿ ಪಟ್ಟಣದ ನಾಗರೀಕ ರೂ ಈ ರೀತಿ ವರ್ತಿಸಬೇಕೆ? ಎಲ್ಲಿದ ನಾ ಗರೀಕತೆ? ರಸ್ತೆಯ ಇಕ್ಕೆಡೆಯ ದಲ್ಲೂ ಗುಡಿಸಿ ಹಾಕಿದ ಈ ಕಸದ ರಾಶಿಯಿಂದ ಯಾವ ಯಾವ ರೋಗ ಹರಡುತ್ತಿರಬಹು ದು. ಇಲ್ಲದಿದ್ದರೆ ಈ ಆಧುನಿಕ ಕಾಲದ ಲ್ಲಿ ಪ್ಲೇಗು, ಸಿಡುಬುಗಳಿಗೆ ಅಸ್ಪದವೆಲ್ಲಿ?

ನಾನು ಯೋಚನೆಯಲ್ಲಿ ತಲ್ಲೀನನಾ ಗಿದ್ದೆ. ಯಾರದೋ ಮಾತು ಕೇಳಿಸಿದಂ ತಾಯಿತು. ಹತ್ತಿರದ ಗೋಡೆಗೊರಗಿ ನನ್ನ ಹಿಗೆ ಬೆನ್ನುಮಾಡಿ ಇಬ್ಬರು ದೂರದ ದೃಶ್ಯವನ್ನು ನೋಡುತ್ತಾ ಮೇಲ ದನಿಯ ಲ್ಲಿ ಮಾತಾಡಿಕೊಳ್ಳುತ್ತಿದ್ದರು. ನನ್ನ ದೃ ಷ್ಟಿಯು ಅಲ್ಲಿದ್ದ ಯುವತಿಯ ಜಡೆಯ ಮೇಲಿದ್ದ ಹೂವಿನ ಕಡೆ ಹರಿತ್ತಾಗಿ ಹೋ ಯಿ [illegible] ಒಡೆದು ಒಣ್ಣಾದ ಕಣ್ಣನ್ನು [illegible] ನೋಡಿದೆ. [illegible] ಗದದ ಹೂವು! ನನ್ನ ವಿಮರ್ಶಕ ಬುದ್ಧಿ ಗೆ [illegible] ಆಕೆ ಆಧುನಿಕ ಉಡುಪು ಧರಿಸಿದ್ದಾಳೆ. [illegible] ಪೌಡರು ರೂಜ ಗಳು, ತುಟಿಗ ಳಲ್ಲಿ ಹಚ್ಚಿರುವ ಲಿಪ್‌ಸ್ಟಿಕ್ಕು ಕಾಣು ತ್ತಿದ [illegible] ದೃಷ್ಟಿಯಿಂದ ಆಕರ್ಷಕ [illegible] ಹೂವೆ! ಕಮನೀಯ ವಾದ [illegible] ಸ್ವಾಭಾವಿಕ ಹೂವಿನಂತಲ್ಲ, [illegible] ಬುದ್ಧಿ ಕುಟುಕಿತು.

ಈ [illegible], ಬಣ್ಣ [illegible] ನನ್ನ [illegible] ಸ್ವಲ್ಪ, ಜರ್ಮನಿಯಲ್ಲಿ ತಟ್ಟಿದ್ದನೆ [illegible] ಧಕನೆ [illegible] ನೋಡಿದ [illegible] ನೋಡಿದರೆ ನಮ್ಮ ಸಮಾಜದಲ್ಲಿ ಎಲ್ಲವೂ ಟೊಳ್ಳು ಎನಿಸುತ್ತದೆ. ಒಳಗೆ ಏನಿದ್ದರೂ ಅನ್ನ [illegible] ಅದಕ್ಕೆ ಆ ವಶ್ಯವಿದ್ದರೆ ರಂಗು ಬಡಿದು ಪ್ರದರ್ಶನ ಮ ಡೆಯುತ್ತಿದೆ. ಆತ್ಮವಂಚನೆ ಮಾಡಿಕೊಂಡ ಇನ್ನೊಬ್ಬರ ಕಣ್ಣು ಕಟ್ಟುವ ಪ್ರವೃ ತ್ತಿ ಹೆಚ್ಚು ತೋರುತ್ತಿದೆ. ನಮ್ಮ ಮ ದುವೆ ಮೊದಲಾದ ಸಾಮಾಜಿಕ ವಿಚಾರಗ ಳಲ್ಲಿ [illegible] ಆ ವೇಷಭೂಷಣಗಳು ಆ ಒಡವೆ [illegible] ಯ್ಯಾರಗಳು ವರ್ಣನಾತೀತವಾಗಿವೆ. ಎ ಲ್ಲಿಯೂ ರಾಜರ ನತನದಂತೆ ತೋರು ತ್ತದೆ. [illegible] ಈ ಚಿಕ್ಕ ಚಿಕ್ಕ ವ ನಗಳಲ್ಲಿ ಈ ರಾಜಕುಮಾರ, ರಾಜಕು ಮಾರಿಯರು ವಾಸಿಸುತ್ತಿರುವರೇ ಎನಿಸು ತ್ತದೆ. ಈ ಆಡಂಬರ, ಈ ತೋರಿಕೆ ಏಕೆ? ಯಾರನ್ನು ಮೆಚ್ಚಿಸಲಿಕ್ಕೆ? ಎಂಬುದಕ್ಕೆ ಉತ್ತರವನ್ನು [illegible] ಕೊಡಬೇಕು.

ನಮ್ಮ ಸ್ವಹಿತಬಿಟ್ಟಿದ್ದರು ಪೋ [illegible] ಆದರ್ಶ ಸಂಯೋಗ ಬೌದ್ಧಿಕ ಯಾ ಭೌತಿಕ ಬಂಧವು ಇದರಲ್ಲಿಲ್ಲ. ಬರೇ ಇವರ ವೇಷಭೂಷಣಕ್ಕೆ ಮರುಳಾಗಬೇಕೆ, [illegible] ಹಣ್ಣು ಕೊಟ್ಟರೆ ಈಗ ಆತನ [illegible] ವಾಗಿದೆ. ಆತನನ್ನು ಎಲ್ಲಿಯೂ [illegible] ತ್ತಿದ್ದಾರೆ. [illegible] ಹೆಣ್ಣೂ ಕೂಡ [illegible] ರೀತಿಯ ವೇಷ, ಆಡಂಬರದ ಆಸ್ಥೆ [illegible] ದ [illegible] ಭವಿಷ್ಯಕ್ಕೆ [illegible] ಕಟ್ಟಲು ಹೊರಟ [illegible] ಅರ್ಥ ಉಳಿದ [illegible]?

[illegible] ದ ಪಕ್ಷಿಗಳಲ್ಲಿ ಹೆಂಡತಿ ಪರಿಧಾನವನ್ನಿ ಟ್ಟು ಇಂದಿಗ [illegible] ಇವು ಈ ಮೊದಲಿನ ಮಾತ [illegible] ಹೂವು [illegible] ಹೂವಿನ [illegible] ಹೋದರು [illegible] ನೀಲಿ [illegible] ಹೇಳಿದನು [illegible] ಹಾರ [illegible]?

'ಇದಕ್ಕಿಂತ ಮ [illegible]?' ಆಕೆ ಪ್ರಶ್ನಿಸಿದಳು.

'ಆದರಲ್ಲೇನಿದೆ, ಒರಿ [illegible] ಹೂ ವು' ಅಕನೆಂದ.

'ಚೆನಿವಾರದ ಕಟ್ಟೆಯಿಂದ [illegible] ರು ರೂಪಾಯಿ ಚೆಲ್ಲಿ ತೆಗೆದ ಕಾಗದ [illegible] ಪತ್ತದ ಹಾರಕ್ಕಿಂತಲೂ ಇದು ಮಿಗಿಲು. ನನಗಾಗಿ ನೀವು ಸ್ನೇಹದಿಂದ ಮಾಡಿದ ಈ ಹಾರ ದ ಪ್ರತಿಯೊಂದು ಹೂವಿನಲ್ಲಿ ನಿಮ್ಮ ಪ್ರೀ ತಿಯ [illegible] ಜೇಬಿನ ಹಣದ ನ್ನು ಗರ್ವದಿಂದ ತೆಗೆದು ಚಲ್ಲಿ ತರುವ ರ ತ್ನ ಹಾರದಲ್ಲಿ ಆ ಪ್ರೇಮವಿರಲು ಸಾಧ್ಯ ವೇ?' ಎಂದಳು.

ಆಕೆಯ ಮಾತು ಕೇಳಿ ನನಗಾಶ್ಚರ್ಯ ವಾಯಿತು. ಅದರ [illegible] ನನ್ನನ್ನು ಮುಗ್ಧನನ್ನಾಗಿ ಮಾಡಿತು. ಪಾಪ! ತಾ ರುಣ್ಯದ [illegible] ಕಾಲದಲ್ಲಿ ಆಕೆ ಪರಿಕ್ಷಾಮವನ್ನು [illegible] ಆತನಿಗೆ [illegible] ಇಂದಿಗೂ ಸಜೀವ್ಯತನಾಗಿ ಇ ದ್ದಾನೆ. ಇದು [illegible] ಪವಿತ್ರ ಪ್ರೇಮ [illegible] ಆಕೆ ಹೇಳಿದ ಮಾತು [illegible] ಸತ್ಯ ಪ್ರೀ ತಿ ಪುರಸ್ಸರವಾದ [illegible] ಸರ್ವಸ್ವ ಜೊತೆ [illegible] ಹರಿಸು ವ [illegible]!

ಚಾಟಿ.

ಸೇಂದಿ ಮನೆಗಳು !

ಎಂಡ ಪರ್ವಗಳಿಂದಲೇ ಕೊಡಗು ಸರಕಾರವು ಸೇಂದಿ ಅಂಗಡಿಗಳನ್ನು ತಡೆ ದೆ ಮಾಡುತ್ತ ಬಂದಿತ್ತು! ಆದರೆ ಇದು ಸೇಂದಿ ಮನೆಗಳ ಸ್ಥಾಪನೆಗೆ ಸಹಾಯ ಕವಾಗಿದ.

ನಾನು ಕಳೆದ ವಾರದಲ್ಲಿ ಬೇಂಗೂ ರು ಗ್ರಾಮವನ್ನು ಸಂದರ್ಶಿಸಿದೆ. ಅಲ್ಲಿ [illegible] ಕತ್ತ [illegible] ನೋಡಲು ಆ ಊರಿ ನ ಸೇಂದಿ [illegible] ದೂ ರದಲ್ಲಿದ [illegible] ಮುಂದಕ್ಕೆ ಒಂದು [illegible] ದಾಟಬೇಕಿತ್ತು. [illegible] ಮನೆಯವರೆ ಲ್ಲರ [illegible] ಭಕ್ತರಾಗಿದ್ದರು. [illegible] ಒಂದು ಗ್ಲಾಸು [illegible]!

[illegible] ಸೋರೆಯೊಂದ ನ್ನು [illegible] ಸೂಟ್ಟನು ಬಂದ [illegible] ಆತನಲ್ಲಿ ಭಕ್ತಿ [illegible] ಈ ಗುರುವು [illegible] ಸೇಂದಿ, ಹೆಂಗಸರಿಗೂ, ಮಕ್ಕಳಿಗೂ ಎಂದನು ನ ರಿ ಮಕ್ಕಳೆಲ್ಲರೂ ಆನಂದದಿಂದ ನಲಿ ದಾಡಿದರು.

ನಾನು ಇದೇನ! ಸೇಂದಿ, ಮನೆ ಮನೆ ತೆಂದು ಮಾರುತ್ತೀರಿ ಎಂದು ಪ್ರಶ್ನಿ ಸಲು, ಈಗಿನ ಸೇಂದಿ ವ್ಯಾಪಾರವು ಹೀಗೆ ಎಂದನು. ಇದನ್ನು ಕಂಟ್ರಾಕ್ಟುದಾರರ ಸೈಕಲಿನ ಸಾವ [illegible] ಅಧಿಕಾರಿಯಿಂದೂ, ಇವನ್ನ ಈ ಊರುಗಳಲ್ಲಿ ಸೇಂದಿ ಸರಬ ರಾಯಿ ಮಾಡ [illegible] ಬಂದ.

ಈ ರೀತಿಯ ಸೇಂದಿ ವ್ಯಾಪಾರ [illegible] ದಿ ಸೇಂದಿ ಅಂಗಡಿ ಕಡಿತ [illegible] ಯಾವ [illegible] ಯೂ ಇಲ್ಲದೆ ಹಳ್ಳಿ [illegible] ಮನೆಯಲ್ಲಿ [illegible] ಜನರ [illegible] ದ ಎರಡು [illegible] ಗಿ ತೋ ದರೆ ತೀರುತ್ತದೆ [illegible] ಮನೆಯೂ ಸೇಂದಿಯ ಅಂಗಡಿಯಾ [illegible] ನನ್ನ ತಪ್ಪ [illegible].

—ಕ ಮ [illegible]

THE WARDEN INSURANCE CO., Ltd.

(H O BOMBAY)

Branch Office - Bangalore City

ANNOUNCEMENT

This is to inform all over workers, policy holders medical examiners and other interested insuring public, that our office has been shifted from Mercara to Virajpet as from 1-4-1949 and request that all further communications be made to the following address only

	A. S. Aiyappa,
Chief Agency office,	*Branch secretary,*
Warden Insurance Co, Ltd,	GANDHI NAGAR,
Virajpet (Coorg)	BANGALORE CITY

ದಿ ವಾರ್ಡನ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

ಗಾಂಧಿನಗರ, ಬೆಂಗಳೂರು ಸಿಟಿ

ಕೊಡಗು

ತಾ. ೬-೫-೧೯೪೯ನೇ ಶುಕ್ರವಾರ

ಕೊಡಗಿನ ಕಾಲೇಜು.

ಕೊಡಗಿನಲ್ಲಿ ಒಂದು ಕಾಲೇಜು ಸ್ಥಾಪಿಸಬೇಕೆಂಬ ಹಲವು ವರ್ಷಗಳಿಂದ ಚಳವಳಿವು ನಡೆಯುತಿತ್ತು. ಬಂದು ಕಳೆದ ವರ್ಷ ಈ ಚಳವಳಿವು ತೀವ್ರ ಸ್ವರೂಪವನ್ನು ತಾಳಿತ್ತು. ಕಾಲೇಜನ್ನು ಸರಕಾರವೇ ಸ್ಥಾಪಿಸಬೇಕು ಇಲ್ಲ, ಮಿಶನರಿಯವರು ನಡೆಸಬೇಕು ಎಂದು ದೇಶದಲ್ಲಿದ್ದ ಭಿನ್ನಾಭಿಪ್ರಾಯವೇ ಈ ಘರ್ಷಣೆಗೆ ಕಾರಣವಾಗಿತ್ತು. ಹೇಗೂ ಕಡೆಗೆ ಸರಕಾರದವರೇ ಇದನ್ನು ಸ್ಥಾಪಿಸಬೇಕೆಂಬ ಅನುವಾಗಿ ಈಗಿನ ಚೀಫ್ ಕಮಿಷನರು, ಸಾರ್ವಜನಿಕ ಕೆಲಸಗಾರರ ಸಹಾಯದಿಂದ ವಿಶೇಷ ತರದ ಪ್ರಯತ್ನವನ್ನು ನಡೆಸಿ ಇಂಡಿಯಾ ಸರಕಾರದ ಮಂಜೂರಾತಿಯನ್ನು ಪಡೆದರು. ಇದರ ಕಟ್ಟಡವನ್ನು ಕಟ್ಟಿಸಲು ನಾಲ್ಕು ವರ್ಷಗಳಲ್ಲಿ ಎಂಟು ಲಕ್ಷ ರೂಪಾಯಿ ಖರ್ಚು ಮಾಡುವಂತೆಯೂ ಇದರ ಅರ್ಧ ಭಾಗವನ್ನು ಕೇಂದ್ರ ಸರಕಾರವು ಕೊಡುವಂತೆಯೂ ಏರ್ಪಾಡಾಗಿದೆ. ಈ ಕಾಲೇಜು ಮದ್ರಾಸು ವಿಶ್ವವಿದ್ಯಾಲಯಕ್ಕೆ ಸಂಯೋಜಿಸಲ್ಪಡಬೇಕಿರುವದರಿಂದ ಸದರಿ ವಿಶ್ವವಿದ್ಯಾಲಯದ ಕಮಿಷನೊಂದು ಮೊನ್ನೆ ತಾನೆ ಕೊಡಗಿಗೆ ಬಂದು ಸಂಬಂಧಿಸಿದ ಆಜಮಾಯಿಸಿಕೆಗಳನ್ನು ಮಾಡಿ ಕಾಲೇಜು ಸ್ಥಾಪಿಸಬೇಕೆಂದು ಶಿಫಾರಸ್ಸು ಮಾಡಿರುವರೆಂದು ತಿಳಿಯಲು ಸಂತೋಷ ಪಡುತ್ತೇವೆ. ಇದರಿಂದ ಬರುವ ಜೂನ್ ತಿಂಗಳಲ್ಲಿ ಮಡಿಕೇರಿಯಲ್ಲಿ ಕಾಲೇಜು ಪ್ರಾರಂಭವಾಗುವದೆಂಬುದು ಖಚಿತವಾಗಿದೆ. ಇದು ಕೊಡಗಿನ ವಿದ್ಯಾ ಚರಿತ್ರೆಯಲ್ಲಿ ಒಂದು ಪ್ರಾಮುಖ್ಯವಾದ ವಿಷಯವಾಗಿದೆ

ಪ್ರೌಢ ಶಿಕ್ಷಣದ ದಾಹದಲ್ಲಿ ಕಷ್ಟಪಡುತ್ತಿರುವ ಕೊಡಗಿನ ವಿದ್ಯಾರ್ಥಿ ವರ್ಗಕ್ಕೆ ಅದರಲ್ಲೂ ಬಡ ವಿದ್ಯಾರ್ಥಿಗಳಿಗೆ ಈ ಕಾಲೇಜು ಕಾಮಧೇನುವಿನಂತೆ ಪರಿಣಮಿಸುವುದರಲ್ಲಿ ಸಂಶಯವಿಲ್ಲ ವಿದ್ಯಾಭ್ಯಾಸಕ್ಕಾಗಿ ಲಕ್ಷಾಂತರ ರೂಪಾಯಿಗಳನ್ನು ಕೊಡಗಿನ ಹೊರಗೆ ಪ್ರತಿವರ್ಷ ಖರ್ಚು ಮಾಡುವುದು ಇದರಿಂದ ಉಳಿಯುವದು. ವಿಶ್ವ ವಿದ್ಯಾಲಯ ಕಮಿಶನಿನ ಮುಂದಾಳು ಹೇಳಿದಂತೆ ಇಲ್ಲಿಯ ಯುವಕ ಯುವತಿಯರ ಬುದ್ಧಿ ವಿಕಾಸಕ್ಕೆ ಆಸ್ಪದ ಮಾಡುವ ಈ ಕಾಲೇಜಿನಿಂದ ಕೊಡಗಿನ ಕೀರ್ತಿಯು ಇನ್ನಷ್ಟು ಹರಡಿ ಇಲ್ಲಿಯವರ ಸೇವೆಯು ಭರತಖಂಡಕ್ಕೆ ಮತ್ತಷ್ಟು ಹೆಚ್ಚಾಗಿ ದೊರೆಯುವ ಅನುವಾಗುವುದರಲ್ಲಿ ಸಂದೇಹವಿಲ್ಲ. ಕಾಲೇಜಿನ ಜಯಕ್ಕೆ ಮುಖ್ಯವಾದ ಅಧ್ಯಾಪಕರ ಆಯ್ಕೆಯ ದೊಡ್ಡ ಜವಾಬ್ದಾರಿಯನ್ನು ಕಾಲೇಜಿನ ಸಂಬಂಧ ಬಹು ಉತ್ಸಾಹಕರಾಗಿರುವ ಚೀಫ್ ಕಮೀಷನರು ಯೋಗ್ಯ ರೀತಿಯಲ್ಲಿ ನಿರ್ವಹಿಸುವರೆಂಬ ದರಲ್ಲಿ ಸಂದೇಹವಿಲ್ಲ. ಈ ಮಹತ್ಕಾರ್ಯದಲ್ಲಿ ಅಧಿಕಾರಿಗಳೊಂದಿಗೆ ಸಾರ್ವಜನಿಕರು ಸಂಪೂರ್ಣ ಸಹಕರಿಸಿ ಕೊಡಗಿನ ಈ ಪ್ರಥಮ ದರ್ಜೆಯ ಕಾಲೇಜು ಮಾದರಿ ಕಾಲೇಜಾಗಿ ಪರಿಣಮಿಸಲೆಂದು ಹಾರೈಸುತ್ತೇವೆ.

ವರ್ತಮಾನ.

ಹುಬ್ಬಳ್ಳಿ ಸಬ್ ರೀಜನಲ್ ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜ್ ಆಫೀಸಿನಲ್ಲಿ ಅ. ರೀಜನಲ್ ಎಂಪ್ಲಾಯಿಮೆಂಟ್ ಆಫೀಸರಾಗಿದ್ದ ಶ್ರೀ ಪಿ ಯಂ. ಸುಬ್ಬಯ್ಯನವರನ್ನು ಬೊಂಬಾಯಿ ರೀಜನಲ್ ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜ್ ಆಫೀಸಿಗೆ ವರ್ಗ ಮಾಡಿರುವರು.

ತಾ. ೨೫ ರಲ್ಲಿ ಕುಶಾಲ್ನಗರ ಗ್ರಾಮದ ಒಂದು ಮದುವೆಯ ಲಗ್ನ ಪಡೆಗಿಯ ತಂದೆಯು ಹುಡುಗನ ಕಡೆಯಿಂದ ಶುಲ್ಕ ರೂಪದಲ್ಲಿ ರೂ. ೨೫೦ ತೆಗೆದುಕೊಂಡುದಲ್ಲದೆ ಮದುವೆ ಬಂದಾಗ ಹೆಣ್ಣನ್ನು ಇಳಿಸಲು ಸೇಂದಿ ಕುಡಿಯುವ ನೆವನದಿಂದ ಪುನಹ ೫೦ ರೂ. ಬೇಕೆಂದು ಹಟ ಹಿಡಿದು ಸತಾಯಿಸಿದರಿಂದೂ ಕಡೆಗೆ ಪೋಲೀಸರ ಬಲಾತ್ಕಾರದಿಂದ ಧಾರೆ ಮುಹೂರ್ತ ನಡೆಯಿತೆಂದೂ ವಾರ್ತೆ.

ಇಂಡಿಯಾ ಸರಕಾರದವರು ಕೊಡಗಿನಲ್ಲಿ ಒಂದು ಡಿಸ್ಟ್ರಿಕ್ಟ್ ಎಂಪ್ಲಾಯಿಮೆಂಟ್ ಆಫೀಸನ್ನು ಮಡಿಕೇರಿಯ ಅರಮನೆಯಲ್ಲಿ ತಾ. ೧-೫-೪೯ರಿಂದ ತೆರೆದಿರುತ್ತಾರೆ. ಕೆಲಸವಿಲ್ಲದೆ ಕೆಲಸ ಮಾಡಲು ಕುತೂಹಲವುಳ್ಳವರೆಲ್ಲರೂ ಈ ಆಫೀಸಿಗೆ ಹೋಗಿ ತಮ್ಮ ಹೆಸರು ರಿಜಿಸ್ಟರ್ ಮಾಡಿಕೊಳ್ಳಬಹುದು. ಕೆಲಸಗಾರರು ಬೇಕೆಂಬುವವರು ಕೆಲಸಗಾರರನ್ನು ಒದಗಿಸಲು ಈ ಹೊಸ ಆಫೀಸಿಗೆ ಬರೆದುಕೊಳ್ಳಬಹುದು ಹೆಚ್ಚಿನ ಮಾಹಿತಿಗೆ ಇಲ್ಲಿಯ ಡಿಸ್ಟ್ರಿಕ್ಟ್ ಎಂಪ್ಲಾಯಿಮೆಂಟ್ ಆಫೀಸರನ್ನು ಕಂಡು ತಿಳಿದುಕೊಳ್ಳಬಹುದು

ಶ್ರೀ ಕೆ. ಪಿ. ಕುಟ್ಟಪ್ಪನವರನ್ನು ಚೀಫ್ ಕಮೀಷನರ್‌ರವರ ಪರ್ಸನಲ್ ಅಸಿಸ್ಟೆಂಟರಾಗಿಯೂ, ಶ್ರೀ ಕಂಡ್ರತಂಡ ಪೊನ್ನಪ್ಪನವರನ್ನು ಹಂಗಾಮಿಯಾಗಿ ಟ್ರೆಜರಿ ಆಫೀಸರಾಗಿಯೂ, ಶ್ರೀ ರಾಮಸ್ವಾಮಿಯವರನ್ನು ಚೀಫ್ ಕಮಿಷನರ್ ಆಫೀಸಿನ ಮ್ಯಾನೇಜರಾಗಿಯೂ ನೇಮಿಸಲಾಗಿದೆ.

ಶ್ರೀರಾಮಕೃಷ್ಣ ಪರಮಹಂಸರವರ ೧೧೪ನೇ ಜಯಂತ್ಯೋತ್ಸವವೂ, ಧರ್ಮದ ಔಷಧಾಲಯದ ವಾರ್ಷಿಕೋತ್ಸವವೂ ಪೊನ್ನಂಪೇಟೆ ಶ್ರೀ ಶಾರದಾಶ್ರಮದಲ್ಲಿ ತಾ ೭-೫-೪೯ರಲ್ಲಿ ಶ್ರೀ ಡಿ. ಸಿದ್ದಣ್ಣನವರ ಅಧ್ಯಕ್ಷತೆಯಲ್ಲಿ ನಡೆಯುವದು. ಅನೇಕ ಆಧ್ಯಾತ್ಮಿಕ ಮಹನೀಯರ ಭಾಷಣಗಳೂ ಹರಿಕಥೆಯೂ ಏರ್ಪಡಾಗಿದೆ.

ಕುಕ್ಲೂರು ಗ್ರಾಮದ ಶ್ರೀಮೂಲ ಭದ್ರಕಾಳಿ ದೇವರ ಉತ್ಸವವು ತಾ. ೨೧, ೨೨, ೩೩ರಲ್ಲಿ ನಡೆಯುವದು.

ತಾರೀಕು ೨೬-೪-೪೯ರಲ್ಲಿ ಡೆಲ್ಲಿಗೆ ಆಹಾರ ಸಮ್ಮೇಳನಕ್ಕಾಗಿ ಹೋಗಿರುವ ಕೊಡಗಿನ ಅ. ಕಮಿಷನರು ತಾರೀಕು ೭-೫-೪೯ರಲ್ಲಿ ವಾಪಾಸು ಬರಲಿರುವರು.

ಲಕ್ಷ್ಮಣ ತೀರ್ಥ ಅಣೆ ಕಟ್ಟಿನ ಸಂಬಂಧ ಮೈಸೂರು ಸರಕಾರದವರಿರುವ ತಕರಾರನ್ನು ನಿರ್ಮೂಲನಿಸಲು ಕೊಡಗು, ಮೈಸೂರು ಮತ್ತು ಇಂಡಿಯಾ ಸರಕಾರಗಳ ಪ್ರತಿನಿಧಿಗಳ ಮೀಟಿಂಗು ಈ ತಾ ೧೨ ಮತ್ತು ೧೩ರಲ್ಲಿ ಕೃಷ್ಣರಾಜಸಾಗರ ಕಟ್ಟೆಯಲ್ಲಿ ನಡೆಯುವದೆಂದು ತಿಳಿದುಬರುತ್ತೆ.

ಲೋವರ್ ಸೆಕೆಂಡರಿ ಪರೀಕ್ಷಾ ಫಲಿತಾಂಶ.

ಕಳೆದ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ಈ ಕೆಳಗಿನಂತೆ ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

ಮಡಿಕೇರಿ ಹೈಸ್ಕೂಲ ೯೫ ರಲ್ಲಿ ೭೭, ಕುಶಾಲನಗರ ಹೈಸ್ಕೂಲ ೬೬ ರಲ್ಲಿ ೪೩, ಸ್ಟೇಟ್ ಟ್ರೈನಿಂಗ್ ಸ್ಕೂಲ್ ೬೬ ರಲ್ಲಿ, ೨೨ ಸೋಮವಾರಪೇಟೆ ಬೆಳೆ ರಲ್ಲಿ ೨೧, ಅಮ್ಮತ್ತಿ ೪೨ರಲ್ಲಿ ೩೫, ಶ್ರೀಮಂಗಲ ಪರಂಬು ೫೯ರಲ್ಲಿ ೫೦, ಭಾಗಮಂಡಲ ೧೪ ರಲ್ಲಿ ೧೨, ಚೆಯ್ಯಂಡಾಣೆ ೩೯ರಲ್ಲಿ ೨೨, ಕಕ್ಕಬೆ ೨೪ರಲ್ಲಿ ೧೬, ಗೋಣಿಕೊಪ್ಪಲು ೩೪ ರಲ್ಲಿ ೨೫, ಸುಂಟಿಕೊಪ್ಪ ೪೫ರಲ್ಲಿ ೩೪, ವೀರಾಜಪೇಟೆ ೯೩ ರಲ್ಲಿ ೬೬, ಕೊಡ್ಲಿಪೇಟೆ (ಯಾರೂ ಪಾಸಾಗಲಿಲ್ಲ.) ವೀರಾಜಪೇಟೆ ಎಸ್. ಸ್ಕೂಲ್, ೬೨ ರಲ್ಲಿ ೫೫, ಪೊನ್ನಂಪೇಟೆ ೪೬ರಲ್ಲಿ ೩೪. ಹುದಿಕೇರಿ ೪೬ರಲ್ಲಿ ೨೯, ಬೆಸಗೂರು ೨೮ರಲ್ಲಿ ೨೬, ಬಿಳಿಗೇರಿ ೬ರಲ್ಲಿ ೪, ಕಲ್ಲೋಡು ೩೭ರಲ್ಲಿ ೨೨, ನಾಪೋಕ್ಲು ೩೯ರಲ್ಲಿ ೨೪, ಶನಿವಾರಸಂತೆ ೨೫ ರಲ್ಲಿ ೧೪, ಹೆಬ್ಬಾಲೆ ೧೨ರಲ್ಲಿ ೧೦, ಫ್ರೇಜರ್‌ಪೇಟೆ ೧೪ ರಲ್ಲಿ ೧೨, ಶಾಂತಿಕೊಪ್ಪ ೧೬ರಲ್ಲಿ ೧೧, ಪಾರಣೆ ೪೦ರಲ್ಲಿ ೨೩, ಬಿ ಶೆಟ್ಟಿಗೇರಿ ೧೬ ರಲ್ಲಿ ೧೬, ಟಿ ತೂರು ೨೩ ರಲ್ಲಿ ೧೨, ಟಿ ಶೆಟ್ಟಿಗೇರಿ ೧೮ ರಲ್ಲಿ ೧೧.

CANCELLATION OF DR PATTABHI'S COORG TOUR.

The following is the copy of the letter written by Rashtrapathi Dr. Pattabhi Sitaramaiya to P. I. Belliappa cancelling his tour in Coorg.

My dear Belliappa,

I have just wired to you cancelling my proposed trip to Coorg-much to my regret. It has had to be done under unavoidable circumstances which call me away to Madras. I am extremly sorry that the people of Coorg have been put to considerable inconvenience as the cancellation cannot get the same publicity as the programme relating to the proposed visit. I can only request you to convey my apologies to Coorg friends, and can only make amend by undertaking to visit Coorg at a later date But I very seriously doubt whether Coorg friends will take my promise at its face value !

Yours's Sincerely,
B. Pattabhi Sitaramaiya.

Bangalore.
2—5—49

ರಾಷ್ಟ್ರಪತಿ ಡಾ|| ಪಟ್ಟಾಭಿಯವರ ಪ್ರವಾಸ ವಜಾ.

ಡಾ|| ಪಟ್ಟಾಭಿ ಸೀತಾರಾಮಯ್ಯನವರು ಪಿ ಐ. ಬೆಳ್ಯಪ್ಪನವರಿಗೆ ಬರೆದ ಪತ್ರ.

ನನ್ನ ಪ್ರಿಯ ಬೆಳ್ಯಪ್ಪ,

ನನ್ನ ಕೊಡಗಿನ ಪ್ರವಾಸವನ್ನು ವಜಾ ಮಾಡಲು ವ್ಯಸನದಿಂದ ಈಗ ತಾನೇ ನಿಮಗೆ ತಂತೀ ಕಳುಹಿಸಿರುತ್ತೇನೆ. ಮದ್ರಾಸಿಗೆ ನಾನು ಕೂಡಲೆ ಹೋಗಬೇಕಾದ ಅನಿವಾರ್ಯ ಕಾರಣಗಳಿಂದ ಹಾಗೆ ಮಾಡಬೇಕಾಯಿತು. ಪ್ರವಾಸದ ಕಾರ್ಯಕ್ರಮವು ಪ್ರಚಾರವಾದಂತೆ ಅದು ವಜವಾದುದನ್ನು ಪ್ರಚಾರ ಮಾಡಲು ಸಾಧ್ಯವಿಲ್ಲದ ಕಾರಣ ಇದರಿಂದ ಕೊಡಗಿನ ಜನರಿಗೆ ಉಂಟಾಗುವ ತೊಂದರೆಗಳಿಗಾಗಿ ನಾನು ತುಂಬಾ ವ್ಯಸನಪಡುತ್ತೇನೆ ಕೊಡಗಿನ ಮಿತ್ರರ ಕ್ಷಮಾಪಣೆ ಬೇಡುತ್ತೇನೆಂದು ಅವರಿಗೆ ನೀವು ತಿಳಿಸುವುದಲ್ಲದೆ ಕೆಲವು ಕಾಲದ ನಂತರ ನಾನು ಕೊಡಗಿಗೆ ಬರುವ ಭರವಸೆಯಿಂದ ಮಾತ್ರ ಈ ತಪ್ಪನ್ನು ಸರಿಪಡಿಸಬಲ್ಲೆ. ಆದರೆ ಈಗ ಕೊಡಗಿನವರು ನನ್ನ ಭರವಸೆಯನ್ನು ನಂಬುವರೋ ಎಂಬ ಸಂಶಯ ನನಗಿದೆ !

ನಿಮ್ಮವನಾದ,
ಬಿ. ಪಟ್ಟಾಭಿ ಸೀತಾರಾಮಯ್ಯ.

ಬೆಂಗಳೂರು,
2—5—49

ಈ ಮೇಲಿನ ಕಾರಣದಿಂದ ರಾಷ್ಟ್ರಪತಿಯವರ ಪ್ರವಾಸ ವಜವಾಗಿದೆ. ಇದರಿಂದ ಉಂಟಾದ ನಿರಾಶೆಗಾಗಿ ದೇಶೀಯರು ದಯವಿಟ್ಟು ಕ್ಷಮಿಸಬೇಕಾಗಿ ಕೋರಿಕೆ.

ಮಡಿಕೇರಿ,
3—5—49.

ಪಿ ಐ. ಬೆಳ್ಯಪ್ಪ.

ಆದರ್ಶ ಸಹಕಾರಿ-ಡಾ|| ಪಟ್ಟಾಭಿ.

ರಾಷ್ಟ್ರಪತಿಗಳಾದ ಡಾ ಪಟ್ಟಾಭಿಯವರು ಹಿಂದೂದೇಶದ ಪ್ರಧಾನ ಸಹಕಾರಿಗಳಲ್ಲೊಬ್ಬರು ಸಹಕಾರ ರಂಗದಲ್ಲಿ ಅವರು ಮಾಡಿದ ಸೇವೆಯ ಸಂಕ್ಷಿಪ್ತ ಪರಿಚಯವನ್ನಿಲ್ಲಿ ಕೊಡಲಾಗಿದೆ

೧೯೧೫ನೇ ಇಸವಿಯಲ್ಲಿ ಅವರು ಕೃಷ್ಣಾ ಜಿಲ್ಲಾ ಸಹಕಾರಿ ಬ್ಯಾಂಕನ್ನು ಸ್ಥಾಪಿಸಿದರು. ಆ ನಂತರ ಅದನ್ನು ಪಶ್ಚಿಮ ಗೋದಾವರಿ, ವಿಜಯವಾಡ ಮತ್ತು ಕೃಷ್ಣಾ ಸಹಕಾರ ಸೆಂಟ್ರಲ್ ಬ್ಯಾಂಕುಗಳೆಂದು ಮೂರು ವಿಭಾಗ ಮಾಡಲಾಯಿತು. ಈ ಬ್ಯಾಂಕುಗಳ ಕಾರ್ಯದರ್ಶಿ ... ಡೈರೆಕ್ಟರರಾಗಿ ಬಹುಕಾಲ ದುಡಿದರು. ಸೆಂಟ್ರಲ್ ಬ್ಯಾಂಕುಗಳ ಪ್ರತಿನಿಧಿಯಾಗಿ ಅವರು ಮದ್ರಾಸ್ ಪ್ರಾಂತೀಯ ಸಹಕಾರಿ ಬ್ಯಾಂಕಿನ ಬೋರ್ಡಿನಲ್ಲಿದ್ದರು.

ಆ ಕಾಲದಲ್ಲಿ ಸಹಕಾರ ಪ್ರಾಂತೀಯ ಬ್ಯಾಂಕನ್ನು ಮದ್ರಾಸ್ ಸೆಂಟ್ರಲ್ ಅರ್ಬನ್ ಬ್ಯಾಂಕೆಂದು ಕರೆಯುತ್ತಿದ್ದರು ಸಹಕಾರ ಕ್ಷೇತ್ರದಲ್ಲಿ ದಿವಂಗತ ಡಾ ಎಸ್ ಸ್ವಾಮಿನಾಥನ್ ಮತ್ತು ವಿ ರಾಮದಾಸ್ ಪಂತುಲು ಇವರ ಸಹಪಾಟಿಯೂ ಆಗಿದ್ದರು ೧೯೩೦ರಲ್ಲಿ ಅಸಹಕಾರ ಚಳವಳಿಯ ಸಲುವಾಗಿ ಬಂಧಿತರಾದಂದಿನಿಂದ ಸಹಕಾರ ಚಳವಳಿಯ ಆಸಕ್ತಿಯನ್ನು ಸ್ವಲ್ಪ ಕಡಿಮೆ ಮಾಡಿದ್ದಾರೆ ಆದರೆ ಹದಿನೈದು ವರ್ಷಗಳ ಸಹಕಾರ ರಂಗದ ಕಾರ್ಯಕಲಾಪದ ಸಮಯದಲ್ಲಿ ಹಲವಾರು ತಾಲ್ಲೂಕು ಜಿಲ್ಲಾ ಮತ್ತು ಪ್ರಾಂತೀಯ ಪರಿಷತ್ತುಗಳಲ್ಲಿ ಅಧ್ಯಕ್ಷ ಸ್ಥಾನವನ್ನು ವಹಿಸಿದ್ದಾರೆ ಅವರು ಸಹಕಾರ ಪಡಿಯೋಜನೆಯನ್ನು ಸ್ಥಾಪಿಸಿದರು ಮತ್ತು ೧೯೩೦ರ ವರೆಗೆ 'ಸಹಕಾರ' ಎಂಬ ತೆಲುಗು ಪತ್ರಿಕೆಯನ್ನು ಹೊರಡಿಸುವ ಹೊಣೆಗಾರಿಕೆಯನ್ನು ಹೊತ್ತಿದ್ದರು ಕೃಷ್ಣಾ ಜಿಲ್ಲೆಯ ಗಡ್ಡನಹಳ್ಳಿ ... ಪಡ್ಡಪ್ಪ ... ಗಳಲ್ಲಿ ಸ್ಥಾಪಿಸಿದ ಪ್ರಾಥಮಿಕ ಭೂಮಿ ಅಡಮಾನ ಬ್ಯಾಂಕುಗಳ ಸ್ಥಾಪಕರೂ ಇವರೇ! ಇವರು ತಂದ ದೇಶದ ಸಹಕಾರ ಚಳವಳಿಯ ಪಿತನೆಂದರೆ ಅತ್ಯುಕ್ತಿಯಲ್ಲ. ಆ ಕಾಲದಲ್ಲಿ ಪ್ರಾದೇಶಿಕ ಭೂಮಿ ಅಡಮಾನ ಬ್ಯಾಂಕುಗಳಿಗೆ ಡಿಬೆಂಚರುಗಳನ್ನು ಹೊರಡಿಸುವ ಅಧಿಕಾರವಿತ್ತು. ಅಂಥ ಅಧಿಕಾರವಿರುವ ಆರು ಅಥವಾ ಎಂಟು ಬ್ಯಾಂಕುಗಳಲ್ಲಿ ಮೇಲಿನ ೩ ಬ್ಯಾಂಕುಗಳು ಆಗಿದ್ದವು ೧೯೩೮-೩೯ರಲ್ಲಿ ಸೆಂಟ್ರಲ್ ಭೂಮಿ ಅಡಮಾನ ಬ್ಯಾಂಕನ್ನು ಸ್ಥಾಪಿಸಿ, ಹಣ ವಹಿವಾಟವನ್ನು ಕೇಂದ್ರೀಕರಿಸಿದರು

ಅದೇ ರೀತಿ ಜಯಿಂಟ್ ಸ್ಟಾಕ್ ಕಂಪೆನಿಗಳನ್ನು ವ್ಯವಸ್ಥಾಪಿಸಿ ಬೆಳೆಸಿದ್ದಾರೆ ಆಂಧ್ರ ಬ್ಯಾಂಕ್, ಆಂಧ್ರ ವಿಮಾ ಕಂಪೆನಿ, ಭಾರತ ಲಕ್ಷ್ಮಿ ಬ್ಯಾಂಕ್, ಹಿಂದೂಸ್ಥಾನ ಐಡಿಯಲ್ ವಿಮಾ ಕಂಪೆನಿ ಇವುಗಳನ್ನು ಅವರೇ ಸ್ಥಾಪಿಸಿದ್ದಾಗಿದೆ. ಇವುಗಳೆಲ್ಲ ರಾಷ್ಟ್ರಪತಿಯವರ ಶ್ರಮದಿಂದ ಹುಟ್ಟಿ ಬೆಳೆದಂಥವುಗಳಾಗಿವೆ

ವಿಶ್ವವಿದ್ಯಾಲಯ ಕಮಿಷನ್

ಕೊಡಗಿನಲ್ಲಿ ಸ್ಥಾಪಿಸಲಿರುವ ಕಾಲೇಜನ್ನು ಮದ್ರಾಸ ವಿಶ್ವವಿದ್ಯಾಲಯಕ್ಕೆ ಸಂಯೋಜಿಸುವ ಉದ್ದೇಶ ಸದರಿ ವಿಶ್ವವಿದ್ಯಾಲಯದ ಎಂಟು ಮಂದಿಯಿಂದ ಕೂಡಿದ ಕಮಿಷನೊಂದು ಲಾ ಕಾಲೇಜಿನ ವೈಸ್ ಪ್ರಿನ್ಸಿಪಾಲ್ ದಿವಾನ್ ಬಹದ್ದೂರ್ ಗೋವಿಂದರಾಜುಲು ನಾಯುಡುರವರ ನೇತೃತ್ವದಲ್ಲಿ ಕಳೆದ ತಾ ೩೦ರಲ್ಲಿ ಮಡಿಕೇರಿಗೆ ಬಂದು ಎರಡು ದಿನ ಮಡಿಕೇರಿಯಲ್ಲಿದ್ದು ಈ ಊರಲ್ಲಿ ಹಿಂತಿರುಗಿ ನೋಡಿದರು. ಇವರು ಜೂನ್ ಕಾಲೇಜು ಕಟ್ಟುವ ಸ್ಥಳ ಮತ್ತು ತಾತ್ಕಾಲಿಕ ಕಾಲೇಜು ಪ್ರಾರಂಭಿಸುವ ಹೈಸ್ಕೂಲ ಕಟ್ಟಡಗಳನ್ನು ಸಂದರ್ಶಿಸಿ ಕಾಲೇಜಿನ ಮುಂದಿನ ಬೆಳವಣಿಗೆಗೆ ಬೇಕಾದ ಎಲ್ಲಾ ವಿಚಾರಗಳನ್ನು ಅವಲೋಕಿಸಿ ಇದರಿಂದ ತೃಪ್ತರಾಗಿ ಕಾಲೇಜನ್ನು ಮದ್ರಾಸು ವಿಶ್ವವಿದ್ಯಾಲಯಕ್ಕೆ ಸಂಯೋಜಿಸಬಹುದೆಂದು ಶಿಫಾರಸ್ಸು ಮಾಡಿರುವರಾಗಿ ತಿಳಿಯಬರುತ್ತದೆ. ತಾ ೩ರ ಸಾಯಂಕಾಲ ಕೋಟೆಯ ಮಹಾಭಾಗದಲ್ಲಿ ಸಾರ್ವಜನಿಕರು ಇವರಿಗಾಗಿ ಏರ್ಪಡಿಸಿದ್ದ ಚಹಾ ಕೂಟದಲ್ಲಿ ಇವರೆಲ್ಲರೂ ಭಾಗವಹಿಸಿದ್ದರು. ಈ ಸಭೆಯಲ್ಲಿ ಚೀಫ್ ಕಮಿಷನರು ಈ ಕಮಿಷನಿನ ಸದಸ್ಯರನ್ನು ನೆರೆದಿದ್ದವರಿಗೆ ಪರಿಚಯ ಮಾಡಿಕೊಡುತ್ತಾ ಅವರ ವಿಶೇಷ ಯೋಗ್ಯತೆಗಳನ್ನು ವಿವರಿಸಿ ಕಾಲೇಜು ಸ್ಥಾಪನೆಯ ಪ್ರಯತ್ನಗಳನ್ನು ಹೇಳಿದರು.

ಅವರ ಮುಂದ ಶ್ರೀ ಗೋವಿಂದರಾಜುಲು ನಾಯುಡುರವರು ಉತ್ತರವೀಯುತ್ತಾ, "ಕಾಲೇಜಿನ ಜಯಾಪಜಯಗಳು ಅದರ ಅಧ್ಯಾಪಕ ವರ್ಗವನ್ನು ಹೊಂದಿಕೊಂಡಿವೆ. ಉತ್ತಮರನ್ನು ಆರಿಸಬೇಕು. ಆದರೆ ನಿಮ್ಮ ಕಾಲೇಜು ಮಾದರಿ ಕಾಲೇಜಾಗಬಹುದು. ಬೇರೆ ಎಲ್ಲಾ ಕಡೆಗಳಿಗಿಂತಲೂ ಕೊಡಗಿನಲ್ಲಿ ಕಾಲೇಜಿನ ಸ್ಥಾಪನೆಯ ಅತ್ಯವಶ್ಯಕತೆ ತೋರಲು ಇಲ್ಲಿಯ ಸ್ತ್ರೀ ಪುರುಷರ ಗುಣವೇ ಪ್ರಾಮುಖ್ಯವೆನ್ನಬಹುದು. ಸೈನ್ಯಕ್ಕೆ ಕಮಿಷನ್ ಪಡೆದ ಅಧಿಕಾರಿಗಳಾಗಿ ಈ ಸುಂದರ ಮತ್ತು ಚಿಕ್ಕ ಪ್ರಾಂತದಿಂದ ಕೊಟ್ಟಂಥಾ ಜನರ ಯೋಗ್ಯತೆ ಮತ್ತು ಸಂಖ್ಯೆಯು ಇಲ್ಲಿಯ ಜನರಲ್ಲಿ ಅಂತರಿತವಾಗಿರುವ ಉತ್ತಮ ಗುಣಗಳನ್ನು ಪ್ರದರ್ಶಿಸುತ್ತದೆ. ಈ ಗುಣವು ಇನ್ನೂ ವಿಕಾಸಗೊಳ್ಳಲು ಸಹಾಯಕವಾದ ಕಾಲೇಜಿನಿಂದ ನೀವು ಇನ್ನೂ ಹೆಚ್ಚಿನ ಸೇವೆಯನ್ನು ಸಲ್ಲಿಸಬಲ್ಲಿರಿ. ಆದರೆ ಬೇರೆ ಕಡೆಗಳಂತೆಯೇ ಇಲ್ಲಿಯೂ ರಾಜಕೀಯ ಜಗಳಗಳಿರುವುದ ವ್ಯಸನಕರ. ಕಾಲೇಜಿನ ವಾತಾವರಣವು ರಾಜಕೀಯ ಪಕ್ಷ ಪಂಗಡಗಳಿಂದ ದೂರವಾಗಿರಬೇಕು. ಇಲ್ಲವಾದರೆ ಕಾಲೇಜು ಪ್ರಗತಿ ಪಡೆಯಲಾರದು.

ಈ ಸರಕಾರಿ ಕಾಲೇಜಿಗೆ ಇಂಡಿಯಾ ಸರಕಾರದ ಅಮಿತ ಆದಾಯದ ಬೆಂಬಲವಿದೆಯೆಂಬುದು ಸಂತೋಷದ ವಿಷಯ. ಈ ತರದ ಅನುಕೂಲವು ದೊಡ್ಡ ಪ್ರಾಂತಗಳಿಗಿಲ್ಲ. ನ ಡಿಕೇರಿಯ ಉತ್ತಮ ವಾತಾವರಣದಲ್ಲಿ ಕಾಲೇಜನ್ನು ಸ್ಥಾಪಿಸಬೇಕೆಂದು ನಾವು ವಿಶ್ವವಿದ್ಯಾಲಯಕ್ಕೆ ಶಿಫಾರಸ್ಸು ಮಾಡದಿರಲು ಸಾಧ್ಯವಿಲ್ಲ"

Coorg Civil Surgeon's Office, Mercara, the 30th April 1949

WANTED

Women candidates to undergo training, as Rural Midwives, at the Civil Hospital, Mercara, for six months, on a stipend of Rs 25/- per mensem and Rs 50/- towards equipment allowance after the completion of training

The candidates must have completed Lower Secondary examination and must be between 25 and 35 years of age Those living in villages will be given preference

Relaxation of age limit and educational qualification, on special cases, will be considered, if candidate deserves selection on other considerations

Application must reach the Civil Surgeon, Coorg, Mercara, on or before 15-5-1949 The course will commence from 1-6 49.

T. B MEDAPPA,
2-1 *Civil Surgeon Coorg*

The Chief Commissioner Of Coorg Mercara, the 2nd May 1949

Press Communique

Owing to transport difficulties, Messrs Parry & Co, inspite of their best efforts, could not so far get the indented bottles to bottle arrack at the warehouse at Mercara and also boxes to pack them. In view of this and other unavoidable circumstances, it has been decided to postpone the supply of bottled arrack to permit holders from the 10 depots during May 1949 As in April 1949, during May 1949, arrack to all persons who have been issued temporary permits so far, will be given from the four wholesale arrack depots of the Parry & Company at Mercara, Virajpet, Gonicoppal and Somawarpet All persons who have surrendered their temporary April permit to one of these Depots are requested to go in person or depute an Agent with a letter or authority to the Depot to which they surrendered their April card and draw their ration of one bottle for May, on the strength of their April card Persons who have failed to obtain their ration for April, may surrender their April card to the Depot concerned and draw their ration for May too Necessary instructions have been issued to the Depot keepers

C T. MUDALIAR,
Chief Commissioner

ದಿ ಟ್ರಾಪಿಕಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್ - ಲಾಲ ಶಂಕರ್ ಲಾಲ್

ಮುಖ್ಯ ಕಚೇರಿ – ಹೊಸ ಡೆಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು — ಎಸ್ ಶ್ರೀನಿವಾಸ ಅಯ್ಯಂಗಾರ್

ಹಕೀಮ್ ಅಜಮಲಖಾನ್. — ಡಾ|| ಎಂ ಎ. ಅನ್ಸಾರಿ.

(1) ದೇಶದಲ್ಲಿ ...

(2) ಸ್ವತಂತ್ರ ಭಾರತದಲ್ಲಿ ...

(3) ... ವರ್ಷಗಳ ...

(4) ... ಮಾಡುತ್ತಿದೆ

(5) ... ಕೊಡುತ್ತಿದೆ

(6) ... ಯೋಗ್ಯವಾದ ರೀತಿಯಲ್ಲಿ ನಡೆಸಿಕೊಳ್ಳಲಾಗುತ್ತದೆ

ನಮ್ಮ ಹೊಸ ವಿಸ್ತಾರದ ಯೋಜನೆಯಲ್ಲಿ ಕಮಿಷನ್ ... ಬೇಕಾದವರು ...

ಏಜೆನ್ಸಿ ಸುಪರಿಂಟೆಂಡೆಂಟ್, — ಎಂ. ಎ ಚೆಟ್ಟಿಪ್ಪ, ಬ್ರಾಂಚ್ ಸೆಕ್ರಟರಿ,
ಮಡಿಕೇರಿ, ಕೊಡಗು. — ದಿ ಟ್ರಾಪಿಕಲ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್;
ವಾ — ... ಬೆಂಗಳೂರು

ಮೈಸೂರಿನ ನಿರ್ಧಾರ.

ಮೈಸೂರು ಭವಿಷ್ಯದ ಬಗ್ಗೆ ಪ್ರಜಾಭಿಪ್ರಾಯವನ್ನು ಪ್ರತಿಬಿಂಬಿಸಲು ಮೈಸೂರು ಜಿಲ್ಲಾ ರೈತರ ಸಂಘದ ಆಶ್ರಯದಲ್ಲಿ ರಾಜಧಾನಿಯ ಟೌನ್ ಹಾಲಿನಲ್ಲಿ ಮೈಸೂರು ಜಿಲ್ಲಾ ಬೋರ್ಡು ಅಧ್ಯಕ್ಷರಾದ ಶ್ರೀ ಎಚ್. ಎಸ್. ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯನ್ನು ಏರ್ಪಡಿಸಲಾಗಿತ್ತು.

ಶ್ರೀ ಎಚ್. ಎಂ. ಚನ್ನಬಸಪ್ಪನವರು ಅಧ್ಯಕ್ಷ ಪೀಠದಿಂದ ಈ ಕೆಳಗೆ ಕಂಡ ನಿರ್ಣಯವನ್ನು ಮಂಡಿಸಿದರು

'ಅಗಲಿರುವ ಕನ್ನಡ ನಾಡುಗಳನ್ನು ಒಂದುಗೂಡಿಸಿ ಕರ್ನಾಟಕ ಪ್ರಾಂತರಚನೆ ಮಾಡಲು ಉತ್ಸಾಹದಿಂದ ಜರುಗುತ್ತಲಿರುವ ಕಾರ್ಯ ಚಟುವಟಿಕೆಗಳನ್ನು ವಿಶೇಷ ರೀತಿಯ ಸಂಬಂಧ ಮತ್ತು ಆಸಕ್ತಿಗಳಿಂದ ಬರುತ್ತಿರುವ ಆಗ್ರಹಪೂರಿತ ಬಿರುನುಡಿಗಳು ವಿನಯ ಸಂಸ್ಕೃತಿಗಳಿಗೆ ದೂರವಾಗಿವೆ, ಬಿರುಸು ಮಾತುಗಳಿಂದ ವಾತಾವರಣ ವಿರಸವಾಗುವುದೇ ವಿನಹ ಏಕೀಕರಣ ಕೆಲಸ ಸರಸವಾಗುವುದಿಲ್ಲ. ಇಂತಹ ಮಹತ್ಕಾರ್ಯ ಸಾಧನೆಯು ಸಂಬಂಧಪಟ್ಟ ಪ್ರಾಂತ್ಯಗಳ ಪ್ರಜಾಭಿಪ್ರಾಯವನ್ನವಲಂಭಿಸಿದೆಯೇ ವಿನಹ ಕಾರ್ಯದಲ್ಲಿ ತೊಡಗಿರುವವರ ಸ್ಥಾನಮಾನ, ಶಕ್ತಿ, ಸಾಮರ್ಥ್ಯ ಹಂಬಲಗಳಿಂದಲೇ ಸಾಧ್ಯವಾಗುವುದಿಲ್ಲವೆಂದು ಈ ಸಭೆಯು ಅಭಿಪ್ರಾಯಪಡುತ್ತದೆ.

ಮೈಸೂರು ಸಂಸ್ಥಾನದ ರಾಜ್ಯಾಂಗ ರಚನಾ ಸಭೆಯಲ್ಲಿ ಅಂಗೀಕೃತವಾಗಿರುವ ಮೂಲೋದ್ದೇಶ ನಿರ್ಣಯದಲ್ಲಿ ಪ್ರಜೆಗಳ ಅಧಿಕಾರವು ಅಡಕವಾಗಿದೆ. ಶಾಸನಬದ್ಧ ರಾಜತ್ವವನ್ನೊಳಗೊಂಡ ಪ್ರಜಾಸ್ವಾತಂತ್ರ್ಯ ರಾಜ್ಯಾಡಳಿತವೇರ್ಪಡಿಸಿ, ಮೈಸೂರಿನ ವ್ಯಕ್ತಿತ್ವ, ವೈಶಿಷ್ಟ್ಯ ಮತ್ತು ಸಂಸ್ಕೃತಿಗಳಿಗೆ ಅಸಮಂಜಸವಾಗದ ರೀತಿಯಲ್ಲಿ ನೆರೆಹೊರೆಯ ಪ್ರಾಂತ್ಯಗಳು ಸಂಸ್ಥಾನದೊಡನೆ ಸೇರಲು ಅವಕಾಶ ಕಲ್ಪಿಸಿಕೊಡಬಹುದೆಂಬುದೇ ಸಂಸ್ಥಾನದ ಪ್ರಜೆಗಳ ಹಾಗೂ ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯ ಖಚಿತ ಅಭಿಪ್ರಾಯ. ಇದಕ್ಕೆ ವಿರೋಧ ಬರುವ ರೀತಿಯಲ್ಲಿ ನಡೆಯುವ ಅಥವಾ ನಡೆಯಬಹುದಾದ ಮಾತುಕತೆ, ವ್ಯವಹಾರದ ಒಪ್ಪಂದಗಳಿಗೆ ಮೈಸೂರು ಪ್ರಜೆಗಳ ಒಪ್ಪಿಗೆಯಿಲ್ಲ. ಭಾರತ ರಾಜ್ಯಾಂಗ ರಚನಾ ಸಭೆಯು ಅಂಗೀಕರಿಸಿರುವ ಧ್ಯೇಯೋದ್ದೇಶ ನಿರ್ಣಯದಲ್ಲಿ ಸೂಚಿತವಾಗಿರುವ 'ಸರ್ವಸ್ವಾತಂತ್ರ್ಯ ಸಂಪನ್ನ ಪ್ರಜಾಪ್ರಭುತ್ವ' (Sovereign Democratic Republic) ದೊಡನೆ ಸಮನ್ವಯ ಹೊಂದುವ ರೀತಿಯಲ್ಲಿ ಸಂಸ್ಥಾನದ ಒಳಾಡಳಿತವನ್ನು ರೂಪಿಸುವುದು ಮತ್ತು ಭಾರತಾವರ್ಷದ ಪ್ರಾಂತರಚನೆಯಲ್ಲಿ ತನ್ನ ಪಾತ್ರವನ್ನು ನಿರ್ಧರಿಸುವುದೂ ಸಹ ಮೈಸೂರು ಪ್ರಜೆಗಳಿಗೆ ಸೇರಿದ್ದು.

ರಾಜಪ್ರಭುತ್ವವು ಮೈಸೂರು ಸಂಸ್ಥಾನದ ಇತಿಹಾಸ ಸಂಸ್ಕೃತಿಗಳಿಗೆ ಹೊಂದಿ ಬಂದದ್ದು. ಶಾಸನಬದ್ಧ ರಾಜತ್ವವು ಪ್ರಜಾಸ್ವಾತಂತ್ರ್ಯ (Republio) ತತ್ವದಲ್ಲಿ ಸಮನ್ವಯ ಹೊಂದಿ ಪ್ರಜಾಪ್ರಭುತ್ವಕ್ಕೆ ವಿಶೇಷ ರೀತಿಯ ತೇಜಸ್ಸು ಕೊಟ್ಟು ಆಡಳಿತವನ್ನು ಯಶಸ್ವಿ ಮಾಡಬಲ್ಲದೆಂಬುದಕ್ಕೆ ಬ್ರಿಟಿಷ್ ರಾಜ್ಯಾಡಳಿತ ಪದ್ಧತಿಯೇ ಸಾಕ್ಷಿಯಾಗಿದೆ. ಇದನ್ನು ಮನಗಂಡೇ ಮೈಸೂರಿನ ಪ್ರಜೆಗಳು ಶಾಸನಬದ್ಧ ರಾಜತ್ವವನ್ನು ಒಪ್ಪಿ ಅಪ್ಪಿಕೊಂಡಿರುವರು. ಈ ವಿಷಯದಲ್ಲಿ ಮಾತ್ರ ಯಾವ ವಿಧವಾದ ಮಧ್ಯಸ್ಥಿಕೆಗೂ ತಲೆಬಾಗಲು ಸಾಧ್ಯವಿಲ್ಲ. ಸರಾಜಕ, ಸಾಂಘಿಕ ಪ್ರಭುತ್ವದಲ್ಲಿ ಅಖಂಡ ಕರ್ನಾಟಕವನ್ನು ಕಟ್ಟಲು ಯಾವತ್ತೂ ಕನ್ನಡಿಗರಿಗೆ ಆಹ್ವಾನವಿದೆ. ಅದು ಬಿಟ್ಟು ಮೈಸೂರಿನ ಹಿತಕ್ಕೆ ಧಕ್ಕೆ ಬರುವ ರೀತಿಯಲ್ಲಿ ಕೈಕೊಳ್ಳಬಹುದಾದ ಯಾವ ಕಾರ್ಯ ಕ್ರಮಗಳನ್ನೂ ಸಂಸ್ಥಾನದ ಜನರು ಸಹಿಸುವುದಿಲ್ಲ. ಅವಶ್ಯ ಬಿದ್ದರೆ ತೀವ್ರವಾಗಿ ಪ್ರತಿಭಟಿಸಲು ಹಿಂಜರಿಯುವುದಿಲ್ಲವೆಂದು ಈ ಸಭೆಯು ಘೋಷಿಸುತ್ತದೆ.

ಮೈಸೂರು ಸಂಸ್ಥಾನದೊಡನೆ ವಿವಿಧ ಕನ್ನಡ ಜಿಲ್ಲೆಗಳನ್ನು ಸೇರಿಸುವುದರ ಮೂಲಕ ಕರ್ನಾಟಕ ಪ್ರಾಂತರಚನೆ ಸಾಧ್ಯವಿಲ್ಲವೆಂಬ ಅರ್ಥವಿರುವ ರೀತಿಯಲ್ಲಿ ಹೇಳಿರುವ ತ್ರಿಮೂರ್ತಿ ಸಮಿತಿಯ ಅಭಿಪ್ರಾಯವನ್ನು ಈ ಸಭೆಯು ಒಪ್ಪುವುದಿಲ್ಲ. ಮೈಸೂರಿನಲ್ಲಿ ರಾಜತ್ವವನ್ನು ರದ್ದು ಮಾಡಿ ಕರ್ನಾಟಕ ಪ್ರಾಂತರಚನೆ ಮಾಡುವ ಉದ್ದೇಶದಿಂದ ಈ ಪ್ರಶ್ನೆಯನ್ನು ಮುಂದುವರಿಸಿದೆಯೆಂಬ ಮತ್ತು ಪ್ರಜಾಸತ್ತೆಯ ರಾಜತ್ವಕ್ಕೆ ಸ್ಥಾನವಿಲ್ಲವೆಂಬ ಅರ್ಥ ಬರುವ ರೀತಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರು ವ್ಯಾಖ್ಯಾನ ಮಾಡಿರುವುದು ಸಂಸ್ಥಾನದ ಪ್ರಜೆಗಳಲ್ಲಿ ಆಶ್ಚರ್ಯವನ್ನೂ ಕಳವಳವನ್ನೂ ಉಂಟುಮಾಡಿದೆ. ಹೀಗೆ ಹೇಳುವಾಗ ಅವರು ಪ್ರಜೆಗಳ ಅಭಿಪ್ರಾಯದ ಕಡೆಗೆ ಲಕ್ಷ್ಯ ಕೊಟ್ಟಂತೆ ಕಾಣಬರುವುದಿಲ್ಲ. ಇದಕ್ಕಾಗಿ ಈ ಸಭೆಯು ತನ್ನ ವಿಷಾದವನ್ನು ವ್ಯಕ್ತಪಡಿಸುತ್ತದೆ. ಪ್ರಜಾ ಬೆಂಬಲವಿಲ್ಲದ ಯಾವ ಯೋಜನೆಯೂ ಯಶಸ್ವಿಯಾಗಿ ಕಾರ್ಯಗತವಾಗುವುದು ಸಾಧ್ಯವಿಲ್ಲ. ಮೈಸೂರಿನ ಜನತೆಯ ಪರವಾಗಿ ಸಂಸ್ಥಾನದ ರಾಜಕೀಯ ಭವಿಷ್ಯದ ಬಗ್ಗೆ ವ್ಯವಹರಿಸಲು ಮೈಸೂರು ರಾಜ್ಯಾಂಗ ರಚನಾ ಸಭೆಯೊಂದು ವಿನಾ ಮತ್ಯಾರಿಗೂ ಯಾವ ವಿಧವಾದ ಅಧಿಕಾರವಿಲ್ಲವೆಂದು ಈ ಸಭೆಯು ಘೋಷಿಸುತ್ತದೆ.'

ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

(ಸ. ಭಾ.)

ಪ್ರಚಲಿತ ವಿಚಾರಗಳು.

ಮೊಸಳೆಗಳ ಅದ್ಭುತ ಜೀರ್ಣ ಶಕ್ತಿ.

ಮೊಸಳೆಯ ಕುರಿತು ಪರಿಶೋಧನೆ ಮಾಡಿದ ಪ್ರಾಣಿ ಶಾಸ್ತ್ರಜ್ಞರು ಅದರ ಅದ್ಭುತ ಪಚನೇಂದ್ರಿಯ ಕ್ರಿಯೆಯ ಕುರಿತು ವಿಸ್ಮಯಗೊಂಡಿರುವರು. ಅದೆಷ್ಟು ಶೀಘ್ರವೂ ಮತ್ತು ಶಕ್ತಿಯುಕ್ತವೂ ಆಗಿದೆಯೆಂದರೆ ನುಂಗಲ್ಪಟ್ಟ ಪದಾರ್ಥಗಳು ಅದರ ಹೊಟ್ಟೆಯಲ್ಲಿ ಅರ್ಧ ಗಂಟೆಯಲ್ಲಿ ಕರಗಿ ಹೋಗುತ್ತವೆಯಂತೆ. ಪರಿಶೋಧಕರು ಒಂದು ಉಕ್ಕಿನ ಕೊಕ್ಕೆಯನ್ನು ಅದರ ಆಹಾರದೊಡನೆ ಸೇರಿಸಿ ಅದನ್ನು ಹೊಟ್ಟೆಗೆ ಹೋಗುವಂತೆ ಮಾಡಿದರು. ಅದೂ ಕೆಲವೇ ವಾರಗಳಲ್ಲಿ ಕರಗಿ ಹೋದದ್ದು ಗಮನಕ್ಕೆ ಬಂತು. ಒಂದು ಮೊಸಳೆಯ ಬೆನ್ನಿಗೆ ಬೇಟೆಗಾರರಿಂದ ಚುಚ್ಚಲ್ಪಟ್ಟ ಕಬ್ಬಿಣದ ಈಟಿಯ ಒಂದು ತುಂಡು ಅದರ ಹೊಟ್ಟೆಯ ತನಕ ತಲುಪಿದ್ದು ಅದರಲ್ಲಿ ನಾಲ್ಕು ಇಂಚುಗಳಷ್ಟು ಸಂಪೂರ್ಣ ಕರಗಿಹೋಗಿದ್ದು ಕಂಡುಬಂದಿದೆ.

ಹಲ್ಲುಗಳ ಮಿರುಗು ನಾಶವಾಗುತ್ತದೆ.

ಟೂತ್ ಪೇಸ್ಟುಗಳಲ್ಲೂ, ಹಲ್ಲು ಪುಡಿಗಳಲ್ಲೂ ರಾಸಾಯನಿಕ ಧಾತುಗಳ ಚೂರವು ಉಪಯೋಗಿಸಲ್ಪಡುವದರಿಂದ ಅವುಗಳಿಂದ ಉಜ್ಜಲ್ಪಡುವ ಹಲ್ಲುಗಳು ತಮ್ಮ ಮಿರುಗನ್ನು ಕಳಕೊಳ್ಳುತ್ತವೆ ಎಂದು ಇಂಡಿಯಾನ್ ವಿಶ್ವ ವಿದ್ಯಾಲಯ ದ ಶಾಸ್ತ್ರಜ್ಞರಾದ ಡಾ ರಾಲ್ಫ್ ಫಿಲಿಪ್‌ರವರು ತಿಳಿಸುತ್ತಾರೆ. ಕೊಳೆಯು ಹಲ್ಲುಗಳಲ್ಲಿ ಅಂಟಿಕೊಳ್ಳಬಾರದೆಂದು ಅದಕ್ಕೆ ಪ್ರಕೃತಿದತ್ತವಾದ ಆ ಮಿರುಗು ಇರುತ್ತದೆ. ಅದು ಹಲ್ಲನ್ನು ಉಜ್ಜುವದರಿಂದ ಕಳಕೊಳ್ಳುವದಾದರೆ ಹಲ್ಲುಗಳ ಉದ್ದೇಶವೇ ಭಂಗವಾಗುವದೆಂದು ಅವರ ಹೇಳಿಕೆ.

ಮುಂದಿನ ಯುದ್ಧದ ಭವಿಷ್ಯ

'ದೇವರು ಜಗತ್ತಿಗೆ ಯುದ್ಧ ತರುವದು ಬೇಡ. ಒಂದು ವೇಳೆ ಅದು ಅನಿವಾರ್ಯವಾಗಿ ಸಂಭವಿಸಿತೆಂದರೆ ಈ ಸಲ ಅದಂಥಾ ಭೀಕರ ಅಸ್ತ್ರಗಳು ಉಪಯೋಗಿಸಲ್ಪಡುವದೆಂದು ಹೇಳಬರುವದಿಲ್ಲ' ಹೀಗೆಂದು ಬ್ರಿಟನಿನ ರಕ್ಷಣಾ ಖಾತೆಯ ಮಂತ್ರಿಗಳು ಶಸ್ತ್ರಾಸ್ತ್ರ ಯೋಜನೆಗಾಗಿ ಮಂಜೂರಾತಿಯನ್ನು ಪಡೆಯುವ ಸಂದರ್ಭದಲ್ಲಿ ಪಾರ್ಲಿಮೆಂಟಿನಲ್ಲಿ ತಿಳಿಸಿದರು. ನಮ್ಮ ಯುದ್ಧ ಸನ್ನಾಹವು ಸದಾ ಸಿದ್ಧವಾಗಿದೆ. ನಮ್ಮ ಯಂತ್ರ ಶಾಲೆಗಳೂ, ವೈಜ್ಞಾನಿಕರೂ ಸಮರಸದಿಂದ ಕಾರ್ಯಗೆಯ್ಯುತ್ತಿರುವರು. ಆದುದರಿಂದ ನಾವು ಯಾವ ಜನಾಂಗಕ್ಕೂ ಹಿಂದೆ ಬೀಳೆವು.' ಎಂದರು. ಮುಂದಿನ ಯುದ್ಧದಲ್ಲಿ ನೆಲದ ಮೇಲೆ ಆಗುವಷ್ಟೇ ಕದನಗಳು ಜಲದ ಒಳಗೂ ಆಗುವದೆಂದು ಬ್ರಿಟಿಷ್ ನೌಕಾ ಖಾತೆಯ ಅಧಿಕಾರಿಗಳು ತಿಳಿಸುತ್ತಾರೆ. ಅದಕ್ಕಾಗಿ ಹೆಚ್ಚು ಕಾಲ ನೀರಡಿಯಲ್ಲಿ ಇರಬಹುದಾದ ಜಲಾಂತರ್ಗಾಮಿ ನಾವೆಗಳನ್ನು ರಚಿಸಲಾಗುವದಂತೆ. ಈಗಾಗಲೇ ಸಿದ್ಧಪಡಿಸಲ್ಪಟ್ಟಿರುವ ಇಂಥಾ ಸಬ್‌ಮೆರಿನ್‌ಗಳು ಸಾಗರದ ತಳಗಳಲ್ಲಿ ಒಂದೆರಡು ತಿಂಗಳು ಮೇಲಕ್ಕೆ ಬಾರದೇ ಚಲಿಸಬಲ್ಲವಂತೆ. ಅವುಗಳ ವೇಗವೂ ೨೫ ಮೈಲಿಗೆ ಮಿಕ್ಕಿರುತ್ತದೆ.

ಒಂದು ಭೀಕರ ದುಷ್ಕೃತ್ಯ.

ಹರಿಜನೋದ್ಧಾರದ ಕುರಿತು ಗಾಂಧೀಜಿಯವರು ಹಿಂದೂ ಸಮಾಜದ ಹೃದಯ ಪರಿವರ್ತನೆಯಾಗಬೇಕೆಂದು ಒತ್ತೊತ್ತಿ ಸಾರುತ್ತಿದ್ದರು. ಆದರೂ ಆ ಮಹಾತ್ಮರ ಅಮರ ಸಂದೇಶವು ಇನ್ನೂ ಅನೇಕ ಕಡೆಗಳಿಗೆ ತಲುಪಿಲ್ಲವೆಂಬುದಕ್ಕೆ ನಿದರ್ಶನವೋ ಎಂಬಂತೆ ಜಬ್ಬಲ್‌ಪುರದ ಬಳಿ ನಡೆದೊಂದು ಹೃದಯಾವಿದ್ರಾವಕ ಘಟನೆಯು ಸಾಕ್ಷಿಯಾಗಿದೆ.

ಅಲ್ಲಿನ ಹಳ್ಳಿಯೊಂದರ ಪಟೇಲನ ಮನೆಯಲ್ಲಿ ಒಂದು ಔತಣ ಸಮಾರಂಭ ಜರುಗಿತು. ಓರ್ವ ಹರಿಜನ ಹೆಂಗಸು ತನ್ನ ಜಾತಿ ಮರೆಸಿ ಊಟದಲ್ಲಿ ಭಾಗವಹಿಸಿದಳು. ಅವಳ ಜಾತಿ, ತಿಳಿದೊಡನೇ ರೋಷಗೊಂಡ ಅಲ್ಲಿನ ಅಂಧ ಜನರು ಕಲವರು ತುಂಬು ಗರ್ಭಿಣಿ ಆ ಸ್ಥಿತಿಯಲ್ಲಿರುವ ಆ ಹೆಂಗಸನ್ನು ಸಾಯುವ ತನಕ ಹೊಡೆದರು. ಈ ವಿಷಯ ಕುರಿತು ತೀವ್ರ ವಿಚಾರಣೆ ಕೈಕೊಳ್ಳಲು ಆ ಕಡೆಯ ಪತ್ರಿಕೆಗಳು ಸರಕಾರಕ್ಕೆ ಒತ್ತಾಯ ಪಡಿಸಿವೆ

ಬೆಂಗಳೂರೇ ರಾಜಧಾನಿ.

'ಭವಿಷ್ಯ ಕರ್ನಾಟಕ ಪ್ರಾಂತಕ್ಕೆ ಬೆಂಗಳೂರೇ ರಾಜಧಾನಿಯಾಗಬೇಕಾಗುವುದು; ಕೋಟಿಗಟ್ಟಲೆ ರೂಪಾಯಿಗಳನ್ನು ಖರ್ಚುಮಾಡಿ ಹೊಸದಾಗಿ ರಾಜಧಾನಿ ನಿರ್ಮಿಸುವ ತೊಂದರೆಗೆ ಹೋಗುವ ಅವಶ್ಯಕತೆಯಿರುವುದಿಲ್ಲ' ಎಂಬುದಾಗಿ ಭಾರತ ಸರ್ಕಾರದ ವಾರ್ತಾ ಮತ್ತು ಬ್ರಾಡ್‌ಕಾಸ್ಟಿಂಗ್ ಮಂತ್ರಿಗಳಾದ ಶ್ರೀ ರಂಗನಾಥ ರಾಮಚಂದ್ರ ದಿವಾಕರ್‌ರವರು ಮೈಸೂರಿನ ಸಿವಿಲ್ ಉದ್ಯೋಗಿಗಳ ಸಂಘದಲ್ಲಿ ಕಳೆದ ಶನಿವಾರ ಸಂಜೆ ಭಾಷಣ ಮಾಡುತ್ತಾ ತಿಳಿಸಿದರು.

'ಕರ್ನಾಟಕ ಪ್ರಾಂತ ರಚನೆ ವಿಷಯದಲ್ಲಿ ಯಾರೂ ಉದ್ರೇಕಕ್ಕೊಳಗಾಗಬಾರದು; ಅಷ್ಟೇ ಅಲ್ಲ, ಮೈಸೂರೇ ಬೇರೆ ಆಗಲಿ, ಉತ್ತರ ಕರ್ನಾಟಕವೇ ಬೇರೆ ಆಗಲಿ ಎಂಬ ಸಂಕುಚಿತ ಭಾವನೆಗಳಿಂದ ವರ್ತಿಸಬಾರದು. ಈ ಎಲ್ಲಾ ಭಾಗಗಳೂ ಕೂಡಿಯೇ ಕರ್ನಾಟಕ ಪ್ರಾಂತ ನಿರ್ಮಾಣವಾಗುವುದು ಅಗತ್ಯ. ಇನ್ನು ಹತ್ತು ವರ್ಷ ಹಿಡಿದರೂ ಸಹ ಕರ್ನಾಟಕ ಪ್ರಾಂತ ಆಗಲೇಬೇಕು. ಹಾಗಲ್ಲದೆ ಕರ್ನಾಟಕದ ಭಾಗಗಳು ಪ್ರತ್ಯೇಕತೆಯ ಮನೋಭಾವ ಅನುಸರಿಸುವುದಾದರೆ ಒರಿಸ್ಸಾ ಮಾದರಿಯ ಪ್ರಭಾವ ರಹಿತ ಪ್ರಾಂತಗಳಾಗುತ್ತವೆ. ನಾವು ಮಾಡುವ ಯಾವ ಕೆಲಸವನ್ನೇ ಆಗಲಿ ದೂರದೃಷ್ಟಿಯಿಂದ ಮಾಡಬೇಕು' ಎಂಬುದಾಗಿ ಶ್ರೀ ದಿವಾಕರರು ಹೇಳಿದರು.

ಈ ವಾರದ ಕಥೆ.

ಹಕ್ಕಿಯ ಮರಿ!!

ಲೇ:- "ಪ್ರೇಮಯೋಗಿ" ಮಡಿಕೇರಿ.

ಮನುಷ್ಯನ ಜೀವನದಲ್ಲಿ ಒಮ್ಮೊಮ್ಮೆ ಶೂನ್ಯತೆಯು ತಲೆದೋರುವದಿದೆ. ಬಡತನದ ಪೆಟ್ಟು ತಗಲಿದಾಗ, ಪ್ರಿಯ ಜನರ ವಿರಹವಾದಾಗ, ಕಟ್ಟಿದ್ದ ಆಶಾಗೋಪುರ ತರಗೆಲೆಯಂತೆ ಹಾರಿಹೋದಾಗ ಏಕೆ ಈ ಜೀವನ? ಎಂದು ಮನವು ಪ್ರಶ್ನಿಸುತ್ತದೆ. ಗಣೇಶನು ವಿದ್ಯಾಪಾರಂಗತನಾಗಿದ್ದರೂ ಈ ಶೂನ್ಯತೆ ಆತನನ್ನು ಮುಸುಕದಿರಲಿಲ್ಲ. ಒಂದೇ ಒಡಲಲ್ಲಿ ಹುಟ್ಟಿ ತನ್ನ ರಕ್ತದ ರಕ್ತವಾಗಿ, ಅಸ್ತಿತ್ವದ ನೆಳಲಾಗಿ, ಬಾಲ್ಯದಿಂದಲೂ ಜೊತೆಗಾತಿಯಾಗಿ ಬೆಳೆದು ಬಂದಿದ್ದ ಶಶಿಯು ಇನ್ನೂ ಹೆಣ್ತನವನ್ನು ಹೊಂದಿ ಪೂರ್ಣ ವಿಕಾಸಗೊಂಡು ತನ್ನ ಸುರಸೌರಭವನ್ನು ಜಗತ್ತಿನ ರಂಗದಲ್ಲಿ ಬೀರುವ ಮೊದಲೇ ಕಣ್ಮರೆಯಾಗಿದ್ದಳು. ಈ ವಿಯೋಗ ದುಃಖವು ಗಣೇಶನಿಗೆ ಅಸಹನೀಯವಾಗಿತ್ತು. ಅಂದು ಸಾಯಂಕಾಲ ಸೀತಾದೇವಿಯು ತನ್ನ ಕರಾಳ ಶರೀರದಿಂದ ಜಗತ್ತನ್ನು ಆವರಿಸ ಹತ್ತಿದ್ದಾಳೆ. ಗಣೇಶನು ತನ್ನ ಕೋಣೆಯಲ್ಲಿ ಕುಳಿತಿದ್ದಾನೆ. ಆತನ ಮನಸ್ಸಿಗೆ ಆವರಿಸಿದ್ದ ಕತ್ತಲೆಯನ್ನು ಪ್ರತಿಬಿಂಬಿಸುವಂತೆ ಕೋಣೆಯಲ್ಲಿ ಕತ್ತಲು ಕವಿದಿತ್ತು. ಈ ಭಾವಸಮಾಧಿಯಲ್ಲಿ, ತಂಗಿಯೊಡನೆ ತಾನು ಕಳೆದ ದಿನಗಳನ್ನು ನೆನೆಯುತ್ತಾ ಎಷ್ಟು ಸಮಯವಾಯಿತೆಂದು ಹೇಳಲಾಗುವದಿಲ್ಲ. ಯಾರೋ ಕೂಗಿದ ಹಾಗಾಯಿತು. ಗಣೇಶನು ಕೋಣೆಯ ವಿದ್ಯುಚ್ಛಕ್ತಿ ಗುಂಡಿಯನ್ನು ಒತ್ತಿದನು. ಕತ್ತಲೆಯು ಮಾಯವಾಯಿತು. ಬಾಗಿಲು ತೆರೆದು ನೋಡಲು ತನ್ನ ಜೀವನ ಗೆಳೆಯ ಸದಾಶಿವನು ನಿಂತಿದ್ದನು. ಇಬ್ಬರೂ ಕೋಣೆಯೊಳಗೆ ಕೂತರು.

ಸದಾಶಿವನು ಒಂದು ತಿಂಗಳಿಗೆ ಹಿಂದೆ ಮದುವೆಯಾಗಿದ್ದನು. ಗಣೇಶನ ತಂಗಿ ಸತ್ತ ದುಃಖವನ್ನು ಮರೆಸಲು ನಾನಾ ರೀತಿಯಿಂದ ಪ್ರಯತ್ನಿಸುತ್ತಿದ್ದನು. ಕಡೆಗೆ ಈಗ ಆತನಿರುವ ಹಳ್ಳಿಯ ಮನೆಗೆ ಕರಕೊಂಡು ಹೋಗಲು ಬಂದಿದ್ದನು. ಅನೇಕ ಒತ್ತಾಯದ ಮೇಲೆ ಗಣೇಶನು ಒಪ್ಪಿದನು.

*　　*　　*

ಗ್ರಾಮದ ನೈಸರ್ಗಿಕವಾದ ಸುಂದರ ಪ್ರಶಾಂತ ವಾತಾವರಣದಲ್ಲಿ, ಸದಾಶಿವನ ಅತುಳ ಪ್ರೇಮದ ದಿವ್ಯ ಶೀತಲಛಾಯೆಯಲ್ಲಿ, ಸದಾಶಿವನ ಪತ್ನಿ ಶಶಿಯ ಕಲಂಕರಹಿತ ಪ್ರೀತಿಯಲ್ಲಿ, ಕಲ್ಲೋಲ ಕಲ್ಲೋಲಗೊಂಡಿದ್ದ ಗಣೇಶನ ಹೃದಯ ಸಮುದ್ರದ ದುಃಖ ತೆರೆಗಳು ಶಾಂತಗೊಳ್ಳತೊಡಗಿದವು. ಕೆಲವೇ ದಿನದಲ್ಲಿ ಕಾಲೇಜಿನಲ್ಲಿ ಓದುತ್ತಿದ್ದ ಶಶಿಯ ತಂಗಿ ಗೀತಾಳು ಅಕ್ಕನಲ್ಲಿಗೆ ಬಂದಳು. ಒಂದೇ ಮನೆಯಲ್ಲಿರುವಾಗ ಒಬ್ಬರನ್ನೊಬ್ಬರು ಅರಿಯದಿರಲು ಸಾಧ್ಯವೇ? ಕ್ರಮಶಃ ಗೀತಾ ಗಣೇಶರಲ್ಲಿ ಅನ್ಯೋನ್ಯತೆ ಉಂಟಾಯಿತು.

ಗಣೇಶನು ಚಿಕ್ಕಂದಿನಲ್ಲೇ ತಂದೆ ತಾಯಿಯರನ್ನು ಕಳಕೊಂಡರೂ ಸ್ವಪ್ರಯತ್ನದಿಂದ ಪದವಿ ಧರನಾಗಿದ್ದನು. ಅಂದು ಬೆಳಗ್ಗೆ ಎಲ್ಲರೂ ಸಂತೋಷದಿಂದ ಕಾಫಿ ಕುಡಿಯುತ್ತಿದ್ದರು. ಟಪ್ಪಾಲಿನವನು ಪತ್ರಗಳ ಗಂಟೊಂದನ್ನು ತಂದುಕೊಟ್ಟನು. ತನ್ನ ಹೆಸರಿಗಿದ್ದ ಒಂದು ಪತ್ರವನ್ನು ತೆಗೆದು ಅತೀ ಕುತೂಹಲದಿಂದ ಗಣೇಶನು ಓದಿದನು. ಓದುತ್ತಿದ್ದಂತೆಯೇ ಆತನ ಮುಖದಲ್ಲಿ ಅಪೂರ್ವ ನಗುವೊಂದು ಮಿಂಚಿತು. ಆತನು ಪತ್ರವನ್ನು ಶಶಿಗೆ ಕೊಟ್ಟನು. ಶಶಿಯು ಪತ್ರವನ್ನು ಕುತೂಹಲದಿಂದ ನೋಡಿದಳು. ಅದು ಗಣೇಶನಿಗೆ ದೊರೆತ ಉದ್ಯೋಗದ ಆರ್ಡರಾಗಿತ್ತು. ಎಲ್ಲರೂ ಗಣೇಶನಿಗೆ ಶುಭವನ್ನು ಬಯಸಿದರು. ಶಶಿಯು ತಾನೊಂದು ಬಹುಮಾನ ಕೊಡುವುದಾಗಿ ಹೇಳಿದಳು. ಆದರೆ ಆ ಬಹುಮಾನ ಸ್ವೀಕರಿಸುವಾಗ ಗಣೇಶನು ಕಣ್ಮುಚ್ಚಿಕೊಳ್ಳಬೇಕೆಂದಳು! ಗಣೇಶನು ಕಣ್ಮುಚ್ಚಿಕೊಂಡನು. ಶಶಿಯು ಗೀತಾಳ ಭಾವಚಿತ್ರವೊಂದನ್ನು ಆತನ ಕೈಯಲ್ಲಿ ಹಿಡಿಸಿ ಕಣ್ತೆರೆಯಲು ಹೇಳಿದಳು. ಗಣೇಶನು ಕಣ್ತೆರೆದು 'ಗೀತಾಳ ಚಿತ್ರ!' ಎಂದನು. 'ಗೀತಾಳ ಚಿತ್ರವಲ್ಲ; ಗೀತಾಳೆ!' ಎಂದು ಶಶಿ ನುಡಿದಳು. ಗಣೇಶನ ಮುಖ ಕೆಂಪಾಯಿತು. 'ಇದನ್ನು ಸ್ವೀಕರಿಸುವ ಭಾಗ್ಯವಿದೆಯೇ'? ಎಂದು ಹೇಳಿ ಫೋಟೋವನ್ನು ಅಲ್ಲೇ ಇಟ್ಟು ಬೇರೆಡೆ ನಡೆದನು. ಶಶಿಗೂ ಸ್ವಲ್ಪ ಬೇಸರವಾಯಿತು.

ಅಂದು ಶನಿವಾರ. ಸದಾಶಿವ, ಶಶಿಯರು ಸಿನೆಮಾಕ್ಕೆ ಹೋಗಿದ್ದರು. ಗೀತಾಳು ಕೋಣೆಯೊಂದರಲ್ಲಿ ಓದುತ್ತಿದ್ದಳು. ಗಣೇಶನು ಆಕೆಯ ಕೋಣೆಗೆ ಬಂದನು. ಗೀತಾಳನ್ನು ಕುರಿತು ಶಶಿಯ ಅಭಿಪ್ರಾಯವನ್ನು ತಿಳಿಸಿದನು: 'ಆದರೆ ನೋಡು ಗೀತಾ, ನನ್ನಲ್ಲಿ ನಿನಗೆ ಯೋಗ್ಯವಾದ ಉಡುಪು ಒಡವೆಗಳನ್ನು ಒದಗಿಸುವ ಹಣವಿಲ್ಲ. ನಿನ್ನನ್ನು ಸಂತೋಷದಿಂದಿಟ್ಟು ಸುಖಜೀವನದ ಎಡೆ ನೀಡಲು ಐಶ್ವರ್ಯವ ಮಾರ್ಗವಿಲ್ಲ. ಈಗ ತಾನೆ ದೊರೆತ ಉದ್ಯೋಗದಿಂದ ಬಡತನದ ಜೀವನ ನಡೆಸಬಹುದು. ಆದರೆ ಈ ವರೆಗೆ ಸುಖದಿಂದ ಬದುಕಿ ಬಾಳಿದ ನಿನ್ನ ಜೀವನದಲ್ಲಿ ಕಷ್ಟವನ್ನು ಬೆರಸಲು ನನಗಿಷ್ಟವಿಲ್ಲ. ಆದಕ್ಕಾಗಿಯೇ ಶಶಿಯ ಕೇಳಿಕೆಗೆ ಸಮರ್ಪಕ ಉತ್ತರ ಕೊಡಲಿಲ್ಲ.' ಎಂದನು.

ಗೀತಾಳ ಮುಖವು ಕೆಂಪಾಗಿತ್ತು. ಪ್ರೇಮದ ದೃಷ್ಟಿಯೊಂದನ್ನು ಗಣೇಶನತ್ತ ಬೀರಿ 'ನನಗೆ ಒಡವೆ ವಸ್ತ್ರಗಳ ಅಗತ್ಯವಿಲ್ಲ ಸುಖ ಜೀವನದ ಕನಸು ಕಟ್ಟುವವಳೂ ಅಲ್ಲ. ನನಗೆ ಬೇಕಿರುವದು ನೀ... ..' ಗೀತಾಳು ಮುಂದೆ ಮಾತಾಡಲಿಲ್ಲ. ಗಣೇಶನು ಆಕೆಯ ಇಂಗಿತವನ್ನರಿತನು. 'ನಾನು ಧನ್ಯನು ಗೀತಾ' ಎಂದನು.

ಮಾರಣೆ ದಿನ ತಮ್ಮ ಇಚ್ಛೆಯನ್ನು ಗಣೇಶನು ಶಶಿ, ಸದಾಶಿವರಿಗೆ ತಿಳಿಸಿದನು. ಅವರ ಆನಂದಕ್ಕೆ ಪಾರವಿರಲಿಲ್ಲ. ಮದುವೆಯು ಏರ್ಪಾಡಾಯಿತು. ವಿಜೃಂಭಣೆಯಿಂದ ಮದುವೆಯೂ ನಡೆಯಿತು. ಗಣೇಶ ಗೀತಾರು ಪ್ರತ್ಯೇಕ ಸಂಸಾರ ಹೂಡಿದರು. ಜೀವನವು ಎರಡು ವರ್ಷಗಳ ವರೆಗೆ ಅಡಚಣೆಗಳಿಲ್ಲದೆ ಸುಖಮಯವಾಗಿ ಸಾಗಿತು. ಗಣೇಶನ ಅಲ್ಪ ವೇತನದಿಂದ ಹೊಟ್ಟೆ ಹೊರೆಯುತ್ತಿದ್ದರು. ಪ್ರೇಮವು ಎಷ್ಟೇ ಗಾಢವಾಗಿರಲಿ ದಂಪತಿಗಳಲ್ಲಿ ಎಷ್ಟೇ ಹಣದ ಬಗ್ಗೆ ಅನಾಸಕ್ತಿ ಇರಲಿ ಬಡತನವು ಗಾಢ ಪ್ರೇಮದ ಬಂಧನವನ್ನು ಕ್ರಮಶಃ ಸಡಿಲು ಮಾಡದಿರದು. ಬಡತನದ ಬೇಗೆಯಿಂದ ಬಳಲಿದ ಗಣೇಶನು ಗೀತಾಳು ಅಧ್ಯಾಪಿಕೆಯಾಗುವದನ್ನು ತಡೆಯಲಿಲ್ಲ. ಆಕೆಯು ಮನೆಯ ಹತ್ತಿರದ ಶಾಲೆಯಲ್ಲಿ ಅಧ್ಯಾಪಿಕೆಯಾದಳು. ಈಗ ಮನೆ ಖರ್ಚಿಗೆ ಸಾಕಷ್ಟು ಹಣ ಬರುತ್ತಿದೆ. ಆದರೂ ಅವರಿಬ್ಬರಲ್ಲಿ ಹಿಂದಿನ ಆ ಬಡತನದ ಗಾಢಪ್ರೇಮವಿಲ್ಲ. ತನ್ನ ಹೆಂಡತಿಯೂ ಕೂಡ ತನ್ನಂತೆಯೇ ಕುಟುಂಬದ ಸಂಪಾದನೆಯಲ್ಲಿ ಭಾಗಿಯಾಗಿರುವದು, ಅದರೊಟ್ಟಿಗೇ ಮನೆಯ ಸರ್ವ ಕೆಲಸಗಳನ್ನೂ ನಿರ್ವಹಿಸುವದು ಗಣೇಶನಲ್ಲಿ ಒಂದು ರೀತಿಯ ನಿಕೃಷ್ಟ ಭಾವನೆಯನ್ನುತ್ಪನ್ನಮಾಡಿತು. ಆತನು ಯಾವದೇ ಕೆಲಸಕ್ಕಾಗಿ ಆಕೆಗೆ ಹೇಳುತ್ತಿರಲಿಲ್ಲ. ಈ ದೂರತನವು ಗೀತಾಳಿಗೆ ವ್ಯಸನವನ್ನುಂಟು ಮಾಡಿತು. ನಿಜವಾಗಿಯೂ ಗೀತಾಳು ಎಲ್ಲ ಕೆಲಸವನ್ನು ಸಂತೋಷದಿಂದ ಮಾಡುತ್ತಿದ್ದಳು. ನಾನೂ ಸಂಪಾದಿಸುತ್ತಿರುವೆನೆಂಬ ಅಹಂಭಾವನೆಯು ಆಕೆಯಲ್ಲಿ ಬಂದಿರಲಿಲ್ಲ. ಒಂದು ದಿನ ಗಣೇಶನು ಆಫೀಸಿಗೆ ಹೊರಡುವ ಸಮಯ ಆತನ ಕೋಟಿಗೆ ಗುಂಡಿಗಳಿರಲಿಲ್ಲ. ಆತನೇ ಸೂಜಿ ತೆಗೆದುಕೊಂಡು ಗುಂಡಿ ಹಚ್ಚಿಕೊಳ್ಳುತ್ತಿದ್ದನು. ಗೀತಾಳು ಇದನ್ನು ಕಂಡು ತಡೆಯದಾದಳು. 'ನನಗೆ ಹೇಳಿದ್ದರೆ ನಾನು ಹಚ್ಚಿ ಕೊಡುತ್ತಿರಲಿಲ್ಲವೇ ನೀವೇಕೆ ಹೀಗೆ ದೂರ ದೂರ ವರ್ತಿಸುತ್ತಿರುವಿರಿ' ಗದ್ಗದ ಸ್ವರದಿಂದ ಹೇಳಿದಳು. 'ನೀನೇ ಮನೆಕೆಲಸವನ್ನು ಮಾಡುತ್ತಿರುವ ಕ್ಷಣವಾದರೂ ನಿನಗೆ ಬಿಡುವಿಲ್ಲ. ನಿನಗೇಕೆ ತೊಂದರೆ ಕೊಡಲಿ' ಎಂದು ಗಣೇಶನು ತೋರಿಕೆಯ ಮಾತಾಡಿದನು. ಗೀತಾಳಿಗೆ ತೃಪ್ತಿಯಾಗಲಿಲ್ಲ. ಆಕೆಯ ಕಣ್ಣಿನಿಂದ ಎರಡು ತೊಟ್ಟು ನೀರು ನೆಲಕ್ಕುರುಳಿದವು. ಇಂಥಾ ದುಃಖಾಶ್ರುಗಳ ಮಧ್ಯೆ ಇವರ ಜೀವನ ಒಂದು ರೀತಿ ಸಾಗಿತ್ತು;

ಅಂದು ಗಣೇಶನ ಆಫೀಸಿನಲ್ಲಿ ಕೋಲಾಹಲವೇ ಕೋಲಾಹಲ. ಆತನ ಸಹ ಉದ್ಯೋಗಿಗಳೆಲ್ಲ ಮುತ್ತುವರಿದು ಆತನಿಂದ ಟೀ ಪಾರ್ಟಿ ಕೇಳುತ್ತಿದ್ದರು. ಟೀ ಪಾರ್ಟಿ ಮುಗಿದ ಮೇಲೆ ಸಿನೆಮಾ. ರಾತ್ರಿ ಗಣೇಶನು ಮನೆಗೆ ಬಂದಾಗ ಹನ್ನೊಂದು ಗಂಟೆಯಾಗಿತ್ತು. ಗೀತಾಳ ಕೋಣೆಯಲ್ಲಿ ದೀಪ ಇನ್ನೂ ಉರಿಯುತ್ತಿತ್ತು. ಶಾಲಾ ಮಕ್ಕಳ ಪರೀಕ್ಷಾ ಪತ್ರಗಳನ್ನು ತಿದ್ದುತಿರಬಹುದೆಂದು ಭಾವಿಸಿ ಗಣೇಶನು ಕಿಡಿಕೆಯ ಮೂಲಕ ನೋಡಿದನು. ಗೀತಾಳು ಅಂಗಾತ ಮಲಗಿದ್ದಾಳೆ. ಪುಸ್ತಕವೊಂದು ಆಕೆಯ ಮುಖವನ್ನು ಮುಚ್ಚಿದೆ. ಕಣ್ಣೀರು ಪುಸ್ತಕದ ಅಂಚಿಗಾಗಿ ಹರಿಯುತ್ತಿರುವದು ಬೆಳಕಿನಲ್ಲಿ ಸ್ಪಷ್ಟ ಕಾಣುತ್ತಿದೆ. ಗಣೇಶನ ಮೈ ಜುಮ್ಮೆಂದಿತು. ಆತನು ಒಳಗೆ ಬಂದನು. ಗೀತಾಳನ್ನು ಎತ್ತಿ ಕುಳ್ಳಿರಿಸಿ ಕಣ್ಣೀರೊರಸಿದನು. ಗೀತಾಳಿಗೆ ಗಣೇಶನ ವರ್ತನೆಯು ಆಶ್ಚರ್ಯವನ್ನುಂಟು ಮಾಡದಿರಲಿಲ್ಲ. ಗಣೇಶನು ಸಂತೋಷದಿಂದ ಹೇಳಿದನು. 'ಗೀತಾ, ನಿನ್ನ ಅಧ್ಯಾಪಿಕೆಯ ಕೆಲಸಕ್ಕೆ ನಾಳೇ ರಾಜಿನಾಮೆ ಕೊಡು. ನನಗೆ ಆಫೀಸಿನಲ್ಲಿ ಮೇಲಿನ ಉದ್ಯೋಗ ದೊರೆತಿದೆ. ಮುಂದೆ ತೊಂದರೆಯಾಗಲಾರದು' ಗೀತಾಳ ಮುಖದಲ್ಲಿ ಸಂತೋಷದ ಚಿಹ್ನೆ ಸುಳಿಯಿತು. ಗಣೇಶನು ಆಕೆಯ ಹತ್ತಿರ ಕುಳಿತು 'ನೀನು ಏಕೆ ವ್ಯಸನಪಡುವೆ. ಕಣ್ಣೀರು ಹಾಕುತ್ತಾ ಏನು ಯೋಚಿಸುತ್ತಿದ್ದೆ?' ಎಂದು ಕೇಳಿದನು. ಗೀತಾಳು ಕಿಡಿಕಿಯ ಹೊರಗಿನಿಂದ ಮೇಲೆ ನೋಡಿದಳು. ಅಲ್ಲಿ ಮನೆಯ ಎರಿಯಲ್ಲಿದ್ದ ಗುಬ್ಬಚ್ಚಿಯ ಗೂಡಿನಲ್ಲಿ ಮರಿಗಳು ತಮ್ಮ ಕಿರುದನಿಯಿಂದ ಕೂಗುತ್ತಿದ್ದವು. ಗಣೇಶನಿಗೆ ಆಕೆಯ ಮನದ ಅಭಿಲಾಷೆ ತಿಳಿಯಿತು. ಗಣೇಶನು ಗೀತಾಳನ್ನು ಅಪ್ಪಿಕೊಂಡನು. ಗೀತಾಳ ಕಣ್ಣಿನಲ್ಲಿ ಕಂಬನಿ ಹರಿಯುತಿತ್ತು. ಅದು ಮಕ್ಕಳಿಲ್ಲದ ದುಃಖಾಶ್ರುವೋ ಯಾ ಪತಿಯ ಪ್ರೇಮವನ್ನು ಪುನಹ ಗೆದ್ದ ಆನಂದಾಶ್ರುವೋ ಬಲ್ಲವರಾರು? (ಆಧಾರದಿಂದ)

ಎಂಪೈರ್ ಆಫ್ ಇಂಡಿಯಾ

ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

೧೮ನೇ ಮಾರ್ಚ್ ವರದಿಯಲ್ಲಿನ ಕೆಲವು ಪ್ರಶಸ್ತ ಸಂಗತಿಗಳು	ಒಟ್ಟು ಆದಾಯ	1,07,09,000	ರೂಪಾಯಿ
	ಚಾಲ್ತಿಯಿರುವ ವಿಮೆ	17,74,52,000	,,
	ಆಸ್ತಿ	6,67,60,000	,,
ಕಂಪೆನಿಯು ಆದಿಯಲ್ಲಿ ಕೊಟ್ಟ ಕ್ಲೇಮುಗಳು		5,83,62,000	,,

ಬ್ರಾಂಚ ಆಫೀಸು	ಏಜನ್ಸಿ	ಪ್ರಧಾನ ಕಛೇರಿ
ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು.	ಅರ್ಜಿಗಳನ್ನು ಸ್ವಾಗತಿಸಿದೆ.	ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಮುಂಬಯಿ

ವೀರಾಜಪೇಟೆಗೆ 'ಕೊಡಗು' ಪತ್ರಿಕೆಯ ಏಜೆಂಟರು ಶ್ರೀ ಟಿ. ಎನ್. ಗೋವಿಂದರಾಜುರವರು.

ಪಕ್ಷ ರಾಜಕೀಯದ ಅನಿಷ್ಟ ಪರಂಪರೆ

ಲೇ:—"ಶಂಭು"

ಪಕ್ಷ ರಾಜಕೀಯವು ಹಿಂದೂಸ್ಥಾನದ ಪ್ರತಿ ಪ್ರಾಂತಗಳಲ್ಲೂ ಇರುವಂತೆ ತೋರಿಬರುತ್ತದೆ. ಸ್ವಾತಂತ್ರ್ಯವು ಕರಗತವಾದ ನಂತರ ಈ ಪಕ್ಷ ರಾಜಕೀಯಕ್ಕೆ ಕಳೆ ಏರಿದೆ. ಅಧಿಕಾರ ತಮಗೆ ಬಂದಿದೆಯೆಂಬ ಸ್ಪರ್ಧೆಯಲ್ಲಿ ಈ ಹಿಂದೆ ಅನಾಸಕ್ತ ಸರಳ ಜೀವಿಗಳಾಗಿದ್ದ ಕಾಂಗ್ರೆಸಿಗರು ತಮ್ಮ ಗಿನ್ನೀ ತತ್ವಗಳನ್ನು ಮುರಿದು ಲಗ್ಗೆ ಹತ್ತ ತೊಡಗಿದ್ದಾರೆ. ತತ್ಪರಿಣಾಮವಾಗಿ ಅನೇಕ ಪ್ರಾಂತಗಳ ಮಂತ್ರಿ ಮಂಡಳಗಳು ಆಗಾಗ್ಗೆ ಬದಲಾಗುತ್ತಿವೆ. ಇಂದು ಅಧಿಕಾರಕ್ಕೆ ಒಬ್ಬರು ಬಂದರೆ ಅವರನ್ನು ಉರುಳಿಸುವ ಪ್ರಯತ್ನದಲ್ಲಿ ವಿರೋಧ ಪಕ್ಷವಿದ್ದು ಸಂದರ್ಭ ದೊರೆತಾಗ ಹಾಗೆ ಮಾಡುತ್ತಿದೆ. ಮದ್ರಾಸ್, ಪೂರ್ವ ಪಂಜಾಬ್, ವಿಂಧ್ಯ ಪ್ರದೇಶ ಮೊದಲಾದೆಡೆ ಈ ಕಾಯಿಲೆಯು ಭಯಂಕರ ರೀತಿಯಲ್ಲಿ ತೋರುತ್ತಿದೆ. ಈ ಪಕ್ಷ ರಾಜಕೀಯದಿಂದ ದೇಶಕ್ಕಾಗುವ ಹಾನಿಯನ್ನು ಹೇಳುವ ಅವಶ್ಯವಿಲ್ಲ. ಪ್ರತಿಯೊಬ್ಬನೂ ಅದನ್ನು ಅನುಭವಿಸುತ್ತಿರುವನು. ಸ್ವಾತಂತ್ರ್ಯ ಸೂರ್ಯನ ಉದಯವಾಗಿ ಆ ಸೂರ್ಯನು ತೇಜಸ್ಸಿನಿಂದ ಬೆಳಗಬೇಕಿತ್ತು. ಆದರೆ ಆ ಸೂರ್ಯನಿಗೆ ಈ ಪಕ್ಷ ರಾಜಕೀಯದ ರಾಹು ಬಡಿದು ಸ್ವಾತಂತ್ರ್ಯದ ಫಲವು ಜನತೆಗೆ ದೊರೆಯದಾಗಿದೆ.

ರಾಜಕೀಯದಲ್ಲಿ ನೀತಿಗೆಡೆ ಇಲ್ಲದಿದ್ದರೆ ಅದು ರಾಜಕೀಯವೆನಿಸಲಾರದು. ನೀತಿ ಬಾಹಿರವಾದ ರಾಜಕೀಯವು, ದರ್ಪೋಡೆ, ಮೋಸಲಾದವುಗಳಿಗಿಂತಲೂ ಕೀಳು. ಪಕ್ಷ ರಾಜಕೀಯಕ್ಕೆ ಕಟ್ಟು ಬಿದ್ದು ಯಾರೇ ಆಗಲಿ ದೇಶ ಹಿತಕಾರಕವಾಗಿ ಕೆಲಸ ಮಾಡಲಾರನು. ಹಿತಾಹಿತಗಳ ವಿಮರ್ಶೆ ಮಾಡಲಾರನು. ತಮ್ಮ ಪಕ್ಷ ಮೇಲೇರಬೇಕು; ಅದು ಬಲಗೊಳ್ಳಬೇಕೆಂಬುದೇ ಅವರ ಕಾರ್ಯ ಕಲಾಪಗಳನ್ನು ಮುನ್ನಡೆಸುವ ಧ್ರುವ ತಾರೆ. ವ್ಯಕ್ತಿಗತವಾಗಿ ಪಾಪ ಭೀರುಗಳೂ, ಧರ್ಮ ಬುದ್ಧಿಯವರಾಗಿದ್ದರೂ ಪಕ್ಷದ ಪಂಜರದಲ್ಲಿ ಸಿಕ್ಕಿ ಅಹಿತವನ್ನು ಮಾಡುವವರಿಗೆ ಕಡಿಮೆ ಇಲ್ಲ.

ಕೊಡಗಿನಲ್ಲಿ ಈ ಪಕ್ಷ ರಾಜಕೀಯವು ಪ್ರಾರಂಭವಾಗಿ ಕೆಲವು ವರ್ಷಗಳಾದವು. ಕೊಡಗಿನಲ್ಲಿ ಕಾಂಗ್ರೆಸ್ಸಿಗೆ ಅಧಿಕಾರ ಅಂದರೆ ಜಿಲ್ಲಾ ಬೋರ್ಡ್ ಮತ್ತಿತರ ಸ್ಥಳಗಳ ಜವಾಬ್ದಾರಿ ದೊರೆಯತೊಡಗಿದ ಕಾಲದಿಂದಲೇ ಇದು ಪ್ರಾರಂಭವಾಗಿದೆ. ಅಧಿಕಾರದ ಸ್ಪರ್ಧೆ ನಡೆಯುತ್ತಾ ಅತೃಪ್ತವಾದ ತಂಡವೊಂದು ನಿರ್ಮಾಣವಾಯಿತು. ಅದೇ ತಂಡ ಮುಂದೆ ತನ್ನ ರಾಜಕೀಯ ನೀತಿಯನ್ನೂ ಬದಲು ಮಾಡಿ ಪ್ರತ್ಯೇಕ ನಿಂತಿದೆ. ಕಳೆದ ಹತ್ತು ವರ್ಷಗಳಿಂದ ಕೊಡಗಿನಲ್ಲಿ ನಡೆದ ರಾಜಕೀಯ ಕೆಲಸ ಮತ್ತು ಜನ ಜಾಗೃತಿಯೆಂದರೆ ಈ ಎರಡು ಪಕ್ಷಗಳ ಘರ್ಷಣೆಯಿಂದುತ್ಪನ್ನವಾದ ಬಿಸಿಯಲ್ಲದೆ ಬೇರಿಲ್ಲ. ಒಂದು ಪಕ್ಷವು ಒಂದು ವಿಚಾರವನ್ನು ಹೂಡಿದರೆ ಅದನ್ನು ವಿರೋಧಿಸಲು ಮತ್ತೊಂದು ಪಕ್ಷವು ಸ್ವಯಂಸಿದ್ಧವಾಗಿರುತ್ತದೆ. ಒಂದು ಪಕ್ಷವು ಕಾಗೆ ಕಪ್ಪು ಎಂದರೆ ಮತ್ತೊಂದು ಕಾಗೆ ಬಿಳುಪೆನ್ನುವಷ್ಟು ಇವರಲ್ಲಿ ಪಕ್ಷ ರಾಜಕೀಯ ಹಾಗೂ ಅಧಿಕಾರ ಲಾಲಸೆಯು ಕುರುಡುತನ ಬಂದಿದೆ. ತತ್ಫಲವಾಗಿ ಕೊಡಗಿನಲ್ಲಿ ಕಾಂಗ್ರೆಸ್ಸಿನ ಹೆಸರು ಕಸಕ್ಕೆ ಸಮಾನ ಆಗತೊಡಗಿದೆ. ಈ ಪಕ್ಷ ರಾಜಕೀಯದಿಂದ ಆದ ಹಾನಿಯನ್ನು ಪುನಹ ಹೇಳುವದು ಈ ಲೇಖನದ ಉದ್ದೇಶವಲ್ಲ. ಇತ್ತಲಾಗಿ ನಡೆದ ಕೆಲವು ವಿಚಾರಗಳನ್ನು ಹೇಳದೆ ಕಳೆಯದು. ಒಂದು ಪಕ್ಷದಲ್ಲಿದ್ದು ಅಲ್ಲಿ ತನ್ನ ಸ್ವಾರ್ಥ ಸಾಧನೆಯಾಗಲಿಲ್ಲವೆಂದು ಕೋಟು ಬದಲಾಯಿಸಿ ತಾನು ಹಿಡಿತ ತತ್ವಗಳನ್ನೇ ಬಿಟ್ಟುಕೊಟ್ಟು ಹೊಸ ವೇಷ ಧರಿಸಿದ ಸಂದರ್ಭಸಾಧಕರೂ ಕೊಡಗಿನಲ್ಲಿ ಇದ್ದಾರೆ. ಅವರ ಸಂಖ್ಯೆ ಬೆಳೆಯುತ್ತಿದೆಯೆಂಬುದು ವಿಷಾದದ ಸಂಗತಿ.

ಕೊಡಗಿನ ಈ ಪಕ್ಷ ರಾಜಕೀಯದಿಂದಾಗಿ ವಿಧಾಯಕವಾದ ಜನಹಿತ ಕಾರ್ಯಕ್ರಮಗಳ ಮಾತಿರಲಿ, ವ್ಯಕ್ತಿ ವ್ಯಕ್ತಿಗಳಲ್ಲಿ ಪರಸ್ಪರವಿದ್ದ ಪ್ರೇಮ ವಿಶ್ವಾಸಗಳೇ ಮಾಯವಾಗಿ ಒಂದು ಪಕ್ಷದವರು ಮತ್ತೊಂದು ಪಕ್ಷದವರನ್ನು ಶತ್ರುಗಳಂತೆ ನೋಡುತ್ತಿರುವರು. ಇದರಿಂದ ಇಡೀ ದೇಶಕ್ಕೂ, ಮಾನವ ಸಮಾಜಕ್ಕೂ ಮಹಾ ಹಾನಿಯಾಗುತ್ತಿದೆ. ಈ ಪರಿಸ್ಥಿತಿ ಇರುವ ಕಾರಣ ಹೊರಗಿನ ಗಣ್ಯರೂ ಕೂಡ ಇಲ್ಲಿಗೆ ಬರಲು ಹಿಂಜರಿಯುವರು. ಕೊಡಗಿನ ಈ ಕೊಳಕಿಗೆ ನಿಷ್ಕಾರಣವಾಗಿ ಕೈಹಾಕುವದೇಕೆಂದು ಹಿಂತೆಗೆಯುವರು.

ಕಳೆದ ಸಾರಿ ಮದ್ರಾಸಿನ ಮಂತ್ರಿ ಶ್ರೀ ಕೆ. ಚಂದ್ರಮೌಳಿಯವರು ಬಂದಿದ್ದಾಗ ಅವರು ಏಕೆ ಬಂದ್ದದು? ತನ್ನ ಬೆನ್ನು ತಟ್ಟಿಸಿಕೊಳ್ಳಲು ಕರೆಸಿದ್ದಾರೆ ಎಂದು ಅಂಜಿಕೊಳ್ಳಲು ವಿರೋಧ ಪಕ್ಷವು ಹೇಸಲಿಲ್ಲ. ನಂತರ ಕೇಂದ್ರದ ಮಂತ್ರಿ ಶ್ರೀ ಕೆ. ಸಂತಾನಂರವರು ಬಂದದ್ದಾಗಲೂ ಅಸಹ್ಯವಾದ ಕೆಲವು ವರ್ತನೆಗಳು ನಡೆದವು. ಇತ್ತಲಾಗಿ ರಾಷ್ಟ್ರಪತಿ ಡಾ. ಪಟ್ಟಾಭಿ ಸೀತಾರಾಮಯ್ಯನವರು ಕೊಡಗಿಗೆ ಬರುವದಾಗಿ ಅವರೇ ಬರೆದು ಕಾರ್ಯಕ್ರಮ ಏರ್ಪಾಡಾಗಿದ್ದು, ಅವರು ಬರದಿರಲು ಕೊಡಗಿನ ಈ ಪಕ್ಷ ರಾಜಕೀಯದ ಕೊಳಕೇ ಒಂದು ಕಾರಣವೆಂದು ಹೇಳಿದರೆ ಅತ್ಯುಕ್ತಿಯಾಗಲಾರದು. ಈ ಹೇಸಿಕೆಯ ಪಕ್ಷ ರಾಜಕೀಯವು ವಿಘಾತುಕ ಮಾರ್ಗದಲ್ಲಿ ನಡೆಯತೊಡಗಿದೆ. ಯಾವದೇ ಕೆಲಸವನ್ನು ಒಬ್ಬರು ಪ್ರಾರಂಭಿಸಿದರೆ ಅದನ್ನು ವಿರೋಧ ಪಕ್ಷದವರು ಮುರಿದು ಅವರ ಮುಖಕ್ಕೆ ಕಪ್ಪು ಬಳಿಯಲೆತ್ನಿಸುವದೇ ಕರ್ತವ್ಯವೆಂದು ಭಾವಿಸುತ್ತಿದೆ.

ಕೊಡಗಿನ ಜನರು ಶಾಂತಿ ಪ್ರಿಯರು ದೇಶದಲ್ಲಿ ಏನೇ ಆದರೂ ಗಲಾಟೆ ಮಾಡದೆ ಸಹಿಸುವವರು ಎಂಬರ್ಥದ ಸರ್ದಾರ್ ಪಟೇಲರ ಮಾತು ಅಕ್ಷರಶ: ನಿಜ. ಇಲ್ಲದಿದ್ದರೆ ಈ ಕಳೆದ ಹತ್ತು ವರ್ಷಗಳಿಂದಲೂ ಈ ಪಕ್ಷ ರಾಜಕೀಯದ ಅನಿಷ್ಟ ಪರಂಪರೆಗೆ ಸಿಕ್ಕಿದ್ದರೂ ಸಹಿಸಿಕೊಂಡು ಶಾಂತರಾಗಿರುವ ಜನತೆಗೆ ಏನೆನ್ನಬೇಕು? ಅವರಲ್ಲಿ ಜನ ಜಾಗೃತಿ ಎಷ್ಟಿದೆಯೆಂದು ತಿಳಿಯಲು ಬೇರೆ ಅಳತೆಗೋಲು ಬೇಕೆ? ೧೯೫೨ ರಿಂದ ಕಾಂಗ್ರೆಸಿಗೆ ಚುನಾವಣೆಗಳಾಗದೆ ಕರ್ನಾಟಕದ ಕೈಗೂಡು ಎಡ್ ಹಾಕ್ ಸಮಿತಿಯಲ್ಲಿ ಕಾಂಗ್ರೆಸು ಪರ್ಯವಸಾನ ಹೊಂದಿದ್ದರೂ ಚುನಾವಣೆಗೆ ಕಾತುರ ಪಡದೆ, ಜನ ಪ್ರತಿನಿಧಿಯಲ್ಲದ ಈ ಎಡ್ ಹಾಕ್ ಸಮಿತಿಗೆ ವಿರೋಧಿಸದೆ ಹೇಗೂ ದಿನ ಸಾಗಲೀ ಎಂಬ ವೃತ್ತಿಯನ್ನು ತಳೆದ ಜನರಿಗೇನೆನ್ನಬೇಕು?

ಸ್ವತಂತ್ರ್ಯ ಯಾರಿಗೆ ಬಂದಿದೆ? ಎಲ್ಲಿ ಬಂದಿದೆ? ಕೊಡಗಿಗೆ ಬಂದಿಲ್ಲ. ಬಂದರೂ ಪಕ್ಷ ರಾಜಕೀಯದ ಈ ಸಂಕೀರ್ಣ ಮನೋಭಾವದ ಜನರೆಡೆಯಲ್ಲಿ ಅದು ಸ್ವರಾಜ್ಯವಾಗಿ ಉಳಿಯದೆಂದು ಸ್ಪಷ್ಟ ಹೇಳಬಯಸುತ್ತೇನೆ. ನೀತಿಯೋ, ಅನೀತಿಯೋ ನನ್ನ ನಮ್ಮ ಜೀವನ ಸುಖವಾದರೆ ಸಾಕು, ನಮ್ಮ ಕುಟುಂಬ ಚೆನ್ನಾಗಿದ್ದರೆ ತೀರಿತೆಂದೂ, ಭಾವಿಸುವ ಸಂಕೀರ್ಣ ಮನೋಭಾವಕ್ಕೆ ಸ್ವತಂತ್ರ ಭಾರತದಲ್ಲಿ ಎಡೆ ಇರಬಾರದು. ದೇಶದಲ್ಲಿ ನಡೆಯುತ್ತಿರುವ ಅನೀತಿಯನ್ನು ತಡೆಗಟ್ಟಲು ಜನತೆಯು ತ್ನಿಸದಿದ್ದರೆ ಮುಂದಾಗುವ ಕೇಡಿನ ಫಲಗಳು ಬಂದು ಬಾಧಿ ಹೇಳಬೇಕ?

ಕೊಡಗು ಉಳಿಯ ಬೇಕಾದರೆ, ಪಕ್ಷ ರಾಜಕೀಯದ ಗಂಡಾಂತರದಿಂದ ಬದುಕ ಬೇಕಾದರೆ ಯೋಗ್ಯ ದೇಶ ಸೇವಕರ ಹೊಸ ತಂಡವೊಂದು ತಯಾರಾಗಬೇಕು. ಕೊಡಗಿಗೆ ಗಂಡಾಂತರ ಬಂದಿದೆ ಈ ಗಂಡಾಂತರದಿಂದ ದೇಶವನ್ನು ರಕ್ಷಿಸಲು ಕೆಲವರಾದರೂ ತಮ್ಮ ತನುಮನವನ್ನರ್ಪಿಸಿ ಮುಂದಿಯಬೇಕು. ಹತ್ತಾರು ಯುವಕರು ರಾಜಕೀಯ ಸನ್ಯಾಸವನ್ನು ಸ್ವೀಕರಿಸಿ ಪ್ರತಿ ಗ್ರಾಮಗಳಲ್ಲಿ ಪ್ರಚಾರ ಮಾಡಿ ಪಕ್ಷ ರಾಜಕೀಯದ ಕೆಸರಿಗೆ ಸಿಲುಕದ ಹೊಸ ರಾಜಕೀಯ-ಪ್ರವಾದವನ್ನು ಕೊಡಗಿನಲ್ಲಿ ಸ್ಥಾಪಿಸಬೇಕು. ಸ್ವಾರ್ಥಿಗಳಾದ ತನ್ನ ಹಿತವೇ ದೇಶದ ಹಿತಕ್ಕಿಂತಾ ಮಿಗಿಲೆಂದು ತಿಳಿಯುವ, ತನ್ನ ಪಕ್ಷವು ಎಂದೂ ತಪ್ಪು ಮಾಡದೆಂದು ಭಾವಿಸುವವರ ಕೈಯಲ್ಲಿ ದೇಶದ ಹಿಡಿತವಿರುವ ವರೆಗೆ ಯಾವ ದೇಶವೂ ಘನತೆಗೇರದು; ಯಾವ ಜನಾಂಗವೂ ಅಭಿವೃದ್ಧಿಗೊಳ್ಳದು. ಇಂಥಾ ವೊಂದು ನಿರ್ಮಲ ರಾಜಕೀಯದ ಸ್ಥಾಪನೆಗಾಗಿ ಸರ್ವಸ್ವವನ್ನು ತೊರೆದು ಪ್ರಯತ್ನಿಸಬೇಕಾಗಿದೆ. ಇಂಥಾ ಒಂದು ನೀತಿಯ ಆವಶ್ಯಕತೆಯನ್ನು ಕಂಡು ಅದರಲ್ಲಿ ದುಡಿಯಲು ತಯಾರಿರುವ ಯುವಕರು ತಮ್ಮಭಿಪ್ರಾಯವನ್ನು ವ್ಯಕ್ತಮಾಡಿ "ಶಂಭು" C/o. ಕೊಡಗು, ಮಡಿಕೇರಿ, ಈ ಪತ್ರಿಗೆ ಬರೆಯಬೇಕಾಗಿ ವಿನಂತಿ. ದೇಶದ ಸರ್ವ ನಾಶವಾಗುತ್ತಿರುವ ಈ ಸಮಯದಲ್ಲಿ ದೇಶದ ಹಿತಕ್ಕಾಗಿ ದುಡಿಯಲು ಮುಂದೆ ಬಂದವನು ದೇಶಕ್ಕೆ ತನ್ನ ಪಾಲಿನ ಕರ್ತವ್ಯವನ್ನು ಮಾಡಿದಂತಾಗದು. ಸಾಕಷ್ಟು ಜನರು ದೊರೆತ ನಂತರವೇ ಅದರ ಸಭೆ ನಡೆಸಿ ಮುಂದೆ ಕಾರ್ಯ ಕೈಕೊಳ್ಳುವ ಸುಲ್ಲ.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್,

ಲಿಮಿಟೆಡ್, ಮಡಿಕೇರಿ.

ಕೋ.ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,65,000.
ಕ್ಷೇಮನಿಧಿ	ರೂ.	50,000.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಆಧಾರ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯೂ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಸಿಟ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಖಜಾಂಚಿ.

CRESCENT

FOR PROTECTION AND SERVICE.

It is best to represent and insure with

The CRESCENT Insurance Co., Ltd,

H. O: BOMBAY. *[Established 1919.*

For particulars write to:

Sri B. A. Poovayya or **The Branch Manager,**
Organiser *22 B. Mahatma Gandhi Road,*
Polibetta, Coorg. *Bangalore 1.*

ಸುರಕ್ಷಿತವಾದ ಜೀವವಿಮೆ ಪಡೆಯಲು

ಕ್ರೆಸೆಂಟ್

ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ ಐ ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ 4-8-0

ಸಂಪುಟ ೨೭ | ತಾರೀಕು ೧೩-೨-೧೯೪೯ನೇ ಶುಕ್ರವಾರ | ಸಂಚಿಕೆ ೩೯

ಈಗ ಗಾಂಧೀಜಿಯು ಪುನರವತಾರವಾದರೆ?

ಲೇ — 'ಶಂಬು'

ಬಿರ್ಲಾ ಭವನದ ಪ್ರಾರ್ಥನಾ ಸಭೆಯಲ್ಲಿ ನಾಥೂರಾಂ ಗೋಡ್ಸೆಯ ಗುಂಡಿಗೆ ತುತ್ತಾಗಿ 'ಹೇ ರಾಮ್' ಎಂದು ಆಕ್ರಂದಿಸಿ ಇಹವನ್ನು ತ್ಯಜಿಸಿದ ಗಾಂಧೀಜಿಯವರು ಈಗ ಭರತ ಖಂಡಕ್ಕೆ ಬಂದು ಇಲ್ಲಿಯ ಕಾರ್ಯಕಲಾಪಗಳನ್ನು ನೋಡಿದರೆ ಏನೆಂದಾರು? ... ಮಾಡಿದಾಗ ನನಗೆ ... ವಿಚಾರಗಳನ್ನು ಇಲ್ಲಿ ಕೊಟ್ಟಿರುವೆನು.

೧ ಹಿಂದೆ ಯಾವ ಪದವಿಯಲ್ಲಿಯೂ ಇಲ್ಲದೆ ... ಹಿಡಿದು ಕಪ್ಪುಪೇಟೆ ಮಾಡುವ ಲಾಭ ಬಡುಕರವರೆಗೆ ಎಲ್ಲರೂ ತನ್ನ ಹೆಸರನ್ನು ಉಪಯೋಗಿಸಿ ಅವರವರ ಸ್ವಂತ ಲಾಭ ಮಾಡುತ್ತಿರುವುದನ್ನು, ಅವರ ಹೀನ ಕೆಲಸವನ್ನು ಮುಚ್ಚಲು ಅದನ್ನು ಉಪಯೋಗಿಸುತ್ತಿರುವುದನ್ನು ಕಂಡು 'ನನ್ನ ಹೆಸರನ್ನು ಹೇಳಬೇಡಿ, ಬರೆಯಬೇಡಿ, ಪ್ರಕಟಿಸುವ ಎಲ್ಲಾ ಹಕ್ಕುಗಳು ಕಾಯ್ದಿಡಲ್ಪಟ್ಟಿವೆ' ಎಂದು ಕೂಡಲೇ ಪ್ರಕಟಿಸುತ್ತಾರೆ.

೨ ಸೈನ್ಯ ಮತ್ತು ಪೊಲೀಸಿಲ್ಲದ ಶಾಂತಿಯ ರಾಜ್ಯವನ್ನು, ಬಡತನ ರೋಗ ರುಜಿನ, ಅನ್ಯಾಯಗಳಿಲ್ಲದ ರಾಮರಾಜ್ಯವನ್ನು ಕಟ್ಟುವ ಪ್ರಯತ್ನದಲ್ಲಿದ್ದ ಅವರು ಇಂದಿನ ಸೈನ್ಯ ಸಿದ್ಧತೆ, ... ಶಸ್ತ್ರಾಸ್ತ್ರ ... ಆಹಿಂಸೆ ನಡೆಯುತ್ತಿರುವ ಅಹಿಂಸೆಯ ಕೂಲೆ ಇವುಗಳನ್ನು ನೋಡಿ ಮತ್ತೊಮ್ಮೆ 'ಹೇ ರಾಂ' ಎನ್ನುತ್ತಿದ್ದರು.

೩ ವಿಕೇಂದ್ರೀಕೃತ ಕೈಗಾರಿಕೆ, ವಿಕೇಂದ್ರೀಕೃತ ಗ್ರಾಮ ... ಗಿ ... ಹಿಡಿದು ಗ್ರಾಮ ಸೇವೆಯ ಬೆನ್ನೆಲುಬೆಂದೂ, ಚರಖಾವೇ ಭಾರತೀಯರ ಕಾಮಧೇನುವೆಂದೂ ಸಾರಿದ ಅವರು ಇಂದಿನ ಯಾಂತ್ರಿಕ ಕೈಗಾರಿಕೆ ಕೇಂದ್ರೀಕೃತ ಆಡಳಿತ, ಸ್ವದೇಶಿ ಬಂಡವಾಳ ... ವಿದೇಶಿ ಬಂಡವಾಳಕ್ಕೆ ಕೊಡುತ್ತಿರುವ ಆಹ್ವಾನ, ಚರಖಾದ ಸಂಕೇತವಾಗಿ ವರ್ಷಕ್ಕೊಮ್ಮೆ ಚರಖಾ ಜಯಂತಿಯಿಂದ ತೃಪ್ತರಾಗಿರುವ ನೀತಿಯನ್ನು ಕಂಡು 'ಜೀವ ಪರ್ಯಂತರ ಉಪವಾಸ' ಕೈಕೊಳ್ಳುತ್ತಿದ್ದರು!

೪ ತಾನು ಉಪದೇಶಿಸಿದ ಹಿಂದೂ ಮುಸ್ಲಿಮ ಹಿತ 'ಮಾಡುವೆ ಇಲ್ಲವೇ ಮಡಿಯುವೆ' ಎಂಬ ವಿಪುಲ ಸಂದೇಶವನ್ನು ಪವಿತ್ರ ಮಂತ್ರ ಧರಿಸಿದವರನೇಕರು ದುಡ್ಡು 'ಮಾಡುವ ಇಲ್ಲವೆ ಮಡಿಯುವ' ಎಂದೂ, ಅಧಿಕಾರ 'ಪಡೆಯುವೆ ಇಲ್ಲವೇ ಸಾಯುವೆ' ಎಂದೂ ಮಾರ್ಪಡಿಸಿಕೊಂಡಿರುವುದನ್ನು ಕಂಡು ಕಾಂಗ್ರೆಸಿನವರ ಹಸ್ತ ... ಈ ... ವನ್ನು ... ವೆ' ಎಂಬ ... ಪ್ರಾರಂಭಿಸಿದ್ದರು.

... ಪ್ರತಿ ದಿನ ಮೌನ ವ್ರತವನ್ನು ... ಲಂಘಿಸುತ್ತಿದ್ದರು.

೭ ಭರತ ಖಂಡದಲ್ಲಿ ಜಾತೀಯತೆ ... ಉಹವು ನಿಂತರೂ ಕೆಲವು ಸರಕಾರಗಳ ಜಾತೀಯ ತಳಹದಿಯ ... ಕಾರ್ಯ...

ಗಾಂಧಿ ಕಲ್ಪಿತ ನುಡಿಯಂತೆ ಕಾಂಗ್ರೆಸ್ಸನ್ನು ನಡೆಸುವರೇ?



ಕಾಂಗ್ರೆಸ್ಸಿನ ಜವಾಬ್ದಾರಿ ಹೊತ್ತಿರುವ ಡಾ ಪಟ್ಟಾಭಿಯವರು ಕೊಡಗಿಗೆ ಎಂದಾದರೊಮ್ಮೆ ತಪ್ಪದೆ ಬರುವ ಆಶ್ವಾಸನವನ್ನಿತ್ತಿದ್ದಾರೆ

೫ ಭಾರತದ ಸ್ವಾತಂತ್ರ್ಯ ... ದಕ್ಕಿರುವುದು, ಕಾಂಗ್ರೆಸ್ಸಿಗನ ಪರಿಶ್ರಮ ... ನೆಯ ಉತ್ಕಟ ಅಪರ್ಣದಿಂದ ... ಇಯ ವಿಷಯವನ್ನು ಹೃದಯದಲ್ಲಿ ... ತ್ಯಾಗ ... ಇಂಬಿರುವವರ, ಪ್ರಾಂತೀಯತೆ, ಭಾಷಾ ... ನ್ನು ... ಬಳ ... ಗಳಲ್ಲಿ ಹಿಂದೂ ದೇಶದ ಹಿತವನ್ನು ... ಸ್ವಂ ... ಸತ್ಯಾಗ್ರಹ' ... ಮರೆತಿರುವುದು ಇವುಗಳನ್ನು ಕಂಡು ಹಿಂ

ಉಪಯೋಗಿಸುತ್ತಿರುವುದನ್ನು ಕಂಡು 'ಸತ್ಯಾಗ್ರಹ ... ಗ್ರಹ'ವೆಂಬ ಪುಸ್ತಕವನ್ನು ಓದಿದ ಎಲ್ಲರಿಗೂ ದೊರೆಯುವಂತೆ ಮಾಡುತ್ತಿದ್ದರು.

೬ ... ಸುಭಾಷ ... ಯಾಗಿ ಸರ್ವರೂ ಪ್ರತಿ ಭಾಷಣ, ... ಕೆಗಳಲ್ಲಿ ತನ್ನ ಮತಗಳನ್ನು ಉಲ್ಲೇಖಿಸುವುದ, ಉದಾಹರಣೆಗಳನ್ನು ಕೊಡುವುದ, 'ಭಾರತದ ಬಾಪು' ಎಂದು ಕರೆದು ತೋರಿಕೆಯ ಕಣ್ಣೀರು ... ವ ... ವ್ಯಕ್ತಿಯನ್ನು ನೋಡಿ ... ಮಾಡಲ ... ಮಾಡುತ್ತಿದ್ದ ವಾರಕ್ಕೆ ಒಂದು ದಿವಸ ಮೌನ ವ್ರತದ ಬದಲು

ದೆ ಕಾಂಗ್ರೆಸ್ಸಿನ ನಾಲ್ಕಾಣೆ ಸದಸ್ಯರಲ್ಲದಿದ್ದರೂ ಕಾಂಗ್ರೆಸ್ಸೇ ತಾನಾಗಿದ್ದ ಇವರು ಕಾಂಗ್ರೆಸ್ಸಿನಿಂದ ದೂರ ನಿಲ್ಲುತ್ತಿದ್ದರು.

೮ ಕಪ್ಪು ಸಂತೆ, ಲಂಚಗುಳಿತನ ಅಪ್ಪ ಹಾದಿಯ ನೀತಿಗಳನ್ನು ಅನುಸರಿಸುತ್ತ ... ಬಡ ಜನರ ... ಇಂದ ಬಳ್ಳಿದರಾಗಿ ಈ ತನ್ನ ಹೀನ ವ್ಯಾಪಾರಗಳಲ್ಲಿ ತನ್ನ ಭಾವ ಚಿತ್ರಗಳನ್ನೂ ಅದಕ್ಕೆ ಸದಾ ಪೂಜೆ ಪುನಸ್ಕಾರಗಳಾಗುತ್ತಿರುವುದನ್ನೂ, ಈ ವ್ಯಾಪಾರ ... ಗಳಿಗೆ ತನ್ನ ಹೆಸರು ಹಾಕಿಕೊಂಡಿರುವುದನ್ನೂ ಕಂಡು ಎದೆಗೆ ಗುಂಡು ತಗಿಲಿದಕ್ಕಿಂತ ಹಿರಿದಾದ ವೇದನೆಯನ್ನು ಅನುಭವಿಸುತ್ತಿದ್ದರು.

೯ ಗಾಂಧೀ ತತ್ವದ ಪರಿಪಾಲನೆಯಿಂದ, ಸರಳ, ಶಾಂತಿಯುಕ್ತ, ಸತ್ಯ ಜೀವನದಿಂದ, ... ಜಗತ್ತಿಗೆ ಹೊಸ ಸಂದೇಶವನ್ನು ಸಾರಬೇಕೆಂದು ಆಶಿಸಿದ್ದ ಭರತ ಖಂಡವು, ಇತರ ಯುದ್ಧ ಸಕ್ತ ರಾಷ್ಟ್ರಗಳ ಪದದಲ್ಲಿಯೇ ಸಾಗಲು ಪ್ರಯತ್ನಿಸುತ್ತಿರುವುದನ್ನು, ಜಗತ್ತಿನ ... ಗೆ ... ತನ್ನ ತತ್ವಗಳನ್ನು ಉಪದೇಶ ... ಮಾತ್ರ ಇಟ್ಟುಕೊಂಡಿರುವುದನ್ನೂ ಕಂಡು ... ಗಾಡಿಗೆ ... ಸ್ವತಂತ್ರ (?) ... ಹವನ್ನು ತ್ಯಜಿಸಿ ಹೋಗುತ್ತಿದ್ದರು.

ಪದಚ್ಯುತ ನ್ಯಾಯಾಧೀಶ.

೮೫ ವರ್ಷಗಳ ಹಿಂದೆ ಭಾರತದಲ್ಲಿ ಹೈಕೋರ್ಟುಗಳು ಸ್ಥಾಪಿತವಾದಂದಿನಿಂದ ಇಂದಿನ ವರೆಗೆ ... ನ್ಯಾಯಾಧೀಶನನ್ನು ಪದಚ್ಯುತಗೊಳಿಸಿದ ದೃಷ್ಟಾಂತ ... ಲ ... ವಾಗಿರೂ ಕಳೆದ ವಾರ ಅಲ್ಲಹಾಬಾದ್ ಹೈಕೋರ್ಟಿನ ನ್ಯಾಯಾಧೀಶ ಜಸ್ಟಿಸ್ ಎಸ್ ಪಿ ಸಿಂಹ ನನ್ನು ಗವರ್ನರ್ ಜನರಲ್‌ರವರು ಪಕ್ಷಪಾತ ವರ್ತನೆ ... ಮೇರೆಗೆ ಪದಚ್ಯುತಗೊಳಿಸಿ ... ಶ್ರೀ ಸಿಂಹರ ಮೇಲೆ ಹೊರಿಸಿದ್ದ ಹಲವು ಆರೋಪಗಳ ತನಿಖೆಯನ್ನು ಫೆಡರಲ್ ಕೋರ್ಟಿನ ... ಒಂದು ಆರೋಪಕ್ಕೆ ಸಾಕಷ್ಟು ಸಾಕ್ಷಿಯ ಬೆಂಬಲವಿರುವ ನಿಜವೆಂದು ನಿರ್ಧರಿಸಿತು. ಆ ಆರೋಪ ಶ್ರೀ ಸಿಂಹರವರು ಹಲವು ವಕೀಲರ ಕಡೆಗೆ ಪಕ್ಷಪಾತ ದೃಷ್ಟಿಯಿಂದ ನೋಡಿ ನ್ಯಾಯಾನ್ಯಾಯಗಳ ... ತೀರ್ಪು ಕೊಡಲಿ ... ಕೊಟ್ಟಿದ್ದು ... ನ್ಯಾಯಾಧೀಶರು ರಾಮಾಯಣದ ಸೀತಾ ದೇವಿಯಂತೆ ಎಲ್ಲಾ ಸಂಶಯಗಳಿಂದ ... ಗಿರಬೇಕಾಗುವುದು ಅತ್ಯಗತ್ಯ ... ಪಕ್ಷಪಾತದ ಸರಕಾರ ... ಗವರ್ನರ್ ಜನರಲ್‌ರವರು ... ಉಗ್ರ ... ಯನ್ನು ... ಸ್ತುತ್ಯ. ಅನೇಕ ಪ್ರಾಂತಗಳಲ್ಲಿ ಈ ರೀತಿಯಲ್ಲಿ ನ್ಯಾಯದ ಕೊಲೆಯಾಗ ... ಎಲ್ಲಾ ಸರಕಾರಗಳೂ ... ವರೇ.

ಪ್ರತಿಯೊಂದು ಪಾಪದ ಹಿನ್ನೆಲೆಯಲ್ಲಿ ಸ್ತ್ರೀ ಇರುವಳು!

ಪ್ರತಿಯೊಂದು ಖೂನಿಯ ಹಿನ್ನೆಲೆಯಾಗಿ ಓರ್ವ ಸ್ತ್ರೀ ಇದ್ದೇ ಇದ್ದಾಳೆ ಎಂಬ ವಿಷಯವನ್ನು ಪ್ರತಿಪಾದಿಸುತ್ತ ಕಲ್ಕತ್ತದ ಪೋಲೀಸ್ ಡೆಪ್ಯೂಟಿ ಕಮಿಷನರ್ ಶ್ರೀ. ಪಿ. ಕೆ. ಸೇನರು 'ಅಮೃತ ಬಜಾರ್' ಪತ್ರಿಕೆಯಲ್ಲಿ ಕೊಟ್ಟ ಕೆಲವು ನಿದರ್ಶನಗಳು ಈ ಕೆಳಗಿನಂತಿವೆ:–

ಸ್ತ್ರೀ ಪ್ರಪಂಚವನ್ನು ಕೆರಳಿಸುವ ವಿಷಯನ್ನು ಬರೆಯಲು ನಾನು ಮನಸ್ಸು ಮಾಡಿದ್ದೇನೆ. ಆದರೆ ಸ್ತ್ರೀಯರನ್ನು ನೋಯಿಸಲೆಂದು ಉದ್ದೇಶಪೂರ್ವಕವಾಗಿ ಇದನ್ನು ಬರೆಯುವುದಲ್ಲ. ಆದುದರಿಂದ ಆ ಬಗ್ಗೆ ಸ್ತ್ರೀ ಪ್ರಪಂಚದೊಡನೆ ಕ್ಷಮೆ ಯಾಚಿಸಲು ಮರೆಯುವುದಿಲ್ಲ. ನಾನು ಬರೆಯುತ್ತಿರುವ ಲೇಖನ, ಮಾನವತೆಯ ಕಡೆಗೆ ಕರುಣಾಪೂರ್ಣ ಹೃದಯವಿರುವ ಆದರ್ಶ ನಾರಿಗೆ ಯಾವ ರೀತಿಯಲ್ಲೂ ಬಾಧಿಸದು; ಅವಳ ಶ್ರೇಯಸನ್ನು ಕುಗ್ಗಿಸದು. ಈ ಕೆಳಗೆ ಸೂಚಿಸಿದ ಪೈಶಾಚಿಕ ಸ್ವರೂಪದ ದುಷ್ಟ ನಾರಿಯರಿದ್ದರೆ ಮಾತ್ರ ಅವರನ್ನು ಕೆರಳಿಸುವುದು.

ಸೌಂದರ್ಯ ಮತ್ತು ಆಕರ್ಷಣೆ ಇವೆರಡು ಸ್ತ್ರೀಯರಿಗೆ ಪ್ರಕೃತಿಯ ಕಡೆಯಿಂದ ದೊರೆತ ಎರಡು ಅಪೂರ್ವ ವರಗಳು. ಅದನ್ನು ಕೆಲ ಮಂದಿ ಸ್ತ್ರೀಯರು ಪುರುಷರನ್ನು ಜೈಸಲು, ಇಲ್ಲವೆ ಬೇರೊಬ್ಬರೊಡನೆ ಸ್ಪರ್ಧೆ ಗೆಲ್ಲಲು ಉಪಯೋಗಿಸುತ್ತಾರೆ. ಅಂಥಾ ಕರಾಳ ಮನೋವೃತ್ತಿಯ ದುಷ್ಟ ಸ್ತ್ರೀಯರೇ ಇತಿಹಾಸದಲ್ಲಿ ಕೊಲೆ ಸುಲಿಗೆಗಳಿಗೆ ಕಾರಣರಾಗಿದ್ದಾರೆ.

ಆಧುನಿಕ ಮಾತಾಹಾರಿ.

ಫ್ರೆಂಚರಲ್ಲಿ ಒಂದು ನಾಣ್ಣುಡಿ ಪ್ರಚಾರದಲ್ಲಿದೆ: ಏನಾದರೂ ವಿಪತ್ತು ಸಂಭವಿಸಿತೆಂದರೆ ಅದರ ಬೇರಿನಲ್ಲಿ ಹೆಂಗಸನ್ನು ಹುಡುಕು ಎಂಬ ಅರ್ಥದ ಮಾತದು. ಹಿಂದೆ ಕೇವಲ ಸ್ತ್ರೀಗಾಗಿ ಎಷ್ಟೋ ರುಧಿರ ಸಂಗ್ರಾಮಗಳು ನಡೆದುದುಂಟು. ಇಂದು ಕೂಡಾ ಹಲವು ಗೃಹಗಳಲ್ಲಿ ಜೀವನವನ್ನು ದುಃಖಮಯವನ್ನಾಗಿ, ಕಲಹಮಯವನ್ನಾಗಿ ಮಾಡುವ ಕಾರಣ ಕರ್ತಳು ಸ್ತ್ರೀಯಾಗಿರುತ್ತಾಳೆ. ಕೋರ್ಟು ಸಂಬಂಧವಾದ ವ್ಯಾಜ್ಯ ವ್ಯವಹರಣೆಗಳು, ಖೂನಿಗಳು ಇವುಗಳಲ್ಲಿಯೂ ಹಿಂದೆಯೂ ಇಂದೂ ಸ್ತ್ರೀಯ ಪಾತ್ರ ಕಂಡುಬಂದಿದೆ. ಪ್ರಾಚೀನ ಭಾರತದ ಮಹಾ ರಾಜಕಾರಣಿ ಕೌಟಿಲ್ಯನು ಸ್ತ್ರೀಯಲ್ಲಿರುವ ಈ ಶಕ್ತಿಯನ್ನು ಮೆಚ್ಚಿ ಅವಳಿಗೆ 'ಅರ್ಥಶಾಸ್ತ್ರ'ದಲ್ಲಿ ಒಂದು ದೊಡ್ಡ ಸ್ಥಾನವನ್ನು ಕೊಟ್ಟಿರುತ್ತಾನೆ. ಅಂತಃಪುರದ ಸ್ತ್ರೀಯರು ಇಡೀ ಜನಾಂಗದ ಅದೃಷ್ಟವನ್ನೇ ಬದಲಾಯಿಸಬಲ್ಲರೆಂಬುದನ್ನು ಕೌಟಿಲ್ಯನು ಉಲ್ಲೇಖಿಸಿದ್ದಾನೆ. ಪ್ರಚಲಿತ ಇತಿಹಾಸವನ್ನು ಓದಿದವರು ಜರ್ಮನ್ ಗುಪ್ತಚಾರಿಣಿ ಮಾತಾಹಾರಿ ಮತ್ತು ಅವಳಂತಹ ಇತರ ಹೆಸರು ಹೋದ ಗುಪ್ತಚಾರಿಣಿಯರ ಸಾಹಸ ಕೃತ್ಯಗಳನ್ನು ಓದಿ ಬೆಚ್ಚಿ ಬೆರಗಾದುದಿಲ್ಲವೇ?

ಹುಲ್ಲಿನಲ್ಲಿ ಸರ್ಪ.

ಅರ್ಥಶಾಸ್ತ್ರದಲ್ಲಿ ಉಲ್ಲೇಖಿತವಾದ ಸ್ತ್ರೀಸಾಹಸದ ಒಂದು ಕಥೆ ಹೀಗಿದೆ:–

'ಅರಸನು ರಾತ್ರಿಯಾಗುತ್ತಲೇ ಅಂತಃಪುರವನ್ನು ಸೇರಿದನು. ಅಲ್ಲಿ ಅವನ ಪ್ರೀತಿಯ ರಾಣಿ ಅವನನ್ನು ಆದರದಿಂದ ಆಹ್ವಾನಿಸಿದಳು. ಅವಳ ಕಣ್ಣುಗಳಲ್ಲಿ ಪ್ರೇಮವು ಉಕ್ಕುತಿತ್ತು. ದೇಹವು ರಾಜನ ದೇಹದೊಡನೆ ಕೂಡಲು ತವಕಪಡುತಿತ್ತು. ಅವಳ ಸೌಂದರ್ಯಕ್ಕೆ ಮೋಹಪರವಶನಾದ ಅರಸನು, ಆಕೆಯನ್ನು ಆಲಿಂಗನದ ಸೆರೆಯಿಂದ ಬಿಗಿಯಲು ಮುಂದಾದಳು. ಒಂದು ಕ್ಷಣಕ್ಕೆ ಅವಳ ಕಣ್ಣುಗಳು ಮಿಂಚಿನಂತೆ ಹೊಳೆದವು. ಮುಗುಳ್ನಗೆ ನಗುತ್ತಾ, 'ಪ್ರಿಯಾ, ಬನ್ನಿ' ಎಂದು ಅಕ್ಕರೆಯಿಂದ ಕರೆದಳು. ಎರಡು ದೇಹಗಳು ಆಲಿಂಗನದ ಸೆರೆಯಲ್ಲಿ ಒಂದಾದುವು. ಆಕೆ ಕೈಯಲ್ಲಿ ತೊಟ್ಟುಕೊಂಡ ವಜ್ರದ ಬಳೆಗಳು ಪ್ರಕಾಶಕ್ಕೆ ಮಿನುಗುತ್ತಿದ್ದುವು. ಅರಸನ ಗಂಧಪೂಸಿತ ಮೈಯೊಳಗೆ ಬಳೆಗಳ ವಜ್ರದ ಮೊನೆಯಾದ ಹಲ್ಲುಗಳು ಬಂದು ಸೇರಿದೊಡನೆ, ಬಳೆಗಳಲ್ಲಿದ್ದ ವಿಷವು ಅವನ ರಕ್ತವನ್ನು ಸೇರಿತು. ಮರುಕ್ಷಣದಲ್ಲಿಯೇ ಆಲಿಂಗನದ ಸೆರೆಯಲ್ಲಿಯೇ ಅರಸನ ಆತ್ಮ ಅದೃಶ್ಯವಾಯಿತು. ರಾಣೀವಾಸದಲ್ಲಿ ಸಂಗೀತ ಮುಂದುವರಿಯುತಿತ್ತು; ರಾಜನು ಮಾತ್ರ ನಿಶ್ಚೇತನನಾಗಿ ನೆಲದಲ್ಲೊರಗಿದ್ದನು.

ಹೇಯ ಪೂಜನೆ.

ಇದು ಸುಮಾರು ೩,೦೦೦ ವರ್ಷಗಳ ಹಿಂದಿನ ಕಥೆ. ಇಂದು ಅಂತಹದೇ ಕೆಲ ಶಕ್ತಿ ನೇಮಕವಾದ ಚದುರೆ ಇನ್ನಷ್ಟು ವೇಗದಲ್ಲಿ ಬಹಳ ಚಮತ್ಕಾರಿಕ ರೀತಿಯಿಂದ ತನ್ನ ಕಾರ್ಯ ಸಾಧಿಸುತ್ತಾಳೆ. ಒಂದೇ ಗೋಲಿಯಿಂದ ತೀರಿಸಿಬಿಡುತ್ತಾಳೆ. ದೊಡ್ಡ ದೊಡ್ಡ ದಳಾಯಿತರು ಕಾಮಮನೋವೃತ್ತಿಯ ಸ್ತ್ರೀಯರ ಮೋಹದ ಬಲೆಗೆ ಬೀಳುವುದು ಬಲು ಬೇಗ. ಹೇಯಕೃತ್ಯಗಳಿಗೆ ಅವರನ್ನು ಪ್ರೇರೇಪಿಸುವುದು, ಅವರಿಗೆ ಸ್ಫೂರ್ತಿ ಈಯುವ ಶಕ್ತಿಯು ಅವರ ಪ್ರೇಯಸಿ. ಕೊನೆಗೆ ಈ ದಳಾಯಿತರ ದೇಹಾಂತವಾಗುವುದೂ ಅವರ ನೆಚ್ಚಿನ ರಾಣಿಯರಿಂದಲೇ. ಹೆಂಗಸೊಬ್ಬಳನ್ನು ಕೊಂದ ತಪ್ಪಿಗಾಗಿ ಚಿಕಾಗೋದ ದಳಾಯಿತನೊಬ್ಬನಿಗೆ ವಿದ್ಯುತ್ ಕುರ್ಚಿಯ ಮರಣ ಶಿಕ್ಷೆ ವಿಧಿಸಲ್ಪಟ್ಟಿತು. ಸಾಯುವುದಕ್ಕೆ ಮೊದಲು ಆತ ತುರಂಗದ ಗೋಡೆಯಲ್ಲಿ ಈ ರೀತಿ ಬರೆದಿಟ್ಟಿದ್ದ, 'ಹಗಲು ಹೊತ್ತು ರಾಣಿಯಾಗಿದ್ದವಳನ್ನು ರಾತ್ರಿಯ ರಾಣಿಯನ್ನಾಗಿ ಮಾಡಬಾರದು. ಭದ್ರತೆಗಾಗಿ ಬೇಕಾದರೆ ಒಬ್ಬಳನ್ನು ಇಟ್ಟುಕೊಳ್ಳಿ. ಆದರೆ ಮಕ್ಕಳೇ, ಸ್ತ್ರೀಯರನ್ನು ಯಾವ ಕಾಲಕ್ಕೂ ನಂಬಬೇಡಿ, ಅವರಲ್ಲಿ ವಿಶ್ವಾಸವಿಡಬೇಡಿ.'

ಅನೈಸರ್ಗಿಕ ಆಕಾಂಕ್ಷೆ.

ಸ್ತ್ರೀಯನ್ನು ಹೊಂದುವ ಅನೈಸರ್ಗಿಕ ಆಕಾಂಕ್ಷೆಯೇ ಕೆಲವು ಕೊಲೆಗಳ ಹಿನ್ನೆಲೆಯಾಗಿದೆ. 'ಅವಳು ನನ್ನವಳು. ಅವಳನ್ನು ಹೊಂದುವುದು ನನಗೆ ಸಾಧ್ಯವಿಲ್ಲವೆಂದಾದರೆ, ಇತರ ಯಾರಿಗೂ ಅವಳನ್ನು ಹೊಂದಲು ಬಿಡಲಾರೆ' ಎಂಬ ಈ ಹಟದಿಂದ ಎಷ್ಟು ಕೊಲೆಕೃತ್ಯಗಳು ನಡೆದಿಲ್ಲ?

ಇಂತಹ ನಾಟಕಗಳು ಮೇಲಿಂದ ಮೇಲೆ ನಡೆಯುತ್ತಿವೆ. ತನ್ನ ಅಪರಾಧವನ್ನು ಒಪ್ಪಿಕೊಂಡ ಒಬ್ಬ ಪೋಲೀಸ್ ಸ್ಟೇಶನಿಗೆ ಬಂದು ತಿಳಿಸುತ್ತಾನೆ. ತನ್ನ ಪತ್ನಿಯು ಪರರಿಗೆ, ಅನ್ಯ ಭಾವಿಸುವುದನ್ನು ಸಹಿಸಲಾರದೆ ಅವಳನ್ನು ತಾನು ಕೊಂದೆ ಎನ್ನುತ್ತಾನೆ. ಆದಾಗಿ ಅವನ ಪ್ರಕರಣವನ್ನು ವಿಚಾರಿಸಿದರೆ ಯಾವುದೇ ಆಸ್ತಿಪಾಸ್ತಿ ಸಂಬಂಧ ಕಾರಣವು ಅಡಿಯಲ್ಲಿದೆ ಎಂಬುದು ಹೊಳೆಯುವುದು. ತಾನು ಪ್ರೀತಿಸಿದುದನ್ನು ಒಬ್ಬ ಕೂಲಿಲ್ಲತ್ತಾನೆ; ಮುಂದೆ ಅದನ್ನು ಹೊಂದಿರುವುದು ಅಸಾಧ್ಯವೆಂದು ಕಂಡುಬಂದು ಹಾಗೆ ಮಾಡುತ್ತಾನೆ.

ನಿರಾಶೆ ಹೊಂದಿದ ಮನುಷ್ಯರು ಯಾವಕಾಲವೂ ಅಪಾಯಕಾರಿಗಳಾಗುತ್ತಾರೆ. ಒಂದು ವಸ್ತುವನ್ನು ಹೊಂದುವುದು ಅಸಾಧ್ಯವೆಂಬ ಭಾವನೆ ಹೆಚ್ಚುತ್ತ ಹೋದ ಹಾಗೆ ನಿರಾಶೆಯೂ ಹೆಚ್ಚುತ್ತದೆ. ಆ ನಿರಾಶೆಯೇ ಮುಂದೆ ಅತ್ಯಂತ ಭಯಂಕರ ಕೊಲೆಯ ರೂಪದಲ್ಲಿ ಪರ್ಯವಸಾನಗೊಳ್ಳುವುದು.

ಲಂಡನಿನಲ್ಲಿ ನಡೆದ ಖೂನಿ ಮೊಕದ್ದಮೆ.

೧೯೩೯-೪೦ರಲ್ಲಿ ಲಂಡನ್ ನಗರದಲ್ಲಿ ಭಯಂಕರ ಖೂನಿಯೊಂದು ನಡೆಯಿತು. ೧೭ ವರ್ಷದ ಒಬ್ಬ ಹುಡುಗ ಮತ್ತು ಹುಡುಗಿ ಪರಸ್ಪರ ಪ್ರೇಮಿಸತೊಡಗಿದರು. ಆದರೆ ಅವರ ಹೆತ್ತವರಿಗೆ ಅವರ ಪ್ರೇಮ ಮಿಲನದಲ್ಲಿ ಒಪ್ಪಿಗೆಯಿರಲಿಲ್ಲ. ಅವರಿಬ್ಬರ ಪ್ರೇಮ-ಸಂಬಂಧ ಕಡಿಯಲೆಂದು ಹುಡುಗಿಯ ರಕ್ಷಕನು ಅವಳನ್ನು ದೂರದ ಒಂದು ಊರಿಗೆ ಕರೆದೊಯ್ದನು.

೧೯೪೦ರ ಜನವರಿ ತಿಂಗಳ ಆರಂಭದಲ್ಲಿ ಹುಡುಗನು ಹುಡುಗಿಯಿದ್ದ ಸ್ಥಳವನ್ನು ಹುಡುಕಿ ಹೋಗಿ, ಒಂದು ರಾತ್ರಿಯನ್ನು ಆವಳೊಡನೆ ಕಳೆದನು. ಇದರ ಪರಿಣಾಮವಾಗಿ ಆ ಹುಡುಗಿಯು ಹೆತ್ತವರಿಂದ ಹೆಚ್ಚಿಗೆ ಶಿಕ್ಷೆ ಅನುಭವಿಸಬೇಕಾಯಿತು. ಕೆಲವು ದಿನಗಳು ಕಳೆದ ಅನಂತರ ಏನೋ ಒಂದು ಕುಂಟು ನೆವ ಹೇಳಿ ಹುಡುಗನು ಹುಡುಗಿಯನ್ನು ತನ್ನೊಡನೆ ಕರೆದೊಯ್ದನು. ಇವರಿಗೆ ಮೊದಲೇ ಆತ ಒಂದು ಹರಿತವಾದ ಚೂರಿಯನ್ನು ಕೊಂಡುಕೊಂಡಿದ್ದ. ಹೋಗಿ ಕೆಲವು ತಾಸುಗಳಾದರೂ ಹುಡುಗಿ ಹಿಂದಿರುಗಲಿಲ್ಲ. ಆದರೆ ಹುಡುಗನು ಸ್ಥಳೀಯ ಪೋಲೀಸ್ ಸ್ಟೇಶನೊಂದರ ಮುಂದೆ ಹಾಜರಾಗಿ, 'ಅವಳು ತೀರಿಹೋದಳು, ಅವಳನ್ನು ನಾನು ಕೊಂದೆ' ಎಂದು ಬೊಬ್ಬಿಟ್ಟನು. ಹಲವು ಬಾರಿ ಹಾಗೆ ಹೇಳುತ್ತ ಚೀರಿದನು. ಒಂದು ಪಾಳು ಬಿದ್ದ ಮನೆಯಲ್ಲಿ, ಎದೆಯ ಎಡಭಾಗದಲ್ಲಿ ಚೂರಿಯ ಬಲವಾದ ಘಾಯಗಳಿಂದ ಹುಡುಗಿಯ ಶವವು ಪೋಲೀಸರಿಗೆ ಸಿಕ್ಕಿತು. ಆ ಹುಡುಗನು ಅವಳನ್ನು ಕೊಲೆ ಮಾಡಿದ ಮುಖ್ಯ ಉದ್ದೇಶವಾದ ಗಿತ್ತು: 'ಅವ ನನ್ನವಳು. ಅವಳನ್ನು ಹೊಂದುವುದು ನನಗೆ ಸಾಧ್ಯವಿಲ್ಲವಾದರೆ ಇತರರು ಆಕೆಯನ್ನು ಹೊಂದುವುದನ್ನು ಬಿಡಲಾರೆ' ಎಂಬ ಹಟಸಾಧನೆಗಾಗಿ ಆಕೆಯನ್ನು ಅವನು ಕೊಂದನಾಗಿದೆ.

ಇತರ ಹಲವು ಪ್ರಕರಣಗಳು.

ಮೇಲೆ ಸೂಚಿಸಿದಂತಹ ಅಸಂಖ್ಯ ಕೊಲೆ ಪ್ರಕರಣಗಳು ಕಳೆದ ಹನ್ನೆರಡು ವರ್ಷಗಳಲ್ಲಿ ಕಲ್ಕತ್ತದಲ್ಲಿ ನಡೆದು ಹೋಗಿವೆ. ಪ್ರತಿಯೊಂದು ಪ್ರಕರಣದಲ್ಲಿ ಕೊಲೆಯ ಹಿನ್ನೆಲೆಯಾಗಿ ಸ್ತ್ರೀಯು ಕಂಡು ಬರುತ್ತಾಳೆ. ಪ್ರೇಮದಲ್ಲಿ ನಿರಾಶೆ, ಸ್ತ್ರೀಯ ಕುರಿತು ಈರ್ಷ್ಯೆ, ಮತ್ಸರ, ಪ್ರೇಮಭಂಗ ಇವುಗಳ ಪ್ರೇರಣೆಯಿಂದಲೇ ಕೊಲೆಗಳು ನಡೆದುವೆಂಬುದು ತಿಳಿದುಬರುತ್ತದೆ. ೧೯೩೬ರ ಸಗ್ಗು ಖೂನಿ ಮೊಕದ್ದಮೆ, ಇತ್ತೀಚಿಗೆ ಪಿಸ್ತೂಲಿನ ಗೋಲಿಗೆ ಬಲಿಯಾಗಿ ಒಬ್ಬನು ತೀರಿಹೋದ ... ಇಂತಹ ಕೊಲೆ ಪ್ರಕರಣಗಳಲ್ಲಿ ಕೆಲವು.

ಇನ್ನೊಂದು ರಹಸ್ಯ.

ಕೊಲೆ ಪಾತಕಿ ಇಲ್ಲದ ಕೈದಿಯು ತನ್ನ ಆರೋಪವನ್ನು ಮರೆಸಲು ಸ್ತ್ರೀಯ ಆಶ್ರಯ ಹಿಡಿಯುತ್ತಾನೆ. ಅದೊಂದು ಕೇವಲ ದೈಹಿಕ ಮಾತ್ರವಲ್ಲ ಮಾನಸಿಕ ಅವಶ್ಯಕತೆಯಾಗಿದೆ. ಸ್ತ್ರೀಯು ಪುರುಷನ ಅದೃಷ್ಟದ ರಾಣಿಯಾಗಿದ್ದಾಳೆ. ಒಳ್ಳೆಯ ಗುಣ ನಡತೆಯ ಶೀಲವಂತ ನಾರಿಯಾದರೆ ತನ್ನ ಪುರುಷನ ಭಾಗ್ಯವನ್ನು ಮಾತ್ರವಲ್ಲ ಕುಟುಂಬದ ಕೀರ್ತಿಯನ್ನೂ ಹೆಚ್ಚಿಸಬಲ್ಲಳು. ಶೀಲವಿಹೀನೆ ಸ್ವೇಚ್ಛಾಚಾರಿಯಾದರೆ ಕುಲವನ್ನೇ ನಾಮಾವಶೇಷ ಮಾಡುವಳು.

ಪರಪುರುಷನ ಪ್ರೇಮದಲ್ಲಿ ಆಸಕ್ತಿ ಸೂಚಿಸುವ ನಾರಿ ತನ್ನ ಪ್ರೇಮಿಯ ಪತನಾನಂತರವೂ ಅವನಿಗಾಗಿ ದುಃಖಸಂತಾಪಗಳನ್ನು ಪಡುವ ಸನ್ನಿವೇಶಗಳು ಹಲವು ಇವೆ. ತನ್ನ ಪ್ರೇಮಿಯು ಪೋಲಿಸರ ದಸ್ತಗಿರಿಗೊಳಗಾದ ಎಷ್ಟೋ ದಿನಗಳ ವರೆಗೆ ಪ್ರೇಯಸಿಯು ಅವನಿಗಾಗಿ ಅತ್ತ ದೃಷ್ಟಾಂತಗಳು ಹಲವು. ಪಗ್ಗಾ ಖೂನಿ ಮೊಕದ್ದಮೆಯಲ್ಲಿಯೂ ನಾಯಕಿಯು ಇದೇ ರೀತಿ ವರ್ತಿಸಿದ್ದಾಳೆ.

ಮಾನವತೆಯು ಕಾಮಕ್ರೋಧಾದಿ ಕೀಳು ಭಾವನೆಗಳಿಗೆ ಎಲ್ಲಿಯ ತನಕ ಅಪ್ಪನೆಕೊಡುವುದೋ ಅಲ್ಲಿಯ ವರೆಗೆ ಇಂತಹ ಘಟನೆಗಳು ನಡೆಯುತ್ತಲೇ ಹೋಗುವವು. ಕ್ರಿ. ಪೂ. ೫೦೦೦ದಿಂದ ಕ್ರಿ. ಶ. ೧೯೪೯ರ ವರೆಗೆ ಅವ್ಯಾಹತವಾಗಿ ಈ ಪ್ರಕರಣಗಳು ನಡೆಯುತ್ತ ಹೋಗಿವೆ. ಕ್ಲಿಟೆಮ್ನೆಸ್ಟ್ರಾ, ಕ್ಲಿಯೊಪಾತ್ರಾ, ಮೇಡಮ್ ಡುಬೆರ್ರಿ, ಮಾತಾಹಾರಿ ಇವರೆಲ್ಲರ ಉದಾಹರಣೆಗಳು ನಮ್ಮ ಮುಂದಿದ್ದೂ, ದುಷ್ಟ ಆಕರ್ಷಣೆಗಳ ಕಡೆಗೆ ಮನಸ್ಸು ಹರಿಯದಂತೆ ಮನೋದಾರ್ಢ್ಯತೆ ನಮ್ಮಲ್ಲಿ ಇನ್ನೂ ಉಂಟಾಗದಿದ್ದುದಕ್ಕೆ ಖೇದಪಡಬೇಕಾಗಿದೆ.'

ಪ್ರಭಾತ.

ಪ್ರತ್ಯಕ್ಷ ಜೀವನದಿಂದಲೇ ವಿದ್ಯಾಭ್ಯಾಸ

ಅಮೇರಿಕನ್ ತಜ್ಞರ ಸಲಹೆ

[ಡಾ. ಎ. ಇ. ಮೋರ್ಗನ್ ಇವರು ಪ್ರಗತಿಶೀಲ ವಿದ್ಯಾಧೋರಣೆಯ ಪ್ರಚಾರಕರು. ಇವರು ಅಮೇರಿಕದ ಪ್ರಖ್ಯಾತ ಇಂಜಿನಿಯರರೂ ಆಗಿರುವರು. ಟೆನೆಸಿ ಕಣಿವೆ ನೀರಾವರಿ ಯೋಜನೆಯ ಅಧ್ಯಕ್ಷರೂ ಆಗಿದ್ದರು. ಈಗ ಹಿಂದೀ ಸರಕಾರದ ವಿಶ್ವವಿದ್ಯಾಲಯ ಸಮಿತಿಯ ಸದಸ್ಯರಾಗಿ ನೇಮಕವಾಗಿದ್ದಾರೆ. ಈ ಕೆಳಗಿನ ಲೇಖನವನ್ನವರು ವಾರ್ಧಾದಲ್ಲಿನ ನಯಿತಾಲಿಮಿ ಸಂಘದ ಸ್ನೇಹಿತರಿಗೆ ಬರೆದ ಒಂದು ಸಲಹಾ ಪತ್ರದಿಂದ ತೆಗೆದುದಾಗಿದೆ. ಕೈಗಾರಿಕೆ ಪ್ರಧಾನವಾದ ಮೂಲ ಶಿಕ್ಷಣದ ಕುರಿತು ಅವರು ತಮ್ಮ ಅಭಿಪ್ರಾಯಗಳನ್ನು ಇಲ್ಲಿ ಸೂಚಿಸಿದ್ದಾರೆ.]

ಮೂಲ ಶಿಕ್ಷಣದ ಕುರಿತು ಯೋಚಿಸುವಾಗ ಒಂದೆರಡು ಪ್ರಬಲ ಸಂದೇಹಗಳು ತಲೆದೋರುತ್ತವೆ. ಮಕ್ಕಳಿಗೆ ಕೆಳಗಿನ ತರಗತಿಗಳಲ್ಲಿ ನೂಲುವ ನೇಯುವಿಕೆಗಳಿಗೂ, ತೋಟಗಾರಿಕೆಗೂ ಮತ್ತು ಮೇಲಿನ ತರಗತಿಗಳಲ್ಲಿ ಮರದ ಕೆಲಸ ಕಬ್ಬಿಣದ ಕೆಲಸಕ್ಕೆ ಅದೆಷ್ಟು ಅವಧಿಯನ್ನು ಮೀಸಲಿಡಬೇಕಾಗುತ್ತದೆ? ಈ ತರಗತಿಗಳಲ್ಲಿ ಪುಸ್ತಕ ಪಾಠಗಳಿಗೆ ಎಷ್ಟು ಸಮಯ ಇಡಬೇಕು? ಕಳೆದ ಅರ್ಧಶತಮಾನದ ವಿದ್ಯಾಭ್ಯಾಸವು ಪುಸ್ತಕಗಳಿಂದಲೇ ಆಯಿತೆನ್ನಬಹುದು. ಇಂಡಿಯಾ ಅಮೇರಿಕಗಳಲ್ಲಿ ಇದು ತನಕ ಮಕ್ಕಳನ್ನು ವಾರದಲ್ಲಿ ಕೆಲವು ಗಂಟೆಗಳ ತನಕ ಶಾಲೆಯೆಂಬ ಸೆರೆಮನೆಯಲ್ಲಿ ಬಂಧನದಲ್ಲಿರಿಸಿ ಪಾರಂಪರ್ಯವಾಗಿ, ಕುಲದ ಕಸುಬಾಗಿ ಅವರು ಕಲಿಯಬೇಕಾದ ಕೈಗಾರಿಕೆಯ ಪ್ರಾವೀಣ್ಯವನ್ನು ಅವರಲ್ಲಿ ಕಡಮೆ ಮಾಡಿದಂತೆಯೂ ಆಯಿತು. ಆದರೆ ಈಗಿನ ಹೊಸ ವಿದ್ಯಾಯೋಜನೆಯು ಪುಸ್ತಕಗಳನ್ನು ಸಂಪೂರ್ಣ ಬಹಿಷ್ಕರಿಸುವ ಕೊನೆಯ ತುದಿಯನ್ನು ಮುಟ್ಟುತ್ತದೆ. ವಿದ್ಯಾಭ್ಯಾಸವೆಲ್ಲವನ್ನು ಗೃಹಕೃತ್ಯಗಳ ಮತ್ತು ಗುಡಿ ಕೈಗಾರಿಕೆಗಳ ಮೂಲಕ ಗಳಿಸಿಕೊಡುವ ಉದ್ದೇಶದ್ದು ಇದಾಗಿರುತ್ತದೆ.

ಈ ಎಲ್ಲಾ ಪ್ರಯೋಗಗಳನ್ನು ಅಮೇರಿಕನ್ ಶಾಲೆಗಳಲ್ಲೂ ಮಾಡಿ ನೋಡಲಾಗಿದೆ. ಅಲ್ಲೂ ಬರೀ ಪುಸ್ತಕದಿಂದಲೂ, ಪುಸ್ತಕವಿಲ್ಲದೆಯೂ ವಿದ್ಯಾಭ್ಯಾಸವನ್ನು ಕೊಟ್ಟು ಫಲಿತಾಂಶವನ್ನು ನೋಡಲಾಗಿದೆ. ಸರ್ವ ಸಾಧಾರಣವಾದ ಜೀವನ ಚಟುವಟಿಕೆಗಳನ್ನು ಈಗ ಅಲ್ಲಿನ ಹೆಚ್ಚಿನ ಶಾಲೆಗಳಲ್ಲಿ ವಿದ್ಯಾಭ್ಯಾಸದ ಮಾಧ್ಯಮವಾಗಿ ಬಳಸಲಾಗುತ್ತದೆ. ಆಗೊಂದು ಪ್ರಶ್ನೆ ಉದ್ಭವಿಸುತ್ತದೆ. ಚಟುವಟಿಕೆಯ ವಿದ್ಯಾಭ್ಯಾಸಕ್ಕೂ ಪುಸ್ತಕ ವಿದ್ಯಾಭ್ಯಾಸಕ್ಕೂ ಎಷ್ಟರ ಮಟ್ಟಿಗೆ ಸಂಬಂಧವನ್ನು ಕಲ್ಪಿಸಬಹುದು ಎಂಬುದೇ ಮಹತ್ವದ ವಿಚಾರವಾಗಿದೆ.

ನನ್ನ ಅಭಿಪ್ರಾಯದಲ್ಲಿ ಮಕ್ಕಳು ವಿದ್ಯಾವಂತರೂ ಸುಸಂಸ್ಕೃತರೂ ಆಗಿರುವ ಜನರ ಮಧ್ಯದಲ್ಲಿ, ಅವರ ಕುಟುಂಬದಲ್ಲಾಗಲಿ, ಅವರ ಹಳ್ಳಿಯಲ್ಲೇ ಆಗಲಿ ಬೆಳೆಯಬೇಕೆಂದಿದೆ. ಗುಣಶೀಲಿಗಳಾದ ಜನರು ಹೀಗೆ ಬೆಳೆಯುವ 'ಮಕ್ಕಳ ಸುತ್ತಮುತ್ತಲಿನಲ್ಲಿರಬೇಕು. ಶಾಲೆಯ ಕಟ್ಟುನಿಟ್ಟಿನ ಶಿಸ್ತಿನೊಳ್ಳಿ ವಾತಾವರಣಕ್ಕಿಂತ ಸುಸಂಸ್ಕೃತ ಜನರ ಜೀವನ ವ್ಯವಹಾರದ ಕ್ಷೇತ್ರವು ಮಕ್ಕಳ ಆರೋಗ್ಯಕರ ಬೆಳವಣಿಗೆಗೆ ಅತ್ಯುತ್ತಮವಾದುದು. ಆಚಾರ ವಿಚಾರಗಳಲ್ಲಿ ಪ್ರಗತಿ ಶೀಲ ಧೋರಣೆಯನ್ನು ವಹಿಸುವ ಜನರ ಮಧ್ಯದಲ್ಲಿ ಮಕ್ಕಳು ಪ್ರಾಚೀನ ಸಾಂಪ್ರದಾಯಗಳನ್ನೂ, ಆಚಾರ ವಿಚಾರಗಳನ್ನೂ ಮೂಢ ಶ್ರದ್ಧೆಯಿಂದ ಒಪ್ಪಿಕೊಂಡು ಅನುಸರಿಸಬೇಕಾದ ಆವಶ್ಯಕತೆಯಿಲ್ಲ. ಮಗುವಿನ ಸ್ವಾಭಾವಿಕವಾದ ಕುತೂಹಲದ ಪ್ರವೃತ್ತಿಗೆ ಅಲ್ಲಿ ಸತಃಕರ್ತನವೂ ವಿವೇಕವೂ ಆವ ತೃಪ್ತಿಯು ದೊರೆಯುತ್ತವೆ. ಅವಿಚಾರ ಪ್ರಣಾಳಿಯಿಂದ ಅದರ ತರ್ಕಶಕ್ತಿಯು ಕುಂಠಿತವಾಗುವುದಿಲ್ಲ. ಮಗುವಿಗೆ ಪ್ರಶ್ನೆ ಹಾಕುವುದೆ ದರೆ ತುಂಬಾ ಇಷ್ಟ. ಆಗ ಅದಕ್ಕೆ ತರ್ಕಬದ್ಧವಾದ ಉತ್ತರವು ಸಿಕ್ಕಿದರೆ ಅದರ ಸಹಜವಾದ ಬುದ್ಧಿಶಕ್ತಿಯು ಅಭಿವೃದ್ಧಿಗೊಳ್ಳಲು ಅನುಕೂಲವಾಗುತ್ತದೆ. ಅದರ ಒಳಗಿನ ರಹಸ್ಯವೂ ಅನುಭವ ವಿರೋಧವೂ ಆದ ಉತ್ತರಗಳಿಂದ ಆದರ ಕುತೂಹಲವು ತಾತ್ಕಾಲಿಕವಾಗಿ ತಣಿಸಲ್ಪಟ್ಟರೆ ಮಾತ್ರ ಆ ಮಗು ತನ್ನ ಸಂಪೂರ್ಣ ವಿಕಾಸತೆಗೆ ಮುಟ್ಟಲಾರದು. ಹೃತ್ಪೂರ್ವಕತೆ, ಪ್ರಾಮಾಣಿಕತೆಗಳಿಂದ ಮಗುವಿನ ಪ್ರಶ್ನೆಗಳಿಗೆ ವಿವೇಕಪೂರ್ಣವಾದ ಉತ್ತರಗಳು ದೊರೆಯುತ್ತವೆಂದಾದರೆ ಅಂಥಹ ಕುಟುಂಬದಲ್ಲಿ ಅದರ ಶಿಕ್ಷಣವು ಅತ್ಯಂತ ಪರಿಪೂರ್ಣತೆಯಿಂದ ಸಾಗುತ್ತದೆಂದಾಯಿತು. ಆ ಸಮಾಜದ ಪ್ರಾಚೀನ ಸಂಸ್ಕೃತಿಯಲ್ಲಿನ ಉತ್ತಮ ಅಂಶಗಳು ಮಗುವಿನ ಬುದ್ಧಿವಿಕಾಸದಲ್ಲಿ ಸೇರಿಕೊಂಡು ಆ ಸಂಸ್ಕೃತಿಯ ಕಟ್ಟ ಆಚಾರ ವಿಚಾರಗಳು ತೊಡೆದು ಹಾಕಿದಂತಾಗಿ ಆ ಸಂಸ್ಕೃತಿಯ ನಿಜವಾದ ಶೋಭೆಯು ಬೆಳಗಲು ಸಹಾಯವೂ ಆಗುವುದು. ಒಂದು ಆದರ್ಶ ಸಮಾಜದ ಆಚಾರ ವಿಚಾರಗಳು ಯಾವಾಗಲೂ ವಿವೇಕಪೂರ್ಣವಾದುವುಗಳೇ ಆಗಿರುತ್ತವೆ.

ಮಗುವೂ ಪುಸ್ತಕವೂ.

ಮೇಲೆ ಹೇಳಿದಂತಹ ಕುಟುಂಬದಲ್ಲಿ, ಹಳ್ಳಿಯಲ್ಲಿ ಇಲ್ಲವೆ ಸಮಾಜದಲ್ಲಿ ಪುಸ್ತಕಗಳಿಗೂ ಒಂದು ಸ್ಥಾನವಿದೆ. ಸಣ್ಣ ಮಕ್ಕಳಿಗಾಗಿ ಅಲ್ಲಿ ಚಿತ್ರಗಳ ಪುಸ್ತಕಗಳಿರುತ್ತವೆ. ಚಿತ್ರಗಳ ಜೊತೆಯಲ್ಲಿ ಅಕ್ಷರಗಳೂ ಇದ್ದರೆ ಅವುಗಳ ಪರಸ್ಪರ ಸಂಬಂಧೀಕರಣವು ವಿದ್ಯಾಭ್ಯಾಸಕ್ಕೆ ಸಹಕಾರಿಯಾಗುತ್ತದೆ. ಬೇರೆ ದೇಶಗಳ ಮಕ್ಕಳ ಕತೆಗಳಿಂದ ವಿಶ್ವದೃಷ್ಟಿಯು ವಿಕಸಿತವಾಗುತ್ತದೆ. ಹೊರಗಿನ ವೇಷಭೂಷ, ಬಣ್ಣ ಬೆಡಗುಗಳ ತಳದಲ್ಲಿ ನೋಡಿದರೆ ಎಲ್ಲಾ ದೇಶಗಳ ಮಕ್ಕಳು-ಅವರ ಆಶೆ ಹಾರೈಕೆಗಳಲ್ಲಿ, ಸುಖ ಸಂತೋಷಗಳಲ್ಲಿ-ಸ್ವಭಾವತಃ ಒಂದೇ ಆಗಿರುತ್ತಾರೆಂಬುದು ಸಾಮಾನ್ಯ ತಿಳುವಳಿಕೆಯಾಗಿದೆ. ಸುತ್ತಲಿನ ವಾತಾವರಣದ ಬೆ ಮಕ್ಕಳ ದೃಷ್ಟಿಕೋನವನ್ನು ಅರಳಿಸಲು ಪುಸ್ತಕಗಳು ತುಂಬಾ ಸಹಾಯ ಮಾಡುತ್ತವೆ.

ಒಂದು ವೇಳೆ ಸೇವಾಗ್ರಾಮದಂತಹ ಆದರ್ಶ ಸಮಾಜ ಜೀವನದ ವಾತಾವರಣದಲ್ಲಿ ಪುಸ್ತಕವಿಲ್ಲದೇ ಮಗುವಿನ ವಿದ್ಯಾಭ್ಯಾಸವು ಪರಿಪೂರ್ಣತೆ ಹೊಂದಲು ಶಕ್ಯವಿದೆ. ಅಲ್ಲಿ ಪುಸ್ತಕಗಳಿಲ್ಲದೆ, ಶಾಲಾ ವರ್ಗವಿಲ್ಲದೆ ಮತ್ತು ಸಂದರ್ಭೋಚಿತ ವಿಷಯ ಬೋಧನೆ ಕೊಡುವಿಕೆಯಿಂದ ಮಗುವಿನ ವ್ಯಕ್ತಿತ್ವ ವಿಕಾಸವಾಗಬಹುದು. ಆದರೆ ವಿದ್ಯಾಭ್ಯಾಸವು ಸಾಮೂಹಿಕ ಪ್ರಮಾಣದಲ್ಲಿ ಜರಗಬೇಕಾದಲ್ಲಿ ಈ ಮಾದರಿಯು ಅಸಾಧ್ಯವಾಗಬಹುದು. ಎಲ್ಲಾ ಕಡೆಗಳಲ್ಲಿ ಸೇವಾಗ್ರಾಮದಂತಹದೇ ವಾತಾವರಣವನ್ನೂ, ಸುಸಂಸ್ಕೃತ ವ್ಯಕ್ತಿಗಳನ್ನು ಕಲ್ಪಿಸಲು ಸಾಧ್ಯವಿಲ್ಲ.

ಯೋಜನಾ ಪದ್ಧತಿ

ಅಮೇರಿಕಾದಲ್ಲಿ ಈ ಒಂದು ಹೊಸ ವಿದ್ಯಾಭ್ಯಾಸ ಕ್ರಮವನ್ನು ಪ್ರಯೋಗಿಸಿ ನೋಡಲಾಗಿದೆ. ಬೆಳೆಯುವ ಮಗುವಿನ ಕುತೂಹಲ, ಚಟುವಟಿಕೆಗಳಿಗೆ ಯೋಗ್ಯವಾದ ಆಟಗಳನ್ನೂ, ಇತರ ಸೌಕರ್ಯಗಳನ್ನೂ ಕಲ್ಪಿಸಿಕೊಟ್ಟು ಅದು ಒಂದು ಉದ್ದೇಶಪಟ್ಟ ಚಟುವಟಿಕೆಯನ್ನು ಸಂಪೂರ್ಣಗೊಳಿಸಲು ಪ್ರೋತ್ಸಾಹಿಸಲ್ಪಡುತ್ತದೆ. ಆ ಕಾರ್ಯದಲ್ಲಿ ಮಗು ಪಡೆಯುವ ಅನುಭವವೇ ಅದರ ವಿದ್ಯಾಭ್ಯಾಸವಾಗುವುದು. ಇದಕ್ಕೆ 'ಪ್ರೊಜೆಕ್ಟ್ ಮೆಥಡ್' ಎನ್ನುತ್ತಾರೆ. ಆದರೆ ಇದು ಅತೀ ಹೆಚ್ಚಿನ ಖರ್ಚಿನದೂ, ಅತ್ಯಂತ ಶ್ರಮದಾಯಕವೂ ಎಂದು ತಿಳಿದಿದೆ. ಇದನ್ನು ಕೂಡ ಸಾಮೂಹಿಕ ಪ್ರಮಾಣದಲ್ಲಿ ಕೈಕೊಳ್ಳಲು ಕಷ್ಟಸಾಧ್ಯ.

ಹಳ್ಳಿ ಶಾಲೆಗಳ ಯೋಜನೆ

ಭಾರತದಲ್ಲಿನ ಅಪಾರ ಜನಸಂಖ್ಯೆಯನ್ನು ಶಿಕ್ಷಿತರನ್ನಾಗಿ ಮಾಡುವ ಕಾರ್ಯ ಭಾರವಿದೆ. ಅದೆಷ್ಟು ಶೀಘ್ರವಾದ ಅವಧಿಯಲ್ಲೂ ಅವರು ಶಿಕ್ಷಿತರಾದರೆ ಅತ್ಯನುಕೂಲ. ಕಾರಣ ಇತರ ಕಡೆಗಳಲ್ಲಿ ತುಂಬಾ ಮುಂದರಿದಿರುವ ಜಗತ್ತಿನೊಡನೆ ಇಲ್ಲಿಯವರೂ ಸಮಾನ ಸ್ಥಾನಮಾನಗಳನ್ನು, ಪ್ರಗತಿ, ಸಂಪತ್ಸಮೃದ್ಧಿಯನ್ನು ಗಳಿಸಬೇಕಾಗಿದೆ. ಮೇಲೆ ಹೇಳಿದ ಯೋಜನೆಗಳಲ್ಲವೂ ಅಪಾರ ಹಣವ್ಯಯವುಳ್ಳವು. ಈ ದೃಷ್ಟಿಯಿಂದ ನಾನು ಇಲ್ಲಿಯ ಹಳ್ಳಿ ವಿದ್ಯಾಭ್ಯಾಸದ ಒಂದು ರೂಪರೇಷೆಯನ್ನು ಹೀಗೆ ಕೊಡಬಯಸುತ್ತೇನೆ.

ಹಳ್ಳಿಯ ಮಕ್ಕಳನ್ನು ಎರಡು ಗುಂಪಾಗಿ ವಿಭಾಗಿಸಬೇಕು. ವಾರದ ಆರು ಶಾಲಾ ದಿನಗಳಲ್ಲಿ ಮೂರು ದಿನ ಒಂದು ಗುಂಪಿನವರು ಶಾಲೆಗೆ ಹಾಜರಾಗಬೇಕು. ಉಳಿದ ದಿನಗಳಲ್ಲಿ ಅವರು ಮನೆಗಳಲ್ಲಿರಬಹುದು. ಅಲ್ಲಿ ಅವರು ತಮ್ಮ ಹೆತ್ತವರಿಗೆ ಸಹಾಯ ಮಾಡುತ್ತ ಇಲ್ಲವೆ ಇಚ್ಛಿಸುವ ಬೇರೆ ಯಾವ ಚಟುವಟಿಕೆಗಳನ್ನಾಗಲಿ ಮಾಡುತ್ತ ಇರಬಹುದು.

ಮೂಲ ಶಿಕ್ಷಣದ ವಿಧಾನದ ಪ್ರಕಾರ ಎಷ್ಟು ಶಾಲಾ ದಿನಗಳಿರುವುವೋ ಅಷ್ಟು ದಿನ ಶಾಲೆ ಜರುಗಿಸಬಹುದು. ಮಕ್ಕಳಿಗೆ ಕೈಗಾರಿಕೆಗಳಿಂದ ಎಷ್ಟನ್ನು ಕಲಿಸಬೇಕು ಮತ್ತು ಪುಸ್ತಕಗಳಿಂದ ಎಷ್ಟು ಕಲಿಸಬೇಕೆಂಬುದರ ಕುರಿತು ಆಯಾ ಉಪಾಧ್ಯಾಯರ ಮತ್ತು ಅಲ್ಲಿನ ಸಮಾಜದ ನಿಷ್ಕರ್ಷೆಗೆ ಬಿಡಬೇಕು.

ಮಕ್ಕಳು ಅಲ್ಪ ಶಾಲಾ ಅವಧಿಯಲ್ಲಿ ದೀರ್ಘ ಶಾಲಾ ಅವಧಿಯ ಇಮ್ಮಡಿಯಷ್ಟು ಕಲಿಯುತ್ತವೆಂದು ಪ್ರತ್ಯಕ್ಷ ಅನುಭವದಿಂದ ತಿಳಿದು ಬಂದಿದೆ. ನಮ್ಮ ಮನಸ್ಸು ಇಂತ ಸಮಯಗಳಲ್ಲಿ ತಿರುಗಿಕೊಂಡಾಗ ಶಿಕ್ಷಣ ಕ್ರಿಯೆಯು ಸುವ್ಯವಸ್ಥೆಯಲ್ಲೆಂಬಂತೆ ನಮ್ಮಲ್ಲಿ ಅಭಿವೃದ್ಧಿಯಾಗುತ್ತದೆ. ಮಕ್ಕಳಿಗೂ ಹಾಗೇ. ಅವರು ವಾರದಲ್ಲಿ ಮೂರು ದಿನ ಶಾಲೆಗಳಿಗೆ ಹೋದರೆ ಅನೇಕ ಅನುಕೂಲತೆಗಳಿವೆ. ಅವರಿಗೆ ಶಾರೀರಿಕ ಬಂಧನದ ಶ್ರಮವು ಕಡಿಮೆಯಾಗುವುದು. ಅಮೇರಿಕದಲ್ಲಿನ ಮಕ್ಕಳ ವ್ಯಕ್ತಿತ್ವ ವಿಕಾಸಕ್ಕೆ ಮಹಾ ಅಭ್ಯಂತರವಾದೊಂದು ಸಂಗತಿ ಇದೇ ಆಗಿರುತ್ತದೆ. ಇದರಿಂದ ಮುಂದೆ ಜೀವನದಲ್ಲೂ ಅವ್ಯವಸ್ಥೆಗಳ ದುಷ್ಪರಿಣಾಮ ಪ್ರಾಪ್ತವಾಗುವುದು. ಮಕ್ಕಳಿಗೆ ತಮ್ಮ ಕುಟುಂಬದೊಡನೆ, ಸಮಾಜದವರೊಡನೆ ಬೆರೆಯಲು ಹೆಚ್ಚು ಅವಕಾಶ ಸಿಕ್ಕಿ ಅವರಿಗೆ ಅಪ್ರತ್ಯಕ್ಷವಾದ ಜೀವನ ಶಿಕ್ಷಣದ ಅನುಭವ ದೊರೆತಂತಾಗುವದು. ಒಂದು ನಿರ್ದಿಷ್ಟ ಅವಧಿಯಲ್ಲಿ ಭಾರತದ ಅತೀ ಹೆಚ್ಚಿನ ಮಕ್ಕಳ ವಿದ್ಯಾಭ್ಯಾಸವನ್ನು ಪೂರ್ಣ ಮಾಡಲು ಸಾಧ್ಯವಾಗುತ್ತದೆ. ಅಮೇರಿಕದಲ್ಲಿ ಮಕ್ಕಳು ಹೆತ್ತಾಗಿ ಮನೆ, ಸಮಾಜವನ್ನು ಬಿಟ್ಟೇ ವಿದ್ಯಾಭ್ಯಾಸ ಕಲಿಯುತ್ತಾರೆ. ಆದರಿಂದ ಅವರಲ್ಲಿ ಪ್ರಾಚೀನ ಕಲಾ ಸಂಸ್ಕೃತಿಗಳ ಪ್ರಾದುರ್ಭಾವವಿಲ್ಲದಂತಾಗಿದೆ. ಮಕ್ಕಳ ಶಿಕ್ಷಣದಲ್ಲಿ ನಾವು ಯಾವಾಗಲೂ ಸಾಂಸ್ಕೃತಿಕ ದೃಷ್ಟಿಯನ್ನು ಇಟ್ಟುಕೊಳ್ಳಲೇ ಬೇಕಾಗುವುದು.

ಸ್ವ. ಮಾ.

Cocrg Forest Department, Mercara, the 6th May, 1949.

Sale Notice.

712 teak poles and 30 teak round logs measuring 673 cft will be sold at the Range Office at Makut on Saturday the 21st May 1949 at [illegible] A M For further particulars apply to the Range Officer, Makut.

(Sd) **C. B. Chengappa,**
for Chief Forest Officer.

ಕೊಡಗು

ತಾ. ೧೩-೫-೧೯೪೯ನೇ ಶುಕ್ರವಾರ

ಆದರ್ಶ ನಿಯಮ.

ಹಿಂದೂದೇಶವು ಕೃಷಿಕರ ದೇಶವಾದರೂ ಇಲ್ಲಿಯ ಜನರಿಗೆ ಬೇಕಾದಷ್ಟು ಆಹಾರ ಪದಾರ್ಥಗಳು ಇಲ್ಲಿ ಬೆಳೆಯುತ್ತಿಲ್ಲ. ಆದ್ದರಿಂದ ಪ್ರತಿ ವರ್ಷದಿಂದ ಸರಕಾರವು ಬರ್ಮಾ, ಆಸ್ಟ್ರೇಲಿಯಾ ಮೊದಲಾದ ಹೊರದೇಶಗಳಿಂದ ಆಹಾರ ಪದಾರ್ಥಗಳಿಗಾಗಿ ಕೋಟಿಗಟ್ಟಲೆ ರೂಪಾಯಿಗಳನ್ನು ವೆಚ್ಚ ಮಾಡುತ್ತಿದೆ. ಹಿಂದೂದೇಶವು ಅತಿ ವಿಶಾಲವಾದ ದೇಶ. ಏಳು ಲಕ್ಷ ಗ್ರಾಮಗಳಿಂದ ಕೂಡಿದ ಈ ದೇಶದ ಜನರಲ್ಲಿ ನೂರಕ್ಕೆ ೮೫ರಷ್ಟು ಜನರು ಕೃಷಿವೃತ್ತಿಯನ್ನವಲಂಬಿಸಿದವರು. ಫಲವತ್ತಾದ ಭೂಮಿ ಇದೆ; ಆ ಭೂಮಿಯಲ್ಲಿ ದುಡಿಯಲು ಜನಸಂಖ್ಯೆ ಬೇಕಾದಷ್ಟಿದೆ. ಆದರೂ ಭಾರತೀಯರ ಹೊಟ್ಟೆಗೆ ಬೇಕಾದಷ್ಟು ಇಲ್ಲಿ ಬೆಳೆಯುತ್ತಿಲ್ಲವೆಂದರೆ ನಮ್ಮ ಕೃಷಿವಿಧಾನದಲ್ಲಿ ನ್ಯೂನತೆ ಇರಲೇ ಬೇಕು.

ಪ್ರಧಾನವಾಗಿ ನಾವು ಅನುಸರಿಸಿರುವ ವ್ಯವಸಾಯ ಕ್ರಮವು ಶಾಸ್ತ್ರೀಯವಾಗಿರದೆ ಕಷ್ಟತಮವಾದುದು. ಎಷ್ಟೇ ಕಷ್ಟಪಟ್ಟರೂ ದುಡಿಯುವವರ ದುಡಿಮೆಗೆ ಅನುಗುಣವಾದ ಫಲ ಬರುತ್ತಿಲ್ಲ. ಇದಕ್ಕೆ ಕಾರಣ ನಾವು ಉಪಯೋಗಿಸುವ ಋಷಿ ರಾಯರ ಕಾಲದ ಹತ್ಯಾರುಗಳು, ಅತ್ಯಲ್ಪ ಗೊಬ್ಬರ, ಪುಷ್ಟಿಕರವಲ್ಲದ ಬೀಜ ಮೊದಲಾದವಾಗಿವೆ. ಇದನ್ನು ಅಭಿವೃದ್ಧಿಗೊಳಿಸಲು ಇತ್ತೀಚೆಗೆ ಸರಕಾರವು ಯತ್ನಿಸುತ್ತಿದೆ. ಕೃಷಿಕರ ನಾಡಾದ ಹಿಂದೂದೇಶವು ಅನ್ನಕ್ಕಾಗಿ ಇತರ ರಾಷ್ಟ್ರಗಳ ಮುಂದೆ ಕೈಯೊಡ್ಡುವದು ನಾಚಿಕೆ ಕೇಡಿನ ಪ್ರಸಂಗ. ಆದ್ದರಿಂದ ಕೇಂದ್ರ ಸರಕಾರ ಈ ಪರಿಸ್ಥಿತಿಯನ್ನು ಹೋಗಲಾಡಿಸಲು ಒಂದು ಯೋಜನೆಯನ್ನು ತಯಾರಿಸಿ ೧೯೫೨ರೊಳಗೆ ಭರತ ಖಂಡವು ಆಹಾರದ ಪಟ್ಟಿಗೆ ಸ್ವಾವಲಂಬಿಯಾಗಬೇಕೆಂದು ನಿರ್ಧರಿಸಿದೆ. ಹೀಗೆ ಸ್ವಾವಲಂಬಿಯಾಗಲು ಕೇವಲ ಶಾಸ್ತ್ರೀಯ ರೀತಿಯ ವ್ಯವಸಾಯ ನಡೆದರೆ ಸಾಲದು. ವ್ಯವಸಾಯದ ಕ್ಷೇತ್ರವೂ ವಿಶಾಲವಾಗಬೇಕಾಗಿದೆ. ಏಕೆಂದರೆ ಹಿಂದೂದೇಶದಲ್ಲಿ ಇಂದು ವ್ಯವಸಾಯವಾಗುತ್ತಿರುವ ಪ್ರದೇಶವು ತಲಾ ಒಂದು ಎಕರೆಯಷ್ಟಿಲ್ಲ. ಇದು ಹೆಚ್ಚಬೇಕು. ಒಬ್ಬ ಕೃಷಿಕನು ಕೃಷಿಯಿಂದಲೇ ಯೋಗ್ಯ ಜೀವನ ನಡೆಸಬೇಕಾದರೆ, ಆತನ ಆರ್ಥಿಕ ಸ್ಥಿತಿಯು ಉತ್ತಮಗೊಳ್ಳಬೇಕಾದರೆ, ಕಡಿಮೆ ೧೦ ಎಕರೆಯ ವ್ಯವಸಾಯವು ಆತನಿಂದ ನಡೆಯಬೇಕು. ಇದರಿಂದ ಆತನು ತನ್ನ ಖರ್ಚನ್ನು ಸರಿಗಟ್ಟಿಗೊಂಡು ಯೋಗ್ಯ ಜೀವನ ನಡೆಸುವನು. ಎರಡು ಮೂರು ಎಕರೆಯ ವ್ಯವಸಾಯವನ್ನು ಎಷ್ಟೇ ಉತ್ತಮವಾಗಿ ನಡೆಸಿದರೂ ಅದರಿಂದಲೇ ಒಂದು ಕುಟುಂಬವನ್ನು ನಿರ್ವಹಿಸಿಕೊಂಡು ಹೋಗುವದು ಸಾಧ್ಯವಿಲ್ಲ. ಆದ್ದರಿಂದ "ವ್ಯವಸಾಯವು ಆಳವಾಗಿಯೂ ಅಗಲವಾಗಿಯೂ" ನಡೆಯಬೇಕು.

ಕೇಂದ್ರ ಸರಕಾರದ ಈ ಸ್ವಾವಲಂಬಿ ಯೋಜನೆಯಂತೆ ಪ್ರತಿ ಪ್ರಾಂತಗಳು ಕಾರ್ಯೋನ್ಮುಖವಾಗಿವೆ. ಈ ಬಗ್ಗೆ ಸಂಯುಕ್ತ ಪ್ರಾಂತವು ಸಾಧಿಸಿದ ಕಾರ್ಯವು ಪ್ರಶಂಸನೀಯವಾಗಿದೆ. ಆ ಸರಕಾರವು ಹೊಸದಾಗಿ ವ್ಯವಸಾಯಕ್ಕೆ ತಂದ ನೈನಿಟಾಲ್ ಮತ್ತಿತರ ಪ್ರದೇಶಗಳ ವಿಚಾರ ಹೀಗಿದೆ.

"ಈ ಪ್ರದೇಶಗಳು ಮಲೇರಿಯಾದ ತವರೂರಾಗಿದ್ದವು. ಇವನ್ನು ವ್ಯವಸಾಯ ಯೋಗ್ಯವಾಗಿ ಮಾಡುವ ಪ್ರಯತ್ನವು ೧೫ ತಿಂಗಳ ಹಿಂದೆ ಪ್ರಾರಂಭವಾಯಿತು. ನೈನಿಟಾಲ್ ತಾರಾಯಿಯ ಒಂದು ಲಕ್ಷ ಎಕರೆ ಪ್ರದೇಶದಲ್ಲಿ ೮೦,೦೦೦ ಎಕರೆಯೂ, ಮೀರತ್ ಗಂಗಾ ಖಾದರಿನ ೪೩,೦೦೦ ಎಕರೆಯಲ್ಲಿ ೨೧,೦೦೦ವೂ, ಗೋಗ್ರಾ ಖಾದರಿನ ೨೦,೦೦೦ ಎಕ್ರೆಯಲ್ಲಿ ೧೫೦೦೦ವೂ ವ್ಯವಸಾಯ ಯೋಗ್ಯವಾಗಿದೆಯಲ್ಲದೆ ಉಳಿದ ಪ್ರದೇಶಗಳನ್ನು ಹುಲ್ಲುಗಾವಲಿಗಾಗಿ ಮೀಸಲಾಗುವುದು" ೧೯೫೨—೫೩ರೊಳಗೆ ಎಂಟು ಲಕ್ಷ ಎಕರೆ ಸ್ಥಳವನ್ನು ವ್ಯವಸಾಯ ಯೋಗ್ಯವಾಗಿ ಮಾಡುವುದು ಅವರ ಯೋಜನೆಯಾಗಿದೆ. ಈ ಮಹಾ ಯೋಜನೆಗೆ ವರ್ಲ್ಡ್ ಬ್ಯಾಂಕ್ ಮತ್ತು ಕೇಂದ್ರ ಸರಕಾರದಿಂದ ಧನಸಹಾಯ ನಿರೀಕ್ಷಿಸುತ್ತಿರುವರು. ಈ ಧನಸಹಾಯ ಬರುವ ವರೆಗೆ ಸರಕಾರವು ತಟಸ್ಥ ಕುಳಿತಿಲ್ಲ. ನೈನಿಟಾಲ್, ಬುಂದೇಲ್ ಖಂಡ್ ಭಾಗದಲ್ಲಿ ೪೧,೨೦೦ ಎಕರೆಯ ಯೋಜನೆಯೊಂದನ್ನು ಕಾರ್ಯರೂಪಕ್ಕೆ ತಂದಿದ್ದಾರೆ. ಈ ಯೋಜನೆಯಿಂದ ಸರಕಾರಕ್ಕೆ ಹೆಚ್ಚಿನ ಲಾಭವಾಗಲಿದೆ. ಈ ಪ್ರದೇಶಗಳನ್ನು ವ್ಯವಸಾಯ ಯೋಗ್ಯವಾಗಿ ಮಾಡಲು, ಮಲೇರಿಯಾ ನಿರ್ಮೂಲ, ಸಿಬ್ಬಂದಿಗಳ ವೇತನವೆಂದು ಸುಮಾರು ೨೫ ಲಕ್ಷ ರೂಪಾಯಿ ೧೯೪೮ನೇ ಅಕ್ಟೋಬರ್ ಅಂತ್ಯದ ವರೆಗೆ ವೆಚ್ಚವಾಗಿದೆ. ಆದರೆ ಈ ಯೋಜನೆಯಿಂದ ಕ್ರಮಶಃ ಸರಕಾರವು ಹೆಚ್ಚಿನ ಲಾಭ ಪಡೆಯುವದರಲ್ಲಿ ಸಂಶಯವಿಲ್ಲ.

ಈ ಹೊಸ ವಸಾಹತಿನಲ್ಲಿ ೫೦೦೦ ನಿರಾಶ್ರಿತರು ೩೩ ನಿವೃತ್ತ ಸೈನಿಕ ಕುಟುಂಬಗಳೂ ಇರುವವು. ಇವರಿಗೆ ವಾಸಕ್ಕೆ ಮನೆ ಮಠಗಳನ್ನು ಸರಕಾರವೇ ನಿರ್ಮಿಸಿದೆ. ವ್ಯವಸಾಯ ಪ್ರದೇಶವನ್ನು ೧೦ ಎಕರೆಯ ಒಂದೊಂದು ತಾಕುಗಳಾಗಿ ವಿಂಗಡಿಸಿ ಸಹಕಾರ ತತ್ವದಂತೆ ವ್ಯವಸಾಯದ ಏರ್ಪಾಡು ನಡೆಸಲಾಗಿದೆ. ಈ ಹೊಸ ವಸಾಹತಿನಲ್ಲಿ ಶಾಲೆ, ಆಸ್ಪತ್ರೆ, ಟಪಾಲು ಆಫೀಸುಗಳು ತಲೆ ಎತ್ತಿವೆ. ಹೊಸದೊಂದು ಜನಾಂಗದ ರಚನೆ ಇಲ್ಲಿ ಆಗುತ್ತಿದೆ.

ಸಂಯುಕ್ತ ಸರಕಾರವು ಅನುಸರಿಸಿದ ಈ ಮಾರ್ಗವನ್ನು ಉಳಿದ ಎಲ್ಲಾ ಪ್ರಾಂತೀಕ ಸರಕಾರಗಳೂ ಅನುಸರಿಸಬಹುದು. ಕೊಡಗಿನ ಮಟ್ಟಿಗೆ ಹೇಳುವದಾದರೆ ಈ ಬಾಬಿನಲ್ಲಿ ವ್ಯವಸಾಯ ಇಲಾಖೆಯಾಗಲೀ, ಸರಕಾರವಾಗಲೀ ಮಾಡುತ್ತಿರುವದು ಅತ್ಯಲ್ಪ. ಕೊಡಗಿನಲ್ಲಿ ಆಗುತ್ತಿರುವ ವ್ಯವಸಾಯವನ್ನು ಅಭಿವೃದ್ಧಿಗೊಳಿಸಲು ಸಾಧ್ಯತೆ ಇನ್ನೂ ಇರುವದಲ್ಲದೆ ಹೆಚ್ಚಿನ ಪ್ರದೇಶವನ್ನು ವ್ಯವಸಾಯ ಯೋಗ್ಯವಾಗಿ ಮಾಡುವ ಅನುವೂ ಇದೆ. ಈ ಬಗ್ಗೆ ಸರಕಾರವು ಒಂದು ಪಂಚ ವಾರ್ಷಿಕ ಯೋಜನೆಯನ್ನು ತಯಾರಿಸಿ ಕೊಡಗಿನ ವ್ಯವಸಾಯ ಉತ್ಪತ್ತಿಯು ಈ ಅವಧಿಯಲ್ಲಿ ಇಮ್ಮಡಿಯಾಗುವಂತೆ ಪ್ರಯತ್ನಿಸಬೇಕು. ಫಲವತ್ತಾದ ಭೂಮಿ ಇಲ್ಲದೆ ಯೋಗ್ಯ ನೀರಿನ ಅವಕಾಶವಿಲ್ಲದೆ, ಹೊರಗಿನ ಅನೇಕ ಪ್ರಾಂತಗಳು ಪ್ರಯತ್ನಪಟ್ಟರೂ ಸಾಕಷ್ಟು ಬೆಳೆಸುವದು ಅಸಾಧ್ಯವಿರುವದು. ಕೊಡಗಿಗೆ ಈ ಎಲ್ಲಾ ಅನುಕೂಲತೆ ಇದೆ. ನೀರಾವರಿ ಯೋಜನೆಗಳನ್ನೂ ಹೆಚ್ಚಿಸಿಕೊಳ್ಳುವ ಸಾಧ್ಯತೆ ಇದೆ. ಇವುಗಳನ್ನು ಉಪಯೋಗಿಸಿ ಹೆಚ್ಚಿಗೆ ಬೆಳೆದು ನೆರೆಯವರ ನೆರವಿಗೆ ಬರುವದು ನಮ್ಮ ಕರ್ತವ್ಯವಿದೆ. ಸರಕಾರವು ಈ ಮಾರ್ಗದಲ್ಲಿ ಎಚ್ಚರಗೊಂಡು ಯೋಗ್ಯರೀತಿ ವರ್ತಿಸುವದೇ?

ವರ್ತಮಾನ.

ಮೈಸೂರು ವಿಶ್ವವಿದ್ಯಾಲಯದ ಕಳೆದ ಇಂಟರ್ ಮೀಡಿಯಟ್ ಪರೀಕ್ಷೆಯಲ್ಲಿ ಶ್ರೀ. ಮುಕ್ಕಾಟಿರ ಜೆ. ನಾಣಯ್ಯನವರು ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿರುವರು.

ಅಮ್ಮತ್ತಿನಾಡಿನ ಹೊಸಕೋಟೆ ಗ್ರಾಮದಲ್ಲಿ ಕಳೆದ ನಾಲ್ಕೈದು ತಿಂಗಳುಗಳಿಂದ ಒಂದು ಎತ್ತು ಬಂದಿದೆ. ಕಾಂತೂರು ಗ್ರಾಮದ ಶ್ರೀ. ಎ. ಕೆ. ಮಾದಪ್ಪನವರಲ್ಲಿ ಬೀಜವಡೆಯದ ಕೆಂಪು ವೈವರ್ಣದ ಆರು ಹಲ್ಲಿಗಬಹುದಾದ ಹೋರಿ ಒಂದು ಸೇರಿಕೊಂಡಿದೆ. ಕುಂಜಿಲಗೇರಿ ಗ್ರಾಮದ ಶ್ರೀ. ಚೊಟ್ಟೆರ ಬೋಳ್ಳಪ್ಪನವರಲ್ಲಿ ಒಂದು ಕೆಂಪು ವರ್ಣದ ಎತ್ತು ಎರಡು ತಿಂಗಳುಗಳಿಂದಿದೆ. ಹೆಬ್ಬಾಲೆ ಅರಸಪ್ಪನವರಲ್ಲಿ ಕರಿವರ್ಣದ ಎತ್ತೊಂದು ಸೇರಿಕೊಂಡಿದೆ. ಪರಾರಿಯಾಗಿ ಬಂದು ಸೇರಿರುವ ಈ ರಾಸುಗಳನ್ನು ಅವುಗಳ ಮಾಲೀಕರು ತಕ್ಕ ರುಜುವಾತಿನಿಂದ ಹೊಡಕೊಂಡು ಹೋಗಬೇಕಾಗಿ ಇವರು ತಿಳಿಸುತ್ತಾರೆ.

ಮುರಗೋಡು ಹೈಯರ್ ಎಲಿಮೆಂಟರಿ ಶಾಲೆಯ ಮಹಾಸಭೆಯು ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ. . ಬಿ. ಎಸ್. ಕುಶಾಲಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಹೊಸದಾಗಿ ಈ ಶಾಲೆಯನ್ನು ಏಳನೆ ತರಗತಿಯನ್ನು ತೆರೆಯಲಾಯಿತು.

ಸೋಮವಾರಪೇಟೆ ವೀರಶೈವ ಮಂಡಲಿಯವರು ಬಸವೇಶ್ವರ ಜಯಂತ್ಯುತ್ಸವವನ್ನು ಕಳೆದವಾರ ಶ್ರೀ ಬಿ. ಎಸ್. ಡಿ. ಸಿದ್ದಪ್ಪನವರ ಅಧ್ಯಕ್ಷತೆಯಲ್ಲಿ ನಡೆಸಿದರು. ಅನೇಕರ ಬೋಧಪ್ರದ ಭಾಷಣಗಳು ನಡೆದವು.

ಕೊಡಗು ಐರಿಯರ ವಿದ್ಯಾಭಿವೃದ್ಧಿ ಸಂಘದ ಐದನೇ ವಾರ್ಷಿಕ ಮಹಾಸಭೆಯು ಕುಂಜಿಲಗೇರಿ ಗ್ರಾಮದಲ್ಲಿ ಶ್ರೀ. ಮಂಡೈರಿರ ಚಂಗಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ವಿದ್ಯಾನಿಧಿಗಾಗಿ ಈ ಸಂಘದ ಅಧ್ಯಕ್ಷ ಶ್ರೀ ಐರಿ ಪೊನ್ನಪ್ಪನವರು ರೂ. ೧೦೦ ದಾನವಾಗಿ ಕೊಟ್ಟರೆಂದು ತಿಳಿಯಬರುತ್ತದೆ.

ಮದ್ರಾಸು ಹೈಕೋರ್ಟಿನ ಮುಂದೆ ಬರಬಹುದಾದ ಕ್ರಿಮಿನಲ್ ಕೇಸುಗಳ ಅಪೀಲುಗಳ ಕಾಲಕ್ಕೆ ಕೊಡಗು ಸರಕಾರದ ಪರ ವಾದಿಸಲು ಮದ್ರಾಸ್ ಸರಕಾರದ ಪಬ್ಲಿಕ್ ಪ್ರಾಸಿಕ್ಯೂಟರನ್ನು ಸರಕಾರಿ ಲಾಯರರಾಗಿ ನೇಮಿಸಲಾಗಿದೆ.

ಪ್ರತಿ ವರ್ಷದ ಆಗಸ್ಟ್ ೧೫ ನ್ನು ಮರ ನೆಡುವ ದಿನವಾಗಿ ಆಚರಿಸಬೇಕೆಂದೂ ಎಲ್ಲಾ ಸರಕಾರಿ ಉದ್ಯೋಗಸ್ಥರು ಇದರಲ್ಲಿ ಹೆಚ್ಚಿನ ಮುತುವರ್ಜಿಯಿಂದ ಭಾಗವಹಿಸಬೇಕೆಂದೂ ಆ ದಿನ ಕೊಡಗಿನ ಆದ್ಯಂತವೂ ಯುಕ್ತ ಸ್ಥಳಗಳಲ್ಲಿ ಗಿಡಗಳನ್ನು ನೆಟ್ಟು ಅವು ಸಾಯದಂತೆ ಸಾಕುವ ಏರ್ಪಾಡನ್ನು ಮಾಡಬೇಕಾಗಿದೆಯೆಂದೂ ಪ್ರಕಟಿಸಿದ್ದಾರೆ

ಈ ತಾ. ೧೪ ಮತ್ತು ೧೫ ರಲ್ಲಿ ಬೆಂಗಳೂರಿನಲ್ಲಿ ನಡೆಯಲಿರುವ ಅಖಿಲಭಾರತ ೮ನೇ ಸಹಕಾರಿ ಸಮ್ಮೇಳನಕ್ಕೆ ಕೊಡಗಿನ ಸಹಕಾರಿ ಸಂಘಗಳ ರಿಜಿಸ್ಟ್ರಾರ್ ಶ್ರೀ ಪಿ. ಎಂ. ಚಂಗಪ್ಪನವರು ಮತ್ತು ಪ್ರಾಂತೀಕ ಸಹಕಾರಿ ಬ್ಯಾಂಕಿನ ಪ್ರತಿನಿಧಿಯಾಗಿ ಶ್ರೀ ಪಿ. ಐ. ಬೆಳ್ಯಪ್ಪನವರು ತಾ. ೧೩ ರಲ್ಲಿ ಬೆಂಗಳೂರಿಗೆ ಹೋಗಿರುವರು.

ತಿದ್ದುಪಡಿ

ಕಳೆದ ವಾರ ಪ್ರಕಟವಾಗಿದ್ದ ಲೋವರ್ ಸೆಕೆಂಡರಿ ಪರೀಕ್ಷಾ ಫಲಿತಾಂಶ ಪಟ್ಟಿಯಲ್ಲಿ ಕೊಡ್ಲಿಪೇಟೆಯಲ್ಲಿ ಯಾರೂ ಪಾಸಾಗಲಿಲ್ಲವೆಂದು ತಪ್ಪಾಗಿ ಪ್ರಕಟವಾಗಿತ್ತು. ಪರೀಕ್ಷೆಗೆ ಕುಳಿತ ೧೬ ವಿದ್ಯಾರ್ಥಿಗಳಲ್ಲಿ ೫ ಜನರು ತೇರ್ಗಡೆಯಾಗಿರುವರು. ಮೇಲ್ಕಂಡ ತಪ್ಪಿಗೆ ವಿಷಾದಿಸುತ್ತೇವೆ. —ಸಂ.

ಸಾರ್ವಜನಿಕರಲ್ಲಿ.

ಈ ಕೆಳಗೆ ನಮೂದಿಸಿರುವ ಸಿಪಾಯಿಗೆ ಮಂಜೂರಾಗಿರುವ ಮಿಲಿಟರಿ ಪೆನ್ಶನ್ ಕೊಡಲು. ಆತನ ಈಗಿನ ಅಡ್ರೆಸ್ಸನ್ನು ಮಡಿಕೇರಿಯಲ್ಲಿರುವ ಸಿಪಾಯಿ ಬೋರ್ಡಿನ ಸೆಕ್ರೆಟರಿಯವರಿಗೆ ತಿಳಿದವರು ಸೂಚಿಸಬೇಕಾಗಿ ವಿನಂತಿ.

ಸಿಪಾಯಿಯ ಹೆಸರು, ನಂ. ೦/156410 ಪಿ. ಎಂ. ಕಾಳಪ್ಪ.
ತಂದೆಯ ಹೆಸರು, ಪಿ. ಕೆ. ಮಾದಪ್ಪ.
ತಾಯಿಯ ಹೆಸರು, ಪಿ. ಎಂ. ತಂಗಮ್ಮ.

ಗಾಂಧಿ ಸ್ಮಾರಕ ಪ್ರದರ್ಶನ

ಕೆಲಕಾಲದ ಹಿಂದೆ, ಡಿಲ್ಲಿಯ ರಾಜಘಾಟಿನಲ್ಲಿ ಜರುಗಿದ ಗಾಂಧಿ ಮಂಟಪ ಪ್ರದರ್ಶನದಂತೆ ಗಾಂಧೀ ಸ್ಮಾರಕ ಪ್ರದರ್ಶನವೊಂದು, ಅಕ್ಟೋಬರ ತಿಂಗಳಲ್ಲಿ ಮುಂಬಯಿಯಲ್ಲಿ ಜರಗುವುದೆಂದು ನಿರ್ಧಾರವಾಗಿದೆ. ಇದು ಗಾಂಧಿ ಸ್ಮಾರಕ ಸಂಘದವರ ನೇತೃತ್ವದಲ್ಲಿ ನಡೆಯುವುದು. ಪ್ರಧಾನ ಮಂತ್ರಿ ಪಂಡಿತ ಜವಾಹರಲಾಲ ನೆಹರುಗಳವರು ಈ ಪ್ರದರ್ಶನವನ್ನು ತೆರೆವರೆಂಬ ನಿರೀಕ್ಷೆಯಿದೆ. ಈ ಪ್ರದರ್ಶನದಲ್ಲಿ ಗಾಂಧೀಜಿಯವರ ಎಲ್ಲ ಗ್ರಂಥಗಳು ಸಾಹಿತ್ಯ ಭಾವ ಚಿತ್ರಗಳು, ಶಿಲ್ಪ, ಗಾಂಧಿಜಿಯವರ ಖಾಸಗಿ ವಸ್ತುಗಳು, ಗಾಂಧಿಜಿಯವರು ಬರೆದ ಅನೇಕ ಪತ್ರಗಳು ಪ್ರದರ್ಶಿಸಲ್ಪಡುವವು. ಮಹಾತ್ಮರು ಸೇವಾಗ್ರಾಮದಲ್ಲಿ ವಾಸಿಸಿದ್ದಾಗ ಇದ್ದ ಗುಡಿಸಲನ್ನೂ ರಚಿಸಲಾಗುವುದು. ಮುಂಬಯಿಗೆ ಬರುವವರೆಲ್ಲರೂ ಬಂದು ನೋಡಲನುಕೂಲವಾಗುವಂತೆ ಪ್ರದರ್ಶನವು ೧೮ ವಾರ ಜರಗುವುದು.

CRESCENT

FOR PROTECTION AND SERVICE.

It is best to represent and insure with The CRESCENT Insurance Co., Ltd,

H: O: BOMBAY. [*Established 1919.*

For particulars write to:

Sri B. A. Poovaiah — *Organiser*, *Pollibetta, Coorg.*

or

The Branch Manager, *22 B. Mahatma Gandhi Road, Bangalore 1.*

ಸುರಕ್ಷಿತವಾದ ಜೀವನಕ್ಕೆ ಸೇವೆಯು

ಕ್ರೆಸೆಂಟ್

ಇನ್ಸೂರೆನ್ಸ್ ಕಂಪೆನಿಗೆ ಬರೆಯಿರಿ.

ವಿಮೆ ಮಾಡಲು ಇಲ್ಲವೇ ಪ್ರತಿನಿಧಿಸಲು

ಕೊಟ್ಟಿಕಾರ್ ಬ್ರದರ್ಸ್, ಲಿಮಿಟೆಡ್.

ಇವರ ಸಲಹೆಗಿಂತ ಉತ್ತಮ ಮಾರ್ಗವಿಲ್ಲ.

ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದೂಸ್ಥಾನದ ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು.

ದಿ ಬೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

30 ಮೌಂಟ್ ರೋಡ್, ಪೋ. ಬಾ. ನಂ. 337, ಮದ್ರಾಸು 2.

ಬೋಂಬೆ ಲೈಫ್ ಬಿಲ್ಡಿಂಗ್, ಪೋ. ಬಾ. ನಂ. 1, ಉಡುಪಿ.

(ಟೆಲಿಫೋನ್ ನಂ. 8398)

ಇತರ ಆಫೀಸುಗಳು:— ಬೆಂಗಳೂರು, ತಿರುವೇಂದ್ರಂ, ಕಲ್ಲಿಕೋಟೆ, ಮಂಗಳೂರು, ಮಧುರೆ, ಮತ್ತು ಬೊಂಬಾಯಿ.

ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್, ಮಡಿಕೇರಿ.



ನಮ್ಮ ಸ್ಟೀಮ್ ಪವರ್ ಕಾರ್ಖಾನೆಯಲ್ಲಿ ಸದ್ಯಕ್ಕೆ ಈ ಕೆಳಗಿನ ಕೆಲಸಗಳನ್ನು ಕೈಕೊಂಡಿರುವೆವು. ಸರ್ವರೂ ಪ್ರೋತ್ಸಾಹಿಸಬೇಕಾಗಿ ವಿನಂತಿ. (1) ಭತ್ತ ಮಿಲ್ ಮಾಡುವುದು, (2) ಅಕ್ಕಿ ಮತ್ತು ಧಾನ್ಯಗಳನ್ನು ಹಿಟ್ಟುಮಾಡುವುದು. (3) ಕಾಫಿ ಹುರಿದು ಹುಡಿಮಾಡುವುದು, (4) ಮೂಳೆ ಪುಡಿಮಾಡುವುದು.

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿಸಲಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,65 000.
ಕ್ಷೇಮನಿಧಿ	ರೂ.	50.000

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ, ನಗಗಳ ಆಧಾರದ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ಕುಗಳೂ ಡ್ರಾಫ್ಟ್‌ಗಳೂ ಡಿಸ್ಕೌಂಟ್ ಮಾಡಲ್ಪಡುವವು. [illegible] ಮತ್ತು ನಾರ್ದನ್ ಇನ್ಸೂರೆನ್ಸ್ ಕಂಪೆನಿಯ ಪ್ರೀಮಿಯಂ ಹಣವನ್ನು ಕೊಂಡುಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು [illegible].

ಕೊಡಗಿನ ಚೀಫ್ ಕಮಿಷನರವರು.

ಪ್ರಕಟಣೆ.

ನಂ A 6 2876 48.

ಮಡಿಕೇರಿ, ತಾ 26ನೇ ಮಾರ್ಚ್ 1949.

ಸಾಮಾನುಗಳ ಮಹಿವಾಟುಗಳಿಗೆ ಒದಗಿರುವ ತೊಂದರೆಯಿಂದ ವ್ಯಾಪಾರಿ ಮತ್ತು ಕಂಪನಿಯವರು ಬಹಳ ಮಟ್ಟಿಗೆ ತೊಂದರೆ ತೆಗೆದುಕೊಂಡರೂ ಕೂಡ ಮಡಿಕೇರಿಯ ಸರಾಯಿ ಗಡಂಗದಲ್ಲಿ ಸರಾಯಿ ತುಂಬಲಿಕ್ಕೆ ಬೇಕಾಗುವ ಶೀಸೆಗಳೂ, ಸದರಿ ಶೀಸೆಗಳನ್ನು ತುಂಬಿ ಕಳುಹಿಸಲು ಪೆಟ್ಟಿಗೆಗಳೂ ಸಕಾಲಕ್ಕೆ ಒದಗಲಿಲ್ಲ. ಈ ಕಾರಣಗಳಿಂದಲೂ ಮತ್ತು ನಿವಾರಿಸಲಿಕ್ಕಾಗದ ಇತರ ತೊಂದರೆಗಳಿಂದಲೂ ಸರಾಯಿ ಲೈಸನ್ಸ್ ಕಾರ್ಡುಗಳನ್ನು ಪಡೆದವರಿಗೆ ಅರಗು ಮುದ್ರೆ ಮಾಡಿದ ಶೀಸೆಗಳಲ್ಲಿ ಸರಕಾರದ 10 ಡಿಪೋಗಳಲ್ಲಿ ಒದಗಿಸುವ ಏರ್ಪಾಡನ್ನು ಮೇ ತಿಂಗಳಲ್ಲಿ ಪ್ರಾರಂಭ ಮಾಡದೆ ಮುಂದಿನ ತಿಂಗಳಿಗೆ ಮುಂದುವರಿಸಬೇಕೆಂದು ನಿರ್ಧಾರ ಮಾಡಲಾಗಿದೆ. ಏಪ್ರಿಲ್ ತಿಂಗಳಿನಂತೆಯೇ ಮೇ ತಿಂಗಳಲ್ಲೂ ಹಂಗಾಮಿ ಪರ್ಮಿಟ್ ಹೊಂದಿದವರಿಗೆ ವ್ಯಾಪಾರಿಗಳ ಮತ್ತು ಕಂಪನಿಯವರ ನಾಲ್ಕು ಬಿಕ್ರಿ ಡಿಪೋಗಳಲ್ಲಿ ಸರಾಯಿ ಒದಗಿಸಲ್ಪಡುತ್ತೆ. ಸದರಿ ಡಿಪೋಗಳು ಮಡಿಕೇರಿ, ಸೋಮವಾರಪೇಟೆ, ವೀರರಾಜಪೇಟೆ ಮತ್ತು ಗೋಣಿಕೊಪ್ಪಲು ಈ ನಾಲ್ಕು ಸ್ಥಳಗಳಲ್ಲಿವೆ. ಏಪ್ರಿಲ್ ತಿಂಗಳಿಗಾಗಿ ಕೊಟ್ಟ ಹಂಗಾಮಿ ಪರ್ಮಿಟ್ಟುಗಳನ್ನು ಯಾರ್ಯಾರು ಸದರಿ ಡಿಪೋಗಳಿಗೆ ವಾಪಾಸು ಕೊಟ್ಟಿರುವರೋ ಅಂಥಾವರು ಸದರಿ ಡಿಪೋಗಳಿಗೆ ತಾವೇ ಖುದ್ದಾಗಿ ಹೋಗಿಯಾಗಲೀ ಅಥವಾ ತಮ್ಮಿಂದ ಅಧಿಕಾರ ಪತ್ರ ಹೊಂದಿದ ಗಾತರರನ್ನು ಕಳುಹಿಸಿಯಾಗಲೀ ತಮ್ಮ ತಮ್ಮ ಮೇ ತಿಂಗಳ ರೇಷನ್ನಿನ ಒಂದು ಕುಪ್ಪಿ ಸರಾಯಿಯನ್ನು ಪಡಕೊಳ್ಳಬಹುದು. ಏಪ್ರಿಲ್ ತಿಂಗಳ ರೇಷನನ್ನು ಪಡೆದುಕೊಳ್ಳಲು ಯಾರು ಪ್ರಯತ್ನಪಟ್ಟಿಲ್ಲವೋ ಅಂಥವರು ಅದೇ ಪರ್ಮಿಟ್ಟುಗಳನ್ನು ಉಪಯೋಗಿಸಿ ಮೇ ತಿಂಗಳ ರೇಷನನ್ನು ಪಡಕೊಳ್ಳಬಹುದು. ಈ ವಿಷಯಗಳಲ್ಲಿ ಡಿಪೋಗಳ ಮಾಲೀಕರಿಗೆ ತಕ್ಕ ಸೂಚನೆ ಕೊಡಲಾಗಿದೆ.

ಸಿ. ಟಿ. ಮೊದಲಿಯಾರ್,
ಚೀಫ್ ಕಮಿಷನರ್.

ಪ್ರಕಟಣೆ.

1946ನೇ ಇಸವಿಯಲ್ಲಿ ಕೊಡಗು ಕ್ಲಾತ್ ಮರ್ಚೆಂಟ್ಸ್ ಕಂಪನಿಯಿಂದ ಪಡಕೊಂಡ ಶೇರು ಸರ್ಟಿಫಿಕೇಟುಗಳು ಕಾಣೆಯಾಗಿದೆ. ಸಿಕ್ಕಿದವರು ಈ ನೋಟೀಸು ನೋಡಿದ ಒಂದು ವಾರದೊಳಗೆ ಈ ಕೆಳಗಿನ ವಿಳಾಸದಾರರಿಗೆ ತಲ್ಪಿಸಬೇಕಾಗಿ ವಿನಂತಿ.

ಬಿ. ಎಂ. ಸೋಮಯ್ಯ,
ಎಂ. ಎಂ. ಗಣಪತಿ,
ಶ್ರೀಮಂಗಲ.
ದ. ಕೊಡಗು.

ರಷ್ಯಕ್ಕೆ ಜರ್ಮನರ ಸಹಾಯ

ಯುದ್ಧವು ಸಂಭವಿಸಿದರೆ, ಜರ್ಮನರು ರಷ್ಯಕ್ಕೆ ನೆರವಾಗುವರು ಹೀಗೆಂಬುದಾಗಿ, ರಷ್ಯನ್-ಜರ್ಮನ್ ಕಮ್ಯೂನಿಸ್ಟ್ ಪಾರ್ಟಿಯ ಚೇರ್ಮನರಾದ ಒಟ್ಟೋ ಗ್ರೋಟ್‌ವೋಲ್‌ರವರು, ಬರ್ಲಿನ್ ನಗರ ಪೂರ್ವ ಪ್ರದೇಶದಲ್ಲಿನ ಕಮ್ಯೂನಿಸ್ಟ್ ಸಮ್ಮೇಲನದಲ್ಲಿ ಭಾಷಣ ಮಾಡುತ್ತಾ, ತಮ್ಮ ಭಾವನೆಯನ್ನು ಹೊರಗೆಡಹಿದರು. ಅತ್ತ ಫ್ರಾನ್ಸ್ ಮತ್ತು ಇಟೇಲಿಯನ್ ಕಮ್ಯೂನಿಸ್ಟರ ಸಹಾಯದ ಕುರಿತು (ಯುದ್ಧ ಸಂಭವದಲ್ಲಿ) ಮಾತಾಡಿದ್ದಾರೆ. ಅಂತೂ ಪ್ರತ್ಯಕ್ಷವಾಗಿಯೂ ಅಪ್ರತ್ಯಕ್ಷವಾಗಿಯೂ, ಮಾತುಗಳು ಯುದ್ಧದ ವಿಷಯವನ್ನೇ ಅವಲಂಬಿಸಿವೆ.

ನೆಹರು-ಚರ್ಚಿಲ್ ಭೇಟಿ.

ಲಂಡನಿನಲ್ಲಿ ಕಾಮನ್‌ವೆಲ್ತ್ ಪ್ರಧಾನರ ಸಮ್ಮೇಲನಕ್ಕೆ ಹೋದ ಪಂ. ನೆಹರೂರವರನ್ನು ಬ್ರಿಟನಿನ ಮಾಜಿ ಪ್ರಧಾನಿ ಮಿ. ವಿನ್‌ಸ್ಟನ್ ಚರ್ಚಿಲ್ರು ಕೆಂಟ್ ಪಾರ್ಕದಲ್ಲಿರುವ ತಮ್ಮ ಸ್ವಗೃಹದಲ್ಲಿ ಇತ್ತೀಚೆಗೆ ಉಪಹಾರ ಕೂಟಕ್ಕೆ ಆಮಂತ್ರಿಸಿದ್ದರು. ಚರ್ಚಿಲ್ ದಂಪತಿಗಳೊಡನೆ ಭೋಜನ ಸ್ವೀಕರಿಸುವ ಕಾಲಕ್ಕೆ ಪಂ. ನೆಹರೂರವರು ಏಶ್ಯ ಮತ್ತು ಆಫ್ರಿಕದಲ್ಲ ಸಮಾಜ ಪದ್ಧತಿಯ ಲೋಪದೋಷಗಳಿಗೆ ಕಾರಣಗಳೇನೆಂಬುದರ ಕುರಿತು ತಾನು ಕಟ್ಟಿಕೊಂಡ ಅಭಿಪ್ರಾಯವನ್ನು ವಿವರಿಸಿದರು.

Edited, Printed and Published by P. I. Belliappa at 'Kodagu' Press Mercara, for 'Kodagu' Ltd.

ಅಧಿಕಾರಕ್ಕಾಗಿ ಕಾಂಗ್ರೆಸಿನವರ ಲಾಲಸೆ.

ಸರ್ದಾರ್ ವಲ್ಲಭಭಾಯಿ ಪಟೇಲರ ಖಂಡನೆ

"ಸಂಸ್ಥಾನಗಳನ್ನು ರಾಜರುಗಳಿಂದ ಕಿತ್ತುಕೊಂಡು ಒಕ್ಕೂಟಗಳನ್ನು ನಿರ್ಮಿಸಿದುದು ಅಧಿಕಾರದಲ್ಲಿರುವ ಕಾಂಗ್ರೆಸಿಗರು ಕಿತ್ತಾಡಿಕೊಂಡು ಸಂಸ್ಥಾನಗಳನ್ನು ಹಾಳು ಮಾಡಲಿ ಎಂದಲ್ಲ ಇದು ಈ ರೀತಿಯೇ ನಡೆಯುವುದಾದಲ್ಲಿ ಎಲ್ಲಾ ಸಂಸ್ಥಾನಗಳನ್ನೂ ಕೇಂದ್ರದ ಆಡಳಿತಕ್ಕೆ ತೆಗೆದುಕೊಂಡು ಅಡ್ಮಿನಿಸ್ಟ್ರೇಟರುಗಳನ್ನು ನಿಯಮಿಸಲಾಗುವುದು" ಎಂದು ಭಾರತದ ಉಪಪ್ರಧಾನಿ ಸರ್ದಾರರು ಇಂದೂರಿನ ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತಾ ತಿಳಿಸಿದರು.

"ಮಧ್ಯಭಾರತ ಯೂನಿಯನನ್ನು ರಚಿಸಲು ನಾವು ಮೊದಲು ಪ್ರಯತ್ನಿಸಿದಾಗ ಇತರ ಸಂಸ್ಥಾನಗಳ ಯೂನಿಯನ್‌ಗಳಿಗೆಲ್ಲ ಇದು ಒಂದು ಮಾದರಿಯಾಗುವುದೆಂದು ನಾವು ಭಾವಿಸಿದೆವು ಆದರೆ ಅದು ನಮ್ಮ ಭ್ರಾಂತಿಯೆಂದು ಗೋಚರವಾಯಿತು. ಅನಂತರ ನಾವು ವಿಂಧ್ಯಪ್ರದೇಶ ಮತ್ತು ರಾಜಾಸ್ಥಾನ ಯೂನಿಯನ್‌ಗಳನ್ನು ಏರ್ಪಡಿಸಿದೆವು. ವಿಂಧ್ಯಪ್ರದೇಶದಲ್ಲಿ ಕಾಂಗ್ರೆಸ್ ಒಳಗುಂಪುಗಳಲ್ಲಿ ಸ್ಪರ್ಧೆ ಏರ್ಪಟ್ಟವು ಒಬ್ಬರ ಮೇಲೊಬ್ಬರು ಲಂಚರುಷುವತ್ತುಗಳ ಅಪವಾದನೆ ಮಾಡತೊಡಗಿದರು ರಾಜಾಸ್ಥಾನದಲ್ಲೂ ಇದೇ ರೀತಿ ಭಿನ್ನತೆಗಳಿವೆ.

"ನಾವು ರಾಜ ಮಹಾರಾಜರುಗಳನ್ನೆಲ್ಲ ಪದಚ್ಯುತರನ್ನಾಗಿ ಮಾಡಿದ್ದೇಕೆ? ನಾವು ಆಡಳಿತವನ್ನು ಚೆನ್ನಾಗಿ ನಡೆಸಿಕೊಂಡು ಹೋಗುವ ಆಶೆಯಿಂದಲ್ಲವೆ? ಹಾಗಿಲ್ಲದೆ ಸಂಸ್ಥಾನಗಳಲ್ಲಿಯ ಕಾಂಗ್ರೆಸ್ ಮಂತ್ರಿ ಮಂಡಲಗಳು ಆ ಕೆಲಸ ಮಾಡಲ ಸಮರ್ಥವಾದಲ್ಲಿ, ಪಕ್ಷ ಪ್ರತಿಪಕ್ಷ ವ್ಯಾಜ್ಯದಲ್ಲಿ ತೊಡಗಿದ್ದಲ್ಲಿ, ನಮಗೆ ಬೇರೆ ಮಾರ್ಗವೇ ಉಳಿಯುವುದಿಲ್ಲ. ಇದನ್ನೆಲ್ಲಾ ಕೇಂದ್ರದ ಆಡಳಿತಕ್ಕೇ ತೆಗೆದುಕೊಂಡು ಪ್ರತಿ ಸಂಸ್ಥಾನಕ್ಕೂ ಅಡ್ಮಿನಿಸ್ಟ್ರೇಟರುಗಳನ್ನು ನೇಮಿಸಬೇಕಾಗುವುದು.

ಮಂತ್ರಿ ಸ್ಥಾನಗಳಿಗಾಗಿ ಕಾಂಗ್ರೆಸಿನ ಹಂಬಲ

"ಕಾಂಗ್ರೆಸಿನಲ್ಲಿರುವಂತಹ ಅನೇಕರು ಸೇವೆಯ ಭಾವನೆಯನ್ನು ಬಿಟ್ಟು ಅಧಿಕಾರಲಾಲಸೆಯಿಂದಿದ್ದಾರೆ ಮೇಲಧಿಕಾರ ಸ್ಥಾನಕ್ಕೆ ಹೋಗುವುದಕ್ಕೆ ಈ ಕಾಂಗ್ರೆಸ್ ಸ್ಥಾನಗಳು ತಮಗೆ ಒಂದು ಅವಕಾಶವೆಂದವರು ಭಾವಿಸುತ್ತಿದ್ದಾರೆ. ಜೇನು ನೊಣವು ಒಂದು ತೊಟ್ಟು ಜೇನಿಗಾಗಿ ಓಡಾಡುತ್ತಿರುವಂತೆ ಈ ಜನರು ಮಂತ್ರಿಸ್ಥಾನ ಪಡೆಯಲು ಹಂಬಲಿಸುತ್ತಿರುವರು ಮಹಾತ್ಮಾ ಗಾಂಧಿಯವರ ಅಭಿಮತದಂತಹ ಕಾಂಗ್ರೆಸ್ ಇದಲ್ಲ. ಸರ್ಕಾರ ಬಿಟ್ಟು ಬೇರೆ ಕಡೆಗಳಲ್ಲಿ ಸೇವೆ ಸಲ್ಲಿಸಲು ಕಾಂಗ್ರೆಸ್ ಜನರಿಗೆ ಯಥೇಚ್ಛವಾದ ಅವಕಾಶವಿದೆ.

ಗಾಂಧೀಜಿ ಎಂದೂ ಮಂತ್ರಿಯಾಗಿರಲಿಲ್ಲ

ಗಾಂಧೀಜಿಯವರು ಯಾವಾಗಲೂ ಮಂತ್ರಿಯಾಗಿರಲಿಲ್ಲ. ಆದರೂ ಅವರು ಭಾರತದಲ್ಲೆಲ್ಲಾ ಅತ್ಯಂತ ಬಲಯುತರಾಗಿದ್ದರು. ನಾನು ಕೂಡ ಮಂತ್ರಿಸ್ಥಾನ ಬಿಟ್ಟು ಹೊರಬರಲು ಉತ್ಸುಕನಾಗಿದ್ದೇನೆ. ಹೊರಗಡೆ ನಾನು ಹೆಚ್ಚು ಕೆಲಸ ಮಾಡಬಲ್ಲೆನೆಂದು ನನಗೆ ವಿಶ್ವಾಸವಿದೆ. ಆದರೆ ನನ್ನನ್ನು ಅವರು ಮಂತ್ರಿಸ್ಥಾನ ಬಿಟ್ಟು ಹೋಗಲು ಅವಕಾಶ ಕೊಡುವುದಿಲ್ಲ ನಾನು ಮಂತ್ರಿತ್ವವನ್ನು ಬಿಟ್ಟು ಬಂದು ಕಾಂಗ್ರೆಸನ್ನು ವ್ಯವಸ್ಥೆ ಮಾಡಿದಾಗ ಆಗ ಕಾಂಗ್ರೆಸ್ಸು ಅಧಿಕಾರ ಹಂಚುವ ಸಂಸ್ಥೆಯಾಗಿರುವುದಿಲ್ಲ

ಪೌರಸಭೆಯ ಕರ್ತವ್ಯವೇನು?

ಮಹಾತ್ಮಾ ಗಾಂಧಿಯವರು ಹೋದ ಮೇಲೆ ಜನರು ಅವರ ಉಪದೇಶಗಳನ್ನೆಲ್ಲಾ ಮರೆತಂತಿದೆ. ತಾವು ಕೈಹಾಕುವುದು ಅಯುಕ್ತವಾದಂತಹ ವಿಷಯಗಳಿಗೆಲ್ಲಾ ಕೆಲವರು ಕೈ ಹಾಕುವಂತೆ ಕಾಣುವುದು ಇಂದೂರಿನ ಪೌರಸಭೆಯನ್ನೇ ತೆಗೆದುಕೊಳ್ಳಿ. ಪೌರಸಭೆಯ ಕೆಲಸವೆಂದರೆ ನಗರವನ್ನು ಶುಚಿಯಾಗಿಡುವುದು, ಜನರ ಆರೋಗ್ಯ ಕಾಪಾಡುವುದು ಮತ್ತು ಅವರಿಗೆ ಸೌಲಭ್ಯಗಳನ್ನೊದಗಿಸಿ ಕೊಡುವುದು. ಆದರೆ ಆ ಕೆಲಸ ಮಾಡುವುದನ್ನು ಬಿಟ್ಟು ಅವರು ಪೌರ ಮಾನ ಪತ್ರಗಳನ್ನರ್ಪಿಸುವುದರಲ್ಲಿಯೇ ಹೆಚ್ಚಿನ ಆಸಕ್ತಿ ತೋರಿಸುತ್ತಿದ್ದಾರೆ ಪೌರಸಭೆಯು ತನ್ನ ಕೆಲಸವನ್ನು ಚೆನ್ನಾಗಿ ಮಾಡಿಕೊಂಡು ಬಂದು ನಗರದ ಸ್ಥಿತಿಯು ಸುಖಕರವಾಗಿದ್ದರೆ ಅದೇ ನನಗೆ ಪೌರ ಬಿನ್ನವತ್ತಳೆಯನ್ನರ್ಪಿಸಿದಂತೆ ನಾನು ಭಾವಿಸುವೆನು. (ಆಚೆಗೆ ಇಂದೂರು ಪೌರಸಭೆಯ ಬಿನ್ನವತ್ತಳೆಯನ್ನು ಸ್ವೀಕರಿಸಲು ಸರ್ದಾರರು ನಿರಾಕರಿಸಿದ್ದರು) ನಾವು ಸ್ವಾತಂತ್ರ್ಯ ಸಾಧಿಸಿದ್ದೇ ಸಾಲದು. ಆ ಸ್ವಾತಂತ್ರ್ಯದ ಮೂಲಕ, ಗಾಂಧೀಜಿಯವರ ಆಶೆಯಾದ ರಾಮರಾಜ್ಯವನ್ನು ಸ್ಥಾಪಿಸಬೇಕು ಮೇಲಿನ ಕೆಲವರನ್ನು ಬಿಟ್ಟರೆ ಸ್ವಾತಂತ್ರ್ಯದ ಬೆಳಕು ಮತ್ತಾರಿಗೂ ತಲುಪಿಲ್ಲ"

ಎಂಪೈರ್ ಆಫ್ ಇಂಡಿಯಾ
ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.
ಸ್ಥಾಪನೆ,—1897

48ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು.	ಒಟ್ಟು ಆದಾಯ	1,07,09,000	ಮಿಗಿಲು
	ಚಾಲ್ತಿಯಿರುವ ವಿಮೆ	17,74,52,000	,,
	ಆಸ್ತಿ	6,67,60,000	,,
ಕಂಪೆನಿಯ ಆದಿಯಲ್ಲಿ ಕೊಟ್ಟ ಕ್ಲೈಮುಗಳು	....	8,83,62,000	,,

ಅಂಗ ಕಛೇರಿ: ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು. — ಏಜೆನ್ಸಿ ಅರ್ಜಿಗಳನ್ನು ಸ್ವಾಗತಿಸಿದೆ. — ಪ್ರಧಾನ ಕಛೇರಿ: ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ

ದಿ ಟ್ರಾಪಿಕಲ್
ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.
ಮೇನೇಜಿಂಗ್ ಡೈರೆಕ್ಟರ್:— ಲಾಲ ಶಂಕರ್ ಲಾಲ್
ಮುಖ್ಯ ಕಚೇರಿ:— ಹೊಸ ಡೆಲ್ಲಿ.
ಸ್ಥಾಪಿಸಿದ ಡೈರೆಕ್ಟರರು:
ಪಂಡಿತ ಮೋತಿಲಾಲ್ ನೆಹರು. ಎಸ್ ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮುಲಖಾನ್. ಡಾ|| ಎಂ. ಎ. ಅನ್ಸಾರಿ.

(1) ದೇಶದಲ್ಲಿ ಪ್ರಮುಖ ದೇಶ ಭಕ್ತರಿಂದ ಸ್ಥಾಪಿಸಲ್ಪಟ್ಟಿದೆ
(2) ಸ್ವತಂತ್ರ ಭಾರತದಲ್ಲಿ ಆರ್ಥಿಕ ನೆಲಗಟ್ಟನ್ನು ಭದ್ರವಾಗಿರಿಸುವುದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯವಾಗಿದೆ.
(3) ಕಳೆದ 22 ವರ್ಷಗಳ ಹಿರಿದಾದ ಅನುಭವವುಳ್ಳ ನಾವು ನಿಮ್ಮ ಜೀವವಿಮಾ ಸಂಬಂಧದ ಯಾವದೇ ಸೇವೆಸಲ್ಲಿಸಲು ಸಂತೋಷಪಡುತ್ತೇವೆ.
(4) ಜೀವವಿಮಾ, ಬೆಂಕಿ, ಮರಾಯಿನ್ ಮತ್ತು ಅಪಘಾತ ಇವೆಲ್ಲ ಕಾರ್ಯಗಳನ್ನು ಮಾಡುತ್ತಿದೆ
(5) ಪ್ರಾರಂಭದಿಂದ ವಿಮಾದಾರರಿಗೆ ಬೋನಸ್ಸು ಕೊಡುತ್ತಿದೆ
(6) ಯೋಗ್ಯ ಏಜೆಂಟು ಮತ್ತು ಆರ್ಗನೈಜರುಗಳಿಗೆ ತಮ್ಮ ಉದ್ಯೋಗದಲ್ಲಿ ಶಿಖರವನ್ನು ಮುಟ್ಟಲು ಒಳ್ಳೆ ಸಂದರ್ಭವನ್ನು ಒದಗಿಸಿಕೊಟ್ಟು ಎಲ್ಲಾ ಕಾಲದಲ್ಲಿಯೂ ದಯಾಳುತನದಿಂದ ಮತ್ತು ಯೋಗ್ಯವಾದ ರೀತಿಯಲ್ಲಿ ಅವರನ್ನು ನಡಿಸಿಕೊಳ್ಳಲಾಗುತ್ತದೆ.

ನಮ್ಮ ಹೊಸ ವಿಸ್ತಾರದ ಯೋಜನೆಯಲ್ಲಿ ಆಕರ್ಷಕ ಕಮಿಷನ್ ಮೇಲೆ ಆರ್ಗನೈಜರರನ್ನು ನಿಯಮಿಸಿಕೊಳ್ಳತಕ್ಕದಿದೆ. ದಯವಿಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಏಜೆನ್ಸಿ ಸುಪರಿಂಟೆಂಡೆಂಟ್, ಮಡಿಕೇರಿ, ಕೊಡಗು. ಅಥವಾ ಎಂ. ಎ. ಬೆಳ್ಯಪ್ಪ, ಬ್ರಾಂಚ್ ಸೆಕ್ರೆಟರಿ, ದಿ ಟ್ರಾಪಿಕಲ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್; ಹಂಪನಕಟ್ಟಾ, ಮಂಗಳೂರು

ಪತ್ರಿಕಾ ಸಂಪಾದಕರ ಸಮ್ಮೇಳನ

ಬೆಂಗಳೂರಿನಲ್ಲಿ ಮೇ ೧೬ ರಲ್ಲಿ ಆರಂಭವಾಗುವ ಅಖಿಲಭಾರತ ವೃತ್ತಪತ್ರಿಕಾ ಸಂಪಾದಕರುಗಳ ಸಮ್ಮೇಳನದ ಆರಂಭೋತ್ಸವವನ್ನು ಗವರ್ನರ್ ಜನರಲ್ ಶ್ರೀ ಸಿ ರಾಜಗೋಪಾಲ ಚಾರಿಯವರು ನೆರವೇರಿಸಲೊಪ್ಪಿದ್ದಾರೆ ಎಂದು ಶ್ರೀ ಸಿ ಆರ್ ಶ್ರೀನಿವಾಸನ್‌ರವರು ಪ್ರಕಟಿಸಿದ್ದಾರೆ.

ಕಾಫಿ ತೋಟಕ್ಕೆ ರೈಟರು ಬೇಕಾಗಿದೆ.

ಕಾಫಿ, ಭೂಮಿ, ಕಿತ್ತಳೆ ವ್ಯವಸಾಯ ಅನುಭವ ಇರುವ ಮತ್ತು ಲೆಕ್ಕ ಇಡಲು ತಿಳಿದಿರುವ ಒಬ್ಬ ರೈಟರು ಬೇಕಾಗಿದೆ ಇಚ್ಛಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆದು ಯಾ ಖುದ್ದಾಗಿ ಬಂದು ತಿಳಿಯಬಹುದು.

ಮೆನೇಜರ್,
ಬೆನ್ನ್‌ಹೋಂ ಎಸ್ಟೇಟ್,
ಕುಟ್ಟ

ಬಹುಮಾನ.

ಕೋಟಕಾಡು ತೋಟದ ಈ ಕೆಳಗಿನ ಚಹರೆಯ ಹಸುವೊಂದು ಕಳೆದ ಮೂರು ವಾರಗಳಿಂದ ಪರಾರಿಯಾಗಿದೆ. ಅದನ್ನು ಪತ್ತೆ ಮಾಡಿ ಈ ಕೆಳಗಿನ ಅಡ್ರೆಸ್ಸಿಗೆ ತಿಳಿಸಿದವರಿಗೆ ರೂ. ೫ - ಬಹುಮಾನ ಕೊಡಲಾಗುವದು

ಚಹರೆ:— ಕೆಂಪು ವರ್ಣ, ಸುಮಾರು ೪ ಅಡಿ ಎತ್ತರ, ೪ರಿಂದ ೬ ಇಂಚುಗಳು ಉದ್ದದ ನೆಟ್ಟಗಿರುವ ಕೋಡುಗಳು

ಸುಪರಿಂಟೆಂಡೆಂಟ್,
ಕೋಟೆಕಾಡು ತೋಟ,
ಪಂಟಿಕೊಪ್ಪ.

NOTICE.

Mercara,
6th May 1949

Applications are invited from passed S. S. L. C candidates, and graduates who are good in games to undergo training at the Y. M. C. A College of physical Education, Madras to be appointed as physical training instructors and physical Director. Applications should reach this office not later than the 25th May 49 stating age and qualifications. Teachers in service may also apply.

Applications are also invited from graduates who know Kanrada for temporary posts in Government High Schools in Coorg. Applications should reach this office not later than the 25th May, 1949.

B S Kushalapa,
District Educational Officer,
Coorg

ಈ ವಾರದ ಕಥೆ.

ಆದರ್ಶ ಸತಿಪತಿ.

ಲೇ:—"ರಾಜ."

ಒಗೆಯಲು ಹಾಕಿದ್ದ ಬಟ್ಟೆಯು ಮೇಲೆ ಹಂಪಿನ ನೀರು ಧಾರೆ ಕಾರವಾಗಿ ಬೀಳುತಿತ್ತು. ಬಟ್ಟೆ ಒಗೆಯಲು ಬಂದಿದ್ದ ರಾಣಿಯು ಹತ್ತಿರದ ಕಲ್ಲಿನ ಮೇಲೆ ಕುಳಿತು ಏನನ್ನೋ ಆಲೋಚಿಸುತ್ತಿದ್ದಳು! ಹಂಪಿನ ನೀರಿನ ಪ್ರವಾಹದಂತೆ ಆಕೆಯ ಯೋಚನಾ ಪ್ರವಾಹವು ತಡೆ ಇಲ್ಲದೆ ಸಾಗಿತ್ತು. ಆಕೆಯ ಕಣ್ಣುಗಳಲ್ಲಿ ಕಂಬನಿ ತುಂಬಿತ್ತು. ಎಂದಿನ ಆನಂದದ ಗೆಲುವಿನಲ್ಲಿರಲಿಲ್ಲ. ಕಣ್ಣೀರು ಸುರಿದು ಎರಡು ಕಪೋಲಗಳ ಮೇಲೂ ಎರಡು ಗೆರೆಗಳನ್ನು ಚಿತ್ರಿಸಿದ್ದವು. ತಲೆಯ ಕೂದಲೂ ಉಟ್ಟ ಬಟ್ಟೆಯೂ ಅನಾಸಕ್ತಿಯ ಕುರುಹುಗಳಂತಿದ್ದವು. ರಾಣಿಯು ಎದ್ದಳು. ತನ್ನ ಕೋಣೆಗೆ ಹೋದಳು. ಬಾಗಿಲು ಹಾಕಿಕೊಂಡಳು. ತನ್ನ ಪೆಟ್ಟಿಗೆಯೊಳಗೆ ಅಮೂಲ್ಯ ರತ್ನಗಳಂತೆ ಇರಿಸಿದ್ದ ಕೆಲವು ಪತ್ರಗಳನ್ನು ಹೊರತೆಗೆದಳು. ಅವುಗಳನ್ನು ಒಂದೊಂದಾಗಿ ಓದತೊಡಗಿದಳು. ಅವುಗಳಿಗೆ ತಾನು ಬರೆದ ಉತ್ತರದ ಪ್ರತಿಗಳನ್ನೂ ಓದತೊಡಗಿದಳು. ಆ ಪತ್ರವಿದು.

ರಾಣಿ,

ದಿನಕಳೆದಂತೆ ನೀನು ನನ್ನ ಹೃದಯದಲ್ಲಿ ಹೆಚ್ಚು ಹೆಚ್ಚು ಸ್ಥಳವನ್ನಾಕ್ರಮಿಸತೊಡಗಿರುವೆ. ಎಷ್ಟೇ ನಾನು ಪ್ರಯತ್ನಿಸಿದರೂ ನಿನ್ನ ಬಗೆಗೆ ನನ್ನಲ್ಲಿ ಏರಿ ಬರುತ್ತಿರುವ ಒಲವನ್ನು ಹಿಡಿತದಲ್ಲಿಡುವುದು ಸಾಧ್ಯವಾಗಿಲ್ಲ. ಆದಕಾರಣವೇ ನನ್ನ ಮನಸ್ಸಿನ ಕಾತುರತೆಯನ್ನು ಈ ನಿಸ್ಸಾರ ಪತ್ರದ ಮೂಲಕ ವ್ಯಕ್ತಪಡಿಸುವುದಾಗಿದೆ. ಹೆಂಗಸರ ಬಗೆಗೆ ಮರುಳಾಗುವ ಸ್ವಭಾವವು ನನ್ನದಲ್ಲ. ಹೆಂಗಸರ ವಿರೋಧಿಯೆಂದೇ ನನ್ನ ನೆರೆಯವರು ನನ್ನನ್ನು ಹೇಳುತ್ತಾರೆ. ಆದರೆ ನೀನು ಆ ದೃಢವಾದ ಪರಿವರ್ತನೆಯನ್ನು ನನ್ನಲ್ಲಿ ತಂದಿರುವೆ. ನಿನ್ನ ಬಗೆಗೆ ನನ್ನಲ್ಲಿ ಈ ನಿರ್ಬಲತೆ ಏಕೆ?

ಒಂದು ದೃಷ್ಟಿಯಿಂದ ನೀನು ನಿಷ್ಠುರಿಯೂ ಹೌದು. ಯೋಚಿಸು! ಮೊದಲು ಪುಸ್ತಕಗಳೇ ನನ್ನ ಸರ್ವಸ್ವವಾಗಿದ್ದವು. ಅವುಗಳ ಸ್ನೇಹದಲ್ಲಿ ಅನುಪಮ ಆನಂದವನ್ನು ಪಡೆಯುತ್ತಿದ್ದೆನು. ಆದರೆ ಈಗ ಅವು ಅಷ್ಟು ರುಚಿಸುವುದಿಲ್ಲ. ಅದೇ ಅಲ್ಲ; ನನ್ನ ಹಸಿವೆ ನಿದ್ರೆಗಳೂ ನಿನ್ನಿಂದಾಗಿ ಅಸ್ತವ್ಯಸ್ತವಾಗಿವೆ. ನನ್ನ ಹೃದಯವನ್ನು ನೀನು ಅಪಹರಿಸಿದೆ. ಅದರೊಂದಿಗೆ ಇವುಗಳನ್ನೂ ಅಪಹರಿಸಬೇಕೆ?

—ರಾಜ.

ರಾಜ,

ನಿನ್ನ ಉದಾರತೆಯು ಕಾರಣವೇ ನಾನು ನಿನ್ನ ಹೃದಯದಲ್ಲಿ ಸ್ಥಳ ಪಡೆದೆನಲ್ಲದೆ ನನ್ನ ಪ್ರಯತ್ನವೇನಿದೆ? ನಿನ್ನ ಪ್ರೀತಿ ಸೌಜನ್ಯಗಳು ನನ್ನನ್ನು ಅಂಗೀಕರಿಸಿದವು. ಆದರೆ ...... ನನ್ನ ಮಾತಾಪಿತರೇ ನನಗೆ ವಿರೋಧಿಗಳಾಗುವ ಭಯವಿದೆ. ಸಮಾಜದ ದೃಷ್ಟಿಯಿಂದ ಅವರು ಸುಧಾರಕರು, ಸರಳ ಜೀವಿಗಳೆನಿಸಿಕೊಂಡರೂ ತಮ್ಮ ಮಗಳ ವಿಚಾರ ಬಂದಾಗ ಆ ಹಿರಿ ಹೇಳಿದ ತತ್ವವನ್ನು ಅವರು ಪಾಲಿಸುವರೆಂಬ ಭರವಸೆ ನನಗಿಲ್ಲ. ದುಡ್ಡಿನ ಮೋಹ, ಮನೆತನದ ಹುಚ್ಚು, ಪ್ರತಿಷ್ಟೆಯ ಆಶೆ ಇನ್ನೂ ಅವರನ್ನು ಬಿಟ್ಟಿಲ್ಲ. ಆ ಸಮಯ ಬಂದಾಗ ತಿಳಿಯುತ್ತದೆ.

ನಿನ್ನ ದೃಷ್ಟಿಯಿಂದ ನೋಡುವದಾದರೆ ನೀನೂ ನಿಷ್ಠುರಿ ಅಲ್ಲವೇನು? ನನ್ನ ತಂದೆ ತಾಯಿ, ಸಹೋದರಿ ಸಹೋದರರನ್ನು ಕೂಡ ದೂರ ಮಾಡಿರುವೆ! ನನ್ನ ಪ್ರಾಣದ ಗೆಳತಿಯನ್ನೂ ಹಿಂದಿನಂತೆ ಪ್ರೀತಿಸಲಾರೆ. ಇದಕ್ಕೆ ಯಾರು ಕಾರಣರು? ನಿನಗೆ ಪತ್ರ ಬರೆಯುವಾಗ ಏನೇನೋ ಬರೆಯಬೇಕೆಂದು ಕುಳಿತರೂ ಮನಸ್ಸಿನ ಆ ಉದ್ವೇಗದಿಂದ ಏನೂ ಬರೆಯಲಾಗುವುದೇ ಇಲ್ಲ. ಪತ್ರ ಬರೆಯುವಾಗ ನನ್ನನ್ನು ನೋಡಬೇಕು! ನೀನೇ ಪ್ರತ್ಯಕ್ಷವಿದ್ದು ನಿನ್ನೊಡನೆ ಮಾತಾಡುತ್ತಿರುವಂತೆ ಕನ್ನೆ ಕೆಂಪೇರುತ್ತದೆ. ಹಣೆಯಲ್ಲಿ ಬೆವರ ಹನಿಗಳು ಮೂಡಿರುತ್ತವೆ. ಇವು ಪತ್ರಗಳಲ್ಲ ರಾಜ, ನನ್ನ ಹೃದಯದ ಪಡಿಯಚ್ಚುಗಳು!

—ರಾಣಿ.

ರಾಣಿ,

ನಿನ್ನೆ ನನ್ನ ಗೆಳೆಯ ರಾಮು ಮತ್ತು ಆತನ ಹೆಂಡತಿ ಶಾರದೆ ಮನೆಗೆ ಬಂದಿದ್ದರು. ಅವರು ಹೋದ ಮೇಲೆ ನಿನ್ನ ಯೋಚನೆಯು ಆಗದಿರಲಿಲ್ಲ. ಅವರಿಬ್ಬರದೂ ನನಗೆ ಆಡಂಬರದ ಪ್ರೇಮವಾಗಿ ತೋರಿತು. ತಮ್ಮ ಪ್ರೀತಿಯಿಂದಿರುವೆಷ್ಟೋ ಬುದನ್ನು ಬೇರೆಯವರಿಗೆ ತೋರಿಸಲು ಇಬ್ಬರೂ ಸ್ಪರ್ಧೆ ನಡೆಸುತ್ತಿರುವರೋ ಎನ್ನಿಸುತ್ತಿತ್ತು. ಆದರೆ ನನ್ನ ಪ್ರೇಮ ರೀತಿಯೇ ಬೇರೆ. ಅದನ್ನು ಕವಿಯ ಮಾತಿನಲ್ಲೇ ಹೇಳಿದರೊಳಿತು

"ಜಗವೆಮದು ನಿನ್ನ ಮೇಲಣ ನನ್ನ ಪ್ರೇಮವನು
ಅರ್ಥವಿಸಿ ಅರ್ಪಿಸುವ ಆದಿಯುತ್ಸವ
ಎದೆಯ ಗುಡಿಯಲಿ ನಿನ್ನ ಸಾಕ್ಷಿಸುವೆ ಪ್ರೇಮವನು
ಮನಸಾರೆ ಪೂಜಿಸುವ ಇಚ್ಛೆಯಿದೆ ಎನ್ನ
ನನ್ನ ರಾಣಿಯು ಫಲಕೆ ಓಡಿ ಬರುವೊಸವದ,
ಕಣ್ಣ ನ ಮುತ್ತುಗಳು ಏತಕಗೆ ಬೇಕು?
ಸಾಕೊಂದೆ ಏಕನೋಟ ಸಾಕೊಂದೆ ಸವಿಮಾತು.
ನಿನ್ನ ಮೋಹನ ರೂಪದರ್ಶನವೆ ಸಾಕು"

ತನ್ನ ಪ್ರೇಮ ಇಷ್ಟಿದೆಯೆಂದು ಅಳೆಯಲು ಹೊರಡುವವನಿಗೆ ಪ್ರೇಮದ ಅರಿವಿಲ್ಲವೆನಬೇಕು. ಪ್ರೇಮವು ನಿಲುಕದ ಎತ್ತರದ ಆಳವಾದ ಅರಿವಿನ ಮೂರ್ತಿ. ಅದು ರೂಪು ರಚನೆಯ ಸೀಮೆಯಲ್ಲಡಗಿಲ್ಲ. ಅದರ ಪರಿಧಿ ಅನಂತವಾದುದು. ದುಃಖದ ಮೋಹವಾಗಲೀ, ಸೌಂದರ್ಯ ಬಿಸಿಯಾಗಲೀ, ಹೃದಯದ ಬಿಸಿಯಾಗಲೀ ಇದರಲ್ಲಿ ಅಡಿಸಲು ಸಾಧ್ಯವಿಲ್ಲ. ಪ್ರೇಮ ವಿರುವಲ್ಲಿ ಕಾಮವೂ ಕೂಡ ಇರಲಾರದೆಂದರೆ ನೀನು ಆಶ್ಚರ್ಯ ಪಡಬಹುದು. ಪರಸ್ಪರ ಪ್ರೇಮವೆಂದರೆ ಒಬ್ಬರೊಬ್ಬರು ದಂಪತಿಗಳಾಗಿಯೇ ಇರಬೇಕೆಂಬ ನಿಯಮವಿಲ್ಲ. ಗಂಧೀಜಿಯವರೆಂತೆ ಮಕ್ಕಳು ಬೇಕೆಂಬ ಆಶೆಯಿದ್ದರೆ ಮಾತ್ರ ಮದುವೆ. ನಮ್ಮ ಮದುವೆಯಿಂದ ನಮ್ಮ ಆತ್ಮವಿಕಾಸವಾಗುವುದಾಗಿದ್ದರೆ ಅದು ಶಾಶ್ವತ ಮದುವೆ! ಕ್ಷಮಿಸು, ಏನೋ ಬರೆಯಲು ಹೊರಟು ಎಲ್ಲಿಗೋ ತಲುಪಿದೆ. ತಂದೆ ತಾಯಿಗಳ ವಿರೋಧದ ನಡುವೆ ಈ ನಮ್ಮ ತಪಸ್ಸಿಗೆ ಫಲ ಬಂದೀತೇ?

—ರಾಜ

ರಾಜ,

ನಿನ್ನ ಪತ್ರ ಓದಿ ನಗು ಬಂತು. ನೀನು ಹೇಳಲು ಹೊರಟ ಪ್ರೇಮವೇ ದಾಂತಕ್ಯಾಗಿ! ಇದೆಲ್ಲಿಂದ ಹರಕತ್ತಾಗಿ ಈ ವೇದಾಂತ? ನನ್ನ ಮಾತಾಪಿತೃಗಳ ಅಭಿಪ್ರಾಯವು ವಿರೋಧವಿದೆಯೆಂದು ಈ ಅಳ್ಳೆಯ ಪತ್ರವೇ? ಕವಿಯ ಮಾತಿನಲ್ಲೇ ಹೇಳುವೆ ಕೇಳು ರಾಜ,

"ಒಂದೆ ನೋಟದಲಿ ನಾನು ನನ್ನ ಗುಟ್ಟೆಲ್ಲವನು
ಹೃದಯದಲಿ ಬಚ್ಚಿಟ್ಟ ನನ್ನೊಲವನು
ತಡೆಯಲಾರದ ಬಿಚ್ಚಿ ನಿನಗೆ ಹೇಳಿದ ದಿನದ
ನೆನಪು ನನಗಿರುವಂತೆ ನಿನಗಿರುವುದೇ?
ನಾನು ನುಡಿದಾತೆಯೋ ನನ್ನೊಲವಿನಾತುರವೋ
ನನ್ನ ಪ್ರೇಮದ ಬಗೆಯ ನೋಡಿದೆ ನನಗೆ
ಆ ಗಳಿಗೆ ನಾರೆಯುವವೇ ಆ ನುಡಿಗಳಳಿಯುವವೇ
ನನ್ನ ಸ್ಮೃತಿಯಲಿ ಸ್ಥಾಣುವಿರುವವರೆಗೆ
ಬಂದ ರೋಗವು ಬರಲಿ, ಕೇಳಲು ಗುಲಾಮಿಯನು
ಮುಳ್ಳು ಚುಚ್ಚುವುದೆಂದು ಹೆದರಬಹುದೇ?"

"ದಂಪತಿಗಳಾಗಿಯೇ ಇರಬೇಕೆಂಬ ನಿಯಮವಿಲ್ಲ"ವೆಂಬ ನಿನ್ನ ಮಾತು ನನ್ನನ್ನು ಆತುರಗೊಳಿಸಿದೆ. ನಿನ್ನನ್ನು ಸ್ವತಃ ಕಂಡು ಮಾತಾಡಬೇಕೆನಿಸುತ್ತದೆ. ದಂಪತಿಗಳಾಗಲು ಉಳಿದಿರುವುದೇನು? ನನ್ನ ಮನವನ್ನು ಕೆರೆದು ನಿನಗೊಪ್ಪಿಸಿರುವೆನು. ನೀನೂ ಹಾಗೆ ಮಾಡಿರುವಿಯೆಂದು ನನ್ನ ನಂಬಿಕೆ. ಹೀಗಿದ್ದೂ ನಮ್ಮ ಈ ಪ್ರೀತಿಗೆ ತಂದೆ ತಾಯಿಯರ ವಿರೋಧವಿದೆಯೆಂದು ಅಂಜುವವಾದರೆ ನಿನ್ನ ಪ್ರೇಮಕ್ಕೆ ಅರ್ಥವೆಲ್ಲಿ? ನೀನು ವರ್ಣಿಸಿರುವ ಅನಂತ ಪ್ರೇಮಕ್ಕೆ ಸ್ಥಳವೆಲ್ಲಿ? ರಾಜ, ನಿನಗೆ ಹೆಣ್ಣು ಹೃದಯದ ಪರಿಚಯವಿದ್ದಂತೆ ತೋರುವುದಿಲ್ಲ. ಹೆಂಗಸು ಒಲಿದರೆ ಅದು ಸಂಪೂರ್ಣ. ತನ್ನ ಸರ್ವಸ್ವವನ್ನು ನೀಡುತ್ತಾಳೆ. ನಾನು ನನ್ನನ್ನೇ ಅರ್ಪಿಸಿರುವೆನಾದ ಕಾರಣ ನೀನಿಲ್ಲದೆ ನನ್ನ ಬಾಳು ಸ್ವತಂತ್ರವಾಗಿ ನಿಲ್ಲಲಾರದು. ನನ್ನ ಹೃದಯದೇವತೆಗರ್ಪಿಸಿದ ಈ ಹೂ ಬೇರೆ ಸ್ಥಳವಿರಲಾರದು.

—ರಾಣಿ.

ರಾಣಿ,

ನೀನು ನನ್ನನ್ನು ಇನ್ನೂ ಚೆನ್ನಾಗಿ ಅರಿಯೆ! ಆದ ಕಾರಣವೇ ನನ್ನ ಪತ್ರದಿಂದ ಬೇಸರಗೊಂಡೆ. ನಿನ್ನಲ್ಲಿ ನನಗಿರುವ ಪ್ರೇಮ ನಿನ್ನ ಶರೀರಕ್ಕೆ ಸಂಬಂಧಿಸಿದುದಲ್ಲ. ನಿನ್ನ ಚೆಲುವಿಗಾಗಲೀ ಬುದ್ಧಿ, ಶಿಕ್ಷಣ ಕೌಶಲಗಳಿಗಾಗಲೀ ಮರುಳಾದುದಲ್ಲ. ಈ ಶರೀರದ ಸೌಂದರ್ಯ ಎಷ್ಟು ದಿನ? ಈ ಶರೀರ ಎಷ್ಟು ವರ್ಷ ಬಾಳೀತು. ಈ ನಶ್ವರವಾದ ಶರೀರದ ಮೇಲೆ ಅನಂತವಾದ ಪ್ರೇಮವನ್ನು ನಿಲ್ಲಿಸುವುದು ಮರಳಿನಿಂದ ಮನೆ ಕಟ್ಟಿದಂತಲ್ಲವೇ? ನಾನು ಪ್ರೀತಿಸುವುದು ಎಂದೂ ಅಳಿಯದ ನಿನ್ನ ಆತ್ಮವನ್ನು. ಆ ಆತ್ಮ ಪ್ರೇಮಕ್ಕೆ ಸಹಾಯಕವಾಗಿ ಶರೀರ ನಿಮಿತ್ತಗಳು! ಅದ್ದರಿಂದ ನಾವಿಬ್ಬರೂ ಶಾರೀರಿಕವಾಗಿ ಒಂದುಗೂಡದಿದ್ದರೂ ನನ್ನ ಪ್ರೇಮಕ್ಕೆ ಚ್ಯುತಿ ಇಲ್ಲ. ಈ ಅಮರ ಪ್ರೇಮದ ವೇದಿಕೆಯಲ್ಲಿ ನಮ್ಮೆರಡು ಆತ್ಮಗಳು ಒಂದಾಗಿರುವಾಗ ಅದಕ್ಕೆ ಯಾವ ಮದುವೆಯ ಸಂಪ್ರದಾಯವೂ ಬೇಕಿಲ್ಲ. ನಾವಿಬ್ಬರು ಇಂದಿಗೂ ಎಂದಿಗೂ ಸತಿಪತಿಗಳೇ. ಈ ಆತ್ಮ ಮಿಲನವಿಲ್ಲದ ಆಡಂಬರದ ಬಾಹ್ಯ ಮದುವೆಯನ್ನು ನಾನು ಮದುವೆ ಎನ್ನಲಾರೆ. ನಿನ್ನ ಮಾತಾಪಿತರು ವಿರೋಧಿಸುವದಾದರೂ ಈ ಆಡಂಬರದ ಸಂಪ್ರದಾಯವನ್ನು ಮಾತ್ರ. ಅದರಾಚೆ ಅವರ ವಿರೋಧವೂ ನಡೆಯದು. ಈ ಅರ್ಥದಲ್ಲಿ ನಾನು ಪತ್ರ ಬರೆದೆ. ನೀನು ಅದನ್ನು ನನ್ನ ಅಂಜುಬುರುಕತನವೆಂದು ನೆನೆಸಿದೆ! ರಾಣಿ, ತನ್ನ ಆತ್ಮಕ್ಕೆ ವಂಚನೆಯಿಲ್ಲದೆ ವರ್ತಿಸುವವನು ಯಾವ ಗುಂಡಿಗೂ ಹೆದರುವ ಅವಶ್ಯಕತೆಯಿಲ್ಲ. ಈ ವಿಚಾರ ನಿನ್ನನ್ನು ಕಂಡು ನನ್ನ ಸರ್ವ ಮನದಟ್ಟಿಯನ್ನು ಹೇಳಬೇಕೆಂದಿರುವೆನು ಪ್ರಸ್ತುತ ನೀನು ವೃಥಾ ಚಿಂತಿಸಬೇಡ ಇಂದಿಗೂ ಎಂದಿಗೂ ನಾವು ಸತಿಪತಿಗಳೇ! ಒಂದು ವೇಳೆ ಸಮಾಜ ರೂಢಿಯ ಮದುವೆಗೆ ನಿನ್ನ ಮಾತಾಪಿತರು ವಿರೋಧಿಸಿದರೆ (ಹಾಗೆ ವಿರೋಧಿಸುವ ಹಕ್ಕು ನ್ಯಾಯದೃಷ್ಟಿಯಿಂದ ಅವರಿಗಿಲ್ಲ) ನಮ್ಮ ಆತ್ಮಮಿಲನಕ್ಕೆ ಆತಂಕ ಮಾಡಲು ಎಂದಿಗೂ ಸಾಧ್ಯವಿಲ್ಲ.

— ರಾಜ.

ರಾಜ,

ನಿನ್ನ ಪತ್ರ ಓದಿಯೂ ಮನಸ್ಸಿಗೆ ತೃಪ್ತಿಯಾಗಲಿಲ್ಲ. ನೀನು ಬರುವವರೆಗೂ ಕಾಯ್ದು ಕೂರಲು ಮನಸ್ಸು ಒಪ್ಪಲೊಲ್ಲದು. ಅದ್ದರಿಂದ ಬರೆಯುತ್ತಿರುವೆನು. ನಿನ್ನ ಮನಸ್ಸಿನ ಆಳ ಬಹು ಹಿರಿದು. ನೀನು ನಿಂತ ಎತ್ತರವಾದರೂ ಬಹು ಮೇಲೆ. ನಿನ್ನೊಡನೆ ಸಮತೆಯಿಂದ ನಡೆಯುವ ಚೇತನ ನನಗಿದೆಯೋ ನಾನರಿಯೆ. ಆದರೆ ನನ್ನ ಭವಿಷ್ಯವನ್ನು ನಿನಗೊಪ್ಪಿಸಿರುವೆನು. ಈ ಭವಸಾಗರದಲ್ಲಿ ಮುಳುಗುವದಾದರೂ ನಿನ್ನೊಡನೆಯೇ, ತೇಲುವದಾದರೂ ನಿನ್ನೊಡನೆಯೆ. ಪ್ರಾಯಕ್ಕೆ ಬಂದ ತಮ್ಮ ಮಗಳು ತನಗೊಪ್ಪಿದ ವರನನ್ನು ಆರಿಸಿಕೊಂಡರೆ ಸಂಪ್ರದಾಯ, ಮನೆತನ, ಜಾತಿಮತಗಳ ಹೆಸರಿನಲ್ಲಿ ಪೋಷಕರು ಏಕೆ ವಿರೋಧಿಸುವರೋ ತಿಳಿಯದು. ಜಾತಿ ನೀತಿ ಎಲ್ಲಿದೆ? ಸುಗುಣಿ, ಸುಶೀಲನೇ ಬ್ರಾಹ್ಮಣನಲ್ಲವೇ? ಜ್ಞಾನ, ತ್ಯಾಗ, ಸಹನೆಗಳೇ ಸಂಪತ್ತಲ್ಲವೇ?

ಆದರೆ ಈ ಕುರುಡು ಸಂಪ್ರದಾಯದ ಕಟ್ಟಳೆಗೆ ವಿರುದ್ಧದಂಗೆ ಎದ್ದು ನೀತಿಬಾಹಿರವಾಗಿ ನಾನು ವರ್ತಿಸಲಾರೆ. ನೀನೂ ಕೂಡ ಅದಕ್ಕೊಪ್ಪುವೆಯೆಂದು ನನಗೆ ತಿಳಿದಿದೆ. ತಂದೆ ತಾಯಿಗಳು ಯಾವದೇ ಬಲಾತ್ಕಾರ ಮಾಡಿದರೂ ಬೇರೊಬ್ಬನನ್ನು ಕನಸಿನಲ್ಲಿಯೂ ನೆನೆಯಲಾರೆನು. ಶಬರಿಯು ರಾಮನ ಬರವನ್ನು ನಿರೀಕ್ಷಿಸಿದಂತೆ ನಾನು ನಿನಗಾಗಿ ನಿರೀಕ್ಷಿಸುವೆನು. ಈ ನನ್ನ "ನಾಡಿ ಸೋತ ಮೂಕ ಪ್ರೇಮ"ಕ್ಕೆ ಭಗವಂತನು ಸಹಾಯಕನಾಗಲಿ.

—ರಾಣಿ.

ರಾಣಿ,

ನಿನ್ನ ಪತ್ರ ಓದಿ ಹರ್ಷವಾಯಿತು. ನಿನ್ನ ಹೃದಯದ ಆಳದ ಅರಿವೂ ಆಯಿತು. ನಾನೂ ಕೂಡ ಸಮಾಜದ ಕಟ್ಟುಗಳ ಬಗ್ಗೆ ದಂಗೆ ಎದ್ದು ಅಹಿತವನ್ನು ಮಾಡಲಾರೆ. ಆದರೆ ಸಮಾಜದ ಈ ದುಷ್ಟ ಪದ್ಧತಿಯನ್ನೂ ಕುರುಡು ಪ್ರತಿಷೆ

ಕಾಮನ್‌ವೆಲ್ತದಲ್ಲಿ ಕೂಡಿದುದೇಕೆ?

ಭಾರತವು ಸಾರ್ವಭೌಮ ಸ್ವತಂತ್ರ ಪ್ರಜಾರಾಜ್ಯದ ನಿಲುವೆಯನ್ನು ಕಾಯ್ದುಕೊಂಡೇ ಕಾಮನ್‌ವೆಲ್ಥದಲ್ಲಿ ಕೂಡಿದೆ. ಇದರಿಂದ ಭಾರತದ ಸ್ಥಾನ ಮಾನವು ಬೆಳೆಯುವುದಲ್ಲದೆ, ತನ್ನ ಮುಖ್ಯ ಗುರಿಯಾದ "ಜಾಗತಿಕ ಶಾಂತಿ" ಪ್ರಸ್ಥಾಪನೆಯ ಕಾರ್ಯದಲ್ಲಿ ಭಾರತಕ್ಕೆ ತನ್ನ ಪಾತ್ರವನ್ನು ಹೆಚ್ಚಿನ ಶಕ್ತಿ ಸಾಮರ್ಥ್ಯಗಳಿಂದ ಆಡಲು ಶಕ್ಯವಾಗುವುದು. ಕಾಮನ್‌ವೆಲ್ತದಲ್ಲಿ ಭಾರತವು ಕೂಡಿರಲು ನಾನು ಒಪ್ಪಿದ ನಿಯಮಗಳಿಂದ, ಭಾರತ, ಇಂಗ್ಲೆಂಡು ಕಾಮನ್‌ವೆಲ್ತ ಹಾಗೂ ಜಗತ್ತು ಇವೆಲ್ಲಕ್ಕೂ ಒಳ್ಳೆಯದೇ ಆಗಿರುತ್ತದೆ.

ಕಾಮನ್‌ವೆಲ್ತ ಮುಖ್ಯ ಮಂತ್ರಿಗಳ ಪರಿಷತ್ತು ಹೋದವಾರ ಲಂಡನಿನಲ್ಲಿ ಜರುಗಿ, ಭಾರತವು ತನ್ನ ಸ್ವಾತಂತ್ರ್ಯ, ಸಾರ್ವಭೌಮ ಪ್ರಜಾರಾಜ್ಯ, ಜಾಗತಿಕ ಶಾಂತಿ ಸ್ಥಾಪನೆಯ ತನ್ನ ಧೋರಣೆ, ಇವುಗಳಿಗೆ ಕೂದಲೆಳೆಯಷ್ಟು ವ್ಯತ್ಯಯ ಬರದಂತೆ ಕಾಮನ್‌ವೆಲ್ಥದಲ್ಲಿರಲು ಕೆಲವು ನಿಯಮ ನಿರ್ಬಂಧಗಳ ಅನ್ವಯ ಒಪ್ಪಿಕೊಂಡುದಾದನ್ನು ಕಾಮನ್‌ವೆಲ್ಥ ಪರಿಷತ್ತು ಅಂಗೀಕರಿಸಿ ಭಾರತವನ್ನು ತನ್ನಲ್ಲಿ ಉಳಿಸಿಕೊಂಡಿತು. ಈ ವಿಷಯವಾಗಿ ಭಾರತದಲ್ಲಿ ಅನೇಕ ಕ್ರಿಯೆ ಪ್ರತಿಕ್ರಿಯೆಗಳು ನಡೆದಿರುತ್ತವೆ, ಆ ಬಗ್ಗೆ ಪಂ. ಜವಾಹರಲಾಲರು ಲಂಡನಿನಲ್ಲಿ ಮೇ ಎರಡನೆಯ ದಿನಾಂಕ ರಾತ್ರಿ ಇಂಡಿಯಾ ಲೀಗಿನವರು ತಮಗೆ ಇತ್ತ ಸತ್ಕಾರ ಕೂಟ ಸಮಾರಂಭದಲ್ಲಿ ಮಾತನ್ನಾಡುತ್ತಾ, ಭಾರತವು ಕಾಮನ್‌ವೆಲ್ಥದಲ್ಲಿ ಉಳಿದುದು ಜಾಗತಿಕ ಹಿತಕ್ಕಾಗಿಯೇ ಎಂದು ನಿರ್ಧರವಾಗಿ ಸಾರಿದ್ದಾರೆ.

"ಕಾಮನ್‌ವೆಲ್ಥ ಪರಿಷತ್ತಿನಲ್ಲಿ ನಡೆದ ವಿಷಯಗಳು ಮತ್ತು ಕೈಕೊಂಡ ನಿರ್ಣಯಗಳ ಬಗ್ಗೆ ಭಾರತದಲ್ಲಿಯು ನನ್ನ ಅನೇಕ ಗೆಳೆಯರಿಂದಲೂ ಮತ್ತು ಕೆಲವು ಕಾಂಗ್ರೆಸಿಗರಿಂದಲೂ ಅನೇಕ ಬಗೆಯ ಭಿನ್ನ ಭಿನ್ನ ಅಭಿಪ್ರಾಯಗಳು ಪ್ರಕಟವಾಗಿಯು ಕಂಡುಬರುತ್ತದೆ. ಆದರೆ ಭಾರತದ ಬಹುಸಂಖ್ಯಾಕರು ಇದನ್ನು ಸ್ವಾಗತಿಸಿದೆ ಇರುವರೆಂದು ನಾನು ನಿಸ್ಸಂಶಯವಾಗಿ ಹೇಳಬಲ್ಲೆ. ಜಯಪುರದ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಅಧಿವೇಶನದಲ್ಲಿಯೇ ಈ ಪ್ರಶ್ನೆಯನ್ನು ಸ್ಥೂಲವಾಗಿ ಚರ್ಚಿಸಿ ಒಪ್ಪಿಗೆಯನ್ನೂ ದೊರಕಿಸಿದ್ದಾಗಿದೆ.

ಟೀಕಾಕಾರರಿಗೆ

ಪತ್ರಿಕೆಗಳಲ್ಲಿ ಪ್ರಕಟವಾದುದರಿಂದ ಹಾಗೂ ಇನ್ನಿತರ ಕೆಲವು ಗೆಳೆಯರು ಈ ಕಾರ್ಯವನ್ನು ಒಪ್ಪಿಲ್ಲವೆಂದು ತಿಳಿದು ಬರುತ್ತದೆ. ಅಲ್ಲದೆ ಕೆಲವರು ಇದನ್ನು ತೀಕ್ಷ್ಣವಾದ ಹಾಗೂ ಕಟು ಶಬ್ದಗಳಲ್ಲಿ ಟೀಕಿಸಿದ್ದಾರೆ. ಟೀಕೆಯು ಯಾವಾಗಲೂ ಸ್ವಾಗತಾರ್ಹವಾದುದಲ್ಲದೆ ಭಾರತದಲ್ಲಿಯೇ ಆಗಲಿ, ಜನತೆ ಸರಕಾರವನ್ನು ಟೀಕಿಸುವುದನ್ನು, ಮರೆತರೆ ಪರಿಸ್ಥಿತಿ ಕರುಣಾಜನಕವಾಗಿ ಸಂಭವಿಸುವುದರಲ್ಲಿ ಸಂಶಯವಿರಲಾರದು. ಆದುದರಿಂದಲೇ ಆ ಟೀಕೆಯ ಬಗ್ಗೆ ನಾನೇನೂ ಹೆಚ್ಚು ವಿಚಾರಿಸುವುದಿಲ್ಲ. ಯಾವುದೇ ಒಂದು ಕಾರ್ಯದ ಕ್ಷಣಿಕ ಪರಿಣಾಮಕ್ಕಿಂತಲೂ ಅದರ ಸಂಪೂರ್ಣ ಫಲದ ಜ್ಞಾನವಿರಬೇಕಾದುದು ಅವಶ್ಯವಾದ ಮಾತಾಗಿರುತ್ತದೆ. ಈ ಟೀಕಾಕಾರರಿಗೆ ನಾನು ಹೇಳುವುದು ಇಷ್ಟೇ— ನನ್ನ ಸ್ವಂತ ಅಭಿಪ್ರಾಯದ ಮೇರೆಗೆ ಕಾಮನ್‌ವೆಲ್ಥದಲ್ಲಿ ಕೂಡಲು ನಾನು ಒಪ್ಪಿಕೊಂಡ ನಿಯಮ ನಿರ್ಬಂಧಗಳು ಭಾರತಕ್ಕೂ ಇಂಗ್ಲೆಂಡಕ್ಕೂ ಕಾಮನ್‌ವೆಲ್ತಿಗೂ ಜಗತ್ತಿಗೂ ಕೂಡ ಒಳ್ಳೆಯದನ್ನು ಮಾಡುವವು; ಹಾಗಿಲ್ಲದಿದ್ದರೆ ನಾನು ಅವನ್ನು ಒಪ್ಪುತ್ತಲೇ ಇರಲಿಲ್ಲ.

ನಮ್ಮ ಇಲ್ಲಿಯ ಮಾತುಕತೆಗಳ ಬಗ್ಗೆ ಏನೇನು ಗುಪ್ತತೆ ಇರಬಹುದೆಂದೂ ಕೆಲವರು ಕಲ್ಪಿಸಿಕೊಂಡಿರುವಂತೆ ತೋರುತ್ತದೆ. ಆದರೆ ಅಲ್ಲಿ ತೆರೆಮರೆಯಲ್ಲಿಯ, ಸ್ವರೂಪದಲ್ಲಿ ಏನೇನೂ ನಡೆದಿಲ್ಲವೆಂದು ಧೈರ್ಯವಾಗಿ ನಾನು ಹೇಳಬಲ್ಲೆ. ಅಟ್ಲಾಂಟಿಕ ಒಪ್ಪಂದ ಹಾಗೂ ಪಶ್ಚಿಮ ಯುರೋಪದ ಒಕ್ಕೂಟ ಇವುಗಳ ವಿಷಯಕ್ಕೆ ನಾವೇನೂ ಚರ್ಚೆಯನ್ನೇ ನಡೆಸಿಲ್ಲ.

ಸ್ವಾತಂತ್ರ್ಯ ಪ್ರತಿಜ್ಞೆ ನೆನಪಿಡಿ.

ಭಾರತದ ಸ್ವಾತಂತ್ರ್ಯದ ಪ್ರತಿಜ್ಞೆಯನ್ನೇ ಭಾರತದ ಉಳಿದ ಕೋಟ್ಯವಧಿ ಜನರೊಂದಿಗೆ ನಾನೂ ವರ್ತಿಸಿದ್ದೇನೆಂದು ನನಗೆ ಎನಿಸುತ್ತದೆ. ಕಾಮನ್‌ವೆಲ್ಥ ಪರಿಷತ್ತು ಸಾಧಿಸಿದ ಕಾರ್ಯವನ್ನು ಸಾಧಿಸಿದ ರೀತಿಯನ್ನು ನೋಡಿದರೆ, ಗಾಂಧಿಜಿಯವರಿಂದಲೂ ನಾವು ಮನ್ನಣೆ ಪಡೆಯುವಂತಿತ್ತು. ಈ ಕಾರ್ಯ ಸಾಧನೆಯಲ್ಲಿ ಕಂಡು ಬಂದ ಸಹಕಾರ, ಸೌಹಾರ್ದ, ಔದಾರ್ಯಗಳು ಅನುಭವವಾಗಿದ್ದವು. ದ್ವೇಷ ಮತ್ತು ಕಷ್ಟಗಳಿಂದ ಸಾಧಿಸಬಹುದಾದ ಮಹತ್ಕಾರ್ಯಕ್ಕಿಂತಲೂ, ಅವಿಲ್ಲದೆ ಸಾಧಿಸುವ ಕಾರ್ಯವು ತುಸು ಕಡಿಮೆಯದಾದರೂ ಅದಕ್ಕೆ ಹೆಚ್ಚಿನ ಮಹತ್ವವಿರುವುದು. ನಾವು ಏಕಾಂಗಿಯಾಗಿರುವುದು ಬೇಡವಾದುದರಿಂದಲೇ, ಕಾಮನ್‌ವೆಲ್ಥದಲ್ಲಿರಲು ನಾವು ಒಪ್ಪಿದ್ದೇವೆ. ಅಲ್ಲದೆ ನಮ್ಮ ಸಾರ್ವಭೌಮತ್ವವನ್ನು ಕಳೆದುಕೊಳ್ಳದಲೇ ನಮಗೆ ದೊರೆತ ಈ ಸಂಬಂಧವು ಎಷ್ಟೋ ಲಾಭದಾಯಕವಾಗಿದೆ. ಹಾಗೂ ನಾವು ಸ್ವತಂತ್ರರಾಗಿದ್ದರೆ ಮಾತ್ರ ಜಾಗತಿಕ ಶಾಂತಿ ಸ್ಥಾಪನೆಗೆ ನನ್ನಿಂದ ಸಹಾಯವಾಗಬಹುದಾದ್ದರಿಂದಲೇ ನಾವು ಸ್ವತಂತ್ರ ಪ್ರಜಾರಾಜ್ಯವಾಗಿರಲು ನಿರ್ಧರಿಸಿದ್ದೇವೆ.

ಕ್ರಾಂತಿ ಕಾಲ.

ಇದೊಂದು ಕ್ರಾಂತಿಯ ಕಾಲವೆಂದೇ ಹೇಳಬೇಕು. ಅದರಲ್ಲಿಯೂ ಏಶಿಯಾದಲ್ಲಿ ಬಹು ಬಗೆಯ ಹೆಚ್ಚು ಕಡಿಮೆಗಳಾಗುತ್ತಲಿ ನಡೆದಿರುತ್ತವೆ. ಯುರೋಪಿಯನ್ನರ ಏಶಿಯಾದೊಳಗಿನ ಅಧಿಕಾರವು ಅಳಿದಳಿದಂತಿಲ್ಲ. ಏಶಿಯಾ ಖಂಡದ ತುಂಬ ರಾಷ್ಟ್ರೀಯತೆಯಿಂದ ಒಳಿತೂ ಆಗಿದೆ, ಕೆಡುಕೂ ಆಗಿರುತ್ತದೆ. ಹಿಂದೂಸ್ಥಾನದಲ್ಲಿ ಈ ಕೆಡುಕೇ ಜಾತೀಯತೆಯ ರೂಪವನ್ನು ತಾಳಿ, ನಾಡ ವಿಚ್ಛೇದನಕ್ಕೆ ಕಾರಣವಾಯಿತು. ವಿಚ್ಛೇದನಾದ ಬಳಿಕವೂ, ಇದೇ ಜಾತೀಯತೆಯು ಆರ್. ಎಸ್. ಎಸ್. ಹಾಗೂ "ಅಕಾಲಿ" ಪಕ್ಷಗಳ ಸ್ವರೂಪವನ್ನು ತಳೆದ. ಇಷ್ಟೇ ಅಲ್ಲದೆ ಈಗೊಂದು ಒಂದೆರಡು ವರ್ಷಗಳಿಂದ ಕಮ್ಯೂನಿಸ್ಟರ ವಿರೋಧವೂ ಕಂಡ ಬರುತ್ತಲಿದೆ. ಸ್ವಾತಂತ್ರ್ಯದ ಹೋರಾಟದ ಸರಿಗೂ, ನಮ್ಮೊಡನೇ ಕಾರ್ಯ ಮಾಡಿದ ಇವರು ಈಗ ಶಾಂತಿಭಂಗದ ಕಾರ್ಯವನ್ನು ಮಾಡತೊಡಗಿದ್ದಾರೆ.

ಯಾವುದೇ ಘಟನೆ ಹಾಗೂ ಕೃತಿಗಳ ಬಗ್ಗೆ ವಿಮರ್ಶೆ ಮಾಡುವುದನ್ನಾಗಲೀ ಅಥವಾ ಅಭಿಪ್ರಾಯವನ್ನು ಪ್ರಕಟಿಸುವುದನ್ನಾಗಲೀ, ಹಿಂದೂಸ್ಥಾನ ಸರಕಾರವು ವಿರೋಧಿಸುವುದಿಲ್ಲ. ಆದರೆ ಈ ಬಗೆಯ ವಿರೋಧದಿಂದ ರಾಷ್ಟ್ರದ ಭದ್ರತೆಗೆ ಧಕ್ಕೆ ತಂದರೆ ಮಾತ್ರ ಸರಕಾರವು ಅದನ್ನು ಸಹಿಸಲಾರದು. ಪಕ್ಕದ ಬ್ರಹ್ಮದೇಶದ ಉದಾಹರಣೆಯೇ ನಮಗೊಂದು ಎಚ್ಚರಿಕೆಯಾಗಿದೆ.

ಗಾಂಧಿ ಒಪ್ಪುತ್ತಿದ್ದರು

ಸರಿ ಸಮಾನತೆಯನ್ನು ಪ್ರಸ್ಥಾಪಿಸುವ ನಮ್ಮ ಧೋರಣೆಯ ರೂಪ ಮಾದರಿಯಂತೆಯೇ ಇರುವುದು, ಅದರಲ್ಲಿ ಏನೂ ವ್ಯತ್ಯಾಸವಾಗಿಲ್ಲ. ಕಾಮನ್‌ವೆಲ್ಥ ಹಿತದ ದೃಷ್ಟಿಯಿಂದ ಇದು ಅವಶ್ಯ. ಗಾಂಧಿಜಿ ಈಗ ಇದ್ದಿದ್ದರೆ ಏನು ಹೇಳಬಹುದಾಗಿತ್ತೋ ಬದನ್ನು ತರ್ಕಿಸಲು ಪ್ರಯತ್ನಿಸುತ್ತಿದ್ದೇನೆ. ಅವರು ಜೀವಂತ ಇದ್ದಾಗ ನಾನು ಕಡಲೇ ಓಡಿಹೋಗಿ ಅವನ್ನು ಕೇಳಿರುತ್ತಿದ್ದೆ. ಕಾಮನ್‌ವೆಲ್ಥದ ಪರಿಷತ್ತಿನ ಫಲಶ್ರುತಿ ಏನೇ ಇದ್ದರೂ, ಈ ಸಂದರ್ಭದಲ್ಲಿ ನಾವು ಮಾಡಿದ ಕಾರ್ಯಕ್ಕೆ ಗಾಂಧೀಜಿಯವರು ಆಶೀರ್ವಾದ ಕೊಟ್ಟು ಕಳಿಸುತ್ತಿದ್ದರು. ಏಕೆಂದರೆ ಸೌಹಾರ್ದಪೂರ್ಣವಾಗಿ ತೊಡಕನ್ನು ಬಿಡಿಸುವ ರೀತಿ, ಅಹಿಂಸೆಯ ರೀತಿಗಳಲ್ಲೇ ಒಂದಾಗಿದೆ. ಅನೇಕ ಸಲ ಕಹಿ ದ್ವೇಷ ಮತ್ಸರಗಳ ಫಲವಾಗಿ ಸೋಲಿಗಿಂತಲೂ ಕಡೆಯಾದ ವಿಜಯಗಳನ್ನು ಕಂಡ ಈ ಜಗತ್ತಿನಲ್ಲಿಯೇ ಈ ಬಗೆಯಾಗಿ ಸಾಮರಸ್ಯದಿಂದ ನಿರ್ಣಯವು ನಡೆದುದು ಮಹತ್ವಪೂರ್ಣವಾಗಿರುತ್ತದೆ.

ವಿಮನಸ್ಕತೆ ಮಾಡಿ ಹೆಚ್ಚು ಸಂಪಾದಿಸುವುದಕ್ಕಿಂತಲೂ ವಿಮನಸ್ಕತೆಯಿಲ್ಲದೆ ಕಡಿಮೆ ದೊರೆತರೂ ಅದೇ ಒಳ್ಳೆಯದು. ಈ ಎರಡು ದಾರಿಗಳಲ್ಲಿ ಬೇಕಾದುದನ್ನು ಆರಿಸಿಕೊಳ್ಳಲು ಭಾರತೀಯರಿಗೇ ಬಿಟ್ಟಿದ್ದೇನೆ" ಎಂದು ಪಂಡಿತ ಜವಾಹರಲಾಲರು ಹೇಳಿದ್ದಾರೆ.

"ಜೈ ಹಿಂದ"

(೭ನೇ ಪುಟದಿಂದ ಸಾಗಿದ್ದು.)

ಯನ್ನೂ ನ್ಯಾಯ ರೀತಿಯಲ್ಲಿ ವಿರೋಧಿಸುವೆ. ನನ್ನ ಪಾಲಿಗೆ ನೀನೇ ಭಾಗ್ಯತಾರಕೆ. ಮುಂದೆ ನನ್ನ ಜೀವನವೂ ಒಂದು ತಪಸ್ಸಾಗಿ ಪರಿಣಮಿಸುವುದು. ಈ ತಪಸ್ಸು ಸಮಾಜದಲ್ಲಿ ರೂಢವಾಗಿರುವ ಅಂಧಪದ್ಧತಿಗಳಿಗಾಗಿ! ನಮ್ಮ ಈ ಎರಡು ಪವಿತ್ರ ಆತ್ಮಗಳ ಸಂಗಮದಲ್ಲಿ ಸಮಾಜದ ಕೊಳೆಯು ತೊಳೆಯಲ್ಪಡಲಿ. ಈ ಪ್ರೇಮ ತಪಸ್ಸಿನಲ್ಲಿ, ನಮ್ಮ ಐಹಿಕ ಜೀವನವು ಸಮಾಜದ ಅಂಧ ವಿಶ್ವಾಸದ ವೇದಿಕೆಯಲ್ಲಿ ಬಲಿಯಾದರೂ ಈ ನಿರ್ಮಲ ತ್ಯಾಗದ ಫಲವಾಗಿ ನಾಳಿನ ಪೀಳಿಗೆಯು ಈ ಸಮಾಜ ಸಂಪ್ರದಾಯ ಬಂಧನದಿಂದ ಮುಕ್ತವಾಗುವುದೆಂಬ ಭರವಸೆ ನನಗಿದೆ. ನಾವು ಆತ್ಮಹತ್ಯೆ ಮಾಡಿಕೊಳ್ಳಬಹುದು. ಆದರೆ ಇದು ಹೇಡಿಗಳ ಮಾರ್ಗ. ನಾವು ಜೀವಿಸಬೇಕು. ಈ ಪದ್ಧತಿಗಳ ಅಂತ್ಯದವರೆಗೆ ಜೀವಿಸಬೇಕು. ಪ್ರತಿದಿನದ ನಮ್ಮ ಪ್ರಾರ್ಥನೆಯು ಇದೇ. ಈ ಸಮಾಜ ನಂಬಿಕೆ ತೊಲಗಲಿ. ನಮ್ಮಂತೆಯೇ ಪವಿತ್ರ ಪ್ರೇಮಿಗಳು ಒಂದಾಗಿ ಸಮಾಜದ ... ಜೀವನವು ... ದಿನಗಳಲ್ಲಿ ... ಮಾಡಲಿ".

—ರಾಜ.

ಶೋಕದ ಬಗೆ ತೆರೆಯತೊಡಗಿ ಹೊಂಗೆಬಣ್ಣದ ಆಕಾಶದಲ್ಲಿ ಚಿತ್ರದ ಚಿಹ್ನೆ ಇರಲಿಲ್ಲ. ತಾನು ಓದುತ್ತಿದ್ದ ಪತ್ರದ ಕಾಗದಗಳನ್ನೇ ಅವಳು ನೋಡುತ್ತ ಕುಳಿತಿದ್ದಳು. ಆಕೆ ಒಬ್ಬಳೇ ಅಳಲು ಪ್ರಾರಂಭಿಸಿದಳು.

Coorg Civil Surgeon's Office
Mercara the 30th April 1949

WANTED

Women candidates to undergo training as Rural Midwives at the Civil Hospital, Mercara, for six months on a stipend of Rs 25 - per mensem and Rs 50/- towards equipment allowance after the completion of training

The candidates must have completed Lower Secondary examination and must be between 25 and 35 years of age. Those living in villages will be given preference

Relaxation of age limit and educational qualification, on special cases will be considered, if candidate deserves selection on other considerations.

Application must reach the Civil Surgeon, Coorg Mercara, on or before 15-5-1949. The course will commence from 1-6-4[illegible]

T. B. MEDAPPA,
2-2 *Civil Surgeon, Coor[illegible]*

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 4-8-0.

ಸಂಪುಟ ೨೭ | ತಾರೀಕು ೨೮-೧-೧೯೪೯ನೇ ಶುಕ್ರವಾರ | ಸಂಚಿಕೆ ೪೦

ಒಂದು ನೆನಪು.

ಲೇ:—ಶ್ರೀ. ಬಾ. ದೆ. ವಿನಾಯಕ.

ಪ್ರತಿ ವಾರಕ್ಕೂ ಒಂದೊಂದು ಶುಕ್ರವಾರವಿದೆ. ಆದರೆ ಅಂದಿನ ಶುಕ್ರವಾರ ಸ್ಪಷ್ಟವಾಗಿ ಮನಸ್ಸಿನಲ್ಲಿದೆ. ಅದರ ನಂತರ ನೂರಾರು ಶುಕ್ರವಾರಗಳು ಉರುಳಿ ಹೋದವು. ಆದರೆ ಆ ಹಿಂದಿನ ಶುಕ್ರವಾರದ ನೆನಪು ನನ್ನ ಮರಣಪರಿಯಂತರವೂ ಉಳಿಯುವುದರಲ್ಲಿ ಸಂಶಯವಿಲ್ಲ.

ಆ ಶುಕ್ರವಾರದ ಸಾಯಂಕಾಲ ಸುಮಾರು ಐದೂವರೆ ಗಂಟೆಗೆ ನಾವು ಮೈದಾನದಲ್ಲಿ ಬೇಡ್‌ಮಿಂಟನ್ ಆಡುತ್ತಿದ್ದೆವು. ಸ್ನೇಹಿತರೊಬ್ಬರು ಓಡಿ ಬಂದು "ಗಾಂಧೀಜಿಯವರನ್ನು ಯಾರೋ ಗುಂಡಿಕ್ಕಿ ಕೊಂದರಂತೆ" ಎಂದು ಹೇಳಿದರು. ನನ್ನ ನಂಬಿಕೆಗಳಲ್ಲಿ ತಕ್ಷಣ ನಿಸ್ಸಹಾಯಕತೆ ಉಂಟಾಯಿತು.. [illegible] ಆಟ ಬಿಟ್ಟು ಹೊರಟೆನು. ಮೈದಾನದಲ್ಲಿಯ ಆರಿವಾಯ ಗೋಚರವಾಗಲೀ, ನಾನು ಪೇಟೆಯ ಮಧ್ಯಕ್ಕಾಗಿ ಹೋಗುತ್ತಿರುವೆನೆಂಬ ಭಾವವಾಗಲೀ ಮನಸ್ಸಿನಲ್ಲಿರಲಿಲ್ಲ. ಆಟದ ವೈದಾನದ ಆಟ ಪೋಷಾಕಿನಿಂದಲೇ ಓಡುತಿದ್ದೆ. ಎಲ್ಲೆಡೆಯೂ ಶೂನ್ಯ. ಮನಸ್ಸಿನಲ್ಲಿ ಕತ್ತಲೆ ಆವರಿಸಿತ್ತು. ಮನಸ್ಸಿನಲ್ಲಿ ಭಾರವಾಗಿ ಕೂತಿದ್ದ ದುಃಖಸಂತಾಪಗಳನ್ನು ಹೇಳಿ ಹಗುರ ಮಾಡಿಕೊಳ್ಳಲು ನಾನು ನನಗೆ ತಿಳಿಯದೆಯೇ ಆವರ ಮನೆಗೆ ಹೋದೆನು!

ಮನೆಯ ಆವರಣವು ನಿಶ್ಶಬ್ದವಾಗಿತ್ತು. ಹತ್ತಿರ ಹೋದಂತೆ ರೋಧನ ಸ್ವರವು ಕೇಳುತ್ತಿತ್ತು. ವಿದ್ಯುಚ್ಛಕ್ತಿ ದೀಪವು ಮಂದವಾಗಿ ಉರಿಯುತ್ತಿತ್ತು. ಸರೋಜ, ಲೀಲಾ, ಕಮಲ ಎಲ್ಲರೂ ರೋಧಿಸುತ್ತಿದ್ದರು. ನನ್ನನ್ನು ಕಂಡೊಡನೆಯೇ ಅವರ ರೋಧನವು ಕಟ್ಟೊಡೆದ ನೀರಿನಂತೆ ಮೇರೆ ತಪ್ಪಿ ಹೊರಟಿವ್ವಿತು. ನನಗೆ ದಿಕ್ಕು ತೋಚದಂತಾಯಿತು. ಕೋಣೆಗೆ ಹೋದೆನು. ಅವರ ತಂದೆ ಹಾಸಿಗೆಯಲ್ಲಿ ಮಲಗಿದ್ದಾರೆ. ಬಿಕ್ಕಿ ಬಿಕ್ಕಿ ಅಳುತ್ತಿದ್ದಾರೆ. ಜೀವನದ ಅನುಭವದಲ್ಲಿ ಅನೇಕ ದುಃಖ ಕಷ್ಟಗಳನ್ನು ಸಹಿಸಿದ ಜೀವ. ಅನೇಕ ಬಂಧುಬಾಂಧವರನ್ನು ಕಳಕೊಂಡರೂ ಬೇರೆಯವರಿಗೆ ಸಮಾಧಾನ ಹೇಳುವ ವ್ಯಕ್ತಿ. ಅಂದು ಚಿಕ್ಕ ಮಗುವಿನಂತೆ ಅಳುತ್ತಿದ್ದರು. ಅನಾಥರಾದ ವಿಧವೆಯಂತೆ ನಿರ್ಬಲರಾಗಿದ್ದರು. ಸಾಮಾನ್ಯವಾಗಿ ಸಂಗೀತ ನೃತ್ಯಗಳಿಂದ ಸಂತೋಷದಲ್ಲಿರುತ್ತಿದ್ದ ಮನೆಯು ದುಃಖಸಾಗರದಲ್ಲಿ ಮುಳುಗಿತ್ತು. ಒಂದೆರಡು ಸ್ನೇಹಿತರು ಬಂದಿದ್ದರು. ಸ್ನೇಹಿತರೊಬ್ಬರ ಹೆಂಡತಿ ಮಕ್ಕಳೂ ಬಂದಿದ್ದರು. ಒಬ್ಬರ ಎದೂ ಕಣ್ಣಿಂದಲೂ ನೀರು ಸುರಿಯುತ್ತಿತ್ತು. ಯಾವ ಕಡೆ ನೋಡಿದರೂ ಕಣ್ಣೀರು, ನಿಟ್ಟುಸಿರು ಕೇಳಿಸುತ್ತಿದ್ದವು. ಇದೇ ಅನುಭವವನ್ನು [illegible] ದಿನ ನಾನು ಪಡೆದೆನು!

ನನ್ನ ಸ್ವಭಾವವೊಂದು ರೀತಿ ಚಿ[illegible] ಕಾಲಿಗೆ ಸಿಕ್ಕಿ [illegible] ಬಂದ [illegible] ಸ್ನೇಹಿತರೆಲ್ಲರೂ ಕಣ್ಣೀರಿಡುತ್ತಿದ್ದಾರೆ. [illegible] ಬರುವದಿಲ್ಲ; ಬದಲು ದುಃಖವು ಅಂತರ್ಯದಲ್ಲಿ ಹೃದಯವನ್ನು ಕೊರೆಯುತ್ತಿರುತ್ತದೆ. ಅದು ಒಂದು ದಿನವಲ್ಲ; ಒಂದು ತಿಂಗಳಲ್ಲ ವರ್ಷ ವರ್ಷಗಳವರೆಗೆ! ಆ ಹೃದಯದ ನೋವೆ ಪುನಃ ಅಂದಿನ ನೆನಪನ್ನು ಇಂದು ಮಾಡಿಕೊಳ್ಳುತ್ತಿದೆ.

ಹಾಸಿಗೆ ಹಿಡಿದು ರೋಧಿಸುತ್ತಿದ್ದ ಸಭ್ಯರನ್ನು ಸ್ನೇಹಿತರೊಬ್ಬರು ಸಂತೈಸುತ್ತಿದ್ದರು. ನಾನು ಒಂದೆಡೆ ಮೌನವಾಗಿ ಕುಳಿತಿದ್ದೆ. ನನ್ನ ಭಾವನಾ ತರಂಗಗಳು ಬಹುದೂರ ಸಾಗಿದ್ದವು. ಭಾರತದ ಬಾಪುವನ್ನು ಕಳಕೊಂಡಿರುವೆವು. ಆದರೆ ಅದಕ್ಕಾಗಿ ರೋಧಿಸಲೇಕೆ? 'ಜಾತಸ್ಯಂ ಮರಣಂ ಧ್ರುವಂ' ಎಂದಿರುವಾಗ ಇಂದು ಗುಂಡಿನಿಂದಲ್ಲದಿದ್ದರೂ ನಾಳೆ ಬೇರೊಂದು ರೀತಿಯಲ್ಲಿ ಸಾಯಲೇ ಬೇಕಲ್ಲವೇ? ಈ ಸತ್ಯವು ಕಾರ್ಯರೂಪದಲ್ಲಿ ಬಂದಾಗ ಅಳುವದೆಷ್ಟು ಹುಚ್ಚುತನ! ಗಾಂಧೀಜಿಯವರು ಮಾಡಿದ ಕೃತಿಗಳು, ಸಾಧಿಸಿದ ತತ್ವಗಳು, ಉಪದೇಶಿಸಿದ ಸತ್ಯ ಅಹಿಂಸೆಗಳು ಜಗತ್ತಿಗೆ ಸೂರ್ಯಚಂದ್ರರಂತಿರಲು ಅವರಿಗೆ ಸಾವೆಲ್ಲಿ? 'ನೈನಂ ಛಿಂದಂತಿ ಶಸ್ತ್ರಾಣಿ, ನೈನಂ ದಹತಿ ಪಾವಕಃ'ವೆಂದು ಆತ್ಮದ ಅಖಂಡತ್ವವನ್ನೂ, ಅಮರತ್ವವನ್ನೂ ಅರಿತ ಹಿಂದೀಯನು ವ್ಯರ್ಥವಾಗಿ ರೋಧಿಸುವದೆಷ್ಟು ಹುಚ್ಚುತನ!

ಪ್ರಾರ್ಥನಾ ಕೋಣೆಯಲ್ಲಿ ಎಲ್ಲರೂ ಪ್ರಾರ್ಥನೆಗಾಗಿ ಕುಳಿತೆವು. ಮೂರು ವರ್ಷದ ಕುಸುಮದಿಂದ ಹಿಡಿದು ಮನೆಯವರೆಲ್ಲರಿದ್ದರು. ಸುಶ್ರಾವ್ಯವಾದ ಹಾಗೂ ದುಃಖಪೂರಿತ ಕಂಠದಿಂದ ಲೀಲಾ ಕಮಲರು ಹಾಡುತ್ತಿದ್ದರು 'ರಘುಪತಿ ರಾಘವ ರಾಜಾರಾಂ, ಪತಿತ ಪಾವನ ಸೀತಾರಾಂ.' ಆ ಧ್ವನಿ ಇಂದೂ ಕೂಡ ನನ್ನ ಕಿವಿಯಲ್ಲಿ ಮೊಳಗುತ್ತಿದೆ. ಅದನ್ನು ನೆನೆದು ಹೃದಯವು ಒಂದು ಸ್ತಬ್ಧತೆಯನ್ನು ತಳೆಯುತ್ತಿದೆ. ಬಹುಶಃ ಅಂದಿನಷ್ಟು ಅನನ್ಯತೆಯಿಂದ ರಾಮನನ್ನು ಎಂದೂ ಭಜಿಸಿರಲಿಕ್ಕಿಲ್ಲ!

ಪಕ್ಕದ ಮನೆಯೊಂದರಲ್ಲಿ ರೇಡಿಯೋವಿತ್ತು. ಅದನ್ನು ಕೇಳಲು ಹೋದೆನು. ಮೃತಶರೀರವನ್ನು ಇಟ್ಟುಕೊಂಡು ಅದರ ಸುತ್ತಲೂ ಕಣ್ಣೀರು ಮಿಡಿಯುತ್ತಾ ಕೂತಿರುವ ಬಂಧುಗಳಂತೆ ರೇಡಿಯೋದ ಸುತ್ತ ಹಲವಾರು ಜನರು ಮೌನದಿಂದ ಕುಳಿತು ರೇಡಿಯೋ ಕೇಳುತ್ತಿದ್ದರು. ಪ್ರತಿಯೊಬ್ಬರ ಕಣ್ಣಿನಿಂದಲೂ ನೀರು ಎಡೆಯಿಲ್ಲದೆ ಹರಿಯುತ್ತಿತ್ತು. ರೇಡಿಯೋದಲ್ಲಿ ಬಾಪುವಿನ ಪ್ರಿಯಗೀತೆ, 'ವೈಷ್ಣವ ಜನತೋ ತೇನೇ ಕಹಿಯೆ' ಕೇಳುತ್ತಿತ್ತು: ಭರತಖಂಡದ ಮಹಾ ಮುಂದಾಳುಗಳು ಅನಾಥವಾದ ರಾಷ್ಟ್ರಕ್ಕೆ ಧೈರ್ಯದ ಮಾತು ಹೇಳುತ್ತಿದ್ದರು.

[illegible] ಹೃದಯಭಾರದಿಂದ [illegible] ನಾನು [illegible] ಬೀದಿ [illegible] ಅದೇ ಧ ಪೃಷ್ಠ ರಸ್ತೆಯ [illegible] ಮೆರವಣಿಗೆ [illegible] ಎಲ್ಲರ [illegible] ಮೆರವಣಿಗೆ ಇದ್ದಿತು [illegible], ಹೀಗೆ ಮಾಡ[illegible] ಯಾರೂ ಹೇಳಿರಲಿಲ್ಲ. [illegible] ತಾನೆ ಏಕಮುಖವಾಗಿ [illegible] ಜನಸ್ತೋಮವನ್ನು ಈ ರೀತಿ ಐಕ್ಯದಿಂದ ಏಕೀಕೃತಗೊಳಿಸಿದ ಉದಾರ [illegible] ಬಹುಶಃ ಚರಿತ್ರೆಯಲ್ಲಿ ದೊರೆಯು[illegible] ಜನಕ[illegible] ನಾನಾ ಉಡುಪಿನವರಿದ್ದರು. ನಾನಾ ಜಾತಿಯವರಿದ್ದರು. ನಾನಾ ಪಂಗಡದವರಿದ್ದರು. ಬಡವರು, ಶ್ರೀಮಂತರು ಹೀಗೆ ಸಮಾಜದ ಎಲ್ಲ ಅಂತಸ್ಥಿನ ಜನರಿದ್ದರು. ಆದರೆ ಆ ಭೇದಭಾವ ಆ ಕ್ಷಣದಲ್ಲಿರಲಿಲ್ಲ. ಎಲ್ಲರೂ ಒಂದು. ಎಲ್ಲರೂ ಪಿತನನ್ನು ಕಳಕೊಂಡ ತಬ್ಬಲಿ ಮಕ್ಕಳು!

ಮಹತ್ವದ ಇನ್ನೊಂದು ವಿಚಾರ ಹೇಳದಿರಲಾಗುವದಿಲ್ಲ. ಯಾವದೋ ಕಾರಣದಿಂದ ಕಳೆದ ನಾಲ್ಕು ವರ್ಷಗಳಿಂದ ಶಂಕರನು ನನ್ನೊಡನೆ ಮಾತಾಡುತ್ತಿರಲಿಲ್ಲ. ಇದಕ್ಕೆ ರಾಜಕೀಯ ಕಾರಣವೇ ಪ್ರಮುಖ. ಅಂದು ರಸ್ತೆಯಲ್ಲಿ ನನ್ನನ್ನು ಕಂಡೊಡನೆಯೇ ಓಡಿಬಂದು ನನ್ನನ್ನು ತಬ್ಬಿಕೊಂಡ! ನನಗೇ ಆಶ್ಚರ್ಯವಾಯಿತು. [illegible] ಕಣ್ಣೀರಿಡುವನಾಗಿ ಗದ್ಗದ ಸ್ವರದಿಂದ ಹೇಳತೊಡಗಿದ, 'ವಿನಾಯಕ, ಯಾವದೋ ಕ್ಷುಲ್ಲಕ ಕಾರಣಗಳಿಗಾಗಿ, ನನ್ನ ಅಹಂಕೃತಿಯ ಸ್ವಾರ್ಥ ಲಾಭದ ಪ್ರವೃತ್ತಿಗಾಗಿ ನಿನ್ನೊಡನೆ ಜಗಳ ಮಾಡಿಕೊಂಡು ಆ ಮೂರು ವರ್ಷ ನಿನ್ನೊಡನೆ ಮಾತಾಡಲಿಲ್ಲ. ಅದು ನನ್ನ ಅಪರಾಧವೆಂದು ಇಂದು ತಿಳಿಯಿತು. ನಾವಿಬ್ಬರೂ ಕಾಂಗ್ರೆಸ್ಸಿನವರಾಗಿ ಕೂಡಿದ್ದು, ಸರ್ವಧರ್ಮ ಸಮನ್ವಯಾಚಾರ್ಯ ಮಹಾತ್ಮರ ಅನುಯಾಯಿಗಳೆಂದು ಕೊಂಡು, ಸತ್ಯ, ಪ್ರೀತಿ, ಅಹಿಂಸೆ ಮೊದಲಾದ ತತ್ವಗಳನ್ನು ಬದಿಗೊತ್ತಿ ವರ್ತಿಸುವದು ಯೋಗ್ಯವಲ್ಲ. ಮಹಾತ್ಮರು ಜೀವಿಸಿದ್ದಾಗ ಅವರ ತತ್ವಗಳ ಪ್ರತಿಪಾದನೆಯನ್ನು ಅವರು ಮಾಡುತ್ತಿದ್ದರು. ಅವರನ್ನು ಇಂದು ಕಳಕೊಂಡಿರುವೆವು. ಅವರು ಸಾರಿದ ಸಿದ್ಧಾಂತ, ಮಾಡಿತೋರಿಸಿದ ಸೇವೆ, ಎತ್ತಿಹಿಡಿದ ಸಮತಾಭಾವನೆಗಳನ್ನು ಬೆಳೆಸುವದು ನಮ್ಮ ಕರ್ತವ್ಯ. ಮಹಾತ್ಮರಂಥಾ ಮಹಾಪುರುಷರೂ ಕೂಡ ಈ ಜಗತ್ತನ್ನು ಬಿಟ್ಟು ತೊಲಗಬೇಕಿರುವಾಗ ನಾವು ನಮ್ಮ ಕಿಂಚಿತ್ ದೃಷ್ಟಿಯನ್ನು ಬೆಳೆಸಿಕೊಂಡು ಈ ನಾಲ್ಕು ದಿನದ ಜಗತ್ತಿನಲ್ಲಿ ಹೊಯ್ದಾಡಿಕೊಳ್ಳುವದು ಅಯೋಗ್ಯ. ನಮ್ಮ ಜಗಳ, ಘರ್ಷಣೆ, ಪೈಪೋಟಿ, ಪಾರ್ಟಿ ಪಕ್ಷಗಳಿಗೆ ಸ್ವಾರ್ಥವೇ ಮೂಲ. ಸ್ವಾರ್ಥದ ತ್ಯಾಗಮಾಡದವನು ರಾಜಕೀಯ ಕೆಲಸಗಾರನಾಗಲಾರ. ಮಹಾತ್ಮರ ಅನುಯಾಯಿ ಎಂದುಕೊಳ್ಳಲಾರ. ಆದ್ದರಿಂದ ನನ್ನ ಹಿಂದಿನ ಕಿಂಚಿತ್ ಭಾವನೆಗಳನ್ನು ಮಹಾತ್ಮರ ಹೆಸರಿನಲ್ಲಿ ಕಿತ್ತೊಗೆದಿರುವೆನು' ಎಂದನು. ಅವನು ಹೇಳಿದ ಮಾತು ನನ್ನ ಹೃದಯಕ್ಕೂ ಬೆಳಕಾಯಿತು. ನನ್ನ ವಿರೋಧಿಯಾಗಿದ್ದ ಶಂಕರನ ನನ್ನ ಹೃದಯದಲ್ಲಿ ಹಚ್ಚಿದ ದೀಪ ಇಂದೂ ಉರಿಯುತ್ತಿದೆ. ಮಹಾತ್ಮರು ಪಾರ್ಥಿವ ಶರೀರವನ್ನು ಆ ದಿನ ತೊರೆದರೂ ಆ ರೀತಿ ಎಷ್ಟು ಜನರ ಹೃದಯದ ಬೆಳಕಾಗಿಲ್ಲ? ಅಂದಿನ ಆ ದಿನ ನನ್ನ ಆತ್ಮವಿಕಸನದ ದಿನ. ಅಂದಿನ ಆ ನೆನಪು ಜೀವನದ ಅಮೂಲ್ಯ ಬಂಗಾರ. 'ಮೂಕಂ ಕರೋತಿ ವಾಚಾಲಂ, ಪಂಗುಂ ಲಂಘಯತೇ ಗಿರಿಂ' ಎಂದಂತೆ ಆ ದಿವ್ಯ ಜ್ಯೋತಿ ನಕ್ಕೆ ಮಿಗಿಲಾದುದೇನು?

Edited, Printed and Published by P. I. Belliappa at 'Kodagu Press, Mercara, for 'Kodagu Ltd.

ಎಂಪೈರ್ ಆಫ್ ಇಂಡಿಯಾ

ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

48ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು.

ಒಟ್ಟು ಆದಾಯ	 1,07,00,000	ಮೊತ್ತದ
ಚಾಲ್ತಿಯಿರುವ ವಿಮೆ	.... 17,7[illegible],000	"
ಆಸ್ತಿ	 6,67,60,000	"
ಕಂಪೆನಿಯು ಆದಿಯಲ್ಲಿ ಕೊಟ್ಟ ಕ್ಲೈಮುಗಳು	 8,83,62,000	"

ಅಂಗ ಶಾಖೆ: ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು.

ಏಜೆನ್ಸಿ ಅರ್ಜಿಗಳನ್ನು ಸ್ವಾಗತಿಸಿದೆ.

ಪ್ರಧಾನ ಶಾಖೆ: ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ

ಶ್ರೀ ಭಗವದ್ಗೀತಾ ತತ್ವಗಳು.

ಬಾಳಿನ ಮುಖ್ಯ ಸಿದ್ಧಾಂತ ಮತ್ತು ಸ್ವರೂಪ.

[ಶ್ರೀ ಕಾವೇರಿ ಆಶ್ರಮ, ವೀರಾಜಪೇಟೆ ಇವರಿಂದ]

ಶ್ರೀ ಕೃಷ್ಣನು ಅರ್ಜುನನ ನೆಪದಿಂದ ನಮಗೆಲ್ಲರಿಗೂ ಗೀತಾದಾನವನ್ನು ಮಾಡಿರುವನು. ಗೀತೆಯ ಮೊದಲನೆ ಅಧ್ಯಾಯ ವಿಷಾದಯೋಗವೆಂಬುದು, ನಮಗೆಲ್ಲರಿಗೂ ಅನ್ವಯಿಸುವಂತೆಯೇ ಇದೆ. ಎರಡನೆ ಅಧ್ಯಾಯದಿಂದ ಗೀತೆಯ ಉಪದೇಶ ಪ್ರಾರಂಭ. ಶುರುವಿನಲ್ಲಿ ಶ್ರೀ ಕೃಷ್ಣನು ಬಾಳಿನ ಮಹಾ ಸಿದ್ಧಾಂತವನ್ನು ಹೇಳುತ್ತಾನೆ. ಗೀತೆಯ ಎರಡನೆ ಅಧ್ಯಾಯದೊಳಗಿನ ಬಾಳಿನ ತತ್ವ ಜೀವನದ ಮೂಲ ಸಿದ್ಧಾಂತವಾಗಿದೆ. ಇಲ್ಲಿಂದ ಗೀತಾತತ್ವವು ಬೆಳೆದು ಕಡೆಯ ಅಧ್ಯಾಯದಲ್ಲಿ ಪ್ರಸಾದಯೋಗದ ಫಲ ಬಿಡುತ್ತದೆ.

ಕಳೆದ ಸಲ ನಾವು ತುಕಾರಾಂ ಮಹಾಶಯರ ಭಕ್ತಿ ಎಷ್ಟರ ಮಟ್ಟಿನದಾಗಿತ್ತೆಂದು ನೋಡಿದೆವು. ಭಕ್ತಿಯಲ್ಲಿ ಫಲಾಭಿಲಾಷೆಯು ಚಿಗುರು ಬರದಿರುವಂತೆ ಎಚ್ಚರದಿಂದಿರುವುದು ಜೀವನದ ಕಲೆ. ತುಕಾರಾಮರ ಭಕ್ತಿಯಲ್ಲಿ ಫಲಾಭಿಲಾಷೆಯು ಸ್ವಲ್ಪವೂ ಇಲ್ಲ.

ಇದೇ ರೀತಿ ಪುಂಡಲೀಕನಲ್ಲಿಯೂ ನಿಷ್ಕಾಮ ಭಕ್ತಿಯನ್ನು ನಾವು ಕಾಣಬಹುದು. ಪುಂಡಲೀಕನು ತಂದೆ ತಾಯಿಗಳ ಸೇವೆಯೇ ಸ್ವಧರ್ಮವೆಂದು ಭಕ್ತಿಯಿಂದಲೂ ಶ್ರದ್ಧೆಯಿಂದಲೂ ಅವರ ಸೇವೆಯಲ್ಲಿಯೇ ನಿರತನಾಗಿದ್ದನು. ಇವನ ಪಿತೃಭಕ್ತಿಗೆ ಮೆಚ್ಚಿ ದೇವರೇ ಇವನಿಗೆ ಪ್ರತ್ಯಕ್ಷನಾದನು. ಆ ಸಮಯದಲ್ಲಿ ಪುಂಡಲೀಕನಿಗೆ ವಿರಾಮವಿರಲಿಲ್ಲ. ತಂದೆಯ ಉಪಚಾರದಲ್ಲಿದ್ದನು. ದೇವರು ಪ್ರತ್ಯಕ್ಷನಾಗಿ ಬಂದರೂ ಸಹ ತನ್ನ ಕೆಲಸವನ್ನು ತಾನು ಬಿಡಲಿಲ್ಲ. "ಎಲೈ ದೇವರೇ, ನೀನು ನನಗೆ ದರ್ಶನ ಕೊಟ್ಟದ್ದು ಸಂತೋಷದ ವಿಷಯ. ಈಗ ನಾನು ನನ್ನ ತಂದೆಯ ಸೇವೆಯನ್ನು ಮಾಡುತ್ತಿದ್ದೇನೆ. ನೀನು ಬಂದೆಯೆಂದು ನನ್ನ ಕರ್ತವ್ಯವನ್ನು ಬಿಡಲಾರೆ. ನಿನ್ನ ಕಡೆ ಈಗ ಗಮನ ಕೊಡಲು ನನಗೆ ಅವಕಾಶವಿಲ್ಲ. ನೀನೇನೋ ದೇವರು, ಆದರೆ ನನ್ನ ಮಾತಾಪಿತೃಗಳೂ ದೇವರೇನೇ. ಇವರಿಗೆ ಉಪಚಾರ ಮಾಡಿ ಬರುವವರೆಗೆ ಸ್ವಲ್ಪ ಇರು" ಎಂದು ಹೇಳಿ ಒಂದು ಇಟ್ಟಿಗೆಯನ್ನು ಹಾಕಿ, "ಇಲ್ಲಿ ಕುಳಿತಿರು" ಎಂದು ಹೇಳಿ ತನ್ನ ಕೆಲಸದಲ್ಲಿಯೇ ನಿರತನಾಗಿದ್ದನು. ಇದು ಇನ್ನೂ ದೊಡ್ಡ ಶೋಧನೆ. ತುಕಾರಾಮರ ಭಕ್ತಿಗೆ ತೋರಿಸಿದ ಫಲದ ಆಸೆಗಿಂತಲೂ ಪುಂಡಲೀಕನಿಗೆ ತೋರಿಸಿದ ಆಸೆಯು ತುಂಬಾ ಮೋಹಕವಾದದ್ದು. ದೇವರೇ ಪ್ರತ್ಯಕ್ಷವಾದರೂ ಸಹ ತನ್ನ ಕರ್ತವ್ಯವನ್ನು ಬಿಡದಿರಬೇಕಾದರೆ ಪುಂಡಲೀಕನು ಎಂಥಾ ಸ್ಥಿತಪ್ರಜ್ಞನಾಗಿರಬೇಕು. ಕರ್ಮಕ್ಕೆ ಇದಕ್ಕಿಂತಲೂ ಒಂದು ಹೆಚ್ಚಿನ ಫಲ ಯಾರೂ ತಿಳಿಯರು. ಅದೇ ಸಿಕ್ಕಿದರೂ ಸಹ ಅದರಲ್ಲಿಯೂ ಮೋಹವಿಲ್ಲದಿರುವುದು; ತ್ಯಾಗದ ಅತ್ಯಂತ ಮೇಲು ಮಟ್ಟವನ್ನು ಸೂಚಿಸುತ್ತದೆ. ಮನುಷ್ಯನು ತನ್ನ ಸ್ವಧರ್ಮವನ್ನು ನಿಶ್ಚಯ ಮಾಡಿದ ಮೇಲೆ ಕಡೇ ತನಕ ಅದರಲ್ಲಿಯೇ ತನ್ಮಯನಾಗಬೇಕು. ಅದರಲ್ಲಿ ಫಲಾಪೇಕ್ಷೆ ಇರಬಾರದು. ಭಕ್ತಿ ಮತ್ತು ಶ್ರದ್ಧೆಯಿಂದ ಇಂದ್ರಿಯಗಳನ್ನು ನಿಗ್ರಹಿಸಿ, ಸ್ಥಿತಪ್ರಜ್ಞನಾಗಿ ತನ್ನ ಸರ್ವ ಶಕ್ತಿಯನ್ನು ಸ್ವಧರ್ಮಸಾಧನೆಯಲ್ಲಿಯೇ ಉಪಯೋಗಿಸಬೇಕು. ಮನಸ್ಸಿನಲ್ಲಿ ಭಕ್ತಿ, ಪ್ರೀತಿ, ಇರುವ ತನಕ ದೇವರ ದರ್ಶನವು ಹೆಚ್ಚಿನ ಮಾತಲ್ಲ. ಫಲತ್ಯಾಗದ ಅತ್ಯಂತ ಮೇಲ್ಮಟ್ಟವೆಂದರೆ ಮೋಕ್ಷದಲ್ಲಿಯೂ ಆಸೆಯಿಲ್ಲದಿರುವಿಕೆ. ವಾಸನಾ ಮುಕ್ತಿಯೇ ಮೋಕ್ಷ. ಮತ್ತೆ ಮೋಕ್ಷಕ್ಕೆ ವಾಸನೆ ಬೇಕು. ಅಂದರೆ ಮೋಕ್ಷಕ್ಕೂ ಸಹ ಆಸೆಪಡಬೇಕಾದದ್ದಿಲ್ಲ. ಅದೂ ಸಹಜವಾದುದು. ಫಲತ್ಯಾಗದಿಂದ ಈ ಮಟ್ಟಕ್ಕೇರಿದರೆ ಜೀವನ ಕಲೆಯನ್ನು ಪೂರ್ಣವಾಗಿ ಸಾಧಿಸಿದಂತಾಯಿತು.

ಇಲ್ಲಿಯವರೆಗೆ ನಾವು ಜೀವನಶಾಸ್ತ್ರ ಮತ್ತು ಜೀವನ ಕಲೆ ಎರಡನ್ನೂ ನೋಡಿದೆವು. ಶಾಸ್ತ್ರವು ಹೇಳುತ್ತದೆ, ಕಲೆಯು ತಿಳಿಸುತ್ತದೆ. ಶಾಸ್ತ್ರವು ನಿರ್ಗುಣ, ಕಲೆಯು ಸಗುಣ. ಶಾಸ್ತ್ರವು ಹೇಳುವ ಕ್ರಮದಲ್ಲಿ ಅದರ ಕಲೆಯನ್ನು ತಿಳಿದು ಆಚರಣೆ ಮಾಡಬೇಕು. ಇಷ್ಟೆಲ್ಲಾ ತಿಳಿದರೂ ಉಪಾಸಕರಿಗೆ ಯಾವುದೂ ಪ್ರತ್ಯಕ್ಷವಾಗಿ ಕಾಣದೆ ಆಚರಣೆಗೆ ಸಾಧ್ಯವಾಗಬಾರದು. ಶಾಸ್ತ್ರ ಮತ್ತು ಕಲೆ ಎರಡನ್ನೂ ತಿಳಿದು ಅದರಂತೆ ನಡೆಯುವವರು ಸ್ಥಿತಪ್ರಜ್ಞನು. ಗುಣವು ಇವನಲ್ಲಿ ಮೂರ್ತಿಮತ್ತಾಗಿರುತ್ತದೆ. ಇವನ ದರ್ಶನ ನಮಗೆ ಆದರೆ ಸಾಧನೆಗೆ ಬಹು ಸುಲಭ. ಅರ್ಜುನನು (ಎರಡನೇ ಅಧ್ಯಾಯದ ಕೊನೆಯಲ್ಲಿ) ಪರಮಾತ್ಮನನ್ನು ಇದೇ ಪ್ರಶ್ನೆ ಕೇಳುತ್ತಾನೆ, "ಭಗವಾನ್, ಶಾಸ್ತ್ರವನ್ನು ಹೇಳಿದೆ. ಅದರೂ ಸಹ ನನಗೆ ಚೆನ್ನಾಗಿ ಹೊಳೆಯುತ್ತಿಲ್ಲ. ಆದುದರಿಂದ ಅವರ ಸ್ವರೂಪವನ್ನು ನನಗೆ ತಿಳಿಸು. ಸ್ಥಿರವಾದ ಬುದ್ಧಿ ಉಳ್ಳ ಸಾಂಖ್ಯ ಶಾಸ್ತ್ರನಿಷ್ಠನಾದ, ಫಲತ್ಯಾಗ ಯೋಗಸಿದ್ಧನ ಲಕ್ಷಣವೇನು? ದಯವಿಟ್ಟು ನನಗೆ ವಿಶದಪಡಿಸು. ಸಂಪೂರ್ಣ ಫಲತ್ಯಾಗಿಯಾದ, ಸದಾ ಸ್ವಧರ್ಮ ಕರ್ಮದಲ್ಲಿಯೇ ಮಗ್ನನಾದ, ದೃಢವಾದ ಮನಸ್ಸುಳ್ಳ ಸ್ಥಿತಪ್ರಜ್ಞನೆನಿಸಿದವನ ನಡೆ ಹೇಗೆ, ಮಾತು ಹೇಗೆ, ಇರವು ಹೇಗೆ? ಇವನ್ನು ನನಗೆ ತಿಳಿಸು, ಅವರನ್ನು ಹೇಗೆ ಗುರುತಿಸುವುದು?" ಎಂದು ಪ್ರಾರ್ಥಿಸುತ್ತಾನೆ.

ಸ್ಥಿತಪ್ರಜ್ಞನ ಲಕ್ಷಣಗಳು, ಎರಡನೇ ಅಧ್ಯಾಯದ ಕೊನೆಯಲ್ಲಿ, ಹದಿನೆಂಟು ಶ್ಲೋಕಗಳಲ್ಲಿ ಹೇಳಲ್ಪಟ್ಟಿದೆ.

ಭಗವದ್ಗೀತೆಗೆ 'ಸ್ಥಿತಪ್ರಜ್ಞನೆ' ಆದರ್ಶ ಮೂರ್ತಿ. ಸ್ಥಿತಪ್ರಜ್ಞನೆಂಬ ಪದಕ್ಕೆ ಸ್ಥಿರವಾದ ಬುದ್ಧಿಯುಳ್ಳವ ಎಂದರ್ಥ. ಆತ್ಮದೊಳಗೆ ಬುದ್ಧಿ ಸ್ಥಿರವಾಗಿರುವವನು ಸ್ಥಿತಪ್ರಜ್ಞನು. ಈ ಆದರ್ಶ ಮೂರ್ತಿಯ ಲಕ್ಷಣವನ್ನು ನಾವು ಚೆನ್ನಾಗಿ ತಿಳಿಯಬೇಕು. ನಿತ್ಯ ಪಾರ ಮಾಡಬೇಕು. ನಿತ್ಯ ಪಠನ ಒಂದೇ ಸಾಲದು. ಅದರೊಡನೆ ನಿತ್ಯ ಮನನ ಮತ್ತು ಆತ್ಮ ಪರೀಕ್ಷೆಯೂ ಮುಖ್ಯ. ಭಗವದ್ಗೀತೆಯ ಈ ಆದರ್ಶ ಮೂರ್ತಿಯ ವರ್ಣನೆಯಲ್ಲಿ ಸಿದ್ಧ ಲಕ್ಷಣಗಳೂ, ಸಾಧನ ಲಕ್ಷಣಗಳೂ ಎರಡೂ ಇವೆ. ಇದು ಮನಸ್ಸಿಗೆ ಚೆನ್ನಾಗಿ ಹತ್ತಬೇಕು. ಆಗಲೇ ಅದು ನಮಗೆ ಪ್ರಯೋಜನಕಾರಿಯಾಗುತ್ತದೆ.

ಸ್ಥಿತಪ್ರಜ್ಞನು ಸಂಯಮ ಮೂರ್ತಿ. ಬುದ್ಧಿಯು ಆತ್ಮದೊಳಗಿರಬೇಕು, ಮತ್ತು ಇಂದ್ರಿಯಗಳೂ ಆತ್ಮದೊಳಗಿರಬೇಕು ಅವನು ಸಂಯಮಿ.

ಮನಸ್ಸು ಯಾವಾಗಲೂ ಹೊರಕ್ಕೆ ಧಾವಿಸುತ್ತಿರುತ್ತದೆ. ಅದರ ಸ್ವಭಾವವೇ ಚಂಚಲವಾದದ್ದು. ಅದನ್ನು ಬಿಗಿ ಹಿಡಿಯುವುದೇ ಬಹಳ ಕಷ್ಟ. ಮನಸ್ಸನ್ನು, ಇಂದ್ರಿಯಗಳನ್ನು ಕಂಡಾಬಟ್ಟೆ ಮನಸ್ಸೋ ಇಚ್ಛೆ ಬಿಡುವುದು ಎಲ್ಲರಿಗೂ ಸುಲಭ. ಪ್ರಯತ್ನ ಮತ್ತು ಅಭ್ಯಾಸವಿಲ್ಲದೆ ಸ್ವಾಧೀನ ಮಾಡಿಕೊಳ್ಳಲಾಗುವುದಿಲ್ಲ. ಇಂದ್ರಿಯಗಳಿಂದ ಎಲ್ಲಾ ಕೆಲಸಗಳು ಸಾಧ್ಯ. ಇಂದ್ರಿಯಗಳನ್ನು ಉಪಯೋಗಿಸದೆಯೇ ಇರಬಹುದು. ಉಪವಾಸ ಮಾಡುವುದೂ ಸುಲಭ. ಆದರೆ ಬೇಕಾದ ಕೆಲಸಕ್ಕೆ ಬೇಕಾದ ಸಮಯದಲ್ಲಿ ಇಂದ್ರಿಯಗಳನ್ನು ಉಪಯೋಗಿಸಲು ಕಷ್ಟವಾಗುತ್ತದೆ. ಸಾಧಾರಣ ಮನುಷ್ಯನಿಗೆ ಮನಸ್ಸು ಎಲ್ಲೆಲ್ಲೋ ಇರುತ್ತದೆ. ತನ್ನ ಕರ್ತವ್ಯದ ಕಡೆಗಿರುವುದಿಲ್ಲ. ಬೇಡಾದ ಕೆಟ್ಟ ಕೆಲಸಗಳ ಕಡೆಗೇ ಮನಸ್ಸು ಹೋಗುತ್ತದೆ. ಹಾಗೆಯೇ ಇತರ ಇಂದ್ರಿಯಗಳು ಹಲವಾರು ವಿಧವಾದ ಅಕಾರ್ಯಗಳಿಗೆ ಉಪಯೋಗಿಸಲ್ಪಡುತ್ತವೆ. ಸ್ವಧರ್ಮಾಚರಣೆಗೆ ಮಾತ್ರ ಉಪಯೋಗಿಸಿಕೊಳ್ಳಬೇಕಾದ ಇಂದ್ರಿಯ ಯಾವುದೋ ಕೆಲಸಕ್ಕೆ ಉಪಯೋಗವಾಗುತ್ತದೆ. ಇದೇ ದುರಭ್ಯಾಸವಾಗಿಬಿಟ್ಟಿರುತ್ತದೆ. ದುಷ್ಕಾರ್ಯಗಳ ಕಡೆಗೇ ಮನಸ್ಸು ಓಡುತ್ತದೆ. ಇತರ ಇಂದ್ರಿಯಗಳೂ ಇಂತಹ ಮನಸ್ಸಿನ ಅಧೀನವಾಗಿರುತ್ತವೆ. ಆದರೆ ಸಂಯಮಿಗೆ ಇದರ ಮೇಲೆಲ್ಲಾ ಹಿಡಿತ ಇರುತ್ತದೆ. ಸಂಯಮಿಯ ಮನಸ್ಸು ಮತ್ತು ಇಂದ್ರಿಯಗಳು ಸತ್ಕಾರ್ಯದಲ್ಲಿಯೇ, ಸ್ವಧರ್ಮಾಚರಣೆಯಲ್ಲಿಯೇ ಉಪಯೋಗವಾಗುತ್ತವೆ. ಆಮೆಯು ತನ್ನ ಅಂಗಗಳನ್ನು ಉಪಯೋಗಿಸುವಂತೆ ಸಂಯಮಿಯು ತನ್ನ ಇಂದ್ರಿಯಗಳನ್ನು ಇಟ್ಟುಕೊಂಡಿರುತ್ತಾನೆ. ನೀರಿನಲ್ಲಿರುವ ಆಮೆಯು ಅಪಾಯವಿಲ್ಲದಿರುವಾಗ ತನ್ನ ತಲೆ ಕಾಲುಗಳನ್ನು ಹೊರಗೆ ಹಾಕಿಕೊಂಡಿರುತ್ತದೆ. ಏನಾದರೂ ಅಪಾಯ ಸಂಭವಿಸುವ ಸಂದರ್ಭ ಬಂದರೆ ಎಲ್ಲವನ್ನೂ ಒಳಗೆ ಎಳೆದುಕೊಂಡುಬಿಡುತ್ತದೆ. ಇದೇ ರೀತಿ ಬುದ್ಧಿ, ಮನಸ್ಸು, ಮತ್ತು ಇಂದ್ರಿಯಗಳು ತನ್ನ ಸ್ವಾಧೀನವಿರುವ ಸಂಯಮಿಯು ತನ್ನ ಮನಸ್ಸು ಮತ್ತು ಇಂದ್ರಿಯಗಳನ್ನು ಸ್ವಧರ್ಮಾಚರಣೆಗಾಗಿ ಮಾತ್ರ ಉಪಯೋಗಿಸಿಕೊಳ್ಳುತ್ತಾನೆ. ಪ್ರತಿ ನಿಮಿಷವೂ ತನ್ನ ಚರ್ಯೆಯಲ್ಲಿ ಬಹು ಎಚ್ಚರದಿಂದಿದ್ದು ಎಲ್ಲಿ ತನ್ನ ಮನಸ್ಸು ಕೆಟ್ಟ ವಿಷಯಗಳನ್ನು ಯೋಚನೆ ಮಾಡಿತೋ ಎಂದು ನೋಡಿಕೊಳ್ಳುತ್ತಾನೆ. ಯಾವ ಇಂದ್ರಿಯವೂ ಅಕಾರ್ಯಗಳನ್ನು ಮಾಡಲು ತೊಡಗಬಾರದು. ಹೀಗೆ ಸ್ವಧರ್ಮಾಚರಣೆಯಲ್ಲಿ ಮನಸ್ಸು ಮತ್ತು ಇಂದ್ರಿಯಗಳನ್ನು ಉಪಯೋಗಿಸಿಕೊಳ್ಳುತ್ತಾ ಪರಧರ್ಮದಲ್ಲಿ ತೊಡಗದಂತೆ ಎಚ್ಚರದಿಂದ ಕಾದುಕೊಳ್ಳುವವನು 'ಸಂಯಮಿ' ಇಂತಹ ಸಂಯಮ ಮೂರ್ತಿಯೇ ಸ್ಥಿತಪ್ರಜ್ಞನು. ಕಾಮ ಕ್ರೋಧಾದಿ ಶತ್ರುಗಳನ್ನು ಪೂರ್ಣವಾಗಿ ಜಯಿಸಿ, ಶುದ್ಧ ಮನಸ್ಕನಾಗಿ ಇಂದ್ರಿಯ ಸುಖಗಳಿಂದ ಮೈಮರೆಯದ ದುಃಖ ಬಂದರೆ ಹಿಂಜರಿಯದೆ ಸಮಚಿತ್ತನಾಗಿ ನಿಷ್ಕಾಮ ಕರ್ಮಯೋಗಿಯಾದವನೇ ಸ್ಥಿತಪ್ರಜ್ಞ. ಎಲ್ಲಾ ಇಂದ್ರಿಯಗಳಿಗೂ ಕಡಿವಾಣ ಹಾಕಿ ಕರ್ಮಯೋಗದಲ್ಲಿ ಅವನ್ನು ಓಡಿಸುತ್ತಾನೆ. ಇಂದ್ರಿಯಗಳೆಂಬ ಎತ್ತುಗಳಿಂದ ಅವನು ಸ್ವಧರ್ಮಾಚರಣೆಯ ಗದ್ದೆಯನ್ನು ಉಳುತ್ತಾನೆ. ತನ್ನ ಆಯುಸ್ಸನ್ನೆಲ್ಲಾ ಪರಮಾರ್ಥದಲ್ಲಿ ಕಳೆಯುತ್ತಾನೆ. ವಿಷಯ ಭೋಗಗಳಲ್ಲಿ ಇಂದ್ರಿಯಗಳನ್ನು ಸ್ತಂಭಿಸಿ ಪರಮಾರ್ಥದಲ್ಲಿಯೇ ಅವನ್ನು ಉಪಯೋಗಿಸುತ್ತಾನೆ. ಇದು ಸಾಧಾರಣ ಕೆಲಸವಲ್ಲ. ತುಂಬಾ ಪ್ರಯತ್ನ ಮತ್ತು ಜ್ಞಾನಬೇಕು.

ಮನುಷ್ಯನು ಎಷ್ಟು ಪ್ರಯತ್ನ ಮಾಡಿದರೂ, ಎಷ್ಟು ಜ್ಞಾನ ಪಡೆದಿದ್ದರೂ ಸದಾ ಸಂಯಮದಿಂದಿರುವುದು ಸಾಧ್ಯವೆಂದು ಹೇಳಲಾಗುವುದಿಲ್ಲ. ಕಾಮಕ್ರೋಧಾದಿಗಳಿಂದ ತುಂಬಿದ ಈ ಶರೀರಕ್ಕೆ ಬಂದ ಮೇಲೆ ಸದಾ ಸಂಯಮವನ್ನು ಕಾದುಕೊಂಡಿದ್ದೇನೆಂದು ಹೇಳಲು ಬರುವುದಿಲ್ಲ. ಯಾವಾಗಲಾದರೂ ಎಡವಿಬಿಡಬಹುದು. ಆದರೆ ಇದರಿಂದ ಮನುಷ್ಯನು ನಿರಾಶನಾಗಬಾರದು. ಸಾಧಕನು ಎಂದಿಗೂ ನಿರಾಶನಾಗಬಾರದು. ಸಾಧ್ಯವಾದಷ್ಟು ಪ್ರಯತ್ನ ಮತ್ತು ಉಪಾಯಗಳನ್ನು ಮಾಡಿ ಕಡಿಮೆ ಬಿದ್ದಲ್ಲಿ ಭಕ್ತಿಯನ್ನು ಜೋಡಿಸಬೇಕು. ಭಕ್ತಿಯ ಉಪಯೋಗಕ್ಕೂ ನಿಯಮವಿದೆ. ಸರ್ವಸಾಧನೆ ಇದ್ದಲ್ಲಿ ಮಾತ್ರ ಭಕ್ತಿಯ ಉಪಯೋಗವಿದೆ. ಪ್ರಯತ್ನವಿಲ್ಲದ ಭಕ್ತಿಗೆ ಅರ್ಥವಿಲ್ಲ. ಸ್ಥಿತಪ್ರಜ್ಞನ ಲಕ್ಷಣದಲ್ಲಿ ಈ ಅಮೂಲ್ಯ ಸೂಚನೆಯನ್ನು ಭಗವಂತನು ಹೇಳಿದ್ದಾನೆ. ನನ್ನ ಸಾಧನಾ ಸರ್ವದಲ್ಲಿ ಭಕ್ತಿಯ ಸ್ಥಾನವನ್ನು ಮರೆಯಬಾರದೆಂದು ಇದನ್ನು ಹೇಳಲಾಗಿದೆ.

ಈ ರೀತಿಯ ಸಾಂಖ್ಯ ಶಾಸ್ತ್ರ ಬುದ್ಧಿ, ಯೋಗ ಶಾಸ್ತ್ರ ಬುದ್ಧಿಯಿಂದ ಕೂಡಿದ ಸ್ಥಿತಪ್ರಜ್ಞನು ಪ್ರಾರಬ್ಧಾನುಸಾರವಾಗಿ ವಿಷಯಗಳೊಡಗೂಡಿದ್ದರೂ ಶಾಂತಿಯನ್ನೇ ಹೊಂದುವವನು. ವಿಷಯಾಸಕ್ತನಾದವನು ವಿಷಯ ಭೋಗಗಳಿಂದ ಎಂದಿಗೂ ಶಾಂತಿಯನ್ನು ಹೊಂದಲಾರನು. ಅಂತಃಕರಣದಲ್ಲಿರುವ ಸರ್ವ ಆಸೆಗಳನ್ನು ಬಿಟ್ಟು, ಅಂತರ್ಯಾಮಿಯಂತೆ ನಡೆದು, ಬ್ರಹ್ಮ ಐಕ್ಯ ಲಾಭದಿಂದ ತನ್ನಲ್ಲಿಯೇ ತಾನು ಸಂತುಷ್ಟನಾಗಿ ಸ್ಥಿತಪ್ರಜ್ಞನೆನಿಸಿಕೊಳ್ಳುವನು. ಇಂತಹವನಿಗೆ ನಿಶ್ಚಯವಾಗಿ ಬ್ರಹ್ಮನಿರ್ವಾಣವು ಸಿದ್ಧಿಯಾದಂತೆಯೇ.

ಕಮ್ಯೂನಿಸ್ಟರಿಂದ ದೂರ ಸರಿಯಿರಿ.

ಚೀನೀ ಸರಕಾರೀ ಸೈನ್ಯದಲ್ಲಿ ಅನೀತಿ ಅನೈಕ್ಯತೆಗಳು ಮನೆಮಾಡಿರುವುದರಿಂದ ಹಾಗೂ ಹದಗೆಟ್ಟ ರಾಜ್ಯಾಡಳಿತದ ದೆಸೆಯಿಂದ ಇಂದು ಚೀನದಲ್ಲಿ ಕಮ್ಯೂನಿಸ್ಟರು ವಿಜಯದ ಮೇಲೆ ವಿಜಯಗಳನ್ನು ಹೊಂದುತ್ತ ಸಾಗಿರುವರು. ಅಲ್ಲಿ ಇಂದು ಕಂಡುಬರುತ್ತಿರುವ ಅನೀತಿ ಅನೈಕ್ಯಗಳಿಗೆ ಬಹ್ವಂಶದಿಂದ ಅಲ್ಲಿಯ ಕಮ್ಯೂನಿಸ್ಟರೇ ಕಾರಣರು ಎಂದು ಬೇರೆ ಹೇಳಬೇಕಿಲ್ಲ. ಚೀನದ ಶ್ರಮಜೀವಿಗಳಲ್ಲಿ ಹಾಗೂ ರೈತ ಜನತೆಯಲ್ಲಿ ಕಮ್ಯೂನಿಸ್ಟರು ಬೆರೆತು, ಸಿಕ್ಕ ಎಲ್ಲ ಅವಕಾಶಗಳಲ್ಲಿ ಅವರ ಅಜ್ಞಾನದ ಲಾಭಪಡೆದು ಇಂದು ಚೀನವನ್ನು ಕಮ್ಯೂನಿಸ್ಟಮಯವನ್ನಾಗಿ ಮಾಡಿರುವರು. ಅಮೇರಿಕೆಯಂತಹ ಧನಾಢ್ಯ ರಾಷ್ಟ್ರವು ಚೀನದ ಬೆನ್ನುಕಟ್ಟಿ ನಿಂತು ಚೀನದಲ್ಲಿ ಡಾಲರುಗಳ ಮಳೆಗರೆಯಿತ್ತು. ಕರೆಯಿ ಶಾಖದರ್, ತನ್ನ ತಜ್ಞ ಸೈನಿಕರನ್ನು ಹಾಗೂ ಯಂತ್ರಿಕರನ್ನು ಚೀನಕ್ಕೆ ಕಳುಹಿಸಿ ಶಕ್ಯವಿದ್ದರೆ ಒದಗಿಸುತ್ತಿದ್ದರೂ, ಕಮ್ಯೂನಿಸ್ಟರ ಕೈಗೂಸಾಗುವ ಕಾಲವು ಇಂದು ಸನ್ನಿಹಿತವಾಗಿದೆ. ಆದ್ದರಿಂದ ಈಗ ಭಾರತದ ಈಶಾನ್ಯ ಮೂಲೆಯಲ್ಲಿ ಕಮ್ಯೂನಿಸ್ಟರ ಸೆಳೆತ ಹೆಚ್ಚತೊಡಗಿದೆ.

ಇತ್ತ ಆಗ್ನೇಯದಲ್ಲಿಯೂ ಕಮ್ಯೂನಿಸ್ಟ ಚಟುವಟಿಕೆಗಳು ... ಆಗ್ನೇಯ ಏಷಿಯಾ ... ಕಮ್ಯೂನಿಸ್ಟ ತೊಂದರೆಗಳು ... ಅವಕಾಶ ಸಿಕ್ಕಾಗಲೆಲ್ಲಾ ಸಾಗಿವೆ. ಆಸ್ಟ್ರೇಲಿಯಾವೂ ಈ ಮಾತಿನಿಂದ ಹೊರತಲ್ಲ. ಅಲ್ಲಿಯ ಕಮ್ಯೂನಿಸ್ಟ್ ಪಕ್ಷವು ಸದಸ್ಯತ್ವದ ದೃಷ್ಟಿಯಿಂದ ದೊಡ್ಡದಲ್ಲವಾದರೂ ಅದರ ವರ್ಚಸ್ಸು ಮಾತ್ರ ಅಲಕ್ಷಿಸಲ್ಪಡುವಂತೆ ಇರುವುದಿಲ್ಲ. ಆಸ್ಟ್ರೇಲಿಯಾ ಸರಕಾರವು ಆ ಪಕ್ಷದ ಮುಖಂಡ ಎಲ್. ಲಾನ್ಸ್ ಶಾರ್ಕಿಯವರ ಮೇಲೆ ದೇಶದ್ರೋಹದ ಅಪಾದನೆಯನ್ನು ಹೊರಿಸಿ ನ್ಯಾಯಕ್ಕೆ ಗುರಿ ಮಾಡಿರುವುದು. ಆಸ್ಟ್ರೇಲಿಯಾದ ಶ್ರಮಜೀವಿಗಳನ್ನು ಉದ್ರೇಕಿಸಲು ಪ್ರೋತ್ಸಾಹಕವಾಗುವಂತಹ ಚಟುವಟಿಕೆಗಳನ್ನು ಎಲ್. ಶಾರ್ಕಿಯವರು ಮಾಡಿದ್ದರಂತೆ. ಎಲ್. ಶಾರ್ಕಿಯವರು ಭಾರತೀಯರಿಗೆ ಹೊಸಬರಲ್ಲ. ನೆಹರೂ ಸರಕಾರಕ್ಕೆ ಸಂಪೂರ್ಣ ಬೆಂಬಲವನ್ನು ಕೊಡಬೇಕೆಂದು ಹಿಂದೀ ಕಮ್ಯೂನಿಸ್ಟ್ ಮುಖಂಡ ಶ್ರೀ ಪಿ. ಸಿ. ಜೋಷಿಯವರು ಒಮ್ಮೆ ಮಾಡಿದ ನಿರ್ಣಯವನ್ನು ತಿದ್ದಲು ಹಾಗೂ ಹಿಂದೀ ಕಮ್ಯೂನಿಸ್ಟರು ಸರಕಾರದ ವಿರುದ್ಧ ಚಟುವಟಿಕೆಗಳನ್ನು ಕೈಕೊಳ್ಳುವಂತೆ ಮಾಡಲು ಈ ಎಲ್. ಶಾರ್ಕಿಯವರು ಸಲಹೆ ಕೊಟ್ಟಿದ್ದರೆಂಬುದನ್ನು ಮರೆಯಬಾರದು.

ನಮಗೂ ಇದು ಸೋಂಕಿದೆ.

ಹಿಂದೂಸ್ಥಾನವು ಇಂದು ಉತ್ತರದಲ್ಲಿ, ಈಶಾನ್ಯದಲ್ಲಿ, ಪೂರ್ವದಲ್ಲಿ, ಮತ್ತು ಆಗ್ನೇಯದಲ್ಲಿ ಕಮ್ಯೂನಿಸ್ಟರಿಂದ ಅಥವಾ ಕಮ್ಯೂನಿಸ್ಟ ವರ್ಚಸ್ಸಿನಿಂದ ಕೂಡಿದ ಹಾಗೂ ಕಮ್ಯೂನಿಸ್ಟ ಉಪಟಳಗಳಿಗೆ ಗುರಿಯಾದ ರಾಷ್ಟ್ರಗಳಿಂದ ಆವರಿಸಲ್ಪಟ್ಟಿಂತಿದೆ. ಹಿಂದೂಸ್ಥಾನದ ಒಳಗೂ ಕಮ್ಯೂನಿಸ್ಟ ಚಟುವಟಿಕೆಗಳು ಸಾಗಿವೆ. ಕಲ್ಕತ್ತಾ, ಡಮ್‌ಡಮ್, ಮದ್ರಾಸ್, ಮತ್ತು ಹೈದರಾಬಾದುಗಳಲ್ಲಿ ಕಮ್ಯೂನಿಸ್ಟರು ಚಿಕ್ಕ ಪುಟ್ಟ ತಂಟೆಗಳನ್ನು ಮಾಡುತ್ತಾ ಸಾಗಿರುವರು. ಇಂದು ದೇಶದಲ್ಲಿ ತಲೆ ಎತ್ತಿರುವ ಅನ್ನ ಬಟ್ಟೆಗಳ ಪ್ರಶ್ನೆಯು ಕಮ್ಯೂನಿಸ್ಟರ ಚಟುವಟಿಕೆಗಳಿಗೆ ಪುಟಕೊಟ್ಟಿವೆ. ಅನ್ನ ಬಟ್ಟೆಗಳ ತುಟಾಗ್ರತೆಗೆ ಸರಕಾರದ ಧೋರಣೆಯೇ ಕಾರಣವೆಂದು ಟೀಕಿಸುತ್ತಾ ಸಾಗಿರುವ ಹಿಂದೀ ಕಮ್ಯೂನಿಸ್ಟರಿಗೆ ಕೆಲವು ಮುಖಂಡರ ಅಧಿಕಾರ ಲಾಲಸೆ, ಇನ್ನು ಕೆಲವರ ಅನೀತಿ, ಹಟಮಾರಿತನ ಮತ್ತು ಕೆಲವರ ಅನಾಚಾರಗಳು ಬೆಂಬಲವನ್ನು ಕೊಡುತ್ತಿವೆ. ಸರಕಾರಗಳು ಜನಹಿತಕ್ಕಾಗಿ ... ಕಟ್ಟಳೆ ... ನಗಳನ್ನು ಅವಹೇಳನಕ್ಕೆ ಗುರಿಪಡಿಸುತ್ತ ಜನರಿಗೆ ... ಭಯವನ್ನು ... ಹಿಂದೀ ಕಮ್ಯೂನಿಸ್ಟರಿಗೆ ... ಆಸ್ಪದ ಕೊಡ ... ಹಾಕಿ ...

ಹಿಂದೀ ಕಮ್ಯೂನಿಸ್ಟ ಪಕ್ಷವನ್ನು ನಿ... ಸರಕಾರದ ... 'ಪ್ರಜಾಪ್ರಭುತ್ವ'ದ ಕೊಲೆಯಾಯಿತೆಂದು ಕಮ್ಯೂನಿಸ್ಟರು ಗಲಿಬಿಲಿ ಎಬ್ಬಿಸುವರು. ಆದರೆ ಇದಕ್ಕೆ ಅಂಜಬೇಕಿಲ್ಲ. ಪ್ರಜಾಪ್ರಭುತ್ವದ ಹೆಸರಿನಲ್ಲಿ ಅದರ ತತ್ವಗಳಿಗೆ ಕೊಡಲಿಏಟನ್ನಿಡಲು ಯೋಚಿಸುವ ಕಮ್ಯೂನಿಸ್ಟರಿಗೆ ಪ್ರಜಾಪ್ರಭುತ್ವವಾದರೂ ಏಕೆ ಅಸ್ಪದ ಕೊಡಬೇಕು? ಅಜ್ಞ, ಅಶಿಕ್ಷಿತ ಜನತೆಯ ಅಜ್ಞಾನದ ಲಾಭ ಪಡೆಯುತ್ತಿರುವ ಈ ಕಮ್ಯೂನಿಸ್ಟರಿಗೆ ಎಡೆಕೊಡುವುದೆಂದರೆ ಹಿಂದೀ ರಾಜಕಾರಣದಲ್ಲಿ 'ನಾಚಿಕೆ ಮುಳ್ಳಿಗೆ ಎಡೆಕೊಟ್ಟಂತೆ' ಎಂಬುವದನ್ನು ಯಾರೂ ಮರೆಯಬಾರದು.

ಭಾರತ ಸರಕಾರವು ಈ ಪಕ್ಷದವರ ಕಡೆಗೆ ತನ್ನ ದೃಷ್ಟಿಯನ್ನು ಹೊರಳಿಸಿರುವದು. ಈ ದೃಷ್ಟಿಯಿಂದ ಪಾರಾಗಲು ಕಮ್ಯೂನಿಸ್ಟರೂ ಧರ್ಮ ವೇಷ ಹಾಕಿಕೊಂಡು ... ರಾಜನಿಷ್ಠೆಯನ್ನು ಪ್ರಕಟಿಸುತ್ತ ಒಳಗೊಳಗೆ ಗೆದ್ದಲಿನಂತೆ ಕೆಲಸಮಾಡುವರು. ಆದ್ದರಿಂದ ಕೇವಲ ... ಕಮ್ಯೂನಿಸ್ಟರನ್ನು ... ದಿಂದ ಕಿತ್ತೊಗೆಯುವ ... ಅಶಕ್ಯವಾಗಬಹುದು. ಸರಕಾರದ ... ರಾಷ್ಟ್ರಪ್ರೇಮಿ ಜನತೆಯು ... ಪರಿಹಾರವಿದೆ.

'ಜೈ ಹಿಂದ್'

ಇಂದ್ರಜಾಲದಂತೆ ಬ್ರಿಟಿಷರನ್ನು ಓಡಿಸಿದರು.

ಈಚೆಗೆ ಯುರೋಪ್ಯ ಸಂಚಾರ ಮಾಡಿ ಬಂದ ಡಾ|| ಸತ್ಯನಾರಾಯಣ ಸಿಹ್ನಾರವರು ಜರ್ಮನಿಯಲ್ಲೊಂದು ಕಡೆ ಅಮೇರಿಕನ್ ವೈಮಾನಿಕನೊಬ್ಬನಿಂದ ಕೇಳಿದ ಸಂಗತಿಯನ್ನು ಒಂದು ಲೇಖನದಲ್ಲಿ ತಿಳಿಸಿದ್ದಾರೆ.

ಆಗ ಜರ್ಮನಿಯಲ್ಲಿ ವಸಂತ ಕಾಲ. ತುಂಬು ಬಿಸಿಲಿನಿಂದ ಬೆಚ್ಚಗಿನ ವಾತಾವರಣವು ಹರ್ಷದಾಯಕವಾಗಿತ್ತು. ನಮ್ಮ ದೊಡ್ಡ ಅಮೇರಿಕನ್ ವಿಮಾನವು ಭರದಿಂದಲೂ, ನಯವಾಗಿಯೂ ಆಕಾಶಪಥವನ್ನು ಆಕ್ರಮಿಸುತಿತ್ತು.

ವಿಮಾನದ ಚಾಲಕನು ಅಮೇರಿಕನನು. ಆತ ಬರ್ಮಾ ಕದನದಲ್ಲಿ ಭಾಗವಹಿಸಿದ್ದ. ಹಲವು ಬಾರಿ ಅವನು ಭಾರತ ಸಂಚಾರವನ್ನು ಮಾಡಿದ್ದ. ನನ್ನನ್ನು ಆತನು ತನ್ನ ಬಳಿ ಕುಳ್ಳಿರಿಸಿದ. 'ನೋಡಿ ಆ ಜಗತ್ತಿನ ನೋಟವನ್ನು. ಭವಿಷ್ಯ ಹೇಗೆ ಕಾಣುತ್ತದೊ. ನಿಮ್ಮವರು ಕೈ ನೋಡಿ ಹೇಳಲು ಪ್ರವೀಣರಲ್ಲವೇ? ನಾನು ತುಂಬಾ ಸಮಯ ಭಾರತದಲ್ಲಿದ್ದೆ. ನನಗೆ ನಿಮ್ಮ ಶಿಲ್ಪ ಪದಾರ್ಥಗಳ, ಮಾವು, ಚಿತ್ರಗಳ ಪರಿಚಯವಿರುವ ತೆರನಿಮ್ಮ ಸಾಧು ಜನರ ಮತ್ತು ಸಂತ ರಾಜಕೀಯದ ಪರಿಚಯವೂ ಇದೆ' ಎಂದನಾತ.

ಮತ್ತೆ, ಅವನು ಕೆಲವು ಯಂತ್ರೋಪಕರಣಗಳನ್ನು ಸರಿಪಡಿಸುತ್ತ ನನ್ನೊಡನೆ ಸಂಭಾಷಿಸಿದ.

'ಗಾಂಧೀಯ ಶಿಷ್ಯನು ಹೇಗಿದ್ದಾನೆ? ನನಗೆ ಆತನ ಹೆಸರು ಮರೆತು ಹೋಗಿದೆ, ನನಗೂ ಅವನಿಗೂ ಬಹಳ ಅಂತರವಿದ್ದು, ಸಮಯವೂ ತುಂಬಾ ಕಳೆದಿದೆ.'

'ಪಂ. ನೆಹರೂರವರ ವಿಷಯ ಕೇಳುತ್ತೀರೋ' ಎಂದು ವಿಚಾರಿಸಿದೆ ನಾನು.

'ಹರಿ, ಅವರು ಈಗಲೂ ಸನ್ಯಾಸಿಗಳಾಗಿಯೇ ಇರುವರೋ?'

'ಸನ್ಯಾಸಿಗಳೇ?' ಎಂದು ಆಶ್ಚರ್ಯ ಸೂಚಿಸಿದೆ ನಾನು.

'ಅದರಲ್ಲಿ ಆಶ್ಚರ್ಯವೇನು? ನಿಮಗೆ ಅವನ ಪರಿಚಯವಿಲ್ಲವೇ? ನಾನು ಅವರ ಪುಸ್ತಕ ಓದಿದ್ದೇನೆ. ಅವರು ದಿವಸವನ್ನು ಶಿರಶಾಸನ ಮಾಡಿ, ಗಂಗಾ ಜಲ ಸ್ನಾನದಿಂದ ಪ್ರಾರಂಭಿಸುತ್ತಾರೆ. ಅವರು ಅತ್ಯದ್ಭುತ ವ್ಯಕ್ತಿಗಳಾಗಿರಬೇಕು. ಅಮೇರಿಕನರಾದ ನಮಗೆ ಅವರ ವಿಷಯ ತುಂಬಾ ಪರಿಚಯವಿದೆ. ಭಾರತದಿಂದ ಈಚೆಗೆ ಬಂದ ನನ್ನ ಸ್ನೇಹಿತನೊಬ್ಬ 'ನೆಹರೂ ಬ್ರಿಟಿಷರನ್ನು ಇಂದ್ರಜಾಲದ ಕೋಲಿನಿಂದ ಓಡಿಸಿದ' ಎಂದು ಹೇಳಿರುವನು. ಈಗ ಅವರು ಕಮ್ಯೂನಿಸ್ಟರನ್ನು ತಮ್ಮ ಬಾಯಿ ಮಾತಿನ ಬಲದಿಂದಲೇ ಮಾನಗೊಳಿಸಿರುವರಂತೆ. ನಮ್ಮ ಅಧ್ಯಕ್ಷ ಟ್ರೂಮನ್ನರಿಗೂ ಅವರು ತಮ್ಮ ಕೆಲವು ಇಂಥಾ ಜಾದುವನ್ನು ಸ್ವಲ್ಪ ಕಲಿಸುತ್ತಿದ್ದರೆ ಚೆನ್ನಾಗಿತ್ತು.'

ಕೊಡಗು ಚೀಫ್ ಫಾರೆಸ್ಟ್ ಆಫೀಸು,
ಮಡಿಕೇರಿ ತಾ 13.5 49.

ನೋಟೀಸು

ಗೇಣಿ ಅವಧಿ ಮುಗಿದ ಏಲಕ್ಕಿ ಮಲೆಗಳಲ್ಲಿರುವ ಹಾಲಿ ವರ್ಷದ ಏಲಕ್ಕಿ ಫಸಲನ್ನು ಎತ್ತುವಳಿ ಮಾಡುವ ಹಕ್ಕನ್ನು ೧೯೪೯ ನೇ ಇಸವಿ ಮೇ ತಾ ೨೫ನೇ ಬುಧವಾರ ವೀರಾಜಪೇಟೆ, ೨೭ನೇ ಶುಕ್ರವಾರ ಮಡಿಕೇರಿ ಮತ್ತು ೩೦ನೇ ಸೋಮವಾರ ನಾಪೋಕ್ಲು ನಾಡು ಕಚೇರಿ ಬಳಿ ಮಧ್ಯಾಹ್ನ ೨ ಗಂಟೆಗೆ ಸರಿಯಾಗಿ ಕೊಡಗು ಚೀಫ್ ಫಾರೆಸ್ಟ್ ಆಫೀಸರವರ ಪರ್ಸನಲ್ ಅಸಿಸ್ಟೆಂಟರವರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುವ ಸಂಗತಿ ಸಮಸ್ತ ಜನರಿಗೂ ಈ ಮೂಲಕ ತಿಳಿಯಪಡಿಸಲಾಗಿದೆ. ಖರೀದಿದಾರರು ಸಮಯಕ್ಕೆ ಸರಿಯಾಗಿ ಹಾಜರಾಗಿ ಬಿಡಮಾಡಬಹುದು... ಮೂಲಕ ಪಡೆದುಕೊಳ್ಳಬಹುದು. ಹೆಚ್ಚಿನ ವಿವರಗಳನ್ನು ನಾಡು ಕಚೇರಿಗಳಿಂದಾಗಲೀ ಯಾ ರೇಂಜ್ ಆಫೀಸರವರಿಂದಾಗಲೀ ಹರಾಜು ಇಸ್ತಿಹಾರ್ ಮೂಲಕ ತಿಳಿದುಕೊಳ್ಳತಕ್ಕದ್ದು.

ಸಿ. ಬಿ. ಚಂಗಪ್ಪ
ಚೀಫ್ ಫಾರೆಸ್ಟ್ ಆಫೀಸರಿಗಾಗಿ.

ಪ್ರಕಟಣೆ.

ಕೊಡಗು ಮುಜ್ರಾಯಿ ಇಲಾಖೆಗೆ ಸೇರಿದ ಮಡಿಕೇರಿ ಪಾಡಿನಾಲ್ಕುನಾಡು ತಾಲೂಕುಗಳ ಪರ ಮೆಂಬರಾಗಿದ್ದ ಶ್ರೀ ಯಂ ಎ ಚಂಗಪ್ಪ ಬಿ. ಎ. ಎಲ್. ಟಿ. ಯವರ ಮೆಂಬರತನದ ಅವಧಿ ಪೂರೈಸಿ ಖಾಲಿಬಿದ್ದಿದೆ. ಸದರಿ ಮೆಂಬರತನಕ್ಕೆ ಮೆಂಬರಾಗಲು ಇಷ್ಟಪಡುವವರು ಈ ಬಗ್ಗೆ ಅವರ ಅರ್ಜಿಯನ್ನು ತಾರೀಕು 10-6-49ರ ವಳಗೆ ಇಲಾಖಾ ಪ್ರೆಸಿಡೆಂಟ್‌ರವರಿಗೆ ತಲಪುವಂತೆ ಅರ್ಜಿ ಬರೆದುಕೊಳ್ಳತಕ್ಕದ್ದು. ಅವಧಿ ಮೀರಿ ಬಂದ ಅರ್ಜಿಯನ್ನು ಅಂಗೀಕರಿಸುವುದಿಲ್ಲ. ಅರ್ಜಿದಾರರ ಚುನಾವಣೆಯು ಮಡಿಕೇರಿ ದೇವಸ್ಥಾನದ ಹಾಲಿನಲ್ಲು ತಾ. 17-6-49 ರಲ್ಲು ಓಟ್ಸ್ ತೆಗೆಯಲಾಗುತ್ತೆ. ಓಟರುಗಳ ಪಟ್ಟಿಯನ್ನು ಹೆಸರು ದಾಖ್ಲೆಮಾಡಿಸಿಕೊಂಡವರೆಲ್ಲರೂ ಓಟು ಕೊಡಬಹುದು.

ಮಡಿಕೇರಿ, ರಾ. ಬ. ಪಿ. ಎ. ಚಂಗಪ್ಪ
14-5-49. ಪ್ರೆಸಿಡೆಂಟ್.

WANTED

Two men and Two women to be trained as Compounders and Nurses. Pay up to fifty with free quarters. Qualifications:— must be able to read and write English. Apply in your own hand writing to.

Dr Miss Y Lakshmi,
M B B S, D G O
'Maya Clinic,' Feelkhana,
HYDERABAD, Dn.

ಕೊಡಗು

ತಾ. ೨೦-೫-೧೯೪೯ನೇ ಶುಕ್ರವಾರ

ಕಾಮನ್‌ವೆಲ್ತ್ ಸಂಬಂಧ.

ಭರತಖಂಡವು ಸ್ವತಂತ್ರವಾದಂದಿನಿಂದ ಬ್ರಿಟನ್ ಮತ್ತು ಭಾರತದೊಳಗಿನ ಸಂಬಂಧ ಯಾವ ರೀತಿ ಇರಬೇಕೆಂಬುದು ಅತ್ಯಂತ ಜಟಿಲವಾದ ಸಮಸ್ಯೆಯಾಗಿತ್ತು. ರಾಜ್ಯಘಟನಾ ಸಭೆಯು ತಾನು ರಚಿಸಿದ ಘಟನೆಯಲ್ಲಿ ಹಿಂದೂದೇಶವು ಸ್ವತಂತ್ರ ರಿಪಬ್ಲಿಕ್ ಎಂದು ಸಾರಿದ್ದು ಆ ಬಗ್ಗೆ ಪ್ರಕಟಣೆಯನ್ನು ಇಂಡಿಯಾ ಸರಕಾರವು ಶೀಘ್ರ ಹೊರಪಡಿಸಲಿದೆ. ಹಿಂದೂದೇಶವು ಸ್ವತಂತ್ರ ರಿಪಬ್ಲಿಕ್ ಆದ ನಂತರ ಹಿಂದೂದೇಶದ, ಬ್ರಿಟನ್ ಮತ್ತು ಇತರ ಕಾಮನ್‌ವೆಲ್ತ್ ರಾಷ್ಟ್ರಗಳ ಸಂಬಂಧ ಹೇಗಿರಬೇಕು; ಹಿಂದೂದೇಶವು ಕಾಮನ್‌ವೆಲ್ತ್ ಕೂಟದಿಂದ ಹೊರಬರುವದೇ ಎಂಬ ಪ್ರಶ್ನೆಗಳಿದ್ದು ಈ ವಿಚಾರದ ನಿರ್ಣಯ ಮಾಡಲು ಲಂಡನಿನಲ್ಲಿ ಕಾಮನ್‌ವೆಲ್ತ್ ಮುಖ್ಯ ಮಂತ್ರಿಗಳ ಸಮ್ಮೇಳನ ನಡೆಯಿತು. ಈ ಸಮ್ಮೇಳನಕ್ಕೆ ಭಾರತದ ಪರ ಪಂಡಿತ ಜವಾಹರ್‌ಲಾಲ್ ನೆಹರೂರವರು ಹೋಗಿದ್ದರು. ಈ ಸಮ್ಮೇಳನದಲ್ಲಿ ಸರ್ವರ ದೃಷ್ಟಿಯೂ ಹಿಂದೂದೇಶದ ಮೇಲೆಯೇ ಕೇಂದ್ರೀಕೃತವಾಗಿತ್ತು. ಏಕೆಂದರೆ ಕಾಮನ್‌ವೆಲ್ತಿನಲ್ಲಿರುವ ಒಟ್ಟು ೫೦೦ ಮಿಲಿಯ ಜನರಲ್ಲಿ ಹಿಂದೂದೇಶದಲ್ಲಿ ೩೫೦ ಮಿಲಿಯ ಜನರಿದ್ದಾರೆ. ಅದ್ದರಿಂದ ಹಿಂದೂದೇಶದ ನಿರ್ಣಯದ ಮೇಲೆ ಕಾಮನ್‌ವೆಲ್ತಿನ ಭವಿಷ್ಯವೂ ನಿಂತಿತ್ತು.

ಈ ಹಿಂದೆ ಜಯಪುರದಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ಸಿನಲ್ಲಿ ಈ ವಿಚಾರವು ಚರ್ಚೆಗೆ ಬಂದಿದ್ದು ಹಿಂದೂದೇಶದ ನಿಲುವು ಇಂದು ಸ್ಪಷ್ಟವಾಗಿ ವಿಶದಪಡಿಸಲಾಯಿತು. ಕಾಂಗ್ರೆಸ್ಸಿನ ಆ ನಿಲುವಿನ ತಳಹದಿಯ ಮೇಲೆ ಪಂ. ನೆಹರೂರವರು ಲಂಡನ್ ಪರಿಷತ್ತಿನಲ್ಲಿ ವರ್ತಿಸಿದರು. ಜವಾಹರರು ಈ ಪರಿಷತ್ತಿನಲ್ಲಿ ತೋರಿಸಿದ ಹೃದಯ ವೈಶಾಲ್ಯತೆ, ಅವರ ಉತ್ತುಂಗ ವರ್ತನೆ ಭರತ ಖಂಡಕ್ಕೆ ಮಹಾ ಕೀರ್ತಿಯನ್ನು ತಂದಿರುವದಲ್ಲದೆ ಜಾರ್ಜ್ ಬರ್ನಾರ್ಡ್ ಷಾರಂಥಾ ಜಗದ್ವಿಖ್ಯಾತ ಮಹಾ ಪುರುಷರಿಂದ ಹೊಗಳಿಕೆಯನ್ನು ತಂದಿದೆ. ಈ ಒಪ್ಪಂದದ ಪ್ರಕಾರ ಭರತ ಖಂಡವು ಯಾವದೇ ರೀತಿಯಿಂದ ಬ್ರಿಟನಿನ ಕೋಲೆಬಿಲೆಯೊಳಗಿಲ್ಲ. ಕಾಮನ್‌ವೆಲ್ತಿನಿಂದ ಹೊರ ಬರುವ ಇಲ್ಲವೆ ಅದರೊಳಗಿರುವ ನಿರ್ಣಯವನ್ನು ಅದು ಮಾಡಲು ಸ್ವತಂತ್ರವಿದೆ. ಬ್ರಿಟಿಷ್ ರಾಜರ ಸಂಬಂಧ ಭಾರತಕ್ಕಿಲ್ಲ. ಭಾರತ ಒಕ್ಕೂಟದ ಪ್ರೆಸಿಡೆಂಟರು ಇಂಗ್ಲೆಂಡಿಗೆ ಹೋದರೆ ಅವರಿಗೆ ಅಲ್ಲಿ ಎಷ್ಟು ಸನ್ಮಾನ ದೊರೆಯುವದೋ ಅಷ್ಟೇ ಬ್ರಿಟಿಷ್ ರಾಜರು ಭಾರತಕ್ಕೆ ಬಂದರೆ. ಇಂಥಾ ಸ್ವಯಂಪೂರ್ಣ ಸ್ವತಂತ್ರತೆ ಇರುವ ಭರತಖಂಡವು ಕಾಮನ್‌ವೆಲ್ತಿನಲ್ಲಿರಲು ಉಳಿದ ರಾಷ್ಟ್ರಗಳು ಒಪ್ಪಿವೆ. ಬ್ರಿಟನೂ ಅದನ್ನು ಸ್ವಾಗತಿಸಿದೆ. ಭರತಖಂಡವು ಕಾಮನ್‌ವೆಲ್ತಿನಿಂದ ಹೊರ ನಿಂತಿದ್ದರೆ ಅದರಿಂದ ಭಾರತಕ್ಕೂ ಜಗತ್ತಿಗೂ ಹಾನಿಯಾಗುತಿತ್ತು.

ಪಂಡಿತ ಜವಾಹರರು ಹೇಳಿದಂತೆ ಭರತ ಖಂಡವು ಚಿಕ್ಕ ರಾಷ್ಟ್ರವಲ್ಲ. ಜಗತ್ತಿನ ಶಾಂತಿ ಸಂಸ್ಥಾಪನಾ ಕಾರ್ಯದಲ್ಲಿ ಅದಕ್ಕೂ ಜವಾಬ್ದಾರಿಯಿದೆ. ಇಂದಿನ ಜಗತ್ತಿನಲ್ಲಿ ನಾನು ಬೇರೆ ತಾನು ಬೇರೆ ಎಂಬ ಸಂಕೀರ್ಣ ಮನೋಭಾವಕ್ಕೆಡೆಯಿಲ್ಲ. ಯಾವದೇ ರಾಷ್ಟ್ರವು ಎಷ್ಟೇ ಬಲಶಾಲಿಯಾಗಿದ್ದರೂ ಬೇರೆ ರಾಷ್ಟ್ರಗಳ ಸಂಬಂಧವಿಲ್ಲದೆ ಬಾಳಲಾರದು. ಹಿಂದೂದೇಶವು ಇತರ ರಾಷ್ಟ್ರಗಳ ಸಂಬಂಧ ಬಿಡದೆ ನಿರ್ಲಿಪ್ತವಾಗಿರುವದಾದರೆ ಅಂತರ್ರಾಷ್ಟ್ರೀಯ ರಂಗದಲ್ಲಿ ತಾನು ಮಾಡಲಿರುವ ಕೆಲಸವನ್ನು ನಿರಾಕರಿಸಿದಂತೆ. ಬ್ರಿಟಿಷರು ಭಾರತಕ್ಕೆ ಅಪಕಾರ ಮಾಡಿರುವರು, ಭಾರತೀಯರ ಸುಲಿಗೆ ಮಾಡಿರುವರು. ಇಂದೂ ಕಾಮನ್‌ವೆಲ್ತ್ ರಾಜ್ಯಗಳಾದ ದಕ್ಷಿಣ ಅಫ್ರಿಕಾ, ಮಲಯಾ ಮೊದಲಾದೆಡೆ ಹಿಂದೀಯರು ಕಡೆಗಣಿಸಲ್ಪಡುತ್ತಿದ್ದಾರೆ. ಆದರೆ 'ಕ್ಷಮಾ ವೀರಸ್ಯ ಲಕ್ಷಣಂ' ಎಂಬಂತೆ ಅವರು ಮಾಡಿದ ತಪ್ಪನ್ನು ಕ್ಷಮಾದೃಷ್ಟಿಯಿಂದ ನೋಡಿ ಅವರೊಳಗೆ ಮಿಳಿತವಾಗಿ ಭರತಖಂಡದ ವಿಮಲ ಸಂದೇಶವನ್ನು ಸಾರುವದೇ ಜಗತ್ತಿನ ಶಾಂತಿಯ ಮಾರ್ಗವೆಂಬುದನ್ನು ಯಾರೂ ಅಲ್ಲಗಳೆಯರು.

ಮೊನ್ನೆಯಾಗಿ ಕಾಮನ್‌ವೆಲ್ತ್ ನಿರ್ಣಯವನ್ನು ಅಂಗೀಕರಿಸುವ ಬಗ್ಗೆ ಠರಾವೊಂದನ್ನು ರಾಜ್ಯಘಟನಾ ಸಭೆಯಲ್ಲಿ ಪಂಡಿತ ನೆಹರೂರವರು ಮಂಡಿಸಿದರು. ಈ ನಿರ್ಣಯವನ್ನು ಒಪ್ಪಕೂಡದೆಂದೂ, ಭರತಖಂಡವು ಕಾಮನ್‌ವೆಲ್ತಿನಲ್ಲಿರಬೇಕೋ ಇಲ್ಲವೋ ಎಂಬದನ್ನು ನಿರ್ಣಯ ಮಾಡುವ ಹಕ್ಕು ಪ್ರೌಢ ಮತದಾನದ ಪ್ರಕಾರ ಚುನಾಯಿತವಾಗುವ ಮುಂದಿನ ಶಾಸನ ಸಭೆಗೆ ಮಾತ್ರವಾಗಿರುವದರಿಂದ ಆ ವರೆಗೆ ಇದನ್ನು ಮುಂದರಿಸಬೇಕೆಂದು ಶ್ರೀ ಸಿಬ್ಬನ್‌ಲಾಲ್ ಸಕ್ಸೇನಾರವರು ತಿದ್ದುಪಡಿ ತಂದರು. ಇದಕ್ಕೆ ಉತ್ತರ ನೀಡುತ್ತಾ ಈ ನಿರ್ಣಯದಿಂದ ಯಾವದೇ ರೀತಿಯಲ್ಲಿ ಭರತಖಂಡದ ಕೈ ಕಟ್ಟಿಲ್ಲವೆಂದೂ, ಬೇಡವೆಂದು ತೋರಿದರೆ ಹಾಗೆ ನಿರ್ಣಯಿಸಿ ಕಾಮನ್‌ವೆಲ್ತಿನಿಂದ ಹೊರಬರುವ ಪೂರ್ಣ ಅಧಿಕಾರ ಹಿಂದೂದೇಶಕ್ಕಿದೆಯೆಂದೂ ನೆಹರೂರವರು ಹೇಳಿದರು. ರಾಜ್ಯಘಟನಾ ಸಭೆಯು ಬಹುಮತದಿಂದ ನೆಹರೂರವರ ಠರಾವನ್ನು ಒಪ್ಪಿತು.

ಕಾಮನ್‌ವೆಲ್ತಿನಲ್ಲಿ ಹಿಂದೂದೇಶವು ಇರಬೇಕಾಗಿ ಬಂದುದನ್ನು ಟೀಕಿಸಿ ಇದು ಬ್ರಿಟಿಷ್ ಮುತ್ಸದ್ದಿತನದ ವಿಜಯವೆಂದು ಹೇಳುವವರು ಅನೇಕರಿದ್ದಾರೆ. ಹೀಗೆ ಮಾಡಿದುದರಿಂದ ಬ್ರಿಟನ್ ಅಮೇರಿಕಾ ಗುಂಪಿಗೆ ಭಾರತದ ಸಹಾನುಭೂತಿ ಇದೆಯೆಂದು ತೋರಿಸಿದಂತಾಯಿತೆಂದೂ ರಷ್ಯಾದ ವಿರುದ್ಧ ವರ್ತಿಸಿದಂತಾಯಿತೆಂದೂ ಹೇಳುವವರಿದ್ದಾರೆ. ಭರತಖಂಡವು ಯಾವದೇ ವಿಧದಲ್ಲಿ ಈ ಪಕ್ಷ ರಾಜಕೀಯಕ್ಕೆ ಬದ್ಧವಾಗಿಲ್ಲ. ಮುಂದೆ ಯುದ್ಧವಾಗುವದಾದರೆ ಅಂಥಾ ಸಮಯದಲ್ಲಿ ಯಾವ ಪಕ್ಷಕ್ಕೂ ಸೇರದೆ ತನ್ನ ಅಭಿಮತದಂತೆ ವರ್ತಿಸುವ ಪೂರ್ಣ ಹಕ್ಕು ಭಾರತಕ್ಕಿದೆ. ಆದ್ದರಿಂದ ಈ ನಿರ್ಣಯವು ಯೋಗ್ಯವೂ, ಭರತಖಂಡದ ಪರಂಪರೆಗೆ ತಕ್ಕದೂ ಆಗಿದೆ. ಮಹಾತ್ಮಾ ಗಾಂಧೀಯವರ ಮಹಾ ತತ್ವದ ಬೆಳಕೊಂದು ಈ ನಿರ್ಣಯದಲ್ಲಿ ಹೊಳೆದಿದೆ ಎನ್ನಬಹುದು. ಧರ್ಮ, ನೀತಿ, ಶಾಂತಿಯ ಪಥದಲ್ಲಿ ನಡೆಯುತ್ತಿರುವ ಭರತಖಂಡಕ್ಕೆ ಜಗತ್ತಿನಲ್ಲಿ ಯಾರೂ ಶತ್ರುಗಳಿಲ್ಲ. ಯಾರ ಕೈಗೊಂಬೆಯಾಗಿಯೂ ಅದು ವರ್ತಿಸಲಿಕ್ಕಿಲ್ಲ.

ಸ್ವಾತಂತ್ರ್ಯ ದೊರೆತಿದ್ದರೂ ಅದನ್ನು ಸರಿಯಾಗಿ ಅರಗಿಸಿಕೊಂಡು ಪುಷ್ಟವಾಗಿ ಬೆಳೆದು ತನ್ನ ಮಹಾಪಾತ್ರವನ್ನು ಸರಿಯಾಗಿ ನಿರ್ವಹಿಸುವ ಶಕ್ತಿ ಬರುವ ವರೆಗೆ ಹಿಂದೂದೇಶವು ಆ ಶಕ್ತಿಗೆ ಸಹಾಯಕವಾಗುವ ಸರ್ವ ಅನುಕೂಲತೆಗಳನ್ನೂ ಇತರ ರಾಷ್ಟ್ರಗಳಿಂದ ಹೊಂದಿಕೊಳ್ಳಬೇಕಿದೆ. ಈ ವಿಶಾಲದೃಷ್ಟಿಯಿಂದಲೇ 'ಏಷ್ಯಾದ ಮಹಾರಾಜಕಾರಣಿ' ನೆಹರೂರವರು ಕಾಮನ್‌ವೆಲ್ತಿನಲ್ಲಿದ್ದು ಪೂರ್ಣ ಸ್ವತಂತ್ರವಾಗಿರುವ ಅಪೂರ್ವ ಮಾರ್ಗವನ್ನು ಭರತಖಂಡಕ್ಕೆ ತೋರಿಸಿದ್ದಾರೆ. ಇಂಥಾ ಬಿಕ್ಕಟ್ಟಿನ ಕಾಲದಲ್ಲಿ ನೆಹರೂರವರಂಥಾ ರಾಜಕಾರಣಿಯು ಭರತಖಂಡದಲ್ಲಿರುವದು ಭಾರತೀಯರ ಸೌಭಾಗ್ಯ.

ಗವರ್ನರ್ ಜನರಲ್‌ರವರ ಭೇಟಿ.

ಈ ತಾ ೧೪ ಮತ್ತು ೧೫ರಲ್ಲಿ ಬೆಂಗಳೂರಿನಲ್ಲಿ ನಡೆದ ಅಖಿಲ ಭಾರತ ಸಹಕಾರಿ ಪರಿಷತ್ತಿಗೆ ಪ್ರಾಂತೀಕ ಸಹಕಾರಿ ಬ್ಯಾಂಕಿನ ಪ್ರತಿನಿಧಿಯಾಗಿ ನಾನು ಹೋಗಿದ್ದೆನು. ಈ ಸಂದರ್ಭದಲ್ಲಿ ತಾ. ೧೪ರಲ್ಲಿ ಅಲ್ಲಿಯ ಭೂಮಿ ಅಡಮಾನ ಬ್ಯಾಂಕಿನವರು ಕೊಟ್ಟ ಸತ್ಕಾರಕೂಟದಲ್ಲಿ ಮೈಸೂರಿನ ದಿವಾನರಾದ ಸರ್. ರಾಮಸ್ವಾಮಿ ಮೊದಲಿಯಾರವರನ್ನು ಕಂಡು ಮಾತಾಡಿ ಅಲ್ಲಿಗೆ ಮುಂದಿನ ಬರಲಿದ್ದ ಗವರ್ನರ್ ಜನರಲ್‌ರವರ ಭೇಟಿ ಮಾಡಲು ಅವಕಾಶ ಮಾಡಿಕೊಡಬೇಕೆಂದು ಕೇಳಿದೆನು. ರಾಜಾಜಿಯವರು ಖಾಸಗಿಯಾಗಿ ಬೆಂಗಳೂರಿಗೆ ಬರುವದರಿಂದ ಅವರ ಕಾರ್ಯಕ್ರಮವು ಮೈಸೂರು ಸರಕಾರದ ಕೈಯಲ್ಲಿಲ್ಲ. ಅವರನ್ನು ನೋಡಬೇಕಾದರೆ ಅವರ ಮಿಲಿಟರಿ ಸೆಕ್ರೆಟರಿಯವರ ಮೂಲಕ ಏರ್ಪಡಿಸುವದು ಉತ್ತಮವೆಂದು ದಿವಾನರು ಹೇಳಿದರು. ಆದರೆ ರಾಜಾಜಿಯವರು ತಾ. ೧೫ರಲ್ಲಿ ಬರುವ ಬದಲು ತಾ. ೧೬ರಲ್ಲಿ ಬಂದರು. ಆ ದಿನ ಬೆಳಿಗ್ಗೆ ಅವರ ಮಿಲಿಟರಿ ಸೆಕ್ರೆಟರಿಯವರ ಮೂಲಕ ರಾಜಾಜಿಯ ಭೇಟಿಯ ಅವಕಾಶಕ್ಕಾಗಿ ಪತ್ರ ಕಳುಹಿಸಿದೆನು.

ಮರುದಿನ ಬೆಳಿಗ್ಗೆ ೧೦ ಗಂಟೆಗೆ ರಾಜಾಜಿಯವರು ಉಳಕೊಂಡಿದ್ದ ರೆಸಿಡೆನ್ಸಿ ಬಂಗ್ಲೆಗೆ ಹೋಗಿ ನಾನು ಒಂದು ದಿನ ಮುಂಚಿತವಾಗಿ ಬರೆದ ಪತ್ರಕ್ಕೆ ಜವಾಬು ಸಿಕ್ಕದ ಕಾರಣ ಮಿಲಿಟರಿ ಸೆಕ್ರೆಟರಿಯವರ ಭೇಟಿ ಮಾಡಿದೆನು. ರಾಜಾಜಿಯವರ ಹಳೇ ಸ್ನೇಹಿತರನ್ನು ಕಾಣುವ ಕಾರ್ಯಕ್ರಮವು ತಾ. ೨೦ರ ವರೆಗೆ ನಿಶ್ಚಯಿಸಲ್ಪಟ್ಟಿದ್ದರೂ ನನ್ನ ವಿಳಾಸ ಕಾರ್ಡನ್ನು ರಾಜಾಜಿಯವರಿಗೆ ಅವರು ಕಳುಹಿಸಿಕೊಟ್ಟರು. ರಾಜಾಜಿಯವರು ಕೂಡಲೇ ಭೇಟಿಯ ಅವಕಾಶಕೊಟ್ಟರು. ಅವರಿಗೆ ನಮಸ್ಕರಿಸಿದ ಕೂಡಲೇ 'ಕೊಡಗು ಪತ್ರಿಕೆಯು ಹೇಗೆ ನಡೆಯುತ್ತಿದೆ. ಕೊಡಗಿನ ಕಿತ್ತಳೆ ವ್ಯವಸಾಯ ಅಭಿವೃದ್ಧಿಗೊಳ್ಳುತ್ತಿದೆಯೋ, ಈ ವರ್ಷದ ಮಳೆ, ಬೆಳೆ ಹೇಗಿದೆ, ಆಹಾರದ ಸ್ಥಿತಿ ಹೇಗಿದೆ' ಎಂದು ಮುಂತಾಗಿ ಕೆಲವು ಪ್ರಶ್ನೆ ಕೇಳಿದರು. ಅವುಗಳಿಗೆ ನಾನು ಉತ್ತರವಿತ್ತ ಮೇಲೆ ಕೊಡಗಿನ ಭವಿಷ್ಯದ ವಿಚಾರ ಯಾವ ಸ್ಥಿತಿಯಲ್ಲಿದೆಯೆಂದು ಕೇಳಿದೆನು. ಈ ವಿಚಾರವು ಇನ್ನೂ ನಿರ್ಣಯವಾಗಿಲ್ಲ; ರಾಜ್ಯಘಟನಾ ಸಮಿತಿಯಲ್ಲಿ ತೀರ್ಮಾನವಾಗುವಂತೆ ತೋರುತ್ತದೆ. ಆದರೆ ನೀವು ಕೊಡಗನ್ನು ಮೈಸೂರಿನೊಂದಿಗೆ ಸೇರಿಸುವ ವಿಚಾರ ಮಾತುಕತೆ ನಡೆಸಲು ಬಂದಿರುವಿರೆಂದು ಬೆಂಗಳೂರಿನಲ್ಲಿ ಕೆಲವು ಪತ್ರಿಕೆಗಳು ಪ್ರಕಟಿಸಿರುವದು ನಿಜವೋ ಎಂದು ಕೇಳಿದೆನು. "ನಾನು ವಿಶ್ರಾಂತಿಗಾಗಿ ಬೆಂಗಳೂರಿಗೆ ಬಂದದ್ದು. ಅಲ್ಲದೆ ಈ ವಿಚಾರ ನಾನೇಕೆ ಕೈಹಾಕಬೇಕು' ಎಂದು ಹೇಳಿ ಈ ವಿಚಾರದಲ್ಲಿ ದೇಶದವರ ಅಭಿಪ್ರಾಯವೇನೆಂದು ಕೇಳಿದರು. ಅದಕ್ಕೆ ಸಮರ್ಪಕವಾದ ಉತ್ತರವನ್ನು ವಿವರವಾಗಿ ಹೇಳಿದೆನು. 'ಹಲವು ಜಿಲ್ಲೆಗಳು ಈಗ ದೊಡ್ಡ ಪ್ರಾಂತದ ಭಾಗವಾಗಿರುವದಕ್ಕಿಂಥಾ ಕೇಂದ್ರದಿಂದ ನೇರವಾಗಿ ಆಳಲ್ಪಡುವದು ಉತ್ತಮವೆಂದು ಹೇಳುತ್ತಿರುವವು. ಇದಕ್ಕೆ ದೊಡ್ಡ ಪ್ರಾಂತೀಕ ಸರಕಾರಗಳ ಈಗಿನ ಆಡಳಿತ ಕ್ರಮವೇ ಕಾರಣವಾಗಿರಬಹುದು' ಎಂದು ಹೇಳಿದರು.

೨೦-೫-೪೯. ಪಿ. ಐ. ಬೆಳ್ಯಪ್ಪ.

ವರ್ತಮಾನ.

ಭಾರತವು ಸ್ವತಂತ್ರಗೊಂಡನಂತರ ಪ್ರಾಂತೀಕ ನ್ಯಾಯಶಾಸನ ಸಭೆಯಲ್ಲಿ ಯೂರೋಪಿಯನರಿಗೆಂದು ಇಟ್ಟಿದ್ದ ಸ್ಥಳಗಳನ್ನು ೧೯೪೭ರಲ್ಲೇ ರದ್ದುಮಾಡಲಾಗಿತ್ತು. ಆದರೆ ಕೊಡಗಿನ ನ್ಯಾಯಶಾಸನ ಸಭೆಯಲ್ಲಿ ಈ ಪ್ರಾತಿನಿಧ್ಯ ಮುಂದರಿಯುತ್ತಿತ್ತು. ಆದರೆ ಮೊನ್ನೆ ಅಂದರೆ ತಾ. ೧೮ರಲ್ಲಿ ರಾಜ್ಯ ಘಟನಾ ಸಮಿತಿಯಲ್ಲಿ ಈ ಬಗ್ಗೆ ಒಂದು ನಿಯಮವನ್ನು ಜಾರಿಯಲ್ಲಿ ತಂದು ಕೊಡಗಿನ ನ್ಯಾಯವಿಧಾಯಕ ಸಭೆಯಲ್ಲಿ ಇದ್ದ ಯೂರೋಪಿಯನ ಈ ವಿಶೇಷ ಪ್ರಾತಿನಿಧ್ಯವನ್ನು ರದ್ದುಮಾಡಲಾಗಿದೆ.

ಅಖಿಲ ಭಾರತ ಪತ್ರಿಕಾ ಸಂಪಾದಕರುಗಳ ಎಂಟನೇ ಸಮ್ಮೇಳನವು ತಾ. ೧೬ರಲ್ಲಿ ಬೆಂಗಳೂರಿನಲ್ಲಿ ನಡೆದು ಗವರ್ನರ್ ಜನರಲ್ ಶ್ರೀ ಸಿ. ರಾಜಗೋಪಾಲಾಚಾರಿಯವರು ಅದರ ಉದ್ಘಾಟನೆಯನ್ನು ಮಾಡಿದರು. 'ಕೊಡಗು' ಪತ್ರಿಕೆಯ ಸಂಪಾದಕರಾದ ಶ್ರೀ ಪಿ. ಐ ಬೆಳ್ಯಪ್ಪನವರು ಈ ಸಮ್ಮೇಳನಕ್ಕೆ ಹೋಗಿದ್ದರು.

ತಾ. ೧೪ ಮತ್ತು ೧೫ರಲ್ಲಿ ಬೆಂಗಳೂರಿನಲ್ಲಿ ನಡೆದ ಅಖಿಲ ಭಾರತ ಸಹಕಾರಿ ಪರಿಷತ್ತಿಗೆ ಹೋಗಿದ್ದ ಸಹಕಾರಿ ಸಂಘಗಳ ರಿಜಿಸ್ಟ್ರಾರರೂ ಮತ್ತು ಪ್ರಾಂತೀಕ ಬ್ಯಾಂಕಿನ ಪ್ರತಿನಿಧಿಯಾಗಿದ್ದ ಶ್ರೀ ಪಿ ಐ. ಬೆಳ್ಯಪ್ಪನವರೂ ವಾಪಾಸು ಬಂದಿರುವರು.

ಅಖಿಲಭಾರತ ಸಹಕಾರ ಕೂಟದ ಕಾರ್ಯಕಾರಿ ಮಂಡಳಿಯ ಒಬ್ಬ ಸದಸ್ಯರಾಗಿ ಕೊಡಗಿನ ಪರ ಶ್ರೀ ಪಿ. ಐ ಬೆಳ್ಯಪ್ಪನವರು ಆರಿಸಲ್ಪಟ್ಟಿರುವರು.

ಮೈಸೂರು ವಿಶ್ವವಿದ್ಯಾಲಯದ ಬಿ ಎ. ಪರೀಕ್ಷೆಯಲ್ಲಿ ಶ್ರೀಗಳಾದ ಬೊಳ್ಳಂಡ ಎಸ್. ಕಾಳಪ್ಪ ಮತ್ತು ಕಾಡ್ಯಮಾಡ ಕೆ. ಅಚ್ಚಯ್ಯನವರೂ ಇಂಟರ್ ಮೀಡಿಯೇಟ್ ಪರೀಕ್ಷೆಯಲ್ಲಿ ಶ್ರೀಗಳಾದ ಕೊಕ್ಕಲೆಮಾಡ ಚೆಂಗಪ್ಪ, ನೆಲ್ಲಿರ ಸೋಮಯ್ಯ, ಅಜ್ಜಿಕುಟ್ಟಿರ ಎಂ. ಅಪ್ಪಣ್ಣ, ಎಂ ಐ ಪೀರ್, ಎ. ಎ. ಬೆಳ್ಳಪ್ಪ, ಪಿ. ಎಂ ಮಹಮ್ಮದ್ ಮತ್ತು ಶ್ರೀಮತಿಯರಾದ ಪುಟ್ಟಿಚಂಡ ಪುಷಿ ಮಂದಪ್ಪ, ಕೊಕ್ಕಲೆರ ಲೀಲ ಮತ್ತು ಕೆ. ಬಿ. ಸೀತಮ್ಮ ಇವರೂ ಆಂಧ್ರ ವಿಶ್ವವಿದ್ಯಾಲಯದ ಬಿ. ಕಾಮ್ ಪರೀಕ್ಷೆಯಲ್ಲಿ ಶ್ರೀ ಚೌರಿರ ಅಪ್ಪಯ್ಯನವರೂ ಮದ್ರಾಸು ವಿಶ್ವವಿದ್ಯಾಲಯದ ಬಿ ಓ. ಎಲ್. ಪರೀಕ್ಷೆಯಲ್ಲಿ ಶ್ರೀ ನಾಚೆಟ್ಟಿರ ಮುತ್ತಣ್ಣನವರು ತೇರ್ಗಡೆಯಾಗಿರುವರು.

ತಾರೀಕು ೧೪-೫-೧೯೪೯ರಲ್ಲಿ ಶ್ರೀ ಪಿ. ಎಂ. ಉತ್ತಪ್ಪನವರು ಬೊಂಬಾಯಿಗೆ ಹೋಗುವಾಗ ಅಲ್ಲಿರುವ ಹಳೇ ವಿದ್ಯಾರ್ಥಿಗಳು ಅದರ ಗೌರವಾರ್ಥ ಪುರೋಹಿತರ ಹೋಟೆಲಿನಲ್ಲಿ ಒಂದು ಔತಣ ಕೂಟವನ್ನೇರ್ಪಡಿಸಿದ್ದರು.

ಹೊಟ್ಟೆಗಾಗಿ ಏನು ಮಾಡುವದಿಲ್ಲ?

ಇಂಗ್ಲೆಂಡಿನ ಕಾರ್ನ್‌ವಾಲ್ ಪ್ರಾಂತ್ಯದ ಓರ್ವ ಗೃಹಸ್ಥನು ತನ್ನ ವಿಚಿತ್ರ ಉದ್ಯಮದಿಂದ ಜಗತ್ತಿನ ಗೃಷ್ಟಿಯನ್ನು ಸೆಳೆದ. ಕಪ್ಪೆಗಳನ್ನು ಒಂದು ಕೃಷಿ ಪ್ರಯೋಗ ಶಾಲೆಗೆ ಪೂರೈಸಿಕೊಡುವುದು ಅವನ ಜೀವನ ವೃತ್ತಿ. ವಾರಕ್ಕೆ ಹೇಗೆಂದರೂ ಅವನ ಕೊಳ್ಳೆ ೫ ಸಾವಿರ ಕಪ್ಪೆಗಳಾಗುವವು!

ವೇಲ್ಸ್ ಪ್ರಾಂತ್ಯದಲ್ಲಿ ಇನ್ನೊಬ್ಬ ವಿಚಿತ್ರ ಉದ್ಯೋಗಿಯವನಿದ್ದಾನೆ. ಇಂಗ್ಲೆಂಡಿನ ಸಮುದ್ರ ಕರಾವಳಿಯಿಂದ ಕೆಲವು ಮೀನುಗಳು ವರ್ಷದ ಒಂದು ನಿರ್ದಿಷ್ಟ ಅವಧಿಯಲ್ಲಿ ನದಿಗಳ ಮೂಲಕ ಒಳಪ್ರದೇಶವನ್ನು ಸೇರುತ್ತವೆ. ಅಂತಹ ಮೀನುಗಳಿಗೆ ತಮ್ಮ ಒಳಸಂಚಾರದ ಹಾದಿಯಲ್ಲಿ ಜಲಪಾತಗಳು ಸಿಕ್ಕಿದರೆ ಅವುಗಳನ್ನು ಹತ್ತಿ ಹೋಗಲು ಆ ಮನುಷ್ಯನು ತನ್ನ ಪ್ರಾವೀಣ್ಯವನ್ನು ಉಪಯೋಗಿಸಿ ಸಹಾಯಮಾಡುವನು. ಇದರಿಂದ ಅಲ್ಲಿನ ಮೀನುಗಾರಿಕೆಗೆ ತುಂಬಾ ಸಹಾಯವಾಗುವುದು. ಅವನಿಲ್ಲದೆ ಇತಿದ್ದರೆ ಈಲ್ ಎಂಬ ರುಚಿಕರವಾದ ಮೀನುಗಳಿಗೆ ಅಲ್ಲಲ್ಲಿ ಜಲಪಾತಗಳನ್ನು ದಾಟುವುದು ಕಷ್ಟದ ಕೆಲಸವಾಗುತಿತ್ತು.

ಹೀಗೆ ಜಗತ್ತಿನಲ್ಲಿ ಕೆಲವು ಸ್ತ್ರೀಪುರುಷರು ಚಿತ್ರವಿಚಿತ್ರವಾದ ಉದ್ಯೋಗಗಳಲ್ಲಿ ನಿರತರಾಗಿ ಉದರಂಭರಣ ಗೈಯುತ್ತಿರುವರು. ತೆಂಗಿನ ಚಿಪ್ಪು ಒಡೆಯುವ ಸಿಪ್ಪೆಯಿಂದ ಹಿಡಿದು ಅಸ್ಥಿಪಂಜರ ಮಾರುವವರ ವರೆಗೆ ಈ ವಿಚಿತ್ರ ಉದ್ಯಮಗಳ ಕ್ಷೇತ್ರ ವ್ಯಾಪಿಸಿದೆ.

ಮಾತನಾಡುವ ಪಕ್ಷಿಗಳನ್ನು ಮಾರುವ ಒಂದು ಕಂಪೆನಿಯವರು ತಮ್ಮ ಕಚೇರಿಯಲ್ಲಿ ಗಿಳಿಗಳಿಗೆ ಮಾತು ಕಲಿಸುವ ತಜ್ಞರನ್ನು ಕೆಲಸಕ್ಕೆ ಇಟ್ಟುಕೊಳ್ಳುತ್ತಾರೆ. ಈ ತಜ್ಞರು ಜಗತ್ತಿನ ಹಲವು ಭಾಷೆಗಳನ್ನು ಬಲ್ಲವರಿದ್ದಾರೆ. ಆ ಸಂಸ್ಥೆಯವರು ಮಾತಾಡುವ ಗಿಳಿಗಳನ್ನು ಜಗತ್ತಿನ ಎಲ್ಲಾ ಕಡೆಗಳಿಗೂ ಕಳುಹಿಸುತ್ತಾರೆ. ಆದುದರಿಂದ ಬೇರೆ ಬೇರೆ ದೇಶ ಭಾಗಗಳಲ್ಲಿ ಗಿಳಿಗಳು ಮಾತಾಡಬಲ್ಲವಾಗಿರಬೇಕು. ಗಿಳಿಗಳಿಗೆ ಚೀನಿ ಭಾಷೆಯನ್ನು ಕಲಿಸುವ ಉದ್ಯಮಕ್ಕಿಂತ ಸೋಜಿಗವಾದುದು ಬೇರೆ ಯಾವುದಾದರೂ ಇದೆಯೆ?

ಸ್ತ್ರೀಯರು ಕೂಡಾ ವಿಚಿತ್ರ ಕೆಲಸಗಳಲ್ಲಿ ಪ್ರವರ್ತರಾಗಿರುವುದು ತಿಳಿದು ಬಂದಿದೆ. ಒಂದು ಇಂಗ್ಲಿಷ್ ರಬ್ಬರ್ ಬೂಟ್ಸು ಕಂಪೆನಿಯವರು ಇಬ್ಬರು ಮಹಿಳೆಯರನ್ನು ಕೆಲಸಕ್ಕೆ ಇಟ್ಟುಕೊಂಡಿದ್ದಾರೆ. ಅಲ್ಲಿ ತಯಾರಾಗುವ ಹೊಸ ಹೊಸ ಮಾದರಿಯ ಬೂಟ್ಸುಗಳನ್ನು ಧರಿಸಿ ಅವರು ದಿನಕ್ಕೆ ೧೦ ಮೈಲುಗಳಷ್ಟು ಪ್ರಯಾಣ ಮಾಡಿದರೆ ಅವರ ಕರ್ತವ್ಯ ತೀರಿತು?

ಅಮೇರಿಕದಲ್ಲಿನ ಸ್ನಾನದ ಮತ್ತು ಈಜುವ ಉಡುಪುಗಳನ್ನು ತಯಾರಿಸುವ ಒಂದು ಸಂಸ್ಥೆಯಲ್ಲಿ ನೇಮಿಸಲ್ಪಟ್ಟ ಓರ್ವ ತರುಣಿಗೆ ಏನಪಲ್ಲ ಕೆಲಸ. ಈಸಿದ ಉಡುಪುಗಳನ್ನು ಧರಿಸಿದಲ್ಲಿ, ಈಜುವಾಗ ಆ ಉಡುಪುಗಳು ಎಷ್ಟರ ತನಕ ಸಂಕೋಚಗೊಳ್ಳುತ್ತವೆ ಎಂದು ಅವಳು ವರದಿ ಮಾಡುವಳು.

ಮತ್ತೆ ಒಬ್ಬಳಿಗೆ ಸಿಗುವ ಕೆಲಸ ಆಪಳಿರುವುದು ಪೆನ್ಸಿಲು ಕಾರ್ಖಾನೆಯಲ್ಲಿ. ಹೊಸ ಹೊಸ ಪೆನ್ಸಿಲುಗಳನ್ನು ಅವಳು ದಿನವಲ್ಲ ಗೀಚಿ ಪರೀಕ್ಷಿಸೋದಿ ಕಾಲ ಕಳೆಯುವಳು.

ಜಗತ್ತಿನ ಅತೀ ವಿಸ್ಮಯಕಾರಕ ಉದ್ಯೋಗದಲ್ಲಿರುವ ವ್ಯಕ್ತಿ ಯಾರು? ಇದು ಹೇಳಲು ಅಶಕ್ಯ. ಕಡಿತಕ್ಕೆ ಆರು ಆಣೆಯಂತೆ ವಾತರೋಗಕ್ಕೆ ಉಪಶಮನಕಾರಿಯಾಗಿ ಜೇನ ನೊಣಗಳನ್ನು ಕಚ್ಚಿಸಿ ಜೀವನ ಮಾಡುವವನೊಬ್ಬನಿದ್ದಾನೆ. ಇಲ್ಲವೆ ಕಡಲುನೊಣಗಳನ್ನು ಹಿಡಿದು ಮಾಸಿಸುವವನೊಬ್ಬನಿದ್ದಾನೆ. ಖಂಡಿತವಾಗಿ ಆತ್ಯಂತ ಕೌತುಕವನ್ನುಂಟುಮಾಡುವ ನಾವಿರಾರು ವಿಧದ ಉದ್ಯಮಗಳು ಈ ಜಗತ್ತಿನಲ್ಲಿ ರಬಹುದು. ಉದಾ: ವೈದ್ಯಶಾಸ್ತ್ರ ಕಲಿಯುವ ವಿದ್ಯಾರ್ಥಿಗಳಿಗೆ ಅಸ್ಥಿಪಂಜರಗಳನ್ನು ಮಾರಿ ಜೀವಿಸುವವರೇ ಕೆಲವರಿದ್ದಾರೆ. ಗಾಳಿಹಾಕುವವರಿಗೆ ಹುಳಗಳನ್ನು ಮಾರಿಯೆ ವರ್ಷಕ್ಕೆ 1000 ಹವನು ಸಂಪಾದಿಸುವವನೊಬ್ಬನಿದ್ದಾನೆ. ಹಾಗೆ ಒಂದು ಜಾತಿಯ ಜೇಡರ ಹುಳಗಳನ್ನು [illegible] ಒಟ್ಟುಗೂಡಿಸಿ ಹೊಟ್ಟೆ [illegible] ನೊಬ್ಬನಿದ್ದಾನೆ. [illegible] ವಾರಗಳನ್ನು [illegible] ತಯಾರಿಕೆಗೆ ಮಾರ್ಕೆಟ್ ಮಾಡುತ್ತಾನೆ. [illegible] ತರಬೇತುಗೊಳಿಸುತ್ತಾರೆ.

[illegible] ಹೊಟೇಲುಗಳಲ್ಲಿ [illegible] ಆವು [illegible] ನೋಟಕೊಳ್ಳುವುದು ಇವರ ಕೆಲಸ. ಅವರು ಕಡಲ್ಲಿ ವಿದ್ಯಾರ್ಥಿಗಳು ಬಿಡು ಸಮಯದಲ್ಲಿ ಯಾಗಿ ಈ ಕೆಲಸವನ್ನು ಮಾಡುತ್ತಾರೆ.

ವಿಚಿತ್ರ ಕೆಲಸಗಳಿಗೆ ವಿಚಿತ್ರ ಹೆಸರುಗಳೂ ಇವೆ. ಉದಾ: ಕ್ಲೈಟೋಮಿಸ್ಟ್ ಎಂಬವನು ಸೂಕ್ಷ್ಮ ದರ್ಶಕದಲ್ಲಿ ಮರದ ಹುಳುಗಳನ್ನು ಪರಿಶೀಲಿಸುವವ. ಪೆಡೋಕ್ರೊನೊಲೊಜಿಸ್ಟ್ ಎಂಬವನು ಮರದ ಮತ್ತು ಗಿಡಗಳ ವ್ಯಾಧಿ ಪರಿಶೀಲನೆ ಮಾಡುವವ. ಎಂತ್ರೊಪೆಟ್ರಿಸ್ಟ್ ಎಂಬವನು ಮನುಷ್ಯನ ಶರೀರ ಭಾಗಗಳನ್ನು ಅಳತೆ ಮಾಡುವವನು. ಕಣ್ಣು ಕಿವಿ ಮತ್ತು ಗಂಟಲುವ್ಯಾಧಿಗಳಿಗೆ ಮದ್ದು ಕೊಡುವವನೆಂದರೆ ಅಷ್ಟೊಂದು ವಿಚಿತ್ರವೆಂದೆನಿಸದಿದ್ದರೂ ಅವನಿಗೆ ವೈದ್ಯಕೀಯ ಶಾಸ್ತ್ರದಲ್ಲಿ ಒಟೋರ್ ಹಿನೊಲೆರಿಂಗೋಜಿಸ್ಟ್ ಎನ್ನುತ್ತಾರೆ.

'ಸ್ವರಾ'

NOTICE.

Elephants for Sale.

About 15 to 20 elephants will be sold by auction at Thithimati at 2 P M on 11th June 1949. The elephants are of all sizes and include both cows and tuskers. For further particulars apply to the Chief Forest Officer, Coorg Mercara.

THE WARDEN INSURANCE CO., Ltd.

(H. O. BOMBAY)

Branch Office: Bangalore City

ANNOUNCEMENT

This is to inform all over workers, policyholders medical examiners and other interested insuring public, that our office has been shifted from Mercara to Virajpet as from 1-4-1949 and request that all further communications be made to the following address only:

A. S. Aiyappa,
Branch secretary,
GANDHI NAGAR,
BANGALORE CITY.

Chief Agency office,
Warden Insurance Co., Ltd.,
Virajpet (Coorg)

ದಿ ವಾರ್ಡನ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,
ಗಾಂಧಿನಗರ್, ಬೆಂಗಳೂರು ಸಿಟಿ

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

[illegible] (1921ರಲ್ಲಿ ಸ್ಥಾಪಿತವಾಗಿದೆ)

ಅಧಿಕೃತ ಶೇರು ಭಂಡವಾಳ	ರೂ	10,00,000.
ವಸೂಲಾದ ಶೇರು ಮೊಬಲಗು	ರೂ.	1,65,000.
ಕ್ಷೇಮನಿಧಿ	ರೂ	50,000.

ಈ ಬ್ಯಾಂಕಿನಿಂದ ಜೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಆಧಾರ ಮೇಲೆ ಸಹ ಸಾಲ ಕೊಡಲಾಗುವುದು. [illegible] ಇನ್ಶೂರೆನ್ಸ್ [illegible] ತೆಗೆದುಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ಕೇಳಿ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,
ಕೆ. ಪಿ. ಅಪ್ಪಯ್ಯ, B. L. C., ಪ್ರೆಸಿಡೆಂಟ್ [illegible]

ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್, ಮಡಿಕೇರಿ.



ನಮ್ಮ ಫ್ರೇಜರ್‌ಪೇಟೆ ಕಾರ್ಖಾನೆಯಲ್ಲಿ ಸದ್ಯಕ್ಕೆ ಈ ಕೆಳಗಿನ ಕೆಲಸಗಳನ್ನು ಕೈಕೊಂಡಿರ ತ್ತೇವೆ. ಸರ್ವರೂ ಪ್ರೋತ್ಸಾಹಿಸಬೇಕಾಗಿ ವಿನಂತಿ.
(1) ಭತ್ತ ಮಿಲ್ ಮಾಡುವುದು. (2) ಅಕ್ಕಿ ಮತ್ತು ಧಾನ್ಯಗಳನ್ನು ಹುಡಿಮಾಡುವುದು, (3) ಕಾಫಿ ಹುರಿದು ಹುಡಿಮಾಡುವುದು, (4) ಮರ ಕೊಯ್ಯುವುದು

॥ ಪತ್ರವ್ಯವಹಾರಗಳು ॥

ಕೊಡಗಿನ ಮಿಲನ.

ಕರ್ನಾಟಕದ ಏಕೀಕರಣ ಸಾಧ್ಯವಿಲ್ಲವೆಂದರಿತ ಒಡನೆ ಮೈಸೂರಿನವರನ್ನಾದರೂ ನಮ್ಮನ್ನು ಆಳಲು ಅಂಗಲಾಚಿ ಬೇಡಿಕೊಳ್ಳಬೇಕಾದ್ದು ಒಂದು ದೃಷ್ಟಿಯಿಂದ ಸಹಜ. ಕೊಡಗನ್ನು ಪ್ರತ್ಯೇಕವಾಗಿಟ್ಟುಕೊಂಡು ಆಡಳಿತ ನಡೆಸುವ ಆ ದೊಡ್ಡ ಜವಾಬುದಾರಿ ಅದಾರಿಗೆ ಬೇಕು? ಪೂರ್ವದಿಂದಲೇ 'ಪಾಣಿ ಮಂಡಿತುಣಿ' ಕಟ್ಟಿಕೊಂಡು 'ಕೈತ್ತಿರಿ' ಕೋವಿ ಹೆಗಲ ಮೇಲೆ ಹೊತ್ತು ಅರಮನೆ ಕಾಯುತ್ತಾ, ಜೌಡಿಕಾರ ನೈಪುಣ್ಯಪಡೆದ ಆರಕ್ತ ನಮ್ಮ ಹಲವರಲ್ಲಿ ಇನ್ನೂ ಇರುವಾಗ ರಾಜ್ಯಭಾರ ನಡೆಸುವದೆಂದರೆ ಅದೊಂದು ಗಲಭೆಯೇ ಸರಿ. ಮೈಸೂರಿನೊಂದಿಗೆ ಮಿಲನವಾದರೆ ಮಹಾರಾಜರ ದೊಡ್ಡ ಅರಮನೆ ಇದೆ. 'ಸಲ್ಯೂಟ್' ಹೊಡೆಯುವ ಚಾಕರಿಯೂ ನಮಗೆ ಕಟ್ಟಿಟ್ಟದ್ದೇ ಆಗಿದೆ. ಅಥವಾ ಮೈಸೂರು ಮಿಲನ ತಪ್ಪಿ ಹೋದರೆ ಮಲಬಾರಿನ ಕೇಳಪ್ಪನವರ ಕಾಲನ್ನಾಗಲೀ ಕಟ್ಟಿಕೊಳ್ಳದೆ ನಿರ್ವಾಹವಿಲ್ಲ. ಚುನಾವಣೆ ದಿನ ಹತ್ತಿರ ಬರುತ್ತಿದೆ. ಆಪತ್ಕಾಲ. ೨೨ ಕೌನ್ಸಿಲು ಮೆಂಬರುಗಳ ಚುನಾವಣೆ. ೩-೪ ಮಂತ್ರಿಗಳು ಒಬ್ಬ ಮುಖ್ಯಮಂತ್ರಿ, ಒಬ್ಬ ಲೆಫ್ಟನೆಂಟ್ ಗವರ್ನರು ಇದೆಲ್ಲಾ ಯಾರಿಗೆ ಬೇಕು. ಕೊಡಗು ಕಂಡು ಕೇಳರಿಯದ ಈ ಗಲಾಟೆ!

ಮೈಸೂರಿಗಾಗಲೀ ಕರ್ನಾಟಕ್ಕೆ ಆಗಲೀ ಸೇರಿಹೋದರೆ ಹೇಗಾದರೂ ಒಬ್ಬ ಮಂತ್ರಿಯ ಪದವಿ ಒಂದೆರಡು ಕೌನ್ಸಿಲು ಮೆಂಬರುತನ ದೊರೆಯದಿರದು. ಅದರ ಅಗ್ರಪೂಜೆ ಸಂಯೋಜನವಾದಿಗಳಿಗೆ ದೊರೆಯಲೂಬಹುದು. ಯಾಕೆ? ದೊರೆಯುತ್ತದೆ ಅನ್ನಿ. ಹತ್ತರ ಮೇಲೆ ಇನ್ನೊಂದು ಎಂದು ಯಾವ ಜವಾಬುದಾರಿಕೆಯೂ ಇಲ್ಲದೆ ನಿಜಲಿಂಗಪ್ಪನವರಿಗೊಂದು ಕೈ, ರೆಡ್ಡಿಗಳಿಗಿನ್ನೊಂದು ಕೈ ಎತ್ತಬಹುದು. ಹೋಗಿಬರುವ ದೊಡ್ಡ ಭತ್ಯವೂ ದೊರೆಯುತ್ತದೆ!

ಆದರೆ ಕರ್ನಾಟಕವು ಏಕೀಕರಣಕ್ಕಾಗಿ ಹೋರಾಡುವದು ಯಾಕೆ? ಅಂತೆಯೇ ಮಲಬಾರು ಒಂದು ಕೇರಳ ಪ್ರಾಂತ್ಯಕ್ಕಾಗಿ ಹೋರಾಡುವದಾದರೂ ಏಕೆ? ಒಂದೇ ತರದ ಭಾಷೆಯನ್ನು ಆಡುವವರು ಒಂದೇ ಪ್ರಾಂತ್ಯದಲ್ಲಿರಬೇಕೆಂಬ ಒಂದೇ ಕಾಂಕ್ಷೆಯೇ? ಈ ಹೋರಾಟದ ಹಿನ್ನೆಲೆಯಲ್ಲಿ ಮುಖ್ಯವಾದ ಇನ್ನೊಂದು ಸಂಗತಿಯಿದೆ. ಅದನ್ನು ಪಡೆಯುವದೇ ಇದರ ಮುಖ್ಯ ಉದ್ದೇಶ. ಕರ್ನಾಟಕವೆಂಬ, ಕೇರಳವೆಂಬ ಒಂದೊಂದು ಆಧಿಪತ್ಯವಿಲ್ಲ. ಈ ಆಧಿಪತ್ಯವಿಲ್ಲದ ನಾಡುಗಳಿಗೆ ಕೌನ್ಸಿಲು ಇಲ್ಲ. ಅಂದ ಮೇಲೆ ಮಂತ್ರಿಗಳಿಲ್ಲ, ಗವರ್ನರುಗಳಿಲ್ಲ. ಮಧ್ಯವರ್ತಿ ಸರಕಾರದಲ್ಲಿ ಕರ್ನಾಟಕ, ಕೇರಳವೆಂಬ ಹೆಸರೇ ಇಲ್ಲ. ಅಲ್ಲಿ ಅವುಗಳಿಗೆ ಸ್ಥಾನವಿಲ್ಲ. ಇದನ್ನು ಪಡೆಯುವದಕ್ಕಾಗಿಯೇ ಕರ್ನಾಟಕದವರ ಶತಪ್ರಯತ್ನವಾಗಿದೆ. ಕೊಡಗಿನವರು ಕಿವಿಹಿಂಡುವದೂ ಇದಕ್ಕೆ. ಅದು ಸಾಧಿಸುವ ವರೆಗೆ ಕೊಡಗಿನ ಕಾಂಗ್ರೆಸಿನ ಎಡ್‌ಹಾಕ್ ಕಮಿಟಿಯು ಅಧಿಕಾರದಲ್ಲಿರುವಂತೆ ಕರ್ನಾಟಕದ ಕಾಂಗ್ರೆಸು ಧುರೀಣರು ಪ್ರಯತ್ನಿಸುತ್ತಿರುವರು!

ಯಾವ ದೇಶವನ್ನಾದರೂ ಬಲಿಕೊಟ್ಟು ಕರ್ನಾಟಕ್ಕೊಂದು ಆಧಿಪತ್ಯ ದೊರಕಿಸಿಕೊಂಡರೆ ಅಲ್ಲಿಗೊಬ್ಬ ಗವರ್ನರು ೩೦೦-೪೦೦ ಕೌನ್ಸಿಲು ಮೆಂಬರುಗಳು. ಒಬ್ಬ ಮುಖ್ಯ ಮಂತ್ರಿ ೮-೯ ಇತರ ಮಂತ್ರಿಗಳು ಅವರ ಸೆಕ್ರೆಟರಿ ಇಲಾಖೆ ಮಧ್ಯವರ್ತಿ ಸರಕಾರದಲ್ಲಿ ಅವರಿಗೊಂದು ಸ್ಥಾನ ಇತ್ಯಾದಿ, ಇವನ್ನು ಪಡೆಯುವದೇ ಮುಖ್ಯ ಉದ್ದಿಶ್ಯ. ಕೊಡಗು ಪ್ರತ್ಯೇಕವಾಗಿರುವದರಿಂದ ಈ ಎಲ್ಲಾ ಸ್ಥಾನಮಾನಗಳಿಗೂ ಎಡೆ ಇದೆ. ಮಧ್ಯವರ್ತಿ ಸರಕಾರದಲ್ಲಿ ನಮಗೆ ದೊರಕಿರುವ ಸ್ಥಾನವು ನಮ್ಮ ಮಾತಿನ ಮಲ್ಲಗಾರಿಕೆಯಿಂದಾಗಲೀ, ವಿದ್ಯಾಪಾಂಡಿತ್ಯದಿಂದಾಗಲೀ ಕಾಂಗ್ರೆಸಿನಲ್ಲಿ ದೇಶೀಯರು ದುಡಿದದಕ್ಕಾಗಿ ಆಗಲೀ ಸಿಕ್ಕಿದಲ್ಲ. ನಮ್ಮ ದೇಶವನ್ನು ಪ್ರತ್ಯೇಕ ಪ್ರಾಂತ್ಯವನ್ನಾಗಿ ಇಟ್ಟುಕೊಂಡುದರ ಫಲವಾಗಿ ಸಿಕ್ಕಿರುವದಾಗಿದೆ ಮತ್ತು ಪರದೇಶಗಳಿಗೆ ಪೆಟ್ಟಿನ ವ್ಯಾಸಂಗಕ್ಕಾಗಿ ಹೋಗುವ ಅನುವೂ ಈ ಕಾರಣವೇ ದೊರಕಿದುದಾಗಿದೆ. ನಾವು ನಮ್ಮ ಪ್ರತ್ಯೇಕತ್ವವನ್ನು ಕಳಕೊಂಡ ಮಡನೆಯೇ ಇವುಗಳೆಲ್ಲಾ ತನ್ನಷ್ಟಕ್ಕೆ ತಾನೇ ಇಲ್ಲದಾಗುವವು ಎಂಬದನ್ನು ಯಾರೂ ಮರೆಯಬಾರದು. ಅಲ್ಲದೆ ಕೊಡಗಿನ ವಿದ್ಯಾವಂತರಲ್ಲಿ ನಿರುದ್ಯೋಗವು ಇಲ್ಲವೆಂತಲೇ ಹೇಳಬಹುದು. ಬೇರೆ ದೇಶಗಳಲ್ಲಿ ಶೇಕಡ ೪೦ರಷ್ಟು ನಿರುದ್ಯೋಗಿಗಳು ಎಂದು ಮೇಲೆ ಏಕೀಕರ್ನಾಟಕಕ್ಕೆ ಸೇರುವದರಿಂದ ನಮಗೆ ನಿರುದ್ಯೋಗದ ಸಮಸ್ಯೆಯು ಬಗೆಹರಿಯುವ ವರೆಗೆ ಮೇಲೆ ಹೇಳಿದ 'ಸಲ್ಯೂಟ್' ಹೊಡೆಯುವ ಚಾಕರಿ ಸಹ ಸಿಕ್ಕಲಾರದು. ಅಲ್ಲದೆ ೩ ವರ್ಷಕ್ಕೆ ೫ ಬರಗಾಲ ಬರುವ ಕರ್ನಾಟಕದ ಪ್ರಾಂತ್ಯಗಳಾದ ಧಾರವಾಡ, ಬಿಜಾಪುರ, ಕಾರವಾರ ಪ್ರಾಂತ್ಯಗಳ ಮಧ್ಯೆ ಕೊಡಗಿಗೂ ಬರಗಾಲ ಬಂದೀತು!

ಕರ್ನಾಟಕಕ್ಕೆ ಒಂದು ಪ್ರಾಂತ್ಯವಾಗಬೇಕೆಂದಾದರೆ ಪ್ರತ್ಯೇಕ ಪ್ರಾಂತವನ್ನು ಪಡೆದಿರುವ ಯಾವ ಕರ್ನಾಟಕವು ಯಾವ ಗುರಿಯನ್ನು ಪಡೆಯಲು ಪ್ರಯತ್ನಿಸುತ್ತಿರುತ್ತದೋ ಆ ಗುರಿಯನ್ನು ಪಡೆದಿರುವ ಕೊಡಗನ್ನು ಅದರ ಅಸ್ತಿತ್ವದಿಂದ ಹೊರತಳ್ಳಲು ನಮ್ಮ ಕರ್ನಾಟಕ ನಿಜಬಂಧುಗಳು ಯಾಕೆ ಪ್ರಯತ್ನಿಸುತ್ತಿರುವರು ಎಂಬದು ಒಂದು ಸಮಸ್ಯೆ. ಕೊಡಗನ್ನು ವಿನಾಯಿಸಿ ಒಂದು ಪ್ರಾಂತವನ್ನು ರಚಿಸಿಕೊಳ್ಳುವದರಲ್ಲಿ ಯಾವ ಅತಂಕವಿದೆ. ಚಲ್ಲಾಪಿಲ್ಲಿಯಾಗಿ ಹರಿದು ಹಂಚಿ ಹೋಗಿರುವ ಕನ್ನಡ ನಾಡನ್ನು—ಕೊಡಗನ್ನು ವಿನಾಯಿಸಿ—ಒಂದುಗೂಡಿಸಿ ಒಂದು ಪ್ರಾಂತ ಮಾಡಲು ಕೊಡಗಿನವರ ಸಂಪೂರ್ಣ ಸಹಾನುಭೂತಿಯಿದೆ.

ಕೊಡಗು ದೇಶವು ಒಬ್ಬರ ಯಾ ಒಂದು ಪಂಗಡದವರ ಸ್ವಂತ ಆಸ್ತಿಯಲ್ಲ. ಅನ್ಯದೇಶಸ್ಥರಾರೂ ಗಳಿಸಿ ಬಳುವಳಿಯಾಗಿ ನಮಗೆ ಕೊಟ್ಟಿಲ್ಲ. ನಮ್ಮ ಪೂರ್ವಿಕರು ತಮ್ಮ ಭುಜಬಲ ಪರಾಕ್ರಮದಿಂದ ಅದರ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿರುತ್ತಾರೆ. ಅದನ್ನು ಅನ್ಯದೇಶಕ್ಕೆ ಮಾರಾಟ ಮಾಡುವ ಹಕ್ಕು ಯಾರಿಗೂ ಇಲ್ಲ. ಕೊಡಗು ಪ್ರತ್ಯೇಕವಾಗಿದ್ದು ಅದರ ಆಡಳಿತನಡಿಸಿಕೊಂಡು ಬರುವದು ನೋಡಿ ಸಹಿಸಲಾರದವರು ಯಾರಾದರೂ ಇದ್ದಲ್ಲಿ ದಯಮಾಡಿ ಅವರೇ ಅವರ ಗಂಟು ಮೂಟೆಗಳ ಸಮೇತ ಅವರವರಿಗೆ ಇಷ್ಟ ಬಂದ ದೇಶಗಳಿಗೆ ಹೋಗುವಲ್ಲಿ ದೇಶದವರ ಸಹಾನುಭೂತಿಯಿರುವುದು.

ಐ. ಓ. ಮಾದಪ್ಪ.

ಡಿಲ್ಲಿಯಲ್ಲಿರುವ ನರೇಂದ್ರರ ಅರಮನೆಗಳು

ಡಿಲ್ಲಿ ನಗರದಲ್ಲಿರುವ, ನರೇಂದ್ರರ ಅರಮನೆಗಳನ್ನು ಇಂಡಿಯಾ ಸರಕಾರದವರು ಕೊಂಡುಕೊಳ್ಳಲಿರುವರು ಎಂಬುದಾಗಿ ತಿಳಿದು ಬಂದಿದೆ. ಆ ಅರಮನೆಗಳ ಮೌಲ್ಯವೆಷ್ಟೆಂದು ಅಂದಾಜು ತಯಾರಾಗುತ್ತಿದೆ. ಡಿಲ್ಲಿಯಲ್ಲಿ ಸುಮಾರು ೨೦ ನರೇಂದ್ರರ ಅರಮನೆಗಳಿವೆ. ಇವುಗಳ ಅಂದಾಜು ಮೌಲ್ಯ ತಯಾರಿಸಲು ಸುಮಾರು ಎರಡು ವರ್ಷಗಳು ಬೇಕಾಗಬಹುದಂತೆ.

ಈ ಅಂದಾಜು ಮೌಲ್ಯ ನಿರ್ಣಯವಾದ ಅನಂತರ, ಸ್ಟೇಟ್ ಮಿನಿಸ್ಟ್ರಿ ಪ್ರತಿನಿಧಿಗಳು, ಯಾವ ಅರಮನೆಗಳನ್ನು ಕೊಂಡುಕೊಳ್ಳಬೇಕೆಂಬುದನ್ನು ನಿರ್ಣಯಿಸುವರು.

ನರೇಂದ್ರರ ಆ ಇಪ್ಪತ್ತು ಮನೆಗಳನ್ನು ಆಫೀಸಿಗಾಗಲಿ, ವಾಸಸ್ಥಾನಕ್ಕಾಗಲಿ ಉಪಯೋಗಿಸಬಹುದು. ಕೆಲವು ಅರಮನೆಗಳು, ಪರರಾಷ್ಟ್ರಗಳಿಂದ ಬರುವ ಡೆಲಿಗೇಷನುಗಳಿಗೆ ಉಳಕೊಳ್ಳಲು ಮೀಸಲಾಗಿಡಲ್ಪಡುವುವು.

ಹೈದರಾಬಾದ್, ಕಾಶ್ಮೀರ, ಬಡೋದೆ, ಜಯಪುರ, ಪಾಟಿಯಾಲಾ, ಉದಯಪುರ, ನಭಾ, ಡೋಲಪುರ, ಕಪುರ್ತಲಾ, ತಿರುವಾಂಕೂರ್, ಕೊಚ್ಚಿ, ಜಯಸಲ್ಮೇರ, ತೆಹರಿಘರವಾಲ, ಭಿಕಾನೇರ, ಕೋಟ್ಟಾ, ಭಾವನಗರ, ಪಟಿಯಾಲ, ಮಂಡಿ, ಬಾವಲ್ಪುರ ಮತ್ತು ಜಿಂದ್—ಈ ಸಂಸ್ಥಾನಾಧೀಶರ ಅರಮನೆಗಳು ಡಿಲ್ಲಿಯಲ್ಲಿವೆ.

ಸರಕಾರದವರು ಹೊಟೇಲು ಕಟ್ಟಿಸುವರು

ಡಿಲ್ಲಿ ನಗರಕ್ಕೆ ಬೇರೆ ಬೇರೆ ಕಡೆಗಳಿಂದ ಶಿಷ್ಟ ಮಂಡಳಿಗಳು ಬರುತ್ತಲಿವೆ. ಅವರಿಗೆ ಉಳಕೊಳ್ಳುವರೆ ಸ್ಥಳದ ಅಭಾವವಿದೆ. ಈ ಕೊರತೆಯನ್ನು ಹೋಗಲಾಡಿಸಲು ಇಂಡಿಯಾ ಸರಕಾರದವರು, ಸಾಕಷ್ಟು ಸ್ಥಳವಿರುವ ದೊಡ್ಡ ಹೊಟೇಲನ್ನು ಕಟ್ಟಿಸುವ ಆಲೋಚನೆ ಮಾಡಿರುವರು. ಕಟ್ಟಡಕ್ಕೆ ಸ್ಥಳವು ನಿರ್ಣಯಿಸಲ್ಪಟ್ಟಿದ್ದು, 'ಟೆಂಡರು'ಗಳನ್ನು ಕರೆಯಲಾಗಿದೆ. ಹೊಟೇಲು ಕಟ್ಟಡವು ಪೂರ್ಣಗೊಳ್ಳಲು ಹದಿನೆಂಟು ತಿಂಗಳ ಕಾಲ ಬೇಕಾಗಬಹುದೆಂದೂ ತಿಳಿಯಲಾಗಿದೆ.

ಅಂಡಮಾನ್ ದ್ವೀಪಗಳಿಗೆ ಎಮ್ಮೆಗಳ ರವಾನೆ

ಭಾರತ ಸರಕಾರದ ವ್ಯವಸಾಯದ ಇಲಾಖೆಯವರು ೨೪೪ ಎಮ್ಮೆಗಳನ್ನೂ ಕೋಣಗಳನ್ನೂ ಕೊಂಡುಕೊಂಡಿದ್ದಾರೆ. ಇವುಗಳನ್ನು ಅಂಡಮಾನ್ ದ್ವೀಪಗಳಲ್ಲಿ ನೆಲೆಸುವ ನಿರಾಶ್ರಿತರಿಗೆ ಹಂಚಲಾಗುತ್ತೆ. ಈ ಎಮ್ಮೆಗಳನ್ನು ಹಡಗುಗಳಲ್ಲಿ ಮದರಾಸ್ ಬಂದರಿನಿಂದ ಕಳುಹಿಸಲಾಗುವುದು. ೧೫ ಮಂದಿ ಪಂಜಾಬ್ ರೈತರೂ ಈ ಎಮ್ಮೆಗಳ ಜೊತೆಯಲ್ಲಿ ಹೋಗುವರು. ಅಂಡಮಾನ್ ದ್ವೀಪಗಳಲ್ಲಿ ನಿರಾಶ್ರಿತರು ನೆಲೆಸಿ ವ್ಯವಸಾಯ ಅಭಿವೃದ್ಧಿಗೊಳಿಸಬೇಕೆಂದು ಭಾರತ ಸರಕಾರದ ಯೋಜನೆ ಆಗಿದೆ.

ನೆಹರೂ ಅಮೇರಿಕಾಕ್ಕೆ

ಪಂ ನೆಹರೂರವರು ಇನ್ನೊಂದು ಪ್ರಾಮುಖ್ಯ ಪ್ರಯಾಣ ಕೈಕೊಳ್ಳಲಿದ್ದಾರೆ. ಅದು ಅಮೇರಿಕಾದ ಅಧ್ಯಕ್ಷ ಟ್ರೂಮೇನರ ಆಮಂತ್ರಣದಂತೆ. ಟ್ರೂಮೇನರ ಆಮಂತ್ರಣವು ಎರಡು ತಿಂಗಳ ಮೊದಲೇ ಬಂದಿತ್ತು. 'ಈ ವರ್ಷಾಂತ್ಯದ ಭಾಗದಲ್ಲಿ ಅಮೇರಿಕಾಕ್ಕೆ ಬನ್ನಿ' ಎಂದು ಅಧ್ಯಕ್ಷ ಟ್ರೂಮೇನರ ಆಹ್ವಾನವಿದ್ದಿತು. ಬರುವ ಅಕ್ಟೋಬರ್ ಆದಿ ಭಾಗದಲ್ಲಿ ವಾಷಿಂಗ್ಟನಿಗೆ ಹೋಗಿ, ಆ ಮೇಲೆ ಮೂರು ವಾರ ಅಮೇರಿಕಾದಲ್ಲೆಲ್ಲಾ ನೆಹರೂರವರು ಸಂಚರಿಸುವರೆಂದು ಗೊತ್ತಾಗಿದೆ ರಿಪಬ್ಲಿಕ್ ಭಾರತಕ್ಕೆ ಆದಿ ಭಾಗದಲ್ಲಿ ಅಮೇರಿಕಾದ ಸಲಕರಣೆ ಸಹಾಯಗಳು ಬೇಕಾಗಬಹುದಾದ್ದರಿಂದ ನೆಹರೂ—ಟ್ರೂಮೇನರೊಳಗೆ ಭಾರತ—ಅಮೇರಿಕಾಗಳೊಳಗಿನ 'ಕೊಡಕೊಂಡ'ದ ಮಾತುಕತೆಗಳಾಗಲಿವೆ ನೆಹರೂಗಳ ಆ ಭೇಟಿಯು ಲೋಕ ಪ್ರಾಮುಖ್ಯತೆ ಪಡೆಯುವದು ಖಂಡಿತ.

'ನೆಹರೂ ಮಹಾ ಶ್ರೇಷ್ಠ ರಾಜ ನೀತಿಜ್ಞರು'

ಪಂ. ನೆಹರೂರವರು ಅಖಿಲ ಏಷ್ಯಾದಲ್ಲಿ ಬಹು ದಕ್ಷರಾದ, ವಿವೇಕಶಾಲಿಗಳಾದ, ಮತ್ತು ಬುದ್ಧಿವಂತರಾದ ರಾಜನೀತಿಜ್ಞರು. ಯೂರೋಪು ಖಂಡದಲ್ಲಿ ಸ್ಟಾಲಿನ್ನರು ಹೇಗೆ ಅದ್ವಿತೀಯರೋ, ಏಷ್ಯಾ ಖಂಡದಲ್ಲಿ ನೆಹರೂ ಹಾಗೆ. ನೆಹರೂರವರು ಕೀರ್ತಿವಂತರೂ, ಪ್ರಭಾವಶಾಲಿಗಳೂ ಆಗಿದ್ದಾರೆ' ಎಂದು ಜಾರ್ಜ್ ಬರ್ನಾರ್ಡ್ ಷಾರವರು ನೆಹರೂರವರನ್ನು ಪ್ರಶಂಸಿಸಿದ್ದಾರೆ. ಈ ಪ್ರಶಂಸೆಯನ್ನು ಮಿ. ಎಫ್. ಇ. ಲೊವೆನ್‌ಸ್ಟೀನ್ ಎಂಬ ಗ್ರಂಥಕಾರರು ಶ್ರೀ ಪಿ. ಡಿ. ಟಾಂಡನ್‌ರವರಿಗೆ ಕಳುಹಿಸಿಕೊಟ್ಟಿದ್ದಾರೆ.

ಡೆಲ್ಲಿಗೆ ಷೇಕ್ ಅಬ್ದುಲ್ಲಾ.

ಕಾಶ್ಮೀರದ ಮುಖ್ಯ ಮಂತ್ರಿ ಷೇಕ್ ಅಬ್ದುಲ್ಲಾರವರೂ ಮತ್ತು ಕಾಶ್ಮೀರದ ಇತರ ಮೂವರು ಮಂತ್ರಿಗಳೂ ಡೆಲ್ಲಿಗೆ ಬಂದಿರುವರು. ಪ್ರಪಂಚ ಸಂಸ್ಥೆ ಕಮಿಷನ್ನಿನವರು ಕಾಶ್ಮೀರ ಒಪ್ಪಂದಕ್ಕೆ ಸಂಬಂಧಪಟ್ಟ ಕೊನೆಯ ಸಲಹೆಗಳನ್ನು ಭಾರತ ಸರಕಾರದೊಡನೆ ಚರ್ಚಿಸಿ ಪರಿಶೀಲಿಸಲಾಗುವದು. ಅನಂತರ ಪ್ರಪಂಚ ಸಂಸ್ಥೆ ಕಮಿಷನ್ನಿಗೆ ಉತ್ತರಕೊಡಲಾಗುವದು.

ಜೇನು ನೊಣಗಳ ಭಾಷೆ.

ಲೇ:- ಶ್ರೀ ಮನೆಯಪಂಡ ಸಿ. ಕಾರ್ಯಪ್ಪ, ಬಿ ಎಸ್‌ಸಿ. ಎಂ ಐ ಎಂ. ಬೊಂಬಾಯಿ

ಪ್ರಾಣಿಗಳು ಸಹ ಮನುಷ್ಯನಂತೆ ಬಾಯಿಯಿಂದ ಸ್ವರವನ್ನು ಹೊರಡಿಸಿ ಮನಸ್ಸಿನಲ್ಲಿ ಹೊಳೆದದ್ದನ್ನು ಹೊರಗೆ ವ್ಯಕ್ತಪಡಿಸುತ್ತವೆ. ಭಾಷೆಯು ಮಾನವ ಕುಲದ ಮಾತ್ರ ಹುಟ್ಟು ಗುಣವಲ್ಲ; ನಾಗರೀಕತೆಯು ತಲೆದೋರುವದಕ್ಕೆ ಮುಂಚೆ ಮನುಷ್ಯನೂ ಸಹ ಮೂಕನಾಗಿಯೇ ಇದ್ದನು. ಹಸಿವು, ಕಾಮ ಮತ್ತು ನೋವು ಉಂಟಾದಾಗ ಮಾತ್ರ ಅರಚಿಕೊಳ್ಳುತ್ತಿದ್ದನಂತೆ! ಚಿಕ್ಕ ಮಗುವು ಒಂದೆರಡು ವರ್ಷಗಳ ವರೆಗೂ ಮೂಕನಾಗಿಯೇ ಇದ್ದು ಕ್ರಮೇಣ ತನ್ನ ಆವರಣದಲ್ಲಿ ರೂಢಿಯಲ್ಲಿರುವ ಭಾಷೆಯನ್ನು ಕಲಿಯುತ್ತವೆ. ಮಾನವ ಕುಲದಲ್ಲಿ ವಿವಿಧ ಭಾಷೆಯಲ್ಲಿ ಸ್ವರವನ್ನು ವಿವಿಧ ರೀತಿಯಿಂದ ಬಾಯಿಂದ ಹೊರಡಿಸುವಾಗ ಬೇರೆ ಬೇರೆ ಅರ್ಥವನ್ನುಂಟುಮಾಡುತ್ತದೆ. ಉದಾಹರಣೆಗಾಗಿ ಸ್ಕೇಂಡಿನೇವಿಯಾದ ಭಾಷೆಯಲ್ಲಿ ತಾ, ತಾ ತಾ, ತಾ ತಾ ತಾ ಎಂದರೆ ಮೂರು ವಿಧದ ಅರ್ಥವನ್ನುಂಟುಮಾಡುತ್ತದೆ. ಆದರೆ [illegible] ಬೇರೆ ಬೇರೆ ಸ್ವರಗಳಲ್ಲಿ ಕೀ, ಕಾ, ಕರ್ ಎಂದಾಗ ಅವುಗಳ ಉದ್ದೇಶವನ್ನು ತಿಳಿದವರುಂಟೆ? ಪಕ್ಷಿಗಳು, ಪ್ರಾಣಿಗಳೂ ಹೀಗೆ ಒಂದೊಂದು ವಿಧದ ಸ್ವರವನ್ನು ಹೊರಡಿಸಿ ಅವುಗಳ ಜಾತಿಗಳಿಗೆ ಬೇಕಾದ್ದನ್ನು ತಿಳಿಯಪಡಿಸುತ್ತವೆ. [illegible]ಯು ಮೂಕವಾಗುತ್ತದೆ. ಅನೇಕ ಪಕ್ಷಿಗಳು [illegible] ಹಾಡುತ್ತವೆ. ಕೆಲವು ಪಕ್ಷಿಗಳು ಕುಣಿಯುತ್ತವೆ. ಆಸ್ಟ್ರೇಲಿಯಾದ 'ಲಿಂಗ್ ಬೇರ್ ಏನ್' [illegible]. ಇದೆಲ್ಲಾ ಮನುಷ್ಯನ ಮನೋರಂಜನೆಗಲ್ಲ, ಅವುಗಳ ಪ್ರೇಮದ ಮತ್ತು ಆಹಾರಕ್ಕಿರುವ [illegible]. ಇನ್ನೂ ಚಿಕ್ಕ ಪ್ರಾಣಿವರ್ಗದವುಗಳಾದ ಇರುವೆಗಳು ಸ್ವರವನ್ನು ಹೊರಡಿಸಲಾರವು. ಅದಕ್ಕೆ ಬದಲು ಅವುಗಳು 'ಟೆಲಿಗ್ರಾಂ' ಶಬ್ದದಂತೆ ಒಂದು ಇನ್ನೊಂದರ ಮೂಸಗೆ ಹೊಡೆದು ಆಹಾರ, ಮಳೆ, ಅಪಾಯ ಮುಂತಾದವುಗಳನ್ನು ತಿಳಿಸುತ್ತವೆ. ಅಂತೆಯೇ ಜೇನು ನೊಣಗಳೂ ಸಹ ಒಂದು ವಿಧದ ಭಾಷೆಯನ್ನನುಸರಿಸುತ್ತವೆ.

ಜೇನು ನೊಣಗಳ ಭಾಷೆಯನ್ನು ಕುರಿತು ವಿಚಾರಿಸಿದವರಲ್ಲಿ ಆಸ್ಟ್ರಿಯಾ ದೇಶದ ಡಾಕ್ಟರ್ ವಾನ್ ಫ್ರಿಸ್ಸ್ ಮೊದಲನೆಯವರು. ಇವರು ಕಳೆದ ಸಲ್ಪತ್ತು ವರ್ಷಗಳಿಂದಲೂ ಆಸ್ಟ್ರಿಯಾದಲ್ಲಿ ಈ ಕೆಲಸವನ್ನು ಕೈಕೊಂಡಿದ್ದಾರೆ. ಈ ಶೋಧನೆಗಾಗಿ ಇವರು ಒಂದು ಗಾಜಿನ ಜೇನು ಪೆಟ್ಟಿಗೆಯನ್ನೂ ಮತ್ತು ಜೇನು ನೊಣಗಳಿಗೆ ಆಹಾರಕ್ಕಾಗಿ ಸಕ್ಕರೆಯ ಪಾನಿಯನ್ನೂ ಉಪಯೋಗಿಸಿದರು. ಜೇನು ನೊಣಗಳು ಎರಡು ವಿಧದ ಕುಣಿತದಿಂದ ಆಹಾರವಿರುವ ಸ್ಥಳ, ದೂರ, ಮತ್ತು ಎಷ್ಟು ಆಹಾರವು ಸಿಕ್ಕುತ್ತದೆಂಬುದನ್ನು ತಮ್ಮ ತಮ್ಮೊಳಗೆ ತಿಳಿಯಪಡಿಸುತ್ತವೆ ಎಂಬುದು ತಿಳಿದು ಬಂದಿದೆ. ಜೇನು ಗೂಡಿನ ಹತ್ತಿರ ಆಹಾರವನ್ನಿಟ್ಟಾಗ ಅದನ್ನು ಮೊದಲು ಕಂಡು ಹಿಡಿದ ಜೇನು ನೊಣವು ಗೂಡಿಗೆ ಹಿಂದಕ್ಕೆ ಹಾರಿ ಗೋಳಾಕಾರದಲ್ಲಿ ಕುಣಿಯಲು ಪ್ರಾರಂಭಿಸುತ್ತದೆ. ಇದು ಒಂದು ಅಂಟು ರೋಗದಂತೆ! ಇದನ್ನು ನೋಡಿದ ಎಲ್ಲಾ ನೊಣಗಳೂ ಕುಣಿಯಲು ಪ್ರಾರಂಭಿಸಿ ಮೊದಲು ಬಂದ ನೊಣವನ್ನು ಹಿಂಬಾಲಿಸುತ್ತಾ ಆಹಾರವಿರುವ ಸ್ಥಳಕ್ಕೆ ಬರುತ್ತವೆ. ಮೊದಲಿಟ್ಟ ಸ್ಥಳದಿಂದ ಆಹಾರವನ್ನು ದೂರದಲ್ಲಿಟ್ಟಾಗ ಮತ್ತು ಆಹಾರವನ್ನು ಹೆಚ್ಚು ಕಡಿಮೆ ಮಾಡಿದಾಗ ಅಥವಾ ಆಹಾರವನ್ನು ಇಲ್ಲದೆ ಮಾಡಿದಾಗಲೂ ನೊಣಗಳು ಗೂಡಿನೊಳಗೆ ಮತ್ತೊಂದು ವಿಧದಲ್ಲಿ ಸಂಕಲೆಯಂತೆ ಗೋಳಾಕಾರದಲ್ಲಿ ಮತ್ತು ಶರೀರದ ಹಿಂಭಾಗವನ್ನು ಎಡಕ್ಕೂ ಮತ್ತು ಬಲಕ್ಕೂ ಅಲ್ಲಾಡಿಸಿ ಕುಣಿಯುತ್ತವೆ. ಈ ಕುಣಿತದಲ್ಲಿ ನೊಣಗಳು ಆಹಾರವಿರುವ ದಿಕ್ಕನ್ನೂ ಸಹ ತೋರಿಸುತ್ತವೆ ಎಂದೂ ಊಹಿಸಲಾಗಿದೆ. ಒಂದು ಗೂಡಿನ ಜೇನು ನೊಣಗಳು ಬೇರೆ ಬೇರೆ ಕಡೆಯಿಂದ ಜೇನು ಸಂಗ್ರಹಿಸುತ್ತಿದ್ದರೆ ಆಯಾ [illegible] ಸಿಕ್ಕುತ್ತಿ[illegible] ನೊಣಗಳು ಅಲ್ಲಿಗೆ [illegible] ಕಂಡು ಹಿಡಿಯಲು [illegible] ಒಂದು ಜೇನು ಗೂಡಿನ ಹತ್ತಿರ [illegible] ಸ್ಥಳದಲ್ಲಿ ಆಹಾರ [illegible] ಒಂದು ಸ್ಥಳದಲ್ಲಿ ಆಹಾರವನ್ನು ಹೆಚ್ಚಿಸಿದಾಗ ಅಲ್ಲಿಗೆ ಜೇನು ನೊಣಗಳು ಬರಲಾರಂಭಿಸಿದವು. ಆಹಾರವನ್ನು ಬಹಳ ಕಡಿಮೆ ಮಾಡಿದಾಗ ಅಲ್ಲಿಗೆ ಹೋಗುತ್ತಿದ್ದ ನೊಣಗಳು [illegible] ಗೂಡಿನಲ್ಲಿರುವದು ಕಂಡು ಬಂತು. ಆಹಾರವನ್ನು ಅಲ್ಲಿಂದ ಇಲ್ಲದೆ ಮಾಡಿದಾಗ ಅಲ್ಲಿಗೆ ಹೋಗುತ್ತಿದ್ದ ರಂಗಿನ ನೊಣಗಳು ಗೂಡಿನಲ್ಲೇ ಇರುವದನ್ನು ಕನ್ನಡಿಯ ಪೆಟ್ಟಿಗೆಯಲ್ಲಿ ನೋಡಲಾಯಿತು. ಇವೂ ಅಲ್ಲದೆ ಒಂದೆರಡು ನೊಣವು ಸ್ವಲ್ಪ ಸಮಯ ಬಿಟ್ಟು ಮೊದಲು ಆಹಾರ ಸಿಕ್ಕುವ ಸ್ಥಳವನ್ನು ಸಂದರ್ಶಿಸುತ್ತಿತ್ತು. ಆಹಾರವನ್ನು ಪುನಃ ಇಟ್ಟಾಗ ಇದನ್ನು ಮೊದಲು ಕಂಡ ನೊಣವು ಗೂಡಿಗೆ ಹಿಂದಕ್ಕೆ ಹಾರಿ ಗೋಳಾಕಾರದಲ್ಲಿ ಕುಣಿಯುವುದು. ಇದನ್ನು ಹಿಂಬಾಲಿಸಿ ಕುಣಿಯುತ್ತಾ ಆ ಗುಂಪಿನ ಜೇನು ನೊಣಗಳು ಪುನಃ ಕೆಲಸಕ್ಕೆ ಪ್ರಾರಂಭಿಸುವವು.

ಜೇನು ನೊಣಗಳು ರೆಕ್ಕೆ ಬಡಿತದಿಂದಲೂ ಕೆಲವು ವಿಷಯಗಳನ್ನು ವ್ಯಕ್ತಪಡಿಸುತ್ತವೆ. ಎಳೆ ಬಿಸಿಲು ಬಂದಾಗ ಬೆಳಿಗ್ಗೆ ಅವುಗಳು ಗೂಡಿನ ಬಾಯಿಯ ಬಳಿಯಲ್ಲಿ ಮೆಲ್ಲಗೆ ರೆಕ್ಕೆ ಬಡಿಯುತ್ತಾ ಹಾರುತ್ತವೆ. ಆದರೆ ಅವುಗಳಿಗೆ ಸಿಟ್ಟೇರಿದಾಗ ಎಂದರೆ ಕಣಜ, ಹಲ್ಲಿ ಮತ್ತು ಮನುಷ್ಯರು ಮುಂತಾದ ಶತ್ರುಗಳು ತೊಂದರೆ ಕೊಟ್ಟಾಗ ನಿಮಿಷಕ್ಕೆ ಸಾವಿರ ಬಾರಿಗೆ ಮೀರಿ ರೆಕ್ಕೆ ಬಡಿಯುತ್ತಾ ಘೋರ ಬೀಳುತ್ತವೆ. ಕೆಲವು ಜೇನು ನೊಣಗಳು ಉಗ್ರವಾಗಿಯೂ, ಕೆಲವು ಸಾಧುವಾಗಿಯೂ ಮತ್ತು ಕೆಲವು ವ್ಯೆಗಳ್ಳ ಜಾತಿಯಾಗಿಯೂ ಇರುತ್ತವೆ. ವ್ಯೆಗಳ್ಳ ಜಾತಿಯ ನೊಣಗಳು ಹೂವಿಂದ ಜೇನು ಸಂಗ್ರಹಿಸುವದರ ಬದಲು ಹತ್ತಿರದಲ್ಲಿ ಬೇರೆ ಜೇನು ನೊಣಗಳ ಗೂಡಿನಿಂದ ಜೇನು ಕದಿಯುತ್ತವೆ. ಜೇನು ನೊಣಗಳಿಗೆ ಪರಿಮಳವೂ ಒಂದು ಭಾಷೆಯೇ. ಒಂದೊಂದು ಗುಂಪಿನ ನೊಣಗಳಿಗೆ ಒಂದೊಂದು ವಾಸನೆ ಇರುತ್ತದೆ. ಇದರಿಂದ ಅವು ಜೇನು ಸಂಗ್ರಹಿಸಿ ತಮ್ಮ ತಮ್ಮ ತಂಡಗಳನ್ನೇ ಸೇರುತ್ತವೆ. ಅಂತೆಯೇ ಬೇರೆ ಗೂಡಿನ ನೊಣವು ಇನ್ನೊಂದು ಗೂಡಿಗೆ ಹೋದಾಗ ಒಡನೆಯೇ ಹೊರ ಹಾಕಲ್ಪಡುತ್ತದೆ. ಜೇನು ಕದಿಯುವ ನೊಣಗಳಿಗೂ ಮತ್ತು ಜೇನು ಇರುವ ಗೂಡಿನ ಪಹರೆಯ ಜೇನು ನೊಣಗಳಿಗೂ ಆಗುವ ಹೋರಾಟವನ್ನೂ ಮತ್ತು ಅವುಗಳು ಕಚ್ಚಾಡಿ ಸಾಯುವದನ್ನೂ ಕಾಣಬಹುದು. ಸಾಕಿದ ಗೂಡುಗಳಲ್ಲಿ ಇಂಥಾ ಚೋರತನವನ್ನು ನಿಲ್ಲಿಸುವ ಅನೇಕ ವಿಧಾನಗಳಿವೆ. ಗೂಡಿನ ಬಾಗಿಲನ್ನು ಚಿಕ್ಕದಾಗಿ ಮಾಡುವದು ಒಂದು ವಿಧ. ಇದರಿಂದ ಪಹರೆಯ ನೊಣಗಳು ಕಳ್ಳ ನೊಣಗಳನ್ನು ಚಿಕ್ಕ ದ್ವಾರದಲ್ಲಿ ತಡೆದು ಹಿಡಿಯಲು ಸಾಧ್ಯವಾಗುತ್ತದೆ.

ಜೇನು ನೊಣವನ್ನು ಅಕಸ್ಮಾತ್ತಾಗಿ ಹಿಸುಕಿದಾಗ ಒಂದು ವಿಧದ ವಾಸನೆಯುಂಟಾಗುತ್ತದೆ. ಈ ವಾಸನೆಯು ಬೇರೆ ನೊಣಗಳಿಗೆ ಸಿಕ್ಕಿದಾಕ್ಷಣವೇ ಗೂಡಿನ ಹೊರ ಬಿದ್ದ ಶತ್ರುವಿನ ಮೇಲೆ ಬೀಳುತ್ತವೆ. ಕುಣಿತದ, ಗಂಧದ ಮತ್ತು ರೆಕ್ಕೆ ಬಡಿತದ ಭಾಷೆಯಲ್ಲದೆ ಜೇನು ನೊಣಗಳು ನೆನಪಿನಿಂದಲೂ ಕೆಲಸ ಮಾಡುತ್ತವೆ. ಕೆಲವು ಸಂದರ್ಭಗಳಲ್ಲಿ ಜೇನು ನೊಣಗಳು ಎರಡು ಮೈಲು ದೂರದಲ್ಲಿಯ ಹೂವುಗಳಿಂದ ಜೇನು ಸಂಗ್ರಹಿಸಿ ಗೂಡಿಗೆ ಬರುತ್ತವೆ. ಇವುಗಳು ಹೋಗುವ ಮತ್ತು ಬರುವ ದಾರಿಯನ್ನು ಎಷ್ಟು ಚಮತ್ಕಾರದಿಂದ ನೆನಪಿನಲ್ಲಿಟ್ಟುಕೊಳ್ಳುತ್ತವೆ! ಸೂರ್ಯನ ಕಿರಣದಿಂದ ಹೂವಿರುವ ದಿಕ್ಕಿಗೆ ಇರುವ ಕೋನದ (Angle) ಅಂದಾಜಿನಿಂದ ದಾರಿಯನ್ನು ನೆನಪಿನಲ್ಲಿಟ್ಟುಕೊಳ್ಳುತ್ತವೆಂದು ಊಹಿಸಲಾಗಿದೆ. ಆದರೆ ಸೂರ್ಯೋದಯಕ್ಕೆ ಮೊದಲು ಮತ್ತು ಮೋಡವಿದ್ದ ದಿನಗಳಲ್ಲಿ ದಾರಿಯಲ್ಲಿ ಮತ್ತು ಗೂಡಿನ ಹತ್ತಿರವಿರುವ ವಸ್ತುಗಳ ಮರ, ಗಿಡ, ಏರು ತಗ್ಗುಗಳ ಗುರುತಿನ ನೆನಪಿನಿಂದ ಕೆಲಸಮಾಡುತ್ತವೆ. ಇಂಥಾ ಗುರುತನ್ನು ಬದಲಾಯಿಸಿದಾಗ ಜೇನು ನೊಣಗಳು ದಾರಿ ತಪ್ಪಿ ಅಲೆದಾಡುತ್ತವೆ. ಜೇನು ನೊಣಗಳು ಯಾವಾಗಲೂ ಅತಿ ಸುಲಭದ ನೆಟ್ಟಗಾದ ದಾರಿಯಲ್ಲಿ ಹಾರುತ್ತವೆ. ದಾರಿಯಲ್ಲಿ ಮರ, ಗಿಡ, ಗುಡ್ಡ ಬೆಟ್ಟಗಳಿದ್ದಂತೆ ಅವುಗಳನ್ನು ಹಾಯ್ದು ಮೇಲಿಂದ ನೆಟ್ಟಗೆ ಗೂಡಿಗೆ ಹಾರುತ್ತವೆ. ಇದೆಲ್ಲಾ ವಿಮರ್ಶಿಸುವಾಗ ಮೇಲ್ದರಗತಿಯ ಪ್ರಾಣಿಗಳಂತೇ ವಾಸನೆಯನ್ನು ತಿಳಿಯುವ, ನೋಡುವ, ನೆನಪಿನಲ್ಲಿಡುವ ಮತ್ತು ಆಲೋಚಿಸುವಂಥಾ ಶಕ್ತಿ ಇರುವ ಮೆದುಳನ್ನು ಜೇನುನೊಣಗಳ ಅಣುಗಾತ್ರ ಶಿರಸ್ಸಿನಲ್ಲಿಯೂ ಸಹ ಸೃಷ್ಟಿಕರ್ತನು ಅಡಕವಾಗಿ ಇಟ್ಟಿದ್ದಾನೆಯೋ ಎಂಬುದು ತಿಳಿಯಬರುವದಿಲ್ಲ.

ದಿ ಟ್ರಾಪಿಕಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:- ಲಾಲ ಶಂಕರ್ ಲಾಲ್

ಮುಖ್ಯ ಕಚೇರಿ:- ಹೊಸ ಡೆಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು — ಎಸ್ ಶ್ರೀನಿವಾಸ ಅಯ್ಯಂಗಾರ್

ಹಕೀಮ್ ಅಜಮಲಖಾನ್ — ಡಾ|| ಎಂ. ಎ. ಅನ್ಸಾರಿ.

(1) ದೇಶದಲ್ಲಿ ಸ್ವರಾಜ್ಯ ದೇಶ ಭಕ್ತರಿಂದ ಸ್ಥಾಪಿಸಲ್ಪಟ್ಟಿದೆ
(2) ಸ್ವತಂತ್ರ ಭಾರತದಲ್ಲಿ ಆರ್ಥಿಕ [illegible] ಪ್ರತಿಯೊಬ್ಬ ಪ್ರಜೆಯ ಕರ್ತವ್ಯವಾಗಿದೆ
(3) ಕಳೆದ 22 ವರ್ಷಗಳ [illegible] ಸಂಬಂಧ [illegible]
(4) ಜೀವ ವಿಮಾ, ಬೆಂಕಿ, ಮರೀನ್ [illegible] ಮತ್ತು ಅಪಘಾತ ಇನ್ನೆಲ್ಲ [illegible] ಮಾಡುತ್ತಿದೆ
(5) [illegible] ಕೊಡುತ್ತಿದೆ
(6) ಯೋಗ್ಯ ಏಜೆಂಟು ಮತ್ತು ಆರ್ಗನೈಸರುಗಳಿಗೆ ತಮ್ಮ ಉದ್ಯೋಗದಲ್ಲಿ [illegible] ಒಳ್ಳೆ ಸಂದರ್ಭವನ್ನು ಒದಗಿಸಿಕೊಟ್ಟು ಎಲ್ಲಾ [illegible] ಯೋಗ್ಯವಾದ ರೀತಿಯಲ್ಲಿ ಅವರನ್ನು [illegible]

ನಮ್ಮ ಹೊಸ ವಿಸ್ತಾರದ ಯೋಜನೆಯಲ್ಲಿ ಆಕರ್ಷಕ ಕಮಿಷನ್ ಮೇಲೆ ಆರ್ಗನೈಜರನ್ನು ನಿಯಮಿಸಿಕೊಳ್ಳಲಾಗುತ್ತದೆ, ದಯವಿಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ

ಏಜೆನ್ಸಿ ಸುಪರಿಂಟೆಂಡೆಂಟ್, ಮಡಿಕೇರಿ, ಕೊಡಗು, ಅಥವಾ ಎಂ. ಎ ಬೆಳ್ಯಪ್ಪ, ಬ್ರಾಂಚ್ ಸೆಕ್ರೆಟರಿ, ದಿ ಟ್ರಾಪಿಕಲ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್, ಹಂಪನಕಟ್ಟಾ, ಮಂಗಳೂರು.

ವೀರಾಜಪೇಟೆಗೆ 'ಕೊಡಗು' ಪತ್ರಿಕೆಯ ಏಜೆಂಟರು ಶ್ರೀ ಟಿ. ಎನ್. ಗೋವಿಂದರಾಜುರವರು.

"ಸೆಕೆಂಡ್ ಸೀಟು"!

ಲೇ – ಶ್ರೀ ಕೆ ಸಿ ಭೀಮಯ್ಯ, ಪೊನ್ನಂಪೇಟೆ

ಹಳ್ಳಿಗಳಲ್ಲಿ ನೈಸರ್ಗಿಕ ಪ್ರಕೃತಿ ಸೌಂದರ್ಯವು ಎಷ್ಟೇ ಇರಲಿ, ಆದರೂ ಹಳ್ಳಿವಾಸಿಗಳಿಗೆ ಕೃತಕ ಸೌಂದರ್ಯದಿಂದ ತುಂಬಿರುವ ಪಟ್ಟಣಗಳಿಗೆ ಹೋಗುವುದೆಂದರೆ ಒಂದು ವಿಶೇಷ ಆನಂದ ಅನೇಕ ದಿವಸಗಳವರೆಗೆ ಹಳ್ಳಿಯಲ್ಲೇ ಇದ್ದು ಸ್ವಲ್ಪ ಬೇಸರವಾದುದರಿಂದ ಅದನ್ನು ನಿವಾರಿಸಲು, ನಾನು ಮಡಿಕೇರಿಯಲ್ಲಿ ನನ್ನ ಮಿತ್ರನೊಬ್ಬನಲ್ಲಿಗೆ ಹೋಗಲು ಟಿಕೇಟೊಂದನ್ನು ಪಡಕೊಂಡು, ಬಸ್ಸಿನ ಮೂರನೇ ಸೀಟಿನಲ್ಲಿ ಕುಳಿತು, ಕೈಯಲ್ಲಿದ್ದ ಪುಸ್ತಕವೊಂದರ ಪುಟಗಳನ್ನು ಮಗುಚುತ್ತಾ ಇದ್ದೆನು ಅಷ್ಟರಲ್ಲಿ ನವೀನ ಮಾದರಿಯ, ಬಣ್ಣಬಣ್ಣಗಳಿಂದ ಕೂಡಿ, ಸೀರೆಯನ್ನುಟ್ಟಿದ್ದ ತರುಣಿಯೊಬ್ಬಳ ಕಡೆಗೆ ನನ್ನ ಕಣ್ಣೋಟವು ಓಡಿ, ಅವಳನ್ನೂ ಅವಳೊಡನೆ ಬಂದಿದ್ದ ಅವಳ ತಾಯಿಯನ್ನೂ ಗುರ್ತಿಸಿತು ಅವಳನ್ನು ನಾನು ಮೊದಲೊಮ್ಮೆ ಕಂಡಿದ್ದೆನಾದರೂ, ಅವಳ ಪರಿಚಯವಿಂದಿಲ್ಲ ಅವರೂ ನನ್ನಂತೆಯೇ ಎಲ್ಲಿಗೋ ಹೋಗಲಿಕ್ಕೋಸ್ಕರ ಬಸ್ಸಿಗಾಗಿ ಬಂದು, ಆಗ ತಾನೇ ಟಿಕೆಟಿಗಾಗಿ ಕಂಡಕ್ಟರನೊಡನೆ ಸಂಭಾಷಿಸುತ್ತಿದ್ದರು

ತಾಯಿ – ಕಂಡಕ್ಟರ್, ಫಸ್ಟ್ ಕ್ಲಾಸಿನ ಎರಡು ಟಿಕೆಟ್ ಬೇಕಾಗಿದೆ

ಕಂಡಕ್ಟರ್ – ಇಲ್ಲ ಅಮ್ಮಾ, ಫಸ್ಟ್ ಕ್ಲಾಸ್ ಮೊದಲೇ ರಿಸರ್ವ್ ಆಗಿ ಹೋಗಿದೆ

ತಾಯಿ 'ಏ ಸೇ' ಫಸ್ಟ್ ಕ್ಲಾಸಿನ ಅದೇ ಚಾರ್ಜನ್ನು ನಾವೂ ಕೊಡುತ್ತೇವೆ ಕೊಡು ಟಿಕೆಟ್!

ಕಂಡಕ್ಟರ್ ನಾನೇನು ಮಾಡಲಮ್ಮಾ, ನಿಮ್ಮಂತೆಯೇ ಅವರೂ ಬಂದು ಕೇಳಿದರು ನಿಮಗಿಂತ ಮೊದಲು ಬಂದವರಾದುದರಿಂದ ಅವರಿಗೆ 'ಫಸ್ಟ್ ಕ್ಲಾಸ್' ಟಿಕೇಟು ಕೊಟ್ಟುಬಿಟ್ಟೆ ದಯವಿಟ್ಟು 'ಸೆಕೆಂಡ್ ಸೀಟ'ನಲ್ಲಿ ಕುಳಿತುಕೊಳ್ಳಿ

ಸರಿ, ತಾಯಿ ಮಗಳಿಬ್ಬರೂ ಏನೇನೋ ಗೊಣಗುಟ್ಟುತ್ತಾ ಸ್ತ್ರೀಯರಿಗಾಗಿ ಪ್ರತ್ಯೇಕಿಸಲ್ಪಟ್ಟಿರುವ ಎರಡನೇ ಸೀಟಿನಲ್ಲಿ ಕುಳಿತರು ಅಷ್ಟರಲ್ಲೇ ನಿಶ್ಚಿತ ಸಮಯವಾಗಲು, ನಿಲ್ದಾಣವನ್ನು ಬಿಟ್ಟು, ಬಸ್ಸು ಮುಂದೆ ಧಾವಿಸ ತೊಡಗಿತು

ಕೊಡಗಿನ ಪ್ರಕೃತಿ ಸೌಂದರ್ಯವನ್ನು ಕಂಡು ಮೆಚ್ಚಿ, ಮರುಳಾಗಿ, ತಲೆದೂಗದ ರಸಿಕರಿಲ್ಲ ಅದರ ಸೃಷ್ಟಿ ಸೌಂದರ್ಯವನ್ನು ಕೊಂಡಾಡಿ, ಮೈಮರೆತು, ಭಾವೋದ್ರೇಕವಾಗಿ, ಕವನವನ್ನು ರಚಿಸದ ಕವಿಯಿಲ್ಲ ಆದರೆ ನಾನೊಬ್ಬ ರಸಿಕನೂ ಅಲ್ಲ ಕವಿಯೂ ಅಲ್ಲವಾದುದರಿಂದ, ನನಗೆ ಆ ಪ್ರಕೃತಿ ಸೌಂದರ್ಯವು ಅಷ್ಟೇನೂ ಭಾವೋದ್ರೇಕಕ್ಕೆಡೆ ಕೊಡದೆ ಬದಲು ನನ್ನ ಮನಸ್ಸಿನೊಳಗೇ ಒಂದು ತರಹದ ಉಲ್ಲಾಸವನ್ನುಂಟು ಮಾಡುತ್ತಿತ್ತು ಇಬ್ಬದಿಗಳಲ್ಲೂ ಹಸುರು ವರ್ಣಗಳಿಂದ ಕೂಡಿ, ನವವಧುವಿನಂತೆ ಬಾಗಿ, ಗಾಳಿ ಬೀಸಿದಾಗ, ಹರುಷದಿಂದ ಬಳುಕುತ್ತಾ, ನಗುನಗುವ ಕಾಫಿಯ ಗಿಡಗಳು, ಅದೇ ರೀತಿಯಲ್ಲಿ ಉದ್ದಕ್ಕೂ ಇರುವ ಕಾಪಿ ತೋಟಗಳ ಮಧ್ಯೆ ಇಲ್ಲಿ ಸುತ್ತಿ, ಅಲ್ಲಿ ಬಳಸಿ, ಹೊರಟ ಸ್ಥಳವನ್ನೇ ಪುನಃ ಬಂದು ಸೇರುವಂತೆ ತೋರುವ ಅಂಕುಡೊಂಕಿನ ಹಾದಿ ಪರ್ವತ ಶ್ರೇಣಿಗಳಿಂದೆದ್ದು ಮೆಲ್ಲನೆ ಮೆಲ್ಲನೆ ಮುಂದೆ ಸಾಗುವ ಮೇಘ ಮಾಲೆಗಳು! ಬಸ್ಸಿನಿಂದ ಇಣಿಕಿ ಮೇಲೆ ನೋಡಿದರೆ, ಶ್ರೀಕೃಷ್ಣನಿಗೆ ಸರ್ಪಗಳು ತಮ್ಮ ಹೆಡೆಗಳನ್ನು ಕೊಡೆಯಾಗಿ ಹಿಡಿದು ಉಪಚರಿಸುವಂತೆ, ನಮ್ಮನ್ನು ಉಪಚರಿಸ ಹೊರಟಿರುವಂತೆ ತೋರುವ ಎತ್ತರೆತ್ತರದ ಬೆಟ್ಟಗಳು!

ಪ್ರಕೃತಿದೇವಿಯ ಮಡಿಲಲ್ಲಿ ಮಲಗಿ, ನಿದ್ರಿಸುತ್ತಿದ್ದ ನನ್ನ ಚಿತ್ತವು, ಅಷ್ಟರಲ್ಲೇ ನಮ್ಮ ಬಸ್ಸಿನ ನಿಲ್ಲುವಿಕೆಯಿಂದ ಎಚ್ಚರಿಸಲ್ಪಟ್ಟಿತು ಬಡತನದ ಉಡಪಿನ ಇಬ್ಬರು ಸ್ತ್ರೀಯರು 'ಸೆಕೆಂಡ್ ಸೀಟ್' ನಲ್ಲಿ ಹತ್ತಿ ಕುಳಿತರು ಬಸ್ಸು ಪುನಃ ಮುಂದೋಡ ತೊಡಗಿ ಅನತಿ ದೂರದಲ್ಲೇ ಇನ್ನೊಮ್ಮೆ ನಿಲ್ಲಿಸಲ್ಪಟ್ಟಿತು ನಾಗರಿಕತೆಯ ಚಿಹ್ನೆಯಾದ 'ಹ್ಯಾಟ್, ಬೂಟ್, ಟೈ' ಮುಂತಾದುವುಗಳನ್ನು ಧರಿಸಿದ್ದ – ಮೇಲ್ಮಟ್ಟದ ಒಬ್ಬ ಮನುಷ್ಯನು ಬಸ್ಸನ್ನು ನಿಲ್ಲಿಸಿದ್ದನು ಮೊಟ್ಟ ಮೊದಲು ಅವನ ಕಣ್ಣು 'ಫಸ್ಟ್ ಸೀಟ್'ನ ಕಡೆಗೆ ಹೋಯಿತು, ಅಲ್ಲಿ ಇತರರಿಬ್ಬರು ಕುಳಿತಿದ್ದುದನ್ನು ಕಂಡು, ನಿರಾಶೆಯನ್ನು ಹೊಂದಿ, 'ಸೆಕೆಂಡ್ ಸೀಟ್'ನ ಬಳಿಯೊಮ್ಮೆ ಹೊರಳಿತು ಸರಿ, ಅದೂ ಭರ್ತಿಯಾಗಿತ್ತು ಬಡತನದ ಪೋಷಾಕಿನ ಸ್ತ್ರೀಯರಿಬ್ಬರು ಎರಡನೇ ಸೀಟ್‌ನಲ್ಲಿ ಕುಳಿತಿರುವುದನ್ನು ಕಂಡ, ಆತನಲ್ಲಿ ಅಸಮಾಧಾನ ಮೂಡಿ ತಲೆದೋರಿತು ಆದರೆ, ಆ ವಿಷಯದಲ್ಲಿ ಪ್ರಶ್ನಿಸುವ ಅಧಿಕಾರವಾದರೂ ತನಗಿದೆಯೇ? ಇಲ್ಲ ಕಾಲವಾದರೂ ಎಂತಹದ್ದು! ದೇಶವು ಸ್ವತಂತ್ರವಾಗಿ ಎರಡು ವರ್ಷಗಳು ಕಳೆದಿವೆ! ಹೋ, ತನ್ನ ಅಸಮಾಧಾನವನ್ನು ವ್ಯಕ್ತಪಡಿಸಲೋ ಎಂಬಂತೆ, ಹಿಂದಕ್ಕೊಮ್ಮೆ ಮುಂದಕ್ಕೊಮ್ಮೆ ನಡೆದು, ಹೇಗೂ ಕಡೆಗೆ ನನ್ನ ಪಕ್ಕದಲ್ಲಿ, ಅಂದರೆ ಮೂರನೇ ಸೀಟಿನಲ್ಲಿ ಬಂದು ಕುಳಿತನು ಆದರೆ ಹಾಯಾಗಿ ಕೂರಲು, ಅಲ್ಲಿಯೂ ಎಡೆಯಿರಲಿಲ್ಲ 'ಅತ್ತೆಯ ಮೇಲೆ ಬಂದ ಸಿಟ್ಟು ಕೊತ್ತಿಯ ಮೇಲೆ' ಎಂಬಂತೆ ನನ್ನ ಕಡೆಯೊಮ್ಮೆ ಅವನ ಉರಿಗಣ್ಣುಗಳನ್ನು ಹೊರಳಿಸಿದನು ಹೇಗೂ ಮಾಡಿ, ನನ್ನ ಪಕ್ಕದಲ್ಲಿದ್ದವರನ್ನೆಲ್ಲಾ ಸ್ವಲ್ಪ ಒತ್ತಿ ಕುಳಿತುಕೊಳ್ಳ ಹೇಳಿ, ಆ ಮಹರಾಯನಿಗೆ ಅನುಕೂಲವಾಗುವಷ್ಟು ಸ್ಥಳವನ್ನು ಮಾಡಿಕೊಟ್ಟು ಅವನ ದೃಷ್ಟಿಗೆ ಸಿಕ್ಕದಂತೆ, ನನ್ನ ಕೈಯಲ್ಲಿದ್ದ ಪುಸ್ತಕದ ಪುಟಗಳನ್ನು ತಿರುವಿ ಹಾಕುವ ಕೆಲಸಕ್ಕೆ ತೊಡಗಿದೆನು ಬಸ್ಸು ಪುನಃ ಓಡತೊಡಗಿತು. ಸ್ವಲ್ಪ ಸಮಯ ಕಳೆಯಿತು ಆದರೆ ಅಷ್ಟರಲ್ಲಿ 'ನಾನ್ ಸೆನ್ಸ್' ಎಂಬೊಂದು ಶಬ್ದ ಕೇಳಿತು ತಲೆಯೆತ್ತಿ ನೋಡಿದೆನು ನನ್ನ ಪಕ್ಕದಲ್ಲಿ ಕುಳಿತಿದ್ದ ಗಾಂಭೀರ್ಯದ ಮನುಷ್ಯ 'ಅಯ್ಯೋ, ಇದೇನು ಗ್ರಹಚಾರ ಬಂತಪ್ಪಾ' ಎಂದು ಕೊಂಡೆ ಅದೊಂದು ಶಬ್ದಕ್ಕೇ ಅವನ ಮಾತು ಮುಗಿಯಲಿಲ್ಲ ಪುನಃ ಪ್ರಾರಂಭಿಸಿದನು "I say driver, this foolish girl keeps on spitting I can't tolerate this Ask her to sit in the last seat' ಎಂದು [illegible] ಏನೇನೋ ಕೂಗ ತೊಡಗಿದನು ಆದರೆ ಅವನ ಮಾತಿನ ಮರ್ಮವನ್ನು ಅರಿತ ಡ್ರೈವರನು ಬಸ್ಸನ್ನು ನಿಲ್ಲಿಸದೆ, ಏನೆಂದೂ ಮಾತನಾಡದೆ, ತನ್ನ ಕಾರ್ಯದಲ್ಲಿ ತೊಡಗಿದ್ದನು ನಾಗರೀಕನು ತನ್ನ ಕರವಸ್ತ್ರವನ್ನು ಕಿಸೆಯಿಂದ ಹೊರತೆಗೆದು ತನ್ನ ಕೋಟನ್ನು ಸವರುತ್ತಾ, 'ಯಾರಿಗೆಲ್ಲಾ ಸೆಕೆಂಡ್ ಸೀಟ್?' ಎಂದು ಹೇಳಿ ಸುಮ್ಮನಾದ

ಎರಡನೇ ಸೀಟಿನಲ್ಲಿ ಕುಳಿತಿದ್ದ ಬಡವ ಸ್ತ್ರೀಯು, ವಾಂತಿ ಬಂದಂತಾದುದರಿಂದಲೋ ಏನೋ, ಹೊರಗೆ ಉಗುಳಿಬಿಟ್ಟಳು ಬಸ್ಸು ಮುಂದೆ ಹೋಗುತ್ತಾ ಇದ್ದುದರಿಂದ, ಅದು ಗಾಳಿಯ ಹೊಡೆತಕ್ಕೆ ಸಿಕ್ಕಿ, ನನ್ನ ಪಕ್ಕದಲ್ಲಿದ್ದ ಮನುಷ್ಯನ ಕೋಟಿಗೆ ಸ್ವಲ್ಪ ತಗಲಿತ್ತು ಅಷ್ಟಕ್ಕೆ ಈ ಗಲಭೆ! ಅವಳೊಡನೆಯೇ ಸಮಾಧಾನದ ಎರಡು ಮಾತುಗಳಿಂದ ಹಾಗೆ ಉಗುಳದಿರೆಂದಿದ್ದರೆ ಸಾಲದಿತ್ತೇ? ಹೌದು, ಒಂದು ಮತ್ತು ಎರಡನೇ ಸೀಟುಗಳಲ್ಲಿ ಸ್ಥಳ ದೊರೆಯದುದ್ದರಿಂದ ಅವನ ಗೌರವಕ್ಕೆ ಸ್ವಲ್ಪ ಧಕ್ಕೆ ಬಂದಂತಾಗಿತ್ತು! ಆದುದರಿಂದಲೇ ಅವನು ಆ ರೀತಿ ಕೂಗಾಡಿಕೊಂಡನು 'ಯಾರಿಗೆಲ್ಲಾ ಸೆಕೆಂಡ್ ಸೀಟ್?' ಹೌದು, ನವನಾಗರಿಕತೆಯಿಂದೊಡಗೂಡಿ, ಬಣ್ಣಬಣ್ಣದ ವೇಷಭೂಷಣಗಳ ಬೆಡಗು ಬಿನ್ನಾಣಗಳಿಂದ ಮೆರೆಯುತ್ತಿರುವಂತವರಿಗಲ್ಲದೆ. ಕೇವಲ ಬಡವರಾದ, ದೀನದರಿದ್ರರಾದ, ಸಾಮಾನ್ಯತರದ ಉಡುಗೆ ತೊಡಿಗೆಗಳಲ್ಲಿರುವವರಿಗೆ 'ಸೆಕೆಂಡ್ ಸೀಟ'ನಲ್ಲಿ ಕೂರುವ ಯೋಗ್ಯತೆ ಇದೆಯೇ? ಅದಕ್ಕಾಗಿಯೇ ಅವಳನ್ನು ಕಡೆಯ ದೊಡ್ಡಿಯಲ್ಲಿ ಅವಳ ಯೋಗ್ಯತೆಗೆ ಸರಿಯಾಗಿ, ಕೂರಿಸೆಂದು ಅವನು ಕೂಗಿದನು! ಅದೇ ದೀನ ಸ್ತ್ರೀಯು, ಜರತಾರಿ ಸೀರೆಯನ್ನುಟ್ಟಿದ್ದು, ಲಿಪ ಸ್ಟಿಕ್, ಪೌಡರ್, ಮುಂತಾದುವುಗಳನ್ನು ಉಪಯೋಗಿಸಿದ್ದರೆ ಮತ್ತು ಅವಳು ಅದೇ ರೀತಿ ಉಗುಳಿದ್ದರೆ, ಕೇವಲ ಅವಳನ್ನು ಅವನು ಸಮಾಧಾನದಿಂದಲೇ ಮಾತಾಡಿಸುತ್ತಿದ್ದನೋ ಏನೋ! ಹೌದು, ಈಗಿನ ಜನತೆ ಗೌರವ ತೋರಿಸುವುದು ಮನುಷ್ಯನ ಗುಣ, ನಡತೆ ಯೋಗ್ಯತೆ, ವಿದ್ಯೆ, ಜ್ಞಾನ ಮುಂತಾದವುಗಳಿಗಲ್ಲ, ಬದಲು ಕೃತಕ ವೇಷ ಭೂಷಣಕ್ಕೆ, ಬಂಡವಾಳವಿಲ್ಲದ ಬಡಾಯಿಗೆ ಅಧಿಕಾರ ಬಲಗಳಿಂದ ಕೂಡಿರುವ ಕೆಲವರಿಗೆ ಸ್ವರಾಜ್ಯವು ಬಂದದ್ದೇ ತಪ್ಪೆಂದು ತೋರುತ್ತಿರಬಹುದು ಕೀಳ್ಮಟ್ಟದ ಜನರೂ ನಮ್ಮೊಡನೆ ಬೆರೆಯುತ್ತಿರುವರೆಂಬ ಕಿಚ್ಚು ಕೆಲವರನ್ನು ಸುಡುತ್ತಿರಬಹುದು ಆದರೆ ಬಸ್ಸಿನಂಥಾ ಸಾರ್ವಜನಿಕ ವಾಹನಗಳಲ್ಲಿ ಬಡವರಿಗೂ ಸ್ವಾತಂತ್ರ್ಯವಿದೆಯೆಂದು ಈ ನಾಗರೀಕರು ತಿಳಿದರೆ ಅದೆಷ್ಟು ಹಿತ!

CRESCENT

FOR PROTECTION AND SERVICE.

It is best to represent and insure with

The CRESCENT Insurance Co, Ltd,

H O BOMBAY] [*Established 1919*

For particulars write to

Sri B A Poovaiah or The Branch Manager,
Organiser *22 B Mahatma Gandhi Road,*
Pollibetta Coorg *Bangalore 1*

ಸುರಕ್ಷಿತವಾದ ಜೀವವಿಮೆ ಪಡೆಯಲು

ಕ್ರೆಸೆಂಟ್

ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.

ವಿಮೆ ಮಾಡಲು ಇಲ್ಲವೇ ಪ್ರತಿನಿಧಿಸಲು

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.

ಇವರ ಸಲಹೆಗಿಂತ ಉತ್ತಮ ಮಾರ್ಗವಿಲ್ಲ

ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದೂಸ್ಥಾನದ ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು

ದಿ ಬೊಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

30 ಮೌಂಟ್ ರೋಡ್, ಪೊ ಬಾ ನಂ 337, ಮದ್ರಾಸು 2

ಬೊಂಬೆ ಲೈಫ್ ಬಿಲ್ಡಿಂಗ್, ಪೊ ಬಾ ನಂ 1, ಉಡುಪಿ

(ಟೆಲಿಫೋನ್ ನಂ 8398)

ಇತರ ಆಫೀಸುಗಳು —ಬೆಂಗಳೂರು, ತಿರುವೇಂದ್ರಂ, ಕಲ್ಲಿಕೋಟೆ, ಮಂಗಳೂರು, ಮಧುರೆ, ಮತ್ತು ಬೊಂಬಾಯಿ

Reg. No. M. 1550.
"KODAGU" MERCARA, (Coorg).

ಕೊಡಗು

ಸಂಪಾದಕರು—ಟಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 4-8-0.

ಸಂಪುಟ ೨೭ | ತಾರೀಕು ೨೫-೫-೧೯೪೫ನೇ ಶುಕ್ರವಾರ | ಸಂಚಿಕೆ ೪೧

"ಯದ್ಭಾವಂ ತದ್ಭವತಿ."

[ಲೇ:—ಶ್ರೀ ಬಿ. ಡಿ. ಗಣಪತಿ]

"ಹೇಗೆ ಭಾವನೆಯೋ ಹಾಗೆಯೇ ಆಗುವೆ" ಎಂಬ ಮೇಲಿನ ಶಿರ್ಷಿಕೆಯ ಅರ್ಥವನ್ನೇ "The Face is the Index of the mind" ಮುಖವೇ ಮನಸ್ಸಿನ ಸೂಚೀ ಪತ್ರವೆಂದು ಇನ್ನೊಂದು ರೀತಿಯಲ್ಲಿ ಹೇಳಿರುವರು. ಬಸ್ಸು ಕಾರುಗಳಲ್ಲಿ ಪೆಟ್ರೋಲ್ ಇಷ್ಟಿದೆ, ಎಷ್ಟು ವೇಗವಾಗಿ ಓಡುತ್ತಿವೆ. ಎಂಬುದನ್ನು ಸೂಚಿಸುವ ಯಂತ್ರವಿರುವಂತೆ ಮನುಷ್ಯನ ಮನಸ್ಸು ಹೇಗೆ ಯೋಚನೆ ಮಾಡುತ್ತದೆ, ಅವನ ಹೃದಯದ ಒಲವು ಹೇಗಿದೆಯೆಂಬುದನ್ನು ಸ್ಪಷ್ಟವಾಗಿ ಚಿತ್ರಿಸುವ ಕನ್ನಡಿ—ಮುಖ

ನಾವು ರೂಪಸಿಗಳೇ ಆಗಿರಲಿ, ಪರಂಪರಾಗತವಾಗಿ ಸೌಂದರ್ಯವಂತರಲ್ಲದವರಾಗಿರಲಿ, ನಮ್ಮ ಬುದ್ಧಿ, ಗುಣ, ಶಾರೀರಿಕ ರಚನೆ ಇವೆಲ್ಲವನ್ನೂ ನಾವು ಆಲೋಚಿಸುವುದಕ್ಕಿಂತಲೂ ಮಿಗಿಲಾಗಿ ಮಾರ್ಪಡಿಸಿಕೊಳ್ಳಬಹುದು. ನಾವು ಸಮಾಜದಲ್ಲಿ ಗಣ್ಯ ವ್ಯಕ್ತಿಗಳೇ ಇರಲಿ, ಶ್ರೀಮಂತರೂ ಬಡವರಿರಲಿ, ಸಾಂಸ್ಕೃತಿಕ ಮೆಟ್ಟಲಿನಲ್ಲಿ ಮೇಲೇರಿರಲಿ ಯಾ ಅಜ್ಞಾನದ ಕೆಳ ಅಂತಸ್ತಿನಲ್ಲಿರಲಿ ನಮ್ಮ ಮುಖವು ನಮ್ಮ ಆತ್ಮದ ಬೆಳಕನ್ನು ಸದಾ ಚೆಲ್ಲುತ್ತಿರುತ್ತದೆ. ಆತ್ಮವು ಪವಿತ್ರವಾಗಿರಿಸಲ್ಪಟ್ಟಿದ್ದರೆ ಈ ಬೆಳಕು ತೇಜಃಪುಂಜವಾಗಿ ಬೆಳಗುವದು. ಮುಖದಲ್ಲಿ ಈ ತೇಜಸ್ಸು ಹೆಚ್ಚಾದಂತೆ ವ್ಯಕ್ತಿಯು ಸೌಂದರ್ಯಶಾಲಿ ಎನಿಸುವನು. ಈ ಆತ್ಮದ ಬೆಳಕನ್ನು ಶರೀರದ ಯಾವ ಬಣ್ಣವಾಗಲೀ, ಕುರೂಪವಾಗಲೀ ಹಿಡಿದು ಹಿನ್ನೆಲೆಗೆ ತಳ್ಳಲು ಸಾಧ್ಯವಿಲ್ಲ. ಆದ್ದರಿಂದ ಆತ್ಮೀಯವಾಗಿ ಸೌಂದರ್ಯವಿಲ್ಲದಿದ್ದರೆ ಬಾಹ್ಯ ಸೌಂದರ್ಯವೂ ಇರಲಾರದೆಂಬುದು ಸ್ವಯಂಸಿದ್ಧವಾಗುವದು.

ಕೇಡಿಗಳು, ಮೋಸಗಾರರು, ಹೀನ ವೃತ್ತಿಯವರು ತಮ್ಮ ಮುಖದಲ್ಲಿ ಅವರವರ ಆತ್ಮ ವೃತ್ತಿಯ ಪ್ರತಿಬಿಂಬವನ್ನು ಪ್ರದರ್ಶಿಸುತ್ತಾರೆ. ಮುಖ ನೋಡಿದೊಡನೆಯೇ "ಕೇಡಿಯಪ್ಪಾ" ಎನ್ನಬಹುದಾದವರನ್ನು ನಾವು ಕಾಣುತ್ತೇವೆ. ಈ ಹೇಳಿಕೆಯು ಸತ್ಯ ಆತನ ಒಳಗಿರುವ ಹೃದಯವನ್ನವಲಂಬಿಸಿದೆ. ಆದ್ದರಿಂದ ಪರಿಶುದ್ಧ ಹೃದಯವು ಸೌಂದರ್ಯವನ್ನು ಮುಖದಲ್ಲಿ ಪ್ರದರ್ಶಿಸಿದಂತೆ ಕಲ್ಮಶ ಹೃದಯವು ಕುರೂಪವನ್ನು ಹೊರಚೆಲ್ಲುವುದು!

ಆದ್ದರಿಂದ ನಾವು ನಮ್ಮೊಳಗೆ ಪ್ರಶ್ನೆ ಹಾಕಿಕೊಳ್ಳಬೇಕು. ನಮ್ಮ ಆಸಕ್ತಿ, ನಮ್ಮ ಆಶೆ, ನಮ್ಮ ಭಾವನೆಗಳಿಂದ ಯಾವ ರೀತಿಯ ಸೌಂದರ್ಯವನ್ನು ನಾವು ಪಡೆಯುತ್ತೇವೆ ಎನ್ನುವುದನ್ನು ಗಮನಿಸಬೇಕು. ಶರೀರವು ಸ್ವಭಾವ ಮನೆಯಂತೆ! ಅದರೊಳಗೆ ಆತ್ಮ ಜ್ಯೋತಿಯು ಬೆಳಗುತ್ತಿದ್ದರೆ ಅದರ ಬೆಳಕು ಶರೀರದ ಪ್ರತಿ ಅಂಗದಲ್ಲಿಯೂ ಪ್ರತಿಫಲಿಸುವುದು. ಈ ಕಾರಣದಿಂದಲೇ ಶ್ರೀರಾಮಚಂದ್ರ, ವಿವೇಕಾನಂದ, ಕೃಷ್ಣ, ರಾಮ, ಕ್ರಿಸ್ತ, ಮಹಾ ಪುರುಷ ವ್ಯಕ್ತಿಗಳ ಮುಖದಲ್ಲಿ ಅಪೂರ್ವ ತೇಜಸ್ಸಿನ ಚಿತ್ರವನ್ನು ನಾವು ನೋಡುತ್ತೇವೆ. ಮಹಾತ್ಮ ಗಾಂಧಿಯವರ ಮುಖದಲ್ಲಿ, ಶರೀರದ ಪ್ರತಿ ಅಂಗಗಳಲ್ಲಿ ಅಪೂರ್ವ ತೇಜಸ್ಸು ಹೊಳೆಯುತ್ತಿದೆಯೆಂದು ಹೇಳುವದರ ಮರ್ಮವಾದರೂ ಇದೇ ಆಗಿದೆ.

ನಿಜವಾದ ಮನಸ್ಸಿನಿಂದ ಸೇವೆ ಮಾಡುವವನಲ್ಲಿ ಆ ನಮ್ರತೆಯು ಪ್ರತಿಬಿಂಬಿಸುವದು. ಜರ್ಜನ ಯೋಗ್ಯ ಗುರು, ಯಾ ಯೋಗಿ, ಆಶ್ರಿತೆಯ ಸೂಲಗಿತ್ತಿ, ಡಾಕ್ಟರು, ಯಾರೇ ಆಗಲಿ ತಮ್ಮ ವೃತ್ತಿಯ ಮಹತ್ವವನ್ನರಿತು ಮನಸಾರೆ ಸೇವೆ ಸಲ್ಲಿಸುವವರಲ್ಲಿ ಅದರ ಛಾಯೆಯು ಪ್ರತಿಬಿಂಬಿಸಿರುತ್ತದೆ ಇದು ಪ್ರಕೃತಿ ನಿಯಮ. ತಾತ್ಕಾಲಿಕವಾದ ಈ ಉನ್ಮಾದಗಳ ಛಾಯೆಯು ಮನುಷ್ಯನ ಪ್ರಕೃತಿಯಲ್ಲಿ ತೋರಿ ಬರಬಲ್ಲುದಾದರೆ ಶಾಶ್ವತವಾಗಿರುವ ಆತ್ಮದ ಭಾವನೆಯು ಪ್ರತಿಬಿಂಬಿಸುವದರಲ್ಲಿ ಆಶ್ಚರ್ಯವಿಲ್ಲ. ಆದ್ದರಿಂದ ಪ್ರತಿಯೊಬ್ಬನೂ ಕೂಡ ಆತ್ಮವನ್ನು ಪರಿಶುದ್ಧಗೊಳಿಸುವದರಿಂದ ತನ್ನ ಸೌಂದರ್ಯವನ್ನು ಹೆಚ್ಚಿಸಿಕೊಳ್ಳಬಹುದು!

ಇದಕ್ಕೆ ಕೆಲವು ಸಿನೆಮಾ ನಟಿಯರ ಉದಾಹರಣೆಯನ್ನೂ ಕೊಡಬಹುದು. ಜೋನ್ ಕ್ರಾಫೋರ್ಡರ ಸೊಬಗು ಸೌಂದರ್ಯ ಯಾ ಗ್ರೇಟಾಗಾರ್ಬೊ, ಮತ್ತು ನಾರ್ಮಾ ಶೀರರ ಸೌಂದರ್ಯ ಅವರ ಶಾರೀರಕ ರಚನೆಗಾಗಿ ಅಲ್ಲ. ಹಾಗಾಗಿದ್ದರೆ ಅವರ ಶಾರೀರಕ ಬದಲಾವಣೆಯೊಂದಿಗೆ ಅವರ ಸೌಂದರ್ಯ ಎಂದೋ ನಾಶವಾಗುತಿತ್ತು. ಗ್ರೇಟಾಗಾರ್ಬೊಳ ಮುಖವು ಸರಳ ಹಾಗೂ ಅನಾಕರ್ಷಣೀಯವಾಗಿತ್ತು. ಆಕೆಯ ವ್ಯಕ್ತಿತ್ವದ ಆತ್ಮ ಛಾಯೆಯು ಅದರಲ್ಲಿ ದಿನದಿನ ಬೆಳಗತೊಡಗಿದಂತೆ ಆಕೆ ಪೂರ್ಣ ಸೌಂದರ್ಯವತಿ ಎನಿಸಿದ್ದಾಳೆ. ಜೋನ್ ಕ್ರಾಫೋರ್ಡಳ ಬಾಯಿ ಅಗಲವಾಗಿ ತುಟಿ ದಪ್ಪವಾಗಿದ್ದರೂ ದಿನ ಕಳೆದಂತೆ ಹೆಚ್ಚು ಸೌಂದರ್ಯವತಿ ಎನಿಸುತ್ತಿದ್ದಾಳೆ.

ಕೆಟ್ಟ ಭಾವನೆ, ವರ್ತನೆಗಳಿಂದ ತಮ್ಮ ಸೌಂದರ್ಯವನ್ನು ಕೆಡಿಸಿಕೊಂಡ ಅನೇಕರನ್ನು ನಾವು ಬಲ್ಲೆವು. ಕೆಟ್ಟ ಭಾವನೆಗಳು ನಮ್ಮನ್ನು ಕುರೂಪಗೊಳಿಸಬಲ್ಲುವಾದರೆ ಸದ್ಭಾವನೆಗಳು ನಮ್ಮನ್ನು ರೂಪವಂತರೆನಿಸುವದರಲ್ಲಿ ಸಂಶಯವಿಲ್ಲ. ಇದು ಕೇವಲ ನೀತಿನ ವಿಚಾರವಲ್ಲ, ಕಾರ್ಯರೂಪದಲ್ಲಿ ತೋರಿಬಂದ ಅನುಭವ.

ಒಬ್ಬ ಅನುಭವಿಯ ದೃಷ್ಟಿಗೆ ನಮ್ಮ ಮುಖಗಳು ನಾನಾ ವಿಚಾರಗಳನ್ನು ಹೇಳುತ್ತವೆ. ಆದ್ದರಿಂದ ಮನುಷ್ಯನ ಮುಖ ನೋಡಿ ಆತನ ಹಿಂದಿನ, ಇಂದಿನ ಮತ್ತು ಮುಂದಿನ ವಿಚಾರಗಳನ್ನು ಹೇಳುವ ಕಲೆಯು ರೂಪುಗೊಂಡು ಬೆಳೆದಿದೆ. ಭಾವನೆಯಂತೆ ಆತ್ಮದ ಪಾವಿತ್ರ್ಯ. ಆತ್ಮದ ಪಾವಿತ್ರ್ಯದಂತೆ ಗುಣ ಮಾನವನ ಸೌಂದರ್ಯ!

ಚಿಕ್ಕಂದಿನಲ್ಲಿ ಮಕ್ಕಳಿಗೆ ವೀರ ಪುರುಷರ ಕಥೆ ಹೇಳಿದರೆ ಅವರೂ ಮುಂದೆ ವೀರರಾಗುವರೆಂಬುದರ ಮರ್ಮವು ಇದೇ ಆಗಿದೆ ಇಂಥಾ ಕಥೆ ಕೇಳಿ ಮಗುವಿನ ಮನಸ್ಸಿನಲ್ಲಿ ನಾನೂ ಆ ರೀತಿ ಆಗಬೇಕೆಂಬ ಭಾವನೆ ಮೂಡಿದರೆ ಮುಂದೆ ಮಗುವು ಹಾಗೆ ಆಗುವ ಸಾಧ್ಯತೆ ಇದೆ. ಆದ್ದರಿಂದ ಭಾವನೆಯೇ ಸರ್ವದರ ಮೂಲ. ಈ ಪವಿತ್ರ ಭಾವನೆಯನ್ನು ಊರ್ಜಿತಗೊಳಿಸಿ ಆ ಮೂಲಕ ಆತ್ಮದ ಪಾವಿತ್ರ್ಯವನ್ನು ಗಳಿಸಲೆಂದೇ ಪ್ರಾರ್ಥನೆ, ಮೌನ, ಭಜನೆಗಳು ಏರ್ಪಾಡಾಗಿದೆ, ದೇವರ ನಾಮ ಸಂಕೀರ್ತನೆಯಲ್ಲಿ ಪಾವಿತ್ರ್ಯವಿದೆಯೆಂಬ ನಂಬಿಕೆಯ ಆವಿಷ್ಕಾರವೂ ಈ ತಳಹದಿಯಲಿ. ಈ ತಪಸ್ಸು ನಿಷ್ಠೆಯಿಂದ ನಡೆದರೆ ಭಾವನೆಯು ಮೇಲಂತಸ್ತಿಗೇರಿ, ಆತ್ಮವು ಪವಿತ್ರಗೊಂಡು ಮನುಷ್ಯ ಜನ್ಮವು "ಸತ್ಯ, ಶಿವಂ, ಸುಂದರಂ"ದಲ್ಲಿ ಐಕ್ಯವಾಗುವದು.

ಆದ್ದರಿಂದಲೇ "ಯದ್ಭಾವಂ ತದ್ಭವತಿ" ಎಂದು ಹೇಳಲಾಗಿದೆ. ಭಾವನೆಯು ರೂಪಗಳ ರಚನೆಯ ಪ್ರೇರಕ ಶಕ್ತಿ. ಭಾವನೆಯೇ ಭವಿಷ್ಯವನ್ನು ರೂಪಿಸಬಲ್ಲುದು. ಆದ್ದರಿಂದ ಮಾನವನ ಭಾವನೆಯು ಪವಿತ್ರದೆಡೆಗೆ, ಸತ್ಯದೆಡೆಗೆ, ಸೌಂದರ್ಯದೆಡೆಗೆ ಸಾಗಲಿ.

ಓಂ ಅಸತೋ ಮಾ ಸದ್ಗಮಯ
ತಮಸೋ ಮಾ ಜ್ಯೋತಿರ್ಗಮಯ
ಮೃತ್ಯೋರ್ಮಾ ಅಮೃತಂಗಮಯ
(ಅಸತ್ಯದಿಂದ ಸತ್ಯಕ್ಕೆ, ಕತ್ತಲೆಯಿಂದ ಬೆಳಕಿಗೆ ಸಾವಿನಿಂದ ಸಾವಿಲ್ಲದುದಕ್ಕೆ ಕೊಂಡೊಯ್ಯ)

ದಿ ಟ್ರಾಪಿಕಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:— ಲಾಲ ಶಂಕರ್ ಲಾಲ್.

ಮುಖ್ಯ ಕಚೇರಿ:— ಹೊಸ ಡೆಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮಲಖಾನ್. ಡಾ|| ಎಂ. ಎ. ಅನ್ಸಾರಿ.

(1) ದೇಶದಲ್ಲಿ ಪ್ರಮುಖ ದೇಶ ಭಕ್ತರಿಂದ ಸ್ಥಾಪಿಸಲ್ಪಟ್ಟಿದೆ.
(2) ಸ್ವತಂತ್ರ ಭಾರತದಲ್ಲಿ ಆರ್ಥಿಕ ನೆಲಗಟ್ಟನ್ನು ಭದ್ರವಾಗಿರಿಸುವುದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯವಾಗಿದೆ.
(3) ಕಳೆದ 22 ವರ್ಷಗಳ ಹಿರಿದಾದ ಅನುಭವವುಳ್ಳ, ನಾವು ನಿಮ್ಮ ಜೀವವಿಮಾ ಸಂಬಂಧದ ಯಾವದೇ ಸೇವೆಸಲ್ಲಿಸಲು ಸಂತೋಷಪಡುತ್ತೇವೆ.
(4) ಜೀವವಿಮಾ, ಬೆಂಕಿ, ಮರಾಯಿನ್ ಮತ್ತು ಅಪಘಾತ ಇವೆಲ್ಲ ಕಾರ್ಯಗಳನ್ನು ಮಾಡುತ್ತಿದೆ
(5) ಪ್ರಾರಂಭದಿಂದ ವಿಮಾದಾರರಿಗೆ ಬೋನಸ್ಸು ಕೊಡುತ್ತಿದೆ.
(6) ಯೋಗ್ಯ ಏಜೆಂಟು ಮತ್ತು ಆರ್ಗನೈಜರುಗಳಿಗೆ ತಮ್ಮ ಉದ್ಯೋಗದಲ್ಲಿ ಶಿಖರವನ್ನು ಮುಟ್ಟಲು ಒಳ್ಳೆ ಸಂದರ್ಭವನ್ನು ಒದಗಿಸಿಕೊಟ್ಟು ಎಲ್ಲಾ ಕಾಲದಲ್ಲಿಯೂ ದಯಾಳುತನದಿಂದ ಮತ್ತು ಯೋಗ್ಯವಾದ ರೀತಿಯಲ್ಲಿ ಅವರನ್ನು ನಡಿಸಿಕೊಳ್ಳಲಾಗುತ್ತದೆ.

ನಮ್ಮ ಹೊಸ ವಿಸ್ತಾರದ ಯೋಜನೆಯಲ್ಲಿ ಆಕರ್ಷಕ ಕಮಿಷನ್ ಮೇಲೆ ಆರ್ಗನೈಜರರನ್ನು ನಿಯಮಿಸಿಕೊಳ್ಳತಕ್ಕದಿದೆ. ದಯವಿಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಏಜೆನ್ಸಿ ಸುಪರಿಂಟೆಂಡೆಂಟ್, ಮಡಿಕೇರಿ, ಕೊಡಗು. ಅಥವಾ ಎಂ. ಎ. ಬೆಳ್ಯಪ್ಪ, ಬ್ರಾಂಚ್ ಸೆಕ್ರೆಟರಿ, ದಿ ಟ್ರಾಪಿಕಲ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್; ಹಂಪನಕಟ್ಟಾ, ಮಂಗಳೂರು.

ಎಂಪೈರ್ ಆಫ್ ಇಂಡಿಯಾ

ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

48ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು.	ಒಟ್ಟು ಆದಾಯ	1,07,09,000	ಮೀರಿದೆ
	ಚಾಲ್ತಿಯಿರುವ ವಿಮೆ	[illegible],000	,,
	ಆಸ್ತಿ	6,67,60,000	,,
ಕಂಪೆನಿಯ ಆದಿಯಲ್ಲಿ ಕೊಟ್ಟ ಕ್ಲೈಮುಗಳು		8,83,62,000	,,

ಅಂಗ ಕಛೇರಿ: ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು. | ಏಜೆನ್ಸಿ ಕೇಳುಗರನ್ನು ಸ್ವಾಗತಿಸಿದೆ. | ಪ್ರಧಾನ ಕಛೇರಿ: ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ

ಪ್ರೇಮದಿಂದ ಸಮಾಜವನ್ನು ಬದಲಿಸುವ ಮಾರ್ಗ.

[ಶ್ರೀ ಶಂಕರರಾವ್ ದೇವ್‌ರವರಿಂದ]

ಇಂದೂರಿನ ರಾವ್ ಎಂಬಲ್ಲಿ ನಡೆದ ರಚನಾತ್ಮಕ ಕಾರ್ಯಕರ್ತರ ಸರ್ವೋದಯ ಸಮಾಜ ಸಮ್ಮೇಳನವು ಒಂದಂಶವನ್ನು ಸ್ಪಷ್ಟಪಡಿಸಿದೆ. ಮಹಾತ್ಮ ಗಾಂಧಿಯವರ ಕೊಲೆಯಾದ ಕೂಡಲೇ ಹೋದ ವರ್ಷ ಸೇವಾಗ್ರಾಮದಲ್ಲಿ ಬಿತ್ತಿದ ಬೀಜವೀಗ ಭಾರತ ಜನತೆಯ ಮನಸ್ಸಿನಲ್ಲಿ ಆಳವಾಗಿ ಬೇರುಬಿಟ್ಟಿದೆ. ಈ ಬೀಜದಿಂದ ಬೆಳೆದಿರುವ ಗಿಡವು ನಿರವಾಗಿ ಫಲಪುಷ್ಪ ಭರಿತವಾಗಿ ಪ್ರಪಂಚಕ್ಕೆ ಶಾಂತಿ ಮತ್ತು ಅಭಿವೃದ್ಧಿಯನ್ನೀಯುವಂತಾಗುವದೆಂಬ ವಿಶ್ವಾಸವು ರಾವ್ ಸಮ್ಮೇಳನದಿಂದ ಹಿಂತಿರುಗಿದವರೆಲ್ಲರಿಗೂ ಮನವರಿಕೆಯಾಗುತಿತ್ತು.

ರಾವ್ ಸಮ್ಮೇಳನದ ಫಲಿತಾಂಶದ ಬಗ್ಗೆ ಇಲ್ಲಿ ಫಲವೇನೂ ದೊರೆಯದಿದ್ದಕ್ಕಾಗಿ ಕೆಲವರು ಸ್ವಲ್ಪ ಆಶಾಭಗ್ನರಾಗಿದ್ದಾರೆಂದೂ ನನಗೆ ಗೊತ್ತು. ಸೇವಾಗ್ರಾಮದಲ್ಲಿ ನಡೆದ ಸಮ್ಮೇಳನದೊಡನೆ ಇದನ್ನು ಹೋಲಿಸಿ ನೋಡಿದಲ್ಲಿ ಇದು ಬಹಳ ಸೌಮ್ಯವಾದುದಾಗಿ ಕಾಣುವುದಾಗಿದ್ದಿತು. ರಾವ್ ಸಮ್ಮೇಳನದಲ್ಲಿ ಆಡಂಬರವಾಗಲಿ, ದೊಡ್ಡಸ್ತಿಕೆಯಾಗಲೀ ಇರಲಿಲ್ಲ. ಏಕೆಂದರೆ ಅಲ್ಲಿಗೆ ಗವರ್ನರಾಗಲೀ ಮಂತ್ರಿಗಳಾಗಲೀ ಬಂದಿರಲಿಲ್ಲ. ಜೊತೆಗೆ ಅದೃಷ್ಟವಶಾತ್ ಪೋಲೀಸ್ ಬಂದೋಬಸ್ತು ಅಥವಾ ಸುರಕ್ಷತೆಯ ವ್ಯವಸ್ಥೆಯೂ ವಿಶೇಷವಾಗಿ ಇರಲಿಲ್ಲ. ರಾವ್‌ನಲ್ಲಿ ನಡೆದಂತಹ ಸಮ್ಮೇಳನದ ತತ್ವಗಳಿಗೂ ಕಾರ್ಯಕ್ರಮಗಳಿಗೂ ಇಂತಹ ಪೋಲೀಸ್ ಬಂದೋಬಸ್ತು ಸಹಜವಾಗಿಯೇ ಅಸಂಬದ್ಧವೂ ಅಯುಕ್ತವೂ ಆಗಿರುವದು.

ಸೇವಾಗ್ರಾಮಕ್ಕೂ ರಾವ್‌ಗೂ ವ್ಯತ್ಯಾಸ ಕೇವಲ ಭಾವ ಗೋಚರವಲ್ಲ, ದೃಷ್ಟಿಗೋಚರವಾಗಿಯೂ ಇದ್ದಿತು. ರಾವ್‌ನಲ್ಲಿ ನಡೆದ ಸಮ್ಮೇಳನದ ಸ್ಥಿತಿ ಮತ್ತು ವಾತಾವರಣವು ಸೇವಾಗ್ರಾಮಕ್ಕಿಂತ ತೀರಾ ಭಿನ್ನವಾದುದಾಗಿತ್ತು. ಗಾಂಧೀಜಿಯವರ ಕೊಲೆಯಾಗಿ ಎರಡು ವಾರ ಕೂಡ ಆಗಿರಲಿಲ್ಲ, ಆಗಲೇ ಸೇವಾಗ್ರಾಮದ ಸಮ್ಮೇಳನ ನಡೆಯಿತು. ಆ ಬಲವಾದ ಪೆಟ್ಟಿನಿಂದ ದೇಶವಿನ್ನೂ ಎಚ್ಚೆತ್ತಿರಲಿಲ್ಲ. ಸ್ವತಃ ಆಧ್ಯಾತ್ಮಿಕ ಮತ್ತು ನೈತಿಕ ಬಲವಂತಿದ್ದು, ದೇಶದ ಜನತೆಯೆಲ್ಲದರ ಮಾರ್ಗದರ್ಶನದ ಭಾರ ಹೊತ್ತುಕೊಂಡಿದ್ದ ಆ ಮಹಾವ್ಯಕ್ತಿಯ ಅಗಲಿಕೆಯಿಂದ ತೆರವೆಯೇ ಪ್ರಪಂಚ ಬಿಟ್ಟುಹೋಗಿತ್ತು.

ದೇಶಕ್ಕೆ ಸ್ವಾತಂತ್ರ್ಯ ಬಂದಿದ್ದರೂ ದೇಶವು ಇಬ್ಭಾಗವಾಗಿ ಕತ್ತರಿಸಿಹೋಗಿತ್ತು. ಆ ಎರಡು ಭಾಗಗಳೂ ಹೆಚ್ಚು ಕಡಿಮೆ ಪರಸ್ಪರ ಯುದ್ಧದಲ್ಲಿಯೇ ಇದ್ದಂತಿದ್ದವು. ಸ್ವಾತಂತ್ರ್ಯಕ್ಕೆ ಮುಂಚೆ ಪ್ರಜೆಗಳನ್ನಾಕರ್ಷಿಸಿದ್ದ ಆ ಉದಾತ್ತವಾದ ಘೋಷಣೆಗಳು ಸ್ವಾತಂತ್ರ್ಯ ಲಭ್ಯವಾದ ಕೂಡಲೆ ಜನರ ಮನಸ್ಸನ್ನು ಉದ್ರೇಕಗೊಳಿಸಿದವು. ಅವರು ಸರ್ಕಾರಕ್ಕೆ ಆ ಘೋಷಣೆಗಳ ಆಧಾರದ ಮೇಲೆ ಬೇಡಿಕೆಗಳನ್ನು ಮಾಡತೊಡಗಿದರು. ಅವರನ್ನೆಲ್ಲಾ ತೃಪ್ತಿಪಡಿಸುವುದಕ್ಕೆ ಸರ್ಕಾರಕ್ಕೆ ಸಾಕುಸಾಕೆನ್ನಿಸುವಂತಿತ್ತು. ಸ್ವಾತಂತ್ರ್ಯವೆಂದರೆ ಒಂದು ಯಕ್ಷಿಣಿ ಕೋಲೆಂದೂ ಏನನ್ನು ಬೇಕಾದರೂ ಅದು ಒದಗಿಸುವುದೆಂದೂ ಜನರು ಭಾವಿಸಿದ್ದರು. ೫೦ ಲಕ್ಷಕ್ಕಿಂತ ಹೆಚ್ಚು ಜನರಿಗೆ ಆಹಾರ ಮತ್ತು ವಸತಿಗಳನ್ನೇರ್ಪಡಿಸಬೇಕಾಯಿತು. ಶಿರೋಭಾಗದಲ್ಲಿ ಕಾಶ್ಮೀರವೂ ಅಂತರ್ಭಾಗದಲ್ಲಿ ಹೈದರಾಬಾದೂ ಕಳವಳವನ್ನುಂಟುಮಾಡುತ್ತಿದ್ದು ಕಾತ್ರಿಸದಾಯಕವಾಗಿದ್ದವು. ಯುದ್ಧಾನಂತರ ಪ್ರಪಂಚ ಪರಿಸ್ಥಿತಿಯೂ ಅಷ್ಟು ಆಶಾದಾಯಕವಾಗಿರಲಿಲ್ಲ. ಉಗ್ರಸಾಮ್ಯವಾದವು ತನ್ನ ಕೈಯನ್ನು ಪೂರ್ವ ಮತ್ತು ಆಗ್ನೇಯ ಏಷ್ಯಾದಲ್ಲಿ ಚಾಚುತ್ತಿದ್ದಿತು. ಎಲ್ಲಕ್ಕಿಂತ ಹೆಚ್ಚಾಗಿ ದೇಶದಲ್ಲಿ ಕಪ್ಪು ಮಾರಾಟ ಮತ್ತು ಲಂಚ ರುಷುವತ್ತುಗಳು ವಿಪುಲವಾಗಿದ್ದು ಭಾರತ ಸಮಾಜದ ನೈತಿಕ ಬುಡವನ್ನೇ ಹೀರುತ್ತಿದ್ದವು.

ಸೇವಾಗ್ರಾಮದ ಸಮ್ಮೇಳನದ ಹಿನ್ನೆಲೆಯನು ಮಂತ್ರಿಯಿಂದ ಹಿಡಿದು ಸ್ವಯಂಸೇವಕರ ವರೆಗೆ ಎಲ್ಲರೂ ಕೂಡ ಪೂರ್ಣ ಜವಾಬ್ದಾರಿಯ ಮನೋಭಾವದಿಂದ ದೈನ್ಯತಾಭಾವ ಹೊಂದಿದ್ದರು. ಯಾರಿಂದಲಾದರೂ ಯಾವ ಕಡೆಯಿಂದಲಾದರೂ ಬೆಂಬಲಬರುವುದೇ ಎಂದು ಕಾತುರರಾಗಿರುತ್ತಿದ್ದರು. ಸೇವಾಗ್ರಾಮಕ್ಕೆ ಆಗ ಬಂದಿದ್ದವರೆಲ್ಲರೂ ತಾವು ಈ ಹಿಂದೆ ತಮ್ಮ ಗುರುವಿನ ಉಪದೇಶದಂತೆ ನಡೆಯುತ್ತಿದ್ದಂತೆ ಆಗಲೂ ನಡೆಯುವುದಾದರೆ, ಈಗಿನ್ನೂ ಕತ್ತಲೆಯಿದ್ದರೂ ಭವಿಷ್ಯವು ಆಶಾದಾಯಕವಾಗಿರುವುದೆಂದು ಹಾರ್ದಿಕವಾಗಿಯೇ ನಂಬಿದ್ದರು. ಆದರೆ ಆಡಳಿತ ಜವಾಬ್ದಾರಿ ವಹಿಸಿಕೊಂಡವರಿಗೆ ಆದರ್ಶ ಭಾವನೆಗೂ ವಾಸ್ತವತೆಗೂ ಬಹಳ ಅಂತರವಿದೆಯೆಂದು ಗೊತ್ತಾಗಿತ್ತು. ಅಹಿಂಸಾಯುತವಾಗಿ ಆಡಳಿತ ನಡೆಸುವುದೆಂದರೆ ತಮಗೇ ಅಲ್ಲದೆ ಇಡೀ ಪ್ರಪಂಚಕ್ಕೇ ಒಂದು ಹೊಸ ಕಲೆಯಾಗಿದ್ದಿತು. ಈ ಹೊಸ ವಿದ್ಯೆಯನ್ನು ಆರಂಭಿಸಿ ಅವರ ಮಾರ್ಗಗಳನ್ನೆಲ್ಲಾ ಅರಹಲು ಗುರುವು ಮಾತ್ರ ಇರಲಿಲ್ಲ. ಅಂತಹ ಅಸಾಧಾರಣ ಪರಿಸ್ಥಿತಿಯಲ್ಲಿ ಎಲ್ಲರಿಗೂ ಕೂಡ ಆ ಮಹಾ ಸಂಪತ್ತನ್ನು ಕಾಪಾಡಿಕೊಂಡು ಬರಬೇಕೆಂಬ ಅಭಿಲಾಷೆಯೇ ಬಲವಾಗಿತ್ತು. ಗುರುವು ಬಿಟ್ಟು ಹೋಗಿದ್ದ ಕೆಲಸವನ್ನು ಭಾರತದಲ್ಲೂ ಪ್ರಪಂಚದಲ್ಲೂ ಮಾಡುವುದಕ್ಕಾಗಿ ದಾರಿ ಮಾಡಿಕೊಳ್ಳುವುದಕ್ಕೂ ಅವರು ಬಹಳ ಆತುರರಾಗಿದ್ದರು. ಗಾಂಧೀಜಿಯು ಭಾರತದಲ್ಲಿ ಜನಿಸಿದ್ದರೂ ಅವರು ಇಡೀ ಪ್ರಪಂಚಕ್ಕೇ ಸೇರಿದಂತಹವರು.

ಸೇವಾಗ್ರಾಮದಲ್ಲಿ ನಡೆದ ಸಮ್ಮೇಳನವು ಸತ್ಯ ಮತ್ತು ಅಹಿಂಸೆಯ ಆಧಾರದ ಮೇಲೆ ಸರ್ವೋದಯ ಸಮಾಜವನ್ನು ಸ್ಥಾಪಿಸಲು ತೀರ್ಮಾನಿಸಿತು. ಯಾವುದೇ ಪಕ್ಷ ಅಂಗರಚನೆಯಾಗಲೀ ನಿಯಮಗಳಾಗಲೀ ಇರುವಂತಹ ಸಂಸ್ಥೆಯಲ್ಲ, ಅದು ಕೇವಲ ಪಾರಮಾರ್ಥಿಕ ಸೋದರ ಕೂಟದಂತಿರುವದು. ಗಾಂಧೀಜಿಯ ತತ್ವಗಳಲ್ಲೂ ಕಾರ್ಯಕ್ರಮದಲ್ಲೂ ನಂಬಿಕೆಯಿಟ್ಟು ಅದರಂತೆ ತಮ್ಮ ಜೀವಿತವನ್ನು ರೂಪಿಸಿಕೊಂಡು ಅದರಂತೆ ಕೆಲಸ ಮಾಡಲಿಚ್ಛಿಸುವಂತಹವರೆಲ್ಲರೂ ಕೂಡ ವರ್ಷಕ್ಕೊಮ್ಮೆಯಾದರೂ ಒಟ್ಟಿಗೆ ಕಲೆತು ತಮ್ಮ ಅನುಭವಗಳ ವಿನಿಮಯ ಮಾಡಿಕೊಂಡು ಮುಂದಿನ ಕೆಲಸಕ್ಕಾಗಿ ಕಾರ್ಯಕ್ರಮ ಸಿದ್ಧಪಡಿಸಿಕೊಳ್ಳುವರು. ಸರ್ವೋದಯ ಎಂಬ ಹೆಸರೇ ಭಾರತ ದೇಶದ ಮತ್ತು ಹೊರ ದೇಶಗಳ ಜನರ ಚಿತ್ತವನ್ನಾಕರ್ಷಿಸಿರುವುದನ್ನು ನೋಡಿದರೆ ಜನತೆಯ ನೈತಿಕ ಮತ್ತು ಪಾರಮಾರ್ಥಿಕ ಅಭಿಲಾಷೆಗೆ ಹೊಸ ಹುರುಪನ್ನು ಕೊಟ್ಟಂತಾಗಿದೆ. ಆವರಿಗೆ ಹೊಸದೊಂದು ಭಾವನೆಯನ್ನು ಅಥವಾ ಆದರ್ಶವನ್ನು ಕೊಟ್ಟು ವಿಶ್ವಾಸದಿಂದಲೂ ಉತ್ಸಾಹದಿಂದಲೂ ಅದಕ್ಕಾಗಿ ಅವರು ಕೆಲಸ ಮಾಡಲು ಅವಕಾಶ ಕಲ್ಪಿಸಿದಂತಾಯಿತು.

ಇಷ್ಟು ದಿನವೂ ಸಮಾಜವಾದ ಅಥವಾ ಉಗ್ರ ಸಾಮ್ಯವಾದ ತತ್ವಗಳು ಅಧಿಕ ಜನಸಮೂಹದ ಮನಸ್ಸನ್ನಾಕರ್ಷಿಸಿ, ಉದಾತ್ತ ಗುರಿಯಿಂದ ಗೆಲಿದು ಅದಕ್ಕಾಗಿ ಎಷ್ಟು ಕಷ್ಟವನ್ನಾದರೂ ಅನುಭವಿಸಿ ಎಷ್ಟು ತ್ಯಾಗವನ್ನಾದರೂ ಮಾಡಲು ಸಿದ್ಧವಾಗುವಂತೆ ಮಾಡುತ್ತಿದ್ದವು. ಹಿಂಸಾತ್ಮಕವಾದ ಕ್ರಾಂತಿಯನ್ನು ಮಾಡಿದುದರ ಫಲವಾಗಿ ಸ್ಥಾಪಿತವಾದ ಸಮಾಜವಾದ ಅಥವಾ ಉಗ್ರ ಸಮತಾವಾದ ಮಾತ್ರ ಜನಸಾಮಾನ್ಯಕ್ಕೆ ರಾಜಕೀಯ ಸ್ವಾತಂತ್ರ್ಯವನ್ನೂ ಆರ್ಥಿಕ ಸಮತೆಯನ್ನೂ ಕೊಟ್ಟು ಕೊನೆಗೆ ಪ್ರಪಂಚದಲ್ಲೆಲ್ಲಾ ಶಾಂತಿಯೂ ಅಭಿವೃದ್ಧಿಯೂ ನೆಲೆಸುವಂತೆ ಮಾಡಲು ಸಾಧಕವಾದಂತಹವೆಂದು ಪ್ರಪಂಚ ಭಾವಿಸಿತ್ತು. ಆದರೆ ಇಲ್ಲಿಯ ತನಕ ಆದ ಅನುಭವದಲ್ಲಿ ಶಾಂತಿ ಮತ್ತು ಅಭಿವೃದ್ಧಿಯ ಬದಲು ಪ್ರಪಂಚದ ಜನಸಾಮಾನ್ಯದ ಸ್ಥಿತಿಯು ಭಯ ಮತ್ತು ಅಭಾವದಿಂದಲೇ ಕೂಡಿದ ದಾಗಿದೆ. ಜನತೆಗೆ ಯುದ್ಧವು ಬೇಸರವಾಗಿದೆ. ಅದು ಮನುಷ್ಯನನ್ನು ಅನಾಗರಿಕನನ್ನಾಗಿ ಮಾಡುವದು. ಸಾವಿಗಿಂತಲೂ ಅಧಿಕವಾದ ಭಯಾನಕವಾದ ಸ್ಥಿತಿಯಲ್ಲಿ ಜನರು ಜೀವಿಸಬೇಕಾಗುವದು. ಮನುಷ್ಯನು ಅನೇಕ ಶೋಧನ ನಡೆಸಿದ್ದಾನೆ, ಅನೇಕ ಕ್ರಾಂತಿ ನಡೆಸಿದ್ದಾನೆ. ಆದರೆ ಅವನ ಗುರಿ ಮಾತ್ರ ಇನ್ನೂ ಮೃಗಮರೀಚಿಕೆಯಂತೆ ಅವನಿಂದ ದೂರ ದೂರವಾಗುತ್ತಲೇ ಬಂದಿದೆ. ಅವನಿಗೆ ಮುಂಕು ದಾರಿ ವಾಗುತ್ತಾ ಬಂದಿದೆ. ಅವನಿಗೆ ಬೇರೊಂದು ದಾರಿ ಬೇಕಾಗಿದೆ. ಉಗ್ರ ಸಮತಾವಾದ ಮತ್ತು ಸಮತವಾದ ಹೇಳುವಂತಹ ಫಲಗಳು ಬೇಕು. ಆದರೆ ಅವುಗಳೊಡನೆ ಜೊತೆ ಬರುವ ಆ ದ್ವೇಷ, ಹಿಂಸೆ ಮತ್ತು ಯುದ್ಧಗಳು ಬೇಡ. ಅಂತಹುದೊಂದು ಮಾರ್ಗವನ್ನು ಬಹುಶಃ ಸರ್ವೋದಯ ಕಾರ್ಯಕ್ರಮದಲ್ಲಿ ಅತ ಕಂಡುಕೊಂಡಿದ್ದಾನೆ.

ಸರ್ವೋದಯದ ಮೂಲ ತತ್ವ

ಸರ್ವೋದಯವೆಂದರೆ ಸರ್ವರೂ ಅಭಿವೃದ್ಧಿಯಾಗಬೇಕು, ಸರ್ವರೂ ಕ್ಷೇಮವಾಗಿರಬೇಕು. ಎಲ್ಲರನ್ನೂ ದೇವರೇ ನಿರ್ಮಿಸಿದನು, ಆಂದಮೇಲೆ ಒಬ್ಬರ ಹಿತವನ್ನೊಬ್ಬರ ಹಿತಕ್ಕೆ ವಿರುದ್ಧವಾಗುವಂತೆ ಅಥವಾ ಒಬ್ಬರಿಗೊಬ್ಬರು ಹೊಡೆದಾಡುವಂತೆ ದೇವರು ಇಚ್ಛಿಸುವುದಿಲ್ಲ ಎಂಬುದೇ ಇದರ ಮೂಲ ತತ್ವ. ಒಂದು ಕುಟುಂಬದಲ್ಲಿ ಎಷ್ಟೋ ಜನರಿರುತ್ತಾರೆ. ಅವರಲ್ಲಿ ಮನಸ್ಸು ಮತ್ತು ಬುದ್ಧಿಶಕ್ತಿ ಬೇರೆ ಬೇರೆ ರೀತಿಯಿರುತ್ತದೆ. ಒಬ್ಬೊಬ್ಬರೂ ಒಂದೊಂದು ಜೀವನೋಪಾಯ ಹೊಂದಿರುವರು. ಆದರೂ ಅವರೆಲ್ಲಾ ಪರಸ್ಪರ ಹಿತವಾಗಿಯೂ ಒಟ್ಟಾಗಿಯೂ ಇರುವರು. ಇಡೀ ಕುಟುಂಬದ ಕ್ಷೇಮವೇ ಹಿತವೇ ತಮ್ಮಲ್ಲಿ ಪ್ರತಿಯೊಬ್ಬರ ಕ್ಷೇಮ ಹಿತವೆಂದು ಅವರಲ್ಲಿ ಪ್ರತಿಯೊಬ್ಬರೂ ಭಾವಿಸುವರು. ಹಾಗೆಯೇ ಇಡೀ ಸಮಾಜವು ಕೂಡ ಒಂದು ಕುಟುಂಬದಂತೆಯೇ ಇರಬಹುದು. ಕುಟುಂಬಕ್ಕೆ ಐಹಿಕ ಸುಖ ಸೌಲಭ್ಯಗಳು ಬೇಕು. ಅದ್ದರಿಂದ ಕುಟುಂಬದ ಸದಸ್ಯರೆಲ್ಲರೂ ಸಂಪಾದನೆ ಮಾಡುವರು. ಆದರೆ ಅವರಲ್ಲಿ ಒಬ್ಬರಿಗೊಬ್ಬರು ಸಂಬಂಧ ಹೊಂದಿರುವದು ಹಣದಿಂದಲ್ಲ. ಪ್ರೇಮವೇ ಅವರೆಲ್ಲರನ್ನೂ ಒಟ್ಟಿಗೆ ಸೇರಿಸುವ ಶಕ್ತಿ, ಸಮಾಜದಲ್ಲಿಯೂ ಕೂಡ ಅದೇ ಶಕ್ತಿಯೇ ಬೆಳೆಯಬೇಕು.

ಆದ್ದರಿಂದ ಈ ಭಾವನೆಯನ್ನು ವೈಯಕ್ತಿಕ ಮತ್ತು ಸಮಾಜ ಜೀವನದಲ್ಲಿ ಬೆಳೆಸುವ ಉದ್ದೇಶದಿಂದ ಆದ ಪಾರಮಾರ್ಥಿಕ ಸೋದರ ಕೂಟವೇ ಈ ಸರ್ವೋದಯ ಸಮಾಜ. ಸಮಾಜದ ಪ್ರತಿಯೊಬ್ಬ ಸದಸ್ಯರೂ ಕೂಡ ಈ ಗುರಿಯನ್ನು ಸಾಧಿಸಲು ಸತತ ಪ್ರಯತ್ನಿಸಬೇಕು. ಇತರರೂ ಕೂಡ ಇದೇ ರೀತಿ ಮಾಡುವಂತೆ ಅವರು ಪ್ರೇರೇಪಿಸಬೇಕು. ಅಗತ್ಯವಾದಲ್ಲಿ ಅವರಿಗೆ ಉದ್ಧಕ್ಕೂ ಸಲಹೆಯೀಯುತ್ತಿರಬೇಕು. ಇದೊಂದು ಬಹಳ ಸಡಿಲವಾದ ಸಂಸ್ಥೆ. ಸತ್ಯ ಮತ್ತು ಅಹಿಂಸೆ ಅಡಿಪಾಯದಲ್ಲಿ ನಿರ್ಮಿತವಾದ ಸರ್ವೋದಯ ಸಮಾಜವು ತನ್ನ ಆಚರಣೆಯಲ್ಲಿ ಬಲಪ್ರಯೋಗವನ್ನಾಗಲೀ ಒತ್ತಾಯವನ್ನಾಗಲೀ ಉಪಯೋಗಿಸಲು ಸಾಧ್ಯವಿಲ್ಲ. ತನಗೆ ತಾನು ಒಳ್ಳೆಯವನಾಗುವಂತೆ ಹೃದಯದಿಂದಲೇ ಪ್ರೇರಣೆ ಬರಬೇಕು. ಅದು ಸ್ವಯಂ ಪ್ರೇರಿತವಾಗಿ ಬರಬೇಕು. ಇದು ಕೇವಲ ವೈಯಕ್ತಿಕವಾದ. ವ್ಯಕ್ತಿಯು ಉತ್ತಮಗೊಂಡ ಹೊರತೂ, ಪ್ರಾಮಾಣಿಕನೂ ಶೀಲವಂತನೂ, ಗುಣವಂತನೂ ಆಗಲ್ಲಿ ಅವನ್ನೊಳಗೊಂಡಿರುವ ಸಮಾಜವು ಕೂಡ ಉತ್ತಮಗೊಂಡು ಅದು ಶುದ್ಧವೂ, ಶೀಲ

(ಆನೇ ಪುಟಕ್ಕೆ ಸಾಗಿದೆ.)

ಕೊಡಗಿನ ಹರಿಜನರು.

ಲೇ:—ಶ್ರೀ. 'ಗುಪ್ತ' ಮಡಿಕೇರಿ.

ಹರಿಜನರ ಉದ್ಧಾರವಾಗಬೇಕು; ಅವರನ್ನು ಸಮಾಜದ ಕೆಳ ಅಂತಸ್ತಿನಿಂದ ಮೇಲೆತ್ತಬೇಕು, ಜಾತೀಯ ಭೇದ ಭಾವವನ್ನು ಕಿತ್ತು ತೆಗೆದು ಎಲ್ಲರೂ ಭಾರತ ಮಾತೆಯ ಪುತ್ರರು ಎಂಬ ಭಾವನೆಗೆಡೆಗೊಡಬೇಕೆಂದು ಕಾಂಗ್ರೆಸು ಪೂಜ್ಯ ಬಾಪೂಜಿಯವರ ನೇತೃತ್ವದಲ್ಲಿ ನಡೆಸಿದ ಚಳವಳಿಯಿಂದಾಗಿ ಜನತೆಯ ಕಣ್ಣು ತೆರೆದಿದೆ. ಹರಿಜನರೂ ನಿದ್ರೆಯಿಂದ ಎದ್ದಿದ್ದಾರೆ. ಸರಕಾರವು ಈ ಬಗ್ಗೆ ಶ್ರಮಿಸಲು ಯತ್ನಿಸುತ್ತಿದೆ.

ಕಳೆದ ಒಂದೂವರೆ ವರ್ಷದಿಂದ ಕೊಡಗಿನಲ್ಲಿ ಹರಿಜನರ ಬಗ್ಗೆ ಆಸಕ್ತಿಯನ್ನು ಸ್ಥಳೀಯ ಸರಕಾರವು ವಹಿಸಿದೆ. ಹರಿಜನರಿಗಿದ್ದ ಸಾಮಾಜಿಕ ಅಡಚಣೆಯನ್ನು ನಿವಾರಿಸಲು ಮಸೂದೆಯೊಂದನ್ನೂ ಅಂಗೀಕರಿಸಲಾಗಿದೆ. ವ್ಯವಸಾಯ ಮಾಡಲಿಚ್ಛಿಸುವ ಹರಿಜನರಿಗೆ ಬೇಕಾದ ಭೂಮಿ, ಮನೆ ಕಟ್ಟಿಕೊಳ್ಳಲು ಜಾಗದ ಏರ್ಪಾಡು ಮಾಡಲಾಗುತ್ತಿದೆ. ಎಲ್ಲವೂ ಶುಭ ಚಿಹ್ನೆ. ಕೊಡಗಿನ ಹರಿಜನರೂ ಚೇತರಿಸಿಕೊಂಡಿರುವರೆಂಬುದಕ್ಕೆ ಆಗಾಗ್ಗೆ ಅಲ್ಲಲ್ಲಿ ನಡೆಯುತ್ತಿರುವ ಅವರ ಸಮ್ಮೇಳನ, ಅವರು ಮಾಡುತ್ತಿರುವ ನಿರ್ಣಯಗಳೇ ಸಾಕ್ಷಿ. ಇವೆಲ್ಲವೂ ಯೋಗ್ಯ ಪಥದಲ್ಲಿ ಸಾಗಿದೆಯೇ ಎಂಬುದನ್ನು ವಿಚಾರಿಸುವುದು ಈ ಲೇಖನದ ಧ್ಯೇಯ

ಈಗಿನ ಚೀಫ್ ಕಮಿಷನರು ಕೊಡಗಿಗೆ ಬಂದು ಕೊಡಗಿನ ಹರಿಜನರ ಬಗ್ಗೆ ಆಸಕ್ತಿಯನ್ನು ತೋರಿಸ ತೊಡಗಿದಂದಿನಿಂದ ಇಲ್ಲಿಯ ಹರಿಜನ ಸಮಸ್ಯೆಗೆ ಚಾಲನೆ ದೊರೆತು ಆ ಬಗ್ಗೆ ಜನತೆಯ ದೃಷ್ಟಿ ಹರಿಯ ತೊಡಗಿತು. ಚೀಫ್ ಕಮಿಷನರು ಹೋದ ಕಡೆಯಲ್ಲೆಲ್ಲಾ ಹರಿಜನರಹಿತ ಚಿಂತನೆಯ ಬಗ್ಗೆ ಆಶ್ವಾಸನೆ ಕೊಡತೊಡಗಿದುದರಿಂದ ಹರಿಜನರು ತಮ್ಮ ಬೇಡಿಕೆಗಳನ್ನು ಮುಂದಿಡ ತೊಡಗಿದರು. ದಿನವಹಿ ಅರ್ಜಿಗಳ ಸುರಿಮಳೆಯಾಗತೊಡಗಿತು. ಬಂದ ಅರ್ಜಿಗಳನ್ನು ಯೋಗ್ಯ ರೀತಿ ವಿಚಾರಿಸಿ ತಕ್ಕ ಏರ್ಪಾಡು ಮಾಡುವ ವ್ಯವಸ್ಥೆ ಇನ್ನೂ ಸರಿಯಾಗಿಲ್ಲವೆಂದು ನನ್ನಭಿಪ್ರಾಯ. ನಾಲ್ಕಾರು ಅರ್ಜಿ ಬರೆದು ಒಂದೇ ಉತ್ತರ ದೊರೆಯದ ಹರಿಜನರಿದ್ದಾರೆ. ಕೆಲವೆಡೆ ಹರಿಜನರಿಗೆ ಮನೆ ಕಟ್ಟಲು ಸ್ಥಳಕೊಟ್ಟು ಅವರ ಹೊಸ ಕಾಲನಿಗಳಿಗವಕಾಶ ಮಾಡಲಾಗಿದೆ. ಆದರಲ್ಲೂ ಅದೂರದೃಷ್ಟಿಯ ಏರ್ಪಾಡೇ ತೋರಿಬರುತ್ತದೆ. ಉದಾಹರಣೆಗೆ ಪೊನ್ನಂಪೇಟೆ, ಗೋಣಿಕೊಪ್ಪ ರಸ್ತೆಯ ಮಧ್ಯದಲ್ಲಿ ರಸ್ತೆ ಕರೆಯಲ್ಲಿ ಹರಿಜನರಿಗೆ ಮನೆಕಟ್ಟಲು ಸ್ಥಳಕೊಟ್ಟು "ನೆಹರೂ ಕಾಲನಿ" ಯೊಂದನ್ನು ಏರ್ಪಡಿಸಲಾಗಿದೆ. ಇವರಿಗೆ ಭೂಮಿಯ ಏರ್ಪಾಡು ಮಾಡಲಾಗಿದೆಯೇ? ಮಾಡಿದ್ದರೆ ಎಲ್ಲಿ? ಪ್ರತಿಯೊಬ್ಬನಿಗೂ ಕಡಿಮೆ ಮೂರು ಎಕರೆ ಭೂಮಿ ಅದನ್ನು ವ್ಯವಸಾಯ ಮಾಡಲು ಪ್ರಥಮವಾಗಿ ಸ್ವಲ್ಪ ಧನ ಸಹಾಯವೂ ಆದಿದ್ದರೆ ಈ ರೀತಿಯ ತೋರಿಕೆಯ 'ಕಾಲನಿ'ಗಳ ಪ್ರಯೋಜನವೇನ? ಎಂದಿನಂತೆ ಅವರು ಬೇರೆಯವರ ಹಟ್ಟಿಯಲ್ಲಿ ದುಡಿದು ಹೊಟ್ಟೆ ಹೊರೆಯ ಬೇಕಾಗುವದಿಲ್ಲವೇ?

ಸರಕಾರವು ಸಮಾಜದಲ್ಲಿ ಅವರಿಗಿದ್ದ ತೊಂದರೆಯನ್ನು ನಿವಾರಿಸುವ ಮಸೂದೆ ಮಾಡಿದಾಕ್ಷಣಕ್ಕೆ ಹೆಚ್ಚಿನದೇನನ್ನೂ ಸಾಧಿಸಿದಂತಾಗಲಿಲ್ಲ. ಹರಿಜನರ ಬಗ್ಗೆ ಸಮಾಜದ ಬಹಿಷ್ಕಾರವು ಹಿಂದಿನಂತೆ ಇಂದೂ ಇದೆ. ಉತ್ತಮರೆಂದುಕೊಳ್ಳುವವರು, ಅವರನ್ನು ಸುಲಿಗೆ ಮಾಡುವ ಮಾರ್ಗ ಕೈಜಾರುತ್ತಿದೆಯೆಂದು ಕಳೆದು ಇಲ್ಲದ ಕಿರುಕುಳಕ್ಕೆ ತೊಡಗಿದ್ದಾರೆ! ಆದ್ದರಿಂದ ಹರಿಜನರಲ್ಲಿ ಬೆಳೆದು ಬಂದಿರುವ ತಾವು ಕಡಿಮೆ ದರ್ಜೆಯವರೆಂಬ ಭಾವನೆಯು ಹೋಗಲು ಅವರ ಆರ್ಥಿಕ, ನೈತಿಕ ಮತ್ತು ಬೌದ್ಧಿಕ ಸುಧಾರಣೆಯಾಗಬೇಕು. ಯೋಗ್ಯ ವಿದ್ಯೆ ಪಡೆದಿರುವ ಹರಿಜನರು ಯಾವ ತೊಂದರೆಯೂ ಇಲ್ಲದೆ ಉತ್ತಮರೆನಿಸುವವರೊಡನೆ ಸಮಕರಾಗಿರಬಲ್ಲರು. ಆದ್ದರಿಂದ ಹರಿಜನರ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಿ ಅವರಿಗೆ ವಿದ್ಯೆ ಸಾಕಷ್ಟು ದೊರೆಯುವ ಪ್ರಯತ್ನವನ್ನು ಪ್ರಥಮ ಮಾಡಬೇಕು. ವಿದ್ಯಾವರ್ಗದಲ್ಲಿ ಏರ್ಪಡಿಸಿದ ವಯಸ್ಕರ ಶಿಕ್ಷಣ ಶಾಲೆಗಳು ಕುಂಟುತ್ತಾ ನಡೆದಿವೆ. ಸರಕಾರವು ಇದರ ಜವಾಬ್ದಾರಿಯನ್ನು ಪೂರ್ಣವಹಿಸಬೇಕು. ಅಲ್ಲದೆ ಎಲ್ಲಾ ಹರಿಜನ ಮಕ್ಕಳು ಖಡ್ಡಾಯವಾಗಿ ಶಾಲೆಗೆ ಹೋಗುವ ಏರ್ಪಾಡು ಮಾಡಬೇಕು.

ಕೊಡಗಿನ ಹರಿಜನರ ಬಗ್ಗೆ ಸರಕಾರವೂ ಸಾರ್ವಜನಿಕರೂ ಅಲ್ಪಸ್ವಲ್ಪ ಸೇವೆ ಮಾಡಿದ್ದಾರೆ. ಅದನ್ನು ಇಲ್ಲವೆನ್ನಲಾಗುವದಿಲ್ಲ. ಆದರೆ ಇದು ಕೇವಲ ಅಲ್ಪವೆಯ ಪ್ರಯತ್ನವೆನ್ನಬೇಕಾಗಿದೆ. ಕೇಂದ್ರ ಸರಕಾರವೇ ಹೆಜ್ಜೆ ಮುಂದಿಟ್ಟಿರುವಾಗ ನಾವೂ ಸ್ವಲ್ಪ ಏನಾದರೂ ಮಾಡಬೇಕೆಂಬ ಭಾವನೆಯಿಂದ ಕಾರ್ಯ ನಡೆದರೆ ಅದರಿಂದ ಹೆಚ್ಚಿನ ಫಲ ಬರಲಾರದು.

ಹರಜನರ ಪರೋಭಿವೃದ್ಧಿಯ ಕೆಲಸವನ್ನು ಸರಿಯಾಗಿ ನಡೆಸಲು ಅವಕ್ಕಾಗಿಯೇ ಪ್ರತ್ಯೇಕ ಸಿಬ್ಬಂದಿಗಳು ಬೇಕು. ಈಗಿರುವ ಗ್ರಾಮಾಭಿವೃದ್ಧಿ ಅಧಿಕಾರಿಯು ಎಲ್ಲಾ ಕೆಲಸವನ್ನು ನೋಡುವದು ಸಾಧ್ಯವಿಲ್ಲ. ಸರಕಾರವು ಇನ್ನಾದರೂ ತಕ್ಕ ಏರ್ಪಾಡುಗಳನ್ನು ಮಾಡಬೇಕು.

ಹರಜನರ ಉದ್ಧಾರ ಕಾರ್ಯವು ಕೇವಲ ಸರಕಾರ ಮತ್ತು ಸಾರ್ವಜನಿಕರಿಗೆ ಸಂಬಂಧಿಸಿದ್ದಲ್ಲ. ಈ ಜಗತ್ತಿನಲ್ಲಿ ಯಾರು ಯಾರನ್ನೂ ಉದ್ಧಾರ ಮಾಡಲಾರನು. ಮೇಲೇಳಲು ಯತ್ನಿಸುವವನಿಗೆ ನೆರವು ದೊರೆಯುವದೇ ವಿನಹ ಏನೂ ಪ್ರಯತ್ನ ಮಾಡದವನಿಗೆ ನೆರವು ಬರಲಾರದು. ಆದ್ದರಿಂದ ಹರಿಜನರ ಉದ್ಧಾರ ಹರಿಜನರಿಂದಲೇ ಆಗಬೇಕು. ಸಮ್ಮೇಳನ ಠರಾವುಗಳೊಂದಿಗೆ ಬೇರೆ ವಿಧಾಯಕ ಕೆಲಸಗಳೂ ನಡೆಯಬೇಕು. ಮೊನ್ನೆ ಮೊನ್ನೆಯಾಗಿ ರೋಹತಕ್ ಜಿಲ್ಲೆಯಲ್ಲಿ ಹರಿಜನರಿಗೆ ಉತ್ತಮರು ಕೊಡುವ ಕಿರುಕುಳವನ್ನು ನಿಶೇಧಿಸಿ ೪೪ ಹರಿಜನರು ಮಹಾತ್ಮರ ಸಮಾಧಿಯ ಅಂದರೆ ರಾಜಘಾಟನಲ್ಲಿ ಉಪವಾಸ ವ್ರತ ಕೈಕೊಂಡಿದ್ದರು. ಒಂದು ವಾರದ ಉಪವಾಸದ ನಂತರ ಸರ್ದಾರ್ ಪಟೇಲರಂಥವರು ಈ ವಿಚಾರದಲ್ಲಿ ಪರಿಶೀಲನೆ ಮಾಡಿ ಯೋಗ್ಯ ವ್ಯವಸ್ಥೆ ನಡೆಯುತ್ತಿದೆ. ಅವರು ಮಾಡಿದ ಸತ್ಯಾಗ್ರಹ ಈ ಕಾರಣಗಳಾಗಿತ್ತು.

(೧) ಹರಿಜನರ ಬಗ್ಗೆ ರೋಹತಕ್ ನಲ್ಲಿ ಇರುವ ಸಮಾಜ ಬಹಿಷ್ಕಾರ:

(೨) ಜಮೀನ್ದಾರರು ಹರಿಜನರ ಮೇಲೆ ನಡೆಸುವ ಬಲಪ್ರಯೋಗ.

(೩) ಹರಿಜನರನ್ನು ಅವರ ನಿವಾಸಗಳಿಂದ ಹೊರ ತಳ್ಳುವ ನೀತಿ.

(೪) ಗ್ರಾಮದಲ್ಲಿ ಹರಿಜನರ ಸಂಖ್ಯೆ ಹೆಚ್ಚಿದ್ದರೂ ಗ್ರಾಮ ಪಂಚಾಯಿತ ಮತ್ತಿತರ ಸಭೆಗಳಿಗೆ ಹರಿಜನರನ್ನು ಆರಿಸದ ನೀತಿ.

ಕೊಡಗಿನ ಹರಿಜನರೂ ಕೂಡ ತಮ್ಮ ನ್ಯಾಯಬದ್ಧ ಹಕ್ಕುಗಳಿಗಾಗಿ ಹೋರಾಡಬೇಕು. "ಬಾಗಿಲು ತಟ್ಟಿದರೆ ಬಾಗಿಲು ತೆರೆಯುವದು; ಕೇಳಿದರೆ ಕೊಡಲ್ಪಡುವುದು" ಎಂಬ ನುಡಿಯಂತೆ ವರ್ತಿಸಬೇಕು.

WANTED

Influential and capable Chief Agents and Special Agents all over the Province to represent the Largest Motor Insurance Company of S. India. The Premier Life & General Insurance Co; Ltd; Madras 1, offering various attractive rebates, charging Low Premiums to Policy-holders and liberal terms to Representatives and insuring about 15,000 Vehicles with an Annual Premium in-come of Rs. 10,00,000. Season fast approaching, apply sharp.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

೧೯೧೨ರ ಕೋಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,65,000.
ಕ್ಷೇಮನಿಧಿ	ರೂ.	50,000.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೋದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಏಜೆಂಟ್.

ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್, ಮಡಿಕೇರಿ.

ಮಹಾಜನರಲ್ಲಿ ವಿನಂತಿ.

ನಮ್ಮ ಫ್ರೇಜರ್‌ಪೇಟೆ ಕಾರ್ಖಾನೆಯಲ್ಲಿ ಈಗಾಗಲೇ ಮೂಳೆಗೊಬ್ಬರ ತಯಾರಾಗುತ್ತಿರುವುದು ಎಲ್ಲರಿಗೂ ತಿಳಿದ ವಿಷಯ. ಈ ಸಂದರ್ಭದಲ್ಲಿ ನೀವು ನಿಮ್ಮ ಗ್ರಾಮಗಳಲ್ಲಿ ಸತ್ತ ದನಗಳ ಮತ್ತು ಇತರ ಪ್ರಾಣಿಗಳ ಮೂಳೆಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಜಮಾಯಿಸಿ ಮೇಲಿನ ವಿಳಾಸಕ್ಕೆ ತಿಳಿಸಿದಲ್ಲಿ ಅದನ್ನು ಅದರ ಬೆಲೆ ಕೊಟ್ಟು ಸಾಗಿಸುವ ಏರ್ಪಾಡನ್ನು ಮಾಡುತ್ತೇವೆ. ಅಥವ ಲಾರಿಗಟ್ಲೆ ಜಮಾಯಿಸಿದವರು ನಮ್ಮ ಫ್ರೇಜರ್‌ಪೇಟೆ ಕಾರ್ಖಾನೆಗೆ ತಂದು ಕೊಟ್ಟಲ್ಲಿ ಮಣ 1ರ 0-12-0 ಯಂತೆ ಬೆಲೆಗೆ ತೆಗೆದುಕೊಳ್ಳಲಾಗುವುದು.

ಈಗಾಗಲೇ ತಯಾರಾಗಿರುವ ಮೂಳೆ ಗೊಬ್ಬರಕ್ಕೆ ಆರ್ಡರ್‌ದಾರರು ಬರೆಕೊಂಡಲ್ಲಿ ಅಗ್ರಸ್ಥಾನವನ್ನನುಸರಿಸಿ ಬಟವಾಡೆ ಮಾಡಲಾಗುವುದು.

ಸೂಚನೆ:—ನಮ್ಮ ಕಂಪೆನಿಯ ಶೇರುದಾರರಿಗೆ ಹೆಚ್ಚಿನ ರಿಯಾಯಿತಿ ಮತ್ತು ಮೊದಲಿನ ಹಕ್ಕು ಕೊಡಲಾಗುವುದು.

ಮಡಿಕೇರಿ, ತಾ. 19-5-49.

ಕೆ. ಕೆ. ತಿಮ್ಮಯ್ಯ, ಮೇನೇಜಿಂಗ್ ಡೈರೆಕ್ಟರ್.

ಕೊಡಗು

ತಾ. ೨೭-೫-೧೯೪೯ನೇ ಶುಕ್ರವಾರ

ಕೊಡಗಿನ ಕಾಲೇಜು

ಕೊಡಗಿನ ಕಾಲೇಜು ಮಂಜೂರಾಯಿತೆಂದು ತಿಳಿಸಲು ಸಂತೋಷಪಡುತ್ತೇವೆ. ಪ್ರಾರಂಭದಲ್ಲಿ ಕಾಲೇಜಿನ ಕಟ್ಟಡಕ್ಕೆ ಬೇಕಾದ ಹಣದ ಮಂಜೂರಾತಿಯನ್ನು ಇಂಡಿಯಾ ಸರಕಾರದಿಂದ ಪಡೆಯಲು ಬಹು ಶ್ರಮ ಪಡಬೇಕಾಯಿತು. ಅದು ದೊರೆತ ನಂತರ ಮದ್ರಾಸು ವಿಶ್ವವಿದ್ಯಾಲಯಕ್ಕೆ ಕಾಲೇಜನ್ನು ಸಂಯೋಜಿಸಲು ಒಪ್ಪಿಗೆಯನ್ನು ಪಡೆಯಲು ಪ್ರಯತ್ನಿಸಲಾಯಿತು. ವಿಶ್ವವಿದ್ಯಾಲಯ ಕಮಿಷನಿನವರು ಮಡಿಕೇರಿಗೆ ಬಂದು ಇದಕ್ಕೆ ಸಂಬಂಧಿಸಿದ ಎಲ್ಲಾ ವಿಚಾರಗಳನ್ನೂ ವಿವರಿಸಿ ಸಂಯೋಜನೆಯ ಶಿಫಾರಸ್ಸನ್ನು ಮಾಡಿದ್ದರು. ಈಗ ವಿಶ್ವವಿದ್ಯಾಲಯದವರು ಸಂಯೋಜನೆಯ ಒಪ್ಪಿಗೆಯನ್ನು ಕೊಟ್ಟಿದ್ದಾರೆಂದು ತಿಳಿಯಬರುತ್ತದೆ. ಈಗಾಗಲೇ ಕೆಲವು ಪ್ರವೀಣ ಪ್ರೊಫೆಸರರುಗಳನ್ನು ನೇಮಕ ಮಾಡಲಾಗಿದೆ. ಉಳಿದ ಲೆಕ್ಚರರುಗಳ ಮತ್ತು ಮುಖ್ಯವಾಗಿ ಪ್ರಿನ್ಸಿಪಾಲರ ಆಯ್ಕೆಗಾಗಿ ಸ್ಥಳೀಯ ಸರಕಾರದವರು ತುಂಬಾ ಪ್ರಯತ್ನ ಮಾಡುತ್ತಿರುವರು. ಹೇಗೂ ಉತ್ತಮ ಸಿಬ್ಬಂದಿಯ ವಿಷಯದಲ್ಲಿ ಸಂಶಯವಿಲ್ಲ. ಕಾಲೇಜಿನ ಅಭಿವೃದ್ಧಿ ಆಗ ಅಧ್ಯಾಪಕರನ್ನು ಹೊಂದಿಕೊಂಡಿರುವದರಿಂದ ಅಂಥಾ ಯೋಗ್ಯರ ಆಯ್ಕೆಗಾಗಿ ಸರ್ಕಾರದವರು ಎಷ್ಟು ಶ್ರಮ ತೆಗೆದುಕೊಂಡರೂ ಸಾಲದೆಂದರೆ ತಪ್ಪಾಗಲಾರದು. ಹೇಗೂ ಕೊಡಗಿನ ಕಾಲೇಜು ಮಡಿಕೇರಿಯಲ್ಲಿ ಬರುವ ಜುಲೈ ತಿಂಗಳಲ್ಲಿ ಪ್ರಾರಂಭವಾಗುವದು ಆನಂದದ ಸಂಗತಿಯಾಗಿದೆ.

ಇಷ್ಟರ ವರೆಗೆ ಕೊಡಗಿನಲ್ಲಿ ಕಾಲೇಜಿಲ್ಲದಿದ್ದುದರಿಂದ ಕೊಡಗಿನ ವಿದ್ಯಾರ್ಥಿಗಳು ವ್ಯಾಸಂಗಕ್ಕಾಗಿ ಹೊರಗೆ ಹೋಗಬೇಕಾಗುತ್ತಿತ್ತು. ಇದರಿಂದ ತಂದೆ ತಾಯಿಗಳಿಗೆ ತುಂಬಾ ಖರ್ಚು ತಗಲುತ್ತಿತ್ತಲ್ಲದೆ ವಿದ್ಯಾರ್ಥಿಗಳಿಗೆ ನಿರೀಕ್ಷಿಸಿದಂತೆ ಅವರ ಇಚ್ಛೆಯ ವಿಷಯಗಳನ್ನು ಪಡೆದು ವ್ಯಾಸಂಗ ಮಾಡಲು ತೊಂದರೆಯಾಗುತ್ತಿತ್ತು. ಇದನ್ನೆಲ್ಲಾ ನಿವಾರಿಸಲಿಕ್ಕಾಗಿಯೇ ಕೊಡಗಿನಲ್ಲಿ ಪ್ರಥಮ ದರ್ಜೆಯ (ಲೆಕ್ಕ ಮತ್ತು ವಿಜ್ಞಾನಶಾಸ್ತ್ರ ಶಾಖೆಯುಳ್ಳ) ಕಾಲೇಜನ್ನು ಸ್ಥಾಪಿಸಿದ್ದಾಗಿದೆ. ಈ ಕಾಲೇಜಿನಲ್ಲಿ ಈ ವರ್ಷ ಮೂರು ಸೆಕ್ಷನುಗಳನ್ನು ತೆರೆಯುವದಾಗಿ ವರ್ತಮಾನ. ಇದಕ್ಕೆ ನೂರು ನೂರೈವತ್ತು ವಿದ್ಯಾರ್ಥಿಗಳು ಬೇಕಾಗಬಹುದು. ಈ ವರ್ಷ ಕೊಡಗಿನ ಹೈಸ್ಕೂಲುಗಳಿಂದ ಸುಮಾರು ನಾನ್ನೂರು ವಿದ್ಯಾರ್ಥಿಗಳು ಸ್ಕೂಲ್ ಫೈನಲ್ ಪರೀಕ್ಷೆಗೆ ಕೂತಿದ್ದಾರೆ. ಇದರಲ್ಲಿ ಶೇಕಡ ಐವತ್ತರಷ್ಟು ಪಾಸಾಗಬಹುದೆಂದು ಊಹಿಸಿದರೆ ಪಾಸಾದವರೆಲ್ಲರೂ ಈ ಕಾಲೇಜಿಗೆ ಸೇರುವದು ಅಗತ್ಯವಾಗಿದೆ. ಅಂದರೇನೇ ಕಾಲೇಜಿಗೆ ಸಾಕಷ್ಟು ವಿದ್ಯಾರ್ಥಿಗಳು ದೊರೆಕುತ್ತಾಗುವದು. ಇಲ್ಲವಾದರೆ ಹೊರಗಿನ ವಿದ್ಯಾರ್ಥಿಗಳಿಗೂ ಕೂಡ ಪ್ರವೇಶದ ಅನುಕೂಲ ಮಾಡಬೇಕಾಗುವದು. ಹೊರಗಿನವರನ್ನು ಇಲ್ಲಿಗೆ ಸೇರಿಸಬಾರದೆಂಬುದು ನಮ್ಮ ಅಭಿಪ್ರಾಯವಲ್ಲ. ಅವರಿಗೂ ಅವಕಾಶವಿರಬೇಕು. ಆದರೆ ಕೊಡಗಿನ ವಿದ್ಯಾರ್ಥಿಗಳಿಗೇ ಒಂದು ಕಾಲೇಜು ಅಗತ್ಯವಿತ್ತೆಂಬುದನ್ನು ರುಜುವಾತುಪಡಿಸಬೇಕಾದರೆ ಪ್ರಥಮ ವರ್ಷದಲ್ಲಾದರೂ ಇಲ್ಲಿಯ ವಿದ್ಯಾರ್ಥಿಗಳು ಹೊಸ ಕಾಲೇಜನ್ನು ತುಂಬಬೇಕಾಗಿದೆ. ಈ ಕಾಲೇಜು ಸಹಶಿಕ್ಷಣದ ಕಾಲೇಜಾಗಿದ್ದು ವಿದ್ಯಾರ್ಥಿನಿಯರಿಗೂ ಕಲಿಯುವ ಅವಕಾಶವಿರುವದರಿಂದ ಪ್ರೌಢ ವಿದ್ಯಾಭ್ಯಾಸಕ್ಕಾಗಿ ಕಾತುರಪಡುತ್ತಿರುವ ಕೊಡಗಿನ ವಿದ್ಯಾರ್ಥಿನಿಯರಿಗೆ ಉತ್ತಮ ಅವಕಾಶವು ದೊರೆತಿದೆ. ತಂದೆ ತಾಯಿಗಳು ತಮ್ಮ ಹೆಣ್ಣು ಮಕ್ಕಳನ್ನು ಹೊರ ದೇಶಗಳಿಗೆ ಕಳುಹಿಸಿ ಕಷ್ಟಪಡುತ್ತಿರುವದರ ಬದಲು ಇಲ್ಲಿಯೇ ಪ್ರೌಢ ವಿದ್ಯಾಭ್ಯಾಸವನ್ನು ಕೊಡಬಹುದಾಗಿದೆ. ಆದ್ದರಿಂದ ಹೊರಗಿನ ಕಾಲೇಜುಗಳಿಗೆ ಹೋಗುವದರ ಬದಲು ಕೊಡಗಿನ ವಿದ್ಯಾರ್ಥಿಗಳೆಲ್ಲಾ ಈ ಕಾಲೇಜಿಗೇ ಸೇರುವದಲ್ಲದೆ, ತಂದೆ ತಾಯಿಗಳು ತಮ್ಮದೇ ಆದ ಈ ಕಾಲೇಜಿಗೆ ತಮ್ಮ ಮಕ್ಕಳನ್ನು ಸೇರಿಸುವರಾಗಿ ಆಶಿಸುತ್ತೇವೆ.

ವರ್ತಮಾನ.

ಶ್ರೀ ಮುಕ್ಕಾಟಿರ ಬಿ ಅಣ್ಣಯ್ಯನವರು ಬಿ ಎ (ಆನರ್ಸ್) ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು

ಅಬ್ಕಾರಿ ಸಬ್ ಇನ್ಸ್‌ಪೆಕ್ಟರ್ ಶ್ರೀ ಕಟ್ಟೆಂಡ ಚಂಗಪ್ಪನವರನ್ನು ಪೊನ್ನಂಪೇಟೆಗೂ, ಶ್ರೀ ಕೊಕ್ಕೆಂಗಡ ಬೆಳ್ಯಪ್ಪನವರನ್ನು ನಾಪೋಕ್ಲಿಗೂ, ಶ್ರೀ ಪಾಲೇಕಂಡ ಕಾರ್ಯಪ್ಪನವರನ್ನು ವೀರಾಜಪೇಟೆಗೂ ವರ್ಗ ಮಾಡಿ, ಶ್ರೀ ಮುಕ್ಕಾಟಿರ ಪೊನ್ನಪ್ಪನವರನ್ನು ಕುಂಟಿಕೊಪ್ಪ ಫ್ರೀ ಜರ್ನಿಟಿ ಸೆಂಟರಿಗೆ ಅಬ್ಕಾರಿ ಸಬ್ ಇನ್ಸ್‌ಪೆಕ್ಟರಾಗಿ ವರ್ಗ ಮಾಡಿರುವರು.

ಚೀಫ್ ರೇಶನಿಂಗ್ ಇನ್ಸ್‌ಪೆಕ್ಟರಾಗಿದ್ದ ಶ್ರೀ ಚೆಯ್ಯಂಡ ತಿಮ್ಮಯ್ಯನವರು ರಜೆಯಲ್ಲಿರುವದರಿಂದ ಅವರ ಬದಲಿಗೆ ಶ್ರೀ ಭೀಮರಾಯರನ್ನು ನೇಮಕವಾಗಿರುವರು.

ಪೊನ್ನಂಪೇಟೆಯಲ್ಲಿ ಪಾರುಪತ್ಯಗಾರರಾಗಿದ್ದ ಶ್ರೀ ನಾಯಕಂಡ ಉತ್ತಯ್ಯನವರನ್ನು ಮಡಿಕೇರಿ ಡಿಸ್ಟ್ರಿಕ್ಟ್ ಜಡ್ಜಿಯವರ ಆಫೀಸಿನ ಹೆಡ್ ಕ್ಲಾರ್ಕರಾಗಿ ವರ್ಗ ಮಾಡಿರುವರು.

ಮೈಸೂರು ವಿಶ್ವವಿದ್ಯಾಲಯದ ಬಿ ಎಸ್‌ಸಿ. ಪರೀಕ್ಷೆಯಲ್ಲಿ ಶ್ರೀಮತಿ ಕೇಲಪಂಡ ಅಪಲ್ಲ ಇವರು ತೇರ್ಗಡೆಯಾಗಿದ್ದಾರೆ.

ಅಖಿಲ ಕೊಡಗು ವಕೀಲರುಗಳ ಸಂಘದ ಎರಡನೇ ವಾರ್ಷಿಕ ಮಹಾ ಸಭೆಯು ಈ ತಾ. ೨೯ ರಲ್ಲಿ ವೀರಾಜಪೇಟೆ ಮುನ್ಸಿಪಲ್ ಹಾಲಿನಲ್ಲಿ ನಡೆಯುವದಾಗಿ ತಿಳಿಯಬರುತ್ತದೆ.

ತಮ್ಮ ತಂದೆಯವರ ಜ್ಞಾಪಕಾರ್ಥವಾಗಿ ಶ್ರೀ ಮನೆಯಪಂಡ ಚಿಟ್ಯಪ್ಪನವರು ತಿತಿಮತಿಯಲ್ಲಿ ಕಟ್ಟಿಸಿದ "ಮನೆಯಪಂಡ ನಾಚಯ್ಯ ಮೆಮೋರಿಯಲ್ ಆಸ್ಪತ್ರೆ"ಯ ಪ್ರಾರಂಭೋತ್ಸವವನ್ನು ಕೊಡಗಿನ ಚೀಫ್ ಕಮಿಶನರರವರು ತಾ. ೩೦ ರಲ್ಲಿ ನಡೆಸುವರು. ಈ ಆಸ್ಪತ್ರೆಯನ್ನು ಜಿಲ್ಲಾ ಬೋರ್ಡಿನವರಿಗೆ ವಹಿಸಲಾಗುವುದು.

ಕೇಂದ್ರ ಸರಕಾರವು ಕೊಡಗಿನಲ್ಲಿ ತೆರೆದಿರುವ ಎಂಪ್ಲಾಯಿಮೆಂಟ್ ಎಕ್ಸ್‌ಛೇಂಜ್ ಆಫೀಸಿನ ಆಶ್ರಯದಲ್ಲಿ ಈ ದಿನ "ಎಂಪ್ಲಾಯರ್ಸ್ ದಿನಾಚರಣೆ" ಯು ನಡೆಯಿತು. ಇಂಡಿಯಾ ಸರಕಾರದ ಲೇಬರ್ ಇಲಾಖೆಯ ಮದ್ರಾಸಿನ ರೀಜನಲ್ ಡೈರೆಕ್ಟರಾದ ಶ್ರೀ ಎಸ್. ಅಬ್ದುಲ್ ಕಾದಿರ್‌ರವರು ರಾಷ್ಟ್ರೀಯ ಎಂಪ್ಲಾಯಿಮೆಂಟ್ ಸರ್ವಿಸಿನ ಉಪಯೋಗವನ್ನು ಕುರಿತು ಮಾತಾಡಿದರು.

ಕೊಡಗಿನ ಹೈಸ್ಕೂಲುಗಳ ನಾಲ್ಕನೇ ಫಾರಂನಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಬಹಳ ಹೆಚ್ಚಾಗಿ ವಿದ್ಯಾರ್ಥಿಗಳಿಗೆ ತೊಂದರೆಯಾದ ಕಾರಣ ಪೊನ್ನಂಪೇಟೆ, ವೀರಾಜಪೇಟೆ ಮತ್ತು ಮಡಿಕೇರಿ ಹೈಸ್ಕೂಲುಗಳಲ್ಲಿ ಒಂದೊಂದು ಹೆಚ್ಚಿನ ಸೆಕ್ಷನುಗಳನ್ನು ತೆರೆಯುವ ಏರ್ಪಾಡಾಗಿದೆ.

ಲಕ್ಷ್ಮಣತೀರ್ಥ ಅಣೆಕಟ್ಟಿನ ವಿಚಾರದಲ್ಲಿ ಮೈಸೂರು ಸರಕಾರ ಎತ್ತಿದ್ದ ಆಕ್ಷೇಪದ ಬಗ್ಗೆ ಮಾತುಕತೆ ನಡೆಸಲು ಹೋಗಿದ್ದ ಚೀಫ್ ಕಮಿಶನರವರು ತಾ ೨೧ ರಲ್ಲಿ ವಾಪಸು ಬಂದಿರುವರು. ಲಕ್ಷ್ಮಣತೀರ್ಥ ಅಣೆಕಟ್ಟನ್ನು ಕಟ್ಟಬಹುದೆಂದು ನಿರ್ಣಯವಾಗಿದೆಯೆಂದು ತಿಳಿಯಬರುತ್ತದೆ.

ಭದ್ರತಾ ಮಂಡಳದಲ್ಲಿ ಹೈದರಾಬಾದಿನ ಪ್ರಶ್ನೆ

ತಾ. ೧೯ರಂದ ಲೇಕ್ ಸಕ್ಸೆಸ್‌ನಲ್ಲಿ ಕೂಡಿದ ಭದ್ರತಾ ಸಮಿತಿಯ ಸಭೆಯಲ್ಲಿ ಹೈದರಾಬಾದಿನ ಪ್ರಶ್ನೆಯನ್ನು ಚರ್ಚಿಸುವ ವಿಷಯದಲ್ಲಿ ಭಾರತ ಮತ್ತು ಪಾಕಿಸ್ಥಾನಗಳನ್ನು ಆಮಂತ್ರಿಸಲಾಗಿತು. ಭಾರತದ ಪ್ರತಿನಿಧಿಯಾದ ಸರ್ ಬೆನಗಲ್ ನರಸಿಂಗರಾಯರು ಭಾರತದ ನಿಲುವನ್ನು ಸ್ಪಷ್ಟಪಡಿಸುತ್ತಾ—ಹೈದರಾಬಾದಿನ ಮೇಲೆ ಕ್ರಮ ತೆಗೆದುಕೊಳ್ಳುವ ವಿಷಯವು ಅನಿವಾರ್ಯವಾಗಿದ್ದು ಅಲ್ಲಿ ಫ್ಯಾಸಿಸ್ಟ್ ಆಕ್ರಮಣವು ನಡೆದುದರಿಂದ ಭಾರತವು ಕೈಹಾಕಬೇಕಾಯಿತು. ಹೈದರಾಬಾದಿನ ಪ್ರಶ್ನೆಯು ಅಂತರಾಷ್ಟ್ರೀಯವಲ್ಲ. ಹೈದರಾಬಾದಿನ ಸಮಸ್ಯೆಯ ವಿಷಯದಲ್ಲಿ ಭಾರತ ಸರಕಾರವು ಅಂತರೀಕ ವಿಷಯವೆಂಬಂತೆ ಇತ್ಯರ್ಥವನ್ನು ಮಾಡಿದೆ. ಹೈದರಾಬಾದು ಒಂದು ರಾಜ್ಯವಲ್ಲ ಮಾತ್ರವಲ್ಲ ಅದು ಯಾವುದೇ ಒಪ್ಪಂದವನ್ನು ಮಾಡಿಕೊಳ್ಳಲು ಸಾಧ್ಯವಿಲ್ಲವೆಂದರು.

"ಭಾರತದ ಕಾರ್ಯಕ್ರಮ ಅಕ್ರಮ", ಜಫರುಲ್ಲಾರ ಹೇಳಿಕೆ.

ಭಾರತದ ಪ್ರತಿನಿಧಿಯ ಹೇಳಿಕೆಯಾದ ನಂತರ ಪಾಕಿಸ್ಥಾನದ ಪ್ರತಿನಿಧಿ ಸರ್ ಜಫರುಲ್ಲಾಖಾನರು ಮಾತನಾಡುತ್ತಾ—ಹೈದರಾಬಾದಿನ ಸಮಸ್ಯೆಯ ವಿಷಯವನ್ನು ಪರಿಶೀಲಿಸಿದ್ದಲ್ಲಿ ಭಾರತವು ಕೈಕೊಂಡ ಕಾರ್ಯಕ್ರಮವು ತೀರಾ ಅಕ್ರಮವೆಂದು ಹೇಳಬಹುದು. ಅದು ಅಂತರಾಷ್ಟ್ರೀಯ ನಿಯಮಗಳಿಗೆ ವಿರೋಧವಾಗಿದೆ. ಭಾರತವು ಸ್ವತಂತ್ರವಾದ ಮೇಲೆ ಹೈದರಾಬಾದು ಸ್ವತಂತ್ರವಾಗದಿದ್ದರೆ ಅದೇನಾಯಿತೆಂದು ಸ್ಪಷ್ಟ ತಿಳಿಯಬೇಕಾಗುವದು. ಹೈದರಾಬಾದವು ಭಾರತದಲ್ಲಿ ಸೇರ್ಪಡೆಯಾಗಲು ಇಚ್ಛಿಸದಿದ್ದಲ್ಲಿ ಅದು ಸ್ವತಂತ್ರವಾಗಬೇಕು ಎಂದು ಹೇಳಿದರು.

ಭಾರತದ ಹೇಳಿಕೆ.

ಸರ್ ನರಸಿಂಗರಾಯರು ಅದಕ್ಕೆ ಉತ್ತರ ಕೊಡುತ್ತಾ—ಭಾರತದೊಳಗಣ ಯಾವುದೇ ಸಂಸ್ಥಾನವು ಸ್ವತಂತ್ರವಾಗಿರುವುದನ್ನು ಭಾರತವು ಸಹಿಸದು. ಹಿಂದೆ ಬ್ರಿಟಿಷರೂ ಭಾರತದೊಳಗಣ ಯಾವುದೇ ಸಂಸ್ಥಾನಕ್ಕೆ ಸ್ವಾತಂತ್ರ್ಯವಿತ್ತಿಲ್ಲ. ಯಾವುದಾದರೊಂದು ಸಂಸ್ಥಾನವು ಕಾನೂ ಭಾರತದಲ್ಲಿ ಸೇರ್ಪಡೆಯಾಗುವುದೊ ಇಲ್ಲವೊ ಎಂದು ನಿರ್ಧರಿಸಬೇಕಾಗುವುದು. ಹಾಗೆ ಸೇರ್ಪಡೆಯಾದರೆ ಅದಕ್ಕೆ ಶಾಸನ ಸಭೆಯಲ್ಲಿ ಪ್ರಾತಿನಿಧ್ಯವು ದೊರಕುವುದು. ಆದರೆ ಅದರ ಪರರಾಷ್ಟ್ರ ನೀತಿಯು ಭಾರತವನ್ನು ಹೊಂದಿಕೊಂಡಿರಬೇಕು ಎಂದು ಹೇಳಿದರು.

ಸರ್ ಜಫರುಲ್ಲಾರು ಅದಕ್ಕೆ ಉತ್ತರ ಕೊಡುತ್ತಾ—ಭಾರತ ಮತ್ತು ಹೈದರಾಬಾದುಗಳ ಮಧ್ಯೆ ನಡೆದ ಮಾತುಕತೆಗಳಲ್ಲಿ ಹೈದರಾಬಾದ ಭಾರತಕ್ಕೆ ಸೇರಬೇಕೆಂಬುದನ್ನೇ ಒತ್ತಾಯಿಸಲಾಗಿತ್ತು. ಹೈದರಾಬಾದು ಭಾರತದಲ್ಲಿ ಸೇರ್ಪಡೆಯಾಗಬೇಕೆಂದು ಭಾರತವು ಒತ್ತಾಯದಿಂದ ಆರ್ಥಿಕ ದಿಗ್ಬಂಧನವನ್ನು ಹೇರಿದ. ಹೈದರಾಬಾದ ಮತ್ತು ಭಾರತಗಳ ನಡುವೆ ನಡೆದ ಒಪ್ಪಂದದ ವಿಷಯದಲ್ಲಿ ಭಾರತವು ಮೂರನೇಯ ಪಕ್ಷದ ಯಾವುದೇ ಮಧ್ಯಸ್ಥಿಕೆಗೆ ಒಪ್ಪಿಲ್ಲ ಎಂದು ಹೇಳಿದರು. ಆ ಮೇಲೆ ಭದ್ರತಾ ಸಮಿತಿಯ ಅಧ್ಯಕ್ಷರು ಜಫರುಲ್ಲಾರ ಹೇಳಿಕೆಗೆ ಎಷ್ಟು ಸಮಯ ಬೇಕಾಗಬಹುದೆಂದು ಕೇಳಿದರು. ಸರ್ ಜಫರುಲ್ಲಾರು ಒಂದೂವರೆ ಘಂಟೆಯ ಅವಧಿಯನ್ನು ಕೇಳಿದಾಗ ಹೈದರಾಬಾದ ಪ್ರಶ್ನೆಯನ್ನು ಮುಂದರಿಸಲಾಯಿತು

ಭಾರತದ ಪತ್ರ.

ಯುಕ್ತರಾಷ್ಟ್ರ ಸಂಘದಲ್ಲಿ ಭಾರತದ ಶಿಷ್ಟ ಮಂಡಳದ ಪ್ರಥಮ ಕಾರ್ಯದರ್ಶಿಗಳಾಗಿರುವ ಶ್ರೀ ಗೋಪಾಲ ಮೆನನ್ನರು ಒಂದು ಪತ್ರ ಬರೆದು ಹೈದರಾಬಾದಿನ ಪ್ರಶ್ನೆಯು ಭಾರತದ ಅಂತರೀಕ ಪ್ರಶ್ನೆಯಾಗಿರುವುದು. ಆದುದರಿಂದ ಅದನ್ನು ಭದ್ರತಾ ಮಂಡಳವು ಚರ್ಚಿಸಲಾಗುವುದಿಲ್ಲ, ಮಾತ್ರವಲ್ಲ ಪಾಕಿಸ್ಥಾನಕ್ಕೆ ಅದನ್ನು ಮುಂದೆ ತರಲು ಹಕ್ಕಿಲ್ಲವೆಂಬುದಾಗಿ ತಿಳಿಯಪಡಿಸಿರುವರು.

ನಿದ್ರೆಯ ವಿಷಯ ನಿಮಗೇನು ಗೊತ್ತಿದೆ?

ಮನುಷ್ಯನು ಸರಾಸರಿ ತನ್ನ ೫೫ ವರ್ಷದ ಜೀವಮಾನದಲ್ಲಿ ಒಟ್ಟು ೧೫ ವರ್ಷಗಳನ್ನು ನಿದ್ರೆಯಲ್ಲೇ ಕಳೆಯುತ್ತಾನೆ. ಸಾಕಷ್ಟು ನಿದ್ರೆ ಮಾಡದೆ ಎಷ್ಟೋ ಪಟಾಲಮಿಗಳು ಯುದ್ಧ ಕಳೆದುಕೊಂಡಿದ್ದಾರೆ ಮನೋಸ್ಥೈರ್ಯವಿಲ್ಲದ ರೋಗಿಗಳು ಮೊದಲು ಕಳೆದುಕೊಂಡಿದ್ದಾರೆ. ಹೆಂಡತಿಯರು ತಮ್ಮ ಗಂಡಂದಿರನ್ನೂ ಗಂಡಂದಿರು ತಮ್ಮ ಹೆಂಡತಿಯರನ್ನೂ ಕಳೆದುಕೊಂಡಿದ್ದಾರೆ

ನಿದ್ರೆಯ ವಿಷಯವಾಗಿ ಸರಿಯಾದ ತಿಳುವಳಿಕೆ ಇರಬೇಕಾದದ್ದು ಪ್ರಮುಖ್ಯವಾದರೂ ನಮ್ಮಲ್ಲಿ ಸ್ಟೋ ಜನರಿಗೆ ನಿದ್ರೆಯ ವೈಜ್ಞಾನಿಕ ಅಂಶಗಳು ಗೊತ್ತಿಲ್ಲ

ಈ ಕೆಳಗಿನ ಪ್ರಶ್ನೋತ್ತರಗಳಿಂದ ಆ ತಿಳುವಳಿಕೆಗೆ ಅನುಕೂಲವಾಗಬಹುದು:-

ಪ್ರ: ಆರೋಗ್ಯವಂತರು ನಿದ್ರೆ ಮಾಡುವಾಗ ಹೊರಳಾಡುವುದಿಲ್ಲ, ಅಲ್ಲವೆ?

ಉ: ಈ ಅಭಿಪ್ರಾಯ ಸರಿಯಲ್ಲ. ನಮ್ಮ ದೇಹದ ಮಾಂಸಖಂಡಗಳ ವ್ಯವಸ್ಥೆಯು ಯಾವ ರೀತಿ ಇದೆಯೆಂದರೆ ಎಲ್ಲಾ ಭಾಗಗಳಿಗೂ ಆರಾಮವು ಒಂದೇ ಸಾರಿ ಸಿಗುವುದಿಲ್ಲ ಆದುದರಿಂದಲೇ ನಿದ್ರೆ ಮಾಡುವವರು ಅಕ್ಕಪಕ್ಕಕ್ಕೆ ಹೊರಳುವುದೂ ತಮ್ಮ ಶರೀರದ ಚಲನೆಯನ್ನು ಬದಲಾಯಿಸುವುದೂ ಆಗಿದೆ ಆರೋಗ್ಯವಂತರ ವಿಷಯದಲ್ಲಿ ಅಂದಾಜು ಮಾಡಿ ನೋಡಿದುದರಿಂದ ನಿದ್ರೆ ಮಾಡುವವರು ಒಂದು ರಾತ್ರಿಗೆ ೩೫ ತರಹ ತಮ್ಮ ಭಂಗಿಯನ್ನು ಬದಲಾಯಿಸುತ್ತಾರೆ ಎಂದು ವ್ಯಕ್ತಪಟ್ಟಿದೆ

ಪ್ರ: ಅತ್ಯಂತ ಗಾಢವಾದ ನಿದ್ರೆಯು ನಿದ್ರೆಯ ಪ್ರಥಮ ಭಾಗದಲ್ಲಿ ಬರುತ್ತದೋ ಅಥವಾ ನಿದ್ರೆಯ ಕೊನೆಯ ಭಾಗದಲ್ಲೋ?

ಉ: ಮೊದಲನೆಯ ಭಾಗದಲ್ಲಿ ಎಂಬುದು ದಿಟ ಅಮೇರಿಕದ ಕಾರ್ನೆಗಿ ವಿಶ್ವವಿದ್ಯಾಲಯದಲ್ಲಿ ನಡೆಸಿರುವ ಪರಿಶೋಧನೆಯಿಂದ ವ್ಯಕ್ತಪಟ್ಟಿರುವುದೇನೆಂದರೆ, ನಿದ್ರೆಯ ಆರಂಭದ ಕೆಲವು ಗಂಟೆಗಳಲ್ಲೇ ನಿದ್ರೆಯ ವಿಶೇಷ ಅನುಕೂಲಗಳೂ ಹಿತವೂ ಉಂಟಾಗುವುವು

ಪ್ರ: ದಿನವೂ ೮ ಗಂಟೆ ಕಾಲ ನಿದ್ರೆ ಮಾಡುವವನು ಒಂದು ದಿನ ೬ ಗಂಟೆ ಕಾಲ ಮಾತ್ರ ನಿದ್ರೆ ಮಾಡಿದರೆ, ಮಾರನೆಯ ದಿನ ನಿತ್ಯದ ಕೆಲಸ ಮಾಡಲು ಹೆಚ್ಚಿನ ಶಕ್ತಿ, ಶ್ರಮವಹಿಸಬೇಕಾಗುತ್ತದೆ ನಿಜವೇ?

ಉ: ಹೌದು ನಾವು ಕಳೆದುಕೊಂಡ ನಿದ್ರೆಗಾಗಿ ನಮ್ಮ ಶಕ್ತಿಯ ಶೇ ೩೫ರಷ್ಟು ಭಾಗವನ್ನು ಈಡುಮಾಡಬೇಕಾಗುವುದೆಂದು ಸಂಶೋಧನೆಗಳಿಂದ ವ್ಯಕ್ತಪಟ್ಟಿದೆ

ಪ್ರ: ಒಂದು ರಾತ್ರಿ ಕಳೆದುಕೊಂಡ ನಿದ್ರೆಗೆ ಪರಿಹಾರವಾಗಿ ಮಾರನೆಯ ಅನೇಕ ರಾತ್ರಿಗಳ ಕಾಲ ಸ್ವಲ್ಪ ಹೆಚ್ಚು ಕಾಲ ನಿದ್ರೆ ಮಾಡಿದರೆ ಸರಿಹೋಗುವುದು ತಾನೇ?

ಉ: ಹಾಗೆಂದವರು ಯಾರು? ಅದು ನಿಜವಲ್ಲ ಮಾರನೆಯ ದಿನ ಸಾಧಾರಣವಾದ ಸುಖನಿದ್ರೆ ಮಾಡಿದರೆ ಹಿಂದಿನ ದಿನದ ನಿದ್ರೆಗೇಡಿನ ಆಯಾಸವೆಲ್ಲಾ ಹೋಗುವುದು.

ಪ್ರ: ನಾವು ನಿದ್ರೆಮಾಡುವ ಕೋಣೆಯಲ್ಲಿಯೇ ಮತ್ತಾರಾದರೂ ಮಲಗಿದ್ದರೆ ನಮಗೆ ಸರಿಯಾದಂತಹ ನಿದ್ರೆ ಬರುವುದಿಲ್ಲ ಅಲ್ಲವೆ?

ಉ: ಅದೇನೋ ಸರಿ ಯಾಕೆಂದರೆ ನಮ್ಮ ಕೋಣೆಯಲ್ಲೇ ಮಲಗಿರುವ ಮತ್ತೊಬ್ಬ ವ್ಯಕ್ತಿಯ ಸಣ್ಣಪುಟ್ಟ ಭಂಗಿಗಳೂ ಚಲನೆಗಳೂ ನಮ್ಮನ್ನು ಎಚ್ಚರಿಸಿ ಸುಖವಾದ ಗಾಢ ನಿದ್ರೆ ಮಾಡಲು ಅಡಚಣೆಯಾಗುತ್ತದೆ

ಪ್ರ: ಕಡಿಮೆ ನಿದ್ರೆ ಮಾಡುವ ಮನುಷ್ಯರು ತುಂಬಾ ಶಕ್ತಿವಂತರೂ ಬುದ್ಧಿವಂತರೂ ಆಗಿರುವರೆಂದು ಹೇಳುತ್ತಾರಲ್ಲಾ?

ಉ: ಅದನ್ನು ನಂಬಬೇಡಿ ನೆಪೋಲಿಯನ್, ಎಡಿಸನ್ ಮುಂತಾದವರು ರಾತ್ರಿಯ ಹೊತ್ತು ಕಡಿಮೆ ಕಾಲ ನಿದ್ರೆ ಮಾಡುತ್ತಿದ್ದರೆಂಬುದೇನೋ ನಿಜ ಆದರೆ ಅವರು ಹಗಲಿನಲ್ಲಿ ಬೇಕಾದಾಗ ನಿದ್ರೆ ಮಾಡುತ್ತಿದ್ದರು ದಿನದ ಒಟ್ಟು ೨೪ ಗಂಟೆ ಕಾಲದಲ್ಲಿ ಅವರು ಸಾಧಾರಣವಾಗಿ ಒಬ್ಬ ಮನುಷ್ಯನು ನಿದ್ರೆ ಮಾಡಬೇಕಾದಷ್ಟು ಕಾಲ ನಿದ್ರಿಸುತ್ತಲೇ ಇದ್ದರು

ಪ್ರ: ಊಟ ನಿದ್ರೆಗಳಿಂದಲೇ ಪ್ರಬಲ ಕಾಯಿಲೆಗಳು ಬರಬಹುದೇನು?

ಉ: ಹೌದು, ಪ್ರಾಣಿಗಳು ಆಹಾರ ಇಲ್ಲದೆ ಸಾಯುವುದಕ್ಕಿಂತಲೂ ಹೆಚ್ಚಾಗಿ ನಿದ್ರೆ ಇಲ್ಲದೆ ಸಾಯುವುದು ದೃಢಪಟ್ಟಿದೆ

ಪ್ರ: ನಮಗೆ ಚೆನ್ನಾಗಿ ನಿದ್ರೆ ಬರುವುದೂ ಎಚ್ಚರಿಕೆಯಾಗುವುದೂ ಒಂದೇ ಅರ್ಧ ಕ್ಷಣದಲ್ಲಿಯೆ?

ಉ: ಅದು ಸರಿಯಲ್ಲ ನಮಗೆ ಅರ್ಧಂಬರ್ಧ ನಿದ್ರೆ ಬಂದಿರುವಾಗ ನಮಗೆ ಶಬ್ದಗಳಷ್ಟು ಕೇಳುವವು, ಆದರೆ ಮಾತನಾಡಲು ಸಾಧ್ಯವಿಲ್ಲದಂತಹ ಸ್ಥಿತಿಯೊಂದನ್ನು ಅನುಭವಿಸುತ್ತೇವೆ ಆಗ ನಮಗೆ ಚಲಿಸಲೂ ಸಾಧ್ಯವಿರುವುದಿಲ್ಲ ನಿದ್ರೆಯ ಮೊದಲಲ್ಲೂ ಕೊನೆಯಲ್ಲೂ ಇಂತಹ ಸ್ಥಿತಿ ಅನುಭವಿಸುತ್ತೇವೆ

ಪ್ರ: ಎಡಗಡೆ ಪಕ್ಕಕ್ಕೆ ಮಲಗಿಕೊಂಡರೆ ಹೃದಯಕ್ಕೆ ಅಪಾಯ ಉಂಟೇನು?

ಉ: ಹಾಗೇನೂ ಇಲ್ಲ. ಸಾಧಾರಣ ಮನುಷ್ಯನು ಯಾವ ಪಕ್ಕಕ್ಕೆ ತಿರುಗಿ ಮಲಗಿದರೂ ಒಂದೆ, ಅಂಗಾತನಾಗಿ ಮಲಗಿದರೂ ಒಂದೇ

ಪ್ರ: ಮಲಗುವ ಮುನ್ನ ಬಿಸಿಯಾದ ಪಾನೀಯಗಳನ್ನು ಕುಡಿದರೆ ಒಳ್ಳೆಯ ನಿದ್ರೆ ಬರುವುದು ಅಲ್ಲವೆ?

ಉ: ಅದು ಸರಿಯಲ್ಲ. ಇತ್ತೀಚೆಗೆ ಕೋಲಂಬಿಯ ಯೂನಿವರ್ಸಿಟಿಯಲ್ಲಿ ಈ ಪಾನೀಯಗಳ ಒತ್ತಡವಿರುವುದರಿಂದ ಚೆನ್ನಾಗಿ ನಿದ್ರೆ ಬರುವುದಿಲ್ಲ ರಾತ್ರಿಯನ್ನು ಸುಖವಾಗಿ ಕಳೆಯಬೇಕಾದರೆ ಸಂಜೆಯ ಹೊತ್ತು ಪಾನೀಯಗಳನ್ನು ತೆಗೆದುಕೊಳ್ಳಬೇಕಾದರೂ ಮಿತಿಯಿಂದಿರುವುದು ಒಳ್ಳೆಯದು.

ಪ್ರ: ದೇಹದ ಆಯಾಸದಿಂದ ನಿದ್ರೆ ಬರುವುದು ಕಷ್ಟವಲ್ಲವೆ?

ಉ: ಹಾಗೆ ಮಿತಿಮೀರಿ ಆಯಾಸವಾಗಿದ್ದರೆ ಮಲಗುವ ಮೊದಲು ಬಿಸಿನೀರಿನ ಸ್ನಾನ ಮಾಡಿ ಮಲಗಿದರೆ ಆ ಆಯಾಸದ ಶ್ರಮ ಕೊಂಚ ಕಮ್ಮಿಯಾಗುವುದು.

ಪ್ರ: ತುಂಬಾ ಸುಖವಾಗಿ ನಿದ್ರೆ ಮಾಡಬೇಕೆಂದರೆ ಮಲಗುವ ಹಾಸಿಗೆಯೂ ಸ್ಪ್ರಿಂಗುಗಳೂ ಸಾಧಾರಣ ರೀತಿಯಲ್ಲಿ ಮೃದುವಾಗಿರಬೇಕೆನ್ನುತ್ತಾರಲ್ಲಾ?

ಉ: ಹೌದು ತುಂಬಾ ಮೃದುವಾದ ಹಾಸಿಗೆಯ ಸುಖವಾದ ನಿದ್ರೆಯ ಶತ್ರು ತುಂಬಾ ಒರಟಾದ ಹಾಸಿಗೆಯೂ ಅಷ್ಟೇ ಕೆಟ್ಟದು

ಪ್ರ: ಉಪಹಾರಾನಂತರ ಸಣ್ಣ ನಿದ್ರೆಯೊಂದನ್ನು ಮಾಡುವುದು ಸೋಮಾರಿತನ ಇದರಿಂದ ಚಟುವಟಿಕೆ ಕಮ್ಮಿಯಾಗುವುದಂತೆ ಹೌದೇ?

ಉ: ವಿಸ್ಕಾನ್ಸಿನ್ ಸ್ಟೇಟ್ ಕಾಲೇಜಿನಲ್ಲಿ ಈ ಬಗ್ಗೆ ಪರಿಶೋಧನೆ ನಡೆಸಲಾಯಿತು ಅಲ್ಲಿ ವಿದ್ಯಾರ್ಥಿಗಳು ಉಪಹಾರಾನಂತರ ಒಂದು ಗಂಟೆ ನಿದ್ರೆ ಮಾಡುವುದರಿಂದ ಅವರು ಆ ಹೊತ್ತನ್ನು ವ್ಯಾಸಂಗದಲ್ಲಿ ಕಳೆಯುತ್ತಿದ್ದುದಕ್ಕಿಂತಲೂ ಹೆಚ್ಚಿನ ಪ್ರಾಧಿಮೆಯನ್ನು ತೋರಿಸಿದ್ದಾರೆ

"ತಾಯಿನಾಡು"

ಬೇಕಾಗಿದ್ದಾರೆ.

ಭೂಮಿ ಸಾಗುವಳಿ ಕೆಲಸಗೊತ್ತಿರುವ 30 ವಯಸ್ಸಿಗೆ ಮೀರದ ಕುಟುಂಬಸ್ಥನಲ್ಲದ ಚಟುವಟಿಕೆ ಇರುವ ಒಬ್ಬಾತನು ಈ ಕೆಳಗಿನ ವಿಳಾಸದವರಲ್ಲಿ ಭೂಮಿ ಕೆಲಸದ ಮೇಲ್ವಿಚಾರಣೆ ನೋಡಲು ಬೇಕಾಗಿದೆ ಕನ್ನಡ ಬರಹ ಗೊತ್ತಿರಬೇಕು

ಕೆ ಜಿ. ಬೋಪಯ್ಯ,
'ಆರೆಂಜ್ ಗ್ರೋವ್' ತೋಟ,
ಪೊಳ್ಳಿಬೆಟ್ಟ.

CRESCENT

FOR PROTECTION AND SERVICE.

It is best to represent and insure with

The CRESCENT Insurance Co., Ltd,

H. O: BOMBAY.] [Established 1919.

For particulars write to:

Sri B. A Poovaiah	or	The Branch Manager,
Organiser		*22 B Mahatma Gandhi Road,*
Pollibetta, Coorg.		*Bangalore 1*

ಸುರಕ್ಷಿತವಾದ ಜೀವವಿಮೆ ಪಡೆಯಲು

ಕ್ರೆಸೆಂಟ್

ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.

ವಿಮೆ ಮಾಡಲು ಇಲ್ಲವೇ ಪ್ರತಿನಿಧಿಸಲು

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.

ಇವರ ಗಳಿಕೆಗಿಂತ ಉತ್ತಮ ಮಾರ್ಗವಿಲ್ಲ

ಇವರು ದಕ್ಷಿಣ ಹಿಂದೂಸ್ಥಾನದ ಮದ್ರಾಸ್ ಬ್ರಾಂಚಿನ ಏಜೆಂಟರು

ದಿ ಬೊಂಬಾಯಿ ಲೈಫ್ ಅಶ್ಶೂರೆನ್ಸ್ ಕಂ. ಲಿಮಿಟೆಡ್.

90 ಮೌಂಟ್ ರೋಡ್,	ಬೊಂಬಾಯಿ ಲೈಫ್ ಬಿಲ್ಡಿಂಗ್,
ಪೋ ಬಾ ನಂ. 337,	ಪೋ ಬಾ ನಂ 1,
ಮದ್ರಾಸು 2	ಉಡುಪಿ.

(ಟೆಲಿಫೋನ್ ನಂ- 8398)

ಇತರ ಆಫೀಸುಗಳು:—ಬೆಂಗಳೂರು, ತಿರುವನಂತಪುರಂ, ಕಲ್ಲಿಕೋಟೆ, ಮಂಗಳೂರು, ಮಧುರೆ, ಮತ್ತು ಬೊಂಬಾಯಿ

॥ ಪತ್ರವ್ಯವಹಾರಗಳು ॥

ಮಡಿಕೇರಿ ಮುನ್ಸಿಪಾಲಿಟಿ.

ಮುನ್ಸಿಪಾಲಿಟಿಗಳ ಮುಖ್ಯ ಕರ್ತವ್ಯ ದೀಪ, ನೀರು ಮತ್ತು ಕನ್‌ಸರ್ವೆನ್ಸಿಗೆ ನಿಗಕೊಡುವದು. ದೀಪದ ವ್ಯವಸ್ಥೆ ಎಷ್ಟರ ಮಟ್ಟಿಗೆ ಕುಲಗೆಟ್ಟಿದೆ ಎಂಬುದು ಹೇಳಬೇಕಾಗಿಲ್ಲ. ನೀರಿನ ಬಗ್ಗೆ ಕೆಲವು ಮಟ್ಟಿಗೆ ಅಧಿಕಾರಿಗಳು ತೊಂದರೆ ತೆಗೆದುಕೊಂಡರೂ ನೀರಿನ ಕೆರೆ ಕಾಮಗಾರಿ ಸಮರ್ಪಕವಾಗದೆ ನೀರಿನ ಅಭಾವ ತಪ್ಪಿರುವದಿಲ್ಲ.

ಕನ್‌ಸರ್ವೆನ್ಸಿ ವಿಷಯದಲ್ಲಿ ಮಾತ್ರ ಮುನ್ಸಿಪಲ್ ಅಧಿಕಾರಿಗಳು ನ್ಯಾಯವಾದ ಏರ್ಪಾಡು ಮಾಡದೆ ಇರುವದು ಬಹು ಶೋಚನೀಯ. ಖಾಸಗಿ ಪೇಟೆಗಳು ಸಿಕ್ಕಿ ಸಿಕ್ಕಿದ ಜಲಾಶಯಗಳಲ್ಲೂ, ಹಿತ್ತಲು ಜಾಗಗಳಲ್ಲೂ ಅಮೇಧ್ಯವನ್ನು ತೇಲಬಿಡುವದು ರೂಢಿಯಲ್ಲಿರುತ್ತೆ. ಇದು ಅಧಿಕಾರಿಗಳ ಅವಗಾಹನೆಗೆ ಬಂದಿರುವದಿಲ್ಲವೇ? ಇದರಿಂದ ನೀರು ಕುಲಗೆಡುವದಲ್ಲದೆ ಅದೇ ನೀರಿನ ಉಪಯೋಗದಿಂದ ಉಂಟಾಗುವ ಅನರ್ಥಗಳು ಎಷ್ಟೆಂಬುದು ಗೋಚರವಾಗುವದಿಲ್ಲವೇ? ಆರೋಗ್ಯ ಇಲಾಖೆಯವರು ಮತ್ತು ಮುನ್ಸಿಪಾಲಿಟಿ ಅಧಿಕಾರಿಗಳು ಈ ವಿಷಯದಲ್ಲಿ ಕೂಡ್ಲೆ ಸುವ್ಯವಸ್ಥೆ ಮಾಡುವರಾಗಿ ನಂಬಿರುತ್ತೇನೆ. ಮುನ್ಸಿಪಾಲಿಟಿಯ ಕರ್ತವ್ಯವನ್ನು ಖಾಸಗಿ ತೋಟಗಳ ದುರಾಚಾರಕ್ಕೆ ಒಳಗು ಮಾಡುವದು ಸರ್ವಥಾ ನ್ಯಾಯವಲ್ಲ.

'ಪುರನಿವಾಸಿ'

ನಿಯೋಗ ಗೋಷ್ಠಿ.

ತಾರೀಕು ೧೮-೫-೪೯ರಲ್ಲಿ ವೀರಾಜಪೇಟೆಯಲ್ಲಿ ಸಾರ್ವಜನಿಕ ಸಭೆಯೊಂದು ಶ್ರೀ ನೆಲ್ಲಮಕ್ಕಳ ಅಚ್ಚಯ್ಯನವರ ಅಧ್ಯಕ್ಷತೆಯಲ್ಲಿ ನಡೆದು ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಸ್ಥಳ ಒದಗಿಸುವ ಬಗ್ಗೆ ಚೀಫ್ ಕಮಿಷನರನ್ನು ಕಂಡು ಮಾತಾಡಲು ನೇಮಕವಾದ ಶ್ರೀಗಳಾದ ನೆಲ್ಲಮಕ್ಕಳ ಅಚ್ಚಯ್ಯ, ಕಾಳೇಂಗಡ ಚಿಣ್ಣಪ್ಪ, ಪಂದ್ಯಂಡ ಬೆಳ್ಯಪ್ಪ, ಮುರುವಂಡ ಮಾಚಯ್ಯ ಮತ್ತು ಮಾತಂಡ ಚಂಗಪ್ಪನವರುಗಳ ಪೈಕಿ ಶ್ರೀಗಳಾದ ಪಿ. ಐ. ಬೆಳ್ಯಪ್ಪ, ಕಾಳೇಂಗಡ ಚಿಣ್ಣಪ್ಪ, ನೆಲ್ಲಮಕ್ಕಡ ಅಚ್ಚಯ್ಯನವರುಗಳು, ಶ್ರೀಗಳಾದ ಕಾಕಮಾಡ ಗಣಪತಿ, ಅಬ್ದುಲ್ ಮಕ್ಸೂದ್ ಖಾನರನ್ನು ಕೂಡಿಕೊಂಡು ತಾ. ೨೫-೫-೪೯ರಲ್ಲಿ ಚೀಫ್ ಕಮಿಷನರನ್ನು ಕಂಡು ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಸ್ಥಳ ಒದಗಿಸುವ ಬಗ್ಗೆ ಮಾತಾಡಿದರೆಂದೂ, ಚೀಫ್ ಕಮಿಷನರು—ಜಿಲ್ಲಾ ವಿದ್ಯಾಧಿಕಾರಿಗಳು ಮಡಿಕೇರಿಯಲ್ಲಿಲ್ಲವೆಂದೂ ಅವರು ಬಂದೊಡನೆ ಅವರೊಡನೆ ವಿಚಾರ ಮಾಡಿ ವಿದ್ಯಾರ್ಥಿಗಳಿಗೆ ಸಾಕಷ್ಟು ಅನುಕೂಲತೆ ಮಾಡುವದಾಗಿಯೂ ತಾ. ೩ರಲ್ಲಿ ಪುನಹ ಅವರನ್ನು ಈ ವಿಚಾರ ಕಾಣಬೇಕೆಂದು ಹೇಳಿದರೆಂದೂ ತಿಳಿಯಬಂದಿದೆ.'

K. A. C.

ಕೊಡಗಿನ ವಿದ್ಯಾವ್ಯವಸ್ಥೆ.

ಕೊಡಗಿನಲ್ಲಿ ವಿದ್ಯೆಯು ಮುಂದುವರಿಯಬೇಕಿರುವಷ್ಟು ಮುಂದುವರಿದಿಲ್ಲ. ನೂರಕ್ಕೆ ೨೦ ರಂತೆಯೂ ಜನರು ವಿದ್ಯಾವಂತರಲ್ಲ. ಉಳಿದ ೮೦ ಜನರೆಲ್ಲರನ್ನೂ ವಿದ್ಯಾವಂತರನ್ನಾಗಿ ಮಾಡುವದು ಸರಕಾರದ ಕರ್ತವ್ಯ. ಈ ದೃಷ್ಟಿಯಿಂದ ಕೈಕೊಂಡ ವಯಸ್ಕರ ಶಿಕ್ಷಣವು ಇನ್ನು ಒಂದು ನಿರ್ದಿಷ್ಟ ರೂಪುಗೊಳ್ಳಬೇಕಾಗಿದೆ. ಸರಕಾರವು ಇದರ ಸರ್ವ ಜವಾಬ್ದಾರಿ ವಹಿಸಿ ಕಾರ್ಯಪ್ರವರ್ತವಾಗದಿದ್ದರೆ ಎಷ್ಟೇ ಸಾರ್ವಜನಿಕ ಪ್ರಯತ್ನದಿಂದ ಇದಾ ಕೈಗೂಡದು. ವಯಸ್ಕರ ಶಿಕ್ಷಣ ಯೋಜನೆಯು ಕಾರ್ಯರೂಪಕ್ಕೆ ಬರುವ ಮೊದಲು ಅತೀ ತುರಿತದ ಮತ್ತೊಂದು ಪ್ರಶ್ನೆ ಮುಂದೆ ನಿಂತಿದೆ. ಈ ವರ್ಷದ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ಸುಮಾರು ೮೦೦ ವಿದ್ಯಾರ್ಥಿಗಳ ವರೆಗೆ ತೇರ್ಗಡೆಯಾಗಿದ್ದಾರೆ. ಪ್ರತಿ ಹೈಸ್ಕೂಲಿನ ೯ನೇ ತರಗತಿಯಲ್ಲಿ ಎ. ಬಿ. ಸೆಕ್ಷನುಗಳಿದ್ದರೂ ಈ ವಿದ್ಯಾರ್ಥಿಗಳೆಲ್ಲರಿಗೆ ಸ್ಥಳ ಕೊಡುವದು ಸಾಧ್ಯವಾಗದು. ಪೊನ್ನಂಪೇಟೆ, ವೀರಾಜಪೇಟೆ, ನಾಪೋಕ್ಲು ಹೈಸ್ಕೂಲುಗಳಲ್ಲಿ ಈ ನುಗ್ಗಾಟ ಅತೀ ಹೆಚ್ಚಾಗಿದೆ. ಶಾಲಾ ಅಧ್ಯಾಪಕರು ಕಾಲೇಜಿಗೆ ಪ್ರವೇಶಕ್ಕೆ ಏರ್ಪಡಿಸಿರುವಂತೆ ವಿದ್ಯಾರ್ಥಿಗಳ ವಯಸ್ಸು, ಅತನು ಪಡೆದ ಮಾರ್ಕುಗಳ ತಳಹದಿಯಿಂದ ಮಕ್ಕಳನ್ನು ಸೇರಿಸಿಕೊಳ್ಳತೊಡಗಿದ್ದಾರೆ. ಈಗಿರುವ ಏರ್ಪಾಡಿನಂತೆ ನೂರಾರು ವಿದ್ಯಾರ್ಥಿಗಳಿಗೆ ವಿದ್ಯೆಯನ್ನು ಮುಂದರಿಸುವ ಭಾಗ್ಯವಿಲ್ಲದಾಗಬಹುದು. ಮಕ್ಕಳ ಪೋಷಕರು ಈ ವಿಚಾರದಲ್ಲಿ ಕಳವಳಗೊಂಡಿದ್ದಾರೆ ಮೀಟಿಂಗು ನಡೆಸಿ ಚೀಫ್ ಕಮಿಷನರ ವರೆಗೆ ಡೆಪ್ಯುಟೇಶನೂ ಹೋಗಿದ್ದಾರೆ ಸ್ಥಳೀಯ ಸರಕಾರವು ಈ ವಿಚಾರದಲ್ಲಿ ನಿದ್ರೆಮಾಡದೆ ಶೀಘ್ರ ಅವಶ್ಯವಿರುವ ಹೈಸ್ಕೂಲುಗಳಲ್ಲಿ ಹೆಚ್ಚಿನ ಸೆಕ್ಷನುಗಳನ್ನು ತೆರೆದು ಬಡ ವಿದ್ಯಾರ್ಥಿಗಳ ವಿದ್ಯಾರ್ಜನೆಗೆ ಅನುಮಾಡಬೇಕಾಗಿದೆ.

ಬಿ. ಕುಶಾಲಪ್ಪ.

ಬಹುಮಾನ.

ನನ್ನ ಬಾಪ್ತು ಈ ಕೆಳಗಿನ ವಿವರದ ಒಂದು ಹಸು ತಾರೀಕು 25-4-49 ರಿಂದ ಪರಾರಿಯಾಗಿದೆ, ಪತ್ತೆ ಹಚ್ಚಿ ಕೊಟ್ಟವರಿಗೆ ಏಳು ರೂಪಾಯಿಗಳ ಬಹುಮಾನ ಕೊಡಲಾಗುವದು.

ಚಿಹರೆ:– ಕಪ್ಪು ಮತ್ತು ಬಿಳಿಬಣ್ಣದಿಂದ ಕೂಡಿದ ಉದ್ದ ಕೋಡಿನ ಸುಮಾರು ಐದು ಅಡಿ ಎತ್ತರದ ಪ್ರಾಯದ ಹಸು.

ತೀತಿರ ಬಿ. ಕಾಳಪ್ಪ,
ಮಂಚಳ್ಳಿಗ್ರಾಮ,
ಕುಟ್ಟ.

ಕೊಡಗು ಹೆಗ್ಗಡೆಯರ ವಿದ್ಯಾನಿಧಿ.

ತಾರೀಕು 2—5—49ರಲ್ಲು ಕೊಡಗು ಹೆಗ್ಗಡೆಯವರ ವಾರ್ಷಿಕ ಮಹಾ ಸಭೆಯು ಮೀಟಿಂಗನ್ನು ಬ್ರಿಗೇಡಿಯರ್ ಸಿ. ಬಿ. ಪೊನ್ನಪ್ಪನವರ ಅಧ್ಯಕ್ಷತೆಯಲ್ಲು ವೀರಾಜಪೇಟೆ ಮುನ್ಸಿಪಲ್ ಹಾಲಿನಲ್ಲು ನಡೆಸಲಾಗಿ ಆ ದಿನ ವಿದ್ಯಾನಿಧಿ ಫಂಡಿಗೆ ಉಪಕಾರ್ಥ ಧನಸಹಾಯ ಮಾಡಿದವರ ಹೆಸರುಗಳನ್ನು ಈ ಕೆಳಗೆ ಕೊಡಲಾಗಿದೆ.

ಬ್ರಿಗೇಡಿಯರ್ ಸಿ. ಬಿ. ಪೊನ್ನಪ್ಪ	50	0	0
ಶ್ರೀ ಕೋದಂಡ ಕಂಚಪ್ಪ	50	0	0
,, ಪಂದಿಕಂಡ ಬೊಳ್ಳಯ್ಯ	20	0	0
,, ಚರಿಯಪಂಡ ಕುಶಾಲಪ್ಪ	10	0	0
,, ತೋರೆರ ಕುಶಾಲಪ್ಪ	10	0	0
,, ಕೋರಂಡ ಅಪ್ಪಣ್ಣ	10	0	0
ಹತ್ತು ರೂಪಾಯಿಗೆ ಕಡಿಮೆಯಾಗಿ ಕೊಟ್ಟವರಿಂದ	145	0	0
ಒಟ್ಟು ಜುಮ್ಲಾ	295	0	0

ನೈತಾಡಿ ಶಾಲಾ ಅಭಿವೃದ್ಧಿ ನಿಧಿ.

ಈ ಶಾಲೆಗಾಗಿ ಉದಾರ ಧನ ಸಹಾಯ ಮಾಡಿದ ಐಚೆಟ್ಟಿರ ಕುಟುಂಬದವರ ಹೆಸರನ್ನು ಕೊಡಲಾಗಿದೆ. ಇತರರೂ ಧನ ಸಹಾಯ ಮಾಡುವರಾಗಿ ಆಶಿಸಲಾಗಿದೆ.

ಶ್ರೀ ಐಚೆಟ್ಟಿರ ಪೊನ್ನಪ್ಪನವರು ರೂ.	೨೫	೦	೦
,, ಕುಶಾಲಪ್ಪನವರು	೨೫	೦	೦
,, ಬೋಪಯ್ಯನವರು	೨೦	೦	೦
,, ಪೂವಯ್ಯನವರು	೨೦	೦	೦
,, ಉತ್ತಯ್ಯನವರು	೨೦	೦	೦
,, ಮುದ್ದಪ್ಪನವರು	೧೫	೦	೦
,, ಸೋಮಯ್ಯನವರು	೧೫	೦	೦
,, ಚಿಂಣಪ್ಪನವರು	೧೦	೦	೦
,, ಮಂದಪ್ಪನವರು	೧೦	೦	೦
ಹತ್ತು ರೂಪಾಯಿಗೆ ಒಳಪಟ್ಟು	೪೫	೦	೦
ಒಟ್ಟು ಜುಮ್ಲಾ	೨೦೫	೦	೦

ಐ. ಕೆ. ಚಂಗಪ್ಪ,
ಪ್ರೆಸಿಡೆಂಟ್.

ಮೈಸೂರು ಭವಿಷ್ಯ.

ಭಾರತ ಗೌರ್ನರ್ ಜನರಲ್ ಶ್ರೀ ಸಿ. ರಾಜಗೋಪಾಲ ಚಾರಿಯವರು ವಿಶ್ರಾಂತಿಗೆಂದು ಕಳೆದವಾರ ಬೆಂಗಳೂರಿಗೆ ಆಗಮಿಸಿರುವುದರ ಜೊತೆಗೆ ಸಂಸ್ಥಾನ ಶಾಖೆಯ ಸಲಹೆಗಾರರಾದ ಶ್ರೀ ವಿ. ಪಿ. ಮೆನನ್ ಮತ್ತು ಕೇಂದ್ರ ಆರ್ಥಿಕ ಪರಿಶೀಲನಾ ಸಮಿತಿ ಸದಸ್ಯರಾದ ಶ್ರೀ ಜಿ. ಸ್ವಾಮಿನಾಥನ್‌ರವರು ಇಲ್ಲಿಗೆ ಭೇಟಿಕೊಟ್ಟದ್ದು ಮೈಸೂರಿನ ರಾಜಕೀಯ ಭವಿಷ್ಯದ ಬಗ್ಗೆ ಊಹಾ ಪೋಹಗಳಿಗೆಡೆ ಕೊಟ್ಟಿದೆ.

ಅಲ್ಲದೆ ಮೇ ೧೮ನೇ ತಾರೀಖಿನಲ್ಲಿ ಮೈಸೂರರಸರು ಬೆಂಗಳೂರಿನಲ್ಲಿ ರಾಜಾಜಿಯನ್ನು ಭೇಟಿಮಾಡಿದ್ದು ಮತ್ತು ೨ ದಿನಗಳನಂತರ ಶ್ರೀ ವಿ. ಪಿ. ಮೆನನ್‌ರವರು ಮೈಸೂರಿನಲ್ಲಿ ರಾಜರೊಡನೆ ಮಾತು ನಡೆಸಿದ್ದು ಈ ಊಹೆಗಳಿಗೆ ಬಲಕೊಟ್ಟಿವೆ.

ಹಣಕಾಸು ಆಡಳಿತ ವ್ಯವಸ್ಥೆ ಮತ್ತು ಶಾಸನಾಂಗ ವಿಚಾರಗಳಿಗೆ ಸಂಬಂಧಿಸಿದ್ದಂತೆ ಹೊಸ ಕರಾರು ಪತ್ರ ರಚಿತವಾಗಿದೆಯೆಂದೂ ಅದಕ್ಕೆ ಸಹಿ ಹಾಕಲು ಶ್ರೀ ಮನ್ಮಹಾರಾಜರು ಒಪ್ಪಿಗೆಯಿತ್ತಿರುವರೆಂದೂ ರಾಜಕೀಯ ವಲಯಗಳಲ್ಲಿ ತಿಳಿಯಬಂದಿದೆ. ಈ ವರದಿ ನಿಜವಾದಲ್ಲಿ ಸಂಸ್ಥಾನದ ಆರ್ಥಿಕ, ರೈಲ್ವೆ, ಮಿಲಿಟರಿ, ಆದಾಯ ತೆರಿಗೆ ಮತ್ತು ಟೆಲಿಫೋನ್ ಶಾಖೆಗಳು ಕೇಂದ್ರ ಸರಕಾರದ ಆಡಳಿತ ವ್ಯವಸ್ಥೆಯೊಡನೆ ಒಟ್ಟುಗೂಡುವ ಸಂಭವವಿದೆ.

ಕೇಂದ್ರ ಸರಕಾರಕ್ಕೆ ೨೫ ಮಂತ್ರಿಗಳು.

ಕೇಂದ್ರ ಸರಕಾರದ ಖಚೇರಿಯನ್ನು ಪುನರ್‌ವ್ಯವಸ್ಥೆಗೊಳಿಸುವ ಬಗ್ಗೆ ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರರು ಒಂದು ವರದಿಯನ್ನು ಸಿದ್ಧಮಾಡಿದ್ದು ಅದರಲ್ಲಿ ಕೇಂದ್ರ ಸರಕಾರಕ್ಕೆ ೨೫ ಮಂತ್ರಿಗಳಿರುವ ಮಂತ್ರಿ ಮಂಡಳವು ರಚಿಸಲ್ಪಡಬೇಕೆಂಬ ಸೂಚನೆಯನ್ನು ಇತ್ತಿರುವರಲ್ಲದೆ ಸರಕಾರಕ್ಕೆ ಪ್ರಾಮುಖ್ಯ ಕಾರ್ಯದರ್ಶಿಗಳು ಅವರಿಗೆ ತಕ್ಕಂತೆ ಹೆಚ್ಚಿನ ನೇಮಕವಾಗಬೇಕೆಂದು ಹೇಳಿರುತ್ತಾರೆ.

ಅವರ ವರದಿಯಲ್ಲಿ ಕೇಂದ್ರ ಸರಕಾರದ ಖಾತೆಗಳಲ್ಲಿನ ನೌಕರರಿಗೆ ತರಬೇತಿಯೂಗುವ ಯೋಜನೆ ಮೇಲ್ದರಗತಿಯ ಅಧಿಕಾರಿಗಳನ್ನು ಆರಿಸುವದು ಮತ್ತು ಸರಕಾರದ ಖಾತೆಗಳಲ್ಲಿ ನೆಲೆನಿಂತಿರುವ ವಿಳಂಬಕಾರಕ ಧೋರಣೆಯನ್ನು ನಿರ್ನಾಮ ಮಾಡುವದೇ ಮೊದಲಾಗಿ ಸೂಚನೆಗಳಿವೆ. ಆದರೆ ಶ್ರೀ ಗೋಪಾಲಸ್ವಾಮಿ ಅಯ್ಯಂಗಾರರ ಸೂಚನೆಗಳು ಹಿಂದೆ ಮಿತವ್ಯಯದ ಸಮಿತಿಯು ಸರಕಾರದ ಮುಂದಿಟ್ಟಿರುವ ಸೂಚನೆಗಳ ೧೦ ಪಾಲಷ್ಟು ಹೆಚ್ಚು ವೆಚ್ಚಕ್ಕೆ ಒಳಪಡುವದು ಎಂದು ತಿಳಿಯಲಾಗಿದೆ.

ಭಾರತಕ್ಕೆ ರಾಜಧಾನಿ.

ಭಾರತದ ರಾಜಧಾನಿಯು ಉತ್ತರ ಮತ್ತು ದಕ್ಷಿಣ ಭಾರತಗಳ ಮಧ್ಯದಲ್ಲಿರಬೇಕು. ಇದನ್ನು ಭಾರತದ ಪಾರ್ಲಿಮೆಂಟು ಕಾಯಿದೆಗಳ ಮೂಲಕ ನಿರ್ಧರಿಸಬೇಕು ಮತ್ತು ಅದಕ್ಕೆ ಗಾಂಧಿಪುರವೆಂದು ಹೆಸರಿಡತಕ್ಕದೆಂದೂ ಇದೇ ಸ್ಥಳದಲ್ಲಿ ಭಾರತದ ಹೊಸ ಪಾರ್ಲಿಮೆಂಟು ಸೇರಬೇಕೆಂಬುದನ್ನು ಭಾರತದ ಹೊಸ ಘಟನೆಯಲ್ಲಿ ಸೇರ್ಪಡೆಯಾಗಬೇಕೆಂದೂ ಘಟನಾ ಸಮಿತಿಯಲ್ಲಿ ಸೂಚನೆ ಬಂದಿದ್ದು ಸಮಿತಿಯ ಅಧ್ಯಕ್ಷರು ಠರಾವನ್ನು ಒಪ್ಪಿಕೊಂಡಿದ್ದಾರೆ.

ಮಾಸ್ಕೋದಲ್ಲಿ ರಾಯಭಾರಿ

ಮಾಸ್ಕೊ ನಗರಕ್ಕೆ ಭಾರತದ ರಾಯಭಾರಿಯಾಗಿ ಡಾ. ಎಸ್. ರಾಧಾಕೃಷ್ಣನ್‌ರವರನ್ನು ಕಳುಹಿಸುವ ನಿರ್ಧಾರವಾಗಿದೆಯೆಂದು ತಿಳಿದುಬರುತ್ತದೆ.

ಪ್ರಕಟಣೆ.

ಹನ್ನೆರಡನೇ ನಂಬರಿನ ಹೊಸ ನಮೂನೆಯ ತೋಟದ ಕೋವಿಗಳು, .32 ನಂಬರಿನ ಪಿಸ್ತೂಲ್ ಮತ್ತು ರಿವಾಲ್ವರುಗಳು ಮತ್ತು ಕೇಪು ಕೋವಿಗಳು ಬಂದಿವೆ. ಖಾಯಿಷ್‌ದಾರರು ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟನ್ನು ಪಡೆದು ಇವುಗಳನ್ನು ಈ ಕೆಳಗಿನ ಸ್ಥಳದಿಂದ ಪಡೆದುಕೊಳ್ಳಬಹುದು. ಕೋವಿಗಳ ಸಂಖ್ಯೆಯು ಬಹು ಕಡಿಮೆಯಾದ್ದರಿಂದ ಬೇಕಾದವರು ತ್ವರೆಮಾಡಬೇಕಾಗಿದೆ.

ಪ್ರೆಸಿಡೆಂಟ್,
ಕೊಡಗು ಪ್ರಾಂತೀಕ ಸಹಕಾರಿ
ಮಾರ್ಕೆಟಿಂಗ್ ಫೆಡರೇಶನ್
ವೀರಾಜಪೇಟೆ.

ಒಂದು ಹರಟೆ.

ಬಲತ್ಕಾರದ ಬ್ರಹ್ಮಚಾರಿ!

ಲೇ:—"ಮಲ್ಲ"

ಕೇಶವನಿಗೇನೂ ಕಡಿಮೆ ಇರಲಿಲ್ಲ, ಸರಕಾರಿ ಉದ್ಯೋಗದಲ್ಲಿದ್ದ. ಸಂಬಳವೂ ಸಾಕಷ್ಟು ಬರುತಿತ್ತು. ತನ್ನಿಚ್ಛೆಯಂತೆ ಸುಖವಾಗಿಯೇ ಬದುಕುತ್ತಿದ್ದ. ಆತನಿಗೆ ೩೫ ವಯಸ್ಸಾದರೂ ಇಂದು ಬ್ರಹ್ಮಚಾರಿಯಾಗಿಯೇ ಇದ್ದಾನೆ. ಆತನು ತನ್ನ ಕಳೆದ ಹದಿನೈದು ವರ್ಷಗಳ ಅವಧಿಯಲ್ಲಿ ಅನೇಕ ಪಟ್ಟಣಗಳಲ್ಲಿದ್ದು ಕೆಲಸ ಮಾಡಿದ್ದಾನೆ. ಸರಕಾರಿ ಕೆಲಸವೆಂದರೆ ನೌಕರನು ಉರುಳುವ ಕಲ್ಲಿನಂತೆ ತಾನೆ! ಇಂದು ಮಡಿಕೇರಿಯಾದರೆ ನಾಳೆ ನಾಪೋಕ್ಲು. ಈ ರೀತಿ ಕೇಶವನು ಕೊಡಗಿನ ಎಲ್ಲಾ ಭಾಗಗಳನ್ನು ಸುತ್ತಿದ್ದನೆನ್ನಬಹುದು. ಈ ಅವಧಿಯಲ್ಲಿ ಆತನಲ್ಲಾದ ಬದಲಾವಣೆಯನ್ನು ಯೋಚಿಸಿದರೆ ಆಶ್ಚರ್ಯವಾಗುತ್ತೆ. ಆತನ ಕೋಣೆಯೂ ಕೂಡ ಆಗಾಗ್ಗೆ ಬದಲಾವಣೆ ಹೊಂದುವದಿದೆ. ಒಮ್ಮೆ ಸಜ್ಜಾಗಿದ್ದರೆ ಮತ್ತೊಮ್ಮೆ ನಾಳು ಬಿದ್ದಿರುತ್ತದೆ. ಆತನ ಉಡುಪಿನಲ್ಲೂ ಹಲವು ವ್ಯತ್ಯಾಸಗಳು. ಘೂರ್ಜರಿಯಿಂದ ನಾನಾ ಬಂಗಿನ ಎಣ್ಣೆಯು ಪರಿಗಿನ ಎಲ್ಲಾ ನಾಸನ ತೈಲಗಳ ಉಪಯೋಗವಾಯಿತು. ಕ್ರೀಂ, ಪೌಡರುಗಳು ಉಪಯೋಗವಾಯಿತು. ಮುಖದ ಮೇಲೆ ಮೀಸೆ ಬಂದು, ಮಾಯವಾಗಿ ಪುನಃ ಒಂದಿದೆ! ಈ ರೀತಿಯ ಬದಲಾವಣೆಗಳು ಮಾತ್ರ [illegible] ದರ್ಶನ ತನ್ನ ಜೀವನ ಯಾತ್ರೆಯಲ್ಲಿ [illegible] ಸಿಯೊಬ್ಬಳನ್ನು ಪಡೆಯಲು! ಆತನು ಇಷ್ಟೆಲ್ಲ ಶಕ್ತಿ ಪ್ರದರ್ಶನ ಮಾಡಿದರೂ [illegible] ಇನ್ನೂ ಒದಗಲಿಲ್ಲ. ಈಗ ಆತನಿರುವ ಪೇಟೆಯೂ ಚಿಕ್ಕ ಪೇಟೆಯಲ್ಲ. ಕಡಿಮೆ ನೂರಿನ್ನೂರು ವಿವಾಹ ಯೋಗ್ಯ ವಯಸ್ಸಿನ ಯುವತಿಯರಿದ್ದಾರೆ. ಅವರಲ್ಲಿ ಯಾರ ಪ್ರೇಮ ದೃಷ್ಟಿಯಾದರೂ ಆತನ ಮೇಲೆ ಬೀಳಬೇಡವೇ! ಯುವತಿಯರ ಮಾತಿರಲಿ. ಅವರ ತಂದೆ ತಾಯಿಗಳ ದರೂ ಆತನು ತಮ್ಮ ಮಗಳಿಗೆ ಯೋಗ್ಯನೆಂದು ಗುರ್ತಿಸಬೇಡವೇ? ಕೇಶವನು ತನ್ನ ಹೋಟೆಲುಗಳಿಂದ ಪೇಟೆಯ ಬೀದಿಗಳನ್ನು ಹಗಲಿರುಳು ಸುತ್ತಿದರೂ ಒಂದೇ ನಾಯಿಯಾದರೂ ಬೊಗುಳುತ್ತಿಲ್ಲ!

ಯುವತಿಯರನ್ನು ಆಕರ್ಷಿಸಲು ಏನು ಮಾಡಬೇಕು? ಅವರ ತಂದೆ ತಾಯಿಗಳನ್ನು ಗೆಲ್ಲಲು ಹೇಗೆ ವರ್ತಿಸಬೇಕು? ಕೇಶವನ ಮನಸ್ಸಿನಲ್ಲಿ ಮೂಡಿದ ಈ ಪ್ರಶ್ನೆಗಳಿಗೆ ಉತ್ತರ ಹುಡುಕುತ್ತಿತ್ತಿ ಆತನು ನಿರಾಶನಾಗಿದ್ದನು. ಅನೇಕ ತರಹೆಯ ಮಾರ್ಗಗಳನ್ನು ಆತನು ಪರೀಕ್ಷಿಸಿದ್ದನು. ಎಲ್ಲವೂ ನಿಷ್ಫಲ. ಆತನ ಸ್ನೇಹಿತರನೇಕರು ಅನೇಕ ಉಪಾಯಗಳನ್ನು ಹೇಳಿಕೊಟ್ಟರು. ಇನ್ನೆಲ್ಲಾ ಉಪಯೋಗಿಸಿಯೂ ಕೇಶವನು ಇಂದೂ ಬ್ರಹ್ಮಚಾರಿಯೇ!

ಸಮಾಜದಲ್ಲಿ ಹೆಣ್ಣು ಗಂಡುಗಳನ್ನು ತಮ್ಮ ಇಚ್ಛೆಯಂತೆ ಆರಿಸಿಕೊಳ್ಳುವ ಅನುವಿದ್ದರೆ ಹೇಗಾದೀತು? ಕಳೆದ ಕಾಲು ಶತಮಾನದಲ್ಲಿ ಈ ಕ್ಷೇತ್ರದಲ್ಲಿ ಆದ ಬದಲಾವಣೆಗಳೇನು ಎಂಬುವದನ್ನು ಕೇಶವನು ಆಗಾಗ್ಗೆ ಪರ್ಯಾಲೋಚಿಸುತ್ತಿದ್ದನು. ಪ್ರೇಮ ವಿವಾಹಗಳ ಉದಾಹರಣೆಗಳನ್ನು ತೆಗೆದು ಅವರಿಬ್ಬರ ವ್ಯವಹಾರವನ್ನು ಅಭ್ಯಾಸ ಮಾಡುತ್ತಿದ್ದನು. ಯಾರು ಮೊದಲು ಪ್ರೇಮ ಸಂಕೇತವನ್ನು ತೋರಿಸುವರು ಎಂಬುದನ್ನು ಅಭ್ಯಾಸ ಮಾಡಿ ಪ್ರೇಮದ ಮದುವೆಗಳಿಗೆಲ್ಲಾ ಹೆಂಗಸರೇ ಕಾರಣರೆಂಬ ನಿರ್ಧಾರಕ್ಕೆ ಬಂದಿದ್ದನು. ಆದ್ದರಿಂದ ಅಂಥಾ ಒಬ್ಬಾಕೆಯ ಪ್ರೇಮಕ್ಕೆ ಬಲಿಯಾಗಲು ಅನುಕೂಲವಾಗಿ ಆತನ ವರ್ತನೆ ಸರ್ವದಾಗಿತ್ತು. [illegible] ಹಣ್ಣು ಎಲೆ ಮುಟ್ಟಿದೊಡನೆ ಬೀಳುವಂತೆ ಕೇಶವನ ಪ್ರೇಮ ಬಟ್ಟೆಯಲ್ಲಿ ಬೀಳಲು ತಯಾರಿದ್ದನು.

ಅದೊಂದು ದಿನ ಆತನ ಸ್ನೇಹಿತ ನಾರಾಯಣನು ಹೇಳಿದ "ಹೆಂಗಸರು ಹೆಚ್ಚಾಗಿ ಶಕ್ತಿ ವಂತರಿಂದ, ಒಳ್ಳೆ ಶರೀರಬಲವಿರುವವರಿಂದ ಆಕರ್ಷಿಸಲ್ಪಡುತ್ತಾರೆ" ಇದಕ್ಕೆ ಆತನು ಹಲವು ಉದಾಹರಣೆಗಳನ್ನೂ ಕೊಟ್ಟನು. [illegible] ಪರಿವರ [illegible] ಭೀಮನ ಮೇಲೆಯೇ [illegible] ಇತ್ತೆಂದೂ ಹೇಳಿದ. ಈ ಉಪದೇಶದ ನಂತರ ಕೇಶವನ ಕೋಣೆಯು ವ್ಯಾಯಾಮ ಶಾಲೆಯಾಗಿ ಮಾರ್ಪಟ್ಟಿತ್ತು. ಕನಮಂಜನ ಚಿತ್ರವೊಂದನ್ನು ಇಟ್ಟು ಕಸರತ್ತಿಗೆ ಪ್ರಾರಂಭಿಸಿದ. ಬಸ್ಕಿ, ಓಟ್ಸ್, ದಂಡೆ ಮೊದಲಾಗಿ ಪ್ರಾರಂಭವಾಯಿತು!

ಅಂದು ಶನಿವಾರ. ಆತನ ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದ ಸರೋಜ ಮತ್ತು ಶ್ಯಾಮರು ಪರಸ್ಪರ ಸಂತೋಷದ ಮಾತಾಡಿಕೊಂಡು ಗಾಳಿ ವಿಹಾರಕ್ಕೆ ಹೊರಟಿದ್ದರು. ಇವರ ಪ್ರೇಮದ ವಿಚಾರ ಕೇಶವನಿಗೆ ಕೇಳಿಬಂದಿತ್ತು. ಆತನಿಗೆ ತನ್ನ ಪ್ರಯತ್ನದಲ್ಲಿ ಜಿಗುಪ್ಸೆ ಬಂದಿತು. ಶ್ಯಾಮನು ತೆಳ್ಳಗಾಗಿ ಬಾಗಿದ ಕಡ್ಡಿಯಂತಿದ್ದನು. ಆಫೀಸಿನಲ್ಲಿ ಕೃಷ್ಣ ಪುಷ್ಟರಾದ ಅನೇಕರಿದ್ದೂ ಈತನನ್ನು ಸರೋಜ ಪ್ರೀತಿಸಬೇಕಾದರೆ! ಪ್ರಯೋಜನವಿಲ್ಲ; ಅಂದಿನಿಂದ ಕೇಶವನು ವ್ಯಾಯಾಮವನ್ನು ಬಿಟ್ಟನು. ದೃಷ್ಟಪುಷ್ಟ ಶರೀರವೇನೂ ಪ್ರೇಮಕ್ಕೆ ಬೇಕಾದ ಯೋಗ್ಯತಾ ಪತ್ರವಲ್ಲ!

ಅನೇಕ ಯುವಕರು ಪತ್ರ ಸೂಟು ಬೂಟಿನಿಂದ ಯುವತಿಯರನ್ನು ಮರುಳು ಮಾಡಿದ ಮಾತ ಕೇಳಿದ್ದ! ಹಾಗೆಯೇ ಕೆಲವು ದಿನ ಈತನೂ ಜೆಂಟಲ್‌ಮನಾಗಿಯೇ ವರ್ತಿಸಿದ! ಅದೂ ನಿಷ್ಪ್ರಯೋಜನವೆಂದು ಆತನಿಗೆ ಕಂಡು ಬಂತು. ಆತನ ನೆರಮನೆಯ ಸಾವಿತ್ರಿಯು ಆ ಪಟ್ಟಣದಲ್ಲಿ ಹಾಳಾಗಿ ಪ್ಯಾಂಟು ಧರಿಸುವ ರಾಮುವನ್ನು ಪ್ರೀತಿಸಲು ತೊಡಗಿದಂದಿನಿಂದ ಆತನ ಈ ನಂಬಿಕೆಯೂ ಹೋಯಿತು.

ಏನಿದು ಈ ಪ್ರಪಂಚ! ಬುದ್ಧಿವಂತರಿದ್ದಾರೆ, ಬುದ್ಧಿಹೀನರಿದ್ದಾರೆ. ಗುಮಾಸ್ತರಿದ್ದಾರೆ, ಆಫೀಸರರಿದ್ದಾರೆ. ಸುಂದರರೂ ಕುರೂಪಿಗಳೂ, ಪೀರರೂ–ಬೀರುಗಳೂ ಎಲ್ಲಾ ರೀತಿಯವರಿದ್ದರೂ ಪ್ರತಿಯೊಬ್ಬನನ್ನು ಪ್ರೀತಿಸುವ ಒಬ್ಬೊಬ್ಬ ಯುವತಿ ಇದ್ದಾಳೆ. ಸಮಾಜ, ಜಾತಿ ನೀತಿಗಳ ಕಟ್ಟನ್ನು ಮೀರಿ ಅಂತರ್ಜಾತಿ, ಅಂತರಾಷ್ಟ್ರೀಯ ವಿವಾಹಗಳಾಗುತ್ತಿವೆ. ಮೊನ್ನೆಯಾಗಿ ಆಂಗ್ಲ ಯುವತಿಯೊಬ್ಬಳು ಜಬ್ಬಲ್‌ಪುರದ ರಸ್ತೆ ಗುಡಿಸುವವನೊಬ್ಬನನ್ನು ಮದುವೆಯಾಗಿ ಆತನ ವೃತ್ತಿಯನ್ನವಲಂಭಿಸಿದ್ದಾಳೆ. ಹಾಗಾದರೆ ಈ ಹೆಂಗಸರ ಸ್ವಭಾವವೇನು? ಗಂಡಸನಿಗೆ ಆಕೆಯುವ ಅವರ ಅಳತೆಗೋಲೇನು? ಇದೇ ಕೇಶವನ ಬಗೆಹರಿಯದ ಪ್ರಶ್ನೆ.

ಮಾನವ ಸಮಾಜವನ್ನು ಆಗಾಗ್ಗೆ ನಿರೀಕ್ಷಿಸುವನು. ಎಡೆಯಿಲ್ಲದೆ ಬೀಡಿ, ಸಿಗರೇಟು ಸೇದುವವರು, ಹೊಗೆ ಸೊಪ್ಪು ತಿನ್ನುವವರು, ಸೇಂದಿ ಸಾರಾಯಿ ಸೇವಿಸುವವರು, ಸಸ್ಯಹಾರಿಗಳು, ನಾನಾ ರೀತಿಯವರಿದ್ದಾರೆ. ಇವರೆಲ್ಲರಿಗೂ ಸ್ಥಳವಿದೆ. ಆದರೆ ಈತನಿಗೆ ಮಾತ್ರ ಏಕಿಲ್ಲ? ಈ ಹತ್ತು ಹದಿನೈದು ವರ್ಷಗಳ ಆತನ ಜೀವನದಲ್ಲಿ ಆತನನ್ನು ಮಾತಾಡಿಸುವವರೇ ಇಲ್ಲವೇ?

ಕೇಶವನಿಗೆ ಯಾವದೂ ಹೊಳೆಯಲಿಲ್ಲ. ಆದ್ದರಿಂದ ಯಾವದಾದರೊಂದು ಬಗೆಯ ಕೀರ್ತಿಯನ್ನು ಸಂಪಾದಿಸಬೇಕೆಂದು ವಿವಿಧ ಉದ್ಯಮಗಳಲ್ಲಿ ತೊಡಗಿದ. ಕಲಾವಿದನಾಗಲು ಯತ್ನಿಸಿದ. ಸಫಲವಾಗಲಿಲ್ಲ. ಸಂಗೀತಗಾರನಾಗಲು ನಾಲ್ಕಾರು ಸಿನೇಮಾ ಪದಗಳನ್ನು ಕಷ್ಟಪಟ್ಟು ಕಲಿತ. ಯಶಸ್ವಿಯಾಗಲಿಲ್ಲ. ಫೋಟೋಗ್ರಾಫರನೆಂದು ಕುತ್ತಿಗೆಗೆ 'ಕೆಮರಾ' ತೂಗಹಾಕಿಕೊಂಡು ಸುತ್ತಿದ.

ಕೇಶವನ ಪ್ರಯತ್ನ ಇನ್ನೂ ನಡೆದಿದೆ. ವಯಸ್ಸು ೩೫. ಆತನ ಸ್ನೇಹಿತರು ಆತನಿಗಾಗಿ ಕನಿಕರಪಡತೊಡಗಿದ್ದಾರೆ. ನನಗೊಬ್ಬ ತಂಗಿ ಇದ್ದಿದ್ದರೆ ಹೇಗಾದರೂ ಒಲಿಸುತ್ತಿದ್ದೆ ಎನ್ನುವವರೇ ಹೆಚ್ಚು! ಕೇಶವನ ಪ್ರಯತ್ನವು ಹಿಮಾಲಯದಂತೆ ದೊಡ್ಡದಾದರೂ ಪ್ರತಿಫಲ ಅಗಸ್ತ್ಯೇರ ಣ್ಣಗೆ!

ಬ್ರಹ್ಮಚರ್ಯ ಪಾಲಿಸುವದು ಯೋಗ್ಯವೆಂದು ನಮ್ಮ ಪುರಾಣಗಳು ಹೇಳುತ್ತವೆ. ಬ್ರಹ್ಮಚಾರಿಗಳೆನಿಸಿದ ಹನುಮಂತ, ಕೃಷ್ಣ, ಭೀಷ್ಮರಿಗೆ ಇಂದೂ ಗೌರವ ಸಲ್ಲುತ್ತಿದೆ. ನಮ್ಮ ಕೇಶವನಿಗೆ ಆ ಗೌರವವಾದರೂ ಸಮಾಜದಿಂದ ದೊರೆಯಬೇಡವೇ? ನಿಷ್ಠುರ ಸಮಾಜವು ಇದನ್ನು ಓದಿಯಾದರೂ ಕೇಶವರಂಥವರ ಸಮಸ್ಯೆಯನ್ನು ಬಗೆಹರಿಸಬಾರದೇ?

ಜನಸಾಮಾನ್ಯನ ಪ್ರೀತಿ ವಿಶ್ವಾಸಗಳನ್ನು

ಕಾಂಗ್ರೆಸು ಕಳೆದುಕೊಳ್ಳುತ್ತಲಿದೆಯೇ?

ಕಳೆದ ಏಳು ದಶಕಗಳಿಂದಲೂ ಕಾಂಗ್ರೆಸ್ಸು ಭಾರತೀಯ ಹಿಂದ ವಿರಲಿ ಮುಸ್ಲಿಂ ಇರಲಿ ಪದವೀ ಜೋಪಾರೇ ಇರಲಿ ಈ ಜನತೆಯಲ್ಲಿ ಪ್ರಚಂಡವಾದ ಜಾಗೃತಿಯನ್ನುಂಟುಮಾಡಿದೆಯೆಂಬ ಮಾತನ್ನು ಯಾರೂ ಅಲ್ಲಗಳೆಯಲಾರರು. [illegible] ಸರಿಗೂ ಕೇವಲ ವಿನಂತಿ ಬೇಡಿಕೆ ಬಿನ್ನಹಗಳಿಂದ ಜನತಾ ತೊಂದರೆಗಳನ್ನು ನಿವಾರಿಸಿಕೊಳ್ಳಲು ಪ್ರಯತ್ನಿಸುತ್ತ ಜನತೆಯ ಪ್ರೀತಿ ವಿಶ್ವಾಸಗಳನ್ನು ಗಳಿಸಿಕೊಳ್ಳುತ್ತಿದ್ದ ಕಾಂಗ್ರೆಸ್ಸು ೧೯೨೦ರಿಂದಂತೂ ಬಾಪೂಜಿಯವರ ನೇತೃತ್ವದಲ್ಲಿ ಅಸಹಕಾರ ಸತ್ಯಾಗ್ರಹಗಳೆಂಬ ಎರಡು ಅಸ್ತ್ರಗಳ ಮುಖಾಂತರ ಸತ್ಯ ಹಾಗೂ ಅಹಿಂಸೆಗಳಿಂದ ತ್ವರಿತಗತಿಯಲ್ಲಿ ಸಾಗುತ್ತ ಜನತಾ ತೊಂದರೆಗಳ ಮೂಲವಾದ 'ಪರದಾಸ್ಯ' ವನ್ನು ಕಿತ್ತೊಗೆಯಲೆಂದು ಬೇರಿಗೇ ಕೈ ಹಾಕಿ ನಲ್ವತ್ತು ಕೋಟಿ ಜನತೆಯ ವಿಶಾಲ ನಾಡನ್ನು ಕೇವಲ ಇಪ್ಪತ್ತೇಳು ವರ್ಷಗಳಲ್ಲಿ ಸ್ವತಂತ್ರಗೊಳಿಸಿ, ತನ್ನ ಗುರಿಯನ್ನು ಸಾಧಿಸಿತ.

ಗಾಂಧಿಜಿ ಕಾಂಗ್ರೆಸ್ಸು.

ಈ ಇಪ್ಪತ್ತೇಳು ವರ್ಷಗಳಲ್ಲಿ ದಿನದಿಂದಿನಕ್ಕೆ ಕಾಂಗ್ರೆಸ್ಸಿನ ಬಗ್ಗೆ ಜನತೆಯಲ್ಲಿ ಜನಸಾಮಾನ್ಯರಲ್ಲಿ ಪ್ರೀತಿ ಆದರ ವಿಶ್ವಾಸಗಳು ತುಂಬಿ ತುಳುಕುತ್ತಿದ್ದವು. ಮಹಾತ್ಮಾ ಗಾಂಧಿಯವರಂತೂ ತಮ್ಮ ತಪ್ಪಸ್ಸಿನಿಂದ ನಲ್ವತ್ತು ಕೋಟಿ ಜನತೆಯ ಪ್ರತಿಯೊಂದು ಹೃದಯದಲ್ಲಿಯೂ ಪ್ರೀತಿಯ ವಿಶ್ವಾಸದ ಸ್ಥಾನವನ್ನು ದೊರಕಿಸಿ ಕೊಂಡಿದ್ದರು. (ಈಗಲೂ ಆ ಮಹಾತ್ಮರ ಬಗ್ಗೆ ಅದೇ ಪ್ರೀತಿ ವಿಶ್ವಾಸಗಳು ಪ್ರತಿಯೊಬ್ಬರಲ್ಲಿ ಇರುತ್ತವೆ) ಪಾಮರು ಪಂಡಿತರ ಭಾರತೀಯ ಕೂಸು ಕೂಡ ತನ್ನ ತೊದಲು ನುಡಿಯಿಂದ 'ಮಹಾತ್ಮಾ ಗಾಂಧೀಕಿ ಜೈ' ಎಂದು ಎದೆಯುಬ್ಬಿಸಿ ಕೈಯೆತ್ತಿ ಹೆಮ್ಮೆಯಿಂದ ಕೂಗುತ್ತಿತ್ತು. ಮಹಾತ್ಮಾ ಗಾಂಧೀಜಿಯವರೆಂದರೇ ಕಾಂಗ್ರೆಸ್ಸು, ಕಾಂಗ್ರೆಸೆಂದರೇ ಗಾಂಧೀಜಿಯವರು ಎಂಬಂತೆ ಆಗಿದ್ದಿತು. ಅವರ ವಿನಾ ಕಾಂಗ್ರೆಸಿನಲ್ಲಿ ಒಂದು ಕಡ್ಡಿ ಕೂಡ ಅಲುಗಾಡುವಂತಿರಲಿಲ್ಲ. ಕಾಂಗ್ರೆಸಿನೊಡನೆ ಗಾಂಧೀಜಿಯವರು ಅಷ್ಟು ಸಾಮರಸ್ಯವನ್ನು ಸಾಧಿಸಿದ್ದರು; ತಮ್ಮ ತ್ಯಾಗ, ಸೇವೆ, ಸತ್ಯ ಅಹಿಂಸೆಗಳಿಂದ ಆ ಸಾಮರಸ್ಯದ ಸಿದ್ಧಿಯನ್ನು ಪಡೆದಿದ್ದರು. ಅಲ್ಲದೆ ಕಾಂಗ್ರೆಸ್ ಮತ್ತು ಜನತೆಯೂ ಈ ಸಾಮರಸ್ಯವು ಸಿದ್ಧಿಸುವಂತೆ ಮಾಡಿದ್ದರು.

ಬಹಳೇ ಯಾವ ಕಾಂಗ್ರೆಸ್ ಅಧಿವೇಶನವೂ ಮಹಾತ್ಮಾ ಗಾಂಧಿಯವರಿಲ್ಲದೆ ಆಗುತ್ತಿದ್ದಿಲ್ಲ. [illegible] ಕಾಂಗ್ರೆಸಿನ ಗುರಿಯು ಸಿದ್ಧಿಯಾದ ವರ್ಷವಾದ ಆಗಸ್ಟ ೧೫ ರಂದು ಸ್ವಾತಂತ್ರ್ಯೋತ್ಸವವು ಭಾರತದ ರಾಜಧಾನಿಯಾದ ಹೊಸ ದಿಲ್ಲಿಯಲ್ಲಿ ನಡೆಯುತ್ತಿರುವಾಗ ಬಾಪೂಜಿಯವರು ಬಂಗಾಲದಲ್ಲಿಯ ಜಾತೀಯ ದ್ವೇಷದ ಬೆಂಕಿಯನ್ನು ಆರಿಸಲು ಸತ್ಯ ಪ್ರೇಮದ ಬಾಂಗಾಲದಲ್ಲಿ ಜನತೆಯ ಯೋಗಕ್ಷೇಮವನ್ನು ನೋಡಿಕೊಳ್ಳುವದಕ್ಕಾಗಿ ಸಂಚರಿಸುತ್ತಿದ್ದರು.

ಸ್ವಾತಂತ್ರ್ಯ

ಈ ಮೊದಲ ಸಾರ್ವತ್ರಿಕ ಆಯ್ಕೆ ನಡೆದು ಎಲ್ಲ ಸ್ಥಳಗಳಲ್ಲಿಯ ಕಾಂಗ್ರೆಸ್ ಹುರಿಯಾಳುಗಳೇ ಗೆಲುವು ಪಡೆದು ಅಧಿಕಾರ ಸ್ವೀಕಾರವಾಗಿ ಹೋಯಿತು. ಈಗ ಸ್ವಾತಂತ್ರ್ಯವೂ ದೊರಕಿತ. ಈ ವಿಜಯದ ಸ್ವಯಂಗಳಿಂದ ಕಾಂಗ್ರೆಸಿನಲ್ಲಿ ಕೆಲವು

ಜನರ ವಿಶ್ವಾಸ ಕಾಂಗ್ರೆಸ್ಸಿಗಿದೆಯೇ?

ಧುರೀಣರು ನೆಲಬಿಟ್ಟು, ಮೂರು ಮೊಳ ಮೇಲೆಯೇ ಆಡ್ಡಾಡುವುದಕ್ಕೆ ಆರಂಭವಾಯಿತು. ಸೇವೆ, ತ್ಯಾಗ, ಸತ್ಯ, ಅಹಿಂಸೆಗಳ ಸ್ಥಳಗಳನ್ನು ಅಧಿಕಾರ, ಸ್ವಾರ್ಥ, ಮರಿ ಮೋಸಗಳು ಕ್ರಮಕ್ರಮವಾಗಿ ಆಕ್ರಮಿಸ ತೊಡಗಿದವು ಈ ಲಕ್ಷಣವನ್ನು ಬಾಪೂಜಿಯವರು ಕಂಡು ಬಹಳ ಖಿನ್ನರಾದರು. ಕಾಂಗ್ರೆಸ್‌ನ ಗುರಿಯಾದ ಸ್ವಾತಂತ್ರ್ಯವು ಲಭಿಸಿದ ಬಳಿಕ ಕಾಂಗ್ರೆಸನ್ನು ವಿಸರ್ಜಿಸಿ ಬಿಡಬಾರದೇಕೆಂದೂ ಅವರು ವಿಚಾರ ಮಾಡುವಂತಾಯಿತು. ಆ ರೀತಿ ಅವರು ಒಮ್ಮೆ ಆಡಿಯೂ ತೋರಿಸಿದರು. ಆದರೆ ಮುಂದೆ ಐದಾರು ತಿಂಗಳು ಕಳೆಯುವಷ್ಟರಲ್ಲಿಯೇ ಬಾಪೂಜಿಯವರು 'ಜಾತಿಯತೆ' ಯ ಗುಂಡಿಗೆ ತಮ್ಮ ಎದೆಯನ್ನೊಡ್ಡಬೇಕಾಯಿತು. ಬಾಪೂ ಅಮರರಾದರು!

ಭಾರತವು ಸ್ವಾತಂತ್ರ್ಯ ಪಡೆದ ಬಳಿಕ ನಡೆದ ಹಲಕೆಲವು ರೀತಿನೀತಿಗಳಿಂದಲೂ ಜಾತೀಯತೆಯ ತಾಂಡವದಿಂದಲೂ ಆಡಳಿತ ಕ್ರಮದಲ್ಲಿಯ ಅನೋವಿನ್ಯತೆಯಿಂದ ಜನತೆಯು ಬಹುವಿಧದ ತೊಂದರೆಯನ್ನು ಅನುಭವಿಸಬೇಕಾದುದರಿಂದಲೂ, ಕಂಟ್ರೋಲು, ಕಳ್ಳಪೇಟೆ, ಲಂಚಗುಳಿತನ ಈ ತ್ರಿಪುರಾಸುರ ಹಾವಳಿಯಿಂದಲೂ ಜನರು ಕಂಗೆಟ್ಟು ಬಾಯಿಬಾಯಿ ಬಿಡತೊಡಗಿ ಈ ಎಲ್ಲ ತೊಂದರೆಗಳ ನಿವಾರಣೆಗಾಗಿ ಕಾಂಗ್ರೆಸ್ಸಿನ ಕಡೆಗೆ ಆತ್ರ್ಯದೃಷ್ಟಿಯಿಂದ ನೋಡತೊಡಗಿತು. ಆದರೆ...?

ಲೋಲುಪತೆ

ಕಾಂಗ್ರೆಸಿನಲ್ಲಿಯೂ ಕಾಂಗ್ರೆಸಿಗರೆನಿಸಿಕೊಳ್ಳುವ ಬಹಳಷ್ಟು ಜನರಲ್ಲಿ ಇದೇ ಪರಿಸ್ಥಿತಿಯು ಇಷ್ಟರಲ್ಲಿಯೇ ಮೂಡಿ ಹೋಗಿತ್ತು. ಈ ಕಾಂಗ್ರೆಸ ಮುಂದಾಳುಗಳು, ಅಧಿಕಾರ ಸ್ವೀಕಾರವಾದಂದಿನಿಂದ ಬೇರೆಯ ಹಾದಿಯನ್ನೇ ಹಿಡಿದಿದ್ದರು. ಸ್ವಾತಂತ್ರ್ಯಕ್ಕಾಗಿ ಕಾಲುಶತಮಾನಗಳ ಸುದೀರ್ಘ ಅವಧಿಯಲ್ಲಿ ಅನೇಕ ಕಷ್ಟನಷ್ಟಗಳನ್ನು ತೊಡಕು ತೊಂದರೆಗಳನ್ನು ಅನುಭವಿಸಿ ಬೇಕಾದಂತಹ ತ್ಯಾಗವನ್ನೂ ಮಾಡಿದ ತಾವು ಈಗ ಸ್ವಾತಂತ್ರ್ಯ ದೊರೆತ ಮೇಲಾದರೂ ಏಕೆ ಸುಖಪಡಬಾರದು ಎಂಬ ಮನೋವೃತ್ತಿ ಮೂಡಿ ಬರತೊಡಗಿತು. ಸೇವಾಭಾವದ ಸ್ಥಾನವನ್ನು ಅಧಿಕಾರ ಲಾಲಸೆಯೂ, ತ್ಯಾಗದ ಸ್ಥಾನವನ್ನು ಸ್ವಾರ್ಥವೂ ಸ್ವಾಭಾವಿಕವಾಗಿಯೇ ಆಕ್ರಮಿಸಿದವು. ಜನತಾ ಕಲ್ಯಾಣದ ಕಡೆಗೆ ಸಮಗ್ರ ದೃಷ್ಟಿಯಿಂದ ನೋಡುವ ಮುಂದಾಳುಗಳು ಬೆರಳ ಮೇಲೆ ಎಣಿಸುವಷ್ಟಕ್ಕೆ ಬಂದರು.

ಸೂಚಕ ಆಯ್ಕೆಗಳು

ಹೀಗಾಗಿ ಸಾಮಾನ್ಯ ಭಾರತೀಯನ ಹೃದಯದಲ್ಲಿ ಉಚ್ಚಸ್ಥಾನದಲ್ಲಿದ್ದ ಕಾಂಗ್ರೆಸು ಕ್ರಮೇಣವಾಗಿ ಕೆಳಗಿಳಿಯ ತೊಡಗಿತು. ಆಯ್ಕೆ ಮೊದಲಾದ ಜನಮತ ಪ್ರಸಂಗಗಳಲ್ಲಿ ಎಂತಹರನ್ನೇ ಆಗಲಿ, ಕಾಂಗ್ರೆಸ್ ಟಿಕೆಟಿನಿಂದ ಹುರಿಯಾಳಾಗಿ ನಿಲ್ಲಿಸಿದರೆ ಆರಿಸಿ ಬಂದೇ ತೀರುವರೆಂದು ಹಿಂದಕ್ಕಿದ್ದ ನಂಬಿಕೆಯು ಬರಬರುತ್ತ ಹೋಗತೊಡಗಿತು. ಬೊಂಬಾಯಿ ಅಸೆಂಬ್ಲಿಯ ಉಪಆಯ್ಕೆಗಳೇ ಇದಕ್ಕೆ ಉದಾಹರಣೆಯೆಂದು ಹೇಳಬಹುದು. ಕಳೆದ ಜನವರಿಯಲ್ಲಿ ಒಂದು ಮಹಮದೀಯಸ್ಥಳಕ್ಕೆ ಕಾಂಗ್ರೆಸ್ಸಿನಿಂದ ನಿಲ್ಲಿಸಲ್ಪಟ್ಟ ಮುಸಲ್ಮಾನ ಹುರಿಯಾಳುವು ತನ್ನ ಹುರಿಯಾಳುತ್ವವನ್ನು ಉಪಸಂಹರಿಸಬೇಕಾಯಿತು. ಆ ಸ್ಥಾನಕ್ಕೆ ಸಾಮ್ಯವಾದೀ ಧುರೀಣರಾದ ಶ್ರೀ ಯುಸುಫ ಮೆಹರಾಲ್ಲಿಯವರು ಪ್ರಚಂಡ ಬಹುಮತದಿಂದ ಆರಿಸಿ ಬಂದರು. ಅದರಂತೆಯೇ ಏಪ್ರಿಲ್ ತಿಂಗಳಲ್ಲಿ ಅದೇ ಅಸೆಂಬ್ಲಿಯ ಮತ್ತೆರಡು ಉಪ ಆಯ್ಕೆಗಳಲ್ಲಿ ಒಂದು ರೇಲ್ವೆ ಕೆಲಸಗಾರರ ವತಿಯಿಂದ ನಡೆದದ್ದು ಅದರಲ್ಲಿ ಕಾಂಗ್ರೆಸ್ಸಿನ ಶ್ರೀ ಶಂಭುರಾವ ಜೋಶಿಯವರು ಸೋತು ಹೋಗಿ ಸಮಾಜವಾದೀ ಮುಂದಾಳುಗಳಾದ ಶ್ರೀ ಪೀಟರ್ ಅಲ್ವಾರೀಸ ಎಂಬವರು ಆರಿಸಿಬಂದರು. ಇನ್ನೊಂದು ಉಪ ಆಯ್ಕೆಯಲ್ಲಿ ಕಾಂಗ್ರೆಸಿನಿಂದ ನಿಲ್ಲಿಸಲ್ಪಟ್ಟ ಡಾ. ಮ್ಲಸಕರರು ಸೋತು ಹೋಗಿ ಸಮಾಜವಾದೀ ಹುರಿಯಾಳುಗಳಾದ ಶ್ರೀ ಪುರುಷೋತ್ತಮ ತ್ರಿಕಮದಾಸರು ಆರಿಸಿ ಬಂದರು.

ಈ ಆಯ್ಕೆಯ ಘಟನೆಗಳು ಸರ್ವಸಾಮಾನ್ಯವಾಗಿ ಕಂಡರೂ ಇಂದು ಸಾಮಾನ್ಯ ಮಾನವನ ಮನಸಿನ ಒಲವು ಯಾವ ಕಡೆಗೆ ಓಡುತ್ತಲಿದೆಯೆಂಬುದನ್ನು ಸುಸ್ಪಷ್ಟವಾಗಿ ತೋರಿಸುವ ಪ್ರತೀಕವಾಗಿರುತ್ತದೆ. ಸಾಮ್ಯವಾದಿಗಳು ಆರಿಸಿ ಬಂದರೂ ಸರಕಾರದಲ್ಲಿ ತಮ್ಮ ವರ್ಚಸ್ಸನ್ನು ಕೆಡುಪಲು ಅವರೇನೂ ಸಧ್ಯಕ್ಕೆ ಸಮರ್ಥರಾಗಿಲ್ಲ. ಆದ್ದರಿಂದ ಕಾಂಗ್ರೆಸ್ಸೇನೂ ವಿಮಂಚನೆಗೊಳಗಾಗುವಂತಿಲ್ಲ. ಆದರೂ ಜನತಾ ನಾಡಿಯು ಯಾವ ಮುಖವಾಗಿ ಜಿಗಿಯುತ್ತದೆಂಬುದನ್ನು ಕಾಂಗ್ರೆಸ್ ಇದರಿಂದ ತಿಳಿದುಕೊಳ್ಳಬಹುದಾಗಿದೆ. ಮುಖ್ಯವಾಗಿ ಅಲ್ಲಲ್ಲಿಯ ಕಾಂಗ್ರೆಸ ಧುರೀಣರಲ್ಲಿ ಬಹಳಷ್ಟು ಜನರು ಸಾಮಾನ್ಯಮಾನವನ ಪ್ರೀತಿ ವಿಶ್ವಾಸಗಳಿಂದ ದಿನದಿನಕ್ಕೂ ಹೇಗೆ ದೂರ ಸರಿಯುತ್ತಲಿದ್ದಾರೆಂಬ ಮಾತನ್ನು ನಿರ್ವಿವಾದವಾಗಿ ಈ ಆಯ್ಕೆಗಳು ಸಿದ್ಧಮಾಡಿದಂತೆಯೇ ಸೈ.

ಕಾಂಗ್ರೆಸಿಗನ ಕರ್ತವ್ಯ

ನಿಯಂತ್ರಣ, ಕಳ್ಳಪೇಟೆ, ಲಂಚಗುಳಿತನ ಈ ಮೂರು ವಿಷಯಗಳು ಇಂದು ಸಾಮಾನ್ಯ ಮಾನವನ ರಕ್ತವನ್ನು ಜಿಗಳೆಯಂತೆ ಹೀರತೊಡಗಿವೆ. ಸಾಮಾನ್ಯ ಮಾನವನಿಂದು ಸ್ವಾತಂತ್ರ್ಯದ ಸವಿಯನ್ನೇ ಕಾಣದಾಗಿದ್ದಾನೆ. ಇದೆಲ್ಲಕ್ಕೂ ಕಾಂಗ್ರೆಸ್ಸೇ ಕಾರಣವೆಂದು ಹೇಳಲು ಮೇಲಿನ ಆವನ ಮತದಾನವೇ ಸಬಲ ಚಿನ್ಹವಾಗಿದೆ. ಇನ್ನೂ ಬಾಲ್ಯಾವಸ್ಥೆಯಲ್ಲಿರುವ ಈ ದುಸ್ಥಿತಿಯನ್ನು ತಮ್ಮ ಸೇವೆತ್ಯಾಗಗಳ ಸಾಮರ್ಥ್ಯದಿಂದ ದೂರಮಾಡಿ ಸಾಮಾನ್ಯ ಮಾನವನ ಹೃದಯದಲ್ಲಿ ಕಾಂಗ್ರೆಸಿಗೆ ಮೊದಲಿನ ಸ್ಥಾನವು ದೊರಕುವಂತೆ ಕಾಂಗ್ರೆಸ್ ಧುರೀಣರು ಪ್ರಯತ್ನಿಸುವರೇ? ದೇಶಕಲ್ಯಾಣ ದೃಷ್ಟಿಯಿಂದ ಅವಶ್ಯವಿರುವ ಈ ಕಾರ್ಯವನ್ನು ಪ್ರತಿಯೊಬ್ಬ ಕಾಂಗ್ರೆಸಿಗನೂ ಕೈಕೊಳ್ಳುವನೇ?

'ಜೈ ಹಿಂದ್'

ಪ್ರೇಮದಿಂದ ಸಮಾಜ ಪರಿವರ್ತನೆ.

(೩ನೇ ಪುಟದಿಂದ ಸಾಗಿದ್ದು.)

ಮತ್ತು ಸುಗುಣವೂ ಆಗುವುದು ಖಂಡಿತ.

ಆದರೆ ಕುಟುಂಬದಲ್ಲಿದ್ದಂತೆಯೇ ಸಮಾಜದಲ್ಲಿಯೂ ಕೂಡ ಪ್ರೇಮವೆಂಬುದೊಂದು ಕೇವಲ ಭಾವನೆಯಾಗಿರಲು ಸಾಧ್ಯವಿಲ್ಲ. ಅದು ಕಾರ್ಯಶಕ್ತಿಯಾಗಿರಬೇಕು. ಪ್ರೇಮವನ್ನು ಸೇವೆಯಾಗಿ ಪರಿವರ್ತಿಸಬೇಕು. ಕಾಡಿನಲ್ಲಿರುವ ಮನುಷ್ಯನೊಬ್ಬನು ಒಳ್ಳೆಯವನೋ ಕೆಟ್ಟವನೋ ಎಂಬ ಯೋಜನೆಯನ್ನು ಮಾಡಬೇಕಾದ್ದಿಲ್ಲ. ಸಮಾಜದೊಳಗಿರುವ ಇತರ ಜನ ಸಮುದಾಯದೊಡನೆ ಬೆರೆತಿರುವ ಮಾನವನ ವಿಷಯವನ್ನೇ ನಾವು ಚರ್ಚಿಸುವುದು. ಇತರ ಜನರೊಡನೆ ಸಂಬಂಧ ಬೆಳೆಸಿರುವ ಮಾನವನ ವಿಷಯವನ್ನು ಇಲ್ಲಿ ಪ್ರಸ್ತಾಪಿಸುವದು.

ವ್ಯಕ್ತಿಗತ ಜೀವನವು ಅದೆಷ್ಟೇ ಸಂಕುಚಿತವೂ ಮಿತವೂ ಆಗಿದ್ದರೂ ಕೂಡ-ಸಮಾಜ ಜೀವನಕ್ಕೆ ಆಗತ್ಯವಾದ ತಪಸ್ವಿಗಳ ವಿಷಯವನ್ನು ನಾವು ಪ್ರಸ್ತಾಪಿಸುವುದಿಲ್ಲ. ಅವರೆಲ್ಲ ದೂರದ ಹಿಮಾಲಯದಲ್ಲಿ ವಾಸಿಸುವವರು. ಜನತೆಗೆ ಒಳ್ಳೆಯದಾಗಬೇಕೆಂದು ನಾವು ಆಶಿಸುವುದಾದರೆ ಅವರೊಡನೆಯೇ ನಾವು ಜೀವಿಸಬೇಕು. ಅವರಿಗೆ ಸೇವೆ ಸಲ್ಲಿಸಬೇಕು ಮತ್ತು ಅವರಿಗೆ ಒಳ್ಳೆಯದನ್ನು ಮಾಡಬೇಕು.

ನಾವು ಪ್ರಾರ್ಥನೆಯಲ್ಲಿ ಹೇಳುವುದೇನು. 'ಸರ್ವರೂ ಸುಖವಾಗಿರಲಿ, ಸರ್ವರೂ ರೋಗರಹಿತವಾಗಿರಲಿ, ಸರ್ವರೂ ಒಳ್ಳೆಯವರಾಗಿರಲಿ, ಯಾರೂ ಕಷ್ಟವನ್ನನುಭವಿಸದಿರಲಿ" ಆದರೀ ಪ್ರಾರ್ಥನೆಯಿಂದಲೇ ಮನುಷ್ಯನು ಸುಖವಾಗಿಲ್ಲ, ಆರೋಗ್ಯವಂತನಾಗಿಲ್ಲ, ಒಳ್ಳೆಯವನಾಗಿಲ್ಲ. ಈ ಪ್ರಪಂಚದಲ್ಲಿ ಬೇಕಾದಷ್ಟು ರೋಗವಿದೆ, ಕಷ್ಟವಿದೆ, ವ್ಯಸನವಿದೆ. ಏಕೆ? ಪ್ರಾರ್ಥನೆಯೇನೋ ಒಳ್ಳೆಯದಿದೆ, ಅದು ಹೃದಯವನ್ನು ಶುದ್ಧಿಗೊಳಿಸುವುದು. ಆದರೆ ಒಳ್ಳೆಯಭಾವನೆಗಳೊಡನೆ ಒಳ್ಳೆಯ ಕೆಲಸಗಳಲ್ಲಿ ತೊಡಗಬೇಕು. ಪ್ರಾರ್ಥನೆ ಅಥವಾ ಉಪದೇಶದಿಂದ ಮನುಷ್ಯನನ್ನು ಒಳ್ಳೆಯವನನ್ನಾಗಿ ಮಾಡಲು ಸಾಧ್ಯವಿಲ್ಲ. ಅಥವಾ ಕಷ್ಟನಿವಾರಣೆಯಾಗಲು ಸಾಧ್ಯವಿಲ್ಲ. ಯುದ್ಧ ನಿವಾರಣೆಯಾಗಬೇಕೆಂದು ನಾವು ಮನಸ್ಸಿನಲ್ಲಿ ಆಶಿಸಬಹುದು. ಕೈಗಾರಿಕೆಯಲ್ಲಿ ಅನ್ಯಾಯ ನಿಲ್ಲಬೇಕೆಂದು ಆಶಿಸಬಹುದು ಸರ್ವರಿಗೂ ಸಮಾನಾವಕಾಶ ಏರ್ಪಡಿಸಬೇಕೆಂದಾಶಿಸಬಹುದು. ಆದರೆ ಸೌಹಾರ್ದವನ್ನು ಎಷ್ಟೇ ಉಪದೇಶಿಸಿದರೂ, ಪ್ರೇಮ ಮತ್ತು ಸಮತೆಯ ಭಾವನೆಯನ್ನು ಎಷ್ಟೇ ಮನಸ್ಸಿನಲ್ಲಿ ಆಲೋಚಿಸಿದರೂ ಏನೂ ಪ್ರಯೋಜನವಾಗದು. ನಾವು ಕೆಲಸದಲ್ಲಿ ತೊಡಗಬೇಕು, ಸುಮ್ಮನೇ ಭಾವನೆಯಿಂದೇನೂ ಪ್ರಯೋಜನವಿಲ್ಲ. ಹಾಗಿಲ್ಲದಿದ್ದರೆ ಗಗನದಲ್ಲಿ ಅರಮನೆಯನ್ನು ಕಟ್ಟಿದಂತಾಗುವದು.

ಗಾಂಧೀಜಿಯು ಸಮಾಜವಾದಿಯೂ ಆಚಾರ್ಯ ಪುರುಷರು. ಪ್ರಪಂಚ ಭ್ರಾತೃತ್ವ ಅಥವಾ ಐಕ್ಯತೆಯು ಪಾರಮಾರ್ಥಿಕ ಮತ್ತು ಮಾನಸಿಕ ದೃಷ್ಟಿಯಿಂದಲೇ ಅಲ್ಲದೆ ಐಹಿಕ ಮತ್ತು ಸಾಮಾಜಿಕ ದೃಷ್ಟಿಯಿಂದಲೂ ಸಾಧಿಸಲ್ಪಡಬೇಕು ಎಂದವರು ಹೇಳಿದರು. ಸರ್ವಸಂಗ ತ್ಯಾಗ ಮಾಡಿ ದೂರದಲ್ಲಿ ಹೋಗಿ ಕುಳಿತಿರಲು ಅವರು ಆಶಿಸಲಿಲ್ಲ. ಅಥವಾ ವಾಸ್ತವಿಕ ಜಗತ್ತನ್ನು ಬಿಟ್ಟು ಮಾರವಿರಲೂ ಅವರು ಆಶಿಸಲಿಲ್ಲ. ಜೀವನವು ಪರಸ್ಪರ ವಿರೋಧ ಶಕ್ತಿಗಳ ಮತ್ತು ಮನೋಭಾವನೆಗಳ ಸಮ್ಮಿಳನವೆಂದು ಗಾಂಧೀಜಿ ಭಾವಿಸಿದ್ದರು. ಒಂದನ್ನು ಬಿಟ್ಟು ಇನ್ನೊಂದನ್ನು ನಾವು ಆಶಿಸುತ್ತಾ ಕುಳಿತಿರಲು ಸಾಧ್ಯವಿಲ್ಲ ಆದ್ದರಿಂದ ಪಾರಮಾರ್ಥಿಕ ಮತ್ತು ನೈತಿಕ ಮನುಷ್ಯನು ಪೂರ್ಣ ಜೀವನವನ್ನು ಜೀವಿಸಬೇಕು. ತನ್ನ ವ್ಯಕ್ತಿಗತ ಜೀವನವನ್ನೇ ಅಲ್ಲದೆ ಇಡೀ ಸಮಾಜದ ಜೀವನವನ್ನು ನೈತಿಕ ಮತ್ತು ಪಾರಮಾರ್ಥಿಕ ಮಟ್ಟಕ್ಕೆ ಒಯ್ಯಬೇಕು. ವ್ಯಕ್ತಿ ಮತ್ತು ಸಮಾಜದ ಸಂಬಂಧವು ಬದಲಾಗಬೇಕು. ನೈತಿಕ ಆಧಾರದ ಮೇಲೆ ನಿಲ್ಲಬೇಕು. ಮನುಷ್ಯನ ಶೋಷಣೆ ಅಥವಾ ಅಧಃಪತನವನ್ನು ಅದು ಆಶಿಸಬಾರದು. ಪ್ರೇಮದ ಮೂಲಕ ಮಾನವ ಸೇವೆ ನಡೆಸಬೇಕು. ತನ್ಮೂಲಕ ಮಾನವತೆಯ ಘನತೆಯನ್ನು ಹೆಚ್ಚಿಸಬೇಕು. ಕ್ರಾಂತಿಯನ್ನು ಸುಭದ್ರವಾಗಿಯೂ ಸುಲಭವಾಗಿಯೂ ಮಾಡಬೇಕಾದಲ್ಲಿ ಅದು ಮನುಷ್ಯನನ್ನೇ ಬದಲಾಯಿಸುವ ಮೂಲಕ ಸಾಧ್ಯ ಎಂದು ಗಾಂಧೀಜಿ ಹೇಳಿದರು. ಮನುಷ್ಯನ ಮನಸ್ಸು ಕಲುಷಿತವಾಗಕೂಡದೆಂದೂ ಅದು ಶುದ್ಧವೂ ಮೇಲ್ಮಟ್ಟದ್ದೂ ಆಗಿರಬೇಕೆಂದೂ ಅವರು ಉಪದೇಶಿಸಿದರು. ಮನಸ್ಸೇ ಕ್ರಾಂತಿಕಾರಕವಾಗಿ ಬದಲಾವಣೆ ಹೊಂದಿದಲ್ಲಿ ಹಳೆಯ ಸಂಸ್ಥೆಗಳು ವ್ಯವಸ್ಥೆಗಳು ವಿನಾಶ ಹೊಂದಿ ಹೊಸವು ಸ್ಥಾಪನೆಯಾಗುವುವು. ಆದರೂ ಮನಸ್ಸನ್ನು ಪರಿವರ್ತನೆಗೊಳಿಸಲು ಶೀಲವನ್ನು ಮೇಲ್ಮಟ್ಟಕ್ಕೆ ತರಲು ಸುತ್ತುಮುತ್ತಲ ವಾತಾವರಣವೂ ಮತ್ತು ವ್ಯವಸ್ಥೆಯೂ ಆಗತ್ಯವೆಂದು ಅವರು ಹೇಳಿದರು.

ಆತ್ಮನಿಗೆ ಜೀವಿಸಲು ಮತ್ತು ಬೆಳೆಯಲು ಒಂದು ರೂಪೂ ಒಂದು ದೇಹವೂ ಬೇಕಷ್ಟೆ. ಆಲೋಚನೆಯು ಕಾರ್ಯಗತವಾಗಬೇಕಾದರೂ ಒಂದು ರೂಪ ಬೇಕು. ಒಂದು ವ್ಯವಸ್ಥೆ ಅಥವಾ ಒಂದು ಸಂಸ್ಥೆ ಬೇಕು. ಅದಿಲ್ಲದಿದ್ದಲ್ಲಿ ಸ್ವಲ್ಪ ಕಾಲ ಮನಸನ್ನಾಳಿ ಅನಂತರ ಗಾಳಿಯಲ್ಲಿ ತೂರಿಕೊಂಡು ಅದು ಹೊರಟು ಹೋಗಬಹುದು.

—"ತಾ. ನಾ"

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಬಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೨೮ | ತಾರೀಖು ೩-೬-೧೯೪೯ನೇ ಶುಕ್ರವಾರ | ಸಂಚಿಕೆ ೧

ವಿಶೇಷ ಲೇಖನ.

ದುಡಿಮೆಯ ಗೌರವ.

ಕರ್ಮವೆಂಬುದೆ ಸಜ್ಜೆ
ಕರ್ಮವೆಂಬುದೆ ಲಿಂಗ
ಕರ್ಮದಾ ಬಗೆಯರಿತು ದುಡಿಯುವನ
ಬ್ರಹ್ಮನೆಂದೆಂಬ ಸರ್ವಜ್ಞ ||

ಲೇಖಕ:— 'ಕಿ ಸಾ ಸ'

ಯುದ್ಧೋತ್ತರ ಜಗತ್ತಿನ ಪ್ರತಿ ರಾಷ್ಟ್ರಗಳ ಮುಂದೆ ಪ್ರಚಂಡ ಸಮಸ್ಯೆಗಳಿವೆ. ಆ ಸಮಸ್ಯೆಗಳು ಭರತ ಖಂಡಕ್ಕೂ ಇವೆ. ಅದರೊಂದಿಗೆ ಸ್ವತಂತ್ರವಾದ ಭರತ ಖಂಡದಲ್ಲಿ ಸ್ವಾತಂತ್ರ್ಯದ ನಂತರ ತಲೆ ಎತ್ತಿದ ಹಲವಾರು ಸಮಸ್ಯೆಗಳೂ ಸೇರಿ ಭಾರತೀಯರಾದ ನಮ್ಮ ಸ್ಥಿತಿ ದುಸ್ಥಿತಿಯಾಗಿದೆ. ಆದ್ದರಿಂದ ಈ ವಾತಾವರಣವನ್ನು ಬದಲು ಮಾಡಿ ಸ್ವತಂತ್ರ ಸ್ವಾವಲಂಬಿ, ಹೃಷ್ಟ ಪುಷ್ಟ ಜನಾಂಗವನ್ನು ಕಟ್ಟಲು ನಾನಾ ಯೋಜನೆಗಳಾಗುತ್ತಿವೆ. ಈ ಯೋಜನೆಗಳು ಹಿತಕರವೆನಿಸಿದರೂ ಸ್ವತಂತ್ರ ಭಾರತದ ಪ್ರಜೆಗಳಾದ ನಮ್ಮಲ್ಲಿ ಸ್ವಾತಂತ್ರ್ಯದ ವಾತಾವರಣವೇ ಇನ್ನೂ ಕಲ್ಪಿಸಲ್ಪಟ್ಟಿಲ್ಲ. ನಮ್ಮ ವರ್ಣ, ಜಾತಿ, ಕುಟುಂಬ, ಸಾಮಾಜಿಕ ಸ್ಥಾನ ಇವು ಎಂದಿನಂತೆ ನಮ್ಮಲ್ಲಿ ಬೇಧವನ್ನು ಇನ್ನೂ ಇರಿಸಿವೆ. ಭರತ ಖಂಡವು ಸಂಪತ್ಸಮೃದ್ಧವಾದ ದೇಶ. ಆದರೆ ಇಲ್ಲಿಯ ಜನದಷ್ಟು ಬಡತನದಲ್ಲಿರುವವರು ಜಗತ್ತಿನ ಯಾವ ದೇ ಭಾಗದಲ್ಲಿಲ್ಲ. ಬಡತನದಲ್ಲಿರುವವರು ತಮ್ಮ ಬಡತನವು ತಮ್ಮ ಪ್ರಾರಬ್ಧವೆಂದು ಭಾವಿಸಿ ಸತತ ಕಷ್ಟಪಡುತ್ತಿದ್ದಾರೆ. ಶ್ರೀಮಂತರು ತಾವು ಬಡವರ ಮೇಲೆ ತಮ್ಮ ಶಾಸನವನ್ನು ನಡೆಸಲು ಹುಟ್ಟಿದ್ದೆಂದು ತಿಳಿಯುತ್ತಾರೆ. ಏನೇ ಕಷ್ಟ ಬಂದರೂ, ಏನೇ ಕೆಟ್ಟ ಹೆಸರು ಬಂದರೂ, ಶ್ರೀಮಂತನು ಅದರಿಂದ ಪಾರಾಗಬಲ್ಲ. ಶ್ರೀಮಂತನ ಸಿರಿಯು ಆತನ ಜನ್ಮಸಿದ್ಧ ಹಕ್ಕೆಂದು ಆತನಿಗಾಗಿ ದುಡಿಯುವ ಒಡವನೂ ಗೌರವಿಸುತ್ತಾನೆ!

ಬಡವನು ಎಷ್ಟೇ ಕಷ್ಟಪಡಲೀ, ಎಷ್ಟೇ ಬೆವರು ಹರಿಸಲೀ ಅದು ಆತನಿಗೆ ತಾನು ಕೊಡುವ ಸಂಬಳಕ್ಕೆ ಪಡಬೇಕಾದುದೇ ಎಂದು ಶ್ರೀಮಂತನು ನಂಬುತ್ತಾನೆ. ಆತನ ಬಗ್ಗೆ ಕನಿಕರದ ಎರಡು ಮಾತಾಗಲೀ, ಉದಾರತೆಯಾಗಲೀ ಶ್ರೀಮಂತನಿಂದ ಬಾರದು. ಕೂಲಿಯವನು ಕೂಲಿ ಮಾಡುವದು ಆತನ ಜೀವನದ ಕರ್ತವ್ಯ. ಶ್ರೀಮಂತನು ಆತನನ್ನು ತನಗಾಗಿ ದುಡಿಸಿಕೊಳ್ಳುವದು ಆತನ ಹಕ್ಕು. ಈ ನೀತಿಯನ್ನು ಸಮಾಜವೂ, ಸರಕಾರವೂ ಒಪ್ಪಿವೆ.

ನಮ್ಮ ದೇಶದ ಮಕ್ಕಳನ್ನೇ ತೆಗೆದುಕೊಳ್ಳುವ. ಸ್ವಲ್ಪ ಮಧ್ಯ ತರಗತಿಯ ಮಾತ್ರದಕ್ಕೆ ಮೇಲಿನ ಪ್ರತಿ ಮನೆಯಲ್ಲಿಯೂ ಆಳುಗಳಿರುತ್ತಾರೆ. ಮಕ್ಕಳ ಕೆಲಸವನ್ನು, ಅ ನೆಮ ... ಕೆಲಸವನ್ನು ಇವ ... ಮಾಡಬೇಕಾಗುತ್ತದೆ ... 'ಆ ... ' ಎಂದು ... ಸ್ವಲ್ಪ ... ಗೆ ... ಕೊಂಡದ್ದ ... ಕೆಲಸ ಕೊಡದೆ ಬಿಡುವದಿಲ್ಲ. ಮನೆಯ ಮಕ್ಕಳು ಶಾಲೆಗೆ ಹೋಗುತ್ತವೆ. ಮನೆಯ ಆಳುಗಳು (ಕೆಲವು ಸಮಯ ಅವೂ ಮಕ್ಕಳೇ) ಇವರ ಪುಸ್ತಕಗಳನ್ನು ಹೊತ್ತುಕೊಂಡು ಹೋಗಿ ಶಾಲೆಯಲ್ಲಿ ಕೊಟ್ಟು ಬರುತ್ತಾರೆ. ಅವರಿಗೆ ಮಧ್ಯಾಹ್ನ ಅನ್ನ ಕೊಟ್ಟು ಬರುತ್ತಾರೆ. ಸಾಯಂಕಾಲ ಬರುವಾಗಲೂ ಈ ಮಕ್ಕಳ ಪುಸ್ತಕ ಹೊತ್ತುಕೊಂಡು ಬರಲು ಆಳು ಕಳುಹಿಸುವ ನಿದರ್ಶನಗಳೂ ಇವೆ. ಶಾಲೆಗೆ ಹೋಗುವ ಮನೆಯ ಮಕ್ಕಳಂತೆಯೇ ಶಾಲೆಗೆ ಹೋಗಿ ವಿದ್ಯೆ ಕಲಿಯಬೇಕಾದ ಈ ಆಳು ಮಕ್ಕಳ ಭಾಗ್ಯ ಪುಸ್ತಕ ಹೊರುವದು ಮಾತ್ರ. ಈ ಮೂಕ ಸೇವೆಯನ್ನು ಅವರು ಸತತ ಮಾಡಿದರೂ ಒಂದೇ ಒಂದು ತಂದೆ ತಾಯಿಗಾಗಲೀ, ವಿದ್ಯಾರ್ಥಿಗಾಗಲೀ ಆ ಮಕ್ಕಳ ಮೇಲೆ ದಯೆ ಬಂದ ನಿದರ್ಶನ ನನಗೆ ತಿಳಿದಿಲ್ಲ. ಯಾರೇ ಒಬ್ಬರು ಅವರನ್ನು ತಮ್ಮ ಮಕ್ಕಳಂತೇ ವಿದ್ಯಾರ್ಜನೆಗೆ ಸೇರಿಸಿದ ನಿದರ್ಶನವಿಲ್ಲ.

ಯಾರೇ ಒಬ್ಬರು ನಮ್ಮಲ್ಲಿಗೆ ಕೆಲಸಕ್ಕೆ ಬಂದರೆ ಆತನಿಂದ ಆದಷ್ಟು ಹೆಚ್ಚಿನ ಕೆಲಸ ಪಡೆಯಬೇಕೆಂಬುದು ನಮ್ಮ ಆಸೆ. ಆತನು ಎಷ್ಟೇ ಕಷ್ಟಪಡಲಿ, ಕೆಲಸದಲ್ಲಿ ಆತನ ಕೈ ಮುರಿಯಲಿ ಅವನು ದುಡಿದಷ್ಟಕ್ಕೆ ಮಾತ್ರ ನಾವು ಕೂಲಿ ಕೊಡುತ್ತೇವೆ. ಅದರ ಆಚೆ ಯೋಚನೆಯಿಲ್ಲ. ಆತನೂ ನಮ್ಮಂತೆಯೇ ಮನುಷ್ಯನು, ನಮ್ಮಂತೆಯೇ ಸಮಾಜದಲ್ಲಿ ಬದುಕಿ ಬಾಳಬೇಕಾದವನು. ಆತನಿಗೂ ಆ ರೀತಿ ಬಾಳಲು ಹಕ್ಕಿದ್ದರೂ ನಮ್ಮ ಸಮಾಜ ನೀತಿಯು ಅವರನ್ನು ಕೆಳಗೆ ತಳ್ಳಿ ನಮ್ಮ ಊಳಿಗದವರ ಸ್ಥಾನಕ್ಕೆ ತಂದಿದೆಯೆಂದು ಭಾವಿಸುವವರು ಕಡಿಮೆ. ಚಿಕ್ಕಂದಿನಿಂದಲೇ ಮಕ್ಕಳಿಗೆ ಮನೆಯಲ್ಲಿ ಆಳಿಟ್ಟು ಆತನಿಂದ ದುಡಿಸಿಕೊಳ್ಳುವ ಪ್ರವೃತ್ತಿಯನ್ನು ಕಲಿಸುವದರಿಂದ ಮುಂದೆ ಬೆಳೆದಾಗಲೂ ಆ ಮಕ್ಕಳು ಇನ್ನೊಬ್ಬರ ದುಡಿಮೆಯಿಂದಲೇ ಜೀವಿಸಲೆತ್ನಿಸುತ್ತವೆ.

ವಿಹಾರಕ್ಕಾಗಲೀ, ಬೇರೆ ಪ್ರಯಾಣಕ್ಕಾಗಲೀ ಯುವಕರ ತಂಡವೊಂದು ಹೊರಟರೆ ಅವರ ಸಾಹಿತ್ಯಗಳನ್ನು ಹೊತ್ತುಕೊಳ್ಳಲು ಆಳುಗಳು ಬೇಕು. ಶಾಲಾ ಮಕ್ಕಳು ವನಭೋಜನ ಇಲ್ಲವೇ ಬೇರೆ ವಿಹಾರ ಹೋದಾಗಲೂ ಅವರೊಡನೆ ಆಳುಗಳು ಬೇಕು. ಈ ಆಳುಗಳ ಮೇಲಿನ ಅನುಕರಣವು ಬೆಳೆದು ಮುಂದೆಯೂ ಸಮಾಜದ ಈಗಿನ ಏರು ತಗ್ಗುಗಳನ್ನೇ ಸಮರ್ಥಿಸುವವು. ಹಿಂದಿನ ನಮ್ಮ ಗುರುಕುಲಾಶ್ರಮಗಳಲ್ಲಿ ಈ ಪದ್ಧತಿ ಇರಲಿಲ್ಲ. ಇಂದೂ ಕೂಡ ಕೆಲವೆಡೆ ಮಕ್ಕಳೇ ತಮ್ಮ ಬಟ್ಟೆ ಒಗೆದುಕೊಳ್ಳಬೇಕು, ಅಡಿಗೆ ಕೂಡ ಮಾಡಿಕೊಳ್ಳಬೇಕು. ಪಾಶ್ಚಾತ್ಯ ದೇಶಗಳಲ್ಲಿ ಶಾಲಾ ಬಾಲಕರು ತಮ್ಮ ಶಾಲೆಗಳ ಪ್ರತಿಯೊಂದು ಕೆಲಸವನ್ನೂ ತಾವೇ ಮಾಡಿಕೊಳ್ಳುತ್ತಾರಂತೆ!

ಶಾಲೆಯಲ್ಲಿ ಮತ್ತು ಮನೆಯಲ್ಲಿ ಆಳುಗಳನ್ನು ಆಧರಿಸಿ ನಿಂತ ನಾವು ವಿದ್ಯಾರ್ಜನೆ ಮುಗಿದ ನಂತರ ಸಮಾಜದಲ್ಲೂ ಆಳುಗಳ ಆಧಾರದಿಂದಲೇ ಬದುಕಲೆತ್ನಿಸುತ್ತೇವೆ. ಬಡ ಜನರ ಸುಲಿಗೆಯಿಂದ ಸಂಪಾದಿಸಿದ ಹಣವನ್ನು ಉಪಯೋಗಿಸಿ ಆಳುಗಳನ್ನಿಟ್ಟು ಅವರನ್ನು ದುಡಿಸಿಕೊಂಡು ಅವರ ದುಡಿಮೆಗೆ ಸರಿಯಾದ ಪ್ರತಿಫಲ ಕೊಡದೆ ನಾವು ಜೀವಿಸುತ್ತೇವೆ. ಕುಟುಂಬದಲ್ಲಿ ತೋರುವ ಈ ಚಿಕ್ಕ ರೂಪಿನ ಸುಲಿಗೆಯೇ ಸಮಾಜದಲ್ಲಿ ವರ್ಣ ಬೇಧಕ್ಕೆ ಕಾರಣ. ರಾಷ್ಟ್ರ ರಾಷ್ಟ್ರಗಳ ಸ್ಪರ್ಧೆಗೆ, ಯುದ್ಧಕ್ಕೆ ತಳಹದಿಯಾಗಿದೆ. ಈ ಪರಸ್ಪರ ಸುಲಿಗೆಯ ಪ್ರಯತ್ನವೇ ಸಮಾಜವಾದ, ಉಗ್ರ ಸಾಮ್ಯವಾದಗಳಂಥಾ ಚಳವಳಿಗಳಿಗೆ ಆಸ್ಪದ ಕೊಟ್ಟಿವೆ.

ಇನ್ನೊಬ್ಬರ ದುಡಿಮೆಯಿಂದ ಬದುಕುವ ಗುಲಾಮ ಬುದ್ಧಿ ಇಲ್ಲವೇ ಜಿಗಣೆ ವೃತ್ತಿಯು ನಿಲ್ಲುವ ವರೆಗೆ ಯಾವ ರಾಷ್ಟ್ರವೂ ಸ್ವತಂತ್ರವಲ್ಲ. ಎಲ್ಲಿಯೂ ಶಾಂತಿಗೆ ನೆಲೆ ಇಲ್ಲ. ಈ ಸುಳ್ಳು ಗೌರವದ ಮೇಲೆ ಸಮಾಜ ಕಟ್ಟಲ್ಪಟ್ಟಿರುವ ಕಾರಣ ನಮ್ಮ ಕೆಲಸವನ್ನು ನಾವು ಮಾಡಿಕೊಳ್ಳುವದು ಘನತೆಗೆ ಕಡಿಮೆ ಎನಿಸಿದೆ. ನಮ್ಮ ಮನೆಯನ್ನು ಶುಚಿಯಾಗಿಟ್ಟುಕೊಳ್ಳುವದು, ನಮ್ಮ ಸೌದೆ ನಾವು ಒಡೆದುಕೊಳ್ಳುವದು, ನಮ್ಮ ಸಾಮಾನುಗಳನ್ನು ಹೊತ್ತುಕೊಂಡು ಬರುವದು ಇವೆಲ್ಲ ಘನತೆಗೆ ಕಡಿಮೆಯಾದ ಕಾರ್ಯಗಳು. ಆದರೆ ಅದಕ್ಕಾಗಿಯೇ ನಮ್ಮಂಥಾ ಇನ್ನೊಬ್ಬ ಸಹೋದರನನ್ನು ದುಡಿಯಲು ಹಚ್ಚುವದು ನಮಗೆ ಘನತೆ ತರುವಂಥಾ ವಿಚಾರವೆಂದು ಭಾವಿಸುತ್ತೇವೆ!

ಕೆಲಸ ಮಾಡುವದು ಘನತೆಗೆ ಕೀಳು ಎಂಬ ಭಾವನೆ ಎಲ್ಲಿ ಹುಟ್ಟಿತೋ ತಿಳಿಯದು. ಈ ಪೊಳ್ಳು ಗೌರವವನ್ನು ಬಿಡಬೇಕು. ಭೂಮಿಯನ್ನು ಉತ್ತು, ಹದ ಮಾಡಿ, ಗೊಬ್ಬರ ಹಾಕಿ ಯೋಗ್ಯ ಬೀಜ ಬಿತ್ತಿದರೆ ಉತ್ತಮ ಬೆಳೆಯಾಗುವದು. ಈ ಕೃಷಿ ಪ್ರವೃತ್ತಿಯಂತೆ ಸಕಲ ಜೀವನಾಧಾರವೂ ಹಾಗೆಯೇ ಪ್ರತಿಯೊಂದು ಕ್ಷೇತ್ರದಲ್ಲೂ ದುಡಿಮೆ ಬೇಕು. ಕೆಲಸ ಮಾಡದೆ ಜೀವಿಸುವವನ ಜೀವನ ಹಾಳು ಬಿದ್ದ ನೆಲದಂತೆ. ದುಡಿಮೆ ಇಲ್ಲದೆ ಯಾವ ದೇಶವೂ ಬೆಳೆಯದು. ಯಾವ ಸಂಸ್ಕೃತಿ, ಸಾಹಿತ್ಯವೂ ಪ್ರಗತಿ ಪಡೆಯದು. 'Work is worship' ಕೆಲಸವೇ ಪೂಜೆ ಎಂಬ ಮಾತಿನ ಅರ್ಥವಾದರೂ ಇದೆ ಆಗಿದೆ. ಆದ್ದರಿಂದ ಕೆಲಸ ಮಾಡುವವನಿಗೇ ಸಮಾಜದಲ್ಲಿ ಗೌರವ ಬರಬೇಕು. ದಿನವಿಡೀ ಕೆಸರಿನಲ್ಲಿದುಡಿಯುವ ರೈತನ ಸೇವೆಯು, ಅನವರತ ದೇಶಕ್ಕಾಗಿ ದುಡಿಯುವ ರಾಜಕಾರಣಿಯ ಸೇವೆಗಿಂಥಾ ಕಡಿಮೆಯಲ್ಲ. ಈ ರೀತಿಯ ಒಂದು ಸಮಾನಸ್ಕಂಧತೆ ನಮ್ಮಲ್ಲಿ ಬಂದು ದುಡಿಯುವವನಿಗೆ ಅಗ್ರ ಪೂಜೆ ಸಲ್ಲುವಂತಾದರೆ ಅದೇ ಸ್ವರಾಜ್ಯದ ತಳಹದಿ ಎನ್ನಬಹುದು. ಆದ್ದರಿಂದಲೇ ಕೂಲಿಗಾರರು, ರೈತರು ದೇಶದ ಬೆನ್ನೆಲುಬೆಂದು ಹೇಳುತ್ತಾರೆ. ಇವರನ್ನು ಸುಲಿಗೆ ಮಾಡುವ ಜನ ಕಡಿಮೆಯಾಗಿ 'ದುಡಿವ ಕೈಗೇ ಉಣ್ಣುವ ಹಕ್ಕು' ಎಂಬುದು ಜಾರಿಯಲ್ಲಿ ಬರಲಿ.

THE WARDEN INSURANCE CO., Ltd.
(H. O. BOMBAY)

Managing Director — S. H. THAKER Esq.

Business in Force	Rs.	4,50,00,000
New Business	,,	1,35,00,000
Assets	,,	75,00,000

Transacts:
LIFE, FIRE, ACCIDENT etc;

For Particulars Please Apply to:
A. S. Aiyappa,
Branch secretary,
GANDHI NAGAR,
BANGALORE CITY.

ದಿ ವಾರ್ಡನ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,
ಗಾಂಧಿನಗರ, ಬೆಂಗಳೂರು ಸಿಟಿ.

ಗ್ರಾಮೋದ್ಯೋಗ.

ಆಡುಗಳ ಸಾಕುವ ಆವಶ್ಯಕತೆ.

ಮಾನವನ ಆರೋಗ್ಯಕ್ಕೆ ಹಾಲೇ ಅತ್ಯುತ್ತಮವಾದ ಆಹಾರ. ಹಾಲುಗಳಲ್ಲಿಯೂ ಆಕಳ ಹಾಲು ಆಡಿನ ಹಾಲು ಅತ್ಯಂತ ಶ್ರೇಷ್ಠ. ಆಕಳ ಹಾಲು ಎಲ್ಲರಿಗೂ ಸಿಕ್ಕುವಂತಾಗಬೇಕಾದರೆ ಅವುಗಳನ್ನು ಪ್ರಯತ್ನ ಪೂರ್ವಕವಾಗಿ ಬೆಳೆಸಬೇಕಾಗುತ್ತದೆ. ಈಗ ಯಾವ ಬಗೆಯ ಹಾಲೂ ಚಿಕ್ಕ ಮಕ್ಕಳಿಗೆ ಒದಗುತ್ತಿಲ್ಲವೆಂದೇ ಎಳೆಯ ಮಕ್ಕಳಿಗೆ ಬಾಲಮೃತ್ಯು ಬರುತ್ತಿದೆ, ತರುಣರಿಗೆ ಅಕಾಲವಾರ್ಧಿಕ್ಯ ಆವರಿಸುತ್ತಿದೆ. ಇನ್ನು ಮೇಲಾದರೂ ಈ ದುಃಸ್ಥಿತಿ ದೂರಾಗುವುದು ಅತ್ಯವಶ್ಯವಿದೆ. ಎಂದರೆಯೇ ಸ್ವತಂತ್ರ ಭಾರತ ಸದೃಢ ಸ್ತ್ರೀ ಪುರುಷರಿಂದ ಸಮೃದ್ಧವಾಗುವುದು.

ಹಿಂದೂಸ್ಥಾನದಲ್ಲಿಯ ಆಕಳುಗಳು ೧೫ ಸೇರು ಹಾಲಿಗಿಂತ ಹೆಚ್ಚಾಗಿ ಹಿಂಡುವುದಿಲ್ಲ. ಆಡುಗಳ ಹಾಲಂತೂ ಅರ್ಧ ಸೇರಿಗೆ ಕಡಿಮೆಯೇ. ಈ ಪ್ರಮಾಣದಿಂದ ನೋಡಿದರೆ ಈಗಿರುವ ಆಡು ಆಕಳುಗಳ ಸಂಖ್ಯೆಯಿಂದ ಭಾರತೀಯರ ಬಳಕೆಗೆ ಬೇಕಾದಷ್ಟು ಹಾಲು ಸಿಕ್ಕಲಾರದೆಂದು ಯಾರು ಹೇಳಬಹುದಾಗಿದೆ. ಆದರೆ ಹಾಲಿಲ್ಲದೆ ಇಂದು ಯಾರ ಜೀವನವೂ ನಡೆಯುವುದಿಲ್ಲ. ಪಿತ್ಯದ ಚಹಾದ ಚಟಕ್ಕಾದರೂ ನಾವು ಸೇರು ಹಾಲು ಬೇಕೇಬೇಕು. ಇದು ನಮ್ಮಲ್ಲಿ ಸಿಕ್ಕುವುದಿಲ್ಲವೆ ನಾಗ ವಿದೇಶಿಯ ಹಾಲಿನ ಪುಡಿಯಿಂದ ನಮ್ಮ ಹಸಿವನ್ನು ಹಿಂಗಿಸಿಕೊಳ್ಳಬೇಕಾಗಿದೆ. ಇದು ಎಂತಹ ಶೋಚನೀಯ ಮತ್ತು ನಾಚಿಕೆಗೇಡು! ಹೊಟ್ಟೆಯ ಸಲುವಾಗಿ ಹೆರವರ ಮುಖವನ್ನು ನೋಡುವ ಈ ಹೀನತನ ಎಂದು ಹಿಂಗಬೇಕು?

ಹಾಲು ಕೊಡುವ ಆಡುಗಳಲ್ಲಿ ನಮ್ಮ ಕಡೆಗೆ ಸುರಲೀ ಅಥವಾ 'ಜಂಯೂಡ'ಗಳು ಪ್ರಶಸ್ತವಾಗಿವೆ. ಇವುಗಳ ಹಾಲಿಗೆ ರುಚಿ ಹೆಚ್ಚು, ದುರ್ವಾಸನೆ ಕಡಿಮೆ. ನಮ್ಮ ದೇಶದಲ್ಲಿ ಇವು ೧ ಸೇರಿಗಿಂತ ಹೆಚ್ಚಾಗಿಯೇ ಹಾಲನ್ನು ಕೊಡುತ್ತಿವೆ. ಇವುಗಳ ಯೋಗ್ಯ ಜೋಪಾನೆಯಾದರೆ ಎರಡು ಮೂರು ಸೇರುಗಳನ್ನು ಪಡೆಯಬಹುದು. ಇಂತಹ ಜಾತಿವಂತ ಆಡುಗಳನ್ನು ಹೇಗೆ ಹೆಚ್ಚಿಸಬೇಕ?

ಆಡುಗಳು ವರುಷದಲ್ಲಿ ಎರಡು ಸಲ ಮರಿಗಳನ್ನು ಹಾಕುತ್ತವೆ. ಈ ಪ್ರಸಂಗದಲ್ಲಿ ಅವುಗಳ ಶುದ್ಧ ಜಾತಿಯು ಹೀಳಿಗೆ ಸಿದ್ಧವಾಗುವಂತೆ ಎಚ್ಚರ ಪಡಬೇಕಾಗುತ್ತದೆ. ಇದರಿಂದ ನಾಲ್ಕೈದು ವರುಷಗಳಲ್ಲಿ ಅವುಗಳ ಸಂಖ್ಯೆ ಏನಿಲ್ಲೆಂದರೂ ನಾಲ್ಕು ಪಟ್ಟಾದರೂ ಬೆಳೆದಂತೆ ಹಾಲು ಕರೆಯುವ ಪ್ರಮಾಣವೂ ಹೆಚ್ಚಾಗುವುದು. ಈ ಕಾರ್ಯದಲ್ಲಿ ಸರಕಾರ ಹೊರಬಹುದಾದ ಹೊಣೆ ಹೆಚ್ಚಾಗಿದೆ. ಯುರೋಪ ಖಂಡದಲ್ಲಿ ೧೭೦೦-೧೭೫೦ ವರ್ಷಗಳ ಪೂರ್ವದಲ್ಲಿ ಹಾಲಿನ ಕೊರತೆ ಬಹಳವಾಗಿತ್ತು. ಆಗ ಸರಕಾರ ಆ ಕಡೆಗೆ ಲಕ್ಷ್ಯವನ್ನು ಪೂರಯಿಸಿತು. ಎಮ್ಮೆ ಆಕಳುಗಳ ಸಂಖ್ಯೆಯನ್ನು ಬೆಳೆಸುವುದಕ್ಕಿಂತ ಆಡುಗಳ ಅಭಿವೃದ್ಧಿಯನ್ನು ಮಾಡುವುದು ಅವರಿಗೆ ಹಗುರವಾಗಿ ತೋರಿತು. ಆಲ್ಪ್ಸ ಮತ್ತು ಪಿರಿಅಜ ಪರ್ವತದ ಕೊಳ್ಳಗಳಲ್ಲಿರುವ ಜನರಲ್ಲಿ ಉತ್ತಮ ಜಾತಿಯ ಆಡುಗಳಿವೆಯೆಂದು ಕಂಡುಹಿಡಿದರು. ಅಲ್ಲಿಂದ ಕೆಲವೇ ಪ್ರಾಣಿಗಳನ್ನು ಕೊಂಡು ತಂದರು; ತಮ್ಮಲ್ಲಿ ಆ ತಳಿಯನ್ನು ಬೆಳೆಸಿದರು. ಅದರಂತೆ, ಆಂಗ್ಲೋ ನ್ಯೂಬಿಯನ್, ಶಾನೆನ್, ರೋಜೇನಬರ್ಗ್ ಈ ಕಡೆಯಿಂದಲೂ ಕೆಲವು ಆಡುಗಳನ್ನು ತಂದರು; ತಳಿಯನ್ನು ಹೆಚ್ಚಿಸಿದರು. ಈ ಆಡುಗಳು ೫ ರಿಂದ ೭ ಸೇರುಗಳ ವರೆಗೂ ಹಾಲನ್ನು ಕೊಡುತ್ತಿವೆ. ಜರ್ಮನಿಯಲ್ಲಿ ಕೂಡ ಕೆಲವು ವರ್ಷಗಳ ಹಿಂದೆ ಹಾಲಿನ ಬಗೆಗೆ ಹಾಹಾಕಾರವಿದ್ದಿತು. ಅಲ್ಲಿ ಸರಕಾರದ ಪ್ರಯತ್ನದಿಂದ ಆಡುಗಳ ಹಾಲನ್ನು ಪೂರೈಸುವ ಕೆಲಸವು ಯಶಸ್ವಿಯಾಗಿಯೇ ನಡೆಯಿತು; ಆರೋಗ್ಯದ ಅಭಿವೃದ್ಧಿಗೆ ಕಾರಣವಾಯಿತು.

ಇದೇ ಕಾರ್ಯಕ್ಷಮತೆಯನ್ನು ನಾವೂ ಸರಕಾರದ ಕಡೆಯಿಂದ ನಿರೀಕ್ಷಿಸಿದರೆ ತಪ್ಪಾಗಲಿಕ್ಕಿಲ್ಲವಷ್ಟೇ! ಆದರೆ ಈಗ ಸ್ವತಂತ್ರ ಭಾರತದ ಸರಕಾರ ಅದೆಷ್ಟೋ ಹೊಣೆಗಳನ್ನು ಹೊರಬೇಕಾಗಿದೆ. ಅಂತಹದರಲ್ಲಿ ಇದೊಂದು ಹೊಸ ಹೊರೆಯೇಕೆ ಎಂದು ಹೇಳಬಹುದು. ಇದು ಹೊಸ ಹೊರೆಯಲ್ಲ; ಅವರು ಹೊತ್ತಿರುವ ಹೊಣೆಯನ್ನೇ ಹಗುರು ಮಾಡುವ ಹೊಸ ಹಾದಿ ಎಂದು ನಮ್ಮ ಉತ್ತರ. ಈಗ ಆಹಾರ ಧಾನ್ಯವನ್ನು ಸರಕಾರ ಹೇಗಾದರೂ ಒದಗಿಸಲೇಬೇಕಾಗಿದೆಯಷ್ಟೇ. ಸದ್ಯ ಅವರು ಕೊಡುತ್ತಿರುವ ಕಾಳಿನಿಂದ ಆರೋಗ್ಯ ವರ್ಧನೆಗೆ ಏನೂ ಸಹಾಯ ವಾಗುವಂತಿಲ್ಲ. ಈ ಹೊಸಯೋಜನೆಯಿಂದ ಅನಾಯಾಸವಾಗಿ ಆರೋಗ್ಯ ವರ್ಧನೆಯಾಗಲಿದೆ; ಮತ್ತು ಕಾಳುಕಡ್ಡಿಗಳನ್ನುಪಯೋಗಿಸುವ ಪ್ರಮಾಣವೂ ಕಡಿಮೆ ಯಾಗಬಹುದಾಗಿದೆ. ಮತ್ತು ಈ ಆಡುಗಳ ಅಭಿವೃದ್ಧಿಗಾಗಿ ಹೆಚ್ಚಿಗೇನೂ ಪ್ರಯಾಸಪಡಬೇಕಾಗಿಲ್ಲ. ಅವುಗಳ ಆಹಾರ ಸುಲಭವಾಗಿ ಸಿಕ್ಕುವಂತೆ ಅನುಕೂಲ ಮಾಡಿಟ್ಟರೆ ಸಾಕು.

'ಆಡು ಮುಟ್ಟದ ಗಿಡವಿಲ್ಲ' ಎಂಬುದು ಗಾದೆಯ ಮಾತಾಗಿದೆ. ಬಹುಶಃ ಅಡವಿಯಲ್ಲಿ ತಾನಾಗಿಯೇ ಬೆಳೆದ ಹುಲ್ಲು ಗಿಡಗಳ ತೊಪ್ಪಲನ್ನು ತಿಂದು ಜೀವಿಸುವುದು ಅವುಗಳ ಗುಣಧರ್ಮ. ಇನ್ನೂ ವಿಶೇಷವೆಂದರೆ, ಆಡುಗಳಿಗೆ ದಪಡಿಯಿಂದ ಕಟ್ಟಲಿಕ್ಕೇ ಹಾಲು ಇಳಿಯುತ್ತದೆಂದು ಕೆಲವರು ಹೇಳುವುದುಂಟು. ಅಂದರೆ ಹೆಚ್ಚಾಗಿ ತಿಂದಷ್ಟು ಹೆಚ್ಚು ಹಾಲನ್ನು ಕೊಡುವ ಜಾತಿಯದು. ಅದರಿಂದ ಅಲ್ಪ ವೆಚ್ಚದಲ್ಲಿ ಅಡವಿಯನ್ನುಪಯೋಗಿಸಲು ಈ 'ಸಾಕುಗಾರ'ರಿಗೆ ಕಾಯಿದೆಯಿಂದ ಅನುಕೂಲತೆಯನ್ನು ಮಾಡಿಕೊಡಬೇಕು.

ಇನ್ನು ಸಿರಿವಂತರಾದವರು ಈಗ ದೇರಿ ಯೋಜನೆಗಳಲ್ಲಿ ಆಕಳು ಎಮ್ಮೆಗಳನ್ನು ಜೋಪಾನ ಮಾಡುತ್ತಿರುವಂತೆ ಆಡುಗಳ ಅಭಿವೃದ್ಧಿಯ ಸಲುವಾಗಿ ಇಂತಹ ಸಂಸ್ಥೆಗಳನ್ನು ತೆರೆದರೂ ಒಳಿತೇ.

ಆಡುಗಳ ಅಭಿವೃದ್ಧಿಗಾಗಿ ಇಷ್ಟೆಲ್ಲಾ ಹೇಳುವುದರ ಕಾರಣವೇನು ಗೊತ್ತಿದೆಯೇ? 'ಆಡು ದರಿದ್ರರ ಧೇನು' ಎಂಬುದಂತೂ ಸರಿಯೇ. ಆದರೆ ಆಕಳ ಹಾಲಿಗಿಂತಲೂ ಆಡುಗಳ ಹಾಲು ಹೆಚ್ಚು ಹಿತಕಾರಿ ಎಂಬುದು ಎಷ್ಟೋ ಜನರಿಗೆ ತಿಳಿದಿಲ್ಲ.

ಆಕಳು ಎಮ್ಮೆಗಳ ಹಾಲಿಗಿಂತಲೂ ಆಡಿನ ಹಾಲಿನಲ್ಲಿ ಸ್ನಿಗ್ಧತೆ ಮತ್ತು ಸಕ್ಕರೆಯ ಅಂಶ ಹೆಚ್ಚು; ಆದರೂ ಪಚನವಾಗಲಿಕ್ಕೆ ಬಹಳ ಹಗುರು, ಕೇವಲ ೧೫, ೨೦ ಮಿನಿಟುಗಳಲ್ಲಿ ಎಂದರೆ ಆಕಳ ಹಾಲಿನ ½ ಪಾಲು ಕಾಲದಲ್ಲಿ ಅರಗಿ ಬಿಡುತ್ತದೆ. ಆಕಳ ಹಾಲಿನಲ್ಲಿ ಆರು ಬಗೆಯ ಕ್ಷಾರಗಳಿರುತ್ತಿದ್ದರೆ, ಆಡಿನ ಹಾಲಿನಲ್ಲಿ ಒಂಭತ್ತು ಬಗೆಯ ಕ್ಷಾರಗಳಿರುವುವು. ಮಕ್ಕಳ ಎಲುಬಿನ ಬೆಳವಣಿಗೆಗೆ ಬೇಕಾಗುವ 'ಕ್ಯಾಲ್ಸಿಯಂ' ಪ್ರಮಾಣ ಆಡಿನ ಹಾಲಲ್ಲಿ ಹೆಚ್ಚಾಗಿ ಕಂಡುಬರುತ್ತಿದೆ; ಲೋಹದ ಅಂಶವಾದರೂ ಆಕಳ ಹಾಲಿಗಿಂತ ಎಂಟು ಹತ್ತು ಪಟ್ಟು ಹೆಚ್ಚಾಗಿರುತ್ತದ. ಎದೆ ಹಾಲನ್ನು ಕೊಡುವ ಹೆಣ್ಣು ಮಕ್ಕಳಿಗೆ ಆಡಿನ ಹಾಲು ಕುಡಿಸುವುದರಿಂದ, ಮೊಲೆಹಾಲಿನ ಪ್ರಮಾಣ ಹೆಚ್ಚುವುದಲ್ಲದೆ ಮಕ್ಕಳ ಆರೋಗ್ಯವೂ ಬೆಳೆಯುವುದು. ಆಕಳ ಹಾಲಿನಲ್ಲಿರುವ ಕ್ಷಯರೋಗದ ಕ್ರಿಮಿಗಳು ಆಡಿನ ಹಾಲಿನಲ್ಲಿ ಇರುವುದಿಲ್ಲೆಂದು ಪ್ರಯೋಗದಿಂದ ಕಂಡುಹಿಡಿದ್ದಾರೆ. ಈ ಹಾಲಿನಲ್ಲಿ ವ್ಹೊಟ್ಯಾಸಿಯಮ್ಮಿನ ಅಂಶವೂ ಚೆನ್ನಾಗಿ ಕಂಡುಬರುತ್ತಿದೆ. ಇಂತಹ ಸತ್ವವಾಯು ಆದರೆ ಲಘು ಪಾಚಕವಾದ ಆಡಿನ ಹಾಲನ್ನು ಮಕ್ಕಳಿಗೆ ಉಪಯೋಗಿಸುವುದಂತು ಬಹಳ ಒಳ್ಳೆಯದು. ಆಡಿನ ಹಾಲಿನಲ್ಲಿ ೧೦೦ಕ್ಕೆ ೫ರಂತೆ ಸಕ್ಕರೆಯ ಅಂಶವನ್ನು ಬೆರಸಿದರೆ ಸಶಕ್ತಳಾದ ತಾಯಿಯ ಹಾಲಿನಷ್ಟು ಈ ಹಾಲು ಹಿತಕರವಾಗುವುದು. ಇಂತಹ ಹಾಲಿನಿಂದ ಮಕ್ಕಳ ಆರೋಗ್ಯ ಬೆಳೆಯುವುದಲ್ಲದೆ, ಬಾಲಮೃತ್ಯು ವಿನ ಭಯವೂ ತಪ್ಪುವುದು. ಆಡಿನ ಹಾಲಿನಲ್ಲಿ ಕೆಲವು ತೊಪ್ಪಲಗಳ ಮೂಲಕ ಸಾವಧಿ ಶಕ್ತಿಯೂ ಬರುವದೆಂದು ಕೆಲವರ ಅಭಿಪ್ರಾಯವಿದೆ.

ಇಂತಹ ಮಹತ್ವದ ಆಹಾರವನ್ನು ಸೇವಿಸಲು ಕೆಲವರು ಮನಸ್ಸು ಸಹ ಮಾಡುವುದಿಲ್ಲ. ಏಕೆಂದರೆ, ಆ ಹಾಲಿಗೆ ಒಂದು ಬಗೆಯ ದುರ್ಗಂಧ ಬರುತ್ತಿದೆ. ಇದೇನೂ ಅಷ್ಟು ದೊಡ್ಡ ಆತಂಕವಲ್ಲ. ಕೆಲವೇ ದಿವಸಗಳ ರೂಢಿಯಿಂದ ಈ ಮೇಸಿಕೆ ಹೋಗಬಹುದಾಗಿದೆ. ಮತ್ತು ಯೋಗ್ಯ ಅಕ್ಕೆಕೆಯಲ್ಲಿಟ್ಟರೆ ಈ ದುರ್ಗಂಧವೂ ದೂರವಾಗಬಹುದು. ಅಲ್ಲದೆ, ಜಂಯೂಡು ಮೊದಲಾದುವುಗಳ ಹಾಲಿಗೆ ಯಾವ ಹೊಲಸು ವಾಸನೆಯೂ ಇರುವುದಿಲ್ಲ. ಎಂದ ಮೇಲೆ 'ದರಿದ್ರರ ಧೇನ' ವೆನಿಸಿರುವ ಆಡುಗಳ ಅಭಿವೃದ್ಧಿಗೆ ಭಾರತೀಯರೆಲ್ಲ ಮುಂದಾಗುವುದು ಅತ್ಯವಶ್ಯವಿದೆ. ಇದರಿಂದ, ಆಹಾರ ಧಾನ್ಯದ ಕೊರತೆಯು ಕಾಲುಪಾಲು ತಪ್ಪುವುದೆಂದು ಧಾರಳವಾಗಿ ಹೇಳಬಹುದಾಗಿದೆ; ಅಲ್ಲದೆ 'ತುಸು ರೊಕ್ಕದಲ್ಲಿ ಹಬ್ಬ ಹಸನೂ ಆಗುವುದು'

(ಜಯಕರ್ನಾಟಕ)

ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್, ಮಡಿಕೇರಿ.

ಮಹಾಜನರಲ್ಲಿ ವಿನಂತಿ.

ನಮ್ಮ ಫ್ರೇಜರ್‌ಪೇಟೆ ಕಾರ್ಖಾನೆಯಲ್ಲಿ ಈಗಾಗಲೇ ಮೂಳೆಗೊಬ್ಬರ ತಯಾರಾಗುತ್ತಿರುವುದು ಎಲ್ಲರಿಗೂ ತಿಳಿದ ವಿಷಯ. ಈ ಸಂದರ್ಭದಲ್ಲಿ ನಿಮ್ಮ ನಿಮ್ಮ ಗ್ರಾಮಗಳಲ್ಲಿ ಸತ್ತ ದನಗಳ ಮತ್ತು ಇತರ ಪ್ರಾಣಿಗಳ ಮೂಳೆಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಜಮಾಯಿಸಿ ಮೇಲಿನ ವಿಳಾಸಕ್ಕೆ ತಿಳಿಸಿದಲ್ಲಿ ಅದನ್ನು ಅದರ ಬೆಲೆ ಕೊಟ್ಟು ಸಾಗಿಸುವ ಏರ್ಪಾಡನ್ನು ಮಾಡುತ್ತೇವೆ. ಅಥವ ಲಾರಿಗಟ್ಟಲೆ ಜಮಾಯಿಸಿದವರು ನಮ್ಮ ಫ್ರೇಜರ್‌ಪೇಟೆ ಕಾರ್ಖಾನೆಗೆ ತಂದು ಕೊಟ್ಟಲ್ಲಿ ಮಣ 1ರ 0-12-0 ಯಂತೆ ಬೆಲೆಗೆ ತೆಗೆದುಕೊಳ್ಳಲಾಗುವುದು.

ಈಗಾಗಲೇ ತಯಾರಾಗಿರುವ ಮೂಳೆ ಗೊಬ್ಬರಕ್ಕೆ ಪರ್ಮಿಟ್‌ದಾರರ ಬರಕೊಂಡಲ್ಲಿ ಅಗ್ರಸ್ಥಾನವನ್ನನುಸರಿಸಿ ಬಟವಾಡೆ ಮಾಡಲಾಗುವುದು.

ಸೂಚನೆ:—ನಮ್ಮ ಕಂಪೆನಿಯ ಶೇರುದಾರರಿಗೆ ಹೆಚ್ಚಿನ ರಿಯಾಯಿತಿ ಮತ್ತು ಮೊದಲಿನ ಹಕ್ಕು ಕೊಡಲಾಗುವುದು.

ಮಡಿಕೇರಿ,
ತಾ 19-5-49.

ಕೆ. ಕೆ. ತಿಮ್ಮಯ್ಯ,
ಮ್ಯಾನೇಜಿಂಗ್ ಡೈರೆಕ್ಟರ್.

ಎಂಪೈರ್ ಆಫ್ ಇಂಡಿಯಾ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

48ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು.	ಒಟ್ಟು ಆದಾಯ	1,07,09,000	ರೂಪಾಯಿ
	ಜಾರಿಯಲ್ಲಿರುವ ವಿಮೆ	17,74,52,000	„
	ಆಸ್ತಿ	6,67,60,000	„
ಕಂಪನಿಯು ಆದಿಯಲ್ಲಿ ಕೊಟ್ಟ ಕ್ಲೈಮುಗಳು		8,83,62,000	„

ಶಾಖಾ ಕಛೇರಿ: ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು.

ಏಜೆನ್ಸಿ ಅರ್ಜಿಗಳನ್ನು ಸ್ವಾಗತಿಸಿದೆ.

ಪ್ರಧಾನ ಕಛೇರಿ: ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ

ಈ ವಾರದ ಕಥೆ.

"ಗೃಹಿಣೀ ಗೃಹಮುಚ್ಯತೇ."

ಲೇ:—"ಪ್ರೇಮಯೋಗಿ" ಮಡಿಕೇರಿ.

ಒಂದಾನೊಂದು ಕಾಲದಲ್ಲಿ ಒಬ್ಬ ತಂದೆಗೆ ಎರಡು ಹೆಣ್ಣು ಮಕ್ಕಳಿದ್ದರು. ಅವರು ಬೆಳೆದು ದೊಡ್ಡವರಾದಾಗ ಒಬ್ಬಾಕೆಯು ಮಿಲಿಯಾಧಿಪತಿ ವ್ಯಾಪಾರಸ್ಥನೊಬ್ಬನನ್ನು ಮದುವೆಯಾಗಿ ನಗರದಲ್ಲಿ ವಾಸಿಸ ತೊಡಗಿದಳು. ಮತ್ತೊಬ್ಬಳು ಬಡವನಾದ ಕಲಾಕಾರನೊಬ್ಬನನ್ನು ಮದುವೆಯಾಗಿ ಬಡವರ ಬೀದಿಯಲ್ಲಿ ಜೀವಿಸ ತೊಡಗಿದಳು.

ವ್ಯಾಪಾರಸ್ಥನನ್ನು ಮದುವೆಯಾದ ಸಹೋದರಿಯು ಶ್ರೀಮಂತೆಯೆಂದು ಗಣಿಸಲ್ಪಡುತ್ತಿದ್ದಳು. ಆಕೆಗೆ ವಾಸಿಸಲು ಅರಮನೆಯಂಥಾ ಮನೆ ಇತ್ತು. ಉಡಲು ಅತ್ಯುತ್ತಮ ಬೆಲೆಬಾಳುವ ಒದವೆ ವಸ್ತ್ರಗಳಿದ್ದವು. ಮನೆಯೊಳಗೆ ಚಿನ್ನ ಬೆಳ್ಳಿಯ ಪಾತ್ರೆಗಳು ತುಂಬಿದ್ದವು. ನೆಲಕ್ಕೆ ಅತೀ ಬೆಲೆ ಬಾಳುವ ರತ್ನಗಂಬಳಿ ಹಾಸಲ್ಪಟ್ಟಿತ್ತು. ಆಕೆಗೆ ಮಗುವೊಂದಿತ್ತು. ಅದು ಆ ಐಶ್ವರ್ಯದ ಕೃತ್ರಿಮ ಜಗತ್ತಿನಲ್ಲಿ ನೈಸರ್ಗಿಕವಾದ ಒಂದೇ ವಸ್ತುವಿನಂತೆ ಓಡಾಡುತ್ತಿತ್ತು. ಅಂಗಳದ [illegible] ಯೂ ಇರಲಿಲ್ಲ. ಮನೆಯಲ್ಲಿ [illegible] ಆಳುಗಳಿದ್ದರು, ಎಲ್ಲಿ [illegible] ಶೋಭೆಗಾಗಿ [illegible] ದಿಂದ ಕೂಡಿದ್ದು! [illegible] ಗಳಿಂದ ಶೋಭಿತವಾದ ಕಿವಾಡುಗಳಲ್ಲಿ ಬಣ್ಣದ ಆಕೃತಿಯ ಗೂಡುಗಳಲ್ಲಿ ಪುಸ್ತಕಗಳು ಮಿನುಗುತ್ತಿದ್ದವು. ಮನೆಯ ಎಲ್ಲಾ ಪಾಟುಗಳಿಗೂ ಬೀಗದ ಏರ್ಪಾಡಿತ್ತು. ಎಲ್ಲಾ ಸಾಮಾನು ಸಾಹಿತ್ಯಗಳೂ ಅಲಂಕರಿಸಲ್ಪಟ್ಟಿದ್ದವು. ಯಾರಾದರೂ ಅತಿಥಿಗಳು, ಸ್ನೇಹಿತರು ಬಂದಾಗ ಮಾತ್ರ ಇವು ತಮ್ಮ ಹಿಗ್ಗಳಿಕೆಯನ್ನು ಹೆಚ್ಚಿಸಲು ಹೊರಗೆ ಬರುತ್ತಿದ್ದವು. ಮನೆಯ ಕುರ್ಚಿ ಮೇಜುಗಳು ಕೂಡ ಅಂದೇ ಉಪಯೋಗಿಸಲ್ಪಡುತ್ತಿದ್ದವು. ಅತಿಥಿಗಳಿಲ್ಲದಾಗ ಈ ಅಮೂಲ್ಯ ಬೆಲೆಯ ಮೇಜು ಕುರ್ಚಿಗಳಿಗೆ ಮುಸುಕು ಹಾಕಲ್ಪಡುತ್ತಿತ್ತು.

ಮನೆಯಲ್ಲಿ ಬೀಗ ಹಾಕದೆ, ಬಂಧನವಿಲ್ಲದೆ ಇದ್ದ ಒಂದೇ ವಸ್ತುವೆಂದರೆ ಆ ಮಗು! ಆದರೆ ಆ ಮಗುವಿಗೂ ಪೂರ್ಣ ಸ್ವಾತಂತ್ರ್ಯವಿರಲಿಲ್ಲ. ವಿಚಿತ್ರ ಬಣ್ಣಗಳ, ನಾನಾ ರೀತಿಯ ಬಟ್ಟೆಬರೆಗಳು ಆ ಮಗುವನ್ನು ಯಾವಾಗಲೂ ಒಂದು ವಿಧದ ಜೈಲಿನಲ್ಲೇ ಇರಿಸಿದ್ದವು! ಮಗುವನ್ನು ನೋಡಿಕೊಳ್ಳಲು ಆಳೊಬ್ಬಳಿದ್ದಳು. ಅದಕ್ಕೆ ಚಿತ್ರವಿಚಿತ್ರ ಉಡಿಗೆ ತೊಡಿಸುವದೇ ಆಕೆಯ ಕೆಲಸ. ಮಗುವಿಗೆ ತನ್ನ ಮನಸ್ಸಿನಂತೆ ಆಟವಾಡುವ ಹಕ್ಕೂ ಇರಲಿಲ್ಲ! ಮಗುವಿನ ಬಟ್ಟೆ ಬರೆಗಳಾಗಲೀ ಮನೆಯ ಇತರ ವಸ್ತುಗಳಾಗಲೀ ಬಹು ಬೆಲೆಯುಳ್ಳವೇನೋ ಹೌದು. ಬಹು ಬೆಲೆಯುಳ್ಳ ಕಾರಣವೇ ಅವುಗಳನ್ನು ಆಗಾಗ್ಯ ಒಗೆಯುವದಾಗಲೀ, ಪರಿಶುದ್ಧಗೊಳಿಸುವದಾಗಲೀ ಸಾಧ್ಯವಿರಲಿಲ್ಲ. ಆರ್ಥಿಕ ದೃಷ್ಟಿಯಿಂದ ಬಹು ಬೆಲೆಯುಳ್ಳದಾಗಿದ್ದರೂ ಶುಚಿತ್ವದ ದೃಷ್ಟಿಯಿಂದ ಅವಕ್ಕೆ ಬೆಲೆ ಇರಲಿಲ್ಲ. ಆದರೆ ಮನೆಯಾಕೆಗೆ ಇದರ ಗೊಡವೆ ಇರಲಿಲ್ಲ. ನೆರೆಮನೆಯವರಿಗೆ ಬೆಲೆಯುಳ್ಳವೆಂದೂ, ಗಂಭೀರವೆಂದೂ ತೋರಿದರೆ ಅದೇ ಸಾಕು.

ಅತಿಥಿಗಳು ಬಂದ ದಿನ ಆಕೆಯ ಮನೆಯಲ್ಲಿ ಆಡಂಬರವೇ ಆಡಂಬರ. ಆಳುಗಳು ಅತ್ತಿತ್ತ ಓಡಾಡುವರು. ಹಾಸಿಗೆಗಳ ಮೇಲೆ ಹೊಸ ಬೆಲೆಬಾಳುವ ಹೊದಿಕೆಗಳು ರಂಜಿಸುವವು. ಚಿನ್ನ ಬೆಳ್ಳಿಯ ಪಾತ್ರೆಗಳು ಮೇಜನ್ನಲಂಕರಿಸುವವು. ಮನೆಯವರು ಆ ಸಮಯದಲ್ಲಿ ಮುಖವನ್ನು ಪಾರೆ ಬಿಡುವದೂ ಇತ್ತು! ಅತಿಥಿಗಳು ಹೋದನಂತರ ವಸ್ತುಗಳೆಲ್ಲವೂ ತಮ್ಮ ತಮ್ಮ ಗುಪ್ತಸ್ಥಾನಗಳಲ್ಲಿಡಲ್ಪಡುವವು!

ಈ ಶ್ರೀಮಂತ ಸಹೋದರಿಗೆ ಅತ್ಯಮೂಲ್ಯ, ಬೆಲೆಬಾಳುವ ಮುತ್ತಿನ ಹಾರವೊಂದಿತ್ತು. ಒಂದು ದಿನ ಆಕೆಯು ಅದನ್ನು ಹಾಕಿಕೊಂಡಿದ್ದಾಗ ಕಲಾವಿದನ ಮಡದಿಯಾದ ತಂಗಿಯು ಅದನ್ನು [illegible] ಅದನ್ನು ಕೈಯಲ್ಲಿ ಹಿಡಿದುಕೊಂಡು, ಅಕ್ಕನನ್ನು ಕುರಿತು, "ಇದರ ಪ್ರತಿ ಮುತ್ತಿನಲ್ಲಿಯೂ ಮಹಾ ಚರಿತ್ರೆ ಅಡಗಿರಬಹುದು. ಈ ಮಾಲೆಯನ್ನು ಉದ್ದ ಮಾಡುತ್ತಾ ಹೋಗು. ನೀನು ಹೆಚ್ಚಿಗೆ ಸೇರಿಸುವ ಪ್ರತಿ ಮುತ್ತಿನ ಪರಿಚಯವೂ ನಿನಗಾಗುವದಲ್ಲದೆ ಪ್ರತಿಯೊಂದನ್ನೂ ನೀನು ಅನನ್ಯವಾಗಿ ಪ್ರೀತಿಸುವೆ' ಎಂದಳು.

ಅಕ್ಕನು ಗರ್ವದಿಂದ ಹೇಳಿದಳು,—'ನೀನು ಹುಚ್ಚಿ. ಇಂಥಾ ಹತ್ತಾರು ಮಾಲೆಗಳನ್ನು ಏಕ ಕಾಲದಲ್ಲಿ ತೆಗೆಯಲು ಶಕ್ತಿ ಇರುವಾಗ ಒಂದೊಂದು ಮುತ್ತನ್ನು ಜೋಡಿಸುವ ಅವಶ್ಯಕತೆ ಎಲ್ಲಿ? ನಾನು ಆ ಮುತ್ತುಗಳನ್ನು ನೋಡುವದೇ ಇಲ್ಲ. ಅವುಗಳನ್ನು ಧರಿಸಿದರೆ ಸಮಾಜದಲ್ಲಿ ಒಂದು ಗೌರವವಿದೆ. ಅದಕ್ಕಾಗಿ ಅವುಗಳನ್ನು ಧರಿಸುವೆನು' ಎಂದಳು.

ಶ್ರೀಮಂತ ಸಹೋದರಿಯ ಗಂಡನು ಒಳ್ಳೆ ಮನುಷ್ಯನಾಗಿದ್ದನು. ತನ್ನ ತಾಯಿಯ ಮನೆಯನ್ನು ಈತನು ಬಡಜನರ ಉಪಯೋಗಕ್ಕಾಗಿ ಛತ್ರವಾಗಿ ಮಾಡಿಸಿದ್ದನು. ಜನರೆಂದರೆ ಆತನಿಗೆ ಪ್ರಾಣ. ಆತನು ಅಲ್ಲಿಗೆ ದಿನರಾತ್ರೆ ಹೋಗಿ ಜನರ ಕಷ್ಟ ಸುಖಗಳಲ್ಲಿ ಭಾಗಿಯಾಗುತ್ತಿದ್ದನು. ಹಾಗೆಯೇ ತನ್ನ ಹೆಂಡತಿ ಇರುವ ಈ ಅರಮನೆಯಲ್ಲೂ ಅದೇ ಪದ್ಧತಿಯನ್ನು ತರಬೇಕೆಂದು ಆತನು ಯತ್ನಿಸಿದನು. ಬಡ ಜನರಿಗೂ ಅದರಲ್ಲಿ ಪ್ರವೇಶ ದೊರೆಯುವಂತೆ ಮಾಡಲು ಪ್ರಯತ್ನ ಮಾಡಿದನು. ಆದರೆ ಹೆಂಡತಿಯಿಂದಾಗಿ ಜಯಶೀಲನಾಗಲಿಲ್ಲ. ಆ ಮನೆಯು ಶ್ರೀಮಂತರ ಮನೆಯಾಗಿ ಬಡ ಜನರ ಸಂಪರ್ಕದಿಂದ ದೂರ ಉಳಿಯಿತು. ಜನಾನುರಾಗಿ ವ್ಯಾಪಾರಸ್ಥನಿಗೂ ಈ ಮನೆ ಆತನ ಶಯನ ಗೃಹವಾಯಿತೇ ವಿನಹ ಅದರಲ್ಲಿ ಯಾವ ಪ್ರೀತಿಯೂ ಇರಲಿಲ್ಲ.

ಮಗುವು ದಿನ ದಿನಕ್ಕೆ ಬೆಳೆಯುತ್ತಿತ್ತು. ಮಗುವನ್ನು ಬೇರೆ ಮಕ್ಕಳ ಕೆಟ್ಟ ಸಂಘಕ್ಕೆ ಬಿಡದೆ ಖಾಸಗಿ ಶಾಲೆಗೆ ಕಳುಹಿಸಲಾಯಿತು. ತಾನು ಶ್ರೀಮಂತನೆಂಬ ಅಹಂಭಾವದಿಂದಲೇ ಮಗು ಬೆಳೆಯ ತೊಡಗಿತು. ಆಕೆಯ ಸಿರಿವಂತಿಕೆಯ ಮನೆಗೆ ಜನರೇ ಬರುತ್ತಿರಲಿಲ್ಲ. ಒಮ್ಮೊಮ್ಮೆ ಆಕೆಗೆ ಏಕಾಂಗಿ ಜೀವನವು ಬೇಸರ ಹಿಡಿಸಿದರೂ ತಾನು ದೊಡ್ಡವಳೆಂಬ ಭಾವನೆಯು ಅದನ್ನು ಸಹಿಸುವಂತೆ ಮಾಡುತಿತ್ತು. ತನ್ನ ತಂಗಿಯ ಮನೆಗೆ ಹೋಗಲೂ ಆಕೆ ನಾಚುತ್ತಿದ್ದಳು. ಅದರಂತೇ ತಂಗಿಯೂ ಆಕೆಯಲ್ಲಿಗೆ ಭಯದಿಂದ ಆಗಾಗ್ಗೆ ಬರುತ್ತಿರಲಿಲ್ಲ

ಕಲಾವಿದನನ್ನು ಮದುವೆಯಾದ ತಂಗಿಯ ಮನೆಯು ಚಿಕ್ಕದಾಗಿತ್ತು. ಅದರಲ್ಲಿ ಬೆಲೆಬಾಳುವ ಯಾವ ವಸ್ತುಗಳೂ ಇರಲಿಲ್ಲ. ಮನೆಯಲ್ಲಿ ಅನಾವಶ್ಯಕ ವಸ್ತುಗಳಿರಲಿಲ್ಲ. ಸೌಂದರ್ಯಕ್ಕಾಗಲೀ, ತೋರಿಕೆಗಾಗಲೀ ಯಾವುದೇ ಸಾಮಾನಿರಲಿಲ್ಲ. ಕೆಲಸಕ್ಕೆ ಬರುವ ನಾಲ್ಕಾರು ಕುರ್ಚಿಗಳು, ಮೇಜು ಇತರ ಉಪಯುಕ್ತ ವಸ್ತುಗಳಿದ್ದವು. ಆ ಬಡವನಲ್ಲಿಗೆ ಅನೇಕ ಜನರು ಬರುತ್ತಿದ್ದರು. ಎಲ್ಲರಿಗೂ ಅಲ್ಲೇ ಊಟ. ಆಡಂಬರದ ಅಡಿಗೆ ಇಲ್ಲ. ಯಾವಾಗಲೂ ಉಪಯೋಗಿಸುವ ಪದಾರ್ಥಗಳೇ! ಆಕೆಯ ಪಾತ್ರೆ ಬಟ್ಟಲುಗಳು ಕಡಿಮೆ ಬೆಲೆಯವು. ಕೆಲವು ವೇಳೆ ಎಲೆಗಳನ್ನೂ ಉಪಯೋಗಿಸುತ್ತಿದ್ದರು. ಮೇಜಿಗೂ ಕೂಡ ತಾಳಿಕೆಯ ಎಣ್ಣೆ ಬಟ್ಟೆ (oil cloth) ವಿನಹ ಬೇರಿರಲಿಲ್ಲ

'ರಾತ್ರಿ ಹಗಲೆನ್ನದೆ ಬರುವ ಈ ಜನರನ್ನು ನೀನು ಹೇಗೆ ಸಹಿಸುವೆ?' ಒಂದು ದಿನ ಶ್ರೀಮಂತ ಸಹೋದರಿಯು ಕೇಳಿದಳು.

'ಅದರಲ್ಲೇನು? ಎಂದಿನಂತೆಯೇ ಅಂದೂ ಕೂಡ. ಅತಿಥಿಗಳು ಬಂದಾಗ ಹೆಚ್ಚಿನ ಆಡಂಬರದ ತೋರಿಕೆ ಏಕೆ? ನಾವು ಊಟ ಮಾಡುವದನ್ನೇ ಪ್ರೀತಿಯಿಂದ ಅವರಿಗೆ ಬಡಿಸಿದರಾಯಿತು. ಕೃತ್ರಿಮ ಸೋಗನ್ನು ಹಾಕದೆ ನಿಜ ಸ್ಥಿತಿಯಂತೆ ವರ್ತಿಸುವದು ಎಂದೂ ಪ್ರಿಯ ಕರವಲ್ಲ.'

'ಈ ರೀತಿ ನಿನ್ನ ಮನೆ ಬಾಗಿಲನ್ನು ಎಲ್ಲರಿಗೂ ತೆರೆದಿರುವದೇ ನಿಮ್ಮ ಬಡತನಕ್ಕೂ, ಕಷ್ಟಗಳಿಗೂ ಕಾರಣ. ನೀನು ಯೋಗ್ಯ ಗೃಹಿಣಿ ಎನಿಸೆ' ಶ್ರೀಮಂತ ಅಕ್ಕನೆಂದಳು.

'ಯೋಗ್ಯ ಗೃಹಿಣಿ ಎಂದರೆ ಉತ್ತಮ ಉಡುಪು, ಶ್ರೀಮಂತಿಕೆಯಲ್ಲ. ಬಡತನವಾದರೂ ಹತ್ತು ಜನರಿಗೆ ಉಪಯೋಗವಾಗುವ ಬಾಳು ಯೋಗ್ಯವಲ್ಲವೇ? ಮರದಡಿಯಲ್ಲಿ ಜೀವಿಸಿದರೂ ಗಂಡ, ಹೆಂಡತಿ, ಮಕ್ಕಳಲ್ಲಿ ಅನ್ಯೋನ್ಯ ಪ್ರೀತಿ ಇದ್ದರೆ ಅದೇ ಸ್ವರ್ಗ' ತಂಗಿ ಎಂದಳು.

ಶ್ರೀಮಂತ ಸಹೋದರಿಯು ತನ್ನ ಮನೆಗೆ ತೆರಳಿದ ನಂತರ ಇವರ ಸಂಭಾಷಣೆಯನ್ನು ಕೇಳುತ್ತಿದ್ದ ತೆಳ್ಳಗಿನ ಶರೀರದ ಕಲಾವಿದನೊಬ್ಬನು ಹೇಳತೊಡಗಿದನು.

'ನಿನ್ನ ಶ್ರೀಮಂತ ಸಹೋದರಿಯು ಕೃತ್ರಿಮ ಜೀವನಕ್ಕೆ ಬಲಿಯಾಗಿದ್ದಾಳೆ. ನಿನ್ನಲ್ಲಿಗೆ ಬಂದಾಗಲೂ ಆಕೆಗೆ ಕೂರಲು ಜಿಗುಪ್ಸೆ. ಕೂತರೆ ಬಟ್ಟೆ ಮಾಸಿತೋ ಎಂಬ ಭಯ. ಆಕೆಯ ಕುಟುಂಬ ಜೀವನ ಜೈಲಿನಂತೆ. ಆಕೆಯ ಮನೆ ಅರಮನೆಯಾಗಿದ್ದರೂ ಅದು ಕಲ್ಲು ಸಿಮೆಂಟಿನ ಜೀವರಹಿತ ಮನೆ ಮಾತ್ರ. ನಿನ್ನದು ಹಾಗಲ್ಲ. ಬಡಗುಡಿಸಲಾದರೂ ಪ್ರೇಮಸಿಂಚಿತ ಕುಟುಂಬ. ನಿನ್ನ ಕುಟುಂಬವು ಗಂಡ, ಹೆಂಡತಿ, ಮಕ್ಕಳ ಮೇರೆಯನ್ನು ದಾಟಿ ಜನಗಣವನ್ನು ಮುಟ್ಟಿದೆ. ಅದೇ ಜೀವನದ ಸರ್ವಸ್ವ.

ಅನೇಕ ಹೆಂಗಸರು ಜನರೇನೆನ್ನುವರೋ ಎಂಬ ಹೆದರಿಕೆಯಿಂದ ತೋರಿಕೆಗೆ ಸೋಗು ಹಾಕುತ್ತಾರೆ. ಅದು ತಪ್ಪು. ತಮ್ಮ ಸ್ಥಿತಿಯನ್ನು ಇದ್ದಕ್ಕಿದ್ದಂತೆ ತೋರಿಸಿಕೊಳ್ಳುವದೇ ಹಿತ. ಸರಳ ಜೀವನ ನಡೆಸಿ ಬಾಗಿಲು ತಟ್ಟಿದವನಿಗೆ ಬಾಗಿಲು ತೆರೆದು ಉಪಚರಿಸುವದು ಮನುಷ್ಯನ ಪಾಲಿನ ಭಾಗ್ಯವಾಗಿದೆ. ಹೆಂಗಸಿನ ಹೃದಯವು ಇರಬೇಕಾದಲ್ಲಿದ್ದರೆ ಆಕೆಯ ಕಡಿಮೆ ಕ್ರಯದ ಬಟ್ಟೆಗಾಗಲೀ, ಆಕೆಯ ಬಡತನಕ್ಕಾಗಲೀ ಯಾರೂ ಅಪಹಾಸ್ಯ ಮಾಡಲಾರರು. ಗಂಡನನ್ನು ಕ್ಲಬ್ಬಿಗೆ ಕಳುಹಿಸಿ, ಮಕ್ಕಳನ್ನು ಬೋರ್ಡಿಂಗಿನಲ್ಲೋ ಇಲ್ಲವೇ ಸೆರೆ ಮನೆಯ ಆಶ್ರಯಕ್ಕೋ ತಳ್ಳಿ ತನ್ನದು ಏಕಾಂಗಿ ಜೀವನವೆಂದರೆ ಅದು ಹೆಂಗಸಿನ ತಪ್ಪು. ಮನೆಯನ್ನು ನಗೆಯ ತವರು ಮನೆಯಾಗಿ, ಶಾಂತಿಯ ನೆಲೆವೀಡಾಗಿ, ಗಂಡನ ಉದ್ಯಾನವಾಗಿ ಮಕ್ಕಳ ಸ್ವರ್ಗವಾಗಿ ಮಾಡುವದು ಹೆಂಗಸಿನ ಕೈಯಲ್ಲಿದೆ. 'ಗೃಹಿಣೀ ಗೃಹಮುಚ್ಯತೇ' ಅಲ್ಲವೇ?'

ಒಳ್ಳೆ ಕ್ವಾಲಿಟಿ. ಬೆಡ್ಡಿಂಗ್ ಕ್ಲಾತ್. ಬೆಲೆ ಸುಲಭ.

ನಮ್ಮಲ್ಲಿ ಒಳ್ಳೆ ತರನಾದ ಜಮಖಾನ (ದಪ್ಪ ಬಟ್ಟೆ) ಗಳೂ, ದುಪಟಿಗಳೂ, ಚಕ್ಕು ಕೋಟಿಂಗ್ ಗಳೂ ಸುಲಭ ಬೆಲೆಯಲ್ಲಿ ದೊರೆಯುತ್ತವೆ.

ವಿವರಗಳಿಗೆ:—

G. CHOUDAIAH & Bro.

MANUFACTURERS AND CLOTH MERCHANTS

3-1 *Main Road Dodballapur M. S. R.*

ವೀರಾಜಪೇಟೆಗೆ 'ಕೊಡಗು' ಪತ್ರಿಕೆಯ ಏಜೆಂಟರು ಶ್ರೀ ಟಿ. ಎನ್. ಗೋವಿಂದರಾಜುರವರು.

ಪಾನನಿರೋಧ ಏಕೆ?

ಆಧುನಿಕ ಪಾನೀಯಗಳು.

[ಪಾನನಿರೋಧವು ಹಿಂದೂದೇಶದ ಮುಂದಿರುವ ಮಹಾ ಪ್ರಶ್ನೆಗಳಲ್ಲೊಂದು. ಕೊಡಗೂ ಕೂಡ ಈ ತತ್ವವನ್ನನುಸರಿಸಿ ಮದ್ಯ ಪಾನೀಯಗಳ ನಿಯಂತ್ರಣವನ್ನು ಜಾರಿಗೆ ತಂದಿದೆ. ಆದರೂ ಪಾನನಿರೋಧದ ಆವಶ್ಯಕತೆ ಏನು ಎಂಬ ವಿಚಾರ ಎಲ್ಲರಿಗೂ ತಿಳಿದಿರಲಾರದು. ಈ ವಿಚಾರದಲ್ಲಿ ಭಾರತ ರಾಜ್ಯಘಟನಾ ಸಭೆಯ ಉಪಾಧ್ಯಕ್ಷರಾದ ಶ್ರೀ ಹೆಚ್. ಸಿ. ಮುಖರ್ಜಿಯವರು ಬರೆದ ಪುಸ್ತಕದಿಂದ ಪ್ರಮುಖಾಂಶಗಳನ್ನು ವಾಚಕರ ಅವಗಾಹನೆಗೆ ಪ್ರತಿವಾರ ಶ್ರೀ ಬಿ. ಡಿ. ಗಣಪತಿಯವರು ಕೊಡುವರು.]

ಮಾದಕ ಪಾನೀಯಗಳ ಶೋಧನೆ ಪ್ರಥಮವಾಗಿ ಎಲ್ಲಿ, ಯಾವಾಗ ಆಯಿತೆಂಬುದು ತಿಳಿದು ಬಂದಿಲ್ಲ. ಆದರೆ ಅತಿ ಪುರಾತನವಾದ ಈಜಿಪ್ಟ್, ಚೈನಾ, ಹಿಬ್ರೂ ಮತ್ತು ಹಿಂದೂದೇಶಗಳ ಬರವಣಿಗೆಗಳಲ್ಲಿ ಕುಡುಕತನದ ಪರಿಣಾಮ; ಅದನ್ನು ನಿಲ್ಲಿಸಲು ಕೈಕೊಂಡ ಏರ್ಪಾಡುಗಳ ವಿಚಾರ ಉಲ್ಲೇಖವಿದೆ. ೫೦೦೦ ವರ್ಷಗಳಿಗೂ ಹಿಂದೆ ಜನರು ದ್ರಾಕ್ಷೆಯಿಂದ ಸಾರಾಯಿ, ಬಾರ್ಲಿಯಿಂದ ಬೀರು ಮೊದಲಾದ ಪಾನೀಯಗಳನ್ನು ಮಾಡುತ್ತಿದ್ದ ವಿಧಾನಗಳನ್ನು ಚಿತ್ರಿಸುವ ಕೆತ್ತನೆ ಕಲ್ಲುಗಳು ಈಜಿಪ್ಟಿನಲ್ಲಿವೆ. ಅತೀ ಪುರಾತನವಾದ ಗೋರಿಯೊಂದರ ಮೇಲೆ ಈಜಿಪ್ಟಿನಲ್ಲಿ ಈ ರೀತಿ ಬರೆಯಲಾಗಿದೆ. 'ಈ ಯುವಕನ ಜೀವನವು ಕುಡುಕತನದ ಫಲವಾಗಿ ಶೀಘ್ರ ಕೊನೆಗೊಂಡಿತು.' ಈಜಿಪ್ಟಿನಲ್ಲಿ ಅಲ್ಲಲ್ಲಿ ತೋರುವ ಕಲ್ಲಿನ ಮೇಲಿನ ಬರವಣಿಗೆಗಳು ಕುಡುಕತನದ ಬಗ್ಗೆ ಎಚ್ಚರಿಕೆಯನ್ನು ಹೇಳುತ್ತಿವೆ.

ಈಜಿಪ್ಟಿನ ಆ ಸಮಯದಲ್ಲೇ ಚೀನೀಯರೂ ಕೂಡ ದ್ರಾಕ್ಷಿಯಿಂದ ಮದ್ಯವನ್ನು ಇಳಿಸುವದನ್ನು ಕಂಡು ಹಿಡಿದಿದ್ದರು. ಸುಮಾರು ೪೦೦೦ ವರ್ಷಗಳ ಹಿಂದೆ ಚೈನಾದ ಚಕ್ರವರ್ತಿಯೊಬ್ಬನು ಮಾದಕ ಪಾನೀಯಗಳನ್ನು ಸೇವಿಸ ಕೂಡದೆಂದು ಆಜ್ಞೆ ಮಾಡಿದ್ದನೆಂದು ಫಾರರ್ ಎಂಬವರು ಬರೆದ ಪುಸ್ತಕ ಒಂದರಿಂದ ತಿಳಿಯಬರುತ್ತದೆ. ಬತ್ತದಿಂದ ಸಾರಾಯಿ ಮಾಡುವದನ್ನು ಇಟಾಯಿ ಎಂಬ ಚೀನಾ ಕ್ಷ ವ್ಯವಸಾಯಗಾರನೊಬ್ಬನು ಕ್ರಿಸ್ತನು ಹುಟ್ಟುವ ೨೨೦೭ ವರ್ಷಗಳ ಮೊದಲು ಕಂಡುಹಿಡಿದನು. ಚೈನಾದ ಆಗಿನ ಚಕ್ರವರ್ತಿ ಟಾ ಯು ಬತ್ತದಿಂದ ಸಾರಾಯಿ ಇಳಿಸುವದನ್ನು ನಿಶೇಧಿಸಿ ಆ ತಪ್ಪು ಮಾಡಿದವರಿಗೆ ಕಠಿನ ಶಿಕ್ಷೆಯ ಏರ್ಪಾಡು ಮಾಡಿದ್ದನು. ಇಂಥಾ ನಿಯಮಗಳಿದ್ದೂ ಕುಡುಕತನವು ಮೇರೆ ಮೀರಿ ಚೈನಾದಲ್ಲಿ ಹಬ್ಬಿದ ಕಾರಣ ನಂತರದ ಚಕ್ರವರ್ತಿಯೊಬ್ಬನು ಕ್ರಿಸ್ತ ಹುಟ್ಟುವ ಮೊದಲು ಸುಮಾರು ೧೧೦೦ ವರ್ಷಗಳ ಹಿಂದೆ ಚೈನಾದಲ್ಲಿಯ ದ್ರಾಕ್ಷೆ ಬಳ್ಳಿಗಳನ್ನೆಲ್ಲಾ ನಾಶ ಮಾಡುವ ಆಜ್ಞೆ ಮಾಡಿದ್ದನು. ಆ ನಂತರದಿಂದ ಚೈನಾದಲ್ಲಿ ದ್ರಾಕ್ಷೆಯಿಂದ ಸಾರಾಯಿ ಮಾಡುವ ಪದ್ಧತಿಯು ಪುನಹ ತಲೆ ಎತ್ತಲಿಲ್ಲ.

ಬೈಬಲಿನಲ್ಲಿ ದ್ರಾಕ್ಷೆಯಿಂದ ತಯಾರಿಸಿದ ಪಾನೀಯದ ಸೇವನೆಯ ಬಗ್ಗೆ ಅಲ್ಲಲ್ಲಿ ಉಲ್ಲೇಖಗಳಿವೆ. ಸುಮಾರು ೪೦೦೦ ವರ್ಷಗಳ ಹಿಂದೆ ಇದ್ದ ನೋವಾ ಎಂಬುವವನು ಕುಡಿದ ಮತ್ತನಾಗಿದ್ದ ಉಲ್ಲೇಖವಿದೆ.

ಕುಡುಕತನವನ್ನು ನಿಷೇಧಿಸುವ ಉಲ್ಲೇಖಗಳು ಚತುರ್ವೇದಗಳಲ್ಲಿ ಎಲ್ಲದಕ್ಕಿಂಥಲೂ ಪುರಾತನವಾದ ಋಗ್ವೇದದಲ್ಲಿವೆ. ಸ್ಮೃತಿ, ಶ್ರುತಿ, ಮನುನೀತಿ ಮತ್ತು ಕೌಟಿಲ್ಯನ ಲೇಖನಗಳಲ್ಲಿಯೂ ಇವು ಕಂಡುಬರುತ್ತವೆ. ಕುಡುಕರಿಗೆ ವಿಧಿಸುತ್ತಿದ್ದ ಶಿಕ್ಷೆಯ ಕಾಠಿಣ್ಯತೆಗಳನ್ನು ನೋಡಿದರೆ ಆಗ ಕುಡುಕತನವು ಬಹುವಾಗಿದ್ದಿರಬೇಕೆಂದು ಊಹಿಸಬಹುದು.

ಮೆಸಪೊಟೇಮಿಯಾದಿಂದ ಪ್ರಥಮವಾಗಿ ದ್ರಾಕ್ಷೆಯ ವ್ಯವಸಾಯವು ಗ್ರೀಸಿಗಾಗಿ ನಂತರ ರೋಮಿಗೂ ಹಬ್ಬಿತು. ಗ್ರೀಕರು ಮತ್ತು ರೋಮನರಲ್ಲಿ ವಿವಿಧ ರೀತಿಯ ಮಾದಕ ಪಾನೀಯಗಳಿದ್ದು ಇವುಗಳ ಉಪಯೋಗವನ್ನು ಹೋಮರ್ ಮತ್ತು ಪ್ಲಿನಿ ಮೊದಲಾದವರು ನಿಶೇಧಿಸಿದ್ದಾರೆ.

ಭಟ್ಟಿ ಇಳಿಸುವ ಹೊಸ ಶೋಧನೆಯು ೧೩ನೇ ಶತಮಾನದಲ್ಲಿ ಆಯಿತೆನ್ನಬಹುದು. ೧೩೦೦ರಲ್ಲಿ ಮೃತನಾದ ಲ್ಯೂಹನ್ ಆಫ್ ವಿಲ್ಲಾನೋವಾ ಎಂಬ ಡಾಕ್ಟರನು ಗಾಜು ಮತ್ತು ಮಣ್ಣಿನಿಂದ ತಯಾರಿಸಿದ ಸಾರಾಯಿ ಇಳಿಸುವ ಯಂತ್ರದ ರಚನೆಯನ್ನು ಬರೆದಿರುವನು. ಈ ಕಾಲದಿಯಿಂದಲೇ ಮುಂದೆ ವಿಸ್ಕಿ, ಬ್ರಾಂಡಿ, ರಮ್ ಮತ್ತು ಜಿನ್ ಮೊದಲಾದವುಗಳ ತಯಾರಿಯು ಹದಿನೈದನೇ ಶತಮಾನದ ಮಧ್ಯ ಭಾಗದಿಂದ ಪ್ರಾರಂಭವಾಯಿತು.

ಇಂದು ಉಪಯೋಗದಲ್ಲಿರುವ ಕೆಲವು ಪಾನೀಯಗಳಲ್ಲಿ ಮಾದಕ ದ್ರವ್ಯವು ಈ ಪರಿಮಾಣದಲ್ಲಿದೆ. ಬೀರ್ ಮತ್ತು ಅದರಂಥಾ ಪಾನೀಯಗಳಲ್ಲಿ ಶೇಕಡ ೪ರಿಂದ ೭ರ ವರೆಗೆ. ಸೇಂದಿ ಮತ್ತದಕ್ಕೆ ಸಂಬಂಧಿಸಿದ ಪಾನೀಯಗಳಲ್ಲಿ ಶೇಕಡ ೪ ರಿಂದ ೧೨ರ ವರೆಗೆ. ವೈನ್, ಶೆರಿ, ಕ್ಲೇರೆಟ್ ಮೊದಲಾದವುಗಳಲ್ಲಿ ಶೇಕಡ ೧೦ ರಿಂದ ೨೦ರ ವರೆಗೆ. ಈ ವರ್ಗದಲ್ಲಿ ಎಲ್ಲದಕ್ಕಿಂಥಲೂ ಅಂದರೆ ಶೇಕಡ ೨೫ರಷ್ಟು ಪೋರ್ಟಲಾದಲ್ಲಿದೆ. ಮನೆಯಲ್ಲಿ ಹಣ್ಣುಗಳಿಂದ, ರಾಗಿ, ಬತ್ತಗಳಿಂದ ಮಾಡಿದ ಮಾದಕ ಪಾನೀಯಗಳಲ್ಲಿ ಸಾಧಾರಣ ಶೇಕಡ ೧೦ರಷ್ಟು ಮಾದಕ ಪದಾರ್ಥವಿರುತ್ತದೆ. ಬ್ರಾಂಡಿ, ವಿಸ್ಕಿ, ರಮ್, ಜಿನ್‌ಗಳಲ್ಲಿ ಶೇಕಡ ೪೦ ರಿಂದ ೫೦ ರ ವರೆಗೂ ಸಾಧಾರಣ ಪೇಟೆಯಲ್ಲಿ ಮಾರುವ ಸಾರಾಯಿಯಲ್ಲಿ ೩೫ರಿಂದ ೪೦ರ ವರೆಗೂ ಮಾದಕ ವಸ್ತು ಇರುತ್ತದೆ.

ಇಂಗ್ಲೆಂಡಿನಲ್ಲಿ ಬೀರ್ ಕುಡಿದಂತೆ ಇಂಡಿಯಾದಲ್ಲಿ ಸೇಂದಿ ಕುಡಿಯುವದರಿಂದ ಹಾನಿ ಏನೂ ಇಲ್ಲವೆಂದು ಕೆಲವರು ಹೇಳುತ್ತಾರೆ. ಅವುಗಳಲ್ಲಿ ಮಾದಕ ದ್ರವ್ಯ ಕಡಿಮೆ ಇರುವ ಕಾರಣ ತೊಂದರೆ ಇಲ್ಲ ಎನ್ನುತ್ತಾರೆ. ಆದರೆ ಮೇಲೆ ಹೇಳಿದ ಎಲ್ಲಾ ಪಾನೀಯಗಳೂ ಅವುಗಳಲ್ಲಿರುವ ಮಾದಕ ದ್ರವ್ಯದ ಕಾರಣವಾಗಿಯೇ ಕುಡಿಯಲ್ಪಡುತ್ತವೆ. ಮಾದಕ ದ್ರವ್ಯ ಕಡಿಮೆ ಇರುವದನ್ನು ಕುಡುಕನು ಹೆಚ್ಚು ಪ್ರಮಾಣದಲ್ಲಿ ಕುಡಿಯುವದರಿಂದ ಆಗುವ ಹಾನಿಯು ಎರಡರಲ್ಲೂ ಒಂದೇ!

ಸೇಂದಿಯನ್ನು ತೆಂಗು, ಈಚಲು ಜಾತಿಗೆ ಸೇರಿದ ಮರಗಳ ರಸದಿಂದ ತಯಾರಿಸುತ್ತಾರೆ. ಈ ಮರಗಳ ರಸವೇ ಸೇಂದಿಯಲ್ಲ. ಈ ರಸವು ಸಿಹಿಯಾಗಿದ್ದು ಇದರಲ್ಲಿ ಮಾದಕ ವಸ್ತುಗಳಿಲ್ಲದೆ ನೀರಾ ಎನಿಸಿಕೊಳ್ಳುತ್ತದೆ. ಇದು ಆರೋಗ್ಯಕ್ಕೆ ಹಾನಿಕಾರಕವಲ್ಲ. ಇದರಿಂದ ಬೆಲ್ಲವನ್ನೂ ಮಾಡುತ್ತಾರೆ. ಆದರೆ ಈ ನೀರಾಕ್ಕೆ ಕೆಲವು ನಿಕೃಷ್ಟ ವಸ್ತುಗಳನ್ನು ಸೇರಿಸುವದರಿಂದ ನೀರಾವು ಬೆಳೆದು ಸೇಂದಿ ಆಗುತ್ತದೆ. ಬೇಯಿಸಿದ ಅನ್ನದಿಂದ ಪಾಚ್ವೈ ಎಂಬ ಅಕ್ಕಿಯ ಬೀರನ್ನು ತಯಾರಿಸುತ್ತಾರೆ. ಕೇವಲ ದ್ರಾಕ್ಷೆ ರಸದಿಂದಲೇ ವೈನ್ ತಯಾರಾಗುವದಲ್ಲ. ಲಾಭದ ದೃಷ್ಟಿಯಿಂದ ಅನೇಕ ಇತರ ವಸ್ತುಗಳಿಂದಲೂ ತಯಾರಾಗಲ್ಪಡುವದು. ವಿಸ್ಕಿಯು ಬಾರ್ಲಿಯಿಂದ ಮಾಡಲ್ಪಡುವದು. ಬಾರ್ಲಿಯಿಂದ ಮಾಡಿದರೆ ಹೆಚ್ಚು ಬೆಲೆಯಾಗುವ ಕಾರಣ ಹೆಚ್ಚಾಗಿ ಜೋಳದಿಂದಲೂ ಮಾಡುತ್ತಾರೆ. ಕೆಲವು ವೇಳೆ ಕುಯಿದ ಮರದ ಹುಡಿಯಿಂದಲೂ ಮಾಡುವರು! ಆಹಾರ ಪದಾರ್ಥಗಳಲ್ಲಿ ಪರಿಶುದ್ಧತೆ ಇರಬೇಕೆಂದರೂ ಈ ಮಿಶ್ರಣ ಕಾರ್ಯವು ಎಲ್ಲೆಡೆಯೂ ನಡೆಯುವದು. ಹಿಂದೂದೇಶದಲ್ಲಿ ಕಬ್ಬಿನರಸ, ಈಚಲು ಬೆಲ್ಲ ಅಥವಾ ಮಹುವಾ ಹೂವಿನಿಂದ ಸಾರಾಯಿ ಇಳಿಸುತ್ತಾರೆ. ಈ ಸಾರಾಯಿಗಳು ಪರಿಷ್ಕೃತವಲ್ಲದ ಕಾರಣ ಆಧುನಿಕ ಮಾದರಿಯಿಂದ ತಯಾರಿಸಿದವುಗಳಿಗಿಂಥಾ ಆರೋಗ್ಯಕ್ಕೆ ಹೆಚ್ಚು ಹಾನಿಕರವಾಗಿರುತ್ತವೆ.

ಮುಂದಿನವಾರ ಮಾದಕ ಪಾನೀಯವು ಆಹಾರವೇ? ಔಷಧಿಯೇ? ಯಾ ವಿಷವೇ? ಎಂಬುದನ್ನು ಪರಿಶೀಲಿಸಲಾಗುವದು.

ಸಶೇಷ.

ದಿ ಟ್ರಾಪಿಕಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:— ಲಾಲ ಶಂಕರ್ ಲಾಲ್.

ಮುಖ್ಯ ಕಚೇರಿ:— ಹೊಸ ಡೆಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್

ಹಕೀಮ್ ಅಜಮಲಖಾನ್. ಡಾ|| ಎಂ. ಎ. ಅನ್ಸಾರಿ.

(1) ದೇಶದಲ್ಲಿ ಪ್ರಮುಖ ದೇಶ ಭಕ್ತರಿಂದ ಸ್ಥಾಪಿಸಲ್ಪಟ್ಟಿದೆ.

(2) ಸ್ವತಂತ್ರ ಭಾರತದಲ್ಲಿ ಆರ್ಥಿಕ ನೆಲಗಟ್ಟನ್ನು ಭದ್ರವಾಗಿರಿಸುವುದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯವಾಗಿದೆ.

(3) ಕಳೆದ 22 ವರ್ಷಗಳ ಹಿರಿದಾದ ಅನುಭವವುಳ್ಳ ನಾವು ನಿಮ್ಮ ಜೀವವಿಮಾ ಸಂಬಂಧದ ಯಾವದೇ ಸೇವೆಸಲ್ಲಿಸಲು ಸಂತೋಷಪಡುತ್ತೇವೆ.

(4) ಜೀವವಿಮಾ, ಬೆಂಕಿ, ಮರಾಯಿನ್ ಮತ್ತು ಅಪಘಾತ ಇವೆಲ್ಲ ಕಾರ್ಯಗಳನ್ನು ಮಾಡುತ್ತಿದೆ.

(5) ಪ್ರಾರಂಭದಿಂದ ವಿಮಾದಾರರಿಗೆ ಬೋನಸ್ಸು ಕೊಡುತ್ತಿದೆ.

(6) ಯೋಗ್ಯ ಏಜೆಂಟು ಮತ್ತು ಆರ್ಗನೈಜರುಗಳಿಗೆ ತಮ್ಮ ಉದ್ಯೋಗದಲ್ಲಿ ತಿಳಿವನ್ನು ಮುಟ್ಟಲು ಒಳ್ಳೆ ಸಂದರ್ಭವನ್ನು ಒದಗಿಸಿಕೊಟ್ಟು ಎಲ್ಲಾ ಕಾಲದಲ್ಲಿಯೂ ದಯಾಳುತನದಿಂದ ಮತ್ತು ಯೋಗ್ಯವಾದ ರೀತಿಯಲ್ಲಿ ಅವರನ್ನು ನಡಿಸಿಕೊಳ್ಳಲಾಗುತ್ತದೆ.

ನಮ್ಮ ಹೊಸ ವಿಸ್ತಾರದ ಯೋಜನೆಯಲ್ಲಿ ಆಕರ್ಷಕ ಕಮಿಷನ್ ಮೇಲೆ ಆರ್ಗನೈಜರರನ್ನು ನಿಯಮಿಸಿಕೊಳ್ಳತಕ್ಕದಿದೆ. ದಯವಿಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಏಜೆನ್ಸಿ ಸುಪರಿಂಟೆಂಡೆಂಟ್, ಮಡಿಕೇರಿ, ಕೊಡಗು.

ಅ ಎಂ. ಎ. ಬೆಳ್ಯಪ್ಪ, ಬ್ರಾಂಚ್ ಸೆಕ್ರೆಟರಿ,
ಥ ದಿ ಟ್ರಾಪಿಕಲ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್;
ವಾ ಹಂಪನಕಟ್ಟಾ, ಮಂಗಳೂರು.

ವಿಮೆ ಮಾಡಲು ಇಲ್ಲವೇ ಪ್ರತಿನಿಧಿಸಲು

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.

ಇವರ ಸಲಹೆಗಿಂತ ಉತ್ತಮ ಮಾರ್ಗವಿಲ್ಲ.

ಸಂಸ್ಥೆನಗಳನ್ನೊಳಗೊಂಡ ದಕ್ಷಿಣ ಹಿಂದೂಸ್ಥಾನದ ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು.

ದಿ ಬೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

30 ಮೌಂಟ್ ರೋಡ್, ಪೋ. ಬಾ. ನಂ. 337, ಮದ್ರಾಸು 2.

ಬೋಂಬೆ ಲೈಫ್ ಬಿಲ್ಡಿಂಗ್, ಪೋ. ಬಾ. ನಂ. 1, ಉಡುಪಿ.

(ಟೆಲಿಫೋನ್ ನಂ. 8806)

ಇತರ ಆಫೀಸುಗಳು:— ಬೆಂಗಳೂರು, ತಿರುವೇಂದ್ರಂ, ಕಲ್ಲಿಕೋಟೆ, ಮಂಗಳೂರು, ಮಧುರೆ, ಮತ್ತು ಬೋಂಬಾಯಿ.

ಸ್ವತಂತ್ರ ಭಾರತದಲ್ಲಿ.

ಈ ವಾರದ ವಿಚಾರಗಳು.

ಲೇ.—"ಗಣೇಶ" ಮಂಡಳ ೧.

ಕಾಶ್ಮೀರ ಭಾರತಕ್ಕೆ ಸೇರಬೇಕು

ಕಾಶ್ಮೀರ [illegible] ರಾಜ್ಯಘಟನಾ ಸಮಿತಿಯಲ್ಲಿ ಕಾಶ್ಮೀರದ ವಿಚಾರ ಚರ್ಚೆಯಾಗಿ ಕಾಶ್ಮೀರವು ಭಾರತಕ್ಕೆ ಸೇರಬೇಕೆಂದೂ ಕಾಶ್ಮೀರ ಅರಸರು ತಮ್ಮ ಸಂಸ್ಥಾನದ ಮುಖ್ಯ ಮಂತ್ರಿಗಳನ್ನು ವಿಚಾರಿಸಿ ಕಾಶ್ಮೀರದ ಪರ ನಾಲ್ಕು ಜನ ಪ್ರತಿನಿಧಿಗಳನ್ನು ರಾಜ್ಯಘಟನಾ ಸಭೆಗೆ ಕಳುಹಿಸಬೇಕೆಂದೂ ನಿರ್ಣಯವಾಗಿದೆ.

ತಾರೀಕು ೩೦ರಲ್ಲಿ ಪಂಡಿತ ಜವಾಹರ್‌ಲಾಲ್ ನೆಹರೂರವರು ಕಾಶ್ಮೀರಕ್ಕೆ ಹೋಗಿದ್ದಾರೆ. ಅವರಿಗೆ ಶ್ರೀನಗರದಲ್ಲಿ ಅಭೂತಪೂರ್ವ ಸ್ವಾಗತ ಕೊಡಲಾಯಿತು. ಶ್ರೀಯುತರ ಬಹಿರಂಗ ಸಭೆಯೊಂದರಲ್ಲಿ ಮಾತಾಡುತ್ತಾ, ಕಾಶ್ಮೀರದ ರಕ್ಷಣೆಗೆ ಭಾರತವು ಪ್ರತಿಜ್ಞಾಬದ್ಧವಾಗಿರುವದರಿಂದ ಭಾರತದ ನೆರವು ಸದಾ ಕಾಶ್ಮೀರಕ್ಕಿರುವದೆಂದೂ ಪಾಕಿಸ್ಥಾನವು ತನ್ನ ಆಂತರಿಕ ಅವ್ಯವಸ್ಥೆಯನ್ನು ಸರಿಪಡಿಸಿಕೊಂಡಿದ್ದಿರುವಾಗ ಕಾಶ್ಮೀರದ ಜನರಿಗೆ ಹಿತ ಮಾಡಲು [illegible] ಪಾಕಿಸ್ಥಾನವು ಮಾಡಲು ಕಾಶ್ಮೀರ [illegible] ಇಲ್ಲವೆಂದು [illegible] ಹೊರಬಿದ್ದ [illegible] ನ್ಯಾಯಗಳಿಂದ ಯಾವ [illegible] ದಿನಗಳಿಂದಲೂ ಕಾಶ್ಮೀರದ ಮತ್ತು ಭಾರತ [illegible] ಬಂಧವನ್ನು [illegible] ಗತ್ತಿನ ಯಾವ ಶಕ್ತಿಗೂ ಸಾಧ್ಯವಿಲ್ಲವೆಂದೂ ಹೇಳಿದರು.

ಕಾಶ್ಮೀರದ ಮುಖ್ಯಮಂತ್ರಿ ಶೇಕ್ ಅಬ್ದುಲ್ಲಾ ಮತ್ತು ಕಾಶ್ಮೀರ ಹಿಂದೀ ಸೇನೆಯ ಮುಖ್ಯರಾದ ಮೇಜರ್ ಜನರಲ್ ಕೊಡಂದೆರ ತಿಮ್ಮಯ್ಯ ಇವರುಗಳು ಸಹ ನೆಹರೂರವರಿಗೆ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು.

ಅಲ್ಪ ಸಂಖ್ಯಾತರ ಭವಿಷ್ಯ

ಭಾರತದಲ್ಲಿರುವ ಅಲ್ಪ ಸಂಖ್ಯಾತರಿಗೆ ಸರಕಾರಿ ಉದ್ಯೋಗಗಳಲ್ಲಿ, ಶಾಸನ ಸಭೆಗಳಲ್ಲಿ ನಿಶ್ಚಿತ ಸ್ಥಳಗಳನ್ನು ಕಾದಿರಿಸುವ ಪದ್ಧತಿಯು ಈ ವರೆಗೆ ಇತ್ತು. ಈ ಪದ್ಧತಿಯನ್ನು ತೆಗೆದುಹಾಕುವ ನಿರ್ಣಯವನ್ನು ಭಾರತ ರಾಜ್ಯಘಟನಾ ಸಭೆಯು ಮಾಡಿದೆ. ಅದರೆ ತೀರಾ ಹಿಂದುಳಿದಿರುವ ಹರಿಜನರಿಗೆ ಮಾತ್ರ ಮುಂದಿನ ಹತ್ತು ವರ್ಷಗಳ ವರೆಗೆ ಈ ರಿಯಾಯಿತಿ ಕೊಡಲಾಗುವದೆಂದೂ ನಿರ್ಧರಿಸಿದೆ. ಈ ವ್ಯವಸ್ಥೆಯು ಎಲ್ಲರಿಂದಲೂ ಸ್ವಾಗತಿಸಲ್ಪಟ್ಟಿದೆ. ಈ ರೀತಿಯ ಭಿನ್ನಭಾವವೇ ಹಿಂದೆ ದೇಶದಲ್ಲಿ ಸಹಿಸಲಸಾಧ್ಯವಾದ ಭೀಕರ ಪರಿಸ್ಥಿತಿಗೆ ಕಾರಣವಾಯಿತು. ರಾಜ್ಯಘಟನಾ ಸಭೆಯು ಭಾರತವನ್ನು ಜಾತ್ಯತೀತವಾದ ರಾಷ್ಟ್ರವೆಂದು ಸಾರಿ ಅದಕ್ಕಾಗಿ ದುಡಿಯುತ್ತಿರುವಾಗ ಭಿನ್ನಭಿನ್ನ ಮತೀಯರಿಗೆ ಸ್ಥಳಗಳನ್ನು ಕಾದಿರಿಸುವ ವ್ಯವಸ್ಥೆಯು ಸಮಂಜಸವಲ್ಲ.

ಪಂಡಿತ ನೆಹರೂ ಮತ್ತು ವಲ್ಲಭಭಾಯಿಯವರ ನೇತೃತ್ವದಲ್ಲಿ ಭಾರತ ಸರಕಾರವು ಜಾತೀಯವಾದವನ್ನು ಸಮೂಲವಾಗಿ ಕಿತ್ತೆಗೆಯಲು ಯತ್ನಿಸುತ್ತಿದೆ. ಈ ವಿಚಾರದಲ್ಲಿ ಮಾತಾಡುತ್ತಾ ಪಂಡಿತ ನೆಹರೂರವರು [illegible] ಪ್ರಭಾವದ ಕಡೆಗೆ ಸಾಗುತ್ತಿರುವಾಗ ಕೆಲವೊಂದು ಹಿಂದುಳಿದ ವರ್ಗಗಳಿಗೆ ಸ್ಥಳ ಕಾಯ್ದಿರಿಸುವ ಹಕ್ಕು ಕೊಟ್ಟರೆ ಅವರನ್ನು ಇತರರಿಂದ ಬೇರ್ಪಡಿಸಿದಂತಾಗುತ್ತದೆ. ಇದರಿಂದ ಅವರಿಗೆ ಹಾನಿಯಾಗುವದು. ಸರ್ವರೂ ಏಕರೀತಿಯಿಂದ ಮುಂದರಿಯಬೇಕು. ಸರಿಹೆಜ್ಜೆ ಹಾಕಲಾರದವರನ್ನು ನಡೆಯುವಂತೆ ಮಾಡಬೇಕೇ ವಿನಹ ದಾರಿಯಲ್ಲಿ ಬಿಡಲಾಗದು ಎಂದರು.

ಮೈಸೂರು ದಿವಾನಗಿರಿ

ಮೈಸೂರಿನ ದಿವಾನರಾದ ಸರ್ ರಾಮಸ್ವಾಮಿ ಮೊದಲಿಯಾರರವರು ಬರುವ ಆಗಸ್ಟ್ ತಾರೀಕು ೭ರಿಂದ ನಿವೃತ್ತರಾಗುವರು. ಅವರೊಡನೆಯೇ ಮೈಸೂರು ದಿವಾನಗಿರಿಯೂ ಸಮಾಪ್ತಿಗೊಳ್ಳುವದು. [illegible] ಮೈಸೂರಿಗೆ ದಿವಾನ ಪದವಿ ಇಲ್ಲ. ಮೈಸೂರು ಅರಸರು ಇದನ್ನು ಒಪ್ಪಿರುವರೆಂದು ತಿಳಿಯಬರುತ್ತದೆ.

ಮೈಸೂರು ಪ್ರಜಾ ಪ್ರತಿನಿಧಿ [illegible] ಮತ್ತು ನ್ಯಾಯ ವಿಧಾಯಕ [illegible] ಗಳ [illegible] ಕಾಂಗ್ರೆಸ್ ಪಕ್ಷದ [illegible] ಸಮ್ಮೇಳನವು ಕಾಂಗ್ರೆಸ್ [illegible] [illegible] ನಡೆಯಿತು. [illegible] ಯತಂಲಗಿಯೂ, [illegible] [illegible] ಆರಿಸಲ್ಪಟ್ಟರು.

ಮೈಸೂರು ಮಂತ್ರಿಮಂಡಲದಲ್ಲಿ ವಿಶೇಷ ಬದಲಾವಣೆಯಾಗಲಿದೆಯೆಂದೂ, ಬೇರೆ ಪ್ರಾಂತಗಳ ಮಂತ್ರಿಮಂಡಲದಂತೆ ರಚನೆಯಾಗಬೇಕೆಂದೂ ಸಲಹೆಗಳು ಆಗಿವೆ.

ಕಾಂಗ್ರೆಸ್ಸಿಗೆ ನವಜೀವದಾನ

ಡೆಲ್ಲಿಯಲ್ಲಿ ಹಿಂದೂಸ್ಥಾನದ [illegible] ಪ್ರಾಂತೀಕ ಕಾಂಗ್ರೆಸ್ ಸಮಿತಿಗಳ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳ ಸಮ್ಮೇಳನವೊಂದು ನಡೆಯಿತು. ಕಾಂಗ್ರೆಸ್ಸಿನ ಸಂಘಟನೆಯನ್ನು ಹೆಚ್ಚಿಸಿ ಅದಕ್ಕೆ ಹೊಸ ಜೀವಕೊಡುವದು ಇದರ ಧ್ಯೇಯವಾಗಿತ್ತು. ಈ ಪರ್ಯಾಲೋಚನೆಯ ವಿವರಗಳು ಇನ್ನೂ ಪ್ರಕಟವಾಗುವದಿಲ್ಲ. ಹೇಗಿದ್ದರೂ ಕಾಂಗ್ರೆಸ್ ಸಂಸ್ಥೆಯಲ್ಲಿ ಇತ್ತೀಚಿಗೆ ತೋರಿಬಂದಿರುವ ಶಿಥಿಲತೆಯನ್ನು ಸರಿಪಡಿಸಲು ಉಗ್ರಧೋರಣೆಯ ಅಗತ್ಯವೆಂಬ ದರಲ್ಲಿ ಎರಡಭಿಪ್ರಾಯಗಳಿಲ್ಲ. ಪ್ರತಿ ಪ್ರಾಂತಗಳಲ್ಲಿಯೂ ಕಾಂಗ್ರೆಸಿಗರಲ್ಲಿ ಐಕ್ಯಮತ್ಯವಿಲ್ಲ. ಮದ್ರಾಸ್, ಪೂರ್ವ ಪಂಜಾಬ್, ವಿಂಧ್ಯಾಪ್ರದೇಶ, ಮಧ್ಯಭಾರತ, ಪಶ್ಚಿಮ ಬಂಗಾಳ ಮೊದಲಾದೆಡೆ ಪರಸ್ಪರ ಭೀಕರ ಘರ್ಷಣೆ ನಡೆಯುತ್ತಿವೆ. ಹೀಗೆ ಪ್ರತಿ ಪ್ರಾಂತದಲ್ಲಿಯೂ ಕಾಂಗ್ರೆಸ್ ಘಟನೆ ನುಚ್ಚುನೂರಾಗಿ ಕಾಂಗ್ರೆಸಿಗರಿಂದರೆ ಅಧಿಕಾರಲಾಲಸಿಗಳು ಎಂಬ ಮಟ್ಟಿಗೆ ಪರಿಸ್ಥಿತಿ ಹದಗೆಟ್ಟಿದೆ. ಈ ಒಡಕುಗಳನ್ನು ಮುಚ್ಚಿ ಕಾಂಗ್ರೆಸನ್ನು ಜನಾನುರಾಗಿ ಸಂಸ್ಥೆಯಾಗಿ ಮಾಡಲು ತ್ಯಾಗಬದ್ಧರಾಗಬೇಕು. ಅನವರತ ದುಡಿಯಬೇಕು. ಕಾಂಗ್ರೆಸ್ಸಿಗರಿಗೆ ಈ ಬುದ್ಧಿ ಬರುವದೇ?

ಸಿಡ್ನಿ ಕಾಟನ್

ಹೈದರಾಬಾದಿನ ಮೇಲೆ ಭಾರತ ಸೇನೆಗಳು ನುಗ್ಗುವ ಮೊದಲು ನೈಜಾಮರು ಕಾಸಿಂ ರಜ್ವಿಯ ಕೈಗೊಂಬೆಯಂತೆ ವರ್ತಿಸುತ್ತಿದ್ದಾಗ ಪಾಕಿಸ್ಥಾನದಿಂದ ಹೈದರಾಬಾದಿಗೆ ವಿಮಾನ ಮೂಲಕ ಯುದ್ಧ ಸಲಕರಣಗಳನ್ನು ಸಿಡ್ನಿಕಾಟನ್ ಎಂಬ ವಿರೋಪ್ಯನು ಒಯ್ದನೆಂಬುದನ್ನು ವಾಚಕರು ಗಮನಿಸಿರಬಹುದು. ಆ ಸಿಡ್ನಿಕಾಟನಿನ ಮೇಲೆ ಆರೋಪ ಹೊರಿಸಿ ಆತನ ವಿಚಾರಣೆ ನಡೆದು ಆತನಿಗೆ ೨೦೦ ಪೌಂಡುಗಳ ಜುಲ್ಮಾನೆಯನ್ನೂ, ೩೦೦ ಪೌಂಡುಗಳ ಕೋರ್ಟು ಖರ್ಚನ್ನೂ ತೆರುವಂತೆ ಇಂಗ್ಲೆಂಡಿನ ಬೋ ಸ್ಟ್ರೀಟ್ ಮೆಜಿಸ್ಟ್ರೇಟರು ವಿಧಿಸಿದರು. ಅಲ್ಲದೆ ವೈಮಾನಿಕ ಮತ್ತು ವೈಮಾನಿಕ ಶೋಧನಾ ಸಂಸ್ಥೆಯವರು ಆತನಿಗೆ ಸಹಾಯವಿತ್ತದ್ದಕ್ಕಾಗಿ ಆ ಸಂಸ್ಥೆಯ ಮೇಲೂ ೫೦೦ ಪೌಂಡು ಜುಲ್ಮಾನೆ, ೩೦೦ ಪೌಂಡು ಕೋರ್ಟು ಖರ್ಚು ವಿಧಿಸಲಾಗಿದೆ.

ಮದ್ರಾಸ್ ಗ್ರಾಮ ಪಂಚಾಯತಿ ಯೋಜನೆ

[illegible] ಎಲ್ಲಾ ಅಧಿಕಾರಗಳನ್ನು ಹಳ್ಳಿಗರಿಗೆ ಒಪ್ಪಿಸುವ ಗ್ರಾಮ ಪಂಚಾಯತಿ ಯೋಜನೆಯೊಂದನ್ನು ಮದ್ರಾಸ್ ಸರಕಾರವು ತಯಾರಿಸುತ್ತಿದೆ. ಈ ಯೋಜನೆಯು ಪ್ರಕಾರ ೮–೫೦೦ ಜನ ಅಥವಾ ಅದಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವ ಪ್ರತಿ ಗ್ರಾಮಕ್ಕೂ ಕಡ್ಡಾಯವಾಗಿ ಒಂದು ಗ್ರಾಮ ಪಂಚಾಯತಿ ಸಭೆ [illegible] ಆರಿಸಲಾಗುವದು. ೫೦೦ [illegible] ಹೆಚ್ಚಿಗೆ ಜನಸಂಖ್ಯೆ ಇರುವ ಗ್ರಾಮದ ಪಂಚಾಯತಿ ಸಭೆಗಳು ಪ್ರಧಾನ [illegible] [illegible] ಇಂಥವುಗಳಿಗೆ ಸರಕಾರವು ಒಟ್ಟೊಟ್ಟಿಗೆ 'ಎಗ್ಸಿಕ್ಯೂಟಿವ್' ಅಧಿಕಾರಿಗಳನ್ನು ನೇಮಿಸುವದು. [illegible] ಕೊಡುವ ಹಕ್ಕಿರುವವರೇ ಈ ಗ್ರಾಮ ಪಂಚಾಯಿತಿ ಚುನಾವಣೆಗೂ ಮತ ಕೊಡಲು ಹಕ್ಕುದಾರರು. ಬೋರ್ಡಿನ ಅಧ್ಯಕ್ಷರು ಚುನಾವಣೆಯಿಂದ ಆರಿಸಲ್ಪಡುವರು. ಅಲ್ಲಿ ಜಾತಿ ಮತಗಳಿಗೆ ಸ್ಥಾನವಿಲ್ಲ. ಅಲ್ಪಸಂಖ್ಯಾತ ಮತ್ತು ಸ್ತ್ರೀಯರಿಗೂ ಪ್ರಾತಿನಿಧ್ಯವಿರುವಂತೆ ಏರ್ಪಡಿಸಲಾಗುವದು. ಸಭೆಯಲ್ಲಿ ಮಾತಾಡದೇ ಭಿನ್ನಾಭಿಪ್ರಾಯ ಒಂದರೆ ಅದನ್ನು ಸಲಹಾಕಕ್ಕೆ ತಿಳಿಸತಕ್ಕದ್ದು. ಗ್ರಾಮ ಕಾರ್ಯ ಮತ್ತು ಗ್ರಾಮಾಭಿವೃದ್ಧಿಯ ಜವಾಬ್ದಾರಿ ಗ್ರಾಮ ಪಂಚಾಯಿತಿ ಬೋರ್ಡಿಗೆ ಸೇರುವದು. ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯ ತೀರ್ಪು ಅಧಿಕಾರ ಅವುಗಳಿಗೆ ಕೊಡಲ್ಪಟ್ಟು ಖಾನೂನಿನ ಭಂಗದಲ್ಲಿ ಸರಕಾರ [illegible] ನಿರ್ದೇಶಕರ ಸಲಹೆಯಂತೆ ವರ್ತಿಸಲಾಗುವದು. [illegible] ಕೆಲಸ, [illegible] ವ್ಯವಸ್ಥೆ, ಎಲ್ಲವೂ ಈ ಬೋರ್ಡಿನ [illegible] ಮನೆ ತೆರಿಗೆ, ವಾಹನ ತೆರಿಗೆ, ಉದ್ಯೋಗ ತೆರಿಗೆಗಳನ್ನು ವಸೂಲು ಮಾಡುವ, ಬಡಪಾಂದ ವಸೂಲ್ಮಾಡದ ವಿನಾಯಿಸುವ ಅಧಿಕಾರ ಬೋರ್ಡಿಗಿರುವದು. ಹೀಗೆ ಸಂಗ್ರಹವಾದ ಹಣ ಗ್ರಾಮದಿಂದ ಬರುವ ಭೂ ತೆರಿಗೆಯೊಂದಿಗೆ ಗ್ರಾಮದ ಹಿತಕ್ಕಾಗಿ ಸರಕಾರದ ನಿರ್ದೇಶನದಂತೆ ವಿನಿಯೋಗವಾಗುವದು. ೫೦೦೦ಕ್ಕೆ ಕಡಿಮೆ ಜನಸಂಖ್ಯೆ ಇದ್ದು ವಾರ್ಷಿಕ ಉತ್ಪನ್ನ ರೂ ೧೦,೦೦೦ ದೊಳಗಿದ್ದರೆ ಅಂಥ ಗ್ರಾಮ ಪಂಚಾಯಿತಿಗಳಿಗೆ ಸರಕಾರವು ಗ್ರಾಂಟು ಕೊಡುವದು. ವರ್ಷಕ್ಕೊಮ್ಮೆ ಗ್ರಾಮ ಪಂಚಾಯಿತಿಗಳ ಲೆಕ್ಕ ಪತ್ರಗಳನ್ನು ಸರಕಾರವು ಆಡಿಟ್ ಮಾಡಿಸುವದು. ಈ ರೀತಿಯ ಒಂದು ಗ್ರಾಮ [illegible] ಯೋಜನೆಯನ್ನು ಮದ್ರಾಸ್ ಸರಕಾರವು ತಯಾರಿಸುತ್ತಿದೆ.

ತಿರುವಾಂಕೂರು ಕೊಚ್ಚಿನ್ ವಿಲೀನ

ದಕ್ಷಿಣ ಹಿಂದುಸ್ಥಾನದ ಸಂಸ್ಥಾನಗಳಾದ ತಿರುವಾಂಕೂರು ಮತ್ತು ಕೊಚ್ಚಿನ್ ಸಂಸ್ಥಾನಗಳನ್ನು ಒಂದುಗೂಡಿಸುವ ಏರ್ಪಾಡುಗಳಿಗೆ ಎರಡು ಸಂಸ್ಥಾನಗಳ ಅರಸರು ಒಪ್ಪಿಗೆಯಿತ್ತು, ಬರುವ ಜೂಲೈ ೧ರಿಂದ ಏಕೀಕೃತ ಆಡಳಿತ ನಡೆಯುವದು. ತಿರುವಾಂಕೂರು ಮತ್ತು ಕೊಚ್ಚಿನ್ ಸಂಸ್ಥಾನಗಳ ಜನರ ಅಭಿಮತವು ಹೀಗೆಯೇ ಇತ್ತು. ಅಲ್ಲಿಯ ಜನರು ಮಲಯಾಳಿ ಭಾಷೆಯಾಡುವವರಿದ್ದು ಈ ವಿಲೀನವು ಭಾಷಾನ್ವಯ ಆಗಿದೆ. ಈ ವಿಲೀನದ ಕಾರಣದಿಂದ ಐಕ್ಯ ಕೇರಳದ ಪ್ರಶ್ನೆ ಸುಲಭವಾಗುವದು. ಅದು ಸದ್ಯಕ್ಕೆ ಆಗದಿದ್ದರೂ ಭಾಷಾವಾರು ಪ್ರಾಂತ ರಚನೆಯಾಗುವಾಗ ಐಕ್ಯ ಕೇರಳವು ಒಂದು ಪ್ರಾಂತವಾಗದಿರದೆಂದು ಹೇಳಬಹುದು. ಈಗ ಒಂದಾಗುವ ತಿರುವಾಂಕೂರು ಕೊಚ್ಚಿನ್‌ಗಳ ವಿಸ್ತೀರ್ಣವು, ಜನ ಸಂಖ್ಯೆಯೂ ದೊಡ್ಡದ್ದಿದೆ. ಇವರಡರ ವಾರ್ಷಿಕ ವರಮಾನ ೧೫ ಕೋಟಿ ರುಪಾಯಿಗಳಿಗೂ ಮಿಕ್ಕುವದು. ಈ ಆದಾಯದಲ್ಲಿ ಇಡೀ ಹಿಂದೂಸ್ಥಾನದಲ್ಲೇ [illegible] ಎಂದೆನಿಸಿರುವ ಈ ಸಂಸ್ಥಾನಗಳು ಇನ್ನೂ ಪ್ರಗತಿಪಥದಲ್ಲಿ ಮುಂದುವರಿಯದಿರವು.

ADVERTISEMENT.

Government College, Mercara, Coorg.

The Colleg offers instructions in –

Intermediate *Part I- English, Part II- Kannada, Hindi, Part III Maths, Physics & Chemistry Natural Science Physics & Chemistry, History and logic*

Arrangement for vegetarian and non vegetarian food will be made in the hostel The College admits boys as well as girls

Applications for admission should be submitted so as to reach the District Educational Officer, Coorg, Mercara on or before the 20th June with copies of the marks obtained in the S S L C. examination Age Conduct and leaving certificates certified by the Head of the School or a gazetted officer

B S Kushalapa,
District Educational Officer, Coorg

ಕೊಡಗು

ತಾ. ೩-೬-೧೯೪೯ನೇ ಶುಕ್ರವಾರ

ನಮ್ಮ ಮಾತು.

"ಕೊಡಗು" ಪತ್ರಿಕೆಗೆ ೨೮ ವರ್ಷಗಳು ತುಂಬಿ ೨೯ನೇ ವರ್ಷ ಪ್ರಾರಂಭವಾಯಿತು. ಈ ಪತ್ರಿಕೆಯು ಕಳೆದ ೨೮ ವರ್ಷಗಳ ಚರಿತ್ರೆಯಲ್ಲಿ ಮಹಾ ಕಷ್ಟಗಳನ್ನು ಎದುರಿಸಿದೆ. ಆಗಿನ ವಿದೇಶೀ ಸರಕಾರದ ಶಾಸನಗಳ ಕರಾಳ ಪಡೆಗೆ ಸಿಲುಕಿಯೂ ಬದುಕಿದೆ. ಈ ಅವಧಿಯಲ್ಲಿ ವಾಚಕರ ಸೇವೆಯನ್ನು ಎಷ್ಟರ ಮಟ್ಟಿಗೆ ಮಾಡಿದೆ, ಕೊಡಗಿಗೆ ಎಷ್ಟು ಶ್ರದ್ಧಾಂಜಲಿಯನ್ನು ಎಷ್ಟರಮಟ್ಟಿಗೆ ಅರ್ಪಿಸಿದೆಯೆಂಬುದನ್ನು ಅಳೆಯುವ ಕೆಲಸ ನಮ್ಮದಲ್ಲ; ಅದನ್ನು ವಾಚಕರೇ ನಿರ್ಧರಿಸಬೇಕು. ಹೇಗೂ ಪತ್ರಿಕೆಯು ಮಾಡಬೇಕಿದ್ದಷ್ಟು ಸೇವೆಯನ್ನು ನಿರಾತಂಕವಾಗಿ ಸಲ್ಲಿಸಬಹುದು ಕಠಿಣವಾಯಿತು. ದುಡ್ಡಿದ್ದಾಗ ಕಾಗದದ ತೊಂದರೆ ಕಾಗದವಿದ್ದಾಗ ಕೆಲಸಗಾರರ ಕೊರತೆ, ಇವೆರಡೂ ಇದ್ದಾಗ ಸರಕಾರದ ಉಪಟಳ ಹೀಗೆ ಕಷ್ಟಪಡುತ್ತಾ 'ಕೊಡಗು' ತನ್ನ ಶೈಶವವನ್ನು ದಾಟಿದೆ. ಇಂದು ಅದಕ್ಕೆ ಯೌವನದ ಕಾಲ. ಈ ಕಾಲದಲ್ಲಿ ಅದು ತನ್ನ ಶಕ್ತಿಗೆ ಮೀರಿ ದುಡಿಯಬೇಕಾದುದು ಕರ್ತವ್ಯ. ಮೇಲಾಗಿ ಈ ಹಿಂದಿನಂತೆ ನಮ್ಮ ದೇಶವು ಪರತಂತ್ರದಲ್ಲಿರುವ ರಾಷ್ಟ್ರವಲ್ಲ. ಸಿರ್ಭಾರ್ಥಕ ಸ್ವಾತಂತ್ರ್ಯವಿರುವ ದೇಶ. ಈ ಸ್ವಾತಂತ್ರ್ಯವು ಕಾರ್ಯರೂಪದಲ್ಲಿಳಿದು ಪ್ರತಿ ಮನೆಬಾಗಿಲಿಗೆ ಮುಟ್ಟಬೇಕು. ಅದಕ್ಕಾಗಿ ಹರೆಯದ 'ಕೊಡಗು' ಪತ್ರಿಕೆಯು ಮುಂದೆ ಶಕ್ತಿಮೀರಿ ದುಡಿಯಬೇಕಾಗಿದೆ.

'ಕೊಡಗು' ಪತ್ರಿಕೆಗೆ ಈ ಕಾಲುಶತಮಾನದ ಅವಧಿಯಲ್ಲಿ ನಾನಾ ಅಡಚಣೆ ಬಂದಿದ್ದರೂ ಇತ್ತೀಚಿನ ಕೆಲವು ವರ್ಷಗಳಿಂದ ಬರ ವಿಶಾಲ ದೃಷ್ಟಿಗೆ ಒಂದು ಮಿತಿಯನ್ನು ಕಲ್ಪಿಸಿ ಅನೇಕರು ಅದು 'ಒಂದು ಪಕ್ಷದ ಪತ್ರಿಕೆ' ಎಂದುಕೊಂಡರು. ಅದು 'ಪ್ರತ್ಯೇಕವಾದಿಗಳ ಮುಖಪತ್ರ'ವೆಂದೂ ಕೆಲವರು ಹೇಳಿಕೊಂಡರು. ಇಂದೂ ಹೇಳುತ್ತಿದ್ದಾರೆ. ಆದರೆ ವಸ್ತುತಃ ಪರಿಸ್ಥಿತಿ ಹಾಗಿಲ್ಲ. 'ಕೊಡಗು' ಪತ್ರಿಕೆಯು ಒಬ್ಬಿಬ್ಬ ಬಂಡವಾಳದ ದರದಲ್ಲಿಲ್ಲ. ಕೊಡಗಿನ ಸಮಗ್ರ ಜನತೆಯು, ಈ ಕಂಪನಿಯ ಶೇರುದಾರರು 'ಕೊಡಗು' ಪ್ರತ್ಯೇಕವಿರಬೇಕೆನ್ನುವವರೇ ಅಲ್ಲ. ಕೊಡಗಿನ ಸರ್ವಕೋಮಿನವರೂ ಜಾತಿ ಮತ ಭೇದಭಾವವಿಲ್ಲದ ಈ ಕಂಪನಿಯ ಸದಸ್ಯರಾಗಿದ್ದಾರೆ. ಈ ಕಾರಣದಿಂದಲೇ 'ಕೊಡಗು' ಎಂದೂ ಒಂದು ಪಕ್ಷದ ಮುಖಪತ್ರವಾಗಲಾರದು.

ಸಂಯೋಜನವಾದಿಗಳೇ ಇರಲಿ, ಪ್ರತ್ಯೇಕವಾದಿಗಳೇ ಇರಲಿ ಯೋಗ್ಯ ರೀತಿಯ ಲೇಖನಗಳನ್ನು ಬರೆದು ತಮ್ಮ ಅಭಿಪ್ರಾಯಗಳನ್ನು ಕೊಡಗಿನ ಜನತೆಯ ಮುಂದಿಡಲು ಅವಕಾಶವಿದೆಯೆಂದು ಕಳೆದ ಹೊಸ ವರ್ಷದ ಕಾಲಕ್ಕೆ ನಾವು ಹೇಳಿದ ಮಾತನ್ನು ಈಗಲೂ ಹೇಳಬಯಸುತ್ತೇವೆ. ಪತ್ರಿಕೆಗಳೇ ದೇಶಕ್ಕೆ ಪಥದರ್ಶನ ಮಾಡುವ ಮಹಾ ಜ್ಯೋತಿಗಳು. ಆ ಜ್ಯೋತಿಗಳ ಪ್ರಕಾಶವು ಜಕೀಯದ ಕತ್ತಲಲ್ಲಿ ಮಬ್ಬಾಗದಂತೆ ನೋಡುವದು ಪತ್ರಿಕೋದ್ಯೋಗಿಯ ಕೆಲಸ. ಪತ್ರಿಕೆಯು ದೇಶದ ಕನ್ನಡಿಯಂತೆ! ದೇಶದಲ್ಲಿ ಆಗುವ ವಿಚಾರಗಳೆಲ್ಲ ಅದರಲ್ಲಿ ಪ್ರತಿಬಿಂಬಿತವಾಗಬೇಕು. ಈ ಧ್ಯೇಯವನ್ನು 'ಕೊಡಗು' ಮುಂದಿಟ್ಟು ಶ್ರಮಿಸುವದು.

ಪತ್ರಿಕೋದ್ಯೋಗಿಯ ಜವಾಬ್ದಾರಿ ನ್ಯಾಯಾಧೀಶನ ಜವಾಬ್ದಾರಿಗಿಂತಾ ಹಿರಿದು. ನ್ಯಾಯಾಧೀಶನ ವ್ಯವಹಾರಕ್ಷೇತ್ರ ತಪ್ಪು ಮಾಡಿದ ವ್ಯಕ್ತಿಗಳ ಮಟ್ಟಿಗೆ ಆದರೆ ಪತ್ರಿಕೆಯದು ಸಮಗ್ರ ಬ್ರಹ್ಮಾಂಡ! ಮೊನ್ನೆ ಬೆಂಗಳೂರಿನಲ್ಲಿ ಅಖಿಲ ಭಾರತ ಸಂಪಾದಕರುಗಳ ಸಮ್ಮೇಳನದ ಉದ್ಘಾಟನೆಯನ್ನು ಮಾಡುತ್ತಾ ಗವರ್ನರ್ ಜನರಲ್ ರಾಜಾಜಿಯವರು-ಪತ್ರಿಕೆಯಲ್ಲಿ ಯಾವದೇ ವಿಚಾರವನ್ನು ಪ್ರಕಟಿಸುವ ಮೊದಲು ಅದು ಪ್ರೇಮ ಮತ್ತು ಸೌಹಾರ್ದವನ್ನು ಸಮಾಜದಲ್ಲಿ ಹೆಚ್ಚಿಸಲು ಸಹಾಯಕವಾಗುವದೇ ಎಂಬ ಒರೆಗಲ್ಲಿಗೆ ಹಚ್ಚಿ ಹಾಗಿದ್ದರೆ ಮಾತ್ರ ಅದನ್ನು ಪ್ರಕಟಿಸಬೇಕೆಂದು ಹೇಳಿದರು. ಈ ತತ್ವವನ್ನು 'ಕೊಡಗು' ಅನುಸರಿಸುವದು.

'ಕಂಡದ್ದನ್ನು ಹೇಳಿದರೆ ಕೆಂಡದಂಥಾ ಕೋಪ'ವೆಂದು ಸತ್ಯವನ್ನು ನುಡಿದರೆ ರೇಗುವವರೂ ಸಮಾಜದಲ್ಲಿದ್ದಾರೆ. ಉದಾಹರಣೆಗೆ ಇದೇ ಪತ್ರಿಕೆಯಲ್ಲಿ 'ಗೋಂಗಿ' ಎಂಬ ಹೆಸರಿನಿಂದ ಕೆಲವು ಸಮಯದ ವರೆಗೆ ಕೆಲವು ವಿಚಾರಗಳು ಹೊರಬಿದ್ದವು. ಅದರಿಂದ ಅನೇಕರು ಸಿಟ್ಟಿಗೆದ್ದದಲ್ಲದೆ 'ಗೋಂಗಿ'ಗೆ ಮದ್ರಾಸಿನ ಲಕ್ಷ್ಮೀಕಾಂತನ ಗತಿಯಾಗುವದೆಂದು ಬೆದರಿಸಿ ಬರೆದರು! ಸರಕಾರದ ವರೆಗೂ ಇದರ ದೂರು ಮುಟ್ಟಿ ಆಗಿನ ಸರಕಾರವೂ ಪತ್ರಿಕೆಯ ಕತ್ತನ್ನೇ ಹಿಸುಕುವ ಬೆದರಿಕೆ ಹಾಕಿತು. ಸತ್ಯವೂ ಕೆಲವು ವೇಳೆ ಚುಚ್ಚುತ್ತದೆ!

ಸ್ವತಂತ್ರ ಭರತ ಖಂಡದಲ್ಲಿ ಪರಸ್ಪರ ಐಕ್ಯತೆಯನ್ನು ಹೆಚ್ಚಿಸಿ ನಮ್ಮ ದೇಶವನ್ನು ಗಗನ ಮುಟ್ಟುವ ಕೀರ್ತಿ ಶಿಖರಕ್ಕೆ ಏರಿಸುವದು ಪ್ರತಿಯೊಬ್ಬನ ಕೆಲಸ. ಈ ದೃಷ್ಟಿಯಿಂದ ಸರ್ವರ ಹಿತಕ್ಕಾಗಿ, ಸರ್ವರ ಉನ್ನತಿಗಾಗಿ 'ಕೊಡಗು' ತನ್ನ ಕೈಯಲ್ಲಾದ ಸೇವೆಯನ್ನು ಮಾಡುವದು.

'ಕೊಡಗು' ಪತ್ರಿಕೆಯು ಜನತೆಯ ಅನುರಾಗವನ್ನು ಗಳಿಸಿದೆ ಎಂಬದಕ್ಕೆ ಕಳೆದ ವರ್ಷ ೧೨೦೦ ಇದ್ದ ಚಂದಾದಾರರ ಸಂಖ್ಯೆ ಈಗ ೨೦೦೦ಕ್ಕೆ ಏರಿರುವದೇ ಸಾಕ್ಷಿ. ಚಂದಾದಾರರ ಏರಿಕೆಯು ನಮ್ಮಲ್ಲಿ ಹೊಸ ಹುರುಪನ್ನು ತಂದಿದೆ. ಆ ದೃಷ್ಟಿಯಿಂದಲೇ ಈ ಹೊಸ ವರ್ಷದಿಂದ ಪತ್ರಿಕೆಯ ಪುಟ ಸಂಖ್ಯೆಯನ್ನು ಹನ್ನೆರಡಕ್ಕೆ ಏರಿಸಲಾಗಿದೆ.

"ಕೊಡಗು" ವಾರಪತ್ರಿಕೆ.

ಈ ವರೆಗೆ ಪ್ರಕಟವಾಗುತ್ತಿದ್ದಂತೆ ಎಂಟು ಪುಟಗಳಿಂದ ನಾಡಿನ ಸೇವೆ ಸಲ್ಲಿಸಲು ಸಾಲದೆಂದೂ ಇನ್ನೂ ಹೆಚ್ಚು ಪುಟಗಳಿರುವದು ಅವಶ್ಯವೆಂದೂ ತೋರಿದ ಕಾರಣ ತಾ. ೧-೬-೪೯ರಿಂದ ಪತ್ರಿಕೆಯ ಪುಟ ಸಂಖ್ಯೆಯನ್ನು ಹನ್ನೆರಡಕ್ಕೆ ಏರಿಸಲಾಗಿದೆ. ಇದಕ್ಕೆ ತಗಲುವ ಖರ್ಚಿನ ಸ್ವಲ್ಪ ಭಾಗವನ್ನು ನಮ್ಮ ಗ್ರಾಹಕರೂ ಹೊರಬೇಕಾದುದು ಧರ್ಮ. ಆದ್ದರಿಂದ ಆ ತಾರೀಖಿನಿಂದ ಪತ್ರಿಕೆಯ ಚಂದಾ ದರವನ್ನು ರೂ. ೫/-ಕ್ಕೆ ಏರಿಸಲಾಗಿದೆ. ಚಂದಾದಾರರೆಲ್ಲರೂ ಸಹಕರಿಸಿ ನಾಡಿನ ಮತ್ತು ನುಡಿಯ ಸೇವೆಗೆ ಬೆಂಬಲವೀಯುವರೆಂದು ಆಶಿಸಲಾಗಿದೆ.

ಮ್ಯಾನೇಜರು.

ಈ ವರ್ಷದಲ್ಲಿ ವಾಚಕರಿಗೆ ಪ್ರಿಯವಾಗುವ ನಾನಾ ವಿಚಾರಗಳನ್ನು ಕೊಡಲಾಗುವದು. ಗ್ರಾಮೋದ್ಯೋಗ, ರೈತರ ಪ್ರಶ್ನೆ, ಗಾಂಧೀವಾದ ಮೊದಲಾದುವಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಡುವದಲ್ಲದೆ ವ್ಯವಸ್ಥಿತ ರೀತಿಯಿಂದ ಹಿಂದೂದೇಶದ ಮತ್ತು ಪ್ರಪಂಚದ ಘಟನೆಗಳನ್ನು ವಾಚಕರ ಮುಂದಿಡಲು ಯತ್ನಿಸಲಾಗುವದು. ಇದು ಕೈಗೂಡಬೇಕಾದರೆ ಸರ್ವರ ಸಹಕಾರ ಬೇಕು. ಲೇಖಕರ ನೆರವೂ ಬೇಕು. ಇತ್ತೀಚೆಗೆ ಅನೇಕ ಯುವಕ ಯುವತಿಯರು ಲೇಖನ ವೃತ್ತಿಯಲ್ಲಿ ಆಸಕ್ತಿ ತೋರುತ್ತಿರುವದು ಶುಭ ಚಿಹ್ನೆ. 'ಕೊಡಗು' ಇವರಿಗೆ ಸ್ವಾಗತವಿತ್ತು ಪ್ರೋತ್ಸಾಹಿಸುವದು. ಕೊಡಗಿನಲ್ಲಿ ಲೇಖಕರ ಸಂಖ್ಯೆ ಕಡಿಮೆ; ಇಲ್ಲವೆಂದರೂ ತಪ್ಪಾಗಲಾರದು. ಈ ಕೊರತೆಯನ್ನು ನೀಗಬೇಕು. ಆದ್ದರಿಂದ ಯಾರೇ ಆಗಲಿ ತಮಗೆ ತಿಳಿದ ವಿಚಾರಗಳಲ್ಲಿ ಉತ್ತಮ ಲೇಖನ ಬರೆಯಲು ಅಭ್ಯಾಸ ಮಾಡುವದಲ್ಲದೆ ತಮಗೆ ತಿಳಿದು ಬಂದ ಉಪಯುಕ್ತ ಸುದ್ದಿ ವಿಚಾರಗಳನ್ನೂ ಬರೆದು ಕಳುಹಿಸಿ, 'ಕೊಡಗು' ನಾಡಿನ ಕನ್ನಡಿಯಾಗುವಂತೆ ಪ್ರೋತ್ಸಾಹಿಸಬೇಕು.

ಈ ವರೆಗೆ ಲೇಖನಗಳನ್ನೂ, ಜಾಹಿರಾತುಗಳನ್ನೂ ಕೊಟ್ಟು ಪ್ರೋತ್ಸಾಹಿಸಿದವರಿಗೂ, ಚಂದಾದಾರರಾಗಿ ನೆರವಿತ್ತವರಿಗೂ 'ಕೊಡಗು' ತನ್ನ ಹಾರ್ದಿಕ ವಂದನೆಯನ್ನರ್ಪಿಸಿ ತನ್ನ ಶಕ್ತಿಗೆ ಮೀರಿ ಅವರೆಲ್ಲರ ಸೇವೆ ಮಾಡಲು ಕಂಕಣಬದ್ಧವಾಗಿ ಮುಂದೆ ಸಾಗುವದು.

ಪ್ರಸಂಶನೀಯ ದಾನ.

ಕಳೆದ ತಾರೀಕು ೨೮ ರಲ್ಲಿ ಚೀಫ್ ಕಮಿಷನರವರು ಶಿತಿಮಾತಿಯಲ್ಲಿ ಒಂದು ಹೊಸ ಆಸ್ಪತ್ರೆಯನ್ನು ತೆರೆದರು. ಈ ಆಸ್ಪತ್ರೆಯಲ್ಲಿ ರೋಗಿಗಳಿಗೆ ಔಷಧಿ ಕೊಡುವ ಏರ್ಪಾಡು, ನಾಲ್ಕು ಹಾಸಿಗೆಯ ವಾರ್ಡ್, ಡಾಕ್ಟರ್, ನರ್ಸ್ ಮತ್ತು ಕಂಪೌಂಡರಿಗೆ ವಸತಿ ಗೃಹಗಳಲ್ಲದೆ ಒಂದು ಉತ್ತಮವಾದ ಟೆನ್ನಿಸ್ ಕೋರ್ಟ್ ಕೂಡಿದೆ. ಇದನ್ನು ನಡೆಸಿಕೊಂಡು ಬರಲು ಐದು ಸಾವಿರ ರೂಪಾಯಿಯ ಒಂದು ನಿಧಿ, ೩೦ ಎಕರೆ ಬಟ್ಟೆ ಭೂಮಿ ಮತ್ತು ಸುತ್ತುಮುತ್ತು ಒಂದು ಎಕ್ರೆ ಕಿತ್ತಳೆ ತೋಟ ಇವುಗಳನ್ನು ಕೂಡ ಕೊಡಲಾಗಿದೆ. ಇದರ ಒಟ್ಟು ಮೌಲ್ಯ ಸುಮಾರು ಒಂದು ಲಕ್ಷ ರೂಪಾಯಿಗಳಾಗುತ್ತದೆ. ಈ ಅದರ್ಶದಾನವನ್ನು ಶಿತಿಮಾತಿಯ ಶ್ರೀ. ಮನೆಯಪಂಡ ಎಸ್. ಚಿಟ್ಟಿಯಪ್ಪನವರು ತನ್ನ ತಂದೆ ದಿವಂಗತ ಸಾಬಪ್ಪನವರ ಸ್ಮಾರಕವಾಗಿ ಕೊಟ್ಟಿದ್ದಾಗಿದೆ. ಈ ಆಸ್ಪತ್ರೆಯನ್ನು ಸರಕಾರವು ವಹಿಸಿಕೊಳ್ಳುವ ತನಕ ಜಿಲ್ಲಾ ಬೋರ್ಡಿನ ವಶಕ್ಕೆ ಕೊಡಲಾಗುವದು.

ಹಣವನ್ನು ನ್ಯಾಯವಾದ ಮಾರ್ಗದಲ್ಲಿ ಗಳಿಸುವದೇ ಕಷ್ಟ. ಗಳಿಸಿದ್ದನ್ನು ಉಳಿಸುವದು ಮತ್ತಷ್ಟೂ ಕಷ್ಟ. ಉಳಿಸಿದನ್ನು ಸದುಪಯೋಗಪಡಿಸುವದು ಮಹಾ ಕಷ್ಟ. ಶ್ರೀ ಚಿಟ್ಟಿಯಪ್ಪನವರು ವಿದ್ಯಾಪಾರಂಗತರಾದರೂ ಕೂಡ ಗ್ರಾಮದಲ್ಲಿ ಉಳಿದು ವ್ಯವಸಾಯ ವೃತ್ತಿಯನ್ನು ಕೈಕೊಂಡು ತನ್ನ ಚಿಕ್ಕ ಪ್ರಾಯದಲ್ಲೇ ನ್ಯಾಯ ರೀತಿಯಲ್ಲಿ ಗಳಿಸಿ, ಉಳಿಸಿ, ಅದನ್ನು ಸದುಪಯೋಗಪಡಿಸಿರುವದು ಪ್ರಸಂಶನೀಯ. ಕಳ್ಳಸಂತೆ, ಅಸತ್ಯ ವರ್ತನೆಗಳನ್ನು ಬಿಟ್ಟು ಕಷ್ಟಾರ್ಜಿತ ಮಾರ್ಗವಾದ ವ್ಯವಸಾಯದಿಂದ ಸಂಪಾದನೆ ಮಾಡುವ ಕಾಲಕ್ಕೆ ಅನೇಕರು ಇವರೊಡನೆ ಸ್ಪರ್ಧೆ ಮಾಡಿದಾರೆ. ಕೆಲವರು ಅಸೂಯೆ ಕೂಡ ಪಟ್ಟರು. ಆದರೆ ಇವರನ್ನೆಲ್ಲಾ ಶ್ರೀ ಚಿಟ್ಟಿಯಪ್ಪನವರು ತನ್ನ ಉದಾರ ದಾನದಿಂದ ಮೀರಿಸಿರುವರು. ಶ್ರೀಮಂತರಾದ ಇವರು ತಮ್ಮ ಸುಖ ಸಂಪತ್ತಿನಲ್ಲಿ ಮಗ್ನರಾಗಿರದೆ ಜಾತಿಯ ಬಡಜನರ ಕಷ್ಟವನ್ನರಿತು ಅವರ ದುಃಖ ನಿವಾರಣೆಯಲ್ಲಿಯೇ ಸರ್ವರ ಸೌಖ್ಯವಿದೆಯೆಂಬದನ್ನು ತಿಳಿದು ಈ ದಾನವನ್ನು ಮಾಡಿರುವದು ಜನತೆಗೆ ಅವರ ಹೃದಯ ಪರಿಚಯವನ್ನು ಮಾಡುತ್ತದೆ. ದಾನ ಧರ್ಮಕ್ಕೆ ಹೆಸರಾಗಿರುವ ಕೊಡಗಿನಲ್ಲಿ ಈ ಮೊದಲು ದಾನ ಮಾಡಿದವರ ಸಂಖ್ಯೆ ಕಡಿಮೆ ಏನಿಲ್ಲ. ಆದರೆ ಬಡ ಜನರ ಹಿತಕ್ಕಾಗಿ ಈ ವರೆಗೆ ಯಾರೂ ಮಾಡದ ಇಷ್ಟು ದೊಡ್ಡ ದಾನ ಮಾಡಿದ್ದು, ಇದನ್ನೂ ಕೂಡ ತನ್ನ ಪ್ರೀತಿಯ ತಂದೆಯವರ ಹೆಸರಿನಲ್ಲಿ ಮಾಡಿದ್ದು ಆದರ್ಶನೀಯವೂ ಶ್ಲಾಘನೀಯವೂ ಆಗಿದೆ. ಉಳಿಸಿದ ಹಣವನ್ನು ಬ್ಯಾಂಕುಗಳಲ್ಲಿ ಇಡುವ ಈ ಕಾಲದಲ್ಲಿ ಶ್ರೇಯಸ್ಕರ ತಮ್ಮ ಸಂಪಾದನೆಯನ್ನು ಎಂದೂ ಅಳಿಯದ ಸ್ಥಿರಸ್ಥಾಯಿಯಾಗಿರುವ ಧರ್ಮವಾದ ಬ್ಯಾಂಕಿನಲ್ಲಿರಿಸಿರುವರೆನ್ನಬಹುದು. ಶ್ರೀಯುತರ ಈ ಉದಾಹರಣೆಯನ್ನು ಕೊಡಗಿನ ಶ್ರೀಮಂತರೆಲ್ಲ ಅನುಸರಿಸಿ ಬಡ ಜನರ ದುಃಖ ನಿವಾರಣೆಗೆ ತಮ್ಮ ಪಾಲಿನ ಸೇವೆಯನ್ನು ಸಲ್ಲಿಸುವರೆಂದು ಆಶಿಸುವೆವು.

ವರ್ತಮಾನ.

ವೈದ್ಯಕೀಯ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಶ್ರೀಗಳಾದ ಕಂಬೀರಂಡ ಎ. ಮಂದಣ್ಣ, ಪುಲಿಯಂಡ ಜಿ. ಚಂಗಪ್ಪ, ಬಿಟ್ಟಂಗಾಲ ಗ್ರಾಮದ ಶ್ರೀಮತಿ ಮುಕ್ಕಾಟಿರ ಎಸ್. ತಂಗವ್ವ ಮತ್ತು ಮಾಪಂಗಡ ಕೆ. ಸೋಮಯ್ಯ ಇವರುಗಳು ತೇರ್ಗಡೆಯಾಗಿರುವರು.

ಕೊಡಗಿನ 'ಯಂಗ್ ಇಲೆವನ್' ಹಾಕಿ ಟೀಮು ಕಳೆದ ನವಂಬರ್ ತಿಂಗಳಿಂದ ಈ ಮೇ ಅಂತ್ಯದ ವರೆಗೆ ಈ ಕೆಳಗಿನ ಐದು ಬೆಳ್ಳಿಯ ಬಟ್ಟಲುಗಳನ್ನು ಗೆದ್ದಿರುತ್ತದೆ. (೧) ಅಜ್ಜಿಕುಟ್ಟಿರ ದಿವಂಗತ (ಪೊನ್ನಂಪೇಟೆ) ಇವರ ಸ್ಮಾರಕ ಕಪ್. (೨) ಯಾಬ್ರಿಯಿ ಲಿಮಿಟೆಡ್ ಇವರು ನಾಪೋಕ್ಲು ಶಾಲೆಯ ಆಶ್ರಯದಲ್ಲಿ ಇಟ್ಟಿರುವ ಕಪ್. (೩) ನೆರವಂಡ ಅಪ್ಪಚ್ಚು ಮೆಮೋರಿಯಲ್ ಕಪ್. (೪) ದೇವಣಿರ ಪೂವಿ ಅಪ್ಪಯ್ಯ ಸ್ಮಾರಕ ಕಪ್ ಮತ್ತು (೫) ಎಲ್. ಜಿ. ಮೈರಾ ಐಪರ್‌ರವರ ಚೀಫ್ ಕಮಿಷನರ್ ಟ್ರೋಫಿ.

ಕೆಲವು ದಿನಗಳ ಹಿಂದೆ ಮಡಿಕೇರಿಯಲ್ಲಿ ಚಿನ್ನದ ಕೆಲಸ ಮಾಡುತ್ತಿರುವ ಶ್ರೀ. ವಿ ನಾಚಾರಿಯವರ ಮನೆಯಿಂದ ನಗನಾಣ್ಯಗಳ ಕಳವು ಮಾಡಿದನೆಂಬ ಅಪಾದನೆ ಮೇರೆ ನಾರಾಯಣನೆಂಬವನಿಗೆ ಮೂರು ವರ್ಷ ನಾಲ್ಕು ತಿಂಗಳೂ, ಅಚಾರಿ ಚೆಂಗಪ್ಪನಿಗೆ ಮೂರು ವರ್ಷವೂ ಕಠಿಣ ಶಿಕ್ಷೆ ವಿಧಿಸಲಾಗಿದೆಯಂತೆ.

ನಾಪೋಕ್ಲು ಹೈಸ್ಕೂಲಿನಲ್ಲಿ ನಾಲ್ಕನೇ ಫಾರಂನಲ್ಲಿ ಹೆಚ್ಚಿನ ಸೆಕ್ಷನೊಂದನ್ನು ತೆರೆಯಲು ಮಂಜೂರಾಗಿದೆಯೆಂದು ತಿಳಿದು ಬರುತ್ತದೆ.

ಈ ತಾರೀಕು ೧ ರಿಂದ ಕೊಡಗಿನ ನಿಶ್ಚಿತ ಹತ್ತು ಸಾರಾಯಿ ಗಡಂಗಗಳಲ್ಲಿ ಕೂಪನ್‌ದಾರರಿಗೆ ಸೀಲು ಹಾಕಿದ ಕುಪ್ಪಿಗಳಲ್ಲಿ ಸಾರಾಯಿ ಮಾರಾಟ ಮಾಡುವ ಏರ್ಪಾಡಾಗಿದೆ.

ಜುಲೈ ತಿಂಗಳಲ್ಲಿ ಪ್ರಾರಂಭವಾಗಲಿರುವ ಕೊಡಗಿನ ಕಾಲೇಜಿಗೆ ಮಂಗಳೂರು ಸೈಂಟ್ ಎಲೋಸಿಯಸ್ ಕಾಲೇಜಿನಲ್ಲಿ ೮ ವರ್ಷ ಫಿಜಿಕ್ಸ್ ಲೆಕ್ಚರರಾಗಿದ್ದ ಶ್ರೀ. ಎಂ. ಎ. ರಾಮಚಂದ್ರರಾವ್ ಬಿ. ಎ (ಫಸ್ಟ್ ಕ್ಲಾಸ್) ಬಿ. ಎಸ್. ಸಿ (ಆನರ್ಸ-ಫಸ್ಟ್ ಕ್ಲಾಸ್) ಇವರನ್ನು ಫಿಜಿಕ್ಸ್ ಲೆಕ್ಚರರಾಗಿಯೂ, ತಲಚೇರಿ ಗವರ್ನಮೆಂಟ್ ಬ್ರೆನೆನ್ ಕಾಲೇಜಿನ ಕೆಮಿಸ್ಟ್ರಿ ಇಲಾಖೆಯಲ್ಲಿ ಆರು ವರ್ಷಗಳಿಂದ ಮುಖ್ಯಸ್ಥರಾಗಿದ್ದ ಶ್ರೀ. ಕೆ. ಎ. ರಾಮಕೃಷ್ಣನ್ ಬಿ. ಎ (ಫಸ್ಟ್ ಕ್ಲಾಸ್) ಬಿ. ಎಸ್ ಸಿ (ಆನರ್ಸ) ಇವರನ್ನು ಕೆಮಿಸ್ಟ್ರಿ ಲೆಕ್ಚರರಾಗಿಯೂ, ಮತ್ತು ಮೈಸೂರು ವಿಶ್ವವಿದ್ಯಾಲಯದಲ್ಲಿ ಐದು ವರ್ಷ ಬಾಟನಿ ಮತ್ತು ಝೂವಾಲಜಿ ಲೆಕ್ಚರರಾಗಿದ್ದ ಶ್ರೀ. ಎ. ಸತ್ಯನಾರಾಯಣರಾವ್ ಬಿ. ಎಸ್ ಸಿ (ಆನರ್ಸ-ಫಸ್ಟ್ ಕ್ಲಾಸ್) ಇವರನ್ನು ನೇಚರಲ್ ಸೈನ್ಸ್ ಲೆಕ್ಚರರಾಗಿಯೂ ಜೂನ್ ತಾರೀಕು ೧ರಿಂದ ನೇಮಿಸಲಾಗಿದೆ.

॥ ಪತ್ರವ್ಯವಹಾರಗಳು ॥

ಮಡಿಕೇರಿ ದೀಪ ವ್ಯವಸ್ಥೆ.

ಈ ವಿಚಾರದಲ್ಲಿ ಹಲವು ಲೇಖನಗಳು ಪತ್ರಿಕೆಗಳಲ್ಲಿ ಬಂದಿವೆ. ಆದರೂ ಇಲೆಕ್ಟ್ರಿಕ್ ಕಂಪನಿಯವರಾಗಲೀ, ಸರಕಾರದವರಾಗಲೀ ಯಾವದೇ ತೊಂದರೆ ತೆಗೆದುಕೊಂಡ ಹಾಗೆ ಕಾಣುವದಿಲ್ಲ. ಮಡಿಕೇರಿಯ ಬೀದಿಗಳಲ್ಲಿ ಯಾವಾಗಲೂ ಕತ್ತಲೆ. ಸ್ವಲ್ಪ ಜನರ ಇಲೆಕ್ಟ್ರಿಕ್ ದೀಪದಿಂದ ಮನೆಗಳಲೆಲ್ಲಾ ಕಾಮಾಲೆ ರೋಗ ಪೀಡಿತವಾದ ದೀಪದ ಬೆಳಕು. ಈ ಬೆಳಕಿನಿಂದ ಓದುವದಾಗುವದಿಲ್ಲ. ಇದು ಹೀಗೆಯೇ ಮುಂದರಿದರೆ ಅನೇಕರು ತಮ್ಮ ಕಣ್ಣುಗಳನ್ನು ಇದರಿಂದ ಕೆಡಿಸಿಕೊಳ್ಳುವರು ಎಂಬುವದರಲ್ಲಿ ಸಂಶಯವಿಲ್ಲ. ಕಂಪನಿಗೆ ಇದನ್ನು ಸರಿಪಡಿಸಲಾಗದಿದ್ದರೆ ಸರಕಾರವು ಇದನ್ನು ವಹಿಸಿಕೊಂಡು ಯೋಗ್ಯ ದೀಪದ ಏರ್ಪಾಡು ಮಾಡಬೇಕು. ಇದಲ್ಲಿವೆ ಪ್ರಜೆಗಳಿಗೆ ಈ ರೀತಿಯ ತೊಂದರೆ ಕೊಡುವದು ಯೋಗ್ಯವಲ್ಲ.

ಈ ಇಲೆಕ್ಟ್ರಿಕ್ ಕಂಪನಿಯ ವಿದ್ಯುಚ್ಛಕ್ತಿ ಶಕ್ತಿ ನಂಬಿ ಚಿಕ್ಕ ಚಿಕ್ಕ ಕೈಗಾರಿಕೆ ಪ್ರಾರಂಭಿಸಿದವರ ಕಷ್ಟ ಹೇಳತೀರದು. ಒಂದು ದೃಷ್ಟಿಯಿಂದ ಈ ಇಲೆಕ್ಟ್ರಿಕ್ ಕಂಪನಿಯವರು ಈ ಮಿಲ್ ಮಾಲೀಕರಿಗೂ, ಇತರ ಕೈಗಾರಿಕೆಯವರಿಗೂ ಪರಿಹಾರ ಕೊಡತಕ್ಕದ್ದು. ಮಡಿಕೇರಿಯ ಸ್ವಲ್ಪ ಜನರೂ ಕೈಗಾರಿಕೆಯವರೂ ಒಹು ಕಾಲ ನಿಷ್ಕ್ರಿಯವಾಗಿ ತೆಗೆದುಕೊಳ್ಳಬೇಕು. ಅಲ್ಲದಿದ್ದರೆ ಈ ಅನಿಷ್ಟವನ್ನು ಸಹಿಸುತ್ತಿದ್ದರೇ? ಸರಕಾರವು ಇನ್ನಾದರೂ ಈ ಬಗ್ಗೆ ಯೋಗ್ಯ ಏರ್ಪಾಡು ಮಾಡುವದೇ?

'ಪ್ರಜೆ'

ಕೊಡಗು ವ್ಯವಸಾಯ ಇಲಾಖೆ.

ಈ ಇಲಾಖೆ ವಿಸ್ತಾರಗೊಳ್ಳುತ್ತಿದೆ. ಕೇವಲ ಹೆಸರಿಗೆ ಈ ಇಲಾಖೆಯು ಬೆಳೆದು ಅಧಿಕಾರಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ಆದರೆ ಇದರಿಂದ ಜನರಿಗೆ ಏನಾದರೂ ಪ್ರಯೋಜನವಾಗಿದೆಯೇ ಎಂಬುದು ಸಂಶಯದ ಮಾತು. ಸ್ವಾತಂತ್ರ್ಯ ಬಂದ ಮೇಲೆ ವ್ಯವಸಾಯ ವಿಚಾರದಲ್ಲಿ ಮುಂದುವರಿಯುತ್ತಿರುವಾಗ ಈ ಇಲಾಖೆಯು ಆಡಳಿತ ಈ ಹಿಂದಿನಂತೆಯೇ ಸಮಯ ತಪ್ಪಿ ಆಗುತ್ತಿದೆ. ಮಳೆಗಾಲ ಪ್ರಾರಂಭವಾದರೂ ಇನ್ನೂ ಗೊಬ್ಬರ ಸರಬರಾಯಿ ವ್ಯವಸ್ಥೆಯಾಗಿಲ್ಲ. ಜನರಿಂದ ಇಂಡೆಂಟ್ ತರಿಸಿ ಅನೇಕ ತಿಂಗಳುಗಳು ಕಳೆದವು. ಇನ್ನೂ ಈ ಬಗ್ಗೆ ವ್ಯವಸ್ಥೆಯಾಗಲಿಲ್ಲವೇಕೆ? ಈ ರೀತಿ ಸಮಯ ತಪ್ಪಿದ ವ್ಯವಸ್ಥೆಯಿಂದ ರೈತರಿಗೆ ಒಳಿತಾಗದು. ಅದೂ ಗ್ರಾಮಾಂತರಗಳಲ್ಲಿರುವ ಗದ್ದೆಯ ಅನುಕೂಲ ತಪ್ಪಿದ ಮೇಲೆ ಯಾವ ಪ್ರಯೋಜನವೂ ಈ ಗೊಬ್ಬರದಿಂದ ಆಗಲಾರದು. ಅಧಿಕಾರಿಗಳು ಗ್ರಾಮಕ್ಕೆ ಹೋಗುತ್ತಾರೆ ಸರಿ, ಆದೇ ಸಾಲದು. ಬಡ ಜನರಿಗೆ ಕಾಲದಲ್ಲಿ ತಕ್ಕ ಸಹಾಯ ಒದಗಿಸಿ ಅವನ ಪ್ರತಿ ವ್ಯವಸಾಯ ಉದ್ಯಮವನ್ನು ಕಣ್ಣಿಟ್ಟು ಪರೀಕ್ಷಿಸಿ ಕಾಲದಲ್ಲಿ ಶಾಸ್ತ್ರೀಯವಾಗಿ ಅವನ ವ್ಯವಸಾಯವಾಗುವಂತೆ ಪ್ರೇರೇಪಿಸುವ ದಕ್ಷತೆಯನ್ನು ಇಲಾಖೆಯು ವಹಿಸಬೇಕು. ಇದು ಬಿಟ್ಟು ಇಲಾಖೆಯವರೇ ಯಾವಾಗಲೋ ಸರಬರಾಯಿ ಮಾಡಬೇಕಾದ ಗೊಬ್ಬರವನ್ನು ಯಾವಾಗಲೋ ಮಾಡಿದರೆ ರೈತನ ವ್ಯವಸಾಯ ಸಕಾಲದಲ್ಲಿ ಹೇಗಾದೀತು? ಇನ್ನಾದರೂ ಈ ಇಲಾಖೆಯವರು ಎಚ್ಚರ ತೆಗೆದುಕೊಳ್ಳಬೇಕು. ಈ ಇಲಾಖೆಯ ದಕ್ಷತೆಯ ಮೇಲೆ ವ್ಯವಸಾಯಗಾರರ ನಾಡಾದ ಕೊಡಗಿನ ಉತ್ಕರ್ಷವು ನಿಂತಿದೆ.

'ರೈತ'

ಚೀಫ್ ಕಮಿಷನರ ಪರ್ಸನಲ್ ಅಸಿಸ್ಟೆಂಟರ ಉದ್ಯೋಗ.

ಕೆಲವು ದಿನಗಳ ಹಿಂದೆ ಸ್ಥಾಪಿಸಲ್ಪಟ್ಟ ಚೀಫ್ ಕಮಿಷನರ ಪರ್ಸನಲ್ ಅಸಿಸ್ಟೆಂಟರ ಉದ್ಯೋಗಕ್ಕೆ ಸ್ಪೆಷಲ್ ಆಫೀಸರಾಗಿದ್ದ ಶ್ರೀ. ಕೆ. ಸಿ. ಕುಟ್ಟಪ್ಪನವರನ್ನು ನೇಮಿಸಿದ್ದು ನ್ಯಾಯವಲ್ಲವೆಂದೂ, ಸ್ಪೆಷಲ್ ಆಫೀಸರಾಗುವ ಶ್ರೀ ಐ ಸಿ ಸುಬ್ಬಯ್ಯನವರನ್ನು ನೇಮಿಸಬೇಕಾಗಿತ್ತೆಂದೂ, ಇವನ್ನು ಬದಲಾಯಿಸಿ ಸರಿಪಡಿಸಬೇಕೆಂದು ಇಂಡಿಯಾ ಸರಕಾರಕ್ಕೆ ಅರಿಕೆ ಮಾಡಲಾಗುವದೆಂದೂ ಕಾಂಗ್ರೆಸ್ ಮುಖಂಡರಾದ ಸಿ. ಎಂ. ಪೂಣಚ್ಚ, ಕೆ. ಮಲ್ಲಪ್ಪ, ಎಂ. ಎಸ್. ಸೋಮಣ್ಣ ಇವರು ಚೀಫ್ ಕಮಿಷನರಿಗೆ ತಿಳಿಸಿದರು. ಅದರ ನಕಲನ್ನು ಇಂಡಿಯಾ ಸರಕಾರಕ್ಕೆ ಕಳುಹಿಸಿರುವರೆಂದು ಸುದ್ದಿ ಇದೆ. ಇದು ನಿಜವೋ ಸುಳ್ಳೋ ಎಂದು ಗ್ರಾಮದಲ್ಲಿರುವವರಿಗೆ ತಿಳಿಯುವದು ಕಷ್ಟವಾಗಿದೆ. ಆದ್ದರಿಂದ ಈ ಮೇಲಿನ ಮಹನೀಯರಾಗಲೀ, ಇದರ ಸತ್ಯಾಂಶವನ್ನು ತಿಳಿದ ಇತರರೇ ಆಗಲೀ ಪತ್ರಿಕೆಯ ಮೂಲಕ ತಿಳಿಸಬೇಕಾಗಿ ಈ ಮೂಲಕ ಕೇಳಿಕೊಳ್ಳಲಾಗಿದೆ.

"ಗ್ರಾಮಸ್ಥ"

ಮಡಿಕೇರಿ ಹುಡುಗಿಯರ ಹೈಸ್ಕೂಲು

ಈ ಹೈಸ್ಕೂಲಿನ ಪರೀಕ್ಷಾ ಫಲಿತಾಂಶಗಳು ಪ್ರತಿ ವರ್ಷವೂ ಪ್ರಶಂಸನೀಯವಾದ ರೀತಿಯಲ್ಲಿರುವದು ಸ್ತುತ್ಯಾರ್ಹವಾದರೂ ಈ ಸಂಸ್ಥೆಯಲ್ಲಿ ನ್ಯೂನತೆಗಳಿಲ್ಲವೆಂದು ಭಾವಿಸಿದರೆ ತಪ್ಪಾಗುವದು. ಈ ಹುಡುಗಿಯರ ಹೈಸ್ಕೂಲಿನಲ್ಲಿ ಮಕ್ಕಳಿಗೆ ಕೊಡುವ ಆಹಾರ ಸಮರ್ಪಕವಾಗಿಲ್ಲ. ಮಕ್ಕಳಿಗೆ ವಿಶ್ರಾಂತಿಯ ಸೌಕರ್ಯವಿಲ್ಲ. ಈ ವಿಚಾರದಲ್ಲಿ ಈ ಮೊದಲೇ ಹಲವು ಕಡೆಯಿಂದ ದೂರು ಕೇಳಿಬಂದರೂ ಈ ನ್ಯೂನತೆಗಳು ಪರಿಹಾರವಾಗಿರುವುದಿಲ್ಲ. ಅಂದಿನಂತೆಯೇ ಇಂದೂ ಕೂಡ ಮಕ್ಕಳೇ ನೀರು ತಂದುಕೊಳ್ಳಬೇಕು. ಅವರೇ ಸೌದೆ ಒದಗಿಸಿಕೊಳ್ಳಬೇಕು. ಮಕ್ಕಳು ತಮ್ಮ ಕೆಲಸವನ್ನು ತಾವೇ ಮಾಡಿಕೊಳ್ಳುವದನ್ನು ತಪ್ಪೆಂದು ನಾನು ಹೇಳೆನಾದರೂ ಮಕ್ಕಳು ಹಸನ್ಮುಖರಾಗಿ ಮಾಡುವ ಪರಿಸ್ಥಿತಿ ಕಲ್ಪಿಸಬೇಕು. ಕಾನ್ವೆಂಟಿನಲ್ಲಿರುವ ಚಿಕ್ಕ ಹುಡುಗಿಯರ ಕಲೆಯಲ್ಲಿ ಹೋಗಿ, ಪುಣ್ಯಾಗಿ ಕಷ್ಟಪಡುವ ಉದಾಹರಣೆಗಳೂ ಇವೆ. ಇತ್ತೀಚೆಗೆ ರೋಗಿಗಳಿಗೆ ಡಿ. ಡಿ. ಟಿ ಔಷಧಿ ಉಪಯೋಗಿಸುತ್ತಾರಂತೆ! ಇದು ಯೋಗ್ಯವೇ ಎಂಬುದನ್ನು ಡಾಕ್ಟರುಗಳು ಹೇಳಬೇಕು. ಹೇಗೂ ಅಲ್ಲಿಯ ವಿದ್ಯಾರ್ಥಿಗಳ ಬಗ್ಗೆ ಮೇಲ್ವಿಚಾರಕರು ಹೆಚ್ಚಿನ ನಿಗ ವಹಿಸಬೇಕು. ಶಾಲಾ ಜೀವನವು ಜೈಲು ಜೀವನವಾಗಬಾರದು.

ಅಲ್ಲಿನ ಶಾಲಾ ವಿದ್ಯಾರ್ಥಿಗಳಲ್ಲಿ ಒಂದನೆ ತರಗತಿಯ ಊಟದವರು, ಎರಡನೇ ತರಗತಿಯವರೆಂದು ವಿಂಗಡಿಸಿರುವದು ಯೋಗ್ಯವಲ್ಲ. ಎಲ್ಲರೂ ಸಮಾನರೆಂಬ ತತ್ವವನ್ನು ಕಲಿಸಬೇಕಾದ ಶಾಲೆಗಳಲ್ಲಿ ಈ ರೀತಿಯ ಏರ್ಪಾಡು ಎಂದಿಗೂ ಯೋಗ್ಯವಲ್ಲ. ಕಾನ್ವೆಂಟಿನ ಸಂಚಾಲಕರು ಈ ನ್ಯೂನತೆಗಳನ್ನು ಶೀಘ್ರ ನಿವಾರಿಸುವರೆಂದು ಆಶಿಸಲಾಗಿದೆ.

"ಪೋಷಕ"

ಮನೆಯಪಂಡ ನಾಚಯ್ಯ ಮೆಮೋರಿಯಲ್ ಆಸ್ಪತ್ರೆ.

ಈ ಆಸ್ಪತ್ರೆಯನ್ನು ತಾ. ೨೮ ರಲ್ಲಿ ಚೀಫ್ ಕಮಿಷನರವರು ತೆರೆದು ಉದ್ಘಾಟಿಸಿದರು. ಸುಮಾರು ೩೦೦ ಜನರು ನೆರೆದಿದ್ದರು. ಶ್ರೀ ಚೆಪ್ಪುಡಿರ ಪೂವಯ್ಯನವರು ಸ್ವಾಗತ ಭಾಷಣ ಮಾಡುತ್ತಾ, ಶ್ರೀ. ಚಿಟ್ಟಿಯಪ್ಪನವರು ಮಾಡಿರುವ ಈ ದಾನದಲ್ಲಿ ಆಸ್ಪತ್ರೆಗೆ ಸಂಬಂಧಿಸಿದ ಕಟ್ಟಡಗಳು, ಬಾವಿ ಇರುವದಲ್ಲದೆ, ೫೦೦೦ ರೂಪಾಯಿಗಳಿಂದ ಕೂಡಿದ ಮೇವಿ ನಿಧಿ, ೨೫೦ ಬಟ್ಟೆ ಭೂಮಿ, ೧ ಎಕ್ರೆ ಕಿತ್ತಳೆ ತೋಟವೆಲ್ಲ ಸೇರಿ ಬೆಲೆ ೧೬,೦೦೦ ರೂ ಆಗಬಹುದು. ನಂತರ ನಿಧಿಯಲ್ಲಿ ಶ್ರೀ. ಎಂ. ಎಸ್. ಗಣಪತಿಯವರು ರೂ. ೪೦೦೦ ದಾನ ಕೊಡಲಾಗಿದೆ. ಇದರಿಂದ ಇಲ್ಲಿಯ ಸುತ್ತುಮುತ್ತಲಿನ ಗ್ರಾಮಸ್ಥರಿಗೂ, ಇತರ ಬಡವರಿಗೂ ತುಂಬಾ ಸಹಾಯವಾಗುವದೆಂದೂ ಇಲ್ಲಿಯು ಶಾಲೆಯ ಬಡಾವಣೆಯನ್ನೂ, ತಿತಿಮತಿ ಬಾಳೆಲೆ ರಸ್ತೆಯ ದುರಸ್ತಿಯನ್ನೂ ಸರಕಾರವು ಶೀಘ್ರ ಕೈಕೊಳ್ಳಬೇಕೆಂದೂ ಹೇಳಿದರು. ಶ್ರೀ ಚಿಟ್ಟಿಯಪ್ಪನವರ ಕೋರಿಕೆ ಮೇರೆ ಚೀಫ್ ಕಮಿಷನರು ಉದ್ಘಾಟನೆ ಮಾಡುತ್ತಾ ಚಿಟ್ಟಿಯಪ್ಪನವರ ಈ ಉದಾರ ದಾನವನ್ನು ಪ್ರಶಂಸಿಸಿ ಇದು ಬೇಗನೆ ಪ್ರಥಮ ದರ್ಜೆಯ ಆಸ್ಪತ್ರೆಯಾಗಬಹುದೆಂದೂ, ಇತರ ಶ್ರೀಮಂತರು ಇವರ ಉದಾಹರಣೆಯನ್ನು ಅನುಸರಿಸಲೆಂದೂ ಹೇಳಿದರು. ನಂತರ ಶ್ರೀ. ಎ. ಎಸ್ ಚೆಂಗಪ್ಪನವರು ಮತ್ತು ಶ್ರೀ ಪಿ ಐ ಬೆಳ್ಯಪ್ಪನವರು ಚಿಟ್ಟಿಯಪ್ಪನವರ ಉದಾರ ದಾನವನ್ನು ಅನುಮೋದಿಸಿ ಭಾಷಣ ಮಾಡಿದರು. ಆ ವೇಳೆ ನೆರೆದವರಿಗೆಲ್ಲಾ ತಿಂಡಿ ತೀರ್ಥಗಳು ಹಂಚಲ್ಪಟ್ಟವು.

---

೧೫ ರೂಪಾಯಿ ಬಹುಮಾನ

ನನ್ನ ಬಾಪ್ತು ಈ ಕೆಳಗಿನ ಚಹರೆಯ ಎರಡು ಎತ್ತುಗಳು ಕೆಲವು ದಿವಸಗಳಿಂದ ಪರಾರಿಯಾಗಿವೆ. ಇವುಗಳ ಪತ್ತೆ ಹಚ್ಚಿ ಈ ಕೆಳಗಿನ ಅಡ್ರೆಸಿಗೆ ತಿಳಿಸಿದವರಿಗೆ ರೂ ೧೫ ಬಹುಮಾನ ಕೊಡಲಾಗುವದು

(೧) ಬಿಳಿ ಎತ್ತು, ಸುಮಾರು ಹತ್ತು ಇಂಚು ಉದ್ದವಿದ್ದು ಹಿಂದಕ್ಕೆ ಬಾಗಿರುವ ಕೋಡುಗಳು ಕಣ್ಣಿನ ಕರೆ ಕಪ್ಪಾಗಿ ಎತ್ತು ಸುಮಾರು ನಾಲ್ಕು ಅಡಿ ಎತ್ತರವಿದೆ.

(೨) ಬೂದು ಬಣ್ಣದ ಕಪ್ಪು ಮಿಶ್ರ ಇರುವ ಎತ್ತು ಕೋಡು ಉದ್ದವಾಗಿ ಆರು ಇಂಚು ಉದ್ದವಿದೆ. ಸುಮಾರು ನಾಲ್ಕು ಅಡಿ ಎತ್ತರವಿದೆ.

ಚಾಳಾಡಿರ ಮಾದಪ್ಪ,
ಅರ್ವತೊಕ್ಲು ಗ್ರಾಮ,
ಬಿಟ್ಟಂಗಾಲ ಪೋಸ್ಟ್,
ಉ. ಕೊಡಗು.

ನೋಟೀಸು

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನೆಂದರೆ:—

ನಮ್ಮ ಕುಟುಂಬಕ್ಕೆ ಸೇರಿ ಪಟ್ಟೆದಾರ ಶ್ರೀ ಮುತ್ತಣ್ಣನವರ ಹೆಸರಿನಲ್ಲಿ ಜಮಾಬಂದಿ ನಡೆದುಕೊಂಡು ಬರುತ್ತಿರುವ ಹಾರಂಗಿ ಗ್ರಾಮದಲ್ಲಿ ಸರ್ವೆ ನಂ 62,18, 50, 23 2, 55ರ ಆಸ್ತಿಯನ್ನು ಚೆಪ್ಪುಡೀರ ಪೂವಯ್ಯನವರ ಮಗ ಕುಶಾಲಪ್ಪನವರು ರಾಟೆ ಬಿಟ್ಟು ಕಿರಿಯರಿಗೆ ಕೊಡದೆ ಬೇರೆಯವರಿಗೆ ಪರಾಧೀನ ಮಾಡುವದಾಗಿ ಕೇಳಿ ಬಂದಿದೆ. ಇದು ಕುಟುಂಬದ ಆಸ್ತಿಯಾಗಿರುವುದರಿಂದ ಇದನ್ನು ಹಾಗೆ ಪರಾಧೀನ ಮಾಡಲು ಅವರಿಗೆ ಹಕ್ಕು ಇರುವುದಿಲ್ಲ. ಆದ್ದರಿಂದ ಈ ಕ್ರಯಗಳನ್ನು ಹಾಗೆ ಪಡಕೊಳ್ಳುವವರಿಗೆ ಅದು ದೂಷ ಕಾಲಕನ್ನ ಸಿಂಧು ವಾಗಲಾರದು.

2-6-49 ಪಟ್ಟೆದಾರರಾಗಿ
ಚೆಪ್ಪುಡೀರ, ಬೋಪಯ್ಯ
ಸಿದ್ದರ್ ಲಾಡ್ಜ್ ಗೋಣಿಕೊಪ್ಪ

1-1

ಅಂತರಾಷ್ಟ್ರೀಯ ರಂಗದಲ್ಲಿ

ಪ್ರಾಮುಖ್ಯ ಘಟನೆಗಳು.

ಲೇ:—ಶ್ರೀ. 'ಗುಪ್ತ'

ಚೈನಾದ ಕೆಂಪುಸೇನೆ.

ಚೈನಾದಲ್ಲಿ ಕಳೆದ ಹಲವು ವರ್ಷಗಳಿಂದ ನಡೆಯುತ್ತಿರುವ ಯಾದವೀ ಕಲಹದ ಕಡೇ ಅಂಕವು ಈಗ ನಡೆಯುತ್ತಿದೆ. ಚೀನಾ ಕಮ್ಯೂನಿಷ್ಟರ ಕೆಂಪುಸೇನೆಯು ಕ್ಯೂಮಿಂಗ್‌ಟೇಂಗ್ ಪಕ್ಷದ ದಳಗಳನ್ನು ಹಿಮ್ಮೆಟ್ಟಿಸಿವೆ. ಶಾಂಘಾಯಿ ನಗರದಲ್ಲಿ ಚೈನೀ ಸರಕಾರದ ಪಡೆಗಳು ಕೆಂಪುಸೇನೆಯ ಮುನ್ನಡೆಯನ್ನು ಎದುರಿಸಿವೆ. ಇಲ್ಲಿ ಪ್ರಚಂಡ ಕದನ ನಡೆದು ಶಾಂಘಾಯಿ ಪಟ್ಟಣವು ಚೀನೀ ಕೆಂಪು ಸೈನ್ಯದ ವಶವಾಯಿತು.

ಶಾಂಘಾಯೀ ಪಟ್ಟಣವು ಜಗತ್ತಿನ ನಾಲ್ಕನೇ ನಗರ. ಇದರಲ್ಲಿ ಅರುವತ್ತು ಲಕ್ಷ ಜನರಿದ್ದಾರೆ. ಇದು ಚೀನೀ ಕಮ್ಯೂನಿಷ್ಟರ ಕರಗತವಾದ ಕಾರಣ ಚೀನೀ ಸರಕಾರದ ಬಲ ಮುರಿಯಿತೆನ್ನಲು ಅಡ್ಡಿ ಇಲ್ಲ. ಕಮ್ಯೂನಿಷ್ಟ ದಳಗಳು ಬ್ರಿಟಿಷರ ಆಡಳಿತದಲ್ಲಿರುವ ಅಂತರ್‌ರಾಷ್ಟ್ರೀಯ ನಗರವಾದ ಹಾಂಕಾಂಗಿನ ಕಡೆ ಧಾವಿಸುತ್ತಿದ್ದಾರೆ. ಈ ಅಂತರ್‌ರಾಷ್ಟ್ರೀಯ ನಗರವನ್ನು ಚೀನೀ ಕೆಂಪುಸೇನೆ ಮುತ್ತಿದರೆ ಬ್ರಿಟಿಷರು ಯಾವ ರೀತಿ ಪ್ರತಿಭಟಿಸುವರೋ ಮುಂದೆ ನೋಡಬೇಕು. ಇಲ್ಲಿಯೇ ಪ್ರಪಂಚದ ಮತ್ತೊಂದು ಯುದ್ಧದ ಬೀಜ ಬಿತ್ತಲ್ಪಟ್ಟರೂ ಪಟ್ಟೀತು.

ಚೀನಾದ ಕೆಂಪುಸೇನೆಗಳು ತಮ್ಮ ಧಾಳಿಯನ್ನು ಚೀನಾಕ್ಕೆ ಮಾತ್ರ ಅನ್ವಯಿಸುವಂತೆ ನಡೆಸುತ್ತಿಲ್ಲವೆನ್ನಬಹುದು. ಅವರ ದೃಷ್ಟಿ ಬರ್ಮಾದ ಮೇಲೂ ಇದೆ. ಬರ್ಮಾದಲ್ಲಿ ಕಮ್ಯೂನಿಷ್ಟರು ಅಲ್ಲಿಯ ಮೂಲನಿವಾಸಿ ಕರೆನರನ್ನು ಕೂಡಿಕೊಂಡು ಥಾಕಿನ್‌ನ್ಯೂ ಸರಕಾರದ ವಿರುದ್ಧ ದಂಗೆ ಎಬ್ಬಿಸಿದ್ದರೂ ಈ ವರೆಗೆ ಆ ಸರಕಾರವನ್ನು ಅಲುಗಾಡಿಸಲಾಗಿಲ್ಲ. ಥಾಕಿನ್ ನ್ಯೂರವರು ಹಿಂದೂದೇಶದ, ಪಾಕಿಸ್ಥಾನದ ಮತ್ತಿತರ ರಾಷ್ಟ್ರಗಳ ಸಹಾಯ ಕೇಳಿದ್ದಾರೆ. ಬರ್ಮಾದ ಈ ಪರಿಸ್ಥಿತಿಯಲ್ಲಿ ಚೀನೀ ಕೆಂಪುಸೇನೆಯ ನೆರಳು ಬರ್ಮಾ ಗಡಿಯಲ್ಲಿ ಬಿದ್ದಿದೆ. ಬರ್ಮಾದಲ್ಲಿ ಸುಮಾರು ೭,೦೦,೦೦೦ ಭಾರತೀಯರಿದ್ದಾರೆ. ಇವರ ಜೀವ ಹಾಗೂ ಸೊತ್ತುಗಳ ಜೋಪಾನದ ಜವಾಬ್ದಾರಿ ಭಾರತ ಸರಕಾರದ ಮೇಲೆ ಬಿದ್ದಿದೆ. ರಂಗೂನಿನಲ್ಲಿರುವ ಭಾರತ ರಾಯಭಾರಿಯ ಕಚೇರಿಗೆ ವಿಪರೀತ ಕೆಲಸವಾಗಿದೆ. ಬರ್ಮಾದ ಯುದ್ಧವ್ಯೂಹಗಳೊಳಗೆ ಸುಮಾರು ಎರಡು ಲಕ್ಷ ಭಾರತೀಯರು ಸಿಕ್ಕಿರುವರೆಂದು ಹೇಳಲಾಗುತ್ತಿದೆ. ಭಾರತ ಸರಕಾರವು ಬರ್ಮಾದ ಬಂಡಾಯಗಾರರನ್ನು ಎಚ್ಚರಿಸಿ 'ಭಾರತೀಯರಿಗೇನಾದರೂ ಹಾನಿಮಾಡಿದಲ್ಲಿ, ಅಂತರ್‌ರಾಷ್ಟ್ರೀಯ ಕಾನೂನು ಭಂಗವೆಂದು ಪರಿಗಣಿಸಲಾಗುವದು' ಎಂದಿದೆ. ಬರ್ಮಾದಿಂದ ಭಾರತೀಯರು ಹಿಂಪಕ್ಕೆ ಬರುತ್ತಿದ್ದಾರೆ. ಈಗಾಲೇ ಸುಮಾರು ೧೨,೦೦೦ ಜನರು ಭಾರತಕ್ಕೆ ಬಂದಿರುವರು.

ಬರ್ಲಿನ್ ದಿಗ್ಬಂಧನ.

ಜರ್ಮನಿಯ ಬರ್ಲಿನ್ ನಗರದ ವಿಚಾರದಲ್ಲಿ ರಷ್ಯಾ, ಬ್ರಿಟನ್, ಅಮೇರಿಕಾ, ಫ್ರಾನ್ಸ್‌ಗಳೊಳಗೆ ಮಹಾ ಬಿಕ್ಕಟ್ಟಾಗಿ ಅಲ್ಲಿಯೇ ಮುಂದಿನ ಮಹಾ ಸಂಗ್ರಾಮ ಪ್ರಾರಂಭವಾಗಬಹುದೋ ಎನ್ನುವ ಮಟ್ಟಿಗೆ ಪರಿಸ್ಥಿತಿಯಲ್ಲಿ ಕಾವೇರಿತ್ತು. ಆದರೆ ಈ ಪ್ರಮುಖ ರಾಷ್ಟ್ರಗಳಲ್ಲಿ ಸ್ವಲ್ಪ ಜಾಣ್ಮೆ ತೋರಿಬಂದು ಬರ್ಲಿನ್ ದಿಗ್ಬಂಧನವು ರದ್ದಾಗಿದೆ. ಈ ಬಗ್ಗೆ ವಿವರವಾದ ರಾಜಿ ಶರತ್ತುಗಳನ್ನು ರೂಪಿಸಲು ತಾರೀಕು ೨೩ರಿಂದ ಪ್ಯಾರಿಸಿನಲ್ಲಿ ಈ ಚತುರ್ರಾಷ್ಟ್ರಗಳ ವಿದೇಶ ಮಂತ್ರಿಗಳ ಸಮ್ಮೇಳನ ನಡೆಯುತ್ತಿದೆ. ಈ ಸಮ್ಮೇಳನದಲ್ಲಿ ಬ್ರಿಟಿಷ್ ವಿದೇಶಾಂಗ ಮಂತ್ರಿ ಬೆವಿನರು ಜರ್ಮನ್ ಐಕ್ಯಮತ್ಯಕ್ಕಾಗಿ ಒಂದು ಯೋಜನೆಯನ್ನು ಸೂಚಿಸಿದ್ದಾರೆ. ಜರ್ಮನಿಯು ಐಕ್ಯತೆಗಾಗಿ ಎಲ್ಲರೂ ಯತ್ನಿಸಬೇಕು. ಅಲ್ಲಿಯ ಜನತೆಗೆ ಸಂಚಾರ, ವಾಕ್, ಮತ್ತು ಪತ್ರಿಕಾ ಸ್ವಾತಂತ್ರ್ಯಗಳಿರಬೇಕು. ಅಲ್ಲಿರುವ ಸೈನ್ಯ ಸರಕಾರವನ್ನು ಅಂತ್ಯಗೊಳಿಸಲು ಅನುಕೂಲವಾಗುವಂತೆ ನಾಲ್ಕು ರಾಷ್ಟ್ರಗಳಿಂದ ಕೂಡಿದ ಹೊಸ ಯೋಜನೆಯಾಗಬೇಕು ಎಂಬುದು ಅವರ ಸೂಚನೆಯಾಗಿದೆ. ಈ ಯೋಜನೆಗಳನ್ನು ಪರ್ಯಾಲೋಚಿಸಿ ರಷ್ಯಾ ಪ್ರತಿನಿಧಿ ಅವುಗಳನ್ನು ತಿರಸ್ಕರಿಸಿರುವರು. ಮುಂದೆ ಏನಾಗುವದೋ ನೋಡಬೇಕು.

ನೆಹರೂ ಅಮೇರಿಕಾಕ್ಕೆ.

ಬರುವ ಅಕ್ಟೋಬರ್ ತಿಂಗಳಲ್ಲಿ ನೆಹರೂರವರು ಅಮೇರಿಕಾಕ್ಕೆ ಹೋಗುವವರಿದ್ದಾರೆ. ಅಮೇರಿಕಾದ ಅಧ್ಯಕ್ಷರಾದ ಟ್ರೂಮನ್‌ರವರ ಆಮಂತ್ರಣವಿದು. ಅಮೇರಿಕೆಯು ಜಗತ್ತಿನಲ್ಲೇ ಸಂಪನ್ನ ರಾಷ್ಟ್ರ. ಯುದ್ಧ ಮುಗಿದೊಡನೆಯೇ ಗೆದ್ದ ರಾಷ್ಟ್ರಗಳಲ್ಲಿ ಜಗತ್ತಿನ ಮುಂದಾಳ್ತನವನ್ನು ಯಾವ ರಾಷ್ಟ್ರ ವಹಿಸುವದೆಂಬ ಪೈಪೋಟಿ ನಡೆದಂತೆ ತೋರುತ್ತಿದೆ. ಆ ದೃಷ್ಟಿಯಿಂದಲೇ ಯುರೋಪಿನ ಚಿಕ್ಕ ದೊಡ್ಡ ರಾಷ್ಟ್ರಗಳನ್ನು ತಮ್ಮ ಅಂಕಿತದಲ್ಲಿಟ್ಟುಕೊಳ್ಳುವ ಪೈಪೋಟಿ ರಷ್ಯಾ, ಅಮೇರಿಕಾಗಳೊಳಗೆ ನಡೆದಿದೆ. ರಷ್ಯಾವು ತನ್ನ ತತ್ವದ ಬಲದಿಂದ, ಅಮೇರಿಕಾವು ತನ್ನ ದುಡ್ಡಿನ ಬಲದಿಂದ, ಈ ಪ್ರಯತ್ನ ಮಾಡುತ್ತಿವೆ. ಅಮೇರಿಕಾದ ಮಾರ್ಷಲ್ ಯೋಜನೆಯ ಅರ್ಥವಿಷ್ಟೆ. ನಿರ್ಬಲ ರಾಷ್ಟ್ರಗಳಿಗೆ ಸಾಕಷ್ಟು ಸಾಲಕೊಟ್ಟು ತಮ್ಮ ಕಕ್ಷದಲ್ಲಿ ಇರಿಸಿಕೊಳ್ಳುವದು. ಯುರೋಪಿನ ಪರಿಸ್ಥಿತಿ ತಕ್ಕಡಿಯಲ್ಲಿ ತೂಗುತ್ತಿದೆ.

ಅಮೇರಿಕವೂ ಚೈನಾದಲ್ಲಿ ರಷ್ಯಾ ಪ್ರಭಾವವನ್ನು ತಡೆಯಲು ಚಿಯಾಂಗ್ ಸರಕಾರಕ್ಕೆ ವಿಪುಲ ಸಹಾಯಮಾಡಿತು. ಮಿಕ್ಕ ರಾಷ್ಟ್ರಗಳಿಗೆ ಕೊಟ್ಟ ಎಲ್ಲಾ ಸಹಾಯದ ಮೊತ್ತಕ್ಕಿಂಥಲೂ ಚಿಯಾಂಗರಿಗೆ ಸಹಾಯಕೊಟ್ಟಿದ್ದಾರೆ. ಆದರೆ ಈ ಪ್ರಯತ್ನದಿಂದ ಟ್ರೂಮನರು ತನ್ನ ಕೈಸುಟ್ಟುಕೊಂಡಂತಾಗಿದೆ. ಏಕೆಂದರೆ ಇಷ್ಟು ವಿಪುಲ ಸಹಾಯ ದೊರೆತರೂ ಚಿಯಾಂಗ್ ಸರಕಾರವು ಅದರೊಂದಿಗೇ ಮುಳುಗುತ್ತಿದೆ. ಇಡೀ ಏಷ್ಯಾವನ್ನು ಕಮ್ಯೂನಿಷ್ಟರಿಂದ ರಕ್ಷಿಸುವ ದೃಷ್ಟಿ ಅಮೇರಿಕಾಕಿತ್ತು. ತಾನು ಚೀನಾದಲ್ಲಿ ಅಸಫಲವಾದುದರಿಂದ ಟ್ರೂಮನರ ಹುರುಪಿಗೆ ಕಳೆ ಹಿಡಿದಿರಬಹುದು. ಹೇಗೂ ಪಂಡಿತ ಜವಾಹರರನ್ನು ಆಮಂತ್ರಿಸಿರುವದು ಕಮ್ಯೂನಿಷ್ಟರ ಹಾವಳಿಯನ್ನು ತಡೆಯುವ ಬಗ್ಗೆ ಯಾವ ಮಾರ್ಗ ಅನುಸರಿಸಬೇಕೆಂದು ಪರ್ಯಾಲೋಚಿಸುವ ಕಾರಣದಿಂದಲೆ! ಎಷ್ಟೇ ಕಷ್ಟ ಬಂದರೂ ಮುಂಬರುತ್ತಿರುವ ರಷ್ಯಕ್ಕೆ ದುರಾಗಿ ಈ ಬಂಡವಳಶಾಹೀ ರಾಷ್ಟ್ರಗಳು ಕೋಟೆ ಕಟ್ಟಲೇ ಬೇಕಾಗಿದೆ. ಇಲ್ಲದಿದ್ದರೆ ಅವುಗಳ ಅಸ್ತಿತ್ವಕ್ಕೇ ಅಪಾಯವಿದೆ. ಕಮ್ಯೂನಿಷ್ಟರು ಚೈನಾವನ್ನು ಕಬಳಿಸಿ, ಹತ್ತಿರದ ಇಂಡೋ ಚೀನಾವನ್ನು ಮುಗಿಸಿ, ಜಪಾನು ಆಸ್ಟ್ರೇಲಿಯಾಗಳ ತೇಜೋಭಂಗಮಾಡಿ, ಬರ್ಮಾದ ವರೆಗೂ ಬಂದರೆ ಹಿಂದೂದೇಶವೂ ಆ ವಿಚಾರ ಆಲೋಚನೆ ಮಾಡದಿರಲಾಗುವದಿಲ್ಲ. ಆದ್ದರಿಂದಲೇ ನೆಹರೂರವರು ಟ್ರೂಮನರ ಆಹ್ವಾನವನ್ನು ಸ್ವೀಕರಿಸಿದ್ದಾರೆ. ಮುಂದೆ ಏನಾಗುವದೋ ನಿರೀಕ್ಷಿಸೋಣ.

ಯಂತ್ರದ ಮನುಷ್ಯ.

ಎಂಟು ವರ್ಷಗಳ ಶ್ರಮದ ಫಲವಾಗಿ ಅಮೇರಿಕಾದ ಡೆಟ್ರಾಯಿಟಿನ ಪೀಟರ್ ಎಸ್. ರೊಜಾರಿಯೋ ಎಂಬ ಕಾರ್ಖಾನೆಯೊಂದರ ಕೆಲಸಗಾರನು ಒಬ್ಬ ಯಂತ್ರದ ಮನುಷ್ಯನನ್ನು ನಿರ್ಮಿಸಿದ್ದಾನೆ. ಈ 'ಮನುಷ್ಯ'ಗೆ "ರಾಬಿನ್ ದಿ ರೊಬಟ್" ಎಂದು ಹೆಸರಿಡಲಾಗಿದೆ. 'ಇವನನ್ನು' ಯಾರು ಬೇಕಾದರೂ ೩,೩೦,೦೦೦ ರೂಪಾಯಿಗಳಿಗೆ ಕೊಂಡುಕೊಳ್ಳಬಹುದು.

ಈ 'ಮನುಷ್ಯ' ೫ ಅಡಿ ಎತ್ತರ ಇದ್ದು ೯೫೦ ಪೌಂಡು ತೂಕವಿದ್ದಾನೆ. ಈತನ 'ದೇಹದ'ಲ್ಲಿ ೫೩ ಸ್ವಿಚ್ಚುಗಳೂ ೮೩೩ ತಂತಿಗಳೂ ಇವೆ. ಸ್ವಿಚ್ಚುಗಳನ್ನು ಹಾಕಿ ಅವನನ್ನು ನಡೆಯುವಂತೆ ಮತ್ತು ಮಾತನಾಡುವಂತೆ ಮಾಡಬಹುದು. ಮಾತನಾಡುವುದು ಹೇಗೆ ಗೊತ್ತೇ? ಸ್ವಿಚ್ ಹಾಕಿದರೆ ಬಾಯಿ ತೆರೆಯುತ್ತದೆ, ಲೌಡ್‌ಸ್ಪೀಕರ್ ಮೂಲಕ ಆತನ ಬಾಯಿಯಿಂದ ಬೇಕಾದ ಮಾತು ಹೊರಡುತ್ತದೆ.

ಕರ್ಫ್ಯೂ ಎಂಬ ಪದ ಹೇಗೆ ಬಂತು?

ಫ್ರೆಂಚ್ ಭಾಷೆಯಲ್ಲಿ ಕೋರಿರ್ ಎಂದರೆ ಮುಚ್ಚು ಎಂದ ಅರ್ಥ. ಫ್ಯೂ ಎಂದರೆ ಬೆಂಕಿ ಎಂದು ಅರ್ಥ. ಮಲಗುವ ಮುಂಚೆ ದೀಪ ಆರಿಸುವುದು ರೂಢಿ. ದೀಪ ಆರಿಸಿ ಮಲಗುವ ಎನ್ನುವುದಕ್ಕಾಗಿ "ಕರ್ಫ್ಯೂ" ಎಂದು ಹೇಳುತ್ತಿದ್ದರು. ಈಗ ಆ ಪದಕ್ಕೆ ಬಂದಿರುವ ಭಯಂಕರ ಅರ್ಥವೇ ಬೇರೆ!

ವಿದ್ಯುಕ್ಷಕ್ತಿ

ಬರಪೊಳೆ ಯೋಜನೆ.

ಮದರಾಸು ಸರಕಾರ ತೆಗೆದುಕೊಳ್ಳುವದು?

ಬರಪೊಳೆ ಹೈಡ್ರೋ ಎಲೆಕ್ಟ್ರಿಕ್ ಯೋಜನೆಯನ್ನು ಕೊಡಗು ಸರಕಾರದೊಡನೆ ಮಾತುಕತೆ ನಡೆಸಿ ಕೈಕೊಳ್ಳುವ ಬಗ್ಗೆ ಮದ್ರಾಸ್ ಸರಕಾರಕ್ಕೆ ಇಂಡಿಯಾ ಸರಕಾರವು ಅನುಮತಿ ಕೊಟ್ಟಿರುವದಾಗಿ ಮದ್ರಾಸಿನ ಪಬ್ಲಿಕ್ ವರ್ಕ್ಸ್ ಮಂತ್ರಿ ಎಂ. ಭಕ್ತವತ್ಸಲಂರವರು ತಾ. ೨೩ರಲ್ಲಿ ಪತ್ರಿಕೆಗಳಲ್ಲಿ ಈ ಸುದ್ದಿಯನ್ನು ಕೊಟ್ಟಿದ್ದಾರೆ. ಬರಪೊಳೆ ಯೋಜನೆಯಿಂದ ೪೦,೦೦೦ ಕಿಲೊವಾಟ್ ವಿದ್ಯುಕ್ಷಕ್ತಿ ಉತ್ಪತ್ತಿಯಾಗುವದೆಂದೂ ಇದು ಮಲಬಾರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಗೆ ಸಾಕಾಗಬಹುದೆಂದೂ ಅಭಿಪ್ರಾಯಪಟ್ಟಿದ್ದಾರೆ

ಈ ವರೆಗೆ ಈ ಯೋಜನೆಯ ಬಗ್ಗೆ ಕೇಂದ್ರ ಸರಕಾರವು ಪರಿಶೀಲನೆ ಮಾಡುತ್ತಿದ್ದು ಈಗ ಅದನ್ನು ಮದ್ರಾಸು ಸರಕಾರಕ್ಕೆ ಬಿಡಲಾಗಿದೆ. ಬರಪೊಳೆ ವಿದ್ಯುಕ್ಷಕ್ತಿ ಯೋಜನೆಯಲ್ಲಿ ಜೇನುಪಾರೆ ಮತ್ತು ಸಾರತಬ್ಬಿ ಜಲಪಾತಗಳ ನೀರನ್ನು ಉಪಯೋಗಿಸಲಾಗುವದು. ಇದರಿಂದ ಮೇಲೆ ಹೇಳಿದಂತೆ ೪೦,೦೦೦ ಕಿಲೋವಾಟ್ ವಿದ್ಯುಕ್ಷಕ್ತಿಯು ದೊರೆಯುವದು. ಕೊಡಗಿಗೆ ಇಷ್ಟು ವಿದ್ಯುಕ್ಷಕ್ತಿಯ ಅವಶ್ಯಕತೆ ಇಲ್ಲದಕಾರಣ ಕೊಡಗು ಮತ್ತು ಮದ್ರಾಸ್ ಸರಕಾರಗಳು ಜಂಟಿಯಾಗಿ ಈ ಯೋಜನೆಯನ್ನು ಕೈಕೊಳ್ಳಬೇಕೆಂದು ಸೂಚಿಸಲಾಗಿತ್ತು. ಈ ಬಗ್ಗೆ ಮಾತುಕತೆ ನಡೆದು ಪ್ರಥಮ ಪರಿಶೀಲನೆಯೂ ಆಗಿದೆ.

ಆದರೆ ಇತ್ತಲಾಗಿ ಕೊಡಗು ಸರಕಾರವು ತನಗೆ ಬೇಕಿರುವ ವಿದ್ಯುಕ್ಷಕ್ತಿಯ ಬಗ್ಗೆ ಜೋಗ್ ವಿದ್ಯುಕ್ಷಕ್ತಿ ಕೇಂದ್ರದಿಂದ ಪಡೆಯಲು ಮೈಸೂರು ಸರಕಾರದೊಡನೆ ಒಪ್ಪಂದ ಮಾಡಿಕೊಂಡಿರುವದರಿಂದ ಬರಪೊಳೆ ಯೋಜನೆಯ ಬಗ್ಗೆ ಅದು ಆಸಕ್ತವಾಗಿಲ್ಲ. ಕೇಂದ್ರ ಸರಕಾರವೇ ಈ ಯೋಜನೆಯನ್ನು ಕೈಕೊಳ್ಳುವದೆಂದೂ ಅವರು ಈ ಬಗ್ಗೆ ಪರಿಶೀಲನೆ ನಡೆಸಿದ್ದಾರೆಂದೂ ಕೊಡಗು ಸರಕಾರವು ಮದ್ರಾಸ್ ಸರಕಾರಕ್ಕೆ ತಿಳಿಸಿತ್ತು.

ಈ ಯೋಜನೆಯನ್ನು ಕೇಂದ್ರ ಸರಕಾರವು ಬಿಡುವದಕ್ಕಿಂಥಾ ಮದ್ರಾಸ್ ಸರಕಾರವು ಕೈಗೊಂಡರೆ ಅದರಿಂದ ಹೆಚ್ಚಿನ ಉಪಯೋಗವೆಂದು ಭಾವಿಸಿ, ಕನ್ನಡ ಮತ್ತು ಮಲಬಾರಿಗೆ ವಿದ್ಯುಕ್ಷಕ್ತಿ ಸಂಬರಾಯಿ ಮಾಡುವ ದೃಷ್ಟಿಯಿಂದ ಮದ್ರಾಸ್ ಮಂತ್ರಿ ಶ್ರೀ ಭಕ್ತವತ್ಸಲಂರವರು ಡೆಲ್ಲಿಯಲ್ಲಿ ಈ ವಿಚಾರ ಮಾತುಕತೆ ನಡೆಸಿ ಮದ್ರಾಸ್ ಸರಕಾರವು ಈ ಯೋಜನೆಯನ್ನು ಕೈಕೊಳ್ಳಲು ಅನುಮತಿ ದೊರೆತಿದೆ.

ಈ ವರೆಗೆ ಕೇಂದ್ರ ಸರಕಾರವು ನಡೆಸುತ್ತಿದ್ದ ಪರಿಶೀಲನೆಯನ್ನು ಮದ್ರಾಸ್ ಸರಕಾರವು ಕೈಗೊಂಡು ಆ ಜಲಪಾತಗಳನ್ನು ಕೊಡಗು ಸರಕಾರದಿಂದ ಒತ್ತೆಪಡೆಯುವ ಏರ್ಪಾಡಿನ ನಂತರ ಮದ್ರಾಸ್ ಸರಕಾರವು ಈ ಯೋಜನೆಯನ್ನು ಕೈಕೊಳ್ಳುವದು.

ರೈತ ಮತ್ತು ಕೂಲಿಕಾರರ ಸಮಸ್ಯೆಗಳು.

ರಷ್ಯಾದ ಶ್ರಮಜೀವಿಗಳು.

ಕಮ್ಯೂನಿಸ್ಟ ಪಕ್ಷದವರಿಂದ ನಿರ್ದೇಶಿಸಲ್ಪಟ್ಟ ಧೋರಣೆಯಂತೇ ಕಾರ್ಯ ಮಾಡುವ ಹಾಗೂ ಸೋವಿಯೇಟ್ ಸರಕಾರದಿಂದ ಮನ್ನಣೆ ಪಡೆದ ಶ್ರಮಜೀವೀ ಸಂಘಟನೆಗಳನ್ನು ಕೂಡಿಕೊಳ್ಳಲು ರಶಿಯಾದ ಶ್ರಮ ಜೀವಿಗಳಿಗೆ ಆಸ್ಪದವಿದೆಯಲ್ಲದೆ ಮುಕ್ಕಳಿದವುಗಳ ಕಡೆಗೆ ಕಣ್ಣೆತ್ತಿ ನೋಡಲು ಕೂಡ ಅವರಿಗೆ ಸ್ವಾತಂತ್ರ್ಯವಿಲ್ಲ. ಸೋವಿಯೇಟ್ ಸರಕಾರದ ರಾಜ್ಯ ಘಟನೆಯು ೧೨೬ನೆಯ ನಿಯಮವು ಕಮ್ಯೂನಿಸ್ಟ ಪಕ್ಷವಲ್ಲದ ಬೇರಾವ ಪಕ್ಷಕ್ಕೂ ರಶಿಯಾದಲ್ಲಿ ಆಸ್ಪದವಿರಕೂಡದೆಂಬ ಕಟ್ಟಪ್ಪಣೆಯನ್ನು ವಿಧಿಸಿದೆ. ಈ ಸನ್ನಿವೇಶದಲ್ಲಿ ಕಮ್ಯೂನಿಸ್ಟ ಪಕ್ಷಕ್ಕೆ ಅಂಟಿಕೊಳ್ಳದ ಪಕ್ಷವು ರಶಿಯಾದಲ್ಲಿ ತಲೆ ಎತ್ತುವದಾದರೂ ಹೇಗೆ? ಅಂದ ಮೇಲೆ ರಶಿಯಾದ ಶ್ರಮಜೀವಿಗಳ ಸ್ವಾತಂತ್ರ್ಯವು ಕಮ್ಯೂನಿಸ್ಟರ ಕೈವಶ, ಅರ್ಥಾತ ಸೋವಿಯೇಟ್ ಸರಕಾರದ ಕಡೆಗೆ ಮೀಸಲಾಗಿರುವದು. ರಷ್ಯಾದ ಸರ್ವಾಧಿಕಾರಿಯ ಆಜ್ಞೆಯಂತೆ ಅಲ್ಲಿಯ ಶ್ರಮಜೀವಿಗಳ ಜೀವನವು ಅತಂತ್ರವಾಗಿ ಸಾಗಿರುವದು.

೧೯೩೨ರಿಂದೀಚೆಗೆ ರಷ್ಯದಲ್ಲಿ ಶ್ರಮಜೀವೀ ಸಂಘಟನೆಗಳು ಒಂದೆಡೆ ಕೂಡಿ ತಮ್ಮ ಧೋರಣೆಯನ್ನು ಚರ್ಚಿಸಲು ಆಸ್ಪದ ದೊರಿಯಲಿಲ್ಲ. ೧೯೩೭ರ ಅಕ್ಟೋಬರ್ ತಿಂಗಳಲ್ಲಿ ಈ ದೃಷ್ಟಿಯಿಂದ ಒಂದು ಪರಿಷತ್ತು ಕೂಡಿಸುವ ನಿರ್ಧಾರಕ್ಕೆ ಟ್ರೇಡ್ ಯೂನಿಯನುಗಳ ಕೇಂದ್ರ ಸಮಿತಿಯು ಬಂದಿತ್ತಾದರೂ ಕಾರಣಾಂತರಗಳಿಂದ ಅದೂ ಕೂಡಲಿಲ್ಲ. ಸರಕಾರವು ತನಗೆ ಈ ಕ್ಷೇತ್ರದಲ್ಲಿ ಬೇಕಾದವರನ್ನು ನಿರ್ಮಾಣಗೊಳಿಸುತ್ತಾ ನಡೆಯಿತು. ೧೯೩೭ರಲ್ಲಿ ಈ ಯೂನಿಯನುಗಳ ಅಧಿಕಾರ ಸ್ಥಾನದಲ್ಲಿದ್ದವರೇ ಮುಂದೆಯೂ ಆ ಸ್ಥಾನದಲ್ಲಿ ಅಧಿಕಾರ ನಡೆಸುತ್ತ ಬಂದರು. ಆಯ್ಕೆಗೆ ಆಸ್ಪದವಿಲ್ಲದಿರುವಾಗ ಹೊಸ ಅಧಿಕಾರಿಗಳನ್ನು ನಿಯಮಿಸುವದಾದರೂ ಹೇಗೆ?

ಸಂಪಿನ ಸುಳಿವಿಲ್ಲ.

ಜಗತ್ತಿನ ಇತರ ರಾಷ್ಟ್ರಗಳ ಶ್ರಮಜೀವಿಗಳು ಸಂಪುಗಳನ್ನು ಹೂಡುವದಾದರೂ ರಷ್ಯದಲ್ಲಿ ಸಂಪಿನ ಸುಳಿವೇ ಇಲ್ಲವೆಂಬ ಮಾತು ನಿಜ. ಆದರೆ ಸಂಪುಗಳು ರಷ್ಯದಲ್ಲಿ ಆಗುವದಿಲ್ಲವೆಂಬುದಕ್ಕೆ ರಷ್ಯದ ಶ್ರಮ ಜೀವಿಗಳು ಸಂತೃಪ್ತರಾಗಿರುವದು ಕಾರಣವಲ್ಲ. ಸಂಪನ್ನು ಹೂಡುವದು ಒತ್ತಟ್ಟಿಗಿರಲಿ; ಸಂಪಿನ ಮಾತೆತ್ತಿದರೆ ಶ್ರಮಜೀವಿಗಳಿಗೆ ಕ್ರಾಂತಿಕಾರಕರೆಂಬ ಹೆಸರಿಟ್ಟು ಅವರನ್ನು ಸೈಬೇರಿಯಾ ಮುಂತಾದ ಭೂಮಿಯ ಕಾರಾಗೃಹಗಳಿಗೆ ರಷ್ಯವು ಅಟ್ಟುವದರಿಂದಲೇ ದೇಶದ ಶ್ರಮಜೀವಿಗಳು ನೊಗಕ್ಕೆ ಕಟ್ಟಿದ ಎತ್ತಿನಂತೆ ಗೋಣು ಹಾಕುತ್ತಾ ಸಾಗಿರುವರು. ಶ್ರಮಜೀವಿಗಳ ನ್ಯಾಯಬದ್ಧ ಅಧಿಕಾರ ಹಾಗೂ ಆಯುಧವಾದ ಸಂಪಿನ ಸೌಕರ್ಯವು ಸರಕಾರದ ಹಿಡಿತದಿಂದ ಕಳಚಿ ಶ್ರಮಜೀವಿಗಳ ಕೈವಶವಾಯಿತೆಂದರೆ ರಷ್ಯದಲ್ಲಿ ಸಂಪುಗಳ ಸುರಿಮಳೆಯು ಪ್ರಾರಂಭವಾಗುವದರಲ್ಲಿ ಆಶ್ಚರ್ಯವಿಲ್ಲ.

ಸಾಮೂಹಿಕ ರೀತಿಯ ವ್ಯವಹಾರ ಪದ್ಧತಿಯಿಂದ ರಷ್ಯದ ಶ್ರಮಜೀವಿಗಳಿಗೆ ದೊರೆಯುವದೆಂದರೂ ಅಷ್ಟೇ ಇದೆ. ವೇತನದ ಪ್ರಮಾಣ ಮತ್ತು ಪರಮಾವಧಿಗಳನ್ನು ನಿಶ್ಚಯಿಸುವ ಪ್ರಸಂಗಗಳಲ್ಲಿ ಶ್ರಮಜೀವಿಗಳು ತುಟಿ ಎರಡು ಮಾಡಲು ರಷ್ಯದಲ್ಲಿ ಆಸ್ಪದವಿಲ್ಲ. ಕಾರ್ಖಾನೆಗಳ ಅಧಿಕಾರಸ್ಥರು ನಿರ್ಣಯಿಸಬಹುದಾದ ವೇತನಗಳಿಗೆ ತಲೆಬಾಗಿ ಅವರು ದುಡಿಯಬೇಕು. ಒಮ್ಮೆ ಒಬ್ಬ ಶ್ರಮಜೀವಿಯು ಒಂದು ವಿಧದ ದುಡಿಮೆಗೆ ಪ್ರಾರಂಭಿಸಿದನೆಂದರೆ ಆ ದುಡಿಮೆಯನ್ನು ಬಿಟ್ಟು ತನಗೆ ಒಗ್ಗುವ ಬೇರೆ ದುಡಿಮೆಯನ್ನು ಮಾಡಲು ಅವನಿಗೆ ರಷ್ಯದಲ್ಲಿ ಆಸ್ಪದವಿಲ್ಲ. ಅದನ್ನು ತ್ಯಜಿಸಲೂ ಅವನಿಗೆ ಅಧಿಕಾರವಿಲ್ಲ. ಅಧಿಕಾರಿಗಳ ಆಜ್ಞೆಯಂತೆ ದುಡಿಯುವದಕ್ಕೆ ಶ್ರಮಜೀವಿಯು ಹಿಂದು ಮುಂದು ನೋಡಿದರೆ ಅವನ ಅವಕಾಶವೇ ಮುಗಿದಂತೆ! ೧೯೩೭ರಲ್ಲಿ ರಷ್ಯದಲ್ಲಿ ಆದ 'ಸಾಮೂಹಿಕ ಒಪ್ಪಂದ'ಗಳ ಲಾಭವಾದರೂ ಶ್ರಮ ಜೀವಿಗಳಿಗೆ ದೊರೆತದ್ದು ಅಷ್ಟಕಷ್ಟೇ. ಈ ಒಪ್ಪಂದದ ಮೂಲ ಧ್ಯೇಯವು ಶ್ರಮಜೀವಿಗಳ ಜೀವನ ಮಟ್ಟವನ್ನು ಮೇಲಕ್ಕೇರಿಸುವದಾಗಿರದೆ ಕೇವಲ ಸರಕಾರದ ಉತ್ಪಾದನಾ ಯೋಜನೆಗಳನ್ನು ಸಫಲಗೊಳಿಸುವದಕ್ಕಿದೆ. ಯೋಗ್ಯ ಕಾರಣಗಳಿಲ್ಲದೆ ಕೆಲಸವನ್ನು ತಪ್ಪಿಸುವದು ಹಾಗೂ ೨೦ ನಿಮಿಷಗಳಿಂದ ತಡಮಾಡಿ ಬರುವದು ಅಪರಾಧಗಳೆಂದು ರಷ್ಯದ ಶ್ರಮಿಕ ನ್ಯಾಯಾಲಯವು ೧೯೪೦ರಲ್ಲಿ ತನ್ನ ನಿರ್ಣಯವನ್ನು ಕೊಟ್ಟಿದೆ. ಅಪರಾಧಿಗಳಿಗೆ ೬ ತಿಂಗಳ ಶ್ರಮ ಬದ್ಧ ದುಡಿತ ಹಾಗೂ ವೇತನದಲ್ಲಿ ನೂರು ೨೫ರಷ್ಟು ಕಡಿತಗಳ ಶಿಕ್ಷೆಗಳನ್ನು ವಿಧಿಸಲು ಈ ನಿರ್ಣಯವು ಅಧಿಕಾರಕೊಟ್ಟಿದೆ.

ಹೊರಗಿನ ಸಂಬಂಧವಿಲ್ಲ.

ಜಗತ್ತಿನಲ್ಲಿ ಶ್ರಮಜೀವಿಗಳ ಜೀವನ ಹೇಗೆ ಸಾಗಿದೆ ಎಂಬುವದನ್ನು ತಿಳಿಯಲು ರಷ್ಯದ ಶ್ರಮಜೀವಿಗಳಿಗೆ ಆಸ್ಪದವಿಲ್ಲ. ಸರಕಾರದಿಂದ ಮುಂಚಿತವಾಗಿ ಅಧಿಕಾರ ಹೊಂದಿದ ಕೆಲವೇ ಜನರನ್ನುಳಿದು ಇತರರಿಗೆ ಹೊರಗಿನ ಶ್ರಮಜೀವಿಗಳ ಸುದ್ದಿಯನ್ನು ತಿಳಿಯಲು ಅಥವಾ ಶ್ರಮಜೀವಿಗಳಿಗೆ ಸಂಬಂಧಿಸಿದ ನಿಯತಕಾಲಿಕಗಳನ್ನು ತರಿಸಿಕೊಳ್ಳಲು ಬರುವಂತಿಲ್ಲ. ಬಾಹ್ಯ ಪ್ರಪಂಚದ ಪರಿಚಯವನ್ನು ಮಾಡಿಕೊಳ್ಳಲು ಅಲ್ಲಿಯ ಶ್ರಮ ಜೀವಿಯು ಯತ್ನಪಟ್ಟದ್ದೇ ಆದರೆ ಗುಪ್ತ ಪೋಲೀಸರು ಅವನ ಬೆನ್ನ ಹತ್ತುವದು ಕಟ್ಟಿಟ್ಟದ್ದು. ಪರರಾಷ್ಟ್ರಗಳಿಗೆ ಹೋಗುವ ಪರ ರಾಷ್ಟ್ರಗಳಿಂದ ಬರುವ ಪತ್ರ ವ್ಯವಹಾರಗಳನ್ನು ಸೋವಿಯೇಟ್ ಸರಕಾರವು ಪರೀಕ್ಷಿಸಿ ಕಳಿಸುವ ಪದ್ಧತಿಯನ್ನಿಟ್ಟುಕೊಂಡಿರುವದು. ಆ ನಿಟ್ಟಿನಿಂದ ಕೂಡ ಶ್ರಮಜೀವಿಗಳ ಆಟವು ನಡೆಯುವಂತಿಲ್ಲ.

ಸರಕಾರಗಳನ್ನು ಮತ್ತು ರಾಜ್ಯ ಸೂತ್ರಗಳನ್ನು ಹಿಡಿದ ಅಧಿಕಾರಿಗಳನ್ನು ಯೋಗ್ಯ ರೀತಿಯಿಂದ ಟೀಕಿಸುವ ಹಾಗೂ ಅವರು ಮಾಡುವ ಕಾರ್ಯಗಳನ್ನು ವಿಮರ್ಶಿಸುವ ಅಧಿಕಾರವು ಇತರ ಎಲ್ಲ ರಾಷ್ಟ್ರಗಳ ಜನರಿಗೆ ಇರುವದಾದರೂ ರಷ್ಯದ ಶ್ರಮಜೀವಿಗಳಿಗೆ ಈ ಸ್ವಾತಂತ್ರ್ಯವಿಲ್ಲ. 'ಜನತೆಯ ಸರಕಾರ'ವೆಂಬ ಮಾತು ರಷ್ಯದ ಜನತೆಗೆ ತಿಳಿಯದು. ಅಲ್ಲಿರುವದು ಸ್ಟಾಲಿನ್ನರ ಸರ್ವಾಧಿಕಾರೀ ಸರಕಾರ. ಜೀವನದ ಪ್ರತಿಯೊಂದು ಹೆಜ್ಜೆ ಹೆಜ್ಜೆಗೆ ಇದರ ಅರಿವು ಅಲ್ಲಿಯ ಜನತೆಗೆ ಆಗುತ್ತಿದೆ. ಆದರೆ ಅದನ್ನು ತಮ್ಮ ಹಿತ ಸಾಧಿಸುವ ಸರಕಾರವನ್ನಾಗಿರಿಸಲು ಸ್ಟಾಲಿನ್ನರ ಉಕ್ಕಿನ ಹಿಡಿತ ಬಿಡುವದಿಲ್ಲ. ಸ್ಟಾಲಿನ್ನರ ಮಾತೇ ವೇದ ವಾಕ್ಯ. 'ರಾಜನು ಎಂದೆಂದೂ ತಪ್ಪು ಮಾಡುವದಿಲ್ಲ'ವೆಂಬುದು ಸ್ಟಾಲಿನ್ನರಿಗೆ ಸರಿಯಾಗಿ ಅನ್ವಯಿಸಲ್ಪಟ್ಟಿದೆ.

ರಷ್ಯವು ಇಂದಿನ ಸ್ಥಿತಿಗೆ ಏರಲು ಅಲ್ಲಿಯ ಶ್ರಮಜೀವಿಗಳು ಬಹ್ವಂಶದಿಂದ ಕಾರಣರಾದರೇನೋ ನಿಜ. ಆದರೆ ಇಂದಿನ ಸಂಸ್ಥಿತಿಯ ಲಾಭವು ಮಾತ್ರ ಅವರಿಗೆ ಅತ್ಯಲ್ಪ ಪ್ರಮಾಣದಲ್ಲಿ ಕೂಡ ಮುಟ್ಟುವದಿಲ್ಲ. 'ದಾಸ್ಯ ದುಡಿಮೆ'ಯ ಕೇಂದ್ರಗಳಲ್ಲಿ ಈಗಲೂ ಕನಿಷ್ಠ ಒಂದು ಒಂದುವರೆ ಕೋಟಿ ಜನರು ಬಾಹ್ಯ ಜಗತ್ತಿನ ಸಂಪರ್ಕವಿಲ್ಲದೆ ಒತ್ತಾಯದಿಂದ ದುಡಿಯುತ್ತಿರುವರು. ಇವರ ಈ ದುಡಿಮೆಯ ಶಕ್ತಿಯ ಮೇಲೆ ರಷ್ಯದ ಸರ್ವಾಧಿಕಾರತ್ವ ನಿಂತಿದೆ. ದಾಸ್ಯ ದುಡಿಮೆಯ ಕೇಂದ್ರಗಳಿಗೆ ಹೋಗುವದು ಕಟುಕನ ಕೈಗೆ ಕೊರಳನ್ನು ನೀಡಿದಂತೆಯೇ!

ಮಾತು ಮಾತಿಗೆ ಜಗತ್ತಿನ ಹಲವು ಕೆಲವು ರಾಷ್ಟ್ರಗಳ ಶ್ರಮಜೀವಿಗಳು ರಷ್ಯದ ಆದರ್ಶವನ್ನು ಹಿಡಿದು ಮಾತಾಡುವದು ಕೇಳಿಬರುತ್ತಲಿದೆ. ಆದರೆ ಅದು 'ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ' ಎಂಬೋಣಾದ ಇರುವದು. ಒಳಹೊಕ್ಕು ನೋಡಿದರೆ ಎಲ್ಲೆಲ್ಲೂ ಅಸಹ್ಯ ಪರಿಸ್ಥಿತಿ ಇದೆ.

'ಜೈ ಹಿಂದ್'

ಕಿತ್ತಳೆ ಸಸಿಗಳು ಮಾರಾಟಕ್ಕಿವೆ.

ಪರಿಷ್ಕರಿಸಿದ ಬೀಜದಿಂದ ತಯಾರಿಸಿದ ಎರಡು, ಮೂರು ವರ್ಷಗಳ ಉತ್ತಮವಾದ ಕಿತ್ತಳೆ ಸಸಿಗಳು ಮಾರಾಟಕ್ಕಿವೆ. ಹೆಚ್ಚಿನ ವಿವರಗಳಿಗೆ ಈ ವಿಳಾಸಕ್ಕೆ ಬರೆಯುವದು.

Orange Plants for Sale.

Apply:-

K. M. Povaiah,
Laxmi Estate,
2-1 *Pollibetta.*

MAKE THE BEST USE OF THIS GOOD OPPORTUNITY.

The following plants and Articles will be had from the undersigned at Sidapur Town. Orders must accompany with 25% advance.

1. Coconut plants.
2. Mango plants (grafted)
3. Arecanut plants.
4. Date-Mats.
5. Date-Baskets (1, ½ & ¼ bushel sizes)
6. Spraying lime (in tins)
7. Slaked lime.
8. Bullock Cart Wheels.

Shiva Nanjappa,
Contractor,
Sidapur, Coorg.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ. ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. /1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,65,000.
ಕ್ಷೇಮನಿಧಿ	ರೂ.	50,000.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಆಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ಕು ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಸ್ಟಿ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ,
ಗೌ. ಕಾರ್ಯದರ್ಶಿ,

ಕೆ. ಓ. ಅಪ್ಪಯ್ಯ, M. L. C.
ಪ್ರೆಸಿಡೆಂಟ್ ಮತ್ತು ಖಜಾಂಚಿ.

ಭಾರತದ ಭಾಗ್ಯ ಭಂಡಾರ

— ಪ್ರಾಚೀನ ಭಾರತದಲ್ಲಿ ಜನಜೀವನ —

ಲೇ:—ಶ್ರೀ ವಿ. ಎಸ್. ರಾಮಕೃಷ್ಣ ಬಿ. ಎಸ್‌ಸಿ. (ಆನರ್ಸ್) ಬಿ. ಟಿ.

ಲೇಖನ ೧೦

ಭರತ ವರ್ಷದ ತಾತ್ವಿಕ ಆಧ್ಯಾತ್ಮಿಕ ಮತ್ತು ಐತಿಹಾಸಿಕ ಬೆಳವಣಿಗೆಯ ಅನುಕ್ರಮವಾದ ಕಾಲಕ್ರಮ ಪಟ್ಟಿಯನ್ನು ತಯಾರಿಸುವ ಪ್ರಯತ್ನವು ತಜ್ಞರಾದ ವಿದ್ವಾಂಸರಿಂದ ಮುಂದೆಸಾಗಿ ಬಹುಮಟ್ಟಿಗೆ ಯಶವನ್ನುಗಳಿಸಿದೆ. ಆದರೆ ಅಂದಿನ ಕಾಲದ ಜನಜೀವನವನ್ನು ವಿಮರ್ಶಿಸುವ, ಜನರ ವೃತ್ತಿಗಳನ್ನೂ ವ್ಯಾಪಾರ ವ್ಯವಸಾಯಗಳನ್ನೂ ನಿರ್ದೇಶಿಸುವ ಅನ್ವೇಷಣೆಯು ಹೆಚ್ಚಾಗಿ ನಡೆದಂತೆ ಕಂಡುಬರುವುದಿಲ್ಲ. ಈ ಆರ್ಥಿಕ ಸಾಮಾಜಿಕ ಸ್ಥಿತಿಗತಿಗಳನ್ನು ಪರಿಶೋಧಿಸುವ ಪ್ರಯತ್ನವು ಇಂದಿನ ಕೆಲವು ವಿದ್ವಾಂಸರಿಂದ ಸ್ವಲ್ಪ ಮಟ್ಟಿಗೆ ನಡೆದಿದೆ. ಮಹಾಭಾರತವೂ ಇತರ ಪ್ರಾಚೀನ ಗ್ರಂಥಗಳೂ ಭಾರತ ವರ್ಷದ ಆರ್ಥಿಕ ಸಾಮಾಜಿಕ ವ್ಯವಹಾರಗಳ ವಿಷಯ ಬಹು ಮಟ್ಟಿನ ಜ್ಞಾನವನ್ನು ನಮಗೆ ಕೊಡುವುವಾದರೂ ಹೊಸ ಸಮಾಜ ಶಾಸ್ತ್ರದೃಷ್ಟಿಯಿಂದ ಅವುಗಳನ್ನು ಇನ್ನೂ ಪರಾಂಬರಿಸಿ ನೋಡಬೇಕಾಗಿದೆ. ಆರ್ಥಿಕ ಪ್ರಶ್ನೆಗಳ ವಿಷಯ ಪ್ರಾಚೀನ ಭಾರತದ ವಿಶೇಷ ಸಂಗತಿಗಳನ್ನು ಕೊಡಬಲ್ಲ ಅತ್ಯಮೂಲ್ಯವೂ ಪಾಂಡಿತ್ಯ ಪೂರ್ಣವೂ ಆದ ಗ್ರಂಥವು ಕ್ರಿ. ಪೂ. ನಾಲ್ಕನೇ ಶತಮಾನದಲ್ಲಿ ಬರೆಯಲ್ಪಟ್ಟ ಕೌಟಿಲ್ಯನ ಅರ್ಥಶಾಸ್ತ್ರವೇ ಆಗಿದೆ. ಅರ್ಥಶಾಸ್ತ್ರವು ಮೌರ್ಯ ಸಾಮ್ರಾಜ್ಯದ ರಾಜಕೀಯ, ಸಾಮಾಜಿಕ, ಆರ್ಥಿಕ, ಸೈನಿಕ ವಿಜ್ಞಾನಗಳನ್ನು ವಿಶಾಲವಾಗಿ ವಿಶದೀಕರಿಸುತ್ತದೆ.

ಅರ್ಥಶಾಸ್ತ್ರಕ್ಕಿಂತ ಪ್ರಾಚೀನವಾಗಿದ್ದು ಬುದ್ಧನ ಕಾಲಕ್ಕಿಂತಲೂ ಹಿಂದಿನ ಭಾರತದ ಜನಜೀವನ ಸಮಸ್ಯೆಗಳನ್ನು ಒಳಗೊಂಡ ಗ್ರಂಥವೆಂದರೆ 'ಜಾತಕ' ಕಥೆಗಳ ಸಂಗ್ರಹವೆನ್ನಬಹುದು. ಜಾತಕ ಗ್ರಂಥಕ್ಕೆ ಈಗಿನ ಆಕಾರವು ಬಂದುದು ಬುದ್ಧನ ಕಾಲದ ತರುವಾಯವೇ ಹೌದು. ಜಾತಕ ಕಥೆಗಳು ಬುದ್ಧನ ಹಿಂದಿನ ಅವತಾರಗಳನ್ನು ಬಣ್ಣಿಸುವುವೆಂದು ಪ್ರತೀತಿ ಇರುವುದರಿಂದ ಇವು ಬೌದ್ಧ ಸಾಹಿತ್ಯದಲ್ಲಿ ಪ್ರಧಾನಾಂಗವನ್ನು ತಾಳುತ್ತವೆ. ಜನಪದ ಸಾಹಿತ್ಯದಲ್ಲಿ ಅತ್ಯಂತ ಹಳೆಯದಾಗಿ ಅನುಭವಪೂರ್ಣವಾದ ಅನೇಕ ಕಥೆಗಳು ಜಾತಕದಲ್ಲಿ ಅಡಕವಾಗಿವೆ. ಯೂರೋಪ್ ಏಷ್ಯಾಖಂಡಗಳಲ್ಲಿ ಪ್ರಚಾರದಲ್ಲಿರುವ ಅನೇಕ ದಂತಕಥೆಗಳು ಜಾತಕದಿಂದಲೇ ಉದ್ಧರಿಸಲ್ಪಟ್ಟುವೆನ್ನಲಡ್ಡಿಯಿಲ್ಲ. ಆರ್ಯ ಮತ್ತು ದ್ರಾವಿಡರಲ್ಲಿ ಅಭೇದ್ಯವಾದ ಮಿಲನವು ಆಗುತ್ತಿದ್ದ ಕಾಲದಲ್ಲೇ ಜಾತಕದ ಕಥೆಗಳು ರೂಪುಗೊಂಡಿರಬಹುದು.

ಈ ಪುರಾತನ ಗ್ರಂಥಗಳಿಂದ ಅಂದಿನ ರಾಜಕೀಯ, ಆರ್ಥಿಕ, ಸಾಮಾಜಿಕ ಜನಜೀವನವು ಸ್ವಲ್ಪ ಮಟ್ಟಿಗೆ ನಮಗೆ ವಿದಿತವಾಗುತ್ತದೆ. ರಾಜಪರಂಪರೆಗಳನ್ನೂ ವಂಶೀತಿಹಾಸಗಳನ್ನೂ ನಿರೂಪಿಸುವ ವಂಶವೃಕ್ಷಗಳು ಹಲವಿವೆ. ರಾಜತ್ವವು ಮೊದಲು ಚುನಾವಣೆಯ ಪದ್ಧತಿಯಿಂದ ನಡೆಯುತ್ತಿದ್ದು ಕ್ರಮಶಃ ಪಾರಂಪರ್ಯಗತವಾಗಿ ಹಿರಿಯನಿಗೆ ಪಟ್ಟವೆಂದು ನಿರ್ಧಾರವಾಯಿತು. ಮಹಿಳೆಯರಿಗೆ ಸಿಂಹಾಸನದ ಹಕ್ಕಿಲ್ಲವಾದರೂ ಅನೇಕ ಸಂದರ್ಭಗಳಲ್ಲಿ ಸ್ತ್ರೀಯರು ರಾಜ್ಯಪರಿಪಾಲಿಸಿದ ಉದಾಹರಣೆಗಳಿವೆ. ಪ್ರಜೆಗಳಿಗೆ ಒದಗಬಹುದಾದ ಸಕಲ ಕಷ್ಟಸುಖಗಳಿಗೂ ರಾಜನೇ ಮೂಲಕಾರಣನೆಂಬ ಭಾವನೆಯಿದ್ದಿತು. ಶ್ರೇಷ್ಠನಾದ ರಾಜನಿಂದ ರಾಜ್ಯವು ಸಂಪದಭಿವೃದ್ಧಿಗೊಳ್ಳುವುದೆಂದೂ ನೀತಿಬಾಹಿರನಾದ ರಾಜನಿಂದ ದೇಶದಲ್ಲಿ ವಿಪ್ಲವವೂ ದಾರಿದ್ರ್ಯವೂ ರೋಗರುಜಿನೆಗಳೂ ತಲೆದೋರುವುವೆಂದೂ ಜನರ ನಂಬಿಕೆಯಿತ್ತು. ಪ್ರಜಾಪೀಡಕನಾದ ದುರುಳರಾಜನ ವಿರುದ್ಧ ದಂಗೆ ಎದ್ದು ಅಂತಹ ರಾಜನನ್ನು ಪ್ರಜೆಗಳೇ ಮರಣದಂಡನೆಗೆ ಗುರಿಮಾಡಿದ ದೃಷ್ಟಾಂತಗಳೂ ದೃಗ್ಗೋಚರಿಸುವುವು. ರಾಜರುಗಳಲ್ಲಿ ಯೋಗ್ಯ ಸಲಹೆ ಕೊಡಲು ಕುಶಲರಾದ ಮಂತ್ರಿಗಳೂ ಅನೇಕ ವೇಳೆ ರಾಜ್ಯಾಂಗ ಸಭೆಯೂ ಇದ್ದವಾದರೂ ಸಿಂಹಾಸನಾರೂಢರಾದ ರಾಜರುಗಳೇ ಬಹುತೇಕ ನಿರಂಕುಶ ಪ್ರಭುಗಳಾಗಿದ್ದರು.

ಗ್ರಾಮಪಂಚಾಯಿತಿ ಸಭೆಗಳು ಬಹುಮಟ್ಟಿಗೆ ಸ್ವಾತಂತ್ರ್ಯವುಳ್ಳವುಗಳಾಗಿದ್ದುವು. ರಾಜ್ಯದ ಬಹು ಮುಖ್ಯ ಆದಾಯವು ಭೂಕಂದಾಯದಿಂದಲೇ ಬರಬೇಕಿದ್ದಿತು. ಭೂತೆರಿಗೆಯು ರಾಜನಿಗೆ ಸಲ್ಲುವ ಕಾಣಿಕೆಯೆಂದು ಪರಿಗಣಿತವಾಗಿ ಅನೇಕ ವೇಳೆ ದವಸ ಧಾನ್ಯಗಳ ರೂಪದಲ್ಲೇ ಸಲ್ಲುತ್ತಿತ್ತು. ಜನರ ಪ್ರಾಮುಖ್ಯ ವೃತ್ತಿಯು ವ್ಯವಸಾಯವೇ ಆಗಿದ್ದು ಕೃಷಿಪ್ರಧಾನವಾದ ಈ ನಾಗರೀಕತೆಯು ಗ್ರಾಮಕೇಂದ್ರವಾಗಿದ್ದಿತು. ರಾಜಕೀಯ ಆರ್ಥಿಕ ವ್ಯವಹಾರಗಳಿಗೋಸ್ಕರ ಇಂಥಹ ಅನೇಕ ಗ್ರಾಮಗಳು ಸಂಯೋಜನೆ ಹೊಂದುತ್ತಲಿದ್ದುವು. ತೋಟಗಾರಿಕೆ, ಪಶುಪಾಲನೆ ಮುಂತಾದುವು ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದ್ದು ವಿಹಾರೋದ್ಯಾನಗಳೂ ಹಣ್ಣುಹಂಪಲುಗಳನ್ನು ಬೆಳೆವ ತೋಟಗಳೂ ವಿಪುಲವಾಗಿದ್ದುವು. ಫಲಪುಷ್ಪಗಳು ಎಲ್ಲರ ಮನ್ನಣೆಗೆ ಪಾತ್ರವಾಗಿದ್ದುವು. ಸುವಾಸನೆಯುಳ್ಳ ಅನೇಕ ಹೂವುಗಳ ಹೆಸರುಗಳನ್ನು ನಾವು ಪುರಾತನ ಗ್ರಂಥಗಳಲ್ಲಿ ಕಾಣಬಹುದು. ಮಾವು, ಅಂಜೂರ, ದ್ರಾಕ್ಷಿ, ಬಾಳೆ ಮತ್ತು ಖರ್ಜೂರ ಮೊದಲಾದ ಹಣ್ಣುಗಳು ಜನಪ್ರಿಯವಾಗಿದ್ದುವು. ಹೂವಿನ ಹಾಗೂ ಹಣ್ಣಿನ ಅಂಗಡಿಗಳು ನಗರಗಳಲ್ಲಿ ವಿಶೇಷವಾಗಿದ್ದುವು. ಆಧುನಿಕ ಭಾರತದಲ್ಲಿ ಹೂವಿನ ಹಾರಕ್ಕಿರುವ ಮನ್ನಣೆಯೇ ಪ್ರಾಚೀನ ಭಾರತದಲ್ಲೂ ಇದ್ದಿತು.

ಬೇಟೆಯು ಆಹಾರದ ದೃಷ್ಟಿಯಿಂದಲೂ ಮನೋರಂಜನೆಯ ದೃಷ್ಟಿಯಿಂದಲೂ ಜನರ ಉತ್ತಮ ಉದ್ಯಮವಾಗಿದ್ದಿತು. ಮಾಂಸಾಹಾರವು ಸರ್ವಸಾಮಾನ್ಯವಾಗಿದ್ದು ಕೋಳಿಸಾಕುವಿಕೆ ಮತ್ತು ಮೀನುಹಿಡಿಯುವುದು ರೂಢಿಯಲ್ಲಿದ್ದಿತು. ಮೀನಿನ ಕೋರಿಗಳೂ ಪಶುಸಂಹಾರ ಆಲಯಗಳೂ ಪ್ರಚಾರದಲ್ಲಿದ್ದುವು. ಆದರೆ ಆಹಾರದ ಮುಖ್ಯ ಪದಾರ್ಥಗಳು ಅಕ್ಕಿ, ಗೋಧಿ, ಜೋಳ, ಕಾಳುಗಳೇ ಆಗಿದ್ದುವು. ಕಬ್ಬಿನಿಂದ ಸಕ್ಕರೆ ತಯಾರಿಸುವ ಕ್ರಮವು ಜಾರಿಯಲ್ಲಿದ್ದಿತು. ಹಾಲು ಮತ್ತು ಅದರ ವಿವಿಧ ಉತ್ಪನ್ನಗಳು ಈಗಿನಂತೆ ಹೆಚ್ಚು ಬೆಲೆ ಬಾಳುವ ಸಾಧನಗಳಾಗಿದ್ದುವು. ಮದ್ಯದ ಅಂಗಡಿಗಳೂ ಇದ್ದು ಭತ್ತ, ಹಣ್ಣು, ಕಬ್ಬು ಇತ್ಯಾದಿಗಳಿಂದ ಮದ್ಯವು ತಯಾರಿಸಲ್ಪಡುತ್ತಿತ್ತು.

ಗಣಿಗಳನ್ನು ಅಗೆದು ಲೋಹಗಳನ್ನು ತೆಗೆಯುತ್ತಿದ್ದರು. ಚಿನ್ನ, ಬೆಳ್ಳಿ, ತಾಮ್ರ, ಕಬ್ಬಿಣ, ಸೀಸ, ತವರ ಮತ್ತು ಹಿತ್ತಾಳೆಗಳು ಹೆಚ್ಚು ಬಳಕೆಯಲ್ಲಿದ್ದ ಉಪಯುಕ್ತ ಲೋಹಗಳಾಗಿದ್ದುವು. ಅಮೂಲ್ಯವಾದ ರತ್ನಗಳಲ್ಲಿ ವಜ್ರ, ವೈಡೂರ್ಯ, ಹವಳ ಮುತ್ತು ಇವುಗಳು ವಿಶೇಷವಾಗಿದ್ದುವು. ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳು ಬಳಕೆಯಲ್ಲಿದ್ದುವು.

ರೇಷ್ಮೆ, ಉಣ್ಣೆ ಮತ್ತು ಹತ್ತಿಯ ಬಟ್ಟೆಗಳನ್ನು ತಯಾರಿಸುವುದರಲ್ಲಿ ಭಾರತದ ಖ್ಯಾತಿ ಅನ್ಯದೇಶಗಳಲ್ಲೂ ಹಬ್ಬಿದ್ದಿತು. ನೂಲುವುದು, ನೇಯುವುದು, ಬಣ್ಣಹಾಕುವುದು ಹೆಚ್ಚು ಲಾಭದಾಯಕ ಕೈಗಾರಿಕೆಗಳಾಗಿದ್ದುವು. ಲೋಹದ ಕಾರ್ಖಾನೆಗಳು ವಿದೇಶಗಳಲ್ಲಿ ಹೆಸರಾಂತ ಯುದ್ಧ ಸಾಮಗ್ರಿಗಳನ್ನು ತಯಾರಿಸುತ್ತಲಿದ್ದುವು. ಕಲ್ಲು ಇಟ್ಟಿಗೆ ಮರಮುಟ್ಟುಗಳನ್ನು ಕಟ್ಟಡ ರಚನಾಸಾಮಗ್ರಿಗಳಾಗಿ ಉಪಯೋಗಿಸುತ್ತಲಿದ್ದರು. ರಥಗಳು, ಗಾಡಿಗಳು, ಹಡಗುಗಳು ಇತ್ಯಾದಿಗಳನ್ನು ಬಡಗಿಗಳು ನಿರ್ಮಿಸುವುದರಲ್ಲಿ ಕುಶಲರಾಗಿದ್ದರು. ಪ್ರತಿ ಗ್ರಾಮದಲ್ಲೂ ಕುಂಬಾರರು ಮಡಕೆಗಳನ್ನು ಮಾಡುತ್ತಿದ್ದರು. ಪುಷ್ಪಗಳಿಂದಲೂ ಗಂಧದಿಂದಲೂ ಅನೇಕ ಸುವಾಸನಾದ್ರವ್ಯಗಳನ್ನು ಅತ್ತರುಗಳನ್ನು ಉತ್ಪಾದಿಸುತ್ತಲಿದ್ದರು. ಶ್ರಮಜೀವಿಗಳು ಮಾತ್ರವಲ್ಲದ ಅಧ್ಯಾಪಕರು, ವ್ಯಾಪಾರಿಗಳು, ಸಂಗೀತಗಾರರು, ಜ್ಯೋತಿಷ್ಯರು, ನಟರು, ನಾಟ್ಯಕಲಾಭಿಮಾನಿಗಳೂ ತಮ್ಮ ತಮ್ಮ ಉದ್ಯೋಗದಲ್ಲಿ ನಿರತರಾಗಿದ್ದರು.

ಮನೆಗಳಲ್ಲಿ ದಾಸದಾಸಿಯರನ್ನಿಡುವ ಪದ್ಧತಿಯಿದ್ದಿತು. ಕೃಷಿಮಾಡಲು ತಾತ್ಕಾಲಿಕವಾಗಿ ಕಾರ್ಮಿಕರನ್ನು ಬಾಡಿಗೆಕೊಟ್ಟು ಕರೆದುಕೊಳ್ಳುತ್ತಲಿದ್ದರು. ಅಸ್ಪೃಶ್ಯರೆನಿಸಿದ ಚಂಡಾಲರು ಶವಗಳನ್ನು ತೆಗೆದು ನಗರಶುಚಿತ್ವವನ್ನು ಕಾಯುತ್ತಿದ್ದರು. ವ್ಯಾಪಾರದಲ್ಲಿ ಪಾಲುಗಾರಿಕೆಯ ಪದ್ಧತಿ ಇದ್ದಿತು. ಬಡ್ಡಿಗೆ ಸಾಲಕೊಡುವ ರೂಢಿಯೂ ಬಹಳವಿದ್ದಿತು. ವರ್ತಕ ಸಂಘಗಳೂ ವಾಣಿಜ್ಯ ಸಂಸ್ಥೆಗಳೂ ರೂಪುಗೊಂಡಿದ್ದುವು. ಇವುಗಳ ಪ್ರಮುಖನನ್ನು 'ಶ್ರೇಷ್ಠಿ' ಎಂದು ಸಂಬೋಧಿಸುತ್ತಲಿದ್ದರು. ಒಂದೇ ವೃತ್ತಿಗೆ ಸೇರಿದ ಜನರಿಂದಲೇ ನಿಬಿಡವಾದ ಕೆಲವು ಗ್ರಾಮಗಳಿದ್ದುವು. ಇಂತಹ ಗ್ರಾಮಗಳು ಸಾಮಾನ್ಯವಾಗಿ ನಗರಗಳ ಬಹಿರ್ಭಾಗದಲ್ಲಿ ಬೆಳೆಯುತ್ತಲಿದ್ದುವು. ವರ್ಣಭೇದವು ಈ ರೀತಿ ಉದ್ಯಮ ವಿಭಾಗದಿಂದಲೇ ತಲೆದೋರಿತು.

ರಾಜಮಾರ್ಗಗಳೂ, ಪ್ರಯಾಣಿಕ ವಸತಿಗೃಹಗಳೂ ಆಸ್ಪತ್ರೆಗಳೂ ಉತ್ತರ ಭಾರತದಲ್ಲಿ ಹೆಚ್ಚಾಗಿದ್ದುವು. ವಾಣಿಜ್ಯವು ಒಳದೇಶದಲ್ಲಿ ಮಾತ್ರವಲ್ಲದೆ ವಿದೇಶಗಳಲ್ಲೂ ಸಾಗುತ್ತಿತ್ತು. ವಿದೇಶೀ ವ್ಯಾಪಾರವು ಹಡಗುಗಳ ಮೂಲಕವೂ ಕಾರವಾನ್ ರಸ್ತೆಗಳ ಮೂಲಕವೂ ಸಾಗುತ್ತಿದ್ದಿತು. ನದಿಗಳ ಮುಖಾಂತರ ಹಡಗು ವೈವಾಟುಗಳು ನಡೆಯುತ್ತಲಿದ್ದುದರಿಂದ ಕಾಶಿ, ಪಾಟ್ನ, ಭಾಗಲಪುರ ಮುಂತಾದ ನಗರಗಳು ಪ್ರಖ್ಯಾತಿಗೊಂಡುವು. ದಕ್ಷಿಣ ಭಾರತದಲ್ಲಿ ಕಾವೇರಿ ಪಟ್ಟಣವು ಅಂತರರಾಷ್ಟ್ರೀಯ ವ್ಯಾಪಾರ ಕೇಂದ್ರವಾಗಿದ್ದುದೆಂದು ಹಳೇ ತಮಿಳು ಕಾವ್ಯಗಳು ನಮಗೆ ಹೇಳುತ್ತವೆ.

ಡೆಲ್ಲಿಯ ಸಮೀಪವಿರುವ ಒಂದು ಪ್ರಕಾಂಡವಾದ, ವಿಜ್ಞಾನಿಗಳನ್ನು ಭ್ರಾಂತಿಗೊಳಿಸಿದ ಕಬ್ಬಿಣದ ಸ್ತಂಭದಿಂದ ಕಬ್ಬಿಣದ ಉಪಯೋಗದಲ್ಲಿ ಪ್ರಾಚೀನ ಭಾರತವು ಪಡೆದ ಕೌಶಲ್ಯವು ವ್ಯಕ್ತವಾಗುವುದು. ಈ ಸ್ತಂಭವು ಗುಪ್ತರ ಕಾಲದ ಬಹಳ ಹಿಂದೆ ನಿರ್ಮಿತವಾಯಿತೆಂದು ತಜ್ಞರು ಅಭಿಪ್ರಾಯಪಡುವರು. ಇದರಿಂದ ಪ್ರಾಚೀನ ಭಾರತದ ಜನಜೀವನವು ವೈಭವಪೂರ್ಣವಾಗಿದ್ದಿತು ಎನ್ನಲು ಅಡ್ಡಿಯಿಲ್ಲ.

(ಮುಂದುವರಿಯುವುದು.)

Office of the Registrar of Co-operative Societies, Coorg, Mercara, Dated 31st May, 1949.

*Applications from Candidates who have passed or completed S. S. L. C., examinations and ex-service-men with equivalent qualifications are invited up to **20th June, 1949**, for training in Co-operation and allied subjects at the Coorg Government Co operative Institute, Mercara. The period of training is twelve months commencing from 1st July, 49.*

Applicants are required to appear before the undersigned at their own expense for interview at his office at 11 A. M. on the 27th June, 1949. The selected candidates will be paid a stipend of Rs 25/- per mensem each for the period of training.

P. M. Chengapa,
Registrar,
Co operative Societies, Coorg.

"ಹರಿಜನ" ಲೇಖನ.

ಪ್ರಜಾತಂತ್ರವನ್ನು 'ಸುರಾಜ್ಯ'ಕ್ಕಾಗಿ ಅಳವಡಿಸುವ ಉಪಾಯ.

ಲೇ:—ಶ್ರೀ. ಕ. ಜಿ. ಮಶ್ರುವಾಲಾ.

ರಾಷ್ಟ್ರಕಾರ್ಯದಲ್ಲಿ ಪ್ರಜೆಗಳಿಗೆ ನಿರ್ಣಯಾಧಿಕಾರವನ್ನು ಕೊಡುವ ಸಮರ್ಪಕ ವ್ಯವಸ್ಥೆಯಿರುವ ರಾಜ್ಯಪದ್ಧತಿಯೆಂಬರ್ಥವನ್ನು ಸೂಚಿಸಲು ಅನುಕೂಲವಾದುದೆಂದು 'ಪ್ರಜಾತಂತ್ರ' ಶಬ್ದವನ್ನು ನಾನು ಉಪಯೋಗಿಸುತ್ತಿದ್ದೇನೆ. ಸಾಮಾನ್ಯವಾಗಿ ಜನರು ತಮ್ಮನ್ನು ತಾವೇ ತಮ್ಮ ಪ್ರತಿನಿಧಿಗಳ ಮೂಲಕ ಆಳಿಕೊಳ್ಳುವದು ಈ ಪದ್ಧತಿಯ ರೂಢ ರೂಪ. ವ್ಯವಹಾರದಲ್ಲಿ ಅದು ಸರ್ವಾನುಮತದಿಂದ ಆರಿಸಲ್ಪಟ್ಟ ಸಂಸ್ಥೆಯಾಗಿರದೆ ಜನರಲ್ಲಿ ಬಹುಸಂಖ್ಯರ ವಿಶ್ವಾಸಕ್ಕೆ ಪಾತ್ರವಾದ ಸಂಸ್ಥೆಯಾಗಿರುವದು.

ಅನುಪ್ರಮಾಣ ಪ್ರಾತಿನಿಧ್ಯ.

ಆದರಿಂದ ಅನಿವಾರ್ಯವಾಗಿ ಪ್ರತಿನಿಧಿಗಳ ಆಯ್ಕೆಯಾಗಲೇಬೇಕಾಗುವದು. ಈ ಪದ್ಧತಿಯ ಶಾಖೆಗಳಲ್ಲಿ ಸಂಖ್ಯಾನುಗುಣ ಪ್ರಾತಿನಿಧ್ಯವೂ ಒಂದು. ಅಂದರೆ ಪ್ರಾತಿನಿಧ್ಯ ಪಡೆಯಬೇಕಾದ ಪ್ರತಿಯೊಂದು ವರ್ಗದ ಜನಸಂಖ್ಯೆಗನುಗುಣವಾಗಿ ಆಯಾ ಪ್ರತಿನಿಧಿಗಳು ಆರಿಸಲ್ಪಡುವರು.

ಇದೀಗ ಪ್ರಶ್ನೆ: ಸಂಖ್ಯಾನುಗುಣ ಪ್ರಾತಿನಿಧ್ಯದ ತತ್ವ ಯೋಗ್ಯವಾದುದೆ? ರಾಷ್ಟ್ರಕಾರ್ಯದಲ್ಲಿ ಎಲ್ಲ ಮುಖ್ಯ ಮುಖ್ಯ ವರ್ಗಗಳಿಗೂ ಸರಿಯಾದ ಪಾಲು ದೊರೆಯಬೇಕೆಂಬ ತತ್ವದ ಆಧಾರದಿಂದ ಸಂಖ್ಯಾನುಗುಣ ಪ್ರಾತಿನಿಧ್ಯವನ್ನು ಸಾಮಾನ್ಯವಾಗಿ ಬೇಡಲಾಗುತ್ತದೆ. ಮತ್ತು ಆಯಾ ವರ್ಗಕ್ಕೆ ಸೇರಿದ ಅಥವಾ ಸಂಬಂಧಿಸಿದ ಜನರ ಸಂಖ್ಯೆಗನುಗುಣವಾಗಿ ಅದರದರ ಪ್ರತಿನಿಧಿಗಳಿಗೆ ರಾಜ್ಯದ ವಿವಿಧ ಅಂಗಗಳಲ್ಲಿ ಸ್ಥಾನ ಸಿಕ್ಕಿದರೆ ನ್ಯಾಯದೊರೆತಂತಾಯಿತೆಂದು ತಿಳಿಯಲ್ಪಡುತ್ತದೆ.

ಈ ಪದ್ಧತಿಯಲ್ಲಿ ರೊಟ್ಟಿಗಳನ್ನು ಹಂಚುವ ಪದ್ಧತಿಯನ್ನೇ ಪ್ರಾತಿನಿಧ್ಯಕ್ಕೂ ಅನ್ವಯಿಸುತ್ತಾರೆ. ರೊಟ್ಟಿಗಳ ಸಂಖ್ಯೆ ಮಿತವಾಗಿದ್ದು ಅದನ್ನು ಪ್ರತಿಯೊಂದು ಗುಂಪಿಗೂ ಅದರದರ ಜನಸಂಖ್ಯಾನುಗುಣವಾಗಿ ಹಂಚಿದರೆ ಕೊನೆಗೆ ಪ್ರತಿಯೊಬ್ಬನಿಗೂ ಅಷ್ಟೇ ರೊಟ್ಟಿಗಳು ಸಿಕ್ಕುತ್ತವೆ. ಅದೇ ಪ್ರಕಾರ ಸಂಖ್ಯಾನುಗುಣ ಅಥವಾ ಅನುಪ್ರಮಾಣ ಪ್ರಾತಿನಿಧ್ಯದಿಂದ ಪ್ರಜಾತಂತ್ರ ಅಥವಾ ಜನಸತ್ತೆ ನ್ಯಾಯವಾಗಿ ಸ್ಥಾಪಿತವಾಗುವದೆಂದು ಭಾವಿಸಲಾಗಿದೆ. ಪ್ರಾದೇಶಿಕ, ಜಾತೀಯ, ವ್ಯವಸಾಯಿಕ ಅಥವಾ ಇತರ ವರ್ಗಗಳ ಪ್ರತಿ ಇಷ್ಟು ಪ್ರಜೆಗಳಿಗೆ ಒಂದು ಪ್ರತಿನಿಧಿಸ್ಥಾನ ಎಂದು ಗೊತ್ತುಪಡಿಸುವ ರೂಢಿ ಇದರಿಂದಲೇ ಉದ್ಭವಿಸಿತು.

ಆದರೆ ಸರ್ವಾನುಮತದಿಂದ ಮಾಡದೆ ಬಹುಮತದಿಂದ ನಿರ್ಣಯಗಳನ್ನು ಮಾಡಿದಲ್ಲಿ ಆ ಬಹುಮತ ಸರಳವಿರಲಿ ಬೇಕೆಂದು ಉಬ್ಬಿಸಿದ್ದಿರಲಿ—ಅನುಪ್ರಮಾಣ ಪ್ರಾತಿನಿಧ್ಯದಿಂದ ಸ್ಥಾಪಿಸಬೇಕೆಂದು ಮಾಡಿದ ನ್ಯಾಯವು ವ್ಯವಹಾರದಲ್ಲಿ ವಿಫಲವಾಗುತ್ತದೆ. ಏಕೆಂದರೆ ಒಂದು ನಿಶ್ಚ ಅಲ್ಪ ಸಂಖ್ಯ ವರ್ಗವು ತಾನೆಷ್ಟೇ ಯೋಗ್ಯ ಪ್ರಮಾಣದಲ್ಲಿ ಪ್ರಾತಿನಿಧ್ಯಪಡೆದಿದ್ದರೂ ತನ್ನ ಅಭಿಪ್ರಾಯಗಳನ್ನು ನಿತ್ಯ ಬಹುಸಂಖ್ಯಾ ವರ್ಗವು ತಿರಸ್ಕರಿಸದಂತೆ ತಡೆಯಲಾರದು. ಈ ಅರಿವಿನಿಂದಲೇ ಸಂಖ್ಯಾಧಿಕ ಪ್ರಾತಿನಿಧ್ಯ ಮತ್ತು ಪ್ರತ್ಯೇಕ ಮತದಾರ ಸಂಘಗಳು ಬೇಕೆಂಬ ಬೇಡಿಕೆಗಳು ಹುಟ್ಟಿಕೊಂಡವು. ಅಧಿಕ ಪ್ರಾತಿನಿಧ್ಯವೆಂದರೆ ಬಹುಸಂಖ್ಯ ವರ್ಗದ ದಾರಿಯಲ್ಲಿ ಕೆಲ ಕೃತ್ರಿಮ ಕಂಟಕಗಳನ್ನು ಚೆಲ್ಲಿದಂತೆ; ಮತ್ತು ಪ್ರತ್ಯೇಕ ಮತದಾರ ಸಂಘಗಳು ಅಲ್ಪ ಸಂಖ್ಯ ಗುಂಪಿನಲ್ಲಿಯೂ ಬಹುಸಂಖ್ಯರು ತಮ್ಮ ಪರನ್ನೇ ನಿಲ್ಲಿಸದಂತೆ ನೋಡಿಕೊಳ್ಳುವ ಯುಕ್ತಿ.

ಆದರೆ ಎಲ್ಲಿವರೆಗೆ ಬಹುಸಂಖ್ಯಾಗು ಬಹುಸಂಖ್ಯರಾಗಿಯೆ ಉಳಿಯುವರೋ ಆ ವರೆಗೂ ಇಂಥ ಯುಕ್ತಿಗಳಿಂದ ಮೇಲೆ ಹೇಳಿದಂಥ ನಿಜವಾದ ಅಥವಾ ಕಾಲ್ಪನಿಕ ಅನ್ಯಾಯಗಳನ್ನು ತಡೆಯುವದು ಸಾಧ್ಯವಲ್ಲ. ಅದಕ್ಕೆ ಒಂದೇ ಉಪಾಯವಿದೆ: ಬಹುಸಂಖ್ಯರ ಆಳಿಕೆಯೆನಿಸುವ ಪದ್ಧತಿಯ ಬದಲಿಗೆ, ಇಂಥ ದೌರ್ಬಲ್ಯಗಳಿಗೊಳಗಾದ ಎಲ್ಲ ಅಲ್ಪ ಸಂಖ್ಯ ಗುಂಪುಗಳಿಗೂ ಅನುಕೂಲವಾದ ಹೊಸ ಪದ್ಧತಿಯೊಂದನ್ನು ನಾವು ಕಂಡುಹಿಡಿಯಬೇಕು. ಅನುಪ್ರಮಾಣ ಪ್ರಾತಿನಿಧ್ಯ, ಅಧಿಕ ಪ್ರಾತಿನಿಧ್ಯ ಮತ್ತು ಪ್ರತ್ಯೇಕ ಮತದಾರ ಸಂಘಗಳಂಥ ಉಪಶಾಮಕ ಉಪಾಯಗಳಿಂದ ಯುಕ್ತವಾಗಿದ್ದಾಗ ಕೂಡ, ಬರಿ ಕೈಗಳನ್ನೆಣಿಸಿ ನಿರ್ಣಯಕ್ಕೆ ಬರುವ ಪದ್ಧತಿಯಲ್ಲಿ ಏನೋ ಮೂಲಭೂತ ಕೊರತೆಯಿದೆಯೆಂದು ಒಪ್ಪಿಕೊಳ್ಳಲೇಬೇಕು. ಈ ಕೊರತೆಗೆ ಕಾರಣವಿಷ್ಟೆ. ಪ್ರಜಾತಂತ್ರವೆಂದರೆ ಬಹುಸಂಖ್ಯರ ಆಳಿಕೆಯೆಂದೂ ಅದರ ಮೇಲೆ ಬಹುಸಂಖ್ಯರ ಆಳಿಕೆಯೇ ಸು—ರಾಜ್ಯವೆಂದೂ ನಂಬಿಕೊಂಡು ನಾವು ಸುರಾಜ್ಯದ ಮೂಲಭೂತ ಲಕ್ಷಣಗಳನ್ನೇ ಮರೆತುಬಿಡುತ್ತೇವೆ.

ಈ ಪ್ರಶ್ನೆಯನ್ನು ನಿರ್ವಿಕಾರವಾಗಿ ತಾತ್ವಿಕ ರೀತಿಯಲ್ಲಿ ವಿಚಾರಿಸೋಣ.

ಮತದಾನದ ಆತ್ಮವಂಚನೆ.

ಮೊದಲನೆಯದಾಗಿ, ಸುಸಂಘಟಿತ ಪಕ್ಷಗಳು ರೂಢವಾಗಿರುವಲ್ಲಿ ಮತದಾನವೇ ಒಂದು ಆತ್ಮವಂಚನೆಯಾಗುತ್ತದೆ. ಯಾವುದೊಂದು ಪ್ರಮೇಯಕ್ಕೆ ಬಹುಸಂಖ್ಯರ ಬೆಂಬಲ ದೊರೆತದೆಯೆಂದಾಕ್ಷಣ ಆಯೆಲ್ಲ ಜನರು ನಿರ್ಣಯಕ್ಕೆ ಬರುವ ಮೊದಲು ಸ್ವಬುದ್ಧಿಯಿಂದ ಆಳವಾಗಿ ಆ ಪ್ರಮೇಯದ ಗುಣದೋಷಗಳನ್ನು ಚಿಂತಿಸಿದ್ದಾರೆಂದು ಅರ್ಥವಲ್ಲ. ತೊಂಬತ್ತುಪಾಲು, ಆ ಪಕ್ಷದ ಸಂಘಟನೆ ಬಲವಾಗಿದೆಯೆಂದೂ ಸದಸ್ಯರು ಅದರ ಪ್ರತೋದನ ಆದೇಶಗಳನ್ನು ಸರಿಯಾಗಿ ಪಾಲಿಸುತ್ತಾರೆಂದೂ ಅದರ ಅರ್ಥ. ಎತ್ತಿದ ಕೈಗಳ ಸಂಖ್ಯೆ ಬಹಳವಾಗಿದ್ದರೂ ವಿಚಾರ ಮಾಡಿದ ತಲೆಗಳ ಸಂಖ್ಯೆ ತೀರ ಕಡಿಮೆ—ಒಮ್ಮೊಮ್ಮೆ ಬರಿ ಒಂದೇ ತಲೆಯಾಗಿರುವದು ಅಪೂರ್ವವಲ್ಲ. ವ್ಯವಹಾರಕ್ಕೆ ಅನುಕೂಲವಾಗುವಂತೆ, ಚುನಾವಣೆಯಾದೊಡನೆ ಇಂಥಿಂಥ ಪಕ್ಷದ ಸಂಖ್ಯಾಬಲ ಇಷ್ಟಿಷ್ಟಿದೆಯೆಂದು ಗುರುತು ಹಾಕಿಕೊಂಡು, ಆಯಾಪಕ್ಷದ ಮುಂದಾಳಿನ ಲೆಕ್ಕಕ್ಕೆ ಅಷ್ಟಷ್ಟು ಮತಗಳನ್ನು ಜಮಾಹಿಡಿದು ಬಿಡಬೇಕೆಂದೂ ಶಾಸನ ಸಭೆಯು ಆ ಮುಂದಾಳುಗಳನ್ನೂ ಅವರೇ ಆರಿಸುವ ಕೆಲ ಸಹಯೋಗಿಗಳನ್ನೂ ಒಳಗೊಂಡಿದ್ದರೆ ಸಾಕೆಂದೂ ನಿಯಮ ಮಾಡಿಬಿಟ್ಟರೂ ಸರಿಯೆ! ಅತಿ ದೊಡ್ಡ ಪಕ್ಷದ ನಾಯಕನು ಹೊಸ ಚುನಾವಣೆಗಳಾಗುವ ತನಕ ತನ್ನ ಸಹಯೋಗಿಗಳ ಸಹಾಯದಿಂದ ರಾಜ್ಯಭಾರ ಮಾಡಬೇಕೆಂದೂ ಇತರ ಪಕ್ಷಗಳ ನಾಯಕರೂ ಅವರ ಸಹಯೋಗಿಗಳೂ ಆ ವರೆಗೆ ವಿರೋಧಿ ಪಕ್ಷವಾಗಿ ವರ್ತಿಸಬೇಕೆಂದೂ ಗೊತ್ತುಮಾಡಿಬಿಡಬಹುದು. ಉಳಿದ ಸದಸ್ಯರನ್ನು ಮನೆಗೆ ಕಳಿಸಬಹುದು. ಪಕ್ಷಪ್ರತೋದರಿಗೆ ವಿಧೇಯರಾಗಿರಲು ಬದ್ಧರಾದ ಸದಸ್ಯರಿಂತಲೂ ಸದಾಜಾಗೃತವಾದ ಪತ್ರಿಕೆಗಳು ಮತ್ತು ಜನಾಭಿಪ್ರಾಯವೇ ಸುರಾಜ್ಯಕ್ಕೆ ಹೆಚ್ಚು ಹಿತಕಾರಿಗಳಾಗಬಲ್ಲವು.

ಬಹುಮತವೇ ಸನ್ಮತವೆಂದು ಹೇಳಲು ಸಾಧ್ಯವಿಲ್ಲೆಂದೂ ನಾವು ಗಮನಿಸಬೇಕು. ಭೂಮಿ ಸೂರ್ಯನಿಗೆ ಪ್ರದಕ್ಷಿಣೆ ಬರುತ್ತದೆಂದು ಬಗೆದವನು ಅವನ ಕಾಲದಲ್ಲಿ ಗೆಲಿಲಿಯೋ ಒಬ್ಬನೇ. ಬಹುಸಂಖ್ಯರ ಮತ ತದ್ವಿರುದ್ಧವಾಗಿದ್ದು ತಮ್ಮ ಮತವನ್ನು ನಂಬದ್ದಕ್ಕಾಗಿ ಅವನನ್ನು ಅವರು ದಂಡಿಸಿದ್ದರಿಂದ ಅವರು ಮಾಡಿದ್ದು ಯೋಗ್ಯವೆಂದೂ ಆಗಲಿಲ್ಲ ನ್ಯಾಯವೆಂದೂ ಆಗಲಿಲ್ಲ. ಬಹುಸಂಖ್ಯರ ಬಲವನ್ನು ಅವನು ಎದುರಿಸಲಾರದೆ ಬರಿ ಮಾತಿನಲ್ಲಾದರೂ ಅವರಿಗೆ ತಲೆಬಾಗಲೇಬೇಕಾಯಿತು. ಇತರ ಪರಿಸ್ಥಿತಿಗಳಲ್ಲಿ ಒಬ್ಬನೇ ಸತ್ವಶಾಲಿ ಮನುಷ್ಯನು ತನ್ನ ಅಭಿಪ್ರಾಯಗಳನ್ನು ದೊಡ್ಡ ಸಂಸ್ಥೆಯ ಮೇಲೆ ಹೇರುವ ಉದಾಹರಣೆಗಳನ್ನೂ ನಾವು ಕಾಣುತ್ತೇವೆ. ಅವನು ಎದುರಿಗಿಲ್ಲದಿದ್ದರೆ ಸಂಸ್ಥೆ ಬೇರೆಯೇ ನಿರ್ಣಯಕ್ಕೆ ಬರಲು ಸಿದ್ಧವಾಗಿರುತ್ತದೆ. ಆದರೆ ನಿರ್ಣಯವಾಗುವಷ್ಟರಲ್ಲೇ ಅವನು ಉಪಸ್ಥಿತನಾಗುತ್ತಾನೆ; ಮತ್ತು ಅವನೊಬ್ಬನ ಮಾತಿನ ಮೇಲೆಯೆ ಇತಿ ನಿರ್ಣಯ ತಲೆಕೆಳಗಾಗುತ್ತದೆ. (ಜಯಪುರ ಕಾಂಗ್ರೆಸ್ಸಿನಲ್ಲಿ ಇದರ ಪ್ರತ್ಯಕ್ಷ ನಿದರ್ಶನವಾಯಿತು. ಅಲ್ಲಿ ವಿಷಯ ನಿಯಾಮಕ ಸಮಿತಿ ತಾನೇ ಮೊದಲು ಪಾಸುಮಾಡಿದ ನಿರ್ಣಯವನ್ನು ಪಂಡಿತ ಜವಾಹರಲಾಲರ ಬಿನ್ನಹದ ಮೇರೆಗೆ ಬದಲಿಸಿತು.) ಹೀಗೆ ಕೊನೆಗೆ ನಿರ್ಣಯವಾಗುವದು ತಲೆಯ ಬಲಾಬಲಗಳ ಮೇಲೆಯೆ. ತಲೆ ಬಲವಾಗಿದ್ದರೆ ಕೈಗಳು ಮಣಿಯುತ್ತವೆ; ಕೈಗಳು ಬಲವಾಗಿದ್ದರೆ ತಲೆ ಬಾಗುತ್ತದೆ. ಹಾಗಾದರೆ ಪ್ರಜಾತಂತ್ರವನ್ನು ಸು—ರಾಜ್ಯಹೇತುವಾಗುವಂತೆ ಹೇಗೆ ವ್ಯವಸ್ಥೆಗೊಳಿಸಬೇಕು?

ಪಕ್ಷಾತೀತತೆ ಅವಶ್ಯ.

'ಕ' ನಿಗೂ 'ಗ' ನಿಗೂ ಜಗಳವಾದರೆ ಇಲ್ಲವೆ ಮತಭೇದವುಂಟಾದರೆ, ಮತ್ತು ಅವರಿಬ್ಬರೂ ವಿವೇಕಿಗಳಾಗಿದ್ದು ಸಮಂಜಸವಾದ ಒಪ್ಪಂದವಾಗಬೇಕೆಂದು ಅಪೇಕ್ಷಿಸುತಿದ್ದರೆ, ಅವರು ವಿವಾದವನ್ನು ಒಬ್ಬ ಅಥವಾ ಕೆಲ ನ್ಯಾಯಾಧೀಶರನ್ನಾಗಲಿ ಮಧ್ಯಸ್ಥರನ್ನಾಗಲಿ ಆರಿಸುವಾಗ ಅವರು ಯಾವುದಾದರೊಂದು ಪಕ್ಷದ ಪ್ರಸಿದ್ಧ ಪಕ್ಷಪಾತಿಗಳು ಅಥವಾ ಅದರಲ್ಲಿ ಆಸಕ್ತಿಯುಳ್ಳವರು ಎಂಬುದನ್ನು ನೋಡದೆ ಭಯ ದಾಕ್ಷಿಣ್ಯಗಳಿಗೊಳಗಾಗದೆ ಮತ' ಪಕ್ಷಪಾತವಿಲ್ಲದ ತೀರ್ಪು ಕೊಡಲು ಸಮರ್ಥರೋ ಎಂದು ನೋಡಲಾಗುತ್ತದೆ. ವಿವಾದಿಗಳಲ್ಲೊಬ್ಬನ ಮೇಲೆ ವಿಶೇಷ ಪ್ರೀತಿ ಅಥವಾ ಅಪ್ರೀತಿಯುಳ್ಳ, ಅಥವಾ ಅವನ ಹಿತದಲ್ಲಿ ವಿಶೇಷ ಆಸಕ್ತಿಯುಳ್ಳ ಮನುಷ್ಯನು ತೀರ್ಪು ಕೊಡಲು ಯೋಗ್ಯನೆಂದು ಸಾಮಾನ್ಯವಾಗಿ ಭಾವಿಸಲ್ಪಡುವದಿಲ್ಲ. ನ್ಯಾಯಾಸ್ಥಾನಗಳಲ್ಲಿಯೂ ಪಂಚಾಯತಿಗಳಲ್ಲಿಯೂ ನಮಗಿರುವ ವಿಶ್ವಾಸ ಅವುಗಳ ಮುಖ್ಯಾಧಿಕಾರಿಗಳ ನಿಷ್ಪಕ್ಷಪಾತ, ನಿರ್ವಿಕಾರತೆಗಳನ್ನೇ ಅವಲಂಬಿಸಿದೆ.

ಅದೇ ಪ್ರಕಾರ, ಇತರ ಆಳಿಕೆಯ ಶಾಖೆಗಳಲ್ಲಿಯೂ ಜನರು ಅಪೇಕ್ಷಿಸಬೇಕಾದ್ದು ಮತ್ತು ಆಳುವವರು ಅಧಿಕಾರ ಸ್ವೀಕಾರಮಾಡುವ ಮೊದಲು ವಾಗ್ದಾನ ಮಾಡಬೇಕಾದ್ದೆಂದರೆ, ತಾವ ಭಯ ದಾಕ್ಷಿಣ್ಯಗಳಿಗೊಳಗಾಗದೆ ಕ[illegible]ನ್ನು ನೆರವೇರಿಸುವೆವೆಂದು. ಅಂದರೆ, ತ[illegible] ರಾಜಕೀಯ ವಿಚಾರಗಳೇನೇ ಇರಲಿ, ಮತ್ತು ತಾವು ಯಾವ ಯಾವ ವರ್ಗಕ್ಕೆ ಸೇರಿದವರೇ ಆಗಲಿ, ತಮ್ಮ ಈ ವಿಶಿಷ್ಟ ಸಂಬಂಧಗಳನ್ನು ಲಕ್ಷಿಸದೆ, ಮನುಷ್ಯನಿಗೆ ಸಾಧ್ಯವಾದಷ್ಟು ಮಟ್ಟಿಗೆ ಪಕ್ಷದ ಅಥವಾ ವರ್ಗದ ವಿಚಾರಗಳನ್ನು ಮೀರಿ ನ್ಯಾಯ ರೀತಿಯಲ್ಲೇ ಅವು ವಿಚಾರಿಸಲು ವಾಗ್ಬದ್ಧರಾಗಬೇಕು. ಶಾಸನ ಸಭೆಯ ಅಥವಾ ನಗರ ಸಭೆಯ ಪ್ರತಿಯೊಬ್ಬ ಅಧ್ಯಕ್ಷನೂ ತಾನೂ ಅಧಿಕಾರ ಸ್ವೀಕಾರ ಮಾಡಿದ ಕ್ಷಣದಿಂದ ಪಕ್ಷಾತೀತನಾಗಿ ನಡೆದುಕೊಳ್ಳುವದಾಗಿ ಎಲ್ಲ ಪಕ್ಷಗಳಿಗೂ ಆಶ್ವಾಸನ ಕೊಡುವದಿಲ್ಲವೆ? ಸರಕಾರದ ಮಂತ್ರಿಗಳಿಗೂ ಇದೇ ನಿಯಮ ಅನ್ವಯಿಸಬೇಕು. ಅವರು ಶಾಸನ ಸಭೆಯ ಬಹುಮತ ಪಕ್ಷದವರಿಂದಲೇ ಆರಿಸಲ್ಪಟ್ಟು ತಮ್ಮದೇ ಪಕ್ಷವನ್ನು ಮಾಡಿಕೊಳ್ಳಬಹುದು. ಆದರೆ ಅವರನ್ನು ಆ

ಪ್ರಜಾತಂತ್ರದ ಲೋಪದೋಷಗಳು.

ಪಕ್ಷಕ್ಕೆ ಅಥವಾ ವರ್ಗಕ್ಕೆ ಸೇರಿದವರೆಂಬ ಒಂದೇ ಕಾರಣಕ್ಕಾಗಿ ಆರಿಸದೆ, ಆಡಳಿತೆಯ ಕಾರ್ಯಗಳಲ್ಲಿ ಪಕ್ಷ ವರ್ಗಗಳನ್ನು ಮೀರಿ ನ್ಯಾಯವಾಗಿ ನಡೆದುಕೊಳ್ಳುವ ಶಕ್ತಿಯುಳ್ಳವರೆಂದು ಆರಿಸಬೇಕು.

ಅಧಿಕಾರ ಸ್ಥಾನವನ್ನು ತನ್ನ ಪಕ್ಷದ ಬಲವರ್ಧನೆಗಾಗಿ ಅಥವಾ ತನ್ನ ವರ್ಗದ ಜನರಿಗೆ ಅನುಗ್ರಹ ಮಾಡುವದಕ್ಕಾಗಿ ಉಪಯೋಗಿಸಿಕೊಂಡರೆ ಅದು ಕರ್ತವ್ಯಚ್ಯುತಿ ಮತ್ತು ಅಧಿಕಾರ ಸ್ವೀಕಾರ ಪ್ರತಿಜ್ಞೆಯ ಭಂಗ ಎಂದು ಪರಿಗಣಿಸಲ್ಪಡಬೇಕು. ಆದರೆ ಆಧುನಿಕ ಪ್ರಜಾತಂತ್ರದಲ್ಲಿ ಪ್ರಚಲಿತವಾಗಿರುವ ರೂಢಿ ತದ್ವಿರುದ್ಧವಾದುದು. ಎಲ್ಲ ಸಣ್ಣ ದೊಡ್ಡ ಸಾರ್ವಜನಿಕ ಸಂಸ್ಥೆಗಳಲ್ಲಿಯೂ ಅನುಪ್ರಮಾಣ ಪ್ರಾತಿನಿಧ್ಯದ ಬೇಡಿಕೆಯೇಳಲು ಇದೇ ಕಾರಣ. ಅನುಪ್ರಮಾಣ ಪ್ರಾತಿನಿಧ್ಯದ ಬೇಡಿಕೆಯ ಕೂಗೆಷ್ಟು ಹಬ್ಬಿದೆಯೆಂದರೆ, ಯಾವುದೊಂದು ಸಾರ್ವಜನಿಕ ಸಂಸ್ಥೆಯ ಆಯ್ಕೆಯಾಗಲಿ ನೇಮಕವಾಗಲಿ ಆಗಬೇಕಾದರೂ ತನ್ನವರ ತಲೆಗಳನ್ನೆಣಿಸಿ ತನಗೆ ಇಷ್ಟು ಸ್ಥಾನಗಳು ಸಿಕ್ಕಲೇಬೇಕೆಂದು ಕೂಗೆಬ್ಬಿಸದೆ ಒಂದೇ ಒಂದು ದೊಡ್ಡ ಜಾತಿಯಾಗಲಿ, ಪಂಥವಾಗಲಿ, ಪ್ರದೇಶವಾಗಲಿ, ಘಟಕವಾಗಲಿ ಇಲ್ಲವೆನ್ನಬಹುದು. ಸಾಮರ್ಥ್ಯಕ್ಕೂ ಸಚ್ಚರಿತ್ರಕ್ಕೂ ಬೆಲೆಯೇ ಇಲ್ಲ. ಆ ವರ್ಗಕ್ಕೆ ಸೇರಿದ್ದರೆ ತೀರಿತು.

ಇದರಿಂದ ಸುರಾಜ್ಯ ಹುಟ್ಟಲಾರದು. ಈ ಪದ್ಧತಿಯನ್ನನುಸರಿಸುವ ರಾಜ್ಯಪದ್ಧತಿ, ಕೇಂದ್ರೀಕೃತವಾಗಿರಲಿ ವಿಕೇಂದ್ರೀಕೃತವಾಗಿರಲಿ, ಅದು ಅತ್ಯಂತ ವ್ಯಾಪಕವಾದ ಮತದಾನ ಪದ್ಧತಿಯಿಂದ ಬೇಕಾದರೂ ಆರಿಸಲ್ಪಟ್ಟಿರಲಿ, ನೀತಿಭ್ರಷ್ಟವಾಗಿ ಪರಿಣಮಿಸದಿರದು. ಅದರಲ್ಲಿ ಬಲಿಷ್ಠರು ದುರ್ಬಲರನ್ನು ಹತ್ತಿಕ್ಕದಿರರು. ಪ್ರಾಚೀನ ಭಾರತದ ಗಣರಾಜ್ಯ ಸಂಸ್ಥೆಗಳೂ ಪಂಚಾಯಿತಿಗಳೂ ಅವನತಿ ಹೊಂದಿದ್ದಕ್ಕೂ ವಿದೇಶದ ಆಕ್ರಮಣ ಶೀಲರು ಭಾರತವನ್ನು ಬಾರಿಬಾರಿಗೂ ಗೆದ್ದದ್ದಕ್ಕೂ ಈ ಬಗೆಯ ದಬ್ಬಾಳಿಕೆಯೇ ಕಾರಣವಾಗಿರಬೇಕೆಂದು ನನಗೆ ಅನಿಸುತ್ತದೆ. ಇದು ನಿಜವಾಗಿ ಬಲಿಷ್ಠವಾದ ಕೇಂದ್ರವನ್ನು ಉಂಟುಮಾಡಲಾರದು.

ಆಡಳಿತೆಗಾರರು ಪ್ರಜೆಯ ಮತ್ತು ಅದರ ಪ್ರತಿಯೊಂದು ವರ್ಗದ ಮನಸ್ಸನ್ನು ಅರಿತಿರಬೇಕಾದ್ದು ಅಗತ್ಯ. ಯಾವುದೊಂದು ಸೂಚನೆಯ ಬಗ್ಗೆ ಅದಕ್ಕೆ ನೇರವಾಗಿ ಸಂಬಂಧಿಸಿದ ವರ್ಗದ ಅಭಿಪ್ರಾಯವೇನಿದೆ, ಅವರ ಜೀವನದ ಮೇಲೆ ಒಂದು ನೀತಿಯಿಂದಾಗಬಹುದಾದ ಪರಿಣಾಮವೇನೆಂದು ಅವರಿಗೆ ಸರಿಯಾದ ಸುಬುದ್ಧಿಯೂ ಯೋಗ್ಯ ಕಲ್ಪನೆಯೂ ಇರಬೇಕು. ಆ ಪ್ರಶ್ನೆಯಲ್ಲಿ ಅಭಿಪ್ರಾಯವನ್ನು ವ್ಯಕ್ತಗೊಳಿಸಲು ಯೋಗ್ಯವಾದುದು ಅದೊಂದೇ ವರ್ಗ; ಮತ್ತು ಅನೇಕ ವರ್ಗಗಳಿಂದ ಕೂಡಿದ ಆ ದೊಡ್ಡ ಸಂಸ್ಥೆಯಲ್ಲಿ ಆ ವರ್ಗಕ್ಕಿರುವ ಪ್ರಾತಿನಿಧ್ಯ ಬರಿ ಕೈಬೆರಳನ್ನೆಣಿಸುವಷ್ಟೇ ಎಂಬ ಕಾರಣದಿಂದ ಆದರ ಅಭಿಪ್ರಾಯಗಳು ಲಘುವಾಗಿ ಭಾವಿಸಲ್ಪಡಕೂಡದು. ಅಭಿಪ್ರಾಯದ ಮಹತ್ವವನ್ನು ವ್ಯಕ್ತಗೊಳಿಸಿದವರು ಒದಗಿಸುವ ಪ್ರಮಾಣಗಳ ಮತ್ತು ಅವರ ಪ್ರಾಮಾಣಿಕತೆಯ ಮೇಲಿಂದ ತೂಗಬೇಕಲ್ಲದೆ ಅವರ ಸಂಖ್ಯೆಯ ಮೇಲಿಂದಲ್ಲ. ವಿಷಯಗಳು ತೀರ ಜಟಿಲವಾಗಿದ್ದು ಅಭಿಪ್ರಾಯ ಭೇದಗಳು ವಿಶೇಷವಾಗಿದ್ದರೆ ಒಂದು ಬಗೆಯ ಮತಗಣನೆ ಅವಶ್ಯವೆನಿಸಬಹುದು. ಆದರೆ ಮತಗಣನೆಯಲ್ಲಿ ಯಾವಾಗಲೂ ಚಮತ್ಕಾರ ಬೀರಲು ಅವಕಾಶವಿರುವುದರಿಂದ ನಿರ್ಣಯಕ್ಕೆ ಬಹುಮತವೊಂದೇ ಸಾಲದು.

ಪರಿಹಾರೋಪಾಯ.

ನನ್ನ ಸೂಚನೆ ಹೀಗಿದೆ: ಪ್ರತಿನಿಧಿಗಳ ಮೂಲಕ ಜನಾಭಿಪ್ರಾಯವನ್ನು ಗೊತ್ತುಮಾಡಿಕೊಳ್ಳುವಾಗ, ನಿರ್ಣಯಗಳನ್ನು ಮಾಡುವಾಗ ಮತ್ತು ರಾಜ್ಯಕಾರ್ಯದ ಕಕ್ಷೆಯಲ್ಲಿ ಬರುವ ಎಲ್ಲ ವಿಷಯಗಳಲ್ಲಿಯೂ ಜನತೆಯ ಇಚ್ಛೆಯನ್ನು ಕಾರ್ಯಕಾರಿಯಾಗಿ ಮಾಡುವಾಗ, ಘಟನೆಯಲ್ಲಿ ಸಾಮಾನ್ಯ ಪ್ರತಿನಿಧಿಗಳು (ಶಾಸನ ಸಭೆ), ಆಸಕ್ತ ಪ್ರತಿನಿಧಿಗಳು, ಅಂದರೆ ಪಕ್ಷ, ಪಂಗಡ, ಆರ್ಥಿಕಾದಿ ಹಿತಸಂಬಂಧಗಳೇ ಮೊದಲಾದವುಗಳ ಪ್ರತಿನಿಧಿಗಳು (ವಿಧಿ ಮಂಡಲ ಅಥವಾ ಕೌನ್ಸಿಲ್) ಮತ್ತು ನಿಷ್ಪಕ್ಷಪಾತ, ನ್ಯಾಯಬುದ್ಧಿಗಳೇ ಮೊದಲಾದ ಗುಣವಿಶೇಷಗಳಿಗಾಗಿ ಆರಿಸಲ್ಪಟ್ಟ ಪ್ರತಿನಿಧಿಗಳು (ಮಧ್ಯಸ್ಥ ಮಂಡಲ) ಎಂಬ ಭೇದಗಳನ್ನು ಕಲ್ಪಿಸುವದು ಸೂಕ್ತ. ಶಾಸನ ಸಭೆ ಮತ್ತು ವಿಧಿಮಂಡಲಗಳಿಗೆ ತಮ್ಮ ಅಭಿಪ್ರಾಯವನ್ನು ಪ್ರತಿಯೊಂದು ರಾಜ್ಯಕಾರ್ಯದ ವಿಷಯದಲ್ಲೂ ಹೇಳುವ ಹಕ್ಕಿರಬೇಕಾದರೂ ಕೊನೆಯ ನಿರ್ಣಯವನ್ನು ಮಧ್ಯಸ್ಥ ಮಂಡಲವೇ ಮಾಡಬೇಕು. ಮೊದಲ ಎರಡು ಸಭೆಗಳಿಗೆ ಸರಕಾರವು ಸಾಮಾನ್ಯ ರೀತಿಯಲ್ಲಿ ಹೊಣೆಯಾಗಿರಬೇಕಾದರೂ ಮಧ್ಯಸ್ಥ ಮಂಡಲಕ್ಕೆ ವಿವರಗಳಲ್ಲಿ ಸಂಪೂರ್ಣ ವಿಧೇಯವಾಗಿರಬೇಕು.

ಶಾಸನ ಸಭೆಯಲ್ಲಿ ವಿಶಿಷ್ಟ ಪಕ್ಷಗಳಿಗೆ ಕಾಂಗ್ರೆಸ್, ಸಮಾಜವಾದಿ, ಕಮ್ಯೂನಿಸ್ಟ್ ಮೊದಲಾದವುಗಳಿಗೆ ಸೇರಿದ ಸದಸ್ಯರಿರಬಹುದು. ಆದರೆ ಪಕ್ಷಗಳು ರಾಜಕೀಯ ಧ್ಯೇಯಗಳನ್ನಾಧರಿಸಿರಬೇಕೇ ಹೊರತು ಪ್ರಾಂತೀಯ, ಸಾಮಾಜಿಕ ಧಾರ್ಮಿಕ ಮೊದಲಾದ ಭೇದಗಳನ್ನಲ್ಲ.

ವಿಧಿ ಮಂಡಲ ಅಥವಾ ಆಸಕ್ತ ಪ್ರತಿನಿಧಿಗಳನ್ನೊಳಗೊಂಡ ಸಭೆಯಲ್ಲಿ ಎಲ್ಲ ವಿಶಿಷ್ಟಹಿತ ಸಂಬಂಧಗಳಿಗೆ ಪ್ರಾತಿನಿಧ್ಯವಿರತಕ್ಕದ್ದು. ಸಾಧಾರಣ ಮಹತ್ವವುಳ್ಳ ಪ್ರತಿಯೊಂದು ಹಿತಸಂಬಂಧ ವರ್ಗಕ್ಕೂ ಅಲ್ಲಿ ಪ್ರತಿನಿಧಿಗಳನ್ನು ನೇಮಿಸಲು ಅವಕಾಶದೊರೆಯಬೇಕು. ಆದರೆ ವಿವಿಧ ವರ್ಗ ಅಥವಾ ಪಂಗಡಗಳ ಜನಸಂಖ್ಯೆಯೆಷ್ಟೇ ಇರಲಿ, ಅವುಗಳ ಪ್ರತಿನಿಧಿಗಳ ಸಂಖ್ಯೆ ಮಾತ್ರ ಸಮಾನವಾಗಿರಬೇಕು. ಹೀಗೆ ಪ್ರತಿಯೊಂದು ಪ್ರಾದೇಶಿಕ ಘಟಕಕ್ಕೂ ಪ್ರತಿಯೊಂದು ಮನ್ನಣೆ ಹೊಂದಿದ ಜಾತೀಯ ಅಥವಾ ಪಾಂಥಿಕ ಗುಂಪಿಗೂ ಪ್ರತಿಯೊಂದು ನಿರ್ದಿಷ್ಟ ವೃತ್ತಿ ವ್ಯವಸಾಯದ ವರ್ಗಕ್ಕೂ ಪ್ರತಿಯೊಂದು ಶಾಸ್ತ್ರ ಕಲಾ ವಿಭಾಗಕ್ಕೂ ಪ್ರಾತಿನಿಧ್ಯದ ವಿಷಯದಲ್ಲಿ ಸಮಾನತೆಯಿರಬೇಕು. ಈ ಸಂಬಂಧದಲ್ಲಿ ಯಾವುದೊಂದು ಹಿತಸಂಬಂಧವು ಮನ್ನಣೆ ಹೊಂದಬೇಕಾದರೆ ಕೆಲ ನಿಯಮಗಳನ್ನು ಗೊತ್ತುಮಾಡಬೇಕಾದೀತು.

ಆಳುವವರನ್ನು ಅಥವಾ ಮಂತ್ರಿಗಳನ್ನು ಶಾಸನ ಸಭೆಯ ಅತಿದೊಡ್ಡ ಪಕ್ಷದಿಂದ ಅಥವಾ ಅದರ ಹೇಳಿಕೆಯಂತೆ ಆರಿಸಬೇಕು. ಶಾಸನ ಸಭೆ ಧೋರಣೆಗಳನ್ನೂ ಶಾಸನಗಳನ್ನೂ ಮಂಡಿಸುವದು ಪ್ರತಿಯೊಂದು ಕ್ರಮವನ್ನು ಸೂಕ್ಷ್ಮವಾಗಿ ಚರ್ಚಿಸುವ ಅದರ ಹಕ್ಕಿಗೆ ಬಾಧೆ ಬರಕೂಡದಾದರೂ ಸಾಮಾನ್ಯವಾಗಿ ಅದು ವಿಶಾಲ ತತ್ವಗಳನ್ನು ಚರ್ಚಿಸಿ ಅವುಗಳ ಬಗ್ಗೆ ಪಾಕ್ಷಿಕ ಮತ್ತು ಜನತೆಯ ಅಭಿಪ್ರಾಯಗಳನ್ನು ಮಾತ್ರ ವ್ಯಕ್ತಗೊಳಿಸಬೇಕು. ಯಾವುದೊಂದು ಕ್ರಮದ ಆಮೂಲಾಗ್ರ ಸೂಕ್ಷ್ಮ ಪರಿಶೀಲನ ಮಾಡುವದು ವಿಧಿ ಮಂಡಲದ ಮತ್ತು ಮಧ್ಯಸ್ಥ ಮಂಡಲದ (ಅನಾಸಕ್ತ ಪ್ರತಿನಿಧಿಗಳು ಉಳಿದ ಎರಡೂ ಸಭೆಗಳಲ್ಲಿ ಕುಳಿತು ಅವುಗಳ ಮುಂದೆ ಬರುವ ಪ್ರತಿಯೊಂದು ವಿಷಯದ ಮೇಲೆ ಪಕ್ಷ ಪ್ರತಿಪಕ್ಷಗಳ ಟೀಕೆಗಳನ್ನು ಕೇಳಿಕೊಂಡ ನಂತರ ತಮ್ಮ ಕೊನೆಯ ನಿರ್ಣಯವನ್ನು ಕೊಡಬಹುದು) ನಿರ್ಣಯಕ್ಕೆ ಬರಬೇಕಾದರೆ ಅವರು ಅಧಿಕಾರದಲ್ಲಿರುವ ಸರಕಾರವು ಪ್ರಜೆಗಳಿಗೆ ವಾಗ್ದಾನ ಮಾಡಿದ ಮೂಲ ಧೋರಣೆಯನ್ನೂ ಗಮನದಲ್ಲಿಟ್ಟುಕೊಳ್ಳಬೇಕಾದೀತು. ಅವರ ನಿರ್ಣಯಗಳು ಸರಕಾರಕ್ಕೆ ಬಂಧಕವಾಗಿರಬೇಕು. ಅವರ ನಿರ್ಣಯ ಸರಕಾರ ಅಪೇಕ್ಷಿಸಿದ್ದಕ್ಕಿಂತ ತೀರ ಭಿನ್ನವಾಗಿರಬಹುದು. ಆದರೂ ತನ್ನ ಮೂಲಭೂತ ಧೋರಣೆಗೆ ಅದು ಅಸಂಗತವಾಗಿದೆಯೆಂದೆನಿಸಿದಲ್ಲದೆ ಸರಕಾರ ಅದನ್ನು ಸೋಲೆಂದು ಬಗೆಯಬೇಕಾಗಿಲ್ಲ.

ಶಾಸನ ಸಭೆಯನ್ನು ಪೂರ್ವ ನಿರ್ಣಯದ ಮೇರೆಗೆ ಜನರು ಪ್ರತ್ಯಕ್ಷವಾಗಿಯಾಗಲಿ ಅಪ್ರತ್ಯಕ್ಷವಾಗಿಯಾಗಲಿ ಆರಿಸಬಹುದು. ವಿಧಿ ಮಂಡಲವನ್ನು ವಿವಿಧ ಹಿತ ಸಂಬಂಧಗಳಿಂದ ಕೂಡಿದ ಬೇರೆ ಬೇರೆ ಮತದಾರ ಸಂಘಗಳಿಂದಲೆ ಆರಿಸಬೇಕು. ಅದು ಶಾಸನ ಸಭೆಗಿಂತ ಆಕಾರದಲ್ಲಿ ಕಿರಿದಾಗಿರಬಹುದು. ಮಧ್ಯಸ್ಥರನ್ನು ಈ ಎರಡು ಸಭೆಗಳು ತಾವು ಆರಿಸಲ್ಪಟ್ಟು ಸಭೆ ಸೇರಿದೊಡನೆ, ಮೊಟ್ಟಮೊದಲು ಆರಿಸಬೇಕು. ಮಧ್ಯಸ್ಥ ಮಂಡಲ ಬಹಳ ದೊಡ್ಡ ಸಭೆಯಾಗಿರಲಾರದು ೩೦ ಸದಸ್ಯರಿಗಿಂತ ಹೆಚ್ಚು ಇರಕೂಡದು. ಅವರು ಶಾಸನ ಸಭೆ ಅಥವಾ ವಿಧಿಮಂಡಲದ ಸದಸ್ಯರಿರಬೇಕಾಗಿಲ್ಲ; ಮತ್ತು ಅವರ ಚುನಾವಣೆಯಲ್ಲಿ ಮತದಾರರು ಯಾವ ಪಕ್ಷಕ್ಕೂ ಸೇರದ ಅಥವಾ ತಮ್ಮ ಪಕ್ಷವಲ್ಲದೆ ಬೇರೆಯದಕ್ಕೆ ಸೇರಿದ ಅರ್ಧದಷ್ಟು ಸದಸ್ಯರನ್ನಾದರೂ ಆರಿಸಬೇಕೆಂಬ ಸಂಪ್ರದಾಯವನ್ನೋ ಶಾಸನವನ್ನೋ ಮಾಡಬೇಕು. ಮುಖ್ಯವಾಗಿ ಅವರು ಉತ್ತಮ ಚರಿತ್ರವುಳ್ಳವರೂ ಅನುಭವಿಗಳೂ, ಕುಶಾಗ್ರಮತಿಗಳೂ ನಿರ್ಣಯ ಶಕ್ತಿಯುಳ್ಳವರೂ ಕರ್ತವ್ಯ ಬುದ್ಧಿಗಳೂ ಇರಬೇಕಲ್ಲದೆ ಈ ಕೆಳಗಿನ ಯೋಗ್ಯತೆಗಳನ್ನೂ ಪಡೆದವರಾಗಿರಬೇಕು:

(೧) ವಿಧಿ ಮಂಡಲದಲ್ಲಾಗುವ ಪ್ರತಿಯೊಂದು ಚರ್ಚೆಯ ಮೇಲೂ ನಿರ್ಣಯ ಕೊಡುವ ಸಾಮರ್ಥ್ಯ;

(೨) ಜನಪ್ರತಿನಿಧಿ ಸರಕಾರವು ಕೆಲಸ ಮಾಡಲಾರದೆ ಹೋಗಿ, ಹೊಸ ಚುನಾವಣೆಗಳಾಗುವದು. ಇಷ್ಟವಲ್ಲದ ಸಮಯಗಳಲ್ಲಿ ಕೇಂದ್ರದ ಅಥವಾ ಪ್ರಾಂತದ ಸರಕಾರವನ್ನು ನಡೆಸಿಕೊಂಡು ಹೋಗುವ ಯೋಗ್ಯತೆ; ಮತ್ತು

(೩) ರಾಜ್ಯದ ನ್ಯಾಯಶಾಲೆಯ ನಿರ್ವಹಣವನ್ನು ಮಂತ್ರಿಗಳ ಹಸ್ತಕ್ಷೇಪವಿಲ್ಲದೆ ಸಾಗಿಸುವ ಯೋಗ್ಯತೆ; (ಇದು ಆ ಸಭೆಯ ವಿಶೇಷ ಶಾಶ್ವತ ಕರ್ತವ್ಯವಾಗಿರಬೇಕು.)

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

CRESCENT

FOR PROTECTION AND SERVICE.

It is best to represent and insure with

The CRESCENT Insurance Co., Ltd,

H. O: BOMBAY.] [*Established 1919.*

For particulars write to:

Sri B. A. Poovaiah or **The Branch Manager,**

Organiser *22 B. Mahatma Gandhi Road,*

Pollibetta, Coorg. *Bangalore 1.*

ಸುರಕ್ಷಿತವಾದ ಜೀವವಿಮೆ ಪಡೆಯಲು

ಕ್ರೆಸೆಂಟ್

ಇನ್ಶ್ಯೂರೆನ್ಸ್ ಕಂಪೆನಿಗೆ ಬರೆಯಿರಿ.

Reg. No. M. 1080.
'KODAGU' MERCARA. (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೨೮ | ತಾರೀಕು ೧೧-೬-೧೯೪೯ನೇ ಶುಕ್ರವಾರ | ಸಂಚಿಕೆ ೨

ವಿಶೇಷ ಲೇಖನ.

ಭೂಮಿ ಹೇಗಾಯಿತು; ಮುಂದೇನಾಗಬಹುದು?

ಮೂಲಕ ಲೇಖಕ.
ಶ್ರೀ. ಪಿ. ಸಿ. ಟಾಂಡನ್.

ಅನುವಾದಕ
ಬಿ. ಡಿ. ಗಣಪತಿ

ನಾವು ಈ ಹಿಂದೆ ಆದ ಘಟನೆಗಳನ್ನು, ಜಗತ್ತಿನ ಜೀವನದ ವರ್ಷಗಳನ್ನು ಮಿಲಿಯನೂಂತರ ಪರಿಮಾಣದಿಂದ ಅಳೆಯುತ್ತಾ ಹೋದರೆ ಸುಮಾರು ೩,೦೦೦ ಮಿಲಿಯ ವರ್ಷಗಳಿಗೂ ಹಿಂದೆ ಆದ ಒಂದು ಘಟನೆಯು ಜ್ಞಾಪಕಕ್ಕೆ ಬರುವದು. ಆ ಅನಾದಿ ಭೂತಕಾಲದಲ್ಲಿ ಖಗೋಳ ಶಾಸ್ತ್ರಜ್ಞರನ್ನು ದಂಗುಬಡಿಸುವ ಒಂದು ಘಟನೆ ನಡೆಯಿತು. ಆ ಕಾಲದಲ್ಲಿ ಭೂಮಿಯಾಗಲೀ, ಸೂರ್ಯಮಂಡಲದ ಇತರ ಗ್ರಹಗಳಾಗಲೀ ಇರಲಿಲ್ಲ. ಸೂರ್ಯನು ಕೊಳ್ಳಿದವ ಕಡ ಯಿಯಂತೆ ಇರುತ್ತಿದ್ದನು. ಈ ಪರಿಸ್ಥಿತಿಯಲ್ಲಿದ್ದ ಈ ಘಟನೆಯನ್ನು ಮಾರ್ಮಿಕವಾಗಿ ಬರೆದರೆ ಖಗೋಳ ಶಾಸ್ತ್ರದ ಅತ್ಯಾಶ್ಚರ್ಯ ಘಟನೆಯಾಗವಲ್ಲದೆ ನಮ್ಮ ಇಂದಿನ ಸಮಾಜದ ಯಾವದೇ ಅತ್ಯುತ್ತಮ ಪ್ರೇಮಕಥಾ ದಂಬರಿಗಿಂತಲೂ ರುಚಿಕರವೆನಿಸುವದು.

ಈ ಜಗತ್ತು ಕಲ್ಪನೆಗೆ ಮೀರಿದ, ಅರಿವಿಕೆಗೆ ಸಿಲುಕದ, ಶೋಧನೆಗೆ ನಿಲುಕದಷ್ಟು ದೊಡ್ಡದಾಗಿರುವದೆಂದು ಖಗೋಳ ಶಾಸ್ತ್ರಜ್ಞರು ಹೇಳುತ್ತಾರೆ. ಅದರ ವಿಸ್ತಾರವನ್ನಾಗಲೀ, ಅದರ ಅಸ್ತಿತ್ವದ ಸಮಯವನ್ನಾಗಲೀ ಊಹಿಸುವದು ಮನುಷ್ಯ ಬುದ್ಧಿಗೆ ಮೀರಿದುದು. ಆಕಾಶದಲ್ಲಿ ಕಾಣುವ ಕೋಟ್ಯಾಂತರ ನಕ್ಷತ್ರಗಳಲ್ಲಿ ಒಂದೊಂದೂ ಕಲ್ಪನೆಗೆ ಮೀರಿದಷ್ಟು ಬೃಹದಾಕಾರದಲ್ಲಿದ್ದು ಒಂದರಿಂದ ಒಂದಕ್ಕೆ ಅಳೆಯಲಾರದಷ್ಟು ಅಂತರವಿದೆ. ಒಂದೇ ನಕ್ಷತ್ರದ ವಿಸ್ತೀರ್ಣ ಒಂದರಿಂದ ಮತ್ತೊಂದಕ್ಕಿರುವ ದೂರವನ್ನು ಅಳೆಯುವದೇ ಮನುಷ್ಯನಿಗೆ ಸಾಧ್ಯವಾಗದಿರುವಾಗ ಈ ಬ್ರಹ್ಮಾಂಡದ ಕಲ್ಪನೆಯನ್ನು ಆತನ ಈ ಚಿಕ್ಕ ತಲೆಯು ಹೇಗೆ ಮಾಡೀತು?

ಸುಮಾರು ೩,೦೦೦ ಮಿಲಿಯ ವರ್ಷಗಳ ಹಿಂದೆ ಘಟನಾವಶಾತ್ ಆಕಾಶದಲ್ಲಿ ಒಂದು ನಕ್ಷತ್ರ ವಿಜ್ಞಾನಭಾಷೆಯಲ್ಲಿ ಅಗ್ನಿಯ ಚೆಂಡು ತನ್ನ ಯಾವದೋ ಶಕ್ತಿ ತಬುದ್ಧಿಯಿಂದ ಸೂರ್ಯನ ಕಡೆ ಬರತೊಡಗಿತು. ಸೂರ್ಯನಲ್ಲಿ ಯಾವದೋ ಆಕರ್ಷಣೆ ಅದಕ್ಕೆ ತೋರಿರಬೇಕು. ಈ ಆಕರ್ಷಣೆಯ ಫಲವಾಗಿ ಅದು ಸೂರ್ಯನ ಕಡೆಗೆ ಧಾವಿಸುತ್ತಿತ್ತು.

ಆ ಕಾಲದಲ್ಲಿ ಸೂರ್ಯನ ಸ್ಥಿತಿ ಭಯಂಕರವಾಗಿತ್ತು. ಸರ್ ಜೇಮ್ಸ್ ಜೀನರೆಂಬ ಪ್ರಸಿದ್ಧ ಖಗೋಳಶಾಸ್ತ್ರಜ್ಞರ ಮಾತಿನಲ್ಲಿ ಹೇಳುವದಾದರೆ, 'ಸೂರ್ಯನ ಇಡೀ ಶರೀರವು ಕುದಿಯುತ್ತಿತ್ತು. ಅಲ್ಲಲ್ಲಿ ಕರಗಿ, ಒಡೆದು ಕಾಯಿದ ಜ್ವಾಲೆಯಲ್ಲಿ ಬೇಯುತಿತ್ತು. ಕೊಳ್ಳುದವಾಗ ನೀರು ಮೇಲೆ ಚಿಮ್ಮುವಂತೆ ಆಗಾಗ್ಗೆ ಸೂರ್ಯನ [illegible] ಕಿರಣಗಳು [illegible] ೫೦,೦೦೦ ಮೈಲು [illegible]! [illegible] ವಿವಿಧ ಬಣ್ಣಗಳ ಜ್ವಾಲೆಗಳು ಸೂರ್ಯನಿಂದ ಹೊರಚಾಚುತ್ತಿದ್ದವು. ಈ ಜ್ವಾಲೆಗಳ ಮಧ್ಯೆ ಸೂರ್ಯನ ಬೃಹದಾಕಾರದ ಶರೀರದಲ್ಲಿ ಕಪ್ಪುದ ತಗ್ಗು ಪ್ರದೇಶಗಳೂ ಕಾಣುತಿದ್ದವು.'

ಈ ರೀತಿ ಧಾವಿಸುತ್ತಿದ್ದ ಸೂರ್ಯನ ಹತ್ತಿರ ಬರುತ್ತಿದ್ದ ನಕ್ಷತ್ರದ ಅಳತೆಗೆ ಮೀರಿದ ಗಾತ್ರ, ಅದು ಹತ್ತಿರ ಬಂದಂತೆ ವಾತಾವರಣದಲ್ಲಾದ ಪರಿವರ್ತನೆ ಇವು ಈ ಕುದಿಯುತ್ತಿದ್ದ ಸೂರ್ಯನ ಮೇಲೆ ತನ್ನ ಪ್ರಭಾವವನ್ನು ಬೀರಿದವು. ಚಂದ್ರನ ಆಕರ್ಷಣ ಶಕ್ತಿಯಿಂದ ಸಮುದ್ರದಲ್ಲಿ ಉಬ್ಬರ ಇಳಿತ ಆಗುವಂತೆ ಸೂರ್ಯನಲ್ಲಿಯೂ ಪರಿವರ್ತನೆ ಆಯಿತು. ಸಮುದ್ರದ ತೆರೆಗಳಂತೆ ಏರಿಳಿತವಾಯಿತೆನ್ನುವಾಗ ಸೂರ್ಯನಲ್ಲಿ ನೀರಿತ್ತೇ ಎಂದು ಯಾರಾದರೂ ಭಾವಿಸಬಹುದು! ಸೂರ್ಯನಲ್ಲಿ ನೀರಿನ ಅಂಶ ಇರಲಿಲ್ಲ; ಇರಲು ಸಾಧ್ಯವಿರಲಿಲ್ಲ. ಸೂರ್ಯನ ಉಷ್ಣಮಾನವು ಎಷ್ಟು ವಿಪರೀತವಿತ್ತೆಂದರೆ ಸೂರ್ಯನಿಂದ ಸಹಸ್ರಾರು ಮೈಲುಗಳ ದೂರದಲ್ಲಿಯೂ ನೀರೂ ಕೂಡ ಕಾವಿನಿಂದ ಒಣಗಿ ಹೋಗುತ್ತಿತ್ತು. ಸೂರ್ಯನ ಉಷ್ಣ ಪರಿಮಾಣವು ಎಷ್ಟರ ಮಟ್ಟಿಗಿತ್ತೆಂಬುದಕ್ಕೆ ಒಂದು ಉದಾಹರಣೆ ಸಾಕು. ಮೂರು ಕಾಸಿನಂಥಾ ಒಂದು ತಾಮ್ರದ ತುಂಡನ್ನು ಬಿಸಿಮಾಡುತ್ತಾ ಅದರ ಬಿಸಿಯ ಜ್ವಾಲೆಯಿಂದ ಸಹಸ್ರಾರು ಮೈಲುಗಳ ದೂರದಲ್ಲಿರುವ ಪ್ರತಿಯೊಂದು ಜೀವಜಂತುಗಳು ಬೆಂದು ಬೂದಿಯಾಗವಷ್ಟರ ಕಾವು ಸೂರ್ಯನ ಕೇಂದ್ರಬಿಂದುವಿನಲ್ಲಿತ್ತು!

ನಕ್ಷತ್ರವು ಹತ್ತಿರ ಬಂದಂತೆ ಸೂರ್ಯನಲ್ಲಿ ಕರಗಿ ಕುದಿಯುತ್ತಿದ್ದ ದ್ರಾವಕರೂಪಿ ವಸ್ತುವು ಉಬ್ಬತೊಡಗಿ ಕ್ರಮಶಃ ಅದು ಮಹಾಪರ್ವತಗಳ ಆಕಾರವನ್ನು ತಾಳಿತು. ನಕ್ಷತ್ರವು ಹತ್ತಿರ ಬಂದಂತೆ ಇದು ಇನ್ನೂ ದೊಡ್ಡದಾಯಿತು. ಪ್ರೇಮಿಯು ಹತ್ತಿರ ಬಂದಂತೆ ಪ್ರಿಯೆಯು ಮುಖ, ಶರೀರಗಳಲ್ಲಾಗುವ ಪರಿವರ್ತನೆಯಂತೆ ಸೂರ್ಯನಲ್ಲೂ ಅಳತೆಗೆ ಮೀರಿದ ಆಕಾರದಲ್ಲಿ ಪರಿವರ್ತನೆಗಳಾಗತೊಡಗಿದವು. ಸಮುದ್ರದ ತೆರೆಗಳು ಮೇಲೇರಿದಾಗ ತೆರೆಗಳಿಂದ ನೀರಿನ ಬಿಂದುಗಳು ತೆರೆಯಿಂದ ಬೇರೆಯಾಗಿ ಹೊರಚಿಮ್ಮುವಂತೆ ಸೂರ್ಯನ ಈ ಮಹಾಉಬ್ಬುವಿಕೆಯಿಂದ ಮಿಲಿಯಾಂತರ ಟನ್ನುಗಳಷ್ಟು ಭಾರದ ತುಂಡೊಂದು ಬಿತ್ತು. ಇದರ ಆಕಾರವು ಉದ್ದವಾಗಿ ಒಂದು ಸಿಗಾರಿನ ಆಕಾರದಂತಿತ್ತು. ಸಮುದ್ರದ ತೆರೆಯ ಹನಿಯು ಪುನಹ ಸಮುದ್ರಕ್ಕೆ ಬೀಳುವಂತೆ ಈ ತುಂಡು ಪುನಹ ಸೂರ್ಯನಲ್ಲಿಗೇ ಬಿದ್ದಿದ್ದರೆ ಕಥೆಯೇ ಬದಲಾಗುತಿತ್ತು. ಈ ಜಗತ್ತಾಗಲೀ, ಚಂದ್ರನಾಗಲೀ, ಸೂರ್ಯಮಂಡಲದ ಇತರ ಗ್ರಹಗಳಾಗಲೀ ಇರುತ್ತಿರಲಿಲ್ಲ. ಆದರೆ ಹಾಗಾಗಲಿಲ್ಲ.

ಸಿಗಾರ್ ಆಕಾರದ ಈ ತುಂಡು ಸಮಯ ಕಳೆದಂತೆ ಒಡೆದು ಚೂರಾಯಿತು. ಈ ಚೂರುಗಳಲ್ಲ ಒಂದು ಈ ಭೂಮಿ. ಉಳಿದವೆಲ್ಲ ಸೂರ್ಯಮಂಡಲದ ಇತರ ಗ್ರಹಗಳಾದವು. ಈ ಗ್ರಹಗಳು ಸೂರ್ಯನ ಪ್ರಭಾವದೊಳಗಾದವು. ಇವುಗಳು ಸೂರ್ಯನ ಈ ಪ್ರಭಾವದೊಳಗೆ ಸುತ್ತ[illegible] ಗುರುತ್ವಾಕರ್ಷಣ ಶಕ್ತಿಯಿಂದ [illegible]. ಈ ಪ್ರಭಾವದಿಂದಲೇ ಇವು ಸೂರ್ಯನ ಸುತ್ತ ತಿರುಗುತ್ತಿವೆ. ಈ ಸುತ್ತುವಿಕೆಯು ಅನಂತ ಕಾಲದ ವರೆಗೆ ನಡೆಯಬಹುದು!

ವರ್ಷಗಳು ಮಿಲಿಯಾಂತರ ಸಂಖ್ಯೆಯಲ್ಲಿ ಕಳೆದಂತೆ ಭೂಗ್ರಹವು ತನ್ನ ಹಿಂದಿನ ಕಾವನ್ನು ಕಳೆದುಕೊಳ್ಳುತ್ತಾ ತಂಪಾಗತೊಡಗಿತು. ಪರಿಸ್ಥಿತಿ, ಶಾಖ ಮೊದಲಾದವು ಜೀವಾಧಾರಣೆಗೆ ಯೋಗ್ಯವಾದಾಗ ಭೂಮಿಯಲ್ಲಿ ಜೀವಜಂತುಗಳು ತೋರಿ ಬಂದವು. ಆದರೆ ಭೂಮಿಯಲ್ಲಿ ಜೀವ ಉತ್ಪನ್ನವಾಗುವ ಮೊದಲೇ ಇಲ್ಲವೇ ಅದೇ ಸಮಯದಲ್ಲಿ ಭೂಮಿಯಲ್ಲಿ [illegible]ವಾದ ಬದಲಾವಣೆಯಾಗಿ ಚಂದ್ರನ ಹುಟ್ಟುವಂತಾಯಿತು. ಚಂದ್ರನು ಈ ಭೂಮಿಯ ಮಗುವಿನಂತೆ! ಭೂಮಿಯಲ್ಲಿ ಇಂದು ತೋರಿಬರುತ್ತಿರುವ ಶಾಂತಸಾಗರವೆಂಬ ಕಡಲಿರುತ್ತಿರುವ ತಗ್ಗು ಪ್ರದೇಶವು ಚಂದ್ರನು ಭೂಮಿಯಿಂದ ಸಿಡಿದು ಹೋದ ಭಾಗವೆಂದೂ ಇತ್ತಲಾಗಿ ಅಲ್ಲಿ ನೀರು ತುಂಬಿಕೊಂಡಿತೆಂದೂ ಹೇಳಲಾಗುತ್ತಿದೆ.

ಸೂರ್ಯನ ಹತ್ತಿರ ಪ್ರೇಮದಿಂದ ಲೋ[illegible] ಬಂದ ನಕ್ಷತ್ರವೇನಾಯಿತೆಂದು ಹೇಳಲಿಲ್ಲವಲ್ಲ! ಇಲ್ಲಿ ಈ ಅನಿರೀಕ್ಷಿತ ಪರ್ಯಟನದ ನಂತರ ಅದು ಸೂರ್ಯನಿಂದ ದೂರ ಸರಿದು ಎಲ್ಲೋ ಹೋಗಿರಬೇಕು. ಆಕಾಶದಲ್ಲಿ ಇಂದು ಮಿನುಗುತ್ತಿರುವ ಲಕ್ಷಾಂತರ ನಕ್ಷತ್ರಗಳಲ್ಲಿ ಅದೊಂದಾಗಿರಬಹುದು. ಆದರೆ ಅದನ್ನು ಗುರುತಿಸಲು ಮನುಷ್ಯನಿಗೆ ಯಾವ ಆಧಾರಗಳಿವೆ?

ಭೂಮಿಯ ರಚನೆ ಮತ್ತು ಅಸ್ತಿತ್ವದ ವಿಚಾರ ಹಿಂದೆ ಆದುದನ್ನು ತಿಳಿಯುವದು ಮನೋರಂಜಕವಾಗಿದೆ. ಆದರೆ ಮುಂದೆ ಏನಾಗಬಹುದೆಂಬುದು ಊಹನೆಯ ಮೇಲೆಯೇ ನಿಲ್ಲಬೇಕು. ಭೂಮಿಯ ಭವಿಷ್ಯದಲ್ಲಿ ಏನಿದೆಯೋ ಬಲ್ಲವರಾರ? ಭೂಮಿಯ ಅಂತ್ಯವು ನಾಳೆಯೂ ಆಗಬಹುದು; ಇಲ್ಲವೇ ಬಿಲ್ಲಿಯ ವರ್ಷಗಳ ನಂತರವಾದರೂ ಆಗಬಹುದು. ಯಾಕೆಂದರೆ ಆಕಾಶದಲ್ಲಿರುವ ಯಾವದೇ ಒಂದೇ ನಕ್ಷತ್ರವು ಅಸಾಧ್ಯ ಅನಾಹುತವನ್ನು ಮಾಡಬಹುದು. ನಾವು ಪ್ರತಿದಿನ ದೇವರನ್ನು ಪ್ರಾರ್ಥಿಸಬೇಕು. ನಾವು ಬದುಕಿರುವದಕ್ಕೆ ಅಲ್ಲ; ಬದಲು ಸೂರ್ಯನು ಅಲುಗಾಡದೆ ಅಂದಿನಂತೆ ಇಂದೂ ಇರುವದಕ್ಕೆ!

ಈ ಭೂಮಿಯಲ್ಲಿ ಜೀವಕಳೆ ಇರುವದು ಒಂದು ಅನಿರೀಕ್ಷಿತ ಘಟನೆ. ನಾವು ಬದುಕುತ್ತಿರುವ ಜಗತ್ತಿನ ಸೃಷ್ಟಿಯಿಂದ ಹಿಡಿದಲ್ಲ ಪ್ರತಿಕ್ಷಣಕ್ಕೂ ನಾಶಕಾರ್ಯ ನಡೆಯುತ್ತಿದೆ. ಭೂಮಿಯಲ್ಲಿ, ಸುತ್ತುಮುತ್ತಲಿನ ಗಾಳಿಯಲ್ಲಿ ಸರ್ವದಲ್ಲೂ ಇದು ಅವ್ಯಾಹತವಾಗಿ ನಡೆದಿದೆ. ಈ ವಿಶಾಲ ಜಗತ್ತಿನಲ್ಲಿ ನಮ್ಮ ಈ ಭೂಮಿಯು ಧೂಳಿನ ಕಣದಷ್ಟು! ಆ ಭೂಮಿಯಲ್ಲಿರುವ ಜೀವರಾಶಿಗಳ ಜೀವನ ವಿಶಾಲ ಜಗತ್ತಿನ ದೃಷ್ಟಿಯಿಂದ ಕ್ಷುಲ್ಲಕ. ಹೇಗೆ ಭೂಮಿಯಲ್ಲಿ ತನ್ನಿಂದ ತಾನೇ ಅನಿರೀಕ್ಷಿತವಾಗಿ ಜೀವ ಉತ್ಪನ್ನವಾಯಿತೋ ಹಾಗೆಯೇ ತನ್ನಿಂದ ತಾನೇ ಮಾಯವಾಗಬಹುದು.

ಸ್ಥೂಲವಾಗಿ ಹೇಳುವದಾದರೆ ಈ ಭೂಮಿಯಲ್ಲಿ ಇಂದಿರುವ ಜೀವರಾಶಿಗಳು ಭೂಮಿಯ ಕಾವು ಹೆಚ್ಚಿ ಇಲ್ಲವೇ ಶೀತ ಹೆಚ್ಚಿ ನಾಶವಾಗಬಹುದು. ಇದೇ ಅಲ್ಲ; ನಮ್ಮ ಈ ಭೂಮಿಯೇ, ಇಲ್ಲವೇ ಈ ಸೂರ್ಯಮಂಡಲವೇ ನಾಶವಾಗಬಹುದು. ಕೆಲವು ಶಾಸ್ತ್ರಜ್ಞರು ನಾವೆಲ್ಲರೂ ಮಂಜಿನ ಸಮಾಧಿ ಹೊಂದುವೆವೆಂದು ಹೇಳುತ್ತಾರೆ. ಭೂಮಿಯ ಶಾಖವು ಕ್ರಮಶಃ ಕಡಿಮೆಯಾಗುತ್ತಿದೆ. ಇಲ್ಲಿ ಶೀತವು ಹೆಚ್ಚಿ ಯಾವ ಪ್ರಾಣಿಗಳೂ, ಮರಗಿಡಗಳೂ ಜೀವಿಸದಂಥಾ ಪರಿಸ್ಥಿತಿಯಾಗಬಹುದೆಂದು ಅವರ ಊಹನೆ. ಖಗೋಳ ಶಾಸ್ತ್ರಜ್ಞರ ಆಧುನಿಕ ಶೋಧನೆಯೂ ಇದಕ್ಕೆ ಬಲ ಕೊಡುತ್ತದೆ. ನಮಗೆ ಅಂದರೆ ಭೂಮಿಗೆ ದೊರೆಯುತ್ತಿರುವ ಚೇತನವು (ಬೆಳಕ) ಸೂರ್ಯನಿಂದಾಗಿದ. ಸೂರ್ಯನು ಆ ಚೇತನವನ್ನು ನಮಗೆ ಒದಗಿಸುವ ಕಾರಣ ಪ್ರತಿ ನಿಮಿಷಕ್ಕೆ ೨೫೦,೮೦,೦೦೦೦ ಟನ್ನುಗಳಷ್ಟು ತನ್ನ ಭಾರವನ್ನು ಕಳೆದುಕೊಳ್ಳುತ್ತಿದ್ದಾನೆ. ಈ ರೀತಿಯಿಂದ ಸೂರ್ಯನ ಚೇತನವು ಕಡಿಮೆಯಾಗಿ ಎಂದಾದರೊಮ್ಮೆ ಭೂಮಿಗೆ ಆತನ ಬೆಳಕು ಮತ್ತು ಕಾವು ನಿಂತರೆ ನಮಗೆ ಮಂಜಿನ ಸಮಾಧಿ ಕಟ್ಟಿಟ್ಟದ್ದೆ! ಆದರೆ ದಿವ್ಯಸ್ಥವಶಾತ್ ಸೂರ್ಯನು ಚಿಕ್ಕ ಗ್ರಹವೇನಲ್ಲ. ಮಿಲಿಯಗಟ್ಟಲೆ ಮಿಲಿಯ ಟನ್ ಭಾರಕಳೆದರೂ ಸೂರ್ಯನ ಚೇತನ ಕಡಿಮೆಯಾಗಲು ಎಷ್ಟೋ ಬಿಲಿಯ ವರ್ಷಗಳು ಹಿಡಿಯಬಹುದು. ಆದ್ದರಿಂದ ಭೂಮಿಯಲ್ಲಿ ಜೀವನದ ಸಂಜೆ ಸನ್ನಿಹಿತವಾಗಿದೆಯೆಂದೂ ಯಾರೂ ಹೆದರುವ ಅಗತ್ಯವಿಲ್ಲ.

(೧೦ನೇ ಪುಟಕ್ಕೆ ಸಾಗಿದೆ.)

ಚೈನಾ-ಭಾರತಕ್ಕೊಂದು ಪಾಠ

[ಗಾಂಧೀ ಶಿಷ್ಯ ಶ್ರೀ. ಎಸ್. ಎನ್. ಅಗರ್‌ವಾಲಾ, ಇವರಿಂದ]

ಗಾಂಧಿ ತತ್ವ ಪ್ರಚಾರಾರ್ಥವಾಗಿ, ನಾನು ಕೈಕೊಂಡ ಶೈಕ್ಷಣಿಕ ಲೋಕ ಸಂಚಾರದಲ್ಲಿ, ಉದ್ದೇಶ ಪೂರ್ವಕವಾಗಿಯೇ ಚೈನವನ್ನೂ ಸೇರಿಸಿಕೊಂಡಿದ್ದೆ. ಆದರೂ ಚೈನದ ರಾಜಕೀಯ ಸ್ಥಿತಿಗತಿಗಳಿಂದಾಗಿ, ಪ್ರಯಾಣ ಮಧ್ಯದಲ್ಲಿ ಶಾಂಘಾಯಿಯಲ್ಲಿ ಇಳಿಯಲು ನನಗೆ ಸಾಧ್ಯವಾದೀತೇ ಎಂಬುದು ತೀರಾ ಅನುಮಾನಕರವಾಗಿತ್ತು. ಚೈನಾದಲ್ಲಿ ಭಾರತದ ರಾಯಭಾರಿಯಾಗಿರುವ ಸರ್ದಾರ್ ಕೆ. ಎಂ. ಪಣಿಕರರು ಕೂಡಾ ಕಲ್ಕತ್ತದಲ್ಲಿ ನಮ್ಮ ವಿಮಾನವನ್ನೇರಿ ಹತ್ತಿ ನಮ್ಮೊಂದಿಗಿದ್ದರು. ಸದ್ಯ ಸ್ಥಿತಿಯಲ್ಲಿ ಚೈನಾದಲ್ಲಿ ನಿಲ್ಲಬಹುದೆಂಬ ಸ್ಪಷ್ಟ ಸಲಹೆ ಕೊಡಲು ಅವರೂ ಹಿಂಜರಿದಿದ್ದರು. ಆದರೂ ಅಲ್ಲಿಯ ವಿಮಾನ ನಿಲ್ದಾಣದಲ್ಲಿ ಚೈನದ ಭಾರತ ರಾಯಭಾರಿ ಕಚೇರಿ ಮತ್ತು ಕಾನ್ಸಲೇಟ್ ಜನರಲರ ಕಚೇರಿಯ ಹಲವು ಮಿತ್ರರು ನನಗೆ ಭೇಟಿಯಾದರು. ನಾನು ಕೆಲವು ದಿನಗಳ ಮಟ್ಟಿಗಾದರೂ ಚೈನಾದಲ್ಲಿ ಸಂಚರಿಸಲೇಬೇಕೆಂದರು ಅಲ್ಲಿ ಆಕಾಶ ಪ್ರಯಾಣ ನಿಲ್ಲಿಸಲು ನಿರ್ಧರಿಸಿದೆ. ಇದು ಏಪ್ರಿಲ್ 18ರಲ್ಲಿ.

ಶಾಂಘಾಯಿಯ ಮಜಲ್

ಸುಮಾರು 8 ಮಿಲಿಯ ಜನಸಂಖ್ಯೆಯುಳ್ಳ ದೊಡ್ಡ ನಗರ ಶಾಂಘಾಯಿ. ಚೈನೀಯರು, ಅಮೇರಿಕನರು, ಬ್ರಿಟಿಷರು, ಜಪಾನರು ಮತ್ತು ಸುಮಾರು 600 ಭಾರತೀಯರ ಸಮೇತ ವಿಶ್ವ ಹಲವು ರಾಷ್ಟ್ರೀಯರ ಬೀಡಾಗಿರುವ ಸಮ್ಮಿಶ್ರ ಜನಾಂಗವಿರುವ ನಗರವದು. ಭಾರತದ ಕಾನ್ಸಲೇಟ್ ಜನರಲರು ಶಾಂಘಾಯಿಯಲ್ಲೇ ನೆಲೆನಿಂತಿದ್ದು, ಅಲ್ಲಿರುವ ಭಾರತೀಯರಿಗೆ ಬೇಕಾಗುವ ಕಾರ್ಯಗಳಲ್ಲಿ ಪ್ರವೃತ್ತರಾಗಿದ್ದಾರೆ. ಶಾಂಘಾಯಿಯು ಚೈನದ ದೊಡ್ಡ ನಗರವಾದರೂ ಅದು ಚೈನೀ ಜನತೆಯ ಪುರಾತನ ಸನಾತನ ಸಂಸ್ಕೃತಿಯನ್ನೇನೂ ಪ್ರತಿನಿಧೀಕರಿಸುವದಿಲ್ಲ. ಚೈನದ ಯಥಾರ್ಥ ತಿಳುವಳಿಕೆಯನ್ನು ತೋರಿಸುತ್ತಿರುವ ಯಾವುದೊಂದು ಸಂಸ್ಥೆಯೂ ಅಲ್ಲಿದ್ದಂತೆ ಕಾಣುವದಿಲ್ಲ. ಶಾಂಘಾಯಿ ವಿಶ್ವವಿದ್ಯಾಲಯವನ್ನು ಕಾಣುವ ಸುಯೋಗವು ನನಗೊದಗಿದ್ದಿತು. ಆದರೆ ಆ ವಿಶ್ವವಿದ್ಯಾಲಯವನ್ನು ನಡೆಸುವವರು ಅಮೇರಿಕದ ಮಿಶನರಿಗಳಿದ್ದು ಚೈನೀ ಸಂಸ್ಕೃತಿ ಅಥವಾ ಭಾಷಾ ಪಠಣಗಳಿಗೆ ಅಲ್ಲಿ ಯಾವ ಲಕ್ಷ್ಯವೂ ಕೊಡಲ್ಪಟ್ಟಿಲ್ಲವೆನ್ನಬೇಕು. ನಾನು ಕೊನೆಗೆ ಸಂದರ್ಶಿಸಿದ ಫ್ಯುಟಾನ್ ವಿಶ್ವವಿದ್ಯಾಲಯವೇ ಈ ಪಟ್ಟಿಗೆ ವಿಶೇಷ 'ಚೈನೀಯ'ವಾಗಿತ್ತು. ಈ ಯೂನಿವರ್ಸಿಟಿಗಳ ಹೆಚ್ಚಿನ ಪ್ರೊಫೆಸರರು ಅಮೇರಿಕನರು ಅಥವಾ ಬ್ರಿಟಿಶರು; ಹಾಗಿದ್ದರೂ ಚೈನೀ ವಿದ್ಯಾರ್ಥಿಗಳಿಗೆ ಈಗ ಕೂಡ ಅತ್ಯುಚ್ಚ ಶಿಕ್ಷಣಕ್ಕಾಗಿ ಇಂಗ್ಲೆಂಡು ಅಥವಾ ಅಮೇರಿಕಕ್ಕೇನೇ ಹೋಗುವ ಚಟವಿರುವದು ತೀರಾ ವಿಲಕ್ಷಣವೇ ಸರಿ. ಇಲ್ಲಿ ತರಗತಿಯಾಗಿ ಚೈನೀ ಭಾಷೆಯಲ್ಲಿ ವಿಶಿಷ್ಟ ಕಲಾಭ್ಯಾಸವಾವುದೂ ನಡೆಯದೆ, ಲ್ಯಾಟಿನ್ ಅಥವಾ ಅಂತರಾಷ್ಟ್ರೀಯ ಪರಿಭಾಷೆಗಳೇ ಯುನಿವರ್ಸಿಟಿ ಲೆಕ್ಚರುಗಳಲ್ಲಿ ಸರ್ವತ್ರ ಉಪಯೋಗಿಸಲ್ಪಡುತ್ತಿವೆ. ಚೈನೀ ಭಾಷೆಯ ಪಠ್ಯ ಪುಸ್ತಕಗಳ ಜತೆಯಲ್ಲಿ ಇಂಗ್ಲಿಷ್ ಪುಸ್ತಕಗಳನ್ನು ಚೈನೀ ಪ್ರೊಫೆಸರರೂ ವಿದ್ಯಾರ್ಥಿಗಳೂ ಬಹಳ ಮೆಚ್ಚುತ್ತಾರೆ. ಹೈಸ್ಕೂಲ್ ಕ್ಲಾಸುಗಳ ತನಕ ಇಂಗ್ಲಿಷ್ ಭಾಷಾ ಶಿಕ್ಷಣವು ಕಡ್ಡಾಯವಾಗಿದ್ದು ಯುನಿವರ್ಸಿಟಿ ತರಗತಿಗಳಲ್ಲಿ ಅದು ಐಚ್ಛಿಕವಾಗಿದೆ.

ಭಾರತ-ಚೈನಾ ಸಮಾನ ಸಂಸ್ಕೃತಿ

ಶಾಂಘಾಯಿಯಲ್ಲಿ ನಾನಿದ್ದ ಅಲ್ಪಾವಧಿಯಲ್ಲಿ ಕೆಲವು ಚೈನೀ ಮೇಧಾವಿಗಳನ್ನು ಭೇಟಿಯಾಗುವ ಸುಯೋಗ ಸಂಪಾದಿಸಿದೆ. ಡಾ. ಲಿನ್‌ಟೊಂಗ್ ಚಿ ಇವರು ಫ್ಯುಟಾನ್ ಯುನಿವರ್ಸಿಟಿಯ ರಾಜಕೀಯ ವಿಜ್ಞಾನದ ಪ್ರೊಫೆಸರರಿದ್ದಾರೆ. ಅಂತೆಯೇ ಶಾಂಘಾಯಿಯ ಪಾಶ್ಚಾತ್ಯ ಮಿಂಗ್ ಹಾಯಿ ಕ್ವಾಂಗ್ ಲೈಬ್ರರಿಯ ಡೈರೆಕ್ಟರರು ಇವರೇ. ಅವರು, ಭಾರತ ಮತ್ತು ಮಹಾತ್ಮಾ ಗಾಂಧಿಯವರ ಕುರಿತು ಆಸಕ್ತಿ. ಅಭಿರುಚಿಯುಳ್ಳ ಕೆಲವೇ ಮಂದಿಯ ಚುನಾಯಿತ ಸಭೆಯೊಂದರಲ್ಲಿ ಭಾಷಣ ಮಾಡುವಂತೆ ನನ್ನನ್ನು ಆಮಂತ್ರಿಸಿದ್ದರು. ಭಾರತ ಮತ್ತು ಚೈನಗಳೊಳಗೆ ನಿಕಟ ಸಾಂಸ್ಕೃತಿಕ ಸಂಬಂಧ ನಿರ್ಮಿಸಬೇಕೆಂದು ನಾನಲ್ಲಿ ವಾದಿಸಿದೆ. ಈ ಅಭಿಪ್ರಾಯವನ್ನೇ ಹಲವು ಚೈನೀ ಮಿತ್ರರೂ ಹೊರಗೆಡಹಿದರು. ಚೀನದ ಒಬ್ಬ ಸಿಂ ಪ್ಯಾರಿಂ ಬೌದ್ಧ ಮತೀಯರಿದ್ದು, ಭಾರತ ಮತ್ತು ಚೈನಗಳ ಪುರಾತನ ಸಂಸ್ಕೃತಿಗಳೊಳಗೆ ಸಮಾನ ಸಂಗತಿಗಳೆಷ್ಟೋ ಹಾಗಿವೆ. ಆದರೂ ಚೈನೀ ಬುದ್ಧಿಯು ಬಹು ಅಲ್ಲಿಯ ಕೊನ್‌ಫ್ಯುಸಿಯಸ್ ಮತ್ತು ಟಾವೋಯಿಸಮ್ ಮತಗಳ ನಡುವೆ ಸಿಕ್ಕಿ ಹುದುಗಿಹೋಗಿದೆ. ಕೊನ್‌ಫ್ಯುಸಿಯಸ್ ಕರ್ತವ್ಯ ಧರ್ಮವನ್ನು ಬೋಧಿಸಿದರೆ ಟಾವೋಯಿಸಮ್ ವ್ಯಕ್ತಿಸ್ವಾತಂತ್ರ್ಯವನ್ನೇ ಒತ್ತಿ ಹೇಳಿತು. ಪ್ರಾಯಶಃ ಚೈನದ ದೊಡ್ಡ ದುರಂತವೆಂದರೆ ರಾಜಕೀಯ ಘರ್ಷಣೆ ಅಥವಾ ಅಂತರ್ಯುದ್ಧವಾವುದೂ ಅಲ್ಲ—ಚೈನೀ ಜನತೆಯ ಮಿತಿಮೀರಿದ ಸ್ವಾತಂತ್ರ್ಯವುಳ್ಳ ವ್ಯಕ್ತಿತ್ವವೇ ಎನ್ನಬೇಕು. ಜನ್ಮತಃ ಅವರ ಲಕ್ಷ್ಯವಿರುವದು. ಪ್ರಧಾನವಾಗಿ ವ್ಯಕ್ತಿ: ತನ್ನ ಮನೆ; ಆ ಮೇಲೆಯೇ ಕುಲಗೋತ್ರ ಮಾತು ರಾಷ್ಟ್ರದ ಮಾತು. ಚೈನದಲ್ಲಿಂದು ಪಸರಿಸಿದ ಬಹು ಸಂಘಟನೆಗಳಿಗೆ ಮೂಲ ಕಾರಣವಾಗಿರುವ ಈ ಚೈನೀ ಸ್ವಭಾವವೇ ಅವರಲ್ಲಿ ಆಳಕ್ಕೆ ಬೇರು ಬಿಟ್ಟಿರುವ ಹತ್ತಾರು ದೋಷ. ಮಹಾತ್ಮಾ ಗಾಂಧಿಯವರ ತತ್ವಗಳ ಕುರಿತು ಭಾಷಣ ಮಾಡುವಂತೆ, ಅಲ್ಲಿಯ ಜಗತ್ತಿನ ಬೌದ್ಧ ಮಿಶನಿನವರೂ ನನ್ನನ್ನು ಆಮಂತ್ರಿಸಿದ್ದರು. ಬುದ್ಧನ ತತ್ವಗಳನ್ನೇ ಹೋಲುವ ಗಾಂಧೀಜೀ ಬೋಧನೆಗಳನ್ನು ಕೇಳಿ ಆ ಮಿಶನಿನ ಅಧ್ಯಕ್ಷ ಡಾ|| ಲ್ಹೀ ಅವರು ಅವುಗಳ ಕುರಿತು ತನ್ನ ಗಾಢ ಗೌರವವನ್ನು ವ್ಯಕ್ತಪಡಿಸಿದರು. ಚೈನೀಯ ಸಾಂಸ್ಕೃತಿಕ ಸಮಿತಿಯೊಂದನ್ನು ಭಾರತಕ್ಕೆ ಕಳುಹಿಸಿಕೊಡುವ ಆಲೋಚನೆಯು ಆ ಸಭೆಯಲ್ಲಿ ರೂಪುಗೊಂಡಿತು. ಭಾರತದಲ್ಲಿ ಹೊಸತಾಗಿ ಸ್ಥಾಪನೆಗೊಂಡ ಸರ್ವೋದಯ ಸಮಾಜದ ಪರಿಚಯವನ್ನು ನಾನಾ ಕಮಿಶ್ಯನಿನ ಸದಸ್ಯರಿಗೆ ಮಾಡಿಕೊಟ್ಟೆ. ಕೂಡಲೇ ಡಾ|| ಲ್ಹೀ ಅವರ ಸಮೇತ ಹಲವು ಸದಸ್ಯರು ಸರ್ವೋದಯ ಸಮಾಜದ ಸೇವಕರಾಗಿ ತಮ್ಮ ಹೆಸರುಗಳನ್ನು ದಾಖಲ್ಮಾಡಿಸಿ ಕೊಂಡರು.

ಕಮ್ಯೂನಿಸಮ್ಮಿನ ಭವಿಷ್ಯ ಹೇಗೆ?

ಚೈನವು, ಸಮೃದ್ಧ ಸಾಂಸ್ಕೃತಿಕ ವಿಧಾನಗಳುಳ್ಳ ಅತಿ ಪುರಾತನ ರಾಷ್ಟ್ರವಾದರೂ, ಸರ್ವಸಾಮಾನ್ಯ ಚೈನೀಯನು ತನ್ನ ವ್ಯಕ್ತಿಗತ ಜೀವನವೊಂದರ ಹೊರತು ಬೇರಾವುದರ ಕಡೆಗೂ ಸಹ ಲಕ್ಷ್ಯ ಗಮನ ಕೊಡುವವನಲ್ಲವೆಂಬುದು ನನ್ನ ಮನಸ್ಸಿಗೆ ನಾಟಿದೆ. ಪ್ರಚಲಿತ ರಾಜಕೀಯ ಮತ್ತು ಆರ್ಥಿಕ ಅನಾಹುತಗಳಿಗೆ ಇದೂ ಒಂದಂಶ ಹೇತುವಾಗಿದೆ. ಇನ್ನಾದರೂ ಸರಿಯೇ ವ್ಯಕ್ತಿಗತ ಲಾಭಗಳನ್ನು ಮರೆತು ಸಾರ್ವರಾಷ್ಟ್ರೀಯ ಹಿತ ಸಾಧನೆಯನ್ನು ಗಣಿಸದಲ್ಲಿ, ಕ್ಷಿಪ್ರ ಭವಿಷ್ಯದಲ್ಲೇ ಅಧೋಗತಿಯಿಂದ ತಪ್ಪಿ ಮೇಲಕ್ಕೇರುವುದು ಚೈನದ ಪಾಲಿಗೆ ಅಸಾಧ್ಯವೇ ಸರಿ. ಚೈನದಲ್ಲಿ ಕಮ್ಯೂನಿಸಮಿಗೆ ತೀರಾ ಸಂದೇಹಕರ ಭವಿಷ್ಯ ಕಾದಿರುವಂತೆ ತೋರುತ್ತಿರುವುದೇಕೆಂದರೆ ಚೈನೀ ಜನತೆಯ ಅತಿ ಸಂಕುಚಿತ ವ್ಯಕ್ತಿತ್ವವೇ. ಕಮ್ಯೂನಿಸ್ಟರೇ ನಂಬಲರ್ಹ ಮೇಲೆ ವಿಜಯಗಳಿಸಿ ಸಾಧಿಸುತ್ತಿದ್ದರೂ ಚೈನವು ಸಂಪೂರ್ಣವಾಗಿ ಕಮ್ಯೂನಿಸ್ಟರ ಹಸ್ತಗತವಾಗಲು ಇನ್ನೂ ಹಲವು ವರುಷಗಳು ಅಥವಾ ತಿಂಗಳುಗಳೇನೂ ಬೇಕಾಗದೆ ಇರದು. ಕೇವಲ ಮಾಂಗಳ ಪ್ರಶ್ನೆಯೆಂದು ತೋರುವ ಪ್ರಕಾರ— ಚೀನಾ ದೇಶದಲ್ಲಿ ಕಮ್ಯೂನಿಸಮ್ ಆಳಕ್ಕೆ ಬೇರೂರುವುದು ಅಸಂಭವವೆಂದೇ ಚೈನದ ಹಲವು ಜನರ ನಂಬಿಕೆ. ಈ ದಿನ ಚೈನದಲ್ಲಿ ಎದ್ದು ನಿಂತಿರುವ ಕ್ರಾಂತಿ ಮತ್ತು ಕಮ್ಯೂನಿಸ್ಟರುಗಳು ತತ್ವಶಃ ಒಪ್ಪಿ ನಿಂತಿರುವರು ಚೀನೀ ಕಮ್ಯೂನಿಸ್ಟರು ಸೋವಿಯೆಟ್ ರಶಿಯದ ಬಾಲಕರಾಗಿ ಬಾಳುವವರಲ್ಲವೆಂಬ ನಿಶ್ಚಯವು ಇದೆ. ಇಂಗ್ಲಿಷ್, ಅಮೇರಿಕನರು ಚೈನದ ರಾಷ್ಟ್ರೀಯ ಸರಕಾರಕ್ಕೆ ಸಹಾಯ ಕೊಡದಿರಲು ಒಂದು ಕಾರಣವೆಂದು ಬೇರೇ ಹೇಳುವುದಿದ್ದರೆ ಚೈನೀ ಕಮ್ಯೂನಿಸ್ಟರು ಸಮ ನೈಜ 'ಕಮ್ಯೂನಿಸ್ಟ'ರೆಂದೂ ಚೈನದಲ್ಲಿಲ್ಲ. ತಮ್ಮ ರಾಜಕೀಯಾಧಿಕಾರವನ್ನೊಮ್ಮೆ ಸುದೃಢವಾಗಿ ಸ್ಥಾಪಿಸಿಕೊಂಡ ಮೇಲೆ ಅವರು ಆಂಗ್ಲೋ ಅಮೇರಿಕನ್ ಸಂಗಡದೊಳಗೆ ಸೇರಿಕೊಳ್ಳಬಹುದೆಂದೂ ನಿರೀಕ್ಷಿಸಿಯದೆಯಂತೆ. ಈ ವಾದವು ಸತ್ಯವಾದೀತೆಂಬ ಕುರಿತು ನನಗನುಮಾನವಿದೆಯಾದರೂ, ಚೈನೀ ಕಮ್ಯೂನಿಸ್ಟರು ತಮ್ಮ ಕಮ್ಯೂನಿಸ್ಟ್ ಮುಖವಾಡವನ್ನು ಕಿತ್ತೆಸೆದು, ಗತ ಕಾಲದಲ್ಲಿ ಮಾಡಿದ್ದಂತೆಯೇ ಸ್ವಂತ ವ್ಯಕ್ತಿ ವೈಶಿಷ್ಟ್ಯವನ್ನು ಧರಿಸಿ ಪ್ರತ್ಯೇಕ ಮಜಲ್‌ಗಳನ್ನು ಹತ್ತಿದರೆ, ಅದರಲ್ಲೇನೂ ಆಶ್ಚರ್ಯವಿಲ್ಲ.

ಭಾರತಕ್ಕೊಂದು ಪಾಠ

ಚೈನದ ರಾಷ್ಟ್ರೀಯ ಸರಕಾರವು ಪೂರ್ಣ ಪತನಗೊಂಡಿದೆ. ಸದ್ಯದ ಚೈನೀ ಸರಕಾರವು ಅಮೂಲಾಗ್ರ ದಿವಾಳಿ ಹೋರಜನನ್ನೂ, ನಿರುದ್ಯೋಗಿಯೂ ಇದ್ದು ಬಹಳ ದಿನ ಬಾಳುವಂತಹದಲ್ಲ. ಶಾಂಘಾಯಿ ಬಿಟ್ಟು ಟೋಕಿಯೋವಿಗೆ ಹೊರಡುವಾಗ ಚೈನೀ ಜನತೆಯನ್ನು ನೋಡಿ ನಾನು ಬಹಳ ದುಃಖಗೊಂಡೆ. ಅವರು ಬುದ್ಧಿವಂತರು ಅತ್ಯಂತ ಶ್ರಮ ಜೀವಿಗಳು; ಮೇಲಾಗಿ ಪುರಾತನ ಸಾಂಸ್ಕೃತಿಕ ಹಿನ್ನೆಲೆಯುಳ್ಳವರು. ಆದರೆ ಅವರು ಗಂಭೀರ ಮತ್ತು ಗಾಢ ಪರಿಣಾಮಕಾರಿ ಕಾರ್ಯೋತ್ಸಾಹಿಗಳಲ್ಲ; ಸಾರ್ವತ್ರಿಕ ನಾಗರಿಕ ಕರ್ತವ್ಯ ಮತ್ತು ರಾಷ್ಟ್ರೀಯ ಧ್ರುವೀಕರಣ ಬುದ್ಧಿಯ ಅಭಾವವುಳ್ಳವರು. ಭಾರತದಲ್ಲಿ ಕೂಡ ಸಾರ್ವತ್ರಿಕ ಭಾವನೆಯು ವಿಶೇಷ ಪ್ರಕಾಶಗೊಂಡಿಲ್ಲ. ಆದ್ದರಿಂದ ನಾವು ಕಾಲವಲ್ಲೇ ಚೈನದಿಂದ ಒಂದು ಪಾಠ ಕಲಿತುಕೊಳ್ಳಬೇಕು. ಪಂಡಿತ ನೆಹರು ಮತ್ತು ಸರ್ದಾರ್ ಪಟೇಲರ ಅಮೋಘ ನಾಯಕತ್ವವು ದೊರೆತಿರುವ ನಾವು ಭಾರತೀಯರು, ನಿಜಕ್ಕೂ ಸುದೈವಿಗಳು. ಆದರೂ ನಾವು ರಾಷ್ಟ್ರದ ಹಿತಕ್ಕಾಗಿ ಯಥಾರ್ಥತೆಯಿಂದ ಮತ್ತು ಶ್ರಮಪಟ್ಟು ದುಡಿಯದಿದ್ದಲ್ಲಿ ನಾವು ನಮ್ಮ ಭವಿಷ್ಯದ ಕುರಿತು ವಿಶೇಷ ಆಸಕ್ತಿಕೊಳ್ಳಲಾಗುವುದಿಲ್ಲ. ಅನ್ಯಥಾ ಸನ್ನಿಹಿತ. ಚೈನವೆಂಬುದು ಲೋಕದ ಚರಿತ್ರೆಯಲ್ಲೇ ಅತ್ಯಂತ ದೊಡ್ಡದಾದ ಮತ್ತು ಅತ್ಯಂತ ಶೋಚನೀಯವಾದ್ದುವ ದುರಂತಗಳಲ್ಲೊಂದು. ಇನ್ನೊಂದು ಕಡೆಯಾಗಿ ಹೋದ ಈ ಮಹಾ ದುರ್ದೆಸೆಯಲ್ಲಿಯಾದರೂ ಚೈನವು ತನ್ನ ಮಿತಿಮೀರಿದ ವ್ಯಕ್ತಿ ಸ್ವಾತಂತ್ರ್ಯವನ್ನು ಬಿಟ್ಟುಕೊಡಲಿ; ಒಂದಾಗಿ ದುಡಿದು ಬಲಶಾಲಿ ಹಾಗೂ ಪ್ರಗತಿಶೀಲ ರಾಷ್ಟ್ರವಾಗಿ ಬದುಕಲೆಂದು ಹಾರೈಸುತ್ತೇನೆ.

"ನವಯುಗ"

ಒಳ್ಳೆ ಕ್ವಾಲಿಟಿ. ಬ್ಲೀಚಿಂಗ್ ಕ್ಲಾತ್. ಬೆಲೆ ಸುಲಭ.

ನಮ್ಮಲ್ಲಿ ಒಳ್ಳೆ ಹಸನಾದ ಷಾಲುಗಳ್ (ಹಾಸಿಗೆ ವಸ್ತ್ರ) ಗಳೂ, ದುಪಟಿಗಳೂ, ಚೆಕ್ಸ್ ಕೋಟಿಂಗ್‌ಗಳೂ ಸುಲಭ ಬೆಲೆಯಲ್ಲಿ ದೊರೆಯುತ್ತವೆ.

ವಿವರಗಳಿಗೆ:—

G CHOUDAIAH & Bro.
MANUFACTURERS AND CLOTH MERCHANTS
2-2 *Main Road - Dodballapur M. S. R.*

ಪಾನನಿರೋಧ ಏಕೆ?

ಮದ್ಯವು ಆಹಾರವೇ, ಔಷಧಿಯೋ ಯಾ ವಿಷವೇ?

[ಪಾನನಿರೋಧವು ಹಿಂದೆಂದಿಗಿಂತಲೂ ಇಂದಿನ ಮಹಾ ಪ್ರಶ್ನೆಗಳಲ್ಲೊಂದು. ಕೂಡಾಗೂ ಕೆಲವು ಈ ತತ್ವ ... ಮದ್ಯ ಪಾನೀಯಗಳ ಪ್ರಾಮುಖ್ಯವನ್ನು ಹಿಂದೆಗೆ ತಂದಿದೆ. ಆದರೂ ಪಾನನಿರೋಧದ ಆವಶ್ಯಕತೆ ಏನು ಎಂಬ ವಿಚಾರ ಎಲ್ಲರಿಗೂ ತಿಳಿದಿರಲಾರದು. ಈ ವಿಚಾರದಲ್ಲಿ ಭಾರತ ಮದ್ಯಪಾನ ನಿರೋಧ ಸಭೆಯ ಉಪಾಧ್ಯಕ್ಷರಾದ ಶ್ರೀ ಹೆಚ್. ಸಿ. ಮುಖರ್ಜಿಯವರು ಬರೆದ ಪುಸ್ತಕದಿಂದ ವ್ಯಾಖ್ಯಾನಗಳನ್ನು ವಾಚಕರ ಅವಗಾಹನೆಗೆ ಸ್ವತಂತ್ರವಾಗಿ ಶ್ರೀ ಎ. ಡಿ. ಗಣಪತಿಯವರು ಕೊಡುತ್ತಾರೆ]

ಪಾನನಿರೋಧಕ್ಕೆ ವಿರೋಧ ಇರುವವರು ತಮ್ಮ ಪಕ್ಷಕ್ಕೆ ಎರಡು ಕಾರಣಗಳನ್ನು ಕೊಡುತ್ತಾರೆ! ಮದ್ಯವನ್ನು ತಯಾರಿಸುವದು ಆಹಾರ ವಸ್ತುಗಳಿಂದ ಉದಾಹರಣೆಗೆ ಬತ್ತ, ರಾಗಿ, ಬಾರ್ಲಿ, ಜೋಳ ಇಲ್ಲವೆ ಹಣ್ಣು ಹಂಪಲುಗಳು, ಇಲ್ಲವೆ ಮರದ ರಸಗಳಿಂದಾಗಿದೆ. ಆಹಾರ ವಸ್ತುಗಳಿಂದ ಉತ್ಪನ್ನವಾದ ಮಾದಕ ಪಾನೀಯ ಸಹ ಯೋಗ್ಯ ಆಹಾರವೇ ಆಗಿರಬೇಕು. ಈ ಪಾನೀಯಗಳು ಶರೀರದ ಆಮ್ಲಜನಕ ಶಕ್ತಿಯಿಂದ ಶರೀರಕ್ಕೆ ಶಾಖವನ್ನೂ ಚೇತನವನ್ನೂ ಕೊಡುತ್ತವೆ. ಆದಕಾರಣ ಮಾದಕ ಪಾನೀಯಗಳೂ ಇತರ ಆಹಾರ ವಸ್ತುಗಳಂತೆ ಸೇವಿಸಲು ಯೋಗ್ಯವಾದುವು. ಇದು ಒಂದು ವಾದವಾದರೆ ಮಾದಕ ಪಾನೀಯಗಳು ಅತ್ಯುತ್ತಮ ಔಷಧಿಗಳ; ಶರೀರಕ್ಕೆ ಚೇತನವನ್ನು ಕೊಡುವ 'ಟಾನಿಕ್' ಗಳು ಎಂಬುದು ಎರಡನೇ ವಾದ.

ಈ ವಾದಗಳು ತಪ್ಪು. ಮಾದಕ ಪಾನೀಯಗಳು ಆಹಾರವೂ ಅಲ್ಲ; ಔಷಧಿಯೂ ಅಲ್ಲ, ಬಲು ಸ್ವಲ್ಪ ಪ್ರಮಾಣದಲ್ಲಿ ವಿಷಯುಕ್ತವಾದವು. ಇವು ಬಹಳ ಅತಿ ಹಾನಿಕಾರಕವಾದ ವಸ್ತು ಎಂಬುದನ್ನು ಸಿದ್ಧಪಡಿಸುವದೇ ಈ ಲೇಖನದ ಉದ್ದೇಶ.

ಆಹಾರವೇ?

ತೆಗೆದುಕೊಂಡಾಗ ಜೀರ್ಣವಾಗಿ ಶರೀರಕ್ಕೆ ಶಾಖವನ್ನೂ, ಚೇತನವನ್ನೂ, ಕೊಟ್ಟು ಶರೀರ ರಚನೆಗೆ ಬೇಕಾದ ಸಾಹಿತ್ಯಗಳನ್ನು ಒದಗಿಸಿ ವಿಶಿಷ್ಟವಾದ ತೆಗೆದುಕೊಂಡರೆ ಶರೀರಕ್ಕೆ ಯಾವ ಹಾನಿಯನ್ನೂ ತಾರದೆ ಶರೀರದ ಪಾಲನೆಗೆ ಸಹಾಯಕವಾಗುವ ವಸ್ತುವನ್ನು ಆಹಾರವೆಂದು ಕರೆಯಬಹುದು. ಮದ್ಯವು ಸಕ್ಕರೆ ಯಾ ಹಿಟ್ಟು ಇವುಗಳಂತೆ ಶರೀರಕ್ಕೆ ಶಾಖ ಮತ್ತು ಚೇತನವನ್ನು ಕೊಟ್ಟು, ನಮ್ಮ ಶರೀರದ ಸ್ನಾಯುಗಳ ಚಲನೆಗೆ, ಸಹಾಯಕವಾದರೆ ಅದನ್ನು ತತ್ವತಃ ಆಹಾರವೆಂದೇ ಕರೆಯಬಹುದು. ನಾವು ತೆಗೆದುಕೊಂಡ ಆಹಾರವು ಈ ಕ್ರಿಯೆಗೆ ಸಹಾಯಕವಾಗದೆ ಇದ್ದು, ಶರೀರಕ್ಕೆ ಯಾವದೇ ಹಿತವಾಗದಿದ್ದರೆ ಅದನ್ನು ತತ್ವತಃ ಆಹಾರವೆನ್ನಲಾಗುವದಿಲ್ಲ.

ಮಾದಕ ಪಾನೀಯಗಳಿಂದ ನಮ್ಮ ಶರೀರಕ್ಕೆ ಬೇಕಾದ ಶಾಖದ ಶೇಕಡ ೨೦ ರಷ್ಟನ್ನು ಪಡೆಯಬಹುದೆಂಬುದು ಸಹಜ. ಆದರೆ ಮಾದಕ ಪಾನೀಯದ ಕೊರತೆ ಏನೆಂದರೆ ಪಾನೀಯವು ಶರೀರದೊಳಗೆ ಹೋಗಿ ರಕ್ತದ ಸಂಬಂಧವಾದೊಡನೆಯೇ ಶರೀರಕ್ಕೆ ಅವಶ್ಯವಿರಲೀ ಯಾ ಇಲ್ಲದಿರಲೀ ಶೇಕಡ ೧೦ರಷ್ಟು ಶಾಖವನ್ನು ಹೆಚ್ಚಿಸುತ್ತದೆ. ಈ ರೀತಿ ನಾವು ತೆಗೆದುಕೊಂಡ ಮಾದಕ ಪಾನೀಯವು ವ್ಯಯವಾಗುವವರೆಗೆ ನಡೆಯುವದು. ಅದರಿಂದ ಇದು ಆಹಾರದಂತೆ ಅವಶ್ಯ ಬಿದ್ದಾಗ ಶರೀರದ ಹಿತಕ್ಕಾಗಿ ಉಪಯೋಗವಾಗುವದಿಲ್ಲ. ಇತರ ಆಹಾರಗಳಂತೆ ಶರೀರದಲ್ಲಿ ಇದನ್ನು ಶೇಖರಿಸಿಡುವದೂ ಸಾಧ್ಯವಿಲ್ಲ. ಇದಲ್ಲದೆ ಮಾದಕ ಪಾನೀಯವು ಶರೀರದಲ್ಲಿ ಒಂದು ವಿಷಪ್ರಾಯವಾದ ವಸ್ತುವನ್ನು ಉತ್ಪಾದನೆ ಮಾಡುತ್ತದೆ. ಪ್ರಾಮುಖ್ಯವಾಗಿ ಇದು ಮೆದುಳಿನಿಂದ ಪ್ರಾರಂಭಿಸಿ ಪಾನೀಯದ ಅಂಶವು ಶರೀರದಲ್ಲಿ ಮುಗಿಯುವ ವರೆಗೆ ನಡೆಯುವದು. ಇದಲ್ಲದೆ ಮಾದಕ ಪಾನೀಯಗಳು ಆಹಾರವಲ್ಲವೆಂಬುದಕ್ಕೆ ಡಾ. ಎಫ್. ಎಂ. ಗ್ರಿಗ್ ಎಂಬುವವರು ಐದು ಕಾರಣಗಳನ್ನು ಕೊಡುತ್ತಾರೆ.

(೧) ಇತರ ಆಹಾರದಂತೆ ಮಾದಕ ಪಾನೀಯವು ಶರೀರದ ವಿವಿಧ ಭಾಗಗಳಲ್ಲಿ ಪಚನವಾಗಿ ಆಯಾಯ ಭಾಗಗಳಿಗೆ ಉಪಯುಕ್ತ ಸಾರವನ್ನು ಕೊಡದೆ ಕರುಳಿನಿಂದ ಅದು ಹೋಗುವ ಎಲ್ಲಾ ಭಾಗಗಳ ಕ್ರಿಯೆ [illegible]

(೨) ಆಹಾರ [illegible] ಹೋಗವಾಗ ಇತರ ಆಹಾರಗಳಂತೆ [illegible] ವಿಲ್ಲ.

(೩) ಆಹಾರದಲ್ಲಿ ಶರೀರಕ್ಕೆ ಬೇಕಿಲ್ಲದ ಭಾಗವು ಹೇಗೆ ಶರೀರದಿಂದ ಹೊರಬಿಟ್ಟ ನಂತರ ಹಿಪ್ಪೆಯಾಗಿ ಹೊರಬೀಳುವದೋ ಹಾಗೆ ಮಾದಕ ಪಾನೀಯಗಳಲ್ಲಾಗದೆ ಶ್ವಾಸಕೋಶ ಮತ್ತು ಕಿಡ್ನಿಗಳು ಮಾದಕ ಪಾನೀಯವನ್ನು ಆದಷ್ಟು ಶೀಘ್ರ ಹೊರಹಾಕಲು ಯತ್ನಿಸುತ್ತವೆ.

(೪) ಮಾನವ ಗಣದ ಚರಿತ್ರೆಯಲ್ಲಿ ಎಂದಾದರೊಮ್ಮೆ ಮಾದಕ ಪಾನೀಯವು ನಿಸರ್ಗದ ಆಹಾರವಾಗಿ ಪರಿಗಣಿಸಲ್ಪಟ್ಟಿಲ್ಲ.

(೫) ಮಾದಕ ಪಾನೀಯವನ್ನು ಕ್ರಿಸ್ತನಲ್ಲಿ ಶರೀರದ ಆಮ್ಲಜನಕವು ಮತ್ತು ಜೊರದ ಕುಗ ನೈಸರ್ಗಿಕ ಕಾರ್ಯವೇ ಅದು ಸ್ವಾಭಾವಿಕ ಆಹಾರವಲ್ಲವೆಂಬುದನ್ನು ತೋರಿಸುತ್ತದೆ. ಸರ್ ಫ್ರೆಡರಿಕ್ ಹಾಪ್‌ಕಿನ್ಸ್ ಎಂಬ ಪ್ರಸಿದ್ಧ ವಿಜ್ಞಾನಿಯು ಇದೇ ವಿಚಾರವನ್ನು 'ಮಾದಕ ಪಾನೀಯಗಳ ಮೇಲೆ ಆಮ್ಲ ಜನಕದ ಪ್ರವೃತ್ತಿಯು ಈ ವಿಷವನ್ನು ಆದಷ್ಟು ಬೇಗ ಹೊರಹಾಕುವ ಪ್ರಯತ್ನವಾಗಿದೆ' ಎಂದಿರುವರು.

ಮೇಲಿನ ವಿಚಾರಗಳಿಂದ ಆಹಾರಕ್ಕೂ ಮಾದಕ ಪಾನೀಯಗಳಿಗೂ ವ್ಯತ್ಯಾಸವಿದೆ; ಅವನ್ನು ಆಹಾರವೆಂದು ಹೇಳಲಾಗದೆಂಬುದು ವೇದ್ಯವಾಗುವದು. ಬದಲು ಅದು ಶರೀರಕ್ಕೆ ಹಾನಿಕಾರಕವಾದುದು. ಡಾ. ಫ್ರೆಡರಿಕ್ ಪಿಟರ್‌ಸನ್ ಎಂಬುವವರು ಹೀಗೆ ಹೇಳಿದ್ದಾರೆ "ಕೆಲವರು ಮಾದಕ ಪಾನೀಯವು ಆಹಾರವೆಂದು ಹೇಳುತ್ತಾರೆ; ಅದು ಕೇವಲ ವಿಷಯುಕ್ತ ಆಹಾರ."

ಔಷಧಿಯೋ?

ಮಾದಕ ಪಾನೀಯಗಳು ಚೇತನ ಕೊಡುವಷ್ಟು, ಟಾನಿಕ್‌ಗಳಂತೆ ಶರೀರ ರಚನೆಗೆ ಸಹಾಯ ಮಾಡುವವು ಅನೇಕ ರೋಗಗಳನ್ನು ನಿವಾರಣೆ ಮಾಡುವವು ಎಂದು ಹೇಳುವವರಿದ್ದಾರೆ. ಮಾದಕ ಪಾನೀಯಗಳು ಉಪಯುಕ್ತ ಔಷಧಿಗಳೆಂದು ಹೇಳುವರು. ಅನೇಕ ವರ್ಷಗಳ ವರೆಗೆ ವೈದ್ಯರು ಮಾದಕ ಪಾನೀಯಗಳನ್ನು ಔಷಧವಲ್ಲಿ ಉಪಯೋಗಿಸಿಕೊಂಡಿದ್ದರು. ಪರಂಪರೆಯಿಂದ ಬಂದ ಈ ಪದ್ಧತಿಯನ್ನು ಬಿಡಲಾರದೆ ತಪ್ಪು ತಿಳುವಳಿಕೆಯಿಂದ ವೈದ್ಯರು ಪರೀಕ್ಷಿಸುತ್ತಿದ್ದರು. ಕ್ಷಯ, ನಿಮೋನಿಯಾ, ಹೃದಯ [illegible] ಬಲಹೀನತೆ, ನೋವಿಲ್ಲದಿರುವದಕ್ಕಾಗಿ ಇವನ್ನು ಉಪಯೋಗಿಸಲಾಗುತ್ತಿತ್ತು. ವೈದ್ಯಕೀಯ ಶಾಸ್ತ್ರದಲ್ಲಿ ಜ್ಞಾನದ ಬೆಳಕು ಹೆಚ್ಚಿದಂತೆ ಈ ಪದ್ಧತಿ ತಪ್ಪು ತೋರತೊಡಗಿತು.

೧೯೦೫ರಲ್ಲಿ ಪ್ಯಾರಿಸ್ ನಗರದಲ್ಲಿ ಸೇರಿದ ಕ್ಷಯ ರೋಗ ನಿವಾರಣಾ ಸಂಘದ ಅಂತರಾಷ್ಟ್ರೀಯ ಸಭೆಯಲ್ಲಿ ಈ ದರಾವು ಪಾಸಾಯಿತು. "ಕ್ಷಯ ರೋಗಕ್ಕೂ ಮಾದಕ ಪಾನೀಯಗಳಿಗೂ ಅಂತಿಕಟ ಸಂಬಂಧವಿರುವದರಿಂದ ಕ್ಷಯ ರೋಗ ನಿವಾರಣೆಯ ಪ್ರಯತ್ನದೊಂದಿಗೆ ಮಾದಕ ಪಾನೀಯಗಳ ನಿರೋಧದ ಪ್ರಯತ್ನವನ್ನು ಮಾಡಬೇಕು."

ಬ್ರಿಟಿಷ್ ಕ್ಷಯರೋಗ ಸಂಘದ ಉಪಾಧ್ಯಕ್ಷ ಡಾ. ಡಿ. ಕ್ರಾಫ್ಟ್‌ರವರು ಹೀಗೆ ಹೇಳಿರುವರು. "ಕ್ಷಯರೋಗವನ್ನು ಮಾದಕ ಪಾನೀಯಗಳು ಎಂದೂ ಗುಣ ಮಾಡಿಲ್ಲ ಮುಂದೆ ಎಂದೂ ಮಾಡಲಾರವು. ಬದಲು ಅವು ಗುಣವಾಗುವದನ್ನು ತಡೆಯುವವು. ಅದು ಎರಡು ಬಾಯಿಯ ಕತ್ತಿಯಂತೆ. ಒಂದೆಡೆ ಅದು ಶರೀರದಲ್ಲಿ ವಿಷ ತುಂಬುವದು. ಮತ್ತೊಂದೆಡೆ ಹೊಟ್ಟೆಯನ್ನು ಹಾಳು ಮಾಡಿ ಯೋಗ್ಯ ಆಹಾರದ ಪಚನ ಕ್ರಿಯೆಗೆ ಆತಂಕ ಮಾಡುವದು."

ಕುಡುಕತನವು ಕ್ಷಯರೋಗಕ್ಕೆ ಒಂದು ಕಾರಣವೆಂದು ತಿಳಿದು ಬಂದ ಮೇಲೆ ಈ ವಿಚಾರದಲ್ಲಿ ಹೆಚ್ಚು ಮಾಹಿತಿ ಇದ್ದವರು ಕ್ಷಯ ರೋಗಕ್ಕೆ ಇದನ್ನು ಉಪಯೋಗಿಸ ಕೂಡದೆಂದು ಸ್ಪಷ್ಟ ಹೇಳತೊಡಗಿದರು. ಅಮೇರಿಕದ ಕೊಲೊರಡೊ ಕ್ಷಯರೋಗ ಸಂಸ್ಥೆಯ ಡೈರೆಕ್ಟರು ಹೀಗೆ ಹೇಳಿರುವರು "ಕ್ಷಯ ರೋಗವನ್ನು ಮಾದಕ ವಸ್ತುಗಳಿಂದ ವಾಸಿಮಾಡಲೆತ್ನಿಸುವದು ಬೆಂಕಿಯನ್ನು ಸೀಮೆ ಎಣ್ಣೆಯಿಂದ ಕೆಡಿಸಿದಂತೆ."

ಮಾದಕ ಪಾನೀಯಗಳನ್ನು ನಿಮೋನಿಯಾಕ್ಕೆ ಔಷಧಿಯಾಗಿ ಉಪಯೋಗಿಸುವ ಬಗ್ಗೆ ಅಮೇರಿಕಾದ ಮಿನ್ನೆಸೋಟಾ ವಿಶ್ವವಿದ್ಯಾಲಯದ ಡಾ. ಮೇರ್ಸ್ ಕಾಸೊವಿಟ್ಟ್ಸ್ ಹೀಗೆ ಹೇಳಿರುವರು. 'ಮಾದಕ ಪಾನೀಯಗಳ ತೊಂದರೆ ಇಲ್ಲದಿದ್ದರೆ ನಿಮೋನಿಯಾವು ಕ್ರಮಶಃ ವಾಸಿಯಾಗುತ್ತದೆ. ನ್ಯೂಮೋನಿಯಾಕ್ಕೆ ಮಾದಕ ವಸ್ತು ಉಪಯೋಗಿಸುವದನ್ನು ಖಡ್ಡಾಯ ನಿಲ್ಲಿಸಬೇಕು.'

ಹೃದಯದ ಕಾಯಿಲೆ ಪಾರ್ಶ್ವವಾಯು ಜ್ವರ ಮೊದಲಾದವುಗಳಲ್ಲಿಯೂ ಮಾದಕ ವಸ್ತುಗಳಿಂದ ಯಾವ ಪ್ರಯೋಜನವೂ ಇಲ್ಲ; ಬಲು ಹಾನಿಯೇ ಆಗುತ್ತದೆಂದು ಅನೇಕ ತಜ್ಞರು ವಿಷದಪಡಿಸಿದ್ದಾರೆ. ಅಮೇರಿಕದ ವೈದ್ಯಕೀಯ ಸಂಸ್ಥೆಯ ಪ್ರತಿನಿಧಿಗಳು ತಮ್ಮ ಸಭೆಯಲ್ಲಿ ೧೯೧೭ರಲ್ಲಿ ಈ ನಿರ್ಣಯವನ್ನು ಮಾಡಿರುವರು.

'ಔಷಧಿಗಳಲ್ಲಿ ಟಾನಿಕ್ ಆಗಿ ಇಲ್ಲವೇ ಪ್ರಚೋದಕ ವಸ್ತುವಾಗಿ ಯಾ ಆಹಾರವಾಗಿ ಮಾದಕ ಪಾನೀಯಗಳನ್ನು ಉಪಯೋಗಿಸುವದರಲ್ಲಿ ಯಾವ ವೈಜ್ಞಾನಿಕ ಲಾಭವೂ ಇಲ್ಲ. ಇದರ ಉಪಯೋಗವನ್ನು ಕಡಿಮೆ ಮಾಡಿದಷ್ಟೂ ಹಿತ."

ಡಾಕ್ಟರ್ ಜೆ. ಜೆ. ರಿಡ್ಜ್ ಎಂಬವರು ಮಾಡಿದ ಸಂಶೋಧನೆ ಇದು. ಅವರು ಐದು ಗಾಜಿನ ಕೊಳವೆಗಳನ್ನು ತೆಗೆದುಕೊಂಡ. ಒಂದರಲ್ಲಿ ನೀರು, ಎರಡನೆಯದರಲ್ಲಿ ೨,೦೦೦ದಲ್ಲಿ ಒಂದು ಪಾಲು ಮಾದಕ ವಸ್ತು ಮಿಶ್ರಿತ ನೀರು, ಮತ್ತೊಂದರಲ್ಲಿ ೧೦೦೦ದಲ್ಲಿ ಒಂದು ಪಾಲು, ಇನ್ನೊಂದರಲ್ಲಿ ೫೦೦ರಲ್ಲಿ ಒಂದು ಪಾಲು, ಕಡೆಯದರಲ್ಲಿ ೧೦೦ ಕ್ಕೆ ಒಂದು ಪಾಲು ಮಾದಕ ಪದಾರ್ಥಗಳಿರುವ ನೀರನ್ನಿಟ್ಟು ಅವುಗಳಲ್ಲಿ ಕೆಲವು ಬೀಜಗಳನ್ನಿಟ್ಟು ಅವುಗಳಿಗೆ ಸಮಾನ ಬಿಸಿ, ಬೆಳಕು ದೊರೆಯುವಂತೆ ಏರ್ಪಡಿಸಿದರು. ಹೆಚ್ಚು ಮಾದಕ ವಸ್ತುವಿದ್ದ ಐದನೆ ಕೊಳವೆಯಲ್ಲಿದ್ದ ಬೀಜಗಳು ಹುಟ್ಟಲೇ ಇಲ್ಲ. ನಾಲ್ಕನೇ ಕೊಳವೆಯ ಸ್ಥಿತಿ ಸ್ಥಿತಿ ಮೂರನೇ ಕೊಳವೆಯಲ್ಲಿ ಚನ್ನಾಗಿಲ್ಲ. ಎರಡನೇ ಕೊಳವೆಯ ಬೀಜಗಳು ಮೊಳಕೆಯೊಡೆದು ಬೆಳೆಯತೊಡಗಿದ್ದವು. ಆದರೆ ಬರೇ ನೀರಿನಲ್ಲಿ ಇದ್ದ ಬೀಜಗಳು ಎಲ್ಲದಕ್ಕಿಂತ ಶ್ರೇಷ್ಠವಾಗಿದ್ದವು. ಈ ಶೋಧನೆಯು ಮಾದಕ ವಸ್ತುಗಳ ಹಾನಿಯನ್ನು ಎತ್ತಿ ತೋರಿಸುತ್ತದೆ.

ಡಾ. ಬಿ. ಡಬ್ಲ್ಯು. ರಿಚರ್ಡ್‌ಸನ್ ಎಂಬವರು ಎರಡು ಮೀನುಗಳನ್ನು ಎರಡು ಪ್ರತ್ಯೇಕ ಪಾತ್ರೆಗಳಲ್ಲಿಟ್ಟು ಒಂದರಲ್ಲಿ ಶುದ್ಧ ನೀರನ್ನೂ ಮತ್ತೊಂದರಲ್ಲಿ ಸಾವಿರದಲ್ಲಿ ಒಂದು ಪಾಲು ಮಾದಕ ವಸ್ತುವನ್ನು ಸೇರಿಸಿದರು. [illegible] ಕೊಳವೆಯಲ್ಲಿನ [illegible] ಸೇರಿಸುವ ಮೊದಲು ಮೀನುಗಳು [illegible] ಚಲಿಸುತ್ತಿದ್ದ ಮೀನು ಚಲಿಸಲು [illegible] ಕೆಳಗೆ ಮುಳುಗ ತೊಡಗಿತು. ಐದ ನಿಮಿಷಗಳ ತರುವಾಯ ಅದು ಕೊಳವೆಯ ಅಡಿಭಾಗದಲ್ಲಿ ಬಿದ್ದಿತ್ತು. ಅದನ್ನು ತೆಗೆದು

ಕೆರೆಯ ಶುದ್ಧ ನೀರಿನಲ್ಲಿ ಬಿಡಲಾಯಿತು. ಎರಡು ಗಂಟೆಗಳ ವರೆಗಿಟ್ಟರೂ ಅದಕ್ಕೆ ಜೀವ ಬರಲಿಲ್ಲ. ಪ್ರಥಮ ಕೋಳಿಯು ಮೊದಲು ಹಿಂದಿನಂತೆ ಚೆನ್ನಾಗಿ ಓಡಾಡುತ್ತಿತ್ತು. ಇದೇ ರೀತಿ ಕಪ್ಪೆ, ಮೊಲ, ನಾಯಿ ಮೊದಲಾದ ಪ್ರಾಣಿಗಳ ಮೇಲೆ ಮಾಡಿದ ಪ್ರಯೋಗಗಳಿಂದ ಪ್ರತಿಯೊಂದು ಪ್ರಾಣಿಗೂ ಮಾದಕ ಪಾನೀಯಗಳು ಅಸಾಧ್ಯ ಹಾನಿ ತರುವವೆಂಬುದು ಸಬೀತಾಗಿದೆ. ಆದ್ದರಿಂದ ಸ್ವಲ್ಪ ಕುಡಿದರೂ ಹೆಚ್ಚು ಕುಡಿದರೂ ಶರೀರಕ್ಕೆ ಹಾನಿಯು ಕಟ್ಟಿಟ್ಟದ್ದೆ.

ವಿಷ.

ತಕ್ಷಣ ಪ್ರಾಣ ತೆಗೆಯಲು ಶಕ್ತಿ ಇರುವ ವಸ್ತುಗಳಿಗೆ ಮಾತ್ರ ವಿಷವೆನ್ನುವದಿಲ್ಲ. ಇವು ಶೀಘ್ರ ವಿಷವಾದರೂ ನಿಧಾನದ ವಿಷಗಳೂ ಇವೆ. ಅಫೀವಲ್, ಮಾರ್ಫಯಿನ್, ಹೆರೊಯಿನ್, ಕೊಕೆಯಿನ್ ಮೊದಲಾದವು! ಇವೆಲ್ಲವೂ ಶರೀರದ ಆರೋಗ್ಯವನ್ನು ಕೆಡಿಸಿ ಶರೀರವನ್ನು ರೋಗದ ತವರು ಮನೆಯಾಗಿ ಮಾಡುವವು.

ಈ ಮೇಲಿನ ನಿಧಾನ ವಿಷಗಳ ಕಾರಣದಿಂದ ಸಾಯಲಸ್ಥನಾದವನು ಸತ್ತರೆ ಆ ಸಾವು ಈ ವಿಷಗಳ ಕಾರಣದಿಂದ ಎಂದು ಯಾರೂ ಹೇಳುವದಿಲ್ಲ. ಈ ವಿಷಗಳ ಕಾರಣದಿಂದ ಆತನ ಶರೀರವು ನಿರ್ಬಲವಾಗದಿದ್ದರೆ ಬಹುಶಃ ಆತನಿಗೆ ರೋಗವೇ ಬರುತ್ತಿರಲಿಲ್ಲ, ಬಂದರೂ ಶೀಘ್ರ ಗುಣ ಹೊಂದುತ್ತಿದ್ದನು. ಈ ಅಳತೆಯಿಂದ ಹೇಳುವದಾದರೆ ಮಾದಕ ಪಾನೀಯಗಳೂ ವಿಷಗಳೇ. ಶೀಘ್ರ ವಿಷಗಳಂತೆ ಹೆಚ್ಚಿಗೆ ಕುಡಿದರೆ ತಕ್ಷಣ ಮೃತ್ಯುವನ್ನೂ ಇವು ತರುವವು. ಒಂದು ಇಲ್ಲವೇ ಒಂದೂವರೆ ಪಿಂಟ್ ವಿಸ್ಕಿಯನ್ನು ತೆಗೆದುಕೊಂಡರೆ ಸಾಧಾರಣ ಮನುಷ್ಯನು ಮೃತನಾಗುವನೆಂದು ಅನುಭವದಿಂದ ತಿಳಿದು ಬಂದಿದೆ. ಎರಡು ಚಂಚ ಬ್ರಾಂಡಿಯನ್ನು ಚಿಕ್ಕ ಮಕ್ಕಳಿಗೆ ಕೊಟ್ಟರೆ ಅವು ಸತ್ತು ಹೋಗುವವು.

ಜನರು ಸಾಯುವಷ್ಟು ಮಾದಕ ಪಾನೀಯಗಳನ್ನು ಒಂದೇ ಬಾರಿಗೆ ಕುಡಿಯುವದಿಲ್ಲವೆನ್ನುವದು ನಿಜವಾದರೂ ಸಾಧಾರಣ ಹಿಡಿತದಲ್ಲಿ ಉಪಯೋಗಿಸುವವರಿಗೂ ಇವರ ಹಾನಿಕಟ್ಟೆ ಅವರ ಅಂತಿಮವನ್ನು ಹತ್ತಿರ ತರುವದೆಂಬುವದಕ್ಕೆ ಸಂಶಯವಿಲ್ಲ. ಮರಕ್ಕೆ ಗೆದ್ದಲು ಕ್ರಮಶಃ ಹಿಡಿದು ಮರವನ್ನು ನಾಶಮಾಡುವಂತೆ ಈ ಹೊಟ್ಟೆಯೊಳಗಿನ ಕುಡುಕತನದ ಪರಿಣಾಮವೂ ಆಗುವದು.

ಕಿತ್ತಳೆ ಸಸಿಗಳು ಮಾರಾಟಕ್ಕಿವೆ.

ಸಂಸ್ಕರಿಸಿದ ಬೀಜದಿಂದ ತಯಾರಿಸಿದ ಎರಡು, ಮೂರು ವರ್ಷಗಳ ಉತ್ತಮವಾದ ಕಿತ್ತಳೆ ಸಸಿಗಳು ಮಾರಾಟಕ್ಕಿವೆ. ಹೆಚ್ಚಿನ ವಿವರಗಳಿಗೆ ಈ ವಿಳಾಸಕ್ಕೆ ಬರೆಯಬಹುದು.

Orange Plants for Sale

Apply:—

K. M. Povaiah,
Laxmi Estate,
Pollibetta.

2-2

ಈ ವಾರದ ಕಥೆ.

ರತ್ನ.

ಲೇ:— "ಸುಮತಿ" ಕೊಡಗು.

ರತ್ನಳು ಭಿಕ್ಷುಕಿ. ಆ ಹರೆಯದ ಭಿಕ್ಷುಕಿಗೆ ಮನೆ ಇರಲಿಲ್ಲ. ಕೂಲಿಗಾರರ ಬೀದಿಯ ಮುರುಕು ಗುಡಿಸಲಿನ ಮೆಂಡಾದಲ್ಲಿ ಯಾವಾಗಲೂ ಮಲಗುತ್ತಿದ್ದಳು. ಅದೇ ನಗರದಲ್ಲಿದ್ದ ದೇವಾಲಯದ ಬಾಗಿಲ ಹತ್ತಿರ ಯಾವಾಗಲೂ ಬೆಳಗ್ಗೆ ನಾಲ್ಕು ಗಂಟೆಗೆ ಹೋಗಿ ಕೂತುಕೊಂಡು ಭಕ್ತಿಯ ಪದಗಳನ್ನು ಹಾಡುವದು ಆಕೆಯ ಕೆಲಸ. ಆಕೆಯ ಗಾನಕ್ಕೆ ತಂಬೂರಿಯಾಗಲೀ, ಹಾರ್ಮೋನಿಯಂ ಆಗಲೀ ಇರಲಿ(ಲ್ಲ). ಪ್ರಭಾತದ ಪ್ರಶಾಂತವಾತಾವರಣದಲ್ಲಿ ಆಕೆಯ ಸುಶ್ರಾವ್ಯಕಂಠದ ಗಾನವು ಪ್ರತಿ ದಿನ ಗಾಳಿಯಲ್ಲಿ ಬಹುದೂರ ಪ್ರಯಾಣಮಾಡಿ ಮಾರ್ದನಿಗೊಳ್ಳುವ ಈ ದೇವಸ್ಥಾನದಲ್ಲಿ ಪ್ರಾರ್ಥನೆ, ಪೂಜೆಗೆ ಬಂದ ಭಕ್ತರು ಆಕೆಗೆ ಒಂದೆರಡು ಕಾಸು ಬಿಸಾಡುವರು. ಇದರಿಂದ ರತ್ನಳು ತನ್ನ ಚಿಕ್ಕ ಮಗುವಿನೊಂದಿಗೆ ಜೀವಿಸುತ್ತಿದ್ದಳು. ಆಕೆಯ ಮಗುವಿಗೆ ಇನ್ನೂ ಎರಡು ವರ್ಷಗಳಾಗಿರಲಿಲ್ಲ. ಅದನ್ನು ಒಂದು ಮಾಸಿದ ಬಟ್ಟೆಯಲ್ಲಿಟ್ಟು ಬೆನ್ನಿಗೆ ಕಟ್ಟಿಕೊಂಡು ಆಕೆ ತಿರುಗುತ್ತಿದ್ದಳು. ಸೂರ್ಯನು ಮೇಲೇರಿ ಶೆಕೆ ಹೆಚ್ಚಾಗಿ ದೇವಸ್ಥಾನಕ್ಕೆ ಭಕ್ತರು ಬರುವದು ಕಡಿಮೆಯಾದಾಗ ರತ್ನಳು ನೇರವಾಗಿ ಹತ್ತಿರದ ಹೋಟೇಲಿಗೆ ಹೋಗಿ ತನ್ನ ಮತ್ತು ಮಗುವಿನ ಕ್ಷುದ್ಬಾಧೆಯನ್ನು ಹಿಂಗಿಸಿಕೊಳ್ಳುತ್ತಿದ್ದಳು. ನಂತರ ಬಿಡುವಿನಲ್ಲಿ ತನ್ನ ಮುರುಕು ಗುಡಿಸಲಿನಲ್ಲಿ ವಿಶ್ರಾಂತಿ ತೆಗೆದುಕೊಳ್ಳುವಳು; ಪುನಹ ಸಾಯಂಕಾಲ ದೇವಸ್ಥಾನದ ಬಾಗಿಲಿನಲ್ಲಿ ನಿಂತು ಭಜನೆ ಮಾಡುವಳು!

ರತ್ನಳಿಗೆ ೨೫ ವರ್ಷಗಳಿರಬಹುದು. ಬಡತನದ ಅಗ್ನಿಯು ಪ್ರತಿ ದಿನ ಬೇಯುತ್ತಿದ್ದರೂ ತಾರುಣ್ಯದ ಕಾಂತಿ ಇತ್ತು. ಭಿಕ್ಷುಕರ ವರ್ಗಕ್ಕೆ ಮೀರಿದ ಸೌಂದರ್ಯವೂ ಆಕೆಯಲ್ಲಿತ್ತು. ಆಸ್ತಿ, ಇದ್ದು ಜೀವನ ಸರಿಯಾಗಿ ನಡೆಯುವವರೆಗೆ ಸೌಂದರ್ಯವಿದ್ದರೆ ಅದು ಚಿನ್ನಕ್ಕೆ ಗಂಧದ ಸುವಾಸನೆ ಬೆರೆತಂತೆ. ಆದರೆ ಬಡವರ ಪಾಲಿಗೆ ಸೌಂದರ್ಯವೂ ಒಂದು ಶೂಲವೇ?

ದೇವಸ್ಥಾನಕ್ಕೆ ಬರುವ ಭಕ್ತರು ದೇವರ ಪೂಜೆಗೆಂದು ಬಂದರೂ ಕೆಲವರಾದರೂ ಭಿಕ್ಷುಕಿಯ ಮಧುರ ಸ್ವರವನ್ನು ಕೇಳಿ ಒಂದೆರಡು ಕೊಂಕು ನುಡಿಗಳನ್ನಾಡಿ ಹೋಗುವ ಆತ್ಮತೃಪ್ತಿಗಾಗಿ ಬರುತ್ತಿದ್ದರು! ರತ್ನಳು ಬಡವೆಯಾದ ಕಾರಣ ಅವರ ಕೊಂಕುನುಡಿಗಳನ್ನೂ, ಮಲಿನ ನೋಟವನ್ನೂ ಸಹಿಸಬೇಕಾಗಿತ್ತು! ಕೆಲವರು ಪೇಟೆಯ ವಸ್ತುವನ್ನು ಪರಿಶೀಲಿಸುವಂತೆ ಪರಿಶೀಲಿಸುವರು, ಕೆಲವರು ಬೇರೆ ಉತ್ತಮ ಕೆಲಸ ಒದಗಿಸುವೆನೆಂಬ ಸೋಗು ತೋರುವರು. ದುರ್ಭಾಗ್ಯದ ಪಥದಲ್ಲಿ ಬಿದ್ದು ಕಷ್ಟಪಡುತ್ತಿರುವ ಆಕೆಗೆ ಜನರ ಯಾವ ಉದ್ಯೋಗ ದೊರಕಿಸಿಯಾರು? ಆಕೆ ಅದಕ್ಕೆಲ್ಲ ಉತ್ತರವಾಗಿ ತಲೆತಗ್ಗಿಸುವಳು. ಕಣ್ಣಿನಲ್ಲಿ ನೀರು ತುಂಬುವಳು.

ಅದೊಂದು ದಿನ. ರತ್ನಳು ಬೀದಿಯಲ್ಲಿ ನಡೆದು ಹೋಗುತ್ತಿದ್ದಳು. ಆಕೆಯ ಬಾಯಿಯಲ್ಲಿ ಮೆಲುದನಿಯಲ್ಲಿ ಹಾಡೊಂದು ಕೇಳಿಬರುತ್ತಿದೆ. ಆಕೆಯ ಮನಸ್ಸು ಹಾಡಿನಲ್ಲಿರಲಿಲ್ಲ. ಆಕೆಯು ನಿಂತಳು. ಬೆನ್ನಿಗೆ ಕಟ್ಟಿದ್ದ ಮಗುವಿನ ಮುಖವನ್ನೊಮ್ಮೆ ನೋಡಿದಳು. ಮುಖವು ಪುಳಕಿತವಾಯಿತು. ರಸ್ತೆಯಲ್ಲಿ ಒಂದೆರಡು ಸ್ತ್ರೀಯರು ಕೈಯಲ್ಲಿ ತಮ್ಮ ಮಕ್ಕಳನ್ನು ಜೊತೆಯು ನಡೆಯುತ್ತಿರುವದು ಆಕೆಗೆ ಕಂಡಿತು. ಅನೇಕರು ಹಾಗೆಯೇ ಕೈ ಬೀಸಿ ಹೋಗುತ್ತಿದ್ದರು. ಬಹುಶಃ ಅವರ ಮಕ್ಕಳು ಮನೆಯಲ್ಲಿ ತೊಟ್ಟಿಲಲ್ಲಿರಬಹುದು; ಕೆಲವು ಮಕ್ಕಳು ಅಳುತ್ತಿರಬಹುದು.

ಆಕೆ ತನ್ನೊಳಗೇ ಹೇಳಿಕೊಂಡಳು. 'ಈ ಉತ್ತಮ ಬಟ್ಟೆ ಧರಿಸಿದ ಹೆಂಗಸರಿಗಿಂತ ನಾನೇ ಧನ್ಯಳಲ್ಲವೇ? ಹಗಲಾಗಲೀ, ರಾತ್ರಿಯಾಗಲೀ, ಬಿಸಿಲಾಗಲೀ ಚಳಿಯಾಗಲೀ ನನ್ನ ಮಗು ನನ್ನೊಡನೆಯೇ ಅನವರತ ಇರುವದಲ್ಲವೇ?'

ಆಕೆಗೆ ಜೀವನದ ಈ ಕಾಲ ಕಡಮಾನದ ಯಾತ್ರೆಯಲ್ಲಿ ಹಸಿವೆಯೆಂದರೇನೆಂಬುದರ ಪೂರ್ಣ ಪರಿಚಯವಿತ್ತು. ಆ ಹಸಿವಿನ ಕಾರಣದಿಂದಲೇ ಭಿಕ್ಷಾವೃತ್ತಿಯನ್ನವಲಂಬಿಸಿದ್ದಳು. ಇಂದು ಆಕೆ ಆ ಹಸಿವಿನ ಕಾರಣದಿಂದಲೇ ಬೀದಿಯ ಪ್ರತಿ ಮನೆಯ ಮುಂದೆ ನಿಂತು ಹಾಡುತ್ತಿದ್ದಳು. ಕೆಲವರು ಕಾಸು ಕೊಡುತ್ತಿದ್ದರು. ಕೆಲವರು 'ಮುಂದಕ್ಕೆ' ಎಂದು ಕೈತೋರಿಸುತ್ತಿದ್ದರು. ಕೆಲವರು [illegible]. ಹೀಗೆ ಹಸಿವಿನ ಯೋಚನೆಯಿಂದ ಪರಿಪ್ಲುತವಾದ ರತ್ನಳ ಮನಸ್ಸಿನಲ್ಲಿ ಒಂದು ಅಪೂರ್ವ ಸುಖದ ಅನುಭವವಿತ್ತು. ಆಕೆಯ ಕಂಠದಲ್ಲಿ ಒಂದು ವಿಶೇಷ ಮಾಧುರ್ಯ ಬಂದಿತ್ತು.

ಹಠಾತ್ತಾಗಿ ಮನುಷ್ಯನೊಬ್ಬನು ಆಕೆಯ ಹತ್ತಿರ ಬಂದನು. ಆಕೆಗೆ ಆತನನ್ನು ಕೆಲವು ದಿನಗಳ ಮೊದಲೇ ಕಂಡಿದ್ದಳು. ಆತನ ದೃಷ್ಟಿಯಲ್ಲಿ ಅಪೂರ್ವ ಕನಿಕರವಿತ್ತು. ಆತನ ಮುಖಭಾವದಲ್ಲಿ ಒಂದು ಗಾಂಭೀರ್ಯತೆ ಇತ್ತು. ಆತನು ಹತ್ತಿರ ಬಂದೊಡನೆಯೇ ಆಕೆಯು ಹಾಡುವದನ್ನು ನಿಲ್ಲಿಸಿದಳು. 'ಆತನಿಗೇನು ಬೇಕಾಗಿದೆ?' ಆಕೆ ತನ್ನನ್ನೇ ಪ್ರಶ್ನಿಸಿಕೊಂಡಳು. ರಸ್ತೆಯಲ್ಲಿ ತಿರುಗುವ ಜನರು ಈ ದೃಶ್ಯವನ್ನು ಎವೆ ಇಕ್ಕದೆ ನೋಡುತ್ತಿದ್ದರು. ಆ ಮನುಷ್ಯನು ಆಕೆಯನ್ನು ಮೃದುಸ್ವರದಿಂದ ಸಂಬೋಧಿಸಿ ಮಾತಾಡತೊಡಗಿದನು. ಆಕೆಯು ಆತನ ಮುಖವನ್ನು ಅರಳಿದ ಕಣ್ಣುಗಳಿಂದ ನೋಡಿದಳು. ಆತನ ಹೃದಯವನ್ನರಿಯುವದು ಆಕೆಗೆ ಕಷ್ಟವಾಗಲಿಲ್ಲ. ಆತನು ಹೊರಟನು. ಆಕೆಯು ಆತನನ್ನು ಹಿಂಬಾಲಿಸಿದಳು. ಹತ್ತಿರದಲ್ಲೇ ಆತನ ಕಾರು ನಿಂತಿತ್ತು. ಆತನು ಬಾಗಿಲು ತೆರೆದನು. ಆಕೆ ಕುಳಿತಳು. ಕಾರು ಮುಂದೆ ಸಾಗಿತು.

ಇದನ್ನೆಲ್ಲಾ ನೋಡಿದ ಜನರು ಏನೇನೋ ಹೇಳಿಕೊಂಡರು. ತಮ್ಮ ತಮ್ಮ ಮನಸ್ಸಿನ ಕಲ್ಪನೆಯಂತೆ ಅವಳ ಕಥೆ ಕಟ್ಟಿಕೊಂಡರು. ದೇವಸ್ಥಾನದ ಬಾಗಿಲಿನಲ್ಲಿ ಅಂದಿನಿಂದ ರತ್ನಳ ಹಾಜರಾತಿಯು ನಿಂತಿತು. ಬರುತ್ತಿದ್ದ ಭಕ್ತರೆಲ್ಲರಿಗೂ ಈ ಕಥೆ ಮುಟ್ಟಿತು. ಬಡ ಭಿಕ್ಷುಕಿಯೊಬ್ಬಳಿಗೆ ಏನೆಲ್ಲಾ ಆಗುವದು ಸಾಧ್ಯವೋ ಅದನ್ನೆಲ್ಲಾ ನೆನಸಿ ಜನರು ತಮ್ಮದೇ ಆದ ಕಥೆ ಕಟ್ಟಿಕೊಂಡರು.

ಒಂದು ವರ್ಷ ಕಳೆಯಿತು. ಚಲನಚಿತ್ರ ಜಗತ್ತಿನಲ್ಲಿ ಹೊಸ ತಾರೆಯೊಂದು ಹುಟ್ಟಿ ಅಪೂರ್ವ ತೇಜಸ್ಸಿನಿಂದ ಬೆಳಗತೊಡಗಿದೆ. ಪ್ರತಿಯೊಂದು ಪತ್ರಿಕೆಯಲ್ಲಿಯೂ ರತ್ನಳ ಪ್ರಶಂಸೆಯೆ! ಪ್ರತಿ ಪತ್ರಿಕೆಯಲ್ಲಿ ಆಕೆಯ ಭಾವಚಿತ್ರಗಳು! ತಮ್ಮ ಸಿನೆಮಾದಲ್ಲಿ ನಟಿಸುವಂತೆ ಆಕೆಯೊಡನೆ ಕಂಟ್ರಾಕ್ಟ ಮಾಡಿಕೊಳ್ಳಲು ಸಿನೆಮಾ ನಿರ್ದೇಶಕರ ಸ್ಪರ್ಧೆಯೇ ನಡೆದಿತ್ತು. ಸಿನೆಮಾ ನಟಿ [illegible] ರತ್ನಳ ಹೆಸರು ಮನೆಮಾತಾಯಿತು. ಆಕೆಯ ಶರೀರದಲ್ಲಿ ಹಿಂದಿನ ಬಡತನದ ಜೀವನದ ಚಿಹ್ನೆಗಳನ್ನು ನೋಡಬಹುದಿತ್ತಾದರೂ ಸಿನೆಮಾ ಪ್ರಪಂಚದ ಪೋಷಾಕು, ಮುಖ ಕೈಕಾಲುಗಳಲ್ಲಿ ಆಧುನಿಕ ಬಣ್ಣ ಮೊದಲಾದವುಗಳಿಂದ ಆಕೆಯನ್ನು ಗುರ್ತಿಸುವದು ಯಾರಿಗೂ ಸಾಧ್ಯವಿರಲಿಲ್ಲ. ಆಕೆಗೆ ತನ್ನದೇ ಆದ ಹೊಸ ಕಾರಿತ್ತು. ಸಮುದ್ರವನ್ನು ಇಣುಕುವಂತೆ ಉತ್ತಮ ಬಂಗಲೆಯೊಂದಿತ್ತು. ಅವಳ ಜೀವನ ಸುಖಮಯವಾಗಿತ್ತು.

ಹಿಂದೆ ಬೀದಿ ಬೀದಿಗಳಲ್ಲಿ, ಮಂದಿರದ ಬಾಗಿಲಿನಲ್ಲಿ ಲಾವಣಿ, ಕೀರ್ತನೆಗಳನ್ನು ಹಾಡುತ್ತಿದ್ದಾಗ ಉಪೇಕ್ಷಿಸಿದ ಜನ ಇಂದು ಆಕೆಯ ಪೂಜೆಗೆ ತೊಡಗುವರು. ಅಂದು ಮೂರು ಕಾಸು ಕೈ ಎತ್ತಿ ಕೊಡದವರು ಇಂದು ಆಕೆ ಅಭಿನಯಿಸಿದ ಸಿನೆಮಾಗಳಿಗೆ ಹೋಗಲು ದುಡ್ಡು ಚೆಲ್ಲುತ್ತಾರೆ!

ರತ್ನಳು ತನ್ನ ಮಗುವನ್ನು ಎಚ್ಚರದಿಂದ ಸಾಕುತ್ತಿದ್ದಳು. ಆಕೆಯ ಗಂಡನ ವಿಚಾರ ಯಾರಿಗೂ ತಿಳಿದಿಲ್ಲ. ಸಾಧಾರಣವಾಗಿ ಅನೇಕ ಸಿನೆಮಾ ನಟಿಗಳ ಹೆಸರು ಅವರ ಗಂಡಂದಿರ ಹೆಸರನ್ನೇ ಮರೆಮಾಡಿರುವಂತೆ ರತ್ನಳ ಗಂಡನ ವಿಚಾರ ಆಲೋಚಿಸಲು ಯಾರೂ ಹೋಗುತ್ತಿರಲಿಲ್ಲ.

ಸಿನೆಮಾ ನಟಿಯರ ಬಗ್ಗೆ ಉಪ್ಪುಖಾರ ಹಚ್ಚಿ ಕಥೆ ಹೇಳುವವರಿಗೆ ಕಡಿಮೆ ಇಲ್ಲ. ಆದರೆ ರತ್ನಳನ್ನು ಟೀಕಿಸಲು ಒಂದೇ ಒಂದು ನಾಲಗೆ ಅಲ್ಲಾಡುತ್ತಿರಲಿಲ್ಲ. ಆಕೆ ತನ್ನ ಬಾಗಿಲಿನಿಂದ ಒಬ್ಬನೇ ಬಡವನನ್ನು ಬರಿ ಕೈಯಲ್ಲಿ ಕಳುಹಿಸಿದುದಿಲ್ಲ. ರಸ್ತೆಯಲ್ಲಿ ಕೂಡ ತನ್ನ ಕಾರು ನಿಲ್ಲಿಸಿ ಬಡವರಿಗೂ, ದೀನರಿಗೂ ಸಹಾಯ ಮಾಡುವಳು. ಆಕೆಯು ಧಾರ್ಮಿಕ ಪ್ರವೃತ್ತಿಯವಳೆಂದು ಎಲ್ಲರೂ ಹೇಳುತ್ತಿದ್ದರು. ತಾನು ಹಿಂದೆ ಬೇಡುತ್ತಿದ್ದ ದೇವಸ್ಥಾನಕ್ಕೆ ಲಕ್ಷಾಂತರ ರೂಪಾಯಿ ಕೊಟ್ಟು ಅದನ್ನು ಹೊಸದಾಗಿ ಕಟ್ಟಿಸಿದ್ದಳು. ಆದರೆ ಈ ಸಿನೆಮಾ ತಾರೆ ರತ್ನಳೇ ಅಂದಿನ ಭಿಕ್ಷುಕಿ ರತ್ನಳೆಂದು ಯಾರಿಗೆ ಗುರುತಿಸುವದು ಸಾಧ್ಯ? ರತ್ನಳ ಮನೆಯಲ್ಲಿ ಇಂದೂ ಕೂಡ ಅಂದಿನ ಭಿಕ್ಷಾಪಾತ್ರೆ ಇದೆ. ಆಕೆ ಅದನ್ನು ಯಾವಾಗಲೂ ಹೂವು ಹಾರ ಹಾಕಿ ಪೂಜಿಸುತ್ತಾಳೆ. ಐಶ್ವರ್ಯ ಸಂಪತ್ತಿನ ಭೋಗ ಸಾಮ್ರಾಜ್ಯ ರಾಣಿಯಾದರೂ ತನ್ನ ಹಿಂದಿನ ತ್ಯಾಗಜೀವನವನ್ನು ಮರೆತಿಲ್ಲ.

—ಆಧಾರದಿಂದ.

ಅಂತರರಾಷ್ಟ್ರೀಯ ರಂಗದಲ್ಲಿ.

ನಡೆದ ಪ್ರಾಮುಖ್ಯ ಘಟನೆ.

ಲೇ:—ಶ್ರೀ. 'ಗುಪ್ತ' ಮಡಿಕೇರಿ.

ಜರ್ಮನಿ.

ದ್ವಿತೀಯ ಮಹಾಯುದ್ಧಕ್ಕೆ ಕಾರಣನಾದ ಹಿಟ್ಲರನ ದೇಶವನ್ನು ಯುದ್ಧಾನಂತರ ಸಂಯುಕ್ತ ರಾಷ್ಟ್ರಗಳು ನಾಲ್ಕು ಭಾಗ ಮಾಡಿ ಒಂದು ಭಾಗವು ಫ್ರೆಂಚರಿಗೆ, ಮತ್ತೊಂದು ಅಮೇರಿಕನರಿಗೆ, ಇನ್ನೊಂದು ರಷ್ಯನರಿಗೆ, ಮಗುದೊಂದು ಬ್ರಿಟನರಿಗೆಂದು ಹಂಚಿಕೊಂಡು ಆ ಭಾಗಗಳು ಅಯಾ ರಾಷ್ಟ್ರಗಳ ವಶದಲ್ಲಿವೆ. ಅಲ್ಲಿ ಅವರದೇ ಆಡಳಿತ ನಡೆದಿದೆ, ಪರಕೀಯರು ಹೇಗೆ ಆದರೂ ಪರಕೀಯರೇ! ಈ ಪರಕೀಯ ಆಡಳಿತದಲ್ಲಿ ಜರ್ಮನರು ಬೇಸರಗೊಂಡಿದ್ದಾರೆ. ಅವರಲ್ಲಿ ರಾಷ್ಟ್ರೀಯತಾ ಮತ್ತು ಸ್ವದೇಶಾಭಿಮಾನವು ತೀವ್ರರೀತಿಯಿಂದ ಬೆಳೆಯುತ್ತಿದೆ.

ಇಂದೂ ಕೂಡ ಜರ್ಮನಿಯಲ್ಲಿ ನಾಶವಾದ ವಿನಹ ಬೇರೆ ವಿಚಾರದಲ್ಲಿ ಅವರಿಗೆ ಆಸ್ಥೆ ಇಲ್ಲ. ಜರ್ಮನ್ ರಾಷ್ಟ್ರವನ್ನು ಮೊದಲಿನಂತೆ ಏಳಿಗೆಯ ಅಂತಸ್ತಿಗೆ ತರಬೇಕೆಂಬ ಲವಲವಿಕೆ ಅವರಲ್ಲಿದೆ. ಅಲ್ಲಿಯ ಸೈನ್ಯದ ಒಬ್ಬ ಅಧಿಕಾರಿಯು ಹೇಳಿದ ಈ ಮಾತು ಗಮನಾರ್ಹವಾಗಿದೆ 'ಬ್ರಿಟಿಷ್, ಫ್ರೆಂಚ್ ಅಥವಾ ಅಮೇರಿಕನರ ಬಗ್ಗೆ ಜರ್ಮನರಿಗೆ ಪ್ರೀತಿ ಇಲ್ಲ. ಉಪಾಯವಿಲ್ಲದೆ ಜನರು ಎಲ್ಲಾ ರೀತಿಯ ಕಷ್ಟಗಳನ್ನು ಇಂದು ಅನುಭವಿಸಬೇಕಾಗಿ ಬಂದಿದೆ. ಒಂದೆಡೆ ಅಮೇರಿಕನರು ಪ್ರಜಾರಾಜ್ಯದ ತತ್ವಗಳನ್ನು ಪ್ರಚಾರಮಾಡುತ್ತಿದ್ದಾರೆ. ಮತ್ತೊಂದೆಡೆ ರಷ್ಯನರು ಸಮಾಜವಾದದ ಪ್ರಚಾರ ಮಾಡುತ್ತಿದ್ದಾರೆ. ಯುದ್ಧ ಮುಗಿದು ನಾಲ್ಕು ವರ್ಷಗಳಾದರೂ ಜರ್ಮನಿಯು ಈ ಎರಡು ಪ್ರಚಾರಕ್ಕೂ ಬಲಿಬಿದ್ದಿಲ್ಲ. ಅದು ತನ್ನದೇ ಆದ ನಾಝಿ ತತ್ವವನ್ನೇ ಅವಲಂಬಿಸಿದೆ. ಸಮಯೋಚಿತವಾದಾಗ ಎಲ್ಲರೂ ಒಂದಾಗಿ ಹಿಂದಿನಂತೆ ವೈಭವಶಾಲಿಯಾದ ಜರ್ಮನಿಯನ್ನು ಪುನಹ ಕಟ್ಟುವದೇ ಅವರ ಧ್ಯೇಯ' ಈ ಮಾತಿನಲ್ಲಿ ಜರ್ಮನಿಯ ಇಂದಿನ ಸತ್ಯ ಚಿತ್ರ ಇದೆ.

ಸಂಯುಕ್ತ ರಾಷ್ಟ್ರಗಳು ತಾವು ಜರ್ಮನಿಯನ್ನು ಯೋಗ್ಯರೀತಿ ಕಂಡಿದ್ದೇವೆ! ನೋಡುತ್ತಿರುವ ಬುದ್ಧಿಯಿಂದ ಕಾಣುತ್ತಿಲ್ಲವೆನ್ನುತಿದ್ದಾರೆ. ಇದರಲ್ಲಿ ಸತ್ಯಾಂಶವಿಲ್ಲ. ಜರ್ಮನರನ್ನು ಕೆಲವೆಡೆ ದನಕರುಗಳಂತೆ ನೋಡುತ್ತಾರೆ. ಎರಡಂತಸ್ತಿನ ಮನೆಯಲ್ಲಿ ನೂರು ಗಳಿಗೂ ಮಿಕ್ಕಿ ಜನರು ವಾಸಿಸುವಂತೆ ತುಂಬಿಸಿದ್ದಾರೆ. ಜನರು ಕಂಬಳಿಗಳನ್ನು ಕಟ್ಟಿ ಕೋಣೆ ಮಾಡಿಕೊಳ್ಳುತ್ತಾರೆ. ಈ ರೀತಿ ಜರ್ಮನಿಯಲ್ಲಿ ಜೀವನ ನಡೆದಿದೆ.

ಅಮೇರಿಕಾದಲ್ಲಿ ಸತ್ಯಾಗ್ರಹ.

ಸಂಯುಕ್ತ ಅಮೇರಿಕಾದಲ್ಲಿ ವರ್ಣವಿಭೇದವನ್ನು ಪ್ರತಿಭಟಿಸಲೋಸುಗ ಅಹಿಂಸಾತ್ಮಕವಾದ ಸತ್ಯಾಗ್ರಹ ಕಾರ್ಯಕ್ರಮವನ್ನು ಕೈಕೊಂಡಿರುವರು ಇದು ಪ್ರಪಂಚದ ಎಲ್ಲಾ ಭಾಗದಲ್ಲೂ ಆಸಕ್ತಿಯನ್ನು ಹುಟ್ಟಿಸಿದೆ. ಅಮೇರಿಕಾದ ಜನಾಂಗ ಸಮತೆಯ ಕಾಂಗ್ರೆಸ್ ಸಂಸ್ಥೆಯ ನೇತೃತ್ವದಲ್ಲಿ ಈ ಚಳವಳವಾಗಿದೆ. ಅಮೇರಿಕಾದ ಘಟನೆಯಂತೆ ದೇಶದ ಎಲ್ಲ ಪ್ರಜೆಗಳಿಗೂ ಸಮಾನವಾದ ಹಕ್ಕು ಬಾಧ್ಯತೆಗಳು ಇವೆ. ಆದರೆ ಆಚರಣೆಯಲ್ಲಿ ಅದು ಹಾಗಿಲ್ಲ ಈ ಹಕ್ಕು ಬಾಧ್ಯತೆಗಳನ್ನು ಪಡೆಯುವದಕ್ಕಾಗಿ ಅಲ್ಲಿಯ ವರ್ಣದ ಜನರು ಅಹಿಂಸ ತಳಹದಿಯ ಮೇಲೆ ಈ ಚಳವಳ ಹೂಡಿದ್ದಾರೆ ಈ ಸಂಸ್ಥೆಯವರು ಬಹಿಷ್ಕಾರ, ಮತ್ತು ಪ್ರತಿಕಾರ ಕೊನೆಗೆ ಕಾನೂನಿನ ಬೆಂಬಲ ಪಡೆಯಲು ಮನವಿ ಮೊದಲಾದ ಮಾರ್ಗದ ಕಾರ್ಯಕ್ರಮ ಕೈಕೊಳ್ಳುವರು. ಅವರ ಸಂಸ್ಥೆಯ ತತ್ವಗಳಲ್ಲಿ ಕೆಲವನ್ನು ಸೂಕ್ಷ್ಮವಾಗಿ ಇಲ್ಲಿ ಕೊಡಲಾಗಿದೆ

(೧) ಈ ಸಂಸ್ಥೆಯ ಸದಸ್ಯನು ಬೇರೆ ಯಾವ ವ್ಯಕ್ತಿಯೊಡನಾಗಲೀ, ಸಂಸ್ಥೆಯೊಡನಾಗಲೀ ದ್ವೇಷ ಯಾ ಅಸೂಯೆ ಮಾಡಕೂಡದು

(೨) ಸದಸ್ಯರು ಸೈನ್ಯತಾ ಭಾವನೆ ತೋರಬೇಕು; ಉದ್ಧಟ ವರ್ತನೆ ಸಲ್ಲದು. ತನ್ನಲ್ಲಿರುವ ದುರ್ಬಲತೆಯನ್ನೂ, ಅಸಾಮರ್ಥ್ಯವನ್ನು ಒಪ್ಪಿಕೊಳ್ಳಲು ಸದಾಸಿದ್ಧರಿರಬೇಕು

(೩) ಪ್ರತಿವಾದಿಯು ಕೋಪದಿಂದ ಉದ್ಧಟನಾಗಿ ವರ್ತಿಸಿದರೆ ಸೌಹಾರ್ದಭಾವನೆಯಿಂದ ಸಹಿಸಿಕೊಳ್ಳಬೇಕು. ಹಿಂಸಾಪ್ರಯೋಗವು ಎಂದೂ ಕೂಡದು.

ಚೀನಾ ಯುದ್ಧರಂಗ.

ಶಾಂಘಾಯಿ ಪತನವಾದ ನಂತರ ಅಲ್ಲಿ ಕಮ್ಯೂನಿಷ್ಟರು ತೋರಿಸಿದ ವರ್ತನೆ ಶ್ಲಾಘನೀಯವಾಗಿದೆ. ಅಲ್ಲಿರುವ ಬ್ರಿಟನ್, ಅಮೇರಿಕಾ, ಯಾ ಮತ್ತಾವುದೇ ವಿದೇಶಿಯರಿಗೆ ಯಾವ ರೀತಿಯ ಹಾನಿಯನ್ನೂ ಮಾಡದೆ ಕಮ್ಯೂನಿಷ್ಟ ಪಡೆಯು ಶಿಸ್ತಿನಿಂದ ವರ್ತಿಸಿತು. ಲೂಟಿಗಾಗಲೀ, ಬೇರೆ ಗಲಭೆಗಾಗಲೀ ಎಡೆ ಇರಲಿಲ್ಲ. ಶಾಂಘಾಯಿ ಪತನದ ೭೨ ಗಂಟೆಗಳಲ್ಲಿ ನಗರದಲ್ಲಿ ಶಾಂತಿ ನೆಲೆಸಿತ್ತು. ಕಮ್ಯೂನಿಷ್ಟರ ಈ ಶಿಸ್ತು ಅಮೇರಿಕನರ ಬಾಯಿಯಿಂದಲೂ ಹೊಗಳಿಕೆಯ ಮಾತುಗಳನ್ನು ತಂದಿದೆ.

ಕಮ್ಯೂನಿಷ್ಟರು ಆಕ್ರಮಿಸಿದ ಭಾಗದಲ್ಲಿ ಶಿಸ್ತು ಆದರ್ಶನೀಯವಾಗಿದೆ ಅಲ್ಲಿಯ ಆಡಳಿತ ಯೋಗ್ಯತೆಯ ಬಗ್ಗೆ ಈ ಒಂದು ನಿದರ್ಶನ ಸಾಕಾಗಬಹುದು. ರೈಲ್ವೆ ನಿಲ್ದಾಣದಲ್ಲಿ ಅಸಾಧ್ಯ ಗಡಿಬಿಡಿ ಇತ್ತು. ಸೀಟ್ ದೊರೆಯುವದೇ ತೊಂದರೆಯಾಗಿತ್ತು ಶ್ರೀಮಂತನೊಬ್ಬನಿಗೆ ಸೀಟ್ ದೊರೆಯುವಂತೆ ಒಬ್ಬ ಕೂಲಿಯು ಏರ್ಪಡಿಸಿದನು. ಆತನ ಸಾಮಾನುಗಳನ್ನು ಕೊಡುವಾಗ ಇದಕ್ಕಾಗಿ ವಿಶೇಷ ಸಂಭಾವನೆಯನ್ನು ಬೇಡಿದನ! ಈ ವಾರ್ತೆಯು ಆತನ ಸಹೋದ್ಯೋಗಿಗಳಿಗೆ ತಿಳಿಯಿತು. ಅವರು ಒಂದು ಸಭೆ ಸೇರಿಸಿ ಈತನ ಈ ಲಂಚಪಡೆಯುವ ನೀತಿಯನ್ನು ಖಂಡಿಸಿ ತಮ್ಮ ಸಮೂಹಕ್ಕೇ ಕಳಂಕತಂದಿರುವದಾಗಿ ಟೀಕಿಸಿ ಆತನಿಗೆ ಬಹಿಷ್ಕಾರ ಹಾಕಿದರು. ಇಂಥಾ ಪ್ರಾಮಾಣಿಕತೆ, ಸತ್ಯವರ್ತನೆ ಅವರಲ್ಲಿದೆ. ನಿಶ್ಚಿತ ದಕ್ಷಿಣಾ ಹೆಚ್ಚು ಎಂದೂ ತೆಗೆದುಕೊಳ್ಳರು. ಈ ಭಾವನೆ ಮತ್ತು ಘನತೆ ಭಾರತಕ್ಕೆ ಎಷ್ಟು ಅವಶ್ಯ? ಈ ಗುಣಗಳಿಂದಾಗಿಯೇ ಚೀನಾದಲ್ಲಿ ಕಮ್ಯೂನಿಷ್ಟರು ತಡೆಯಿಲ್ಲದೆ ಮುಂದೆ ಸಾಗುತ್ತಿರುವದಾಗಿದೆ.

ಜಪಾನ್.

ಯುದ್ಧೋತ್ತರ ಪುನರುತ್ಥಾನ ಕಾರ್ಯದಲ್ಲಿ ಜಪಾನಿನಷ್ಟು ಬೇಗ ಚೇತರಿಸಿಕೊಂಡ ಇತರ ರಾಷ್ಟ್ರಗಳಿರಲಾರವು. ಯುದ್ಧದಲ್ಲಿ ಈ ದೇಶಕ್ಕೆ ಆದ ನಷ್ಟವೂ ಕಡಿಮೆ ಎನ್ನಬೇಕು. ಅದು ಇಂದು ಔದ್ಯೋಗಿಕ ರಂಗದಲ್ಲಿ ಬ್ರಿಟನನ್ನೂ ಮೀರಿಸಿದೆ. ಆದರೆ ಅಲ್ಲಿ ಅಮೇರಿಕನರ ಸರ್ಕಾವಲು ಇನ್ನೂ ಇದ್ದು ಅಲ್ಲಿಯ ಅಮೇರಿಕನ್ ಅಧಿಕಾರಿಗಳಾದ ಜನರಲ್ ಮೆಕಾರ್ಥರವರು ಜಪಾನಿನ ಕುರುವು ಹದ್ದುಮೀರಿ ಬೆಳೆಯದಂತೆ ಹಿಡಿತದಲ್ಲಿಟ್ಟಿದ್ದಾರೆ. ಜಪಾನಿನ ಮೇಲೆ ಕಮ್ಯೂನಿಷ್ಟರ ಪ್ರಭಾವ ಆಗಕೂಡದಿದೆಯೆಂದು ವರ್ತಮಾನವಿದೆ. ಇದನ್ನು ತಡೆಯಲು ಅಮೇರಿಕಾವು ಕಠಪ್ರಯತ್ನ ಮಾಡದಿರದು. ಅಮೇರಿಕಾವು ಜಪಾನಿನ ಪ್ರಗತಿಯ ಬಗ್ಗೆ ಹೆಚ್ಚು ತಡೆ ಹಾಕಿಲ್ಲ, ಏಕೆಂದರೆ ಎಂದಾದರೊಮ್ಮೆ ರಷ್ಯಾಕ್ಕೂ, ಅಮೇರಿಕಾಕ್ಕೂ ಘರ್ಷಣೆ ಆಗಬಹುದು.. ಆ ಕಾಲದಲ್ಲಿ ಬಲಯುತವಾದ ಜಪಾನು ತನ್ನ ಅಂಕಿತದಲ್ಲಿದ್ದು ಅದನ್ನು ರಷ್ಯಾದ ಬಾಯಿಗೆ ಒಡ್ಡಬಹುದೆಂಬ ನಂಬಿಕೆ ಅವರಲ್ಲಿದೆ ಅದಕ್ಕಾಗಿಯೇ ಇಂದು ಜಪಾನಿನಲ್ಲಿ ಅವರ ಹಿಡಿತ ಸ್ವಲ್ಪ ಸಡಿಲಾಗಿರಲು ಕಾರಣ.

ನೆಹರು ರಷ್ಯಾಕ್ಕೆ?

ಡೆರಾಡೆನ್ನಿನಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದ ಕಾಲಕ್ಕೆ ರಷ್ಯಾದಿಂದ ಕರೆ ಬಂದರೆ ತಾವು ರಷ್ಯಾವನ್ನು ಸಂದರ್ಶಿಸುವದಾಗಿ ನೆಹರೂರವರು ಹೇಳಿದರು. ಈ ಹೇಳಿಕೆ ರಷ್ಯಾದಲ್ಲಿ ಆಸಕ್ತಿಯನ್ನು ಹೆಚ್ಚಿಸಿದೆ ರಷ್ಯಾದ ಮಾರ್ಷಲ್ ಸ್ಟಾಲಿನ್‌ರವರು ನೆಹರೂರವರನ್ನು ಆಮಂತ್ರಿಸಲಿರುವರೆಂದು ತಿಳಿಯಬಂದಿದೆ.

ಈ ಮಧ್ಯೆ ಅಮೇರಿಕಾದ ಮಿ. ಹೆರ್ಸ್ ಲೂಫರ್ಡ್ ಮತ್ತು ಅವರ ಪತ್ನಿ ಗ್ಲೇಡ್ ಲೂಫರ್ಡರು ಭಾರತಕ್ಕೆ ಬಂದಿದ್ದಾರೆ. ಇವರು ಅಮೇರಿಕಾದ ಹಿಂದಿನ ವೆಂಡೆಲ್ ವಿಲ್ಕಿಯವರಂತೆ ಜಗತ್ತು ಒಂದು, ಅದಕ್ಕೆ ಒಂದೇ ವಿಶ್ವಸರಕಾರವಿರಬೇಕೆಂದು ವಾದಿಸುವವರು. ಅದರ ಪ್ರಚಾರಕ್ಕಾಗಿಯೇ ಅವರು ಭಾರತಕ್ಕೆ ಬಂದಿದ್ದಾರೆ. ವಿಶ್ವಸರಕಾರವಿದ್ದರೆ ಆಗ ಯಾವ ಜನಾಂಗ ಜನಾಂಗಗಳ ಪೈಪೋಟಿ ನಿಲ್ಲುವದೆಂದೂ, ಜಾಗತಿಕ ಯುದ್ಧವನ್ನು ತಡೆಯಲು ಅದೇ ಸೂಕ್ಷ್ಮ ಮಾರ್ಗವೆಂದೂ ಅವರ ಅಭಿಪ್ರಾಯ. ಇಂಥಾ ಅಖಂಡ ವಿಶ್ವಚಳವಳವನ್ನು ನಡೆಸಲು ಶ್ರೇಷ್ಠ ನೈತಿಕಗುಣವಿರುವ ಪಂಡಿತ ಜವಾಹರರೇ ಅರ್ಹರೆಂದೂ ಆ ಕಾರಣ ಅವರ ನಾಯಕತ್ವವನ್ನು ಪಡೆಯಲು ತಾವು ಬಂದಿರುವದಾಗಿಯೂ ಅವರು ಹೇಳಿದ್ದಾರೆ.

ದಿ ಟ್ರಾಪಿಕಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:- ಲಾಲ ಶಂಕರ್ ಲಾಲ್.

ಮುಖ್ಯ ಕಚೇರಿ:- ಹೊಸ ಡೆಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್

ಹಕೀಮ್ ಅಜಮುಲಖಾನ್. ಡಾ|| ಎಂ. ಎ. ಅನ್ಸಾರಿ.

(೧) ದೇಶದಲ್ಲಿ ಪ್ರಮುಖ [illegible] ಸ್ಥಾಪಿಸಲ್ಪಟ್ಟಿದೆ.

(2) ಸ್ವತಂತ್ರ ಭಾರತದಲ್ಲಿ ಅಧಿಕ [illegible] ಭದ್ರವಾಗಿರುವುದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯವಾಗಿದೆ.

(3) ಕಳೆದ 22 ವರ್ಷಗಳ ಹಿಂದಿನ ಅನುಭವವುಳ್ಳ ನಾವು ನಿಮ್ಮ ಜೀವವಿಮಾ ಸಂಬಂಧದ ಯಾವದೇ ಸೇವೆಸಲ್ಲಿಸಲು ಸಂತೋಷಪಡುತ್ತೇವೆ.

(4) ಜೀವವಿಮಾ, ಬೆಂಕಿ, ಮರಾಯನ್ ಮತ್ತು ಅಪಘಾತ ಇನ್ಶೂ ಕಾರ್ಯಗಳನ್ನು ಮಾಡುತ್ತಿದೆ

(5) ಪ್ರಾರಂಭದಿಂದ ವಿಮೆದಾರರಿಗೆ ಬೋನಸ್ಸು ಕೊಡುತ್ತಿದೆ.

(6) ಯೋಗ್ಯ ಏಜೆಂಟು ಮತ್ತು ಆರ್ಗನೈಜರುಗಳಿಗೆ ತಮ್ಮ ಉದ್ಯೋಗದಲ್ಲಿ ಕಿರುವನ್ನು ಮುಟ್ಟಲು ಒಳ್ಳೆ ಸಂದರ್ಭವನ್ನು ಒದಗಿಸಿಕೊಟ್ಟು ಎಲ್ಲಾ [illegible] ದಯಾಳುತನದಿಂದ ಮತ್ತು ಯೋಗ್ಯವಾದ ರೀತಿಯಲ್ಲಿ ಅವರನ್ನು ನಡಿಸಿಕೊಳ್ಳಲಾಗುತ್ತದೆ [illegible]

ನಮ್ಮ ಹೊಸ ವಿಸ್ತಾರದ ಯೋಜನೆಯಲ್ಲಿ ಆಕರ್ಷಕ ಕಮಿಷನ್ ಮೇಲೆ [illegible] ನೇಮಿಸಿಕೊಳ್ಳಲಾಗುವದು. ದಯವಿಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಏಜೆನ್ಸಿ ಸುಪರಿಂಟೆಂಡೆಂಟ್, ಮಡಿಕೇರಿ, ಕೊಡಗು. ಅಥವಾ ಎಂ. ಎ. ಬೆಳ್ಯಪ್ಪ, ಬ್ರಾಂಚ್ ಸೆಕ್ರೆಟರಿ, ದಿ ಟ್ರಾಪಿಕಲ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್; ಹಂಪನಕಟ್ಟೆ, ಮಂಗಳೂರು.

ವೀರಾಜಪೇಟೆಗೆ 'ಕೊಡಗು' ಪತ್ರಿಕೆಯ ಏಜೆಂಟರು ಶ್ರೀ ಪಿ. ಎನ್. ಗೋವಿಂದರಾಜುರವರು.

ಕೊಡಗು

ತಾ. ೧೦-೬-೧೯೪೯ ನೇ ಶುಕ್ರವಾರ

ಪ್ರತ್ಯೇಕ ಪ್ರಾತಿನಿಧ್ಯ

ರಾಜ್ಯಘಟನಾ ಸಮಿತಿಯಲ್ಲಿ ಕೀರ್ವೋನವಾಗ ಪ್ರಾಮುಖ್ಯ ವಿಚಾರಗಳಲ್ಲಿ ಅಲ್ಪ ಸಂಖ್ಯಾತರಿಗೆ ಶಾಸನ ಸಭೆಗಳಲ್ಲಿ ಸ್ಥಳ ಪ್ರತ್ಯೇಕಿಸಿಡುವ ಈ ವರೆಗಿನ ಪದ್ಧತಿಯನ್ನು ತೆಗೆದು ಹಾಕುವ ನಿರ್ಣಯವು ಜಾತ್ಯಾತೀತ ಅಖಂಡ ಭರತಖಂಡದ ದೃಷ್ಟಿಯಿಂದ ಹಿರಿದಾದುದು.

ದಲಿತ ಸಮಾಜ (ಹರಿಜನರೂ) ಮತ್ತು ಸಿಕ್ಕರ ಒಂದು ದಳಿತ ವರ್ಗಕಲ್ಲದೆ ಬೇರಾವ ಅಲ್ಪ ಸಂಖ್ಯಾತ ಸಮಾಜಕ್ಕೆ ಕಾದಿಟ್ಟ ಸ್ಥಾನಗಳಿರತಕ್ಕದ್ದು. ಹರಿಜನರಿಗೆ ಮತ್ತು ದಳಿತ ಸಿಕ್ ವರ್ಗಕ್ಕೆ ಕಾದಿಡುವ ಪದ್ಧತಿಯೂ ಕೂಡ ಮುಂದಿನ ಹತ್ತು ವರ್ಷಗಳವರೆಗೆ ಮಾತ್ರ ಇರಬೇಕು.” ಎಂದು ಪಂಡಿತಜವಾಹರರು ಈ ವಿಚಾರ ಮಾತಾಡುತ್ತಾ ಹೇಳಿದರು ಭಾರತೀಯರ ಆದೃಷ್ಟ ನಿರ್ಮಾಪಕ ಚರಿತ್ರಾರ್ಹ ಬದಲಾವಣೆ ಇದು.

ಪ್ರತ್ಯೇಕ ಮತದಾನದ ಪದ್ಧತಿಯನ್ನು ಬ್ರಿಟಿಷರು ಜಾರಿಗೆ ತಂದು ಅದರಿಂದ ಭಾರತೀಯರಾದ ನಾವು ಅನುಭವಿಸಿದ ಕಷ್ಟ ನಿಷ್ಠುರಗಳು ಎಲ್ಲರಿಗೂ ತಿಳಿದಿದೆ. ರಾಷ್ಟ್ರವನ್ನು ಇಬ್ಭಾಗವಾಗಿ ಲಕ್ಷಾವಧಿ ಮಂದಿಯ ಮರಣಕ್ಕೂ ಮಿಲಿಯಗಟ್ಟಲೆ ಜನರ ಸ್ಥಳಾಂತರಕ್ಕೂ ಇದೇ ಕಾರಣವಾಯಿತು. ಈ ಪ್ರತ್ಯೇಕ ತಾದೆವ್ವವನ್ನು ಭಾರತ ನವರಾಜ್ಯ ಶಾಸನದಲ್ಲಿ ಪ್ರತಿಷ್ಠಿಸುವದಿಲ್ಲವೆಂದು ಮೊದಲೇ ಎಲ್ಲರಿಗೂ ತಿಳಿದಿತ್ತು. ಹಿಂದೂದೇಶವು ಜಾತ್ಯಾತೀತ ರಾಷ್ಟ್ರವೆಂದು ಘೋಷಿಸಿದಾಗಲೇ ಈ ಪ್ರತ್ಯೇಕ ಮತದಾನ ಪದ್ಧತಿಯು ಪ್ರಾಣಹೋಗಿತ್ತು. ಈಗ ಅದರ ಸಮಾಧಿ ಆಯಿತು!

ದೇಶದಲ್ಲಿ ಪ್ರತ್ಯೇಕ ಪದ್ಧತಿಯಿಂದ ನಡೆಯುತ್ತಿರುವ ತೊಂದರೆಯನ್ನು ನಿವಾರಿಸಲು ಕಲವು ಸಮಯಕ್ಕೆ ಹಿಂದೆ ಘಟನಾ ಸಭೆಯು ಸರ್ದಾರ ಪಟೇಲರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಏರ್ಪಡಿಸಿತ್ತು. ಆ ಸಮಿತಿಯು ತನ್ನ ವರದಿಯಲ್ಲಿ ಇದನ್ನು ತೆಗೆದು ಹಾಕುವ ಸ್ಪಷ್ಟ ಸೂಚನೆಯನ್ನು ನೀಡಿತ್ತು. “ಭಾರತ ಘಟನೆಯ ಗತ ಚರಿತ್ರೆಯಲ್ಲಿ ಸ್ಪಷ್ಟವಾಗಿದ್ದ ಈ ಕಲಂಕವನು ನಾವು ಈ ದಿನ ದೇವರ ದಯೆಯಿಂದ ಉಜ್ಜಿ ತೆಗೆಯುತ್ತಿದ್ದೇವೆ; ಪ್ರತಿಯೊಂದು ವಿಧಾನದಲ್ಲೂ ಪ್ರತಿಯೊಬ್ಬನೂ ಮತ್ತೊಬ್ಬನಿಗೆ ಸರಿಸಮಾನನಾಗಿರುವ ನಿಜವಾದ ಜಾತ್ಯಾತೀತ ಪ್ರಜಾಸತ್ತಾತ್ಮಕ ರಾಜ್ಯದ ಅಸ್ತಿವಾರಹಾಕುತ್ತಿದೇವೆ” ಎಂದು ಸರ್ದಾರ ಪಟೇಲರು ಈ ವಿಚಾರ ಮಾತಾಡುತ್ತಾ ತುಂಬು ಹೃದಯದಿಂದ ಹೇಳಿದರು.

ಭಾರತೀಯರು ಒಂದು. ಜಾತಿ ಮತ ವ್ಯತ್ಯಾಸಗಳನ್ನು ಬಿಟ್ಟು “ಎಲ್ಲರೊಂದಿಗೆ ನಾವು” ಎಂದು ಪ್ರತಿಯೊಬ್ಬನೂ ಭಾವಿಸಬೇಕಾಗಿದೆ. ಎಲ್ಲಾ ಧರ್ಮದ ಜನರು ಅವರವರ ಧರ್ಮದಂತೆ ವರ್ತಿಸಲು ಯಾವ ಆತಂಕವೂ ಭವಿಷ್ಯ ಭಾರತದಲ್ಲಿ ಇರಲಾರದಾದರೂ ರಾಜಕೀಯ ದೃಷ್ಟಿಯಿಂದ ಭಾರತೀಯರು ಒಂದು. ಅದರಲ್ಲಿ ಜಾತಿ, ಮತಗಳ ಸಂಕೀರ್ಣತೆ ಇರಬರದು. ರಾಜಕೀಯದಲ್ಲೇ ಏಕೆ? ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ಜನತೆಯು ಹೊರತು ಜಾತಿಯ ಸ್ಪರ್ಧೆ ಇಲ್ಲದಂತಾಗಬೇಕು. ಇಂಥಾ ಒಂದು ಸ್ಥಿತಿ ಭಾರತದಲ್ಲಿ ಬರುವಂತೆ ನಾವೆಲ್ಲರೂ ಪ್ರಯತ್ನಿಸಬೇಕು.

ವರ್ತಮಾನ.

ಬೊಂಬಾಯಿ ವಿಶ್ವವಿದ್ಯಾಲಯದ ಇಂಟರ್ ಮೀಡಿಯೇಟ್ ಪರೀಕ್ಷೆಯಲ್ಲಿ ಶ್ರೀ ಮುಂಡಂಡ ದಿಲೀಪ್ ಮುತ್ತಣ್ಣನವರೂ ಶ್ರೀಮತಿ ಮಾತಂಡ ಪದ್ಮಿನಿ ಕಾರ್ಯಪ್ಪನವರೂ, ತೇರ್ಗಡೆಯಾಗಿರುವರು.

ಮದ್ರಾಸ್ ವಿಶ್ವವಿದ್ಯಾಲಯದ ಬಿ. ಎಸ್. ಸಿ (ಆನರ್ಸ್) ಪರೀಕ್ಷೆಯಲ್ಲಿ ಶ್ರೀ ಪಟ್ಟಮಾಡ ಸಿ. ಐಯ್ಯಣ್ಣನವರೂ, (ಪ್ರಥಮ ಶ್ರೇಣಿ) ಶ್ರೀ. ಮನೆಯಪಂಡ ಮಾದಯ್ಯನವರೂ, ಬಿ. ಎಸ್ ಸಿ ಪರೀಕ್ಷೆಯಲ್ಲಿ ಶ್ರೀಮತಿ ಪಟ್ಟಮಾಡ ಸಿ ಕಾವೇರಮ್ಮನವರೂ (ಪ್ರಥಮ ದರ್ಜೆ) ಶ್ರೀ ಕೊಂಗಂಡ ನಾಣಯ್ಯನವರೂ, ಶ್ರೀ. ಕೋಟೆರ ಚೆಂಗಪ್ಪ ಮತ್ತು ಕೋಡಿರ ಅಪ್ಪಚ್ಚ ಇವರುಗಳು ಬಿ. ಈ. ಪರೀಕ್ಷೆಯಲ್ಲೂ ತೇರ್ಗಡೆಯಾಗಿರುವರು.

ಸರಕಾರದ ಅನುಮತಿ ವಿನಹ ಕೊಡಗಿನಲ್ಲಿ ಅಗಲಕಿ, ಹುರಿಕಾಳು ಮಾರುವದಾಗಲೀ, ಇಟ್ಟುಕೊಳ್ಳುವದಾಗಲೀ ತಯಾರಿಸುವದಾಗಲೀ ಕೂಡದೆಂದು ಪ್ರಕಟಿಸಲಾಗಿದೆ.

ಕೊಡಗು ಜಿಲ್ಲಾ ನ್ಯಾಯಾಧೀಶರಾದ ಶ್ರೀ. ಎನ್. ಮುದ್ದಪ್ಪನವರು ತಾ. ೧೫-೬-೪೯ರಿಂದ ಎರಡು ತಿಂಗಳ ರಜೆಯಲ್ಲಿ ಹೋಗುವರೆಂದೂ ಅವರ ಬದಲಿಗೆ ಮಡಿಕೇರಿ ಮುನ್ಸೀಫರಾದ ಶ್ರೀ ಐ. ಸಿ. ಸುಬ್ಬಯ್ಯನವರನ್ನು ನೇಮಿಸಲಾಗುವದೆಂದೂ, ಶ್ರೀ. ಎಂ ಎನ್ ಗುಂಡುರಾಯರನ್ನು ಉತ್ತರ ಕೊಡಗಿನ ಮುನ್ಸೀಫರಾಗಿಯೂ, ಪಾರ್ಟಿಕಲ್ಚರಲ್ ಇಲಾಖೆಯ ಶ್ರೀ. ದೇವರಾಜನ್‌ರವರನ್ನು ಜಿಲ್ಲಾ ಎಂಪ್ಲಾಯಿಮೆಂಟ್ ಆಫೀಸರಾಗಿ ನೇಮಕ ಮಾಡಲಾಗುವದೆಂದೂ ವರ್ತಮಾನ.

ಜನರ ಆರೋಗ್ಯಕ್ಕೆ ಸಂಬಂಧಿಸಿದ ಚಲನ ಚಿತ್ರ ರೀಲೊಂದನ್ನು ನಾಳೆಯಿಂದ ಒಂದು ವಾರದ ವರೆಗೆ ಕಾವೇರಿ ಮಹಲಿನಲ್ಲಿ ಚಿತ್ರ ಪ್ರಾರಂಭವಾಗುವ ಮೊದಲು ಪ್ರದರ್ಶಿಸುವರೆಂದು ಆರೋಗ್ಯ ಇಲಾಖೆಯವರು ತಿಳಿಸುತ್ತಾರೆ.

ಕಗ್ಗೋಡ್ಲು ಗ್ರಾಮದ ಶ್ರೀ ಮಾವೆರ ಬೋಪಯ್ಯನವರಲ್ಲಿ ಕಳೆದ ನಾಲ್ಕಾರು ತಿಂಗಳುಗಳಿಂದ ಸಧಾರಣ ಕರಿವರ್ಣದ ಕೋಣ ಒಂದು ಬಂದು ಸೇರಿಕೊಂಡಿದೆ, ವಾರೀಸ್‌ದಾರರು ತಕ್ಕ ರುಜುವಾತಿನಿಂದ ಹೊಡೆದುಕೊಂಡು ಹೋಗಬಹುದಾಗಿ ತಿಳಿಸುತ್ತಾರೆ

ಹುದಿಕೇರಿ ಹೈಸ್ಕೂಲಿನ ನಾಲ್ಕನೇ ಫಾರಂ ಕ್ಲಾಸು ಈ ತಾ ೧೩ನೇ ಸೋಮವಾರ ಚೀಫ್ ಕಮಿಷನರವರಿಂದ ತೆರೆಯಲ್ಪಡುವದೆಂದು ತಿಳಿಯಬರುತ್ತದೆ.

ಚೀಫ್ ಕಮಿಷನರವರು ಈ ತಾ. ೯ರಿಂದ ೧೩ರ ವರೆಗೆ ನೀರಾಜನ್ಸೇಟೆರ್‌ನಲ್ಲಿ ಕ್ಯಾಂಪು ಮಾಡುತ್ತಾರಾಗಿ ತಿಳಿಯುತ್ತೇವೆ.

ಆಕಸ್ಮಿಕ ಮರಣ.

ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಲ್ಲಿ ಅಧ್ಯಾಪಕರಾಗಿದ್ದ ಶ್ರೀ. ಐಚೆಟ್ಟಿರ ಐ. ಮಾದಯ್ಯನವರು ಶಾಲೆಯಿಂದ ತಾರೀಕು ೩-೬-೪೯ರಲ್ಲಿ ಮನೆಗೆ ಮೋಟಾರ್ ಸೈಕಲಿನಲ್ಲಿ ಹೋಗುತ್ತಿದ್ದಾಗ ಮಡಿಕೇರಿ ಸಿದ್ದಾಪುರ ರಸ್ತೆಯ ಸುಮಾರು ಮೂರ ಮೈಲು ದೂರದಲ್ಲಿ ಎದುರು ಗಡೆಯಿಂದ ಬರುತ್ತಿದ್ದ ಕೊಡಗು ವ್ಯವಸಾಯ ಇಲಾಖೆಯ ವ್ಯಾನಿಗೆ ಹೇಗೋ ಡಿಕ್ಕಿ ಹೊಡೆದು ಜಖಂಗೊಂಡು ಅದೇ ವ್ಯಾನಿನಲ್ಲಿ ಮಡಿಕೇರಿ ಆಸ್ಪತ್ರೆಗೆ ತಂದ ಕೆಲವು ಸಮಯದಲ್ಲಿ ನಿಧನರಾದರು

ಶ್ರೀ. ಮಾದಯ್ಯನವರು ಇನ್ನೂ ಸುಮಾರು ೨೫ ವಯಸ್ಸಿನ ತರುಣರಾಗಿ ಜನಾನುರಾಗಿಯಾಗಿದ್ದರು ಆಟೋಟಗಳಲ್ಲಿ ಅವರು ನಿಷ್ಣಾತರಾಗಿದ್ದರು. ಆಟೋಟಗಳಿಗಾಗಿಯೇ ಇವರು ಹೈಸ್ಕೂಲಿನ ಅಧ್ಯಾಪಕರಾಗಿದ್ದರು. ಈ ವಿಚಾರದಲಿ ಹೈಸ್ಕೂಲಿನ ನಿಧಿಯಂತಿದ್ದ ಇವರ ನಿಧನವು ಸರ್ವರಿಗೂ ವ್ಯಸನಕಾರಕವಾಗಿದೆ. ಅಕಾಲ ಮೃತ್ಯುವಿಗೆ ತುತ್ತಾದ ಇವರ ಆತ್ಮಕ್ಕೆ ಶಾಂತಿ ದೊರೆಯಲೆಂದೂ, ದುಃಖಿತ ಕುಟುಂಬಕ್ಕೆ ದುಃಖ ಸಹನಾಶಕ್ತಿಯನ್ನು ದೇವರು ಕೊಡಲೆಂದೂ ಪ್ರಾರ್ಥಿಸುವೆವು. ಸಂ.]

ರಾಜ್ಯಘಟನಾ ಸಭೆ.

ನಮ್ಮ ಭವಿಷ್ಯ ರಾಜ್ಯಘಟನೆಯನ್ನು ತಯಾರಿಸುತ್ತಿರುವ ರಾಜ್ಯಘಟನಾ ಸಭೆಯ ಸದಸ್ಯರೆಲ್ಲ ಸಿಟ್ಟಿನ ಜನರಿದ್ದಾರೆ. ಈ ಸದಸ್ಯರಿಗೆ ದಿನಕ್ಕೆ ೪೫ ರೂಪಾಯಿಯಂತೆ ಬತ್ಯವಿದೆ. ಆದರೂ ಘಟನಾಸಭಾಗೃಹದಲ್ಲಿ ಇವರು ಇಳಿದುಕೊಂಡಿರುವ ಮನೆಗಳಿಗೆ ಇಲೆಕ್ಟ್ರಿಕ್ ದೀಪದ ಚಾರ್ಜನ್ನು ಸಹ ಕಾನರೇಕರಿದ್ದ ಡೆಲ್ಲಿ ಮುನ್ಸಿಪಾಲಿಟಿಯವರು ಘಟನಾ ಸಭೆಯ ಪ್ರೆಸಿಡೆಂಟರಿಗೆ ಈ ವಿಚಾರ ತಿಳಿಸಿದ್ದ ಅವರು ಇಂಥಾ ಸದಸ್ಯರ ಬತ್ಯದಿಂದ ಅದನ್ನು ಮುರಿದು ಪೂರ ಸಭೆಯವರಿಗೆ ಕೊಡವ ವಿರ್ಪಾಡು ಮಾಡಿದನರಂತೆ.

ಘಟನಾ ಸಭೆಯ ಈ ಸದಸ್ಯರು ಅಲ್ಲೇ ಹತ್ತಿರದ ಹೊಟೇಲುಗಳಿಂದ ಊಟ, ತಿಂಡಿ ತರಿಸಿಕೊಳ್ಳುವ ಅಭ್ಯಾಸವಿದ್ದು ಮೀಟಿಂಗು ಮುಗಿದು ತಮ್ಮ ತಮ್ಮ ಸ್ಥಳಗಳಿಗೆ ಹೊರಡುವಾಗ ಹೊಟೇಲಿನ ಪ್ಲೇಟು, ಕಪ್ಪುಗಳನ್ನು ತಮ್ಮ ಗಂಟುಗಳೊಳಗೆ ಕೆಲವರು ಸೇರಿಸುವ ಪರಿಪಾಟವಿತ್ತೆಂದೂ ಇತ್ತಲಾಗಿ ಹೋಟೆಲಿನವರು ಎಚ್ಚರಿಕೆ ವಹಿಸಬೇಕಾಯಿತೆಂದು ಸುದ್ದಿ ಪ್ರಕಟವಾಗಿದೆ!

ರಾಜ್ಯ ಘಟನಾ ಸಭೆಯ ಚರ್ಚೆಯನ್ನು ನೋಡಿದರೆ ಕೆಲವು ಹೆಚ್ಚು ಹವಿನ್ಯದ ಸದಸ್ಯರೇ ಅದರಲ್ಲಿ ಭಾಗವಹಿಸುತಿರುವರೆಂತೆ ತೋರುತ್ತದೆ. ನಾಶ್ಯವಾಗಿ ಘಟನಾ ಸಭೆಯ ಮುಂದಿನ ಸಾಲಿನಲ್ಲಿಯ ಕಲವು ನುಖಂಡರಿಂದಲೇ ಸರ್ವಕಾರ್ಯವೂ ನಡೆಯುತ್ತದೆ ಈ ವರೆಗೆ ರಾಜ್ಯಘಟನಾ ಸಭೆಯಲ್ಲಿ ಒಮ್ಮೆಯೂ ದರೂ ಬಾಯಿಬಿಡದ ಅಲಂಕಾರ ಸದಸ್ಯರುಗಳೂ ಇದ್ದಾರೆ. ಈಗ ಡೆಲ್ಲಿಯಲ್ಲಿ ವಿಪರೀತ ಸೆಕೆ. ಆದ್ದರಿಂದ ರಾಜ್ಯ ಘಟನಾ ಸಭೆಯನ್ನು ಬರುವ ಜುಲೈ ವರೆಗೆ ಮುಂದರಿಸಬೇಕೆಂದು ಕೆಲವು ಸೂಚಿಸಿದರೂ ಅಧ್ಯಕ್ಷರು ಒಪ್ಪಿಲ್ಲ. ಮೇಲೇ ರಾಜ್ಯಘಟನಾ ಸಭೆಯಲ್ಲಿ ಹಿಂದಿನ ಅಧಿವೇಶನಗಳಲ್ಲಿ ಸಂಭ

ರು ನಿದ್ರೆಮಾಡುವದು; ಅನೇಕರು ತಮ್ಮ ಅಂತರಿಕ ಮಾತುಗಳಲ್ಲಿ ತೊಡಗಿರುವದು ಸಾಧಾರಣವಾಗಿತ್ತು. ಈಗಿನ ಶೆಕೆಯ ಕಾರಣದಿಂದ ಇವರ ಸಂಖ್ಯೆ ಹೆಚ್ಚಿದೆ.

ಒಮ್ಮೆ ಘಟನಾ ಸಭೆಯು ಮುಖ್ಯ ‘ವಿಪ್’ ರೇ ಹಿಂದಿನ ಆಸನಕ್ಕೆ ಹೋಗಿ ನಿದ್ರೆ ಹೊಡೆದರಂತೆ ನಿದ್ರೆಮಾಡಿದರೆ ಮಾಡಿಕೊಳ್ಳಬಹುದು. ಆದರೆ ಗೊರಕೆ ಹೊಡೆಯ ಕೂಡದೆಂಬ ತೀರ್ಮಾನಕ್ಕೆ ಅನೇಕ ಸದಸ್ಯರು ಬಂದಿರುವರಂತೆ!

ಘಟನೆಯನ್ನು ತಯಾರಿಸಿ ಬಾಪೂಜಿಯವರ ಜನ್ಮದಿನ ತಾ. ೨-೧೦-೪೯ ರಲ್ಲಿ ಒಪ್ಪಬೇಕೆಂದೂ, ಈ ಬಗ್ಗೆ ಘೋಷಣೆಯನ್ನು ಮುಂಬರುವ ಸ್ವಾತಂತ್ರ್ಯದಿನ ಅಂದರೆ ೨೬-೧-೫೦ರಲ್ಲಿ ಮಾಡಬೇಕೆಂದೂ ಏರ್ಪಾಡಾಗಿದೆಯಂತೆ.

ಐದು ರೂಪಾಯಿ ಬಹುಮಾನ.

ನನ್ನ ಬಾಪ್ತು ಈ ಕೆಳಗಿನ ಚಿಹರೆಯ ಒಂದು ಹಸವು ತಾ. ೩೧-೫-೪೯ ರಿಂದ ಸೀಲಿಬಿಟ್ಟ ತೋಟದಿಂದ ಕಾಣೆಯಾಗಿದೆ. ಇದನ್ನು ಪತ್ತೆಹಚ್ಚಿ ಈ ಕೆಳಗಿನ ವಿಳಾಸಕ್ಕೆ ತಿಳಿಸಿದವರಿಗೆ ಐದು ರೂಪಾಯಿಗಳನ್ನು ಬಹುಮಾನವಾಗಿ ಕೊಡಲಾಗುವದು.

ಚಿಹರೆ:— ಕೆಂಪುಬಣ್ಣ, ಸುಮಾರ 4½ ಅಡಿ ಎತ್ತರ, ಒಂದೂವರೆ ಅಡಿ ಉದ್ದದ ಕೊಂಬುಗಳು, ಮಧ್ಯ ಪ್ರಾಯದ ಮಿಶ್ರಜಾತಿ ಹಸು.

ಎಫ್. ಡಿಸೂಜ,
ಸೀಲಿಬಿಟ್ಟ ತೋಟ,
ಅಮ್ಮತಿ.

ಈ ಸುಸಂದರ್ಭದ ಸದುಪಯೋಗ ಮಾಡಿರಿ.

ಈ ಕೆಳಗೆ ನಮೂದಿಸಿರುವ ಗಡಗಳು ಮತ್ತು ಸಾಹಿತ್ಯಗಳು ಸಿದ್ದಾಪುರ ಪೇಟೆಯಲ್ಲಿರುವ ಈ ಕೆಳಗಿನವರಿಂದ ದೊರೆಯುವದು. ಪ್ರತಿ ಆರ್ಡರಿನ ಜೊತೆಯಲ್ಲಿ ಶೇಕಡ 25ರಷ್ಟು ಮುಂಗಡ ಹಣ ಬರಬೇಕು.

1. ತೆಂಗಿನ ಸಸಿ, 2. ಮಾವಿನ ಸಸಿ (ಕಸಿಮಾಡಿದ್ದು), 3. ಕಿತ್ತಳೆ ಸಸಿ, 4. ತಂತಿ ಜಾಪಗಳು, 5. ತಾಮ್ರದ ಚಕ್ರಗಳು (1, ¾ ಮತ್ತು ½) ಬುಲಕ್ ಹಿಡಿಸುವ ಢಂದ್ದು) 6 ಸ್ಟ್ರಾಂಗ ಮನ ಸುಣ್ಣ (ಟನ್ನುಗಳಲ್ಲಿ) 7. ಹದಮಾಡಿದ ಸುಣ್ಣ 9. ಗಾಡಿ ಚಕ್ರಗಳು.

ಶಿವನಂಜಪ್ಪ,
ಕಂಟ್ರಾಕ್ಟರ್,
ಸಿದ್ದಾಪುರ, ಕೊಡಗು.

WANTED

A Field writer of experience smart and intelligent. He should have a sound knowledge of paddy cultivation cattle upkeep and routine work in coffee estate Pay 40-2-60 D A 20 and kitchen allowance

Apply:-

Superintendent.
B & C Estates
TITTIMATTI
South Coorg

॥ ಪತ್ರವ್ಯವಹಾರಗಳು ॥

ನಮ್ಮ ಕಾಲೇಜು

ಕೊಡಗಿನ ವಿದ್ಯಾ ಇಲಾಖೆಯ ಚರಿತ್ರೆಯಲ್ಲಿ ಕಾಲೇಜು ಸ್ಥಾಪನೆಯು ಬಹು ಯಶಸ್ವಿಯಾದ ಘಟನೆ. ಕೆಲವು ವರ್ಷಗಳಿಂದ ಹಾರೈಸುತ್ತಿದ್ದ ಈ ಯತ್ನ ೧೯೪೯ನೇ ಜುಲೈ ತಿಂಗಳಲ್ಲಿ ನೆರವೇರಲಿದೆ. ಜ್ಞಾನಾಧಿದೇವತೆಯಾದ ಶಾರದೆಯ ಸಿಂಹಾಸನಾರೋಹಣದ ಸಮಾರಂಭದಲ್ಲಿ ನಾವೆಲ್ಲರೂ ಭಾಗಿಗಳಾಗೋಣ. ಕೊಡಗಿನ ನಿವಾಸಿಗಳಾದ ನಮಗೆ ವಿಶ್ವವಿದ್ಯಾಲಯದ ವ್ಯಾಸಂಗವೆಂಬುದು ಧನಿಕನ ಮಕ್ಕಳ ಭಾಗ್ಯವಾಗಿತ್ತು. ದೇಶದ ಲಕ್ಷಾಂತರ ರೂಪಾಯಿಗಳು ನೆರೆ ಪ್ರಾಂತಗಳ ವಿದ್ಯಾಪೀಠ ಹಾಸ್ಟೆಲಲ್ಲಿ ಚೆಲ್ಲಿ ಹೋಗುತ್ತಿತ್ತು. ಹೈಸ್ಕೂಲಿನ ವಿದ್ಯಾಭ್ಯಾಸವು ಪೂರೈಸಿತೆಂದರೆ ಉತ್ತೀರ್ಣನಾದ ಬಡ ವಿದ್ಯಾರ್ಥಿಯು ನಿರಾಶೆಯಿಂದ ಕೊರಗುವ ಧನಿಕನು ಹಿಗ್ಗುವ ಪ್ರಸಂಗ. ಆಹಾ, ಈಗ, ಬೇಡಿ ಕಾದರೂ 'ನ ನೊಲ್ಲೆ' ನೆಂದು ಸರ್ಕಾರದ ಎದೆಯಲ್ಲಿ ಮುಂದಿಟ್ಟಿದ್ದ ಸಮಸ್ಯೆಯನ್ನು ಭಗೀರಥ ಪ್ರಯತ್ನದಿಂದ ಬಗೆಹರಿಸಿದ್ದರಿಂದ ಸರಕಾರದ ಸಹಕಾರವು ಶ್ಲಾಘನೀಯ.

ಕೊಡಗಿನ ಕಾಲೇಜಿನ ಆವಶ್ಯಕತೆಯು ಈಗ ಹಲವು ವರ್ಷಗಳಿಂದ ಹೆಚ್ಚುತ್ತಿದೆ. ಹೈಯರ್ ಎಲಿಮೆಂಟರಿ ಮತ್ತು ಹೈಸ್ಕೂಲ್‌ಗಳ ಸಂಖ್ಯೆಯು ಬೆಳೆದುದರ ಪ್ರತಿಫಲವಾಗಿ ವರ್ಷಂಪ್ರತಿ ಕಾಲೇಜುಗಳಿಗೆ ಪ್ರವೇಶಿಸಲು ಬಯಸುವ ವಿದ್ಯಾರ್ಥಿಗಳ ಬಹಳವಾಗಿದ್ದಾರೆ. ಹೊರಗಿನ ಕಾಲೇಜುಗಳು ಕಿಕ್ಕಿರಿದು ಹೋಗಿವೆ. ದೇಶ ವಿದೇಶಗಳೆಂಬ ಭೇದವನ್ನು ಮಾಡಿಕೊಂಡು ಇಷ್ಟೇ ಸ್ಥಳ, ಆ ಸ್ಥಾನಗಳಿಗೆ ಇಂಥವರೇ ಯೋಗ್ಯರು ಎಂಬ ನಿರ್ಬಂಧ ಮಾಡಲ್ಪಟ್ಟಿದೆ. ಇನ್ನೊಂದು ಕಡೆ ಆರ್ಥಿಕ ಮುಗ್ಗಟ್ಟಿನಿಂದ ಜೀವನದ ವೆಚ್ಚವು ಏರುತ್ತ ಇದೆ. ಸಾಮಾನ್ಯರು ಖರ್ಚನ್ನು ನಿಭಾಯಿಸಲಾಗದ ವಿಷಯ. ಹೀಗಾಗಿ ಸ್ಥಳೀಕ ಕಾಲೇಜುಗಳಿಲ್ಲದಿದ್ದರೆ ಕೊಡಗಿನ ಯುವಕ ಯುವತಿಯರಿಗೆ ಏಳಿಗೆಯ ದಾರಿ ಕಿರಿದಾಗಿದೆ. ದೈವ ಸಂಕಲ್ಪದಿಂದಲೂ ಸರಕಾರದವರ ಪ್ರಯತ್ನದಿಂದಲೂ ಈ ವರ್ಷ ಕಾಲೇಜಾದ ಮೇಲಾದರೂ ಇನ್ನು ಮುಂದೆ ಈ ದುಃಸ್ಥಿತಿ ನೀಗುವಂತಾಗ ಬಡ ವಿದ್ಯಾರ್ಥಿಯು ಕಲ್ಪತರುವನ್ನು ಮುಂದೆ ಉಪಯೋಗಿಸುವಂತಾಗಿದೆ, ಎಂಥಾ ಆನಂದ.

ಕೊಡಗಿನ ಕಾಲೇಜು ಅವರ್ಣವಾಗಿರಬೇಕೆಂಬ ಸದುದ್ದೇಶದಿಂದ ಉತ್ತಮ ಪ್ರಾಧ್ಯಾಪಕರನ್ನು ಲೆಕ್ಚರರ್‌ಗಳಾಗಿಯೂ ಪ್ರೊಫೆಸರುಗಳಾಗಿಯೂ, ಸಿ ಸಿ ಸರಕಾರದವರು ಬರಮಾಡಿ ಕೊಳ್ಳುತ್ತಿರುವುದರಿಂದ ಸಂತೋಷ. ಬ್ರಿಟಿಷ್ ರಾಜ್ಯಾಂತರ ರೂಪಾಯಿಗಳ ಕಟ್ಟಡಗಳು ಹೊಸ ದಾರಿ ಮೇಲೇಳಲಿವೆ ಎಂದು ಕೇಳುತ್ತೇವೆ. ಆದರೆ ಹೊರನಾಡಿನ ಬರತಕ್ಕವರೇ ಉತ್ತಮರು ಎಂದು ಭಾವಿಸದೆ ಸ್ಥಳೀಕರಲ್ಲಿ ಪರಿಣತರಾದ ವಿದ್ವಾಂಸರಿದ್ದು ಅವರನ್ನು ಸೇರಿಸಿಕೊಂಡರೆ ಕಾಲೇಜಿನ ಘನತೆ ಕಡಿಮೆಯಾದೀತೆಂದೂ ಭಾವನೆ ಇದ್ದಲ್ಲಿ ತಪ್ಪಾದೀತು. 'ಹಿತ್ತಲಿನ ಮದ್ದಿಗೆ ಬೆಲೆಯಿಲ್ಲ' ವೆಂದರೆ, 'ದೂರದ ಬೆಟ್ಟ ನುಣ್ಣಗೆ' ಎಂಬ ಗಾದೆಯನ್ನು ನೆನಪಿಸಿಕೊಳ್ಳಬೇಕಾಗುವುದು. ದೇಶ, ಕಾಲ, ರೀತಿ, ನೀತಿಗಳನ್ನರಿತು ವ್ಯವಸ್ಥಾಪನೆಯನ್ನಾಗಲೀ ಬೋಧನೆಯನ್ನಾಗಲೀ ಮಾಡಬೇಕಾದರೆ ಸ್ಥಳೀಕರ ಬೆರಕೆ ಇಲ್ಲವಾದರೆ ಅಪರಿಚಿತರಾದ ಎಷ್ಟೋ ಘನ ವಿದ್ವಾಂಸರಿದ್ದರೂ ಜಯ ಪ್ರದವಾಗಲಾರದು.

ಕೊಡಗಿನ ನಮ್ಮ ಕಾಲೇಜಿಗೆ ವಾತಾವರಣವು ಸರಿಯಾಗಿಲ್ಲ ವೆಂದು ಕೆಲವರ ಅಭಿಪ್ರಾಯ. ಪ್ರಕೃತಿಯಲ್ಲಿ ಪ್ರಯಾಣ ಮಾಡಿ ಸವಿ ದವನ್ನು ನೇರವಾಗಿ ನೋಡಿ. ದೊಡ್ಡ ಶಹರುಗಳನ್ನು ಹಾದು ವಿಶ್ವ ವಿದ್ಯಾಲಯವನ್ನು ಪ್ರವೇಶಿಸಿದ ಮಾತ್ರಕ್ಕೆ ಜ್ಞಾನವು ದೊರಕುವುದೆಂಬ ಭಾವನೆ ತಪ್ಪು. ನ್ಯಾಯವಾಗಿ ನೋಡಿದರೆ ವಿಶ್ವ ವಿದ್ಯಾಲಯದ ವಾತಾವರಣವೇ ಶಾಂತಿಮಯ. ಪ್ರಾಚೀನ ಕಾಲದ ನಳಂದ, ತಕ್ಷಶಿಲ ವಿದ್ಯಾಪೀಠಗಳನ್ನು, ಗುರುಕುಲ ಪದ್ಧತಿಯ ರವೀಂದ್ರನಾಥ ಠಾಕೂರರು ಸ್ಥಾಪಿಸಿರುವ ಶಾಂತಿನಿಕೇತನದ ವಾತಾವರಣವನ್ನು ನೋಡಿದರೆ ಅದೆಷ್ಟು ಶಾಂತಿಮಯ. ಈ ವಿಚಾರದಲ್ಲಿ ಕೊಡಗು ಕಾಲೇಜಿನ ವಾತಾವರಣಕ್ಕೆ ಆದರ್ಶ ಸ್ಥಾನವಾಗಿದೆ. ದೊಡ್ಡ ದೊಡ್ಡ ಶಹರುಗಳನ್ನಾಗಲೀ, ಕಾರ್ಖಾನೆಗಳನ್ನಾಗಲೀ, ರೈಲು ಮೊದಲಾದ ಆಧುನಿಕ ವಿಜ್ಞಾನ ಶಾಸ್ತ್ರದ ನಿರ್ಮಾಣಗಳನ್ನಾಗಲೀ ನೋಡ ಬೇಕೆಂದಾದರೆ ತಡೆ ಏನಿದೆ? ಕೊಡಗಿನ ಕಾಲೇಜಿನ ವಿದ್ಯಾರ್ಥಿಗಳಿಗೆ ವರ್ಷಕ್ಕೆ ಒಂದೆರಡು ಪ್ರವಾಸಗಳನ್ನೇರ್ಪಡಿಸಿ ಒಯ್ಯಸಿದ ಅನುಭವಗಳನ್ನು ಪಡೆಯಲಾಗುತ್ತಿಲ್ಲವೆ? ವಿದ್ಯಾ ಸಂಸ್ಥೆಯು ಘನವಾಗಿದ್ದರೆ ದೊಡ್ಡ ದೊಡ್ಡ ವಿದ್ವಾಂಸರ ಸಂದರ್ಶನಗಳು ತಾನಾಗಿಯೇ ಆಗುತ್ತಿರುತ್ತವೆ.

ನಮ್ಮ ಕಾಲೇಜೆಂಬ ಹೆಸರೇ ಯಾವ ನಮ್ಮ ಕ್ಷಣದಲ್ಲಿ ತುಂಬಿದೆ. ಅದು ಎಷ್ಟು ಯಶಸ್ವಿಯಾಗಿ ಬಾಳಲೆಂಬ ಬಯಕೆಯು ಹೆಚ್ಚಿದೆ. ಲೋಕ ಮಾನ್ಯರಾದ ನಾಯಕರಾದ ಶ್ರೀಯುತರುಗಳನೇಕರನ್ನು ತರಬೇತು ಮಾಡಿರುವ ಹಿಂದೂಸ್ಥಾನದ ಅನೇಕ ಕಾಲೇಜುಗಳ ಸಾಲಿನಲ್ಲಿ ಎಷ್ಟು ಚಿಕ್ಕವು ಪುನರಿಯಲ್ಲಿ ಎಷ್ಟು ಭವ್ಯವಾಗಿದೆ ಎಂಬ ವಿಷಯವನ್ನು ಮನಗಂಡು ನಮ್ಮ ಕಾಲೇಜನ್ನು ನಾವು ಬಿಂಬಿಸಿಕೊಳ್ಳೋಣ. ಭಗವಂತನು ನಮ್ಮ ಉತ್ಸಾಹದಲ್ಲಿ ನೆರವಾಗಲಿ. ನಮ್ಮ ಕಾಲೇಜಿನ, ಅಭ್ಯುದಯವಾಗಲಿ.

'ಹಿತೈಷಿ.'

ಶಾಲಾ ಪಂಚಾಯಿತಿಗಳು.

ಶಾಲೆಗಳ ಕೆಲಸಗಳನ್ನು ನೋಡಿಕೊಳ್ಳಲು, ಯೋಗ್ಯ ಸಲಹೆಗಳನ್ನು ಕೊಡಲು ಶಾಲಾ ಪಂಚಾಯಿತಿಗಳನ್ನು ನೇಮಿಸುವುದಾಗಿದೆ. ಸರ್ಕಾರದ ಪ್ರತಿಯೊಂದ ಶಾಲೆಗೂ ಇದು ಅಗತ್ಯ. ಆದರೆ ಇಂದಿರುವ ಶಾಲಾ ಪಂಚಾಯಿತರಿಂದ ಯಾವ ಪುರುಷಾರ್ಥ ಸಾಧಿಸಲ್ಪಡುತ್ತಿದೆಯೋ ದೇವರೇ ಬಲ್ಲ. ಈ ಶಾಲಾ ಪಂಚಾಯಿತರನ್ನು ಯಾವ ತತ್ವದಿಂದ ಆರಿಸುವರೊ ಅದೂ ತಿಳಿಯದು. ಅಂಥ ಈಗಿರುವ ಬಹುಮತ ಶಾಲಾ ಪಂಚಾಯಿತಗಳಿಂದ ಶಾಲೆಗಾಗಲೀ, ಗ್ರಾಮಕ್ಕಾಗಲೀ ಯಾವದೇ ಹಿತವಾಗುತ್ತಿಲ್ಲ. ಕೆಲವರಿಗೆ ತಾವು ಶಾಲಾ ಪಂಚಾಯಿತರಾಗಿರುವದೇ ತಿಳಿಯದ ಪರಿಸ್ಥಿತಿಯೂ ಇರಬಹುದು. ಇಂಥಾ ಪಂಚಾಯಿತರನ್ನು ನೇಮಿಸುವಾಗ ಸಂಬಂಧಿಸಿದವರು ಗ್ರಾಮದಲ್ಲಿ ವಿದ್ಯಾವಂತನಾಗಿದ್ದು ಯೋಗ್ಯರಾದವರನ್ನು ಆರಿಸಬೇಕು. ಅಧ್ಯಾಪಕರ ತೊಂದರೆಯಾದಾಗ ಪಾರ ಹೇಳುವ ಚೇತನ ಅವರಿಗಿರಬೇಕು. ಶಾಲೆಯ ನಿಜಸ್ಥಿತಿಯನ್ನು ತಿಳಿದು ಅದರ ಅಭಿವೃದ್ಧಿಗೆ ಸಲಹೆ ಕೊಡುವ ಯೋಗ್ಯತೆಯಿರಬೇಕು. ಅಂಥಾವರನ್ನು ಆರಿಸಿದರೆ ಶಾಲೆಗಳು ಅಭಿವೃದ್ಧಿ ಹೊಂದುವವು. ಇಲ್ಲವೇ ಗ್ರಾಮದ ಯೋಗ್ಯರನ್ನು ಗ್ರಾಮಸ್ಥರೇ ಆರಿಸಿಕೊಂಡು ಶಾಲಾಪಂಚಾಯಿತ ಮಂಡಳಿಯನ್ನು ರಚಿಸಿಕೊಳ್ಳುವ ಅನುವನ್ನು ಮಾಡಿದರೂ ಹಿತ. ಹೀಗೆ ಮಾಡದೆ ಜೀವನ್ಮೃತಾವಸ್ಥೆಯ ಇಂದಿನ ಪಂಚಾಯಿತ ಸಭೆಗಳಿಂದ ಯಾರಿಗೂ ಸುಖವಿಲ್ಲ.

'ವಿದ್ಯಾ ಪ್ರೇಮಿ'

ಅಖಿಲ ಕೊಡಗು ಪಟೇಲರ ಸಭೆ.

ತಾರೀಕು 29-5-49ರಲ್ಲಿ ವೀರಾಜಪೇಟೆ ಮುನ್ಸಿಪಲ್ ಹಾಲಿನಲ್ಲಿ ನಡೆದ ಅಖಿಲ ಕೊಡಗು ಪಟೇಲರುಗಳ 2ನೇ ವಾರ್ಷಿಕ ಮಹಾ ಸಭೆಯಲ್ಲಿ ಈ ತೀರ್ಮಾನಗಳಾದವು ಶ್ರೀ ಪಂಪ್ಯಂಡ ಬೆಳ್ಯಪ್ಪನವರು ಅಧ್ಯಕ್ಷತೆ ವಹಿಸಿದ್ದರು.

(1) ಪಟೇಲರುಗಳು ವಾರಕ್ಕೊಂದು ಸಾರಿ ವರದಿ ಮಾಡುವ ಸಮಯದಲ್ಲಿ ಪ್ರತಿ ಒಂದು ನಾಡು ಕಚೇರಿಯಲ್ಲು ಅವರಿಗೆ ಕೂರಲು, ಬರೆಯಲು ಸಾಕಷ್ಟು ಬೆಂಚು ಮೇಜುಗಳನ್ನು ಸಾಧ್ಯವಿದ್ದಲ್ಲಿ ಪ್ರತ್ಯೇಕ ಕೋಣೆಯನ್ನು ಆದಷ್ಟು ಶೀಘ್ರವಾಗಿ ಏರ್ಪಾಡು ಮಾಡಿ ಕೊಡಬೇಕೆಂದು ಈ ಸಭೆಯು ಸರಕಾರವನ್ನು ಒತ್ತಿ ಕೇಳಿಕೊಳ್ಳುತ್ತದೆ.

(2) ಪಟೇಲರುಗಳ ಜಾಯಿಂ ಹುಕುಂ ನಂ. 4/1907-8 ರ ಮೇರೆ ರೈತರ ಕಂದಾಯ ಮತ್ತು ಸರಕಾರಕ್ಕೆ ಸಲ್ಲತಕ್ಕ ಇತರ ಮೊಬಲಗಿನ ವಸೂಲಾತಿಯೂ, ರೆವಿನ್ಯೂ, ಪ್ರೊಸೆಸ್ ತಗಾದೆ ನೋಟೀಸ್ ಜಪ್ತಿ ವಾರಂಟು ಮೊದಲಾದುವುಗಳ ಜಾರಿಯನ್ನು ಮಾತ್ರ ಪಟೇಲರುಗಳ ಮೂಲಕ ನಡಿಸಬೇಕಲ್ಲದೆ ಉಳಿದ ಎಲ್ಲಾ ನೋಟೀಸುಗಳ ಜಾರಿಯನ್ನು ಕೆಲವು ವರ್ಷಗಳ ಮೊದಲಿದ್ದಂತೆ ನಾಡು ಕಚೇರಿಯ ಜವಾನರ ಮೂಲಕವೇ ಮಾಡಿಸಬೇಕೆಂದು ಈ ಸಭೆಯು ಕೇಳಿಕೊಳ್ಳುತ್ತದೆ.

(3) ಪಟೇಲರುಗಳಿಗೆ ಈಗ ಕೊಡುತ್ತಿರುವ ವಾರ್ಷಿಕ ಗೌರವಧನವನ್ನು ಇಮ್ಮಡಿ ಮಾಡಿಕೊಡಬೇಕೆಂದೂ, ಅದನ್ನು ಪ್ರತಿ ವರ್ಷ ಏಪ್ರಿಲ್ ತಿಂಗಳಲ್ಲಿ ಬಟವಾಡೆ ಮಾಡುವಂತೆ ಮಾಡಬೇಕೆಂದು ಮತ್ತು ಈ ತೀರ್ಮಾನವನ್ನು 1947ನೇ ಇಸವಿಯಿಂದಲೇ ಜಾರಿಗೆ ಬರುವಂತೆ ಮಾಡಿಸಿ ಕೊಡಬೇಕೆಂದೂ ಈ ಸಭೆಯು ಸರಕಾರದಲ್ಲಿ ಬಿನ್ನವಿಸುತ್ತದೆ.

(4) ಕಳೆದ ಮಹಾ ಸಭೆಯಲ್ಲಿ ಮಂಜೂರು ಮಾಡಿ ಸರಕಾರಕ್ಕೆ ಕಳುಹಿಸಿದಂಥಾ ಠರಾವುಗಳಿಗೆ ಸರಕಾರದವರು ಈ ವರೆಗೂ ಯಾವದೊಂದೂ ಉತ್ತರವನ್ನು ಕೊಡದಿರುವುದು ವ್ಯಸನಕರ. ಮುಂದಕ್ಕಾದರೂ ಮಹಾ ಸಭೆಯ ತೀರ್ಮಾನಕ್ಕೆ ಸರಕಾರದವರು ಗಮನ ಕೊಡಬೇಕೆಂದು ಕೇಳುತ್ತದೆ.

(5) ಈ ಸಂಘದ ವಾರ್ಷಿಕ ಮಹಾ ಸಭೆಯನ್ನು ಏಪ್ರಿಲ್ ಆಖೈರು ಒಳಗೆ ನಡೆಸತಕ್ಕದ್ದು.

(6) ಪ್ರತೀ ಒಬ್ಬ ಗ್ರಾಮ ಪಟೇಲನಿಗೆ ವ್ಯವಸಾಯಕ್ಕಾಗಿ ಗ್ರಾಮದೊಳಗಿನ ಆಗವಾ ಸಮೀಪದ ಪೈಸಾರಿಯಿಂದ ಹತ್ತು ಎಕ್ರೆಯಂತೆ ಜಾಗವನ್ನು ಕೊಡಿಸಿ ಕೊಡಬೇಕಾಗಿ ಈ ಸಭೆಯು ಸರಕಾರವನ್ನು ಕೇಳಿಕೊಳ್ಳುತ್ತದೆ.

(7) ಈ ಕೆಳಗಿನ ಪಟೇಲರುಗಳನ್ನು ಕಾರ್ಯಕಾರಿ ಮಂಡಳಿಯವರನ್ನಾಗಿ ಚುನಾಯಿಸಲಾಯಿತು

ವೀರಾಜಪೇಟೆ. ಐತಿಚಂಡ ಗಣಪತಿಯವರು. ಮತ್ತು ಮಾಟೀರಿರ ಅಪ್ಪಯ್ಯನವರು ನಾಪೋಕ್ಲು—ಮುಚ್ಚಂಡ ಸಬ್ಬಯ್ಯನವರು. ಭಾಗಮಂಡಲ—ಕುಯ್ಯಮುಡಿಯ ನ ದೇವಯ್ಯನವರು ಭಾಗಮಂಡಲ—ಕೇದಂಬಾಡಿ ರಾಮಯ್ಯನವರು ಮಡಿಕೇರಿ—ಕಾಳ್ಚಮಂಡ ಬೆಳ್ಯಪ್ಪನವರು ಮೂರ್ನಾಡು—ನೆರವಂಡ ಬೆಳ್ಯಪ್ಪನವರು ಮಾದಾಪುರ—ಓಡಿಯಂಡ ಮಾದಪ್ಪನವರು ಸಂಪಾಜೆ—ಎನ್. ಆರ್. ಸಣ್ಣಯ್ಯನವರು. ಕುಂಟಿಕೊಪ್ಪ—ಎನ್. ರುದ್ರಪ್ಪನವರು. ಫ್ರೇಜರ್ ಪೇಟೆ—ಹೆಬ್ಬಾಲೆ ಶಿವಮೃತ್ಯುಂಜಯ್ಯನವರು ಸೋಮವಾರಪೇಟೆ ಕುಂದಳ್ಳಿ ಚೆಂಗಪ್ಪನವರು ಮತ್ತು ಕುಸುಬೂರು ... ನವರು ಶನಿವಾರಸಂತೆ—ಹೆಗ್ಗಳ ಕಾಳಿಂಗಪ್ಪನವರು ಮತ್ತು ಬೆಳ್ಳಾರಳ್ಳಿ ಶಾಂತಪ್ಪನವರು. ಶ್ರೀಮಂಗಲ—ಕೋಳೆರ ಚೆಂಗಪ್ಪನವರು ಮತ್ತು ಮಚ್ಚಮಾಡ ಕುಶಾಲಪ್ಪನವರು. ಪೊನ್ನಂಪೇಟೆ—ಅಲೆಮಾಡ ಐಯ್ಯಣ್ಣನವರು. ಗೋಣಿಕೊಪ್ಪಲ—ಕಪ್ಪೀಡ ಮುತ್ತಣ್ಣನವರು. ಅಮ್ಮತ್ತಿ—ನೆಲ್ಲಮಕ್ಕಡ ಚಿಣ್ಣಪ್ಪನವರು. ಸಿದ್ದಾಪುರ—ಎಸ್ ಎನ್ ಈಶ್ವರಯ್ಯನವರು.

ಈ ವೇಳೆ ಅಂಡವರ ಪ್ರೀತಿಗೆ ಐತಿಚಂಡ ಗಣಪತಿಯವರನ್ನು ಪ್ರಸಿಡೆಂಟರಾಗಿಯೂ ಮಾಟೀರಿರ ಅಪ್ಪಯ್ಯನವರನ್ನು ಗೌರವ ಕಾರ್ಯದರ್ಶಿಯಾಗಿಯೂ ಆರಿಸಲಾಯಿತು.

(8) ಈ ದಿವಸದ ಊಟದ ಖರ್ಚಿಗೋಸ್ಕರ 90 ರೂಪಾಯಿಯು ವಸೂಲಾಗಿ ಖರ್ಚನ್ನು ಮಾಡಲು ಮಂಜೂರು ಮಾಡಲಾಯಿತು.

ಸ್ವತಂತ್ರ ಭಾರತದಲ್ಲಿ.

ಈ ವಾರದ ವಿಚಾರಗಳು.

ಲೇ:—“ಗಣೇಶ” ಮಡಿಕೇರಿ.

ಕಾಶ್ಮೀರ ಎತ್ತ ಹೋದೀತು?

ಕಾಶ್ಮೀರ ಪ್ರಶ್ನೆಯು ಬಹಳ ದಿನಗಳಿಂದ ತೀರ್ಮಾನವಾಗದೆ ಉಳಿದಿದೆ. ಸಂಯುಕ್ತ ರಾಷ್ಟ್ರ ಸಂಘದಿಂದ ನೇಮಿಸಲ್ಪಟ್ಟ ಕಾಶ್ಮೀರ ಸಮಿತಿಯು ಭಾರತಕ್ಕೆ ಬಂದು ಪಾಕಿಸ್ಥಾನ ಮತ್ತು ಹಿಂದೂಸ್ಥಾನ ಸರಕಾರಗಳೊಡನೆ ಮಾತುಕತೆ ನಡೆಸಿ ತಮ್ಮ ಪ್ರಥಮ ವರದಿಯನ್ನು ಸಂಯುಕ್ತ ರಾಷ್ಟ್ರ ಸಂಘಕ್ಕೆ ಕಳುಹಿಸಿವೆ. ಕಾಶ್ಮೀರದಲ್ಲಿ ಮತಗಣನೆಯ ಮಾತು ಕೇಳಿಬರುತ್ತಿದ್ದರೂ ಅದಕ್ಕೆ ವಿಪರೀತ ಆತಂಕಗಳೂ ಇವೆ. ಮತಗಣನೆಯಾದರೆ ಕಾಶ್ಮೀರವು ಭಾರತಕ್ಕೆ ಕೂಡುವದೆಂಬ ಹೆದರಿಕೆ ಪಾಕಿಸ್ಥಾನಕ್ಕೂ ಇರುವಂತೆ ತೋರಿಬರುತ್ತದೆ. ಆದ್ದರಿಂದಲೇ ಕಾಶ್ಮೀರವನ್ನು ವಿಭಾಗಿಸುವ ಮಾತುಗಳನ್ನು ಅವರು ಎತ್ತಿದ್ದಾರೆ.

ನಿಜವಾಗಿ ನೋಡಿದರೆ ಕಾಶ್ಮೀರದಲ್ಲಿ ಮುಸಲ್ಮಾನರೇ ಹೆಚ್ಚು. ತಮ್ಮ ಜಾತೀಯ ದೃಷ್ಟಿಯಿಂದ ವಿಚಾರ ಮಾಡಿದರೆ ಅವರು ಪಾಕಿಸ್ಥಾನಕ್ಕೇ ಸೇರಬೇಕು. ಆದರೂ ಅವರು ಹಿಂದೂಸ್ಥಾನದ ಕಡೆ ಸೇರುವರೆಂದು ಅಲ್ಲಿಯ ಮಂತ್ರಿ ಶೇಖ್ ಅಬ್ದುಲ್ಲಾ ಮತ್ತಿತರರು ಸ್ಪಷ್ಟವಾಗಿ ಹೇಳುತ್ತಿರಲು ಕಾರಣವೇನು? ಇದಕ್ಕೆ ಕೆಲವು ಕಾರಣಗಳನ್ನು ಕೊಡಬಹುದು. ಒಂದನೆಯದಾಗಿ ಪಾಕಿಸ್ಥಾನದವರ ಅದೂರದೃಷ್ಟಿ. ದರೋಡೆಗಾರರ ಹೆಸರಿನಲ್ಲಿ ಪಾಕಿಸ್ಥಾನ ಪಡೆಯು ಕಾಶ್ಮೀರಕ್ಕೆ ನುಗ್ಗಿ ಮಾಡಿದ ಅನಾಚಾರ, ಅತ್ಯಾಚಾರಗಳ ನೆನಪು ಅಲ್ಲಿಯ ಜನರಿಗೆ ಇಂದೂ ಇದೆ. ಪಾಕಿಸ್ಥಾನ ಸೈನಿಕರು ಅಮಾನುಷ ರೀತಿಯಿಂದ ವರ್ತಿಸಿ ತಮ್ಮ ಮತೀಯರೇ ಆದ ಮುಸ್ಲಿಮರನ್ನು ಸಾವಿರ ಸಂಖ್ಯೆಯಲ್ಲಿ ಕೊಂದರು.

ಆದರೆ ಕಾಶ್ಮೀರದ ನೆರವಿಗೆ ಬಂದ ಹಿಂದೀ ಸೇನೆಯ ಕಥೆಯೇ ಬೇರೆಯಾಯಿತು. ಅವರು ದರೋಡೆಗಾರರನ್ನು ಹೊರಗಟ್ಟಿ ಕಾಶ್ಮೀರಕ್ಕೆ ಸಹಾಯ ಮಾಡಿದುದು ಮಾತ್ರವಲ್ಲ; ಕಾಶ್ಮೀರ ಜನರೊಡನೆ ಪ್ರೇಮವನ್ನು ಬೆಳಸಿದರು. ಹೊಟ್ಟೆ ಬಟ್ಟೆಗೆ ಸಿಕ್ಕದೆ ತೊಂದರೆ ಪಡುತ್ತಿದ್ದ ಕಾಶ್ಮೀರದ ಬಡಜನರಿಗೆ ಹಿಂದೀ ಸೈನ್ಯವು ಶಕ್ತಿಮೀರಿ ಸಹಾಯ ಮಾಡಿತು. ರೇಷನ್ ಪದ್ಧತಿ ಇದ್ದಾಗ್ಯೂ ಎಲ್ಲರಿಗೂ ಸರಿಯಾಗಿ ಆಹಾರ ಮುಟ್ಟುವಂತೆ ಸೈನಿಕರೇ ನಿಂತು ಹಂಚಿದರು. ಸ್ವತಃ ಹಳ್ಳಿಗಳ ಕಸಗುಡಿಸಿ ಶುಚಿತ್ವದ ಬೋಧನೆ ಮಾಡಿದರು. ಪ್ಲೇಗು ವಾಂತಿಬೇಧಿಗಳ ಕಾಲಕ್ಕೆ ಅಮೂಲ್ಯ ಸೇವೆ ಮಾಡಿದರು. ವಾಹನ ಸೌಕರ್ಯವಿಲ್ಲದ ಕಡೆ ರಸ್ತೆ ಮಾಡಿದರು. ಹಲವೆಡೆ ವಿಮಾನಗಳ ಮೂಲಕ ಕೂಡ ಆಹಾರ ಸಾಧನ ಪೂರೈಸಿದರು. ಈ ಉದಾರ ಭಾವವು ಮುಸಲ್ಮಾನರನ್ನು ಗೆದ್ದಿತು. ಹಳ್ಳಿಗರು ಹಿಂದೀ ಸೈನಿಕರನ್ನು ಪ್ರೇಮದಿಂದ ನೋಡ ತೊಡಗಿದರು. ಅವರ ಸತ್ಕಾರವನ್ನು ಮಾಡಿದರು. ಹಿಂದೀ ಸೈನಿಕರ ಬಗ್ಗೆ ಹುಟ್ಟಿದ ಈ ಪ್ರೇಮವು ಹಿಂದೂದೇಶದ ಮೇಲೂ ಹಬ್ಬಿತು. ಹಿಂದೂಸ್ಥಾನದೊಡನೆ ತಾವು ಸೇರಿದರೆ ಸುರಕ್ಷಿತರಾಗಿ ಸುಖವಾಗಿರಬಹುದೆಂದು ಅವರು ನಂಬಿದ್ದಾರೆ. ಈ ಸಹೃದಯ ವರ್ತನೆಯು ಕಾಶ್ಮೀರವನ್ನು ಭಾರತಕ್ಕೆ ಗೆದ್ದುಕೊಡಲಿದೆ!

ಹಿಂದಿಯಲ್ಲಿ ತಂತಿ ಸುದ್ದಿ.

ತಂತಿ ಸುದ್ದಿ ಕಳುಹಿಸಬೇಕಾದರೆ ಅದು ಇಂಗ್ಲಿಷಿನಲ್ಲೇ ಆಗ ಬೇಕಿತ್ತು. ಸ್ವತಂತ್ರ ಭಾರತದಲ್ಲಿ ಇಂಗ್ಲಿಷನ್ನೇ ನಂಬಿಕೊಂಡಿರುವದು ಯೋಗ್ಯವಲ್ಲ. ಈ ದೃಷ್ಟಿಯಿಂದ ತಂತಿವಾರ್ತೆಗಳನ್ನು ಹಿಂದೀ ಭಾಷೆಯಲ್ಲಿ ಕಳುಹಿಸುವ ಏರ್ಪಾಡು ಮಾಡಲಾಗುತ್ತಿದೆ. ತಾ. ೧-೬-೪೯ ರಿಂದ ಪ್ರಥಮವಾಗಿ ಅಲಹಾಬಾದಿನಿಂದ ಕಾಶಿ, ಆಗ್ರಾ, ಕಾನ್‌ಪುರಗಳಿಗೆ ತಂತಿ ಸುದ್ದಿಯು ಹಿಂದಿಯಲ್ಲಿ ಕಳುಹಿಸಲ್ಪಟ್ಟಿತು. ಇದು ಕ್ರಮಶಃ ಬೆಳೆದು ಇಂಗ್ಲಿಷ್ ಭಾಷೆಯ ಬದಲು ಹಿಂದಿಯೇ ಈ ಕಾರ್ಯವನ್ನು ಮಾಡಬಹುದು. ಇದು ಶುಭಚಿಹ್ನೆ. ಸ್ವತಂತ್ರವಾದ ದೇಶ ಯಾವ ರೀತಿ ಸರ್ವದಿಕ್ಕುಗಳಲ್ಲಿಯೂ ಪ್ರಗತಿ ಪಡೆಯಬಹುದೆಂಬುದಕ್ಕೆ ಇದೊಂದು ನಿದರ್ಶನ. ಪರಕೀಯ ಸತ್ತೆಯಿಂದ ಮುಕ್ತಿ ಹೊಂದಿದ ಹಿಂದೂದೇಶವು ಸ್ವಾತಂತ್ರ್ಯದ ಎರಡು ವರ್ಷಗಳಲ್ಲಿಯೇ ತಂತಿ ಕಳುಹಿಸುವ ಕಾರ್ಯದಲ್ಲಿ ಹಿಂದೀ ಭಾಷೆಯನ್ನು ಪಯೋಗ ಮಾಡುತ್ತಿರುವದು ಸ್ತುತ್ಯಾರ್ಹ.

ನೌಕಾಭಿವೃದ್ಧಿ ಯೋಜನೆ.

ಹಿಂದೊಮ್ಮೆ ಭರತಖಂಡವು ನೌಕಾ ಉದ್ಯಮದಲ್ಲಿ ಹೆಸರಾಗಿತ್ತು. ಹತ್ತೊಂಭತ್ತನೇ ಶತಮಾನದಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಹಿಂದೂದೇಶವು ಹಡಗು ಕಟ್ಟಿ ಕೊಡುತ್ತಿತ್ತು. ಆಗ ಕಟ್ಟಿದ ಭಾರತದ ಹಡಗೊಂದು ಬ್ರಿಟಿಷ್ 'ಮ್ಯೂಜಿಯಮ್'ನಲ್ಲಿ ಇಂದೂ ಇದೆಯೆಂದು ಹೇಳುತ್ತಾರೆ. ಆದರೆ ಬ್ರಿಟಿಷರ ಆಳಿಕೆ ಪ್ರಾರಂಭವಾದಂದಿನಿಂದ ಭಾರತೀಯರ ಈ ಉದ್ಯಮವು ಮೂಲೆ ಸೇರಿ ನಮಗೆ ಬೇಕಾದ ಹಡಗುಗಳನ್ನು ಇಂಗ್ಲೆಂಡಿನಿಂದ ತರಿಸುವ ಪರಿಸ್ಥಿತಿ ಬಂತು.

ಸ್ವತಂತ್ರ ಹಿಂದೂಸ್ಥಾನದಲ್ಲಿ ಈಗ ಈ ಉದ್ಯಮ ತಲೆ ಎತ್ತ ತೊಡಗಿದೆ. ವಿಶಾಖಪಟ್ಟಣದಲ್ಲಿರುವ ಹಡಗು ಕಟ್ಟುವ ನಿಲ್ದಾಣವನ್ನು ಸಿಂಧ್ಯಾ ಕಂಪೆನಿಯವರು ಸ್ಥಾಪಿಸಿದರು. ಇದು ಈ ವರೆಗೆ ಮೂರು ಹಡಗುಗಳನ್ನು ಕಟ್ಟಿದೆ. ಇನ್ನೆರಡನ್ನು ತಯಾರಿಸುತ್ತಿದೆ. ಇತ್ತಲಾಗಿ ಸರಕಾರವು ಈ ನಿಲ್ದಾಣವನ್ನು ತಾನೇ ವಹಿಸಿಕೊಳ್ಳುವ ಮಾತುಕತೆ ನಡೆದಿದೆ. ನಮ್ಮ ನೌಕಾಪಡೆಯ, ದಕ್ಷತೆಯನ್ನು ಹೆಚ್ಚಿಸಿ ಮುಂದಿನ ಐದು ವರ್ಷಗಳಲ್ಲಿ ೩,೦೦೦,೦೦೦ ಟನ್ನುಗಳಷ್ಟು ವ್ಯಾಪಾರ ವಹಿವಾಟು ಮಾಡುವಂಥಾ ಸ್ಥಿತಿಗೆ ಬರುವಂತೆ ಇಂಡಿಯಾ ಸರಕಾರವು ಯೋಜನೆ ಮಾಡಿದೆ. ಕಲ್ಕತಾ, ಕೊಚ್ಚಿನ್, ಮತ್ತು ಬೊಂಬಾಯಿಗಳಲ್ಲಿ ಹಡಗು ನಿರ್ಮಾಣ ಕೇಂದ್ರಗಳನ್ನು ತೆರೆಯುವ ಏರ್ಪಾಡಾಗುತ್ತಿದೆ.

ಬಂದರುಗಳು.

ಹಿಂದೂದೇಶದ ಬಂದರುಗಳಲ್ಲಿ ವರ್ಷಕ್ಕೆ ೩೦,೦೦೦,೦೦೦ ಟನ್ನು ವಹಿವಾಟು ನಡೆಯುತ್ತಿದೆ. ಇದನ್ನು ಹೆಚ್ಚಿಸಲು ಒಂದು ಯೋಜನೆಯನ್ನು ಸರಕಾರ ಮಾಡಿದೆ. ಈ ಬಂದರುಗಳಿಂದ ಸರಕಾರಕ್ಕೆ ವರ್ಷಕ್ಕೆ ರೂ. ೧೫,೦೦,೦೦,೦೦೦ ಉತ್ಪತ್ತಿ ಇದೆ.

ಇತ್ತಲಾಗಿ ಉತ್ತಮ ಒಂದು ಬಂದರಾಗಿದ್ದ ಕರಾಚಿಯು ಪಾಕಿಸ್ಥಾನಕ್ಕೆ ಸೇರಿದ ಕಾರಣ ದಕ್ಷಿಣ ಕರಾವಳಿಯ ಆಮದು, ನಿರ್ಯಾತಗಳ ಭಾರವು ಬೊಂಬಾಯಿಯ ಮೇಲೆ ಬಿದ್ದು ವಹಿವಾಟಿಗೆ ಕಷ್ಟವಾಗುತ್ತಿದೆ. ಆದ್ದರಿಂದ ಪಶ್ಚಿಮ ಕರಾವಳಿಯಲ್ಲಿ ಉತ್ತಮ ಇನ್ನೆರಡು ಬಂದರುಗಳನ್ನು ಕಂಡು ಹಿಡಿದು ಅವನ್ನು ಅಭಿವೃದ್ಧಿ ಪಡಿಸಲು ಕೇಂದ್ರ ಸರಕಾರವು ೨೫ ಕೋಟಿ ರೂಪಾಯಿಗಳ ಯೋಜನೆಯೊಂದನ್ನು ಮಾಡಿದೆ. ಈ ಪ್ರಕಾರ ಬೊಂಬಾಯಿಗೆ ಉತ್ತರದಲ್ಲಿರುವ ಕಾಂಡ್ಲಾ ಎಂಬ ಬಂದರನ್ನು ಗೊತ್ತುಮಾಡಿ ಅದರ ಅಭಿವೃದ್ಧಿಗೆ ಹದಿನಾರುಕೋಟಿ ರೂಪಾಯಿಗಳನ್ನು ವಿನಿಯೋಗಿಸಿ ಕರಾಚಿ ಬಂದರಿನಂತೆ ಅದನ್ನು ಕಟ್ಟುವ ಯೋಜನೆಯನ್ನು ಕೈಕೊಳ್ಳಲಾಗಿದೆ. ಬೊಂಬಾಯಿಯ ದಕ್ಷಿಣಕ್ಕೆ ಒಂದು ಬಂದರನ್ನು ಕಂಡು ಹಿಡಿಯುವ ಬಗ್ಗೆ ಒಂದು ಸಮಿತಿಯನ್ನು ನೇಮಿಸಲಾಗಿದ್ದು ಅವರು ಕಾರವಾರ, ಭಟ್ಕಲ್, ಮಲ್ಪೆ, ಮಂಗಳೂರುಗಳ ಸ್ಥಿತಿಯನ್ನು ಪರಿಶೀಲಿಸಿ ಕೇಂದ್ರ ಸರಕಾರಕ್ಕೆ ವರದಿ ಮಾಡಿರುವರೆಂದು ತಿಳಿಯಬರುತ್ತದೆ. ಈ ಸಮಿತಿಯವರ ವರದಿಯಂತೆ ಮಲ್ಪೆಯೇ ಈ ಭಾಗದ ಮುಂದಿನ ಬಂದರಾಗುವದೆಂದು ಹೇಳಲಾಗಿದೆ.

ಫ್ರೆಂಚ್ ವಸಾಹತುಗಳು.

ಹಿಂದೂದೇಶವು ಸ್ವತಂತ್ರವಾದಂದಿನಿಂದ ಹಿಂದೂದೇಶದಲ್ಲಿರುವ ಗೋವಾ, ಪಾಂಡಿಚೆರಿ, ಚಂದ್ರನಾಗೋರ್ ಮೊದಲಾದ ಫ್ರೆಂಚ್ ಮತ್ತಿತರ ವಿದೇಶೀಯರ ಆಳಿಕೆಗೊಳಪಟ್ಟ ಭಾಗಗಳು ಭಾರತಕ್ಕೆ ಸೇರಬೇಕೆಂದು ಪ್ರಖರವಾದ ಚಳವಳ ನಡೆಯುತ್ತಿದೆ. ಈ ಪ್ರದೇಶದ ಜನರ ಅಭಿಪ್ರಾಯವನ್ನು 'ರೆಫರೆಂಡಂ' ಪ್ರಕಾರ ತೆಗೆದು ಆ ನಿರ್ಣಯದಂತೆ ಆಗಬೇಕೆಂದು ಈ ಚಳವಳ. ಇದರಂತೆ ಇತ್ತಲಾಗಿ ಫ್ರೆಂಚ್ ಸರಕಾರವು ಚಂದ್ರನಾಗೂರಿನ ಜನರ ಅಭಿಪ್ರಾಯವನ್ನು ಜೂನ್ ತಾ. ೧೯ ರಲ್ಲಿ ತೆಗೆಯಲು ಆಜ್ಞಾಪಿಸಿದೆ. ಚಂದ್ರನಾಗೂರಿನ ಶಾಸನ ಸಭೆಯು ಕೇಳಿದ್ದ ಬೇಡಿಕೆಗಳನ್ನು ಒಪ್ಪದೆ ಫ್ರೆಂಚ್ ಸರಕಾರವು ತನ್ನದೇ ಏರ್ಪಾಡು ಮಾಡಿದೆ. ಚುನಾವಣಾ ಪ್ರಚಾರಕ್ಕೆ ೩ ವಾರ ಕೇಳಲಾಗಿತ್ತು. ಎರಡು ವಾರ ಕೊಡಲಾಗಿದೆ. ಚುನಾವಣೆಯ ಕಾಲಕ್ಕೆ ಭಾರತೀಯ ವೀಕ್ಷಕರನ್ನು ಕರೆಸಬೇಕೆಂದು ಅದು ನಿರ್ಣಯಿಸಿತ್ತು. ಇವರು ಅಂತರಾಷ್ಟ್ರೀಯ ಕೋರ್ಟಿನ ವೀಕ್ಷಕರನ್ನು ಕರೆಸಿದೆ. ಇದರ ಫಲಿತಾಂಶ ಮುಂದೆ ತಿಳಿಯಲಿದೆ.

“ವಿಂಡ್ ಮಿಲ್”

ಹಿಂದೂದೇಶದಲ್ಲಿ ನೀರಾವರಿ ಯೋಜನೆ ಸಮರ್ಪಕವಾಗಿಲ್ಲದ ಕಾರಣ ವ್ಯವಸಾಯವು ಶಾಸ್ತ್ರೀಯವಾಗಿಯೂ, ದಕ್ಷತೆಯಿಂದಲೂ ನಡೆಯುವದು ಅಸಾಧ್ಯವಾಗಿದೆ. ಅನೇಕ ಕಡೆ ಮಳೆ ನೀರನ್ನೇ ನಂಬಿ ವ್ಯವಸಾಯವಾಗಬೇಕಿದೆ. ಇಂಡಿಯಾ ಸರಕಾರವು ಈ ಬಗ್ಗೆ ಹೆಚ್ಚು ಆಸ್ಥೆವಹಿಸುತ್ತಿದೆ. ಹಾಲೆಂಡಿನಲ್ಲಿರುವಂತೆ ಭಾರತದಲ್ಲಿಯೂ ಸಾಗುವಳಿಗೆ ನೀರು ಒದಗಿಸಲು 'ವಿಂಡ್‌ಮಿಲ್' (ಗಾಳಿಯ ಸಹಾಯದಿಂದ ನಡೆದು ನೀರು ಹಾಯಿಸುವ ಯಂತ್ರ) ಗಳನ್ನು ಉಪಯೋಗಿಸಲು ಏರ್ಪಾಡು ಮಾಡುತ್ತಿದೆ. ಪ್ರಥಮತವಾಗಿ ಅಲಹಾಬಾದ್, ಅಹಮದಾಬಾದ್, ಬೆಳಗಾಂ, ಕೊಯಮತ್ತೂರು, ಡೆಲ್ಲಿ, ಪೂನಾ ಈ ಕಡೆಗಳಲ್ಲಿ ಇದನ್ನು ಪ್ರಾಯೋಗಿಕವಾಗಿ ಏರ್ಪಡಿಸಲಾಗುವದು.

ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್, ಮಡಿಕೇರಿ.

ಮಹಾಜನರಲ್ಲಿ ವಿನಂತಿ.

ನಮ್ಮ ಫ್ರೇಜರ್‌ಪೇಟೆ ಕಾರ್ಖಾನೆಯಲ್ಲಿ ಈಗಾಗಲೇ ಮೂಳೆಗೊಬ್ಬರ ತಯಾರಾಗುತ್ತಿರುವುದು ಎಲ್ಲರಿಗೂ ತಿಳಿದ ವಿಷಯ. ಈ ಸಂದರ್ಭದಲ್ಲಿ ನಿಮ್ಮ ನಿಮ್ಮ ಗ್ರಾಮಗಳಲ್ಲಿ ಸತ್ತ ದನಗಳ ಮತ್ತು ಇತರ ಪ್ರಾಣಿಗಳ ಮೂಳೆಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಜಮಾಯಿಸಿ ಮೇಲಿನ ವಿಳಾಸಕ್ಕೆ ತಿಳಿಸಿದಲ್ಲಿ ಅದನ್ನು ಅದರ ಬೆಲೆ ಕೊಟ್ಟು ಸಾಗಿಸುವ ಏರ್ಪಾಡನ್ನು ಮಾಡುತ್ತೇವೆ. ಅಥವ ಲಾರಿಗಟ್ಟಲೆ ಜಮಾಯಿಸಿದವರು ನಮ್ಮ ಫ್ರೇಜರ್‌ಪೇಟೆ ಕಾರ್ಖಾನೆಗೆ ತಂದು ಕೊಟ್ಟಲ್ಲಿ ಮಣ 1ರ 0-12-0 ಯಂತೆ ಬೆಲೆಗೆ ತೆಗೆದುಕೊಳ್ಳಲಾಗುವುದು.

ಈಗಾಗಲೇ ತಯಾರಾಗಿರುವ ಮೂಳೆ ಗೊಬ್ಬರಕ್ಕೆ ಖಾಯಿಸ್‌ದಾರರು ಬರಕೊಂಡಲ್ಲಿ ಅಗ್ರಸ್ಥಾನವನ್ನನುಸರಿಸಿ ಬಟವಾಡೆ ಮಾಡಲಾಗುವುದು.

ಸೂಚನೆ:—ನಮ್ಮ ಕಂಪೆನಿಯ ಶೇರುದಾರರಿಗೆ ಹೆಚ್ಚಿನ ರಿಯಾಯಿತಿ ಮತ್ತು ಮೊದಲಿನ ಹಕ್ಕು ಕೊಡಲಾಗುವುದು.

ಮಡಿಕೇರಿ,
ತಾ 19-5-49.

ಕೆ. ಕೆ. ತಿಮ್ಮಯ್ಯ,
ಮೇನೇಜಿಂಗ್ ಡೈರೆಕ್ಟರ್.

ಭಾರತದ ಭಾಗ್ಯ ಭಂಡಾರ

— ಪ್ರಾಚೀನ ಭಾರತದಲ್ಲಿ ಜನಜೀವನ —

ಲೇ —ಶ್ರೀ ವಿ. ಎಸ್. ರಾಮಕೃಷ್ಣ ಬಿ ಎಸ್ಸಿ (ಆನರ್ಸ್) ಬಿ. ಟಿ.

ಲೇಖನ ೧೧

ಅಲೆಗ್ಸಾಂಡರನು ಕ್ರಿ. ಪೂ. ೪ನೆಯ ಶತಮಾನದಲ್ಲಿ ವಾಯವ್ಯ ಪ್ರಾಂತದ ಮೇಲೆ ದಾಳಿ ನಡೆಸಿದಾಗ ಟ್ಯಾಕ್ಸಿಲಸನ ದೊಬ್ಬ ಸ್ತ್ರೀಯ ಗಾರನ ಅವನನ್ನು ಎದುರಿಸಿ ಕಾದಿದ ದರ ಪರಿಣಾಮವಾಗಿ ಮಹತ್ವಾಕಾಂಕ್ಷೆಯುಳ್ಳ ಅಲೆಗ್ಸಾಂಡರನು ಆ ಪ್ರತಿಭಟನದನು ಕೇವಲ ಸಾಮಾನ್ಯನಾದ ಒಬ್ಬ ಪಾಲಕನು ವಿಶ್ವವಿಜಯಿಯಾದ ಅಲೆಗ್ಸಾಂಡರನನ್ನು ಈ ರೀತಿ ಇದಿರಿಸಿ ಹಾಡಿಮಾಡಿದರೆ ಸಾಧಬೇಕೆಂದರೆ ಭಾರತದ ಒಳ ಪ್ರಾಂತಗಳ ಬಲಿಷ್ಠರಾದ ಅರಸರ ಪರಾ ಶೌರ್ಯ ಪರಾಕ್ರಮಗ ಳೇನಿರಬಹುದೆಂದು ಅವನು ಯೋಚನೆ ಗೊಳಗಾಗದಿರಲಿಲ್ಲ. ಅಲೆಗ್ಸಾಂಡರನ ದಂಡಯಾತ್ರೆ ಸಲ್ಯೂಕಸನ ಭಾರತದ ಮೇಲೆ ಧಾಳಿ ನಡೆಸಿದ ಗಲೂ ಭಾರತ ವರ್ಷದ ಸೈನಾಬಲವು ಪರದೇಶೀಯ ಸ್ವಾಯತ್ತ ಕ ತಗೊಂಡಿತು. ಭಾರತ ಶಿಲ್ಪ ವಿನ್ಯಾಸ ಬಲದ ಪ್ರತ್ಯಕ್ಷಿಗೆ ಸುರಕ್ಷಿತವಾದ ಸ್ಮಾರಕ ನಿವಾಸಗಳಿದ್ದುದೇ ಕಾರಣ. ಆ ಸ್ಮಾರಕ ನಿವಾಸಗಳನ್ನು ಇಂದಿನ ನಮ್ಮ ವಿಜ್ಞಾನದ 'ಟ್ಯಾಂಕ್'ಗಳಿಗೆ ಹೋಲಿಸಬಹುದು.

ಆನೆಗಳಿಗೆ ಯುದ್ಧ ವಿದ್ಯೆಯ ಶಿಕ್ಷಣ ಕೊಡುವುದರಲ್ಲೂ ಪಳಗಿಸುವುದರಲ್ಲಿಯೂ ಪುಸ್ತಕಗಳು ಬರೆಯಲ್ಪಟ್ಟು 'ಶಾಸ್ತ್ರ' ಎಂಬುದಾಗಿ ಕರೆಯಲ್ಪಡುತ್ತಿತ್ತು. ಇಂತಹ ಧಾರ್ಮಿಕ ಸ್ವಾಭಾವಿಕ ಗ್ರಂಥಗಳಿಂದ ಆಧುನಿಕ ವಿಜ್ಞಾನಿಗಳೂ ವಿಸ್ಮಯಪಡುವ ಜ್ಞಾನ ವಿಜ್ಞಾನಗಳಿಗೂ 'ಶಾಸ್ತ್ರ' ಎಂಬ ಪದ ಪ್ರಯೋಗಿಸಲ್ಪಡುತ್ತಿತ್ತು. ಜೀವನಕ್ಕೆ ಅತ್ಯವಶ್ಯಕಗಳಾದ ಎಲ್ಲ ವಸ್ತುಗಳ ಅನ್ವೇಷಣೆ ನಡೆಸಿ ಶಾಸ್ತ್ರ ರೂಪದಲ್ಲಿ ಹೊರ ಬೀಳುತ್ತಿದ್ದವು.

ಬರವಣಿಗೆಯ ಕಲೆಯು ಭಾರತದಲ್ಲಿ ಅತಿ ಪುರಾತನವಾದುದು. ನವಶಿಲಾ ಯುಗಕ್ಕೆ ಸಂಬಂಧಿಸಿದ ವಸ್ತುಗಳಲ್ಲಿ 'ಬ್ರಾಹ್ಮಿ' ಲಿಪಿಯ ಬರವಣಿಗೆಯು ಕಾಣಬರುವುದು. ಮೊಹೆಂಜೊದಾರೋ ನಗರದ ಬರವಣಿಗೆಯು ಯಾವ ಲಿಪಿಯೆಂದು ನಿರ್ದಿಷ್ಟವಾಗಿ ಹೇಳಬರುವುದಿಲ್ಲ. ಭಾರತದಾದ್ಯಂತವೂ ಗೋಚರಿಸುವ ಬ್ರಾಹ್ಮೀಲಿಪಿಯು ದೇವನಾಗರೀ ಲಿಪಿಗೂ, ತನ್ಮೂಲಕ ಭಾರತದ ಇತರ ಲಿಪಿಗಳಿಗೆ ತಾಯಿಯಾಗಿದ್ದಿತೆಂಬುದರಲ್ಲಿ ಸಂದೇಹವಿಲ್ಲ. ಅಶೋಕನ ಕಾಲದ ಕೆಲವು ಶಾಸನಗಳು ಬ್ರಾಹ್ಮಿ ಲಿಪಿಯಲ್ಲಿವೆ. ವಾಯವ್ಯ ಪ್ರಾಂತದಲ್ಲಿ 'ಖರೋಷ್ಠಿ' ಲಿಪಿಯೂ ಕಾಣಬರುತ್ತವೆ.

ಕ್ರಿಸ್ತ ಪೂರ್ವ ೬ನೆಯ ಶತಮಾನದ ಹಿಂದೆಯೇ ಪಾಣಿನಿಯು ಸಂಸ್ಕೃತ ಭಾಷೆಯಲ್ಲಿ ಮಹಾ ವ್ಯಾಕರಣವನ್ನು ಬರೆದನು. ಪಾಣಿನಿಯ ಕಾಲದಲ್ಲಿ ಸಂಸ್ಕೃತ ಭಾಷೆಯು ಶೀಘ್ರಗತಿಯಿಂದ ಬೆಳೆಯುವ ಸ್ಥಿತಿಯಲ್ಲಿದ್ದು ಮೂಲಭೂತವಾದ ಭಾಷೆಯಾಗಿ ವರ್ಧಿಸತೊಡಗಿತ್ತು. ಪಾಣಿನಿಯ ವ್ಯಾಕರಣವು ಇತರ ಸಂಸ್ಕೃತ ವ್ಯಾಕರಣಗಳಿಗೆ ಮಾರ್ಗದರ್ಶಕವಾಗಿದ್ದು ಕೇವಲ ವ್ಯಾಕರಣ ಮಾತ್ರವಾಗಿರದೆ ಮಾನವನ ಮನಸ್ಸಿನ ಅತ್ಯುತ್ಕೃಷ್ಟ ಉತ್ಪಾದನೆಯಾಗಿದೆ. ಪಾಣಿನಿಯು ತನ್ನ ವ್ಯಾಕರಣದಲ್ಲಿ ಗ್ರೀಕ್ ಲಿಪಿಯ ವಿಷಯದಲ್ಲೂ ಪ್ರಸ್ತಾಪಿಸುವುದರಿಂದ ಅಲೆಗ್ಸಾಂಡರನ ಆಕ್ರಮಣದ ಪೂರ್ವದಲ್ಲೇ ಗ್ರೀಕ್ ಭಾರತಗಳಲ್ಲಿ ಸಂಬಂಧವಿತ್ತೆಂದು ಊಹಿಸಬಹುದು.

ವೈದ್ಯಶಾಸ್ತ್ರವು ಭಾರತದಲ್ಲಿ ಬಹು ಮಟ್ಟಿಗೆ ಅಭಿವೃದ್ಧಿ ಹೊಂದಿ ಅನೇಕ ವೇಳೆ ವಿದೇಶೀಯರನ್ನು ಬೆರಗುಗೊಳಿಸಿತ್ತು. ವೈದ್ಯಕೀಯ ವಿಜ್ಞಾನದಲ್ಲಿ ಅನೇಕ ಗ್ರಂಥಗಳು ಬರೆಯಲ್ಪಟ್ಟಿದ್ದವು. ವೈದ್ಯ ವಿಜ್ಞಾನದ ಮೂಲಭೂತವಾದ 'ಆಯುರ್ವೇದ' ಎಂಬ ಗ್ರಂಥ ಜನಪ್ರಿಯವಾಗಿದೆ. ವೈದ್ಯ ವಿದ್ಯೆಯಲ್ಲಿ ಅತ್ಯುತ್ತಮ ಪುಸ್ತಕಗಳು ಚರಕ, ಸುಶ್ರುತ ಸಂಹಿತೆಗಳು. ಬಹಳ ಹಿಂದೆ ಬರೆಯಲ್ಪಟ್ಟ ವೈದ್ಯ ವಿಜ್ಞಾನ ಪುಸ್ತಕದಲ್ಲಿ ಉಲ್ಲೇಖಿಸಲ್ಪಟ್ಟ ಚಿಕಿತ್ಸಾ ವಿಧಾನ, ಔಷಧಿಗಳ ವಿವರ ಅನೇಕ ಆಧುನಿಕ ವೈದ್ಯರಿಗೆ ಸ್ಫೂರ್ತಿ ನೀಡಿದೆ ಎಂದು ಊಹಿಸಲಾಗಿದೆ. ಪರಂತು ಆ ಪುಸ್ತಕಗಳು ಅನೇಕ ರೋಗಗಳನ್ನು ನಿರ್ದೇಶಿಸಿ ಅವುಗಳನ್ನು ಕಂಡು ಹಿಡಿಯುವ ವಿಧಾನವನ್ನೂ ಅವುಗಳ ಔಷಧೋಪಚಾರಗಳನ್ನೂ ಚರ್ಚಿಸುವುದಲ್ಲದೆ ಆಹಾರ, ಸ್ವಚ್ಛತೆ, ಸ್ನಾನ, ಶಿಶು ಪೋಷಣೆ ಮುಂತಾದ ಹಲವು ಉಪಯುಕ್ತ ವಿಷಯಗಳನ್ನೊಳಗೊಂಡಿವೆ. ಪ್ರಯೋಗದೃಷ್ಟಿಯ ಪ್ರಧಾನವಾಗಿ ಅನೇಕ ಮೃತದೇಹಗಳನ್ನು ಶಸ್ತ್ರ ಚಿಕಿತ್ಸಾ ಅಭ್ಯಾಸ ಕಾಲದಲ್ಲಿ ಕತ್ತರಿಸಿ ಅಂತರ್ ದೇಹರಚನೆಯನ್ನು ನೋಡುವ ಕೌಶಲ್ಯವು ಆ ಪುಸ್ತಕಗಳಲ್ಲಿ ಪ್ರತಿಬಿಂಬಿತವಾಗಿದೆ. ಶಸ್ತ್ರ ಚಿಕಿತ್ಸೆಯ ವಿವಿಧ ಶಸ್ತ್ರಗಳ ಹೆಸರನ್ನು, ದೇಹದ ವಿವಿಧ ಭಾಗಗಳಲ್ಲಿ ಶಸ್ತ್ರ ಚಿಕಿತ್ಸೆ ಮಾಡುವ ವಿಧಾನವನ್ನು ಸುಶ್ರುತನು ವಿವರಿಸುತ್ತಾನೆ. ಗಾಯಗಳನ್ನು ಹೊಲಿದ ಹೊಗೆ ಇತ್ಯಾದಿಗಳಿಂದ ಶುಚಿಗೊಳಿಸಿ ಸೂಕ್ಷ್ಮಾಂಗಗಳ ಬೆಳವಣಿಗೆಯನ್ನು ತಡೆಗಟ್ಟುತ್ತಲಿದ್ದರು. ಕ್ರಿ. ಪೂ. ಮೂರು ಅಥವಾ ನಾಲ್ಕನೇ ಶತಮಾನಗಳಲ್ಲಿ ಜೈನ ಬೌದ್ಧ ಮತಗಳ ಪ್ರಾಣಿದಯಾ ಪರತೆಯಿಂದ ಪಶುವೈದ್ಯಶಾಲೆಗಳೂ ಸ್ಥಾಪಿತವಾಗಿದ್ದವು.

ಪ್ರಾಚೀನ ಭಾರತವು ಗಣಿತ ವಿದ್ಯೆಯಲ್ಲಿ ಅಭೂತಪೂರ್ವ ಶೋಧನೆಗಳನ್ನು ನಡೆಸಿತ್ತು. ಸೊನ್ನೆಯ ಉಪಯೋಗ, ದಶಮಾಂಶ ಪದ್ಧತಿ, ಕಳೆಯುವ ಚಿಹ್ನೆಯ ಉಪಯೋಗ, ಗೊತ್ತಿಲ್ಲದ ಸಂಖ್ಯೆಯನ್ನು ನಿರ್ದೇಶಿಸಲು ಅಕ್ಷರಗಳನ್ನು ಬಳಸುವ ವಿಧಾನ ಮುಂತಾದವುಗಳಿಂದ ಗಣಿತ ಶಾಸ್ತ್ರವು ಪ್ರಗತಿಯನ್ನೈದಿದ್ದಿತು. ಅಂಕ ಗಣಿತ, ಬೀಜ ಗಣಿತ, ರೇಖಾಗಣಿತಗಳಿಗೆ ಕಳಹದಿಯು ಇವುಗಳಿಂದಲೇ ಉಂಟಾಯಿತು. ಹತ್ತು ಎಂಬ ಅಂಕೆಯು ಋಗ್ವೇದ ಕಾಲದಿಂದಲೂ ಬಳಸಲ್ಪಡುತ್ತಿತ್ತು. ಗಣಿತ ಶಾಸ್ತ್ರವು ಅತಿ ಮಹತ್ವದ ಮತ್ತು ಅತಿ ಕನಿಷ್ಠವಾದ ಸಂಖ್ಯೆಗಳನ್ನು ನಿರ್ದೇಶಿಸಲು ಹಲವು ಶಬ್ದಗಳನ್ನು ಬಳಸುತ್ತಿತ್ತು. ಪಾಶ್ಚಾತ್ಯ ದೇಶಗಳಲ್ಲಿ ನಕ್ಷತ್ರ ಶಾಸ್ತ್ರಜ್ಞ ಅಮಾನುಷ ದೂರಗಳನ್ನು ಹೇಳಿದಾಗ, ಭೂಗರ್ಭದಲ್ಲಿ ಹತ್ತು ಸಾವಿರ ಮಿಲಿಯ ವರುಷಗಳಿಂದ ಉಂಟಾದ ವಿಕಾಸದ ಪರಿಣಾಮವಾಗಿ ಸಕಲ ಜೀವರಾಶಿಗಳೂ ಉಂಟಾದುವು ಎಂದು ಡಾರ್ವಿನನು ವಾದಿಸಿದಾಗ ಆ ಸಮಯದ ಬಾಹುಳ್ಯವನ್ನು ಯೋಚಿಸಲು ಕೂಡ ಶಕ್ತಿ ಸಾಲದೆ ಆಂದೋಲನ ಉಂಟಾಯಿತು. ಭಾರತದಲ್ಲಿ ಕಾಲಗಣನೆಯು ಯುಗಗಟ್ಟಳೆಯಲ್ಲಿ ನಡೆದು ಅನಾದಿಯಾದುದರಿಂದ ಇಂತಹ ಮಹತ್ತರ ಅಂಕೆ ಸಂಖ್ಯೆಗಳು ಹೆಚ್ಚು ಕ್ರಾಂತಿಯನ್ನು ಉಂಟುಮಾಡಲಿಲ್ಲ.

ಕೌಟಿಲ್ಯನ ಅರ್ಥಶಾಸ್ತ್ರವು ಅಂದಿನ ಕಾಲದಲ್ಲಿ ಉಪಯೋಗದಲ್ಲಿದ್ದ ವಿವಿಧ ಅಳತೆಯ ಮಾನಗಳ ಪಡಿಯಚ್ಚುಗಳನ್ನು ವಿವರಿಸುವುದು. ವಾಣಿಜ್ಯ ಕೇಂದ್ರದಲ್ಲಿ ಆ ಪಡಿಯಚ್ಚುಗಳು ಅಧಿಕಾರಿಗಳಿಂದ ಆಗಾಗ್ಗೆ ಪರಿಶೀಲಿಸಲ್ಪಡುತ್ತಿದ್ದವು.

ಜ್ಞಾನಸಾಧನೆಯನ್ನು ಪೋಷಿಸಲು ಶಾಸ್ತ್ರಕಾರರೂ ಶಿಷ್ಯರೂ ಅಂತಹ ಸಾಧನೆಯನ್ನು ಗಣಿಸಲು ಸಮರ್ಥರಾದ ಗುರುಗಳೂ ಒಟ್ಟು ಸೇರಿ ನಗರದಿಂದ ದೂರವಾದ ಪ್ರಶಾಂತ ಅರಣ್ಯಗಳಲ್ಲಿ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಿ ತ್ಯಾಗಮಯವೂ, ಆದರ್ಶ ಪ್ರಾಯವೂ, ನಿತ್ಯಶುದ್ಧವೂ ಆದ ಜೀವನವನ್ನು ನಡೆಸುತ್ತಲಿದ್ದರು. ಇಂತಹ ವಿದ್ಯಾ ಕೇಂದ್ರಗಳಲ್ಲಿ ವಿವಿಧ ವಿಷಯಗಳು ಕಲಿಸಲ್ಪಡುತ್ತಿದ್ದವು. ಸೈನ್ಯ ವಿಜ್ಞಾನವೂ ಶಿಕ್ಷಣದ ಒಂದಂಗವಾಗಿದ್ದಿತು. ವಿದ್ಯಾರ್ಥಿಗಳು ಆದರ್ಶಮಯ ಜೀವನವನ್ನು ಸಾಗಿಸಿ ಜ್ಞಾನಾರ್ಜನೆ ಮಾಡಿದ ಮೇಲೆ ಗುರು ದಕ್ಷಿಣೆ ಅರ್ಪಿಸಿ ಗೃಹಸ್ಥ ಜೀವನವನ್ನು ಕೈಕೊಳ್ಳುತಲಿದ್ದರು. ಒರ್ವ ಪ್ರಜ್ಞಾವಂತ ಗುರುವಿನ ಸುತ್ತಲೂ ಕ್ರಮೇಣ ಒಂದು ವಿಶ್ವವಿದ್ಯಾನಿಲಯವು ಬೆಳೆಯುತ್ತಿತ್ತು.

ಕಾಶಿಯು ಬುದ್ಧನ ಕಾಲದಿಂದಲೂ ವಿದ್ಯಾ ಕೇಂದ್ರವಾಗಿದ್ದಿತು. ಇಲ್ಲಿ ಅನೇಕ ಗುರುಗಳೂ ಅವರ ಶಿಷ್ಯರುಗಳೂ ಬೇರೆ ಬೇರೆ ಶಿಬಿರಗಳಲ್ಲಿ ವಾಸಿಸುತ್ತಲಿದ್ದರು. ವಾಯುವ್ಯ ಪ್ರಾಂತದಲ್ಲಿ ನೂತನ ಪಶಾವರದ ಸಮೀಪ ತಕ್ಷಶಿಲಾ ನಗರದಲ್ಲಿ ಪ್ರಖ್ಯಾತವಾದ ವಿಶ್ವವಿದ್ಯಾನಿಲಯವು ವಿಜ್ಞಾನ, ವೈದ್ಯಶಾಸ್ತ್ರ, ಕಲೆ ಮುಂತಾದವುಗಳಿಗೆ ಖ್ಯಾತಿಗೊಂಡಿದ್ದಿತು. ದೇಶ ವಿದೇಶಗಳಿಂದ ವಿದ್ಯಾರ್ಥಿಗಳು ವಿದ್ಯಾರ್ಜನೆಗಾಗಿ ಇಲ್ಲಿಗೆ ಬರುತ್ತಿದ್ದರು. ಇಲ್ಲಿನ ಪದವೀಧರರು ಭರತ ವರ್ಷದಲ್ಲಿ ಮಾತ್ರವಲ್ಲದೆ ಮಧ್ಯ ಆಸ್ಯಾ, ಅಫ್ಘಾನಿಸ್ಥಾನ ದೇಶಗಳಲ್ಲೂ ಗೌರವಾರ್ಹರಾಗಿದ್ದರು. ಪಾಣಿನಿಯು ಈ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಯಾಗಿದ್ದನು. ತಕ್ಷಶೀಲ ವಿದ್ಯಾನಿಲಯವು ಸನಾತನ ಧರ್ಮದ ಬ್ರಹ್ಮವಿದ್ಯೆಗೆ ಕೇಂದ್ರವಾಗಿದ್ದು ನಂತರ ಬೌದ್ಧ ತತ್ವಗಳಿಗೂ ಮೂಲಸ್ಥಾನವಾಯಿತು.

ಮನುಷ್ಯತೆಯ ಸೇವೆಗೆ ಪ್ರಾಚೀನ ಭಾರತದಲ್ಲಿ ಮಹಿಳೆಯರ ಸ್ಥಾನವು ಸ್ವಾಯತ್ತವಾಗಿಯೇ ಶೋಚನೀಯವಾಗಿದ್ದಿತೆನ್ನಬಹುದು. ಮಹಿಳೆಯರು ಪಿತ, ಪತಿ, ಪುತ್ರರ ಅಧೀನವಾಗಿರಬೇಕೆಂದೂ ಅಸ್ವತಂತ್ರ ಅಬಲೆಯರಾಗಿರಬೇಕೆಂದೂ ಭಾವನೆಯಿದ್ದಿತು. ತಕ್ಷಶಿಲಾ ಮುಂತಾದ ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯಾರ್ಥಿನಿಯರು ಇದ್ದಂತೆ ಕಂಡುಬರುವದಿಲ್ಲ. ಪರಂತು ಅಪ್ರತಿಮ ವಿದ್ಯಾಸಂಪನ್ನೆಯರಾದ ಮಾನಿನಿಯರು ಭರತಖಂಡದ ನಾಲ್ದೆಸೆಗಳಲ್ಲೂ ಇದ್ದರೆನ್ನಲು ಸಂದೇಹವಿಲ್ಲ. ನ್ಯಾಯ ಶಾಸ್ತ್ರರೀತ್ಯಾ ಅವರ ಸ್ಥಾನವು ಹೀನವಾಗಿದ್ದರೂ ಗ್ರೀಕ್, ರೋಮ್ ಮುಂತಾದ ದೇಶಗಳಲ್ಲಿ ಮಹಿಳೆಯರಿಗಿದ್ದ ಸ್ಥಾನಕ್ಕಿಂತಲೂ ತುಚ್ಛವಾಗಿರಲಿಲ್ಲ.

ಅತಿ ಪ್ರಾಚೀನ ಭಾರತೀಯರು ಯಾವ ಶಿಲ್ಪ ಸ್ಥಾಪನಗಳಿಂದ ಕೂಡಿದ್ದರೆಂದು ನಿರ್ದಿಷ್ಟವಾಗಿ ಹೇಳುವುದು ಕಷ್ಟಸಾಧ್ಯ. ಆದರೂ ಅವರು ಸರಳ ಹೃದಯಿಗಳಾಗಿಯೂ, ಆತ್ಮದಾರ್ಢ್ಯ ಸಂಯಮಗಳಿಂದ ಕೂಡಿದವರಾಗಿಯೂ, ವಿಶ್ವದ ಮಹಾ ನಿಗೂಢ ತತ್ವವನ್ನು ಕಂಡು ಹಿಡಿದು ಮಾನವ ಜೀವನದ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ನಿರತರಾಗಿಯೂ ಇದ್ದರೆಂದೂ ಸಾವು ನೋವುಗಳಿಗೆ ಸೋತು ಹಾಕದೆ ಧೀಮಂತರಾಗಿ ಜೀವನ ಸಮಸ್ಯೆಗಳನ್ನು ನಗುಮುಖದಿಂದ ಎದುರಿಸುತ್ತಲಿದ್ದ ಧನ್ಯ ಜೀವಿಗಳಾಗಿದ್ದರೆಂದೂ ಧಾರಾಳವಾಗಿ ಹೇಳಬಹುದು.

ಎಂಪೈರ್ ಆಫ್ ಇಂಡಿಯಾ

ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

48ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು.	ಒಟ್ಟು ಆದಾಯ	1,07,09,000	ಮೀರಿದೆ
	ಚಾಲ್ತಿಯಿರುವ ವಿಮೆ ...	17,74,52,000	,,
	ಆಸ್ತಿ	6,67,60,000	,,
ಕಂಪೆನಿಯ ಆದಿಯಲ್ಲಿ ಕೊಟ್ಟ ಕ್ಲೈಮುಗಳು	....	8,83,62,000	,,

ಬ್ರಾಂಚ ಆಫೀಸು: ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು.

ಏಜೆನ್ಸಿ ಅರ್ಜಿಗಳನ್ನು ಸ್ವಾಗತಿಸಿದೆ.

ಪ್ರಧಾನ ಆಫೀಸು: ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ

(೧ನೇ ಪುಟದಿಂದ ಸಾಗಿದ್ದು)

ಶಾಸ್ತ್ರಜ್ಞರನ್ನು ಗಾಬರಿಗೊಳಿಸುವ ವಿಚಾರ ಇದಲ್ಲ. ನೋಟಕ್ಕೆ ನಿಲುಕದ ಅನಿರೀಕ್ಷಿತ ಶಕ್ತಿಯೊಂದು ಇದನ್ನೆಲ್ಲಾ ನಾಶಮಾಡಬಹುದೆಂಬುದು! ಸೂರ್ಯನ ಈ ವರೆಗಿನ ನೀತಿಯು ಸಂಶಯಕ್ಕೆ ಮೀರಿದ್ದಾದರೂ ಅದು ಹೀಗೆಯೇ ನಿಂತಲ್ಲೇ ನಿಂತೀತೆಂಬು ಹೇಳಲಾಗದು. ಅದು ಒಂದು ವೇಳೆ ಹಾಗೆ ಇದ್ದರೂ ಯಾವದೇ ನಕ್ಷತ್ರವು ಬಂದು ಅದರ ಮೇಲೆ ಆಘಾತ ಮಾಡಲು ಬಹುದು. ಅತೀ ಹೆದರಿಕೆಯ ವಿಚಾರವೆಂದರೆ ಸೂರ್ಯನು 'ನೋವಾ' ಆಗಿ ಪರಿವರ್ತನೆ ಆಗಬಹುದು ನಂದುವ ಮೊದಲು ದೀಪವು ಎತ್ತರ ಉರಿಯುವಂತೆ ಯಾವುದಾದರೊಂದು ನಕ್ಷತ್ರವು ಕ್ರಮಶಃ ಇರುವದಕ್ಕಿಂತಾ ಹೆಚ್ಚಿನ ತೇಜದಿಂದ ಪ್ರಜ್ವಲಿಸತೊಡಗಿ ನಂತರ ತಣ್ಣಗಾಗುವ ಸ್ಥಿತಿಗೆ 'ನೋವಾ' ಎಂದು ಹೇಳುತ್ತಾರೆ. ಈ ರೀತಿಯಾದ ಅನೇಕ ನಕ್ಷತ್ರಗಳ ಕಥೆ ಇದೆ. ಸೂರ್ಯನು ಈ ರೀತಿಯಾಗುವದಾದರೆ ಭೂಮಿಯ ತಾಪ ವಿಪರೀತ ಹೆಚ್ಚಿ ಇಲ್ಲಿಯ ಸರ್ವವೂ ಸುಟ್ಟು ಬೂದಿಯಾಗಿ ಹೋಗಬಹುದು. ಈ ತೀಕ್ಷ್ಣ ಉಷ್ಣತೆಯಿಂದ ಸೂರ್ಯನೇ ಚಿಕ್ಕದಾಗಬಹುದು. ಸೂರ್ಯನು ಯಾವಾಗ ಹೀಗಾಗಬಹುದೆಂದು ಹೇಳಲಾಗುವದಿಲ್ಲ. ನಾಳೆ ಆದರೂ ಆಗಬಹುದು; ಮಿಲಿಯಾಂತರ ವರ್ಷ ಕಳೆದು ಆದರೂ ಆಗಬಹುದು!

ಮತ್ತೊಂದು ಗಂಡಾಂತರವೆಂದರೆ ಬೇರೆ ಯಾವುದಾದರೊಂದು ನಕ್ಷತ್ರವು ಈ ಹಿಂದಿನಂತೆ ಸೂರ್ಯನತ್ತ ಬರಲೂ ಬಹುದು. ಇದು ಇಡೀ ಸೂರ್ಯಮಂಡಲವನ್ನೇ ಅವ್ಯವಸ್ಥೆಗೊಳಿಸಬಹುದು. ಇನ್ನೂ ಅನೇಕ ರೀತಿಯಿಂದ ನಮ್ಮ ಭೂಮಿ ನಾಶವಾಗಲೂ ಸಾಕು ಭೂಮಿಯು ಸೂರ್ಯಮಂಡಲದಿಂದ ಸಿಡಿದು ಬೇರೆ ಯಾವುದಾದರೂ ನಕ್ಷತ್ರದಿಂದ ಆಕರ್ಷಿಸಲ್ಪಡಬಹುದ. ಇಲ್ಲವೇ ಸೂರ್ಯನಿಂದ ದೂರ ಸರಿದು ತಣ್ಣಗಾಗಬಹುದು.

ಖಗೋಳ ಶಾಸ್ತ್ರದ ಕ್ಷೇತ್ರದಲ್ಲಿ ಈ ಶೋಧನ ವಿವೇಚನೆಗಳು ಚಿತ್ತವನ್ನಾಕರ್ಷಿಸುತ್ತವೆ ಖಗೋಳ ಶಾಸ್ತ್ರಜ್ಞರ ಶೋಧನೆಗಳು ಭವಿಷ್ಯದ ಬಗ್ಗೆ ಉಪಯುಕ್ತವಾದರೂ, ಅವು ಆಗಾಗ ಬದಲಾಗಬೇಕಾಗುವವು. ಬೇರೆ ಶಾಸ್ತ್ರಗಳಂತೆ ಇದೂ ಕೂಡ ಹೊಸ ಆವಿಷ್ಕಾರಗಳಿಂದ ಬದಲಾವಣೆಯನ್ನು ಹೊಂದುತ್ತಿದೆ. ಖಗೋಳ ಶಾಸ್ತ್ರಜ್ಞನು ಮಿಲಿಯಾಂತರ ವರ್ಷಗಳಲ್ಲಿ ಹೀಗಾಗಬಹುದೆಂದು ಹೇಳಿದರೆ ಅಷ್ಟೇ ವರ್ಷಗಳಲ್ಲಿ ಆಗುತ್ತದೆಂದಲ್ಲ ಅದೊಂದು ಅಂದಾಜು. ಈ ಜಗತ್ತು ಎಪ್ಪತ್ತು ಸಾವಿರ ಬಿಲ್ಲಿಯ ವರ್ಷಗಳಲ್ಲಿ ನಿರ್ನಾಮಗೊಳ್ಳುವದೆಂದು ಆತನು ಹೇಳಿದರೆ ಎರಡು ಸಾವಿರದ ಐದು ಬಿಲ್ಲಿಯ ವರ್ಷಗಳೇಕೆ ಆಗಬಾರದೆಂದು ಪ್ರಶ್ನಿಸಬಹುದು!

Edited, Printed and Published by P. I. Bellappa at 'Kodagu' ... Mercara, for 'Kodagu' ...

ನಗಾಡುವುದು ಒಂದು ಉತ್ತಮ ವ್ಯಾಯಾಮ

ನಗಾಡುವುದು ಒಂದು ದೈವೀಕ ವರವೇ ಆಗಿದೆ ಎಂದು ಸರ್ ಪೌಲ್ ಡ್ಯೂಕ್ ಎಂಬ ಬ್ರಿಟಿಷ್ ಶಾರೀರಿಕ ತಜ್ಞರು 'ಸಂಡೇ ಡಿಸ್ಪೇಚ್' ಪತ್ರಿಕೆಯಲ್ಲಿ ಬರೆಯುತ್ತಾ ನಗೆಯ ದೈಹೀಕ ಮಾನಸೀಕ ಮತ್ತು ಅಧ್ಯಾತ್ಮಿಕ ಅವಲೋಕನದ ಕುರಿತು ಚರ್ಚಿಸುತ್ತಾರೆ

ನಾವು ನಗಾಡುವಾಗ ಏನೆಲ್ಲ ಸಂಭವಿಸುತ್ತದೆ ಎಂಬ ಪ್ರಶ್ನೆಗೆ ಅವರು ಉತ್ತರ ಬರೆಯುತ್ತಾರೆ.

ಈ ಸಂಬಂಧವಾಗಿ ಗಮನಿಸಬೇಕಾದ ಮೊದಲನೆ ಸಂಗತಿಯೆಂದರೆ ಅದೊಂದು ಉಸಿರಾಟದ ವ್ಯಾಯಾಮವೇ ಬುದು. ನಮ್ಮಲ್ಲಿ ಹೆಚ್ಚಿನವರು ಶ್ವಾಸಕೋಶಗಳನ್ನು ಸಂಪೂರ್ಣ ಬರಿದು ಮಾಡುವುದಿಲ್ಲ. ನಗಾಡುವವರಲ್ಲಿ ಆ ಕ್ರಿಯೆಯು ಸುಲಭವಾಗಿ ಉಂಟಾಗುತ್ತದೆ ನಗಾಡುವಾಗ ಶ್ವಾಸಕೋಶಗಳಲ್ಲಿನ ಗಾಳಿಯು ಸಂಪೂರ್ಣ ಹೊರ ಹೋಗಿ ಮತ್ತೆ ಹೆಚ್ಚು ಪ್ರಮಾಣದ ವಾಯುವು ಅದರೊಳಗೆ ಪ್ರವೇಶಿಸುವಂತಾಗುತ್ತದೆ ಹೀಗೆ ಹಲವು ಭಾರಿ ಸಂಭವಿಸಿದಾಗ ರಕ್ತದೊಳಗೆ ಶುದ್ಧ ವಾಯುವಿನ ಶಕ್ತಿಸಾರವು ಹೆಚ್ಚೆಚ್ಚು ಸೇರಿಕೊಳ್ಳಲು ಅನುಕೂಲವಾಗುತ್ತದೆ.

ನಗೆಯಿಂದ ಯೋಗಾಭ್ಯಾಸದ ಒಂದು ಧ್ಯೇಯವೂ ನಿರ್ವಹಿಸಿದಂತಾಗುತ್ತದೆಂದು ಬಲ್ಲವರು ಹೇಳುತ್ತಾರೆ. ಕಾರಣ ನಗಾಡುವಾಗ ಕ್ರಮವಾಗಿ ಒಂದರ ಹಿಂದೆ ಒಂದರಂತೆ ಶ್ವಾಸಕೋಶಗಳು ಸಂಪೂರ್ಣ ಬರಿದಾಗಿ ಪುನಃ ಸಂಪೂರ್ಣ ತುಂಬಿಕೊಳ್ಳುವಂತಾಗುತ್ತದೆ. ಇದು ಯೋಗಾಭ್ಯಾಸ ವ್ಯಾಯಾಮದ ಒಂದು ಮಹತ್ವದ ಕ್ರಿಯಾಂಶವಾಗಿದೆ ಯೋಗವೆಂದರೆ ಪರಮಾತ್ಮನೊಡನೆ ಸಂಯೋಗಗೊಳ್ಳುವುದೆಂದರ್ಥ.

ವ್ಯಾಯಾಮವಾಗಿ

ನಗುವುದೊಂದು ಅಧ್ಯಾತ್ಮಿಕ ವ್ಯಾಯಾಮ. ಏಕೆಂದರೆ ಅದರಿಂದ ರಕ್ತಶುದ್ಧಿಯಾಗುವುದರೊಂದಿಗೆ ನರಶಕ್ತಿಯು ಬಲಿತುಕೊಳ್ಳುವದು. ಈ ಎರಡು ಸುಪರಿಣಾಮಗಳು ಸಂಪೂರ್ಣ ನಗೆಯಿಂದಲೇ ಉಂಟಾಗುತ್ತವೆಂಬುದು ನಿಸ್ಸಂದೇಹ. ಯೋಗಿಯೊಬ್ಬನು 'ದೇವರೇ, ನನ್ನಲ್ಲಿ ಹೃದಯವನ್ನು ಪರಿಶುದ್ಧಗೊಳಿಸು, ಸ್ವಸ್ಥ ಸನ್ಮಾರ್ಗದ ಭಾವನೆಯನ್ನುಂಟು ಮಾಡು' ಎಂದು ಪ್ರಾರ್ಥಿಸುವಾಗ ಅವನು ಅಕ್ಷರಶಃ ಅದೇ ಉದ್ದೇಶವನ್ನು ಅಪೇಕ್ಷಿಸುತ್ತಾನೆ

ಶುದ್ಧವಾದ ರಕ್ತ ಹರಿಯುವಂತಾದರೆ ಪರಿಶುದ್ಧವಾದ ಹೃತ್ಕೋಶವುಂಟಾಗುವದು; ಮತ್ತೆ ಆ ರಕ್ತವು ಪರಿಶುದ್ಧವಾಗಿರಬೇಕಾದರೆ ಅದಕ್ಕೆ ಹೇರಳವಾದ ಆಮ್ಲಜನಕವುಳ್ಳ ಗಾಳಿಯು ಸರಬರಾಯಿಯಾಗಬೇಕು ಮತ್ತೆ ಸದ್ಭಾವನೆಯನ್ನುಂಟು ಮಾಡುವುದರ ಕುರಿತು ನಿರೂಪಿಸುವಾಗ ಬೈಬಲ್ ಧರ್ಮಗ್ರಂಥದಲ್ಲಿ ಹೇಳಲ್ಪಟ್ಟ 'ಅಧ್ಯಾತ್ಮಿಕ ಭಾವನೆ' ಇಲ್ಲವೇ 'ಸ್ಫೂರ್ತಿ' ಇವಕ್ಕೂ 'ಉಸಿರಾಟಕ್ಕೂ' ನಿಕಟ ಸಂಬಂಧವುಳ್ಳ ವಿಷಯಗಳೆಂಬುದನ್ನು ಗಮನಿಸಿದರೆ ಸಾಕು.

ಅದಲ್ಲದೆ ನಗಾಡುವುದರಿಂದ ಹೊಟ್ಟೆಗೊಂದು ಉತ್ತಮ ವ್ಯಾಯಾಮ ಸಿಕ್ಕಿದಂತಾಗುವುದು. ಹೊಟ್ಟೆಯ ಹೊರಸರಿಯು ಒಳಗಿನ ಅನ್ನಕೋಶಕ್ಕೆ ಚೆನ್ನಾಗಿ ಒತ್ತಿದಂತಾಗಿ ಪಚನಕ್ರಿಯೆಗೆ ತುಂಬಾ ಸಹಾಯ ಮಾಡುವದು. ಇದನ್ನು ಉದ್ದೇಶಪೂರ್ವಕವಾಗಿ ಕೈಯಿಂದಲೇ ಚೆನ್ನಾಗಿ ತಿಕ್ಕಿಯೂ ಮಾಡುತ್ತಾರೆ, ಆದರೆ ನಗಾಡುವಾಗ ಇದು ಸಹಜವಾಗಿಯೆ ಆಗುತ್ತದೆ ಇದೇ ರೀತಿ ಉಚ್ಛ್ವಾಸ ನಿಶ್ವಾಸಗಳ ಕ್ರಿಯೆಯು ನಗಾಡುವಾಗ ಸರಾಗವಾಗಿ ಜರುಗುವುದರಿಂದ ನರ ಶಕ್ತಿಯ ಮೇಲೆ ಅದರ ಪರಿಣಾಮವು ಚೆನ್ನಾಗಿಯೆ ಆಗುತ್ತದೆ.

ಪಚನ ಕ್ರಿಯೆಗೆ ಸಹಾಯ

ನಗೆಯು ಒಂದು ಕಂಪನ ರೂಪದ ವ್ಯಾಯಾಮ. ಹಲವೊಂದು ಸಂದರ್ಭಗಳಲ್ಲಿ ಹೊಟ್ಟೆ ತುಂಬ ನಗಾಡದಿಂದ ಇಡೀ ಶರೀರವು ಚೆನ್ನಾಗಿ ಕುಲುಕಿದಂತಾಗುತ್ತವೆ. ಇದರ ಪರಿಣಾಮವಾಗಿ ಸ್ವಲ್ಪ ದಣಿವೂ ಉಂಟಾಗುತ್ತದ. ಕೆಲವು ಸಲ ಅಳುವಾಗಲೂ ಇದೇ ತರದ ಪರಿಣಾಮ ಉಂಟಾಗುವದ ಆದರೆ ನಗು ಮತ್ತು ಅಳುವಿಕೆಗಳೊಳಗಿನ ವ್ಯತ್ಯಾಸವು ಬಹಳ ಸೂಕ್ಷ್ಮವಾದುದಾಗಿದ.

ಈ ಕುಲುಕಾಟ ಅಲುಗಾಟಗಳು ಪಚನಕ್ರಿಯೆಗೆ ಅಸಾಮಾನ್ಯ ಸಹಾಯ ಕಾರಿಯಾದವುಗಳು. ಈ ತರದ ವ್ಯಾಯಾಮವು ದಿನನಿತ್ಯವೂ ಸಿಗುವಂತೆ ಪ್ರಯತ್ನಿಸಿದರೆ ಹೊಟ್ಟೆಯ ಪರೆಯು ಬಲಗೊಂಡು ತನ್ನಾಳದ ಪಚನೇಂದ್ರಿಯಗಳು ಹದಗೊಳ್ಳುವವು.

ಕನ್ನಡಿಯೊಂದನ್ನು ಎದುರಿಗೆ ಇಟ್ಟುಕೊಂಡು ಉದ್ದೇಶಪೂರ್ವಕವಾಗಿ ಬೇಕಾದ ಹಾಗೆ ನಿಮ್ಮನ್ನು ನೋಡಿ ನೀವೇ ನಗುತ್ತಾ ಈ ವ್ಯಾಯಾಮವನ್ನು ಮಾಡಬಹುದು. ಹೊಟ್ಟೆಯ ಪರೆಯು ನಡುಕವನ್ನು ಆದಷ್ಟು ಹೆಚ್ಚೆಚ್ಚು ಉಂಟುಮಾಡಿ ಅದರೊಡನೆ ಬಲಾತ್ಕಾರದ ಉಚ್ಛ್ವಾಸ ನಿಶ್ವಾಸಗಳನ್ನು ಮಾಡಬೇಕು ಒಂದುಸಾರಿ ಸಂಪೂರ್ಣ ಗಾಳಿಯನ್ನು ಶ್ವಾಸಕೋಶದಿಂದ ಹೊರಹಾಕಿದ ಮೇಲೆ ಮತ್ತೆ ಅದೇ ರೀತಿ ಶ್ವಾಸಕೋಶಗಳನ್ನು ಸಂಪೂರ್ಣ ಒಳ ಉಸಿರಾಟದಿಂದ ತುಂಬಿಸಬೇಕ. ಹೀಗೆ ಮಾಡುವುದರಿಂದ ನಿಮಗೆ ತುಂಬಾ ಶಕ್ತಿಯ ಸುಖಾರೋಗ್ಯಗಳುಂಟಾಗುವುದನ್ನೂ ನೀವು ಗಮನಿಸುವಿರಿ. ಕ್ರಮೇಣ ಈ ಅನುಕರಣವನ್ನು ಹೆಚ್ಚಿಸಿ ನೀವು ಇಡೀ ಶರೀರವನ್ನು ಕುಲುಕುವಂತೆ ಮಾಡುವುದು ಅತ್ಯುತ್ತಮ ಫಲವನ್ನು ಕೊಡುವಂತಹದಾಗುತ್ತದೆ

ಇತರ ಸುಪರಿಣಾಮಗಳು

ನಗಾಟದಿಂದ ಇನ್ನೂ ಅನೇಕ ಶಾರೀರಿಕ ಅನುಕೂಲತೆಗಳು ಲಭಿಸುವವು. ರಕ್ತಚಲನೆಯನ್ನು ತೀವ್ರಗೊಳಿಸುವುದು; (ಮುಖ ಕೆಂಪಾಗುವುದರಲ್ಲಿ ಇದನ್ನು ಕಾಣಬಹುದು;) ಕಣ್ಣೀರು ಬರುವುದು (ಇದು) ಉತ್ತಮ ದೃಷ್ಟಿ ಶುಭ್ರಗೊಳಿಸುವದು), ನಗಾಟದಿಂದ ಕೆಲವು ಸಲ ಬೆವರು ಬರುವುದೂ ಉಂಟು. ಇದೂ ಒಂದು ಒಳ್ಳೆ ಲಕ್ಷಣ.

ನಮ್ಮ ಶರೀರವು ಅಧ್ಯಾತ್ಮಿಕ ಸಾಧನೆಯ ಶ್ರೇಷ್ಠ ದೇವಾಲಯವೆಂಬ ಭಾವನೆ ಸರಿಯಾದರೆ ಅದನ್ನ ಉತ್ತಮ ಸ್ಥಿತಿಯಲ್ಲಿಡುವುದೂ ನಮ್ಮ ಆದ್ಯ ಕರ್ತವ್ಯವಾಗಿದೆ ಆಂತರಿಕ ಶುದ್ಧತೆಯು ಯಾವ ಮಂದಿರಕ್ಕಾದರೂ ಅತ್ಯಾವಶ್ಯಕವಾದುದು. ಶರೀರಗಳಲ್ಲಿ ಪರಸ್ಪರ ವ್ಯತ್ಯಾಸಗಳೂ ಲೋಪ, ದೋಷಗಳೂ ಇವೆಯೆಂಬ ಮಾಸಿಜ. ಆದರೆ 'ದೇವರ ರಾಜ್ಯವು ನಿನ್ನ ಒಳಗೇ ಇದೆ' ಎಂಬ ಸಂತ ವಚನಕ್ಕನುಗುಣವಾಗಿ ಯೋಗಾಭ್ಯಾಸಿಗಳು ಅದನ್ನು ಅಚ್ಚುಕಟ್ಟಾಗಿಡುವ ಧ್ಯೇಯವುಳ್ಳವರಾಗಿರುವರು. ದಿವಸಾಗಲೂ ಒಂದಿಷ್ಟು ಹೊಟ್ಟೆ ತುಂಬ ನಗಾಡಿದರೆ ಈ ಉದ್ದೇಶ್ಯ ಸಾಧನೆಯು ಬಹುಮಟ್ಟಿಗೆ ಪೂರೈಸುವುದೆಂದು ನಾನು ಧೈರ್ಯದಿಂದ ಹೇಳಬಲ್ಲೆ.

'ಸ್ವ ಮೂ.'

CRESCENT

FOR PROTECTION AND SERVICE.

It is best to represent and insure with

The CRESCENT Insurance Co., Ltd,

H. O: BOMBAY.] [Established 1919

For particulars write to

Sri B. A. Poovaiah, Organiser, Pollibetta, Coorg. or The Branch Manager, 22 B. Mahatma Gandhi Road, Bangalore 1.

ಸುರಕ್ಷಿತವಾದ ಜೀವವಿಮೆ ಪಡೆಯಲು

ಕ್ರೆಸೆಂಟ್

ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.

ಗಾಂಧಿ ವಿಚಾರದೋಹನ.

ಹೆಂಗಸು ಅಬಲೆಯಲ್ಲ.

ಲೇ:—ಮಹಾತ್ಮಾಗಾಂಧಿ.

ನಾನು ಹೆಂಗಸಾಗಿ ಹುಟ್ಟಿದ್ದರೆ ಹೆಂಗಸು ತನ್ನ ಆಟದ ಸಾಮಾನೆಂದು ತಿಳಿಯುವ ಗಂಡಸಿನ ನೀತಿಯ ವಿರುದ್ಧ ದಂಗೆ ಏಳುತ್ತಿದ್ದೆ. ಹೆಂಗಸಿನ ಹೃದಯ ಪ್ರವೇಶಮಾಡಲು ಮಾನಸಿಕವಾಗಿ ನಾನು ಹೆಂಗಸಾಗಿರುವೆ. ನಾನು ನನ್ನ ಹೆಂಡತಿಯ ಬಗ್ಗೆ ಆ ವರೆಗಿದ್ದ ನನ್ನ ನೀತಿಯನ್ನು ಬದಲು ಮಾಡುವ ವರೆಗೆ ಆಕೆಯ ಹೃದಯ ಪ್ರವೇಶಮಾಡಲು ಸಾಧ್ಯವಾಗಲಿಲ್ಲ. ಗಂಡನಿಗೆ ಸೇರಬೇಕೆನ್ನುವ ಹಕ್ಕುಗಳನ್ನು ತ್ಯಾಗಮಾಡಿ ಆಕೆಯ ಪೂರ್ಣ ಹಕ್ಕುಗಳನ್ನು ಕೊಟ್ಟ ನಂತರವೇ ಇದು ಸಾಧ್ಯವಾಯಿತು. ಇಂದು ನನ್ನಂತೆಯೇ ಆಕೆಯು ಸರಳವಾಗಿರುವದನ್ನು ನೀವು ನೋಡುವಿರಿ. ಆಕೆಯ ಕುತ್ತಿಗೆಯಲ್ಲಿ ಸರಪಣಿಗಳಾಗಲೀ, ಕೈಯಲ್ಲಿ ಬಾಕಿನ [illegible]ಗಳಾಗಲೀ ಇಲ್ಲ. ನೀವೂ ಕೂಡ ಹಾಗೆ ಆಗಬೇಕೆಂಬುದು ನನ್ನ ಇಚ್ಛೆ. ನೀವು ಇಚ್ಛೆ ಅನಿಚ್ಛೆಗಳ ಗುಲಾಮರಾಗದಿರಿ. ಗಂಡಸಿನ ಗುಲಾಮರಾಗದಿರಿ. ನಿಮ್ಮನ್ನು ಶೃಂಗರಿಸಿಕೊಳ್ಳಲು, ತಿರಸ್ಕರಿಸಿ—ಸುಗಂಧ ದ್ರವ್ಯಗಳಿಗೂ, ಇತರ ಬಿನ್ನಾಣದ ವಸ್ತುಗಳಿಗೂ ಮರುಳಾಗದಿರಿ. ನೀವು ನಿಜವಾದ ಸುಗಂಧವನ್ನು ಬೀರಬೇಕಾದರೆ ಅದು ನಿಮ್ಮ ಹೃದಯದಿಂದ ಬರಬೇಕು. ಆಗ ನೀವು ಬರೀ ಗಂಡಸನ್ನು ಸೈರಿಸುವದಿಲ್ಲ; ಇಡೀ ಮಾನವಜಾತಿಯನ್ನು. ಇದು ನಿಮ್ಮ ಜನ್ಮಸಿದ್ಧ ಹಕ್ಕು. [illegible] ಹೆಂಗಸಿನಿಂದ ಹುಟ್ಟಿರುವನು. ಆತನು ಆಕೆಯ ಮಾಂಸದ ಮಾಂಸ ಆಕೆಯ ಎಲುಬಿನ ಎಲುಬು. ನಿಮ್ಮ ಮನಸ್ಸಿಗೆ ಬಂದು ನಿಮ್ಮ ಶುಭ ಸಂದೇಶವನ್ನು ಬೀರಿ. (ಯಂಗ್ ಇಂಡಿಯಾ ೧೯೨೭. ಪುಟ ೪೦೬)

ಹೆಂಗಸು ತಾನು ಗಂಡಸಿನ ಭೋಗದ ವಸ್ತುವೆಂದು ತಿಳಿಯುವದನ್ನು ಬಿಡಬೇಕು. ಇದನ್ನು ಬಗೆಹರಿಸುವ ಶಕ್ತಿ ಗಂಡಸಿಗಿಂತ ಆಕೆಯಲ್ಲಿದೆ. ಗಂಡಸಿನ ಸ್ತ್ರೀ ತಾನು ಸ್ವತಂತ್ರಳು, ಆತನ ಪ್ರತಿಯೊಂದು ಕಾರ್ಯದಲ್ಲಿಯೂ ಸಮಪಾಲುಗಾರಳು ಎಂದು ಗಣಿಸಬೇಕಾದರೆ ಗಂಡಸಿನ ತೃಪ್ತಿಗಾಗಿ—ತನ್ನ ಗಂಡನೂ ಕೂಡಿಲ್ಲ—ಶೃಂಗರಿಸಿಕೊಳ್ಳುವದನ್ನು ಬಿಡಬೇಕು. ತನ್ನ ಶಾರೀರಿಕ ಸೌಂದರ್ಯದಿಂದ ರಾವಣನನ್ನು ಮರುಳಿಸಲು ಸೀತೆಯು ಒಂದು ಕ್ಷಣವನ್ನಾದರೂ ಪ್ರಯತ್ನಿಸಿದಳೆಂದು ನಾನು ಊಹಿಸಲಾರೆ. (ಯಂಗ್ ಇಂಡಿಯಾ, ೧೯೨೧ ಪುಟ ೨೫೯)

ಗಂಡಸು ತಾನು ಮಾಡಿದ ಮತ್ತು ಮಾಡುವ ಪಾಪಗಳಲ್ಲಿ ನನ್ನ ದೃಷ್ಟಿಯಲ್ಲಿ ಮಾನವಿಗ[illegible] ಉತ್ಕೃಷ್ಟವಾದ ಹೆಂಗಸನ್ನು—ಅಬಲೆಯನ್ನು—ತನ್ನ [illegible] ಮಾಡಿಕೊಂಡದ್ದಷ್ಟು ಅವಮಾನ [illegible] ಗಂಡಸರ [illegible] ತ್ಯಾಗ, [illegible], ನಂಬಿಕೆ ಮತ್ತು ಜ್ಞಾನ [illegible]. (ಯಂಗ್ ಇಂಡಿಯಾ ೧೯೨೧ ಪುಟ ೨೯೬)

ಹೆಂಗಸು ತ್ಯಾಗದ ಮೂರ್ತಿಯೆಂದು ನನ್ನ ಭಾವನೆ. ಆದರೆ ತನ್ನ ಮುದ್ರೆಯೊತ್ತಲು ಗಂಡಸಿಗಿಂತ ತನಗೆ ಎಂಥಾ ಅನುಕೂಲವಿದೆಯೆಂಬುದನ್ನು [illegible] ಆಕೆ ಅರಿಯಳು. ಮಹಾಕವಿ ಟಾಲ್‌ಸ್ಟಾಯಿ ಹೇಳುತ್ತಿದ್ದಂತೆ ಅವರು ಗಂಡಸಿನ [illegible] ಪ್ರಭಾವದಲ್ಲಿ ತೊಳಲುತ್ತಿದ್ದಾರೆ. ಅವರು ಅಹಿಂಸೆಯ ಬಲವನ್ನು ತಿಳಿಯಬಲ್ಲರಾದರೆ ಅಬಲೆಯರೆಂದು ಕರೆಸಿಕೊಳ್ಳಲು ಎಂದೂ ಒಪ್ಪಲಿಕ್ಕಿಲ್ಲ. (ಯಂಗ್ ಇಂಡಿಯಾ ೧೯೩೭ ಪುಟ ೧೯)

ಹೆಂಗಸನ್ನು ಅಬಲೆಯೆಂದು ಕರೆಯುವದು ಅಪರಾಧ. ಇದು ಹೆಂಗಸಿಗೆ ಗಂಡಸಿನ ಅನ್ಯಾಯ. ಶಕ್ತಿ ಎಂದರೆ ಪಾಶವೀಶಕ್ತಿ ಎಂದೆನ್ನುವದಾದರೆ ಖಂಡಿತವಾಗಿಯೂ ಹೆಂಗಸು ಗಂಡಸಿಗಿಂತ ನಿರ್ಬಲಳು. ಶಕ್ತಿ ಎಂದರೆ ನೈತಿಕಶಕ್ತಿ ಎನ್ನುವದಾದರೆ ಹೆಂಗಸು ಗಂಡಸಿಗಿಂತ ಹೇಳಲಾರದಷ್ಟು ಪ್ರಬಲಳು. ಆಕೆಗೆ ಹೆಚ್ಚು [illegible], ಹೆಚ್ಚು ತ್ಯಾಗಶಕ್ತಿ, ಹೆಚ್ಚು ಕಷ್ಟಸಹನಶಕ್ತಿ, ಹೆಚ್ಚು ಧೈರ್ಯ ಇಲ್ಲವೇ? ಆಕೆ ಇಲ್ಲದಿದ್ದರೆ ಗಂಡಸು ಇಲ್ಲ. ಅಹಿಂಸೆಯು ಮಾನವಕುಲದ ಉನ್ನತ ತತ್ವವಾದರೆ ಭವಿಷ್ಯವು ಹೆಂಗಸಿನದು. ಹೆಂಗಸಿನಷ್ಟು ಹೃದಯವನ್ನು ಪ್ರಚೋದಿಸುವವರು ಯಾರಿರುವರು? (ಯಂಗ್ ಇಂಡಿಯಾ ೧೯೩೦ ಪುಟ ೧೨೧)

ಗಂಡಸು ತನ್ನ ಕುರುಡು ಸ್ವಾರ್ಥತೆಯಿಂದ ಹೆಂಗಸಿನ ಆತ್ಮವನ್ನು ಕೆಳಗೆ ತುಳಿಯದಿದ್ದರೆ, ಆಕೆಯು ಜೀವನದ ಭೋಗದ ಬಲಿಪಶುವಾಗದಿದ್ದರೆ ಆಕೆಯಲ್ಲಿ ಅಂತರ್ಗತವಾಗಿರುವ ಮಹಾಶಕ್ತಿಯ ಪ್ರದರ್ಶನವನ್ನು ಜಗತ್ತಿಗೆ ಆಕೆ ಮಾಡುತ್ತಿದ್ದಳು. ಹೆಂಗಸಿಗೆ ಗಂಡಸಿನಂತೆಯೇ ಸಮಾನ ಸ್ವಾತಂತ್ರ್ಯ, ಸಮಾನಾವಕಾಶ ದೊರೆತು ತನ್ನ ಪರಸ್ಪರ ಸಹಾಯ ಮತ್ತು ಐಕ್ಯತೆಯ ಗುಣಗಳನ್ನು ಆಕೆ ಬೆಳೆಸಿಕೊಂಡಾಗ ಜಗತ್ತು ಆಶ್ಚರ್ಯದಿಂದ ಆಕೆಯ ಘನತೆಯನ್ನು ಕಾಣುವದು. (ಯಂಗ್ ಇಂಡಿಯಾ ೧೯೨೧ ಪುಟ ೯೬)

ಜೀವನದಲ್ಲಿ ಪವಿತ್ರವಾದುದು ಮತ್ತು ಧಾರ್ಮಿಕವಾದುದು ಏನಿದೆಯೋ ಅವುಗಳೆಲ್ಲವುಗಳ ಸ್ವಾಮಿನಿಗಳು ಹೆಂಗಸರು. ಸ್ವಾಭಾವಿಕವಾಗಿ ಹಳೇ ಸಂಪ್ರದಾಯವಾದಿಗಳಾಗಿ ತಮ್ಮ ಮೂಢ ನಂಬಿಕೆ ಮತ್ತು ಬಂಧನಗಳನ್ನು ತಾವು ಬಿಡಲು ನಿಧಾನವಾದರೆ ಜೀವನದಲ್ಲಿ ಪವಿತ್ರವಾದದ್ದನ್ನು, ಉದಾತ್ತವಾದದ್ದನ್ನು ಬಿಡಲು ನಿಧಾನರು. (ಹರಿಜನ ೧೯೩೭ ಪುಟ ೩)

[illegible] ಉಚ್ಚಾಧಿಕಾರಗಳ ಬಗ್ಗೆ ನಾನು [illegible]. [illegible] ನನ್ನ [illegible]. (ಯಂಗ್ ಇಂಡಿಯಾ [illegible])

ಹೆಂಗಸಿಗೆ [illegible] ಕೊಡುವದರಲ್ಲಿ ನನಗೆ ವಿಶ್ವಾಸವಿದೆ. ಆದರೆ ಹೆಂಗಸು ಗಂಡಸಿನ ಅನುಕರಣೆ ಮಾಡುತ್ತ ಆತನೊಡನೆ ಸ್ಪರ್ಧಿಸುತ್ತಿರುವದರಿಂದ ತನ್ನ ಪಾಲಿನ ಸೇವೆಯನ್ನು ಜಗತ್ತಿಗೆ ಸಲ್ಲಿಸಲು ಹೆಂಗಸು ಅಸಮರ್ಥಳಾಗುವಳೆಂದೂ ನನಗೆ ನಂಬಿಕೆ ಇದೆ. ಆಕೆ ಗಂಡಸಿನೊಡನೆ ಸ್ಪರ್ಧಿಸಬಹುದು. ಆದರೆ ತನಗೆ ಸಾಧ್ಯವಿರುವ ಮಹಾ ಎತ್ತರಕ್ಕೆ ಗಂಡಸನ್ನು ಅನುಕರಿಸುವದರಿಂದ ಆಕೆ ಏರಲಾರಳು. ಆಕೆಯು ಗಂಡಸಿನಲ್ಲಿರುವ ನ್ಯೂನತೆಯನ್ನು ತುಂಬುವ ಪೂರಕಶಕ್ತಿಯಾಗಬೇಕು. (ಯಂಗ್ ಇಂಡಿಯಾ ೧೯೩೯ ಪುಟ ೩೪೦)

ಅನುವಾದಕ:—ಶ್ರೀ. ಬಿ. ಡಿ. ಗ.

ಚೀನ ಮತ್ತು ಜಪಾನುಗಳಲ್ಲಿ

ಗಾಂಧಿಯವರ ಪ್ರಭಾವ.

ಲೇ:—ಶ್ರೀ. ಮನ್ನಾರಾಯಣ ಅಗರ್‌ವಾಲಾ.

ನಾವು (ಅಂದರೆ ಲೇಖಕ ಮತ್ತು ಅವರ ಹೆಂಡತಿ) ಏಪ್ರಿಲ್ ೧೭ರಲ್ಲಿ ಶಾಂಘಾಯಿಗೆ ತಲುಪಿದೆವು ಮತ್ತು ಅಲ್ಲಿ ಎರಡು ದಿನ ನಿಂತೆವು. ನಾವು ೬ ದಿನಗಳನ್ನು ಟೋಕಿಯೋದಲ್ಲಿ ಕಳೆದೆವು. ಡಾ. ಜೇಯುವರು ಅಧ್ಯಕ್ಷರಾಗಿರುವ ನಾಗರಿಕ ಬೌದ್ಧಸಂಘವು ನನ್ನನ್ನು ಆಮಂತ್ರಿಸಿತು ಮತ್ತು ಅಲ್ಲಿಯ ನನ್ನ ಭಾಷಣದಲ್ಲಿ ನಾನು ಚೀನ ಮತ್ತು ಭಾರತಗಳಲ್ಲಿ ಹೆಚ್ಚಿನ ಸಾಂಸ್ಕೃತಿಕ ಸಂಪರ್ಕವಾಗಬೇಕೆಂದು ಒತ್ತಿ ಹೇಳಿದೆನು. ನಾನು ಸರ್ವೋದಯ ಸಮಾಜದ ಬಗ್ಗೆ ಅಲ್ಲಿ ಹೇಳಿದೆನು. ಅವರು ಆ ವಿಚಾರವನ್ನು ಮೆಚ್ಚಿಕೊಂಡರು. ಮತ್ತು ಡಾ. ಜೇ ಅದರ ಸದಸ್ಯರಾದರು. ಶಾಂಘಾಯಿಯ ಪಾಶ್ಚಾತ್ಯ ವಿಭಾಗದ ಪುಸ್ತಕ ಭಂಡಾರದ ಅಧ್ಯಕ್ಷರಾದ ಡಾ. ಲಿನ್ನರಿಂದಲೂ ನನಗೆ ಆಮಂತ್ರಣ ಬಂತು. ಅಲ್ಲಿ ನಾನೊಂದು ಪುಟ್ಟ ಭಾಷಣ ಮಾಡಿದೆನು. ಚೀನದಲ್ಲಿ ಗಾಂಧೀ ಸಾಹಿತ್ಯಕ್ಕೆ ಹೆಚ್ಚಿನ ಪ್ರಕಟಣೆ ಅವಶ್ಯಕ ಎಂದು ಎಲ್ಲರೂ ಅಪೇಕ್ಷಿಸಿದರು. ಜಪಾನಿನಲ್ಲಿ ನಾವು ಅನೇಕ ಜಪಾನೀ ಪ್ರತಿಷ್ಠಿತರನ್ನು ಡಯಟ್ಟಿನ ಸದಸ್ಯರನ್ನೂ ಭೆಟ್ಟಿಯಾದೆವು. ಅವರು ಗಾಂಧೀತತ್ವದಲ್ಲಿ ಬಹಳ ಆಸಕ್ತಿಯನ್ನು ತೋರಿದರು. ಬಹಳ ಕಾಲದಿಂದ ಜಪಾನಿನಲ್ಲಿ ಒಂದು ಗಾಂಧೀ ಸಂಘ ನಡೆಯುತ್ತಿದೆ. ಅದಕ್ಕೆ ಬಹಳ ಜನರು ಸದಸ್ಯರಾಗಿದ್ದಾರೆ. ಟೋಕಿಯೋದ ಹೋಂಗಾಂಜಿ ಬೌದ್ಧ ದೇವಾಲಯದ ಮುಖ್ಯಾಚಾರ್ಯರಾದ ಶ್ರೀ. ನಾಕಯಾಮಾರು ಆ ಗಾಂಧೀ ಸಂಘದ ಕಾರ್ಯದರ್ಶಿಗಳು. ಅವರು ಒಳ್ಳೆಯ ಉತ್ಸಾಹಿಗಳಾದ ಕಾರ್ಯಕರ್ತರು. ಬಾಪುವಿನ ಮರಣವಾದ ಕೆಲ ದಿನಗಳ ಬಳಿಕ ಅವರು ಮೂರು ದಿನ ಉಪವಾಸಮಾಡಿದರು. [illegible] ೧೯೪೯ರಲ್ಲಿ ಗಾಂಧಿಯವರ ಮೊದಲನೆಯ ವಾರ್ಷಿಕ ಪುಣ್ಯತಿಥಿಯನ್ನು ಸಂಘದವರು ಆಚರಿಸಿದರು. [illegible] ಟೋಕಿಯೋನಿನ ಅತಿ ದೊಡ್ಡದಾದ ಬೌದ್ಧ ದೇವಾಲಯವೆನಿಸಿದ ಆ ಹೋಂಗಾಂಜಿ ಬೌದ್ಧ ದೇವಾಲಯದಲ್ಲಿಯೆ [illegible] ವಿಗ್ರಹ [illegible]ದಲ್ಲಿ ಗಾಂಧಿಯವರ [illegible] ಪ್ರತಿಷ್ಠಿಸಿದ್ದರು. ನಿನ್ನೆ ಹೋಂಗಾಂಜಿ ದೇವಾಲಯದಲ್ಲಿ ಗಾಂಧೀ ಸಂಘ, ಬೌದ್ಧ ಧರ್ಮಸಂಘ, ಅಂತಾರಾಷ್ಟ್ರೀಯ ಸಾಂಸ್ಕೃತಿಕ ಸಂಘ ಇವುಗಳ ಆಶ್ರಯದಲ್ಲಿ ನಾನು ಒಂದು ಭಾಷಣ ಕೊಟ್ಟೆ. ಸರ್ವೋದಯದ ತತ್ವಗಳ ಬಗ್ಗೆ ಹೇಳಿದೆ. ನಿನ್ನೇ ನನ್ನ ಮಾತಿಗೆ ಸ್ವಲ್ಪ ಮುಂಚೆ ಭಾರತೀಯ ಸಂಪರ್ಕ ಸಮಿತಿಯ ಮುಖ್ಯಸ್ಥರಾದ ಶ್ರೀ. ಮಲ್ಹೋತ್ರರವರು ಭಾರತ ಸರಕಾರದ ಪರವಾಗಿ ಅಲ್ಲಿಯ ಗಾಂಧೀ ಸಂಘಕ್ಕೆ ಒಂದು ಗಾಂಧೀ ಸಾಹಿತ್ಯ ಸಂಗ್ರಹವನ್ನು ಬಹುಮಾನವಾಗಿ ಕೊಟ್ಟರು. ಶ್ರೀಮತಿ ಮದಾಲಸೆ ಕೂಡ (ಲೇಖಕರ ಹೆಂಡತಿ) ಹಸ್ತದಂತದಿಂದ ಮಾಡಿದ ಬಾಪುವಿನ ಒಂದು ಚಿಕ್ಕ ಪ್ರತಿಮೆಯನ್ನು ಅದಕ್ಕೆ ಕೊಟ್ಟಳು. ಎರಡು ದಿನಗಳ ಹಿಂದೆ ಆವಳೂ ಒಂದು ಸಭೆಯನ್ನುದ್ದೇಶಿಸಿ ಭಾಷಣ ಮಾಡಿದಳು. ಆವಳು ಚೆನ್ನಾಗಿ ಮಾತಾಡಿದಳು.

ಟೋಕಿಯೋದಲ್ಲಿ ಮೇಜರ್ ಕನಿಷ್ಕ ಮತ್ತು ಮೇಜರ್ ಪ್ರಜಿವಾರ ಎಂಬಿಬ್ಬರು ಸೈನಿಕರನ್ನು ಭೆಟ್ಟಿಯಾದೆವು. ಅವರು ಮೊದಲಿಂದ ಕಡೆಯ ವರೆಗ ಭಾರತೀಯ ರಾಷ್ಟ್ರೀಯ ಸೈನ್ಯದಲ್ಲಿ ಸುಭಾಷಬಾಬು ಅವರೊಡನೆ ಕೆಲಸ ಮಾಡಿದವರು. ಅವರು ಸ್ವಾರಸ್ಯವಾದ ಬಹಳ ಸಂಗತಿಗಳನ್ನು ನಮಗೆ ಹೇಳಿದರು. ಅವರಿಂದ ನಾವು ಸುಭಾಸಬಾಬು ಹೇಗೆ ಸತ್ತರೆಂಬುದನ್ನು ಅರಿತೆವು. ಈಗಲೂ ಅವರು ಬದುಕಿದ್ದಾರೆಂದು ತಿಳಿಯುವದು ಹುಚ್ಚುತನವೇ ಸರಿ.

ಚೀನ ಮತ್ತು ಜಪಾನಗಳಲ್ಲಿ ಜನರು ವಿವಿಧ ಮಾದರಿಯ ಚರಕಗಳನ್ನು ಬಳಸುತ್ತಾರೆ. ಟೋಕಿಯೋದಲ್ಲಿ ನಮ್ಮನ್ನು ಭೆಟ್ಟಿಯಾದ ಮುಂಬಯಿಯ ಖಾದಿ ಮತ್ತು ಗ್ರಾಮೋದ್ಯೋಗ ಸಂಘದ ಶ್ರೀ. ಪ್ರಾಣಜೀವನ ಕಪಾಡಿಯಾವರು ಇವುಗಳ ಬಗ್ಗೆ ತಕ್ಕ ಮಟ್ಟಿನ ಸಂಗತಿಗಳನ್ನು ಕಲೆಹಾಕಿದ್ದಾರೆ. ಆ ಚರಕಗಳ ಕೆಲ ಮಾದರಿಗಳನ್ನು ಅವರು ಸ್ವಲ್ಪ ಕಾಲದಲ್ಲಿ ಭಾರತಕ್ಕೆ ಒಯ್ಯಲಿದ್ದಾರೆ. ಈ ಜಪಾನೀ ಚರಕಗಳು ನಮ್ಮ ಚರಕಗಳ ಸಂಖ್ಯೆಯಷ್ಟು ನೂಲುಗಳನ್ನು ತೆಗೆಯಬಲ್ಲವು. ನಾವು ಚೀನದಲ್ಲಿಯೂ ಒಂದು ಬಗೆಯ ಚರಕವನ್ನು ಕಂಡೆವು. ಅದು ಒಂದು [illegible] ತಿರುಗಿ [illegible] ಮತ್ತು ಅದಕ್ಕೆ [illegible] ಅದನ್ನು ಕಾಲಿನಿಂದ ತಿರುಗಿಸುತ್ತಾರೆ, ಕೈಯಿಂದಲ್ಲ. ಅದರ ಒಂದು ಮಾದರಿಯನ್ನು ಕಳಿಸಿರೆಂದು ನಾನು ಕೇಳಿದ್ದೇನೆ. ಶ್ರೀಯುತರಾದ ಕೃಷ್ಣದಾಸರು, ನಂದಲಾಲರು ಮತ್ತು ಇತರರು ಚೀನ ಮತ್ತು ಜಪಾನುಗಳನ್ನು ಒಮ್ಮೆ ಸಂದರ್ಶಿಸುವದು ಉತ್ತಮವೆಂದು ನನಗನಿಸುತ್ತದೆ. ಅದು ನಮ್ಮ ಸಂಶೋಧನಕಾರ್ಯಕ್ಕೆ ಸಹಾಯಕವಾಗುವುದು.

ನಮ್ಮ ರಾಯಭಾರಿಗಳೆಲ್ಲರೂ ತಮತಮ್ಮ ಕಚೇರಿಯಲ್ಲಿ ಸಾಕಷ್ಟು ಗಾಂಧೀ ಸಾಹಿತ್ಯವನ್ನು ಇಟ್ಟುಕೊಂಡಿರಬೇಕು ಮತ್ತು 'ಹರಿಜನ'ಕ್ಕೆ ಚಂದಾದಾರರಾಗಬೇಕು ಎಂದು ನನಗೆ ತೋರುತ್ತದೆ.

ರಶಿಯೂದ ರಾಷ್ಟ್ರಭಾಷಾ ಪ್ರಶ್ನೆ.

ಹಿಂದುಸ್ಥಾನದಲ್ಲಿ ರಾಷ್ಟ್ರಭಾಷೆಯ ಸ್ಥಾನದಲ್ಲಿ ಯಾವ ಭಾಷೆಯನ್ನು ಸ್ವೀಕರಿಸಬೇಕು? ಮತ್ತು ಅದಕ್ಕಾಗಿ ಯಾವ ಲಿಪಿಯನ್ನು ಗೊತ್ತುಮಾಡಬೇಕು? ಎಂಬ ಬಗ್ಗೆ ದೊಡ್ಡ ತೊಡಕು ಉಂಟಾಗಿದೆ. ಈ ದೇಶದಲ್ಲಿ ಅನೇಕ ಭಾಷೆಗಳು ಇವೆ. ಇವುಗಳ ಅಸ್ತಿತ್ವಕ್ಕೆ ಭಂಗ ತರದೆ ರಾಷ್ಟ್ರ ಭಾಷೆಯನ್ನು ಸರ್ವರಲ್ಲಿ ಪ್ರಸಾರ ಮಾಡಬೇಕಾದ ಪ್ರಸಂಗವಿದೆ. ಲಿಪಿಯ ವಿಷಯದಲ್ಲಿ ದೇವನಾಗರಿ ಮತ್ತು ಉರ್ದು ಲಿಪಿಗಳ ವಿಷಯವಾಗಿ ಬಹಳ ಚರ್ಚೆಯು ನಡೆಯುತ್ತಿದೆ.

ಈ ದೇಶದಷ್ಟೇ ದೊಡ್ಡದಾದ ರಶಿಯೂ ದೇಶವು ಈ ಪ್ರಶ್ನೆಯನ್ನು ಈಗ ಬಹು ಅನುಕರಣೀಯವಾಗಿ ಬಿಡಿಸಿಕೊಂಡಿದೆ. ಅದರಲ್ಲಿಯೂ ಅನೇಕ ಭಾಷೆಗಳಿವೆ. ಅಲ್ಲಿಯೂ ಲಿಪಿಯ ಪ್ರಶ್ನೆಯು ಇದೆ. ಅಂದರೂ ಅವರು ಅದನ್ನು ಒಂದು ಯೋಜನೆಯೊಡನೆ ಬಿಡಿಸಿಕೊಂಡಿದ್ದಾರೆ. ಅವರ ದಾರಿಯು ಈ ಕೆಳಗಿನ ವಿವರಗಳು ನಮಗೆ, ನಮ್ಮ ದೇಶದ ರಾಷ್ಟ್ರಭಾಷೆ ಮತ್ತು ಲಿಪಿಗಳ ಪ್ರಶ್ನೆಯನ್ನು ಬಿಡಿಸಿಕೊಳ್ಳುವ ಕಾರ್ಯದಲ್ಲಿ ಬಹಳ ಮಟ್ಟಿಗೆ ಸಹಾಯ ಮಾಡಬಲ್ಲವಾಗಿವೆ.

ಮೂವತ್ತು ವರ್ಷದ ಪ್ರಯತ್ನ.

ಕಳೆದ ಮೂವತ್ತು ವರ್ಷಗಳಿಂದ ರಶಿಯೂ ದೇಶವು ತನ್ನ ರಾಷ್ಟ್ರ ಭಾಷೆಯ ಪ್ರಶ್ನೆಯನ್ನು ಬಿಡಿಸಿಕೊಳ್ಳಲು ಯತ್ನಿಸುತ್ತಿದೆ. ಮತ್ತು ಆ ಸಂಬಂಧವಾದ ಸರ್ವ ತೊಡಕುಗಳನ್ನು ಬದಿಗೆ ಸರಿಸಿ ಬಹು ಮಟ್ಟಿಗೆ ಆ ಕಾರ್ಯವನ್ನು ಸಾಧಿಸಿಕೊಂಡಿದೆ.

ಮೊದಲನೆ ಯುದ್ಧದಲ್ಲಿ ಆದ ಹಾನಿಯಿಂದ ರಶಿಯೂ ದೇಶವು ಈ ಕಾರ್ಯದಲ್ಲಿ ಸ್ವಲ್ಪ ತೊಂದರೆ ತೊಡಕುಗಳನ್ನು ಅನುಭವಿಸಬೇಕಾಯಿತು. ಅದಲ್ಲದೆ ಆ ಯುದ್ಧವು ಮುಗಿದನಂತರ ಮುಂದೆ ಮೂರು ವರ್ಷಗಳ ವರೆಗೆ ಆ ದೇಶದಲ್ಲಿ ಗೃಹ ಕಲಹವು ನಡೆಯಿತು. ಅದರಿಂದ ಕೂಡಿ ಅದರ ಈ ತರಹದ ವಿಧಾಯಕ ಕಾರ್ಯಕ್ರಮಕ್ಕೆ ತುಂಬ ಆತಂಕವಾಯಿತು, ಇದಲ್ಲದೆ ಬರಗಾಲ ಮತ್ತು ರೋಗರುಜಿಗಳ ಹಾವಳಿಯೂ ಅದೇ ಕಾಲದಲ್ಲಿ ಗಂಟುಬಿದ್ದಿತು. ಇವೆಲ್ಲ ಕಾರಣಗಳ ಮೂಲಕ ನಿಜವಾಗಿ ನೋಡಿದರೆ ಅದರ ಕಾರ್ಯದ ಪ್ರಗತಿಯು ೧೯೨೨ನೇ ಇಸವಿಯಿಂದ ಪ್ರಾರಂಭವಾಯಿತು.

ರಶಿಯೂ ದೇಶವು ಝಾರನ ಕಾಲದಲ್ಲಿ ಸರ್ವರೀತಿಗಳಿಂದ ಬಹಳ ಹೀನಸ್ಥಿತಿಯಲ್ಲಿತ್ತು. ಅದಕ್ಕಿಂತಲೇ, ಕ್ಷೇತ್ರದಲ್ಲಿ ದೊಡ್ಡದಾಗಿದ್ದರೂ ಉಳಿದ ಸಾಮರ್ಥ್ಯದ ದೃಷ್ಟಿಯಿಂದ ಅದು ನಿಷ್ಪ್ರಯೋಜಕವಾಗಿತ್ತು. ಅಲ್ಲಿಯ ಜನರಲ್ಲಿಯ ನಿರಕ್ಷರತೆಯಂತೂ ವಿಪರೀತವಾಗಿತ್ತು. ಎರಡನೆಯ ಯುದ್ಧದಪ್ಪೊತ್ತಿಗೆ ಆ ದೇಶವು ತನ್ನ ಪ್ರಗತಿಯನ್ನು ಸರ್ವಾಂಗೀಣವಾಗಿ ಮಾಡಿಕೊಳ್ಳುತ್ತ ನಡೆಯಿತು. ಅಷ್ಟರಲ್ಲಿ ಪ್ರತಿ ನೂರು ಜನರಲ್ಲಿ ೮೧ ಜನರು ಓದುಬರೆಯ ಬಲ್ಲವರಾಗಿದ್ದರು. ಎರಡನೆಯ ಯುದ್ಧದಲ್ಲಿ ಆ ದೇಶಕ್ಕೆ ಆದ ಹಾನಿಯ ಬಗ್ಗೆ ಹೊಸದಾಗಿ ಹೇಳಬೇಕಾಗಿಲ್ಲ. ಅದರಿಂದ ಅದರ ಸರ್ವ ಪ್ರಯತ್ನಗಳು ಸ್ಥಗಿತಗೊಂಡವು ಆ ಬಳಿಕ ಪುನಃ ಆ ದೇಶವು ನಿಂತುಹೋದ ತನ್ನ ರಚನಾತ್ಮಕ ಕಾರ್ಯಗಳನ್ನು ಮುಂದರಿಸುತ್ತ ಇಂದು ಆಶ್ಚರ್ಯಕರ ಸಂಗತಿಯನ್ನು ಸಾಧಿಸಿದೆ.

ಕಾರ್ಯ ಪದ್ಧತಿ

ಒಟ್ಟು ಹದಿನಾರು ಭಾಗಗಳಿಂದ ಕೂಡಿದ ರಶಿಯೂ ದೇಶದಲ್ಲಿ ಬೇರೆ ಬೇರೆ ದೇಶಾಚಾರಗಳಿವೆ. ಭಾಷೆಗಳಿವೆ ಮತ್ತು ಪರಂಪರೆಗಳಿವೆ. ಆದರೆ ಇವೆಲ್ಲವುಗಳ ಹಿಂದೆ ರಶಿಯನ್ ದೃಷ್ಟಿಯು ಸಾರ್ವತ್ರಿಕವಾಗಿದೆ. ರಶಿಯೂ ಒಕ್ಕೂಟಕ್ಕೆ ಸೇರುವ ಯಾವುದೇ ಭಾಗವು ಆ ದೇಶದ ಪರಂಪರೆಗೆ ಒಡಂಬಡಬೇಕಾಗುತ್ತದೆ.

೧೮೦ ಭಾಷೆಗಳು ರಶಿಯೂದಲ್ಲಿವೆ. ಆದರೆ ಅಲ್ಲಿಯ ಸರ್ವ ವಿದ್ಯಾರ್ಥಿಗಳಿಗೆ ರಶಿಯನ್ ಭಾಷೆಯು ಬರಲೇ ಬೇಕೆಂಬ ನಿಯಮವಿದೆ.. ಹಳೇ ರಶಿಯೂದಲ್ಲಿ ಒಕ್ಕಲಿಗರು ಮತ್ತು ರಶಿಯನ್ನರಲ್ಲದವರು ಬಹುಶಃ ನಿರಕ್ಷರಿಗಳಾಗಿದ್ದರು. ಆದರೆ ಈಗ ಸರ್ವರಿಗೆ ಪ್ರಾದೇಶಿಕ ಭಾಷೆಗಳಲ್ಲಿ ಅಕ್ಷರ ಜ್ಞಾನವನ್ನು ಮಾಡಿಕೊಡಲಾಗಿದ ಅದರ ಜೊತೆಗೆ ಅವರಿಗೆ ರಶಿಯನ್ ಭಾಷೆಯನ್ನಾದರೂ ಕಲಿಸಲಾಗಿದೆ. ರಶಿಯನ್ ಮತ್ತು ಇತರ ಭಾಷೆಗಳಲ್ಲಿಯ ಉತ್ತಮ ಸಾಹಿತ್ಯವನ್ನು ಪ್ರಾದೇಶಿಕ ಭಾಷೆಯಲ್ಲಿ ಪ್ರಸಿದ್ಧ ಮಾಡಿ, ಸಾಹಿತ್ಯದ ಅಭಿರುಚಿಯನ್ನು ಸರ್ವರಲ್ಲಿ ಹುಟ್ಟಿಸಲು ರಶಿಯನ್ ಸರಕಾರವು ಯತ್ನಿಸಿದೆ. ಎಲ್ಲರೂ ರಶಿಯನ್ ಭಾಷೆಯನ್ನು ಕಲಿಯಲೇ ಬೇಕೆಂಬ ನಿಯಮದಿಂದ ಆಯಾ ಪ್ರಾದೇಶಿಕ ಭಾಷೆಗಳ ಮೇಲೆ ಎಳ್ಳಷ್ಟು ಪರಿಣಾಮವಾಗಿಲ್ಲ. ಮತ್ತು ವಿದ್ಯಾರ್ಥಿಗಳಿಗೆ ಎರಡೂ ಭಾಷೆಗಳನ್ನು ಕಲಿಯುವ ವಿಷಯವು ಭಾರವಾಗಿಯೂ ಪರಿಣಮಿಸಿಲ್ಲ.

ಈ ಕಾರ್ಯದಲ್ಲಿ ಒಂದು ದೊಡ್ಡ ವಿಭಾಗವನ್ನೇ ರಶಿಯನ್ ಸರಕಾರವು ನಿಯಮಿಸಿದೆ. ಅನೇಕ ತಜ್ಞರು ಪ್ರಾದೇಶಿಕ ಭಾಷೆಗಳನ್ನು ಸುಧಾರಿಸುವ ಕಾರ್ಯವನ್ನು ಕೈಕೊಂಡಿದ್ದಾರೆ. ಅವರು ಆ ಭಾಷೆಗಳನ್ನು ಅಭ್ಯಾಸ ಮಾಡಿ, ಅವುಗಳಲ್ಲಿರುವ ಅಕ್ಷರ ವ್ಯಾಕರಣಗಳ ಸಂಬಂಧವಾದ ಕೊರತೆಗಳನ್ನು ತುಂಬುತ್ತಾರೆ. ಇತರ ಯಾವುದೇ ವಿಷಯದಲ್ಲಿ ಅವಕ್ಕೆ ಇರುವ ಕೊರತೆಯನ್ನು ಅವರು ಹೋಗಲಾಡಿಸುತ್ತಾರೆ.

ಮೂರು ಕೋಟಿ ಮುಸಲ್ಮಾನರು ರಶಿಯೂದಲ್ಲಿ ಇದ್ದಾರೆ. ಅವರು ಅರಬೀ ಲಿಪಿಯಲ್ಲಿ ಈ ಮೊದಲು ಬರೆಯುತ್ತಿದ್ದರು. ಆದರೆ ಅದರಿಂದ ದೇಶದ ಏಕರೂಪೀ ಪದ್ಧತಿಗೆ ಭಂಗವುಂಟಾಗುವದೆಂಬ ಕಾರಣಕ್ಕಾಗಿ ಅರಬೀ ಲಿಪಿಯ ಸ್ಥಳದಲ್ಲಿ ಲ್ಯಾಟಿನ್ ಲಿಪಿಯನ್ನು ಪ್ರಚಾರ ಮಾಡಿದ್ದಾರೆ.

ಪ್ರತಿಯೊಬ್ಬ ರಶಿಯನ್ ವಿದ್ಯಾರ್ಥಿಗೆ ಅಲ್ಲಿ ಇಂದು ಪ್ರಾದೇಶಿಕ ಭಾಷೆ ಮತ್ತು ರಾಷ್ಟ್ರಭಾಷೆ ಎರಡೂ ಬರುತ್ತದೆ. ಎಷ್ಟೋ ವಿದ್ಯಾರ್ಥಿಗಳಿಗೆ ಎರಡಕ್ಕಿಂತ ಹೆಚ್ಚು ಭಾಷೆಗಳೂ ಬರುವುದುಂಟು. ಹೀಗಾಗಿ ಯಾವನೇ ರಶಿಯನ್ ತರುಣನು ಆ ದೇಶದ ಯಾವುದೇ ಭಾಗದಲ್ಲಿ ಇದ್ದು ವ್ಯವಹಾರ ಮಾಡಲು ಇಂದು ಶಕ್ತನಾಗಿದ್ದಾನೆ.

ಇಂಗ್ಲಿಷ್ ಭಾಷೆ

ಇಂಗ್ಲಿಷ್ ಭಾಷೆಯ ಬಗ್ಗೆ ಅಲ್ಲಿ ಆಸ್ಥೆಯೇ ಇಲ್ಲ. ಎಂದಿನಿಂದಲೂ ಅದರ ಸಂಪರ್ಕವಿಲ್ಲದ ಅವರಿಗೆ ಅದರ ಮೋಹವು ಉಂಟಾಗಿಲ್ಲ. ಜಾಗತಿಕ ಚಟುವಟಿಕೆಗಳಲ್ಲಿ ತೊಡಗುವವರು ಅದನ್ನು ಅಲ್ಲಿ ಕಲಿಯಬಹುದಾಗಿದೆ. ಆ ಬಗ್ಗೆ ಕೂಡ ಅವರು ಬಹಳ ಆಲೋಚನೆ ಮಾಡುವುದಿಲ್ಲ. ಆ ದೇಶದಿಂದ ಹೊರಗೆ ಬರುವ ಎಷ್ಟೋ ಪ್ರತಿನಿಧಿಗಳಿಗೆ ಇಂಗ್ಲಿಷ್ ಭಾಷೆಯೇ ಬರುವುದಿಲ್ಲ. ಭಾಷಾಂತರಮಾಡುವವರನ್ನು ಇಟ್ಟುಕೊಂಡು ಅವರು ಕೆಲಸ ಸಾಗಿಸುತ್ತಾರೆ ಪ್ರತ್ಯಕ್ಷ ಸ್ಟಾಲಿನ್ನರವರಿಗೇ ಇಂಗ್ಲಿಷ್ ಬರುವುದಿಲ್ಲ

ಆಯರ್ಲಂಡವು ಕೂಡ ಇಂಗ್ಲಿಷ್ ಪ್ರಶಸ್ತಿಯನ್ನು ತನ್ನ ದೇಶದಲ್ಲಿ ಕಿತ್ತೊಗೆಯಲು ಮನಸ್ಸು ಮಾಡುತ್ತಿದೆ. ಹಿಂದುಸ್ಥಾನದ ಮಾತು ಬೇರೆಯಾಗಿದೆ. ನೂರಿನ್ನೂರು ವರ್ಷದಿಂದ ಇಂಗ್ಲಿಷ್ ಭಾಷೆಯನ್ನು ಅರಗಿಸಿಕೊಂಡ ಇದರ ಜನರು ಆ ಭಾಷೆಯಿಂದ ದೂರವಾಗಲು ಈಗ ಚಡಪಡಿಸುತ್ತಿದ್ದಾರೆ. ಆದರೆ ಸಾಕಷ್ಟು ಅವಧಿಯಲ್ಲಿ ಆ ಭಾಷೆಯು ಈ ದೇಶದ ಮುಂದಿನ ಪೀಳಿಗೆಗೆ ಅಷ್ಟೇ ಅಪರಿಚಿತವಾಗುವುದರಲ್ಲಿ ಸಂಶಯವಿಲ್ಲ.

ಯಾವುದೇ ದೇಶವು ತನ್ನ ಅಂತರಿಕ ವ್ಯವಹಾರದ ದೃಷ್ಟಿಯಿಂದ ತನ್ನ ಭಾಷೆ ಉಪಭಾಷೆಗಳನ್ನು ಹೇಗೆ ಬೆಳಸಿಕೊಳ್ಳಬೇಕೆಂಬ ಮಾತನ್ನು ಈಗ ನಾವು ತಿಳಿಯಬೇಕಾಗಿದೆ. ಇದುವರೆಗೆ ಈ ಪ್ರಶ್ನೆಯನ್ನು ಬಿಡಿಸಿಕೊಂಡು ವ್ಯವಹಾರ ಮಾಡುತ್ತಿರುವ ಇತರ ಅನೇಕ ಸ್ವತಂತ್ರ ರಾಷ್ಟ್ರಗಳನ್ನು ನೋಡಿ ನಾವು ಈ ಕ್ಷೇತ್ರದಲ್ಲಿ ಹೆಜ್ಜೆಯಿಡಲು ಏನೂ ಕಠಿಣವಾಗದು. ಅಷ್ಟೇ ಅಲ್ಲದೆ ಆ ವಿಷಯವು ನಮಗೂ ಸ್ಪಷ್ಟವಾಗಿ ಕಾಣುತ್ತಿದೆ. ಆದರೆ ಹೊಸದಾಗಿ ಅದನ್ನು ಕೈಕೊಳ್ಳಬೇಕಾದ ನಾವು ಇಂದು ಆ ಬಗ್ಗೆ ಅನೇಕ ರೀತಿಯ ಊಹಾಪೋಹಕ್ಕೆ ಬಿದ್ದಿದ್ದೇವೆ.

ಜೈ ಹಿಂದ್.

ವಿಮೆ ಮಾಡಲು ಇಲ್ಲವೇ ಪ್ರತಿನಿಧಿಸಲು

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.

ಇವರ ಸಲಹೆಗಿಂತ ಉತ್ತಮ ಮಾರ್ಗವಿಲ್ಲ.

ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದೂಸ್ಥಾನದ ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು.

ದಿ ಬೊಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

30 ಮೌಂಟ್ ರೋಡ್, ಪೊ. ಬಾ. ನಂ. 337, ಮದ್ರಾಸು 2.

ಬೊಂಬೆ ಲೈಫ್ ಬಿಲ್ಡಿಂಗ್, ಪೊ. ಬಾ. ನಂ. 1, ಉಡುಪಿ.

(ಟೆಲಿಫೋನ್ ನಂ. 8398)

ಇತರ ಆಫೀಸುಗಳು:—ಬೆಂಗಳೂರು, ತಿರುವೆಂಡರಂ, ಕಲ್ಲಿಕೋಟೆ, ಮಂಗಳೂರು, ಮಧುರೆ, ಮತ್ತು ಬೊಂಬಾಯಿ.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

೧೯೧೨ನೇ ಇಸವಿಯ ಕೋಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,65,000.
ಕ್ಷೇಮನಿಧಿ	ರೂ.	50,000.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ಕು ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುವು. ಟ್ರಸಿಟಿ ಮತ್ತು ವಾರ್ಡ್ಸ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೋಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಖಜಾಂಚಿ.

Reg. No. M. 1050.
‘KODAGU’ MERCARA, (Coorg).

ಕೊಡಗು

ಸಂಪಾದಕರು—ಟಿ. ವಿ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೨೮ | ತಾರೀಕು ೨೮-೬-೧೯೪೫ನೇ ಶುಕ್ರವಾರ | ಸಂಚಿಕೆ ೪

ಓದುಗರ ಅಭಿರುಚಿ ಕೆಳಮಟ್ಟಕ್ಕಿಳಿದಿದೆ.

ಲೇ:—ಶ್ರೀ. ಹೊ. ವೆಂಕಟರಾಯ, ಬಿ. ಎ.

‘ಪತ್ರಿಕೆಯು ಮುಖ್ಯವಾಗಿ ಜನತೆಯ ವಿಚಾರಗಳನ್ನು ಬೆಳಗಿಸುವ ಸಂಸ್ಥೆಯಾಗಿಲ್ಲ; ಅದು ಕಾರಖಾನೆ, ವ್ಯಾಪಾರ ಮತ್ತು ಹುದ್ದೆ ಈ ಮೂರು ಸಂಸ್ಥೆಗಳ ವೈಶಿಷ್ಟ್ಯಗಳ ಒಂದು ಏರಕವಾಗಿದೆ’ ಎಂದು ನೆವಿಲ ಚೇಂಬರ್ಲೀನ್‌ರವರು ಹೇಳಿದ್ದ ಮಾತು ಪತ್ರಿಕೋದ್ಯೋಗಿಗಳಿಗೆ ಕಹಿಯಾಗಿ ಕಂಡು ಬಂದರೂ, ಅದು ಸತ್ಯವೆಂಬುದನ್ನು ಒಪ್ಪಲೇಬೇಕಾಗಿದೆ. ದೈನಿಕ ಪತ್ರಿಕೆಗಳಿಂದ ಹಿಡಿದು ಮಾಸಪತ್ರಿಕೆಗಳ ವರೆಗೂ ಆ ಮಾತು ಅನ್ವಯಿಸುತ್ತದೆ. ಕಾರಖಾನೆಗಳು ಹೇಗೆ ಜನತೆಯ ಬೇಡಿಕೆಗಳಿಗೆ ಸರಿಯಾಗಿ, ಜನತೆಯ ಚಂಚಲ ಮನೋವೃತ್ತಿಗಳಿಗನುಗುಣವಾಗಿ ವಸ್ತುಗಳನ್ನು ತಯಾರಿಸುವವೋ, ಹಾಗೆಯೇ ಪತ್ರಿಕೆಗಳು ಜನತೆಯ ವಿಚಾರ, ವಿದ್ಯೆ, ಮಾನಸಿಕ ಬೇಡಿಕೆಗಳ ಕಡೆಗೆ ಬಾಗಿ ಅವುಗಳನ್ನು ತಣಿಸಿ ಪೂರೈಸುವ ಲೇಖನಗಳನ್ನು ಪ್ರಕಟಿಸತೊಡಗಿವೆ. ವಾರ ಮತ್ತು ಮಾಸಪತ್ರಿಕೆಗಳಂತೂ ಜನತೆಯ ವಿಚಾರದ, ವಿದ್ಯೆಯ, ಅನುಭವದ ಮಟ್ಟವನ್ನು ಮೇಲೆತ್ತುವ ಬದಲು ಈಗಿರುವ ಕೆಳಹಂತವನ್ನು ಮಾತ್ರ ತಣಿಸಿ ತಮ್ಮ ವ್ಯಾಪಾರದ ದೃಷ್ಟಿಯಿಂದ, ಪ್ರತಿಗಳು ಹೆಚ್ಚು ಮಾರಾಟವಾಗಬೇಕೆಂಬ ಉದ್ದೇಶ್ಯದಿಂದ, ಜನರಿಗೆ ಪ್ರಿಯವಾದ, ಅವರ ಇಳಿಮೊಗ ರುಚಿಯನ್ನು ತೃಪ್ತಿಗೊಳಿಸುವ ತೀರಾ ಹಗುರ ವಿಚಾರಗಳನ್ನು ಅವರಿಗೆ ಉಣಿಸಿ ಅವರ ಗಮನವನ್ನು ಸೆಳೆಯಲು ಹೋರಾಡುತ್ತಿವೆ.

ವ್ಯವಸಾಯಕ್ಕೆ ಬರುವವರು

ಇನ್ನು ಹುದ್ದೆಯ ದೃಷ್ಟಿಯಿಂದ ನೋಡಿದರೆ ಪತ್ರಿಕಾ ವ್ಯವಸಾಯವನ್ನು ಕೈಕೊಳ್ಳುವವರು ಇತರ ಎಲ್ಲ ದುಡಿಮೆಯ ಕ್ಷೇತ್ರಗಳಲ್ಲಿ ಪರಿಶ್ರಮಿಸಿ ಸೋತವರು, ಇಲ್ಲವೇ ರಾಜಕೀಯ ಕ್ಷೇತ್ರದಲ್ಲಿ ತಮಗೊಂದು ಸ್ಥಾನ ಸಿಗಬೇಕು, ಗಣ್ಯ ವ್ಯಕ್ತಿಗಳಾಗಬೇಕೆಂಬ ಉದ್ದೇಶವುಳ್ಳವರು. ಸಾರ್ವಜನಿಕ ಹಿತವನ್ನು ಮೊದಲು ಬಯಸಿ, ತನ್ನ ಹಿತಸ್ವಾರ್ಥಗಳನ್ನು ಕಡೆಗೆ ಎಣಿಸುವ ವ್ಯಕ್ತಿಗಳು ಪತ್ರಿಕೋದ್ಯಮದಲ್ಲಿ ಇಲ್ಲವೆಂದರೂ ಸಲ್ಲುವುದು. ಹೀಗೆ ಪತ್ರಿಕೆಗಳು ಜನತೆಯ ವಿಚಾರಗಳನ್ನು ತಿದ್ದುವ, ಅವರಿಗೆ ದೇಶದಲ್ಲೂ ಲೋಕದಲ್ಲೂ ಆಗುತ್ತಿರುವ ಸಾಮಾಜಿಕ, ರಾಜಕೀಯ ಬದಲಾವಣೆಗಳನ್ನು ಮನದಟ್ಟು ಮಾಡುವ, ಅವರು ನಾಗರಿಕನ ಹಕ್ಕು ಬಾಧ್ಯತೆಗಳನ್ನರಿತು ಜೀವಿಸುವಂತೆ ಮಾಡುವ ಕಡೆಗೆ ಲಕ್ಷ್ಯವೀಯುವ ಸಂಸ್ಥೆಗಳಾಗಿಲ್ಲವೆಂಬುದನ್ನು ಇಂದಿನ ಯಾವ ವಾರ ಪತ್ರಿಕೆಯಿಂದಲೂ ಅರಿತುಕೊಳ್ಳಬಹುದು. ಮೊದ ಮೊದಲು ಹಲವು ವಾರ ಪತ್ರಿಕೆಗಳು ಈ ಉಚ್ಚಧ್ಯೇಯಗಳ ಪ್ರತಿಬಿಂಬಗಳಾಗಿದ್ದರೂ, ಬರಬರುತ್ತಾ ಅವುಗಳು ಜನತೆಯ ಮೆಚ್ಚುಗೆಗೆ ಪಾತ್ರವಾಗದುದನ್ನು ಕಂಡು, ತಮ್ಮ ಧ್ಯೇಯಗಳನ್ನು ಒಂದೊಂದಾಗಿ ಗಾಳಿಗೆ ತೂರಿ ಈಗಿರುವ ಇಳಿಮೊಗವನ್ನು ಮುಟ್ಟಿವೆ.

ಅಭಿರುಚಿ ಎಷ್ಟು ಅಗ್ಗವಾಗಿದೆ?

ಇಂದಿನ ಸಂಪೂರ್ಣ ಜನತೆಯಲ್ಲಿ ಸಾಕ್ಷರತೆ, ವಿದ್ಯೆ ಹೆಚ್ಚುತ್ತಿದೆಯೇನೋ ನಿಜ. ಆದರೆ ಆ ಜನತೆಯಲ್ಲಿ ಒಂದು ವಿಶೇಷ ಮನೋವಿಕಾರದ ಸಂಗಡ ಬೆಳೆದು ಬಂದಿದೆ. ಆ ಸಂಗಡದವರು ಓದುಬರಹ ತಿಳಿದೂ, ಅಜ್ಞಾನಿಗಳು, ಅಶಿಕ್ಷಿತರು, ಅನುಭವಹೀನರಾಗಿದ್ದಾರೆ. ಅವರಲ್ಲಿ ಸಾರ್ವಜನಿಕ ರಾಜಕೀಯ ಸಮಸ್ಯೆಗಳ ಕುರಿತು ಅಧ್ಯಯನ ಮಾಡಲು, ಅಥವಾ ವಿಚಾರ ಮಾಡಲು, ಬರೆದ ವಿಚಾರಗಳನ್ನೋದಿ ಅರಗಿಸಲು ಬೇಕಾದ ಏಕಾಗ್ರತೆ, ತಾಳ್ಮೆ, ಕಡೆಯದಾಗಿ ಸಮಯವೂ ಇರುವುದಿಲ್ಲ. ಅಂಥವರಿಗೆ ಬೇಕಾದುದೇನು ಎಂದು ಕೇಳಿದರೆ ಉತ್ತರ ಕೊಡುವುದು ಸ್ವಲ್ಪ ಕಷ್ಟ; ಅವರಿಗೆ ಬೇಡವಾದುದೇನೆಂಬುದನ್ನು ಹೆಚ್ಚು ಆಲೋಚಿಸದೆ ಹೇಳಬಹುದಾಗಿದೆ. ಅವರಿಗೆ ಸಮಸ್ಯೆಗಳ ಕುರಿತು ವಿವೇಚನೆ ಬೇಡವಾಗಿದೆ. ಅವರು ಲೋಕದ ಆಗುಹೋಗುಗಳನ್ನು ವಿಚಾರ ಸರಣಿಗಳನ್ನು ದೈನಿಕ ಪತ್ರಿಕೆಗಳಿಂದ ಓದಿ ತಿಳಿದುಕೊಳ್ಳುವರು. ಅದು ಕೂಡಾ, ಎಂಟು ಪುಟದ ದೈನಿಕ ಪತ್ರಿಕೆಯನ್ನು ಬರೀ ಹತ್ತು ನಿಮಿಷದಲ್ಲಿಯೇ ಮುಗಿಸಿ ಬಿಸಾಡುವರು. ಲೋಕದ ಗತಿಯ ಸ್ಥೂಲ ಅನುಭವ ಸಾಕಾಗಿದೆ ಅವರಿಗೆ. ಅದಕ್ಕಿಂತ ಹೆಚ್ಚು ಸಮಯ ವಿನಿಯೋಗಿಸಲು ಅವರಿಂದ ಸಾಗದು. ಹಾಗಿರುತ್ತಾ, ವಾರ ಪತ್ರಿಕೆಗಳಲ್ಲಿ ಸಂಪಾದಕನ ಮನಕುಗಳು, ವಿಚಾರ ತರಂಗ, ರಾಷ್ಟ್ರೀಯ, ಅಂತರರಾಷ್ಟ್ರೀಯ ವಿಚಾರಗಳು, ಸಾಮೂಹಿಕ ಸಮಸ್ಯೆ ಘಟನೆಗಳ ಕುರಿತು ವಿಶೇಷ ಲೇಖನಗಳು, ಇವೆಲ್ಲ ಅವರಿಗೇಕೆ? ಅವರಿಗೆ ಬೇಕಾದುದು ಮನಸ್ಸನ್ನು ಹಗುರಗೊಳಿಸುವ, ಉಲ್ಲಾಸಗೊಳಿಸುವ ಪ್ರಣಯಕತೆಗಳು, ಸಿನೆಮಾ ಚಿತ್ರ ಮತ್ತು ವಿಚಾರಗಳು, ಕಾಲ್ಪನಿಕ ಯಾ ವಾಸ್ತವಿಕ ವಿಚಿತ್ರ ಘಟನೆಗಳು, ರೋಮಾಂಚಕಾರ ಅದ್ಭುತಗಳು, ಸ್ತ್ರೀ, ಸೌಂದರ್ಯ, ಕುದುರೆ ಜೂಜು, ಪಂದ್ಯಾಟಗಳು ಇವುಗಳ ಕುರಿತು ವಿಮರ್ಶೆಗಳು, ದರೋಡೆ, ಸ್ತ್ರೀವಂಚನೆ, ಪಲಾಯನ, ದಾಂಪತ್ಯದ ಸೋಡಾಚೀಟಿ, ಕೋರ್ಟ್ ವ್ಯವಹಾರಗಳು, ಇವೆಲ್ಲಕ್ಕೂ ಶಿಖರವಾಗಿ ವಾರ ಭವಿಷ್ಯ. ಅವರಿಗೆ ರಾಜಕೀಯ ಸಾಮಾಜಿಕ ಆರ್ಥಿಕ ವಿಚಾರಗಳ ಕಡುಬು ಬೇಡ; ನಿರಾಯಾಸವಾಗಿ, ಕೊಂಚವೂ ತ್ರಾಸವಾಗದ ರೀತಿಯಲ್ಲಿ ಸೇವಿಸಬಹುದಾದ ನೆಲಗಡಲೆ ಅವರಿಗೆ ಬೇಕಾದುದು! ಈ ‘ಅಗ್ಗ’ ವಿಚಾರ ಪ್ರಿಯತೆಯನ್ನು ಇಂದಿನ ವಾರ ಪತ್ರಿಕೆಗಳು ಬಹಳ ಮಟ್ಟಿಗೆ ಪೋಷಿಸುತ್ತಿವೆಯೆನ್ನಬಹುದು.

ಲಘು ಬರಹದ ಆರಂಭ.

(ಚುಟುಕಗಳು Tit bits) ಎಂಬ ಪತ್ರಿಕೆ ಮೊದಲ ಬಾರಿಗೆ ಇಂಗ್ಲೆಂಡಿನಲ್ಲಿ ಹೊರಬರಲಾಗಲೇ ಮೇಲೆ ಹೇಳಿದ ರೀತಿಯ ಅಗ್ಗ ವಿಚಾರ ಪ್ರಿಯತೆ ತಲೆಯೆತ್ತಿತ್ತು ಎನ್ನಬಹುದು. ಅದರ ಆಗಮನದ ನಂತರ ಪತ್ರಿಕೋದ್ಯಮದ ಮುಖವೇ ಬದಲಾಗುತ್ತಾ ಬಂದಿದೆ. ಆ ಪತ್ರಿಕೆಯ ಸಂಪಾದಕನ ಮನಸ್ಸಿನಲ್ಲಿ ಹೊಳೆದಿರಬಹುದಾದ ಭಾವನೆಯನ್ನು ಲಾರ್ಡ್ ನಾರ್ಥ್‌ಕ್ಲಿಫ್ ಹೀಗೆಂದು ವಿವರಿಸುವರು: ‘ಜನರು ತುಂಡು ಚುಟುಕಗಳನ್ನು ಮೆಚ್ಚುವರಾದರೆ ಅವರಿಗೇಕೆ ಅವುಗಳನ್ನು ಒದಗಿಸಬಾರದು? ಸುದ್ದಿ ವಿಚಾರಗಳನ್ನು ಅವರಿಗೆ ಪ್ರಿಯವಾದ ಚುಟುಕಗಳ ರೂಪದಲ್ಲಿ ಬರೆಯಬಹುದು. ಈಗಿನ ಪತ್ರಿಕೆಗಳ ಪ್ರತಿಯೊಂದು ವಿಷಯ ತಿಳಿದುಕೊಳ್ಳಲು ಕಠಿಣವಾಗಿದೆ. ಯಾವೊಂದು ವಿಚಾರವನ್ನು ಉದ್ದುದ್ದ ಬರೆದ ವಿನಹ ವಿವರಿಸಲು ಅಸಾಧ್ಯವೆಂಬುದನ್ನು ಓದುಗರಿಗೆ ಸೂಚಿಸುತ್ತಿವೆಯಾದರೆ, ಸಂಕ್ಷೇಪ ರೀತಿಯಲ್ಲಿ ಎಲ್ಲಾ ವಿಷಯಗಳನ್ನು ತಾವು ತಿಳಿದಿರುವೆವೆಂದು ಅವರು ಭಾವಿಸುವ ರೀತಿಯಲ್ಲಿ ಅವುಗಳನ್ನು ಬರೆಯಬಹುದಲ್ಲವೆ?’ ಇದು ಇಂದಿನ ಪತ್ರಿಕೆಗಳ ವ್ಯಾಪಾರದ ಗುಟ್ಟನ್ನು ಸೂಕ್ಷ್ಮವಾಗಿ ತೋರಿಸಿಕೊಡುತ್ತಿದೆ.

ಸಾಮಾನ್ಯ ಜನತೆ ಕುರಿ ಹಿಂಡೇ?

ಜನತೆಯಲ್ಲಿ ವಿಲಾಸಪ್ರಿಯತೆ, ಲಘು ಹೃದಯ ವಿಚಾರಗಳು ಮೂಡಿಬಂದಿವೆ. ರಾಜಕೀಯ ವಿಚಾರಗಳ ಸೂಕ್ಷ್ಮ ವಿವೇಚನೆಯನ್ನು ರಾಜಕೀಯ ಪಂಡಿತರಿಗೂ ಧುರೀಣರಿಗೂ ಬಿಟ್ಟು ಕೊಡಲಾಗಿದೆ. ಸಾಮಾನ್ಯ ಜನತೆ ಆ ವಿಷಯವಾಗಿ ಇನ್ನೂ ಕುರಿ ಹಿಂಡೇ ಸರಿ. ಬೀಜವಾಪರಿತನವು ಇನ್ನೂ ಮಾಸಿಹೋಗಿಲ್ಲ. ಸ್ವಾತಂತ್ರ್ಯ ಬಂದರೂ ಚೈತನ್ಯವಿನ್ನೂ ಬಂದಿಲ್ಲ; ಜನತೆ ಸಜೀವವಾಗಿಲ್ಲ. ಈ ಚೈತನ್ಯವನ್ನು ತುಂಬುವ ಕೆಲಸ ಪತ್ರಿಕೆಗಳದ್ದು. ಜನಜಾಗೃತಿಯನ್ನುಂಟುಮಾಡಲು, ಸಾಮೂಹಿಕ ಪ್ರಶ್ನೆಗಳತ್ತ ಜನತೆಯ ಗಮನವನ್ನು ಸೆಳೆದು ಅವರ ವಿಚಾರವನ್ನು ಕೆಣಕಲು, ಅವರ ರುಚಿಯ ಮಟ್ಟವನ್ನು ಮೇಲೆತ್ತಲು ಬೇಕಾದ ಜ್ಞಾನಸಂಭಾರವನ್ನು ಪತ್ರಿಕೆಗಳು ಮೊಗೆದು ಕೊಡಬೇಕು. ಆಸು ಸವಯ ಅಂತಹ ಕಠಿಣ ತರದ ಪತ್ರಿಕೆಗಳನ್ನು ಕಡೆಗಣಿಸಬಹುದು ಜನತೆ. ಆದರೆ ಬೇರೆ ಎಡೆ ತೋರದಿದ್ದರೆ ಅದನ್ನೇ ಸ್ವೀಕರಿಸಿ ಮೆಚ್ಚಲಿದೆ; ಅದರಿಂದಾಗಿ ಒತ್ತಾಯದಿಂದ ವಿಚಾರ ಶಕ್ತಿಗೆ ಹಿಡಿದ ತುಕ್ಕು-ಸವೆಯುವುದರಿಂದ ಪತ್ರಿಕೆಗಳ ಮಟ್ಟ ಉನ್ನತವಾಗುವುದು. ಈಗ ವಾರ ಪತ್ರಿಕೆಯನ್ನು ಕಂಡೊಡನೆ ಮೊದಲು ವಾರ ಭವಿಷ್ಯದ ಪುಟವನ್ನು ತಿರುವಿ, ನಂತರ ಸಿನೆಮಾ ಪುಟಕ್ಕೆ ಕುಪ್ಪಳಿಸಿ, ಕಡೆಗೆ ವಾರದ ಕತೆಗೆ ಹಾರುವವರು ಆ ಮೇಲೆ ಸಂಪಾದಕೀಯ ವಿಚಾರವನ್ನು ಮೊದಲು ಓದಿ, ರಾಷ್ಟ್ರೀಯ ಅಂತರರಾಷ್ಟ್ರೀಯ ವಿಚಾರಗಳನ್ನು ನಂತರ ಹುಡುಕಿ, ವಿಶೇಷ ಲೇಖನಗಳನ್ನು ಮಥಿಸತೊಡಗುವರು. ಈಗಿನಂತೆ ವಾರ ಪತ್ರಿಕೆಯನ್ನು ಐದು ನಿಮಿಷದೊಳಗೆ ತಿರುವಿ ‘ಏನೂ ಇಲ್ಲ, ಮಣ್ಣು! ಭವಿಷ್ಯದಲ್ಲಾದರೂ ಒಳ್ಳೆಯದಿದೆಯೇ? ಅದೂ ಇಲ್ಲ’ ಎಂದು ಮೂಲೆಗೊಗೆಯುವ ಜನ ಕನಿಷ್ಟ ಅರ್ಧ ಗಂಟೆಯಾದರೂ ಅದನ್ನು ಕೈಯಲ್ಲಿ ಹಿಡಿಯುವ ಯೋಗ ಬರಬಹುದು. ವಾರ ಭವಿಷ್ಯದ ಲೋಕಪ್ರಿಯತೆ ಕನ್ನಡ ಹಾಗೂ ಇತರ ದೇಶೀಯ ಭಾಷೆಗಳ ಪತ್ರಿಕೆಗಳ ಮೇಲೆ ಮಾತ್ರವೇ ತನ್ನ ಪ್ರಭಾವ ಬೀರಿಲ್ಲ. ಈಗ ‘ಟೈಮ್ಸ್ ಆಫ್ ಇಂಡಿಯಾ’ದ ವಾರಾಂತ್ಯದ ಸಂಚಿಕೆ ‘ಸಂಡೇ ನ್ಯೂಸ್’ನಲ್ಲಿಯೂ ವಾರ ಭವಿಷ್ಯ ಬರತೊಡಗಿದೆಯೆಂದರೆ ಆ ಹುಚ್ಚಿನ ಮೇರೆ ಮೀರಿದೆಯೆಂದು ಬೇರೆ ಹೇಳಬೇಕಿಲ್ಲ.

ಆದರೆ ಇಂದು ಓದುವ ಆಸಕ್ತಿ ಜನರಲ್ಲಿ ಹೆಚ್ಚು ಬಂದಿರುವಾಗ ಪತ್ರಿಕೆಗಳು ಕುಸಿದು ಬಿದ್ದಲ್ಲಿಂದ ಎದ್ದು ತಮ್ಮ ಮೊದಲಿನ ಏರಿನ ಸ್ಥಾನಕ್ಕೆ ಮರಳಿ ಹೋಗುವುದು ಯುಕ್ತವಾಗಿದೆ. ಆ ಸಾಹಸ ಕೃತ್ಯ ನಿಷ್ಫಲವಾಗದು. ಪತ್ರಿಕೆಗಳು ಈ ಕಲ್ಲುಮುಳ್ಳಿನ ಏರು ದಾರಿಯನ್ನು ತುಳಿಯಲೇಬೇಕು.

“ನುಡಿ”ಯಿಂದ.

ಎಂಪೈರ್ ಆಫ್ ಇಂಡಿಯಾ
ಲೈಫ್ ಎಸ್ಯೂರೆನ್ಸ್ ಕಂಪೆನಿ, ಲಿಮಿಟೆಡ್.
ಸ್ಥಾಪನೆ,—1897

48ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು.	ಒಟ್ಟು ಆದಾಯ	1,07,09,000	ಮೀರಿದೆ
	ಜಾರಿಯಲ್ಲಿರುವ ವಿಮೆ	[illegible],000	,,
	ಆಸ್ತಿ	6,67,60,000	,,
ಕಂಪೆನಿಯು ಇದುವರೆಗೆ ಕೊಟ್ಟ ಕ್ಲೈಮುಗಳು	....	8,83,62,000	,,

ಶಾಖಾ ಕಛೇರಿ: ವೆಸ್ಟ್‌ಕಾಟ್ ಬೋರ್ಡ್ ಬಿಲ್ಡಿಂಗ್, ಕಂಟೋನ್ಮೆಂಟ್, ಬೆಂಗಳೂರು. } ಏಜೆನ್ಸಿ ಅರ್ಜಿಗಳನ್ನು ಸ್ವಾಗತಿಸಿದೆ. { ಪ್ರಧಾನ ಕಛೇರಿ: ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ.

ರೈತನ ಪ್ರಪಂಚ

ಭಾರತದಲ್ಲಿ ಪಶುವೈದ್ಯರು.

ಲೇ:-ಶ್ರೀ. ಜಿ. ಕರ್ನೇಲಸಿಂಗ್, (ಹರಿಜನದಿಂದ)

ಭಾರತಕ್ಕೆ ಪಶುವೈದ್ಯನ ಮಹತ್ವ ಎಷ್ಟೆಂಬುದು ತಿಳಿಯಬೇಕಾದರೆ ಈ ದೇಶದ ಉತ್ಪನ್ನದಲ್ಲಿ ನೂರರಲ್ಲಿ ಎರಡಂಶದಷ್ಟು ಪಶುಗಳಿಂದಲೇ ಆಗುವದೆಂದು ಅರಿತರೆ ಸಾಕು. ತಜ್ಞರ ಲೆಕ್ಕಾಚಾರದಂತೆ ನಿಷ್ಪ್ರಯೋಜಕ ಪಶುಗಳನ್ನು ಸಾಕಲು ನಾವು ೧೭೦ ಕೋಟಿ ರೂಪಾಯಿಗಳನ್ನು ಹಾಳು ಮಾಡುತ್ತಿದ್ದರೂ ಈ ಸ್ಥಿತಿ. ಪಶುತಜ್ಞರು ಮಾತ್ರ ಈ ಪಶುಗಳನ್ನು ಸುಧಾರಿಸಿ ಈ ಅಪಾರ ವ್ಯಯಗಳನ್ನು ಉಳಿಸಬಲ್ಲರಲ್ಲದೆ, ಈ ನಿಷ್ಪ್ರಯೋಜಕ ಪ್ರಾಣಿಗಳನ್ನು ಪ್ರಯೋಜಕವಾಗಿ ಮಾಡಿ ಅಪಾರ ಲಾಭವನ್ನು ಮಾಡಿಕೊಡಬಲ್ಲರು.

ನಮ್ಮದು ಕೃಷಿಪ್ರಧಾನ ದೇಶ. ಕೃಷಿಯೂ ದನಕರುಗಳೂ ಅಕ್ಕ ತಂಗಿ ಇದ್ದಂತೆ. ಅವು ಅನ್ಯೋನ್ಯಾಶ್ರಯವಾಗಿವೆ. ಒಂದನ್ನು ಬಿಟ್ಟು ಇನ್ನೊಂದು ಸಾಗಲಾರದು. ಕೃಷಿಯ ಏಳಿಗೆಯಾಗಬೇಕಾದರೆ ಕಾರ್ಯಕ್ಷಮವಾದ ಶ್ರಮಶಕ್ತಿ ಅವಶ್ಯ. ಈ ಚಾಲಕ ಶಕ್ತಿಯ ಮುಖ್ಯ ಆಗರವೇ ಎತ್ತು. ಎತ್ತನ್ನು ಬಿಟ್ಟರೆ ಅಥವಾ ಅದನ್ನು ಅಸಮರ್ಥವಾಗಗೊಟ್ಟರೆ ಕೃಷಿಗೇ ಉಳಿಗಾಲವಿಲ್ಲ. ಪಶುವೈದ್ಯನಿಗೆ ಇಲ್ಲಿ ದ್ವಿತೀಯ ಸ್ಥಾನವಿದೆ.

ಮಕ್ಕಳಿಗೂ ದೊಡ್ಡವರಿಗೂ ಪ್ರಕೃತಿದತ್ತವಾದ ಶ್ರೇಷ್ಠವೂ ಪರಿಪೂರ್ಣವೂ ಹಿತವೂ ಆದ ಆಹಾರವೆಂದರೆ ಹಾಲು. ಅದು ಪಶುಗಳಿಂದ ದೊರಕುತ್ತದೆ. ಆದರೆ ಡೆನ್ಮಾರ್ಕಿನಲ್ಲಿ ದನಗಳು ಸರಾಸರಿ ದಿನಕ್ಕೆ ಒಂಭತ್ತು ಸೇರು ಹಾಲು ಕರೆಯುತ್ತಿರುವಾಗ ನಮ್ಮ ದನಗಳು ಸರಾಸರಿ ಒಂದು ಸೇರಿಗಿಂತಲೂ ಕಡಮೆ ಹಿಂಡುತ್ತವೆ. ಕಳೆದ ಯುದ್ಧಕ್ಕಿಂತ ಮೊದಲು ನಾವು ೧೨ ಕೋಟಿ ಪಶುಗಳಿಂದ ಪಡೆಯುತ್ತಿದ್ದಷ್ಟೇ ಹಾಲನ್ನು ಜರ್ಮನಿಯಲ್ಲಿ ಎರಡೂವರೆ ಕೋಟಿ, ಅಮೇರಿಕೆಯಲ್ಲಿ ಮೂರುವರೆ ಕೋಟಿ, ಬ್ರಿಟನ್ನಿನಲ್ಲಿ ಏಳುವರೆ ಕೋಟಿ ಮತ್ತು ರಶಿಯದಲ್ಲಿ ಏಳೇ ಕೋಟಿ ದನಗಳು ಕೊಡುತ್ತಿದ್ದವು. ತಿಳಿದರೆ ನಾವು ನಾಚಿಕೊಳ್ಳಬೇಕಾಗಿದೆ. ಇಂದು ಭಾರತದಲ್ಲಿ ಹಿಂಡು ದನಗಳು ಸರಾಸರಿ ಕೊಡುವಷ್ಟೇ ಹಾಲನ್ನು ಒಂದು ಕಾಲದಲ್ಲಿ ಡೆನ್ಮಾರ್ಕಿನ ದನಗಳೂ ಸಾಮಾನ್ಯವಾಗಿ ಕೊಡುತ್ತಿದ್ದವು. ಆಗಿಂದ ಅವರು ದನಗಳ ಅರ್ಹತೆಯನ್ನು ಸುಧಾರಿಸತೊಡಗಿದರು. ಈ ಐವತ್ತು ವರ್ಷಗಳೊಳಗೆ ಅಲ್ಲಿಯ ಸಾಮಾನ್ಯ ದನವೊಂದು ಕೊಡುವ ಬೆಣ್ಣೆಯ ಪ್ರಮಾಣ ವರ್ಷಕ್ಕೆ ೮೪ ಪೌಂಡಿನಿಂದ ೩೫೯ ಪೌಂಡಿಗೆ, ಅಂದರೆ ಹದಿನಾಲ್ಕರಷ್ಟು ಏರಿದೆ. ಇದೇ ಪ್ರಕಾರ ಬೇರೆ ದೇಶಗಳಲ್ಲಿಯೂ ಎಷ್ಟೋ ಕಾಣುವ ಸುಧಾರಣೆಯಾಗಿದೆ. ಇತರ ದೇಶಗಳ ದನಗಳಷ್ಟೇ ಹಾಲನ್ನು ನಮ್ಮವುಗಳೂ ಕೊಡಲಾರವೆಂದು ನಂಬಲು ಕಾರಣವೇನೂ ಇಲ್ಲ.

ಜಗತ್ತಿನಲ್ಲಿರುವ ದನಕರುಗಳಲ್ಲಿ ಮೂರು ಪಾಲಿನಲ್ಲೊಂದರಷ್ಟು ಭಾರತದಲ್ಲಿವೆಯಾದರೂ ಇಲ್ಲಿ ತಲಾ ಹಾಲಿನ ಬಳಕೆ ೭ ಔನ್ಸ್ ಆಗಿದೆ. ಅದೇ ಫ್ರಾನ್ಸಿನಲ್ಲಿ ತಲಾ ೩೦ ಔನ್ಸು, ಅಮೇರಿಕೆಯಲ್ಲಿ ೩೫ ಔನ್ಸ್, ಬ್ರಿಟನ್ನಿನಲ್ಲಿ ೩೯ ಔನ್ಸು, ನಾರ್ವೆಯಲ್ಲಿ ೪೩ ಔನ್ಸು ಮತ್ತು ನ್ಯೂಝೀಲೆಂಡಿನಲ್ಲಿ ೫೬ ಔನ್ಸ್ ಹಾಲನ್ನು ಉಪಯೋಗಿಸಲಾಗುತ್ತದೆ.

ಜನರು ಸರಾಸರಿ ಉಪಯೋಗಿಸುವ ಹಾಲಿನ ಪರಿಮಾಣಕ್ಕೂ ಸರಾಸರಿ ಆಯುರ್ದಾಯಕ್ಕೂ ಏನೋ ಸಂಬಂಧವಿರುವಂತೆ ತೋರುತ್ತದೆ. ಕಡಿಮೆ ಹಾಲು ಉಪಯೋಗಿಸುವ ಭಾರತೀಯನ ಸರಾಸರಿ ಆಯುಷ್ಯ ೨೭ ವರ್ಷವಾದರೆ ಸರಾಸರಿ ೫೬ ಔನ್ಸ್ ಹಾಲು ಬಳಸುವ ನ್ಯೂಝೀಲೆಂಡಿನ ಪ್ರಜೆಯ ಆಯುರ್ದಾಯ ೬೦ ವರ್ಷವಾಗಿದೆ.

ಭಾರತದಲ್ಲಿ ಸಾಯುವಷ್ಟು ಶಿಶುಗಳು ಬಹುಶಃ ಬೇರೆಲ್ಲೂ ಸಾಯವೆಂದು ತೋರುತ್ತದೆ. ಹಾಲಿನ ಬಳಕೆಗೂ ಆಯುರ್ದಾಯಕ್ಕೂ ಇರುವ ಸಂಬಂಧದಂತಹದೇ ಸಂಬಂಧ ಇಲ್ಲಿಯೂ ಇರುವಂತೆ ತೋರುತ್ತದೆ. ಪಶುವೈದ್ಯನಿಗೆ ಇಲ್ಲಿದೆ ಸ್ಥಾನ: ಏಕೆಂದರೆ ಅವನೊಬ್ಬನೇ ನಮ್ಮ ಪ್ರಜೆಗೆ ಆರೋಗ್ಯಶಾಲಿಯಾಗಿಯೂ ಬಲಶಾಲಿಯಾಗಿಯೂ ಬೆಳೆಯಲು ನೆರವಾಗಬಲ್ಲನು.

ಭಾರತದ ಕುರಿಯೂ ಕೀಳ್ತರದ್ದು. ಅದರ ಸರಾಸರಿ ತೂಕ ೬೦ ಪೌಂಡೂ ಇಲ್ಲ. ಸರಾಸರಿ ಉಣ್ಣೆಯ ಹುಟ್ಟು ಸುಮಾರು ಎರಡು ಪೌಂಡು— ಇದೂ ತೀರ ಕಡಿಮೆಯೆ. ಇದರೊಡನೆ ಹೋಲಿಸಿದರೆ, ಯುರೋಪಿನ ಕುರಿಗಳು ಉತ್ತಮ ದರ್ಜೆಯವು. ಅವುಗಳ ಸರಾಸರಿ ಜೀವಂತ ತೂಕವೂ ಉಣ್ಣೆಯ ಹುಟ್ಟುವಳಿಯೂ ಭಾರತದ ಕುರಿಗಿಂತ ಮೂರುಪಟ್ಟು ಹೆಚ್ಚಾಗಿವೆ. ಜಗತ್ತಿನಲ್ಲಿರುವ ಕುರಿಗಳಲ್ಲಿ ನೂರಕ್ಕೆ ೬ ಭಾರತದಲ್ಲಿವೆ. ಆದರೆ ಅದು ಕೊಡುವ ಉಣ್ಣೆ ಜಗತ್ತಿನಲ್ಲಿ ನೂರಕ್ಕೆ ಎರಡಂಶದಷ್ಟು ಮಾತ್ರ. ಅರ್ಥಾತ್ ಇಲ್ಲಿರುವ ಕುರಿಗಳ ಸಂಖ್ಯೆಯ ಮೇಲೆ ಮೂರು ಪಾಲು ಕಡಿಮೆ ಉಣ್ಣೆ ಉತ್ಪನ್ನವಾಗುತ್ತದೆ. ಇಲ್ಲಿಯೂ ಪಶುವೈದ್ಯನಿಗೆ ಕೆಲಸವಿದೆ. ಅವರು ಈ ಪ್ರಾಣಿಗಳನ್ನು ಇತರ ಮುಂದುವರಿದ ದೇಶಗಳಲ್ಲಿರುವವುಗಳಷ್ಟೇ ಸುಧಾರಿಸಿ ಹೆಚ್ಚು ಉತ್ತಮ ಉಣ್ಣೆ ಬಟ್ಟೆಗಳನ್ನೂ ಹೆಚ್ಚು ಮಾಂಸವನ್ನೂ ಒದಗಿಸಬಲ್ಲರು.

ಆಡು ಮತ್ತು ಕೋಳಿಗಳ ಸಂಗತಿಯೂ ಅಷ್ಟೇ. ಅವುಗಳನ್ನೂ ಸುಧಾರಿಸಬೇಕಾಗಿದೆ. ಅವುಗಳನ್ನು ಸುಧಾರಿಸಿ ಪಶುವೈದ್ಯರು ಹಾಲು ಮತ್ತು ಮೊಟ್ಟೆಗಳನ್ನು ಎಲ್ಲರ ಕೈಯಳವಿಗೆ ತರಬಲ್ಲರು.

ಪ್ರಾಣಿಗಳಿಗೆ ಬರುವ ಕೆಲ ದೊಡ್ಡ ಸೋಂಕು ರೋಗಗಳಿಂದಾಗುವ ಹಾನಿಯನ್ನು ಇನ್ನು ವಿಚಾರಿಸೋಣ.

ದನಕರುಗಳಿಗೆ ಅಂಟುವ ಮೂರು ಮುಖ್ಯ ಪಿಡುಗುಗಳೆಂದರೆ ಅತಿಸಾರ (ರಿಂಡರ್ ಪೆಸ್ಟ್), ಗುಂಡಿಗೆ ಸೆಲೆ (ಎಚ್. ಎಸ್ [ಒಂದು ಬಗೆಯ ಹೃದಯ ವಿಕಾರ] ಮತ್ತು ಕಾಲು ಬೇನೆ ಬಾಯಿ ಬೇನೆ. ಇವು ಭಾರತಕ್ಕೆ ಅಪಾರ ಹಾನಿಯನ್ನುಂಟುಮಾಡುತ್ತವೆ. ೧೯೩೬–೩೭ರಲ್ಲಿ ಈ ಬೇನೆಗಳಿಂದ ಆದ ಪಶು ಮರಣಗಳ ಸಂಖ್ಯೆಗಳು ಇಂತಿವೆ; ಅತಿಸಾರದಿಂದ ೩೦೩೩೦೦, ಗುಂಡಿಗೆ ಸೆಲೆಯಿಂದ ೩೬೪೦೦, ಕಾಲುಬೇನೆ ಬಾಯಿ ಬೇನೆಯಿಂದ ೧೩೬೦೦. ನಿಜವಾಗಿ ಈ ಸಂಖ್ಯೆಗಳು ಸತ್ಯ ಸಂಖ್ಯೆಗಳಿಗಿಂತ ಎಷ್ಟೋ ಕಡಿಮೆಯಾಗಿವೆ. ದನಕರುಗಳಿಗೆ ಬರುವ ರೋಗಗಳಿಂದ ಆದ ಪಶುಮರಣಗಳನ್ನು ಅಧಿಕಾರಿಗಳಿಗೆ ತಿಳಿಸಲೇ ಬೇಕೆಂಬ ಕಾಯಿದೆಯಿದ್ದ ಬ್ರಹ್ಮದೇಶದ ಒಂದು ಭಾಗದ ಸಂಖ್ಯೆಗಳನ್ನು ನೋಡಿದರೆ ಈ ಮಾತು ಮನವರಿಕೆಯಾದೀತು. ಈ ಸಂಖ್ಯೆಗಳನ್ನು ನಂಬಿದರೆ ದನಕರುಗಳ ಸರಾಸರಿ ಆಯುಷ್ಯ ೫೦ ವರ್ಷವೆಂದು ತೋರಬರುವಂತಿತ್ತು. ಆದರೆ ಇದು ಉತ್ಪ್ರೇಕ್ಷೆ ಇರಬಹುದು. ಈಗ ದನಕರುಗಳ ಸರಾಸರಿ ಆಯುಷ್ಯ ೬ ವರ್ಷ. ಮೇಲೆ ಕಂಡು ಬಂದ ಆಯುಷ್ಯ ಈಗಿನ ಆಯುಷ್ಯದ ಒಂಭತ್ತರಷ್ಟಾಗುತ್ತದೆ. ಅಂದ ಮೇಲೆ ನಿಜವಾದ ಪಶುಮರಣದ ಸಂಖ್ಯೆ ಲೆಕ್ಕದಲ್ಲಿ ದಾಖಲಾದ ಸಂಖ್ಯೆಗಿಂತ ಒಂಭತ್ತು ಪಟ್ಟು ಇತ್ತೆಂದು ತಿಳಿದುಕೊಳ್ಳಲಡ್ಡಿಯಿಲ್ಲ. ಪ್ರತ್ಯಕ್ಷವಾಗಿ ಇದಕ್ಕಿಂತಲೂ ಹೆಚ್ಚು ಹಾನಿಯಾಗಿರಬೇಕು. ಉದಾಹರಣೆಗಾಗಿ ಕಾಲುಬೇನೆ ಬಾಯಿಬೇನೆಯಿಂದ ಒಂದು ದನ ಸತ್ತರೆ ೯೯ ದನಗಳು ತಾತ್ಕಾಲಿಕವಾಗಿ ನಿರುಪಯುಕ್ತವಾಗಬಹುದು. ಈ ಮೂಲಕ ಸಾಗುವಳಿ ಕೆಲಸ ಸರಿಯಾಗದೆಯೂ ಹಾಲು ಕರೆಯುವದು ಕಡಿಮೆಯಾಗಿಯೂ ಅವನಿಗೆ ನಷ್ಟವಾಗುತ್ತದೆ. ಇನ್ನೂ ಹಲವಾರು ಜ್ಞಾತಾಜ್ಞಾತ ಕ್ಷಯ ಮತ್ತು ಜಂತು ಮೂಲ ರೋಗಗಳಿದ್ದು ಅವುಗಳಿಂದೊದಗುವ ಹಾನಿಯೂ ದೊಡ್ಡದೇ ಆಗಿರುತ್ತದೆ. ದನಗಳ ಹೊಟ್ಟೆಯನ್ನು ಕಚ್ಚಿ ಗುಳ್ಳೆ ಬರಿಸುವ ಒಂದು ಜಾತಿಯ ನೊಣಗಳ ಪೀಡೆಯಿಂದ ವರ್ಷಕ್ಕೆ ಒಂದೂವರೆ ಕೋಟಿ ರೂಪಾಯಿ ನಷ್ಟವಾಗುತ್ತದೆಂದರೆ ಅತಿಶಯೋಕ್ತಿಯಲ್ಲವೆಂದು ಹೇಳಬಹುದು. ಯುರೋಪಿನಲ್ಲಿ ಈ ರೋಗಗಳನ್ನು ಪೂರ್ತಿಯಾಗಿಯೇ ಉಚ್ಚಾಟನೆ ಮಾಡಿದಂತಿದ್ದು ಅಲ್ಲಿ ಇವುಗಳಿಂದ ಆಗುವ ಹಾನಿ ತೀರ ಅಲ್ಪ. ಇತರರು ಸಾಧಿಸಿದ್ದನ್ನು ನಾವೂ ಸಾಧಿಸಲಾರೆವೆಂದು ನಂಬಲು ಕಾರಣವೇನೂ ಇಲ್ಲ. ಹೀಗೆ ಪಶುವೈದ್ಯನು ಮಾತ್ರ ರೋಗಗಳನ್ನು ದೂರ ಮಾಡುವದೇ ಮೊದಲಾದ ಕಾರ್ಯಗಳಿಂದ ದೇಶದ ಈ ಹಾನಿಯನ್ನು ತಪ್ಪಿಸಬಲ್ಲನೆಂಬುದು ಸ್ಪಷ್ಟವಾಗುತ್ತದೆ.

ಪಶುಗಳಿಂದ ಕ್ಷಯವೇ ಮೊದಲಾದ ಅನೇಕ ರೋಗಗಳು ಮನುಷ್ಯನಿಗೂ ದಾಟುತ್ತವೆ. ಮಾಂಸಭೇದಿ ಮೊದಲಾದ ಹಲವಾರು ರೋಗಗಳು ಹಾಲಿನ ಮೂಲಕ ಒಬ್ಬ ಮನುಷ್ಯನಿಂದ ಇನ್ನೊಬ್ಬನಿಗೆ ದಾಟಿ ಪಸರುತ್ತವೆ. ಪಶುವೈದ್ಯನು ಪಶುಗಳ ರೋಗಗಳನ್ನು ನಿವಾರಿಸುವ ಮತ್ತು ಗುಣಪಡಿಸುವ ಮೂಲಕ ಪರಿಶುದ್ಧವಾದ ಹಾಲನ್ನೊದಗಿಸಿ ಮನುಷ್ಯರಲ್ಲಿಯೂ ಈ ರೋಗಗಳ ಬಾಧೆಯನ್ನು ಕಡಿಮೆಮಾಡಬಲ್ಲನು.

ಮೇಲೆ ಹೇಳಿದ ಸಂಗತಿಗಳಿಂದ ಭಾರತಕ್ಕೆ ಪಶುವೈದ್ಯರ ಮಹತ್ವವೆಷ್ಟಿದೆ ಎಂದು ನಿಸ್ಪಷ್ಟವಾಗಿ ಮನವರಿಕೆಯಾಗದಿರಲಾರದು. ನಿಶ್ಚಯ ಭಾರತದ ಸಮೃದ್ಧಿಯ ಕೀಲಿಕೈಯೇ ಪಶುವೈದ್ಯರ ಕೈಯಲ್ಲಿದೆಯೆನ್ನಬಹುದು.

ಹೀಗಿದ್ದರೂ ಎಲ್ಲೆಲ್ಲಿಯೂ ಪಶುವೈದ್ಯರನ್ನು ಕಡೆಗಣಿಸುವದೇ ಕಾಣಬರುತ್ತಿದೆ. ಅವರ ಕಡೆ ಯೋಗ್ಯ ಲಕ್ಷ್ಯವನ್ನು ಕೊಡುವವರಿಲ್ಲ. ಬಹುತರವಾಗಿ ಜನರು ಅವರನ್ನು ಕೀಳಾಗಿ ಕಾಣುತ್ತಾರೆ. ಇದೆಲ್ಲ ಅವರ ಯೋಗ್ಯತೆಯನ್ನು ಅರಿಯದ ಜನರ ಅಜ್ಞಾನದ ಪರಿಣಾಮ. ಕೆಲ ಪಶುವೈದ್ಯರು ಕೂಡ ತಮ್ಮ ವೃತ್ತಿ ತುಚ್ಛವೆಂದು ತಿಳಿಯುವದುಂಟು. ಈ ವೃತ್ತಿಗೆ ಸೇರಿದ್ದೇ ತಮ್ಮ ದುರದೃಷ್ಟವೆಂದು ಅವರು ಬಗೆಯುತ್ತಾರೆ. ಆದರೆ ಪಶುವೈದ್ಯಕವು ಆರ್ಥಿಕ ದೃಷ್ಟಿಯಲ್ಲಿ ಅತ್ಯಂತ ಪ್ರಯೋಜನಕಾರಿಯೂ ವಿಜ್ಞಾನ ದೃಷ್ಟಿಯಿಂದ ತುಂಬ ಅರ್ಥವತ್ತಾಗಿಯೂ ಇದೆ. ಅವರೂ ಪಶುವೈದ್ಯರಿಗೆ ಸರಕಾರ ಸರಿಯಾದ ಸಂಬಳ ಕೊಡುತ್ತಿಲ್ಲ!

ಆಗಿ ಹೋದುದಕ್ಕೆ ಕೂಗಿ ಫಲವಿಲ್ಲ. ಭವಿಷ್ಯತ್ತಿನ ಕಡೆ ಆಶಾದೃಷ್ಟಿಯನ್ನಿಡೋಣ. ಏಕೆಂದರೆ ಈಗ ಪ್ರಾಮಾಣಿಕ ಜನರು ನಮ್ಮ ಭವಿಷ್ಯದ ಸೂತ್ರಧಾರರಾಗಿದ್ದಾರೆ. ಅವರು ಇತ್ತ ಲಕ್ಷ್ಯ ಕೊಟ್ಟೇ ಕೊಡುವರು. ಈವರೆಗೆ ಅತ್ಯಂತ ಮಹತ್ವದ ಕೆಲಸಗಳೇ ಅತ್ಯಂತ ದುರ್ಲಕ್ಷ್ಯಕ್ಕೀಡಾಗಿದ್ದವು. ಆದುದರಿಂದ ಪಶುವೈದ್ಯರು ಎಲ್ಲರಿಗಿಂತ ದುರ್ಲಕ್ಷಿತರಾಗಿದ್ದರು. ಇಂದು ಅವರು ಎಷ್ಟು ಅವಶ್ಯಕರಾಗಿದ್ದಾರೆಂದರೆ ಕೆಲವೇಳೆ ಅವರ ಕರ್ತವ್ಯ ವೃತ್ತಿಯನ್ನು ಪ್ರಕಾಶಪಡಿಸಲು ಕೂಡ ಹಿಂಜರಿಯುತ್ತಾರೆ.

ಮೇಲೆ ಹೇಳಿದ್ದರ ಮೇಲೆ ಪಶುವೈದ್ಯರ ಅತ್ಯಂತ ಮಹತ್ವದ ಸಮಸ್ಯೆಯನ್ನು ಬಿಡಿಸಬೇಕಾಗಿದೆಯೆಂದು ಸೂಚಿಸಬಹುದು. ಅವು ಯಾವುವೆಂದರೆ—

(೧) ಹಾಲಿನ ಮತ್ತು ತಜ್ಜನ್ಯ ಪದಾರ್ಥಗಳ ಉತ್ಪತ್ತಿ.

(೨) ಪಶುಗಳ ತಳಿ ಸುಧಾರಣೆ ಮತ್ತು ಕೃಷಿ ಕಾರ್ಯಕ್ಕಾಗಿ ಒಳ್ಳೆ ಎತ್ತುಗಳ ಪೂರೈಕೆ.

(೩) ಕುರಿ ಆಡುಗಳ ಸುಧಾರಣೆಯ ಮೂಲಕ ಮಾಂಸದ ಪೂರೈಕೆ.

(೪) ಕುರಿಗಳ ಸುಧಾರಣೆಯ ಮೂಲಕ ಉಣ್ಣೆಯ ಪೂರೈಕೆ.

(೫) ಕೋಳಿಗಳ ಸುಧಾರಣೆಯ ಮೂಲಕ ತತ್ತಿಗಳ ಪೂರೈಕೆ.

(೬) ದನಕರುಗಳ ಸಾಂಕ್ರಾಮಿಕ ಮತ್ತು ಇತರ ರೋಗಗಳನ್ನು ಹಿಡಿತಕ್ಕೆ ತರುವದು.

(೭) ಮನುಷ್ಯನಿಗೂ ಪಶುಗಳಿಗೂ ಸಾಮಾನ್ಯವಾದ ರೋಗಗಳ ನಿವಾರಣೆ.

(೮) ಹಾಲಿನ ಮೂಲಕ ಹಬ್ಬುವ ರೋಗಗಳ ನಿವಾರಣೆ.

(೯) ರುಗ್ಣ ಪಶುಗಳ ಶುಶ್ರೂಷೆ.

ಇವಲ್ಲದೆ ಗೋಮಾಂಸ ಮತ್ತು ಹಂದಿಯ ಮಾಂಸಗಳನ್ನು ಅವುಗಳ ರೂಢಿಯುಳ್ಳವರಿಗೆ ಒದಗಿಸುವ ಕೆಲಸವೂ ಪಶುವೈದ್ಯನ ಪಾಲಿಗೆ ಬರುತ್ತದೆ.

ಇವು ರಾಷ್ಟ್ರಕ್ಕೆ ಮಹತ್ವದ ಸಮಸ್ಯೆಗಳು. ನಮ್ಮ ದೇಶ ಮುಂದುವರಿಯಬೇಕಾದರೆ, ಮತ್ತು ಅದರ ಪ್ರಗತಿ ತೀವ್ರವಾಗಬೇಕಾದರೆ, ಅತ್ಯಂತ ಸಮರ್ಥರೂ ಉತ್ಕೃಷ್ಟರೂ ಆದ ಜನರನ್ನು ಪಶುವೈದ್ಯ ವೃತ್ತಿಯತ್ತ ಒಲಿಸಬೇಕಾಗಿದೆ. ಆದರೆ ದುರ್ದೈವದಿಂದ ಬೇರೆ ಯಾವಲ್ಲಿಯೂ ಎಡೆದೊರೆಯದವರು ಇದನ್ನು ಆಶ್ರಯಿಸುತ್ತಾರೆ. ಸವರ್ಣರೂ ಕೀಳ್ವೃತ್ತಿ ಎನ್ನುವವರನ್ನು ಇತ್ತ ಆಕರ್ಷಿಸಲು ಪಶುವೈದ್ಯರ ಅಂತಸ್ತನ್ನು ಏರಿಸಬೇಕು. ರಾಷ್ಟ್ರದ ನಾಯಕರೂ ವಿವಿಧ ಗೋಸೇವಾ ಸಂಘಗಳವರೂ ಈ ವಿಷಯವನ್ನು ಆಸ್ಥೆಯಿಂದ ವಿಚಾರಿಸುವರೆಂದು ಹಾರೈಸುತ್ತೇನೆ.

'ಕ. ವಿ.'

ಪಾನನಿರೋಧ ಏಕೆ?

ಶರೀರದ ಅವಯವಗಳ ಮೇಲೆ ಪರಿಣಾಮ.

[ಪಾನನಿರೋಧವು ಹಿಂದೂದೇಶದ ಮುಂದಿರುವ ಮಹಾ ಪ್ರಶ್ನೆಗಳಲ್ಲೊಂದು. ಕೊಡಗೂ ಕೂಡ ಈ ತತ್ವವನ್ನನುಸರಿಸಿ ಮದ್ಯ ಪಾನೀಯಗಳ ನಿಯಂತ್ರಣವನ್ನು ಜಾರಿಗೆ ತಂದಿದೆ. ಆದರೆ ಪಾನನಿರೋಧದ ಆವಶ್ಯಕತೆ ಏನು ಎಂಬ ವಿಚಾರ ಎಲ್ಲರಿಗೂ ತಿಳಿದಿರಲಾರದು. ಈ ವಿಚಾರದಲ್ಲಿ ಭಾರತ ರಾಜ್ಯಘಟನಾ ಸಭೆಯ ಉಪಾಧ್ಯಕ್ಷರಾದ ಶ್ರೀ ಹೆಚ್. ಸಿ. ಮುಖರ್ಜಿಯವರು ಬರೆದ ಪುಸ್ತಕದಿಂದ ಪ್ರಾಮುಖ್ಯಾಂಶಗಳನ್ನು ವಾಚಕರ ಅವಗಾಹನೆಗೆ ಪ್ರತಿವಾರ ಶ್ರೀ ಬಿ. ಡಿ. ಗಣಪತಿಯವರು ಕೊಡುವರು.]

ಮಾದಕ ಪಾನೀಯಗಳು ಶರೀರದ ವಿವಿಧ ಅಂಗಗಳ ಮೇಲೆ ಯಾವ ಪ್ರಭಾವವನ್ನು ಬೀರುವವು; ಎಷ್ಟರ ಮಟ್ಟಿನ ಹಾನಿಯನ್ನು ಮಾಡುವವು ಎಂಬ ಬಗ್ಗೆ ಯುರೋಪು ಅಮೇರಿಕಾಗಳಲ್ಲಿ ವೈದ್ಯಕೀಯ ತಜ್ಞರು ಪರಿಶೋಧನೆಗಳನ್ನು ಮಾಡಿದ್ದಾರೆ. ಇವರು ಮಾದಕ ಪಾನೀಯಗಳ ಸೇವನೆ ಬಗ್ಗೆ ಆಗಾಗ ಎಚ್ಚರಿಕೆ ಕೊಟ್ಟಿದ್ದಾರೆ. ಶರೀರದೊಳಗೆ ಸೇರಿದೊಡನೆಯೇ ಮಾದಕ ಪಾನೀಯವು ಶರೀರದ ಎಲ್ಲಾ ಅವಯವಗಳ ಕೆಲಸವನ್ನು ಶಿಥಿಲಗೊಳಿಸುವದೆಂಬುದೇ ಅವರೆಲ್ಲರ ಒಮ್ಮತ ಅಭಿಪ್ರಾಯ. ಪ್ರತಿಯೊಂದು ಅವಯವದ ಮೇಲೆ ಯಾವ ರೀತಿಯ ಹಾನಿಮಾಡುವದೆಂಬುದನ್ನು ವಿಷದವಾಗಿ ಪ್ರತ್ಯೇಕ ವಿವರಿಸುವದು ಇಲ್ಲಿ ಅಸಾಧ್ಯವಾದರೂ ಕೆಲವು ಪ್ರಾಮುಖ್ಯ ಅವಯವಗಳ ಮೇಲೆ ಅದರಿಂದಾಗುವ ಪರಿಣಾಮಗಳನ್ನು ವಿವರಿಸುವದು ಸೂಕ್ತವಾಗಿದೆ.

ನಮ್ಮ ಶರೀರವು ಮಿಲಿಯಾಂತರ ಸಂಖ್ಯೆಯ ಕಣಗಳಿಂದ ಮಾಡಲ್ಪಟ್ಟಿದೆ. ಈ ಪ್ರತಿಯೊಂದು ಕಣವೂ ಶ್ವಾಸೋಚ್ಛ್ವಾಸ ಕೆಲಸ ಮಾಡುತ್ತದೆ. ಆಹಾರ ತೆಗೆದುಕೊಳ್ಳುತ್ತದೆ. ಕೆಲಸ ಮಾಡುತ್ತದೆ. ಅಪ್ರಯೋಜಕ ವಸ್ತುವನ್ನು ಹೊರಗೆ ಹಾಕುತ್ತದೆ. ಈ ಚಿಕ್ಕ ಕಣಗಳೇ ಒಟ್ಟಾಗಿ ಶರೀರದ ವಿವಿಧ ಅವಯವಗಳಾಗಿವೆ. ಅದೇ ಅಲ್ಲ; ಅವು ಈ ಅವಯವಗಳಲ್ಲಿಯೂ ಕೂಡ ತಮ್ಮದೇ ಆದ ವಿಶೇಷ ಕೆಲಸ ಮಾಡುವವು. ಉದಾಹರಣೆಗೆ ಮೆದುಳಿನಲ್ಲಿ ಆಲೋಚನೆಗೆ ಸಹಾಯಕವಾದ ಕಣಗಳೂ, ಅದೇ ಕಾಲಕ್ಕೆ ಬೇರೆ ಕೆಲಸವನ್ನೂ ಮಾಡುತ್ತವೆ. ಹೊಟ್ಟೆಯಲ್ಲಿ ಮತ್ತು ಕರುಳುಗಳಲ್ಲಿ ಶರೀರದ ಇತರ ಭಾಗಗಳಿಗೆ ಬೇಕಾದ ಆಹಾರವನ್ನು ತಯಾರಿಸುವ ಕಣಗಳೂ ಇವೆ. ಕಲಿಜದ ಕಣಗಳು ಜೀವನಾವಶ್ಯಕ ವಸ್ತುಗಳನ್ನು ಸಂಗ್ರಹಿಸಿಡುವ ಕಾರ್ಯದೊಂದಿಗೆ ವಿಷವಸ್ತುಗಳ ನಿಗ್ರಹಕಾರ್ಯವನ್ನೂ ಮಾಡುತ್ತವೆ. ತಲೆ ಮೆದುಳಿನ ಕಣಗಳೂ, ಮೂತ್ರಕೋಶದ ಕಣಗಳೂ ಒಂದೇ ರೀತಿಯಲ್ಲಿದ್ದರೂ ತಲೆಯಲ್ಲಿಯ ಕಣವು ಮೂತ್ರವನ್ನು ಹೊರಗೆ ಹಾಕದು. ಇಲ್ಲವೇ ಮೂತ್ರಕೋಶದ ಕಣವು ಮೆದುಳಿನ ಕಣದಂತೆ ಯೋಚನೆ ಮಾಡಲಾರದು.

ಎಚ್ಚರಿಕೆಯ ಮತ್ತು ಶಿಸ್ತಿನ ಜೀವನದಿಂದ ಈ ಕಣಗಳ ಕೆಲಸವನ್ನು ದಕ್ಷತೆಯಿಂದ ಇಟ್ಟುಕೊಳ್ಳುವದು ಹೇಗೆ ಸಾಧ್ಯವೋ ಹಾಗೆಯೇ ಹದತಪ್ಪಿದ ಜೀವನದಿಂದ ಅವುಗಳನ್ನು ನಾಶಮಾಡಲೂಬಹುದು. ಹಿಂದಿನ ಲೇಖನದಲ್ಲಿ ಮಾದಕ ಪಾನೀಯವು ವಿಷವೆಂಬುದನ್ನು ವಿವರಿಸಲಾಗಿದೆ. ಆ ವಿಷವು ಶರೀರದ ಮೇಲೆ ಯಾವ ರೀತಿ ವರ್ತಿಸುವದೆಂಬುದನ್ನು ಇಲ್ಲಿ ನೋಡುವೆವು.

ವಿವಿಧ ಪರಿಶೋಧನೆ ಮತ್ತು ಪರಿಶೀಲನೆಗಳಿಂದ ಶರೀರದಲ್ಲಿ ಮಾದಕಪಾನೀಯವು ಹೇಗೆ ಹೀರಲ್ಪಡುತ್ತದೆಂಬುದು ತಿಳಿದುಬಂದಿದೆ. ಯಾವದೇ ಮಾದಕ ಪಾನೀಯವು ಹೊಟ್ಟೆಯನ್ನು ಪ್ರವೇಶಿಸಿದೊಡನೆಯೇ ಹೊಟ್ಟೆಯು ತನ್ನ ರಸವನ್ನು ಹೊರಹಾಕಿ ಆ ಮಾದಕ ಪಾನೀಯವನ್ನು ಶೇಕಡ ನಾಲ್ಕರಷ್ಟು ಸತ್ವಹೀನ ಮಾಡುತ್ತದೆ. ಇದರ ನಂತರ ಹೊಟ್ಟೆಯ ಗೋಡೆಗಳು ಆ ಪಾನೀಯವನ್ನು ಹೀರತೊಡಗುತ್ತವೆ. ಇತರ ಆಹಾರಗಳಂತೆ ಮಾದಕ ಪಾನೀಯವು ಯಾವುದೇ ಪಚನ ಕ್ರಿಯೆಗೊಳಗಾಗುವದಿಲ್ಲ. ಆದ್ದರಿಂದ ಮಾದಕ ಪಾನೀಯ ಇದ್ದಂತೆಯೇ ಹೀರಲ್ಪಡುತ್ತದೆ. ಈ ಹೀರುವ ಕಾರ್ಯ ಕರುಳಿಗೆ ಹೋದಂತೆ ಪ್ರಬಲವಾಗುತ್ತದೆ. ಆ ರೀತಿ ಹೀರಲ್ಪಟ್ಟು ಅದು ರಕ್ತದೊಡನೆ ಮಿಶ್ರವಾಗುತ್ತದೆ. ಬೀರ್ ಇಲ್ಲವೇ ಬೇರೆ ಯಾವುದೇ ಮಾದಕ ಪಾನೀಯವನ್ನು ಕುಡಿದ ಮೂರು ನಿಮಿಷಗಳಲ್ಲಿ ಅದು ಹೀರಲ್ಪಟ್ಟು ಮೂತ್ರದಲ್ಲಿ ಕಂಡುಬರುವದೆಂದು ಶೋಧನೆಗಳಿಂದ ತಿಳಿದುಬಂದಿದೆ. ಮೂತ್ರಕ್ಕೆ ಬರುವ ಮೊದಲು ಅದು ರಕ್ತವನ್ನು ದಾಟಿ, ಮೂತ್ರಪಿಂಡಗಳಿಗೆ ಸಾಗಿಸಲ್ಪಟ್ಟು ಮೂತ್ರಾಶಯಕ್ಕೆ ಬರುವದು. ಮೂವತ್ತು ಯಾ ಅರುವತ್ತು ನಿಮಿಷಗಳಲ್ಲಿ ತೆಗೆದುಕೊಂಡ ಮಾದಕ ಪಾನೀಯವೆಲ್ಲವೂ ರಕ್ತದೊಡನೆ ಮಿಶ್ರವಾಗುವದು. ಈ ಹೀರುವಿಕೆಯು ಮಾದಕ ಪಾನೀಯದ ಶಕ್ತಿಯನ್ನನುಸರಿಸಿದೆ. ಮಾದಕ ವಸ್ತು ಹೆಚ್ಚಾಗಿರುವಷ್ಟು ಶೀಘ್ರವಾಗಿ ಹೀರಲ್ಪಡುತ್ತದೆ. ಹೊಟ್ಟೆಯು ಖಾಲಿ ಇದ್ದಾಗ ಈ ಕಾರ್ಯ ಬಹು ಚುರುಕಿನಿಂದ ನಡೆಯುತ್ತದೆ. ಹೊಟ್ಟೆಯಲ್ಲಿ ಆಹಾರವಿದ್ದರೆ ಇದು ನಿಧಾನವಾಗಿ ಸಾಗುವದು.

ಮಾದಕ ಪಾನೀಯವು ರಕ್ತದಲ್ಲಿ ಮಿಶ್ರವಾದನಂತರ ಅದು ಕಲಿಜಕ್ಕೂ, ನಂತರ ಹೃದಯಕ್ಕೂ ಸಾಗಿಸಲ್ಪಟ್ಟು ಶರೀರದ ಎಲ್ಲಾ ರಕ್ತದೊಡನೆ ಮಿಶ್ರವಾಗುತ್ತದೆ. ಶರೀರದ ರಕ್ತವು ಹೃದಯದ ಒತ್ತಡದ ಕಾರಣ ತನ್ನ ಚಲನೆಯಲ್ಲಿ ಪ್ರತಿ ನಿಮಿಷಕ್ಕೆ ರಕ್ತಕಣಗಳನ್ನು ಎರಡು ಸಾರಿಯಂತೆ ಮೀಯಿಸುತ್ತದೆ. ಅದಕ್ಕೆ ನೀರು, ಆಹಾರ, ಆಮ್ಲಜನಕಗಳನ್ನು ಕೊಟ್ಟು ಅದರಲ್ಲಿ ಸವೆದ ಭಾಗವನ್ನು ಹಿಂದಕ್ಕೆ ತರುತ್ತದೆ. ಆದರೆ ಮಾದಕ ಪಾನೀಯ ಮಿಶ್ರಿತ ರಕ್ತವು ರಕ್ತಕಣವನ್ನು ಮೀಯಿಸುವದರ ಬದಲು ಅದರೊಳಗೇ ಪ್ರವೇಶಿಸುವದರಿಂದ ಅದರಲ್ಲಿ ರಕ್ತಕಣವು ನೆನೆಯುತ್ತದೆ.

ಮಾದಕ ಪದಾರ್ಥವು ರಕ್ತ ಕಣವನ್ನು ಯಾವ ರೀತಿ ಪ್ರವೇಶಿಸಿ ಯಾವ ಹಾನಿ ಮಾಡುವದೆಂದು ಸ್ಪಷ್ಟವಾಗಿ ವಿಜ್ಞಾನಶಾಸ್ತ್ರವು ಇನ್ನೂ ಕಂಡು ಹಿಡಿದಿಲ್ಲ. ಆದರೆ ಮಾದಕ ಪದಾರ್ಥವು ಹಡಗಿನ ಎಂಜಿನಿಗೆ ಉಪ್ಪು ನೀರು ಹಾಕಿದಂತೆ, ಇಲ್ಲವೇ ನಡೆಯುತ್ತಿರುವ ವಾಚಿನ ಒಳಗೆ ಚಿಕ್ಕ ಮರಳನ್ನು ಹಾಕಿದಂತೆ ಎಂಬುವದರಲ್ಲಿ ಸಂಶಯವಿಲ್ಲ. ಇವು ತಕ್ಷಣ ಯಂತ್ರವನ್ನು ನಿಲ್ಲಿಸದಿದ್ದರೂ ಯಾವ ರೀತಿ ಕ್ರಮೇಣ ಯಂತ್ರವನ್ನು ಹಾಳು ಮಾಡುವವೋ ಅದೇ ರೀತಿ ಮಾದಕ ಪಾನೀಯವು ತಕ್ಷಣವಲ್ಲದಿದ್ದರೂ ಕ್ರಮಶಃ ಶರೀರವನ್ನು ಹಾಳು ಮಾಡುವದು.

ನಾವು ತೆಗೆದುಕೊಳ್ಳುವ ಆಹಾರವು ಹಲ್ಲುಗಳಿಂದ ಜಗಿಯಲ್ಪಟ್ಟು ಜೊಲ್ಲು ರಸ ಮಿಶ್ರಿತವಾಗಿ ಹೊಟ್ಟೆಗೆ ಹೋಗುತ್ತದೆ. ಅಲ್ಲಿ ಅದು ಸ್ನಾಯುಗಳ ಸಹಾಯದಿಂದ ಕಡೆಯಲ್ಪಟ್ಟು ಮುದ್ದೆಯಾಗುತ್ತದೆ. ಈ ಕಾರ್ಯದೊಂದಿಗೆ ಅವು ಕೂಡ ತಮ್ಮ ರಸವನ್ನು ಒಸರಿ ಅದನ್ನು ಸಿದ್ಧಪಡಿಸುತ್ತವೆ. ಹೀಗೆ ಸಿದ್ಧವಾದ ಆಹಾರವು ಚಿಕ್ಕ ಕರುಳಿಗೆ ಹೋಗುತ್ತದೆ. ಅಲ್ಲಿ ಅದು ಹಿಂಡಲ್ಪಟ್ಟು ಕ್ರಮಶಃ ಮುಂದೂಡಲ್ಪಡುತ್ತದೆ. ಚಿಕ್ಕ ಕರುಳಿನ ಗೋಡೆಯಲ್ಲಿ ಒಸರುವ ರಸವು ಇದಕ್ಕೆ ಸೇರಿ ಮುಂದರಿಯುತ್ತದೆ. ಈ ಕಾರ್ಯ ಮುಗಿಯುವದರೊಳಗೆ ಶರೀರಕ್ಕೆ ಅವಶ್ಯವಾದ ವಸ್ತುಗಳು ಆಹಾರದಿಂದ ಹೀರಲ್ಪಟ್ಟು ರಕ್ತ ಕುಡಿಕೆಗಳಿಗೆ ಸಾಗಿಸಲ್ಪಡುವವು. ಇದು ನಂತರ ಶರೀರದ ಎಲ್ಲಾ ಭಾಗಗಳಿಗೂ ಸಾಗಿಸಲ್ಪಟ್ಟು ಶರೀರದ ರಿಪೇರಿಯಾಗುವದಲ್ಲದೆ ಶರೀರಕ್ಕೆ ಚೈತನ್ಯ ದೊರೆಯುವದು. ಶರೀರದ ಉಪಯೋಗಕ್ಕೆ ಬಾರದ ಆಹಾರದ ಶೇಷಾಂಶವು ಗುದ ದ್ವಾರದಿಂದ ಹೊರ ಹಾಕಲ್ಪಡುವದು. ಆದ್ದರಿಂದ ಆಹಾರದ ಪಚನ ಕ್ರಿಯೆಯಲ್ಲಿ ಬಾಯಿ, ಹೊಟ್ಟೆ, ಚಿಕ್ಕ ಕರುಳು ಇವೇ ಪಚನ ಶಾಸ್ತ್ರದ ಅಡಿಗೆ ಮನೆಗಳು. ಆಹಾರದೊಡನೆ ಮಿಶ್ರವಾಗುವ ಜೊಲ್ಲು ರಸವು ಅಡಿಗೆ ಆಳುಗಳಂತೆ.

ಜನರು ಯೋಗ್ಯ ಆಹಾರವನ್ನು ಉಪಯೋಗಿಸುತ್ತಿರುವ ವರೆಗೆ ಪಚನ ಕ್ರಿಯೆಯು ಸುಸೂತ್ರವಾಗಿ ನಡೆಯುತ್ತದೆ. ಆದರೆ ಹಾನಿಕಾರಕ ವಸ್ತುಗಳು ಸೇರಿದರೆ ಈ ಕ್ರಿಯೆ ಸರಿಯಾಗಿ ನಡೆಯದು. ಇಂಥಾ ಹಾನಿಕಾರಕ ವಸ್ತುಗಳಲ್ಲಿ ಮಾದಕ ಪದಾರ್ಥಗಳು ಸೇರಿವೆ. ಮಾದಕ ಪದಾರ್ಥವನ್ನು ಕುಡಿದೊಡನೆಯೇ ಅದರ ಒಗರಿನಿಂದ ಬಾಯಿಯ ಜೊಲ್ಲುರಸದ ನಾಳಗಳು ಶಕ್ತಿಮೀರಿ ರಸವನ್ನು ಸೂಸುತ್ತವೆ. ನಾಲಗೆಯ ಅತಿ ಜಾಗೃತ ಪರೆಯನ್ನು ಕಾಯಲು ಮತ್ತು ಬಾಯೊಳಗೆ ಸೇರಿದ ಈ ಅನಿಷ್ಟ ಪದಾರ್ಥವನ್ನು ಹೊರ ಹಾಕಲು ಅನುಕೂಲವಾಗಿ ಈ ಜೊಲ್ಲು ರಸ ಒಸರುವದಾಗಿದೆ. ಈ ರೀತಿ ಶಕ್ತಿ ಮೀರಿ ಜೊಲ್ಲು ರಸ ಬರುವ ಕಾರಣ ನಾವು ಆಹಾರ ತೆಗೆದುಕೊಂಡಾಗ ಸಾಕಷ್ಟು ರಸ ಸ್ರವಿಸದೆ ಆಹಾರವು ಹೊಟ್ಟೆಯನ್ನು ಸೇರುತ್ತದೆ. ಈ ರೀತಿ ಶಕ್ತಿ ಮೀರಿ ದ್ರವಿಸುವ ಕಾರಣ ಕ್ರಮಶಃ ಈ ನಾಳಗಳು ಮಂದವಾಗಿ ಆಹಾರದ ರುಚಿಯು ತಪ್ಪುವದು. ಹೊಟ್ಟೆಗೆ ಪಾನೀಯವು ಹೋದೊಡನೆಯೇ ಅಲ್ಲಿಯೂ ರಸವು ಶಕ್ತಿಮೀರಿ ಒಸರತೊಡಗಿ ಆ ಪದಾರ್ಥವನ್ನು ಹೊರ ದೂಡಲೆತ್ನಿಸುವದು. ಈ ಪ್ರಯತ್ನದಲ್ಲಿ ಗುಲಾಬಿ ವರ್ಣದ ಆ ಜೊಲ್ಲು ಒಸರುವ ಪರದೆಯು ತನ್ನ ಶಕ್ತಿ ಕಳಕೊಂಡು ಕೆಂಪಾಗಿ ಉರಿಯತೊಡಗುವದು. ಮೂಗಿಗೆ ಮೆಣಸು ಸೇರಿದರೆ ಹೇಗಾಗುವದೋ ಹಾಗೆಯೇ ಮಾದಕ ಪದಾರ್ಥದಿಂದ ಅಲ್ಲಿ ಹಾನಿಯಾಗುವದು. ಇದು ಸತತ ನಡೆದರೆ ಕ್ರಮೇಣ ಹೊಟ್ಟೆಯಲ್ಲಿ ವ್ರಣಗಳೆದ್ದು 'ಅಲ್ಸರ್' ಎನಿಸಿಕೊಳ್ಳುವದು.

ಹೆಚ್ಚಾಗಿ ಕುಡಿಯುವವರ ಹೊಟ್ಟೆಯ ಒಳಭಾಗವು ಮಂದವಾಗಿ ತನ್ನ ತೀಕ್ಷ್ಣತೆಯನ್ನು ಕಳಕೊಂಡು ತೊಗಲಿನಂತಾಗುವದು. ಕ್ರಮೇಣ ಈ ನಾಳಗಳು ಎಷ್ಟು ಬೇಕೋ ಅಷ್ಟು ರಸ ಸ್ರಾವಿಸುವ ಶಕ್ತಿಯನ್ನು ಕಳಕೊಂಡು 'ಗೇಸ್ಟ್ರಿಕ್' ರಸದ ಅಭಾವದಿಂದ ಇಲ್ಲವೇ ಹೆಚ್ಚಳಿಕೆಯಿಂದ ನಾನಾ ಕಾಯಿಲೆಗಳು ಜನಿಸುವವು. ಆದ್ದರಿಂದ ಮಾದಕ ಪಾನೀಯವು ಹೊಟ್ಟೆಯನ್ನು ಪ್ರಚೋದಿಸಿ, ಹದ ತಪ್ಪಿ ರಸ ಸ್ರಾವ ಮಾಡಿ, ವ್ರಣಗಳಿಗೂ, ಅಜೀರ್ಣಕ್ಕೂ ಕಾರಣವಾಗಿ ನಾನಾ ರೋಗಗಳನ್ನು ತರುವದು. ಆದ್ದರಿಂದ ಅಲ್ಪ ಪರಿಮಾಣದಲ್ಲೇ ಆಗಲೊಲ್ಲದೇಕೆ–ಸತತ ಮಾದಕ ಪಾನೀಯವನ್ನು ತೆಗೆದುಕೊಳ್ಳುವವರಲ್ಲಿಯೂ ಕ್ರಮಶಃ ಈ ರೋಗಗಳು ತಲೆದೋರುವವು.

—ಸಪೀಪ.

ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್,

ಮಡಿಕೇರಿ.

ಮಹಾಜನರಲ್ಲಿ ವಿನಂತಿ.

ನಮ್ಮ ಫ್ರೇಜರ್‌ಪೇಟೆ ಕಾರ್ಖಾನೆಯಲ್ಲಿ ಈಗಾಗಲೇ ಮೂಳೆಗೊಬ್ಬರ ತಯಾರಾಗುತ್ತಿರುವುದು ಎಲ್ಲರಿಗೂ ತಿಳಿದ ವಿಷಯ. ಈ ಸಂದರ್ಭದಲ್ಲಿ ನಿಮ್ಮ ನಿಮ್ಮ ಗ್ರಾಮಗಳಲ್ಲಿ ಸತ್ತ ದನಗಳ ಮತ್ತು ಇತರ ಪ್ರಾಣಿಗಳ ಮೂಳೆಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಜಮಾಯಿಸಿ ಮೇಲಿನ ವಿಳಾಸಕ್ಕೆ ತಿಳಿಸಿದಲ್ಲಿ ಅದನ್ನು ಅದರ ಬೆಲೆ ಕೊಟ್ಟು ಸಾಗಿಸುವ ಏರ್ಪಾಡನ್ನು ಮಾಡುತ್ತೇವೆ. ಅಥವ ಲಾರಿಗಟ್ಟಲೆ ಜಮಾಯಿಸಿದವರು ನಮ್ಮ ಫ್ರೇಜರ್‌ಪೇಟೆ ಕಾರ್ಖಾನೆಗೆ ತಂದು ಕೊಟ್ಟಲ್ಲಿ ಮಣ 1ರ 0-12-0 ಯಂತೆ ಬೆಲೆಗೆ ತೆಗೆದುಕೊಳ್ಳಲಾಗುವುದು.

ಈಗಾಗಲೇ ತಯಾರಾಗಿರುವ ಮೂಳೆ ಗೊಬ್ಬರಕ್ಕೆ ಖಾಯಿಸ್‌ದಾರರು ಬರಕೊಂಡಲ್ಲಿ ಅಗ್ರಸ್ಥಾನವನ್ನನುಸರಿಸಿ ಬಟವಾಡೆ ಮಾಡಲಾಗುವುದು.

ಸೂಚನೆ:–ನಮ್ಮ ಕಂಪೆನಿಯ ಶೇರುದಾರರಿಗೆ ಹೆಚ್ಚಿನ ರಿಯಾಯಿತಿ ಮತ್ತು ಮೊದಲಿನ ಹಕ್ಕು ಕೊಡಲಾಗುವುದು.

ಮಡಿಕೇರಿ,
ತಾ. 19-5-49.

ಕೆ. ಕೆ. ತಿಮ್ಮಯ್ಯ,
ಮೇನೇಜಿಂಗ್ ಡೈರೆಕ್ಟರ್.

ಗಾಂಧಿ ವಿಚಾರದೋಹನ.

ಸತ್ಯ ಮತ್ತು ಸೌಂದರ್ಯ.

ಲೇಖಕ:- ಮಹಾತ್ಮಾಗಾಂಧಿ. ಅನುವಾದಕ:- ಬಿ. ಡಿ. ಗಣಪತಿ.

ಪ್ರತಿಯೊಂದು ವಸ್ತುವಿಗೆ ಎರಡು ಬಣ್ಣಗಳಿರುತ್ತವೆ ಒಂದು ಹೊರಮೈಯಾದರೆ ಮತ್ತೊಂದು ಒಳಮೈ. ಒಳಗಿನವನ್ನು ಬೆಳಗಲು ಸಹಾಯಕವಾಗದಿದ್ದರೆ ಹೊರಗಿನ ಬೆಡಗಿಗೆ ಅರ್ಥವಿಲ್ಲ. ಎಲ್ಲಾ ನಿಜವಾದ ಕಲೆಯೂ ಕೂಡ ಆತ್ಮದ ಬಹಿರ್ಬಿಂಬಿತವಾದ ವಾಣಿ. ಮನುಷ್ಯನ ಅಂತರ್ ಚೈತನ್ಯದ ದ್ಯೋತಕವಾಗುವಷ್ಟಕ್ಕೆ ಮಾತ್ರ ಹೊರಗಿನ ರೂಪಕ್ಕೆ ಬೆಲೆ.

ಅನೇಕರು ತಮ್ಮನ್ನು ಕಲಾಕಾರರೆಂದು ಕರೆದುಕೊಳ್ಳುವರು. ಜನರು ಅವರನ್ನು ಹಾಗಿಯೇ ತಿಳಿಯುತ್ತಾರೆ. ಆದರೂ ಅವರ ಕೆಲಸಗಳಲ್ಲಿ, ಯಾ ಕೃತಿಗಳಲ್ಲಿ ಆತ್ಮದ ಬೇಡಿಕೆ ಯಾ ಶಾಂತಿಯ ಯಾವುದೇ ಚಿಹ್ನೆ ಇರುವದಿಲ್ಲ.

ಎಲ್ಲಾ ನೈಜ ಕಲೆಯು ಅಂತರ್‌ಶಕ್ತಿಯನ್ನು ತಿಳಿದುಕೊಳ್ಳಲು ಆತ್ಮಕ್ಕೆ ಸಹಾಯಕವಾಗಿರಬೇಕು. ನನ್ನ ಮಟ್ಟಿಗೆ ಹೇಳುವದಾದರೆ ಹೊರಗಿನ ಬೆಡಗಿಲ್ಲ. ಆತ್ಮದ ಸಾಕ್ಷಾತ್ಕಾರವನ್ನು ಮಾಡಬಲ್ಲೆನು. ಆದ್ದರಿಂದ ನನ್ನ ಜೀವನದಲ್ಲಿ ನೀವು ನಿಮ್ಮ ಕಲ್ಪನೆಯ ಕಲೆಯ ಯಾವುದೇ ಚಿಹ್ನೆಯನ್ನು ಕಾಣದಿದ್ದರೂ ನನ್ನ ಜೀವನದಲ್ಲಿ ದಕ್ಷವಾದ ಕಲೆಯಿದೆಯೆಂದು ನಾನು ಧೈರ್ಯದಿಂದ ಹೇಳಬಲ್ಲೆ. ನನ್ನ ಕೋಣೆಯು ಯಾವದೇ ಚಿತ್ರಪಟಗಳಿಲ್ಲದ ಗೋಡೆಗಳಿಂದ ಕೂಡಿದ್ದಿರಬಹುದು. ನಾನು ಕೋಣೆಯ ಮಾಡನ್ನೇ ತೆಗೆದುಹಾಕಬಹುದು, ಇದರಿಂದ ನನ್ನ ಕಲಾದೃಷ್ಟಿಗೆ ತೊಡಕಿಲ್ಲ. ಬದಲು ಅಂತ್ಯವಿಲ್ಲದ ಸೌಂದರ್ಯ ರಾಶಿಯಿಂದ ಕೂಡಿ ಮೇಲಿರುವ ನಕ್ಷತ್ರಪೂರಿತ ನೀಲಾಕಾಶವನ್ನು ನೋಡಲು ಅದು ಸಹಾಯ ಮಾಡುವದು. ಮಿನುಗುವ ನಕ್ಷತ್ರಗಳಿಂದ ತುಂಬಿದ ಮೇಲಿರುವ ವಿಚಿತ್ರ ವಿನ್ಯಾಸದಿಂದ ಶೋಭಿಸುವ ಆಕಾಶವನ್ನು ನೋಡುವದಕ್ಕಿಂಥಾ ಮಿಗಿಲಾದ ದೃಶ್ಯವನ್ನು ಮಾನವೀಕೃತ ಯಾವ ಕಲೆಯು ಕೊಡಬಲ್ಲದು? ಹಾಗೆಂದಾಗ ಮನುಷ್ಯಕೃತ ಕಲಾಕೃತಿಗಳಿಗೆ ನಾನು ಬೆಲೆ ಕೊಡಬಾರೆನ್ನಲ್ಲ; ಆದರೆ ಪ್ರಕೃತಿಯ ಶಾಶ್ವತ ಮತ್ತು ಗಾಢ ಸೌಂದರ್ಯದೊಡನೆ ತುಲನೆ ಮಾಡಿದರೆ ಇವು ಎಷ್ಟು ಕ್ಷುಲ್ಲಕ ಮತ್ತು ಕ್ಷಣಿಕವೆಂಬುದು ನನ್ನ ವ್ಯಕ್ತಿಗತ ಎಣಿಕೆ. ಆತ್ಮದ ಸಾಕ್ಷಾತ್ಕಾರಕ್ಕೆ ಎಷ್ಟರ ಮಟ್ಟಿಗೆ ಮನುಷ್ಯಕೃತ ಕಲೆಯು ಸಹಾಯಕವಾಗುತ್ತದೋ ಅಷ್ಟೇ ಅದರ ಬೆಲೆ.

ಸತ್ಯದಲ್ಲಿ ಮತ್ತು ಸತ್ಯದ ಮೂಲಕ ನಾನು ಸೌಂದರ್ಯವನ್ನು ನೋಡುತ್ತೇನೆ ಮತ್ತು ಹೊಂದುತ್ತೇನೆ. ಎಲ್ಲಾ ಸತ್ಯಗಳು, ಸತ್ಯಪೂರಿತ ಭಾವನೆಗಳು, ಸತ್ಯಪೂರಿತ ಮುಖ, ಸತ್ಯ ಪೂರಿತ ಚಿತ್ರ, ಗಾನ ಇವೆಲ್ಲವೂ ಪರಮ ಸುಂದರವಾದುವು. ಜನರು ಸಾಧಾರಣವಾಗಿ ಸತ್ಯದಲ್ಲಿ ಸೌಂದರ್ಯವನ್ನು ಕಾಣಲೊಲ್ಲರು. ಸಾಧಾರಣ ಮನುಷ್ಯನು ಸತ್ಯದಿಂದ ದೂರ ಸರಿದು ಅದರಲ್ಲಿಯ ಸೌಂದರ್ಯಕ್ಕೆ ಕುರುಡನಂತಾಗುತ್ತಾನೆ. ಸತ್ಯದಲ್ಲಿ ಸೌಂದರ್ಯವನ್ನು ಯಾವಾಗ ಮನುಷ್ಯನು ನೋಡಲು ತೊಡಗುವನೋ ಆಗ ನಿಜವಾದ ಕಲೆಯು ರೂಪುಗೊಳ್ಳುವದು.

ಹೊರಗಿನ ಸೌಂದರ್ಯವನ್ನು ಮೀರಿ ಯಾವ ಮುಖದಲ್ಲಿ ಆತ್ಮದ ಸತ್ಯತೆ ಬೆಳಗುವದೋ ಆ ಮುಖವು ನಿಜವಾದ ಕಲಾರಾಧಕನಿಗೆ ಸುಂದರವೆನಿಸುವದು. ಸತ್ಯವಿಲ್ಲದೆ ಸೌಂದರ್ಯವಿಲ್ಲ. ಆದರೆ ಸತ್ಯವು ವಿವಿಧ ರೂಪಧರಿಸಿ, ಆ ರೂಪಗಳಲ್ಲಿ ಹೊರಗಿನ ಸೌಂದರ್ಯವಿಲ್ಲದಿರಬಹುದು. ಸೋಕ್ರೆಟಿಸನು ಆತನ ಕಾಲದ ಮಹಾ ಸತ್ಯಾನ್ವೇಷಿಯು ಮನುಷ್ಯನು. ಆದರೆ ಆತನು ಶಾರೀರಿಕವಾಗಿ ಆ ಕಾಲದಲ್ಲಿ ಗ್ರೀಸಿನಲ್ಲಿ ಕುರೂಪಿಯಾಗಿದ್ದನು. ಆತನು ನನ್ನ ದೃಷ್ಟಿಯಿಂದ ಪರಮ ಸುಂದರನು. ಏಕೆಂದರೆ ಆತನ ಜೀವನವೆಲ್ಲವೂ ಸತ್ಯದ ಶೋಧನೆಗಾಗಿ. ಹೊರಗಿನ ಸೌಂದರ್ಯವನ್ನು ನೋಡಿ ಅದನ್ನು ಪ್ರಶಂಶಿಸುತ್ತಿದ್ದ ಕಲಾಕಾರನಾದ ಫೀಡಿಯಸನೂ ಕೂಡ ಸೋಕ್ರೆಟೀಸನ ಸತ್ಯಜೀವನದ ಸೌಂದರ್ಯವನ್ನು ಹೊಗಳಬೇಕಾಯಿತು.

ಸತ್ಯ ಮತ್ತು ಅಸತ್ಯಗಳು ಆಗಾಗ್ಗೆ ಜೊತೆಯಲ್ಲಿರುತ್ತವೆ. ಒಳ್ಳೇದು ಮತ್ತು ಕೆಟ್ಟದ್ದು ಕೂಡ ಹಾಗೆಯೇ. ಕಲಾಕಾರನಲ್ಲಿಯೂ ಕೂಡ ನೈಜವಾದ ಸತ್ಯ ಮತ್ತು ನಿಜವಲ್ಲದ ತಪ್ಪು ದೃಷ್ಟಿಗಳು ಇರುವದು ಅಪರೂಪವಲ್ಲ. ನೈಜವಾದ ಸತ್ಯದಿಂದ ಪ್ರೇರಿತವಾದ ಕಲಾಕೃತಿಯು ಪೂರ್ಣ ಸುಂದರವಾಗಿರುವದು. ಜೀವನದಲ್ಲಿ ಈ ದೃಷ್ಟಿ ಇಲ್ಲದಿದ್ದರೆ ಕಲೆಯಲ್ಲಿಯೂ ಅದಿರಲಾರದು.

ಸಂಧ್ಯಾ ಸೂರ್ಯ ಇಲ್ಲವೇ ನಕ್ಷತ್ರಗಳ ಮಧ್ಯೆ ರಾತ್ರಿ ರಂಜಿಸುವ ಮಧು ಚಂದ್ರ ಈ ಸೌಂದರ್ಯಗಳು ನೈಜವಾದುವು. ಅವು ತಮ್ಮ ಹಿನ್ನೆಲೆಯಲ್ಲಿ ತಮ್ಮ ಅಸ್ತಿತ್ವಕ್ಕೆ ಕಾರಣನಾದ ಆ ಜಗನ್ನಿಯಾಮಕನನ್ನು ಆಲೋಚಿಸುವಂತೆ ಮಾಡುತ್ತವೆ. ಸೃಷ್ಟಿಯ ಕೇಂದ್ರವಾದ ಸತ್ಯದ ದೃಷ್ಟಿಯಿಂದಲ್ಲದೆ ಅವು ಹೇಗೆ ಸೌಂದರ್ಯ ಯುಕ್ತವಾದವುಗಳು? ಸೂರ್ಯಾಸ್ತಮಾನದ ಆಶ್ಚರ್ಯವನ್ನು, ಚಂದ್ರನ ಸೌಂದರ್ಯವನ್ನೂ ನಾನು ಮಗ್ನನಾಗಿ ನೋಡಿದಾಗ ನನ್ನ ಆತ್ಮವು ಸೃಷ್ಟಿಕರ್ತನ ಆರಾಧನೆಯಲ್ಲಿ ವಿಕಾಸಗೊಳ್ಳುವದು. ಈ ಎಲ್ಲಾ ರಚನೆಗಳಲ್ಲಿ ಆತನನ್ನು, ಆತನ ಕರುಣೆಯನ್ನು ನೋಡಲು ನಾನು ಯತ್ನಿಸುವೆನು. ಆತನನ್ನು ಯೋಚಿಸಲು ಸಹಾಯಕವಾಗದಿದ್ದರೆ ಸೂರ್ಯಾಸ್ತಮಾನ ಮತ್ತು ಸೂರ್ಯೋದಯಗಳೂ ಕೂಡ ಕೇವಲ ಆತಂಕಗಳೇ. ಆತ್ಮದ ಸಾಧನೆಗೆ ಇಲ್ಲವೇ ವಿಕಾಸಕ್ಕೆ ತೊಂದರೆಯಾದ ಯಾವದೇ ವಿಚಾರವು ನಶ್ವರ, ಎಲ್ಲವೂ ಎಡರು. ಮುಕ್ತಿಯ ಮಾರ್ಗದಲ್ಲಿ ಕೆಲವು ವೇಳೆ ಶರೀರವೂ ಎಡರಾದಂತೆ ಇವೂ ಎಡರುಗಳೆ.

ಪ್ರಥಮವಾಗಿ ಅಪೇಕ್ಷಿಸಬೇಕಾದುದು ಸತ್ಯ. ನಂತರ ಸೌಂದರ್ಯ ಮತ್ತು ಸದ್ಗುಣಗಳು ಅದಕ್ಕೆ ಜೋಡಿಸಲ್ಪಡುವವು. ಕ್ರಿಸ್ತನು ಬೋಧಿಸಿದುದಾದರೂ ಇದೇ ಆಗಿದೆ. ನನ್ನ ಮನಸ್ಸಿಗೆ ಏಸುಕ್ರಿಸ್ತನು ಮಹಾಕಲಾವಿದ. ಏಕೆಂದರೆ ಆತನು ಸತ್ಯವನ್ನು ನೋಡಿದ್ದಲ್ಲದೆ ಸತ್ಯವನ್ನೇ ನುಡಿದನು. ಅದರಂತೆಯೇ ಮಹಮ್ಮದ್ ಪೈಗಂಬರರೂ. ಅರಬಿ ಸಾಹಿತ್ಯದಲ್ಲಿ ವಿದ್ವಾಂಸರು ಹೇಳುವಂತೆ ಕೊರಾನೇ ಅತೀ ಪೂರ್ಣವಾದ ರಚನೆ. ಅದೇಕೆಂದರೆ ಆ ಇಬ್ಬರೂ ಪ್ರಥಮವಾಗಿ ಸತ್ಯಕ್ಕಾಗಿ ಪ್ರಯತ್ನಿಸಿದರೂ ಅವರಿಗೆ ನೈಸರ್ಗಿಕವಾಗಿ ವಾಣಿಯ ಪೂರ್ಣತ್ವವು ಲಭಿಸಿತು. ಆದರೂ ಏಸುಕ್ರಿಸ್ತನಾಗಲೀ, ಮಹಮ್ಮದನಾಗಲೀ ಕಲೆಯ ವಿಚಾರ ಒಂದಕ್ಷರ ಬರೆದವರಲ್ಲ. ಈ ಸತ್ಯ, ಸೌಂದರ್ಯಗಳಿಗಾಗಿಯೇ ನಾನು ಆಶಿಸುತ್ತೇನೆ. ಅದಕ್ಕಾಗಿಯೇ ಸಾಯಬಲ್ಲೆನು.

ಇಲ್ಲಿಯೂ ಕೂಡ ಬೇರೆಡೆಯಲ್ಲಂತೆ ಮಿಲಿಯಾಂತರ ಜನತೆಯ ದೃಷ್ಟಿಯಿಂದಲೇ ಪರ್ಯಾಲೋಚಿಸುವೆನು. ಮಿಲಿಯಾಂತರ ಜನರಿಗೆ ಸೌಂದರ್ಯದಲ್ಲಿ ಸತ್ಯವನ್ನು ನೋಡಬಲ್ಲ ಆ ತರಬೇತನ್ನು ನಾವು ಕೊಡಲಾರೆವು. ಅವರಿಗೆ ಸತ್ಯವನ್ನು ಪ್ರಥಮವಾಗಿ ತೋರಿಸಿರಿ. ಅವರು ಸೌಂದರ್ಯವನ್ನು ನಂತರ ಕಂಡುಕೊಳ್ಳುವರು. ಮಿಲಿಯಾಂತರ ಹಸಿವಿನಿಂದ ತೊಳಲುವ ಜನರಿಗೆ ಯಾವುದು ಉಪಯೋಗವೋ ಅದೇ ನನ್ನ ದೃಷ್ಟಿಯಲ್ಲಿ ಸುಂದರವಾದುದು. ಇಂದು ನಾವು ಜೀವನದ ಪ್ರಾಮುಖ್ಯ ವಿಚಾರದ ಬಗ್ಗೆ ಆಲೋಚಿಸುವ. ಜೀವನದ ಶೃಂಗಾರ, ಸೌಂದರ್ಯ, ಸೊಗಸುಗಳು ತಮ್ಮಿಂದ ತಾವೇ ಬರುವವು.

ನಾನು ಸಂಗೀತವನ್ನು ಪ್ರೀತಿಸುತ್ತೇನೆ. ಇತರ ಕಲೆಗಳು ನನಗೆ ಪ್ರಿಯವಾದುವು. ಆದರೆ ಸಾಮಾನ್ಯವಾಗಿ ಅವುಗಳಿಗೆ ಕೊಡಲ್ಪಡುವಂತೆ ನಾನು ಹೆಚ್ಚಿನ ಬೆಲೆ ಕೊಡುವದಿಲ್ಲ. ಅವುಗಳನ್ನು ತಿಳಿದುಕೊಳ್ಳಲು ವಿಶೇಷ ಪರಿಜ್ಞಾನ ಬೇಕಿರುವದರಿಂದ ಅವುಗಳ ಬೆಲೆಯನ್ನು ನಾನು ಗಮನಿಸೆನು. ಬಡಜನರಿಗೆ ಈ ಪರಿಜ್ಞಾನ ಎಲ್ಲಿಂದ? ನಕ್ಷತ್ರ ತುಂಬಿದ ಆಕಾಶವನ್ನು ನೋಡಿದಾಗ ಮೇರೆ ಇಲ್ಲದ ಸೌಂದರ್ಯವು ನನ್ನ ಕಣ್ಣಿಗೆ ಕಟ್ಟುತ್ತದೆ. ಅದು ನನಗೆ ಎಲ್ಲಾ ಮಾನವ ಕೃತ ಕಲೆಗಿಂಥಾ ಮಿಗಿಲು. ಕಲಾಪೂರ್ಣವೆನ್ನುವ ಯಾವದೇ ಕೆಲಸದ ಮಹತ್ವವನ್ನು ನಾನು ಕಡೆಗಣಿಸುವೆನೆಂದಲ್ಲ. ಆದರೆ ಅವುಗಳ ಅನೈಜಕತೆಯು ನನಗೆ ವಿಪರೀತವಾಗಿ ತೋರುತ್ತದೆ. ಜೀವನವು ಎಲ್ಲಾ ಕಲೆಗಳಿಗಿಂಥಾ ಮಿಗಿಲು. ಒಂದಡಿ ಮುಂದೆ ಹಾಕಿ ಹೇಳುವದಾದರೆ ಯಾರ ಜೀವನವು ಪೂರ್ಣತೆಯ ಹತ್ತಿರ ಸಾಗಿದೆಯೋ ಅವರೇ ಮಹಾಕಲಾವಿದರು. ಏಕೆಂದರೆ ಉದಾತ್ತ ಜೀವನದ ತಳಹದಿಯೂ, ಚೌಕಟ್ಟಿಲ್ಲದ್ದೂ ಎಂಥಾ ಕಲೆಯಾಗಬಲ್ಲುದು?

ಜೀವರಹಿತ, ಶಕ್ತಿಪ್ರೇರಿತ ಯಂತ್ರದಿಂದ ಸಾಮೂಹಿಕವಾಗಿ ತಯಾರಿಸಲ್ಪಡುವ ವಸ್ತುಗಳಲ್ಲ; ಬದಲು ಮಾನವನ ಚಿಕ್ಕ ಹಾಗೂ ಜೀವಂತ ಹಸ್ತಗಳಿಂದ ರೂಪುಗೊಂಡ ವಸ್ತುವೇ ನಿಜವಾದ ಕಲೆ ಎನಿಸುವದು.

ನಿಜವಾದ ಸೌಂದರ್ಯವು ಹೃದಯದ ಪವಿತ್ರತೆಯಲ್ಲಿದೆ.

ನೋಟೀಸು.

ಕೊಡಗು ಕ್ಲಾತ್ ಮರ್ಚೆಂಟ್ಸ್ ಕಂಪೆನಿಯಿಂದ ಪೊನ್ನಂಪೇಟೆಯ ಶ್ರೀ ಎ. ಎಂ. ಶುಕ್ರಿ ಅಂಡ್ ಬ್ರದರ್ ಇವರಿಗೆ ಕೊಡಲ್ಪಟ್ಟ ೧೦೪೫ರಿಂದ ೧೦೫೭ರ ವರೆಗಿನ ೧೩ ಶೇರುಗಳ ನಂಬರು ೧೭೯ನೇ ಶೇರು ಸರ್ಟಿಫಿಕೇಟು ಕಾಣೆಯಾಗಿದೆ. ಇದನ್ನು ಪಡೆದಿರುವವರು ಈ ತಿಂಗಳ ಆಖ್ಯದೊಳಗೆ ಕೆಳಗಿನ ಪತ್ತೆಗೆ ಹಾಜರ್ ಮಾಡುವದು. ಅನಂತರ ಬಂದ ಯಾವ ವಿಚಾರಕ್ಕೂ ಗಮನ ಕೊಡಲಾಗುವದಿಲ್ಲವೆಂದು ಈ ಮೂಲಕ ತಿಳಿಸಿದೆ.

ಲಿಕ್ವಿಡೇಟರ್,
ಕೊಡಗು ಕ್ಲಾತ್ ಮರ್ಚೆಂಟ್ಸ್ ಕಂಪೆನಿ,
4-2 ಮಡಿಕೇರಿ.

ಭದ್ರತೆ! 17 ವರ್ಷಗಳ ಪರಿಪಕ್ವ ಅನುಭವಶೀಲತೆ!! ಅನುಕೂಲತೆ!!

ದಿ ವಿಜಯ ಬೇಂಕ್ ಲಿಮಿಟೆಡ್

ಮುಖ್ಯ ಕಚೇರಿ,
ಕದ್ರಿ ರೋಡ್, ಮಂಗಳೂರು.

ನಿರಖು ಠೇವಣಾತಿ ಬಡ್ಡಿದರ:-

3	ತಿಂಗಳು	3%
6	,,	3½%
12	,,	3¾%
24	,,	4 %

ರೂಪಾಯಿ ೧೫,೦೦೦ಕ್ಕೆ ಮೀರಿದ ಒಂದೇ ಡಿಪಾಜಿಟ್ಟಿಗೆ ಮೇಲಿನ ದರಕ್ಕಿಂಥಾ ¼% ಹೆಚ್ಚಿಗೆ.

ಶಾಖೆಗಳು:- ಸಿಟಿ ಮಂಗಳೂರು, ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಕಾಸರಗೋಡು, ಕಾಞಂಗಾಡ್, ಪುತ್ತೂರು, ಮಡಿಕೇರಿ ಮತ್ತು ಮುಂಬಾಯಿ.

ಒಟ್ಟು ವಹಿವಾಟು ಬಂಡವಾಳ ರೂ. ೪೦ ಲಕ್ಷಕ್ಕೂ ಮೀರಿದೆ.

ಎಲ್ಲಾ ವಿಧದ ಆಧುನಿಕ ಬೇಂಕಿಂಗ್ ವಹಿವಾಟುಗಳು ದಕ್ಷತೆಯಿಂದ ನಡೆಸಲ್ಪಡುವವು.

ಹೆಚ್ಚಿನ ವಿವರಗಳಿಗೆ ಬರೆಯಿರಿ:- ಏಜಂಟ್,
12-2 ಮಡಿಕೇರಿ ಶಾಖೆ, ಮಡಿಕೇರಿ.

ಈ ವಾರದ ಕಥೆ.

ಅಮರ ಜ್ಯೋತಿ.

ಲೇ:- ಶ್ರೀಮತಿ ಕಲ್ಯಾಣಿ ದೇವಿ

ಲಕ್ಷ್ಮಿಯು ಕಾತುರದ ದೃಷ್ಟಿಯಿಂದ ಪತ್ರವನ್ನು ಓದುತ್ತಿದ್ದಳು. ಆಕೆಯ ಕೈಗಳು ನಡುಗುತ್ತಿದ್ದುವು. ಆಕೆಯು ಗಡಿಯಾರದತ್ತ ನೋಡಿದಳು. ಯಾರಗೊಡವೆಯೂ ಇಲ್ಲದೆ ಅದು ತನ್ನ ಕೆಲಸದಲ್ಲಿ ತನ್ಮಯವಾಗಿತ್ತು. ಐದು ಗಂಟೆಗೆ ೩೦ ನಿಮಿಷವಿತ್ತು. 'ಅಲ್ಲಿಗೆ ತಲಪಲಾಗುವುದೇ? ಹೇಗಾದರೂ ಪ್ರಯತ್ನ ಮಾಡುವುದು ಸಾಧ್ಯ.' ಆಕೆಯು ತನ್ನ ಕೈಚೀಲವನ್ನು ತೆಗೆದುಕೊಂಡು ಮಿಂಚಿನ ವೇಗದಿಂದ ಹೊರಗೆ ಬಂದಳು. ಅದೃಷ್ಟವಶಾತ್ ಕಾರೊಂದು ಹೊರಗೆ ನಿಂತಿತ್ತು. ಅದರ ಡ್ರೈವರನು ಸಿಗರೇಟೊಂದನ್ನು ಸೇದುತ್ತಾ ಪತ್ರಿಕೆಯೊಂದನ್ನು ಮಗುಚುತ್ತಿದ್ದನು. ಲಕ್ಷ್ಮಿಯು ಹತ್ತಿರ ಬಂದು 'ನನ್ನನ್ನು ಗುಲಾಬ್ ಬಾಗಿಗೆ ತಲಪಿಸಬಲ್ಲಿರಾ? ಹತ್ತು ನಿಮಿಷದಲ್ಲಿ ನೀವು ಮಾಡಬಲ್ಲಿರಾದರೆ ನಿಮಗೆ ಹತ್ತು ರೂಪಾಯಿಗಳನ್ನು ಕೊಡುವೆನು.' ಎಂದಳು.

ಡ್ರೈವರನು ಸಿಗರೇಟನ್ನು ಬೀಸಾಡಿ, ಪತ್ರಿಕೆಯನ್ನು ಮಡಚಿ ಹೇಳಿದನು 'ಗುಲಾಬ್ ಬಾಗಿಗೆ ಎಳೆಂಟು ಮೈಲಿದೆ. ಅದೂ ಬಳಸಿಕೊಂಡು ಹೋಗಬೇಕು. ಮುಖ್ಯ ಬೀದಿಯಿಂದ ಹೋಗಬೇಕಿರುವುದರಿಂದ ನಿಶ್ಚಿತವೇಗದಿಂದಲೇ ಹೋಗಬೇಕು. ಹೇಗೂ ಅರ್ಧ ಗಂಟೆಯಾಗಬಹುದು'

'ಅಯ್ಯೋ, ಇದು ಜೀವನ ಮರಣದ ಪ್ರಶ್ನೆ. ನಿಮ್ಮ ಸಹೋದರಿಯೆಂದು ತಿಳಿದು ಸಹಾಯ ಮಾಡಿರಿ' ಆಕೆಯ ಕಣ್ಣಿನಲ್ಲಿ ನೀರಿರಲಿಲ್ಲವಾದರೂ ವಾಣಿಯಲ್ಲಿ ರೋಧನದ ಧ್ವನಿಯಿತ್ತು. ಡ್ರೈವರನು ಆಕೆಯನ್ನೊಮ್ಮೆ ದಿಟ್ಟಿಸಿ ನೋಡಿದನು. ತನ್ನ ಪ್ರಿಯನನ್ನು ಕಾಣಲು ಹೊರಟ ಯುವತಿ ಈಕೆಯಲ್ಲ, ಈಕೆಗೆ ಯಾವುದೋ ತೊಂದರೆ ಇದೆಯೆಂದು ಭಾವಿಸಿದನು. 'ಆಗಲಿ ನನ್ನ ಕೈಲಾದ ಪ್ರಯತ್ನ ಮಾಡುವೆನು.' ಎಂದನು. ಕಾರು ಮಿಂಚಿನವೇಗದಿಂದ ಸಂದರಿಯಿತು.

ಲಕ್ಷ್ಮಿಯು ಹಿಂದಿನ ಸೀಟಿನಲ್ಲಿ ಕುಳಿತಿದ್ದಳು. ಆಗಾಗ್ಗೆ ತನ್ನ ಕೈಗಡಿಯಾರವನ್ನು ನೋಡುತ್ತಿದ್ದಳು. ಸಮಯವು ರೆಕ್ಕೆ ಕಟ್ಟಿ ಹಾರುತ್ತಿರುವಂತೆ ಆಕೆಗೆ ತೋರುತಿತ್ತು. ೪-೪೦, ೪-೪೫, ೪-೫೦ ಆಯಿತು. ಕಾರು ಬಹು ಮಂದಗತಿಯಿಂದ ಹೋಗುತ್ತಿರುವಂತೆ ತೋರುತಿತ್ತು. ೪-೫೫ಕ್ಕೆ ಸುಂದರ ಹೂತೋಟದ ಬಳಿ ಕಾರು ನಿಂತಿತು. ಒಂದೆಡೆಯಲ್ಲಿ ಜನರು ಕಿಕ್ಕಿರಿದು ನೆರೆದಿದ್ದರು. ಲಕ್ಷ್ಮಿಯು ಡ್ರೈವರನಿಗೆ ಹತ್ತುರೂಪಾಯಿ ಕೊಟ್ಟು ಜನ ಸಂದಣಿಯಲ್ಲಿ ನುಗ್ಗಿದಳು. ಜನರು ಕಿಕ್ಕಿರಿದು ನೆರೆದಿದ್ದು ಮುಂದೆ ಸಾಗುವುದು ಕಠಿಣವಾಗಿದ್ದರೂ ಆಕೆ ನುಗ್ಗಿ ಸಾಗುತ್ತಿದ್ದಳು. ವೇದಿಕೆಯ ಮೇಲೆ ಭಾಷಣಕಾರರೊಬ್ಬರು ಮಾತಾಡುತ್ತಿದ್ದರು. ಜನತೆಯು ಕಿವಿಗೊಟ್ಟು ಕೇಳುತಿತ್ತು. ಆದರೆ ಲಕ್ಷ್ಮಿಯ ಗಮನ ಆ ಕಡೆ ಇರಲಿಲ್ಲ. ಜನರ ಗುಂಪಿನಲ್ಲಿ ಆಕೆಯು ಯಾರನ್ನೋ ಹುಡುಕುತ್ತಿದ್ದಳು. ಐದು ಗಂಟೆಗೆ ಇನ್ನೂ ಕೆಲವೇ ಸೆಕೆಂಡುಗಳಿದ್ದುವು. ಆಕೆಯ ಬಾಯಲ್ಲಿ ನೀರೊಣಗಿತ್ತು. ಜನರ ಗುಂಪಿನಲ್ಲಿ ಕಡೆಗೊಮ್ಮೆ ಶ್ರೀನಿವಾಸನನ್ನು ಕಂಡಳು. ಆಕೆಯು ನುಗ್ಗುತ್ತಾ ಅತ್ತ ಧಾವಿಸಿದಳು. ಶ್ರೀನಿವಾಸನು ಜೇಬಿನಿಂದ ಕಪ್ಪಗಿನ ವಸ್ತು ಒಂದನ್ನು ತೆಗೆದನು. ಲಕ್ಷ್ಮಿಯು ಇದನ್ನು ಕಂಡು ಒಮ್ಮೆಗೆ ಕಿರುಚಿದಳು. ಅದರೊಡನೆ ಶ್ರೀನಿವಾಸನ ಪಿಸ್ತೂಲಿನಿಂದ ಗುಂಡು ಹಾರಿತು. ಭಾಷಣ ಮಾಡುತ್ತಿದ್ದ ವ್ಯಕ್ತಿಯು ವೇದಿಕೆಯ ಮೇಲೆ ಕುಸಿದು ಬಿದ್ದು ಮೃತನಾದನು. ಜನರಲ್ಲಿ ಗಡಿಬಿಡಿಯಾಯಿತು. ಯಾರೋ ಶ್ರೀನಿವಾಸನನ್ನು ಹಿಡಿದು ನಿಲ್ಲಿಸಿದ್ದರು. ಪೋಲೀಸು ವ್ಯಾನ್ ಬಂತು. ಲಕ್ಷ್ಮಿಯು ಚೇತರಿಸಿಕೊಂಡು ಶ್ರೀನಿವಾಸನತ್ತ ಓಡಿದಳು. ಆದರೆ ವ್ಯಾನು ಕಣ್ಮರೆಯಾಯಿತು.

* * *

ಲಕ್ಷ್ಮಿ ಮನೆಗೆ ಬಂದಾಗ ಕತ್ತಲಾಗಿತ್ತು. ವಿದ್ಯುಚ್ಛಕ್ತಿ ದೀಪವನ್ನು ಉರಿಸದೆ ಹಾಗೆಯೇ ಆರಾಮ ಕುರ್ಚಿಯಲ್ಲಿ ಕುಸಿದಳು. ಆಕೆಯ ಮನಸಿನ ಕನ್ನಡಿಯಲ್ಲಿ ತನ್ನ ಗತ ಜೀವನದ ಚಿತ್ರಗಳು ಒಂದೊಂದಾಗಿ ಬರತೊಡಗಿದವು. ತಾನು ವ್ಯಾಸಂಗ ಮಾಡುತ್ತಿದ್ದ ಕಾಲೇಜು. ರಾಷ್ಟ್ರೀಯವಾದಿಯಾದ ಶ್ರೀನಿವಾಸ. ತಮ್ಮಿಬ್ಬರಲ್ಲಿ ಸ್ನೇಹ ಬೆಳೆದು ಅವನನ್ನು ಮದುವೆಯಾದುದು!

ಶ್ರೀನಿವಾಸನು ಆದರ್ಶ ಪತಿಯಾಗಿದ್ದನು. ಯಾವುದೇ ವಿಚಾರದಲ್ಲಿ ಲಕ್ಷ್ಮಿಗೆ ನೋವು ಆಗುವಂತೆ ವರ್ತಿಸುತ್ತಿರಲಿಲ್ಲ. ಲಕ್ಷ್ಮಿಯು ಮತ್ತು ಶ್ರೀನಿವಾಸರ ಅಭಿಪ್ರಾಯದಲ್ಲಿ ಸ್ವಲ್ಪ ಅಂತರವಿತ್ತು. ಮದುವೆಯ ಹೊಂಗನಸಿನಲ್ಲಿ ಈ ಅಂತರವು ಹೆತ್ತಿತ ಕೂಡಿತ್ತು. ಮದುವೆಯಾಗಿ ಒಂದು ವರ್ಷವಾಗಿತ್ತು. ಶ್ರೀನಿವಾಸನ ಹಿಂದಿನ ಕ್ರಾಂತಿಕಾರಕ ಅಭಿಪ್ರಾಯಗಳು ಆಗಾಗ್ಗೆ ತಲೆ ಎತ್ತುತ್ತಿದ್ದವು. ಲಕ್ಷ್ಮಿಯು ಎಷ್ಟೇ ಪ್ರತಿಭಟಿಸಿದರೂ ಅವರ ಚರ್ಚೆಯು ಶ್ರೀನಿವಾಸನ, 'ನೋಡು ಲಕ್ಷ್ಮಿ, ಯಾವ ನಿನ್ನನ್ನು ನನ್ನ ವಿದೀರ್ಣ ಅಸ್ಥಿಯ ಒಂದು ಅಂಶವೆಂದು ತಿಳಿದೆನೋ ನೀನೂ ಕೂಡ ನನ್ನನ್ನು ಅರಿಯಲಾರೆ' ಎಂಬ ಮಾತಿನಿಂದ ಅಂತ್ಯವಾಗುತಿತ್ತು.

ಪತಿ ಶ್ರೀನಿವಾಸನನ್ನು ತಿಳಿದ, ಆತನ ರಾಜಕೀಯ ಭಾವನೆಯನ್ನು ಅಳವಡಿಸಿಕೊಳ್ಳಲು ಲಕ್ಷ್ಮಿ ಬಹು ಪ್ರಯತ್ನಪಟ್ಟಳು. ಶ್ರೀನಿವಾಸನಿಗೆ ಸರಕಾರದ ಮೇಲೆ ವಿಶ್ವಾಸವಿರಲಿಲ್ಲ, ರಾಜಕೀಯ ಮುಂದಾಳುಗಳನೇಕರ ಮೇಲೆ ನಂಬಿಕೆ ಇರಲಿಲ್ಲ. ಸರಕಾರವೂ, ಮುಂದಾಳುಗಳೂ ಮಾಡುವುದೆಲ್ಲಾ ತಪ್ಪೆಂದು ಆತನಿಗೆ ತೋರುತ್ತಿತ್ತು. ಒಂದು ದಿನ ತಾನು ಕ್ರಾಂತಿಕಾರರ ಪಕ್ಷವನ್ನು ಸೇರಿರುವುದಾಗಿ ಆತನು ಲಕ್ಷ್ಮಿಗೆ ಹೇಳಿದನು. ಲಕ್ಷ್ಮಿಯು ಅದರಲ್ಲಿರಬಾರದೆಂದೂ, ತನಗಾಗಿ ಹೊರಬರಬೇಕೆಂದೂ ಕಾಡಿ ಬೇಡಿ ಅತ್ತಳು. ಶ್ರೀನಿವಾಸನಿಗೆ ಲಕ್ಷ್ಮಿಯ ಮೇಲೆ ಪ್ರೀತಿ ಕಡಿಮೆ ಇರಲಿಲ್ಲ. ತನ್ನ ಪತ್ನಿಯ ಪ್ರೇಮ ಒಂದೆಡೆ, ರಾಷ್ಟ್ರದ ಹಿತ ಚಿಂತನೆ ಇನ್ನೊಂದೆಡೆ. ಇವುಗಳೊಳಗೆ ಭೀಕರ ಘರ್ಷಣೆ ಆತನ ಹೃದಯದಲ್ಲಿ ನಡೆಯುತಿತ್ತು. ತಾನು ಕ್ರಾಂತಿಕಾರರೊಳ್ಳೊಬ್ಬನೆಂದರೆ ಲಕ್ಷ್ಮಿಯು ಅವರ ಪ್ರೇಮವನ್ನು ನಾಶಮಾಡುವನೆಂಬುದು ಆತನಿಗ ಗೊತ್ತಿತ್ತು. ಈ ವಿಚಾರ ತುಮುಲದಲ್ಲಿ ರಾಷ್ಟ್ರದ ಕರ್ತವ್ಯವೇ ಪತ್ನಿಯ ಪ್ರೇಮಕ್ಕಿಂತಾ ಮಿಗಿಲೆಂದು ಆತನು ನಿರ್ಣಯಿಸಿದನು. ಲಕ್ಷ್ಮಿಗೆ ತನ್ನ ಮರುದಿನದ ಕೆಲಸದ ವಿಚಾರ ಒಂದು ಪತ್ರವನ್ನು ಬರೆದಿಟ್ಟು ಮನೆಯಿಂದ ಅದೃಶ್ಯನಾದನು!

* * *

ಲಕ್ಷ್ಮಿಯು ಪೋಲೀಸ್ ಸ್ಟೇಷನಿನಲ್ಲಿ ಬಂಧಿತನಾಗಿದ್ದ ಪತಿಯ ದರ್ಶನಕ್ಕೆಂದು ಮರುದಿನ ಬಸ್ಸಿನಲ್ಲಿ ಹೊರಟಳು. ಬಸ್ಸಿನ ಪ್ರಯಾಣಿಕರು ಕಳೆದ ಸಾಯಂಕಾಲದ ದುರಂತ ಘಟನೆಯನ್ನು ಪತ್ರಿಕೆಗಳಲ್ಲಿ ಓದಿ ತಮ್ಮ ತರ್ಕ ಟೀಕೆ ಮಾಡುತ್ತಿದ್ದರು. ''ಶ್ರೀನಿವಾಸನು ಪ್ರಾಣಿಯಂಥವನು'' ಎಂದು ಒಬ್ಬನು ಹೇಳಿದರೆ ''ಆತನು ಮನುಷ್ಯನೇ? ನರಘಾತಕ. ಕೊಲೆ ನಡೆಸಿದ ಅವನಿಗೆ ತಕ್ಕ ಶಿಕ್ಷೆ ಫಾಶಿ'' ಎಂದು ಇನ್ನೊಬ್ಬನು ಹೇಳುತ್ತಿದ್ದನು. ಇವರ ಮಾತುಗಳನ್ನು ಕೇಳುತ್ತಾ ಲಕ್ಷ್ಮಿಯ ರಕ್ತ ಬಿಸಿಯಾಗುತಿತ್ತು. ಶ್ರೀನಿವಾಸನ ಗುಣಗಳನ್ನು ಇವರು ಏನು ಬಲ್ಲರು? ಕಾಗದದ ಮೇಲಿನ ನಾಲ್ಕಕ್ಷರಗಳ ಸಹಾಯದಿಂದ ಆತನನ್ನು ''ಪಾಪಿ'' ಎಂದು ಅಳೆದು ಹಾಕಿರುವರು. ಶ್ರೀನಿವಾಸ ಹೇಡಿಯೇ? ಪಾಪಿಯೇ? ಎಂಥ ಸದ್ಗುಣಿ ಎಂಥಾ ಧೈರ್ಯಶಾಲಿ? ಇವರಿಗೆಲ್ಲಿ ತಿಳಿದೀತು? ಶ್ರೀನಿವಾಸನು ಹೇಳುತ್ತಿದ್ದುದು ಸಹಜ. ಆತನನ್ನು ಯಾರೂ ಅರಿಯರು! ನಾನು ಆತನನ್ನು ಅರಿಯಲು ಯತ್ನಿಸಿದ್ದೇನೆ. ಆತನ ಪ್ರೀತಿಯ ಪತ್ನಿಮಾತ್ರವಲ್ಲ, ಆತನ ಜೀವನದ ಸ್ನೇಹಿತೆಯಾಗಿಯೂ ಇದ್ದೆನು. ನನ್ನ ಪ್ರೇಮ ಮತ್ತು ಸ್ನೇಹಗಳಿಂದ ಆತನನ್ನು ಒಲಿಸಬಹುದೆಂದು ಭಾವಿಸಿದ್ದೆನು. ಆದರೆ ಆತನಿಗೆ ರಾಷ್ಟ್ರದ ಕರ್ತವ್ಯವು ಜೀವಕ್ಕಿಂತ ಹಿರಿದು.

ಬಸ್ಸು ನಿಂತಿತು. ಆಕೆ ಜೈಲಿನ ಕಡೆಗೆ ಹೋದಳು. ಪ್ರಯಾಸದಿಂದ ಶ್ರೀನಿವಾಸನನ್ನು ನೋಡಲು ಅನುಮತಿ ದೊರೆಯಿತು.

ಕತ್ತಲ ಕೋಣೆ. ಶ್ರೀನಿವಾಸನು ಶಾಂತ ಮುಖಮುದ್ರೆಯಿಂದ ಕುಳಿತಿದ್ದನು. ಲಕ್ಷ್ಮಿಯನ್ನು ಕಂಡೊಡನೆಯೇ ಮುಗುಳುನಗೆ ನಕ್ಕು ಎದ್ದು ನಾಲ್ಕಡಿ ಮುಂದೆ ಬಂದು ಆಕೆಯನ್ನು ಸ್ವಾಗತಿಸಿದನು.

'ನನ್ನೊಲವಿನ ರಾಣಿ, ನಿನಗೆ ಅಗಾಧ ನೋವುಂಟುಮಾಡಿದ್ದಕ್ಕೆ ನಾನು ವ್ಯಸನಪಡುತ್ತೇನೆ' ಎಂದು ಶ್ರೀನಿವಾಸನ ಹೃದಯ ನುಡಿಯಿತು.

'ಆದರೆ ಇನ್ನೊಬ್ಬ ಮನುಷ್ಯನ ಜೀವ ಹರಣ ಮಾಡಿದುದಕ್ಕೆ ವ್ಯಸನ ಪಡುವುದಿಲ್ಲವೇ?' ಲಕ್ಷ್ಮಿ ಕೇಳಿದಳು.

'ಭೌತಿಕ ದೃಷ್ಟಿಯಿಂದ ವ್ಯಸನವಿದೆ. ಆದರೆ ಆತನು ಹೋಗಲೇಬೇಕಿತ್ತು. ಆತನು ನನ್ನ ದೇಶದ ಪ್ರಗತಿಗೆ ಆತಂಕನಾಗಿದ್ದನು.' ಶ್ರೀನಿವಾಸನೆಂದ.

'ಇದು ನಿನ್ನ ಕಲ್ಪನೆ, ಆತನೂ ಕೂಡ ಆತನ ಮಾದರಿಯಲ್ಲಿ ಇದೇ ದೇಶದ ಸೇವೆ ಮಾಡುತ್ತಿದ್ದನಲ್ಲವೇ?'

'ಆಗಿರಬಹುದು. ಆದರೆ ಆತನದು ಹಳೆ ಸಂಪ್ರದಾಯ. ಈಗಿನ ಸಮಯಕ್ಕೆ ಸರಿಯಾದ ವರ್ತನೆ ಆತನದಾಗಿರಲಿಲ್ಲ.'

'ಪ್ರಾಣೇಶ, ಅದೂ ಕೂಡ ನಿನ್ನ ಅಭಿಪ್ರಾಯ ಮಾತ್ರ. ನಿನ್ನನ್ನು ಆಗಲೂ ನನಗೆ ತಿಳಿಯಲಾಗಲಿಲ್ಲ. ಈಗಲೂ ತಿಳಿಯಲಾರೆ. ಆದರೆ ನಾನು ನಿನ್ನ ಪತ್ನಿಯಾಗಿ ನಿನಗೆ ಯೋಗ್ಯ ಸಹಾಯಕಳಾಗಲಾರದಾದೆ ಇದೇ ನನ್ನ ಪರಮ ದುಃಖ' ಎಂದಳು. ಆಕೆಯ ಕಣ್ಣಿನಲ್ಲಿ ನೀರು ತೊಟ್ಟಿಕ್ಕುತಿತ್ತು.

'ನನ್ನ ಪ್ರೇಮ ನಿನ್ನದೇ ತಪ್ಪಭಿಪ್ರಾಯ. ನಿನ್ನನ್ನು ನಾನು ಪ್ರಥಮ ಭೇಟಿಯಾದಂದಿನಿಂದ ನನ್ನ ಚೇತನದ ಭಂಡಾರ ನೀನು. ಆದರೂ ನನ್ನ ಹೃದಯದ ಆಶಯವನ್ನು ನಿನ್ನ ಪ್ರೀತಿ, ತ್ಯಾಗಗಳು ಪೂರೈಸಲಾರದಾದವು. ನನ್ನೊಲವಿನ ರಾಣಿ, ನಿನ್ನಲ್ಲಿ ನಮ್ಮ ಮಗುವಿದೆ. ಆತನು ತನ್ನನ್ನು ತಾನು ತಿಳಿಯುವಂತೆ ಪೋಷಿಸು. ನನಗೆ ಏನೇ ಆದರೂ, ಜನರು ನನ್ನ ಬಗ್ಗೆ ಏನೇ ಹೇಳಿಕೊಂಡರೂ ಇದನ್ನು ಜ್ಞಾಪಕದಲ್ಲಿಡು. ನಾನು ನಿನ್ನ ಪ್ರೇಮ, ತ್ಯಾಗಗಳನ್ನು ಮರೆಯಲಾರೆನೆಂದು. ಭವಿಷ್ಯವೇ ನಿನ್ನ ಪ್ರೇಮವಿಲ್ಲದಿದ್ದರೆ ನನ್ನ ಜೀವನ ಶೂನ್ಯ ಸ್ವಪ್ನದಂತಾಗುತಿತ್ತು. ಈಗ ನನಗೆ ಆ ದಿನಗಳ ನೆನಪಿದೆ. ಆ ರಸಪೂರ್ಣ ಜೀವನ, ಆನಂದ, ತೃಪ್ತಿಗಳ ನೆನಪನ್ನು ಈ ಜೀವನದ ಆಚೆಗೂ ಕೊಂಡೊಯ್ಯುವೆನು. ಆದ್ದರಿಂದ ಧೃತಿಗೆಡದಿರು.'

* * *

ಪತಿಯ ವಿಚಾರಣೆಯನ್ನು ಕಾತುರತೆಯಿಂದ ಕಾದಿದ್ದರೂ ಪತಿಗೆ ಮರಣದಂಡನೆ ವಿಧಿಸಲ್ಪಟ್ಟಾಗ ಲಕ್ಷ್ಮಿಯು ಧೈರ್ಯಗುಂದಲಿಲ್ಲ. ಆಕೆಯ ಹೃದಯದಲ್ಲಿ, 'ಆ ರಸಪೂರ್ಣ ಜೀವನದ, ಆನಂದ, ತೃಪ್ತಿಗಳ ನೆನಪನ್ನು ಈ ಜೀವನದ ಆಚೆಗೂ ಕೊಂಡೊಯ್ಯುವೆನು. ಆದ್ದರಿಂದ ಧೃತಿಗೆಡದಿರು' ಎಂದು ಜೈಲಿನ ಕತ್ತಲು ಕೋಣೆಯಲ್ಲಿ ನುಡಿದ ವಾಕ್ಯಗಳು ನುಡಿಯುತ್ತಿದ್ದವು. ಹೌದು, ಆಕೆಗೂ ಕೂಡ ಆ ಸವಿನೆನಪುಗಳೇ, ಅವೇ ಆಕೆಯ ಅಮೂಲ್ಯ ಭಂಡಾರ. ಅವರದೇ ಪ್ರೀತಿಯನ್ನು, ಪ್ರೇಮವನ್ನು ಸಾವೂ ಕೂಡ ಬೇರ್ಪಡಿಸಲಾರದು. ಆಕೆಯು ಒಬ್ಬಳೇ ಇಲ್ಲ. ಆಕೆ ಗರ್ಭಿಣಿ. ಆಕೆಯ ಉದರದಲ್ಲಿರುವ ಶಿಶುವು ಪತಿಯು ಒಪ್ಪಿಸಿ ಹೋದ ಅಮೂಲ್ಯ ನಿಧಿ. ಅದಕ್ಕಾಗಿ ಪತಿಧ್ಯಾನದಲ್ಲಿ ಆಕೆ ಜೀವಿಸಬೇಕು. ಮರಣ ದಂಡನೆಗೆ ಗುರಿಯಾಗಿ ಕಟಕಟೆಯಿಂದ ಕೆಳಗಿಳಿದ ಶ್ರೀನಿವಾಸನನ್ನು ನೋಡಿ ಲಕ್ಷ್ಮಿಯು ಮುಗುಳುನಗೆ ಬೀರಿದಳು.

* * *

ಫಾಸಿಗೆ ಕೊಡುವ ದಿನ ಸನ್ನಿಹಿತವಾಗುತಿತ್ತು. ಹಾಗೆಯೇ ಆಕೆಯ ಪ್ರಸವದ ದಿನವೂ ಹತ್ತಿರ ಬರುತ್ತಿತ್ತು. ಆ ದಿನ ಬೆಳಿಗ್ಗೆ ಐದು ಗಂಟೆಗೆ ಶ್ರೀನಿವಾಸನನ್ನು ಗಲ್ಲಿಗೇರಿಸಲಾಯಿತು. ಅದೇ ಸಮಯದಲ್ಲಿ ಲಕ್ಷ್ಮಿಯು ಗಂಡು ಶಿಶುವೊಂದನ್ನು ಹಡೆದಳು. ಆ ಮಗುವಿನ ಮುಖದಲ್ಲಿ ಅದೇ ಕಾಂತಿ, ಆ ಕಣ್ಣುಗಳಲ್ಲಿ ಅದೇ ತೇಜಸ್ಸು! ಫಾಶಿಯ ಮನೆಯಲ್ಲಿ ನಂದಿಸಲ್ಪಟ್ಟ ಆ ಜ್ಯೋತಿಯೇ ಇಲ್ಲಿ ಹೊಸ ಕುಡಿಯಿಂದ ಆವಿರ್ಭವಿಸಿತೆ? ಅಮರ ಜ್ಯೋತಿಗೆ ಸಾವೆಲ್ಲಿ?

ಕೊಡಗು

ತಾ. ೨೪-೬-೧೯೪೯ನೇ ಶುಕ್ರವಾರ

ಕಾಂಗ್ರೆಸು.

ಬ್ರಿಟಿಷರೊಡನೆ ಹೋರಾಡುತ್ತಿದ್ದ ಕಾಲಕ್ಕೆ ಕಾಂಗ್ರೆಸು ಅಜೇಯವಾಗಿತ್ತು. ಅದು ಅಧಿಕಾರ ಸ್ವೀಕರಿಸಿದಂದಿನಿಂದ ಅದರಲ್ಲಿ ಶಿಥಿಲತೆಯ ಚಿಹ್ನೆಗಳು ತೋರಿಬಂದು ಸ್ವಾತಂತ್ರ್ಯ ಕರಗತವಾದ ನಂತರ ಅದು ಇನ್ನಷ್ಟು ಶಿಥಿಲಗೊಂಡಿದೆ. ಹಿಂದೆ ಗ್ರಾಮ ಗ್ರಾಮಗಳಲ್ಲಿ, ಬಡಜನರ ಗುಡಿಸಲುಗಳಲ್ಲಿ ಶ್ರಮವಹಿಸಿ ದುಡಿಯುತ್ತಿದ್ದ ಕಾಂಗ್ರೆಸಿಗರು ಇಂದು ನಗರದಲ್ಲಿ ತುಂಬಿದ್ದಾರೆ. ಸರಕಾರ ಭವನಗಳ ಸುತ್ತು ತಿರುಗುತ್ತಿದ್ದಾರೆ. ಅವರ ಕಾರ್ಯಕ್ಷೇತ್ರ ಇಂದು ಬದಲಾಗಿದೆ. ಬಹುಮತ ಕಾಂಗ್ರೆಸ್ಸಿಗರ ಧ್ಯೇಯವು ಕೇವಲ ಅಧಿಕಾರ ಮತ್ತು ಸ್ವಾರ್ಥಸಾಧನೆಯಲ್ಲಿ ಸೀಮಿತವಾಗಿದೆ. ಹಿಂದಿನ ತಮ್ಮ ತ್ಯಾಗ, ಬಲಿದಾನಗಳನ್ನು ಅಧಿಕಾರದ ಕಟ್ಟೆಯಲ್ಲಿ ಮಾರಲು ನಿಂತಿದ್ದಾರೆ. ತತ್ಪರಿಣಾಮವಾಗಿ ಬಡಜನರ ಕಾಮಧೇನುವೆಂದೂ, ಪತಿತ ಪಾವನ ಸಂಸ್ಥೆಯೆಂದೂ ಹೆಸರಾದ ಕಾಂಗ್ರೆಸ್ಸು ಅಧಿಕಾರ ಲಾಲಸಿಗಳ ಆಗರವಾಗಿದೆ.

ಪ್ರಜಾಪ್ರಭುತ್ವದ ಯುಗದಲ್ಲಿ ಯಾರೇ ಎಷ್ಟೇ ದೊಡ್ಡವರಾಗಿದ್ದರೂ ಜನತೆಗೆ ಅವರಿಂದ ಪ್ರಯೋಜನವಿಲ್ಲವೆಂದು ತೋರಿದರೆ ಅವರನ್ನು ಜನತೆ ತಿರಸ್ಕರಿಸುವದು. ಕಾಂಗ್ರೆಸು ತನ್ನ ಜನಸೇವಾ ದೀಕ್ಷೆಯನ್ನು ಮರೆತು ಅಧಿಕಾರದ ಪೂಜೆಗೆ ತೊಡಗಿ ಸಾಮಾನ್ಯರ ಸಂಪರ್ಕವನ್ನು ಕಳೆದುಕೊಂಡಿದೆ. ಬೊಂಬಾಯಿ ಮತ್ತಿತರ ಕಡೆಗಳಲ್ಲಾದ ಉಪಚುನಾವಣೆಗಳಿಂದ ಈ ಸತ್ಯತೆ ಹೊರಬಿದ್ದಿದೆ. ಮೊನ್ನೆಯಾಗಿ ಬಂಗಾಳದಲ್ಲಿ ಕಾಂಗ್ರೆಸ್ ಹುರಿಯಾಳುವಿಗೆ ದೊರೆತ ಅಪಜಯವು ಅನೇಕ ಕಾಂಗ್ರೆಸ್ಸಿಗರ ಕಣ್ಣು ತೆರೆಸಿದೆ. ಪಂಡಿತ ಜವಾಹರರಂಥಾ ಮಹಾ ಮುಂದಾಳುಗಳೇ ಇದರ ಕಾರಣವನ್ನು ಕಂಡುಕೊಂಡು ಹೆಚ್ಚು ಜನ ಸಂಪರ್ಕವನ್ನು ಬೆಳೆಸಿಕೊಳ್ಳುವ ನಿರ್ಧಾರ ಮಾಡಿದ್ದಾರೆ.

ಕಾಂಗ್ರೆಸು ಸರ್ವರ ಸಂಸ್ಥೆ. ಜಾತ್ಯತೀತವು ಹೇಗೋ ಹಾಗೆಯೇ ವಿವಿಧ ಮತೀಯರಿಗೂ, ವಿವಿಧ ರಾಜಕೀಯ ಅಭಿಪ್ರಾಯದವರಿಗೂ, ಅದರಲ್ಲಿ ಸ್ಥಾನವಿತ್ತು. ಎಲ್ಲರ ಗುರಿ ಇದ್ದುದು ಭಾರತದ ಸ್ವಾತಂತ್ರ್ಯ ಸಾಧನೆ. ಈ ಧ್ಯೇಯಕ್ಕಾಗಿ ಕಾಂಗ್ರೆಸ್ ಧ್ವಜದಡಿ ಒಂದುಗೂಡಿದ್ದ ಜನತೆ ಈ ಧ್ಯೇಯ ಸಾಧನೆಯ ನಂತರ ಸ್ವಾಭಾವಿಕವಾಗಿ ಚದರಬೇಕಾಯಿತು. ಆದ್ದರಿಂದಲೇ ಕಾಂಗ್ರೆಸಿನೊಳಗಿದ್ದ ಕಮ್ಯೂನಿಸ್ಟರೂ, ಸಮತಾವಾದಿಗಳೂ ಹೊರಬಂದರು. ಅದರೊಡನೆಯೇ ಕಾಂಗ್ರೆಸಿನ ಮಹಾನಾಯಕರು ಸರಕಾರದ ಸೂತ್ರಗಳನ್ನು ಹಿಡಿದರು. ಕಾಂಗ್ರೆಸ್ ಸಂಸ್ಥೆಯು ಅನಾಥವಾಯಿತು. ಅದು ತನ್ನ ಹಿರಿಮೆ, ಪ್ರತಾಪಗಳನ್ನು ಕಳೆಕೊಂಡು ಹಿನ್ನೆಲೆಗೆ ಬಿತ್ತು.

ಹೀಗಾಗುವದೆಂದು ಭಾಗ್ಯವಿಧಾತ ಬಾಪೂಜೀಗೆ ತಿಳಿದಿತ್ತು. ಆದ್ದರಿಂದಲೇ ಸ್ವಾತಂತ್ರ್ಯ ಸಾಧನೆಗೆ ರೂಪುಗೊಂಡ ಕಾಂಗ್ರೆಸು ಅದರ ಸಾಧನೆಯ ನಂತರ ಸರ್ವೋದಯ ಸಮಾಜವಾಗಿ ಮಾರ್ಪಡಬೇಕೆಂದು ಹೇಳಿದ್ದರು. ರಾಜಕೀಯ, ಅಧಿಕಾರಕ್ಕಾಗಿ ಹೋರಾಡುವವರು ಬೇರೆ ಇರಬೇಕು. ವಿಧಾಯಕ ಕಾರ್ಯಕ್ರಮ, ಜನಸೇವೆ, ಕಾಂಗ್ರೆಸಿನ ಮಹಾತತ್ವಗಳ ಸಾಧನೆಗಾಗಿ ಕಾಂಗ್ರೆಸ್ಸು ಹೊಸ ರೂಪತಾಳಿ, ಬಡ ಜನರ ಕಣ್ಣೀರೊರಸುವ, ದುಃಖಿತರ ದುಃಖ ಶಮನಮಾಡುವ, ಪತಿತರ ಉದ್ಧಾರಮಾಡುವ ಕಾರ್ಯ ಮಾಡುತ್ತಿರಬೇಕು. ಎಂದು ಎರಡು ವಿಂಗಡ ಮಾಡಿದ್ದರು. ಆದರೆ ಈ ಅಭಿಪ್ರಾಯಕ್ಕೆ ದೊರೆಯಬೇಕಿದ್ದಷ್ಟು ಬೆಂಬಲ ದೊರೆಯಲಿಲ್ಲ. ಅದ್ದರಿಂದಲೇ ಕಾಂಗ್ರೆಸಿ ಮುಖಭಂಗವಾಗುತ್ತಿರುವದನ್ನು ಕಾಂಗ್ರೆಸ್ಸಿಗರು ನಿಸ್ಸಹಾಯಕರಾಗಿ ನೋಡಬೇಕಾಗಿ ಬಂದಿದೆ.

ಕಾಂಗ್ರೆಸು ಎಚ್ಚೆತ್ತು ವರ್ತಿಸದಿದ್ದರೆ ಮುಂಬರುವ ಚುನಾವಣೆಯಲ್ಲಿ ಅಧಿಕಾರವು ಕಾಂಗ್ರೆಸ್ಸಿಗೆ ಕೈತಪ್ಪಿ ಹೋಗುವ ಚಿಹ್ನೆಗಳಿವೆ. ಕಾಂಗ್ರೆಸು ತನ್ನ ಧವಳ ಕೀರ್ತಿಯನ್ನು ಉಳಿಸಿಕೊಳ್ಳಬೇಕಾದರೆ ಅದು ಹಿಂದಿನಂತೆ ಜನತಾ ಸಂಸ್ಥೆಯಾಗಬೇಕು. ಆಡಳಿತ ಖಚೇರಿಗೂ, ಬಡಗುಡಿಸಲಿಗೂ ಹೆಚ್ಚಿನ ಸಂಬಂಧವಾಗಬೇಕು. ಅಧಿಕಾರ ಹಿಡಿದಿರುವವರು ನಮ್ಮ ಪ್ರತಿನಿಧಿಗಳು, ನಮ್ಮ ಸಾಧನೆಗಾಗಿ ದುಡಿಯುತ್ತಿದ್ದಾರೆಂಬ ಭಾವನೆ ಜನತೆಯಲ್ಲಿ ಬರುವಂತೆ ಮಾಡಬೇಕು. ಇದು ಅಧಿಕಾರದ, ಸ್ವಾರ್ಥದ ಮಾರ್ಗದಿಂದ ಆಗಲಾರದು; ಬದಲು ಸೇವೆ, ತ್ಯಾಗಗಳ ಮಾರ್ಗದಿಂದ ಆಗಬೇಕು.

ಮುಂದಿನ ಚುನಾವಣೆ ೧೯೫೦ರ ಒಳಗೆ ಆಗುವ ಸಂದರ್ಭವಿಲ್ಲ. ಬಹುಶಃ ೧೯೫೧ರ ಪ್ರಾರಂಭದಲ್ಲಾಗಬಹುದು. ಅದಕ್ಕೆ ಇನ್ನೂ ೧½ ವರ್ಷವಿದೆ. ಈ ಸಮಯವು ಕಾಂಗ್ರೆಸಿನ ಅಗ್ನಿಪರೀಕ್ಷೆಯ ಸಮಯ. ಕಾಂಗ್ರೆಸು ಅಧಿಕಾರ ಲಾಲಸಿಗಳ, ಕಪ್ಪುಮಾರಾಟದವರ, ಸಂಸ್ಥೆಯಲ್ಲ; ಅದು ಜನತೆಯ ಸೇವಾಸಂಸ್ಥೆಯೆಂದು ಈ ಅವಧಿಯಲ್ಲಿ ಜನತೆಗೆ ಮನದಟ್ಟುಮಾಡಿದರೆ ಕಾಂಗ್ರೆಸು ಉಳಿದೀತು. ಇಲ್ಲದಿದ್ದರೆ ಅದರ ಸರ್ವನಾಶ ಸೂರ್ಯಾಸ್ತಮಾನದ ನಂತರ ಕತ್ತಲೆ ಬರುವಷ್ಟು ಸ್ವಯಂ ಸತ್ಯ.

ಬಂಗಾಳದಲ್ಲಿ ಆದ ಅಪಜಯಕ್ಕೆ ಅಲ್ಲಿಯ ಕಾಂಗ್ರೆಸಿಗರಲ್ಲಿದ್ದ ಒಡಕು ಕಾರಣವೆನ್ನಲಾಗಿದೆ. ಕಾಂಗ್ರೆಸಿನವರಲ್ಲಿ ಒಡಕು ಪ್ರತಿ ಪ್ರಾಂತದಲ್ಲೂ ಇದೆ. ಕೊಡಗಿನಲ್ಲೂ ಅದು ಇದೆ. ಈ ಒಡಕು ಇತರ ಸಂಸ್ಥೆಗಳಿಗೆ ಇಲ್ಲವೇ ವ್ಯಕ್ತಿಗಳಿಗೆ ಅವಕಾಶ ಮಾಡುವದು. ಸರಕಾರದ ಹಿಡಿತವು ಅಂಥವರ ಕೈಸೇರಿ ಜನರ ಅಹಿತವು ಆಗದಂತೆ ಕಾಯುವದು ಕಾಂಗ್ರೆಸಿಗರ ಕರ್ತವ್ಯ. ಎಷ್ಟೇ ಘನತೆಯ ವ್ಯಕ್ತಿಯಾದರೂ ಸಂಸ್ಥೆಗಿಂಥಾ ಮಿಗಿಲಲ್ಲ. ಆದ್ದರಿಂದ ವ್ಯಕ್ತಿವಿಡಂಬನೆಯ ಹುಚ್ಚಿನಲ್ಲಿ ಸಂಸ್ಥೆಯ ಬುಡಕ್ಕೆ ಕೊಡಲಿಹಾಕದೆ ಪ್ರತಿ ಕಾಂಗ್ರೆಸಿಗನೂ ತನ್ನ ಜವಾಬ್ದಾರಿಯನ್ನು ತಿಳಿದು ಅಧಿಕಾರದ ಕಚೇರಿಗಳ ಕಡೆಗಿನ ತಮ್ಮ ದೃಷ್ಟಿಯನ್ನು ಹಳ್ಳಿಗಳ ಕಡೆಗೆ ತಿರುಗಿಸಿ ಕಾಂಗ್ರೆಸನ್ನು ಮತ್ತೊಮ್ಮೆ ಅಖಂಡ, ಅಜೇಯ ಸಂಸ್ಥೆಯಾಗಿ ಕಟ್ಟಬೇಕಿದೆ.

ಬರಹಗಾರರಿಗೆ ಆಹ್ವಾನ.

ಪತ್ರಿಕೆಯಲ್ಲಿ ಪ್ರಕಟಿಸಲು ಯೋಗ್ಯವಾದ ಲೇಖನಗಳು, ಹಾಸ್ಯ ಪ್ರಬಂಧಗಳು, ಕಥೆ, ಕವನಗಳನ್ನು ಸ್ವೀಕರಿಸಲಾಗುವದು. ಗ್ರಾಮಗಳಲ್ಲಿ ನಡೆಯುವ ವಿಶೇಷ ವಾರ್ತೆ, ಮಾದರಿ ಕೆಲಸ, ಗುಡಿ ಕೈಗಾರಿಕೆಯ ವಿಚಾರದ ಲೇಖನಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡಲಾಗುವದು.

ಮೇನೇಜರು.

ವರ್ತಮಾನ.

ಮದ್ರಾಸು ವಿಶ್ವವಿದ್ಯಾಲಯದ ಕಳೆದ ಇಂಟರ್‌ಮಿಡಿಯೇಟ್ ಪರೀಕ್ಷೆಯಲ್ಲಿ ಶ್ರೀಗಳಾದ ಅಜ್ಜಿಕುಟ್ಟಿರ ಎಂ. ಬೆಳ್ಯಪ್ಪ, ಕಟ್ಟೆರ ಕೆ. ಉತ್ತಯ್ಯ, ಎಚ್. ವಿ. ಸಚ್ಚಿದಾನಂದ, ಪಟ್ಟಡ ಪಿ ಅಪ್ಪಚ್ಚು, ಬಿ. ಪಿ. ಬಸಪ್ಪ, ಎ. ಎಂ. ಪೊನ್ನಪ್ಪ, ಪಾರ್ವಂಗಡ ಸಿ. ಉತ್ತಪ್ಪ (ಇವರೆಲ್ಲರೂ ಪ್ರಥಮ ಶ್ರೇಣಿಯಲ್ಲಿ) ಮುಕ್ಕಾಟಿರ ಪೂವಯ್ಯ, ಎಂ. ಪಿ ಮುತ್ತಣ್ಣ, ಎಂ. ಎಸ್. ಬೋಜಪ್ಪ, ಕೋಟ್ರಂಗಡ ಸುಬ್ಬಯ್ಯ, ಬಿ. ಕೆ. ವೇದಪ್ಪ, ನೆಲ್ಲಮಕ್ಕಳ ಎಸ್. ಉತ್ತಯ್ಯ, ನೆಲ್ಲಮಕ್ಕಳ ಎಸ್. ಪೊನ್ನಪ್ಪ, ಅಜ್ಜಿಕುಟ್ಟಿರ ಅಪ್ಪಣ್ಣ, ಐಚೆಟ್ಟಿರ ಬೋಪಣ್ಣ ಇವರುಗಳೂ, ಶ್ರೀಮತಿಯರಾದ ಕೊಂಗೆಟ್ಟಿರ ಎ. ಗಂಗಮ್ಮ, ಮಣವಟ್ಟಿರ ಎಂ. ಅಕ್ಕಮ್ಮ ಮತ್ತು ಕುಪ್ಪಂಡ ಎ. ಲೀಲಾ ಇವರುಗಳೂ ತೇರ್ಗಡೆಯಾಗಿರುವರು.

ಮೈಸೂರು ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಶ್ರೀ ಜೊಟ್ಟೆಮಾಡ ಮುತ್ತಣ್ಣನವರು ಉತ್ತೀರ್ಣರಾಗಿರುವರು.

ತಾ. ೧೦-೬-೪೯ರ ‘ಕೊಡಗು’ ಪತ್ರಿಕೆಯಲ್ಲಿ ಪ್ರಕಟವಾಗಿದ್ದಂತೆ ಕಗ್ಗೋಡು ಗ್ರಾಮದ ಶ್ರೀ ಮಾವೆರ ಬೋಪಯ್ಯನವರಲ್ಲಿ ಯಾವ ಕೋಣವೂ ಬಂದು ಸೇರಿಕೊಂಡಿಲ್ಲವೆಂದೂ ಯಾರೋ ಸುಳ್ಳು ವಾರ್ತೆ ಕೊಟ್ಟದ್ದಾಗಿಯೂ ಅವರು ತಿಳಿಸುತ್ತಾರೆ.

ನಾಪೋಕ್ಲು ಬೆಂಚು ಕೋರ್ಟಿನಲ್ಲಿ ಖಾಲಿಯಾದ ಶ್ರೀ ಕುಲ್ಲೆಟ್ಟಿರ ಅಚ್ಚಪ್ಪನವರ ಬದಲಿಗೆ ಶ್ರೀ ಪಟ್ರಪಂಡ ಅಪ್ಪಯ್ಯನವರನ್ನು ನೇಮಿಸಲಾಗಿದೆ. ಶ್ರೀ ಗುಡ್ಡೆರ ಗಣಪತಿಯವರು ಬೆಂಚು ಕೋರ್ಟಿನ ಅಧ್ಯಕ್ಷರಾಗಿರುವರು.

ಬಸ್ ಕೆಲಸಗಾರರಿಗೆ ಯೋಗ್ಯ ವೇತನ, ತುಟ್ಟಿಭತ್ಯ, ಉದ್ಯೋಗದ ಸೆಕ್ಯೂರಿಟಿ, ಪ್ರಾವಿಡೆಂಟ್ ಫಂಡ್ ಮೊದಲಾದುವನ್ನು ಕೊಡುವ ಏರ್ಪಾಡಿನ ಬಗ್ಗೆ ಬಸ್ ಮಾಲೀಕರ ಮತ್ತು ಆಟೋಮೋಬಾಯಿಲ್ ಸಂಘದ ಪ್ರತಿನಿಧಿಗಳ ಮೀಟಿಂಗೊಂದನ್ನು ಕನ್‌ಸಿಲಿಯೇಷನ್ ಅಫೀಸರು ತಾ. ೨-೭-೪೯ರಲ್ಲಿ ಜಿಲ್ಲಾ ಮೆಜಿಸ್ಟ್ರೇಟರ ಕೋರ್ಟ್ ರೂಮಿನಲ್ಲಿ ಏರ್ಪಡಿಸಿರುವರು.

ವೀರಾಜಪೇಟೆ ಕೊಡವ ಸಮಾಜದ ವಿಶೇಷ ಮಹಾ ಸಭೆಯು ತಾರೀಕು ೧-೭-೪೯ನೇ ಶುಕ್ರವಾರ ವೀರಾಜಪೇಟೆ ಮುನ್ಸಿಪಲ್ ಹಾಲ್‌ನಲ್ಲಿ ನಡೆಯುವದು.

ಈ ದಿನ ಮಧ್ಯಾಹ್ನ ಮೂರು ಗಂಟೆಗೆ ಪೊನ್ನಂಪೇಟೆ ಹೈಸ್ಕೂಲ್‌ನಲ್ಲಿ ಹರದಾಸ ಅಪ್ಪನೆರವಂಡ ಅಪ್ಪಚ್ಚ ಕವಿಗಳ ಭಾವಚಿತ್ರದ ಅನಾವರಣ ಸಮಾರಂಭವು ಸಹಕಾರ ಸಂಘಗಳ ರಿಜಿಸ್ಟ್ರಾರರಾದ ಶ್ರೀ ಪಿ. ಎಂ. ಚಂಗಪ್ಪನವರಿಂದ ನಡೆಯುವದು.

ವಾರ್ತೆ.

ಮಹಾತ್ಮಾ ಗಾಂಧಿಯವರ ಪವಿತ್ರ ನಾಮವನ್ನು ಸ್ಥಿರಗೊಳಿಸಲು ಭಾರತದಲ್ಲಿ ಗಾಂಧಿಶಕವನ್ನು ಆರಂಭಿಸಬೇಕು. ಭಾರತಕ್ಕೆಲ್ಲ ಒಂದೇ ಶಕ ಇರಬೇಕು. ಇದು ಗಾಂಧಿಶಕ ಆಗಿರಲಿ ಎಂದು ಅಸಾಮಿನ ನ್ಯಾಯಾಂಗ ಸಭೆಯ ಸದಸ್ಯರಾದ ಶ್ರೀ ಗೌರಿಕಾಂತ ತಾಲೂಕ್‌ದಾರ್‌ರವರು ಪಂಡಿತನೆಹರೂ ಮೊದಲಾದ ಮುಖಂಡರಿಗೆ ಸಲಹೆ ಮಾಡಿರುವರು.

ಗಾಂಧಿ ಕೊಲೆಯ ಮೊಕದ್ದಮೆಯ ಅಪೀಲು ಪೂರ್ವಪಂಜಾಬ್ ಹೈಕೋರ್ಟಿನಲ್ಲಿ ವಿಚಾರಿಸಲ್ಪಟ್ಟು ತಾ. ೨೧ ರಲ್ಲಿ ಅದರ ಜಡ್ಜ್‌ಮೆಂಟ್ ಪ್ರಕಟವಾಯಿತು. ಇದರ ಪ್ರಕಾರ ಸದಾಶಿವ ಪರಚುರೆ ಮತ್ತು ಶಂಕರ ಕಿಸ್ತಯ್ಯ ಇವರನ್ನು ಬಿಡುಗಡೆ ಮಾಡಲು ಆಜ್ಞೆಯಾಗಿದೆ. ಆದರೂ ಮತ್ತೊಂದು ತಕ್ಸೀರಿನ ಮೇಲೆ ಪರಚುರೆಯವರನ್ನು ಬಂಧಿಸಲಾಗಿದೆ. ಉಳಿದ ನಾಥೂರಾಂ ವಿನಾಯಕಗೋಡ್ಸೆ ಮತ್ತು ಎನ್. ಡಿ. ಆಪ್ಟೆ ಇವರಿಗೆ ವಿಧಿಸಿದ ಫಾಶಿ ಶಿಕ್ಷೆಯನ್ನು ಖಾಯಂ ಮಾಡಲಾಗಿದೆ. ಉಳಿದ ವಿಷ್ಣು ಕರಕರೆ, ಕಾಶ್ಮೀರಿಲಾಲ್ ಪಹ್ವಾ, ಗೋಪಾಲಗೋಡ್ಸೆ ಇವರಿಗೆ ಜೀವಾವಧಿ ಸಜೆಯ ಶಿಕ್ಷೆಯನ್ನು ಖಾಯಂ ಮಾಡಲಾಗಿದೆ. ಈ ಕೇಸಿಗೆ ಸಂಬಂಧಪಟ್ಟು ಬೇಕಾಗಿರುವ ಗಂಗಾಧರ ದಂಡವಟೆ, ಗಂಗಾಧರ ಜಾಧವ, ಮತ್ತು ಸೂರ್ಯದೇವಶರ್ಮ ಇವರ ಪತ್ತೆ ಇನ್ನೂ ಆಗಿಲ್ಲ.

ಸೂರ್ಯ ಮಂಡಲದಲ್ಲಿ ಇರುವ ಗ್ರಹಗಳ ಜೊತೆಯಲ್ಲಿ ಭೂಮಿಯ ಸುತ್ತು ಸುತ್ತುತ್ತಿರುವ ಚಂದ್ರನಂಥಾ ೨೯ ಚಂದ್ರರಿರುವರೆಂದು ಈ ಮೊದಲು ಕಂಡು ಹಿಡಿಯಲಾಗಿತ್ತು. ಚಿಕಾಗೊ ವಿಶ್ವ ವಿದ್ಯಾಲಯದ ಡಾ. ಜಿ. ಪಿ. ಕ್ಯೂಪರ್ ಎಂಬವರು ಇತ್ತಲಾಗಿ ನೆಪ್ಚ್ಯೂನ್ ಗ್ರಹದ ಸುತ್ತು ತಿರುಗುತ್ತಿರುವ ಹೊಸ ಚಂದ್ರನನ್ನು ಕಂಡು ಹಿಡಿದಿರುವರು. ಈ ಹೊಸ ಚಂದ್ರನ ವ್ಯಾಸವು ೨೦೦ ಮೈಲುಗಳಷ್ಟಿದೆಯಂತೆ!

ಲಕ್ಷ್ಮಣತೀರ್ಥ ಆಣೆಕಟ್ಟು.

ಈ ತಿಂಗಳು ೧೨ ಮತ್ತು ೧೩ರಲ್ಲಿ ಕೃಷ್ಣರಾಜ ಸಾಗರದಲ್ಲಿ ಪ್ರಾಮುಖ್ಯವಾದ ನೀರಾವರಿ ಸಮ್ಮೇಳನ ಒಂದು ನಡೆಯಿತು. ರಾಜಸ್ಥಾನದ ಮುಖ್ಯ ಇಂಜನಿಯರಾದ ಶ್ರೀ ಎಂ. ಡಿ. ಮಾಥುರ್‌ರವರು ಅಧ್ಯಕ್ಷರಾಗಿದ್ದರು. ಇಂಡಿಯಾ ಸರಕಾರದ ಮತ್ತು ಮದ್ರಾಸು, ಮೈಸೂರು ಕೊಡಗು ಸರಕಾರಗಳ ಇಂಜನಿಯರ್ ಪ್ರತಿನಿಧಿಗಳು ಲಕ್ಷ್ಮಣತೀರ್ಥ ನದಿಯ ಇಕ್ಕಡೆಯ ಸುಮಾರು ೩,೦೦೦ ಎಕ್ರೆ ಭೂಮಿಗೆ ನೀರು ಸರಬರಾಯಿ ಮಾಡಬಲ್ಲ ಲಕ್ಷ್ಮಣತೀರ್ಥ ಆಣೆಕಟ್ಟಿನ ಅವಶ್ಯಕತೆಯನ್ನು ವಿವರವಾಗಿ ಚರ್ಚಿಸಿದರು.

ಈ ಸಮ್ಮೇಳನವು ಇಂಡಿಯಾ ಸರಕಾರದ ಕೇಂದ್ರ 'ವಾಟರ್ ಪವರ್ ಇರಿಗೇಶನ್ ಮತ್ತು ನೇವಿಗೇಶನ್' ಸಮಿತಿಯ ಡೈರೆಕ್ಟರವರಿಂದ ಕೂಡಿಸಲ್ಪಟ್ಟಿತು. ಚೀಫ್ ಕಮಿಷನರೂ, ರಾಜ್ಯಘಟನಾ ಸಮಿತಿಯ ಸದಸ್ಯರಾದ ಶ್ರೀ ಸಿ. ಎಂ. ಪೂಣಚ್ಚನವರೂ ಸಮ್ಮೇಳನಕ್ಕೆ ಹಾಜರಿದ್ದರು. ಲಕ್ಷ್ಮಣತೀರ್ಥ ಹೊಳೆಗೆ ಆಣೆಕಟ್ಟನ್ನು ಕಟ್ಟುವ ವಿಚಾರವನ್ನು ಸಮ್ಮೇಳನದ ಮುಂದಿಡುತ್ತಾ, ಚೀಫ್ ಕಮಿಷನರು ಅದರ ಅವಶ್ಯಕತೆಯನ್ನು ವಿವರಿಸಿದರು. ಶ್ರೀ ಸಿ. ಎಂ. ಪೂಣಚ್ಚನವರೂ ಚೀಫ್ ಕಮಿಷನರ ಅಭಿಪ್ರಾಯವನ್ನು ಸಮರ್ಥಿಸಿದರು.

ಲಕ್ಷ್ಮಣತೀರ್ಥ ಮತ್ತು ರಾಮತೀರ್ಥ ಸಂಗಮದಿಂದ ಕೆಳಗೆ ಒಂದು ಆಣೆಕಟ್ಟು ಕಟ್ಟಿ ಸೆಪ್ಟಂಬರ್, ನವಂಬರ್ ತಿಂಗಳುಗಳಲ್ಲಿ ೩೫ 'ಕ್ಯೂಸೆಕ್'ಗಳ ವರೆಗೆ ನೀರನ್ನು ಉಪಯೋಗಿಸಿಕೊಳ್ಳಲು ಕೊಡಗು ಸರಕಾರಕ್ಕೆ ಬಿಡುವದು ಉಚಿತವೆಂದೂ, ಅದಕ್ಕೆ ಯೋಗ್ಯ ತರತುಗಳನ್ನು ಮಾಡಿಕೊಳ್ಳುವದೆಂದೂ, ಈ ರೀತಿ ಕೊಡಗು ಸರಕಾರವು ಉಪಯೋಗಿಸುವದರಿಂದ ಆಗುವ ನಷ್ಟವನ್ನು ಮದ್ರಾಸ್ ಮತ್ತು ಮೈಸೂರು ಸರಕಾರಗಳು ಪಾಲುಗೊಳ್ಳಬೇಕೆಂದೂ ನಿರ್ಣಯವಾಯಿತು.

ಸಿ. ಟಿ ಮೊದಲಿಯಾರ್,
ಚೀಫ್ ಕಮಿಷನರ್.

ಕಾಲೇಜು ತೆರೆಯುವ ಸಮಾರಂಭದ ಕಾರ್ಯಕ್ರಮ.

ತಾ. ೩೦-೬-೪೯.

ಈ ೩೦ನೇ ಗುರುವಾರ ಕೊಡಗು ಗವರ್ನಮೆಂಟ್ ಕಾಲೇಜು ತೆರೆಯಲ್ಪಡುವದು. ಬೆಳಗ್ಗೆ ೧೦ ಗಂಟೆಗೆ ಕಾವೇರಿ ಮಹಾಲ್‌ನಲ್ಲಿ ಸಾರ್ವಜನಿಕ ಸಭೆ ನಡೆಯುವದು. ಇಂಡಿಯಾ ಸರಕಾರದ ಗೃಹ ಶಾಖೆಯ ಸೆಕ್ರೆಟರಿಯಾದ ಶ್ರೀ ಎಚ್. ಆರ್ ವಿ. ಐಯ್ಯಂಗಾರ್ ಇವರು ಈ ಸಮಾರಂಭವನ್ನು ನೆರವೇರಿಸುವರು. ೧೧ ಗಂಟೆಗೆ ಪೋಲೀಸ್ ಪರೇಡ್ ಗ್ರೌಂಡಿನಲ್ಲಿ ಕಾಲೇಜು ಕಟ್ಟಡದ ಅಸ್ತಿಭಾರ ಹಾಕಲಾಗುವದು. ೧೧. ೪೫ಕ್ಕೆ ಸೆಂಟ್ರಲ್ ಹೈಸ್ಕೂಲಿನಲ್ಲಿ ಕಾಲೇಜನ್ನು ತೆರೆಯಲಾಗುವದು. ನಂತರ ವಿದ್ಯಾರ್ಥಿಗಳಿಗೆ ಸಿಹಿ ತಿಂಡಿ ಹಂಚಲಾಗುವದು. ಆ ದಿನ ಕಾಲೇಜು ಕಟ್ಟಡ ಅಸ್ತಿಭಾರ ಹಾಕಿದಲ್ಲಿಗೂ ನಂತರ ಹಿಂದಕ್ಕೂ ಹೋಗಿ ಬರಲು ಬಸ್ಸುಗಳ ಏರ್ಪಾಡು ಮಾಡಲಾಗುವದು.

ಬಿ. ಎಸ್. ಕುಶಾಲಪ್ಪ,
ಜಿಲ್ಲಾ ವಿದ್ಯಾಧಿಕಾರಿ.

ವಂದನೆಗಳು.

ನನ್ನ ಪುತ್ರ ಮಾದಯ್ಯನ ಆಕಸ್ಮಿಕ ಮರಣದಿಂದ ನನಗುಂಟಾದ ಅಪಾರವಾದ ದುಃಖದಲ್ಲಿ ಭಾಗಿಗಳಾದ ನನ್ನ ಎಲ್ಲಾ ಬಂಧುಗಳಿಗೂ, ಹಿತಚಿಂತಕರಿಗೂ ಪ್ರತ್ಯೇಕ ವಂದಿಸಲು ಅಸಾಧ್ಯವಾದ ಕಾರಣ ಅವರೆಲ್ಲರಿಗೂ ಈ ಮೂಲಕ ನನ್ನ ವಂದನೆಗಳನ್ನು ನಿವೇದಿಸುವವಳಾಗಿದ್ದೇನೆ.

ಚೆಟ್ಟಳ್ಳಿ, 23-6-49. ಇತಿ, ಐಚೆಟ್ಟಿರ ಪೊನ್ನವ್ವ.

FOR SALE.

One 'TRIUMPH' 3.5 Motor Cycle, which is in very good condition is ready for sale. Registered in Coorg, having new tyres & tubes Persons who can offer Rs. 1500/- or near need only apply.

For Particulars & for trials, Please contact:-

P. M. Ponnappa,
MITTOO AGENCIES,
Virajpet, Coorg.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

೧೯೧೨ರ ಕೋ-ಆಪರೇಟಿವ್ ಸೊಸೈಟೀಸ್ ಆಕ್ಟು ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,65,000.
ಕ್ಷೇಮನಿಧಿ	ರೂ.	50,000.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಆಧಾರದ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ಕು, ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಸಿಟಿ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಖಜಾಂಚಿ.

"ಕೊಡಗು" ವಾರಪತ್ರಿಕೆ.

ವಾಚಕರಿಗೆ ಪ್ರತಿವಾರ ಹನ್ನೆರಡು ಪುಟಗಳನ್ನು ಕೊಡುವ ದೃಷ್ಟಿಯಿಂದ ತಾರೀಕು ೧-೬-೪೯ರಿಂದ ವಾರ್ಷಿಕ ಚಂದಾ ದರವನ್ನು ರೂ. ೫/- ಕ್ಕೆ ಏರಿಸಲಾಗಿದೆ. ನಮ್ಮ ಗ್ರಾಹಕರು ಈ ಹೆಚ್ಚಿನ ಭಾರವನ್ನು ಹೊತ್ತು ನಾಡು ಮತ್ತು ನುಡಿಗಳ ಸೇವೆಗೆ ಪ್ರೋತ್ಸಾಹಿಸುವರಾಗಿ ನಂಬಿದೆ:

ಮ್ಯಾನೇಜರು.

Office of the Registrar of Co-operative Societies, Coorg, Mercara, Dated 21-6-49

Applications from Candidates who have passed or completed S. S. L. C., examinations and ex-servicemen with equivalent qualifications are invited up to 30th June 1949, for training in Co-operation and allied subjects at the Coorg Government Co-operative Institute, Mercara. The period of training is twelve months commencing from 1st July 49.

Applicants are required to appear before the undersigned at their own expense for interview at his office at 11 A. M on 2-7-49. The selected candidates will be paid a stipend of Rs. 25/- per mensem each, for the period of training. Four seats are reserved for lady candidates.

P. M. Chengapa,
Registrar,
Co-operative Societies, Coorg.

Situation Vacant.

WANTED

For immediate employment a qualified Engineer to be in charge of construction works at our Factory site in Fraserpet, Coorg. Persons who have just retired from Government service as Assistant Engineer or Overseer may also apply. Application may be sent to the following address stating age, qualifications, experience, and the minimum starting salary expected

The Cauvery Paper Mills & Forest Industries Ltd;
27. Lalbagh Road,
10-6-49. BANGALORE.

CRESCENT

FOR PROTECTION AND SERVICE.

It is best to represent and insure with

The CRESCENT Insurance Co., Ltd,

H: O: BOMBAY.] *[Established 1919.*

For particulars write to:

Sri B. A. Pooyaiah *Organiser* *Pollibetta, Coorg.*

or

The Branch Manager, *22 B. Mahatma Gandhi Road, Bangalore 1.*

ಸುರಕ್ಷಿತವಾದ ಜೀವವಿಮೆ ಪಡೆಯಲು

ಕ್ರೆಸೆಂಟ್

ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.

ವಿಚಾರ ತರಂಗ.

ಗ್ರಾಮಪಂಚಾಯಿತ ಸಭೆಗಳು.

ಬೊಂಬಾಯಿ ಸರಕಾರವು ಪ್ರಾಂತದ ಹಳ್ಳಿ ಹಳ್ಳಿಗೂ ಗ್ರಾಮ ಪಂಚಾಯಿತ ಸಭೆಗಳನ್ನು ಸ್ಥಾಪಿಸಬೇಕೆಂದು ನಿಶ್ಚಯಿಸಿರುವದಾಗಿ ತಿಳಿಯಬಂದಿದೆ. ಒಂದು ಸಾವಿರಕ್ಕಿಂಥಾ ಹೆಚ್ಚಿಗೆ ಜನರಿರುವ ಗ್ರಾಮಗಳಲ್ಲಿ ಗ್ರಾಮಪಂಚಾಯಿತ ಸಭೆ ಸ್ಥಾಪಿಸಲಾಗುವದು. ಸಾವಿರಕ್ಕಿಂಥಾ ಕಡಿಮೆ ಜನಸಂಖ್ಯೆ ಇದ್ದು ಅಲ್ಲಿಯ ೫೦ ಜನ ಹಿರಿಯರು ಗ್ರಾಮಪಂಚಾಯಿತ ಸಭೆ ಬೇಕೆಂದು ಕೇಳಿದರೆ ಆ ಗ್ರಾಮಗಳಲ್ಲಿಯೂ ಗ್ರಾಮಪಂಚಾಯಿತ ಸಭೆ ಸ್ಥಾಪಿಸಲಾಗುವದು. ಈ ವರ್ಷ ಈ ಪ್ರಾಂತದಲ್ಲಿ ಸಾವಿರ ಗ್ರಾಮಪಂಚಾಯಿತ ಸಭೆಗಳನ್ನು ಸ್ಥಾಪಿಸಬೇಕೆಂದು ಸರಕಾರವು ನಿಶ್ಚಯಿಸಿದೆ. ಬೊಂಬಾಯಿ ಪ್ರಾಂತದಲ್ಲಿ ೨೨೦೦೦ ಗ್ರಾಮಗಳಿವೆ. ಇವುಗಳಲ್ಲಿ ೧೯೪೭ರಲ್ಲಿ ೧೪೦೦ ಹಳ್ಳಿಗಳಲ್ಲಿ ಮಾತ್ರ ಗ್ರಾಮ ಪಂಚಾಯಿತ ಸಭೆಗಳಿದ್ದವು. ಈಗ ಈ ಯೋಜನೆಗಾಗಿ ೧೪,೨೪,೮೦೦ ರೂಪಾಯಿ ವೆಚ್ಚಮಾಡಲು ಬೊಂಬಾಯಿ ಸರಕಾರವು ನಿರ್ಧರಿಸಿದೆ. ಈ ಗ್ರಾಮಪಂಚಾಯಿತ ಸಭೆಗಳಿಗೆ ಸಲಹೆ ಕೊಡಲು ಸ್ಪೆಶಲ್ ಆಫೀಸರನ್ನು ನೇಮಿಸಲಾಗುವದು. ಇವರ ಯೋಜನೆಯಂತೆ ಮೂರು ವರ್ಷಗಳಲ್ಲಿ ೫೦೦೦ ಗ್ರಾಮ ಪಂಚಾಯಿತಗಳನ್ನು ನೇಮಿಸಲಿರುವರು.

ಚಂದ್ರನಾಗೂರು ಮತಗಣನೆ.

ಹಿಂದೂಸ್ಥಾನದಲ್ಲಿ ಕೆಲವು ಪ್ರದೇಶಗಳು ಫ್ರೆಂಚರ ವಶದಲ್ಲಿ ಇನ್ನೂ ಇವೆ. ಈ ಚಿಕ್ಕ ಐದು ಪ್ರದೇಶಗಳ ಒಟ್ಟು ವಿಸ್ತೀರ್ಣ ೨೦೩ ಚದರ ಮೈಲುಗಳು. ಜನಸಂಖ್ಯೆ ೩,೩೫,೦೦೦. ಈ ಪ್ರಾಂತಗಳು ಹಿಂದೂದೇಶದ ಭಾಗಗಳಿಂದ ಕಾರಣ ಅವು ಹಿಂದೂದೇಶದೊಳಗೆ ವಿಲೀನವಾಗಬೇಕಾದ್ದು ಧರ್ಮ. ಆದರೆ ಫ್ರೆಂಚರು ಈ ಭಾಗಗಳನ್ನು ಬಿಟ್ಟುಕೊಡಲು ತಯಾರಿಲ್ಲ. ಈ ಬಗ್ಗೆ ವಿಚಾರ ವಿನಿಮಯ ನಡೆದು ಫ್ರೆಂಚ್ ಸರಕಾರವು ಆಯಾ ಭಾಗಗಳ ಭವಿಷ್ಯವನ್ನು ಅಲ್ಲಿಯ ಜನರೇ ನಿಶ್ಚಯಿಸಬೇಕೆಂದು ತೀರ್ಮಾನಿಸಿ ಆ ತಳಹದಿಯಲ್ಲಿ ಈ ಪ್ರಾಂತಗಳಲ್ಲೊಂದಾದ ಚಂದ್ರನಾಗೂರಿನ ಜನಗಣನೆಯು ತಾ. ೧೯ ರಲ್ಲಿ ನಡೆಯಿತು. ಆ ಪ್ರಕಾರ ಮತವಿತ್ತವರಲ್ಲಿ ಸುಮಾರು ಏಳು ಸಾವಿರ ಜನರು ಚಂದ್ರನಾಗೂರು ಹಿಂದೂದೇಶದೊಡನೆ ವಿಲೀನವಾಗಬೇಕೆಂದೂ ಸುಮಾರು ನೂರು ಜನರು ಈಗಿರುವಂತೆಯೇ ಇರಬೇಕೆಂದೂ ಮತವಿತ್ತರು. ಇದರಂತೆ ಚಂದ್ರನಾಗೂರು ಹಿಂದೂದೇಶದೊಡನೆ ವಿಲೀನವಾಗಲಿದೆ. ಫ್ರೆಂಚರ ಉಳಿದ ವಸಾಹತುಗಳೂ ಈ ದಾರಿಯನ್ನೇ ಅನುಸರಿಸುವವೆನ್ನುವದರಲ್ಲಿ ಅಡ್ಡಿ ಇಲ್ಲ. ಆದರೆ ಉಳಿದ ಭಾಗಗಳ ಮತಗಣನೆ ಕೆಲವು ದಿನಗಳು ಕಳೆದು ಆಗಲಿದೆ. ಭಾರತದ ಸ್ವಾತಂತ್ರ್ಯ ಸುಂದರಿ ಮುಖದಲ್ಲಿರುವ ಈ ಚಿಕ್ಕ ಕಪ್ಪುಗಳು ಬೇಗ ಮಾಯವಾದಷ್ಟೂ ಹಿತ.

ಹಾಲು ಹೆಚ್ಚಿಸುವ ಮದ್ದು.

ಜಾನುವಾರುಗಳ ಹಾಲನ್ನು ನಂಬಲಸಾಧ್ಯವಾದ ಪ್ರಮಾಣದಲ್ಲಿ ಹೆಚ್ಚಿಸುವ ಒಂದು ಔಷಧಿಯನ್ನು ಬ್ರಿಟನಿನಲ್ಲಿ ಯಶಸ್ವಿಯಾಗಿ ಪ್ರಯೋಗಿಸಲಾಗಿದೆ. ಈ ಔಷಧಿಯನ್ನು ಸ್ವಾದವಿಲ್ಲದ ಮಾತ್ರೆಗಳ ರೂಪದಲ್ಲಿ ತಯಾರಿಸಲಾಗುವದು. ದನಗಳು ಇದನ್ನು ಸೇವಿಸಿದಾಗ ಅವು ದಿನಂಪ್ರತಿ ಒಂದೆರಡು ಕಾಲ್ತಿ ಹೆಚ್ಚು ಹಾಲನ್ನು ಕೊಟ್ಟದ್ದು ಗಮನಕ್ಕೆ ಬಂದಿದೆ.

ವಯಸ್ಸು ಮತ್ತು ಆಕರ್ಷಣೆ

ಎಂಬ ಶಿರೋನಾಮೆಯಿಂದ ಅಮೃತಬಜಾರ ಪತ್ರಿಕೆಯಲ್ಲಿನ ಒಂದು ಲೇಖನವು ಹೀಗೆ ನಿರೂಪಿಸುತ್ತದೆ:

ಶರೀರದ ಆಕರ್ಷಣೆಯನ್ನು ಬಾಧಿಸುವ ವಯಸ್ಸಿನ ದುಷ್ಪರಿಣಾಮದ ಸೋಂಕು ತಗಲದ ಜಗತ್ತಿನ ಅತಿವಿರಳ ವ್ಯಕ್ತಿಗಳಲ್ಲಿ ಕ್ಲಿಯೋಪಾತ್ರಾ, ಬರ್ನಾರ್ಡ್ ಶಾ, ಆಗಖಾನ್, ಐನ್‌ಸ್ಟೀನ್ ಮತ್ತು ಜವಾಹರಲಾಲ್ ನೆಹರುಗಳು, ಅತ್ಯಂತ ಗಣನೀಯರು. ವಯಸ್ಸನ್ನು ಪ್ರತಿಭಟಿಸುವ ಅವರ ಶಕ್ತಿಯು ಇನ್ನೂ ರಹಸ್ಯವಾಗಿಯೇ ಇದೆ. ಕತ್ತೆಯ ಹಾಲಿನ ಸ್ನಾನ, ಸಸ್ಯಾಹಾರ, ಆಕರ್ಷಕ ಸ್ತ್ರೀಯ ಕೂಡಗೂಡಿ ದಿನಕ್ಕೊಂದಾವರ್ತಿ ಗೋಲ್ಫ್ ಆಟವಾಡುವಿಕೆ, ಯಾರೊಡನೆಯೂ ಮನಃಕ್ಲೇಶವಿಲ್ಲದಿರುವಿಕೆ, ಪ್ರಾಥಃಕಾಲದ ವ್ಯಾಯಾಮ ನಂತರದ ಲಘು ಆಹಾರ ಸೇವನೆ ಇವೇ ಮೊದಲಾದ ಕೆಲವು ಕಾರ್ಯಕ್ರಮಗಳಿಗೆ ಊಹಕರು ಕೆಲವರು ಪ್ರಾಧಾನ್ಯ ಕೊಟ್ಟಿದ್ದಾರೆ.

ಬರ್ಲಿನ್.

ಜರ್ಮನಿ ಸಂಬಂಧವಾಗಿ ಒಂದು ಒಪ್ಪಂದ ಸಾಧಿಸಬೇಕೆಂಬ ಆತುರದಿಂದ ಪ್ಯಾರಿಸಿನಲ್ಲಿ ಕೆಲವು ದಿನಗಳಿಂದ ನೆರೆದಿರುವ ರಷ್ಯಾ, ಇಂಗ್ಲೆಂಡು, ಫ್ರಾನ್ಸ್, ಅಮೇರಿಕ ಚತುರ್ರಾಷ್ಟ್ರಗಳ ವಿದೇಶ ಮಂತ್ರಿಕೂಟವು ಪಟ್ಟಲು ಪ್ರಕಾರ ಪರಾಭವವನ್ನಲ್ಲದೆ ಸಾರ್ಥಕತೆಯನ್ನೂ ಪಡೆದಿಲ್ಲ. ಪ್ರಥಮತಃ ಅಖಿಲ ಜರ್ಮನಿಗೆ—ಆ ಮೇಲೆ ಪ್ರತ್ಯೇಕವಾಗಿ ಬರ್ಲಿನಿಗೆ— ಚತುರ್ರಾಷ್ಟ್ರೀಯ ಸಂಯುಕ್ತಾಡಳಿತ ಸ್ಥಾಪಿಸುವ ಮಾತುಕತೆಗಳು ನಡೆದು ಎರಡೂ ಕ್ರಮಶಃ ನಿರರ್ಥಕವಾದವು; ಆ ಮೇಲೆ ಇಕ್ಕಡೆಯವರ ಪಾಲಿನ ಬರ್ಲಿನ್ ಭಾಗಗಳೊಳಗಿನ ವಹಿವಾಟು ಸಂಬಂಧದ ವಿವಾದಗಳನ್ನೂ, ಬರ್ಲಿನ್ ರೈಲ್ವೇ ಮುಷ್ಕರವನ್ನೂ ಮುಕ್ತಾಯಗೊಳಿಸುವ ಸಂಧಾನ ಮಾತುಕತೆಗಳು ನಡೆದು ಆ ಕುರಿತೂ ಏನಾದರೊಂದು ತೀರ್ಮಾನವಾಗುವದು ಪ್ರಯಾಸಕರವೆಂದು ತೋರಿಬಂತು; ಕೊನೆಗೆ ಬರ್ಲಿನಿನಲ್ಲಿರುವ ಚತುರ್ರಾಷ್ಟ್ರೀಯ ಅರ್ಥತಜ್ಞರ ಪರ್ಯಾಲೋಚನೆಗೆ ಈ ಪ್ರಶ್ನೆಯನ್ನು ಒಪ್ಪಿಸಿದಾಗ, ಅವರು ಸಾಕಷ್ಟು ಸಮಯ ಚರ್ಚಿಸಿದರೂ ಒಂದು ತೀರ್ಮಾನಕ್ಕೆ ಬರಲಾಗಿಲ್ಲ. ಹೇಗಾದರೂ ಮಾಡಿ, ಒಂದು ತಿಂಗಳಾಗುತ್ತಾ ಬರುತ್ತಿರುವ ಬರ್ಲಿನ್ ರೈಲ್ವೇ ಮುಷ್ಕರವನ್ನು ಮುಕ್ತಾಯಗೊಳಿಸುವ ವ್ಯವಸ್ಥೆಯಾಗಬಹುದೆಂದು ನಂಬಲಾಗಿದೆ.

೪೪೦ ಮಹಡಿಯ ಕಟ್ಟಡ.

ಸಂಯುಕ್ತ ಅಮೇರಿಕದ ಸ್ಯಾನ್‌ಫ್ರಾನ್ಸಿಸ್ಕೋ ನಗರದಲ್ಲಿ ೪೪೦ ಮಹಡಿಗಳುಳ್ಳ ಜಗತ್ತಿನ ಅತೀ ಎತ್ತರದ ಕಟ್ಟಡವನ್ನು ಕಟ್ಟುವ ಒಂದು ಯೋಜನೆಯ ನಕಾಶೆಯನ್ನು ಸಿದ್ಧಪಡಿಸಲಾಗಿದ್ದು, ಅದನ್ನು ಮಂಜೂರಾತಿಗಾಗಿ ಸಂಬಂಧಪಟ್ಟ ನಗರ ಸಭಾಧಿಕಾರಿಗಳ ಪರಿಶೀಲನೆಗೆ ಕಳುಹಿಸಲ್ಪಟ್ಟಿದೆ. ಕಟ್ಟಡದ ಖರ್ಚು ೧೭೫ ಕೋಟಿ ಪವನುಗಳಷ್ಟಾಗಬಹುದೆಂದು ಅಂದಾಜು ಮಾಡಲಾಗಿದೆ.

ಈ ಕಟ್ಟಡವೆಂದರೆ ಒಂದು ನಗರದಂತೇ ಇರುವದು. ಅದರಲ್ಲಿ ೧೦೦೦ ಅಂಗಡಿಗಳೂ, ೧೦ ಆಸ್ಪತ್ರೆಗಳೂ, ೫೦ ರಾತ್ರೆ ಕ್ಲಬ್ಬುಗಳೂ, ೨೦ ಇಗರ್ಜಿಗಳೂ, ಇರುವವು. ೩೦೦ ವಿದ್ಯುಚ್ಛಕ್ತಿ ಏಣಿಗಳನ್ನು ಜೋಡಿಸಲಾಗುವದು. ೮೦ ಸಾವಿರ ಮೋಟಾರು ವಾಹನಗಳನ್ನು ನಿಲ್ಲಿಸಲು ಅದರಲ್ಲಿ ಸ್ಥಳವಿಡಲಾಗುವದು.

ಸ್ಟರ್ಲಿಂಗ್ ಬಾಕಿ,

ಯುದ್ಧ ಸಮಯದಲ್ಲಿ ಭಾರತವು ಬ್ರಿಟಿಷ್ ಸರಕಾರಕ್ಕೆ ಸರಬರಾಯಿ ಮಾಡಿದ ಸಾಮಾನು ಸಾಹಿತ್ಯಗಳ ಬಾಪ್ತು ಹಿಂದೂದೇಶಕ್ಕೆ ಬರತಕ್ಕದ್ದಿರುವ ಸ್ಟರ್ಲಿಂಗ್ ಬಾಕಿಯ ಮಾತುಕತೆ ಇಂಗ್ಲೆಂಡಿನಲ್ಲಿ ನಡೆಯುತ್ತಿದೆ. ಕಳೆದ ವರ್ಷ ಹಿಂದೂದೇಶದ ಆರ್ಥಿಕ ಮಂತ್ರಿಯಾಗಿದ್ದ ಷಣ್ಮುಗಂ ಚೆಟ್ಟಿಯವರ ನೇತೃತ್ವದಲ್ಲಿ ಈ ಮಾತುಕತೆ ನಡೆದು ಹಿಂದೂದೇಶಕ್ಕೆ ಬರತಕ್ಕದ್ದಿರುವ ಬಾಕಿಯಲ್ಲಿ ಮೂರು ವರ್ಷಗಳಿಗಾಗಿ ೧೩೦ ಮಿಲಿಯ ಪೌಂಡು ಕೊಡಲು ಒಪ್ಪಲಾಗಿತ್ತು. ಇದು ಬಹು ಕಡಿಮೆಯಾಗಿದ್ದು ಇಂಡಿಯಾದ ಆವಶ್ಯಕತೆಗೆ ಸಾಲದಾಗಿ ೧೯೪೯–೫೦ರ ಸಾಲಿನ ಸುಮಾರು ೪೦ ಮಿಲಿಯ ಪೌಂಡುಗಳು ಖರ್ಚಾಗಿ ಹೋಗಿವೆ. ಈ ವರ್ಷ ಇದಕ್ಕೂ ಹೆಚ್ಚಿನ ಆವಶ್ಯಕತೆ ಇದೆ. ಈ ಬಗ್ಗೆ ಮಾತುಕತೆಗಳು ಲಂಡನಿನಲ್ಲಿ ನಡೆಯುತ್ತಿವೆ. ಇದಕ್ಕಾಗಿ ಇಂಡಿಯಾದ ಆರ್ಥಿಕ ಸಚಿವರಾದ ಡಾ. ಮತ್ತಾಯಿಯವರು ಹೋಗಲಿದ್ದಾರೆ. ಹಿಂದೂದೇಶದ ಔದ್ಯೋಗಿಕ ಪ್ರಗತಿಗಾಗಿ ಬಂಡವಾಳವಿಲ್ಲದೆ ಹೊರಗಿನ ದೇಶಗಳಿಂದ ಬಂಡವಾಳವನ್ನು ಆಹ್ವಾನಿಸುವ ಸ್ಥಿತಿ ಭಾರತಕ್ಕೆ ಬಂದಿರುವಾಗ ತನಗೆ ಸಲ್ಲತಕ್ಕದ್ದಿರುವ ಈ ಬಾಕಿಯನ್ನು ಒಂದೇ ಗಂಟಿನಿಂದ ಪಡೆಯಬೇಕಿತ್ತು. ಇಂಗ್ಲೆಂಡಿನ ಸ್ಥಿತಿ ಭಾರತಕ್ಕಿಂತಲೂ ಬಹು ಚೆನ್ನಾಗಿದೆ. ಆದರೂ ಅದು ಈ ಬಾಕಿಯನ್ನು ಕೊಡುತ್ತಿಲ್ಲ. ತನ್ನಲ್ಲಿ ಉಳುವರಿಯಾದ ಹಣದಿಂದ ಇದನ್ನು ಪಾವತಿ ಮಾಡುವಂತಿದೆ. ಇದು ಭಾರತಕ್ಕೆ ತುಂಬಾ ಅಡಚಣೆಯನ್ನು ಉಂಟುಮಾಡಿದೆ. ಈ ಸಲದ ಮಾತುಕತೆಯಲ್ಲಿ ಹೇಗೆ ತೀರ್ಮಾನವಾದೀತೋ ನೋಡಬೇಕು.

ಚೈನಾ.

ಚೈನಾದಲ್ಲೀಗ ಕಮ್ಯೂನಿಸ್ಟ್ ಸೇನೆಗಳು ಸರಕಾರಿ ಆಶ್ರಯಿತ ದಕ್ಷಿಣ ಭಾಗದೊಳಗೆ ಮುನ್ನುಗ್ಗಿ ಅಲ್ಲಿಯ ಹುನಾನ್ ಪ್ರಾಂತ್ಯವನ್ನು ಪ್ರವೇಶಿಸಿವೆ. ರಷ್ಯದ ಪಾಲಿನ ಜರ್ಮನ್ ಕ್ಷೇತ್ರದಲ್ಲಿರುವ ಜರ್ಮನ್ ಮರ್ಮಜ್ಞರನ್ನೂ, ತಜ್ಞ ಸಲಹೆಗಾರರನ್ನೂ ತಮಗಾಗಿ ಚೀನೀ ಕಮ್ಯೂನಿಸ್ಟರು ಸಂಗ್ರಹಿಸಿಕೊಳ್ಳುತ್ತಿರುವರೆಂದು ತಿಳಿದುಬಂದಿದೆ. ಅನ್ಯದೇಶಗಳೊಡನೆ ತಮ್ಮ ಸಂಬಂಧಸ್ಥಾಪನೆ ಮಾಡಿಕೊಳ್ಳುವ ವರೆಗೆ ರಷ್ಯದಿಂದ ಇಂತಹ ತಜ್ಞ ಜನಸಹಾಯ ಕೇಳಬಾರದೆಂಬುದೇ ಚೀನಿ ಕಮ್ಯೂನಿಸ್ಟರ ಧೋರಣೆಯಂತೆ. 'ಚೈನದ ಅಂತಃಕಲಹದಲ್ಲಿ ಕೈಹಾಕುವ ಇಚ್ಛೆಯೇ ಬ್ರಿಟನಿಗಿಲ್ಲ. ಬ್ರಿಟನು ಅಲ್ಲಿಯ ಅಂತರ್ಯುದ್ಧದಲ್ಲಿ ಎಂದೂ ಕೈಹಾಕಿದ್ದಿಲ್ಲ. ನಾವು ಕಮ್ಯೂನಿಸ್ಟ್, ಕಮ್ಯೂನಿಸ್ಟ್ ವಿರೋಧಿ, ಕ್ಯೂಮಿಂಟಂಗ್ ಅಥವಾ ಬೇರಾವುದೇ ಪಕ್ಷವನ್ನಾಧರಿಸಿ ಚೀನೀ ಸಮಸ್ಯೆಯನ್ನು ನೋಡುವಂತಿಲ್ಲ. ಅಲ್ಲಿ ಯಾವ ಪಕ್ಷವೇ ಮೇಲ್ಗೈಯಾಗಲಿ, ಅದು ನಮಗವಕಾಶ ಹೊದಗಿಸಿ ಕೊಡುತ್ತದಾದರೆ ಅವರೊಡನೆ ವ್ಯವಹಾರ ಬೆಳಸಲು ಬ್ರಿಟನು ಸಿದ್ಧವಿದೆ' ಎಂದು ಬ್ರಿಟನಿನ ವಿದೇಶ ಮಂತ್ರಿ ಬೆವಿನರು ಬ್ರಿಟಿಷ್ ಲೇಬರ್ ಪಕ್ಷದ ವಾರ್ಷಿಕ ಸಮ್ಮೇಳನದಲ್ಲಂದಿದ್ದಾರೆ. ಚೈನದ ಕೆಂಪು ಸರಕಾರದೊಡನೆ ಸಂಬಂಧ ನಿರ್ಮಿಸುವ ಮಾತುಕತೆಗಳನ್ನು ಬ್ರಿಟನು ಇಷ್ಟರಲ್ಲೇ ನಡೆಸುತ್ತದೆ ಎಂದು ಪ್ರಚಾರವಾಗಿರುವ ಸುದ್ದಿಯು ಪೂರ್ಣ ಸುಳ್ಳೆಂದು ಬ್ರಿಟಿಷ್ ಸರಕಾರದ ನಕಾರ ಬಂದಿದೆ.

GOOD PADDY SEEDS.

"High yeilding, Coorg grown, Coimbatore Sanna Rs. 13-12-0 per batti is available in limited quantities. Apply to the Agronomist, Indian Coffee Board, CHETTALLI."

NOTICE.

Notice having been given of the loss of policy No 37341. issued by this company on the life of Mr Byrattira G. Karumbaya of Katakeri, (Coorg.) a duplicate policy will be issued unless any objection is lodged with us within one month from the date hereof.

MANAGING DIRECTOR,
Warden Insurance Co, Ltd;
Sri Phiroshah Mehta Road
Fort, BOMBAY
D. 16-6-49.

॥ ಪತ್ರವ್ಯವಹಾರಗಳು ॥

ದೇವನೂರು ನಾಲೆ

ಈ ನಾಲೆಯನ್ನು ಸರಿಪಡಿಸಲಾಗುವದೆಂಬ ಸರಕಾರದ ಭರವಸೆಯಿಂದ ಅದರ ಸಂತ್ರಮುತ್ತಿದ್ದ ಹೆಚ್ಚು ಭೂಮಿಯನ್ನು ಹರಾಜಿನಲ್ಲಿ ಏರಿದ ಬೆಲೆಗೆ ಪಡೆದು ಅನೇಕರು ಈಗ ಕಷ್ಟಪಡುತ್ತಿದ್ದಾರೆ. ಈ ನಾಲೆಯನ್ನು ರಿಪೇರಿ ಮಾಡುವ ಬಗ್ಗೆ ಅನೇಕ ಬಾರಿ ಚೀಫ್ ಕಮಿಷನರನ್ನು ಕಾಣಲಾಗಿದೆ. ಪ್ರತಿ ಚೀಫ್ ಕಮಿಷನರು ಇದನ್ನು ಸ್ವತಹ ನೋಡಿ, ಅಂದಾಜು ಪಟ್ಟಿ ರಿಮಾಡಿಸಿ ತೆರಳಿದ್ದಾರೆ. ಈ ವಿಚಾರ ಕೂಗಿಕೊಂಡುದು ಸಾಲದೆ ಕೌನ್ಸಿಲಿನಲ್ಲಿ ಈ ಬಗ್ಗೆ ಠರಾವನ್ನು ಮಂಡಿಸಲಾಯಿತು. ಠರಾವು ಪಾಸಾದರೂ ಸರಕಾರ ಈ ಬಗ್ಗೆ ಗಮನ ಕೊಟ್ಟಿಲ್ಲ. ಹಳೆನಾಲೆಯು ಹುಡುಪು ಜಾಗವನ್ನು ತಪ್ಪಿಸಿ ಹೊಸದಾರಿಗಾಗಿ ಕಂಟ್ರಾಕ್ಟ್ ತೆಗೆದುಕೊಂಡು ಕೆಲಸಮಾಡುವ ಪರಿದ್ದರೆ ಮಾಡಬಹುದೆಂದ ಕಾರಣ ಈ ಕಮಿಷನರ ಮುಂದೆ ಕಂಟ್ರಾಕ್ಟ ಒಪ್ಪಿಕೊಂಡಿದ್ದಾರೆ. ಆದರೆ ಇತ್ತಲಾಗಿ ಚೀಫ್ ಕಮಿಷನರು ಬಂದು ಹಳೆನಾಲೆಯ ಹುಡುಪು ಮಾರ್ಗವಾಗಿಯೇ ದುರಸ್ತಿಗೊಳಿಸುವದೆಂದು ನಿಶ್ಚಯಿಸಿದ್ದಾರೆ. ಅನೇಕ ವರ್ಷಗಳಿಂದ ಈ ನಾಲೆ ಇದ್ದು ಅದನ್ನು ಯೋಗ್ಯ ರೀತಿಯಲ್ಲಿ ದುರಸ್ತಿಗೊಳಿಸದೆ ಭೂಮಿ ಸೇಗುಹೋಗುವದು ತಪ್ಪಿಲ್ಲ. ಈಗ ನಿಶ್ಚಯಿಸಿದ ರೀತಿಯಾದರೂ ಮಾಡದೆ ದಿನ ನೂಕಲಾಗುತ್ತಿದೆ. ಗಣಿಗಳಲ್ಲಿ ಈ ಬಲದ ನಾಲೆಯನ್ನು ರಿಪೇರಿ ಮಾಡಲಾಯಿತು. ರಿಪೇರಿ ಎಂದರೆ ಒಂದುವಾರಕ್ಕೆ ಸಾವಿರರೂಪಾಯಿ ವೆಚ್ಚವಾಯಿತು. ಅಷ್ಟೆ ಭೂಮಿಯು ಏತ್ರಿಗೆ ಸರಿಯಾದ ತೂಬುಗಳನ್ನಿಡದೆ ಬಿದಿರಿನ ತೂಬುಗಳನ್ನಿಟ್ಟದಿನ್ನೆ. ಇದನ್ನು ಸರಿಪಡಿಸಲು ಅರ್ಜಿ ಬರೆಕೊಂಡರೂ ಪ್ರಯೋಜನವಾಗಿಲ್ಲ. ಈ ನಾಲೆಯನ್ನು ನಂಬಿ ವ್ಯವಸಾಯಮಾಡಿ ಅನೇಕರು ಕಷ್ಟಪಡುತ್ತಾರೆ. ಭೂಮಿಸೇಗಾಯಿತೆಂದು ಸರಕಾರ ಕೊಡುವ ರೆಮಿಶನು ಸಮುದ್ರಕ್ಕೆ ಹುಣಸೆ ಕಲಸಿದಂತೆ. ಹೆಚ್ಚು ಬೆಳೆಯಿರಿ ಎಂದು ಪ್ರಚಾರಮಾಡುವ ಸರಕಾರವು ಈ ನಾಲೆಯನ್ನು ಸರಿಪಡಿಸುವ ತೊಂದರೆ ತೆಗೆದು ಕೊಳ್ಳಬಾರದೇಕೆ? ಹೆಚ್ಚು ಬೆಳೆಯಿರಿ ಎಂದು ಕೂಗಿದಾಕ್ಷಣ ಮರುಭೂಮಿಯಲ್ಲಿ ಬೆಳೆ ಬೆಳೆದೀತೆ?

ನೊಂದವ.

ಇಂಡಿಯನ್ ಕಾಫಿ ಪ್ಲಾಂಟರುಗಳ ಸಿಬ್ಬಂದಿ.

ಯುರೋಪಿಯನ್ ಪ್ಲಾಂಟರುಗಳ ಸಿಬ್ಬಂದಿಗೂ, ಇಂಡಿಯನ್ ಪ್ಲಾಂಟರುಗಳ ಸಿಬ್ಬಂದಿಗೂ ಬಹು ದೊಡ್ಡ ವ್ಯತ್ಯಾಸವಿದೆ. ಎಲ್ಲಾ ಯುರೋಪಿಯನ್ ಪ್ಲಾಂಟರುಗಳು ತಮ್ಮ ಸಿಬ್ಬಂದಿಗಳಿಗೆ ಯು. ಪಿ. ಎ ಎಸ್. ಐ. ದರದಂತೆ ಮಾಸಿಕ ವೇತನ, ತುಟ್ಟಿಭತ್ಯ, ಪ್ರಾವಿಡೆಂಟ್ ಫಂಡು, ಕ್ರಾಪ್ ಬೋನಸ್ ಮತ್ತು ಮನೆಗಳಲ್ಲದೆ ಒತ್ತುವೊದಲಾದುವನ್ನು ಸರಿಯಾಗಿ ಕೊಡುತ್ತಾರೆ. ಆದರೆ ಇಂಡಿಯನ್ ಪ್ಲಾಂಟರುಗಳು ಇದಾವುದನ್ನೂ ಸರಿಯಾಗಿ ಅನುಸರಿಸುತ್ತಿಲ್ಲ. ಕೇವಲ ಸಂಬಳವೊಂದನ್ನು ಕೊಡುತ್ತಾರೆ. ಬೇರೆ ಯಾವ ರಿಯಾಯಿತಿಯೂ ಇಲ್ಲ. ಈ ಪ್ಲಾಂಟರುಗಳಿಗೆ ಉತ್ಪತ್ತಿಯೇನೂ ಕಡಿಮೆಯಿಲ್ಲ. ಇಡೀ ವರ್ಷ ಬಿಸಿಲು ಮಳೆ ಎನ್ನದೆ ಯಜಮಾನರನ್ನು ಮೆಚ್ಚಿಸಲು ಇವರು ದುಡಿಯುವದಿಲ್ಲವೇ?

ಇಂಡಿಯನ್ ಪ್ಲಾಂಟರ್ಸ್ ಎಸೋಸಿಯೇಶನಿರುವಂತೆ ಎಸ್ಟೇಟ್ ಸಿಬ್ಬಂದಿಗಳ ಎಸೋಸಿಯೇಶನೊಂದಿದೆ. ಈ ಎಸೋಸಿಯೇಶನಿನ ಪ್ರೆಸಿಡೆಂಟರು ಕೊಡಗಿನ ಶಾಖೆಗೆ ಬರೆದು ಎಲ್ಲಾ ಇಂಡಿಯನ್ ಪ್ಲಾಂಟರುಗಳ ಸಿಬ್ಬಂದಿಗಳು ಈ. ಎಸ್. ಎ ಎಸ್. ಐ. ಗೆ ಸದಸ್ಯರಾದಲ್ಲಿ ಅವರಿಗೆ ಯೋಗ್ಯ ಸವಲತ್ತು ದೊರೆಯುವಂತೆ ಮಾಡುವ ಭರವಸೆ ಕೊಟ್ಟಿದ್ದಾರೆ. ಆದ್ದರಿಂದ ಎಲ್ಲಾ ತೋಟದ ಸಿಬ್ಬಂದಿಗಳೂ ಅದರ ಸದಸ್ಯರಾಗಬೇಕು. ಒಬ್ಬೊಬ್ಬರು ಹೋರಾಡಿದರೆ ಕಾರ್ಯ ಕೈಗೂಡುವದಿಲ್ಲ. ಆದ್ದರಿಂದ ಎಲ್ಲಾ ತೋಟದ ಸಿಬ್ಬಂದಿಗಳು ಒಟ್ಟುಗೂಡಿ ತಮ್ಮ ಹಕ್ಕಿಗಾಗಿ ಶ್ರಮಿಸಬೇಕು,

ಒಬ್ಬ ತೋಟದ ರೈಟರು.

ಹಳ್ಳಿ ಶಾಲೆಗಳು.

ಕೊಡಗಿನಲ್ಲಿ ಸುಮಾರು 130 ಪ್ರೈಮರಿ ಶಾಲೆಗಳೂ 300 ಉಪಾಧ್ಯಾಯರುಗಳೂ ಇದ್ದಾರೆ. ಒಬ್ಬನೇ ಉಪಾಧ್ಯಾಯರಿರುವ ಶಾಲೆಗಳು 50.

ಈ ಶಾಲೆಗಳಲ್ಲಿ 3 ತರಗತಿಗಳಿಂದ 5 ತರಗತಿಗಳ ವರೆಗೆಯಿದೆ. ಆದರೆ 3 ಉಪಾಧ್ಯಾಯರಿಗಿಂತ ಹೆಚ್ಚಿರುವ ಶಾಲೆಗಳು ಒಂದೆರಡಾದರೂ ಇರಬಹುದೋ ಏನೋ! ಕೆಲವು ಶಾಲೆಗಳು ಓಬಿರಾಯನ ಕಾಲದಲ್ಲಿ ಗ್ರಾಮಸ್ಥರೇ ಕಟ್ಟಿಸಿದ್ದು. ಕೆಲವು ದನಗಳ ಕೊಟ್ಟಿಗೆಯಂತಿವೆ. ಒಂದೇ ಕೋಣೆಯ ಹಾಲಿನಲ್ಲಿ 2-3 ತರಗತಿಗಳಿವೆ. ಶಾಲೆಯಲ್ಲಿ ನ್ಯಾಯವಾದ ಬೆಳಕಿಲ್ಲ. ಕೂರಲು ಬೆಂಚು ಡೆಸ್ಕುಗಳಿಲ್ಲ. ಮೇಲು ಮನೆಗೆ ಸೀಲಿಂಗ್ ಇಲ್ಲ. ಕುಡಿಯುವ ನೀರಿಗೆ ಬಾವಿ ಇಲ್ಲ. ಮಧ್ಯಾಹ್ನದ ಬುತ್ತಿ ಊಟ ಮಾಡಲು ಪಾಳುಬಿದ್ದ ಕೆರೆ ಇಲ್ಲವೇ ಗದ್ದೆಯ ನೀರೇ ಗತಿ. ಕುಡಿಯಲು ಸಹ ಅದೇ ನೀರು. ಊಟ ಮಾಡಲು ಅನುಕೂಲವಾಗುವಂತೆ ಶಾಲೆಯಲ್ಲಿ ಮರೆಮಾಡವಿಲ್ಲ. ಇದು ಯಾರಿಗೆ? 4 ವರ್ಷ ಪ್ರಾಯದಿಂದ 10 ವರ್ಷ ಪ್ರಾಯದ ಎಳೆ ಕೂಸುಗಳಿಗೆ! ದೇಶದ ಮುಂದಿನ ಪೀಳಿಗೆಗೆ. ಆ ಬಡ 'ನೇಗಿಲ ಯೋಗಿಯ' ಆ ಬತ್ತಿದ ಒಡಲ ರೈತನ 'ಸರಕಾರದ ಬೆನ್ನೆಲುಬು' ಎಂದು ಕರೆಸಿಕೊಳ್ಳುವ ಆ ಬಡಪಾಯಿ ಕಂದಮ್ಮಗಳಿಗೆ!

ಒಂದು ಹಳ್ಳಿಗೆ ಶಾಲೆ ಬೇಕೆಂದಾದರೆ ಗ್ರಾಮಸ್ಥರು ಒಂದು ಕಟ್ಟಡವನ್ನು ಕಟ್ಟಿಸಿ ಬಿಡುವದು ಉಳಿದ ಅನುಕೂಲತೆಗಳನ್ನು ಸರಕಾರದವರು ಮಾಡಿ ಕೊಡುವರು. ಇಲ್ಲವೆ ಆದರ ಆಚೆಗಿನ ಸೌಕರ್ಯಗಳು ಏನೇನು ಎಂಬದು ಗೊತ್ತಿರುವದಿಲ್ಲ. ಅನೇಕ ಶಾಲೆಗಳಲ್ಲಿ 1-2 ಕೊಟಡಿಗಳಿವೆ. ಇವುಗಳಲ್ಲಿ 3ರಿಂದ5 ತರಗತಿಗಳಿರುತ್ತವೆ ಒಟ್ಟು 2 ರಿಂದ 3 ಉಪಾಧ್ಯಾಯರು. ಒಬ್ಬೊಬ್ಬ ಉಪಾಧ್ಯಾಯರು ಒಂದೊಂದು ತರಗತಿಯಲ್ಲಿ ಪಾಠ ಮಾಡುತ್ತಿರುವಾಗ ಉಳಿದ ತರಗತಿಯ ಮಕ್ಕಳು ಪಾಠವಿಲ್ಲದೆ ಸುಮ್ಮನೆ ಕಾಲಕಳೆಯುತ್ತಿರುವರು. ಉಪಾಧ್ಯಾಯರಿಲ್ಲದ ತರಗತಿಯ ಮಕ್ಕಳು ಸುಮ್ಮನಿರುವಿಕೆ ಎಂದರೆ ಅದೇನೆಂಬದು ಬಹುಶಃ ಎಲ್ಲರಿಗೂ ಗೊತ್ತಿರಬಹುದು. ಈ ತೆರನಾದ ಸಮ್ಮನಿರುವಿಕೆಯಿಂದ ಚಿಕ್ಕಮಕ್ಕಳಲ್ಲಿ ವಿದ್ಯೆಯ ಮೇಲೆ ಆಲಸಿಕೆಯೂ ಪುಂಡುಗಾರಿಕೆಗೆ ಅನುವೂ ದೊರೆತು ಮುಂದಿನ ಶಾಲೆಗಳಲ್ಲಿ ಮಕ್ಕಳನ್ನು ತಿದ್ದಿ ಅವರನ್ನು ಒಳ್ಳೆ ದಾರಿಗೆ ತಂದು ಅವರನ್ನು ನಾಗರೀಕರನ್ನಾಗಿ ಮಾಡುವದು ಕಠಿಣವಾಗಿಯೂ ಅಸಾಧ್ಯ. ಹಳ್ಳಿ ಶಾಲೆಗಳಲ್ಲಿಯೇ ಪ್ರೈಮರಿ ವಿದ್ಯೆಯನ್ನು ಕಲಿತು ಬಂದ ಮಕ್ಕಳು ಮುಂದಿನ ತರಗತಿಗಳಲ್ಲಿ ಯೋಗ್ಯ ಪ್ರಗತಿಯನ್ನು ಹೊಂದಿದವರು ತೀರಾ ವಿರಳ. ತರಗತಿಗೊಬ್ಬ ಉಪಾಧ್ಯಾಯನಿಲ್ಲದೆಯೂ ಯೋಗ್ಯ ಶಿಕ್ಷಣ ದೊರೆಯದೆಯೂ ಇರುವದರಿಂದ ಹಳ್ಳಿ ಶಾಲೆಗಳಲ್ಲಿ 5 ತರಗತಿಗಳನ್ನು ದಾಟ ಬೇಕಾದರೆ 8-9 ವರ್ಷಗಳು ಬೇಕಾಗುವದರಿಂದ ಮುಂದೆ ಪಟ್ಟಣ ಶಾಲೆಗಳಿಗೆ ಹೋಗಲು ವಯಸ್ಸು. ಬೆಳವಣಿಗೆಯೂ ಸುತ್ತಲಿನ ಮಕ್ಕಳಿಗಿಂತ ಹೆಚ್ಚಾಗುವದರಿಂದ ಹಳ್ಳಿ ಶಾಲೆಯಲ್ಲೇ ತನ್ನ ಶಾಲಾ ಆಯುಸ್ಸನ್ನು ಮುಗಿಸಬೇಕಾಗುತ್ತದೆ.

ಈ ಕಾರಣಗಳಿಂದಾಗಿ ಸ್ವಲ್ಪ ಅನುಕೂಲವಿರುವವರೂ ತನ್ನ ಮಕ್ಕಳಿಗೆ ವಿದ್ಯೆ ಕಲಿಸಬೇಕೆಂಬ ಇರಾದೆಯಿರುವವರೂ ಹಳ್ಳಿಗಳನ್ನು ಬಿಟ್ಟು ಪಟ್ಟಣಗಳನ್ನು ಸೇರಲು ಇದೊಂದು ಕಾರಣವಾಗಿದೆ. ಇದರಿಂದಾಗಿ ಹಳ್ಳಿಗಳಲ್ಲಿ ಉಳಿವವರಾರು. ಮೂಢ ನಂಬಿಕೆಯ ಹಳೇ ಸಂಪ್ರದಾಯದ ಒಗ್ಗಟ್ಟಿಲ್ಲದ ಬಡಜನರ ತಂಡ. ಇತ್ತೀಚೆಗೆ ಜನರಲ್ಲಿ ಅದೊಂದು ಚಳುವಳಿಯಾಗಿ ಹಬ್ಬಿರುವ ವಿದ್ಯಾಪ್ರಸಾರಕ್ಕೆ ಸರಕಾರದವರಲ್ಲಿ ಇಷ್ಟೊಂದು ಅನಾಸಕ್ತಿ ಎಂದ ಮೇಲೆ ಬಡ ರೈತನ ಪಾಡೇನು.

ಹಯ್ಯರ್ ಎಲಿಮೆಂಟರಿ ಮತ್ತು ಹೈಸ್ಕೂಲ್‌ಗಳಲ್ಲಿ ತರಗತಿಗೊಂದು ಕೊಠಡಿ, ಒಬ್ಬ ಉಪಾಧ್ಯಾಯನಲ್ಲದೆ ಒಂದೆರಡು ಉಪಾಧ್ಯಾಯರು ಹೆಚ್ಚಿಗೆ ಅಲ್ಲದೆ ಶಾಲಾ ಸೌಕರ್ಯಗಳೂ ಒಂದೆರಡು ಆಳುಗಳೂ ಇರುವವು. ಈ ಬಡ ರೈತನ ಮಕ್ಕಳು ಓದುವ ಈ ಹಳ್ಳಿ ಶಾಲೆಗಳಿಗೇಕೆ ಇಷ್ಟೊಂದು ಪಕ್ಷಪಾತ. ಹಳ್ಳಿ ಶಾಲೆಯ ಉಪಾಧ್ಯಾಯರಿಗೆ ಸಾಕಷ್ಟು ವೇತನ ಕೂಡ ಇಲ್ಲ!

ವಯಸ್ಸಿಗೆ ತಕ್ಕಂತೆ ತರಗತಿಯಲ್ಲಿ ಏರದಿದ್ದರೆ ಮಕ್ಕಳಿಗೂ ಅವರ ಪೋಷಕರಿಗೂ ವಿದ್ಯೆಯಲ್ಲಿ ಅಭಿರುಚಿಯಿಲ್ಲದೆ ಕೇವಲ ಹಳ್ಳಿ ಶಾಲೆಗಳಿಂದಲೇ ಅಮೂಲ್ಯವಾದ ಇನ್ನು ಮುಂದೆ ಎಂದೂ ದೊರೆಯಲಾರದ ತಮ್ಮ ವಿದ್ಯೆಯನ್ನು ಕೊನೆಗಾಣಿಸಿ ಪ್ರಪಂಚವನ್ನೇ ಅರಿತುಕೊಳ್ಳಲಾರದ ಜನರ ಆದೊಂದು ಹಿಂಡಾಗಿ ಜೀವಮಾನವನ್ನೆಲ್ಲಾ ಚಿಕ್ಕಂದಿನಲ್ಲಿ ಮೈಯ್ಯೂಡಿದ ಆ ಆಲಸಿಕೆಯಲ್ಲೇ, ಆ ಪುಂಡು ಆ ಮೊಂಡು ತನದಲ್ಲೇ ಆರೋಗ್ಯ, ಶಕ್ತಿ, ಸಮಯದ ಬೆಲೆ, ಹಣದ ಬೆಲೆ ಕಾರ್ಯ ತತ್ಪರತೆ, ಕಾರ್ಯ ದಕ್ಷತೆ, ಪ್ರಮಾಣಿಕತನ, ಒಗ್ಗಟ್ಟು, ಪರಸ್ಪರ ಪ್ರೀತಿ ವಿಶ್ವಾಸಗಳಿಲ್ಲದೆ ಮೂಢ ನಂಬಿಕೆಯಲ್ಲೇ ಕಾಲವನ್ನು ದೂಡುತ್ತಾ ಜೀವನ್ಮೃತರಾಗಿ 40-45 ವಯಸ್ಸಿನಲ್ಲೇ ಜೀವನ ಕಥೆಯನ್ನು ಮುಗಿಸಬೇಕಾಗುವದು. ಈಗಲಾದರೂ ಈ ಹೊಸ ಯುಗದಲ್ಲಾದರೂ ಅಲ್ಲಸಲ್ಲದ ನೆವ ಹೇಳದೆ ಒಡನೆ ಈ ಹಳ್ಳಿ ಶಾಲೆಗಳ ಕಡೆಗೆ ನಿಗವಿಡಬೇಕಾಗಿ ಸರಕಾರದವರಲ್ಲಿ ದೈನ್ಯ ವಿನಂತಿ.

ಐ ಪಿ ಮಾದಪ್ಪ.

ಮರೆನಾಡಿನ ಸ್ಥಿತಿ

ಮರೆನಾಡಿನ ಕಷ್ಟದ ವಿಶಯ ಸರಕಾರಕ್ಕೆ ಅರ್ಜಿ ಒರೆದೂ ಬರೆದು ಸಾಕಾಯಿತು. ಚೀಫ್ ಕಮಿಷನರನ್ನು ಖುದ್ದು ಕಂಡು ಕಷ್ಟವನ್ನು ಹೇಳಿ ಆಯಿತು. ಮರೆನಾಡನ್ನು ಸ್ವತಹ ನೋಡಲು ಬರುತ್ತೇನೆಂದು ಮಾತು ಕೊಟ್ಟರಲ್ಲದ ಈ ವರೆಗೆ ಅವರ ಸುಳಿವಿಲ್ಲ. ಮರೆನಾಡಿಗೆ ಹೋಗಲು ಹೆಸರಿಗೆ ರಸ್ತೆ ಇದೆ ಆದರೆ ಮಧ್ಯೆ ಇರುವ ಹೊಳೆಗೆ ಸೇತುವೆ ಇಲ್ಲದೆ ಮರೆನಾಡು ದ್ವೀಪದಂತಾಗಿದೆ. ಇರುವ ಒಂದು ತೂಗುಪಾಲವು ರಿಪೇರಿ ಇಲ್ಲದೆ ಅಪಾಯಕರ ಸ್ಥಿತಿಯಲ್ಲಿದೆ. ಇದನ್ನು ದುರಸ್ತಿಗೊಳಿಸಲು ಅನೇಕ ಸಾರಿ ಬರೆದಾಯಿತು. ಮರೆನಾಡಿನವರ ಕೂಗು ಯಾವ ಸರಕಾರದ ಅಧಿಕಾರಿಗೂ ಮುಟ್ಟುವಂತಿಲ್ಲ. ಇವರ ಕೂಗನ್ನು ಸರಕಾರಕ್ಕೆ ಮುಟ್ಟಿಸುವ ಸಹಾಯಕರೂ ಇಲ್ಲ. ಮರೆನಾಡಿನಲ್ಲಿ ಯಾರಿಗಾದರೂ ಕಾಯಿಲೆಯಾದರೆ ದೇವರೇ ಅವರನ್ನು ಕಾಪಾಡಬೇಕು. ಅವರನ್ನು ಆಸ್ಪತ್ರೆಗೆ ಸಾಗಿಸುವದು ಸಾಧ್ಯವಿಲ್ಲ. ಡಾಕ್ಟರನ್ನು ಕರೆತರಿಸುವದೆಂದರೆ ಮಳೆಗಾಲದಲ್ಲಿ ಯಾವ ಡಾಕ್ಟರೂ ಬರುವದಿಲ್ಲ. ಬಡ ಜನರು ಯೋಗ್ಯ ಔಷಧಿ, ಚಿಕಿತ್ಸೆಯ ಅಭಾವದಿಂದ ಸಾಯುತ್ತಾರೆ. ಈ ನಾಡಿನವರ ಬಗ್ಗೆ ಸರಕಾರಕ್ಕೂ, ಜನಪ್ರತಿನಿಧಿಗಳಿಗೂ ಈ ತಾತ್ಸಾರವೇಕೆ? ಮರೆನಾಡಿಗೆ ಒಂದು ಆಸ್ಪತ್ರೆ ಅತ್ಯವಶ್ಯ. ಇದು ಸದ್ಯಕ್ಕೆ ಸಾಧ್ಯವಿಲ್ಲದಿದ್ದರೆ ಹೊಳೆಗೆ ಯೋಗ್ಯ ಸೇತುವೆಯನ್ನಾದರೂ ಮಾಡಬೇಕು. ಇದಾವುದನ್ನೂ ಮಾಡದೆ ಬಡ ಮರೆನಾಡಿನವರನ್ನು ಈ ರೀತಿ ತೊಂದರೆಗೊಳಪಡಿಸುವದು ಸರಕಾರಕ್ಕೆ ಶೋಭಿಸುವ ವಿಚಾರವಲ್ಲ. ಇನ್ನಾದರೂ ಸರಕಾರವು ಎಚ್ಚೆತ್ತು ವರ್ತಿಸುವದೇ?

M. M. M.

ವಿಚಾರ ತರಂಗ.

ಗ್ರಾಮಪಂಚಾಯಿತ ಸಭೆಗಳು.

ಬೊಂಬಾಯಿ ಸರಕಾರವು ಪ್ರಾಂತದ ಹಳ್ಳಿ ಹಳ್ಳಿಗೂ ಗ್ರಾಮ ಪಂಚಾಯಿತ ಸಭೆಗಳನ್ನು ಸ್ಥಾಪಿಸಬೇಕೆಂದು ನಿಶ್ಚಯಿಸಿರುವದಾಗಿ ತಿಳಿಯಬಂದಿದೆ. ಒಂದು ಸಾವಿರಕ್ಕಿಂಥಾ ಹೆಚ್ಚಿಗೆ ಜನರಿರುವ ಗ್ರಾಮಗಳಲ್ಲಿ ಗ್ರಾಮಪಂಚಾಯಿತ ಸಭೆ ಸ್ಥಾಪಿಸಲಾಗುವದು. ಸಾವಿರಕ್ಕಿಂಥಾ ಕಡಿಮೆ ಜನಸಂಖ್ಯೆ ಇದ್ದು ಅಲ್ಲಿಯ ೫೦ ಜನ ಹಿರಿಯರು ಗ್ರಾಮಪಂಚಾಯಿತ ಸಭೆ ಬೇಕೆಂದು ಕೇಳಿದರೆ ಆ ಗ್ರಾಮಗಳಲ್ಲಿಯೂ ಗ್ರಾಮಪಂಚಾಯಿತ ಸಭೆ ಸ್ಥಾಪಿಸಲಾಗುವದು. ಈ ವರ್ಷ ಆ ಪ್ರಾಂತದಲ್ಲಿ ಸಾವಿರ ಗ್ರಾಮಪಂಚಾಯಿತ ಸಭೆಗಳನ್ನು ಸ್ಥಾಪಿಸಬೇಕೆಂದು ಸರಕಾರವು ನಿಶ್ಚಯಿಸಿದೆ. ಬೊಂಬಾಯಿ ಪ್ರಾಂತದಲ್ಲಿ ೨೨೦೦೦ ಗ್ರಾಮಗಳಿವೆ. ಇವುಗಳಲ್ಲಿ ೧೯೪೬ರಲ್ಲಿ ೧೪೦೦ ಹಳ್ಳಿಗಳಲ್ಲಿ ಮಾತ್ರ ಗ್ರಾಮ ಪಂಚಾಯಿತ ಸಭೆಗಳಿದ್ದವು. ಈಗ ಈ ಯೋಜನೆಗಾಗಿ ೧೧೪,೩೪,೮೦೦ ರೂಪಾಯಿ ವೆಚ್ಚಮಾಡಲು ಬೊಂಬಾಯಿ ಸರಕಾರವು ನಿರ್ಧರಿಸಿದೆ. ಈ ಗ್ರಾಮಪಂಚಾಯಿತ ಸಭೆಗಳಿಗೆ ಸಲಹೆ ಕೊಡಲು ಸ್ಪೆಶಲ್ ಆಫೀಸರನ್ನು ನೇಮಿಸಲಾಗುವದು. ಇವರ ಯೋಜನೆಯಂತೆ ಮೂರು ವರ್ಷಗಳಲ್ಲಿ ೫೦೦೦ ಗ್ರಾಮ ಪಂಚಾಯಿತಗಳನ್ನು ನೇಮಿಸಲಿರುವರು.

ಚಂದ್ರನಾಗೂರು ಮತಗಣನೆ.

ಹಿಂದೂಸ್ಥಾನದಲ್ಲಿ ಕೆಲವು ಪ್ರದೇಶಗಳು ಫ್ರೆಂಚರ ವಶದಲ್ಲಿ ಇನ್ನೂ ಇವೆ; ಈ ಚಿಕ್ಕ ಐದು ಪ್ರದೇಶಗಳ ಒಟ್ಟು ವಿಸ್ತೀರ್ಣ ೨೦೩ ಚದರ ಮೈಲುಗಳು. ಜನಸಂಖ್ಯೆ ೩೫,೦೦೦. ಈ ಪ್ರಾಂತಗಳು ಹಿಂದೂದೇಶದ ಭಾಗಗಳಾದ ಕಾರಣ ಅವು ಹಿಂದೂದೇಶದೊಳಗೆ ವಿಲೀನವಾಗಬೇಕಾದದು ಧರ್ಮ. ಆದರೆ ಫ್ರೆಂಚರು ಈ ಭಾಗಗಳನ್ನು ಬಿಟ್ಟುಕೊಡಲು ತಯಾರಿಲ್ಲ. ಈ ಬಗ್ಗೆ ವಿಚಾರ ವಿನಿಮಯ ನಡೆದು ಫ್ರೆಂಚ್ ಸರಕಾರವು ಆಯಾ ಭಾಗಗಳ ಭವಿಷ್ಯವನ್ನು ಅಲ್ಲಿಯ ಜನರೇ ನಿಶ್ಚಯಿಸಬೇಕೆಂದು ತೀರ್ಮಾನಿಸಿ ಆ ತಳಹದಿಯಲ್ಲಿ ಈ ಪ್ರಾಂತಗಳಲ್ಲೊಂದಾದ ಚಂದ್ರನಾಗೂರಿನ ಜನಗಣನೆಯು ತಾ. ೧೯ರಲ್ಲಿ ನಡೆಯಿತು. ಆ ಪ್ರಕಾರ ಮತವಿತ್ತವರಲ್ಲಿ ಸುಮಾರು ಏಳು ಸಾವಿರ ಜನರು ಚಂದ್ರನಾಗೂರು ಹಿಂದೂದೇಶದೊಡನೆ ವಿಲೀನವಾಗಬೇಕೆಂದೂ ಸುಮಾರು ನೂರು ಜನರು ಈಗಿರುವಂತೆಯೇ ಇರಬೇಕೆಂದೂ ಮತವಿತ್ತರು. ಇದರಂತೆ ಚಂದ್ರನಾಗೂರು ಹಿಂದೂದೇಶದೊಡನೆ ವಿಲೀನವಾಗಲಿದೆ. ಫ್ರೆಂಚರ ಉಳಿದ ವಸಾಹತುಗಳೂ ಈ ದಾರಿಯನ್ನೇ ಅನುಸರಿಸುವವೆನ್ನುವದರಲ್ಲಿ ಅಡ್ಡಿ ಇಲ್ಲ. ಆದರೆ ಉಳಿದ ಭಾಗಗಳ ಮತಗಣನೆ ಕೆಲವು ತಿಂಗಳು ಕಳೆದು ಆಗಲಿದೆ. ಭಾರತದ ಸ್ವಾತಂತ್ರ್ಯ ಸುಂದರ ಮುಖದಲ್ಲಿರುವ ಈ ಚಿಕ್ಕ ಕಪ್ಪುಗಳು ಬೇಗ ಮಾಯವಾದಷ್ಟೂ ಹಿತ.

ಹಾಲು ಹೆಚ್ಚಿಸುವ ಮದ್ದು.

ಜಾನುವಾರುಗಳ ಹಾಲನ್ನು ನಂಬಲಸಾಧ್ಯವಾದ ಪ್ರಮಾಣದಲ್ಲಿ ಹೆಚ್ಚಿಸುವ ಒಂದು ಔಷಧಿಯನ್ನು ಬ್ರಿಟನಿನಲ್ಲಿ ಯಶಸ್ವಿಯಾಗಿ ಪ್ರಯೋಗಿಸಲಾಗಿದೆ. ಈ ಔಷಧಿಯನ್ನು ಸ್ವಾದವಿಲ್ಲದ ಮಾತ್ರೆಗಳ ರೂಪದಲ್ಲಿ ತಯಾರಿಸಲಾಗುವದು. ದನಗಳು ಇದನ್ನು ಸೇವಿಸಿದಾಗ ಅವು ದಿನಂಪ್ರತಿ ಒಂದೆರಡು ಕಾಸ್ತಿ ಹೆಚ್ಚು ಹಾಲನ್ನು ಕೊಟ್ಟದ್ದು ಗಮನಕ್ಕೆ ಬಂದಿದೆ.

ವಯಸ್ಸು ಮತ್ತು ಆಕರ್ಷಣೆ

ಎಂಬ ಶಿರೋನಾಮೆಯಿಂದ ಅಮೃತಬಜಾರ ಪತ್ರಿಕೆಯಲ್ಲಿನ ಒಂದು ಲೇಖನವು ಹೀಗೆ ನಿರೂಪಿಸುತ್ತದೆ:

ಶರೀರದ ಆಕರ್ಷಣೆಯನ್ನು ಬಾಧಿಸುವ ವಯಸ್ಸಿನ ದುಷ್ಪರಿಣಾಮದ ಸೋಂಕು ತಗಲದ ಜಗತ್ತಿನ ಜೀವಿಗಳ ವ್ಯಕ್ತಿಗಳಲ್ಲಿ ಕ್ಲಿಯೋಪಾತ್ರ, ಬರ್ನಾರ್ಡ್‌ಶಾ, ಆಗಖಾನ್, ಐನ್‌ಸ್ಟೀನ್ ಮತ್ತು ಜವಾಹರಲಾಲ್ ನೆಹರುಗಳು ಅತ್ಯಂತ ಗಣನೀಯರು. ವಯಸ್ಸನ್ನು ಪ್ರತಿಭಟಿಸುವ ಅವರ ಶಕ್ತಿಯು ಇನ್ನೂ ರಹಸ್ಯವಾಗಿಯೇ ಇದೆ. ಕತ್ತೆಯ ಹಾಲಿನ ಸ್ನಾನ, ಸಸ್ಯಾಹಾರ, ಆಕರ್ಷಕ ಸ್ತ್ರೀಯರೊಡಗೂಡಿ ದಿನಕ್ಕೊಂದಾವರ್ತಿ ಗೋಲ್ಫ್ ಆಟವಾಡುವಿಕೆ, ಯಾರೊಡನೆಯೂ ಮನಃಕ್ಲೇಶವಿಲ್ಲದಿರುವಿಕೆ, ಪ್ರಾತಃಕಾಲದ ವ್ಯಾಯಾಮ ನಂತರ ಲಘು ಆಹಾರ ಸೇವನೆ ಇವೇ ಮೊದಲಾದ ಕೆಲವು ಕಾರ್ಯಕ್ರಮಗಳಿಗೆ ಊಹಕರು ಕೆಲವರು ಪ್ರಾಧಾನ್ಯ ಕೊಟ್ಟಿದ್ದಾರೆ.

ಬರ್ಲಿನ್.

ಜರ್ಮನಿ ಸಂಬಂಧವಾಗಿ ಒಂದು ಒಪ್ಪಂದ ಸಾಧಿಸಬೇಕೆಂಬ ಆತುರದಿಂದ ಪ್ಯಾರಿಸಿನಲ್ಲಿ ಕೆಲವು ದಿನಗಳಿಂದ ಸೇರಿದ್ದ ರಶ್ಯಾ, ಇಂಗ್ಲೆಂಡು, ಫ್ರಾನ್ಸ್, ಅಮೇರಿಕ ಚತುರ್ರಾಷ್ಟ್ರಗಳ ವಿದೇಶ ಮಂತ್ರಿಗಳ ಕೂಟವು ವೆಟ್ಟಲು ಪ್ರಕಾರ ಪರಾಭವವನ್ನಲ್ಲದೆ ಸಾರ್ಥಕತೆಯನ್ನೂ ಪಡೆದಿಲ್ಲ. ಪ್ರಧಾನತಃ ಅಖಿಲ ಜರ್ಮನಿಗೆ—ಆ ಮೇಲೆ ಪ್ರತ್ಯೇಕವಾಗಿ ಬರ್ಲಿನಿಗೆ— ಚತುರ್ರಾಷ್ಟ್ರೀಯ ಸಂಯುಕ್ತಾಡಳಿತೆ ಸ್ಥಾಪಿಸುವ ಮಾತುಕತೆಗಳು ನಡೆದು ಎರಡೂ ಕ್ರಮಶಃ ನಿರರ್ಥಕವಾದವು; ಆ ಮೇಲೆ ಇಕ್ಕಡೆಯವರ ಪಾಲಿನ ಬರ್ಲಿನ್ ಭಾಗಗಳೊಳಗಿನ ವಹಿವಾಟು ಸಂಬಂಧದ ವಿವಾದಗಳನ್ನೂ, ಬರ್ಲಿನ್ ರೈಲ್ವೇ ಮುಷ್ಕರವನ್ನೂ ಮುಕ್ತಾಯಗೊಳಿಸುವ ಸಂಧಾನ ಮಾತುಕತೆಗಳು ನಡೆದು ಆ ಕುರಿತೂ ಏನಾದರೊಂದು ತೀರ್ಮಾನವಾಗುವದು ಪ್ರಯೋಜಕರವೆಂದು ತೋರಿಬಂತು; ಕೊನೆಗೆ ಬರ್ಲಿನಿನಲ್ಲಿರುವ ಚತುರ್ರಾಷ್ಟ್ರೀಯ ಅರ್ಥತಜ್ಞರ ಪರ್ಯಾಲೋಚನೆಗೆ ಈ ಪ್ರಶ್ನೆಯನ್ನು ಒಪ್ಪಿಸಿದಾಗ, ಅವರು ಸಾಕಷ್ಟು ಸಮಯ ಚರ್ಚಿಸಿದರೂ ಒಂದು ತೀರ್ಮಾನಕ್ಕೆ ಬರಲಾಗಿಲ್ಲ. ಹೇಗಾದರೂ ಮಾಡಿ, ಒಂದು ತಿಂಗಳಾಗುತ್ತಾ ಬರುತ್ತಿರುವ ಬರ್ಲಿನ್ ರೈಲ್ವೇ ಮುಷ್ಕರವನ್ನು ಮುಕ್ತಾಯಗೊಳಿಸುವ ವ್ಯವಸ್ಥೆಯಾಗಬಹುದೆಂದು ನಂಬಲಾಗಿದೆ.

೪೪೦ ಮಹಡಿಯ ಕಟ್ಟಡ.

ಸಂಯುಕ್ತ ಅಮೇರಿಕದ ಸೇನ್‌ಫ್ರನ್ಸಿಸ್ಕೊ ನಗರದಲ್ಲಿ ೪೪೦ ಮಹಡಿಗಳುಳ್ಳ ಜಗತ್ತಿನ ಅತೀ ಎತ್ತರದ ಕಟ್ಟಡವನ್ನು ಕಟ್ಟುವ ಒಂದು ಯೋಜನೆಯ ನಕಾಶೆಯನ್ನು ಸಿದ್ಧಪಡಿಸಲಾಗಿದ್ದು, ಅದನ್ನು ಮಂಜೂರಾತಿಗಾಗಿ ಸಂಬಂಧಪಟ್ಟ ನಗರ ಸಭಾಧಿಕಾರಿಗಳ ಪರಿಶೀಲನೆಗೆ ಕಳುಹಿಸಲ್ಪಟ್ಟಿದೆ. ಕಟ್ಟಡದ ಖರ್ಚು ೧೭೫ ಕೋಟಿ ಪವನುಗಳಷ್ಟಾಗಬಹುದೆಂದು ಅಂದಾಜು ಮಾಡಲಾಗಿದೆ.

ಈ ಕಟ್ಟಡವೆಂದರೆ ಒಂದು ನಗರದಂತೇ ಇರುವದು. ಅದರಲ್ಲಿ ೧೦೦೦೦ ಅಂಗಡಿಗಳೂ, ೧೦ ಆಸ್ಪತ್ರೆಗಳೂ, ೫೦ ರಾತ್ರೆ ಕ್ಲಬುಗಳೂ, ೨೦ ಇಗರ್ಜಿಗಳೂ, ಇರುವವು. ೩೦೦ ವಿದ್ಯುಚ್ಛಕ್ತಿ ಏಣಿಗಳನ್ನು ಜೋಡಿಸಲಾಗುವದು. ೮೦ ಸಾವಿರ ಮೋಟಾರು ವಾಹನಗಳನ್ನು ನಿಲ್ಲಿಸಲು ಅದರಲ್ಲಿ ಸ್ಥಳವಿಡಲಾಗುವದು.

ಸ್ಟರ್ಲಿಂಗ್ ಬಾಕಿ,

ಯುದ್ಧ ಸಮಯದಲ್ಲಿ ಭಾರತವು ಬ್ರಿಟಿಷ್ ಸರಕಾರಕ್ಕೆ ಸರಬರಾಯಿ ಮಾಡಿದ ಸಾಮಾನು ಸಾಹಿತ್ಯಗಳ ಬಾಪ್ತು ಹಿಂದೂದೇಶಕ್ಕೆ ಬರತಕ್ಕದ್ದಿರುವ ಸ್ಟರ್ಲಿಂಗ್ ಬಾಕಿಯ ಮಾತುಕತೆ ಇಂಗ್ಲೆಂಡಿನಲ್ಲಿ ನಡೆಯುತ್ತಿದೆ. ಕಳೆದ ವರ್ಷ ಹಿಂದೂದೇಶದ ಆರ್ಥಿಕ ಮಂತ್ರಿಯಾಗಿದ್ದ ಷಣ್ಮುಗಂ ಚೆಟ್ಟಿಯಾರರ ನೇತೃತ್ವದಲ್ಲಿ ಈ ಮಾತುಕತೆ ನಡೆದು ಹಿಂದೂದೇಶಕ್ಕೆ ಬರತಕ್ಕದ್ದಿರುವ ಬಾಕಿಯಲ್ಲಿ ಮೂರು ವರ್ಷಗಳಿಗಾಗಿ ೧೩೦ ಮಿಲಿಯ ಪೌಂಡು ಕೊಡಲು ಒಪ್ಪಲಾಗಿತ್ತು. ಇದು ಬಹು ಕಡಿಮೆಯಾಗಿದ್ದು ಇಂಡಿಯಾದ ಆವಶ್ಯಕತೆಗೆ ಸಾಲದಾಗಿ ೧೯೪೯—೫೦ರ ಸಾಲಿನ ಸುಮಾರು ೯೦ ಮಿಲಿಯ ಪೌಂಡುಗಳು ಖರ್ಚಾಗಿ ಹೋಗಿವೆ. ಈ ವರ್ಷ ಇದಕ್ಕೂ ಹೆಚ್ಚಿನ ಆವಶ್ಯಕತೆ ಇದೆ. ಈ ಬಗ್ಗೆ ಮಾತುಕತೆಗಳು ಲಂಡನಿನಲ್ಲಿ ನಡೆಯುತ್ತಿವೆ. ಇದಕ್ಕಾಗಿ ಇಂಡಿಯಾದ ಆರ್ಥಿಕ ಸಚಿವರಾದ ಡಾ. ಮತ್ತಾಯರವರು ಹೋಗಲಿದ್ದಾರೆ. ಹಿಂದೂದೇಶದ ಔದ್ಯೋಗಿಕ ಪ್ರಗತಿಗಾಗಿ ಬಂಡವಾಳವಿಲ್ಲದೆ ಹೊರಗಿನ ದೇಶಗಳಿಂದ ಬಂಡವಾಳವನ್ನು ಆಹ್ವಾನಿಸುವ ಸ್ಥಿತಿ ಭಾರತಕ್ಕೆ ಬಂದಿರುವಾಗ ತನಗೆ ಸಲ್ಲತಕ್ಕದ್ದಿರುವ ಈ ಬಾಕಿಯನ್ನು ಒಂದೇ ಗಂಟಿನಿಂವ ಪಡೆಯಬೇಕಿತ್ತು. ಇಂಗ್ಲೆಂಡಿನ ಸ್ಥಿತಿ ಭಾರತದಕ್ಕಿಂಥಾ ಬಹು ಚೆನ್ನಾಗಿದೆ. ಆದರೂ ಅದು ಈ ಬಾಕಿಯನ್ನು ಕೊಡುತ್ತಿಲ್ಲ. ತನ್ನಲ್ಲಿ ಉಳುವರಿಯಾದ ಹಣದಿಂದ ಇದನ್ನು ಪಾವತಿ ಮಾಡುವಂತಿದೆ. ಇದು ಭಾರತಕ್ಕೆ ತುಂಬಾ ಅಡಚಣೆಯನ್ನು ಉಂಟುಮಾಡಿದೆ. ಈ ಸಲದ ಮಾತುಕತೆಯಲ್ಲಿ ಹೇಗೆ ತೀರ್ಮಾನವಾದೀತೋ ನೋಡಬೇಕು.

ಚೈನಾ.

ಚೈನಾದಲ್ಲೀಗ ಕಮ್ಯೂನಿಸ್ಟ್ ಸೇನೆಗಳು ಸರಕಾರಿ ಆಕ್ರಮಿತ ದಕ್ಷಿಣ ಭಾಗದೊಳಗೆ ಮುನ್ನುಗ್ಗಿ ಅಲ್ಲಿಯ ಹುನಾನ್ ಪ್ರಾಂತ್ಯವನ್ನು ಪ್ರವೇಶಿಸಿವೆ. ರಷ್ಯದ ಪಾಲಿನ ಜರ್ಮನ್ ಕ್ಷೇತ್ರದಲ್ಲಿರುವ ಜರ್ಮನ್ ಮರ್ಮಜ್ಞರನ್ನೂ, ತಜ್ಞ ಸಲಹೆಗಾರರನ್ನೂ ತಮಗಾಗಿ ಚೀನೀ ಕಮ್ಯೂನಿಸ್ಟರು ಸಂಗ್ರಹಿಸಿಕೊಳ್ಳುತ್ತಿರುವರೆಂದು ತಿಳಿದುಬಂದಿದೆ. ಅನ್ಯದೇಶಗಳೊಡನೆ ತಮ್ಮ ಸಂಬಂಧಸ್ಥಾಪನೆ ಮಾಡಿಕೊಳ್ಳುವ ವರೆಗೆ ರಷ್ಯದಿಂದ ಇಂತಹ ತಜ್ಞ ಜನಸಹಾಯ ಕೇಳಬಾರದೆಂಬುದೇ ಚೀನಿ ಕಮ್ಯೂನಿಸ್ಟರ ಧೋರಣೆಯಂತೆ. 'ಚೈನದ ಅಂತಃಕಲಹದಲ್ಲಿ ಕೈಹಾಕುವ ಇಚ್ಛೆಯೇ ಬ್ರಿಟನಿಗಿಲ್ಲ. ಬ್ರಿಟನು ಅಲ್ಲಿಯ ಅಂತರ್ಯುದ್ಧದಲ್ಲಿ ಎಂದೂ ಕೈಹಾಕಿದ್ದಿಲ್ಲ. ನಾವು ಕಮ್ಯೂನಿಸ್ಟ, ಕಮ್ಯೂನಿಸ್ಟ ವಿರೋಧ, ಕ್ಯೂಮಿಂಟಂಗ್ ಅಥವಾ ಬೇರಾವುದೇ ಪಕ್ಷವನ್ನಾಧರಿಸಿ ಚೀನೀ ಸಮಸ್ಯೆಯನ್ನು ನೋಡುವಂತಿಲ್ಲ. ಅಲ್ಲಿ ಯಾವ ಪಕ್ಷವೇ ಮೇಲ್ಗೈಯಾಗಲಿ, ಅದು ನಮಗವಕಾಶ ಒದಗಿಸಿ ಕೊಡುತ್ತದಾದರೆ ಅವರೊಡನೆ ವ್ಯವಹಾರ ಬೆಳೆಸಲು ಬ್ರಿಟನು ಸಿದ್ಧವಿದೆ' ಎಂದು ಬ್ರಿಟನಿನ ವಿದೇಶ ಮಂತ್ರಿ ಬೆವಿನರು ಬ್ರಿಟಿಷ್ ಲೇಬರ್ ಪಕ್ಷದ ವಾರ್ಷಿಕ ಸಮ್ಮೇಳನದಲ್ಲೆಂದಿದ್ದಾರೆ. ಚೈನದ ಕೆಂಪು ಸರಕಾರದೊಡನೆ ಸಂಬಂಧ ನಿರ್ಮಿಸುವ ಮಾತುಕತೆಗಳನ್ನು ಬ್ರಿಟನು ಇಷ್ಟರಲ್ಲೇ ನಡೆಸುತ್ತಿದೆ ಎಂದು ಪ್ರಚಾರವಾಗಿರುವ ಸುದ್ದಿಯು ಪೂರ್ಣ ಸುಳ್ಳೆಂದು ಬ್ರಿಟಿಷ್ ಸರಕಾರದ ನಕಾರ ಬಂದಿದೆ.

GOOD PADDY SEEDS.

"High yeilding, Coorg grown, Coimbatore Sanna Rs. 13-12-0 per batti is available in limited quantities. Apply to the Agronomist, Indian Coffee Board, CHETTALLI."

NOTICE.

Notice having been given of the loss of policy No 37841 issued by this company on the life of Mr Byrattira G. Karumbaya of Kataheri, (Coorg.) a duplicate policy will be issued unless any objection is lodged with us within one month from the date hereof.

MANAGING DIRECTOR,
Warden Insurance Co, Ltd,
Sri Phiroshah Mehta Road
Fort, BOMBAY
D. 16-6-49.

॥ ಪತ್ರವ್ಯವಹಾರಗಳು ॥

ದೇವನೂರು ನಾಲೆ

ಈ ನಾಲೆಯನ್ನು ಸರಿಪಡಿಸಲಾಗುವದೆಂಬ ಸರಕಾರದ ಭರವಸೆಯಿಂದ ಅದರ ಸುತ್ತುಮುತ್ತಿದ್ದ ಹಡ್ಲು ಭೂಮಿಯನ್ನು ಹರಾಜಿನಲ್ಲಿ ಏರಿದ ಬೆಲೆಗೆ ಪಡೆದು ಅನೇಕರು ಈಗ ಕಷ್ಟಪಡುತ್ತಿದ್ದಾರೆ. ಈ ನಾಲೆಯನ್ನು ರಿಪೇರಿ ಮಾಡುವ ಬಗ್ಗೆ ಅನೇಕ ಬಾರಿ ಚೀಫ್ ಕಮಿಷನರರನ್ನು ಕಾಣಲಾಗಿದೆ. ಪ್ರತಿ ಚೀಫ್ ಕಮಿಷನರು ಇದನ್ನು ಸ್ವತಹ ನೋಡಿ, ಅಂದಾಜು ಪಟ್ಟಿ ಮಾಡಿಸಿ ತೆರಳಿದ್ದಾರೆ. ಈ ವಿಚಾರ ಕೂಗಿಕೊಂಡುದು ಸಾಲದೆ ಕೌನ್ಸಿಲಿನಲ್ಲಿ ಈ ಬಗ್ಗೆ ಠರಾವನ್ನು ಮಂಡಿಸಲಾಯಿತು. ಠರಾವು ಪಾಸಾದರೂ ಸರಕಾರ ಈ ಬಗ್ಗೆ ಗಮನ ಕೊಟ್ಟಿಲ್ಲ. ಹಳೆನಾಲೆಯ ಹುಡುಪು ಜಾಗವನ್ನು ತಪ್ಪಿಸಿ ಹೊಸದಾರಿಗಾಗಿ ಕಂಟ್ರಾಕ್ಟ್ ತೆಗೆದುಕೊಂಡು ಕೆಲಸಮಾಡುವವರಿದ್ದರೆ ಮಾಡಬಹುದೆಂದ ಕಾರಣ ಈ ಕಮಿಷನರ ಮುಂದೆ ಕಂಟ್ರಾಕ್ಟು ಒಪ್ಪಿಕೊಂಡಿದ್ದಾರೆ. ಆದರೆ ಇತ್ತಲಾಗಿ ಚೀಫ್ ಕಮಿಷನರು ಬಂದು ಹಳೆನಾಲೆಯ ಹುಡುಪು ಮಾರ್ಗವಾಗಿಯೇ ದುರಸ್ತಿಗೊಳಿಸುವದೆಂದು ನಿಶ್ಚಯಿಸಿದ್ದಾರೆ. ಅನೇಕ ವರ್ಷಗಳಿಂದ ಈ ನಾಲೆ ಇದ್ದು ಅದನ್ನು ಯೋಗ್ಯ ರೀತಿಯಲ್ಲಿ ದುರಸ್ತಿಗೊಳಿಸದೆ ಭೂಮಿ ಸೇಗುಹೋಗುವದು ತಪ್ಪಿಲ್ಲ. ಈಗ ನಿಶ್ಚಯಿಸಿದ ರೀತಿಯಾದರೂ ಮಾಡದೆ ದಿನ ನೂಕಲಾಗುತ್ತಿದೆ. ೧೯೩೪ರಲ್ಲಿ ಈ ಬಲದ ನಾಲೆಯನ್ನು ರಿಪೇರಿ ಮಾಡಲಾಯಿತು. ರಿಪೇರಿ ಎಂದರೆ ಒಂದುವಾರಕ್ಕೆ ಸಾವಿರರೂಪಾಯಿ ವೆಚ್ಚವಾಯಿತು. ಅಷ್ಟೆ ಭೂಮಿಯ ಎತ್ತರಿಗೆ ಸರಿಯಾದ ತೂಬುಗಳನ್ನಿಡದೆ ಬಿದಿರಿನ ತೂಬುಗಳನ್ನಿಟ್ಟದಿಷ್ಟೆ. ಇದನ್ನು ಸರಿಪಡಿಸಲು ಅರ್ಜಿಬರೆಕೊಂಡರೂ ಪ್ರಯೋಜನವಾಗಿಲ್ಲ. ಈ ನಾಲೆಯನ್ನು ನಂಬಿ ವ್ಯವಸಾಯಮಾಡಿ ಅನೇಕರು ಕಷ್ಟಪಡುತ್ತಾರೆ. ಭೂಮಿಸೇಗುಯಿತೆಂದು ಸರಕಾರ ಕೊಡುವ ರೆಮಿಶನು ಸಮುದ್ರಕ್ಕೆ ಹುಣಸೆ ಕಲಸಿದಂತೆ. ಹೆಚ್ಚು ಬೆಳೆಯಿರಿ ಎಂದು ಪ್ರಚಾರಮಾಡುವ ಸರಕಾರವು ಈ ನಾಲೆಯನ್ನು ಸರಿಪಡಿಸುವ ತೊಂದರೆ ತೆಗೆದು ಕೊಳ್ಳಬಾರದೇಕೆ? ಹೆಚ್ಚು ಬೆಳೆಯಿರಿ ಎಂದು ಕೂಗಿದಾಕ್ಷಣ ಮರುಭೂಮಿಯಲ್ಲಿ ಬೆಳೆ ಬೆಳೆದೀತೆ?

ನೊಂದವ.

ಇಂಡಿಯನ್ ಕಾಫಿ ಪ್ಲಾಂಟರುಗಳ ಸಿಬ್ಬಂದಿ.

ಯುರೋಪಿಯನ್ ಪ್ಲಾಂಟರುಗಳ ಸಿಬ್ಬಂದಿಗೂ, ಇಂಡಿಯನ್ ಪ್ಲಾಂಟರುಗಳ ಸಿಬ್ಬಂದಿಗೂ ಬಹು ದೊಡ್ಡ ವ್ಯತ್ಯಾಸವಿದೆ. ಎಲ್ಲಾ ಯುರೋಪಿಯನ್ ಪ್ಲಾಂಟರುಗಳು ತಮ್ಮ ಸಿಬ್ಬಂದಿಗಳಿಗೆ ಯು. ಪಿ. ಎ. ಎಸ್. ಐ ದರವಂತೆ ಮಾಸಿಕ ವೇತನ, ತುಟ್ಟಿಬತ್ಯ, ಪ್ರಾವಿಡೆಂಟ್ ಫಂಡು, ಕ್ರಾಪ್ ಬೋನಸ್ ಮತ್ತು ಮುಂಗಾಲದ ಬತ್ಯ ಮೊದಲಾದುವನ್ನು ಸರಿಯಾಗಿ ಕೊಡುತ್ತಾರೆ. ಆದರೆ ಇಂಡಿಯನ್ ಪ್ಲಾಂಟರುಗಳು ಇದಾವುದನ್ನೂ ಸರಿಯಾಗಿ ಅನುಸರಿಸುತ್ತಿಲ್ಲ. ಕೇವಲ ಸಂಬಳವೊಂದನ್ನು ಕೊಡುತ್ತಾರೆ ಬೇರೆ ಯಾವ ರಿಯಾಯಿತಿಯೂ ಇಲ್ಲ. ಈ ಪ್ಲಾಂಟರುಗಳಿಗೆ ಉತ್ಪತ್ತಿಯೇನೂ ಕಡಿಮೆಯಿಲ್ಲ. ಇಡೀ ವರ್ಷ ಬಿಸಿಲು ಮಳೆ ಎನ್ನದೆ ಯಜಮಾನರನ್ನು ಮೆಚ್ಚಿಸಲು ಇವರು ದುಡಿಯುವದಿಲ್ಲವೇ?

ಇಂಡಿಯನ್ ಪ್ಲಾಂಟರ್ಸ್ ಎಸೋಸಿಯೇಶನಿರುವಂತೆ ಎಸ್ಟೇಟ್ ಸಿಬ್ಬಂದಿಗಳ ಎಸೋಸಿಯೇಶನೊಂದಿದೆ. ಈ ಎಸೋಸಿಯೇಶನಿನ ಪ್ರೆಸಿಡೆಂಟರು ಕೊಡಗಿನ ಶಾಖೆಗೆ ಬರೆದು ಎಲ್ಲಾ ಇಂಡಿಯನ್ ಪ್ಲಾಂಟರುಗಳ ಸಿಬ್ಬಂದಿಗಳು ಈ. ಎಸ್. ಎ. ಎಸ್. ಐ. ಗೆ ಸದಸ್ಯರಾದಲ್ಲಿ ಅವರಿಗೆ ಯೋಗ್ಯ ಸವಲತ್ತು ದೊರೆಯುವಂತೆ ಮಾಡುವ ಭರವಸೆ ಕೊಟ್ಟಿದ್ದಾರೆ. ಆದ್ದರಿಂದ ಎಲ್ಲಾ ತೋಟದ ಸಿಬ್ಬಂದಿಗಳೂ ಅದರ ಸದಸ್ಯರಾಗಬೇಕು. ಒಬ್ಬೊಬ್ಬರು ಹೋರಾಡಿದರೆ ಕಾರ್ಯ ಕೈಗೂಡುವದಿಲ್ಲ. ಆದ್ದರಿಂದ ಎಲ್ಲಾ ತೋಟದ ಸಿಬ್ಬಂದಿಗಳು ಒಟ್ಟುಸೇರಿ ತಮ್ಮ ಹಕ್ಕಿಗಾಗಿ ಶ್ರಮಿಸಬೇಕು.

ಒಬ್ಬ ತೋಟದ ರೈಟರು.

ಹಳ್ಳಿ ಶಾಲೆಗಳು.

ಕೊಡಗಿನಲ್ಲಿ ಸುಮಾರು 130 ಪ್ರೈಮರಿ ಶಾಲೆಗಳೂ 300 ಉಪಾಧ್ಯಾಯರುಗಳೂ ಇದ್ದಾರೆ. ಒಬ್ಬನೇ ಉಪಾಧ್ಯಾಯರಿರುವ ಶಾಲೆಗಳು 50.

ಈ ಶಾಲೆಗಳಲ್ಲಿ 3 ತರಗತಿಗಳಿಂದ 5 ತರಗತಿಗಳ ವರೆಗೆಯಿದೆ. ಆದರೆ 3 ಉಪಾಧ್ಯಾಯರಿಗಿಂತ ಹೆಚ್ಚಿರುವ ಶಾಲೆಗಳು ಒಂದೆರಡಾದರೂ ಇರಬಹುದೋ ಏನೋ! ಕೆಲವು ಶಾಲೆಗಳು ಓಬಿರಾಯನ ಕಾಲದಲ್ಲಿ ಗ್ರಾಮಸ್ಥರೇ ಕಟ್ಟಿಸಿದ್ದು. ಕೆಲವು ದನಗಳ ಕೊಟ್ಟಿಗೆಯಂತಿವೆ. ಒಂದೇ ಕೋಣೆ ಯಾ ಹಾಲಿನಲ್ಲಿ 2-3 ತರಗತಿಗಳಿವೆ. ಶಾಲೆಯಲ್ಲಿ ನ್ಯಾಯ ವಾದ ಬೇಕಿಲ್ಲ. ಕೂರಲು ಬೆಂಚು ಡೆಸ್ಕುಗಳಿಲ್ಲ. ಮೇಲು ಮನೆಗೆ ಸೀಲಿಂಗ್ ಇಲ್ಲ. ಕುಡಿಯುವ ನೀರಿಗೆ ಬಾವಿ ಇಲ್ಲ. ಮಧ್ಯಾಹ್ನದ ಬುತ್ತಿ ಊಟ ಮಾಡಲು ಪಾಳುಬಿದ್ದ ಕೆರೆ ಇಲ್ಲವೇ ಗದ್ದೆಯ ನೀರೇ ಗತಿ. ಕುಡಿಯಲು ಸಹ ಅದೇ ನೀರು. ಊಟ ಮಾಡಲು ಅನುಕೂಲವಾಗುವಂತೆ ಶಾಲೆಯಲ್ಲಿ ವರಾಂಡವಿಲ್ಲ. ಇದು ಯಾರಿಗೆ? 4 ವರ್ಷ ಪ್ರಾಯದಿಂದ 10 ವರ್ಷ ಪ್ರಾಯದ ಎಳೆ ಕೂಸುಗಳಿಗೆ! ದೇಶದ ಮುಂದಿನ ಪೀಳಿಗೆಗೆ. ಆ ಬಡ 'ನೇಗಿಲ ಯೋಗಿಯ' ಆ ಬತ್ತಿದ ಒಡಲ ರೈತನ 'ಸರಕಾರದ ಬೆನ್ನೆಲುಬು' ಎಂದು ಕರಸಿಕೊಳ್ಳುವ ಆ ಬಡವನ ಕಂದಮ್ಮಗಳಿಗೆ!

ಒಂದು ಹಳ್ಳಿಗೆ ಶಾಲೆ ಬೇಕೆಂತವರೆ ಗ್ರಾಮಸ್ಥರು ಒಂದು ಕಟ್ಟಡವನ್ನು ಕಟ್ಟಿಸಿ ಬಿಡುವದು ಉಳಿದ ಅನುಕೂಲತೆಗಳನ್ನು ಸರಕಾರದವರು ಮಾಡಿ ಕೊಡುವರು. ಇಲ್ಲವೆ ಅದರ ಆಚೆಗಿನ ಸೌಕರ್ಯಗಳು ಏನೇನು ಎಂಬದು ಗೊತ್ತಿರುವದಿಲ್ಲ. ಅನೇಕ ಶಾಲೆಗಳಲ್ಲಿ 1–2 ಕೊಟಡಿಗಳಿವೆ. ಇವುಗಳಲ್ಲಿ 3ರಿಂದ5 ತರಗತಿಗಳಿರುತ್ತವೆ. ಒಟ್ಟು 2 ರಿಂದ 3 ಉಪಾಧ್ಯಾಯರು. ಒಬ್ಬೊಬ್ಬ ಉಪಾಧ್ಯಾಯರು ಒಂದೊಂದು ತರಗತಿಯಲ್ಲಿ ಪಾಠ ಮಾಡುತ್ತಿರುವಾಗ ಉಳಿದ ತರಗತಿಯ ಮಕ್ಕಳು ಪಾಠವಿಲ್ಲದೆ ಸುಮ್ಮನೆ ಕಾಲಕಳೆಯುತ್ತಿರುವರು. ಉಪಾಧ್ಯಾಯರಿಲ್ಲದ ತರಗತಿಯ ಮಕ್ಕಳು ಸುಮ್ಮನಿರುವಿಕೆ ಎಂದರೆ ಅದೇನೆಂಬದು ಬಹುಶಃ ಎಲ್ಲರಿಗೂ ಗೊತ್ತಿರಬಹುದು. ಈ ತೆರನಾದ ಸುಮ್ಮನಿರುವಿಕೆಯಿಂದ ಚಿಕ್ಕಮಕ್ಕಳಲ್ಲಿ ವಿದ್ಯೆಯ ಮೇಲೆ ಅಲಸಿಕೆಯೂ ಪುಂಡುಗಾರಿಕೆಗೆ ಅನುವೂ ದೊರೆತು ಮುಂದಿನ ಶಾಲೆಗಳಲ್ಲಿ ಮಕ್ಕಳನ್ನು ತಿದ್ದಿ ಅವರನ್ನು ಒಳ್ಳೆ ದಾರಿಗೆ ತಂದು ಅವರನ್ನು ನಾಗರೀಕರನ್ನಾಗಿ ಮಾಡುವದು ಖಂಡಿತವಾಗಿಯೂ ಅಸಾಧ್ಯ. ಹಳ್ಳಿ ಶಾಲೆಗಳಲ್ಲಿಯೇ ಪ್ರೈಮರಿ ವಿದ್ಯೆಯನ್ನು ಕಲಿತು ಬಂದ ಮಕ್ಕಳು ಮುಂದಿನ ತರಗತಿಗಳಲ್ಲಿ ಯೋಗ್ಯ ಪ್ರಗತಿಯನ್ನು ಹೊಂದಿದವರು ತೀರಾ ವಿರಳ. ತರಗತಿಗೊಬ್ಬ ಉಪಾಧ್ಯಾಯನಿಲ್ಲದೆಯೂ ಯೋಗ್ಯ ಶಿಕ್ಷಣ ದೊರೆಯದೆಯೂ ಇರುವದರಿಂದ ಹಳ್ಳಿ ಶಾಲೆಗಳಲ್ಲಿ 5 ತರಗತಿಗಳನ್ನು ದಾಟಬೇಕಾದರೆ 8-9 ವರ್ಷಗಳು ಬೇಕಾಗುವದರಿಂದ ಮುಂದೆ ಪಟ್ಟಣ ಶಾಲೆಗಳಿಗೆ ಹೋಗಲು ವಯಸ್ಸೂ, ಬೆಳವಣಿಗೆಯೂ ಸುತ್ತಲಿನ ಮಕ್ಕಳಿಗಿಂತ ಹೆಚ್ಚಾಗುವದರಿಂದ ಹಳ್ಳಿ ಶಾಲೆಯಲ್ಲೇ ತನ್ನ ಶಾಲಾ ಆಯುಷ್ಯವನ್ನು ಮುಗಿಸಬೇಕಾಗುತ್ತದೆ.

ಈ ಕಾರಣಗಳಿಂದಾಗಿ ಸ್ವಲ್ಪ ಅನುಕೂಲವಿರುವವರೂ ತಮ್ಮ ಮಕ್ಕಳಿಗೆ ವಿದ್ಯೆ ಕಲಿಸಬೇಕೆಂಬ ಇರಾದೆಯಿರುವವರೂ ಹಳ್ಳಿಗಳನ್ನು ಬಿಟ್ಟು ಪಟ್ಟಣಗಳನ್ನು ಸೇರಲು ಇದೊಂದು ಕಾರಣವಾಗಿದೆ. ಇದರಿಂದಾಗಿ ಹಳ್ಳಿಗಳಲ್ಲಿ ಉಳಿವವರಾರು. ಮೂಢ ನಂಬಿಕೆಯ ಹಳೇ ಸಂಪ್ರದಾಯದ ಒಗ್ಗಟ್ಟಿಲ್ಲದ ಬಡಜನರ ತಂಡ. ಇತ್ತೀಚೆಗೆ ಜನರಲ್ಲಿ ಆದೊಂದು ಚಲವಾಗಿ ಹಬ್ಬಿರುವ ವಿದ್ಯಾಪ್ರಸಾರಕ್ಕೆ ಸರಕಾರದವರಲ್ಲಿ ಇಷ್ಟೊಂದು ಅನಾಸಕ್ತಿ ಎಂದ ಮೇಲೆ ಬಡ ರೈತನ ಪಾಡೇನು.

ಹಯ್ಯರ್ ಎಲಿಮೆಂಟರಿ ಮತ್ತು ಹೈಸ್ಕೂಲ್‌ಗಳಲ್ಲಿ ತರಗತಿಗೊಂದು ಕೊಠಡಿ, ಒಬ್ಬ ಉಪಾಧ್ಯಾಯನಲ್ಲದೆ ಒಂದೆರಡು ಉಪಾಧ್ಯಾಯರು ಹೆಚ್ಚಿಗೆ ಅಲ್ಲದೆ ಶಾಲಾ ಸೌಕರ್ಯಗಳೂ ಒಂದೆರಡು ಆಳುಗಳೂ ಇರುವರು. ಈ ಬಡ ರೈತನ ಮಕ್ಕಳು ಓದುವ ಈ ಹಳ್ಳಿ ಶಾಲೆಗಳಿಗೇಕೆ ಇಷ್ಟೊಂದು ಪಕ್ಷಪಾತ ಹಳ್ಳಿ ಶಾಲೆಯ ಉಪಾಧ್ಯಾಯರಿಗೆ ಸಾಕಷ್ಟು ವೇತನ ಕೂಡ ಇಲ್ಲ!

ವಯಸ್ಸಿಗೆ ತಕ್ಕಂತೆ ತರಗತಿಯಲ್ಲಿ ಏರದಿದ್ದರೆ ಮಕ್ಕಳಿಗೂ ಅವರ ಪೋಷಕರಿಗೂ ವಿದ್ಯೆಯಲ್ಲಿ ಅಭಿರುಚಿಯಿಲ್ಲದೆ ಕೇವಲ ಹಳ್ಳಿ ಶಾಲೆಗಳಿಂದಲೇ ಅಮೂಲ್ಯವಾದ ಇನ್ನು ಮುಂದೆ ಎಂದೂ ದೊರೆಯಲಾರದ ತಮ್ಮ ವಿದ್ಯೆಯನ್ನು ಕೊನೆಗಾಣಿಸಿ ಪ್ರಪಂಚವನ್ನೇ ಅರಿತುಕೊಳ್ಳಲಾರದ ಜನರ ಆದೊಂದು ಹಿಂಡಾಗಿ ಜೀವಮಾನವನ್ನೆಲ್ಲಾ ಚಿಕ್ಕಂದಿನಲ್ಲಿ ಮೈಗೂಡಿಸ ಆ ಅಲಸಿಕೆಯಲ್ಲೇ, ಆ ಪುಂಡು ಆ ಪೋಂಡು ತನದಲ್ಲೇ ಆರೋಗ್ಯ, ಸೂತ್ರ, ಸಮಯದ ಬೆಲೆ, ಹಣದ ಬೆಲೆ ಕಾರ್ಯ ತತ್ಪರತೆ, ಕಾರ್ಯದಕ್ಷತೆ, ಪ್ರಮಾಣಿಕತನ, ಒಗ್ಗಟ್ಟು, ಪರಸ್ಪರ ಪ್ರೀತಿ ವಿಶ್ವಾಸಗಳಿಲ್ಲದೆ ಮೂಢ ನಂಬಿಕೆಯಲ್ಲೇ ಕಾಲವನ್ನು ದೂಡುತ್ತಾ ಜೀವನ್ಮೃತರಾಗಿ 40-45 ವಯಸ್ಸಿನಲ್ಲೇ ಜೀವನ ಕಥೆಯನ್ನು ಮುಗಿಸಬೇಕಾಗುವದು. ಈಗಲಾದರೂ ಈ ಹೊಸ ಯುಗದಲ್ಲಾದರೂ ಇಲ್ಲಸಲ್ಲದ ನೆವ ಹೇಳದೆ ಒಡನೆ ಈ ಹಳ್ಳಿ ಶಾಲೆಗಳ ಕಡೆಗೆ ನಿಗವಿಡಬೇಕಾಗಿ ಸರಕಾರದವರಲ್ಲಿ ದೈನ್ಯ ವಿನಂತಿ.

ಐ ಪಿ ಮಾದಪ್ಪ.

ಮರೆನಾಡಿನ ಸ್ಥಿತಿ

ಮರೆನಾಡಿನ ಕಷ್ಟದ ವಿಶಯ ಸರಕಾರಕ್ಕೆ ಅರ್ಜಿ ಒರೆದೂ ಬರೆದು ಸಾಕಾಯಿತು. ಚೀಫ್ ಕಮಿಷನರನ್ನು ಖುದ್ದು ಕಂಡು ಕಷ್ಟವನ್ನು ಹೇಳಿ ಆಯಿತು. ಮರೆನಾಡನ್ನು ಸ್ವತಹ ನೋಡಲು ಬರುತ್ತೇನೆಂದು ಮಾತು ಕೊಟ್ಟರಲ್ಲದೆ ಈ ವರೆಗೆ ಅವರ ಸುಳಿವಿಲ್ಲ. ಮರೆನಾಡಿಗೆ ಹೋಗಲು ಹೆಸರಿಗೆ ರಸ್ತೆ ಇದೆ. ಆದರೆ ವೃಷ್ಟಿ ಇರುವ ಹೊಳೆಗೆ ಸೇತುವೆ ಇಲ್ಲದೆ ಮರೆನಾಡು ದ್ವೀಪದಂತಾಗಿದೆ. ಇರುವ ಒಂದು ತೂಗು ಪಾಲವು ರಿಪೇರಿ ಇಲ್ಲದೆ ಅಪಾಯಕರ ಸ್ಥಿತಿಯಲ್ಲಿದೆ ಇದನ್ನು ದುರಸ್ತಿಗೊಳಿಸಲು ಅನೇಕ ಸಾರಿ ಬರೆದಾಯಿತು. ಮರೆನಾಡಿನವರ ಕೂಗು ಯಾವ ಸರಕಾರದ ಅಧಿಕಾರಿಗೂ ಮುಟ್ಟುವಂತಿಲ್ಲ. ಇವರ ಕೂಗನ್ನು ಸರಕಾರಕ್ಕೆ ಮುಟ್ಟಿಸುವ ಸಹಾಯಕರೂ ಇಲ್ಲ. ಮರೆನಾಡಿನಲ್ಲಿ ಯಾರಿಗಾದರೂ ಕಾಯಿಲವಾದರೆ ದೇವರೇ ಅವರನ್ನು ಕಾಪಾಡಬೇಕು, ಅವರನ್ನು ಆಸ್ಪತ್ರೆಗೆ ಸಾಗಿಸುವದು ಸಾಧ್ಯವಿಲ್ಲ. ಡಾಕ್ಟರನ್ನು ಕರೆತರಿಸುವದೆಂದರೆ ಮಳೆಗಾಲದಲ್ಲಿ ಯಾವ ಡಾಕ್ಟರೂ ಬರುವದಿಲ್ಲ. ಬಡ ಜನರು ಯೋಗ್ಯ ಔಷಧಿ, ಶುಶ್ರೂಷೆಯ ಅಭಾವದಿಂದ ಸಾಯುತ್ತಾರೆ. ಈ ನಾಡಿನವರ ಬಗ್ಗೆ ಸರಕಾರಕ್ಕೂ, ಜನಪ್ರತಿನಿಧಿಗಳಿಗೂ ಈ ತಾತ್ಸಾರವೇಕೆ? ಮರೆನಾಡಿಗೆ ಒಂದು ಆಸ್ಪತ್ರೆ ಅತ್ಯವಶ್ಯ. ಇದು ಸದ್ಯಕ್ಕೆ ಸಾಧ್ಯವಿಲ್ಲದಿದ್ದರೆ ಹೊಳೆಗೆ ಯೋಗ್ಯ ಸೇತುವೆಯನ್ನಾದರೂ ಮಾಡಬೇಕು. ಇದಾವುದನ್ನೂ ಮಾಡದೆ ಬಡ ಮರೆನಾಡಿನವರನ್ನು ಈ ರೀತಿ ತೊಂದರೆಗೊಳಪಡಿಸುವದು ಸರಕಾರಕ್ಕೆ ಶೋಭಿಸುವ ವಿಚಾರವಲ್ಲ. ಇನ್ನಾದರೂ ಸರಕಾರವು ಎಚ್ಚೆತ್ತು ವರ್ತಿಸುವದೇ ?

M. M. M.

॥ ಪತ್ರವ್ಯವಹಾರಗಳು ॥

ಬಸ್ ಕೆಲಸಗಾರರಲ್ಲಿ ಅಪೀಲು

ಕೊಡಗಿನ ಬಸ್ ಕೆಲಸಗಾರರಿಗೆ ತಮ್ಮದೇ ಆದ ಒಂದು ಸಂಸ್ಥೆಯಿಲ್ಲ ಆದ್ದರಿಂದ ಬಸ್ ಮಾಲೀಕರು ತಮ್ಮ ಮನಸ್ಸಿಗೆ ಬಂದ ಹಾಗೆ ವರ್ತಿಸುವದಲ್ಲದೆ ಅವರ ಶೋಷಣೆಯನ್ನು ಮಾಡುತ್ತಾರೆ ಇತ್ತೀಚಿಗೆ ಕೆಲವರು ಸೇರಿ ಕೊಡಗ ಆಟೋಮೊಬೈಲ್ ಎಸೋಸಿಯೇಶನೆಂದು ಒಂದು ಸಂಸ್ಥೆಯನ್ನು ತೆರೆದಿದ್ದಾರೆ ಸುಮಾರು ಮುನ್ನೂರಕ್ಕೂ ಮಿಕ್ಕಿ ಬಸ್ ಕೆಲಸಗಾರರು ಸದಸ್ಯರಾಗಿದ್ದಾರೆ ಈ ಸಂಸ್ಥೆ ಇನ್ನೂ ಬಲಗೊಳ್ಳಬೇಕಿದೆ ಕೊಡಗಿನಲ್ಲಿರುವ ಪ್ರತಿಯೊಬ್ಬ ಬಸ್ ಕೆಲಸಗಾರನೂ ಇದರಲ್ಲಿ ಸದಸ್ಯರಾಗಬೇಕು

ಬಸ್ ಕೆಲಸಗಾರರ ಜೀವನ, ಕಷ್ಟಮಯವಾದುದು. ಅವರ ಶ್ರಮಕ್ಕೆ ಸರಿಯಾದ ವೇತನ ಅವರಿಗಿಲ್ಲ ತುಟ್ಟಿ ಬತ್ಯ ಸಾಕಷ್ಟಿಲ್ಲ ಪ್ರಾವಿಡೆಂಟ್ ಫಂಡಿನ ಏರ್ಪಾಡಿಲ್ಲ ಕೆಲಸದ ಸೆಕ್ಯೂರಿಟಿಯೂ ಕೂಡ ಇಲ್ಲ ಮಾಲೀಕರು ಕೆಲಸ ಬಿಟ್ಟು ಹೋಗು ಎಂದರೆ ಬೇರೆ ರಕ್ಷಣೆ ಇಲ್ಲ ಈ ರೀತಿ ಅನಾಥ ಮಕ್ಕಳಂತೆ ಬಸ್ ಕೆಲಸಗಾರರ ಸ್ಥಿತಿಯಾಗಿದೆ ಅದರಲ್ಲೂ ವಿವಿಧ ಕಂಪನಿಗಳಲ್ಲಿ ವಿವಿಧ ರೀತಿಯ ವೇತನ, ಒಬ್ಬ ಸಿ ಪಿ ಸಿ ಕಂಪನಿಯಲ್ಲಿ ಒಂದು ದರವಾದರೆ, ಗಣೇಶ ಕಂಪನಿಯಲ್ಲಿ ಒಂದು ಈ ರೀತಿಯ ಅವ್ಯವಸ್ಥೆಗೊಳಗಾದ ಬಸ್ ಕೆಲಸಗಾರರು ಅನೀತಿಯ ಮಾರ್ಗದಿಂದ ತಮ್ಮ ಹೊಟ್ಟೆಹೊರೆಯಲು ಯತ್ನಿಸಿದರೆ ಆ ತಪ್ಪು ಮಾಲೀಕರದ್ದೆ!

ಅನೇಕ ಕಂಪನಿಗಳು ಯಥೇಚ್ಛ ಲಾಭಮಾಡಿ ಸಾವಿರ ಸಂಖ್ಯೆಯಲ್ಲಿ ಆದಾಯ ಕಂದಾಯ ತೆತ್ತರೂ ತಮ್ಮ ಸಿಬ್ಬಂದಿಗಳ ಹಿತವನ್ನು ಲಕ್ಷಿಸದಿರುವದು ಅನ್ಯಾಯ ಬಸ್ ಕೆಲಸಗಾರರು ಸಂಘಟಿತರಾಗದಿದ್ದರೆ ಅವರ ಹಿತವನ್ನು ಯಾರೂ ಸಾಧಿಸಿಕೊಡಲಾರರು ಆದ್ದರಿಂದ ಬಸ್ ಕೆಲಸಗಾರರ ಸಂಘವನ್ನು ಬಲಪಡಿಸಬೇಕು ಪ್ರತಿಯೊಬ್ಬನಿಗೂ ಯೋಗ್ಯವೇತನ, ತುಟ್ಟಿಬತ್ಯ, ಪ್ರಾವಿಡೆಂಟ್ ಫಂಡ್, ಬೋನಸ್ಸ್ ಮೊದಲಾದುವು ಸರಿಯಾಗಿ ದೊರೆಯುವಂತೆ ಮಾಡಬೇಕು ಇದನ್ನು ಸಾಧಿಸಲು ಸಂಘಟಿತವಾದ ಸಂಸ್ಥೆ ಅವಶ್ಯ ಆದ್ದರಿಂದ ಎಲ್ಲಾ ಬಸ್ ಕೆಲಸಗಾರರು ಈ ಸಂಸ್ಥೆಗೆ ಸೇರಬೇಕು ತಮ್ಮ ಹಕ್ಕು ಬ್ಯಾಕಿಗಳಿಗಾಗಿ ಹೋರಾಡಬೇಕು ಶೀಘ್ರದಲ್ಲಿ ಆಟೋಮೊಬೈಲ್ ಸಂಘದವರು ಕೆಲಸಗಾರರ ಸಭೆಯೊಂದನ್ನು ಸೇರಿಸಿ ಮುಂದಿನ ಕೆಲಸ ಕಾರ್ಯಗಳನ್ನು ದಕ್ಷತೆಯಿಂದ ನಡಸುವ ಏರ್ಪಾಡು ಮಾಡುವರೆಂಗಿ ಆಶಿಸಲಾಗಿದೆ

ಬಸ್ ಕೆಲಸಗಾರ

ನೆಲಜಿ ಶಾಲೆ

ಈ ಶಾಲೆಯಲ್ಲಿ ಆರನೇ ತರಗತಿಯನ್ನು ತೆರೆಯುವ ಸಮಾರಂಭವು ತಾರೀಕು ೩೧-೫-೪೯ ರಲ್ಲಿ ನಡೆಯಿತು ಶ್ರೀ ಕೆ ಎಸ್ ನಂಜುಂಡನವರು ಅಧ್ಯಕ್ಷರಾಗಿದ್ದರು. ಆರನೆ ತರಗತಿಯನ್ನು ತೆರೆದುದಲ್ಲದೆ ಈ ಕೆಳಗಿನ ನಿರ್ಣಯಗಳು ಪಾಸಾದವು (೧) ಹೆಚ್ಚಿಗೆ ತೆರೆದಿರುವ ಈ ತರಗತಿಗೆ ಒಬ್ಬ ಉಪಾಧ್ಯಾಯರನ್ನೂ, ಪ್ರಥಮ ದರ್ಜೆಯಲ್ಲಿ ನೂರರ ವರೆಗೆ ಮಕ್ಕಳಿರುವದರಿಂದ ಮತ್ತೊಬ್ಬ ಹೆಚ್ಚಿನ ಉಪಾಧ್ಯಾಯರನ್ನೂ ಒದಗಿಸಿಕೊಡಬೇಕು ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ನೇಮಿಸಿಕೊಂಡಿರುವ ಅಧ್ಯಾಪಕರ ವೇತನವನ್ನು ಗ್ರಾಂಟ ಮೂಲಕ ಕೊಡಬೇಕೆಂದ ಕೇಳಿಕೊಳ್ಳಲ ಯಿತು. (೨) ಶಾಲಿಕಾಲೆಯಲ್ಲಿ ಸ್ಥಳ ಸಂಕೋಚವಾದ ಕಾರಣ ಮತ್ತು ಶೀರಾ ಬಡವರಾದ ಈ ನಾಡಿನ ಜನರು ಕಟ್ಟಡ ಕಟ್ಟಿಕೊಳ್ಳಲು ಚೈತನ್ಯವಿಲ್ಲದವರಾದ ಕಾರಣ ಈ ಶಾಲೆಗೆ ಒಂದು ಕಟ್ಟಡ ಕಟ್ಟಿಕೊಡಲು ಸರಕಾರವನ್ನು ಕೇಳಲು ಐದು ಜನರಿಂದು ಕೂಡಿದ ಒಂದು ನಿಯೋಗ ಗೋಷ್ಠಿಯನ್ನು ನೇಮಿಸಲಾಯಿತು

ಹಾಜರಿದ್ದವ

ಮಡಿಕೇರಿ ಪೋಸ್ಟಾಫೀಸು

ಟಪಾಲು ಇಲಾಖೆಯು ಸರಕಾರದ ಇಲಾಖೆಗಳೆಲ್ಲ ದಕ್ಷವಾದುದು ಎಂಬ ಪ್ರತೀತಿ ಇದೆ ಜನೋಪಯೋಗ ಕಲಸದಲ್ಲಿ ಇವರು ಶ್ರಮವಹಿಸುವರೆಂದು ಹೇಳಲಾಗುತ್ತದೆ ಆದರೆ ಮಡಿಕೇರಿಯಲ್ಲಿ ಆ ಪರಿಸ್ಥಿತಿ ಇಲ್ಲವೆನ್ನಬೇಕು ಮೈಸೂರಿನಿಂದ ಬರುವ ಮೈಲು ಬಸ್ಸು ೩½ಗಂಟೆಗೆ ಮಡಿಕೇರಿಗೆ ಬರಬೇಕೆಂದಿದೆಯಂತೆ ಆದರೆ ಒಂದೇ ದಿನ ಆ ಬಸ್ಸು ಈ ಸಮಯಕ್ಕೆ ಬಂದಿಲ್ಲ ಹಿಂದೆ ಸಾಯಂಕಾಲ 'ವಿಂಡೊ ಡೆಲಿವರಿ' ಇತ್ತು ಆವತ್ತಿನ ಕಾಗದಗಳು ಆ ದಿನವೇ ದೊರೆಯುತ್ತಿದ್ದವು ಆದರೆ ಇತ್ತಲಾಗಿ ಅದು ನಿಲ್ಲಿಸಲ್ಪಟ್ಟಿದೆ ಒಹಳ ನುಡಿಕಾರಿ ಶಾಖೆಯ ಜನರಿಗ ಮಾಡ ಪ ಹಿತ ಇದೇ ಎಂದು ತೋರುತ್ತದೆ!

ಟಪಾಲ ಬಸ್ಸು ಸಾಯಂಕಾಲ ನಿಶ್ಚಿತ ಸಮಯಕ್ಕೆ ಬರುವಂತೆ ಮಾಡಲು ಇಲಾಖೆಯವರಿಗೆ ಸಾಧ್ಯವಿಲ್ಲವೇ? ಮೇಲಾಗಿ ಈಗ ಮಡಿಕೇರಿಗೆ ಬಂದ ಟಪಾಲು ಮಾರಣೆ ದಿನ ಮಧ್ಯಾಹ್ನವೋ ಮಧ್ಯಾಹ್ನದ ಮೇಲೋ ದೊರೆಯುತ್ತದ ಈ ವಿಳಂಬಕ್ಕೆ ಸಾಕಷ್ಟು 'ಪೋಸ್ಟ್‌ಮ್ಯಾನ್'ರಿಲ್ಲದ್ದೇ ಕಾರಣವಂತ ಎರಡು ಮೂರು ತಿಂಗಳಿಗೆ ಹಿಂದ ಪೋಸ್ಟಲ್ ಸುಪರಿಂಟೆಂಡಂಟರು ಮಡಿಕೇರಿಗೆ ಬಂದಿದ್ದಾಗ ಈ ವಿಚಾರ ಆಲೋಚಿಸಿ ಒಬ್ಬನನ್ನ ಹೆಚ್ಚಿಗ ಕೊಡುವದಾಗಿ ಹೇಳಿದ್ದರಂತೆ ಆದರೆ ಈ ವರೆಗೆ ಹಾಗೆ ಮಾಡಿರುವದಿಲ್ಲ ಸಾಧಾರಣವಾಗಿ ಒಬ್ಬ ಟಪ್ಪಾಲಿನವನು ದಿನಕ್ಕೆ ೨೦೦ ಪತ್ರಗಳ ಬಟವಾಡೆ ಮಾಡಬೇಕೆಂದು ಲೆಕ್ಕ ಆದರೆ ಮಡಿಕೇರಿಯಲ್ಲಿ ಇರುವದು ಬರೇ ಮೂರು 'ಪೋಸ್ಟ್‌ಮ್ಯಾನ್'ರು ಮಡಿಕೇರಿಯಂಥಾ ಬೆಟ್ಟ ಪ್ರದೇಶದಲ್ಲಿ ಇವರ ಕೆಲಸ ಸುಲಭವಲ್ಲ ಆದ್ದರಿಂದ ಇನ್ನೊಬ್ಬನನ್ನು ಹೆಚ್ಚಿಸುವದು ಅತೀ ಅವಶ್ಯ ಇದೂ ಅಲ್ಲದ ಮೈಲ್ ಬಸ್ಸು ಸರಿಯಾದ ಸಮಯಕ್ಕೆ ಬರುವಂತೆ ಏರ್ಪಡಿಸಿ ಸಾಯಂಕಾಲವೇ ಟಪಾಲು ಬಟವಾಡೆಯಾಗುವ ಏರ್ಪಾಡು ಮಾಡಬೇಕು ಸಂಬಂಧಿಸಿದ ಅಧಿಕಾರಿಗಳು ಗಮನಿಸ ವರೇ?

'ನಾಗರಿಕ'

ಮನೆದಳಗಳ ಮಾರಾಟ

ಮಡಿಕೇರಿ ಮುನ್ಸಿಪಾಲಿಟಿಯೊಳಗೆ ಮನೆದಳಗಳ ಮಾರಾಟದ ಬಗ್ಗೆ ಯಾವದೇ ಒಂದು ನಿಯಮವಿರುವಂತೆ ತೋರುವದಿಲ್ಲ ತಲೆ ನೋಡಿ ಮುಂಡಾಸು ಕಟ್ಟುವ ಆ ಹಿಂದಿನ ನೀತಿಯೇ ಇಂದೂ ತೋರಿಬರುತ್ತಿದೆ ಅನೇಕ ಮನೆದಳಗಳನ್ನು ಗುಟ್ಟು ಗುಟ್ಟಾಗಿ ಕೊಡಲಾಗಿದೆ ಹಿಂದೆ ಕೇಳಿದಾಗ ಕೊಡದ ದಳಗಳು ಇತ್ತಲಾಗಿ ಕೆಲವರಿಗೆ ಕೊಡಲ್ಪಟ್ಟಿವೆ. ಈ ರೀತಿ ಆಗಬಾರದು ಅದಕ್ಕೂ ಒಂದು ನೀತಿಯನ್ನು ಮುನ್ಸಿಪಾಲಿಟಿಯವರು ಅನುಸರಿಸಬೇಕು ಪತ್ರಿಕೆಗಳಲ್ಲಿ ಮಾರಾಟದ ಬಗ್ಗೆ ಪ್ರಕಟಿಸಿ ಬಹಿರಂಗವಾಗಿ ಹರಾಜುಮಾಡುವದು ಯೋಗ್ಯವಾಗಿದೆ ಇದನ್ನು ಪುರಸಭೆಯ ಆಡಳಿತ ಮಂಡಳಿಯವರೂ, ಪ್ರೆಸಿಡಂಟರೂ ಗಮನಕ್ಕೆ ತಗದುಕೊಂಡು ಆ ರೀತಿಯ ಏರ್ಪಾಡಾಗುವಂತೆ ಮಾಡುವರೇ? ಸರಕಾರವೂ ಈ ವಿಚಾರದಲ್ಲಿ ತನ್ನ ದೃಷ್ಟಿ ಇಡುವದೇ?

'ಪಟ್ಟಣಿಗ'

ಬಾಡಿಗೆ ನಿಯಂತ್ರಣ

ಹಿಂದೂದೇಶದ ವಿವಿಧ ಭಾಗಗಳಲ್ಲಿ ಮನೆಬಾಡಿಗೆ ನಿಯಂತ್ರಣವು ಜಾರಿಯಲ್ಲಿ ಬಂದಿದೆ ಕೊಡಗಿನಲ್ಲೂ ಆ ರೀತಿಯ ಮಸೂದೆಯೊಂದನ್ನು ಸರಕಾರ ತರಲೆತ್ನಿಸಿತೆಂದೂ, ಜನಪ್ರತಿನಿಧಿಗಳೆನ್ನುವ ಆಸಕ್ತ ಸದಸ್ಯರೇ ಅದಕ್ಕೆ ವಿರೋಧಮಾಡಿ ಅದ ಜಾರಿಯಲ್ಲಿ ಬರದಂತಾಯಿತೆಂದೂ ಪತ್ರಿಕೆಯಲ್ಲಿ ಓದಿದ ನೆನಪಿದೆ ಹೀಗಿಂದ ದುಬಡ ಜನರ ದುರ್ದೈವ ಬಡವರ ಓಟನ್ನು ಪಡೆದು ಪ್ರತಿನಿಧಿಗಳಾದ ಇವರು ತಮ್ಮ ಜವಾಬ್ದಾರಿಯನ್ನು ಸ್ವಾರ್ಥಕ್ಕಾಗಿ ಬಲಿಕೊಟ್ಟದ್ದು ನಾಚಿಕೆಯ ಸಂಗತಿ ಪೇಟೆಯಲ್ಲಿ ಒಂದೆರಡು ಮನೆ ಇರುವ ಈ ಸ್ವಾರ್ಥಸಾಧಕರು ತಮ್ಮ ಲಾಭದ ದೃಷ್ಟಿಯಿಂದ ಬಹುಜನರ ಹಿತಕ್ಕೆ ವಿರೋಧ ಮಾಡಿರುವದನ್ನು ನೋಡಿದರೆ ಇಂಥವರಿಗೆ ಹೆಚ್ಚಿನ ಜವಾಬ್ದಾರಿ ಕೊಟ್ಟರೆ ತಮ್ಮ ಸ್ವಾರ್ಥಕ್ಕಾಗಿ ಸರ್ವವನ್ನೂ ಉಪಯೋಗಿಸಿಕೊಳ್ಳಬಹುದು ಪೇಟೆಗಳಲ್ಲಿ ಮನೆ ಬಾಡಿಗೆಯು ಹದ್ದು ಮೀರಿ ಏರುತ್ತಿದ ಆರು ರೂಪಾಯಿ ಬಾಡಿಗೆಯು ಮನೆ ಮೂವತ್ತು ರೂಪಾಯಿಗೆ ತಲಪಿದೆ ಮೊನ್ನೆಯಾಗಿ ರೂಪಾಯಿ ೩೦ ಕ್ಕಿಂದಿದ್ದ ಮನೆಗಾಗಿ ಸ್ಪೈಪೋಟಿಯ ಕಾರಣ ರೂ ೭೦ಕ್ಕೆ ಏರಿಸಿಂತದೆ ಈ ರೀತಿಯಾದರೆ ಬಡಜನರು ಹೇಗೆ ಜೀವಿಸಬೇಕು? ಬಾಡಿಗೆ ತಿಂಗಳಿಗೆ ಇಷ್ಟೆಂದು ನಿಶ್ಚಯಿಸಿ ಮುಂಗಡ ಪಡಕೊಂಡವರು ಹೆಚ್ಚಿಗೆ ಬಾಡಿಗೆ ಕೊಡುವವರು ಬಂದಾಗ ಒಪ್ಪಂದವನ್ನು ಮುರಿದು ಬೇರೆಯವರಿಗ ಕೊಡುವ ಇಲ್ಲವೇ ಅವರಿಂದಲೇ ಹೆಚ್ಚಿನ ಬಾಡಿಗೆ ವಸೂಲ್ಮಾಡುವ ನಿದರ್ಶನಗಳೂ ಇವೆ ಸರಕಾರವು ತನ್ನ ಮಸೂದ ಬಿದ್ದುಹೋಯಿತೆಂದು ತಟಸ್ಥ ಉಳಿಯಬಾರದು, ಅನ್ಯಾಯವಾದ ಈ ಶೋಷಣೆಯನ್ನು ತಪ್ಪಿಸಲು ಕಾನೂನ ಮಾಡಬೇಕು ಜನ ಪ್ರತಿನಿಧಿಗಳೆನ್ನುವವರು ವಿರೋಧಿಸಿದರೂ ಬಹು ಜನರ ಹಿತಕ್ಕಾಗಿ ಈ ಕಾನೂನನ್ನು ಜಾರಿಯಲ್ಲಿ ತರಲೇಬೇಕು ಚೀಫ್ ಕಮಿಷನರು ಈ ಬಗ್ಗೆ ನಿಗವಹಿಸಬೇಕಾಗಿದೆ ಕೇವಲ ೫೦ ರೂಪಾಯಿಗೆ ಪಡೆದ ಮನೆಗೆ ಇಂದು ತಿಂಗಳಿಗೆ ರೂ ೩೦/- ಬಾಡಿಗೆ ಪಡೆಯುತ್ತಿರುವದು ದರೋಡೆ ಎಂದು ಕರೆಸಿಕೊಳ್ಳದಿದ್ದರೂ ಅದಕ್ಕಿಂಥಾ ಭಿನ್ನವಾದುದೇನೂ ಅಲ್ಲ ಚೀಫ್ ಕಮಿಷನರು ಬಡ ಜನರ ಗೋಳನ್ನು ಗಮನಿಸುವರಾಗಿ ನಂಬಲಾಗಿದೆ

K A R

ಕುತ್ತನಾಡು

ಕುತ್ತನಾಡೆಂದು ಕರೆಸಿಕೊಳ್ಳುವ ಕುಟ್ಟಂದಿ, ಸೆಟ್ಟಿಗೇರಿ ಮತ್ತು ಕೊಂಗಣ ಗ್ರಾಮಗಳು ಮಳೆಗಾಲದಲ್ಲಿ ಹೊರಗಿನ ಸಂಪಂಧವಿಲ್ಲದ ಅಂಡಮಾನಿನಂತೆ ಆಗುವವು ಇವುಗಳನ್ನು ಸುತ್ತುವರಿದು ಹೊಳೆ ಇರುವದರಿಂದ ಪೇಟೆಗೂ, ಕೋರ್ಟು ಖಚೇರಿಗೂ, ಆಸ್ಪತ್ರೆಗೂ ಹೋಗುವದು ಕಷ್ಟವಾಗಿದೆ ಶಾಲಾ ಮಕ್ಕಳೂ ಕೂಡ ಶಾಲೆಗೆ ಹೋಗಲಾರರು ಈ ನಾಡಿನಲ್ಲಿ ಸುಮಾರು ೨೦೦೦ ದ ವರೆಗೆ ಜನರಿದ್ದೇವೆ ಇವರಿಗೆ ಬೇಕಾದ ಸರ್ವವಸ್ತುವನ್ನೂ ಮಳೆಪ್ರಾರಂಭದ ಮೊದಲೇ ನಿಕ್ಷೇಪ ಇಟ್ಟುಕೊಳ್ಳಬೇಕಾಗುತ್ತೆ ಈ ಹೊಳೆಗ ಒಂದು ಸೇತುವೆ ಮಾಡಬೇಕೆಂದು ಅನೇಕ ವರ್ಷಗಳಿಂದ ಈ ನಾಡಿನ ಜನರು ಕೂಗಿಕೊಂಡರೂ ಆಗಿನ ಬ್ರಿಟಿಷ್ ಸರಕಾರವೂ ಗಮನ ಕೊಡಲಿಲ್ಲ ಈಗಿನ ಸ್ವದೇಶೀ ಸರಕಾರವೂ ಕಿವಿಗೊಡುತ್ತಿಲ್ಲ ಹೈಸ್ಕೂಲಿಗೆ ಹೋಗುವ ವಿದ್ಯಾರ್ಥಿಗಳು ಮನೆಯಲ್ಲಿ ಕೂಡಬೇಕಿದೆ ಗೋಣಿಕೊಪ್ಪ, ವೀರಾಜಪೇಟೆ, ಹುದಿಕೇರಿ ಯಾ ಪೊನ್ನಂಪೇಟೆ ಎಲ್ಲಿಗೆ ಹೋಗಬೇಕಾದರೂ ಈ ಹೊಳೆ ದಾಟದೆ ಸಾಧ್ಯವಿಲ್ಲ ಗೋಣಿಕೊಪ್ಪಲಿಗ ಹೋಗುವ ದಾರಿಯಲ್ಲಿ ಜಿಲ್ಲಾ ಬೋರ್ಡಿನವರು ಒಂದು ದೋಣಿ ಹಾಕುತ್ತಾರೆ ಆವರೆ ಹೆಚ್ಚು ನೀರಿನಲ್ಲಿ ಇದೂ ನಿಷ್ಪ್ರಯೋಜಕ ಈಗಿನ ಚೀಫ್ ಕಮಿಷನರು ಆನಯಮೇಲೆ ಹೊಳೆದಾಟ ನಮ್ಮ ಕಷ್ಟವನ್ನು ನೋಡಿದ್ದಾರೆ ಪೊಳ್ಳಬೆಟ್ಟದಲ್ಲಿ ತನ ಮೊಕಾಂ ಇದ್ದಾಗ ಕಲವು ಗ್ರಾಮಸ್ಥರನ್ನು ಕರೆಸಿ ಸೇತುವೆ ಕಟ್ಟಲು ತಕ್ಕ ಏರ್ಪಾಡು ಮಾಡುವ ಬಗ್ಗೆ ಇಂಜಿನಿಯರನ್ನು ಕಳಹಿಸುವದಾಗಿ ಭರವಸೆ ಕೊಟ್ಟರು ಆದರೆ ಇಂಜಿನೀಯರಾಗಲೀ, ಡೆವಲೆಪ್ಮೆಂಟ್ ಅಧಿಕಾರಿಯಾಗಲಿ ಈ ವರೆಗೆ ಬಂದಿಲ್ಲ ಮಳೆಗಾಲ ಪ್ರಾರಂಭವಾಯಿತು ಪಾಂಡಿಯೂ ಇಲ್ಲ, ಪಾಲವೂ ಇಲ್ಲ ಇಂಥಾ ತೊಂದರೆಯಿಂದ ಜನರು ವಿಪರೀತ ತೊಂದರೆಗೊಳಗಾಗಿದ್ದಾರೆ ಕಲು ಶತಮಾನಕ್ಕೂ ಹಿಂದಿನಿಂದ ಕೂಗುತ್ತಿದ್ದರೂ ಸರಕಾರ ಈ ಬಗ್ಗೆ ಗಮನ ಕೊಡದಿರುವದು ವಿಷಾದಕರ ಇನ್ನಾದರೂ ಬಡರೈತರ ಕಷ್ಟ ನಿವಾರಣೆಗೆ ಸರಕಾರ ಪ್ರಯತ್ನಿಸದೇ?

'ನಾಡಿನವ'

ಮಹಿಳಾ ಪುಟ

ಗೃಹ ವಿಜ್ಞಾನ.

ಲೇಖಕಿ:- ಶ್ರೀಮತಿ ಜಯಲಕ್ಷ್ಮೀ ಆರ್. ಶ್ರೀನಿವಾಸನ್.

ನಮ್ಮ ಹುಡುಗಿ ಮದುವೆಯಾಗಿ ಗಂಡನ ಮನೆಗೆ ಹೋದಳೆಂದರೆ ಗೃಹಿಣಿಯಾದಳೆಂದು ಸಹಜವಾಗಿ ಎಲ್ಲರೂ ಭಾವಿಸುತ್ತೇವೆ. ಗೃಹಿಣಿ ಎಂಬ ಬಿರುದನ್ನು ಹೊಂದಬೇಕಾದರೂ ಕೂಡ ವಿಶ್ವ ವಿದ್ಯಾನಿಲಯದಲ್ಲಿ ಪಟ್ಟಧಾರಿಯಾಗಲು ಕೆಲವು ನಿಬಂಧನೆಗಳೂ, ನಿಯಮಗಳೂ ಇವೆಯೋ, ಅದೇ ರೀತಿಯಲ್ಲಿ ಹಲಕೆಲವು ಅನುಭವಗಳೂ, ಸದ್ಗುಣಗಳೂ ಅವಶ್ಯಕ. "ಏನು ಹೀಗೆ ಹೇಳುತ್ತೀ? ಮದುವೆಯಾಗಿ, ಗಂಡನ ಸಹಿತ ಸಂಸಾರ ಹೂಡಿತೆಂದರೆ ತನ್ನಷ್ಟಕ್ಕೇ ಎಲ್ಲ ತಿಳಿದು ಹೋಗುತ್ತೆ. ಏನು ಪ್ರಮಾದ" ಎಂದು ಒಂದು ಸಲ ನನ್ನ ಗೆಳತಿಯೊಬ್ಬಳು ಅಂದದ್ದು ನೆನಪಿಗೆ ಬರುತ್ತದೆ.

ಹಿಂದಿನ ಕಾಲದಂತೆ ನಮ್ಮ ಹುಡುಗಿಯರು ಮದುವೆಯಾದ ಬಳಿಕ ಅತ್ತೆಯ ಮನೆಗೆ ಹೋಗಿ ವರ್ಷಗಟ್ಟಲೆ ವಾಸಮಾಡಿ ಕೆಲಸ ಕಲಿಯುವವರು, ಈಗ ಬಹಳ ಕಡಿಮೆ. ಮದುವೆಯಾಯಿತೆಂದರೆ ಗಂಡನ ಸಹಿತ ಡೆಲ್ಲಿಗೋ, ಕಲ್ಕತ್ತೆಗೋ, ಸಿಂಗಾಪುರಿಗೋ— ಬಸಿಗಿ ಲಂಡನ್‌ಗೋ ಹೊರಟು ಬಿಡುತ್ತಾರೆ. ಮದುವೆಯಾಗುವ ವರೆವಿಗೆ ತೌರುಮನೆಯಲ್ಲಿದ್ದರೂ ಕೂಡ ಮನೆಗೆಲಸ ಕಲಿಯೋಣವೆಂದರೆ ಹೈಸ್ಕೂಲು, ಕಾಲೇಜು ಎಂದು ವಿದ್ಯಾಲಯಗಳಿಗೆ ಹೋಗಿ ಬರುವುದಕ್ಕೂ, ಪಾಠಗಳನ್ನು ಮಾಡುವುದಕ್ಕೂ ಸಹ ಹೊತ್ತು ಸಾಲುವುದಿಲ್ಲ. ಹಾಡಿನ ಉಪಾಧ್ಯಾಯರಿಗೆ ದಂಡ ಸಂಬಳ ತೆರಬೇಕಾಗಿದೆ ಎಂದು ಘಳಿಗೆ ಕುಳಿತು ಕಲಿತ ಹಾಡನ್ನು ಅಭ್ಯಸಿಸಲೂ ಸಹ ಸಮಯ ಸಿಗದಿರುವಾಗ ತಮ್ಮನ ಜೊತೆಗೆ ಮನೆಗೆಲಸಗಳನ್ನು ಗಮನಿಸಿ ಕಲಸ ಕಲಿಯಲು ಅವಕಾಶವೆಲ್ಲಿ ಸಿಗಬೇಕು? ಹಾಡು, ಓದು, ಸಾಧ್ಯವಾದಷ್ಟು ಲಲಿತ ಕಲೆಗಳನ್ನು ಕಲಿತು ಮುಗಿಯುವುದರೊಳಗಾಗಿಯೋ, ಮುಗಿಸುವುದನ್ನೇ, ಮದುವೆಯಾಯಿತೆಂದರೆ, ಗಂಡ ತಾನು ಉದ್ಯೋಗವಾಗಿರುವ ಎಡೆಗೆ ಜೊತೆಯಲ್ಲೇ ಕರೆದೊಯ್ಯುತ್ತಾನೆ. ಹುಡುಗಿ ಹೊಸದಾಗಿ ಸಂಸಾರ ಹೂಡುತ್ತಾಳೆ. ನೆರೆಹೊರೆಯವರೆಲ್ಲ ಅಪರಿಚಿತರು. ತನಗೆ ತಿಳಿಯದ ವಿಷಯವನ್ನು ಅವರಿಂದ ಕೇಳಿ ತಿಳಿಯಲೂ ಸಂಕೋಚ. ಇಷ್ಟರವರೆವಿಗೆ ತಾನು ಕಲಿತ ನವನಾಗರೀಕತೆಯೂ, ವಿದ್ಯಾಲಯದ ವ್ಯಾಸಂಗವೂ ಕುಟುಂಬ ನಿರ್ವಹಣೆಗೆ ಯಾವ ರೀತಿಯ ಒತ್ತಾಸೆ ನೀಡಬಲ್ಲುದು? ಬಿಟ್ಟನಲ್ಲಿ ತಿಳುವಳಿಕೆ ಮಾತ್ರ ಚುರುಕಾಗಿರುತ್ತದೆಂಬುದನ್ನು ನಾನೂ ಒಪ್ಪುತ್ತೇನೆ. ಆದುದರಿಂದಲೇ ಇಂತಹ ಓದಿದ ಹುಡುಗಿಯರು, ಅವರ ಮನೆಗೆಲಸ ತಿಳಿಯದ ಹೆಣ್ಣು ಮಕ್ಕಳ ಒತ್ತಾಸೆಗಾಗಿ ನುರಿತ ಗೃಹಿಣಿಯರಿಂದ ಗೃಹ ನಿರ್ವಹಣೆಯ ವಿಷಯವಾಗಿ ನಮ್ಮ ನಾಡಿನಲ್ಲಿ ಒಳ್ಳೊಳ್ಳೆಯ ಪುಸ್ತಕಗಳು ಪ್ರಚುರವಾಗಬೇಕು. "ಪಾಕಶಾಸ್ತ್ರ" ಒಂದಿದ್ದರಾಯಿತು, ಏನೀಗ ವಿಕ್ಕವಲ್ಲಾ ಸಣ್ಣ ಪುಟ್ಟ ವಿಷಯಗಳು ಕ್ರಮೇಣ ತನ್ನಷ್ಟಕ್ಕೆ ಅನುಭವದಿಂದ ತಿಳಿದು ಹೋಗುತ್ತವೆ" ಎನ್ನಬಹುದು. ಹಾಗಲ್ಲ, ನೋಡಲು ಹೋದರೆ ಗೃಹಕೃತ್ಯವೂ ಸಹ ದೊಡ್ಡದೊಂದು ವಿಜ್ಞಾನವೇ. ಸರಿ ಉಪ್ಪನ್ನೂ ರವೆಯನ್ನೂ ಕಲೆಸಿ ಬೇಯಿಸಿಬಿಟ್ಟರೆ ಉಪ್ಪಿಟ್ಟಾಯಿತೇನು? ರವೆಗೆ ಸಕಷ್ಟು ತುಪ್ಪ ಹಾಕಿ ಸೀದುಹೋಗದಂತೆ 'ಘಂ' ಎಂದು ಪಕ್ವವಾಗಿ ಹುರಿದು, ಒಗ್ಗರಣೆ ಮಾಡಿ, ಸಾಕಷ್ಟು ನೀರು ಬೆರೆಸಿ ಬೇಯಿಸಿ, ತೆಂಗಿನಕಾಯಿ ತುರಿದು, ಕೊತ್ತಂಬರೀ ಸೊಪ್ಪು, ನಿಂಬೇಹುಳಿ, ತುಪ್ಪದಲ್ಲಿ ಹುರಿದ ಗೋಡಂಬೀ ಬೀಜ, ಎಲ್ಲ ಸೇರಿಸಿ, ಸಾಕಷ್ಟು ತುಪ್ಪ ಹಾಕಿ, ಹಾವಿಸಂತೆ ಪಕ್ವವಾಗಿ ಉಪ್ಪಿಟ್ಟು ಮಾಡಿದರೆ ಅದು ಉಪ್ಪಿಟ್ಟು. ಅದೇ ತರಹವೇ ಗೃಹಕೃತ್ಯ ನಿರ್ವಹಣೆಯೂ ಸಹ. 'ನಮ್ಮ ಯಜಮಾನರೂ ಆಫೀಸಿಗೆ ಹೋಗುತ್ತಾರೆ' ಎಂದುಕೊಂಡು ತವಿ ಗಂಡಯಂಟು.. ಆ ತರಹ 'ನನ್ನ ಮಗಳೂ ಸಂಸಾರ ಮಾಡುತ್ತಾಳೆ' ಎಂದುಕೊಂಡು ನಂತ ಸ್ಥಿತಿಯಿಂದಿರೆ ಸಲದು. ಅವಳು ನಮ್ಮ ಮನೆಯಲ್ಲಿದ್ದಾಗಲಂತೂ ಎಲ್ಲ ಕೆಲಸ ಹೇಳಿಕೊಡಲು ನಮಗೆ ಸಾಧ್ಯವಾಗಲಿಲ್ಲ. ಆದರೆ ನೋಡಿದ್ದನ್ನು, ಕೇಳಿದ್ದನ್ನು, ಓದಿದ್ದನ್ನೂ, ತಕ್ಷಣ ಗ್ರಹಿಸಿಕೊಂಡು ಅದರಂತೆ ನಡೆಯುವ ಚಾತುರ್ಯವೂ, ಜಾಣ್ಮೆಯೂ ಉಂಟು ನಮ್ಮ ಮಗಳಿಗೆ. ಆದ್ದರಿಂದ ಆ ಗೃಹಕೃತ್ಯ ನಿರ್ವಹಣೆಯಲ್ಲಿ ಯಾವ ವಿಷಯದಲ್ಲೇ ಆಗಲಿ ಅಲ್ಪ ಸಂದೇಹವಾಗಲೀ, ತೊಡಕಾಗಲೀ ಏರ್ಪಟ್ಟರೂ ಕೂಡ ಅವಳು ಪುಸ್ತಕದಲ್ಲಿ ಓದಿ ತಿಳಿದುಕೊಳ್ಳುವಂತಹ ಸೌಲಭ್ಯವಾದರೂ ನಾವು ನಮ್ಮ ಹೆಣ್ಣು ಮಕ್ಕಳಿಗೆ ಕಲ್ಪಿಸಿ ಕೊಡಬೇಡವೇ?

ಈಗ ನಮಗೆ ಸ್ವಾತಂತ್ರ್ಯ ಲಭಿಸಿದೆ. ಸ್ವತಂತ್ರ ಭಾರತದಲ್ಲಿ ಹೆಣ್ಣು ಮಕ್ಕಳೂ ತಮ್ಮ ತಮ್ಮ ಕಷ್ಟ ನಿಷ್ಠುರಗಳನ್ನು ವ್ಯಕ್ತಪಡಿಸಿಕೊಂಡು, ತಮಗೆ ಅವಶ್ಯಕವಾದಂತಹ ಸೌಲಭ್ಯಗಳನ್ನೂ, ಹಕ್ಕುಬಾಧ್ಯತೆಗಳನ್ನೂ ಕೇಳಿ ಪಡೆಯಲು ಅವಕಾಶ ಉಂಟು. ಆಗಾಗ ರೇಡಿಯೋ ಮೂಲಕವಾಗಿ ಹೆಣ್ಣು ಮಕ್ಕಳಿಗೆ ಉಪಯೋಗವಾಗುವಂತಹ ಮಾತುಕಥೆಯೇ ಮೊದಲಾದ ವಿಚಾರಗಳನ್ನು ಪ್ರಸಾರ ಮಾಡುತ್ತಿದ್ದಾರಲ್ಲದೆ ಇನ್ನೂ ಹಲಕೆಲವು ಉಪಯುಕ್ತ ವಿಷಯಗಳನ್ನೂ ಪ್ರಸಾರಗೊಳಿಸುತ್ತಾರೆ. ಇಷ್ಟು ಮಾತ್ರ ಸಲದು. ಮನೆಯನ್ನು ಚೊಕ್ಕಟವಾಗಿಯೂ, ಅಂದವಾಗಿಯೂ ಇಡುವಿಕೆ, ರುಚಿ ರುಚಿಯಾದ ಊಟ ಉಪಚಾರ, ಅತಿಥಿ ಸತ್ಕಾರ, ರೋಗಿಯ ಉಪಚಾರ, ಮಕ್ಕಳ ಪೋಷಣೆ, ಬಟ್ಟೆಗಳನ್ನು ಪರಿಶುದ್ಧವಾಗಿ ಒಗೆದು ಒಣಗಿಸಿ ಇಸ್ತ್ರೀ ಮಾಡುವಿಕೆ, ಮನೆಯ ಲೆಕ್ಕ ಪತ್ರಗಳನ್ನು ಕ್ರಮವಾಗಿ ಇಡುವಿಕೆ, ಮಿತವ್ಯಯ, ಪತಿಗೆ ನೆರವಾಗಿ ಮನೆಯ ಒಳಗೂ, ಹೊರಗೂ ಸಾಮರ್ಥ್ಯ ಶಾಲಿನಿಯಾದ ಸತಿಯಾಗಿರುವಿಕೆ, ಸಮಾಜಸೇವೆ, ಗ್ರಾಮಸೇವೆ, ದೇಶ ಸೇವೆಯೇ ಮುಂತಾದ ಗೃಹ ವಿಜ್ಞಾನಕ್ಕೆ ಸಂಬಂಧಪಟ್ಟಂತಹ ವಿಷಯಗಳನ್ನು ನಮ್ಮ ಹೆಣ್ಣು ಮಕ್ಕಳಿಗೆ ಸಹಜವಾದ ಮತ್ತು ಸುಲಭವಾದ ಶೈಲಿಯಲ್ಲಿ ತಿಳಿಸಬೇಕಾಗಿದೆ. ಈ ಮಹಾಕಾರ್ಯಗಳು ರೇಡಿಯೋ ಭಾಷಣಗಳ ಮೂಲಕವೂ ಗ್ರಂಥ ರಚನೆಗಳ ಮೂಲಕವೂ, ಪರಿವರ್ತನೆ ಹೊಂದಿದ ಹೆಣ್ಣು ಮಕ್ಕಳ ವಿದ್ಯಾಭ್ಯಾಸದ ಮೂಲಕವೂ ಸಾಧಿಸಲ್ಪಡಬೇಕಾಗಿದೆ.

ಪಾಶ್ಚಾತ್ಯ ದೇಶಗಳಲ್ಲಿ ಗೃಹಿಣಿಯರಿಗೇ ಮೀಸಲಾದ ಎಷ್ಟೋ ಒಳ್ಳೊಳ್ಳೆಯ ಪುಸ್ತಕಗಳೂ, ಪತ್ರಿಕೆಗಳೂ, ಮಾಸಿಕಗಳೂ ಹೇರಳವಾಗಿ ಪ್ರಚುರವಾಗುತ್ತವೆ. "ಯಾಕೆ, ನಮ್ಮಲ್ಲಿ ಇಂತಹ ಪತ್ರಿಕೆಗಳು ಇಲ್ಲವೇನು?" ಎನ್ನಬಹುದು. ಹೌದು ಪತ್ರಿಕೆಗಳು ಇವೆ. ಇಲ್ಲವೆನ್ನಲಿಲ್ಲ. ಹೆಸರಿಗೆ ಮಾತ್ರ ಸ್ತ್ರೀಯರಿಗೆ ಮೀಸಲಾದ ಪತ್ರಿಕೆಗಳಷ್ಟೇ. ಅವುಗಳಲ್ಲಿ ಎಲ್ಲೋ ಒಂದ ಮೂಲೆಯಲ್ಲಿ ಒಂದೆರಡು ಅಡಿಗೆಯ ವಿಧಾನಗಳನ್ನು ಮಾತ್ರ ಪ್ರಕಟಿಸಿಬಿಟ್ಟರಾಯಿತು. ಅದು ಸ್ತ್ರೀಯರ ಪತ್ರಿಕೆಯೆಂಬ ಭಾವನೆಯಷ್ಟೆ. ಬಾಕಿ ಪುಟಗಳನ್ನೆಲ್ಲ ಬೇಕಾದರೆ, ತಿರುವಿ ನೋಡಿ! ಗೃಹಕೃತ್ಯ ನಿರ್ವಹಣೆಗೆ ಸಂಬಂಧಪಟ್ಟಂತಹ ವಿಷಯಗಳು ಬಹಳ ವಿರಳ.

ಪಾಶ್ಚಿಮಾತ್ಯ ದೇಶಗಳಲ್ಲಿ ಮಹಿಳೆಯರಿಗೆ ಉಪಯುಕ್ತವಾಗುವಂತಹ ಪುಸ್ತಕಗಳು ಮಾತ್ರ ಉಂಟೆಂದಲ್ಲ. ಅಲ್ಲಿನ ಫರ್ನೀಚರ್, ಬಟ್ಟೆ, ಪಾತ್ರೆ, ಗಾಜಿನ ಸಾಮಾನು ಎಲೆಕ್ಟ್ರಿಕ್ ಬತ್ತಿ, ಬಾಗಿಲು ಮುಂತಾದ ಭಾರೀ ಕೈಗಾರಿಕಾ ಕಾರ್ಖಾನೆಯೂ ಸಹ ಮಹಿಳೆಯರ ಅಮೂಲ್ಯ ಸಲಹೆಗಳನ್ನು ಅಪೇಕ್ಷಿಸುತ್ತದೆ. ತಾನು ನೂತನವಾಗಿ ಸೃಷ್ಟಿಸಬೇಕೆಂದಿರುವ ಹೊಸ ಸಾಮಾನಿನ ಮಾದರಿಯೊಂದನ್ನು ಮೊಟ್ಟ ಮೊದಲು ದೇಶದ ನುರಿತ ಗೃಹಿಣಿಯರಿಗೋ ಅವರ ಸಮಾಜಕ್ಕೋ ತೋರಿಸಿ, ಅವರುಗಳ ಅಭಿಪ್ರಾಯ ಪಡೆಯದೆ ಆ ನೂತನ ವಸ್ತುವನ್ನು ತಯಾರಿಸುವುದಿಲ್ಲ. ಮತ್ತೂ ಆ ಮಹಿಳಾ ಪ್ರತಿನಿಧಿಗಳು ಅದರಲ್ಲಿ ಏನಾದರೂ ಮಾರ್ಪಾಟುಗಳೋ, ಸುಧಾರಣೆಗಳೋ ಆಗಬೇಕೆಂದು ಅಭಿಪ್ರಾಯಪಟ್ಟರೆ ಆ ಸಲಹೆಗಳನ್ನು ಅನುಸರಿಸಿ ಗೃಹಿಣಿಯರಿಗೆ ಅನುಕೂಲವಾಗುವಂತಹ ರೀತಿಯಲ್ಲೇ ತಯಾರಿಸುತ್ತಾರೆ. ಇಂತಹ ಸುಧಾರಣೆಗಳು ನಮ್ಮಲ್ಲೂ ಆಗಬೇಕು.

(ಮೈಸೂರು ಆಕಾಶವಾಣಿಯಲ್ಲಿ ಪ್ರಸಾರವಾದದ್ದು)

ವಿಮೆ ಮಾಡಲು ಇಲ್ಲವೇ ಪ್ರತಿನಿಧಿಸಲು
ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.
ಇವರ ಸಲಹೆಗಿಂತ ಉತ್ತಮ ಮಾರ್ಗವಿಲ್ಲ
ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದೂಸ್ಥಾನದ ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು
ದಿ ಬೊಂಬಾಯಿ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.
30 ಮೌಂಟ್ ರೋಡ್, ಪೊ. ಬಾ. ನಂ. 337, ಮದ್ರಾಸು 2
ಬೊಂಬಾಯಿ ಲೈಫ್ ಬಿಲ್ಡಿಂಗ್, ಪೊ. ಬಾ. ನಂ 1, ಉಡುಪಿ.
(ಟೆಲಿಫೋನ್ ನಂ 8398)
ಇತರ ಆಫೀಸುಗಳು—ಬೆಂಗಳೂರು, ತಿರುವೆಂಡರಂ, ಕಲ್ಲಿಕೋಟೆ, ಮಂಗಳೂರು, ಮಧುರೆ, ಮತ್ತು ಬೊಂಬಾಯಿ.

ದಿ ಟ್ರಾಪಿಕಲ್
ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.
ಮೇನೇಜಿಂಗ್ ಡೈರೆಕ್ಟರ್: ಲಾಲ ಶಂಕರ್ ಲಾಲ್.
ಮುಖ್ಯ ಕಚೇರಿ— ಹೊಸ ಡೆಲ್ಲಿ.
ಸ್ಥಾಪಿಸಿದ ಡೈರೆಕ್ಟರರು:
ಪಂಡಿತ ಮೋತಿಲಾಲ್ ನೆಹರು — ಎಸ್ ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮಲಖಾನ್. — ಡಾ|| ಎಂ ಎ. ಅನ್ಸಾರಿ.
Transacts:—Life, Fire, Motor and Marine.
ನಮ್ಮ ಹೊಸ ವಿಸ್ತಾರದ ಯೋಜನೆಯಲ್ಲಿ ಆಕರ್ಷಕ ಕಮಿಷನ್ ಮೇಲೆ ಏಜನ್ಸಿಗೆ ದಯವಿಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ.
ಆರ್ಗನೈಜರ್, ದಕ್ಷಿಣ ಕೊಡಗು, ಪೊನ್ನಂಪೇಟೆ. ಅಥವಾ ಯಂ. ಯು. ಅಚ್ಚಯ್ಯ. ಏಜೆನ್ಸಿ ಸುಪರಿಂಟೆಂಡೆಂಟ್, ಮಡಿಕೇರಿ, ಕೊಡಗು.
ಆರ್ಗನೈಜರ್, ಉತ್ತರ ಕೊಡಗು, ಮಡಿಕೇರಿ. ಅಥವಾ ಎಂ. ಎ ಬೆಳ್ಯಪ್ಪ, ಬ್ರಾಂಚ್ ಸೆಕ್ರೆಟರಿ, ಹಂಪನಕಟ್ಟಾ, ಮಂಗಳೂರು

ಭಾರತದ ಭಾಗ್ಯ ಭಂಡಾರ.

॥ ಭಗವಾನ್ ಬುದ್ಧ ದೇವ ॥

ಲೇ—ಶ್ರೀ ಬಿ. ಎಸ್. ರಾಮಕೃಷ್ಣ ಬಿ. ಎಸ್ಸಿ (ಆನರ್ಸ್) ಬಿ. ಟಿ.

ಲೇಖನ ೧೨

ಭಾರತದ ಜನ ಜೀವನವು ಅನಂತ ಮುಖಗಳಲ್ಲಿ ಆವಿರ್ಭವಿಸಿ ರಾಜಕೀಯ, ಆರ್ಥಿಕ, ಸಾಮಾಜಿಕ ಆಂದೋಲನಗಳುಂಟಾದಾಗ ಮಾನವನ ಮಾನಸಾಕಾಶದಲ್ಲೂ ಕ್ರಾಂತಿ ತಾರೆಗಳು ಉದಯಿಸಲಾರಂಭಿಸಿದವು. ತಾರ್ಕಿಕವಾದ ಮನಸ್ಸಿಗೆ ರುಚಿಸದ ಹಳೆಯ ಸಂಪ್ರದಾಯ ನೀತಿಗಳಿಗೆ ವಿರುದ್ಧವಾಗಿ ಮಾನವನ ಮನಸ್ಸು ದಂಗೆ ಎದ್ದುದರಿಂದ ಉಪನಿಷತ್ತುಗಳ ಜನನವಾಯಿತು. ಇವುಗಳಿಗಿಂತಲೂ ಒಂದು ಹೆಜ್ಜೆ ಮುಂದುವರಿದು ಜಡವಾದವು ಅಂಕುರಿಸಿ ಜೈನ ಬುದ್ಧ ತತ್ವಗಳು ಉದಯವಾದವು. ಈ ನಾನಾ ಪ್ರವಾಹಗಳನ್ನು ಒಂದು ಗೂಡಿಸಿ ಸಂಶ್ಲೇಷಿಸುವ ಮಹತ್ಕಾರ್ಯವು ಭಗವದ್ಗೀತೆಯಲ್ಲಿ ನಡೆಯಿತು. ಎಲ್ಲಾ ಮಾನಸಿಕ ಕ್ರಾಂತಿ ವಿಪ್ಲವಗಳ ಮೇಲೆ ವೈಶಾಲ್ಯತಮ ರಾಷ್ಟ್ರ ಭಾವನೆಯೂ ಬೆಳೆಯಿತು.

ಜೈನ ಬೌದ್ಧ ಧರ್ಮಗಳೆರಡೂ ವೈದಿಕ ಧರ್ಮದಿಂದ ದೂರ ಸರಿದರೂ ಅದರ ಶಾಖೆಗಳಾಗಿ ಆದರಿಂದಲೇ ಪರಿಪುಷ್ಟತೆಯನ್ನು ಪಡೆದವು. ಇವೆರಡು ಧರ್ಮಗಳೂ ವೇದದ ಅಧಿಕಾರ ವಾಣಿಯನ್ನು ಅಲ್ಲಗಳೆದವು; ಮಾತ್ರವಲ್ಲದೆ ವಿಶ್ವಾಧಾರವಾದ ಮೂಲ ತತ್ವದ ಅಸ್ತಿತ್ವವನ್ನೂ ನಿರಾಕರಿಸಿದವು. ಅನೇಕ ವೇಳೆ ಮೂಲತಮ ಪರಮ ಸತ್ಯದ ವಿಷಯ ಉಲ್ಲೇಖಿಸುವುದನ್ನೇ ಬಿಟ್ಟುಬಿಟ್ಟವು. ಎರಡು ಧರ್ಮಗಳೂ ಅಹಿಂಸೆಯ, ಪರಮ ತತ್ವದ ಮೇಲೆ ಆಧಾರಿಸಿ ಸಂಯಮಿಗಳಾದ ಸಾಧು ಸಂತರಿಗೆ ವಿಹಾರ ಗೃಹಗಳನ್ನು ಏರ್ಪಡಿಸಲನುವಾದವು. ಈ ಮತಗಳಲ್ಲಿ ತಾರ್ಕಿಕ ಸಿದ್ಧಾಂತ ಧೋರಣೆಯೂ ಶೋಧನಾತ್ಮಕ ಪ್ರವೃತ್ತಿಯೂ ವ್ಯಕ್ತವಾದರೂ ಇಂದ್ರಿಯಾತೀತ ವಸ್ತುವಿನ ಅನ್ವೇಷಣೆಯ ಪ್ರಸ್ತಾಪವು ಇಲ್ಲವೆನ್ನಬಹುದು. ಜೈನ ಧರ್ಮದ ಒಂದು ಪ್ರಾಮುಖ್ಯ ತತ್ವವೇನೆಂದರೆ ಸತ್ಯವು ಸ್ವಮನೋಧರ್ಮಕ್ಕೆ ವಿರುದ್ಧವಾದುದಲ್ಲವೆಂದು. ಈ ಧರ್ಮವು ಧಾರ್ಮಿಕ ನೈತಿಕ ಶುದ್ಧ ಜೀವನದ ಕಡೆಗೆ ಮಾತ್ರ ಗಮನ ಕೊಟ್ಟು ಶಾರೀರಿಕ ಮಾನಸಿಕ ತ್ಯಾಗ ಜೀವನವನ್ನು ಪ್ರತಿಪಾದಿಸುತ್ತದೆ.

ಜೈನ ಮತ ಸ್ಥಾಪಕನಾದ ಮಹಾವೀರನೂ ಶಾಕ್ಯ ಕುಲತಿಲಕನಾದ ಭಗವಾನ್ ಬುದ್ಧ ದೇವನೂ ಸಮಕಾಲೀನರು. ಈರ್ವರೂ ಪೌರುಷ ಪೂರ್ಣರಾದ ಕ್ಷತ್ರಿಯರ ಕುಲದಲ್ಲಿ ಜನಿಸಿದರು. ಬುದ್ಧ ದೇವನು ೮೦ ವರ್ಷಗಳ ಕಾಲ ಬಾಳಿ ಕ್ರಿ. ಪೂ. ೫೪೪ರಲ್ಲಿ ನಿರ್ವಾಣವನ್ನು ಪಡೆದನು. ಅಂದಿನಿಂದ ಬುದ್ಧ ಶಕವು ಆರಂಭಿಸಿತು.

ಹಿಂಸಾತ್ಮಕವಾದ ಯಜ್ಞಯಾಗಾದಿಗಳು ಪ್ರಬಲಿಸಿ ಧರ್ಮದ ಹೆಸರಿನಲ್ಲಿ ದುರಾಚಾರಗಳು ನಡೆಯುತ್ತಲಿದ್ದವು. ನಿರಂಕುಶ ನಾಯಕರ ಧರ್ಮಾಧಿಕಾರಿಗಳು ಆಡಂಬರ ಪೂರ್ಣ ಜೀವನವನ್ನು ನಡೆಸುತಲಿದ್ದರು. ಭಗವತ್ಸ್ವರೂಪಿಯಾದ ಬುದ್ಧನು ಈ ಅತ್ಯಾಚಾರ ಅನ್ಯಾಯಗಳನ್ನು ತೀವ್ರವಾಗಿ ಖಂಡಿಸಲು ಕಟ್ಟೆದೆಯನ್ನು ತಾಳಿದನು. ಬುಡರಹಿತವಾದ ಭ್ರಾಂತಿಮಯ ಆಧ್ಯಾತ್ಮಿಕವಾದಗಳನ್ನೂ ಪವಾಡಗಳನ್ನೂ, ಭೂತಾರಾಧನೆಗಳನ್ನೂ ಬುದ್ಧನು ಕಟುವಾಗಿ ಟೀಕಿಸಿದನು. ಅವನ ಬೋಧನೆಯು ತಾರ್ಕಿಕ ಬುದ್ಧಿಗೆ ನಿಲುಕುವಂಥದ್ದಾಗಿದ್ದಿತು. ಅವನ ಧೋರಣೆಯು ಮಾನಸಿಕ ವಿಶ್ಲೇಷಣಾಪೂರ್ಣವಾದದ್ದು. ಆದರೆ ಮನಸ್ಸಿಗೆ ಆತ್ಮವಿಲ್ಲ ನೀರಸವಾದ ಆಧ್ಯಾತ್ಮಿಕ ಚಿಂತನೆಯ ನಂತರ ಪರ್ವತಾಗ್ರದಿಂದ ಸುಳಿವ ಶುಭ್ರ ಮಂದಾನಿಲದಂತಿತ್ತು ಭಗವಾನ್ ಬುದ್ಧ ದೇವನ ದಿವ್ಯ ಮಾರ್ಗ.

ಬುದ್ಧನು ವರ್ಣಭೇದಗಳನ್ನು ನೇರವಾಗಿ ಪ್ರತಿಭಟಿಸಲಿಲ್ಲ. ಆದರೆ ತನ್ನ ನಿತ್ಯಾಚರಣೆಯಲ್ಲೂ, ಬೋಧನೆಗಳಲ್ಲೂ ಸಂಕುಚಿತ ಭೇದ ಭಾವಗಳಿಗೆ ಲೇಶವೂ ಸ್ಥಳವೀಯಲಿಲ್ಲ. ಅವನ ಧೋರಣೆಯೇ ವರ್ಣ ಭೇದಗಳಿಗೆ ತೀವ್ರಾಂಕುಶವಾಗಿದ್ದಿತು. ಬುದ್ಧನ ಕಾಲದಲ್ಲಿ ವರ್ಣ ಭೇದಗಳು ಅಷ್ಟು ಕಠಿಣವಾಗಿರಲಿಲ್ಲವೆಂದು ಊಹಿಸಬಹುದು. ಏಕೆಂದರೆ ಭಿನ್ನ ಭಾವನೆಗಳಿಂದ ಕೂಡಿದ ಭಾರತ ವರ್ಷವು ಪರರಾಷ್ಟ್ರಗಳೊಡನೆ ವಾಣಿಜ್ಯ ಬಾಂಧವ್ಯಗಳನ್ನು ಗಳಿಸಿ ಉಚ್ಛ್ರಾಯ ದೆಸೆಯಲ್ಲಿರಲು ಸಾಧ್ಯವಾಗುತ್ತಿರಲಿಲ್ಲ.

ತೇಜಃ ಪುಂಜನೂ ದೇವಸಮಾನನೂ ಆದ ಬುದ್ಧ ದೇವನ ಗಂಭೀರ ವಾಣಿಗೆ ಎಚ್ಚೆತ್ತ ಭರತ ಖಂಡವು ಮುಗ್ಧವಾಗದಿರಲಿಲ್ಲ. ಅತೀ ಪುರಾತನವಾದರೂ ಅತ್ಯಾಧುನಿಕವಾದ ಆತನ ಸಂದೇಶವು ಆಧ್ಯಾತ್ಮಿಕ ಸಾಧಕರಾದ ಪ್ರತಿಭಾವಂತ ಭಾರತೀಯರ ಮಾನಸಾಕಾಶದಲ್ಲಿ ಹೊಂಬೆಳಕನ್ನು ಮೂಡಿಸಿದವು. ಆತನ ಬೋಧನಾಮೃತವು ಜನಮನವನ್ನು ಸೂರೆಗೊಂಡಿತು. 'ಎಲ್ಲಾ ನದಿಗಳೂ ಸಾಗರಕ್ಕೆ ಸೇರುವಂತೆ ದೀನದಳಿತರೂ, ಶ್ರೀಮಂತ ಶ್ರೇಷ್ಠರೂ, ಉಚ್ಚ ನೀಚ ವರ್ಣಗಳವರೂ ಮಾನವತೆಯ ಮಹಾ ಮತದಲ್ಲಿ ಐಕ್ಯರಾಗುವರು.' ಎಂದು ಬುದ್ಧನು ಸಾರಿದನು. ಆತನ ಸಂದೇಶವೂ, ವಿಶ್ವ ಪ್ರೇಮಿಕವೂ, ಕಾರುಣ್ಯಮಯವೂ, ಸೌಹಾರ್ದಪೂರ್ಣವೂ ಆಗಿದ್ದಿತು. 'ದ್ವೇಷವನ್ನೆಂದೂ ದ್ವೇಷದಿಂದ ಜಯಿಸಲು ಸಾಧ್ಯವಿಲ್ಲ; ದ್ವೇಷವನ್ನು ಪ್ರೇಮದಿಂದ ಜಯಿಸಬೇಕು. ಕ್ರೋಧವನ್ನು ಕಾರುಣ್ಯದಿಂದ ಶಮನಿಸಬೇಕು. ಕೆಟ್ಟದ್ದನ್ನು ಒಳ್ಳೆಯದ್ದರಿಂದ ಪ್ರತಿಭಟಿಸಬೇಕು.' ಎಂದು ಶಾಕ್ಯ ಕುಲತಿಲಕನು ಸಾರಿದನು.

ಬುದ್ಧನ ಮಾರ್ಗವು ನೀತಿಬದ್ಧವಾದ ಆತ್ಮ ಸಂಯಮನದ ಮಾರ್ಗ. 'ಯುದ್ಧದಲ್ಲಿ ಸಹಸ್ರ ಗಟ್ಟಲೆ ವೀರರನ್ನು ಜಯಿಸಿ ಮಹಾ ವಿಕ್ರಮಿಯೆನಿಸಿದವನು ತನ್ನನ್ನು ತಾನು ಜಯಿಸದ ಹೊರತು ವಿಜಯಿಯೆನಿಸಿಕೊಳ್ಳಲಾರನು. ಸದಾಚಾರ ಸತ್ಕರ್ಮಗಳಿಂದ ಹೀನ ಜಾತಿಯವನು ಉತ್ತಮ ಕುಲಜನಾಗಬಲ್ಲನು. ದುರಾಚಾರ ದುಶ್ಶೀಲಗಳಿಂದ ಬ್ರಾಹ್ಮಣನು ಚಂಡಾಲನಾಗಬಹುದು. ಪಾಪಿಯೆಂದು ತಿಳಿದ ಮನುಷ್ಯನನ್ನು ಕೂಡ ಹೀನವಾಗಿ ತೆಗಳಬಾರದು. ಇನ್ನು ಪಾಪಿಯು ತಪ್ಪಿನ ಗಾಯದ ಮೇಲೆ ಉಪ್ಪು ನೀರೆರಸಿದಂತೆ. ಸಮರ ಮುಖದಲ್ಲುಂಟಾದ ಜಯವು ಸೋತವರ ಅಸಮಾಧಾನದಿಂದ ವ್ಯಾಪ್ತವಾಗುವದರಿಂದ ದ್ವೇಷವನ್ನೇ ಬೆಳೆಯಿಸುತ್ತದೆ' ಎಂದು ಬುದ್ಧನು ಬೋಧಿಸಿದನು.

ಬುದ್ಧನ ಬೋಧನೆಗಳ ತಳಹದಿಯಾಗಿ ಮತೀಯ ಭಾವನೆಯಾಗಲೀ, ಭಗವದ್ಭಕ್ತಿಯ ನಿರೂಪಣವಾಗಲೀ ಪಾರಲೌಕಿಕ ಪ್ರಪಂಚದ ನಿರ್ದೇಶನವಾಗಲೀ ಇಲ್ಲವಾಗಿದೆ. ಬುದ್ಧನು ತಾರ್ಕಿಕವಾದ ಪರಿಶ್ರಮಪೂರ್ಣ ಬುದ್ಧಿಗೆ ಅತೀತವಾದುದನ್ನು ಅಲ್ಲಗಳೆದನು. 'ಹಳೆಯ ಸಂಪ್ರದಾಯವೆಂದು ತಿಳಿಗೇಡಿತನದಿಂದ ಅದನ್ನೊಪ್ಪಲಾಗದು. ಭಂಗಾರವನ್ನು ಬೆಂಕಿಯಲ್ಲಿಟ್ಟು ಸ್ಫುಟಗೊಳಿಸಿದಂತೆ ಸಂಪ್ರದಾಯಗಳನ್ನು ಜ್ಞಾನಾಗ್ನಿಯಲ್ಲಿ ಶುದ್ಧಗೊಳಿಸಬೇಕು. ಜಗತ್ತಿನಲ್ಲಿ ಕ್ಲೇಶಕ್ಕೆ ಕಾರಣವು ಸತ್ಯದ ವಿಷಯ ಜನಮನದಲ್ಲುಂಟಾದ ತಪ್ಪು ಭಾವನೆಯೇ ಆಗಿದೆ. ಇಂದ್ರಿಯಾತೀತನಾದ ಭಗವಂತನ ವಿಚಾರ ಬಗೆದ ಜ್ಞಾನ ಕೇವಲ ಊಹಾಪೋಹಯಾಗಿದೆ. ವಿಶುದ್ಧವಾದ ಜ್ಞಾನವಿಲ್ಲವೋ ಅಲ್ಲಿ ವಿಷಯಗಳ ತೀರ್ಮಾನಕ್ಕೆ ನಾವು ಬರಬಾರದು. ನಮಗೆ ಕಾಣದ ಅದೃಶ್ಯ ಶಕ್ತಿಯನ್ನು ನಂಬಲು ಸಾಧ್ಯವಿಲ್ಲ. ದೃಗ್ಗೋಚರವಾದ ವಿಶ್ವದಲ್ಲಿ ಪ್ರತಿಯೊಂದು ವಸ್ತು ಒಂದಕ್ಕೊಂದು ಸಂಬಂಧವುಳ್ಳದ್ದು. ಸಂಬಂಧವಿಲ್ಲದ ಇಂದ್ರಿಯಗೋಚರವಲ್ಲದ ವಸ್ತುವನ್ನು ನಂಬುವದಾದರೂ ಹೇಗೆ?

ವ್ಯಕ್ತಿಗತವಾದ ಕಿರಿಯ ಆತ್ಮ, ವಿಶ್ವವ್ಯಾಪಕವಾದ ಹಿರಿಯ ಆತ್ಮ ಮುಂತಾದ ಆಧ್ಯಾತ್ಮಿಕ ಯೋಚನಾ ಪ್ರವಾಹದಲ್ಲಿ ಮುಳುಗಿದ ಭಾರತ ವರ್ಷದಲ್ಲಿ ಬುದ್ಧನು ಆತ್ಮದ ವಿಚಾರವನ್ನೇ ಎತ್ತದಿರುವದು ಸೋಜಿಗವಾದುದು. ಆದುದರಿಂದ ಚಿರಸ್ಥಾಯಿಯಾದ ನೈಸರ್ಗಿಕ ನಿಯಮವನ್ನು ಸಹೇತುಕವಾದ ವಿಶ್ವವನ್ನೂ ಹಿಂದಿನ ಸ್ಥಿತಿಗಳಿಂದಲೇ ಪ್ರಕೃತಿಯ ರೂಪವು ಬರುವ ವಿಕಾಸವಾದವನ್ನು ಪ್ರತಿಪಾದಿಸಿದನು.

ಅನೇಕ ವಿಷಯಗಳನ್ನು 'ಇದು ಹಾಗೆಯೇ, ಇದು ಹೀಗೆಯೇ' ಎಂದು ನಾವು ಸಿದ್ಧಾಂತಪೂರ್ಣವಾಗಿ ಹೇಳಬಹುದು. ಆದರೆ ಈ ಜಗತ್ತಿನಲ್ಲಿ ಪ್ರತಿ ವಸ್ತು ಬದಲಾವಣೆ ಹೊಂದುತ್ತಲೇ ಇದೆ. ಜೀವನ ಮಹಾ ಪ್ರವಾಹವೂ ಸತತವೂ ಬದಲಾವಣೆಗೊಳ್ಳುತ್ತಲೇ ಇರುತ್ತದೆ. ಆದರೆ ಪರಮ ಸತ್ಯವೂ ನಿರಂತರವೂ ಉಳ್ಳದ್ದಾಗಿ ಬದಲಾವಣೆಯೇ ಇಲ್ಲದ್ದಾಗಿದೆ. ದೇಹವು ನಶಿಸಿ ಆತ್ಮವು ವಿವಿಧಾಕೃತಿಯ ದೇಹಗಳನ್ನು ಪ್ರವೇಶಿಸಿದರೂ, ಸದಾ ರೂಪಾಂತರ ಹೊಂದುತ್ತಿದ್ದರೂ ಸ್ಥಿರವಾಗಿದ್ದು ಅಮರವಾಗಿದೆ. ಅದು ಯಾವದು ಎಂದು ಸುಲಭವಾಗಿ ಹೇಳಬರುವದಿಲ್ಲ.

ಆದ್ದರಿಂದ ಬುದ್ಧನ ಮಹಾ ತತ್ವಗಳು ವಿಶ್ವಕಾರಣನಾದ ಭಗವಂತನೊಬ್ಬನನ್ನು ನಂಬುವ ನಮ್ಮ ಮನಸ್ಸಿಗೆ ರುಚಿಸದಿರಬಹುದು. ಪರಂತು ಬುದ್ಧನ ತತ್ವವು ಆಧುನಿಕ ಭೌತ ಶಾಸ್ತ್ರ ತತ್ವಶಾಸ್ತ್ರಗಳ ಸಿದ್ಧಾಂತಕ್ಕೆ ತೀರಾ ಸಮಂಜಸವಾಗಿದೆ. ಬುದ್ಧನ ರೀತಿ ನೀತಿ ಶಾಸ್ತ್ರೀಯವಾಗಿರುವದರಿಂದ ಇಂದಿನ ವಿಜ್ಞಾನ ಪ್ರಪಂಚದಲ್ಲೆಲ್ಲಾ ಅತ್ಯಾಧುನಿಕವಾದ ನವ ರೀತಿಯಲ್ಲಿ ಪ್ರಾಚೀನ ಬುದ್ಧನ ಅಂತರ್‌ದೃಷ್ಟಿಯು ಅತ್ಯಾಶ್ಚರ್ಯಕರವಾಗಿದೆ. ಮನಃಶಾಸ್ತ್ರ ರೀತ್ಯಾ ಮಾನವನ ಜೀವನವು ನಿತ್ಯವಾದ ಆತ್ಮದ ಸಂಬಂಧವಿಲ್ಲದೇನೇ ಪರಿಶೋಧಿಸಲ್ಪಡುತ್ತದೆ. ಅಂಥಾ ಆತ್ಮವಿದ್ದರೂ ಅದು ವಿಜ್ಞಾನಿಯ ದೃಷ್ಟಿಗೆ ಗೋಚರಿಸದ್ದು. ಮನಸ್ಸು ಅನೇಕ ಮಾನಸಿಕ ಶಕ್ತಿಗಳಿಂದ ಕೂಡಿದ್ದು ಶರೀರದ ಒಂದು ಭಾಗವಾಗಿದೆ. ವ್ಯಕ್ತಿಯ ಮನಸ್ಸು ಅನೇಕ ಮಾನಸಿಕ ಶಕ್ತಿಗಳ ಒಂದು ಸಂಶ್ಲೇಷಣೆ.

ಬುದ್ಧನು ಸಾವು ನೋವು, ರೋಗ ರುಜಿನೆಗಳಿಂದ ಕೂಡಿದ ಜೀವನಕ್ಕೆ ಬಹು ಪ್ರಾಶಸ್ತ್ಯವಿತ್ತನು. ಜಗತ್ತಿನಲ್ಲಿ ದುಃಖಕ್ಕೆ ಕಾರಣ, ಅದರ ನಿವಾರಣೋಪಾಯ ಮುಂತಾದವುಗಳ ಮೇಲೆ ಪ್ರಸ್ತಾಪಿಸಿದನು. ಜಗತ್ತಿನಲ್ಲಿ ನಾವು ಅಭಿಲಾಷಪಡುವ ಭೋಗ ವಸ್ತುಗಳಿಂದ ಸಂತೋಷವು ಕ್ಷಣಿಕವೆಂದೂ ನಿತ್ಯ ದುಃಖವೇ ಮಾನವನ ಪಾಲಿಗೆ ಬಂದಿರುವ ಸಾಧನವೆಂದೂ ಬುದ್ಧನು ತನ್ನ ಶಿಷ್ಯರಿಗೆ ಬೋಧಿಸಿದನು.

ಜಗತ್ತಿನ ಶೋಕ ಸಾಗರವನ್ನು ದಾಟಲು ನಿರ್ವಾಣವೊಂದೇ ಪರಮ ಮಾರ್ಗ. ನಿರ್ವಾಣವೆಂದರೇನೆಂದು ಸುಲಭವಾಗಿ ಹೇಳಬರುವದಲ್ಲ. ನಿರ್ವಾಣವೆಂದರೆ ಮಾನವ ದೇಹದ ಅಂತ್ಯವೆಂದು ಕೆಲವರು ವಾದಿಸುತ್ತಾರೆ. ಆದರೆ ನಿರ್ವಾಣವು ಕೇವಲ ಅಂತಿಮವಲ್ಲವೆಂದೂ ಪ್ರಜ್ವಲವಾದೊಂದು ಚೇತನಾತ್ಮಕ ಸ್ಥಿತಿಯೆಂದೂ ಬುದ್ಧನು ಹೇಳುತ್ತಾನೆ. ದುರಾಸೆಗಳನ್ನು ನಾಶಗೊಳಿಸಿ ನಿತ್ಯ ಸುಖವನ್ನು ಕೊಡುವ ಒಂದವಸ್ಥೆಯೇ ನಿರ್ವಾಣವೆಂದು ಊಹಿಸಬಹುದು.

ಬುದ್ಧನದು ಮಧ್ಯ ಮಾರ್ಗ. ಶಾರೀರಕ ಶೋಷಣೆಯಿಂದಲೂ, ದೇಹ ದಂಡನೆಯಿಂದಲೂ ಕೂಡಿದ ಅತಿ ತೀವ್ರ ಮಾರ್ಗವೂ ಅಲ್ಲ. ಭೋಗವಿಲಾಸಗಳಿಂದ ಕೂಡಿದ ಸೌಭಾಗ್ಯಮಯ ಜೀವನವೂ ಅಲ್ಲ. ಶಾರೀರಕ ದಾರ್ಢ್ಯವನ್ನು ಕಳೆದುಕೊಂಡ ಮಾನವನು ಸತ್ಯ ಮಾರ್ಗದಲ್ಲಿ ನಡೆಯಲು ಅಸಾಧ್ಯ. ಬುದ್ಧನ ಮಧ್ಯ ಮಾರ್ಗವು ಶುದ್ಧ ಜೀವನ, ಶುದ್ಧ ಚಿಂತನ, ಶುದ್ಧ ವಾಕ್ಕು, ಶುದ್ಧ ನಡತೆ, ಶುದ್ಧ ನಂಬಿಕೆ, ಶುದ್ಧ ಪ್ರಯತ್ನ, ಶುದ್ಧ ಮನಸ್ಸು, ಶುದ್ಧಾಭಿಲಾಷೆ ಇವುಗಳಿಂದ ಕೂಡಿದೆ. ಇವೆಲ್ಲ ವ್ಯಕ್ತಿತ್ವದ ವಿಕಾಸಕ್ಕೆ ಸಹಕರಿಸುವವು. ಈ ಮಾರ್ಗದಲ್ಲಿ ನಡೆದು ತನ್ನನ್ನು ತಾನೇ ಮಾನವನು ನಿಗ್ರಹಿಸಿದರೆ ಭಗವಂತನು ಕೂಡ ಅಂಥಾ ವ್ಯಕ್ತಿಯನ್ನು ಜಯಿಸಲಾರನು. ಜೀವನದಲ್ಲಿ ಏನು ಆನುಷ್ಠಿಸಲು ಸಾಧ್ಯವೋ ಅಂಥಾ ವಿಷಯವನ್ನು ಮಾತ್ರ ಬುದ್ಧನು ತನ್ನ ಶಿಷ್ಯರಿಗೆ ಬೋಧಿಸಿದನು.

ಬುದ್ಧ ದೇವನು ಶಾಂತಿ ಅಹಿಂಸೆಗಳ ಮೂರ್ತಿವೆತ್ತ ಪ್ರತಿಬಿಂಬವಾಗಿದ್ದನು. ವಿಭವಪೂರ್ಣವಾದ ಆತನ ವ್ಯಕ್ತಿತ್ವದ ಹೊಂಬೆಳಕು ಸದಾ ಜ್ಯೋತಿರ್ಮಯವಾಗಿದ್ದು ಸಕಲ ಜೀವರಾಶಿಗಳ ಕಷ್ಟ ಕಾರ್ಪಣ್ಯಗಳ ನಿವಾರಣೆಗಾಗಿ ಪರಿತಪಿಸುತ್ತಿತ್ತು. ಆ ದಿವ್ಯ ಮಂಗಳ ವ್ಯಕ್ತಿ ಪುಂಗವನನ್ನು ಪಡೆಯಲು ರಾಷ್ಟ್ರವು ಅಂತರ್ಬಲ ಸಮೃದ್ಧವಾಗಿರಬೇಕಾಗಿತ್ತು.

Edited, Printed and Published by P. I. Bellиappa at 'Kodagu' Press, Mercara, for 'Kodagu' Ltd.

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೨೮ | ತಾರೀಖು ೧-೭-೧೯೪೯ನೇ ಶುಕ್ರವಾರ | ಸಂಚಿಕೆ ೫

ಗಾಂಧಿ ವಿಚಾರದೋಹನ.

ನಿರ್ಭಯತೆ.

ಲೇಖಕ:—
ಮಹಾತ್ಮಾಗಾಂಧಿ.

ಅನುವಾದಕ:—
ಬಿ. ಡಿ. ಗಣಪತಿ

ದೈವಿಕತೆಯ ಪ್ರಥಮ ಆವಶ್ಯಕತೆ ಎಂದರೆ ಅಭಯ. (ನಿರ್ಭಯತೆ.) ಹೇಡಿಗಳು ಎಂದೂ ನೀತಿವಂತರಾಗಲಾರರು

ಎಲ್ಲಿ ಭಯವಿದೆಯೋ ಅಲ್ಲಿ ಧರ್ಮವಿರಲಾರದು.

ಗೀತೆಯ ಹದಿನಾರನೆ ಅಧ್ಯಾಯದಲ್ಲಿ ದೈವಿಕ ವಿಶೇಷಣಗಳ ಪಟ್ಟಿಯಲ್ಲಿ ನಿರ್ಭಯತೆಗೆ (ಅಭಯ) ಪ್ರಥಮ ಸ್ಥಾನವಿರುವದು ಗೀತೆಯನ್ನು ಓದುವ ಪ್ರತಿಯೊಬ್ಬನಿಗೆ ಗೋಚರಿಸದಿರದು. ನಿರ್ಭಯತೆಗೆ ಏಕೆಂದು ಆ ಸ್ಥಾನ ಕೊಡಲ್ಪಟ್ಟಿದೆಯೋ ಯಾ ಶ್ಲೋಕಗಳ ರಚನೆ, ಪ್ರಾಸಗಳ ದೃಷ್ಟಿಯಿಂದ ಹಾಗಾಗಿದೆಯೋ ನಾನು ಹೇಳಲಾರೆ. ನನ್ನ ಅಭಿಪ್ರಾಯದಲ್ಲಿ ಬಹುಶಃ ಅಹೇತುಕವಾಗಿ ನಿರ್ಭಯತೆಗೆ ಗೀತೆಯಲ್ಲಿ ಕೊಡಲ್ಪಟ್ಟಿರುವ ಸ್ಥಾನವನ್ನು ಅದಕ್ಕೆ ಕೊಡಲೇಬೇಕಿದೆ. ಬೇರೆ ಸದ್ಗುಣಗಳು ಬೆಳೆಯುತ್ತಿವೆಯೆಂಬುದಕ್ಕೆ ನಿರ್ಭಯತೆಯೇ ಒರೆಗಲ್ಲು. ನಿರ್ಭಯತೆ, ಧೈರ್ಯವಿಲ್ಲದೆ ಸತ್ಯ ಅನ್ವೇಷಣೆಯನ್ನು ಯಾ ಪ್ರೇಮದ ಪಾಲನವನ್ನು ಒಬ್ಬನು ಹೇಗೆ ಕಲಿಯಬಲ್ಲನು? ಪ್ರೀತಮರು ಹೇಳಿದಂತೆ 'ಹರಿಯ ಮಾರ್ಗವು ಧೀರರ ಮಾರ್ಗ. ಹೆತ್ತಿ ಕೋಪಿ ಯಾ ಇತರ ಭಯಂಕರ ಆಯುಧಗಳನ್ನು ಕೇವಲ ಹೇಡಿಗಳು ಹಿಡಿಯುವರು. ಧೀರರು ನಿರ್ಭಯತೆಯ ಆಯುಧ ಧರಿಸಿದವರು.'

ಶಾರೀರಿಕ ವ್ಯಾಧಿ, ಶರೀರದ ಹೇಳಿಗಿನ, ಸಾವು, ಕಳೆದು ಹೋಗುವ ಭಯ, ಅಪ್ತರ ವಿಯೋಗ, ಗೌರವ, ಹಾನಿ, ಮೊದಲಾದ ಹೆದರಿಕೆಗಳಿಂದ ಮುಕ್ತರಾಗಿರುವದೇ ನಿರ್ಭಯತೆಯ ಚಿಹ್ನೆ.

ಮಾಯಾ ಮೋಹಗಳಿಂದ ಬಿಡುಗಡೆ ಪಡೆದವನೇ ನಿರ್ಭಯನಾಗಿರಲು ಸಾಧ್ಯವಾಗಿರುವದರಿಂದ ಆ ಅದಿ ವಸ್ತುವನ್ನು ತಿಳಿದುಕೊಂಡವನಿಗೆ ಮಾತ್ರ ಪೂರ್ಣ ನಿರ್ಭಯತೆಯಿಂದಿರಲು ಸಾಧ್ಯ. ಆದರೆ ಒಬ್ಬನು ತನ್ನ ಗುರಿಯತ್ತ, ಸತತ ಪ್ರಯತ್ನದಿಂದಲೂ, ಆತ್ಮವಿಶ್ವಾಸದಿಂದಲೂ ಸಾಗುವದು ಸಾಧ್ಯವಿದೆ. ಆಂತರಿಕವಾಗಿರುವ ಶತ್ರುಗಳ ಬಗ್ಗೆ ನಾವು ಯಾವಾಗಲೂ ಭಯದಿಂದಿರಬೇಕು. ರಾಗದೊಳಗಿನ ಅಂದರೆ ಆಂತರಿಕವಾಗಿರುವ ಶತ್ರುಗಳನ್ನು ನಾವು ವಶಪಡಿಸಿಕೊಂಡರೆ ಹೊರಗಿನ ಶತ್ರುಗಳ ಭಯವು ತನ್ನಿಂದ ತಾನೇ ನಿಲ್ಲುವದು. ಪ್ರತಿಯೊಂದು ಭಯವೂ ಕೇಂದ್ರಬಿಂದು ಶರೀರದ ಸುತ್ತ ಸುತ್ತುತ್ತಿರುವದು. ಅದ್ದರಿಂದ ಶರೀರದ ಮೋಹ ಸಂಬಂಧವನ್ನು ಕತ್ತರಿಸಿಕೊಂಡರೆ ಇವೆಲ್ಲ ಅದೃಶ್ಯಗೊಳ್ಳುವವು. ಇದರಿಂದ ಪ್ರತಿಯೊಂದು ಹೆದರಿಕೆಯೂ ನಮ್ಮ ಸ್ವಂತ ನಿರಾಧಾರ ಸೃಷ್ಟಿಯು ತಳಹದಿಯಿಂದ ರೂಪುಗೊಂಡುದೆಂಬುದು ತಿಳಿಯುವದು. ಧನ ಆಸ್ತಿ, ಕುಟುಂಬದ ಮೋಹ, ಶರೀರದ ಬಯಕೆ ಇವುಗಳನ್ನು ಕೊಡವಿ ಹಾಕಿದರೆ ನಮ್ಮ ಹೃದಯದಲ್ಲಿ ಭಯಕ್ಕೆ ಎಂದೂ ಸ್ಥಳವಿರಲಾರದು 'ತೇನ ತ್ಯಕ್ತೇನ ಭುಂಜೀಥಾಃ' (ಐಹಿಕ ವಸ್ತುಗಳ ತ್ಯಾಗದಿಂದ ಅವುಗಳ ಸವಿಯನ್ನು ಪಡೆ) ಎಂಬುದು ಉದಾತ್ತವಾದ ಅಭಿಪ್ರಾಯ. ಈ ಸ್ಥಿತಿಯು ನಂತರವೂ ಧನ, ಕುಟುಂಬ, ಶರೀರ ಎಲ್ಲವೂ ಹಿಂದಿನಂತೆಯೇ ಇರುತ್ತವೆ. ಆದರೆ ಅವುಗಳ ಬಗ್ಗೆ ನಮ್ಮ ವರ್ತನೆಯನ್ನು ಮಾತ್ರ ಬದಲು ಮಾಡಬೇಕು. ಇವೆಲ್ಲವೂ ನಮ್ಮವಲ್ಲ, ಅವು ದೇವರವು. ಈ ಜಗತ್ತಿನಲ್ಲಿ ನಮ್ಮದೆಂದು ಹೇಳಲು ಏನೂ ಇಲ್ಲ. ನಾವೂ ಕೂಡ ಅವನ ವಸ್ತುಗಳು. ಹಾಗಿರುವಾಗ ನಾವೇಕೆ ಭಯಪಡಬೇಕು? ಅದ್ದರಿಂದ ನಾವು ಭೋಗಿಸುವ ವಸ್ತುಗಳ ಮೇಲಿನ ಆಸಕ್ತಿಯನ್ನು ಬಿಡಬೇಕೆಂದು ಉಪನಿಷತ್ತುಗಳು ಸಾರುತ್ತಿವೆ. ಅಂದರೆ ಆ ವಸ್ತುಗಳಲ್ಲಿ ನಾವು ಯಜಮಾನರಾಗಿ ಆಸಕ್ತಿ ತೋರಿಸುವದಲ್ಲ ಬದಲು ಕೇವಲ 'ಟ್ರಸ್ಟಿ'ಗಳಾಗಿ ಮಾತ್ರ. ಯಾರು ಅವುಗಳನ್ನು ನಮಗೆ ಕೊಟ್ಟಿರುವನೋ ಅವುಗಳನ್ನು ಅಪಹರಿಸಲು ಬರುವ ಎಲ್ಲಾ ಎದುರಾಳಿಗಳನ್ನು ನಿವಾರಿಸುವ ಶಕ್ತಿ ಮತ್ತು ಆಯುಧಗಳನ್ನು ಅವನೇ ಕೊಡುವನು. ಈ ರೀತಿ ನಾವು ಯಾವಾಗ ಅವುಗಳ ಯಜಮಾನಿಕೆಯನ್ನು ಬಿಟ್ಟು ಕಾಲಿನ ಕೆಳಗಿರುವ ಧೂಳಿಗಿಂತಲೂ ಕೆಳಮಟ್ಟದ ಸೇವಕರಾಗುವೆವೋ ಆಗ ಎಲ್ಲಾ ಭಯವೂ ಮಂಜಿನಂತೆ ಮಾಯವಾಗುವದು. ನಾವು ಅನಂತ ಶಾಂತಿಯನ್ನು ಪಡೆದು ಸತ್ಯನಾರಾಯಣ (ಸತ್ಯದ ದೇವರು) ನನ್ನು ಪ್ರತ್ಯಕ್ಷ ನೋಡುವೆವು.

ನಾವು ಸುಂದರ ಬೆಳಕಿನ ಹೊಸ್ತಿಲಿನಲ್ಲಿ ನಿಂತಿದ್ದೇವೆ. ಅದು ಸಂಧ್ಯಾ ಕಾಲವೋ ಯಾ ಉಷಾ ಪ್ರಭಾತವೋ ನಮಗೆ ತಿಳಿದಿಲ್ಲ. ಒಂದರ ನಂತರ ಕತ್ತಲೆ ಬರುತ್ತದೆ. ಮತ್ತೊಂದು ಬೆಳಕನ್ನು ತರುವದು. ನಾವು ಪ್ರಭಾತದನಂತರ ಭಯಂಕರ ರಾತ್ರಿಯನ್ನು ಬಿಟ್ಟು, ಸುಂದರ ಹಗಲನ್ನು ನೋಡಬೇಕಾದ್ದರೆ, ಈ ಪರಿಸ್ಥಿತಿಯಲ್ಲಿ ಸತ್ಯವನ್ನರಿತು ಅದಕ್ಕಾಗಿ ಎಷ್ಟೇ ಎಡರು, ತೊಂದರೆ ಬಂದರೂ ಅದರಂತೆ ನಡೆದು, ಅದನ್ನೇ ನಂಬಿ ಅದಕ್ಕಾಗಿ ಯಾವದೇ ಬೆಲೆ ತೆತ್ತು ಅದನ್ನು ಸಾಧಿಸಬೇಕು.

ಸ್ವಾತಂತ್ರ್ಯದೆಡೆಗೆ ಮುನ್ನಡೆಯಲು ನಾವು ಅರ್ಹರಾದ ಸತ್ಯ ಮತ್ತು ಅಹಿಂಸೆಯ ಪಥವನ್ನು ಅರಿಸಿಕೊಂಡಿರುವೆವು ಯಾರು ಹತ್ತಿರದ ವಸ್ತು ಇಲ್ಲದ್ದಾದ ನೋವಾದ ದಾರಿಯನ್ನು ಅನುಸರಿಸುವರೋ ಅವರಿಗೆ ವ್ಯಸನ ಬಾರದೆಂಬ ದೇವರ ಸಂದೇಶವು ನಮ್ಮಲ್ಲಿ ನಂಬಿಕೆಯನ್ನೂ, ಆಶೆಯನ್ನೂ ಹುಟ್ಟಿಸಲಿ.

ಆತ್ಮವನ್ನು ಹತ್ತಿಕ್ಕಿಕೊಳ್ಳುವ ಮತ್ತು ಅಂಜುಬುರುಕುತನದ ಈ ದೇಶದಲ್ಲಿ ಹೇಡಿತನದ ಹೆಸ್ಸರಿಗೆ ತಲೆಪಿಡುವ ನಮಗೆ ಹೆಚ್ಚು ಶಕ್ತಿದೆಯ ಧೈರ್ಯ ಯಾ ಆತ್ಮತ್ಯಾಗ ವೃತ್ತಿ ಇರಲಾರದು. ಆದರೂ ನಮಗೆ ನಿರ್ಬಲರ ಧೈರ್ಯ ಹೆಚ್ಚಬೇಕು. ಸಾಧು ಸ್ವಭಾವದ ಧೈರ್ಯಬೇಕು. ಅಹಿಂಸೆಯ ಧೈರ್ಯ ಬೇಕು. ಯಾವದೇ ಒಂದು ಅಕ್ರಮಕ್ಕೆ ಅನ್ಯಾಯ ಮಾಡದೆ ಮನಸ್ಸಿನಲ್ಲಿ ಕೂಡ ಆ ರೀತಿ ಯೋಚಿಸದೆ ಸಂತೋಷದಿಂದ ಸಲ್ಲಿಸಬಲ್ಲ ಆ ಧೈರ್ಯ ಬೆಳೆಸಬೇಕು.

ಭೌತಿಕ ಶಕ್ತಿ ಎಷ್ಟೇ ದೊಡ್ಡದಿರಲಿ, ಎಷ್ಟೇ ಪ್ರಚಂಡವಾದುದಿರಲಿ ಅದರ ವಿರೋಧ ಪ್ರತಿರೋಧವನ್ನು ತಾಳಿದೆ, ನಿಶ್ವಾಸದಿಂದಲೂ, ಆ ಜೀವನ ಒಂದೇ ಜೀವಿಸಬಲ್ಲುದೆಂಬ ಜ್ಞಾನ ಬೇರಿಲ್ಲವೆಂಬ ನಂಬಿಕೆಯಿಂದಲೂ ಪಾರಲೌಕಿಕ ಶಕ್ತಿಯು ಎದುರು ದೇಗ್ಗಾಲೂ ರಲು ಶಿರಸ್ಸರಿಸುವ ಶಕ್ತಿಗಿಂತಾ ಮಹತ್ತು ಕಾಣಬೇರಿರಲಾರದು.

ನಾವು ದೇವರಿಗೆ ಅಂಜೋಣ; ಇದರಿಂದ ಮನುಷ್ಯರಿಗೆ ಅಂಜಬೇಡ ನಿಲ್ಲುವದ.

"ಸಾಧು ಪದೇಶ"

ಲೇ:— ಶ್ರೀ ಎಂ. ಎಸ್. ರಾಮಯ್ಯ, ಮೂರ್ನಾಡು.

1 ಯಾವಾಗಲೂ ಸತ್ಯವನ್ನೇ ನುಡಿ.
2 ಯಾರಿಗೂ ವಚನ ಕೊಡಬೇಡ, ಕೊಟ್ಟರೆ ಸಾರ್ಥಕ ಮಾಡು.
3 ಸತ್ಸಂಗ ಮಾಡು, ಇಲ್ಲವೇ ಯಾರ ಸಂಗವನ್ನೂ ಮಾಡಬೇಡ.
4 ಪರನಿಂದೆಯನ್ನು ಮಾಡದಿರು, ಪರರ ವಿಷಯಗಳಿಗೆ ಕಿವಿಕೊಡದಿರು.
5 ಎಂದೂ ಜೂಜಾಡಬೇಡ.
6 ಮಾದಕ ಪದಾರ್ಥಗಳನ್ನು ಸೇವಿಸಬೇಡ.
7 ಒಳ್ಳೆಯ ಶೀಲವು ಎಲ್ಲಾ ಗುಣಗಳಲ್ಲಿಯೂ ಶ್ರೇಷ್ಠವೆಂದು ತಿಳಿ.
8 ಸಾಧ್ಯವಾದ ಮಟ್ಟಿಗೆ ಸಾಲ ಮಾಡುವುದನ್ನು ತಪ್ಪಿಸು.
9 ಸಂಸಾರವನ್ನು ಸುರಕ್ಷಿತವಾಗಿ ನಡೆಸುವ ಶಕ್ತಿ ಬರುವ ತನಕ ಲಗ್ನವಾಗಬೇಡ.
10 ಸಾಲುವನ್ನೇ ಇಟ್ಟುಕೊಂಡಿದ್ದರೆ ಜನಗಳ ಗೊಡವೆಗೆ ಹೋಗಬೇಡ.
11 ಉತ್ಪತ್ತಿನೋಡಿ ಖರ್ಚುಮಾಡು.
12 ಮೋಹಪಾಶಕ್ಕೆ ಸಿಲುಕಿ ಗುದ್ದಾಟಕ್ಕೆ ಹೋಗಬೇಡ.
13 ಇದ್ದುದರಲ್ಲಿ ಉಂಡುಟ್ಟು, ಮನಶ್ಶಾಂತಿಯಿಂದ ತೃಪ್ತನಾಗಿ ನಡೆ.
14 ಒಳ್ಳೆಯ ಜನರ ಸ್ನೇಹವು, ಮತ್ತು ಧನವು ಸದ್ಗುಣಗಳಿಗೆ ಉತ್ತಮ ಸಾಧನವೆಂದು ತಿಳಿ.
15 ನಿನ್ನ ಶೀಲ ದೊಡ್ಡದಾಗಬೇಕಾದರೆ ನಿನ್ನ ಕೃತ್ಯಗಳೇ ಕಾರಣವೆಂದು ತಿಳಿ.
16 ನಿನ್ನ ಆಚರಣೆಯು ನೆಟ್ಟಗಿದ್ದರೆ ಇತರರಿಂದ ನಿನಗೆ ಯಾವ ಪೀಡೆಯೂ ಉಂಟಾಗದು.
17 ಮಲಗುವ ಮುಂಚೆ ಆ ದಿವಸದಲ್ಲಿ ನೀನು ಮಾಡಿದ ಒಳ್ಳೆಯ ಮತ್ತು ಕೆಟ್ಟ ವಿಷಯಗಳ ಬಗ್ಗೆ ವಿಮರ್ಶೆ ಮಾಡು.
18 ನಿರುದ್ಯೋಗಿಯಾಗಿ ಕೂಡ್ರಬೇಡ, ಮನಃಶಾಂತಿಗಾದರೂ ಕೆಲಸಮಾಡು.
19 ಪ್ರಾಣಾಂತದ ಮಾನವನ್ನು ಕಾಪಾಡು.
20 ಪರಸ್ತ್ರೀ ಅಥವ ಪರಪುರುಷರಲ್ಲಿ ನಯವಾಗಿ ಮಾತನಾಡು. ದುರ್ಮಾರ್ಗದಲ್ಲಿ ಪ್ರವರ್ತಿಸಬೇಡ.
21 ಉಪಯೋಗವಿಲ್ಲದ ಮಾತಿನಿಂದ ಕಾಲಕಳೆಯಬೇಡ. ನಿಷ್ಪ್ರಯೋಜಕರ ಮಾತಿಗಿಂತ ಮೌನವಾಗಿರು.
22 ಕಷ್ಟಕಾಲದಲ್ಲಿ ನಿನ್ನ ಶತ್ರುವನ್ನು ದ್ರೋಹಿ ಎಂದೆಣಿಸದೆ ಪ್ರೀತಿಯಿಂದ ಸಹಾಯಮಾಡು.
23 ಇತರರ ತಪ್ಪನ್ನು ಕಂಡು ಹಿಡಿಯುವ ಪ್ರಯತ್ನಕ್ಕಿಂತ ತನ್ನ ತಪ್ಪನ್ನೆ ಪರಿಶೋಧಿಸಿ ನೋಡು.
24 ಅಹಿಂಸೆಗಿಂತ ದೊಡ್ಡ ತಪಸ್ಸಿಲ್ಲ, ಸತ್ಯವೇ ದೇವರೆಂದು ನಂಬು.
25 ಸತ್ಯವೇ ತಾಯಿ, ಜ್ಞಾನವೇ ತಂದೆ, ಧರ್ಮವೇ ಸಹೋದರ, ದಯೆಯೇ ಮಿತ್ರ, ಶಾಂತಿಯೇ ಪತ್ನಿ, ಕ್ಷಮೆಯೇ ಪುತ್ರನೆಂದು ತಿಳಿದು ಈ ಬಾಂಧವರೊಡನಾಡು.

ಜುಲೈ ೩೦ ರಿಂದ

ಭಾರತ ರಾಜ್ಯಾಂಗ ರಚನಾ ಸಭೆಯ ಬರುವ ಅಧಿವೇಶನವು ಜುಲೈ ೩೦ರಿಂದ ಸೇರುವುದೆಂದು ಅಧಿಕೃತವಾಗಿ ಪ್ರಕಟವಾಗಿದೆ.

ನೋಟೀಸು.

ಕೊಡಗು ಕ್ಲಾತ್ ಮರ್ಚೆಂಟ್ಸ್ ಕಂಪೆನಿಯಿಂದ ಪೊನ್ನಂಪೇಟೆಯ ಶ್ರೀ ಎ. ಎಂ. ಶಾಸ್ತ್ರಿ ಅಂಡ್ ಬ್ರದರ್ ಇವರಿಗೆ ಕೊಡಲ್ಪಟ್ಟ ೧೦೪೫ರಿಂದ ೧೦೫೭ರ ವರೆಗಿನ ೧೩ ಶೇರುಗಳ ನಂಬರು ೧೬೯ನೇ ಶೇರು ಸರ್ಟಿಫಿಕೇಟು ಕಾಣೆಯಾಗಿದೆ. ಇದನ್ನು ಪಡೆದಿರುವವರು ಈ ತಿಂಗಳ ಅಂತ್ಯದೊಳಗೆ ಕೆಳಗಿನ ವಿಳಾಸಕ್ಕೆ ಹಾಜರ್ ಮಾಡುವದು. ಅನಂತರ ಬಂದ ಯಾವ ವಿಚಾರಕ್ಕೂ ಗಮನ ಕೊಡಲಾಗುವದಿಲ್ಲವೆಂದು ಈ ಮೂಲಕ ತಿಳಿಸಿದೆ.

ಲಿಕ್ವಿಡೇಟರ್,
ಕೊಡಗು ಕ್ಲಾತ್ ಮರ್ಚೆಂಟ್ಸ್ ಕಂಪೆನಿ. ಲಿ.
ಮಡಿಕೇರಿ.
1-3

ಪ್ರಹಸನ.

ದೇವರಿಲ್ಲ.

ಲೇ:—ಶ್ರೀ. ಪೊಣ್ಣಪ್ಪ, ಸಿ. ಮಲಚೀರ, ಕಾನೂರು.

ಪ್ರಪಂಚದಲ್ಲಿ ದೇವರೇನೊ ನಮ್ಮನ್ನು ಹುಟ್ಟಿಸಿ ಬಿಟ್ಟ, ಅಲ್ಲಿಗೇ ಅವನ ಕೆಲಸ ಮುಗಿಯಿತೊ ಅಲ್ಲ ಇನ್ನೂ ಉಳಿಯಿತೊ, ಅದರ ಪರಿವೆ ನಮಗಿಲ್ಲ. ಮುಗಿಯಿತೆಂದೇ ಹೇಳಬೇಕು. ಇಲ್ಲದಿದ್ದರೆ ನಮಗೆ ಸಂಕಟ ಬಂದಾಗ ಮಾತ್ರ ವೆಂಕಟರಮಣಾ ನಮ್ಮನ್ನು ಕಾಪಾಡು ಅಂತ ಅಂಗಲಾಚಿ ಬೇಡಿಕೊಳ್ಳೋದೇಕೆ? ಒಂದು ರೂಪಾಯಿ ಸಂಪಾದಿಸಿದವ ಇನ್ನೊಂದು ರೂಪಾಯಿ ದೇವರ ದಯೆಯಿಂದ ದೊರೆತಿದ್ದರೆ ಒಳ್ಳೇದಾಗಿತ್ತೆಂದು ದೇವರ ಸಹಾಯವನ್ನು ಕೋರೋದು; ಮನಸ್ಸಿನ ಭ್ರಮೆಗೆ ತಕ್ಕ ಹೆಣ್ಣು ಕೊಡಪ್ಪಾ ಅಂತ ಹಗಲು ರಾತ್ರಿ ದೇವರನ್ನು ಕಾಡೋದು; ಆವಳಿಗೊಂದು ಮಗು ಹುಟ್ಟಬೇಕೆಂದು ದೇವರನ್ನು ಬೇಡೋದು; ಅಗಲವಾದ ಆಸ್ತಿ ಗಳಿಸಿಕೊಂಡು ದೇವಾ ಅಂತ ದೇವರ ಕಡೆ ನೋಡೋದು; ತಪ್ಪು ಸಂತೆಯಲ್ಲಿ ಗಳಿಸಿದ ಹಣವನ್ನು ಕಬ್ಬಿಣದ ಪೆಟ್ಟಿಗೆಯಲ್ಲಿಟ್ಟು ಅದರ ಬಳಿಯಲ್ಲೇ ಕುಳಿತು ಅದನ್ನು ಕಾಪಾಡಬೇಕೆಂದು ದೇವರಿಗೆ ಮೊರೆಯಿಡೋದು; ಹೀಗೆ ಒಂದಲ್ಲ ಒಂದು ರೀತಿಯಲ್ಲಿ ದೇವರನ್ನು ನಮ್ಮ ಸ್ವಾರ್ಥಸಾಧನೆಗೆ ಸಹಾಯಕನಾಗಲು ಆತನಿಗೆ ಗಾಳಿಮುಖಾಂತರ 'ವಯರ್‌ಲೆಸ್' ಕೊಡೋದಿದೆ. ಅವನ ಅಂಚೆಕಟ್ಟೆಯಲ್ಲಿ (ದೇವಸ್ಥಾನ) ಪಾರಾಯಣ ಮಾಡಿಸಿ ಪತ್ರ ಕಳಿಸೋದೂ ಇದೆ. ಆದರೆ ಈ ವರೆಗೆ ಜವಾಬು ಯಾರಿಗೂ ಬಾರದಿರೋದು ನೋಡಿದರೆ ದೇವರು 'ಔಟ್ ಆಫ್ ಸ್ಟೇಷನ್' ಅಂತ ಕಾಣುತ್ತೆ. ಆ ಮಹರಾಯನಿಗೆ ಒಂದು 'ಇನ್ ಅಂಡ್ ಔಟ್ ಬೋರ್ಡ್' ಆದರೂ ಆಕಾಶದಲ್ಲಿ ಆಡಿಸಿ ತೋರಿಸಬಾರದೆ?

ನೀವು ಯಾರೂ ಹೀಗೆಲ್ಲಾ ಶ್ರಮಪಡಲಿಲ್ಲವೆಂದು ಹೇಳಿ ನನ್ನನ್ನು ಬೆಪ್ಪುತಕ್ಕಡಿಯೆಂದು ಕರೆಯಬೇಡ. ನಾನು ಅನೇಕರನ್ನು ನೋಡಿದ್ದೇನೆ. ಮೊನ್ನೆ ಮೊನ್ನೆಯಾಗಿ ಒಬ್ಬರು ಕಾಶಿಗೆ ಹೋಗಲು ಹಣ ಕೇಳಿದರು. ಇವರು ಕಾಶಿಗೆ ಹೋಗಿ ಸ್ವರ್ಗದಲ್ಲಿ ಇವರಿಗೊಂದು ಸೀಟು ಕಾದಿಡಬೇಕೆಂದು ಪರಮಾತ್ಮನಿಗೆ 'ರಿಜಿಸ್ಟರ್ಡ್' ಕಾಗದ ಕಳುಹಿಸುತ್ತಾರಂತೆ! 'ಎಕ್ನಾಲೇಜ್‌ಮೆಂಟ್ ರಿಜಿಸ್ಟರ್' ಮಾಡಿ ಕಳುಹಿಸಿ ಬರುವಾಗ ರಶೀತಿ ತಂದು ತೋರಿಸಬೇಕಂತೆ. ಅವರು ಬರುವಾಗ ಅಲ್ಲಿಯ ಹೊಳೆಯಿಂದ ನೀರು ತಂದು ಹಣ ಕೊಟ್ಟವರಿಗೆಲ್ಲಾ ಊಟಕೊಟ್ಟು ಆ ನೀರನ್ನು ತೋರಿಸಿದರು. ಈಗ ಸ್ವರ್ಗಕ್ಕೆ ಹೊರಡಲು ಅನುವಾಗುತ್ತಿದ್ದಾರೆ!

ಮತ್ತೊಬ್ಬರು ಅವರನ್ನು ಐಶ್ವರ್ಯವಂತರನ್ನಾಗಿ ಮಾಡಬೇಕೆಂದು ದೇವರನ್ನು ಬಹಳ ಕೇಳಿಕೊಂಡರು. ಆದರೆ ಈ ವರೆಗೆ ದೇವರು ತಿರುಗಿ ಸಹ ನೋಡಲಿಲ್ಲ. ಆಗ ಅವರಿಗೆ ದೇವರ ಮೇಲೆ ಕೋಪ ಬಂದು ಬೆಳಿಗ್ಗೆ ಮತ್ತು ರಾತ್ರಿ ಶಂಖ ಊದಿ ಯುದ್ಧವನ್ನು ಹೂಡುತ್ತೇನೆಂದು ಹೆದರಿಸುತ್ತಿದ್ದಾರೆ. ಏನಾಗುತ್ತದೆಂದು ನೋಡಬೇಕು!

ವ್ಯವಸಾಯಗಾರರೊಬ್ಬರು ಮಳೆ ಬೀಳಲಿಲ್ಲವೆಂಬ ಕೋಪದಿಂದ 'ನೀನು ಹದಿನಾರು ಸಾವಿರ ಸ್ತ್ರೀಯರನ್ನಿಟ್ಟುಕೊಂಡವ, ವ್ಯಭಿಚಾರಿ, ಗಡಿಹೊಡೆಯುವವ, ಬೆಣ್ಣೆ ಕದ್ದವ, ದನ ಕಾಯುವವ, ಬಾಗಿಲು ಕಾಯುವವ, ಇತ್ಯಾದಿ ಸಹಸ್ರಾರು ನಾಮಗಳಿಂದ ಬೈದು ದೇವರ (ಕೂರ್ಮನ) ಮುಖಕೆ ನೀರೆರಚುತ್ತಿದ್ದರು!

ಒಬ್ಬ ಸನ್ಯಾಸಿಯು ತನ್ನ ಯೌವನದಲ್ಲಿ ಮದುವೆಮಾಡಿಕೊಂಡು ಸುಖವೂ ಪಡಲಿಲ್ಲ. ವೃದ್ಧಾಪ್ಯದಲ್ಲಿ ದೇವರನ್ನೂ ನೋಡಲಿಲ್ಲ. ಪದ್ಮಾಸನ ಹಾಕಿ, ಎದ್ದು ನಿಂತು, ಕೈ ಮೇಲೆತ್ತಿ, ಬಗ್ಗಿಕೊಂಡು, 'ಕುರ್ಚಿಸಿಂತು,' ಮೊಣಕಾಲೂರಿ, ತಪಸ್ಸು ಮಾಡಿದ. ದೇವರು ಪ್ರತ್ಯಕ್ಷವಾಗಲಿಲ್ಲ. ಬಿಲದೊಳಗೆ ಹೆಗ್ಗಣವಿದ್ದರೆ ಹೊಗೆ ಹಾಕಿ ಅದನ್ನು ಹೊರಗೆಡವುದನ್ನು ನಾನು ನೋಡಿದ್ದೇನೆ. ಅದೇ ರೀತಿಯಲ್ಲಿ ಈ ಸನ್ಯಾಸಿಯು ಈಗ ದಿನವಹಿ ಬೆಂಕಿ ಕುಂಡವನ್ನು ಮಾಡಿ ಹಲಸಿನಸೌದೆ, ಹಲಸಿನಸೊಪ್ಪು, ನೀರು ಹೊಯ್ದು ಹೊಗೆ ಎಬ್ಬಿಸಿ ಆಕಾಶದಲ್ಲಿರುವ ದೇವರನ್ನು ಕೆಳಗೆ ಬೀಳಿಸುವ ಎತ್ತುಗಡೆಯಲ್ಲಿದ್ದಾನೆ!

ನಮ್ಮ ನೆರೆಯೂರಿಗೂ ನಮ್ಮೂರಿಗೂ ಒಂದೇ ಸಾರಿ ಮಾರಿ ಬೇನೆಯು ಹಾರಾಡಿ ಹಾವಳಿ ಮಾಡಿತು. ಹೃದಯದಲ್ಲಿ ಸಾಯಲಿಚ್ಛೆಯಿಲ್ಲದಿದ್ದರೂ ಸಾಯ ಬೇಕೆಂದು ಜನರ ಮುಂದೆ ದೇವರಿಗೆ 'ಫೋನ್' ಮಾಡುವವರು ಸತ್ತರು. ನಮ್ಮ 'ರೇಷನ್ ಕಾರ್ಡ್' ಮುಗಿಯಿತು; 'ಪೇ ಕಮಿಷನ್' ಇನ್ನೂ ಬರಲಿಲ್ಲ; ಸ್ವರಾಜ್ಯ ಸಿಕ್ಕಿಬಂದಿನಿಂದ ರೈತರು ಕೂಡಾ ಸಲಾಂ ಹಾಕೋದಿಲ್ಲ; 'ಮುದಿ ತಲೆಗೆ ಮೆದುಳಿಲ್ಲ'ವೆಂದು ನಮ್ಮ ಸೊಸೆಯರು ಹಿಯ್ಯಾಳಿಸುತ್ತಾರೆ; ನಮ್ಮನ್ನು ಕರೆಕೊಳ್ಳಬೇಕೆಂದು ದೇವರ ಸನ್ನಿಧಿಗೆ ಹೋದ ನಿಯೋಗಗೋಷ್ಠಿಯವರನ್ನು ದೇವರು ವಾಪಾಸು ಕಳುಹಿಸಿ ಅವರೀಗ 'ಪೆನ್ಷನ್' ಸಿಕ್ಕಿಯೂ ಚಾಕರಿ ಪಡೆದು ಬದುಕಿದ್ದಾರೆ. ಮಾರಿ ಬೇನೆ ಕಳೆದ ನಂತರ ಊರವರು ಸೇರಿ ಮಾರಮ್ಮನನ್ನು ಕರೆಕೊಂಡು ಹೋಗಿ ಬಿಡುವ ಪದ್ಧತಿಯಿದೆ. ನಮ್ಮೂರಿನವರು ನೆರೆಯೂರಿಗೆ ಬಿಟ್ಟರು. ನೆರೆಯೂರಿನವರು ನಮ್ಮೂರಿಗೆ ಬಿಟ್ಟರು. ಈಗ ಎರಡು ಊರಿನವರಿಗೂ ಘರ್ಷಣೆಗೆ ಪ್ರಾರಂಭವಾಗಿ ಹಿಂದೂಸ್ಥಾನ ಪಾಕಿಸ್ಥಾನವಾಗಿದೆ. ಗಡಿಘರ್ಷಣೆಯಲ್ಲಿ ದೇವರಿಗೆ ಅವಮಾನವಿತ್ತಿದ್ದಾರೆ!

ಕೃಷ್ಣಮಂದಿರದಲ್ಲಿ ದಿನ ಹತ್ತು ಗಂಟೆ ಹೊಡೆದು ಮಕ್ಕಳು ಹುಟ್ಟಿದ್ದಾರೆ, ಮುದುಕರು ಸತ್ತಿದ್ದಾರೆ. ಸಾಯಲು ಬಿದ್ದವರನ್ನು ಬದುಕಿಸಬೇಕೆಂದು ವರದಿ ಮಾಡುವುದು ಎಡೆಬಿಡದೆ ನಡೆಯುತ್ತಿದೆ. ಮುಸಲ್ಮಾನರು ದಿನಕ್ಕೆ ನಾಲ್ಕು ಬಾರಿ ದೇವರನ್ನು ಕೂಗಿ ಕೂಗಿ ಕರೆಯೋದು; ಕೂಗಿ ಸೋತು ಕಿವಿಗೆ ಬೆರಳಿಟ್ಟು ಕರೆಯೋದು. ಅಂತು ಆ ನಿಷ್ಕರುಣಿ ದೇವರು ಒಂದು ಪೋಸ್ಟ್ ಕಾರ್ಡು ಕೂಡಾ ಖರ್ಚು ಮಾಡುವಂತಿಲ್ಲ. ಯುದ್ಧದಿಂದಾದ ಕಷ್ಟದ ನಿಮಿತ್ತ ಆತನಿಗೂ ಸಂಬಳ ಸಾಲದೆ ಇತ್ತಲಾಗಿ ಸಿನೇಮಕ್ಕೆ ಸೇರಿದನೆಂದು ವರ್ತಮಾನ! ರಂಭೆಯನ್ನೂ [illegible] ಸುಂದರಿಯರಾದ ಆ ಸಿನೇಮಾ ನಟಿಯರು ದೇವರನ್ನು ಪಳಗಿಸದೆ ಬಿಡುತ್ತಾರೆಯೇ? ದೇವರ ದರ್ಶನ ಬೇಕಾದವರು ಸಿನೇಮಾ ಮಂದಿರಕ್ಕೆ ಹೋಗಬೇಕೆಂದು ಸಿನೇಮಾ ನೋಡಿದವರು ಹೇಳುತ್ತಾರೆ.

ಭೂಲೋಕದ ಸ್ವಾರ್ಥಸಾಧಕರ ಕಾಟ ತಡೆಯಲಾರದೆ ಭಗವಂತನು ಸ್ವರ್ಗದಲ್ಲಿ ಮಹಾಸಭೆಯನ್ನು ಸೇರಿಸಿ ಅರ್ಜಿಗಳನ್ನೆಲ್ಲಾ ವಿಮರ್ಶಿಸಿ ನರಮನುಷ್ಯನ ಹಾವಳಿಯನ್ನಡಗಿಸಲು ಕೋಪಾವೇಶದಿಂದ ಯಮನನ್ನು ಜರ್ಮನಿಗೆ ಕಳುಹಿಸಿದ; ರುದ್ರನನ್ನು ಯೂರೋಪಿಗೆ ಕಳುಹಿಸಿದ, ಇವರ ಪ್ರಭಾವದಿಂದ ಭೂಲೋಕದಲ್ಲಿ ಯುದ್ಧ ಪ್ರಾರಂಭವಾಗಿ ದಸ್ತ ನಿಗ್ರಹವಾಯಿತು. ದೇವರಿಲ್ಲವೆಂದು ಹೇಳುತ್ತಿದ್ದ ಪಾಶ್ಚಾತ್ಯ ವಿಜ್ಞಾನಿಗಳಿಗೆ ತಕ್ಕ ಶಿಕ್ಷೆಯನ್ನೇ ವಿಧಿಸಿದ! ಈಗ ಅವರಲ್ಲಿ ದೇವರ ಭಕ್ತಿ ಉದಯವಾಗುತ್ತಿದೆ!

ಮೂಢ ಭಕ್ತಿಯಿಂದಲಾದರೂ ದೇವರಿದ್ದಾನೆಂದು ಹೇಳುತ್ತಿದ್ದ ಹಿಂದೂಸ್ಥಾನದವರಿಗೆ ಪರಮಾತ್ಮನೇ ನರಾವತಾರ ತಾಳಿ, ಮಹಾಮೇಧಾವಿಯಾಗಿಯೂ ಅಜಾನುಬಾಹುವಾಗಿಯೂ, ಸದ್ಗುಣ ಸಂಪನ್ನನಾಗಿಯೂ, [illegible]ಯಾಗಿಯೂ, ಸರಳ ಜೀವಿಯಾಗಿಯೂ, ಪತಿತಪಾವನನಾಗಿಯೂ, ಶ್ವೇತವಸ್ತ್ರಧಾರಿಯಾಗಿಯೂ ಬಂದು ಅಹಿಂಸೆ, ಪ್ರೇಮ, ಶಾಂತಿ, ದೇವರಲ್ಲಿ ನಂಬಿಕೆಯನ್ನು ಬೋಧಿಸಲು ತೊಡಗಿದ. ಇದರಿಂದ ಹೊಟ್ಟೆ ತುಂಬುತ್ತದೆಯೆ? ರೇಷನ್ ಹೆಚ್ಚುತ್ತದೆಯೆ? ಮಳೆ ಬೀಳುತ್ತದೆಯೆ? ಇಡೀ ವಿಶ್ವವನ್ನೇ ನಮ್ಮ ಕುಟುಂಬವಾಗಿ ಭಾವಿಸಿದರೆ ನಮ್ಮ ಅಂತಸ್ತು ಉಳಿಯುತ್ತದೆಯೆ? ಸ್ತ್ರೀಯರಿಗೆ ಸ್ವಾತಂತ್ರ್ಯ ಕೊಟ್ಟರೆ ನಮ್ಮ ಕೈಗೆ ಅವರಿನ್ನು ಸಿಗುತ್ತಾರೆಯೆ? ಹರಿಜನೋದ್ಧಾರವೆಂದು ಅವರನ್ನು ನಮ್ಮ ಅಂತಸ್ತಿಗೆ ತಂದರೆ ನಮ್ಮ ಮನೆಗೆಲಸಕ್ಕೆ ಆಳೆಲ್ಲಿಂದ ತರಬೇಕು? ನಮ್ಮ ಆಸ್ತಿಯನ್ನೆಲ್ಲಾ ಬಡವರಿಗೆ ಬಟವಾಡೆ ಮಾಡಿದರೆ ನಮಗೇನುಳಿಯಿತು? ಮಾದಕ ಪದಾರ್ಥ ಸೇವಿಸಬೇಡವೆಂದರೆ ವಂಶಪಾರಂಪರ್ಯ ನಡೆದುಬಂದುದನ್ನು ಬಿಡಲಾಗುತ್ತದೆಯೆ? ಇದೆಲ್ಲಾ ತಲೆಹರಟೆಯ ಬೋಧನೆಯೆಂದು ಪಾಶ್ಚಾತ್ಯರ ಅಂಧಕರನೇಕರು ಅವನನ್ನು ಹಿಮಾಲಯಕ್ಕೆ ಕಳುಹಿಸಿ, ಬೆತ್ತಲೆ ಸನ್ಯಾಸಿ, ಕಪಟವೇಷಧಾರಿ, ಪಕ್ಷಪಾತಿ'ಯೆಂದು ಸಾರಿದರು. ನರರೂಪದಲ್ಲಿದ್ದ ಆ ದೇವನಿಗೆ ಗುಂಡನ್ನೂ ಹಾಕಿದರು! ಈ ರೀತಿ ಯಮನು ಜರ್ಮನಿಯಲ್ಲಿ, ರುದ್ರನು ಯೂರೋಪಿನಲ್ಲಿ ಆಗಿ, ಒಬ್ಬರಿದ್ದ ದೇವರೂ ಭರತಖಂಡದಲ್ಲಿ ಕೊಲೆ ಮಾಡಲ್ಪಟ್ಟರು. ಈಗ ದೇವರಿಲ್ಲ. ಖಾಲಿ ಜಾಗಕ್ಕೆ ಅರ್ಜಿ ನಿರೀಕ್ಷಿಸಲಾಗಿದೆ. ಪೆನ್ಷನ್‌ದಾರರಿಗೆ ರಿಯಾಯಿತಿ ಕೊಡಲಾಗುವುದಂತೆ! ತ್ವರೆಮಾಡಿ.

ಆಚಾರ್ಯ ಕೃಪಲಾನಿಯವರಿಗೆ ಮಂತ್ರಿ ಪದ?

ಘಟನಾ ಸಮಿತಿಯ ಸದಸ್ಯರಲ್ಲಿ ನಡೆದ ಖಾಸಗಿ ಮಾತು ಕತೆಗಳಿಂದ, ಆಚಾರ್ಯ ಕೃಪಾಲಾನಿಯವರನ್ನು ಮಂತ್ರಿ ಮಂಡಳದಲ್ಲಿ ಸೇರಿಸಿ, ಕೇಂದ್ರ ಸರಕಾರದ ಒಕ್ಕಲುತನ ಖಾತೆಯನ್ನು ಪ್ರತ್ಯೇಕಿಸಿ ಅವರಿಗೆ ಕೊಡ ಬಹುದೆಂದು ತಿಳಿದು ಬಂದಿದೆ.

ಕೇಂದ್ರ ಸರಕಾರದ ಆಹಾರ ಮತ್ತು ಒಕ್ಕಲುತನ ಖಾತೆಗಳನ್ನು ಪ್ರತ್ಯೇಕಿಸಬೇಕೆಂದು ಅನೇಕ ದಿನಗಳಿಂದ ಚರ್ಚೆ ನಡೆದಿದ್ದು ಸದ್ಯದ ಆಹಾರ ಮತ್ತು ಒಕ್ಕಲುತನಗಳ ಮಂತ್ರಿಯಾದ ಶ್ರೀ ಜಯರಾಮದಾಸ ದೌಲತ್‌ರಾಮರಿಗೆ ಈ ಎರಡೂ ಖಾತೆಗಳ ಕೆಲಸದ ಹೊರೆಯಿರುವುದರಿಂದ ಈ ಏರ್ಪಾಡು ಮಾಡಲಾಗುವುದೆಂದು ತಿಳಿಯುತ್ತದೆ.

೨೫೦೦ ವರ್ಷಗಳ ಹಿಂದಿನ ಗಾಜಿನ ಕಾರ್ಖಾನೆ

೨೫೦೦ ವರ್ಷಗಳ ಹಿಂದಿನದೆಂದು ಹೇಳಲಾದ ಗಾಜಿನ ಕಾರ್ಖಾನೆಯೊಂದು ಸಂಯುಕ್ತ ಪ್ರಾಂತದ ಬಸ್ತಿ ಜಿಲ್ಲೆಯಲ್ಲಿ ಕೋಪಿಯಾ ಎಂಬ ಹಳ್ಳಿಯಲ್ಲಿ ಕಂಡು ಬಂದಿದ್ದು ಅದನ್ನು ಪರಿಶೀಲಿಸಲು ಕೇಂದ್ರ ಗಾಜು ಮತ್ತು ಸಿರಾಮಿಕ್ ಇನ್‌ಸ್ಟಿಟ್ಯೂಟಿನ ಮುಖ್ಯಾಧಿಕಾರಿಗಳಾದ ಡಾ|| ಆತ್ಮರಾಮ್‌ರವರು ಅಲ್ಲಿಗೆ ಹೋಗಿದ್ದಾರೆ. ಅಲ್ಲಿಂದ ತಂದಿರುವ ನಮೂನೆಗಳನ್ನು ನೋಡಿದರೆ ಹಿಂದೆ ಗಾಜನ್ನು ವಿವಿಧ ಬಣ್ಣಗಳಲ್ಲಿ ತಯಾರಿಸುತ್ತಿದ್ದುದಷ್ಟೇ ಅಲ್ಲ, ವಿವಿಧ ಆಕಾರಗಳಲ್ಲೂ ರೀತಿಯಲ್ಲೂ ತಯಾರಿಸುತ್ತಿದ್ದುದು ಕಂಡು ಬಂದಿದೆ. ಕೆಲವಂತೂ ತುಂಬಾ ಆಶ್ಚರ್ಯಕರವಾಗಿವೆ.

'ಭಾರತದಲ್ಲಿ ಪ್ರ|| ಪ್ರಭುತ್ವ ಮೊಳಕೆ ಪ್ರಾಚೀನವಾದ್ದು'

"ಪ್ರಜಾಪ್ರಭುತ್ವದ ಮೊಳಕೆಗಳನ್ನು ನಿಮ್ಮೊಡನೆ ತೆಗೆದುಕೊಂಡು ವಿಶ್ವಪ್ರವಾಸ ಕೈಗೊಳ್ಳಲಿರುವ ಸಂದರ್ಭ ನೀವು ಭಾರತಕ್ಕೆ ಭೇಟಿ ಕೊಟ್ಟಾಗ ಇದೇ ಪ್ರಜಾಪ್ರಭುತ್ವದ ಮೊಳಕೆಯು ಭಾರತದ ಭೂಮಿಯಲ್ಲಿ ಪ್ರಾಚೀನಕಾಲದಿಂದಲೂ ಇತ್ತು ಎಂಬುದನ್ನು ನೋಡುವಿರಿ' ಎಂಬುದಾಗಿ ಭಾರತದ ರಾಯಭಾರಿ ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್‌ರವರು ನ್ಯೂಯಾರ್ಕಿನಲ್ಲಿ 'ವರ್ಲ್ಡ್ ಟೌನ್ ಹಾಲ್ ಸೆಮಿನಾರ್' ಸಂಸ್ಥೆಯನ್ನು ಉದ್ದೇಶಿಸಿ ಮಾತನಾಡುತ್ತಾ ಹೇಳಿದರು.

ಈ ಸಂಸ್ಥೆಯು ಅಮೆರಿಕಾದ ೨೬ ಸಂಸ್ಥೆಗಳ ಪ್ರತಿನಿಧಿಗಳನ್ನೊಳಗೊಂಡಿದೆ. ಈ ಸಂಸ್ಥೆಗಳ ಒಟ್ಟು ಸದಸ್ಯ ಬಲ ೩ ಕೋಟಿ ೧೦ ಲಕ್ಷ. ಈ ಸೆಮಿನಾರ್‌ನ ನಿಯೋಗವೊಂದು ತಾ. ೨೬ರಲ್ಲಿ ನ್ಯೂಯಾರ್ಕಿನಿಂದ ಹೊರಟು ಪ್ರಪಂಚದ ೧೨ ರಾಜಧಾನಿಗಳನ್ನು (ಭಾರತ ಕರಾಚಿಗಳನ್ನು ಸಹ) ನೋಡಿಕೊಂಡು ಬರುವುದು.

ಪಾನನಿರೋಧ ಏಕೆ?

ಶರೀರದ ಅವಯವಗಳ ಮೇಲೆ ಪರಿಣಾಮ.

[ಪಾನನಿರೋಧವು ಹಿಂದೂದೇಶದ ಮುಂದಿರುವ ಮಹಾ ಪ್ರಶ್ನೆಗಳಲ್ಲೊಂದು. ಕೊಡಗೂ ಕೂಡ ಈ ತತ್ವವನ್ನನುಸರಿಸಿ ಮದ್ಯ ಪಾನೀಯಗಳ ನಿಯಂತ್ರಣವನ್ನು ಜಾರಿಗೆ ತಂದಿದೆ. ಆದರೂ ಪಾನನಿರೋಧದ ಅವಶ್ಯಕತೆ ಏನು ಎಂಬ ವಿಚಾರ ಎಲ್ಲರಿಗೂ ತಿಳಿದಿರಲಾರದು. ಈ ವಿಚಾರದಲ್ಲಿ ಭಾರತ ರಾಜ್ಯಘಟನಾ ಸಭೆಯ ಉಪಾಧ್ಯಕ್ಷರಾದ ಶ್ರೀ ಹೆಚ್. ಸಿ. ಮುಖರ್ಜಿಯವರು ಬರೆದ ಪುಸ್ತಕದಿಂದ ಪ್ರಮುಖಾಂಶಗಳನ್ನು ವಾಚಕರ ಅವಗಾಹನೆಗೆ ಸ್ವಾತಿಪಾರ ಶ್ರೀ ಬಿ. ಡಿ. ಗಣಪತಿಯವರು ಕೊಡುವರು.]

ಹಿಂದೆ ಹೇಳಿದಂತೆ ಮಾದಕ ಪಾನೀಯವು ಹೊಟ್ಟೆಯ ಮತ್ತು ಇತರ ಅವಯವಗಳನ್ನು ಮಂದಗೊಳಿಸಿ ಅವುಗಳಿಂದ ಒಸರಿ ಬರಬೇಕಾದ ಜೀವ ಕೂಲ್ಯ ರಸಗಳು ನಿಲ್ಲುವದರಿಂದ ಅನೇಕ ನಿರುಪಯೋಗಿ ಪದಾರ್ಥಗಳು ಹೊಟ್ಟೆಯೊಳಗೆ ಶೇಖರವಾಗಿ ಇವುಗಳನ್ನು ಕರಗಿಸುವ ಪೂರ್ಣ ಜವಾಬ್ದಾರಿಯು ಪಿತ್ತಕೋಶ(liver)ದ ಮೇಲೆ ಬೀಳುವದು. ಇದು ಈ ವಿಪರೀತ ಕೆಲಸದಿಂದಾಗಿ ಅವ್ಯವಸ್ಥೆಗೀಡಾಗುವದು ಹೊಟ್ಟೆಯಲ್ಲಿ ಅಜೀರ್ಣದಿಂದ ಉಂಟಾಗುವ ವಿಷಾಣುಗಳಿಂದಾಗಿ ಪಿತ್ತಕೋಶವು ಉಬ್ಬಿ ಹುಣ್ಣಾಗತೊಡಗುವದು. ಈ ಅಂಗವು ಸರಿಯಾಗಿ ಕೆಲಸ ಮಾಡದಿದ್ದರೆ ಇಡೀ ಶರೀರದ ವ್ಯವಸ್ಥೆ ಹಾಳಾಗಿ ರಕ್ತದ ಮೂಲಕ ವಿಷಾಣುಗಳು ಶರೀರದ ಎಲ್ಲಾ ಭಾಗಗಳಿಗೂ ಹೋಗಿ ಶರೀರಕ್ಕೆ ವಿಪರೀತ ಹಾನಿಯನ್ನು ಮಾಡುತ್ತವೆ. ಈ ರೀತಿ ಪಿತ್ತಕೋಶದ ಕೆಲಸಕ್ಕೆ ಮಾದಕ ಪಾನೀಯವು ಆತಂಕವಾಗಿ ಶರೀರದಲ್ಲಿರುವ ದೊಡ್ಡ ಮತ್ತು ಚಿಕ್ಕ ರಕ್ತ ನಾಳಗಳಲ್ಲಿ ಅನೇಕ ಎಡರುಗಳನ್ನು ತರುವದಲ್ಲದೆ 'ಬೈಲ್' ರಸವು ಒಸರುವದನ್ನು ನಿಲ್ಲಿಸುವದು.

ಮಾದಕ ಪಾನೀಯವು ಬಹು ಕಾರವಾಗಿರುವ ವಸ್ತುವಾದ್ದರಿಂದ ರಕ್ತ ಕಣಗಳನ್ನು ಅದು ಕೊಂದು ಹಾಕುತ್ತದೆ. ಆದರಿಂದ ರಕ್ತವು ತನ್ನ ಕೆಂಪು ಬಣ್ಣವನ್ನು ಕಳೆದುಕೊಂಡು ಗುಲಾಬಿ ಬಣ್ಣಕ್ಕೆ ತಿರುಗುವದಲ್ಲದೆ ರಕ್ತವೂ ಕಡಿಮೆಯಾಗತೊಡಗುತ್ತದೆ. ಈ ರೀತಿ ಪಿತ್ತಕೋಶದಲ್ಲಿ ಅಣುಗಳು ಸಾಯತೊಡಗಿದಾಗ ಸತ್ತ ಅಣುಗಳ ಸ್ಥಳಕ್ಕೆ ಹೊಸ ಅಣುಗಳು ಬಂದು ಅವು ಕೂಡ ಸಾಯಬೇಕಾಗುತ್ತದೆ.

ಯಾವಾಗಲಾದರೊಮ್ಮೆ ಹೆಚ್ಚಾಗಿ ಮಾದಕ ಪದಾರ್ಥ ಸೇವಿಸುವದರಿಂದ ಅಷ್ಟು ಹಾನಿಯಾಗದು. ಒಮ್ಮೆ ಶರೀರದಲ್ಲಿ ಉಂಟಾದ ಹಾನಿಯನ್ನು ತುಂಬಿಕೊಳ್ಳಲು ಬಿಡು ದೊರೆಯುತ್ತದೆ. ಆದರೆ ಸತತವಾಗಿ ಸ್ವಲ್ಪವೇ ಆಗಲಿ ಸಲ್ಲದೇಕೆ. ಕುಡಿಯುವವರಿಗೆ ಇದರಿಂದ ವಿಪರೀತವಾದ ಹಾನಿಯುಂಟಾಗಿ ಜೀವನದ ಅಂತಿಮವು ಸನ್ನಿಹಿತವಾಗುವದು.

ಕಲಿಜಕ್ಕೆ ಬರುವ ಕಾಯಿಲೆಗಳಿಗೆಲ್ಲಾ ಹೆಚ್ಚಾಗಿ ಮಾದಕ ಪಾನೀಯಗಳ ಸೇವನೆಯೇ ಪ್ರಾಮುಖ್ಯ ಕಾರಣ. ಒಮ್ಮೊಮ್ಮೆ ಹೆಚ್ಚಾಗಿ ಕುಡಿಯುವವರಿಗಿಂತಲೂ ಯಾವಾಗಲೂ ಸ್ವಲ್ಪಸ್ವಲ್ಪ ಕುಡಿಯುವವರ ಪಿತ್ತಕೋಶಕ್ಕೇ ಹೆಚ್ಚಿನ ಹಾನಿಯಾಗುತ್ತದೆಂದು ಶೋಧನೆಗಳಿಂದ ತಿಳಿದುಬಂದಿದೆ. ಸಕಾಲದಲ್ಲಿ ಕುಡುಕತನವನ್ನು ನಿಲ್ಲಿಸದೆ ಮುಂದುವರಿಸಿದರೆ ಮಾದಕ ಪಾನೀಯದ ಆಘಾತದಿಂದ ಮಂದಗೊಂಡ ಪಿತ್ತಕೋಶದ ಮೇಲೆ ಕೊಬ್ಬು ಕಟ್ಟತೊಡಗಿ ಪಿತ್ತಕೋಶವು ಕೊಬ್ಬಿನದಾಗುವದು. ಶೇ. ಐವತ್ತರಷ್ಟು ಸತತ ಕುಡುಕರಲ್ಲಿ ಈ ಪರಿಸ್ಥಿತಿಯೊದಗುವದು ಕಂಡುಬಂದಿದೆ. 'ಸಿರೋಸಿಸ್' ಎಂಬ ಪಿತ್ತಕೋಶದ ಕಾಯಿಲೆಯೂ ಈ ಕುಡಿತದಿಂದಲೇ ಬರುವದು ಗಿದೆ ಅಮೇರಿಕದ ಮಹಾ ವೈದ್ಯ ತಜ್ಞರು ಪರಿಶೋಧನೆಗಳಿಂದ ಕೊಬ್ಬು ತುಂಬಿದ ಪಿತ್ತಕೋಶವೇ ಮುಂದೆ 'ಸಿರೋಸಿಸ್' ಖಾಯಿಲೆಗೊಳಗಾಗುವದೆಂದು ಕಂಡು ಹಿಡಿದಿರುವರು.

ಮಾದಕ ಪಾನೀಯಗಳಿಂದ ಸತ್ತ ಅಣುಗಳ ಸ್ಥಳವನ್ನು ಆಕ್ರಮಿಸಲು ಹತ್ತಿರದ ನರಗಳು ಅಷ್ಟು ಬಗ್ಗಬೇಕಾಗುತ್ತದೆ ಈ ರೀತಿ ನರಗಳು ಕುಗ್ಗಿ ಏಟುಗಳಾಗಿ ಪಿತ್ತಕೋಶದ ಆಕಾರವು ಕೆಡುವದಲ್ಲದೆ ಅದರ ಕೆಲಸಕ್ಕೂ ಆತಂಕವಾಗಿ ಅದಕ್ಕೆ ರೋಗ ಸುತ್ತುವದ. ಇದನ್ನು 'ಹಾಬ್‌ನೈಷ್ಟ್' ಪಿತ್ತಕೋಶವೆಂದು ಹೇಳುತ್ತಾರೆ. ಮಾದಕ ಪಾನೀಯದಲ್ಲಿ ದಿಸ್ಸುವಂಥ ಕಲಿಜದಲ್ಲಿ ನೋವುಂಟಾಗಿ ಕ್ರಮಶಃ 'ಜಾಂಡೀಸ್' ಖಾಯಿಲೆಯೂ ಇದರಿಂದ ಉತ್ಪನ್ನವಾಗುತ್ತದೆ.

ಶರೀರದಲ್ಲಿ ನಕ್ಷವಾಗಿ ಸೋಸುವ ಕೆಲಸವನ್ನು ಮೂತ್ರಾಶಯವು ಮಾಡುತ್ತದೆ. ರಕ್ತವನ್ನು ಶುದ್ಧೀಕರಿಸಿ ಅದರಲ್ಲಿರುವ ಅಶುದ್ಧ ವಸ್ತುಗಳನ್ನು ಸಂಗ್ರಹಿಸಿ ಮೂತ್ರದ ಮೂಲಕ ಹೊರ ಚೆಲ್ಲುವದು ಇದರ ಕೆಲಸ. ಈ ಕೆಲಸವು ಸರಾಗವಾಗಿ ನಡೆಯದಿದ್ದರೆ ರಕ್ತವು ಕೆಟ್ಟು ಇದರಿಂದ ಮನುಷ್ಯನು ಸಾಯಲೂ ಬಹುದು. ಅಮೇರಿಕದ ಚೇಟ್ಲ್‌ಕ್ರೀಕ್ ಸೆನಟೋರಿಯಮಿನಲ್ಲಿ ನಡೆದ ಪರಿಶೋಧನೆಯಿಂದ ಮಾದಕ ಪಾನೀಯಗಳ ಕಾರಣದಿಂದ ರಕ್ತದಿಂದ ಅಪವಿತ್ರ ವಸ್ತುಗಳನ್ನು ಸಂಗ್ರಹಿಸಿ ಹೊರ ಚೆಲ್ಲುವ ಮೂತ್ರಾಶಯದ ಕೆಲಸವು ಶೇ ೫೦ರಷ್ಟು ಕಡಿಮೆಯಾಗುವದು. ಇದು ಪಾನೀಯದ ಪರಿಮಾಣವು ಹೆಚ್ಚಿದಂತೆ ಹೆಚ್ಚುವದು. ಇದು ಕ್ರಮಶಃ ಅಕಾಲ ಮರಣಕ್ಕೂ ಕಾರಣವಾಗುವದು ಮೂತ್ರಾಶಯದ ಕೆಲಸಕ್ಕೆ ಆತಂಕ ಮಾಡುವ ಯಾವದೇ ವಸ್ತುವು ಹಾನಿಕಾರಕ ವಿಷಗಳು ಹೆಚ್ಚುವಂತೆಯೂ, ಅದರಲ್ಲಿರುವ ಜೀವನ-ವಶ್ಯಕ ವಸ್ತುಗಳು ಕಡಿಮೆಯಾಗುವಂತೆಯೂ ಮಾಡುವದು. ಮಾದಕ ಪಾನೀಯದಿಂದ ಮೂತ್ರಾಶಯದ ಅಣುಗಳು ಮೋಡದ ಬಣ್ಣಕ್ಕೆ ತಿರುಗಿ ಉಬ್ಬಿಕೊಳ್ಳುವವು. ಸೋಸಲು ಸಹಾಯಕವಾದ ನಾಳಗಳು ಹಿಡಿಗೆಡುವವು ಮೂತ್ರಾಶಯವು ಚಿಕ್ಕದಾಗುತ್ತಾ ಮೂತ್ರವು ಕಡಿಮೆಯಾಗುವದು. ಕ್ರಮೇಣ ಎಂದೂ ವಾಸಿಯಾಗದ 'ಬ್ರೈಟ್ಸ್' ಖಾಯಿಲೆ ಪ್ರಾರಂಭವಾಗುವದು. ಇದರಿಂದ ಬಿಡುಗಡೆ ಮರಣದಲ್ಲಿಯೇ!

ಮೂತ್ರಾಶಯದ ಹದತಪ್ಪಿದ ಕೆಲಸದಿಂದ ಶರೀರದಲ್ಲಿ ವಾಯು, ಮಾನಸಿಕ ಒತ್ತಡ, ಜೀರ್ಣ ಶಕ್ತಿ ಕೆಡುವಿಕೆ, ಅಜೀರ್ಣದ ನಾನಾ ರೋಗಗಳು ಹುಟ್ಟುತ್ತವೆ ಇದರಿಂದಾಗುವ ನಷ್ಟವು ತಗೆದುಕೊಳ್ಳುವ ಮಾದಕ ಪಾನೀಯಕ್ಕನುಗುಣವಾಗಿದೆ. ಮೂತ್ರಾಶಯಕ್ಕೆ ಬರುವ ನೂರಾರು ಎಂಟು ಖಾಯಿಲೆಗಳಲ್ಲಿ ಏಳು ಮಾದಕ ಪಾನೀಯಗಳಿಂದ ಬರುವದಾಗಿದೆ.

ನಮ್ಮ ಶರೀರದ ಅವಯವಗಳಲ್ಲ ಪ್ರಾಮುಖ್ಯವಾದುದು ಹೃದಯವೆನ್ನಿಸುವದು. ಇದು ಬಲಯುತವಾದ ಸ್ನಾಯುಗಳಿಂದ ಮಾಡಲ್ಪಟ್ಟು ತನ್ನ ಒತ್ತಡದ ಕಾರಣ ಶರೀರಕ್ಕೆ ರಕ್ತ ಒದಗಿಸುವ ಪಂಪಿನಂತಿದೆ. ಜೀವ ಪ್ರಾರಂಭವಾದಂದಿನಿಂದ ಇದು ಕೆಲಸ ಪ್ರಾರಂಭಿಸುವದು. ಇದರ ಕೆಲಸ ನಿಂತಾಗ ಜೀವ ಕೊನೆಗೊಳ್ಳುವದು. ಅದಕ್ಕೆ ದೊರೆಯುವ ವಿಶ್ರಾಂತಿ ಎಂದರೆ ಒಂದು ಬಡಿತದಿಂದ ಇನ್ನೊಂದು ಬಡಿತದ ವರೆಗಿನ ಕೇವಲ ಅರ್ಧ ಸೆಕಂಡಿನಷ್ಟು ಸಮಯ. ಅನೇಕರು ಹೃದಯದ ಬಗ್ಗೆ ಎಚ್ಚರ ವಹಿಸುವದಿಲ್ಲ. ಹೆಚ್ಚು ಆಹಾರ ಸೇವಿಸುವದು, ಸರಿಯಾದ ವ್ಯಾಯಾಮ ಮಾಡದಿರುವದು, ರಾತ್ರಿ ಬಹಳ ಹೊತ್ತು ನಿದ್ದೆಗೆಡುವದು, ಮಾದಕ ಪಾನೀಯ ಸೇವಿಸುವದು ಇವುಗಳಿಂದ ಹೃದಯವು ನಿರ್ಬಲಗೊಂಡು ರೋಗಕ್ಕೆ ಕಾರಣವಾಗುವದು.

ಮಾದಕ ಪಾನೀಯ ಸೇವಿಸಿದರೆ ಹೃದಯವು ಪ್ರಚೋದನಗೊಂಡು ಚೆನ್ನಾಗಿ ಕೆಲಸ ಮಾಡುತ್ತದೆ ಎಂಬ ನಂಬಿಕೆಯಿದೆ. ಮಾದಕ ಪಾನೀಯ ಸೇವನೆಯಿಂದ ಹೃದಯ ಬಡಿತ ಹೆಚ್ಚಾಗುವದರ ಮೇಲೆ ನಿಂತ ವಿಶ್ವಾಸ ಹೃದಯದ ಸ್ನಾಯುಗಳು ನಿರೀಕ್ಷಿಸುವ ಬೋಧ, ಶಕ್ತಿಯು ಹಿಡಿತದಲ್ಲಿದೆ. ಅದು ಎದೆಯ ಬಡಿತವನ್ನು ನಿಯಮಿಸುತ್ತದೆ. ಆದರೆ ಮಾದಕ ಪಾನೀಯವು ಈ ಶಕ್ತಿಯ ಹಿಡಿತವನ್ನು ಸಡಲಿಸುವದರಿಂದ ಹೃದಯ ಬಡಿತವು ಹೆಚ್ಚುತ್ತದೆ. ನಾನೂರರಲ್ಲಿ ಒಂದು ಭಾಗದಷ್ಟು ಮಾದಕ ಪಾನೀಯವಿರುವ ರಕ್ತವು ಹೃದಯದ ಕೆಲಸವನ್ನು ಕಡಿಮೆ ಮಾಡುವದೆಂದೂ ನಾನೂರರಲ್ಲಿ ಎರಡು ಭಾಗದಷ್ಟಿರುವ ರಕ್ತವು ಹೃದಯದ ಕೆಲಸವನ್ನು ಅಪಾಯಕರ ರೀತಿಯಲ್ಲಿ ತಡೆಯುವದೆಂದೂ, ಹೃದಯವು ತನ್ನ ರಕ್ತಕೋಶಗಳಿಗೂ ಕೂಡ ರಕ್ತವನ್ನು ಕಳುಹಿಸುವ ಚೇತನವನ್ನು ಕಳಕೊಳ್ಳುವದೆಂದೂ ಜಾನ್ ಹಾಪ್‌ಕಿನ್ಸ್ ವಿಶ್ವವಿದ್ಯಾಲಯದವರು ನಡೆಸಿದ ಶೋಧನೆಗಳಿಂದ ತಿಳಿದು ಬಂದಿದೆ. ಆದ್ದರಿಂದ ಹೃದಯಾಸ್ಪತ್ರೆಗಳಲ್ಲಿಯ ಡಾಕ್ಟರುಗಳು ಮಾದಕ ಪಾನೀಯ ಮಿಶ್ರಿತ ಯಾವದೇ ಔಷಧವನ್ನು ಹೃದಯ ರೋಗವಿರುವವರಿಗೆ ಕೊಡುವದಿಲ್ಲ.

ಕುಡಿದಾಕ್ಷಣ ಮಾದಕ ಪದಾರ್ಥವು ಹೃದಯದ ಕೆಲಸವನ್ನು ನಿರ್ಬಲಗೊಳಿಸುತ್ತದೆ. ಸಣ್ಣ ಪರಿಮಾಣದಲ್ಲಿ ಮಾದಕ ಪದಾರ್ಥ ಸೇವಿಸಿದ ಅರ್ಧ ಗಂಟೆಯಲ್ಲಿ ಹೃದಯದ ಕೆಲಸವನ್ನು ನೂರಕ್ಕೆ ಆರರಷ್ಟು ಇದು ಕಡಿಮೆ ಮಾಡುವದೆಂದು ಗೊತ್ತಾಗಿದೆ. ಮಾದಕ ವಸ್ತು ಹೋಗುವ ವರೆಗೆ ಹೃದಯವು ಸರಿಯಾಗಿ ಕೆಲಸದ ಮಾಡಲಾರದೆ ಕೆಲವು ವೇಳೆ ಹೃದಯದಲ್ಲಿ ರಕ್ತದ ಒತ್ತಡ ಹೆಚ್ಚಾಗಿ ಹೃದಯದ ಸ್ನಾಯುಗಳು ವಿಕಾಸಗೊಂಡು ಹಾನಿಯಾಗುವದು. ಕುಡುಕನು ಸಮಯ ಬಿಟ್ಟು ಕುಡಿಯ ದಿನಾನರೆ ತನ್ನ ಶಕ್ತಿಯನ್ನು ಪುನಃ ಪಡೆಯಲು ಹೃದಯಕ್ಕೆ ಸಾಧ್ಯವಾಗುವದು. ಆದರೆ ಸತತ ಕುಡಿಯುವವರ ಹೃದಯಕ್ಕೆ ಈ ಅವಕಾಶ ದೊರೆಯದೆ ಹೃದಯವು ನಿರ್ಬಲಗೊಂಡು ಆಕಾರದಲ್ಲಿಯೂ ಶಿಥಿಲಗೊಳ್ಳುವದು. ಹೀಗಾದರೆ ಹೃದಯಕ್ಕೆ ಬಂದ ರಕ್ತವನ್ನು ಶುದ್ಧಿಕರಿಸಿ ಪುನಹ ಶರೀರದ ವಿವಿಧ ಭಾಗಗಳಿಗೆ ಕಳುಹಿಸುವ ಚೇತನವು ಇದಕ್ಕಿಲ್ಲದಾಗುವದು. ಹೃದಯವು ಸರಿಯಾಗಿ ಕೆಲಸ ಮಾಡದಿದ್ದರೆ ಅಲ್ಲಿ ಸಂಗ್ರಹವಾಗುವ ಅಶುದ್ಧ ರಕ್ತವು ಕಲಸಿ, ಹೊಟ್ಟೆ ಮೊದಲಾದವುಗಳ ಮೇಲೆ ದುಷ್ಪರಿಣಾಮವನ್ನುಂಟು ಮಾಡುತ್ತವೆ. ಹೃದಯದ ನಿರ್ಬಲತೆಯ ಕಾರಣ ಶರೀರದ ರಕ್ತದ ಚಲನವು ಸರಿಯಾಗಿ ನಡೆಯದೆ ರಕ್ತವು ನೀರ ಕೂಳದ ನೀರಿನಂತಾಗಿ ತನ್ನ ಶಕ್ತಿಯನ್ನು ಕಳೆದುಕೊಳ್ಳುವದು.

ಮಾದಕ ಪಾನೀಯವು ಎಲ್ಲಿ ಅವಶ್ಯವಿಲ್ಲವೋ ಆ ಕಡೆಗಳಲ್ಲಿ ಕೊಬ್ಬನ್ನು ಹೆಚ್ಚಿಸುವದೆಂಬುದು ಎಲ್ಲರಿಗೂ ತಿಳಿದ ವಿಚಾರ. ಸಾಧಾರಣವಾಗಿ ಹೃದಯದ ಹೊರ ಆವರಣದಲ್ಲಿ ತೆಳುವಾಗಿ ಕೊಬ್ಬಿನ ಪರದೆ ಇರುತ್ತದೆ ಮದ್ಯವು ಇದನ್ನು ಹೆಚ್ಚುವಂತೆ ಮಾಡುತ್ತದೆ. ಇದೇ ಹೃದಯದೊಳಗೂ ಕೂಡ ಕೊಬ್ಬು ಹೆಚ್ಚುವಂತೆ ಮಾಡುವುದು. ಹೃದಯದ ಸ್ನಾಯುಗಳ ಮೇಲೆ ತನ್ನ ಪ್ರಭಾವಬೀರಿ ಅವು ಊದಿಕೊಳ್ಳುವಂತೆ ಮಾಡುವದು. ಕುಡುಕತನವು ಹೆಚ್ಚಿದಂತೆ ಈ ಸ್ನಾಯುಗಳ ಮಧ್ಯದಲ್ಲಿಯೂ ಕೂಡ ಕೊಬ್ಬು ನಿಲ್ಲುವದು. ಈ ರೀತಿ ಎರಡು ಬಗೆಯಿಂದ ಹೃದಯದ ಕ್ರಿಯೆಗೆ ತೊಂದರೆಯಾಗುವದು.

ಈ ರೀತಿ ಕೊಬ್ಬು ತುಂಬಿದ ಹೃದಯವು ರೋಗಕ್ಕೆ ತವರುಮನೆ. ಸ್ವಲ್ಪ ಬಗೆಯ ಕೆಲಸವನ್ನು ನಡೆಸುವ ಶಕ್ತಿ ಇದಕ್ಕೆ ಇರಲಾರದು. ಈ ರೀತಿಯ ಹೃದಯವುಳ್ಳವರು ಥಟ್ಟನೆ ಸಾಯುತ್ತಿರುವರು. ವರ್ಷಗಳವರೆಗೆ ನಿಶ್ಚಿತ ಪರಿಮಾಣದಲ್ಲಿ ಮಾದಕ ಪಾನೀಯ ಸೇವಿಸುವವರಲ್ಲಿ ಚೇತನವು ಯಾ ಕ್ರಿಯಾ ಶಕ್ತಿಯು ಕಡಿಮೆ ಇರುತ್ತದೆ ಕೆಲವು ತಿಂಗಳ ವರೆಗೆ ಮಾದಕ ಪಾನೀಯ ಸೇವಿಸದಿದ್ದರೆ ಕಳೆದು ಹೋದ ಚೇತನವು ಪುನಃ ಬರುವದು ಅವರಿಗೆ ಗೋಚರವಾಗದಿರುವದು. ಎಷ್ಟೇ ಸ್ವಲ್ಪ ಪರಿಮಾಣದಲ್ಲಾಗಲೀ ಸತತ ಕುಡಿಯುವದು ಹೃದಯಕ್ಕೆ ಹಾನಿಯನ್ನು ಮಾಡದಿದ್ದರೂ, ಇಂಥವರು ಹೃದಯಸ್ತಂಭನದಿಂದ ಶೀಘ್ರ ಮರಣಕ್ಕೆ ತುತ್ತಾಗುವರು. ಹೆಚ್ಚು ಕುಡಿಯುವವರು ವಿಷಮಶೀತ ಜ್ವರ, ನಿಮೋನಿಯಾಗಳ ಕಾಲದಲ್ಲಿ ವಿಪರೀತ ತೊಂದರೆಪಡುವರು. ಮಧ್ಯ ಪ್ರಾಯದಲ್ಲಿ ಸಾಯುವವರಲ್ಲಿ ಬಹು ಜನರ ಈ ಕುಡುಕತನದ ಪರಿಣಾಮದಿಂದಲೇ ಎನ್ನಬಹುದು. ಸುವರ್ಣ್ ಲೀಟರ್ ಎಂಬ ಡಾಕ್ಟರರು ಪ್ರಾಣಿಗಳ ಮೇಲೆ ನಡೆಸಿದ ಪ್ರಯೋಗದಿಂದ ಮಾದಕ ವಸ್ತುಗಳು ಹೃದಯವನ್ನು ನಿರ್ಬಲಗೊಳಿಸುವದಲ್ಲದೆ ವಯಸ್ಸಾದಂತೆ ಹೃದಯವು ಯೋಗ್ಯ ರೀತಿ ಕೆಲಸ ಮಾಡಲಾರದೆ ಹೃದಯಸ್ತಂಭನದಿಂದ ಮರಣಕ್ಕೆ ಕಾರಣವಾಗುವದು ಇದಲ್ಲದೆ ನಿಮೋನಿಯಾ, ವಿಷಮ ಜ್ವರಗಳಿಂದ ಇಂಥವರಿಗೆ ತೊಂದರೆ ಹೆಚ್ಚಾಗುವದ ಎಂದು ತಿಳಿದು ಬಂದಿದೆ

ಅವರ ಶರೀರದ ಶಕ್ತಿ ಕುಗ್ಗದಿರುವಾಗ ಇವನ್ನು ಅವರಲ್ಲಿ ಚೇತನವಿದ್ದು ಹರೆಯದಲ್ಲಿರುವಾಗ ಈ ರೀತಿ ಹೃದಯ ಕ್ರಿಯೆ ನಿಂತು ಸಾಯುವದರಿಂದ ರಾಷ್ಟ್ರಕ್ಕೆ ವಿಪರೀತ ಹಾನಿ ಏಕೆಂದರೆ ರಾಷ್ಟ್ರಕ್ಕೆ ಹೆಚ್ಚಾಗಿ ಸೇವೆ ಮಾಡಬಲ್ಲ ಕೆಲಸಗಾರರು ತಾವು ಸೇವೆ ಮಾಡಬೇಕಾದಾಗ ಸಮಯದಲ್ಲಿ ಅಕಾಲ ಮರಣಕ್ಕೆ ಈ ದುಶ್ಚಟದಿಂದ ತುತ್ತಾಗುವರು,

---

ಶ್ರೀಮದ್ಭಗವದ್ಗೀತೆ

ಫಲ ತ್ಯಾಗಿಯ - ಕರ್ಮದ ಮಹತ್ವ.

[ಶ್ರೀ ಕಾವೇರಿ ಆಶ್ರಮ, ವೀರಾಜಪೇಟೆ ಇವರಿಂದ]

ಎರಡನೇ ಅಧ್ಯಾಯದಲ್ಲಿ ನಾವು ಸಂಪೂರ್ಣ ಜೀವನ ಶಾಸ್ತ್ರದ ಪರಿಚಯ ಮಾಡಿಕೊಂಡೆವು. ಇನ್ನು ಮೂರನೇ ಅಧ್ಯಾಯದಲ್ಲಿ ಆ ಶಾಸ್ತ್ರದ ಹೆಚ್ಚು ವಿವರವನ್ನೂ ಸ್ಪಷ್ಟೀಕರಣವನ್ನೂ ಕಾಣಬಹುದು. ಕರ್ಮಯೋಗವನ್ನು ಸಂಗ್ರಹವಾಗಿ ಹೇಳಿದ ಮೇಲೆ ಅದರ ವಿವರವನ್ನು ಮೂರನೇ ಅಧ್ಯಾಯದಲ್ಲಿ ಹೇಳಿದೆ.

ನಾವು ಭಗವದ್ಗೀತೆಯ ವಿಚಾರವನ್ನು ಮಾಡುವಾಗಲೆಲ್ಲಾ ಭಗವಂತನನ್ನು ಮನಸ್ಸಿಗೆ ತಂದುಕೊಳ್ಳಬೇಕು. ಭಗವಂತನು ಎಲ್ಲೆಲ್ಲಿಯೂ ಇರುತ್ತಾನೆ ನಮ್ಮೊಳಗೆ ಇದ್ದು, ನಮಗೆ ಅತ್ಯಂತ ಹತ್ತಿರ ಇದ್ದಾನೆ. ಆದರೂ ನಾವು ಅವನನ್ನು ದೂರಮಾಡಿಕೊಂಡಿದ್ದೇವೆ. ಜಲಚರಗಳು ನೀರನ್ನು ಬಿಟ್ಟಿರುವದು ಹೇಗೆ ಅಸಾಧ್ಯವೋ ಹಾಗೆ ನಾವೂ ಭಗವಂತನನ್ನು ಬಿಟ್ಟು ಬೇರೆ ಇರಲಾರೆವು. ಆದರೂ ಅವನನ್ನು ಮರೆತು ಅವನಿಂದ ದೂರವಾಗಿರುತ್ತೇವೆ. ಆದ್ದರಿಂದ ಆತನ ಸಾನ್ನಿಧ್ಯವನ್ನು ಭಾವಿಸುವ ಮಟ್ಟಕ್ಕೆ ಮನಸ್ಸನ್ನು ಏರಿಸಿಕೊಳ್ಳಬೇಕು. ಆಗಲೇ ಆತನ ಉಪದೇಶವು ನಮ್ಮ ಕಿವಿಗೆ ಬೀಳುವದು.

ಕರ್ಮವೆಂದರೆ ಕೆಲಸ. ಆ ಕರ್ಮವು ಲೌಕಿಕವಾಗಲಿ, ವೈದಿಕವಾಗಲಿ ಅದಕ್ಕೆ ತಕ್ಕ ಫಲವು ಅವಶ್ಯವಾಗಿ ಆಗಿಯೇ ತೀರುತ್ತದೆ. ಯಾವ ಕರ್ಮವನ್ನು ಯಾವ ಸಂದರ್ಭದಲ್ಲಿ ಹೇಗೆ ಮಾಡಿರುವೆವೋ ಅದಕ್ಕೆ ಅನುಗುಣವಾಗಿಯೇ ಫಲವು ತಪ್ಪದೆ ಆಗುತ್ತದೆ. ಆ ಫಲವನ್ನು ಅನುಭವಿಸಿಯೇ ತೀರಬೇಕು. ಇದು ಕರ್ಮದ ನಿಯಮ. ಆದರೆ ಲೋಕದಲ್ಲಿ ನಮ್ಮ ಅಲ್ಪ ಬುದ್ಧಿಗೆ ತಿಳಿದ ಕರ್ಮಗಳಿಗೂ ವೇದದಲ್ಲಿ ಹೇಳಿರುವ ಕರ್ಮಗಳಿಗೂ ಬಹಳ ಹೆಚ್ಚು ಕಡಿಮೆಯುಂಟು.

ಕರ್ಮ ಯೋಗದಲ್ಲಿ ಫಲ ತ್ಯಾಗದ ವಿಷಯವೇ ಮುಖ್ಯ. ಆದರೆ ಕರ್ಮಯೋಗಿಗೆ ಫಲ ಸಿದ್ಧಿ ಇದೆಯೇ ಎಂದು ಪ್ರಶ್ನೆ ಬರುತ್ತದೆ. ಮೂರನೇ ಅಧ್ಯಾಯದಲ್ಲಿ ಅದಕ್ಕೆ ಉತ್ತರವಿದೆ. ಫಲತ್ಯಾಗಿಯಾದ ಕರ್ಮಯೋಗಿಗೆ ಬೇರೆಯವರಿಗಿಂತಲೂ ಹೆಚ್ಚು ಫಲ. ಅನಂತ ಫಲ ಖಂಡಿತವಾಗಿಯೂ ಸಿಕ್ಕುತ್ತದೆ ಎಂದು ಮೂರನೇ ಅಧ್ಯಾಯದಲ್ಲಿ ಹೇಳಿದೆ.

ಸಾಮಾನ್ಯ ಮನುಷ್ಯನೂ, ಕರ್ಮಯೋಗಿಯೂ ಇಬ್ಬರೂ ಕರ್ಮ ಮಾಡುತ್ತಾರೆ ಇಬ್ಬರಿಗೂ ಒಂದೊಂದು ರೀತಿಯ ಫಲ ಇದ್ದೇ ಇರುತ್ತದೆ. ಅದು ತಪ್ಪದಲ್ಲ. ಆದರೆ ಕರ್ಮ ಯೋಗಿಗೆ ಸಿಕ್ಕುವ ಫಲದ ಮುಂದೆ ಫಲಾಪೇಕ್ಷೆಯಿಂದ ಮಾಡಿದ ಕರ್ಮ ಫಲ ಏನೂ ಇಲ್ಲ.

ಲಕ್ಷ್ಮೀ ಸ್ವಯಂವರದ ಕಥೆಯಲ್ಲಿ ವಿಷಯವನ್ನು ನಾವು ತಿಳಿಯಬಹುದು ಆಕೆಯ ಸ್ವಯಂವರಕ್ಕೆ ಇಂದ್ರನೇ ಮೊದಲಾದ ದೇವತೆಗಳು ಅವಳನ್ನು ವರಿಸಲು ಬಂದಿದ್ದರು. ಬ್ರಹ್ಮಾದಿಗಳೂ, ವಿಷ್ಣು ಸಹ ಹೋದರು. ಸ್ವಯಂವರಕ್ಕೆ ಪಣ ಹೊರಡಿಸಿರಲಿಲ್ಲ. ಬ್ರಹ್ಮಾದಿಗಳೂ ಇತರ ದೇವತೆಗಳೂ ಲಕ್ಷ್ಮಿಯು ನನ್ನನ್ನೇ ವರಿಸುವಳೆಂಬ ಆಶೆಯಿಂದ ಬಂದಿದ್ದರು. ಎಲ್ಲರೂ ಬಂದು ಸೇರಿದ ಮೇಲೆ ಪಣವನ್ನು ಹೊರಡಿಸಿದಳು. 'ಇಲ್ಲಿಗೆ ಬಂದಿರುವವರ ಪೈಕಿ ಯಾರಿಗೆ ನನ್ನ ಮೇಲೆ ಇಷ್ಟವಿಲ್ಲವೋ ಅವರನ್ನು ನಾನು ವರಿಸುತ್ತೇನೆ' ಎಂದಳು. ಎಲ್ಲರೂ ಇವಳ ಮೇಲಿನ ಆಶೆಯಿಂದಲೇ ಬಂದಿದ್ದವರು. ಲಕ್ಷ್ಮಿಯೇ ವರಿಸುತ್ತಾಳೆಂದರೆ ಯಾರಿಗೆ ತಾನೆ ಆಶೆಯಿಲ್ಲ? ಎಲ್ಲರೂ ಇವಳ ಪಣವನ್ನು ಕೇಳಿ ಚಕಿತರೂ, ಕಾತುರರೂ ಆದರು. ಲಕ್ಷ್ಮಿಯು ತನ್ನ ಮೇಲೆ ಆಸೆಯಿಲ್ಲದವರನ್ನು ಹುಡುಕಿದಳು. ಆದಿಶೇಷನ ಮೇಲೆ ನಿರ್ಯೋಚನೆಯಾಗಿ ಶಾಂತನಾಗಿ ಮಲಗಿದ್ದ ವಿಷ್ಣುವನ್ನು ಕಂಡಳು. ಅವನ ಕೊರಳಿಗೆ ಹೂವು ಮಾಲೆಯನ್ನು ಹಾಕಿ ಅವನ ಪದತಳದಲ್ಲಿ ಇನ್ನೂ ಕೂತಿದ್ದಾಳೆ. ಆಶೆಪಟ್ಟು ಬಂದವರು ನಿರಾಶರಾದರು. ವಿಷ್ಣುವು ನಿಷ್ಕಾಮದಿಂದ ಸಭಾ ಮಂಟಪಕ್ಕೆ ಬಂದಿದ್ದನು. ಲಕ್ಷ್ಮಿಯು ಅವನನ್ನೇ ವರಿಸಿದ್ದರೂ ಸಂತೋಷವಿಲ್ಲ, ವರಿಸದಿದ್ದರೂ ಅವನಿಗೆ ವ್ಯಸನವಿಲ್ಲ. ಲಕ್ಷ್ಮಿಯ ಮೇಲೆ ಅವನಿಗೆ ಮೋಹವೂ ಇರಲಿಲ್ಲ. 'ಬೇಡದಯೇ ಬಂದಳು ಭಾಗ್ಯ ಲಕ್ಷ್ಮಿ ಕೊಡುತ್ತಾಗಿ' ಎಂಬ ಮಾತಿನಂತೆ ವಿಷ್ಣುವು ಬೇಡದೆಯೇ ಲಕ್ಷ್ಮಿಯು ಅವನಲ್ಲಿ ಬಂದಳು. ನನಗೆ ತನಗೆ ಎಂದು ಕಾತುರರಾದವರು ಯಾರೂ ಅವಳನ್ನು ಹೊಂದಲಾಗಲಿಲ್ಲ. ನಿಷ್ಕಾಮ ಯೋಗದಲ್ಲಿಯೂ ಇದೇ ಗುಟ್ಟು.

ಸಾಮಾನ್ಯ ಮನುಷ್ಯರು ತಮ್ಮ ಕರ್ಮಕ್ಕೆ ತಾವೇ ಬೆಲೆ ಕಟ್ಟುತ್ತಾರೆ. ಹೀಗಾಗಿ ತಮ್ಮ ಕರ್ಮದ ನಿಜವಾದ ಫಲವನ್ನು ಕಳೆದುಕೊಳ್ಳುತ್ತಾರೆ. ತಮ್ಮ ಕರ್ಮ ಫಲಕ್ಕೆ ಸುತ್ತಲೂ ಬೇಲಿ ಕಟ್ಟಿ ಆದರಿಂದ ನಿಜವಾದ ಅನಂತ ಫಲ ಇವರಿಗೆ ಸಿಕ್ಕುವದಿಲ್ಲ. ಆದೇ ಕರ್ಮಯೋಗ ಫಲದ ಅಪೇಕ್ಷೆಯೇ ಇಲ್ಲದಿರುವದರಿಂದ ಅನಂತ ಫಲ ಗಳಿಸುತ್ತಾರೆ. ತನ್ನ ಮನೆಯ ಗಾಳಿಯ ಮೋಹಕ್ಕೆ ಬಿದ್ದು ಮನುಷ್ಯನು ಮನೆ ಬಾಗಿಲುಗಳನ್ನೆಲ್ಲಾ ಹಾಕಿಕೊಂಡರೆ ಹೊರಗಿನಿಂದ ಬರುವ ಅನಂತವಾದ ಮತ್ತು ಶುದ್ಧವಾದ ಗಾಳಿಯನ್ನು ಕಳೆದುಕೊಳ್ಳುವಂತೆ ಫಲವನ್ನು ಅಪೇಕ್ಷಿಸುವವನು ನಿಜವಾದ ಕರ್ಮ ಫಲವನ್ನು ಹೊಂದುವದಿಲ್ಲ.

ಕರ್ಮ ಯೋಗಿಯ ಮತ್ತು ಸಾಮಾನ್ಯ ಮನುಷ್ಯನ ಕರ್ಮ ಎರಡೂ ಒಂದೇ ರೀತಿಯದಾಗಿದ್ದರೂ ಸಹ ಅವರವರ ಭಾವನಾ ಭೇದದಿಂದ ಫಲವೂ [illegible] ಬೇರೆಯಾಗುತ್ತದೆ. ಬಾಹ್ಯ ಕರ್ಮ ಒಂದೇ ಮುಖ್ಯವಲ್ಲ. ಯಾವ ಭಾವನೆಯಿಂದ ಕರ್ಮ ನಡೆಯುತ್ತದೆ ಎನ್ನುವದರ ಮೇಲೆ ಅದರ ಫಲವೂ ಹೊಂದಿಕೊಂಡಿರುತ್ತದೆ.

ರಷ್ಯಾ ದೇಶದ ದೊಡ್ಡ ಕವಿಯಾದ ಟಾಲ್‌ಸ್ಟಾಯಿಯು ಜನರು ಕಷ್ಟಪಡುತ್ತಿರುವದನ್ನು ನೋಡಿ ಒಂದು ಸಲ ಈ ರೀತಿ ಹೇಳಿದನು:– 'ಲೋಕದ ಜನರು ಕ್ರಿಸ್ತನ ತ್ಯಾಗವನ್ನು ಬಾಯಿಯಲ್ಲಿ ತುಂಬಾ ಹೊಗಳುತ್ತಾರೆ. ಈ ಹೊಗಳುವ ಜನರೇ ಬೆಳಗಿನಿಂದ ಸಂಜೆಯ ವರೆಗೆ ನಾಲ್ಕು ಕತ್ತೆ ಭಾರದ ಹೊರೆ ಹೊತ್ತು ವೈಬೆನರಿಸುತ್ತಾರೆ. ಹೊಟ್ಟೆ ಹೊರೆಯುವದಕ್ಕಾಗಿ ಮಾತ್ರ ಈ ಜನರು ಇಷ್ಟು ಕಷ್ಟವನ್ನು ಅನುಭವಿಸುತ್ತಾರೆ. ಇಷ್ಟಾದರೂ ಹೊಟ್ಟೆ ತುಂಬಾ ಕೂಳು ಸಿಕ್ಕುವದಿಲ್ಲ ಇದೇ ಜನರು ಇವರ ಅರ್ಧದಷ್ಟು ಕಷ್ಟವನ್ನು ದೇವರಿಗಾಗಿ ಪಟ್ಟಿದ್ದರೆ ಈ ಜೀವರೆಲ್ಲಾ ಕ್ರಿಸ್ತರೇ ಆಗುತ್ತಿದ್ದರು.' ಕ್ರಿಸ್ತನು ದೇವರಿಗಾಗಿ, ಲೋಕದ ಜನರಿಗಾಗಿ ಕಷ್ಟವನ್ನನುಭವಿಸಿ ದೊಡ್ಡ ತ್ಯಾಗ ಮಾಡಿದನು. ಬೇರೆಯವರಂತೆಯೇ ಕ್ರಿಸ್ತನು ಮನುಷ್ಯನಾದರೂ ಇವನ ಕರ್ಮದ ಭಾವನೆಯೇ ಬೇರೆ. ಅದಕ್ಕಾಗಿ ಇವನು ಮಹಾತ್ಮನಾದನು. ಇತರರು ಎಷ್ಟು ಕಷ್ಟ ಅನುಭವಿಸಿದ್ದರೂ ಅದು ಬರೇ ಹೊಟ್ಟೆಪಾಡಿಗಾಗಿ; ಅವರು ಸಾಮಾನ್ಯರಾಗಿಯೇ ನಿಂತರು

ಭಾವನೆಗೆ ತುಂಬಾ ಬೆಲೆಯುಂಟು. ಸದ್ಭಾವನೆ ಇಲ್ಲದ ದೊಡ್ಡ ದೊಡ್ಡ ಕರ್ಮವೂ ನಿಷ್ಫಲವಾದದ್ದು. ಕುಚೇಲನು ಒಂದು ಹಿಡಿ ಅವಲಕ್ಕಿಯನ್ನು ಕೃಷ್ಣನಿಗೆ ಕೊಟ್ಟು ಅನಂತ ಫಲವನ್ನು ಪಡೆದನು. ಒಂದು ಹಿಡಿ ಅವಲಕ್ಕಿಗೆ ಏನು ಬೆಲೆ ಇದೆ? ಒಂದು ಬೀಡಿ ಕಾಸೂ ಅದರ ಬೆಲೆಯಲ್ಲ. ಆದರೆ ಕೃಷ್ಣನು ಅದಕ್ಕೆ ಅನಂತವಾದ ಬೆಲೆಯನ್ನು ಕೊಟ್ಟನು. ಕುಚೇಲನ ಆ ಅವಲಕ್ಕಿ ಸಾಧಾರಣವಾದ ಅವಲಕ್ಕಿಯಲ್ಲ ಅದು ಭಕ್ತಿಯಿಂದ ತುಂಬಿದ ಅವಲಕ್ಕಿ. ಭಕ್ತಿಯಿಂದ ಮಂತ್ರಿಸಿದ್ದರಿಂದ ಅದಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ ಈ ಭಕ್ತಿಯ ಭಾವನೆಗೇ ಅನಂತ ಫಲ ಸಿಕ್ಕುವದು. ಪದಾರ್ಥ ಚಿಕ್ಕದಾದರೂ ಭಾವನೆ ಅದನ್ನು ದೊಡ್ಡದು ಮಾಡಿತು.

ನೂರು ರೂಪಾಯಿ ನೋಟನ್ನು ನೋಡಿ, ಅದು ಒಂದು ಸಣ್ಣ ಕಾಗದದ ತುಂಡು. ಬೆಂಕಿ ಕೊಟ್ಟರೆ ಒಂದು ತಂಬಿಗೆ ನೀರು ಸಹ ಅದರಲ್ಲಿ ಬಿಸಿಯಾಗುವದಿಲ್ಲ. ಆದರೂ ಆ ಸಣ್ಣ ಕಾಗದದ ಚೂರಿಗೆ ೧೦೦ ರೂಪಾಯಿ ಬೆಲೆ ಇದೆ. ಸಾವಿರಾರು ಹಂಡೆ ನೀರು ಕಾಯಿಸುವಷ್ಟು ಸೌದೆಯನ್ನು ಅದರಲ್ಲಿ ಕೊಂಡುಕೊಳ್ಳಬಹುದು. ಕಾಗದದ ತುಂಡಿಗೆ ಬೆಲೆಯಿಲ್ಲ. ಆದರೆ ಅದರ ಮೇಲಿರುವ ಮುದ್ರೆಗೆ ಬೆಲೆ ಇದೆ. ಹಾಗೆಯೇ ಭಾವನೆಗೂ ಬೆಲೆ ಸಿಕ್ಕುವದು. ಭಾವನೆಯ ಮುದ್ರೆ ಹೊತ್ತ ಸಣ್ಣ ಕೆಲಸಕ್ಕೂ ದೊಡ್ಡ ಬೆಲೆ ಇದೆ. ಕರ್ಮ ಯೋಗದ ಅಭಿಪ್ರಾಯವೂ ಇದೇನೇ. ಬರೀ ಕರ್ಮಕ್ಕೆ ಬೆಲೆ ಇಲ್ಲ. ಭಾವನೆಯ ಮುದ್ರೆಯು ಕರ್ಮಕ್ಕಿರಬೇಕು. ಆಗಲೇ ಅದಕ್ಕೆ ಬೆಲೆ.

ಮೂರ್ತಿ ಪೂಜೆಯ ರಹಸ್ಯವೂ ಇದೇ ರೀತಿಯದು. ಮೂರ್ತಿ ಪೂಜೆಯ ಕಲ್ಪನೆ ಅತ್ಯಂತ ಸುಂದರವಾದದ್ದು. ಮೂರ್ತಿಯು ಕಲ್ಲಿನಿಂದಲೂ ಮಣ್ಣಿನಿಂದಲೂ ಮಾಡಲ್ಪಡುತ್ತದೆ. ಈ ಬರೀ ಕಲ್ಲು ಮಣ್ಣಿಗೆ ಏನೂ ಬೆಲೆ ಇಲ್ಲ. ದೇವರೆಂಬ ಭಾವನೆಯನ್ನು ನಾವು ಅದಕ್ಕೆ ತುಂಬಿಸುತ್ತೇವೆ. ಭಾವನೆಯ ಜೀವನವನ್ನು ನಾವು ಅದಕ್ಕೆ ತುಂಬಿಸುತ್ತೇವೆ. ಆಗಲೇ ಅದಕ್ಕೆ ಪೂಜೆ ಮಾಡುವದು. ಆಗ ಅದು ನಮಗೆ ಅತ್ಯಂತ ಶ್ರೇಷ್ಠವಾದದ್ದು. ಪರಮಾತ್ಮನ ಗುಣಗಳೆಲ್ಲವನ್ನು ಈ ಮಣ್ಣಿನ ವಿಗ್ರಹಕ್ಕೆ ತುಂಬಿಸುತ್ತೇವೆ. ಅದೇ ನಮಗೆ ದೇವರು. ಈ ಭಾವನೆಯನ್ನು ಯಾರಾದರೂ ತುಂಡು ಮಾಡಲು ಸಾಧ್ಯ ಉಂಟೇ? ಕಲ್ಲು ಮಣ್ಣು ತುಂಡಾಗಬಹುದು, ಆದರೆ ಭಾವನೆಯು ತುಂಡಾಗದು. ವಿಗ್ರಹದಿಂದ ನನ್ನ ಭಾವನೆಯು ಮಾಯವಾದರೆ ಆ ವಿಗ್ರಹವು ಬರೀ ಕಲ್ಲಿನ ತುಂಡಾಗುತ್ತದೆ. ಮುಖ್ಯವಾದದು ಭಾವನೆ. ಬರೀ ಕರ್ಮವೆಂದರೆ ಈ ಕಾಗದ, ಕಲ್ಲುಗಳು ಇದ್ದಂತೆ. ಅದಕ್ಕೇನು ಮರ್ಯಾದೆ ಇದ್ದೀತು? ತಾಯಿಯು ಬರೆದ ಕಾಗದಕ್ಕೂ, ಬೇರೆ ಯಾವನೋ ಬರೆದ ಕಾಗದಕ್ಕೂ ಒಂದೇ ಬೆಲೆ ಕೊಡುತ್ತೇವೆಯೇ? ತಾಯಿಯು ಸೊಟ್ಟ ಸೊಟ್ಟಗಾಗಿ ನಾಲ್ಕಕ್ಷರವನ್ನು ಬರೆದು ಕಳುಹಿಸುತ್ತಾಳೆ– ಅದು ಪ್ರೀತಿಯಿಂದ ತುಂಬಿದ ಕಾಗದ. ಪವಿತ್ರವಾದದ್ದು ಮತ್ತು ಅಮೂಲ್ಯವಾದದ್ದು.

ಕರ್ಮಕ್ಕೆ ಭಾವನೆ ಬೇಕು, ಹಾಗೆಯೇ ಇಚ್ಛೆಯೂ ಬೇಕು. ಇಷ್ಟಪಟ್ಟು ದುಡಿಯಬೇಕು. ಇದರಿಂದಲೂ ಕರ್ಮಕ್ಕೆ ಬೆಲೆ ಹೆಚ್ಚುತ್ತದೆ. ಒಬ್ಬ ಕೂಲಿಯವನು ಕೆಲಸ ಮಾಡುತ್ತಾನೆ. ಅವನಿಗೆ ಕರ್ಮದಲ್ಲಿ ಏನು ಭಾವನೆ, ಏನು ಇಚ್ಛೆ ಇದ್ದೀತು? ಅವನ ಕೆಲಸಕ್ಕೆ ಅವನಿಗೆ ತಕ್ಕ ಕೂಲಿ ಕೊಟ್ಟು ಹೋಗು ಎನ್ನುತ್ತೇವೆ. ಆದರೆ ದಕ್ಷಿಣೆ ಕೊಡುವದು ಈ ಭಾವನೆಯಿಂದಲ್ಲ. ಎಷ್ಟು ದಕ್ಷಿಣೆ ಕೊಟ್ಟೆ ಎಂದು ಪ್ರಶ್ನೆ ಮಾಡುವದಿಲ್ಲ. ಮನಪ್ರೀತಿಯಿಂದ ಕೊಟ್ಟದ್ದು ಮುಖ್ಯವಾದದ್ದು. ಪ್ರೀತಿಯಿಂದ ಇಷ್ಟಪಟ್ಟು ಕೊಟ್ಟಿಯೋ ಇಲ್ಲವೋ ಎನ್ನುವದು ಮುಖ್ಯ.

ಮನುಸ್ಮೃತಿಯಲ್ಲಿ ಈ ದಕ್ಷಿಣೆಯ ವಿಷಯವನ್ನು ಸ್ವಾರಸ್ಯವಾಗಿ ಹೇಳಿದೆ. ಗುರುವಿಗೆ ಶಿಷ್ಯನು ದಕ್ಷಿಣೆ ಕೊಡುವದು ಹೇಗೆ ಎಂದು ಹೇಳಿದೆ. ೧೨ ವರ್ಷ ಗುರುಕುಲದಲ್ಲಿ ವಿದ್ಯಾಭ್ಯಾಸ ಮಾಡುವ ಶಿಷ್ಯನು ಗುರು ದಕ್ಷಿಣೆ ಕೊಡಬೇಕು. ಪಶುವಾಗಿದ್ದ ಹುಡುಗ ಗುರುವಿನ ಅನುಗ್ರಹದಿಂದ ಬ್ರಹ್ಮಜ್ಞಾನಿಯಾಗುತ್ತಾನೆ. ಇಂಥಾ ಗುರುವಿಗೆ ದಕ್ಷಿಣೆ ಏನನ್ನು ತಾನೆ ಕೊಟ್ಟಾನು? ಅವನು ಕಲಿತ ವಿದ್ಯೆಗೆ, ಗುರುವಿನಿಂದ ಪಡೆದ ಜ್ಞಾನಕ್ಕೆ ಬೆಲೆ ಕ

ಟ್ಟಲು ಸಾಧ್ಯ? ಇದಕ್ಕೆ ಪ್ರತಿಯಾಗಿ ಏನನ್ನು [illegible] ಉಪಕಾ ಕ್ಕೆ ಪ್ರತಿಫಲವನ್ನು [illegible] ಲ್ಲ. ಈಗಿನ [illegible] ವಿಶೇಷ [illegible], ನರನನ್ನು ಮಾನ [illegible] ವಿದ್ಯಾಭ್ಯಾಸವಲ್ಲ. ಆದರೆ ಶಿಷ್ಯನು ಗುರುದಕ್ಷಿಣೆ ಕೊಡುತ್ತಾನೆ. ಏನನ್ನು ಕೊಡುತ್ತಾನೆ? ಮನುಷ್ಯ ಹೇಳುತ್ತಾನೆ. 'ಗುರುವಿಗೆ ಒಂದು ಹೂವು, ಒಂದು ಬೀಸಣಿಗೆ, ಒಂದು ಜೊತೆ ಪಾದರಕ್ಷೆ, ಒಂದು ನೀರು ತುಂಬಿದ ತಂಬಿಗೆ, ಇವುಗಳನ್ನು ಕೊಡು ಎಂದು.' ಇದು ತಮಾಷೆಯಲ್ಲ. ಗುರುವಿಗೆ ಬೇಕಾದದ್ದು ಏನೂ ಇಲ್ಲ. ಶಿಷ್ಯನಿಗೆ ನಿಜವಾದ ಬೆಲೆಯನ್ನು ಕೊಡಲು ಸಾಧ್ಯವಿಲ್ಲ. ಆದರೂ ಗುರು ದಕ್ಷಿಣೆಯನ್ನು ಕೊಡುತ್ತಾನೆ. ಅವನು ಇದನ್ನೇ ಕೊಡುವುದು ಸಹ. ಗುರುವಿಗೆ ಕೊಡುವ ಹೂವು ಮೊದಲಾದುವಕ್ಕೆ ತೂಕವಿಲ್ಲ. ಆದರೂ ಸಹ ಗುರುವಿಗೆ ತಾನು ಕೊಡಬೇಕೆಂಬ ಮನಸ್ಸು ಮತ್ತು ಭಕ್ತಿ ಈ ಭಾವನೆಗಳು ಆ ಹೂವಿನಲ್ಲಿವೆ. ಆದರ ಬೆಲೆಯನ್ನು ಅಳೆಯಲು ಸಾಧ್ಯವಿಲ್ಲ.

ಕೃಷ್ಣ ತುಲಾಭಾರದ ಕಥೆಯನ್ನು ನೋಡಿ, ರುಕ್ಮಿಣಿ ಸತ್ಯಭಾಮೆಯರು ಇಬ್ಬರೂ ಶ್ರೀ ಕೃಷ್ಣನನ್ನು ತಕ್ಕಡಿಯಲ್ಲಿ ತೂಗುತ್ತಾರೆ. ಸತ್ಯಭಾಮೆಯು ಸ್ವರ್ಣ, ವಜ್ರ, ವೈಡೂರ್ಯಗಳನ್ನು ಸಾಧ್ಯವಾದಷ್ಟು ಹಾಕಿ ತೂಗುತ್ತಾಳೆ. ಎಷ್ಟು ಆಭರಣಗಳನ್ನು ಹಾಕಿದರೂ ಕೃಷ್ಣನ ತೂಕಕ್ಕೆ ಸರಿಹೋಗುವದಿಲ್ಲ. ಅವಳು ಕೃಷ್ಣನ ತೂಕವನ್ನು ಆಭರಣದಿಂದ ಅಳೆಯಲು ಪ್ರಯತ್ನಿಸಿದಳು. ಅದು ಸಾಧ್ಯವಾಗಲಿಲ್ಲ. ಆದರೆ ರುಕ್ಮಿಣಿಯು ಒಂದು ತುಲಸೀ ದಳದಿಂದ ಕೃಷ್ಣನನ್ನು ತೂಗಿದಳು. ಭಕ್ತಿ ಭಾವವಿಲ್ಲದ ಸತ್ಯಭಾಮೆಯು ಮಣಗಟ್ಟಲೆ ಆಭರಣಗಳಿಂದಾಗದ ಕೆಲಸ, ರುಕ್ಮಿಣಿಯ ಭಕ್ತಿ ಭರಿತವಾದ ಒಂದು ತುಲಸೀ ದಳದಿಂದ ಆಯಿತು. ತೂಕವಿಲ್ಲದ ತುಳಸೀ ದಳಕ್ಕೆ ಭಕ್ತಿ ತುಂಬಿದರೆ ಬ್ರಹ್ಮಾಂಡದಷ್ಟು ಭಾರವಾಗುತ್ತದೆ. ಭಕ್ತಿ ಭಾವವಿಲ್ಲದ ಕರ್ಮ ನಿಜವಾದ ಕರ್ಮವಲ್ಲ. ಕರ್ಮಯೋಗಿಯ ಕರ್ಮ ನಿಜವಾದ ಕರ್ಮ. ಫಲತ್ಯಾಗಿಯು ಕರ್ಮದ ಅನಂತ ಫಲವನ್ನು ಪಡೆಯುತ್ತಾನೆ.

ಪೆಟ್ರೋಲ್ ಕೋಟಾ ಹೆಚ್ಚಿತು.

ಪೆಟ್ರೋಲ್ ಸರಬರಾಜು ಸ್ಥಿತಿ ಉತ್ತಮಗೊಂಡಿರುವುದರಿಂದ ಜುಲೈ–ಸೆಪ್ಟೆಂಬರ್ ಅವಧಿಗೆ ಭಾರತದ ಎಲ್ಲಾ ಪ್ರಾಂತಗಳಲ್ಲೂ ಸಂಸ್ಥಾನಗಳಲ್ಲೂ ಖಾಸಗಿ ಜನರ ಕಾರುಗಳು ಮತ್ತು ಮೋಟಾರು ಸೈಕಲ್‌ಗಳಿಗೆ ಕೊಡುವ ಪೆಟ್ರೋಲಿನ ಬೇಸಿಕ್ ಕೋಟಾವನ್ನು ಈಗಿರುವುದಕ್ಕಿಂತ ಶೇ|| ೫೦ರಷ್ಟು ಹೆಚ್ಚಿಸಲಾಗಿದೆ.

ವಿಚಾರ ತರಂಗ.

ಮಲನ್ ರಾಜ್ಯ!

[illegible] ಜನ ಲ್ [illegible] ಆಡಳಿತ [illegible] ಇದು ಸ್ಪಷ್ಟ ಉದಾಹರಣೆ. ಅಲ್ಲಿರುವ ಭಾರತೀಯರಿಗೆ ಕಿರುಕುಳ ಕೊಡುತ್ತಿದ್ದಾರೆ. ಅವರು ಅಧಿಕಾರ ಪಡೆದು ಒಂದು ವರ್ಷವಾಯಿತು. ಈ ಒಂದು ವರ್ಷದಲ್ಲಿ ಇವರು ಮಾನವ ಹಕ್ಕು ಬಾಧ್ಯತೆಗಳನ್ನು ಉಲ್ಲಂಘಿಸಿದ್ದಾರೆ. ಮೂಲನಿವಾಸಿಗಳ ಸಂಸ್ಥೆಗಳನ್ನು ರದ್ದು ಮಾಡಿದ್ದಾರೆ. ಒಳ ಪ್ರಾಂತಕ್ಕೆ ಹೋಗಲು ಕೂಡ ಅನುಮತಿ ಪಡೆಯಬೇಕೆಂದು ಆಜ್ಞಾಪಿಸಿದ್ದಾರೆ. ರಕ್ಷಣಾ ಸೇನೆಯಲ್ಲಿದ್ದ ಯೂರೋಪಿಯನ್ನರಲ್ಲದವರನ್ನೆಲ್ಲ ತೆಗೆದು ಹಾಕಿದ್ದಾರೆ. ಮೂಲನಿವಾಸಿಗಳ ಮಕ್ಕಳಿಗೆ ಶಾಲೆಗಳಲ್ಲಿ ಅನ್ನ ಕೊಡುವ ಸವಲತ್ತುಗಳನ್ನು ತೆಗೆದುಹಾಕಿದ್ದಾರೆ. ಮಿಶ್ರ ವಿವಾಹಗಳಿಗೆ ತಡೆ ಹಾಕಿದ್ದಾರೆ. ದಕ್ಷಿಣ ಆಫ್ರಿಕಾದಲ್ಲಿರುವ ಹಿಂದಿಯ ಕಾಂಗ್ರೆಸ್ ಮತ್ತು ಅದರ ಶಾಖೆಗಳನ್ನು ನಿಯಮ ಬಾಹಿರವೆಂದು ಪರಿಗಣಿಸಿದ್ದಾರೆ. ಹಿಂದೀ ಮುಖಂಡರನ್ನು ವಿವಿಧ ರೀತಿಯ ಅವಮಾನಕ್ಕೊಳಪಡಿಸಿದ್ದಾರೆ. ಸಂಯುಕ್ತ ರಾಷ್ಟ್ರ ಸಂಘದಲ್ಲಿ ಈ ದೂರನ್ನು ಮುಂದಿಟ್ಟ ಭಾರತವನ್ನು ನಾನಾ ರೀತಿ ಟೀಕಿಸಿದ್ದಾರೆ. ಹಿಂದೀಯ ವಿದ್ಯಾರ್ಥಿಗಳಿಗೆ ಯಾವ ಸಹಾಯವನ್ನು ಆ ಸರಕಾರ ಕೊಡುತ್ತಿಲ್ಲ. ಹಿಂದೀಯರಿಗೆ ಹಿಂದೆ ಕೊಡುತ್ತಿದ್ದ ಸ್ಟೈಪೆಂಡನ್ನು ನಿಲ್ಲಿಸಿದೆ. ಎಲ್ಲೆಲ್ಲಿಯೂ ಹಿಂದೀಯರ ಬಗ್ಗೆ ವಿರೋಧ ಭಾವನೆಯ ಪ್ರಚಾರ ನಡೆಸುತ್ತಿದೆ. ಹಿಂದೀಯರ ಅಂಗಡಿಗಳಿಂದ ಸಾಮಾನು ಪಡೆಯುವವರನ್ನು ಶಿಕ್ಷಿಸಲಾಗುತ್ತಿದೆ. ಪ್ರಜಾಪ್ರಭುತ್ವ ತತ್ವದಂತೆ ರಾಜ್ಯಭಾರ ನಡೆಸುತ್ತಿರುವವನೆನ್ನುವ ಮಲನ್ ಸರಕಾರವು ಈ ರೀತಿ ವರ್ಣನಾತೀತ ತೊಂದರೆಯನ್ನು ದಕ್ಷಿಣ ಆಫ್ರಿಕಾದ ಭಾರತೀಯರಿಗೆ ಕೊಡುತ್ತಿದೆ.

ಗೂಂಡಾ ಗಿರಿ!

ಕಮ್ಯೂನಿಸ್ಟರ ಗೂಂಡಾ ಗಿರಿಯು ಹೈದರಾಬಾದ್ ಮತ್ತು ಕಲ್ಕತ್ತಗಳಲ್ಲಿ ನಡೆಯುತ್ತಿದೆ. ಹೈದರಾಬಾದಿನ ಕಮ್ಯೂನಿಸ್ಟರು ಹತ್ಯಾಕಾಂಡಕ್ಕೆ ಪ್ರಾರಂಭಿಸಿದ್ದಾರೆ. ಅನೇಕ ಜನ ಕಾಂಗ್ರೆಸ್ ಮುಖಂಡರನ್ನು ಅಲ್ಲಿ ಕೊಲೆ ಮಾಡಿದ್ದಾರೆ. ಹೈದರಾಬಾದಿನ ಮಿಲಿಟರಿ ಸರಕಾರವು ಮ. ಜ. ಚೌಧರಿಯವರ ನೇತೃತ್ವದಲ್ಲಿ ಕಮ್ಯೂನಿಸ್ಟ್ ಹಾವಳಿಯನ್ನು ತಪ್ಪಿಸಲು ಟೊಂಕ ಕಟ್ಟಿದೆ. ಸ್ವಲ್ಪ ಅವಧಿಯಲ್ಲಿಯೇ ಕಮ್ಯೂನಿಸ್ಟರ ಹುಟ್ಟಡಗಿಸುವ ಆಶಾವಾದವನ್ನು ಅವರು ಪ್ರಕಟಿಸಿದ್ದಾರೆ.

ಕಲ್ಕತ್ತಾದಲ್ಲಿ ಕಮ್ಯೂನಿಸ್ಟರು ಇಬ್ಬರು ಕಾಂಗ್ರೆಸ್ ಮುಂದಾಳುಗಳ ಮನೆನುಗ್ಗಿ ವಿಪರೀತ ಹಾನಿಮಾಡಿದ್ದಾರೆ. ಕಾಂಗ್ರೆಸ್ ಮುಂದಾಳುಗಳು ಮನೆಯಲ್ಲಿಲ್ಲದಾಗ ಭರ್ಜಿ, ಬಾಂಬು ಸಜ್ಜಿತರಾಗಿ ಸುಮಾರು ೩೦೦ ಜನ ಕಮ್ಯೂನಿಸ್ಟರು (ಇವರಲ್ಲಿ ೩೦ ಮಂದಿ ಮಹಿಳೆಯರು) ಈ ಧಾಳಿ ನಡೆಸಿದರು. ಕಾಂಗ್ರೆಸ್ ಮುಖಂಡರ ಮನೆ ನಗ್ನಿ ಸಿಕ್ಕಿದನ್ನು ಲೂಟಿ ಮಾಡಿ, ಹೆಂಗಸು ಮಕ್ಕಳನ್ನು ಹೊಡೆದು ತೊಂದರೆ ಮಾಡಿದರು. ಪೋಲೀಸರು ಬಂದು ಪರಿಸ್ಥಿತಿ ಹತೋಟಿಗೆ ಬಂತು. ೫೦ ಜನರ ದಸ್ತಗಿರಿಯಾಗಿದೆ. ಇದರ ನಂತರವೇ ದಕ್ಷಿಣ ಕಲ್ಕತ್ತದ ಹೊರ ಪ್ರದೇಶದ ರಬ್ಬರ್ ಕಾರ್ಖಾನೆಯೊಂದಲ್ಲಿ ಕೆಲಸಗಾರರು ಕಾರ್ಖಾನೆಯನ್ನು ವಶಪಡಿಸಿಕೊಂಡ, ಲೂಟಿ ನಡೆಸಿ, ಸೆಕ್ಯೂರಿಟಿ ಆಫೀಸರ ಕೊಲೆ ಮಾಡಿದರು. ಇವರು [illegible] ಸರಕಾರವು ಯತ್ನಿಸುತ್ತಿದೆ.

ಮಲ್ಪೆ ಬಂದರ.

ದಕ್ಷಿಣ ಕರಾವಳಿಯಲ್ಲಿ ಕೊಚ್ಚಿನ್ ಮತ್ತು ಬೊಂಬಾಯಿಯ ಮಧ್ಯೆ ಯೋಗ್ಯ ಬಂದರು ಸ್ಥಳವನ್ನು ನಿಶ್ಚಯಿಸಲು ನೇಮಕವಾದ ಸಮಿತಿಯು ಮಂಗಳೂರಿನಿಂದ ೩೫ ಮೈಲು ಉತ್ತರಕ್ಕಿರುವ ಮಲ್ಪೆಯನ್ನು ಆರಿಸಿ ಕೇಂದ್ರ ಸರಕಾರಕ್ಕೆ ಶಿಫಾರಸ್ಸು ಮಾಡಿದ ಪದಾಗಿ ತಿಳಿಯುತ್ತದೆ. ಇದನ್ನು ಕೇಂದ್ರ ಸರಕಾರವು [illegible] ಮಂಗಳೂರನ್ನು ಆರಿಸ ಬಹುದಾಗಿ ಮೊದಲು ವಾರ್ತೆ ಇತ್ತು. ಆದರೆ ಮಂಗಳೂರಿಗೆ ಗುರುಪುರ ಮತ್ತು ನೇತ್ರಾವತಿ ಎರಡು ನದಿಗಳು ಕೂಡಿ ಪ್ರತಿ ವರ್ಷ ಸಮುದ್ರ ತಳವು ಪ್ರವಾಹದಿಂದ ಮೇಲೆ ಬರುವ ಕಾರಣ ಆದನ್ನು 'ಡ್ರೆಜ್' ಮಾಡಿ ತೆಗೆಯುವ ಗತ್ತೆ ವೆಚ್ಚ ತಗುಲುವದೆಂದು ಮಲ್ಪೆಯನ್ನು ಆರಿಸಿದ್ದಾಗಿದೆಯಂತೆ. ಮಲ್ಪೆಗೆ ಮಂಗಳೂರಿನಂತೆ ರೈಲ್ವೆ ಸೌಕರ್ಯವಿಲ್ಲದಿದ್ದರೂ, ಆಯಕಟ್ಟಿನ ಮತ್ತು ವ್ಯಾಪಾರ ಸೌಲಭ್ಯ ದೃಷ್ಟಿಯಿಂದ ಯೋಗ್ಯವಿದೆ. ಸುಂದರ ನಿಸರ್ಗತತ್ವವಾದ ಈ ಬಂದರಿನ ಹತ್ತಿರ ಸೆಂಟ್ ಮೇರೀಸ್ ದ್ವೀಪಗಳಿವೆ. ಹಿರಿಯ ಬಂದರಿಗೆ ಅನುಕೂಲವಾಗುವಂತೆ ಬೇಕಾದಷ್ಟು ಖಾಲಿ ಜಾಗವೂ ಇದೆ. ಕೊಚ್ಚಿನ್ ಮತ್ತು ಬೊಂಬಾಯಿಗಳಿಗೆ ಮಧ್ಯದಲ್ಲಿ ಈ ಬಂದರವಿದೆ.

ಹಿಂದ್ – ಪಾಕ್.

ಹಿಂದೂಸ್ಥಾನ ಮತ್ತು ಪಾಕಿಸ್ಥಾನಗಳೊಳಗೆ ಅತ್ತಿಂದಿತ್ತ, ಇತ್ತಿಂದತ್ತ ವಲಸೆ ಹೋದವರ ಆಸ್ತಿ ಪಾಸ್ತಿಗಳ ವಿಚಾರದಲ್ಲಿ ಮಾತು ಕತೆ ನಡೆಯಿತು. ಹಿಂದೂ ಮತ್ತು ಸಿಖ್ ನಿರಾಶ್ರಿತರು ಪಶ್ಚಿಮ ಪಾಕಿಸ್ಥಾನದಲ್ಲಿ ಸುಮಾರು ೧೪೦೦ ಕೋಟಿ ರೂಪಾಯಿ ಬೆಲೆ ಬಾಳುವ ತಮ್ಮ ಆಸ್ತಿ ಪಾಸ್ತಿಗಳನ್ನು ಬಿಟ್ಟು ಬಂದಿರುವರೆಂದೂ, ಹಿಂದೂಸ್ಥಾನದಿಂದ ಪಾಕಿಸ್ಥಾನಕ್ಕೆ ವಲಸೆ ಹೋದ ಮುಸ್ಲಿಮರ ಆಸ್ತಿ ಪಾಸ್ತಿಗಳ ಮೊಬಲಗು ಸುಮಾರು ೨೦೦ ಕೋಟಿ ಆಗಬಹುದೆಂದೂ ಅಂದಾಜು ಮಾಡಲಾಗಿದೆ. ಈ ಅಂದಾಜಿನಂತೆ ಜೂನ್ ೨೫–೨೬ರಲ್ಲಿ ಕರಾಚಿಯಲ್ಲಿ ಪಾಕಿಸ್ಥಾನ ಮತ್ತು ಹಿಂದೂಸ್ಥಾನ ಸರಕಾರ ಪ್ರತಿನಿಧಿಗಳೊಳಗೆ ಮಾತು ಕತೆ ನಡೆಯಿತು. ಭಾರತದ ಪ್ರತಿನಿಧಿಗಳು ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರರ ನೇತೃತ್ವದಲ್ಲಿ ಹೋಗಿದ್ದರು. ಈ ಆಸ್ತಿ ಪಾಸ್ತಿಗಳ ಮೌಲ್ಯದ ಅಂತರವನ್ನು ರಾಷ್ಟ್ರಗಳು ತ[illegible] ನಿರ್ಣಯಿಸಿ ಲೆಕ್ಕ ತೀರಿಸಿಕೊಳ್ಳ[illegible] ಕಳೆದ ಜನವರಿಯಲ್ಲಿಯೇ ಪಾಕಿಸ್ಥಾನ ಸರಕಾರವನ್ನು ಹಿಂದೀ ಸರಕಾರವು ಕೇಳಿತ್ತು. ಅದರ ಫಲರೂಪವಾಗಿ ಈ ಮಾತು ಕತೆಯಾಗಿದೆ. ಪಾಕಿಸ್ಥಾನವು ಈ ಒಪ್ಪಂದದಂತೆ ಹಿಂದೂಸ್ಥಾನಕ್ಕೆ ಕೋಟಿಗಟ್ಟಲೆ ರೂಪಾಯಿ ತೆರಬೇಕಾಗಿರುವದರಿಂದ ಮಾತು ಕತೆಗೆ ಹಿಂಜರಿಯುತ್ತಿದೆ. ಮೊನ್ನೆ ನಡೆದ ಮಾತುಕತೆಯ ಫಲದಾಯಕವಾಗದೆ ಭಾರತದ ಪ್ರತಿನಿಧಿಗಳು ಹಿಂದಕ್ಕೆ ಬಂದಿದ್ದಾರೆ.

ಬಣ್ಣ ಬದಲಾಗುತ್ತಿದೆ.

ಕರ್ನಾಟಕ ಏಕೀಕರಣದ ಬಗ್ಗೆ ಇತ್ತಲಾಗಿ ಮೈಸೂರ ಮತ್ತು ಕರ್ನಾಟಕ ಕಾಂಗ್ರೆಸ್ಸಿನವರು ಬಣ್ಣ ಬದಲಾಯಿಸುತ್ತಿರುವಂತೆ 'ನಾಡಿ' ಪತ್ರಿಕೆಯಲ್ಲಿ ಶ್ರೀ ಎ. ವೆಂಕೋಬ ಚಾರ್ ಇವರು ಹೀಗೆ ಬರೆದಿರುವರು:-

'ಏಕೀಕರಣದ ಬಗ್ಗೆ ಮೈಸೂರು ಮತ್ತು ಕರ್ನಾಟಕ ಕಾಂಗ್ರೆಸ್ಸಿನ ನಾಯಕರ ಘೋಷಣೆ ಗೋಸುಂಬಿಯ ಬಣ್ಣದಂತೆ ಕ್ಷಣಕ್ಷಣಕ್ಕೂ ಬದಲಾಗುತ್ತಿದೆ. ಮಹಾರಾಜರಲ್ಲಿ ಮೈಸೂರೇ ಪ್ರತ್ಯೇಕ ಪ್ರಾಂತವಾಗಬೇಕೆಂಬುದು ಮೈಸೂರು ಕಾಂಗ್ರೆಸ್ಸಿನ ಹೊಸ ಕೂಸು. ಹಾಗೆ, ನಾಳೆ ಏಕೀಕೃತ ಕರ್ನಾಟಕದಲ್ಲಿ ಈ ಪ್ರಭೃತಿಗಳಿಗೆಲ್ಲಾ ಮಂತ್ರಿಪದವೆಲ್ಲಿ ಸಿಗಬೇಕು? ಬಿಸಿಲಿದ್ದಾಗಲೇ ಬಟ್ಟೆ ಒಣಗಿಸಿಕೊಳ್ಳಬೇಕು ಅಲ್ಲವೆ? ಕರ್ನಾಟಕ ಕಾಂಗ್ರೆಸ್ಸಿನ ಹೊಸ ರೂಪವೇನೆಂದು ಅಧ್ಯಕ್ಷ ನಿಜಲಿಂಗಪ್ಪನವರೇ ಹೇಳಬೇಕು. ತಮ್ಮ ಅಧ್ಯಕ್ಷ ಪದಕ್ಕೆ ಎಲ್ಲಿ ಧಕ್ಕೆ ಬಂದೀತೋ! ಅಥವಾ ತಮ್ಮ ನಾಯಕತ್ವಕ್ಕೋ, ಏಕೀಕರಣವಾಗಬಹುದಾದ ಅಖಂಡ ಯಾ ಖಂಡ ಕರ್ನಾಟಕದಲ್ಲಿ ಗವರ್ನರ್ ಪದವೋ, ಮಂತ್ರಿ ಪದವೋ ಎಲ್ಲಿ ತಪ್ಪೀತೆಂಬ ಭೀತಿಯಿಂದ ಅಡ್ಡ ಗೋಡೆಯ ಮೇಲೆ ದೀಪ ಇಟ್ಟಂತೆ ಬೆಳಗೆ ಒಂದು ರೀತಿ, ಬೈಗು ಇನ್ನೊಂದು ರೀತಿ ಹೇಳಿಕೆ ಹೊರಡಿಸುವ ಈ ವಾಕ್ಚತುರರು ತಮ್ಮ ಖಚಿತ ಅಭಿಪ್ರಾಯವನ್ನು ಒಮ್ಮೆ ತಿಳಿಸುವುದು ಮೇಲು.'

ಮಂತ್ರಿಗಳ ಮೇಲೆ ಆರೋಪ.

ಮದ್ರಾಸ್ ಮಂತ್ರಿ ಮಂಡಲದಲ್ಲಿರುವ ಆರು ಮಂದಿ ಮಂತ್ರಿಗಳು ಮತ್ತು ಕೆಲವು ಕಾಂಗ್ರೆಸ್ಸಿಗರ ಮೇಲೆ ಕೆಲವು ಕಾಂಗ್ರೆಸ್ ಶಾಸನ ಸಭಾ ಸದಸ್ಯರು ಲಂಚಕೋರತನ, ಅಧಿಕಾರದ ದುರುಪಯೋಗ ಮೊದಲಾದ ಆರೋಪ ಹೊರಿಸಿ ಕಾಂಗ್ರೆಸ್ ಅಧಿನಾಯಕ ಮಂಡಳಿಗೆ ದೂರು ಕೊಟ್ಟರು. ಇದನ್ನು ವಿಚಾರಿಸಲು ಕಾಂಗ್ರೆಸ್ ಕಾರ್ಯದರ್ಶಿಗಳಲ್ಲೊಬ್ಬರಾದ ಶ್ರೀ ಶಂಕರ ರಾವ್ ದೇವ್‌ರವರನ್ನು ಕಳುಹಿಸಲಾಗಿತ್ತು. ಅವರು ಮದ್ರಾಸಿಗೆ ಬಂದು ಅಪಾದಿತ ಮಂತ್ರಿಗಳನ್ನು ಶ್ರೀಗಳಾದ ಟಿ. ಪ್ರಕಾಶಂ, ಜೆ. ಆರ್. ಕಾರಂತ, ಕಾಳೇಶ್ವರ ರಾವ್, ಟಿ. ವಿಶ್ವನಾಥನ್, ಮುಂತಾದವರನ್ನೂ, ಶ್ರೀ ಓಮಂದೂರು ಮತ್ತು ಕೇಳಪ್ಪನ್‌ರವರನ್ನೂ ಕರೆದು ವಿಚಾರಿಸಿ ಹೇಳಿಕೆ ಸಂಗ್ರಹಿಸಿರುವರು. ಇವುಗಳ ಮೇಲೆ ಕಾಂಗ್ರೆಸ್ಸಿಗೆ ಅವರು ತಮ್ಮ ವರದಿ ಒಪ್ಪಿಸಲಿದ್ದಾರೆ. ಆದರೆ ದೇವ್‌ರವರು ನಿಷ್ಪಕ್ಷಪಾತ ದೃಷ್ಟಿಯಿಂದ ವಿಚಾರ ಮಾಡಲಿಲ್ಲವೆಂದು ಈಗಲೇ ಮದ್ರಾಸಿನಲ್ಲಿ ವಿರೋಧ ಪ್ರಾರಂಭವಾಗಿದೆ.

ಕೊಡಗು ಸರಕಾರಿ ಕಾಲೇಜಿನ ಉದ್ಘಾಟನೆ.

ತಾರೀಖು ೩೦-೬-೪೯ನೇ ಗುರುವಾರ ಕೊಡಗು ಸರಕಾರಿ ಕಾಲೇಜನ್ನು ತೆರೆಯಲಾಯಿತು. ಮಡಿಕೇರಿಯ ಬೀದಿಗಳೂ, ಶಾಲಾ ಆವರಣವೂ ತಳಿರುತೋರಣಗಳಿಂದ ಅಲಂಕೃತವಾಗಿದ್ದುವು. ಕಾವೇರಿ ಮಹಲ್ ಹಾಲಿನಲ್ಲಿ ಸಭೆಯು ಏರ್ಪಾಡಾಗಿತ್ತು. ಇಂಡಿಯಾ ಸರಕಾರದ ಗೃಹಶಾಖೆಯ ಸೆಕ್ರೆಟರಿಗಳಾದ ಶ್ರೀ. ಎಚ್. ಆರ್. ವಿ. ಐಯ್ಯಂಗಾರ್‌ರವರು ಈ ಕಾರ್ಯಕ್ರಮವನ್ನು ನೆರವೇರಿಸಿದರು.

ಬೆಳಿಗ್ಗೆ ೧೦ ಗಂಟೆಗೆ ಸರಿಯಾಗಿ ಶ್ರೀ. ಐಯ್ಯಂಗಾರ್‌ರವರು ಚೀಫ್ ಕಮಿಷನರೊಡನೆ ಕಾವೇರಿ ಮಹಲಿಗೆ ಬಂದರು. ನೇಶನಲ್ ಕೆಡೆಟ್ ಕೋರಿನವರು 'ಗಾರ್ಡ್ ಆಫ್ ಆನರ್' ಕೊಟ್ಟರು. ಕೊಡಗು ಜಿಲ್ಲಾ ವಿದ್ಯಾಧಿಕಾರಿಗಳು ಅವರಿಗೆ ಹೂಮಾಲೆ ಹಾಕಿ ಸ್ವಾಗತಿಸಿದರು. 'ವಂದೇ ಮಾತರಂ' ಗೀತೆ ಹಾಡಲ್ಪಟ್ಟಿತು. ಜಿಲ್ಲಾ ವಿದ್ಯಾಧಿಕಾರಿಗಳು ಸರ್ವರನ್ನು ಸ್ವಾಗತಿಸಿ ಕಾಲೇಜಿಗೆ ಶುಭಾಶಯಗಳನ್ನು ಕೋರಿ ಬಂದಿದ್ದ ಸಂದೇಶಗಳಲ್ಲಿ ಕೆಲವನ್ನು ಓದಿದರು. ನಂತರ ಚೀಫ್ ಕಮಿಷನರು ಐಯ್ಯಂಗಾರ್‌ರವರನ್ನು ಸ್ವಾಗತಿಸಿಯೂ, ಕಾಲೇಜಿನ ಅಸ್ತಿತ್ವದ ಬಗ್ಗೆ ನಡೆದ ಹಲವು ಯೋಜನೆಗಳನ್ನು ವಿವರಿಸಿಯೂ ಭಾಷಣ ಮಾಡಿದರು.

ಚೀಫ್ ಕಮಿಷನರ ಭಾಷಣ.

ತಮ್ಮ ಎರಡು ಕಾರ್ಯಗಳನ್ನು ಸಲ್ಲಿಸಿ ಕೊಡಲಿಕ್ಕಾಗಿ ದೆಹಲಿಯಿಂದ ಬಂದಿರುವ ಶ್ರೀ. ಐಯ್ಯಂಗಾರ್‌ರವರನ್ನು ಪ್ರಥಮ ವಂದಿಸುತ್ತೇನೆ. ನನ್ನ ಆಮಂತ್ರಣವನ್ನು ಸ್ವೀಕರಿಸಿ ಅವರು ತಂಬಾ ಶ್ರಮವಹಿಸಿದ್ದರೂ ಅವರು ತೋರ್ಪಡಿಸುವ ಜವಾಬ್ದಾರಿಯ ದೃಷ್ಟಿಯಿಂದ ಎಲ್ಲಿ ಅನಿರೀಕ್ಷಿತ ಕಷ್ಟಗಳೊದಗಿ ಅವರು ಬರದಾಗುವರೋ ಎಂಬ ಭಯ. ಏನಾದ್ರೂ ಕಳೆದ ವರ್ಷವೇ ಕೊಡಗಿಗೆ ಬರುವ ಇಚ್ಛೆಯನ್ನು ಅವರು ಪ್ರಕಟಿಸಿದ್ದರು. ಅವರ ಬೇರೆ ಕಾರ್ಯಭಾರ ಹೆಚ್ಚಿದ ಕಾರಣ ಹಾಗೆ ಮಾಡಲಾಗಲಿಲ್ಲ. ಇಂದು ಒದಗಿ ಬಂದಿರುವುದು ನಮ್ಮ ಭಾಗ್ಯ.

ಅವರು ಗೃಹಶಾಖೆಯ ಸೆಕ್ರೆಟರಿಗಳು. ದಂಗೆ ಗಲಭೆಯ ಈ ಅವಧಿಯಲ್ಲಿ ಅನೇಕ ಸಹಾಯಕ ಕಾರ್ಯಗಳು ಒದಗಿವೆ. ಈ ಪ್ರಾಂತದ ಹಿತವನ್ನು ಗಮನಿಸಿದ್ದರು. ಆದ್ದರಿಂದ ನಮ್ಮ ಕಾಲೇಜನ್ನು ತೆರೆಯುವ, ಮತ್ತು ಕಾಲೇಜು ಕಟ್ಟಡದ ಅಸ್ತಿಭಾರವನ್ನಿಡಲು ಅವರು ಸೇರಿರುವುದು ಸೂಕ್ತವಾಯಿತು. ಇದು ಕೊಡಗಿನ ವಿದ್ಯಾಚರಿತ್ರೆಯಲ್ಲಿ ಸುವರ್ಣಾಕ್ಷರಗಳಿಂದ ಬರೆಯಲ್ಪಡತಕ್ಕ ದಿನವಾಗುತ್ತದೆ. ಹಿಂದೂದೇಶದ ಗವರ್ನರ್ ಜನರಲರು ಹೇಳಿದಂತೆ ಇದು ಕೊಡಗಿನ ಪ್ರಮುಖವಾದ ಸಂಗತಿ. ಕೇಂದ್ರ ಸರಕಾರದ ಸಹಾಯದಿಂದ ಆರಂಭಿಸಲ್ಪಟ್ಟ ಈ ಕಾಲೇಜಿನಂಥದನ್ನು ಪಡೆದೆವು. ಕಾಲೇಜಿನ ಬಗ್ಗೆ ಈವರೆಗೆ ನಡೆದ ಕಾರ್ಯಕಲಾಪಗಳನ್ನು ಸ್ವಲ್ಪ ವಿವರಿಸಿದರೆ ಉಪಯುಕ್ತವಾಗಲಾರದು.

ಕೊಡಗಿಗೊಂದು ಕಾಲೇಜು ಬೇಕೆಂಬ ವಿಚಾರವು ಪ್ರಥಮತಃ ಕೊಡಗು ವಿದ್ಯಾಭಿವೃದ್ಧಿ ನಿಧಿಯ ೧೯೪೧ನೇ ವರ್ಷದ ಮೀಟಿಂಗಿನಲ್ಲಿ ಉದಯವಾಯಿತು. ಆದೇ ವರ್ಷ ಕೊಡಗು ನ್ಯಾಯವಿಧಾಯಕ ಸಭೆಯಲ್ಲಿ ಆದೇ ಅರ್ಥದ ಠರಾವು ಪಾಸಾಯಿತು. ಆದರೆ ಆರ್ಥಿಕ ಅಡಚಣೆ, ಮತ್ತು ಯುದ್ಧ ಪರಿಸ್ಥಿತಿಯ ದೆಸೆಯಿಂದ ಆ ಪ್ರಶ್ನೆಯನ್ನು ಅಲ್ಲಿಗೇ ಬಿಡಲಾಯಿತು. ಪುನಹ ಕೊಡಗು ವಿದ್ಯಾಭಿವೃದ್ಧಿ ನಿಧಿಯವರು ಈ ವಿಚಾರದ ಒತ್ತಾಯಮಾಡಿ ಒಂದನೆ ಕೆಂಡರಿ ಗ್ರೇಡ್ ಕಾಲೇಜನ್ನಾದರೂ ತೆರೆಯಬೇಕೆಂದು ಸೂಚಿಸಿದರು. ೧೯೪೪ರಲ್ಲಿ ಈ ಪ್ರಯತ್ನ ನಡೆದಾಗ ಮದ್ರಾಸು ವಿಶ್ವವಿದ್ಯಾಲಯದವರು ದ್ವಿತೀಯ ಸ್ಥಾಯಿ ಕಾಲೇಜಿನ ಸಂಯೋಜನೆಗೆ ಒಪ್ಪಲಿಲ್ಲ. ೧೯೪೫ರಲ್ಲಿ ಈ ಪ್ರಶ್ನೆ ಪುನಹ ಶಾಸನ ಸಭೆಯಲ್ಲಿ ಬಂದ ಕಾಲೇಜಿಗಾಗಿ ಐದು ಲಕ್ಷ ಹಣ ವಿನಿಯೋಗ ಠರಾವು ಪಾಸಾಯಿತು. ಆ ಠರಾವಿಗೆ ಉತ್ತರ ಕೊಡುವಾಗ ಫೈನಾನ್ಸ್ ಮೆಂಬರರು ಯುದ್ಧೋತ್ತರ ಯೋಜನೆಯಲ್ಲಿ ಕಾಲೇಜಿಗೆ ಕಟ್ಟಡಕ್ಕಾಗಿ ೪ ಲಕ್ಷ ಮತ್ತು ವಾರ್ಷಿಕ ಖರ್ಚಿಗೆ ರೂ. ೪೦೦೦೦ ಇಡಲಾಗುವುದೆಂದು ಹೇಳಿದರು. ಇದು ಕೇಂದ್ರದಿಂದ ಒಪ್ಪಲ್ಪಟ್ಟಿತು. ಯುದ್ಧೋತ್ತರ ಪರಿಸ್ಥಿತಿಯಲ್ಲಿ ಈ ಹಣವನ್ನು ರೂ. ಏಳುಲಕ್ಷಕ್ಕೂ ವಾರ್ಷಿಕ ಖರ್ಚನ್ನು ರೂ. ೫೦,೦೦೦ಕ್ಕೂ ಏರಿಸಲಾಯಿತು. ಆದರೂ ಇಷ್ಟು ದೊಡ್ಡ ಹಣವನ್ನು ಖರ್ಚು ಮಾಡಲು ಕೇಂದ್ರ ಸರಕಾರವು ಹಿಂದೆಗೆದ ಕಾರಣ ಭಾರತದ ಆಭಿಪ್ರಾಯವನ್ನು ಸರಕಾರವು ಅಲ್ಲಿಗೇ ಬಿಟ್ಟಿತು. ಈ ಸಂದರ್ಭದಲ್ಲಿ ಖಾಸಗಿ ಕೆಥೊಲಿಕ್ ಮಿಶನ್ ಸಂಸ್ಥೆಯೊಂದು ಕೊಡಗಿನಲ್ಲಿ ತಾವು ಕಾಲೇಜು ಸ್ಥಾಪಿಸುವೆನೆಂದು ಮುಂದೆ ಬಂತು. ಸ್ಥಳೀಯ ನಾಗರಿಕರು ಸ್ವಲ್ಪ ಹಣ ಸಹಾಯ ಮಾಡಲೊಪ್ಪಿ ಅದು ಆಸ್ಪದವಾಯಿತು. ಆಸ್ಪದವನ್ನು ಅಂಗೀಕರಿಸಿತು. ಆದರೆ ಕೆಥೊಲಿಕರಿಂದ ಅವರು ಕಾಲೇಜು ಸ್ಥಾಪನೆಗೆ ಮುಂದೆಬಾರದೆ ತಮ್ಮ ನಿರ್ಧಾರವನ್ನು ಬದಲು ಮಾಡಿದರು. ಆದ್ದರಿಂದ ಸ್ಥಳೀಯ ಸರಕಾರವೇ ಈ ಜವಾಬ್ದಾರಿಯನ್ನು ಹೊರಬೇಕಾಯಿತು. ಕಾಲೇಜಿನ ಆವಶ್ಯಕತೆಯು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ಆದ್ದರಿಂದ ನಾನು ದೆಹಲಿಗೆ ಹೋಗಿದ್ದಾಗ ಆ ವಿಚಾರವನ್ನು ಸರ್ದಾರ್ ಪಟೇಲ್, ಡಾ. ತಾರಾಚಂದ್ ಮತ್ತು ಐಯ್ಯಂಗಾರರೊಡನೆ ಪ್ರಸ್ತಾಪಿಸಿದೆನು. ಅವರ ಆತಯದಂತೆ ಕೊಡಗಿನ ಕಾಲೇಜಿನ ಒಂದು ಯೋಜನೆಯು ಸಿದ್ಧವಾಯಿತು. ಯೋಜನೆಯನ್ನು ೧೯೪೮ನೇ ನವಂಬರಿನಲ್ಲಿ ಕಳಿಸಲಾಯಿತು. ಈ ಯೋಜನೆಯು ಮೂರು ತಿಂಗಳಲ್ಲಿ ಅಂಗೀಕಾರವಾಗಿ ಬಂತು. ನಂತರ ಇವರ ಸಂಯೋಜನೆ ಬಗ್ಗೆ ಮದ್ರಾಸು ವಿಶ್ವವಿದ್ಯಾಲಯಕ್ಕೆ ಬರೆಯಲಾಯಿತು. ವಿಶ್ವವಿದ್ಯಾಲಯ ಕಮಿಟಿಯವರು ಕೊಡಗನ್ನು ಸಂದರ್ಶಿಸಿ ಕಾಲೇಜಿಗಾಗಿ ಮಾಡಿದ ಏರ್ಪಾಡುಗಳನ್ನು ಒಪ್ಪಿ ಶಿಫಾರಸ್ಸು ಮಾಡಿದರು. ವಿಶ್ವವಿದ್ಯಾಲಯದ ಒಪ್ಪಿಗೆ ದೊರೆಯಿತು. ಈ ವರ್ಷ ಜೂನಿಯರ್ ಇಂಟರ್ ತರಗತಿ ತೆರೆಯಲಾಗುವುದು (೧) ಇಂಗ್ಲಿಷ್, (೨) ಹಿಂದೀ ಮತ್ತು ಕನ್ನಡ, (೩) ಲೆಕ್ಕ, ಫಿಜಿಕ್ಸ್, ಕೆಮಿಸ್ಟ್ರಿ ಅಥವಾ ಪ್ರಕೃತಿ ಶಾಸ್ತ್ರ, ಫಿಜಿಕ್ಸ್, ಕೆಮಿಸ್ಟ್ರಿ ಅಥವಾ ಚರಿತ್ರೆ ಮತ್ತು ಲಾಜಿಕ್ ಕಲಿಸುವ ಏರ್ಪಾಡು ಮಾಡಲಾಗಿದೆ. ಈ ತರಗತಿಯಲ್ಲಿ ೧೪೪ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲು ಅವಕಾಶವಿದೆ. ಆದರೆ ಈಗಾಗಲೇ ಇದಕ್ಕಿಂಥಾ ಹೆಚ್ಚಿಗೆ ಅರ್ಜಿಗಳು ಬಂದಿವೆ. ವಿಶ್ವವಿದ್ಯಾಲಯ ಕಡೆಯಿಂದ ಬಂದಿರುವ ಪ್ರೊಫೆಸರರು ಹೆಚ್ಚಿನ ಮಕ್ಕಳನ್ನು ಸೇರಿಸಿಕೊಳ್ಳಲನುವಾಗುವಂತೆ ಮಧ್ಯಾಹ್ನ ಸಿಫ್ಟಿಗಾಗಿ ವಿಶ್ವವಿದ್ಯಾಲಯದವರಿಗೆ ಶಿಫಾರಸು ಮಾಡುವರೆಂದು ಆಶಿಸುತ್ತೇನೆ. ಕಾಲೇಜಿನ ತರಗತಿಯನ್ನು ಹೈಸ್ಕೂಲು ಕಟ್ಟಡದಲ್ಲಿ ತೆರೆಯಲಾಗುವುದು. ಕಾಲೇಜು ಕಟ್ಟಡ ಯೋಜನೆಯನ್ನು ವಿಶ್ವವಿದ್ಯಾಲಯ ಕಮಿಟಿಯವರು ಒಪ್ಪಿದ್ದಾರೆ. ಪೊಲೀಸ್ ಮೈದಾನದ ಹತ್ತಿರ ೩೦ ಎಕ್ರೆ ಜಾಗವನ್ನು ಕಾಲೇಜಿಗಾಗಿ ಪಡೆಯಲಾಗಿದೆ. ಮತ್ತು ಇನ್ನು ೨೦೦ ಎಕ್ರೆ ಸರಕಾರಿ ಸ್ಥಳವಿರುವುದು. ಈ ಕಾಲೇಜು ಕಟ್ಟಡಗಳಲ್ಲದೆ, ಸಿಬ್ಬಂದಿ ವಸತಿ, ಆಟದ ಮೈದಾನ, ವಿದ್ಯಾರ್ಥಿ ನಿಲಯ ಮೊದಲಾದವುಗಳನ್ನು ಏರ್ಪಡಿಸಲಾಗುವುದು. ವೆಳಿಗಾಲ ಕಳೆದೊಡನೆಯೇ ಕಟ್ಟಡದ ಕೆಲಸ ಪ್ರಾರಂಭಿಸಲಾಗುವುದು. ಈ ವರ್ಷ ಮೂರು ಲಕ್ಷ ಐವತ್ತು ಸಾವಿರ ರೂಪಾಯಿಗಳನ್ನು ಕಟ್ಟಡಕ್ಕಾಗಿ ವಿನಿಯೋಗಿಸಲು ನಿಶ್ಚಯವಾಗಿದೆ. ವಾರ್ಷಿಕ ಖರ್ಚು ೫೦,೦೦೦ ಆಗುವುದಾದರೂ, ಫೀಜಿನಿಂದ ೨೪,೦೦೦ ಬರುವುದೆಂದು ಅಂದಾಜು ಮಾಡಲಾಗಿದೆ. ಕಟ್ಟಡ ಖರ್ಚಿನ ಬಹುಭಾಗವನ್ನು ಕೇಂದ್ರ ಸರಕಾರದಿಂದ ಉದಾರವಾಗಿ ಯುದ್ಧೋತ್ತರ ಯೋಜನೆಗೆ ದೊರೆತಿರುವ ೩೫ ಲಕ್ಷ ರೂಪಾಯಿಗಳಿಂದ ನಿರ್ವಹಿಸಲಾಗುವುದು.

ಕೊಡಗಿನ ವಿದ್ಯಾರ್ಥಿಗಳಿಗೆ ಹೊರಗಿನ ಕಾಲೇಜುಗಳಲ್ಲಿ ಸ್ಥಳ ದೊರೆಯುವುದು ಕಷ್ಟವಾಗುತ್ತಿತ್ತು. ಹೊರಗೆ ಹೋಗುವ ಪ್ರತಿ ವಿದ್ಯಾರ್ಥಿಗೆ ವರ್ಷಕ್ಕೆ ಸರಾಸರಿ ರೂ ೭೦೦/- ಖರ್ಚಾಗುತ್ತಿತ್ತು. ಕೊಡಗಿನಿಂದ ವರ್ಷಕ್ಕೆ ಸುಮಾರು ೧೫೦ ವಿದ್ಯಾರ್ಥಿಗಳು ಹೊರಗೆ ಹೋಗುವುದರಿಂದ ಕೊಡಗಿನಿಂದ ಸುಮಾರು ರೂ. ೧,೦೫,೦೦೦ ಹೊರಗೆ ಹೋಗುತ್ತಿತ್ತು. ಇದಲ್ಲದೆ ಇತರ ಔದ್ಯೋಗಿಕ ತರಬೇತಿಗೆ ಬೇರೆ ಖರ್ಚಾಗುತ್ತಿತ್ತು. ಈಗಲೂ ಕೂಡ ಕೊಡಗಿನ ಕೆಲವು ವಿದ್ಯಾರ್ಥಿಗಳು ಹೊರಗೆ ಹೋದರೂ ಕೊಡಗಿನಲ್ಲಿ ವರ್ಷಕ್ಕೆ ೧ ಲಕ್ಷದಂತೆ ಹಣ ಈ ಕಾಲೇಜಿನಿಂದ ಉಳಿಯುವಂತಾಯಿತೆಂದು ಹೇಳಬಹುದು. ೧೯೪೧ರಿಂದ ಕಾಲೇಜಿಗಾಗಿ ನಡೆಯುತ್ತಿದ್ದ ಪ್ರಯತ್ನವು ಸಾರ್ಥಕ್ಯಗೊಂಡಿತು.

ಸಿಬ್ಬಂದಿಗಳನ್ನು ಆರಿಸುವದರಲ್ಲಿಯೂ, ಕಾಲೇಜಿಗೆ ಬೇಕಾದ ಸಾಹಿತ್ಯವನ್ನು ಒದಗಿಸುವದರಲ್ಲಿಯೂ ಹೆಚ್ಚು ಶ್ರದ್ಧೆ ವಹಿಸಲಾಗಿದೆ. ತಾ ೧೩-೬-೪೯ರಲ್ಲಿ ಹಿಂದೂದೇಶದ ಮುಖ್ಯ ಸೇನಾನಿಯೂ ದ ಜನರಲ್ ಕಾರಿಯಪ್ಪನವರು ನನಗೆ ಬರೆದ ಪತ್ರದಲ್ಲಿ ಹೀಗೆ ಹೇಳಿರುವರು. 'ಕೊಡಗಿನ ಕಾಲೇಜಿನ ಮುಂದಿನ ಮುಂಬಾಳನ್ನು ತಯಾರಿಸುವದೆಂದು ನನಗೆ ನಂಬಿಕೆ ಇದೆ. ಯಾವ ದೃಷ್ಟಿಯಿಂದಲೂ ಕಾಲೇಜಿನ ಅಂತಸ್ತು ಕೆಳಗಿಳಿಯದಂತೆ ಉತ್ತಮ ಸಿಬ್ಬಂದಿ, ಒಳ್ಳೇ ಸಾಹಿತ್ಯಗಳು, ಯೋಗ್ಯ ಆಟದ ಮೈದಾನಗಳನ್ನು ಏರ್ಪಡಿಸಬೇಕು. ಸರಕಾರವು ಖರ್ಚಿಗಾಗಿ ಹಿಂಜರಿಯಬಾರದು. ಕೊಡಗಿನ ಕಾಲೇಜು ಇತರ ಕಾಲೇಜುಗಳಿಗೆ ಆದರ್ಶವಾಗಿರಬೇಕು' ಸ್ಥಳೀಯ ಸರಕಾರವು ಈ ವಿಚಾರವನ್ನು ಗಮನದಲ್ಲಿಟ್ಟು ಕೆಲಸ ಮಾಡಿದೆ. ಈ ಕಾಲೇಜನ್ನು ಮಾದರಿ ಕಾಲೇಜಾಗಿ ಮಾಡುವದೇ ಸ್ಥಳೀಯ ಸರಕಾರದ ಮತ್ತು ಸಾರ್ವಜನಿಕರ ಧ್ಯೇಯವಾಗಿರಬೇಕು. ಕೊಡಗಿನ ಜನರು ವಿದ್ಯೆಗಾಗಿ ತ್ಯಾಗ ಮಾಡುತ್ತಾರೆ. ಅನೇಕ ಕಡೆ ಖಾಸಗಿಯಾಗಿ ಶಾಲೆಗಳನ್ನು ಕಟ್ಟಿಕೊಂಡು ನಂತರ ಅವು ಜಿಲ್ಲಾ ಬೋರ್ಡಿಗೋ, ಸರಕಾರಕ್ಕೋ ತಗದುಕೊಳ್ಳಲ್ಪಡುತ್ತವೆ. ಖಾಸಗಿಯಾಗಿ ಒಂದು ಕಾಲೇಜನ್ನು ಸ್ಥಾಪಿಸುವ ಪ್ರಯತ್ನವನ್ನೂ ಕೊಡಗಿನ ಜನರು ಒಮ್ಮೆ ಮಾಡಿದ್ದರು. ವಿದ್ಯೆಗಾಗಿ ತನ್ನ ಶಕ್ತಿ ಮೀರಿ ಖರ್ಚು ಮಾಡಿ ದಾನಿಯೆಂಬ ಕೀರ್ತಿ ಇಲ್ಲವೇ? ಮುಂಬಯಿ ಸೇನೆ ನಿಧಿಯವರ ಆಶಯ. ಅತಿ ಶೀಘ್ರದಲ್ಲಿ ಸರಕಾರದ ಸಹಾಯದಿಂದ ಕೊಡಗಿನ ಈ ಕಾಲೇಜನ್ನು ಇತರ ಕಾಲೇಜುಗಳಿಗೆ ಮಾದರಿಯಾಗಿ ಮಾಡುವದೇ ನನ್ನ ಪ್ರಯತ್ನ.

ಈಗಾಗಲೇ ಹಲವು ಕಲವು ಸ್ಕಾಲರ್‌ಷಿಪ್ ನಿಧಿಗಳಿಗಾಗಿ ಬಂದಿರುವ ಧನಸಹಾಯವು ಎಂತೆಂದರೆ: ಶ್ರೀ ಗುಂಡುಕುಟ್ಟಿ ಮಂಜುನಾಥಯ್ಯನವರು ರೂ. ೫೦೦೦, ಪಶ್ಚಿಮ ಕೊಡಗಿನ ವಿಲ್ ಪಾಲು ಕರು ರೂ. ೧೦,೦೦೦ ಶ್ರೀ. ಸಿ. ಎಂ. ಪೂಣಚ್ಚನವರು ಮೊದಲಾದವರು ರೂ. ೫೦೦೦ ಕೊಡಗಿನ ಸಹಕಾರಿಗಳು ರೂ. ೫೦೦೦. ಹೀಗೆ ೨೫,೦೦೦ ರೂಪಾಯಿಗಳ ಒಳಗೆ ಇದಲ್ಲದೆ ರೂ. ೧೫,೦೦೦ ಈಗಲೇ ಬರಲಿದೆ. ಇವನ್ನು ಹೇಗೆ ವಿನಿಯೋಗಿಸಬೇಕೆಂಬ ಬಗ್ಗೆ ಒಂದು ಸಮಿತಿಯನ್ನು ನೇಮಿಸಲಿದ್ದೇನೆ.

ಕೊಡಗಿನಲ್ಲಿ ಔದ್ಯೋಗಿಕ ಪ್ರಗತಿ ಏನೇನೂ ಆಗಿಲ್ಲ. ಸರಕಾರವು ತನ್ನ ದೃಷ್ಟಿಯನ್ನು ಅಂಥ ಕಡೆಗೆ ಹರಿಸಬೇಕಾಗಿದೆ. ಆ ಬಗ್ಗೆ ಕೊಡಗಿನ ಉದ್ಯಮಗಳಿಗೆ ವಿದ್ಯಾಸಂಸ್ಥೆಯ ಸಹಯೋಗ ಬೇಕು. ಮುಂದಿನ ಜೂನ್ ಒಳಗಾಗಿ ಇದನ್ನು ಪಡೆಯಲಿಚ್ಛಿಸಿದ್ದೇವೆ. ಶ್ರೀ ಐಯ್ಯಂಗಾರರು ಇದಕ್ಕೆ ಸಹಾಯ ಮಾಡುವರೆಂದು ನಂಬಿದ್ದೇನೆ ಮತ್ತು ಅವರೊಂದಿಗೆ ಆಶಿಸುತ್ತೇನೆ.

ಈ ಕಾಲೇಜಿನ ಸ್ಥಾಪನೆಗೆ ಸಹಾಯ ದೊರಕಿಸಿದವರೆಲ್ಲರಿಗೆ ನನ್ನ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಸರ್ದಾರ್ ಪಟೇಲರಿಗೂ, ಐಯ್ಯಂಗಾರರಿಗೂ, ಡಾ. ತಾರಾಚಂದರಿಗೂ ನನ್ನ ವಂದನೆಗಳು. ಮದ್ರಾಸು ಸರಕಾರಕ್ಕೂ, ವೈಸ್ ಛಾನ್ಸಲರ್ ಸರ್ ಲಕ್ಷ್ಮಣಸ್ವಾಮಿ ಮೊದಲಿಯಾರ್‌ರವರಿಗೂ, ಗೋವಿಂದಸ್ವಾಮಿ ನಾಯಡು ಮತ್ತು ಬೆಸ್ಟ್‌ಯವರಿಗೂ ನನ್ನ ವಂದನೆಗಳು. ಅಲ್ಲದೆ ಇತರ ಸಾರ್ವಜನಿಕರಿಗೂ, ಅಧಿಕಾರಿಗಳಿಗೂ ವಂದನೆಗಳು. ಈ ಸಂದರ್ಭದಲ್ಲಿ ಎಗ್ಸಿಕ್ಯುಟಿವ್ ಇಂಜನಿಯರಾದ ಶ್ರೀ ಉತ್ತಯ್ಯರವರನ್ನು ಪ್ರತ್ಯೇಕ ವಂದಿಸಬೇಕಿದೆ. ವಿಶ್ವವಿದ್ಯಾಲಯ ಸಮಿತಿಯವರು ಸೂಚಿಸಿದ ಬದಲಾವಣೆಗಳನ್ನು ಕೇವಲ ಐದೇ ವಾರಗಳಲ್ಲಿ ಈ ಮರ ಕೆಲಸ ಪೂರ್ತಿ ಮಾಡಿಕೊಟ್ಟಿದ್ದಾರೆ. ಕಾಲೇಜಿನ ಅಸ್ತಿಭಾರವನ್ನು ಹಾಕಲು ಐಯ್ಯಂಗಾರರನ್ನು ಕೇಳಿಕೊಳ್ಳುತ್ತೇನೆ. ದೇವರು ಈ ಕಾಲೇಜಿಗೆ ಶ್ರೀರಕ್ಷೆಯಾಗಿರಲಿ, ಗವರ್ನರ್ ಜನರಲ್‌ರ ಆಶಯದಂತೆ ದಕ್ಷಿಣ ಗಂಗೆ ಎನಿಸಿದ ಕಾವೇರಿಯ ಉಗಮ ಸ್ಥಳವಾದ ಕೊಡಗಿನ ಈ ಕಾಲೇಜು ಖ್ಯಾತಿ ಪಡೆಯಲೆಂದೂ ಆಶಿಸುತ್ತೇನೆ.'

ಗೃಹ ಶಾಖೆಯ ಸೆಕ್ರೆಟರಿ ಶ್ರೀ. ಐಯ್ಯಂಗಾರ್ ಇವರ ಭಾಷಣ

"ಈ ದಿನದ ಕಾರ್ಯಕ್ರಮವನ್ನು ನೋಡಿದಾಗ ನನಗೆ ಸ್ವಲ್ಪ ಆಶ್ಚರ್ಯವಾಯಿತು. ಒಂದಕ್ಕೊಂದು ಸಂಬಂಧವಿಲ್ಲದಂತೆ ತೋರಿದ ಭಾಷಣ ಒಂದಿದೆ. ಅಶ್ವಿಭಾರ ಇನ್ನೊಂದಿದೆ. ಕಾಲೇಜ್ ತೆರೆಯುವುದು ಮೂರನೆಯದು. ಇವು ಕೇವಲ ಮಡಿಕೇರಿ ಪಟ್ಟಣದ ಕಾರಣವೆಂದು ತಿಳಿಯುತ್ತೇನೆ. ನಿನ್ನೆಯಿಂದ ಮಡಿಕೇರಿಯು ಜವಾಗಿಯೂ ಬದಲಾಯಿತು. ಈ ಸಮಯದಲ್ಲಿ ನಿರೀಕ್ಷಿಸಬಾರದಾದ ಬಿಸಿಲು ತೋರುತ್ತಿದೆ. ಇದು ಕಾಲೇಜಿಗೆ ಶುಭಚಿಹ್ನೆ. [illegible] ಬೆಳಿಗ್ಗೆ ಬರಲು ನನಗೆ [illegible] ಕಾರಣಗಳಿಗಾಗಿ ಸಂತೋಷ. ನನಗೂ ಕೊಡಗಿನ ಸಂಬಂಧವಿದೆ. ನಾನೂ ಕಾವೇರಿಯ ಪುತ್ರನು, [illegible]. ಆ ಕಡೆಯಲ್ಲಿ [illegible]. ಕೊಡಗಿನ [illegible] ನನ್ನ [illegible] ಭಾವಿಸುವವನಾಗಿದ್ದೇನೆ. ನನಗೂ ಕೊಡಗಿನವರಿಗೂ ಇಷ್ಟೇ ವ್ಯತ್ಯಾಸ [illegible] ಕೊಡಗಿನವರ [illegible] ಬ್ರಿಗೇಡಿಯರಾಗಿ [illegible] ಕಾರ್ಯಪ್ಪನವರಾಗ [illegible] ಬೇಗನ ಅವರ [illegible] ಯಾರೂ [illegible] ಎಟ್ಟಿಲ್ಲ. ಅವರೂ [illegible] ಕೊಡಗಿನಲ್ಲಿ ಹೆಚ್ಚು [illegible] ದಿನದ [illegible] ಕೊಡಗಿನ [illegible] ಇನ್ನೇ [illegible] ಕೊಡಗಿನ [illegible] ಬೇರೆ [illegible] ಜನಾಂಗ [illegible] ಉದ್ಯೋಗಗಳನ್ನು [illegible] ತಿಮ್ಮಯ್ಯನವರು ಕಾಶ್ಮೀರ [illegible] ಯುದ್ಧರಂಗದಲ್ಲಿ ಹೋರಾಡುವುದನ್ನು [illegible] ಕಾರ್ಯದರ್ಶಿಯಾಗಿದ್ದಾಗ ನಾನು ನೋಡಿರುವೆನು. ರಣರಂಗದಲ್ಲಿ ತಿಮ್ಮಯ್ಯನವರಿಗಿಂಥಾ ದೊಡ್ಡ [illegible] ಕಂಡು ಹಿಡಿಯುವುದು ಅಸಾಧ್ಯ.

ಕಲ ಸಮಯದ ಬಳಿಕ ಕೊಡಗಿಗೆ ಬರಲು ನಾನು [illegible] ಸರ್ದಾರ್ [illegible] ಕೊಡಗು ಅಂಥಾ [illegible] ಪ್ರದೇಶವಲ್ಲ. ಅದು ಕೇಂದ್ರ ಸರಕಾರಕ್ಕೆ [illegible] ದಿನ [illegible] ಕೇಂದ್ರದ [illegible] ನಂತರ [illegible] ಗಲಾಟೆ [illegible] ವಿಚಾರದಲ್ಲಿ [illegible] ಗಲಾಟೆಯ [illegible] ಉತ್ತರ ಕೊಟ್ಟಿದ್ದಾರೆ. ಕೇಂದ್ರ ಸರಕಾರಕ್ಕೆ [illegible] ಗಲಾಟೆಯು [illegible] ಕೊಡಗಿಗೆ ಗೌರವದ ಸ್ಥಾನ ಕೊಡಲಾಗಿದೆ. ಈ [illegible] ಪರಿಸ್ಥಿತಿಯ ಕಾರಣ ಕೊಡಗಿಗೆ ಬರುವ ಅವಕಾಶವೇ ದೊರೆಯಲಿಲ್ಲ. ಈಗ ಈ ಕಾಲೇಜಿನ ಸಂದರ್ಭವನ್ನು ಉಪಯೋಗಿಸಿಕೊಂಡೆನು.

ಕಾಲೇಜನ್ನು ತೆರೆಯುವುದು ಕಾಲೇಜ್ ಜಿಲ್ಲೆಯಲ್ಲಿ [illegible] ಘಟನೆಯಾಗಿರುವುದು [illegible] ದೇಶದ ಪರಿಸ್ಥಿತಿಯ [illegible] ವಿಶ್ವವಿದ್ಯಾಲಯದ [illegible] ಆ ಕಾಲದಲ್ಲಿ [illegible] ಘಟನೆ [illegible] ಮಹಾತ್ಮಾ [illegible] ಜನರ [illegible] ಬೆಂಗಳೂರಿಗೆ [illegible] ೧೦,೦೦೦ ಜನರ [illegible] ವಿದ್ಯಾರ್ಥಿಗಳು [illegible] ಗಾಂಧೀಜಿಯವರನ್ನು [illegible] ಆ ಕಾಲ [illegible] ಸ್ವಾತಂತ್ರ್ಯ [illegible] ಪಡೆದಿದ್ದೇವೆ [illegible] ಸ್ವಾತಂತ್ರ್ಯ [illegible] ಕಾಲೇಜು [illegible] ಇಂದಿನವರೆಗೂ [illegible]. ನಾವು ಈ ಸಮಸ್ಯೆಗಳನ್ನು [illegible] ದೇಶದ ವಿಭಾಗದ ನಂತರ ಈ ಸಮಸ್ಯೆಗಳು ಬೆಳೆದಿವೆ. ಕೇಂದ್ರದವರನ್ನು, ನಮ್ಮನ್ನು, ನಾವು ಈ [illegible] ಪರಿಸ್ಥಿತಿಯಿಂದ [illegible] ನಾವು [illegible] ಗಳು [illegible] ಎಂದು [illegible] ಜನರನ್ನು ನಿಷೇಧ [illegible] ಆಗ [illegible] ಎಂಥಾ [illegible] ಈ ಪರಿಸ್ಥಿತಿಯನ್ನು ಎದುರಿಸುವ [illegible] ಸಾಧ್ಯವಾಗಬೇಕು. ಅಂತರ [illegible] ಕೇಂದ್ರದಲ್ಲಿರುವ [illegible] ಜನರೇ [illegible] ಸಾಧಿಸುವರೆಂದು [illegible] ನಮ್ಮ ಆತ್ಮಶೋಧನೆಯನ್ನು ಮಾಡಿಕೊಳ್ಳಬೇಕು. ನಾವು ಜಗತ್ತಿಗೇ ಆದರ್ಶವಾದ ವ್ಯಕ್ತಿಗಳನ್ನು ಪಡೆದಿದ್ದೇವೆ. ಮಹಾತ್ಮಾ ಗಾಂಧಿಯವರಂಥಾ ವ್ಯಕ್ತಿ ಯಾವ ದೇಶದಲ್ಲಿ ಯುವಾಗ ಹುಟ್ಟಿದ್ದಾರೆ? [illegible] ಅಂತರಾಷ್ಟ್ರೀಯ ವ್ಯಕ್ತಿಗಳು [illegible]? ಆದರೆ ದೇಶದ ಬಲವು ಇಂಥಾ ಒಬ್ಬರಿಬ್ಬರು ಮಹಾವ್ಯಕ್ತಿಗಳ ಮೇಲೆ ನಿಲ್ಲಲಾರದು. ಇಂಗ್ಲೆಂಡಿನ [illegible] ಜನರ [illegible] ಗಿದೆ. ಅವರು [illegible] ಜನರ [illegible] ಇದರಿಂದ [illegible] ಈ [illegible] ಬಲ [illegible] ಎಂಥಾ [illegible] ಅದರ [illegible] ಎಲ್ಲಾ [illegible].

ನಾವು ಅಧಿಕಾರ [illegible] ಇಂಗ್ಲೆಂಡಿನಲ್ಲಿ [illegible] ಅಧಿಕಾರ [illegible] ನಮ್ಮಲ್ಲಿ [illegible] ವ್ಯಕ್ತಿಗಳು [illegible] ಅಧಿಕಾರ [illegible] ರಾಜಕೀಯದಲ್ಲಿ [illegible] ಇಂಗ್ಲೆಂಡಿನ [illegible] ಅವರೆ [illegible] ಸ್ವಾತಂತ್ರ್ಯ [illegible] ಜನರ [illegible] ದೇಶದ [illegible] ರಾಜಕೀಯದಿಂದ [illegible] ಮಾಡಿಕೊಳ್ಳಬಾರದು. ನನ್ನ [illegible] ಹೇಳಬೇಕು.

[illegible] ವಿದ್ಯಾರ್ಥಿಯಾಗಿದ್ದಾಗ [illegible] ಜೀವನ [illegible] ವಿದ್ಯಾರ್ಥಿಗಳು [illegible] ವಿದ್ಯಾರ್ಥಿಗಳಲ್ಲಿ ಶಿಸ್ತು, ಸಹನೆ, ಗೌರವ [illegible] ನಮ್ಮ [illegible] ಸ್ವಾತಂತ್ರ್ಯ [illegible] ಕಾಲೇಜು [illegible] ಉತ್ತಮ [illegible] ಸಂಘಟನೆ [illegible] ವ್ಯಕ್ತಿಗಳು [illegible] ವಿಷಯದಲ್ಲಿ [illegible] ಕೊಡಗಿನ ಕಾಲೇಜು [illegible] ಕಾವೇರಿ [illegible].

[illegible] ಚರಿತ್ರೆಯಲ್ಲಿ [illegible] ವಾಗಿರುವುದು.

ಕೊಡಗಿನ ಚರಿತ್ರೆಯಲ್ಲಿ ಎರಡು [illegible] ವರ್ಷಗಳ [illegible] ರಾಜ [illegible] ಮತ್ತು [illegible] ಲಿಂಗರಾಜನು [illegible] ರಾಜನ [illegible] ಅವರ [illegible] ಕೊಡಗಿನ [illegible] ಸ್ವಾತಂತ್ರ್ಯ [illegible] ದೇಶೀಯರೆಲ್ಲರೂ [illegible] ಪ್ರತಿಯೊಬ್ಬ [illegible] ಸಂವಿಧಾನ [illegible] ಕೊಡಗಿನ [illegible] ಸ್ಥಾನವಾಗಿ [illegible].

[illegible] ಕೊಡಗಿನ ಜನರು [illegible] ಕೃತಜ್ಞರಾಗಿರುವರು [illegible] ಗುಣವನ್ನು [illegible] ಕೊಡಗಿನ [illegible] ಹೆಮ್ಮೆಯಿಂದ [illegible] ."

ಶ್ರೀ ಐಯ್ಯಂಗಾರರ ಭಾಷಣದ ನಂತರ [illegible] ವೈದ್ಯನಾಥ [illegible] ಕಾಲೇಜು [illegible] ಅಶ್ವಿಭಾರ [illegible] ಕಾಲೇಜು ತೆರೆಯಲಾಯಿತು [illegible].

ಕೊಡಗು

ತಾ. ೧-೭-೧೯೪೯ನೇ ಶುಕ್ರವಾರ

ಕಾಲೇಜು.

ಜೂನ್ ತಾರೀಕು ೩೦ ಕೊಡಗಿನ ಚರಿತ್ರೆಯಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡಬೇಕಾದ ದಿನ ಕೊಡಗಿಗೆ ಕಾಲೇಜು ದೊರೆತ ದಿನವದು. ಕೊಡಗಿನಲ್ಲಿ ಕಾಲೇಜು ಸ್ಥಾಪಿಸಬೇಕೆಂಬ ಚಳವಳ ೧೯೪೧ರಲ್ಲಿ ಪ್ರಾರಂಭವಾದಂದಿನಿಂದಲೇ ಅದಕ್ಕೆ ಸಂಪೂರ್ಣ ಒತ್ತಾಸೆ ಕೊಟ್ಟಿರುವವು 'ಇಂಡಿಯಾ ಸರಕಾರದಿಂದ ಈ ಯೋಜನೆಯು ಮಂಜೂರಾದ ಮೇಲೆ ಜನತೆಯ ಸಹಕಾರವನ್ನು ಬೇಡಿಯೂ ಬರೆದದ್ದುಂಟು. ಇಡೀ ದೇಶದ ಹಾಗೂ ಸರಕಾರದ ಆಶಯವು ನಿಸ್ಸಂಶಯವಾಗಿ ಕೊಡಗಿನಲ್ಲೊಂದು ಕಾಲೇಜಿನ ಅವಶ್ಯಕತೆ ಮತ್ತು ಪ್ರಾಮುಖ್ಯತೆಯನ್ನು ಗವರ್ನರ್ ಜನರಲ್, ಪ್ರಧಾನ ಮಂತ್ರಿ, ಕಾಂಗ್ರೆಸ್ ಮುಂದಾಳುಗಳು, ಭಾರತ ಸೇನಾನಾಯಕರು ಮುಂತಾದವರಿಂದ ಬಂದ ಸಂದೇಶಗಳು ಮಾತ್ರವಲ್ಲ, ಉದ್ಘಾಟನಾ ಸಮಾರಂಭದ ಕಾಲದಲ್ಲಿ ಚೀಫ್ ಕಮಿಷನರು ಮತ್ತು ಇಂಡಿಯಾ ಸರಕಾರದ ಗೃಹಖಾತೆಯ ಸೆಕ್ರೆಟರಿಯವರು ಮಾಡಿದ ಭಾಷಣಗಳು ಎತ್ತಿ ಹೇಳುತ್ತಿವೆ.

ಚೀಫ್ ಕಮಿಷನರ ಭಾಷಣದಿಂದ ಕಾಲೇಜಿನ ಕಟ್ಟಡಕ್ಕಾಗಲೀ, ಕಾಲೇಜನ್ನು ನಡಸಲಿಕ್ಕಾಗಲೀ ಹಣದ ಅಡಚಣೆಗಳಿಲ್ಲವೆಂಬುದು ಸ್ಪಷ್ಟವಾಗಿದೆ. ಈ ಬಗ್ಗೆ ಇಂಡಿಯಾ ಸರಕಾರದಿಂದ ದೊರೆಯುವ ಸಹಾಯಕ್ಕಾಗಿ ದೇಶೀಯರು ಕೃತಜ್ಞರಾಗಿರಬೇಕು. ದೇಶವವರೂ ಕೂಡ ತಮ್ಮ ಭಾಗದ ಕರ್ತವ್ಯವನ್ನರಿತು ತಮ್ಮ ಮಕ್ಕಳನ್ನು ಈ ಹೊಸ ಕಾಲೇಜಿಗೆ ಸೇರಿಸುವ ಸ್ಥಳ ವಿಂಗಡಣೆ ಗಿಂತಲೂ ಹೆಚ್ಚಾಗಿ ಮಕ್ಕಳ ಅರ್ಜಿ ಬಂದಿರುವುದು ಸಂತೋಷದ ಮಾತು. ಕಾಲೇಜು ಸ್ಥಾಪನೆಯಿಂದ ದೇಶಕ್ಕೆ ಪ್ರತಿ ವರ್ಷ ಕಡಿಮೆ ಪಕ್ಷ ಒಂದು ಲಕ್ಷ ರೂಪಾಯಿಗಳಾದರೂ ಉಳಿತಾಯವಾಗುವುದು. ಕೊಡಗಿನಂಥಾ ಚಿಕ್ಕ ಪ್ರಾಂತಕ್ಕೆ ಅಲ್ಪ ವಿಷಯವಲ್ಲ. ಈ ಉಳಿತಾಯದಲ್ಲದೆ ಕೊಡಗಿನ ಕಾಲೇಜಿನ ಸ್ಥಾಪನೆಯಿಂದಲೂ ವಿದ್ಯಾಭ್ಯಾಸಕ್ಕೆ ಹಾತೊರೆಯುತ್ತಿರುವ ಕೊಡಗಿನ ಜನರಿಗೆ ವಿದ್ಯಾರ್ಜನೆಗೆ ಮತ್ತಷ್ಟು ಉತ್ತೇಜನ ದೊರೆಯುವದರಲ್ಲಿ ಸಂಶಯವಿಲ್ಲ. ಈ ಕಾಲೇಜಿನಲ್ಲಿ ಬಡವರ ಶ್ರೇಷ್ಠ ವಿದ್ಯಾಭ್ಯಾಸಕ್ಕೆ ಸಹಾಯ ಕೊಡಲು ಕೆಲವರು ನಿಧಿಗಳನ್ನೂ ಕೊಡಲು ಒಪ್ಪಿದ್ದು ಮತ್ತಷ್ಟು ಉತ್ಸಾಹಕಾರಕ ಸಂಗತಿಯಾಗಿದೆ.

ದೇಶೀಯರ ಹಾಗೂ ಸರಕಾರದ ಪ್ರಯತ್ನದಿಂದ ಕಾಲೇಜು ಸ್ಥಾಪನೆಯಾಗಿದೆ. ಆದರೆ ಹಲವು ಪ್ರಮುಖರು ಅಂದಿರುವಂತೆ ಈ ಕಾಲೇಜನ್ನು ಹಿಂದೂದೇಶದ ಇತರ ಕಾಲೇಜುಗಳಿಗೆ ಮಾದರಿಯಾಗಿ ಮಾಡುವ ಅಮೋಘ ಜವಾಬ್ದಾರಿಯು ಅಧ್ಯಾಪಕರ ಮತ್ತು ವಿದ್ಯಾರ್ಥಿಗಳ ಮೇಲಿದೆ. ಕಾಲೇಜಿನ ಉದ್ಘಾಟಕರು ಸೂಚಿಸಿದಂತೆ ಈಗಿನ ಕಾಲದಲ್ಲಿ ಅತ್ಯವಶ್ಯವಾಗಿರುವ ಶಿಸ್ತು, ಪ್ರಾಮಾಣಿಕತನ ಇವುಗಳನ್ನು ಸಾಧಿಸುವದರೊಂದೇ ಕಾಲೇಜಿನ ಮುಂದಿನ ಏಳಿಗೆಯ ದಾರಿಯಾಗಿದೆ. ಈ ಗುರಿಯನ್ನು ಮುಟ್ಟಲು ಸರ್ವರೂ ಶಕ್ತಿಮೀರಿ ಪ್ರಯತ್ನಿಸುವರಾಗಿ ಆಶಿಸುತ್ತೇವೆ.

ವರ್ತಮಾನ.

ಕೊಡಗಿನ ಕಾಲೇಜು ಉದ್ಘಾಟನಾ ಸಮಾರಂಭಕ್ಕೆ ಗವರ್ನರ್ ಜನರಲ್ ಶ್ರೀ ರಾಜಗೋಪಾಲಚಾರಿ, ಮುಖ್ಯಮಂತ್ರಿ ಪಂ ಜವಾಹರ್‌ಲಾಲ್ ನೆಹರೂ, ಕಾಂಗ್ರೆಸ್ ಪ್ರಸಿಡೆಂಟ್ ಡಾ. ಪಟ್ಟಾಭಿ ಸೀತಾರಾಮಯ್ಯ, ಮುಖ್ಯ ಸೇನಾನಿ ಜನರಲ್ ಕಾರ್ಯಪ್ಪನವರೇ ಮೊದಲಾದವರ ಸಂದೇಶಗಳು ಬಂದಿವೆ. ಇವುಗಳ ವಿವರವನ್ನು ಮುಂದಿನ ವಾರ ಕೊಡಲಾಗುವದು.

ಪೊಲೀಸ್ ಆಫೀಸಿನ ಮುಖ್ಯ ಗುಮಾಸ್ತರಾಗಿದ್ದ ಶ್ರೀ ಎಂ. ಎಸ್. ಅನಂತಪದ್ಮನಾಭಯ್ಯನನ್ನು ಕಾಲೇಜಿನ ಮುಖ್ಯ ಗುಮಾಸ್ತರಾಗಿ ನೇಮಿಸಿರುವರು.

ಸುದಿಕೇರಿ ಹೈಸ್ಕೂಲ್ ಕಟ್ಟಡದ ಏರ್ಪಾಟಿಗೆ ಸಾರ್ವಜನಿಕರಿಂದ ಸಹಾಯ ಪಡೆಯುವ ವಿಚಾರ ಆಲೋಚಿಸಲು ತಾರೀಕು ೪-೬-೪೯ರಲ್ಲಿ ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಬಿ. ಎಸ್. ಕೆಂಚಾಲಪ್ಪನವರ ಅಧ್ಯಕ್ಷತೆಯಲ್ಲಿ ನಾಡಿನವರ ಸಭೆಯೊಂದನ್ನು ಹೈಸ್ಕೂಲು ಕಮಿಟಿಯವರು ಸುದಿಕೇರಿಯಲ್ಲಿ ಏರ್ಪಡಿಸಿರುವರು.

ಕಳೆದ ಮೇ ತಾ. ೯ರಲ್ಲಿ ೧೩ನೇ ಇನ್‌ಫೆಂಟ್ರಿ ಬ್ರಿಗೇಡಿನ ಆಶ್ರಯದಲ್ಲಿ ಆ ವೃತಸರದಲ್ಲಿ ನಡೆದ ಹಾಕಿ ಪಂದ್ಯಾಟದಲ್ಲಿ ೩೭ನೇ ಕೊಡಗು ಏಂಟಿಟೇಂಕ್ ರಿಜಮೆಂಟಿನವರು ಆ ಇಡೀ ಏರ್ಯದ ಹಾಕಿ ಟೀಮುಗಳನ್ನು ಸೋಲಿಸಿ ಬೆಳ್ಳಿಯ ಬಟ್ಲನ್ನು ಗೆದ್ದಿರುವರು.

ವೀರಾಜಪೇಟೆ ನಾಡು ಕಂಡಂಗಲ ಗ್ರಾಮದ ಶ್ರೀ ಮೇಚಿಯಂಡ ಚೆಳ್ಳಪ್ಪನವರ ದನಗಳ ಜೊತೆಯಲ್ಲಿ ಒಂದೆರಡು ತಿಂಗಳುಗಳಿಂದ ಯಾರದೋ ಬಿಳಿವರ್ಣದ ಎತ್ತೊಂದು ಸೇರಿಕೊಂಡಿದೆಯಾಗಿಯೂ ವಾಲೀಕರು ತಕ್ಕ ರುಜುವಾತಿನಿಂದ ಅದನ್ನು ಹೊಡಕೊಂಡು ಹೋಗಬಹುದೆಂದೂ ತಿಳಿಸುತ್ತಾರೆ.

ಕೊಡಗಿನ ಹರಿಜನರಿಗೆ ದೇವಸ್ಥಾನ ಪ್ರವೇಶ ನಿಷೂಚೆಯು ತಾರೀಕು ೧-೬-೪೯ರಿಂದ ಜಾರಿಯಲ್ಲಿ ಬಂದಿದೆ.

ಕಾಲೇಜಿನ ಉದ್ಘಾಟನಾ ಸಮಾರಂಭಕ್ಕೆ ತಾ. ೨೯ರಲ್ಲಿ ಮಡಿಕೇರಿಗೆ ಬಂದಿರುವ ಶ್ರೀ ಎಚ್. ಆರ್. ವಿ. ಅಯ್ಯಂಗಾರರವರು ತಾ. ೨೮ ವರೆಗೆ ಮಡಿಕೇರಿಯಲ್ಲಿದ್ದು ೨೯ರಲ್ಲಿ ಭಾಗಮಂಡಲಕ್ಕೆ ಹೋಗಿ ನಂತರ ಅದೇ ದಿನ ವಾಪಾಸು ಹೋಗುವರು.

ಶ್ರೀ ಅಪ್ಪಾರಂಡ ಎ. ಕಾರ್ಯಪ್ಪನವರು ಮೈಸೂರಿನಲ್ಲಿ ಭೇಟಿಗೆ ಹೋಗಿದ್ದಾಗ ಅವರಿಗೆ ಆಕಸ್ಮಾತ್ ಗಾಯ ತಗಲಿ ಈಗ ಅವರು ಮಡಿಕೇರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದಾರೆ.

ಕೃತಜ್ಞತಾ ವಂದನೆ.

ನಮ್ಮ ಪ್ರಿಯ ಕುಮಾರ ಪೊನ್ನಪ್ಪನ ಅಕಾಲ ಮರಣದಿಂದ ವೃದ್ಧಾಪ್ಯದಲ್ಲಿ ನಮಗೆ ಒದಗಿದ ಪುತ್ರಶೋಕದಲ್ಲಿ ಭಾಗಿಗಳಾಗಿ ತಮ್ಮ ಸಹಾನುಭೂತಿಯನ್ನು ಖುದ್ದಾಗಿಯೂ, ಪತ್ರ ಮೂಲಕವೂ ತೋರಿಸಿ ನಮ್ಮನ್ನು ಸಂತೈಸಿದ ನಮ್ಮ ಇಷ್ಟ ಮಿತ್ರರಿಗೂ ಬಂಧು ಬಾಂಧವರಿಗೂ ಪ್ರತ್ಯೇಕ ಪ್ರತ್ಯೇಕವಾಗಿ ನಮ್ಮ ಕೃತಜ್ಞತೆಯನ್ನು ಅರ್ಪಿಸಲು ಅಶಕ್ಯರಾಗಿರುವುದರಿಂದ ಈ ಮೂಲಕ ಅವರೆಲ್ಲರಿಗೂ ನಮ್ಮ ಹೃದಯ ಪೂರ್ವಕವಾದ ಕೃತಜ್ಞತೆಯನ್ನು ಅರ್ಪಿಸುತ್ತೇವೆ.

ಡಾಕ್ಟರ್ & ಮಿಸೆಸ್
ಚೇರಂಡ ಅಚ್ಚಯ್ಯ.

ORANGE AND LIME PLANTS FOR SALE.

20,000 two year old Coorg Orange plants and 4,000 two year old Lime plants available for immediate sale Seeds selected from trees of outstanding merit and nursery raised on scientific lines Rate is Rs 35 per hundred seedlings, delivery ex- Nursery situated on 4|5th Mile in Mercara - Madapur Road. Please apply to:-

T. Krishnaswami,
Retd. Agricultural Officer
Padma Nursery,
MERCARA.

1-1

ಸುಭಾಷ್ ಬೋಸರು ಜೀವಂತವಿದ್ದಾರೆ!

'ತರುಣ ಭಾರತ' ಎಂಬ ನಾಗಪುರದ ಪತ್ರಿಕೆಯಲ್ಲಿ 'ನೇತಾಜಿ ಬೋಸರು ಜೀವಂತವಿದ್ದಾರೆ' ಎಂಬ ವಿಸ್ಮಯಕರ ಶಿರೋನಾಮೆಗಳು ಅಚ್ಚಿಗೆ ಪ್ರಕಟವಾದುವು. ಅದರ ಹೊಸ ದಿಲ್ಲಿ ಬಾತ್ಮೀದಾರರು ಹೀಗೆ ಬರೆದಿದ್ದಾರೆ.

'ಜೂನ್ ೬ ರಂದು ಸ್ವಿಜರ್‌ಲೇಂಡಿನ ಬರ್ನ್ ರೇಡಿಯೋವು ಸುಭಾಷರು ಜೀವಂತವಿದ್ದಾರೆಂದು ಸಾರಿತು.

'ಅದೇ ದಿನ ನೇತಾಜಿಯವರ ಸಹೋದರರಾದ ಶ್ರೀ ಶರತ್ ಬೋಸರು ಅದೇ ರೇಡಿಯೋ ಕೇಂದ್ರದಿಂದ ಒಂದು ಭಾಷಣ ಮಾಡಿದರು. ಅದಲ್ಲದೆ ತಾನು ನೇತಾಜಿಯೊಡನೆ ಜುಲೈ ತಿಂಗಳಾರಂಭದೊಳಗೆ ಭಾರತಕ್ಕೆ ಬರುವೆನೆಂದೂ, ಭಾರತದ ವಿದೇಶ ರಾಯಭಾರಿಗಳ ಅವ್ಯವಹಾರದಿಂದ ನೇತಾಜಿಯವರಿಗೆ ಅತೀವ ಅತೃಪ್ತಿಯುಂಟಾಗಿರುವುದೆಂದೂ ನಿರೂಪಿಸಿದ್ದರೆಂದು ಹೇಳಲಾಗುತ್ತದೆ.

'ಇಲ್ಲಿಯ ರಾಜಕೀಯ ಕೇಂದ್ರಗಳಲ್ಲಿ ಈ ಸುದ್ದಿಯ ಕುರಿತು ನಡೆಸಲ್ಪಡುವ ತರ್ಕ ವಿತರ್ಕಗಳು ನೇತಾಜಿಯವರ ಜೀವಂತವಿರುವಿಕೆಯ ಕುರಿತು ಆಶಾಪೂರ್ಣ ಕಲ್ಪನೆಗೆ ಎಡೆಗೊಟ್ಟಿವೆ.'

ಗಾಂಧಿ ಕೊಲೆ ಮೊಕದ್ದಮೆ

ಗಾಂಧಿಜೀಯ ಕೊಲೆ ಮೊಕದ್ದಮೆಯ ಅಪ್ಪೀಲು ವಿಚಾರಣೆ ನಡೆಸಿದ ಪ್ರೂವರ್ ಜಡ್ಜ ಬಂ ಹೈಕೋರ್ಟಿನ ಶ್ರೀ ಜಸ್ಟೀಸ್ ಎ. ಎನ್. ಭಂಡಾರಿ, ಶ್ರೀ ಜಸ್ಟೀಸ್ ಜೀ. ಡಿ ಖೋಸ್ಲಾ, ಇವರ ಫುಲ್ ಬೆಂಚ್- ಇದೇ ತಾ. 21ರಲ್ಲಿ ತನ್ನ ತೀರ್ಪನ್ನಿತ್ತಿದೆ

೧೯೪೮ನೇ ಜನವರಿ ೩೦ರಲ್ಲಿ ನಡೆದ ಗಾಂಧೀಜಿಯ ಕೊಲೆಯ ಸಂಬಂಧದ ಈ ಮೊಕದ್ದಮೆಯು ತನಿಖೆಯನ್ನು ಸ್ಪೆಶಲ್ ಜಡ್ಜ ಶ್ರೀ ಆತ್ಮಚರಣರು ಡಿಲ್ಲಿಯ ಕೆಂಪುಕೋಟೆಯಲ್ಲಿ ೧೯೪೮ನೇ ಮೇ. ತಾ ೨೭ಕ್ಕೆ ಆರಂಭಿಸಿ, ಡಿಸೆಂಬರ್ ತಾ. ೩೦ಕ್ಕೆ ಮುಗಿಸಿದ್ದರು. ಪ್ರಾಸಿಕ್ಯೂಶನ್ ಕಡೆಯ ೧೪೯ ಸಾಕ್ಷಿಗಳ ವಿಚಾರಣೆಯಾಗಿದ್ದಿತು. ಅವರ ಸಾಕ್ಷ್ಯಗಳು ೨೭೦ ಫುಲ್‌ಸ್ಕೇಪ್ ಹಾಳೆಯಷ್ಟಾಗಿದ್ದವು. ೪೦೪ಕ್ಕೂ ಮಿಕ್ಕಿದ ಬರಹವಿರುವ ದಾಖಲೆಗಳೂ ಸಾಕ್ಷೀ ಪುರಾವೆಗಳಾಗಿ ಕೋರ್ಟಿಗೆ ಹಾಜರು ಮಾಡಲ್ಪಟ್ಟಿದ್ದವು. ಅಪ್ಪೀಲು ತನಿಖೆಗಾಗಿ ಪೂರ್ವ ಪಂಜಾಬು ಹೈಕೋರ್ಟು ಅಪಾದಿತರ ಕಡೆಯ ಮತ್ತು ಸರಕಾರೀ ಕಡೆಯ ವಕೀಲರುಗಳ 'ವಾದ'ಗಳನ್ನು ಕೇಳುವದಕ್ಕಾಗಿ ೨೬ ದಿನ ಕೋರ್ಟು ನಡಿಯುತ್ತಿತ್ತು. ಪ್ರಥಮಾರೋಪಿ ನಾತೂರಾಮ್ ಗಾಡ್ಸೆ ತಾನೇ ವಾದಿಸಿದ್ದ. ಉಳಿದ ಆರೋಪಿಗಳ ಪರವಾಗಿ ಶ್ರೀಗಳಾದ ಬಿ. ಬೆನರ್ಜಿ, ಎಸ್. ಡಿ ಡಾಂಗೆ, ಪಿ. ಎಲ್ ಇನಾಂದಾರ್, ಡಿ ಯಾ. ಅವಾಸ್ತಿ ವಾದಿಸಿದ್ದರು. ಸರಕಾರೀ ಕಡೆಯಿಂದ ಚೀಫ್ ಪ್ರಾಸಿಕ್ಯೂಟಿಂಗ್ ವಕೀಲ್ ಶ್ರೀ ಸಿ ಕೆ. ದಪ್ತಾರಿಯವರು ವಾದಿಸಿದ್ದರು. ಅವರಿಗೆ ಸಹಾಯಕರಾಗಿ ಶ್ರೀ ಎನ್. ಕೆ. ಪೆಟಿಗಾರ ಮತ್ತು ಸರ್ದಾರ್ ಕರ್ತಾರ್ ಸಿಂಗ್ ಚಾವ್ಲಾ ಇದ್ದರು. ನಾತೂರಾಮ್ ಗೋಡ್ಸೆ ತಾನು ಮಹಾತ್ಮಾ ಗಾಂಧಿಯವರ ಕೊಲೆ ಮಾಡಿದುದು ಹೌದೆಂದು ಒಪ್ಪಿಕೊಂಡು, ಅದು ತನ್ನೊಬ್ಬನ ಇಚ್ಛೆ ಮತ್ತು ಕೆಲಸ ಮಾತ್ರವೆಂದೂ ಅದಕ್ಕಾಗಿ ಯಾವ ಒಳಸಂಚು ಇರಲಿಲ್ಲವೆಂದೂ ಸಾಧಿಸಿದ್ದ.

THE WARDEN INSURANCE CO., Ltd.
Head Office: Bombay.

LIFE, FIRE, ACCIDENT, MOTOR & W. C. INSURANCES.

Managing Director, – **S. H. THAKER.**

Business in force	Rs. 5,00,00,000
Assets	,, 1,00,00,000
Income	,, 35,00,000

Also **LOCAL MANAGERS OF**
THE LONDON GUARANTEE & ACCIDENT CO., Ltd.
(Incorporated in England)
Assets Exceed Rs. 10,00,00,000

a Subsidiary Company of
THE PHOENIX ASSURANCE CO. Ltd.
(One of the Largest Assurance Companies in the World)
Assets Exceed Rs. 45,00,00,000

Transact **FIRE INSURANCE**
Enquiries for representation solicited.
Apply to:

Chief Agency Office *Virajpet (Coorg)* or **A. S. Aiyappa,** *Branch Secretary, Gandhinagar,* *BANGALORE CITY.*

ಆರೋಗ್ಯ ವಿಭಾಗ.

ಏಕೆ ದೇವಿ ಹಾಕಿಸಲೇಬೇಕು?

ಡಾಕ್ಟರ್ ವಿ. ಎಸ್. ಕೃಷ್ಣಮೂರ್ತಿ ಎಂ. ಬಿ (ಪಬ್ಲಿಕ್‌ಹೆಲ್ತ್) ಸೂಪರಿನ್‌ಟೆಂಡೆಂಟ್, ವ್ಯಾಕ್ಸಿನ್ ಇನ್‌ಸ್ಟಿಟ್ಯೂಟ್, ಬೆಂಗಳೂರು.

ದೇವಿ ಹಾಕುವುದು ಪರಿಣಾಮಕಾರಿಯಾದರೆ ಆ ಬಗ್ಗೆ ನಿರ್ದಿಷ್ಟವಾದ ಚಿಹ್ನೆಗಳು ಗೋಚರಿಸುವುವು. ಮೈಸೂರು ಸಂಸ್ಥಾನದಲ್ಲಿ ಸಿಡುಬು ಹಾಕುವ ಹಾಲು ಅದರ ಗುಣದಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿರುತ್ತದೆ.

ಜನರಿಗೆ ಸಿಡುಬು ರೋಗವು ಅಂಟದಂತೆ ರಕ್ಷಣೆ ಕೊಡುವುದಕ್ಕಾಗಿ ಚರ್ಮದೊಳಕ್ಕೆ ಸಿಡುಬು ಹಾಲನ್ನು ಪ್ರಯೋಗಿಸುವುದಕ್ಕೆ ವ್ಯಾಕ್ಸಿನೇಷನ್ ಅಂದರೆ ದೇವಿ ಹಾಕುವುದು ಅಥವಾ ಸಿಡುಬು ಹಾಕುವುದು ಎಂದು ಹೆಸರು. ಸಿಡುಬು ಹಾಲನ್ನು ಶಾಸ್ತ್ರೀಯವಾಗಿಯೂ ಎಚ್ಚರಿಕೆಯಿಂದಲೂ ತಯಾರಿಸಲಾಗುತ್ತದೆ. ಮತ್ತು ಮನುಷ್ಯರ ಚರ್ಮದೊಳಕ್ಕೆ ಪ್ರಯೋಗಿಸುವ ಮುನ್ನ ಆ ಹಾಲನ್ನು ಚೆನ್ನಾಗಿ ಪರೀಕ್ಷಿಸಿ ಪ್ರಯೋಗದ ಮೂಲಕ ಅದು ಪರಿಣಾಮಕಾರಿ ಎಂಬುದನ್ನೂ ಯಾವ ರೀತಿಯಲ್ಲೂ ಅಪಾಯಕರವಲ್ಲವೆಂಬುವನ್ನೂ ನಿರ್ಧರಿಸಿ, ಅನಂತರವೇ ಜನರ ಉಪಯೋಗಕ್ಕಾಗಿ ಕೊಡಲಾಗುತ್ತದೆ.

ದೇವಿ ಹಾಕಿಸಿಕೊಳ್ಳುವುದರಿಂದ ಜನರಿಗೆ ಸಾಧಾರಣವಾಗಿ 3 ವರ್ಷದಿಂದ 5 ವರ್ಷದ ವರೆಗೆ ಸಿಡುಬ ರೋಗದಿಂದ ರಕ್ಷಣೆ ಇರುತ್ತದೆ. ಎಲ್ಲಿಯೋ ಕೆಲವು ಸಂದರ್ಭಗಳಲ್ಲಿ ಮಾತ್ರ ಅದರ ರಕ್ಷಣೆಯು 2 ವರ್ಷಗಳಿಗೂ ಕಡಿಮೆ ಇರಬಹುದು. ದಿನಗಳು ಕಳೆದಂತೆಲ್ಲಾ ಅದರ ರಕ್ಷಣಾ ಪ್ರಭಾವವು ಕಡಿಮೆಯಾಗುತ್ತದೆ. ಸಾಮೂಹಿಕವಾಗಿ ಜನರಲ್ಲಿ ಇದರ ಪ್ರಭಾವವು ಕಡಿಮೆಯಾಗಿದ್ದರೆ ಅಲ್ಲಿ ಸಿಡುಬು ಸಾಂಕ್ರಾಮಿಕವಾಗಿ ನಾನಾ ರೀತಿಯ ದುಷ್ಪರಿಣಾಮಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಒಂದು ಬಾರಿ ದೇವಿ ಹಾಕಿಸಿಕೊಂಡ ಮೇಲೆ 3 ವರ್ಷದಿಂದ 5 ವರ್ಷಗಳೊಳಗಾಗಿಯೂ, ಸಿಡುಬು ರೋಗವು ತಲೆದೋರುವ ಸಂದರ್ಭಗಳಲ್ಲಿಯೂ ಪ್ರತಿಯೊಬ್ಬರೂ ದೇವಿ ಹಾಕಿಸಿಕೊಳ್ಳಲೇಬೇಕು.

ದೇವಿ ಹಾಕುವುದರಲ್ಲಿ ಎರಡು ವಿಧ. (1) ಮೊದಲನೆ ಬಾರಿಗೆ ದೇವಿ ಹಾಕುವುದು. ಇದು ಸಾಧಾರಣವಾಗಿ ಮಕ್ಕಳು ಹುಟ್ಟಿದ 3 ತಿಂಗಳಿಂದ 6 ತಿಂಗಳೊಳಗಾಗಿ ದೇವಿ ಹಾಕಲಾಗುವುದು. ಹೀಗೆ ಮೊದಲನೆಯ ಬಾರಿ ದೇವಿ ಹಾಕಿದ್ದು ವಾಸಿಯಾಗುವುದಕ್ಕೆ ಮೂರು ವಾರಗಳು ಬೇಕು. ಸಿಡುಬು ಹಾಲು ತುಂಬಿ, ಅದು ಹೊಪ್ಪಳಿ, ಒಣಗಿ, ಹುರುಪು ಬಿದ್ದುಹೋಗಲು ಅಷ್ಟು ಕಾಲಬೇಕು. ಒಂದು ವೇಳೆ ಚೆನ್ನಾಗಿ ಹಾಲು ತುಂಬದೆ ಹೋದರೆ ದೇವಿ ಹಾಕಿದುದು ಪರಿಣಾಮಕಾರಿಯಾಗಲಿಲ್ಲವೆಂದು ಭಾವಿಸಿ ಪುನಃ ದೇವಿ ಹಾಕಬೇಕು. ಕೆರೆಯುವುದರಿಂದಲೋ ಅಥವಾ ಮತ್ತಾವ ಕಾರಣದಿಂದಲೋ ಗುಳ್ಳೆಗೆ ಗಾಯವಾದರೆ ನಂಜಾಗದಿರಲು ಅದರ ಮೇಲೆ ಬೋರಿಕ್ ಅಥವಾ ಸಿಬಿಜಾಲ್ ಪುಡಿಯನ್ನು ಉದುರಿಸಬೇಕು.

(2) ಪುನಃ ದೇವಿ ಹಾಕುವಿಕೆ:–ರಿವ್ಯಾಕ್ಸಿನೇಷನ್ ಅಂದರೆ ಮೊದಲ ಬಾರಿ ದೇವಿ ಹಾಕಿದ್ದು ಪೂರ್ಣ ಪರಿಣಾಮಕಾರಿಯಾದ ಮೇಲೆ ಕೆಲ ಕಾಲಾನಂತರ ಪುನಃ ದೇವಿ ಹಾಕುವುದಕ್ಕೆ 'ರಿವ್ಯಾಕ್ಸಿನೇಷನ್' ಎಂದು ಹೆಸರು. ಹೀಗೆ ದೇವಿ ಹಾಕಿದಾಗ ಗುಳ್ಳೆಯಾಗುವುದು, ಹಾಲು ತುಂಬುವುದು, ಒಣಗುವುದು ಇತ್ಯಾದಿಗಳ ಕ್ರಮಕ್ಕೂ ಮೊದಲು ಬಾರಿ ದೇವಿ ಹಾಕಿದುದರ ಕ್ರಮಕ್ಕೂ ವ್ಯತ್ಯಾಸವಿರುತ್ತದೆ. ಏಕೆಂದರೆ ಒಂದು ಬಾರಿ ದೇವಿ ಹಾಕಿಸಿಕೊಂಡುದರ ಪರಿಣಾಮ ಶಕ್ತಿಯು ಅವಧಿಯು ಅವರವರ ಶರೀರ ಪ್ರಕೃತಿಯನ್ನು ಅವಲಂಬಿಸುತ್ತದೆ. ಇದರಲ್ಲಿ ಮೂರು ರೀತಿ ಇರುತ್ತದೆ. (1) ಇಮ್ಯೂನಿಟಿ ರಿಯಾಕ್ಷನ್ ಅಂದರೆ ದೇವಿ ಹಾಕಿದ 24 ರಿಂದ 48 ಗಂಟೆಗಳೊಳಗಾಗಿ ಆ ಸ್ಥಳದಲ್ಲಿ ಚರ್ಮವು ಕೆಂಪಾಗಿದ್ದು ಅದು ಒಂದೆರಡು ದಿನಗಳೊಳಗಾಗಿ ಮಾಯವಾಗುವುದು. ಅದು ವಿನಹ ಜ್ವರ ಬರುವುದು ಇತ್ಯಾದಿಯಾದ ಹೆಚ್ಚಿನ ಪರಿಣಾಮವೂ ಉಂಟಾಗುವುದಿಲ್ಲ. (2) ಆಕ್ಸಿಲರೇಟೆಡ್ ರಿಯಾಕ್ಷನ್ ಅಂದರೆ ದೇವಿ ಹಾಕಿದ 48 ಗಂಟೆಗಳೊಳಗಾಗಿ ಅದು ಗುಳ್ಳೆಯಾಗಿ ಅಲ್ಲಿಂದ ಒಂದು ವಾರದೊಳಗಾಗಿ ಅದು ಬೇಗ ಒಣಗಿಹೋಗುವುದು. ಇದಕ್ಕಿಂತಲೂ ಹಿಂದೆ ದೇವಿ ಹಾಕಿಸಿದ್ದರ ರಕ್ಷಣೆಯು ಇನ್ನೂ ಕೊಂಚ ಇರುವುದಾದರೆ ಈ ರೀತಿಯ ಪರಿಣಾಮವುಂಟಾಗುತ್ತದೆ. ಇಂಥಾ ಸಂದರ್ಭದಲ್ಲಿ ದೇವಿ ಹಾಕಿದ ಸ್ಥಳದಲ್ಲಿ ಕೊಂಚ ನೋವಾಗುವುದು ಮತ್ತು ನವೆಯಾಗುವುದು. ಇಂಥವರು ಹೀಗೆ ರೀವ್ಯಾಕ್ಸಿನೇಷನ್ ಮಾಡಿಸಿಕೊಳ್ಳದಿದ್ದ ಪಕ್ಷದಲ್ಲಿ ಸಿಡುಬುರೋಗವು ಪ್ರಾಪ್ತವಾದಾಗ ಅದು ಹೆಚ್ಚಿನ ಉಪದ್ರವ ಕೊಡುತ್ತಿತ್ತು. (3) ಪ್ರೈಮರಿ ರಿಯಾಕ್ಷನ್ ಅಂದರೆ ಮೊದಲ ಬಾರಿ ದೇವಿ ಹಾಕಿದಾಗ 3 ವಾರಗಳ ವರೆಗೆ ಉಂಟಾದ ಪರಿಣಾಮವೇ ಉಂಟಾಗುವುದು,–ಜ್ವರ ಬರುವುದು, ತಲೆನೋವು, ಆಲಸ್ಯ, ಬೇಸರಿಕೆ ಇತ್ಯಾದಿ–ಚಿಹ್ನೆಗಳು ತೋರುವುವು. ದೇವಿ ಹಾಕಿದ ಸ್ಥಳವು ಊದಿ, ನೋವೂ ತೋರುವುದು. ಈ ಹಿಂದೆ ದೇವಿ ಹಾಕಿಸಿಕೊಂಡುದರ ರಕ್ಷಣಾ ಪರಿಣಾಮವು ಸಂಪೂರ್ಣವಾಗಿ ಕಳೆದು ಹೋಗಿದ್ದರೆ ಮಾತ್ರವೇ ಈ ರೀತಿಯ ಚಿಹ್ನೆಗಳು ತೋರುವುವು. ಇಂತಹವರು ರಿವ್ಯಾಕ್ಸಿನೇಷನ್ ಮಾಡಿಸಿಕೊಳ್ಳದಿದ್ದರೆ ಸಿಡುಬಿನ ಸೋಂಕು ತಗಲಿದಾಗ ರೋಗದಿಂದ ನರಳಬೇಕಾಗುವುದು. ಈ ಮೇಲ್ಕಂಡ ಮೂರು ವಿವರಣೆಗಳಿಂದ ತಿಳಿದುಬರುವುದೇನೆಂದರೆ–ಎರಡನೆಯ ಮತ್ತು ಮೂರನೆಯ ಸಂದರ್ಭಗಳಲ್ಲಿ ದೇವಿ ಹಾಕಿಸಿಕೊಂಡುದರ ಪ್ರಭಾವದ ಚಿಹ್ನೆಗಳು ಕಾಣಬರುವುವು. ಆದರೆ ಮೊದಲನೆಯದಾದ ಇಮ್ಯುನಿಟಿ ರಿಯಾಕ್ಷನ್ ಸಂದರ್ಭದಲ್ಲಿ ಯಾವ ಚಿಹ್ನೆಗಳೂ ಕಾಣಬರುವುದಿಲ್ಲ. ಆದ್ದರಿಂದ ಆಗಾಗ ಸಿಡುಬು ಹಾಕಿಸಿಕೊಳ್ಳುವುದು ಒಳ್ಳೆಯದು.

ದೇವಿ ಹಾಕಿಸಿಕೊಂಡ ಕೂಡಲೇ ಸಿಡುಬು ಏಳುವ ಸಂದರ್ಭ:–ಎಲ್ಲಾ ವಿಧವಾದ ಅಂಟುರೋಗಗಳಲ್ಲಿಯೂ ಆಯಾ ರೋಗಕ್ಕೆ ಕಾರಣವಾದ ಒಂದು ರೀತಿಯ ಅಣುಜೀವಿಗಳಿರುತ್ತವೆ. ಆ ಅಣುಜೀವಿಗಳು ಆರೋಗ್ಯವಂತರ ಶರೀರವನ್ನು ಹೊಕ್ಕು ಅಲ್ಲಿಂದ ಮುಂದೆ ನಿರ್ದಿಷ್ಟವಾದ ಕಾಲದ ವರೆಗೆ ವೃದ್ಧಿಹೊಂದಿದ ನಂತರವೇ ಆ ರೋಗದ ಚಿಹ್ನೆಗಳು ಕಾಣುತ್ತವೆ. ಅಂಥಾ ನಿರ್ದಿಷ್ಟವಾದ ಅವಧಿಗೆ 'ಇನ್‌ಕ್ಯುಬೇಷನ್ ಪೀರಿಯಡ್' ಎಂದು ಹೆಸರು. ಸಿಡುಬು ರೋಗದ ಈ ಅವಧಿಯು 12 ದಿನಗಳು. ಅಂದರೆ ಜ್ವರ ಕಾಣಿಸುವ 12 ದಿನಗಳ ಮುನ್ನವೇ ಅಂಥವರಲ್ಲಿ ಈ ರೋಗವು ನಾಟಿರುವುದೆಂದು ಭಾವಿಸಬೇಕು. ಹೊರಗೆ ಕಾಣುವುದರಲ್ಲಿ ಆ ವರೆಗೂ ಅವರು ಆರೋಗ್ಯವಂತರಾಗಿಯೇ ತೋರುತ್ತಾ ತಮ್ಮ ತಮ್ಮ ದಿನಚರಿಯ ಕೆಲಸ ಕಾರ್ಯಗಳನ್ನು ಮಾಡುತ್ತಿರುವರು. ಅಂಥ ಸಂದರ್ಭದ ಮೊದಲನೆ 7 ದಿನಗಳೊಳಗಾಗಿ ದೇವಿಯನ್ನು ಹಾಕಿದ ಪಕ್ಷದಲ್ಲಿ ಸಿಡುಬನ್ನು ತಡೆಗಟ್ಟಬಹುದು. ಆದರೆ ಈ 7 ದಿನಗಳ ನಂತರ ದೇವಿ ಹಾಕಿದರೆ ಅದರ ಶಕ್ತಿಯು ಸಿಡುಬಿನ ಉಪದ್ರವವನ್ನು ಪೂರ್ಣವಾಗಿ ತಡೆಗಟ್ಟಲಾಗದಿದ್ದರೂ ಕಡಿಮೆ ಮಾಡುವುದು. ಅಂದರೆ ಆ ಹನ್ನೆರಡು ದಿವಸಗಳ ಅವಧಿಯಲ್ಲಿ ದಿನಗಳು ಕಳೆದಂತೆಲ್ಲಾ ಸಿಡುಬು ರೋಗದ ಮೇಲೆ ದೇವಿ ಹಾಕಿಸುವುದರ ಪ್ರಭಾವವೂ ಕುಗ್ಗುವುದು.

(ಮೈಸೂರು ಆರೋಗ್ಯ ಪತ್ರಿಕೆ)

ಈ ವಾರದ ಕಥೆ.

ರಾಮರಾಜ್ಯ.

ಲೇ —ಶ್ರೀ. ಕೆ. ಎ. ದೇವಪ್ಪ, ನಾಪೋಕ್ಲು.

ಬಹು ಪುರಾತನ ಕಾಲದ ಮಾತು. ಆ ಕಾಲದಲ್ಲಿ ದೇಶದಲ್ಲೆಲ್ಲಾ ಬೌದ್ಧ ಧರ್ಮವು ಪ್ರಸರಿಸಿತ್ತು. ಆದೊಂದು ಊರು. ಆ ಊರಿನಲ್ಲಿ ವಿನೀತನೆಂಬ ರೈತನೊಬ್ಬನಿದ್ದನು. ಆತನು ಬೌದ್ಧ ಮತಾವಲಂಬಿಯಾಗಿದ್ದನು. ಆತನು ತನ್ನ ಜೀವನದಲ್ಲಿ ಐದು ತತ್ವಗಳನ್ನು ಪಾಲಿಸುವ ನಿರ್ಧಾರ ಮಾಡಿಕೊಂಡಿದ್ದನು. (೧) ಯಾವ ಪ್ರಾಣಿಗಾಗಲೀ, ಜನರಿಗಾಗಲೀ ಹಿಂಸೆ ಮಾಡದಿರೋಣ (೨) ಕಳ್ಳತನ, ಮೋಸ ಮಾಡದಿರೋಣ (೩) ವ್ಯಭಿಚಾರಕ್ಕಿಳಿಯದಿರೋಣ (೪) ಸುಳ್ಳು ಹೇಳದಿರೋಣ ಮತ್ತು (೫) ನಿಶಾಸೇವನೆ ಮಾಡದಿರೋಣ ಈ ಐದು ನಿರ್ಧಾರಗಳು ಆತನ ಜೀವನ ಧ್ಯೇಯವಾಗಿದ್ದವು. ಆತನು ಗ್ರಾಮದಲ್ಲಿ ತನ್ನ ಕೆಲಸಗಳನ್ನೆಲ್ಲಾ ತಾನೇ ನಿರ್ವಹಿಸಿಕೊಂಡು ಸರಳ ಜೀವನ ನಡೆಸುತ್ತಿದ್ದನು.

ಒಂದು ದಿನ ಯಾವುದೋ ಒಂದು ಕಾರಣಕ್ಕಾಗಿ ಊರ ಮೈದಾನದಲ್ಲಿ ಗ್ರಾಮಸ್ಥರ ಸಭೆ ಸೇರಿತ್ತು. ಸಭೆ ನೆರೆದ ಸ್ಥಳದಲ್ಲಿ ಕಸಕಡ್ಡಿಗಳಿದ್ದವು. ವಿನೀತನು ತಾನು ಕೂರಲೆಂದು ಸ್ವಲ್ಪ ಸ್ಥಳವನ್ನು ಗುಡಿಸಿ ಸ್ವಚ್ಛಪಡಿಸಿದನು. ಆದರೆ ಊರ ಸಭ್ಯನೊಬ್ಬನು ಆ ಸ್ಥಳದಲ್ಲಿ ಬಂದು ಕುಳಿತನು. ಆತನು ಮತ್ತೊಂದು ಸ್ಥಳವನ್ನು ಗುಡಿಸಿದನು. ಅಲ್ಲಿಯೂ ಒಬ್ಬನು ಬಂದು ನೆಲೆಸಿದನು. ಆದರೆ ವಿನೀತನು ಸಿಟ್ಟಾಗಲಿಲ್ಲ. ಒಂದರ ನಂತರ ಒಂದರಂತೆ ಹಲವು ಭಾಗಗಳಲ್ಲಿ ಗುಡಿಸಿದನು. ಆತನು ಗುಡಿಸುತ್ತಿದ್ದಂತೆಯೇ ಸ್ವಚ್ಛವಾದ ಸ್ಥಳಗಳನ್ನಾಕ್ರಮಿಸುತ್ತಿದ್ದವರಿಗೆ ಆತನ ಸಹನೆಯನ್ನು ನೋಡಿ ನಾಚಿಕೆಯಾಯಿತು. ತಾವೂ ಕೂಡ ಅವನೊಡನೆ ಸೇರಿದರೆ ಇಡೀ ವಠಾರವೇ ಶುಚಿಯಾಗುವದಲ್ಲವೇ ಎಂದು ಅವರವರೊಳಗೆ ಮಾತು ಪ್ರಾರಂಭವಾಯಿತು. ಎಲ್ಲರೂ ಕಾರ್ಯೋನ್ಮುಖರಾದರು. ಕೆಲವೇ ನಿಮಿಷಗಳಲ್ಲಿ ಆವರಣವು ಸ್ವಚ್ಛವಾಯಿತು. ವಿನೀತನು ಯಾರಿಗೂ ಗುಡಿಸಲು ಹೇಳಲಿಲ್ಲ. ತನ್ನ ಕರ್ತವ್ಯವೆಂದು ಹಿಡಿದ ಕೆಲಸವನ್ನು ಯಾವದೇ ಉದ್ವೇಗ, ಆಕಾಂಕ್ಷೆಗಳಿಲ್ಲದೆ ಮಾಡಿದನು. ಅದು ಎಲ್ಲರ ಹೃದಯಗಳನ್ನು ಗೆದ್ದಿತು.

ವಿನೀತನ ಮನೆಯ ಹತ್ತಿರವೇ ಇನ್ನೂ ಬೇರೆಯವರ ನಾಲ್ಕಾರು ಮನೆಗಳಿದ್ದವು. ವಿನೀತನು ಬಹು ಕಷ್ಟಪಡುವ ರೈತ. ತನ್ನ ಭೂವ್ಯವಸಾಯದೊಂದಿಗೆ ಕಾಯಿಪಲ್ಯಗಳ ತೋಟವನ್ನೂ ಅಚ್ಚುಕಟ್ಟಾಗಿ ಮಾಡುತ್ತಿದ್ದ. ಚಿಕ್ಕ ಒಂದು ಹೂವಿನ ತೋಟವೂ ಇತ್ತು. ನಾಲ್ಕಾರು ದಿನಗಳೂ ಇನ್ನವು ಪ್ರತಿಯೊಂದನ್ನೂ ಸರಿಯಾಗಿ ನೋಡಿಕೊಂಡಿರುವ. ಆತನ ತೋಟ ಮನೆಗಳನ್ನು ನೋಡುವದೇ ಆನಂದದ ಸಂಗತಿ. ಪ್ರತಿಯೊಂದರಲ್ಲಿಯೂ ಶಿಸ್ತು ಇತ್ತು. ಆತನ ಜೀವನವು ಹಳ್ಳಿಯ ಜೀವನವಾದರೂ ಮಧುರ ಸಂಗೀತದಂತೆ ಅನುಕರಣೀಯವಿತ್ತು. ನೆರೆಯವರ ಹಂದಿಕೋಳಿಗಳು, ದನಕರುಗಳು ಪ್ರಥಮದಲ್ಲಿ ಆತನಿಗೆ ವಿಪರೀತ ತೊಂದರೆ ಕೊಡುತ್ತಿದ್ದವು. ಆದರೆ ವಿನೀತನು ಯಾರೊಡನೆಯೂ ಜಗಳ ಮಾಡಲಿಲ್ಲ. ತನ್ನ ಬೇಲಿ ಬಲಮಾಡಿಕೊಂಡನು. ಆ ಬಗ್ಗೆ ಹೆಚ್ಚಿಗೆ ಎಚ್ಚರಿಕೆ ವಹಿಸಿದನು. ಇವನ ಆದರ್ಶ ಜೀವನವು ನೆರೆಯವರಿಗೂ ರುಚಿಸಿತು. ಅವರೂ ಆತನನ್ನು ಹಿಂಬಾಲಿಸಿದರು.

ಗ್ರಾಮದ ಜನರಲ್ಲಿ ಹಲವರಿಗೆ ವಿನೀತನ ಮೇಲೆ ಬಹು ವಿಶ್ವಾಸ. ವಿನೀತನು ಕೂಡ ಸಮಯ ಒದಗಿದಾಗ ಸತ್ಯ, ಅಹಿಂಸೆ, ಪಾನನಿರೋಧ, ಮೊದಲಾದುವುಗಳ ವಿಚಾರ ಜನರಿಗೆ ಬೋಧನೆ ಕೊಡುತ್ತಿದ್ದನು. ಇದಕ್ಕಾಗಿಯೇ ಗ್ರಾಮದ ಜನರೆಲ್ಲರೂ ಒಗ್ಗಟ್ಟಾಗಿ ತಮ್ಮ ಪರಿಶ್ರಮದಿಂದ ಒಂದು ಮನೆಯನ್ನು ಗ್ರಾಮದಲ್ಲಿ ಕಟ್ಟಿದ್ದಾರೆ. ಸಾಯಂಕಾಲ ಬಿಡುವಾದೊಡನೆ ಎಲ್ಲರೂ ಅಲ್ಲಿ ಸೇರುತ್ತಾರೆ. ವಿನೀತನೂ, ಗ್ರಾಮದ ಇತರ ತಿಳಿದವರೂ ತಿಳಿಯದವರಿಗೆ ವಿವಿಧ ಬೋಧನೆ ಮಾಡುತ್ತಾರೆ; ಪ್ರಪಂಚದ ಸ್ಥಿತಿಗತಿಗಳನ್ನು ವಿವರಿಸಿಕೊಡುತ್ತಾರೆ. ಇತ್ತೀಚೆಗೆ ಅಕ್ಷರ ತಿಳಿಯದವರಿಗೆ ಅಕ್ಷರಾಭ್ಯಾಸದ ಏರ್ಪಾಡನ್ನೂ ಮಾಡಿದ್ದಾರೆ.

ಗ್ರಾಮವು ಈಗ ವಿನೀತನ ವರ್ಚಸ್ಸಿಗೊಳಗಾಗಿದೆ. ಪ್ರತಿ ಹದಿನೈದು ದಿನಕೊಮ್ಮೆ ಗ್ರಾಮದ ಶುಚಿತ್ವ ಸಮಿತಿಯವರು ಪ್ರತಿ ಮನೆಗಳನ್ನು ಸುತ್ತುತ್ತಾರೆ. ಪ್ರತಿ ಮನೆಯೂ ತಮ್ಮ ಮನೆಗಳಂತೆಯೇ ಇರಬೇಕೆಂದು ಆಶಿಸುತ್ತಾರೆ. ಇಡೀ ಗ್ರಾಮವೇ ಒಂದು ಕುಟುಂಬದಂತಾಗಿದೆ. ಒಬ್ಬರನ್ನೊಬ್ಬರು ಮೋಸಗೊಳಿಸಿ ತಾವು ಮೇಲೇರಬೇಕೆಂಬ ಬುದ್ಧಿ ಬಹು ಮಟ್ಟಿಗೆ ಕಡಿಮೆಯಾಗಿದೆ. ಗ್ರಾಮದ ಜನರ ವ್ಯವಹಾರಗಳು ಗ್ರಾಮ ಪಂಚಾಯತರಿಂದಲೇ ತೀರ್ಮಾನವಾಗುತ್ತಿವೆ. ರಸ್ತೆ, ಕೆರೆ, ಬಾವಿ, ಸರ್ವರ ಎಚ್ಚರಿಕೆಯನ್ನು ಗ್ರಾಮಸ್ಥರೇ ನೋಡಿಕೊಳ್ಳುತ್ತಾರೆ. ಗ್ರಾಮದಲ್ಲಿ ಚಾಪೆ ಹೆಣೆಯುವದು, ಜೇನು ಸಾಕುವದು, ಹಗ್ಗ ಮಾಡುವದು ಮೊದಲಾದ ಕೈಗಾರಿಕೆಗಳನ್ನೂ ಮಾಡುತ್ತಿದ್ದಾರೆ.

ಗ್ರಾಮದ ಮಂದಿರದಲ್ಲಿ ಬಾಪೂಜಿಯ ದೊಡ್ಡದಾದ ಭಾವಚಿತ್ರ ಒಂದಿದೆ. ಅದೇ ವಿನೀತನಿಗೂ ಇತರರಿಗೂ ಪಥದರ್ಶನವೀಯುವ ಚೇತನ. ಹೀಗೆಯೇ ಮುಂದಿನ ಎಲ್ಲಾ ಗ್ರಾಮಗಳ ರೂಪರೇಖೆಯಾಗಬಹುದೇನೋ! ಹಾಗಾದರೆ ಮಂದಿರದಲ್ಲಿರುವ ಆ ಪವಿತ್ರ ಭಾವಚಿತ್ರಕ್ಕೆ ಮನಶಾಂತಿ ದೊರೆಯಬಹುದು

ರೈತನ ಪ್ರಪಂಚ

ಬಾಳೆಯ ಬೆಳೆ.

ಲೇ:- ಶ್ರೀ ರಾಮಕೃಷ್ಣ ಹೆಗಡೆ ದೊಡ್ಡಮನೆ.

'ಹಿತ್ತಲಿನ ಹುಣಸೆಗೆ ಹುಳಿ ಕಡಿಮೆ' ಎನ್ನುವ ಗಾದೆಯ ಮಾತಿನಂತೆ ಸುಲಭ ಪ್ರಾಪ್ಯವಾದ ವಸ್ತುವಿನ ಯೋಗ್ಯವಾದ ಬೆಲೆಯನ್ನು ನಾವು ಬಹು ತರವಾಗಿ ಅರಿಯುವದಿಲ್ಲ. ದೂರದ ವಸ್ತುವಿಗೆ ಹೃಚಾಚುವದು ಮಾನವನ ಹುಟ್ಟುಗುಣ. ಅಪ್ರಾಪ್ಯಕ್ಕಾಗಿ ದುಃಖವನ್ನಾದರೂ ಸಹಿಸಿಯಾನು ಆದರೆ ಇದ್ದುದನ್ನೇ ಸರಿಯಾಗಿ ಉಪಯೋಗಿಸಿ ಸಂತೃಪ್ತಿಪಟ್ಟುಕೊಳ್ಳಲಾರ.

ನಾನು ಹೇಳ ಹೊರಟ ಬಾಳೆಯ ಹಾಡೂ ಇಂತಹದೇ. ಬಾಳೆಯ ನಿಜವಾದ ಬೆಲೆಯನ್ನು ಅರಿತವರು ಬಹಳ ಕಡಿಮೆ, ಇದಕ್ಕೆ ಬಾಳೆಯು ಸದಾ ಸರ್ವದಾ ಲಭ್ಯವಾಗುವ ಅಪರಾಧವೇ ಕಾರಣವಾಗಿರಬೇಕು ರುಚಿಯಾಗಲಿ, ಗುಣದಲ್ಲಾಗಲಿ, ವೈವಿಧ್ಯದಲ್ಲಾಗಲೀ ಇದು ಬೇರೆ ಯಾವ ಹಣ್ಣಿಗೂ ಕಡಿಮೆಯಿಲ್ಲ. ಅಷ್ಟೇಕೆ, ನಿಜವಾಗಿ ಹೇಳಬೇಕಾದರೆ ಸರ್ವೋತ್ತಮವೇ ಸರಿ. ಆದರೆ ಜನರು ಮಾತ್ರ ವರ್ಷಕ್ಕೆ ಕೆಲವಾರು ತಿಂಗಳು ಸಿಗುವ ಮಾವು, ಪೇರಳೆ ನೇರಳೆಗಳನ್ನೋ ಇಲ್ಲವೇ ವಿಲಾಯತಿಯ ಅರ್ಕ ತಾಗಿದ ಕಿತ್ತಳೆ, ದ್ರಾಕ್ಷಿಗಳನ್ನು ಹೊಗಳಿ ಹಾಡುತ್ತಾರೆ.

ಫಲರಾಜ

ಭಗವಾನ್ ಶ್ರೀಕೃಷ್ಣನು ಗೀತೆಯ ಹತ್ತನೆಯ ಅಧ್ಯಾಯದಲ್ಲಿ 'ಹಣ್ಣುಗಳಲ್ಲಿ ಬಾಳೆ ನಾನು' ಎಂದು ವಿಸ್ತಾರ ಭಯದಿಂದ ಹೇಳದಿದ್ದರೂ ಇಲ್ಲವೇ ಹೇಳಲು ಮರೆತಿದ್ದರೂ, ದೇವರ ನೈವೇದ್ಯಕ್ಕೆ ಉಳಿದ ಎಲ್ಲಾ ಹಣ್ಣುಗಳನ್ನು ಬಿಟ್ಟು ಬಾಳೆಯ ಹಣ್ಣನ್ನೇ ಅರ್ಪಿಸುವ ನಮ್ಮ ರೂಢಿಯೊಂದೇ ಬಾಳೆಯು ಪ್ರಧಾನ ಫಲವೆಂಬದನ್ನು ಸಿದ್ಧಪಡಿಸಲು ಸಾಕು. ಇದಂತೂ ರೂಢಿಯ ಮಾತಾಯಿತು. ಇನ್ನು ಆಧುನಿಕ ದೃಷ್ಟಿಯಿಂದ ನೋಡಿದರೂ ಅಷ್ಟೆ. ದೇಹದ ಬೆಳವಣಿಗೆಗೆ ಬೇಕಾಗುವ ಎಲ್ಲಾ ಮುಖ್ಯವಾದ ಪೋಷಣ ದ್ರವ್ಯಗಳೂ ಇದರಲ್ಲಿವೆ. ಅಷ್ಟೇ ಅಲ್ಲ, ವಿಪುಲವಾಗಿವೆ. ಬೇರೆ ಹಣ್ಣುಗಳಲ್ಲಿ ಇಂಥ ಒಂದೆರಡು ಬಗೆಯ ದ್ರವ್ಯಗಳಿದ್ದರೆ ಬಹಳವಾಯಿತು. ಬಾಳೆಯ ಹಣ್ಣಿನಲ್ಲಿ ವಿಟಾಮಿನ್ ಎ. ಬಿ ಸಿ. ಡಿ. ಮತ್ತು ಇ ಹಾಗೂ ಪ್ರೊಟೀನ್, ಫಾಸ್ಫೋರಸ್, ಸುಣ್ಣ ಮತ್ತು ಲೋಹಗಳು ದೊಡ್ಡ ಪ್ರಮಾಣದಿಂದ ದೊರೆಯುವವು. ಇದರ ಹೊರತಾಗಿ ಹಣ್ಣಿನ ಸಹಜವಾದ 'ಸಿಹಿ' (Sugar) ಯಂತೂ ಇದ್ದೇ ಇದೆ 'ಹಸಿದು ಹಲಸು, ಉಂಡು ಬಾಳೆ' ಎನ್ನುವಂತೆ ಊಟದ ಜೊತೆಗಾಗಲಿ, ತದನಂತರವಾಗಲೀ ಬಾಳೆಯ ಹಣ್ಣಿನ ಮಿತವಾದ ಸೇವನೆಯು ಆರೋಗ್ಯಕ್ಕೆ ಬಹಳ ಹಿತಕಾರಿಯಾದದ್ದು. ಕಠಿಣ ಕೆಲಸಮಾಡುವವರಿಗೆ ತುಸು ಹಾಲಿನೊಂದಿಗೆ ತಕ್ಕಷ್ಟು ಬಾಳೆಯ ಹಣ್ಣು ಪರ್ಯಾಪ್ತ ಆಹಾರವಾಗಬಹುದು. ಮೇಲೆ ಹೇಳಿದಂತೆ ಇದರಲ್ಲಿ ಎಲ್ಲಾ ಪೋಷಣ ದ್ರವ್ಯ ಇರುವದರಿಂದ ಬಾಳೆಯ ಹಣ್ಣಿನ ಸೇವನೆಯು ನಮ್ಮ ಆಹಾರವನ್ನು ಸಮತೂಕ (Balanced diet) ವನ್ನಾಗಿ ಮಾಡಲು ಸಹಾಯಕವಾಗುವದು. ನಮ್ಮ ನಿತ್ಯದ ಆಹಾರದಲ್ಲಿ ಕೊರತೆಯಾಗುವ ದ್ರವ್ಯಗಳನ್ನು ಇದು ತುಂಬುವದು. ಇದರಲ್ಲಿ ಹಾಲಿನಲ್ಲಿ ದೊರೆಯುವ ಮತ್ತು ಮೊಟ್ಟೆಯಲ್ಲಿರುವ ಗುಣಗಳೂ ಕೂಡಿರುವದರಿಂದ ನಿರಾಮಿಷರಿಗೂ ಮತ್ತು ಹಾಲನ್ನು ಕೊಳ್ಳಲಾರದವರಿಗೂ ಇದು ಒಳ್ಳೆಯದು. ಹಾಲು ದೊರೆಯದ ಬಡವರಿಗೂ ಅನುಕೂಲವಾದುದು ಅತಿಸಾರಕ್ಕೂ ಅಗ್ನಿಮಾಂದ್ಯಕ್ಕೂ ಇದು ಔಷಧ ಮಲಬದ್ಧತೆಗೆ ಇದು ಮದ್ದು. ದಪ್ಪಗಿರುವವರನ್ನು ತೆಳ್ಳಗೆ, ತೆಳ್ಳಗಿರುವವರನ್ನು ದಪ್ಪಗೆ ಮಾಡುವ ಸಾಮರ್ಥ್ಯ ಇದರಲ್ಲಿದೆ. ವರ್ಷದ ಎಲ್ಲಾ ಋತುಗಳಲ್ಲೂ ಬೆಳೆಯುವ ಈ ಹಣ್ಣು ಸಾಮಾನ್ಯವಾಗಿ ಭಾರತದ ಎಲ್ಲಾ ಕಡೆಗಳಲ್ಲೂ ಸಿಗುವದು.

ಇತಿಹಾಸ

ಭಾರತದ ವಿಶೇಷ ಫಲವಾದ ಬಾಳೆಗೆ ಉಜ್ವಲವಾದ ಇತಿಹಾಸವಿದೆ. ಕ್ರಿ. ಪೂ. ೩೨೭ರಲ್ಲಿ ಸಿಕಂದರನಿಗೆ ಸಿಂಧದ ಕಂದರದಲ್ಲಿ ಬಾಳೆಯ ಮರಗಳು ಕಂಡಿದ್ದವಂತೆ. ನಂತರ ಅರಬರು ಇದನ್ನು ಪ್ಯಾಲೆಸ್ತೈನ್ ಈಜಿಪ್ತ ಮೊದಲಾದೆಡೆ ಒಯ್ದರು. ಆದರೆ ಇದರ ಬಾಹುಳ್ಯ ಇಂದಿಗೂ ಭಾರತದಲ್ಲಿ ಉಳಿದಿದೆ ಭಾರತದಲ್ಲಾದರೂ ಮದ್ರಾಸಿಗೆ ಪ್ರಥಮ ಸ್ಥಾನ. ಮದ್ರಾಸ್ ಪ್ರಾಂತದಲ್ಲಿ ಎಲ್ಲಕ್ಕಿಂತ ಹೆಚ್ಚು ಅಂದರೆ ೧,೨೫,೦೦೦ ಎಕರೆ ನೆಲದಲ್ಲಿ ಇದನ್ನು ಬೆಳೆಯಲಾಗುತ್ತಿದೆ. ನಂತರ ಬರುವದು ಬಂಗಾಲ. ಇಲ್ಲಿ ೪೪,೬೦೦ ಎಕರೆ ಭೂಮಿಯನ್ನು ಈ ಬೆಳೆ ಆಕ್ರಮಿಸಿದೆ. ಇವಲ್ಲದೆ ಆಸಾಮ, ಒರಿಸಾ, ಬಿಹಾರ್ ಮುಂಬಯಿಯ ಕರಾವಳಿ ಪ್ರದೇಶಗಳಲ್ಲೂ ಇದು ವಿಪುಲವಾಗಿ ಬೆಳೆಯುತ್ತದೆ.

ಬಾಳೆಯ ಎಲ್ಲಕ್ಕೂ ದೊಡ್ಡ ವಿಶೇಷತೆ ಏನಂದರೆ ಅದು ಕಡಿಮೆ ಖರ್ಚಿನಿಂದ ಅಪಾರ ಹೆಚ್ಚು ಪ್ರಮಾಣದಿಂದ ಉತ್ಪನ್ನವಾಗುವ ಫಲ. ಇದಕ್ಕೆ ಶ್ರಮ ವೂ ಹೆಚ್ಚಿನ ಬೇಕಾಗಿಲ್ಲ. ಉತ್ತರ ಕನ್ನಡ ಜಿಲ್ಲೆಯ ಘಟ್ಟದ ಮೇಲಿನ ತಾಲೋಕ ಗಳಲ್ಲಿ ಅಡಿಕೆಯ ತೋಟದಲ್ಲೇ ಬಾಳೆಯನ್ನು ಬೆಳೆಯಲಾಗುತ್ತಿದೆ ಒಮ್ಮೆ ತೋಟಗಾರನು ಸಸಿಯನ್ನು ನೆಟ್ಟನೆಂದರೆ, ತಿರುಗಿ ಬೆಳೆದ ಕೊನೆಯನ್ನು ಕೊಯ್ಯಲು ಕತ್ತಿ ತೆಗೆದುಕೊಂಡೇ ಅವನು ಅತ್ತ ಹೊರಳುವದು. ಅದಕ್ಕೆ ಗೊಬ್ಬರವಾಗಲಿ ಉಳಿದಾವ ವಿಶೇಷ ಆರೈಕೆಯಾಗಲಿ ಬೇಕಾಗಿಲ್ಲ.

ಉಳಿದ ಬೆಳೆಗಳೊಡನೆ ತುಲನೆ ಮಾಡಿದರೆ ಕೆಲರಿ (Calorie) ಗಳ ಲೆಕ್ಕದಿಂದ ಬಾಳೆಯ ಬೆಳೆಯೇ ಸರ್ವಪ್ರಥಮವಾದುದು. ಸಾಮಾನ್ಯವಾಗಿ ಒಂದು ಎಕರೆ ಜಮೀನಿನಲ್ಲಿ ಬೆಳೆಯುವ ಬಾಳೆಯ ಕೆಲರಿಗಳು ೫೦,೦೦,೦೦೦ಕ್ಕಿಂತಲೂ ಮಿಕ್ಕಿರುತ್ತವೆ. ಇದರಲ್ಲಿ ಎರಡನೇ ನಂಬರು ಗಣಿಸಿದರು. ಅಷ್ಟೇ ನೆಲದಲ್ಲಿ ಉತ್ಪನ್ನವಾಗುವ ಗೆಣಸಿನಲ್ಲಿ ನಮಗೆ ೩೮,೮೦,೦೦೦ ಕೆಲರಿಗಳು ಸಿಗುತ್ತವೆ. ಅದೇ ಅಕ್ಕಿಯಲ್ಲಿ ೧೨,೮೨,೨೦೦ ಮತ್ತು ಗೋಧಿಯಲ್ಲಿ ೧೨,೬೦,೦೦೦ ಮಾತ್ರ ದೊರೆಯುತ್ತವೆ. ಒಂದು ಎಕರೆ ಭೂಮಿಯಲ್ಲಿ ಉತ್ಪನ್ನವಾಗುವ ಬಾಳೆಯಲ್ಲಿ ಅಷ್ಟೇ ಜಾಗದಲ್ಲಿ ಬೆಳೆಯುವ ಅಕ್ಕಿ, ಗೋಧಿ, ಬಟಾಟೆ, ಗೆಣಸು ಮೊದಲಾದವುಗಳಿಂದ ದೊರೆಯುವದಕ್ಕಿಂತ ಹೆಚ್ಚು ಪ್ರೊಟೀನ್ ಮತ್ತು ಕಾರ್ಬೋಹೈಡ್ರೇಟುಗಳು ದೊರೆಯುತ್ತವೆ. ಸರಿಯಾಗಿ ಬೆಳೆದರೆ ಒಂದು ಎಕರೆಯಲ್ಲಿ ಒಂದು ವರುಷಕ್ಕೆ ಸಾಮಾನ್ಯವಾಗಿ ೬೦,೦೦೦ ಪೌಂಡು ಬಾಳೆಯ ಹಣ್ಣು ಉತ್ಪನ್ನವಾಗುತ್ತದೆ.

ವೈವಿಧ್ಯ.

ನಮ್ಮ ವಿಶಾಲ ದೇಶದಲ್ಲಿ ಒಂದೇ ವಸ್ತುವೂ ಹವಾಮಾನಕ್ಕೆ ತಕ್ಕಂತೆ ವಿಭಿನ್ನ ರೂಪ ಧಾರಣೆಮಾಡಿಕೊಂಡು ಕಂಗೊಳಿಸುವದೇನೂ ಆಶ್ಚರ್ಯವಲ್ಲ. ಆದರೆ ಬಾಳೆಯಲ್ಲಿ ತೋರುವ ವಿವಿಧತೆಯು ಬಹುತರ ಉಳಿದಾವ ವಸ್ತುವಿನಲ್ಲೂ ಕಂಡುಬರಲಿಕ್ಕಿಲ್ಲ. ಆಸಾಮದ 'ಚಂಪಾ' ಜಾತಿಯ ಬಾಳೆಯು ಒಂದೂವರೆ ಇಂಚಿನಷ್ಟು ಚಿಕ್ಕದು. ಎಲ್ಲಾ ಜಾತಿಯ ಬಾಳೆಗಳೂ ಹಣ್ಣುಮಾಡಿ ತಿನ್ನಲು ಬಾರವು. ಕೆಲವು ಕಾಯಿ ಇದ್ದಾಗಲೇ ಉಪಯೋಗಿಸಲ್ಪಡುವವು. ಮದ್ರಾಸಿನಲ್ಲಿ 'ಪಾವನ' ಜಾತಿಯ ಬಾಳೆಯು ಹಸರಾದದ್ದಾದರೆ ಮಲಬಾರಿನ 'ನೇಂದ್ರ' ಮತ್ತು ಬಂಗಾಲದ 'ಸಾಬರ' ಜಾತಿಯ ಬಾಳೆಯು ಆದಕ್ಕೆ ಸರಿಜೋಡಿಯಾದದ್ದು. ಉತ್ತರ ಕನ್ನಡದಲ್ಲಿ 'ರಸಬಾಳೆ' ಯು ರುಚಿಯಲ್ಲಿ ಉತ್ಕೃಷ್ಟವಾದುದಾದರೂ ಬಾಯಲ್ಲಿಟ್ಟರೆ ನೀರಾಗುವ 'ಸೀದು ಬಾಳೆ' ಯು ಅದರ ಹಿಂದೆ ಬೀಳಲಾರದು. ಇದಲ್ಲದೆ ಹಪ್ಪಳಕ್ಕೆ 'ಕರಿಬಾಳೆ', ಪಲ್ಲೆಯಕ್ಕೆ 'ಚಂದ್ರಬಾಳೆ' ಮೊದಲಾದ ನಿರ್ದಿಷ್ಟ ಜಾತಿಗಳ ನಿರ್ದಿಷ್ಟ ಉಪಯೋಗಕ್ಕೆ ಮೀಸಲಾಗಿವೆ.

ಸರ್ವೋಪಯೋಗಿ.

'ಇದ್ದರೂ ಸಾವಿರ, ಬಿದ್ದರೂ, ಸಾವಿರ, ಎಂದು ಆನೆಯ ಸಂಬಂಧವಾಗಿ ಜನರು ಹೇಳುವದುಂಟು. ಅದರಂತೆ ಬಾಳೆಯೂ ಕೂಡ ಬಾಳೆ ಎರದು ಬುಡದಿಂದ ತುದಿಯ ವರೆಗಿನ ಯಾವದೊಂದು ಚಿಕ್ಕ ಭಾಗವೂ ವ್ಯರ್ಥವಾಗುವದಿಲ್ಲ. ಬಾಳೆಯ ಕಾಯಿ ಹಣ್ಣುಗಳನ್ನು ಬಿಡಿ, ಬಾಳೆಯ ಎಲೆಯು ಊಟಕ್ಕೂ ದೊನ್ನೆ (ದ್ರೋಣ) ಗೂ ಉಪಯೋಗವಾಗುವದಲ್ಲದೆ ತೋಟಿಗರು ಅದನ್ನು ತೋಟದಲ್ಲಿ ಕಳೆಯಾಗದಿರಲು ಮಣ್ಣನ್ನು ಮುಚ್ಚಲಿಕ್ಕೂ ಬಡವರು ಗುಡಿಸಲನ್ನು ಹೊಚ್ಚಲಿಕ್ಕೂ ಉಪಯೋಗಿಸುವರು. ಇದಕ್ಕೂ ಮಿಕ್ಕದರೆ ಅದು ದನಗಳಿಗೆ ಮೇವೂ ಆಹುದು. ಇನ್ನು ಬಾಳೆಯ ಗೊನೆಯಿಂದ ಉದ್ದವಾಗಿ ಜೋತಾಡುವ ಕುಂಡಿಗೆಯೇನು ನಿರುಪಯೋಗಿಯೆಂದು ಎಣಿಸಿದಿರೆ? ನಿಶ್ಚಯವಾಗಿಯೂ ಇಲ್ಲ ಅದನ್ನು ಸುಲಿದು ಅದರ ಒಳಗಿನ ತಿರುಳಿನಿಂದ ಮಾಡಿದ ಪಲ್ಲೆಯದ ಸವಿಯನ್ನು ಏನೆಂದು ಹೇಳಲಿ! ಅದೇ ಸುಲಿದ ಸಿಪ್ಪೆಗಳನ್ನು ಒಂದೆರಡು ಕಟ್ಟಿಗೆಯ ತುಂಡುಗಳೊಡನೆ ನೀರಿನಲ್ಲಿ ಹಾಕಿ ಬಿಸಿಲಿನಲ್ಲಿಡಿ. ಕೆಲವು ದಿನಗಳ ಮೇಲೆ ನೀವು ಅದನ್ನು ಪುನಃ ನೋಡಿದಾಗ ನಿಮಗದರಲ್ಲಿ ಕಪ್ಪಗಿನ ಮಸಿಯು ಕಂಡುಬರುವದು. ಇದನ್ನು ಮನೆಗೆ ಬಳಿಯಲೂ, ಖಾತೆ ಕಿರ್ದಿ ಬರೆಯಲೂ ಉಪಯೋಗಿಸುತ್ತಾರೆ. ತೋಟಿಗರ ಬಾಳೆಯ ಕಂಬವನ್ನು ಸುಲಿದು ಒಣಗಿಸಿ ಅಡಿಕೆಗೆ ಕೊಟ್ಟೆ ಕಟ್ಟಲು ಉಪಯೋಗಿಸಿದರೆ ಅದರ ಒಳಗೆ ಹೊರಳು ತಿಂಡನ್ನು ಬೇಯಿಸಿ ಊಟಕ್ಕೆ ಒಂದು ಒಳ್ಳೆಯ ಪದಾರ್ಥವನ್ನಾಗಿ ಉಪಯೋಗಿಸುತ್ತಾರೆ. ಇನ್ನು ಬಾಳೆಯ ಕಾಯಿಯನ್ನೂ ಹಣ್ಣು ಮಾಡದೇ ಅನೇಕ ವಿಧವಾಗಿ ಉಪಯೋಗಿಸಬಹುದು. ಬಾಳೆಯ ಕಾಯಿಯ ಹದದಿಂದ ಮಾಡಿದ ಪಲ್ಲೆಯು ಬಟಾಟೆ ಭಾಜಿಗೆ ಸಾಟಿಯಲ್ಲ ಕಾಯಿಯಿಂದ ಹಪ್ಪಳ. ಅಪರಾಹ್ನದ ಚಹಾದ ಜೊತೆಗೆ ನೀವು ಎಲ್ಲದಕ್ಕಿಂತ ಹೆಚ್ಚಿಗೆ ಮೆಚ್ಚುವದು ಬಾಳೆಯ 'ಬಾಳ್ಕ' ವನ್ನೇ ಬಡಬಗ್ಗರು ಬಾಳೆಕಾಯಿಯನ್ನು ಒಣಗಿಸಿ ಹಿಟ್ಟು ಮಾಡಿ ಉಪಯೋಗಿಸುವದುಂಟು. ಮತ್ತು ಅದರ ಸಿಪ್ಪೆಯ 'ಗೊಜ್ಜು'ನ್ನೂ ಮಾಡುತ್ತಾರೆ. ಹಣ್ಣಿನದೂ ಮತ್ತಗೆ ಮೆಲ್ಲುವದರ ಹೊರತಾಗಿ 'ಸೀಕರಣೆ' (ರಸಾಯನ) ಆದಾಗಿ ಉಪಯೋಗವಾಗುತ್ತದೆ. ಹಣ್ಣನ್ನು ಒಣಗಿಸಿ ಮಾಡಿದ 'ಸುಕೇಳಿ'ಯು ಪ್ರವಾಸದಲ್ಲಿ ಬಹು ಒಳ್ಳೆಯದಾದ ಆಹಾರ ಮತ್ತು ಬೇನೆ ಬಿದ್ದು ಎದ್ದವನಿಗೆ 'ಟಾನಿಕ.'

ಬಾಳೆಯು ಸಾಮಾನ್ಯವಾಗಿ ಬೆಳೆದಲ್ಲೇ ಹೆಚ್ಚು ಖರ್ಚಾಗುತ್ತದೆ. ಬಾಳೆಯ ಹಣ್ಣನ್ನು ತಿನ್ನುವದರಲ್ಲಿ ತೂರರು ಮದ್ರಾಸ ಪ್ರಾಂತದವರೇ. ಅಲ್ಲಿ ಪ್ರತಿಯೊಬ್ಬ ವ್ಯಕ್ತಿಯು ವರ್ಷ ಒಂದಕ್ಕೆ ೫೧೬ ಪೌಂಡು ಬಾಳೆಯನ್ನು ಉಪಯೋಗಿಸುತ್ತಾನೆ. ಅದೇ ಬಂಗಾಲದಲ್ಲಿ ತಲೆಗೆ ೮೭ ಪೌಂಡಿನಂತೆ ಖರ್ಚಾಗುತ್ತದೆ. ಎಲ್ಲಕ್ಕಿಂತ ಕಡಿಮೆ ಸಂಯುಕ್ತ ಪ್ರಾಂತದಲ್ಲಿ. ಇಲ್ಲಿ ತಲೆಗೆ ಕೇವಲ ೧೨ ಪೌಂಡು ಮಾತ್ರ. ಇಷ್ಟು ದೊಡ್ಡ ಭೇದಕ್ಕೆ ಹವಾಮಾನದಷ್ಟೇ ವಾಹನ ಸೌಕರ್ಯದ ಅನಾನುಕೂಲತೆಯೂ ಕಾರಣ.

ನಮ್ಮ ದೇಶದಲ್ಲಿಂದು ಅನ್ನದ ಕೊರತೆ ಬಹಳವಾಗಿದೆ. ಬರಗಾಲವನ್ನು ದೂರ ಮಾಡಲು, ಔದ್ಯೋಗಿಕ ವಿಕಾಸಕ್ಕಾಗಿ ವೆಚ್ಚ ಮಾಡಬೇಕಾದ ಧನವನ್ನು ವೆಚ್ಚ ಮಾಡುವ ಪ್ರಸಂಗ ಸರಕಾರಕ್ಕೆ ಬಂದಿದೆ. ಕಳೆದ ೪-೬ ವರ್ಷಗಳಿಂದ ಸರಕಾರದ ವತಿಯಿಂದ 'ಹೆಚ್ಚಿಗೆ ಬೆಳೆಯಿರಿ' ಪ್ರಚಾರವು ಎಡೆಬಿಡದೆ ನಡೆದಿದ್ದರೂ ಹೇಳಿಕೊಳ್ಳುವ ಪ್ರಯೋಜನವೇನೂ ಕಂಡುಬರುತ್ತಿಲ್ಲ. ಈಗಂತೂ ನಮ್ಮ ಸರಕಾರವು ೧೯೫೧ ರೊಳಗಾಗಿ ಆಹಾರದ ವಿಷಯದಲ್ಲಿ ಸ್ವಾವಲಂಬಿಯಾಗಲು ಕೃತನಿಶ್ಚಯಿಯಾಗಿದೆ. ಹೀಗಿರುವಾಗ ನಾವು ಧಾನ್ಯ ದವಸಗಳನ್ನು ಹೆಚ್ಚಾಗಿ ಬೆಳೆಯುವದರ ಜೊತೆಗೆ ಅವುಗಳಲ್ಲಿಯ ದ್ರವ್ಯಗಳನ್ನೊಳಗೊಂಡಿರುವ ಉಳಿದ ಆಹಾರ ಪದಾರ್ಥಗಳನ್ನೂ ಬೆಳೆಯುವದರತ್ತ ಗಮನ ಕೊಡಬೇಕು. ಇಂತಹ ಪದಾರ್ಥಗಳಲ್ಲಿ ಬಾಳೆ, ಗೆಣಸು, ಬಟಾಟೆ ಮೊದಲಾದವುಗಳು ಬರುತ್ತವೆ. ಮೇಲೆ ವಿವರಿಸಿದಂತೆ ಬಾಳೆಯು ಸುಲಭವಾಗಿ ಹೆಚ್ಚು ಪ್ರಮಾಣದಿಂದ ಬೆಳೆಯುತ್ತದೆ. ಬಾಳೆಯ ಬೆಲೆಯನ್ನು ನಾವು ಇನ್ನಾದರೂ ಅರಿಯಬೇಕು. ತೋಟಿಗಾರರು ಬಾಳೆಯನ್ನು ಹೆಚ್ಚು ಬೆಳೆಯುವದರ ಜೊತೆಗೆ ಪಟ್ಟಣಿಗರು ತಮ್ಮ ನಿತ್ಯದ ಆಹಾರದಲ್ಲಿ ಬಾಳೆಯನೂ ಒಂದು ಆವಶ್ಯಕ ಅಂಗವಾಗಿ ತಿಳಿಯಬೇಕು. ಆದ್ದರಿಂದ ಜನರ ಆರೋಗ್ಯವೂ ಸುಧಾರಿಸುವದಲ್ಲದೆ ದೇಶದ ಆಹಾರ ತುಟಾಗ್ರತೆಯೂ ಕಡಿಮೆಯಾಗುವದು.

'ಕರ್ಮವೀರ'

ಕೊಡಗನ್ನು ಕಂಡು……

ಲೇ:- ಶ್ರೀ "ಸೌರಭ" ಪುತ್ತೂರು.

"ಸೀಟ್ ಇಲ್ಲ ಸ್ವಾಮಿ" ಎಂದೊಡನೆಯೇ ಸಿಡಿಲು ಹೊಡೆದಂತಾಯಿತು ನನಗೆ. ವೀರರಾಜೇಂದ್ರನಾಳಿದ ಕೊಡಗು, ಲಿಂಗರಾಜನ ಕೊಡಗು, ನಿಸರ್ಗದೇವಿಯ ಹಿರಿಕುವರಿ ಕೊಡಗು, ಅವಳನ್ನು ನೋಡಬೇಕು, ಕೊಡಗು ಬಾಂಧವರೊಡನೆ ಒಡನಾಡಬೇಕು, ಅಲ್ಲಿಯ ಪಕ್ಷಿಗಳ ಮಧುರ ಗಾಯನ ಕೇಳಬೇಕು, ಮಲೆಗಳ ಹೂವಿನ ಕಂಪು ಹೊತ್ತು ಬೀಸುವ ತಂಗಾಳಿಗೆ ಮೈ ಒಡ್ಡಬೇಕು, ಎಂದು ಆನಂದ ತುಂಬಿದವನಾಗಿ ಪುತ್ತೂರಿನಿಂದ ಹೊರಟ ನನಗೆ ಏಜೆಂಟರು 'ಸೀಟ್ ಇಲ್ಲ ಸ್ವಾಮಿ ...' ಎಂದೊಡನೆಯೇ ಎಷ್ಟು ಬೇಸರವಾಗದಿರದು!

ಕೊನೆಗೆ ಹೇಗೋ ಒಂದು ಟಿಕೇಟು ಪಡೆದುಕೊಳ್ಳಲು, ಏಜೆಂಟರೊಂದಿಗೆ ಭಟ್ಟರ 'ಕೆಫೆ' ಹೊಕ್ಕು ಹನ್ನೆರಡು ಆಣೆ ಕಾಣಿಕೆ ಹಾಕಬೇಕಾಯಿತು ಆದರೆ ಅದೊಂದು ನಷ್ಟವೆಂದು ನಾನು ಪರಿಗಣಿಸಲೇ ಇಲ್ಲ. ಮುಖ್ಯ ನನಗೆ ಮಡಿಕೇರಿಗೆ ತಲುಪಬೇಕು. ಅದಕ್ಕಾಗಿ ಮತ್ತೆ ಅಷ್ಟು ನಷ್ಟ ಮಾಡಿಕೊಳ್ಳುವುದಕ್ಕೂ ಸಿದ್ಧನಿದ್ದೆ.

ಮಾರ್ಗದ ಧೂಳನ್ನೆಬ್ಬಿಸುತ್ತ, ಮಿಂಚಿನ ವೇಗದಿಂದ ಮೋಟಾರು ಹೊರಟಿತು. ಮುಂಜಾನೆ, ನೇಸರನು ಆಗತಾನೆ ಉದಯಿಸಿದ್ದನಷ್ಟೆ! ಮಾರ್ಗದ ಪಕ್ಕದ ಹಸುರು ಹೊಲಗಳ ಮೇಲೆ ಎಳೆಕಿರಣಗಳು ಚೆನ್ನಾಟವಾಡುತ್ತಿದ್ದವು. ಬೀಸುವ ತಂಗಾಳಿಗೆ ಅನುವಾಗಿ ಪೈರುಗಳು ತೊನೆಯುತ್ತಿದ್ದುವು ಕೆಲವೊಂದು ಹಕ್ಕಿಗಳ ಗಾಯನ ಆಗಲೇ ಮೊದಲಾಗಿತ್ತು. ಮಾರ್ಗದ ಪಕ್ಕಗಳಲ್ಲಿ ಮೇವಿಗಾಗಿ ದನಗಳು ಸಾಲಾಗಿ ಹೋಗುತ್ತಿದ್ದು ಶಿಸ್ತು ನಮ್ಮಿಂದ ಕಲಿತುಕೊಳ್ಳಿರಿ ಎನ್ನುವಂತಿತ್ತು. ನೇಸರನು ಮೇಲೇರಿದಂತೆ ಮೋಟಾರು ಸಂಪಾಜೆಯ ಗಡಿದಾಟಿ ಮಡಿಕೇರಿಗೆ ಏರತೊಡಗಿತ್ತು. ಸೆಖೆಯಿಂದ ಬೆವರುತ್ತಿದ್ದ ನಮಗೆ ಮೇಲೇರಿದಂತೆ ತಂಗಾಳಿಯ ಸ್ಪರ್ಶದಿಂದ ಮನಸ್ಸಿಗೆ ಆಹ್ಲಾದವಾಗುತ್ತಿತ್ತು. 'ಈ ರಾಜ್ಯಕ್ಕೆ ನಾವೇ ಒಡೆಯರು' ಎನ್ನುವಂತೆ ತಲೆಯೆತ್ತಿ ನಿಂತ ಹಿರಿದಾದ ಮರಗಳು ಅಕ್ಕಪಕ್ಕದಲ್ಲಿ ಬೆಳೆದು ನಿಂತ ಹಸುರು ಪೊದೆಗಳು, ಅಲ್ಲಲ್ಲಿ ಕಾಣಬರುತ್ತಿದ್ದ ರಬ್ಬರ್ ತೋಟಗಳು, ಕೊಡಗಿನ ಬೆಡಗನ್ನು ನೋಡು ಎಂದು ನನಗಾಗಿ ಹೇಳುವಂತೆ ಭಾಸವಾಗುತ್ತಿತ್ತು ನನಗೆ. ಸೂರ್ಯನ ಕಿರಣಗಳಂತೂ ಹಸುರು ಕಾಡನ್ನು ಹೊಕ್ಕು, ಕಾಡಿನ ಸೌಂದರ್ಯವನ್ನು ಮತ್ತೂ ಹೆಚ್ಚಿಸುತ್ತಿದ್ದುವು.

ಮಡಿಕೇರಿಗೆ ತಲುಪಿದೆವು. ಬಾಗಿಲಲ್ಲೇ ಕೊಡಗಿನ ಕಲಾ ವೈಶಿಷ್ಟ್ಯವನ್ನು ಎತ್ತಿ ತೋರಿಸಲು ನಿಂತ ನಿದರ್ಶನದಂತಿದ್ದ ಕೋಟೆ 'ಬಂದಿರಾ?' ಎಂದು ಆದರದಿಂದ ಸ್ವಾಗತಿಸಿದಂತೆ ಎನಿಸಿತು ನಮಗೆ.

ಪ್ರಯಾಣದ ಆಯಾಸ, ಊಟ ಉಪಚಾರಗಳನ್ನು ಗೆಳೆಯ ಡಾಕ್ಟರರೊಬ್ಬರಲ್ಲಿ ತೀರಿಸಿಕೊಂಡೆವು. ಸಂಜೆ ಮತ್ತೆ ಊರು ಸುತ್ತಾಡತೊಡಗಿದೆವು ರಾಜಾ ಸೀಟು, ಅಲ್ಲದೆ ಹಳೆಯ ಅರಸರ ನೆನಪಿಗೆ ಕಟ್ಟಿಸಿದ ಗದ್ದುಗೆ, ವಿಶಾಲ ಹೃದಯದ ಪವಿತ್ರ ಮೂರ್ತಿ, ಓಂಕಾರೇಶ್ವರನ ದರ್ಶನವನ್ನೂ ಮಾಡಿದೆವು.

ಕೊಡಗಿನ ಬಾಂಧವರದು ಅವರದೇ ಒಂದು ರೀತಿ—ನೀತಿ—ನಡೆ—ನುಡಿ ಕೊಡಗಿನ ಯಾವ ಮೂಲೆಗೆ ಹೋದರೂ ಕೇಳಿಸುವುದು ಕನ್ನಡದ ಮಧುರ ಧ್ವನಿ ಅವರಿಗೆ ಕನ್ನಡದ ಮೇಲಿನ ಅಸಮಾನ ಪ್ರೀತಿಯ ಕುರುಹಾಗಿ 'ಜನ್ಮಭೂಮಿ' 'ಕೊಡಗು' ಸಾಪ್ತಾಹಿಕಗಳು ಪ್ರಕಟಿಸಲ್ಪಡುತ್ತಿವೆ ಮಾತ್ರವಲ್ಲದೆ 'ಸತ್ಯಾರ್ಥಿಯೇ' ಮೊದಲಾದ ಇನ್ನೂ ಅನೇಕ ಮಾಸಿಕಗಳೂ ಇವೆ

ಕೊಡಗು ಹಳೆಯ ಸಂಪ್ರದಾಯ ತೀರಾ ಬಿಟ್ಟಿಲ್ಲ. ವೇದಾಂತದಲ್ಲಿ ಜನಕ್ಕೆ ಅಭಿರುಚಿ ಹುಟ್ಟುವಂತೆ ಸಂಘವೊಂದು ದುಡಿಯುತ್ತಿದೆ. ಜನರು ಪವಿತ್ರ ಹೃದಯರಾಗುವಂತೆ ಇದು ಯತ್ನಿಸುತ್ತಿದೆ

ಅವರದೇ ಆದ ಒಂದು ರೀತಿಯಲ್ಲಿ ಉಡಿಗೆಯುಟ್ಟು ನಡೆಯುವ ಕೊಡವ ಸ್ತ್ರೀಯರ ಬೆಡಗು ನೋಡಬೇಕು. 'ದಾಸ್ಯ ನಮಗೆ ಸೇರದು' ಎನ್ನುವಂತೆ ಎದೆ ಮುಂದೆ ಮಾಡಿ ನಡೆಯುವ ಕೊಡವ ತರುಣರ ನಡಿಗೆ ನೋಡಿ ದಣಿಯಬೇಕು. ಹೌದು! ಸುಮ್ಮನೆ ಹಾಡಿಲ್ಲ ಪಂಜೆಯವರು.

"ಯಾರು ಪೂರ್ವದಿ ಸವಿದು ಮೆದ್ದರೊ
ಹುಲಿಯ ಹಾಲಿನ ಮೇವನು.
ಅವನೆ ತೀರಿ ಕಲ್ಪಾಟಕಾಗಿಯೇ
ಹಿಡಿದರೋ ಹೆಬ್ಬಾವನು."

ಕೊಡಗು ಸಂಪತ್ ಸಮೃದ್ಧಿಯಿಂದ ಕೂಡಿದನಾಡು. ಏಲಕ್ಕಿ ಕಾಫಿಯ ಬೀಡು. ಕೊಡಗು ಕಾಡುಗಳ ಉತ್ಪತ್ತಿ ವಿಪುಲವಾಗಿದೆ. ಕೊಡಗಿಗೆ ಕರ್ನಾಟಕದಲ್ಲಿ ಒಂದು ಶ್ರೇಷ್ಠ ಸ್ಥಾನವಿದೆ ಬೇಸಿಗೆಯ ತಾಣವಾಗಿ ಊಟಿಯ ಜೊತೆಗೆ ಕೊಡಗಿನ ಹೆಸರೂ ಹೇಳಬಹುದು.

ಕೊಡಗು ಸಾಮಾನ್ಯವಲ್ಲ ಪ್ರಸಿದ್ಧ ಕತೆಗಾರ್ತಿ ಗೌರಮ್ಮ (ಮಿಸೆಸ್ ಬಿ. ಟಿ. ಜಿ. ಕೃಷ್ಣ)ನ ಜನ್ಮಸ್ಥಳ. ಆದರೆ ಎಳೆ ಹರೆಯದಲ್ಲಿ ದುರ್ವಿಧಿ ಆಕೆಯನ್ನು ಕೊಂಡೊಯ್ದು ಕೊಡಗಿಗೆ ತುಂಬಲಾರದ ನಷ್ಟವನ್ನುಂಟುಮಾಡಿತು. ಈ ತನಕ ಐರೋಪ್ಯರಿಗೆ ಮೀಸಲಾಗಿರಿಸುತ್ತಿದ್ದ ಸ್ಥಾನವಾದ ಭಾರತದ ದಂಡನಾಯಕ ಪದವಿ, ಸ್ವತಂತ್ರ ಹಿಂದೂಸ್ಥಾನದಲ್ಲಿ ಕೊಡಗಿನ ಕಾರ್ಯಪ್ಪನವರಿಗೆ ಸಿಕ್ಕಿತು. ಇದು ಕೊಡಗಿಗೆಷ್ಟು ಹೆಮ್ಮೆಯೋ ಅಷ್ಟೇ ಕರ್ನಾಟಕಕ್ಕೂ ಹೆಮ್ಮೆಯ ಸಂಗತಿಯಾಗಿದೆ.

ಯಾವುದೇ ದೃಷ್ಟಿಯಿಂದ ಕೊಡಗನ್ನು ನೋಡಿದರೂ, ನಿಜಕ್ಕೂ ಕೊಡಗು [illegible]. ಇದೀಗ ಅಲ್ಲಿ ಸ್ಥಾಪಿತವಾದ ಕಾಲೇಜೂ, ಕೊಡಗರ ಸಾಹಸದ ಫಲ. ದೇಶಪ್ರೇಮಿಗಳಿಗೂ, ಸಮಾಜಸುಧಾರಕರಿಗೂ, ವೇದಾಂತಿಗಳಿಗೂ, ಹಾಗೂ ಕಲಾವಿದರುಗಳಿಗೂ ಜನ್ಮವಿತ್ತ ಕೊಡಗು, ಕರ್ನಾಟಕದಲ್ಲೊಂದು ಯಾಕೆ? ಹಿಂದೂಸ್ಥಾನದಲ್ಲೇ ಒಂದು ಸ್ಥಾನಗಳಿಸಿಕೊಳ್ಳುವುದರಲ್ಲಿ ಸಂಶಯವಿಲ್ಲ.

ಅಮೇರಿಕಾದಲ್ಲಿ

ಮದುವೆ ಪದ್ಧತಿ.

ಲೇ:- ಮೇರಿ ವಿಲ್ಲಿಯರ್ಸ್.

ಜೂನ್ ಗುಲಾಬಿ ಹೂಗಳ ತಿಂಗಳು. ಇದು ಸಂಯುಕ್ತ ಅಮೇರಿಕಾದಲ್ಲಿ ಮದುವೆಗೆ ಪವಿತ್ರವಾದ ತಿಂಗಳೆಂದು ಪಾರಂಪರ್ಯವಾಗಿ ಪರಿಗಣಿಸಲ್ಪಟ್ಟಿದೆ. ಸಂಯುಕ್ತ ಅಮೇರಿಕಾದಲ್ಲಿ ಬೇರೆ ಯಾವ ಸಾಮಾಜಿಕ ಪದ್ಧತಿಯನ್ನೂ ಬಹುಶಃ ಇಷ್ಟು ವಿಜೃಂಭಣೆಯಿಂದ ನಡೆಸುವದಿಲ್ಲ. ಅದು ಆಯಾ ಕುಟುಂಬಗಳಂತೆಯೇ ದೊಡ್ಡದೂ, ವಿಜೃಂಭಣೆಯುಳ್ಳದ್ದೂ ಆಗುವದು. ಅಮೇರಿಕಾ ಸಂಸ್ಥಾನವು ವಿವಿಧ ಜನತೆಯಿಂದ ಕೂಡಿದ ಕರಗುತ್ತಿರುವ ಕಡಾಯಿ! ಅಲ್ಲಿ ಮದುವೆಯಲ್ಲಿ ವಿವಿಧ ಸಂಪ್ರದಾಯಗಳಿವೆ. ಅಲ್ಲಿ ಪುರಾತನವಾಗಿ ರೂಢವಾಗಿರುವ ಹಳೇ ಪದ್ಧತಿಯ ಮದುವೆಯೂ ಇದೆ; ಈಗಿನ ಆಧುನಿಕ ಹೊಸ ಪದ್ಧತಿಯೂ ಇದೆ.

ಅಮೇರಿಕದ ನವ ದಂಪತಿಗಳೆಲ್ಲ ಸಾಧಾರಣವಾಗಿ ಕೆಲವೇ ದಿನಗಳಾದರೂ ಮಧು ಚಂದ್ರ, (Honey moon) ದ ಆನಂದ ಪಡೆಯುತ್ತಾರೆ. ಕೆಲವರು ರೈಲುಗಳಲ್ಲಿ ದೂರದ ಸುಂದರ ಪ್ರದೇಶಗಳಿಗೆ ಹೋದರೆ ಕೆಲವರು ವಿಮಾನಗಳಲ್ಲಿ! ಆದರೆ ಮೋಟಾರು ವಾಹನಗಳಲ್ಲಿ ಹೋಗುವವರ ಸಂಖ್ಯೆಯೇ ಹೆಚ್ಚು. ದಂಪತಿಗಳು ವಧುವಿನ ಮನೆಯನ್ನು ಬಿಡುವಾಗ ಕುಟುಂಬದವರು ಮತ್ತು ಸ್ನೇಹಿತರು ಅವರ ಮೇಲೆ ಅಕ್ಕಿಯ ಪ್ರೋಕ್ಷಣೆಯನ್ನು ಮಾಡುವದಲ್ಲದೆ ಅವರು ಹೋದ ನಂತರ ಒಳ್ಳೇ ಅದೃಷ್ಟದ ಚಿಹ್ನೆಗಾಗಿ ಹಳೆಯ ಪಾದರಕ್ಷೆ ಒಂದನ್ನೆಸೆಯುವರು!

ವಧುವರರ ನಿಶ್ಚಯವು ಮದುವೆಗೆ ಕೆಲವು ದಿವಸಗಳ ಮುಂದೆ ಯಾ ಒಂದು ವರ್ಷದ ಅವಧಿಯೊಳಗೆ ಎಷ್ಟೇ ಸಮಯದಲ್ಲಿ ಆಗುತ್ತದೆ. ಕೆಲವರು ನಿಶ್ಚಯವಾದ ಒಂದು ವರ್ಷದ ನಂತರ ಮದುವೆಯಾದರೆ ಕೆಲವರು ಕೆಲವೇ ದಿನಗಳಲ್ಲಿ. ಮದುವೆ ನಿಶ್ಚಯದ ಕಾಲಕ್ಕೆ ಉಂಗುರ ಕೊಡುವ ಪದ್ಧತಿ ಅಲ್ಲಿದೆ. ಸಾಮಾನ್ಯವಾಗಿ ಶ್ರೀಮಂತರೆಲ್ಲರೂ ವಜ್ರದ ಉಂಗುರ ಕೊಡುತ್ತಾರೆ ಹುಡುಗಿಯು ಅದನ್ನು ಎಡಗೈಯ ನಾಲ್ಕನೇ ಬೆರಳಿನಲ್ಲಿ ಧರಿಸುತ್ತಾಳೆ. ಮದುವೆಯಾದ ನಂತರ ತನ್ನ ಪತಿಗೆ ಕೊಟ್ಟಿದ್ದ ಉಂಗುರವನ್ನೂ ಅದರೊಂದಿಗೆ ಆಕೆ ಧರಿಸುತ್ತಾಳೆ. ಸಾಧಾರಣವಾಗಿ ಎಲ್ಲಾ ಮದುವೆಯಾದ ಯುವತಿಯರು ಉಂಗುರ ಧರಿಸುತ್ತಾರೆ. ಕಳೆದ ೨೫ ವರ್ಷಗಳಿಂದ ಮದುವೆಯ ಉಂಗುರ ಧರಿಸುವ ಗಂಡಸರ ಸಂಖ್ಯೆ ಹೆಚ್ಚಾಗುತ್ತಿದೆ. ಆದರೆ ಈ ಸಂಪ್ರದಾಯವು ಸಾರ್ವತ್ರಿಕವಾಗಿಲ್ಲ

ಹೆಚ್ಚಿನ ಸಂದರ್ಭಗಳಲ್ಲಿ ವಧುವಿನ ತಂದೆತಾಯಿಯೂ ಪೋಷಕರ - ಮದುವೆಯ ಖರ್ಚನ್ನು ನಿರ್ವಹಿಸುವರು. ಹುಡುಗನ ಕಡೆಯವರು ವಧುವಿಗೆ, ಮತ್ತಾಕೆಯ ಸಖಿಯರಿಗೆ ಬೇಕಾದ ಕೇವಲ ಹೂಮಾಲೆಗಳ [illegible] ಮಾಡುವದಲ್ಲದೆ ಚರ್ಚಿನ ಪುರೋಹಿತರಿಗೆ ಕೊಡಬೇಕಾದ ಹಣವನ್ನು ಮಾತ್ರ ಕೊಡುವರು. ಇತರ ಅನೇಕ ದೇಶಗಳಲ್ಲಿರುವಂತೆ ತಂದೆತಾಯಿಯರು ಯಾ ಪೋಷಕರು ಇಂಥಾವನನ್ನು ಯಾ ಇಂಥಾವಳನ್ನು ಮದುವೆಯಾಗಬೇಕೆಂದು ಸಲಹೆ ಮಾಡಬಹುದು. ಆದರೆ ಈ ಬಗ್ಗೆ ಯಾವದೇ ಕಾಯಿದೆಯಾಗಲೀ ಸಂಪ್ರದಾಯವಾಗಲೀ ಇಲ್ಲ. ತಂದೆ ತಾಯಿಯರ ಅಭಿಪ್ರಾಯವನ್ನು ಒತ್ತಾಯ ಪೂರ್ವಕ ಮಕ್ಕಳ ಮೇಲೆ ಹೇರುವ ಪದ್ಧತಿ ಇಲ್ಲ. ಇತರ ಅನೇಕ ದೇಶಗಳಲ್ಲಿ ಜಾರಿಯಲ್ಲಿರುವ, ತಂದೆ ತಾಯಿಗಳು ನಿಶ್ಚಯಿಸುವ ರೀತಿಯ ಮದುವೆ (ಗಂಡಿಗೆ ತವರಿನಿಂದ ಕನ್ಯಾಶುಲ್ಕ ತರುವ ಪದ್ಧತಿ) ಗಳು ಸಂಯುಕ್ತ ಅಮೇರಿಕಾದಲ್ಲಿಲ್ಲ. ನ್ಯಾಯಬದ್ಧ ವಯಸ್ಸಿನ ಯುವಕ ಯುವತಿಯರು ತಂದೆತಾಯಿ ಯಾ ಪೋಷಕರ ಒಪ್ಪಿಗೆ ಇಲ್ಲದೆ ತಮಗೆ ಇಚ್ಛೆ ಇರುವವರನ್ನು ಮದುವೆ ಮಾಡಿಕೊಳ್ಳಬಹುದು.

ಅಲ್ಲಿ ಸಂಪ್ರದಾಯದ ಇಲ್ಲವೇ ಸಿವಿಲ್ ಮದುವೆಯಾಗಬಹುದು ಮದುವೆಗೆ ಸರಕಾರದಿಂದ ಇಲ್ಲವೇ ನಗರಸಭೆಯಿಂದ ಒಂದು ಲೈಸೆನ್ಸ್ ಬೇಕು ಅಮೇರಿಕಾದ ೪೮ ಸಂಸ್ಥಾನಗಳಲ್ಲಿ ವಿವಿಧ ರೀತಿಯ ಮದುವೆ ಪದ್ಧತಿಗಳಿವೆ ಕೆಲವು ಸಂಸ್ಥಾನಗಳಲ್ಲಿ ಹುಡುಗಿಗೆ ಕಡಿಮೆ ೧೮, ಹುಡುಗನಿಗೆ ಕಡಿಮೆ ೨೧ ವಯಸ್ಸಾಗಿರಬೇಕು. ಇವರು ಮಾತ್ರ ತಂದೆ ತಾಯಿ ಯಾ ಪೋಷಕರ ಅಪ್ಪಣೆ ಇಲ್ಲದೆ ಮದುವೆಯಾಗಬಲ್ಲರು. ಕೆಲವು ಸಂಸ್ಥಾನಗಳಲ್ಲಿ ಮದುವೆಯಾಗಲು ಯೋಗ್ಯರೆಂದು ಆರೋಗ್ಯ ಸರ್ಟಿಫಿಕೇಟು ಪಡೆಯಬೇಕು. ಕೆಲವು ಸಂಸ್ಥಾನಗಳಲ್ಲಿ ನಿಶ್ಚಿತ ಫೀಜು ಕೊಡಬೇಕು.

ಸಿವಿಲ್ ಮದುವೆಯು ಒಬ್ಬ ಜಡ್ಜಿಯ, ನ್ಯಾಯಾಲಯದ ಗುಮಾಸ್ತ ಇಲ್ಲವೇ ಸ್ಥಳೀಯ ಅಧಿಕಾರಿಯ ಮುಂದೆ ನಡೆಯಬೇಕು. ಧಾರ್ಮಿಕ ಆಚರಣೆಗಳನ್ನು ಚರ್ಚುಗಳಲ್ಲಿ ಯಾ ಮನೆಗಳಲ್ಲಿ ದಂಪತಿಗಳ ಆಶಯದಂತೆ ಮಾಡಬಹುದು. ರೋಮನ್ ಕೆಥೋಲಿಕ್ ಚರ್ಚುಗಳಲ್ಲಿ ಮದುವೆಯು ಮಧ್ಯಾಹ್ನದ ಮೊದಲು ನಡೆಯಬೇಕು. ಪೂರ್ವ ಸಂಸ್ಥಾನಗಳಲ್ಲಿ ಮಧ್ಯಾಹ್ನದ ಮೇಲೆ ನಾಲ್ಕು ಗಂಟೆಯ ನಂತರ ಮದುವೆಯು ಯೋಗ್ಯ. ದಕ್ಷಿಣ ಮತ್ತು ಪಶ್ಚಿಮ ಸಂಸ್ಥಾನಗಳಲ್ಲಿ ಈ ಸಾಯಂಕಾಲದ ಮದುವೆಗಳು ಜನಾನುರಾಗಿಯಾಗಿವೆ

೧೯೩೯ ರಿಂದ ಸಂಯುಕ್ತ ಅಮೇರಿಕಾದಲ್ಲಿ ಮದುವೆಗಳ ಸಂಖ್ಯೆಯು ಕ್ರಮವಾಗಿ ಏರುತ್ತಿವೆ ಬಹು ಹೆಚ್ಚಿನ ವರ್ಷವೆಂದರೆ ೧೯೪೬. ಆ ವರ್ಷ ೨,೨೯೧,೦೪೫ ಮದುವೆಗಳಾದವು. ನಂತರ ಎರಡು ವರ್ಷಗಳಲ್ಲಿ ಈ ಸಂಖ್ಯೆಯು ೨,೦೦೦,೦೦೦ ಕ್ಕೆ ಇಳಿಯಿತು. ೧೯೪೮ ರಲ್ಲಿ ಸಂಯುಕ್ತ ಅಮೇರಿಕಾದಲ್ಲಿ ೧,೮೧೫,೮೨೦ ಮದುವೆಗಳಾದವು.

(ಸ್ವತಂತ್ರ)

ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್,
ಮಡಿಕೇರಿ.

ಮಹಾಜನರಲ್ಲಿ ವಿನಂತಿ.

ನಮ್ಮ ಫ್ರೇಜರ್‌ಪೇಟೆ ಕಾರ್ಖಾನೆಯಲ್ಲಿ ಈಗಾಗಲೇ ಮೂಳೆಗೊಬ್ಬರ ತಯಾರಾಗುತ್ತಿರುವುದು ಎಲ್ಲರಿಗೂ ತಿಳಿದ ವಿಷಯ. ಈ ಸಂದರ್ಭದಲ್ಲಿ ನಿಮ್ಮ ನಿಮ್ಮ ಗ್ರಾಮಗಳಲ್ಲಿ ಸತ್ತ ದನಗಳ ಮತ್ತು ಇತರ ಪ್ರಾಣಿಗಳ ಮೂಳೆಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಜಮಾಯಿಸಿ ಮೇಲಿನ ವಿಳಾಸಕ್ಕೆ ತಿಳಿಸಿದಲ್ಲಿ ಅವನ್ನು ಆದರ ಬೆಲೆ ಕೊಟ್ಟು ಸಾಗಿಸುವ ಏರ್ಪಾಡನ್ನು ಮಾಡುತ್ತೇವೆ. ಅಥವ ಲಾರಿಗಟ್ಟಿ ಜಮಾಯಿಸಿದವರು ನಮ್ಮ ಫ್ರೇಜರ್‌ಪೇಟೆ ಕಾರ್ಖಾನೆಗೆ ತಂದು ಕೊಟ್ಟಲ್ಲಿ ಮಣ 1ರ 0-12-0 ಯಂತೆ ಬೆಲೆಗೆ ತೆಗೆದುಕೊಳ್ಳಲಾಗುವುದು.

ಈಗಾಗಲೇ ತಯಾರಾಗಿರುವ ಮೂಳೆ ಗೊಬ್ಬರಕ್ಕೆ ಖಾಯಿಸ್‌ದಾರರು ಬರ ಕೊಂಡಲ್ಲಿ ಅಗ್ರಸ್ಥಾನವನ್ನನುಸರಿಸಿ ಬಟವಾಡೆ ಮಾಡಲಾಗುವುದು.

ಸೂಚನೆ:–ನಮ್ಮ ಕಂಪೆನಿಯ ಶೇರುದಾರರಿಗೆ ಹೆಚ್ಚಿನ ರಿಯಾಯಿತಿ ಮತ್ತು ಮೊದಲಿನ ಹಕ್ಕು ಕೊಡಲಾಗುವುದು.

ಮಡಿಕೇರಿ, ತಾ. 19-5-49.

ಜೆ ಕೆ ತಿಮ್ಮಯ್ಯ, ಮೇನೇಜಿಂಗ್ ಡೈರೆಕ್ಟರ್.

ವಿಮೆ ಮಾಡಲು ಇಲ್ಲವೇ ಪ್ರತಿನಿಧಿಸಲು

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.

ಇವರ ಸಲಹೆಗಿಂತ ಉತ್ತಮ ಮಾರ್ಗವಿಲ್ಲ.

ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದೂಸ್ಥಾನದ ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು

ದಿ ಬೊಂಬಾಯಿ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್,

30 ಮೌಂಟ್ ರೋಡ್,
ಪೊ. ಬಾ. ನಂ. 337,
ಮದ್ರಾಸು 2.

ಬೊಂಬಾಯಿ ಲೈಫ್ ಬಿಲ್ಡಿಂಗ್,
ಪೊ. ಬಾ. ನಂ. 1,
ಉಡುಪಿ.

(ಟೆಲಿಫೋನ್ ನಂ. 8398)

ಇತರ ಆಫೀಸುಗಳು:—ಬೆಂಗಳೂರು, ತಿರುವೆಂಡರಂ, ಕಲ್ಲಿಕೋಟೆ, ಮಂಗಳೂರು, ಮಧುರೆ, ಮತ್ತು ಕೊಲಂಬೊ.

ದಿ ಟ್ರಾಪಿಕಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:– ಲಾಲ ಶಂಕರ್ ಲಾಲ್.

ಮುಖ್ಯ ಕಚೇರಿ:– ಹೊಸ ಡೆಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. — ಎಸ್. ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮಲಖಾನ್, — ಡಾ|| ಎಂ. ಎ. ಅನ್ಸಾರಿ.

Transacts—Life, Fire, Motor and Marine.

ನಮ್ಮ ಹೊಸ ವಿಸ್ತಾರದ ಯೋಜನೆಯಲ್ಲಿ ಆಕರ್ಷಕ ಕಮಿಷನ್ ಮೇಲೆ ಏಜನ್ಸಿಗೆ ದಯವಿಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಆರ್ಗನೈಜರ್
ದಕ್ಷಿಣ ಕೊಡಗು, ಪೊನ್ನಂಪೇಟೆ
ಅಥವಾ
ಬಿ. ಯಂ. ಅಚ್ಚಣ್ಣ,
ಏಜೆನ್ಸಿ ಸುಪರಿಂಟೆಂಡೆಂಟ್,
ಮಡಿಕೇರಿ, ಕೊಡಗು.

ಆರ್ಗನೈಜರ್
ಉತ್ತರ ಕೊಡಗ, ಮಡಿಕೇರಿ.
ಅಥವಾ
ಎಂ. ಎ ಬೆಳ್ಯಪ್ಪ,
ಬ್ರಾಂಚ್ ಸೆಕ್ರೆಟರಿ,
ಹಂಪನಕಟ್ಟಾ, ಮಂಗಳೂರು.

ಎಂಪೈರ್ ಆಫ್ ಇಂಡಿಯಾ

ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

48ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು.	ಒಟ್ಟು ಆದಾಯ	1,07,09,000	ಮೀರಿದೆ
	ಜಾರಿಯಿರುವ ವಿಮೆ	17,74,52,000	,,
	ಆಸ್ತಿ	6,67,60,000	,,
ಕಂಪೆನಿಯ ಆದಿಯಲ್ಲಿ ಕೊಟ್ಟ ಕ್ಲೈಮುಗಳು	....	8,33,62,000	,,

ಅಂಗ ಕಛೇರಿ: ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು.

ಏಜೆನ್ಸಿ ಅರ್ಜಿಗಳನ್ನು ಸ್ವಾಗತಿಸಿದೆ.

ಪ್ರಧಾನ ಕಛೇರಿ: ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ.

ಭದ್ರತೆ! 17 ವರ್ಷಗಳ ಪರಿಪಕ್ವ ಅನುಭವಶೀಲತೆ!! ಅನುಕೂಲತೆ!!

ದಿ ವಿಜಯ ಬೇಂಕ್ ಲಿಮಿಟೆಡ್

ಮುಖ್ಯ ಕಚೇರಿ,
ಕದ್ರಿ ರೋಡ್, ಮಂಗಳೂರು.

ನಿರಖು ಠೇವಣಾತಿ ಬಡ್ಡಿ ದರ:–

3	ತಿಂಗಳು	3%
6	,,	3½%
12	,,	3¾%
24	,,	4 %

ರೂಪಾಯಿ ೧೫,೦೦೦ಕ್ಕೆ ಮೀರಿದ ಒಂದೇ ಡಿಪಾಜಿಟ್ಟಿಗೆ ಮೇಲಿನ ದರಕ್ಕಿಂತಾ ¼% ಹೆಚ್ಚಿಗೆ.

ಶಾಖೆಗಳು:– ಸಿಟಿ ಮಂಗಳೂರು, ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಕಾಸರಗೋಡು, ಕಾಞಂಗಾಡ್, ಪುತ್ತೂರು, ಮಡಿಕೇರಿ ಮತ್ತು ಮುಂಬಾಯಿ.

ಒಟ್ಟು ವಹಿವಾಟು ಭಂಡವಾಳ ರೂ. ೪೦ ಲಕ್ಷಕ್ಕೂ ಮೀರಿದೆ.

ಎಲ್ಲಾ ವಿಧದ ಆಧುನಿಕ ಬೇಂಕಿಂಗ್ ವಹಿವಾಟುಗಳು ದಕ್ಷತೆಯಿಂದ ನಡೆಸಲ್ಪಡುವವು.

ಹೆಚ್ಚಿನ ವಿವರಗಳಿಗೆ ಬರೆಯಿರಿ:–

ಏಜಂಟ್, ಮಡಿಕೇರಿ ಶಾಖೆ, ಮಡಿಕೇರಿ.

12–3

CRESCENT

FOR PROTECTION AND SERVICE.

It is best to represent and insure with The CRESCENT Insurance Co., Ltd,

H: O: BOMBAY.] [Established 1919.

For particulars write to:

Sri B. A. Poovaiah
Organiser
Pollibetta, Coorg.

or

The Branch Manager,
22 B. Mahatma Gandhi Road,
Bangalore 1.

ಸುರಕ್ಷಿತವಾದ ಜೀವವಿಮೆ ಪಡೆಯಲು

ಕ್ರೆಸೆಂಟ್

ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್,
ಲಿಮಿಟೆಡ್, ಮಡಿಕೇರಿ.

ಕೋ. ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1931ರಲ್ಲಿ ಸ್ಥಾಪಿತವಾಗಿದೆ

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,65,000.
ಕ್ಷೇಮನಿಧಿ	ರೂ.	50,000.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ ಮತ್ತು ವಾರ್ಡನ್ ಇನ್ಶ್ಯೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಖಜಾಂಚಿ.

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು:— ಪಿ. ಐ. ಬೆಳ್ಯಪ್ಪ [illegible] ವಾರ್ಷಿಕ ಚಂದಾ ರೂ. 5-0-0.

ಸಂಪುಟ ೨೮ | ತಾರೀಖು [illegible] ನೇ ಶುಕ್ರವಾರ | ಸಂಚಿಕೆ ೬

ವಿಶೇಷ ಲೇಖನ.

ಮನೆಗೊಂದು ಬೆಳಕು-ಮಗು

ಲೇಖಕರು:— ಶ್ರೀ ಸಮೇತನಹಳ್ಳಿ ರಾಮರಾವ್.

ಮಗವು ಮನೆಗೊಂದು ಬೆಳಕು. ಎಂಥಾ ಸತ್ಯವಾದ ಸುಂದರವಾದ ಮಾತು! ಮಗುವು ನಸುನಗೆ ಬೀರಿ ಮುಂದಿನ ಪುಟ್ಟ ದಂತಗಳನ್ನು ತೋರಿಸಿದಾಗ ಬಾಹ್ಯ ಜಗತ್ತಿನ ಎಲ್ಲ ಜಂಜಡಗಳೂ ಅಲ್ಲಿ ಲಯ. ಆ ಮಂಗಳ ಬೆಳಕಿನ ಶುಭ್ರ ಜ್ಯೋತ್ಸ್ನೆ ಅಮೃತದ ಹನಿಗಳಾಗಿ ಎಲ್ಲರ ಭಾವ ಸಮುದ್ರಗಳಲ್ಲಿಯೂ ಸುಖದ ತೆರೆಗಳನ್ನು ಎಬ್ಬಿಸುತ್ತದೆ. ಎಬ್ಬಿಸಿ ಜೋಗುಳದ ಮಧುರ ತೊಟ್ಟಿಲಲ್ಲಿಟ್ಟು ತೂಗುತ್ತದೆ. ಮಾನವನ ಅಂತ್ಯ ಗುರಿಯಾದ ಮುಕ್ತಿಯನ್ನು ಬಿಟ್ಟರೆ ಉಳಿದ ಪುರುಷಾರ್ಥಗಳಲ್ಲಿ ಮಗುವು ಉನ್ನತೋನ್ನತವಾದ ಸ್ಥಾನವನ್ನು ಆಕ್ರಮಿಸಿದೆ. ಈ ಭೌತಿಕ ಪ್ರಪಂಚದಲ್ಲಿ ಮಗುವೇ ಹಿರಿದಾದದ್ದು. ಅದಕ್ಕಿಂತಃ ಪವಿತ್ರವಾದ, ಶ್ರೇಷ್ಠವಾದ ವಸ್ತು ಬೇರೊಂದಿಲ್ಲ.

ಮಗುವಿನ ಮಹತ್ವವನ್ನು ಕುರಿತು ಹೇಳುತ್ತ ಭವಭೂತಿ ಒಂದುಕಡೆ 'ಮಗುವು ಸತಿಪತಿಗಳ ಆನಂದದ ಗಂಟು.' ಎಂದಿದ್ದಾನೆ. ಎಂಥಾ ದಿವ್ಯವಾದ ಮಾತು! ಮಾನವ ಜೀವನದ ಸಾರಸತ್ವ ಸೌಭಾಗ್ಯವೆಲ್ಲಾ ಮಗುವಿನಲ್ಲಿ ಕೇಂದ್ರೀಕೃತವಾಗಿದೆ ಎಂದು ಹೇಳಿದಂತಾಗದೇ? ನಮ್ಮ ಉದ್ದಾಮ ಕವಿಗಳೊಬ್ಬರು ತಮ್ಮ ಎರಡನೇ ಮಾತಿನಲ್ಲಿ ಹೇಳಿದ್ದಾರೆ. 'ಮಗನೇ ಮಾ ಜಗಮಾಯ್ತು' ಭಾವನೆ ಎಷ್ಟು ಹಿರಿದಾಗಿದೆ! ಎಷ್ಟು ಸಹಜ ಸುಂದರವಾಗಿದೆ! ಶಿಶು ಪ್ರೇಮದ ಆಳ ಎಲ್ಲ ತಾಯಿಯರಿಗೂ ಅಷ್ಟೇ ಹಿರಿದಾದದ್ದು.

ತಾಯಿಗೆ ಅಳುವ ಮಗುವೂ ಮನೋಹರ. ಹಾಡುತ್ತಾಳೆ, 'ಅಳುವ ಕಂದನ ತುಟಿಯು ಹವಳದ ಕುಡಿಯಂಗ, ಕುಡಿಹುಬ್ಬು, ಬೇವಿನೆಸಳಂಗ' ತಾಯಿ ಪ್ರಕೃತಿಯು ಸತ್ಯ ಸೌಂದರ್ಯವನ್ನೇ ತನ್ನ ಮಗುವಿನಲ್ಲಿ ಕಾಣಬಯಸುತ್ತಾಳೆ. ಹವಳದ ಕುಡಿ, ವಸಂತನ ಬೇವಿನ ಚಿಗುರಿನ ಕೆಂಪು ಎಸಳು ಮುಂತಾದವೂ ಕೂಡ ಅವಳ ಉಪಮೆಗೆ ಅನೇಕ ವೇಳೆ ಸಾಲವು.

ಪರೆನೊಸಲ ಮೇಲೆ ಉಯ್ಯಾಲೆಯಾಡುವ ಆ ಸುಳಿಗುರುಳು, ತುಂಬಿ ಉಬ್ಬಿದ ಆ ಹಾಲುಗೆನ್ನೆಗಳು, ಮುದ್ದು ಮುದ್ದಾದ ಗಲ್ಲ, ಶ್ರೀಕಾಂತಿಯ ಆ ಹರಳುಗಣ್ಣುಗಳು ಭಂಗಾರದ ದೇಹದ, ಬೆಣ್ಣೆ ಮುದ್ದೆಯ ಆ ತೋಳುಗಳು, ಚಿಗುರು ಬೆರಳುಗಳು ಇವುಗಳ ಒಂದು ನೋಟ ಸಾಕು. ಶರೀರ ತನ್ಮಯತೆಯನ್ನು ಬೀರಿ ನೂರಿಕೊಂಡು ಆನಂದವನ್ನು ಕಾಣ ಬಯಸುತ್ತದೆ.

ಈ ಆಟಗಳ ಚಿಲುಮೆಗಳನ್ನು ಜೋಪಾನ ಮಾಡುವುದು ಪವಿತ್ರ ಕರ್ತವ್ಯ.

ಮಕ್ಕಳು ಮಹಾತ್ಮಾ ಗಾಂಧಿಯವರ ಜೀವನದ ಬಹುಭಾಗವನ್ನು ಆಕ್ರಮಿಸಿಕೊಂಡಿದ್ದವು. ಅವುಗಳ ಆ ನಿರ್ಮಲ ಮನಸ್ಸು ಅವರ ಮನಸ್ಸನ್ನೂ ತಿಳಿಮಾಡುತ್ತಿದ್ದಂತೆ ವಿರಾಮ ಮಾಡಿಕೊಂಡು ಅವುಗಳೊಡನೆ ಆಟವಾಡುತ್ತಿದ್ದರು. ಆಂಗ್ಲೇಯ ಮಹಾಮನೀಷಿ ಬರ್ನಾರ್ಡ್ ಷಾ ರವರು ಹೇಳಿರುವಂತೆ ಆ ನಿರ್ಮಲ ಮನಸ್ಸುಗಳೇ ಲೋಕದಲ್ಲಿ ಇಂದು ಬೃಹತ್ಕಾರ್ಯಗಳನ್ನು ಮಾಡಿವೆ. ಅವರು ಕಂಡ [illegible] ಸತ್ಯ ಪ್ರಸಿದ್ಧವಾದವು. ಅವರ [illegible] ಅಭಿನವ [illegible] ಸುಖ, [illegible] ಕನಸುಗಳು ಕೈಗೂಡಿಬಂದಾವು.

ಆ ಮಕ್ಕಳನ್ನು ನಾವು ಸಾಕಷ್ಟು ಭದ್ರ ಮಾಡುತ್ತಿರುವೆವೇ? ಇಲ್ಲವೆಂಬ ಕೂಗು ಮನೆ ಮನೆಗಳಿಂದ ಕೇಳಿಬರುತ್ತಿದೆ. ಅಂದರೆ ನಾವು ಅಂಥಾ ಅನಾ[illegible]ನು? ಅದೂ ಅಲ್ಲ. ಅಜ್ಞಾನ ಮತ್ತು ಅ[illegible]ಗಳ ಉಕ್ಕಿನ ಇಕ್ಕಳ ನಮ್ಮ ಮನಸ್ಸನ್ನು ಹಿಸುಕುತ್ತಿದೆ. ತತ್ಫಲವಾಗಿ ಭಾವನೆ ಸಂಕುಚಿತವಾಗುತ್ತಿದೆ.

ಅಜ್ಞಾನದ ಈ ಪರಾಕಾಷ್ಠತೆ ಹಳ್ಳಿಗಳಲ್ಲಿ ಶಿಖರಕ್ಕೇರಿದೆ. ಮನೆಯಲ್ಲಿ ಹಾಲು ಮೊಸರಿನ ಕೋಡಿ ಹರಿಯುತ್ತಿದ್ದರೂ ಮನೆಯ ಮಗುವಿಗೆ ಅದರ ಉಪಯೋಗವಿಲ್ಲ. ಹಣದಾಸೆಯಿಂದ ಮಗುವಿನ ಉಣಿಸನ್ನು ಕಿತ್ತು, ಹಾಲು ಬೆಣ್ಣೆಗಳನ್ನೇ ಅಲ್ಲ; ಅದರೊಡನೆ ತಮ್ಮ ಮಗುವಿನ ಬೆಳವಣಿಗೆಯನ್ನೇ ವಿಕ್ರಯಿಸಿಕೊಳ್ಳುತ್ತಿದ್ದಾರೆ. ಇದು ಮೊಟ್ಟಮೊದಲ ದ್ರೋಹ. ಮಗುವು ಹಾಗೆ ನಕ್ಕು ನಗಿಸಿ, ತಾನೂ ಆನಂದಪಟ್ಟು ಮನೆಯವರನ್ನೂ ಆನಂದಪಡಿಸಬೇಕಾದರೆ ವಯೋನುಗುಣವಾದ ಬೆಳವಣಿಗೆ ಮತ್ತು ರೋಗಗಳಿಂದ ರಕ್ಷಣೆ ಇವು ಅತ್ಯಾವಶ್ಯಕ.

ನಮ್ಮ ತಾಯಿಯರು ಆದರ್ಶರು. ಮಗುವಿನ ಶುಶ್ರೂಷೆಯೇ ಅವರ ಆನಂದ. ಆದರೂ ತಲತಲಾಂತರಗಳಿಂದ ಬಂದಿರುವ ಮೂಢ ನಂಬಿಕೆಗಳು ಆ ಮುಗ್ಧೆಯರನ್ನೂ ವಂಚಿಸುತ್ತಿವೆ. ಅವರ ಮನಸ್ಸಿನಲ್ಲಿ ಭದ್ರವಾಗಿ ಒತ್ತಿರುವ ಕೆಲವು ಕುರುಡು ಭಾವನೆಗಳು ಸಾಧಾರಣ ಬುದ್ಧಿವಾದಗಳಿಂದ ಅಳಿಯುವಂತಿಲ್ಲ.

ಹಳ್ಳಿಯೊಂದರಲ್ಲಿ ಒಂದು ಸಾರಿ ಸಿಡುಬು ಕಾಣಿಸಿಕೊಂಡಿತ್ತು. [illegible] ಮನೆ ಮನೆಗೆ ಹೋದಾಗ ಒಂದು ಮನೆಯಲ್ಲಿ ಮೂವರು ಮಕ್ಕಳಿದ್ದರು. ದೊಡ್ಡದಕ್ಕೆ ಏಳು ವರ್ಷ, ಎಲ್ಲದಕ್ಕೂ ಚಿಕ್ಕದಕ್ಕೆ ಎರಡು ವರ್ಷ. ಮಕ್ಕಳು ಮೈ ತುಂಬಿಕೊಂಡು ಚೆಲುವಾಗಿದ್ದವು. ಒಂದಕ್ಕಾದರೂ ದೇವಿ ಹಾಕಿರಲಿಲ್ಲ. ಆಗ ದೇವಿ ಹಾಕಿಸಲು ಸಮ್ಮತಿಸಲೇ ಇಲ್ಲ. ಆ ತಾಯಿಗೆ ಹೇಳಿದ ಎಲ್ಲಾ ಬುದ್ಧಿವಾದಗಳೂ ಗಾಳಿಯಲ್ಲಿ ಹಾರಿಹೋದುವು. ಸಿಡುಬಿನ ಭಯದಿಂದ [illegible] ಮಕ್ಕಳ [illegible] ಕುಣಿಗೆ ಕಟ್ಟಿ [illegible] ಪ್ರಯೋಜನವಾಗಲಿಲ್ಲ. ತಂದೆ ಬಂದನು. ಸಿಡುಬಿನ ಮಾತೇ ಅವನ ಕಿವಿಯಲ್ಲಿ ಕಾದ ಸಲಿಗೆಯಂತೆ ಪ್ರವೇಶಿಸಿತು. ರೋಗಕ್ಕೆ ಕಾರಣ ಭಗವಂತನೆಂದೂ, ಎಲ್ಲ ಅವನ ಇಚ್ಛೆಯೆಂದೂ ತನ್ನ ಮಕ್ಕಳು ಸಿಡುಬಿನಿಂದ ಸಾಯುವುದಾಗಿ [illegible] ಅವನ ಸಂಕಲ್ಪವಾದರೆ ನಾವು ತಪ್ಪಿಸಲಾಗದೆಂಬ ಅವನ ದೃಢ ನಿರ್ಧಾರದ ಮುಂದೆ ಯಾವ ಮಾತೂ ಸಾಗಲಿಲ್ಲ. ಅವನ ಒರಟುತನಕ್ಕೆ ನಾವು ಒಂಟಿಯಾಗದೆ ವಿಧಿಯಿಲ್ಲ [illegible] ಕೆಲಕ್ಕೆಳಸಿತು. ಅವನ ಮಕ್ಕಳಿಬ್ಬರನ್ನೇ ಅಲ್ಲ; ಗಂಡ ಹೆಂಡರಿಗೂ ಸಿಡುಬು ಹಾಕಿದ ದಾಯಿತು. ಈ ಭಯ ಪ್ರದರ್ಶನ ಎಷ್ಟು ಮಟ್ಟಿಗೆ ಸಾಧ್ಯ!

ಇನ್ನೊಂದು ಶಾಲೆಯಲ್ಲಿ ದೇವಿ ಹಾಕುವ ಕೆಲಸ ನಡೆದಿತ್ತು. [illegible] ವಿದ್ಯಾವಂತ ತಂದೆಯೊಬ್ಬರು ಪ್ರವೇಶಿಸಿ ತನ್ನ ಮಗುವನ್ನು ಬಗಲಿಗೆ ಹಾಕಿಕೊಂಡು ಜೋಪಾನ ಮಾಡಿದರು. ಯೋಧನಂತೆ ಎದೆಗೈ ಚಾಚಿ ನಿಂತಿದ್ದ ಮಗುವು ತಂದೆಯ ಬಗಲಿಗೆ ಹೋದೊಡನೆಯೇ ನಮ್ಮನ್ನು ಕಟುಕರಂತೆ ಭಾವಿಸಿ ಅಳಲಾರಂಭಿಸಿತು. ಸರಿ, ಎಲ್ಲ ಮಕ್ಕಳಿಗೂ [illegible] ಮತ್ಸ್ಯರೂಪನಾದೆ. ತನ್ನ ಸ್ನೇಹಿತನನ್ನು ರಕ್ಷಿಸಿದಂತೆ ತಮ್ಮನ್ನು ರಕ್ಷಿಸುವವರಿಲ್ಲವೆಂದು ಎಲ್ಲ ಮಕ್ಕಳು ಅತ್ತವು. ಅದುವರೆಗೆ ನಿರಾತಂಕವಾಗಿ ನಡೆದಿದ್ದ ಕೆಲಸಕ್ಕೆ ಕೊಂಚ ಅಡಚಣೆಯಾದರೂ ನಿಲ್ಲಲಿಲ್ಲ. ಆ ತಂದೆ ನನ್ನನ್ನು ನುಂಗುತ್ತ ಹೇಳಿದರು. 'ನಮಗೂ ರೂಲ್ಸುಗಳು ಎಲ್ಲ ಗೊತ್ತಿದೆ ಸ್ವಾಮಿ. ನನ್ನ ಅನುಮತಿ ಇಲ್ಲದೆ ನನ್ನ ಮಗುವಿಗೆ ನೀವು ಸಿಡುಬು ಹಾಕಲಾರಿರಿ' ಎಂದು ಕಿಡಿ ಕಾರಿ ಹೊರಟುಹೋದರು. ಶಾಸನವಿದೆ ಹೌದು. ಆದರೆ ಒಂದು ತೊಟ್ಟು ಹುಳಿ, [illegible] ಹಾಲನ್ನೇ ಕೆಡಿಸಿದಂತೆ ಕರ್ತವ್ಯವನ್ನರಿಯದ ತಂದೆ ಅಂಧಾಗ್ನೇ ಮೂಢ ನಂಬಿಕೆಯ ಇತರರನ್ನೂ ವಂಚಿಸಲು ಸಾಧನವಾದನು. ಆ ನೂರು ಮಕ್ಕಳ ಮನಸ್ಸಿಗೂ ಹುಳಿ ಹಿಂಡಿದನು. ಕೆಟ್ಟ ಮನಸ್ಸನ್ನು ಶಾಸನ ಸರಿ ಮಾಡಬೇಕಾದರೆ ಬಹು ಕಾಲ ಬೇಕು. ಕೆಲವು ವೇಳೆ ಸರಿಹೋಗದಿರಲೂ ಬಹುದು.

ಇಂದು ಮನೆಯನ್ನು ಬೆಳಗಿಸುತ್ತಿರುವ ಮಗುವು ನಾಳೆ ಸಮಾಜವನ್ನು ಉದ್ಧರಿಸುವ ವ್ಯಕ್ತಿ ಎಂಬುದನ್ನು ಮನಸ್ಸಿನಲ್ಲಿ [illegible] ಳ ಬೆಳವಣಿಗೆಯ [illegible] ಡೆ ಗಮನ ಕೊಡಬೇಕು. ಮಕ್ಕಳ ಮಹತ್ವವನ್ನರಿತು ಇಂದು ಯೂನ [illegible] ಶಿಶು ಲೋಕವನ್ನು [illegible]ತ್ತಿದೆ. ಅದು ನಮಗಿಂತ ನಾಗರಿಕತೆಯಲ್ಲಿ, ಸಂಸ್ಕೃತಿಯಲ್ಲಿ, ಐಶ್ವರ್ಯದಲ್ಲಿ ಮತ್ತು ಭೋಗದಲ್ಲಿ ಉತ್ತುಂಗ ರಂಗಕ್ಕೇರಿರುವ ಸಂಪತ್ಸಮೃದ್ಧವಾದ ಲೋಕವೆಂಬುದನ್ನು ನಾವು ಮನಗಂಡಿದ್ದೇವೆ.

ರೋಗರುಜನಗಳು ಮಾನವನ ಸಹಜ ಶತ್ರುಗಳು. ಅದಕ್ಕೆ ದೇವರ ಸಂಕಲ್ಪವನ್ನು [illegible] ಮೂರ್ಖತನ [illegible] ಮಲ ದೇಹದಲ್ಲಿ [illegible]ನ್ನು ತಾಳಿಕೊಳ್ಳುವಷ್ಟು ದೃಢತೆ ಮಾಡಿರುವುದಿಲ್ಲ. ಸಹಜವಾಗಿ ಎಷ್ಟೂ ಮಗುವನ್ನು ಮುತ್ತುವವು. ಸರಿಯಾದ ಬೆಳವಣಿಗೆ ಇಲ್ಲದ ಮೇಲಂತೂ ಅವುಗಳ ದಾರುಣ ಪರಿಣಾಮ ಮಗುವಿನ ಮೇಲೆ ಎಷ್ಟರಮಟ್ಟಿಗಾಗುತ್ತದೆ ಎಂಬುದನ್ನು ವಿವರಿಸುವುದು ಅನವಶ್ಯಕ. [illegible] ಮರಣಗಳ ಸಂಖ್ಯೆಯನ್ನು ಅವಲೋಕಿಸುವೆವಾದರೆ [illegible]ಗಿಂತಾ ಹೆಚ್ಚು [illegible] ನಮ್ಮಲ್ಲಿ [illegible] ಅತ್ಯಂತಲೂ ಹೆಚ್ಚು [illegible] ಬೇಕೆ?

ಅಲವರು ಇದಕ್ಕೆಲ್ಲ ಬಡತನವನ್ನು ಮುಂದೊಡ್ಡಿ ವಾದಿಸುತ್ತಾರೆ. ಹೌದು. ದೇವರು ನಮಗೆ ಬಡತನವನ್ನು ಕೊಟ್ಟಿದ್ದಾನೆ. ಆದರೆ ಕೊಳಕತನವನ್ನು ಅದರೊಡನೆ ಕೊಟ್ಟಿಲ್ಲ. ನಮಗೆ ಇರುವಷ್ಟರಲ್ಲಿ ಮಕ್ಕಳನ್ನು ನಿರ್ಮಲವಾಗಿಟ್ಟು ನಿರ್ಮಲ ಆಹಾರದಿಂದ ನಾವು ಅವುಗಳನ್ನು ಜೋಪಾನ ಮಾಡುವೆವಾದರೆ, ಬೆಳೆವ ಮಕ್ಕಳ ಮನಸ್ಸೂ, ಮೈಯೂ, ಅಷ್ಟು ವೇಗವಾಗಿ ದೃಢವಾಗಿ ಪವಿತ್ರವಾಗಿ ಬೆಳೆದು ಈ ನಮ್ಮ ಬಡತನವನ್ನು ನಮ್ಮ ಸಂತತಿಯವರು ನಮ್ಮಿಂದ ಇಳಿಸಿಕೊಳ್ಳಲು ಶಕ್ಯರಾಗುತ್ತಾರೆ.

ಮಗುವಿನ ಮನಸ್ಸು ಬೆಣ್ಣೆಗಿಂತ ಮೃದುವಾದುದು. ಆಗ ಅದರ ಮೇಲೆ ಒತ್ತಿದ ಅಚ್ಚು ಎಂದೆಂದಿಗೂ ನಿಲ್ಲುವುದು. ಆಗ ನಾವು ಎಂತಹ ಉದಾತ್ತವಾದ ಮತ್ತು ಹಿರಿದಾದ ಭಾವನೆಗಳನ್ನು ಬಿತ್ತುವೆವೋ ಮಗುವೂ ಅಷ್ಟು ಉನ್ನತವಾಗುತ್ತದೆ. ನಾವು ಇಂದು ಆಡಿಸುವ ಆಟ ಅದರ ಮುಂದಿನ ಜೀವನದ ತಳಹದಿ. ಮಕ್ಕಳ ಆಟದ ಮಹತ್ವ ನಮಗಿನ್ನೂ ಅರಿವಾಗಿಲ್ಲ. ಮಗುವನ್ನು ಸ್ವೇಚ್ಛೆಯಾಗಿ ಆಟದಲ್ಲಿ ಬಿಡುವುದು ಅವರ ಸ್ವೇಚ್ಛಾಚಾರಕ್ಕೆ ಅನುಕೂಲವೆಂದು ಅನೇಕರು ನಾಲ್ಕು ಗೋಡೆಗಳ ಸೆರೆಮನೆಗಳಲ್ಲಿಡುವ ವಾಡಿಕೆಗೂ ನಮ್ಮಲ್ಲಿ ಅಭಾವವಿಲ್ಲ. ಮಗುವಿಗೆ ಅತಿ ಕುತೂಹಲ ಸಹಜವಾದದ್ದು. ಆ ಪಿಪಾಸೆಗೆ ತಕ್ಕಷ್ಟನ್ನು ಕೊಡಬೇಕು. ಬೆಳೆಸಬೇಕು. ಅದು ಒಂದಕ್ಕೆ ನಿಲ್ಲುವುದಿಲ್ಲ. ಅವರ ಕುತೂಹಲ ಎಷ್ಟು ವಿಶಾಲವಾದರೆ ಅಷ್ಟೂ ಒಳ್ಳೆಯದು. ಮಗುವಿನ ಆಟದ ಸಾಮಾನಿಗೆ ಮೂರು ಕಾಸು ಹಾಕುವುದು ನಮಗೆ ಹಿಡಿಸದು. ಐರೋಪ್ಯರು ಅನೇಕರು, ಅದಕ್ಕಾಗಿ ಬಹು ಭಾಗವನ್ನು ವ್ಯಯಮಾಡುತ್ತಿದ್ದಾರೆ. ಶಿಶುವಿಹಾರಗಳು ಮಗುವಿನ ಎಲ್ಲ ಬೆಳವಣಿಗೆಗೂ ಅನುಕೂಲವಾದದ್ದು. [illegible] ಅಧಿಕಾರಿಗಳು ಶಿಶುವಿಹಾರ [illegible] ದರೆ ಎಷ್ಟು [illegible] [illegible]

ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್, ಮಡಿಕೇರಿ.

ಮಹಾಜನರಲ್ಲಿ ವಿನಂತಿ.

ನಮ್ಮ ಫ್ರೇಜರ್‌ಪೇಟೆ ಕಾರ್ಖಾನೆಯಲ್ಲಿ ಈಗಾಗಲೇ ಮೂಳೆಗೊಬ್ಬರ ತಯಾರಾಗುತ್ತಿರುವುದು ಎಲ್ಲರಿಗೂ ತಿಳಿದ ವಿಷಯ. ಈ ಸಂದರ್ಭದಲ್ಲಿ ನಿಮ್ಮ ನಿಮ್ಮ ಗ್ರಾಮಗಳಲ್ಲಿ ಸತ್ತ ದನಗಳ ಮತ್ತು ಇತರ ಪ್ರಾಣಿಗಳ ಮೂಳೆಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಜಮಾಯಿಸಿ ಮೇಲಿನ ವಿಳಾಸಕ್ಕೆ ತಿಳಿಸಿದಲ್ಲಿ ಅದನ್ನು ಅದರ ಬೆಲೆ ಕೊಟ್ಟು ಸಾಗಿಸುವ ಏರ್ಪಾಡನ್ನು ಮಾಡುತ್ತೇವೆ. ಅಥವ ಲಾರಿಗಟ್ಟಲೆ ಜಮಾಯಿಸಿದವರು ನಮ್ಮ ಫ್ರೇಜರ್‌ಪೇಟೆ ಕಾರ್ಖಾನೆಗೆ ತಂದು ಕೊಟ್ಟಲ್ಲಿ ಮಣ 1ರ 0-12-0 ಯಂತೆ ಬೆಲೆಗೆ ಕೊಂಡುಕೊಳ್ಳಲಾಗುವುದು.

ಈಗಾಗಲೇ ತಯಾರಾಗಿರುವ ಮೂಳೆ ಗೊಬ್ಬರಕ್ಕೆ ಖಾಯಿಸ್‌ದಾರರು ಬರಕೊಂಡಲ್ಲಿ ಅಗ್ರಸ್ಥಾನವನ್ನು ಮನ್ನಿಸಿ ಬಟವಾಡೆ ಮಾಡಲಾಗುವುದು.

ಸೂಚನೆ:—ನಮ್ಮ ಕಂಪೆನಿಯ ಶೇರುದಾರರಿಗೆ ಹೆಚ್ಚಿನ ರಿಯಾಯಿತಿ ಮತ್ತು ಮೊದಲಿನ ಹಕ್ಕು ಕೊಡಲಾಗುವುದು.

ಮಡಿಕೇರಿ,
ತಾ. 19-5-49.

ಕೆ ಕೆ ತಿಮ್ಮಯ್ಯ,
ಮೇನೇಜಿಂಗ್ ಡೈರೆಕ್ಟರ್.

ವಿಮೆ ಮಾಡಲು ಇಲ್ಲವೇ ಪ್ರತಿನಿಧಿಸಲು

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.

ಇವರ ಸಲಹೆಗಿಂತ ಉತ್ತಮ ಮಾರ್ಗವಿಲ್ಲ.

ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದೂಸ್ಥಾನದ ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು.

ದಿ ಬೊಂಬಾಯಿ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

30 ಮೌಂಟ್ ರೋಡ್,
ಪೋ. ಬಾ. ನಂ. 337,
ಮದ್ರಾಸು 2.

ಬೊಂಬಾಯಿ ಲೈಫ್ ಬಿಲ್ಡಿಂಗ್,
ಪೋ. ಬಾ. ನಂ. 1,
ಉಡುಪಿ.

(ಟೆಲಿಫೋನ್ ನಂ. 8398)

ಇತರ ಆಫೀಸುಗಳು:—ಬೆಂಗಳೂರು, ತಿರುವೆಂಡ್ರಂ, ಕಲ್ಲಿಕೋಟೆ, ಮಂಗಳೂರು, ಮಧುರೆ, ಮತ್ತು ಬೊಂಬಾಯಿ.

ದಿ ಟ್ರಾಪಿಕಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:— ಲಾಲ ಶಂಕರ್ ಲಾಲ್.

ಮುಖ್ಯ ಖಚೇರಿ:— ಹೊಸ ಡೆಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮಲಖಾನ್. ಡಾ|| ಎಂ. ಎ. ಅನ್ಸಾರಿ.

Transacts:—Life, Fire, Motor and Marine.

ನಮ್ಮ ಹೊಸ ವಿಸ್ತಾರದ ಯೋಜನೆಯಲ್ಲಿ ಆಕರ್ಷಕ ಕಮಿಷನ್ ಮೇಲೆ ಏಜನ್ಸಿಗೆ ದಯವಿಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಆರ್ಗನೈಜರ್
ದಕ್ಷಿಣ ಕೊಡಗು, ಪೊನ್ನಂಪೇಟೆ.
ಅ ಥ ವಾ
ಯಂ. ಯು. ಅಚ್ಚಣ್ಣ,
ಏಜೆನ್ಸಿ ಸುಪರಿಂಟೆಂಡೆಂಟ್,
ಮಡಿಕೇರಿ, ಕೊಡಗು.

ಆರ್ಗನೈಜರ್
ಉತ್ತರ ಕೊಡಗು, ಮಡಿಕೇರಿ.
ಅ ಥ ವಾ
ಎಂ. ಎ. ಚೆಳ್ಳಪ್ಪ,
ಬ್ರಾಂಚ್ ಸೆಕ್ರೆಟರಿ,
ಹಂಪನಕಟ್ಟಾ, ಮಂಗಳೂರು.

ಎಂಪೈರ್ ಆಫ್ ಇಂಡಿಯಾ

ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

48ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು.	ಒಟ್ಟು ಆದಾಯ	1,07,09,000	ಮೀರಿದೆ
	ಚಾಲ್ತಿಯಿರುವ ವಿಮೆ	17,74,52,000	,,
	ಆಸ್ತಿ	6,67,60,000	,,
ಕಂಪೆನಿಯ ಆದಿಯಲ್ಲಿ ಕೊಟ್ಟ ಕ್ಲೈಮುಗಳು		8,33,62,000	,,

ಶಾಖಾ ಕಛೇರಿ:
ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್,
ಕೆಂಪೇಗೌಡರಸ್ತೆ, ಬೆಂಗಳೂರು.

ಏಜೆನ್ಸಿ
ಅರ್ಜಿಗಳನ್ನು
ಸ್ವಾಗತಿಸಿದೆ.

ಪ್ರಧಾನ ಕಛೇರಿ:
ಎಂಪೈರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ್, ಬೊಂಬಾಯಿ.

ಭದ್ರತೆ! 17 ವರ್ಷಗಳ ಪರಿಪಕ್ವ ಅನುಭವಶೀಲತೆ!! ಅನುಕೂಲತೆ!!

ದಿ ವಿಜಯ ಬೇಂಕ್ ಲಿಮಿಟೆಡ್

ಮುಖ್ಯ ಖಚೇರಿ,

ಕದ್ರಿ ರೋಡ್, ಮಂಗಳೂರು.

ನಿರಖು ಠೇವಣಾತಿ ಬಡ್ಡಿದರ:—

3	ತಿಂಗಳು	3%
6	,,	3½%
12	,,	3¾%
24	,,	4 %

ರೂಪಾಯಿ ೧೫,೦೦೦ಕ್ಕೆ ಮೀರಿದ ಒಂದೇ ಡಿಪಾಜಿಟ್ಟಿಗೆ ಮೇಲಿನ ದರಕ್ಕಿಂತಾ ¼% ಹೆಚ್ಚಿಗೆ.

ಶಾಖೆಗಳು:— ಸಿಟಿ ಮಂಗಳೂರು, ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಕಾಸರಗೋಡು, ಕಾಞಂಗಾಡ್, ಪುತ್ತೂರು, ಮಡಿಕೇರಿ ಮತ್ತು ಮುಂಬಾಯಿ.

ಒಟ್ಟು ವಹಿವಾಟು ಭಂಡವಾಳ ರೂ. ೪೦ ಲಕ್ಷಕ್ಕೂ ಮೀರಿದೆ.

ಎಲ್ಲಾ ವಿಧದ ಆಧುನಿಕ ಬೇಂಕಿಂಗ್ ವಹಿವಾಟುಗಳು ದಕ್ಷತೆಯಿಂದ ನಡೆಸಲ್ಪಡುವವು.

ಹೆಚ್ಚಿನ ವಿವರಗಳಿಗೆ ಬರೆಯಿರಿ:—

ಏಜಂಟ್,
ಮಡಿಕೇರಿ ಶಾಖೆ, ಮಡಿಕೇರಿ.

12-3

CRESCENT

FOR PROTECTION AND SERVICE.

It is best to represent and insure with

The CRESCENT Insurance Co., Ltd,

H: O: BOMBAY. [*Established 1919.*

For particulars write to:

Sri B. A. Poovaiah
Organiser
Pollibetta, Coorg.

or

The Branch Manager,
22 B. Mahatma Gandhi Road,
Bangalore 1.

ಸುರಕ್ಷಿತವಾದ ಜೀವವಿಮೆ ಪಡೆಯಲು

ಕ್ರೆಸೆಂಟ್

ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1914ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,65,000.
ಕ್ಷೇಮನಿಧಿ	ರೂ.	50,000.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಹುಂಡಿಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ತೆಗೆದುಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ,
ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C.
ಪ್ರೆಸಿಡೆಂಟ್ ಮತ್ತು ಖಜಾನ್ಚಿ.

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

Reg. No. M. 1550.
'KODAGU' MERCARA, (Coorg).

ಕೊಡಗು

[illegible] ವಾರ್ಷಿಕ ಚಂದಾ ರೂ. 5-0-0.

ಸಂಪುಟ ೨೮ | ತಾರೀಕು [illegible] ಶುಕ್ರವಾರ | ಸಂಚಿಕೆ ೬

ವಿಶೇಷ ಲೇಖನ.

ಮನೆಗೊಂದು ಬೆಳಕು-ಮಗು

ಲೇಖಕರು:- ಶ್ರೀ ಸಮೇತನಹಳ್ಳಿ ರಾಮರಾವ್

ಮಗುವು ಮನೆಗೊಂದು ಬೆಳಕು ಎಂಥಾ ಸತ್ಯಾರ್ಥ ಸುಂದರವಾದ ಮಾತು! ಮಗುವು ಮನೆ ತುಂಬಿ ಮುಂದಿನ ಹೃದಯ ಮಂದಿರಗಳನ್ನೂ ತುಂಬಿಸಿದಾಗ ಬಾಹ್ಯ ಜಗತ್ತಿನ ಎಲ್ಲ ಜಂಜಡಗಳೂ ಅಡಗಿ ಆ ಮಂಗಳ ಬೆಳಕಿನ ಶುಭ್ರ ಜ್ಯೋತ್ಸ್ನೆ ಅಮೃತದ ಹನಿಗಳಾಗಿ ಎಲ್ಲರ ಭಾವ ಸಮುದ್ರಗಳಲ್ಲಿಯೂ ಸುಖದ ತೆರೆಗಳನ್ನು ಎಬ್ಬಿಸುತ್ತದೆ. ಎಬ್ಬಿಸಿ ಜೋಗುಳದ ಮಧುರ ತೊಟ್ಟಿಲಲ್ಲಿಟ್ಟು ತೂಗುತ್ತದೆ. ಮಾನವನ ಅಂತ್ಯ ಗುರಿಯಾದ ಮುಕ್ತಿಯನ್ನು ಬಿಟ್ಟರೆ ಉಳಿದ ಪುರುಷಾರ್ಥಗಳಲ್ಲಿ ಮಗುವು ಉನ್ನತೋನ್ನತವಾದ ಸ್ಥಾನವನ್ನು ಆಕ್ರಮಿಸಿದೆ. ಈ ಭೌತಿಕ ಪ್ರಪಂಚದಲ್ಲಿ ಮಗುವೇ ಹಿರಿದಾದದ್ದು. ಅದಕ್ಕಿಂತ ಪವಿತ್ರವಾದ, ಶ್ರೇಷ್ಠವಾದ ವಸ್ತು ಬೇರೊಂದಿಲ್ಲ.

ಮಗುವಿನ ಮಹತ್ವವನ್ನು ಕುರಿತು ಹೇಳುತ್ತ ಭವಭೂತಿ ಒಂದು ಕಡೆ 'ಮಗುವು ಸತಿಪತಿಗಳ ಆನಂದದ ಗಂಟು' ಎಂದಿದ್ದಾನೆ. ಎಂಥಾ ದಿವ್ಯವಾದ ಮಾತು! ಮಾನವ ಜೀವನದ ಸಾರಸತ್ವ ಸೌಭಾಗ್ಯವೆಲ್ಲಾ ಮಗುವಿನಲ್ಲಿ ಕೇಂದ್ರೀಕೃತವಾಗಿದೆ ಎಂದು ಹೇಳಿದಂತಾಗದೇ? ನಮ್ಮ ಉದ್ದಾಮ ಕವಿಗಳೊಬ್ಬರು ತಮ್ಮ ಎರಡನೇ ಮಾತಿನಲ್ಲಿ ಹೇಳಿದ್ದಾರೆ. 'ಮಗನೇ ಮಾ ಜಗಮಾಯಿತ್ತು' ಭಾವನೆ ಎಷ್ಟು ಹಿರಿದಾಗಿದೆ! ಎಷ್ಟು ಸಹಜ ಸುಂದರವಾಗಿದೆ! ಶಿಶು ಪ್ರೇಮದ ಆಳ ಎಲ್ಲ ತಾಯಿಯರಿಗೂ ಅಷ್ಟೇ ಹಿರಿದಾದದ್ದು.

ತಾಯಿಗೆ ಅಳುವ ಮಗುವೂ ಮನೋಹರ. ಹಾಡುತ್ತಾಳೆ, 'ಅಳುವ ಕಂದನ ತುಟಿಯು ಹವಳದ ಕುಡಿಯಂಗ, ಕುಡಿಹುಬ್ಬು, ಬೇವಿನೆಸಳಂಗ' ತಾಯಿ ಪ್ರಕೃತಿಯ ಸತ್ಯ ಸೌಂದರ್ಯವನ್ನೇ ತನ್ನ ಮಗುವಿನಲ್ಲಿ ಕಾಣಬಯಸುತ್ತಾಳೆ. ಹವಳದ ಕುಡಿ, ವಸಂತದ ಬೇವಿನ ಚಿಗುರಿನ ಕೆಂಪು ಎಸಳು ಮುಂತಾದವೂ ಕೂಡ ಅವಳ ಉಪಮೆಗೆ ಅನೇಕ ವೇಳೆ ಸಾಲವು.

ಪರೆನೊಸಲ ಮೇಲೆ ಉಯ್ಯಾಲಾಡುವ ಆ ಸುಳಿಗುರುಳು, ತುಂಬಿ ಬಂದ ಆ ಹಾಲುಗೆನ್ನೆಗಳು, ಮುದ್ದು ಮುದ್ದಾದ ಗಲ್ಲ, ಶ್ರೀಕಾಂತಿಯ ಆ [illegible]ಗಣ್ಣುಗಳು ಭಂಗಾರದ ದೇಹದ, ಬೆಣ್ಣೆ ಮಿದುವಿನ ಆ ತೋಳುಗಳು, ಚಿಗುರು ಬೆರಳುಗಳು ಇವುಗಳ ಒಂದು ನೋಟ ಸಾಕು. ಶರೀರ ತ[illegible] ಆನಂದವನ್ನು ಅನುಭವಿಸುತ್ತದೆ.

ಮಗುವಿನ ಗಮನ ಚಲನೆಗಳ [illegible] ಸಮರ್ಥನಾದ ಕರ್ತನ [illegible]

ಮಕ್ಕಳು ಮಹಾತ್ಮ ಗಾಂಧಿ [illegible] ಜೀವನದ [illegible] ಆಕ್ರಮಿಸಿಕೊಂಡಿದ್ದವು. ಅವುಗಳ ಆ ನಿರ್ಮಲ ಮನಸ್ಸು ಅವರ ಮನಸ್ಸನ್ನೂ ತಿಳಿಮಾಡುತ್ತಿದ್ದುದರಿಂದ ವಿರಾಮ ದೊರಕಿದಾಗ ಅವುಗಳೊಡನೆ ಆಟವಾಡುತ್ತಿದ್ದರು. ಅಂತೆಯೇ ಮಹಾನುಭಾವ ಬರ್ನಾರ್ಡ್ ಷಾರವರು ಹೇಳುವಂತೆ ಆ ನಿರ್ಮಲ ಮಕ್ಕಳ ಕಣ್ಣುಗಳಲ್ಲಿ [illegible] ಗಳನ್ನು ನೋಡುವ [illegible] ಸತ್ಯ ಪ್ರಸಿದ್ಧವಾದುದು. ಅವರ [illegible] ಅಭಿಮಾನ [illegible] ಕೈಗೂಡಿಬಂದಾವು.

ಆ ಮಕ್ಕಳನ್ನು ನಾವು ಸುಖವಾಗಿ ಭದ್ರ ಮಾಡುತ್ತಿರುವೆವೇ? ಇಲ್ಲವೆಂಬ ಕೂಗು ಮನೆ ಮನೆಗಳಿಂದ ಕೇಳಿಬರುತ್ತಿದೆ. ಅಂದರೆ ನಾವು ಅಂಥಾ ಅನಾರ್ಯರೇನು? ಅದೂ ಅಲ್ಲ. ಅಜ್ಞಾನ ಮತ್ತು ಅನಾದರಗಳ ಉಕ್ಕಿನ ಇಕ್ಕಳ ನಮ್ಮ ಮನಸ್ಸನ್ನು ಹಿಸುಕುತ್ತಿದೆ. ತತ್ಫಲವಾಗಿ ಭಾವನೆ ಸಂಕುಚಿತವಾಗುತ್ತಿದೆ.

ಅಜ್ಞಾನದ ಈ ಪರಾಕಾಷ್ಠತೆ ಹಳ್ಳಿಗಳಲ್ಲಿ ಶಿಖರಕ್ಕೇರಿದೆ. ಮನೆಯಲ್ಲಿ ಹಾಲು ಮೊಸರಿನ ಕೋಡಿ ಹರಿಯುತ್ತಿದ್ದರೂ ಅವನ್ನು ಮಗುವಿಗೆ ಅದರ ಉಪಯೋಗವಿಲ್ಲ. ಹಣದಾಸೆಯಿಂದ ಮಗುವಿನ ಉಣಿಸನ್ನು ಕಿತ್ತು, ಹಾಲು ಬೆಣ್ಣೆಗಳನ್ನೇ ಅಲ್ಲ, ಅದರೊಡನೆ ತಮ್ಮ ಮಗುವಿನ ಬೆಳವಣಿಗೆಯನ್ನೇ ವಿಕ್ರಯಿಸಿಕೊಳ್ಳುತ್ತಿದ್ದಾರೆ. ಇದು ಮೊಟ್ಟಮೊದಲ ದ್ರೋಹ. ಮಗುವು ಹಾಗೆ ನಕ್ಕು ನಗಿಸಿ, ತಾನೂ ಆನಂದಪಟ್ಟು ಮನೆಯವರನ್ನೂ ಆನಂದಪಡಿಸಬೇಕಾದರೆ ವಯೋನುಗುಣವಾದ ಬೆಳವಣಿಗೆ ಮತ್ತು ರೋಗಗಳಿಂದ ರಕ್ಷಣೆ ಇವು ಅತ್ಯವಶ್ಯಕ.

ನಮ್ಮ ತಾಯಿಯರು ಆದರ್ಶರು. ಮಗುವಿನ ಶುಶ್ರೂಷೆಯೇ ಅವರ ಆನಂದ. ಆದರೂ ತಲತಲಾಂತರಗಳಿಂದ ಬಂದಿರುವ ಮೂಢ ನಂಬಿಕೆಗಳು ಆ ಮುಗ್ಧೆಯರನ್ನೂ ವಂಚಿಸುತ್ತಿವೆ. ಅವರ ಮನಸ್ಸಿನಲ್ಲಿ ಭದ್ರವಾಗಿ ಒತ್ತಿರುವ ಕೆಲವು ಕುರುಡು ಭಾವನೆಗಳು ಸಾಧಾರಣ ಬುದ್ಧಿವಾದಗಳಿಂದ ಅಳಿಯುವಂತಿಲ್ಲ.

ಹಳ್ಳಿಯೊಂದರಲ್ಲಿ ಒಂದು ಸಾರಿ ಸಿಡುಬು ಕಾಣಿಸಿಕೊಂಡಿತ್ತು. [illegible] ಹಾಕುತ್ತ ಮನೆ ಮನೆಗೆ ಹೋದಾಗ ಒಂದು ಮನೆಯಲ್ಲಿ ಮೂವರು ಮಕ್ಕಳಿದ್ದರು. ದೊಡ್ಡದಕ್ಕೆ ಏಳು ವರ್ಷ, ಎಲ್ಲದಕ್ಕೂ ಚಿಕ್ಕದಕ್ಕೆ ಎರಡು ವರ್ಷ. ಮಕ್ಕಳು ಮೈ ತುಂಬಿಕೊಂಡು ಚೆಲುವಾಗಿದ್ದವು. ಒಂದಕ್ಕಾದರೂ ದೇವಿ ಹಾಕಿರಲಿಲ್ಲ. ಆಗ ದೇವಿ ಹಾಕಿಸಲು ಸಮ್ಮತಿಯೂ ಇಲ್ಲ. ಆ ತಾಯಿಗೆ ಹೇಳಿದ ಎಲ್ಲ ಹಿತವಾದಗಳೂ ಗಾಳಿಯಲ್ಲಿ ತೂರಿಹೋದವು. ಸಿಡುಬಿನ ಭಯದಿಂದ ಅಂಗವಿಕಲರಾಗುವ ಮಕ್ಕಳ ಚಿತ್ರಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದರೂ ಪ್ರಯೋಜನವಾಗಲಿಲ್ಲ. ತಂದೆ ಬಂದನು. ಸಿಡುಬಿನ ಮಾತೇ ಅವನ ಕಿವಿಯಲ್ಲಿ ಕಾದ ಸೀಸದಂತೆ ಪ್ರವೇಶಿಸಿತು. ರೋಗಕ್ಕೆ ಕಾರಣ ಭಗವಂತನಾದರೆ, ಎಲ್ಲ ಅವನ ಇಚ್ಛೆಯಂತೆ [illegible] ಮಕ್ಕಳು ಸಿಡುಬಿನಿಂದ ಸಾಯುವುದು [illegible] ಅವನ ಸಂಕಲ್ಪವಾದರೆ [illegible] ದೃಢ ನಿರ್ಧಾರದ ಮುಂದೆ ಯಾವ [illegible] ಸಾಗಲಿಲ್ಲ. ಅವನ [illegible] ಕಳಕ್ಕಿಳಿಸಿತು. ಅವನ ಮಕ್ಕಳಷ್ಟನ್ನೇ ಅಲ್ಲ, [illegible] ಗಂಡ ಹೆಂಡಿರಿಗೂ ಸಿಡುಬು ಹಾಕಿದ ದಾಯಿತು. ಈ [illegible] ಪ್ರದರ್ಶನ ಎಷ್ಟು ಮಟ್ಟಿಗೆ ಸಾಧ್ಯ!

ಇನ್ನೊಂದು ಜಾತಿಯ ಸ್ತ್ರೀ ದೇವಿ ಹಾಕಿಸುವ ಕೆಲಸ ನಡೆದಿತ್ತು. ನಡುವೆ ವಿದ್ಯಾವಂತ ತಂದೆಯೊಬ್ಬರು ಪ್ರವೇಶಿಸಿ ತನ್ನ ಮಗುವನ್ನು ಬಗಲಿಗೆ ಹಾಕಿಕೊಂಡು ಜೋರು ಮಾಡಿದರು. ಯೋಧನಂತೆ ಎಡಗೈ ಚಾಚಿ ನಿಂತಿದ್ದ ಮಗುವು ತಂದೆಯು ಬಗಲಿಗೆ ಹೋದೊಡನೆಯೇ ನನ್ನನ್ನು ಕಟುಕರಂತೆ ಭಾವಿಸಿ ಅಳಲಾರಂಭಿಸಿತು. ಸರಿ, ಎಲ್ಲ ಮಕ್ಕಳಿಗೂ ನಾನು ಯಮಸ್ವರೂಪನಾದೆ. ತನ್ನ ಸ್ನೇಹಿತನನ್ನು ರಕ್ಷಿಸಿದಂತೆ ತಮ್ಮನ್ನು ರಕ್ಷಿಸುವವರಿಲ್ಲವೆಂದು ಎಲ್ಲ ಮಕ್ಕಳು ಅತ್ತವು. ಅದುವರೆಗೆ ನಿರಾತಂಕವಾಗಿ ನಡೆದಿದ್ದ ಕೆಲಸಕ್ಕೆ ಕೊಂಚ ಅಡಚಣೆಯಾದರೂ ನಿಲ್ಲಲಿಲ್ಲ. ಆ ತಂದೆ ನನ್ನನ್ನು ನುಂಗುತ್ತ ಹೇಳಿದರು. 'ನಮಗೂ ರೂಲ್ಸುಗಳು ಎಲ್ಲ ಗೊತ್ತಿದೆ ಸ್ವಾಮಿ. ನನ್ನ ಅನುಮತಿ ಇಲ್ಲದೆ ನನ್ನ ಮಗುವಿಗೆ ನೀವು ಸಿಡುಬು ಹಾಕಲಾರಿರಿ' ಎಂದು ಕಿಡಿ ಕಾರಿ ಹೊರಟುಹೋದರು. ಶಾಸನವಿದೆ ಹೌದು. ಆದರೆ ಒಂದು ತೊಟ್ಟು ಹುಳಿ, ಖಂಡುಗ ಹಾಲನ್ನೇ ಕೆಡಿಸಿದಂತೆ ಕರ್ತವ್ಯವನ್ನರಿಯದ ತಂದೆ ಅಂಥಾದ್ದೇ ಮೂಢ ನಂಬಿಕೆಯ ಇತರರನ್ನೂ ವಂಚಿಸಲು ಸಾಧನವಾದನು. ಆ ನೂರು ಮಕ್ಕಳ ಮನಸ್ಸಿಗೂ ಹುಳಿ ಹಿಂಡಿದನು. ಕೆಟ್ಟ ಮನಸ್ಸನ್ನು ಶಾಸನ ಸರಿಮಾಡಬೇಕಾದರೆ ಬಹು ಕಾಲ ಬೇಕು. ಕೆಲವು ವೇಳೆ ಸರಿಹೋಗದಿರಲೂ ಬಹುದು.

ಇಂದು ಮನೆಯನ್ನು ಬೆಳಗಿಸುತ್ತಿರುವ ಮಗುವು ನಾಳೆ ಸಮಾಜವನ್ನು ಉದ್ಧರಿಸುವ ವ್ಯಕ್ತಿ ಎಂಬುದನ್ನು ಮನಸ್ಸಿನಲ್ಲಿ [illegible] ಗಳ ಬೆಳವಣಿಗೆಯ [illegible] ಕಡೆ ಗಮನ ಕೊಡಬೇಕು. ಮಕ್ಕಳ ಮಹತ್ವವನ್ನರಿತು ಇಂದು ಯಾವ ನಾಡು ಶಿಶು ಲೋಕವನ್ನು ಅರಿತುಕೊಂಡಿದೆಯೋ ಆ ದೇಶಗಳು ನಾಗರಿಕತೆಯಲ್ಲಿ, ಸಂಸ್ಕೃತಿಯಲ್ಲಿ, ಐಶ್ವರ್ಯದಲ್ಲಿ ಮತ್ತು ಭೋಗದಲ್ಲಿ ಉತ್ತುಂಗ ರಂಗಕ್ಕೇರಿರುವ ಸಂಪತ್ಸಮೃದ್ಧವಾದ ಲೋಕವೆಂಬುದನ್ನು ನಾವು ಮನಗಂಡಿದ್ದೇವೆ.

ರೋಗರುಜಿನಗಳು ಮಾನವನ ಸಹಜ ಶತ್ರುಗಳು. ಅದಕ್ಕೆ ದೇವರ ಸಂಕಲ್ಪವನ್ನು [illegible] ದೇಹದ [illegible] ನ್ನು ತಾಳಿಕೊಳ್ಳುವಷ್ಟು ದೃಢತೆ ಮೂಡಿರುವುದಿಲ್ಲ. ಸಹಜವಾಗಿ ಎಲ್ಲವೂ ಮಗುವನ್ನು ಮುತ್ತುವವು. ಸರಿಯಾದ ಬೆಳವಣಿಗೆ ಇಲ್ಲದ ಮೇಲಂತೂ ಅವುಗಳ ದಾರುಣ ಪರಿಣಾಮ ಮಗುವಿನ ಮೇಲೆ ಎಷ್ಟರಮಟ್ಟಿಗಾಗುತ್ತದೆ ಎಂಬುದನ್ನು ವಿವರಿಸುವುದು ಅನವಶ್ಯಕ. ಮರಣದ ಸಂಖ್ಯೆಯನ್ನು ಅವಲೋಕಿಸುವುದಾದರೆ ಮುದುಕರಿಗಿಂಥಾ ಹೆಚ್ಚು [illegible] ಮಕ್ಕಳೇ ನಮ್ಮಲ್ಲಿ [illegible] ಹೆಚ್ಚಿನ [illegible]?

[illegible] ಇದಕ್ಕೆಲ್ಲಾ ಬಡತನವನ್ನು ಮುಂದೊಡ್ಡಿ ವಾದಿಸುತ್ತಾರೆ. ಹೌದು. ದೇವರು ನಮಗೆ ಬಡತನವನ್ನು ಕೊಟ್ಟಿದ್ದಾನೆ. ಆದರೆ ಕೊಳೆತನವನ್ನು ಅದರೊಡನೆ ಕೊಟ್ಟಿಲ್ಲ. ನಮಗೆ ಇರುವಷ್ಟರಲ್ಲಿ ಮಕ್ಕಳನ್ನು ನಿರ್ಮಲನಾಗಿಟ್ಟು ನಿರ್ಮಲ ಆಹಾರದಿಂದ ನಾವು ಅವುಗಳನ್ನು ಪೋಷಣೆ ಮಾಡುವೆವಾದರೆ, ಬೆಳೆವ ಮಕ್ಕಳ ಮನಸ್ಸು, ಮೈಯೂ, ಅಷ್ಟೇ ವೇಗವಾಗಿ ದೃಢವಾಗಿ ಪವಿತ್ರವಾಗಿ ಬೆಳೆದು ಈ ನಮ್ಮ ಬಡತನವನ್ನು ನಮ್ಮ ಸಂತತಿಯವರು ನಮ್ಮಿಂದ ಇಳಿಸಿಕೊಳ್ಳಲು ಶಕ್ತರಾಗುತ್ತಾರೆ.

ಮಗುವಿನ ಮನಸ್ಸು ಬೆಣ್ಣೆಗಿಂತ ಮೃದುವಾದುದು. ಆಗ ಅದರ ಮೇಲೆ ಒತ್ತಿದ ಅಚ್ಚು ಎಂದೆಂದಿಗೂ ನಿಲ್ಲುವುದು. ಆಗ ನಾವು ಎಂತಹ ಉದಾತ್ತವಾದ ಮತ್ತು ಹಿರಿದಾದ ಭಾವನೆಗಳನ್ನು ಬಿತ್ತುವೆವೋ ಮಗುವೂ ಅಷ್ಟು ಉನ್ನತವಾಗುತ್ತದೆ. ನಾವು ಇಂದು ಆಡಿಸುವ ಆಟ ಅದರ ಮುಂದಿನ ಜೀವನದ ತಳಹದಿ. ಮಕ್ಕಳ ಆಟದ ಮಹತ್ವ ನಮಗಿನ್ನೂ ಅರಿವಾಗಿಲ್ಲ. ಮಗುವನ್ನು ಸ್ವೇಚ್ಛೆಯಾಗಿ ಆಟದಲ್ಲಿ ಬಿಡುವುದು ಅದರ ಸ್ವೇಚ್ಛಾಚಾರಕ್ಕೆ ಅನುಕೂಲವೆಂದು ಅನೇಕರು ನಾಲ್ಕು ಗೋಡೆಗಳ ಸೆರೆಮನೆಗಳಲ್ಲಿಡುವ ವಾಡಿಕೆಗೂ ನಮ್ಮಲ್ಲಿ ಅಭಾವವಿಲ್ಲ. ಮಗುವಿಗೆ ಅತಿ ಕುತೂಹಲ ಸಹಜವಾದದ್ದು. ಆ ಪಿಪಾಸೆಗೆ ತಕ್ಕಷ್ಟನ್ನು ಕೊಡಬೇಕು. ಬೆಳೆಸಬೇಕು. ಅದು ಒಂದಕ್ಕೆ ನಿಲ್ಲುವುದಿಲ್ಲ. ಅದರ ಕುತೂಹಲ ಎಷ್ಟು ವಿಶಾಲವಾದರೆ ಅಷ್ಟೂ ಒಳ್ಳೆಯದು. ಮಗುವಿನ ಆಟದ ಸಾಮಾನಿಗೆ ಮೂರು ಕಾಸು ಹಾಕುವುದು ನಮಗೆ ಹಿಡಿಸದು. ಐರೋಪ್ಯರು ಅಮೇರಿಕನ್ನರು, ಅದಕ್ಕಾಗಿ ಬಹು ಭಾಗವನ್ನು ವ್ಯಯ ಮಾಡುತ್ತಿದ್ದಾರೆ. ಶಿಶುವಿಹಾರಗಳು ಮಗುವಿನ ಎಲ್ಲ ಬೆಳವಣಿಗೆಗೂ ಅನುಕೂಲವಾದದ್ದು. [illegible] ಅಧಿಕವ ಶಿಶುವಿಹಾರ [illegible] ಗರ ಎಣಿಸು [illegible]

[illegible]

ವೆ. ಪಶ್ಚಿಮ ರಾಷ್ಟ್ರಗಳಲ್ಲಿ, ಜಪಾನಿನಲ್ಲಿ, ಅಮೇರಿಕದಲ್ಲಿ ಅಂತಹ ಶಿಶು ಕ್ರೀಡಾಸ್ಥಾನಗಳು ಗಣನೆ ಇಲ್ಲದಷ್ಟು ಬೃಹತ್ತಾಗಿ ಬೆಳೆದುಕೊಂಡಿವೆ. ಮಗುವು ಎಷ್ಟು ದೊಡ್ಡದಾಗಬೇಕೆಂಬ ನಮ್ಮ ಅಪೇಕ್ಷೆಯೋ ಅಂತಹ ವೈಶಾಲ್ಯತೆಯನ್ನೇ ನಾವು ಅದರ ಜೀವನದಲ್ಲಿ ತುಂಬಬೇಕು. ಶಿಶುಗಳ ಒಂದು ಮಹಾನಗರವೇ ಅಮೇರಿಕದಲ್ಲಿದೆಯಂತೆ. ಅಲ್ಲಿನ ಉದಾತ್ತಭಾವನೆಗಳಲ್ಲಿ ಬೆಳೆದು ಬಂದ ಮಗುವು ಭವ್ಯ ಜೀವನವನ್ನು ನಡೆಸುತ್ತದೆ.

ಕೆಲವು ದಿನಗಳ ಹಿಂದೆ ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಸಂತಾನ ವಿಜ್ಞಾನದ ವಿಷಯವಾಗಿ ಮಾತನಾಡುತ್ತ ಓರ್ವ ಇಂಗ್ಲೀಷ್ ಮಹಿಳೆ 'ಭಾರತದಲ್ಲಿ ಮಕ್ಕಳ ಬೆಳವಣಿಗೆಗೆ ಗಮನವಿಲ್ಲ. ಎತ್ತಿ ಮುತ್ತಿಡುವಂತಹ ಮಕ್ಕಳೇ ಇಲ್ಲಿ ಅತಿ ವಿರಳ' ಎಂದು ಹೇಳಿದಳು. ನಮ್ಮ ಈ ಅನಾದರ ಅಮೇರಿಕದವರು ನಮ್ಮನ್ನು ಅನಾರ್ಯರೆಂದು ಹೇಳುವಷ್ಟರಮಟ್ಟಿಗೆ ಬಂದಿದೆ. ಸ್ವಾಮಿ ವಿವೇಕಾನಂದರ ಅಮೇರಿಕದ ಪ್ರವಾಸದಲ್ಲಿ ಕೆಲವು ತಾಯಿಯರು 'ಸ್ವಾಮಿಜಿ, ನಿಮ್ಮ ತಾಯಿಯರು ಮಕ್ಕಳನ್ನು ಹೊಳೆಗೆ ಬಿಸಾಡುವುದು ನಿಜವೇ?' ಎಂದು ಕೇಳಿದುದು ಆಶ್ಚರ್ಯವಾದರೂ, ನಮ್ಮ ಈ ಅಲಕ್ಷ್ಯತೆಗೆ ಅಷ್ಟೊಂದು ಅನಾರಿಗಕತೆಯನ್ನು ಕೊಡಿಸುವಷ್ಟು ಲಘುವಾಗಿತ್ತು ನಮ್ಮ ಬಾಳು ಅವರಿಗೆ.

ನಾವಿಂದು ಸರಿಯಾರಲ್ಲಿ ತಲೆ ಎತ್ತಿ ನಿಂತಿದ್ದೇವೆ. ಭಾರತದ ಕೀರ್ತಿ ಸೂರ್ಯನು ಲೋಕದ ಕಣ್ಣು ತೆರೆದಿದ್ದಾನೆ. ಹಿಂದಿನ ಆ ಸ್ವರ್ಣಯುಗವನ್ನು ಮರಳಿಸುವ ಕನಸು ನಮ್ಮ ಮುಂದಿದೆ. ಆ ಕನಸು ನನಸಾಗಬೇಕಾದರೆ ಶಿಶು ಲೋಕ ಸರ್ವ ಚೈತನ್ಯವಾಗಬೇಕು; ಸಮಾಜದ ಆರೋಗ್ಯ ಸುಧಾರಿಸಬೇಕು. ಆಗ ಮಾತ್ರ ನಮ್ಮ ಕನಸಿನ ನಾಡು ಕಣ್ಣು ಮುಂದೆ ಕಟ್ಟುತ್ತದೆ.

ಆರೋಗ್ಯವೇ ನಾಡಿನ ಉಸಿರು. ಅದು ನಿಂತರೆ ಉಳಿದೆಲ್ಲವೂ ನಿರ್ಜೀವವೇ. ಉಪನಿಷತ್ತುಗಳ ಕಾಲದಿಂದ ಹಿಡಿದು ಇಲ್ಲಿಯವರೆಗೂ ಅದನ್ನು ಅಂದುಕೊಳ್ಳುತ್ತಿದ್ದೇವೆ. ಈಗ ಅಂದುಕೊಂಡರೆ ಸಾಲದು. ಎಚ್ಚೆತ್ತ ನಾವಿಂದು ಅದನ್ನು ಊದಿ ಉದ್ದೀಪನಗೊಳಿಸಬೇಕು. ಅಜ್ಞಾನ ಬಡತನಗಳ ಕತ್ತಲೆ ಆರೋಗ್ಯರವಿಗೆ ದಾರಿಗೊಟ್ಟು ಸರಿಯುತ್ತದೆ; ಜ್ಞಾನ, ಸಂಪತ್ತು, ಸಂಸ್ಕೃತಿಗಳ ಹೂಬಿಸಿಲು ನಾಡಿನಲ್ಲಿ ಹರಡುತ್ತದೆ.

ರೈತನ ಪ್ರಪಂಚ

ಕಾಂಪೋಸ್ಟ್ ಗೊಬ್ಬರ

(ಧಾರವಾಡ ಜಿಲ್ಲೆಯ ಒಕ್ಕಲತನ ಅಧಿಕಾರಿಗಳಾದ ಶ್ರೀ ಬಿ. ಬಿ. ಯಲಿಗಾರರವರು ಅಖಿಲ ಭಾರತ ಆಕಾಶವಾಣಿಯ ಮುಂಬಯಿ ಸ್ಟೇಶನದಿಂದ ತಾ. ೧೪-೬-೪೯ರಲ್ಲಿ ಮಾಡಿದ ಭಾಷಣದಿಂದ)

೧ ಹೆಚ್ಚು ಆಹಾರ ಧಾನ್ಯ ಬೆಳೆಯಿರಿ ಎಂಬ ಪ್ರಚಾರವು ಪ್ರಾರಂಭವಾದಂದಿನಿಂದ ಕಾಂಪೋಸ್ಟ್ ಗೊಬ್ಬರದ ಬಗ್ಗೆ ಬಹು ಜನರು ಬಹು ರೀತಿಯಲ್ಲಿ ಹೇಳುತ್ತಲಿದ್ದಾರೆ. ಇದಾದರೂ ಒಂದು ಸಾಮಾನ್ಯ ಸೇಂದ್ರಿಯ ಗೊಬ್ಬರವು. ಇದು ಬಹು ಪುರಾತನ ಕಾಲದಿಂದಲೂ ಒಂದಿಲ್ಲೊಂದು ರೂಪದಲ್ಲಿ ಬಳಕೆಯಲ್ಲಿದ್ದರೂ ಜಗತ್ತಿನ ಅನೇಕ ಕಡೆಗಳಲ್ಲಿ ನಡೆದ ಸಂಶೋಧನೆಗಳ ಫಲವಾಗಿ ಇತ್ತೀಚಿಗೆ ಈ ಕಾಂಪೋಸ್ಟ್ ಗೊಬ್ಬರವನ್ನು ತಯಾರಿಸುವ ರೀತಿಯಲ್ಲಿ ಅನೇಕ ಸುಧಾರಣೆಗಳಾಗಿವೆ. ಹೀಗಾಗಿ ಎಷ್ಟೋ ಪದ್ಧತಿಗಳು ಬಳಕೆಯಲ್ಲಿ ಬಂದಿವೆ. ಆದರೆ ಈ ಎಲ್ಲ ಪದ್ಧತಿಗಳಲ್ಲಿ ಹುದುಗಿರುವ ತತ್ವ ಮಾತ್ರ ಒಂದೇ.

೨ ಕಾಂಪೋಸ್ಟ್ ಗೊಬ್ಬರದ ಅವಶ್ಯಕತೆ: ಸೇಂದ್ರಿಯ ಗೊಬ್ಬರವನ್ನು ಹಾಕುವದರಿಂದ ಬೆಳೆಗಳಿಗೆ ಬೇಕಾಗುವ ಆಹಾರದ ಸಂಗ್ರಹವು ಭೂಮಿಯಲ್ಲಿ ಹೆಚ್ಚುತ್ತದೆ. ಭೂಮಿಯ ರಚನೆಯು ಸುಧಾರಿಸಿ ಹೆಚ್ಚು ಹಸಿಹಿಡಿಯುವದು. ಹಿಡಿದ ಹಸಿಯು ಬಹಳ ಅವಧಿಯವರೆಗೆ ಉಳಿಯುವದು. ಬುಳುಸುಗಳ ಮತ್ತು ಸೂಕ್ಷ್ಮ ಜೀವ ಜಂತುಗಳ (ಬ್ಯಾಕ್ಟೀರಿಯಾ) ಕಾರ್ಯಗಳಿಗೆ ಪುಟಿ ದೊರೆತು ಬೆಳೆಗಳಿಗೆ ಬೇಕಾಗುವ ಆಹಾರಗಳನ್ನು ತಯಾರಿಸುವ ಕೆಲಸದಿಂದ ಸಾಗುವದು. ಭೂಮಿಯು [illegible] ಬೆಂಗ [illegible] ಕಷ್ಟು ಹವೆಗಳು ದೊರೆಯ[illegible] ಟ್ಟಿನ ಮೇಲೆ ಸ್ವರಗಳು ಹುಲುಸಾಗಿ ಬೆಳೆಯಲಿಕ್ಕೆ ಅವಶ್ಯವಿರುವ ಎಲ್ಲ ಬಗೆಯ ಅನುಕೂಲ ಪರಿಸ್ಥಿತಿಯು ಭೂಮಿಯಲ್ಲಿ ಉಂಟಾಗುವದು. ಇನ್ನೊಂದು ಮಹತ್ವದ ವಿಷಯವೆಂದರೆ ಇಂಥ ಗೊಬ್ಬರವನ್ನು ಕೊಟ್ಟು ಬೆಳೆದ ದವಸ ಧಾನ್ಯಗಳೂ, ಹಣ್ಣು ಹಂಪಲುಗಳೂ ಹೆಚ್ಚು ಆರೋಗ್ಯಕರವಾಗಿರುವದರಿಂದ ನಮಗೆ ಉಂಟಾಗುವ ಅನೇಕ ರೋಗಗಳ ಬಾಧೆಯನ್ನು ತಪ್ಪಿಸಿಕೊಳ್ಳಬಹುದು.

ಇಂಥ ಸೇಂದ್ರಿಯ ಗೊಬ್ಬರಗಳಲ್ಲಿ ಬೆಳೆಗಳಿಗೆ ಬೇಕಾಗುವ ಎಲ್ಲ ಬಗೆಯ ಸತ್ವಗಳು ಅಡಕವಾಗಿರುವದರಿಂದ ಇವುಗಳಿಗೆ ಪೂರ್ಣ ಗೊಬ್ಬರಗಳೆನ್ನುತ್ತಾರೆ. ಒಂದೇ ಬಗೆಯ ಸತ್ವವನ್ನು ಪೂರೈಸುವ ರಾಸಾಯನಿಕ ಗೊಬ್ಬರಗಳನ್ನು ಕೊಡಬೇಕಾಗುವ ಬೆಳೆಗಳಿಗೂ ಕೂಡ ಮೂಲ ಗೊಬ್ಬರಗಳೆಂಥಾ ಸೇಂದ್ರಿಯ ಗೊಬ್ಬರಗಳನ್ನು ಮೊದಲು ಕೊಡುವದು ಅವಶ್ಯವಿರುತ್ತದೆ. ಹಾಗೆ ಮಾಡದಿದ್ದಲ್ಲಿ ರಾಸಾಯನಿಕ ಗೊಬ್ಬರಗಳ ಪರಿಣಾಮವು ಬೆಳೆಗಳ ಮೇಲೆ ಸರಿಯಾದ ರೀತಿಯಲ್ಲಿ ಆಗುವದಿಲ್ಲ.

(ದೇಶವನ್ನು ನೈಸರ್ಗಿಕ ದೃಷ್ಟಿಯಿಂದ ಮೂರು ಭಾಗವಾಗಿ ಮಾಡಲ್ಪಟ್ಟಿದೆ.)

೧ ಮಲೆನಾಡು:- ಅಂದರೆ, ಹೆಚ್ಚು ಮಳೆಯಾಗತಕ್ಕ ಪ್ರದೇಶ. ಇಲ್ಲಿ ಗಿಡಗಂಟಿಗಳು ವಿಪುಲವಾಗಿದ್ದು, ಹಸುರೆಲೆಗಳು ಸಾಕಷ್ಟು ದೊರೆಯುತ್ತವೆ. ಇದಲ್ಲದೆ ತರದ ಹಾ[illegible] ಭತ್ತದ ಗೊಳಲು ಮೊದಲಾದವುಗಳು ದೊರೆಯುತ್ತವೆ.

೨ ಗಡಿನಾಡು:- ಅಂದರೆ, ಮಲೆನಾಡಿಗಿಂತ ಕಡಿಮೆ ಮಳೆಯಾಗುವ ಪ್ರದೇಶ. ಈ ನಾಡಿನಲ್ಲಿ ಸಾಕಷ್ಟು ಪ್ರಮಾಣದಲ್ಲಿ ಕಾಂಪೋಸ್ಟ್ ಗೊಬ್ಬರವನ್ನು ತಯಾರಿಸಲಿಕ್ಕೆ ಹಸಿ ಸೊಪ್ಪು, ಸೆಂಗಾಚೆಟ್ಟು, ಮೊದಲಾದವುಗಳು ವಿಪುಲವಾಗಿ ದೊರೆಯುತ್ತವೆ.

೩ ಬೆಳವಲ ನಾಡು ಅಥವಾ ಬೈಲುಸೀಮೆ ಅಂದರೆ, ಕಡಿಮೆ ಮಳೆಯಾಗುವ ಪ್ರದೇಶ. ಇಲ್ಲಿಯೂ ಸಹ ಹಳೆ ಸೊಪ್ಪು, ಚಿಪ್ಪಾಡಿ, ಕುಸುಬಿಚೆಟ್ಟು ಆಗಸಿ ಸಂಜರ್, ಮೊದಲಾದವುಗಳು ದೊರೆಯುತ್ತವೆ

ಆಯಾ ನಾಡುಗಳಲ್ಲಿ ದೊರೆಯುವ ಕಚ್ಚಾವಸ್ತುಗಳಿಂದ ಕಂಪೋಸ್ಟ ಗೊಬ್ಬರವನ್ನು ತಯಾರಿಸಲಿಕ್ಕೆ ಬರುತ್ತದೆ. ಇಂಥ ಗೊಬ್ಬರವು ಯಾವ ಕಚ್ಚಾವಸ್ತುಗಳಿಂದ ಮಾಡಿದರೂ ಕೂಡ ಸಗಣಿಯ ಗೊಬ್ಬರಕ್ಕಿಂತ ಹೆಚ್ಚು ಶಕ್ತಿಯುಳ್ಳದಾಗುವದೆಂದು ಶಾಸ್ತ್ರಜ್ಞರು ಕಂಡುಹಿಡಿದಿದ್ದಾರೆ.

ಕಾಂಪೋಸ್ಟ್ ತಯಾರಿಸುವ ಕ್ರಮ:-

ಗೊಬ್ಬರವನ್ನು ತಯಾರಿಸಲು ೨ ಪದ್ಧತಿಗಳನ್ನು ಅನುಸರಿಸಬಹುದು

೧ ಕುಣಿ ಪದ್ಧತಿ.

೨ ರಾಸಿ ಅಥವಾ ಗುಂಪಿನ ಪದ್ಧತಿ

೧ ಕುಣಿ ಪದ್ಧತಿ:-ಇದನ್ನು ಅನುಸರಿಸಲು ಸಾಧ್ಯವಿಲ್ಲದಲ್ಲಿ ಮಾತ್ರ ಗುಂಪಿ ಪದ್ಧತಿಯನ್ನು ಅನುಸರಿಸಬೇಕು. ಕುಣಿ ಪದ್ಧತಿಯಲ್ಲಿ ಮೊದಲು ೧೦ ಫೂಟ್ ಉದ್ದ ೬ ಫೂಟು ಅಗಲ, ೪ ಫೂಟು ಆಳವಾದ ಗುಂಡಿಯನ್ನು ನಾಲ್ಕು ಮಗ್ಗಲು, ಸುಮಾರು ೬ ಇಂಚು ಇಳಿಜಾರಾಗಿ ತಡಿಯಬೇಕು. ಅಂದರೆ ತಳದ ಅಳತೆಯು ೯ ಫೂಟು ಉದ್ದ, ೫ ಫೂಟು ಅಗಲವಾಗುವದು. ಹೀಗೆ ತಯಾರಿಸಿದ ಗುಂಡಿಯ ತಳಕ್ಕೆ ಗೊಬ್ಬರ ತಯಾರಿಸಲು ಉಪಯೋಗಿಸುವ ಕಚ್ಚಾವಸ್ತುಗಳನ್ನು ಒಂದು ಫೂಟು ದಪ್ಪವಾಗುವಂತೆ ಧರಹಾಕಿ ತುಳಿಯಬೇಕು. ಆ ಬಳಿಕ ಈ ಧರದ ಮೇಲೆ ೪ ಕೊಡ ನೀರನ್ನು ಸುರಿದು ಕಸಕಡ್ಡಿಗಳನ್ನೆಲ್ಲ ತೋಯಿಸಬೇಕು. ನಂತರ ೨ ಬುಟ್ಟಿ ಸಗಣಿಯನ್ನು ೪ ಕೊಡದಷ್ಟು ನೀರನ್ನು ಹಾಕಿ ಬೇರೆ ಕಲಿಸಿ ತಯಾರಿಸಿದ ರಾಡಿಯನ್ನು ಆ ಧರದ ಮೇಲೆ ತುಂಬಾ ಚಿಮುಕಿಸಬೇಕು. ಬಳಿಕ ಅರ್ಧ ಬುಟ್ಟಿ ಬೂದಿಯನ್ನು ಹರವಬೇಕು ಮತ್ತು ದನಗಳ ಮೂತ್ರವನ್ನಾಗಲೀ ಆ ಧರದ ಮೇಲೆ ಸ್ವಲ್ಪ ಮಟ್ಟಿಗಾದರೂ ಹಾಕಲೇಬೇಕು. ಇದರಿಂದ ನಾಯುವ ಕಾರ್ಯಕ್ಕೆ ಪುಟಿ ದೊರೆಯುತ್ತದೆ. ಇದೇ ರೀತಿಯಾಗಿ ಕ್ರಮದಿಂದ ಒಂದರ ಮೇಲೊಂದು ಕೋಲಿ, ಕಸಕಡ್ಡಿ ಮೊದಲಾದ ಕಚ್ಚಾವಸ್ತುಗಳ ೫ ಧರಗಳನ್ನು ನೆಲದಿಂದ (ಗುಂಡಿಯ ದಂಡೆಯ ಮೇಲೆ) ಎರಡು ಫೂಟು ಏರುವಂತೆ ಹಾಕಿ ಕೊನೆಯ ಧರದ ಮೇಲೆ ೨ ಇಂಚು ದಪ್ಪವಾಗುವಂತೆ ಮಣ್ಣನ್ನು ಹರವಬೇಕು.

ಈ ಪ್ರಕಾರ ತುಂಬಿದ ಕುಣಿಗಳು ಒಂದೆರಡು ವಾರಗಳಲ್ಲಿ ಒಳಗಿನ ಕಸವು ಕೊಳೆಯ ಹತ್ತಿ ಕುಸಿಬೀಳುವದು. ಹೀಗಾದ ಕೂಡಲೆ ಮತ್ತೆ ಒಂದೆರಡು ಧರಗಳನ್ನು ಹಾಕಿ ಮೊದಲಿನಂತೆ ಮೇಲೆ ೨ ಇಂಚು ದಪ್ಪ ಮಣ್ಣಿನ ಧರ ಹಾಕಬೇಕು. ಹೀಗೆ ಸಂಗ್ರಹಿಸಿದ ಕಂಪೋಸ್ಟದಿಂದ ನಾಲ್ಕಾರು ತಿಂಗಳಲ್ಲಿ ಉತ್ಕೃಷ್ಟ ಗೊಬ್ಬರ ತಯಾರಾಗುವದು

೨ ರಾಸಿ ಅಥವಾ ಗುಂಪಿ ಪದ್ಧತಿ:- ಈ ಪದ್ಧತಿಯಲ್ಲಿ ಕುಣಿಯ ಅವಶ್ಯಕತೆ ಇಲ್ಲ. ಕುಣಿವೆಯೊಡ ಎತ್ತರ ಸ್ಥಳದಲ್ಲಿ, ಕುಣಿ ಪದ್ಧತಿಯಲ್ಲಿಯಂತೆ ಒಂದರ ಮೇಲೊಂದು ಧರವನ್ನು ಹಾಕಬೇಕು. ಪ್ರತಿಯೊಂದು ಧರದ ಅಳತೆಯು, ಸುತ್ತಲೂ ಅರ್ಧ ಫೂಟಿನಂತೆ ಕಡಿಮೆಯಾಗುತ್ತಾ, ೫ ಫೂಟು ಎತ್ತರಕ್ಕೆ ಮುಗಿಯಬೇಕು. ೫ ಧರಗಳನ್ನು ಹಾಕುತ್ತಾ ಹೋಗಿ ಕಡೆಯ ಧರವು ಮುಗಿದ ನಂತರ, ಇಡೀ ರಾಸಿಯ ಮೇಲೆ ಎರಡು ಇಂಚು ದಪ್ಪವಾಗಿ ಮಣ್ಣನ್ನು ಸ್ವಲ್ಪ ಹಸಿಮಾಡಿ ತುಂಬಾ ಮೆತ್ತಬೇಕು.

ಕಂಪೋಸ್ಟ ಗೊಬ್ಬರವನ್ನು ತಯಾರಿಸುವಾಗ್ಗೆ ಲಕ್ಷ್ಯದಲ್ಲಿಡುವ ಮುಖ್ಯ ಸಂಗತಿಗಳು.

೧ ತಗ್ಗುಗಳ ಉದ್ದಳತೆಯನ್ನು ೨೦ ಫೂಟು, ಅಥವಾ ೩೦ ಫೂಟು ಇಡಬಹುದು. ಆದರೆ ಅಗಲಳತೆ ೬ ಫೂಟು ಆಳವು ೩ ಫೂಟು ಮಾಡಿ ಇಡಲಿಕ್ಕೇಬೇಕು.

೨ ಕುಣಿಯನ್ನು ಆದಷ್ಟು ಎತ್ತರವಾದ ಸ್ಥಳದಲ್ಲಿ ತೆಗೆದು, ಮಳೆಗಾಲದಲ್ಲಿ ಹೊರಗಿನ ನೀರು ಕುಣಿಯನ್ನು ಹೋಗದಂತೆ ಕುಣಿಯ ಸುತ್ತಲೂ ಕಡಿದ ಮಣ್ಣಿನಿಂದಲೇ ಒಂದೆರಡು ಫೂಟು ಎತ್ತರವಾದ ಒಡ್ಡು ಹಾಕಬೇಕು.

೩ ಕಚ್ಚಾಮಾಲನ್ನು ತಂದು ಕುಣಿಯ ಸಮೀಪದಲ್ಲಿ ಗುಂಪಿ ಹಾಕಿರಬೇಕು. ಬೇರೆ ಬೇರೆ ಪ್ರಕಾರದ ಕಚ್ಚಾಮಾಲನ್ನು ಆದಷ್ಟು ಮಿಶ್ರಮಾಡಿ ಇಟ್ಟುಕೊಂಡಿರಬೇಕು. ಇದರಂತೆ, ಸಗಣಿಯನ್ನು ಮತ್ತು ದನದ ಮೂತ್ರವನ್ನು ಅಥವಾ ಮೂತ್ರಮಿಶ್ರಿತ ಮಣ್ಣನ್ನು ಸಹಿತ ಕುಣಿಯ ಸಮೀಪದಲ್ಲಿಯೇ ತಂದಿಡಬೇಕು.

೪ ಕುಣಿಯನ್ನು ತುಂಬುವ ಕೆಲಸವನ್ನು ಒಂದೆರಡು ದಿವಸಗಳಲ್ಲಿಯೇ ಮುಗಿಸಿ ಅದನ್ನು ಪೂರ್ಣ ಮುಚ್ಚಿ ಅದರ ಮೇಲ್ಭಾಗಕ್ಕೆ ಒಹಿತ ಎರಡು ಇಂಚಿನ ಮಣ್ಣಿನ ಧರವನ್ನು, ಮೇಲ ಮುದ್ದೆಯನ್ನು ಹಾಕಿದಂತೆ ಹಾಕಿ ಮುಚ್ಚಬೇಕು.

೫ ಈ ಪ್ರಕಾರ ಗೊಬ್ಬರ ತಯಾರು ಮಾಡಲಿಕ್ಕೆ ಮುಂಬಯಿ ಸರಕಾರದವರು ಒಂದು ಯೋಜನೆ ಮಾಡಿದ್ದು, ಈಗ ಎರಡು ಮೂರು ವರ್ಷಗಳಿಂದ ಈ ಕಾರ್ಯವು ಒಳ್ಳೇ ಜೋರಿನಿಂದ ನಡೆದು ಬಂದಿದೆ. (ಕೊಡಗಿನಲ್ಲಿಯೂ ಇದು ನಡೆಯುತ್ತಿದೆ) ಈ ಯೋಜನೆಯಲ್ಲಿ ಸರಕಾರದವರು ಪ್ರತಿಯೊಬ್ಬ ರೈತನಿಗೆ ಈ ಗೊಬ್ಬರದ ಕುಣಿ ತೆಗೆದು, ಮೇಲಿನ ಕ್ರಮದಂತೆ ಗೊಬ್ಬರ ತಯಾರಮಾಡಲಿಕ್ಕೆ ಪ್ರತಿಯೊಂದು ತಗ್ಗಿಗೆ (೧೦ ಫೂಟು ಉದ್ದ ೬ ಫೂಟು ಅಗಲ, ೩ ಫೂಟು ಆಳ) ಮೂರು ರೂಪಾಯಿಯಂತೆ ಸಹಾಯಕ ಧನವೆಂದು ಕೊಡುತ್ತಾರೆ. ಈ ಸವಲತ್ತಿನ ಲಾಭವನ್ನು ಪಡೆಕೊಂಡು ಪ್ರತಿಯೊಬ್ಬ ರೈತನು ಆದಷ್ಟು ಹೆಚ್ಚು ಗೊಬ್ಬರವನ್ನು ತಯಾರು ಮಾಡಿಕೊಂಡು ಹೆಚ್ಚು ಆಹಾರ ಧಾನ್ಯ ಬೆಳೆಯಲೆಂದು ನನ್ನ ನಮ್ರ ವಿನಂತಿ. (ಸ., ಕ.)

ಪಾನನಿರೋಧ ಏಕೆ?

ನರಗಳ ಮೇಲೆ ಪರಿಣಾಮ.

[ಪಾನನಿರೋಧವು ಹಿಂದೂದೇಶದ ಮುಂದಿರುವ ಮಹಾ ಪ್ರಶ್ನೆಗಳಲ್ಲೊಂದು. ಕೊಡಗೂ ಕೂಡ ಈ ಶಾಸನವನ್ನನುಸರಿಸಿ ಮದ್ಯ ಪಾನೀಯಗಳ ನಿಯಂತ್ರಣವನ್ನು ಜಾರಿಗೆ ತಂದಿದೆ. ಆದರೂ ಪಾನನಿರೋಧದ ಆವಶ್ಯಕತೆ ಏನು ಎಂಬ ವಿಚಾರ ಎಲ್ಲರಿಗೂ ತಿಳಿದಿರಲಾರದು. ಈ ವಿಚಾರದಲ್ಲಿ ಭಾರತ ರಾಷ್ಟ್ರಘಟನಾ ಸಭೆಯ ಉಪಾಧ್ಯಕ್ಷರಾದ ಶ್ರೀ ಹೆಚ್. ಸಿ. ಮುಖರ್ಜಿಯವರು ಬರೆದ ಪುಸ್ತಕದಿಂದ ಪ್ರಾಮುಖ್ಯಾಂಶಗಳನ್ನು ವಾಚಕರ ಅವಗಾಹನೆಗೆ ಶ್ರೀಮಾನ್ ಬಿ. ಡಿ. ಗಣಪತಿಯವರು ಕೊಡುವರು.]

ಶರೀರದ ಜ್ಞಾನೇಂದ್ರಿಯಗಳ ಮೇಲೂ, ಹೃದಯದ ಮೇಲೂ ಮಾದಕ ವಸ್ತುಗಳು ಯಾವ ಪರಿಣಾಮ ಮಾಡುತ್ತವೆ ಎಂಬುದನ್ನು ಈ ಮೊದಲು ನೋಡಿರುವೆವು. ಇಲ್ಲಿ ನರಗಳ ಮೇಲೆ, ತತ್ಪರಿಣಾಮವಾಗಿ ಮಿದುಳಿನ ಮೇಲೆ ಮಾದಕ ಪಾನೀಯದಿಂದ ಯಾವ ವಿಪರೀತಗಳಾಗುತ್ತವೆಯೆಂಬುದನ್ನು ಪರಿಶೀಲಿಸುವ. ಇದರ ಪೂರ್ಣ ಪರಿಜ್ಞಾನವಾಗ ಬೇಕಾದರೆ ಶರೀರದ ನರಗಳು ಯಾವ ರೀತಿ ಇವೆ. ಯಾವುದಕ್ಕೆ ನಿಕಟ ಸಂಬಂಧವಿದೆ. ಅವುಗಳ ರಚನೆ ಮತ್ತು ಕಾರ್ಯಗಳ ಅರಿವು ಬೇಕು.

ಮನುಷ್ಯನ ನರಗಳು ಅತಿ ಚಿಕ್ಕ ರೂಪಿನಿಂದ ಪ್ರಾರಂಭವಾಗಿ ಕ್ರಮಶಃ ಅಭಿವೃದ್ಧಿಗೊಂಡು ಗೋಚರಕ್ಕೆ ಬರುವಂತೆ ಬೆಳೆದಿರುತ್ತವೆ. ಶರೀರವು ಅದು ಜೀವಿಸುತ್ತಿರುವ ವಾತಾವರಣಕ್ಕೆ ಹೊಂದಿಕೊಳ್ಳಲನುವಾಗುವಂತೆ ಈ ರಚನೆಯಾಗಿದೆ. ನಮ್ಮ ಪ್ರತಿಯೊಂದು ಚಲನೆ, ಹೃದಯದ ಬಡಿತ, ಶ್ವಾಸಕೋಶಗಳ ಕಾರ್ಯ, ಶರೀರದ ಅವಯವಗಳ ಚಲನೆ ಇವೆಲ್ಲವೂ ನರಗಳಿಂದ ಹಿಡಿತದಲ್ಲಿಡಲ್ಪಟ್ಟಿವೆ. ಈ ನರಗಳ ಮೂಲಕವೇ ನಾವು ಆಲೋಚಿಸುತ್ತೇವೆ. ನಿರ್ಣಯಗಳನ್ನು ಮಾಡುತ್ತೇವೆ. ಇವೇ ಮನುಷ್ಯನನ್ನು ಪ್ರಾಣಿಗಳಿಗಿಂತಾ ಉತ್ತಮ ಸ್ಥಾನದಲ್ಲಿರಿಸಿವೆ.

ನರಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸ ಬಹುದು. ನರಗಳು, 'ಸ್ಪೈನರ್ ಕಾರ್ಡ್' ಅಥವಾ ಬೆನ್ನೆಲುಬಿನಲ್ಲಿರುವ ಮಿದುಳು, ಚಿಕ್ಕ ಮತ್ತು ದೊಡ್ಡ ಮಿದುಳು. ಈ ಎಲ್ಲಾ ಭಾಗಗಳೂ ಒಂದಕ್ಕೊಂದು ಜೋಡಿಸಲ್ಪಟ್ಟಿವೆ. ಇವೆಲ್ಲವುಗಳ ಕೇಂದ್ರವೆಂದು ಹೇಳಬೇಕಾದರೆ ಅದು ದೊಡ್ಡ ಮಿದುಳು. ಈ ಕೇಂದ್ರ ನರಗಳ ಯೋಜನೆಯಲ್ಲಿ 'ಸೆರಿಬ್ರಮ್', 'ಸೆರಿಬೆಲ್ಲಮ್', 'ಮೆಡುಲಾ ಅಬ್ಲಾಂಗಾಟಾ' ಮತ್ತು ಬೆನ್ನೆಲುಬಿನ ನರಗಳೆಂದು ನಾಲ್ಕು ಭಾಗಗಳಿವೆ. ಇವುಗಳ ಮೂಲಕ ನರಗಳು ಶರೀರದ ಸಂದೇಶವನ್ನು ಇತ್ತಿಂದತ್ತ, ಅತ್ತಿಂದಿತ್ತ ಸಾಗಿಸುತ್ತವೆ.

ಬೆನ್ನೆಲುಬಿನ ೩೩ ಮೂಳೆಗಳ ಮಧ್ಯೆ ಸಾಗಿರುವ ನರಗಳಿಗೆ 'ಸ್ಪೈನಲ್ ಕಾರ್ಡ್' ಎಂದು ಹೆಸರು. ಸಾಧಾರಣ ವ್ಯಕ್ತಿಯಲ್ಲಿ ಇದು ಒಂದೂವರೆ ಅಡಿ ಉದ್ದವಿರುತ್ತದೆ. ಇದು ಬೆನ್ನಿನ ಕೆಳ ಬದಿಯಿಂದ ನೇರವಾಗಿ ಮಿದುಳಿನ ವರೆಗೆ ಮುಟ್ಟಿರುತ್ತದೆ. ಇದರಿಂದ ೩೧ ಜೊತೆ ನರಗಳು ಶರೀರ ಮತ್ತು ಅವಯವಗಳ ವಿವಿಧ ಭಾಗಗಳಿಗೆ ಹೋಗಿವೆ.

ಮಿದುಳು ಮತ್ತು 'ಸ್ಪೈನಲ್ ಕಾರ್ಡ್' ನ ಮಧ್ಯೆ ಇರುವ ಭಾಗವೇ 'ಮೆಡುಲಾ' ಇದನ್ನು 'ಸ್ಪೈನಲ್ ಕಾರ್ಡ್' ನ ತುದಿ ಎನ್ನ ಬಹುದು. ಇಲ್ಲಿ 'ಸ್ಪೈನಲ್ ಕಾರ್ಡ್' ಸ್ವಲ್ಪ ವಿಕಾಸಗೊಂಡಿದೆ. ಇದರ ರಚನೆ ಸುಲಭದ್ದಲ್ಲ. ಇದೂ ಕೂಡ 'ಸ್ಪೈನಲ್ ಕಾರ್ಡ್' ನಂತೆ ಬೂದು ಬಣ್ಣದ ಕಣಗಳಿಂದ ಮತ್ತು ಬಿಳಿ ಬಣ್ಣದ ನರಗಳಿಂದಾಗಿದೆ.

ಶರೀರದಲ್ಲಿ ಜೀವತ್ತ್ವ ರಕ್ತದ ಚಲನೆಯು ಉಚ್ಛ್ವಾಸ, ನಿಶ್ವಾಸ, ಪಚನ ಕ್ರಿಯೆ ಮೊದಲಾದುವುಗಳ ಮೇಲೆ ನಿಂತಿದೆ. ಇವುಗಳ ಕ್ರಿಯೆಯು ನರಮಂಡಲದಲ್ಲಿಯ ಈ ಬೂದು ಬಣ್ಣದ ಕಣ ಮತ್ತು ಬಿಳಿನರಗಳ ಮೇಲೆ ನಿಂತಿದೆ. ಈ ಬೂದು ಕಣಗಳಿಗೆ ಆಶ್ಚರ್ಯಕಾರಕ ನಿರೋಧ ಶಕ್ತಿ ಇದೆ. ಮಿದುಳು ಕೆಲಸ ಮಾಡುವದು ನಿಂತಿದ್ದರೂ ಈ ಕಣಗಳು ಕೆಲಸ ಮಾಡುತ್ತಿರುವದು ತೋರಿಬಂದಿದೆ. ಮಿದುಳಿಗೆ ತಗಲುವ ಪೆಟ್ಟಿನಿಂದಲೂ ಇತರ ರೋಗದಿಂದ ಈ ಕಣಗಳ ಕೆಲಸವು ನಿಂತರೆ ಆಗ ಮನುಷ್ಯನಿಗೆ ಸಾವು ಬರುವದು. ನಿದ್ರೆಯಲ್ಲಿಯೂ, ಮದ್ಯ ಕುಡಿದು ಪ್ರಜ್ಞಾಹೀನನಾಗಿದ್ದಾಗಲೂ ಇವು ಕೆಲಸ ಮಾಡುತ್ತಿರುತ್ತವೆ. ದೇವರು ಈ ಕಣಗಳಿಗೆ ವಿಶೇಷ ಶಕ್ತಿ ಕೊಟ್ಟಿದ್ದಾನೆ.

ನಂತರ 'ಸೆರಿಬೆಲ್ಲಮ್' ಎಂದು ಕರೆಯಲ್ಪಡುವ ಚಿಕ್ಕ ಮಿದುಳಿದೆ. ಇದು 'ಸ್ಪೈನಲ್ ಕಾರ್ಡ್' ಮತ್ತು 'ಮೆಡುಲಾ'ಗಳೊಡನೆ ಸಮರಸವಾಗಿ ಕೆಲಸಮಾಡುತ್ತದೆ. ಕಣ್ಣು, ಕಿವಿ, ಶರೀರದ ಎಲ್ಲಾ ಭಾಗಗಳಿಂದ ವರದಿಯು ಇದಕ್ಕೆ ಬರುತ್ತಿರುತ್ತದೆ. ಈ ವರದಿಗಳನ್ನೆಲ್ಲಾ ಸಂಗ್ರಹಿಸಿ ಅವಕ್ಕೆ ಒಂದು ರೂಪು ಕೊಡುವದು, ಅವರಂತೆ ಆಜ್ಞೆ ಕಳುಹುವದು ಈ ಚಿಕ್ಕ ಮಿದುಳಿನ ಕೆಲಸ. ಶರೀರದ ಅವಯವಗಳು, ತಲೆ ಮೊದಲಾದುವು ನೆಟ್ಟಗೆ ನಿಂತು ಶರೀರಕ್ಕೆ ಒಂದು ರೂಪು ಬರಬೇಕಾದರೆ ಈ ಚಿಕ್ಕ ಮಿದುಳೇ ಕಾರಣ.

ಚಿಕ್ಕ ಮಿದುಳೇ ಇರಲಿ, ದೊಡ್ಡದೇ ಇರಲೀ ಬೇರೆ ಯಾವುದೇ ಇರಲಿ, ಇವೆಲ್ಲವೂ ಕೂಡ ತಲೆ ಬುರುಡೆಯೊಳಗೆ ಅಪಾಯಕ್ಕೆ ಒಳಗಾಗದಂತೆ ಭದ್ರವಾಗಿವೆ. ದೊಡ್ಡ ಮಿದುಳು ಅನೇಕ ಬಹು ಚಿಕ್ಕ ಕಣಗಳಿಂದ ಕೂಡಿದೆ. ಈ ಕಣಗಳು ಮತ್ತು ಇಡೀ ಮಿದುಳು ಒಂದು ರೀತಿಯ ದ್ರಾವಕದಿಂದಾವೃತವಾಗಿದೆ. ಮಿದುಳು ಸರಿಯಾಗಿ ಕೆಲಸ ಮಾಡಬೇಕಾದರೆ ಆರೋಗ್ಯಕರವಾದ ರಕ್ತದ ಪ್ರವಾಹವು ತಡೆ ಇಲ್ಲದೆ ನಡೆಯುತ್ತಿರಬೇಕು. ಮನುಷ್ಯನ ಶರೀರದಲ್ಲಿ ಈ ಮಿದುಳೇ ಪ್ರಾಮುಖ್ಯ ಅಂಗವಾಗಿದೆ. ಅದು ಶರೀರದ ವಿವಿಧಭಾಗದ ಸಂದೇಶಗಳನ್ನು ಸ್ವೀಕರಿಸಿ, ಆಜ್ಞೆ ಕೊಡುತ್ತದೆ.

ವಿಖ್ಯಾತರಾದ ಡಾಕ್ಟರುಗಳು ಮತ್ತು ಸಂಶೋಧಕರಿಂದ ಮೇಲೆ ಹೇಳಿದ ಬೂದು ಬಣ್ಣದ ಜೀವಾಣುಗಳು ನಿಶ್ಚಿತ ಕೇಂದ್ರಗಳಲ್ಲಿ ಮಾತ್ರ ಇವೆಯೆಂದು ತಿಳಿದು ಬಂದಿದೆ. ಮನುಷ್ಯರನ್ನು ಪರಿಶೀಲಿಸಿ ಯೂ ಪ್ರಾಣಿಗಳ ಮೇಲೆ ಪ್ರಯೋಗ ನಡೆಸಿದ್ದರ ಫಲವಾಗಿ ಈ ನಿಶ್ಚಿತ ಕೇಂದ್ರಗಳಿಗೆ ಅಪಾಯ, ತೊಂದರೆಗಳಾದರೆ ಶಕ್ತಿ ಕಡಿಮೆಯಾಗುವದು, ಮಾತಾಡಲಾರದು, ಇಲ್ಲವೇ ಇನ್ನಿತರ ನ್ಯೂನತೆಗಳಾಗುವವೆಂದು ಗೊತ್ತಾಗಿದೆ. ನಮ್ಮ ಪ್ರತಿ ದಿನದ ವ್ಯವಹಾರದಲ್ಲಿ ಶರೀರದ ಪ್ರತಿಯೊಂದು ಅವಯವವೂ ಒಂದಕ್ಕೊಂದು ಹೊಂದಿಕೊಂಡು ಸಮರಸವಾಗಿರಬೇಕು. ಈ ರೀತಿಯಲ್ಲಿ ಪರಸ್ಪರ ಸಂಬಂಧವಿರುವದರಿಂದಲೇ ಮಿದುಳು ಸುಸೂತ್ರವಾಗಿ ಕೆಲಸಮಾಡಬಲ್ಲುದು. ಈ ಏರ್ಪಾಡು ಚಿಕ್ಕದಿರುವಾಗಲೇ ಇದ್ದರೂ ಹನ್ನೆರಡು ವಯಸ್ಸಿನಿಂದ ಮೂವತ್ತರ ವರೆಗೆ ಇದರಲ್ಲಿ ಆಶ್ಚರ್ಯಕಾರಕ ಬದಲಾವಣೆಯಾಗುತ್ತದೆ. ಈ ವಿಕಾಸಕ್ಕೆ ವಿರುದ್ಧವಾದ ಯಾವದೇ ವಿಚಾರವನ್ನು ಈ ಸಮಯದಲ್ಲಿ ಮಾಡಬಾರದು. ಪ್ರಾಣಿಗಳಲ್ಲಿ ಪ್ರೇರಣೆಯೇ ಕಾರ್ಯಕ್ಕೆ ಹೇತು. ಇಂಥಾ ಪ್ರೇರಣೆಯನ್ನು ಬುದ್ಧಿಯ ಒರೆಗಲ್ಲಿನ ಹದಗೊಳಿಸುವ ಕಾರಣ, ಕುಟುಂಬ, ಸಮಾಜ, ಒಳ್ಳೆದು, ಕೆಟ್ಟದು ಎಂಬ ವಿಮರ್ಶೆಗೆಡೆಯಾಗಿ ಮಾನವ ಜೀವನದಲ್ಲಿ ಶಿಸ್ತು, ಸಭ್ಯತೆಗಳಿವೆ.

ಮನುಷ್ಯನ ಶರೀರದಲ್ಲಿ ಮಿಲಿಯಾಂತರ ನರದ ಕಣಗಳೂ, ನರಗಳೂ ಇದ್ದು ಅದರಿಂದ ನರಮಂಡಲವಾಗಿದ್ದರೂ ಪ್ರತಿಯೊಂದಕ್ಕೆ ಒಂದೊಂದು ಕೆಲಸವಿದ್ದು ಶರೀರದ ಆರೋಗ್ಯವು ಈ ಪ್ರತಿಯೊಂದು ಕಣದ ಆರೋಗ್ಯದ ಮೇಲೆ ನಿಂತಿದೆ. ಮನುಷ್ಯನು ಮಾದಕ ಪಾನೀಯಗಳ ಇಚ್ಛೆಯಿಂದ ಅವುಗಳನ್ನು ಕುಡಿಯಲಿ; ಇಲ್ಲವೇ ಸ್ನೇಹಿತರ ಒತ್ತಾಯಕ್ಕಾಗಿ ಕುಡಿಯಲಿ; ಇಲ್ಲವೇ ಅದನ್ನು ಕುಡಿಯುವದರಲ್ಲಿ ಚೇತನ ಹೆಚ್ಚುವದೆಂದು ಕುಡಿಯಲಿ; ಹೇಗೆ ಕುಡಿದರೂ ಆಗುವ ಹಾನಿ ಆಗಿಯೇ ಆಗುತ್ತದೆ. ಕುಡಿದೊಡನೆ ಮಾದಕ ಪಾನೀಯವು ಹೊಟ್ಟೆಯಿಂದ ರಕ್ತಕ್ಕೆ ಬರುತ್ತದೆ. ಅತ್ಯಲ್ಪ ಪ್ರಮಾಣದಲ್ಲಿ ಕುಡಿದರೂ ರಕ್ತದಲ್ಲಿ ನಾಲ್ಕು ಗಂಟೆಗಳ ವರೆಗೆ ಇದರ ಪ್ರಭಾವವಿದ್ದು ರಕ್ತ ಕಣಗಳನ್ನು ಜಖಂಗೊಳಿಸುತ್ತದೆ. ಈ ನಾಲ್ಕು ಗಂಟೆಗಳಲ್ಲಿಯೇ ಮಾದಕ ಪಾನೀಯದಿಂದ ಹಾನಿಯಲ್ಲ. ಅದರ ನಂತರವೂ ರಕ್ತದಲ್ಲಿ ಅದರ ಪ್ರಭಾವವಿರುತ್ತದೆ. ಈ ಕಾರಣ ನರಗಳು ಮತ್ತು ನರ ಕಣಗಳು ನಿರ್ಬಲಗೊಳ್ಳುತ್ತವೆ. ಮಾದಕ ಪಾನೀಯ ಸೇವಿಸಿದವನು ತತ್ತರಿಸುತ್ತಾ ನಡೆಯುವದರ ಕಾರಣವಿಷ್ಟೇ. ಮಾದಕ ಪಾನೀಯವು ರಕ್ತವನ್ನು ಸೇರಿ ನರಮಂಡಲವನ್ನು ನಿರ್ಬಲಗೊಳಿಸುವವು. ನರಗಳಲ್ಲಿ ಒಂದಕ್ಕೊಂದಿರುವ ಸಂಬಂಧವು ತಪ್ಪಿ ಈ ತತ್ತರಿಕೆ ಪ್ರಾರಂಭವಾಗುವದು. ಹೀಗೆ ಮಾದಕ ಪಾನೀಯದಿಂದ ಶಕ್ತಿಗುಂದಲ್ಪಟ್ಟ ನರಕಣಗಳು ನಾಶವಾಗುವವು. ಹೀ ಮಾದಕ ಪಾನೀಯದಿಂದ ಶಕ್ತಿಗುಂದಲ್ಪಟ್ಟ ನರಕಣಗಳು ನಾಶಹೊಂದಿದ ನರಕಣದ ಚಂತ್ರ ಅಲ್ಲಿಗೇ ಮುಗಿಯುತ್ತದೆ. ಅದು ಚೇತರಿಗೊಳ್ಳುವದಿಲ್ಲ. ಈ ನಾಶ ಕಾರ್ಯವು ಚಿಕ್ಕದಾದರೂ ಮಿದುಳಿನ ಮತ್ತು ನೀತಿಯ ದೃಷ್ಟಿಯಿಂದ ಪ್ರಾಮುಖ್ಯವಾದುವು.

ಮಾದಕ ಪಾನೀಯದ ಕಾರಣ ಈ ಕಣಗಳು ಸಾಯುವದರಿಂದ 'ಸ್ಪೈನಲ್ ಕಾರ್ಡ್' ನಿರ್ಬಲಗೊಂಡು ವಾಯುರೋಗಗೂನುಬೆನ್ನು ಉತ್ಪನ್ನವಾಗುತ್ತದೆ. ಇದಲ್ಲದೆ ಕಂಪಕತನದಿಂದ 'ಸಿಫ್ಲಿಸ್' ಎಂಬ ರೋಗವು ಹುಟ್ಟುತ್ತದೆ. ಈ ಕಾರಣ 'ಸ್ಪೈನಲ್ ಕಾರ್ಡ್' ಚೆನ್ನಾಗಿ ಕೆಲಸ ಮಾಡಲಾರದು. ಮೆಡುಲಿನ ಮೇಲೆ ಜೀವದ ಭಾರ ನಿಂತಿದೆ. ಈ ಭಾಗದ ಮೇಲೆ ಮಾದಕ ಪಾನೀಯದ ಪ್ರಭಾವ ಬಿದ್ದೊಡನೆ ಮನುಷ್ಯನು ಪ್ರಜ್ಞಾಹೀನನಾಗಿ ತತ್ತರಿಸುತ್ತಾನೆ. ಹಾಲಿಗೆಯಾಗಲೀ, ಕಾಲುಗಳಾಗಲೀ ಇಚ್ಛಿಸಿದಂತೆ ಕೆಲಸ ಮಾಡವು.

ಸಂದೇಶ.

ಕೊಟ್ಟವರು:- ಶ್ರೀ. ಎಂ. ಕೆ. ಕಾರ್ಯಪ್ಪ ಇವರು

1. ಬಾಳು ಬರಡಲ್ಲ, ಬರಡು ಬಾಳು ಬಾಳಲ್ಲ. ಸ್ವಧರ್ಮ ಸಾಧನವೇ ನಿಜವಾದ ಬಾಳು.

2. ಸ್ವಧರ್ಮವೆಂದರೆ ಜಾತಿ ಧರ್ಮವಲ್ಲ, ಪ್ರಕೃತಿ ಧರ್ಮವೆಂದು ಅರ್ಥ. ಗಂಡಸಿನ ಪ್ರಕೃತಿ ಪುರುಷ ಭಾವ, ಹೆಂಗಸಿನ ಪ್ರಕೃತಿ ಮಾತೃಭಾವ. ಪುರುಷತ್ವವಿಲ್ಲದ ಗಂಡಸು ಗಂಡಸಲ್ಲ, ಮಾತೃತ್ವವನ್ನು ಮರೆತ ಹೆಂಗಸು ಹೆಂಗಸಲ್ಲ. ಸ್ತ್ರೀಪುರುಷರ ಸವಿಹಿತ ಸಾಧನವೇ ರಾಷ್ಟ್ರಧರ್ಮ.

3. ನಿಷ್ಕ್ರಿಯತೆ ಸಂನ್ಯಾಸವಲ್ಲ; ಲಂಪಟತೆ ಲಾಂಛನವಲ್ಲ. ಸ್ವಾರ್ಥತ್ಯಾಗವೇ ಸಂನ್ಯಾಸ, ಆತ್ಮಾರ್ಪಣೆಯೇ ಸಂನ್ಯಾಸ ಧರ್ಮ.

4. ಜೀವನವಿಲ್ಲದೆ ಶಿವನಿಲ್ಲ, ಜೀವನವಿಲ್ಲದೆ ದೇವನಿಲ್ಲ, ಜೀವನಲ್ಲಿ ಶಿವನನ್ನು ಕಾಣುವುದೆ ಶ್ರೇಷ್ಠ ಧರ್ಮ.

5 ವಿದ್ಯೆ ಇಲ್ಲದೆ ವಿಕಾಸವಿಲ್ಲ; ಹೃದಯವನ್ನು ಹಿರಿದುಮಾಡದ ವಿದ್ಯೆ ವಿದ್ಯೆಯಲ್ಲ. ವಿಶಾಲ ಭಾವ ವಿದ್ಯೆಯ ಕುರುಹು; ಅಹಂಭಾವ ಅವಿದ್ಯೆಯ ಕುರುಹು.

6. ಇತರರನ್ನು ತೆಗಳಬೇಡ, ತನ್ನನ್ನು ಮರೆಸಬೇಡ, ಪರರ ಗುಣಗ್ರಹಣ ಮಾಡಿ ನಿನ್ನ ದೋಷವನ್ನು ತಿದ್ದಿಕೋ.

7. ಸ್ತ್ರೀಗೆ ಸಹನೆ ಭೂಷಣ, ಪುರುಷನಿಗೆ ಶಾಂತಿ ಭೂಷಣ.

8. ದೈವಸ ಸಾಕ್ಷಾತ್ಕಾರವೇ ಜೀವನದ ಕಡೆಯ ಗುರಿ, ದೈವಾನುಗ್ರಹವಿಲ್ಲದೆ ಸಾಕ್ಷಾತ್ಕಾರವಿಲ್ಲ. ಭಕ್ತಿಯಿಲ್ಲದೆ ದೈವಾನುಗ್ರಹವಿಲ್ಲ. ಆದ್ದರಿಂದ ಭಕ್ತಿಯನ್ನು ನೆಲೆಗೂಡಿಸಿಕೋ.

9 ಭಗವಾನನಿಗೆ ಬೇಕಾದುದು ಭಕ್ತಿ; ಪಾಂಡಿತ್ಯವಲ್ಲ. ಭಗವಾನನು ಮೆಚ್ಚುವುದು ಸೇವೆಯನ್ನು; ಶೌರ್ಯವನ್ನಲ್ಲ; ಅನುಕಂಪವೇ ಅನುಭವದ ನೆಲೆಗಟ್ಟು. ಅಸಹನೆಯೇ ಅಪರಿಪೂರ್ಣತೆಯ ಕುರುಹು.

10. ಇಂದ್ರಿಯಗಳನ್ನು ಸಡಿಲಬಿಟ್ಟೆಯೆ ಜೋಕೆ! ನೀನು ಇಂದ್ರಿಯಗಳ ಸ್ವಾಮಿಯೇ ಹೊರತು ದಾಸನಲ್ಲವೆಂಬದನ್ನು ಮರೆಯದಿರು.

11. ಆಶಾಚಕ್ರವೇ ಜೀವನಚಕ್ರ; ಆಶೆಯನ್ನು ಬಿಟ್ಟಲ್ಲದೆ ಜೀವನದಿಂದ ಬಿಡುಗಡೆಯಿಲ್ಲ. ಜೀವನದಿಂದ ಬಿಡುಗಡೆಯಿಲ್ಲದೆ ಶಾಂತಿಯಿಲ್ಲ.

12. ಗುರುವಿನ ಅನುಗ್ರಹವಿಲ್ಲದೆ ಮೋಹದ ತೆರೆ ಹರಿಯದು. ಸರಳತೆಯಿಲ್ಲದೆ ಗುರುವಿನ ಅನುಗ್ರಹ ಲಭಿಸದು. ಆದರಿಂದ ಸರಳತೆಯನ್ನಭ್ಯಸಿಸು.

13. ಹಿರಿಕರಿಗಾಗಿ ನಿನ್ನ ಅಭಿಮಾನವನ್ನು ಬಲಿಗೊಡದಿರು, ನಿನ್ನ ಅಭಿಮಾನದಿಂದಾಗಿ ಇತರರಿಗೆ ಅಪಮಾನವಾಗಗೊಡಬೇಡ.

14 ಕಷ್ಟಗಳನ್ನು ಪರಮಾತ್ಮನ ಕರುಣೆಯ ಕುರುಹು ಎಂದು ತಿಳಿ, ಸುಖಕ್ಕೆ ಮನಸೋಲಬೇಡ. ಕಷ್ಟಗಳಿಲ್ಲದೆ ಕೆಚ್ಚು ಕೆರಳದು. ಕೆಚ್ಚು ಕೆರಳದೆ ನಿನ್ನ ಸಾಧನೆ ನಡೆಯದು.

15. ಧ್ಯಾನಕ್ಕಿಂತ ಸಾಧನೆಯಿಲ್ಲ; ದ್ವೇಷಕ್ಕಿಂತ ಕ್ಷುದ್ರತೆಯಿಲ್ಲ.

ಅಧಿಕಾರ

ಕವೇಶ್ವ .

ಸತ್ಯಕಥೆ.

ಸಹಗಮನ!

ಲೇ:—ಮಿಸ್. ಸಿ. ಮುದ್ದಯ್ಯ, ಸಿದ್ದಾಪುರ.

ಮಳೆಗಾಲವಾದ್ದರಿಂದ ಬೇರೆ ಕೆಲಸವಿಲ್ಲದವರಿಗೆ ಓದುವದೇ ಆನಂದದ ಕೆಲಸ. ನಾನು ಮತ್ತು ಲತಾ ಇಬ್ಬರು ಹಿಂದೂದೇಶದಲ್ಲಿ ಹಿಂದೆ ಆಗಿ ಹೋದ ಗವರ್ನರ್ ಜನರಲ್ ಲಾರ್ಡ್ ಬೆಂಟಿಂಕನ ಚರಿತ್ರೆಯನ್ನು ಓದುತ್ತಿದ್ದೆವು. ಅದರಲ್ಲಿ ಆತನು ಹಿಂದೂದೇಶದಲ್ಲಿ ಇದ್ದ ಸತಿ ಸಹಗಮನ ಪದ್ಧತಿಯನ್ನು ನಿಲ್ಲಿಸಿ ಉಪಕಾರ ಮಾಡಿದನು ಎಂಬವಿಚಾರವಿತ್ತು. ಲತಾಳು ‘ಈ ವಿಚಾರದಲ್ಲಿ ಬೆಂಟಿಂಕನದು ತಪ್ಪು. ಸಹಗಮನವನ್ನು ನಿಲ್ಲಿಸಿದ್ದು ತಪ್ಪು; ತನ್ನ ಪತಿಯನಂತರ ಬದುಕುವದು ಯೋಗ್ಯವಲ್ಲವೆಂದು ಭಾವಿಸುವ ಪತಿವ್ರತೆಯರಾದರೂ ಸಹಗಮನ ಮಾಡುವ ಅನುಕೂಲಬೇಕಿತ್ತು’ ಎಂದಳು. ‘ಅಯ್ಯೋ ಈ ಇಪ್ಪತ್ತನೇ ಶತಮಾನದಲ್ಲೂ ಆ ರೀತಿ ಭಾವಿಸುವ ನಿನಗೇನೆನ್ನಬೇಕು. ಪತಿವ್ರತೆಯರಾದಾಕ್ಷಣ ಪತಿಯೊಡನೆ ಸಹಗಮನವಾದರೆ ಏನು ಬಂಗಾರವಾಯಿತು? ರಾಷ್ಟ್ರಕ್ಕೆ ಅದು ಹಾನಿಕರ. ಪತಿವ್ರತೆಯಾದವಳು ತನ್ನ ಪತಿಯು ಯಾವ ಧ್ಯೇಯಕ್ಕಾಗಿ ಬದುಕಿದ್ದನೋ ಆ ಧ್ಯೇಯವನ್ನು ಸಾಧಿಸಲು ತನ್ನ ಅಂತ್ಯದ ವರೆಗೆ ಪ್ರಯತ್ನಿಸಬೇಕು. ಪತಿಯನ್ನು ಕಳೆದುಕೊಂಡ ಆಕೆ ತಪಸ್ಸಿನ ಜೀವನ ನಡೆಸಿ ಪತಿಯ ಕಾಂಕ್ಷೆಯನ್ನು ಪೂರೈಸಬೇಕೇ ವಿನಹ ಸಹಗಮನ ಮಾಡುವದು ಆತ್ಮಹತ್ಯೆಯಂತೆ’ ನಾನೆಂದೆ. ಲತಾ ಸ್ವಲ್ಪ ಉದ್ವಿಗ್ನ ಭಾವದಿಂದ ಹೇಳತೊಡಗಿದಳು. ‘ನಿನಗೆ ತಿಳಿಯದು. ನಮ್ಮ ಇಂಥ ಸಮಾಜದ ರೀತಿ ನೀತಿಗಳ ಅರಿವಿಲ್ಲ. ಈ ಸಮಾಜದಲ್ಲಿ ನೀನೆಂದಂತೆ ವಿಧವೆಯರಿಗೆ ಬದುಕುವದು ಕಷ್ಟ. ಆದರಲ್ಲೂ ವಿಧವೆ ಸುಂದರಿಯಾಗಿದ್ದು, ಗತಿಸಿದ ಪತಿಯು ಹಣವಿಟ್ಟು ಸತ್ತಿದ್ದರೆ ಆಕೆಯ ಜೀವನ ಮುಳ್ಳು ಹಾಸಿಗೆಯಂತೆ. ನೋಡು ನಮ್ಮ ಸಜನಿಯ ಜೀವನ ಹೇಗಾಯಿತು' ಎಂದು ಆಕೆಯ ಕಥೆ ಹೇಳತೊಡಗಿದಳು. ಅದನ್ನೇ ಇಲ್ಲಿ ಬರೆಯುವೆನು.

ಸಜನಿಯು ಚೆನ್ನಪಟ್ಟಣದ ಜಮೀನ್ದಾರರೊಬ್ಬರ ಮಗಳು. ಆಕೆಯನ್ನು ಯೋಗ್ಯನೊಬ್ಬನಿಗೆ ವಿವಾಹ ಮಾಡಿದ್ದರು. ಆಕೆಯ ಜೀವನದಲ್ಲಿ ಯಾವ ಕೊರತೆಯೂ ಇರಲಿಲ್ಲ. ಅನುರೂಪನಾದ ಪತಿಯೊಡಗೂಡಿದ ಅವರ ಜೀವನ ಸುಮಧುರಗೀತದಂತೆ ಸಾಗಿತ್ತು. ಕುಟುಂಬದಲ್ಲಿ ಸುಖಶಾಂತಿ ನೆಲೆನಿಂತಿತ್ತು. ಮದುವೆಯಾಗಿ ಎರಡು ವರ್ಷವಾಗಿದೆ. ಸಜನಿಗಾಗ ಹದಿನೆಂಟು ವರ್ಷ ವಯಸ್ಸು. ಪತಿಪತ್ನಿಗಳ ಪ್ರೇಮದ ಸುಂದರ ಕುರುಹಾಗಿ ಮಗುವೊಂದು ಜನಿಸಿತ್ತು. ಆ ಮಗುವಿನ ಹೀನ ಭಾಗ್ಯವೋ ಯಾ ಸಜನಿಯ ದುರಾದೃಷ್ಟವೋ ಪುತ್ರ ಜನನದ ಆರು ತಿಂಗಳಲ್ಲಿ ಪತಿಯು ಪರಂಧಾಮವನ್ನೈದಿದನು. ಸಜನಿಗೆ ತಡೆಯಲಾಗಲಿ[illegible]ಗಳ[illegible]ಪವಿತ್ರ ಬಂಧನದಿಂದ ಬಿ[illegible]ಲ್ಪಟ್ಟಿದ್ದ ಆಕೆ [illegible] ಪತಿಯೊಡನೆ ಸಹಗಮನ ಮಾಡಿ ಕೃತಾರ್ಥಳಾಗುವೆನೆಂದು ಭಾವಿಸಿದ್ದಳು. ಆದರೆ ಎಲ್ಲರೂ ಅದಕ್ಕೆ ವಿರೋಧ ಮಾಡಿದರು. ಮಾವನವರೂ ಪತಿಯ ತಮ್ಮ ಭಾವನೂ ವಿವಿಧವಾಗಿ ಸಂತೈಸಿದರು. ಮೈದುನನು ಮುಂದೆ ಬಂದು, ‘ದುಃಖಕ್ಕೆ ಕುಗ್ಗದಿರು. ನಿನಗೆ ಸ್ವಲ್ಪವೂ ತೊಂದರೆ ಬಾರದಂತೆ ನಾವು ನೋಡಿಕೊಳ್ಳುವೆವು. ಮಗುವಿನ ಮುಖವನ್ನಾದರೂ ನೋಡಿ ಜೀವಿಸಬೇಕು’ ಎಂದು ಒತ್ತಾಯ ಮಾಡಿದನು. ಹೌದು, ಪತಿಯ ಪ್ರತಿರೂಪವಾದ ಮಗುವಿನ ಬಾಂಧವ್ಯವೊಂದು ಉಳಿದಿತ್ತು. ಈ ಬಾಂಧವ್ಯವೂ, ಬಂಧು ಬಳಗದವರ ಒತ್ತಾಯವೂ ಆಕೆಯನ್ನು ಸಹಗಮನದಿಂದ ತಪ್ಪಿಸಿದವು. ಸಜನಿಯು ವಿಧವೆಯಾಗಿ ಬಿಳೀ ವಸ್ತ್ರ ಧರಿಸಿ, ಆಭರಣರಹಿತಳಾಗಿ ಜೀವಿಸತೊಡಗಿದಳು. ಹೀಗೆಯೇ ಕೆಲವು ಕಾಲ ನಡೆಯಿತು. ಸಜನಿಯ ಹೆಸರಿನಲ್ಲಿ ಆಕೆಯ ಪತಿಯು ಬ್ಯಾಂಕಿನಲ್ಲಿ ಹತ್ತು ಸಾವಿರ ರೂಪಾಯಿಗಳನ್ನಿಟ್ಟಿದ್ದನು. ಆತನ ಉಳಿದ ಆಸ್ತಿಪಾಸ್ತಿಗಳನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಮೈದುನನು ಹೊತ್ತನಾದರೂ ಈ ಹಣದಲ್ಲಿ ಕೈ ಹಾಕಲು ಆತನಿಗೆ ಆಸ್ಪದವಿರಲಿಲ್ಲ. ಈ ಹಣದ ಬಗ್ಗೆ ಮಾವನವರಿಗೂ, ಇತರರಿಗೂ ಕಣ್ಣಿತ್ತು. ಆದ್ದರಿಂದ ಇನ್ನೂ ಚಿಕ್ಕ ವಯಸ್ಸಿನ ಸಜನಿಯನ್ನು ಆಕೆಯ ಮೈದುನನಿಗೆ ಪುನರ್ವಿವಾಹ ಮಾಡುವ ಮಾತನ್ನು ಅವರವರು ಆಡಿಕೊಳ್ಳುತ್ತಿದ್ದರು.

ಸಜನಿಯು ದುಃಖದ ಕಾರಣ ಮೋಡ ಮುಚ್ಚಿದ ಚಂದ್ರನಂತೆ ಕಾಂತಿಹೀನಳಾಗಿದ್ದರೂ ಆಕೆಯ ಸೌಂದರ್ಯದ ಛಾಯೆಯು ಆಕೆಯ ಬಿಳಿ ವಸನದ ಒಳಗಿಂದ ನೋಡುವವರನ್ನು ಮುಗ್ಧಗೊಳಿಸುತ್ತಿತ್ತು. ಆಕೆಯ ಸೌಂದರ್ಯದ ಎಳೆತ ಒಂದೆಡೆ, ಆಕೆಯ ಹೆಸರಿನಲ್ಲಿರುವ ಹಣದ ಮೋಹ ಇನ್ನೊಂದೆಡೆ ಹೀಗೆ ಆಕೆಯ ಮೈದುನನು ಆಕೆಯನ್ನು ಮದುವೆಯಾಗಲು ಕಂಕಣಬದ್ಧನಾದುದರಲ್ಲಿ ಆಶ್ಚರ್ಯವಿಲ್ಲ. ಪ್ರತ್ಯಕ್ಷವಾಗಿ ಅಲ್ಲದಿದ್ದರೂ ಕಿವಿಯಿಂದ ಕಿವಿಗೆ ದಾಟಿ ಈ ಮಾತು ಸಜನಿಗೂ ಮುಟ್ಟಿತ್ತು.

ಇದರಿಂದ ಸಜನಿಗಾದ ದುಃಖವನ್ನು ವರ್ಣಿಸುವವರಾರು? ಪ್ರೀತಿಯ ಪುತ್ರನನ್ನು ತಂದೆಯು ಮರೆತುಹೋಗುತ್ತಾನೆ; ಸಹೋದರನನ್ನು ತಮ್ಮನು ಮರೆತು ಬಿಡುತ್ತಾನೆ. ಆದರೆ ಪ್ರೇಮದ ಚಿಲುಮೆಯಲ್ಲಿ ಬೆರೆತು ಬೆಳೆದ ಪತಿಯನ್ನು ಸತಿಗೆ ಮರೆಯುವದು ಸಾಧ್ಯವೇ? ಆಕೆಗೆ ತುಂಬಾ ವ್ಯಸನವಾಯಿತು. ಮಾವ ಮತ್ತು ಮೈದುನರಿಗೆ ನಾಲ್ಕು ಮಾತು ಕಟುವಾಗಿಯೇ ಹೇಳಿದಳು. ತನ್ನ ಶೇಷ ಜೀವನವನ್ನು ತಪಸ್ಸಿಗಾಗಿ ಕಳೆಯುವ ಅಚಲ ನಿರ್ಧಾರವನ್ನು ಹೇಳಿದಳು. ಮೈದುನನು ಅನೇಕ ದಿವಸಗಳ ವರೆಗೆ ಆಕೆಯನ್ನು ಗೆಲ್ಲಲು ಹಾವಭಾವ ಪ್ರದರ್ಶಿಸಿ ನೋಡಿದನು; ಏನೂ [illegible] ಗೆಡು [illegible] ಆಕೆಯನ್ನು ಗೆಲ್ಲಲು ಯತ್ನಿಸಿದ್ದನು. ಆದರೆ ಪತಿವ್ರತೆಯಾದ ಆಕೆಯ ಪತಿಪ್ರೇಮದ ಉಕ್ಕಿನ ಗೋಡೆಯ ಮೇಲೆ ಯಾವ ಪ್ರಭಾವವೂ ನಡೆಯಲಿಲ್ಲ. ಆಕೆಯನ್ನು ಪಡೆಯಲು ನಿರಾಶನಾದ ಮೈದುನನು ಆಕೆಯ ಹಣವನ್ನು ಪಡೆಯುವ ಪ್ರಯತ್ನಕ್ಕಿಳಿದನು. ಹಣವು ಎಂಥಾದ್ದನ್ನು ಮಾಡಿಸದು? ಅದಕ್ಕಾಗಿ ಮನುಷ್ಯನು ತಂದೆ ತಾಯಿಗಳನ್ನು ತ್ಯಜಿಸುತ್ತಾನೆ. ಬಂಧು ಬಳಗದವರ ಕೊಲೆ ಮಾಡುತ್ತಾನೆ. ಈ ಆಶೆಯಿಂದ ಪ್ರೇರಿತನಾದ ಮೈದುನನು ನಾನಾ ಕಿರುಕುಳಗಳನ್ನು ಕೊಡಲುಪಕ್ರಮಿಸಿದನು. ಸಹಗಮನದಿಂದ ರಕ್ಷಿಸಿದ ಆತನೇ ಈಗ ಆಕೆಯ ಕೊಲೆಗೂ ತಯಾರಾಗಿದ್ದಾನೆ! ಆದರೆ ಆಕೆಯ ಕೊಲೆ ಮಾಡುವದು ಹೇಗೆ?

ಸಜನಿಯ ಜೀವನವು ಮುಳ್ಳಿನ ಹಾಸಿಗೆಯಂತಾಯಿತು. ಆಕೆಯ ಮಗುವನ್ನು ಪುಸಲಾಯಿಸಿ ಇಲ್ಲದ ಆಟಗಳನ್ನು ತೋರಿ ತಾಯಿಯಿಂದ ದೂರ ಮಾಡಿದರು. ಮೊದಲೇ ಪತಿವಿಯೋಗದ ವ್ಯಥೆಯಿಂದ ಬೇಯುತ್ತಿರುವ ಸಜನಿಗೆ ಈ ಕಷ್ಟಪರಂಪರೆಗಳು ವಿಪರೀತವಾಗಿ ಪರಿಣಮಿಸಿದವು. ಆಕೆಗೆ ಬದುಕಿರುವದೇ ಅಯೋಗ್ಯವೆಂಬಂತೆ ತೋರಿತು. ರಾತ್ರಿ ಹಗಲೆನ್ನದೆ ನಿದ್ರೆ ಆಹಾರವನ್ನು ತೊರೆದು ಪತಿಯ ಹೆಸರೆತ್ತಿ ಮೊರೆ ಇಡುವಳು. ಈ ರೀತಿ ಹಲವು ದಿನಗಳು ಕಳೆದವು.

ಒಂದು ದಿನ ಮಾವನವರೂ, ಮೈದುನನೂ ಮನೆಯಲ್ಲಿರಲಿಲ್ಲ. ಸಜನಿಯು ಈ ಕಷ್ಟದಿಂದ ಪಾರಾಗಿ ತನ್ನ ಪತಿದೇವನನ್ನು ಸ್ವರ್ಗದಲ್ಲಾದರೂ ಕೂಡುವೆನೆಂದು ನಿರ್ಧರಿಸಿದಳು. ಅತೀ ಜೋಪಾನವಾಗಿ ಇಟ್ಟುಕೊಂಡಿದ್ದ ಪತಿಯ ಭಾವಚಿತ್ರವೊಂದನ್ನು ತಂದು ವಿವಿಧ ರೀತಿಯಿಂದ ಅಲಂಕರಿಸಿ ಪೂಜಿಸಿದಳು. ನಂತರ ಆ ಭಾವಚಿತ್ರವನ್ನು ಎದೆಗಪ್ಪಿ ಹಿಡಿದುಕೊಂಡಳು. ಮೈಮೇಲೆಲ್ಲಾ ಸೀಮೆಎಣ್ಣೆಯನ್ನು ಸುರುವಿಕೊಂಡಳು. ಹೀಗೆ ಸಜ್ಜಿತಳಾದ ಆಕೆಯು ಪತಿಯ ಧ್ಯಾನಮಾಡುತ್ತಾ ತನ್ನ ಶ್ವೇತವರ್ಣದ ಸೀರೆಗೆ ಬೆಂಕಿ ಹಚ್ಚಿಕೊಂಡಳು. ಬೆಂಕಿಯು ಭಯಂಕರವಾಗಿ ಉರಿಯಿತು. ಕ್ಷಣಮಾತ್ರದಲ್ಲಿ ಆಕೆ ಪ್ರಜ್ಞಾಶೂನ್ಯಳಾಗಿ ಬಿದ್ದಳು. ಮೈಯ ವಸ್ತ್ರವೆಲ್ಲವೂ ಸುಟ್ಟು ಮುಗಿಯುವದರೊಳಗೆ ಆಕೆಯ ಜೀವನಯಾತ್ರೆಯೂ ಮುಗಿದಿತ್ತು. ಆದರೆ ಪತ್ರಿಕೆಗಳಲ್ಲಿ ಈ ವಿಚಾರ ಹೀಗೆ ಪ್ರಕಟವಾಗಿತ್ತು. ‘ಕೆಲವು ದಿನಗಳಿಂದ ಹುಚ್ಚು ತೋರಿಬರುತ್ತಿದ್ದ ಸಜನಿ ಎಂಬ ೨೫ ವರ್ಷದ ಯುವತಿಯು ಮೈಗೆ ಬೆಂಕಿ ಹಚ್ಚಿಕೊಂಡು ಮೃತಳಾದಳು.’ ಹೌದು, ಇಪ್ಪತ್ತನೆಯ ಶತಮಾನದಲ್ಲಿ ಈ ರೀತಿಯ ಪತಿಭಕ್ತಿ ಹುಚ್ಚು ಎಂದೇ ಕರೆಯಲ್ಪಡುತ್ತದೆ. ಆದರೆ ನಾನು ಸ್ಪಷ್ಟವಾಗಿ ಹೇಳುತ್ತೇನೆ. ಬೆಂಟಿಂಕನು ಪತಿವ್ರತೆಗಳಿಗೆ ಒಂದು ಅಪರಾಧ ಮಾಡಿದ್ದಾನೆ. ಇಂದಿನ ಕೊಂಕುದೃಷ್ಟಿಯ ಸಮಾಜದಲ್ಲಿ ಪತಿವ್ರತೆಗಳ ಜೀವನವು ಅಸಹನೀಯವಾದುದು. ಆ ಜೀವನಕ್ಕಿಂಥಾ ಸಹಗಮನವೇ ಯುಕ್ತವಾದುದು. ಆದುದರಿಂದ ಸಹಗಮನವನ್ನು ಖಡ್ಡಾಯವಾಗಿ ನಿಲ್ಲಿಸದೆ, ಬದುಕಲಿಚ್ಛೆಯಿಲ್ಲದವರು ಸಹಗಮನ ಆಗಬಹುದೆಂದು ವಿಧಿಸಿದ್ದರೆ ಯೋಗ್ಯವಿತ್ತು. ಸಜನಿಯಂಥಾ ಹೆಂಗಳೆಯರ ಬಾಳು ಆ ರೀತಿ ಅಂತಿಮಗೊಳ್ಳುತ್ತಿರಲಿಲ್ಲ.’

ಲತಾಳು ಕಥೆಯನ್ನು ಮುಗಿಸಿದಳು. ಆಕೆಯ ಅಭಿಪ್ರಾಯವನ್ನು ನಾನು ಪೂರ್ಣ ಒಪ್ಪಲಿಲ್ಲವಾದರೂ, ಆಕೆಯ ಹೇಳಿಕೆಯಲ್ಲಿ ಸತ್ಯಾಂಶವಿದೆಯೆಂದು ಮನಸ್ಸು ಒಪ್ಪಿತು.

ಪ್ರಪಂಚದಲ್ಲೇ ಅತ್ಯಂತ ಆಳವಾದ ಭಾವಿ.

ಪ್ರಪಂಚದಲ್ಲೇ ಅತ್ಯಂತ ಆಳವಾದ ಎಣ್ಣೆಯ ಭಾವಿಯನ್ನು ಅಮೇರಿಕದಲ್ಲಿ ತೋಡಲಾಗಿದೆ. ಇದು ವ್ಯೋಮಿಂಗ್‌ನ ರಾಕ್ ಚಿಲುಮೆಗಳ ಬಳಿ ಇದೆ. ಇದರ ಆಳ ೧೯೪೩೫ ಅಡಿಗಳು ಅಂದರೆ ೩ ಮೈಲುಗಳಿಗಿಂತಲೂ ಹೆಚ್ಚಿನ ಆಳವಾಯಿತು. ಇದನ್ನು ತೋಡಲು ೧೫೮ ದಿನಗಳು ಹಿಡಿದುವು.

ಚರ್ಮ ಸೌಂದರ್ಯ.

ಅಮೇರಿಕಾದ ಹೆಂಗಸರು ‘ಮೇಕಪ್’ ಸಾಧನಗಳನ್ನು ಉಪಯೋಗಿಸುವುದು ತುಂಬಾ ಜಾಸ್ತಿ. ಅವರಲ್ಲಿ ಉಡುಪುಗಳೂ ಒಂದೇ ತರಹ. ಇದರಿಂದ ಅವರ ಚರ್ಮ ಸೌಂದರ್ಯ ಕೆಟ್ಟು ಹೋಗಿದೆ ಎಂಬುದಾಗಿ ಬ್ರಿಟನ್ನಿನ ಫ್ಯಾಷನ್ನುಗಳ ಬಗ್ಗೆ ಪ್ರಖ್ಯಾತ ಲೇಖಕಿಯಾದ ಎಡ್ವರ್ಡ್ಸ್‌ಳು ಇತ್ತೀಚೆಗೆ ಅಮೇರಿಕಾ ಪ್ರವಾಸ ಮಾಡಿಕೊಂಡು ಬಂದು ಹೇಳಿದರು.

ಈಗ ಅಮೇರಿಕನ್ ಒಬ್ಬರು ಇದಕ್ಕೆ ಎದುರು ಜವಾಬುಕೊಟ್ಟಿದ್ದಾರೆ:—‘ಅಮೇರಿಕಾದ ಹೆಂಗಸರು ಹೆಚ್ಚು ‘ಮೇಕಪ್’ ಮಾಡಿಕೊಳ್ಳಬಹುದು. ಆದರೆ ಬ್ರಿಟಿಷ್ ಮಹಿಳೆಯರು ತುಂಬಾ ಟೀ ಕುಡಿಯುತ್ತಾರೆ. ಇದರಿಂದ ಅವರ ರಕ್ತನಾಳಗಳು ಕುಂದಿ ಮುಖದ ಮೇಲೆ ಮಚ್ಚೆ ಮಚ್ಚೆಯಿಂದ ಕೆಂಪು ಬಣ್ಣ ಉಂಟಾಗುತ್ತದೆ’ ಎಂದು. ಹೀಗೆ ಹೇಳಿರುವವರು ನ್ಯೂಯಾರ್ಕಿನ ಚರ್ಮ ಸಂಬಂಧವಾದ ಸ್ಪೆಷಲಿಸ್ಟ್ ಡಾ. ಹೋವಾರ್ಡ್ ಬೆಹರ್‌ಮನ್‌ರವರು.

ರಷ್ಯಾದಲ್ಲಿ ಯುವಕರು ಸಿಗರೇಟು ಸೇದಕೂಡದು.

ರಷ್ಯಾದಲ್ಲಿ ಯುವಕರು ಸಿಗರೇಟು, ಚುಟ್ಟಾ ಮೊದಲಾದುವನ್ನು ಸೇದುವದನ್ನು ಇನ್ನು ಮುಂದೆ ತ್ಯಜಿಸಬೇಕೆಂಬುದಾಗಿ ‘ಸೋವಿಯಟ್ ಯೂತ್’ ಎಂಬ ರಷ್ಯನ್ ಪತ್ರಿಕೆ ಸೂಚನೆಯಿತ್ತಿದೆ.

ಧೂಮಪಾನವು ಬಂಡವಾಳಗಾರಿಕೆ ರಾಷ್ಟ್ರಗಳಲ್ಲಿ ಸಹಜ. ಬಂಡವಾಳಗಾರಿಕೆಯಲ್ಲಿ ಇಡೀ ಜೀವನ ವ್ಯವಸ್ಥೆಯೇ ಈ ರೀತಿ ಧೂಮಪಾನ ಮುಂತಾದ ಮಾದಕ ಸೇವನೆಗೆ ದಾರಿಯಿತ್ತಿದೆ. ಆದರೆ ರಷ್ಯದ ಯುವಕರು ಆ ಬಂಡವಾಳಗಾರಿಕೆಗಳ ಜನರನ್ನು ನೋಡಿಕೊಂಡು ಅವರಂತೆ ಧೂಮಪಾನ ಮಾಡುತ್ತಿರುವುದು ಯುಕ್ತವಲ್ಲ. ಈಚೆಗೆ ರಷ್ಯದಲ್ಲಿ ಯುವಕರು ಧೂಮಪಾನ ಮಾಡುವದು ಹೆಚ್ಚುತ್ತಿದೆ. ಇದನ್ನು ಇವರು ಈ ಕೂಡಲೇ ಬಿಡಬೇಕು ಎಂದು ಆ ಪತ್ರಿಕೆ ಬರೆದಿದೆ.

ಲಂಚ ಗುಳಿತನದ ಮೂಲ ಸ್ವರೂಪ.

[ಅನೇಕ ಸರಕಾರಿ ಖಾತೆಗಳಲ್ಲಿ ಲಂಚಗುಳಿತನವು ಸಮೃದ್ಧವಾಗಿದೆ. ಕೆಲವು ಕಡೆಗಳಲ್ಲಿ ಇದನ್ನು ಹಿಡಿಯುವದು ಕಷ್ಟತರವಾಗುತ್ತದೆ. ಆದರೆ ಇದನ್ನು ಹೀಗೆಯೇ ಬೆಳೆಯಬಿಟ್ಟರೆ ನಮ್ಮ ದೇಶದ ಬೆನ್ನೆಲುಬೇ ಈ ವ್ಯಾಧಿಯಿಂದ ದುರ್ಬಲವಾಗುವುದೆಂದು ಬಂಗಾಲದ ಶ್ರೀ ದಿನೇಶ ಚಂದ್ರ ಚಾಂದಾ ಎಂಬ ಲಂಚಗುಳಿತನ ನಿರ್ಮೂಲನಾಧಿಕಾರಿಗಳು ತಿಳಿಸುತ್ತಾರೆ. ಈ ಸಂಬಂಧ ಅವರ ಲೇಖನವೊಂದು ವಿಚಾರಾರ್ಹವಾಗಿದೆ.]

ಲಂಚಗುಳಿತನವು ಮಾನವ ಸಮಾಜದಲ್ಲಿ ಬಹಳವಾಗಿ ವ್ಯಾಪಿಸಿಕೊಂಡಿರುವ ಒಂದು ಅನೈತಿಕ ವ್ಯವಹಾರ. ಅದರ ಕ್ಷೇತ್ರವು ವಿಶಾಲವೂ ಅದರ ವಿಧಾನಗಳು ಅಸಂಖ್ಯಾತವೂ ಆಗಿವೆ. ಈ ಅನೈತಿಕ ರೋಗ ಪೀಡೆಯು ದೇಶದ ರಾಜಕೀಯ ಮತ್ತು ಸಾಮಾಜಿಕ ಶರೀರವನ್ನು ಅದೆಷ್ಟು ಕೊರೆಯುತ್ತಿದೆಯೆಂದರೆ ತತ್ಪರಿಣಾಮವಾಗಿ ನಮ್ಮ ಸಾರ್ವಜನಿಕ ಮತ್ತು ಸ್ವತಂತ್ರ ಜೀವನಗಳು ಅದರಿಂದ ಅಧೋಗತಿಗಿಳಿದಂತಾಗಿ ವಿಚಾರಿ ಧುರೀಣರಿಗದೊಂದು ಅಗಾಧ ಸಮಸ್ಯೆಯಾಗಿದೆ. ಬೇರೆ ಬೇರೆ ಕ್ಷೇತ್ರಗಳಲ್ಲಿ ಇದರ ಕಾರ್ಯ ಕಾರಣಗಳು ಬೇರೆ ಬೇರೆ ತರವಾಗಿದ್ದರೂ ಸದ್ಯಕ್ಕೆ ದೇಶದ ಆಡಳಿತ ಖಾತೆಗಳಲ್ಲಿ ಅದರ ಹಾವಳಿಯ ಖೂನಿಕಾರಕ ಪರಿಣಾಮಗಳನ್ನು ತಿಳಿಸುವುದು ಈ ಲೇಖನದ ಉದ್ದೇಶವಾಗಿದೆ. ಇದರಿಂದ ಲಂಚಗುಳಿತನದ ಪತ್ತೆ ಹಚ್ಚುವವರಿಗೆ ಸ್ವಲ್ಪ ಸಹಾಯವೂ ಆಗಬಹುದು.

ಮನೋಶಾಸ್ತ್ರ ದೃಷ್ಟಿಯಿಂದ ಪರಿಶೀಲಿಸಿದಾಗ ಲಂಚ ತಿನ್ನುವವರಲ್ಲಿ ಪ್ರಾಮುಖ್ಯವಾಗಿ ಎರಡು ವರ್ಗದವರಿರುವರೆಂದು ತಿಳಿದುಬಂದಿದೆ—(1) ಕೆಲವು ಆಕರ್ಷಕ ಸಂದರ್ಭಗಳಲ್ಲಿ ಅಪ್ರಾಮಾಣಿಕರಾಗುವುದು (2) ಎಲ್ಲಾ ಸಂದರ್ಭಗಳಲ್ಲೂ ಸ್ವಾಭಾವಿಕವಾಗಿ ಅಪ್ರಾಮಾಣಿಕರಾಗಿರುವುದು.

ಮೊದಲನೆ ವರ್ಗದವರು ಹೊರನೋಟಕ್ಕಾದರೂ ಪ್ರಾಮಾಣಿಕರಂತೆ ತೋರುವರು. ಇದಕ್ಕೆ ಶಿಕ್ಷೆಯ ಭೀತಿ, ಕೆಟ್ಟ ಹೆಸರು ಬರುವುದೆಂಬ ಅಂಜಿಕೆ, ಮತ್ತು ಅಯೋಗ್ಯ ಸಂದರ್ಭಗಳಿರುವುದು, ಈ ಮೂರು ಕಾರಣಗಳಿರಬಹುದು. ಈ ವರ್ಗದ ಲಂಚಗುಳಿಗಳು ನಿರ್ಬಲ ಧೈರ್ಯದವರಾಗಿದ್ದು ಯೋಗ್ಯ ಮೇಲ್ವಿಚಾರಣೆಯನ್ನು ಇಡುವುದರ ಮೂಲಕ ಇವರನ್ನು ಸುಧಾರಿಸಬಹುದಾಗಿದೆ. ಆದರೆ ಲಂಚದ ಸಂದರ್ಭಗಳು ಅನುಕೂಲವಾಗಿದ್ದರೆ, ಲಂಚದ ವಸ್ತುಗಳು ಶ್ರೇಷ್ಠತರಗಳಾಗಿದ್ದರೆ, ಮತ್ತು ಅದರ ಪ್ರಮಾಣವು ದೊಡ್ಡದಾಗಿದ್ದರೆ ಅವರು ಯಾವಾಗಲೂ ಇದಕ್ಕೆ ಬಲಿಬೀಳಬಹುದಂತವರಾಗಿದ್ದಾರೆ.

1. ಸಂದರ್ಭಗಳ ಒತ್ತಡದಿಂದ:

ಲಂಚವನ್ನು ಅಪಾಯವಿಲ್ಲದೆ ಜೀರ್ಣಿಸಿಕೊಳ್ಳುವಂತಹ ಅನುಕೂಲ ಸಂದರ್ಭಗಳಿದ್ದರೆ ಕೆಲವರು ಲಂಚಗುಳಿತನವನ್ನನುಸರಿಸುವರು. ಇಲ್ಲದಿದ್ದರೆ ಅವರು ಕಡು ಪ್ರಾಮಾಣಿಕರಂತೆ ನಟಿಸುವರು. ಕಚೇರಿಗಳಲ್ಲಿನ ಕೆಲವು ಅಧಿಕಾರಿಗಳು ಸಹಜವಾಗಿ ಅನಜ್ಞರೂ ದುರ್ಬಲ ಮನಸ್ಸಿನವರೂ ಇದ್ದು ಇಂತಹ ಕೆಲಸಕ್ಕೆ ಹೇಸುವವರಾದರೂ ಕೆಲವು ಸ್ವಾರ್ಥಸಾಧಕ ಪ್ರಭಾವಿತ ಸಾರ್ವಜನಿಕ ವ್ಯಕ್ತಿಗಳ ದುಬೋಧನೆಗೆ ಬಲಿಬೀಳುವರು. ಇಂತಹ ಸಾರ್ವಜನಿಕ ವ್ಯಕ್ತಿಗಳು ಲಂಚಗುಳಿತನದ ಪ್ರಾರಂಭಕ್ಕೂ ಮತ್ತದರ ಹರಡುವಿಕೆಗೂ ಬಹು ಮಟ್ಟಿಗೆ ಹೊಣೆಗಾರರಾಗಿರುತ್ತಾರೆ. ಇವರ ದುಬೋಧನೆಯಿಲ್ಲದಿದ್ದರೆ ಕಚೇರಿಗಳಲ್ಲಿನ ತುಂಬ ಮಂದಿ ಕೆಲಸಗಾರರು ನೀತಿಗೆಡದಂತಹರಾಗುವರು. ಸಂಬಳ ಕಡಿಮೆ ಕೊಡಲ್ಪಡುವ ಕಛೇರಿ, ಕೆಲಸಗಾರರು ಈ ದುಷ್ಕೃತ್ಯಕ್ಕೆ ಬಲಬೀಳುವರೆಂಬೊಂದು ಕುತರ್ಕವು ಆಗಾಗ್ಗೆ ಹೇಳಲ್ಪಡುತ್ತದೆ. ಆದರೆ ಯಾವ ಸಂದರ್ಭದಲ್ಲೂ ಇಂತಹ ಲಂಚಗುಳಿತನವನ್ನು ನ್ಯಾಯನೀತಿಗನುಣವಾಗಿಸರಿಯೆಂದು ಸಿದ್ಧಾಂತ ಮಾಡಿಕೊಡಲು ಸಾಧ್ಯವೇ ಇಲ್ಲ. ಏಕೆಂದರೆ ಕಮ್ಮಿ ಸಂಬಳ ಸಿಗುತ್ತದೆಂದು ಹೇಳಲ್ಪಡುವ ಈ ಜನರಿಗೆ ಹೆಚ್ಚು ಸಂಬಳವನ್ನು ಕೊಟ್ಟರೂ ಸಂದರ್ಭಗಳು ಅನುಕೂಲವಾಗಿದ್ದರೆ ಅವರು ಖಂಡಿತ ಲಂಚ ತಿನ್ನಲು ಪ್ರಯತ್ನಿಸುವುದು ಗಮನಕ್ಕೆ ಬಂದಿದೆ. ಆದುದರಿಂದ ಇಂತಹರನ್ನು ಇತರರಂತೇ ಹೆಚ್ಚಿನ ಜಾಗರೂಕತೆಯಿಂದಲೂ ಪ್ರಮದಿಂದಲೂ ಹತ್ತಿಕ್ಕುವುದು ಆವಶ್ಯವೆನಿಸುತ್ತದೆ.

2. ವಸ್ತುರೂಪದ ಲಂಚ.

ಕೆಲವರು ತಾವು ಹಣದ ರೂಪದಲ್ಲಿ ಲಂಚ ತೆಗೆದುಕೊಳ್ಳುವಷ್ಟು ಅಪ್ರಾಮಾಣಿಕರಲ್ಲವೆಂಬು ಒತ್ತಿ ಹೇಳುತ್ತಾರೆ. ಆದರೆ ಹಣದ ಬದಲಿಗ ವಸ್ತುಗಳನ್ನು ಕೊಟ್ಟರೆ ಇವರು ಸುಲಭವಾಗಿ ಅದನ್ನು ಸ್ವೀಕರಿಸುವರು. ಇವರ ವಿಧಾನವು ಪರೋಕ್ಷವು.

3. ದೊಡ್ಡ ಮೊತ್ತಕ್ಕೆ ಬಲಿಬೀಳುವವರು

ಕೆಲವರಲ್ಲಿ ಪ್ರಾಮಾಣಿಕತನದ ಶೀಲವು ತುಂಬಾ ದೃಢತರದ್ದಾಗಿರುತ್ತದೆ. ಇವರು ಸಣ್ಣ ಪುಟ್ಟ ಮೊತ್ತಗಳನ್ನು ನಿರಾಕರಿಸುವವರಾದರೂ ದೊಡ್ಡ ಬೇಟೆಯೊಂದನ್ನು ಸದಾ ಕಾಯುತ್ತಿರುತ್ತಾರೆ. ಇವರು ತಮ್ಮ ಗುಣಶ್ರೇಷ್ಠತೆಯನ್ನು ಕ್ರಮೇಣ ದೊಡ್ಡ ಪ್ರಮಾಣದ ಲಂಚದನ್ನು ನುಂಗಿ ಕರಗಿಸಲು ಉಪಯೋಗಿಸುವರು.

ಸ್ವಾಭಾವಿಕವಾಗಿ ಅಪ್ರಾಮಾಣಿಕರಾಗಿರುವವರಲ್ಲಿ ಸ್ವಾಭಿಮಾನದ ಇಲ್ಲವೇ ಸೌಮ್ಯತನದ ತಿಲಾಂಶಪ್ರದರ್ಶನವಾದರೂ ತೋರಿಬರುವುದಿಲ್ಲ. ತಮ್ಮ ಲಂಚಗುಳಿ ವ್ಯವಹಾರದಲ್ಲವರು ಮ... ಸಾ... ತರೂ ತಜ್ಞರೂ ಎನಿಸಿ... ವರು ಹಣ ಇಲ್ಲವೆ ... ಲ್ಲೂ ಲಂಚವನ್ನು ಸ್ವೀಕರಿ... ವರ ವಿಧಾನಗಳು ... ರೂಕತೆಯೂ ಮತ್ತು ...

ರಿಸಲ್ಪಟ್ಟ ಯೋಜಿಸಿದಂತಹದೂ ಆಗಿರುತ್ತವೆ. ಅನೈತಿಕ ಜೀವನ ರೀತಿಯೂ ಅಭ್ಯಾಸಿ ಲಂಚಗುಳಿತನದ ಒಂದು ಮುಖ್ಯ ಕಾರಣವಾಗಿದೆ. ಅನೈತಿಕ ಸ್ವಭಾವವೇ ಮುಖ್ಯ ಕಾರಣವೆಂಬುದಕ್ಕೆ ತುಂಬಾ ಶಿಕ್ಷಿತರೂ ಉನ್ನತ ಸ್ಥಾನದಲ್ಲಿರುವವರೂ, ಮತ್ತು ತುಂಬಾ ಶ್ರೀಮಂತರಾಗಿರುವವರೂ ಕೂಡ ಈ ಕೆಲಸವನ್ನು ಮಾಡುವದೆಂಬುದೊಂದು ನಿದರ್ಶನ. ಲಂಚಗುಳಿ ವ್ಯವಹಾರದಲ್ಲಿ ಈ ವರ್ಗದವರನ್ನು ಹಿಡಿಯುವುದು ಹೆಚ್ಚಿನ ಶ್ರಮದಾಯಕವೂ ಅಪಾಯಕಾರಕವೂ ಆಗಿರುತ್ತದೆ. ಅಲ್ಲದೆ ಇವರು ತಮ್ಮ ಕೆಟ್ಟ ಆದರ್ಶದಿಂದ ತಮ್ಮ ಕೈಕೆಳಗಿನವರನ್ನು ಕಲಂಕಿಸುವರು. ಇಂತಹರು ರಾಷ್ಟ್ರದ ಅಭಿವೃದ್ಧಿಗೆ ಘಾತಕರಾಗಿರುವರು. ತಾವು ಸ್ವತಃ ಲಂಚಗುಳಿಗಳಾಗುವುದರಿಂದ ತಮ್ಮ ಕೈಕೆಳಗಿನವರ ಮೇಲೆ ಯಾವ ತರದ ಆರೋಪ ಹೊರಿಸಲೂ ಅವರಿಗೆ ನೈತಿಕ ಸ್ಥೈರ್ಯವಿರುವುದಿಲ್ಲ. ಇಂಥವರನ್ನು ನಿರ್ದಾಕ್ಷಿಣ್ಯವಾಗಿ ಕಳೆಕಿತ್ತಂತೆ ನಿರ್ಮೂಲಿಸುವುದು ಯುಕ್ತವಿದೆ.

ಲಂಚದ ವಿಧಾನಗಳು.

(1) ನೇರವಾಗಿ ಮತ್ತು (2) ಮಾರೆಯಾಗಿ ಎಂಬೆರಡು ವಿಧಾನಗಳಿಂದ ಲಂಚ ಸ್ವೀಕರಣವು ನಡೆಯುತ್ತದೆ. ಮೊದಲನೆಯ ವಿಧಾನದಲ್ಲಿ ವಸ್ತು ಇಲ್ಲವೆ ಹಣದ ರೂಪದಲ್ಲಿ ಲಂಚವನ್ನು ನುಂಗಲಾಗುವುದು. ಎರಡನೆಯ ವಿಧಾನದಿಂದ ಅಪ್ರತ್ಯಕ್ಷವಾಗಿ ಇತರರಿಂದ ಪೆಟ್ಟಿಗೆ ಹಿಡಿಯುವುದಕ್ಕೆ, ಪ್ರಭಾವ ಬೆಳೆಸುವುದಕ್ಕೆ, ಲಾಭ ಹೊಂದಲಿಕ್ಕೆ, ಸುಖದ ಅನುಕೂಲತೆ ಪಡೆಯಲಿಕ್ಕೆ, ಮರ್ಯಾದೆ ಗಳಿಸಲಿಕ್ಕೆ, ಇಲ್ಲವೆ ... ಮಾಡಲಿಕ್ಕೆ ಪ್ರಯತ್ನಗಳಾಗುವವು. ಆದರೆ ಸಾರ್ವಜನಿಕ ಆಡಳಿತ ಖಾತೆಗಳಲ್ಲಿರುವವರು ಇಂತಹ ಯಾವ ಕಾರ್ಯವನ್ನು ಮಾಡಲು ನಿರೀಕ್ಷಿಸಲ್ಪಡುವುದಿಲ್ಲ. ಇದು ಕರ್ತವ್ಯಲೋಪವೆನಿಸುತ್ತದೆ.

ಲಂಚಕ್ಕೆ ಹಲವು ಗೌರವದ ಹೆಸರುಗಳು ಕೊಡಲ್ಪಡುವುದು ವಾಡಿಕೆಯಾಗಿದೆ: ಅದು ಜನರು, ಕಾಣಿಕೆ, ಪುರಸ್ಕಾರ, ಭಕ್ಷೀಸು, ನಮೂನೆ, ಮಾದರಿ ಮೊದಲಾದ ರೂಪಗಳನ್ನು ಹೊಂದುತ್ತದೆ.

ಮೇಲಿನವುಗಳು ಲಂಚಗಳೇ ಆದರೂ ಗಣನೀಯವೆನಿಸುವುದಿಲ್ಲ ಇದರಲ್ಲಿ ದುರುದ್ದೇಶದ ಕಾರ್ಯ ಸಾಧನೆಗಾಗಿ ಕೊಡಲ್ಪಡುವ ಔತಣ, ಉಪಹಾರ ಕೂಟಗಳೂ ಸೇರುತ್ತವೆ. ಆತ್ಮೀಯರಿಗೆ ಕೆಲಸಗಳನ್ನು ದೊರಕಿಸಲು ಮಾಡುವ ಪ್ರಯತ್ನಗಳೂ ಇದೇ ವರ್ಗದವು.

ಲಂಚದ ಮೂಲ ಕಾರಣಗಳು.

1. ನೀತಿಗೆಟ್ಟ ಸ್ವಭಾವ, 2 ಬಡತನ, 3. ಸ್ವಕಲ್ಪಿತ ಅವಶ್ಯಕತೆಗಳು, 4. ಯೋಗ್ಯ ನಿಯಂತ್ರಣವಿಲ್ಲದಿರುವಿಕೆ. 5. ಆಕರ್ಷಣೆಗಳಿರುವಿಕೆ, 6 ಪ್ರಸಲಾಯಿಸುವಿಕೆಗೆ ಬಲಿಬೀಳುವುದು, 7. ಕಳ್ಳತನದ ಸ್ವಭಾವ, 8. ಅಧಿಕಾರಲಾಲಸೆ, 9. ಹಣದ ... 10 ಸುಖದಲಾಲಸೆ. ... ನೈತಿಕ ಸ್ವ... ಲಂಚಗುಳಿತನಕ್ಕೆ ...

ಲಂಚದ ದುಷ್ಪರಿಣಾಮ.

ಲಂಚದಿಂದ ಲಂಚಗುಳಿತನವು ವ್ಯಾಪಿಸುತ್ತದೆ. ಅದೊಂದು ಅಂಟು ವ್ಯಾಧಿ. ಅದು ತತ್ಸಂಬಂಧದ ವಾತಾವರಣದಲ್ಲೆಲ್ಲ ಹರಡಿಕೊಳ್ಳುವುದು. ಬೇರೆಯವರ ದುರಾದರ್ಶಗಳು ಇದರ ಪ್ರೋತ್ಸಾಹಕಗಳು. ಹೀಗೆ ಒಬ್ಬ ಲಂಚಗುಳಿ ಕೆಲಸಗಾರನು ಒಂದು ಆಫೀಸಿನ ಆರೋಗ್ಯಕರ ಪರಿಸ್ಥಿತಿಗೆ ಅಪಾಯಕಾರಿಯಾದವನು. ಅನೇಕ ಸಂದರ್ಭಗಳಲ್ಲಿ ಲಂಚ ಕೊಡುವವನು ಮತ್ತು ಅದನ್ನು ಸ್ವೀಕರಿಸುವವನು ಮೂರನೆಯವನೊಬ್ಬನಿಗೆ ಅನಾನುಕೂಲತೆಯನ್ನುಂಟುಮಾಡಿ ಲಾಭಗಳಿಸುವರು. ಅದರಲ್ಲಿ ಯಾವ ನ್ಯಾಯನೀತಿಗೂ ಆಸ್ಪದವಿಲ್ಲ. ಆದರೆ ಇದರಿಂದ ದೇಶದ ಹಿತಗಳು ಹಾಳಾಗುವುದೆಂಬುದರಲ್ಲಿ ಸಂದೇಹವಿಲ್ಲ. ದೇಶದ ನೈತಿಕ ಜೀವನ ಶ್ರೇಷ್ಠತೆಯೂ ಇದರಿಂದ ಕುಂದುವುದು.

'ಸ್ವ ಮೂ.'

ಮಡಿಕೇರಿ ಪೋಸ್ಟಾಫೀಸು.

ಆಚೆ ವಾರದ ಪತ್ರಿಕೆಯಲ್ಲಿ ಮಡಿಕೇರಿ ಪೋಸ್ಟಾಫೀಸಿನ ವಿಚಾರದ ಲೇಖನವನ್ನೋದಿದೆನು. ಅದರ ಕೆಲಸದಲ್ಲಿ ನನಗೆ ತೋರಿಬಂದ ಒಂದೆರಡು ನ್ಯೂನತೆಗಳನ್ನು ಎತ್ತಿ ತೋರಿಸುವದು ಅಗತ್ಯ. ಪೋಸ್ಟಾಫೀಸಿನಲ್ಲಿ ಕೆಲಸವು ಇಲ್ಲಿ ಈಗ ನಡೆಯುತ್ತಿರುವಂತೆ ಬೆಳಗ್ಗೆ ೧೦ ಗಂಟೆಯಿಂದ ನಾಲ್ಕು ಗಂಟೆಯ ವರೆಗೆನ್ನಬಹುದು. ಈ ಸಮಯದಲ್ಲಿ ಸ್ಟಾಂಪುಗಳ ಮಾರಾಟವು ನಡೆಯುವದಾಗಿದೆ. ಮನಿ ಯಾರ್ಡರು, ರಿಜಿಸ್ಟರ್ಡ್ ಮತ್ತಿತರ ಕಾರ್ಯ ಮೂರು ಗಂಟೆಗೇ ಮುಕ್ತಾಯವಾಗುತ್ತದೆ. ನಾನು ಈ ಸಮಯವನ್ನು ವ್ಯತ್ಯಾಸ ಮಾಡಬೇಕೆಂದು ಹೇಳುವದಿಲ್ಲ. ಆದರೆ ಈ ಅವಧಿಯಲ್ಲಿ ಹೊರವರಿಗೆಲ್ಲಾ ತಡವಿಲ್ಲದೆ ಸ್ಟಾಂಪುಗಳು ದೊರೆಯುವಹಾಗಾಗಬೇಕು. ಸಾರ್ವಜನಿಕರಿಗೆ ತೊಂದರೆಯಾಗಬಾರದೆಂದೇ ಪೋಸ್ಟಾಫೀಸು ಸಿಬ್ಬಂದಿಗಳಿಗೆ ಆಫೀಸಿನ ಹತ್ತಿರದಲ್ಲೇ ವಾಸ ಸ್ಥಾನದ ಏರ್ಪಾಡು ಮಾಡಿರುವದೆಂದು ನನ್ನ ಭಾವನೆ. ಆದರೆ ಇದರ ಲಾಭ ಸಾರ್ವಜನಿಕರಿಗೆ ಆಗುತ್ತಿಲ್ಲ. ಕೆಲವು ಸಮಯ ಗಂಟೆ ಗಂಟೆಗಳ ಕಾಲ ಕಾಯಬೇಕಾಗುತ್ತದೆ. ಕ್ಲಾರ್ಕರು ಊಟಕ್ಕೆ ಹೋಗಿದ್ದಾರೆ; ಬೇರೇನೋ ಮಾಡುತ್ತಿದ್ದಾರೆ ಎಂದು ಹೇಳುವದುಂಟು. ಆತುರ ವಿರುವವರು ಸ್ವಲ್ಪ ಒತ್ತಾಯಮಾಡಿದರೆ ಗದರಿಸುವದೂ ತಪ್ಪಿದಲ್ಲ. ಪೋಸ್ಟಾಫೀಸು ಜನ ಸೇವಾ ಸಂಸ್ಥೆ ಎಂದು ತಿಳಿದು ತಮ್ಮ ದರ್ಪವನ್ನು ಬಿಡಬೇಕು. ಅಲ್ಲದೆ ಮಡಿಕೇರಿ ಪೋಸ್ಟಾಫೀಸಿನಲ್ಲಿ ಬೆಳಗ್ಗೆ ಹತ್ತು ಗಂಟೆಯಿಂದ ನಾಲ್ಕು ಗಂಟೆಯ ವರೆಗೆ ಯಾವದೇ ವಿಳಂಬವಿಲ್ಲದೆ ಕೇಳಿದಾಗ ಆವರು, ಸ್ಟಾಂಪುಗಳೂ ಮತ್ತಿತರ ಸವಲತ್ತು ದೊರೆಯುವಂತೆ ಸಂಬಂಧಿಸಿದ ಅಧಿಕಾರಿಗಳು ವಿಚಾರಿಸಬೇಕಾಗಿದೆ

ಕೊಡಗು

ತಾ. ೮-೭-೧೯೪೯ನೇ ಶುಕ್ರವಾರ

ಗ್ರಾಮ ಪಂಚಾಯಿತಿ.

ಹಳ್ಳಿಗಳ ನಾಡಾದ ಭರತಖಂಡದಲ್ಲಿ ಗ್ರಾಮಗಳೇ ರಾಷ್ಟ್ರದ ಬೆನ್ನೆಲುಬು; ರೈತರೇ ದೇಶದ ಜೀವನಾಡಿ. ಈ ಗ್ರಾಮಸ್ಥರ ಅಂತಸ್ತು ಯಾವ ಮಟ್ಟದಲ್ಲಿರುವದೋ ರಾಷ್ಟ್ರದ ಅಂತಸ್ತು ಅದೇ ಮಟ್ಟದಲ್ಲಿದೆಯೆಂದು ಎಣಿಸಲ್ಪಡುವದು. ನಗರಗಳಲ್ಲಿ ನಾಲ್ಕು ಜನ, ಟಾಟಾ, ಡಾಲ್ಮಿಯಾಗಳು ಇದ್ದರೆ ದೇಶದ ಆರ್ಥಿಕ ಸ್ಥಿತಿ ಉತ್ತಮವಾಯಿತೆಂದು ಪರಿಗಣಿಸಲಾಗದು. ನೆಹರೂ, ರಾಮನ್, ರಾಧಾಕೃಷ್ಣನ್‌ರಂಥಾ ಕೆಲವರು ಮಹಾಮೇಧಾವಿಗಳಿರುವದರಿಂದ ದೇಶದ ಜನತೆಯ ಜ್ಞಾನಮಟ್ಟವು ಮೇಲೇರಿದೆ ಎಂದು ಲೆಕ್ಕ ಹಾಕಲಾಗದು. ಈ ಮಹಾವ್ಯಕ್ತಿಗಳ ಅಂತಸ್ತಿನಿಂದ ದೇಶದ ಹಿರಿಮೆಯನ್ನು ಅಳೆಯಲಾಗದು. ರಾಧಾಕೃಷ್ಣನ್, ನೆಹರೂರವರಂಥಾ ವ್ಯಕ್ತಿಗಳಿಂದ ದೇಶದ ಹಿರಿಮೆ ಹೆಚ್ಚುತ್ತದೆ; ಅಂತರಾಷ್ಟ್ರೀಯ ರಂಗದಲ್ಲಿ ಸ್ಥಾನದೊರೆಯುತ್ತದೆ; ಇದೆಲ್ಲ ಸಹಜ. ಆದರೆ ದೇಶದ ಬಲವು ಈ ಕೆಲವು ವ್ಯಕ್ತಿಗಳಲ್ಲಿಲ್ಲ. ಗುಲಾಬಿ ಹೂವನ್ನು ನೋಡಿ ಗಿಡದ ಬೇರೂ ಹೂವಿನಂತೆ ಎನ್ನಲಾಗದು. ದೇಶದ ಸ್ಥಿತಿಯನ್ನು ಅಳೆಯುವಾಗ ಹಿರಿಮೆ ಪಡೆದ ನಾಲ್ಕು ವ್ಯಕ್ತಿಗಳ ದೃಷ್ಟಿಯಿಂದ ತೂಗಲಾಗದು.

ಹಿಂದೂದೇಶದಲ್ಲಿ ವಿದ್ಯಾವಂತರು ನೂರಕ್ಕೆ ಹದಿನಾರರಂತೆ ಎಂದು ಹೇಳುವಾಗ ದೇಶದ ಜ್ಞಾನವನ್ನು ಅನಕ್ಷರಸ್ಥರಾದ ಶೇಕಡ ೮೪ ರಷ್ಟಿರುವವರ ಸ್ಥಿತಿಯಂತೆ ಅಳೆಯಬೇಕು. ಶೇಕಡ ೧೦ ಕ್ಕೂ ಕಡಿಮೆಯಾಗಿ ಶ್ರೀಮಂತರಿನ್ನುವಾಗ ದೇಶದ ಆರ್ಥಿಕ ಸ್ಥಿತಿಯನ್ನು ದಿನಕ್ಕೆ ನಾಲ್ಕಾಣೆ ಸಂಪಾದಿಸಲಾರದ ಮಿಲಿಯಾಂತರ ಬಡ ಜನರ ಕಳಹೆದಿಯಿಂದ ಅಳೆಯಬೇಕು. ಆದ್ದರಿಂದ ದೇಶದ ಸಂಪತ್ತು, ಪ್ರೌಢಿಮೆ ಆಯಾಯ ದೇಶದ ಬಡ ಜನರ ಸಂಪತ್ತು, ಪ್ರೌಢಿಮೆಯ ಮೇಲೆ ನಿಂತಿದೆ. ಹಿಂದೂದೇಶದ ಹಿರಿಮೆ ಹಿಂದೂದೇಶದ ರೈತರ ಹಿರಿಮೆಯಲ್ಲಡಗಿದೆ.

ಆದ್ದರಿಂದ ರಾಷ್ಟ್ರವನ್ನು ಅಖಂಡ ಬಲಯುತವಾಗಿ ರಚಿಸುವ ಜವಾಬ್ದಾರಿ ನಗರದ ನಾಲ್ಕು ನಾಗರೀಕರಿಗಿಂಥಾ ಹಳ್ಳಿಯ ಹೆಚ್ಚು ರೈತರ ಮೇಲೇ ಹೆಚ್ಚಾಗಿದೆ. ಸ್ವತಂತ್ರ ಭರತಖಂಡದಲ್ಲಿ ಈ ಹಿಂದಿನಂತೆಯೇ ರೈತನು ದೇಶದ ಆಗುಹೋಗುಗಳನ್ನು ಲಕ್ಷ್ಯಿಸದೆ ಜೀವಿಸುವದಾದರೆ ದೇಶದಲ್ಲಿ ಎಷ್ಟೇ ನೆಹರೂ, ಪಟೇಲರಿದ್ದರೂ ದೇಶವು ಪ್ರಗತಿ ಪಡೆಯದು. ಅದರಲ್ಲೂ ಭಾರತದ ಸಂಸ್ಕೃತಿ, ನೀತಿ ನಡತೆಗಳು ಗ್ರಾಮಗಳಲ್ಲೇ ಉಳಿದಿರುವದಾಗಿದೆ. ಯುದ್ಧ, ಗಂಡಾಂತರಗಳು ನಡೆದರೂ, ರಾಜರು ಬಂದು ರಾಜರು ಹೋದರೂ ಗ್ರಾಮಜೀವನ ವ್ಯತ್ಯಾಸಗೊಳ್ಳದೆ ನಡೆದು ಬಂದದ್ದರಿಂದ ಹಿಂದೂದೇಶವು ತನ್ನ ಹಿಂದಿನ [illegible]ಗಳನ್ನು ಕಳಕೊಳ್ಳದೆ [illegible]ತ್ತಿದೆ. ಇಂಥಾ ಹಿರಿಮೆಯನ್ನು ಕಾಯ್ದ ಸಂಸ್ಥೆಗಳಲ್ಲಿ ಗ್ರಾಮಪಂಚಾಯಿತ ಸಭೆಗಳು ಮುಖ್ಯ.

ಬ್ರಿಟಿಷ್ ಕೇಂದ್ರೀಕೃತ ಆಡಳಿತದಲ್ಲಿ ನಿಸ್ತೇಜಗೊಂಡಿದ್ದ ಈ ಗ್ರಾಮ ಸಂಸ್ಥೆಗಳು ಸ್ವತಂತ್ರ ಭಾರತದಲ್ಲಿ ಪ್ರಾಶಸ್ತ್ಯಕ್ಕೆ ಬರುತ್ತಿವೆ. ಮದ್ರಾಸು, ಬೊಂಬಾಯಿ ಪ್ರಾಂತಗಳಲ್ಲಿ ಇವು ಸ್ಥಾಪಿಸಲ್ಪಡುತ್ತಿವೆ. ಈ ಗ್ರಾಮಪಂಚಾಯಿತ ಸಭೆಗಳು ಮಹಾತ್ಮಾ ಗಾಂಧಿಯವರ ಕಲ್ಪನೆಯ ಸಭೆಗಳಾಗದಿದ್ದರೂ ಹಳ್ಳಿಯ ರೈತನಿಗೆ ಜವಾಬ್ದಾರಿ ಬರುತ್ತಿದೆ. ಆ ಜವಾಬ್ದಾರಿಯನ್ನು ಅವನು ಎಷ್ಟು ದಕ್ಷತೆಯಿಂದ ನಿರ್ವಹಿಸುವನೋ ಅಷ್ಟೇ ಮಟ್ಟಿಗೆ ದೇಶದ ಶ್ರೇಯೋಭಿವೃದ್ಧಿಯಾಗುವದು. ಆದ್ದರಿಂದ ಹಳ್ಳಿಯ ರೈತನು ಎಚ್ಚರಗೊಳ್ಳಬೇಕು. ದೇಶಕ್ಕೆ ಆಹಾರ ಒದಗಿಸಿ ದೇಶವನ್ನು ಪೊರೆಯುವ ಆತನೇ ದೇಶದ ಆಡಳಿತ ಚಕ್ರವನ್ನು ಹಿಡಿಯಬೇಕಾಗಿ ಬರುವದು. ಆ ಜವಾಬ್ದಾರಿ ಬಂದಾಗ ಅದರ ಸದುಪಯೋಗಮಾಡಲಾರದೆ ಸ್ವಾರ್ಥ, ಸಂಕೀರ್ಣತೆಗಳಿಗೊಳಗಾಗಿ ವರ್ತಿಸಿದರೆ ಗ್ರಾಮದ ನಾಶ ಮಾತ್ರವಲ್ಲ; ದೇಶದ ನಾಶವೂ ಆಗುವದು. ದೇಶವೆಂಬ ಮಹಾ ಗೋಪುರಕ್ಕೆ ಗ್ರಾಮಗಳೇ ತಳಹದಿಗಳು. ಈ ಗ್ರಾಮ ಹಳಹದಿ ಕುಸಿದರೆ ದೇಶದ ಗೋಪುರ ಕೆಳಗುರುಳಲೇಬೇಕು. ಗ್ರಾಮದಲ್ಲಿ ವಿದ್ಯೆ ತಿಳಿದವರು ತಿಳಿಯದವರನ್ನು ಅಕ್ಷರಸ್ಥರನ್ನಾಗಿ ಮಾಡುವ ಏರ್ಪಾಡು ಮಾಡಬೇಕು. ದೇಶದ ವಿಚಾರವನ್ನು ತಿಳಿದವರು ಇತರರಿಗೂ ತಿಳಿಸಬೇಕು. ಗ್ರಾಮವು ಒಂದು ಕುಟುಂಬವೆಂಬ ಭಾವಿಸಿ ಎಲ್ಲರೂ ಜ್ಞಾನವಂತರೂ, ಉತ್ತಮ ಚರಿತರೂ ಆಗುವಂತೆ ಪ್ರಯತ್ನಿಸಬೇಕು. ಇಂಥಾ ಸಾಮೂಹಿಕ ಒಗ್ಗಟ್ಟು, ಸಮನ್ವಯ ಭಾವನೆ ಇರುವ ಗ್ರಾಮಗಳಲ್ಲಿ ಮಾತ್ರ ಗ್ರಾಮ ಪಂಚಾಯಿತ ಸಭೆಗಳು ಬದುಕುವವು. ಇವಿಲ್ಲದ ಗ್ರಾಮಗಳಲ್ಲಿ ಅವೇ ಕಾಳಗದ, ಪಕ್ಷ ರಾಜಕೀಯದ ಕಣಗಳಾಗಿ ಗ್ರಾಮಗಳ ಮತ್ತು ದೇಶದ ಅವನತಿಯಾಗುವದು.

ದಿವಂಗತ ಕೇಳಪಂಡ ಅಚ್ಚಯ್ಯನವರು.

ಮಡಿಕೇರಿ ಆಸ್ಪತ್ರೆಯಲ್ಲಿ ನಿನ್ನೆ ನಿಧನರಾದ ಶ್ರೀ. ಕೇಳಪಂಡ ಅಚ್ಚಯ್ಯನವರು ತಮ್ಮ ವೃದ್ಧಾಪ್ಯದಲ್ಲಿ ನಿವೃತ್ತ ಜೀವನವನ್ನು ನಡೆಸುತ್ತಿದ್ದುದರಿಂದ ಅವರ ಹೆಸರು ಇತ್ತಲಾಗಿ ಹೆಚ್ಚು ಕೇಳಿ ಬರುತ್ತಿರಲಿಲ್ಲ. ಆದರೆ ಅವರು ಮಧ್ಯ ವಯಸ್ಸಿನ ಕಾಲದಲ್ಲಿ ತಮ್ಮ ಕೈಲಾದ ಸಾರ್ವಜನಿಕ ಸೇವೆ ಮಾಡಿದ್ದಾರೆ. ಕೊಡಗಿನ ಸಮಸ್ಯೆಗಳನ್ನು ತಿಳಿದು ಕೊಂಡು ಅದರಂತೆ ಜನಜಾಗೃತಿಗಾಗಿ ದುಡಿದಿದ್ದಾರೆ. ಕೊಡಗು ಜಮೀನ್ದಾರರ ಸಂಘದ ಸಮ್ಮೇಳನದ ಅಧ್ಯಕ್ಷಸ್ಥಾನವನ್ನು ವಹಿಸಿ ಇವರು ಮಾಡಿದ ಬೋಧಪ್ರದ ಭಾಷಣವು ಇಂದಿಗೂ ಸರಿಹೋಗುವಂತಿದೆ. ಇವರು ಸಾರ್ವಜನಿಕ ಕೆಲಸಗಾರರು ಹೇಗೋ ಹಾಗೆಯೇ ತಮ್ಮ [illegible]ಸ್ಸೇ ಉಸಿರಿನ ವರೆಗೆ ಆದರ್ಶ [illegible]ರಾಗಿದ್ದರು. ಶಾಸ್ತ್ರೀಯ ದೃಷ್ಟಿಯ ವ್ಯವಸಾಯ; ತೋಟಗಾರಿಕೆ ಇವರ ಮೆಚ್ಚಿನ ವಿಷಯವಾಗಿತ್ತು. ಇವರ ಮನೆ ತೋಟ, ಭೂಮಿ, ಇವುಗಳನ್ನು ಇಟ್ಟುಕೊಂಡ ರೀತಿಯನ್ನು ಪ್ರತಿಯೊಬ್ಬನು ಅನುಸರಿಸಬೇಕು. ಇವರು ಉದಾರ ಹೃದಯದವರಾಗಿದ್ದು ಹಾತೂರು ಶಾಲೆ, ಪೊನ್ನಂಪೇಟೆ ಶಾರದಾಶ್ರಮ ಆಸ್ಪತ್ರೆ, ಮೈಸೂರು ರಾಮಕೃಷ್ಣಾಶ್ರಮ ಬೋರ್ಡಿಂಗ್ ಮನೆ ಮೊದಲಾದ ಹಲವು ಸಾರ್ವಜನಿಕ ಸಂಸ್ಥೆಗಳಿಗೆ ಉಚಿತ ಧನ ಸಹಾಯ ಮಾಡಿದ್ದಾರೆ. ಸಹಕಾರ ರಂಗದಲ್ಲೂ ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ. ಇವರು ಆದರ್ಶ ಪೂರ್ಣ ಜೀವನ ನಡೆಸಿ ತನ್ನ ೮೫ನೆ ವಯಸ್ಸಿನಲ್ಲಿ ಇಹವನ್ನು ತ್ಯಜಿಸಿದರು. ಇವರ ಆತ್ಮಕ್ಕೆ ಚಿರ ಶಾಂತಿಯು ದೊರೆಯಲಿ.

ವರ್ತಮಾನ.

ನಾಪೋಕ್ಲು ಹೈಸ್ಕೂಲಿನ ವಿದ್ಯಾರ್ಥಿಗಳ ಚರ್ಚಾ ಕೂಟದ ಆರಂಭ ಭಾಷಣವು ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ಅಧ್ಯಾಪಕರಾದ ಶ್ರೀ. ವಿ. ಎಸ್. ರಾಮಕೃಷ್ಣ ಇವರಿಂದ ತಾ ೫-೭-೪೯ನೇ ಮಂಗಳವಾರ ದಿನ ಜರಗಿತು. ಭಾಷಣಕಾರರು 'ರಾಷ್ಟ್ರ ಮತ್ತು ಶಿಕ್ಷಣ' ಎಂಬ ವಿಷಯದಲ್ಲಿ ಸ್ವಾರಸ್ಯವಾಗಿ ಮಾತನಾಡಿದರು. ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ. ಪಿ. ಎಂ. ಉತ್ತಪ್ಪನವರು ಅಗ್ರಾಸನವನ್ನು ವಹಿಸಿದ್ದರು.

ತಾರೀಕು ೧೬-೭-೪೯ರಿಂದ ಮೂರು ತಿಂಗಳವರೆಗೆ ಫ್ರೇಜರ್‌ಪೇಟೆಯಲ್ಲಿ ಸರ್ವೆ ತರಬೇತು ಪ್ರಾರಂಭವಾಗುವದೆಂದೂ ಸೇರಬಿಚ್ಛಿಸುವವರು ತಾ. ೧೫-೭-೪೯ರೊಳಗೆ ಅರ್ಜಿ ಬರಕೊಳ್ಳಬೇಕೆಂದೂ ಲೋವರ್ ಸೆಕೆಂಡರಿ ಪರೀಕ್ಷೆಗೆ ಕಡಿಮೆ ವಿದ್ಯಾಯೋಗ್ಯತೆ ಇರುವವರನ್ನು ತೆಗೆದುಕೊಳ್ಳಲಾಗುವದಿಲ್ಲವೆಂದೂ ಖಾಸಗಿ ವಿದ್ಯಾರ್ಥಿಗಳಿಗೆ ತಿಂಗಳಿಗೆ ರೂ. 5/-ಫೀಜು ಚಾರ್ಜು ಮಾಡಲಾಗುವದೆಂದೂ ಪ್ರಕಟಿಸಲಾಗಿದೆ.

ಕೊಡಗಿನ ಬೆಂಚು ಮೇಜಿಸ್ಟ್ರೇಟರುಗಳ ಎಸೋಸಿಯೇಶನೊಂದನ್ನು ಸ್ಥಾಪಿಸುವ ನಿಮಿತ್ತ ತಾ. ೧೪-೫-೪೮ರಲ್ಲಿ ನಿಶ್ಚಯಿಸಿದ್ದ ಮೀಟಿಂಗಿಗೆ ಕೇವಲ ೯ ಜನರು ಮಾತ್ರ ಹಾಜರಾಗಿದ್ದ ಕಾರಣ ಆ ಮೀಟಿಂಗನ್ನು ತಾ ೧೬-೭-೪೯ ನೇ ಶನಿವಾರ ಮಡಿಕೇರಿ ಜಿಲ್ಲಾ ಮೇಜಿಸ್ಟ್ರೇಟರ ಕೋರ್ಟಿನಲ್ಲಿ ಬೆಳಗ್ಗೆ ೧೧ ೩೦ ಗಂಟೆಗೆ ಏರ್ಪಡಿಸಿರುವರು. ಮೀಟಿಂಗಿಗೆ ಬರಲು ಅವಕಾಶವಾಗದವರು ತಮ್ಮಭಿಪ್ರಾಯವನ್ನು ಕನ್‌ವೀನರಾದ ಶ್ರೀ ಪುಚ್ಚಿಮಾಡ ಮೊದಯ್ಯನವರಿಗೆ ತಿಳಿಸಬೇಕೆಂದು ಅವರ ವಿನಂತಿ ಇದೆ.

ತಾ. ೨೬-೬-೪೯ರಲ್ಲಿ ಪಾರಾಣೆ ಹೈ. ಎಲಿಮೆಂಟರಿ ಶಾಲೆಯ ಸುತ್ತುಮುತ್ತಲಿನ ಆರು ಗ್ರಾಮಸ್ಥರ ಮೀಟಿಂಗು ಶ್ರೀ. ಕೋಚವಂಡ ಅಪ್ಪಯ್ಯನವರ ಅಧ್ಯಕ್ಷತೆಯಲ್ಲಿ ನಡೆದು ಶಾಲೆಯಲ್ಲಿ ಮಕ್ಕಳು ಹೆಚ್ಚಿ ಗ್ರಾಮಸ್ಥರೇ ಸ್ವಂತ ಉಪಾಧ್ಯಾಯರನ್ನು ನಾಲ್ಕು ವರ್ಷಗಳಿಂದ ಇಟ್ಟು ನಡೆಸುತ್ತಿದ್ದು ಇದು ಗ್ರಾಮಸ್ಥರಿಗೆ ದೊಡ್ಡ ಹೊರೆಯಾದ ಕಾರಣ ಇನ್ನಾದರೂ ಇದನ್ನು ಜಿಲ್ಲಾ ಬೋರ್ಡಿನವರು ನೀಗಬೇಕೆಂದೂ, ಮಕ್ಕಳಿಗೆ ಅವಶ್ಯವಿರುವ ಬೆಂಚು ಡೆಸ್ಕು ಮಾಡಿಸಿ ಕೊಡಬೇಕೆಂದೂ, ಕೊಡಗಿನ ಹೈಯರ್ ಎಲಿಮೆಂಟರಿ ಶಾಲೆಗಳನ್ನೆಲ್ಲಾ ಸರಕಾರವು ತನ್ನ ವಶಕ್ಕೆ ತೆಗೆದು ಕೊಳ್ಳಬೇಕೆಂದೂ ಕೇಳುವ ಠರಾವುಗಳಾದವು.

ತಾರೀಕು ೨೬-೬-೪೯ರಲ್ಲಿ ಕಲ್ಲ್ಯೋಡು ಎಚ್. ಈ ಶಾಲೆಯ ಸುತ್ತುಮುತ್ತಲಿನ ಐದು ಗ್ರಾಮಗಳ ಜನರ ಮೀಟಿಂಗೊಂದು ಶ್ರೀ ಕಂಬಿರಂಡ ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ನಡೆದು ಜಿಲ್ಲಾ ಬೋರ್ಡಿನ ಪ್ರಾಥಮಿಕ ಶಾಲೆಗಳಲ್ಲಿ ಕೊಡಗಿನ ರೈತರ ಮಕ್ಕಳೆಲ್ಲಾ ಓದುತ್ತಿರುವದರಿಂದಲೂ, ಈ ಮಕ್ಕಳಿಗೆ ಯೋಗ್ಯ ಅಧ್ಯಾಪಕರನ್ನು, ಇತರ ಸವಲತ್ತುಗಳನ್ನು ಒದಗಿಸಿಕೊಡಲು ಆರ್ಥಿಕ ಮುಗ್ಗಟ್ಟಿನಿಂದ ಬೋರ್ಡಿಗೆ ಅಸಾಧ್ಯವಾಗಿ ಈ ಶಾಲೆಗಳ ಪರಿಸ್ಥಿತಿಯು ಶೋಚನೀಯವಾಗಿರುವದರಿಂದ ಕೊಡಗಿನ ಪ್ರಾಥಮಿಕ ವಿದ್ಯಾಭ್ಯಾಸದ ಜವಾಬ್ದಾರಿಯನ್ನು ಸರಕಾರವೇ ಹೊತ್ತುಕೊಂಡು ಈ ಶಾಲೆಗಳನ್ನೆಲ್ಲಾ ವಹಿಸಿಕೊಳ್ಳಬೇಕೆಂಬ ಠರಾವು ಪಾಸಾಯಿತು.

ಮಲೆನಾಡು ಅಭಿವೃದ್ಧಿಯ ಸಂಬಂಧ ಡೆಲ್ಲಿಯಲ್ಲಿ ತಾ. ೧೦ ರಲ್ಲಿ ಕೂಡಲಿರುವ ಸಮ್ಮೇಳನಕ್ಕಾಗಿ ಕೊಡಗಿನ ಚೀಫ್ ಕಮಿಷನರು ತಾ. ೬-೭-೪೯ರಲ್ಲಿ ಡೆಲ್ಲಿಗೆ ಹೋಗಿರುವರು.

ಮದ್ರಾಸು ಸರಕಾರದ ಆರ್ಥಿಕ ಮಂತ್ರಿಗಳಾದ ಶ್ರೀ. ಬಿ ಗೋಪಾಲರೆಡ್ಡಿಯವರು ತಾ. ೯-೭-೪೯ರಲ್ಲಿ ಮಡಿಕೇರಿಗೆ ಬಂದು ಮರುದಿನ ವಾಪಾಸು ಹೋಗುವರು. ಅವರಿಗೆ ಒಂದು ಸಾರ್ವಜನಿಕ ಸ್ವಾಗತವನ್ನು ಕೊಡಗು ಕೌನ್ಸಿಲ್ ಹಾಲ್‌ನಲ್ಲಿ ಶನಿವಾರ ಮಧ್ಯಾಹ್ನ ೧ ಗಂಟೆಗೆ ಕೊಡಲು ಏರ್ಪಡಿಸಲಾಗಿದೆ.

ತಾ ೩೦-೬-೪೯ರಲ್ಲಿ ದೇವಣಗೇರಿ ಗ್ರಾಮದ ಶ್ರೀ. ಪುಗ್ಗೆರ ಪೂವಯ್ಯನವರೂ ತಾ ೭-೭-೪೯ರಲ್ಲಿ ಕೊಳತ್ತಡ ಬೈಗೋಡು ಗ್ರಾಮದ ಶ್ರೀ. ಕೇಳಪಂಡ ಅಚ್ಚಪ್ಪನವರು ತಮ್ಮ ೮೫ನೇ ವಯಸ್ಸಿನಲ್ಲಿಯೂ ಸ್ವರ್ಗಸ್ಥರಾದರು.

ಜಪಾನಿನಲ್ಲಿ ನಿರುದ್ಯೋಗಿಗಳ ಸಂಖ್ಯೆ ಒಂದೇ ಸಮನೆ ಏರುವುದು. ಸಿವಿಲ್ ಸರ್ವೀಸು ಮತ್ತು ಕೈಗಾರಿಕಾ ಸಿಬ್ಬಂದಿಯಲ್ಲಿ ಕಡಿತ ತಂದುದರ ಪರಿಣಾಮವಾಗಿ ನಿರುದ್ಯೋಗಿಗಳ ಸಂಖ್ಯೆ ೬೦೦೦,೦೦೦ ದಿಂದ ೧,೮೦೦,೦೦೦ಕ್ಕೆ ಏರಿರುವುದು.

ಹೊಂಗ್ ಕೊಂಗ್ ಗಡಿಯಿಂದ ಬರೀ ಹತ್ತು ಮೈಲು ದೂರದಲ್ಲಿ ಕಮ್ಯೂನಿಸ್ಟರಿಗೂ ಚೀನದ ರಾಷ್ಟ್ರೀಯ ಸೈನಿಕರಿಗೂ ಹೋರಾಟ ನಡೆಯುತ್ತಿದೆ.

ದಕ್ಷಿಣ ಆಫ್ರಿಕದಲ್ಲಿ ದಿನದಿಂದ ದಿನಕ್ಕೆ ಅಭಿವೃದ್ಧಿಗೊಳ್ಳುತ್ತಿರುವ ಮಾಲನರ ಫೆಸಿಸ್ಟ್‌ಶಾಹಿಯನ್ನು ವಿರೋಧಿಸಲು ತಕ್ಕ ಉಪಾಯಗಳನ್ನು ಕೈಕೊಳ್ಳಬೇಕೆಂದು ಆಫ್ರಿಕದ ಹಿಂದೀಯರು, ಆಫ್ರಿಕನರು, ವರ್ಣ ಜನರು ಮತ್ತು ಯುರೋಪಿಯನರು ಒಂದೇ ವೇದಿಕೆಯ ಮೇಲೆ ನಿಂತು ನಿರ್ಧಾರ ಕೈಕೊಂಡಿದ್ದಾರೆ.

ಅಮೇರಿಕೆಯ ಜವಾಬ್ದಾರಿ!

ಜಗತ್ತಿನಲ್ಲಿ ಇಂದು ಅಮೇರಿಕ 'ಸರ್ವ ಸಂಪತ್ ಸಮೃದ್ಧ' ಸಮರ್ಥ ರಾಷ್ಟ್ರವೆಂದು ತಿಳಿಯಲ್ಪಡುತ್ತದೆ. ಅಮೇರಿಕ ಬ್ರಿಟನುಗಳ ಮೈತ್ರಿಯೂ ಅಷ್ಟೇ ಸಾಮರ್ಥ್ಯದಿಂದ ಗಾಢವಾದದ್ದಾಗಿದೆ. ಸದ್ಯದ ಅಂತರರಾಷ್ಟ್ರೀಯ ರಂಗದಲ್ಲಿ ಅಮೇರಿಕ ಎಲ್ಲಿಯೋ ಅಲ್ಲಿ ಬ್ರಿಟನ್ನು ಎಂದು ಎಲ್ಲ ರಾಜಕಾರಣಿಗಳೂ ಕಣ್ಣು ಮುಚ್ಚಿ ನಂಬಿಬಿಡುತ್ತಾರೆ. ಅಷ್ಟು ಸಹಜ, ಅಷ್ಟು ಗಾಢ, ಅಷ್ಟು ಏಕರೂಪ ಮೈತ್ರತ್ವವು ಈ ಎರಡು ರಾಷ್ಟ್ರಗಳಲ್ಲಿ ಬೇರು ಬಿಟ್ಟಿದೆ. ಬ್ರಿಟನು ಅಮೇರಿಕಗಳ ಸಂಬಂಧವು ಸನಾತನೀ ಸತಿಪತಿಗಳ ಸಂಬಂಧದಂತಿದೆ ಎಂದರೂ ಅತಿಶಯೋಕ್ತಿಯಾಗಲಾರದು ಅಥವಾ ಅಂತರರಾಷ್ಟ್ರೀಯ ರಾಜಕಾರಣ ಪ್ರಪಂಚದ 'ಅರ್ಧನಾರೀ ನಟೇಶ್ವರ'ವೆಂದೂ ಬೇಕಾದರೆ ಬ್ರಿಟನು ಅಮೇರಿಕಗಳ ಸಂಬಂಧವನ್ನು ಹೇಳಬಹುದು.

'ಬ್ರಿಟನ್ನಿನ ಸಾಯುಧ ಶಕ್ತಿ ಬಹಳ ದುರ್ಬಲವಾಗುತ್ತ ನಡೆದಿರುತ್ತದೆ. ಸಮುದ್ರ ಸೈನ್ಯ ಶಕ್ತಿಯು ಸರಿಯಾಗಿದ್ದಂತೆ ನಿಸಿದರೂ ಭೂಬಲ, ಬಾನ್ ಬಲಗಳು ತೀರ ದುರ್ಬಲವಿದೆ. ಅದರಲ್ಲಿಯೂ ಬಾನ್ ಬಲವಂತೂ ಬಹಳ ಹಳೆಯ ತರಗತಿಯದಾಗಿರುತ್ತದೆ. ಬ್ರಿಟನಿನಲ್ಲಿಯ ಆಡಳಿತದ ಒಲವು, ಹಾಗೆಯೇ ಜನಮನದ ಒಲವೂ ಕೂಡ ಶಕ್ತಿ ಸಂಗ್ರಹದಕ್ಕಿಂತಲೂ ಸೌಕರ್ಯ ಸಂಗ್ರಹದ ಕಡೆಗೇ ಹೆಚ್ಚು ಹೆಚ್ಚು ಒಲಿಯುತ್ತ ನಡೆದಿದೆ. ದೇಶದಲ್ಲೆಲ್ಲ ಬಂದೂಕ ಸಂಗ್ರಹದಕ್ಕಿಂತಲೂ ಬೆಣ್ಣೆ ಸಂಗ್ರಹದ ಕಡೆಗೇ ಬಯಕೆ ಹೆಚ್ಚುತ್ತಲಿದೆ. ಆಡಳಿತದ ಹಣವು ಸೈನ್ಯ ಶಕ್ತಿ ಸಂಗ್ರಹದಕ್ಕಿಂತಾ ನಾಗರೀಕ ಸೌಕರ್ಯ ಸಂಗ್ರಹದ ಬಗ್ಗೆಯೇ ವೆಚ್ಚವಾಗುವವರಲ್ಲಿ ನೋಡಲಾಗುತ್ತದೆ. ಆದರೂ ಅಮೇರಿಕೆಯು ತನ್ನ ಭುಜ ಬಲಕ್ಕೆ ಸ್ನೇಹ ಬಲವನ್ನು ದೊರಕಿಸಲೆಂದು ಬ್ರಿಟನ್ನಿನ ಬಲ ಬೆಳೆಸಲು ತುಂಬಾ ವೆಚ್ಚ ಮಾಡುತಿತ್ತು, ಮಾಡುತ್ತಲಿದೆ, ಮಾಡುವುದು.

ಆರ್ಥಿಕವಾಗಿ ಬ್ರಿಟನಿನ ಆಡಳಿತವು ತೊಂದರೆಯಲ್ಲಿದೆ. ಆದ್ದರಿಂದ ಅದು ತನ್ನ ಪುನರುದ್ಧಾರದ ಕಡೆಗೂ ಜನ ಜೀವನ ಮಟ್ಟವನ್ನು ಸುಧಾರಿಸುವುದರ ಕಡೆಗೂ ಸ್ವಾಭಾವಿಕವಾಗಿಯೇ ಹೆಚ್ಚು ಲಕ್ಷ್ಯವನ್ನು ಪೂರೈಸುತ್ತದೆ. ಹೀಗಾಗಿ 'ಅಜ್ಜ ನೂತದ್ದೆಲ್ಲಾ ಮೊಮ್ಮಗನ ಉಡುದಾರಕ್ಕೆ' ಎಂಬಂತೆ, ಗೃಹ ಯೋಜನೆ, ಪುಕ್ಕಟೆ ಔಷಧೋಪಚಾರ, ಆಹಾರ ಪೂರೈಕೆ ಮೊದಲಾದವುಗಳಿಗೇ ಹಣವೆಲ್ಲ ವೆಚ್ಚವಾಗಿ ಹೋಗಿ ಸಾಯುಧ ಶಕ್ತಿಯನ್ನು ಬೆಳೆಸಲಿಕ್ಕೆ ಸೈನ್ಯ ಸಂಗ್ರಹವನ್ನು ಪೋಷಿಸಲಿಕ್ಕೆ ಬ್ರಿಟನ್ನಿನ ಬಳಿ ಹಣದ ಕೊರತೆಯುಂಟಾಗುತ್ತಿದೆ.

ಕಳೆದ ವರ್ಷಕ್ಕಿಂತಲೂ ಈ ವರ್ಷ ತುಲನಾತ್ಮಕವಾಗಿ ಬ್ರಿಟನ್ನಿನ ಸಂರಕ್ಷಣೆಯ ವೆಚ್ಚ ಹೆಚ್ಚಿದಂತೆ ಕಂಡು ಬಂದರೂ ಆ ಬಗ್ಗೆ ಅಮೇರಿಕದಲ್ಲಿ ಆಲೋಚಿಸಿದ್ದಕ್ಕಿಂತಲೂ ಬಹಳ ಕಡಿಮೆ ಎಂದು ನಿಶ್ಚಿತವಾದವಾಗಿ ಹೇಳಬಹುದು. ಸೈನ್ಯೋತ್ಕರ್ಷಕ್ಕಾಗಿ ಬ್ರಿಟನು ಬರಿ ಮುನ್ನೂರು ಕೋಟಿ ಡಾಲರುಗಳಷ್ಟು ವೆಚ್ಚ ಮಾಡುತ್ತವೆ. ಇದು ರಾಷ್ಟ್ರೀಯ ವಾರ್ಷಿಕ ಉತ್ಪನ್ನದ ನೂರರಲ್ಲಿ ಏಳು ಪಾಲಿಗಿಂತಾ ತುಸು ಹೆಚ್ಚಾಗುತ್ತದೆ. ಅಮೇರಿಕವು ತನ್ನ ಸೈನ್ಯೋತ್ಕರ್ಷಕ್ಕಾಗಿ ಹದಿನೈದು ನೂರು ಕೋಟಿ ಡಾಲರುಗಳನ್ನು ವೆಚ್ಚ ಮಾಡುತ್ತದೆ ಇದಲ್ಲದೆ ಕಡಬಕ್ತೆಯ ಒಪ್ಪಂದದನ್ವಯವಾಗಿ ಅಟ್ಲಾಂಟಿಕ್ ಒಪ್ಪಂದಕ್ಕೆ ಅಂಕಿತವಿರುವ ದೇಶಗಳಿಗೆ ಸೈನ್ಯೋತ್ಕರ್ಷಕ್ಕಾಗಿ ಕೊಡುವ ಹಣವು ಬೇರೆಯೇ ಆಗಿರುತ್ತದೆ.

ಮೊದಲು ಬ್ರಿಟನಿಂದ ಹೊರಲಾಗುತ್ತಿದ್ದ ಮೆಡಿಟರೇನಿಯನ್, ಗ್ರೀಸ್ ತುರ್ಕಿಸ್ತಾನ ಸೈನದ ವೆಚ್ಚವನ್ನೂ ಈಗ ಅಮೇರಿಕೆಯೇ ನೋಡಿಕೊಳ್ಳುತ್ತಲಿದೆ ಮತ್ತು ಬ್ರಿಟಿಶ ಸೇನೆಗಳು, ಪಾಲಿಸ್ತಾನ, ಹಿಂದುಸ್ಥಾನ, ಪಾಕಿಸ್ಥಾನಗಳಿಂದಲೂ ಹಿಂತೆಗೆದುಕೊಳ್ಳಲ್ಪಟ್ಟಿರುತ್ತವೆ ಹೀಗಾಗಿ ಇಂದು ಬ್ರಿಟಿಷ್ ಸೈನ್ಯದ ವೆಚ್ಚವು ಶಾಂತಿ ಕಾಲದ ಸೈನ್ಯ ವೆಚ್ಚಕ್ಕಿಂತಲೂ ಎಷ್ಟೋ ಕಡಿಮೆಯಾದಾಗಿರುತ್ತದೆ. ಹೀಗಿದ್ದರೂ, ಬ್ರಿಟನು ಆಕ್ರಮಣಗಾರರ ವಿರುದ್ಧವಾಗಿ ಆಧುನಿಕ ಬಾಂಬರ ವಿಮಾನಗಳನ್ನೂ ಸಾಯುಧ ಸೈನ್ಯ ಪಡೆಗಳನ್ನೂ ಕಳುಹಿಸಿ ಎದುರಿಸುವ ಪರಿಸ್ಥಿತಿಯಲ್ಲಿ ಇಲ್ಲ

ಎಂದೂ ಇಲ್ಲದೆ ಈಗೇ ಏಕೆ ಬ್ರಿಟನದ ಪರಿಸ್ಥಿತಿ ಹೀಗಾಗುತ್ತಿದೆ ಎಂಬುದಕ್ಕೆ ಕಾರಣವಿಲ್ಲದೆ ಇಲ್ಲ ಸದ್ಯಕ್ಕೆ ಅಧಿಕಾರ ಪಡೆದಿರುವ ಕಾರ್ಮಿಕರ ಸರಕಾರವು, ಸೈನ್ಯ ಪರಾಮರಿಕೆಗಿಂತ, ಪ್ರಜರ ಪರಾಮರಿಕೆಗೇ ಪ್ರಾಧಾನ್ಯತೆ ನೀಡಿರುತ್ತದೆ ಬ್ರಿಟನದಲ್ಲಿ ನಾಲ್ಕು ಲಕ್ಷ ಸಂಖ್ಯೆಯ ದಂಡಿಗೆ ಒಟ್ಟು ಸಂರಕ್ಷಣಾ ವೆಚ್ಚದ ಒಂದು ಮೂರಾಂಶದಷ್ಟು ವೆಚ್ಚ ತಗಲುತ್ತದೆ ಆದರೆ ಪ್ರಸಂಗ ಬಂದಾಗ ಸಮುದ್ರದಾಚೆ ಕಳುಹಿಸಬೇಕೆಂದರೆ, ಚತುರರಾದ ಸೈನ್ಯಾಧಿಕಾರಿಗಳು, ಸಾಕಷ್ಟು ಸಾಧನ ಸಾಮಗ್ರಿಗಳು ಒಂದೋ ಎರಡೋ ದಂಡಿನ ಪಡೆಗಳನ್ನು ಮಾತ್ರ ಬ್ರಿಟನವು ಕಳುಹಿಸುತ್ತದೆ. ಇದರ ಕಾರಣವೆಂದರೆ, ಭಾರೀ ವೆಚ್ಚದಿಂದ ಹದಿನೆಂಟು ತಿಂಗಳುಗಳವರೆಗೆ ಸೈನ್ಯ ಶಿಕ್ಷಣ ಪಡೆದವರೆಲ್ಲ ಬಹುಶಃ ಮರಳಿ ನಾಗರಿಕ ಜೀವನಕ್ಕೆ ತಿರುಗುತ್ತಿರುವುದೇ ಆಗಿದೆ

ಒಟ್ಟಿನಲ್ಲಿ ಯುದ್ಧ ಸಿದ್ಧತೆಗಾಗಿ ಬ್ರಿಟನವು ಇನ್ನೂ ಬಹಳ ಸನ್ನಾಹ ಮಾಡಬೇಕಾಗಿದೆ. ಅಮೇರಿಕೆಯು ಇನ್ನೂ ಬ್ರಿಟನನ್ನು ನಂಬಿಗೆಯ ಮತ್ತು ಯೋಗ್ಯತೆಯ ಮಿತ್ರರಾಷ್ಟ್ರವೆಂದೇ ಬಗೆದಿದೆ ಆದರೆ ಬ್ರಿಟನದ ಕಾರ್ಮಿಕರ ಸರಕಾರವು, ಯೋಗಕ್ಷೇಮ ಆರ್ಥಿಕ ಪುನರುದ್ಧಾರಕ್ಕೇ, ಸಂರಕ್ಷಣಕಿಂತ ಮೊದಲ ಸ್ಥಾನವನ್ನು ಕೊಡುತ್ತಲಿದೆ.'

ಬ್ರಿಟನವು ಬರಿ ನಾಗರಿಕ ಯೋಗಕ್ಷೇಮ, ಅವರ ಸುಖ ಸೌಕರ್ಯ, ಅವರ ವಿಶ್ರಾಮಾರಾಮಗಳ ಕಡೆಗೇ ಇದು ಹೆಚ್ಚು ಲಕ್ಷ್ಯಗೊಡುತ್ತ ಯುರೋಪ ಖಂಡದ ಗಂಡಾಂತರದ (ಬಹುಶರವಾಗಿ ರಶಿಯೊಂದೇ ಇರಬಹುದು) ಕಾಲದಲ್ಲಿಯೂ ತನ್ನ ಸ್ವಸ್ವ ರಕ್ಷಣೆಯನ್ನು ವಿಶೇಷತಃ ನೆಲ ಮತ್ತು ಬಾನು ಸೈನ್ಯ ಶಕ್ತಿಯನ್ನು ಅತ್ಯಾಧುನಿಕ ಸಾಧನ ಸಾಮಗ್ರಿಗಳಿಂದ ಸಜ್ಜುಗೊಳಿಸಿಕೊಳ್ಳುವುದರ ಕಡೆಗೆ ಹೇಗೆ ಉದಾಸೀನ ವೃತ್ತಿಯಿಂದಿದೆ ಎಂಬುದನ್ನು ಸ್ಪಷ್ಟವಾಗಿ ಅಮೇರಿಕೆ ಹೇಳುತ್ತಿದೆ

ಏನೇ ಇದ್ದರೂ ಅಮೇರಿಕೆ ಬ್ರಿಟನ್ನುಗಳದು 'ಅರ್ಧ ನಾರೀ ನಟೇಶ್ವರ' ಸಂಬಂಧ! ಸನಾತನೀ ಸತಿಪತಿ ಸಂಬಂಧ!! ವಿಜ್ಞೇಗದ ವಿಚಾರವನ್ನೆ ಎತ್ತುವಂತಿಲ್ಲ ಹೀಗಾಗಿ ಅಮೇರಿಕೆಗೆ ಬ್ರಿಟನವು ಕೊರಳೊಳಗಿನ ಬಾರವಂತೆ ಭಾಸವಾಗುತ್ತಿರಬಹುದು. ಏನಾದರೇನ? ಜಾಗತಿಕ ರಾಜಕೀಯ ರಂಗದಲ್ಲಿ ಅಮೇರಿಕೆ ಬ್ರಿಟನ್ನುಗಳು 'ಅರ್ಧನಾರೀ ನಟೇಶ್ವರ' ಪಾತ್ರವನ್ನು ಪೂರ್ಣ ಮಾಡದೇ ಗತ್ಯಂತರವಿಲ್ಲ. 'ಜೈಹಿಂದ'

ಬಾಕಿ.

ಕೊಡ್ಲಿಪೇಟೆ ಲೈನು ಬಸ್ಸುಗಳ ದರ

ತಾರೀಕು ೪-೭-೪೯ ರಿಂದ ಕೊಡ್ಲಿಪೇಟೆ ಲೈನು ಬಸ್ಸುಗಳ ದರವನ್ನು ರೂಪಾಯಿಗೆ ನಾಲ್ಕಾಣೆಯಂತೆ ಸಿ. ಪಿ ಸಿ ಕಂಪೆನಿಯವರು ಹೆಚ್ಚಿಸಿರುವರು. ಯುದ್ಧಾರಂಭವಿಂದಾಗಿ ಪ್ರತಿ ಸಾಮಾನುಗಳ ಬೆಲೆಯು ಒಂದಕ್ಕೆ ಎರಡರ ಮೇಲ್ಪಟ್ಟು ಹತ್ತರ ವರೆಗೆ ಜಾಸ್ತಿಯಾಗಿದ್ದರೂ ೧೯೩೭ನೇ ಇಸವಿಯಿಂದ ಇದು ವರೆವಿಗೂ ಒಂದೇ ದರದಲ್ಲಿ ಬಸ್ಸು ಲೈನುಗಳನ್ನು ನಡೆಸುತ್ತಾ ಇದ್ದುದಕ್ಕಾಗಿ ಅಭಿನಂದನೆ. ಆದರೆ ಯುದ್ಧ ನಿಂತು ಅನೇಕ ವರ್ಷಗಳು ಕಳೆದು ಪ್ರತೀ ಸಾಮಾನುಗಳ ಬೆಲೆಯು ಸಾಮಾನ್ಯ ಸ್ಥಿತಿಗೆ [illegible] ಇಳಿದು ಪೆಟ್ರೋಲಿನ ಅಭಾವವು ಕಡಿಮೆಯಾಗುತ್ತಾ ಬಂದಿರುವ ಈ ಸಮಯದಲ್ಲಿ ಕೊಡ್ಲಿಪೇಟೆ ಲೈನು ಬಸ್ಸುಗಳ ದರವು ಹೆಚ್ಚಾಗಿರುವ ಸಂಗತಿಯನ್ನು ತಿಳಿಸಲು ವಿಷಾದವಾಗುತ್ತದೆ.

ಸೋಮವಾರಪೇಟೆಯಿಂದ ಬೇಳೂರಿಗಿರುವ ದೂರ ೪ ಮೈಲು ೩ ಫರ್ಲಾಂಗುಗಳು. ಬೀಟಿಕಟ್ಟೆಗೆ ಇರುವ ದೂರ ೪ ಮೈಲು ೬ ಫರ್ಲಾಂಗುಗಳು. ಇವೆರಡು ಸ್ಥಳಗಳಿಗೂ ಸೋಮವಾರಪೇಟೆಯಿಂದ ಇಟ್ಟಿರುವ ದರವು ೦-೫-೦. ಶನಿವಾರಸಂತೆಯಿಂದ ಕೊಡ್ಲಿಪೇಟೆಗೆ ಇರುವ ದೂರ ೭ ಮೈಲುಗಳು. ಶನಿವಾರಸಂತೆಯಿಂದ ಕೊಡ್ಲಿಪೇಟೆಗೆ ಇಟ್ಟಿರುವ ದರವು ೦-೫-೦. ಇದು ಬಹಳ ಅನ್ಯಾಯವಾಗಿ ಕಂಡು ಬರುತ್ತದೆ ಶನಿವಾರಸಂತೆಯಿಂದ ಕೊಡ್ಲಿಪೇಟೆಗೆ ಮೈಲಿಗೆ ಒಂದೇ ೦-೦-೯ ಕಾಸಿನಂತೆಯೂ, ಸೋಮವಾರಪೇಟೆಯಿಂದ ಬೀಟಿಕಟ್ಟೆಗೆ ಮೈಲಿಗೆ ೦-೧-೧ ಕಾಸಿನಂತೆಯೂ, ಮತ್ತು ಬೇಳೂರಿಗೆ ಮೈಲಿಗೆ ೦-೧-೩ ಕಾಸಿನಂತೆಯೂ ಪ್ರಯಾಣಿಕರಿಂದ ವಸೂಲ್ಮಾಡಲಾಗುತ್ತಿದೆ. ಇದು ಖಂಡಿತವಾಗಿಯೂ ನ್ಯಾಯ ಸಮ್ಮತವಲ್ಲ. ಬೇಳೂರಿಗೂ ಮತ್ತು ಬೀಟಿಕಟ್ಟೆಗೂ ಜಾಸ್ತಿ ದರವನ್ನು ಇಟ್ಟಿರುವುದನ್ನು ನೋಡಿದರೆ ಬೇಳೂರು ಮತ್ತು ಬೀಟಿಕಟ್ಟೆಯ ಜನರು ತಮ್ಮ ಸರ್ವೀಸುಗಳಲ್ಲಿ ತಿರುಗಬಾರದೆಂಬ ಅಭಿಪ್ರಾಯ ವೇನಾದರೂ ಅವರಿಗಿದೆಯೋ? ಮೇಲ್ಕಂಡ ವಿವರವನ್ನು ಅಜಮಾಯಿಸಿ ಇದು ನಿಜವೆಂದಾದರೆ ಸೋಮವಾರಪೇಟೆಯಿಂದ ೪ ಮೈಲು ೩ ಫರ್ಲಾಂಗುಗಳ ದೂರವಿರುವ ಬೇಳೂರಿಗೆ ೦-೪-೦ ಆಣೆಯನ್ನೂ ೪ ಮೈಲು ೬ ಫರ್ಲಾಂಗುಗಳು ದೂರವಿರುವ ಬೀಟಿಕಟ್ಟೆಗೆ ೦-೪-೦ ಆಣೆಯನ್ನೂ, ೬ ಮೈಲು ದೂರವಿರುವ ಗೌಡಳ್ಳಿಗೆ ೦-೫ [illegible], ೭ ಮೈಲು ೩ ಫರ್ಲಾಂಗುಗಳ ದೂರವಿರುವ ಮಲ್ಲೇಶ್ವರಕ್ಕೆ ೦-೬-೦ ಯನ್ನೂ, ೯ ಮೈಲು ೪ ಫರ್ಲಾಂಗುಗಳ ದೂರವಿರುವ ಎಳನೀರುಗುಂಡಿಗೆ ೦-೭-೦ಯನ್ನೂ, ೧೦ ಮೈಲುಗಳ ದೂರವಿರುವ ಗೋಪಾಲಪುರಕ್ಕೆ ೦-೮-೦ ಆಣೆ ದರವನ್ನು [illegible] ಸಾರ್ವಜನಿಕರ ಹವಾಲನ್ನು [illegible] ಬೇಕೆಂದು ಕೇಳುವ,

ಸಾರ್ವಜನಿಕರು.

ಶಾಲಾ ಪಠ್ಯ ಪುಸ್ತಕಗಳು.

ಶಾಲಾ ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕಗಳನ್ನು ನಿರ್ಧರಿಸಲಿರುವ 'ಟೆಕ್ಸ್ಟ್ ಬುಕ್' ಸಮಿತಿಯವರು ಯಾವ ತಳಹದಿ ಮತ್ತು ದೃಷ್ಟಿಯಿಂದ ಪುಸ್ತಕಗಳನ್ನು ನಿರ್ಧರಿಸುವರೋ ತಿಳಿಯದು. ಆದರೆ ಸಕಾಲದಲ್ಲಿ ನಿರ್ಣಯ ಮಾಡಿ ಪಠ್ಯ ಪುಸ್ತಕಗಳನ್ನು ಗೊತ್ತು ಮಾಡದೆ ಅನೇಕರು ಪುಸ್ತಕಗಳನ್ನು ಕ್ರಯಕ್ಕೆ ಪಡೆದ ನಂತರ ಬದಲಾವಣೆ ನಡೆಸುವುದರಿಂದ [illegible] ಪೋಷಕರಿಗೆ ವಿಪರೀತ ಹಾನಿಯಾಗುತ್ತಿದೆ. ಈ ಮೊದಲು ಪ್ರತಿ ತರಗತಿ [illegible] ಪುಸ್ತಕಗಳನ್ನು [illegible] ಬಿಡದು 'ನಮ್ಮನ್ನಾಳುವ [illegible]' ಎಂದು ಕೊಡಗಿನ ಮಕ್ಕಳು ಓದುವಂತಾಯಿತು. ಈ ವರ್ಷ [illegible] ಮೋಹ ಕಂಡು ಬರುತ್ತಿದೆ. [illegible] ಬ್ರಿಟಿಷ್ ಕಂಪೆನಿಯ ಮೇಲೆ [illegible] ತಮ್ಮ ಪ್ರಭಾವ ಬೀರಿದ್ದಾರೆ. [illegible] ವರ್ಷ ಅನೇಕ ಮಕ್ಕಳು [illegible] ಇತ್ಯಾದಿ ಎಲ್ಲಾ ಪುಸ್ತಕಗಳ ಬದಲಾವಣೆಯಾಗಿದೆ. ಇದರಿಂದ [illegible] ಯಾವುದಕ್ಕೆ ನಷ್ಟವಾಗಿದೆ. [illegible] ಬುಕ್ ಸಮಿತಿಯವರು [illegible] ಬದಲಾಯಿಸುವಪದ್ಧತಿ [illegible] ದೆ ಈ ರೀತಿ ಮಾಡಿಗೆ ಎಡೆಕೊಡುವರೇಕೆ? ನೇರವಾಗಿ ಕೊಡಗಿನ ಟೆಕ್ಸ್ಟ್ ಬುಕ್ ಸಮಿತಿಯವರು [illegible] ದ 'ಕಾಪಿ' ಮಾಡದೆ ತಮ್ಮದೇ [illegible] ಪುಸ್ತಕಗಳ ಪ್ರಕಟಣೆಯ ಆಲೋಚನೆಯನ್ನು ಮಾಡಲಾರರೇಕೆ? ಇದಕ್ಕೆ [illegible] ಪುಸ್ತಕಗಳನ್ನು [illegible] ಎಲ್ಲರಿಗೂ [illegible] ಗದೇ? ಬಹುಶಃ ಇಷ್ಟು [illegible] ಆಲೋಚಿಸುವವರು ಬಹು [illegible]

'ಪ್ರೋಷಕ'

ಗಾಂಧಿ ಯೋಜನೆಗೆ ಆದರ್ಶಪ್ರಾಂತ ಕೊಡಗು.

ಜೂನ್ ತಾರೀಕು ೨೦ರ 'ಇಂಡಿಯನ್ ರಿಪಬ್ಲಿಕ್' ಪತ್ರಿಕೆಯಲ್ಲಿ ಪ್ರಕಟವಾದ ವಿಚಾರ

'ಗಾಂಧೀಜಿಯವರ ಧ್ಯೇಯವಾದ ಗ್ರಾಮ ಪಂಚಾಯಿತಗಳ ಮೂಲಕ ವಿಕೇಂದ್ರೀಕೃತ ಆಡಳಿತ ಮಾದರಿಯನ್ನು ತಂದು ಕೊಡಗಿನ ಮಾತ್ರವಲ್ಲ; ಹಿಂದೂದೇಶದ ಪ್ರಗತಿಗೂ, ಶಾಶ್ವತ ಶಾಂತಿಗೂ ಪ್ರಯತ್ನಿಸಲು ಕೊಡಗು ಆದರ್ಶವಾದ ಪ್ರಾಂತ' ಎಂದು ಕೊಡಗನ್ನು ಪ್ರತ್ಯೇಕ ರಾಜಕೀಯ ಘಟಕವಾಗಿಟ್ಟು ಜವಾಬ್ದಾರಿ ಸರಕಾರ ಕೊಡಬೇಕೆಂದು ರಾಜ್ಯಘಟನಾ ಸಮಿತಿಯ ಮುಂದೆ ಕೊಡಗಿನ ಜನರ ಅಪೀಲನು ಇಡಲು ಡೆಲ್ಲಿಗೆ ಬಂದ 'ಕೊಡಗು' ಪತ್ರಿಕೆಯ ಸಂಪಾದಕರೂ, ಶಾಸನ ಸಭೆಯ ಸದಸ್ಯರೂ ಆದ ಶ್ರೀ ಪಿ. ಐ. ಬೆಳ್ಯಪ್ಪನವರು ಹೇಳಿದರು.

ಗ್ಲೋಬ್ ವಾರ್ತಾ ಕೇಂದ್ರಕ್ಕೆ ಕೊಟ್ಟ ಒಂದು ಭೇಟಿಯಲ್ಲಿ ಶ್ರೀ ಬೆಳ್ಯಪ್ಪನವರು ಈ ಹೇಳಿಕೆ ಕೊಡುತ್ತಾ, 'ಕೊಡಗು ಪ್ರತ್ಯೇಕವುಳಿಯುವದರಿಂದ ದಕ್ಷಿಣ ಹಿಂದೂಸ್ಥಾನದಲ್ಲಿಯ ಕೆಲವು ಪ್ರಾಮುಖ್ಯ ಗಂಡಾಂತರಗಳನ್ನು ತಡೆಯಲು ಸಹಾಯಕವಾಗುವದು. ವಿದ್ಯೆ, ವೈದ್ಯಕೀಯ, ಆರ್ಥಿಕ ಸ್ಥಿತಿ, ಸಹಕಾರ ಚಳವಳಿ, ಜನ ಜಾಗೃತಿ, ಆಡಳಿತ ದಕ್ಷತೆಯಲ್ಲಿ ಅದು ನೆರೆಯ ಪ್ರಾಂತಗಳಿಗಿಂಥಾ ತುಲನಾತ್ಮಕವಾಗಿ ಮುಂದಿದೆ. ಕೋಮುವಾರು ಭಾವನೆ ಇಲ್ಲದಿರುವಿಕೆ, ಆರ್ಥಿಕ ಸ್ವಸಂಪೂರ್ಣತೆ ಇವುಗಳೇ ಈ ಪ್ರಗತಿಗೆ ಕಾರಣಗಳಾಗಿವೆ'

ಕೊಡಗಿನ ಸಂಸ್ಕೃತಿ ವೈಶಿಷ್ಟ್ಯ ಮತ್ತು ಪರಂಪರೆಗಳ ವಿಚಾರ ಹೇಳುತ್ತಾ ಶ್ರೀ ಬೆಳ್ಯಪ್ಪನವರು, 'ನಮ್ಮ ಆರ್ಥಿಕ, ಸಾಮಾಜಿಕ ಜೀವನವು ಹಿಂದೂದೇಶದ ಅನೇಕ ಭಾಗಗಳಿಗಿಂಥಾ ಆಧುನಿಕವೂ, ಉತ್ತಮವೂ ಆಗಿದೆ. ಇದೆಲ್ಲದಕ್ಕಿಂಥಾ ಹಿಂದೀ ಸೈನ್ಯಕ್ಕೆ ಪ್ರಥಮ ಭಾರತೀಯ ದಂಡನಾಯಕರಾದ ಜನರಲ್ ಕಾರ್ಯಪ್ಪನವರನ್ನು ಕೊಡಗು ತನ್ನ ಪರಿಮಿತಿಗೆ ಮೀರಿ ಕೊಡುಗೆ ತನ್ನ ಪುತ್ರರನ್ನು ಬಹು ಸಂಖ್ಯೆಯಲ್ಲಿ ಕೊಟ್ಟಿದೆ' ಎಂದರು.

ಕೊಡಗಿನ ಈಗಿನ ಅಸ್ತಿತ್ವವನ್ನು ಬದಲಾಯಿಸುವ ಯಾವದೇ ನಿರ್ಣಯವಾದರೆ ಕೊಡಗಿನ ಜನರ ಅಭಿಪ್ರಾಯವನ್ನು ತೆಗೆಯದೆ ಮಾಡಕೂಡದೆಂದು ರಾಜ್ಯಘಟನಾ ಸಮಿತಿಯನ್ನು ಕೇಳುವದಾಗಿ ಶ್ರೀ ಬೆಳ್ಯಪ್ಪನವರು ಹೇಳಿದರು. ಶ್ರೀ ಬೆಳ್ಯಪ್ಪನವರು ಗವರ್ನರ್ ಜನರಲ್‌ರನ್ನೂ, ಮುಖ್ಯ ಮಂತ್ರಿಯವರನ್ನೂ ಕಂಡು ಮಾತಾಡುವ ಆಶೆಯಲ್ಲಿದ್ದಾರೆ

ಪಶ್ಚಿಮ ಘಟ್ಟದಲ್ಲಿ ಮೈಸೂರು ಸಂಸ್ಥಾನ, ಮಲಬಾರು ಮತ್ತು ದಕ್ಷಿಣ ಕನ್ನಡಗಳಿಂದ ಆವೃತವಾದ ಕೊಡಗಿನಲ್ಲಿ ಸುಮಾರು ೧,೮೦,೦೦೦ ಜನವಸತಿ ಇದ್ದು ಅದು ಪ್ರಪಂಚದ [illegible] ಭಾಗಿನ ಕಾಫಿ ಬೆಳೆಯ [illegible] ದಗಿನ ಕಿತ್ತಳೆ ಉತ್ಪತ್ತಿ [illegible] ಲಕ್ಷ [illegible] ಲಕ್ಷವೂ ಆಗಿ [illegible]

ದೆ. ಅದು ಚೀಫ್ ಕಮಿಷನರ ಪ್ರಾಂತವಾಗಿದ್ದು ಅದಕ್ಕೊಂದು ಶಾಸನ ಸಭೆ ಇದೆ.

ನಮಗೆ ಬರತಕ್ಕ ಸಾಲ.

ಕಳೆದ ಯುದ್ಧದಲ್ಲಿ ಹಿಂದೂಸ್ಥಾನದಿಂದ ಅನೇಕ ವಸ್ತುಗಳನ್ನು ಬ್ರಿಟನು ಪಡೆದು ಅವುಗಳನ್ನು ಉಪಯೋಗಿಸಿರೊಂಡ ಬಾಪ್ತು ಹಿಂದೂದೇಶಕ್ಕೆ ಸುಮಾರು ೧೫೦೦ ಕೋಟಿ ರೂಪಾಯಿಗಳಷ್ಟು ಕೊಡಬೇಕಾಯಿತು. ಹಿಂದೂಸ್ಥಾನದ ವಿಭಾಗವಾದನಂತರ ಈ ಹಣದಲ್ಲಿ ೧೨೦೦ ಕೋಟಿಯು ಹಿಂದೂಸ್ಥಾನಕ್ಕೂ ಉಳಿದುದು ಪಾಕಿಸ್ಥಾನಕ್ಕೂ ಎಂದು ವಿಭಾಗವಾಯಿತು. ಇಷ್ಟು ಹಣವನ್ನು ಬ್ರಿಟನು ಭಾರತಕ್ಕೆ ಕೊಡತಕ್ಕದಿದ್ದು ಅವರು ಅದನ್ನು ಕೊಡುವ ವಿಚಾರದಲ್ಲಿ ಸ್ವಲ್ಪ ಉದಾಸೀನ ಮನೋವೃತ್ತಿ ತಾಳಿದುದರಲ್ಲಿ ಆಶ್ಚರ್ಯವಿಲ್ಲ ಯಾವಾಗಲೂ ಸಾಲ ಕೊಂಡುಕೊಳ್ಳುವಾಗ ಇದ್ದ ಹುರುಪು ಅದರ ಮರುಪಾವತಿ ಕಾಲದಲ್ಲಿರುವದಿಲ್ಲ. ಆದ್ದರಿಂದಲೇ ಚರ್ಚಿಲ್ಲರಂದವರು, 'ಹಿಂದೂಸ್ಥಾನದ ಹಿತದೃಷ್ಟಿಯೂ ಆ ಯುದ್ಧದಲ್ಲಿತ್ತು. ಈ ರೀತಿ ಎಲ್ಲರ ಹಿತಕ್ಕಾಗಿ ಖರ್ಚಾದ ಹಣವನ್ನು ಹಿಂದೂದೇಶವು ಕೇಳುವದು ಯೋಗ್ಯವಲ್ಲ' ಎಂದು ಪ್ರಚಾರಮಾಡಿದರು. ಆದರೆ ಈ ವಿಚಾರಕ್ಕೆ ಹೆಚ್ಚು ಬೆಲೆ ದೊರೆಯಲಿಲ್ಲ ಆದರೂ ಈ ಹಣವನ್ನು ನಗದು ಕೊಡುವದು ಸಾಧ್ಯವಿಲ್ಲವೆಂದು ಬ್ರಿಟನು ಹೇಳಿತು. ಹಿಂದೂಸ್ಥಾನವು ಈ ಹಣದ ಬದಲು ತನಗೆ ಬೇಕಾದ ಸಾಮಾನುಗಳನ್ನು ಬ್ರಿಟನಿನಿಂದ ತರಿಸಿಕೊಳ್ಳಬೇಕೆಂದು ನಿರ್ಧಾರವಾಯಿತು. ಇದರಿಂದ ಬ್ರಿಟಿಷರು ಲಾಭ ಸಂಪಾದಿಸಿದರೆಂದು ಬೇರೆ ಹೇಳಬೇಕಿಲ್ಲ

ಈ ಪ್ರಕಾರ ಪ್ರತಿ ವರ್ಷ ೧೨೦ ಕೋಟಿ ರೂಪಾಯಿಗಳಂತೆ ಮುಂದಿನ ಮೂರು ವರ್ಷಗಳ ವರೆಗೆ ಸರಕುಗಳನ್ನು ಬ್ರಿಟನಿನಿಂದ ಪಡೆಯುವ ಒಪ್ಪಂದವಾಯಿತು. ೧೯೪೮-೪೯ ರಲ್ಲಿ ೧೨೦ ಕೋಟಿಯ ಸಾಮಾನು ತರಿಸಿದ್ದಲ್ಲದೆ ಹೆಚ್ಚಿಗೆ ೨೦ ಲಕ್ಷ ರೂಪಾಯಿಗಳ ಸಾಮಾನು ಬಂದಿದೆ. ಇಷ್ಟಾದರೆ ಸಾಲದು ಬ್ರಿಟನಿಗೆ ಬೇರೆ ಅಮೇರಿಕೆಯಂಥಾ ದೇಶಗಳೊಡನೆ ವ್ಯವಹಾರವಿದೆ ನಮ್ಮ ಹಣವು ಬ್ರಿಟನಿನಲ್ಲಿ ಸಿಕ್ಕಿಬಿದ್ದಿರುವ ಕಾರಣ ಅಮೇರಿಕಾದಿಂದ ನೇರವಾಗಿ ನಮಗೆ ಬೇಕಾದ ಸಾಮಾನುಗಳನ್ನು ಪಡೆಯಲಾಗುವದಿಲ್ಲ. ಇದನ್ನು ಬ್ರಿಟನು ಪಡೆದು ನಮಗೆ ಕೊಡಬೇಕಾಗಿದೆ. ೧೯೪೮-೪೯ ರಲ್ಲಿ ೨೨½ ಕೋಟಿ ಮೌಲ್ಯದ ಸರಕನ್ನು ಈ ರೀತಿ ಬ್ರಿಟನು ಪಡೆದುಕೊಟ್ಟಿದೆ. ಈ ವ್ಯಾಪಾರದಲ್ಲಿ ಬ್ರಿಟನಿಗೆ ಲಾಭವೇನೂ ಕಡಿಮೆಯಿಲ್ಲ. ಆದರೆ ಸ್ವತಂತ್ರ ಹಿಂದೂಸ್ಥಾನದ [illegible] ಬೇಕಿದೆ. ಅದಕ್ಕೆ ಯಂತ್ರ, [illegible] ಬೇಕು. ಬ್ರಿಟನಿನಲ್ಲಿ [illegible] ದ್ದರೂ ತನ್ನ ಬೇಡಿಕೆಗಳನ್ನು [illegible] ಬ್ರಿಟನು ಸಾಕಷ್ಟು [illegible]

ಕಾರಣ ಅಂತರರಾಷ್ಟ್ರೀಯ ನಿಧಿಯಿಂದ ಹಿಂದೂದೇಶವು ೧೫ ಕೋಟಿ' ಸಾಲ ಮಾಡಿದೆ ಇನ್ನೂ ಹೆಚ್ಚಿಗೆ ಸಾಲಮಾಡಬೇಕಾದ ಪ್ರಸಂಗವಿದೆ."

ಭಾರತಕ್ಕೆ ಬೇಕಾದುದು ಯಾಂತ್ರಿಕ ಸಾಮಾನು, ಆಹಾರ ಧಾನ್ಯಗಳು. ಆದರೆ ಬ್ರಿಟನು ಲಿಫ್‌ಸ್ಟಿಕ್, ಪೌಡರುಗಳನ್ನೂ ಕೊಳ್ಳಬೇಕೆಂದು ಒತ್ತಾಯಮಾಡುತ್ತಿದೆ! ಈ ಆರಾಮಿನ ವಸ್ತುಗಳು ಪ್ರಾಮುಖ್ಯವಲ್ಲ ಈ ವರ್ಷ ಬ್ರಿಟನಿಂದ ಎಷ್ಟು ಹಣ ಬರಬೇಕು, ಯಾವ ಸಾಮಾನುಗಳು ಎಂಬ ಬಗ್ಗೆ ಮಾತುಕಥೆ ನಡೆಸಲು ನಮ್ಮ ಆರ್ಥಿಕ ಮಂತ್ರಿ ಮತ್ತಾಯಿಯವರು ಲಂಡನಿಗೆ ಹೋಗಿದ್ದಾರೆ ಇದರ ತೀರ್ಮಾನ ಹೇಗಾಗುವದೋ ನೋಡಬೇಕು.

ಸರ್ದಾರ್ ಪಟೇಲ್

ದಿನದಿಂದ ದಿನಕ್ಕೆ ಅಧೋಗತಿಗೆ ಇಳಿಯುವದೆಂದು ಹೇಳಲ್ಪಡುವ ಕಾಂಗ್ರೆಸ್ ಸಂಸ್ಥೆಯನ್ನು ಶುದ್ಧೀಕರಿಸಲೋಸುಗ ಸರ್ದಾರ್ ಪಟೇಲರವರು ತಮ್ಮ ಕೇಂದ್ರ ಮಂತ್ರಿಮಂಡಲ ಸದಸ್ಯತ್ವಕ್ಕೆ ರಾಜಿನಾಮೆ ಇತ್ತು ತಮ್ಮ ಚೈತನ್ಯ ಸಮಯಗಳನ್ನು ಆ ಕಾರ್ಯಕ್ಕಾಗಿ ವ್ಯಯಿಸುವರೆಂದು ನಂಬಲರ್ಹವಾದ ಡೆಲ್ಲಿಯ ಕಾಂಗ್ರೆಸ್ ಕೇಂದ್ರಗಳಿಂದ ತಿಳಿದುಬರುತ್ತದೆ.

ಕಲ್ಕತ್ತಾ, ಮುಂಬಾಯಿಗಳೆರಡು ಕಡೆಗಳಲ್ಲಿ ನಡೆದ ಉಪ ಚುನಾವಣೆಗಳಲ್ಲಿ ಕಾಂಗ್ರೆಸ್ ಹುರಿಯಾಳುಗಳು ಸೋಲನ್ನನುಭವಿಸಿದುದರ ಕುರಿತು ಸರ್ದಾರರು ಗಂಭೀರ ವಿಚಾರಮಗ್ನರಾಗಿರುವರಂತೆ. ಪ್ರಾಂತಗಳಲ್ಲಿನ ಸರಕಾರಿ ವರ್ಗಗಳಲ್ಲಿ ದಿನವಹಿ ಎಂಬಂತೆ ಹೆಚ್ಚಾಗುತ್ತಿರುವ ಲಂಚ, ವಂಚನೆ, ಪಕ್ಷಪಾತ ದ್ರೋಹಗಳ ಕುರಿತು ಅವರು ತೀವ್ರ ಮನೋವೇದನೆಯನ್ನು ನಿರೂಪಿಸಿರುವರಂತೆ. ಕಾಂಗ್ರೆಸಿನೊಳಗಿಂದ ಎಲ್ಲಾ ಅನಾವಶ್ಯಕ ವ್ಯಕ್ತಿ ಶಕ್ತಿಗಳನ್ನು ತೊಡೆದು ಹಾಕಬೇಕೆಂದು ಕಾಂಗ್ರೆಸ್ ವರಿಷ್ಠರಿಗೂ ತುಂಬಾ ಆಸಕ್ತಿಯಿದೆ. ಪಶ್ಚಿಮ ಬಂಗಾಲದಲ್ಲಿ ಇತ್ತೀಚೆಗುಂಟಾದ ಕಾಂಗ್ರೆಸಿಗರ ಸೋಲನಂತೂ ಪಟೇಲರು ತಮ್ಮ ವಯಕ್ತಿಕ ಅಪಯಶಸ್ಸೆಂದ ಭಾವಿಸಿಕೊಂಡಂತೆ ತಿಳಿಯುತ್ತದೆ.

ಕೇಂದ್ರದಿಂದ ಸರ್ದಾರ್ ಪಟೇಲರು ರಾಜಿನಾಮೆಯಿತ್ತು ಹೊರಬಂದರೆ ಪ್ರಾಂತೀಕ ರಾಜಕೀಯದಲ್ಲಿ ತುಂಬಾ ಬದಲಾವಣೆಗಳಾಗಬಹುದೆಂದು ನಿರೀಕ್ಷಿಸಲಾಗಿದೆ. ಅವರ ಸ್ಥಾನದಲ್ಲಿ ಪ್ರಾಂತಗಳಿಂದ ಯಾರಾದರೊಬ್ಬ ಪ್ರಭಾವಿತ ಧುರೀಣರನ್ನು ತೆಗೆದುಕೊಳ್ಳಬಹುದೆಂದೂ ಕಲ್ಪಿಸಲಾಗಿದೆ.

ಎರಡು ಪ್ರಕೃತಿ ವೈಚಿತ್ರ್ಯಗಳು.

[illegible] ಪ್ರಾಂತ್ಯದ ಬಂಧಾರಾ ಎಂ [illegible] ರಲ್ಲಿ ೧೭ ವರ್ಷದ ತರುಣಿಯೊಬ್ಬಳು ಕರುವಿನಂತೆ ತೋರುವ ಒಂದು ಶಿಶುವನ್ನು ಹೆತ್ತಳೆಂದೂ ಅದು ಕೆಲವೇ ಗಂಟೆ ಜೀವಿಸಿಕೊಂಡಿತ್ತೆಂದೂ ತಿಳಿದು ಬರುತ್ತದೆ.

ಮತ್ತೆ ರಾಜಕೋಟೆ ಬಳಿಯ ಒಂದೂರಲ್ಲಿ ಓರ್ವ ರಜಪೂತ ಸ್ತ್ರೀಯು ಇದೇ ವಾರದಲ್ಲಿ ಎರಡು ತಲೆ ನಾಲ್ಕು ಕೈಗಳು ಎರಡು ಕಾಲುಗಳಿರುವ ಒಂದು ಶಿಶುವನ್ನು ಹೆತ್ತಿರುವಳೆಂದೂ ವರ್ತಮಾನ ಬಂದಿರುತ್ತದೆ.

ಕಾಸೀಮ್ ರಿಜ್ವಿಯ ವಿಚಾರಣೆ.

ಕುಖ್ಯಾತ ರಜಾಕಾರಣ ಮುಖಂಡನೂ ನಿಜಾಮರ ಧ್ವಜವನ್ನು ಡೆಲ್ಲಿಯ ಕೆಂಪು ಕೋಟೆಯ ಮೇಲೇರಿಸುವೆನೆಂದಿದ್ದವನೂ ಆದ ಕಾಸೀಂ ರಿಜ್ವಿಯ ವಿಚಾರಣೆಯು ಸದ್ಯದಲ್ಲೇ ಪ್ರಾರಂಭವಾಗಲಿದೆಯೆಂದು ಮಿಲಿಟರಿ ಗವರ್ನರ್ ಚೌಧರಿಯವರು ತಿಳಿಸಿದರು. ಪತ್ರಿಕಾ ಸಂಪಾದಕ ಶೋಬುಲ್ಲಾ ಖಾನರನ್ನು ಕೊಲೆ ಮಾಡಿದ ಮತ್ತು ಬೇರೊಂದು ಜಿಲ್ಲೆಯಲ್ಲಿ ೯ ಜನರನ್ನು ಕೊಂದ ಎರಡು ಆರೋಪಗಳ ಸಂಬಂಧ ಈ ವಿಚಾರಣೆಯು ನಡೆಯುತ್ತಿದೆಯೆಂದು ಹೇಳಲಾಗಿದೆ.

ಲಾಯಕಾಲಿಯ ಕುರಿತು ಇನ್ನೂ ವಿವರಗಳು ಸಂಗ್ರಹವಾಗಬೇಕಿರುವದರಿಂದ ಅವನ ವಿಚಾರಣೆಗೆ ತುಸು ವಿಳಂಬವಾಗಬಹುದೆಂದೂ ತಿಳಿದುಬಂದಿದೆ.

ವಾರ್ತೆ.

ಭಾರತ ಘಟನೆಯ ದ್ವಿತೀಯ ಪರಣದ ಚರ್ಚೆಯು ಆಗಸ್ಟು ೩೦ರೊಳಗೆ ಮುಗಿಯಬಹುದಾಗಿ ತಾನು ನಿರೀಕ್ಷಿಸುತ್ತೇನೆಂದು ಘಟನಾ ಸಮಿತಿಯ ಅಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು ತಿಳಿಸುತ್ತಾರೆ.

ಭಾರತದ ಹಳ್ಳಿಗಳಲ್ಲಿ ಜನಪದ ಕಲೆಯ ಅಭಿವೃದ್ಧಿಯನ್ನು ತರಲೋಸುಗ ಯೋಗ್ಯ ಕಲಾಕಾರರಿಗೆ ರೂ. ೨೫೦೦ ಮೌಲ್ಯದ ೮ ವೇತನಗಳನ್ನು ೧೯೪೯-೫೦ನೇ ವರ್ಷಕ್ಕೆ ಭಾರತ ಸರಕಾರವು ಮಂಜೂರು ಮಾಡಿರುವುದು.

ಟೋಕಿಯೋ ಮೃಗಾಲಯಕ್ಕೆ ಭಾರತದಿಂದ ಒಂದು ಆನೆಯನ್ನು ಕಳಿಸಿಕೊಡಬೇಕೆಂಬ ಜಪಾನ್ ಮಕ್ಕಳ ಕೋರಿಕೆಯನ್ನು ಮನ್ನಿಸಿ ಭಾರತ ಪ್ರಧಾನ ಪಂಡಿತ ನೆಹರುರವರು ಅಲ್ಲಿಗೊಂದು ಆನೆಯನ್ನು ಕಳಿಸಿಕೊಟ್ಟಿರುವರು.

ಮಹಾತ್ಮಾ ಗಾಂಧೀಜಿಯವರ ಭಾಷಣಗಳ ಇಲೆಕ್ಟ್ರಿಕ್ ರಿಕಾರ್ಡುಗಳು ಸುಮಾರು ೧೫೦ ಅಖಿಲ ಭಾರತ ರೇಡಿಯೋದವರ ವಶದಲ್ಲಿವೆ. ಅವುಗಳನ್ನು ಕಾಚಿನ ರಿಕಾರ್ಡುಗಳಲ್ಲಿ ಸಂಗ್ರಹಿಸಿಡಲು ವಿದೇಶಗಳಿಗೆ ಕಳಿಸುವ ಯೋಜನೆ ನಡೆದಿದೆ

ಆಗ್ನೇಯ ಏಷ್ಯದಲ್ಲಿ ಕಮ್ಯೂನಿಸಮ್ ವಿರುದ್ಧ ಹೋರಾಟ ಹೂಡುವ ಬಗ್ಗೆ ಎಂಗ್ಲೋ-ಅಮೇರಿಕನ್ ಒಡಂಬಡಿಕೆಯೊಂದು ಪೂರ್ಣತೆಗೊಳ್ಳುತ್ತಿರುವುದು.

ಗಾಂಧಿ ವಿಚಾರದೋಹನೆ.

ಭರತಖಂಡದ ಗುರಿ.

ಲೇಖಕ:—
ಮಹಾತ್ಮಾಗಾಂಧಿ.

ಅನುವಾದಕ.—
ಬಿ. ಡಿ. ಗಣಪತಿ.

ಭರತಖಂಡದ ಗುರಿಯು ಇತರ ರಾಷ್ಟ್ರಗಳ ಗುರಿಗಿಂಥಾ ಭಿನ್ನವಾಗಿದೆಯೆಂದು ನನಗನಿಸುತ್ತದೆ. ಜಗತ್ತಿನ ಧಾರ್ಮಿಕ ಮುಂದಾಳ್ತನ ವಹಿಸಲು ಭರತ ಖಂಡವು ಯೋಗ್ಯವಿದೆ. ಈ ದೇಶವು ತನ್ನಿಚ್ಛೆಯಿಂದ ಹೊಂದಿದ ಶುದ್ಧೀಕರಣಕ್ಕೆ ಜಗತ್ತಿನಲ್ಲಿ ಎಣೆ ಇರಲಾರದು. ಹಿಂದೂದೇಶಕ್ಕೆ ಉಕ್ಕಿನ ಆಯುಧಗಳ ಅವಶ್ಯಕತೆ ಹೆಚ್ಚಿಲ್ಲ. ಅದು ದೈವಿಕ ಆಯುಧಗಳಿಂದ ಯುದ್ಧ ಮಾಡಿದೆ, ಮುಂದೆಯೂ ಹಾಗೆ ಮಾಡಲು ಶಕ್ಯವಿದೆ. ಇತರ ರಾಷ್ಟ್ರಗಳು ಪಶುಬಲದ ಆರಾಧಕರು. ಯುರೋಪಿನಲ್ಲಿ ನಡೆಯುತ್ತಿರುವ ಭಯಂಕರ ಯುದ್ಧವು ಇದರ ಸತ್ಯಾಂಶಕ್ಕೆ ಉದಾಹರಣೆ. ಹಿಂದೂದೇಶವು ಎಲ್ಲವನ್ನೂ ಆತ್ಮ ಬಲದಿಂದ ಗೆಲ್ಲಬಲ್ಲದು. ಆತ್ಮ ಬಲದ ಮುಂದೆ ಪಶು ಬಲವು ಲೆಕ್ಕಕ್ಕಿಲ್ಲವೆಂಬುದಕ್ಕೆ ಚರಿತ್ರೆಯು ಅನೇಕ ಉದಾಹರಣೆಗಳನ್ನು ಕೊಡಬಲ್ಲದು. ಕವಿಗಳು ಈ ಬಗ್ಗೆ ಹಾಡಿದ್ದಾರೆ. ಋಷಿಗಳು ಈ ಬಗ್ಗೆಯ ತಮ್ಮ ಅನುಭವಗಳನ್ನು ವಿವರಿಸಿದ್ದಾರೆ.

ಹಿಂದೂದೇಶದಲ್ಲಿರುವ ಪ್ರತಿಯೊಂದೂ ನನ್ನನ್ನು ಆಕರ್ಷಿಸುತ್ತದೆ ಮನುಷ್ಯನಿಗೆ ತನ್ನ ಉಚ್ಛತಮ ಜೀವನದಲ್ಲಿ ಏನೆಲ್ಲ ಬೇಕೋ ಅದೆಲ್ಲವೂ ಇಲ್ಲಿದೆ. ಹಿಂದೂದೇಶವು ಭೋಗ ಭೂಮಿಯ ಬದಲು ಅವಶ್ಯಕವಾಗಿ ಕರ್ಮ ಭೂಮಿ.

ಯುರೋಪಿನ ಪದತಳದಲ್ಲಿ ಸಾಷ್ಟಾಂಗ ಬಿದ್ದಿರುವ ಭರತಖಂಡವು ಮಾನವಗಣಕ್ಕೆ ಯಾವ ಭರವಸೆ, ಆಶೆಯನ್ನೂ ಕೊಡಲಾರದು. ಸ್ವತಂತ್ರವಾದ ಮತ್ತು ಜಾಗ್ರತವಾದ ಭರತಖಂಡವು ಪಾಶವೀಬಲದ ಹಿಡಿತದಲ್ಲಿ ನರಳುತ್ತಿರುವ ಜಗತ್ತಿಗೆ ಶಾಂತಿಯ ಸಂದೇಶವನ್ನು ಕೊಡಬಲ್ಲುದು.

ಹಿಂದೀಯರು ಹೇಡಿಗಳ ಜನಾಂಗವಲ್ಲವೆಂಬುದು ಹಿಂದೂದೇಶದ ಸೈನಿಕ ಜಾತಿಯ ಹಿಂದೂ, ಮುಸ್ಲಿಂ, ಸಿಖ್ ಯಾ ಘೂರ್ಕಾರ ವ್ಯಕ್ತಿಗತ ಶೌರ್ಯದಿಂದ ಪ್ರದರ್ಶಿಸಲ್ಪಟ್ಟಿದೆ. ಯುದ್ಧ ಮಾಡುವ ವ್ಯಕ್ತಿಯು ಬಾರತೀಯರಿಗೆ ಹೊರಗಿನಿಂದ ಬಂದುದು. ಜಗತ್ತಿನ ಜೀವನದಲ್ಲಿ ಭರತಖಂಡವು ಇದಕ್ಕಿಂಥಾ ಹೆಚ್ಚಿನ ಮತ್ತು ಯೋಗ್ಯ ಪಾತ್ರವನ್ನು ವಹಿಸಲಿದೆಯೆಂಬುದು ನನ್ನ ಕಲ್ಪನೆಯಾಗಿದೆ ಅದರ ಭವಿಷ್ಯವು ಎಂಥಾದ್ದೆಂಬುದನ್ನು ಕಾಲವಾಹಿನಿಯೇ ಹೊರಗೆಡಹಬೇಕು. ಮಾನವಗಣಕ್ಕಾಗಿ ಸಾಯಲಿಚ್ಛಿಸುವ ಮೊದಲು ಹಿಂದೂದೇಶವು ತಾನು ಬದುಕಲು ಕಲಿಯಬೇಕು.

ಜಗತ್ತಿನ ಉದ್ಧಾರಕ್ಕಾಗಿ ತನ್ನಿಚ್ಛೆಯ ಮತ್ತು ಪರಿಶುದ್ಧ ತ್ಯಾಗವನ್ನು ತಾನು ಮಾಡಬೇಕಾದ ಹಿಂದೂ ದೇಶವು ಸ್ವತಂತ್ರ ಮತ್ತು ಶಕ್ತಿಯುತ ರಾಷ್ಟ್ರವಾಗಬೇಕೆಂಬುದು ನನ್ನಿಚ್ಛೆ. ವ್ಯಕ್ತಿಯು ಪರಿಶುದ್ಧನಾಗಿ ಕುಟುಂಬಕ್ಕಾಗಿ ತ್ಯಾಗ ಮಾಡುತ್ತಾನೆ. ಕುಟುಂಬವು ಗ್ರಾಮಕ್ಕಾಗಿ, ಗ್ರಾಮವು ಜಿಲ್ಲೆಗಾಗಿ, ಜಿಲ್ಲೆಯು ಪ್ರಾಂತಕ್ಕಾಗಿ, ಪ್ರಾಂತವು ರಾಷ್ಟ್ರಕ್ಕಾಗಿ, ರಾಷ್ಟ್ರವು ಎಲ್ಲರಿಗಾಗಿ. ಹಿಂದೂದೇಶದ ಸ್ವಾತಂತ್ರ್ಯವು ಯುದ್ಧ ಮತ್ತು ಶಾಂತಿಯ ಬಗ್ಗೆ ಜಗತ್ತಿನ ದೃಷ್ಟಿಯಲ್ಲಿ ಕ್ರಾಂತಿಕಾರಕ ಬದಲಾವಣೆ ಮಾಡಬೇಕು. ಅದರ ನಪುಂಸಕತೆಯಾದರೆ ಅದರ ನಪುಂಸಕತ್ವ ಇಡೀ ಜಗತ್ತನ್ನೇ ಆವರಿಸುವದು.

ಹಿಂದೂದೇಶದ ಮಾರ್ಗವು ಸೋತು ಸುಣ್ಣಾಗಿ ದಿಕ್ಕು ಕಾಣದಿರುವ ಪಶ್ಚಿಮದ ರಕ್ತಪಾತದ ಮಾರ್ಗವಲ್ಲ. ಸರಳ ಮತ್ತು ದೈವಿಕ ಜೀವನದಿಂದ ಬರುವ ರಕ್ತರಹಿತ ಶಾಂತಿಯ ಮಾರ್ಗ. ಹಿಂದೂದೇಶವು ತನ್ನ ಆತ್ಮವನ್ನು ಕಳಕೊಂಡು ಜೀವಿಸಲಾರದು. ಆದ್ದರಿಂದ ಅಸಹಾಯಕವಾಗಿ, ಸೋಮಾರಿತನದಿಂದ 'ಪಶ್ಚಿಮದ ರಭಸದಿಂದ ದೇಶವನ್ನು ನಾನು ತಪ್ಪಿಸಿಕೊಳ್ಳಲಾರೆ' ಎಂದು ಅದು ಹೇಳಬಾರದು. ತನ್ನ ಮತ್ತು ಜಗತ್ತಿನ ಹಿತಕ್ಕಾಗಿ ಅದನ್ನು ಎದುರಿಸಲು ಅದರ ಶಕ್ತಿಯನ್ನು ತಳೆಯಬೇಕು.

ಪಾಶ್ಚಿಮಾತ್ಯ ಸಂಸ್ಕೃತಿಯಿಂದ ಲಾಭದಾಯಕವಾಗಿ ನಾವು ಕಲಿತುಕೊಳ್ಳಬೇಕಾದದು ಬಹಳವಿದೆ ಎಂದು ಒಪ್ಪುವಷ್ಟು ದೈನ್ಯತೆ ನನ್ನಲ್ಲಿದೆ. ಜ್ಞಾನವು ಯಾವದೇ ಒಂದು ಭೂಖಂಡದ ಇಲ್ಲವೇ ಜಾತಿಯ ಹಕ್ಕಲ್ಲ. ಏಷ್ಯಾದವರು ಕೇವಲ ಪಾಶ್ಚಿಮಾತ್ಯರನ್ನು ಹದತಪ್ಪಿ ಕುರುಡು ರೀತಿಯಲ್ಲಿ ಅನುಕರಿಸಲು ಯೋಗ್ಯರೆಂಬ ನಂಬಿಕೆಯನ್ನು ವಿರೋಧಿಸುವದೇ ನನ್ನ ಪಾಶ್ಚಿಮಾತ್ಯ ನಾಗರೀಕತೆಯ ವಿರೋಧದ ಅರ್ಥ. ಹಿಂದೂದೇಶಕ್ಕೆ ಕಷ್ಟದ ಶಿಖರವನ್ನು ಶಾಂತಿಯಿಂದ, ಧೃತಿಯಿಂದ ದಾಟುವ ಸ್ಥೈರ್ಯವಿದ್ದು, ತನ್ನ ಸಂಸ್ಕೃತಿಯ ಮೇಲಿನ ಅನ್ಯಾಯವಾದ ಉಪಟಳವನ್ನು ಎದುರಿಸುವ ಶಕ್ತಿ ಇದ್ದರೆ ಹಿಂದೂದೇಶದ ಸಂಸ್ಕೃತಿಯಲ್ಲಿ ನಿಸ್ಸಂಶಯವಾಗಿ ನ್ಯೂನತೆಗಳಿದ್ದರೂ ಕಾಲದ ಧಾಳಿಯನ್ನು ಎದುರಿಸಿ ಉಳಿದು ಬಂದಿರುವ ಅದು ಜಗತ್ತಿನ ಶಾಂತಿಗೂ, ಜಗತ್ತಿನ ನಿಷ್ಟಲ ಪ್ರಗತಿಗೂ ಶಾಶ್ವತವಾದ ತನ್ನ ಪಾಲಿನ ಸೇವೆಯನ್ನು ಮಾಡಬಲ್ಲುದು.

ನನ್ನ ಗುರಿಯು ಭಾರತದ ಸ್ವಾತಂತ್ರ್ಯಕ್ಕಿಂಥಾ ಬಹು ಹೆಚ್ಚಿನದು. ಭರತಖಂಡದ ಬಿಡುಗಡೆಯಿಂದ ಇಡೀ ಜಗತ್ತಿನ ಅಬಲ ಜನಾಂಗಗಳನ್ನು ಪಾಶ್ಚಿಮಾತ್ಯ ಶೋಷಣೆಯ ಭಯಂಕರ ಹಿಡಿತದಿಂದ ಬಿಡಿಸಲು ಯತ್ನಿಸುವೆನು.

ಹಿಂದೂದೇಶವು ಯಾವದೇ ರಾಷ್ಟ್ರದ ಮೇಲೆ ಯುದ್ಧ ಮಾಡಿರುವದಿಲ್ಲ. ಅದು ಅವ್ಯವಸ್ಥಿತವಾದ ಇಲ್ಲವೇ ಅರ್ಧವ್ಯವಸ್ಥಿತವಾದ ವಿರೋಧವನ್ನು ಮಾಡಿದ್ದರೆ ಅದು ಕರಳ ಹಾಗೂ ಶುದ್ಧವಾಗಿ ತನ್ನ ಆತ್ಮರಕ್ಷಣೆಯ ದೃಷ್ಟಿಯಿಂದ. ಆದ್ದರಿಂದ ಶಾಂತಿಗಾಗಿ ಮನಸ್ಸನ್ನು ತಯಾರಿಸುವ ಅಗತ್ಯ ಅದಕೆಗಿಲ್ಲ. ಅದಕೆಗೆ ತಿಳಿದಿರಲೀ ಯಾ ಇಲ್ಲದಿರಲೀ ಆ ಶಾಂತಿಯ ಬಯಕೆ ಅದರಲ್ಲಿ ವಿಪುಲವಾಗಿದೆ. ತನ್ನ ಶೋಷಣೆಗೆ ವಿರುದ್ಧ ಅದು ಶಾಂತಿಯುತ ಮಾರ್ಗದಲ್ಲಿ ಪ್ರತಿಭಟನೆ ಮಾಡುವದೇ ಅದರ ಆಶೆಯು ಶಾಂತಿ ಸಾಧನೆಯ ಮಾರ್ಗ. ಹಾಗೆಂದರೆ ಅದು ಸ್ವಾತಂತ್ರ್ಯವನ್ನು ಶಾಂತಿಯುತ ಮಾರ್ಗದಲ್ಲಿ ಗಳಿಸಬೇಕು. ಅದು ಇದನ್ನು ಸಾಧಿಸಬಲ್ಲಳಾದರೆ ಜಗತ್ತಿನ ಶಾಂತಿಗಾಗಿ ಯಾವದೇ ಒಂದು ರಾಷ್ಟ್ರವು ಮಾಡಿದ ಮಹಾ ಸೇವೆಗಿಂಥಾ ಇದು ಮಿಗಿಲಾಗುವದು.

ಸ್ವತಂತ್ರ ಹಿಂದೂಸ್ಥಾನದಲ್ಲಿ ತಮ್ಮ ಭವಿಷ್ಯದ ಬಗ್ಗೆ ಕಾತುರಗೊಂಡು ಗಡಿಬಿಡಿಗೊಳ್ಳುವ ಜನರನ್ನು ನೋಡಿದರೆ ನನಗೆ ನೋವೂ ಆಶ್ಚರ್ಯವೂ ಆಗುತ್ತದೆ. ಕೃತ್ರಿಮ ಸರಹದ್ದು ಇಲ್ಲವೇ ನೈಸರ್ಗಿಕ ಸರಹದ್ದಿನೊಳಗಿರುವ ಅಂತ್ಯಜರಲ್ಲಿ ಅಂತ್ಯದ ಮಂದವರಿಗೂ ಸ್ವಾತಂತ್ರ್ಯದ ಭರವಸೆಯನ್ನು ಕೊಡಲಾರದ ಹಿಂದೂದೇಶವು ನನ್ನ ದೃಷ್ಟಿಯಿಂದ ಸ್ವತಂತ್ರ ಹಿಂದೂಸ್ಥಾನವಲ್ಲ. ನಮ್ಮ ಭಯವು ನಮ್ಮ ಆಲೋಚನಾಶಕ್ತಿಗೆ ಪಾರ್ಶ್ವವಾಯು ಹಿಡಿಸುತ್ತದೆ. ಇಲ್ಲದಿದ್ದರೆ ಸ್ವಾತಂತ್ರ್ಯವೆಂದರೆ ಪ್ರತಿಯೊಬ್ಬ ಯೋಗ್ಯ ಹೆಂಗಸು ಯಾ ಗಂಡಸಿಗ ಸಂದಾಸ್ಯಕ್ಕಿಂಥಾ ಉತ್ತಮಸ್ಥಿತಿಯೆಂದು ಆಕ್ಷಣ ತಿಳಿಯಬೇಕು. ಸ್ವಾತಂತ್ರ್ಯದ ಹೊಂಬೆಳಕನ್ನು ಕಂಡು ಹೆದರುವವರು, ಶೋಷಕ ವರ್ಗದವರು, ಲಾಭಬಡಕರು, ಸುಲಿಗೆದಾರರು ಮತ್ತವರ ವರ್ಗದವರು.

ಗುಲಾಮಗಿರಿ ಮತ್ತು ಶೋಷಣೆಯಿಂದ ಹಿಂದೂದೇಶವನ್ನು ಪಾರುಮಾಡಿ ಅವಶ್ಯಬಿದ್ದರೆ ತಪ್ಪನ್ನಾದರೂ ಮಾಡಬಲ್ಲ ರಾಜ್ಯಘಟನೆಯು ಭಾರತಕ್ಕೆ ಬರಲೆಂದೇ ನನ್ನ ಪ್ರಯತ್ನ. ಅತೀ ದರಿದ್ರರಲ್ಲಿ ದರಿದ್ರನೂ ಕೂಡ ಇದು ನಮ್ಮ ದೇಶ, ಅದರ ರೂಪರಚನೆಯಲ್ಲಿ ನಮಗೂ ಹಕ್ಕಿದೆ ಉತ್ತಮರು ದಳಿತರು ಎಂಬ ಬೇಧವಿಲ್ಲದ ಎಲ್ಲರೂ ಒಂದಾಗಿರುವ ಹಿಂದೂದೇಶವಿದು ಎಂದು ಭಾವಿಸುವಂಥಾ ಹಿಂದೂದೇಶಕ್ಕಾಗಿ ನಾನು ಶ್ರಮಿಸುವೆನು. ಇಂಥಾ ಹಿಂದೂದೇಶದಲ್ಲಿ ಅಸ್ಪೃಶ್ಯತೆಗಾಗಲೀ, ಕುಡುಕತನದ ಮಹಾಶಾಪಕ್ಕಾಗಲೀ ಎಡೆ ಇರಲಾರದು. ಹೆಂಗಸರೂ ಗಂಡಸರಷ್ಟೇ ಸ್ವಾತಂತ್ರ್ಯವನ್ನು ಭೋಗಿಸುವರು. ಇಡೀ ಜಗತ್ತಿನ ಬೇರೆ ಜನಾಂಗಗಳೊಡನೆ ನಾವು ಶಾಂತಿಯಲ್ಲಿದ್ದು ಯಾರ ಶೋಷಣೆ ಮಾಡದೆ ಯಾರಿಂದಲೂ ಶೋಷಿಸಿಕೊಳ್ಳದೆ ಇದ್ದು, ಎಷ್ಟು ಚಿಕ್ಕ ಸೈನ್ಯವು ಸಾಕೋ ಅಷ್ಟು ಚಿಕ್ಕ ಸೈನ್ಯವನ್ನು ಇಟ್ಟುಕೊಳ್ಳುವೆವು. ಅದು ದೇಶಿಯ ಯಾ ವಿದೇಶೀಯವಾಗಿರಲಿ ಮೂಕ ಮಿಲಿಯಾಂತರ ಜನರ ಆಶಯಕ್ಕೆ ವಿರೋಧವಾಗದ ಪ್ರತಿಯೊಂದನ್ನೂ ಗೌರವಿಸಲಾಗುವದು. ಸ್ವದೇಶೀ ಮತ್ತು ವಿದೇಶೀ ಎಂಬ ತತ್ವವನ್ನು ವ್ಯಕ್ತಿಗತವಾಗಿ ನಾನು ವಿರೋಧಿಸುತ್ತೇನೆ. ಇದೇ ನನ್ನ ಕಲ್ಪನೆಯ ಹಿಂದೂಸ್ಥಾನ. ಇದಕ್ಕಿಂಥಾ ಕಡಿಮೆಯಿಂದ ನಾನು ತೃಪ್ತನಾಗಲಾರೆ

ನನ್ನ ದೇಶಕ್ಕೆ ಸ್ವಾತಂತ್ರ್ಯ ನನಗೆ ಬೇಕು, ಯಾವನೇ ಒಬ್ಬ ವ್ಯಕ್ತಿ ಇಲ್ಲವೇ ಜಗತ್ತಿನ ಯಾವದೇ ಜನಾಂಗವನ್ನು ಸುಲಿಗೆ ಮಾಡಲಿಕ್ಕಾಗಿ ಜಗತ್ತಿನ ಐದಕ್ಕೊಂದಂಶದಷ್ಟಿರುವ ಜನಾಂಗಕ್ಕೆ ಸೇರಿರುವ ನನಗೆ ಸ್ವಾತಂತ್ರ್ಯ ಬೇಕಿಲ್ಲ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬೇಕೆಂದಾದರೆ ಅದೇ ಸ್ವಾತಂತ್ರ್ಯವನ್ನು—ಅವು ಬಲಯುತ ಯಾ ನಿರ್ಬಲವಾಗಿವೆ' ಆಗಿರಲೀ,—ಬೇರೆ ಜನಾಂಗ, ಜಾತಿಗಳಿಗೆ ಕೊಡಲು ತಯಾರಿಲ್ಲದಿದ್ದರೆ ನಾನು ಸ್ವಾತಂತ್ರ್ಯಕ್ಕೆ ಅನರ್ಹನು.

ಸತ್ಯವನ್ನು ಬಲಿಕೊಟ್ಟು ಹಿಂದೂದೇಶವು ಸ್ವಾತಂತ್ರ್ಯಪಡೆಯುವದಾದರೆ ಸತ್ಯವು ಉಳಿದು ಹಿಂದೂದೇಶವು ನಾಶವಾಗುವದನ್ನು ಇಚ್ಛಿಸುವೆನು. ನನ್ನ ಇಹಯಾತ್ರೆಯನ್ನು ಮುಗಿಸಿದ ನಂತರ ಹಿಂದೂದೇಶವು ಸ್ವತಂತ್ರವಾಗುವದು.. ಹಿಂದೂದೇಶ ಮಾತ್ರವಲ್ಲ ಇಡೀ ಜಗತ್ತೇ ಸ್ವತಂತ್ರಗೊಳ್ಳುವದು. ಅಮೇರಿಕನರು ಯಾ ಇಂಗ್ಲಿಷರು ಸ್ವತಂತ್ರರಿದ್ದಾರೆಂದು ನಾನು ನಂಬಲಾರೆ. ಸವರ್ಣ ಜನಾಂಗಗಳನ್ನು ಹಿಡಿತದಲ್ಲಿಟ್ಟುಕೊಳ್ಳುವ ಶಕ್ತಿ ಇರುವವರೆಗೆ ಅವರು ಸ್ವತಂತ್ರರಾಗಿರಲಾರರು. ನನಗೆ ನನ್ನ ಧ್ಯೇಯವೇನೆಂದು ತಿಳಿದಿದೆ. ಸ್ವಾತಂತ್ರ್ಯವೇನೆಂಬ ಕಲ್ಪನೆಯೂ ನನಗಿದೆ. ಬ್ರಿಟಿಷ್ ಅಧ್ಯಾಪಕರೇ ಅದನ್ನು ನನಗೆ ಕಲಿಸಿದರು. ನಾನು ಕಂಡ ಮತ್ತು ಅನುಭವಿಸಿದ ಅಂತಸ್ಥಿನಿಂದ ಆ ಸ್ವಾತಂತ್ರ್ಯದ ವಿವರಣೆಯನ್ನು ನಾನು ಮಾಡಬೇಕಿದ.

ಸ್ವಾತಂತ್ರ್ಯದ ಯುದ್ಧಗಳು ಅದಕ್ಕೆ ಸರಿಯಾದ ಬೆಲೆ ತೆರದೆ ನಡೆಯಲಾರವು. ಮನುಷ್ಯನು ಯಾವ ರೀತಿ ತನ್ನ ಶರೀರದಲ್ಲಲ್ಲದೆ ಇತರರ ಶರೀರದಲ್ಲಿ ಜೀವಿಸುವ ಕಲ್ಪನೆ ಮಾಡಲಾರನೋ ಹಾಗೆಯೇ ಒಂದು ಜನಾಂಗವು ಮತ್ತೊಂದರ ಆಶ್ರಯದಲ್ಲಿ— ಅದು ಎಷ್ಟೇ ಗುಣಾಢ್ಯ ಮತ್ತು ಹಿರಿಮೆಯದ್ದಾಗಿರಲಿ.—ಬದುಕಲಾರದು.

ಸುಭಾಸಚಂದ್ರಬೋಸರು ಸತ್ತಿಲ್ಲ.

ಟೋಕಿಯೋ [ಜಪಾನದ ರಾಜಧಾನಿ] ಯಲ್ಲಿ ಯುದ್ಧ ಕೈದಿಗಳ ವಿಚಾರಣೆಗಾಗಿ ನಡೆದು ಹೋದ ಅಂತರ್ರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರಲ್ಲೊಬ್ಬರಾದ ಶ್ರೀ. ಡಾ. ರಾಧಾ ವಿನೋದಪಾಲರು, ಅಖಿಲ ಭಾರತ ವಕೀಲರ ಪರಿಷತ್ತಿನ ಅಧ್ಯಕ್ಷ ಸ್ಥಾನವಹಿಸಲು ಜೂನ್ ೨೫ಕ್ಕೆ ನಾಗಪುರಕ್ಕೆ ಬಂದಾಗ ಅಲ್ಲಿ ಅವರನ್ನು ಕಾಣಲು ಬಂದ ಕಾಲಿಕಾರ ಮುಂದಾಳುಗಳಾದ ಶ್ರೀ. ಆರ್. ಎಸ್. ರುಯಿಕರ ಅವರೊಡನೆ 'ನೇತಾಜಿ ಸುಭಾಸಚಂದ್ರಬೋಸರು ವಿಮಾನ ಅಪಘಾತದಲ್ಲಿ ಮರಣಹೊಂದಿಲ್ಲ. ಇದು ಅಮೇರಿಕನ್ ಮತ್ತು ಬ್ರಿಟಿಷ್ ಗುಪ್ತಚಾರರ ಅಭಿಪ್ರಾಯವೂ ಆಗಿದೆ' ಎಂದು ಹೇಳಿದರಲ್ಲದೆ, ಇದಕ್ಕೂ ಹೆಚ್ಚು ವಿವರಗಳ ಬಗ್ಗೆ ಏನನ್ನೂ ಕೇಳಲು ತಮಗೆ ಸಾಧ್ಯವಿಲ್ಲವೆಂದು ಹೇಳಿದರು.

ಪರೀಕ್ಷೆ ಮತ್ತು ಅದರ ಮಹತ್ವ

ಪರೀಕ್ಷೆಯೆಂಬುದು ವಿದ್ಯಾರ್ಥಿಗಳಿಗೆ ಪ್ರಾಮುಖ್ಯ ಸಂಗತಿ ಮಾತ್ರವಲ್ಲ, ವಿದ್ಯಾಭ್ಯಾಸ ಹೊಂದಿದವರ ಮುಂದಣ ಜೀವನವು ಪರೀಕ್ಷೆಯ ಫಲಿತಾಂಶದ ಮೇಲೆ ಹೊಂದಿಕೊಂಡಿರುತ್ತದೆ. ವಿದ್ಯಾರ್ಥಿಗಳಾಗಿರುವಾಗ ತಂದೆ ತಾಯಿಗಳಿಂದ ಹಿಡಿದು ಕುಟುಂಬದವರು ಹಾಗೂ ಸ್ನೇಹಿತರೂ, ಎಲ್ಲರೂ 'ನೀವು ಪಾಸೇ?' ಎಂದು ಕೇಳುವದುಂಟು. 'ಪಾಸ್' ಎಂದು ಹೇಳಿದರೆ ಸಾಕು 'ಶಹಭಾಶ್' ಎಂಬ ಉದ್ಗಾರವು ಹೊರಬೀಳುತ್ತದೆ. 'ಫೈಲ್' ಎಂದರೆ ಮುಗಿಯಿತು, ಬುದ್ಧಿವಾದಗಳಿಗೆ ಆರಂಭವಾಗುತ್ತದೆ. ಇನ್ನು ಶಾಲೆ ಬಿಟ್ಟು ಕೆಲಸ ಹುಡುಕುವಾಗಲೂ ಇದೇ ಪ್ರಶ್ನೆ. 'ಯಾವ ಪರೀಕ್ಷೆ ಪಾಸಾಗಿದ್ದೀರಿ?' 'ಫೈಲ್' ಎಂದರೆ ಮುಗಿಯಿತು, 'ಕೆಲಸವಿಲ್ಲ' ಎಂಬ ನಿರಾಶೆಯ ಉತ್ತರ ಹೊರಹೊರಡುತ್ತದೆ. ಪಾಸಾದವರಿಗೆ ಮಾತ್ರ ಈ ಜಗತ್ತಿನಲ್ಲಿ ಮರ್ಯಾದೆ, ಹುದ್ದೆ, ಅಧಿಕಾರ, ಯಶಸ್ಸು ಇವೆಲ್ಲ. ಉಳಿದವರು ಜೀವನದಲ್ಲೇ ನಾಪಾಸಾಗುವರು.

ಶಾಲೆ ಅಥವಾ ಕಾಲೇಜುಗಳಲ್ಲಿ ಒಂದು ವರ್ಷವಿಡೀ ಪಾಠ ಕಲಿತರೆ ವಿದ್ಯಾರ್ಥಿಯು ಆ ವಿದ್ಯೆಯಲ್ಲಿ ಪಾರಂಗತನಾಗಿರುವನೇ ಎಂದು ತಿಳಿಯಲು ನಡೆವ ಪರೀಕ್ಷೆಗಳು ಕೇವಲ ಕೆಲವೇ ಗಂಟೆಯ ದಿವಸಗಳಲ್ಲೇ ಮುಗಿದುಬಿಡುವವು. ಇದರಿಂದ ಈ ಪರೀಕ್ಷೆಯ ಮಹತ್ವವನ್ನು ತಿಳಿಯಬಹುದು.

ಪ್ರಾಥಮಿಕ ಶಾಲೆಯ ಪ್ರಾಥಮಿಕ ದರ್ಜೆಗಳಲ್ಲಿ ಪರೀಕ್ಷೆಗಳು ಬಹು ಸುಲಭ. ಬಾಯಿ ಲೆಕ್ಕ, [illegible] ಮೊದಲಾದುವುಗಳಲ್ಲೇ ಪರೀಕ್ಷೆಯು ಮುಗಿಯುವದು. ಮೇಲ್ತರಗತಿಗಳಿಗೆ ಹೋದಾಗೆಲ್ಲಾ ಪಾಠಗಳೂ ಕಠಿಣವಾಗುತ್ತವೆ. ಮಾತ್ರವಲ್ಲ ಪರೀಕ್ಷೆಗಳೂ ಕಷ್ಟ. ಸಣ್ಣ ತರಗತಿಗಳ ಪರೀಕ್ಷೆ ಕೆಲವೇ ತಾಸುಗಳಲ್ಲಿ ಮುಗಿಯುತ್ತದೆ. ಮೇಲ್ತರಗತಿಗಳಲ್ಲೂ ಹೈಸ್ಕೂಲುಗಳಲ್ಲೂ ಪರೀಕ್ಷೆಗಳ ಸಮಯವೂ ಹೆಚ್ಚುತ್ತದೆ. ಮೊದಲ ತರಗತಿಯಲ್ಲಿ ಆಯಾ ತರಗತಿಯ ಉಪಾಧ್ಯಾಯರೇ ಪರೀಕ್ಷೆ ನಡೆಸುವರು. ಬಾಲಕರು ಫೈಲಾಗುವದು ಅಪರೂಪ. ಮೇಲ್ತರಗತಿಗಳಲ್ಲಿ ಪರೀಕ್ಷೆಗಳು [illegible]. ಎಲ್ಲ ತರಗತಿಗಳನ್ನು ಒಟ್ಟುಗೂಡಿಸಿ ದೊಡ್ಡ ಸಭಾಭವನದಲ್ಲಿ ಪರೀಕ್ಷೆ ನಡೆಸುವರು. ಪ್ರಶ್ನೆಗಳು ಛಾಪಿಸಲ್ಪಡುವವು. ದೊಡ್ಡ ದೊಡ್ಡ ಹಾಳೆಗಳಲ್ಲಿ ಉತ್ತರ ಬರೆಯಬೇಕು. ದೊಡ್ಡ ದೊಡ್ಡ ಉಪಾಧ್ಯಾಯರು ಕೆಂಪು ಕಣ್ಣಿನಿಂದ ಪರೀಕ್ಷಾ ಭವನದಲ್ಲಿ ಅತ್ತಿಂದಿತ್ತ ಇತ್ತಿಂದತ್ತ ತಿರುಗುವರು. ಯಾರಾದರೂ ನಕಲು ಮಾಡಿದರೆ ಅಥವಾ ಪಕ್ಕದವರೊಡನೆ ಮಾತಾಡಿದರೆ ಬೆದರಿಸುತ್ತಾರೆ. ಹೀಗೆ ಒಂದೆರಡು ಸಲ ನಕಲು ನೋಡಿದರೆ ಅಥವಾ ಮಾತಾಡಿದರೆ ಆ ವಿದ್ಯಾರ್ಥಿಯ ಗತಿ ಮುಗಿಯಿತು. ಅವನು ಪರೀಕ್ಷೆಯಿಂದ ಹೊರಗೆ ಹಾಕ

ರಜಾ ದಿನಗಳು ಕಳೆದು ಶಾಲೆ ಪ್ರಾರಂಭವಾಗುವಾಗ ಪರೀಕ್ಷೆಯ ನೆನಪು ಯಾವ ವಿದ್ಯಾರ್ಥಿಗೂ ಉಂಟಾಗುವದಿಲ್ಲ. ಮೂರು ತಿಂಗಳೊಳಗೆ ಸಣ್ಣ ಪರೀಕ್ಷೆ. ಈ ಪರೀಕ್ಷೆಗೆ ವಿದ್ಯಾರ್ಥಿಗಳು ಹೆಚ್ಚಿಗೆ ಗಮನಕೊಡಬೇಕೆಂದಿಲ್ಲ. ಈ ಪರೀಕ್ಷೆಯು ಉಪಾಧ್ಯಾಯರುಗಳಿಗಾಗಿಯೋ ವಿದ್ಯಾರ್ಥಿಗಳಿಗಾಗಿಯೋ ಎಂಬುದು ತಿಳಿದಿಲ್ಲ. ಆ ಮೇಲೆ ಬರುವಂಥಾದ್ದು ಹದ ಪರೀಕ್ಷೆ. ಈ ಪರೀಕ್ಷೆಯಲ್ಲಿ ಕೈ ಮೇಲಾಗಬೇಕೆಂದು ಸರ್ವಸಾಧಾರಣ ಎಲ್ಲರೂ ಪ್ರಯತ್ನಿಸುವರು. ಮೆಟ್ರಿಕ್ ಕ್ಲಾಸುಗಳಿಗೆ ಇಂಟರ್‌ಮೀಡಿಯೆಟ್, ಬಿ. ಎ., ಬಿ. ಕಾಮ್; ಇನ್ನಿತರ ಕಲಾ ಶಾಲೆಯ ತರಗತಿಗಳಿಗೆ ಸಿಲೆಕ್ಷನ್ ಪರೀಕ್ಷೆ ಯಾನೆ ಪ್ರವೇಶ ಪರೀಕ್ಷೆಯೂ ಇದೇ ಸಮಯದಲ್ಲಿ ನಡೆಯುವದು. ದೊಡ್ಡ ಅಥವಾ ಸರಕಾರಿ ಪರೀಕ್ಷೆಗಳಿಗೆ ಕೂತುಕೊಳ್ಳಬೇಕಾದರೆ ಈ ಪರೀಕ್ಷೆಯಲ್ಲಿಯೂ ವಿದ್ಯಾರ್ಥಿಗಳ 'ಚೀಟು' ಮೇಲೆ ಬೀಳಬೇಕಾಗುವದು. ಇನ್ನು ಕೊನೆಯ ಅಥವಾ ದೊಡ್ಡ ಪರೀಕ್ಷೆ. ಈ ಪರೀಕ್ಷೆಗೆ ಒಂದೆರಡು ತಿಂಗಳಿಂದರೆ ವಿದ್ಯಾರ್ಥಿಗಳ ಎದೆಯು ಗುಡು ಗುಡುಗಿಸಲು ಆರಂಭಿಸುವದು. ಪುಸ್ತಕದ ಕೀಟಗಳೆನಿಸುವವರು ಕೂಡಲೇ ಪರೀಕ್ಷೆಯನ್ನು ಎದುರಿಸುವ ಸಿದ್ಧತೆ ಮಾಡುವರು. ಆದರೆ ಪರೀಕ್ಷೆಗೆ ಒಂದೆರಡು ದಿನ ಇಂತೆಂದರೆ ಸರಿ, ಎಲ್ಲರೂ ರಾತ್ರಿ ಇಡಿ ದೀಪ ಇಟ್ಟು ಓದುವರು.

ಕೆಲವು ವಿದ್ಯಾರ್ಥಿಗಳು ರಾಜಾಸೀಟ್, ಗದ್ದಿಗೆ ಮೊದಲಾದ ಪ್ರಶಾಂತ ವಾತಾವರಣವನ್ನು ಅಪೇಕ್ಷಿಸುವರು. ಇನ್ನು ಕೆಲವರು ಮರದ ಕೊಂಬೆಗಳನ್ನೇರಿ ಲೋಕವನ್ನು ಮರೆತು ಪರೀಕ್ಷೆಗಾಗಿ ಸಿದ್ಧತೆ ಮಾಡುವರು. ಇಂಥಾ ವಿದ್ಯಾರ್ಥಿಗಳು ಜಾಗರೂಕತೆಯಿಂದ ಇರಬೇಕೆಂದು ನಾವು ಹೇಳಬೇಕಿಲ್ಲ. ಕೆಲವು ವಿದ್ಯಾರ್ಥಿಗಳು ರಿವರ್‌ಜನ್ ಚಾ ಅಥವಾ ಕಾಫಿ ಕುಡಿದು ಓದಲು ಅಣಿಯಾಗುವರು. ಇನ್ನು ಸುಧಾರಿತ ನವನಾಗರೀಕ ವಿದ್ಯಾರ್ಥಿಗಳು ಓದಿದನ್ನು ತಲೆಯಲ್ಲಿ ತುಂಬಲು ಸಹಾಯಕವಾಗುವಂತೆ (?) ಬಾಯಿಯಲ್ಲಿ ಸಿಗರೇಟು ಹಚ್ಚಿಸಿಯೇ ವ್ಯಾಸಂಗ ನಡೆಸುವರು. ಕೆಲವರು ಕ್ಲಾಸಿನಲ್ಲಿ ಚುರುಕಿನ ವಿದ್ಯಾರ್ಥಿಗಳ ಬೆನ್ನು ಹಿಡಿದು ಅವರ 'ನೋಟ್ಸು'ಗಳನ್ನು ಜಗಿಯುವರು. ಪರೀಕ್ಷೆಯಲ್ಲಿ ಉಪಾಧ್ಯಾಯರುಗಳು ಕೆಲವು ಮಟ್ಟಿಗೆ ಸಹಾಯವಾಗಬಹುದೆಂದು ಅವರ ಬೆನ್ನು ಹಿಡಿಯುವವರೂ ಕೆಲವರಿದ್ದಾರೆ.

ಪರೀಕ್ಷೆಯ ದಿವಸ ಮೊದಲಾಗಿ ನಾಸ್ತಿಕ ವಿದ್ಯಾರ್ಥಿಗೂ ದೇವರ ಸ್ಮರಣೆ ಮಾಡಬೇಕಾಗುವದು. ಫೌಂಟನ್ ಪೆನ್ನಿಗೆ ತುಂಬಾ ಶಾಹಿ ತುಂಬಿಸಿದ ಮೇಲೆ ಕೆಲವರು ಎರಡು–ಮೂರು ಪೆನ್ನುಗಳನ್ನು ಹೊತ್ತುಕೊಳ್ಳುವರು. ಕೆಲವು ಕಡೆಗಳಲ್ಲಿ ವಿದ್ಯಾರ್ಥಿಗಳನ್ನು ಪರೀಕ್ಷಾ ಮಂದಿರದ ವರೆಗೆ ಅವರ ತಂದೆ ತಾಯಿಗಳಾಗಲೀ ಬಂಧುಗಳಾಗಲಿ ಬಿಡುವ ವಾಡಿಕೆ ಇದೆ.

ಪರೀಕ್ಷೆ ಮುಗಿದು ಅದರ ಫಲಿತಾಂಶ ಬರುವವರೆಗೆ ಎಲ್ಲಾ ವಿದ್ಯಾರ್ಥಿಗಳು ಪಾಸೇ! ಆದರೆ ಫಲಿತಾಂಶದಲ್ಲಿ ಮಾತ್ರ ಕಲಿತ ವಿದ್ಯೆಯ ಅಳವು ಅಳೆಯಲ್ಪಡುವದು.

ಪರೀಕ್ಷೆಯಲ್ಲಿ ಪಾಸಾದ ಎಂದ ಕೂಡಲೇ 'ಟಾಫಿ ಇಲ್ಲವೋ' ಎಂಬ ಪೀಡೆ ಸುರುವಾಗುತ್ತದೆ. 'ಪಾಸ? ಸರಿ ಬರಲಿ ಟಾಫಿ' ಎಂದು ಕೇಳುವವರೆಲ್ಲರ ಉಪಟಳ. ಒಬ್ಬನಿಗೆ ಟಾಫಿಕೊಟ್ಟರಾಗಲಿಲ್ಲ ಎಲ್ಲರಿಗೂ ಕೊಡುವುದು ಅಗತ್ಯ, ಒಬ್ಬನಿಗೆ ಕೊಟ್ಟರೆ ಇನ್ನೊಬ್ಬನಿಗೆ ಕೋಪ. ಅಂತ್ಯದಲ್ಲಿ ಕಿಸೆ ಖಾಲಿ. ಫೈಲಾದರೆ ಟಾಫಿಗೆ 'ಕಾಗುವ' ಬೆದರಿಕೆಯಿಲ್ಲ. ಆದರೆ ಫೈಲೆಂದು ಹೇಳುವುದು ನಾಚಿಕೆ. ಆದರೆ ನಾಚಿಕೆ ಬಿಟ್ಟು ಕಲ್ಲಾದವರು ಕೆಲವರಿದ್ದಾರೆ. ಒಂದೇ ತರಗತಿಯಲ್ಲಿ ಎಷ್ಟು ವರ್ಷಗಳವರೆಗೂ ಕಲಿಯಲು ಅವರಿಗೆ ಬೇಕಾದಷ್ಟು ತಾಳ್ಮೆಯಿದೆ. ಭೋಜನ ಶಾಲೆ ಗಟ್ಟಿ ಇದ್ದವರಿಗೆ ಪಾಠಶಾಲೆ ಹಿಡಿಯುವುದು ಕಷ್ಟವಲ್ಲವೆ?

ಇದೆಲ್ಲ ಪರೀಕ್ಷೆ ವಿಷಯಗಳು. ಪರೀಕ್ಷೆಯಲ್ಲಿ ಪಾಸಾಗಲು ಕೇವಲ ತಲೆಕೊಟ್ಟು ಕಲಿತರೆ ಸಾಲದು, 'ನಂಬರ' ಮೇಲೆ ಬರಬೇಕಾದರೆ ಸ್ವಲ್ಪ ದೆಸೆ ಬೇಕೆಂದೂ ಕೆಲವರು ಹೇಳಿಕೊಳ್ಳುತ್ತಿದ್ದಾರೆ. ಕೆಲವು ವಿದ್ಯಾರ್ಥಿಗಳ ದೆಸೆ 'ಗಟ್ಟಿ' ಯಾಗಲಿಕ್ಕೆ ಹರಕೆ ಹೇಳಿಕೊಳ್ಳುವುದೂ ಉಂಟು. ಇನ್ನು ಕೆಲವರು ತನ್ನನ್ನು ಪಾಸು ಮಾಡಿದರೆ ಉಪಾಧ್ಯಾಯರಿಗೆ ಹಣ ಕೊಡುತ್ತೇವೆಂದೂ ಮಾತುಕೊಟ್ಟ ವಿಷಯವನ್ನು ನಾವು ಕೇಳಿದ್ದೇವೆ.

ಇತ್ತೀಚೆಗೆ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳು ಅಚ್ಚಾಗುವ ಮುದ್ರಣಾಲಯಗಳಿಂದ ಪ್ರಶ್ನೆಯ ಪತ್ರಿಕೆಯ ನಕಲನ್ನು ಹೊಡೆದು ಪಾಸಾಗಲು ಪ್ರಯತ್ನಿಸುವ ವಿದ್ಯಾರ್ಥಿಗಳ ಸುದ್ದಿಯನ್ನೂ ನಾವು ಕೇಳಿದ್ದೇವೆ. ಅವರು ಪರೀಕ್ಷೆಯಲ್ಲಿ ಪಾಸಾಗುವದಾದರೂ, ಸರಕಾರದ ಸೆರೆಮನೆಯ ಶಾಲೆಯಲ್ಲಿ ಸ್ವಲ್ಪ ಸಮಯ ಪುನಃ ಪರೀಕ್ಷೆಗೆ ಒಳಗಾಗುವ ಪ್ರಸಂಗ ಬರುತ್ತದೆ. ಅಂತೂ ಇವರೆಲ್ಲರ ಇರಾದೆ ಒಂದೇ. ಪರೀಕ್ಷೆಯಲ್ಲಿ ಪಾಸಾಗಬೇಕು ಎಂಬುದೇ. ಪರೀಕ್ಷೆಯ ಮಹತ್ವವನ್ನು ವರ್ಣಿಸಿ ಕವಿಗಳೊಬ್ಬರು ಈ ರೀತಿ ಹೇಳಿದ್ದಾರೆ. 'ಜೀವನದಿರುವುದು ಎರಡು ದಿನ. ಜನ್ಮ ದಿನ ಪರೀಕ್ಷೆಯ ದಿನ—ಎರಡು'

'ನ. ಭಾ.'

ಕಾಲೇಜು ಬಂತು.

ಹಲವಾರು ವರುಷಗಳ ಪರಿಶ್ರಮದ ಫಲವಾಗಿ
ಉದಯಿಸಿತು ಜ್ಯೋತಿಯೆಂದೀ ಕಾಲೇಜು
ಎಡರುಗಳು ತೊಡರುಗಳು ಹಲವಾರು ತೋರಿದರು
ತಡವಾಗಿ ಉದಯಿಸಿತು ಈ ಕಾಲೇಜು. ॥೧॥

ಪರಿಪರಿಯ ವನಶೋಭೆ ಎತ್ತೆತ್ತಲು ಬೆಳಗಿದವು
ಸೊಂಪಾದ ಇಂಪಾದ ಮಡಿಕೇರಿಯಲ್ಲಿ
ಎಲ್ಲೆಡೆಗು ಎದೆಯಲ್ಲಿ ಝುಲ್ಲೆನ್ನಿಸುವ ಪ್ರೀತಿ
ಅಲ್ಲಲ್ಲಿ ಎಸೆದಿತ್ತು ಮಡಿಕೇರಿಯಲ್ಲಿ. ॥೨॥

ದಾರಿಯನು ನಡೆನಡೆದು ಏರೇರಿ ಇಳಿದಿಳಿದು
ಜನ ಬಂದು ತುಂಬಿತ್ತು ಮೈದಾನದಲ್ಲಿ
ಬಸ್ಸುಗಳು, ಕಾರುಗಳು ಸಾಲಾಗಿ ಸೇರಿದವು
ಭಾಗ್ಯರವಿಯುದಯಿಸುವ ಮೈದಾನದಲ್ಲಿ ॥೩॥

ಎತ್ತರದ ಮೂರ್ತಿಯಂ, ಅಧಿಕಾರ ಕೀರ್ತಿಯಂ
ಹೊತ್ತಿರುವ ಎಚ್. ಆರ್. ವಿ. ಮುಗುಳುನಗೆಯಲ್ಲಿ
ಬಿತ್ತರದ ಬಗೆಯಿಂದ ಜಯಕಾರದಿಂದೊಡನೆ
ತಳಹದಿಯ ಹಾಕಿದರು ಹುಮ್ಮಸ್ಸಿನಲ್ಲಿ ॥೪॥

ಮಿತಿಮೀರಿ ಖತಿಗೊಂಡ ಜನಬೇಡಿ ಪಡೆದಿಹುದು
ಬಾನ್‌ರಮಣ ಚಂದ್ರಮನೊ ಕಾಲೇಜು ಎಂಬೆ
ಅಜ್ಞಾನ ಕಾರಿರುಳ ಮೌಢ್ಯತೆಗೆ ಸಲೆಹದರಿ
ಒಲಿಸಿ ಕೊಂಡಿಹರವರು ಜ್ಯೋತಿಯಿದು ಕಾಂಬೆ ॥೫॥

ಸುರಲೋಕ ಸೌಂದರ್ಯ ತುಂಬಿರುವ ಕೊಡಗುನಾಡು
ವೈಧವ್ಯ ಶೋಕದಾ ಮುಖ ಕಮಲದಂತೆ
ಕಾಲೇಜ ಕುಂಕುಮವ ಹಾಕಿದರು ಹರಿಸಿದರು
ತೋರುತ್ತಿಹಳೀ ಕೊಡಗು ಸುರಕನ್ಯೆಯಂತೆ ॥೬॥

ಹೊತ್ತಿಸಿದ ಸೊಡರಕುಡಿ ಮೇಲೇರಿ ಬೆಳಗಲದು
ಕೊಡಗುನಾಡ ಅಗಸವ ತಾ ಬೆಳಗುತಾ
ಪಕ್ಷಿಗಳ ಬಿರುಗಾಳಿ ಸೋಂಕದದು ಬದುಕಿರಲಿ
ಅಜ್ಞಾನ ಅಂಧತೆಯ ಸಲೆ ನೀಗುತಾ ॥೭॥

B. D. G.

ಭಾರತದ ಭಾಗ್ಯ ಭಂಡಾರ.

ಚಂದ್ರಗುಪ್ತ ಚಾಣಕ್ಯರು.

ಲೇ:—ಶ್ರೀ ವಿ. ಎಸ್. ರಾಮಕೃಷ್ಣ ಬಿ ಎಸ್‌ಸಿ (ಆನರ್ಸ್) ಬಿ ಟಿ

ಲೇಖನ ೧೩.

ಬೌದ್ಧ ಧರ್ಮವು ಹಿಂದೂಸ್ಥಾನದಲ್ಲಿ ಬೆಳೆಯ ತೊಡಗಿತು. ಮೂಲತಃ ಕ್ಷತ್ರಿಯ ಜನ್ಯವಾದ ಈ ಧರ್ಮದ ನೈತಿಕ ಸಾಮಾಜಿಕ ಭಾವನೆಗಳೂ ಹಳೇ ಸಂಪ್ರದಾಯದ ಯಜ್ಞಯಾಗಾದಿಗಳಿಗೆ ವಿರುದ್ಧ ಹೋರಾಟವೂ ಬಹು ಜನರನ್ನು ಬೌದ್ಧ ಧರ್ಮಕ್ಕೆ ಆಕರ್ಷಿಸಿತು. ಮಾನಸಿಕ ಕ್ಷೇತ್ರದಲ್ಲಿ ಕ್ರಾಂತಿ ಎಬ್ಬಿಸುವ ಈ ಪಂಥದ ತತ್ವಗಳು ಕೆಲವು ಬ್ರಾಹ್ಮಣ-ತತ್ವವೇತ್ತರನ್ನೂ ಆಕರ್ಷಿಸದಿರಲಿಲ್ಲ. ಪರಂತು ಸಾಮಾನ್ಯವಾಗಿ ಬ್ರಾಹ್ಮಣವರ್ಗದವರು ಬೌದ್ಧ ಅನುಯಾಯಿಗಳನ್ನು ವಿಧರ್ಮಿಗಳೆಂದೂ ನಿರೀಶ್ವರವಾದಿಗಳೆಂದೂ ಖಂಡಿಸಿದರು. ಇವೆಲ್ಲವುಗಳಿಂದಲೂ ಪ್ರಾಮುಖ್ಯವಾಗಿ ಬೌದ್ಧ ಧರ್ಮದ ತತ್ವಗಳು ಪ್ರಾಚೀನ ಧರ್ಮತತ್ವಗಳೊಂದಿಗೆ ಘರ್ಷಣೆ ಹೊಂದಿ ಸನಾತನ ಧರ್ಮವನ್ನು ರೀಕಿಸಿದುವು. ಎರಡೂವರೆ ಶತಮಾನಗಳ ತರುವಾಯ ಸಾಮ್ರಾಟ ಅಶೋಕನು ಬೌದ್ಧ ಧರ್ಮವನ್ನವಲಂಬಿಸಿ ದೇಶವಿದೇಶಗಳಿಗೆ ಪ್ರಚಾರಕರನ್ನು ಕಳಿಸಿ ಬೌದ್ಧ ಧರ್ಮದ ತತ್ವಗಳನ್ನು ಪ್ರಚುರಪಡಿಸಿದನು.

ಎರಡು ಶತಮಾನಗಳ ಈ ದೀರ್ಘ ಅವಧಿಯಲ್ಲಿ ಭರತ ವರ್ಷದಲ್ಲಿ ಅಭೂತಪೂರ್ವ ಬದಲಾವಣೆಗಳುಂಟಾದುವು. ವಿವಿಧ ಚಿಕ್ಕ ದೊಡ್ಡ ರಾಜ್ಯಗಳಾಗಿ, ಪ್ರಜಾಪ್ರಭುತ್ವಗಳಾಗಿ ಒಡೆದ ಭಾರತವನ್ನು ಒಗ್ಗೂಡಿಸಿ ಪ್ರಬಲ ಕೇಂದ್ರ ಸಮಾವಿಷ್ಟವಾದೊಂದು ಅಖಂಡ ರಾಜ್ಯವನ್ನು ಕಟ್ಟುವ ದೀರ್ಘಯತ್ನ ನಡೆಯಿತು. ಇದರೊಂದಿಗೆ ವಿವಿಧ ಬುಡಕಟ್ಟಿಗೆ ಸೇರಿದ ಜನರಲ್ಲಿ ಪರಸ್ಪರ ಮಿಲನವುಂಟಾಗಿ ಐಕ್ಯತೆಯೂ ಮೂಡಲನುವಾಯಿತು. ಪ್ರಬಲತಮವಾದ ಈ ಬದಲಾವಣೆಗಳಿಗೆ ವಾಯವ್ಯ ಪ್ರಾಂತಕ್ಕೆ ಅಲೆಗ್ಸಾಂಡರನು ಮಾಡಿದ ಧಾಳಿಯು ಸ್ಫೂರ್ತಿಯಿತ್ತು ಭಾರತೀಯರನ್ನು ವಿದೇಶೀಯ ಆಕ್ರಮಣಕ್ಕೆ ವಿರುದ್ಧವಾಗಿ ಪ್ರತಿಭಟಿಸಲು ಬಲವುಳ್ಳ ವಿಶಾಲ ಸಾಮ್ರಾಜ್ಯವನ್ನು ಕಟ್ಟುವಂತೆ ಪ್ರೇರೇಪಿಸಿತು. ವಿದೇಶಿ ಆಕ್ರಮಣವನ್ನು ಶಕ್ತಿಯಿಂದ ಇದುರಿಸಲು ಸಮರ್ಥರಾಗಿ ದೇಶದ ಭವಿಷ್ಯವನ್ನು ತಮಗೆ ಯುಕ್ತ ಕಂಡ ರೀತಿಯಲ್ಲಿ ವ್ಯವಸ್ಥೆಗೊಳಿಸಲು ಸಿದ್ಧರಾದವರು ಅಸಾಧಾರಣ ವ್ಯಕ್ತಿಗಳು ಭಾರತದ ರಾಜಕೀಯ ಬಾಂದಳದಲ್ಲಿ ಉದಯವಾದರು. ಮೌರ್ಯಕುಲಕ್ಕೆ ಕಿರೀಟಪ್ರಾಯನೂ ಮಹಾವಿಕ್ರಮಿಯೂ ಆದ ಚಂದ್ರಗುಪ್ತನೂ ಅವನ ಅನುಯಾಯಿಯೂ, ಮಂತ್ರಾಲೋಚಕನೂ ಸಚಿವವರೇಣ್ಯನೂ ಆದ ಬ್ರಾಹ್ಮಣ ಚಾಣಕ್ಯನೂ ಅಂದಿನ ಪ್ರಕ್ಷುಬ್ಧ ಭಾರತದಲ್ಲಿ ಆವಿರ್ಭವಿಸಿದ ಮಹಾವ್ಯಕ್ತಿಗಳಾಗಿದ್ದರು. ಚಂದ್ರಗುಪ್ತ ಚಾಣಕ್ಯರ ಕೂಟವು ಅದ್ವಿತೀಯವಾಗಿದ್ದು ಇಬ್ಬರೂ ಪಾಟಲೀಪುತ್ರವೇ ರಾಜಧಾನಿಯಾದ ಮಗಧರಾಜ್ಯದ ಬಲಾಢ್ಯ ಅರಸನಾದ ನಂದನ ಆಜ್ಞೆಯಂತೆ ದೇಶಭ್ರಷ್ಟರಾಗಿ ಅಲೆಯುತ್ತಿದ್ದರು. ಇಬ್ಬರೊಂದಾಗಿ ತಕ್ಷಶಿಲೆಗೂ ವಾಯವ್ಯ ಪ್ರಾಂತಗಳಿಗೂ ಹೋಗಿ ಅಲ್ಲಿದ್ದ ಗ್ರೀಕ್ ಸೇನೆಯನ್ನು ಕಂಡುದಲ್ಲದೆ ಚಂದ್ರಗುಪ್ತನು ವಿಶ್ವವಿಜೇತನಾದ ಅಲೆಗ್ಸಾಂಡರನನ್ನು ಸಂಧಿಸಿದನು. ಚಂದ್ರಗುಪ್ತನು ಅಲೆಗ್ಸಾಂಡರನ ವಿಜಯವೈಭವಗಳಿಂದಲೂ ಧೈರ್ಯಸಾಹಸಗಳಿಂದಲೂ ಮುಗ್ಧನಾಗಿ ಹೋದನು. ಅಲೆಗ್ಸಾಂಡರನ ಆದರ್ಶದಂತೆ ಮಹಾಸಾಮ್ರಾಜ್ಯವನ್ನು ಕಟ್ಟುವ ಮಹತ್ವಾಕಾಂಕ್ಷೆಯಿಂದ ಪ್ರಜ್ವಲನಾದನು. ಚಂದ್ರಗುಪ್ತ ಚಾಣಕ್ಯರು ಕಾರ್ಯಸಾಧನೆಗೆ ಅನೇಕ ಯುಕ್ತಿಗಳನ್ನು ಹೂಡಿ ವಿಜಯಗಳಿಗಾಗಿ ಸಂದರ್ಭ ಸಾಧಿಸುತ್ತಿದ್ದರು.

ಅಲೆಗ್ಸಾಂಡರನು ಕ್ರಿ. ಪೂ. ೩೨೩ರಲ್ಲಿ ಬಾಬಿಲೋನಿನಲ್ಲಿ ಮರಣಹೊಂದಿದನೆಂಬ ವಾರ್ತೆ ತಿಳಿದೊಡನೆಯೇ ಚಂದ್ರಗುಪ್ತನು ಸದಾ ನವಪೌರುಷವನ್ನೀವ ರಾಷ್ಟ್ರೀಯ ವಾದದ ಸಿಂಹನಾದವನ್ನು ಮಾಡಿ ಪರಾಕ್ರಮದಿಂದ ಭರತ ವರ್ಷವನ್ನು ಕಾಯಬೇಕೆಂದು ಘೋಷಿಸಿದನು. ಗ್ರೀಕರ ಸೈನ್ಯವು ಪರಾಜಯ ಹೊಂದಿ ತಕ್ಷಶಿಲೆಯು ಅವನ ವಶವಾಯಿತು. ರಾಷ್ಟ್ರೀಯತೆಯ ಮೇಘಗಂಭೀರ ನಿನದವು ಚಂದ್ರಗುಪ್ತನಿಗೆ ಅನೇಕ ಪ್ರಬಲ ಮಿತ್ರರನ್ನು ಒದಗಿಸಿಕೊಟ್ಟ ಪರಿಣಾಮವಾಗಿ ಉತ್ತರ ಭಾರತವನ್ನವನು ಆಕ್ರಮಿಸಿ ಪಾಟಲೀಪುತ್ರಕ್ಕೆ ವಿಜಯಯಾತ್ರೆಯನ್ನು ಬೆಳೆಸಿದನು. ಅಲೆಗ್ಸಾಂಡರನ ಮರಣವಾದ ಎರಡು ವರ್ಷಗಳೊಳಗೆ ಚಂದ್ರಗುಪ್ತನು ಪಾಟಲೀಪುತ್ರವನ್ನಾಕ್ರಮಿಸಿ ಮಗಧರಾಜ್ಯದ ಸ್ವಾಮಿಯಾದನು. ಆಗಾಗಲೇ ಮೌರ್ಯಸಾಮ್ರಾಜ್ಯವು ಸ್ಥಾಪನೆಗೊಂಡು ವಿಸ್ತರಿಸಲು ಪ್ರಾರಂಭಿಸಿತು.

ಅಲೆಗ್ಸಾಂಡರನ ಸೇನಾಪತಿಯಾದ ಸೆಲ್ಯೂಕಸನು ಸಿಂಧೂನದಿಯನ್ನು ಕ್ರಮಿಸಿ ಕಳೆದು ಹೋದ ಗ್ರೀಕ್ ಆಧಿಕಾರವನ್ನು ಸಂಸ್ಥಾಪಿಸುವ ಯತ್ನ ನಡೆಸಿದನು. ಚಂದ್ರಗುಪ್ತನು ಅವನನ್ನು ಪರಾಜಯಗೊಳಿಸಿ ಭಾರತದಿಂದ ಹೊರಗಟ್ಟಿದ್ದು ಮಾತ್ರವಲ್ಲದೆ ಸೆಲ್ಯೂಕಸನ ನಾಡುಗಳನ್ನು [illegible]. ಈ ವಿಜಯದಿಂದಾಗಿ ಚಂದ್ರಗುಪ್ತ ಮೌರ್ಯನ ಸಾಮ್ರಾಜ್ಯಕ್ಕೆ ಕಾಬೂಲಿನ ವರೆಗೆ ಅಫ್ಘಾನಿಸ್ಥಾನವೂ ಸೇರಿದಂತಾಯಿತು. ದಕ್ಷಿಣ ಭಾರತವನ್ನು ಮಾತ್ರ ಉಳಿದು ಸಮುದ್ರ ಮೇರೆಯಾದ ಸಮಗ್ರ ಭರತಖಂಡವು ಮೌರ್ಯಸಾಮ್ರಾಜ್ಯಕ್ಕೆ ಅಧೀನವಾಗಿ ಕಾಬೂಲಿನ ವರೆಗೂ ವಿಸ್ತರಿಸಿತು. ಇತಿಹಾಸದಲ್ಲಿ ಪ್ರಥಮ ಸಾರಿಗೆ ಭರತ ವರ್ಷದಲ್ಲಿ ಅಖಂಡವಾದೊಂದು ಚಕ್ರಾಧಿಪತ್ಯವು ನೆಲೆನಿಂತು ಪಾಟಲೀಪುತ್ರವೇ ರಾಜಧಾನಿಯಾಗಿ ವಿರಾಜಿಸಿತು.

ಮೌರ್ಯಸಾಮ್ರಾಜ್ಯದ ರೂಪರೇಷೆಗಳ ವಿಚಾರ ನಮಗೆ ಬೇಕಾದಷ್ಟು ಆಧಾರಗಳು ಸಿಗುತ್ತವೆ. ಸೆಲ್ಯೂಕಸನ ರಾಯಭಾರಿಯಾದ ಮೆಗಸ್ಥನೀಸನು ಮೌರ್ಯಸಾಮ್ರಾಜ್ಯದ ವೈಭವವನ್ನು ವರ್ಣಿಸಿರುವುದರಿಂದಲೂ ಕೌಟಿಲ್ಯನ ಅರ್ಥಶಾಸ್ತ್ರದಿಂದಲೂ ಮೌರ್ಯಸಾಮ್ರಾಜ್ಯದ ಅನೇಕ ಸಂಗತಿಗಳು ನಮಗೆ ತಿಳಿದುಬರುತ್ತವೆ. ಕೌಟಿಲ್ಯನೆಂಬ ಅನ್ವರ್ಥನಾಮವು ಮಹಾವಿದ್ವಾಂಸನೂ ರಾಜನೀತಿ ಶಾಸ್ತ್ರಪಾರಂಗತನೂ ಮೌರ್ಯಸಾಮ್ರಾಜ್ಯ ಸ್ಥಾಪನಾಚಾರ್ಯನೂ ಅದರ ಪುರೋಭಿವೃದ್ಧಿಗಾಗಿ ಹೆಣಗಿದವನೂ ಆದ ಚಾಣಕ್ಯನ ಇನ್ನೊಂದು ಹೆಸರು. ಚಾಣಕ್ಯನು ಬಲಾಢ್ಯನಾದೊಬ್ಬ ಸಾಮ್ರಾಟನ ಕೇವಲ ಮಂತ್ರಿ ಸಚಿವನಾಗಿರದೆ ಸ್ವತಂತ್ರ ಧೀಮಂತ ಬುದ್ಧಿಯ ಪ್ರಭಾವಶಾಲಿಯಾಗಿದ್ದನು. ಪ್ರಾಚೀನ ಭಾರತೀಯ ರಂಗಭೂಮಿಯ 'ಮುದ್ರಾರಾಕ್ಷಸ' ಎಂಬ ಕಾವ್ಯದಿಂದ ಚಾಣಕ್ಯನ ಅದ್ಭುತ ಪ್ರತಿಭೆಯು ಪ್ರದರ್ಶಿತವಾಗುವುದು. ಸದಾ ಪೌರುಷಪೂರ್ಣನಾಗಿಯೂ, ನೀತಿವಿಶಾರದನಾಗಿಯೂ, ಹಗೆಯನ್ನಳಿಸುವ ತಂತ್ರಗಳನ್ನು ಹೂಡುವುದರಲ್ಲಿ ಅಗ್ರಗಣ್ಯನಾಗಿಯೂ, ಮುಯ್ಯಿಗೆ ಮುಯ್ಯಿ ತೀರಿಸುವ [illegible] ಬೆಂಬಿಡದ ಛಲವುಳ್ಳವನಾಗಿಯೂ, ಗುರಿಯನ್ನು ತಲಪುವ ಧ್ಯೇಯತೆಯಿಂದ ಕಾರ್ಯತತ್ಪರನಾಗಿಯೂ ಇದ್ದ ಚಾಣಕ್ಯನು ಮೌರ್ಯಸಾಮ್ರಾಜ್ಯದ ಕಡಿವಾಣವನ್ನು ತನ್ನ ಕೈಯಲ್ಲಿ ಹಿಡಿದು ಲೀಲಾಜಾಲವಾಗಿ ಸಾಮ್ರಾಜ್ಯವನ್ನು ನಡೆಸುತ್ತಿದ್ದರೂ ಅಧಿಕಾರದರ್ಪದಿಂದ ರಾಜ್ಯವನ್ನು ನೋಡದೆ, ತಾನು ರಾಷ್ಟ್ರದ ಕೇವಲ ಒಬ್ಬ ಸೇವಕನೆಂದು ಭಾವಿಸಿ ಮಹಾ ಮತಿಯಾಗಿದ್ದನು. ವಿರಕ್ತನಾಗಿ ರಾಜ್ಯವಿಜಯಾನಂತರ ತನ್ನ ಸ್ಥಾನಮಾನದ ಆಮೋದಪ್ರಮೋದಗಳಿಗೆ ಮೋಹಗೊಳ್ಳದೆ ತನ್ನ ಉದ್ದಿಷ್ಟಸಾಧನೆಯೊಡನೆ ಆತ್ಮೀಯ ಧರ್ಮರೀತ್ಯಾ ಏಕಾಂತಜೀವಿಯಾಗಿ ಆತ್ಮಕಲ್ಯಾಣ ಸಾಧಕನಾಗಲು ಹವಣಿಸಿದನು.

ಉದ್ದಿಷ್ಟಸಾಧನೆಗಾಗಿ ಎಂಥ ಕೆಲಸವನ್ನು ಮಾಡಲೂ ಹಿಂಜರಿಯದವನಾದರೂ ಚಾಣಕ್ಯನು ತನ್ನ ಹಟಸಾಧನೆಯನ್ನು ಕ್ಷುದ್ರಮಾರ್ಗದಿಂದ ಮಾಡಿದರೆ ತನ್ನ ಉದ್ದಿಷ್ಟಕ್ಕೇ ಭಂಗಬರಬಹುದೆಂದು ತಿಳಿದವನಾಗಿದ್ದನು. ಯಾವುದೇ ರಾಜನೀತಿಯ ಒಂದಂಗವಾದರೂ ಮಹದುದ್ದಿಷ್ಟಸಾಧನೆಗಾಗಿ ಮಾತ್ರ ಹೂಡಲ್ಪಡಬೇಕೆಂದೂ ಕೇವಲ ವೈರಬಲದ ನಾಶವೇ ಧ್ಯೇಯವಾದ ಯುದ್ಧವು ಅನೈತಿಕವೆಂದೂ ಚಾಣಕ್ಯನು ಪ್ರತಿಪಾದಿಸಿದನು. ರಾಜಕಾರಣಿಯು ಯುದ್ಧದ ಫಲಿತಾಂಶದಿಂದಾಗಿ ತನ್ನ ರಾಷ್ಟ್ರದ ಸಂಪದಭಿವೃದ್ಧಿಯನ್ನು ನೋಡುವ ದೂರದೃಷ್ಟಿಯುಳ್ಳ ಚಾಣಾಕ್ಷನಿರಬೇಕೇ ಹೊರತು ಯುದ್ಧದಿಂದ ಶತ್ರುರಾಷ್ಟ್ರದ ನಾಶವನ್ನು ಸಾಧಿಸಲು ಹವಣಿಸಿದರೆ ಅಂಥಾ ರಾಜಕಾರಣವು ಪ್ರಶಂಸಾರ್ಹವಲ್ಲವೆಂದು ಅವನ ಅಭಿಮತವಿತ್ತು. ಇಕ್ಕಡೆಗಳಲ್ಲೂ ಯುದ್ಧದಿಂದಾಗಿ ಕೇವಲ ನಾಶವೇ ಉಂಟಾಗುವುದಾದರೆ ಅದು ರಾಜನೀತಿಯ ಕ್ಷೋಭೆಯನ್ನೇ ಸೂಚಿಸುತ್ತದೆ. ಸಮರರಂಗದಲ್ಲಿ ಸೈನಿಕ ಕಾಳಗವು ಯುದ್ಧದ ಪ್ರಧಾನಾಂಗವಾದರೂ ಎದುರಾಳಿಯ ಮನೋಬಲವನ್ನು ಕುಗ್ಗಿಸಿ, ಎದುರುಬಲದಲ್ಲಿ ಒಳಜಗಳವನ್ನು ಹೆಚ್ಚಿಸಿ ಸಾಮ, ದಾನ, ಭೇದೋಪಾಯಗಳಿಂದ ಶತ್ರುವನ್ನು ನಿಗ್ರಹಿಸುವ ರಾಜನೀತಿಗೆ ಚಾಣಕ್ಯನು ಹೆಚ್ಚು ಪ್ರಾಧಾನ್ಯವಿತ್ತನು. ಹಟಸಾಧನೆಗಾಗಿ ಏನು ಮಾಡಲೂ ಹಿಂಜರಿಯದವನಾದರೂ ಪ್ರತಿಭಾನ್ವಿತ ಶತ್ರುವನ್ನು ನಿಗ್ರಹಿಸುವುದರ ಬದಲು ಸಾಮದಾನೋಪಾಯಗಳಿಂದ ಜಯಿಸುವುದು ಶ್ರೇಯಸ್ಕರವೆಂದು ಚಾಣಕ್ಯನ ಅಭಿಪ್ರಾಯವಿದ್ದಿತು. ಶತ್ರುಪಕ್ಷದಲ್ಲಿ ಕಲಹವನ್ನು ಬಿತ್ತಿ ಶತ್ರುವು ನಾಶೋನ್ಮುಖನಾದಾಗ ಅಂಥಹ ಶತ್ರುವನ್ನು ಉದಾರ ಬುದ್ಧಿಯಿಂದ ಕ್ಷಮಿಸಿ ಶತ್ರುವಿನ ಸಚಿವನಿಗೆ ಉನ್ನತಾಧಿಕಾರವನ್ನೂ ಪದವಿಯನ್ನೂ ಚಾಣಕ್ಯನು ಕೊಟ್ಟನು. ಚಾಣಕ್ಯನ ರಾಜನೀತಿಯ ವೈಖರಿಯನ್ನು ಬಣ್ಣಿಸುವ ಮುದ್ರಾರಾಕ್ಷಸವು ದುರಂತದಲ್ಲಿ ಕೊನೆಗಾಣುವ ಬದಲು ಸೌಹಾರ್ದ ಸಂತೋಷಗಳಿಂದ ಮುಕ್ತಾಯವಾಗಿ ಮಹಾಸಾಮ್ರಾಜ್ಯದ ಆಸ್ತಿಭಾರವನ್ನು ಹಾಕುವ ರಾಜನೀತಿಯನ್ನು ಬೋಧಿಸುವುದು.

ಮೌರ್ಯಸಾಮ್ರಾಜ್ಯವು ಗ್ರೀಕ್ ಮುಂತಾದ ಪರರಾಷ್ಟ್ರಗಳೊಡನೆ ರಾಜನೈತಿಕ ಸಂಬಂಧವನ್ನು ಬೆಳೆಸಿದ್ದಿತು. ವಾಣಿಜ್ಯ ಪ್ರಧಾನವಾದ ಈ ಸಂಬಂಧಗಳು ವ್ಯಾಪಾರವಹಿವಾಟುಗಳಿಗೆ ಅನ್ವಯಿಸಿದವುಗಳಾಗಿದ್ದುವು. ಅನುಭವಸಿದ್ಧವಾದ ಜ್ಞಾನವೂ ತದನುಸಾರವಾದ ಕ್ರಿಯೆಯೂ ಒಗ್ಗೂಡಿದ ಚಂದ್ರಗುಪ್ತ ಚಾಣಕ್ಯರಿಂದ ಆಳಲ್ಪಟ್ಟ ಮೌರ್ಯಸಾಮ್ರಾಜ್ಯವು ಭರತಖಂಡದ ವಿಜಯದುಂದುಭಿಯನ್ನು ನಾಲ್ದೆಸೆಗಳಲ್ಲಿ ಮೊಳಗಿಸಿತು.

ನೋಟೀಸು.

ಕೊಡಗು ಕ್ಲಾತ್ ಮರ್ಚೆಂಟ್ಸ್ ಕಂಪೆನಿಯಿಂದ ಪ್ರೊಸ್ಪಂಪೇಟಿಯು ಶ್ರೀ ಎ. ಎಂ. ಶಕ್ರಿ ಅಂಡ್ ಬ್ರದರ್ ಇವರಿಗೆ ಕೊಡಲ್ಪಟ್ಟ ೧೦೪೫ರಿಂದ ೧೦೫೭ರ ವರೆಗಿನ ೧೩ ಶೇರುಗಳ ನಂಬರು ೧೯೧ನೇ ಶೇರು ಸರ್ಟಿಫಿಕೇಟು ಕಾಣೆಯಾಗಿದೆ. ಇದನ್ನು ಪಡೆದಿರುವವರು ಈ ತಿಂಗಳ ಅಂತ್ಯದೊಳಗೆ ಕೆಳಗಿನ ಪತ್ತೆಗೆ ಹಾಜರ್ ಮಾಡುವುದು. ಅನಂತರ ಬಂದ ಯಾವ ವಿಚಾರಕ್ಕೂ ಗಮನ ಕೊಡಲಾಗುವದಿಲ್ಲವೆಂದು ಈ ಮೂಲಕ ತಿಳಿಸಿದೆ.

ಲಿಕ್ವಿಡೇಟರ್,
ಕೊಡಗು ಕ್ಲಾತ್ ಮರ್ಚೆಂಟ್ಸ್ ಕಂಪೆನಿ,
4-4 ಮಡಿಕೇರಿ.

ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್, ಮಡಿಕೇರಿ.

ಮಹಾಜನರಲ್ಲಿ ವಿನಂತಿ.

ನಮ್ಮ ಫ್ರೇಜರ್‌ಪೇಟೆ ಕಾರ್ಖಾನೆಯಲ್ಲಿ ಈಗಲೇ ಮೂಳೆಗೊಬ್ಬರ ತಯಾರಾಗುತ್ತಿರುವುದು ಎಲ್ಲರಿಗೂ ತಿಳಿದ ವಿಷಯ. ಈ ಸಂದರ್ಭದಲ್ಲಿ ನಿಮ್ಮ ನಿಮ್ಮ ಗ್ರಾಮಗಳಲ್ಲಿ ಸತ್ತ ದನಗಳ ಮತ್ತು ಇತರ ಪ್ರಾಣಿಗಳ ಮೂಳೆಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಜಮಾಯಿಸಿ ಮೇಲಿನ ವಿಳಾಸಕ್ಕೆ ತಿಳಿಸಿದಲ್ಲಿ ಅದನ್ನು ಉಚಿತ ಬೆಲೆ ಕೊಟ್ಟು ಸಾಗಿಸುವ ಏರ್ಪಾಡನ್ನು ಮಾಡುತ್ತೇವೆ. ಅಥವಾ ಲಾರಿಗಟ್ಟಲೆ ಜಮಾಯಿಸಿದವರು ನಮ್ಮ ಫ್ರೇಜರ್‌ಪೇಟೆ ಕಾರ್ಖಾನೆಗೆ ತಂದು ಕೊಟ್ಟಲ್ಲಿ ಮಣ 1ಕ್ಕೆ 0-12-0 ಯಂತೆ ಬೆಲೆಗೆ ತೆಗೆದುಕೊಳ್ಳಲಾಗುವುದು.

ಈಗಾಗಲೇ ತಯಾರಾಗಿರುವ ಮೂಳೆ ಗೊಬ್ಬರಕ್ಕೆ ಖರೀದಿದಾರರು ಬರಕೊಂಡಲ್ಲಿ ಅಗ್ರಸ್ಥಾನವನ್ನನುಸರಿಸಿ ಬಟವಾಡೆ ಮಾಡಲಾಗುವುದು.

ಸೂಚನೆ.-ನಮ್ಮ ಕಂಪೆನಿಯ ಶೇರುದಾರರಿಗೆ ಹೆಚ್ಚಿನ ರಿಯಾಯಿತಿ ಮತ್ತು ಮೊದಲಿನ ಹಕ್ಕು ಕೊಡಲಾಗುವುದು.

ಮಡಿಕೇರಿ, ತಾ. 19-5-49.

ಕೆ ಕೆ ತಿಮ್ಮಯ್ಯ, ಮೆನೇಜಿಂಗ್ ಡೈರೆಕ್ಟರ್.

ಭದ್ರತೆ! 17 ವರ್ಷಗಳ ಪರಿಪಕ್ವ ಅನುಕೂಲತೆ!! ಅನುಭವಶೀಲತೆ!!

ದಿ ವಿಜಯ ಬೇಂಕ್ ಲಿಮಿಟೆಡ್

ಮುಖ್ಯ ಕಚೇರಿ,
ಕದ್ರಿ ರೋಡ್, ಮಂಗಳೂರು.

ನಿರಖು ಠೇವಣಾತಿ ಬಡ್ಡಿದರ:

3	ತಿಂಗಳು	3%
6	,,	3½%
12	,,	3¾%
24	,,	4%

ರೂಪಾಯಿ ೧೫,೦೦೦ಕ್ಕೆ ಮಿಗಿಲದ ಒಂದೇ ಡಿಪಾಜಿಟ್ಟಿಗೆ ಮೇಲಿನ ದರಕ್ಕಿಂತ ¼% ಹೆಚ್ಚಿಗೆ.

ಶಾಖೆಗಳು:- ಸಿಟಿ ಮಂಗಳೂರು, ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಕಾಸರಗೋಡ, ಕಾಞಂಗಾಡ್, ಪುತ್ತೂರು, ಮಡಿಕೇರಿ ಮತ್ತು ಮುಂಬಾಯಿ.

ಒಟ್ಟು ವಹಿವಾಟು ಭಂಡವಾಳ ರೂ. ೪೦ ಲಕ್ಷಕ್ಕೂ ಮೀರಿದೆ ಎಲ್ಲಾ ವಿಧದ ಆಧುನಿಕ ಬೇಂಕಿಂಗ್ ವಹಿವಾಟುಗಳು ದಕ್ಷತೆಯಿಂದ ನಡೆಸಲ್ಪಡುವವು.

ಹೆಚ್ಚಿನ ವಿವರಗಳಿಗೆ ಬರೆಯಿರಿ:- ಏಜಂಟ್, ಮಡಿಕೇರಿ ಶಾಖೆ, ಮಡಿಕೇರಿ.

12-4

ವಿಮೆ ಮಾಡಲು ಇಲ್ಲವೇ ಪ್ರತಿನಿಧಿಸಲು

ಕೊಟ್ಟಿಕಾರ್ ಬ್ರದರ್ಸ್, ಲಿಮಿಟೆಡ್.

ಇವರ ಸಲಹೆಗಿಂತ ಉತ್ತಮ ಮಾರ್ಗವಿಲ್ಲ.

ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದೂಸ್ಥಾನದ ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು

ದಿ ಬೊಂಬಾಯಿ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

30 ಮೌಂಟ್ ರೋಡ್, ಪೋ. ಬಾ. ನಂ. 337, ಮದ್ರಾಸು 2 (ಟೆಲಿಫೋನ್ ನಂ. 8698)

ಬೊಂಬಾಯಿ ಲೈಫ್ ಬಿಲ್ಡಿಂಗ್, ಪೋ. ಬಾ. ನಂ. 1, ಉಡುಪಿ.

ಇತರ ಆಫೀಸುಗಳು:—ಬೆಂಗಳೂರು, ತಿರುವೆಂದರಂ, ಕಲ್ಲಿಕೋಟೆ, ಮಂಗಳೂರು, ಮಧುರೆ, ಮತ್ತು ಬೊಂಬಾಯಿ.

ದಿ ಟ್ರಾಪಿಕಲ್

ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:- ಲಾಲ ಶಂಕರ್ ಲಾಲ್.

ಮುಖ್ಯ ಕಚೇರಿ:- ಹೊಸ ಡೆಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್ ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮಲಖಾನ್. ಡಾ|| ಎಂ. ಎ. ಅನ್ಸಾರಿ.

Transacts:—Life, Fire, Motor and Marine.

ನಮ್ಮ ಹೊಸ ವಿಸ್ತಾರದ ಯೋಜನೆಯಲ್ಲಿ ಆಕರ್ಷಕ ಕಮಿಷನ್ ಮೇಲೆ ಏಜನ್ಸಿಗೆ ದಯವಿಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಆರ್ಗನೈಜರ್, ದಕ್ಷಿಣ ಕೊಡಗು, ಪೊನ್ನಂಪೇಟೆ
ಅಥವಾ
ಯಂ. ಯಂ. ಅಚ್ಚಣ್ಣ,
ಏಜನ್ಸಿ ಸುಪರಿಂಟೆಂಡೆಂಟ್,
ಮಡಿಕೇರಿ, ಕೊಡಗು.

ಆರ್ಗನೈಜರ್, ಉತ್ತರ ಕೊಡಗು, ಮಡಿಕೇರಿ
ಅಥವಾ
ಎಂ. ಎ ಬೆಳ್ಯಪ್ಪ,
ಬ್ರಾಂಚ್ ಸೆಕ್ರೆಟರಿ,
ಹಂಪನಕಟ್ಟಾ, ಮಂಗಳೂರು.

ಎಂಪೈರ್ ಆಫ್ ಇಂಡಿಯಾ

ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

48ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು:

ಒಟ್ಟು ಆದಾಯ	1,07,09,000	ಮೀರಿದೆ
ಜಾರಿಯಿರುವ ವಿಮೆ	17,74,52,000	,,
ಆಸ್ತಿ	6,67,60,000	,,
ಕಂಪೆನಿಯು ಆದಿಯಲ್ಲಿ ಕೊಟ್ಟ ಕ್ಲೈಮುಗಳು	8,83,62,000	,,

ಅಂಗ ಕಛೇರಿ: ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡ ರಸ್ತೆ, ಬೆಂಗಳೂರು.

ಏಜೆನ್ಸಿ ಅರ್ಜಿಗಳನ್ನು ಸ್ವಾಗತಿಸಿದೆ.

ಪ್ರಧಾನ ಕಛೇರಿ: ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ.

CRESCENT

FOR PROTECTION AND SERVICE.

It is best to represent and insure with

The CRESCENT Insurance Co, Ltd,

H. O: BOMBAY.] [*Established 1919.*

For particulars write to:

Sri B. A Poovaiah, *Organiser*, *Pollibetta, Coorg.*

or

The Branch Manager, *22 B. Mahatma Gandhi Road, Bangalore 1.*

ಸುರಕ್ಷಿತವಾದ ಜೀವವಿಮೆ ಪಡೆಯಲು

ಕ್ರೆಸೆಂಟ್

ಇನ್ಶ್ಯೂರೆನ್ಸ್ ಕಂಪೆನಿಗೆ ಬರೆಯಿರಿ.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,65,000.
ಕ್ಷೇಮನಿಧಿ	ರೂ.	50,000.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ಕು ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ ಮತ್ತು ನಾರ್ದರ್ನ್ ಇನ್ಶ್ಯೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಖಜಾಂಚಿ.

Edited, Printed and Published by P. I. Bellappa at 'Kodagu' Press, Mercara, for 'Kodagu' Ltd.

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಟಿ. ಐ. ಬೆಳ್ಳಿಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೨೮ | ತಾರೀಕು ೧೫-೭-೧೯೪೯ನೇ ಶುಕ್ರವಾರ | ಸಂಚಿಕೆ ೭

ವಿಶೇಷ ಲೇಖನ

॥ ಹಿಟ್ಲರನಿಗೆ ಅನುಪಮ ಸ್ಮಾರಕ. ॥

ಲೇ:—ಶ್ರೀ ಬಿ. ಡಿ. ಗಣಪತಿ.

ಸತ್ತವರಿಗೆ ಗೋರಿ, ಸ್ತೂಪಗಳನ್ನು ಸ್ಮಾರಕವಾಗಿ ಕಟ್ಟುವುದಿದೆ. ಇಲ್ಲವೇ ಸತ್ತವರ ಚಿತ್ರಗಳನ್ನು ಕಲ್ಲಿನಲ್ಲಿ ಕೆತ್ತುವದಿದೆ. ಇವು ನಿಕೃಷ್ಟ ರೀತಿಯ ಸ್ಮಾರಕಗಳು! ಸತ್ತವನು ಯಾವ ತತ್ವಕ್ಕಾಗಿ ಶ್ರಮಿಸಿದನ; ಯಾವ ಮಾರ್ಗವನ್ನನುಸರಿಸಿ ದುಡಿದನ; ಅದೇ ಮಾರ್ಗವನ್ನು ಉಳಿದವರು ಅನುಸರಿಸಿ ಅದೇ ಧ್ಯೇಯಕ್ಕಾಗಿ ದುಡಿದರೆ ಅದಕ್ಕಿಂತಾ ಉತ್ತಮವಾದ ಸ್ಮಾರಕ ಬೇರಿರಲಾರದು. ಇಂಥಾ ಅನುಯಾಯಿಗಳಿಂದ ಮೃತರ ಆತ್ಮಕ್ಕೆ ಶಾಂತಿಯು ದೊರೆಯುವದಲ್ಲದೆ ಅವರ ಜೀವನವೂ ಅನುಪಮ ಸಾರ್ಥಕವನ್ನು ಪಡೆಯುವದು. ಈ ದೃಷ್ಟಿಯಿಂದ ಅಳೆದು ನೋಡಿದರೆ ಜಗತ್ತಿನಲ್ಲಿ ಹಿಟ್ಲರನಿಗೆ ರಚಿಸಲ್ಪಟ್ಟಂಥಾ ಸ್ಮಾರಕ ಬಹುಶಃ ಯಾರಿಗೂ ರಚಿಸಲ್ಪಟ್ಟಿಲ್ಲ; ಭವಿಷ್ಯದಲ್ಲಿ ರಚಿಸಲ್ಪಡಲಾರದು. ಈ ಸ್ಮಾರಕವನ್ನು ರಚಿಸಿದವರು ಕೇವಲ ಜರ್ಮನಿಯವರೇ ಅಲ್ಲ; ಜಗತ್ತಿನ ಎಲ್ಲಾ ರಾಷ್ಟ್ರಗಳೂ, ಜನಾಂಗಗಳೂ ತುಂಬು ಹೃದಯದಿಂದ ಈ ಸ್ಮಾರಕಕ್ಕೆ ಸಹಾಯ ಮಾಡಿದ್ದಾರೆ. ಈ ಮಹಾಸ್ಮಾರಕವನ್ನು ರಚಿಸಿ, ಸತ್ತರೂ ಹಿಟ್ಲರನು ಜೀವಂತವಿರುವಂತೆ ಹೇಗೆ ಮಾಡಿರುವರೆಂಬುವದಕ್ಕೆ ಕೆಲವು ನಿದರ್ಶನಗಳನ್ನು ಇಲ್ಲಿ ತೆಗೆದುಕೊಳ್ಳುವಾ.

(೧) ತನ್ನ ಅಧಿಕಾರವೇ ಸರ್ವಾಧಿಕಾರ. ತಾನು ಆಜ್ಞೆ ಮಾಡುವವನ; ಉಳಿದವರು ಅದನ್ನು ಪಾಲಿಸುವವರು. ತಾನು ಮಾಡಿದ ನಿರ್ಣಯವು ದೋಷರಹಿತವಾದುದು. ಅವರಲ್ಲಿ ಬದಲಾವಣೆ ಸಾಧ್ಯವಿಲ್ಲವೆಂಬುದು ಹಿಟ್ಲರನ ಮರ್ಜಿ. ಈ ಭಾವನೆ ಇಂದು ಇಲ್ಲದವರು ಎಷ್ಟು ಜನರಿದ್ದಾರೆ. ರಕ್ತಬೀಜಾಸುರನ ಒಂದು ರಕ್ತದಿಂದ ಸಹಸ್ರಾರು ರಕ್ತಬೀಜಾಸುರರು ಹುಟ್ಟಿದಂತೆ ಹಿಟ್ಲರನೊಬ್ಬನ ನಿಧನದಿಂದ ಲಕ್ಷಾಂತರ ಮರಿಹಿಟ್ಲರರು ಉದಯಿಸಿದ್ದಾರೆ. ಯಾವ ಕ್ಷೇತ್ರದಲ್ಲಿ, ಯಾವ ದೇಶದಲ್ಲಿ, ಯಾವ ಜನಾಂಗದಲ್ಲಿ ಇವರಿಲ್ಲ? ಇವರಿಗೆ ಜಾತಿ, ಧರ್ಮದ ಭೇದವಿಲ್ಲ; ಬಡವ, ಬಲ್ಲಿದರೆಂಬ ವ್ಯತ್ಯಾಸವಿಲ್ಲ. ಪ್ರತಿಯೊಂದು ಮನೆ, ಪ್ರತಿಯೊಂದು ಸಂಘ, ಸಂಸ್ಥೆ, ಖಚೇರಿ, ಕಾರಖಾನೆ, ಹೆಚ್ಚೇಕೆ ಪ್ರತಿ ಕಾರ್ಯಕ್ಷೇತ್ರದಲ್ಲಿಯೂ ಇವರಿದ್ದಾರೆ. ಇಷ್ಟೊಂದು ದೊಡ್ಡ ಸಂತಾನ, ಇಷ್ಟೊಂದು ಸಂಖ್ಯೆಯ ಅನುಯಾಯಿಗಳು ಹಿಟ್ಲರನಿಗಲ್ಲದೆ ಬೇರೆಯಾರಿಗೂ ಇಲ್ಲವೆಂದು ನಿಸ್ಸಂದೇಹವಾಗಿ ಹೇಳಬಹುದು.

(೨) ಹಿಟ್ಲರನು ನಾಝಿ ಪಕ್ಷವನ್ನು ಸ್ಥಾಪಿಸಿದ. ಅದರಲ್ಲಿ ಸ್ವತಂತ್ರ ಭಾವನೆಗೆ ಎಡೆ ಇರಲಿಲ್ಲ. ಸಂಕುಚಿತ ಬುದ್ಧಿ, ಕಟ್ಟುಗ್ರನೀತಿ, [illegible] ಆರ್ಯರ ಕುಲ, ಉಳಿದವರು ದಲಿತ ಕುಲ, ಲೋಕದಲ್ಲಿ ಆರ್ಯರು ಬಾಳಬೇಕು, ಇನ್ನು ಬೇರೆಯವರಿಗೆ ಸ್ಥಾನವಿಲ್ಲವೆಂದು ಪಕ್ಷವು ಹೋರಾಡಿದವು.

ಈ ಸ್ವಭಾವದ ಪಕ್ಷಗಳು ಎಲ್ಲೆಲ್ಲೂ ತಲೆ ಎತ್ತಿವೆ. ಹಿಟ್ಲರ್ ಸಂತಾನಿಗರು ಎಡೆಬಿಡದೆ ಹಬ್ಬಿದ್ದಾರೆ. ಮದ್ರಾಸೇ, ಬಂಗಾಳವೇ, ಸಿಂಧೇ, ಕರ್ನಾಟಕವೇ, ಕೊಡಗು ಕೊಡಗೇ—ಎಲ್ಲೆಲ್ಲೂ ನಾಝಿ ತತ್ವದ ಪಕ್ಷಗಳೇ. ಅವರು ಹೇಳಿದ್ದೆ ಸತ್ಯ. ಅವರದ್ದೇ ಸಿದ್ಧಾಂತ. ಅವರೇ ಯೋಗ್ಯರು. ಅವರೇ ಅಧಿಕಾರ ಪಡೆಯಬೇಕು. ಉಳಿದವರಿಗೆ ಜಗತ್ತಿನಲ್ಲಿ ಸ್ಥಾನವಿಲ್ಲ. ಈ ಭಾವನೆ ಸಾರ್ವತ್ರಿಕ ಹಬ್ಬಿದೆ. ನಾಝಿ ಪಕ್ಷ ಇಡೀ ಜಗತ್ತನ್ನೇ ಆವರಿಸಿದೆ. ಹಿಟ್ಲರರು ಅಸಂಖ್ಯ ಸಂಖ್ಯೆಯಲ್ಲಿ ಹುಟ್ಟಿಕೊಂಡಿದ್ದಾರೆ.

(೩) ನಾಝೀ ಪಕ್ಷವು ಲೋಕವನ್ನು ಆಕ್ರಮಿಸಿ ನಾಝಿ ಆಡಳಿತ ಛತ್ರಿಯಡಿಯಲ್ಲಿ ಜಗತ್ತು ಇರಬೇಕು; ಎಂಬ ಧ್ಯೇಯದಿಂದ ಜಗತ್ತಿನ ಸ್ವಾಮಿತ್ವಕ್ಕಾಗಿ ಹಿಟ್ಲರನು ಯುದ್ಧ ಮಾಡಿದ. ಹಿಟ್ಲರನು ಯುದ್ಧದಲ್ಲಿ ಪರಾಜಯ ಪಡೆದು ಸತ್ತನು. ಆದರೆ ಸತ್ತವನನ್ನು ಮರೆಯುವಷ್ಟು ಗೆದ್ದವರು ಆತ್ಮವಂಚಕರಲ್ಲ. ಹಿಟ್ಲರನ ಸ್ಮಾರಕವನ್ನು, ಗೆದ್ದವರು ಸತ್ತ ದೃಷ್ಟಿಯಿಂದ ರಚಿಸತೊಡಗಿದರು. ಇದಕ್ಕಾಗಿ ಸಂಯುಕ್ತ ರಾಷ್ಟ್ರಸಂಘದ ರಚನೆಯಾಯಿತು. ಹಿಟ್ಲರನು ಯಾವ ಧ್ಯೇಯಕ್ಕಾಗಿ ಹೋರಾಡಿದನೋ ಅದೇ ಧ್ಯೇಯವನ್ನು ಈ ಗೆದ್ದ ಪ್ರಬಲ ರಾಷ್ಟ್ರಗಳು ಅನುಸರಿಸಿವೆ. ರಷ್ಯಾವು ಜಗತ್ತು ತನ್ನ ಛತ್ರಿಯಡಿಯಲ್ಲಿರಬೇಕೆಂದೂ, ಅಮೇರಿಕಾ ಬ್ರಿಟನುಗಳು ತಮ್ಮ ಹಿಡಿತದಲ್ಲಿರಬೇಕೆಂದೂ ಸಾರುತ್ತಿವೆ. ಹಿಟ್ಲರನಿಗೆ [illegible] ಇನ್ನಷ್ಟು ಭಕ್ತಿಯ ಅನುಯಾಯಿಗಳು [illegible] ದೊರೆತಿದ್ದಾರೆ?

(೪) ತಾನು ಸರ್ವಾಧಿಕಾರಿ. ತನ್ನ ಆಣತಿಗೆ ಎದುರಿಲ್ಲ. ಜಗತ್ತು ತನ್ನ ಹಿಡಿತದಲ್ಲಿರಬೇಕೆಂದು ಹಿಟ್ಲರನು ಆಶಿಸಿ ತನ್ನ ಜೀವಿತದಲ್ಲಿ ಅದನ್ನು ಸಾಧಿಸಿಕೊಳ್ಳಲಾಗಲಿಲ್ಲವಾದರೂ ಸತ್ತ ಮೇಲೆ ಜಯ ಪಡೆದನು! ಇಂದು ಹಿಟ್ಲರ್ ಮರ್ಜಿ, ಮನೋವೃತ್ತಿಯ ಅಂಶಗಳು ಯಾರಲ್ಲಿ ಅಧಿಕ ಇವೆಯೋ ಅವರ ಹಿಡಿತದಲ್ಲಿಯೇ ಜಗತ್ತು ಇದೆ. ಅವರೇ ಇಂದು ಜಗತ್ತಿನ ಸೂತ್ರಧಾರಿಗಳು, ಅವರೇ ಪ್ರತಿಭಾವಂತರು. ಇವರ ಮೂಲಕ ಹಿಟ್ಲರನ ಅಂದಿನ ಕನಸು ಇಂದು ನನಸಾಗಿದೆ. ಇಡೀ ಜಗತ್ತಿನ ಸೂತ್ರ ಈ ಮರಿಹಿಟ್ಲರರ ಕೈಯಲ್ಲಿದೆ. ಮಹಾತ್ಮಾಗಾಂಧೀಯವರು ಪರಂಧಾಮವನ್ನೈದಿದಾಗ ನಾವೆಲ್ಲರೂ ಅತ್ತೆವು ಕೂಗಿ ಹೇಳಿದೆವು. 'ನಿನ್ನ ತತ್ವಗಳನ್ನು ಅನುಷ್ಠಾನದಲ್ಲಿ ತಂದು ನಿನ್ನ ಜೀವನ ಧ್ಯೇಯವನ್ನು ಸಫಲಗೊಳಿಸುವೆವು' ಎಂದು. ಆದರೆ ಹತ್ತಿರದ ಗಾಂಧಿಯನ್ನು ಮರೆತೆವು. 'ಬಾಪೂ' ಎಂದು ಕರೆದರೂ ಪಿತೃದ್ರೋಹಿ ಮಕ್ಕಳಂತೆ ವರ್ತಿಸಿದೆವು. ಗಾಂಧೀಜಿಯನ್ನು ಮರೆತು ಹಿಟ್ಲರನನ್ನು ಸ್ವಾಗತಿಸಿದೆವು. ಗಾಂಧೀ ಸ್ಮಾರಕಕ್ಕೆ ನಾಲ್ಕು ಕಾಸು ತೆತ್ತು ಹಿಟ್ಲರನಿಗೆ ಎಂದೂ ಅಳಿಯದ ಚಿರಸ್ಮಾರಕವನ್ನು ರಚಿಸಿದೆವು.

(೫) ಜಗತ್ತಿನಲ್ಲಿ ಹಿಟ್ಲರನಿಗಿಂಥಾ ಮೊದಲು ಕ್ರಿಸ್ತ, ಬುದ್ಧ, ವಿವೇಕಾನಂದ ಮೊದಲಾದವರು ಜನಿಸಿದ್ದರು. ಆತನ ಸಮಕಾಲಿ-ಸರಂಗಿ ಮಹಾತ್ಮ ಗಾಂಧೀ ಮೊದಲಾದವರು ಹುಟ್ಟಿದರು. ಇವರೆಲ್ಲರ ಪ್ರಭಾವವೂ ಹಿಟ್ಲರ್ ಪ್ರಭಾವವನ್ನು ಮೀರಿಸಲಿಲ್ಲ. ಜಗತ್ತಿನ ಜನರಲ್ಲಿ ತಾತ್ವಿಕ ವೃತ್ತಿಗಿಂಥಾ ಹಿಟ್ಲರ್ ವೃತ್ತಿಯೇ ಹೆಚ್ಚಾಗಿ ತೋರುತ್ತದೆ. ಉದಾಹರಣೆಗಾಗಿ ಗಾಂಧೀಜಿಯವರ ಪವಿತ್ರ ಜೀವನ ಮತ್ತು ಅಂತಿಮದಲ್ಲಿ ತನ್ನ ಹೃದಯದಿಂದ ಚೆಲ್ಲಿದ ಆ ಪವಿತ್ರ ರಕ್ತದಿಂದ ಕಲ್ಮಷ ಬುದ್ಧಿಯು ಕೆಲಮಟ್ಟಿಗೆ ತೊಳೆದು ಹೋಗಿರುವ ಭಾರತೀಯನೊಬ್ಬನ ಮನೋವೃತ್ತಿಯನ್ನೇ ಪರಿಶೀಲಿಸುವ. ಅದರಲ್ಲೂ ಗಾಂಧೀ ಭಕ್ತರೆಂದು ಹೇಳಿಸಿಕೊಳ್ಳುವವರಲ್ಲಿ ಒಬ್ಬನ ಮರ್ಜಿ ಮನೋವೃತ್ತಿಗಳನ್ನೇ ತೂಗಿ ನೋಡೋಣ. ಆತನಲ್ಲಿ ಜನಹಿತಕಾರಕ [illegible]ತ್ಯ, ಅಹಿಂಸೆ, ನಿಸ್ವಾರ್ಥತೆ ಮೊ[illegible]ದ ಗಾಂಧೀ ಅಂಶಕ್ಕಿಂಥಲೂ ಹಿಂಸೆ, ಅಧಿಕಾರ ಕಾಂಕ್ಷೆ, ವ್ಯಕ್ತಿಗತ ಲಾಭದ ಲಾಲಸೆ ಮೊದಲಾದ ಹಿಟ್ಲರ್ ವೃತ್ತಿಯೇ ಹೆಚ್ಚಿರುವದು ತೋರಿಬರುವದು. ಅಹಿಂಸಾ ಮೂರ್ತಿಯಾಗಿದ್ದ ಸತ್ಯ, ತ್ಯಾಗ, ಪ್ರೇಮಗಳ ಚಿಲುಮೆಯಾಗಿದ್ದ ಗಾಂಧೀಜಿ ಇದ್ದ ಈ ದೇಶದಲ್ಲೇ ಹಿಟ್ಲರ್ ಪ್ರವೃತ್ತಿಯನ್ನು ಸೋಲಿಸಲಿಕ್ಕಾಗಲಿಲ್ಲವೆಂದರೆ ಜಗತ್ತಿನ ಇತರ ರಾಷ್ಟ್ರಗಳಲ್ಲಿ [illegible]ನ ಸಾಧಿಸುವ ಅದ್ಭುತ ನಡೆದೀತೆಂದು ನಿರೀಕ್ಷಿಸುವದು ಸಾಧ್ಯವೇ?

(೬) ಯುದ್ಧದಲ್ಲಿ ಹಿಟ್ಲರನು ಸೋತನೆಂದರೂ ಆತನು ಸತ್ತನೆಂದು ಯಾರೂ ಹೇಳಲ್ಲ. ಹಿಟ್ಲರನು ಎಲ್ಲೋ ಅಡಗಿರಬೇಕೆಂದು ಇನ್ನೂ ಊಹಿಸುವವರು ಕೆಲವರಿದ್ದಾರೆ. ಅದರಲ್ಲಿ ಸತ್ಯತೆ ಇದೆ. ಇಂದಿನ ಪ್ರಪಂಚದಲ್ಲಿ ಹಿಟ್ಲರನು ಚಿರಂಜೀವಿ. ಗಾಂಧೀಜಿಯವರು ದೇಹ ಬಲಿದಾನ ಕೊಟ್ಟು ತತ್ವತಃ ಸರ್ವಾಂತರ್ಯಾಮಿಯಾದರೆಂದು ನಾವು ಹೇಳುವಂತೆ ಹಿಟ್ಲರನು ಸತ್ತನೆಂದರೂ ತತ್ವತಃ ಲೋಕವ್ಯಾಪಿಯಾಗಿ, ಭಾವನೆ ಮತ್ತು ವ್ಯವಹಾರ ರಂಗಗಳಲ್ಲಿ ಗೆದ್ದು ವಿಜಯ ಧ್ವಜವನ್ನು ಜಗತ್ತಿನ ಸರ್ವ ದಿಕ್ಕುಗಳಲ್ಲಿ ಹಾರಿಸಿದ್ದಾನೆ. ಜಗತ್ತಿನ ಜನತೆಯಲ್ಲಿ ಬಹು ಜನವು ಹಿಟ್ಲರನನ್ನು ಆರಾಧಿಸಿ, ಹೃದಯದಲ್ಲಿ ಆತನಿಗೆ ಗುಡಿ ಕಟ್ಟಿ, ಎಂದೂ ಅಳಿಸಲಾರದ ಸ್ಮಾರಕವನ್ನು ರಚಿಸಿದ್ದೆ. ಹಿಟ್ಲರನಿಗೆ ಯುದ್ಧ ರಂಗದಲ್ಲಿ ಸೋಲಾದಾಗ ಬಹಳ ವ್ಯಥೆಯಾಗಿರಬಹುದು. ಆದರೆ ಇಂದು ಅವನ ಆತ್ಮಕ್ಕೆ ಆಗುತ್ತಿರುವ ಆನಂದಕ್ಕೆ ಅಂತ್ಯವಿರಲಾರದು. ಜಗತ್ತು ಹಿಟ್ಲರನ ಗುರುತ್ವವನ್ನು ಇಷ್ಟರ ಮಟ್ಟಿಗೆ ಸ್ವೀಕರಿಸುವದೆಂಬುದು ಆತನಿಗೂ ತಿಳಿದಿದ್ದಿರಲಾರದು. ಇಂದಿನ ಜಗತ್ತನ್ನು ನೋಡಿ ಆತನ ಆತ್ಮಕ್ಕೆ ಚಿರ ಶಾಂತಿ ದೊರೆತಿರಬಹುದು. ಪಂಡಿತರು ಹೇಳಿದಂತೆ 'In the long run, the bitterness of defeat taste as Sweet as the petals of Success' 'ಸೋಲಿನ ಕಹಿಯು ಕಾಲವಾಹಿನಿಯಲ್ಲಿ ಜಯದ ಎಸಳಿನಷ್ಟೇ ರುಚಿಕರವಾಗಿ ತೋರುವದು.' ಹಿಟ್ಲರನಿಗೆ ಹೀಗೆ ತೋರುತ್ತಿರಬೇಕಲ್ಲವೇ?

ನೋಟೀಸು.

ಹಾಸನ ಡಿಸ್ಟ್ರಿಕ್ಟ್ ಆಲೂರು ತಾಲೋಕು ಕಂಚಮ್ಮನ ಹೊಸಕೋಟೆ ಹೋಬಳಿ ಜೋಂಕರವಳ್ಳಿಯಲ್ಲಿರುವ ಮುಂಡಚಾಡಿರ ಪೌತಿ ಪೂವಯ್ಯನವರ ಮಗ ಬೆಳ್ಳಪ್ಪನು ಸಮಸ್ತ ಜನರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ:— ನಾನು ಜೋಂಕರವಳ್ಳಿ ತೋಟ, ಭೂಮಿ, ಮನೆ, ಕೂಲಿ ಲೈನು ವಗೈರೆ 1947ನೇ ಇಸವಿಯಲ್ಲಿ ಸದ್ರಿ ಆಸ್ತಿಯ ಮಾಲೀಕರಿಂದ ಶುದ್ಧ ಕ್ರಯಕ್ಕೆ ಪಡೆಕೊಂಡ ಸೊತ್ತನ್ನು ಆರಣಾಂತರದಿಂದ ದಕ್ಷಿಣ ಕೊಡಗು ಜಿಲ್ಲಾ ನಾಪೋಕ್ಲು ನಾಡು ಕಿರುಂದಾಡು ಗ್ರಾಮದ ಅಪ್ಪನೆರವಂಡ ಪೌತಿ ಬೆಳ್ಳಪ್ಪನವರ ಮಗ ಮಾಚಯ್ಯನವರ ಹೆಸರಿಗೆ ಜಮಾಬಂದಿ ವರ್ಗಾಯಿಸಿರುತ್ತೇನೆ. ಸದ್ರಿ ಆಸ್ತಿಯು ನನ್ನ ಸ್ವಾಧೀನ ಅನುಭವದ ಸೊತ್ತಾಗಿರುವದರಿಂದಲೂ, ಸದ್ರಿ ಮಾಚಯ್ಯನವರು ಅಕಾಲ ಮರಣ ಹೊಂದಿದ ಕಾರಣವೂ ನಮ್ಮಿಬ್ಬರ ಒಪ್ಪಂದಕ್ಕೆ ಕುಂದಕ ಬರುವ ಸಂಭವವಿರುವದರಿಂದ ಅದರ ನ್ಯಾಯವಾದ ಅಧಿಕಾರ ಹೊಂದಿದ ಮಾಲೀಯು ನನ್ನ ಹೊರತು ಬೇರೆ ಯಾರಿಗೂ ಸದ್ರಿ ಜೋಂಕರವಳ್ಳಿ ಆಸ್ತಿಯನ್ನು ಪರಾಧೀನ ಮಾಡಕೂಡದಾಗಿಯೂ, ಬೇರೆ ಜನರು ಗಿರ್ವಿ, ಭೋಗ್ಯ, ಕ್ರಯ ಪತ್ರ ಏನೊಂದೂ ಬರೆಸಿಕೊಳ್ಳಕೂಡದಾಗಿಯೂ, ಹಾಗೆ ನನ್ನ ತಿಳುವಳಿಕೆಯಿಲ್ಲದೆ ಬರೆಸಿಕೊಂಡಲ್ಲಿ ಅಂಥಾ ಪತ್ರ, ರದ್ದಾಗಿರತಕ್ಕದೆಂದೂ ಈ ಮೂಲಕ ತಿಳಿಸಿರುತ್ತೇನೆ.

ಜೋಂಕರವಳ್ಳಿ, ಬೆಳ್ಳಪ್ಪ.
1-7-49.

ವಿಜ್ಞಾನ ವೈಚಿತ್ರ್ಯ.

ನಿಮ್ಮ ಹೆಬ್ಬೆರಳಲ್ಲಿ ನಿಮ್ಮ ಮೆದುಳಿನ ಗುಟ್ಟು!

ಪ್ರತಿಯೊಂದು ವಸ್ತುವಿಗೂ ಆಕರ್ಷಣ ಶಕ್ತಿಯುಂಟೆಂದು ಭೌತಶಾಸ್ತ್ರಜ್ಞರು ಹೇಳುತ್ತಾರೆ. ಈ ಪರಸ್ಪರಾಕರ್ಷಣದಿಂದಲೇ ಈ ದೃಶ್ಯ ಜಗತ್ತು ಶೂನ್ಯದಲ್ಲಿ ನಿಯಮಾನುಸಾರವಾಗಿ ಸಾಗುತ್ತದೆ. ಆದರೆ ಈಚಿಗೆ ಒಂದು ನೂರು ವರ್ಷಗಳಿಂದ ನಡೆದ ಸಂಶೋಧನೆಗಳು ಒಂದು ಹೊಸ ವಸ್ತುಸ್ವಭಾವವನ್ನು ಬೆಳಕಿಗೆ ತಂದಿವೆ. ಅದೇನೆಂದರೆ, ಪ್ರತಿಯೊಂದು ವಸ್ತುವೂ ಶಕ್ತಿಯನ್ನು ಅಥವಾ ಪ್ರಕಾಶವನ್ನು ಚಿಮ್ಮಿಸುತ್ತದೆ ಅಥವಾ ತನ್ನ ಸುತ್ತಲೂ ಪಸರಿಸುತ್ತದೆ. ಗುಡ್ಡ ಬೆಟ್ಟಗಳು, ಗಿಡ ಮರಗಳು ಎಲ್ಲವೂ ಶಕ್ತಿಪ್ರಸರಣ ಮಾಡುತ್ತಲೇ ಇರುತ್ತವೆ. ಸೃಷ್ಟಿಯ ಅತ್ಯದ್ಭುತ ಚಮತ್ಕಾರವಾದ ಬುದ್ಧಿ ಅಥವಾ ಮೆದುಳು ಕೂಡ ಪ್ರಸರಣ ಶಕ್ತಿಯಿಂದೊಡಗೂಡಿರುವುದು ವಿಚಿತ್ರವಲ್ಲ.

೧೮೪೫ರಲ್ಲಿ ವಿಯೆನ್ನಾದ (ಆಸ್ಟ್ರಿಯಾ) ಪ್ರೊ. ವಾನ್ ರೀಕೆನ್‌ಬಾಕರು ಮಾನವ ದೇಹದ ವಿವಿಧ ಅಂಗಗಳ ಪ್ರಸರಣವನ್ನು ಅಳೆಯಬಹುದೆಂಬ ತತ್ವ ಪ್ರತಿಷ್ಠಾಪಿಸಿದ ನಂತರ ಹಲವು ದೇಶಗಳಲ್ಲಿ ಈ ಬಗ್ಗೆ ಹಲವು ವೈಜ್ಞಾನಿಕರು ಪ್ರಯೋಗಗಳನ್ನು ನಡೆಸಿದರು. ಇವುಗಳ ಫಲವಾಗಿ ಮೆದುಳಿನ ಪ್ರಸರಣ ಕ್ರಿಯೆಯ ಛಾಯಾಚಿತ್ರವನ್ನು ತೆಗೆಯುವದೂ ಯಂತ್ರಸಹಾಯದಿಂದ ಅದನ್ನು ಬರಿಗಣ್ಣಿಂದ ನೋಡುವದೂ ಸಾಧ್ಯವೆಂದು ಸಿದ್ಧವಾಯಿತು. ಬೋವಿಸನೆಂಬ ಫ್ರೆಂಚ್ ವೈಜ್ಞಾನಿಕನು ೨೫ ವರ್ಷ ಆಯುಷ್ಯವನ್ನು ಸವೆಸಿ ಮಾನವ ದೇಹದ ವಿವಿಧ ಅಂಗಗಳ ಶಕ್ತಿಪ್ರಸರಣವನ್ನು ಅಳೆಯುವ ಒಂದು ಸರಳವಾದ ಯಂತ್ರವನ್ನು ನಿರ್ಮಿಸಿದನು.

ಪ್ರಾಚೀನ ಸಾಮುದ್ರಿಕ ಶಾಸ್ತ್ರಜ್ಞರು ಮನುಷ್ಯನ ಜೀವಿತದ ಆಗುಹೋಗುಗಳು ಅವನ ಅಂಗೈಯಲ್ಲಿ ಬರೆಯಲ್ಪಟ್ಟಿವೆಯೆಂದು ಹೇಳಿದ್ದು ಕೇವಲ ಕಲ್ಪನಾಬಲದಿಂದಲೋ ಅನುಭವಬಲದಿಂದಲೋ ಹೇಳಲಿಕ್ಕಿಲ್ಲ. ಆದರೆ ಶರೀರದ ಪ್ರತಿಯೊಂದು ಅಂಗದ ಪ್ರಸರಣವೂ ಮನುಷ್ಯನ ಹಸ್ತದಲ್ಲಿ ಸಂದುಗೂಡಿವೆಯೆಂದೂ, ಅಂಗೈ ಮತ್ತು ಬೆರಳುಗಳ ಕೆಲ ಸ್ಥಾನಗಳ ಪ್ರಸರಣ ಭಿನ್ನತೆಯ ಮೂಲಕ ವಿಶಿಷ್ಟ ಅಂಗಗಳ ಆರೋಗ್ಯ ಅನಾರೋಗ್ಯಗಳನ್ನು ಊಹಿಸಿಕೊಳ್ಳಬಹುದೆಂದೂ ಬೋವಿಸನು ಕಂಡುಕೊಂಡನು. ಅಂಗಗಳು ಆರೋಗ್ಯವಾಗಿದ್ದಾಗ ಈ ಅಳತೆ ಯಾವಾಗಲೂ ಒಂದೇ ಆಗಿರುತ್ತಿದ್ದುದೂ ಅವನ ಗೋಚರಕ್ಕೆ ಬಂದಿತ್ತು. ಅನಾರೋಗ್ಯವಾದ ಅಂಗದ ಪ್ರಸರಣವಿಕಾರದ ಅಳತೆಯ ಮೇಲೆ ಅದಕ್ಕಾದ ರೋಗದ ಸ್ವರೂಪವನ್ನು ಕೂಡ ಊಹಿಸುವದು ಸಾಧ್ಯವೆಂದು 'ಅಮೃತ ಬಜಾರ' ಪತ್ರಿಕೆಯ ಒಂದು ಲೇಖನದಲ್ಲಿ ಈ ವಿಷಯದಲ್ಲಿ ತುಂಬ ಅಭ್ಯಾಸ ಮಾಡಿದ ಡಾ. ಅಸ್ಕರ್ ಬ್ರೂನ್ಲರರು ಬರೆಯುತ್ತಾರೆ.

ಬೇರೆ ಬೇರೆ ಪ್ರಕಾಶಗಳ ಪ್ರಸರಣದ ಅಲೆಗಳ ಉದ್ದ ಬೇರೆ ಬೇರೆ ಬಗೆಯಾಗಿರುವದು ಸಾಮಾನ್ಯ ಜ್ಞಾನದ ಮಾತು. ಹಾಗೆಯೆ ಸ್ವಸ್ಥ ಅಂಗಗಳ ಪ್ರಸರಣದ ಅಲೆಗಳ ಉದ್ದ ಕೆಂಪು ಪ್ರಕಾಶದ ಅಲೆಗಳ ಉದ್ದದ ಪಟ್ಟಿಯನ್ನು ಹೋಲುತ್ತದೆಯೆಂದು ಬ್ರೂನ್ಲರರು ಕಂಡು ಹಿಡಿದರು. ಆದರೆ ಕೈಯ ಹೆಬ್ಬೆರಳಿನ ಪ್ರಸರಣದ ಅಲೆಗಳ ಉದ್ದವೊಂದು ಸಮಸ್ಯೆಯೇ ಆಯಿತವರಿಗೆ. ಅದರ ಪ್ರಸರಣಶಕ್ತಿ ಅತಿಶಯವಾಗಿತ್ತು ಮಾತ್ರವಲ್ಲ, ಒಬ್ಬೊಬ್ಬರ ಹೆಬ್ಬೆರಳ ಶಕ್ತಿ ಪ್ರಸರಣದ ಅಳತೆ ಒಂದೊಂದು ಬಗೆಯಾಗಿತ್ತು.

ಹೆಬ್ಬೆರಳಿನ ಕೆಲ ಗುರುತುಗಳ ಮೇಲಿಂದ ಮನುಷ್ಯನ ಆತ್ಮದ ಗುಣವನ್ನು ಹೇಳುವದು ಸಾಮುದ್ರಿಕಶಾಸ್ತ್ರ ಬಲ್ಲವರಿಗೆ ಗೊತ್ತಿದ್ದ ಸಂಗತಿ. ಉದಾಹರಣೆಗಾಗಿ, ಹೆಬ್ಬೆರಳ ಮೇಲಿನ ತುಣುಕನ್ನು ಒಂದು ರೇಖೆ ಸುತ್ತುವರಿದಿದ್ದರೆ ಅದು ಕೊಲೆಗಡುಕನ ಮನೋವೃತ್ತಿಯ ದ್ಯೋತಕವೆಂದು ಹೇಳಲಾಗಿದೆ. ಡಾ. ಬ್ರೂನ್ಲರರು ಇಂಥ ಹಸ್ತರೇಖಾ ಶಾಸ್ತ್ರದ ಯಾವ ತತ್ವವನ್ನೂ ಅನುಸರಿಸದಿದ್ದರೂ ಮತ್ತು ಅವರ ಸಂಶೋಧನೆಗಳಿಗೂ ರೇಖೆಗಳಿಗೂ ಯಾವ ಸಂಬಂಧವೂ ಇಲ್ಲದಿದ್ದರೂ ಕೈಯ ಹೆಬ್ಬೆರಳಿಗೂ ಮನುಷ್ಯನ ಬುದ್ಧಿಗೂ ಇರುವ ಸಂಬಂಧ ಆಕಸ್ಮಿಕವಾಗಿ ಅವರಿಗೆ ಗೋಚರಿಸಿತು. 'ಮಂದ ಬುದ್ಧಿ'ಯ ಒಬ್ಬಳು ಹುಡುಗಿ ಅವರ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕಳಿಸಲ್ಪಟ್ಟಾಗ ಅವಳ ಹೆಬ್ಬೆರಳ ಪ್ರಸರಣ ೩೦ ಅಂಶ (ಬಯೋಮೆಟ್ರಿಕ್)ಗಳಿಗಿಂತಲೂ ಕಡಿಮೆಯಿದ್ದುದನ್ನು ಅವರು ಕಂಡರು. ಕುತೂಹಲದಿಂದ ಅವರು ಅವಳ ಬುದ್ಧಿಶಕ್ತಿಯನ್ನು ಊಹಿಸಲೆಂದು ಕೆಲ ಸಾಮಾನ್ಯ ಪ್ರಶ್ನೆಗಳನ್ನು ಕೇಳಿದರು. ಆದರೆ ಅವಳೆಷ್ಟು ದಡ್ಡಳಾಗಿದ್ದಳೆಂದರೆ 'ನಿನ್ನ ಬಲಗಾಲ ಹೆಬ್ಬೆರಳು ಯಾವುದು?' ಎಂಬಂಥ ಪ್ರಶ್ನೆಗಳಿಗೆ ಕೂಡ ಅವಳ ಉತ್ತರ ಬರಬೇಕಾದರೆ ೨ ಮಿನಿಟು ೧೫ ಸೆಕೆಂಡು ಸಮಯ ಹಿಡಿಯಿತು. ಅದರಲ್ಲಿಯೂ ವಿಚಿತ್ರವೆಂದರೆ ಪ್ರತಿಯೊಂದು ಸಾಮಾನ್ಯ ಪ್ರಶ್ನೆಗೂ ಅವಳ ಉತ್ತರ ಬರಬೇಕಾದರೆ ೨ ಮಿನಿಟು ೧೫ ಸೆಕೆಂಡುಗಳೇ ಹಿಡಿಯುತ್ತಿದ್ದವು!

ಮನುಷ್ಯನ ಅನುಭವಗಳೆಲ್ಲವೂ ಜಾಗೃತ ಚಿತ್ತದಿಂದ ಸುಷುಪ್ತಚಿತ್ತಕ್ಕೆ ಹೋಗಿ ಅಲ್ಲಿ ಜ್ಞಾನಭಂಡಾರವಾಗುತ್ತವೆ. ಒಬ್ಬನ ಬುದ್ಧಿಶಕ್ತಿ ಈ ಜ್ಞಾನಭಂಡಾರದಿಂದ ತತ್ಕಾಲಾವಶ್ಯಕ ಅನುಭವವನ್ನು ತಿರುಗಿ ಜಾಗೃತಚಿತ್ತಕ್ಕೆ ತರಿಸಿ ಅದನ್ನು ಉಪಯೋಗ ಮಾಡಿಕೊಳ್ಳುವ ವೇಗವನ್ನೇ ಅವಲಂಬಿಸಿದೆಯೆನ್ನಬಹುದು. ಈ ಜಾಗೃತ-ಸುಷುಪ್ತ ಚಿತ್ತಗಳ ನಡುವೆ ಯಾವಾಗಲೂ ಒಂದು ಅಂತರಾಳವಿರುತ್ತದೆ. ಪ್ರಸ್ತುತ ಹುಡುಗಿಯ ಈ ಚಿತ್ತದ್ವಯಗಳ ನಡುವಿನ ಅಂತರಾಳ ಬಹಳವಾಗಿದ್ದುದರಿಂದ ಭಂಡಾರದಿಂದ ಜ್ಞಾನವಿಶೇಷಗಳನ್ನು ಹೊರದೆಗೆಯಲು ಅಷ್ಟು ಹೊತ್ತು ಹಿಡಿಯುತ್ತಿತ್ತೆಂದು ಬ್ರೂನ್ಲರರು ನಿಶ್ಚಯಿಸಿದರು. ಮುಂದೆ ಅವರು ಪರೀಕ್ಷಿಸಿದ ಅನೇಕ ಹೆಬ್ಬೆರಳುಗಳಿಂದ ಅವರ ಈ ಊಹೆ ಸರಿಯಾದುದೆಂದು ನಿಷ್ಕರ್ಷೆಯಾಯಿತು.

ಪ್ರತಿಯೊಬ್ಬನೂ ಜಗತ್ತಿನಲ್ಲಿ ಜನ್ಮವೆತ್ತುವಾಗಲೇ ಅವನ ಮೆದುಳಿನ ಶಕ್ತಿ ನಿರ್ಧರಿತವಾಗಿರುತ್ತದೆ. ಅದು ಹೆಬ್ಬೆರಳಿನ ಪ್ರಸರಣ ಪ್ರಮಾಣದಿಂದ ಅಳೆಯಲ್ಪಡಬಹುದು. ಈ ಶಕ್ತಿಯ ಪ್ರಮಾಣದ ಮೇಲೆಯೇ ಅವನ ಭಾವೀ ಯೋಗ್ಯತೆಯ ಪರಮಾವಧಿಯನ್ನು ನಿರ್ಣಯಿಸಬಹುದು. ಇದಲ್ಲದೆ ಅವನ ಮೆದುಳು ರಚನಾತ್ಮಕ ಪ್ರವೃತ್ತಿಯದೋ ವಿಘಾತುಕ ವರ್ಗಕ್ಕೆ ಸೇರಿದ್ದೋ ಎಂದು ಕೂಡ ತಿಳಿದುಕೊಳ್ಳಲು ಸಾಧ್ಯವಿದೆ. ಅವನ ಕಲ್ಪನಾವೈಖರಿ, ಬುದ್ಧಿಚಾತುರ್ಯಗಳನ್ನೂ ಊಹಿಸಬಹುದು. ಅವನು ದೃಢ ಬುದ್ಧಿಯಿಂದ ಕಾರ್ಯ ಮಾಡುತ್ತ ಹೋಗುವವನೋ ಚಂಚಲ ವೃತ್ತಿಯವನೋ ಪರಪ್ರತ್ಯಯನೇಯಬುದ್ಧಿಯವನೋ ಎಂದು ಕೂಡ ತಿಳಿಯುವದು ಕಠಿಣವಲ್ಲ.

ಮೇಲೆ ಹೇಳಿದ ಬುದ್ಧಿಹೀನ ಹುಡುಗಿ ಅತಿಶಯ ದಡ್ಡ ಜಾತಿಗೆ ಸೇರಿದವಳು. ಆದರೆ ಸಾಮಾನ್ಯ ಜನರ ಬುದ್ಧಿಯ ಪ್ರಸರಣದ ಅಂಕೆ ಅತಿ ನೇರಳೆ ಬಣ್ಣದ ಅಲೆಗಳ ಪಟ್ಟಿಯ ಅಳವಿನಲ್ಲಿ ಬರುತ್ತದೆ. ಯುರೋಪಿನಲ್ಲಿ ಸಾವಿರಾರು ಜನರ ಬುದ್ಧಿಶಕ್ತಿಯ ಅಳತೆಯನ್ನು ಮಾಡಿದಾಗ ಡಾ. ಬ್ರೂನ್ಲರರಿಗೆ ನೂರರಲ್ಲಿ ಎಂಭತ್ತರಷ್ಟು ಜನರ ಬುದ್ಧಿಯ ಅಲೆಗಳು ಬಯೊಮೆಟ್ರಿಕ್ ಮಾಪದ ೨೪೦ ಅಂಶಗಳನ್ನು ದಾಟಿ ಹೋಗುವದಿಲ್ಲೆಂದು ಖಚಿತವಾಯಿತು. ಈ ಅಳತೆಯೊಳಗಿರುವ ಜನರ ಬುದ್ಧಿ ಅದೃಶ್ಯ, ಅಸ್ಪೃಶ್ಯ ವಸ್ತುಗಳ ಅರ್ಥಾತ್ ಇತರ ಇಂದ್ರಿಯಗಳ ಪ್ರತ್ಯಕ್ಷ ಅನುಭವಕ್ಕೆ ಅತೀತವಾಗಿ ಬುದ್ಧಿ ಮಾತ್ರಕ್ಕೆ ಗೋಚರವಾಗುವ ವಿಷಯಗಳನ್ನು ಗ್ರಹಿಸಲಾರದು. ತತ್ವಗಳು ಇವರ ಗ್ರಹಣ ಶಕ್ತಿಗೆ ನಿಲುಕದ ಸಂಗತಿ. ತಾವು ಸರ್ವಜ್ಞರೆಂದೂ ತಮ್ಮ ಬುದ್ಧಿಗೆ ನಿಲುಕದ್ದೆಲ್ಲ ಭ್ರಮೆ ಅಥವಾ ಅಂಧಶ್ರದ್ಧೆಯೆಂದೂ ತಿಳಿಯುವ ಇವರು ತಮ್ಮ ತಪ್ಪುಗಳೆಲ್ಲಕ್ಕೂ ಅನ್ಯರು ಹೊಣೆಯೆಂದು ಬಗೆಯುವ ಜಾತಿ.

ಇವರಿಗಿಂತ ಮೇಲಿನ ವರ್ಗವನ್ನು ೨೪೦ರಿಂದ ೩೩೦ ಅಂಶಗಳ ವರೆಗಿನ ಬುದ್ಧಿಪ್ರಸರಣವುಳ್ಳವರೆಂದು ಹೇಳಬಹುದು. ಅವರಿಗೆ ವಿಶ್ವವಿದ್ಯಾಲಯ ಶಿಕ್ಷಣ ಪಡೆಯಲು ಯೋಗ್ಯವಾದ ಬುದ್ಧಿ ಶಕ್ತಿಯಿಲ್ಲದಿರುವದರಿಂದ ಉಚ್ಚ ಶಿಕ್ಷಣಕ್ಕೆ ಇಂಥವರನ್ನು ಕಳಿಸುವದು ನಿರರ್ಥಕ. ಆದರೆ ಜೀವನದ ವಿವಿಧ ಸಾಮಾನ್ಯ ವೃತ್ತಿಗಳಲ್ಲಿ ಅವರು ಯಶಸ್ವಿಗಳಾಗಬಲ್ಲರು. ಕೈಗಾರಿಕೆಗಳನ್ನು ಮಾಡುವವರ, ಅಂಗಡಿ ಕಾರಕೂನರ, ಯಂತ್ರಜ್ಞರು, ಪ್ರಾಥಮಿಕ ಶಾಲಾ ಶಿಕ್ಷಕರು ಇತ್ಯಾದಿ ಜನರು ಈ ವರ್ಗದಲ್ಲಿ ಸೇರುವರು.

ಸಾವಿರಾರು ಜನರ ಬುದ್ಧಿ ಪರಿಶೀಲನೆಯ ನಂತರ ಡಾ. ಬ್ರೂನ್ಲರರು ೪೦೦ ಅಂಶಗಳಿಗಿಂತಲೂ ಹೆಚ್ಚು ಪ್ರಖರವಾದ ಅಲೆಗಳನ್ನು ಪ್ರಸರಿಸುವ ಬುದ್ಧಿಶಕ್ತಿಯುಳ್ಳವರು ನೂರರಲ್ಲಿ ಒಬ್ಬರಿಗಿಂತಲೂ ಕಡಿಮೆ ಇದ್ದಾರೆಂದು ನಿರ್ಧಾರಕ್ಕೆ ಬಂದರು. ಇದು ಅದೃಶ್ಯ ಅತಿ ನೇರಳೆ ಕಿರಣಗಳ ಅಲೆಗಳಿಗೆ ಸಮಾನವಾಗಿದೆ. ೪೦೦ರ ಹತ್ತಿರ ಹತ್ತಿರ ಅಥವಾ ಅದಕ್ಕಿಂತ ಹೆಚ್ಚು ಬಯೋಮೆಟ್ರಿಕ್ ಅಂಶಗಳ ಬುದ್ಧಿ ಶಕ್ತಿಯುಳ್ಳವರು ತೀರ ಕಡಿಮೆಯಾಗಿರುವದರಿಂದ ರಾಷ್ಟ್ರ ರಾಷ್ಟ್ರಗಳ ಜನರ ಬುದ್ಧಿ ಶಕ್ತಿಯನ್ನು ತುಲನಾತ್ಮಕ ಪರಿಶೀಲನೆಗೊಳಪಡಿಸಲು ಸುಲಭ. ಕೆಲ ಜನಾಂಗಗಳೂ ರಾಷ್ಟ್ರಗಳೂ ತಾವು ಇತರ ಜನಾಂಗಗಳಿಗಿಂತ ಬುದ್ಧಿ ಶಾಲಿಗಳೆಂಬ ಅಹಂಕಾರವನ್ನು ತಳೆಯುವದುಂಟು. ಆದರೆ ಡಾ. ಬ್ರೂನ್ಲರರ ಪರಿಶೀಲನೆಯಲ್ಲಿ ಇದೆಲ್ಲ ಶುದ್ಧ ಭ್ರಮೆಯೆಂದು ಕಂಡುಬಂತು. ಸಾಮಾನ್ಯವಾಗಿ ಒಂದು ರಾಷ್ಟ್ರ ಅತಿ ಬುದ್ಧಿಶಾಲಿ ಇನ್ನೊಂದು ದಡ್ಡ, ಎಂದು ತಿಳಿಯಲು ಯಾವ ಆಧಾರವೂ ಇಲ್ಲ. ಬುದ್ಧಿ ಶಕ್ತಿ ಯಾವುದೊಂದು ಜನಾಂಗಕ್ಕೆ, ವರ್ಣಕ್ಕೆ ಅಥವಾ ರಾಷ್ಟ್ರಕ್ಕೆ ಮೀಸಲಾದ ಸೊತ್ತಲ್ಲ. ಭಾರತದಲ್ಲಿನ ಬುದ್ಧಿಶಾಲಿಗಳು ಅನ್ಯದೇಶಗಳವರಿಗಿಂತ ಕಡಿಮೆಯಿಲ್ಲ. ಯುರೋಪ್ ಅಮೇರಿಕೆಗಳ ಅಂಧಾನುಕರಣ ಮಾಡಹೊರಟವರು ಇದನ್ನು ಮನಗಾಣಬೇಕೆಂದು ಬ್ರೂನ್ಲರರು ಸೂಚಿಸುತ್ತಾರೆ.

ಭಾರತೀಯರ ರೂಢಿ ಸಂಪ್ರದಾಯಗಳು ಯುರೋಪಿಯನ್ನರವುಗಳಿಗಿಂತ ಭಿನ್ನವಾಗಿರಬಹುದಾದರೂ ಬುದ್ಧಿ ಶಕ್ತಿಯಲ್ಲಿ ಭಾರತೀಯರು ಅವರಿಗಿಂತ ಏನೂ ಕೀಳಲ್ಲ. ಯಾವ ಜ್ಞಾನಶಾಖೆಯಲ್ಲಿಯೂ ಭಾರತೀಯರು ಬಿಳಿಯರೊಡನೆ ಸ್ಪರ್ಧಿಸಲು ಸಮರ್ಥರೇ. ಧೀಮಂತರು ಜಗತ್ತಿನ ಎಲ್ಲೆಡೆಗಳಲ್ಲೂ ಸಮಾನವಾಗಿ ಹಂಚಿಹೋಗಿದ್ದಾರೆ; ಇಲ್ಲಿಯ ಪ್ರಮಾಣಕ್ಕನುಸಾರವಾಗಿ ಧೀಮಂತರ ಸಂಖ್ಯೆಯಿದ್ದೇ ಇದೆ. ಜಗತ್ತು ಬರಿ ದೈಹಿಕ ಶ್ರಮಜೀವಿಗಳ ದುಡಿಮೆಯಿಂದ ಮುನ್ನಡೆಯುತ್ತದಾದರೆ ಆಯಾ ರಾಷ್ಟ್ರದ ಧೀಮಂತರ ಬುದ್ಧಿಬಲದಿಂದಲೂ ಅಷ್ಟೇ ಪ್ರಗತಿಹೊಂದುತ್ತದೆ.

ಭಾರತೀಯರು ಹಿಂದೆ ಬೆಳೆಸುತ್ತಿದ್ದ ಒಂದೇ ಬುದ್ಧಿ ಶಾಖೆಯೆಂದರೆ ಇಚ್ಛಾಶಕ್ತಿ ಅಥವಾ ನಿಶ್ಚಯ ಬುದ್ಧಿ. ಪಟಕೀ

(೩ನೇ ಪುಟ ನೋಡಿರಿ)

ನಮ್ಮ ಕಥೆ.

ಹಳೆಯ ಹೆಣ್ಣು; ಹೊಸ ಸೀರೆಯಲ್ಲಿ!

ಒಂದಾನೊಂದು ಕಾಲದಲ್ಲಿ ನಿರಂಕುಶ ಸ್ವಭಾವದ ಒಬ್ಬ ರಾಜನಿದ್ದನು. ಜನರನ್ನು ಲೆಕ್ಕಿಸದೆ ತನ್ನ ಇಚ್ಛೆಗೆ ಬಂದುದನ್ನು ಆತನು ಮಾಡುತ್ತಿದ್ದನು. ಒಮ್ಮೆ ಈ ರಾಜನು ಲಂಡನಿಗೆ ಹೋದನು. ಪಶ್ಚಿಮದ ರೀತಿನೀತಿಗೆ ಮರುಳಾದನು. ಆತನನ್ನು ಹೆಚ್ಚಿಗೆ ಮರುಳನನ್ನಾಗಿ ಮಾಡಿದುದೆಂದರೆ ವಿದ್ಯುಚ್ಛಕ್ತಿ. ದೇಶಕ್ಕೆ ಹಿಂತಿರುಗಿದಮೇಲೆ ತನ್ನ ರಾಜ್ಯದಲ್ಲಿಯೂ ಅದನ್ನು ಸ್ಥಾಪಿಸಲು ಬೇಕಾದ ಯಂತ್ರಸಾಹಿತ್ಯಗಳನ್ನು ತರಿಸಿದನು. ಅರಮನೆ ವಿದ್ಯುದ್ದೀಪಗಳಿಂದ ಬೆಳಗಿತು. ಜನರೆಲ್ಲರೂ ಆಶ್ಚರ್ಯಚಕಿತರಾದರು. ವರ್ಷದ ಅಂತ್ಯದಲ್ಲಿ ನೋಡಲಾಗಿ ಇದಕ್ಕೆ ಹೆಚ್ಚು ವೆಚ್ಚವಾಗುತ್ತಿರುವದು ತೋರಿಬಂತು. ಇದು ಲಾಭದಾಯಕವಾಗಬೇಕಾದರೆ ದೇಶದ ಜನರೆಲ್ಲಾ ಇದನ್ನು ಉಪಯೋಗಿಸಬೇಕು. ಎಲ್ಲರೂ ಉಪಯೋಗಿಸಿದರೆ ಖರ್ಚು ಕಡಿಮೆಯಾಗುವದು. ಬೇಕಾದಷ್ಟು ಲಾಭ ಬರುವದೆಂದು ತಜ್ಞರು ಸೂಚಿಸಿದರು. ತಕ್ಷಣ ರಾಜನ ಆಜ್ಞೆಯಾಯಿತು. ದೇಶದ ಎಲ್ಲಾ ಬೀದಿ, ನಗರ, ಮನೆಗಳು ವಿದ್ಯುಚ್ಛಕ್ತಿಯಿಂದ ಶೋಭಿಸಬೇಕು. ಈ ಖರ್ಚನ್ನು ನೀಗಲು ನಿಶ್ಚಿತ ಕಂದಾಯ ಹಾಕಲ್ಪಡಬೇಕು.

ಆ ದೇಶದ ಜನರು ಬಹು ಬಡವರಾಗಿದ್ದರು. ಕಂದಾಯ ಪಾವತಿಮಾಡಲು ಹಣವಿಲ್ಲವೆಂದು ಅವರು ಕೂಗಿಕೊಂಡರು. ವಿದ್ಯುಚ್ಛಕ್ತಿಯು ನಾಗರೀಕತೆಯ ಚಿಹ್ನೆ, ಜನರು ಅದನ್ನು ಉಪಯೋಗಿಸಲೇಬೇಕೆಂದು ರಾಜನು ವಿಧಿಸಿದರು. ಈ ರಾಜರು ದೊಡ್ಡ ಬೇಟೆಗಾರರಾಗಿದ್ದುದಲ್ಲದೆ ಆಟಗಾರರೂ ಹೌದು. ಅವರು ಟೆನ್ನಿಸ್, ಕ್ರಿಕೆಟ್, ಪೋಲೋ ಆಟಗಳನ್ನು ಪ್ರಚುರಪಡಿಸಿದರು. ಬೇಟೆಗಾಗಿ ಕಾದಿರಿಸಲ್ಪಟ್ಟ ಕಾಡುಗಳು ಹೆಚ್ಚಿದವು. ಪ್ರತಿ ಗ್ರಾಮದಲ್ಲಿಯೂ ಆಟದ ಮೈದಾನಗಳಾದವು.

ರಾಜರ ರಾಜ್ಯದಲ್ಲಿ ಇಲಿಗಳ ಹಾವಳಿ ಹೆಚ್ಚಿತ್ತು. ಅವುಗಳನ್ನು ಕೊಲ್ಲಲು ಬೇರೆ ದೇಶಗಳಿಂದ ಬೆಕ್ಕುಗಳು ತರಿಸಲ್ಪಟ್ಟವು. ಈ ಬೆಕ್ಕುಗಳ ಸಂಖ್ಯೆ ಹೆಚ್ಚಿ ಮನೆಯವರಿಗೆ ಹಾಲು ದೊರೆಯುವದೇ ಕಷ್ಟವಾಯಿತು. ಬೆಕ್ಕುಗಳನ್ನು ನಾಶಮಾಡಲು ಆರುನೂರು ನಾಯಿಗಳನ್ನು ತರಿಸಿದರು. ಇದಕ್ಕೆಲ್ಲಾ ಬಡ ಜನರೇ ಹಣ ತೆರಬೇಕಾಯಿತು! ದೇಶದ ಜನರು ಗೊಣಗತೊಡಗಿದರು.

ಕೆಲವು ದಿನಗಳ ನಂತರ ರಾಜನಿಗೆ ಕ್ಷಯರೋಗ ಪ್ರಾರಂಭವಾಯಿತು. ಚಿಕಿತ್ಸೆಗಾಗಿ ಲಂಡನಿಗೆ ಹೋದರು. ಚಿಕಿತ್ಸೆಗಾಗಿ ವಿಪರೀತ ಹಣ ವೆಚ್ಚವಾಗಬೇಕಾಯಿತು. ದಯಾಳು ಅರಸರು ತನ್ನ ದೇಶದ ಜನರೆಲ್ಲಾ ಈ ರೋಗದ ಬಗ್ಗೆ ಪರೀಕ್ಷಿಸಿಕೊಳ್ಳಬೇಕೆಂದು ಆಜ್ಞಾಪಿಸಿದರು. ಈ ಪರೀಕ್ಷೆಯ ಫೀಜಿನ ಕೆಲವಂಶ ಜನರು ಕೊಡಬೇಕೆಂದು ವಿಧಿಸಿದರು! ಜನರು ಗೊಣಗಲು ಪ್ರಾರಂಭಿಸಿದಾಗ ಈ ಜನರಿಗೆ ತಲೆ ಇಲ್ಲ; ಅವರಿಗೆ ಆಡಳಿತ ಅರ್ಥವೇ ಆಗುವದಿಲ್ಲವೆಂದು ರಾಜರೆಂದರು!

ಕೆಲವೇ ದಿನಗಳಲ್ಲಿ ದೇಶದಾದ್ಯಂತ ಭೀಕರ ಬರಗಾಲ ಪ್ರಾರಂಭವಾಯಿತು. ಜನರು ನಾಶವಾದರು. ಉಳಿದವರು ರಾಜರವಿರುದ್ಧ ದಂಗೆ ಎದ್ದರು. ಸರಕಾರವು ಜನರದ್ದಾಗಬೇಕು; ಪ್ರಾತಿನಿಧ್ಯವಿಲ್ಲದ ಸರಕಾರಕ್ಕೆ ಕರವಸೂಲು ಮಾಡುವ ಹಕ್ಕಿಲ್ಲವೆಂಬ ಕೂಗು ಎದ್ದಿತು. ರಾಜರನ್ನು ಗದ್ದುಗೆಯಿಂದ ಇಳಿಸಿ ಪ್ರಜಾಪ್ರಭುತ್ವ ತಳಹದಿಯ ಮೇಲೆ ಆಡಳಿತ ರಚನೆಯಾಯಿತು. ಜನರು ತಮ್ಮ ಸರಕಾರವೆಂದು ಸಂತೋಷಗೊಂಡರಾದರೂ ಬರಗಾಲ ತಪ್ಪಲಿಲ್ಲ.

ಹೊಸಮಂತ್ರಿಗಳು ಜನಾನುರಾಗಿಗಳು. ಸರಳರು! ಅವರು ಹಳೆಯ ಅರಮನೆಗಳಲ್ಲಿಯೇ ವಾಸಮಾಡಲು ತೊಡಗಿದರು. ಆ ಅರಮನೆಗಳನ್ನು ಕೇಳಲಾಗುತ್ತದೆಯೇ? ಔತಣ ಕೂಟ, ಚಹಾಪಾನ ಸಭೆಮೊದಲಾದವು. ಎಲ್ಲಾ ಜನರು ಆಶ್ಚರ್ಯದಿಂದ ನೋಡತೊಡಗಿದರು. ತಾವು ಹೊತ್ತಿರುವ ಅಧಿಕಾರದ ಗೌರವ ಉಳಿಸಬೇಕಾದರೆ ಔತಣಗಳು ಅನಿವಾರ್ಯವೆಂದರು. ಉಚ್ಚ ಯೋಚನೆಗೆ ಉತ್ತಮ ಆಹಾರ ಅವಶ್ಯವೆಂದರು. ಆಟದ ಮೈದಾನಗಳು ಆಹಾರ ಬೆಳೆಯುವ ತೋಟಗಳಾಗುವವೆಂದು ಉತ್ಸಾಹಬದ್ಧ ಜನರು ನಂಬಿದ್ದರು. ಆ ಆಟದ ಮೈದಾನಗಳನ್ನು ತೋಟಮಾಡಲು ವಿಪರೀತ ಖರ್ಚಾಗುವದೆಂದು ಸರಕಾರವೆಂದಿತು. ಅಲ್ಲದೆ ಅಂತರರಾಷ್ಟ್ರೀಯ ಸೌಹಾರ್ದಕ್ಕೆ ಈ ಆಟದ ಮೈದಾನಗಳು ಅವಶ್ಯವೆಂದರು.

ಬರಗಾಲದ ಕಾರಣ ಬೆಲೆಗಳು ಏರಿದವು. ಹಣದ ಉಬ್ಬರವಾಯಿತು. ಜನಾನುರಾಗಿ ಮಂತ್ರಿಗಳು ಇದಕ್ಕೆ ಕಾರಣ ಹಿಂದಿನ ರಾಜರೆಂದರು. ಇದನ್ನು ನಿವಾರಿಸಲು ತಜ್ಞರ ಸಮಿತಿಗಳಾದವು. ಈ ತಜ್ಞರಲ್ಲಿ ಒಬ್ಬರು ಪ್ರಜಾಪ್ರಭುತ್ವವನ್ನು ವಿವರಿಸಿದರು. ಪ್ರಜಾಪ್ರಭುತ್ವವು ಜನರ ಸರಕಾರ; ಪೋಲೀಸರಿಗಾಗಿ, ಮೂರು 'ಎಂ'ಗಳಿಗಾಗಿ! (ಮಂತ್ರಿಗಳು, ಮರ್ಚಂಟ್‍ಗಳು, ಶಾಸನ ಸಭೆಯ ಮೆಂಬರುಗಳು)

ಕರ ಹೆಚ್ಚಿತು. ಬೆಲೆ ಏರಿತು. ನೋಟುಗಳು ಹಿಡಿತವಿಲ್ಲದೆ ಅಚ್ಚಾದವು. ಔತಣಗಳೂ ಸಾಗಿದವು. ಜನರು ಗೊಣಗಲು ಪ್ರಾರಂಭಿಸಿದಾಗ ತಜ್ಞರು ಹೇಳಿದರು. ಹಣದ ಉಬ್ಬರವನ್ನು ಇಳಿಸಲು ಏರಿಸಿದ ಕರವು ಅವಶ್ಯಕ. ಹೆಚ್ಚು ಆಹಾರ ಬೆಳೆಯಲು ಪ್ರೋತ್ಸಾಹ ಕೊಡಲು ಬೆಳೆಸಿದ ಆಹಾರಕ್ಕೆ ಏರಿಸಿದ ಬೆಲೆ ಕೊಡುವದು ಅವಶ್ಯಕ! ಇದು ಅರ್ಥಶಾಸ್ತ್ರ ತಿಳಿಯದ ಜನರಿಗೆ ಅರ್ಥವಾಗದು. ಅವರದೇ ಆದ ಸರಕಾರದ ಮೇಲೆ ವಿಶ್ವಾಸವಿಡಬೇಕು.

ಒಮ್ಮೆ ಮುಖ್ಯ ಮಂತ್ರಿಗಳು ಲಂಡನಿಗೆ ಆಹ್ವಾನಿಸಲ್ಪಟ್ಟರು. ಅವರಿಗೆ ಆನಂದವಾಗದಿರಲಿಲ್ಲ. ಅವರು ವಿಮಾನದಲ್ಲಿ ಹೋದರು. ಆಧುನಿಕ ವಿಮಾನವನ್ನು ಕಂಡು ಮೋಹಿತರಾದರು. ಇದು ನಾಗರೀಕತೆಯ ಚಿಹ್ನೆ ಎಂದರು. ನಮ್ಮ ದೇಶಕ್ಕೂ ಇದು ಬೇಕೆಂದರು. ಕೆಲವು ವಿಮಾನಗಳನ್ನು ಕ್ರಯಕ್ಕೆ ಪಡೆದರು. ದೇಶದ ವಿಮಾನ ಪಡೆ ಬೆಳೆಯಬೇಕೆಂದರು.

ಅವರ ಜನರೂ ವಿಮಾನಗಳನ್ನು ಮೆಚ್ಚಿದರು. ಆದರೆ ವಿಮಾನ ಪ್ರಯಾಣದ ದರ ವಿಪರೀತವಾಗಿತ್ತು. ಈ ಮಧ್ಯೆ ಆಹಾರ ಪದಾರ್ಥಗಳ ಬೆಲೆ ಏರುತ್ತಲೇ ಇತ್ತು. ಬರಗಾಲ ತಡೆಯಿಲ್ಲದೆ ಸಾಗಿತ್ತು. ವಿಮಾನಗಳಿಗೆ ಪ್ರೋತ್ಸಾಹಿಸಲು ಮುಖ್ಯ ಮಂತ್ರಿಗಳು ಎಲ್ಲರೂ ವಿಮಾನಗಳಲ್ಲಿ ತಿರುಗುವದು ಯೋಗ್ಯವೆಂದರು. ಪೋಸ್ಟ್ ಕಾರ್ಡು, ಪತ್ರಗಳೂ ವಿಮಾನಗಳಲ್ಲಿ ತಿರುಗುವದು ಹಿತವೆಂದರು. ಆದ್ದರಿಂದ ಕಾರ್ಡು, ಕವರುಗಳ ಕ್ರಯ ಸ್ವಲ್ಪ ಏರಿಸಿದರು. ಸರಕಾರವು ಆಹಾರದ ಹೊಲಗಳನ್ನು ವಿಮಾನ ನಿಲ್ದಾಣಗಳಾಗಿ ಮಾಡಿದರು.

ಜನರು ದೂರು ಕೊಟ್ಟರು. ಹೊಟ್ಟೆಗಿಲ್ಲದೆ ಸಾಯುತ್ತಿರುವೆವೆಂದರು. ವಿಮಾನಗಳಲ್ಲಿ ನಮಗೆ ಆಸಕ್ತಿಯಿಲ್ಲವೆಂದರು. ಬರಗಾಲದಲ್ಲೂ ಆಹಾರ ಸಾಗಿಸಲು ವಿಮಾನಗಳು ಉಪಯೋಗಕ್ಕೆ ಬರುವವೆಂದು ಸರಕಾರ ನುಡಿಯಿತು. ಆ ದೇಶದ ಮುಖ್ಯ ಮಂತ್ರಿಗಳು ಪ್ರಧಾನ ಚರಿತ್ರಕಾರರು. ಅವರು ತಮ್ಮ ಪಾರ್ಲಿಮೆಂಟಿನಲ್ಲಿ ಹೇಳಿದರು 'ವಿಮಾನವು ಆಧುನಿಕ ನಾಗರೀಕತೆಗೆ ವರದಾನವಿದ್ದಂತೆ. ನಾವು ಕಾಲಕ್ಕನುಗುಣ ವರ್ತಿಸಬೇಕು. ನಮ್ಮ ದೇಶವು ಯಾವಾಗ ತಟಸ್ಥ ವೃತ್ತಿಯನ್ನನುಸರಿಸಿತ್ತೋ ಆಗ ಅದು ತನ್ನ ಸ್ವಾತಂತ್ರ್ಯವನ್ನು ಕಳಕೊಂಡಿತೆಂದು ಚರಿತ್ರೆ ಹೇಳುತ್ತದೆ. ಆದ್ದರಿಂದ ನಾವು ಚೇತನಯುಕ್ತರಾಗಿ ವಿಮಾನಗಳಲ್ಲಿ ತಿರುಗಬೇಕು. ಉಪವಾಸವಿರುವ ಜನರು ಜಗತ್ತಿನ ದೃಷ್ಟಿಯಿಂದ ನೋಡಲಾರರು. ದೊಡ್ಡ ವಿಚಾರಗಳನ್ನು ಅರ್ಥ ಮಾಡಿಕೊಳ್ಳಲಾರರು.'

ಜನರ ಗೊಣಗು ನಿಲ್ಲಲಿಲ್ಲ. ಅವರಲ್ಲಿ ಬುದ್ಧಿವಂತರು ಹೇಳತೊಡಗಿದರು. ಹಿಂದಿನ ನಿರಂಕುಶ ಆಡಳಿತಕ್ಕೂ, ಇಂದಿನ ಪ್ರಜಾಪ್ರಭುತ್ವಕ್ಕೂ ವ್ಯತ್ಯಾಸವಿಲ್ಲ. ಇದು ಕೇವಲ 'ಹಳೇ ಸಾರಾಯಿ ಹೊಸ ಕುಪ್ಪಿಯಲ್ಲಿದ್ದಂತೆ' ಇದನ್ನು ಮುಖ್ಯ ಮಂತ್ರಿಗಳು ವಿರೋಧಿಸಿದರು. 'ಹಳೇ ಸಾರಾಯಿ ಅಂದೇ ಮುಗಿದಿದೆ. ಹೊಸ ಕುಪ್ಪಿಗಳನ್ನು ನಾವು ತಯಾರಿಸಲು ಪ್ರಾರಂಭಿಸಿಯೇ ಇಲ್ಲ' ಎಂದರು. ಆಗ ಪಕ್ಷದ ಜನರು ಕೈ ಚಪ್ಪಾಳೆ ಹೊಡೆದರು. ಬರಗಾಲವು ಹಾಗೆಯೇ ಸಾಗಿತು.

'ಸ್ವತಂತ್ರ'

ಅಧಿಕಾರಿಗಳಿಗೆ ಜುಲ್ಮಾನೆ.

ಈಜಿಪ್ಟ್ ಸರಕಾರದ ಲೆಕ್ಕ ಪರಿಶೋಧನಾಧಿಕಾರಿಗಳು ತಮ್ಮ ಸರಕಾರಕ್ಕೆ ನವೀನವಾದೊಂದು ಸೂಚನೆಯನ್ನು ಕೊಟ್ಟಿರುವರು. ಬಜೆಟಿನಲ್ಲಿ ಕೊರತೆ ಬಿದ್ದ ಹಣವನ್ನು ತುಂಬಿಸಿಕೊಳ್ಳುವ ವಿಧಾನವದು. ಆಡಳಿತ ಮುಖ್ಯಾಧಿಕಾರಿಗಳು ತಮ್ಮ ಕಾರ್ಯದಲ್ಲಿ ಅವ್ಯವಸ್ಥೆ, ಕರ್ತವ್ಯವಿಮುಖತೆಗಳನ್ನು ತೋರಿಸಿದಲ್ಲಿ ಅವರಿಗೆ ಜುಲ್ಮಾನೆಯನ್ನು ಮಾಡಬೇಕೆಂದವರ ಸೂಚನೆ. ಅದೇ ಸಮಯಕ್ಕೆ ಹೆಚ್ಚಿನ ಕಾರ್ಯದಕ್ಷತೆ ಸುವ್ಯವಸ್ಥೆಗಳನ್ನು ತೋರಿಸಿದವರಿಗೆ ಪಾರಿತೋಷಕಗಳನ್ನು ಕೊಡಬೇಕೆಂದೂ ಅವರು ಸೂಚಿಸಿದ್ದಾರೆ.

'ಈಸ್ಟರ್ನ್ ಟೈಮ್ಸ್' ಎಂಬ ಪತ್ರಿಕೆಯಲ್ಲಿ ಜೇಕ್ಸ್ ಎಂಬವರು ಈ ಕುರಿತು ಹೀಗೆ ಬರೆಯುತ್ತಾರೆ. 'ಅಧಿಕಾರಿಗಳ ಅಸಡ್ಡೆಗೆ ಜುಲ್ಮಾನೆಗಳನ್ನು ಮಾಡುವ ವಿಧಾನವನ್ನು ಒರಿಸ್ಸಾ ಪ್ರಾಂತ್ಯದಲ್ಲಿ ಜಾರಿಗೆ ತಂದರೆ ಸಂಬಳ ಬಟವಾಡೆ ದಿನದಂದು ಅಲ್ಲಿ ಹೆಚ್ಚಿನ ಲೆಕ್ಕಾಚಾರವೇ ಉಳಿಯಲಿಕ್ಕಿಲ್ಲ. ಕಾರಣ ಸಂಬಳದಲ್ಲಿ ಹೆಚ್ಚಿನ ಭಾಗವು ಜುಲ್ಮಾನೆ ರೂಪವಾಗಿಯೇ ಕತ್ತರಿಸಿಹೋಗುವುದು ಮಾತ್ರವಲ್ಲ ಕೆಲವು ಅಧಿಕಾರಿಗಳು ತಮ್ಮ ಸಂಬಳ ಪ್ರಮಾಣಕ್ಕಿಂತ ಹೆಚ್ಚಾಗಿಯೇ ಸರಕಾರಕ್ಕೆ ಕೊಡಬೇಕಾಗುವುದು. ಚಾಲ್ತಿ ವರ್ಷದ ಆಡಳಿತ ಖರ್ಚು ಬಿಗಿಯಾಗಿದೆಂದು ಹೇಳಲ್ಪಡುತ್ತಿರುವ ಈ ಕಾಲದಲ್ಲಿ ಇಂತಹ ವಿಧಾನಗಳಿಂದ ಹಣವುಳಿಸುವಿಕೆಯ ಸಾಧ್ಯಾಸಾಧ್ಯತೆಗಳನ್ನು ನಮ್ಮ ಸರಕಾರದವರೂ ಪರಿಶೀಲಿಸಬಹುದು.'

ಪಾಂಡವರ ವಂಶಸ್ಥರು.

ಯುಕ್ತ ಪ್ರಾಂತ್ಯದ ಗಡಿ ಪ್ರದೇಶದ ಹಿಮಾಲಯ ತಪ್ಪಲಲ್ಲಿ 60 ಸಾವಿರ ಪಾಂಡವರ ವಂಶಸ್ಥರು ಇದ್ದಾರೆ. ಇವರು ಗುಡ್ಡ ಕಾಡುಗಳಲ್ಲಿ ವಾಸಿಸುವ ಮೂಲನಿವಾಸಿ ಜನರು. ಡೇರಾಡೂನ್ ಮತ್ತು ಹಿಮಾಚಲ ಪ್ರದೇಶದ 2 ಸಾವಿರ ಎಕ್ರೆ ಪ್ರದೇಶದಲ್ಲಿ ಈ ಜನರು ತಮ್ಮ ವಿಚಿತ್ರ ಸಮಾಜ ಸಂಪ್ರದಾಯಗಳಿಂದ ವಾಸಿಸುತ್ತಾರೆ. ಇವರಿಗೆ ಜಾನ್ಸರಿ ಜನರೆಂದು ಹೆಸರು. ಇವರು ಮುಖ್ಯತಃ ಕೃಷಿಕರಿದ್ದು ತಾವು ಪಾಂಡವರ ವಂಶಸ್ಥರೆಂದವರು ಹೇಳಿಕೊಳ್ಳುತ್ತಾರೆ. ಬಹು ಪತ್ನೀತ್ವವು ಅವರದೊಂದು ಗಣನೀಯ ಸಮಾಜ ಪದ್ಧತಿ. ಜಾನ್ಸರಿಯವರಲ್ಲಿ ಕುಟುಂಬದ ಹಿರಿಯ ಮಗನಿಗೆ ಮಾತ್ರ ಮದುವೆಯಾಗುವುದು. ಆದರೆ ಅವಳ ಮೇಲೆ ಇತರ ತಮ್ಮಂದಿಯರಿಗೆ ಸಮಾನ ಹಕ್ಕು ಇರುತ್ತದೆ. ಅವನು ನಾಲ್ಕೈದು ಹೆಂಡತಿಯರನ್ನು ಇಟ್ಟುಕೊಳ್ಳುವನು. ಆದರೆ ಕುಟುಂಬದಲ್ಲಿ ಪಾಲು ಆಗುವುದಾದರೆ ಈ ಹೆಂಡತಿಯರು ಇಷ್ಟಪಟ್ಟ ಪತಿ ಸಹೋದರನ ಜೊತೆಗೆ ಹೋಗುವರು. ಹೀಗೆ ಪ್ರತಿಯೊಬ್ಬ ಹೆಂಗಸಿಗೆ ಒಬ್ಬನಿಗಿಂತ ಹೆಚ್ಚು ಪತಿಯಂದಿರು ಇರುತ್ತಾರೆ.

ಜಾನ್ಸರಿ ಹೆಂಗಸಿಗೆ ವೈಧವ್ಯವೆಂದರೆ ಗೊತ್ತಿಲ್ಲ. ಜೀವನವು ಕಷ್ಟತರವಾಗಿರುವ ಆ ಪ್ರದೇಶದಲ್ಲಿ ಸ್ತ್ರೀಯರು ಯಾರೊಬ್ಬನನ್ನಾದರೂ ಆಶ್ರಯಿಸಿಯೇ ಇರಬೇಕಾಗುವುದು. ಆದುದರಿಂದ ತನ್ನ ಉದರಂಭರಣಕ್ಕಾಗಿ ಅವಳು ಎಷ್ಟು ಗಂಡಂದಿರನ್ನು ಮಾಡಿಕೊಳ್ಳುವಳು. ಈ ಸಮಾಜ ಪದ್ಧತಿಯಿಂದಲೇ ಆ ಜನರ ಸಾಮಾಜಿಕ ಪ್ರಗತಿಯು ಮುರುಟಿಹೋಗಿರುವುದು. ಒಬ್ಬ ಜಾನ್ಸರಿ ಹುಡುಗನಿಗೆ 20 ವರ್ಷವಾಗಬೇಕಾದರೆ ಅವನು ಒಂದೆರಡು ಮಕ್ಕಳ ತಂದೆಯಾಗುವನು. ಹೀಗಾದುದರಿಂದ ಅವರ ಭಾವೀ ಜನಾಂಗವು ನಿರ್ಬಲವಾಗಿದೆ. ಯುಕ್ತ ಪ್ರಾಂತ ಸರಕಾರವು ಇವರನ್ನು ಸುಧಾರಿಸಲು ಒಂದು ಯೋಜನೆಯನ್ನು ಸಿದ್ಧಗೊಳಿಸಿದೆ.

ಕೊಡಗು

ತಾ. ೧೫-೭-೧೯೪೯ನೇ ಶುಕ್ರವಾರ

ಮದ್ರಾಸ್ ಮಂತ್ರಿಗಳ ಸಂದರ್ಶನ.

ಕೊಡಗು ಸರಕಾರವು ಹಲವು ವಿಚಾರಗಳಲ್ಲಿ ನೆರೆ ಪ್ರಾಂತವಾದ ಮದರಾಸಿನ ಆಡಳಿತ ಕ್ರಮವನ್ನು ಅನುಸರಿಸುತ್ತಿದೆ. ನೆರೆ ಪ್ರಾಂತಗಳಾದ ಇವೆರಡಲ್ಲಿ ಆಗಿಂದಾಗ್ಗೆ ಪರಸ್ಪರ ಸಂಬಂಧವಿರುವ ವಿಚಾರಗಳು ಬರುತ್ತವೆ. ಆದ್ದರಿಂದ ಮದರಾಸಿನ ಮಂತ್ರಿಗಳು ಆಗಾಗ್ಗೆ ಕೊಡಗನ್ನು ಸಂದರ್ಶಿಸುತ್ತಿರುವದು ಉಭಯತ್ರರ ಪ್ರಯೋಜನಕ್ಕೆಂದು ಹೇಳಬಹುದು. ಕೆಲವು ತಿಂಗಳುಗಳ ಹಿಂದೆ ಮದ್ರಾಸಿನ ಸಹಕಾರಿ ಇಲಾಖಾ ಮಂತ್ರಿಯವರು ಇಲ್ಲಿಗೆ ಬಂದು ಇಲ್ಲಿ ಕೆಲದಿನಗಳ ವರೆಗಿದ್ದು ದೇಶದ ಹಲವು ಭಾಗಗಳನ್ನು ಸಂದರ್ಶಿಸಿ ಸಹಕಾರ ಸಂಸ್ಥೆಗಳ ಕಾರ್ಯಕಲಾಪಗಳನ್ನು ವಿಮರ್ಶಿಸಿ ವಿಶೇಷ ರೀತಿಯ ಪ್ರಶಂಸೆಯನ್ನು ಮಾಡಿದ್ದು ವಾಚಕರಿಗೆ ತಿಳಿಯದ್ದಲ್ಲ. ಮೊನ್ನೆ ತಾನೆ ಮದ್ರಾಸಿನ ಆರ್ಥಿಕ ಮತ್ತು ವಹಿವಾಟು ಇಲಾಖೆಗಳ ಮಂತ್ರಿಗಳಾದ ಶ್ರೀ ಬಿ. ಗೋಪಾಲರೆಡ್ಡಿಯವರು ಮಡಿಕೇರಿಗೆ ಬಂದು ಅರ್ಧದಿನದ ವರೆಗೆ ಮಾತ್ರ ಇದ್ದರೂ ಹಲವು ಉದ್ಯೋಗಸ್ಥರುವರು, ಸಾರ್ವಜನಿಕ ಕೆಲಸಗಾರರನ್ನು ಭೇಟಿಮಾಡಿ ಕೊಡಗಿನ ಸಮಸ್ಯೆಗಳನ್ನು ಬಹಳಾಗಿ ತಿಳಿದುಕೊಳ್ಳಲು ತುಂಬಾ ಶ್ರಮವಹಿಸಿದರು. ಅವರಿಗೆ ಕೊಡಗು ಕೌನ್ಸಿಲ ಹಾಲ್‌ನಲ್ಲಿ ಸಾರ್ವಜನಿಕ ಸ್ವಾಗತವನ್ನಿತ್ತರು. ಅವರು ಮಾಡಿದ ಭಾಷಣದಲ್ಲಿ ಮದ್ರಾಸ್ ಪ್ರಾಂತದಲ್ಲಿ ಸಂಪೂರ್ಣ ನಿಷೇಧವನ್ನು ತಂದ ಸಾಧಕ ಬಾಧಕಗಳನ್ನು ಕುರಿತು ವಿವರವಾಗಿ ಹೇಳಿದರು. ಹದಿನೇಳು ಕೋಟಿ ರೂಪಾಯಿಗಳಷ್ಟು ಆದಾಯವನ್ನು ಕಳಕೊಂಡು ಹೊಸತೆರಿಗೆಯನ್ನು ಹಾಕಿಯಾದರೂ ಮದ್ರಾಸು ಸಂಪೂರ್ಣ ನಿಶಾನಿಶೇಧವನ್ನು ಜಾರಿಗೆ ತಂದು ಮುಖ್ಯವಾಗಿ ಬಡಜನರ ಸೇವೆಯನ್ನು ಮಾಡುತ್ತಿರುವದು ಸ್ತುತ್ಯಾರ್ಹವಾಗಿದೆ. ಕೊಡಗು ಸಂಪೂರ್ಣ ನಿಶಾನಿಶೇಧಕ್ಕೆ ಮೊದಲಿನ ಮೆಟ್ಟಲಂತೆ ಸಾರಾಯಿಯ ರೇಶನಿಂಗ್ ಕ್ರಮವನ್ನು ಈ ವರ್ಷ ಜಾರಿಗೆ ತಂದಿದೆ. ಇದರಿಂದ ಸರಕಾರದ ಆದಾಯವು ಸ್ವಲ್ಪಮಟ್ಟಿಗೆ ಕಡಿಮೆಯಾಗಲಿದೆ. ಮದ್ರಾಸನ್ನನುಸರಿಸಿ ಬರುವ ವರ್ಷ ಕೊಡಗಿನಲ್ಲಿ ಆದಾಯದ ನಷ್ಟವಪ್ಪ ಎಣಿಸದೆ, ಪಾನನಿರೋಧದಿಂದ ಬಡ ಜನರಿಗಾಗುವ ಅಪಾರ ಲಾಭವನ್ನು ಗಮನಿಸಿ ಸಂಪೂರ್ಣ ಪಾನನಿರೋಧವನ್ನು ತರಬೇಕಿದೆ. ಈ ಸದುದ್ದೇಶಕ್ಕಾಗಿ ವ್ಯವಸಾಯ ಆದಾಯ ತೆರಿಗೆ, ಮಾರಾಟ ತೆರಿಗೆ ಮೊದಲಾದವನ್ನು ಹಾಕಲು ದೇಶಿಸುರು ಎಂದೂ ವಿರೋಧಿಸಲಾರರು.

ಶ್ರೀ ರೆಡ್ಡಿಯವರು ಕೊಡಗಿನ ಕೋರ್ಟುಗಳನ್ನು ಮದ್ರಾಸ್ ಹೈಕೋರ್ಟಿಗೆ ಸಂಯೋಜಿಸಲು ಸಹಾಯ ಮಾಡಿದಂತೆಯೇ ಕೊಡಗಿನ ವಿದ್ಯಾರ್ಥಿಗಳಿಗೆ ಇಂಜಿನಿಯರಿಂಗ್, ಮೆಡಿಕಲ್, ವೆಟರಿನರಿ ಮತ್ತು ಎಗ್ರಿಕಲ್ಚರಲ್ ಕಾಲೇಜುಗಳಲ್ಲಿ ಹೆಚ್ಚಿನ ಸ್ಥಳಗಳನ್ನು ದೊರಕಿಸಿ ಕೊಡಲು ಮತ್ತು ಅದಕ್ಕೆ ತಗಲುವ ಖರ್ಚನ್ನು ಕೂಡ ಕಡಿಮೆ ಮಾಡಿ ಕೊಡಲು ಸಹಾಯ ಮಾಡುವರಾಗಿ ಆಶಿಸುತ್ತೇವೆ.

ಬರಪೊಳೆಯ ವಿದ್ಯುಚ್ಛಕ್ತಿ ಯೋಜನೆಯಿಂದ ಕೊಡಗಿನಂತೆಯೇ ಮದ್ರಾಸ್ ಪ್ರಾಂತದ ಪಶ್ಚಿಮ ಕರಾವಳಿಗೆ ತುಂಬಾ ಪ್ರಯೋಜನವಾಗುವದರಿಂದ ಈ ಯೋಜನೆಯ ವಿಚಾರವಾಗಿ ಮದ್ರಾಸ್ ಸರಕಾರವು ಕೂಡಲೇ ಇದರ ಕಾರ್ಯ ಪ್ರಾರಂಭಿಸಬೇಕೆಂದು ಆರ್ಥಿಕ ಮಂತ್ರಿಗಳನ್ನು ಕೇಳಿಕೊಂಡದ್ದು ಯುಕ್ತವಾಗಿದೆ. ಅಲ್ಲದೆ ಮೋಟಾರು ವಾಹನಗಳ ವಹಿವಾಟಿನ ಸಂಬಂಧ ಕೊಡಗಿಗೂ ಮಲಬಾರು ಮತ್ತು ದ ಕನ್ನಡ ಜಿಲ್ಲೆಗಳಿಗೂ ಇರುವ ಎಡರುತೊಡರುಗಳನ್ನು ಕುರಿತು ಶ್ರೀ ರೆಡ್ಡಿಯವರು ಸಂಬಂಧಿಸಿದ ಕೊಡಗಿನ ಉದ್ಯೋಗಸ್ಥರು ಮತ್ತು ಸಾರ್ವಜನಿಕ ಮಹನೀಯರೊಂದಿಗೆ ದೀರ್ಘ ಚರ್ಚೆ ನಡೆಸಿ ವಿಚಾರಗಳನ್ನು ತಿಳಿದುಕೊಂಡಿರುವರು.

ಮೇಲಿನ ಕೆಲಸಗಳನ್ನು ಸಾಧಿಸಿಕೊಳ್ಳಬೇಕಾದರೆ ಇನ್ನೀಗ ಸ್ಥಳೀಯ ಸರಕಾರದವರು ಈ ವಿಚಾರದಲ್ಲಿ ಮದ್ರಾಸ್ ಸರಕಾರದೊಂದಿಗೆ ಯೋಗ್ಯ ರೀತಿಯಲ್ಲಿ ಪತ್ರವ್ಯವಹಾರಗಳನ್ನು ನಡೆಸಬೇಕಾಗಿದೆ. ವಿವರವೆಲ್ಲವೂ ಅಲ್ಲಿಯ ಆರ್ಥಿಕ ಸಚಿವರಿಗೆ ಮನದಟ್ಟಾಗಿರುವ ಕಾರಣ ಇವುಗಳನ್ನು ಸುಲಭದಲ್ಲಿ ಸಾಧಿಸಿಕೊಳ್ಳಬಹುದು.

ಕೊಡಗಿನ ಭವಿಷ್ಯತ್ತನ್ನು ಕುರಿತು ಇಲ್ಲಿರುವ ಭಿನ್ನಾಭಿಪ್ರಾಯಗಳು ತನಗೆ ಗೊತ್ತಿದೆಯೆಂದೂ ಸಂಯೋಜನೆಯಾಗಲೀ, ಯಾ ಪ್ರತ್ಯೇಕವಿರಲೀ, ಮುಖ್ಯವಾಗಿ ಬೇಕಾದುದು ಇಲ್ಲಿಯ ಜನರಿಗೆ ಹಿತದಾಯಕವಾದ ಸರಕಾರ ಇಂಥಾ ಪರಿಶಾಸನವನ್ನು ಹಾಗೂ ಪ್ರಾಂತದ ಭವಿಷ್ಯತ್ತನ್ನು ನಿರ್ಣಯಿಸುವ ಅಧಿಕಾರವು ಸಂಪೂರ್ಣ ಇಲ್ಲಿಯ ಜನರದ್ದೇ ಆಗಿದೆಯೆಂದು ಮಾನ್ಯ ಮಂತ್ರಿಯವರು ಅಭಿಪ್ರಾಯಪಟ್ಟರು. ಇದರಂತೆ ಹೊರಗಿನಿಂದ ಬರುವ ಯಾವ ಜವಾಬ್ದಾರಿಯ ಮುಂದಾಳೇ ಆಗಲೀ ಪ್ರಾಂತದ ಭವಿಷ್ಯತ್ತನ್ನು ನಿರ್ಣಯಿಸುವ ಅಧಿಕಾರವು ಜನರ ಕೈಯಲ್ಲಿದೆಯೆಂದು ಸಾರಿ ಹೇಳುತ್ತಿದ್ದಾರೆ. ಆದರೂ ಕೂಡ ಇಲ್ಲಿಯ ಸಂಯೋಜನಾ ಪಕ್ಷದವರು ಭವಿಷ್ಯತ್ತಿನ ತೀರ್ಮಾನಕ್ಕೆ ಜನರ ಅಭಿಪ್ರಾಯ ತೆಗೆಯುವ ಅವಶ್ಯಕತೆ ಇಲ್ಲವೆಂದು ವಾದಿಸುತ್ತಿರುವದು ಹಾಸ್ಯಾಸ್ಪದವಾಗಿದೆ. ಇನ್ನಾದರೂ ಜನತೆಯು ಎಚ್ಚೆತ್ತು ಒಗ್ಗಟ್ಟಾಗಿ ಪ್ರಾಂತ್ಯದ ಭವಿಷ್ಯತನ್ನು 'ರೆಫರೆಂಡಂ' ಮೂಲಕವೇ ನಿಶ್ಚಯಿಸಬೇಕೆಂದು ಕೇಳಿಕೊಳ್ಳುವದು ಯುಕ್ತವಾಗಿದೆ.

ವಿಶೇಷ ಮಾನ.

ಮದ್ರಾಸಿನ ವೈ. ಎಂ. ಸಿ. ಎ. ಶಾರೀರಿಕ ಶಿಕ್ಷಣ ಕಾಲೇಜಿನಲ್ಲಿ ಓದುತ್ತಿದ್ದ ಮಿಸ್ ಚಿಪ್ಪುಡೀರ ಎಂ. ಮುತ್ತಮ್ಮನವರು ಹೈಯರ್‌ಗ್ರೇಡ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರು.

ತಾರೀಕು ೭-೭-೪೯ ರಲ್ಲಿ ಮಧ್ಯಾಹ್ನ ಡಿನಲ್ಲಿ ಸಾರ್ವಜನಿಕ ಸಭೆಯೊಂದು ಶ್ರೀ. ಬಿ ಜಿ. ಮುತ್ತಣ್ಣನವರ ಅಧ್ಯಕ್ಷತೆಯಲ್ಲಿ ಸೇರಿ ಕೊಡಗಿನ ಬಸ್ ಮಾಲೀಕರು ತಾ. ೩-೭-೪೯ರಿಂದ ಬಸ್ ಚಾರ್ಜನ್ನು ಶೇಕಡ ೨೫ ಕ್ಕೂ ಹೆಚ್ಚಿಗೆ ಏರಿಸಿರುವ ಪ್ರಯುಕ್ತ ಪ್ರಯಾಣಿಕರಿಗೆ ಆಗುತ್ತಿರುವ ಕಷ್ಟವನ್ನು ಚೀಫ್ ಕಮಿಷನರ ಮುಂದಿಡಲು ಶ್ರೀಗಳಾದ ಕೆ ಎಂ. ದೇವಯ್ಯ, ಕೆ. ಎಂ. ಮೊಣ್ಣಪ್ಪ ಮತ್ತು ಬಿ. ಜಿ. ಮುತ್ತಣ್ಣ, ಇವರುಗಳಿಂದ ಕೂಡಿದ ಒಂದು ನಿಯೋಗಗೋಷ್ಠಿಯನ್ನು ಆರಿಸಲಾಯಿತು.

ಕೊಡಗಿನಲ್ಲಿ ಉಪಕಸುಬುಗಳನ್ನು ಸಹಕಾರ ಪದ್ಧತಿಯಂತೆ ಕೈಕೊಳ್ಳಲು ಅನುವಾಗುವಂತೆ ಕೊಡಗು ಸಹಕಾರಿ 'ಅಕ್ಯುಪೇಶನಲ್ ಇನ್‌ಸ್ಟಿಟ್ಯೂಟ್' ಸಂಸ್ಥೆಯೊಂದನ್ನು ಮಡಿಕೇರಿಯಲ್ಲಿ ಸ್ಥಾಪಿಸಲಾಗುವದೆಂದೂ, ಇದಕ್ಕೆ ಪಾಲುಗಳ ಸಂಗ್ರಹಮಾಡಿ, ಸರಕಾರದ ಸಹಾಯದಿಂದ ಮರಕುಯ್ಯುವ, ಮರದ ಸಾಮಾನುಗಳನ್ನು ಮಾಡುವ, ಚಿಕ್ಕ ಕಬ್ಬಿಣ ಕೆಲಸಗಳನ್ನು ಮಾಡುವದನ್ನು ಕೈಕೊಳ್ಳಲಾಗುವದೆಂದೂ, ಈ ಕೆಲಸಗಳಲ್ಲಿ ತರಬೇತು ಕೊಡಲಾಗುವದೆಂದೂ ತಿಳಿದುಬಂದಿದೆ.

ಸುಮಾರು ಒಂದು ತಿಂಗಳಿಂದ ಕೋಣಗೇರಿ ಗ್ರಾಮದಲ್ಲಿ ಪರಾರಿಯಾಗಿ ಬಂದಿದ್ದ ಕೆಂಪುವರ್ಣದ ಬಲಕೋಡು ಮುರಿದು ಕೆಳಗೆ ಬಗ್ಗಿದ, ಕಣ್ಣಿನ ಸುತ್ತಲೂ ಕಪ್ಪು ಇರುವ ಎತ್ತು ಆಗೆ ಗದ್ದೆಗೆ ತೊಂದರೆಸಡಿಸುತ್ತಿದ್ದು ಈಗ ಹುದಿಕೇರಿ ದೊಡ್ಡಿಯಲ್ಲಿದೆ. ಮಾಲೀಕರು ಅಲ್ಲಿಂದ ಬಿಡಿಸಿಕೊಂಡು ಹೋಗಬಹುದು.

ಕಳೆದ ತಿಂಗಳಲ್ಲಿ ನಡೆದ ಸರಕಾರಿ ಸಹಕಾರಿ ತರಬೇತು ಶಾಲೆಯ ಪರೀಕ್ಷೆಯಲ್ಲಿ ಶ್ರೀಗಳಾದ ಯು. ಆರ್ ಗೋಪಾಲಕೃಷ್ಣ (ಪ್ರಥಮಶ್ರೇಣಿ), ಕೆ ಟಿ ಉತ್ತಯ್ಯ, ಮೋಕೇರಿರ ಸುಬ್ರಮಣ್ಯ, ಬಿ. ಎಂ. ನೀಲಮ್ಮ, ಪಿ. ಎಂ ಕುಟ್ಟಪ್ಪ, ಬಿ. ಎ. ಮುತ್ತಮ್ಮ, ಯಂ. ಜೆ. ಸುಮಿತ್ರ, ಎಚ್. ಎಸ್. ರುದ್ರಪ್ಪ, ಪಿ ಎಸ್. ಪೊನ್ನಮ್ಮ ಇವರುಗಳು ತೇರ್ಗಡೆಯಾಗಿರುವರು. ಶ್ರೀ ಎಸ್. ಸಿ. ಬೇಲೂರಪ್ಪ ಮತ್ತು ಸಿ. ಕೆ. ಬೆಳ್ಯಪ್ಪ ಇವರುಗಳು ಒಂದು ಭಾಗದಲ್ಲಿ ಮಾತ್ರ ತೇರ್ಗಡೆಯಾಗಲಿಲ್ಲ.

ಬೊಂಬಾಯಿಯಿಂದ ಪ್ರಯಾಣಮಾಡಿ ತಾ. ೧೪ನೇ ಸಾಯಂಕಾಲ ಮೈಸೂರು ಮೊಡರ್ನ್ ಬಸ್ಸಿನಿಂದ ಮಡಿಕೇರಿಗೆ ತಾರದಾ ಎಂಬ ಹೆಸರಿನ ಹುಡುಗಿ ಬಂದಿದ್ದಾಳೆ. ವಯಸ್ಸು ೧೩-೧೪ ಇರಬಹುದು. ತಂದೆತಾಯಿಗಳು ಬೊಂಬಾಯಿಯಲ್ಲಿ ಇದ್ದಾರೆ. ವಿಳಾಸ ಗೊತ್ತಿಲ್ಲ. ತಂದೆ ನಾಗರಾಜ, ತಾಯಿ ತಾರಾ. ಅಪ್ಪಯ್ಯ ಎಂಬವರ ಜೊತೆಯಲ್ಲಿ ಮೈಸೂರಿನ ವರೆಗೆ ಬಂದು ಅಲ್ಲಿಂದ ಒಬ್ಬಳೇ ಮಡಿಕೇರಿಗೆ ಬಂದಿರುವೆನು. ಕನ್ನಡ ಅಭ್ಯಾಸಕ್ಕೆ ಕಳುಹಿಸಿದ್ದಾರೆ. ಇಲ್ಲಿ ಸೋದರಮಾವ ಜಯಂತಿ ಕುಮಾರ್ ಎಂಬವರಿದ್ದಾರೆ. ಇವರಿಗೆ ಇಲ್ಲಿ ಮನೆಗಳಿವೆ. ಬಾಡಿಗೆ ಕೊಟ್ಟಿದ್ದಾರೆ. ಇವರಿಗೆ ಕಾಫಿ ತೋಟ ಇದೆ ಇನ್ನು ವಿಷಯ ಹುಡುಗಿಯಿಂದ ತಿಳಿದು ಬಂದಿದೆ. ಅವಳ ಹತ್ತಿರವಿದ್ದ ಒಂದು ಕಂಬಳಿ ಮತ್ತು ಇಪ್ಪತ್ತು ರೂಪಾಯಿಗಳು ರೈಲಿನಲ್ಲಿ ಕಳೆದು ಹೋದುವಂತೆ. ಹುಡುಗಿಯು ಬಣ್ಣ ಕಪ್ಪು, ಕನ್ನಡ ಮರಾಠಿ ಭಾಷೆಗೊತ್ತಿದೆ. ಸದ್ಯಕ್ಕೆ ಶ್ರೀ ಎಂ. ಎಸ್. ಅನಂತ ಪದ್ಮನಾಭರಾಯರ ಮನೆಯಲ್ಲಿದ್ದಾಳೆ. ಇವಳ ಸಂಬಂಧಿಕರು ಈ ಹುಡುಗಿಯನ್ನು ಅಲ್ಲಿಂದ ಕರೆದುಕೊಂಡು ಹೋಗಬಹುದು.

ಮದ್ರಾಸಿನ ಆರ್ಥಿಕ ಮಂತ್ರಿ ಗೋಪಾಲ ರೆಡ್ಡಿಯವರು ತಾ. ೯ ರಲ್ಲಿ ಮಡಿಕೇರಿಗೆ ಬಂದಿದ್ದಾಗ ಅವರಿಗೆ ಕೊಟ್ಟ ಸ್ವಾಗತಕ್ಕೂ ಅವರ ವಸತಿ ಏರ್ಪಾಡಿಗೂ ವಂದಿಸಿ ಪತ್ರ ಬರೆದಿರುವರು.

ಅನಂತಪುರ ಕಾಲೇಜಿನ ಇಂಗ್ಲಿಷ್ ಪ್ರೊಫೆಸರಾಗಿದ್ದ ಶ್ರೀ ಹೋಲ್‌ಮೆನ್ ಎಂ. ಎ. ಇವರು ಈ ತಾರೀಕು ೯ ರಲ್ಲಿ ಕೊಡಗಿಗೆ ಬಂದು ಕೊಡಗು ಸರಕಾರಿ ಕಾಲೇಜಿನ ಪ್ರಿನ್ಸಿಪಾಲರಾಗಿ ಛಾರ್ಜು ವಹಿಸಿಕೊಂಡಿರುವರು.

ಈ ವರ್ಷ ಜನವರಿ ತಿಂಗಳಿಂದ ಈ ವರೆಗೆ ಮಡಿಕೇರಿಗೆ ೫೦ ಇಂಚು ೫೪ ಸೆಂಟು ಮಳೆಯಾಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ೭೩ ಇಂಚು ೭೯ ಸೆಂಟು ಮಳೆಯಾಗಿತ್ತು. ಈ ವಾರ ಮಡಿಕೇರಿಗೆ ೭ ಇಂಚು ೨೧ ಸೆಂಟು ಮಳೆಯಾಗಿದೆ.

ನೋಟೀಸು.

ಕೊಡಗಿನ ಜಮ್ಮದ ಜಾಗದಲ್ಲಿ ಪರಜನರು ಮನೆ ಕಟ್ಟಿಕೊಂಡಿರುವ ಜಮೀನುಗಳನ್ನು ಆಯಾಯ ಪರಜನರಿಗೆ ಬಿಟ್ಟುಕೊಡಬೇಕೆಂದು ಗೌರವ ಹೊರಜನರ ರಂಗನನ್ನು ಚೀಫ್ ಕಮಿಷನರವರು ಜಮೀನ್ದಾರ ಸಂಘದ ಅಭಿಪ್ರಾಯಕ್ಕೆ ಕಳುಹಿಸಿರುವರು. ಈ ಪ್ರಯುಕ್ತ ತಾರೀಕು 30-7-49ರ ಬೆಳಗ್ಗೆ 10 30 ಗಂಟೆಗೆ ವೀರಾಜಪೇಟೆಯಲ್ಲಿ ಶ್ರೀ ಕೋಳೀರ ಕರುಂಬಯ್ಯ ಎಂ. ಎ; ಎಲ್. ಎಲ್. ಬಿ. ಯವರ ಆಫೀಸಿನಲ್ಲಿ ಕಮಿಟಿ ಮೀಟಿಂಗು ಸೇರುವಂತೆ ಏರ್ಪಾಡು ಮಾಡಲಾಗಿದೆ. ಎಲ್ಲಾ ಕಮಿಟಿ ಮೆಂಬರುಗಳೂ ತಪ್ಪದೆ ಸಮಯಕ್ಕೆ ಸರಿಯಾಗಿ ಹಾಜರಾಗಬೇಕಾಗಿ ಕೇಳಿಕೊಳ್ಳಲಾಗಿದೆ.

ಸಿ. ಎಂ. ಬಿದ್ದಯ್ಯ,
ಕೊ. ಜಮೀನ್ದಾರರ ಸಂಘ, ಪ್ರೆಸಿಡೆಂಟ್.
ತಾ. 7 7. 49.

FOR SALE.

One B. S. A. double barrel breach loading gun with a 30 inches Nitro proof barrels in tip top condition is for sale. For further particulars Please contact.

I. M. Mandappa, B. Com
C/o. *Kushalnagar works,*
Kudige, Fraserpet.

ಮದ್ರಾಸಿನ ಆರ್ಥಿಕ ಮಂತ್ರಿ

ಬಿ. ಗೋಪಾಲರೆಡ್ಡಿಯವರು.

ತಾರೀಕು ೯-೭-೪೯ ನೇ ಶನಿವಾರ ಮದ್ರಾಸಿನ ಆರ್ಥಿಕ ಮಂತ್ರಿಗಳಾದ ಮಾನ್ಯ ಶ್ರೀ ಬಿ. ಗೋಪಾಲರೆಡ್ಡಿಯವರು ತಮ್ಮ ಪತ್ನಿಯೊಡನೆ ಮಡಿಕೇರಿಗೆ ಮಧ್ಯಾಹ್ನ ೧ ಗಂಟೆಗೆ ಬಂದರು. ಮಡಿಕೇರಿ ಪುರ ಸಭೆಯವರೂ, ಇತರ ಸಾರ್ವಜನಿಕರೂ ಅವರಿಗೆ ಟೋಲ್‌ಗೇಟಿನ ಬಳಿ ಸ್ವಾಗತವಿತ್ತು ಕೊಡಗು ಕೇಶವ ಸಭಾಲಯಕ್ಕೆ ಕರೆಕೊಂಡು ಹೋದರು. ಅಲ್ಲಿ ಸಾರ್ವಜನಿಕ ಸ್ವಾಗತವು ಜರೆಯಿತು. ಶ್ರೀ ಸಿ. ಐ. ಬೆಳ್ಯಪ್ಪನವರು ಮಂತ್ರಿಗಳಿಗೆ ಸುಸ್ವಾಗತವನ್ನು ಕೋರಿದುದಲ್ಲದೆ ಅವರ ಪರಿಚಯವನ್ನು ಸಭೆಗೆ ಮಾಡಿಕೊಟ್ಟರು. ಈ ಸಂದರ್ಭದಲ್ಲಿ ಮದ್ರಾಸಿಗೂ ಕೊಡಗಿಗೂ ಇರುವ ಸಂಬಂಧವನ್ನು ವಿವರಿಸಿದುದಲ್ಲದೆ ಮದ್ರಾಸಿನ ಟೆಕ್ನಿಕಲ್ ಕಾಲೇಜುಗಳಲ್ಲಿ ಕೊಡಗಿನ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲತೆ ಮಾಡಿಕೊಡಬೇಕೆಂದೂ, ಮದ್ರಾಸಿನವರಿಗೆ ಅತ್ಯುಪಯುಕ್ತವಾದ ಬರಪೊಳೆ ವಿದ್ಯುಚ್ಛಕ್ತಿ ಯೋಜನೆಯನ್ನು ಶೀಘ್ರ ನಡಸಿಕೊಳ್ಳಬೇಕೆಂದೂ ಹೇಳಿದರು.

ಮಾನ್ಯ ಮಂತ್ರಿ ಗೋಪಾಲರೆಡ್ಡಿಯವರು ಸಭೆಯವರಿಗೆ ವಂದಿಸುತ್ತಾ ಸ್ವಾಗತಕ್ಕೆ ಕೃತಜ್ಞತೆಯನ್ನು ಸೂಚಿಸಿದರು. ಕೊಡಗಿಗೂ ಮದ್ರಾಸಿಗೂ ಇರುವ ಸಂಬಂಧ, ಇತ್ತಲಾಗಿ ಬೆಳೆದ ಹೈಕೋರ್ಟಿನ ಸಂಬಂಧ, ಕೊಡಗು ತನ್ನ ಉಳುವರಿ ಬತ್ತದಲ್ಲಿ ಸ್ವಲ್ಪವನ್ನು ಮಲಬಾರಿಗೆ ಕೊಡುತ್ತಿರುವವರ ವಿಚಾರ ವಿವರಿಸಿದರು. ಕಾಲೇಜಿನಲ್ಲಿ ಸದ್ಯಕ್ಕೆ ಸೀಟು ಒದಗಿಸಲಾರದ ತಮ್ಮ ತೊಂದರೆಯನ್ನೂ ವಿವರಿಸಿದರು. ಹೇಗೂ ಮುಂದಿನ ವರ್ಷಗಳಲ್ಲಿ ಹೆಚ್ಚಿನ ಸೀಟುಗಳನ್ನು ಒದಗಿಸುವ ಬಾಬಿಗೆ ಪ್ರಯತ್ನಿಸುವದಾಗಿ ಹೇಳಿದರು. ಬರಪೊಳೆ ಯೋಜನೆಯು ಈಗ ಯಾವ ಸ್ಥಿತಿಯಲ್ಲಿದೆಯೆಂದು ತನಗೆ ಗೊತ್ತಿಲ್ಲವೆಂದೂ, ಹೇಳಿದರು. ಕೊಡಗು ತನ್ನ ಭವಿಷ್ಯವನ್ನು ಹೇಗೆ ನಿರ್ಧರಿಸಿಕೊಂಡರೂ ಅದಕ್ಕೆ ಉತ್ತಮ ಆಡಳಿತಗಾರರು ದೊರೆಯಬೇಕೆಂದೂ, ದಕ್ಷ ಆಡಳಿತದಲ್ಲಿ ಕೊಡಗು ತನ್ನ ವೈಶಿಷ್ಟ್ಯವನ್ನು ಉಳಿಸಿಕೊಂಡು ಸುಖ ಶಾಂತಿಯಿಂದ ಬಾಳಲೆಂದೂ ಆಶಿಸಿದರು. ನಂತರ ಮದ್ರಾಸಿನ ಕಾರ್ಯಕಲಾಪಗಳ ವಿಚಾರ ವಿವರಿಸುತ್ತಾ ಮದ್ರಾಸಿನಲ್ಲಿ ಪಾನ ವಿರೋಧವನ್ನು ಜಾರಿಗೆ ತಂದ ಕಾರಣ ಅಬಕಾರಿಯಿಂದ ಮದ್ರಾಸು ಸರಕಾರಕ್ಕೆ ಆದ ಹದಿನೇಳು ಕೋಟಿ ರೂಪಾಯಿಗಳ ನಷ್ಟ ಅದನ್ನು ಭರ್ತಿ ಮಾಡಲು ಮಾಡಿದ ಪ್ರಯತ್ನ, ಬಡಜನರಿಂದ ಬರುತ್ತಿದ್ದ ಈ ಆದಾಯ ಅವರಲ್ಲಿಯೇ ಉಳಿಯುವಂತಾಗಿ ದೇಶಕ್ಕಾದ ಹಿತ ಮೊದಲಾದುವನ್ನು ವಿವರಿಸಿದರು. ಮದ್ರಾಸು ಆಹಾರದ ಮಟ್ಟಿಗೆ ಸ್ವಯಂಪೂರ್ಣವಾಗಿಲ್ಲವೆಂದೂ, ಆದ್ದರಿಂದ ಆಹಾರದ ಬಗ್ಗೆ ತನ್ನ ಕಾಲಲ್ಲಿ ತಾನು ನಿಲ್ಲಲು ಮದ್ರಾಸು ಸರಕಾರವು ಕೈಕೊಂಡ ಯೋಜನೆಯನ್ನೂ, ವ್ಯವಸಾಯಕ್ಕೆ ಅನುಕೂಲವಾಗಿ ಅವರು ಕೈಕೊಳ್ಳುತ್ತಿರುವ ನೀರಾವರಿ ಯೋಜನೆಗಳನ್ನೂ ವಿವರಿಸಿದರು. ಮದ್ರಾಸು ಮಂತ್ರಿ ಮಂಡಳವು ಆಡಳಿತವನ್ನು ಹೇಗೆ ನಡೆಸುತ್ತದೆ; ಕಾಲೇಜುಗಳಿಗೆ ವಿದ್ಯಾರ್ಥಿಗಳನ್ನು ಆರಿಸುವಾಗ ಒಂದು ರೀತಿಯ ಕೋಮುವಾರು ಪದ್ಧತಿ ಏಕೆ ಇಡಲಾಗಿದೆ ಎಂಬುದನ್ನು ವಿಶದ ಪಡಿಸಿದರು.

ಕೊಡಗಿನ ಹೊಸ ಕಾಲೇಜಿನ ವಿಚಾರ ಮಾತಾಡುತ್ತಾ ಈ ಕಾಲೇಜು ಬೆಳೆದು ಜ್ಞಾನದ ದೇವಾಲಯವಾಗಲೆಂದೂ, ಹಿಂದೂದೇಶಕ್ಕೆ ಜನರಲ್ ಕಾರ್ಯಪ್ಪ ಮತ್ತು ತಿಮ್ಮಯ್ಯ ಸಹೋದರರನ್ನು ಕೊಟ್ಟ ಈ ದೇಶವು ಇನ್ನೂ ಅಂಥಾ ಮುಂದಾಳುಗಳನ್ನು ಒಡೆದ ಹಿತಕ್ಕಾಗಿ ಕೊಡಲೆಂದೂ ಆಶಿಸಿದರು.

ಕಾಂಗ್ರೆಸು ಬಲಗುಂದುತ್ತಿದೆಯೆಂಬುದರಲ್ಲಿ ಸತ್ಯವಿಲ್ಲವೆಂದೂ ಶತಮಾನಗಳ ಬ್ರಿಟಿಷರ ಆಳ್ವಿಕೆಯಲ್ಲಿ ಉಂಟಾದ ಅವ್ಯವಸ್ಥೆಯನ್ನು ಸುಧಾರಿಸಿ, ದೇಶದ ಏಳ್ಗೆಯನ್ನು ಸಾಧಿಸುವದು ಈ ಅಲ್ಪ ಎರಡು ವರ್ಷಗಳಲ್ಲಿ ಆಗದ ಮಾತೆಂದೂ, ದೇಶದ ಬೇಡಿಕೆಯು ಮಹಾ ಸಾಗರದಂತಿದ್ದು ಅದಕ್ಕೆ ಈಗ ನಡೆಯುತ್ತಿರುವ ಸುಧಾರಣೆಗಳು ಸಾಲದೆಂದೂ ಯಾವ ಸರಕಾರವೂ ಇದಕ್ಕಿಂಥಾ ಹೆಚ್ಚಿನದನ್ನು ಈ ಅಲ್ಪ ಅವಧಿಯಲ್ಲಿ ಮಾಡುವದು ಅಸಾಧ್ಯವೆಂದೂ ಹೇಳಿದರು. ಬರುವ ಚುನಾವಣೆಯಲ್ಲಿ ದೇಶೀಯರು ಕಾಂಗ್ರೆಸ್ಸಿಗೇ ಓಟುಕೊಡಬೇಕೆಂದು ತಾನು ಹೇಳುವದಿಲ್ಲವೆಂದೂ ಕಾಂಗ್ರೆಸ್ಸಿನವರಿಗಿಂಥಾ ಉತ್ತಮವಾಗಿ ಜನ ಸೇವೆ ಮಾಡುವವರಿದ್ದರೆ ಅಂಥಾವರನ್ನು ಆರಿಸಿಕೊಳ್ಳುವದು ಯುಕ್ತವೆಂದೂ ಹೇಳಿದರು.

ಕೊಡಗಿನ ಲಾರಿಗಳಿಗೆ ಮದ್ರಾಸ್ ಗಡಿಯಲ್ಲಿ, ಮದ್ರಾಸಿನ ಲಾರಿಗಳಿಗೆ ಕೊಡಗಿನ ಗಡಿಯಲ್ಲಿ ಹೀಗೆ ಕಂದಾಯದ ಮೇಲೆ ಕಂದಾಯದ ಈಗಿನ ವ್ಯವಸ್ಥೆ ಸರಿ ಇಲ್ಲವೆಂದೂ ಯಾವದಾದರೂ ಒಂದೇ ಕಂದಾಯವಿರುವಂತೆ ಒಪ್ಪಂದ ಮಾಡಿಕೊಳ್ಳುವದು ಯೋಗ್ಯವೆಂದೂ ಹೇಳಿದರು. ಸುಂದರ ಕೊಡಗನ್ನು ನೋಡಲು ಹಿಂದೆಯೇ ಇಚ್ಛೆ ಇತ್ತೆಂದೂ, ಇದು ತನ್ನ ಕಡೇ ಸಂದರ್ಶನವಾಗದೆಂದೂ ಹೇಳಿ ಸ್ವಾಗತಕ್ಕಾಗಿ ಪುನಃ ವಂದಿಸಿದರು.

ನಂತರ ಶ್ರೀ ಸಿ. ಎಂ. ಪೂಣಚ್ಚನವರು, ಮಾನ್ಯ ಮಂತ್ರಿಗಳು ತಮ್ಮ ಮಹಾ ಜವಾಬ್ದಾರಿಗಳ ಮಧ್ಯದಲ್ಲೂ ಕೊಡಗಿಗೆ ಬರುವ ಅನುವನ್ನು ಮಾಡಿಕೊಂಡು ಬಂದದಕ್ಕೂ, ಸ್ವಾಗತವನ್ನು ಸ್ವೀಕರಿಸಿದುದಕ್ಕೂ ವಂದಿಸಿ ಅವರಿಗೂ ಅವರ ಪತ್ನಿಯವರಿಗೂ ಆಯುರಾರೋಗ್ಯವನ್ನು ಕೋರಿದರು.

ಮಾನ್ಯ ಮಂತ್ರಿಯವರಿಗೆ ಸಾರ್ವಜನಿಕರು ಸಾಯಂಕಾಲ ೫ ಗಂಟೆಗೆ ಒಂದು ಚಹಪಾನ ಸಮಾರಂಭವನ್ನು ಏರ್ಪಡಿಸಿದ್ದರು. ಮಂತ್ರಿಯವರು ಮದ್ರಾಸಿಗೂ, ಕೊಡಗಿಗೂ ಸಂಬಂಧಿಸಿದ ಕೆಲವು ವಿಚಾರಗಳ ಬಗ್ಗೆ ಕೊಡಗಿನ ಕೆಲವು ಅಧಿಕಾರಿಗಳೊಡನೆಯೂ ಸಾರ್ವಜನಿಕ ಮುಂದಾಳುಗಳೊಡನೆಯೂ ಮಾತುಕತೆ ನಡೆಸಿದರು. ಮಾರನೆ ದಿನ ಮೈಸೂರಿಗಾಗಿ ಮದ್ರಾಸಿಗೆ ಹೋದರು.

ರಾತ್ರಿಯಲ್ಲಿ ಬಿಸಿಲು.

ಮುಸ್ಸಂಜೆಯ ಪ್ರಕಾಶದಂತಿರುವ ಒಂದು ತರದ ಕೃತಿಮ ಬೆಳಕನ್ನುಂಟುಮಾಡಿ ರಾತ್ರಿಗಳನ್ನು ಬೆಳಗಿಸಲು ಸಾಧ್ಯವಿದೆಯೆಂದು ತಿಳಿದು ಬರುತ್ತದೆ. ನೆಲದಿಂದ ಸುಮಾರು ೬೦ ಮೈಲು ಎತ್ತರದ ಆಕಾಶ ಪ್ರದೇಶದಲ್ಲಿರುವ ವಾತಾವರಣದಲ್ಲಿ ರೇಡಿಯೋ ಕಿರಣಗಳನ್ನು ಕಳುಹಿಸಿ ಈ ಬೆಳಕನ್ನುಂಟುಮಾಡುವದು ಇದರ ಸಂಕ್ಷೇಪ ತತ್ವವಾಗಿದೆ. ಈ ರೀತಿಯಲ್ಲಿ ಒಂದು ಪಟ್ಟಣವನ್ನು ಬೆಳಗಿಸಲು ಆಸ್ಟ್ರೇಲಿಯಾದ ಆಗ್ಮಡೇಲ್‌ಯೆಂಬಲ್ಲಿ ಪ್ರಯತ್ನಗಳಾಗುತ್ತಿವೆ. ಮುಸ್ಸಂಜೆ ಹೊತ್ತಿನ ಪ್ರಕಾಶದಷ್ಟು ಪ್ರಭೆಯನ್ನು ಬೀರಲು ಸುಮಾರು ೬೫೦ ಸಾವಿರ ರೂಪಾಯಿ ಖರ್ಚು ತಗಲಬಹುದು. ಇದರ ಇಮ್ಮಡಿ ಖರ್ಚುಮಾಡಿದರೆ ಬೆಳದಿಂಗಳಿನಷ್ಟು ಪ್ರಭೆಯು ಪ್ರಕಾಶವನ್ನು ೫ ಸಾವಿರ ಚದರ ಮೈಲು ವಿಸ್ತಾರಕ್ಕೆ ಪಸರಿಸಬಹುದೆಂದು ವಿಜ್ಞಾನಿಗಳು ಅಂದಾಜು ಮಾಡಿದ್ದಾರೆ.

ಕೂದಲೆಣ್ಣೆಗಳು ನಿರರ್ಥಕ.

ಕೂದಲು ಬೀಳುವಿಕೆಯನ್ನು ನಿಲ್ಲಿಸಲು, ಬೋಳು ತಲೆಯನ್ನು ಸಂರಕ್ಷಿಸಲು, ಜಗತ್ತಿನಲ್ಲಿ ಜನರು ಮಿಲಿಯಾವಧಿ ಹಣವನ್ನು ಈ ದೋಷ ನಿವಾರಿಸುತ್ತದೆಂದು ಹೇಳಲ್ಪಡುವ ಎಣ್ಣೆ ಮುಂತಾದ ಔಷಧಿಗಳಲ್ಲಿ ವ್ಯಯಿಸುತ್ತಾರೆ. ಅಮೇರಿಕದ ವೈದ್ಯಕೀಯ ಸಂಘದ ಶೃಂಗಾರ ವಸ್ತುಗಳ ಪರಿಶೀಲನಾ ಸಮಿತಿಯವರು ತಮ್ಮ ವರದಿಯಲ್ಲಿ ಹೀಗೆ ತಿಳಿಸುತ್ತಾರೆ.

'ಪ್ರಾಯ ಹೋದವರ, ಇಲ್ಲವೆ ಪ್ರಾಯ ಮುಂಚಿತವಾಗಿ ಉದುರಿಹೋದ ಕೂದಲುಗಳನ್ನು ಪುನರ್ಜೀವಿಸುವುದು ಅಸಾಧ್ಯದ ಕೆಲಸ. ಯಾವ ಚಿಕಿತ್ಸೆಯು ವಿಧಾನದಿಂದಾಗಲಿ, ಯಾಂತ್ರಿಕ ಕ್ರಮದಿಂದಾಗಲೀ, ಟಾನಿಕುಗಳಿಂದಾಗಲಿ, ವಿಟಮಿನ್‌ಗಳಿಂದಾಗಲಿ ಬಿದ್ದ ಕೂದಲುಗಳನ್ನು ಪುನಃ ಬೆಳೆಸುವುದು ಅಸಂಭವ.

'ಕೇಶದ ಎಣ್ಣೆಗಳು ಕೇವಲ ಕೂದಲನ್ನು ಬಾಚಿಕೊಳ್ಳಲು ಮಾತ್ರ ಸಹಾಯ ಮಾಡುತ್ತವೆ. ಸರ್ವಸಾಧಾರಣವಾಗಿ ಅವು ಕೆಲವು ಸಾಮಾನ್ಯ ಔಷಧಿಗಳಿಂದ ತಯಾರಿಸಲ್ಪಡುತ್ತವೆ. ಔಷಧಿಗಳಲ್ಲಿ ಕೂದಲನ್ನು ಬೆಳೆಸುವ, ಉದುರುವಿಕೆಯನ್ನು ತಡೆಯುವ ಇಲ್ಲವೆ ಕೂದಲನ್ನು ಶಕ್ತಿಯುಕ್ತವಾಗಿ ಮಾಡುವ ಯಾವ ಪ್ರಭಾವವೂ ಇರುವುದಿಲ್ಲ.

ಧೂಮಪಾನದ ವಿರೋಧ ಚಳವಳ.

ಬ್ರಿಟನಿನ ಒಂದು ಕೋಟಿ ಧೂಮಪಾನದ ಅಭ್ಯಾಸವಿಲ್ಲದವರು ಹೊಗೆ ಬಿಡುವವರ ಮೇಲೆ ಚಳವಳ ಯುದ್ಧವನ್ನು ಸಾರಿದ್ದಾರೆ. ಮಿಲಿಯಾವಧಿ ತಮ್ಮ ದೇಶ ಬಾಂಧವರ ಶರೀರದಿಂದ ಹೊಗೆಸೊಪ್ಪಿನ ನಿಕೊಟಿನ್ ವಿಷವನ್ನು ನಿರ್ಮೂಲ ಮಾಡಬೇಕೆಂದವರ ನಿರ್ಧಾರ. ಹೊಗೆಸೊಪ್ಪಿನ ದುಷ್ಪರಿಣಾಮ ಕುರಿತು ಅಲ್ಲಿನ ಹಲ್ಟನ್ ಪರಿಶೋಧನಾಲಯದವರು ಪ್ರಕಟಿಸಿದ ಒಂದು ವರದಿಯು ಈ ಚಳವಳಕ್ಕೆ ಸ್ಫೂರ್ತಿಯನ್ನು ಕೊಟ್ಟಿತು.

ಬ್ರಿಟನ್ನಿನಲ್ಲಿರುವ ೧೬ ವರ್ಷಕ್ಕೆ ಮೇಲ್ಪಟ್ಟ ೩೬ ಮಿಲಿಯ ಜನ ಸಂಖ್ಯೆಯಲ್ಲಿ ೨೧ ಮಿಲಿಯ ಜನರು ಧೂಮ ಪಾನವನ್ನು ಮಾಡುತ್ತಾರೆ. ಪುರುಷರಲ್ಲಿ ಪ್ರತಿ ಐದು ಮಂದಿಗಳ ಪೈಕಿ ನಾಲ್ಕು ಮಂದಿಗಳು ಹೊಗೆ ಬತ್ತಿ ಸೇದಿಸುವರು. ಮತ್ತೆ ಬ್ರಿಟಿಷ್ ಸ್ತ್ರೀಯರಲ್ಲಿ ಕೂಡ ಪ್ರತಿ ಐದು ಮಂದಿಗಳಲ್ಲಿ ಇಬ್ಬರು ಸೇದುತ್ತಾರೆ. ಭಕ್ತೆಯರು. [illegible] ಗರೇಟುಗಳಿಗಿಂಥಲೂ [illegible] ಹೆಚ್ಚಾಗಿ ಉಪಯೋಗಿಸುತ್ತಾರೆ.

ಅಲ್ಲಿನ ಪಾರ್ಲಿಮೆಂಟಿನ ಹೌಸ್ ಆಫ್ ಲಾರ್ಡ್ಸ್ ಮತ್ತು ಹೌಸ್ ಆಫ್ ಕಾಮನ್ಸ್ ಇವೆರಡು ಸಭೆಗಳಲ್ಲೂ ಧೂಮಪಾನ ನಿಷೇಧಕರು ತಮ್ಮ ಕಡೆ [illegible] ಪ್ರತಿನಿಧಿಗಳನ್ನು ಕಾನೂನ ಮಾಡಿಸುವ [illegible] ಸಿದ್ಧಗೊಳಿಸಿರುವರು. ಇವರು ಮೊದಲು ಪ್ರಜಾಪ್ರತಿನಿಧಿಗಳಲ್ಲಿ ಧೂಮಪಾನ ನಿಷೇಧವನ್ನು ತರಲು [illegible] ಧೂಮಪಾನ ನಿಷೇಧ [illegible] ರೀಟನ್ನು ಹೀಗೆ ವರ್ಣಿ [illegible] ತುದಿಯಲ್ಲಿ ಬೆಂಕಿ ಇದೆ, [illegible] ದಿಯಲ್ಲಿ ಒಬ್ಬ ಹುಚ್ಚನಿದ್ದಾನೆ.

ಸಾಹಸಿ ಹುಡುಗಿಗೆ ನಾಗರೀಕ ಬಹುಮಾನ.

ಸಂಯುಕ್ತ ಅಮೇರಿಕ [illegible] ನಗರಪಾಸಿಗಳು ತಮ್ಮ [illegible] ಹೆಸರ ಓವರ್ ಹುಡಿಗಿಗೆ [illegible] ವಿರ ಡಾಲರಿನ ಒಂದು [illegible] ಸಾವಿರ ಡಾಲರು ನಗದಿ ಕಣದ ಕ್ರೆಡಿಟನ್ನು ಅರ್ಪಿಸಿದರು. [illegible] ವು ಹುಡುಗಿಯ ಸಾಹಸದಿಂದ [illegible] ಲಾಗಿದೆ. ತನ್ನ ಮನೆಗೆ ಬೆಂಕಿ ಹಿಡಿದುಕೊಂಡಿದ್ದಾಗ ಒಳಗೆ [illegible] ತನ್ನ ಮಲತಾಯಿಯ [illegible] ವದ ಹೆಂಗುಸೊಬ್ಬಳ [illegible] ರಿತೋಷಕ ದಾನದ [illegible] ಚೇತಾರಿ ಮೇಯರ [illegible] ಲ್ಲಿಯವರ ಸೇವ್ಯತ್ವದಿಲ್ಲ [illegible] ತು. ಅವನ್ನು [illegible] ಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದು [illegible] ಡುಗಿಯ ಮಲತಾಯಿ [illegible] ಟ್ಟಿವಳಾಗಿದೆ. [illegible] ಥಾ ಆದರ್ಶಗಳು ಅದ ಕರ್ತವ್ಯವೆಂಬುವನ್ನು ದೇಶದ ಅನೇಕ ಪತ್ರಿಕೆಗಳು ಪ್ರಶಂಸಿಸಿವೆ.

ರೈತನ ಪ್ರಪಂಚ

ಹಾಲು.

(ಜೇನು, ಹಾಲುಗಳಿಂದ ಸಮೃದ್ಧವಾದ ನಾಡು ನಮ್ಮ ಭಾರತ ದೇಶವೆಂಬ ಹೆಸರು ಹಿಂದೆ ಇತ್ತು. ಆದರೆ ಇಂದು ಈ ಸ್ಥಿತಿಯಿಲ್ಲ. ನಮ್ಮ ದೇಶ 'ಸುಜಲಾಂ' ಆಗಿಲ್ಲ; 'ಸುಫಲಾಂ' ಅಲ್ಲ. ಹೊಟ್ಟೆಗೆ ಅನ್ನಕ್ಕೇ ತೊಂದರೆಯಾಗಿದೆ. ಭರತ ಖಂಡದಲ್ಲಿ ಧನ ಸಂಪತ್ತು ಕಡಿಮೆ ಇಲ್ಲ. ಅನೇಕ ಕುಟುಂಬಗಳಲ್ಲಿ ಹಾಲಿನ ಸುಳಿವೇ ಇಲ್ಲ. ಶರೀರದ ಆರೋಗ್ಯಕ್ಕೆ ಹಾಲು ಎಷ್ಟು ಆವಶ್ಯಕವೆಂದು ಬೇರೆ ಹೇಳಬೇಕಿಲ್ಲ. ಇದರ ಅಭಾವದ ಕಾರಣವೇ ಭಾರತೀಯರು ದುರ್ಬಲರಾಗುತ್ತಿದ್ದಾರೆ. ಈ ಕೆಳಗೆ ಅಮೇರಿಕದಲ್ಲಿ ಹಾಲನ್ನು ಯಾವ ರೀತಿ ವಿತರಣೆ ಮಾಡುತ್ತಾರೆ ಎಂಬ ಬಗ್ಗೆ ವಿವರಗಳಿವೆ. ಅಮೇರಿಕನರು ಎಷ್ಟರ ಮಟ್ಟಿಗೆ ಮುಂದರಿದಿರುವರು ಎಂಬುದನ್ನು ಇಲ್ಲಿ ಕಾಣಬಹುದು. ಸಂ.)

ಹಾಲನ್ನು ವಿಜ್ಞಾನ ರೀತಿಯಿಂದ ಸಂಗ್ರಹಿಸಿ, ಯೋಗ್ಯ ಆರೋಗ್ಯಕರ ರೀತಿಯಲ್ಲಿ ಅಮೇರಿಕದ ಮಿಲಿಯಾಂತರ ಮನೆಗಳಿಗೆ ಮುಟ್ಟಿಸುವ ಕೆಲಸ ಶಾಸ್ತ್ರೀಯ ರೀತಿಯಲ್ಲಿ ನಡೆಯುತ್ತದೆ. ಖಾಸಗಿ ಕಂಪೆನಿಗಳು 'ಡೈರಿ ಫಾರಂ'ನಲ್ಲಿ ಹಾಲನ್ನು ಶೋಧಿಸಿ, ಪರೀಕ್ಷಿಸಿ, ಸೀಲ್ ಹಾಕಿದ ಪಾತ್ರೆಗಳಲ್ಲಿ ಪ್ರತಿ ಮನೆಗೆ ಮುಟ್ಟಿರುತ್ತಾರೆ. ಜನತೆಗೆ ಉತ್ತಮ ಹಾಲನ್ನು ಕೊಡುವ ಕಾರ್ಯದಲ್ಲಿ ಖಾಸಗಿ ಕಂಪೆನಿಗಳು 'ಡೈರಿ ಫಾರಂ'ಗಳು, ಪರಿಶೀಲನೆಗಿರುವ ಮೇಲ್ವಿಚಾರಕರು ಪರಸ್ಪರ ಸಹಕರಿಸಿ ದಕ್ಷ ರೀತಿಯಲ್ಲಿ ಈ ಕೆಲಸ ಮಾಡುತ್ತಿದ್ದಾರೆ. ಈ ಕಾರಣದಿಂದ ಅಶುದ್ಧ ಹಾಲಿನಿಂದ ಉತ್ಪನ್ನವಾಗುವ ರೋಗಗಳು ತಡೆಗಟ್ಟಲ್ಪಟ್ಟಿವೆ. ಅಯೋಗ್ಯ ಹಾಲಿನಿಂದ ಬರುವ ವಿಶಮ ಶೀತ ಜ್ವರದಂಥ ಖಾಯಿಲೆ ಅಮೇರಿಕದಲ್ಲಿ ಇಲ್ಲವೇ ಇಲ್ಲವೆನ್ನಬಹುದು.

ಸಂಯುಕ್ತ ಅಮೇರಿಕದ ಎಲ್ಲಾ ನಗರ ಮತ್ತು ಪಟ್ಟಣಗಳಲ್ಲಿ 'ಹಾಲಿನ ನಿಯಮ'ಗಳಿವೆ. ಹಾಲು ಮಾರುವ ಪ್ರತಿಯೊಬ್ಬನೂ ವಿತರಣಾ ಕೇಂದ್ರಕ್ಕೆ ಹಾಲನ್ನು ತಲಪಿಸುವಾಗ ಆ ಹಾಲು ಕೆಲವು ಪರಿಶೋಧನೆಗನುಗುಣವಾಗಿರಬೇಕು. ಹಾಲಿನಲ್ಲಿ ಇಷ್ಟೇ ಬೇಕ್ಟೀರಿಯಾ ಅಣು ಇರಬೇಕು; ಧೂಳು ಮೊದಲಾದ ಅಶುದ್ಧ ಪದಾರ್ಥಗಳಿರಬಾರದು. ರುಚಿತ್ವದ ದೃಷ್ಟಿಯಿಂದ ಉತ್ತಮವಾಗಿರಬೇಕು. ಅಲ್ಲಿಯ ಆರೋಗ್ಯ ಇಲಾಖೆಯವರು ವಿಧಿಸಿದ ನಿಯಮಗಳನ್ನು ಎಲ್ಲರೂ ಪಾಲಿಸಬೇಕು. ಕೆಲವು ಮುನ್ಸಿಪಾಲಿಟಿಯ ನಗರಗಳು ತಮ್ಮದೇ ಆದ ನಿಯಮಗಳನ್ನು ಮಾಡಿಕೊಂಡಿವೆ. ಇವು ಆರೋಗ್ಯ ಇಲಾಖೆಯ ನಿಯಮಗಳಿಗಿಂತ ಕಠಿಣವಿವೆ. ನ್ಯೂಯಾರ್ಕ್ ಪಟ್ಟಣದಲ್ಲಿ ಯಾವ ರೀತಿ ೧೯೦೮ರಲ್ಲಿ ಮಾಡಲ್ಪಟ್ಟ ಈ ನಿಯಮವು ಜಾರಿಯಲ್ಲಿದೆಯೆಂಬುದನ್ನು 'ನ್ಯೂಯಾರ್ಕ್ ಟೈಮ್ಸ್' ಪತ್ರಿಕೆಯಲ್ಲಿ ಹೀಗೆ ಬರೆಯಲಾಗಿತ್ತು.

ವರ್ಷದ ಪ್ರತಿ ದಿನದಲ್ಲಿ ೩,೨೫೦,೦೦೦ ಕ್ವಾರ್ಟ್ಸ್ ಹಾಲು ಈ ನಗರದಲ್ಲಿ ಖರ್ಚಾಗುತ್ತವೆ. ಪ್ರತಿಯೊಬ್ಬ ಮನುಷ್ಯನಿಗೆ ದಿನಕ್ಕೆ ಒಂದು ಪಾವಿನಷ್ಟು ಹಾಲು. ಈ ಹಾಲು ೪೩,೫೭೭ ಗೋರಕ್ಷಾ ಕೇಂದ್ರಗಳಿಂದ ಬರುತ್ತದೆ. ಇವುಗಳ ವಿಸ್ತೀರ್ಣ ೭೫,೦೦೦ ಚದರ ಮೈಲುಗಳಷ್ಟು. ಇಲ್ಲಿ ಕರೆಯಲ್ಪಟ್ಟ ಹಾಲು ಲಾರಿ, ರೈಲುಗಳ ಮೂಲಕ ಕರೆಯಲ್ಪಟ್ಟ ೨೪ ಗಂಟೆಗಳೊಳಗೆ ನಗರವನ್ನು ಮುಟ್ಟುವವು. ಬೆಳಗಿನ ಪ್ರಭಾತದ ಕಾಲಕ್ಕೆ ವಿಶೇಷ ಟ್ರಕ್ಕುಗಳ ಮೂಲಕ ೪೦ ಕ್ವಾರ್ಟರುಗಳು ಹಿಡಿಯುವ ಪಾತ್ರೆಗಳಲ್ಲಿ ೪೦೮ ಕೇಂದ್ರಗಳಿಗೆ ಈ ಹಾಲು ಬರುತ್ತದೆ. ಇಲ್ಲಿ ಈ ಪಾತ್ರೆಗಳನ್ನು ಬೇರೊಂದು ವಾಹನಕ್ಕೆ ತುಂಬಿಸಿ ಪರಿಶೋಧನಾ ಕೇಂದ್ರಕ್ಕೆ ಕಳಿಸಲಾಗುವದು.

ನ್ಯೂಯಾರ್ಕ್ ನಗರದ ಆರೋಗ್ಯ ಇನ್ಸ್‌ಪೆಕ್ಟರು ಈ ಪ್ರತಿಯೊಂದು ಪಾತ್ರೆಯನ್ನು ಪರಿಶೀಲಿಸುವರು. ಯಾವದೇ ಪಾತ್ರೆಯ ಹಾಲಿನ ಮೇಲೆ ಸಂಶಯವಾಗರೆ ತಮ್ಮ ಕೈಯ್ಯಲ್ಲಿರುವ ಸೂಕ್ಷ್ಮದರ್ಶನ ಯಂತ್ರದಿಂದ ಅವಲೋಕಿಸುವರು. ಹಾಲಿನಲ್ಲಿ ಬೇಕ್ಟೀರಿಯಾ ಇದ್ದೆ (ಒಂದು ಚಚೌಕ ಸಂಟಿಮೀಟರ್ ಹಾಲಿನಲ್ಲಿ ೧ ಲಕ್ಷದ ೫೦ ಸಾವಿರಕ್ಕಿಂಥಾ ಕಡಿಮೆ ಇರಬೇಕು.) ಬೇಕು ಇದಲ್ಲದೆ ಬೇರೆ ಹಾನಿಕಾರಕ ಕ್ರಿಮಿಗಳು ಇವೆಯೋ, ದನಗಳ ಕೆಚ್ಚಲು ರೋಗ, ಅಶುದ್ಧ ಪಾತ್ರೆಗಳು ಮತ್ತು ಸಾಕಷ್ಟು ತಣಿಯದಿರುವಿಕೆಗಳಿಂದ ಹಾಲು ಹಾಳಾಗಿದೆಯೋ ಎಂದು ಪರೀಕ್ಷಿಸುವರು. ಇದಲ್ಲದೆ ಬೇರೆ ವಿವಿಧ ರೀತಿಯ ಪರಿಶೀಲನೆಯನ್ನೂ ಸಂಶಯವಿದ್ದರೆ ನಡೆಸುವರು.

ಪರಿಶೀಲನೆಯಲ್ಲಿ ಇನ್ಸ್‌ಪೆಕ್ಟರ ಸಂಶಯವು ಆಧಾರಪೂರ್ಣವಾದುದೆಂದು ತೋರಿಬಂದರೆ ಆ ಹಾಲು ತಿರಸ್ಕರಿಸಲ್ಪಡುವದು. ಯಾವ ಕೇಂದ್ರದಿಂದ ಆ ಹಾಲು ಬಂತೋ ಆ ಕೇಂದ್ರದ ಎಲ್ಲಾ ಹಾಲುಗಳನ್ನು ಪರಿಶೀಲಿಸಲಾಗುವದು. ತೃಪ್ತಿಕರವೆಂದು ತೋರಿದ ಹಾಲನ್ನು ವಿಶಾಲ ಕೆರೆಗಳಂಥಾ ಪಾತ್ರೆಗಳಲ್ಲಿ ತುಂಬಿ ಅದನ್ನು ಕಾಯಿಸಿ ಚಿಕ್ಕ ಪಾತ್ರೆಗಳಲ್ಲಿ ತುಂಬಿ ಸೀಲ್‌ಮಾಡಿ ಮನೆ ಮನೆಗೆ ಕಳುಹಿಸಲಾಗುವದು.

ಹಾಲು ಹಾಳಾದ ಕೇಂದ್ರಗಳಿಗೆ ಇನ್ಸ್‌ಪೆಕ್ಟರುಗಳು ಕಳುಹಿಸಲ್ಪಟ್ಟು ಯಾರಿಂದ ಆ ಹಾಲು ಬಂದಿದೆಯೋ ಅವರ ಕೊಟ್ಟಿಗೆ ದನ, ಪಾತ್ರೆ ಮೊದಲಾದುವನ್ನು ಪರೀಕ್ಷಿಸಲಾಗುವದು. ಅವರು ಅಲ್ಲಿ ೩೩ ವಿಚಾರಗಳ ಶೋಧನೆ ಮಾಡುವರು. ದನಗಳನ್ನು ಸರಿಯಾಗಿ ಆಹಾರ ಹಾಕಿ ಪೋಷಿಸುತ್ತಿರುವರೇ, ಪಾತ್ರೆಗಳನ್ನು ಉಪಯೋಗಕ್ಕೆ ಮೊದಲು ಕಾಸುವರೇ, ಮನೆಯವರಲ್ಲಿ ಯಾವುದಾದರೂ ಸಾಂಕ್ರಾಮಿಕ ರೋಗವಿದೆಯೋ ಎಂದು ಶೋಧಿಸಲಾಗುವದು.

ನ್ಯೂಯಾರ್ಕ್ ಹಾಲು ಪರಿಶೋಧನಾ ಇನ್ಸ್‌ಪೆಕ್ಟರುಗಳು ಈ ನ್ಯೂನತೆಗಳನ್ನು ನಿವಾರಿಸುವ ಮಾರ್ಗಗಳನ್ನು ಬೋಧಿಸುವದಿಲ್ಲ. ಅದಕ್ಕೆ ಬೇರೆ ಇಲಾಖೆಗಳಿವೆ. ಹಾಲನ್ನು ಶೋಧಿಸಿ ಅಯೋಗ್ಯವಾಗಿದ್ದರೆ ತಿರಸ್ಕರಿಸುವದು ಇವರ ಕೆಲಸ. ಇವರು ತಮ್ಮ ಕೆಲಸವನ್ನು ದಕ್ಷ ರೀತಿಯಿಂದ ಮಾಡುತ್ತಾರೆ. ಇದ್ದರಿಂದ ಹಾಲು ಕೊಡುವವರಲ್ಲಿ ಸಾವಿರಕ್ಕೆ ಒಬ್ಬನಾದರೂ ನೀರು ಸೇರಿಸುವದಾಗಲೀ, ಅಶುದ್ಧ ಹಾಲು ಕೊಡುವದಾಗಲೀ ಇಲ್ಲ. ಪ್ರತಿಯೊಬ್ಬನೂ ಆರೋಗ್ಯಕರವಾದ ಹಾಲು ಸರಬರಾಯಿ ಮಾಡಿ ಇನ್ಸ್‌ಪೆಕ್ಟರುಗಳಿಂದ ಹೆಚ್ಚಿನ ನಂಬಿಕೆಯನ್ನು ಗಳಿಸಲು ಯತ್ನಿಸುತ್ತಾರೆ.

॥ ಪತ್ರವ್ಯವಹಾರಗಳು ॥

ಕರಿಕೆ ಗ್ರಾಮ.

ಇದು ಬಹು ವಿಶಾಲವಾದ ಗ್ರಾಮ. ಸುಮಾರು ೨೦೦೦ದ ವರೆಗೆ ಜನರಿದ್ದಾರೆ. ಸರಕಾರಕ್ಕೆ ಕಂದಾಯ ರೂಪದಲ್ಲಿ ಸಾವಿರ ಗಟ್ಟಲೆ ಹಣ ಹೋಗುತ್ತದೆ. ಆದರೆ ಈ ಗ್ರಾಮದ ಪಾಡು ಭಗವಂತನಿಗೇ ಗೊತ್ತು. ಒಂದು ರಸ್ತೆ ಇಲ್ಲ. ವಿದ್ಯೆಗೆ ಯೋಗ್ಯ ಏರ್ಪಾಡೂ ಇಲ್ಲ. ವೈದ್ಯಕೀಯ ಸಹಾಯ ದೇವರೇ ಕೊಡಬೇಕು. ಎಲ್ಲಾ ಗ್ರಾಮಗಳಿಗೂ ಮಲೇರಿಯಾ ಇಲಾಖೆಯವರು ಸಂದರ್ಶಿಸಿ ಡಿ. ಡಿ. ಟಿ. ಸ್ಪ್ರೆ ಮಾಡಿದರೂ ನಮ್ಮ ಗ್ರಾಮಕ್ಕೆ ಆ ಭಾಗ್ಯವಿಲ್ಲ. ಗ್ರಾಮದಲ್ಲಿರುವ ಗ್ರಾಂಟು ಶಾಲೆಗೆ ತಿಂಗಳಿಗೆ ರೂ. ೧೫ ಗ್ರಾಂಟು ಕೊಡಲಾಗುತ್ತಿದೆ. ಇದೂ ಪ್ರತಿ ತಿಂಗಳು ದೊರೆಯುವದಿಲ್ಲ. ಈ ಗ್ರಾಮಕ್ಕೆ ಕಳೆದ ಎರಡು ವರ್ಷಗಳಿಂದ ಯಾವ ಅಧಿಕಾರಿಗಳೂ ಬಂದಿರುವದಿಲ್ಲ. ಈ ಗ್ರಾಮದ ವಿಚಾರ ಕಳೆದ ಸಾರೆ ಚೀಫ್ ಕಮಿಷನರಲ್ಲಿ ಮಾತಾಡಿದಾಗ ಗ್ರಾಮಾಭಿವೃದ್ಧಿ ಅಧಿಕಾರಿಯನ್ನು ಕಳುಹಿಸುವೆನೆಂದರು. ಆದರೆ ಅವರ ದರ್ಶನ ಈ ವರೆಗೆ ಇಲ್ಲ. ಈ ರೀತಿ ಸರಕಾರ ನಿರ್ಲಕ್ಷ್ಯ ಭಾವದಿಂದ ಹಿಂದೆ ಬಿದ್ದಿರುವದು. ಇನ್ನಾದರೂ ಸರಕಾರವು ಈ ಗ್ರಾಮದತ್ತ ಗಮನವೀಯುವದೇ?

ಬಿ. ಎಸ್. ಚಿಣಪ್ಪ

ನಾಲಡಿ ಗ್ರಾಮ

ಈ ಗ್ರಾಮದ ಜನರು ಬೆಟ್ಟಗುಡ್ಡದ ತಪ್ಪಲಲ್ಲಿ ವಾಸಿಸಿಕೊಂಡು, ನಿರ್ಮಲ ಹೊಳೆಯ ನೀರು, ತಂಪಾದ ಪರ್ವತ ಗಾಳಿಯನ್ನು ಸೇವಿಸಿ, ಕೋಗಿಲೆಯ ಗಾನದಿಂದ ಕಾಲವನ್ನು ಕಳೆದರೂ ವಿದ್ಯೆಯ ಬೆಳಕಿಲ್ಲದೆ ತೊಂದರೆಗೊಳಗಾಗಿದ್ದಾರೆ. ಇರುವ ಕಿಂಚಿತ್ ಭೂಮಿಯು ಜೀವನಕ್ಕೆ ಸಾಲದು. ನೂರಕ್ಕೆ ೯೦ರಷ್ಟು ಜನರು ಅವಿದ್ಯಾವಂತರು. ಗ್ರಾಮವನ್ನು ಸುತ್ತು ಎರಡು ಹೊಳೆಗಳು ಆವರಿಸಿದಂತಿರುವದರಿಂದ ಗ್ರಾಮದಿಂದ ಐದು ಮೈಲು ದೂರವಿರುವ ಕಕ್ಕಬೆ ಶಾಲೆಗೆ ಐದಾರು ತಿಂಗಳುಗಳ ವರೆಗೆ ಚಿಕ್ಕ ಮಕ್ಕಳಿಗೆ ಹೋಗಲಾಗುವದಿಲ್ಲ. ಗ್ರಾಮದಲ್ಲಿ ಒಂದು ಶಾಲೆಯನ್ನು ಮೂರನೇ ತರಗತಿಯ ವರೆಗೆ ತೆರೆದು ಚಿಕ್ಕಮಕ್ಕಳಿಗೆ ಅನುಕೂಲ ಮಾಡಿಕೊಡಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಒಂದೆರಡು ಸಾರೆ ಬರೆಕೊಂಡರೂ ಪ್ರಯೋಜನವಾಗಲಿಲ್ಲ. ಈ ಗ್ರಾಮದಲ್ಲಿ ೫೦ ಕ್ಕಿಂಥಲೂ ಹೆಚ್ಚಿಗೆ ಇಂಥಾ ಚಿಕ್ಕ ಮಕ್ಕಳಿದ್ದಾರೆ. ಇನ್ನಾದರೂ ಸರಕಾರವು ಈ ಬಗ್ಗೆ ನಿಗವಹಿಸಿ ಈ ಮಕ್ಕಳ ವಿದ್ಯೆಗೆ ಏರ್ಪಾಡು ಮಾಡಬೇಕಾಗಿದೆ

"ಮಕ್ಕಳ ತಂದೆ"

ಕೊಡಗಿನ ವ್ಯವಸಾಯ ಇಲಾಖೆ.

ಈ ಇಲಾಖೆಯು ಹೆಚ್ಚು ಬೆಳೆ ಬೆಳೆಸುವ ಪ್ರಚಾರ ಮಾಡುತ್ತಿದೆ. ಹೆಚ್ಚು ಗೊಬ್ಬರದ ಪ್ರಚಾರವೂ ಸಾಗಿದೆ. ಕಳೆದ ವರ್ಷ ಗೊಬ್ಬರ ಗುಂಡಿ ಒಂದಕ್ಕೆ ರೂ. ೧೦ ಬಹುಮಾನ ಕೊಡುವ ಹೇಳಿಕೆ ಕೊಟ್ಟು ಅನೇಕರಿಗೆ ಇದು ದೊರೆತಿರುವದಿಲ್ಲ. ಈ ವರ್ಷವೂ ಶೇಕರಿಸಿದವರಿಗೆ ವ್ಯವಸಾಯ ಹತ್ಯಾರು ಇನಾಮು ಕೊಡುವದಾಗಿ ಹೇಳಿ ಮುಂಡಾಸು ನೋಡಿ ಮಣೆ ಹಾಕಿದಂತೆ ತೋರುತ್ತದೆ. ಯಾರ್‍ಯಾರಿಗೋ ಈ ಇನಾಮುಗಳು ಕೊಡಲ್ಪಟ್ಟಿವೆ. ಗ್ರಾಮಕ್ಕೆ ಬಂದು ಶೇಕರಿಸಿದ ರೀತಿ ನೀತಿಗಳನ್ನು ಸರಿಯಾಗಿ ಪರೀಕ್ಷಿಸದೆ ಹೀಗೆ ಮಾಡುವದರಿಂದ ಕಷ್ಟಪಡುವ ರೈತರಿಗೆ ಯಾವ ಪ್ರೋತ್ಸಾಹ ಕೊಟ್ಟಂತಾಯಿತು. ಇದರಿಂದ ಬಹುಮಾನ ಕೊಡುವದರ ಗುರಿಯೇ ಸೋಲಿಸಲ್ಪಟ್ಟಂತಲ್ಲವೇ? ಈ ಬಗ್ಗೆ ರೈತರು ಪುಕಾರು ಮಾಡಿದರೂ ಯಾವದೇ ಉತ್ತರವಿಲ್ಲ. ಈ ರೀತಿಯಾದರೆ ವ್ಯವಸಾಯ ಇಲಾಖೆಯ ಪ್ರಯತ್ನವೂ ಸಫಲವಾಗದು. "ಹೆಚ್ಚು ಬೆಳೆಯಿರಿ" ಕೂಗೂ ವ್ಯರ್ಥವಾಗುವದು.

ಎಂ. ಎಂ. ಮಾಚಯ್ಯ

ಮಡಿಕೇರಿ ಹೈಸ್ಕೂಲು.

ಶಾಲಾ ಮಕ್ಕಳಿಂದ ಫೀಜು, ಆಟದ ಫೀಜು, ಲೈಬ್ರೆರಿ ಫೀಜು ಹೀಗೆ ವಿವಿಧ ರೀತಿಯ ಫೀಜು ವಸೂಲ್ಮಾಡುವರು. ಆದರೆ ಇವರು ವಸೂಲ್ಮಾಡುವ ಪೇಪರು ಫೀಜು (ಪರೀಕ್ಷೆಯಲ್ಲಿ ಮಕ್ಕಳಿಗೆ ಕಾಗದ ಸರಬರಾಯಿ ಮಾಡಲಿರುವದು) ಅನ್ಯಾಯದ್ದೆಂದು ಹೇಳಬೇಕಾಗಿದೆ. ಮೂರನೇ ಫಾರಮಿನ ಒಳಗಿರುವ ವಿದ್ಯಾರ್ಥಿಗಳಿಂದ ಒಂದು ರೂಪಾಯಿಯೂ ಮೇಲಿನ ತರಗತಿಯವರಿಂದ ಒಂದುವರೆ ರೂಪಾಯಿಯೂ ವಸೂಲ್ಮಾಡಲ್ಪಡುತ್ತಿದೆ. ಒಂದು ರೂಪಾಯಿಗೆ ಕಡಿಮೆ ಐವತ್ತು ಗಜ ಕಾಗದ ದೊರೆಯುತ್ತದೆ. ಮಕ್ಕಳಿಗೆ ಇರುವದು ಮೂರು ಪರೀಕ್ಷೆ. ಈ ಪರೀಕ್ಷೆಗಳಲ್ಲಿ ಮೂರನೇ ಫಾರಮಿನ ಒಳಗಿರುವವರು ಹೆಚ್ಚಾದರೆ ೨೪ ಗಜ ಪೇಪರು ಉಪಯೋಗಿಸಬಹುದು. ಮೇಲಿನವರು ೪೦ ಗಜ ಉಪಯೋಗಿಸಬಹುದು. ಆದರೂ ಈ ಹೆಚ್ಚಿನ ದರವೇಕೆ? ದುಡ್ಡಿನ ಮುಗ್ಗಟ್ಟಿನ ಈ ಕಾಲದಲ್ಲಿ ಇದನ್ನು ಕಡಿಮೆ ಮಾಡುವದು ಅತ್ಯಗತ್ಯವಲ್ಲವೇ?

'ನಿರೀಕ್ಷಕ'

ಸ್ಕೂಲ್ ಫೈನಲ್ ಪರೀಕ್ಷಾ ಫಲಿತಾಂಶ.

ಈ ರೀತಿ ಫಲಿತಾಂಶವು ಕೆಳಗಿಳಿಯುತ್ತಿರಲು ಕಾರಣವೇನೆಂದು ಯೋಚಿಸಿದವರು ಕಡಿಮೆ. ಸೂಕ್ಷ್ಮ ದೃಷ್ಟಿಯಿಂದ ಅವಲೋಕಿಸುವವರಿಗೆ ಕೊಡಗಿನ ವಿದ್ಯಾ ಮಟ್ಟವು ಕೆಳಗಿಳಿಯುತ್ತಿರುವದು ತೋರಬಾರದಿರದು. ಕೊಡಗಿನ ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸವು ಬಹು ಮಟ್ಟಿಗೆ ಜಿಲ್ಲಾ ಬೋರ್ಡಿನ ಕೈಯ್ಯಲ್ಲಿದೆಯೆನ್ನಬೇಕು. ಈ ಶಾಲೆಗಳಲ್ಲಿ ನೇಮಿಸಲ್ಪಟ್ಟಿರುವ ಉಪಾಧ್ಯಾಯರಲ್ಲಿ ಹಲವರು ಲೋವರ್ ಸೆಕೆಂಡರಿಯವರು. ಇರುವವರಾದರೂ ವೇತನ ಮತ್ತು ತುಟ್ಟಿ ಬತ್ಯದ ಅತೃಪ್ತಿಯಿಂದ ಯೋಗ್ಯ ರೀತಿ ಪಾಠ ಮಾಡುತ್ತಿಲ್ಲ. ಆದ್ದರಿಂದ ಈ ಶಾಲೆಗಳಿಂದ ಹೈಸ್ಕೂಲುಗಳಿಗೆ ಬರುವ ವಿದ್ಯಾರ್ಥಿಗಳ ವಿದ್ಯೆ ತಳಹದಿ ಭದ್ರವಾಗಿರದೆ ಹೈಸ್ಕೂಲಿನಲ್ಲಿ ಅವರ ವಿದ್ಯೆಯು ಯೋಗ್ಯ ರೀತಿ ನಡೆಯದೆ ಈ ರೀತಿಯ ಫಲಿತಾಂಶಕ್ಕೆ ಕಾರಣವಾಗಿದೆ. ಕೆಳತರಗತಿಗಳ ಅಧ್ಯಾಪಕರು ಯೋಗ್ಯರೂ ದಕ್ಷರೂ ಆಗಬೇಕು. ಕೊಡಗಿನ ವಿದ್ಯಾ ಪ್ರಗತಿಯನ್ನು ಯೋಗ್ಯ ರೀತಿ ವಿಚಾರಿಸಿ ಅವರ ಕುಂದು ಕೊರತೆಗಳನ್ನು ವರದಿ ಮಾಡಲು ಒಂದು ದಕ್ಷ ಸಮಿತಿಯನ್ನು ನೇಮಿಸಿ ಅವರ ಸಲಹೆಯಂತೆ ಇಂದು ಶಿಥಿಲವಾಗಿರುವ ವಿದ್ಯಾಯೋಜನೆಯನ್ನು ಪುನರ್ಘಟಿಸದಿದ್ದರೆ ಕೊಡಗಿನ ವಿದ್ಯಾ ಪ್ರಚಾರವು ಕುಂಟುತ್ತಾ ನಡೆಯಬೇಕಾಗುವದು.

'ವಿದ್ಯಾ ಪ್ರೇಮಿ'

(೨ನೇ ಪುಟಕ್ಕೆ ಸಾಗಿದದ್ದು.)

ಯರ ಆಳಿಕೆಗೆ ದೀರ್ಘ ಕಾಲದಿಂದ ಒಳಗಾಗಿದ್ದುದರಿಂದ ಅವರು ದೃಢ ನಿಶ್ಚಯದಿಂದ ಕಾರ್ಯತತ್ಪರರಾಗುವದು ಕಡಿಮೆ. ಎಲ್ಲ ಆಜ್ಞೆಗಳಿಗೂ ಬಿಳಿಯರ ಮೋರೆ ನೋಡುವದು ತಲ್ಲಿಯುವರಿಗೆ ರೂಢಿಯಾಗಿ ಹೋಗಿತ್ತು. ತಮ್ಮ ಧ್ಯೇಯಗಳನ್ನು ನಿರ್ಭಯವಾಗಿ ಪ್ರತಿಪಾದಿಸುವ ಧೈರ್ಯವಿದ್ದವರು ದೀರ್ಘಕಾಲದ ಸೆರೆಮನೆಯನ್ನು ಕಾಣಬೇಕಾಗಿತ್ತು. ಆದರಿಂದ ಇಚ್ಛಾಶಕ್ತಿ, ಶಿಕ್ಷಣ, ಆಶ್ಯೋದ್ಧಾರದ ಆಸಕ್ತಿ ಇವುಗಳು ಸಾಮಾನ್ಯವಾಗಿ ಭಾರತೀಯರಲ್ಲಿ ಕಡಿಮೆ ಪ್ರಮಾಣದಲ್ಲಿ ಕಾಣಿಸುತ್ತವೆ. ಸರದಾರ ಪಟೇಲರ ದೃಢ ನಿರ್ಧಾರ, ಸಾಹಸ, ಕಾರ್ಯ ತತ್ಪರತೆಗಳನ್ನು ಆದರ್ಶವಾಗಿಟ್ಟುಕೊಂಡು ಭಾರತೀಯರು ಮುಂದೆ ಸಾಗಬೇಕೆಂದು ಡಾ ಬ್ರೂನ್ಸರರು ಸೂಚಿದ್ದಾರೆ. ಕುಶಾಗ್ರ ಬುದ್ಧಿಯೊಂದೇ ಜೀವನದಲ್ಲಿ ಯಶಸ್ವಿತೆಗೂ ರಾಷ್ಟ್ರದ ಉನ್ನತಿಗೂ ಸಾಲದು. ಜ್ಞಾನವನ್ನು ಸದುಪಯೋಗಕ್ಕೆ ವಿನಿಯೋಗಿಸುವ ಸಾಹಸ, ಇಚ್ಛೆ ಇರಬೇಕು. ಸ್ಥಿರ ಬುದ್ಧಿಯಿಲ್ಲದವರು ತಮ್ಮ ಅಪಜಯಗಳಿಗೆ ಪರರ ಒಳಸಂಚೇ ಕಾರಣವೆಂದು ಸಮಾಧಾನ ಹಚ್ಚಿಕೊಳ್ಳುತ್ತಾರೆ. ಇದು ಶುದ್ಧ ಅಶ್ಮವಂಚನೆ. ಆದರೆ ಬುದ್ಧಿ ಪ್ರಸರಣವನ್ನು ಅಳೆದರೆ ಮನುಷ್ಯನ ಒಳಗೆ ಹುದುಗಿದ ಶಕ್ತಿಯ ಪರಿಚಯವಾಗುತ್ತದೆ.

ಫ್ರೆಂಚ ಶಾಸ್ತ್ರಜ್ಞರ ಸಂಶೋಧನೆಗಳಿಂದ ಮನುಷ್ಯನ ಶಕ್ತಿ ಪ್ರಸರಣವನ್ನು ಉಪ್ಪು ಹೀರಿಕೊಳ್ಳುತ್ತದೆಯೆಂದು ಗೊತ್ತಾಯಿತು. ಹಿಡಿಯಲ್ಲಿ ಉಪ್ಪು ಹಿಡಿದುಕೊಂಡು ಕೆಲ ಕ್ಷಣಗಳ ನಂತರ ಅದನ್ನು ಪರೀಕ್ಷೆಗೊಳಪಡಿಸಿದರೆ ಅದು ಮಾನವನ ಶಕ್ತಿಪ್ರಸರಣವನ್ನು ಸೂಚಿಸುತ್ತದೆ. ಆದರೆ ತಾವು ಮಾಡಿದ ಸಂಶೋಧನೆಗಳಿಂದ ಮನುಷ್ಯನ ಬುದ್ಧಿ ಶಕ್ತಿಯನ್ನು ಅವನು ಬರೆದ ಚಿತ್ರ, ಅಥವಾ ಅವನ ಸ್ವಹಸ್ತದಿಂದ ಬರೆದ ಪತ್ರವೇ ಮೊದಲಾದ ಸಾಧನಗಳಿಂದ ಗೊತ್ತು ಹಚ್ಚಬಹುದಾಗಿದೆಯೆಂದು ತಿಳಿದುದಾಗಿ ಡಾ. ಬ್ರೂನ್ಸರರು ಹೇಳುತ್ತಾರೆ. ಮನುಷ್ಯನು ಇಂಥ ತನ್ನ ಉಪಯೋಗಕ್ಕೊಳಗಾದ ವಸ್ತುಗಳಲ್ಲಿ ಹಲ ಶತಕಗಳ ವರೆಗೆ ಬಾಳುವ ಪ್ರಸರಣ ಶಾಸನವನ್ನು ಬಿಟ್ಟು ಹೋಗುತ್ತಾನೆ. ಅವರು ಇಂಥ ಪ್ರಸರಣವನ್ನು ಅಳೆಯಲು ಒಂದು ಚಿಕ್ಕ ಯಂತ್ರವನ್ನು ಉಪಯೋಗಿಸಿದ್ದಾರೆ.

ದೀರ್ಘಕಾಲದ ಪ್ರಯೋಗದಿಂದ ವಿವಿಧ ಸ್ವಭಾವದ ಬುದ್ಧಿಗಳನ್ನು ಬೇರ್ಪಡಿಸಿ ವರ್ಗೀಕರಿಸಲು ಸಾಧ್ಯವಾಗಿದೆ, ಈ ಬಗೆಯ ಬುದ್ಧಿಯ ಅಳತೆಯಲ್ಲಿ ತಪ್ಪಾಗಲು ಎಡೆ ಕಡಿಮೆ. ಪ್ರಶ್ನೋತ್ತರಗಳ ಸ್ವರೂಪದಲ್ಲಿ ಬುದ್ಧಿ ಮಾಪನ ನಡೆಸುವ ಸದ್ಯದ ಸಾಮಾನ್ಯ ಪದ್ಧತಿಯಲ್ಲಿ ಎಷ್ಟೋ ತಪ್ಪು ತಡೆಗಳಾಗುತ್ತವೆ. ಆದರೆ ಈ ಪದ್ಧತಿಯಲ್ಲಿ ಪ್ರಶ್ನೋತ್ತರಗಳಿಲ್ಲದೆ ಕೇವಲ ಭೌತ ಬುದ್ಧಿಯ ಅಂತರ್ನಿಗೂಢ ಸಾಮರ್ಥ್ಯವನ್ನು ನಿಷ್ಕೃಷ್ಟ ಮಾಪನಕ್ಕೆ ಗುರಿಪಡಿಸಲು ಸಾಧ್ಯವಾಗಿದೆ. ಬುದ್ಧಿಶಕ್ತಿ ಸ್ಮರಣಶಕ್ತಿಯೆಂದು ಎಷ್ಟೋ ವೇಳೆ ಭ್ರಮಿಸುವದುಂಟು, ಆದರೆ ಇಲ್ಲಿ ಆ ಭ್ರಮೆಗೆಡೆಯಿಲ್ಲ.

ಪ್ರತ್ಯಕ್ಷ ಪರೀಕ್ಷೆಯಿಂದಲೂ ಅವರು ಬಿಟ್ಟುಹೋದ ಪತ್ರ ಮೊದಲಾದ ಕೃತಿಗಳಿಂದಲೂ ಬುದ್ಧಿ ಪ್ರಸರಣವನ್ನಳೆದು ಡಾ. ಬ್ರೂನ್ಸರರು ಮಾಡಿಕೊಂಡ ಟಿಪ್ಪಣಿಗಳಿಂದ ಕೆಲ ಯುರೋಪಿಯನ್ ಮತ್ತು ಭಾರತೀಯ ಪ್ರಮುಖರ ತುಲನಾತ್ಮಕ ಬುದ್ಧಿ ಶಕ್ತಿಯ ಕಲ್ಪನೆ ಬರಬಹುದು. ಕೆಳಗೆ ಅಂಥ ಪ್ರಮುಖರ ಒಂದು ಯಾದಿಯನ್ನು ಆಯ್ದುಕೊಟ್ಟಿದೆ. ಇಟಲಿಯ ಪ್ರಸಿದ್ಧ ಚಿತ್ರಕಾರನಾದ ಲೆನಾರ್ಡೋ ಡಾ. ವಿನ್ಸಿಯೇ ಅವರು ಅಳೆದ ಬುದ್ಧಿಗಳಲ್ಲಿ ಅಸಾಧಾರಣವಾಗಿದೆ. ಅದನ್ನು ಮೀರಿ ಯಾರೂ ಇಂದಿಗೂ ಹೋಗಿಲ್ಲ.

ಯುರೋಪಿಯನ್ ಪ್ರಮುಖರು.

ಲೆನಾರ್ಡೋ ಡಾ. ವಿನ್ಸಿ (ಚಿತ್ರಗಾರ)	೬೩೩
ಜಾರ್ಜಿಯೊನ್ (ಚಿತ್ರಕಾರ)	೬೦೦
ಹೀರೋ (ಸಾಮುದ್ರಿಕ ಶಾಸ್ತ್ರ)	೬೭೫
ಪ್ರಶ್ಯಾದ ಫ್ರೆಡ್ರಿಕ್ ಅರಸ	೬೫೬
ನೆಪೋಲಿಯನ್	೫೯೮
ಶೇಕ್ಸಪಿಯರ್ ಕವಿ	೫೩೫
ಸ್ಟಾಲಿನ್	೫೧೮
ಬರ್ನಾರ್ಡ ಶಾ	೫೧೮
ಎಲಿಜಬೆತ್ ರಾಣಿ	೫೦೪
ರೂಜವೆಲ್ಟ	೪೯೫
ಮ್ಯಾಡಮ್ ಕ್ಯೂರಿ (ವಿಜ್ಞಾನಿ)	೪೯೨
ಮುಸೋಲಿನಿ	೪೮೮
ಲಾಯ್ಡ್ ಜಾರ್ಜ	೪೪೪
ಚರ್ಚಿಲ್	೪೪೪
ಟಾಲ್ ಸ್ಟಾಯ್	೪೩೩

ಭಾರತೀಯರು

ಸರ್ ಸಿ. ವಿ. ರಾಮನ್ (ವಿಜ್ಞಾನಿ)	೬೬೦
ಸ್ವಾಮಿ ವಿವೇಕಾನಂದ	೫೩೩
ಪಂ. ಜವಾಹರಲಾಲ	೫೨೦
ಸರ್. ರಾಧಾಕೃಷ್ಣನ್	೫೧೨
ರಾಜಾಜಿ	೪೯೬
ಮಹಾತ್ಮಾಗಾಂಧಿ	೪೬೬
ರವೀಂದ್ರನಾಥ ಠಾಕೂರ	೪೬೧
ಮಾಲವೀಯ	೪೫೦
ವಿಜಯಲಕ್ಷ್ಮಿ	೪೩೫
ಸರ್ ಸಿ. ಪಿ.	೪೧೮
ಅಬುಲ್ ಕಲಮ ಆಝಾದ	೪೦೦
ಝಫರುಲ್ಲಾ ಖಾನ	೩೯೫
ಕೆ. ಎಂ. ಮುನಶಿ	೩೬೫
ವಲ್ಲಭಬಾಯಿ ಪಟೇಲ	೩೨೦
ಫಜಲುಲ್ ಹಕ್	೩೫೦

'ಕರ್ಮವೀರ ಪತ್ರಿಕೆಯಿಂದ

ಸಮಾಜ ದರ್ಪಣ.

ಸತ್ಯ ಚಿತ್ರಗಳು.

ಲೇ:-ಮಿಸ್. ಪಿ. ತಂಗಮ್ಮ.

ರಾಮು ಮತ್ತು ಸೋಮು ಇಬ್ಬರೂ ಕೊಡಗಿನವರು. ಅವರು ಬೇರೆ ಬೇರೆ ರಾಜಕೀಯ ಪಕ್ಷಕ್ಕೆ ಸೇರಿದವರು. ರಾಜಕೀಯದಲ್ಲಿ ಪ್ರಾರಂಭನಾದ ಅವರ ವಿರೋಧ ಪ್ರತಿ ರಂಗಕ್ಕೂ ಇಳಿಯಿತು ನೆರೆಯವರಾದ ಇವರು ಪರಸ್ಪರ ವಿರುದ್ಧ ವರ್ತಿಸುತ್ತಿದ್ದರು. ಗ್ರಾಮದ ಮುಖ್ಯಸ್ಥರಿವರು. ಒಬ್ಬರು ಒಂದು ಮಾಡಿದರೆ ಅದಕ್ಕೆ ವಿರುದ್ಧ ಇನ್ನೊಬ್ಬರು ಮಾಡುತ್ತಿದ್ದರು. ಆ ಗ್ರಾಮಕ್ಕೆ ಶಾಲೆಗಳಿರಲಿಲ್ಲ. ರಾಮುವು ಗ್ರಾಮದಲ್ಲಿ ಉದಾರಿ ಎನಿಸಿಕೊಳ್ಳಬೇಕೆಂದು ಒಂದು ಶಾಲೆ ಕಟ್ಟಿಸಿದನು. ಗ್ರಾಮಸ್ಥರು ಹೊಗಳತೊಡಗಿದರು. ಸೋಮುವಿಗೆ ತಡೆಯಲಾಗಲಿಲ್ಲ. ಹುಲ್ಲು ಮಾಡಿನ ಶಾಲೆಗೆ ರಾತ್ರಿ ಬೆಂಕಿ ಹಾಕಿಸಿದನು. ಶಾಲೆ ಭಸ್ಮವಾಯಿತು. ಗ್ರಾಮಸ್ಥರು ಮರುಗಿದರು. ರಾಮು ಒಳ್ಳೆ ಮನಸ್ಸಿನಿಂದ ಕಟ್ಟಿಸಿದ್ದರೆ ಹೀಗಾಗುತ್ತಿತ್ತೇ ಎಂದು ಸೋಮು ಪ್ರಚಾರ ಮಾಡತೊಡಗಿದ! ಇದೇ ರೀತಿ ದೇಶದಲ್ಲೂ ಎರಡು ಪಕ್ಷಗಳು. ಒಂದು ಪಕ್ಷ ಒಂದು ಮಾಡಿದರೆ ಇನ್ನೊಂದು ಅದಕ್ಕೆ ವಿರುದ್ಧ. ಈ ರೀತಿಯಾಗಿ ಸರಕಾರವು ಕೂಡ ಏನು ಮಾಡಲಾರದೆ ಕಟ್ಟಕ್ಕೆ ಕುಳಿತಿದೆ. ಏನೇ ಮಾಡಿದರೂ ಒಂದಲ್ಲೊಂದು ಪಕ್ಷಕ್ಕೆ ವಿರೋಧ ಮಾಡಿದಂತಾಗುವದು!

* * *

ವೀರಾಜಪೇಟೆಯಲ್ಲಿ ನೆಹರೂ ವಾರ್ ಆಗಿದೆಯೆಂಟ ವಾರ್ತೆ ಕೇಳಿ ನೋಡಲು ಹೊರಟೆ ನಾನು ಶ್ರೀಮಂತಳೇನೂ ಅಲ್ಲ; ಆದರೂ ಎ. ಬಿ. ಸಿ. ಡಿ ಗೊತ್ತಿತ್ತು. ನನ್ನ ಉಡುಪು ಆಧುನಿಕ ಪೋಷಾಕಿನದು. ಮಾತಿನ ಧಾಟಿಯು ಇಂಗ್ಲಿಷಿನಂತೆ. ಕನ್ನಡ, ಕೊಡಗು ಭಾಷೆ [illegible] ಇಂಗ್ಲಿಷಿನಂತೆ [illegible] ಗಾದರೇನೇ ನನಗೆ ಗೌರವವೆಂದು ನನ್ನ ಭಾವನೆ ಇತ್ತು. ಜನರು ಬೆಲೆ ಕೊಡುವದಾದರೂ ಈ ಆಡಂಬರಕ್ಕೆಂದು ನಂಬಿದ್ದೆ. ಆದರೆ ನೆಹರೂ ಮಾರ್ಚ್ ನೋಡಲು ಹೊರಟ ನನಗೆ ಅಂದು ಈ ಉಡುಪು ಬೇಡವೆನಿಸಿತು. ಸರಳ ಹಾಗೂ ಶುಚಿಯಾದ ಉಡುಪು ಧರಿಸಿದೆ. ಯಾವ ಎತ್ತರ ಹಿಮ್ಮಡಿಯ ಪಾದರಕ್ಷೆ, ಲಿಪ್‌ಸ್ಟಿಕ್, ಪೌಡರನ್ನೂ ಉಪಯೋಗಿಸಲಿಲ್ಲ. ಬಸ್ಸಿನಲ್ಲಿ ಕುಳಿತೆ. ಅಂದಿನಂತೆಯೇ ಇಂದೂ ಜನರು ಗೌರವಿಸಿದರು. ಸರಳ ನೀತಿಯಿಂದು ಯಾರೂ ಛೀ ಎನ್ನಲಿಲ್ಲ ಸರಳ ಉಡಿಗೆ ಹಾಕಿದರೆ ಗೌರವಕ್ಕೆ ಕಡಿಮೆ ಎಂಬುದು ನನ್ನ ಮೂಢ ನಂಬಿಕೆ ಎಂದು ನನಗೆ ಹೊಳೆಯಿತು.

* * *

ಬಸ್ ನಿಲ್ದಾಣ ಪ್ರಯಾಣಿಕರನೇಕರಿದ್ದರು. ಕೂಲಿಯವನು ಸಾಮಾನುಗಳನ್ನು ಮೇಲೆ ಹಾಕುತ್ತಿದ್ದನು. ತಮ್ಮ ಚಿಕ್ಕ ಮೂಟೆಗಳನ್ನು ಹೊತ್ತುಕೊಳ್ಳುವದು ಸಭ್ಯತೆಗೆ ಕೊರತೆ ಎಂದು ಜನರ ನಂಬಿಕೆ ಇರುವಂತೆ ತೋರುತ್ತಿತ್ತು. ಶ್ರೀಮಂತರೊಬ್ಬರಿದ್ದರು. ಅವರ ಸಾಮಾನುಗಳೆಷ್ಟು? ಹಾಗೆಯೇ ನನ್ನ ಪಕ್ಕದಲ್ಲಿ ಒಬ್ಬರಿದ್ದರು ಅವರದು ಹರಕು ಬಟ್ಟೆ, ಬಹಳ ಆರ್ಥಿಕ ಸ್ಥಿತಿಯಿಂದ ಬರಬೇಕು ಅವರದೊಂದು ಪೆಟ್ಟಿಗೆಯನ್ನು ಕೂಲಿ ಮೇಲೆ ಹಾಕಿದ. ಆತನು ಮುಗುಳು ನಗೆಯಿಂದ ಜೇಬಿನಲ್ಲಿದ್ದ ನಾಲ್ಕಾಣೆಯನ್ನು ತೆಗೆದು ಕೊಟ್ಟನು. ಕೂಲಿಯಂತಲ್ಲ, ಕೂಲಿಯವನು ಮಾಡಿದ ಸಹಾಯದ ಉಪಕಾರ ಸ್ಮರಣೆಯಿಂದ. ಆತನೂ ಬಡವನಾದ್ದರಿಂದ ಕೂಲಿಯ ಜೀವನದ ಕಷ್ಟ ತಿಳಿದಿತ್ತು. ಕೂಲಿಯು ಆತನಿಗೆ ವಂದಿಸಿ ಶ್ರೀಮಂತನತ್ತ ಕೈನೀಡಿ [illegible] ಶ್ರೀಮಂತನು ಜೇಬಿನಿಂದ ಅರು [illegible] ದಲು ಹೋದನು. ಕೂ [illegible] ಬಿಟ್ಟನು. ಬಸ್ಸು ಹೊರಟಿತು. ಶ್ರೀಮಂತನು ಆರು ಪೈಯನ್ನು ಕೂಲಿಯತ್ತ ಎಸೆದನು. ಆ ಶ್ರೀಮಂತರನ್ನು ನನಗೆ ಗೊತ್ತು. ಅಂದು ಸ್ವತಂತ್ರ ದಿನಾಚರಣೆಯಲ್ಲಿ ನೂರು ಸೇರು ಅಕ್ಕಿ ದಾನಮಾಡಿ ಹೆಸರುಗಳಿಸಿದ್ದಾರೆ. ಇಂಥಾ ಸಂದರ್ಭಗಳಲ್ಲಿ ಎಲ್ಲರಿಗೂ ತಿಳಿಯುವ ಹಾಗೆ ಅವರು ದಾನ ಮಾಡುವದಿದೆ. ಆದರೆ ಆಂತರಿಕ ಜೀವನದಲ್ಲಿ ನ್ಯಾಯವಾಗಿ ಕೂಲಿ ಸಹ ಕೊಡದ ಜಿಪುಣರು. ಇದೆಂಥಾ ದ್ವಂದ್ವ ಜೀವನ!

* * *

ಬಸ್ಸಿನ ಮುಂದಿನ ಸೀಟಿನಲ್ಲಿ ಒಬ್ಬರು ಕೂತಿದ್ದರು. ಸರಕಾರಿ ಅಧಿಕಾರಿಯಂತೆ! ಅವರು ದಾರಿಯಲ್ಲಿ ಇಳಿದರು. ಡ್ರೈವರನನ್ನು ಕುರಿತು ವಾಪಾಸು ಹೋಗುವಾಗ ತಾನೂ ಬರುವದಾಗಿಯೂ ಮುಂದಿನ ಸೀಟನ್ನು ರಿಜರ್ವ್ ಮಾಡಿಕೊಂಡು ಬರಬೇಕಾಗಿಯೂ ಹೇಳಿದರು. ಡ್ರೈವರನಿಗೆ ಇದು ಇಷ್ಟವಿಲ್ಲವೆಂಬುದು ಆತನ ಮುಖದ ವರ್ಣದಿಂದ ತಿಳಿದರೂ ಇವರ ಅಧಿಕಾರಕ್ಕಾಗಿ 'ಹೂಂ' ಎಂದನು. ನನಗೂ ಆಶ್ಚರ್ಯ. ಬಸ್ಸಿನಲ್ಲಿ ಅನೇಕ ಸರಕಾರಿ ಅಧಿಕಾರಿಗಳು ತಿರುಗುತ್ತಾರೆ. ಚಿಕ್ಕ ಚಿಕ್ಕವರಲ್ಲದೆ ಯಾವ ಅಧಿಕಾರಿಯೂ ಹಿಂದಿನ ಸೀಟಿನಲ್ಲಿ ಕೂತದ್ದನ್ನು ನಾನು ಕಾಣಲಿಲ್ಲ, ಇದೇನು ಇಷ್ಟು ಸಂಬಳಕ್ಕಿಂಥಾ ಹೆಚ್ಚಿರುವವರು ಮುಂದಿನ ಸೀಟಿನಲ್ಲೇ ತಿರುಗಬೇಕೆಂದು ನಿಯಮವಿದೆಯೇನು? ಹಿಂದಿನ ಸೀಟಿನಲ್ಲಿ ಸಾಮಾನ್ಯ ಜನರೊಡನೆ ಕೂತರೆ ಇವರ ಗೌರವ ಕಳೆಗಿಳಿಯುವದೇನು?

* * *

ಸಹಕಾರ ಕೂಟವೊಂದರ ಮಹಾಸಭೆ ಏರ್ಪಾಡಾಗಿತ್ತು. ಅದಕ್ಕೆ ನಾನೂ ಹೋಗುವ ಅವಕಾಶವಿತ್ತು. ಆ ವರ್ಷ ಮಹಾ ಸಭೆಗೆ ಹೆಚ್ಚು ಜನರು ಬಂದಿತ್ತು. [illegible] ಹಿಂದಿನವರನ್ನು ಹುರಿಸಿಬಿಡಬೇಕೆಂದು ಚಳವಳ ನಡೆದಿತ್ತು. ಓಟಿನ ಭೇಟಿ ನಡೆದಿತ್ತು. ನಾನು ನಿಲ್ಲ [illegible], ನನಗೆ ಓಟು ಕೊಡಿರಿ ಎಂದು ಕೇಳಲಾಗುತಿತ್ತು. ಅಂದು ಆ ಊರಿನ ಹೋಟೇಲಿನವರಿಗೆ ಒಳ್ಳೆ ವ್ಯಾಪಾರ. ಟೀಯು ಧೀಕ್ತೆ ಸಿಬ್ಬಾರ್ಯಿತು. ಜನರು ಟೀ ಕುಡಿದು ತಮ್ಮ ಓಟುಗಳನ್ನು ಮಾರಿದರು. ನನಗೆ ಸ್ವರಾಜ್ಯ ಬಂದಿದೆಯೆಂದು ಹೇಳುತ್ತಾರೆ. ಯಾರಿಗೆ ಬಂದಿದೆಯೋ ನನಗೆ ತಿಳಿಯದು ಹಿಂದಿನಂತೆಯೇ ಟೀ, ಕಾಫಿ, ಊಟ ಮೊದಲಾದುವಕ್ಕೆ ಓಟನ್ನು ಮಾರುವ ಪದ್ಧತಿಯು ಇಂದೂ ಇರುವಾಗ ಯಾರಿಗೆ ಸ್ವಾತಂತ್ರ್ಯ? ಯಾರಿಗೆ [illegible]! [illegible] ಸ್ವರಾಜ್ಯಕ್ಕೆ ಅರ್ಹರಲ್ಲವೆಂದು ದಿವಂಗತ ಜಿನ್ನಾರವರು ಹೇಳುತ್ತಿದ್ದರು. ಬಹುಶಃ [illegible] ಮಾಡುವ ಇಂಥಾ ಜನರನ್ನೇ ನೋಡಿ ಅವರು ಹೇಳಿರಬೇಕು.

* * *

ಆಸ್ಪತ್ರೆಗೆ ಔಷಧಿಗಾಗಿ ಹೋಗುತ್ತಿದ್ದೆ. [illegible] ಶಾಲೆಯ ಮಕ್ಕಳು ಕಲೆಯಲ್ಲಿ ಹುಲ್ಲಿನ ಕಂತೆಗಳನ್ನು ಹೊತ್ತು ತರುತ್ತಿದ್ದರು. ಇದೇನು ಶಾಲೆಯಲ್ಲಿ ದನಗಳನ್ನು [illegible] ಸಾಕುತ್ತಾರೆಯೇ ಪ್ರಶ್ನಿಸಿದೆ. ಶಾಲೆಯ ಮಾಡು ಮಳೆಗೆ ಸೋರುತ್ತಿರುವದರಿಂದ ಹುಲ್ಲು ಹಾಕಲು ಉಪಾಧ್ಯಾಯರು ಹೇಳಿದ ಮೇರೆ ಇದನ್ನು ತರುವದೆಂದು ತಿಳಿಯಿತು. ಇದೊಂದು ಚಿಕ್ಕ ಪಟ್ಟಣ. ಜಣಗಾರರಿದ್ದಾರೆ. ವ್ಯಾಪಾರಿಗಳಿದ್ದಾರೆ. ಸುಧಾರಕರಿದ್ದಾರೆ. ಇವರೆಲ್ಲರ ಮಕ್ಕಳು ಓದುವ ಶಾಲೆಗೆ ಮಕ್ಕಳು ಹುಲ್ಲು ಹೊತ್ತು ಮಾಡು ಹೊದಿಸಬೇಕು! ಈ ಶಾಲೆಯನ್ನು ಹೈಸ್ಕೂಲು ಮಾಡಬೇಕೆಂದು ಮೀಟಿಂಗುಗಳಲ್ಲಿ ಉಗ್ರ ಭಾಷಣ ಮಾಡುವರಿದ್ದಾರೆ. ಇರುವ ಶಾಲೆಯೇ ಬೀಳುವ ಸ್ಥಿತಿಯಲ್ಲಿರುವದು ಇವರಿಗೆ ಕಣ್ಣು ಕಾಣದೇ? ಹೌದು, 'ಕಣ್ಣಿದ್ದೂ ಕುರುಡರಿಗೆ ಕಣ್ಣು ಕಾಣದು.'

ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್,
ಮಡಿಕೇರಿ.

ಮಹಾಜನರಲ್ಲಿ ವಿನಂತಿ.

ನಮ್ಮ ಫ್ರೇಜರ್‌ಪೇಟೆ ಕಾರ್ಖಾನೆಯಲ್ಲಿ ಈಗಾಗಲೇ ಮೂಳೆಗೊಬ್ಬರ ತಯಾರಾಗುತ್ತಿರುವುದು ಎಲ್ಲರಿಗೂ ತಿಳಿದ ವಿಷಯ. ಈ ಸಂದರ್ಭದಲ್ಲಿ ನಿಮ್ಮ ನಿಮ್ಮ ಗ್ರಾಮಗಳಲ್ಲಿ ಸತ್ತ ದನಗಳ ಮತ್ತು ಇತರ ಪ್ರಾಣಿಗಳ ಮೂಳೆಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಜಮಾಯಿಸಿ ಮೇಲಿನ ವಿಳಾಸಕ್ಕೆ ತಿಳಿಸಿದಲ್ಲಿ ಅದನ್ನು ಅದರ ಬೆಲೆ ಕೊಟ್ಟು ಸಾಗಿಸುವ ಏರ್ಪಾಡನ್ನು ಮಾಡುತ್ತೇವೆ ಅಥವ ಲಾರಿಗಟ್ಟಿ ಜಮಾಯಿಸಿದವರು ನಮ್ಮ ಫ್ರೇಜರ್‌ಪೇಟೆ ಕಾರ್ಖಾನೆಗೆ ತಂದು ಕೊಟ್ಟಲ್ಲಿ ಮಣ 1ರ 0-12-0 ಯಂತೆ ಬೆಲೆಗೆ ತೆಗೆದುಕೊಳ್ಳಲಾಗುವುದು.

ಈಗಾಗಲೇ ತಯಾರಾಗಿರುವ ಮೂಳೆ ಗೊಬ್ಬರಕ್ಕೆ ಖಾಯಿಸ್‌ದಾರರು ಬರಕೊಂಡಲ್ಲಿ ಅಗ್ರಸ್ಥಾನವನ್ನನುಸರಿಸಿ ಬಟವಾಡೆ ಮಾಡಲಾಗುವುದು.

ಸೂಚನೆ:-ನಮ್ಮ ಕಂಪೆನಿಯ ಶೇರುದಾರರಿಗೆ ಹೆಚ್ಚಿನ ರಿಯಾಯಿತಿ ಮತ್ತು ಮೊದಲಿನ ಹಕ್ಕು ಕೊಡಲಾಗುವುದು.

ಮಡಿಕೇರಿ, ತಾ. 19-5-49. — ಕೆ. ತಿಮ್ಮಯ್ಯ, ಮೇನೇಜಿಂಗ್ ಡೈರೆಕ್ಟರ್.

ಭದ್ರತೆ! 17 ವರ್ಷಗಳ ಪರಿಪಕ್ವ ಅನುಭವಶೀಲತೆ!! ಅನುಕೂಲತೆ!!

ದಿ ವಿಜಯ ಬೇಂಕ್ ಲಿಮಿಟೆಡ್

ಮುಖ್ಯ ಖಚೇರಿ,
ಕದ್ರಿ ರೋಡ್, ಮಂಗಳೂರು.

ನಿರಖು ಠೇವಣಾತಿ ಬಡ್ಡಿದರ:-

3	ತಿಂಗಳು	3%
6	,,	3½%
12	,,	3¾%
24	,,	4 %

ರೂಪಾಯಿ ೧೫,೦೦೦ಕ್ಕೆ ಮೀರಿದ ಒಂದೇ ಡಿಪಾಜಿಟ್ಟಿಗೆ ಮೇಲಿನ ದರಕ್ಕಿಂಥಾ ¼% ಹೆಚ್ಚಿಗೆ.

ಶಾಖೆಗಳು:- ಸಿಟಿ ಮಂಗಳೂರು, ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಕಾಸರಗೋಡು, ಕಾಞಂಗಾಡ್, ಪುತ್ತೂರು, ಮಡಿಕೇರಿ ಮತ್ತು ಮುಂಬಾಯಿ.

ಒಟ್ಟು ವಹಿವಾಟು ಭಂಡವಾಳ ರೂ ೪೦ ಲಕ್ಷಕ್ಕೂ ಮೀರಿದೆ.

ಎಲ್ಲಾ ವಿಧದ ಆಧುನಿಕ ಬೇಂಕಿಂಗ್ ವಹಿವಾಟುಗಳು ದಕ್ಷತೆಯಿಂದ ನಡೆಸಲ್ಪಡುವವು.

ಹೆಚ್ಚಿನ ವಿವರಗಳಿಗೆ ಬರೆಯಿರಿ:- ಏಜಂಟ್, ಮಡಿಕೇರಿ ಶಾಖೆ, ಮಡಿಕೇರಿ.

12-5

ವಿಮೆ ಮಾಡಲು ಇಲ್ಲವೇ ಪ್ರತಿನಿಧಿಸಲು
ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.

ಇವರ ಸಲಹೆಗಿಂತ ಉತ್ತಮ ಮಾರ್ಗವಿಲ್ಲ.

ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದೂಸ್ಥಾನದ ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು.

ದಿ ಬೋಂಬೆ ಲೈಫ್ ಅಶ್ಶೂರೆನ್ಸ್ ಕಂ. ಲಿಮಿಟೆಡ್.

30 ಮೌಂಟ್ ರೋಡ್, ಪೋ. ಬಾ. ನಂ. 337, ಮದ್ರಾಸು 2. (ಟೆಲಿಫೋನ್ ನಂ. 8398)

ಬೋಂಬೆ ಲೈಫ್ ಬಿಲ್ಡಿಂಗ್, ಪೋ. ಬಾ. ನಂ. 1, ಉಡುಪಿ.

ಇತರ ಆಫೀಸುಗಳು:—ಬೆಂಗಳೂರು, ತಿರುವೆಂಡರಂ, ಕಲ್ಲಿಕೋಟೆ, ಮಂಗಳೂರು, ಮಧುರೆ, ಮತ್ತು ಬೊಂಬಾಯಿ.

ದಿ ಟ್ರಾಪಿಕಲ್
ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:- ಲಾಲ ಶಂಕರ್ ಲಾಲ್.

ಮುಖ್ಯ ಖಚೇರಿ:- ಹೊಸ ಡೆಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್ ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮಲಖಾನ್. ಡಾ|| ಎಂ. ಎ. ಅನ್ಸಾರಿ.

Transacts:—Life, Fire, Motor and Marine.

ನಮ್ಮ ಹೊಸ ವಿಸ್ತಾರದ ಯೋಜನೆಯಲ್ಲಿ ಆಕರ್ಷಕ ಕಮಿಷನ್ ಮೇಲೆ ಏಜನ್ಸಿಗೆ ದಯವಿಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ

ಆರ್ಗನೈಜರ್, ದಕ್ಷಿಣ ಕೊಡಗು, ಪೊನ್ನಂಪೇಟೆ
ಅಥವಾ
ಯಂ ಯು. ಅಚ್ಚಣ್ಣ, ಏಜೆನ್ಸಿ ಸುಪರಿಂಟೆಂಡೆಂಟ್, ಮಡಿಕೇರಿ, ಕೊಡಗು.

ಆರ್ಗನೈಜರ್, ಉತ್ತರ ಕೊಡಗು, ಮಡಿಕೇರಿ.
ಅಥವಾ
ಎಂ. ಎ ಚೆಲ್ವಪ್ಪ, ಬ್ರಾಂಚ್ ಸೆಕ್ರೆಟರಿ, ಹಂಪನಕಟ್ಟಾ, ಮಂಗಳೂರು

ಎಂಪೈರ್ ಆಫ್ ಇಂಡಿಯಾ
ಲೈಫ್ ಎಶ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

48ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು.			
	ಒಟ್ಟು ಆದಾಯ	1,07,09,000	ಮೀರಿದೆ
	ಚಾಲ್ತಿಯಿರುವ ವಿಮೆ	17,74,52,000	,,
	ಆಸ್ತಿ	6,67,60,000	,,
ಕಂಪೆನಿಯು ಆದಿಯಲ್ಲಿ ಕೊಟ್ಟ ಕ್ಲೈಮುಗಳು		8,83,02,000	,,

ಅಂಗ ಕಛೇರಿ: ಡಿಸ್ಟ್ರಿಕ್ಟ್ ... ಬಿಲ್ಡಿಂಗ್, ಕೆಂಪೆ... ಸ್ಟ್ರೀಟ್, ಬೆಂಗಳೂರು.
ಏಜೆನ್ಸಿ ಅರ್ಜಿಗಳನ್ನು ಸ್ವಾಗತಿಸಿದೆ.
ಪ್ರಧಾನ ಕಛೇರಿ: ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬೆ.

CRESCENT

FOR PROTECTION AND SERVICE.

It is best to represent and insure with

The CRESCENT Insurance Co., Ltd.,

H O: BOMBAY [*Established 1919.*

For particulars write to:

Sri B. A. Poovaiah
Organiser
Pollibetta, Coorg.

or

The Branch Manager,
22 B. Mahatma Gandhi Road,
Bangalore 1.

ಸುರಕ್ಷಿತವಾದ ಜೀವವಿಮೆ ಪಡೆಯಲು

ಕ್ರೆಸೆಂಟ್

ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್,
ಲಿಮಿಟೆಡ್, ಮಡಿಕೇರಿ.

ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,65,000.
ಕ್ಷೇಮನಿಧಿ	ರೂ.	50,000.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಆಡವ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ಕು ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ಪಡೆದುಕೊಳ್ಳಬಹುದು

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಖಜಾಂಚಿ.

Edited Printed and Published by P. I. Bellappa at 'Kodagu' Press, Mercara, for 'Kodagu' Ltd.

Reg. No. M. 1509.
'KODAGU' MERCARA. (Coorg).

ಕೊಡಗು

ಸಂಪಾದಕರು—ಪಿ. ವಿ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೨೮ | ತಾರೀಖು ೨೮-೭-೧೯೪೯ನೇ ಗುರುವಾರ | ಸಂಚಿಕೆ ೪

ವಿದ್ಯಾ ಸಮಸ್ಯೆ

ಪ್ರಗತಿಗೆ ಬೇಕಾದ ಆವಶ್ಯಕಗಳು.

ಲೇ:—ಶ್ರೀ ಬಿ. ಡಿ. ಗಣಪತಿ.

ಅನಾಥ ಮಗು.

ವಿದ್ಯಾ ಪ್ರಚಾರ ಅನೇಕ ವರ್ಷಗಳಿಂದ ಅವ್ಯಾಹತವಾಗಿ ನಡೆದಿದೆ. ಆದರೂ ನೂರಕ್ಕೆ ಹತ್ತು ಜನರು ವಿದ್ಯಾವಂತರಾಗಿ [illegible]. ಕಾರಣವೇನು? ಕೊಡಗು ವಿದ್ಯೆಯ ಮಟ್ಟಿಗೆ ಸ್ವಲ್ಪ ಮುಂದುವರಿದಿದೆಯೆನ್ನು[illegible]. ಆ-ಥಾ ಕೊಡಗಿನ ಸ್ಥಿತಿ ಹೇಗಿ[illegible]? [illegible] ಕಾರಣವೇನು? [illegible] ವಿಷಯ ಮೇಲೆ [illegible] ಇಲ್ಲ[illegible]? ಇಲ್ಲವೇ ಸರಕಾರದ [illegible] [illegible]ಲೇ?

ಕೊಡಗಿನ ಜನರಿಗೆ ವಿದ್ಯೆಯ [illegible] [illegible] ಇಲ್ಲ [illegible] ಹೇಳಲಾಗುವುದಿಲ್ಲ. [illegible] ಕೊಡಗಿನಲ್ಲಿರುವ ಶಾಲೆಗಳಲ್ಲಿ [illegible] ಪ್ರಯತ್ನದಿಂದ [illegible] ಸ್ಥಾಪನೆಯಾಗಿ [illegible] ನಿರ್ವಾಹವಿಲ್ಲ[illegible] ನಡಿಸಿಕೊಂಡುವೇ [illegible] ಸರಕಾರ [illegible] ಸ್ಥಾಪಿಸಿದ ಶಾಲೆಗಳು [illegible]. ಇಂದಿಗೂ ಕೂಡ ಅನೇಕ ಹೈಸ್ಕೂಲ್ ಎಲಿಮೆಂಟರಿ ಮತ್ತು ಪ್ರಾಥಮಿಕ ಶಾಲೆಗಳನ್ನು ಗ್ರಾಮದ ಜನರೇ ಚಂದಾ ಹಾಕಿಕೊಂಡು ನಡೆಸುತ್ತಿದ್ದಾರೆ. ಜನರಲ್ಲಿ ವಿದ್ಯೆಯ ಬಗ್ಗೆ ಆಸಕ್ತಿ ಇದೆ ಎಂಬುದಕ್ಕೆ ನೆನ್ನೆಯಾಗಿ ಕಾಲೇಜು [illegible] ಕಾಲಕ್ಕೆ ಚೀಫ್ ಕಮಿಷನರು ಹೇಳಿದ ಮಾತೇ ಸಾಕ್ಷಿ. ವಿದ್ಯೆಯ ಮಟ್ಟಿಗೆ ಕೊಡಗಿನಲ್ಲಿ ಉತ್ಸಾಹಪೂರ್ವ ಆಸಕ್ತಿ ಇದೆಯೆಂದೂ, ತಮ್ಮ ಮಕ್ಕಳ ವಿದ್ಯೆಗಾಗಿ ಮನೆ ಮಠಗಳನ್ನು ಮಾರಿದ ನಿದರ್ಶನವಿದೆಯೆಂದೂ ತಮಗೆ ಬೇಕಾದ ಶಾಲೆ, ಹೈಸ್ಕೂಲುಗಳನ್ನು ಖಾಸಗಿಯಾಗಿ ಜನರೇ ಸ್ಥಾಪಿಸಿಕೊಂಡ [illegible] ಬೇಕಾದ ಕಾಲೇಜಿಗಾಗಿ ಜನರೇ ಪ್ರಯತ್ನ ಮಾಡಿದ ನಿದರ್ಶನವಿದೆಯೆಂದೂ ಹೇಳಿದರು. ಹಾಗಾದರೆ ಕೊಡಗಿನ ಜನರಲ್ಲಿ ವಿದ್ಯೆಯನ್ನು ಗಳಿಸುವ ಆಸಕ್ತಿ [illegible] ಇದೆ. ಆದರೆ ಆ ಆಸಕ್ತಿಗೆ [illegible]ವಾಗಿ ವಿದ್ಯಾ ಪ್ರಚಾರ ಆಗಲಿಲ್ಲ. ಕಾರಣವೇನು?

ಸರಕಾರದ ತಪ್ಪನ್ನು ಇಲ್ಲಿ ಎತ್ತಿ ಹೇಳಬೇಕಾಗಿದೆ. ಸರಕಾರವು ದೇಶದ ವಿದ್ಯೆ ಎಂಬುದು ಒಂದು ಪ್ರಾಮುಖ್ಯ ವಿಚಾರವೆಂದು ತಿಳಿದಂತೆ ತೋರುವದಿಲ್ಲ. ಗ್ರಾಮಗಳಿಗೆ ಬೇಕಾದ ಶಾಲೆಗಳನ್ನು ಸ್ಥಾಪಿಸಿ ಗ್ರಾಮದ ಜನರನ್ನು ಹೆಚ್ಚಿನ ವಿದ್ಯಾರ್ಜನೆಗೆ ಪ್ರೋತ್ಸಾಹ ಮಾಡುವದರಿಂದ; ಗ್ರಾಮಸ್ಥರೇ ಮುಂದೆ ಬಂದು ತಮಗೆ ಬೇಕಾದ ಶಾಲೆಗಳನ್ನು ತಾವೇ ಕಟ್ಟಿಸಿ ಅದಕ್ಕೆ ಯೋಗ್ಯ ಅಧ್ಯಾಪಕರನ್ನು ಕೊಡಿರೆಂದರೆ ಸರಕಾರವಾಗಲೀ, ಜಿಲ್ಲಾ ಬೋರ್ಡಾಗಲೀ ಕಳಿಸಿಕೊಡುವದಿಲ್ಲ. ಸರಕಾರದಿಂದ [illegible] [illegible] ಜೀವನ [illegible] ಸರಕಾರ ಭಾವಿಸಿದಂತಿದೆ!

[illegible]

[illegible] ಜಿಲ್ಲಾ ಬೋರ್ಡಿನ [illegible] ಹುದು. ವಿದ್ಯಾ [illegible] ಜಿಲ್ಲಾ [illegible] ವಿದ್ಯಾ ಪ್ರಚಾರ [illegible] [illegible] ಜಿಲ್ಲಾ ಬೋರ್ಡು ನ್ನು ತನಗೆ [illegible] ಸಂಸ್ಥೆಯೆಂದು ಭಾವಿಸಿದೆ. [illegible] ಸಂಬಂಧಿಕನಂತೆ ಜಿಲ್ಲಾ ಬೋರ್ಡಿನ ಸ್ಥಿತಿಯಾಗಿದೆ. ಜಿಲ್ಲಾ ಬೋರ್ಡಿನ ಅಧಿಕಾರ ಹೊತ್ತವರು [illegible] ಜನ ಪ್ರತಿನಿಧಿಗಳೇ. ಆದರೂ [illegible] ಬೇರೆ ಇಲ್ಲವೆಂದು [illegible] [illegible] ಜಿಲ್ಲಾ ಬೋರ್ಡಿನ [illegible] ಯಾಗಿ ಕೆಲಸ [illegible] ಸ್ವರ್ಗವನ್ನು [illegible] ನ್ನ ಕಾರ್ಯ [illegible] ಯಾಗಿ ನಡೆಯಲು ಸರಕಾರದಿಂದ ಸಾಕಷ್ಟು ಸಹಾಯ ಪಡೆಯಬೇಕು. [illegible] ಮಾಡಿದರೆ ಈ [illegible] [illegible] ಮಾಡಿ ಈ [illegible] ಸಾಧ್ಯವೇ ಪಾದರೆ ಇಂದಿನ ಜೀವನಕ್ಕೆ ಪಕರಲ್ಲಿ ಮಾತ್ರವಲ್ಲ. ಗ್ರಾಮಗಳಲ್ಲೂ ಇದೆ. ತಮ್ಮ ಬೆವರನ್ನು ಹರಿಸಿ ಶಾಲೆಗಳನ್ನು ಕಟ್ಟಿ ತಮ್ಮ ಮಕ್ಕಳನ್ನು ವಿದ್ಯೆಗಾಗಿ ಕಳುಹಿಸಿ ಯೋಗ್ಯ ಅಧ್ಯಾಪಕರನ್ನು ಕೊಡಿರೆಂದು [illegible] ನೀಡಿ ಇಟ್ಟಾಗ, ಇಲ್ಲವೇ ಕಟ್ಟಡದ ಖರ್ಚಿಗಾಗಿ [illegible] ಇಲ್ಲದಂತೆ ಸರಕಾರ [illegible] ಜನರ ಮೊರೆಗೆ [illegible] ಪ್ರೋತ್ಸಾಹಿಸಿಂತೆ ಎನ್ನಲಡ್ಡಿಯಿಲ್ಲ. ಗ್ರಾಮದ ಹಳ್ಳಿಯ ಜನರು ವಿದ್ಯೆಯ ಸ್ವೀಕರಿಯೇಂದ ಹೊಟ್ಟೆ ಕಟ್ಟಿ ತಮ್ಮ ಸ್ವಂತ ಖರ್ಚಿನಿಂದ ಖಾಸಗಿಯಾಗಿ ಅಧ್ಯಾಪಕರನ್ನಿಟ್ಟುಕೊಂಡು ತಮ್ಮ ಮಕ್ಕಳಿಗೆ ವಿದ್ಯೆ ಕಲಿಸಲು ಪ್ರಯತ್ನಿಸುತ್ತಿರುವಾಗ [illegible] ವೇಳೆ ಮೇಲೆ ಬಿದ್ದಂತೆ ವರ್ತಿಸುವ ಸರಕಾರವಾಗಲೀ ಜಿಲ್ಲಾ ಬೋರ್ಡಾಗಲೀ ಯಾತಕ್ಕಾಗಿ? ಮತ್ತು ಯಾವ ಧ್ಯೇಯಕ್ಕಾಗಿ ಎಂದು ಪ್ರಶ್ನಿಸಬೇಕಾಗಿದೆ. ಇಂಥಾ ಅಸ್ವಸ್ಥ ಮಾತಾಪಿತರ ಸಂತತಿ ವಿದ್ಯಾಪ್ರಚಾರ [illegible] ನಿಯೋಜಿಸಿರುವ ಅಧ್ಯಾಪಕರ ಅತೃಪ್ತಿ ಮೇರೆ ಮೀರಿದೆ. ಅವರಿಗೆ ಸರಿಯಾದ ವೇತನ, ತಕ್ಕ ಬತ್ತ ಕೊಡದೆ ಅವರ ಕೂಗು ಗಗನ [illegible] ಬೀದಿಯಲ್ಲಿ ಗ್ರಾಮಸ್ಥರೇ ಕಟ್ಟಿಸಿ ಕೊಟ್ಟ ಶಾಲೆ ಇಲ್ಲದ ಶಾಲೆ ಕಟ್ಟಡಗಳು ಮತ್ತು ಅತೃಪ್ತರಾದ ಅಧ್ಯಾಪಕರು. ಇವೆಲ್ಲವೂ ಕಳಕಳಿಪಟ್ಟಂತೆ ಜಿಗನ್ನೆಗೊಂಡ [illegible] ಈ ವಾತಾವರಣದಲ್ಲಿ ವಿದ್ಯಾ ಪ್ರಚಾರ ಹೇಗೆ ನಡೆಯಬೇಕು?

ಅಧ್ಯಾಪಕರು.

ಶಾಲೆಗಳ ಪ್ರಗತಿ ಮತ್ತು [illegible] ವೃದ್ಧಿಗಳಿಗೆ ಅಧ್ಯಾಪಕರೇ ಕಾರಣರು ಎಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲವೆಂದು. ಯಾವದೇ ಜವಾಬ್ದಾರಿಯನ್ನು ಯಾರೇ ಹೊತ್ತು ಯಶಸ್ವಿಯಾಗಿ ನಿರ್ವಹಿಸಬಹುದು. ಆದರೆ ಅಧ್ಯಾಪಕನ ಜವಾಬ್ದಾರಿಯನ್ನು ಹೊರುವ ವ್ಯಕ್ತಿ ಯೋಗ್ಯತೆ ಇರುವವರೇ ಹೊರಬೇಕು. ಬೇರೆ ಉದ್ಯೋಗಗಳಲ್ಲಿ ಜವಾಬ್ದಾರಿ ಹೊತ್ತವನು ಅಯೋಗ್ಯನಾದರೆ ಆ ವ್ಯವಹಾರಕ್ಷೇತ್ರದ ಕೆಲವರಿಗೆ ಹಾನಿಯಾಗಬಹುದು. ಆದರೆ ಅಧ್ಯಾಪಕನು ಅಯೋಗ್ಯನಾದರೆ ಮುಂದಿನ ಪೀಳಿಗೆಯೇ ವಿನಾಶಕರವಾಗಿ ದೇಶದ ಅವನತಿಯಾಗುವದು. ಆದ್ದರಿಂದ ಸಿಕ್ಕಿ [illegible] ಅಧ್ಯಾಪಕನನ್ನಾಗಿ ನೇಮಿಸುವದು ದೇಶದ್ರೋಹಾತ್ಮಕವಾದುದು. ಅಧ್ಯಾಪಕರಾಗಲು ವಿದ್ಯಾಯೋಗ್ಯತೆಯೊಂದೇ ಸಾಲದು. ಶೀಲ, ಗುಣ, ನಡತೆ, ಸ್ವಭಾವಗಳನ್ನು ಪರಿಶೀಲಿಸಿ ಆರಿಸಬೇಕು. ವಿದ್ಯಾಯೋಗ್ಯತೆಯ ದೃಷ್ಟಿಯಿಂದ ಅರ್ಹನಿದ್ದು, ಗುಣಶೀಲದ ದೃಷ್ಟಿಯಿಂದ ಅಯೋಗ್ಯನಾದರೆ ಅಂಥಾವರನ್ನು ಅಧ್ಯಾಪಕರಾಗಿ ಆರಿಸಕೂಡದು. ಇಂದಿನ ಅಧ್ಯಾಪಕ ವರ್ಗದ ಹಲವರಲ್ಲಿ ಸಾಕಷ್ಟು ವಿದ್ಯಾಯೋಗ್ಯತೆಯೂ, ಗುಣ, ಶೀಲಗಳೂ ಇಲ್ಲವೆಂದು ಸತ್ಯವನ್ನು ಮರೆಮಾಚದೆ ಹೇಳಬೇಕಾಗುತ್ತದೆ. ಲೋವರ್ ಸೆಕೆಂಡರಿ ಪಾಸಾದವರು ಯಾವ ತರಗತಿಗೂ ಟ್ರೇನಿಂಗ್ ಇಲ್ಲದೆಯೇ ಪಾಠಮಾಡಲರ್ಹರು. ಆಯಾ ತರಗತಿಗಳಲ್ಲಿ ಪಾಠಮಾಡುವವರಿಗೆ ಹೆಚ್ಚಿನ ಯೋಗ್ಯತೆಬೇಕು. ಇಂಥಾವರಿಗೆ ಎನೋ ಪೀಡಿಯಾಟ್ರಿಕ್ಸಿನ ಅರಿವೂ ಬೇಕು.

ಬೆಲ್ಲ ಹಾಕಿದಷ್ಟು ಸಿಹಿ.

ಗಾಡಿಯವನಿಗೆ ತಿಂಗಳಿಗೆ ೮೫/- ಶ್ರಮಿಕನಿಗೆ ಮಾಸಿಕ ರೂ. ೧೦೦/- ದೊರೆಯುತ್ತಿರುವ ಈ ಕಾಲದಲ್ಲಿ ಅಧ್ಯಾಪಕನಿಗೆ ತಿಂಗಳಿಗೆ ರೂ. ೩೫/- ೩೦/- ಎಂದಿಟ್ಟರೆ ಅಧ್ಯಾಪಕರಾಗಿ ಯಾರು ದೊರೆತಾರು? ಬೆಲ್ಲ ಹಾಕಿದಷ್ಟು ರುಚಿ ಹೆಚ್ಚು. ಹೀಗಿರುವಾಗ ಇಂದಿನ ದುಡ್ಡಿನ ಪ್ರಪಂಚದಲ್ಲಿ ದುಡ್ಡು ಹೆಚ್ಚು ಕೊಟ್ಟಷ್ಟೂ ಯೋಗ್ಯರು ದೊರೆಯುವ ಅವಕಾಶವಾಗಬಹುದು. ಅಧ್ಯಾಪಕ ಸ್ಥಾನ ಯೋನೋ ಬಹು ಗೌರವದ ವ್ಯಕ್ತಿ ಹೌದು. ಆದರೆ ಇಂದು ಆ ಗೌರವ ಉಳಿದಿಲ್ಲ. ಅಧ್ಯಾಪಕನೆಂದರೆ 'ಟ' ಎನ್ನುತ್ತಾರೆ. ಸಮಾಜದಲ್ಲಿ ಆತನಿಗೆ ಸ್ಥಾನವೇ ಇಲ್ಲ. ಕಳ್ಳನನ್ನು ಹಿಡಿಯುವ ಪೋಲೀಸನಿಗೆ ದೊರೆಯುವ ಗೌರವ ಶಾಲೆಯ ನಾಗರೀಕರನ್ನು ತಯಾರಿಸಲಿರುವ ಅಧ್ಯಾಪಕನಿಗಿಲ್ಲ. ಇಂದಿನ ಸಮಾಜದಲ್ಲಿ 'ದುಡ್ಡಿರುವವನೇ ದೊಡ್ಡಪ್ಪ' ಹೀಗಿರುವಾಗ ಆರೆಹೊಟ್ಟೆಯ ಅಧ್ಯಾಪಕನಿಗೆ ಗೌರವವೆಲ್ಲಿ? ದುಡ್ಡಿನ ಬಲವಿಲ್ಲದ್ದರೆ ವಿದ್ಯೆಯ ಬಲಬೇಕು; ಇವೆರಡೂ ಇಲ್ಲದಿದ್ದರೆ ಗುಣ ನೀತಿ ಬೇಕು; ಈ ಮೂರಕ್ಕೂ ಸೊನ್ನೆಯಾಗಿರುವ ಇಂದಿನ ಅಧ್ಯಾಪಕನಿಗೆ ಗೌರವವೆಲ್ಲಿ? ಈ ಅತೃಪ್ತಿಯಿಂದ ವಿದ್ಯಾಪ್ರಚಾರ ಹೇಗೆ? ಆದ್ದರಿಂದ ಮುಂದಿನ ರಾಷ್ಟ್ರವನ್ನು ನಿರ್ಮಿಸಬಲ್ಲ ಅಧ್ಯಾಪಕರು ಬಂಬಲೇಕಾದರೆ ಅವರಿಗೆ ಯೋಗ್ಯ ಆಕರ್ಷಣೆದೊರೆಯಬೇಕು. ಸರಕಾರದ ಯಾವದೇ ಇಲಾಖೆಯ ಕೆಲಸಗಾರರಿಗಿಂತಲೂ ಅಧ್ಯಾಪಕರಿಗೆ ಹೆಚ್ಚಿನ ವೇತನ ದೊರೆಯಬೇಕು. ಸಿಕ್ಕಿದವರಿಗೆಲ್ಲಾ ಈ ಕೆಲಸ ದೊರೆಯದಂತೆ ಮಾಡಬೇಕು. ಅಧ್ಯಾಪಕ ಕೆಲಸ ದೊರೆಯುವದು ಹೆಮ್ಮೆ ಎಂಬ ಭಾವನೆ ಬರಬೇಕು. ಸಮಾಜದ ನಿಚ್ಚಣಿಕೆಯಲ್ಲಿ ಅಂದು ಗುರುಕುಲ ವಿದ್ಯಾಪದ್ಧತಿಯಲ್ಲಿದ್ದಂತೆ ಅಧ್ಯಾಪಕರಿಗೆ ಅಗ್ರಪೂಜೆ ಸಲ್ಲಬೇಕು.

ಗುರುವಿನಂತೆ ಶಿಷ್ಯ!

ಅತೃಪ್ತರಾದ ಅಧ್ಯಾಪಕರ ಅನುಕರಣೆಯನ್ನು ವಿದ್ಯಾರ್ಥಿಗಳೂ ಮಾಡುತ್ತಿರುವರೋ ಎಂಬಂತೆ ಶಾಲೆಯಲ್ಲಿ ಪರಿಸ್ಥಿತಿ ಇದೆ. ವಿದ್ಯಾರ್ಥಿಗಳು ಕಟ್ಟುಪಾಡಿಲ್ಲದ ಹೀನಂತೆ ಹದತಪ್ಪಿ ವರ್ತಿಸುತ್ತಿದ್ದಾರೆ. ಶಾಲೆಗಳಲ್ಲಿ ಶಿಸ್ತು ಶಿಥಿಲವಾಗಿದೆ. ಶಾಲೆಗಳಲ್ಲಿ ಸಂಘಟನೆ ಶಿಸ್ತಿನ ಬದಲು ಸ್ವೇರವೃತ್ತಿಯು ಹಬ್ಬಿದೆ. ಈ ಹದಿತಪ್ಪಿದ ವರ್ತನೆಗೆ ಶಾಲೆಯಲ್ಲಿ ಕಲಿಸಲ್ಪಡುತ್ತಿರುವ ವಿದ್ಯಾಕ್ರಮವೂ, ಅಧ್ಯಾಪಕ ವೃಂದದ ಅಯೋಗ್ಯತೆಯೂ ಕಾರಣವಾಗಿರುವಷ್ಟೇ ಸಾರ್ವಜನಿಕರ ಅನಾವಶ್ಯಕ ಹಸ್ತಕ್ಷೇಪವೂ ಕಾರಣವಾಗಿದೆ. ಸ್ವಾತಂತ್ರ್ಯದ ಹಿಂದಿನಿಂದಲೇ ವಿದ್ಯಾರ್ಥಿಗಳು ಶಾಲೆ ಯೆಂದರೆ ಜೈಲುಗಳೆಂಬಂತೆ ಭಾವಿಸುತ್ತಿರುವ ಅವಸ್ಥೆಯಿಂದ ದೇಶಕ್ಕೆ ಆಗುತ್ತಿರುವ ಅಪಾರ ಹಾನಿಯನ್ನು ತಿಳಿದು ವಿದ್ಯಾ ಪ್ರಚಾರದ ತನ್ನ ಜವಾಬ್ದಾರಿಯನ್ನು ಸರಕಾರವು ಕೇಳುವಂತೆ ಸರಕಾರಕ್ಕೆ ಬಿಟ್ಟುಕೊಡಬೇಕು. ದೇಶದ ಹಿರಿಯರು ವ್ಯಕ್ತಿಗಳ ಪ್ರತಿಷ್ಠೆ ಗೌರವಗಳ, ಜಿಲ್ಲೆಗಳಲ್ಲಿ ಇಂದಿರುವ ಈ ವ್ಯಾಧಿಕ [illegible] ಕೊಡಗಿನ ವಿದ್ಯಾ ಪ್ರಗತಿಯು ಚೆನ್ನಾಗಿ ಆಗಲಾರದು.

ಅತೃಪ್ತಿ ವಾತಾವರಣ

ಸರಕಾರದ ಅನಾಸಕ್ತಿ, ಜಿಲ್ಲಾ ಬೋರ್ಡಿನ ಆಳ್ವಿಕೆಯ [illegible] ಇವುಗಳ ಕಾರಣವಾಗಿ ವಿದ್ಯಾ ಕ್ಷೇತ್ರದಲ್ಲಿ ಅತೃಪ್ತಿ ಕಲೆ ದೊರೆದಿದೆ. ಅತೃಪ್ತಿ ಕೇವಲ ಅಧ್ಯಾ-

ವರು ವಿದ್ಯೆಯಲ್ಲಿ ಆಕರ್ಷಣೆ ಇಲ್ಲ. ಈ ರೀತಿಯ ವಾತಾವರಣಕ್ಕೆ ಕಾರಣವು ಹಿಂದಿನಂತೆ ಇಂದೂ ವ್ಯತ್ಯಾಸವಿಲ್ಲದೆ ನಡೆಯುತ್ತಿರುವ ವಿದ್ಯಾ ಕ್ರಮವಾಗಿದೆ. ಶಾಲಾ ಮಕ್ಕಳು ಹಿಂದಿನಂತೆಯೇ ಶಾಲೆಯಲ್ಲಿ ಪರಕೀಯರಾಗಿರುವರಲ್ಲದೆ ಶಾಲೆ ವಸ್ತುದೂ, ಅದರ ಹಿತ ಘನತೆಗಳೇ ನಮ್ಮ ಹಿತವೆಂದು ತಿಳಿದಂತಿಲ್ಲ. ಸ್ವಾತಂತ್ರ್ಯದ ನಂತರವಾದರೂ ಶಾಲೆ ನಮ್ಮದೆಂಬ ಭಾವನೆ ಹುಟ್ಟಬೇಕಿತ್ತು. ಶಾಲೆಯಲ್ಲಿ ವ್ಯಾಸಂಗ ಮಾಡುವರೆಲ್ಲರೂ ಅಕ್ಕತಂಗಿಯರು, ಅಣ್ಣತಮ್ಮಂದಿಯರು, ಒಂದೇ ತಾಯಿಯಾದ ಈ ಶಾಲೆಯ ಮಕ್ಕಳೆಂಬ ಮಮತೆ ಹೆಚ್ಚಬೇಕಿತ್ತು. ಹೀಗಾಗದಿರಲು ಕಾರಣ ಆ ಹಿಂದಿನ ಗುಲಾಮಿ ವಾತಾವರಣ. ಅಧ್ಯಾಪಕ ಮತ್ತು ವಿದ್ಯಾರ್ಥಿಗಳಲ್ಲಿ ಮಿಳಿತವಿಲ್ಲ. ಅಧ್ಯಾಪಕರು ತಮ್ಮ ಗೌರವವನ್ನು ಕಳಕೊಳ್ಳದೆ ವಿದ್ಯಾರ್ಥಿಗಳೊಡನೆ ಸಮರಸ ಭಾವದಿಂದ ಮಿಳಿತರಾಗುವುದನ್ನು ಕಲಿತಿಲ್ಲ. ಇಂದೂ ಕೂಡ ಅಧ್ಯಾಪಕರೆಂದರೆ ವಿದ್ಯಾರ್ಥಿಗಳ ವಿರೋಧಿ, ವಿದ್ಯಾರ್ಥಿಗಳೆಂದರೆ ಅಧ್ಯಾಪಕರ ಕಂಗಣ್ಣಿನ ವಸ್ತು!

ಕೋಳ ಕುರಿಮರಿ.

ಮುಂದಿನ ನಾಗರಿಕನಾದ ಇಂದಿನ ವಿದ್ಯಾರ್ಥಿಗೆ ಹೆಚ್ಚಿನ ಜವಾಬ್ದಾರಿ ಕೊಡಲ್ಪಡಬೇಕು. ಶಾಲೆಯ ಹಿತಾಹಿತಗಳಲ್ಲಿ ಅಧ್ಯಾಪಕವೃಂದವು ಆತನ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕು. ಶಾಲೆಗೆ ಏನು ಬೇಕು, ಶಾಲೆಯ ಕಾರ್ಯಕ್ರಮಗಳಲ್ಲಿ ಯಾವ ಬದಲಾವಣೆ ಅವಶ್ಯ, ಶಾಲೆಯ ಆವರಣ, ಆಟೋಟ, ಕೈಗಾರಿಕೆಗಳಲ್ಲಿ ಯಾವ ಬದಲಾವಣೆ ಆಗಬೇಕೆಂಬ ಬಗ್ಗೆ ವಿದ್ಯಾರ್ಥಿಗಳನ್ನು ಸೇರಿಸಿಕೊಂಡು ಆಲೋಚಿಸಬೇಕು. ಅರ್ಥವಿಷ್ಟೆ: ವಿದ್ಯಾರ್ಥಿಗಳಿಗೂ ಶಾಲೆಯ ಆಡಳಿತ ಮತ್ತು ಕಾರ್ಯಕಲಾಪಗಳಲ್ಲಿ ತಕ್ಕಷ್ಟು ಜವಾಬ್ದಾರಿ ಕೊಡಬೇಕು. ವಾರಕೊಮ್ಮೆ ವಿದ್ಯಾರ್ಥಿಗಳೂ, ಅಧ್ಯಾಪಕರೂ ಸಭೆಸೇರಿ ಶಾಲೆಯ ಬಗ್ಗೆ ಚಿಂತಿಸಬೇಕು. ಚರ್ಚಿಸಿ ತೀರ್ಮಾನಿಸಿದುದನ್ನು ಜಾರಿಗೆ ತರಬೇಕು. ಈ ರೀತಿಯ ಸಂಪರ್ಕವನ್ನು ವಿದ್ಯಾರ್ಥಿಗಳೊಡನೆ ಬೆಳೆಸಿ ವಿದ್ಯಾರ್ಥಿಯ ಮನಸ್ಸಿನಲ್ಲಿ ಶಾಲೆ ನಮ್ಮದೆಂಬ ಭಾವನೆಯನ್ನು ಒಡಮೂಡಿಸಿದರೆ ಇಂದು ಜೈಲುಗಿರುವ ಶಾಲೆಗಳ ವಿದ್ಯಾರ್ಥಿಗಳ ನಂದನವನಗಳಾಗುವವು. ವಿದ್ಯಾರ್ಥಿಗಳು ಈ ವಾತಾವರಣದಲ್ಲಿ ಸ್ವತಂತ್ರ ಪಕ್ಷಿಗಳಂತೆ ಜೀವಿಸಿ ಮುಂದಿನ ಯೋಗ್ಯ ನಾಗರೀಕರಾಗುವರು. ದ[illegible] ಮಾಡುವುದೇ ಪ್ರಧಾನವಲ್ಲ; ತಮ್ಮ ಪುಸ್ತಕ, ಬಟ್ಟೆಬರೆ, ತರಗತಿ ಕೋಣೆ, ಆವರಣ ಸ್ವಚ್ಛವಾಗಿರುವಂತೆ ಶಿಸ್ತಿನಿಂದ ವರ್ತಿಸಬೇಕು. ಈ ವಾತಾವರಣದಲ್ಲಿ ಬೆಳೆದವನು ಯೋಗ್ಯ ನಾಗರೀಕನಾಗದಿರನು. ವಿದ್ಯಾರ್ಥಿ ಮತ್ತು ಅಧ್ಯಾಪಕರ ಸಂಬಂಧ ಕೋಳ ಕುರಿಮರಿಯಂತಾಗಬಾರದು. ಅಧ್ಯಾಪಕನಾದವನು ವಿದ್ಯಾರ್ಥಿಯ ತಪ್ಪನ್ನು ಕಂಡು ಹಿಡಿಯುವುದು ಮಾತ್ರವಲ್ಲ; ತಪ್ಪು ಮಾಡಿದವನಿಗೂ ಯೋಗ್ಯ ರೀತಿಯ ಬುದ್ಧಿವಾದ ಹೇಳಿ ಪ್ರೋತ್ಸಾಹಕೊಟ್ಟರೆ ತಪ್ಪನ್ನು ತಿದ್ದುವುದು ಸುಲಭ.

ಸಮಾಪ್ತಿ.

ಇಂದಿನ ವಿದ್ಯಾರ್ಜನೆಯ ಅವನತಿಗೆ ಕಾರಣವಾದ ಕೆಲವು ವಿಚಾರಗಳನ್ನು ಮೇಲೆ ಕೊಡಲಾಗಿದೆ. ಇವು ಕೇವಲ ಶಾಲಾ ವಾತಾವರಣಕ್ಕೆ ಸಂಬಂಧಿಸಿದವು. ಕಲಿಸಲ್ಪಡುವ ವಿದ್ಯೆ, ಬೋಧನೆಯ ರೀತಿ ಇವುಗಳ ವಿಚಾರ ಇಲ್ಲಿ ಬರೆಯುವದು ಬೇಡ. ಯಾವದೇ ರೀತಿಯಲ್ಲಿ ಅದು ವರ್ಧಾ ಶಿಕ್ಷಣ ಕ್ರಮವೇ ಇರಲಿ, ಸಾರ್ಜೆಂಟ್ ಯೋಜನೆಯದೇ ಇರಲಿ, ರೂಟ್‌ಬೇರಿಯನು 'ಕೀಟ್, ರೀಟ್' ಕ್ರಮವೇ ಆಗಲೀ ಯಾವ ವಿದ್ಯಾಕ್ರಮವನ್ನು ಜಾರಿಯಲ್ಲಿ ತರಬೇಕಾದರೂ ಮೇಲಿನ ಅವಶ್ಯಕಗಳು ಅನಿವಾರ್ಯ. ಮೇಲೆ ವಿವರಿಸಿದ ವಾತಾವರಣವಿಲ್ಲದೆ, ಶಿಸ್ತು ಸಂಘಟನೆಗೆ ಮಹತ್ವವಿಲ್ಲದೆ ಯಾವ ಮೂಲ ಶಿಕ್ಷಣ ಕ್ರಮವನ್ನು ಜಾರಿಗೆ ತಂದರೂ ಅದು ಸಲಕಾರಿಯಾಗದು. ಆದ್ದರಿಂದ ಸುಗಮವಾಗಿ ವಿದ್ಯಾಪ್ರಚಾರ ನಡೆಯಲು ಸರಕಾರವು ಕಣಿ ಗಿಂಥಾ ಕೈಯುಂಗುರೇ ಮಹತ್ವವೆಂಬ ನೀತಿಯನ್ನು ಬಿಟ್ಟು ವಿದ್ಯಾ ಇಲಾಖೆಯ ಬಗ್ಗೆ ಹೆಚ್ಚಿನ ಆಸಕ್ತಿವಹಿಸಬೇಕು. ಜನತೆಯ ಪ್ರಯತ್ನಕ್ಕೆ ಪ್ರೋತ್ಸಾಹವಿತ್ತು ಹೆಚ್ಚಿನ ಪ್ರಚೋದನೆ ಕೊಡಬೇಕು. ಅಧ್ಯಾಪಕ ವರ್ಗವನ್ನು ಪರಿಷ್ಕರಿಸಿ ಯೋಗ್ಯರನ್ನು ಮಾತ್ರ ನೇಮಿಸಿ ಯೋಗ್ಯ ವೇತನ ಕೊಡಬೇಕು. ಜಿಲ್ಲಾ ಬೋರ್ಡು ದೇಶದ ಹಿತವನ್ನು ಲಕ್ಷಿಸಿ ಶಕ್ತಿ ಇದ್ದರೆ ಸರಕಾರದಿಂದ ಸಹಾಯ ಪಡೆಯಬೇಕು. ಇಲ್ಲದಿದ್ದರೆ ಹೊರಬಂದು ಇಂದಿನ ಶಾಲೆಗಳ ತ್ರಿಶಂಕು ಪರಿಸ್ಥಿತಿಯನ್ನು ನೀಗಬೇಕು.

ಇಷ್ಟಾದರೆ ಮುಂದಿನ ಬದಲಾವಣೆಗಳು ತಾವಾಗಿಯೇ ಆಗುವವು. ಆದರೆ ದೇಶದ ವಿದ್ಯೆ ನಮ್ಮ ಪ್ರಥಮ ಜವಾಬ್ದಾರಿ ಎಂದು ತಿಳಿಯುವ ಸರಕಾರ ಎಂದು ಬಂದೀತು? ತಮ್ಮ ವ್ಯಕ್ತಿಗತ ಪ್ರತಿಷ್ಠೆಗಿಂಥಾ ದೇಶದ ಹಿತವು ಹೆಚ್ಚಿನದೆಂದು ಭಾವಿಸುವ ಜನಪ್ರತಿನಿಧಿಗಳು ಎಂದು ದೊರೆತಾರು?

ಮಹಿಳಾಲೋಕ.

ನಮ್ಮ ಹೆಣ್ಣು ಮಕ್ಕಳ ಕ್ಷಮೆ ಬೇಡಿ.

ಗಂಡಸು ಒಬ್ಬ ಸ್ತ್ರೀಯನ್ನು ಸಂಪೂರ್ಣ ಅರಿತುಕೊಳ್ಳಬಲ್ಲನಾದರೆ ಅವನು ಜಗತ್ತಿನಲ್ಲಿ ಏನು ಬೇಕಾದುದನ್ನೂ ಅರ್ಥಮಾಡಿಕೊಳ್ಳಬಲ್ಲ. — ಜೆ ಬಿ ಯೇಟ್ಸ್

ಸ್ತ್ರೀಯರ ನೆಲೆ—ಬೆಲೆ ತಿಳಿಯುವುದು ಸಾಧ್ಯವೇ ಇಲ್ಲ ಎಂದು ಎಂದಿನಿಂದಲೂ ಹೇಳುತ್ತ ಬಂದದ್ದಾಗಿದೆ. ಆದರೂ ವಿಚಾರವಂತ ಗಂಡಸರು, ಸ್ವತಃ ಸ್ತ್ರೀಯರು ಸಹಿತ ಈ ಬಗ್ಗೆ ಪ್ರಯತ್ನ ಪಟ್ಟಿದ್ದಾರೆ। ಅಂಥ ಅನುಭವದ ಕೆಲ ಮಾತುಗಳನ್ನು ಇಲ್ಲಿ ಸಂಗ್ರಹಿಸಿಕೊಡಲಾಗಿದೆ. ಅನುಭವ ಪಡೆದವರ ಹೆಸರನ್ನು ಬೇಕೆಂದೇ ಹೇಳಿಲ್ಲ. ಸಂಗ್ರಹಿತವಾದ ಹೇಳಿಕೆಗಳಲ್ಲಿ ಕೆಲವು ಪರಸ್ಪರ ವಿರೋಧವಾಗಿರಲೂಬಹುದು. ಆದರಲ್ಲೇ ಸ್ತ್ರೀಯ ನೆಲೆ ಸಿಕ್ಕಿಲ್ಲ ಎಂಬುದರ ಸತ್ಯಾಂಶವಿದೆಯೆಂಬುದನ್ನು ನಮ್ಮ ಜಾಣ ಓದುಗರು ತಿಳಿದುಕೊಂಡಿರಬಹುದು. ಕಟಿಸಿದ್ದಾದರೆ ಕೇಳದಂತಹ ಸಿಟ್ಟಂತೆ. ಮನನೀಯವಾದ ಪದೇಶನದಲ್ಲಿ ಸದ್ದಿಲ್ಲ, ದಯವಿಟ್ಟು ಹೊಟ್ಟೆಯಲ್ಲಿ ಹಾಕಿಕೊಳ್ಳಬೇಕು.

ಹೀರಿಕೆ.

'ಕೋಳಿಯು ಹೇಗೆ ಹಾರುವ ಹಕ್ಕಿಯೆಂದು ಎನಿಸಿಕೊಳ್ಳಲಾರದೊ ಹಾಗೆಯೆ ಮಾನವ ಪ್ರಾಣಿ ಅಲ್ಲವೆ?

'ಹೆಣ್ಣು ಮಕ್ಕಳನ್ನು ಅಬಲೆಯರೆಂದು ಕರೆಯಲು ನಾನು ಸಿದ್ಧನಿಲ್ಲ! ದೇಹದಾಕಾರ ಮತ್ತು ಚಿತ್ತಾತ್ಮಕ ಭಾವನೆಗಳು ಇವೆರಡನ್ನು ಬಿಟ್ಟರೆ ಉಳಿದೆಲ್ಲ ರೀತಿಯಿಂದಲೂ ಅವರು ನಮಗೆ ಸಮಾನರೇ, ಇಷ್ಟೇ ಏಕೆ, ಕೆಲವು ಸಲ ನಮ್ಮನ್ನು ಮೀರಿಸಲೂಬಹುದು. ನಾಗರೀಕ ಜಗತ್ತಿನ ಈಗಿನ ಹೆಣ್ಣುಮಕ್ಕಳ ಬಾಳ್ವೆ [illegible] ಅಂಕಿಸಂಖ್ಯೆಗಳು ಹೇಳುತ್ತಿರುವ ಕಥೆ ಏನು? ಹೆಂಗಸಿಗೆ ಜೀವನವು ಪ್ರಾರಂಭವಾದ ಮೇಲೆ ಎಂದರೆ, ಅವಳು ಮದುವೆಯ ಕಾಲಕ್ಕೆ ಗಂಡಸು ಆಗಲೆ ೮-೧೦ ವರ್ಷ ಮುಂದೆ ಹೋಗಿರಬೇಕಂತೆ! ಇದು ಏನನ್ನು ತೋರಿಸುತ್ತದೆ?. ಅಲ್ಲದೆ ದಿನನಿತ್ಯದ ಗೃಹಕೃತ್ಯದಲ್ಲಿ ಗಂಡಸು ಪಡುವ ಕಷ್ಟ ಹೆಂಗಸಿಗಿಲ್ಲ. ಹೀಗಿರುವಾಗ ಸ್ತ್ರೀಯರನ್ನು ಅಬಲೆಯರೆಂದು ಗಂಡಸು ತಿಳಿಯುವುದು ಆತನಿಗೆ ಹೆಮ್ಮೆಯ ಮಾತಲ್ಲ. ಅದು ಮೌಢ್ಯತೆ, ಮಹಿಳೆಯರೂ, ತಾವು ಅಬಲೆಯರೆಂದು ಕರೆಯಿಸಿಕೊಳ್ಳುವಲ್ಲಿ ಎಂದೂ ಬೇಸರನ್ನುವುದಿಲ್ಲ! ಏಕಿರಬಹುದು? ಆ ನೆಪದಲ್ಲಿ ಎಲ್ಲ ಸೌಲಭ್ಯ, ಅಧಿಕಾರಗಳನ್ನು ಪಡೆಯಲೆಂದೆ?'

'ಸ್ತ್ರೀಯು ಸ್ವರ್ಗದ ಕಲ್ಪನೆಯೇ ಇರಲಿ ಪುರುಷನು ಯಾವುದೇ ಸ್ತ್ರೀಗಿಂತ ನೋಡಲು ಸುಂದರನು. ಸ್ತ್ರೀಯರು ತೋರಿಕೆಗೆ ಮಾತ್ರ ಮೋಹಕವಾಗಿ ಕಾಣುತ್ತಾರೆ. ಅದಕ್ಕೆ ಕಾರಣ ಅವರ ವೇಷ, ಭೂಷಣ, ಒನಪು-ಒಯ್ಯಾರಗಳು. ಗಂಡಸಿಗಾದರೊ, ಒಂದೇ ಬಗೆಯ ಸಾದಾ ವೇಷ, ಮತ್ತು ಕೃತ್ರಿಮ ಸಾಧನಗಳ ಬಳಕೆ ತೀರ ಕಡಿಮೆ. ಹೀಗೆ ತುಲನಾತ್ಮಕವಾಗಿ ನೋಡಿದಾಗ ಪುರುಷರು ಸುಂದರರಾಗಿ ತೋರಲಿಕ್ಕಿಲ್ಲ. ಆದರೆ ನಿಸರ್ಗದತ್ತವಾಗಿಯೇ ಪುರುಷರಿಗೆ ಸ್ತ್ರೀಯರಿಗಿಂತ ಸಿಚ್ಚಳ ನೋಟ, ಹುಬ್ಬಿನ ಕಾಟ, ಹೊಳಪಿನ ಮೈ ಬಣ್ಣ, ಮುಖದಲ್ಲಿ ಒಟ್ಟಿಗೆ ಗಾಂಭೀರ್ಯ ಇರುತ್ತವೆ. [illegible] ಹೆಂಡರ ಹಡಗಿಯರಿರುವ ಒಂದು ದೊಡ್ಡ ಕಟ್ಟಡದಲ್ಲಿ ಹುಡುಗರೇ ಹೆಚ್ಚು ಆಕರ್ಷಕರಾಗಿರುವರು. ಎಷ್ಟು ಜನ ಹುಡುಗಿಯರು ಇರುವುದೇ ಇದಕ್ಕೆ ಒಂದು ನಿದರ್ಶನ.'

— ಸಂಗ್ರಹಕಾರರು —

ಶ್ರೀ. ಎಸ್. ಎನ್. ಗಲಗಲಿ.

'ಇಗೋ ನನ್ನ ಮಾತಲ್ಲ, ನಿಸರ್ಗದ್ದು. [illegible] ಒಂದ ಕಾಲಕ್ಕೆ ಉಳಿದ ಗಂಡು ಪಕ್ಷಿ, ಗಂಡು ಪ್ರಾಣಿಗಳಂತೆ, ಪುರುಷನೂ ಆಕರ್ಷಕ ವ್ಯಕ್ತಿಯಾಗಿ ಕಂಡು ಬರುತ್ತಾನೆ, ಆಗ ಹೆಣ್ಣು ಪುರುಷನನ್ನು ತಾನಾಗಿ ಆರಿಸಿಕೊಳ್ಳುತ್ತಿದ್ದಳು. ಯಾವಾಗ ಪುರುಷನು ಜೀವನದಲ್ಲಿ ಹೀಗೆ ಆರಿಸಿಕೊಳ್ಳುವಂತ ಪದ್ಧತಿ, ಅವಾಗ ಸ್ತ್ರೀಯರು ತಮ್ಮ ಗಂಡನಿಗೋಸ್ಕರವೇ ಆಕರ್ಷಕರಾಗಬೇಕೆಂದು [illegible] ಮಾಡಿದರು. ಆದ್ದರಿಂದ, ಈಗ ನೋಡಿ!'

'ಹಿಗ್ಗುವೆ ಏತಕ್ಕೆ ಬೆಲೆಯಿನ ಹೆಣ್ಣೆ,
ನಿನ್ನಿರ ಬಿಗಿ ಗತಿ ನ[illegible],
ನಿನ್ನೀ ಅಂದಕೆ ಚಂದಕೆ ಎಲ್ಲಾ,
ನಾಣೆ ಅಂತ್ಯದ ಗತಿ ಹೆಣ್ಣೆ,'
[illegible] ಧರಿಸುವುದ
[illegible] ಪುರುಷನ ಆಕ
[illegible] ದೇಶ ಈ ಅಲಂ
[illegible] ತ್ಯಜಿಸಬೇಕು.'

ಸ್ವಭಾವ.

'ಹೆಣ್ಣುಮಕ್ಕಳಾದ ನಾವು ಬಹಳ ಮಾತನಾಡುತ್ತೇವೆ. ಇಷ್ಟಾದರೂ ನಾವು ನಮಗೆ ಗೊತ್ತಿದ್ದ ಅರ್ಥವನ್ನಾದರೂ ಬಿಟ್ಟುಕೊಟ್ಟಿರುವುದಿಲ್ಲ.'

'ಸಿಟ್ಟು ಬಂದಾಗ, ಹೆಣ್ಣು ರಕ್ಕಸಿಯಲ್ಲವೆ?

'ಕಿವಿಯಲ್ಲಿ ಬಂದು ಗಟ್ಟಿಯಾಗಿ ಹೇಳಿದ ಮಾತು ಯಾವುದೇ ಇರಲಿ, ಹೆಂಗಸರು ಅದನ್ನು ನಂಬದೇ ಇರುವುದಿಲ್ಲ?

'ಗಂಡು ಹೆಣ್ಣು ಇಬ್ಬರೂ ಸುಳ್ಳು ಹೇಳುವರೇ. ಆದರೆ ಒಂದು ಅಂತರ. ಹೆಣ್ಣು ಯಾವಾಗಲೂ ಯಶಸ್ವಿಯಾಗುವುದು?'

ಗೃಹಮುಚ್ಚಟೀ.

'ಮನೆಯನ್ನು ಎಷ್ಟು ನೆಚ್ಚಿಕೊಂಡಿರದೆ ಇರುವ ಮಹಿಳೆ ಭಾವೀ ಜನಾಂಗದ ಒಬ್ಬ ದೊಡ್ಡ ವೈರಿ'

'ನೌಕರಿಯನ್ನು ಮಾಡಿಕೊಂಡು ಇರುವ ಸ್ತ್ರೀಯನ್ನು ಮದುವೆಯಾಗುವುದು ಲಾಭದಾಯಕವೇ ಎಂದು ನಾನು ಕೇಳುತ್ತೇನೆ. ಏಕೆಂದರೆ ನೌಕರಿ ಬಿಟ್ಟ ಮದುವೆಯಾದ ಮೇಲೆ ಅಪಳಂಕಹ ಮನೆಯನ್ನು ನೆಚ್ಚಿಕೊಂಡಿರುವ ಸ್ತ್ರೀ ಇನ್ನಾರೂ ಆಗುವುದಿಲ್ಲ?

'ದಾಂಪತ್ಯವೆಂದರೆ ಕೊಡ ತೆಗೊಳ್ಳುವ (lend lease) ವ್ಯವಹಾರವಿದ್ದಂತೆ. ಅದ ಕಾರಣ ನಿನ್ನ ಗಂಡ ಯಾವುದನ್ನಾದರೂ ಕೊಡದಿದ್ದರೆ ನೀನು ತೆಗೆದುಕೊಳ್ಳಬೇಕಾಗುತ್ತದೆ'

'ಗಂಡಸರು ಏನು ಬೇಕಾದರೂ ಸಾಧಿಸಬಹುದಾದುದನ್ನು ಹೆಂಗಸರು ಸಾಧಿಸದೆ ಇರುವುದರ ಮುಖ್ಯ ಕಾರಣವೆಂದರೆ ಅವರಿಗೆ 'ಹೆಂಡತಿ' ಎಂಬುವಳಿರುವುದಿಲ್ಲ!'

'ಗಂಡಸು, ನಿನ್ನನ್ನು ಹೆಂಡತಿಯಾಗಿ ಸ್ವೀಕರಿಸಿ ರಕ್ಷಿಸುವುದಕ್ಕೆ ಅಭಿಮಾನಪಡುತ್ತಾನೆ. ಆ ಮೇಲೆ ನೀ ತಾಯಿಯಾದಾಗಂತೂ, ಆತನಿಗೆ ಅತಿಯಾದ ಸಂತಸ. ಇವೆರಡೂ ಜವಾಬ್ದಾರಿ ಹಾಗು ಹಕ್ಕುಗಳನ್ನು ಕಳೆದುಕೊಂಡರೆ, ತಂಗಿ, ನನ್ನ ಹಾಗೆ ನೀನು ಆ ಮೇಲೆ ಮರುಗುವಿ. ಜಗತ್ತಿಗೇ ಉಪಕಾರ ಮಾಡಿ, ಅದನ್ನು ಸುಧಾರಿಸುವ ಹಂಬಲವೇಕೆ? ನಿನ್ನ ತೀರ ಸನಿಹದವರನ್ನು ಒಳ್ಳೆಯ ನಾಗರಿಕರನ್ನಾಗಿ ಮಾಡಿದರೆ, ಅದು ಬೇಕಾದದ್ದಕ್ಕಿಂತ ಹೆಚ್ಚೇ ಎನ್ನಬೇಕು!'

'ಮಕ್ಕಳಿಗೆ ತಾಯಂದಿರ ಆವಶ್ಯಕತೆ ಹೆಂಗಿದೆಯೋ, ಹಾಗೆಯೇ ತಾಯಂದಿರಿಗೆ ಮಕ್ಕಳ ಆವಶ್ಯಕತೆ ಇದೆ. ಈ ನಿಸರ್ಗ ಧರ್ಮವನ್ನು [illegible] ಹೆರುವುದೇ ಬೇಡ ಎಂದರೆ ಹೇಗೆ?'

'ಒಳ್ಳೆಯ ಹೆಂಡತಿ ಗಂಡನ ಸುಖದುಃಖಗಳ ಬೆಳಕು ಕತ್ತಲೆಗಳನ್ನು ಮಾಡುವ ರನ್ನಗನ್ನಡಿಯಾಗಿರಬೇಕು!

ಪ್ರಾರ್ಥನಾ

'ಈ ದಿನವೊಂದು ಹೇಗೂ ಮುಗಿಯುತ್ತ ಬಂತ. ಬೆಳಗಾಯಿತೆಂದರೆ ಹಿಂದಿನ ದಿನದ ಸಂಗತಿಯಲ್ಲಿವೂ ಹೊಸದಾಗಿ ಬರುತ್ತದೆ. ಆದ ಕಾರಣ ನಾವು ಹಿಡಿದ [illegible] ತೊಂದರೆಗಳು ಬಾರದಿರಲಿ, ಒಬ್ಬರಿಗೊಬ್ಬರಿಗೆ ತಿಳಿಯದಂತೆ ಎಂದೂ ಗುಟ್ಟು [illegible] ಪರಸ್ಪರ ಕರ್ತವ್ಯದಲ್ಲಿ ಮಂಗಳವಾಗಲಿ.

ನಮ್ಮ [illegible] ಈಗ ಕೆಲವು ವಿಚಾರಗಳನ್ನು ತಪ್ಪು ಕಲ್ಪನೆಗಳನ್ನು, ಅಯೋಗ್ಯವಾದುದೆಲ್ಲವನ್ನು ತೊಡೆದುಹಾಕುವ [illegible] ತಪ್ಪಿ ಆದರೆ, ಒಬ್ಬರಿಗೊಬ್ಬರು ಮೇಲೆ [illegible] ಮಾಡಿ ತೋರಿಸುವುದು ಬೇಡ. ಯಾವ [illegible] ಸಾಮರ್ಥ್ಯದ ಮಹತ್ವದಲ್ಲಿ ಹೀಗೆ [illegible] ಪ್ರೀತಿ ಮಾಡಿಯೂ, ಮಾಡಿಸಿಕೊಂಡು, ನಾವಿಬ್ಬರೂ ನಮ್ಮದಿರುವ ಬಾಳ ನೌಕೆಯನ್ನು ಸಾಗಿಸೋಣ. ಅಲ್ಲಿ ನಾವು ನಮ್ಮ ಮಕ್ಕಳು ಈ ಜಗತ್ತನ್ನು ಆನಂದದಿಂದ ಎದುರಿಸಲು ಯಶಸ್ವಿಯಾಗಲು, ದೇವರು ಕರುಣಿಸಲಿ.' 'ನಾಡಿ'

ಈ ವಾರದ ಕಥೆ.

"ಅಮೃತ!"

ಲೇ:-ಮಿಸ್ ಸಿ. ಎಂ. ಅಮ್ಮಾಜಿ.

ಸಂಧ್ಯಾಸಮಯದ ರವಿಯ ದಿವ್ಯಕಿರಣಗಳನ್ನು ನೋಡಿ ಆನಂದಿಸಬಹುದು. ಪ್ರೇಯಸಿಯನ್ನು ನೆನೆಯೋ ಎಂಬಂತೆ ವಿಕಾರವಶನಾದ ಅಸ್ತಂಗತ ಸೂರ್ಯನನ್ನು ನೋಡಬಹುದು. ಪಕ್ಷಿಗಳ ಮಧುರಗಾನವನ್ನು ಆಲಿಸಬಹುದು. ಹಸುರು ಹಚ್ಚಗಿನ ಭೂಮಾತೆಯ ವಿಶಾಲ ವಕ್ಷಸ್ಥಳದಲ್ಲಿ ಅಡಿ ನಲಿಯಬಹುದೆಂದು ನಾನು ಮತ್ತು ನನ್ನ ಗೆಳತಿ ಮೀನಾ ಇಬ್ಬರು ಹೊರಗೆ ವಾಯುಸೇವನೆಗೆಂದು ಹೊರಟಿದ್ದೆವು. ಸಾಮಾನ್ಯವಾಗಿ ಹೆಂಗಸರ ಜೀವನವೆಲ್ಲ ಮನೆಯೊಳಗೇ ಕಳೆಯುವದು. ಶುಭ್ರಗಾಳಿ, ಶಕ್ತಿ ಪ್ರಚೋದಕ ಸೂರ್ಯಕಿರಣಗಳ ಲಾಭವನ್ನು ಹೊಂದಲು ಅವರಿಗೆ ಅನು ಕಡಿಮೆ. ಆದ್ದರಿಂದ ಮನೆಕೆಲಸವನ್ನೆಲ್ಲಾ ಮುಗಿಸಿ ಸಾಯಂಕಾಲ ಗಾಳಿವಿಹಾರಕ್ಕೆ ಹೋದರೆ ಆತ್ಮಕ್ಕೆ ಶಾಂತಿಯೂ, ತನುವಿಗೆ ಕಾಂತಿಯೂ ದೊರೆಯುವದು. ಮೀನಾ ಮತ್ತು ನಾನು ಇಬ್ಬರು ಅಂಕು ಡೊಂಕಾದ ರಸ್ತೆಗಳನ್ನು ಬಳಸಿಕೊಂಡು ವಕ್ರ ವಕ್ರವಾಗಿ ಸಾಗಿರುವ ಮನೆಯ ಸಾಲುಗಳನ್ನು ದಾಟಿಕೊಂಡು ಸಾಗಿದೆವು. ಮನಃಪ್ರವಿಶಾಂತ ಪಟ್ಟಣವನ್ನು ದಾಟಿದೆವು. ನಿಸರ್ಗದ ಮಾಯಾ ಹಸ್ತದಿಂದ ನಿರ್ಮಿತವಾದ ಬನರಾಶಿಗಳನ್ನು ನೋಡುತ್ತಾ, ಪುಷ್ಪಗಂಧಿಯಲ್ಲಿ ಉಲ್ಲಾಸ [illegible] ತುತ್ತಿದ್ದೆವು. ಈ ನಿಸರ್ಗ [illegible] ನ ಮಧ್ಯೆ ಮನವ [illegible] ದ [illegible] ಹೊಂದಿಕೊಂಡಾಗಿ ಸಾಗಿತ್ತು. ನಾವು ನಮ್ಮಲ್ಲೇ ತನ್ಮಯರಾಗಿದ್ದೆವು. ತಣ್ಣನೆ ಮರಗಳ ಮಧ್ಯೆ ಬೀಸುತ್ತಿದ್ದ ಗಾಳಿಯ ಸುರಸಂಗೀತವನ್ನು ಬೇಧಿಸಿ ಮಧುರ ಸ್ವರವೊಂದು ನಮಗೆ ಕೇಳಿಸುತ್ತಿತ್ತು. ಹೌದು, ಯಾರೋ ಹಾಡಿಕೊಳ್ಳುತ್ತಿದ್ದರು. ನಾವು ಕಿವಿಗೊಟ್ಟು ಆಲಿಸಿದೆವು. ಮಸ್ತಾದ ಸ್ವರ ಆ ಕೊಳಲಿನ ಮನೆಯಲ್ಲಿ ಕೇಳಿಬರುತ್ತಿತ್ತು. 'ಈ ಜೀವ ಸುರಪಾನವಿದೆ ಸ್ವರ್ಗ [illegible] ನಂ| ತಲೆಗಿಂಟಿನ ಜ್ಞಾನ [illegible] ನಿಲ್ಲಿ ಬರೆದಷ್ಟು ಸ್ಪಷ್ಟವಾಗಿ ಅದು ಕೇಳಿಬರುತ್ತಿರಲಿಲ್ಲ. ನಮಗೆ ತಿಳಿಯಿತು, ಯಾರೋ ಕುಡಿದು ಮತ್ತರಾಗಿರಬೇಕೆಂದು ನಾವು ಆ ಧ್ವನಿಯತ್ತ ಹೋದೆವು. ರಸ್ತೆಯ ಪಕ್ಕದಲ್ಲಿ ವ್ಯಕ್ತಿಯೊಬ್ಬನು ಹೊರಳಾಡುತ್ತಿದ್ದಾನೆ. ಆತನ ಬಟ್ಟೆ ಬರೆಗಳು ಧೂಳಿನಿಂದಾವೃತವಾಗಿವೆ. ಆತನ ಬಾಯಿಯಿಂದ ಈ ಹಾಡು ಅಸ್ಪಷ್ಟವಾಗಿ ಹೊರಬರುತ್ತಿದೆ. ವ್ಯಕ್ತಿ ಜಣ್ಮಟ್ಟಿ ಕನವರಿಸುವಂತಿದೆ. ಹತ್ತಿರದಲ್ಲಿ ಹೆಂಗಸೊಬ್ಬಳು ಕುಳಿತು ಅಳುತ್ತಿದ್ದಾಳೆ.

ನಮಗೆ ಸ್ವಲ್ಪ ಕನಿಕರವಾಯಿತು. ಹತ್ತಿರ ಹೋದೆವು ಆತನನ್ನು ನೋಡುವಾಗ ಭಯವಾಗುತಿತ್ತು. ಆತನು ಸುರಾದೇವಿಯ ಪ್ರಭಾವದಲ್ಲಿ ಮೈಮರೆತಿದ್ದನು. ನಾವು ಆಕೆಯ ಹತ್ತಿರ ಹೋದೆವು. ಆಕೆಯನ್ನು ಮಾತಾಡಿಸಿದೆವು. ದುಃಖದಿಂದ ರೋಧಿಸುತ್ತಿದ್ದ ಆಕೆಯ ಕಣ್ಣಿನಲ್ಲಿ ಕುದಿದುಃಖದ ನೀರಿನಂತೆ ಕಂಬನಿ ಹರಿಯಿತು. ಏನೇನೋ ಹೇಳಬೇಕೆಂದು ಆಕೆ ಪ್ರಯತ್ನಿಸಿದರೂ ಹೇಳಲೊಲ್ಲಳು. ತನ್ನ ಪತಿಯ ದುಷ್ಕೃತ್ಯವನ್ನು ಹೇಳಲು ಆ ಸಾಧ್ವಿಯೇ ಹಿಂಜರಿಯುತ್ತಿದ್ದಳು. ನಾವು ಒತ್ತಾಯಮಾಡಿದೆವು. ಇಷ್ಟರಲ್ಲಿ ಕುಡುಕನು ಸುರಾದೇವಿಯ ಪ್ರಾಣಾರ್ಪಣನಾದಂತೆ ತನ್ನ ಕನವರಿಕೆಯನ್ನು ನಿಲ್ಲಿಸಿದನು. ಆತನು ಗಾಢನಿದ್ರೆಯಲ್ಲಿರುವಂತೆ ನಮಗೆ ತೋರುತಿತ್ತು. ಆಕೆ ನಾಚಿಕೆಯ ಇಳಿದನಿಯಲ್ಲಿ ಹೇಳತೊಡಗಿದಳು.

'ಇವರು ವಿದ್ಯಾವಂತರು ಬುದ್ಧಿವಂತರು. ಆಂಗ್ಲೋಸಮಾಜದಲ್ಲಿ ಪ್ರತಿಷ್ಠೆ ಪಡೆದ ವ್ಯಕ್ತಿ ಎನಿಸಿದ್ದರು. ಮಹಾತ್ಮರ ಅನುಯಾಯಿಗಳಲ್ಲಿ ಒಬ್ಬರಾಗಿ ಜೈಲಿಗೂ ಒಮ್ಮೆ ಹೋಗಿದ್ದರು. ಮೊದಲು ಖಾದಿಯನ್ನೇ ಧರಿಸುತ್ತಿದ್ದರು. ಇವರ ಅಂದಿನ ಆದರ್ಶ ಜೀವನವನ್ನು ನೋಡಿಯೇ ನಾನೂ ಮದುವೆಗೆ ಸಮ್ಮತಿಸಿದೆನು. ನಮ್ಮ ಸಂಸಾರ ಪ್ರಾರಂಭವಾಯಿತು. ನಮ್ಮ ಚಿಕ್ಕ ಕುಟುಂಬವನ್ನು ಸಾಗಿಸಲು ಇವರು ಒಂದು ಉದ್ಯೋಗವನ್ನು ಹುಡುಕಿದರು. ಆವಾಗ ಸರಕಾರಿ ಉದ್ಯೋಗವೊಂದು ದೊರೆಯಿತು. ನಮ್ಮ ಸಂಸಾರ ಚೆನ್ನಾಗಿಯೇ ನಡೆಯುತ್ತಿತ್ತು. ಇವರು ಪಟ್ಟಣವನ್ನು, ತಿಂಗಳಿಗೊಮ್ಮೆ ತಮ್ಮ [illegible] ಹೋಟೆಲುಗಳನ್ನು, ಚಹಪಾನಕ್ಕೂ, ಊಟಕ್ಕೂ ಕರೆಯುವದಿತ್ತು. ಮೊದಲು ಸರಳವಾಗಿದ್ದ ನಮ್ಮ ಊಟಗಳಲ್ಲಿ [illegible] ಸುಧಾರಣೆಯು ಆ ತಾರವಾಯಿತು. [illegible] ಕಳೆದಂತೆ ಊಟಗಳು [illegible] ಪಾರ್ಟಿಗಳೂ ದಪ್ಪ [illegible] ಅಸನ್ಮಭಕ್ತರಾದರು. ಆ [illegible] ಆಗ ತಿಂಗಳಿಗೆ ನೂರು ರೂಪಾಯಿ ಮೇತನ ಬರುತಿತ್ತು. ನಮ್ಮ ಚಿಕ್ಕ ಸಂಸಾರಕ್ಕೆ ಅದು ಸಾಕಾಗುತಿತ್ತು. ಆದರಲ್ಲಿ ಸ್ವಲ್ಪ ಹಣ ಉಳಿಸಿ ನಿಕ್ಷೇಪವಿಟ್ಟಿದ್ದೆವು. ದಿನ ಕಳೆದಂತೆ ಕುಡುಕತನದಿಂದಾಗಿ ಆ ವೇತನ ಅವರ ಖರ್ಚಿಗೆ ಸಾಲದಾಯಿತು. ನಿಕ್ಷೇಪವಿಟ್ಟ ಗಂಟೂ ಕರಗಿ ಮಾಯವಾಯಿತು. ಕ್ರಮೇಣ ಅವರ ಮೈಯಲ್ಲಿದ್ದ ಬೆಲೆಬಾಳುವ ವಸ್ತುಗಳು ಕಾಣದಾಗತೊಡಗಿದವು ಮನೆಯ ವಸ್ತುಗಳೂ ಮಾರಾಟವಾದವು. ನಾನು ಎಷ್ಟೇ ಬುದ್ಧಿವಾದ ಹೇಳಿದರೂ ಪ್ರಯೋಜನವಾಗಲಿಲ್ಲ. ಅಷ್ಟು ಪ್ರೀತಿಯಿಂದ ನನ್ನೊಡನಿದ್ದವರು ನನ್ನನ್ನು ಹೊಡೆಯಲು ಬಡಿಯಲು ಪ್ರಾರಂಭಿಸಿದರು. ಇವರು ಕೊಡುತಿದ್ದ ಕಷ್ಟದಿಂದಾಗಿ ಆತ್ಮಹತ್ಯೆ ಮಾಡಿಕೊಳ್ಳಲೇ ಎಂದು ಒಮ್ಮೊಮ್ಮೆ ನನಗನಿಸುತ್ತದೆ. ಅವರ ಈ ಹುಚ್ಚನ್ನು ಬಿಡಿಸಲು ನಾನು ಉಪವಾಸ ಮಾಡಿದೆನು. ನಾನಾ ರೀತಿಯ ಉಪಾಯಗಳನ್ನು ಮಾಡಿ ನೋಡಿದೆನು. ಸುರಾದೇವಿಯ ಪ್ರಭಾವದೆದುರು ನನ್ನ ಪ್ರಯತ್ನ ಸಾಗಲಿಲ್ಲ. ಇವರು ಬೆಳಗ್ಗೆ ಎದ್ದ ಹಾಗೆಯೇ ಕುಡಿಯುತ್ತಿದ್ದರು. ಆಫೀಸಿಗೂ ಕುಡಿದು ಹೋಗತೊಡಗಿದರು. ಕುಡಿದು ಅಧಿಕಾರಿಯೊಡನೆ ಜಗಳ ಮಾಡಿಕೊಂಡು ಅದೇ ತಪ್ಪಿಗಾಗಿ ಕೆಲಸವನ್ನು ಕಳಕೊಂಡರು. ನಂತರ ನಮ್ಮ ಜೀವನವು ಇನ್ನಷ್ಟು ಕಷ್ಟಮಯವಾಯಿತು. ಪುಣ್ಯವಶಾತ್ ನಮಗೆ ಮಕ್ಕಳಿರಲಿಲ್ಲ. ನಮ್ಮ ತೋಟ, ಮನೆ ಸರ್ವವನ್ನೂ ಸಾಲಕ್ಕಾಗಿ ಮಾರಬೇಕಾಯಿತು. ಈಗ ನಾವು ಬೀದಿಯ ಭಿಕಾರಿಗಳು. ಅಲ್ಲಿ ಇಲ್ಲಿ ಕೆಲಸ ಮಾಡಿಕೊಂಡು ಜೀವಿಸುತ್ತಿರುವೆವು. ಕೆಲಸದಿಂದ ದೊರೆತ ನಾಲ್ಕು ಕಾಸನ್ನೂ ಕುಡಿದು ಬಿಡುತ್ತಾರೆ ಹಲವು ವೇಳೆ ನಾನು ಉಪವಾಸ ಬೀಳಬೇಕಾಗುತ್ತದೆ!

ನೆರೆಕರೆಯ ಬುದ್ಧಿವಂತರನೇಕರು ಅನೇಕ ರೀತಿಯ ಬುದ್ಧಿವಾದ ಹೇಳಿದರೂ ಕೇಳುವದಿಲ್ಲ ಅವರ ಪಾಲಿಗೆ ಅದೇ ಅಮೃತ! ಹೌದು, ಕೊಡಗಿನಲ್ಲಿ ಪಾನ ನಿಯಂತ್ರಣ ಜಾರಿಯಲ್ಲಿದೆ ನಿಜ ಆದರೆ [illegible] ಹೆಚ್ಚಿನ ಪ್ರಯೋಜನವಿಲ್ಲ ಎಲ್ಲಿಂದ ಸಂಪಾದಿಸುವರೋ, ಇವರಲ್ಲಿ ನಾಲ್ಕಾರು ಜನ ಪಾನಪ್ರಿಯರಿಗಳಿವೆ, ಸಾರಾಯಿಯ ಜೊತೆಗೆ ಸೇಂದಿಯ ಅಭ್ಯಾಸವನ್ನೂ ಮಾಡಿದ್ದಾರೆ. ಅಯ್ಯೋ, ಸರಕಾರ ಈ ತೋರಿಕೆಯ ನಿಯಂತ್ರಣವನ್ನು ಯಾರ ಕಣ್ಣು ಕಟ್ಟಲು ಮಾಡಿರುವದೋ ತಿಳಿಯದು. ಬಡ ಜನಗಳ [illegible] ಈ ರೀತಿ ಹಾಳು ಮಾಡಿ ಆ ಮಾರ್ಗದಿಂದ ಬರುವ ಆದಾಯದಿಂದ ಯಾರ ಹಿತ ಸಾಧಿಸಲು ಸರಕಾರ ಇಚ್ಛಿಸಿದೆಯೋ ಬಲ್ಲವರಾರು?' ಆಕೆ ಮಾತು ನಿಲ್ಲಿಸಿ ಏನೋ ಯೋಚಿಸುತ್ತಿದ್ದಳು.

ನಾವು [illegible] ಸ್ವಲ್ಪ [illegible] ದಿಗಂತವನ್ನು ಸೇರುತ್ತಿದ್ದನು [illegible] ನಿಂದ ಮಳೆ ಹೊಡೆಯುತಿತ್ತು. ಪೂರ್ವ ದಿಗಂತದಲ್ಲಿ ಸಪ್ತ ವರ್ಣದ ಕಾಮನ ಬಿಲ್ಲು ಕಾಣುತಿತ್ತು. ಶಾಂತರ [illegible] ಯ ಪ್ರಭಾವವೋ ಏನೋ ಕಣ್ಮುಚ್ಚಿದ್ದ ಆ ವ್ಯಕ್ತಿ ಮೆಲ್ಲನೆ ಕಣ್ತೆರೆಯಿತು. ನಿದ್ರೆಯಿಂದೆದ್ದವನಂತೆ ಎದ್ದು ಸುತ್ತು ನೋಡಿದನು ನಮ್ಮನ್ನು ಕಂಡು ಆತನಲ್ಲಿ ನಾಚಿಕೆಯುಂಟಾಗಿ ತಲೆತಗ್ಗಿಸಿ ಹೆಂಡತಿಯ ನೆಲೆನೋಡಿ ಅಲ್ಲಿಂದ ಹೊರಟನು. ಆ ಪಂಳಿ ನಂತೆ ಆತನನ್ನು ಹಿಂಬಾಲಿಸಿ [illegible] !

ಈ ಪತಿ ಪತ್ನಿಯರ ಕರುಣ ಕಥೆಯನ್ನು ಕೇಳಿ ನನಗೆ ಜೀವನವೇ ಭಾರವಾಯಿತು. ಎಷ್ಟು ಕುಟುಂಬಗಳು ಈ ರೀತಿ ಸುರಾದೇವಿಯಿಂದ ನಾಶವಾಗಿರಬಹುದು? ಅಯ್ಯೋ, ಆಕೆ ಎಂಥಾ ಸಾಧ್ವಿ. ಸೀತಾ, ದ್ರೌಪದಿ, ದಮಯಂತಿಯರ ಸಾಲಿಗೆ ಸೇರತಕ್ಕವಳು. ಆತನ ಹೊಡೆತ, ಬಡಿತಗಳನ್ನು ಸಹಿಸಿ, ಕಷ್ಟ ಕಾರ್ಪಣ್ಯಗಳನ್ನು ಹೊತ್ತು, ಆತನ ಸುಖಕ್ಕಾಗಿ ತನ್ನ ಜೀವನವನ್ನು ತೇದು ವಿನಿಯೋಗಿಸಿ ತಪಸ್ವಿನಿಯಂತೆ ಜೀವನ ನಡೆಸುತ್ತಿರುವ ಈ ಪತಿವ್ರತೆಯನ್ನು ನೆನೆದು ಸ್ತ್ರೀಯ ಸಹನೆಗೆ ಜಗತ್ತಿನಲ್ಲಿ ಮೇರೆ ಇಲ್ಲವೆಂದೆನಿಸಿತು. ಆ ಮೀಬ್ಬರೂ ಕಣ್ಮರೆಯಾಗುವ ವರೆಗೆ ಅವರನ್ನು ನೋಡುತ್ತಿದ್ದು ನಾವು ಹಿಂತಿರುಗಿದೆವು.

ಈ ಘಟನೆಯಾಗಿ ಬಹುಶಃ ಒಂದು ತಿಂಗಳಾಗಿರಬಹುದು. ಒಂದು ದಿನ ಪತ್ರಿಕೆಯಲ್ಲಿ ಈ ರೀತಿ ಇತ್ತು. 'ಹಿಂದೆ ಸರಕಾರಿ ಗುಮಾಸ್ತನಾಗಿದ್ದು, ಕುಡುಕತನದ ಕಾರಣ ನಿವೃತ್ತಿಗೊಳಿಸಲ್ಪಟ್ಟ ರಾಮನು ಕುಡುಕತನದ ಹೆಚ್ಚಳದಿಂದ ಹೃದಯ ಕ್ರಿಯೆ ನಿಂತು ಮೃತನಾದನು. ಆತನ ಪತ್ನಿಯು ಹುಚ್ಚರ ಆಸ್ಪತ್ರೆಯಲ್ಲಿರುವಳು.'

ಸುವಾಸನೆಯ ಕಲ್ಲಿದ್ದಲು.

ಸದ್ಯದಲ್ಲೇ ಅಮೇರಿಕವರು ತಮ್ಮ ಒಲೆಗಳಲ್ಲಿ ಧೂಳಿಲ್ಲದ ಕಲ್ಲಿದ್ದಲನ್ನು ಉಪಯೋಗಿಸಲಿರುವರು. ಮಾತ್ರವಲ್ಲ; ಈ ಹೊಸ ಕಲ್ಲಿದ್ದಲು ಗುಲಾಬಿಯ ಪರಿಮಳವನ್ನೂ ಸೂಸುವದು. ಅಲ್ಲಿನ ಕಲ್ಲಿದ್ದಲು ತಜ್ಞರು ಧೂಳಿಲ್ಲದ ಕಲ್ಲಿದ್ದಲನ್ನು ಸಿದ್ಧಗೊಳಿಸುವ ವಿಧಾನವನ್ನು ಪರಿಪೂರ್ಣಗೊಳಿಸಿದ್ದಾರೆ. ಈ ಕಲ್ಲಿದ್ದಲಿನೊಡನೆ ಒಂದು ತರದ ಎಣ್ಣೆಯನ್ನು ಮಿಶ್ರ ಮಾಡಲಾಗುವದು. ಈ ಎಣ್ಣೆಯು ದುರ್ಗಂಧವನ್ನು ಕಡಿಮೆ ಮಾಡಲು ಗುಲಾಬಿಯ ಸುವಾಸನೆಯನ್ನೂ ಅದರೊಡನೆ ಸೇರಿಸಲಾಗುವದು. ಅಲ್ಲದೆ ಇನ್ನಿತರ ಪರಿಮಳಗಳನ್ನೂ ಇದರೊಡನೆ ಸೇರಿಸಲು ಸಾಧ್ಯವಿದೆ.

ಸೂರ್ಯಶಕ್ತಿಯ ಅದ್ಭುತ

ಪ್ರತಿಯೊಂದು ಕ್ಷಣಕ್ಕೆ ಸೂರ್ಯನಿಂದ ೧೫ ಮಿಲಿಯ ಟನ್ನುಗಳಷ್ಟು ಚೈತನ್ಯವು ಉಷ್ಣರೂಪದಲ್ಲಿ ಹೊರ ಸೂಸುತ್ತದೆ! ಈ ಪ್ರಮಾಣದಲ್ಲಿ ಅದೆಷ್ಟು ಕಾಲ ಆತನ ಉರಿಯಬಹುದೆಂಬ [illegible] ವಿಜ್ಞಾನಿಗಳು ತಿಳಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಇಷ್ಟೊಂದು ಪ್ರಚಂಡ ಉಷ್ಣವನ್ನು ಹೀರಲು ಆ ತೇಜಃಪುಂಜಕ್ಕೆ ಬೇಕಾದ ಸಾಮಗ್ರಿಗಳು ಎಲ್ಲಿಂದ ಹೇಗೆ ದೊರಕುತ್ತವೆಂಬ ಮಾ ರಹಸ್ಯಾತ್ಮಕವಾದ [illegible] ಗತಿಯಾಗಿದೆ. ಸೂರ್ಯನು ಈಗ ಬೀರುವ ಉಷ್ಣತೆಯು ಅರ್ಧಾಂಶದಷ್ಟು ಕಡಿಮೆಯಾದರೆ ಭೂಮಿಯು ಹಿಮದ ಸೀಮೆ ಹೆಪ್ಪುಗಟ್ಟುವ ಪ್ರಸಂಗವಾಗುತದೆ. ಈಗಿರುವ ಉಷ್ಣತೆಗಿಂತ ಅವನು ಇಮ್ಮಡಿಯಾಗಿ ಉರಿದರೆ ನಮ್ಮ ವಾತಾವರಣದ ಶಾಖವು 180 ಡಿಗ್ರಿಯಷ್ಟಾಗಿ ಜೀವನವು ಅಸಾಧ್ಯವಾಗುವುದು.

೨೫ ಕೋಟಿ ವರ್ಷ ಹಿಂದಿನ ಮರ.

ಸುಮಾರು ೨೫ ಕೋಟಿ ವರ್ಷಗಳ ಹಿಂದಿನದೆಂದು ಅಂದಾಜು ಮಾಡಲ್ಪಟ್ಟ ಒಂದು ಮರದ ಕಾಂಡವನ್ನು ಬ್ರಿಟಿಷ್ ವಸ್ತು ಪ್ರದರ್ಶನಾಲಯದಲ್ಲಿ ಇಡಲಾಗಿದೆ. ಯುದ್ಧಕಾಲದಲ್ಲಿ ಆ ಪ್ರದರ್ಶನಾಲಯದ ಕೋಟೆಯಲ್ಲಿ ಈ ಮರವು ಜರ್ಮನರ ಬಾಂಬುಗಳಿಂದ ಸ್ಫೋಟಗೊಂಡು ಹಾನಿಪಟ್ಟಿತ್ತು. ಆ ನಂತರ ವಸ್ತು ಪ್ರದರ್ಶನಾಲಯದ [illegible] ನೆಲಮನೆಗೆಯ ವಾಗ ಸಿಕ್ಕಿದ್ದು ಇನ್ನೊಂದು ಆಕಸ್ಮಿಕ ಘಟನೆ. ೧೮೭೭ರಲ್ಲಿ ನೆಲಮಾಳಿಗೆಗಾಗಿ ಸುರಂಗ ತೋಡುತಿದ್ದಾಗ ಕೆಲಸಗಾರರು ಇದರ ಅವಶೇಷಗಳನ್ನು ಮೊದಲಿನ ಸಲಕ್ಕೆ ಕಂಡಿದ್ದರು.

ಕೊಡಗು

ತಾ. ೨೯-೭-೧೯೪೯ನೇ ಶುಕ್ರವಾರ

ಆಹಾರ ಸಮಸ್ಯೆ.

ಹಿಂದೂದೇಶದ ಸರಕಾರವು ವರ್ಷಕ್ಕೆ ಸುಮಾರು ೧೩೦ ಕೋಟಿ ರೂಪಾಯಿಗಳ ಆಹಾರ ಪದಾರ್ಥಗಳನ್ನು ಹೊರದೇಶಗಳಿಂದ ತರಿಸುತ್ತಿದೆ. ಹಿಂದೂದೇಶದಲ್ಲಿ ಬೆಳೆಯುವ ಆಹಾರ ಪದಾರ್ಥಗಳು ಹಿಂದೂದೇಶೀಯರಿಗೆ ಸಾಲದೆ ಇರುವದೇ ಇಷ್ಟು ಹಣದ ವಾರ್ಷಿಕ ವ್ಯಯಕ್ಕೆ ಕಾರಣ. ಹಿಂದೂದೇಶವು ಕೃಷಿಕರ ದೇಶ. ನೂರಕ್ಕೆ ೮೫ ರಷ್ಟು ಜನ ಕೇವಲ ಕೃಷಿಯಿಂದಲೇ ಜೀವನ ಮಾಡುತ್ತಾರೆ. ಇಷ್ಟೊಂದು ಜನಸಂಖ್ಯೆಯು ವ್ಯವಸಾಯಕ್ಕಾಗಿ ದುಡಿದರೂ ಭಾರತೀಯರಿಗೆ ಬೇಕಾದಷ್ಟು ಆಹಾರ ಉತ್ಪನ್ನವಾಗುತ್ತಿಲ್ಲವೆಂದರೆ ನಮ್ಮ ಕೃಷಿಪ್ರವೃತ್ತಿಯಲ್ಲಿ ತುಂಬಾ ನ್ಯೂನತೆಗಳಿರಲೇಬೇಕು. ಈ ನ್ಯೂನತೆಗಳ ಕಾರಣವೇ ಹಿಂದೂದೇಶದಲ್ಲಿ ಪ್ರತಿ ಎಕರೆಗೆ ಉತ್ಪಾದನೆ ಆಗುವ ಆಹಾರ—ಅದು ಬತ್ತ, ಗೋಧಿ ಯಾವದೇ ಆಗಲಿ—ಇಡೀ ಜಗತ್ತಿನಲ್ಲಿ ಎಲ್ಲ ರಾಷ್ಟ್ರಗಳಿಗಿಂತಲೂ ಕಡಿಮೆ ಪ್ರಮಾಣದಲ್ಲಿದೆ. ಇದಕ್ಕೆ ಕಾರಣ ಹಲವಿವೆ. ವ್ಯವಸಾಯ ಮಾಡುವ ರೈತನ ಎತ್ತುಗಳ ನಿರ್ಬಲತೆ, ಆತನು ಉಪಯೋಗಿಸುವ ಹತ್ಯಾರುಗಳ ಹಳೆತನ, ಆತನು ಉಪಯೋಗಿಸುವ ಅಪರಿಷ್ಕೃತ ಬೀಜ, ಗೊಬ್ಬರದ ಅವ್ಯವಸ್ಥೆ, ಅವುಗಳ ಜೊತೆಗೆ ಅತೃಪ್ತಿಕರ ನೀರಾವರಿಯೋಜನೆ ಇವು ಕಾರಣಗಳೆನ್ನಬಹುದು. ಒಟ್ಟಾರೆ ಶಾಸ್ತ್ರೀಯ ರೀತಿಯಿಂದ ವ್ಯವಸಾಯ ನಡೆಯುತ್ತಿಲ್ಲ. ಪ್ರಧಾನವಾಗಿ ವ್ಯವಸಾಯಗಾರರ ನಾಡಾಗಿರುವ ಹಿಂದೂದೇಶವು ಆಹಾರ ಪದಾರ್ಥಗಳಿಗಾಗಿ ಹೊರಗಿನ ದೇಶಗಳನ್ನು ನಂಬಿ ಜೀವಿಸುವದು ನಾಚಿಕೆಯ ವಿಚಾರ. ಆ ಕಾರಣದಿಂದಲೇ ಕೇಂದ್ರ ಸರಕಾರವು ೧೯೫೧ ರ ನಂತರ ಹೊರಗಿನಿಂದ ಆಹಾರ ಪದಾರ್ಥಗಳನ್ನು ತರಿಸುವದಿಲ್ಲವೆಂದೂ ಅದರೊಳಗೆ ಭರತಖಂಡವು ಆಹಾರದ ಮಟ್ಟಿಗೆ ಸ್ವಾವಲಂಬಿಯಾಗಬೇಕೆಂದೂ ನಿಶ್ಚಯಿಸಿದೆ. ಈ ದೃಷ್ಟಿಯಿಂದ ವಿಸ್ತೃತ ಕಾರ್ಯ ನಡೆಯುತ್ತಿದೆ. ಅದಕ್ಕಾಗಿ ಹೊಸ ಸಿಬ್ಬಂದಿಗಳನ್ನು ನೇಮಿಸಿ ಬಿರುಸಿನ ಕಾರ್ಯ ಸಾಗಿದೆ. ಈ ಕಾರ್ಯದ ಧನೆಯಲ್ಲಿ ಎರಡು ವಿಭಾಗ ಮಾಡಬೇಕಾಗುತ್ತದೆ. ಒಂದು ಕ್ಷಿಪ್ರ ಫಲಕ್ಕೆ ಬಯಸುವಂಥದ್ದು. ಮತ್ತೊಂದು ದೂರದಲ್ಲಿ ಫಲದಾಯಕವಾಗುವಂಥದ್ದು. ಇಂದು ಆಹಾರಕ್ಕಾಗಿ ಸಾವಿರ ಹೊಟ್ಟೆಗಳು ಕೂಗುತ್ತಿರುವಾಗ ಶೀಘ್ರವಾಗಿ ಅವರಿಗೆ ಅನ್ನಾದಿಗಳ ಒದಗಿಸುವದೇ ಕ್ಷಿಪ್ರಯೋಜನೆ. ಈ ಪ್ರಕಾರ ಹೆಚ್ಚು ತರಕಾರಿ ಬೆಳೆಸುವದು; ಒಳ್ಳೆ ಗೊಬ್ಬರ ಹಾಕಿ ಬೆಳೆ ಹೆಚ್ಚು ಮಾಡುವದು ಇವು ಜಾರಿಯಲ್ಲಿ ಬೇಗ ಬರಬೇಕು. ದೀರ್ಘಯೋಜನೆಯಲ್ಲಿ ವ್ಯವಸಾಯ ಕ್ಷೇತ್ರದ ವಿಸ್ತರಣ, ಶಾಸ್ತ್ರೀಯ ವ್ಯವಸಾಯ, ದನಕರುಗಳನ್ನು ಉತ್ತಮಗೊಳಿಸುವದು, ಪರಿಷ್ಕೃತ ಬೀಜವನ್ನು ಉಪಯೋಗಿಸುವದು ಮೊದಲಾದವು ಬರುತ್ತವೆ. ಇವೆಂದು ಯೋಜನೆಗಳು ಯಶಸ್ವಿಯಾಗಬೇಕಾದರೆ ರೈತನು ಸಂತುಷ್ಟನಾಗಿರಬೇಕು. ಆತನು ಬೆಳೆಸಿದ ಬೆಳೆಗೆ ಪ್ರೋತ್ಸಾಹದಾಯಕ ಬೆಲೆ ದೊರೆಯಬೇಕು. ಹೆಚ್ಚು ಬೆಳೆಯುವದರಿಂದ ತನಗೂ ಲಾಭವಿದೆಯೆಂದು ಆತನಿಗೆ ಅನಿಸಬೇಕು.

ಕೊಡಗಿನ ಮಟ್ಟಿಗೆ ಹೇಳುವದಾದರೆ ಕೊಡಗು ಉಳುವರ ಪ್ರಾಂತ. ನಮ್ಮ ಹೊಟ್ಟೆಗೆ ಅನ್ನಕ್ಕೆ ತೊಂದರೆ ಇಲ್ಲವೆಂದು ನಾವು ತೃಪ್ತರಾಗಿರುವದು ಸಾಧ್ಯವಿಲ್ಲ. ಏಕೆಂದರೆ ಇಂದಿನ ಜಗತ್ತಿನಲ್ಲಿ ನಾನು ತಾನೆಂಬುದಕ್ಕೆ ಹೆಚ್ಚಿನ ಆಸ್ಪದವಿಲ್ಲ. ನೆರೆ ಪ್ರಾಂತದವರು ಅನ್ನವಿಲ್ಲದೆ ಕಷ್ಟಪಡುತ್ತಿರುವಾಗ ನಾವು ಅನಾಸಕ್ತಿಯಿಂದಿರಲು ಸಾಧ್ಯವಿಲ್ಲ. ನಮ್ಮ ಕೈಯಲ್ಲಾದ ನೆರವನ್ನು ನೀಡಲೇಬೇಕು. ಕೊಡಗಿನಿಂದ ಈ ವರ್ಷ ಸುಮಾರು ೧೫,೦೦೦ ಟನ್ ಬತ್ತ ಹೊರಗೆ ಹೋಗಿರಬಹುದು. ಇದನ್ನು ಇನ್ನೂ ಹೆಚ್ಚಿಸಲು ಕೊಡಗಿನವರಿಗೆ ಸಾಧ್ಯವಿದೆ. ಕೊಡಗಿನಲ್ಲಿ ಹೆಚ್ಚು ಬೆಳೆಯಿರಿ ಪ್ರಚಾರ ನಡೆಯುತ್ತಿದ್ದರೂ ಅದು ಯಶಸ್ವಿಯಾಗಿಲ್ಲ. ರೈತರಿಗೆ ದೊರೆಯಬೇಕಿದ್ದಷ್ಟು ಪ್ರೋತ್ಸಾಹ ದೊರೆಯಲಿಲ್ಲ. ಈ ವರ್ಷ ಅರ್ಧ ನಾಟಿ ಕೆಲಸ ಆಗುತ್ತಾ ಬಂದಿದೆ. ಈ ವರ್ಷ ಹೆಚ್ಚು ಬೆಳೆಯುವ ಪ್ರಚಾರ ಯೋಗ್ಯ ರೀತಿ ನಡೆದಿಲ್ಲ. ವ್ಯವಸಾಯ ಪ್ರಾರಂಭವಾಗುವ ಒಂದೆರಡು ತಿಂಗಳುಗಳಿಂದಲೇ ಈ ಪ್ರಚಾರ ನಡೆಯಬೇಕಿತ್ತು. ಪ್ರತಿ ಗ್ರಾಮಗಳಲ್ಲಿ ಪರಿಶೀಲನೆ ನಡೆದು ಪಾಳುಬಿದ್ದ ಭೂಮಿಗಳನ್ನು ನಡುವ ಮತ್ತು ನೆಡುತ್ತಿರುವದನ್ನು ಒಳ್ಳೆ ಗೊಬ್ಬರ ಮೊದಲಾದವನ್ನು ಉಪಯೋಗಿಸಿ ಫಲದಾಯಕವಾಗಿ ಮಾಡುವ ಏರ್ಪಾಡು ಮಾಡಬೇಕಿತ್ತು. ಗ್ರಾಮ ಗ್ರಾಮಗಳಿಗೆ ಸಾಕಷ್ಟು ಗೊಬ್ಬರ ಸರಬರಾಯಿ ಆಗಬೇಕಿತ್ತು. ಹೊಸ ಭೂಮಿ ಮಾಡಿದವರಿಗೆ ಪ್ರೋತ್ಸಾಹಕ ರೀತಿಯ ಹೆಚ್ಚಿನ ಬೋನಸ್ಸಿನ ಏರ್ಪಾಡು ಮಾಡಬೇಕಿತ್ತು. ಒಂದು ಏರಿಯಲ್ಲಿ ಎಲ್ಲಕ್ಕೂ ಹೆಚ್ಚಿಗೆ ಬೆಳೆ ಬೆಳೆದ ರೈತರನ್ನು ಹೆಕ್ಕಿ ಅವರಿಗೆ ಬಹುಮಾನ ಕೊಡಬೇಕಿತ್ತು. ಇದಾವದೂ ಕೊಡಗಿನಲ್ಲಿ ಆಗಿಲ್ಲ. ಅಲ್ಲೋ ಇಲ್ಲೋ ಅಪಸ್ವರಗಳಂತೆ ಇದಕ್ಕೆ ನೇಮಕವಾದ ಅಧಿಕಾರಿಗಳ ಕೂಗು ಕೇಳಿದರೆ ಸಾಲದು. ಬತ್ತದ ಬೆಳೆಯನ್ನು ಹೆಚ್ಚಿಸುವ ಸಮಯ ಈ ವರ್ಷಕ್ಕೆ ತಪ್ಪಿಹೋಯಿತೆನ್ನಬಹುದು. ಈಗ ನೆಟ್ಟ ಭೂಮಿಯಲ್ಲಿ ಹೆಚ್ಚಿನ ಬೆಳೆಬರುವಂತೆ ಗೊಬ್ಬರದ ಏರ್ಪಾಡಾದರೂ ಮಾಡಿದರೆ ಹಿತವಾಗುತಿತ್ತು. ಆದರೆ ಪಾಪ; ವ್ಯವಸಾಯ ಇಲಾಖೆಯ ಗೊಬ್ಬರ ಗ್ರಾಮದವರನ್ನು ಯಾವಾಗ ಮತ್ತು ಹೇಗೆ ತಲಪುವದೋ ಬಲ್ಲವರಾರು?

ಹೆಚ್ಚಿಗೆ ಬೆಳೆ ಬೆಳೆಯುವ ಪ್ರಚಾರ ಈಗ ಫಲಕಾರಿಯಲ್ಲ. ಇನ್ನು ಹೆಚ್ಚಿಗೆ ತರಕಾರಿ ಬೆಳೆಯುವ ಪ್ರಚಾರವನ್ನು ಕೈಕೊಂಡು ಪ್ರತಿಯೊಬ್ಬನೂ ಖಡ್ಡಾಯವಾಗಿ ತರಕಾರಿ ಬೆಳೆಸುವಂತೆ ಮಾಡಬೇಕು. ಅದಕ್ಕೆ ಬೇಕಾದ ಗೊಬ್ಬರ ಸರಬರಾಯಿ ಮಾಡಬೇಕು. ಪಂಡಿತ ಜವಾಹರ್‌ಲಾಲ್ ನೆಹರೂರವರು ತಮ್ಮ ಮನೆಯ ಹೂತೋಟಗಳನ್ನು ಸ್ವತಹ ತರಕಾರಿ ತೋಟವಾಗಿ ಮಾರ್ಪಡಿಸಿ ಆದರ್ಶ ಮಾದರಿಯನ್ನು ತೋರಿಸಿದಂತೆ ಪ್ರತಿ ಅಧಿಕಾರಿಯೂ ಸಾಧ್ಯವಿರುವಲ್ಲಿ ತಾವೇ ತರಕಾರಿ ಬೆಳೆಸಬೇಕು. ಎಲ್ಲರೂ ಬೆಳೆಸುವಂತೆ ಪ್ರೋತ್ಸಾಹಿಸಬೇಕು. ಇದಕ್ಕೆ ಪ್ರದರ್ಶನ ಮತ್ತಿತರ ಪ್ರೋತ್ಸಾಹದ ಸ್ಪರ್ಧೆಗಳನ್ನು ಏರ್ಪಡಿಸಬೇಕು. ಇದನ್ನಾದರೂ ಸ್ಥಳೀಯ ಅಧಿಕಾರಿಗಳು ಆಸ್ಥೆಯಿಂದ ಮಾಡುವರೆಂದು ನಂಬಲಾಗಿದೆ.

ಮುಂದಿನ ಯೋಜನೆಯ ವಿಚಾರ ಒಂದೆರಡು ಮಾತು ಹೇಳಬೇಕಾಗಿದೆ. ಕೇವಲ ಸರಕಾರವು 'ಹೆಚ್ಚು ಬೆಳೆಯಿರಿ' ಎಂದು ರೈತರನ್ನುದ್ದೇಶಿಸಿ ಕೂಗಿದರೆ ಫಲವಿಲ್ಲ. ಕೊಡಗಿನ ರೈತನ ವ್ಯವಸಾಯ ಸಮರ್ಪಕವಾಗಿ ನಡೆಯದಿರಲು ಪ್ರಥಮ ಕಾರಣ ಆತನ ಬಡಕಲ ಎತ್ತುಗಳು. ಕೊಡಗಿನ ಜಾನುವಾರು ಸ್ಥಿತಿಯನ್ನು ಉತ್ತಮಗೊಳಿಸದಿದ್ದರೆ ವ್ಯವಸಾಯವು ಪ್ರಗತಿ ಪಡೆಯದು. ಅದಕ್ಕಾಗಿ ಹೊಸ ಏರ್ಪಾಡುಗಳಾಗಬೇಕು. ಜಾನುವಾರು ಇಲಾಖೆ, ಫಾಡರ್ ಆಫೀಸು ಮೊದಲಾದುವು ಇವೆ ಸಹಜ. ಆದರೆ ಈ ವರೆಗೆ ಅವರು ಸಾಧಿಸಿದ ಸಾಧನೆ ಹೇಳಿಕೊಳ್ಳುವಷ್ಟಿಲ್ಲ. ಕೇಂದ್ರದಿಂದ ಕೊಡಗಿನ ರೈತರಿಗೆ ಹಂಚಲ್ಪಡಲೆಂದು ನಿಶ್ಚಿತವಾಗಿರುವ ಎರಡು ಲಕ್ಷ ರೂಪಾಯಿಗಳನ್ನು ರೈತರಿಗೆ ಹಂಚುವ ಬದಲು ಬೇರೆ ಸದುಪಯೋಗ ಮಾಡಲು ಸಾಧ್ಯವಿಲ್ಲವೇ? ದೇಶೀಯರು ಆ ಹಣವನ್ನು ಸರಕಾರಕ್ಕೆ ಬಿಡುವದಾದರೆ ತಾವು ತಮ್ಮ ಬೊಕ್ಕಸದಿಂದ ಅದಕ್ಕೆ ಹಣ ಸೇರಿಸಿ ಇಂಥಾ ರೀತಿಯಲ್ಲಿ ಜಾನುವಾರುಗಳ ಮತ್ತು ರೈತರ ಅಭಿವೃದ್ಧಿ ಯೋಜನೆ ಮಾಡುವೆವೆಂದು ಯೋಗ್ಯ ಕಾರ್ಯಕ್ರಮವನ್ನು ರೂಪಿಸಿ ಜನತೆಯಿಂದ ಆ ಎರಡು ಲಕ್ಷ ರೂಪಾಯಿಗಳನ್ನು ಪಡೆದು ವಿನಿಯೋಗಿಸಲು ಸರಕಾರ ಆಲೋಚಿಸಬಾರದೇಕೆ?

ವ್ಯವಸಾಯ ಇಲಾಖೆಯಾಗಲೀ, ಜಾನುವಾರು ಇಲಾಖೆಯಾಗಲೀ ಇಂದಿನಂತೆ ಕುಂಟುತ್ತಾ ನಡೆಯದೆ ರೈತನ ಸಮಸ್ಯೆಗಳನ್ನು ಎತ್ತಿಕೊಂಡು ಯೋಗ್ಯ ರೀತಿ ಬಗೆಹರಿಸಬೇಕಾಗಿದೆ. ಕೊಡಗಿನಿಂದ ಜಾನುವಾರುಗಳಿಗಾಗಿ ಹೊರಗೆ ಹರಿಯುವ ಹಣದ ಪ್ರವಾಹವು ನಾವು ಹೊರಗೆ ಕೊಡುವ ಬತ್ತದಿಂದ ಬರುವ ಲಾಭವನ್ನು ಸೂರೆಗೊಳ್ಳುತ್ತಿದೆ ಎಂಬುದರಲ್ಲಿ ಸಂಶಯವಿಲ್ಲ. ಈ ರೀತಿಯ ವ್ಯಯ ಒಂದೆಡೆ ಜಾನುವಾರುಗಳ ಹೆಸರಿನಿಂದಾದರೆ ನಮ್ಮದು ಉಳುವರ ಪ್ರಾಂತವೆನ್ನುವದರಿಂದ ಲಾಭವಿರಲಾರದು!

ಇವೆಲ್ಲವುಗಳಿಗೂ ಕಳಶವಿಟ್ಟಂತೆ ರೈತನು ತೃಪ್ತನಾಗದಿದ್ದರೆ ಹೆಚ್ಚಿಗೆ ಬೆಳೆ ಬೆಳೆಯಲಾರನು. ಆದ್ದರಿಂದ ಆತನ ಜೀವನವು ಹಗುರವಾಗುವಂತೆ ಮಾಡುವದು ಸರಕಾರದ ಕರ್ತವ್ಯ. ಆತನ ಬೆಳಸಿಗೆ ಯೋಗ್ಯ ಬೆಲೆ ದೊರೆಯುವಂತೆಯೂ ಆತನ ಜೀವನಾವಶ್ಯಕ ವಸ್ತುಗಳು ನ್ಯಾಯವಾದ ಬೆಲೆಗೆ ದೊರೆಯುವಂತೆಯೂ ಸರಕಾರವು ಎಚ್ಚರಿಕೆ ವಹಿಸಬೇಕು. ಸರಕಾರವು ಈ ವಿಷಯವನ್ನು ಗಮನಿಸಲಿ. ಗಮನಿಸಿದರೆ ದುಃಖಿತ ನೆರೆ ಪ್ರಾಂತಗಳ ಕಣ್ಣೀರನ್ನು ಯಶಸ್ವಿ ರೀತಿಯಿಂದ ಒರೆಸಲು ಕೊಡಗು ಹೆಚ್ಚು ಶಕ್ತವಾಗುವದು.

ವರ್ತಮಾನ.

ಐ. ಎ. ಎಸ್. (ಇಂಡಿಯನ್ ಎಡ್ಮಿನಿಸ್ಟ್ರೇಟಿವ್ ಸರ್ವಿಸ್) ಪರೀಕ್ಷೆಗೆ ಕೂತ ಶ್ರೀಮತಿ ಚೋನಿರ ಬೆಳ್ಯಪ್ಪ ಮುತ್ತಮ್ಮನವರು ಪರೀಕ್ಷೆಗೆ ಕೂತ ೨೦೦೦ ಜನರಲ್ಲಿ ಮೂರನೆ ಸ್ಥಾನವನ್ನು ಪಡೆದು ತೇರ್ಗಡೆಯಾಗಿರುವರು. ಈ ಪರೀಕ್ಷೆಯಲ್ಲಿ ಪಾಸಾದ ಹಿಂದೂದೇಶದ ಮಹಿಳೆಯರಲ್ಲಿ ಇವರೇ ಮೊದಲಿಗರು.

ಶ್ರೀ ನಡಿಕೇರಿಯಂಡ ಎಸ್. ದೇವಯ್ಯನವರು ಎ. ಎಂ. ಐ. ಈ. (ಎಸೋಸಿಯೇಟೆಡ್ ಮೆಂಬರ್ ಆಫ್ ಇಂಡಿಯನ್ ಇಂಜಿನಿಯರಿಂಗ್ – ಕಲ್ಕತ್ತಾ) ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು.

ಬೇಸನೂರು ಗ್ರಾಮದ ಶ್ರೀ ಪೋಡಮಾಡ ಚಂಗಪ್ಪನವರ ಪತ್ನಿಯವರು ತಾ. ೧೧-೭-೪೯ರಲ್ಲಿ ಸ್ವರ್ಗಸ್ಥರಾದರು.

ತಾರೀಕು ೮ರಲ್ಲಿ ಅಮೃತಸರದಲ್ಲಿ ೧೨೩ನೇ ಇನ್‌ಫೆಂಟ್ರಿ ಬ್ರಿಗೇಡಿನ ಆಶ್ರಯದಲ್ಲಿ ನಡೆದ ವಾಲೀ ಬಾಲ್ ಪಂದ್ಯಾಟದಲ್ಲಿ ೩೭ನೇ ಕೊಡಗು ಏಂಟಿ ಟೇಂಕ್ ರಿಜಿಮೆಂಟಿನ ಟೀಮಿನವರು ಆ ಇಡೀ ಬ್ರಿಗೇಡಿನ ಟೀಮುಗಳನ್ನು ಸೋಲಿಸಿ ಶೀಲ್ಡನ್ನು ಗೆದ್ದಿರುವರು.

ಇಂದು ಕೊಡಗು ಜಿಲ್ಲಾ ಬೋರ್ಡಿನ ಕೈಯಲ್ಲಿರುವ ವಿದ್ಯಾ ವಿಭಾಗವನ್ನು ಸರಕಾರವು ಕೇಳಿರುವಂತೆ ಸರಕಾರಕ್ಕೆ ವಹಿಸಿಕೊಡಬೇಕೇ ಯಾ ಬೇಡವೇ ಎಂಬ ವಿಚಾರ ವಿವೇಚಿಸಲು ತಾ. ೨೩-೭-೪೯ರಲ್ಲಿ ಕೊಡಗು ಜಿಲ್ಲಾ ಬೋರ್ಡಿನ ಮೀಟಿಂಗು ಪ್ರೆಸಿಡೆಂಟರಾದ ಶ್ರೀ ಐ. ಪಿ. ಕಾರ್ಯಪ್ಪನವರ ಅಧ್ಯಕ್ಷತೆಯಲ್ಲಿ ನಡೆದು ಸರಕಾರಕ್ಕೆ ವಹಿಸಿಕೊಡಬಾರದೆಂದು ಬಹುಮತದಿಂದ ನಿರ್ಣಯವಾಯಿತೆಂದು ತಿಳಿದುಬಂದಿದೆ.

ಕೊಡಗು ಸರಕಾರಿ ಕಾಲೇಜು ಯೂನಿಯನಿನ ಜನರಲ್ ಸೆಕ್ರೆಟರಿಯಾಗಿ ಶ್ರೀ ಎಂ. ಎಂ. ಪೂಣಚ್ಚನವರೂ, ಜಾಯಿಂಟ್ ಸೆಕ್ರೆಟರಿಯಾಗಿ ಶ್ರೀಮತಿ ಬಿ. ಕೆ. ಮುತ್ತಮ್ಮನವರೂ ಆರಿಸಲ್ಪಟ್ಟಿರುವರು. ಯೂನಿಯನಿನ ಉದ್ಘಾಟನ ಭಾಷಣವನ್ನು ಚೀಫ್ ಕಮಿಷನರಾದ ಶ್ರೀ. ಸಿ. ಟಿ. ಮೊದಲಿಯಾರ್‌ರವರು ಈ ದಿನ ಮಾಡಿದರು.

ತಿದ್ದುಪಡಿ.

ಕಳೆದ ವಾರ ಪ್ರಕಟವಾಗಿದ್ದ ರೂ. ೯೦೦ ಗಳ ಖಾಲಿ ಕಾಗದ ಇನ್ಶೂರನ್ಸು ಕಳುಹಿಸಿದ್ದ ಶ್ರೀ ಎಂ. ಎಸ್. ನಂಜಪ್ಪನವರು ಕೂರ್ಗ್ ಜನರಲ್ ಇಂಡಸ್ಟ್ರೀಸ್ ಕಂಪೆನಿಗೆ ಸಂಬಂಧಿಸಿಲ್ಲವೆಂದೂ ಬದಲು ಅವರು ಫ್ರೇಜರ್‌ಪೇಟೆಯಲ್ಲಿ ಸರ್ವೆ ತರಬೇತಿನಲ್ಲಿರುವರೆಂದೂ ಮೇಲಿನ ಕಂಪೆನಿ ಮೇನೇಜಿಂಗ್ ಡೈರೆಕ್ಟರವರು ತಿಳಿಸುತ್ತಾರೆ. ಸಂ.

ADVERTISEMENT.

Sturdy Orange trees for Sale. Raised from selected seed Price Rs 20 per 100.

Apply:— Consolidated Coffee Estates (1943) Pollibetta.

'ಕೆಚ್ಚೆದೆಗೆ ಜಯಮಾಲೆ; ಅಂಜುವಗೆ ಅವನತಿ.'

ಹಿಂದೂಸ್ಥಾನದ ಮುಖ್ಯ ಮಂತ್ರಿಗಳಾದ ಪಂ. ಜವಾಹರ್‌ಲಾಲ್ ನೆಹರೂರವರು ತಾ. ೧೪ನೇ ದಿವಸ ಕಲಕತ್ತೆಯಲ್ಲಿ ಪ್ರಚಂಡ ಜನ ಸಮುದಾಯದ ಎದುರಿನಲ್ಲಿ ೨ ಗಂಟೆಗಳ ವರೆಗೆ ಮಾತಾಡಿದರು. ಆ ಸಭೆಗೆ ಹತ್ತು ಲಕ್ಷ ಜನರು ಕೂಡಿದ್ದರಂತೆ. ಮೈಲುಗಟ್ಟಲೆ ಜನರು ಎರಡು ಬದಿಗಳಲ್ಲಿ ನಿಂತುಕೊಂಡು ಅವರನ್ನು ಸ್ವಾಗತಿಸಿದರು. ಮತ್ತು ಅವರ ಆಗಮನದಿಂದ ತಮಗಾದ ಆನಂದವನ್ನು ಹರ್ಷೋದ್ಗಾರಗಳಿಂದ ವ್ಯಕ್ತಮಾಡಿದರು.

ಕಲಕತ್ತೆಯಲ್ಲಿದ್ದಾಗ ವಿವಿಧ ಪಕ್ಷದವರು ನೆಹರೂರವರನ್ನು ಕಂಡು ತಮ್ಮ ದೂರುಗಳನ್ನು ಅಥವಾ ಸಲಹೆಗಳನ್ನು ಕೊಟ್ಟರು. ಪಂಡಿತರು ತಾವು ಕಂಡ, ಕೇಳಿದ ಸಂಗತಿಗಳ ವರದಿಯನ್ನು ತಾ. ೧೬ನೇ ದಿವಸ ಕೂಡಿದ ಕಾಂಗ್ರೆಸ್ ಕಾರ್ಯಕಾರಿ ಸಭೆಯ ಮುಂದೆ ಇಟ್ಟರು.

ಅನಿಷ್ಟ ಘಟನೆಗಳು.

ನೆಹರೂರವರು ಅಲ್ಲಿ ಇದ್ದಾಗಲೇ, 'ತಿರುಗಿ ಹೋಗಿರಿ' ಎಂಬ ಕೂಗೂ ಅವರಿಗೆ ಕೇಳುವಂತೆ ಕೆಲವರು ನುಡಿದರು. ಸಭೆಯಲ್ಲಿ ಗದ್ದಲವಂತೂ ನಡೆದೇ ನಡೆಯಿತು. ಬಾಂಬು ಒಗೆಯಲ್ಪಟ್ಟಿತು. ಅದರಿಂದ ಒಬ್ಬನು ಮರಣಹೊಂದಿದನೆಂದೂ ಕೆಲವರಿಗೆ ಗಾಯವಾಯಿತೆಂದೂ ವರದಿಯಾಗಿದೆ. ಸರಕಾರೀ ಭವನದ ಮುಂದೆ ಯಾವನೋ ಒಬ್ಬನು ಕೈಯಲ್ಲಿ ಪಿಸ್ತೂಲು ಹಿಡಿದುಕೊಂಡು ನಿಂತಿದ್ದನಂತೆ. ಸಕಾಲದಲ್ಲಿ ಅವನನ್ನು ಬಂಧಿಸಿದರು.

ಹತ್ತು ಲಕ್ಷ ಜನರು.

ನೆಹರೂರವರ ಭಾಷಣಕ್ಕೆ ೧೦ ಲಕ್ಷ ಜನ ಸೇರಿದ್ದರೆಂಬ ಮಾತು ಬಹಳ ಮಹತ್ವದ್ದಾಗಿದೆ. ಪಂಡಿತರು ಅಂಥಾ ಲೋಕಪ್ರಿಯರೇ ಆಗಿದ್ದಾರೆ. ಅವರು ಎಲ್ಲಿ ಹೋದರೂ ಈ ತರದ ಪ್ರೇಮಾದರಗಳು ಅವರನ್ನು ಕಾಯ್ದಿರುತ್ತವೆ.

ಆದರೆ ಕಲಕತ್ತೆಯು ಅವರ ಭಾಷಣಕ್ಕೆ ಎಷ್ಟು ಜನ ಕೂಡುವರೆಂಬ ಮಾತನ್ನು ಸರ್ವರೂ ಬಹು ಕುತೂಹಲದಿಂದ ನೋಡುತ್ತಿದ್ದರು. ತಾ. ೧೫ನೇ ದಿವಸ ಆ ಮಾತನ್ನು ನೋಡಲು ಎಲ್ಲರೂ ವರ್ತಮಾನ ಪತ್ರಿಕೆಯಲ್ಲಿ ಹುಡುಕುತ್ತಿದ್ದರೆ ಆದರಲ್ಲಿ ಆಶ್ಚರ್ಯವೇನೂ ಇಲ್ಲ. ಅಲ್ಲಿಯ ಸಮತವಾದಿಗಳೇ ಮೊದಲಾದವರು ಪಂಡಿತರ ಭಾಷಣಕ್ಕೆ ಜನರು ಬಹಿಷ್ಕಾರ ಹಾಕಬೇಕೆಂದು ಪ್ರಚಾರಮಾಡಿದ್ದರು. ಅವರ ಮಾತಿಗೆ ಅಲ್ಲಿ ಎಷ್ಟು ಬೆಲೆಯಿದೆಯೆಂಬ ಮಾತು ಪಂಡಿತರ ಸಭೆಗೆ ಕೂಡಿದ ಜನರ ಸಂಖ್ಯೆಯಿಂದ ಗೊತ್ತಾಗುವುದಿತ್ತಾದುದರಿಂದ ಆ ಸಂಗತಿಯನ್ನು ತಿಳಿದುಕೊಳ್ಳಲು ಸರ್ವರೂ ಉತ್ಸುಕರಾಗಿದ್ದರು.

ಅವರು ಈ ರೀತಿ ಪ್ರಚಾರ ಮಾಡಿದ್ದರೂ ಜವಾಹರಲಾಲರ ಭಾಷಣವನ್ನು ಕೇಳಲು ಅಷ್ಟೊಂದು ಪ್ರಚಂಡ ಜನ ಪ್ರವಾಹವು ಸಭಾ ಸ್ಥಳಕ್ಕೆ ಹರಿದು ಬಂದದು ಅಲ್ಲಿಯ ವಾತಾವರಣದಲ್ಲಿ ಹುದುಗಿಕೊಂಡಿದ್ದ ನಿಜ ಸ್ಥಿತಿಯ ನಿದರ್ಶಕವನ್ನು ಮಾಡಿಕೊಡದೆ ಇರದು. ಸಭೆಯು ಪ್ರಾರಂಭವಾಗುವ ಐದು ಗಂಟೆಗಳಿಂದ ಜನರು ಬಂದು ಸಭಾಗೃಹದಲ್ಲಿ ಕೂಡಹತ್ತಿದ್ದರು. ಮಳೆಯು ಬಂದರೂ ಅಲ್ಲಿಂದ ಅವರು ಕದಲಿದ್ದಿಲ್ಲ.

ವಿರುದ್ಧ ಪಕ್ಷದ ಸಭೆಗೆ ಒಂದು ಸಾವಿರ ಜನರು ಕೂಡಿದ್ದರಂತೆ. ೧ ಸಾವಿರ ಎಲ್ಲಿ? ೧೦ ಲಕ್ಷ ಜನರೆಲ್ಲಿ? ಈ ಸಂಖ್ಯೆಯ ಮೇಲಿಂದ ಅಲ್ಲಿಯ ಜನರಲ್ಲಿರುವ ಅಭಿಪ್ರಾಯಗಳನ್ನು ಕಟ್ಟಿದರೆ ತಪ್ಪಾಗಬಹುದೇ? ಸಮಾಜವಾದಿಗಳ ಸಭೆಗೆ ಹೋದವರು ಹೆಚ್ಚಾಗಿ ಸುಶಿಕ್ಷಿತರು ಮತ್ತು ಹೆಚ್ಚು ಕಡಿಮೆ ಪಂಗಡಗಳ ಅರ್ಜಿಮೇಲಾಟಗಳ ಅಭಿಪ್ರಾಯವುಳ್ಳವರೇ ಇರಬೇಕು. ಮತ್ತು ಅವರ ಮುಖಂಡರು ಅಥವಾ ಎರಡನೇಯವರ ಮತದಲ್ಲಿ ವ್ಯತ್ಯಾಸವನ್ನುಂಟುಮಾಡಬಲ್ಲಂತವರೂ ಆಗಿರಬೇಕು. ಎಲ್ಲರೂ ಮುಖಂಡರಾಗದಿದ್ದರೂ ಅವರಿಗೆ ಸಹಾಯಮಾಡುವಂಥಾವರಾದರೂ ಆಗಿರಬೇಕು. ಶರಶ್ಚಂದ್ರರ ವಿಜಯಕ್ಕೆ ಇವರಂತವರು ಪ್ರಯತ್ನ ಮಾಡಿರಬೇಕೆಂಬುವದರಲ್ಲಿ ಯಾವ ಸಂಶಯವೂ ಇಲ್ಲ.

ಹಾಗಾದರೆ ಉಳಿದವರ ಸ್ಥಿತಿಯೇನು? ನೆಹರೂರವರ ಸಭೆಗೆ ಬಂದಂಥಾ ಹತ್ತು ಲಕ್ಷ ಜನರೆಲ್ಲರೂ ಕಾಂಗ್ರೆಸ್ ತತ್ವ, ಇಂದಿನ ಸರಕಾರದ ಕಾರ್ಯದ ಮಹತ್ವಗಳನ್ನು ತಿಳಿದುಕೊಂಡವರೇ ಆಗಿದ್ದರೇ? ಹಾಗೆ ಹೇಳಲೂ ಬರಲಾರದು. ಅವರಲ್ಲಿ ಯಾವ ವಿಷಯದಲ್ಲಿಯೂ ನಿಶ್ಚಿತ ಜ್ಞಾನವಿಲ್ಲದವರೇ ಹೆಚ್ಚಾಗಿದ್ದಾರೆಂದು ಹೇಳಬೇಕಾಗುವದು. ಇಂಥಾ ಜನರು ಬಲವಾಗಿ ಯಾರು ಯಾವಕಡೆಗೆ ಎಳೆಯುತ್ತಾರೋ ಆ ಕಡೆಗೇ ಹೋಗುತ್ತಿರುತ್ತಾರೆ. ಶರಶ್ಚಂದ್ರರ ಪಕ್ಷದವರು ಅಗ ಅತ್ತ ಎಳೆದರು. ಅದಕಾರಣ ಅವರು ಕಾಂಗ್ರೆಸ್ಸಿನ ವಿರುದ್ಧ ತಮ್ಮ ಮತಗಳನ್ನು ಕೊಟ್ಟರು. ಈಗ ನೆಹರೂರವರಂಥಾ ಮಹಾ ವ್ಯಕ್ತಿಯು ಬಂದದ್ದನ್ನು ಕಂಡು, ಆ ಆಕರ್ಷಣವನ್ನು ಎದುರಿಸಲಾರದೆ ಸಮಾಜವಾದಿಗಳೇ ಮೊದಲಾದವರು ಹೇಳಿದ ಮಾತುಗಳನ್ನು ಕೇಳದೆ ಈ ಸಭೆಗೆ ಬಂದರು. ಅದ್ದರಿಂದ ಜನತೆಯನ್ನು ಯಾವದೊಂದು ಪಕ್ಷಕ್ಕೆ ಎಳೆಯುಕೊಳ್ಳುವದು ಮುಖಂಡರ ಮತ್ತು ಅವರ ಪ್ರಚಾರ ಕಾರ್ಯದ ಅಲ್ಲದೆ ಅವರ ಶಕ್ತಿಯ ಮೇಲೆ ಅವಲಂಬಿಸಿದೆಯೆಂದು ಹೇಳದೆ ಗತ್ಯಂತರವಿಲ್ಲ.

ಪಂಡಿತರ ಧೈರ್ಯ.

ನಿಜವಾದ ಮುಖಂಡನು ಎಂತವನಿರಬೇಕಾಗುವದು? ಮತ್ತು ಅವನಲ್ಲಿ ಎಂಥಾ ಗುಣಗಳು ಮತ್ತು ಸಿದ್ಧತೆಯಿರಬೇಕಾಗುವದು ಎಂಬುದಕ್ಕೆ ಪಂಡಿತರೇ ಸಾಕ್ಷಿ. ದೊಡ್ಡ ಮನುಷ್ಯನಾಗುವದು ಸುರಕ್ಷಿತ ಮಾತಾಗಲಿಲ್ಲ. ಇಂಥಾ ಗಂಡಾಂತರಗಳು ಬಂದಾಗ್ಯೂ ಅವುಗಳಿಗೆ ಬೆದರದೆ ಎದೆಗೊಡುವವನೇ ತನ್ನ ಮುಖಂಡತ್ವವನ್ನು ಉಳಿಸಿಕೊಳ್ಳಬಲ್ಲನು. ಕಲಕತ್ತೆಯಲ್ಲಿ ಇಷ್ಟೊಂದು ಗಲಭೆಗಳು ಕೋಲಾಹಲವು ನಡೆದಿದ್ದರೂ ಕಾಂಗ್ರೆಸ್ ಮುಖಂಡರು ಹೊರಗೆ ಬರದೆ ರಕ್ಷಣೆಯ ನಡುವೆ ಇರುತ್ತಿದ್ದರೆಂದು ಕಲಕತ್ತದ ಪತ್ರಿಕೆಗಳು ಬರೆದವು.

ಎಲ್ಲರಿಗೂ ಹಾಗೆ ಹೊರಗೆಬರಲು ಸಾಧ್ಯವಿರುವುದಿಲ್ಲ. ಬಂದರೂ ಅವರಂದ ಪರಿಸ್ಥಿತಿಯನ್ನು ಕೈಯಲ್ಲಿ ತೆಗೆದುಕೊಂಡು ಸುಧಾರಿಸುವ ಶಕ್ತಿಯಿರುವುದಿಲ್ಲ, ಅಂತಹ ಶಕ್ತಿಯುಳ್ಳವನೇ ಮುಂದೆ ಬರುತ್ತಾನೆ ಮತ್ತು ಬಂದದ್ದಕ್ಕೆ ಎದೆಗೊಟ್ಟು ನಿಲ್ಲುತ್ತಾನೆ.

ಆ ಮಾದರಿಯ ಮುಖಂಡರಲ್ಲಿ ಪಂಡಿತ ಜವಾಹರಲಾಲರು ಅಗ್ರಗಣ್ಯರಾಗಿದ್ದಾರೆ. ಅವರು ಧೈರ್ಯದ ಮೂರ್ತಿಯೇ ಆಗಿದ್ದಾರೆ. ಯಶಸ್ಸು ಯಾರು ಧೈರ್ಯದಿಂದ ಮುಂದೆ ಬಂದು ಕಾರ್ಯ ಮಾಡುತ್ತಾರೋ ಅವರ ಕೊರಳಿಗೆ ಅಂಜುಬುರುಕರ ಕೊರಳಿಗೆ ಮಾಲೆಯು ಕ್ವಚಿತ್ತಾಗಿ ಬೀಳುತ್ತದೆ ಎಂಬುದು ಜವಾಹರಲಾಲರ ಸಿದ್ಧಾಂತದ ಮಾತಾಗಿದೆ.

ಸಭೆಯಲ್ಲಿ ಕೋಲಾಹಲವಾದರೂ, ಬಾಂಬು ಒಗೆಯಲ್ಪಟ್ಟರೂ, ತಿರುಗಿ ಹೋಗಿರಿ ಎಂದು ಜನರು ಒದರಿದರೂ, ತಮ್ಮ ಮೇಲೆ ಗುಂಡು ಹಾರಿಸುವ ಸಿದ್ಧತೆಯಲ್ಲಿ ಓರ್ವನಿದ್ದ ಸುದ್ದಿಯು ಅವರಿಗೆ ಗೊತ್ತಾದರೂ ಜವಾಹರಲಾಲರು ಜುಮ್ಮೆನ್ನಲಿಲ್ಲ. ಜನರಲ್ಲಿ ಉಂಟಾದ ಗದ್ದಲವನ್ನು ಜನರೇ ಎದುರಿಸಿ ಬಗೆಹರಿಸಿಕೊಳ್ಳಬೇಕೆಂದು ಹೇಳಿದರು. ಅದೇ ರೀತಿಯಲ್ಲಿ ಆ ಒದರಾಟವು ಶಾಂತವಾಯಿತು.

ಹೀಗೆ ಧೈರ್ಯಮಾಡುವವರಿಗೆ ಗುಂಡುಗಳು ತಾಕುವುದಿಲ್ಲ. ಒಂದು ವೇಳೆ ತಾಗಿದರೂ ಆ ಬಗ್ಗೆ ಅವರು ಚಿಂತೆ ಮಾಡುವುದಿಲ್ಲ. ಅಂತೆಯೇ ನಾವು ಅವರ ಕಡೆಗೆ ನಮ್ಮ ಮುಖಂಡತ್ವವನ್ನು ಒಪ್ಪಿಸಿದ್ದೇವೆ.

ಮಾರ್ಗ ದರ್ಶನ.

ಇನ್ನು ಜವಾಹರಲಾಲರು ಕಲಕತ್ತೆಯ ಜನರಿಗೆ ಬಂಗಾಲ ಪ್ರಾಂತದವರಿಗೆ, ತದ್ವಾರಾ ಇಡಿ ಹಿಂದುಸ್ಥಾನಕ್ಕೆ, ಸಾಮಾನ್ಯವಾಗಿ ಕಾಂಗ್ರೆಸಿಗರಿಗೆ, ಕಮ್ಯೂನಿಸ್ಟರು ಸಮತಾವಾದಿಗಳು ಮುಂತಾದವರಿಗೆ ತಮ್ಮ ಭಾಷಣದಲ್ಲಿ ಮತ್ತು ಅಲ್ಲಿ ಅವರು ಬೇರೆ ಬೇರೆ ಜನರ ಗುಂಪುಗಳಿಗೆ ಮತ್ತು ವ್ಯಕ್ತಿಗಳಿಗೆ ಭೇಟಿಕೊಟ್ಟ ಕಾಲಕ್ಕೆ ಮಾರ್ಗದರ್ಶನ ಮಾಡಿಕೊಟ್ಟಿದ್ದಾರೆ.

ಕಲಕತ್ತೆಯ ಜನರಿಗೆ "ಇಂತಹ ಗುಂಡು ಬಾಂಬುಗಳಿಗೆ ಹೆದರಬೇಡಿರಿ' ಎಂದು ಹೇಳಿದ್ದಾರೆ. ಈ ಮಾತು ಸಾಮಾನ್ಯವಾದುದಲ್ಲ. ಎಂತಹ ಪರಿಸ್ಥಿತಿಯಲ್ಲಿಯೂ ಮನುಷ್ಯನು ಬೆದರದೆ ಹಿಡಿದ ಕಾರ್ಯದೊಡನೆ ಮುಂದುವರಿದರೆ ಮಾತ್ರ ಅದರಲ್ಲಿ ಅವನಿಗೆ ಯಶಸ್ಸು ದೊರೆಯುವುದು ಎಂಬ ಮಾತನ್ನು ಆ ಮೂಲಕ ಅವರು ವ್ಯಕ್ತಮಾಡಿದ್ದಾರೆ. ಮತ್ತು ಆ ಮಾತನ್ನು ಅವರು ಕೇವಲ ಪರರಿಗಾಗಿ ಹೇಳಿಲ್ಲ, ಸ್ವತಃ ತಾವು ಅದರಂತೆ ನಡೆದು ತೋರಿಸಿದ್ದಾರೆ. ಅಂತೆಯೇ ಇಂಥವರ ಮಾತುಗಳ ಪರಿಣಾಮವು ಆ ರೀತಿ ಜನರ ಮೇಲೆ ಆಗುತ್ತಿರುತ್ತದೆ. ಬಂಗಾಲ ಪ್ರಾಂತದವರಿಗಾಗಿ 'ಇಂದಿನ ಸರಕಾರವೆಂದರೇನು? ಅದರಲ್ಲಿ ಯಾರು ಇದ್ದಾರೆ? ಏಕೆ ಹಾಗೆ ಮಾಡುತ್ತಿದ್ದಾರೆ? ಅವರೊಡನೆ ಸಹಕರಿಸುವದರಲ್ಲಿ ಏನು ಮಹತ್ವವಿದೆ?' ಎಂಬ ಮಾತುಗಳ ಇಂಗಿತವನ್ನು ತಿಳಿಸಿಹೇಳಿದ್ದಾರೆ.

ಹಿಂದುಸ್ಥಾನದವರಿಗೂ ಸಾಮಾನ್ಯವಾಗಿ ಅವರು ಮಾರ್ಗದರ್ಶನ ಮಾಡುವುದನ್ನು ಮರೆತಿಲ್ಲ. ದೇಶದಲ್ಲಿ ಇಂದು ಎಂತಹ ಶಕ್ತಿಗಳು ಯಾವ ರೀತಿಯಿಂದ ಕಾರ್ಯ ಮಾಡುತ್ತಿವೆ ಅವುಗಳ ಬಗ್ಗೆ ಸಾವಧಾನರಾಗಿದ್ದು ಯೋಗ್ಯ ದಾರಿಯನ್ನು ಹಿಡಿಯುವ ಹೊಣೆಯು ಹಿಂದೀಯರ ಮೇಲೆ ಎಷ್ಟರಮಟ್ಟಿಗೆ ಇದೆ ಎಂಬುದನ್ನು ಅವರು ಸ್ಪಷ್ಟೀಕರಿಸಿದ್ದಾರೆ.

ಕಾಂಗ್ರೆಸ್ಸಿಗರನ್ನು ಅವರು ಚೆನ್ನಾಗಿ ಎಚ್ಚರಿಸಿದ್ದಾರೆ. ಜನರು ಈ ಸಂಸ್ಥೆಯ ಬಗ್ಗೆ ಅಪ್ರೀತಿಯನ್ನು ತಳೆದಿರುವ ಕಾರಣಗಳನ್ನು ಶೋಧಿಸಿ ತಿಳಿದುಕೊಂಡು, ಅದನ್ನು ನಿವಾರಿಸುವ ಅವಶ್ಯ ಕಾರ್ಯವನ್ನು ಮಾಡಲು ಅವರು ಮರೆಯಬಾರದಾಗಿ ಹೇಳಿದ್ದಾರೆ.

ಕಮ್ಯುನಿಸ್ಟರು ಮತ್ತು ಸಮತಾವಾದಿಗಳೇ ಮೊದಲಾದ ಇತರರಿಗೆ ಅವರ ಕರ್ತವ್ಯದ ಬಗ್ಗೆ ಸ್ಪಷ್ಟ ಎಚ್ಚರಿಕೆಕೊಟ್ಟಿದ್ದಾರೆ. ತಮ್ಮ ತಮ್ಮ ವಿಚಾರಗಳ ಕಡೆಗೆ ಜನರನ್ನು ತಿರುಗಿಸುವ ಸ್ವಾತಂತ್ರ್ಯವು ಎಲ್ಲರಿಗೂ ಇದ್ದರೂ ಅದನ್ನು ಕೇವಲ ಶಾಂತಿ ಮತ್ತು ಯೋಗ್ಯ ಉಪಾಯಗಳಿಂದ ಸಾಧಿಸಿಕೊಳ್ಳುವುದು ಯೋಗ್ಯವಾಗಿರುವುದೆಂದೂ ಮತ್ತು ಹಿಂಸೆ ಅತ್ಯಾಚಾರಗಳಿಂದ ಆ ಕಾರ್ಯವು ಸಾಧಿಸಲಾರದೆಂದೂ ಅವರು ಹೇಳಿದ್ದಾರೆ.

ಪಂಡಿತರ ಈ ಮಾರ್ಗದರ್ಶನದಂತೆ ಕಲ್ಕತ್ತೆಯವರು ಮತ್ತು ಇಡಿ ಹಿಂದುಸ್ಥಾನದವರು ನಡೆದು ಇಂದಿನ ಪರಿಸ್ಥಿತಿಯಿಂದ ಪಾರಾಗುವುದು ಅವಶ್ಯವಿದೆ. ಇಷ್ಟರಿಂದಲೂ ಜನತೆಯು ಎಚ್ಚರಾಗಿ ಜಾಣರಾಗದಿದ್ದರೆ ಸರಕಾರದ ಕೈಯಲ್ಲಿ ಬೇರೆ ಉಪಾಯಗಳು ಇದ್ದೇ ಇವೆ.

'ಜೈಹಿಂದ್'

ಅಮೆರಿಕಾದ ಪ್ರಸಿದ್ಧ ಇಂಜಿನಿಯರ್‌ಗೆ ಆಹ್ವಾನ.

ಭಾರತದಲ್ಲಿ ಅಭಿವೃದ್ಧಿ ಕಾರ್ಯಗಳು ಯಾವ ರೀತಿ ಆಗಬೇಕು ಮತ್ತು ದೇಶದ ಸಾಧನ ಸಂಪತ್ತನ್ನು ವಿನಿಯೋಗಿಸಿಕೊಳ್ಳುವದು ಹೇಗೆ ಎಂಬುವನ್ನು ಪರಿಶೀಲಿಸಿ ಭಾರತ ಸರ್ಕಾರಕ್ಕೆ ಸಲಹೆಮಾಡಲು ಭಾರತ ಪ್ರಧಾನಿ ನೆಹರೂರವರು ಪ್ರಸಿದ್ಧ ಅಮೆರಿಕಾ ಎಂಜನಿಯರಾದ ಮಿ. ಎಸ್. ಎ. ಟ್ರೋನ್‌ರವರನ್ನು ಆಹ್ವಾನಿಸಿದ್ದಾರೆ.

ಅವರೊಡನೆ ಚರ್ಚಿಸಬೇಕಾದ ಅಂಶಗಳನ್ನು ನಿರ್ಧರಿಸಲು ಡಾ. ಮುಖರ್ಜಿ, ಶ್ರೀ ಎನ್. ಜಿ. ಐಯ್ಯಂಗಾರ್, ಶ್ರೀ ಗಾಡ್ಗಿಲ್, ಶ್ರೀ ನಿಯೋಗಿ ಮತ್ತು ಶ್ರೀ ಜೈರಾಂದಾಸ್ ದೌಲತ್‌ರಾಂರನ್ನುಳ್ಳ ಮಂತ್ರಿಮಂಡಲದ ಉಪಸಮಿತಿ ನೇಮಕವಾಗಿದೆ.

ರೈತನ ಪ್ರಪಂಚ.

ಕೇಂದ್ರ ಸರಕಾರದ ಬೋನಸ್ಸು

ಲೇಖಕ:—ಶ್ರೀ ಬಿ. ಎಂ. ಕಾರ್ಯಪ್ಪ.

ಕೊಡಗಿನ ರೈತರಾದ ನಾವು ಕಳೆದ ವರ್ಷ ಹೊರಪ್ರಾಂತಗಳಿಗೆ ಕೊಟ್ಟ ನಮ್ಮ ಉಳುವರಿ ಬತ್ತ ಸುಮಾರು ಒಂಭತ್ತುಸಾವಿರ ಟನ್ನುಗಳಿಗೆ ಬೋನಸ್ಸಿನ ರೂಪದಲ್ಲಿ ಕೇಂದ್ರ ಸರಕಾರದಿಂದ ಎರಡು ಲಕ್ಷ ರೂಪಾಯಿಗಳು ದೊರೆತಿವೆಯಂತೆ. ಈ ಹಣವನ್ನು ಬೆಳೆ ಬೆಳೆಸಿದ ರೈತರಲ್ಲಿ ಹಂಚಬೇಕೆಂದು ಕೇಂದ್ರ ಸರಕಾರದ ಆಶಯವಿದೆಯೆಂದು ತಿಳಿಯಬರುತ್ತದೆ. ಈ ಹಣವನ್ನು ಯಾವ ರೀತಿ ಹಂಚಬೇಕೆಂಬುದನ್ನು ನಿರ್ಣಯಿಸಲು ಒಂದು ಸಮಿತಿಯು ನೇಮಕವಾಗಿದ್ದು ಆ ಸಮಿತಿಯು ಕೆಲವು ಸೂಚನೆಗಳನ್ನು ಮಾಡಿದೆಯಂತೆ. ಕೊಡಗಿನಲ್ಲಿ ವ್ಯವಸಾಯ ನಡೆಯುತ್ತಿರುವ ಸುಮಾರು ೩೮೦೦೦ ಎಕ್ರೆ ಭೂಮಿಗೆ ಪ್ರತಿ ಎಕ್ರೆಗೆ ಎರಡು ರೂಪಾಯಿಯಂತೆ ಕೊಡಬೇಕೆಂದೂ, ಬತ್ತದ ವಹಿವಾಟಿನಲ್ಲಿ ನಷ್ಟ ಹೊಂದಿದ ವ್ಯಾಪಾರಸ್ಥರಿಗಾಗಿ ರೂ. ೧೦೦೦೦ ಕೊಡಬೇಕೆಂದೂ ಉಳಿದ ಹಣದಿಂದ ಕೆಲವು ಟ್ರ್ಯಾಕ್ಟರುಗಳನ್ನು ತರಿಸಬೇಕೆಂದೂ ಅವರ ಸೂಚನೆ ಇದೆಯೆಂದು ವರ್ತಮಾನ. ಇದಲ್ಲದೆ ಕೆಲವು ಖಾಸಗಿ ಜನರು ಈ ಹಣದಿಂದ ಒಂದು ಲಕ್ಷ ಈಗ ಸ್ಥಾಪಿತವಾದ ಕಾಲೇಜಿಗೂ, ಒಂದು ಲಕ್ಷ ವೈದ್ಯ ಶಾಲೆಗೂ ಕೊಟ್ಟುಬಿಡಬೇಕೆಂದು ಸೂಚಿಸಿರುವರಂತೆ.

ಈ ಹಣ ಕೇಂದ್ರ ಸರಕಾರದಿಂದ ಕೊಡಗಿನ ರೈತರಿಗಾಗಿ ಕೊಡಲ್ಪಟ್ಟ ಬಹುಮಾನ ಧನವೆನ್ನಬಹುದು. ಇದನ್ನು ಕೊಟ್ಟ ಕೇಂದ್ರ ಸರಕಾರದ ಆಶಯವಾದರೂ ರೈತರಿಗೆ ಇದರಿಂದ ಹೆಚ್ಚಿನ ಪ್ರೋತ್ಸಾಹ ದೊರೆತು ಹೆಚ್ಚು ಬೆಳೆಯುವ ಆಸಕ್ತಿ ಅವರಲ್ಲಿ ಬರಬೇಕೆಂಬುದೇ ಆಗಿದೆ. ಈ ಹಣವನ್ನು ಪ್ರತಿ ಎಕ್ರೆಗೆ ಎರಡು ರೂಪಾಯಿಗಳಂತೆ ಹಂಚಿಬಿಡುವದರಿಂದ ಈ ಹಣದ ಸದುಪಯೋಗವಾಗಲಾರದು. ಹಾಗೆ ದೊರೆತ ಕಿಂಚಿತ್ ಹಣವು ಚಿಲ್ಲರೆ ಖರ್ಚಿಗಾಗಿ ವ್ಯಯವಾಗಿ ಅದರ ಯೋಚನೆಯೇ ಇಲ್ಲದಾಗುವದು. ಈ ಕಿಂಚಿತ್ ಹಣದಿಂದ ರೈತರಿಗಾದರೂ ಹೆಚ್ಚಿನ ಲಾಭವಾಗಲಾರದು. ಈ ಹಣವನ್ನು ಕೊಡಗಿನ ರೈತರಾದ ನಮ್ಮೆಲ್ಲರ ಸಾರ್ವಜನಿಕ ಹಿತಕ್ಕಾಗಿ ಯೋಗ್ಯ ರೀತಿ ವಿನಿಯೋಗ ಮಾಡಬೇಕು. ಈ ವರ್ಷ ನಾವು ಹೊರಪ್ರಾಂತಗಳಿಗೆ ಕೊಟ್ಟ ಸುಮಾರು ೧೫೦೦೦ ಟನ್ ಬತ್ತದ ಬಾಪ್ತು ಬರುವ ವರ್ಷ ಕೇಂದ್ರ ಸರಕಾರದಿಂದ ಸುಮಾರು ೪ ಲಕ್ಷ ರೂಪಾಯಿಗಳು ಬೋನಸ್ಸು ರೂಪದಲ್ಲಿ ದೊರೆಯಬಹುದೆಂದು ವಿಶ್ವಾಸನೀಯವಾಗಿ ತಿಳಿದು ಬಂದಿದೆ. ಈ ರೀತಿ ಕೇಂದ್ರದಿಂದ ದೊರೆತ ಹಣವನ್ನು ವಿಧಾಯಕವಾಗಿ ಕೊಡಗಿನ ವ್ಯವಸಾಯದ ಅಭಿವೃದ್ಧಿಗಾಗಿ ಉಪಯೋಗಿಸಿಕೊಳ್ಳುವದರಲ್ಲಿ ನಮ್ಮ ಜಾಣತನವಿದೆಯೇ ವಿನಹ ಅದನ್ನು ಹಂಚಿಕೊಳ್ಳುವದರಲ್ಲಿಲ್ಲ.

ಕೊಡಗಿನ ರೈತರಾದ ನಾವು ನಮಗೆ ಬರಲಿರುವ ಈ ಹಣವನ್ನು ಸರಕಾರಕ್ಕೆ ಕೆಲವು ನಿಶ್ಚಿತ ಕಾರಣಗಳಿಗಾಗಿ ಮುಂಖತ್ತಾಗಿ ಕೊಡಬೇಕು. ರೈತರಿಂದ ನಮ್ಮ ವ್ಯವಸಾಯದ ಪ್ರಗತಿಯಾಗಬೇಕಾದರೆ ದನಕರುಗಳು ಚೆನ್ನಾಗಿರಬೇಕು. ನಮ್ಮ ಆರೋಗ್ಯ ಸುಧಾರಿಸಬೇಕಾದರೆ ನಮಗೆ ಸಾಕಷ್ಟು ಹಾಲು ದೊರೆಯುವಂತಾಗಬೇಕು. ವ್ಯವಸಾಯದ ಬೆನ್ನೆಲುಬಾದ ದನಗಳ ಸ್ಥಿತಿಯನ್ನು ಸುಧಾರಿಸಲು ಈ ಹಣವನ್ನು ವಿನಿಯೋಗಿಸಬೇಕೆಂದು ನನ್ನ ವ್ಯಕ್ತಿಗತ ಅಭಿಪ್ರಾಯವಾಗಿದೆ. ಕೊಡಗಿನಿಂದ ದನ ಕರುಗಳಿಗಾಗಿ ಲಕ್ಷಾಂತರ ರೂಪಾಯಿ ಹೊರಗೆ ಹೋಗುತ್ತಿದೆ. ಕೊಡಗಿನ ರೈತನು ಸಾಕುಗಾರನಾಗಲು ಸ್ವಾದಿಷ್ಟ ಕಾರಣ ಆತನ ದನಕರುಗಳು ಚೆನ್ನಾಗಿಲ್ಲದಿರುವದೇ ಆಗಿದೆ. ಕೊಡಗಿನ ರೈತರು ನಮ್ಮ ಪಾಲಿಂದ ಈ ಎರಡು ಲಕ್ಷ ರೂಪಾಯಿಗಳನ್ನು ಸರಕಾರದ ವಶಕ್ಕೊಪ್ಪಿಸಬೇಕು. ಸರಕಾರವು ಈ ಉದ್ದೇಶ್ಯಕ್ಕೆ ತನ್ನ ಬೊಕ್ಕಸದಿಂದ ಅಷ್ಟೇ ಹಣ ಹಾಕಿ ಕೊಡಗಿನ ವಿವಿಧ ಕೇಂದ್ರಗಳಲ್ಲಿ ಆದರ್ಶ ಗೋಸಂವರ್ಧನಾಲಯಗಳನ್ನೂ, ಕ್ಷೀರಾಲಯಗಳನ್ನೂ ಏರ್ಪಡಿಸಿ ದನಗಳನ್ನು ಶಾಸ್ತ್ರೀಯ ರೀತಿಯಲ್ಲಿ ಸಾಕುವ, ತಳಿಯನ್ನು ಉತ್ತಮಗೊಳಿಸುವ, ಗ್ರಾಮ ಗ್ರಾಮಗಳಿಗೆ ಶುದ್ಧ ಹಾಲನ್ನು ಅಭಿವೃದ್ಧಿಪಡಿಸುವ ಸಲಕರಣೆಗಳನ್ನೂ, ಅವಶ್ಯ ಸಹಾಯವನ್ನೂ ಒದಗಿಸಿಕೊಡುವ ಏರ್ಪಾಡು ಮಾಡಬೇಕು. ಇದಕ್ಕೆ ಪ್ರತ್ಯೇಕ ಸಿಬ್ಬಂದಿಗಳನ್ನಿಟ್ಟು ಕಾರ್ಯಪ್ರವೃತ್ತರಾಗಬೇಕು. ಬರುವ ವರ್ಷ ಕೇಂದ್ರದಿಂದ ಸಹಾಯ ದೊರೆತರೆ ಲಾಭದಾಯಕವಾಗಿ ಅದನ್ನು ಉಪಯೋಗಿಸಿ ಈ ಕಾರ್ಯವನ್ನು ವಿಸ್ತರಿಸಿಕೊಳ್ಳಬಹುದು.

ಕೇಂದ್ರ ಸರಕಾರವು ಕೊಟ್ಟ ಈ ಹಣವನ್ನು ಆಸಕ್ತಿಯಿಂದ ಯೋಗ್ಯ ರೀತಿಯಲ್ಲಿ ಉಪಯೋಗಿಸಿಕೊಂಡರೆ ಕೊಡಗಿನ ರೈತನ ಜಾಣ್ಮೆಯನ್ನು ಯಾವ ಸರಕಾರವೂ ಮೆಚ್ಚಲೇಬೇಕು. ತನಗೆ ತಾನು ಸಹಾಯಮಾಡಿಕೊಂಡರೇನೇ ಇತರರ ಸಹಾಯವೂ ದೊರೆಯುವದು. ಬಿಟ್ಟಿಯಿಂದ ಮೇಲೆ ಏಳಲು ಯತ್ನಿಸುವವನಿಗೆ ಮಾತ್ರ ದೈವಿನ ಹಸ್ತ ದೊರೆಯುವದು. ಆದ್ದರಿಂದ ನಮ್ಮ ಇಂದಿನ ದಾರುಣ ಸ್ಥಿತಿಯನ್ನು ಉತ್ತಮಗೊಳಿಸಲು ನಾವೇ ಪ್ರಯತ್ನಿಸಬೇಕು. ಈ ಪ್ರಯತ್ನಕ್ಕೆ ಕೇಂದ್ರದಿಂದಲೂ, ಸ್ಥಳೀಯ ಸರಕಾರದಿಂದಲೂ ಹೆಚ್ಚಿನ ಸಹಾಯ ಪಡೆಯುವದು ಅಸಾಧ್ಯವಲ್ಲ.

ಈ ಹಣವು ಹಂಚಲ್ಪಡುವ ಮುನ್ನ ಕೊಡಗಿನ ರೈತರು ಎಚ್ಚೆತ್ತು ತಮ್ಮಭಿಪ್ರಾಯವನ್ನು ವ್ಯಕ್ತಮಾಡಿ ಒಮ್ಮತದಿಂದ ಈ ಹಣವನ್ನು ಮೇಲೆ ವಿವರಿಸಿದ ರೀತಿ ಸದುಪಯೋಗಗೊಳಿಸುವ ನಿರ್ಣಯ ಮಾಡಬೇಕು. ಈ ಹಣವನ್ನು ವಿನಿಯೋಗಿಸುವ ಬಗ್ಗೆ ಸೂಕ್ತ ಯೋಜನೆಗಳನ್ನು ಮತ್ತು ಕೇಂದ್ರಗಳನ್ನು ನಿಶ್ಚಯಿಸುವ ಬಗ್ಗೆ ಉದ್ಯೋಗಸ್ಥರ ಮತ್ತು ಉದ್ಯೋಗಸ್ಥರಲ್ಲದವರಿಂದ ಕೂಡಿದ ಸಮಿತಿಯೊಂದನ್ನು ನೇಮಿಸಿ ವಿಶದವಾದ ಯೋಜನೆ ತಯಾರಿಸಬಹುದಾಗಿದೆ.

॥ ಆದರ್ಶ ಗ್ರಾಮ. ॥

ಅಮ್ಮತ್ತಿ ನಾಡಿನ ಇಂದಿನ ಬಿಳುಗುಂದ ಗ್ರಾಮವು ಹಿಂದೊಮ್ಮೆ ಬಿಳುಗುಂದ ನಲ್ವತ್ತೊಕ್ಲು ಗ್ರಾಮಗಳೆಂದಾಗಿ 'ಬೋಂದ' ಗ್ರಾಮವೆಂದು ಕರೆಯಲ್ಪಡುತ್ತಿತ್ತು. ಈಗಿನ ಆಡಳಿತಕ್ಕೆ ಅನುಕೂಲವಾಗಲು ಈ ಗ್ರಾಮಗಳನ್ನು ವಿಂಗಡಿಸಿ ಒಂದು ಭಾಗಕ್ಕೆ ನಲ್ವತ್ತೊಕ್ಲು ಎಂದೂ ಇನ್ನೊಂದು ಭಾಗಕ್ಕೆ ಬಿಳುಗುಂದವೆಂದೂ ಹೆಸರಿಡಲಾಯಿತು. ಆದರೆ 'ಬಿಳುಗುಂದ' ಎಂಬ ಹೆಸರು ಹೇಗೆ ಬಂತೆಂದು ಯಾರೂ ಅರಿಯರು.

ಈ ಬಿಳುಗುಂದ ಗ್ರಾಮವು ಸುಮಾರು ೧ ಮೈಲು ಅಗಲ, ೪ ಮೈಲು ಉದ್ದವಾಗಿ ಸುಮಾರು ೯೦೦ ಜನ ಸಂಖ್ಯೆಯುಳ್ಳದಾಗಿದೆ. ಇದರಲ್ಲಿ ಕೊಡವರು, ಮುಸಲ್ಮಾನರು, ಕೆಂಬಟ್ಟಿ, ಬಡಗ, ಹರಿಜನರೂ ಬ್ರಾಹ್ಮಣ, ಕ್ಷೌರಿಕ, ಅಗಸ, ಕಮ್ಮಾರ, ಮರಕೆಲಸಗಾರ, ಪಣಿಕ, ಮುರ್ತರಿಂದೊಡಗೂಡಿ ಸುಧಾರಣವಾಗಿ ವ್ಯವಸಾಯಕ್ಕೂ ಇತರ ಸಾಧಾರಣದ ಜೀವನಕ್ಕೂ ಬೇಕಾಗುವ ಕೈಗಾರಿಕೆಯು ಸಂಘಗಳೂ ಪರಸ್ಪರವಾಗಿ ಕೊಟ್ಟು ತೆಗೆದು ಭೂಮಿದಾರರಿಂದ ವರ್ಷಕ್ಕೊಮ್ಮೆ ಈ ಗ್ರಾಮಕ್ಕಾಗಿ ಕೊಡುವ ಭತ್ತದಿಂದಲೂ ಉದ್ಯೋಗದಾರರು ತೃಪ್ತರಾಗಿರುತ್ತಿದ್ದರು. ಬರಬರುತ್ತಾ 'ಜಡಾಯ' ಕಾಲ ಬಂದಂತೆ ಜೀವನದ ಆವಶ್ಯಕತೆ ಹೆಚ್ಚಿ ವರ್ತನದಲ್ಲಿ ಕೃಪ್ತರಾಗದೆ ಉದ್ದಿಮೆಗಳು ಮಣ್ಣು ಪಾಲಾಗಿ ಎಲ್ಲೆಲ್ಲೂ ಇರುವಂತೆ ಟಿನ್ನಿನ ಕೈ ದೀಪಕ್ಕೂ ಕಾರು ಪಟ್ಟಗಕ್ಕೂ ಅನ್ಯ ದೇಶೀಯರನ್ನು ಕಾದು ಕೂರಬೇಕಾಯಿತು.

ಈ ಬಿಳುಗುಂದ ಗ್ರಾಮದಲ್ಲಿ ಸುಮಾರು ೪೦೦ ಜನ ಕೂಡಿರುವದ್ದಾರೆ. ವರ್ಷಗಳ ಹಿಂದ ದೇಶದಲ್ಲೆಲ್ಲಾ ಇದ್ದಂತೆ ಇಲ್ಲೂ ನಿಶಾದೇವಿಯ ಆರಾಧಕರಾಗಿ ಮದುವೆ, ಹಬ್ಬ, ಮುಂತಾದ ಶುಭಾಶುಭ ಕಾರ್ಯಗಳಲ್ಲಿ ಸೇಂದಿ ಊರವರಿಗೆ ನಿರ್ದಿಷ್ಟವಾದ ಸಾರಾಯಿ ಕೊಡಲ್ಪಡುತ್ತಿತ್ತು. ಅಂದು ಎಲ್ಲೂ ನಿಶಾನಿಶೇಧದ ಬಗ್ಗೆ ಚಂಗೆ ಇಲ್ಲದ ಆ ೧೯೪೦ನೇ ಇಸವಿಯಲ್ಲೇ ನಿಶೇಧದ ಬಗ್ಗೆ ತೀವ್ರ ಹೋರಾಟ ಗ್ರಾಮಸ್ಥರಲ್ಲಿ ಉಂಟಾಗಿ ಬೇಕು ಬೇಡವೆನ್ನುವ ಎರಡು ಪಂಗಡವಾಗಿ ಎರಡು ವರ್ಷಗಳ ವರೆಗೆ ಹೋರಾಟ ನಡೆದು ಕಡೆಗೆ ಬೇಡವೆನ್ನುವವರಿಗೆ ಜಯವಾಗಿ ಅಂದಿನಿಂದ ನಿಶಾಸೇವನೆಯನ್ನು ಶುಭಾಶುಭ ಕಾರ್ಯಗಳಲ್ಲಿ ಉಪಯೋಗಿಸಲೇ ಕೂಡದೆಂದೂ ಬಹಿರಂಗವಾಗಿ ಯಾರೂ ಕುಡಿಯಬಾರದೆಂದು ಬುದ್ಧಿವಂತರೂ ಅಲ್ಲಲ್ಲಿ ಕಂಡು ಕಾಣದೆ ಕುಡಿಯುವವರಿಗೆ ಕಡಿಮೆಯಿರಲಿಲ್ಲ.

ಕಂಡುಕ ತನವು ನಿಂತ ೩-೪ ವರ್ಷಗಳಲ್ಲೇ ಗ್ರಾಮದಲ್ಲಿ ನಡೆಯುವ ಬಹುದಾದ ಚಿಲ್ಲರೆ ಜಗಳಗಳನ್ನು ತೀರ್ಮಾನಿಸಲು ಒಂದು ಪಂಚಾಯಿತಿ ಸಭೆಯು ಸ್ಥಾಪನೆಯಾಗಿ ಅದು ಇಂದೂ ಜಾರಿಯಲ್ಲಿದೆ. ಇದರಿಂದಾದ ಉತ್ಪತ್ತಿಯೂ ಇತರ ಅಲ್ಪಸ್ವಲ್ಪ ಅನಾವಶ್ಯವಾಗಿ ಖರ್ಚಾಗುತ್ತಿದ್ದದ್ದನ್ನು ಉಳಿಸುತ್ತಾ ಬರಲು ಅದೊಂದು ಮೊತ್ತವು ೧೦೦೦ ರೂಪಾಯಿಗೆ ಮೀರಿತು. ೧೯೪೭ರಲ್ಲು ಎಲ್ಲೂ ಕಂಡು ಕೇಳರಿಯದೆ ಇದ್ದರೂ ಒಂದು 'ಡೆತ್ ಫಂಡು' ಅದೇ ಮೊಬಲಗಿನಿಂದ ನಿರ್ಮಿಸಲಾಯಿತು. ೪-೫ ವರ್ಷಗಳವರೆಗೆ ೧೦ ದೋಷಗಳನ್ನು ಅದರಲ್ಲಿ ಹುಡುಕುವವರಿದ್ದರೂ ಅಲ್ಪ ಚಂದಾವನ್ನು ಹಾಕುತ್ತಾ ಬಂದು ಈ ಗರ್ತಿ ಮೃತ ಪಟ್ಟವರ ವಾರೀಸ್ ದಾರರಿಗೆ ೨೦೦೦|– ರೂಪಾಯಿಗಳಿಗೆ ಮೇಲ್ಪಟ್ಟು ಕೊಟ್ಟರೂ ಇನ್ನೂ ಆ ಫಂಡವಳವು ೨೦೦೦ಕ್ಕೆ ಮಿಕ್ಕಿದೆ ಎನ್ನಲು ಸಂತೋಷಪಡಬೇಕಾಗಿದೆ. ಹಾಗೆಯೇ ೧೯೪೮ರಲ್ಲಿ ಭತ್ತದ ಫಂಡೊಂದು ಸ್ಥಾಪನೆಯಾಗಿ ಅದರ ಡಿವಿಡೆಂಡನ್ನು ಮರಣ ನಿಧಿಯಾಗಿ ಮಾರ್ಪಡಿಸಲಾಗಿದೆ. ಅಲ್ಲದೆ ಬಿಳುಗುಂದ ನಲ್ವತ್ತೊಕ್ಲು ಸಹಕಾರ ಸಂಘವು ತನ್ನ ಮೆಂಬರುಗಳಿಗೆ ಮರಣ ನಿಧಿಯನ್ನು ಸ್ಥಾಪಿಸಿದೆ. ಅಂತೂ ಈ ಗ್ರಾಮದಲ್ಲಿ ಮೃತಪಟ್ಟವರ ವಾರೀಸ್‌ದಾರರಿಗೆ ೧೫೦|– ರೂಪಾಯಿಯೂ ½ ಗಂಡಿ ಭತ್ತವೂ ಕೊಡಲ್ಪಡುತ್ತಿರುವದು. ಇತ್ತೀಚೆಗೆ ಮೇಲಿನ ಸಂಘದ ಆಶ್ರಯದಲ್ಲಿ ಒಂದು ಮದುವೆಯ ಫಂಡೂ ಸ್ಥಾಪನೆಯಾಗಿದೆ!

೧೯೩೨ನೇ ಇಸವಿಯ ಸುಮಾರಿನಲ್ಲಿ ಗ್ರಾಮದವರು ಪರಸ್ಪರ ಕಲೆತು ಸುಮಾರು ೧೩೦ ಎಕರೆ ಜಂಗಲ್ಲಿ ಬಂಜಾನ ತೆಗೆದು ವ್ಯವಸಾಯ ಮಾಡಿ ಕೊಂಡದ್ದಲ್ಲದೆ ದನಗಳು ಕುಡಿಯುವ ೩-೪ ಕೆರೆಗಳನ್ನೂ ಇವುಗಳಿಗೆ ಹೋಗುವ ಹಾದಿಗಳನ್ನೂ ೩-೪ ದೇವಸ್ಥಾನಗಳನ್ನೂ ರಿಪೇರಿ ಮಾಡಿಕೊಂಡಿರುವರು ಮಾತ್ರವಲ್ಲ ಇತ್ತೀಚೆಗೆ ಭದ್ರವಾದ ಒಂದು ಶಾಲಾ ಕಟ್ಟಡವನ್ನು ಕಟ್ಟಲು ತೊಡಗಿರುವರು.

ತಾನು, ತನ್ನದೆಂಬುದನ್ನು ಸ್ವಲ್ಪ ಬದಿಗಿರಿಸಿ ನೆರೆ ಕರೆಯುವಂಗೆ ಸಹಾಯ ಮಾಡುವ ಉದಾರ ಬುದ್ಧಿಯನ್ನು ಮುಂದಕ್ಕೆ ಮಾಡಿದರೆ ಬಡವರ ಸ್ಥಾನವಾದ ಹಳ್ಳಿಯನ್ನು ಸುಖಮಯವಾಗಿ ಮಾಡಬಹುದು. ಆದರೆ ಓದುಗರು ಯೋಚಿಸುವಷ್ಟು ಸುಲಭದಲ್ಲಿ ಈ ಮೇಲಿನ ಕೆಲಸಗಳು ನಡೆಯಿತೆಂದು ಭಾವಿಸಿದರೆ ಅದು ತಪ್ಪು. ೧೯೩೯ರಿಂದ ೧೯೪೯ರ ವರೆಗೆ ನಡೆದ ಈ ಸುಧಾರಣೆಗಳನ್ನು ಜಾರಿಗೆ ತರಲು ನಡೆದ ಆ ಹೋರಾಟ, ಹೋರಾಟಗಳೇನೆಂಬುದನ್ನು ಪ್ರತ್ಯಕ್ಷ ನೋಡಿದವರಿಗೆ ಮಾತ್ರ ಅನುಭವವಾದೀತು. ಶಾಂತತೆಯಿಂದ ಹಿಡಿದ ಕೆಲಸವನ್ನು ನೆರವೇರಿಸಲು ಮಾಡಿದವರ ಧೃಢತೆಯಿಂದ ಬಿಳುಗುಂದ ಗ್ರಾಮವು ಒಂದು ಮಾದರಿ ಗ್ರಾಮವೆಂದು ಕರೆಸಿಕೊಳ್ಳಲು ತಕ್ಕದ್ದಾಗಿದೆ.

ಗ್ರಾಮಸ್ಥ.

ವಾಚಕರ ಪುಟ

ಓದುಗರ ಓಲೆಗಳು.

ಪಟೇಲರ ಮೊರೆ.

ಕಳೆದ ಡಿಸೆಂಬರು, ಜನವರಿಗೆ ಮತ್ತು ಫೆಬ್ರವರಿ ತಿಂಗಳುಗಳಲ್ಲಿ 'ರೇಶನಿಂಗ್' ಕೆಲಸಕ್ಕಾಗಿ ಪ್ರತಿ ಗ್ರಾಮ ಪಟೇಲರಿಗೆ ತಿಂಗಳಿಗೆ ರೂ. ೫ ರಂತೆ ಹೆಚ್ಚಿನ ವೇತನ ಕೊಡುವ ಹುಕುಮ್ಮಿನ ಮೇರೆ ದ. ಕೊಡಗಿನ ಪಟೇಲರುಗಳಿಗೆ ಮೂರು ತಿಂಗಳ ಬಾಪು ರೂ. ೧೫ ದೊರೆತಿದೆಯಾಗಿ ತಿಳಿಯುವರು. ಇದು ನಿಜವಾದರೆ ಉತ್ತರ ಕೊಡಗಿನ ಪಟೇಲರಿಗೆ ಕೊಡದಿರಲು ಕಾರಣವೇನು? ಮಡಿಕೇರಿ ನಾಡು ಪಟೇಲರುಗಳು ಸುಬೇದಾರರು ಮತ್ತು ಆ. ಕಮಿಷನರರನ್ನು ಈ ವಿಚಾರದಲ್ಲಿ ಕಂಡು ಮಾತಾಡಿದರೂ ಈ ವರೆಗೆ ಯಾವ ಪ್ರಯೋಜನವಾಗಿಲ್ಲ. ಈ ರೀತಿಯ ತಾರತಮ್ಯಕ್ಕೆ ಎಡೆ ಕೊಡದೆ ಇನ್ನಾದರೂ ಶೀಘ್ರ ಈ ಹಣವನ್ನು ಕೊಡಿಸುವರೇ?

ಕೆ. ಎಸ್. ಸಿ.

ಶೇಕಡ ೩೫?

ಬಡ ರೈತನು ಬೆಳೆಸಿದ ಬತ್ತವನ್ನು ಶೇಕಡ ಹತ್ತರಂತೆ ಮಿಲ್ಲುಗಳಿಗೆ ಮಾರಾಟ ಮಾಡಬೇಕೆಂಬ ಆಜ್ಞೆಯಿಂದಾಗಿ ಬಡ ರೈತನಿಗೆ ವಿಪರೀತ ತೊಂದರೆಯಾಗಿದೆ. ತನ್ನ ಆಪತ್ತಿಗೆ ಸಹಕಾರ ಸಂಘದಿಂದ ಸಾಲ ಮಾಡಿ ಇನ್ನು ಸಂಘದಿಂದ ಸಾಲ ಹುಟ್ಟದಂತಾಗಿದೆ. ಎಂದೂ ತೀರದ ಆತನ ಹಣದ ಬೇಡಿಕೆಯು ಆತನನ್ನು ಪುನಃ ಸಾಹುಕಾರರ ಮುಂದೆ ನಿಲ್ಲಿಸಿದೆ! ಸಾಹುಕಾರರು ಹಿಂದಿನಂತೆ ಶೇಕಡ ೨೫–೩೫ ಬಡ್ಡಿ ಎಣ್ಣತೊಡಗಿದ್ದಾರೆ! ಈ ರೀತಿಯಾಗಲು ಸರಕಾರವೇ ಕಾರಣ. ಬಡ ರೈತನು ತನಗೆ ಬೇಕಾದಾಗ ಒಂದೆರಡು ಬಟ್ಟಿ ಬತ್ತ ಮಾರಾಟಮಾಡುವಹು; ಅಲ್ಲವೇ ಅಕ್ಕಿ ಕುಟ್ಟಿ ಮಾರಾಟಮಾಡುವದು ಇಂದು ಅಸಾಧ್ಯವಾಗಿದೆ. ಚಿಲ್ಲರೆಯಾಗಿ ಬಡ ರೈತನ ಬತ್ತವನ್ನು ಪಡೆಯುವವರಿಲ್ಲ. ಅಕ್ಕಿಮಾಡಿ ಮಾರಲೂ ಅನುವಿಲ್ಲ. ಮಿಲ್ಲು ಮಾಲೀಕರಿಗೆ ಗಾಡಿಗಟ್ಲೆ ಬೇಕು. ಇದ್ದ ಬತ್ತವೆಲ್ಲಾ ಗಾಡಿಗಟ್ಲೆ ಮಿಲ್ ಮಾಲೀಕರಿಗೆ ಕೊಡಲ್ಪಟ್ಟಿತು. ಎರಡು ತಿಂಗಳ ಹಿಂದೆ ಸಂತೇರಿಗೆ ೦–೯–೦ ಇದ್ದ ಬೆಲ್ಲ ಇಂದು ೧–೮–೦, ೦–೪–೦ ಇದ್ದ ಹುರುಳಿ ೦–೮–೦ ಪ್ರತಿ ವಸ್ತುವಿನ ಬೆಲೆಯು ಒಂದಕ್ಕೆ ಒಂದುಪಟ್ಟಿಯಂತೆ ಏರಿದೆ. ಇದರ ನಿಯಂತ್ರಣ ಯಾರೂ ಮಾಡುವವರಿಲ್ಲವೇ? ಬಡ ರೈತನ ಬತ್ತಕ್ಕೆ ಅಂದಿನ ಬೆಲೆಯೇ ಇಂದೂ! ಇರುವ ಅಲ್ಪಸ್ವಲ್ಪವನ್ನು ಮಾರಾಟ ಮಾಡಲಾರ. ರೈತನಿಗೆ ಒಂದೆರಡು ಖರ್ಚೇ! ಮಕ್ಕಳ ಶಾಲಾ ಫೀಜು ಇಮ್ಮಡಿಯಾಗಿದೆ. ಆಳುಗಳ ಸಂಬಳ ಮೇರೆ ಮೀರಿದೆ. ರೈತರ ಹಿತಸಾಧಿಸುವ ಸರಕಾರ ಎಂದು ಬರುವದು?

ಎ. ಪಿ. ಮಾದಪ್ಪ.

ಕೊಡಗಿನಲ್ಲಿ ಕಪಿಗಳ ಹಾವಳಿ

ಕಪಿಗಳ ಹಾವಳಿಯಿಂದ ಈ ದೇಶದಲ್ಲಿ ಬತ್ತದ ಬೆಳೆ, ಕಳದಾರಿ, ಕಿತ್ತಳೆ, ಬಾಳೆ, ಏಲಕ್ಕಿ, ಕಾಫಿ ಮೊದಲಾದ ಫಸಲುಗಳು ಹೆಚ್ಚಾಗಿ ನಷ್ಟ ಹೊಂದುತ್ತವೆ. ಇವುಗಳ ನಷ್ಟವನ್ನು ತಪ್ಪಿಸಿದರೆ ಕೊಡಗಿನ ರೈತರಿಗೆ ವರ್ಷಕ್ಕೆ ಲಕ್ಷಾಂತರ ರೂಪಾಯಿಗಳ ಲಾಭವಾಗಬಹುದೆಂದು ನಾವು ಧಾರಾಳವಾಗಿ ಹೇಳಬಹುದು. ಇಷ್ಟೇ ಅಲ್ಲದೆ ಈ ಪ್ರಾಣಿಗಳ ದೆಸೆಯಿಂದ ನಾವು ಪಾಳು ಬಿಟ್ಟ ಗದ್ದೆ ಮತ್ತು ಬಾಣೆ ಬಾರಿಕೆಗಳನ್ನು ಪುನಃ ವ್ಯವಸಾಯಕ್ಕೆ ತರಬಹುದು.

ಕಪಿಗಳು ಕೆಲವು ಗ್ರಾಮಗಳಲ್ಲಿ ಬತ್ತದ ಎಳೆ ಪೈರಿನಿಂದ ಹಿಡಿದು ಬೆಳೆ ಕಟಾವು ಆಗುವ ವರೆಗೆ ಎಡೆ ಬಿಡದೆ ಫಸಲನ್ನು ನಷ್ಟಪಡಿಸುತ್ತವೆ. ಇವುಗಳ ಹಾವಳಿಯನ್ನು ತಪ್ಪಿಸದಿದ್ದರೆ ಹೆಚ್ಚಿಗೆ ಬೆಳೆಯಿರಿ ಎಂಬುವುದು ಯಶಸ್ವಿಯಾಗದು. ಆದ್ದರಿಂದ ನಮ್ಮ ಸರಕಾರವು ಈ ಕಾಡುಪ್ರಾಣಿಗಳ ನಾಶದ ಬಗ್ಗೆ ತಕ್ಕ ಏರ್ಪಾಡು ಮಾಡಬೇಕಾಗಿದೆ.

ಸಿ. ಎಂ. ಬಿದ್ದಯ್ಯ.

ರೈತರಿಗೆ ಬೋನಸ್ಸು.

ಕೊಡಗು ದೇಶದಿಂದ ಹೊರಪ್ರಾಂತ್ಯಗಳಿಗೆ ಕಳುಹಿಸಿದ ಭತ್ತಕ್ಕೆ ಬೋನಸ್ಸು ರೂಪವಾಗಿ ಸುಮಾರು ಎರಡು ಲಕ್ಷ ರೂಪಾಯಿಗಳು ಸೆಂಟ್ರಲ್ ಸರಕಾರದಿಂದ ಕೊಡಗಿನ ಭೂವ್ಯವಸಾಯಗಾರರಿಗೆ ಕೊಡಲು ದೊರೆತಿರುವದಾಗಿ ಒಂದು ವದಂತಿಯಿದೆ. ಇದು ನಿಜವಾದರೆ ಈ ಮೊಬಲಗನ್ನು ಯಾವ ವಿಧದಲ್ಲಿ ವಿನಿಯೋಗಿಸುವರು ಎಂಬುದು ವಿಚಾರಣೀಯ ಸಂಗತಿಯಾಗಿದೆ. ಭೂಮಿಯ ಎಕರೆ ಲೆಕ್ಕದಲ್ಲಿ ಹಣ ಬಟವಾಡೆ ಮಾಡುವದೆಂದರೆ ಹಲವು ಭೂಮಿಗಳಲ್ಲಿ ಎಕರೆಗೆ ೧೦ ಬಟ್ಟಿ ಭತ್ತ ಸಹ ಬೆಳೆಯುವದಿಲ್ಲ. ಈ ಬೆಳೆದ ಭತ್ತ ಅವರ ಕಾಲಿಯಾಪ ಖರ್ಚಿಗೆ ಆಗುತ್ತದೆ. ಇನ್ನು ಕೆಲವು ಭೂಮಿಯಲ್ಲಿ ಎಕರೆಗೆ ೨೫ ಬಟ್ಟಿ ಭತ್ತ ಬೆಳೆಯುತ್ತದೆ. ಕೆಲವು ಭೂಮಿದಾರರು ತಾವು ಬೆಳೆಸಿದ ಭತ್ತವನ್ನು ಮಾರಾಟಮಾಡದೆ ತಮ್ಮ ಕಟಿಪಗಳು ಅಭಿವೃದ್ಧಿಪಡಿಸುವ ಉದ್ದೇಶ್ಯ ತಮ್ಮ ಆಳುಗಳಿಗೇ ಕೊಟ್ಟವರಿದ್ದಾರೆ. ಅನೇಕರು ಈ ದೇಶದಲ್ಲಿಯ ಜನರ ಜೀವನಕ್ಕೆ ಮಾರಿದವರಿದ್ದಾರೆ. ಹೀಗಿರುವಾಗ ಎಲ್ಲರಿಗೂ ಒಂದೇ ರೀತಿ ಎಕರೆ ಲೆಕ್ಕದಲ್ಲಿ ಹಣ ಬಟವಾಡೆ ಮಾಡುವದೆಂದರೆ ಅದು ಪೂರಾ ತಪ್ಪು ಅಭಿಪ್ರಾಯ ಮತ್ತು ಅನ್ಯಾಯ. ಯಾವದೇ ವಿಧದಲ್ಲಾದರೂ ರೈತನಿಗೆ ಕೊಟ್ಟರೂ ತೂತು ಜೇಬಿನ ಈ ರೈತರಿಗೆ ಕೊಟ್ಟ ಹಣದಲ್ಲಿ ಶೇಕಡ ೨೫ ರಷ್ಟು ಸಹ ಅವರ ನಿಜವಾದ ಜೀವನದ ಉದ್ದೇಶಕ್ಕೆ ತಲುಪುತ್ತದೆಂಬದ್ದು ಹೇಳಲು ಸಾಧ್ಯವಿಲ್ಲ.

ಅಂತು ಈ ರೀತಿಯಾಗಿ ಅನಾವಶ್ಯವಾಗಿ ವ್ಯಯವಾಗುವ ಮತ್ತು ಮೇಲೆ ಕಾಣಿಸಿದ ರೀತಿ ವ್ಯತ್ಯಾಸಬರುವ ಕಾರಣವೂ ಮತ್ತು ಈ ಮೊಬಲಗು ಹರಿದು ಹಂಚಿದರೆ ಅತಿ ಅಲ್ಪ ಮೊಬಲಗು ಮಾತ್ರ ದೊರೆಯುವದರಿಂದಲೂ ಸರ್ವ ಜನರ ಉಪಯೋಗಕ್ಕೆ ಬರುವಂತೆ [illegible] ಈ ಮೊಬಲಗನ್ನು ನಮ್ಮ ಕಾಲೇಜು ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ಪು ಕೊಡಲು ಏರ್ಪಡಿಸಿದರೆ ಸರ್ವರೂ ಸಮ್ಮತ ಪಡುವರೆಂಬುದರಲ್ಲಿ ಅಡ್ಡಿಯಿಲ್ಲ. ವಿತರಣೆಯು ಸುಲಭವೂ ಯೋಗ್ಯವೂ ಆಗುವದರಲ್ಲಿ ಸಂದೇಹವಿಲ್ಲ.

ಮಾದಪ್ಪ.

ಸ್ಕೂಲ್ ಫೈನಲ್ ಪರೀಕ್ಷಾ ಫಲಿತಾಂಶ.

ಸ್ಕೂಲ್ ಫೈನಲ್ ಫಲಿತಾಂಶವು ಕಡಿಮೆಯಾಗಲು ಕಾರಣ ಭೂತರು ಯಾರು? ಎಂದು ಪ್ರಶ್ನಿಸಿದರೆ ಫಕ್ಕನೆ ಸಿಕ್ಕಿಬೀಳುವುದು ಉಪಾಧ್ಯಾಯರು! ಹುಡುಗರು ಈ ಬಗ್ಗೆ ತಮ್ಮದೂ ತಪ್ಪಿದೆಯೆಂದು ಯೋಚಿಸುವದೇ ಇಲ್ಲ! ಉಪಾಧ್ಯಾಯರು ಮಕ್ಕಳು ಚೆನ್ನಾಗಿ ಕಲಿಯಲಿ ಎಂದು ಯೋಚಿಸಿ ತಮಗೆ ಗೊತ್ತಿದ್ದ ರೀತಿಯಲ್ಲಿ ಪಾಠವನ್ನು ಹೇಳಿಕೊಡುತ್ತಾರೆ. ಆದರೆ ಕಲಿಯದೆ ಇರುವುದು ಯಾರ ತಪ್ಪೆಂದು ನಾವು ತಿಳಿಯಲಿಲ್ಲ. ಚಿಕ್ಕ ಉದಾಹರಣೆ:- ಒಂದು ದಿನ ಉಪಾಧ್ಯಾಯರು ಕ್ಲಾಸಿನಲ್ಲಿ ಪದ್ಯವನ್ನು ಹೇಳಿಸುವಾಗ ಒಬ್ಬ ವಿದ್ಯಾರ್ಥಿಯು ಹೇಳಲಿಲ್ಲ. ಆಗ ಉಪಾಧ್ಯಾಯರು 'ಏಕಯ್ಯಾ ಕಲಿಯಲಿಲ್ಲ' ಎಂದು ಕೇಳಿದರು. ಕೂಡಲ್ಲೇ 'ಕಲಿಯಲಿಲ್ಲಾ ಸಾರ್' ಎಂದುತ್ತರ ಬಂತು. ನಿಂತು ಮಾತಾನಾಡೆಂದುದಕ್ಕೆ 'ಸಾಧ್ಯವಿಲ್ಲ ಸಾರ್' ಎಂದನು! ಈ ರೀತಿ ದರ್ಪದ ವಿದ್ಯಾರ್ಥಿಗಳಿಗೆ ಯಾವ ಉಪಾಧ್ಯಾಯರು ಬಂದರೂ ಪ್ರಯೋಜನವೇನು? ಒಳ್ಳೆಯ ನೀರನ್ನು ಕೊಡುವುದು ಯಜಮಾನನ ಕೆಲಸ; ಕುದುರೆ ಕುಡಿಯದಿದ್ದರೆ ಯಜಮಾನನು ಏನು ಮಾಡಲು ಸಾಧ್ಯ? ನಾನು ಸಹ ನಾಳೆ ದಿವಸ ಪಾಸಾದರೆ ಉಪಾಧ್ಯಾಯರನ್ನು ಹೊಗಳುತ್ತೇನೆ, ಇಲ್ಲವಾದರೆ ದೂರುತ್ತೇನೆ. 'ಕುಣಿಯಲಾರದವನಿಗೆ ಅಂಗಳ ಓರೆಯಂತೆ'. ಇದೇ ರೀತಿ ನಮ್ಮ ಈ ಶಿಸ್ತಿಲ್ಲದ ಜೀವನದ ಕಾರಣ ವಿದ್ಯೆ ಹತ್ತುವದಿಲ್ಲ. ನಾವು ಓದುವ ಶಾಲೆ ನಮ್ಮದು; ನಮ್ಮ ಪ್ರಗತಿಯಿಂದ ನಮ್ಮ ಉಪಾಧ್ಯಾಯರ ಮತ್ತು ಶಾಲೆಯ ಕೀರ್ತಿ ಹೆಚ್ಚುತ್ತದೆ ಎಂದು ತಿಳಿದು ವಿದ್ಯಾರ್ಥಿಗಳು ವರ್ತಿಸಬೇಕು. ಸೋಮಾರಿ [illegible] ಗುರುಭಕ್ತಿಯುಳ್ಳವರಾಗಿ ಶ್ರಮಿಸಿದರೆ ಮುಂದಿನ ಪರೀಕ್ಷಾ ಫಲಿತಾಂಶವು ತನಗೆ ತಾನೆ ಮೇಲ್ಮಟ್ಟಕ್ಕೆ ಏರುವದರಲ್ಲಿ ಸಂಶಯವಿರಲಾರದು.

'ಕೃಷ್ಣಯ್ಯ'

ಕಾಡಿನಲ್ಲಿ ಕಣ್ತೆರವು.

'ಕಾಡಿನಲ್ಲಿ ಕಣ್ತೆರವು' ಹೀಗೆಂದರೇನು? ಎಂದು ಕೇಳಬಹುದು. ನಮ್ಮಲ್ಲಿ ಒಂದು ವಾಡಿಕೆಯ ಮಾತುಂಟು. 'ಕಾಡಿನಲ್ಲಿ ಕಣ್ಣು ಕಟ್ಟಿ ಬಿಟ್ಟಂತೆ' ಎಂದು. ಎಂದರೆ ನಮ್ಮ ಸಹಾಯಕ್ಕೆ ಬರುವುದು ನಮ್ಮ ತಿಳುವಳಿಕೆ ಮಾತ್ರ! ಈಗ ನಾನು ಹೇಳಲು ಹೊರಟಿರುವುದು ಕಗ್ಗತ್ತಲೆಯ ಕಾಡಿನಲ್ಲಿ ಜ್ಞಾನ ಜ್ಯೋತಿಯನ್ನು ಬೆಳಗಿಸಲು ನಡೆದಿರುವ ಒಂದು ಪ್ರಯತ್ನದ ವಿಚಾರ.

ನಾನು ಊರಿನಲ್ಲಿ ಊರು ಮನುಷ್ಯ, ಕಾಡಿನಲ್ಲಿ ಕಾಡು ಮನುಷ್ಯ! ಮೊನ್ನೆ ತಾನೆ ಕಾಡಿನಲ್ಲಿ ಸುತ್ತುತ್ತಾ ಹಠಾತ್ತಾಗಿ ನಡು ಕಾಡಿನಲ್ಲಿ ಒಂದು ಕುರುಬರ ಹಾಡಿಯನ್ನು ಆಕಸ್ಮಾತ್ತಾಗಿ ಕಾಣಲು ಹೋದೆ. ಇದೇ ಕೊಡಗು ಸೀಮೆಯ ನಾಗರಹೊಳೆ ರೇಂಜಿಗೆ ಸೇರಿದ 'ಕಲ್ಲಹಳ್ಳ'. ಕಾಡೆಂಬುವದು ನಂತರ ತಿಳಿಯಿತು. ೫–೬ ಮೈಲಿ ಸುತ್ತಳತೆಯಲ್ಲಿ ಚದುರಿ ಹೋಗಿರುವ ಕಾಡು ಕುರುಬರು ಗುಡಿಸಲುಗಳನ್ನು ತುಮರಿಗಳಲ್ಲಿ ಕಟ್ಟಿಕೊಂಡು ಅಲ್ಲಿ ವಾಸಿಸುತ್ತಿದ್ದಾರೆ.

ಈ ಗೊಂಡಾರಣ್ಯದಲ್ಲಿ ನಿರ್ಜನ ವಾತಾವರಣದಲ್ಲಿ ಇದ್ದಕ್ಕಿದ್ದಂತೆ [illegible] ದಿನ ಒಟ್ಟಾದ ಕಂಠ ಸ್ವರಗಳು [illegible] ನನ್ನ ಭೇದಿಸಿಕೊಂಡು ಬಂದವು. ಇದೇನಿರಬಹುದೆಂದು ನಾನು ಅತ್ತ [illegible] ಹೊರಟೆ. ನೋಡಿದರೆ, ಸುಮಾರು ೩೦, ೪೦ ಕಾಡು ಕುರುಬರ ಮಕ್ಕಳ ನಾ[illegible]ಲೆ. ಈ ಶಾಲೆಯ ವೈಶಿಷ್ಟ್ಯವೇನೆಂದರೆ, ಅದರ ಸನ್ನಿವೇಶ! ಪ್ರಕೃತಿಯ ಸಾಮ್ರಾಜ್ಯ! ಸೌಂದರ್ಯ!

ಶಾಲೆಯ ವಾತಾವರಣವು ಅತ್ಯಂತ ಪರಿಶುಭ್ರವಾಗಿದೆ. ರೋಗ [illegible] ಕೊಳಕು ಪ್ರದೇಶವಿಲ್ಲವಂತೆ ಮಾ[illegible]ರೆ. ಆಗಾಗ್ಗೆ ಅರಣ್ಯ ಇಲಾಖೆಯವರಿಂದ ಸ್ಥಾಪಿಸಲ್ಪಟ್ಟಿರುವ ಆರೋಗ್ಯ ಕೇಂದ್ರದವರು ಡಿ. ಡಿ. ಟಿ. ಸ್ಪ್ರೇ ಮಾಡುತ್ತಿದ್ದಾರೆ. ಕ್ರಿಮಿಕೀಟಗಳು ಸೇರದಂತೆ ನೋಡುತ್ತಾರೆ.

ಮಕ್ಕಳ ಸ್ವೈರ್ಮಲ್ಯ ಹೇಗೆ [illegible] ದ್ದಾರೆ ಗೊತ್ತೆ? ಅವರಿಗೆ ಪ್ರತಿನಿತ್ಯ [illegible] ಡಬ್ಬಾಯವಾಗ ಸ್ನಾನ! [illegible] ಉಡುಪು! ಮೈ ತೊಳೆಯುವ ಸಾ[illegible] ಒಗೆಯುವ ಸಾಬೂನು ಇವುಗಳನ್ನು ಕೊಡಗು ಅರಣ್ಯ ಇಲಾಖೆಯವರೇ ಉಚಿತವಾಗಿ ಒದಗಿಸುತ್ತಾರೆ.

ಶಾಲೆಯ ಮಕ್ಕಳು ಚೆನ್ನಾಗಿ [illegible] ತ್ತಾರೆ, ಓದುತ್ತಾರೆ; [illegible] ವಾಗಿ ಗ್ರಾಮ್ಯ ಭಾಷೆಯಲ್ಲಿ ಹೇಳುತ್ತಾರೆ. ವಿದ್ಯಾಕಾಂಕ್ಷೆಯು ಅತಿ ತೀವ್ರವಾಗಿ [illegible] ಕುರಿಸಿದೆ. ಆದರೂ ವಿದ್ಯೆ ಅವರನ್ನು ಅವರ ಕಸುಬಿನಿಂದ ಹೊರಡಿಸಲಾಗಿಲ್ಲ. ಕಾಡಿನ ಎಲ್ಲಾ ಕೆಲಸಗಳಲ್ಲೂ ಭಾಗವಹಿಸಿ ದುಡಿಯುತ್ತಾರೆ.

ಇಲ್ಲಿ ಒಂದು ಆಶ್ಚರ್ಯ [illegible] ಗಿತ್ತೀ ಸರಾಯಿ [illegible]. ಈ ಶಾಲೆಯನ್ನು ಸಂದರ್ಶಿಸಿ ನೋಡುವವರಿಗೆ ಕಾಣ ಸಿಗದು; [illegible] ದ ಕೂಡಿದ ನಗುವ ಮುಖ [illegible] ದನ್ನು ನೋಡಿ ಇಲ್ಲಿ ನಾವು ಎಲ್ಲ 'ಸ್ಪೋರ್ಟಿಂಗ್' ನಡೆಸಬಹುದೇ ಎನ್ನಿಸಿತು ನನಗೆ!

ಈ ಗೊಂಡಾರಣ್ಯದ ಮಧ್ಯದಲ್ಲಿ ಇಂತಹ ಶಾಲೆಯನ್ನು ಸ್ಥಾಪಿಸಿ ನಡೆಯಿಸಲು [illegible] ಕೊಡಗು ಡಿಸ್ಟ್ರಿಕ್ಟ್ ಇಲಾಖೆಯವರನ್ನೂ ಮಾನ್ಯ ಚೀಫ್ ಕಮಿಷನರವರನ್ನೂ ಅಭಿನಂದಿಸಬೇಕಿದೆ.

ಎಸ್. ಗುಂಡೂರಾವ್,
ಅಸಿಸ್ಟೆಂಟ್ ಡಿಸ್ಟ್ರಿಕ್ಟ್ ಸ್ಕೌಟ್ ಕಮಿಷನರ್
ಹುಣಸೂರು.

ಬಾಳೆಲೆ ರಸ್ತೆ ಮತ್ತು ಅಂಚೆ ಆಫೀಸು

ಪೊನ್ನಂಪೇಟೆ, ಗೋಣಿಕೊಪ್ಪಲುಗಳಿಂದ ಎಂಟು ಹತ್ತು ಮೈಲು ದೂರದಲ್ಲಿರುವ ಬಾಳೆಲೆ ಮತ್ತು ಸುತ್ತಲಿನ ಗ್ರಾಮಗಳ ಜನರು ವಿಪರೀತ ಕಷ್ಟಪಡುತ್ತಿದ್ದಾರೆ. ಇಲ್ಲಿ ವರೆಗೆ ಯೋಗ್ಯ ರಸ್ತೆ ಇಲ್ಲ. ಅಂಚೆಯು ಏರ್ಪಾಡಿಲ್ಲ. ಆದರೂ ಈ ಭಾಗವೇ ಕೊಡಗಿನ ಕಣಜವೆಂದು ಕರೆಸಿಕೊಳ್ಳುತ್ತಿದೆ! ರಸ್ತೆಗೆ ಕಲ್ಲು ಹಾಕಿ, ದುರಸ್ತಿಗೊಳಿಸಬೇಕೆಂದು ಹಲವು ದಶಕಗಳಿಂದ ಕೂಗಿಕೊಂಡಾಯಿತು. ಸರಕಾರದಿಂದ ಹಣ ಮಂಜೂರಾದರೂ ಕಾರ್ಯಕೈಗೂಡಿಲ್ಲ. ಗ್ರಾಮಸ್ಥರ ಪ್ರಯತ್ನದಿಂದ, ಇಲ್ಲಿ ಆಸ್ಪತ್ರೆಯೊಂದಾಯಿತು. ಅದಕ್ಕೆ ಡಾಕ್ಟರನ್ನು ಸರಿಯಾಗಿ ಒದಗಿಸುವದು ಅಧಿಕಾರಿಗಳಿಗೆ ಸಾಧ್ಯವಿಲ್ಲದಾಗಿದೆ. ಗ್ರಾಮಸ್ಥರೇ ಶಾಲೆಯನ್ನು ಕಟ್ಟಿಸಿದ್ದಾರೆ! ಅದಕ್ಕೆ ಬೇಕಾಗುವ ಸಿಬ್ಬಂದಿ ನೇಮಕವಾಗಿ ಬರುವದೋ ಕಾಣೆ. ಇಲ್ಲಿಯ ಶಾಲೆಯನ್ನು ಹೈಸ್ಕೂಲ ಶಾಲೆಯಾಗಿ ಮಾಡಬೇಕೆಂದು ಕೂಗಿಕೊಂಡರೂ ಫಲವಾಗಿಲ್ಲ. ಗ್ರಾಮಸ್ಥರೇ ಆರಸ್ತೆ ಕೆಲಸ ಕೈಗೊಂಡಿದ್ದಾರೆ. ಇನ್ನು ಅಂಚೆಯ ಆಫೀಸು!

ಬಾಳೆಲೆಯು ಒಂದು ಪ್ರಾಮುಖ್ಯ ವ್ಯಾಪಾರ ಕೇಂದ್ರವೆನ್ನಬಹುದು. ಆದರೂ ಇಲ್ಲಿಗೆ ಮಳೆಗಾಲದಲ್ಲ ಹೋಗಲಾಗುವದಿಲ್ಲ. ರಸ್ತೆ ನಡೆಯಲೂ ಅಯೋಗ್ಯವಾಗಿದೆ. ಬಾಳೆಲೆಯಲ್ಲಿ ಅಂಚೆಯ ಆಫೀಸಾಗಿ ಇರುವದು ಟಪ್ಪಾಲು ಪೆಟ್ಟಿಗೆ! ಅಂಚೆಯವನು ಇಲ್ಲಿಯ ಕಾಗದ ಪತ್ರ, ಮೊದಲಾದುವನ್ನು ಹೊರಲಾರದೆ ಹೊತ್ತುಕೊಂಡು ಹೋಗುವದನ್ನು ನೋಡಿದರೆ ಯಾರಿಗಾದರೂ ವ್ಯಸನವಾಗಬೇಕು. ಸರಕಾರವು ಈ ರೀತಿಯಾಗಿ ವರ್ತಿಸುವದೇ? ಈ ಕೇಂದ್ರಕ್ಕಾಗಿ ಇಂದಿನ ಸ್ವತಂತ್ರ ಸರಕಾರವಾಗಲೀ, ಹಿಂದಿನ ಸರಕಾರವಾಗಲೀ ಏನು ಮಾಡಿದೆ ಎಂದು ಪ್ರಶ್ನಿಸಬೇಕಾಗುತ್ತದೆ. ಎಲ್ಲವನ್ನೂ ಗ್ರಾಮದ ಬಡ ಜನರೇ ಒದಗಿಸಿಕೊಳ್ಳಬೇಕಾದರೆ ಇನ್ನು ಸರಕಾರವೇಕೆ? ಕೇವಲ ಕಂದಾಯ ವಸೂಲಿಗೋ? ಈ ಕಂದಾಯವಾದರೂ ಯಾರ ಹಿತಕ್ಕಾಗಿ? ಈ ನಾಡಿನಿಂದ ಕೊಡುವ ಸಹಸ್ರಾರು ರೂಪಾಯಿ ಕಂದಾಯದಲ್ಲಿ ಅದರ ಕಾಲು ಭಾಗವಾದರೂ ಇಲ್ಲಿಗಾಗಿ ಖರ್ಚಾಗಬೇಡವೇ? ಇನ್ನಾದರೂ ಸರಕಾರವು ಜನರ ಬೇಡಿಕೆಗಳಿಗೆ ಕಿವಿಗೊಡುವದೇ?

ಭೀಮಯ್ಯ ಕೊಕ್ಕೇಂಗಡ.

ನೋಟೀಸು.

ಕೊಡಗು ಕ್ಲಾತ್ ಮರ್ಚೆಂಟ್ಸ್ ಕಂಪೆನಿಯ ಬದ ಶ್ರೀಮಂಗಲದ ಶ್ರೀ ಬಿ ಎಂ. ಸೋಮಯ್ಯ ಮತ್ತು ಎ ಎಂ ಗಣಪತಿ ಇವರುಗಳು ಷೇರಿಗಿಂತ ಶೇರು ಸರ್ಟಿಫಿಕೇಟ ಗಳು ಕಾಣೆಯಾಗಿವೆ. ಇವನ್ನು ಪಡೆದಿರುವರ, ಒಂದು ವಾರದೊಳಗೆ ಈ ಕೆಳಗಿನ ವಿಳಾಸಕ್ಕೆ ಹಾಜರು ಮಾಡುವದು. ಅನಂತರ ಬಂದ ಯಾವ ವಿಚಾರಕ್ಕೂ ಗಮನ ಕೊಡಲಾಗುವದಿಲ್ಲವೆಂದು ಈ ಮೂಲಕ ತಿಳಿಸಿದೆ.

ಲಿಕ್ವಿಡೇಟರು,
ಕೊಡಗು ಕ್ಲಾತ್ ಮರ್ಚೆಂಟ್ಸ್ ಕಂಪೆನಿ,
ಮಡಿಕೇರಿ

ಹಿತೋಕ್ತಿಗಳು.

ಸಂಗ್ರಹಿಸಿದವಳು:— ಶ್ರೀಮತಿ ತಂಗಮ್ಮ.

1. ಬೆಳಗ್ಗೆ ಎದ್ದಕೂಡಲೇ ಪರಮಾತ್ಮನನ್ನು ಸ್ಮರಿಸು.
2. ಸುಜನರ ಸಹವಾಸವನ್ನು ಮಾಡು
3. ಅಚ್ಚುಕಟ್ಟಿನ ನಿದ್ರೆಯನ್ನು ಬಯಸು.
4. ಮಿತವಾಗಿ ಭೋಜನ ಮಾಡು.
5. ಕತ್ತಲೆ ಪ್ರಪಂಚದಲ್ಲಿಯೇ ಮಂದ ಭಾಕದಂತಿರಬೇಡ. ಬೆಳಕಿಗೆ ಬಾ; ನಾಳೆಯ ಸೂರ್ಯೋದಯದಲ್ಲಿ ಜ್ಞಾನಿ ಎನಿಸು.
6. ಪರಸ್ತ್ರೀಯೊಡನೆ ಏಕಾಂತದಲ್ಲಿ ಮಾತನಾಡಬೇಡ.
7. ಡಂಭಾಚಾರವನ್ನು ಬಿಟ್ಟರೆ ನಿನಗೆ ಹಿತವಾಗುವುದು.
8. ಭಾವವಿಲ್ಲದ ಭಕ್ತಿಯು ಉಪ್ಪಿಲ್ಲದ ಊಟದಂತೆ.
9. ಅಧಿಕಾರದ ಹೆಸರಿನಿಂದ ಲಂಚಕ್ಕೆ ಕೈನೀಡ ಬೇಡ. ಇನ್ನೊಂದು ಜನ್ಮಕ್ಕೆ ನೇಗಿಲ ಮೂಲವಾಗಿಯೆ ಹುಟ್ಟುವಿ!
10. ಜೀವರಾಶಿಗಳಿಗೆ ಹಿಂಸೆಯನ್ನು ಯಾವದೇ ವಿಧದಿಂದ ಕೊಡಬೇಡ.
11. ಮೆಚ್ಚಿಸಲು ಪ್ರಯತ್ನಿಸದಿರು. ನಿನ್ನ ಆತ್ಮವನ್ನು ಮೆಚ್ಚಿಸು
12. ಏನನ್ನೂ ಬೇಡದವರೇ ದೇವರಿಗೆ ಪ್ರೀಯರು.
13. 'ಆಸೆ' ಎಂಬುದನ್ನು ಬೇರು ಸಹಿತ ಕಿತ್ತೊಗೆದು ಆ ಮೇಲೆ ಕಾರ್ಯ ಪ್ರವರ್ತನಾಗು
14. ದೇವರ ಭಜನೆಗಾಗಿ, ಆತನ ಪಾದಸೇವೆಗಾಗಿ ನಾಚಿಕೆ ಪಡಬೇಡ.
15. ನೀನು ಮಾಡಿದಂಥ ತಪ್ಪುಗಳನ್ನು ನೆನಸಿಕೊಂಡು ನಾಚಿ ಪಶ್ಚಾತ್ತಾಪ ಪಡು. ಒಮ್ಮೆ ಮಾಡಿದ ತಪ್ಪನ್ನು ಪುನಃ ಮಾಡದಿರು.
16. ಸಣ್ಣ ಪುಟ್ಟ ವಿಷಯವನ್ನು ದೊಡ್ಡದಾಗಿ ಮಾಡಬೇಡ.
17. ನಿಜವಾದ ಸಿರಿವಂತನಾಗ ಬೇಕೆಂದರೆ ಕಡು ದೀನರ ಸೇವೆಮಾಡು. ಬ್ಯಾಂಕಿನ ದುಡ್ಡು ಸಿರಿವಂತಿಕೆಯ ಚಿಹ್ನೆಯಲ್ಲ
18. ಸತ್ಯ ಪ್ರಚಾರ ಮಾಡುತ್ತಿರುವ ಮಹಾತ್ಮರುಗಳಿಗೆ ದಿನವೂ ದಿನ ಸಹಾಯ ಕನಾಗಿರು.
19. ನೀನು ಮಾಡಲಿರುವ ಧರ್ಮ, ದಾನಗಳನ್ನು ಯಾರೊಡನೆಯು ಹೇಳದಿರು.
20. ಪತಿಸ್ನೇಹಿಯಾದ ಸ್ತ್ರೀಯು ದೇವತೆಗೆ ಸಮಾನವೆಂದು ಭಾವಿಸು
21. ನಿನ್ನ ಈ ನೂರು ದಿನದ ದೇಹವನ್ನೆ ಪ್ರಧಾನವಾಗಿಟ್ಟುಕೊಳ್ಳಬೇಡ. ಸರ್ವವೂ ನಿನ್ನಂತೆ!
22. ಒಡವರು ಹಿರಿಯರು ಆಡಿದ ಮಾತುಗಳನ್ನು ದುರ್ಲಕ್ಷ್ಯ ಮಾಡಬೇಡ.
23. ನಿನಗೆ ಶತ್ರು ಎನಿಸಿದವನ ಮನೆಯ ಪಕ್ಕದಲ್ಲೇ ವಾಸಿಸು.
24. ಇನ್ನೊಬ್ಬರಲ್ಲಿ ಕೋಪಿಸುವಾತನು ದ್ವಿಪಾದ ಪಶುವೇ ಸರಿ. ಆದ್ದರಿಂದ ಕೋಪಿಸಿಕೊಳ್ಳಬೇಡ. ಶಾಂತಿಯನ್ನು ತಂದುಕೊ.
25. ಶಾಂತಿಗೆ ಸಮಾನವಾದ ಸೌಖ್ಯವಿಲ್ಲ
26. ಹಣಗಾರರ ಸಹವಾಸವನ್ನು ಎಂದಗೂ ಮಾಡಬೇಡ.
27. ಈ ಮಾನವ ಪ್ರಪಂಚದಲ್ಲಿ ಧರ್ಮಿಷ್ಟ, ಸತ್ಯ ಪುರುಷರೇ ಶೂರರು ಮತ್ತು ಧೀರರು.
28. ಆರೋಗ್ಯರಿಗೆ ದುಡ್ಡನ್ನು ಕೊಡಬೇಡ. ಅನಾಥರಿಗೆ ಏಥೇಚ್ಛವಾಗಿ ಕೊಡು.
29. ಮನನೋಯುವಂತೆ ಮಾಡುವುದು ಹಿಂಸೆಯನ್ನು ಮಾಡಿದಂತೆ! ತನ್ನ ಧರ್ಮ ಆಚಾರ ವಿಚಾರವನ್ನು ಬಿಡಿಸಿಕೊಳ್ಳುವದು ಮಹಾ ಪಾತಕ ವಾಗದು!
30. ಮುಂದೆ ಕಾಣಾಕಾಂಕ್ಷಬೇಕು. ಅಲ್ಲಿಂದ ಇನ್ನೊಬ್ಬರಲ್ಲಿ ಹರಡಬೇಕು.
31. ಜಪತಪವೇ ಕಾದ್ರವೆಂದು ತಿಳಿ.
32. ನಿತ್ಯ ಸುಖವನ್ನು ಕೊಡತಕ್ಕ ವಿದ್ಯೆಯು ಭಕ್ತಿಯೆಂಬ ಶಾಶ್ವತ ದ್ರವ್ಯವನ್ನು ಏಥೇಚ್ಛವಾಗಿ ಸಂಪಾದಿಸು.
33. ಹಣವಿರುವ ಸ್ಥಳದಲ್ಲಿ ಅಪಾಯವಿದೆಯೆಂದೂ, ಅಧಿಕಾರವಿರುವಲ್ಲಿ ಅನ್ಯಾಯವಿದೆಯೆಂದೂ ಚೆನ್ನಾಗಿ ನೆನಪಿನಲ್ಲಿಡು.

ಪಥಿಕ.

ನಿನ್ನ ಆಣತಿಯಂತೆ ತಿರಬಾಗಿ ಹೊರಟಿಹೆನು
ಎಲ್ಲಿಗೆಂಬುದ ತಿಳಿಯ ಪಥಿಕ ನಾನು.
ದಾರಿಯೋಜನ ನಡೆದು ಆಶ್ರಯವ ಪಡೆಯದಲೆ
ದಾರಿಯಲೆ ಉಳಿದಿಹೆನು ಯಾತ್ರಿ ನಾನು.
ಪಥ ನಡೆದು ಬಸವಳಿದು ಕಂಗೆಟ್ಟು ನಿಂದಿಹೆನು
ಕಂಗಳಿದ್ದೆ ಕಾಣದೆಯ ಅಂಧ ನಾನು.
ಆಣತಿಯು ನಿತ್ಯನೀ ಘನ ನಿಧಿಯನೇ ಮರೆತು
ಮೋಹ ಪರವಶನಾದ ಹುಚ್ಚ ನಾನು.
ಎಲ್ಲಿ ಹೋಯಿತು ನಿನ್ನ ನಂಬಿದ್ದಾ ಮನವು
ಮಾಯದಾ ಸಂಸಾರದೊಳಗೆ ಜೀವನವು
ಪಥಗೆಟ್ಟು ಗುರಿಯಿಂದ ದೂರಾದೆನು
ಜೀವನದ ಸಾರವನು ಕಳಕೊಂಡೆನು. ॥ ೧ ॥
ದೆಸೆ ದೆಸೆಗೆ ಕಂಣುಗಳು ತವಕದಲಿ ನೋಡುವವು
ಎಲ್ಲಿ ದೆಸೆಯು ತೋರುತ್ತಿದೆ ಬಹು ಕತ್ತಲೆ.
ಹೃದಯ ಹಣತೆಯ ಹಚ್ಚಿ ನೋಡಿದೊಡೆ ತೋರುವದು
ಪಾಪಮಯ ಜೀವನದ ತನು ಬೆತ್ತಲೆ.
ನೀಲಿ ಕಣ್ಣುಗಳಲ್ಲಿ ಒರಟಾದ ಕುಚಗಳಲಿ
ಜಘನಗಳ ಕತ್ತಲಲಿ ಅಲೆದಾಡಿದೆ.
ಐಹಿಕದ ಭೋಗದಲಿ, ಶಾರೀರ ಸೌಖ್ಯದಲಿ
ಆಶ್ರಯವು ನಶ್ವರವು ನೀನಿಲ್ಲದೆ.
ಹಣದಿಂದ ಹಣದಂತೆ ವಿಷದಿಂದ ವಿಷವು
ಹಸಿಗೆಟ್ಟ ಭೋಗವನು ವಿಷವು ನಿಶ್ಚಯವು
ಜೀವನದ ಚಕ್ರದಲಿ ಸುತ್ತುತಿಹೆನು
ಭೋಗಕ್ಕೆ ಮನಸೋತು ಪಥಗೆಟ್ಟೆನು. ॥ ೨ ॥
ಸೋತು ಸೊರಗಿ ಬಾಡಿಹ ದಾರಿ ಹೋಕನು ನಾನು
ಆಶ್ರಯವ ಕಾಣದೇ ತೊಳಲುತಿಹೆನು
ನೀರಿಲ್ಲದ ದಾರಿಯಲಿ ಸಾಗಲಾರೆನು ಇನ್ನು
ಕೃಪೆಮಾಡಿ ತೋರಿಸೈ ಮಾರ್ಗವನ್ನು
ಮುಂದೆ ಸಾಗಲು ಕಾಲು ಒಪ್ಪಲಾರದು ಗುರುವೆ
ಹಿಂದಕ್ಕೆ ದಯಮಾಡಿ ಕರೆಸಿಕೊಳ್ಳೈ
ಬಂದ ದಾರಿಯ ಮರೆತು ತೊಳಲುತಿಹೆ ನನ್ನರಸ
ಎಂದಿಗೂ ಬೆಂಬಿಡದೆ ಕಾಪಾಡಲೈ.
ಪಥದಲ್ಲಿ ಧೃತಿಗೆಟ್ಟು ನಿಂದಿರುವೆ ತಂದೆ
ನಿನ್ನ ಬೆಳಕದು ಜ್ಯೋತಿ ಬೇಕಿರುವೆ ತಂದೆ
ಜೀವನದ ಮರಣಗಳ ಗಡಿ ದಾಟಲು
ಅದೆಬೇಕು ಬೇಡುವೆನು ಯಾವಾಗಲು ॥ ೩ ॥

"ಬಿ"

(ಅರ್ಥಾತ ಅವಚಕೆಯಿಂದ ಬೇಳು ಕಾಣದಿರುವ ಶ್ರೀ ಶ್ರೀ ಯುವರ ಬಿ ಕೃಷ್ಣಪ್ಪ ಮುತ್ತಣ್ಣರು)

ಕೊಡಗಿನ ಮಾದರಿ ಭವನವೊಂದನ್ನು ನೋಡಿ.

'ಆನಂದ ಭವನ.'

ಲೇ:— ಶ್ರೀ ಕೆ. ಸಿ. ಬಿ.

ಮಾನವನು ತನ್ನ ಜೀವಮಾನದಲ್ಲಿ ಅದೆಷ್ಟೋ ಕಷ್ಟನಷ್ಟಗಳನ್ನೂ ದುಃಖ ಸಂಕೋಚಗಳನ್ನೂ ಅನುಭವಿಸುತ್ತಾನೆ. ತಾನು ಸುಖ ಸಂತೋಷಗಳನ್ನು ಅನುಭವಿಸುತ್ತಿರುವಾಗ ಅವನಿಗೆ ಪ್ರಪಂಚದ ಜೀವಿಗಳ ಜೀವನದ ಏರುಪೇರುಗಳೆಲ್ಲವೂ ಮರೆಯಾಗಿ ವಿಶ್ವವೆಲ್ಲವೂ ತನ್ನಂತೆಯೇ ಸುಖ ಸಂತೋಷಗಳಲ್ಲಿ ತಲ್ಲೀನವಾಗಿ ಹೋಗಿರುವದೆಂದು ಭಾವಿಸಿ, ಆ ವಿಚಾರವನ್ನು ಕುರಿತು ವಿಮರ್ಶಿಸುವ ಗೊಡವೆಗೇ ಹೋಗುವದಿಲ್ಲ. ಆದರೆ ತಾನು ಯಾವಾಗ ಕಷ್ಟ ನಷ್ಟಗಳಿಗೆ ಗುರಿಯಾಗಿ ಬೆಂದು ಬೇಗುದಿಗೊಂಡಿರುತ್ತಾನೋ ಆಗ ಮಾತ್ರ ಜಗತ್ತೇ ಚಿಂತಾಮಯ. ಎಲ್ಲಿ ನೋಡಿದರೂ ಅರೆ, ಅಪೂರ್ಣತೆ ಎಂದು ಮುಂತಾಗಿ ತನ್ನ ಜೀವ ಮಾನವನ್ನು ಕುರಿತು ವಿಮರ್ಶೆಗೆ ತೊಡಗುವನು. ಅವುಗಳ ಗೂಢಾರ್ಥ ಈ ರೀತಿಯಲ್ಲಿ ಒಂದರ ಹಿಂದೊಂದಾಗಿ ಸ್ಮೃತಿಫಲಕದಲ್ಲಿ ಹೊಳೆದು ಪುನಃ ಕೆಲವೇ ಸಮಯದ ನಂತರ ಮಾಯವಾಗುವವು. ಹೀಗೆ ಸುಖ ದುಃಖಗಳ ಕಲ್ಪನೆಯ ಚಕ್ರ ತಿರುಗುತ್ತಿರುತ್ತದೆ.

ಕೆಲವು ದಿವಸಗಳಿಂದ ಎಡೆಬಿಡದೆ ಒಂದರನಂತರೊಂದಾಗಿ ಕಷ್ಟಗಳನ್ನನುಭವಿಸುತ್ತಿದ್ದ ನನಗೆ ಜೀವನದಲ್ಲಿ ಬೇಸರ ಉಂಟಾಗಿತ್ತು. ಏರುಪೇರುಗಳ ಪ್ರಮಾಣವೇ ಹೆಚ್ಚಾಗಿ ಸೇರಿರುವ ಈ ನನ್ನ ಜೀವನ ವ್ಯಾಪಾರಕ್ಕೆ ತಿಲಾಂಜಲಿಯನ್ನಿತ್ತು ಹೊರಟುಹೋಗಬಾರದೇಕೆ? ಈ ನಶ್ವರ ಜೀವನವು ಎಂದಾದರೊಂದು ದಿನ ಮರಣವನ್ನು ಸೇರಬೇಕೆಂಬುದನ್ನು ಅರಿತೂ ಈ ಗೊಂದಲ ಸಣಸಾಟಗಳ ಗೊಡವೆಯೇಕೆ? ಈ ಮರ್ಮವನ್ನು ಅರಿತುದರಿಂದಲೇ ಗೌತಮ ಬುದ್ಧ, ಸ್ವಾಮಿ ವಿವೇಕಾನಂದ ಮೊದಲಾದ ಶ್ರೇಷ್ಠರು ಪರಿವ್ರಾಜಕ ವೇಷದಿಂದ ಊರೂರು ಅಲೆದಾಡಬೇಕು. ಆದರೆ ಅವರು ಪ್ರೇಮವೇ ದೈವವೆಂದೂ, ಅಚಲ ಪ್ರೇಮವಿರುವಲ್ಲಿ ಸುಖ ದುಃಖಗಳು ನೆಲೆಸಿರುವವೆಂದೂ ಮುಂತಾಗಿ ಸಾರಿರುವದಿಲ್ಲವೇ? ಹಾಗಾದರೆ ಅಂಥಾ ಅಚಲ ಪ್ರೇಮವು ಮಾನವರಲ್ಲಿ ಎಷ್ಟು ಜನಕ್ಕಿದೆ?

ನನ್ನ ಜೊತೆಯಲ್ಲಿ ಕಾಲೇಜಿನಲ್ಲಿ ವ್ಯಾಸಂಗಮಾಡುತ್ತಿದ್ದ ಕೃಷ್ಣನ ಮನೆಯೊಂದರ ಹಿಂದಿನ ಘಟನೆ ನನಗೆ ಜ್ಞಾಪಕಕ್ಕೆ ಬಂತು. ಕೃಷ್ಣನ ಮನೆಯವರು ತೋರಿಸಿದ್ದ ಅದೆಂಥಾ ಅನುಪಮ ಪ್ರೇಮ! ಆವನ ಸಹೋದರರು ನನ್ನನ್ನು ಏಕಾಂಗಿಯಾಗಿ ಒಂದು ನಿಮಿಷವೂ ಬಿಡದೆ ತನ್ನೊಡನೆಯೇ ಸಂತೋಷದಿಂದ ಅಲೆದಾಡುತ್ತಿದ್ದರು. ಹಾಗೆ ನನಗೆ ಬಹಿರ್ದೇಶಕ್ಕೆ ಹೋಗಲೂ ಕಷ್ಟವಾಗುತ್ತಿತ್ತು! ನನಗೆ ಗೊತ್ತಿದ್ದ ಕೇವಲ ಎರಡು ಮಾತುಗಳನ್ನು ಆಗಾಗ ಹೇಳಿ ಕೇಳಿ ಸಂತೋಷಪಡುತ್ತಿದ್ದರು. ಕೃಷ್ಣನ ಸಹೋದರಿಯರ ಹೃದಯದಲ್ಲಂತೂ ಪ್ರೇಮವೇ ಮನೆ ಮಾಡಿತ್ತು. ಅವರ ಪ್ರೇಮಪೂರ್ವಕ ಸತ್ಕಾರ ಸನ್ಮಾನಗಳು ನನ್ನನ್ನು ಮುಗ್ಧನನ್ನಾಗಿ ಮಾಡಿದ್ದವು. ಎಂತೆಂಥಾ ತಿಂಡಿ ತೀರ್ಥಗಳನ್ನು ಮಾಡಿ ಬಡಿಸಿದರೂ ಅವರಿಗೆ ಸಾಲದು. ಎಂತೆಂಥಾ ಊಟ ಉಪಚಾರಗಳನ್ನು ಮಾಡಿದರೂ ಸಾಲದು. ಅವರ ಹರ್ಷವದನಗಳು ನನ್ನ ಸ್ಥಿತಿಗತಿಯನ್ನೂ, ನನ್ನ ಇತರ ಬಂಧು ಬಳಗದವರೆಲ್ಲರನ್ನೂ ಮರೆಯುವಂತೆ ಮಾಡಿಬಿಟ್ಟಿದ್ದವು. ಮೊಟ್ಟಮೊದಲು ಕೃಷ್ಣನು ನನ್ನನ್ನು ತನ್ನ ಮನೆಗೆ ಕರೆದಾಗ ನನಗೆ ಸಂಕೋಚವಾಗಿತ್ತು. ಕೃಷ್ಣನೇನೋ ನನ್ನ ಮಿತ್ರ. ಆದರೆ ಅವನ ಮನೆಯವರೂ ಅವನಂತೆಯೇ ಸರಳ ಸ್ವಭಾವದಿಂದಲೂ, ಪ್ರೇಮ ವಿಶ್ವಾಸಗಳಿಂದಲೂ ಕೂಡಿರಬಹುದೇ ಎಂದು ನಾನು ಯೋಚಿಸಿದ್ದೆನು. ಆದರೆ ಆ ರೀತಿ ಯೋಚಿಸಿದ್ದಕ್ಕಾಗಿ ಈಗ ನನ್ನನ್ನು ನಾನೇ ನಿಂದಿಸಿಕೊಳ್ಳಬೇಕಾಯಿತು. ಆಹಾ, ಅವರ ಹೃದಯಗಳು ಆಗ ತಾನೇ ಆಕಾಶದಿಂದ ಬೀಳುತ್ತಲೇ ಇರುವ ನೀರಿನ ಹನಿಯಂತೆ ಪರಿಶುದ್ಧವಾದವು! ಅವರ ಚಿತ್ತವು ಅದೇ ನೀರಿನ ಹನಿಯನ್ನು ನೆಲಕ್ಕೆ ಬೀಳಗೊಡದೆ ಅಂಗೈಯಲ್ಲಿ ಇಟ್ಟು ನೋಡಿದರೆ ಎಷ್ಟು ನಿರ್ಮಲವಾಗಿ ತೋರುವದೋ ಅಷ್ಟು ನಿರ್ಮಲ. ಅವರ ಪ್ರತಿಯೊಂದು ಮಾತಿನ ಧ್ವನಿಯಲ್ಲಿಯೂ ಪ್ರೀತಿ ವಿಶ್ವಾಸಗಳ ಕುರುಹುಗಳು ಕಂಡು ಬರುತ್ತಿದ್ದವು. ಅವರ ರೀತಿ ನೀತಿಗಳು ನಾನೂ ಅವರ ಸಹೋದರನಾಗಿ ಜನಿಸಿದ್ದರೆ ಒಳ್ಳೆಯದಿತ್ತು ಎಂದು ಎನಿಸುತ್ತಿದ್ದವು. ಅವರನ್ನು ಮೆಚ್ಚಿಸಲೋಸುಗ ನಾನೆಷ್ಟು ತಿಂಡಿತೀರ್ಥಗಳನ್ನು ಬಲಾತ್ಕಾರದಿಂದ ತಿಂದರೂ ಸಹ ಅವರಿಗೆ ಅದು ತೃಪ್ತಿಯನ್ನುಂಟುಮಾಡುತ್ತಿರಲಿಲ್ಲ; ಬದಲು ಸಾಕು ಸಾಕೆನ್ನುತ್ತಾ ಕೂಗಿಕೊಂಡಿದ್ದಂತೆಯೇ ಮೇಲೆ ಮೇಲೆ ಸುರಿಯುತ್ತಿದ್ದರು. 'ಊಟ ಮಾಡುವಾಗ ಹೊಟ್ಟೆಗೆ ವಂಚನೆ ಮಾಡಬಾರದು' ಎಂಬುವದೇ ಅವರ ವಾದ.

ತಮ್ಮ ಪ್ರೀತಿಯ ಮಾತೆಯೊಡನೆ ಅವರು ದೈವ ಪೂಜೆ ಮಾಡುತ್ತಿದ್ದುದನ್ನು ಕಂಡು '[illegible]' ಎಂಬ ಸಂಶಯ ಗೋಚರಿಸಿದ್ದ ನಾಸ್ತಿಕನಾದ ನನಗೂ ದೈವ ಭಕ್ತಿಯುಂಟಾಗಿ ದೇವರನ್ನು ಮನದಲ್ಲೇ ಪ್ರಾರ್ಥಿಸತೊಡಗಿದೆನು. ಅವರೆಲ್ಲರೂ ಸೇರಿ ಭಕ್ತಿಯಿಂದ ದೇವರ ನಾಮಸ್ಮರಣೆಯನ್ನು ಮಾಡಿ ಅನಂತರ ನೈವೇದ್ಯವನ್ನರ್ಪಿಸಿ ಉಳಿದುದನ್ನು ನನಗೂ ಸ್ವಲ್ಪ ಕೊಡುತ್ತಿದ್ದರು. ಅವರದು ಪ್ರೇಮ ಪೂಜೆ, [illegible] ದೈವ ಪೂಜೆ. ಅವರು ದೇವರನ್ನು ಅನನ್ಯ ಭಕ್ತಿಯಿಂದ ಭಜಿಸುತ್ತಿರಲು ಅವರ ಆ ನಿಲಯ ಆನಂದದಿಂದ ತುಂಬಿ ತುಳುಕಾಡುತ್ತಿದ್ದಂತೆ ಭಾಸವಾಗುತ್ತಿತ್ತು. ದೇವರ ಬಳಿ [illegible] ಕೆಂಪಲಂಕೃತವಾಗಿ ಶೋಭಿಸ[illegible] ದೀಪದ ಜ್ಯೋತಿಯು ಪ್ರಕಾಶಿ[illegible] ಕಂಡು ಮರುಳು ಜನರು ದೇವ[illegible]ಕ್ಕಾಗಿ ಏಕೆ ಕಾಶಿ, ಗೋಕರ್ಣ, ರಾಮೇಶ್ವರ ಎಂಬ ಯಾತ್ರಾ ಸ್ಥಳಗಳಿಗೆ ವ್ಯರ್ಥವಾಗಿ ಕಷ್ಟಪಟ್ಟು ಹೋಗುತ್ತಾರೆ? ಅಂಥಾ ಪ್ರತಿಯೊಬ್ಬ ಭಕ್ತನೂ ಈ ರೀತಿಯ ಯಾತ್ರಾ ಸ್ಥಳವನ್ನು ತನ್ನ ತನ್ನ ಮನೆಯಲ್ಲಿಯೇ ಮಾಡಿಕೊಳ್ಳಬಹುದಲ್ಲಾ ಎಂದು ನನಗೆ ಅನ್ನಿಸುತಿತ್ತು.

ಆ ಸಹೋದರ ಸಹೋದರಿಯರನ್ನು ಹಡೆದ ಅವರ ಮಾತೆಯು ನಿಜವಾಗಿಯೂ ಧನ್ಯಳು ಎಂದು ನಾನೇ ಮನದಲ್ಲಿ ಯೋಚಿಸಿಕೊಂಡೆನು. ಆ ಮಾತೆಯ ದೇಹವು ಮುಪ್ಪಿನಿಂದ ಸ್ವಲ್ಪ ಕೃಶವಾಗಿದ್ದರೂ ಅದೊಂದು ಅಪೂರ್ವ ಶಕ್ತಿಯು ಅವರ ವದನದಲ್ಲಿ ತಾಂಡವವಾಡುತ್ತಿರುವಂತೆ ನನಗೆ ತೋರುತಿತ್ತು. ಅವರಿಗೆ ತನ್ನ ಮಕ್ಕಳು ಬೇರೆ, ಪರರ ಮಕ್ಕಳು ಬೇರೆ ಎಂಬ ಆ ಭೇದ ಭಾವವು ಕನಸಿನಲ್ಲಿಯೂ ಸಹ ಇಲ್ಲ. ಮಕ್ಕಳೆಂದರೆ ಅವರಿಗೆ ಅದೆಷ್ಟು ಪ್ರೀತಿ, ಅದೆಷ್ಟು ವಾತ್ಸಲ್ಯ, ಅದೆಷ್ಟು ಮಮತೆ! ಅವರ ಹೃದಯವೇ ಪ್ರೇಮದ ಮುದ್ದೆಯೋ ಎಂದೆನಗೆ ಆಶ್ಚರ್ಯವಾಗುತಿತ್ತು. ಆರಾಮಾಸನದಲ್ಲಿ ಕುಳಿತು ನನ್ನೊಡನೆ ಅತಿ ಪ್ರೀತಿಯಿಂದ ಸಂಭಾಷಿಸುತ್ತಿದ್ದರು. ನಾನೆಲ್ಲಿಯಾದರು ಹೊರಗೆ ಹೋಗಿ ಬರುವದು ತಡವಾದರೆ 'ಇಷ್ಟು ಹೊತ್ತು ಎಲ್ಲಿ ಹೋಗಿದ್ದೆ? ನಿನ್ನನ್ನು ನಾನು ಕಾಯುತ್ತಾ ಇದ್ದೆನಲ್ಲ' ಎಂದು ಮುಂತಾಗಿ ಪ್ರಶ್ನಿಸುವರು. ಭಗವಂತನು ಆ ಮಾತೆಗೂ ಅವರ ಮಕ್ಕಳಿಗೂ ಮಾತ್ರ ವಿಶೇಷವಾದೊಂದು ಹೃದಯ-ಚಿತ್ತಗಳನ್ನು ಕೊಟ್ಟಿರುವನೇ ಎಂದು ನಾನು ಭಾವಿಸಿದೆನು. ಆದರೆ ಕ್ರೂರ ವಿಧಿಯು ಆ ತಾಯಿ ಮಕ್ಕಳ ಸುಖ ಸಂತೋಷಗಳಿಗೆ ಮತ್ಸರವನ್ನು ಹೊಂದಿಯೋ ಏನೋ, ಆ ಮಕ್ಕಳ ಪಿತನನ್ನು ಮೊದಲೇ ಕೊಂಡೊಯ್ದಿತ್ತು. ಅವರ ಈ ರೀತಿಯ ಪ್ರೇಮಪೂರಿತ ಸತ್ಕಾರ ಸನ್ಮಾನಗಳು ನನ್ನ ಹೃದಯವನ್ನು ಸೆರೆ ಹಿಡಿದು ಕೇವಲ ಎರಡು ದಿವಸಗಳ ತನಕ ಅವರಲ್ಲಿ ವಿಹರಿಸಲು ತೀರ್ಮಾನಿಸಿದ್ದ ನನ್ನನ್ನು ನನಗೇ ಗೋಚರವಾಗದಂತೆ ಎರಡು ವಾರಗಳ ವರೆಗೆ ಇರುವಂತೆ ಮಾಡಿತು. ಜಾನ್ ಕ್ವೀನ್ಸ್ ಎಂಬೊಬ್ಬ ಆಂಗ್ಲ ಕವಿಯು ಎಂದಂತೆ 'Alas! how swift the moments fly! How flash the years along'! ನನಗೂ ಸಮಯದ ಓಟವು ತಿಳಿಯಲೇ ಇಲ್ಲ. ಆಹಾ, ಅದೀಗ 'ಆನಂದ ಭವನ.'

ಹೌದು, ಕೃಷ್ಣನ ಮನೆಯು ಪ್ರೇಮ ವಿಶ್ವಾಸಗಳ ನೆಲೆವೀಡು; ಸುಖ ಸಂತೋಷಗಳ ತಾಯ್ನಾಡು. ಅವರ ಪ್ರೇಮಾಂಕಿತ ಹೃದಯಗಳು ಎಂಥಾ ಕಠಿನ ಹೃದಯದವರನ್ನೂ ಸರಳ ಹೃದಯರನ್ನಾಗಿ ಪರಿವರ್ತಿಸಬಲ್ಲವು. ಪ್ರೇಮವೇ ದೈವವೆಂಬ ಕ್ರಿಸ್ತ, ಬುದ್ಧ, ಶ್ರೀರಾಮಕೃಷ್ಣ ಪರಮಹಂಸ, ಗಾಂಧೀಜಿ ಮೊದಲಾದ ಮಹಾತ್ಮರ ನುಡಿಯು ಖಂಡಿತವಾಗಿಯೂ ನಿಜ. ಶ್ರೀರಾಮಕೃಷ್ಣ ಪರಮಹಂಸರೆಂದಂತೆ ದೇವರು ಮಾನವನ ದುರಹಂಕಾರದ ತೆರೆಯ ಮರೆಯಲ್ಲಡಗಿರುವನು. ಅವನನ್ನು ಕಾಣಬೇಕಾದರೆ ಆ ತೆರೆಯನ್ನು ಪ್ರೇಮವೆಂಬ ದಾರದ ಮೂಲಕ [illegible] ಸೇರಿಸಬೇಕು. 'The light of the whole life dies, When love is done' ಎಂಬ ಬೋರ್ಡಿಲನ್ ಕವಿಯ ಮಾತು ಸತ್ಯವಾದದು. [illegible]ದ ಪ್ರೇಮ ವಿಶ್ವಾಸಗಳು ಮಾನವನಲ್ಲಿ ನೆಲೆಸಿಲ್ಲದಿರುವದೇ ಈ ಪ್ರಪಂಚದ ಅನೇಕ ಕಷ್ಟ ಪರಂಪರೆಗಳಿಗೆ ಕಾರಣ. ಮಾನವ ಪ್ರೇಮದ [illegible] ವಿಶ್ವಶಾಂತಿಯನ್ನು ಕಟ್ಟಬಹುದೆಂಬ ಕವಿ ರವೀಂದ್ರರ ಅಭಿಪ್ರಾಯವು ಖಂಡಿತವಾಗಿಯೂ ನಿಜ. ಇದನ್ನು ಬಿಟ್ಟು ಜಾಗತಿಕ ರಾಷ್ಟ್ರ ಸಂಘ, ಭದ್ರತಾ ಸಮಿತಿ ಮುಂತಾದ ಸಂಸ್ಥೆಗಳು ವಿಶ್ವಶಾಂತಿ ಸ್ಥಾಪನೆಗಾಗಿ ಹೋರಾಡುವದು ಮರುಳುತನವೇ ಸರಿ! ಪ್ರೇಮವು ಕುರುಕ್ಷೇತ್ರವನ್ನು ನಂದಗೋಕುಲವನ್ನಾಗಿ ಮಾಡಬಲ್ಲದು. ದುಷ್ಟರನ್ನು ಶಿಷ್ಟರನ್ನಾಗಿ ಮಾಡಬಲ್ಲದು. ನಾಸ್ತಿಕರನ್ನು ಆಸ್ತಿಕರನ್ನಾಗಿ ಮಾಡಬಲ್ಲುದು. ಹೌದು, ಕೃಷ್ಣನ ಮನೆಯವರ ಪ್ರೇಮ ಪೂಜೆಯು ನನ್ನನ್ನು ಆಸ್ತಿಕನನ್ನಾಗಿ ಮಾಡಿತು!

ನನ್ನ ವಿಮರ್ಶೆಯು ನಿದ್ರಾದೇವಿಯ ಒಲಿಯುವಿಕೆಯಿಂದ ಅಲ್ಲಿಗೇ ನಿಂತಿತು.

International Trucks & Hudson Cars

ಕಳೆದ ನಲವತ್ತು ವರ್ಷಗಳಿಂದ ಹೆಸರು ಪಡೆದ ಮೋಟಾರು ಮತ್ತು ಟ್ರಕ್ಕುಗಳ ತಯಾರಕರಾದ ಅಮೇರಿಕದ

ಇಂಟರ್‌ನೇಶನಲ್ ಹಾರ್ವೆಸ್ಟರ್ಸ್ ಎಕ್ಸ್‌ಪೋರ್ಟ್ ಕಂಪೆನಿ

ಯವರ ಟ್ರಕ್ಕು ಮತ್ತು ಹಡ್ಸನ್ ಕಾರುಗಳು ನಮ್ಮಲ್ಲಿ ದೊರೆಯುವವು. ಮಿತ ಖರ್ಚಿನಿಂದ ಉತ್ತಮ ಲಾಭ ಪಡೆಯಲು ಇವು ಉತ್ತಮ ಟ್ರಕ್ಕುಗಳು. ಪ್ರತಿ ಗೆಲನ್ ಪೆಟ್ರೋಲಿಗೆ ಅತಿ ಹೆಚ್ಚಿನ 'ಮೈಲೇಜ್' ಕೊಡುತ್ತವೆ. ಇವುಗಳ "ಸ್ಪೇರ್ ಪಾರ್ಟ್ಸ್" ಗಳೂ ನಮ್ಮಲ್ಲಿ ದೊರೆಯುವವು. ಹೆಚ್ಚಿನ ಮಾಹಿತಿಗೆ ಈ ಪತ್ತೆಗೆ ಬರೆದು ತಿಳಿದು ಯಾ ಖುದ್ದು ವಿಚಾರಿಸಬಹುದು.

M. U. ACHANNA,
Manager,
"INDIAN AUTOMOBILES" (UDIPI)
Agents,
Hudson Cars and International Trucks,
For
South Kanara & Coorg,
Branch Mercara.

ಈ ವಾರದ ಕಥೆ.

ಮನುಷ್ಯಾಂತಕಿ!

ಲೇಖಕಿ:- ಮಿಸ್. ಬಿಟ್ಟಿಯಂಡ ಎಂ. ಪೊನ್ನಮ್ಮ, ಮಡಿಕೇರಿ.

ಹನುಮನ ಹಳ್ಳಿಯಲ್ಲಿ ಶೇಷಗಿರಿರಾಯರ ತೋಟವಿತ್ತು. ಇವರ ಹತ್ತಿರ ಶೂರಪ್ಪನೆಂಬ ಒಬ್ಬ ನಂಬಿಗಸ್ತನಾದ ಆಳಿದ್ದನು. ಆತನು ನಂಬಿಗಸ್ತನೇ ಅಲ್ಲ; ಪ್ರಪಂಚ ವ್ಯವಹಾರ ತಿಳಿದ ಜ್ಞಾನಿಯೂ ಆಗಿದ್ದನು!

'ಭೂಲೋಕದಲ್ಲಿ ಜನರೆಲ್ಲಾ ಹಣವೆಂದರೆ ಹಾತೊರೆಯುತ್ತಾರೆ. 'ಹಣ ಕಂಡರೆ ಹೆಣ ಬಾಯಿ ಬಿಡುವದು' ಎಂಬ ನಾಣ್ಣುಡಿ ಎಲ್ಲರಿಗೂ ಗೊತ್ತೇ ಇದೆ. ಆದರೆ ನಮ್ಮ ಶೂರಪ್ಪನಿಗೆ ಹಣವೆಂದರೆ ಭಯ! ಅವನು ತನ್ನ ಸಂಬಳವನ್ನು ಕೂಡ ಪೂರ್ತಿ ಪಡಕೊಳ್ಳುತ್ತಿರಲಿಲ್ಲ. ತನ್ನ ಖರ್ಚಿಗೆ ಸರಿಯಾಗಿ ಹಣ ಕೇಳಿಕೊಳ್ಳುತ್ತಿದ್ದನು. ಶೇಷಗಿರಿಯು ಕಾರಣವನ್ನು ಕೇಳಲು ಶೂರಪ್ಪನು ಹೀಗೆನ್ನುತ್ತಿದ್ದನು. 'ಸ್ವಾಮಿ, ಹಣ ನನಗೆ ಬೇಡ. ಅದು ಮನುಷ್ಯನನ್ನು ಕೊಲ್ಲುವದು.'

ಇವನ ನಂಬಿಕೆಯನ್ನು ಕಂಡು ರಾಯರು ಇವನ ಸಂಬಳವನ್ನು ಇವನ ಹೆಸರಿನಲ್ಲಿ ಬ್ಯಾಂಕಿನಲ್ಲಿಡುತ್ತಿದ್ದರು. ಒಂದು ದಿವಸ ಶೂರಪ್ಪನು ತನ್ನ ಯಜಮಾನರ ಹೊಸ ಬಾವಿಗೆ ಕಟ್ಟೆ ಕಟ್ಟಬೇಕೆಂದು ಕಾಡೊಂದರ ಹತ್ತಿರದಲ್ಲಿ ಕಲ್ಲುಗಳನ್ನು ಅಗೆಯುತ್ತಿದ್ದನು. ಅಗೆಯುತ್ತಿದ್ದ ಹಾಗೆ ಢಣ! ಢಣ! ಎಂಬ ಶಬ್ದ ಕೇಳಿಸಿತು. ಶೂರಪ್ಪನು ಕುತೂಹಲದಿಂದ ಸ್ವಲ್ಪ ಆಳವಾಗಿ ಅಗೆದನು. ಅಗೆದು ನೋಡುವಾಗ ಒಂದು ದೊಡ್ಡ ಕಡಾಯಿ ತೋರಿಬಂತು. ಅದರ ತುಂಬಾ ಹಣವಿತ್ತು. ಇದನ್ನು ಕಂಡೊಡನೆ ಶೂರಪ್ಪನು 'ಮನುಷ್ಯಾಂತಕಿ! ಮನುಷ್ಯಾಂತಕಿ!' ಎಂದು ಕೂಗಿಕೊಂಡು ಅಲ್ಲಿಂದ ಓಡಿದನು. ಅಷ್ಟರಲ್ಲಿ ಅದೇ ಗ್ರಾಮದ ನರಸಿಂಹ ಭಟ್ಟರು ಮತ್ತು ನಿಜಲಿಂಗ ಭಟ್ಟರು ಎಲ್ಲಿಯೋ ಸತ್ಯನಾರಾಯಣ ಸ್ವಾಮಿಯವರ ಪೂಜೆ ತೀರಿಸಿ ದಾನ ದಕ್ಷಿಣೆ ಪಡಕೊಂಡು ಆನಂದದಿಂದ ಬರುತ್ತಿದ್ದರು. ಅವರನ್ನು ಕಂಡು ಶೂರಪ್ಪನು 'ಸ್ವಾಮಿ, ಮೈದಾನದಲ್ಲಿ ಮನುಷ್ಯಾಂತಕಿ ಇದೆ' ಎಂದು ಹೇಳಿದನು. ಅಷ್ಟರೊಳಗೆ ಬೇಟೆಗೆ ಹೋಗಿದ್ದ ಸೋಮಪ್ಪ ಮತ್ತು ತಿಮ್ಮಪ್ಪ ಇವರೂ ಈ ಬೊಬ್ಬೆಯನ್ನು ಕೇಳಿ ಕಾಡಿನೊಳಗಿನಿಂದ [illegible] ಬಂದರು. ಓಡುತ್ತಿರುವ ಶೂರಪ್ಪನನ್ನು ಹಿಡಿದು 'ಕಾರಣವೇನು? ವಿವರವಾಗಿ ಹೇಳು.' ಎಂದರು. ಶೂರಪ್ಪನು 'ಮನುಷ್ಯಾಂತಕಿ ಅಲ್ಲಿದೆ' ಎಂದು ಮುಂದೆ ಸಾಗಿದನು. ಅಷ್ಟರಲ್ಲಿ ನಾಲ್ವರು (ಭಟ್ಟರು ಮತ್ತು ಬೇಟೆಗಾರರು) ಶೂರಪ್ಪನನ್ನು ಹಿಡಿದು, 'ಹಣದ ಕಡಾಯಿಯಿರುವ ಸ್ಥಳವನ್ನು ತೋರಿಸು, ಮನುಷ್ಯಾಂತಕಿಯನ್ನು ಗುಂಡು ಹಾರಿಸಿ ಕೊಲ್ಲುತ್ತೇವೆ' ಎಂದು ಶೂರಪ್ಪನಿಗೆ ಅಭಯವನ್ನಿತ್ತರು.

ಶೂರಪ್ಪನು ಅವರೆಲ್ಲರನ್ನೂ ಹಣವಿದ್ದಲ್ಲಿಗೆ ಕರೆತಂದು ಅದನ್ನು ತೋರಿಸಿ ಹೊರಟು ಹೋದನು!

ಹಣವನ್ನು ಕಂಡ ಕೂಡಲೇ ನಾಲ್ವರೂ ಆನಂದದಿಂದ ನಗಲಾರಂಭಿಸಿದರು. ಆನಂದಭರಿತರಾಗಿ ಒಬ್ಬರನ್ನೊಬ್ಬರು ನೋಡತೊಡಗಿದರು. ಶೂರಪ್ಪನ ದಿಗಿಲನ್ನೂ ಮುಟ್ಠಾಳತನವನ್ನೂ ಹಾಸ್ಯ ಮಾಡಿದರು.

ನರಸಿಂಹ:- ನಿಜಲಿಂಗ ಭಟ್ಟರೇ, ಕಂಡಿದ್ದಿರಾ ನಮ್ಮ ಸತ್ಯನಾರಾಯಣ ಪೂಜೆಯ ಫಲವು ಕ್ಷಣದಲ್ಲೇ ಕಾಣಿಸಿತು!

ನಿಜಲಿಂಗ:- ನಿಜವಾಗಿಯೂ ಆದರ ಫಲ ದೊರೆತೇ ತೀರಬೇಕು.

ತಿಮ್ಮಪ್ಪ:- (ಸೋಮಪ್ಪನನ್ನು ಕುರಿತು) 'ನೋಡಿದಿರಾ, ನಾವು ಬೇಟೆಗೆ ಹೊರಡುವಾಗ ರಾಮಕ್ಕನ ಮುಖವನ್ನು ನೋಡಿದ ಲಕ್ಷಣ?'

ಸೋಮಪ್ಪ:- 'ಸರಿ, ಬಾ ಇಲ್ಲಿ ಕೂರೋಣ. (ಇಬ್ಬರೂ [illegible] ಗಡಿಗೆಯ ಹತ್ತಿರ ಕೂತರು)

ಇವನ್ನು ನೋಡಿ ನಿಜಲಿಂಗ ಭಟ್ಟರು ಮತ್ತು ನರಸಿಂಹ ಭಟ್ಟರು ಕೂಡ ಗಡಿಗೆಯ ಸಮೀಪ ಕೂತರು. ಭಟ್ಟರಿಗೆ ಮೋಸ ಮಾಡಿ ತಾವು ಹಣವನ್ನು ಹಾರಿಸಬೇಕೆಂದು ಬೇಟೆಗಾರರು! ಬೇಟೆಗಾರರಿಗೆ ಸೊನ್ನೆ ಹಾಕಿ ತಾವು ಲಾಭಯಿಸಬೇಕೆಂದು ಭಟ್ಟರು! ಹೇಗೂ ಸಂಜೆಯಾಯಿತು. ಕಡೆಗೆ ಹಣವನ್ನು ಪಾಲು ಮಾಡಿಕೊಳ್ಳುವದೆಂದಾಯಿತು. ಹಣ ಪಾಲು ಮಾಡಿ ಹಣಹಾಕಿಕೊಳ್ಳಲು ಯಾರ ಹತ್ತಿರವೂ ಚೀಲಗಳಿರಲಿಲ್ಲ.

ಭಟ್ಟರು ಬೇಟೆಗಾರರನ್ನು ಕುರಿತು, 'ನಾವು ಹೋಗಿ ಕಾಫಿ ಕುಡಿದು ನಿಮಗಿಬ್ಬರಿಗೆ ಕಾಫಿ ತೆಗೆದುಕೊಂಡು, ಹಣ ಹಾಕಿಕೊಳ್ಳಲು ಚೀಲಗಳನ್ನೂ ತೆಗೆದುಕೊಂಡು ಬರುತ್ತೇವೆ. ಅಷ್ಟರವರೆಗೆ ನೀವಿಬ್ಬರೂ ಇಲ್ಲಿ ಕಾದಿರಬೇಕಾಗುವುದು' ಎಂದರು. ಈ ಮಾತುಗಳನ್ನು ಕೇಳಿದೊಡನೆಯೇ ಬೇಟೆಗಾರರು ಸಂತೋಷದಿಂದ 'ಆಗಲೀ' ಎಂದರು.

ಭಟ್ಟರು ಹೋಟೇಲಿನತ್ತ ಹೋಗುತ್ತಿರುವಾಗ್ಯೆ ತಮ್ಮೊಳಗೆ ಈ ವಿಚಾರ ಚರ್ಚೆ ಮಾಡಿದರು.

ನರಸಿಂಹ:- 'ನಿಜಲಿಂಗ ಭಟ್ಟರೇ, ನಾವು ನಾಲ್ಕು ಚೀಲಗಳನ್ನು ತೆಗೆದುಕೊಂಡು ಹೋಗುವದರ ಬದಲು ಎರಡು ದೊಡ್ಡ ಚೀಲಗಳನ್ನು ತೆಗೆದುಕೊಂಡು ಹೋಗುವಾ'

ನಿಜಲಿಂಗ-'ಅದು ಹೇಗೆ? ನಾಲ್ಕು ಮಂದಿಗೆ ಹಂಚುವಾಗ ಎರಡು ಚೀಲ ಎಲ್ಲಿಗೆ ಸಾಕು?'

ನರಸಿಂಹ-'ನಾಲ್ಕು ಮಂದಿಗೇ? ನಾವಿಬ್ಬರೆ ಹಂಚಿಕೊಳ್ಳೋಣ'.

ನಿಜಲಿಂಗ-ಹಾಗೆ ಮಾಡಿದರೆ ಬೇಟೆಗಾರರು ನಮ್ಮನ್ನು ಬಿಟ್ಟಾರೆ?'

ನರಸಿಂಹ-'ಬಿಡುವ ಹಾಗೆ ಮಾಡಬೇಕು!'

ನಿಜಲಿಂಗ-ಅದು ಹೇಗೆ!'

ನರಸಿಂಹ-'ನಾವು ಕಾಫಿ ಕುಡಿದು ಅವರ ಕಾಫಿಗೆ ವಿಷ ಹಾಕೋಣ. ಮತ್ತೆ ಅವರನ್ನು ಕಾಫಿ ಕುಡಿಸಿಯಾದ ಮೇಲೆ ಹಣ ಹಂಚೋಣ. ಹಂಚುವುದರೊಳಗೆ ಅವರು ಗಾಢ ನಿದ್ರೆಯನ್ನು ಮಾಡದಿರುವರೇ?'

ನಿಜಲಿಂಗ-'ನೀವು ಹೇಳಿದ್ದು ನಿಜ. ಹಾಗೆಯೇ ಮಾಡೋಣ ನಾವಿಬ್ಬರೆ ಹಂಚಿಕೊಂಡರೆ, ಮುಂದೆ ಇಪ್ಪತ್ತೈದು ವರ್ಷ ಯಾವ ಕೆಲಸ ಮಾಡದೆ ರಾಜರಿಗಿಂತ ರೀತಿಯಿಂದ ಬದುಕಬಹುದು.' ಇಬ್ಬರೂ ಒಪ್ಪಿ ಹೋಟೇಲಿಗೆ ನುಗ್ಗಿದರು.

ಇತ್ತ ಸೋಮಪ್ಪನನ್ನು ಕುರಿತು ತಿಮ್ಮಪ್ಪ ಹೇಳಿದನು! 'ಆ ಹಾಳು ಭಟ್ಟರು ಒಂದೇ ಗಳಿಗೆಯಲ್ಲಿ ಬಂದುಬಿಡುವರು. ಏನೇ ಆಗಲಿ; ಅವರಿಗೆ ಹಣಕೊಡ ಕೂಡದು, ಕೊಡದಿದ್ದರೆ ಅವರು ನಮ್ಮನ್ನ ಬಿಡುವಂತಿಲ್ಲ. ಆದುದರಿಂದ ಅವರು ಇಲ್ಲಿಗೆ ಬಂದು ನಮಗೆ ಕಾಫಿ ಕೊಡುವುದರೊಳಗಾಗಿ ಗುಂಡು ಹಾರಿಸಿ ಅವರನ್ನು ಯಮಪುರಿಗೆ ಕಳುಹಿಸೋಣ ಈ ಹಣದ ಬಲದಿಂದ ಕೇಸನ್ನು ಗೆಲ್ಲಬಹುದು.'

ತಿಮ್ಮಪ್ಪ-'ನೀನು ಒಳ್ಳೇ ಜಾಣ ಕಾಣೋ. ನೀನೆಷ್ಟಾದರೂ ನಮ್ಮ ಜಾರಕ್ಕನ ಮಗನಲ್ಲವೇ?'

ಇವರಿಬ್ಬರ ಮಾತು ಮುಗಿಸುವುದರೊಳಗಾಗಿ ಭಟ್ಟರು ಗೋಣಿ ಚೀಲಗಳನ್ನೂ ಕಾಫಿಯನ್ನೂ ನಸುನಗುತ್ತಾ ತಂದಿಟ್ಟರು. ತಕ್ಷಣವೇ ಇವರಿಬ್ಬರ ಕೋವಿಗಳಿಂದ ಗುಂಡು ಹಾರಿತು. ಭಟ್ಟರು 'ಪಿಟ್ ಎನ್ನದೆ' ಯಮಪುರಿಗೆ ಹೊರಟು ಹೋದರು. ಭಟ್ಟರು ಪ್ರಾಣ ಬಿಟ್ಟದೇ ತಡ. ಸೋಮಪ್ಪನು 'ನಿಲ್ಲು, ಹಣ ಕಾದು, ಕಾದು, ಬಣವಾಗಿದೆ ಮೊದಲು ಕಾಫಿ ಕುಡಿದು ಬಾಯಾರಿಕೆಯನ್ನು ಹೋಗಲಾಡಿಸಿ ಆ ಮೇಲೆ ಹಂಚೋಣ. ಈ ನಿರ್ಜನ ಪ್ರದೇಶದಲ್ಲಿ ಯಾರಾದರೂ ಬರುವ ಭಯವಿಲ್ಲ' ಎಂದನು.

ಇಬ್ಬರೂ ಕಾಫಿ ಕುಡಿಯಲು ಕೂತರು. ಕಾಫಿ ಕುಡಿದು ಆಯಿತು. ಇಬ್ಬರೂ ಹಣ ತೆಗೆಯಲು ಕೈ ಹಾಕಿದರು. ಎತ್ತಲು ಕೈ ಬರಲಿಲ್ಲ. ಕಣ್ಣುಗಳಿಗೆ ಮಬ್ಬು ಕವಿಯುತ್ತಾ ಬಂತು. ಇಬ್ಬರು ಪ್ರಯತ್ನಪಟ್ಟು ಎದ್ದು ನಿಂತರು. ಅಷ್ಟರಲ್ಲಿ ಕೈಕಾಲು ನಡುಗಿ ಕೆಳಗೆ ಬಿದ್ದರು. ಕ್ಷಣದಲ್ಲಿ ಇಬ್ಬರೂ ಯಮಪುರಿಯನ್ನು ಸೇರಿದರು.

ಇತ್ತ ಶೂರಪ್ಪನು 'ಮನುಷ್ಯಾಂತಕೀ'ಯೆಂದು ಕೂಗುತ್ತಾ ತನ್ನ ಯಜಮಾನನ ಬಳಿಗೆ ಬಂದನು. ಇವನನ್ನು ನೋಡಿ ಶೇಷಗಿರಿರಾಯರು 'ಶೂರಪ್ಪನಿಗೆ ಹುಚ್ಚೆ?' ಎಂದು ಸಂಶಯಪಟ್ಟು ಕೇಳಲು ಶೂರಪ್ಪನು 'ಮನುಷ್ಯನ ಕೊಲೆಗಡುಕನನ್ನು ತೋರಿಸುವೆನು ಬನ್ನಿ' ಎಂದು ಕರೆದನು.

ಅದೇ ಸಮಯದಲ್ಲಿ ರಾಯರ ಗೆಳೆಯರಾದ ಸುಬ್ಬರಾಯರು (ಇನ್ಸ್‌ಪೆಕ್ಟರು) ಅವರ ಮನೆಗೆ ಬಂದಿದ್ದರು. ಅವರೆಲ್ಲರೂ ಮನುಷ್ಯನ ಕೊಲೆಗಡುಕನಾರೆಂದು ಕುತೂಹಲದಿಂದ ಶೂರಪ್ಪನ ಜೊತೆಯಲ್ಲಿ ಹೊರಟರು. ಶೂರಪ್ಪನು ನಡುಗುತ್ತಾ ಅವರೆಲ್ಲರನ್ನು ಹಣದ ಗಡಿಗೆಯ ಹತ್ತಿರ ಕರೆತಂದನು. ಅವರೆಲ್ಲರೂ ನಾಲ್ಕು ಮೃತ ಶರೀರವನ್ನು ಕಂಡರು. ಈ ದೃಶ್ಯವನ್ನು ನೋಡಿ ಶೂರಪ್ಪನು ಇನ್ನೂ ಭಯಗೊಂಡನು. ರಾಯರು ಅವನನ್ನು ಸಮಾಧಾನಿಸಿ ಎಲ್ಲಾ ಸಮಾಚಾರವನ್ನು ವಿವರವಾಗಿ ತಿಳಕೊಂಡರು.

ಇನ್ಸ್‌ಪೆಕ್ಟರು ಹೆಣಗಳನ್ನು ಪರೀಕ್ಷಿಸಿದರು. ಕೋವಿ ಬೇಟೆಗಾರರ ಬದಿಯಲ್ಲಿ ಇತ್ತು. ಬೇಟೆಗಾರರ ಮೈಯೆಲ್ಲಾ ವಿಷವೇರಿತ್ತು. ಭಟ್ಟರ ಮೈಯೆಲ್ಲಾ ರಕ್ತಮಯವಾಗಿದ್ದವು. ನಾಲ್ವರ ನಡುವಿನಲ್ಲಿ ಹಣದ ಗಡಿಗೆಯಿತ್ತು. ಎಲ್ಲರಿಗೂ ಆಶ್ಚರ್ಯವಾಯಿತು. ಇನ್ಸ್‌ಪೆಕ್ಟರೆಂದರು, 'ಶೂರಪ್ಪನ ಮಾತು ಸುಳ್ಳಲ್ಲ, ಆತನು ಹುಚ್ಚನೂ ಅಲ್ಲ. ಹಣವು ಮನುಷ್ಯಾಂತಕಿ ಸತ್ಯ.'

ಅಂದಿನಿಂದ ಶೇಷಗಿರಿರಾಯರು ಶೂರಪ್ಪನಿಂದ ಕೆಲಸ ಮಾಡಿಸುತ್ತಿರಲಿಲ್ಲ!

International Trucks & Hudson Cars.

ಕಳೆದ ನಲವತ್ತು ವರ್ಷಗಳಿಂದ ಹೆಸರು ಪಡೆದ ಮೋಟಾರು ಮತ್ತು ಟ್ರಕ್ಕುಗಳ ತಯಾರಕರಾದ ಅಮೇರಿಕದ

ಇಂಟರ್‌ನೇಶನಲ್ ಹಾರ್ವೆಸ್ಟರ್ಸ್ ಎಕ್ಸ್‌ಪೋರ್ಟ್ ಕಂಪೆನಿ

ಯವರ ಟ್ರಕ್ಕು ಮತ್ತು ಹಡ್ಸನ್ ಕಾರುಗಳು ನಮ್ಮಲ್ಲಿ ದೊರೆಯುವವು. ಮಿತ ಖರ್ಚಿನಿಂದ ಉತ್ತಮ ಲಾಭ ಪಡೆಯಲು ಇವು ಉತ್ತಮ ಟ್ರಕ್ಕುಗಳು. ಪ್ರತಿ ಗೆಲನ್ ಪೆಟ್ರೋಲಿಗೆ ಅತಿ ಹೆಚ್ಚಿನ 'ಮೈಲೇಜ್' ಕೊಡುತ್ತವೆ. ಇವುಗಳ "ಸ್ಪೇರ್ ಪಾರ್ಟ್" ಗಳೂ ನಮ್ಮಲ್ಲಿ ದೊರೆಯುವವು. ಹೆಚ್ಚಿನ ಮಾಹಿತಿಗೆ ಈ ಪತ್ತೆಗೆ ಬರೆಯಬಹುದು ಯಾ ಖುದ್ದು ವಿಚಾರಿಸಬಹುದು.

M U. ACHANNA,
Manager,
"INDIAN AUTOMOBILES" (UDIPI)
Agents,
Hudson Cars and International Trucks,
For
South Kanara & Coorg.
Branch Mercara.

12-3

ಚೀಫ್ ಕಮಿಷನರ್ ಪ್ರಾಂತಗಳು.

ರಾಜ್ಯಘಟನಾ ಸಮಿತಿಯ ನಿರ್ಣಯ.

ಚೀಫ್ ಕಮಿಷನರ್ ಪ್ರಾಂತಗಳಿಗೆ ಸಂಬಂಧಿಸಿದ ಕರಡು ರಾಜ್ಯಘಟನೆಯ ಭಾಗವು ತಾರೀಕು ಒಂದು ಮತ್ತು ಎರಡರಲ್ಲಿ ರಾಜ್ಯಘಟನಾ ಸಮಿತಿಯ ಮುಂದೆ ಚರ್ಚೆಗೆ ಬಂದು ಆ ಬಗ್ಗೆ ನಿರ್ಣಯಗಳಾದವು. ಅದರ ಸಾರಾಂಶವನ್ನು ಇಲ್ಲಿ ಕೊಡಲಾಗಿದೆ.

ಕರಡು ಘಟನೆ.

ಚೀಫ್ ಕಮಿಷನರ್ ಪ್ರಾಂತಗಳಿಗೆ ಸಂಬಂಧಿಸಿದ ಘಟನೆಯು ಕರಡು ಪ್ರತಿಯಲ್ಲಿ ಈ ರೀತಿ ಇದೆ—

ಭಾಗ ೭.

೨೧೨ (೧) ಈ ಭಾಗದ ಇತರ ಶರತುಗಳಿಗೊಳಪಟ್ಟು ಪ್ರಥಮ ಶೆಡ್ಯೂಲಿನ ಎರಡನೇ ಭಾಗದಲ್ಲಿ ತಖ್ತೆಯಲ್ಲಿ ನಿರ್ದೇಶಿಸಿರುವಂಥ ಸಂಸ್ಥಾನವು (ಚೀಫ್ ಕಮಿಷನರ್ ಪ್ರಾಂತ) ಪ್ರೆಸಿಡೆಂಟರಿಂದ ಅವರಿಗೆ ಯುಕ್ತತೋರುವ ರೀತಿ ಅವರಿಂದ ನೇಮಕ ಮಾಡಲ್ಪಡುವ ಒಬ್ಬ ಚೀಫ್ ಕಮಿಷನರರ ಮೂಲಕ ಇಲ್ಲವೇ ಲೆಫ್ಟನೆಂಟ್ ಗವರ್ನರರ ಇಲ್ಲವೇ ಗವರ್ನರರ ಇಲ್ಲವೇ ನೆರೆ ಸಂಸ್ಥಾನದ ರಾಜರ ಮೂಲಕ ಆಡಳಿತ ನಡೆಸಲ್ಪಡಬೇಕು.

ಪ್ರೆಸಿಡೆಂಟರು ಗವರ್ನರರ ಇಲ್ಲವೆ ನೆರೆ ಸಂಸ್ಥಾನದ ಅರಸರ ಮೂಲಕ ಕಾರ್ಯ ನಡೆಸುವ ಮೊದಲು—

(a) ಸಂಬಂಧಪಟ್ಟ ಗವರ್ನರರ ಯಾ ರಾಜರ ಅಭಿಪ್ರಾಯ ಕೇಳಬೇಕು.

(b) ಈ ರೀತಿ ಆಳಲ್ಪಡುವ ಜನರ ಅಭಿಪ್ರಾಯವನ್ನು ಪ್ರೆಸಿಡೆಂಟರಿಗೆ ಹೆಚ್ಚು ಸೂಕ್ತವೆಂದು ತೋರುವ ರೀತಿ ತೆಗೆಯಬೇಕು.

• • •

೨೧೩. ಪ್ರೆಸಿಡೆಂಟರು ಪ್ರಥಮ ಶೆಡ್ಯೂಲಿನ ಎರಡನೇ ಭಾಗದಲ್ಲಿ ಸೂಚಿತವಾಗಿರುವ ಮತ್ತು ಚೀಫ್ ಕಮಿಷನರ ಇಲ್ಲವೇ ಲೆಫ್ಟನೆಂಟ್ ಗವರ್ನರರಿಂದ ಆಡಳಿತ ನಡೆಸಲ್ಪಡುವ ಯಾವದೇ ಪ್ರಾಂತಕ್ಕೆ

(a) ಸ್ಥಳೀಯ ಶಾಸನ ಸಭೆ ಇಲ್ಲವೇ

(b) ಸಲಹೆಗಾರರ ಸಮಿತಿ ಇಲ್ಲವೇ ಎರಡನ್ನೂ ಪ್ರತಿಯೊಂದು ಪ್ರಾಂತಕ್ಕೆ ಬೇಕಾದ ಘಟನೆ, ಅಧಿಕಾರ, ಆಡಳಿತ ಕ್ರಮಗಳನ್ನೊಳಗೊಂಡ ತಮ್ಮ ಅಪ್ಪಣೆಯಿಂದ ರಚಿಸಬಹುದು. ಇಲ್ಲವೇ ಇದ್ದುದನ್ನು ಮುಂದರಿಸಬಹುದು.

• • •

೨೧೪. ಪ್ರೆಸಿಡೆಂಟರಿಂದ ಈ ಬಗ್ಗೆ ಬೇರೆ ಏರ್ಪಾಡುಗಳು ಮಾಡಲ್ಪಡುವ ವರೆಗೆ ಕೊಡಗು ನ್ಯಾಯಾ. ಶಾಸನ ಸಭೆಯ ರಚನೆ, ಅಧಿಕಾರ, ಮತ್ತು ಕಾರ್ಯಗಳೂ ಕೊಡಗಿನಲ್ಲಿ ಬರುವ ಆದಾಯ ಮತ್ತು ಖರ್ಚುಗಳಿಗೆ ಸಂಬಂಧಪಟ್ಟ ಏರ್ಪಾಡುಗಳೂ ಬದಲಾವಣೆ ಹೊಂದದೆ, ಉಳಿಯುವವು.

ಚರ್ಚೆಯ ಸಾರಾಂಶ.

೨೧೨ನೇ ನಿಬಂಧನೆಯು ರಾಜ್ಯಘಟನಾ ಸಭೆಯಲ್ಲಿ ತಾ. ೧೮ರಲ್ಲಿ ಬಂದಾಗ ನಡೆದ ಸಂ

ರಾಜ್ಯಘಟನಾ ಸಭೆಯಲ್ಲಿ ಈ ಬಗ್ಗೆ ೮೦ ನಿಮಿಷಗಳ ವರೆಗೆ ವಿಚಾರ ವಿನಿಮಯ ನಡೆದ ನಂತರ ಈಗ ಕೇಂದ್ರದಿಂದ ತಾತ್ಕಾಲಿಕವಾಗಿ ಚೀಫ್ ಕಮಿಷನರ್ ಅಥವಾ ಲೆಫ್ಟನೆಂಟ್ ಗವರ್ನರರಿಂದ ಆಳಲ್ಪಡುತ್ತಿರುವ ಪ್ರಾಂತಗಳಿಗೆ ಒಂದು ನೇಮಿಸಿದ ಯಾ ಚುನಾಯಿತ ಸಭೆಯನ್ನೂ-ಆದು ಪ್ರಾಂತದ ಶಾಸನ ಸಭೆಯಾಗಿ ಕೆಲಸ ಮಾಡುವಂತೆಯೂ-ಮತ್ತು ಆಡಳಿತಕ್ಕೆ ಸಲಹೆಗಾರರ ಸಮಿತಿ ಅಥವಾ ಮಂತ್ರಿಮಂಡಲವನ್ನೂ ನಿರ್ಮಿಸುವ ಯಾ ಯಾವುದಾದರೂ ಪ್ರಾಂತದಲ್ಲಿ ಇದ್ದರೆ ಅದನ್ನು ಮುಂದರಿಸುವ ಅಧಿಕಾರವನ್ನು ಯೂನಿಯನ್ ಪಾರ್ಲಿಮೆಂಟಿಗೆ ಕೊಡಲಾಯಿತು. ಯೂನಿಯನ್ ಪಾರ್ಲಿಮೆಂಟು ಈ ಬಗ್ಗೆ ಜಾರಿ ಮಾಡುವ ಯಾವದೇ ನಿಯಮವು ಮೇಲಿನ ಘಟನೆಗೆ ತಿದ್ದುಪಡಿಯೆಂದು ಭಾವಿಸಬಾರದೆಂದೂ ಹಾಗೆ ಭಾವಿಸಿದರೆ ಅದಕ್ಕೆ ಹೆಚ್ಚಿನ ಸದಸ್ಯರ ಒಪ್ಪಿಗೆ ಅಗತ್ಯ ಬರುವದೆಂದೂ ನಿರ್ಣಯವಾಗಿದೆ.

ಸ್ಥಾನಗಳಿಗೆ ಸಂಬಂಧಿಸಿದ ಭಾಗವನ್ನು ತೆಗೆದು ಹಾಕಬೇಕೆಂದು ಡಾ. ಅಂಬೇಡ್ಕರರು ತಿದ್ದುಪಡಿಯನ್ನು ತಂದರು. ಅದು ಒಪ್ಪಲ್ಪಟ್ಟಿತು.

ಅಜಮೀರ್, ಮೇರ್‌ವಾರ, ಡೆಲ್ಲಿ, ಕೊಡಗುಗಳ ಸ್ಥಿತಿಯನ್ನು ವಿವರಿಸಿ ಅವುಗಳ ಭವಿಷ್ಯದ ನಿಲುವನ್ನು ನಿರ್ಣಯಿಸದೆ ಕೇಂದ್ರ ಶಾಸನ ಸಭೆಗೆ ಘಟನೆಯನ್ನು ಮಾರ್ಪಡಿಸಲು ಬಿಡುವದು ಯುಕ್ತವಲ್ಲವೆಂದು ಶ್ರೀ ದೇಶಬಂಧು ಗುಪ್ತ ಸೇಠ್ ಗೋವಿಂದದಾಸರು ನುಡಿದರು.

ಆಡಳಿತ ದಕ್ಷತೆಯ ದೃಷ್ಟಿಯಿಂದ ಕೇಂದ್ರದಿಂದ ಆಳಲ್ಪಡುವ ಈ ಭಾಗಗಳಲ್ಲಿ ಯಾವದೇ ಬದಲಾವಣೆಯು ಅವಶ್ಯವಿಲ್ಲವೆಂದು ಶ್ರೀ ಬ್ರಿಜೇಶ್ವರ ಪ್ರಸಾದರು ಹೇಳಿದರು.

ಈ ನಿಬಂಧನೆಯು ಪುನರ್ವಿಮರ್ಶೆಮಾಡಿ ಈ ಭಾಗಗಳು ಬೇರೆ ದೊಡ್ಡ ಭಾಗಗಳನ್ನು ಸೇರುವ ಪ್ರಶ್ನೆಯನ್ನು ಆಲೋಚಿಸಬೇಕೆಂದೂ, ಕೇಂದ್ರದಿಂದ ಆಳಲ್ಪಡುವ ಈ ಭಾಗದ ಜನರು ನೆರೆಯ ಪ್ರಜಾ ಜವಾಬ್ದಾರಿ ಭಾಗಗಳಲ್ಲಿ ಸೇರಿ ಜವಾಬ್ದಾರಿಯನ್ನು ಪಡೆಯುವಂತಾಗಬೇಕೆಂದೂ ದೊಡ್ಡ ದೊಡ್ಡ ಭಾಗಗಳ ವಿಲೀನೀಕರಣವಾಗುತ್ತಿರುವಾಗ ಈ ರೀತಿಯ ಸಂಸ್ಥಾನಗಳನ್ನು ಇಟ್ಟುಕೊಳ್ಳಕೂಡದೆಂದೂ ಈ ಭಾಗದ ಜನರಿಗೆ ಪ್ರಜಾ ಪ್ರಭುತ್ವ ರೀತಿಯ ಆಡಳಿತ ದೊರೆಯುವಂತಾಗಬೇಕೆಂದೂ ಡಾ. ಪಿ. ಎಸ್. ದೇಶ್‌ಮುಖರು ಹೇಳಿದರು.

ಸಾರ್ವಜನಿಕ ಅಭಿಪ್ರಾಯವನ್ನು ತಿರಸ್ಕರಿಸಿದ ರೀತಿಯ ಆಡಳಿತವು ಈ ನಿಬಂಧನೆಯಂತೆ ಆಗುವದು. ಆಡಳಿತದ ಅನುಕೂಲತೆ ಮತ್ತು ಮಿತ ಖರ್ಚಿನ ದೃಷ್ಟಿಯಿಂದ ಈ ಪ್ರಾಂತಗಳನ್ನು ನೆರೆ ಪ್ರಾಂತಗಳೊಳಗೆ ಸೇರಿಸಬೇಕೆಂದು ಶ್ರೀ ವಿಶ್ವನಾಥ ದಾಸರು ಹೇಳಿದರು.

ಡೆಲ್ಲಿಯ ಜನರಿಗೆ ಆಡಳಿತ ಸ್ವಾಯತ್ತತೆಯು ಕೊಡಲ್ಪಡಲಿಲ್ಲವೆಂದೂ, ಅನೇಕ ಹಿಂದುಳಿದ ಭಾಗಗಳಲ್ಲಿ ಪ್ರಾಂತೀಕ ಸ್ವಾಯತ್ತತೆ ಇರುವಾಗ ಡೆಲ್ಲಿಗೆ ಜನಪ್ರಿಯ ಸರಕಾರ ಅವಶ್ಯವೆಂದು ಶ್ರೀ ಆರ್. ಕೆ. ಸಿಧ್ವಾನವರು ಹೇಳಿದರು. ನಂತರ ೨೧೨ನೇ ನಿಬಂಧನೆಯು ಅಂಗೀಕರಿಸಲ್ಪಟ್ಟಿತು.

ನಂತರ ೨೧೩ನೇ ನಿಬಂಧನೆ ಬಂದಾಗ ಆ ನಿಬಂಧನೆಯ ಬದಲು ಡಾ. ಅಂಬೇಡ್ಕರರು ಹೊಸ ನಿಬಂಧನೆಯೊಂದನ್ನು ಸೂಚಿಸಿದರು.

ಈ ತಿದ್ದುಪಡಿಯ ಪ್ರಕಾರ ಕೇಂದ್ರ ಶಾಸನ ಸಭೆಯು ಈ ಪ್ರಾಂತಗಳಿಗೆ ನೇಮಿಸಿದ ಯಾ ಚುನಾಯಿತ ಯಾ ಅರ್ಧ ಚುನಾಯಿತ ಯಾ ಅರ್ಧ ನೇಮಿತ ಸಭೆಯನ್ನು ಕೊಟ್ಟು ಅವು ಶಾಸನ ಸಭೆಯಂತೆ ಕಾರ್ಯ ಮಾಡುವ ಮತ್ತು ಆಡಳಿತ ಸಲಹಾ ಮಂಡಳಿ ಯಾ ಮಂತ್ರಿ ಮಂಡಳಿ, ಇಲ್ಲವೇ ಎರಡನ್ನೂ ಕೊಡುವ ಅನವಿದೆ. ಪ್ರತಿ ಸಂದರ್ಭದಲ್ಲೂ ಸಂಬಂಧಿಸಿದ ಅಧಿಕಾರ ಮತ್ತು ಕರ್ತವ್ಯಗಳು ಶಾಸನದಿಂದ ಸ್ಪಷ್ಟೀಕರಿಸಲ್ಪಡಬೇಕು. ಅಂಬೇಡ್ಕರರು ಈ ವಿಚಾರ ಮಾತಾಡುತ್ತಾ ಕರಡು ನಿಬಂಧನೆಯಲ್ಲಿ ಈ ಎಲ್ಲಾ ಅಧಿಕಾರವನ್ನು ಪ್ರೆಸಿಡೆಂಟರಿಗೆ ಕೊಡಲಾಗಿತ್ತೆಂದೂ ಈ ತಿದ್ದುಪಡಿಯಂತೆ ಅದು ಕೇಂದ್ರ ಶಾಸನ ಸಭೆಗೆ ಸೇರುವದೆಂದೂ ಹೇಳಿದರು.

ದೇಶಬಂಧು ಗುಪ್ತರವರು ಕೇಂದ್ರ ಶಾಸನ ಸಭೆಗಳಲ್ಲಿ ಡೆಲ್ಲಿಗೆ ಸಾಕಷ್ಟು ಪ್ರಾತಿನಿಧ್ಯ ಬೇಕೆಂದು ತಿದ್ದುಪಡಿ ತಂದರು. ತಮ್ಮ ೭೦ ನಿಮಿಷದ ಭಾಷಣದಲ್ಲಿ ಗುಪ್ತಾರವರು ಡೆಲ್ಲಿಯ ಬೇಡಿಕೆಯ ಬಗ್ಗೆ ಡ್ರಾಫ್ಟಿಂಗ್ ಕಮಿಟಿಯವರ ಮತ್ತು ಅಧಿಕಾರಿಗಳ ಅನಾಸಕ್ತಿಯನ್ನು ಟೀಕಿಸಿದರು. ಅಂಬೇಡ್ಕರರ ತಿದ್ದುಪಡಿಯು ತೃಪ್ತಿಕರವಲ್ಲವೆಂದೂ, ಇಡೀ ಡೆಲ್ಲಿ ಪ್ರಾಂತದ ಜನ ಮಿಲ್ಲಿಯೂ ಇತರ ಕೇಂದ್ರದ ಆಡಳಿತಕ್ಕೆ ಒಳಗಾದ ಭಾಗಗಳಲ್ಲಿಯೂ ಅತೃಪ್ತಿ ಇದೆಯೆಂದೂ, ಈ ರೀತಿಯ ಮಲತಾಯಿ ವರ್ತನೆಯಿಂದ ಸಾಕಾಗಿದೆಯೆಂದೂ ಈ ಪ್ರಾಂತಗಳಿಗೆ ಈ ವರೆಗೆ ನಿಜವಾದ ಜವಾಬ್ದಾರಿ ಕೊಡಲ್ಪಟ್ಟಿಲ್ಲವೆಂದೂ ಹೇಳಿದರು.

ಪಂ. ನೆಹರೂರವರು ಮಾತಾಡುತ್ತಾ ಅಂಬೇಡ್ಕರರ ತಿದ್ದುಪಡಿಯು ಯುಕ್ತವಾಗಿದೆಯೆಂದೂ ಕೇಂದ್ರ ಶಾಸನ ಸಭೆಗಳಲ್ಲಿ ಈ ಭಾಗಗಳಿಗೆ ಪ್ರಾತಿನಿಧ್ಯದ ತತ್ವವನ್ನು ಒಪ್ಪಲಾಗುವದೆಂದೂ ಡೆಲ್ಲಿಯ ಮಟ್ಟಿಗೆ ಈ ವರ್ಷದೊಳಗೆ ಒಂದು ಆಡಳಿತ ಮಸೂದೆಯನ್ನು ತರಲಾಗುವದೆಂದೂ ಹೇಳಿದರು.

ಡೆಲ್ಲಿಯು ಪಂಜಾಬಿನ ಭಾಗವಾಗಿತ್ತೆಂದೂ ಅದನ್ನು ಪಂಜಾಬಿಗೆ ಸೇರಿಸಿ ಹೊಸದಿಲ್ಲಿ ನಗರವನ್ನು ಮಾತ್ರ ಕೇಂದ್ರ ಸರಕಾರವು ಮಹಾ ನಗರವಾಗಿ ಇಟ್ಟುಕೊಳ್ಳಬೇಕೆಂದೂ ಪಂಡಿತ ಠಾಕೂರ್‌ದಾಸ್ ಭಾರ್ಗವಾರವರು ಹೇಳಿದರು.

ಡೆಲ್ಲಿಯ ಭವಿಷ್ಯವು ಡೆಲ್ಲಿಯ ಜನರಿಂದಲೇ ತೀರ್ಮಾನವಾಗಬೇಕೆಂದೂ, ಯಾವ ಪ್ರತಿನಿಧಿಗಳಿಗೂ, ರಾಜ್ಯಘಟನಾ ಸಭೆಗೂ ಆ ಅಧಿಕಾರವಿಲ್ಲವೆಂದೂ, ಡೆಲ್ಲಿಗೆ ಮಾದರಿ ಜನತಾ ಸರಕಾರ ಬೇಕೆಂದೂ ಶ್ರೀ ಮಹಾವೀರ ತ್ಯಾಗಿ ಹೇಳಿದರು.

ಡಾ. ಬಿ. ಪಟ್ಟಾಭಿ ಸೀತಾರಾಮಯ್ಯ, ಡೆಲ್ಲಿಯು ಸಂಯುಕ್ತ ಪ್ರಾಂತದೊಡನೆ ಸೇರಬೇಕೆಂದೂ ಅಜಮೀರ್-ಮೇರ್‌ವಾರ ಮತ್ತು ಪಂತ್ ಪಿಪ್ಲೋಡಾ ಇವು ರಾಜಸ್ಥಾನಕ್ಕೆ ಸೇರಬೇಕೆಂದೂ ಕೊಡಗು ಮೈಸೂರಿಗೆ ಸೇರಬೇಕೆಂದೂ ಆದರೆ ಕೊಡಗಿನ ಪರ ಹೇಳಬೇಕಾದರೆ—ಅದನ್ನು ಸ್ವತಂತ್ರ ಆಡಳಿತ ನಡೆಸಲು ವರ್ಷಕ್ಕೆ ಒಂದೂವರೆ ಕೋಟಿ ರೂಪಾಯಿಗಳನ್ನು ಕೇಂದ್ರದಿಂದ ಪಡೆಯುವ ಡೆಲ್ಲಿಯಂತೆ—ಕೊಡಗು ಕೇಂದ್ರ ಸರಕಾರದ ದಯೆಯಿಂದ ಬದುಕಿಲ್ಲವೆಂದೂ ಹೇಳಿದರು.

ಡೆಲ್ಲಿಯನ್ನು ಮೂರು ಭಾಗವಾಗಿ ವಿಂಗಡಿಸಿ ಸಂಯುಕ್ತ ಪ್ರಾಂತ, ಪೂರ್ವ ಪಂಜಾಬ್‌ಗಳಲ್ಲಿ ಎರಡು ಭಾಗವನ್ನು ಸೇರಿಸಿ ಹೊಸ ಮತ್ತು ಹಳೆ ಡೆಲ್ಲಿಯ ನಗರಗಳನ್ನು ಪ್ರತ್ಯೇಕ ಕಾರ್ಪೊರೇಶನ್‌ಗಳಾಗಿ ಮಾಡಬೇಕೆಂದೂ ಶ್ರೀ. ನಾಸಿರುದ್ದೀನರು ಸೂಚಿಸಿದರು.

ನಂತರ ಗುಪ್ತಾರವರು ತಮ್ಮ ತಿದ್ದುಪಡಿಯನ್ನು ಹಿಂತೆಗೆದುಕೊಂಡರು. ಅಂಬೇಡ್ಕರರ ಸೂಚನೆಯು ಪಾಸಾಯಿತು.

೨೧೩ ನೇ ನಿಬಂಧನೆಗೆ ಮತ್ತೊಂದು ಉಪನಿಬಂಧನೆಯನ್ನು ಸೇರಿಸಲಾಯಿತು. ಇದರ ಪ್ರಕಾರ ಕೇಂದ್ರದ ಆಡಳಿತಕ್ಕೊಳಪಟ್ಟ ಯಾವುದಾದರೂ ಭಾಗಕ್ಕೆ ಪ್ರತ್ಯೇಕವಾಗಿ ಹೈಕೋರ್ಟನ್ನು ಕೊಡುವುದು ಅಸಾಧ್ಯವಾದರೆ ಅಂಥಾ ಪ್ರಾಂತದ ನೆರೆಯ ಹೈಕೋರ್ಟನ್ನು ಆ ಪ್ರಾಂತದ ಹೈಕೋರ್ಟೆಂದು ಕೇಂದ್ರ ಶಾಸನ ಸಭೆಯು ನಿಶ್ಚಯಿಸಬಹುದು.

ಕೊಡಗಿನ ಭವಿಷ್ಯ.

ರಾಜ್ಯಘಟನಾ ಸಭೆಯು ೨೧೪ನೇ ನಿಬಂಧನೆಗೆ ಸಂಬಂಧಿಸಿ ಈ ರೀತಿ ತೀರ್ಮಾನವಾಗಿದೆ.

ಯೂನಿಯನ್ ಪಾರ್ಲಿಮೆಂಟು ಕಾನೂನಿನಲ್ಲಿ ಯಾ ಬೇರೆ ವಿಧದಲ್ಲಿ ಏರ್ಪಡಿಸುವ ವರೆಗೆ ಕೊಡಗು ಶಾಸನ ಸಭೆಯ ರಚನೆ, ಅಧಿಕಾರ ಮತ್ತು ಕಾರ್ಯಗಳು ಈ ಘಟನೆಯು ಜಾರಿಗೆ ಬರುವ ಕ್ಷಣಕ್ಕಿಂತ ಮೊದಲು ಯಾವ ರೀತಿ ಇರುವದೋ ಅದೇ ರೀತಿ ಇರಬೇಕು. ಪ್ರೆಸಿಡೆಂಟರಿಂದ ಬೇರೆ ಏರ್ಪಾಡು ಮಾಡಲ್ಪಡುವ ವರೆಗೆ ಕೊಡಗಿನ ವಾರ್ಷಿಕ ಆದಾಯ ಮತ್ತು ಖರ್ಚಿನ ಬದಲಾವಣೆ ಹೊಂದದೆ ಈಗಿರುವ ಏರ್ಪಾಡಿನಂತೆ ನಡೆಯತಕ್ಕದು.

ಕೊಡಗು

ತಾ. ೫-೮-೧೯೪೯ನೇ ಶುಕ್ರವಾರ

ಕಾಶ್ಮೀರ.

ಕಾಶ್ಮೀರದಲ್ಲಿ ಉದ್ಭವವಾದ ಸಮಸ್ಯೆಯನ್ನು ತಮ್ಮ ತಮ್ಮೊಳಗೆ ಬಗೆಹರಿಸಿಕೊಳ್ಳಲಾರದ ಕಾರಣ ಇದರ ತೀರ್ಮಾನಕ್ಕಾಗಿ ಸಂಯುಕ್ತ ರಾಷ್ಟ್ರ ಸಂಘದ ಸಹಾಯ ಬೇಡಲಾಯಿತು. ಸಂಯುಕ್ತ ರಾಷ್ಟ್ರ ಸಂಘದವರು ಇದರ ಬಗ್ಗೆ ಕಾಶ್ಮೀರ ಸಮಿತಿಯೊಂದನ್ನು ನೇಮಿಸಿ ಅದು ಕಾಶ್ಮೀರಕ್ಕೆ ಬಂದು ಪರಿಸ್ಥಿತಿಯನ್ನಭ್ಯಾಸಮಾಡಿ ಸಂಯುಕ್ತ ಸಂಘಕ್ಕೆ ವರದಿ ಮಾಡಿತು. ಕಾಶ್ಮೀರದಲ್ಲಿ ಸಂಯುಕ್ತ ರಾಷ್ಟ್ರ ಸಂಘದ ನೇತೃತ್ವದಲ್ಲಿ ಚುನಾವಣೆ ನಡೆಯಬೇಕೆಂದೂ, ಜನತೆಯು ಯಾವ ರೀತಿ ನಿರ್ಣಯಿಸುವದೋ ಆ ರೀತಿ ಕಾಶ್ಮೀರದ ಭವಿಷ್ಯ ನಿರ್ಣಯವಾಗಬೇಕೆಂದು ನಿರ್ಣಯವಾದರೂ ಚುನಾವಣೆಗೆ ಯೋಗ್ಯ ವಾತಾವರಣವನ್ನು ಕಲ್ಪಿಸುವದು ಇಂದಿನ ವರೆಗೆ ಆಗಲಿಲ್ಲ. ಇದಕ್ಕೆ ಸಂಯುಕ್ತ ರಾಷ್ಟ್ರ ಸಂಘದ ಪಕ್ಷಪಾತವೂ ಒಂದು ಕಾರಣವೆನ್ನಬಹುದು.

ಕಾಶ್ಮೀರ ಯುದ್ಧವು ಕಳೆದ ಜನವರಿ ತಿಂಗಳಲ್ಲಿ ನಿಲ್ಲಿಸಲ್ಪಟ್ಟಾಗ ಕೆಲವು ಶರತ್ತುಗಳು ಹಾಕಲ್ಪಟ್ಟಿದ್ದವು. ಆ ಶರತ್ತುಗಳ ಪ್ರಕಾರ ಕಾಶ್ಮೀರದೊಳನುಗ್ಗಿದ ಗುಡ್ಡಗಾಡಿನ ಪಠಾಣರೂ, ಪಾಕಿಸ್ತಾನದ ಸೈನಿಕರೂ ಕಾಶ್ಮೀರವನ್ನು ಬಿಟ್ಟು ಹೋಗಬೇಕು. ಅಜಾದ್ ಕಾಶ್ಮೀರ್ ಸೇನೆಯ ವಿಸರ್ಜನೆಯಾಗಬೇಕು ಎಂದಿತ್ತು. ಹಿಂದೀ ಸೈನ್ಯವು ತಮ್ಮ ಮೇಲೆ ಹಾಕಲ್ಪಟ್ಟ ಶರತ್ತುಗಳನ್ನು ಚಾಚೂತಪ್ಪದೆ ಪಾಲಿಸಿತಾದರೂ ಪಾಕಿಸ್ತಾನವು ಹಾಗೆ ಮಾಡಲಿಲ್ಲ. ಸಂಯುಕ್ತ ರಾಷ್ಟ್ರ ಸಂಘದವರು ಪಾಕಿಸ್ತಾನವನ್ನು ಒತ್ತಾಯಪಡಿಸಲೂ ಇಲ್ಲ. ಬದಲು ಒಳಗೊಳಗೆ ಪ್ರೋತ್ಸಾಹವನ್ನಿತ್ತ [illegible] ವರದಿ ಇದೆ. ನ್ಯಾಯ [illegible] ಹೊರಟ ಸಂಯುಕ್ತ ರಾಷ್ಟ್ರ ಸಂಘವೇ [illegible] ಪಕ್ಷವಹಿಸಿದರೆ ಸಮಸ್ಯೆಯು ಬಗೆಹರಿಯುವದೆಂತ? ಆದ್ದರಿಂದಲೇ ಕಾಶ್ಮೀರ ಸಮಸ್ಯೆಯು ನೆನಗುದಿಗೆ ಬಿದ್ದಿದೆ.

ಸಂಯುಕ್ತ ಸಂಘವು ನೇಮಿಸಿದ ಸಮಿತಿಯು ಅಧ್ಯಕ್ಷರಾದ [illegible] ಅವರು ಕಾಶ್ಮೀರದಲ್ಲಿ ಒಪ್ಪಂದವನ್ನು ಸಾಧಿಸಲು ಪ್ರಯತ್ನವನ್ನು ಬಿಟ್ಟಿಲ್ಲ. ಹಿಂದೂಸ್ಥಾನವೂ ಕೂಡ ಒಪ್ಪಂದವು ಸಾಧ್ಯವಾಗಿ ಶಾಂತ ವಾತಾವರಣದಲ್ಲಿ ಕಾಶ್ಮೀರ ಜನತೆಯ ಅಭಿಪ್ರಾಯ ತಿಳಿಯಬೇಕೆಂದು ಬಯಸಿದೆ. ಆದರೆ [illegible]

ಮುರಿದು ಬಿದ್ದು ಪುನಹ ಯುದ್ಧ ಪ್ರಾರಂಭವಾದರೂ ಆಶ್ಚರ್ಯ ಪಡುವ ಕಾರಣವಿಲ್ಲ.

ಸಂಯುಕ್ತ ರಾಷ್ಟ್ರದ ಕಾಶ್ಮೀರ ಸಮಿತಿಯು ಮಾತುಕತೆಗಳ ಫಲಿತಾಂಶವನ್ನು ಆಗಾಗ್ಗೆ ರಾಷ್ಟ್ರ ಸಂಘಕ್ಕೆ ತಿಳುಹಿಸುತ್ತಿದಾರೆ. ಆದರೂ ಕಾಶ್ಮೀರದ ಪ್ರಶ್ನೆಯು ಅನೇಕ ತಿಂಗಳುಗಳಿಂದ ಕೊಳೆಯುತ್ತಾ ಬಿದ್ದಿದೆ. ಅದು ಶೀಘ್ರ ಬಗೆಹರಿಯುವ ಚಿಹ್ನೆಗಳೂ ಕಂಡು ಬರುವದಿಲ್ಲ. ಇದಕ್ಕೆ ಕಾರಣವಿಷ್ಟೆ. ಸಂಯುಕ್ತ ರಾಷ್ಟ್ರ ಸಂಘವು ಪರಿಸ್ಥಿತಿಯನ್ನು ನ್ಯಾಯದೃಷ್ಟಿಯಿಂದ ಸಮಾಲೋಚಿಸಿ ಆದರಂತೆ ತನ್ನ ನಿರ್ಣಯವನ್ನು ಮಾಡಿ ಆಮಲಿನಲ್ಲಿ ತರಲು ಹಿಂಜರಿಯುತ್ತಿದೆ. ಸಂಯುಕ್ತ ರಾಷ್ಟ್ರ ಸಭೆಯು ಪಾಕಿಸ್ತಾನದ ಬೆನ್ನನ್ನು ಹೇಗೆ ತಟ್ಟಬೇಕೆಂಬುದು ಕಾಶ್ಮೀರ ಮತ್ತು ಹೈದರಾಬಾದು ಪ್ರಶ್ನೆಗಳಿಂದ ಭಾರತೀಯರಿಗೆ ತಿಳಿದಿದೆ. ಈ ಎರಡು ರಾಷ್ಟ್ರಗಳ ಘರ್ಷಣೆಯ ಮಧ್ಯೆ ದೊರೆತಿರುವ ಅನುಭವವನ್ನು ತಮ್ಮ ಲಾಭಕ್ಕೆ ಏಕೆ ಉಪಯೋಗಿಸಬಾರದೆಂದು ಅವು ಪ್ರಯತ್ನಿಸುತ್ತಿರುವಂತೆ ತೋರುತ್ತಿದೆ. ಇಲ್ಲವೇ ಸಂಯುಕ್ತ ರಾಷ್ಟ್ರ ಸಂಘವು ತನ್ನ ನಿರ್ಣಯಗಳನ್ನು ಜಾರಿಯಲ್ಲಿ ತರುವಷ್ಟು ನಿರ್ಬಲವಿದ್ದರೆ ಅದು ಹಿಂದಿನ ಜನಾಂಗಗಳ ಕೂಟದ ಮಾರ್ಗ ಹಿಡಿಯ ಬೇಕಾದೀತು. ಹಿಂದಿನ ಉದಾಹರಣೆಗಳನ್ನು ತೆಗೆದು ಪರಿಶೀಲಿಸಿದರೆ ಸಂಯುಕ್ತ ರಾಷ್ಟ್ರ ಸಂಘವು ಇಂಥಾ ಪ್ರಶ್ನೆಗಳನ್ನು, ಜಗತ್ತಿನ ಯಾವ ಭಾಗದಲ್ಲಿಯೂ ಯೋಗ್ಯ ನಿರ್ಣಯ ಮಾಡಿ ಶಾಂತಿಯನ್ನು ಕಾದುಕೊಂಡ ನಿದರ್ಶನಗಳಿಲ್ಲ. ಅದು ಗ್ರೀಸ್, ಪಾಲೆಸ್ಟೀನ್ ಇಲ್ಲವೇ ಕಾಶ್ಮೀರವೇ ಆಗಲೀ ಎಲ್ಲೆಡೆಯಲ್ಲಿಯೂ ಅದು ಕುಂಟುತ್ತಾ ಆಳಿದೆಯ ಪ್ರಯತ್ನ ಮಾಡುತ್ತಿದೆ. ಈ ರೀತಿಯ ನೀತಿಯಿಂದ ಕಾಶ್ಮೀರ ಸಮಸ್ಯೆಯು ಬಗೆಹರಿಯಲಾರದು; ಕಾಶ್ಮೀರಕ್ಕೆ ಶಾಂತಿಯು ದೊರೆಯಲಾರದು. ಆದ್ದರಿಂದ ಸಂಯುಕ್ತ ರಾಷ್ಟ್ರ ಸಂಘವು ತನ್ನ ಜವಾಬ್ದಾರಿಯನ್ನರಿತು ನ್ಯಾಯರೀತಿಯಿಂದ ವರ್ತಿಸಿ ಕಾಶ್ಮೀರ ಸಮಸ್ಯೆಯನ್ನು ಬಗೆ ಹರಿಸುವದು ಅತ್ಯವಶ್ಯವಾಗಿದೆ.

ಕಾಶ್ಮೀರದ ಯುದ್ಧ ನಡೆದ ಕಾಲಕ್ಕೆ ಪಾಕಿಸ್ತಾನ ಸೇನೆಯಲ್ಲಿ ಅಮೇರಿಕನ್ ಯೋಧರಿದ್ದರೆಂಬ ವಾರ್ತೆಗಳು ಹಬ್ಬಿದ್ದವು. ಇದರ ಸತ್ಯಾಂಶ ಏನೇ ಇರಲಿ; ಪಾಶ್ಚಿಮಾತ್ಯ ರಾಷ್ಟ್ರಗಳು ದಯಾಪೂರಿತ ದೃಷ್ಟಿಯಿಂದ ಪಾಕಿಸ್ತಾನವನ್ನು ನೋಡುತ್ತಿವೆಯೆಂಬುದು ಸಹಜವೆನ್ನಬಹುದು. ಕಾಶ್ಮೀರ ಸಮಸ್ಯೆಯ ವಿಷಯದಲ್ಲಿ ಬ್ರಿಟಿಷರ [illegible] ಪ್ರಶ್ನೆಯಾಗಿದೆ. ಪಾಕಿಸ್ತಾನ-ಹಿಂದೂಸ್ತಾನಗಳೊಳಗೆ ಕಾಶ್ಮೀರಕ್ಕಾಗಿ ಯುದ್ಧವು [illegible] ಬ್ರಿಟಿಷ್ ಸೇನಾಧಿಕಾರಿಗಳು [illegible] ಪಾಕಿಸ್ತಾನಗಳಲ್ಲಿಯೂ ತಮ್ಮ [illegible]

ಟನು ನಿರ್ಧರಿಸಿದಂತಿದೆ. ಪಾಕಿಸ್ತಾನದಲ್ಲಿ ಬ್ರಿಟಿಷರ ನೀತಿ ಹೇಗಿದೆಯೆಂಬುದು ಸ್ಪಷ್ಟವಾಗಿ ತಿಳಿಯದಿದ್ದರೂ ಹಿಂದೆ ನಡೆದ ಕಾಶ್ಮೀರ ಯುದ್ಧದ ಕಾಲಕ್ಕೆ ಹಿಂದೂದೇಶದ ಮುಖ್ಯ ಸೇನಾನಿಯಾಗಿದ್ದ ಬುಚರ್‌ನವರು ಅಲ್ಲಿಯ ಸೈನ್ಯ ಚಾಲನೆಯ ಜವಾಬ್ದಾರಿಯನ್ನು ಹಿಂದೀ ಅಧಿಕಾರಿಗೆ ವಹಿಸಿಕೊಟ್ಟದ್ದು, ಆ ಯುದ್ಧಕ್ಕೆ ಬ್ರಿಟಿಷ್ ಅಧಿಕಾರಿಗಳನ್ನು [illegible] ಈ ತಟಸ್ಥ ನೀತಿಯ ಕಾರಣದಿಂದೆನ್ನಬಹುದು.

ಹೇಗೂ ಇರಲಿ, [illegible] ಹಿಂದೂಸ್ಥಾನ ಮತ್ತು ಪಾಕಿಸ್ತಾನ ಸರಕಾರಗಳೊಳಗೆ ಈ ಬಗ್ಗೆ ಘರ್ಷಣೆ [illegible] ಪಾಕಿಸ್ತಾನ ಸರಕಾರದಲ್ಲಿ [illegible] ವಾಗಿ ಕಾಶ್ಮೀರ ಸಮಸ್ಯೆಯು ಶಾಂತ ವಾತಾವರಣದಲ್ಲಿ ಬಗೆಹರಿಯಲ್ಪಟ್ಟು ಈ ಎರಡು ರಾಷ್ಟ್ರಗಳಲ್ಲಿ ಸ್ನೇಹವನ್ನು ಬೆಳೆಸಲಿ.

ಪತ್ರ ಮಾನ.

ನೀಲಂಬೂರಿನಲ್ಲಿ ರೇಂಜರಾಗಿದ್ದ ಶ್ರೀ ಕೊಟ್ಟೇಂಗಡ ಕಾರ್ಯಪ್ಪನವರು ತಾರೀಕೆ ೩೧ರಲ್ಲಿ ಹೃದಯ ಸ್ತಂಭನದಿಂದ ವಿಧಿವಶರಾದರು. ಅಲ್ಲಿಯ ಕೊಡವ ಮಹನೀಯರು ಕೊಡವ ಪದ್ಧತಿಯಂತೆ ಶವ ಸಂಸ್ಕಾರ ನಡೆಸಿದರು. ಬಾಳುಗೋಡು ಗ್ರಾಮದ ಶ್ರೀ. ಕುಂಬೆರ ಬಿದ್ದಯ್ಯನವರು ತಾ ೨೮ರಲ್ಲಿ ಸ್ವರ್ಗಸ್ಥರಾದರು.

ಇಂಡಿಯನ್ ಎಡ್ಮಿನಿಸ್ಟ್ರೇಟಿವ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವ ಕುಮಾರಿ ಚೋನಿರ ಮುತ್ತಮ್ಮನವರಿಗೆ ಮಡಿಕೇರಿ ಮಹಿಳಾ ಸಮಾಜದವರು ತಾ. ೧-೮-೪೯ರಲ್ಲಿ ಒಂದು ಸತ್ಕಾರ ಕೂಟವನ್ನಿತ್ತು ಸನ್ಮಾನಿಸಿದರು. ಮಡಿಕೇರಿ ಪುರಜನರು ಶ್ರೀಮತಿಯವರಿಗೆ ಒಂದು ಸತ್ಕಾರ ಕೂಟವನ್ನು ತಾ ೬-೮-೪೯ರಲ್ಲಿ ಕೊಡಗು ಕೌನ್ಸಿಲ್ ಹಾಲ್‌ನಲ್ಲಿ ಏರ್ಪಡಿಸಿರುವರು.

ಶ್ರೀಮತಿ ಚೆಪ್ಪುಡೀರ ನಂದಂಣ ಮುತ್ತಮ್ಮ ಬಿ ಎಸ್ಸಿ, ಇವರನ್ನು ಮಡಿಕೇರಿ ಸರಕಾರಿ ಕಾಲೇಜಿನಲ್ಲಿ 'ಸೈಯನ್ಸ್ ಡೆಮೊನ್‌ಸ್ಟ್ರೇಟರ್' ರಾಗಿ ನೇಮಿಸಿರುವರು.

ತಾರೀಕ ೩೦-೮-೪೯ರಿಂದ ಅಧಿಕಾರದಿಂದ ನಿವೃತ್ತರಾಗಲಿರುವ ಕೊಡಗಿನ ಅ. ಕಮಿಷನರೂ, ಜಿಲ್ಲಾ ಮೇಜಿಸ್ಟ್ರೇಟರೂ ಆದ ಶ್ರೀ. ಕೋಡಿರ ಉತ್ತಪ್ಪನವರನ್ನು ಸತ್ಕರಿಸಿ ಬೀಳ್ಕೊಡಲು ಮಡಿಕೇರಿಯ ಸಾರ್ವಜನಿಕರು ತಾರೀಕು ೨೦-೭-೪೯ರಲ್ಲಿ ಅವರಿಗೆ ಒಂದು ಸತ್ಕಾರ ಕೂಟವನ್ನು [illegible] ಕೊಡವ ಸಮಾಜದವರು ತಮ್ಮ [illegible] ಭವನದಲ್ಲಿ ತಾರೀಖು ೨೧-೮-೪೯ರಲ್ಲಿ ಒಂದು ಕೂಟವನ್ನು ಏರ್ಪಡಿಸಿರುವರು.

[illegible] ನಡೆಯುವ [illegible] ಅಧಿಕಾರಿಗಳ ಶಿಕ್ಷಣ [illegible] (Batch) ಯ [illegible] ಶ್ರೀ. [illegible] ಶ್ರೀ. [illegible] ಆರಿಸಲಾಗಿದೆ.

[illegible]

ಮಳೆ

ಮಳೆಯಾಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ೬೪ ಇಂಚು ೩ ಸೆಂಟು ಮಳೆಯಾಗಿತ್ತು. ತಾ. ೧ ರಿಂದ ಇಂದಿನ ವರೆಗೆ ಈ ವಾರದಲ್ಲಿ ೫ ಇಂಚು ೯೫ ಸೆಂಟು ಮಳೆಯಾಗಿದೆ.

ಮಾಂಸ ಮಾರಾಟ.

ಸಂತೆಯಲ್ಲಿ ಮಾರಲ್ಪಡುವ ಕುರಿ ಮಾಂಸವನ್ನು 'ಫಸ್ಟ್ ಕ್ಲಾಸ್' ಮತ್ತು 'ಸೆಕೆಂಡ್ ಕ್ಲಾಸ್' ಎಂದು ಎರಡು ತರಗತಿಯಾಗಿ ವಿಂಗಡಿಸಲಾಗಿದೆ 'ಫಸ್ಟ್ ಕ್ಲಾಸ್' ಮಾಂಸವು, ಕಡಿಯಲ್ಪಟ್ಟ ಕುರಿಯ ಮಾಂಸದ ಮೇಲೆ ಕೆಂಪು ಮುದ್ರೆಯನ್ನೊತ್ತಿ ಸೇರಿಗೆ ಎರಡು ರೂಪಾಯಿ ದರದಲ್ಲಿ ಮಾರಲ್ಪಡುವುದು. 'ಸೆಕೆಂಡ್ ಕ್ಲಾಸ್' ಮಾಂಸಕ್ಕೆ ಹಸುರು ಬಣ್ಣದ ಮುದ್ರೆಯು ಹಾಕಲ್ಪಟ್ಟು ಸೇರಿಗೆ ಒಂದು ರೂಪಾಯಿ ಹನ್ನೆರಡಾಣೆ ದರದಲ್ಲಿ ಮಾರಲ್ಪಡುವುದು. ಕಟುಕರು ಅನೇಕ ವೇಳೆ ಮಾಂಸವನ್ನು ಕೊಳ್ಳಲು ಕಳುಹಿಸಲ್ಪಟ್ಟ ನೌಕರರನ್ನು ಮತ್ತು ತಿಳುವಳಿಕೆ ಸಾಲದ ಇತರ ಜನರನ್ನು ಮೋಸಗೊಳಿಸುವ ಸಂಭವ ಉಂಟು. ಜನರು ವಿಟ್ಟು ಮಾಂಸವನ್ನು ಕೊಳ್ಳುವಾಗ ಆಯಾಯ ಮುದ್ರೆಗಳನ್ನು ಚೆನ್ನಾಗಿ ಪರೀಕ್ಷಿಸಿ ನೋಡಿ ಮೇಲೆ ವಿಧಿಸಲ್ಪಟ್ಟ ಕ್ರಯವನ್ನು ಕೊಟ್ಟು ಕೊಂಡು ಕೊಳ್ಳಬೇಕಾಗಿ ಕೋರುತ್ತೇನೆ.

ಸಿ. ಬಿ. ಕಾರ್ಯಪ್ಪ,
ಹೆಲ್ತ್ ಆಫೀಸರು, ಕೊಡಗು.

WANTED

Immediately an influential gentleman to work as an Inspector to one of the biggest Insurance companies for Coorg. The Selected candidate will be working on decent monthly Salary and on yearly bonus. Motor cycle will be freely provided for his regular use.

Apply to:-

Jaybhains,
C/o Mittoo Agencies-
VIRAJPET. S COORG.

ರೇಡಿಯೋ ಮೂಲಕ ಮನೋಚಿಕಿತ್ಸೆ.

ಫ್ರೆಂಚ್ ರೇಡಿಯೋ ಸಂಸ್ಥೆಯವರು [illegible] ಕಲಿತುಕೊಂಡಿದ್ದಾರೆ. ಅವನು [illegible] ಅವನ [illegible] ರೇಡಿಯೋ [illegible] ಮನೋರೋಗಗಳನ್ನು [illegible] ಮಾಡುವ ಪ್ರಯೋಗವೊಂದನ್ನು [illegible] ಗಿ [illegible] [illegible] ಅಧಿಕಾರಿಗಳಿಂದ [illegible] [illegible]

= ಭಾರತದ ಹೊಸ ಪೋಸ್ಟಲ್ ಸ್ಟಾಂಪುಗಳು. =

ಭಾರತದ ಶಿಲ್ಪಕಲಾ ವೈಭವವನ್ನು ಸದಾ ನೆನಪು ಮಾಡಿಕೊಡುವಂಥವು.

ಭಾರತದ ಹೊಸ ಪೋಸ್ಟಲ್ ಸ್ಟಾಂಪುಗಳು ಭಾರತ ಸ್ವಾತಂತ್ರ್ಯೋತ್ಸವದ ಎರಡನೇ ಸಮಾರಂಭದ ದಿನ ಈ ಆಗಸ್ಟ್ ತಿಂಗಳ ೧೫ ನೇ ತಾರೀಕು ಸಾರ್ವಜನಿಕರಿಗೆ ಮಾರಾಟಕ್ಕಾಗಿ ಇಡಲ್ಪಡುತ್ತವೆ. ಈ ಸ್ಟಾಂಪುಗಳು ಭಾರತದ ಪ್ರಾಚ್ಯ ಶಿಲ್ಪಕಲಾ ವೈಭವವನ್ನು ಸದಾ ಸ್ಮರಣೆಗೆ ತರುವಂತಹವಾಗಿವೆ.

ಈ ಸ್ಟಾಂಪುಗಳ ಮಾಲೆಯ ವಿಷಯವಾಗಿ ಈ ವರ್ಷ ಫೆಬ್ರವರಿ ತಿಂಗಳಿನಲ್ಲಿ ನಮೂನೆಗಳನ್ನು ಪ್ರಸಿದ್ಧಿಸಲಾಗಿತ್ತು. ಅಂದಿನಿಂದೀಚೆಗೆ ಕೆಲವು ಬದಲಾವಣೆಗಳೂ ಕೆಲವು ಹೊಸ ಸೇರ್ಪಡೆಗಳೂ ನಡೆದಿವೆ. ೧೫ ರೂಪಾಯಿಗಳ ಹೊಸದೊಂದು ಸ್ಟಾಂಪನ್ನು ಈ ವರ್ಗಕ್ಕೆ ಸೇರಿಸಲಾಗಿದೆ. ಇದಲ್ಲದೆ ಇತರ ಬದಲಾವಣೆಗಳೆಂದರೆ ಆರು ಕಾಸಿನ ಸ್ಟಾಂಪಿನ ಮೇಲೆ ಮೊದಲು ಹಾಕಿದ ಮೊಹೆಂಜೋದಾರೋ ಗೂಳಿಯ ಬದಲಾಗಿ ಈಗ ಕೋನಾರಕ್ ಅಶ್ವವನ್ನು ಹಾಕಲಾಗಿದೆ. ಸಾಂಚಿ ಸ್ತೂಪವಿರುವ ಎರಡಾಣೆ ಸ್ಟಾಂಪನ್ನು ಮೂರಾಣೆಗೆ ಬದಲಾವಣೆಗೆ ಮಾಡಲಾಗಿದೆ.

ಹದಿನೈದು ರೂಪಾಯಿಗಳ ಹೊಸ ಸ್ಟಾಂಪು.

ಹದಿನೈದು ರೂಪಾಯಿಗಳ ಹೊಸ ಸ್ಟಾಂಪಿನ ಮೇಲೆ ಪಾಲಿಟಾಣದ ಶತ್ರುಂಜಯ ದೇವಾಲಯದ ಚಿತ್ರವಿದೆ. ಈ ದೇವಾಲಯವು ಕ್ರಿ. ಶ. ೧೬೧೮ ರಲ್ಲಿ ಕಟ್ಟಲ್ಪಟ್ಟುದು. ಪಶ್ಚಿಮ ಭಾರತದ ನಗರಗಳಲ್ಲಿರುವ ಪ್ರಸಿದ್ಧ ಜೈನ ದೇವಾಲಯಗಳಲ್ಲಿ ಇದೂ ಒಂದು.

ಈ ಸ್ಟಾಂಪುಗಳೆಲ್ಲಾ ಅವುಗಳ ಬೆಲೆಯನ್ನು ಇಂಗ್ಲಿಷ್, ಹಿಂದಿ ಎರಡೂ ಭಾಷೆಗಳಲ್ಲೂ ಬರೆಯಲಾಗಿದೆ 'ಇಂಡಿಯಾ ಪೋಸ್ಟೇಜ್' ಎಂಬುದರಲ್ಲಿ 'ಇಂಡಿಯಾ' ಪದವೇ ಒಂದು ಕಡೆ 'ಪೋಸ್ಟೇಜ್' ಪದವೇ ಒಂದು ಕಡೆ ಇರುತ್ತದೆ.

ಹೊಸ ಸ್ಟಾಂಪುಗಳ ಪರಿಚಯ ರೀತಿಯಿದು:-

ಅಜಂತಾ ಚಿತ್ರ.

ಹೊಸ ೩ ಕಾಸಿನ ಸ್ಟಾಂಪಿನ ಮೇಲೆ ಇರುವ ಚಿತ್ರವಿದು. ಐದನೇ ಶತಮಾನದಲ್ಲಿ ನಿರ್ಮಿತವಾದ, ವಿಶ್ವ ಪ್ರಸಿದ್ಧವಾದ ಅಜಂತಾ ಗುಹೆಗಳಲ್ಲಿನ ಸ್ತಂಭವೊಂದರ ಮೇಲಿನ ಚಿತ್ರವನ್ನಿಲ್ಲಿ ಚಿತ್ರಿಸಲಾಗಿದೆ. ಈ ಸ್ಟಾಂಪಿನ ಬಣ್ಣ ನೀಲಿ ಬೂದು ಬಣ್ಣ.

ಕೋನಾರಕ್ ಅಶ್ವ.

ಆರು ಕಾಸಿನ ಸ್ಟಾಂಪಿನ ಮೇಲಿರುವ ಚಿತ್ರವಿದು. ಒರಿಸ್ಸಾದಲ್ಲಿ ಕೋನಾರಕ್ ಎಂಬ ಸ್ಥಳದಲ್ಲಿರುವ, ಕ್ರಿ. ಶ. ೧೨೩೮-೧೨೬೪ ರಲ್ಲಿ ಕಟ್ಟಲ್ಪಟ್ಟ ಬೌದ್ಧ ದೇವಾಲಯದ ಪ್ರಭಾವಶಾಲಿ ಶಿಲ್ಪವನ್ನು ಈ ಚಿತ್ರವು ತೋರಿಸುತ್ತದೆ.

ತ್ರಿಮೂರ್ತಿಯ ಚಿತ್ರ

ಬೊಂಬಾಯಿ ಬಳಿ ಇರುವ ಎಲಿಫಾಂಟಾದಲ್ಲಿ ಬಂಡೆಗಳಿಂದ ಕಡೆದ ಗುಹಾಂತರ್ದೇವಾಲಯದಲ್ಲಿರುವ ಶಿವನ ಮಹಾ ವಿಗ್ರಹದ (೮ ನೇ ಶತಮಾನದಲ್ಲಿ ನಿರ್ಮಿತವಾದದ್ದು) ಚಿತ್ರಪ್ರತಿಯು ಒಂಭತ್ತು ಕಾಸಿನ ಸ್ಟಾಂಪಿನ ಮೇಲೆ ಮುದ್ರಿತವಾಗಿದೆ. ಇದರ ಬಣ್ಣ ಅಚ್ಚ ಹಸುರು.

ಬೋಧಿಸತ್ವ ಮೂರ್ತಿ.

ಹಸುರು ಮಿಶ್ರವಾದ ನೀಲಿ ಬಣ್ಣದಲ್ಲಿ ಮುದ್ರಿತವಾಗಿರುವ ಒಂದಾಣೆ ಸ್ಟಾಂಪಿನ ಮೇಲೆ ಮಧ್ಯಯುಗದ ಶಿಲ್ಪಕಲಾ ವೈಭವದ ಸಂಕೇತವಾದ ಬೋಧಿಸತ್ವ ಸಿಂಹನಾದ ಲೋಕೇಶ್ವರನ ಪ್ರತಿಮೆಯ ಚಿತ್ರವಿದೆ. ಈ ಪ್ರತಿಮೆಯು ಈಗ ಲಕ್ನೋ ಮ್ಯೂಸಿಯಂನಲ್ಲಿದೆ.

ನಟರಾಜನ ಚಿತ್ರ.

ಎರಡು ಆಣೆಯ ಸ್ಟಾಂಪಿನ ಮೇಲಿರುವ ಚಿತ್ರವಿದು. ಮಧ್ಯಪ್ರಾಂತದ ಶಿರುವೇಲಂಗಾಡು ಎಂಬಲ್ಲಿರುವ ನಟರಾಜನ ಪ್ರತಿಮೆಯು ಕ್ರಿ. ಶ. ೧೧೦೦ ರಲ್ಲಿ ನಿರ್ಮಿತವಾಯಿತು. ಇದರ ಬಣ್ಣ ಕೆಂಪು.

ಸಾಂಚಿ ಸ್ತೂಪದ ಪೂರ್ವ ಹೆಬ್ಬಾಗಿಲು

ಮಧ್ಯ ಇಂಡಿಯಾದಲ್ಲಿರುವ ಪ್ರಸಿದ್ಧ ಬೌದ್ಧ ಯಾತ್ರಾಕ್ಷೇತ್ರವಾದ ಸಾಂಚಿಯ ಸ್ಥಳದ ವಿಖ್ಯಾತ ಸ್ತೂಪದ ನಾಲ್ಕು ಅಲಂಕಾರ ಪೂರ್ವ ಹೆಬ್ಬಾಗಿಲುಗಳಲ್ಲಿ ಒಂದರ ಚಿತ್ರವನ್ನು ಮೂರಾಣೆಯ ಸ್ಟಾಂಪಿನಲ್ಲಿ ಹಾಕಲಾಗಿದೆ. ಈ ಸ್ತೂಪವು ನಿರ್ಮಿತವಾದುದು ಕ್ರಿ. ಪೂ. ಒಂದನೇ ಶತಮಾನದಲ್ಲಿ ಎಂದು ಹೇಳಲಾಗಿದೆ.

ಈ ಸ್ಟಾಂಪು ಕಿತ್ತಳೆ ಬಣ್ಣದ್ದು. ಈ ಸ್ಟಾಂಪು ಉದ್ದುದ್ದವಾಗಿದೆ.

ಬುದ್ಧ ಗಯಾ ದೇವಾಲಯ.

ಬುದ್ಧ ದೇವನು ಮಹಾ ಬುದ್ಧಿ ಸಾಕ್ಷಾತ್ಕಾರವನ್ನು ಪಡೆದ ಪವಿತ್ರ ಸ್ಥಳವನ್ನು ಸೂಚಿಸುವ ಚಿತ್ರವು ನಾಲ್ಕೂವರೆ ಆಣೆ ಸ್ಟಾಂಪಿನ ಮೇಲಿದೆ. ಈ ಪವಿತ್ರ ಕ್ಷೇತ್ರವು ಆರನೇ ಶತಮಾನಕ್ಕೆ ಸೇರಿದುದು.

ಇದರ ಬಣ್ಣ ಒಂದು ಬಗೆಯ ನೀಲಿ. ಇದೂ ಉದ್ದುದ್ದವಾದ ಸ್ಟಾಂಪು.

ಭುವನೇಶ್ವರ ವಿಗ್ರಹ.

ಒರಿಸ್ಸಾದ ದೇವಾಲಯಗಳಲ್ಲೇ ಅತ್ಯಂತ ಭವ್ಯವೆನಿಸಿದ ಮಹಾ ಲಿಂಗರಾಜ ದೇವಾಲಯದಲ್ಲಿನ ಭುವನೇಶ್ವರ ಮೂರ್ತಿಯ ಚಿತ್ರವು ನಾಲ್ಕಾಣೆ ಸ್ಟಾಂಪನ್ನು ಅಲಂಕರಿಸಿದೆ. ಈ ದೇವಾಲಯವು ಕ್ರಿ. ಶ. ೧೦೦೦ ವರ್ಷದಲ್ಲಿ ನಿರ್ಮಿತವಾದುದು.

ಈ ಸ್ಟಾಂಪು ಉದ್ದುದ್ದನೆಯದು. ಕೆಂಪು ಕಿತ್ತಳೆ ಬಣ್ಣ ಇದರದು.

ಬಿಜಾಪುರದ ಗೋಲ ಗುಂಬಜ್.

ಹೈದರಾಬಾದಿನ ಬಿಜಾಪುರದಲ್ಲಿ ಬಹಮನಿ ಸುಲ್ತಾನ್ ಮಹಮ್ಮದ್ ಆದಿಲ್ ಷಹನ ಗೋರಿಯಿದೆ. ಅಲ್ಲಿನ ಗೋಪುರವು ಪ್ರಪಂಚದಲ್ಲೇ ಅತ್ಯಂತ ದೊಡ್ಡದು. ಈ ಶಿಲ್ಪಕೃತಿಯು ಕ್ರಿ. ಶ. ೧೬೨೬-೧೬೫೬ ರಲ್ಲಿ ನಿರ್ಮಿತವಾದುದು. ಇದರ ಚಿತ್ರವು ಹೊಸ ಆರಾಣೆ ಸ್ಟಾಂಪಿನಲ್ಲಿದೆ.

ಆರಾಣೆ ಸ್ಟಾಂಪಿನಲ್ಲಿ ಉದ್ದಕ್ಕಿಂತ ಅಗಲವೇ ಜಾಸ್ತಿ. ಈ ಅಡ್ಡಗಲದ ಸ್ಟಾಂಪಿನ ಬಣ್ಣ ಧೂಮ್ರ.

ಕಂದಾರ್ಯ ಮಹಾದೇವ ದೇವಾಲಯ

ಉತ್ತರ ಭಾರತದ ಶೈಲಿಯಲ್ಲಿ ಕಟ್ಟಿರುವ ದೇವಾಲಯಗಳಲ್ಲಿ ಅತಿ ಪ್ರಸಿದ್ಧವಾದುದು. ಬುಂದೇಲ್ ಖಂಡದ ಖಜುರಾಹೋವಿನ ಕಂದಾರ್ಯ ಮಹಾದೇವ ದೇವಾಲಯ. ಇದು ೧೧ ನೇ ಶತಮಾನದಲ್ಲಿ ನಿರ್ಮಿತವಾದುದು. ಈ ದೇವಾಲಯದ ಚಿತ್ರವು ಎಂಟಾಣೆಯ ಸ್ಟಾಂಪಿನಲ್ಲಿದೆ.

ವಿಶೇಷಾಯಿತು ನೀಲಿ ಬಣ್ಣದ ಈ ಸ್ಟಾಂಪು ಕೂಡ ಆರಾಣೆಯ ಸ್ಟಾಂಪಿನಷ್ಟೇ ಉದ್ದ ಅಪರಂಜಿಯೇ ಅಡ್ಡಗಲವಾಗಿದೆ.

ಅಮೃತಸರದ ಸ್ವರ್ಣ ದೇವಾಲಯ.

ಅಕ್ಬರ್ ಮಹಾ ಚಕ್ರವರ್ತಿಯ ಕಾಲದಲ್ಲಿ ಕ್ರಿ. ಶ. ೧೫೭೭-೧೬೦೪ರಲ್ಲಿ ಕಟ್ಟಲ್ಪಟ್ಟ ಅಮೃತಸರದ ಸುಂದರವಾದ ದೇವಾಲಯವಿದು. ಸಿಖ್ಖರ ಪವಿತ್ರವಾದ ಈ ದೇವಾಲಯವು ಕ್ರಿ. ಶ. ೧೮೦೩ರಲ್ಲಿ ಪುನರ್ನಿರ್ಮಿತವಾಯಿತು. ಇದರ ಚಿತ್ರವು ೧೨ ಆಣೆಯ ಸ್ಟಾಂಪಿನ ಮೇಲೆ ಇದೆ.

ಇದರ ಬಣ್ಣ ಮಾಸಲು ನೀಲಿ, ಆರಾಣೆ ಎಂಟಾಣೆ ಸ್ಟಾಂಪುಗಳಷ್ಟೇ ಇದೂ ಅಡ್ಡಗಲವಾಗಿದೆ.

ಚಿತ್ತೂರಿನ ವಿಜಯ ಗೋಪುರ.

ಚಿತ್ತೂರು ಕೋಟೆಯ ಮೇಲಿರುವ ೯ ಅಂತಸ್ತಿನ ಅಮೃತಶಿಲೆಯ ಗೋಪುರದ ಚಿತ್ರವು ಹೊಸ ೧ ರೂಪಾಯಿ ಸ್ಟಾಂಪಿನ ಮೇಲಿದೆ. ಈ ಗೋಪುರವು ೧೪೪೨-೧೪೪೯ರಲ್ಲಿ ನಿರ್ಮಿತವಾದದು.

ಈ ಸ್ಟಾಂಪು ಉದ್ದುದ್ದವಾಗಿದೆ. ಮಧ್ಯದಲ್ಲಿ ಅಚ್ಚ ಕೆನ್ನೀಲಿ ಬಣ್ಣವೂ ಸುತ್ತಲೂ ಕಪ್ಪು ಮಿಶ್ರಿತ ಹಸುರು ಬಣ್ಣವೂ ಇದೆ.

ದೆಹಲಿಯ ಕೆಂಪು ಕೋಟೆ.

ಇತಿಹಾಸ ಪ್ರಸಿದ್ಧವೂ ಇಂದೂ ಕೂಡ ಸುಪ್ರಖ್ಯಾತವೂ ಆದ ದೆಹಲಿಯ ಕೆಂಪು ಕೋಟೆಯ ಚಿತ್ರವು ೨ ರೂಪಾಯಿನ ಸ್ಟಾಂಪಿನ ಮೇಲಿದೆ. ಈ ಕೋಟೆಯನ್ನು ಚಕ್ರವರ್ತಿ ಷಾಜಹಾನನು ೧೬೩೯-೧೬೪೮ರಲ್ಲಿ ಕಟ್ಟಿಸಿದನು.

ಇದು ಒಂದು ರೂಪಾಯಿನ ಸ್ಟಾಂಪಿನ ಆಕಾರದಲ್ಲೇ ಇದ್ದರೂ ಇದು ಅದರಂತೆ ಉದ್ದುದ್ದವಾಗಿರದೆ ಅಡ್ಡಗಲವಾಗಿದೆ. ಮಧ್ಯಭಾಗದಲ್ಲಿ ಅಚ್ಚ ಕೆಂಪು ಬಣ್ಣವೂ ಸುತ್ತಲು ಕೆನ್ನೀಲಿ ಬಣ್ಣವೂ ಇದೆ.

ಆಗ್ರಾದ ತಾಜಮಹಲ್.

ಬಹುಶಃ ತಾಜಮಹಲಿನಷ್ಟು ವಿಶ್ವ ಪ್ರಖ್ಯಾತಿಯನ್ನು ಪಡೆದ ಕಟ್ಟಡ ಭಾರತದಲ್ಲಿ ಬೇರೆ ಇರದು. ಚಕ್ರವರ್ತಿ ಷಾಜಹಾನನು ತನ್ನ ಪ್ರೀತಿಯ ಮಡದಿ ಮುಮ್ತಾಜಳ ಸ್ಮಾರಕವಾಗಿ ಕಟ್ಟಿಸಿದ ಅಮೃತಶಿಲೆಯ ಸುಂದರ ಮಂದಿರವಿದು. ೧೬೩೨-೧೬೫೪ರಲ್ಲಿ ನಿರ್ಮಿತವಾದ ಅನುಪಮ ಕಲಾ ಕೃತಿಯಿದು. ಇದರ ಚಿತ್ರವು ೫ ರೂಪಾಯಿಗಳ ಸ್ಟಾಂಪಿನ ಮೇಲಿದೆ.

೨ ರೂಪಾಯಿ ಸ್ಟಾಂಪಿನ ಆಕಾರದಲ್ಲಿ ಅದೇ ರೀತಿ ಅಡ್ಡಗಲವಾಗಿರುವ ಈ ಸ್ಟಾಂಪಿನಲ್ಲಿ ಮಧ್ಯ ಭಾಗದಲ್ಲಿ ಕಪ್ಪು ಮಿಶ್ರ ಹಸುರು ಬಣ್ಣವಿದ್ದು ಸುತ್ತಲೂ ಕೆಂಪು ಕಂದು ಬಣ್ಣವುಳ್ಳದ್ದೂ ಆಗಿದೆ.

ದೆಹಲಿಯ ಕುತುಬ್ ಮಿನಾರ್.

ದೆಹಲಿಯಲ್ಲಿರುವ ೨೩೮ ಅಡಿ ಎತ್ತರದ ಈ ಗೋಪುರವು ೧೧-೧೨ನೇ ಶತಮಾನದಲ್ಲಿ ನಿರ್ಮಿತವಾದದು, ಕುತುಬ್ಬುದ್ದೀನನು ಇದನ್ನು ಕಟ್ಟಿಸಿದನು. ಇದರ ಚಿತ್ರವು ೧೦ ರೂಪಾಯಿಯ ಸ್ಟಾಂಪಿನ ಮೇಲಿದೆ.

೧ ರೂಪಾಯಿ ಸ್ಟಾಂಪಿನ ಆಕಾರದಲ್ಲಿ ಅದೇ ರೀತಿ ಉದ್ದುದ್ದವಾಗಿದೆ. ಮಧ್ಯದಲ್ಲಿ ಕೆಂಪು ಕಂದು ಬಣ್ಣವೂ ಸುತ್ತಲು ಕಪ್ಪು ಮಿಶ್ರಿತ ನೀಲಿ ಬಣ್ಣವೂ ಇದೆ.

ಪಾಲಿಟಾಣದ ಶತ್ರುಂಜಯ ದೇವಾಲಯ.

ಸುಪ್ರಸಿದ್ಧ ಜೈನ ದೇವಾಲಯವಾದ ಪಾಲಿಟಾಣದ ಶತ್ರುಂಜಯ ದೇವಸ್ಥಾನದ ಚಿತ್ರವು ೧೫ ರೂಪಾಯಿಯ ಸ್ಟಾಂಪಿನ ಮೇಲಿದೆ.

ಇದರ ಆಕಾರವೇ ಬೇರೆಯಾಗಿದ್ದು ಅಡ್ಡಗಲವಾಗಿದೆ. ಮಧ್ಯದಲ್ಲಿ ಕಂದು ಬಣ್ಣವೂ ಸುತ್ತಲು ಅಚ್ಚ ಕೆಂಪು ಬಣ್ಣವೂ ಇದೆ.

'ತಾಯಿನಾಡು'

ನೂತನ ಸರ್ವಜ್ಞ ಪದ.

ಹಾವಿನಾ ನಡೆಯಂತೆ | ಹೂವಿನಾ ಲತೆಯಂತೆ
ತಾವಿನಾ ಮೇಲೆಲ್ಲ ಹವೆಯಂತೆ—ಸ್ಥಿರವಲ್ಲ
ಠಾವಿಯನ್ನುಟ್ಟವರ ಮನವು ಸರ್ವಜ್ಞ || | ೧ ||

ಹ್ಯಾಟು ಧರಿಸಿದ ತಲೆಯು | ಸೂಟು ಹಾಕಿದ ಮೈಯು
ಬೂಟಿಟ್ಟ ಕಾಲು ಶ್ರೇಷ್ಠವೆನಬೇಡ—ಅದೊಂದು
ಬೂಟಾಟಿಕೆಯ ಬೊಂಬೆ ಸರ್ವಜ್ಞ || || ೨ ||

ಬಣ್ಣವನು ಬಳಿಯುವುದೇ | ಚಿನ್ನವನು ತೊಡುವುದದೇ
ಹೆಣ್ಣಿನಾ ಸರ್ವಸ್ವವೆಂಬುವಳ—ಕೂಡಿದೊಡೆ
ಕಣ್ಣೊಳಗೆ ಹುಣ್ಣಿನಂತಕ್ಕು ಸರ್ವಜ್ಞ || || ೩ ||

ತ್ಯಾಗಿಯುದಿಲ್ಲದವ | ಸಂಗೀತ ತಿಳಿಯದವ
ಭಂಗಾರ ಬಲುಮೆ ಇಲ್ಲದವ—ಬದುಕಿದರೂ
ಇಂಗಿದಾ ಕೆಂಡಗಳ ಅಂತೆ ಸರ್ವಜ್ಞ || || ೪ ||

ವಿದ್ಯೆ ಬಲ್ಲವನೆಂದು | ಬುದ್ಧಿ ತಿಳಿದವನೆಂದು
ಹದ್ದುಗಳ ಬಳಿಯನಪಹಾಸಿಯು—ಮೆರೆಯುವ
ಸದ್ದಿಲ್ಲದೇ ಸತ್ತ ಸರ್ವಜ್ಞ || || ೫ ||

—ಎಂ. ಎಸ್. ಹೊಂಬಪ್ಪ.

ಕೊಡಗು ಸರಕಾರಿ ಕಾಲೇಜು ಯೂನಿಯನಿನ ಉದ್ಘಾಟನೆ.

ಚೀಫ್ ಕಮಿಷನರ ಭಾಷಣದ ಸಾರ

‘ಕೊಡಗಿನ ತರುಣರಲ್ಲಿ ವಿದ್ಯಾವಂತರೂ, ಪ್ರತಿಭಾಶಾಲಿಗಳೂ ಆಗಿದ್ದ ನನ್ನ ಕಾಲೇಜಿನಲ್ಲಿ ಇಬ್ಬರು ಲೆಕ್ಚರರಾಗಿದ್ದಾರೆ. ಇವರಲ್ಲಿ ಒಬ್ಬರು ಇತ್ತಲಾಗಿ ಐ. ಎ. ಎಸ್. ಪರೀಕ್ಷೆಯಲ್ಲಿ ಪ್ರಶಂಸನೀಯ ರೀತಿಯಲ್ಲಿ ತೇರ್ಗಡೆಯಾದದು ಸ್ತುತ್ಯಾರ್ಹ. ಇಡೀ ಹಿಂದೂಸ್ಥಾನದಲ್ಲಿ ಈ ಪರೀಕ್ಷೆಗೆ ಕೂತವರಲ್ಲಿ ಮೂರನೆ ಸ್ಥಾನವನ್ನು ಇವರು ಪಡೆದಿದ್ದಾರೆ. ಈ ವಿಷಯವು ಕೊಡಗಿಗೆ ಮಾತ್ರವಲ್ಲ; ಇಡೀ ಹಿಂದೂದೇಶಕ್ಕೇ ಹೆಮ್ಮೆಯ ಮಾತು. ಇವರು ಇನ್ನು ಮುಂದೆ ಹಿಂದೂದೇಶದ ‘ಎಡ್ಮಿನಿಸ್ಟ್ರೇಟಿವ್ ಸರ್ವಿಸ್’ನಲ್ಲಿ ಅಧಿಕಾರ ಪಡೆದು ತಮ್ಮ ಜವಾಬ್ದಾರಿಯನ್ನು ಜಯಪ್ರದವಾಗಿ ನಿರ್ವಹಿಸಿ ಕೀರ್ತಿಯನ್ನು ಗಳಿಸಲೆಂದು ಆಶಿಸುತ್ತೇನೆ.

ಕೊಡಗಿನಿಂದ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಪಾಸಾದ ನನ್ನ ಬಾಲಕ ಬಾಲಕಿಯರು ಪರ ಊರುಗಳಲ್ಲಿರುವ ಕಾಲೇಜುಗಳಿಗೆ ಹೋದರೆ ಸ್ಥಳಸಿಕ್ಕದೆ ಪಡ ಕ್ಲಿಷ್ಟ ಕಷ್ಟದ ಅರಿವು ನಾನು ಇಲ್ಲಿಗೆ ಬಂದ ಪ್ರಾರಂಭದಲ್ಲೇ ಆಗಿತ್ತು. ಕೊಡಗಿಗೊಂದು ಕಾಲೇಜು ಅತ್ಯವಶ್ಯವೆಂಬ ಭಾವನೆ ನನ್ನಲ್ಲಿ ಅಂದಿನಿಂದಲೇ ಮೂಡಿತ್ತು. ಅಂದು ಮೊಗ್ಗೆಯಂತಿದ್ದ ಯೋಜನೆಯು ಇಂದು ಹೂವಾಗಿ ಅರಳಿದೆ. ಇದರ ಸುಗಂಧವು ನಾಲ್ಕು ದಿಕ್ಕಿಗೆ ಪಸರಿಸಲಿ. ಈ ಹೂವು ಕಾಯಾಗಿ ಉತ್ತಮ ಫಲವನ್ನು ಕೊಡುವಂತಾಗಲಿ.

ತಾತ್ಕಾಲಿಕವಾಗಿ ಕಾಲೇಜನ್ನು ಈ ಹೈಸ್ಕೂಲಿನಲ್ಲಿಯೇ ಪ್ರಾರಂಭಿಸಲಾಗಿದೆ. ಕಾಲೇಜಿಗೆ ಬೇಕಾದ ಕಟ್ಟಡಗಳು ಮುಂದೆ ತಯಾರಾಗುವವು. ಮುಂದಿನ ನಾಲ್ಕು ವರ್ಷಗಳಲ್ಲಿ ಕಾಲೇಜಿನ ಕಟ್ಟಡಗಳು ಆಗುವವು. ಇದಕ್ಕಾಗಿ ೩.೭ ಲಕ್ಷ ರೂಪಾಯಿಗಳು ಮಂಜೂರಾಗಿವೆ. ವಿಜ್ಞಾನ ಶಾಸ್ತ್ರಕ್ಕೆ ಬೇಕಾದ ಉಪಕರಣಗಳಿಗಾಗಿ ಹಲವು ಲಕ್ಷ ರೂಪಾಯಿಗಳು ಬೇಕಾಗುವವು. ಇದೆಲ್ಲವೂ ಮುಂಬರುವ ಐದು ವರ್ಷಗಳಲ್ಲಿ ಸರಿಯಾಗಿ ಜೋಡಿಸಲ್ಪಟ್ಟು ಕೊಡಗಿನ ಕಾಲೇಜು ಇತರ ಕಾಲೇಜುಗಳಿಗೆ ಒಂದು ಮಾದರಿಯಾಗಿ ನಿಲ್ಲುವಂತಾಗಬೇಕೆಂಬ ಆಶೆ ನನ್ನಲ್ಲಿರಲ್ಲಿದೆ.

ಈ ರೀತಿ ಕಾಲೇಜು ಪ್ರಗತಿ ಮತ್ತು ಗೌರವವನ್ನು ಪಡೆದು ನೆರೆಯಬೇಕಾದರೆ ಅದರ ಪ್ರಾಮುಖ್ಯ ಜವಾಬ್ದಾರಿಯು ವಿದ್ಯಾರ್ಥಿಗಳಾದ ನಿಮ್ಮ ಮೇಲಿದೆ. ನೀವೆಲ್ಲರೂ ಭವಿಷ್ಯದಲ್ಲಿ ದೇಶದ ಜವಾಬ್ದಾರಿಯನ್ನು ಹೊರಲಿರುವವರು. ಯಾವುದೇ ಜನಾಂಗವಾಗಲೀ, ಸಮಾಜವೇ ಆಗಲೀ ಶಿಸ್ತಿಲ್ಲದಿದ್ದರೆ ಪ್ರಗತಿ ಆಗದು. ನೀವೆಲ್ಲರೂ ಶಿಸ್ತಿನಿಂದ ವರ್ತಿಸಬೇಕು. ಜೀವನದಲ್ಲಿ ಉತ್ಕರ್ಷವಾಗಬೇಕಾದರೆ ಶಿಸ್ತು ಮತ್ತು ಸಹನೆ ಅತ್ಯವಶ್ಯ. ಶಿಸ್ತಿಲ್ಲದ ಮನುಷ್ಯನು ಎಷ್ಟೇ ತೀವ್ರಮತಿಯವನಾದರೂ ಹೆಚ್ಚಿನದನ್ನು ಸಾಧಿಸಲಾರ. ಅಂಥಾ ಶಿಸ್ತು, ಸಂಘಟನೆ, ಹಿರಿಮೆಗಳಿಗೆ ಉದಾಹರಣೆಯಾಗಿ ಹೇಳಬೇಕಿದ್ದರೆ ನಮ್ಮ ದೇಶದ ಮುಖ್ಯ ಮಂತ್ರಿಯವರಾದ ಪಂಡಿತ ನೆಹರೂರವರನ್ನು ಹೇಳಬಹುದು. ಅವರು ಪಾಲಿಸುವ ಶಿಸ್ತು, ನಂಬಿಕೆ, ವಿಶ್ವಾಸ, ಪ್ರೇಮ, ವಿಶಾಲದೃಷ್ಟಿ ಇವು ಆದರ್ಶನೀಯವಾದುವು. ಇವೇ ಅವರನ್ನು ಮೇಲಕ್ಕೆ ಕೂರಿಸಿವೆ.

ನಿಮ್ಮ ಚರಿತ್ರೆಯ ಪುಸ್ತಕದಲ್ಲಿ ಕಂಡುಬರುವ ನೆಪೋಲಿಯನನು ಜಗತ್ತನ್ನೇ ಜಯಿಸಲು ಶಕ್ಯನಾಗಿದ್ದರೆ ಅದು ಅವನ ಶಿಸ್ತಿನ ಕಾರಣದಿಂದ. ಸಾಮಾನ್ಯಯೋಧನಾಗಿ ಜೀವನ ಪ್ರಾರಂಭಿಸಿದ ಆತನು ಸೈನ್ಯದಲ್ಲಿ ಮಾತ್ರವಲ್ಲ; ದೇಶದ ಮುಖ್ಯಸ್ಥನಾಗಿ ಜಗತ್ತಿನ ಶೂರಯೋಧನೆನಿಸಿದನು. ಯಾವ ಯಾವ ಕೆಲಸವನ್ನು ಯಾವ ಯಾವ ಸಮಯದಲ್ಲಿ ಮಾಡಬೇಕೆಂಬ ನಿಯಮವು ಆತನಿಗಿತ್ತು. ಸಮಯ ತಪ್ಪಿದವರಿಗೆ ಊಟ ಸಹ ದೊರೆಯಬಾರದೆಂಬುದೇ ಆತನ ಕಟ್ಟಾಜ್ಞೆಯಾಗಿತ್ತು. ಇಂಥಾ ಆದರ್ಶವನ್ನು ನೀವು ಇಟ್ಟುಕೊಂಡು ಶಿಸ್ತು, ಸಂಘಟನೆ, ಐಕ್ಯತೆಯಿಂದ ಕೂಡಿ ಮುಂದೆ ಸಾಗಬೇಕಾಗಿದೆ.

ಒಳ್ಳೆಯ ಗುಣ ನಡತೆಗಳನ್ನು ಅಭ್ಯಾಸ ಮಾಡಬೇಕು; ಕೆಟ್ಟ ನಡತೆಗಳು ಪ್ರತಿಯೊಬ್ಬನಲ್ಲಿಯೂ ಇರುತ್ತವೆ. ಅವನ್ನು ಬಿಟ್ಟು ಒಳ್ಳೆಯದನ್ನು ಅನುಸರಿಸುವದರಲ್ಲಿಯೇ ಮನುಷ್ಯನ ಹಿರಿಮೆ ಇದೆ. ಸರಿಯಲ್ಲದ ಕೆಟ್ಟ ಕೆಲಸಗಳನ್ನು ಮಾಡದಿರಿ. ಈ ಕಾಲೇಜನ್ನು ಮುಂದಕ್ಕೆ ನಡೆಸಿಕೊಂಡು ಹೋಗುವವರು ನೀವೆ. ನಿಮ್ಮ ಕಿರಿಯವರೆಲ್ಲರೂ ನಿಮ್ಮನ್ನೇ ಹಿಂಬಾಲಿಸುತ್ತಾರೆ. ನೀವು ಉತ್ತಮ ಆದರ್ಶವನ್ನು ಮುಂದಿಟ್ಟರೆ ಮುಂದಿನ ಮಕ್ಕಳು ಆ ಮಾರ್ಗವನ್ನು ಅನುಸರಿಸುವರು. ಆದ್ದರಿಂದ ಈ ಕಾಲೇಜಿನ ಉನ್ನತಿ, ಅವನತಿ ಎರಡೂ ನಿಮ್ಮನ್ನೇ ಕೂಡಿದೆ.

ನಿಮ್ಮಲ್ಲಿ ವಿಶಾಲತೆ ಬೆಳೆಯಲಿ. ನಿಮ್ಮ ನೋಟವು ನನ್ನ ನಾಡು, ನನ್ನ ಕೊಡಗು ಎಂಬ ಸಂಕೀರ್ಣತೆಯಲ್ಲಿ ಸೀಮಿತವಾಗಿರಬಾರದು. ವಿಶಾಲ ದೃಷ್ಟಿ ಇರಲಿ. ಹಿಂದೂದೇಶವನ್ನು ನನ್ನ ನಾಡೆಂದೆನ್ನಿರಿ. ಪ್ರಪಂಚದಲ್ಲಿ ಒಬ್ಬ ಮಾನವನೆನಿಸಬೇಕಾದರೆ ಈ ವಿಶಾಲತೆ ಇರಲಿ. ಕಲ್ಯಾಣ ವಿಷಯಕ್ಕೆ ಗಮನವೀಯಿರಿ. ಒಳ್ಳೆ ಕಾರ್ಯಕ್ಕೆ, ಸರಿಯಾದ ವಿಷಯಕ್ಕೆ ಮನವಿತ್ತು ಅದನ್ನು ಸಾಧಿಸಿರಿ. ನಿಮ್ಮ ದೇಶಕ್ಕಾಗಿಯೂ ನಿಮ್ಮ ಕಾಲೇಜಿಗಾಗಿಯೂ ತನು, ಮನ, ಧನವನ್ನರ್ಪಿಸಿ ದುಡಿಯಲು ತಯಾರಾಗಿರಿ. ಆ ಬುದ್ಧಿ ನಿಮ್ಮಲ್ಲಿ ಬರುವಂತಾಗಲೆಂದು ಭಗವಂತನನ್ನು ಪ್ರಾರ್ಥಿಸುತ್ತೇನೆ.”

[ಈ ಮೇಲಿನ ಸಾರಾಂಶವನ್ನು ಕಾಲೇಜಿನ ವಿದ್ಯಾರ್ಥಿಯಾದ ಶ್ರೀ ಪಿ. ಎಂ. ಪೂಣಚ್ಚನವರು ಸಂಗ್ರಹಿಸಿ ಕೊಟ್ಟಿದ್ದಾರೆ]

ಮಾನವ ಜನ್ಮ.

ಲೇಖಕ — ಶ್ರೀ ಎ. ಜಿ. ಚಂಗಪ್ಪನವರು, ತರಬೇತು ಶಾಲೆ, ಮಡಿಕೇರಿ

ಈ ಪ್ರಪಂಚದಲ್ಲಿ ನಾವು ಅನೇಕಾನೇಕ ವಸ್ತುಗಳನ್ನು ಕಾಣುತ್ತೇವೆ. ಈ ವಸ್ತುಗಳಲ್ಲಿ ಸಜೀವ ವಸ್ತು, ನಿರ್ಜೀವ ವಸ್ತುಗಳೆಂದು ಎರಡು ವಿಧ. ಸಜೀವಗಳು ಗಿಡ ಮರಗಳಂತಲೂ ವಿವಿಧ ಪ್ರಾಣಿಗಳಂತಲೂ ಹುಟ್ಟುತ್ತವೆ. ಬೆಳೆಯುತ್ತವೆ ಹಾಗೂ ಸಾಯುತ್ತವೆ. ನಿರ್ಜೀವ ವಸ್ತುಗಳು ಇದ್ದ ಸ್ಥಾನಗಳನ್ನು ಬಿಟ್ಟು ಕದಲುವುದಿಲ್ಲ. ಅವುಗಳಿಗೆ ಜನನ ಮರಣಗಳೂ ಬೆಳವಣಿಗೆಯೂ ಇಲ್ಲ. ಸಜೀವ ವಸ್ತುಗಳಲ್ಲಿಯೂ ಹುಟ್ಟಿದ ಸ್ಥಳದಲ್ಲಿಯೇ ಬೆಳೆದು ಸಾಯುವ ಸಸ್ಯಾದಿಗಳು, ಚಲನೆಯಿದ್ದು ಬೇಕಾದೆಡೆಗೆ ಚಲಿಸುವಂತಹ ಪ್ರಾಣಿಗಳು- ಸಜೀವ ವಸ್ತುಗಳಲ್ಲಿ ಇವೆರಡು ದೊಡ್ಡ ವರ್ಗಗಳು. ಈ ವರ್ಗಗಳಲ್ಲಿ ಅನೇಕ ಉಪವರ್ಗಗಳಿವೆ. ಈ ಶಾಸ್ತ್ರಗಳನ್ನು ನಾವು ಓದುತ್ತಿದ್ದ ಹಾಗೆ ಈ ಸಜೀವ ಮತ್ತು ನಿರ್ಜೀವ ವಸ್ತುಗಳ ರಚನೆಯಲ್ಲಿ ಒಂದು ವ್ಯವಸ್ಥಿತ ಕ್ರಮ ವಿದೆಯೆಂಬುದೂ ಆ ಕ್ರಮದ ಉಲ್ಲಂಘನೆಯೊಡನೆ ಅವುಗಳಿಗೆ ನಾಶ ಉಂಟಾಗುವುದೆಂದೂ ನಮಗೆ ಗೊತ್ತಾಗುತ್ತದೆ. ಹಾಗಿದ್ದರೆ ಈ ವಸ್ತುಗಳು ತಮ್ಮಷ್ಟಕ್ಕೆ ಉಂಟಾದುವೇ ಅಥವಾ ಅವುಗಳ ವ್ಯವಸ್ಥೆಗೆ ನಿಯಮಗಳನ್ನು ಹಾಕಿ ಕೊಟ್ಟವರು ಇದ್ದಾರೆಯೇ ಎಂದು ಪ್ರಶ್ನೆ ಹುಟ್ಟುತ್ತದೆ. ನಿಯಮಗಳಿಲ್ಲದಿದ್ದರೆ ಸೂರ್ಯ ಚಂದ್ರ ನಕ್ಷತ್ರಾದಿಗಳು ತಂತಮ್ಮ ಪಥಗಳಲ್ಲಿಯೇ ಉದಯಿಸಿ ಕಂಡದಂತೆ ಕಾಣುತ್ತಿರಲಿಲ್ಲ. ಗಿಡಮರಗಳೂ ಪ್ರಾಣಿಗಳೂ ಆಯಾ ಸಮಯದಲ್ಲಿ ಹುಟ್ಟಿ ಬೆಳೆದು ಸಾಯುತ್ತಿರಲಿಲ್ಲ. ಇದರಿಂದ ಅವುಗಳನ್ನೆಲ್ಲಾ ಉಂಟು ಮಾಡುವವನೂ, ಪಾಲಿಸುವವನೂ ನಾಶಮಾಡುವವನೂ ಪ್ರತ್ಯೇಕವಿರಬೇಕು. ಒಬ್ಬ ವ್ಯಕ್ತಿಯಲ್ಲದಿದ್ದರೆ ಒಂದು ಶಕ್ತಿಯಾದರೂ ಇದೆಯೆಂದು ಎಲ್ಲರೂ ಒಪ್ಪಬೇಕು. ಅಂಥಾ ವ್ಯಕ್ತಿಯೂ ಶಕ್ತಿ ಒಬ್ಬನಲ್ಲದೆ ಹಲವಾರು ಇದ್ದಿದ್ದರೆ ಇವರ ಯೋಜನಾ ಕ್ರಮದಲ್ಲಿ ವ್ಯತ್ಯಾಸಗಳಿದ್ದು ಪ್ರಪಂಚದ ಐಕ್ಯತೆಗೆ ಅಪಾಯ ಬರುತ್ತಿತ್ತು. ಹಾಗಿಲ್ಲದೆ ಎಲ್ಲವು ಕ್ರಮಾನುಗತವಾಗಿ ಕಂಡು ಬರುವುದರಿಂದ ಅವುಗಳ ಐಕ್ಯತೆಗೆ ಕಾರಣನಾದ ಒಬ್ಬನೇ ಒಬ್ಬನು ಇಲ್ಲವೇ ಒಂದೇ ಶಕ್ತಿ ಇರಬೇಕು. ಅವನೇ ಸೃಷ್ಟಿಕರ್ತನಾದ ಪರಮಾತ್ಮನು ಅಥವಾ ಪ್ರಾರಂಭ ಚೇತನ.

ಪರಮಾತ್ಮನು ಒಬ್ಬನೇ ಎಂದೂ ಎಲ್ಲವೂ ಅವನ ನಿಯಮ ಬದ್ಧವಾಗಿ ನಡೆಯುತ್ತವೆಂದೂ, ಆ ನಿಯಮಗಳನ್ನು ಉಲ್ಲಂಘಿಸಿದಾಗ ಆ ವಸ್ತುಗಳಿಗೆ ವಿನಾಶ ಒದಗುವುದೆಂದೂ ತಿಳಿದಿದೆ. ಆದರೆ ಅಂಥ ಪರಮಾತ್ಮನು ಸರ್ವ ವ್ಯಾಪಿಯಾಗಿರುವದರಿಂದ ಅವನ ಗುಣ ಇಂಥದ್ದೇ ರೂಪವು ಇದೇ ಎಂದು ನಮ್ಮ ಇಂದ್ರಿಯಗಳಿಂದ ಗೊತ್ತುಹಚ್ಚಲಾರೆವು. ಅವನು ಸೃಷ್ಟಿಸಿದ ಪ್ರಕೃತಿಯ ಸೌಂದರ್ಯದಿಂದಲೂ, ಅದರ ನಿಯಮ ವೈಚಿತ್ರ್ಯದಿಂದಲೂ, ನಾವು ಆತನ ಭಾವನೆಯನ್ನು ನಮ್ಮ ಜ್ಞಾನ ದೃಷ್ಟಿಯಿಂದ ತಿಳಿದುಕೊಳ್ಳಬಹುದು.

ಪ್ರಕೃತಿ ಸಂಬಂಧವಾದ ಶಾಸ್ತ್ರಗಳನ್ನು ಎಷ್ಟು ಹೆಚ್ಚಾಗಿ ನಾವು ಓದುತ್ತೇವೋ ಅದರ ಸೌಂದರ್ಯ ವೈವಿಧ್ಯಗಳ ಪರಿಚಯವನ್ನು ಎಷ್ಟು ಚೆನ್ನಾಗಿ ಮಾಡಿಕೊಳ್ಳುತ್ತೇವೋ, ಅಷ್ಟಕ್ಕೆ ಆ ಪರಮಾತ್ಮನ ಸೃಷ್ಟಿವೈಚಿತ್ರ್ಯದ ಚಮತ್ಕೃತಿಯು ನಮಗೆ ತಿಳಿದು ಬರುವುದು. ಆಗಲೇ ಆತನ ಪ್ರತಿಯೊಂದು ಕಾರ್ಯದಲ್ಲಿಯೂ ಒಂದು ಉದ್ದೇಶವಿದೆ ಎಂಬ ಗೂಢಾರ್ಥವು ನಮ್ಮ ತಿಳುವಳಿಕೆಗೆ ಬರುವುದು, ಮತ್ತು ಆತನ ಮೇಲೆ ನಮಗೆ ಭಕ್ತಿಯೂ ವಿಶ್ವಾಸವೂ ಹೆಚ್ಚುವುದು.

ಈ ಸೃಷ್ಟಿಯ ಪರಿಚಯವನ್ನು ಮಾಡಿಕೊಳ್ಳುವ ವಿಚಾರ ಶಕ್ತಿಯೂ ಜ್ಞಾನವೂ ಮನುಷ್ಯನಲ್ಲಿ ಮಾತ್ರ ಬೀಜರೂಪದಲ್ಲಿದೆ. ಜನನ ಆ ಜ್ಞಾನವನ್ನು ಬೆಳೆಯಿಸಲಿಕ್ಕೆ ವಿಚಾರ ಶಕ್ತಿಯು ಆತನಿಗೆ ಸಹಾಯಕವಾಗುತ್ತದೆ. ಇತರ ಪ್ರಾಣಿಗಳಿಗೆ ಇಂಥ ವಿಚಾರ ಶಕ್ತಿಯೂ ಜ್ಞಾನವೂ ಇಲ್ಲ.

ಮಾನವ ಜನ್ಮವನ್ನು ಹೊತ್ತ ನಾವುಗಳು ಪ್ರಕೃತಿಯ ಅನುಭವವನ್ನು ಮಾಡಿಕೊಂಡು ಅದರಲ್ಲಿರುವ ಹಲವು ವಸ್ತುಗಳನ್ನು ನಮ್ಮ ಉಪಯೋಗಕ್ಕೆ ಹಚ್ಚಿ ನಮ್ಮ ಸುಖ ಸೌಕರ್ಯಗಳನ್ನು ಹೆಚ್ಚಿಸಿಕೊಳ್ಳುತ್ತೇವೆ. ಆಗ ಅವುಗಳಿಗೆ ಕರ್ತನಾದ ಆ ಪರಮಾತ್ಮನ ಉಪಕಾರವನ್ನು ಸ್ಮರಿಸದಿದ್ದರೆ ನಾವು ವಿಚಾರ ಶಕ್ತಿಯಿಲ್ಲದ ಪಶು ಸಮಾನರಾದೇವು! ಆ ಪರಮಾತ್ಮನ ಉಪಕಾರವನ್ನು ಸರ್ವದಾ ಸ್ಮರಿಸುವುದು ಮಾನವ ಜನ್ಮದ ಮುಖ್ಯ ಕರ್ತವ್ಯವಾಗಿದೆ.

THE WARDEN INSURANCE CO., Ltd.
Head Office. Bombay.

LIFE, FIRE, ACCIDENT, MOTOR & W. C. INSURANCES.

Managing Director: – S. H. THAKER.

Business in force	Rs. 5,00,00,000
Assets	,, 1,00,00,000
Income	,, 35,00,000

Also LOCAL MANAGERS OF
THE LONDON GUARANTEE & ACCIDENT CO., Ltd.
(Incorporated in England)
Assets Exceed Rs. 10,00,00,000

& Subsidiary Company of
THE PHOENIX ASSURANCE CO. Ltd.
(One of the Largest Assurance Companies in the World)
Assets Exceed Rs. 45,00,00,000

Transact FIRE INSURANCE

Enquiries for representation solicited.
Apply to:

Chief Agency Office, *Virajpet (Coorg)* or A. S. Aiyappa, *Branch Secretary, Gandhinagar,* BANGALORE CITY

ವಾಚಕರ ಪುಠ

ಓದುಗರ ಓಲೆಗಳು.

ಸೂರ್ಲಬಿ ಗ್ರಾಮ

ಕಳೆದ ವರ್ಷ ಕೊಡಗು ಜಿಲ್ಲಾ ಬೋರ್ಡ್ ಮೀಟಿಂಗಿನಲ್ಲಿ ಈ ಸುತ್ತುಮುತ್ತಲಿನ ಗ್ರಾಮಗಳ ಉಪಯೋಗಕ್ಕೆಂದು ಈ ಗ್ರಾಮದಲ್ಲಿ ಒಂದು ವಾರಾಸ್ಪತ್ರೆಯನ್ನು ತೆರೆಯಲು ನಿರ್ಣಯವಾಗಿದೆ. ಆದರೆ ಈಗ ಒಂದು ವರ್ಷವಾದರೂ ಅಂಥಾ ಆಸ್ಪತ್ರೆ ತೆರೆಯಲ್ಪಟ್ಟಿರುವದಿಲ್ಲ. ಇಂಥಾ ಆಸ್ಪತ್ರೆ ಇಡಲು ಅನುಕೂಲಪಡಿಸಲಿಕ್ಕಾಗಿ ಇಲ್ಲಿಯ ಕುಂಬಾರ ಗಡಿಗೆ ಶಾಲೆಯಲ್ಲಿ ಇದಕ್ಕಾಗಿ ಗ್ರಾಮಸ್ಥರು ಒಂದು ಕೋಣೆಯನ್ನು ಏರ್ಪಡಿಸಿರುತ್ತಾರೆ. ಇನ್ನಾದರೂ ಸಂಬಂಧಿಸಿದವರು ಇದರ ಸ್ಥಾಪನೆಗೆ ಮುತವರ್ಜಿ ವಹಿಸಬೇಕಾಗಿ ವಿನಂತಿ. ಯೋಗ್ಯ ಔಷಧಿಯು ಏರ್ಪಡಿಲ್ಲದೆ ಅನೇಕರು ಅಕಾಲ ಮರಣಕ್ಕೆ ತುತ್ತಾಗುತ್ತಾರೆ. ಸರಕಾರವು ಬಡ ರೈತರ ಕೂಗಿಗೆ ಕಿವಿಗೊಡುವದೇ?

'ಬಡ ರೈತ'

ಹುದಿಕೇರಿ ಸಂತೆಯ ಸುಂಕ.

ಹುದಿಕೇರಿ ಮಾರ್ಕೆಟ್ ಹರಾಜಿನ ಕಾಲಕ್ಕೆ ನಾನೂ ಇದ್ದೆನು. ಮಾರ್ಕೆಟ್ ಹರಾಜೆಂದರೆ ಮಾರ್ಕೆಟ್ಟಿನಲ್ಲಿ ಮಾರಾಟವಾಗುವ ವಸ್ತುಗಳ ಮೇಲೆ ಸುಂಕ ವಸೂಲ್ಮಾಡುವದೆಂದು ನನ್ನ ನಂಬಿಕೆ. ಆದರೆ ಹುದಿಕೇರಿಯಲ್ಲಿ ಮಾರ್ಕೆಟಿನಲ್ಲಿ ಮಾತ್ರವಲ್ಲ; ಮಾರ್ಕೆಟಿನಿಂದ ಸುಮಾರು ಅರ್ಧ ಮೈಲು ದೂರದಿಂದಲೇ ಈ ವಸೂಲಾತಿ ನಡೆಯುತ್ತಿದೆ. ಮಾರ್ಕೆಟಿಗೆ ಬರುವ ಕೊಡೆ, ಕುಕ್ಕೆ ಮೊದಲಾದುವು ದಾರಿಯಲ್ಲೇ ಮಾರಾಟವಾಗುವದುಂಟು! ಅವುಗಳ ಮೇಲೆ ಸುಂಕ ವಸೂಲ್ಮಾಡಲು ದಾರಿಕಾಯುವದು ಯಾವ ನ್ಯಾಯ? ಈ ರೀತಿ ವಸೂಲ್ಮಾಡಲು ಕಂಟ್ರಾಕ್ಟರಿಗೆ ಹಕ್ಕಿಲ್ಲ. ಕೇವಲ ಮಾರ್ಕೆಟಿಗೆ ಬಂದ ವಸ್ತುಗಳಿಗೆ ಸುಂಕ ಕೊಡಬೇಕಲ್ಲದೆ ಕಂಟ್ರಾಕ್ಟರರ ವ್ಯವಹಾರ ಕ್ಷೇತ್ರದ ಹೊರಗೆ ಸುಂಕ ವಸೂಲ್ಮಾಡುವದು ನ್ಯಾಯವಿಲ್ಲ. ತಿಳಿಯದ ಬಡ ಗ್ರಾಮಸ್ಥರನ್ನು ಈ ರೀತಿ ತೊಂದರೆ ಪಡಿಸುವದನ್ನು ನಿಲ್ಲಿಸಬೇಕಾಗಿದೆ.

'ಕಣ್ಣಾರೆ ಕಂಡವ'

ಹೆಚ್ಚು ಬೆಳೆಯುವ ಯೋಜನೆ.

ಹಿಂದೂದೇಶದ ಜನಸಂಖ್ಯೆ ಮಿತಿಮೀರಿ ಪ್ರತಿ ವರ್ಷ ಹೆಚ್ಚುತ್ತಿದೆ. ಆದರೆ ಅದಕ್ಕನುಗುಣವಾಗಿ ಆಹಾರ ಪದಾರ್ಥಗಳ ಉತ್ಪಾದನೆ ಹೆಚ್ಚುತ್ತಿಲ್ಲ. ಹಿಂದೂದೇಶಕ್ಕೆ ಬೇಕು ಮಣ್ಣಿದೆ ಜನಸಂಖ್ಯೆಯೂ ಇದೆ. ಆದರೆ ಬೇಕಾದಷ್ಟು ಬೆಳೆ ಬೆಳೆಯದಿರಲು ವ್ಯವಸಾಯದ ಬಗ್ಗೆ ಸಾಕಷ್ಟು [illegible] ಕಾರಣ. ವಿದ್ಯಾವಂತರು ಗ್ರಾಮಗಳ ಕಡೆ ತಿರುಗಿ ವ್ಯವಸಾಯ ಕೈಗೊಳ್ಳಬೇಕು. ವ್ಯವಸಾಯದ ಏಳ್ಗೆಗೆ ಸರಕಾರವು ಈ ಕೆಳಗಿನ ಸೂಚನೆಗಳನ್ನು ಗಮನಿಸಬೇಕು.

(೧) ಹೊಸದಾಗಿ ವ್ಯವಸಾಯ ಮಾಡುವ ಕ್ಷೇತ್ರಗಳಲ್ಲಿ ಮತ್ತು ಸಾಧ್ಯವಾಗುವ ಎಲ್ಲಾ ಎಡೆಗಳಲ್ಲಿ ಸಹಕಾರ ತತ್ವದ ಮೇಲೆ ಸಾಮುದಾಯಿಕ ವ್ಯವಸಾಯ ಕ್ರಮವನ್ನು ಜಾರಿಗೆ ತರಬೇಕು.

(೨) ಗೊಬ್ಬರ, ಒಳ್ಳೆ ಬೀಜ, ಮತ್ತು ವ್ಯವಸಾಯಗಾರರಿಗೆ ಅಗತ್ಯವಾದ ಧನಸಹಾಯವನ್ನು ಸಕಾಲದಲ್ಲಿ ಏರ್ಪಡಿಸಬೇಕು.

(೩) ನೀರಾವರಿ ಯೋಜನೆಯನ್ನು ತ್ವರಿತಗತಿಯಿಂದ ಕೈಕೊಳ್ಳಬೇಕು.

(೪) ರೈತರಿಗೆ ಉಪಕರಣಗಳನ್ನು ಒದಗಿಸುವದಲ್ಲದೆ ಶಾಸ್ತ್ರೀಯ ವ್ಯವಸಾಯದ ಬೋಧನೆಯನ್ನು ಆಗಾಗ ಕೊಡುವದಲ್ಲದೆ ಮಾಡಿಯೂ ತೋರಿಸುವ ಏರ್ಪಾಡಾಗಬೇಕು.

(೫) ಜಾನುವಾರುಗಳ ಸ್ಥಿತಿಯನ್ನು ಸುಧಾರಿಸಲು ತಕ್ಕ ಕ್ರಮ ಕೈಕೊಳ್ಳಬೇಕು.

(೬) ಉತ್ಪಾದನೆಯಾದ ಬೆಳೆಗೆ ತಕ್ಕ ಬೆಲೆ, ರೈತನಿಗೆ ದೊರೆಯುವಂತೆಯೂ, ಬೆಳೆಸಿದ ಬೆಳೆಯನ್ನು ಸಂಗ್ರಹಿಸಿ ಯೋಗ್ಯ ರೀತಿ ವಿತರಣೆ ಮಾಡುವಂತೆಯೂ ಆಗಬೇಕು.

ಇಷ್ಟು ಮಾಡದಿದ್ದರೆ ಹೆಚ್ಚು ಬೆಳೆಯುವ ಪ್ರಯತ್ನ ಯಶಸ್ವಿಯಾಗದು.

ಬೋಪಣ್ಣ.

ಕಾಫಿತೋಟಗಳಲ್ಲಿನ ಕೂಲಿಗಳು.

ತೋಟದಲ್ಲಿ ಕೆಲಸ ಮಾಡುವ ಆಳುಗಳ ಸ್ಥಿತಿ ಶೋಚನೀಯವಾಗಿದೆ. 'ಮೇಜಸ್ ಆಕ್ಟ್' ಮೊದಲಾದುವು ಇರಬಹುದು. ಆದರೆ ಅವೆಲ್ಲವೂ ಕಾಗದದಲ್ಲಿ. ಕೆಲವು ತೋಟದ ಮಾಲೀಕರು ಗಂಡಾಳಿಗೆ 1-4-0, ಹೆಣ್ಣಾಳಿಗೆ 0-14-0 ಮಕ್ಕಳಿಗೆ 0-10-0 ಕೂಲಿಕೊಡುತ್ತಾರೆ. ಕೆಲವರು ಗಂಡಾಳಿಗೆ 0-15-0, ಹೆಣ್ಣಾಳಿಗೆ 0-12-0, ಮಕ್ಕಳಿಗೆ 0-8-0 ಕೊಡುತ್ತಾರೆ. ಇದಕ್ಕಿಂಥಾ ಕಡಿಮೆ ದರವೂ ಕೆಲವೆಡೆ ಇವೆ. ಇದು ಶುಂಠಾ ಅನ್ಯಾಯ. ತೋಟದ ಕೆಲಸಗಾರರಿಗೆ ಸರಕಾರದ ಪಿ. ಡಬ್ಲ್ಯು. ಡಿ. ಇಲಾಖೆಯಲ್ಲಿ ಕೆಲಸ ಮಾಡುವವರಷ್ಟೇ ದಿನಗೂಲಿ ದೊರೆಯಬೇಕು. ಈ ವಿಷಯವನ್ನು ಬಡಜನಹಿತಸಾಧಕರೂ, ಕನ್‌ಸಿಲಿಯೇಶನ್ ಅಧಿಕಾರಿಯವರೂ ಗಮನಕ್ಕೆ ತೆಗೆದುಕೊಂಡು ಎಲ್ಲಾ ತೋಟಗಳಲ್ಲಿಯೂ ಒಂದೇ ರೀತಿಯ ದರ ದೊರೆಯುವಂತೆ ಮಾಡಬೇಕು. ಕನ್‌ಸಿಲಿಯೇಶನ್ ಆಫೀಸರು ಕಣ್ಣಾರಿ ಡೇವಿಡ್ ಕೋಟೆ, ಶ್ರೀ. ಎಂ. ಪಿ. ದೇವಿ ಪಡೆ ತೋಟ ಮೊದಲಾದ ತೋಟಗಳಲ್ಲಿ ಕೂಲಿಗಳಿಗೆ ಕೊಡುತ್ತಿರುವ ಕೂಲಿ ದರವನ್ನು ಪರಿಶೀಲಿಸುವದಾಗಿ ಆಶೆ.

ವಿವಿಧ ತೋಟದ ಆಳುಗಳೂ ತಮ್ಮ ಬೇಡಿಕೆಗಳನ್ನು ಪಡೆಯಲು ಸಂಘಟಿತ ಮಾಡಿಕೊಳ್ಳುವದು ಅಗತ್ಯವಿದೆ. ನಾವು ಎಚ್ಚರಗೊಳ್ಳದಿದ್ದರೆ ಸ್ವಾತಂತ್ರ್ಯ ದೇಶಕ್ಕೆ ಬಂದಿದ್ದರೂ ಹೊಟ್ಟೆಗೆ ಗೋಳಾಡಬೇಕಾಗುವ ದುಃಸ್ಥಿತಿಯುವ ತಮ್ಮ ಸ್ಥಿತಿ ಸುಧಾರಿಸದು. ಆದ್ದರಿಂದ ಕೂಲಿ ವರ್ಗದವರಾದ ನಾವು ಎಚ್ಚರಗೊಳ್ಳಬೇಕಾಗಿದೆ.

ಕೆಲಸ.

ಸೋಮವಾರಪೇಟೆ ಜಕ್ಕಳ್ಳಿ ಮತ್ತು ಬೆಟ್ಟದಳ್ಳಿ ಕುಂದಳ್ಳಿ ರಸ್ತೆ.

ಸೋಮವಾರಪೇಟೆಯಿಂದ ಜಕ್ಕಳ್ಳಿಗೆ ಹೋಗುವ ರಸ್ತೆಯೂ, ಮತ್ತು ಸದರಿ ರಸ್ತೆಯಿಂದ ಕುಂದಳ್ಳಿಗೆ ಹೋಗುವ ರಸ್ತೆಯೂ ಎಡೂರು, ಆನಗಲ್ಲು, ಅಬ್ಬಿಮಠ, ತಲ್ತರೆ ಶೆಟ್ಟಳ್ಳಿ, ಹರಗ, ಬೆಟ್ಟದಳ್ಳಿ, ಶಾಂತಳ್ಳಿ, ಕುಂದಳ್ಳಿ, [illegible]ಳ್ಳಿ, [illegible]ತ್ತಳ್ಳಿ ಮೊದಲಾದ [illegible] ರಸ್ತೆಯಾಗಿರತಕ್ಕದ್ದು. ಈ ಎರಡು ರಸ್ತೆಗಳು ಜಿಲ್ಲಾ ಬೋರ್ಡಿನ ಸಂಬಂಧವುಳ್ಳವುಗಳಾಗಿರುತ್ತವೆ. ಮಳೆಗಾಲದಲ್ಲಿ ವಾಹನಗಳ ವಹಿವಾಟಿಗೆ ಈ ರಸ್ತೆಗಳು ಯೋಗ್ಯವಾಗಿಲ್ಲದ ಕಾರಣ [illegible] ಆಸ್ಪತ್ರೆಗೆ ಸಾಗಿಸುವದೂ ಕಷ್ಟ. [illegible] ತಾಲೂಕಿನ ಆಸ್ಪತ್ರೆಗೆ [illegible] ಸರಕಾರದವರು ಒಂದು ವ್ಯಾನನ್ನು ಕೊಟ್ಟಿರುವರು. ಆದರೆ ಆ ವ್ಯಾನಿನಿಂದ ನಮಗೇನೂ ಪ್ರಯೋಜನ ಬರಲಾರದು. ಹೀಗಾಗಿ ಎಷ್ಟೋ ಮರಣಗಳು ಉಂಟಾಗಿವೆ. ರಸ್ತೆ ದುರಸ್ತು ಇಲ್ಲದ ಮೇಲೆ ಯಾವದು ಇದ್ದರೇನು ಬಂದರೇನು? ಈ ರಸ್ತೆಯ ದುರಸ್ತಿಗೆಂದು ೨೫,೦೦೦ ರೂಗಳನ್ನು ಮಂಜೂರು ಮಾಡಿರುವರು. ಆದರೆ ಅದು ಕಾರ್ಯರೂಪಕ್ಕೆ ಯಾವಾಗ ಬಂದೀತು? ವಾರಾಸ್ಪತ್ರೆಯನ್ನು ತೆರೆಯಲು ಏರ್ಪಾಡಾಗಿದೆ. ರೋಡಿನ ಅಭಾವದಿಂದ ಅದೂ ಸಫಲ ಸಾಧ್ಯವಿಲ್ಲ. [illegible] ರಸ್ತೆಯನ್ನು ಪೂರ್ತಿ ಜಲ್ಲಿ ಕಲ್ಲು ಹಾಕಿಸಿ ಪ್ರತಿ ಮೋರಿಗಳನ್ನೂ ಸಂಪಡಿಸಬೇಕು. ನಮ್ಮ ಕೊಡಗಿನ ಸರಹದ್ದಿನಿಂದ ಸುಬ್ರಹ್ಮಣ್ಯ ರಸ್ತೆಗೆ ೬ ಮೈಲು ದೂರವಿರುವದು. ಅಲ್ಲಿ ಎರಡು ಹೊಳೆಗಳಿವೆ. ನಮ್ಮ ಘನ ಸರಕಾರವು ಮೈಸೂರು ಸರಕಾರದೊಡನೆ ಸಹಕರಿಸಿ ಆ ರಸ್ತೆಯನ್ನು ದುರಸ್ತಿಪಡಿಸಿದ್ದೇ ಆದರೆ ನ್ಯಾಯವಾಗಿ ಸರೀಸ್ ಬಸ್ಸು ಲೈನನ್ನು ಇಡಬಹುದು. ಈ ಲೈನಿನಲ್ಲಿ ಸಕಲೇಶಪುರ, ಸುಬ್ರಹ್ಮಣ್ಯ, ಹಾಸನ, ಉಪ್ಪಿನಂಗಡಿ, ಪುತ್ತೂರು, ಮಂಗಳೂರು ಮೊದಲಾದವುಗಳಲ್ಲಿ ವ್ಯಾಪಾರ ವಹಿವಾಟು ನಡೆದು ತುಂಬಾ ಪ್ರಯೋಜನ ಉಂಟಾಗಿ ಬಡ ರೈತರುಗಳು ಬೆಳೆಸಿದಂಥಾ ದವಸ ಧಾನ್ಯಗಳನ್ನು ಸಾಗಿಸಲು ಸಹ ಪ್ರಯೋಜನವಾಗ ಬಲ್ಲದೆ ಘನ ಸರಕಾರಕ್ಕೂ ಸಹ ಇದರಿಂದ ತುಂಬಾ ಪ್ರಯೋಜನವುಂಟಾದೀತು. ನಮ್ಮ ಘನ ಸರಕಾರವು ಬಡಜನೋದ್ಧಾರ ಮಾಡಲು ಇದನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳಬೇಕಾಗಿ ಪ್ರಾರ್ಥನೆ.

ಬೆಟ್ಟ ಪ್ರದೇಶದವ.

ರೈತರ ಮನವಿ.

ಪತ್ರಿಕೆಗಳಲ್ಲಿ ರೈತರು ಎಷ್ಟು ಕೂಗಿಕೊಂಡರೂ ಸರಕಾರ ಗಮನಿಸುವಂತೆ ಕಾಣುವದಿಲ್ಲ. ಕಳೆದ ವರ್ಷ ನಾಲ್ಕುನಾಡಿನ [illegible] ರೈತರ ಗದ್ದೆಗಳು ಒಳ್ಳೆಯದು [illegible] ಹಾಳಾಗಿಹೋದವು. ಸಂಬಂಧಿಸಿದ ಅಧಿಕಾರಿಗಳು ಅಗತ್ಯವಾಗಿ [illegible] ಶೋಧಿಸುವವರಂತೆ ನಟಿಸಿ ಧನ ಸಹಾಯ ಕೊಡುವದಾಗಿ ಭರವಸೆ ಇತ್ತರು. [illegible] ಗಳನ್ನು ಬಿಡದೆ ಕೆಲಸ ಮಾಡಿಸಿದ [illegible] ಕಾಲ[illegible] ಸರಕಾರದಿಂದ ಕೇಳುವುದಾಗಿಯೂ ಅದೇ ವರ್ಷ ರಿಪೇರಿ ಮಾಡಿ ಗದ್ದೆಗಳನ್ನು ನೆಟ್ಟಿದ್ದಾದರೆ 'ಗ್ರೋಮೋರ್ ಫುಡ್' ಇಲಾಖೆಯಿಂದ ಬೋನಸ್ಸು ಕೊಡಿಸುವುದಾಗಿಯೂ ಭರವಸೆಯಿತ್ತದ್ದರಿಂದ ಮಳೆಗಾಲದಲ್ಲಿ ಒಂದಕ್ಕೆರಡು ಕೂಲಿ ಕೊಟ್ಟು ರಿಪೇರಿಮಾಡಿಸಿ ನಾಟಿ ನೆಡಲಾಯಿತು. ಅನಂತರ ಆರು ತಿಂಗಳ ನಂತರ ರಶಾವಿ ಸಾಲಕೊಡಲಾಯಿತು. ಇದರ ಅರ್ಧಾಂಶವನ್ನು ಮಾಫಿ [illegible] ಬೇಕಾಗಿ ಪ್ರಾರ್ಥಿಸಿಕೊಂಡಾಗ 'ಗ್ರೋಮೋರ್ ಫುಡ್' ಅಧಿಕಾರಿಗಳಿಗೆ [illegible] ಳ್ಳಿರೆಂದೂ ತಿಳಿಸಲಾಯಿತು. [illegible] ಕೇಳಿಕೊಂಡಾಗ [illegible] ಉಂಟಾದ ನಷ್ಟಕ್ಕೆ [illegible] ಕೊಡಲಾಗುವುದಿಲ್ಲವೆಂದು [illegible]!

ವ್ಯವಸಾಯ ಇಲಾಖೆಯ [illegible] ತೋಟದ ಮಣ್ಣನ್ನು ಪರಿಶೋಧಿಸಲೋಸುಗ ಸಮ್ಮಂಧಿಸಿದ ಅಧಿಕಾರಿಗಳಿಗೆ ಮಣ್ಣನ್ನೂ ಅದರ ಖರ್ಚಿಗಾಗಿ ಹತ್ತು ರೂಪಾಯಿಗಳನ್ನೂ ಕೊಡಲಾಯಿತು. ಹಲವಾರು ತಿಂಗಳ ನಂತರ ಮಣ್ಣಿನಲ್ಲಿ ಸುಣ್ಣ ಕಡಿಮೆಯಾಗಿದೆಯೆಂದು ಜವಾಬು ಬಂತು. ಅದೇ ಇಲಾಖೆಗೆ ಸುಣ್ಣಕ್ಕಾಗಿ ಬರೆದುಕೊಂಡಾಗ ಅದು ಹಣ್ಣು ಬೆಳೆಸುವ ಇಲಾಖೆಗೆ ಸಂಬಂಧಿಸಿದ್ದು. ಅಲ್ಲಿಗೆ ಬರೆದುಕೊಳ್ಳಿರೆಂದು ತಿಳಿಸಲಾಯಿತು. ಅಲ್ಲಿಗೆ ಬರೆದುಕೊಂಡಾಗ ಮೇಲಧಿಕಾರಿಗಳ ಸಲಹೆ ಮೇರೆ ವ್ಯವಸಾಯ ಇಲಾಖೆಯ ಅಸಿಸ್ಟೆಂಟ್ [illegible] ಕೊಡಲಾಯಿತು. ಅವರು ಈ ಅರ್ಜಿದಾರರ ತೋಟವು ರಸ್ತೆಗಳ ಪಕ್ಕದಲ್ಲಿಲ್ಲದ್ದರಿಂದ ಅಲ್ಲಿ ಪರಿಶೋಧನಾಲಯವನ್ನು ತೆರೆಯಲಾಗುವುದಿಲ್ಲ. ಇದರಿಂದ ಬೆಟ್ಟದ ಜನರಿಗೆ ಪ್ರಯೋಜನವಾಗಲಾರದು. ತತ್ಕಾಲಕ್ಕೆ ಸಂಕಾರದಲ್ಲಿ ಹಣವಿಲ್ಲದ ಕಾರಣ ಸುಣ್ಣ ಹಂಚುವಿಕೆಯು ಸಾಧ್ಯವಿಲ್ಲವೆಂದು ತಿಳಿಸಿಬಿಟ್ಟರು! ಇದಿಷ್ಟು ಜವಾಬುಗಳಿಗೆ ಹೆಚ್ಚು ಕಡಿಮೆ ಒಂದು ವರ್ಷ ಹಿಡಿಯಿತು. ಈ ಬೇಡಿಕೆಗಳು ನೆರವೇರದ್ದಕ್ಕೆ ಚಿಂತೆಯಿರಲಿಲ್ಲ. ಆದರೆ ವ್ಯರ್ಥಾ ಇದಕ್ಕಾಗಿ ಹತ್ತು ಹದಿನೈದು ರೂಪಾಯಿಗಳನ್ನು ಖರ್ಚುಮಾಡಿ ನಿಷ್ಪ್ರಯೋಜನವಾಗಿದ್ದು ರೈತನಿಗೆ ಬಹಳ ದೊಡ್ಡ ನಷ್ಟ.

ರೈತರ ಜೀವನವು ದಿನಹೋದಂತೆ ಕಷ್ಟಕ್ಕೀಡಾಗುತ್ತಿದೆ. ಅವುಗಳು ಸರಕಾರದ ಸಹಾಯವನ್ನು ಹೊಂದಿ ರೈತರ ಹೊಟ್ಟೆ ಬಟ್ಟೆ ಪೇಟೆಪಟ್ಟಣಗಳನ್ನು ಸೇರುತ್ತಿದ್ದಾರೆ. ಉಳುವ ಎತ್ತುಗಳ ಬೆಲೆಯು ದಿನೇ ದಿನೇ ಏರುತ್ತಲಿದೆ. ಬೆಳೆಗಳಿಗೆ ಹೊಸ ಹೊಸ ರೋಗಗಳು ತಗಲಿ ಹಾಳಾಗುತ್ತಿವೆ. [illegible] ಅದರಲ್ಲಿ ಹೊಳೆವ[illegible] ಸಾಗಿಸಲಾರದೆ ಪೇಟೆಯಲ್ಲೇ ಬಿದ್ದಿರಬೇಕಾಗಿದೆ. ಬೆಳೆಸಿದ ದವಸ ಧಾನ್ಯಗಳನ್ನು ಹಣ್ಣು ಹಂಪಲುಗಳನ್ನು ಪೇಟೆಗೆ ಸಾಗಿಸಿ ಮಾರಲು ಸರಿಯಾದ ರಸ್ತೆ, ಸೇತುವೆಗಳಿಲ್ಲದೆ ಸಾಹುಕಾರರ ಬೆಲೆಗೇ ಕೊಡಬೇಕಾಗುತ್ತಿದೆ. ಇವೆಲ್ಲಾ ಕಾರಣಗಳಿಂದ ರೈತಾಪಿ ಜೀವನವು ಒಳಗೆ ಕಡಿಮೆ ತರದೆಂದು ಗಣಿಸಿ ಪ್ರತ್ಯೇಕ ಪಟ್ಟಣಗಳನ್ನು ಸೇರುವಂತಾಗಿದೆ. ರೈತರಿಗೆ ಸರಕಾರದ ಸಹಾಯ ಸಹಾನುಭೂತಿ ಇಲ್ಲದಿದ್ದರೆ ಬಡ ರೈತ ಉಳಿದು ಜೀವಿಸುವಂತಿಲ್ಲ.

ಎಂ. ಪಿ. ಎ.
(ಮಾದಾಪುರ [illegible])

ವಿಡಂಬನ

ಹೆಂಗಸು-ಒಂದು ಒಗಟು.

ಹೆಣ್ಣು, ಹೊನ್ನು, ಮಣ್ಣು, ಮಾನವನನ್ನು ದುಃಖಕ್ಕೀಡು ಮಾಡ ಬಲ್ಲ ಮೂರು ಪಾಶವೀಶಕ್ತಿಗಳೆಂಬ ಉಕ್ತಿಯಿದೆ. ಪ್ರಾಚೀನ ಚರಿತ್ರೆಯಲ್ಲಿ, ಪುರಾಣಗಳ ಕಾಲದಿಂದ ಇಂದಿನ ಗಾಂಧಿಯುಗದ ವರೆಗೂ ಹೆಣ್ಣಿನ ಪಾತ್ರ ಪ್ರಶಂಸನೀಯವಾಗಿಲ್ಲ. ಹಿಂದಣ ಲಂಕೆ ಭಸ್ಮೀಭೂತವಾದುದು, ಟ್ರಾಯ್ ನಗರ ಹೆಣ್ಣಿನಿಂದ, ಹೆಣ್ಣಿಗಾಗಿ. ಕುರುಕುಲ ಮಣ್ಣಾದುದು ಹೆಣ್ಣಿನ ರೋಷಕ್ಕೆ ಸಿಕ್ಕಿ. ಚರಿತ್ರೆಯ ಹಲವಾರು ಸಮರಗಳು ಹೆಣ್ಣಿನ ಕಾರಣದಿಂದ.

ವಿಡಂ–ಈವ್

ಭಾರತೀಯ ಇತಿಹಾಸ ಮಾತ್ರವೇ ಹೆಣ್ಣನ್ನು ದ್ವೇಷಿಸಲಿಲ್ಲ. ಕ್ರೈಸ್ತ ಸಿದ್ಧಾಂತದ ಪ್ರಕಾರ, ಹೆಣ್ಣು ಸೈತಾನನ ಸಹಾಯಕಿಯಾಗಿ ಮಾನವ ಸೀಳಿಗೆಯನ್ನು ಪಾಪದ ಹಾದಿಗೆ ಎಳೆದಳು. ತಿನ್ನಬಾರದ ಫಲವನ್ನು ತಿನ್ನಿಸಿ 'ಮಿತ್ರ ಟ್ರಾಯ್ ನಗರ ಬೆಂಕಿಯ ಪಾಲ ದುದು ಹೆಲನ್‌ಳ ಚಾತುರ್ಯಕ್ಕಾಗಿ. ಮುಸ್ಲಿಮ್ ಪ್ರವಾದಿಯೂ ಹೆಣ್ಣಿಗೆ ಆತ್ಮವನ್ನೇ ಕೊಟ್ಟಿಲ್ಲ.'

ತಾತ್ವಿಕರಂತೂ ಹೆಣ್ಣನ್ನು ಹೀನಾಯ ಮಾನವನಾಗಿ ತೆಗಳಿದ್ದಾರೆ. ತಪಸ್ಸಿನಿಂದ ದೈವತ್ವವನ್ನು ಒಲಿಸಿಕೊಳ್ಳುವ ಋಷಿಗಳ ಹೆಣ್ಣಿಂದರೆ ಸಿಂಹಸ್ವಪ್ನ. ಆ ದಿನ ದೊಂಪಾಯಲ್ಲಿ ಕೂತರೂ ಗಂಧರ್ವ ಸ್ತ್ರೀಯರ ಕಾಟ. ಶತಮಾನಗಳ ತಪಸ್ಸನ್ನು ಕಳೆದುಕೊಂಡು ತೊಳಲಿದ, ಮೇನಕೆಯ ಕಾಟಕ್ಕೆ ಸಿಲುಕಿದ ಬಡಪ್ರಾಣಿ ವಿಶ್ವಾಮಿತ್ರ. ಪರ್ವತ ರಾಜನ ಮಗಳ ಮೋಹಪಾಶಕ್ಕೆ ಸಿಕ್ಕಿದ ಪಾಶುಪತಾಸ್ತ್ರಧಾರಿ ಮುಕ್ಕಣ್ಣನಿಗೂ ತಪೋಭಂಗ ತಪ್ಪಲಿಲ್ಲ

"ಬೆತ್ತವನ್ನು ಮರೆಯಬೇಡ"

ಪಾಶ್ಚಾತ್ಯ ತತ್ವವೇತ್ತರು ಹೆಣ್ಣನ್ನು ಕೀಳಾಗಿ ಹೀಯಾಳಿಸಿದ್ದಾರೆ. ಪ್ರಸಿದ್ಧ ತತ್ವಜ್ಞಾನಿ ನೀಷೆ 'ಹೆಣ್ಣು ಒಂದು ದೊಡ್ಡ ಒಗಟು. ಹೆಣ್ಣಿನೊಡನೆ ಹೋಗುತ್ತಿಯೂ, ಹಾಗಾದರೆ ಬೆತ್ತವನ್ನು ಮರೆಯಬೇಡ' ಎಂದಿದ್ದಾನೆ. ಆತನ ಪಂಥಕ್ಕೇ ಸೇರಿದ ಆಟೋವಿನ್ನಿಂಗರ್ ಹೆಣ್ಣನ್ನು ರಚಿಸಿ, ಅದರ ಫಲಿತಾಂಶಕ್ಕೆ ಹೆದರಿ ಆತ್ಮಹತ್ಯೆ ಮಾಡಿಕೊಂಡ. ಅವನ ದೃಷ್ಟಿಯಲ್ಲಿ 'ಹೆಣ್ಣು, ಹೆಂಡ, ಜೂಜುಗಾರಿಕೆ' ಒಂದೇ ಅಂತಸ್ತಿನವು.

ಇಷ್ಟಾದರೂ ಜಗ್ಗದೆ ಸುಸೂತ್ರವಾಗಿ ತನ್ನ ಆಡಳಿತವನ್ನು ನಡೆಸಿಕೊಂಡು ಬರುತ್ತಿರುವ ಹೆಣ್ಣು ನಿಜವಾಗಿಯೂ 'ಒಂದು ಒಗಟು.' ಹೆಣ್ಣನ್ನು ಹಳಿಯುತ್ತಿದ್ದವರೇ ಹೆಣ್ಣಿನ ಮೋಹಜಾಲಕ್ಕೆ ಮೊದಲು ಬಿದ್ದರು. ವಿಶ್ವವಿಖ್ಯಾತ ಜಾರ್ಜ್ ಬರ್ನಾರ್ಡ್-ಷಾ ಸಹ ಮಹಿಳೆಯೊಬ್ಬಳಿಗೆ ಸೋತು ಬಿಟ್ಟರು. ರವಿ ಮುಳುಗದ ಸಾಮ್ರಾಜ್ಯಕ್ಕೆ ಉತ್ತರಾಧಿಕಾರಿಯಾಗಿದ್ದ ಡ್ಯೂಕ್ ಆಫ್ ವಿಂಡ್ಸರ್, ಹೆಣ್ಣಿಗಾಗಿ ಬಕಿಂಗ್ಹಾಮ್ ಅರಮನೆ ಬಿಟ್ಟು ಭಿಕಾರಿಯಾದರು. ಸೆರೆಮನೆಯಲ್ಲಿ ಮೂಡಿನ ಹೆಜ್ಜೆಯನ್ನು ಕಂಡರೂ ಹೆಂಗಿನ ರೀತಿಯನ್ನು ಕಾಣಲು ಸಾಧ್ಯವಿಲ್ಲ' ನೆಂದು ಶಾಸ್ತ್ರಿಗಳೇ ಸೋಲನ್ನು ಒಪ್ಪಿಕೊಂಡಿದ್ದಾರೆ.

ನಿಜವಾಗಿಯೂ ಅಬಲೆಯೇ!

ಹೆಣ್ಣು ನಿಜವಾಗಿಯೂ ಅಬಲೆಯೇ? ಚಾಂದ್ ಬೀಬಿ, ತಾರಾಬಾಯಿ, ಝಾನ್ಸಿ ಮಹಾರಾಣಿ ಇತ್ಯಾದಿ ಇತ್ತೀಚಿನ ಕ್ರಿಸ್ಟಿನ್ ಲಷ್ಪಿಯ ಮರಣಗಳ ನಂತರವೂ ಹೆಣ್ಣಿನ ಅಬಲತ್ವ ಬಗೆಗೆ ಸಟನೆಯೇ ಗತಿಯಾಗಬಹುದೇ? ಅಬಲೆ ಹೆಣ್ಣಾದರೆ ಗಂಡು ಸಬಲನೇ? ಎ ದಿನ ಅಲ್ಲ ಹೆಣ್ಣಿನ ಒಲವಿನ ಪ್ರಭಾವ ಅರಿಯ ಪ್ರಬಲ್ಲ; ಸೋತು ಸೋಲಿಸುವುದು ಹೆಣ್ಣಿನ ಚಾತುರ್ಯಕೌಶಲ. ಗಂಡನನ್ನು ಭ್ರಮೆಗೊಳಿಸಿ ಮಂಕುಬೂದಿ ಚೆಲ್ಲಿ ತನ್ನ ದಾಸಾನುದಾಸನನ್ನಾಗಿ ಮಾಡಿಕೊಂಡಿದ್ದಾಳೆ ಹೆಂಗಸು. ಸಂಗರಗಳನ್ನು ಸರಾಗವಾಗಿ ದಾಟಬಲ್ಲವನೂ ಹೆಣ್ಣಿನ ಕಣ್ಣೀರ ಹನಿಯೊಂದನ್ನು ದಾಟಲಾರ!

ಹೆಣ್ಣು ಎಂದೂ ತನ್ನ ಸೋಲನ್ನು ಒಪ್ಪಿಕೊಳ್ಳುವುದಿಲ್ಲ. ಪ್ರಕೃತಿಯನ್ನೇ ಪರಿವರ್ತಿಸುವುದಕ್ಕೆ ಹೊಂದುತ್ತಾಳೆ ಸ್ವಾಭಾವಿಕವಾಗಿ ಇಲ್ಲದ 'ಸೌಂದರ್ಯವನ್ನು ಕೃತಕವಾಗಿ ಸಾಧಿಸಿಕೊಳ್ಳುವ ಚಾತುರ್ಯ ಹೆಣ್ಣಿಗಿದೆ. ಯೌವನ ಅಸ್ತಮಿಸಿ ರೆಯ ಗಂಟು ಮೂಗಿನ ಕುರೂಪಿ ಹೆಂಗಸೂ ತಾನು ರೂಪವತಿಯಲ್ಲವೆಂದು ಒಪ್ಪಿಕೊಳ್ಳುವುದಿಲ್ಲ. ಅನೇಕವೇಳೆ ಸ್ವಭಾವಜನ್ಯವಾಗಿ ದೊರೆಕಿದ, ತನ್ನ ಗೆಲುವಿಗೆ ಪ್ರತಿಬಂಧಕವಾಗಬಹುದಾದ ಅನಾನುಕೂಲಗಳನ್ನೇ ಅನುಕೂಲಗಳಾಗಿ ಪರಿವರ್ತಿಸಿಕೊಳ್ಳಬಲ್ಲಳು. ಇದಕ್ಕಾಗಿ ಪಾಶ್ಚಾತ್ಯ ವೈದ್ಯಕೀಯ ಶಾಸ್ತ್ರದಲ್ಲಿ ಒಂದು ಶಾಖೆಯೇ ಇದೆ. ಮೂಳೆಗಳನ್ನು ಮುದುಗೊಳಿಸಿ ಆಕಾರಕ್ಕೆ ತರುವ ಪದ್ಧತಿ!

ಹೆಣ್ಣಿಗಾಗಿ

ಹೆಣ್ಣಿಗೆ ಸೌಂದರ್ಯ ಸಲಕರಣೆಗಳನ್ನು ಒದಗಿಸಿಕೊಡುವ ಸಲುವಾಗಿಯೇ ಅನೇಕ ರಸಾಯನ ಶಾಸ್ತ್ರಜ್ಞರು ಹಗಲಿರುಳು ದುಡಿಯುತ್ತಿದ್ದಾರೆ. ಅದಕ್ಕಾಗಿ ಉನ್ನತ ಕಾರ್ಖಾನೆಗಳು ಬೆಳಕು ಕಂಡಿವೆ. ಲಕ್ಷಾಂತರ ಜನರು ಕೂಲಿಮಾಡುತ್ತಿದ್ದಾರೆ. ಇಂದು ಹೆಂಗಸರು ಸೌಂದರ್ಯ ಸಾಧನೆಗಳಿಗೆ ಶರಣು ಹೊಡೆದರೆ ನಾಳೆಯೇ ಲಕ್ಷಾಂತರ ಜನರು ಬೀದಿಯ ಭಿಕಾರಿಗಳಾಗುತ್ತಾರೆ. ಲಕ್ಷಾಧೀಶ್ವರರು ಭಿಕ್ಷಾಪಾತ್ರೆಗೆ ಕೈ ಒಡ್ಡಬೇಕಾಗುತ್ತದೆ.

ಹೆಣ್ಣಿನ ಸೌಂದರ್ಯ ಹೆಚ್ಚಿಸುವ ಸಲುವಾಗಿ ಬೆಟ್ಟದ ಕಲ್ಲುಗಳನ್ನು ಪುಡಿಮಾಡಿ ಸುವಾಸನೆಗೊಳಿಸಿ ಬಣ್ಣ ಬಣ್ಣದ ಪೆಟ್ಟಿಗೆಯಲ್ಲಿ ತುಂಬಿ ಮಾರುತ್ತಾರೆ. ಫೇಸ್‌ಪೌಡರ್, ರಂಗುರಂಗಿನ ಚೂರ್ಣ, ಸೌಂದರ್ಯ ಸಾಧನೆಯ ಯುಕ್ತಿಯಿಂತು! ಹಾಗೆಯೇ ರಕ್ತವಿಲ್ಲದೆ ಬಿಳಿಚಿಕೊಂಡ ಕಪೋಲದಲ್ಲಿಯೂ ಉಗುರಿನಲ್ಲೂ ರಕ್ತ ಚಿಮ್ಮುವ ಬಣ್ಣ, ತುಟಿಗಳನ್ನು ಕವಿಗಳ ತೊಂಡೆಯ ಹಣ್ಣಿನ ಉಪಮಾನವನ್ನು ನಾಚಿಸುವಂತೆ ಮಾಡುವ ಬಣ್ಣಗಳು. ಅವುಗಳಲ್ಲೂ ಅಭಿರುಚಿಗೆ ತಕ್ಕಂತೆ ವಿವಿಧ ವರ್ಣಗಳು. ಹೆಂಗಸು ಮನಸ್ಸು ಮಾಡಿದರೆ ತುಟಿ ಹಸುರಾಗಬಹುದು, ನೀಲಿಯೂ ಆಗಬಹುದು, ಕೆಂಪಾಗಬಹುದು. ತುಟಿಗೆ ಬಣ್ಣ ಹಾಕುವುದು ಒಂದು ಸ್ವತಂತ್ರ ಕಲೆ ಎಂದಿದ್ದಾಳೆ, ಹೆಲೆನಾ ರೂಬಿನ್‌ಸ್ಟೈನ್!

ಸೃಷ್ಟಿಯ ಪ್ರಾಣಿಗಳೆಲ್ಲ ಬದುಕಿರಲು ಒಂದೇ ಕಾರಣ, ಹೆಣ್ಣಿನ ಸೌಂದರ್ಯ ವರ್ಣನೆ. ಸಹರಾ ಮರುಭೂಮಿಯಲ್ಲಿ ಜನಜಂಗುಳಿಯಿಂದ ದೂರವಾಗಿರುವ ಉಷ್ಟ್ರಪಕ್ಷಿಯು ಸಹ ಹೆಣ್ಣಿನ ವಕ್ರದೃಷ್ಟಿಯಿಂದ ದೂರವಾಗಿಲ್ಲ. ಅದನ್ನು ಬೇಟೆಯಾಡಿ ರೆಕ್ಕೆ ಪುಕ್ಕಗಳನ್ನು ಕಿತ್ತು ತನ್ನ ಅಲಂಕಾರ ಮಾಡಿಕೊಳ್ಳುತ್ತಾಳೆ. ಹಿಮಾಚಲದಲ್ಲಿ ಸಾಧುಸಂತರೊಡನೆ ವಾಸಿಸುವ ವಿರಾಗಿ ಚಮರೀ ಮೃಗಕ್ಕೂ ಉಳಿಗಾಲವಿಲ್ಲ. ಇರಿದು ಬಾಲವನ್ನು ನಾಶಿಸಿದ ಹೆಣ್ಣಿನ ಜಡೆಯನ್ನು ಪಣಿವೇಣಿಯಾಗಿ ಮಾಡಿಸ ಪ್ರಾಣಕ್ಕೆ ಎರವು ಬೇಕು. ಹೆಣ್ಣಿನ ಕೈ ಚೀಲಕ್ಕೆ (Vanity Bag) ಹಿಮಸಾರಂಗದ ಚರ್ಮಬೇಕು, ಶೀತವಲಯದ ಮೂಲೆಯಿಂದ.

ಹಾಗೆಯೇ ಅಭರಣಗಳು! ಚಿನ್ನಕ್ಕೆ ಬೆಲೆ ಬಂದದ್ದು ಹೆಣ್ಣಿನಿಂದ. ಕಿವಿ, ಮೂಗು, ಕಣ್ಣುಗಳನ್ನು ಚುಚ್ಚಿಸಿಕೊಂಡಾದರೂ ಸಾಧ್ಯವಾದಷ್ಟು ಚಿನ್ನ ತೂರಲು ಪ್ರಯತ್ನಪಡುತ್ತಾಳೆ 'ಗಂಡಸು ಬಿನ್ನಾಣದ ಚಿನ್ನ!' ಕತ್ತಿನ ಹಾರಕ್ಕಾಗಿ ಸಮುದ್ರದ ಆಳಕ್ಕೆ ಇಳಿದು ತೆಗೆಸುತ್ತಾಳೆ ಆಣಿ ಮುತ್ತು! ಕಪ್ಪೆ-ಚಿಪ್ಪಿನೊಳಗೆ ನಿದ್ರಿಸುವ ಕಪ್ಪೆಯನ್ನು ಕೊಂದ! ಭೂಗರ್ಭದ ವೈಪರೀತ್ಯಗಳ ಸಾಮುಗ್ರಿ; ಹೆಣ್ಣಿನ ತಪ್ಪುಗಳೆಲ್ಲಾ ಗಂಡಿಗೆ ಒಪ್ಪು. ಹೆಣ್ಣು ತನ್ನ ಪ್ರತಿಯೊಂದು ತಪ್ಪನ್ನೂ ಹೆಮ್ಮೆಯಿಂದ ಪ್ರದರ್ಶಿಸಿ ತನ್ನ ಅರ್ಹತೆಗಳ ಪಟ್ಟಿಯಲ್ಲಿ ಸೇರಿಸಿಕೊಳ್ಳುತ್ತಾಳೆ ಗಂಡಸು ಮೂರ್ಖನಂತೆ ತಲೆಯಾಡಿಸುತ್ತಾನೆ. ಮದನನ ಸಂಗೀತದ ನಂತರ ಬದನ ಭಾಷಣ ಕರ್ಕಶ ಎನಿಸಬಹುದು. ನಿರಾಶಾವಾದಿ ಶೋಪೆನ್‌ಹಾರ್ ಹೇಳುವಂತೆ ಹೆಂಗಸಿನ ಸೌಂದರ್ಯ ಗಂಡಸ ಕಣ್ಣಲ್ಲಿ, ಹೆಣ್ಣು ಸುಂದರಿಯೆಂದು ಹೇಳುವುದು ಆ ಕಾಮಾಚ್ಛಾದಿತವಾದ ಗಂಡಸಿನ ಕಣ್ಣು. ಪ್ರೇಮ ಪ್ರಕೃತಿಯ ಮೋಸ, ಮದುವೆ ಪ್ರಾಯಶ್ಚಿತ್ತ". 'ಚಿತ್ರಗುಪ್ತ

(೭ನೇ ಪುಟದಿಂದ ಸಾಗಿದ್ದು)

ಮಾಜಿ ಸೈನಿಕ.

ಈಗ ತಾನೇ ಕಳೆದ ದ್ವಿತೀಯ ಮಹಾಯುದ್ಧಕ್ಕೆ ನಮ್ಮ ಈ ಪುಟ್ಟ ದೇಶದಿಂದ ಅನೇಕ ಮಂದಿ ಹೋಗಿ ಯುದ್ಧ ಮುಗಿದ ನಂತರ ಬಂದಿರುವರು. ನಮ್ಮ ದಕ್ಷಿಣ ಗಂಗೆಯ ಮಕ್ಕಳಾದ ಈ ವೀರರು ತಮ್ಮ ಮನೆ, ಹೆಂಡತಿ, ಮಕ್ಕಳ, ತಂದೆ ತಾಯಿಯವರನ್ನೆಲ್ಲ ತ್ಯಜಿಸಿ ರಣ ಭೂಮಿಯಲ್ಲಿ ತಾವು ಇತರ ಯೋಧರಿಗೆ ಆದರ್ಶವೆಂಬಂತೆ ಹೋರಾಡಿ ನಮ್ಮ ದೇಶದ ಗೌರವವನ್ನು ಪರದೇಶಗಳಲ್ಲಿ ಬೆಳಗಿ ಬಂದರು. ಇಂದು ಇಂಡಿಯಾ ದೇಶದ ಭೂಪಟದಲ್ಲಿ ಕೊಡಗಿಗೆ ಒಂದು ಸ್ಥಾನವಿದ್ದರೆ ಅದು ಪ್ರಾಮುಖ್ಯವಾಗಿ ಯುದ್ಧಕ್ಕೆ ತೆರಳಿದ ವೀರಯೋಧರಿಂದಾಗಿ. ಆದರೆ ಅಂದು ಹುಲಿಯೆನಿಸಿಕೊಂಡ ಈ ವೀರರದು ಇಂದು ನಾಯಿಯ ಪಾಡಾಗಿದೆ. ಅಂದು ಆತ ಭರವಸೆಗಳನ್ನು ತೋರಿಸಿ ಬೆನ್ನು ತಟ್ಟಿ ಸೈನ್ಯಕ್ಕೆ ಕಳುಹಿಸಿದ ಕೊಡಗಿನ ಮುಖ್ಯ ಅಧಿಕಾರಿಗಳು ಇಂದು ಅವರಿಗೆ ದೂರವಾಗಿದ್ದಾರೆ! ಪ್ರತಿಯೊಬ್ಬ ಸಿಪಾಯಿಗೆ ಕೃಷಿ ಮಾಡಲು ಸರಕಾರದಿಂದ ಯೋಗ್ಯ ಸ್ಥಳವು ದೊರಕುತ್ತದೆಯೆಂದು ಹೇಳಿದಂತೆ ಮೂರು ವರ್ಷಕ್ಕೆ ಹಿಂದೆ ಅರ್ಜಿ ಬರೆಕೊಂಡರೂ ಇನ್ನೂ ಮಂಜೂರು ಆಗಿಲ್ಲ. ಇನ್ನಾದರೂ ಸ್ಥಳ ದೊರೆಯಬಹುದೆಂದರೆ ಸರಕಾರದಲ್ಲಿ ಸರ್ವೆಯ ವ್ಯವಸ್ಥೆ ಇನ್ನೂ ಸರಿಯಾಗಿಲ್ಲವಂತೆ!

ನಾನು ಒಂದು ದಿನ ಉದ್ಯೋಗದ ಪ್ರಾಪ್ತಿಗಾಗಿ 'ಸ್ಟಾಫ್ ಸಿಲೆಕ್ಷನ್ ಬೋರ್ಡ್'ನ ಮುಂದೆ ಹಾಜರಾದೆನು. ಆಫೀಸಿನ 'ಸಬಾರ್ಡಿನೇಟ್' ಕೆಲಸಕ್ಕೆ ಕಡಿಮೆ ಯಸ್. ಯಸ್. ಎಲ್. ಸಿ. ಪರೀಕ್ಷೆ ತೇರ್ಗಡೆಯಾಗಿರಬೇಕಂತೆ! ನಾನು ಸ್ಕೂಲು ಫೈನಲ್ ಆಗಿಲ್ಲವಾದ್ದರಿಂದ ಒಂದೇ ಮಾತಿಗೆ ಹಿಂದಕ್ಕೆ ಬರಬೇಕಾಯಿತು. ಎಲ್ಲರಿಗೂ ಹೀಗೆ ಇದ್ದರೆ ನನಗೆ ಬೇಸರವಿರಲಿಲ್ಲ. ಸ್ಕೂಲ್ ಫೈನಲ್ ಆಗದ ಅನೇಕರಿಗೆ ವಿನಾಯಿತಿ ಕೊಡಲ್ಪಟ್ಟಿದೆ. ಅನೇಕರಿಗೆ ಕೆಲಸವು ದೊರೆತಿದೆ. ಹೀಗೆ ಕೆಲಸಕ್ಕೆ ಸೇರಿಸಿ ಕೊಂಡವರನ್ನು ಸಮಾಜಕ್ಕೆ ಗೊತ್ತಿದೆ. ಈ ರೀತಿಯ ವ್ಯತ್ಯಾಸ ಏಕೆ? M. K. K.

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್ ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. ·32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245 ರ ವರೆಗೆ.
2. ·32 ರಿವಾಲ್ವರುಗಳು (Revolvers) „ 262 „ 274 „
3. 12ನೇ ನಂಬರಿನ ಜೋಡು ನಳಿಗೆಯ ಕೋವಿ (Webley & Scott) ಕ್ರಯ ರೂ. 1492/-
4. 12, 16, 20ನೇ ನಂಬರು ಕೋವಿಗಳ ತೋಟಗಳೂ ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಗಳೂ ಸಹ ದೊರೆಯುತ್ತವೆ.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವದು)

52–1

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

ಕೊಡಗಿನ ಭವಿಷ್ಯ.

ಲೇ:- ಡಾ. ಅಜ್ಜಮಾಡ ಬೋಪಯ್ಯನವರು, ರಾಮತೀರ್ಥ, ಕುಟ್ಟ.

ಮೇಲಿನ ಶಿರೋನಾಮದಲ್ಲಿ ಕಳೆದ ಏಪ್ರಿಲ್ ತಾರೀಕು ೪ ರ 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯಲ್ಲಿ ಒಂದು ಸಂಪಾದಕೀಯವಿತ್ತು. ದನ್ನು ಓದಿದ ಕೊಡಗರಲ್ಲಿ ಮನಸ್ಸು ಅಲ್ಲೋಲಕಲ್ಲೋಲವಾಗಿ ಅನೇಕ ಅಭಿಪ್ರಾಯಗಳು ಹೊರಬೀಳುವದೆಂದು ಕಾದು ನೋಡಿದೆನು. ಆದರೆ ನಾನೇನೂ ಕಾಣಲಿಲ್ಲ. ಕೊಡಗಿನವರು ಇದನ್ನು ಅಸಡ್ಡೆಯಾಗಿ ಕಂಡು ಮೂಲೆಗೊತ್ತಿ ಬಿಟ್ಟಂತೆ ತೋರಿತು. ನನಗೆ ಅದು ಸರಿಹೋಗಲಿಲ್ಲ ಆದುದರಿಂದ ಈ ವಿಷಯದಲ್ಲಿ ಕಾಲವಿಳಂಬವಾದರೂ ನನ್ನ ಅಭಿಪ್ರಾಯಗಳನ್ನು ಈ ಕೆಳಗೆ ಕೊಟ್ಟಿರುತ್ತೇನೆ.

ಆ ಸಂಪಾದಕೀಯವು ನಿಷ್ಪಕ್ಷಪಾತವಾಗಿ ನನಗೆ ತೋರಲಿಲ್ಲ. ಏಕೆಂದರೆ ಸಂಪಾದಕರು ತೊಡರುತ್ತಾ, ತೊಡರುತ್ತಾ ವಿಷಯಗಳನ್ನು ಕೊನೆಗಾಣಿಸಿರುತ್ತಾರೆ.

ಸ್ವಾರ್ಥಸಾಧನೆಯ ರಾಜಕೀಯ ಪಟುಗಳನ್ನು ತೃಪ್ತಿಗೊಳಿಸುವ ಭಾವದಲ್ಲಿ ಬರೆದು ದೇಶದ ಕಲ್ಯಾಣಕ್ಕೆ ಹಾನಿಮಾಡಿದಂತೆ ನನಗೆ ತೋರಿತು. ಈ ರಾಜಕೀಯ ಪಟುಗಳು ರಾಜಕೀಯವನ್ನು ಸ್ವಾರ್ಥಸಾಧನೆಯ ದುಷ್ಪರಿಣಾಮಕ್ಕೆ ಎಳೆಯುತ್ತಿರುವರೆಂಬುದನ್ನು ಸಂಪಾದಕರು ಅರಿತಿರಲಿಕ್ಕಿಲ್ಲವೆಂದೇ ತೋರುತ್ತೆ. ಭೂವಿವರದಲ್ಲಿ ಕೊಡಗನ್ನು ನೋಡಿದರೆ ಅದು ಒಂದು ಚುಕ್ಕೆಯಂತೆ ಕಾಣುತ್ತೆ. ಅದಕ್ಕೊಂದು ಸ್ವತಂತ್ರ ಆಡಳಿತವೇ ಬೇಕೆಂಬ ಕೋರಿಕೆಯು ಸಾಧ್ಯವಲ್ಲವೆಂಬ ಈ ಸಂಪಾದಕರ ಅಭಿಪ್ರಾಯವು ಚರಿತ್ರ ಸಮ್ಮತವಲ್ಲವಲ್ಲದೆ ರಾಜಕೀಯ ಜ್ಞಾನ ಪರಿಪೂರ್ಣವೂ ಅಲ್ಲದಂತೆ ಕಾಣುವುದು. ಇದಕ್ಕೆ ದೃಷ್ಟಾಂತರವಾಗಿ ಯೂರೋಪು ಖಂಡದ ಕಡದಲ್ಲಿ ಸ್ವಿಟ್ಜರ್‌ಲೇಂಡ್ ದೇಶವು ಚುಕ್ಕೆಯಂತಿದ್ದರೂ ಅದು ಆ ಖಂಡದಲ್ಲಿ ಎಲ್ಲಾ ದೃಷ್ಟಿಗಳಲ್ಲಿಯೂ ಶಾಂತಿ, ಸಂಪತ್ತುಗಳಿಂದ ತುಂಬಿ ತುಳುಕಾಡುತ್ತಿರುವಂತದ್ದಾಗಿದೆ.

ಅನೇಕರು ಎನ್ನುವಂತೆ ಈ ಸಂಪಾದಕರು ಸಹ ಕೊಡಗನ್ನು ದಕ್ಷಿಣ ಇಂಡಿಯದ ಸ್ವಿಟ್ಜರ್‌ಲೇಂಡ್ ಎಂದು ಕರೆದಿದ್ದರೆ ನ್ಯಾಯವಿತ್ತು. (ಕೊಡಗನ್ನು ಸಂದರ್ಶಿಸಿ ನೋಡಿದ್ದರೆ ಅವರು ಹಾಗೆ ಕರೆಯುತ್ತಿದ್ದರು) ಇದನ್ನು ಬಿಟ್ಟು ಕೊಡಗು ದೇಶವು ಮೈಸೂರು, ದಕ್ಷಿಣ ಕನ್ನಡ, ಮಲೆಯಾಳದ ಸೆರೆಯಲ್ಲಿ ಅಡಕವಾಗಿರ ಬೇಕಾದೆಂದು ಸಂಪಾದಕರು ಹೇಳುವುದು ಅವರ ಕೊಡಗಿನ ಅಜ್ಞಾನವನ್ನು ಎತ್ತಿ ತೋರಿಸುತ್ತೆ. ಸಾವಿರ ವರ್ಷಗಳನ್ನು ಮೀರಿ ಕೊಡಗು ದೇಶವು ತನ್ನ ಸ್ವಬಲದಿಂದಲೂ ಉದಾರ ಪುರುಷರಾದ ತನ್ನ ಮಕ್ಕಳ ಮತ್ತು ಸಂಸ್ಕೃತಿಯ ಬಲದಿಂದಲೂ ಸುತ್ತು ಮುತ್ತಲಿರುವ ಸೀಮೆಗಳಿಂದ ತನ್ನ ವ್ಯಕ್ತಿತ್ವವನ್ನು ಉಳಿಸಿಕೊಂಡ ನಾಡೆಂದು ಸಂಪಾದಕರು ಬರೆದಿದ್ದಲ್ಲಿ ಅದು ಸತ್ಯವೂ ನ್ಯಾಯವೂ ಎನಿಸಲ್ಪಡುತ್ತಿತ್ತು. ಕೊಡಗಿನ ನಿವಾಸಿಗಳು ನವನಾಗರಿಕತ್ವದ ತಿರುಳನ್ನು ಹೀರಿದ್ದರೂ ಸಹ ಹಿಂದೂ ಸಂಸ್ಕೃತಿಯ ರಕ್ಷಣೆಯಲ್ಲಿ ಇಂದಿಗೂ ಸಹ ಆದರ್ಶ ರೀತಿಯಲ್ಲಿ ಜೀವಿಸುತ್ತಿರುವರು.

ದೇಶದ ಈಗಿನ ಉತ್ಪತ್ತಿಯು ಸಂಪಾದಕರನ್ನು ಹೆದರಿಸಿದಂತೆ ತೋರುತ್ತೆ. ಈ ಉತ್ಪತ್ತಿಯಿಂದ ಕೊಡಗು ತನ್ನ ಆಡಳಿತವನ್ನು ನಡಿಸಲು ಸಾಧ್ಯವಾಗಲಿಕ್ಕಿಲ್ಲವೆಂದು ಭಾವಿಸುತ್ತಾರೆ. ಜವಬ್ದಾರಿ ಸರಕಾರವು ಹೆಚ್ಚಿನ ತೊಂದರೆ ಇಲ್ಲದೆ ಕೊಡಗಿನ ಆದಾಯವನ್ನು ಒಂದು ಕೋಟಿಯ ಹತ್ತಿರಕ್ಕೆ ಹೆಚ್ಚಿಸಲು ಸಾಧ್ಯವಿದೆ ರಾಜರ ಮತ್ತು ಈಗ ತಾನೆ ಹೋದ ಬ್ರಿಟಿಷರ ಆಡಳಿತದಲ್ಲಿ ಹಾಕಲ್ಪಟ್ಟ ಅದೆಷ್ಟೋ ತರದ ಈ ಕಾಲಕ್ಕೆ ಸರಿಬೀಳದ ಭೂಕಂದಾಯ ದರಗಳೂ ಇವೆ. ಇವನ್ನು ಕಾಲಕ್ಕೆ ತಕ್ಕಂತೆ ಸರಿಪಡಿಸಿ ಕಾಫಿ, ಏಲಕ್ಕಿ ಕಿತ್ತಳೆ, ಟೀ ವಗೈರೆ ಉತ್ಪತ್ತಿಗಳಿಗೆ ನ್ಯಾಯ ಸಮ್ಮತವಾದ ಕಂದಾಯ ವಿರಿಸಲು ಸಾಧ್ಯವಿದೆ. ಹೆಸರು ಹೋದ ಕೊಡಗಿನ ಕಾಡು (ಫಾರೆಸ್ಟು)ಗಳನ್ನು ಶಾಸ್ತ್ರೀಯ ರೀತಿ ವೃದ್ಧಿಪಡಿಸಿದ್ದಲ್ಲಿ ಇವರ ಉತ್ಪತ್ತಿಯಲ್ಲಿಯೇ ಕೊಡಗಿನ ಆಡಳಿತವನ್ನು ಕೈಗೊಳ್ಳಬಹುದಲ್ಲದೆ ಕೊಡಗಿಗೆ ಬೇಕಾದಷ್ಟು ಹೈಸ್ಕೂಲ್‌ಗಳನ್ನೂ, ಕಾಲೇಜುಗಳನ್ನೂ, ಸ್ಥಾಪಿಸಿಕೊಳ್ಳಬಹುದೆಂದು, ಕೊಡಗಿನ ಫಾರೆಸ್ಟು ಅಧಿಕಾರಿಗಳಾಗಿದ್ದ ಫಾರೆಸ್ಟಿನ ಉತ್ಪತ್ತಿಯನ್ನು, ಗಣಿಸಿದ ದಿವಂಗತ ಶ್ರೀ ಚೋನೀರ ಬೆಳ್ಯಪ್ಪನವರು ನನಗೆ ಮನಮುಟ್ಟುವಂತೆ ಗಣಿಸಿ ತೋರಿಸಿರುತ್ತಾರೆ. ಆನೆಗಳನ್ನು ಹಿಡಿದು ವಿಕ್ರಯಿಸಿ ಸಾಕಷ್ಟು ಆದಾಯ ಪಡೆಯಬಹುದೆಂದೂ ಅವರು ಸೂಚಿಸಿದ್ದರು

ಈ ಚುಕ್ಕೆಯಂತಿರುವ ಪ್ರಾಂತ್ಯವು ಭರತಖಂಡದ ರಕ್ಷಣಾ ದಳಗಳಿಗೆ ಕೊಟ್ಟಿರುವ ಯುವಕರ ಸಂಖ್ಯೆ, ಮತ್ತು ಶೌರ್ಯವು ಸಂಪಾದಕರ ಗಣನೆಗೆ ಬಂದಿರುವಂತೆ ತೋರುವುದಿಲ್ಲ. ನಲ್ವತ್ತು ವರುಷಗಳ ಹಿಂದೆ ಬರೇ ಕೊಡಗರ ಒಂದು ರಿಜಿಮೆಂಟು ಆಗಿತ್ತು. ಆಗ ಕೊಡಗರು ಮೂವತ್ತೆರಡು ಸಾವಿರ ಮಾತ್ರ ಇದ್ದರು. ಈ ಚಿಕ್ಕ ಜನಾಂಗವು ಒಂದು ರಿಜಿಮೆಂಟಿಗೆ ತಕ್ಕ ಯುವಕರನ್ನು ಕೊಟ್ಟಿದ್ದು ಜಗತ್ತಿನಲ್ಲಿ ಒಂದು ಅದ್ಭುತಕರವಾದ ಸಂಗತಿಯಾಗಿದೆ ಪ್ರತೀ ವ್ಯಕ್ತಿಯಲ್ಲಿಯೂ ಸ್ವಾಮಿ ಮತ್ತು ಸ್ವಾಮಿಕರ್ತನು ಅಡಕವಾಗಿರುವುದನ್ನು ಮನಮುಟ್ಟುವಂತೆ ಅರಿತಿರುವನಾದುದರಿಂದ ಭರತ ಖಂಡದಲ್ಲಿ ಕೊಡವ ಯುವಕರಿಗೆ ಯಾವುದನ್ನೂ ಕಾದಿಡಬೇಕೆಂದು ನಾನು ಅರಿಕುವವನಲ್ಲ. ಆದರೆ ದೇಶ ಸ್ವಭಾವ, ಜನತೆಯ ಆಚರಣೆ, ಆಯಾ ದೇಶದ ಜನರನ್ನು ಮೆಟ್ಟಿಕೆಗೆಯ್ಯು ಕಿಗಳಿಗೆ ಒಳಪಡಿಸುವುದು ಸತ್ಯವು ಭರತ ಖಂಡದಲ್ಲಿ ಕೆಲವು ಪುಟ್ಟ ಜನಾಂಗಗಳು ಸಂಸ್ಕೃತಿಯನ್ನು ಪಡೆದು ಜೀವಿಸುತ್ತಾ ಇಂದೂ ಮೆಚ್ಚತಕ್ಕವರಾಗಿದ್ದಾರೆಂದು ಬಾಲ ಗಂಗಾಧರ ತಿಲಕರವರು ಗೀತಾ ರಹಸ್ಯದಲ್ಲಿ ಒಂದೆಡೆ ಬರೆದಿರುತ್ತಾರೆ.

ಕೇಂದ್ರ ಸರಕಾರವು ಕೊಡಗಿನ ಭವಿಷ್ಯವನ್ನು ನಿರ್ಣಯಿಸುವ ಕಾಲಕ್ಕೆ ತಮ್ಮ ಅಭಿಪ್ರಾಯಗಳನ್ನು ತೆಗೆದುಕೊಳ್ಳಬೇಕೆಂದು ಸಂಪಾದಕರು ಸೂಚಿಸುವಂತೆ ನನಗೆ ತೋರುತ್ತೆ. ಕೊಡಗನ್ನು ಮೈಸೂರಿಗೋ, ಇಲ್ಲವೇ ಪಶ್ಚಿಮ ಪ್ರಾಂತ್ಯಗಳಿಗೋ, ಇಲ್ಲವೇ ಸ್ಥಾಪಿಸಲು ಬೇಕೆಂದಿರುವ ಕನ್ನಡ ಪ್ರಾಂತ್ಯಕ್ಕೋ ಸೇರಿಸ ಬೇಕೆಂದು ಸಂಪಾದಕರು ಸೂಚಿಸುವುದು ಭರತ ಖಂಡಕ್ಕೂ ಮತ್ತು ಕೊಡಗಿಗೂ ಅಪಾರ ಹಾನಿಕರವಾಗಿದೆ. ಇದರಿಂದ ಜನಗೆ ಅದೆಷ್ಟೋ ಪ್ರಯೋಜನಕಾರಿಯಾದ ಸಂಸ್ಕೃತಿಯ ನೆಲೆವೀಡಾಗಿ ಭರತ ಖಂಡಕ್ಕೆ ಕೀರ್ತಿಪ್ರಾಯವಾದ ಕೊಡಗಿನ ವೈಶಿಷ್ಟ್ಯವು ಅಳಿದು ಅದರಿಂದ ಹಿಂದೂದೇಶಕ್ಕೂ ಹಾನಿಯಾಗುವದು. ಹಿಂದಿನ ಬ್ರಿಟಿಷ್ ಆಡಳಿತದ ಅಸಡಕುಸವನ್ನು ಈಗಲೂ ಹೇಳಿಕೊಂಡು ಕೊಡಗಿನಲ್ಲಿ ಜನಹಿತ ಆಡಳಿತ ಸಾಧ್ಯವಿಲ್ಲವೆನ್ನುವದು ಸರಿಯಲ್ಲ

ಸಂಪಾದಕರು ಆಡಳಿತ ಖರ್ಚು ಮಿತಿ ಮೀರಿರುವುದನ್ನೂ, ಈಗಿನ ಆಡಳಿತವು ತೃಪ್ತಿಕರವಾಗಿ ಇಲ್ಲವೆಂಬುದನ್ನೂ ನಾನು ಒಪ್ಪುತ್ತೇನೆ. ಆದರೆ ಜವಬ್ದಾರಿ ಸರಕಾರವು ಇದನ್ನು ಸಹಿಸೀತೆ? ಈ ಚುಕ್ಕೆಯಂತಹ ಪ್ರಾಂತ್ಯದಲ್ಲಿ ಈಗಾಗಲೇ ಎಂಟು ಹೈಸ್ಕೂಲುಗಳೂ, ಒಂದು ಕಾಲೇಜೂ, ಸ್ಥಾಪಿಸಲ್ಪಟ್ಟಿವೆ ವಿದ್ಯೆಯಲ್ಲಿ ಕೊಡಗು ಇಂಡಿಯಾದಲ್ಲಿ ಯಾವ ಪ್ರಾಂತ್ಯಕ್ಕೂ ಹಿಂದೆ ಬಿದ್ದಿರುವುದಿಲ್ಲ. ಕೊಡಗಿಗೆ ಅಸ್ಪೃಶ್ಯತೆ ಎಂಬುದು ತಿಳಿದಿರುವುದಿಲ್ಲ. ಕೊಡಗು ಎಲ್ಲಾ ಸಂಸ್ಕೃತಿಗಳನ್ನು ಮನ್ನಿಸುವುದಲ್ಲದೆ ಅವಕ್ಕೆ ತಕ್ಕ ಗೌರವವನ್ನು ಕೊಡುತ್ತದೆ ಕೊಡಗರು ಮತ್ತು ಮುಸಲ್ಮಾನರು ಅದೆಷ್ಟೋ ವರ್ಷಗಳಿಂದ ಅಣ್ಣ ತಮ್ಮಂದಿಯರಂತೆ ಇಲ್ಲಿ ಬಾಳಿ ಬದುಕುತ್ತಿರುವದು ಒಂದು ಸಂತೋಷಕರ ವಾರ್ತೆಯಾಗಿದೆ. ಮೈಸೂರು ಕೊಡಗಿಗಿಂತ ಹೆಚ್ಚು ಮುಂದುವರಿದಿದೆಯೆಂದು ಸಂಪಾದಕರ ಹೇಳುವುದರ ತಾತ್ಪರ್ಯವು ನನಗೇನೋ ಗೊತ್ತಾಗದು ಮೈಸೂರಿನ ಪ್ರಗತಿಯನ್ನು, ಸಂಸ್ಕೃತಿಯನ್ನು ಕೊಡಗಿನ ಪ್ರಗತಿ ಸಂಸ್ಕೃತಿಗಳೊಡನೆ ತುಲನೆಮಾಡಿ ನೋಡಿದಲ್ಲಿ ಕೊಡಗು ದೇಶವು ಮೈಸೂರಿಗಿಂತ ಅದೆಷ್ಟೋ ಮೆಟ್ಟಲು ಹತ್ತಿ ಮುಂದುವರಿದಿದೆ ಎಂಬುವದು ಎದ್ದು ಕಾಣುತ್ತದೆ. ಕೊಡಗು ಅದೆಷ್ಟೋ ವರ್ಷಗಳಿಂದ ಬೇರೆ ಪ್ರಾಂತ್ಯವಾಗಿದ್ದು ಇನ್ನು ಮುಂದಕ್ಕೂ ಬೇರೆ ಪ್ರಾಂತವಾಗಿದ್ದೇ ಉಳಿದು ಇಂಡಿಯಾ ದೇಶಕ್ಕೆ ಪ್ರಯೋಜನಕಾರಿಯಾಗಿ ಸದಾ ಇರುವುದೆಂದು ಹೇಳಬೇಕಾಗಿಲ್ಲವಲ್ಲದೆ ಇಂಡಿಯಾ ಸರಕಾರದ ಎಲ್ಲಾ ಖಾತೆಗಳಿಗೂ ಮುಖ್ಯವಾಗಿ ರಕ್ಷಣಾ ದಳಕ್ಕೆ, ತಕ್ಕ ಯುವಕರನ್ನು ಒದಗಿಸುತ್ತಾ ಇರುವದು ಎಂಬ ನಂಬಿಕೆ ಇದೆ.

ಹೊರಗೆ ಹೋದ ಕೊಡವರು ಮಾತ್ರ ಇಂಡಿಯಾ ದೇಶದ ಖಾತೆಗಳಲ್ಲಿ ಎತ್ತಿ ತೋರುವ ಮುಂದಾಳುಗಳಂತೆ ಇರುವರೆಂದು ಹೇಳಿದ್ದು ಸಂಪಾದಕರ ಮಹಾಪೇರ. ಏನಂಥಾ ತಪ್ಪಾಗಿ ಕಾಣುತ್ತೆ. ಈ ವೀರ ಮಕ್ಕಳಿಗೆ ಜೋಗುಳ ಹಾಡಿದ ಮಾತೋಶ್ರೀಗಳೇ ಇಂದೂ ಆ ಜೋಗುಳ ಹಾಡಿನಲ್ಲಿ ತನ್ಮಯರಾಗಿದ್ದಾರೆ ಅದೇ ರೀತಿಯ ವೀರರನ್ನು ತಯಾರಿಸಿ ಕೊಡಗಿನಲ್ಲಿ ತುಂಬಿರುವರೆಂಬುದನ್ನು ಸಂಪಾದಕರು ತಿಳಿಯಲಿ.

ಹಾರಂಗಿ ಮತ್ತು ಲಕ್ಷ್ಮಣ ತೀರ್ಥ ಅಣೆಕಟ್ಟುಗಳು ಆಗದಿದ್ದರೆ ಅದರ ತಪ್ಪು ಕಳೆದು ಹೋದ ಸರಕಾರಕ್ಕೂ ಇಲ್ಲವೇ ಇಂದಿರುವ ಸರಕಾರಕ್ಕೂ ಅನ್ವಯಿಸಬೇಕಲ್ಲದೆ ಮುಂಬರುವ ಜನತಾ ಸರಕಾರಕ್ಕಲ್ಲ!

ಕೇಂದ್ರ ಸರಕಾರದ ಅಧೀನದಲ್ಲಿ ಪ್ರತ್ಯೇಕ ಪ್ರಾಂತ್ಯವಾಗಿ ಬಾಳ ಬೇಕೆಂಬ ಆಶೆಯು ಕೊಡಗಿನ ಶೇಕಡ ತೊಂಬತ್ತೊಂಭತ್ತು ದೆಸಿಮಲ್ ಒಂಭತ್ತರಷ್ಟು ಕೊಡವರಲ್ಲಿಯೂ. ಮತ್ತು ಕೊಡಗನ್ನು ಪ್ರೀತಿಸುವ ಕೊಡಗಿನವರಲ್ಲಿಯೂ ಇದೆಯೆಂಬುದನ್ನು ಧೈರ್ಯದಲ್ಲಿ ಹೇಳಬಹುದು. ಇದು ಜನತೆಯ ಅಭಿಪ್ರಾಯ ತೆಗೆಯುವಾಗ ವ್ಯಕ್ತವಾಗುವದು ಖಂಡಿತ. ಜನಾಭಿಪ್ರಾಯ ತೆಗೆಯಲು ತಗಲುವ ಖರ್ಚನ್ನು ಇಲ್ಲದ ಸಲ್ಲದ ಗಲಿಬಿಲಿ ಎಬ್ಬಿಸುತ್ತಿರುವ ರಾಜಕೀಯ ಪಟುಗಳಿಂದ ಖರ್ಚ ಮಾಡಿಸುವುದು ನ್ಯಾಯವಾಗಿ ತೋರುತ್ತೆ!

ನಿನ್ನ ಸಂಸ್ಕೃತಿಯಲ್ಲಿ ಬೇರೆ ಪ್ರಾಂತ್ಯವಾಗಿಯೇ ಇದ್ದು ನಿನ್ನ ಸೇವೆಯನ್ನು ಭರತಖಂಡಕ್ಕೆ ಸದಾ ಸಲ್ಲಿಸು ತಾಯೇ, ಕೊಡಗು ಮಾತೇ!.

ಮುಂದಿನ ಚುನಾವಣೆಯಲ್ಲಿ ಕಮ್ಯೂನಿಸ್ಟ್ ಪಕ್ಷದ ಭವಿಷ್ಯ

ಭಾರತದ ಪ್ರಮುಖ ರಾಜಕೀಯ ಪಕ್ಷಗಳ ಕುರಿತಾದ ಒಂದು ಅಗ್ರಲೇಖನದಲ್ಲಿ 'ಅಮೃತ ಬಜಾರ್' ಪತ್ರಿಕೆ ಹೀಗೆ ಬರೆಯುತ್ತದೆ.

'ಭಾರತದಲ್ಲಿ ಕಮ್ಯೂನಿಸ್ಟರು ದೊಡ್ಡ ಬೊಬ್ಬೆಯಾಗಿದ್ದಾರೆ; ಕೆಲವು ವಿಷಯಗಳ ಮಟ್ಟಿಗೆ ಭಾರತದ ಅತ್ಯಂತ ವ್ಯವಸ್ಥಿತ ಪಕ್ಷ ಅವರದಾಗಿದೆ. ಪಶ್ಚಿಮ ಬಂಗಾಳ ಒಂದನ್ನು ಬಿಟ್ಟರೆ ಇತರ ಕಡೆಗಳಲ್ಲೆಲ್ಲಾ ತಮ್ಮ ಇಚ್ಛೆಯಂತೆ ವ್ಯವಸ್ಥಿತವಾಗುವ, ತಮ್ಮ ಪ್ರಚಾರವನ್ನು ಪರಿಮಿತ ರೀತಿಯಲ್ಲಿ ಮುಂದೊತ್ತುವ ಸ್ವಾತಂತ್ರ್ಯ ಅವರಿಗಿದೆ. ಇನ್ನು ಎರಡು ವರ್ಷಗಳೊಳಗೆ ವಯಸ್ಕ ಮತದಾನ ಪದ್ಧತಿಯ ಚುನಾವಣೆಗಳು ನಡೆಯುವವು ಈ ಅಲ್ಪಾವಧಿಯೊಳಗೆ ಜನರನ್ನು ತಮ್ಮ ಪಕ್ಷದ ಕಡೆಗೆ ಒಲಿಸಿಕೊಳ್ಳಲು ಕಮ್ಯೂನಿಸ್ಟರು ಸಮರ್ಥರೆಂದಾದರೆ, ೧೯೫೧ರಲ್ಲಿ ಭಾರತವು ಕಮ್ಯೂನಿಸ್ಟರ ರಾಜ್ಯವಾಗುವುದು.

ಮೇಲೆ ಸೂಚಿಸಿದುದು ಒಂದು ಉಜ್ವಲ ಭವಿಷ್ಯ. ಆದರೆ ಆ ಗುರಿಯ ಕಡೆಗೆ ಮುಟ್ಟುವಷ್ಟು ಸ್ಥೈರ್ಯ ಕಮ್ಯೂನಿಸ್ಟರಲ್ಲಿಲ್ಲ. ಕಾಯುವುದು ಅವರಿಗೆ ಬೇಡವಾಗಿದೆ. ಪ್ರಜಾಸತ್ತಾತ್ಮಕ ನೀತಿಯಿಂದ ಅಧಿಕಾರ ಆಕ್ರಮಿಸುವ ಬದಲು, ಅತ್ಯಾಚಾರ ಪರಂಪರೆಗಳಿಂದ, ಘಾತಕ ಗೊಂದಲಗಳನ್ನು ಹಂದೊಡ್ಡಿ ಅಧಿಕಾರ ಪಡೆಯಲು ಅವರು ಹವಣಿಸುತ್ತಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಅವರಿಗೆ ವಿಶ್ವಾಸವಿಲ್ಲ. ತಮ್ಮ ನೀತಿಯನ್ನು ಭಾರತವು ಎಂದೂ ಸ್ವೀಕರಿಸಲಾರದೆಂದು ಅವರಿಗೆ ತಿಳಿದಿದೆ. ಭಾರತದ ಉಜ್ವಲ ಕೀರ್ತಿ ಪರಂಪರೆಯು ಐತಿಹ್ಯಕ್ಕೆ ಕಮ್ಯೂನಿಸ್ಟ್ ನೀತಿ ತೀರಾ ವಿರುದ್ಧವಾಗಿದೆ. ಹೀಗಾಗಿ ಶಾಂತಿಯುತವಾದ ಯತ್ನಗಳಿಂದ ಜನರನ್ನು ಒಲಿಸಿಕೊಳ್ಳುವುದು ಅಸಾಧ್ಯವೆಂದು ತಿಳಿದು ಭಯೋತ್ಪಾದನೆಯ ಹಿಂಸಾಮಯ ನೀತಿಗೆ ಅವರು ಇಳಿದಿದ್ದಾರೆ!

ಪುಷ್ಪಗಳ ; ಸರ್ವಧಾತುಗಳ ಖಣಿಗಳು, ವಿವಿಧ ಪಕ್ಷಿಗಳು, ವಿಸ್ತೀರ್ಣವಾದ ಸಮುದ್ರ, ಸುಂದರ ಸರೋವರ, ಇತ್ಯಾದಿಗಳನ್ನು- ನಿಸರ್ಗವು ತಾನು ನೀಡಬಲ್ಲುದೆಲ್ಲವನ್ನು- ಪೂರ್ಣವಾಗಿ ನೀಡಿದ ಸುಂದರ ಭೂಮಿ, ಭಗವತಿ ಆರ್ಯಜನನೀ, ನಿನಗೆ ವಂದನೆಗಳು.

ವೀರ ಮಾತೃತ್ವದಿಂದ ಹೇ ಆರ್ಯ ಜನನೀ ನೀನು ಸೂರ್ಯ-ಚಂದ್ರಲೋಕಗಳಿಗಿಂತ ಶ್ರೇಷ್ಠಳಾಗಿರುವೆ. ಅನಂತ ಕಾಲದ ಅಗಾಧ ಸಮುದ್ರದ ಅಪಾರತೆಯನ್ನು ಇಂದೂ ಯಾರು ಕಂಡಿಲ್ಲವೋ, ಎಂದು ರೋಮಿನ ಹೆಸರನ್ನು ಯಾರೂ ಕೇಳುತ್ತಲಿರಲಿಲ್ಲವೋ ಎಂದು ಗ್ರೀಸ್ ದೇಶದಲ್ಲಿ ಜನಸಂಖ್ಯೆಯೇ ಇದ್ದಿಲ್ಲವೋ ಅದಕ್ಕೂ ಪೂರ್ವದಲ್ಲಿಯೇ ಹೇ ಆರ್ಯ ಭಾರತೀ, ನೀನು ಸುಸಂಪನ್ನಳಾಗಿದ್ದು ಶ್ರೇಷ್ಠಳಾಗಿದ್ದೆ. ವೀರ ಪ್ರಸವದ ಮುಕುಟಮಣಿಯಾಗಿ, ಸಂಸ್ಕೃತಿಗಳ ಪೂರ್ಣ ಕೇಂದ್ರವಾಗಿ ಮಾನವೀ ಸಮಾಜದ ಅಧಿದೇವತೆಯಾಗಿ ಇಜಿಪ್ತ, ಬಾಲಡಿಯಾ ಮತ್ತು ಸಿರಿಯಾಗಳ ಜನರು ಅಂಗಕ್ಕೆ ಬಣ್ಣಗಳನ್ನು ಬಳಿದುಕೊಳ್ಳುವ ಕಾಲಕ್ಕೆ ಆವಾಗ ನಿನ್ನಲ್ಲಿ ಮಾನವತೆಯು ಉತ್ಕ್ರಾಂತಿಯಾಗಿ ತತ್ವವಿಚಾರ ಗ್ರಹಣಮಾಡುವಷ್ಟರ ಸ್ಥಿತಿಗೂ ತಲೆಯೆತ್ತಿತ್ತು. ವಿಶ್ವದ ಇತರ ಎಲ್ಲಾ ಭಾಷೆಗಳವರೂ ತಮ್ಮ ಭಾಷೆಯಲ್ಲಿನ ಐನೂರು ಆರುನೂರು ಶಬ್ದಗಳ ಪರಿಚಯ ಮಾಡಿಕೊಂಡಾಗ, ಆವಾಗ ನಿನ್ನಲ್ಲಿನ ಜನರು ಸಂಸ್ಕೃತವನ್ನು ಛಂದೋಬದ್ಧವನ್ನಾಗಿ ಮಾಡಿ ರಾಗ ತಾಳಗಳಿಂದ ಕಟ್ಟಿ ಗಾನ ನರ್ತನಗಳನ್ನು ಪ್ರಾರಂಭಿಸಿದ್ದರು. ಇಷ್ಟು ಹೇಳಿದಾಕ್ಷಣವೇ ನಿನ್ನ ವೀರ ಮಾತೃತ್ವವು ಪೂರ್ಣವಾಗುವುದೇ? ಇಲ್ಲ, ಇಲ್ಲ- ನಿನ್ನ ಘನತೆ ಅಪಾರವಿದೆ ಅನಂತವಿದೆ.

ಪ್ರಳಯ ಪೂರ್ವದಿಂದ ಎಲ್ಲಿ ಮಂತ್ರದ್ರಷ್ಟರಾದ ಮುನಿಗಳು ಇತಿಹಾಸ ದೀಪವನ್ನು ಹೊತ್ತಿಸಿದರೋ, ಎಲ್ಲಿ ದಂತಕಥೆಗಳ ವಿಪುಲ ನಿರ್ಮಾಣವಾಯಿತೋ, ಅಂಥಾ ಈ ಪುಣ್ಯ ಆರ್ಯಾವರ್ತದಲ್ಲಿ ಇವೆಲ್ಲವುಗಳ ಅಸ್ತಿತ್ವಕ್ಕೂ ಪೂರ್ವ ಋಷಿಪುಂಗವರ ವೇದಘೋಷಗಳು ಮೊಳಗುತ್ತಿದ್ದವು. ಸರ್ವ ಜಗತ್ತಿನ ಸಾಹಿತ್ಯದಲ್ಲೆಲ್ಲವುಗಳಿಗಿಂತ ಹಿರಿಯ ಹಾಗೂ ಪ್ರಾಚೀನವೆನಿಸಲ್ಪಟ್ಟ ಋಗ್ವೇದ ಮತ್ತಾವ ಭಾಷೆಯಲ್ಲಿದೆ? ಯಾವ ತತ್ವ ಜ್ಞಾನವು ಇನ್ನೂ ಪಾಶ್ಚಾತ್ಯರಿಗೆ ಅನಾಕಲನೀಯವಾಗಿದೆಯೋ ಆ ತತ್ವಜ್ಞಾನವನ್ನು ಲಕ್ಷಾಂತರ ವರ್ಷಗಳ ಹಿಂದೆ ಹುಡುಕಿ ತೆಗೆದ ವೀರ್ಯವಾನ್ ಋಷಿ ಸಂಕುಲವನ್ನು ಮತ್ತಾವ ದೇಶದಲ್ಲಿ ನಾವು ಕಾಣಬಹುದು? ಇಂಥಾ ಋಷಿ ಮುನಿಗಳ ತಪೋವನಗಳಿಂದ ಪುನೀತಳಾದ ಭಾರತ ಮಾತೆಯೇ ನಿನಗೆ ವಂದನೆಗಳು. ವಶಿಷ್ಠ ವಾಮದೇವರಿಂದ ಅಭಿಮಂತ್ರಿತ ಜಲಸಿಂಚಿತಳಾಗಿ ಈ ಭೂಮಿ ಪವಿತ್ರವಾಗಿದೆ. ಹೋಮ ಹವನಗಳ ಪುಣ್ಯ ಕಾಲದಲ್ಲಿ ದೇವ ದೇವತೆಗಳ ಸಂತೋಷವು ಅಗ್ನಿ ಜ್ವಾಲೆಯಿಂದ ಹೊರಡುವ ಮಂತ್ರದಿಂದ ವ್ಯಕ್ತವಾಗುತಿತ್ತು. ಹೋಮದಲ್ಲಿ ದಗ್ಧವಾಗುವ ತುಪ್ಪದ ಸುವಾಸನೆಯಿಂದ ಅಮಲೇರಿದಂತಾಗಿ ಸ್ವರ್ಗವಾಸಿಗಳೆಷ್ಟೋ ಬಾರಿ ಈ ಭೂಮಿಗಿಳಿದರು. ಋಗ್ವೇದವು ಈ ಭೂಮಿಯಾಗಿದೆ. ಸಾಮವೇದವು ಈ ಭೂಮಿಯಾಗಿದೆ. ಯಜುರ್ವೇದವೂ ಈ ಭೂಮಿಯಾಗಿದೆ. ಬ್ರಾಹ್ಮಣ ಮತ್ತು ಉಪನಿಷತ್ತುಗಳು ಈ ಭೂಮಿಯದಾಗಿದೆ. ತತ್ವಜ್ಞಾನದ ಭಾಗೀರಥಿಯು ಇದೇ ಭೂಮಿಯ ಚರಣಕಮಲಗಳಿಂದ ಹೊರಟಿದೆ ಶುಕ್ರವಶಿಷ್ಠಾದಿ ಪರ ತತ್ವವೇತ್ತ ಬ್ರಾಹ್ಮಣರು ಇಲ್ಲಿಯೇ ನಿರ್ಮಾಣಗೊಂಡಿದರು. ಅಂಗೀರಸ, ವಶಿಷ್ಠ ಗರ್ಗ, ಯಾಜ್ಞವಲ್ಕ್ಯರು ಇದೇ ಭೂಮಿಯಲ್ಲಿ ಹುಟ್ಟಿದರು. ಇಂಥಾ ಈ ತತ್ವವಿದ್ಯಾಮಾ ಆರ್ಯಮಾತಾ ನಿನಗೆ ವಂದನೆಗಳು.

ವಂದೇ ಮಾತರಮ್.

ಬುದ್ಧಿರಹಿತ, ಸಂಸ್ಕಾರಹೀನ, ಅಂಧ ಪರಂಪರೆಯು ರೂಢಿಯಲ್ಲಿದ್ದಾಗ ಯಾವ ಕಪಿಲ ಮಹಾ ಮುನಿಯು ಈ ಅಂಧ ಪರಂಪರೆಗಳನ್ನೆಲ್ಲ ತೊಡೆದು ಹಾಕಿ ವಿಚಾರ ಶಕ್ತಿಯ ಮೊದಲನೇ ವಿಜಯವನ್ನು ಪಡೆದನೋ ಆ ಸಾಂಖ್ಯಶಾಸ್ತ್ರ ಪ್ರಣೇತ ಕಪಿಲ ಮಹಾ ಮುನಿಯೂ ಅಮ್ಮಾ, ನಿನ್ನನ್ನು 'ಹೇ ಮಾತರಃ' ಎಂದೇ ಸಂಬೋಧಿಸಿದನು. ಸರ್ವ ಜಗದ್ವಂದ್ಯನೆನಿಸಿದ ಆ ಕಪಿಲ ಮಹಾ ಮುನಿಯಿಂದ ಅಮ್ಮಾ ಎಂದು ಕರೆಯುತ್ತಿದ್ದ ಹೇ ಆರ್ಯ ಜನನೀ, ನಿನ್ನನ್ನು ಬಿಟ್ಟು ಇನ್ನಾವ ಭೂಮಿಯು ಆ ಯಶಸ್ಸನ್ನು ಹೊಂದಬಹುದು? ವಿಶ್ವದ ಇತರ ಭೂಭಾಗವಿರಲಿ ಚಂದ್ರಮಂಡಲ, ಸೂರ್ಯಗ್ರಹ, ಬುಧ, ಗುರು ಕೇಂದ್ರಗಳೇ ನೀವು ಹೇಳಿ, ನಿಮ್ಮಲ್ಲಿ ನಮ್ಮಮ್ಮನಷ್ಟು ಸೌಭಾಗ್ಯಶಾಲಿನಿಯಾದವಳು ಬೇರೆ ಇರುವಳೇ? ಭಾಸ್ಕರಾಚಾರ್ಯ, ಆರ್ಯಭಟ್ಟ, ಹಾಗೂ ವರಾಹ ಮಿಹಿರಾದಿಗಳ ಭೂಗೋಳ, ಜ್ಯೋತಿಷ್ಯ ಮತ್ತು ಗಣಿತ ಶಾಸ್ತ್ರಗಳ ಅನ್ವೇಷಣವು ಇದೇ ಭೂಮಿಯ ಅನ್ನದಿಂದ ಸ್ಫೂರ್ತಿಹೊಂದಿ ಆವಿಷ್ಕರಿಸಲ್ಪಟ್ಟವುಗಳಾಗಿವೆ. ಗುರುತ್ವಾಕರ್ಷಣೆಯ ಸಿದ್ಧಾಂತವು ಇದೇ ಭೂಮಿಯದಾಗಿದ್ದು ಭೂಮಿತಿಯ ನಿರ್ಣಯವು ಇಲ್ಲಿಂದಲೇ ಹುಟ್ಟಿದ್ದಾಗಿದೆ ತ್ರಿಕೋಣಮಿತಿಯು ಇದೇ ಭೂಮಿಯ ಯಜ್ಞವೇದಿಕೆಯಿಂದ ಉತ್ಪನ್ನವಾದುದಾಗಿದೆ. ಸಪ್ತ ಸ್ವರಗಳ ಉದಯ ಇದೇ ಭೂಮಿಯ ಕೋಮಲ ಕಂಠದಿಂದ ಉತ್ಪನ್ನವಾಗಿದೆ. ಮತ್ಸ್ಯಯಂತ್ರ (ಹೋರಾಯಂತ್ರ) ದ ಆವಿಷ್ಕಾರವು ಮೊಟ್ಟಮೊದಲು ಇಲ್ಲಿಂದಲೇ ಹುಟ್ಟಿತ್ತು. ಮೊಟ್ಟಮೊದಲನೆಯ ಶಾಸ್ತ್ರಲಿಪಿ ಮತ್ತು ವರ್ಣ ಮಾಲೆಗಳು ಇಲ್ಲಿಯೇ ಬಿಸುರಲ್ಪಟ್ಟವು. ನಾಟ್ಯ, ವೈದ್ಯ ಶಾಸ್ತ್ರಗಳ ನಿರ್ಮಾಣ ಇಲ್ಲಿಯೇ ಮೊದಲಾಯಿತು ವಿಶ್ವಕರ್ಮ, ಕಣಾದ, ಕಪಿಲ, ಗೌತಮ, ಭರತ, ಪಾಣಿನಿ, ಭಾಸ್ಕರಾಚಾರ್ಯ, ಆರ್ಯಭಟ್ಟ, ವರಾಹಮಿಹಿರ, ವಾಗ್ಭಟ ಮುಂತಾದ ಸ್ವಶಾಸ್ತ್ರ ನಿರ್ಮಾಣಕರ ನಿರ್ಮಾಣವನ್ನು ಮಾಡಿದ ಹೇ, ಸರ್ವಶಾಸ್ತ್ರ ವಿಮಾವಿಮಾ, ಆರ್ಯ ಮಾತೇ ನಿನಗೆ ವಂದನೆಗಳು.

ನಿಮಗೇನು ಬೇಕು? ನೀತಿ ಶಾಸ್ತ್ರವು ಬೇಕೇ? ಭಾರತಕ್ಕೆ ಬನ್ನಿ; ತತ್ವಜ್ಞಾನವು ಬೇಕೆ? ಭಾರತಕ್ಕೆ ಬನ್ನಿ; ಕವಿತ್ವವು ಬೇಕೆ? ಬನ್ನಿ ಭಾರತಕ್ಕೆ. ಇಲ್ಲಿನ ಸುಧಾಮಾಧುರಿಯನ್ನು ಕಾಣಿರಿ. ಇತಿಹಾಸ-ಸೃಷ್ಟಿ ವರ್ಣನೆ-ಇತ್ಯಾದಿ ಏನೇನು ಬೇಕೋ ಅವೆಲ್ಲವನ್ನೂ ನಮ್ಮ ಭಾರತವು ನಿಮಗೆ ನೀಡುತ್ತದೆ. ಬುದ್ಧನ ಧರ್ಮವೂ ನಮ್ಮ ಶಾಸ್ತ್ರಗಳಿಂದಲೇ ಹುಟ್ಟಲ್ಪಟ್ಟಿತು ಜೀಸಸ್‌ನ ತತ್ವಗಳೂ ನಮ್ಮ ಶಾಸ್ತ್ರಗಳ ಅಂಶಗಳೇ ಆಗಿದ್ದು, ಮಹಮ್ಮದನ ಪರಿವರ್ತಿತ ಧರ್ಮವೂ ನಮ್ಮ ಶಾಸ್ತ್ರಗಳನ್ನು ನೋಡಿಯೇ ಹುಟ್ಟಿತ್ತು. ಗುರುನಾನಕನಾದರೋ ಆ ಮಹಮ್ಮದೀಯ ಸೂತ್ರಗಳನ್ನರಿತು ಅದನ್ನೇ ತಿರುಗಿಸಿ ಆರ್ಯ ಧರ್ಮವನ್ನಾಗಿ ಪರಿವರ್ತಿಸಿದನು. ವೀರ ಪ್ರಸವದ ದ್ಯೋತಕವಾಗಿ ಮೇಲಿನ ಉದಾಹರಣೆಗಳನ್ನು ಕೊಡ ತಕ್ಕುದಾದರೆ ಇಂಥಾ ಒಂದೊಂದು ವ್ಯಕ್ತಿಯು ಇಡೀ ವಿಶ್ವವನ್ನು ನಿಗ್ರಹಿಸಿಕೊಳ್ಳುವಷ್ಟು ಶಕ್ತಿವಂತನಾಗಿದ್ದನೆನ್ನುವುದನ್ನು ನಾವು ತಿಳಿಯಬಹುದು. ಇದು ಕಲ್ಪಿತ ವರ್ಣನೆಯಲ್ಲ; ಇತಿಹಾಸದ ಸಾಧಾರಪೂರ್ಣ ವರ್ಣನೆಯಿದ್ದು, ವಿಶ್ವದ ಎಲ್ಲ ಧರ್ಮಗಳ, ಎಲ್ಲಾ ಪುರಾಣಗಳ, ಎಲ್ಲಾ ಪೂಜ್ಯ ಗ್ರಂಥಗಳ ನಿರ್ಮಾಣಕ್ಕೂ ೧೦ ಸಾವಿರ ವರ್ಷಗಳ ಪೂರ್ವ ಸಂಗತಿಯಿಂದ ಪರಿಣತವಾಗಿದ್ದ ಸೃಷ್ಟಿಯ ಆದಿಯಿಂದ ಇಂದಿನ ಪರ್ಯಂತ ವೀರ ಪ್ರಸವದಂತ ವೀರ ಮಾತೆಯಾದ ಸರ್ವತೀ ಆರ್ಯ ಮಾತೆ ನಿನಗೆ ವಂದನೆಗಳು.

ಅಂಗೀರಸ, ಗರ್ಗ, ವಶಿಷ್ಠ, ವಾಮದೇವ, ಯಾಜ್ಞವಲ್ಕ್ಯ, ಜನಕ ಇತ್ಯಾದಿ ತತ್ವವೇತ್ತರೂ, ಕಣಾದ, ಕಪಿಲ, ಭರತ, ಪಾಣಿನಿ, ಭಾಸ್ಕರಾಚಾರ್ಯ, ಆರ್ಯಭಟ್ಟ, ವರಾಹಮಿಹಿರ, ವಾಗ್ಭಟ, ಇತ್ಯಾದಿ ಶಾಸ್ತ್ರವೇತ್ತರೂ, ವ್ಯಾಸ, ವಾಲ್ಮೀಕಿ, ಕಾಳಿದಾಸ, ಭವಭೂತಿ, ಇತ್ಯಾದಿ ಕವಿಗಳೂ, ಗೌತಮ ಬುದ್ಧ, ಶಂಕರಾಚಾರ್ಯ, ಮಧ್ವಾಚಾರ್ಯ, ರಾಮಾನುಜಾಚಾರ್ಯ, ವಲ್ಲಭಾಚಾರ್ಯ, ಗುರುನಾನಕ ಇತ್ಯಾದಿ ಧರ್ಮ ಸಂಸ್ಥಾಪಕರೂ, ಶ್ರೀ ರಾಮ, ನಳ, ಯುಧಿಷ್ಠಿರ ಇತ್ಯಾದಿ ರಂಜನಶೀಲ ರಾಜ ಮಹಾರಾಜರೂ, ಶ್ರೀಕೃಷ್ಣ, ಅರ್ಜುನ, ಕರ್ಣ, ಮುಂತಾದ ಅತಿರಥ ಮಹಾರಥಿಗಳೂ, ಚಂದ್ರಗುಪ್ತ, ಶಾಲೀವಾಹನ, ಅಶೋಕ, ವಿಕ್ರಮಾದಿತ್ಯ, ಮುಂತಾದ ಸಾಮ್ರಾಜ್ಯ ಸಂಸ್ಥಾಪಕರೂ, ಶುಕ್ರಾಚಾರ್ಯ, ಹರಿಶ್ಚಂದ್ರ ಮುಂತಾದ ಗುಣವೇತ್ತರೂ, ಗಾರ್ಗೀಯ, ಲೋಪಾಮುದ್ರಾ, ಅಹಲ್ಯಾ, ತಾರಾ, ಮಂಡೋದರಿ, ಸಾವಿತ್ರಿ, ಸೀತಾ ಇತ್ಯಾದಿ ಯುವತಿಯರೂ, ಹುಟ್ಟಿ ನಿನ್ನ ಮಾತೃಪದಕ್ಕೆ ವೀರ ಪ್ರಸವದ ಗೌರವವನ್ನು ಜೋಡಿಸಿ ಪೂಜಿಸಿದರು. ಇಂಥಾ ವೀರ ಮಾತಾ ಆರ್ಯಜನನೀ ನಿನಗೆ ವಂದನೆಗಳು.

ಹೇ ಆರ್ಯಾವರ್ತವಸುಂಧರೇ, ನೀನು ಸುಜಲಳಿರುವಿ, ಸುಫಲಳಾಗಿರುವಿ, ಸುವರ್ಣಳಾಗಿರುವಿ, ಸುರತ್ನಳಾಗಿರುವಿ, ಹೇ ಋತುಮತೀ, ನಿನಗೆ ವಂದನೆಗಳು. ಹೇ ವಿವಿಧ ವಿಹಂಗಮೇ, ಹೇ ವಿವಿಧ ಕುಸುಮೇ, ನಿನಗೆ ವಂದನೆಗಳು. ಹೇ ನಿಸರ್ಗರಮ್ಯೆ, ಹೇ ನಿಸರ್ಗ ರಕ್ಷಿತೇ ನಿನಗೆ ವಂದನೆಗಳು. ಹೇ ಸ್ವತಂತ್ರ್ಯತಿಲಕ ಮುದಿತೇ ನಿನಗೆ ವಂದನೆಗಳು.

'ವಂದೇ ಮಾತರಂ'

(1909ನೇ ಇಸವಿಯಲ್ಲಿ ಪ್ರಕಟವಾದ ಟೋಪಾಯಿಯ ಮರಾಠಿ "ವಿಹಾರಿ" ಪತ್ರಿಕೆಯಿಂದ)

ಕೊಲೆ!!

International Trucks & Hudson Cars.

ಕಳೆದ ನಲವತ್ತು ವರ್ಷಗಳಿಂದ ಹೆಸರು ಪಡೆದ ಮೋಟಾರು ಮತ್ತು ಟ್ರಕ್ಕುಗಳ ತಯಾರಕರಾದ ಅಮೇರಿಕದ

ಇಂಟರ್‌ನೇಶನಲ್ ಹಾರ್ವೆಸ್ಟರ್ಸ್ ಎಕ್ಸ್‌ಪೋರ್ಟ್ ಕಂಪೆನಿ

ಯವರ ಟ್ರಕ್ಕು ಮತ್ತು ಹಡ್ಸನ್ ಕಾರುಗಳು ನಮ್ಮಲ್ಲಿ ದೊರೆಯುವವು. ಮಿತ ಖರ್ಚಿನಿಂದ ಉತ್ತಮ ಲಾಭ ಪಡೆಯಲು ಇವು ಉತ್ತಮ ಟ್ರಕ್ಕುಗಳು. ಪ್ರತಿ ಗೆಲನ್ ಪೆಟ್ರೋಲಿಗೆ ಅತಿ ಹೆಚ್ಚಿನ 'ಮೈಲೇಜ್' ಕೊಡುತ್ತವೆ ಇವುಗಳ "ಸ್ಪೇರ್ ಪಾರ್ಟ್ಸ್" ಗಳೂ ನಮ್ಮಲ್ಲಿ ದೊರೆಯುವವು. ಹೆಚ್ಚಿನ ಮಾಹಿತಿಗೆ ಈ ಪತ್ತೆಗೆ ಬರೆಯಬಹುದು ಯಾ ಖುದ್ದು ವಿಚಾರಿಸಬಹುದು.

M U. ACHANNA,
Manager,
"INDIAN AUTOMOBILES" (UDIPI)
Agents,
Hudson Cars and International Trucks,
For
South Kanara & Coorg,
Branch Mercara.

12-4

ವೀರಾಜಪೇಟೆಗೆ 'ಕೊಡಗು' ಪತ್ರಿಕೆಯ ಏಜೆಂಟರು
ಶ್ರೀ ಟಿ. ಎಸ್. ಗೋವಿಂದರಾಜುರವರು.

ಸ್ವಾತಂತ್ರ್ಯ ದಿನ ಆಗಸ್ಟ್ ೧೫.

ನಮ್ಮೂರಲ್ಲಿ ಸ್ವಾತಂತ್ರ್ಯ ದಿನೋತ್ಸವ.

ಲೇ:—ಶ್ರೀ ಎಂ. ಸದಾಶಿವಶೆಟ್ಟಿ, ಮಡಿಕೇರಿ.

ಥರ್‍ರ ಥರ್‍ರ ಥ! ಥರ್‍ರ ಥರ್‍ರ ಥರ! ಕೋಣೆಯಲ್ಲಿ ಕೂತು ಏನೋ ಪುಸ್ತಕವಾಚನದಲ್ಲಿ ತೊಡಗಿದ್ದ ನನ್ನನ್ನು ಈ ಶಬ್ದ ಬೀದಿಯತ್ತ ಎಳೆಯಿತು. ಡಂಗುರ ಗಾರನೊಬ್ಬನು ಡಂಗುರದ ಬೊದಲಾಡು ವ ಮನ್ನಡಿಯದು. 'ನಾಳೆ ಬೆಳಿಗ್ಗೆ ಎಂಟೂ ಮುಕ್ಕಾಲು ಗಂಟೆಗೆ ಕೋಟೆಯಲ್ಲಿ ಮೀಟಿಂಗು ಇದೆಯಂತೆ. ಎಲ್ಲರೂ ಬಂದು ಸೇರಬೇಕಂತೆ', ಎಂಬುದಿಷ್ಟು ಅವನ ಬಾಯಿಯಿಂದ ಹೊರಬಿದ್ದ ಕೂಡಲೆ ನನ್ನ ಮನಸ್ಸು ಸ್ವಲ್ಪ ನೆಮ್ಮದಿಗೆ ಬಂತು, ಕಾರಣ ಅದುವರೆಗೆ ಸ್ವಾತಂತ್ರ್ಯದಿನೋತ್ಸವದ ಕಾರ್ಯಕ್ರಮದ ವಿಷಯ ನಾನು ಕಂಡದ್ದೂ ಇಲ್ಲ, ಕೇಳಿದ್ದೂ ಇಲ್ಲ ಅದುದರಿಂದ ಪ್ರಾಯಶಃ ಸಾರಾಯಿಗೆ ರೇಶನ್ ಆಗಿರುವುದರಿಂದ ಯಾವದೇ ಉತ್ಸಾಹವಿಲ್ಲವೆಂದು ಆಲೋಚಿಸಿದ್ದೆ. ಆದರೆ ಆ 'ಟಾಂ ಟಾಂ' ನ್ನು ಕೇಳಿದಾಗ ನನ್ನ ಆ ಭಾವನೆಯು ಮಾಯವಾಗಿ, ಸಂತೋಷವು ತನ್ನ ಮೇರೆಯನ್ನರಿಯದಾಯಿತು.

ಸರಿ, ಮರುದಿನ ಪ್ರಾತಃಕಾಲ ತಡೆಯಲಾರದ ಮಡಿಕೇರಿ ಛಳಿಯನ್ನೂ ಸಹಿಸಿಕೊಂಡು ಎಂದಿಗಿಂತ ಒಂದು ಗಂಟೆ ಮುಂಚಿತವಾಗಿ ಎದ್ದು ಕೋಟೆಗೆ ಹೊರಡಲನುವಾದೆ. ನಾಗರೀಕತೆಯು ತುತ್ತತುದಿಯನ್ನೇರಿದ ಈ ಕಾಲದಲ್ಲಿ ಎಲ್ಲರಂತೆ ನಡೆಯಬೇಕೆಂಬ ಹವ್ಯಾಸಕ್ಕೆ ಬಿದ್ದಿದ್ದ ನನಗೆ ನನ್ನನ್ನು ಶೃಂಗರಿಸಿಕೊಳ್ಳುವುದಕ್ಕೇನೇ ಒಂದೂವರೆ ತಾಸು ತಗಲಿತು. ಎಂದೋ ಹೊಲಿಸಿದ ಖಾದಿ ಪೈಜಾಮವೂ ವಸ್ತ್ರೊಂದು ಅಂಗಿಯೂ ಪೆಟ್ಟಿಗೆಯಡಿಯಲ್ಲಿ, ಬ್ರಿಟಿಸ್ ಸಾಮ್ರಾಜ್ಯ ಶಾಹಿಯ ಸೆರೆಮನೆಯಲ್ಲಿದ್ದ ಕಾಂಗ್ರೆಸಿಗರಂತೆ ಯಾತನೆಯಲ್ಲಿತ್ತು. ಇಂದಾದರೂ (ತೋರಿಕೆಗಾಗಿ!) ಅದನ್ನುಡುವ ಎಂದು ಅದರ ಬಂಧವಿಮೋಚನೆಯನ್ನು ಮಾಡಿದೆ. ಪುಣ್ಯವಶಾತ್ ತಮ್ಮನ ಖಾದಿ ಟೊಪ್ಪಿಯೊಂದು ಸಿಕ್ಕಿತು. ಮೊಗಕ್ಕೆ ಬಳಿಯ ಬೇಕಾದುದನ್ನೆಲ್ಲಾ ಬಳಿದೂ ಆಯಿತು. ಆ ಮೇಲೆ ಕನ್ನಡಿಯ ಮುಂದುಗಡೆ ಹೋಗಿ ನಿಂತರೆ ನನ್ನನ್ನು ನೋಡಿ ನನಗೇ ಆಶ್ಚರ್ಯ! ನಾನು ಎಂದಿನ ಊಲನ್ ಸೂಟ್, ಕೋಟ್ ಹ್ಯಾಟಿನವನಾಗಿಂದೆ ಒಬ್ಬ ಪಕ್ಕಾ 'ಖಿದ್ದರಿಸ್ಟ್' ಆಗಿದ್ದೆ. ನಾನೊಬ್ಬ ಕಾಂಗ್ರೆಸಿಗನಾಗಬೇಕಾದರೆ ಹೆಚ್ಚಿನ ಪ್ರಯಾಸವೇನೂ ಇಲ್ಲವೆಂದು ಆಗ ನನಗೆ ಮನವರಿಕೆಯಾಯಿತ!

ಹಾಗೂ ಹೀಗೂ ಎಂಟೂವರೆ ಗಂಟೆಗೆ ಕೋಟೆಯತ್ತ ನಡೆದೆ. ಆದರೆ ಚೌಕಿ ದಾಟಿ ಮುಂದೆ ಹೋಗುವರೆ ಕಾಲುಗಳೊಪ್ಪುವಂತಿಲ್ಲ. ಆ ದಾರಿಯಾಗಿ ಹೋದರೆ ಓಬಿರಾಯನ ಕಾಲದಿಂದೀಚೆಗೆ ಬೆಳೆದು ನಿಂತ, ಎಲೆಗಳಿಲ್ಲದ ಆ ನಾಲ್ಕೈದು ಮರಗಳು ಗಾಳಿಯ ಹೊಡೆತಕ್ಕೆ ಸಿಕ್ಕಿ ಎಲ್ಲಿ ಗ್ರಹಚಾರವಶಾತ್ ಬಿದ್ದು ಬಿಡುತವೋ ಎಂಬ ಹೆದರಿಕೆ. ಆ ಮರಗಳನ್ನೂ ಮುನಿಸಿಪಾಲಿಟಿಯವರ ಕಣ್ಣಿಗೆ ಬಿದ್ದಿಲ್ಲವೆಂದು ಕಾಣುತೆ. ಇಲ್ಲವಾದರೆ ನೂರರಲ್ಲಿ ತೊಂಭತ್ತು ಮಂದಿಯೂ ಮಳೆಗಾಲದಲ್ಲಿ ಕೆಳಗಿನ ರಸ್ತೆಯಲ್ಲಿ ಹೋಗುವವರೇ ಆಗಿದ್ದರೂ, ಈಗಲೋ ಮತ್ತೆಯೋ ಶಯನಗ್ರಸ್ಥರಾಗುವವೆಂದು ಬಾಗಿ ನಿಂತಿರುವ ಆ ಮರಗಳ ಉಚ್ಚಾಟನೆಯನ್ನು ಮಾಡದೆ ಬಿಡುತ್ತಿರಲಿಲ್ಲ! ಅದೂ ನಮ್ಮ ಗ್ರಹಚಾರವೆನ್ನೋಣ!

ಅಂಜುತ್ತಂಜುತ್ತ ಹೇಗೂ ಆ ಬೀದಿಯನ್ನು ದಾಟಿ, ಕೋಟೆಗೆ ಬಂದು ಸೇರಿದೆ. ಅಲ್ಲಿ ಬಂದು ನೋಡಿದರೆ ನಾನು ಭಾವಿಸಿದಷ್ಟು ಜನರಿರಲಿಲ್ಲ. ಬಿಡುವಿಲ್ಲದೆ ಹೊಡೆಯುತ್ತಿದ್ದ ಮಳೆಯ ಕಾರಣವಿರಬಹುದು. ಪೋಲಿಸರ ಸಣ್ಣ ಪಡೆಯೊಂದು, ಧ್ವಜಸ್ತಂಭದ ಎದುರುಗಡೆ ನಿಂತಿತ್ತು. ಧ್ವಜ ಸ್ತಂಭದಡಿಯ ವೇದಿಕೆಯನ್ನು ಕೆಂಪು ವಸ್ತ್ರದಿಂದ ಆವರಿಸಿದ್ದರು. ಆ ಶ್ರೇಷ್ಠ ಧ್ವಜದ ಸನ್ನತಿಗಾಗಿ ರಕ್ತವನ್ನು ಹರಿಯಿಸಿದ ವೀರ ಭಾರತೀಯರ ಸ್ಮರಣೆಗಾಗಿರಬಹುದೆಂದೂಹಿಸಿದೆ. ಅದರ ಒಳಯಲ್ಲಿ ನಾಲ್ಕೈದು ಬಾಲಕಿಯರೂ, ಪೋಲೀಸ್ ಅಧಿಕಾರಿಯೊಬ್ಬರೂ, ಮಳೆಯ ಹೊಡೆತವನ್ನು ಸಹಿಸಿಕೊಂಡು ನಿಂತಿದ್ದರು. ಕೆಲವು ಮಹನೀಯರು ತಮ್ಮ ಮೋಟಾರ್ ಕಾರುಗಳಲ್ಲಿ ಸುಖವಾಗಿ ಒರಗಿದ್ದರು. ಗಂಟೆ ಒಂಭತ್ತಾದರೂ ಯಾವ ಕಾರ್ಯಕ್ರಮವೂ ಮೊದಲಾಗಲಿಲ್ಲ ಕಾರಣ ಮಾನ್ಯ ಚೀಫ್ ಕಮೀಷನರಿನ್ನೂ ಬಂದಿಲ್ಲ! 'ಇಂಡಿಯನ್ ಪಂಕ್ಚುವಾಲಿಟಿ' ಎಂದು ನನ್ನ ಬಳಿಯಲ್ಲಿದ್ದೊಬ್ಬನು ಗೊಣಗುಟ್ಟಿದ. ಹೇಗೂ ಸ್ವಲ್ಪ ಹೊತ್ತಿನಲ್ಲಿ ಅವರ ವಾಹನದ ಕೂಗು ಕೇಳಬಂತು ಪೋಲೀಸರು ತಯಾರಾಗಿ ನಿಂತರು ಮುಮ್ಮಿ ನೌಕರರೆಲ್ಲರೂ ಅವರನ್ನೂ ಆನೆ ಬಾಗಿಲಲ್ಲೇ ಎದುರು ಗೊಂಡುದಾಯಿತು. ಅಲ್ಲಿಂದ ಅವರು ವೇದಿಕೆಯ ಮೇಲೆ ನಿಂತು, ಧ್ವಜಾರೋಹಣ ಮಾಡಿಯೂ ಆಯಿತು. ಬಾಲಿಕೆಯರು ಪ್ರಾರ್ಥನೆಗೂ ಮೊದಲು ಮಾಡಿದರು. ಅಷ್ಟರಲ್ಲೇ, ವೇದಿಕೆಯ ಮೇಲಿದ್ದ ಚೀಫ್ ಕಮೀಷನರ ಹ್ಯಾಟು (ಟೊಪ್ಪಿಯಲ್ಲ!) ಗಾಳಿಯೊಡನೆ ಹಾರಾಡತೊಡಗಿ ವೇದಿಕೆಯಿಂದ ಕೆಳಧುಮುಕಿತು. ನಿಂತು ನಿಂತು ಬಸವಳಿದಿದ್ದ ಪ್ರೇಕ್ಷಕ ವೃಂದಕ್ಕೆ ಇದೊಂದು ಸಂತೋಷದ ಪ್ರದರ್ಶನವಾಯಿತು. ಆ ಮೇಲೆ ಸಾಲಾಗಿ ನಿಂತಿದ್ದ ಪೋಲೀಸರೂ ತೆರಳಿ ಹೋದರು. ಒಂದಿಗೆ ಪ್ರೇಕ್ಷಕರೂ ಹೊರಟರು. ನನಗಾಶ್ಚರ್ಯ! 'ಮೀಟಿಂಗೆಲ್ಲಿ?' ಎಂದು ಬಳಿಯಲ್ಲಿದ್ದವನೊಬ್ಬನೊಡನೆ ವಿಚಾರಿಸಿದರೆ 'ಇಲ್ಲಿಲ್ಲ, ನಮಗೆ ಹನ್ನೊಂದು ಗಂಟೆಗೆ ನಮ್ಮ ಕಾಲೇಜಿನಲ್ಲಿದೆ' ಎಂಬುದು ಉತ್ತರ!

ಅಲ್ಲಿಗೆ ಮುಗಿಯಿತು. ಅಂದಿನ ಉತ್ಸವ, ಹಿಂದೂಸ್ಥಾನದ ಚರಿತ್ರೆಯಲ್ಲಿ ಸುವರ್ಣಾಕ್ಷರಗಳಿಂದ ಮೆರೆಯುತ್ತಿರುವ, ಭಾರತೀಯರು ಪಾರತಂತ್ರ್ಯದಿಂದ ಬಿಡುಗಡೆಯಾದ ಪುಣ್ಯದಿನದ ಉತ್ಸವ!

ಸ್ವಾತಂತ್ರ್ಯ ಹಳಸಿತೇ?

ಲೇ:— ಮಿಸ್ ಅಮ್ಮಾಜಿ.

ಹೊಸ ತಿಂಡಿಗೆ ರುಚಿ ಹೆಚ್ಚು!

೧೯೪೭ನೇ ಆಗಸ್ಟ್ ೧೫ರ ದಿನ ದೇಶೀಯರಾದ ನಾವು ಉತ್ಸಾಹದಿಂದ ಸ್ವಾತಂತ್ರ್ಯವನ್ನು ಸ್ವಾಗತಿಸಿದೆವು. ನೋಡಿದ ಕಡೆಯಲ್ಲಿ ಧ್ವಜಗಳು ಹಾರಾಡುತ್ತಿದ್ದವು. ಬೀದಿ ಬೀದಿಗಳಲ್ಲೆಲ್ಲಾ ಮೆರವಣಿಗೆಗಳು, ಎಲ್ಲೆಡೆಯಲ್ಲಿಯೂ ಸಭೆ, ಜಯಕಾರಗಳು ತುಂಬಿದ್ದವು. ರಸ್ತೆ ಮನೆ ಮಠಗಳೆಲ್ಲಾ ತಳಿರು ತೋರಣಗಳಿಂದಲಂಕೃತವಾಗಿದ್ದವು. ಕಾಂಗ್ರೆಸಿಗರು, ಅಧಿಕಾರಿಗಳು, ಹರಿಜನರು, ಎಂಬ ಭೇದವಿಲ್ಲದೆ ಎಲ್ಲರೂ ಒಂದಾಗಿ ಆ ದಿನ ಆಚರಿಸಲ್ಪಟ್ಟಿತು. ಭಾರತ ಭಾಗ್ಯವಿಧಾತ ಗಾಂಧೀಜಿಯನ್ನು ಕಳಕೊಂಡ ನಾವು ಮರುವರ್ಷ ೧೯೪೮ನೇ ಆಗಸ್ಟ್ ೧೫ರಲ್ಲಿ ಸಂತೋಷದಿಂದ ಆ ದಿನವನ್ನು ಆಚರಿಸಲಾಗಲಿಲ್ಲ. ಆದರೂ ಆ ದಿನವನ್ನು ಯೋಗ್ಯರೀತಿ ಗಂಭೀರ ರೀತಿಯಲ್ಲಿ ಆಚರಿಸಿದೆವು.

ಸ್ವಾತಂತ್ರ್ಯ ಹಳಸಿತೇ?

ಈ ವರ್ಷದ ಸ್ವಾತಂತ್ರ್ಯ ಉತ್ಸವದಲ್ಲಿ ಆಡಂಬರ ಬೇಡವೆಂದು ಆಜ್ಞೆ. ಇದ್ದಾದರೂ ದಿನಾಚರಣೆಯನ್ನು ಗಂಭೀರದಿಂದ ಯೋಗ್ಯ ರೀತಿ ಮಾಡಲು ಆತಂಕವಿರಲಿಲ್ಲ. ಆದರೆ ಕೊಡಗಿನ ಮಟ್ಟಿಗೆ ಹೇಳುವದಾದರೆ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಹುರುಪೇ ಇಲ್ಲ ಮನೆಮಠಗಳು ಶುಚಿಗೊಳಿಸಲ್ಪಟ್ಟು, ತಳಿರು ತೋರಣಗಳಿಂದಲಂಕರಿಸಲ್ಪಟ್ಟು, ಭಾರತೀಯರಾದ ನಾವು ಸ್ವಾತಂತ್ರ್ಯದ ನೆನಪನ್ನು ಮಾಡಿಕೊಂಡು, ಅದಕ್ಕನುಗುಣವಾದ ಕಾರ್ಯಕ್ರಮಗಳನ್ನು ಕೈಕೊಳ್ಳುವ ನಿರ್ಧಾರ ಮಾಡಿಕೊಂಡು ದೃಢ ಭಾವಧಾರಿಗಳಾಗಿ ಮುಂದೆ ಸಾಗಬೇಕಾದ ನಾವು ಹತವೀರ್ಯರಂತೆ ಆ ದಿನವನ್ನೇ ಮರೆತು ವರ್ತಿಸಿದೆವು! ಮಡಿಕೇರಿಯಂಥಾ ಪೇಟೆಯಲ್ಲಿ ಒಂದು ಸಾರ್ವಜನಿಕ ಸಭೆ ನಡೆಯಲಿಲ್ಲವೆಂದರೆ ನಮ್ಮ ಅನಾಸಕ್ತಿಯನ್ನು ಎತ್ತಿ ತೋರಿಸುತ್ತದೆ. ಇತರ ರಾಷ್ಟ್ರಗಳು ತಮ್ಮ ತಮ್ಮ ಸ್ವಾತಂತ್ರ್ಯ ದಿನಾಚರಣೆಯನ್ನು ಎಷ್ಟು ಅಸ್ಥೆಯಿಂದ ಆಚರಿಸುತ್ತಾರೆ! ಕೊಡಗಿನವರಿಗೆ ಸ್ವಾತಂತ್ರ್ಯ ಹಳಸಿತೇ?

ಸ್ವಾತಂತ್ರ್ಯ ಬರಲೇ ಇಲ್ಲ!

ಕೊಡಗಿನವರ ಈ ಅನಾಸಕ್ತಿಗೆ ಕಾರಣವಿರಬಹುದು ಕೊಡಗಿಗೂ ಸ್ವಾತಂತ್ರ್ಯ ಬಂದು ಎರಡು ವರ್ಷ ತುಂಬಿದರೂ ಕೊಡಗಿನಲ್ಲಿ ಬದಲಾವಣೆಗಳಾವುವೂ ಬಂದಿಲ್ಲ. ರೈತರ ಸ್ಥಿತಿ ಸ್ವಲ್ಪವೂ ಸುಧಾರಿಸಿಲ್ಲ. ಆದ್ದರಿಂದಲೇ ಕೊಡಗಿನವರಲ್ಲಿ ಈ ತಾತ್ಸಾರವಿರಬಹುದೇನೋ! ಯಾವ ಸುಧಾರಣೆ ಯಾ ಸವಲತ್ತನ್ನು ನೆನೆದು ಕೊಂಡು ಈ ದಿನಾಚರಣೆ! ಯೋಚಿಸಲು ಒಂದೂ ಇಲ್ಲ! ಕೊಡಗಿಗೆ ತಕ್ಕ ಸುಧಾರಣೆಗಳನ್ನು ಪಡೆಯುವ ವಿಚಾರಕ್ಕಾದರೂ ಆ ದಿನ ಜನರು ಸೇರಿ ನಿರ್ಧಾರ ಮಾಡಿದ್ದರೆ ಉತ್ಸವವಾಗಿತ್ತು. ಅಂದು ಆಗಸ್ಟ್ ೧೫ರಲ್ಲಿ ಏನೇನೋ ಕನಸು ಕಟ್ಟಿ ಜನತೆ ಸ್ವಾತಂತ್ರ್ಯವನ್ನು ಸ್ವಾಗತಿಸಿತು. ಆದರೆ ಆ ಕನಸುಗಳು ಹಾಗೆಯೇ ಉಳಿದು ಸ್ವಾತಂತ್ರ್ಯಕ್ಕೆ ಹೆಚ್ಚಿನ ಅರ್ಥವಿಲ್ಲದಾಗಿದೆ.

ಕಂಬನಿ

ಸ್ವಾತಂತ್ರ್ಯ ಬಂದು ಇಂದಿನ ವರೆಗೆ ಕೊಡಗಿನಲ್ಲಿ ಏನೂ ಆಗದಿರಬಹುದು. ಆದರೂ ಕೊಡಗಿನವರ ಈ ತಾತ್ಸಾರಕ್ಕೆ ಕ್ಷಮೆ ಇಲ್ಲ. ಸ್ವಾತಂತ್ರ್ಯ ಆಕಾಶದಿಂದ ಬೀಳಲಿಲ್ಲ. ಅದಕ್ಕಾಗಿ ಎಷ್ಟು ಜನವೀರ ವಿದುಷಿಯರು ಆತ್ಮತ್ಯಾಗ ಮಾಡಿದ್ದಾರೆ? ಎಷ್ಟು ಜನರು ತಮ್ಮ ಜೀವನವನ್ನು ತ್ಯಾಗಮಾಡಿದ್ದಾರೆ. ಎಷ್ಟು ಜನರು ತಮ್ಮ ಅಭ್ಯುದಯದ ದಾರಿಗೆ ಮುಳ್ಳುಹಾಕಿ ಕೊಂಡಿದ್ದಾರೆ? ಎಷ್ಟು ಮಕ್ಕಳು, ಹೆಂಗಸರು ತಮ್ಮ ಕಣ್ಣೀರನ್ನು ಹರಿಸಿದ್ದಾರೆ. ಇಷ್ಟು ತ್ಯಾಗ, ಬಲಿದಾನಗಳ ಫಲವಾಗಿ ಬಂದ ಸ್ವರಾಜ್ಯದ ದಿನದಂದು ಆ ದಿವ್ಯ ಹುತಾತ್ಮರನ್ನು ನೆನೆದು ಆ ದಿನ ಆ ದಾರುಣ ಸ್ಥಿತಿಯನ್ನು ನಿವಾರಿಸಿ ದೇಶದ ಪ್ರತಿ ಗುಡಿಸಲಿಗೆ ಸ್ವಾತಂತ್ರ್ಯ ಮುಟ್ಟುವ ಮಹಾಕಾರ್ಯದಲ್ಲಿ ತನ್ನ ಅಳಿಲು ಸೇವೆಯನ್ನು ಸಲ್ಲಿಸುವೆನೆಂದು ಪ್ರತಿಜ್ಞೆ ಮಾಡುವದು ಪ್ರತಿಯೊಬ್ಬನ ಕರ್ತವ್ಯವಿತ್ತು. ಇನ್ನಾದರೂ ಸರಕಾರವಾಗಲೀ ಜನತೆಯಾಗಲೀ ಈ ರೀತಿಯ ಅನಾಸಕ್ತಿ ತೋರದಿರಲಿ.

ಸ್ವಾತಂತ್ರ್ಯ ದಿನಾಚರಣೆಯ ಸುದ್ದಿಸಾರ.

ಮಡಿಕೇರಿ.

ಮಡಿಕೇರಿಯಲ್ಲಿ ಈ ವರ್ಷ ಯಾವದೇ ತಳಿರು ತೋರಣ ಯಾ ಸಾರ್ವಜನಿಕ ಸಭೆಯ ಏರ್ಪಾಡು ಇರಲಿಲ್ಲ. ತಾ. ೧೫ರಂದು ಬೆಳಗ್ಗೆ ೯ ಗಂಟೆಗೆ ಕೋಟೆಯ ಎದುರು ಚೀಫ್ ಕಮಿಷನರ ಹಸ್ತದಿಂದ ಧ್ವಜಾರೋಹಣವು ನಡೆಯಿತು. ಪೋಲೀಸರ 'ಸೆಲ್ಯೂಟ್' ಇತ್ತು. ಪಟ್ಟಣದ ಕೆಲವು ಮಹನೀಯರೂ ಸರಕಾರಿ ಉದ್ಯೋಗಸ್ಥರೂ ಬಂದಿದ್ದರು. ಧ್ವಜಾರೋಹಣದೊಂದಿಗೆ ಕಾರ್ಯಕ್ರಮ ಕೊನೆಗೊಂಡಿತು.

ಕೊಡಗು ಸರಕಾರಿ ಕಾಲೇಜಿನ ವಿದ್ಯಾರ್ಥಿಗಳು ಪ್ರಿನ್ಸಿಪಾಲರ ಅಧ್ಯಕ್ಷತೆಯಲ್ಲಿ ಕಾಲೇಜಿನಲ್ಲಿ ಸಭೆಸೇರಿ ಸ್ವಾತಂತ್ರ್ಯ ದಿನವನ್ನು ಆಚರಿಸಿದರು. ಭಾಷಣಗಳು, ನಡೆದವು.

ವೀರರಾಜಪೇಟೆ.

ವೀರರಾಜಪೇಟೆಯ ಶಾಲಾ ವಿದ್ಯಾರ್ಥಿಗಳು ಬೆಳಗ್ಗೆ ೩ ಗಂಟೆಗೆ ಪ್ರಭಾತಪೇರಿಯನ್ನು ನಡೆಸಿದರು. ಪೇಟೆಯ ಬೀದಿಗಳೂ ಅಂಗಡಿಗಳೂ ತಳಿರು ತೋರಣಗಳಿಂದ ಅಲಂಕೃತವಾಗಿದ್ದವು. ೭ ಗಂಟೆಗೆ ಧ್ವಜಾರೋಹಣ ಮಾಡಿದರು. ೯ ರಿಂದ ೧೧ ಗಂಟೆಯ ವರೆಗೆ ಕಾರೊಂದರಲ್ಲಿ ಭಾರತಮಾತೆ, ಗಾಂಧಿ, ನೆಹರೂ ಮೊದಲಾದವರ ಭಾವ ಚಿತ್ರವನ್ನು ಶೃಂಗರಿಸಿ ಮೆರವಣಿಗೆ ನಡೆಯಿತು. ಮೆರವಣಿಗೆಯ ನಂತರ ನೂಲುವ ಸ್ಪರ್ಧೆನಡೆಯಿತು. ಮಧ್ಯಾಹ್ನದ ಮೇಲೆ ವಾಕ್ ಸ್ಪರ್ಧೆ ನಡೆದು ೩ ಗಂಟೆಗೆ ಶಾಲಾ ಸಭಾಂಗಣದಲ್ಲಿ ಸಭೆ ಸೇರಿತು. ಶ್ರೀ ಬಿ. ಡಿ. ಗಣಪತಿಯವರು ಅಧ್ಯಕ್ಷತೆ ವಹಿಸಿದ್ದರು. ಬಹುಮಾನ ವಿತರಣೆಯು ಕೇಂದ್ರ ಶಾಲಾ

(ಆನೇ ಪುಟಕ್ಕೆ ಸಾಗಿದೆ)

ಕೊಡಗು

ತಾ. ೧೯-೮-೧೯೪೯ನೇ ಶುಕ್ರವಾರ.

ಆಗಸ್ಟ್ ೧೫ರ ಸಂದೇಶ.

ಸ್ವಾತಂತ್ರ್ಯ ದಿನಾಚರಣೆಯಂದು ತಮ್ಮ ಸಂದೇಶವನ್ನು ದೇಶದ ಜನತೆಗೆ ಕೊಡುತ್ತಾ ಗವರ್ನರ್ ಜನರಲ್ ರಾಜಾಜಿಯವರು 'ಅನ್ನದಿಂದಲೇ ಸಮಸ್ತ ಜೀವರಾಶಿಗಳು ಉತ್ಪನ್ನವಾಗುತ್ತವೆ. ಅನ್ನದ ಬಲದಿಂದಲೇ ಅವು ಬದುಕುತ್ತವೆ. ಅವು ಪುನಹ (ಮರಣಾನಂತರ) ಇತರ ಜೀವಿಗಳಿಗೆ ಅನ್ನವಾಗಿಯೇ ಮಾರ್ಪಡುತ್ತವೆ. ಅರ್ಥಾತ್ ಅನ್ನವೇ ಬ್ರಹ್ಮ, ಅಥವಾ ದೇವರು. ಅನ್ನವನ್ನು ಚೆಲ್ಲಬಾರದು, ಅನ್ನವನ್ನು ಧಾರಾಳವಾಗಿ ಬೆಳೆಸಬೇಕು. ಹಸಿದು ಬಂದವನು ಯಾವ ಮನೆಯಿಂದಲೂ ಹೊರಗಟ್ಟಲ್ಪಡದಿರಲಿ' ಎಂದು ಹೇಳಿದರು. ರಾಜಾಜಿಯವರು ಈ ಮಾತುಗಳನ್ನು ನಮ್ಮ ಆರ್ಷೇಯ ಶಾಸ್ತ್ರಗಳಿಂದ ಎತ್ತಿ ಹೇಳಿದ್ದಾರೆ. ಈ ಮಾತು ಅಂದಿಗೆ ಎಷ್ಟು ಸತ್ಯವೋ ಅಷ್ಟೇ ಇಂದಿಗೂ ಸತ್ಯವಾಗಿದೆ.

ಹಿಂದೂದೇಶವು ಪ್ರಕೃತಿ ಸಂಪತ್ತಿನಲ್ಲಿ ಕಡಿಮೆಯಿಲ್ಲ. ಇಲ್ಲಿರುವ ಜನರೂ ಕೂಡ ನೈತಿಕ, ಬೌದ್ಧಿಕ ಮತ್ತಿತರ ವಿಚಾರಗಳಲ್ಲಿ ಯಾವ ರಾಷ್ಟ್ರದವರಿಗೂ ಕೀಳಲ್ಲ. ಆದರೂ ನಮಗೆ ಊಟಕ್ಕೆ ಬೇಕಷ್ಟು ಅನ್ನ ಹುಟ್ಟುತ್ತಿಲ್ಲವೆಂದರೆ ನಾಚಿಕೆಪಡಬೇಕು. ಅದ್ದರಿಂದಲೇ ರಾಜಾಜಿಯವರು ಅನ್ನದ ಪ್ರಾಮುಖ್ಯತೆಯನ್ನು ಒತ್ತಿ ನುಡಿದ್ದಾರೆ. ಸ್ವಾತಂತ್ರ್ಯ ದಿನದಲ್ಲಿ ಪ್ರತಿಯೊಬ್ಬನೂ ಹೆಚ್ಚು ಬೆಳೆಯುವ ಮತ್ತು ಕಡಿಮೆ ಖರ್ಚು ಮಾಡಿ ಇತರರಿಗೆ ಉಳಿಸುವ ನಿರ್ಧಾರ ಮಾಡಬೇಕೆಂದು ಹೇಳಿದ್ದಾರೆ. ಈ ವರ್ಷ ಇದನ್ನು ಯುಕ್ತಿಯಾಗಿ ಸಾಧಿಸಿ ಹಿಂದೂದೇಶವು ಆಹಾರದ ಮಟ್ಟಿಗೆ ಸ್ವತಂತ್ರವಾಗುವಂತೆ ಮಾಡಬಲ್ಲೆವಾದರೆ ಸ್ವಾತಂತ್ರ್ಯ ಪಥದಲ್ಲಿ ಭಾರತವು ಮುಂದುವರಿದಂತಾಗುವದು.

ಕೊಡಗು ಫಲವತ್ತಾದ ಪ್ರದೇಶ. ಸಾಧ್ಯವಾದ ಎಲ್ಲೆಡೆಗಳಲ್ಲೂ ಬೆಳೆ ಬೆಳೆಯುವ ಮತ್ತು ಅದಷ್ಟು ಹೆಚ್ಚಿನ ಪರಿಮಾಣದಲ್ಲಿ ತರಕಾರಿ, ಮೊದಲಾದುವನ್ನು ಬೆಳೆಸುವ ಪ್ರಯತ್ನವನ್ನು ನಾವು ಮಾಡಬೇಕು. ನಮ್ಮ ಮುಖ್ಯಮಂತ್ರಿ ಪಂಡಿತ ಜವಾಹರ್‌ಲಾಲ್ ನೆಹರೂರವರು ತಮ್ಮ ಮನೆಯ ಸುತ್ತುಮುತ್ತಲಿನ ಪ್ರದೇಶವನ್ನು ತರಕಾರಿ ತೋಟವಾಗಿ ಮಾಡಿದ್ದಾರೆ. ತಾವೇ ಆಸ್ಥೆಯಿಂದ ಬಿಡುವಿದ್ದಾಗ ಅಲ್ಲಿ ದುಡಿಯುತ್ತಾರೆ. ಈ ಆದರ್ಶವನ್ನು ಪ್ರತಿಯೊಬ್ಬನೂ ಅನುಸರಿಸಬೇಕು. ಈ ನಿರ್ಧಾರವನ್ನು ಎಲ್ಲರೂ ಕೈಕೊಂಡು ಶ್ರಮಿಸಿದರೆ ಸ್ವಾತಂತ್ರ್ಯ ದಿನದ ಆಚರಣೆಗೆ ಬೆಲೆ ಬಂದೀತು. ದೇಶದ ಸರಕಾರವೂ, ಜನತೆಯೂ ಸುಖವನ್ನು ಪಡೆದೀತು.

ವರ್ತಮಾನ.

ಕೊಡಗಿನ ಛೀ. ಕಮಿಷನರು ಮತ್ತು ಜಿಲ್ಲಾ ಮೇಜಿಸ್ಟ್ರೇಟರಾಗಿದ್ದ ಶ್ರೀ ಕೋಡಿರ ಉತ್ತಪ್ಪನವರು ತಾ. ೨೦-೮-೪೯ರಿಂದ ನಿವೃತ್ತರಾಗುವದರಿಂದ ಅವರ ಬದಲು ಶ್ರೀ ನೆಲ್ಲಮಕ್ಕಳ ಸುಬ್ಬಯ್ಯನವರನ್ನೂ, ಪೊಲೀಸ್ ಸುಪರಿಂಟೆಂಡೆಂಟರಾಗಿ ಶ್ರೀ ಮಲ್ಲೇಂಗಡ ಮುತ್ತಣ್ಣನವರನ್ನೂ ನೇಮಿಸಲಾಗಿದೆ.

ತಾ. ೧-೮-೪೯ರಿಂದ ಕೋಡಿರ ಮುದ್ದಪ್ಪನವರನ್ನು ಫ್ಯಾಕ್ಟರಿ ಇನ್ಸ್‌ಪೆಕ್ಟರಾಗಿ ನೇಮಿಸಲಾಗಿದೆ. ಕೊಡಗಿನ ಜಿಲ್ಲಾ ಮೇಜಿಸ್ಟ್ರೇಟರು ಚೀಫ್ ಫ್ಯಾಕ್ಟರಿ ಇನ್ಸ್‌ಪೆಕ್ಟರು. ದ ಮತ್ತು ಉ. ಕೊಡಗಿನ ಸುಬೇದಾರರುಗಳಿಗೆ ಅವರ ವ್ಯವಹಾರ ಕ್ಷೇತ್ರಗಳಲ್ಲಿ ವಿಶೇಷ ಫ್ಯಾಕ್ಟರಿ ಇನ್ಸ್‌ಪೆಕ್ಟರುಗಳ ಅಧಿಕಾರ ಕೊಡಲಾಗಿದೆ.

ಶ್ರೀ ಪಟ್ರಪಂಡ ಅಪ್ಪಯ್ಯನವರು ರಾಜಿನಾಮೆ ಕೊಟ್ಟ ನಾಪೋಕ್ಲಿನ ಬೆಂಚು ಕೋರ್ಟಿನ ಅಧ್ಯಕ್ಷತನಕ್ಕೆ ಶ್ರೀ ಪಾಡಿಯಮ್ಮನ ಮುತ್ತಮ್ಮಯ್ಯನವರನ್ನು ನೇಮಿಸಲಾಗಿದೆ.

ಸರಕಾರಿ ರಜೆ ಪಟ್ಟಿಯಲ್ಲಿರುವಂತೆ ಕೈಲು ಮುಹೂರ್ತ ಹಬ್ಬದ ರಜವು ತಾ. ೩ರಲ್ಲಿಲ್ಲವೆಂದೂ ತಾ. ೩ನೇ ಶನಿವಾರವು ರಜೆಯ ದಿನವೆಂದೂ ಚೀಫ್ ಕಮಿಷನರರವರು ತಿದ್ದುಪಡಿ ಮಾಡಿರುವರು.

ನಾಳೆ ಸಾಯಂಕಾಲ ೬ ಗಂಟೆಗೆ ಮಡಿಕೇರಿ ವೇದಾಂತ ಸಂಘದಲ್ಲಿ ಶ್ರೀಕೃಷ್ಣ ಜಯಂತಿಯು ಆಚರಿಸಲ್ಪಡುವದು. ಸಂಗೀತ ವಿದ್ವಾನ್ ಶ್ರೀ ನಾರಾಯಣ ಶಾಸ್ತ್ರಿಗಳ ಸಂಗೀತವೂ, ಮಡಿಕೇರಿ ಕಾಲೇಜಿನ ಶ್ರೀ ರಾಮಕೃಷ್ಣ ಉಪಾಧ್ಯರ ಭಾಷಣವೂ ಇದೆ.

ಮದ್ರಾಸು ವಿಶ್ವವಿದ್ಯಾಲಯದ 'ಆಟೋಮೋಬೈಲ್ ಇಂಜಿನಿಯರಿಂಗ್' ಅಖೈರು ವರ್ಷದ ಪರೀಕ್ಷೆಯಲ್ಲಿ ಶ್ರೀ ಚೇಂದ್ರಿಮಾಡ ಜಿ. ಮುತ್ತಪ್ಪನವರು ತೇರ್ಗಡೆಯಾಗಿರುವರು.

ಮಡಿಕೇರಿಗೆ ಈ ವರ್ಷ ಆಗಸ್ಟ್ ತಾ. 14 ರೊಳಗೆ 153 ಇಂಚು 73 ಸೆಂಟು ಮಳೆಯಾಗಿದೆ. ಕಳೆದ ವರ್ಷ ಈ ಅವಧಿಯಲ್ಲಿ 171 ಇಂಚು 74 ಸೆಂಟು ಮಳೆಯಾಗಿತ್ತು. ಈ ರೀತಿ ಹೆಚ್ಚು ಮಳೆಯ ದೆಸೆಯಿಂದ ರೈತರಿಗೆ ಎತ್ತು ಸತ್ತು ಬರೆ ಬಿದ್ದು ಒಡಹೋಗಿ ನಾಟಿ ಕೊಳೆತು ವಿಪರೀತ ನಷ್ಟ ಉಂಟಾಗಿದೆ.

ಮೂರ್ನಾಡಿನ ಕೈಲುಪೊಳ್ದು ಸಂಘದ ಬೆಳ್ಳಿಯ ಮಹೋತ್ಸವವು ತಾ. ೩-೯-೪೯ರಲ್ಲಿ ಜರುಗುವದು. ಆ ದಿನ ಆಟೋಟಗಳ ಸ್ಪರ್ಧೆಯು ಬೆಳಿಗ್ಗೆ ೧೦ ಗಂಟೆಯಿಂದ ಪ್ರಾರಂಭವಾಗುವದು.

(೩ನೇ ಪುಟದಿಂದ ಸಾಗಿದ್ದು)

ವಿದ್ಯಾರ್ಥಿಗಳು ಮೂರು ಜನರು ಸೂಕ್ತವಾದ ಭಾಷಣಮಾಡಿದರು. ಅಧ್ಯಕ್ಷರು ವಿದ್ಯಾರ್ಥಿಗಳಿಗೆ ಉಚಿತವಾಗಿ ನಾಟ್ಯ ಮಾಡಿ ನಂತರ ವಂದನಾರ್ಪಣೆಯಿಂದ ಸಭೆ ಮುಕ್ತಾಯಗೊಂಡಿತು.

ಸಾರ್ವಜನಿಕರ ಸಭೆಯೊಂದು ಮುನ್ಸಿಪಲ್ ಹಾಲ್‌ನಲ್ಲಿ ಶ್ರೀ ಪಿ. ಎಂ. ನಾಣಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಗಳಾದ ಡಾ. ಅಶ್ವಣ, ಪಿ. ಎಂ. ಕರುಂಬಯ್ಯ, ಬಿ ಪಿ ಬೋಪಯ್ಯ ಮತ್ತು ಕೆ. ಎ. ಚಿಣ್ಣಪ್ಪ ಮೊದಲಾದವರು ಭಾಷಣ ಮಾಡಿದರು. ಅಧ್ಯಕ್ಷರ ಸೂಕ್ತ ಭಾಷಣದ ನಂತರ ಸಭೆ ಮುಕ್ತಾಯಗೊಂಡಿತು.

ಮಹಿಳಾ ಸಹಕಾರ ಸಮಾಜದ ಆಶ್ರಯದಲ್ಲಿ ಬೆಳಿಗ್ಗೆ ಗಿಡನೆಡುವ ಕಾರ್ಯಕ್ರಮವು ನಡೆಯಿತು.

ಭಾಗಮಂಡಲ.

ಭಾಗಮಂಡಲದಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಶ್ರೀ ದೇವಂಗೋಡಿ, ಬೋಜಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಸ್. ಹೆಬ್ಬಾರರು, ಧ್ವಜಾರೋಹಣವನ್ನು ಮಾಡಿದನಂತರ ಮೆರವಣಿಗೆಯಾಯಿತು. ಅನಂತರ ಸಭೆಯು ಜರಗಿತು. ಸ್ವಾತಂತ್ರ್ಯದ ದಿನಾಚರಣೆಯ ಪ್ರಾಮುಖ್ಯತೆ ಮತ್ತು ಸ್ವತಂತ್ರ ಹಿಂದೂಸ್ಥಾನದ ಈಗಿನ ಮುಗ್ಗಟ್ಟಿನ ವಿಚಾರವಾಗಿ ಶ್ರೀಗಳಾದ ಬಿ. ಎಮ್. ಮುತ್ತಪ್ಪ ಯು. ಎಲ್. ನಾರಾಯಣರಾಯರು, ಡಾ. ವೆಂಕಟರಂಗಾಚಾರ್ಯರ, ಈ. ಎಸ್. ವೆಂಕಟರಾಯರು, ರಾಘವಾಚಾರ್ಯರು ಮಾತಾಡಿದರು. ಅಧ್ಯಕ್ಷರ ಭಾಷಣದೊಡಗೂಡಿ ವಂದನಾರ್ಪಣೆಯಿಂದ ಸಭೆಯು ಮುಕ್ತಾಯವಾಯಿತು.

ಮರಗೋಡು.

ಸ್ವಾತಂತ್ರ್ಯ ದಿನಾಚರಣೆಯನ್ನು ಮರಗೋಡು ಶಾಲಾ ಆವರಣದಲ್ಲಿ ಮರಗೋಡು, ಹೊಸಕೇರಿ, ಕಟ್ಟೆಮಾಡು, ಐಕೊಳ ಗ್ರಾಮಸ್ಥರು ಶ್ರೀಮಾನ್ ಉಳುವಾರನ ಗಣಪತಿಯವರ ಅಧ್ಯಕ್ಷತೆಯಲ್ಲಿ ನೆರೆದು ಆಚರಿಸಿದರು.

ಮೂರ್ನಾಡು.

ಮೂರ್ನಾಡಿನಲ್ಲಿ ಸ್ವಾತಂತ್ರ್ಯ ದಿನಾಚರಣೆ ಬಗ್ಗೆ ಬೆಳಿಗ್ಗೆ ಪ್ರಭಾತ ಫೇರಿಯಾದ ಮೇಲೆ ಧ್ವಜಾರೋಹಣವನ್ನು ಡಾ. ರುದ್ರಪ್ಪನವರು ಮಾಡಿದರು. ಆ ಮೇಲೆ ಶ್ರೀಗಳಾದ ಬಿ. ಸಿ. ದೇವಯ್ಯ, ಪಿ. ಯಂ. ಮುದ್ದಪ್ಪ, ಸಿ. ಡಿ. ಪೊಣ್ಣಪ್ಪ ಮತ್ತು ಬಿ. ಬಿ. ಗಣಪತಿಯವರು ಕೆಲವು ಮಾವಿನ ಗಿಡಗಳನ್ನು ನೆಟ್ಟರು. ಆ ಸಮಯದಲ್ಲಿ ಸ್ಥಳೀಯ ಸಹಕಾರಿ ಬ್ಯಾಂಕಿಯ ನಾಟಿದವರು ಫಾರೆಸ್ಟು ಇಲಾಖೆಯವರಿಂದ ತಾವು ಸಿಕ್ಕಿದ ತೇಗದ ಸಸಿಗಳನ್ನು ಸಾರ್ವಜನಿಕರಿಗೆ ನೆಡಲು ಕೊಟ್ಟರು. ನಂತರ ಒಂದು ಸಾರ್ವಜನಿಕ ಸಭೆಯು ಪಾಂಡಂಡ್ರ ಪೊಣಪ್ಪನವರ ಅಧ್ಯಕ್ಷತೆಯಲ್ಲಿ ಪಾಂಡಾಣೆ ಮಂದಿನಲ್ಲಿ ಸೇರಿದವೇಳೆಯಲ್ಲಿ ಮಾವಿನಗಿಡಗಳನ್ನು ನೆಟ್ಟಿರುವ ಪ್ರಸಾರಿ ಸ್ಥಳವನ್ನು ಇನ್ನು ಮುಂದಕ್ಕೆ ವಿಹಾರವನವಾಗಿ ಮಾರ್ಪಡಿಸಲು ಸರ್ಕಾರವು ಆ ಸಾರ್ವಜನಿಕರಿಗೆ ಬಿಟ್ಟುಕೊಡಬೇಕೆಂಬ ಸೂಚನೆಯು ಸರ್ವಸಮ್ಮತಿಯಿಂದ ಮಂಜೂರಾಯಿತು.

ಮಾಯಮುಡಿ.

ಸ್ವಾತಂತ್ರ್ಯ ದಿನವನ್ನು ಮಾಯಮುಡಿ ಮತ್ತು ಧನುಗಾಲ ಗ್ರಾಮಸ್ಥರು ಮಾಯಮುಡಿ ಸ್ಕೂಲ್ ಬಳಿ ಶ್ರೀ. ಜೆ. ಬಿ. ಮುದ್ದಮಲ್ಲಯ್ಯನವರ ಅಧ್ಯಕ್ಷತೆಯಲ್ಲಿ ನಡಿಸಿದರು. ಆಟೋಟಗಳ ಸ್ಪರ್ಧೆನಡೆಸಿ ಗೆದ್ದ ಮಕ್ಕಳಿಗೆ ಇನಾಮು ಹಂಚಿ ಸಿಂಡಿತೀರ್ಥದನಂತರ ಮುಕ್ತಾಯಗೊಂಡಿತು.

ಕುತ್ತುನಾಡು.

ಕುತ್ತುನಾಡಿನವರು ಆಗಸ್ಟ್ ೧೫ರಂದು ಭಾರತದ ಸ್ವಾತಂತ್ರ್ಯ ದಿನಾಚರಣೆಯನ್ನು ನಾಡಿನ ಪಾರೆ ಶಾಲೆಯಲ್ಲಿ ಆಚರಿಸಿದರು. ಶ್ರೀ ಕೆ. ಎ ಪೂವಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಶ್ರೀಗಳಾದ ಬಿ. ಕೆ. ಪೊನ್ನಪ್ಪ, ಸಿ. ಎಸ್. ಮುತ್ತಣ್ಣ, ಸಿ. ಸಿ ಪೂವಯ್ಯ ಮತ್ತು ಮತ್ತಿಬ್ಬ ಮಹಿಳೆಯರು ಮಾತಾಡಿದರು. ಅಧ್ಯಕ್ಷರು ಚರಕದಿಂದ ನೂಲು ತೆಗೆಯುವುದನ್ನು ಪ್ರತ್ಯಕ್ಷ ತೋರಿಸಿ ವಿವರಿಸಿದರು. ಮಂಗಳಗೀತೆಯಿಂದ ಸಭೆ ಮುಕ್ತಾಯವಾಯಿತು.

Coorg Forest Department
TIMBER SALE NOTICE
Mercara, the 12 August '49.

About 40,000 cft of teak, rosewood, honne (vengai), nandi (venteak), mathi (karimaradu) and other jungle wood species lying at the Coorg Timber Depot at Hunsur will be sold by public auction at the said Depot on Monday the 12th September 1949, commencing at 10-30 A. M. Timber will be sold in small lots to suit the convenience of private consumers. For further particulars apply to the Chief Forest Officer, Coorg, Mercara.

C M. Kushalappa,
Chief Forest Officer, Coorg

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್ ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. 32 ಪಿಸ್ತೂಲುಗಳ. (Pistols) ಕ್ರಯ ರೂ. 162 ರಿಂದ 245 ರ ವರೆಗೆ.
2. ·32 ರಿವಾಲ್ವರುಗಳು (Revolvers) „ 262 „ 274 „
3. 12ನೇ ನಂಬರಿನ ಜೋಡು ಕೊಳವಿನ ಕೋವಿ (Webley & Scott) ಕ್ರಯ ರೂ. 1492/-
4. 12ನೇ ನಂಬರಿನ ಜೋಡು ಕೊಳವಿನ ಕೋವಿ (Spanish make) ಕ್ರಯ ರೂ. 700/-
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4-10-0
6. 12, 16, 20ನೇ ನಂಬರು ಕೋವಿಗಳ ತೋಟಗಳೂ ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಗಳೂ ಸಹ ದೊರೆಯುತ್ತವೆ.

(ಆವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವವು)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

52–3

ಓದುಗರ ಓಲೆಗಳು.

ಈ ನಿರ್ಬಂಧವೇಕೆ?

ತಾರೀಕು ೮–೮–೪೯ರಲ್ಲಿ 'ದಿ ಸೋಶಿಯಲ್ ಏಂಡ್ ಸ್ಟೇಟ್ ಸ್ಟ್ರಕ್ಚರ್ ಆಫ್ ಯು. ಎಸ್. ಎಸ್. ಆರ್' ಎಂಬ ಪುಸ್ತಕವನ್ನು ವೀರಾಜಪೇಟೆಯಲ್ಲಿ ಮಾರಾಟ ಮಾಡುತ್ತಿದ್ದಾಗ್ಯೆ ಸ್ಥಳೀಯ ಪೋಲೀಸ್ ಇನ್ಸ್‌ಪೆಕ್ಟರು ಬಂದು ಆ ಪುಸ್ತಕಗಳ ಪ್ರತಿಯನ್ನು ತೆಗೆದುಕೊಂಡುದಲ್ಲದೆ ಮಾರುವ ಕೈತನವರನ್ನು ಪೋಲೀಸ್ ಸ್ಟೇಷನಿಗೆ ಕರೆದೊಯ್ದು ರಿಂದೂ ಅಲ್ಲಿ ಹೆಡ್‌ಕಾನ್‌ಸ್ಟೇಬಲರು ಇಂಥಾ ಪುಸ್ತಕ ಮಾರಾಟ ಮಾಡಿದರೆ ನಿನ್ನ ಮೂಳೆ ಮುರಿದು ಬಿಡುತ್ತೇವೆಂದು ಗದರಿಸಿದರೆಂದೂ ವಾರ್ತೆ. ಇದು ನಿಜವಾಗಿದ್ದರೆ ಮಾರಾಟಕ್ಕೆ ಪ್ರತಿಬಂಧಕವಿಲ್ಲದ ಆ ಪುಸ್ತಕದ ಬಗ್ಗೆ ಈ ರೀತಿ ವರ್ತಿಸಲು ಕಾರಣವೇನು? ಹಿಂದಿನ ಪೋಲೀಸ್ ಆಡಳಿತವೇ ಇಂದೂ ನಡೆದಿದೆಯೇ? ಸಂಬಂಧಿಸಿದ ಅಧಿಕಾರಿಗಳು ಇದನ್ನು ಶೀಘ್ರ ವಿಚಾರಿಸಿ ಅವರನ್ನು ಎಚ್ಚರಿಸಬೇಕು.

'ಪುಸ್ತಕ ಪ್ರೇಮಿ'

ಸ್ಟಾಫ್ ಸಿಲೆಕ್ಷನ್ ಬೋರ್ಡ್

ಕೊಡಗಿನ ಹೈಸ್ಕೂಲುಗಳಲ್ಲಿ ಮೂರು ಗ್ರಾಜ್ಯುವೇಟ್ ಉಪಾಧ್ಯಾಯರ ಸ್ಥಾನಗಳು ಖಾಲಿ ಇದ್ದು ಈ ಸ್ಥಳಗಳಿಗೆ ಜಿಲ್ಲಾ ವಿದ್ಯಾಧಿಕಾರಿಗಳು ಮೂರು ಜನರ ಹೆಸರನ್ನು ಸೂಚಿಸಿದ್ದರು. ಮಡಿಕೇರಿ ಹೈಸ್ಕೂಲಿನಲ್ಲಿ ಈ ಮೊದಲು ಕೆಲಸ ಮಾಡಿ ಅನುಭವ ಪಡೆದಿದ್ದವರೊಬ್ಬರ ಅರ್ಜಿಯೂ ಇತ್ತಂತೆ. ಅವರನ್ನು ವಿದ್ಯಾಧಿಕಾರಿಗಳು ಶಿಫಾರಸ್ಸು ಮಾಡಲಿಲ್ಲವೆಂದೂ ಬದಲು ಬೇರೆ ಇಲಾಖೆಯ ಉದ್ಯೋಗದಲ್ಲಿದ್ದ ಒಬ್ಬರನ್ನು ಶಿಫಾರಸ್ಸು ಮಾಡಿದರೆಂದೂ ತಿಳಿದು ಬಂದಿದೆ. ಈ ವಿಚಾರ ಚೀಫ್ ಕಮಿಷನರಲ್ಲಿಗೆ ದೂರು ಹೋಗಲಾಗಿ ಈ ಉಪಾಧ್ಯಾಯರನ್ನು ನೇಮಿಸುವ ವಿಚಾರವು ಮೇಲಿನ ಬೋರ್ಡಿಗೆ ಒಪ್ಪಿಸಲ್ಪಟ್ಟಿತಂತೆ. ಅದರಂತೆ ತಾ. ೯–೭–೪೯ರಲ್ಲಿ ಇವರ ಮೀಟಿಂಗು ನಡೆಯಿತು. ಜಿಲ್ಲಾ ವಿದ್ಯಾಧಿಕಾರಿಗಳೂ ಹಾಜರಿದ್ದರು! ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜ್ ಆಫೀಸರು ತಮ್ಮಲ್ಲಿ ರಿಜಿಸ್ಟರಾದ ಎಲ್ಲಾ ಗ್ರಾಜ್ಯುವೇಟುಗಳ ಹೆಸರುಗಳನ್ನು ಕಳುಹಿಸಿದ್ದರು. ಇವರ ಯೋಗ್ಯತೆಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡದೆ ಹಿಂದೆ ಜಿಲ್ಲಾ ವಿದ್ಯಾಧಿಕಾರಿಗಳು ಸೂಚಿಸಿದವರೇ ಆರಿಸಲ್ಪಟ್ಟಿದ್ದಾರೆ! ಹಾಗಾದರೆ ಈ ವಿಚಾರವನ್ನು ಸ್ಟಾಫ್ ಸಿಲೆಕ್ಷನ್ ಬೋರ್ಡಿಗೆ ವಹಿಸಿದ್ದರ ಪ್ರಯೋಜನವೇನಾಯಿತು? ಬೇರೆ ಯೋಗ್ಯ ಉಮೇದುವಾರರಿಲ್ಲವೆಂದರ್ಥವೇ? ಅಥವಾ ಬೋರ್ಡ್ ವಿದ್ಯಾಧಿಕಾರಿಯ ಅಭಿಪ್ರಾಯಕ್ಕೆ ತಲೆಬಾಗಿತೆನ್ನೋಣವೇ?

'ಭಾರತೀಯ'

ಸಾರ್ವಜನಿಕ ಸತ್ಕಾರಕೂಟಗಳು.

ಮಡಿಕೇರಿಯಲ್ಲಿ ಆಗಿಂದಾಗ್ಗೆ ಸತ್ಕಾರಕೂಟಗಳನ್ನು ಕೆಲವು ವ್ಯವಸ್ಥಾಪಕರು ಹಣ ಕಳುಹಿಸಿ ಏರ್ಪಡಿಸುವದು ಎಲ್ಲರೂ ತಿಳಿದ ವಿಷಯವಾಗಿದೆ. ಹೆಚ್ಚಿನ ಮಟ್ಟಿಗೆ ಸತ್ಕಾರಕೂಟಗಳ ಲೆಕ್ಕಾಚಾರವನ್ನು ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಿಸದಿರುವದು ಒಂದು ಅಂಟು ಜಾಡ್ಯದಂತೆ ಕಂಡುಬರುತ್ತದೆ. ಇದು ಮಡಿಕೇರಿಯ ಸತ್ಕಾರಕೂಟಗಳಲ್ಲಿ ಮಾತ್ರವೋ ಅಥವಾ ಕೊಡಗಿನ ಎಲ್ಲಾ ಸ್ಥಳಗಳಲ್ಲಿಯೂ ಹೀಗೆಯೋ ಎಂಬುದನ್ನು ತಿಳಿಯಬಯಸುತ್ತೇನೆ.

ದಿ ಬ ಕೆ ಚಂಗಪ್ಪನವರಿಗೆ ಕೊಟ್ಟ ಸತ್ಕಾರಕೂಟಗಳ ಲೆಕ್ಕಾಚಾರಗಳನ್ನು ಪ್ರಕಟಿಸಿ ಬಾಕಿ ಇದ್ದ ಹಣದಿಂದ ಅವರ ಭಾವಚಿತ್ರವನ್ನು ಶಾಸನ ಸಭೆಯ ಮಂದಿರದಲ್ಲಿ ಇಡಬೇಕೆಂದು ವ್ಯವಸ್ಥಾಪಕರು ತೀರ್ಮಾನಿಸಿದ್ದರೆಂದು ಬರೆದದ್ದು ನನಗೆ ನೆನಪಿನಲ್ಲಿದೆ. ಆದರೆ ಹಣವು ಯಾರಲ್ಲಿದೆಯೆಂಬುದನ್ನು ಮಾತ್ರ ಬರೆದಿರಲಿಲ್ಲ. ಇತ್ತೀಚೆಗೆ ಆ ಹಣವು ಯಾರೋ ಇಬ್ಬರು ವ್ಯಕ್ತಿಗಳಲ್ಲಿ ಇದೆಯೆಂಬ ವರ್ತಮಾನವನ್ನು ತಿಳಿದೆನು. ಇದು ನ್ಯಾಯವೇ? ಇಂಥಾ ಹಣವನ್ನು ಬ್ಯಾಂಕಿನಲ್ಲಿ ಇಡುವದು ಉಚಿತ. ಆದರ ಬದಲು ಖಾಸಗೀ ವ್ಯಕ್ತಿಗಳಲ್ಲಿಟ್ಟರೆ ಕಾಲ ಹೋದ ಮೇಲೆ ಅದರ ಇರುವಿಕೆಯು ಯಾರಿಗೂ ಗೊತ್ತಾಗದಿಲ್ಲ. ಆದುದರಿಂದ ಆಯಾ ವ್ಯವಸ್ಥಾಪಕರು ಸಾರ್ವಜನಿಕ ತಿಳುವಳಿಕೆಯ ಬಗ್ಗೆ ಸ್ಥಳೀಯ ಪತ್ರಿಕೆಯ ಮೂಲಕ ತಿಳಿಸಬೇಕೆಂಬುದೇ ಈ ನನ್ನ ಲೇಖನದ ಮುಖ್ಯ ಉದ್ದೇಶ. ಕೆಲವು ತಿಂಗಳ ಹಿಂದೆ ಟ್ರಾನ್ಸ್‌ಪೋರ್ಟ್ ಮಂತ್ರಿ ಶ್ರೀ ಕೆ. ಸಂತಾನಂರವರು ಬಂದಿದ್ದಾಗ ಅವರಿಗೂ ಒಂದು ಸತ್ಕಾರಕೂಟವನ್ನು ಕೊಟ್ಟದ್ದು ನೆನಪಿನಲ್ಲಿದೆ. ಆದರೆ ಅದರ ಲೆಕ್ಕಾಚಾರವನ್ನು ಯಾರಿಗೂ ಪತ್ರಿಕೆಯ ಮೂಲಕ ತಿಳಿಸಿದಂತೆ ಕಂಡುಬರಲಿಲ್ಲ. ಬಹುಶಃ ವ್ಯವಸ್ಥಾಪಕರು ತಾವು ಹಣ್ಣಿ ಪ್ರಮವೇ ಕೆಟ್ಟಿದೆಂದು ತಿಳಿದುಕೊಂಡು ಲೆಕ್ಕಾಚಾರವನ್ನು ಕೊಡುವದು ಅವಶ್ಯವಿಲ್ಲವೆಂದು ತಿಳಿದುಕೊಂಡಿದ್ದಾರೋ ಎಂದು ಗೊತ್ತಾಗುವದಿಲ್ಲ. ಇದು ಸಮಾಜ ನೀತಿಗೆ ಸಮಂಜಸವಲ್ಲ. ಇನ್ನು ಮುಂದಕ್ಕಾದರೂ ವ್ಯವಸ್ಥಾಪಕರು ಈ ವಿಷಯಗಳನ್ನು ಸಾರ್ವಜನಿಕರು ಕೇಳದಿದ್ದರೂ ನೈತಿಕ ಧರ್ಮವೆಂದು ತಿಳಿದು ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ಅಪೇಕ್ಷಿಸುತ್ತೇನೆ. ಇಲ್ಲವಾದರೆ ಇಂಥಾ ಚಂದಾ ಪಟ್ಟಿಗಳಿಗೆ ಚಂದಾ ಕೊಡುವದನ್ನು ಸಾರ್ವಜನಿಕರು ತಿರಸ್ಕರಿಸಬೇಕೆಂಬ ಸೂಚನೆಯನ್ನು ಕೊಡಲು ಅಪೇಕ್ಷಿಸುತ್ತೇನೆ.

'ಸಾರ್ವಜನಿಕ ಚಂದಾದಾರ'

ಕೊಡಗಿನ ಹರಿಜನರು

ಕೊಡಗಿನಲ್ಲಿ ಹರಿಜನರ ಸಂಖ್ಯೆಯು ೨೭ ಸಾವಿರವಿದೆ. ಈ ಜನಾಂಗಕ್ಕೆ ಕೊಡಗು ಸರಕಾರವು ವಿದ್ಯೆ ಕೊಡುವ ಏರ್ಪಾಡು ಮಾಡಿ ಹಲವು ವರ್ಷಗಳಾಗಿವೆ. ಇದಕ್ಕಾಗಿ ಸರಕಾರವು ಎಷ್ಟೋ ಹಣ ಖರ್ಚು ಮಾಡಿದೆ. ಆದರೂ ಸಾವಿರಕ್ಕೊಬ್ಬ ವಿದ್ಯಾವಂತನಿಲ್ಲ. ಸರಕಾರಿ ನೌಕರಿಯಲ್ಲಿಲ್ಲ. ಇದಕ್ಕೆ ಕಾರಣವೇನೆಂದು ಸರಕಾರವಾಗಲೀ, ದೇಶದ ಜನತೆಯಾಗಲೀ ಪರಿಗಣಿಸಿದೆಯೇ?

ಇವರ ಕಾರಣವನ್ನು ಹೇಳುವದಾದರೆ ಜನಾಂಗದ ಕಡು ಬಡತನ, ಅಜ್ಞಾನ ಮತ್ತು ಪರಜನತಾ ಸೇವೆ ಇವೇ ಮೂಲ ಕಾರಣಗಳಾಗಿವೆ. ಉತ್ತರ ಕೊಡಗಿನ ಅದೆಷ್ಟೋ ಗ್ರಾಮಗಳಲ್ಲಿ ಹರಿಜನರಿಗೆ ಶರಿ ಮತ್ತು ಕಸ್ಸಿ ಜಮೀನು ಇತ್ತು. ಏನೊಂದೂ ಅರಿಯದ ಈ ಜನಾಂಗಕ್ಕೆ ದುರ್ಬೋಧನೆ ಮಾಡಿ, ಸವಿಯೂಟ ಉಣಿಸಿ, ಒಂದು ಸಾಲ ಕೊಟ್ಟು, ಅದನ್ನು ಹತ್ತು ಸಾಲಪಟ್ಟು ಹೆಚ್ಚು ಮಾಡಿದರ ಫಲವಾಗಿ ಹರಿಜನರ ಗದ್ದೆ ಹೊಲಗಳೆಲ್ಲಾ ಇತರರ ಕೈವಶವಾಯಿತು. ಈಗ ಹರಿಜನರಿಗೆ ವಾಸಕ್ಕೆ ಯೋಗ್ಯ ಸ್ಥಳವಿಲ್ಲ. ವ್ಯವಸಾಯಕ್ಕೆ ಭೂಮಿ ಇಲ್ಲ. ಮೂಕ ಪಶುಗಳಂತೆ ಜೀವಿಸಬೇಕಿದೆ.

ಈಗಿನ ಸ್ವತಂತ್ರ ಭಾರತದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಭಾರತ ಮಾತೆಯ ಸಂಪೂರ್ಣ ನಂತೆ ಪ್ರತಿಯೊಬ್ಬನಿಗೂ ಸಮಾನತೆ ಇದೆಯೆಂತೆ ಇದು ವೇದಿಕೆಯ ಮೇಲಿನ ಭಾಷಣವಾಗಿದೆ. ಈಗಿನ ಯುಗ ದರ್ಶನದಲ್ಲಿ ಹರಿಜನರೆಂದರೆ ಬರಿ ಜನರೆಂದು ಅದೆಷ್ಟೋ ಮಂದಿ ಜನರು ಪರಿಹಾಸ್ಯ ಮಾಡುತ್ತಿದ್ದಾರೆ. ಹರಿಜನರಿಗೆ ಕೊಡಗಿನಲ್ಲಿ ಯಾವ ಸುಧಾರಣೆಗಳಾಗಿವೆ? ನಮ್ಮ ನೆರೆಯ ಪ್ರಾಂತಗಳಾದ ಮೈಸೂರು ಮತ್ತು ದ. ಕನ್ನಡ ಜಿಲ್ಲೆಗಳಲ್ಲಿ ಹರಿಜನರಿಗೆ ಯಾವ್ಯಾವ ಸುಧಾರಣೆಗಳಾಗಿವೆ, ಅವರು ಯಾವ ಮಟ್ಟದಲ್ಲಿದ್ದಾರೆ ಎಂಬುದನ್ನು ಕೊಡಗು ಸರಕಾರವು ಪರಿಗಣಿಸಬೇಡವೇ? ಅಲ್ಲಿ ಪದವೀಧರರಾದ ಹರಿಜನರಿದ್ದಾರೆ, ಯಾವ್ಯಾವ ಹುದ್ದೆಗಳಲ್ಲಿದ್ದಾರೆ ಎಂಬುವದನ್ನು ದೇಶದ ಜನತೆಯಾದರೂ ಲಕ್ಷಿಸಬಾರದೇ?

ಈ ದೇಶದಲ್ಲಿ ಅನೇಕ ಮಹನೀಯರು ಹರಿಜನರನ್ನು ಬಹಳ ಉದ್ಧರಿಸಿದ್ದೇವೆ ಅವರಿಗೆ ಯಾವ ತೊಂದರೆ ಕೊಡುತ್ತಿಲ್ಲ, ಅವರಿಗೆ ಬೇಕಾದ ಅನುಕೂಲತೆಗಳನ್ನು ಕಲ್ಪಿಸಿಕೊಟ್ಟಿದ್ದೇವೆ, ಇನ್ನು ಅವರು ತ್ರಿಶಂಕು ಸ್ವರ್ಗದಲ್ಲಿ [illegible] ದೊಂದೇ ಬಾಕಿ ಎಂಬವಾಗಿ [illegible] ಣೆ ನುಡಿದಂತೆ ನುಡಿಯುತ್ತಿದ್ದಾರೆ. ಇ[illegible] ಹರಿಜನರ ಕಿವಿಗಿಂಪು ಇಲ್ಲ. ಹೊಟ್ಟೆಗೆ ಅನ್ನವಿಲ್ಲ, ಮೈಗೆ ಬಟ್ಟೆ ಇಲ್ಲ. ಇತರರ ಮೇಲೆ ಜನಸೇವೆ ಮಾಡಿ ಕಿರುಕುಳವನ್ನು ಅನುಭವಿಸಿ ಹರಿಜನರ ರಕ್ತವೆಲ್ಲಾ ಹೀರಲ್ಪಡುತ್ತಿದೆ. ಅಲ್ಲದೆ ಎಷ್ಟೋ ಗ್ರಾಮಗಳಲ್ಲಿ ಹೊಡೆತ ಬಡಿತಗಳನ್ನು ಅನುಭವಿಸುತ್ತಾ ಇದ್ದಾರೆ. ಇದನ್ನು ಕೇಳುವವರೇ ಇಲ್ಲ. ಹರಿಜನರ ಸ್ಥಿತಿಗತಿಗಳಲ್ಲಿ ಎಳ್ಳಷ್ಟೂ ಬದಲಾವಣೆ ತೋರಿಲ್ಲ.

ಬಾಯಲ್ಲಿ ಸುಧಾರಣೆಯ ಮಾತೆತ್ತುವವರೇ ಹರಿಜನರನ್ನು ಮನೆಯೊಳಗೆ ಸೇರಗೊಡಲಾರರು. [illegible] ಅಮೇಧ್ಯವನ್ನು ಭಕ್ಷಿಸುವ ನಾಯಿಯು ಮನೆಯೊಳಗೆ ಹೋಗಬಹುದು, ಎಕ್ಕಡ ಬೂಟುಗಳೂ ಸಹ ಮನೆಯೊಳಗೆ ಪ್ರವೇಶ ಪಡೆಯುತ್ತವೆ. ಹರಿಜನರಿಗೆ ಮಾತ್ರ ಪ್ರವೇಶವಿಲ್ಲ. ಹರಿಜನರು ಇವಕ್ಕಿಂಥಲೂ ಕಡೆಯೇ? ಹರಿಜನರಿಗೆ ಕೋರ್ಟು ಕಚೇರಿಗಳಲ್ಲೂ, ಸಾರ್ವಜನಿಕ ಸಭೆಗಳಲ್ಲೂ ಸ್ಥಾನಮಾನಗಳಿವೆಯೇ?

ಎಷ್ಟೋ ಗ್ರಾಮಗಳೊಳಗೆ ಹರಿಜನರು ಶುಚಿಯಾದ ಹಾಗೂ ಗಂಭೀರವಾದ ಉಡಿಗೆ ತೊಡಿಗೆಗಳನ್ನು ಹಾಕಿಕೊಂಡು ಹೋಗಬಾರದು. ಒಬ್ಬ ಹರಿಜನನ ಕಾಲು ಮುರಿದುಹೋಗಿದ್ದರೂ ಕೂಡ ಎಕ್ಕಡ ಬೂಟುಗಳನ್ನು ಹಾಕಿಕೊಳ್ಳಕೂಡದು. ಇದಕ್ಕಾಗಲೇ ದೊಣ್ಣೆ ಪೆಟ್ಟು ಬಿದ್ದೇ ಬೀಳುತ್ತೆ. ಕೇಸು ಮಾಡಲಿಕ್ಕೆ ಕಾಸು ಇಲ್ಲ, ಸಾಕ್ಷಿ ಹೇಳುವವರು ಮೊದಲೇ ಇಲ್ಲ. ಬಾಯಿ ಪ್ರಕಾರಿಗೆ ಅವಕಾಶವಿಲ್ಲ. ಇದ್ದರೂ ಸ್ಥಳೀಕ ಕೋರ್ಟುಗಳ ಅಧಿಕಾರಿಗಳು ಗಮನವೀಯುವದೂ ಇಲ್ಲ. ಹರಿಜನರಿಗೆ ಇಂಥಾ ನರಕಯಾತನೆ ಯಮಪಟ್ಟಣದಲ್ಲಾದರೂ ಇರುವದೇ?

ಹಿಂದೂದೇಶದ ಎಷ್ಟೋ ಭಾಗಗಳಲ್ಲಿ ಹರಿಜನರಿಗೆ ಮಂದಿರ ಪ್ರವೇಶ, ಹೊಟೇಲು ಪ್ರವೇಶ, ಮತ್ತು ಅಂಗಡಿ ಪ್ರವೇಶ ಕೊಟ್ಟು ಒಂದೆರಡು ವರ್ಷಗಳಾಗುತ್ತಾ ಬಂದಿವೆ. ಕೊಡಗಿನಲ್ಲಿ ಇದಕ್ಕೆ ಇನ್ನೂ ಅವಕಾಶವಿಲ್ಲ. ನಮ್ಮ ಕೊಡಗು ಸರಕಾರವು ಹರಿಜನರ ಎಡರು–ತೊಡರುಗಳನ್ನೆಲ್ಲಾ ಪರಿಹರಿಸಿ ಇನ್ನು ಮುಂದಕ್ಕಾದರೂ ಶೀಘ್ರ ಮೇಲ್ಮಟ್ಟಕ್ಕೆ ತರುವದೆಂದು ನಂಬಲಾಗಿದೆ. ಹರಿಜನರ ಬಗ್ಗೆ ಏನು ಮಾಡುತ್ತಿದೆ ಮತ್ತು ಮಾಡಿದೆಯೆಂಬುದನ್ನು ಸರ್ವರ ಅವಗಾಹನೆಗೆ ಪತ್ರಿಕೆಯಲ್ಲಿ ಪ್ರಕಟಿಸಬೇಕು.

'ಹರಿಜನ ಹಿತಕಾಂಕ್ಷಿ'

ಭತ್ತದ ಬೋನಸ್ಸು.

ಕೊಡಗಿನಿಂದ ಬೇರೆ ಪ್ರಾಂತಗಳಿಗೆ ಉಳುವರಿ ಭತ್ತವನ್ನು ಕೊಟ್ಟದಕ್ಕಾಗಿ ಇಂಡಿಯಾ ಸರಕಾರದಿಂದ ನಮ್ಮ ಸರ್ಕಾರಕ್ಕೆ ದೊರೆತ ಬೋನಸ್ಸಿನ ಸಮ್ಮಂಧವಾಗಿ ಕೆಲವು ಮಹನೀಯರು ಪತ್ರಿಕೆಯಲ್ಲಿ ಪ್ರಕಟಿಸಿರುವುದನ್ನು ನೋಡಿದನು. ಆದರೆ ಮೇಲ್ಕಂಡ ಹಣದ ಹಕ್ಕುದಾರಿಕೆಯು ಹಳ್ಳಿಗಳಲ್ಲಿ ಇದ್ದು ಭತ್ತವನ್ನು ಬೆಳೆಸುವ ರೈತನದಾಗಿರುತ್ತದೆ. ಅವನು ಬಡಕಲು ಎತ್ತುಗಳನ್ನು ಕಟ್ಟಿಕೊಂಡು ಮಳೆಗಾಳಿ, ಚಳಿಯನ್ನು ಲೆಕ್ಕಿಸದೆ ಕೆಸರಿನಲ್ಲಿ ಕಷ್ಟಪಟ್ಟು ಸಂಪಾದಿಸಿದ ಭತ್ತಕ್ಕೆ ಬಂದ ಬೋನಸ್ಸಾಗಿರತ್ತೆ. ಈ ಬೋನಸ್ಸು ಹಣವನ್ನು ಭತ್ತ ಬೆಳೆಸಿ ಮಾರಾಟಮಾಡಿದ ರೈತರಿಂದ ಲೆಕ್ಕಗಳನ್ನು ತೆಗಿಸಿ ಅವರವರ ಭತ್ತದ ಲೆಕ್ಕಕ್ಕನುಸರಿಸಿ [illegible] ವದಲ್ಲದೆ ಮುಂದಕ್ಕೂ ಈ ರೀತಿ [illegible] ಬೇಕು. ಹಾಗಾದರೆ ರೈತನು ಕಷ್ಟ ನಷ್ಟಗಳನ್ನು ಅನುಭವಿಸಿ ಬೆಳೆಸಿದ ಭತ್ತಕ್ಕೆ ಹೆಚ್ಚಿನ ಹಣ ದೊರೆದಂತಾಗು[illegible]. ಅಲ್ಲದೆ ಭತ್ತ ಬೆಳೆಸಿದ ರೈತನಿಗೂ, [illegible] ರೈತನಿಗೂ ಸಹ ಒಂದು ಇನಾಮು ಸಿಕ್ಕಿದಂತಾಗಿ ಇನ್ನು ಹೆಚ್ಚಿಗೆ ಬೆಳೆಸಲು ತಯಾರಾಗುತ್ತಾರೆ. ಆರಂಭದ ಸಾಧಾರಣ ಖರ್ಚು ಅಂದರೆ ಬರೇ ಒಂದು ಜೋಡಿ ಎತ್ತುಗಳಿಗೆ ೨೦೦ ರೂಪಾಯಿ ಬೆಲೆ ಕೊಟ್ಟು ಕೊಂಡುಕೊಂಡು ನೂರು ಬಟ್ಟಿ

ಓದುಗರ ಓಲೆಗಳು.

ಯನ್ನು ಗಂಡ, ಹೆಂಡತಿ, ಕಷ್ಟಪಟ್ಟು ನೆಟ್ಟಲ್ಲಿ ಬರೀ ಒಂದುಗಾಡಿ ಭತ್ತವನ್ನು ಖರ್ಚು ಕಳೆದು ಪೂರಬಹುದು. ಇದರಿಂದ ಬಾಡಿಗೆ ಕಳೆದು ೧೫೦ ರೂಪಾಯಿ ಸಿಕ್ಕಿದಂತಾಗುತ್ತೆ. ಇದರಿಂದ ರೈತನು ತನ್ನ ಬೇರೆ ಖರ್ಚನ್ನು ಕಳೆದು ಜೀವಿಸುವದು ಕಷ್ಟ. ಆದ್ದರಿಂದ ಬಡ ರೈತರಿಗೆ ನಾಲ್ಕು ಕಾಸು ಹೆಚ್ಚು ದೊರೆತರೆ ಅಷ್ಟು ಸಹಾಯವಾದೀತು.

'ರೈತ'

ಟಕಾವಿ ಹಣ.

ವರ್ಷಕ್ಕೊಮ್ಮೆ ಕೊಡಗು ಡಿ. ಎಂ. ಸಾಹೇಬರವರ ಜಮಾಬಂದಿ. ಅಂದು ರೈತರುಗಳು (ಸರಕಾರಕ್ಕೆ) ತಮ್ಮ ತಮ್ಮ ಕಷ್ಟಸುಖಗಳನ್ನು ತಿಳಿಸಿ ಸಹಾಯವನ್ನು ಹೊಂದಿಕೊಳ್ಳುವ ದಿನ. ಅಂದು ನನ್ನ ಮಿತ್ರರೊಬ್ಬರು ನನ್ನನ್ನು ಕಂಡು ನನಗೆ ಗದ್ದೆ ಹೂಡಲು ಎತ್ತುಗಳಿಲ್ಲ ಆದ್ದರಿಂದ ಟಕಾವಿ ಹಣಕ್ಕೆ ಅರ್ಜಿಯನ್ನು ಬರೆದುಕೊಡು ಎಂದು ಹೇಳಿದನು. ಆ ಕೂಡಲೆ ಒಂದು ಅರ್ಜಿಯನ್ನು ಬರೆದು ಅತನ ಕೈಗ ಕೊಟ್ಟೆನು. ಸಮಯಕ್ಕೆ ಸರಿಯಾಗಿ ಡಿ. ಯಂ. ಸಾಹೇಬರವರು ಬಂದು ತನ್ನ ಪೀಠವನ್ನು ಅಲಂಕರಿಸಿದರು. ರೈತರುಗಳು ಎಲ್ಲರೂ ತಮ್ಮ ಅರಿಕೆಗಳನ್ನು ಒಪ್ಪಿಸಿದಂತೆಯೇ ನನ್ನ ಮಿತ್ರನು ಈ ಅರ್ಜಿಯನ್ನು ಕೊಟ್ಟು ಬಂದನು. ಕೆಲವು ದಿನಗಳಲ್ಲಿಯೇ ಆ ಅರ್ಜಿಯು ನಾಡುಕಛೇರಿಗೆ ಒಂದು ತನಿಖೆಯಾಗಿ ಕೆಲವು ಮಹನೀಯರಿಂದ ಪಾಸ್ಪೋರ್ಟು (?) ವನ್ನು ಹೊಂದಿಕೊಂಡು ಮರಳಿ ಹೋಗಿ ಗುಪ್ತವಾಯಿತು. ಕಲವು ದಿನಗಳಲ್ಲಿ ನನ್ನ ಮಿತ್ರನು ಶ್ಯಾನುಭೋಗರ ಸಮೀಪಕ್ಕೆ ಹೋಗಿ ವಿಚಾರಿಸಲು ಆ ಶ್ಯಾನುಭೋಗರು ನನ್ನ ಮಿತ್ರನ ತಲೆಗೂದಲಿನಿಂದ ಕಾಲಿನ ವರೆಗೂ ನೋಡಿ, 'ಏನೈಯ್ಯ ಟಕಾವಿ ಹಣಕ್ಕೆ ಬರುವವರು ಹೀಗೋ ಬರುವದು' ಎಂದರು. ನನ್ನ ಮಿತ್ರನು ದುಃಖದಿಂದ ವಾಪಾಸು ಬಂದನು. ಜುಲೈ ತಿಂಗಳಲ್ಲಿ ಡಿ. ಯಂ. ಸಾಹೇಬರಿಂದ ಅರ್ಜಿಯನ್ನು ತಿರಸ್ಕರಿಸಲಾಗಿದೆ ಎಂದು ನೋಟೀಸು ಬಂದಿತು. ಅದನ್ನು ನೋಡಿದ ಕೂಡಲೇ ನನ್ನ ಮಿತ್ರನಿಗೆ ಆಕಾಶವೇ ಕಳಚಿ ಬಿದ್ದಂತಾಯಿತು. ನೆರೆಕರೆಯವರು ನಾಟಿ ಕೆಲಸಕ್ಕೆ ಸುರುಮಾಡಿರುವರು. ಈಗ ಈ ರೀತಿಯಲ್ಲಿ ಬಂದರೆ ನನ್ನ ಗತಿ ಏನಾಗಬೇಕೆಂದು ಕಣ್ಣೀರು ಮಿಡಿದುಕೊಂಡು ಮನೆಗೆ ಹೋದನು. 'ಸರಕಾರವೇ ಹೆಚ್ಚು ಬೆಳೆಯಿರಿ' ಎನ್ನುತ್ತಿದೆ. ಈ ರೀತಿಯ ಸಹಾಯವು ಸರಕಾರವು ಮಾಡಿದ್ದೇ ಆದರೆ ಬಡ ರೈತರು ಬೆಳೆಯುವದೇನನ್ನು? ಸಮಯಕ್ಕೆ ಸರಿಯಾಗಿ ಸಿಕ್ಕದ ಹಣದಿಂದ ಯಾವ ಪ್ರಯೋಜನವುಂಟಾದೀತು. ಬಡವನಾದವನಿಗೆ ದೈವಬಲ ಬೇಕು, ಜನಸಹಾಯವೂ, ದೈವಬಲವೂ ಇಲ್ಲದಿದ್ದರೆ 'ಸೂತಪುತ್ರನೆಂದು ಕರ್ಣನನ್ನು ಪ್ರಪಂಚವೇ ದೂಡಿದಂತಾಗುತ್ತದೆ. ಇದರಿಂದಲೇ ಸರ್ವಜ್ಞರು ಹೇಳಿದುದಲ್ಲವೇ.

ಉಳ್ಳವನು ನುಡಿದಿಹರೆ । ಒಳ್ಳಿತೆಂದೆನ್ನುವರು ।
ಇಲ್ಲದಾಬಡವ ನುಡಿದಿಹರೇ ಬಾಯೊಳಗೆ ।
ಕಲ್ಲುಕಡಿದಂತೆ ಸರ್ವಜ್ಞ ॥
ಬಡವನಿದ್ದುದನಾಡೇ । ಕಡೆಗೆ ಪೋಗೆಂಬುವರು ।
ಒಡವೆಯುಳ್ಳವರು ನುಡಿಗಾಡನುಡಿದರೂ ।
ಪೊಡವಿಯೊಳಗಧಿಕ । ಸರ್ವಜ್ಞ ॥
ಮಡಿಯನುಟ್ಟವರನ್ನು । ನುಡಿಸುವರು ವಿನಯದಲಿ ।
ಒಡಪುಟ್ಟಿದವರು ಅರಿವೆಯನು ಉಟ್ಟಿಹರೆ ।
ನುಡಿಸ ನಾಚುವರು ಸರ್ವಜ್ಞ ॥

N. M. M.

ಜನತೆಯ ಪ್ರಜಾಪ್ರಭುತ್ವ.

ಕಳೆದು ಹೋದ ಫ್ಯಾಸಿಸ್ಟ್ ವಿರೋಧಿ ಯುದ್ಧದಲ್ಲಿ ಪ್ರಾಮುಖ್ಯವಾದ ಪಾತ್ರ ವಹಿಸಿದ ಕಾರಣ. ಸಮತಾವಾದ ರಾಷ್ಟ್ರವಾದ ಸೋವಿಯಟ್ ಯೂನಿಯನ್ನಿನ ಶಕ್ತಿಯು ಅಧಿಕವಾಗಿರುತ್ತದೆ. ಪೂರ್ವ ಯುರೋಪಿನ ಹಲವು ರಾಷ್ಟ್ರಗಳು ಬಂಡವಾಳಶಾಹಿ ಆಡಳಿತದಿಂದ ಹೊರಬಂದು ಸಾಮ್ಯವಾದಿ ತಳಹದಿಯ ಮೇಲೆ ತಮ್ಮ ಆಡಳಿತವನ್ನು ರೂಪಿಸತೊಡಗಿವೆ. ಚೀನಿ ಜನತೆಯು ವಿಮೋಚನಾಪಡೆಯು ಕಮ್ಯೂನಿಸ್ಟ್ ಪಾರ್ಟಿಯ ನೇತೃತ್ವದಲ್ಲಿ, ವಿಜಯವನ್ನು ಪಡೆಯುತ್ತ ವಿಸ್ತಾರದಲ್ಲಿ ಅಮೇರಿಕನ್ ಏಜಂಟನಾದ ಚಿಯಾಂಗನ ಜನವಿರೋಧಿ ಸರಕಾರವು ಈ ವರ್ಷಾಂತ್ಯದಲ್ಲಿ ಇಡೀ ಚೀನಾವನ್ನು ಕಳೆದುಕೊಳ್ಳುವ ಚಿಹ್ನೆಗಳು ಕಂಡುಬರುತ್ತದೆ. ಪ್ರಪಂಚದ ಎಲ್ಲಾ ರಾಷ್ಟ್ರಗಳಲ್ಲಿ ಕೆಲಸಗಾರರ ಸಂಘಟನೆಗಳು ಬಳೆಯುತ್ತಿವೆ, ಮುಂದಿನ ಚುನಾವಣೆಯಲ್ಲಿ ಫ್ರಾನ್ಸ್ ಮತ್ತು ಇಟಲಿ ದೇಶಗಳಲ್ಲಿ, 'ಕಮ್ಯೂನಿಸ್ಟ್' ಪಕ್ಷಗಳು ಬಹುಮತ ಪಕ್ಷಗಳಾಗಬಹುದು. ಬರ್ಮ, ಮಲಯ ಮತ್ತು ವಿಯಟ್‌ನಾಮ್ ರಾಷ್ಟ್ರಗಳಲ್ಲಿ ಬಂಧವಿಮೋಚನಾ ಸಂಗ್ರಾಮಗಳು ಯಶಸ್ವಿಯಾಗುತ್ತಿವೆ.

ಇದರಿಂದ ತಿಳಿಯುವುದೇನೆಂದರೆ, ಜಗತ್ತಿನ ಸಮತಾವಾದ ಶಕ್ತಿಯು ಬೆಳೆದಂತೆ, ಜಗತ್ತಿನ ಬಂಡವಾಳಶಾಹಿಯ ಶಕ್ತಿಯು ಕಡಮೆಯಾಗುತ್ತಿದೆ. ಸಮತಾವಾದಿ ಹಾಗು ಬಂಡವಾಳಶಾಹಿ ಶಿಬಿರಗಳ ವೈಷಮ್ಯಗಳು ಕಾಲವಿರಿದಂತೆ ಭಯಾನಕವಾಗಿ ತೋರುತ್ತಿವೆ. ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಆರ್ಥಿಕ ಮುಗ್ಗಟ್ಟು ಬರುವ ಸೂಚನೆಗಳು ಕಾಣಬರುತ್ತಿವೆ ಕೆಲಸಗಾರರ ಆಂದೋಲನಗಳು ಹೆಚ್ಚುತ್ತಾ, ಬಂಡವಾಳಶಾಹಿತ್ವ ಕುಸಿದುಬೀಳುವ ಸಂಭವವಿದೆ. ಅದನ್ನು ತಪ್ಪಿಸಲು ಬಂಡವಾಳಶಾಹಿಗಳು, ಸಮತಾವಾದಿ ಶಕ್ತಿಗಳ ಮೇಲೆ, ಹೆಚ್ಚಾಗಿ ಸಮತಾವಾದಿ ಶಿಬಿರದ ಮುಂದಾಳಾದ ಸೋವಿಯಟ್ ಯೂನಿಯನ್ನಿನ ವಿರೋಧ, ಯುದ್ಧ ತಯಾರಿಯನ್ನು ಭರದಿಂದ ನಡೆಸುತ್ತಿದ್ದಾರೆ. ಅಟ್ಲಾಂಟಿಕ್ ಒಪ್ಪಂದ ಇದಕ್ಕೊಂದು ನಿದರ್ಶನ. ಫೆಸಿಫಿಕ್ ಒಪ್ಪಂದದ ಮಾತುಕತೆಗಳು ತೊಡಗಿವೆ; ಪ್ರತಿ ರಾಷ್ಟ್ರಗಳಲ್ಲಿ ಬಂಡವಾಳಶಾಹಿಗೂ ಮತ್ತು ಜನತೆಯ ಪ್ರಜಾಪ್ರಭುತ್ವ ಶಕ್ತಿಗಳಿಗೂ ಘರ್ಷಣೆಗಳು ನಡೆಯುತ್ತಿವೆ. ನಮ್ಮ ದೇಶದಲ್ಲಿ ಸಹ ಇದು ಕಂಡುಬರುತ್ತದೆ. ಕೆಲಸಗಾರರಿಗೂ ಬಂಡವಳದಾರರಿಗೂ ಘರ್ಷಣೆ ನಡೆದಿದೆ. ದೇಶದ ಬಂಡವಾಳಶಾಹಿಯು ಅದರ ಆಡಳಿತವನ್ನು ಭದ್ರಪಡಿಸಲು ಎಲ್ಲಾ ತರದ ಹಂಚಿಕೆಗಳನ್ನು ತಯಾರಿಸುತ್ತಿದೆ ಜನತೆಯ ಒಂದೇ ಒಂದು ಪ್ರಶ್ನೆಯನ್ನು ಬಗೆಹರಿಸಲು ಸರಕಾರಕ್ಕೆ ಸಾಧ್ಯವಾಗದಿದ್ದರೆ ಅದು ಈ ಬಂಡವಾಳದಾರರ ಸ್ವಾರ್ಥದಿಂದಾಗಿದೆ. ಆದ್ದರಿಂದ ಕೂಲಿಕಾರರ ಸಂಘಟನೆಗಳು ಬೆಳೆಯಬೇಕು. ಉಳುವವನಿಗೆ ಹೊಲ, ಉದ್ಯಮಗಳ ರಾಷ್ಟ್ರೀಕರಣ, ಜೀವನ ವೇತನ, ನಾಗರೀಕ ಸ್ವಾತಂತ್ರ್ಯ, ಜನತೆಗೆ ಅಧಿಕಾರ ಎಂಬ ವೀರ ಘೋಷಣೆಗಳನ್ನು ಕೂಲಿಕಾರರು ಮುಂದಿಟ್ಟು ಅವರನ್ನು ಸಂಘಟಿಸಿ, ಸಾಮ್ಯವಾದಿ ತಳಹದಿಯ ಮೇಲೆ, ಜನತೆಯ ಪ್ರಜಾಪ್ರಭುತ್ವವನ್ನು ಸ್ಥಾಪಿಸಬೇಕು.

'ರಂ. ವ...'

ಜಿಲ್ಲಾ ಬೋರ್ಡಿನ ಪರಿಸ್ಥಿತಿ.

ಬೋರ್ಡು ನಮ್ಮ ದೇಶದ ಒಂದು ಮುಖ್ಯವಾದ ಸಂಸ್ಥೆ. ರೈತರ ಪ್ರತಿನಿಧಿಗಳಿಂದ ರೈತರ ಪ್ರಯೋಜನಕ್ಕಾಗಿ ನಡೆಯಿಸಲ್ಪಡುವ ಈ ಸಂಸ್ಥೆಗೆ ಆರೋಪಣೆಗಳನ್ನು ಹೊರಿಸುವದು ಸಾಧಾರಣವಾಗಿದೆ. ಇವರಲ್ಲಿ ಸ್ಥಿತಿಗತಿ ತಿಳಿದೂ ಆರೋಪಿಸುವ ಸ್ನೇಹಿತರಿಗೆ ಏನೂ ಹೇಳತಕ್ಕದಿಲ್ಲ. ಹೇಗಿದ್ದರೂ ಅವರು ಮಾಡಿಯೇ ಮಾಡುವರು. ತಿಳಿಯದೆ ಮಾಡುವ ಬಂಧುಗಳಿಗೆ ಈ ಸಂಸ್ಥೆಯ ನಿಜಸ್ಥಿತಿಗಳನ್ನು ತಿಳಿಸಬೇಕಾದದ್ದು ಅವರ ... ನಾಗರೀಕತೆಯು ಈ ಕಾಲದಲ್ಲಿ ಹೊಸ ದೇಶಕ್ಕೂ ಅದರಲ್ಲೂ ನಮ್ಮ ನಾಡಿಗೆ ಹೆಚ್ಚಾಗಿ ರಸ್ತೆಗಳೂ, ಶಾಲೆಗಳೂ, ಆಸ್ಪತ್ರೆಗಳೂ, ಬಾವಿಗಳೂ ದೋಣಿಗಳೂ ಇನ್ನಿತರ ಅನೇಕ ಸಲಕರಣೆಗಳೂ ಬೇಕಾದದ್ದು ಅವಶ್ಯ. ಇದಕ್ಕೆ ಹೆಚ್ಚಾಗಿ ಬೋರ್ಡಿನಲ್ಲಿ ಹಣವೂ ಹೆಚ್ಚು ವಾಗಬೇಕಿದೆ. ಆದರೆ ಬೋರ್ಡಿನ ಉತ್ಪತ್ತಿಯು ಕಡಿಮೆ. ಕಳೆದ ಯುದ್ಧದ ನಂತರ ಉಂಟಾದ ಸಾಮಗ್ರಿಗಳ ಬೆಲೆಯುಂತ್ರಣದಿಂದ ಬೋರ್ಡಿಗೆ ಬರುವ ಟೋಲು ಗೇಟುಗಳ ಸಂತೆ ಮಾರ್ಕೆಟುಗಳ ಇನ್ನಿತರ ಉತ್ಪತ್ತಿಯು ಅರ್ಧಕ್ಕೆ ಇಳಿದಿದೆ. ಪ್ರಾಂತಿಕ ಸರಕಾರವನ್ನು ಒತ್ತಾಯಪಡಿಸಿ ಅವರು ಕೊಡುತ್ತಿರುವ ಅಲ್ಪ ಸ್ವಲ್ಪ ಹೆಚ್ಚಿನ ಮಂಜೂರಿಯಿಂದ ಸಂಭಾಳಿಸುವ ಭಾರವು ಬೋರ್ಡಿನ ಮೆಂಬರುಗಳ ಪಾಲಿಗೆ ಬಿದ್ದಿದೆ. ಈ ಬೋರ್ಡಿನ ಜವಾಬ್ದಾರಿಯನ್ನು ಈಗಿನ ಮೆಂಬರುಗಳು 1945ನೇ ಇಸವಿಯಲ್ಲಿ ಹೊತ್ತಾಗ ವಿದ್ಯಾ ಇಲಾಖೆಗೆ ಮಾಡುತ್ತಿದ್ದ ಖರ್ಚನ್ನೂ ನಂತರ ಆದುದನ್ನು ಈ ಕೆಳಗಿನ ಅಂಕೆ ಸಂಖ್ಯೆಗಳಿಂದ ತಿಳಿಯಬಹುದು.

	ಶಾಲೆಗಳ ಸಂಖ್ಯೆ	ಉಪಾಧ್ಯಾಯರು	ವಿದ್ಯಾದ ಖರ್ಚು		
೧೯೪೦ರಲ್ಲಿ	೮೭	೨೧೯	೯೨೦೦೦	೦	೦
೧೯೪೧ರಲ್ಲಿ	೮೭	೨೩೪	೧೦೬೦೦೦	೦	೦
೧೯೪೨ರಲ್ಲಿ	೯೧	೨೫೩	೧೨೧೦೦೦	೦	೦
೧೯೪೩ರಲ್ಲಿ	೯೧	೨೫೪	೧೫೦೦೦೦	೦	೦
೧೯೪೪ರಲ್ಲಿ	೯೪	೨೯೯	೨೬೦೦೦೦	೦	೦
೧೯೪೫ರಲ್ಲಿ	೯೪	೩೨೪	೩೦೫೦೦೦	೦	೦

ಇದಲ್ಲದೆ ಅನೇಕ ಹೊಸ ರಸ್ತೆಗಳೂ ಹಲ ಕೆಲವು ಹೊಸ ಆಸ್ಪತ್ರೆಗಳೂ ತೆರೆಯಲ್ಪಟ್ಟಿವೆ. ಗ್ರಾಮರಸ್ತೆಗಳಿಗೆ ಮೊದಲಿಗಿಂತ ಖರ್ಚು ಇಮ್ಮಡಿಯಾಗಿದೆ. ಕೇವಲ 12 ರೂಪಾಯಿ ವೇತನದಲ್ಲಿದ್ದ ಉಪಾಧ್ಯಾಯರ ವೇತನವನ್ನು 20ಕ್ಕೆ ಏರಿಸಲಾಯಿತು. ಅದರಂತೆ ಗ್ರಾಂಟು ಶಾಲೆಗಳ ಗ್ರಾಂಟನ್ನು ಬರೀ ೧೦ ರೂಪಾಯಿ ಇದ್ದದ್ದು ೨೦ ರೂಪಾಯಿಗೆ ಏರಿತು. ಇದು ಕೂಡ ಈಗಿನ ಕಾಲಕ್ಕೆ ಸಾಲದೆಂದು ಬೋರ್ಡು ಸದಾ ಸರಕಾರವನ್ನು ಒತ್ತಾಯಪಡಿಸಿದ್ದರಿಂದಲೂ ರೈತರೂ ಕೂಡ ತಮ್ಮ ಸೆಸ್ಸಿನಲ್ಲಿ ಆಣೆ ಹೆಚ್ಚಿಸಿಕೊಂಡದ್ದರಿಂದಲೂ ಸ್ಥಳೀಯ ಸರಕಾರವೂ ಅದು ಕೊಡುತ್ತಿದ್ದ ವಿದ್ಯಾ ಗ್ರಾಂಟು ಮತ್ತು ಇನ್ನಿತರ ಗ್ರಾಂಟುಗಳನ್ನು ಆಗಾಗ್ಯೆ ಹೆಚ್ಚಿಸುತ್ತಾ ಬಂದಿರುವದರಿಂದಲೂ ಡಿಸ್ಟ್ರಿಕ್ಟ್ ಬೋರ್ಡು ನೌಕರಿಗೆ ಈಗ ಸಿಕ್ಕುವ ವೇತನದ ಜೊತೆಗೆ ಳಿಗೆ ೩೫-೪೫ ರೂ. ಗಳ ತುಟ್ಟಿ ಬತ್ಯೆ ಕೊಡಲು ಅನುಕೂಲವಾಗಿದೆ. ರೈತರಿಗೂ, ನೌಕರರಿಗೂ ಇನ್ನೂ ಹೆಚ್ಚು ಅನುಕೂಲತೆಗಳನ್ನು ಒದಗಿಸಬೇಕಾಗಿರುವದರಿಂದ ಪ್ರಾಂತೀಕ ಸರಕಾರವು ಬೋರ್ಡಿಗೆ ಹೆಚ್ಚು ಬೆಂಬಲವನ್ನು ಕೊಡಲೇಬೇಕಾಗಿದೆ. ಬೋರ್ಡು ಬೇಡಿ ಎಂದು ಸರಕಾರವು ಭಾವಿಸಿದರೆ ಈ ಸ್ಥಳೀಯ ಸಂಸ್ಥೆಯು ಹೆಚ್ಚೆಚ್ಚು ರೈತಾಪಿ ಜನರ ಅಭಿವೃದ್ಧಿಯನ್ನು ಹೆಚ್ಚಿಸಲಾರದು. ಇದಕ್ಕಾಗಿ ರೈತರೂ ಇವರ ಪ್ರತಿನಿಧಿಗಳೂ ಹೋರಾಡಬೇಕಿದೆ. ಇವರ ಬದಲು ಇಷ್ಟು ಕಷ್ಟದಿಂದ ನಡೆಯಿಸುವದಾದರೆ ಈ ಬೋರ್ಡನ್ನು ಏತಕ್ಕೆ ಸರಕಾರಕ್ಕೆ ವಹಿಸಿಕೊಟ್ಟು ಎಲ್ಲವನ್ನೂ ನೀವೇ ನಡೆಯಿಸಿ ಎಂದು ಚೀಫ್ ಕಮಿಷನರರಿಗೆ ರಜಾಗತರಾಗಬಾರದು! ಏತಕ್ಕೆ ವಿದ್ಯಾ ಇಲಾಖೆಯನ್ನು ಸರಕಾರಕ್ಕೆ ಬಿಟ್ಟುಕೊಟ್ಟು ಹೆಸರಿಗೆ ಬೋರ್ಡನ್ನು ಇಟ್ಟುಕೊಳ್ಳಬಾರದೆಂದು ಎನ್ನುವವರೂ ಇದ್ದಾರೆ ಸ್ಥಳೀಯ ಸಂಸ್ಥೆಗಳನ್ನು ಸ್ವಾಧೀನಪಡಿಸುತ್ತಾ ಸರಕಾರವನ್ನೇ ಸ್ವಾಧೀನಪಡಿಸಿದ ಕಾಂಗ್ರೆಸು ಈ ಭರತಖಂಡವನ್ನೇ ಆಳುತ್ತಿದ್ದು ಇನ್ನು ಮುಂದಿನ ರಾಜ್ಯಭಾರವು ಜನರ ಕೈಗೆ ಬರಬೇಕೆಂದಿರುವಾಗ ನಮ್ಮ ಈ ಪುಟ್ಟ ಬೋರ್ಡನ್ನು ನಡೆಯಿಸಲಾರೆವೆಂದು ರೈತರಿಗೆ ಜವಾಬ್ದಾರರಾಗಿಲ್ಲದ ಚೀಫ್ ಕಮಿಷನರರವರ ಈಗಿನ ಸರಕಾರಕ್ಕೆ ಬಿಟ್ಟುಕೊಡುವದರ ಬದಲು ಸರಕಾರವನ್ನೇ ಪ್ರತಿನಿಧಿ ಸರಕಾರವನ್ನಾಗಿ ಮಾಡಲು ಸೊಂಟಕಟ್ಟಿ ಪ್ರಯತ್ನಿಸಬಾರದೇ? ಸರಕಾರವಾದರೂ ಹಣವೆಚ್ಚ ಮಾಡದೆ ಬೋರ್ಡಿನ ಕೆಲಸಗಳನ್ನು ನಡೆಯಿಸುವದಾದರೂ ಹೇಗೆ? ಅದೇ ಹಣವನ್ನು ಸರಕಾರವು ಏತಕ್ಕಾಗಿ ಬೋರ್ಡಿಗೆ ಕೊಡಬಾರದು ಯೆಂಬ ಪ್ರಶ್ನೆಗಳನ್ನು ಸರಕಾರವೂ, ದೇಶೀಯರೂ ಕೇಳಿಕೊಳ್ಳಬೇಕಾದದ್ದು ಅವಶ್ಯ. ಸರಕಾರವೂ ಕೂಡ ಬೋರ್ಡಿಗೆ ಹೆಚ್ಚಾಗಿ ದ್ರವ್ಯ ಸಹಾಯವನ್ನು ಒದಗಿಸಿಕೊಡಬೇಕಾದದ್ದು ಅದರ ಕರ್ತವ್ಯ. ಕಳೆದ ೪ ವರ್ಷಗಳಿಂದ ಬೋರ್ಡು ಬರೀ ಸರಕಾರವನ್ನೇ ನಂಬಿರದೆ ಅದರ ಉತ್ಪತ್ತಿಯನ್ನು ಹೆಚ್ಚಿಸಲು ಹೆಚ್ಚಿನ ಸೆಸ್ಸನ್ನು ಹಾಕುವದರ ಮೂಲಕವೂ ಹೊಟೇಲು ಫೀಜನ್ನು ಹೆಚ್ಚಿಸುವವದರ ಮೂಲಕವೂ ಮೀನು ಮಾರಾಟದ ಲೈಸನ್ಸ್ ಫೀಜು ಇವೇ ಮೊದಲಾದ ಅನೇಕ ತೆರಿಗೆಗಳನ್ನು ಹಾಕಿ ಉತ್ಪತ್ತಿಯನ್ನು ಹೆಚ್ಚಿಸಲು ಕ್ರಮ ತೆಗೆದುಕೊಂಡಿರುವಾಗ ಸರಕಾರವೂ ತಕ್ಕ ಧನ ಸಹಾಯ ಒದಗಿಸಿಕೊಟ್ಟು ಬೋರ್ಡಿನ ಬಡ ನೌಕರರ ಮತ್ತು ಗ್ರಾಮವಾಸಿಗಳ ಕಷ್ಟವನ್ನು ನಿವಾರಿಸುವರಾಗಿ ಕೋರಲಾಗಿದೆ.

'ಬೋರ್ಡು ಮೆಂಬರು'

ಬತ್ತ ಬೆಳೆಸಲು ಅಡ್ಡಬರುವ ಸಮಸ್ಯೆಗಳು.

ಲೇ:— ಶ್ರೀ ಬಿ. ಎಸ್. ಎಂ. ಮಯೂರನಾಥ.

...ರಂ ಮತ್ತು ಇತರ ಸಂಸ್ಥೆಗಳು ...ನ್ನು ನೌಕರರ ವೇತನವನ್ನು ಬ...ಟ್ಟಿಗೆ ಹೆಚ್ಚಿಸಿದ್ದಾರೆ. ವ್ಯಾಪಾರ...ಶೇಕಡ ಐವತ್ತರ ಮೇಲೆ ಲಾಭಪ...ಯುತ್ತಿದ್ದಾರೆ. ಬಡ ರೈತನು ಈಗ ಎ...ತ್ತಿ ಕೊಳ್ಳದಿದ್ದರೆ ಅವನು ಉಳಿಯುವ...ವವಿಲ್ಲ. ಈಗ ಎಲ್ಲರೂ ಕೂಗಿ ಹೇ...ವ 'ಹೆಚ್ಚು ಬೆಳೆಯಿರಿ' ಎಂಬ ನುಡಿಯು ... ಎರಡು ಅರ್ಥ ಅಡಗಿದೆ. ಹೆಚ್ಚು ಬೆಳೆದು ರೈತನು ತನ್ನ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳುವದು ಹಾಗೂ ನೆ...ವಂಗಾಗಿ ಕಷ್ಟಪಡುವ ಕೃಷಿಕರಲ್ಲದ ಇತರ ಕೆಲಸಗಾರರ ಹೊಟ್ಟೆಗೆ ಕೂಳಿಕ್ಕುವ...ದು ಮತ್ತು ಈ ದೃಷ್ಟಿಯಿಂದ ಇಡೀ ಭ...ತ ಖಂಡದ ಎಲ್ಲಾ ಅವಶ್ಯಕತೆಗಳನ್ನು ...ಪೂರೈಸಿಕೊಳ್ಳುವದೆಂದರ್ಥವಾಗುತ್ತದೆ. ...ಹಗು ಉಳುವರಿ ಪ್ರಾರಂಭವಾದರೂ ರೈತನ ಸ್ಥಿತಿ ಸುಧಾರಿಸಿಲ್ಲ.

ಸರಕಾರದ ಅತಿ ಕೆಳ-ಮಟ್ಟದ ನೌಕರನ ಉತ್ಪತ್ತಿ ಈಗ ವರ್ಷಕ್ಕೆ ರೂ. ೭೨೦ ರ ಮೇಲಿದೆ. ಗಾಡಿ ಒಂದರ ರೂಪಾಯಿ ೧೫೦ ಧಾರಣೆ ಇದ್ದರೆ ಒಬ್ಬ ರೈತನಿಗೆ ನೂರು ಬಟ್ಟೆ ಭೂಮಿ ಇದ್ದರೆ ಅವನು ೫ ಗಾಡಿ ಬತ್ತ ಬೆಳೆಸಿದರೆ ಅವನ ಉತ್ಪತ್ತಿಯು ರೂ. ೭೫೦ ಆಗುವುದು. ಆದರೆ ನೂರು ಬಟ್ಟೆ ಭೂಮಿಯಲ್ಲಿ ಐದುಗಾಡಿ ಬೆಳೆಯುವದು ಅಸಂಭವ. ಅಲ್ಲದೆ ಬತ್ತ ಬೆಳೆಸಲು ತಗಲುವ ಇತರ ಖರ್ಚು ಬಹಳ. ಆದ್ದರಿಂದ ರೈತನು ಅವನ ಸಂಸಾರ ಸಾಗಿಸುವುದೆಂದರೆ ಮೃತ ಜೀವನವೇ ಸರಿ. ನೌಕರನೊಬ್ಬನಿಗೆ ರೈತನ ನಾಲ್ಕರಲ್ಲಿ ಒಂದುಪಾಲು ಜವಾಬ್ದಾರಿಕೆ ಇಲ್ಲ. ರೈತನೆಂದರೆ ಒಂದು ಸಣ್ಣ ಸರಕಾರದ ಯಜಮಾನನೇ ಆಗಿರುತ್ತಾನೆ. ಅಂದ ಮೇಲೆ ಅವನ ಆಯವು ಒಬ್ಬ ನೌಕರನ ಎರಡರಷ್ಟು ಇರಲೇ ಬೇಕು. ಅವನ ಆದಾಯ ರೂ ೧೫೦೦ ಕ್ಕಿಂತ ಹೆಚ್ಚಿರ ಬೇಕಾಗಿದೆ. ಅಂದರೆ ೧೦ ಗಾಡಿ ಬತ್ತವಾಗಲಿ ಅದಕ್ಕೆ ಸರಿದೂಗುವಷ್ಟು ಬೇರೆ ಉತ್ಪತ್ತಿಯಾಗಲೀ ಇರಲೇ ಬೇಕು. ಆದರೆ ಕೊಡಗಿನಲ್ಲಿ ಇಂಥಾ ರೈತರು ಎಷ್ಟು ಜನರಿರುವರ? ಆದ್ದರಿಂದ ರೈತನ ಆರ್ಥಿಕಸ್ಥಿತಿ ಉತ್ತಮವಾಗಲು ಅವನು ಬೆಳೆಸುವ ಬೆಳೆಗೆ ಇನ್ನೂ ಹೆಚ್ಚಿನ ಧಾರಣೆ ದೊರೆಯಬೇಕು.

ರೈತರಲ್ಲಿ ಒಂದು ಎಕರೆ ಭೂಮಿಗಿಂತ ಕಡಿಮೆ ಇರುವವರೂ ಇದ್ದಾರೆ. ಒಂದು ಎಕರೆಯಿಂದ ೩ ಎಕರೆ ಭೂಮಿಗೆ ಒಳಪಟ್ಟಿರುವವರ ಸಂಖ್ಯೆಯೇ ಹೆಚ್ಚೆನ್ನಬಹುದು. ಯೋಗ್ಯನಾಗಿಯೂ ಚುರುಕು ಬುದ್ಧಿ ಇರುವ ಮತ್ತು ದೈವಸಹಾಯವಿರುವ ರೈತನೊಬ್ಬನು ಐದಾರು ಎಕರೆ ಭೂಮಿಯನ್ನು ತಾನೇ ಸಾಗುವಳಿ ಮಾಡಿ ಸರಿಯಾಗ ಫಲ ಹೊಂದಬಹುದು. ಇದಕ್ಕಿಂತ ಹೆಚ್ಚು ಭೂಮಿ ಇದ್ದರೆ ಹೆಚ್ಚು ಬೆಳಬಹುದು ಇಲ್ಲನೇ ಆ ಭೂಮಿಗಳಲ್ಲಿ ಉತ್ಪತ್ತಿ ಕಾಲು ಅಂಶವೇ ಆಗಬಹುದು!

ಕೆಲವು ಪಟ್ಟೆಗೆ ಐನ್ ಮನೆಗಳನ್ನು ಬಿಟ್ಟು ಕೊಪ್ಪಕೆಳಪಾಡು ಮಾಡಿಕೊಂಡಿರುವ ರೈತರು ತಕ್ಕಾಲಕ್ಕೆ ನೆಮ್ಮದಿಯಾಗಿದ್ದಾರೆ ಎನ್ನಬಹುದು. ಎಲ್ಲೆಲ್ಲಿ ಭೂಮಿ ವ್ಯವಸಾಯಕ್ಕೂ ಮತ್ತು ಕರಿಸ್ಕಲು ಮಾಡಿಕೊಳ್ಳಲಿಕ್ಕೂ ಅನುಕೂಲವಾದ ಎಡೆಗಳಲ್ಲಿ ವಾಸಗೃಹಗಳನ್ನು ಮಾಡಿಕೊಂಡಿರುವರೊ ಆ ರೀತಿಯ ರೈತರ ಜೀವನ ಮಟ್ಟವು ಉತ್ಕೃಷ್ಟವಾಗಿದೆ. ಕೆಲವು ಕುಟುಂಬಸ್ಥರು ಚದರಿರುವುದಿಲ್ಲ. ಒಂದೊಂದು ಐನ್ ಮನೆಯಲ್ಲಿ ಜನಸಂಖ್ಯೆ ಬಹಳ ಹೆಚ್ಚಾಗಿ, ಇರುವ ಆಸ್ತಿಪಾಸ್ತಿಗಳು ತಲಾ ಸುಮಾರಾಗಿ ೨೫-೩೦ ಬಟ್ಟೆ ಭೂಮಿ ಸಾಗುವಳಿಯಿಂದ ಜೀವಿಸುತ್ತಾರೆ. ಇನ್ನು ಕೆಲವು ಕುಟುಂಬದವರು ಒಂದೆರಡು ಎಕ್ರೆ ಜಾಗದಲ್ಲಿ ಅಲ್ಲಲ್ಲಿ ಸಣ್ಣ ಮನೆಗಳನ್ನೂ, ದನದ ಮನೆ, ಜನದ ಕೊಟ್ಟಿಗೆಗಳನ್ನು ಕಟ್ಟಿಕೊಂಡು ವಾಸಿಸುತ್ತಾರೆ. ಇವರು 'ನಮ್ಮ ಜೀವಮಾನವೇ ಬಂಪಾಟು'ವೆನ್ನುತ್ತಾರೆ. ಈ ರೀತಿಯಾಗಿ ಭೂಮಿ ಬೇರೆ [illegible] ಕರೆಸ್ಕಲುಗಳನ್ನು ಮಾಡಿಕೊಳ್ಳ [illegible] ರೈತರುಗಳ ಸಂಖ್ಯೆ ಬಹಳವಿದೆ. ಇಂಥಾ ಜನ ಸಂಖ್ಯೆ ಜೀವನದ ಜೊತೆಗೆ ಅವರವರು ಸಾಕುವ ಕೋಳಿ, ಹಂದಿ, ದನಗಳೂ ಅವರ ಅಭಿವೃದ್ಧಿಗೆ ಮಾರಕವಾಗಿರುತ್ತವೆ. ಈ ತರದ ಕುಟುಂಬಸ್ಥರ ಜೀವನದ ಹೋರಾಟವೂ ಪಟ್ಟಣಗಳಲ್ಲಿ ಜೀವಿಸುತ್ತಿರುವ ಸಣ್ಣಗಳ ಹೋರಾಟವೂ ಏಕರೀತಿಯದ್ದಾಗಿದೆ.

ಹೆಚ್ಚು ಬೆಳೆಸಲು ತೊಡಗಿರುವ ಯೋಜನಾವಾದಿಗಳು ಈ ಜಟಿಲ ಸ್ಥಿತಿಯನ್ನು ಉತ್ತರಿಸಲು ಮತ್ತೆ ರೈತರ [illegible] ಸಾಧನೆಯಾಗುವುದಿಲ್ಲ. ಅದು [illegible]ಗರಿಂದ ಈಗ ತಾನೇ ಸ್ವಸ್ಥದಿಂದ ಬಂದವರಿಗೆ ಕೆಲವು ಕಡೆ ಜಾಗಗಳನ್ನು ಕೊಟ್ಟ ಹಾಗೆ ಇಂಥ ರೈತರನ್ನು [illegible] ಅವರಿಗೂ ಸರಕಾರವು ಎಲ್ಲಾ ಸವಲತ್ತುಗಳನ್ನು ಒದಗಿಸಬೇಕಾಗಿದೆ. ಆ ಕುಟುಂಬದಲ್ಲೇ ಉಳಿಯುವವರೂ ಸಹ ಹೊರಗೆ ಹೋದ ಅಂಥಾ ಸಮ್ಮಂಧಿಕರಿಗೆ ಕೆಲವು ವರ್ಷದ ಮಟ್ಟಿಗೆ ಎಲ್ಲಾ ರೀತಿಯಲ್ಲಿಯೂ ಸಹಾಯಕರಾಗಿರಬೇಕು.

ಹೆಚ್ಚು ಭೂಮಿಯಿದ್ದು ಸರಿಯಾಗಿ ವ್ಯವಸಾಯ ಮಾಡಲಾರದವರನ್ನು ಸರ್ಕಾರದವರು ಗೊತ್ತು ಹಚ್ಚಿ ಅವರ ಭೂಮಿಯನ್ನು ಕಷ್ಟಪಡುವವರಿಗೆ ಅನೇಕ ವರ್ಷಗಳ ವರೆಗೆ ವಹಿಸಿಕೊಡುವ ಏರ್ಪಾಡು ಮಾಡಬೇಕು. ನೂರಕ್ಕೆ ನೂರು ಬಟ್ಟೆ ಬತ್ತ ಬೆಳೆಸಬಹುದು. ಆದರೆ ಸದ್ಯ ಸ್ಥಿತಿಯಲ್ಲಿ ಸಾಧ್ಯವಲ್ಲ. ಹೆಚ್ಚು ಬೆಳೆ ಬೆಳೆಸಲು ಸಮ್ಮಂಧಪಟ್ಟ ಅಧಿಕಾರಿಗಳು ಕೊಡಗಿನಲ್ಲಿ ತೋಡು, ಕಾಡುನೀರು, ಹೊಳೆ ಬಿದ್ದು ಹಾಳುಮಾಡದ ಕೋವು ಉಳಿದಿದೆಯೆ ಎಂದು ಪರೀಕ್ಷಿಸಿದರೆ ಅಂಥವು ಬಹುಶಃ ಇರಲಾರವು. ಇದರಿಂದ ರೈತನಿಗೆ ವಿಪರೀತ ನಷ್ಟವಾಗುತ್ತದೆ. ಶಾಸ್ತ್ರೀಯ ರೀತಿಯ ವ್ಯವಸಾಯ ಇಲ್ಲಿ ಕಷ್ಟವಾಗುತ್ತದೆ.

ಶಾಸ್ತ್ರೀಯ ರೀತಿಯಲ್ಲಿ ಬೆಳೆ ಎತ್ತಬೇಕಾದರೆ ಪ್ರತಿ ಗದ್ದೆಗೂ ಹೊರಗಿನಿಂದ ನೀರು ಸಿಕ್ಕಾಬಟ್ಟೆ ಸೇರದಂತೆ ಮಾಡುವ ವ್ಯವಸ್ಥೆ ಇರಬೇಕು. ಬೇಕಾಗುವಾಗ ಬೇಕಾದಷ್ಟು ನೀರು ಕೂಡಿಸಿ ಕೊಳ್ಳುವ ಅನುಕೂಲವಿರಬೇಕು. ಯಾವ ಕಾರಣದಿಂದಲೂ ಸೇರಿದ ನೀರು ಹರಿದು ಹೋಗದಂತೆ ಇರಬೇಕು. ಈ ರೀತಿಯ ಏರ್ಪಾಡಿಗೆ ಅನುಕೂಲವಿದ್ದರೆ ಶಾಸ್ತ್ರೀಯ ವ್ಯವಸಾಯ ನಡೆಸಬಹುದು. ಆದರೆ ಈಗ ಎಲ್ಲಿಯಾದರೂ ಒಂದು ಇಂಚು ಮಳೆ ಬಂದರೆ ಒಂದೊಂದು ಕೋವಿನ ತುದಿಯಿಂದ ಅಡಿಯವರೆಗೆ ತೋಡಿನ ನೀರು, ಕಾಡು ನೀರು ಸೇರಿ ದೊಡ್ಡ ಪ್ರವಾಹವಾಗಿ ಹಸನಾದ ಗದ್ದೆಯ ಮಧ್ಯಕ್ಕಾಗಿ ಹರಿದು ನೂರಾರು ಏರಿಗಳನ್ನು ತುಂಡು ಮಾಡಿ ಗದ್ದೆಗಳ ಗೊಬ್ಬರ, ಮಣ್ಣು, ನೆಟ್ಟ ಸಸಿಗಳನ್ನು ಸಹ ಕೊಚ್ಚಿಕೊಂಡು ಹೋಗುತ್ತದೆ. ನಿಸ್ಸಾರವಾದ ಮರಳು, ಕಲ್ಲು ಹರಳುಗಳನ್ನು ಕೂಡಿಸಿ ದಿಣ್ಣೆ ಮಾಡಿ ಗದ್ದೆಗಳ ಹುಲುಸನ್ನೆ ಕೆಡಿಸಿ ಬಿಡುತ್ತದೆ. ವರ್ಷಕ್ಕೆ ಎರಡು ಮೂರು ಬಾರಿ ಈ ಹಾನಿಯಾಗುತ್ತಿದ್ದರೆ ರೈತರು ಹೆಚ್ಚು ಬೆಳೆಯುವ ರೀತಿಯಾದರೂ ಹೇಗೆ? ವರ್ಷಕ್ಕೆ ಎರಡು ಮೂರು ಸರ್ತಿ ಈ ಬಾರಿಗಳನ್ನು ಸರಿಪಡಿಸುವದೇ ಕೆಲಸ. ಈ ಹಾನಿಯ ಸಲುವಾಗಿ ಮಳೆಯಾದ ಕೂಲಿಗಳು ರೈತರ ಲಕ್ಷಾಂತರ ರೂಪಾಯಿಗಳನ್ನು ತಮ್ಮ ಕಿಸೆಗೆ ಹಾಕಿಕೊಳ್ಳುತ್ತಾರೆ.

ಪ್ರವಾಹದ ಹಾನಿಯನ್ನು ತಪ್ಪಿಸಬೇಕಾದರೆ ಸರ್ಕಾರವು ಕೆಲವು ಮಟ್ಟಿಗೆ ಹೊಸ ಕಾನೂನು ಮಾಡಬೇಕು ಮತ್ತು ಹಣ ಸಹಾಯ ಮಾಡಬೇಕು. ಭೂಮಿಗಳ ಸಂಖ್ಯೆಯನ್ನು ಹೆಚ್ಚಿಸಿ ಅವರಿಗೆ 'ವಾಟರ್ ಕಂಟ್ರೋಲ್' ವಿಷಯ ತರಬೇತು ಕೊಡಿಸಬೇಕು. 'ವಾಟರ್ ಕಂಟ್ರೋಲ್' ಅಂದರೆ ಪ್ರತಿ ಗದ್ದೆಗೆ ನೀರು ಹರಿದು ಹೋಗಲು ದಾರಿ (Irrigation and drainage system) ಈ ಎರಡು ದಾರಿಗಳು ಯಾವ ರೈತನ ಕ್ಷೇತ್ರಕ್ಕೂ [illegible]. ಹೀಗೆ ಪಡಿಸಿದರೆ ಜಗಳ ತಪ್ಪುವುದೇ ಇಲ್ಲ. ಕೆಲವು ಗದ್ದೆಗಳಿಗೆ ನೀರು ಕೊಡದೆ ಒಣಗಿ ಹೋಗಲೂಬಹುದು. ಈ ದಾರಿಗಳನ್ನು ಒತ್ತು ಜಾಗದ ತಕ್ಕೆಯಿಂದಲೂ ಎಲ್ಲಾ ಗದ್ದೆಗಳಿಗೆ ಪ್ರಯೋಜನ ಸಿಕ್ಕುವ ರೀತಿಯಲ್ಲೂ ಮಾಡಿಡಬೇಕು.

ಈಗಿನ ಸ್ಥಿತಿಯಲ್ಲಿರುವ ತೋಡುಗಳನ್ನು ಬರಂಡಿಗಳನ್ನು ಸರಿಪಡಿಸಿದರೆ ಫಲಕಾರಿಯಾಗಲಾರದು. ಒಂದೊಂದು ತೋಡಿಗೆ ನೂರಾರು ತಿರುಗುಮುರುಗುಗಳು ಇದ್ದು ಒಂದು ಸ್ಥಳದಲ್ಲಿ ರಿಪೇರಿ ಮಾಡಿದರೆ ಮತ್ತೊಂದು ಸ್ಥಳದಲ್ಲಿ ಏರಿ ಒಡೆಯಬಹುದು. ಕೋವಿನ ಕೆಲವು ಭಾಗಕ್ಕೆ ನೀರಿನ ಅನುಕೂಲವಿದ್ದರೆ ಬೇರೆ ಸ್ಥಳಕ್ಕೆ ಒದಗುವುದಿಲ್ಲ. ಅಲ್ಲದೆ ಕೆಲವು ದುರಾಶೆ ಹಿಡಿದವರು ಭೂಮಿ ಒತ್ತರಿಸಿ ದೊಡ್ಡ ದೊಡ್ಡ ಬರೆಗಳ ಬದಿಯಲ್ಲಿ ತೋಡುಗಳು ಹರಿಯುತ್ತವೆ. ಆ ಬರೆಗಳನ್ನು ಇವರು ಸಮಯ ಸಿಕ್ಕಿದಾಗಲೆಲ್ಲಾ ಕಡಿಯುತ್ತಾರೆ. ಮಳೆ ಜೋರು ಬೀಳುವ ಕಾಲದಲ್ಲಿ ಬರೆಯು ಒಂದೊಂದು ಜಾಗದಲ್ಲಿ ಜಾರಿ ಬೀಳುವದು. ತೋಡೇ ಮುಚ್ಚಿ ಹೋಗುವುದು. ಇದರಿಂದ ವಿಪರೀತ ನಷ್ಟವಿದೆ.

ಸಾವಿರಾರು ಬಟ್ಟೆ ಭೂಮಿ ಇರುವ ವಿಸ್ತಾರವಾದ ಕೋವಿಗೆ ಗಾಡಿ ಸಂಚಾರಕ್ಕೆ ಅನುಕೂಲವಾಗುವಂತೆ ಹಲವಾರು ರಸ್ತೆಗಳ ಅವಶ್ಯಕತೆ ಇದೆ. ಕೊಡಗಿನ ರೈತರು ಗಾಡಿ ಉಪಯೋಗಿಸುವ ಪ್ರಯೋಜನವನ್ನೇ ತಿಳಿದಿಲ್ಲ. ಇದಕ್ಕಾಗಿ ಹಗುರವಾದ ಗಾಡಿಗಳನ್ನು ಮಾಡಿಸಿ ಉಳುವ ಎತ್ತುಗಳನ್ನು ಕಟ್ಟಿ ಎಳೆಸುವ ರೀತಿಯಲ್ಲಿರಬೇಕು. ಬರಿ ಮಳಲೇ ಆಗಿರುವ ಗದ್ದೆಯನ್ನು ಸಾರಗೊಳಿಸಬೇಕಾದರೆ ಕೆಂತರೆ, ಜೇಡುಮಣ್ಣು ಇತ್ಯಾದಿಗಳನ್ನು ಗದ್ದೆಗೆ ಹಾಕಬೇಕಾಗುತ್ತದೆ. ಆಗ ಗಾಡಿಯನ್ನು ಉಪಯೋಗಿಸದೆ ಕೆಲಸ ಸಾಗುವುದಿಲ್ಲ. ರೈತರಲ್ಲಿ ಕೆಲವರು ಗೊಬ್ಬರ ಶೇಖರಿಸುವುದರಲ್ಲಿ ತುಂಬಾ ಪ್ರಯತ್ನಪಡುತ್ತಾರೆ. ಆದರೆ ಅದರ ಸಾರವನ್ನು ಉಳಿಸಿಕೊಳ್ಳುವುದಿಲ್ಲ. ಮಳೆ ಬೀಳುವುದಕ್ಕೆ ಮೊದಲೇ ಗೊಬ್ಬರವನ್ನು ತಮ್ಮ ತಮ್ಮ ಗದ್ದೆಗಳಿಗೆ ಸಾಗಿಸಿಬಿಟ್ಟು ಗುಪ್ಪೆ ಹಾಕುತ್ತಾರೆ. ದನಗಳು ಅವನ್ನು ಕಾಲಿನಿಂದಲೂ ಕೋಡುಗಳಿಂದಲೂ ಹುಡಿ ಹಾರಿಸಿ ಬಿಡುತ್ತವೆ. ಮಳೆ ಬಿದ್ದ ಕೂಡಲೇ ತಮ್ಮ ತಮ್ಮ ಗದ್ದೆಗಳಿಗೆ ಹೋಗುವ ದಾರಿ ಬಂದಾಗುತ್ತದೆ. ಆದುದರಿಂದ ಮಳೆಗೆ ಮೊದಲೇ ಗೊಬ್ಬರವನ್ನು ಗದ್ದೆಗಳಿಗೆ ಸಾಗಿಸಿ ಬಿಡುತ್ತಾರೆ. ರಸ್ತೆಗಳೂ ಗಾಡಿಗಳ ಬಳಕೆಯೂ ರೈತಾವಳಿಗೆ ಅತ್ಯಗತ್ಯ.

ರೈತರಿಗೆ ದನಕರುಗಳು ಬೆನ್ನೆಲುಬು ಎನ್ನಬಹುದು. ಇವುಗಳ ಸಾಕಾಣಿಕೆಯು ಬಹು ಶೋಚನೀಯ ಸ್ಥಿತಿಯಲ್ಲಿವೆ. ಹತ್ತು ಪ್ರಾಣಿಗಳು ಮೇಯುವ ಸ್ಥಳದಲ್ಲಿ ಐವತ್ತಕ್ಕೆ ಮೇಲ್ಪಟ್ಟ ಸಂಖ್ಯೆಯ ಪ್ರಾಣಿಗಳು ಮೇಯುತ್ತವೆ. ಒಂದು ವರ್ಷ ತಂದ ಎತ್ತುಗಳು ಮತ್ತೊಂದು ವರ್ಷಕ್ಕೆ ಉಳಿಯುವುದಿಲ್ಲ. ಅನಾವಶ್ಯವಾದ ಕೆಲಸಕ್ಕೆ ಬಾರದ ಪ್ರಾಣಿಗಳು ತುಂಬಾ ಇವೆ. ಆದುದರಿಂದ ಇವುಗಳಿಗೆ ಸರ್ಕಾರದವರು ಆಶ್ರಯ ಏರ್ಪಡಿಸಬೇಕು. ಇಂಥಾ ಪ್ರಾಣಿಗಳನ್ನು ಗ್ರಾಮಗಳಲ್ಲಿ ಬಿಟ್ಟರೆ ಅವು ಉಪದ್ರ ಹೇಳಬಾರದಷ್ಟು ಆಗುತ್ತದೆ. ಪ್ರತಿ ಗ್ರಾಮಗಳಲ್ಲಿಯೂ ಒಂದೊಂದು ವಿಸ್ತಾರವಾದ ಗೋಮಾಳಗಳನ್ನು ಏರ್ಪಡಿಸಿ ಚರಾವು ಪದ್ಧತಿಯನ್ನು ಪ್ರಚಾರಗೊಳಿಸದಿದ್ದರೆ ಲಕ್ಷಾಂತರ ರೂಪಾಯಿಗಳ ನಷ್ಟ ಆಗುತ್ತಲೇ ಇರುವದು. ಬಹಳ ರೈತರು ತಮ್ಮ ದನಕರುಗಳ ಮೇಲ್ವಿಚಾರಣೆಯನ್ನು ಮಾಡುವುದೇ ಇಲ್ಲ. ವರ್ಷಕ್ಕೆ ಆರು ತಿಂಗಳು ಕಾಡಿನಲ್ಲಿ ಆರು ತಿಂಗಳು ಕೊಟ್ಟಿಗೆಯಲ್ಲಿರುತ್ತವೆ. ಇಂಥ ದನಗಳ ಹಾವಳಿಯಿಂದ ತರಕಾರಿ ತೋಟ, ಬಾಳೆತೋಟಗಳಿಗೆ ಉಳಿಗಾಲವಿಲ್ಲ. ಬೇಸಿಗೆಯಲ್ಲಿ ದನಕರುಗಳನ್ನು ಸ್ವೇಚ್ಛೆಯಾಗಿ ಬಿಡುವ ಪದ್ಧತಿಯನ್ನು ನಿರ್ಬಂಧವಾಗಿ ನಿಲ್ಲಿಸಲೇಬೇಕು.

ಕೊಡಗಿನವರಾದ ನಾವು ಹಂದಿ, ಕೋಳಿಗಳನ್ನು ಸಾಕುವದು ಶಾಸ್ತ್ರೀಯ ಮಾರ್ಗವಲ್ಲದ ಕಾರಣ ಅವುಗಳಿಂದ ಬೆಳೆಗೂ, ತೋಟಗಾರಿಕೆಗೂ ತುಂಬಾ ಹಾನಿ ಇದೆ. ಇದಲ್ಲದೆ ಮಂಗಗಳ, ಇಲಿ, ಹೆಗ್ಗಣಗಳು ಮುಂತಾದುವು ನಷ್ಟ ಮಾಡುತ್ತವೆ. ಹಿಂದೆ ಕೊಡಗಿನಲ್ಲಿಯೂ ಹೆಚ್ಚು ತರಕಾರಿ ಬೆಳೆಸುತ್ತಿದ್ದಿರಬೇಕು. ಈಗಲೂ ಅಲ್ಲಲ್ಲಿ ಹಳೆಯ ಮಡಕೆಗಳೂ ಬೊಳುಗಳೂ ಇವೆ. ತರಕಾರಿ ಬೆಳೆಸುವದು ಹೆಚ್ಚಾಗಬೇಕಾದರೆ ಈ ಉಪದ್ರವಗಳ ಉಪಶಮನವಾಗಬೇಕು.

ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್,
ಫ್ರೇಜರ್ ಪೇಟೆ.

ಮಹಾಜನರಲ್ಲಿ ವಿನಂತಿ.

ಫ್ರೇಜರ್‌ಪೇಟೆಯ ನಮ್ಮ ಕಾರ್ಖಾನೆಯಲ್ಲಿ ಈಗಾಗಲೇ ಮೂಳೆಗೊಬ್ಬರ ತಯಾರಾಗುತ್ತಿರುವುದು ಎಲ್ಲರಿಗೂ ತಿಳಿದ ವಿಷಯ. ಈ ಸಂದರ್ಭದಲ್ಲಿ ನಿಮ್ಮ ನಿಮ್ಮ ಗ್ರಾಮಗಳಲ್ಲಿ ಸತ್ತ ದನಗಳ ಮತ್ತು ಇತರ ಪ್ರಾಣಿಗಳ ಮೂಳೆಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಜಮಾಯಿಸಿ ಮೇಲಿನ ವಿಳಾಸಕ್ಕೆ ತಿಳಿಸಿದಲ್ಲಿ ಅದನ್ನು ಅದರ ಬೆಲೆ ಕೊಟ್ಟು ಸಾಗಿಸುವ ಏರ್ಪಾಡನ್ನು ಮಾಡುತ್ತೇವೆ. ಅಥವ ಲಾರಿಗಟ್ಟಿ ಜಮಾಯಿಸಿದವರು ನಮ್ಮ ಫ್ರೇಜರ್‌ಪೇಟೆ ಕಾರ್ಖಾನೆಗೆ ತಂದು ಕೊಟ್ಟಲ್ಲಿ ಮಣ 1ರ 0-12-0 ಯಂತೆ ಬೆಲೆಗೆ ತೆಗೆದುಕೊಳ್ಳಲಾಗುವುದು.

ಈಗಾಗಲೇ ತಯಾರಾಗಿರುವ ಮೂಳೆ ಗೊಬ್ಬರಕ್ಕೆ ಖಾಯಿಸ್‌ದಾರರು ಬರೆಕೊಂಡಲ್ಲಿ ಅಗ್ರಸ್ಥಾನವನ್ನನುಸರಿಸಿ ಬಟವಾಡೆ ಮಾಡಲಾಗುವುದು.

ಸೂಚನೆ:–ನಮ್ಮ ಕಂಪೆನಿಯ ಶೇರುದಾರರಿಗೆ ಹೆಚ್ಚಿನ ರಿಯಾಯಿತಿ ಮತ್ತು ಮೊದಲಿನ ಹಕ್ಕು ಕೊಡಲಾಗುವುದು.

ಫ್ರೇಜರ್‌ಪೇಟೆ,
ತಾ. 19-5-49.

ಕೆ. ಕೆ. ತಿಮ್ಮಯ್ಯ,
ಮೇನೇಜಿಂಗ್ ಡೈರೆಕ್ಟರ್.

ವಿಮೆ ಮಾಡಲು ಇಲ್ಲವೇ ಪ್ರತಿನಿಧಿಸಲು.

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.

ಇವರ ಸಲಹೆಗಿಂತ ಉತ್ತಮ ಮಾರ್ಗವಿಲ್ಲ.

ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದೂಸ್ಥಾನದ ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು

ದಿ ಬೋಂಬೆ ಲೈಫ್ ಅಶ್ಶೂರೆನ್ಸ್ ಕಂ. ಲಿಮಿಟೆಡ್.

30 ಮೌಂಟ್ ರೋಡ್,
ಪೊ. ಬಾ. ನಂ. 337,
ಮದ್ರಾಸು 2.

ಬೋಂಬೆ ಲೈಫ್ ಬಿಲ್ಡಿಂಗ್,
ಪೊ. ಬಾ. ನಂ. 1,
ಉಡುಪಿ.

(ಟೆಲಿಫೋನ್ ನಂ. 8398)

ಇತರ ಆಫೀಸುಗಳು:—ಬೆಂಗಳೂರು, ತಿರುವೆಂಡರಂ, ಕಲ್ಲಿಕೋಟೆ, ಮಂಗಳೂರು, ಮಧುರೆ, ಮತ್ತು ಬೊಂಬಾಯಿ.

ದಿ ಟ್ರಾಪಿಕಲ್
ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:– ಲಾಲ ಶಂಕರ್ ಲಾಲ್.
ಮುಖ್ಯ ಕಚೇರಿ:– ಹೊಸ ಡೆಲ್ಲಿ.
ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮಲಖಾನ್. ಡಾ|| ಎಂ. ಎ. ಅನ್ಸಾರಿ.

Transacts:—Life, Fire, Motor and Marine.

ನಮ್ಮ ಹೊಸ ವಿಸ್ತಾರದ ಯೋಜನೆಯಲ್ಲಿ ಆಕರ್ಷಕ ಕಮಿಷನ್ ಮೇಲೆ ಏಜನ್ಸಿಗೆ ದಯವಿಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಆರ್ಗನೈಜರ್
ದಕ್ಷಿಣ ಕೊಡಗು, ಪೊನ್ನಂಪೇಟೆ.
ಅಥವಾ
ಯಂ. ಯು. ಅಚ್ಚಪ್ಪ,
ಏಜೆನ್ಸಿ ಸುಪರಿಂಟೆಂಡೆಂಟ್,
ಮಡಿಕೇರಿ, ಕೊಡಗು.

ಆರ್ಗನೈಜರ್
ಉತ್ತರ ಕೊಡಗು, ಮಡಿಕೇರಿ.
ಅಥವಾ
ಎಂ. ಎ. ಬೆಳ್ಯಪ್ಪ,
ಬ್ರಾಂಚ್ ಸೆಕ್ರೆಟರಿ,
ಹಂಪನಕಟ್ಟಾ, ಮಂಗಳೂರು.

ಎಂಪೈರ್ ಆಫ್ ಇಂಡಿಯಾ
ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

48ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು.	ಒಟ್ಟು ಆದಾಯ	1,07,09,000	ಮೀರಿದೆ
	ಚಾಲ್ತಿಯಿರುವ ವಿಮೆ	17,74,52,000	,,
	ಆಸ್ತಿ	6,67,60,000	,,
ಕಂಪೆನಿಯು ಆದಿಯಲ್ಲಿ ಕೊಟ್ಟ ಕ್ಲೈಮುಗಳು	....	8,83,62,000	,,

ಬ್ರಾಂಚ್ ಆಫೀಸ್: ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು.
ಏಜೆನ್ಸಿ ಅರ್ಜಿಗಳನ್ನು ಸ್ವಾಗತಿಸಿದೆ.
ಪ್ರಧಾನ ಆಫೀಸು: ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ.

ಭದ್ರತೆ! 17 ವರ್ಷಗಳ ಪರಿಪಕ್ವ ಅನುಭವಶೀಲತೆ!!

ದಿ ವಿಜಯ ಬೇಂಕ್ ಲಿಮಿ[ಟೆಡ್]

ಮುಖ್ಯ ಕಚೇರಿ,
ಕದ್ರಿ ರೋಡ್, ಮಂಗಳೂರು.

...ಲತೆ!!

ನಿರಖು ಠೇವಣಾತಿ ಬಡ್ಡಿ ದರ:

3	ತಿಂಗಳು	3%
6	,,	3¼%
12	,,	3½%
24	,,	4 %

ರೂಪಾಯಿ ೧೫,೦೦೦ಕ್ಕೆ ಮೀರಿದ ಒಂದೇ ಡಿಪಾಜಿಟ್ಟಿಗೆ ಮೇಲಿನ ದರಕ್ಕಿಂತಾ ¼% ಹೆಚ್ಚಿಗೆ.

ಶಾಖೆಗಳು:– ಸಿಟಿ ಮಂಗಳೂರು, ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಕಾಸರಗೋಡು, ಕಾಞಂಗಾಡ್, ಪುತ್ತೂರು, ಮಡಿಕೇರಿ ಮತ್ತು ಮುಂಬಾಯಿ.

ಒಟ್ಟು ವಹಿವಾಟು ಭಂಡವಾಳ ರೂ. ೪೦ ಲಕ್ಷಕ್ಕೂ ಮೀರಿದೆ.

ಎಲ್ಲಾ ವಿಧದ ಆಧುನಿಕ ಬೇಂಕಿಂಗ್ ವಹಿವಾಟುಗಳು ದಕ್ಷತೆಯಿಂದ ನಡೆಸಲ್ಪಡುವವು.

ಹೆಚ್ಚಿನ ವಿವರಗಳಿಗೆ ಬರೆಯಿರಿ:–
12-10

ಏಜಂಟ್,
ಮಡಿಕೇರಿ ಶಾಖೆ, ಮಡಿಕೇರಿ.

CRESCENT

FOR PROTECTION AND SERVICE.

It is best to represent and insure with

The CRESCENT Insurance Co., Ltd.,

H. O: BOMBAY. [*Established 1919.*

For particulars write to:

Sri B. A. Poovaiah
Organiser
Pollibetta, Coorg.

or

The Branch Manager,
22 B. Mahatma Gandhi Road,
Bangalore 1.

ಸುರಕ್ಷಿತವಾದ ಜೀವವಿಮೆ ಪಡೆಯಲು

ಕ್ರೆಸೆಂಟ್

ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್,
ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,65,000.
ಕ್ಷೇಮನಿಧಿ	ರೂ.	50,000.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಆಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ಕು ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ ಮತ್ತು ನಾರ್ದನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ,
ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C.
ಪ್ರೆಸಿಡೆಂಟ್ ಮತ್ತು ಖಜಾಂಚಿ.

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

Reg. No. M. 1580.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಳಿಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೨೮ | ತಾರೀಕು ೨೬-೮-೧೯೫೦ನೇ ಶುಕ್ರವಾರ | ಸಂಚಿಕೆ ೧೩

ಸತ್ಯಮೇವ ಜಯತೇ-ನ ಅನೃತಮ್

ಭಾರತ ಸರಕಾರದ ರಾಜ್ಯಭಾರ ನೀತಿ.

'ಸತ್ಯವು ಮಾತ್ರ ಜಯಿಸುವುದು ಆ ಧರ್ಮರಾಜ್ಯವನ್ನು ಸಂಸ್ಥಾಪಿಸಲೋಸುಗ ಸತ್ಯವೆಂದಿಗೂ ಜಯಿಸಲಿ' ಎಂಬುದು ಗ ಪಾಂಡವರು ಸಂದಿಗ್ಧ ಸಮಯದಲ್ಲಿ ಆ ಉಪನಿಷದ್ವಾಕ್ಯ. ಇವರ ಮೊದಲ ಘಾ [illegible] ಗಳನ್ನು [illegible] ಅಲ್ಲಿವೆ ಗವನ್ನು ಹೊಸದಾಗಿ ಉದಯಿಸಿದ ಸ್ವತಂತ್ರ [illegible] ? ಆ ಉನ್ನತ ನೀತಿ [illegible] ತ್ರ ಭಾರತದ ನೀತಿ 'ಸೂತ್ರವಾಗಿಟ್ಟು' [illegible] ಬಳಸಲು ದೇ ಕೊಳ್ಳಲಾಗಿದೆ. [illegible] ನಡೆಯಲಿಲ್ಲವೆ? [illegible]

ಪುರಾತನ ವೇದ ಶಾಸ್ತ್ರಗಳ [illegible] ದ ಈ ನೀತಿ ರತ್ನದ ಆರಿಸುವಿಕೆಯು [illegible] ತು ಅನೇಕ ಸಮಸ್ಯಾತ್ಮಕ ಪ್ರಶ್ನೆಗಳು ಉದ್ಭವವಾಗಿವೆ. ಜಾತ್ಯತೀತವಾದ ರಾಷ್ಟ್ರ ಸರಕಾರವು ಇಂತ ಧರ್ಮಭಾವನೆಗೆ ಸಂಬಂಧಪಟ್ಟ ನೀತಿ ಸೂತ್ರವನ್ನು ತನ್ನ ರಾಜಕಾರಣದಲ್ಲಿ ಬಳಸಲೊಪ್ಪಬಹುದೆ? ಸತ್ಯವೊಂದು ಮಾತ್ರ ಜಯಿಸುವುದೆಂಬ ವಿಷಯದ ಮೇಲೆ ನಾವು ನಮ್ಮೆಲ್ಲ ವ್ಯವಹಾರವನ್ನು ನಡೆಸಲು ಪ್ರಯತ್ನಿಸಬಹುದೆ? ನಿಜವಾಗಿ ಸ್ವತಂತ್ರ ಮತ್ತು ವಯಕ್ತಿಕ ಜೀವನದಲ್ಲಿ ಅದನ್ನೂ ನಿಜವೆಂದು ಹೇಳಲಿಕ್ಕಾಗುವುದಿಲ್ಲ. ಒಳ್ಳೆಯ ಮನುಷ್ಯನು, ಸತ್ಯವಂತನು ಯಾವಾಗಲೂ ವಂಚನೆ ಮೋಡಿಯ ಅಸತ್ಯಾಚರಣೆಯ ಮನುಷ್ಯನೆದುರು ಸೋತುಹೋಗುವನು. ಆರ್ಥಿಕ ಲಾಭವಾಗುವಲ್ಲಿ ಸತ್ಯ ತತ್ವವು ಜಯಿಸುವಾಗ ಹೆಚ್ಚು ಸಂದರ್ಭಗಳಲ್ಲಿ ಕಲವು ವಿಂಗುವುದು. ಸಮಾಜದ ಸಾಮುದಾಯಿಕ ಜೀವನವಲ್ಲಾದರೂ ಸತ್ಯವು ಜಯಿಸುವುದೆ? ಸತ್ಯವನ್ನೇ ಅನುಸರಿಸುವವ ದೇಶವನ್ನು ಆಳಲಾರ. ಸತ್ಯದ ಮಿತಿಯನ್ನರಿತವನಿಗೆ ರಾಜಸೂತ್ರವು ಸಿಲ್ಲುವುದು. ಅವನೇ ರಾಜಕೀಯ ಮುತ್ಸದ್ದಿಯೆನಿಸುವನು. ಖಂಡಿತವಾಗಿ ಸತ್ಯವನ್ನನುಸರಿಸಿದರೆ ವಾಣಿಜ್ಯ ವ್ಯವಹಾರವು ಸ್ತಬ್ಧ ಹೊಂದುವುದು, ಸಾಮಾಜಿಕ ಅಂತರ್ ವ್ಯವಹಾರಗಳು ಕೇವಲ ಕೊಳ್ಳುಕೊಡುವಿಕೆಯ ಮಟ್ಟಕ್ಕಿಳಿಯುವವು. ರಾಜಕೀಯ ಜೀವನವು ಹಾಸ್ಯಾಸ್ಪದ ರಂಪವಾಗುವುದು.

ಅಂತರ್ರಾಷ್ಟ್ರೀಯ ವ್ಯವಹಾರದಲ್ಲಾ ಈ ತರದ ತತ್ವವನ್ನು ಸ್ವೀಕರಿಸಿ ವರ್ತಿಸಲು ಸಾಧ್ಯವಾಗುವಂತಹ ಪರಿಸ್ಥಿತಿಯಾದರೂ ಇದೆಯೆ? ಇತಿಹಾಸವಾದರೂ ಸುಳ್ಳುವಂಚನೆಗಳಿಗಿಂತ ಸತ್ಯವೇ ಮೇಲೆಂಬುದನ್ನು ತೋರಿಸುತ್ತದೆಯೊ? ನಿಜಸಂಗತಿಯು ನಾವು ಕಲ್ಪಿಸಿದುದಕ್ಕೆ ತೀರ ವಿರುದ್ಧವಾಗಿದೆ ಎನ್ನಬೇಕು. ಕುರುಕ್ಷೇತ್ರದ ಯುದ್ಧವಾದರೂ ಹೇಗೆ ಜಯಿಸಲ್ಪಟ್ಟಿತು?

[illegible] ವಿಭೀಷಣನು [illegible] ಗೆ ಆಪ್ತಮಿತ್ರ ಆ ವನಿಂದ ಶತ್ರುದೇಶದ ರಹಸ್ಯಗಳನ್ನು ತಿಳಿದ ರಾಮನು ಜಯಿಸಲಿಲ್ಲವೇ? ಯಾವ ಪ್ರಾಮಾಣಿಕತೆ ಮತ್ತು ಸತ್ಯ ಸಂಧತೆಯಿಂದೆನ್ನಬೇಕು? ಇತಿಹಾಸವು ಇದನ್ನೆಲ್ಲಾ ಹೇಳುತ್ತಿದೆಯಲ್ಲ! ಮೊದಲನೇ ಯುದ್ಧದಲ್ಲಿ ಮಿತ್ರರಾಷ್ಟ್ರಗಳು ಕೊನೆಕೊನೆಗೆ ಕೈಕೊಂಡ ಪಂಚಮಸ್ತಂಭದ ಪ್ರಚಾರ ನೀತಿಯು ಜರ್ಮನರ ಅಖಂಡತೆಯಲ್ಲಿ ಬಿರುಕುಂಟಾಗಿ ಸೋಲಿಸಲು ಪರಿಣಮಿಸಿತೆಂದು ಹೇಳಲಾಗಿದೆ. ಕೇವಲ ಬಾಯಿ ಹೇಳಿಕೆಯ ಮಟ್ಟಿಗಾದರೂ ಸಿದ್ಧಾಂತವಾಗಿ ಹೇಳಲಾಗದ ನೀತಿ ತತ್ವವನ್ನು ರಾಜಕಾರಣ ಬೀಜ ಮಂತ್ರವಾಗಿ ಸ್ವೀಕರಿಸುವುದು ಎಷ್ಟರ ವಿವೇಕ? ಒಳ್ಳೆಯ, ಸಾಮಾನ್ಯ ಮನಸ್ಸುಗಳಿಗೆ ಹೊಳೆಯುವ ಈ ವಿಚಾರಗಳಲ್ಲಿ ಒಂದು ಕಡವು.

ಮೇಲಿನ ತರ್ಕವೆಲ್ಲವೂ ನಿಜವೆ? ಎಂದು ಮತ್ತೆ ಪ್ರಶ್ನಿಸಬೇಕಾಗುತ್ತದೆ. ಕಾಲಕಾಲಗಳಲ್ಲಿ ಜನ್ಮವೆತ್ತಿದ ವಿವೇಕಿಗಳೂ ಜ್ಞಾನಿಗಳೂ ಮಾನವ ಸತ್ಯಕ್ಕೆ ನಿರ್ವಾಜ್ಯವಾದ ಶಕ್ತಿಯಿದೆ, ಅದಕ್ಕೆ ವಿಜಯವು ದೊರೆಯಬೇಕಾದುದು ಅನಿವಾರ್ಯವೆಂದು ನಿರೂಪಿಸಿದ್ದು ತಪ್ಪೇನು? ಸತ್ಯವು ಶಾಲಾ ಪುರಪುಸ್ತಕಗಳಲ್ಲಿ ಮಾತ್ರ ಒಯಿಸುವುದೇನು?

ನಾವು ಹಾಗೆಂದಿಗೂ ಎಣಿಸುವುದಿಲ್ಲ. ನೀತಿಗಳು ಎಷ್ಟೊ ಇವೆ. ಮಾನವನ ಪರಿಸ್ಥಿತಿ ಪದತ್ತದ ಬಲಾಬಲಗಳನ್ನು ಸಾಪೇಕ್ಷಗೊಳಿಸಿ ಸಮಾಜದ ಸತ್ಸಂಬಂಧತ್ರಿವನನ್ನು ಮಾರ್ಗದರ್ಶಿಸಲು ನಿರ್ದೇಶಿಸಲ್ಪಟ್ಟ ಅವೆಷ್ಟೊ ನೀತಿಸೂತ್ರಗಳೂ ಕಟ್ಟಳೆಗಳೂ ಇವೆ. ಕಾಲ ಕಾಲಕ್ಕನುಗುಣವಾಗಿ ಈ ನೀತಿ ಸೂತ್ರಗಳಲ್ಲಿ ಮಾರ್ಪಾಡುಗಳೂ ಆಗಿವೆ. ಆದರೆ ಕೆಲವು ಮೂಲಭೂತ ಸಿದ್ಧಾಂತಗಳು ಯಾವ ಕಾಲಕ್ಕೂ ಬದಲಾಗದಂತವುಗಳಾಗಿ, ಧೃವವಾಗಿ ನಿಂತಿರುತ್ತವೆ. ಅವು ಎಲ್ಲಾ ಜನರಿಗೂ ಜನಾಂಗಗಳಿಗೂ ತಕ್ಕುದಾದವುಗಳು.

ಕೆಲವು ತತ್ವಗಳು ಪ್ರಕೃತಿಯ ನಿಜಸ್ವಭಾವಕ್ಕನುಗುಣವಾಗಿವೆ. ಅವುಗಳ ತಳಹದಿಯ ಮೇಲೇ ಜೀವನದ ಚಲನವಲನಗಳೂ ಸಾಮಾಜಿಕ ಸಂಸ್ಥೆಗಳೂ ಆಧರಿಸಿಕೊಂಡಿರುವವು. ಕೆಲವು ತತ್ವಗಳು ಶಾಶ್ವತವಾಗಿ ನಿಂತಿವೆ. ಈ ತತ್ವಗಳು ಸೃಷ್ಟಿಯ ಎಲ್ಲಾ ಚರಾಚರಾತ್ಮ ಜನಗಳ ಏಕರೂಪತೆಯನ್ನು ತೋರಿಸುವವು. ಸೃಷ್ಟಿಯಲ್ಲಿನ ವಸ್ತುಗಳು ಪರಸ್ಪರ ಸಾಮರಸ್ಯದಿಂದ ವರ್ತಿಸುವುದು ಒಂದು ವಿಷಯ. ಬಿಸಿಲಿನಿಂದ ಮೋಡವಾಗುವುದು, ಮೋಡ ತಣಿದು ನೀರಾಗುವುದು ಇತ್ಯಾದಿ ಸಂಗತಿಗಳು. ಈ ಸಾಮರಸ್ಯತೆಯೇ ಶಿವವೇ ಸೌಂದರ್ಯವೆಂಬುದು. ಇದು ಇನ್ನೊಂದು ಶಾಶ್ವತ ವಿಷಯ. ಸತ್ಯವೇ ಈ ಶಾಶ್ವತ ತತ್ವಗಳ ಆತ್ಮರೂಪವಾದುದು. ಈ ಕಾರಣಕ್ಕಾಗಿಯೇ ಅದನ್ನು ವಿಶ್ವದಲ್ಲೆಲ್ಲಾ ಜೀವಂತವಾದ ಧ್ಯೇಯವನ್ನಾಗಿ ಸ್ವೀಕರಿಸಲಾಗಿದೆ. ಎಲ್ಲಾ ಧರ್ಮಸಂಸ್ಥಾಪಕರೂ, ತತ್ವಜ್ಞಾನಿಗಳೂ ಅದರ ಮಹಿಮೆಗೆ ತಲೆವಾಗಿರುತ್ತಾರೆ.

ಈಗ ಈ ಸತ್ಯವೆಂದರೇನೆಂಬುದನ್ನು ಪರ್ಯಾಲೋಚಿಸೋಣವೆ? ಇತರ ಆಳವಾದ ತತ್ವಾರ್ಥಗಳ ಗೈಯಿಕ್ಕದ ನಾವದನ್ನು ಸರಿಯಾದ ವಿಚಾರವೆಂದೂ, ಸರಿಯಾದ ಜ್ಞಾನವೆಂದೂ ಮತ್ತು ಸ್ಥಿರವಾದ ಜೀವನದ ಒಂದು ರೂಪವೆಂದೂ ವರ್ಣಿಸಬಹುದು. ನಾವು ಸತ್ಯವನ್ನನುಸರಿಸುತ್ತೇವೆ, ಕಾರಣ ಅದು ನೇರವಾದುದೂ, [illegible] ಸಹಜವಾದುದೂ ಆದ ಮಾರ್ಗವು; ಸರಿಯಾದುದನ್ನೇ ಮಾಡಬೇಕಾದುದು ಮಾನವ ಘನತೆಗೆ ಯೋಗ್ಯವಾದುದು. ಸತ್ಯವು ಸ್ವಯಂ [illegible] ಗರ್ಭಿತವಾದುದು ಅದರ ಪರಿಪೂರ್ಣತೆಗೆ ಯಾವ ಕೃತ್ರಿಮ ವಿಷಯಗಳ ಸಹಾಯವೂ ಬೇಕಾಗಿಲ್ಲ. ಅದು ಪ್ರತ್ಯೇಕ ಇಲ್ಲವೆ ಅನೈತಿಕವಾದುದಲ್ಲ. ಆದರೆ ಅದೊಂದು ನೀತಿ ಅದಕ್ಕೆ ಧಾರ್ಮಿಕ ಬೆಂಬಲವಿಲ್ಲದಿದ್ದರೂ ಆಗುವುದು. ಆದುದರಿಂದಲೇ ವ್ಯಾಪಾರಿ ಜನಾಂಗವೆನಿಸಿದ ಆಂಗ್ಲರು ಕೂಡ 'ಪ್ರಾಮಾಣಿಕತೆಯೇ ಕೊನೆಯಲ್ಲಿ ಸಫಲವನ್ನು ಕೊಡುವುದು' ಎಂಬ ಸೂತ್ರವನ್ನು ತಮ್ಮ ಜನಾಂಗದ ನೀತಿಯಾಗಿ ಬೋಧಿಸಿದರು. ಈ ದೃಷ್ಟಿಕೋನದಲ್ಲಿ ಯಾವ ಲೌಕಿಕ ಇಲ್ಲವೆ ಲಾಭ-ಧರ್ಮ ವಿಷಯಗಳ ವಿಚಾರವಾಗಲಿ ಯಾವ ಪ್ರಾಧಾನ್ಯತೆಯಿಲ್ಲ. ಆ ಧರ್ಮ [illegible] ಪ್ರಮಾಣತೆಯು [illegible] ಮಾನವನಿಗೆ ಸಲ್ಲುವುದು. ಆದರೆ ಮಾನವನೋ ವಿಕಾಸಹೊಂದಿದವನಾಗಿ [illegible] ಅವನಲ್ಲಿ ಉದಾತ್ತವೂ ಹೆಚ್ಚು ಘನವೂ ಆದ ಧ್ಯೇಯ ಭಾವನೆಗಳಿಗೆಡೆಯಾಗುವುದು.

ಭಾರತದಲ್ಲಿನ ಜನತೆಯ ನಾಡಿಯಲ್ಲಿ ಘನೋನ್ನತ ಧ್ಯೇಯ ಧೋರಣೆಯ ಸಾಂಪ್ರದಾಯವು ಹರಿಯುತ್ತಿದೆ. ಸತ್ಯಸಾಧಕನಿಗೇ ಇಲ್ಲಿ ಹೆಚ್ಚಿನ ಗೌರವವು ಸಲ್ಲುವುದು. ಕಳೆದ ಅರ್ಧ ಶತಮಾನದಲ್ಲಿ ಅನೇಕಾನೇಕ ಭಾರತೀಯರು [illegible] ಪುರುಷರು—ಈ ಮಹೋನ್ನತ ತತ್ವಾರ್ಥವನ್ನನುಸರಿಸಿ ಬಂಧವಿಮೋಚನೆಗಾಗಿ ಹೋರಾಟ ನಡೆಸಿರುವರು.

ಸತ್ಯವೆಂಬುದು ಅವ್ಯಕ್ತವಾದೊಂದು ಶಕ್ತಿ. ಅದು ಚೈತನ್ಯಾತ್ಮಕ ಸ್ಫೂರ್ತಿ ಹುಟ್ಟಿಸುವುದು. ಜೀವನವನ್ನು ಅರಳಿಸಿ ಬೆಳೆಸುವುದು. ಅದರ ವಿರುದ್ಧವಾದ ಅಸತ್ಯವು ನಿಸ್ಸಾರ ಶಕ್ತಿಯದಾಗಿದೆ. ಅದು ಕ್ಷಣಿಕ ಕಾರ್ಯಕ್ಕೆ ಸರಿಸಮಾನವಾದುದು. ತಾತ್ಕಾಲಿಕವಾಗಿ ಅಸತ್ಯ ಮತ್ತು ಅದರ ಬಳಗಕ್ಕೆ ಸೇರಿದ ಇತರ ದುರ್ಲಕ್ಷಣದ ಅವತಾರಗಳು ಯಶಸ್ಸನ್ನು ಕೊಡುವುದನ್ನು ನಾವು ಕಾಣಬಹುದು. ಮಾನವನ ಅಪರಿಪೂರ್ಣ ವಿಕಾಸದ ಪರಿಸ್ಥಿತಿಯಲ್ಲಿ ಇದು ಸರಿದೋರಬಹುದು. ಆದರೆ ಅದು ಮಾನವನನ್ನು ಖಂಡಿತ ಸೋಲಿಸುವುದು. ಮನುಷ್ಯನು ತನ್ನ ವ್ಯಕ್ತಿತ್ವದ ಗೌರವವನ್ನೇ ಇದರಿಂದ ಕಳಕೊಳ್ಳುತಾನೆ. ಬಲಿಷ್ಠ ವ್ಯಕ್ತಿಯೇಗಾ ಹಾಗೆ ಬಲಿಷ್ಠ ಜನಾಂಗವೊಂದು ಮಾತ್ರ ಸತ್ಯದ ದೀವಿಗೆಯನ್ನೆತ್ತಿ ಹಿಡಿಯಬಲ್ಲುದು.

'ಸ್ವ. ಮಾ'

International Trucks & Hudson Cars.

ಕಳೆದ ನಲವತ್ತು ವರ್ಷಗಳಿಂದ ಹೆಸರು ಪಡೆದ ಮೋಟಾರು ಮತ್ತು ಟ್ರಕ್ಕುಗಳ ತಯಾರಕರಾದ ಅಮೇರಿಕದ

ಇಂಟರ್‌ನೇಶನಲ್ ಹಾರ್ವೆಸ್ಟರ್ಸ್ ಎಕ್ಸ್‌ಪೋರ್ಟ್ ಕಂಪೆನಿ

ಯವರ ಟ್ರಕ್ಕು ಮತ್ತು ಹಡ್ಸನ್ ಕಾರುಗಳು ನಮ್ಮಲ್ಲಿ ದೊರೆಯುವವು. ಮಿತ ಖರ್ಚಿನಿಂದ ಉತ್ತಮ ಲಾಭ ಪಡೆಯಲು ಇವು ಉತ್ತಮ ಟ್ರಕ್ಕುಗಳು. ಪ್ರತಿ ಗಾಲನ್ ಪೆಟ್ರೋಲಿಗೆ ಅತಿ ಹೆಚ್ಚಿನ 'ಮೈಲೇಜ್' ಕೊಡುತ್ತವೆ. ಇವುಗಳ "ಸ್ಪೇರ್ ಪಾರ್ಟ್ಸ್" ಗಳೂ ನಮ್ಮಲ್ಲಿ ದೊರೆಯುವವು. ಹೆಚ್ಚಿನ ಮಾಹಿತಿಗೆ ಈ ಪತ್ರಕ್ಕೆ ಬರೆಯಬಹುದು ಯಾ ಖುದ್ದ ವಿಚಾರಿಸಬಹುದು.

M. U. ACHANNA,
Manager,
"INDIAN AUTOMOBILES" (UDIPI)
Agents,
Hudson Cars and International Trucks,
For
South Kanara & Coorg,
Branch Mercara.

12-6

ವೀರಾಜಪೇಟೆಗೆ 'ಕೊಡಗು' ಪತ್ರಿಕೆಯ ಏಜೆಂಟರು ಶ್ರೀ ಟಿ. ಎನ್. ಗೋವಿಂದರಾಜುರವರು.

ಪರಿಪೂರ್ಣತೆಯ ಆದರ್ಶ ಶ್ರೀಕೃಷ್ಣ.

(ಶ್ರೀ. ಕಾವೇರಿ ಆಶ್ರಮ ವೀರಾಜಪೇಟೆ ಇವರಿಂದ.)

ರಮಣೀಯನಾದ ಶ್ರೀಕೃಷ್ಣನ ದೈವಿಕ ವ್ಯಕ್ತಿತ್ವವು ಮಾನವ ಪ್ರಪಂಚಕ್ಕೊಂದು ಮಹಿಮಾನಿತ್ವದ ಆದೇಶವಾಗಿದೆ. ಮಾನವ ಬುದ್ಧಿಗೆ ಶಕ್ಯವೆನಿಸಿದ ಹಂತದಲ್ಲಿ ತೋರಿ ಬಂದ ಸನಾತನ ಪರಬ್ರಹ್ಮದ ಆವಿಷ್ಕಾರವಾಗಿದೆ. ಇದೇ ಆಗೋಷ್ಟ್ 16 ರಲ್ಲಿ ಶ್ರೀ ಕೃಷ್ಣನ ಜನ್ಮಾಷ್ಟಮಿ ದಿನ ನಡೆಯುತ್ತ.

ಸರ್ವಕಾಲಗಳಲ್ಲಿ ಸರ್ವಾಂಗ ಪರಿಪೂರ್ಣತೆಯ ಆದರ್ಶ ವ್ಯಕ್ತಿ ಎಂದರೆ ಶ್ರೀ ಕೃಷ್ಣನೇ ಸರಿ. ಶ್ರೀ ಕೃಷ್ಣನಿಗಿಂತಲೂ ಉತ್ಕೃಷ್ಟವೆನಿಸಿದ ಸಾಫಲ್ಯತೆ ಐಕ್ಯತೆಗಳಿಗೆ ಆಗರವೆನಿಸಿದ ಮತ್ತು ಸಮತೋಲತೆಯಿಂದ ಕೂಡಿದ ಸರ್ವಾಂಗ ಪರಿಪೂರ್ಣವೆನಿಸಿದ ಒಂದು ವ್ಯಕ್ತಿತ್ವವನ್ನು ಸೃಷ್ಟಿಸುವುದು ಕಲ್ಪನಾ ಶಕ್ತಿಗೂ ಅಸದಳ. ಮಹಾನಾಯಕ, ಪ್ರತಿಭಾನ್ವಿತ ವಿದ್ವಾಂಸ, ಕುಶಲನಾದ ರಾಜ್ಯ ಮಂತ್ರ ಪಾರಂಗತ ದಕ್ಷನಾದ ರಾಜಕಾರಣಿ, ಅತುಳ ಬಾಹು ಬಲ ಸಂಪನ್ನನೆನಿಸಿದ ಯೋಧಾಗ್ರೇಸರ ಎಂಬ ನೆಲೆಗಳು ಮಾತ್ರವಲ್ಲ. ಆಕಾಲದ ಅತಿ ಶ್ರೇಷ್ಠ ತತ್ವವಾದಿಯೆನಿಸಿದ ಯುಗ ಪುರುಷನೆಂದೆನಿಸಿಕೊಂಡ ಮಹಾ ವ್ಯಕ್ತಿಯೆಂದರೆ ಶ್ರೀ ಕೃಷ್ಣನಲ್ಲದೆ ಬೇರೊಬ್ಬನಿಲ್ಲ.

ಶ್ರೀ ಕೃಷ್ಣ ಮಹಾಪುರುಷನು ಮಾನವತೆಯ ದೀನ ಸೇವಕನಂತೆ ತನ್ನ ಸೇವೆಗಳನ್ನು ನಿವೇದಿಸಿದನ; ತನ್ನ ಜೀವಮಾನವನ್ನು ಮಾನವ ಲೋಕದ ಅಭ್ಯುನ್ನತಿಗೆ ಮುಡಿಪಾಗಿರಿಸಿದನ, ಆದರೆ ಪ್ರಪಂಚದಿಂದ ಯಾವ ಲಾಭವನ್ನೂ ಗಳಿಸಿಲ್ಲ. ಆತನಿಗೆ ರಾಜತ್ವದ ಗದ್ದುಗೆಯನ್ನು ನಿವೇದಿಸಿದಾಗ, ತಾನೊಬ್ಬ ರಾಜನಾಗಲು ಒಪ್ಪದಾದ. ಯಾರ ಒಂದು ಕಂಣ ಸನ್ನೆಗೆ ಜಗತ್ತಿನ ಚಕ್ರವರ್ತಿಗಳು ತಮ್ಮ ವೈಭವಯುಕ್ತ ರಾಜ ಶಿರಗಳಿಂದಿಳಿದು, ಆತನ ಪಾದಗಳಲ್ಲಿ ಮಣಿಯುತ್ತಿದ್ದರೋ ಆ ಶ್ರೀ ಕೃಷ್ಣನ ತಾನೊಬ್ಬ ರಾಜನಾಗಲು ಎಂದೂ ಆಕಾಂಕ್ಷಿಸಲಿಲ್ಲ! ಯಾರ ಭೀಕರ ವಿಶ್ವರೂಪವನ್ನು ಕಂಡು ಭೂವ್ಯೋಮಗಳು ಕಂಪಿಸಿದವೋ ಆ ಶ್ರೀ ಕೃಷ್ಣನು ರಾಜಸೂಯ ಯಜ್ಞ ಕಾಲದಲ್ಲ ಅತಿಥಿಗಳ ಪಾದ ಪ್ರಕ್ಷಾಲನೆಯ ಕಾರ್ಯವನ್ನೆಸಗಿದ; ಅತಿಥಿಗಳ ಎಂಜಲು ಎಲೆಗಳನ್ನು ಸ್ವಂತ ಕೈಗಳಿಂದಲೇ ಎತ್ತಿ ಹಾಕಿದ. ಮಹಾ ಯೋಗೀಶ್ವರನಾದ ಕೃಷ್ಣನು ಅರ್ಜುನನ ಕೋರಿಕೆಯಂತೆ, ಪಾರ್ಥ ಸಾರಥಿ ಎಂಬ ಬಿರುದನ ತಳೆದ. ಪ್ರಾಪಂಚಿಕ ವಸ್ತುಗಳಿಂದ ವಿರಕ್ತನಾಗಿ ಸನ್ಯಾಸಿಯ ಆದರ್ಶ ಜೀವನ ನಡೆಸಿದವನಾಗಿರುತ್ತಿದ್ದರೂ, ಆತನು ಎಲ್ಲರಿಗಿಂತಲೂ ದೊಡ್ಡ ಸಂಸಾರಿಯೂ, ತನ್ನ ಕಾಲದ ಬೆಡಗು ಬಿನ್ನಾಣಗಳನ್ನು ಕೈಗೊಂಡವರಲ್ಲಿ ವಿಗಿಲಾದವನೂ ಆಗಿದ್ದ. ತನ್ನದೆಂಬುದೇನೋ ಶ್ರೀ ಕೃಷ್ಣನಿಗಿರಲಿಲ್ಲ. ಆವನ ಮನೆಯು ನಿವೇಶನವಾಗಲೀ ವರುಣನಿಂದ ಎರವು ಪಡೆದವು. ಆದರೂ ಆತನು ಅಖಿಲ ಬ್ರಹ್ಮಾಂಡದ ಸ್ವಾಮಿಯಾಗಿದ್ದ.

ಸೌಜನ್ಯ ಮತ್ತು ಆತ್ಮಾಗುಣಗಳ ಲೋಕಕ್ಕೆ ಒಬ್ಬ ಗೋವಳ ರೂಪದಿನೆನಿಸಿದ ಶ್ರೀ ಕೃಷ್ಣನ ಬಾಲಸಂತ ಧೀಕರನಾ ಗೋಪದ ನಾರಿಯರ ಮನೆಗಳಿಂದ ಹಾಲು ಬೆಣ್ಣೆಗಳನ್ನು ಕದ್ದ. ಆತನು ಜ್ಞಾನದ ಅಮರ ಸಂದೇಶವೆನಿಸಿದ ಗೀತೆಯನ್ನು ದಾನ ಮಾಡಿದ. ಅಖಿಲ ವಿಶ್ವದ, ಸರ್ವ ಚರಾಚರ ಜೀವಿಗಳ ಉದ್ದಿಷ್ಟ, ಲಕ್ಷ್ಯ, ಸಂರಕ್ಷಕ, ಆಶ್ರಯ, ಉಪಕಾರಿ; ಉತ್ಪತ್ತಿ ಸ್ಥಾನ, ಲಯ ಸ್ಥಾನ ಮತ್ತು ಶಾಶ್ವತ ಬೀಜನು ಆಗಿರುವೆನೆಂದು ಆ ಮಹಾಪುರುಷನು ಸಾರಿ ಹೇಳುವನು. ಎಲ್ಲಾ ಜೀವಿಗಳು ಆತನಿಂದಲೇ ಉಗಮಿಸುವುವ; ಆವುಗಳಲ್ಲೆಲ್ಲಾ ಆತನು ವ್ಯಾಪಕನಾಗಿರುವನು. ಆತನು ಸ್ವಯಂ ಪರಿಪೂರ್ಣನಾಗಿದ್ದು ತನ್ನ ಅಂಶ ಒಂದರಿಂದ ನಿಖಿಲ ಬ್ರಹ್ಮಾಂಡದಲ್ಲಿ ವ್ಯಾಪಕನಾಗಿ ವಿರಾಜಮಾನನಾಗಿರುವನು. ಅರ್ಜುನನ ಮೂಲಕ ಸಮಗ್ರ ಮಾನವತೆಗೇ ಜೀವನದ ಸನಾತನ ರಹಸ್ಯಗಳನ್ನು ಪರಮಾತ್ಮನೇ ಶ್ರೀ ಕೃಷ್ಣರೂಪಿಯಾಗಿ ಪ್ರವಚಿಸಿದನು.

ಪರಿಮಿತ ದೃಷ್ಟಿಯಿಂದ ಶ್ರೀ ಕೃಷ್ಣನನ್ನಾಗಲೀ ಆತನ ಸಂದೇಶವನ್ನಾಗಲೀ ಮನನ ಮಾಡಿಕೊಳ್ಳುವುದು ಅಸದಳ. ಮಾನವನು ವಸ್ತುಗಳ ನೈಜ ರೂಪವನ್ನು ನೋಡಿ ಗ್ರಹಿಸಲಾರ. ತನ್ನ ಸ್ವಭಾವವೆಂಬ ಬಂಣದ ಕನ್ನಡಕದಲ್ಲಿ ನೋಡುವನು; ಗ್ರಹಿಸುವನು. ಪ್ರತಿಯೊಬ್ಬ ಮನುಷ್ಯನೂ ತನ್ನ ವೈಯುಕ್ತಿಕ ಅನುಭವಗಳ ಚಿಪ್ಪಿನಿಂದ ಆವೃತನಾಗಿರುವನು. ಅದರಾಚೆಗಿರುವ ತೆಲ್ಲ ಅವನಿಗೆ ಅವಿಧಿತ ಸಂಗತಿಗಳು. ಕೃಷ್ಣನನ್ನೂ, ಗೀತೆಯ ಅಮರ ತತ್ವಗಳನ್ನೂ ತಪ್ಪು ತಿಳಿದುಕೊಳ್ಳಲೂ ಅಥವಾ ಅರಿಯದೇ ಇರಲೂ ಇದೇ ಪ್ರಾಮುಖ್ಯ ಕಾರಣವಾಗಿದೆ.

ತನ್ನ ಸ್ವಂತ ಸ್ವಭಾವಕ್ಕೆ ಸಂಬಂಧಿಸಿದ ಮಾನವನ ಅಜ್ಞಾನವು ಭಯಂಕರವಾದುದು. ಆತನ ಪರಿಮಿತವಾದ ಪ್ರಜ್ಞೆಯನ್ನು ಅಪರಿಮಿತವಾದ ಅಜ್ಞಾನದ ಆವರಣವು ಮುಚ್ಚಿಕೊಂಡಿದೆ. ಅದುದರಿಂದಲೇ ದೇವರು, ಜೀವ, ಪ್ರಪಂಚ, ಸ್ವಾತಂತ್ರ್ಯ, ಪರಿಪೂರ್ಣತೆ, ಮತ್ತು ಅಮರತೆ ಇವುಗಳನ್ನು ಕುರಿತು ಮಾನವನಿಗುಳ್ಳ ಗ್ರಹಿಕೆಗಳು ದುರ್ಮಾರ್ಗವನ್ನು ಅನುಸರಿಸಿವೆ. ಶ್ರೀ ಕೃಷ್ಣನ ತಹ ದೈವಿಕ ಅವತಾರಗಳ ಉದ್ದೇಶವು ಲೋಕದಲ್ಲಿ ಪಸರಿಸಿದ ಅಜ್ಞಾನ ತಿಮಿರದ ನಿರ್ಮೂಲನವೂ, ಕರಿರುಳಲ್ಲಿ ದಾರಿ ತಪ್ಪಿದವರಿಗೆ ಜ್ಞಾನದ ಬೆಳಕನ್ನು ತೋರುವುದೂ ಆಗಿದೆ. ಸಾಕಲ್ಯ ಅಭ್ಯುನ್ನತಿಯ ಮೂಲಕ ಮಾತ್ರ ಇಂತಹ ಉನ್ನತ ತತ್ವಗಳ ಎತ್ತರಗಳನ್ನು ಗ್ರಹಿಸಲು ಸಾಧ್ಯವಿದೆ. ಏಕ ಮುಖವಾದ ಪುರೋಹಿತಿಯು ಜ್ಞಾನವನ್ನು ಒದಗಿಸದು. ಈ ಬಗೆಯಾಗಿ ಪರಿಪೂರ್ಣತೆಯನ್ನು ಸಾಧಿಸಿದುದರ ಆದರ್ಶನೆಂದರೆ ಶ್ರೀ ಕೃಷ್ಣನೇ ಸರಿ. ಪ್ರತಿಯೊಬ್ಬ ಮಾನವನು ಈ ಆದರ್ಶವನ್ನು ಸಾಧಿಸಲು ಪರಿಶ್ರಮಿಸಬೇಕು. ಈ ಆದರ್ಶ ಶಿಖರವನ್ನಡರಲು ಆತನು ಆಶಮಧ್ದನೆನಿಸಿದರೆ, ಆತನಲ್ಲಿ ಧನ, ಧಾನ್ಯ, ಸಂಪತ್ತುಗಳಿದ್ದರೂ ನಿರಪೇಕ್ಷನಾಗುವ ಉದ್ಯಮದಲ್ಲಿ ಆತನು ಸಾರ್ಥಕನೇ ಸರಿ; ಸನಾತನ ಜೀವನದ ಉತ್ತರಾಧಿಕಾರಿಯಾಗಲು ಆತ ಅನರ್ಹನೆನಿಸುವನು.

ಈ ಬಗೆಯ ನೆಲೆಯನ್ನು ಹೊಂದಲು ಮಾನವನು ಒಬ್ಬ ಭಕ್ತನಾಗಲೀ ತತ್ವಜ್ಞಾನಿಯಾಗಲೀ ಅನುಭಾವಿಯಾಗಲೀ ಅಥವಾ ಕರ್ಮ ಕುಶಲನಾಗಲೀ ಆಗಬೇಕೆಂದು ಅರ್ಥವಲ್ಲ. ಈ ಎಲ್ಲಾ ವಿಭಾಗಗಳಲ್ಲಿಯೂ ಆತನು ಪರಿಣತನಾಗಲೇಬೇಕು. ಮೇಲಿನವುಗಳಲ್ಲಿ ಯಾವುದಾದರೂ ಒಂದು ಗುರಿಯನ್ನು ಆರಿಸಿಕೊಂಡು ಅವನ ಪ್ರಾರಂಭದಲ್ಲಿ ಸಾಧನೆಗಳನ್ನು ಕೈಗೊಳ್ಳಬಹುದು. ಆದರೆ ಅನಂತರದ ಹಂತಗಳಲ್ಲಿ ಒಂದು ವಿಭಾಗದಲ್ಲಾದ ಪ್ರಗತಿಯು ಇನ್ನುಳಿದ ವಿಭಾಗಗಳಲ್ಲಿಯೂ ಪ್ರಗತಿಯನ್ನು ಸಾಧಿಸುವುದರ ಆಗತ್ಯತೆಯನ್ನು ಖಚಿತಪಡಿಸುವುದು. ಹೀಗೆ ಸಾಧನೆಗಳ ವಿವಿಧಾಂಗಗಳಲ್ಲಿ ಪಾರಂಗತನೆನಿಸಿಕೊಂಡು, ಶ್ರೀಕೃಷ್ಣನು ಯೋಗಿ, ಜ್ಞಾನಿ, ಕರ್ಮ ಕುಶಲ, ಪ್ರೇಮಾಸ್ಪದನೆನಿಸಿಕೊಂಡ. ಯೋಗೇಶ್ವರ ಮತ್ತು ಜಗದ್ಗುರುವಾಗಿ ಬೆಳಗುತ್ತಿದ್ದನೆ.

ತನ್ನಂತೆಯೇ — ಸಂಪೂರ್ಣತೆಯ ತಂಗ ಶೃಂಗಕ್ಕೇರಬೇಕೆಂದೂ, ಜ್ಞಾನಿಯಾಗಬೇಕೆಂದೂ, ಶಕ್ತಿ ಸಂಪನ್ನನಾಗಬೇಕೆಂದೂ, ಮತ್ತು ಆತ್ಮ ವಿಶ್ವಾಸ ಭರಿತ ಉನ್ನತ ವ್ಯಕ್ತಿಯಾಗಬೇಕೆಂದೂ ಮಾನವನ ಹೃದಯದಲ್ಲಿ ಚಿರೋತ್ಸಾಹವನ್ನು ಪ್ರಚೋದಿಸುವುದೇ ಕೃಷ್ಣಾವತಾರದ ಉದ್ದೇಶವಾಗಿದೆ. ಶ್ರೀ ಕೃಷ್ಣನಂತಹ ಮಹಿಮಾನ್ವಿತ ವಿಭೂತಿಯು ಜಗದ ವಿವಿಧ ಕ್ಲೇಶಗಳನ್ನು ಪರಿಹರಿಸಬಲ್ಲುದು. ಶಾಂತಿ ಸಂತೋಷಗಳನ್ನು ಒದಗಿಸಬಲ್ಲುದು. ಏಕೆಂದರೆ ಶ್ರೀ ಕೃಷ್ಣನ ಸ್ಮೃತಿಯು ಮಾನವನ ಮನಸ್ಸಿನಲ್ಲಿ ಸತ್ಕಲ್ಪತೆಯ ತರಂಗ ಮಾಲೆಗಳನ್ನು ಮೂಡಿಸುವುದಲ್ಲದೆ ಐಕ್ಯ ಮನೋಸ್ಥಿತಿಯನ್ನುಂಟು ಮಾಡುವುದು. ಶ್ರೀ ಕೃಷ್ಣನ ಮಹಿಮಾ ಪೂರ್ಣ ಕಾರ್ಯಕಲಾಪಗಳು ಪಂಡಿತರದ್ದರೂ, ಬಲ ಸಂಪನ್ನರೂ, ಜ್ಞಾನಿಗಳೂ ಆಮರರೂ ಆಗಬೇಕೆಂಬ ಆದಮ್ಯ ಉತ್ಸಾಹವನ್ನು ಕೂಡುವುವು.

ಮಹಾಭಾರತದ ಸಭಾಪರ್ವದಲ್ಲಿ ಯುದ್ಧ ಭಯಂಕರನಾದ ಭೀಷ್ಮನು ಈ ಪ್ರಕಾರ ವಿನೀತ ಧೈರ್ಯದಿಂದ ಹೇಳಿರುವನ. 'ಈ ಪ್ರಪಂಚದಲ್ಲಿ ಪೂಜಾ ಯೋಗ್ಯ ವ್ಯಕ್ತಿಯೆಂದರೆ ಶ್ರೀಕೃಷ್ಣನೇ ಸರಿ. ಶಕ್ತಿ ಪರಾಕ್ರಮಗಳಲ್ಲಿ ಆತನು ಸೂರ್ಯನಂತೆ ಇತರರನ್ನು ಮೀರಿರುವನು. ಆಧಾರ ರಹಿತ ಸ್ಥಾನದಲ್ಲಿ ಸೂರ್ಯರಶ್ಮಿಗಳು ಬೀಳ್ವಂತೆ, ವಾಯುವಿಲ್ಲದೆ ಉಸಿರುಗಟ್ಟುವ ಕೋಣೆಯಲ್ಲಿ ಮಂದಮಾರುತನ್ನು ಚಲಿಸಿದಂತೆ ಶ್ರೀಕೃಷ್ಣನ ಇರವು ಈ ಸಂಪೂರ್ಣ ಸಭೆಯನ್ನೇ ಬೆಳಗಿಸುತ್ತಿದೆ; ಆನಂದಸಾಗರದಲ್ಲಿ ಓಲಾಡಿಸುತ್ತಿದೆ. ಶ್ರೀ ಕೃಷ್ಣನು ನಮಗೆ ಮಾತ್ರವಲ್ಲ; ಮೂಜಗಗಳಿಗೂ ಪೂಜಾರ್ಹನು. ಶಕ್ತಿ ಜ್ಞಾನಗಳ ಆಗರ ಆತನಾಗಿರುವುದರಿಂದ ಸರ್ವ ಜೀವಿಗಳ ಆನಂದದ ಆಶ್ರಯ ಆತನಾಗಿರುವುದರಿಂದ ನಾವು ಶ್ರೀಕೃಷ್ಣನನ್ನು ಪೂಜಿಸುತ್ತೇವೆ; ಸ್ತುತಿಸುತ್ತೇವೆ. ಎಲ್ಲಾ ಉನ್ನತ ಗುಣಗಳ ಸಂದೋಹವನ್ನು ನಾನು ಶ್ರೀಕೃಷ್ಣನಲ್ಲಿ ಕಾಣುತ್ತಿದ್ದೇನೆ. ಶ್ರೀಕೃಷ್ಣನು ಎಲ್ಲರಿಗಿಂತಲೂ ಶ್ರೇಷ್ಠನಾದ ಪರಮ ಗುರುವು; ಆಚಾರ್ಯನು, ಪುರೋಹಿತನು, ಮಿತ್ರನು ಮತ್ತು ಎಲ್ಲರಿಗೆ ಕೈವಲ್ಯವನ್ನೊದಗಿಸುವ ವಿಭೂತಿಪುರುಷನು ಆಗಿರುವನು. ಶ್ರೀಕೃಷ್ಣನನ್ನು ಪೂಜಿಸದವರು ಮಂದಮತಿಗಳೂ ಮತ್ತು ಭಾಗ್ಯಹೀನರೂ ಆಗಿರುವರು.'

ಜೀವನದ ವಿವಿಧಾಂಗ ಸಮನ್ವಿತವಾದ ಆತ್ಮಸಾಕ್ಷಾತ್ಕಾರವನ್ನು ದೈನಂದಿನ ಜೀವನದಲ್ಲಿ ಹೊಂದುವ ಯೋಗದ ಸುಂದರ ಭವ್ಯ ಚಿತ್ರವು ಶ್ರೀಕೃಷ್ಣನ ಜೀವನವಾಗಿದೆ. ಆತನ ಗೀತಾ ಸಂದೇಶದಲ್ಲಿ ಸಾರಿದಂತೆ ಸಂಶ್ಲೇಷಣೆಯ ಯೋಗನಿರತವಾದ ಹಿರಿಯ ಬಾಳನ್ನೇ ಆ ಮಹಾಮಹಿಮನು. ಪಶ್ಚಾದ್ವಿಕಾಸದ ಸಾರಸರ್ವಸ್ವವಾಗಿದೆ ಆತನ ಮಹಾ ಜೀವನ. ಆತನ ಎಳೆನಗೆಯ ಮುಗುಳ ವಿಶ್ವದ ಯಾವುದಾದರೊಂದು ಭಾಗದಲ್ಲಾದ ಮಹಾಪರಿವರ್ತನೆಗಳನ್ನು ಸೂಚಿಸುವುದು. ಉನ್ನತ ಧ್ಯೇಯವಿಲ್ಲದೆ ಆತನು ತನ್ನ ಜೀವನದ ಒಂದು ನಿಮಿಷವನ್ನು ಸಹ ವ್ಯಯಗೊಳಿಸಿಲ್ಲ.

ಶ್ರೀಕೃಷ್ಣನ ಉಪದೇಶಾಮೃತದ ಸಾರಸರ್ವಸ್ವವು ಇದಾಗಿದೆ. 'ನನ್ನನ್ನು ಮಾತ್ರ ಯಾರು ಪೂಜಿಸುವರೋ, ಯಾರು ನನ್ನನ್ನೇ ಧ್ಯಾನಿಸುತ್ತಾ ನನ್ನಲ್ಲೇ ಮನೋಐಕ್ಯವನ್ನು ಸಾಧಿಸಿದವರೋ, ಆ ತಹರ ರಕ್ಷಣೆಯನ್ನು ನಾನೇ ಎಸಗುವೆನು. ನನ್ನನ್ನೇ ಶರಣ ಹೊಂದಿರಿ. ನಿಮ್ಮ ಪಾಪಗಳೆಲ್ಲಾ ಪರಿಹಾರವಾಗುವುವು. ನಿಮ್ಮನ್ನು ಪಂಚಾಸ್ಯಮಾಡಿ ನಗತಕ್ಕವರನ್ನು ಶ್ರದ್ಧಿಸದಿರಿ. ದೇಹಭಾವವನ್ನು ಇಳಿವಗಿಸಿ, ಲಜ್ಜಾಮಮಕಾರಗಳನ್ನು ತೊರೆದು, ಶ್ವಾನ, ಶ್ವಪಚ ಮತ್ತು ಗಾರ್ದಭಗಳ ಮುಂದೆ ಪ್ರಣಮಿಸುವವನೇ ಏಕೆಂದರೆ ಎಲ್ಲಾ ಜೀವಿಗಳಲ್ಲಿಯೂ ನಾನು ನೆಲಸಿರುವೆನು.'

ಭಗವಾನ್ ಶ್ರೀಕೃಷ್ಣನಂತೆ ಸಕಲ್ಯತೆಯ ಉನ್ನತ ಶಿಖರವನ್ನಡರಿ; ಸಂಕುಚಿತ ಚಿತ್ತದ ಆವರಣದಲ್ಲಿ ತೊಳಲದಿ! ಏಕೆಂದರೆ ಪ್ರತಿಯೊಬ್ಬ ಮಾನವನೂ ಸಮಗ್ರ ವಿಶ್ವದ ಒಂದು ಯಥಾಕೃತಿಯಾಗಿದ್ದಾನೆ. ಆದುದರಿಂದ ಜಗತ್ತಿನ ಮಾನವರಲ್ಲಿ ಕಲಹ ಮತ್ಸರಗಳಿಗೆ ಅವಕಾಶವಿಲ್ಲ. ಶ್ರೀಕೃಷ್ಣನಂತೆ ಪ್ರತಿಯೊಬ್ಬ ಮಾನವನೂ ಯಥಾರ್ಥವಾಗಿ ವಿಶ್ವಮಾನವನಾಗಿದ್ದಾನೆ. ಜೀವನದ ಗುರಿಯು ಎಲ್ಲರಿಗೂ ಸಮಾನವಾದುದು. ಅಲೌಕಿಕ ದಿವ್ಯ ಜ್ಞಾನದ ಭೂತಿಯು ಉತ್ಕೃಷ್ಟ ಸ್ಥಾನವು ಪ್ರತಿಯೊಂದು ಜೀವಿಯಲ್ಲಿಯೂ ನೆಲೆಗೊಂಡಿದೆ. ಎಲ್ಲಾ ಜೀವರಾಶಿಗಳ ಹೋರಾಟವು ಆಧ್ಯಾತ್ಮಿಕ ಪರಿಪೂರ್ಣತೆಯನ್ನು ಸಾಧಿಸುವ ಲಕ್ಷ್ಯವನ್ನು ಕುರಿತಾಗಿದೆ. ವಿಶ್ವದ ಎಲ್ಲಾ ಜೀವಿಗಳನ್ನೂ ಪರಸ್ಪರ ಒಂದುಗೂಡಿಸಲಿ; ಆಧ್ಯಾತ್ಮಿಕ ಬಂಧದ ಪ್ರಜ್ಞೆಯು ನಮಗಿರಲಿ; ಶ್ರೀಕೃಷ್ಣ ಪರಮಾತ್ಮನು ನಮ್ಮ ಹೃದಯಗಳನ್ನು ಆಗಸದಷ್ಟು ವಿಶಾಲವಾಗಿರಲಿ; ನಮ್ಮ ಧೀಶಕ್ತಿಯನ್ನು ಪ್ರಭಾವಿತಗೊಳಿಸಲಿ ಮತ್ತು ನಮ್ಮ ಶೀಲ ಸ್ವಭಾವಗಳಲ್ಲಿ ದೈವಿಕತೆ ಮೈದೋರುವಂತೆ ಅನುಗ್ರಹಿಸಲಿ!

ಭಗವಾನ್ ಶ್ರೀಕೃಷ್ಣನ ಅವಿನಾಶಿಯಾದ ಆಶೀರ್ವಾದಗಳು ನಮ್ಮೆಲ್ಲರ ಬೆಂಗಾವಲಿಗಿರಲಿ!

॥ಓಂ ಶ್ರೀಕೃಷ್ಣ ಪರಬ್ರಹ್ಮಣೇ ನಮಃ॥

ಪ್ರತ್ಯೇಕ ಕೊಡಗು ಏಕೆ?

ಕೊಡಗಿನ ಆಯಕಟ್ಟಿನ ಪ್ರಾಮುಖ್ಯತೆ ಮತ್ತು ಆರ್ಥಿಕ ಭದ್ರತೆ.

ಲೇ:— ಶ್ರೀ. ಪಿ. ಐ. ಬೆಳ್ಯಪ್ಪ, ಎಂ. ಎಲ್. ಸಿ.

(ತಾರೀಖು ೨೦—೭—೪೯ರ ಡೆಲ್ಲಿಯ "ಸ್ಟೇಟ್ಸ್‌ಮನ್" ಪತ್ರಿಕೆಯಲ್ಲಿ ಪ್ರಕಟವಾದ ಲೇಖನದ ಸಾರಾಂಶವಿದು.)

ಸ್ವಾತಂತ್ರ್ಯವನ್ನು ಪಡೆದಿರುವ ನಾವು ಹಿಂದೂದೇಶವನ್ನು ಬಲಯುತವಾದ ಮತ್ತು ಘನತೆಯಿಂದ ಕೂಡಿದ ರಾಷ್ಟ್ರವಾಗಿ ಮಾಡಿ ನಮ್ಮ ಮಹಾ ಮುಂದಾಳು ಮಹಾತ್ಮ ಗಾಂಧೀಜಿಯವರ ಆಶಯದಂತೆ ಜಗತ್ತಿನ ಶಾಂತಿಯನ್ನು ರಕ್ಷಿಸಲು ತನ್ನ ಭಾಗದ ಕರ್ತವ್ಯವನ್ನು ಯಶಸ್ವಿಯಾಗಿ ಮಾಡಲು ಅನುವಾಗುವಂತೆ ಶ್ರಮಿಸುವ ಕಡೆಗೆ ಗಮನ ಕೊಡಬೇಕಾಗಿದೆ. ಭಾರತದ ರಾಜ್ಯಘಟನೆಯನ್ನು ರೂಪಿಸುವ ಕಾಲಕ್ಕೆ ಈ ಬಗ್ಗೆ ವಿಶೇಷ ಗಮನವನ್ನೀಯುವದು ಅವಶ್ಯಕ. ಪೂರ್ಣ ಸ್ವಾಯತ್ತತೆಯನ್ನು ಪಡೆದ ದೊಡ್ಡ ದೊಡ್ಡ ಪ್ರಾಂತಗಳಾಗಿ, ಕೇಂದ್ರವು ನಿರ್ಬಲವಾದರೆ ಈ ಧ್ಯೇಯವು ಸಾಧಿಸದು. ಬಲಯುತವಾದ ಸಂಯುಕ್ತ ಕೇಂದ್ರ ಸರಕಾರವು ಇದ್ದು ಸ್ವಾಯತ್ತತೆಯನ್ನು ಪಡೆದಿದ್ದರೂ ಅವಶ್ಯಬಿದ್ದಾಗ ಕೇಂದ್ರದ ಹಿಡಿತಕ್ಕೆ ಒಳಗಾಗಬಲ್ಲ ಚಿಕ್ಕ ಪ್ರಾಂತಗಳೇ ಇಂದು ಬೇಕಾದುದಾಗಿದೆ.

ದೊಡ್ಡ ಪ್ರಾಂತಗಳಲ್ಲಿರುವ ಜನರು ಚಿಕ್ಕ ಚಿಕ್ಕ ಪ್ರಾಂತಗಳನ್ನು ರಚಿಸುವದರ ಸೂಕ್ತತೆ ಮತ್ತು ಸಾಧ್ಯತೆಗಳ ಬಗ್ಗೆ ಸ್ವಾಭಾವಿಕವಾಗಿ ಸಂಶಯ ಪಡುತ್ತಾರೆ. ಉಪಖಂಡವಾಗಿರುವ ೩೦೦ ಮಿಲಿಯ ಜನಸಂಖ್ಯೆಯಿಂದ ಕೂಡಿದ ಭರತ ಖಂಡದಲ್ಲಿ ಕೇವಲ ಲಕ್ಷ ಸಂಖ್ಯೆಗಳಿಂದ ಕೂಡಿದ ಚಿಕ್ಕ ಪ್ರಾಂತಗಳಿರುವದನ್ನು ಸುಲಭದಲ್ಲಿ ಕಲ್ಪಿಸಲೂ ಕೂಡ ಕಷ್ಟ. ಆದರೆ ಇನ್ನು ಚಿಕ್ಕ ಸ್ವತಂತ್ರ ಪ್ರಾಂತಗಳಿಂದ ಕೂಡಿ ದಕ್ಷ ಆಡಳಿತ ನಡೆಸುವ ಸಂಯುಕ್ತ ಅಮೇರಿಕಾ ಮತ್ತು ಸ್ವಿಟ್ಜರ್ಲೆಂಡುಗಳ ಕಡೆಗೆ ನಮ್ಮ ರಾಜಕೀಯವೇತ್ತರು ದೃಷ್ಟಿ ಹರಿಸಬೇಕಾಗಿದೆ.

ಒಂದು ಪ್ರಾಂತದ ಆಡಳಿತವು ಅದರ ಆರ್ಥಿಕ ಸ್ಥಿತಿ ಮತ್ತು ಆರ್ಥಿಕ ಬಲವನ್ನು ಹೆಚ್ಚಿಸಿಕೊಳ್ಳಬಹುದಾದ ಸಾಧ್ಯತೆಯ ಬಗ್ಗೆ ಹೊಂದಿಕೊಂಡಿರುವಷ್ಟು ಅದರ ಜನಸಂಖ್ಯೆ ಮತ್ತು ವಿಸ್ತೀರ್ಣದ ಮೇಲೆ ಹೊಂದಿಕೊಂಡಿಲ್ಲ. ಸ್ವಾವಲಂಬಿಯಾಗಿ ಕೇಂದ್ರ ಸರಕಾರಕ್ಕೆ ಭಾರ ರೂಪವಾಗದೆ ತನ್ನ ಜನತೆಗೆ ಹಿತಕಾರಕವಾದ ಮತ್ತು ದಕ್ಷವಾದ ಆಡಳಿತವನ್ನು ನಡೆಸಲು ಶಕ್ಯವಾದ ಚಿಕ್ಕ ಪ್ರಾಂತಗಳಿದ್ದರೆ ಅಂಥಾ ಪ್ರಾಂತಗಳಿಗೆ ಒಂದು ಯಾ ಎರಡು ವರುಷಗಳ ವರೆಗೆ ಬೇರೆ ಆಡಳಿತ ನಡೆಸುವ ಅನುವನ್ನು ಹಿಂದೂದೇಶದ ಮುಂದಾಳುಗಳು ಕೊಡಬೇಕು.

ದಕ್ಷಿಣ ಹಿಂದೂಸ್ಥಾನದಲ್ಲಿ ಮೇಲಿನ ಅವಶ್ಯಕಗಳನ್ನು ಸಲ್ಲಿಸುವ ಚೀಫ್ ಕಮಿಷನರ ಪ್ರಾಂತ ಒಂದಿದೆ. ೧೫೮೦ ಚದರ ಮೈಲು ವಿಸ್ತಾರವಿದ್ದು ಸುಮಾರು ಎರಡು ಲಕ್ಷ ಜನ ಸಂಖ್ಯೆಯಿಂದ ಕೂಡಿ ಪಶ್ಚಿಮ ಘಟ್ಟಗಳಲ್ಲಿದ್ದು, ದ. ಕನ್ನಡ, ಮಲಬಾರು, ಮದ್ರಾಸು ಮತ್ತು ಮೈಸೂರುಗಳಿಂದ ಸುತ್ತುವರಿಯಲ್ಪಟ್ಟ ಕೊಡಗು. ಅದರ ಪ್ರಾಕೃತಿಕ ಸೌಂದರ್ಯ ಮತ್ತು ಸೊಬಗಿನಂತೆಯೇ ಅದರ ಮಣ್ಣು ಫಲವತ್ತಾದುದಾಗಿದೆ. ಅದರ ಪ್ರಾಮುಖ್ಯ ಬೆಳೆಗಳೆಂದರೆ ಬತ್ತ, ಕಾಫಿ, ಏಲಕ್ಕಿ, ಒಳ್ಳೆಮೆಣಸು, ಕಿತ್ತಳೆ, ರಬ್ಬರ್, ಟೀ. ಈ ಎಲ್ಲಾ ಬೆಳೆಗಳಿಗೂ ಮಳೆಯ ನೀರೇ ಕಾರಣವಾಗಿದೆ. ಕೊಡಗಿಗೆ ಸರಾಸರಿ ವರ್ಷಕ್ಕೆ ೧೫೦ ಇಂಚು ಮಳೆ ಬೀಳುತ್ತದೆ.

ಕೊಡಗಿನ ಹಿಂದಿನ ಚರಿತ್ರೆಯು ಆಶ್ಚರ್ಯಕಾರಕ ಕಥೆಗಳಿಂದ ತುಂಬಿದೆ. ಪ್ರಾರಂಭ ಕಾಲದಲ್ಲಿ ಪಾಳೆಯಗಾರರು ದೇಶದ ವಿವಿಧ ಭಾಗಗಳಲ್ಲಿ ತಮ್ಮ ವರ್ಚಸ್ಸನ್ನು ಬೀರಿದ್ದರು. ಆದರೆ ನಂತರ ೧೬೦೦ರಿಂದ ೧೮೩೪ರ ವರೆಗೆ ಲಿಂಗಾಯತ ರಾಜರ ಆಡಳಿತದಲ್ಲಿದ್ದು ೧೮೩೪ರಲ್ಲಿ ಬ್ರಿಟಿಷರ ವಶವಾಯಿತು. ಅದರ ನಂತರ ಅದು ಚೀಫ್ ಕಮಿಷನರ ಪ್ರಾಂತವಾಗಿ ಪ್ರತ್ಯೇಕವಿದೆ. ಈ ರೀತಿ ಕೊಡಗು ಪ್ರತ್ಯೇಕ ರಾಜಕೀಯ ಘಟಕವಾಗಿ ಕಳೆದ ಶತಮಾನಗಳಿಂದ ಇದೆ. ಕೊಡಗಿನ ಜನರ ಚಳವಳಿಯ ಕಾರಣವಾಗಿ ೧೯೨೪ರಲ್ಲಿ ಒಂದು ಶಾಸನ ಸಭೆಯು ಸ್ಥಾಪಿಸಲ್ಪಟ್ಟಿತು. ಈ ಸಭೆಗೆ ಹೆಚ್ಚಿನ ಅಧಿಕಾರಗಳಿಲ್ಲದಿದ್ದರೂ ಜನರ ಪ್ರತಿನಿಧಿಗಳು ಉತ್ತಮ ತರಗತಿಯ ಶಾಸನ ಸಭಾ ರೀತಿಯನ್ನು ಅನುಸರಿಸಿ ಗೌರವ ತಂದಿದ್ದಾರೆ.

ಒಟ್ಟಾಗಿ ಕೊಡಗಿನ ಜನರು ತುಲನಾತ್ಮಕ ದೃಷ್ಟಿಯಿಂದ ನೆರೆ ಪ್ರಾಂತಗಳ ಸಹೋದರರಿಗಿಂಥಾ ಆರ್ಥಿಕ ಮತ್ತು ಸಾಮಾಜಿಕ ದೃಷ್ಟಿಯಿಂದ ಮುಂದುವರಿದವರಾಗಿದ್ದಾರೆ. ಕೊಡಗಿನ ಪ್ರಾಯಃ ನಿವಾಸಿಗಳಲ್ಲಿ ಬಹು ಮತದವರು ಚಿಕ್ಕ ಹಿಡುವಳಿದಾರರಾಗಿ ತಮ್ಮ ಭೂಮಿಯನ್ನು ತಾವೇ ವ್ಯವಸಾಯ ಮಾಡುತ್ತಾರೆ. ಇಲ್ಲಿ ಕೆಲಸ ಮಾಡದೆ ಇತರರ ದುಡಿಮೆಯಿಂದ ಜೀವಿಸುವವರಿಲ್ಲ. ಆಹಾರದ ಮಟ್ಟಿಗೆ ಕೊಡಗು ಉಳುವರಿ ಪ್ರಾಂತ. ಕೊಡಗಿನಲ್ಲಿ ವಿದ್ಯಾವಂತರ ಸಂಖ್ಯೆ ಶೇಕಡ ೨೩.೮ ಇದ್ದು ಹಿಂದೂದೇಶದಲ್ಲಿ ಪ್ರಧಾನವಾಗಿ ಕೇರಳ ಒಂದಕ್ಕೆ ಮಾತ್ರ ಎರಡನೆಯದಾಗಿದೆ. ಸ್ವಚ್ಛತೆಯ ಪಟ್ಟಿಯಲ್ಲಿ ಕೊಡಗು ಹಿಂದೂದೇಶದಲ್ಲಿ ದ್ವಿತೀಯ ಸ್ಥಾನವನ್ನು ಪಡೆದಿದೆ. ಕೊಡಗು ಸಹಕಾರ ಚಳವಳಿಯನ್ನು ಅನಾದಿಯಿಂದಲೇ ಆದರ್ಶ ಮಾರ್ಗದಲ್ಲಿ ನಡೆಸಿಕೊಳ್ಳುತ್ತಿದೆ. ಪ್ರತಿ ಗ್ರಾಮಕ್ಕೂ ಇಂದು ಸಹಕಾರ ಸಂಘಗಳಿವೆ. ಜನ ಸಂಖ್ಯೆಯ ಶೇಕಡ ೫೦ರಷ್ಟು ಜನರು ಸಹಕಾರಿ ಸದಸ್ಯರಾಗಿದ್ದು ಹೊರಗಿನಿಂದ ಬಂದ ಸಹಕಾರ ಮುಂದಾಳುಗಳ ಪ್ರಶಂಸೆಯನ್ನು ಪಡೆದಿದೆ. ಇದಲ್ಲದೆ ಕೊಡಗು ಇನ್ನೂ ಹಿಂದಿನ ಗ್ರಾಮ ಪಂಚಾಯಿತ ಮಾದರಿಯನ್ನು ಅಲ್ಲಲ್ಲಿ ಉಳಿಸಿಕೊಂಡಿದೆ. ಈ ವಿಚಾರಗಳಿಂದ ಗಾಂಧೀ ಯೋಜನೆಯ ಗ್ರಾಮ ಪಂಚಾಯಿತ ಆಡಳಿತಕ್ಕೆ ಕೊಡಗು ಆದರ್ಶ ಪ್ರಾಂತವಾಗಿದೆ.

ಕೊಡಗಿಗೆ ತನ್ನದೇ ಆದ ಸಂಸ್ಕೃತಿ, ಪರಂಪರೆ ಮತ್ತು ವ್ಯಕ್ತಿತ್ವವಿದೆ. ಕೊಡಗಿನವರ ಸಂಪ್ರದಾಯ, ನಡೆನುಡಿ, ಕಲೆ, ಜೀವನ ಮಾದರಿ ಮತ್ತು ಉಡುಪು ಪ್ರತ್ಯೇಕವಿದ್ದು ಆಧುನಿಕವಾಗಿವೆ. ಅವರು ಸೈನಿಕ ವರ್ಗದವರಾಗಿದ್ದಾರೆ. ವಿಧವಾ ವಿವಾಹ, ಬಾಲ್ಯ ವಿವಾಹ, ಕನ್ಯಾಶುಲ್ಕ ಪದ್ಧತಿ, ರೈತವಾರಿ ಪದ್ಧತಿ, ಭಿಕ್ಷುಕರ ಸಮಸ್ಯೆ ಈ ಮೊದಲಾದ ಯಾವ ಸುಧಾರಣೆಗಳನ್ನು ತರಲು ಕೇಂದ್ರ ಸರಕಾರವು ಈಗ ನಿಯಮಗಳನ್ನು ಮಾಡುತ್ತಿದೆಯೋ ಆ ಸುಧಾರಣೆಗಳು ಅನೇಕ ಶತಮಾನಗಳಿಂದಲೇ ಕೊಡಗಿನಲ್ಲಿ ಇವೆ.

ಕೊಡಗಿನ ಜನರು ಹಿಂದೂದೇಶದ ಸೈನ್ಯ ಶಕ್ತಿಗೆ ತಮ್ಮ ಶಕ್ತಿ ಮೀರಿ ಸಹಾಯ ಮಾಡಿದ್ದಾರೆ. ಕೊಡಗು ಕಳೆದ ಎರಡು ಯುದ್ಧಗಳಲ್ಲಿ ಸೈನ್ಯಕ್ಕೆ ಕಳುಹಿಸಿದ ಯೋಧರ ಸಂಖ್ಯೆಯನ್ನು ಅದರ ಚಿಕ್ಕ ಜನ ಸಂಖ್ಯೆಯ ದೃಷ್ಟಿಯಿಂದ ತುಲನೆ ಮಾಡಿ ನೋಡಿದರೆ ಅದಕ್ಕೆ ಎಲ್ಲಿಯೂ ಎಣೆ ಇರಲಾರದು. ಈ ಚಿಕ್ಕ ಪ್ರಾಂತವು ಸ್ವತಂತ್ರ ಹಿಂದೂದೇಶದ ಪ್ರಥಮ ಸೇನಾನಿಯಾದ ಜನರಲ್ ಕಾರ್ಯಪ್ಪನವರನ್ನೂ, ಶ್ರೀ ಕೆ. ಎಸ್. ತಿಮ್ಮಯ್ಯನವರಂಥವರನ್ನೂ ಒದಗಿಸಿದ್ದು ಹೆಮ್ಮೆಯ ಮಾತಾಗಿದೆ. ಕೊಡಗಿನ ಗಂಡಸರು ಮತ್ತು ಹೆಂಗಸರು ಕೊಡಗಿನ ಮತ್ತು ಹೊರಗಿನ ಆಡಳಿತ ಕ್ಷೇತ್ರದಲ್ಲಿ ತಮ್ಮ ವೈಶಿಷ್ಟ್ಯಪೂರ್ಣ ದಕ್ಷತೆಗಳನ್ನು ತೋರಿಸಿದ್ದಾರೆ. ಕೊಡಗು ದಕ್ಷಿಣ ಹಿಂದೂಸ್ತಾನದ ಒಂದು ಆಯಕಟ್ಟಿನ ಸ್ಥಳದಲ್ಲಿದ್ದು ಗಂಡಾಂತರದ ಕಾಲಕ್ಕೆ ಕೇಂದ್ರ ಸರಕಾರಕ್ಕೆ ಅತ್ಯುಪಯುಕ್ತವಾಗಬಹುದು.

ಚೀಫ್ ಕಮಿಷನರ ಪ್ರಾಂತಗಳಲ್ಲೆಲ್ಲಾ ಕೊಡಗೊಂದೇ ಆರ್ಥಿಕ ದೃಷ್ಟಿಯಿಂದ ಸ್ವಾವಲಂಬಿಯಾಗಿದೆ. ೧೯೩೪ರಿಂದ ಈ ಉಳುವರಿ ಬಜೆಟ್ಟುಗಳನ್ನು ತೋರಿಸಿ ಜಗತ್ತಿನ ಆರ್ಥಿಕ ಮುಗ್ಗಟ್ಟಿನ ಕಾಲದ ಕೆಲವು ವರ್ಷಗಳು ಮಾತ್ರ ಆರ್ಥಿಕ ತೊಂದರೆಯಲ್ಲಿತ್ತು. ೧೯೩೪ರಿಂದ—೧೯೪೭ರ ವರೆಗೆ ಅಂದರೆ ಕೇಂದ್ರದಿಂದ ಈ ಪ್ರಾಂತದ ಆರ್ಥಿಕ ಸಂಬಂಧವನ್ನು ಬೇರೆ ಮಾಡುವ ಕಾಲಕ್ಕೆ ಕೊಡಗು ತನ್ನ ವಾರ್ಷಿಕ ಉಳಿತಾಯದ ಒಂದುವರೆಕೋಟಿ ರೂಪಾಯಿಗಳನ್ನು ಕೇಂದ್ರ ಸರಕಾರಕ್ಕೆ ಒಪ್ಪಿಸಿದೆ. ೧೯೨೪ರಲ್ಲಿ ಶಾಸನ ಸಭೆಯನ್ನು ಉದ್ಘಾಟಿಸಿದಾಗ ಈ ಪ್ರಾಂತಕ್ಕೆ ಯಾವದೇ ಪ್ರಾರಂಭ ಶಿಲ್ಕು ಕೊಡಲ್ಪಡಲಿಲ್ಲ. ಕೊಡಗಿನ ವಾರ್ಷಿಕ ಸರಾಸರಿ ಉತ್ಪತ್ತಿಯು ೪೦ ಲಕ್ಷವಿದ್ದು ಖರ್ಚು ೩೫ ಲಕ್ಷವಿದೆ. ಈಗ ಕೊಡಗಿನ ಉಳುವರಿ ೫೦ ಲಕ್ಷಕ್ಕೂ ಮೀರಿ ನಿಂತಿದೆ.

ಕೊಡಗಿನ ಆದಾಯವನ್ನು ಉತ್ತಮಗೊಳಿಸಲು ಅನೇಕ ಮಾರ್ಗಗಳಿವೆ. ಕೊಡಗಿನ ಅರಣ್ಯಗಳಲ್ಲಿ ಗಂಧದಮರ, ತೇಗ, ಬೀಟೆ ಮುತ್ತಿತರ ಬೆಲೆ ಬಾಳುವ ಮರಗಳು ತುಂಬಿಕೊಂಡಿವೆ. ಈ ಅರಣ್ಯಗಳ ಸರಿಯಾದ ಉಪಯೋಗ ಈವರೆಗೆ ಆಗಲಿಲ್ಲ. ಹಾಗಾಗಿ ಶಾಸ್ತ್ರೀಯ ರೀತಿಯಲ್ಲಿ ಇಂಡಿಯಾ ಸರಕಾರದ ನಿಶ್ಚಯದಂತೆ ಮರಗಳನ್ನು ಉಪಯೋಗಿಸಿದರೆ ಕೊಡಗಿಗೆ ಇದರಿಂದ ದೊಡ್ಡ ವರಮಾನವು ಬರಲಿದೆ. ಕೊಡಗು ಕಂದಾಯ ಕಡಿಮೆ ಇರುವ ಪ್ರಾಂತ. ಭೂಕಂದಾಯವು ಬಹಳ ಕಡಿಮೆ. ಕಾಫಿ ಮತ್ತು ಕಿತ್ತಳೆ ಬೆಳೆಯುವ ಪ್ರಾಂತವಾಗಿ ವ್ಯವಸಾಯ ಆದಾಯ ತೆರಿಗೆಯ ಉತ್ಪತ್ತಿಯಿಂದ ಈ ನಿರೋಧ ನಷ್ಟವನ್ನು ಭರ್ತಿ ಮಾಡಿಕೊಳ್ಳಬಹುದು. ಮಾರಾಟ ತೆರಿಗೆಯಿಂದಲೂ ಆದಾಯ ಬರಲಿದೆ. ಈ ಪ್ರಾಂತದಿಂದ ಕೇಂದ್ರಕ್ಕೆ ಹೋಗುವ ಎಕ್ಸೈಸ್ ಉತ್ಪತ್ತಿ, ಆದಾಯ ತೆರಿಗೆಗಳ ಶೇಕಡ ೫೦ರಂತೆ ಈ ಪ್ರಾಂತಕ್ಕೆ ಕೊಟ್ಟರೆ ೧೫ ಲಕ್ಷ ಬರಬೇಕಾದುದು ಈ ಪ್ರಾಂತದ ಹಕ್ಕಾಗಿದೆ. ಇದಲ್ಲದೆ ಕೊಡಗಿನಲ್ಲಿ ಕೈಕೊಳ್ಳಲು ಅವಕಾಶವಿರುವ ಹೈಡ್ರೋ ಎಲೆಕ್ಟ್ರಿಕ್ ಯೋಜನೆಯಿಂದಲೂ ವರಮಾನ ಬರಬಹುದು. ಕೊಡಗಿನ ಆರ್ಥಿಕ ಸ್ಥಿತಿಯು ಬಹು ಚೆನ್ನಾಗಿದೆ. ಅದು ಕೇಂದ್ರದಿಂದ ಆಳಲ್ಪಡುವ ಇತರ ಪ್ರಾಂತಗಳಂತೆ ಕೇಂದ್ರಕ್ಕೆ ಈ ವರೆಗೆ ಹೊರೆಯಾಗಿಲ್ಲ. ಮುಂದೆಯೂ ಹೊರೆಯಾಗಲಾರದು.

ನಮ್ಮ ದೇಶದ ಮಹಾಮುಂದಾಳುಗಳೊಬ್ಬರು ಒಂದು ಸಮ್ಮೇಳನದಲ್ಲಿ ವಿವರಿಸಿದಂತೆ ಒಂದು ಪ್ರಾಂತವು ಪ್ರತ್ಯೇಕವಿರಲು ಅದರ ವಿಸ್ತಾರ ಯಾ ಜನಸಂಖ್ಯೆಯೇ ಪ್ರಮುಖ ತತ್ವವಲ್ಲ; ಬದಲು ತನ್ನ ಜನತೆಗೆ ಆಧುನಿಕ ಮಟ್ಟದ ಆರ್ಥಿಕ ಮತ್ತು ಸಾಮಾಜಿಕ ಜೀವನವನ್ನು ಒದಗಿಸಿಕೊಡುವದೇ ಆಗಿದೆಯೆಂಬ ತತ್ವದಿಂದ ಕೊಡಗು ವಿಸ್ತೀರ್ಣ ಮತ್ತು ಜನಸಂಖ್ಯೆಯಲ್ಲಿ ಚಿಕ್ಕದಾಗಿದ್ದರೂ ಹಿಂದೂದೇಶದ ಬಹುತೇಕ ಪ್ರಾಂತಗಳಿಗಿಂತಲೂ ಉತ್ತಮವೂ, ಆಧುನಿಕವೂ ಆಗಿರುವ ಆರ್ಥಿಕ ಮತ್ತು ಸಾಮಾಜಿಕ ಜೀವನವನ್ನು ಹೊಂದಿದ್ದು ಕೊಡಗು ಪ್ರತ್ಯೇಕ ಪ್ರಾಂತವಾಗಿ ಉಳಿಯಲು ಸರ್ವ ಯೋಗ್ಯತೆಯನ್ನು ಪಡೆದು ಅರ್ಹವಾಗಿದೆ.

ಈ ಸೂಕ್ತ ಕಾರಣಗಳಿಂದಾಗಿಯೆ - ಕೊಡಗಿನ ಬಹುಮತ ಜನರು ಕೊಡಗು ಪ್ರತ್ಯೇಕ ಪ್ರಾಂತವಾಗಿದ್ದು ಜವಾಬ್ದಾರಿ ಸರಕಾರವನ್ನು ಪಡೆಯಬೇಕೆಂದು ಉತ್ಕಟ ಇಚ್ಛೆ ಉಳ್ಳವರಾಗಿರುವರಾಗಿದೆ. ಕೇಂದ್ರದಿಂದ ಆಳಲ್ಪಡುವ ಈ ಪ್ರಾಂತಗಳ ಭವಿಷ್ಯ ನಿರ್ಣಯವು ಕೇಂದ್ರ ಶಾಸನ ಸಭೆಗೆ ಬಿಡಲ್ಪಟ್ಟಿರುವದರಿಂದ ಕೊಡಗಿನ ಜನರು—ಕೊಡಗನ್ನು ಜವಾಬ್ದಾರಿ ಸರಕಾರವಿರುವ ಪ್ರತ್ಯೇಕ ಆಡಳಿತ ಘಟಕವಾಗಿ ಇಟ್ಟುಕೊಳ್ಳಬೇಕೆಂಬ ತಮ್ಮ ಆಶೆಯ ಬಗ್ಗೆ ನ್ಯಾಯವಾದ ತೀರ್ಮಾನವು ದೊರೆಯುವದೆಂದು ಊಹಿಸಿದ್ದಾರೆ. ಜನತೆಯ ಅಭಿಪ್ರಾಯವನ್ನು ತಿಳಿಯದೆ ಬೇರೆ ಯಾವದೇ ತೀರ್ಮಾನವಾದರೆ ಅದು ಕೊಡಗಿಗೂ, ಹಿಂದೀ ರಾಷ್ಟ್ರಕ್ಕೂ ಹಾನಿಕಾರಕವಾಗುವದು.

ಕೊಡಗು

ತಾ. ೨೨-೮-೧೯೪೭ನೇ ಶುಕ್ರವಾರ

ಕಾಶ್ಮೀರ.

ಕಳೆದ ಸಾರಿ ಕಾಶ್ಮೀರದ ವಿಚಾರ ನಾವು ಬರೆದಾಗ ಕಾಶ್ಮೀರದ ಪ್ರಶ್ನೆಯು ಸಮರ್ಪಕವಾಗಿ ತೀರ್ಮಾನವಾಗುವ ಚಿಹ್ನೆಗಳಿಲ್ಲವೆಂದು ಬರೆದಿದ್ದೆವು. ಈ ಅಭಿಪ್ರಾಯವನ್ನು ಇತ್ತೀಚಿನ ಘಟನೆಗಳು ಸಮರ್ಥಿಸುತ್ತಿವೆ. ಸಂಯುಕ್ತ ರಾಷ್ಟ್ರಸಂಘದ ಸಂಧಾನ ಸಮಿತಿಯು ಕಾಶ್ಮೀರಕ್ಕೆ ಬಂದು ಸಂಧಾನದ ಪ್ರಯತ್ನ ನಡೆಸಿದಾಗ ಅವರ ಮುಂದೆ ಹಿಂದೀ ಸರಕಾರವು ಇಟ್ಟ ಎರಡು ಸಮಸ್ಯೆಗಳು ಇನ್ನೂ ಬಗೆಹರಿಯದೆ ಉಳಿದಿವೆ. ಈ ಕಾರಣದಿಂದಾಗಿಯೇ ಕಾಶ್ಮೀರದ ಪ್ರಶ್ನೆ ಸೂಕ್ತ ರೀತಿಯಿಂದ ಬಗೆಹರಿಯುವ ಸಾಧ್ಯತೆಯು ದೂರವಾಗುತ್ತಿದೆ.

ಕಾಶ್ಮೀರದ ಭವಿಷ್ಯವನ್ನು ನಿರ್ಣಯಿಸುವ ಹಕ್ಕನ್ನು ಅಲ್ಲಿಯ ಜನತೆಗೆ ಬಿಟ್ಟು ನ್ಯಾಯ ಸಮರ್ಪಕವಾದ ಮತದಾನ ಪದ್ಧತಿಯಿಂದ ಅವರ ಅಭಿಪ್ರಾಯವನ್ನು ತಿಳಿದು ಬಹುಮತ ತೀರ್ಮಾನದಂತೆ ಪ್ರಾಂತದ ಭವಿಷ್ಯ ನಿರ್ಣಯಿಸಬೇಕೆಂಬ ತತ್ವವನ್ನು ಹಿಂದೀ ಮತ್ತು ಪಾಕಿಸ್ಥಾನ ಸರಕಾರಗಳು ಒಪ್ಪಿವೆ. ಈ ಚುನಾವಣೆಯನ್ನು ಸುಗಮವಾಗಿ ನಡೆಸಲು ಬೇಕಾದ ವಾತಾವರಣವನ್ನು ಏರ್ಪಡಿಸುವದೇ ಸಂಯುಕ್ತ ರಾಷ್ಟ್ರ ಸಂಘದ ಸಂಧಾನ ಸಮಿತಿಯ ಪ್ರಾಮುಖ್ಯ ಕೆಲಸವಾಗಿದೆ. ಈ ದೃಷ್ಟಿಯಿಂದಲೇ ಅವರು ಈ ಎರಡು ಸರಕಾರಗಳ ಜತೆ ಮಾತುಕತೆ ಪ್ರಾರಂಭಿಸಿದರು.

ಕಾಶ್ಮೀರದ ಕೆಲವು ಭಾಗಗಳನ್ನು ಪಾಕಿಸ್ಥಾನ ಸೈನ್ಯಗಳು ಹಿಡಿದಿದ್ದು, ಈಗ ಅವರ ಹಿಂತೆಗೆದು ಹೋದರೂ ಆ ಭಾಗಗಳಲ್ಲಿ ಅಝಾದ್ ಕಾಶ್ಮೀರ ಸೈನ್ಯದ ಪ್ರಭಾವ ಇದೆ. ಆ ಭಾಗಗಳಲ್ಲಿರುವ ಅಝಾದ್ ಕಾಶ್ಮೀರ ಸೇನೆಯನ್ನು ವಿಸರ್ಜಿಸಬೇಕೆಂದು ಹಿಂದೀ ಸರಕಾರದ ವಾದವಾಗಿದೆ. ಈ ಸೈನ್ಯದಲ್ಲಿ ಸುಮಾರು ೩೦೦೦೦ ಜನರ ೩೫ ಬೆಟಾಲಿಯನ್‌ಗಳಿವೆ. ಇವರೆಲ್ಲರೂ ಕಾಶ್ಮೀರದ ನಿವಾಸಿಗಳಲ್ಲ. ಹೊರಗಿನ ಗುಡ್ಡಗಾಡಿನಿಂದ ಧಾಳಿಯ ಕಾಲಕ್ಕೆ ಬಂದವರು. ಕಾಶ್ಮೀರದ ಭವಿಷ್ಯ ತೀರ್ಮಾನದ ಕಾಲಕ್ಕೆ ಇವರು ಅಲ್ಲಿದ್ದರೆ ಮತದಾನವು ನ್ಯಾಯದೃಷ್ಟಿಯಿಂದ ನಡೆಯಲಿಕ್ಕಿಲ್ಲ. ಈ ಸೈನ್ಯವನ್ನು ವಿಸರ್ಜಿಸಿ ಅವರೆಲ್ಲರನ್ನೂ ಅಲ್ಲೇ ಇರಗೊಡದಿರುವದರಿಂದ ಹಾನಿಯಿದೆ. ಈ ಸೈನ್ಯದಲ್ಲಿ ಯಾರು ಕಾಶ್ಮೀರದ ನಿವಾಸಿಗಳೋ ಅವರಿಗೆ ಮಾತ್ರ ಮತದಾನದ ಅಧಿಕಾರವಿರಬೇಕು. ಧಾಳಿಯ ಕಾಲಕ್ಕೆ ಹೆದರಿ ಆ ಭಾಗಗಳಿಂದ ಓಡಿಹೋಗಿರುವ ಮೂಲ ನಿವಾಸಿಗಳು ಹಿಂದಕ್ಕೆ ಬರುವಂತೆ ಏರ್ಪಡಿಸಿ ಅವರ ಅಭಿಪ್ರಾಯವನ್ನು ತಿಳಿಯುವ ಏರ್ಪಾಡಾಗಬೇಕು. ಇದು ಹಿಂದೀ ಸರಕಾರದ ವಾದ.

ಕಡಿಮೆ ಜನ ಸಂಖ್ಯೆ ಇರುವ ಕಾಶ್ಮೀರದ ಉತ್ತರ ಭಾಗದ ರಕ್ಷಣೆಯ ಬಗೆ ಆತಂಕ ಸೇರಿಸಿ ಕೊಂಬುವದು. ಹಿಂದೀ ಸರಕಾರದ ಮತ್ತೊಂದು ವಾದವಾಗಿದೆ. ಈ ಭಾಗವು ಘಟ್ಟ ಪ್ರದೇಶವಾಗಿದ್ದು ಜನ ಸಂಖ್ಯೆ ಬಹು ಕಡಿಮೆ. ಪಾಕಿಸ್ಥಾನ ಮತ್ತು ಅಝಾದ್ ಕಾಶ್ಮೀರ ಸೇನೆಗಳು ಹಿಂತೆಗೆಯುಲ್ಪಟ್ಟ ನಂತರ ಈ ಭಾಗದ ಆಡಳಿತದ ಬಗ್ಗೆ ತಕರಾರು ನಡೆಯುತ್ತಿದೆ. ಸ್ವಾಭಾವಿಕವಾಗಿ ಇದು ಆಡಳಿತ ದೃಷ್ಟಿಯಿಂದ ಜಮ್ಮು ಮತ್ತು ಕಾಶ್ಮೀರ ಸರಕಾರದ ಕೈಕೆಳಗೆ ಬರಬೇಕಿದೆ. ಮಧ್ಯ ಏಷ್ಯಕ್ಕೆ ಈ ಮೂಲಕವೇ ವ್ಯಾಪಾರ ವಹಿವಾಟಿನ ದಾರಿ ಇರುವದರಿಂದ ಇವುಗಳ ರಕ್ಷಣೆಯ ಜವಾಬ್ದಾರಿ ಹಿಂದೀ ಸರಕಾರಕ್ಕಿರಬೇಕಾಗಿದೆ.

ಹಿಂದೀ ಸರಕಾರದ ನ್ಯಾಯಬದ್ಧವಾದ ಈ ಎರಡು ಕೋರಿಕೆಗಳು ಸಮರ್ಪಕವಾಗಿ ಬಗೆಹರಿಯದಿದ್ದರೆ ನ್ಯಾಯ ರೀತಿಯ ಮತಗಣನೆಯು ಕಾಶ್ಮೀರದಲ್ಲಿ ನಡೆಯಲಾರದು. ಶಸ್ತ್ರ ಸಜ್ಜಿತ ಅಝಾದ್ ಕಾಶ್ಮೀರ ಸೇನೆಯು ಇರುವ ವರೆಗೆ ಆಯಾ ಭಾಗಗಳಲ್ಲಿ ಮತದಾನವು ಸರಿಯಾಗಿ ನಡೆಯಲಾರದು. ಈ ಬಗ್ಗೆ ಮಾತುಕತೆಗಳು ನಡೆದಿದ್ದು ಈ ವರೆಗೆ ಏನೂ ಫಲಕಾರಿ ಆಗಿಲ್ಲ.

ಸಂಯುಕ್ತ ರಾಷ್ಟ್ರ ಸಂಘದ ಸಂಧಾನ ಸಮಿತಿಯವರ ಆಶ್ರಯದಲ್ಲಿ ಈ ಬಗ್ಗೆ ಸಮ್ಮೇಳನವೊಂದು ಏರ್ಪಡಿಸಲ್ಪಟ್ಟಿತ್ತು. ಆದರೆ ಇತ್ತಲಾಗಿ ಆ ಸಮ್ಮೇಳನ ಕೂಡುವದಿಲ್ಲವೆಂದು ಸಂಯುಕ್ತ ರಾಷ್ಟ್ರ ಸಂಘವೇ ಪ್ರಕಟಿಸಿದ್ದು ಇಂಡಿಯಾ ಸರಕಾರಕ್ಕೆ ಆಶ್ಚರ್ಯವನ್ನುಂಟುಮಾಡಿದೆ. ಈ ರೀತಿ ಒಪ್ಪಂದದ ಏರ್ಪಾಡು ನಿಂತ ಕಾರಣ ಮುಂದೆ ಕಾಶ್ಮೀರದಲ್ಲೇನಾದೀತು ಎಂಬ ಪ್ರಶ್ನೆ ಎಲ್ಲರ ಮುಂದೆ ನಿಂತಿದೆ. ಇತ್ತಲಾಗಿ ಬರುತ್ತಿರುವ ವಾರ್ತೆಗಳ ಪ್ರಕಾರ ಸಂಯುಕ್ತ ರಾಷ್ಟ್ರ ಸಂಘದವರು ಒಬ್ಬ ಸಂಧಾನಕಾರರನ್ನು ಇಲ್ಲವೇ ನಿರ್ಣಯಾಧಿಕಾರಿಯನ್ನು ನೇಮಿಸುವರೆಂದು ತಿಳಿದು ಬಂದಿದೆ. ಹಿಂದಿನ ಎಡ್ಮಿರಲ್ ನಿಮಿಟ್ಸರನ್ನೇ ನೇಮಿಸುವರೆಂದು ವಾರ್ತೆ ಇದೆ. ಇವರನ್ನು ಸಂಧಾನಕಾರರನ್ನಾಗಿ ನೇಮಿಸಿದರೆ ಇವರ ಕೆಲಸ ಯಾವ ರೀತಿ ಸುಗಮವಾಗುವದೆಂದು ಹೇಳಬರುವದಿಲ್ಲ. ಹಿಂದೆ ಐದು ಜನ ಸಂಧಾನಕಾರರಿಂದ ಕೂಡಿದ ಸಂಧಾನ ಸಮಿತಿಯು ಸಾಧಿಸಲಾರದ ಕೆಲಸವನ್ನು ಒಬ್ಬರು ಹೇಗೆ ಸಾಧಿಸಲಾಪರೆಂಬುದು ಅರ್ಥವಾಗದ ವಿಚಾರ. ಇಲ್ಲವೇ ಇವರೇ ಒಂದು ಸ್ವಯಂ ನಿರ್ಣಯವನ್ನು ಕೊಡುವದಾದರೆ ಅದು ಒಂದು ತೀರ್ಮಾನವನ್ನು ಬಲತ್ಕಾರದಿಂದ ಹೊರಿಸಿದಂತಾಗಬಹುದು. ಎರಡೂ ಪಕ್ಷಗಳ ಅಭಿಪ್ರಾಯವನ್ನು ತಿಳಿದು ಅವರು ಒಪ್ಪಬಹುದಾದ ನಿರ್ಣಯ ವಾದರೆ ಮಾತ್ರ ಆ ನಿರ್ಣಯಕ್ಕೆ ಬೆಲೆ ಬರಬಹುದು. ಇಲ್ಲದಿದ್ದರೆ ಅದು ಪುನಹ ಘರ್ಷಣೆಗೆ ಎಡೆಕೊಡಬಹುದು.

ಹೇಗೂ ಸಂಯುಕ್ತ ರಾಷ್ಟ್ರ ಸಂಘದ ಸಂಧಾನ ಸಮಿತಿಯವರು ನಡೆಸುತ್ತಿದ್ದ ಸಂಧಾನದ ಪ್ರಯತ್ನವನ್ನು ಏಕೆ ಬಿಡಲಾಯಿತು ಎಂಬುದು ಯಾರಿಗೂ ತಿಳಿಯದ ವಿಚಾರವಾಗಿದೆ. ಈ ನಿರ್ಣಯಕ್ಕೆ ಬರಲು ಕಾರಣವಾದ ತನ್ನೊಳಗಿನ ಪತ್ರವ್ಯವಹಾರವನ್ನು ಪ್ರಕಟಿಸಿದ್ದರೆ ತಪ್ಪು ಯಾರದು ಯಾರಿಂದಾಗಿ ಸಂಧಾನ ವಿಫಲವಾಯಿತೆಂಬುದು ಸಾರ್ವಜನಿಕರಿಗೆ ತಿಳಿಯುತ್ತಿತ್ತು. ಆದರೆ ಸಂಧಾನ ಸಮಿತಿಯು ಅವುಗಳ ಪ್ರಕಟಣೆ ಮಾಡದೆ ನಾನಾ ರೀತಿಯ ಊಹಾಪೋಹಗಳಿಗೆಡೆಕೊಟ್ಟಿದೆ.

ಕಾಶ್ಮೀರದ ಬಗ್ಗೆಯ ಹಿಂದೂ ವೇದರ ವರ್ತನೆಯು ಕಳಂಕರಹಿತವಾದದು. ಯೋಗ್ಯ ರೀತಿಯ ಮತಗಣನೆಗಾಗಿ ತನ್ನ ಕೈಲಾದ ಏರ್ಪಾಡುಗಳನ್ನು ಮಾಡಿದರೂ ಅಲ್ಲಲ್ಲಿ ಅಡ್ಡಿ ಆತಂಕಗಳು ಬರುತ್ತಿವೆ. ಇನ್ನಾದರೂ ಪಾಕಿಸ್ಥಾನ ಸರಕಾರವೂ ಸಂಧಾನ ಮಾಡಲು ಪ್ರಯತ್ನಿಸುವವರೂ ಯೋಗ್ಯ ರೀತಿ ವರ್ತಿಸಿ ಮತಗಣನೆಗೆ ತಕ್ಕ ವಾತಾವರಣವನ್ನು ಕಲ್ಪಿಸುವದು ಅತ್ಯಗತ್ಯವಾಗಿದೆ.

ವರ್ತಮಾನ.

ಉತ್ತರ ಕೊಡಗು ತಾಲೋಕಿಗೆ ಆಹಾರ ಸಲಹಾ ಸಮಿತಿಯಾಗಿ ಉತ್ತರ ಕೊಡಗಿನ ಸುಬೆದಾರರು, ಅ. ರೇಶನಿಂಗ್ ಆಫೀಸರು, ಶ್ರೀಗಳಾದ ಕೋರನ ದೇವಯ್ಯ, ಎಚ್ ಟಿ. ಮುತ್ತಣ್ಣ, ಮಹಮದ್ ಹುಸೇನ್ ಖಾನ್, ಬಿ. ಕಾಳೇಗೌಡ, ಎಸ್. ಎಂ. ಚೆನ್ನಬಸಪ್ಪ, ಸಿ ಎ. ಮಂದಣ್ಣ ಇವರುಗಳನ್ನೂ, ದಕ್ಷಿಣ ಕೊಡಗು ತಾಲೋಕಿನ ಆಹಾರ ಸಲಹಾ ಸಮಿತಿಯಾಗಿ ದ ಕೊಡಗು ಸುಬೆದಾರರು, ಅ. ರೇಶನಿಂಗ್ ಆಫೀಸರ್, ಶ್ರೀಗಳಾದ ಎಚ್. ಬಿ. ಅಣ್ಣಯ್ಯ, ಕೆ. ಕೆ. ಬೆಳ್ಯಪ್ಪ, ಎಸ್. ಎಸ್. ನಾರಾಯಣಮೂರ್ತಿ, ಪಿ. ಎಂ. ನಾಣಯ್ಯ, ಕೆ. ಎಂ ಕುಶಾಲಪ್ಪ, ಏ. ಪಿ. ಕಾರ್ಯಪ್ಪ, ಕೆ ಎ ಚಿಣ್ಣಪ್ಪ, ಮತ್ತು ಬಿ ಕೆ. ಹಬಿಬುಲ್ಲಾಖಾನ್ ಇವರುಗಳನ್ನೂ ನೇಮಿಸಿರುವರು. ಇವರ ಅವಧಿಯು ಒಂದು ವರ್ಷದ ವರೆಗಿರುವದು.

ಮದ್ರಾಸ್ ಲಾಯೋಲಾ ಕಾಲೇಜಿನಲ್ಲಿ ಓದುತ್ತಿದ್ದ ಶ್ರೀ. ಪಂದಿಕುತ್ತಿರ ಜಿ. ಮಾದಯ್ಯನವರು ಬಿ. ಎ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದು ಅವರಿಗೆ ಈ ವರ್ಷದ ಕೊರವಂಡ ಅಪ್ಪಯ್ಯ ದೇವಯ್ಯ ಬಹುಮಾನವು ದೊರೆತಿದೆ.

ಶ್ರೀ. ಚೌರಿರ ಕಾಳಯ್ಯನವರು ದಿಲ್ಲಿಯ ಕಮರ್ಶಿಯಲ್ ಯೂನಿವರ್ಸಿಟಿಯ ಬಿ. ಕಾಂ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರು.

ಬೊಂಬಾಯಿ ಕೊಡಗು ಸಂಘದ ಸದಸ್ಯರಾಗಿದ್ದ ಶ್ರೀ. ಮೂಕಂಡ ಕಾರ್ಯಪ್ಪನವರು ತಾ. ೧೮-೮-೪೯ ರಲ್ಲಿ ನಿಧನರಾದರು. ತಾ. ೧೪-೮-೪೯ ರಲ್ಲಿ ನಡೆದ ಕೊಡಗು ಸಂಘದ ವಾರ್ಷಿಕ ಸಭೆಯಲ್ಲಿ ಆ ಸಂಘದ ಸದಸ್ಯರಾಗಿದ್ದ ಶ್ರೀ. ಮೇರಿಯಂಡ ಕರುಂಬಯ್ಯನವರ ನಿಧನಕ್ಕೆ ಸಂತಾಪಸೂಚಿಸಿ ಠರಾವು ಮಾಡಲಾಯಿತು.

ಕೊಡಗು ನ್ಯಾಯ-ವಿಧಾಯಕ ಸಭೆಯ ಮೀಟಿಂಗು ತಾ. ೧೬-೧೦-೪೯ ರಲ್ಲಿ ನಡೆಯುವದೆಂದು ಪ್ರಕಟವಾಗಿದೆ.

ಮೂರ್ನಾಡಿನ ಸಾರ್ವಜನಿಕರು ತಾ. ೧೯-೮-೪೯ರಲ್ಲಿ, ಅ. ಕಮಿಷನರ ಹುದ್ದೆಯಿಂದ ನಿವೃತ್ತರಾದ ಶ್ರೀ ಕೆ. ಟಿ. ಉತ್ತಪ್ಪನವರಿಗೆ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದ ವೇಳೆಯಲ್ಲಿ ಒಂದು ಬಿನ್ನವತ್ತಳೆಯನ್ನರ್ಪಿಸಿದರು. ಅದೇ ದಿನ ಮೂರ್ನಾಡು ಸಹಕಾರಿ ಯೂನಿಯನ್ ಆಫೀಸಿನಲ್ಲಿ ಕೂಟದ ಪ್ರೆಸಿಡೆಂಟರು ಕೊಟ್ಟ ಮಹಾತ್ಮ ಗಾಂಧೀಜಿಯವರ ಭಾವಚಿತ್ರವನ್ನು ಅಲ್ಲಿ ತೆರೆಯುವ ಉತ್ಸವವನ್ನು ಶ್ರೀ ಕೆ. ಟಿ. ಉತ್ತಪ್ಪನವರು ಜರುಗಿಸಿದರು.

ಸೋಮವಾರಪೇಟೆ ಮೋಂಗಲ್ಸ್ ಕಂಪೆನಿಯ ಸರ್ವರು ಸೇರಿ ಆಗಸ್ಟ ೧೫ರಂದು ಭಾರತದ ಸ್ವಾತಂತ್ರ್ಯ ದಿನಾಚರಣೆಯನ್ನು ಬಹಳ ವಿಜೃಂಭಣೆಯಿಂದ ಆಚರಿಸಿದರು. ಬೆಳಗಿನ ೩ ಗಂಟೆಗೆ ಧ್ವಜಾರೋಹಣ ಮಾಡಿದ ನಂತರ ಆ ಕಂಪೆನಿಯ ಮೇನೇಜರವರು ಸರ್ವ ನೌಕರರಿಗೆ ಒಂದೊಂದು ದಿವಸದ ಸಂಬಳವನ್ನು ಇನಾಮಾಗಿ ಕೊಟ್ಟರು.

ವಂದನೆಗಳು.

ನನ್ನ ಪತ್ನಿ ಗಂಗಮ್ಮನ ಅಕಾಲ ಮರಣದಿಂದ ನನಗುಂಟಾದ ಅಪಾರವಾದ ದುಃಖದಲ್ಲಿ ಭಾಗಿಗಳಾದ ನನ್ನ ಎಲ್ಲಾ ಬಂಧುಗಳಿಗೂ, ಹಿತಚಿಂತಕರಿಗೂ ಪ್ರತ್ಯಕ್ಷ ವಂದೀಲು ಅಸಾಧ್ಯವಾದ ಕಾರಣ ಅವರೆಲ್ಲರಿಗೂ ಈ ಮೂಲಕ ನನ್ನ ವಂದನೆಗಳನ್ನು ನಿವೇದಿಸುವವನಾಗಿದ್ದೇನೆ.

ಪೇಸನೂರು. ಇತಿ,

ಪೋಡಮಾಡ ಚಂಗಪ್ಪ

ANNOUNCEMENT.

We have pleasure to announce the APPOINTMENT of MR K. M. BOPAIAH (formerly of Warden Insurance Co. Ltd.) as our BRANCH SECRETARY for COORG AND MYSORE STATE.

An intensive organisation of Coorg is now planed Influential applicants desirous of a permanent and lucrative appointments, are requested to write or call on the Branch Secretary at Lime Cottage, Mercara.

THE POPULAR INSURANCE COMPANY LTD
Head Office MANGALORE South India
2-1 (Estd. 1929)

BONUS: Rs. 20 per Rs. 1000 for the years 1943/47

ಸರಕಾರಿ ಅಧಿಕಾರಿಗಳಿಗೆ.

ಲೇಖಕ:- ಶ್ರೀ ಕೆ ಜಿ ಮಶ್ರೂವಾಲಾ.

ಈ ಪ್ರಕಾರ ಈ ವಿಚಾರಧಾರೆಗೂ ಬ್ರಿಟಿಷರು ಇಲ್ಲಿ ಸ್ಥಾಪಿಸಿಹೋದ ಮತ್ತು ನೀವು ಆತ್ಮ ಸಾಕ್ಷಿಯಾಗಿ ಮಾಡಿಕೊಂಡ ಪದ್ಧತಿಗೂ ಅಂಥ ಅಂತರವೇನೂ ಇದ್ದಿಲ್ಲ. ವ್ಯವಹಾರದಲ್ಲಿ ಬ್ರಿಟಿಷ್ ಸರಕಾರವೇ ಯಥಾವತ್ತಾಗಿ ಮುಂದೆ ಸಾಗಿ ನಿಮಗೂ ಕಾಂಗ್ರೆಸ್ ಮುಂದಾಳುಗಳಿಗೂ ಬೆರೆತು ಕೆಲಸ ಮಾಡಲು ಸಂದರ್ಭಪ್ರಾಪ್ತವಾಗಿಸಿತೆನ್ನಬಹುದು. ಹೀಗೆ ನಿಮಗೂ ಹೊಸ ಸರಕಾರಕ್ಕೂ ಕಠಿಣ ಸಮಸ್ಯೆಯಾಗಬಹುದಾಗಿದ್ದುದು ಬಹಳ ಸರಳವಾದ ಮಾತಾಗಿ ಬಿಟ್ಟಿತು.

ಈ ಸರಳತನದ ಅರ್ಥವನ್ನು ಸರಿಯಾಗಿ ಗ್ರಹಿಸಿಕೊಂಡಿದ್ದರೆ ಶಾಂತ ರೀತಿಯಲ್ಲಿ ಅಧಿಕಾರ ಹಸ್ತಾಂತರವಾದ ನಂತರದ ವಿಭಜನೆಯಿಂದಲೂ ಅದರ ಬೆಂಬತ್ತಿ ಬಂದ ಮಹಾ ಜನಯಾತ್ರೆಯಿಂದಲೂ ಉದ್ಭವಿಸಿದ ಹೊಸ ಸಮಸ್ಯೆಗಳ ಮಧ್ಯದಲ್ಲಿ ಕೂಡ, ಜನತೆಗೆ ತುಂಬ ಕಲ್ಯಾಣವಾಗುತಿತ್ತು. ನಿಮ್ಮಲ್ಲಿ ವಯೋವೃದ್ಧರಾದವರನ್ನು ಕೂಡ ತೀರ ಎಳೆಯನೊಬ್ಬನೆದುರು ದೀನಾವಸೆಗಿಳಿಸಿಬಿಡುತ್ತಿದ್ದ ಆ ಬಿಳಿ ಚರ್ಮದ ಭೀತಿ ಇಲ್ಲದಂತಾಗಿದೆ. ನೀವೀಗ ನಿಮ್ಮವರೊಡನೆಯೆ, ನಿಮ್ಮವರೇ ಆದವರ ಕೆಳಗೆ ಕೆಲಸ ಮಾಡುತ್ತಿದ್ದೀರಿ. ನಿಮ್ಮನ್ನು ನಿಮ್ಮ ಮೇಲಧಿಕಾರಿಗಳಿಂದಲೂ ನಿಮ್ಮ ಅಧೀನರಾಗಿ ಕೆಲಸ ಮಾಡುತ್ತಿದ್ದ ಕೆಳವರ್ಗದವರಿಂದಲೂ ಬೇರ್ಪಡಿಸಿಟ್ಟಿದ್ದ ಆ ಉಚ್ಚ ನೀಚ ತಾರತಮ್ಯದ ತೆರೆ ಹರಿದುಹೋಗಿದೆ. ನಿಮ್ಮಲ್ಲಿ ಅತಿ ಹಿರಿಯ ಅಧಿಕಾರಿಗಳು ಹಿಂದೀಯರಾಗಲಿ ನಾಗರಿಕರಾಗಲಿ ಜನರ ಸೇವಕರಂತೆ ಆಚರಿಸುವವರಾಗಲಿ ಆಗಿದ್ದಿಲ್ಲವಾದರೂ ನಿಮ್ಮನ್ನು 'ಹಿಂದೀ ನಾಗರಿಕ ಸೇವಕ'ರೆಂಬ ಕರೆಯಲಾಗುತ್ತಿತ್ತು. ಈಗಲಾದರೋ, ನೀವೆಲ್ಲರೂ ಹಿಂದೀಯರೇ ಆಗಿದ್ದೀರಿ, ನಾಗರಿಕರಂತೆ ನಡೆದುಕೊಳ್ಳಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ನಿಮಗೆ ಅವಕಾಶವೂ ದೊರೆತಿದೆ.

ಆದರೆ ವಿವಿಧ ಸರಕಾರಗಳ ಮಂತ್ರಿಗಳಿಗೆ ನಿಮ್ಮ ಕಾರ್ಯದಕ್ಷತೆ, ಸ್ವಾಮಿಬುದ್ಧಿ ಮತ್ತು ನಡತೆಗಳು ಎಷ್ಟೇ ತೃಪ್ತಿಕರವೆನಿಸಿರಬಹುದಾದರೂ ಜನತೆಯ ಅಭಿಪ್ರಾಯ ಮಾತ್ರ ತದ್ವಿರುದ್ಧವಾಗಿದೆಯೆಂದು ಹೇಳಲು ವಿಷಾದವಾಗುತ್ತದೆ. ಅಷ್ಟೇ ಏಕೆ, ಜನರೊಡನೆ ನಿಮ್ಮ ಈಗಿನ ನಡವಳಿಕೆ ಹಿಂದಿನ ಆಳಿಕೆಯ ಕಾಲದಲ್ಲಿದ್ದಷ್ಟು ತೃಪ್ತಿಕರವಾಗಿಲ್ಲೆಂದು ದೂರುಗಳಿವೆ. ನೀವೀಗ ಮೊದಲಿಗಿಂತಲೂ ಒರಟರೂ, ಲಂಚಗುಳಿಗಳೂ, ಅಕ್ಷಮರೂ, ವಿಲಂಬಕರೂ ಆರ್ಥಿಕ ಲಾಭವನ್ನು ಪಡೆಯಲು ಬದ್ಧತನದಿಂದ ಪ್ರೇರಿತರೂ ಆಗಿರುವಿರಲ್ಲದೆ ೧೯೪೭ಕ್ಕಿಂತ ಮೊದಲು ನಿಮ್ಮ ಕೆಳಗೇ ಇದ್ದ ಆಳಿಕೆಗಿಂತ ಈಗಿನದು ಹೆಚ್ಚು ಪ್ರಜಾಪೀಡಕವಾಗಿದೆಯೆಂದು ಹೇಳಲಾಗಿದೆ.

ಬ್ರಿಟಿಷ್ ಆಳಿಕೆಯಲ್ಲಿ ನೌಕರ ವರ್ಗ ಸರ್ವಥಾ ಲಂಚಮುಕ್ತವಾಗಿತ್ತೆಂದಲ್ಲ. ಆದರೆ ಹಿಂದೀ ಸಂಸ್ಥಾನಗಳು ಲಂಚಗುಳಿತನಕ್ಕೆ ಇನ್ನಷ್ಟು ಕುಪ್ರಸಿದ್ಧವಾಗಿದ್ದವು-ಮಾತ್ರ ಅವುಗಳ ಅಧಿಕಾರಿಗಳು ಉಳಿದವರಿಗಿಂತ ಅಲ್ಪ ಸಂತೋಷಿಗಳಾಗಿದ್ದರು. ಹಿಂದೀ ಸಂಸ್ಥಾನದಲ್ಲಿ ಕೆಲ ಆಣೆಗಳ ಲಂಚದಿಂದ ಮಾಡಿಸಿಕೊಳ್ಳಬಹುದಾಗಿದ್ದ ಕೆಲಸಕ್ಕೆ ಬ್ರಿಟಿಷ್ ಹಿಂದುಸ್ಥಾನದಲ್ಲಿ ಅಷ್ಟೇ ರೂಪಾಯಿಗಳನ್ನು ಕೈಬಿಡಬೇಕಾಗುತ್ತಿತ್ತು. ಆದರೆ ಈಗ ವಿಲಯನಹೊಂದಿದ ಸಂಸ್ಥಾನಗಳಿಂದ ನನಗೆ ಬರುತ್ತಿರುವ ವರದಿಗಳೆಂಥವೆನ್ನುವಿರಿ? ಇವರ ಆಡಳಿತೆಯಲ್ಲಿ ನಿಮ್ಮ ಪ್ರವೇಶವಾದಂದಿನಿಂದ ಲಂಚದ 'ಸ್ಕೇಲೂ' ಬಹಳ ಏರಿದೆಯಂತೆ. ಇವುಗಳಲ್ಲಿ ಕೆಲ ದೂರುಗಳಲ್ಲಿ ಅತಿಶಯೋಕ್ತಿಯಿರಬಹುದೆಂದು ಒಪ್ಪಲು ನಾನು ಸಿದ್ಧನೇ. ನ್ಯಾಯಸ್ಥಾನದ ಮುಂದೆ ಇವುಗಳಲ್ಲಿ ಅನೇಕವನ್ನು ಸಿದ್ಧಪಡಿಸಲು ಸಾಧ್ಯವಾಗಲಿಕ್ಕಿಲ್ಲ. ಆದರೆ ನನಗೆ ಬರುವ ದೂರುಗಳಲ್ಲಿ ಎಲ್ಲವೂ ಜನರಿಂದಲೇ ಬಂದಿರುವದಿಲ್ಲ; ಸ್ವತಃ ಸರಕಾರಿ ಅಧಿಕಾರಿಗಳಿಂದೂ ಹಲದೂರುಗಳು ಬಂದಿವೆ. ಉದಾಹರಣೆಗಾಗಿ, ರೇಲ್ವೆ ಪಾಳಿಗಳಲ್ಲಿ, ಸೀದಾ ಅಂಗಡಿಗಳಲ್ಲಿ ಮೊದಲಾಗಿ ನಡೆಯುವ ಅನೇಕ ಕಣ್ಣುಕಟ್ಟು, ಲಂಚಗುಳಿತನ ಮತ್ತು ಮೋಸಗಳು. ನನಗೆ ಗೊತ್ತಾಗುತ್ತಿರುವುದು ಆಯಾ ಖಾತೆಗಳ ಸರಕಾರಿ ನೌಕರರಿಂದಲೇ.

ನಾನು ಹೀಗೆ ನಿಮ್ಮನ್ನು ಸಂಬೋಧಿಸಿ ಮಾತಾಡುವುದನ್ನು ದಯವಿಟ್ಟು ತಪ್ಪು ತಿಳಿದುಕೊಳ್ಳಬೇಡಿರಿ. ನಿಮ್ಮಲ್ಲಿ ಪ್ರಾಮಾಣಿಕ ಆತ್ಮವೇ ಇಲ್ಲದೆಂದಾಗಲಿ, ಸ್ವಾತಂತ್ರ್ಯ ಸಿದ್ಧಿಯ ನಂತರ ಸ್ವೇಚ್ಛೆಯಿಂದಲೇ ಗುಲಾಮರಂತೆ ದುಡಿದ ಅಧಿಕಾರಿಗಳು ನಿಮ್ಮಲ್ಲೊಬ್ಬರೂ ಇಲ್ಲೆಂದಾಗಲಿ, ಮೇಲೆ ಹೇಳಿದ್ದೆಲ್ಲ ಎಲ್ಲ ಖಾತೆಗಳಿಗೂ ಅನ್ವಯಿಸುತ್ತದೆಯೆಂದಾಗಲಿ ನನ್ನ ತಾತ್ಪರ್ಯವಲ್ಲ. ನಿಜಕ್ಕೂ ನಿಮ್ಮಲ್ಲಿ ಅಧಿಕಾಂಶ ಜನರು ದುರ್ಧನವನ್ನು ಕೈಯಿಂದ ಮುಟ್ಟಿರಲಿಕ್ಕಿಲ್ಲ. ಆದರೆ ಇಂಥ ವಿಚಾರಗಳಲ್ಲಿ ನೂರಕ್ಕೆ ಹತ್ತು ಜನರು ಕೂಡ ನಿಮ್ಮ ವರ್ಗದ ಹೆಸರಿಗೆ ಮಸಿಬಳಿಯಲು ಸಾಕು. ೫೦೦ ಜನ ಶಾಂತ ಸಭಿಕರ ಸಭೆಯನ್ನು ಮುರಿಯಲು ಹತ್ತುಪ್ಪತ್ತು ಜನ ಪುಂಡರೇ ಸಾಲುವದಿಲ್ಲವೇ, ಹಾಗೆ ನಾನು ವರ್ಣಿಸಿರುವುದು ಸ್ಥೂಲ ಚಿತ್ರ, ಸಾಮಾನ್ಯ ಅಭಿಪ್ರಾಯ. ಆದುದರಿಂದ ಪ್ರಾಮಾಣಿಕ ಜೀವಿಗಳೂ ಇದನ್ನು ಆಳವಾಗಿ ವಿಚಾರಿಸಲಿ.

ಇದರ ಅಂತಿಮ ಪರಿಣಾಮವೇನಾಗಬಹುದೆನ್ನುವಿರಿ? ನೀವು ಸರಕಾರಕ್ಕೂ ಜನತೆಗೂ ನಡುವೆ ಇರುವವರು. ನಿಮ್ಮ ಕೃತಿಗಳಿಂದಲೇ ಸರಕಾರದ ಆಳಿಕೆಯನ್ನು ಜನರು ಅಳೆಯುವರು; ನಿಮ್ಮಿಂದಲೇ ಸರಕಾರದ ಗೆಲವು-ಸೋಲು. ಜನರು ಅವಶ್ಯವಾಗಿ ನಿಮ್ಮ ಮೇಲೆ ಸರಕಾರದ ಪೂರ್ಣ ನಿಯಂತ್ರಣವಿದೆಯೆಂದು ತಿಳಿಯುತ್ತಾರೆ; ಅದು ಕಾರಣ, ನಿಮ್ಮ ಆಡಳಿತೆ ಅಸಮಾಧಾನಕರವಾಗಿದ್ದರೆ, ನ್ಯಾಯವಾಗಿಯೆ ಅವರು ನಿಮ್ಮ ತಪ್ಪುಗಳಿಗೆ ಸರಕಾರವನ್ನು ದೂರುವರು. ಕಾಂಗ್ರೆಸು ಸರಕಾರವನ್ನು ನಿಯಂತ್ರಿಸುತ್ತಿರುವಂತೆ ಕಂಡರೆ, ನಿಮ್ಮಲ್ಲಿದ್ದ ಭ್ರಷ್ಟಾಚಾರಗಳೆಲ್ಲವೂ ಕಾಂಗ್ರೆಸ್ಸಿನ ಕೊರಳಿಗೆ ಬೀಳುವವು. ನೀವೇನೋ ಹೇಳುವಿರಿ,-ಮತ್ತು ಅದು ನ್ಯಾಯವೂ ಹೌದು-ಕಾಂಗ್ರೆಸ್ಸಿಗರಲ್ಲಿಯೂ ಲಂಚಗುಳಿಗಳಿದ್ದಾರೆ, ಇದರಲ್ಲಿ ನಾವು ಮಾತ್ರವೇ ದೋಷಿಗಳಲ್ಲ-ಎಂದು. ಅದರ ಪ್ರತಿಫಲವಾಗಿ, ಕಾಲ ಬಂದಾಗ ಕಾಂಗ್ರೆಸ್ಸು ಅಧಿಕಾರಚ್ಯುತವಾಗಿ ದಂಡ ತೆರಬೇಕಾಗುವುದು. ಆದರೆ ಈಗಿನ ಧೈರ್ಯಚ್ಯುತಿ ಮತ್ತು ನೀತಿಭ್ರಷ್ಟತೆ ಕಾಂಗ್ರೆಸ್ ಸರಕಾರದ ಪರಾಭವದಿಂದಲೇ ಪರಿಹಾರವಾಗದು. ಅವುಗಳ ಫಲ ನಿಮ್ಮ ತಲೆಯ ಮೇಲೂ ಉಳಿಯದಿರದು. ಇನ್ನೊಬ್ಬ ಗಾಂಧಿಯೇನಾದರೂ ಉದಯಿಸಿ ರಾಷ್ಟ್ರವನ್ನು ಅಹಿಂಸಾತ್ಮಕ ಪ್ರತೀಕಾರದ ಮಾರ್ಗದಲ್ಲಿ ಕರೆದೊಯ್ಯದೆ ಹೋದರೆ ದಬ್ಬಾಳಿಕೆಗೆ ಅರ್ಧಜಾಗೃತ ಜನತೆ ಕೈಕೊಳ್ಳುವ ಪ್ರತೀಕಾರವೊಂದೆ-ಅದೆಂದರೆ 'ಫ್ರೆಂಚ್ ಕ್ರಾಂತಿಯ ಕಾಲದ ಘಟನೆಗಳ ಪುನರಾವರ್ತನೆ!

ನೀವು ಸ್ವತಃ ಸುಧಾರಿಸದೆ ಜನರನ್ನು ಸುಖಿಗಳನ್ನಾಗಿ ಮಾಡಲಾರಿರಿ; ಮತ್ತು ಅಸುಖಿಗಳಾದ ಜನರು ನಿಮ್ಮ ದಬ್ಬಾಳಿಕೆ ಅಸಹನೀಯವಾದ ಮೇಲೆ ನಿಮ್ಮನ್ನು ಸುಮ್ಮನೆ ಬಿಡುವದಿಲ್ಲ. ಆಗಿನ ಮನೆ ಸಿದ್ಧವಾಗಿರುವಾಗ ಒಂದು ಕಿಡಿಕಿಯೂ ಉರಿಯೆಬ್ಬಿಸಲು ಸಾಲುವದೆಂದು ಮರೆಯದಿರಿ.

ನಿಮ್ಮಲ್ಲಿ ನನ್ನ ಪ್ರಾರ್ಥನೆಯೊಂದೆ. ನಿಮ್ಮ ಜೀವನದಲ್ಲಿಯೂ ಆಚಾರದಲ್ಲಿಯೂ ದೇವರಿಗೊಂದು ಸ್ಥಾನವೀಯಿರಿ. ನಿಮ್ಮ ಸಂಪತ್ತನ್ನು ಹೆಚ್ಚಿಸಿಕೊಳ್ಳುವ ಆತುರದಲ್ಲಿ ನೀವು ಆತನನ್ನು ನಿಮ್ಮ ಮನೆಗಳಿಂದಲೂ ಕಚೇರಿಗಳಿಂದಲೂ ಹೊರಗಟ್ಟಿಬಿಟ್ಟು ಕಷ್ಟಕಾಲದಲ್ಲಿಯೂ ವೃದ್ಧಾಪ್ಯದಲ್ಲಿಯೂ ಹಣವೇ ದೇವರಿಗಿಂತಲೂ ಚೆನ್ನಾಗಿ ನಿಮ್ಮನ್ನು ರಕ್ಷಿಸೀತೆಂದು ಬಗೆದಿದ್ದೀರಿ. ಆದರೆ ನಿಮ್ಮ ಎಣಿಕೆ ತಪ್ಪು. ಅದು ನಿಮ್ಮನ್ನೂ ದೇಶವನ್ನೂ ಕೂಡಿಯೆ ಅಧಃಪತನಕ್ಕೊಯ್ಯುವದು. ಪರಮಾತ್ಮನು ನಿಮಗೆ ಜನತೆಯ ನೈಜ ಮತ್ತು ಸುಯೋಗ್ಯ ಸೇವಕರಾಗುವ ಸದ್ಬುದ್ಧಿಯನ್ನೂ ಶಕ್ತಿಯನ್ನೂ ದಯಪಾಲಿಸಲಿ.

ಹರಿಜನದಿಂದ.

ಇದನ್ನು ನಾನು ಸಂತೋಷದಿಂದ ಬರೆಯುತ್ತಿಲ್ಲ. ಬರೆಯುವ ಪ್ರಸಂಗ ಬಾರದಿದ್ದರೆ ನನಗೆಷ್ಟೋ ಸುಖವೆನಿಸುತ್ತಿತ್ತು. ಆದರೆ ಹೆಚ್ಚು ಕಡಿಮೆ ಭಾರತದ ಎಲ್ಲ ಕಡೆಗಳಿಂದಲೂ ನನಗೆ ಮೇಲಿಂದ ಮೇಲೆ ಬರುತ್ತಿರುವ ದೂರುಗಳನ್ನು ಕುರಿತು ನಿಮಗೆ ನೇರವಾಗಿ ಕೆಲ ಮಾತುಗಳನ್ನು ಹೇಳದೆ ಬೇರೆ ಹಾದಿಯೇ ಇಲ್ಲದಾಗಿದೆ. ನಾವು ನಮ್ಮ ಸ್ವಾತಂತ್ರ್ಯದ ಮೂರನೆ ವರ್ಷದಲ್ಲಿ ಕಾಲಿಟ್ಟಿದ್ದೇವೆ. ಅದು ದೊರೆತುದರಿಂದ ವಿಶೇಷವಾಗಿ ಪ್ರಯೋಜನ ಹೊಂದಿದ ಒಂದೇ ವರ್ಗವನ್ನು ಹೆಸರಿಸಬೇಕಾದರೆ, ಆ ವರ್ಗ ನಿಮ್ಮದೆಂದು ಅತಿಶಯೋಕ್ತಿಯಿಲ್ಲದೆ ಹೇಳಬಹುದು. ಸ್ವಾತಂತ್ರ್ಯ ಪ್ರಾಪ್ತಿಯಾದ ಮೇಲೆ ನಿಮ್ಮ ಸಾಂಪತ್ತಿಕ ಸ್ಥಿತಿ ಖಂಡಿತವಾಗಿ ಸುಧಾರಿಸಿದೆ.

ನೌಕರಶಾಹಿಯೆಂಬ ನಿಮಗಿಡಲ್ಪಟ್ಟ ಹೆಸರು ಎಂಥ ತಿರಸ್ಕಾರದ ಅಭಿಧಾನವಾಗಿತ್ತೆಂದು ನಿಮಗೆ ಗೊತ್ತೇ ಇದೆ. 'ಲಂಚಗುಳಿಗಳು' 'ಟೊಳ್ಳು ಹುರುಳಿಯವರು', 'ದರ್ಪದವರು', 'ಪ್ರತಿಗಾಮಿಗಳು', 'ಸೋಮಾರಿಗಳು', 'ಮತ್ಸರರು', 'ಜನತೆಯ ಆವಶ್ಯಕತೆಗಳನ್ನು ಕಾಣದ ಕುರುಡರು'-ಇವೀಗ ಅನೇಕ ಕಾಂಗ್ರೆಸಿಗರು, ಈಗ ವಿವಿಧ ಮಂತ್ರಿಮಂಡಲಗಳಲ್ಲಿರುವವರು ಕೂಡ, ನಿಮಗೆ ಉಪಯೋಗಿಸುತ್ತಿದ್ದ ವಿಶೇಷಣಗಳು. ಸ್ವತಂತ್ರ ಭಾರತವೆಂದರೆ ನೌಕರಶಾಹಿಯ ಆಳಿಕೆಯಿಂದ ಮುಕ್ತವಾದ ಭಾರತವೆಂದು ಸಾಮಾನ್ಯವಾಗಿ ನಂಬಲಾಗಿತ್ತು. ಕಾಂಗ್ರೆಸ್ಸಿನಲ್ಲಿದ್ದ ಎಳೆಹರೆಯದವರೆಲ್ಲರೂ ತೀವ್ರತರವಾದ ಬದಲಾವಣೆಗಳನ್ನು ನಿರೀಕ್ಷಿಸಿದ್ದರು. ನಿಜವಾಗಿ ಕಾಂಗ್ರೆಸ್ ಸಂಸ್ಥೆಯ ವಿರುದ್ಧ ಅವರಲ್ಲಿ ಮತ್ತು ಜನಸಾಮಾನ್ಯದಲ್ಲಿ ಅಸಂತೋಷ ಹುಟ್ಟಲು ಹಿರಿ ಕಾಂಗ್ರೆಸ್ಸಿಗರು ಹಾಗೆ ಬದಲಾವಣೆ ಮಾಡದೆ ಹಳೆಯ ಪ್ರಣಾಲಿಯನ್ನೆ ಉಳಿಸಿಕೊಂಡು ಬಂದುದೂ ಒಂದು ಕಾರಣ. ಅಧಿಕಾರ ಸ್ವೀಕಾರ ಮಾಡಿದ ನಂತರ, ಮುಂದಾಳುಗಳು ವಿಚಾರಪರರಾಗದೆ ತಾತ್ಕಾಲಿಕ ಬುದ್ಧಿಯಿಂದಲೂ ಹೊಣೆಗಾರಿಕೆಯ ಅರಿವಿನಿಂದಲೂ ಪ್ರೇರಿತರಾಗಿ ಹಳೆಯ ಪ್ರಣಾಲಿಯನ್ನೇ ಇರಗೊಟ್ಟರು. ಅಧಿಕಾರದ ಹಸ್ತಾಂತರವಾದ ಸ್ಥಿತಿಗತಿಗಳಲ್ಲಿ ಇದು ಅಪರಿಹಾರ್ಯವೇ ಆಗಿತ್ತೇನೊ. ಅಥವಾ ಗಾಂಧೀಜಿಯ ತೀವ್ರಗಾಮಿ ಧ್ಯೇಯಗಳಾಗಲಿ ಅವುಗಳ ಪ್ರತಿಸ್ಪರ್ಧಿಯಾದ ಮಾರ್ಕ್ಸ್‌ವಾದವಾಗಲಿ ಕಾಂಗ್ರೆಸಿನ ಹಿರಿಯರಿಂದ ಹೃತ್ಪೂರ್ವಕವಾಗಿ ಸ್ವೀಕರಿಸಲ್ಪಡದಿದ್ದುದೇ ಇದಕ್ಕೆ ಕಾರಣವಾಗಿರಲೂ ಬಹುದು. ಹೀಗಾಗಿ ಸಾಂಸ್ಕೃತಿಕ ರಂಗದಲ್ಲಿ ಪ್ರಾಚೀನ ಹಿಂದೂ ಅಥವಾ ಇಸ್ಲಾಮು ಧರ್ಮದ ಪುನರುಜ್ಜೀವನ ಮತ್ತು ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ, 'ಔದ್ಯೋಗಿಕ ಪ್ರಗತಿ' ಮತ್ತು ಗಾಂಧಿ ಪದ್ಧತಿಯಿಂದ ತೀರ ಭಿನ್ನವಾಗಿರದ ರೀತಿಯಲ್ಲಿ 'ಸಾವಕಾಶ, ಸುವ್ಯಸ್ಥಿತ ಸಾಮಾಜಿಕ ಉದ್ಧಾರ' ಇವೇ ನಮಗೆ ಉಳಿದ ಧ್ಯೇಯಗಳಾದವು. ಇದಕ್ಕೆ ಬ್ರಿಟಿಷ್ ಪದ್ಧತಿಯುಕ್ತವೇ ಮಾದರಿಯೆಂದು ಪರಿಗ್ರಹಿಸಲಾಯಿತು.

ಮಾಧ್ಯಮಿಕ ಶಿಕ್ಷಕರ ನೌಕರಿ ಮಟ್ಟ

ಅಗಸ್ಟ ೧೬ಕ್ಕೆ ಮುಂಬಾಯಿ ಮುಖ್ಯ ಮಂತ್ರಿ ಶ್ರೀ. ಖೇರರನ್ನು ಕಾಣಲು ಹೋಗಿದ್ದ ಮುಂಬಾಯಿ ಪ್ರಾಂತೀಕ ಮಾಧ್ಯಮಿಕ ಶಿಕ್ಷಕ ಸಂಘದ ಮಹಾ ಮಂಡಲದ ಶಿಕ್ಷಕ ವೃಂದಕ್ಕೆ ಶ್ರೀ. ಖೇರರು 'ಮುಂಬಾಯಿ ಪ್ರಾಂತದ ಮಾಧ್ಯಮಿಕ ಶಿಕ್ಷಕರ ನೌಕರಿಯ ಸ್ಥಿತಿಗತಿಗಳನ್ನು ಸರಕಾರೀ ನೌಕರರ ಸ್ಥಿತಿಗತಿಗಳ ಮಟ್ಟಕ್ಕೆ ತರಲಾಗುವುದು' ಎಂದು ಆಶ್ವಾಸನವಿತ್ತಿದ್ದಾರೆ.

ಹಿಂದೂ ದೇಶ.

ಕುಮಾರಿ ಪಮೇಲಾ ಮೌಂಟ್‌ಬೆಟನ್

ಲಾರ್ಡ್ ಮೌಂಟ್‌ಬೆಟನ್ನರ ಪುತ್ರಿ ಕುಮಾರಿ ಪಮೇಲಾ ಮೌಂಟ್‌ಬೆಟನ್ ಇವರು ಲಂಡನ್ನಿನಲ್ಲಿ ಭಾರತದ ಹೈಕಮಿಷನರಾಗಿರುವ ಶ್ರೀ ವಿ. ಕೆ. ಕೃಷ್ಣಮೇನನ್ನರ ಕಾರ್ಯದರ್ಶಿಯಾಗುವರೆಂದು 'ಡೈಲಿ ಟೆಲಿಗ್ರಾಫ್' ಪತ್ರಿಕೆ ಬರೆಯುತ್ತದೆ. ಅವರಿಗೆ ಭಾರತದ ಕುರಿತು ಹೆಚ್ಚಿನ ಪರಿಚಯವಿರುವುದರಿಂದ ಕೆಲವು ಸಮಯದ ತನಕ ಈ ಕೆಲಸವನ್ನು ಅವರಿಗೆ ವಹಿಸಿಕೊಡಲಾಗುವದೆಂದು ಸರಕಾರೀ ಭವನದಿಂದ ತಿಳಿದು ಬರುತ್ತದೆ.

ಹಿಂದೂಸ್ಥಾನಿಯೇ ಭಾರತದ ರಾಷ್ಟ್ರಭಾಷೆ ಆಗಬೇಕು.

'ಹಿಂದೂಸ್ಥಾನಿಯೇ ಭಾರತದ ರಾಷ್ಟ್ರಭಾಷೆಯಾಗಬೇಕು. ಲಿಪಿಯು ದೇವನಾಗರಿ ಬೇಕಾದರೂ ಆಗಬಹುದು. ಉರ್ದು ಬೇಕಾದರೂ ಆಗಬಹುದು. ಹಿಂದೂಸ್ಥಾನಿಯನ್ನು ಅಂಗೀಕರಿಸುವದರಿಂದ ಎರಡು ಸಂಸ್ಕೃತಿಗಳೂ ಮಿಳಿತವಾಗಿ ಭಾರತಕ್ಕೆ ಉಪಯೋಗವಾಗುವದು' ಎಂದು ಭಾರತ ರಾಜ್ಯಾಂಗ ಸಭೆಯ ಸದಸ್ಯರುಗಳು ಒಂದು ಮನವಿ ಹೊರಡಿಸಿದ್ದಾರೆ.

ಭಾಷಾವಾರು ಪ್ರಾಂತದ ಜವಾಬ್ದಾರಿಯು ಈಗ ಸಾಧ್ಯವಿಲ್ಲ.

'ಭಾಷಾವಾರು ಪ್ರಾಂತರಚನೆ ಬಗ್ಗೆ ಭಿನ್ನಾಭಿಪ್ರಾಯವೇನೂ ಇಲ್ಲ. ಆದರೆ ಈಗಿನ ಸಂದರ್ಭದಲ್ಲಿ ಅದನ್ನು ಕಾರ್ಯರೂಪಕ್ಕೆ ತರುವದೇ ಕಷ್ಟ' ಎಂಬದಾಗಿ ಭಾರತದ ಮುಖ್ಯ ಮಂತ್ರಿ ಪಂ. ನೆಹರೂ, ಡಾ. ಸರ್ ಎಸ್. ವಿ. ರಾಮಸ್ವಾಮಿ ಮುದಲಿಯಾರ್, ಎನ್. ಜಿ. ರಂಗಾ, ಅನಂತಶಯನಂ ಅಯ್ಯಂಗಾರ್, ಮತ್ತು ಇತರ ಐದು ಜನರು ಆಂಧ್ರ ಪ್ರಾಂತದ ಒತ್ತಾಯಕ್ಕಾಗಿ ನಿಯೋಗ ಹೋದಾಗ ತಿಳಿಸಿದರೆಂದು ಗೊತ್ತಾಗಿದೆ. ನಿಯೋಗವು ಸಲ್ಲಿಸಿರುವ ಮನವಿಯನ್ನು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮುಂದೆ ಇಡಲಾಗುವದು.

ಮೋಟಾರು ಯಂತ್ರಕ್ಕೆ ಸೇಂದಿ.

ಈಗಿನ ಪೆಟ್ರೋಲಿನೊಡನೆ ಸೇಂದಿ ಸೆರೆಗಳ ಸಾರವನ್ನು ಮಿಶ್ರಮಾಡಿದರೆ ಯಶಸ್ವಿಯಾಗಿ ಮೋಟಾರು ಯಂತ್ರಗಳನ್ನು ಚಲಾಯಿಸಬಹುದೆಂದು ಸಂಯುಕ್ತ ಅಮೇರಿಕದ ಕೃಷಿ ಇಲಾಖೆಯವರು ಮಾಡಿದ ಪ್ರಯೋಗಗಳಿಂದ ತಿಳಿದು ಬಂದಿದೆ. ಕೃಷಿ ಪದಾರ್ಥ ಉಪ ವಸ್ತುಗಳಿಗೆ ಹೊಸ ಉಪಯೋಗಗಳನ್ನು ಕಂಡುಹಿಡಿಯಲು ಮಾಡಿದ ಪ್ರಯತ್ನಗಳಲ್ಲಿ ಇದೂ ಒಂದು ಎಂದು ಹೇಳಲಾಗಿದೆ. ಇದುತನಕ ಸಾಮಾನ್ಯ ಕಳಪೆ ಸಾರಾಯಿಗಳು ನಿರರ್ಥಕವೆಂದು ಪರಿಗಣಿಸಲಾಗಿತ್ತು. ಈಗ ಇದನ್ನು ಮೋಟಾರಿಗೆ ಉಪಯೋಗಿಸಲಿಕ್ಕಾಗುವದರಿಂದ ಧಾನ್ಯಗಳ ಹೊಟ್ಟಿನಿಂದ ತಯಾರಿಸಲಾಗುವ ಸಾರಾಯಿಗಳ ತಯಾರಿಯನ್ನು ದ್ವಿಗುಣಿತಮಾಡಲಾಗುವದು.

ಸಾವರ್ಕರರು.

ಹಿಂದೂ ಮಹಾ ಸಭಾ ಧುರೀಣರಾದ ಶ್ರೀ ವಿನಾಯಕ ದಾಮೋದರ ಸಾವರ್ಕರರು ಇನ್ನೊಮ್ಮೆ ರಾಜಕೀಯ ರಂಗವನ್ನು ಪ್ರವೇಶಿಸುವರೆಂದು ತಿಳಿದು ಬರುತ್ತದೆ. ಮಹಾತ್ಮ ಗಾಂಧೀಯವರ ಕೊಲೆಗಟ್ಲೆಯಲ್ಲಿ ನಿರಪರಾಧಿಗಳೆಂದು ಬಿಡಲ್ಪಟ್ಟ ನಂತರ ಅವರು ರಾಜಕೀಯದಿಂದ ನಿವೃತ್ತರಾಗುವೆನೆಂದು ಸಾರಿದ್ದರು. ಆದರೆ ಹಿಂದೂ ಮಹಾ ಸಭೆಯ ಧುರೀಣರು ಅವರನ್ನು ಪುನಃ ತಮ್ಮ ನಾಯಕತ್ವ ವಹಿಸಬೇಕೆಂದು ಒತ್ತಾಯಪೂರ್ವಕ ಬಿನ್ನವಿಸಿಕೊಂಡದ್ದರಿಂದ ಅವರು ಒಪ್ಪಿಕೊಂಡಿರುವರಂತೆ.

ಜಯಪ್ರಕಾಶರ ಉಪವಾಸ?

ದಿಲ್ಲಿಯಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಸೇರಿದ್ದಾಗ ಜಯಪ್ರಕಾಶ ನಾರಾಯಣರವರು ತಾವು ನಿರಶನ ವ್ರತವನ್ನು ಕೈಕೊಳ್ಳುವದಾಗಿ ತಿಳಿಸಿದ ಒಂದು ಸಂಗತಿಯ ಕುರಿತು ಪರ್ಯಾಲೋಚನೆ ನಡೆಯಿತಂತೆ. ಹೀಗೆಂದು 'ಟ್ರಿಬ್ಯೂನ್' ಪತ್ರಿಕೆಯ ದಿಲ್ಲಿ ಬಾತ್ಮಿದಾರರು ಪ್ರಕಟಿಸಿದ್ದಾರೆ. ಅವರು ಹೀಗೆ ಬರೆದಿದ್ದಾರೆ:

ಬಿಹಾರದ ಡೊಟಾಸ್ ಗಿರಣಿ ಮಜೂರರ ಸಂಪು ಯಶಸ್ವಿಯಾಗಿ ಸಮತಾವಾದಿ ಧುರೀಣರಾದ ಬಿಸ್ವನ್ ಸಿಂಗರು ತತ್ಸಂಬಂಧ ಕೈಗೊಂಡ ಅನ್ನ ಸತ್ಯಾಗ್ರಹವನ್ನು ಮುಕ್ತಾಯಗೊಳಿಸಬೇಕಾಯಿತು. ಈ ಕುರಿತು ಜಯ ಪ್ರಕಾಶರು ಬಿಹಾರ ಮುಖ್ಯ ಮಂತ್ರಿಗಳೊಡನೆಯೂ ಅಲ್ಲದೆ ಆ ಪ್ರಾಂತದ ಹಿತಾಭಿಲಾಷಿಗಳಾದ ರಾಜೆನ್ ಬಾಬುಗಳೊಡನೆಯೂ ಪತ್ರ ವ್ಯವಹಾರ ನಡೆಸಿ 'ಈ ಮಜೂರ ಕಲಹವು ತೃಪ್ತಿಕರವಾಗಿ ಇತ್ಯರ್ಥವಾಗದಿದ್ದರೆ ಮರಣಾಂತ ನಿರಶನ ಕೈಕೊಳ್ಳುವೆ'ನೆಂದು ತಿಳಿಸಿದ್ದರು. ವರ್ಕಿಂಗ್ ಕಮಿಟಿಯ ಸಭೆಯಲ್ಲಿ ಈ ಕುರಿತು ಪರಿಶೀಲನೆ ನಡೆಸಿ ಸಮತಾವಾದಿ ಧುರೀಣರಿಗೆ ಯೋಗ್ಯ ಉತ್ತರಕೊಡಲು ರಾಜೆನ್ ಬಾಬುಗಳಿಗೆ ನಿರ್ದೇಶಿಸಲಾಗಿದೆ.

ಆದರ್ಶ ಅಧಿಕಾರಿ.

'ನಮ್ಮ ವೃತ್ತ ಪತ್ರಿಕೆಗಳಲ್ಲಿ ಸರಕಾರಿ ಅಧಿಕಾರಿಗಳ ಲಂಚವಂಚನೆಗಳ ಕುರಿತು ಬರುವ ಲೇಖನಗಳನ್ನು ವಿದೇಶೀಯ ರಾದಾದರೂ ಓದಿದರೆ ದೇಶದ ಅಧಿಕಾರವು ಸಂಪೂರ್ಣ ಲಂಚಮಯವಾಗಿದೆ ಎಂಬಭಿಪ್ರಾಯವನ್ನು ಮಾಡಿಕೊಳ್ಳಬಹುದು. ನಿಜ ಸಂಗತಿ ನೋಡ ಹೋದರೆ ಪ್ರಾಮಾಣಿಕರ ಬಹುಸಂಖ್ಯೆಯಲ್ಲಿರ ಪರು. ಇದಕ್ಕೆ ಹಲವು ಉಜ್ವಲ ನಿದರ್ಶನಗಳೂ ಇವೆ. ಹೀಗೆಂದು 'ನಾಗಪೂರ್ ಟೈಮ್ಸ್' ಪತ್ರಿಕೆಯಲ್ಲಿ ಒಬ್ಬ ಲೇಖಕರು ಕೊಚ್ಚಿ ಸಂಸ್ಥಾನದ ಒಬ್ಬ ಅಧಿಕಾರಿಯ ಆದರ್ಶವನ್ನು ಹೀಗೆ ವಿವರಿಸುತ್ತಾರೆ:

ಅಲ್ಲಿಯೊಬ್ಬ ಇಂಜನಿಯರಿದ್ದಾರೆ. ಪ್ರಾಮಾಣಿಕತನಕ್ಕೆ ತುಂಬಾ ಪ್ರಖ್ಯಾತಿ ಪಡೆದವರು. ಈಗವರು ನಿವೃತ್ತರಾಗಿದ್ದರೂ ಅವರ ನಿರ್ವಂಚನೆಯ ಆದರ್ಶವು ಇಂದೂ ಜನಜನಿತವಾಗಿದೆ. ಅವರು ಅದೆಷ್ಟು ನಿಷ್ಕಲಂಕರಾಗಿರಲು ಇಚ್ಛಿಸುತ್ತಿದ್ದರೆಂದರೆ ಕಚೇರಿಗೆ ಹೋದಾಗ ಅವರು ಎರಡು ಮಸಿಯ ಬುರುಡೆ (*Ink Stand*) ಗಳನ್ನು ಒಯ್ಯುತ್ತಿದ್ದರು—ಒಂದು ಸರಕಾರಿ ಪತ್ರಗಳನ್ನು ಬರೆಯಲಿಕ್ಕೆ ಇನ್ನೊಂದು ತನ್ನ ಸ್ವಂತ ಪತ್ರ ಲಿಖಿತಕ್ಕೆ. ಸ್ವಭಾವತಃ ಇವರು ಹಸನ್ಮುಖರೂ ವಿನೋದಪರರೂ ಆಗಿದ್ದರೂ ಇತರರಿಗೆಲ್ಲರಿಗೂ ಇವರು ನಡುಕ ಹುಟ್ಟಿಸುವವರಾಗಿದ್ದರು.

ಒಂದು ಸಲ ಅವರ ಸೂಚನೆಗಳಿಗನುಸಾರವಾಗಿ ಒಂದು ಸೇತುವೆ ಕಟ್ಟಲ್ಪಟ್ಟಿತ್ತು. ಆಗ ಇವರಿಂದ ನೊಂದ ಅನೇಕರು ಒಟ್ಟು ಸೇರಿ ಆ ಸೇತುವೆಯ ರಚನಾ ಕ್ರಮದಲ್ಲಿನ ಕುಂದು ಕೊರತೆಗಳನ್ನು ತೆಗೆದು ಟೀಕಿಸಹತ್ತಿದರು. ಸೇತುವೆಯು ನಿರ್ಬಲವಾಗಿದೆಯೆಂದೂ, ಅದು ಬಹು ಕಾಲ ಬಾಳಲಾರದೆಂದೂ ಪ್ರಚಾರ ಮಾಡಲಾಯಿತು. ಅದಕ್ಕುತ್ತರವಾಗಿ ಅವರು ಸ್ಥೈರ್ಯದ ಕಾರ್ಯವೊಂದನ್ನು ಮಾಡಿ ತೋರಿಸಿದರು. ಸಕುಟುಂಬವಾಗಿ ಅವರು ಒಂದು ದೋಣಿಯಲ್ಲಿ ಆ ಸೇತುವೆಯ ಅಡಿಯಲ್ಲಿ ನಿಂತರು. ಭಾರದ ಆರು ಆನೆಗಳನ್ನು ಮೇಲಿಂದ ಸಾಲಾಗಿ ಸೇತುವೆಯನ್ನು ದಾಟುವಂತೆ ಏರ್ಪಡಿಸಿದರು. ಸೇತುವೆಗೆ ಏನೂ ಧಕ್ಕೆಯುಂಟಾಗಲಿಲ್ಲ. ಟೀಕೆಗಳೆಲ್ಲವೂ ಮೌನವಾದವು.

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್ ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. ·32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245 ರ ವರೆಗೆ.
2. ·32 ರಿವಾಲ್ವರುಗಳು (Revolvers) „ 262 „ 274 „
3. 12ನೇ ನಂಬರಿನ ಜೋಡು ಕೊಳವಿನ ಕೋವಿ (Webley & Scott) ಕ್ರಯ ರೂ. 1492/-
4. 12ನೇ ನಂಬರಿನ ಜೋಡು ಕೊಳವಿನ ಕೋವಿ (Spanish make) ಕ್ರಯ ರೂ. 700/-
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4-10-0
6. 12, 16, 20ನೇ ನಂಬರು ಕೋವಿಗಳ ತೋಟಗಳೂ ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಗಳೂ ಸಹ ದೊರೆಯುತ್ತವೆ.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

52-4

The Coorg Film Exchange Limited, Mercara.

Proceedings of an extra-ordinary General Meeting held on 7-8-1949 at the registered office.

1. Mr K. V. Giri Proposed Mr. C. M. Thimmaya to the Chair, seconded by Mr. S. Srinivasaya.

2. Mr. C. M. Thimmaya took the Chair.

3. Proceedings of the extra-ordinary General Meeting held on 16-8-1949 as the knowledge was read.

4. Read letter of Mr G. P. White and Mr. K. V. Giri Answered all as for as his Knowledge was concerned.

5. In supersession of the special resolution passed at the Extra-ordinary General Meeting held on 16 8-1948, it is resolved that the Liquidator shall take charge of all the properties and undertakings of the Company and get the accounts audited.

6. Resoloved that the Liquidator be authorized to run the concerns of the Company, with a view to wind up the concern.

7. Resoloved that the Liquidator be authorized to operate on the accounts at the Canara Banking Corporation of the Coorg Film Exchange immediately.

8. Resoloved that the Liquidator be authorized to sell or other-wise dispose off the properties of the Company, to pay all Liabilities outstandings and pay off the share-holders.

9. Resolved that resolutions 5, 6, 7 and 8 be carried out on from 15-8-49.

10. All the above resolutions were carried out unanimously.

With a vote of thanks the Meeting terminated.

C. M. Thimmaya,
7-8-'49. *Chairman.*

MEMBERS PRESENT:-

1. M/s M. B Achanna. (Member) 2. **Mavinahally Siddabasappa, (Director)** 3. P. M. Muthappa, (Director) 4. C. N. Venkappaya, (Member) 5. S. Srinivasaya (Director) 6 M. U Achanna (Member) 7. H Sheshapaya (Member.) 8. K V. Giri (Director & Liquidator)

ವಾಚಕರ ಪುಟ

ಓದುಗರ ಓಲೆಗಳು.

ಕೊಡಗು ಟ್ರಾನ್ಸ್‌ಪೋರ್ಟ್ ಬೋರ್ಡಿನವರಲ್ಲಿ ವಿನಂತಿ.

ಕೊಡಗಿನಲ್ಲಿ ಪ್ರೈವೇಟ್ ಬಸ್ಸಿನ ಸೌಕರ್ಯಗಳಲ್ಲದೆ ಬೇರೆ ಯಾವ ವಾಹನಗಳಿಲ್ಲವೆಂಬುದು ಸಾರ್ವಜನಿಕರಿಗೆ ತಿಳಿಯದ ವಿಷಯವಲ್ಲ. ಇದನ್ನು ಚೆನ್ನಾಗಿ ತಿಳಿದ ಹಿಂದೀ ರಾಷ್ಟ್ರೀಯ ವಾಹನ ವಹಿವಾಟು ಮಂತ್ರಿ ಶ್ರೀ ಸಂತಾನಂರವರು ಕೆಲವು ತಿಂಗಳುಗಳ ಹಿಂದೆ ಕೊಡಗಿಗೆ ಬಂದಲ್ಲಿ ಅವರಿಗೆ ಕೊಟ್ಟ ಬಿನ್ನವತ್ತಳೆಗೆ ಉತ್ತರ ಕೊಡುತ್ತಾ, ಪೆಟ್ರೋಲ್ ವಿತರಣೆಯಲ್ಲಿ ನಮ್ಮ ಪ್ರಾಂತ್ಯಕ್ಕೆ ಹೆಚ್ಚಿನ ಪೆಟ್ರೋಲ್ ಪಾಲು (quota) ಕೊಡುವುದಾಗಿ ಭರವಸೆ ಇತ್ತು ಹೋದದ್ದು ಪತ್ರಿಕೆಗಳಲ್ಲಿ ಓದಿದ ನೆನಪು ನನಗಿದೆ. ಅದರಂತೆ ನಮ್ಮ ಸ್ಥಳೀಕ ಸರಕಾರದ ಸೂಚನೆಯಂತೆ ಅವರು ಖಂಡಿತ ಕೊಟ್ಟಿರಬೇಕು. ಆದರೆ ಏನು ಮಾಡುವುದು 'ದೇವರು ಕೊಟ್ಟರೂ ಪೂಜಾರಿ ಕೊಡ' ಎಂಬ ಸಾರ್ವಜನಿಕ ಮಾತು ನನ್ನ ನೆನಪಿಗೆ ಬರುತ್ತಿದೆ.

ಬಸ್ಸ್ ಲೈನುಗಳು ಸ್ವಲ್ಪ ಇತ್ತೀಚೆಗೆ ಹೆಚ್ಚಿದರೂ ಕೂಡ ಹುದಿಕೇರಿಯಿಂದಾಗ ಲೀ ಕುಟ್ಟದಿಂದಾಗಲೀ ಮಧ್ಯಾಹ್ನದ ವೇಳೆ ಸೀದಾ ಮಡಿಕೇರಿಗೆ ಬರುವ ಬಸ್ಸುಗಳಿಲ್ಲ. ಟ್ರಾನ್ಸ್‌ಪೋರ್ಟ್ ಬೋರ್ಡಿಗೆ ಹೇಳಬೇಕೆಂದಿರುವ ಸಲಹೆ ಏನೆಂದರೆ ಈಗ ಮಡಿಕೇರಿಯಿಂದ ಬೆಳಗ್ಗೆ ಏಳುವರೆ ಘಂಟೆಗೆ ಹೊರಡುವ ಗಣೇಶ ಬಸ್ಸ್ ಅಲ್ಲಲ್ಲಿ ನಿಂತು ವಿಳಂಬ ಮಾಡಿಕೊಂಡು ಪೊನ್ನಂಪೇಟೆಗೆ ಹೋಗುವ ಬದಲು ಸೀದಾ ಕುಟ್ಟಕ್ಕಾಗಲೀ ಹುದಿಕೇರಿಗಾಗಲಿ ಹೋದರೆ ಮಧ್ಯಾಹ್ನದ ವೇಳೆ ಅಲ್ಲಿಂದ ಹೊರಟರೆ ಮರೆನಾಡು ಇತ್ಯಾದಿ ಊರುಗಳಿಂದ ಬಸ್ಸ್ ಹಿಡಿಯಲಿಕ್ಕೆ ಬರುವ ಪ್ರಯಾಣಿಕರಿಗೆ ಬಹಳ ಉಪಕಾರವಾಗುತ್ತಿತ್ತು. ಈಗ ಅವರು ಬೆಳಗಿನ ಜಾವ ೪ ಘಂಟೆಗೆ ಎದ್ದು ಕಾಡು ದಾರಿಗಳಿಗಾಗಿ ಬಸ್ಸ್ ಹಿಡಿಯಲಿಕ್ಕೆ ಬರಬೇಕಾಗಿದೆ. ಮಕ್ಕಳು, ಹೆಂಗಸರು ಇದ್ದರೆ ಅವರ ಕಷ್ಟ ಎಷ್ಟಿದೆ ಎಂಬುದನ್ನು ಎಲ್ಲರೂ ತಿಳಿದುಕೊಳ್ಳಬೇಕು. ಆದುದರಿಂದ ಈ ಲೈನನ್ನು ಹುದಿಕೇರಿ ವರೆಗಾಗಲೀ ಕುಟ್ಟದವರೆಗಾಗಲೀ ಮುಂದುವರಿಸ ಬೇಕಾಗಿದೆ. ಇದನ್ನು ಬೋರ್ಡಿನವರು ಮತ್ತು ಬಸ್ಸ್ ಮಾಲೀಕರು ಖಂಡಿತ ಮನಸ್ಸಿಗೆ ತೆಗೆದುಕೊಳ್ಳಬೇಕೆಂಬುದೇ ಈ ಪತ್ರದ ಅಭಿಪ್ರಾಯ.

ಅಲ್ಲದೆ ಇನ್ನೊಂದು ಸೂಚನೆ ಏನೆಂದರೆ ಬಸುಗಳು ಕ್ಲಪ್ತ ಸಮಯಕ್ಕೆ ಹೊರಡುವಂತೆ ಬೋರ್ಡಿನವರು ಮಾಲೀಕರಿಗೆ ಆಜ್ಞೆ ಕೊಡಿಸಬೇಕು. ಉದಾಹರಣೆಗಾಗಿ ಹೇಳುವದಾದರೆ ಮಡಿಕೇರಿಯಿಂದ ಎಂಟುಕಾಲು ಘಂಟೆಗೆ ಮೂರ್ನಾಡು ಮಾರ್ಗವಾಗಿ ಹೋಗುವ ಬಸ್ಸು ಕೆಲವು ತಿಂಗಳಿಂದ ಒಂಭತ್ತೂವರೆ ಘಂಟೆಗೆ ಹೊರಡುತ್ತಿದೆ. ಕೇಳಿದರೆ ಹೆಚ್ಚಿನ ಬಸ್ಸುಗಳಿಲ್ಲ; ಮೂರ್ನಾಡಿನಿಂದ ಬೆಳಗ್ಗೆ ಬರುವ ಬಸ್ಸ್ ಬಂದನಂತರ ಹೊರಡಬೇಕು ಎಂದು ಹೇಳುವುದು ಯುಕ್ತತಕ್ಕದಲ್ಲ. ಈ ಕಂಪೆನಿಯವರಿಗೆ ಸಾಧ್ಯವಿಲ್ಲದಿದ್ದರೆ ಬೇರೆಯವರಿಗೆ ಲೈಸನ್ಸ್ ಕೊಡಲಿ, ಬಸ್ಸ್ ಮಾಲೀಕರ ಸೌಕರ್ಯಕ್ಕಾಗಿ ಬಸ್ಸ್ ಇಟ್ಟದಲ್ಲ. ಸಾರ್ವಜನಿಕರ ಅನುಕೂಲತೆಗಾಗಿ ಎಂಬದನ್ನು ಬೋರ್ಡಿನವರು ತಿಳಿದುಕೊಳ್ಳಬೇಕೆಂಬದನ್ನ ನೆನಪಿಗೆ ತರಬೇಕೆಂದು ಬರೆದಿರುವುದಾಗಿದೆ.

ಪ್ರಯಾಣಿಕ.

ಕಣ್ಣಿಗೆ ಮಣ್ಣೆ?

ರಾಜ್ಯಘಟನಾ ಸಭೆಯಲ್ಲಿ ಕೊಡಗಿನ ವಿಚಾರದ ಚರ್ಚೆ ಬಂದ ಎರಡು ದಿನಗಳಲ್ಲಿ ತಾನೇಕೆ ಹಾಜರಿರಲಿಲ್ಲವೆಂಬುದನ್ನು ವಿವರಿಸಿಯೂ ಹಿಂದೂದೇಶದ ಹಿತದೃಷ್ಟಿಯಿಂದ ತಾನು ಮಾಡುತ್ತಿರುವ ಮಹಾ ಕೆಲಸಗಳನ್ನೂ ವಿವರಿಸಿಯೂ, ಕೊಡಗಿನ ಬಗ್ಗೆ ಯಾವದೇ ಕರ್ತವ್ಯಚ್ಯುತಿಯನ್ನು ಮಾಡಿಲ್ಲವೆಂದು ಸೂಚಿಸಿಯೂ ಶ್ರೀ ಸಿ. ಎಂ. ಪೂಣಚ್ಚನವರು ಬರೆದ ಲೇಖನವನ್ನು ಓದಿದೆನು. ತಾನು ಕರ್ತವ್ಯ ಚ್ಯುತಿ ಮಾಡಿದುದಾಗಿ ನೆಹರೂರವರೇ, ಪಟೇಲರೋ ತೀರ್ಮಾನ ಕೊಡುವದಾದರೆ ಆ ತೀರ್ಮಾನಕ್ಕೆ ತಾನು ಒಳಗಾಗುವದಾಗಿಯೂ ಅವರು ಬರೆದಿದ್ದಾರೆ. ಶ್ರೀ ಪೂಣಚ್ಚನವರು ತಾನು ಜನ ಪ್ರತಿನಿಧಿ ಎಂಬುದನ್ನು ಮರೆತು ಸರಕಾರ ನೌಕರನಂತೆ ಮಾತಾಡುತ್ತಿರುವದು ವಿಷಾದಕರ. ಮೇಲಧಿಕಾರಿ ಕೊಟ್ಟ ತೀರ್ಮಾನದ ಪ್ರಶ್ನೆ ಇಲ್ಲಿಲ್ಲ. ಶ್ರೀ ಪೂಣಚ್ಚನವರು ಕೊಡಗಿನ ಜನರಿಗೆ ಜವಾಬ್ದಾರರೇ ವಿನಹ ಪಟೇಲರಿಗಾಗಲೀ ನೆಹರೂರವರಿಗಾಲೀ ಅಲ್ಲ. ಶ್ರೀ ಪೂಣಚ್ಚನವರನ್ನು ಪ್ರಶ್ನಿಸುವವರು ಕೊಡಗಿನ ಜನರಲ್ಲದೆ ನೆಹರೂರವರಲ್ಲ. ಘಟನಾ ಸಮಿತಿಯಲ್ಲಿ ಕೊಡಗಿನ ಪ್ರಶ್ನೆ ಬರುವ ಮೊದಲು ಕಾಂಗ್ರೆಸ್ಸ್ ಪಾರ್ಟಿ ಮೀಟಿಂಗಿನಲ್ಲಿ ಇದರ ನಿರ್ಣಯವಾಗಿತ್ತೆಂದೂ ಘಟನಾ ಸಮಿತಿಯ ಮೀಟಿಂಗಿನಲ್ಲಿರಬೇಕಾದ ಆವಶ್ಯಕತೆ ಇರಲಿಲ್ಲವೆಂದೂ ಶ್ರೀ ಪೂಣಚ್ಚನವರು ಹೇಳುವದಾದರೆ ಡೆಲ್ಲಿ ಪ್ರಾಂತದ ಮೆಂಬರು ಶ್ರೀ ದೇಶಬಂಧು ಗುಪ್ತರವರು ಘಟನಾ ಸಮಿತಿಯಲ್ಲಿ ತನ್ನ ಪ್ರಾಂತ ಬೇರೆ ಇದ್ದು ಜವಾಬ್ದಾರಿಸರಕಾರ ಬೇಕೆಂದು ೭೦ ನಿಮಿಷಗಳ ವರೆಗೆ ಧೀರ್ಘ ಭಾಷಣ ಏಕೆ ಮಾಡಬೇಕಿತ್ತು? ಇದಕ್ಕುತ್ತರವನ್ನು ಪಂಡಿತ ಜವಾಹರ್‌ಲಾಲ್ ನೆಹರೂರವರೇ ಏಕೆ ಕೊಡಬೇಕಿತ್ತು? ಕೊಡಗಿನ ಜನರು ರಾಜಕೀಯ ಪರಿಜ್ಞಾನವಿಲ್ಲದವರಿರಬಹುದು. ಆದರೆ ಇಂಥಾ ಸ್ಪಷ್ಟ ವಿಚಾರಗಳೂ ಅವರಿಗೆ ಅರ್ಥವಾಗಲಾರದೆಂದು ಅವರ ಕಣ್ಣಿಗೆ ಮಣ್ಣೆರಚಬಾರದು.

ಕೆ. ಎ.

ಅಪ್ರಿಯ ಬೋರ್ಡು.

(೧)

ತಾ. ೨೩-೭-೪೯ರಲ್ಲಿ ನಡೆದ ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗಿನ ಫಲಿತಾಂಶವನ್ನು ನೋಡಿ ತುಂಬಾ ವಿಷಾದವಾಗುತ್ತದೆ. ಸರಕಾರವು ವಿದ್ಯೆಯ ಅವನತಿಯನ್ನು ಕಂಡು ಬೋರ್ಡು ಶಾಲೆಗಳನ್ನು ಸರಕಾರಕ್ಕೆ ಬಿಡಬೇಕೆಂದು ಕೇಳುವಾಗ ಆಗುವದಿಲ್ಲವೆಂದು ಹೇಳಿದ್ದನ್ನು ನೋಡಿದರೆ ಬೋರ್ಡಿನ ಸದಸ್ಯರುಗಳಿಗೆ ಪದವಿಯ ಮೋಹವು ಹೆಚ್ಚಾಗಿದೆಯೇ ಎಂಬ ಸಂಶಯ ಬರುತ್ತದೆ. ಇಡೀ ಹಿಂದೂಸ್ಥಾನದಲ್ಲಿ ಹತ್ತು ವರ್ಷಗಳಲ್ಲಿ ಪ್ರತಿಯೊಬ್ಬ ಪ್ರಜೆಯೂ ವಿದ್ಯಾವಂತನಾಗಬೇಕೆಂದು ಹೇಳಿದ ಜವಾಹರ್‌ಲಾಲ್ ನೆಹರೂರವರ ವಾಣಿಯನ್ನು ಅರಿಯದಿರುವುದು ಶೋಚನೀಯ. ಪ್ರಜೆಗಳಿಂದಲೇ ಆರಿಸಿ ಸ್ಥಾಪಿಸಲ್ಪಟ್ಟ ಬೋರ್ಡು ಜನ ಹಿತವನ್ನು ಲೆಕ್ಕಿಸಬೇಕು. ತಮ್ಮ ಮಕ್ಕಳ ವಿದ್ಯೆಯ ಅವನತಿಗೆ ಜನತೆಯು ಎಂದಿಗೂ ತಯಾರಿರಲಾರದು. ಬೋರ್ಡಿಗೆ ಒಳಪಟ್ಟಂತ ಎಷ್ಟೋ ಶಾಲೆಗಳು ಹೀನ ಸ್ಥಿತಿಯಲ್ಲಿದ್ದು ದುರಸ್ತಿಪಡಿಸಲು ಹಣವಿರುವುದಿಲ್ಲ. ಇನ್ನೂ ಅನೇಕ ಶಾಲೆಗಳನ್ನು ಗ್ರಾಮದವರೇ ಕಟ್ಟಿಸಿ, ಉಪಾಧ್ಯಾಯರನ್ನೂ ನಿಯಮಿಸಿಕೊಂಡು ತಾವೇ ಸಂಬಳವನ್ನು ಕೊಟ್ಟು ತಾವೇ ತಮ್ಮ ಮಕ್ಕಳ ವಿದ್ಯಾರ್ಜನೆಯನ್ನು ಕೈ ಕೊಳ್ಳುವದಾದರೆ ಸರಕಾರ ಯಾ ಬೋರ್ಡಿನಿಂದ ಆವಶ್ಯಕತೆ ಇರುವದಿಲ್ಲ. ಶಾಲಾ ಕಟ್ಟಡದ ಹಣವನ್ನೂ ಗ್ರಾಂಟಿನ್ನೂ ಕೇಳಿದಲ್ಲಿ 'ಮಕ್ಕಳಿಗೆ ಬಾಳೆಹಣ್ಣನ್ನು ತೋರಿಸಿ ತಾನು ಬಾಯಿಗೆ ಹಾಕಿದಂತೆ' ಎಂಬ ಗಾದೆಯನ್ನು ಹೇಳಿ ಹಣ ವಿರುವುದಿಲ್ಲವೆನ್ನುವರು. ಎಷ್ಟರ ವರೆಗೆ ಗ್ರಾಮಸ್ಥರು ತಾವೇ ಶಾಲೆಯನ್ನು ನಡೆಸಬಹುದು? ಬೋರ್ಡಿಗೆ ಸೇರಿದಂಥಾ ಆಸ್ಪತ್ರೆಗಳೂ ಸಹ ದುರಸ್ತಿಯಿಲ್ಲದೆ ವ್ಯಾಸು ತಿರುಗಲು ಸಾಧ್ಯವಾಗದೆ ಎಷ್ಟೋ ಜನರು ಕಾಯಿಲೆಯಿಂದ ಮರಣ ಹೊಂದಿರುವರು. ಇಂದು ಎಲ್ಲಿ ನೋಡಿದರೂ ಬೋರ್ಡನ್ನು ಶಪಿಸದೆ ಇರುವವರು ಕಡಿಮೆ. ಈ ಬಡತನದ ಬೋರ್ಡು ನಿರಂತರವೂ ಜವಾಬ್ದಾರಿಕೆಯನ್ನು ಹೊತ್ತುಕೊಂಡಿದೆ. ಇದರಿಂದ ದೇಶಕ್ಕೆ ನಷ್ಟವೇ ವಿನಹ ಬೇರಿಲ್ಲ. ಈಗಿರುವ ಬೋರ್ಡು ಶಾಲೆಗಳನ್ನು ನೋಡಿದರೆ ವಿದ್ಯೆಯು ಉನ್ನತಿಯೋ ಯಾ ಅವನತಿಯೋ ಎಂದು ಕ್ಷಣದಲ್ಲೇ ಮನದಟ್ಟಾಗುವದು. ಬೋರ್ಡಿಗೆ ಸೇರಿದ ಆಸ್ಪತ್ರೆಗಳಲ್ಲಿ, ಬೇಕಾದಂತ ಕಾಯಿಲೆಗಳಿಗೆ ಸರಿಯಾದ ಔಷಧಿಯೂ ಸಹ ದೊರಕುವದು ಕಷ್ಟವೆಂದರೆ ತಪ್ಪಾಗಲಾರದು. ಬೆಕ್ಕು ಕಣ್ಣನ್ನು ಮುಚ್ಚಿಕೊಂಡು ಹಾಲು ಕುಡಿಯುವಂತೆ ಬೋರ್ಡು ಕಣ್ಣನ್ನು ಮುಚ್ಚಿಕೊಂಡರೆ ದೇಶದ ಯಾ ಜನರ ಉನ್ನತಿ ಎಂದಿಗೂ ಆಗಲಾರದು. ಇನ್ನಾದರೂ ಸರಕಾರವು ಬೋರ್ಡಿನ ಶಾಲೆಗಳನ್ನು ವಹಿಸಿಕೊಳ್ಳಲು ಮುಂದೆ ಬಂದಿರುವದು. ಒಂದು ಬೊಗಸೆ ನೀರನ್ನು ತಾನು ತುಂಬಾ ತೃಪ್ತಿಪಟ್ಟು ಕುಡಿಯಬೇಕು. ಸಾಧ್ಯವಿಲ್ಲದಿದ್ದರೆ ಕುಡಿಯುವನೊಡು ಹೇಳಿದ ಮಹಾತ್ಮನಿಗಾದರೂ ಕೊಡಬೇಕು. ದೇಶದಲ್ಲಿ ವಿದ್ಯೆಯು ತುಂಬಿ ತುಳುಕಬೇಕಾದರೆ ಚಿಕ್ಕ ದೃಷ್ಟಿಯನ್ನು ಬಿಡಬೇಕು. ದೇಶದ ಅಭ್ಯುದಯಕ್ಕಾಗಿ ಬೋರ್ಡು ಮೆಂಬರರುಗಳು ಪ್ರತಿಷ್ಠೆಯನ್ನ ಬಿಡಬೇಕು.

ವಿದ್ಯಾ ಪ್ರೇಮಿ.

(೨)

ಇಂದಿನ ರಾಜಕೀಯ ವಾತಾವರಣದಲ್ಲಿ ಕೊಡಗು ಒಂದು ಪುಟ್ಟ ದೇಶ. ಅದನ್ನು ಬೇರೆ ಪ್ರಾಂತವಾಗಿಟ್ಟುಕೊಂಡು ಆಡಳಿತ ನಡೆಸಲು ಸಾಧ್ಯವಿಲ್ಲವೆಂಬ ಕೂಗಾಟ ನಡೆಯುತ್ತಿರುವಾಗ ಅದನ್ನು ಬೇರೆ ಇಟ್ಟುಕೊಳ್ಳಲು ಸಾಧ್ಯವಿದೆಯೆಂದು ತೋರಿಸುವದಾದರೆ ಸರಕಾರದ ಅನಾವಶ್ಯಕ ಖರ್ಚಿನಲ್ಲಿ ಅನೇಕ ತರದ ಕೋತೆಗಳನ್ನು ಮಾಡಬೇಕಾಗುತ್ತದೆ.

ಇಷ್ಟು ಸಣ್ಣ ದೇಶಕ್ಕೆ ಒಂದು ಕೌನ್ಸಿಲ್ ಮತ್ತು ಒಂದು ಡಿಸ್ಟ್ರಿಕ್ಟ್ ಬೋರ್ಡು ಆವಶ್ಯ ಇದೆಯೇ ಎಂದು ಮೊದಲು ಆಲೋಚಿಸಬೇಕಾಗಿದೆ. ಖಂಡಿತವಾಗಿಯೂ ಇಲ್ಲ. ಈ ಡಿಸ್ಟ್ರಿಕ್ಟ್ ಬೋರ್ಡಿನ ಉತ್ಪತ್ತಿ ಎಷ್ಟು? ಇವರು ಮಾಡುತ್ತಿರುವ ಕೆಲಸಗಳೇನು? ಇವರ ಅಧೀನವಿರುವ ಯಾವುದಾದರೂ ಕೆಲಸ ಯೋಗ್ಯ ರೀತಿ ನಡೆಯುತ್ತಿದೆಯೇ?

ವಿದ್ಯಾ ಇಲಾಖೆಯ ಕಾರ್ಯ ಕಲಾಪದಿಂದ ಯಾವ ರೈತನಿಗೂ ತೃಪ್ತಿ ಇಲ್ಲ. ವೈದ್ಯ ಇಲಾಖೆಯಲ್ಲಿ ಡಾಕ್ಟರರ ಔಷಧಿಯ ಅಭಾವ ಇದ್ದೇ ಇದೆ. ಕೇಳಿನಲ್ಲಿ ಮಾರಾಸ್ಪತ್ರೆ ಇಡುವದೂ ಬೋರ್ಡಿಗೆ ಸಾಧ್ಯವಾಗಲಿಲ್ಲ. ರಸ್ತೆಗಳನ್ನು ನೋಡಿದರೆ ಆ ವಿಚಾರ ಹೇಳದಿರುವದೇ ಉತ್ತಮ. ರೈತರಾಗಿರುವ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರುಗಳು ತಮ್ಮ ಸ್ವಾರ್ಥತೆಯನ್ನು ಬಿಟ್ಟು ಬೋರ್ಡಿನ ಕಾರ್ಯ ಕಲಾಪಗಳನ್ನ ಸರಕಾರಕ್ಕೆ ಬಿಟ್ಟು ಬೋರ್ಡನ್ನು ವಿಸರ್ಜಿಸಬೇಕು.

C. K. T.

ಕೊಡಗಿನಲ್ಲಿ ಭಿಕ್ಷುಕರು

ಭಿಕ್ಷುಕರಲ್ಲಿ ಗಂಡಸರು, ಹೆಂಗಸರು, ಮಕ್ಕಳು, ವೃದ್ಧರಾದವರು, ಅಂಗಹೀನರು ಮುಂತಾದವರಿರುವರು. ಊರಿಂದ ಊರಿಗೆ ತಿರುಗುತ್ತ ತಲೆಮಾರಿನಿಂದ ಭಿಕ್ಷೆ ಬೇಡುವಿಕೆಯೇ ಒಂದು ಕಸಬಾಗಿ ಜೀವಿಸುವವರು; ವೇಷ ಬದಲಾಯಿಸಿಕೊಂಡು ಸುತ್ತುವ ಕಪಟ ಸನ್ಯಾಸಿಗಳು, ಫಕೀರರು, ಇದೇ ಸುಖಜೀವನವೆಂದು ಹೊಟ್ಟೆ ಹೊರೆಯುವ ಕೋತಿ ಕೊರವರು, ಬಸವನಾಟಕದವರು ಬುಡುಬುಡಿಕೆಯವರು, ದೇವರ ವಿಗ್ರಹ ಯಾ ಭಸ್ಮಗಳನ್ನು ಕೈಯಲ್ಲಿ ಹಿಡಿದು ದೇವರ ಹೆಸರಿನಲ್ಲಿ ಹರಕೆ ಹಣ ಇತ್ಯಾದಿಗಳನ್ನು ತೆಗೆದುಕೊಂಡು ತಿನ್ನುವ ಹಲವಾರು ಸೂತ್ರಧಾರಿಗಳು, ಇವರೆಲ್ಲ ನಮ್ಮ ದೇಶಕ್ಕೆ ಪರದೇಶಗಳಿಂದಲೇ ಬಂದವರು ಮತ್ತು ಬರುತ್ತಿರುವವರೆಂದರೆ ತಪ್ಪಾಗಲಿಕ್ಕಿಲ್ಲ. ಆ ... ಕಟ್ಟಿದ ಹಚ್ಚ ಮೆಟ್ಟಿನ ಉಡುಪನ್ನು ಧರಿಸಿ, ಕೈಯಲ್ಲಿ ಉದ್ದದ ಶಿಫಾರಸಿನ ಪತ್ರಿಕೆ ಹಿಡಿದು 'ನಮ್ಮೂರಲ್ಲಿ ಬರಗಾಲ ಬಂದಿದೆ, ನಾವು ನಿರಾಶ್ರಿತರು, ನಮಗೆ ಧನಸಹಾಯ ಮಾಡಿರಿ' ಎಂದು ಮುಂತಾಗಿ ಸುಳ್ಳಿನ ಪರಂಪರೆಯನ್ನು ಪೋಣಿಸಿಯೂ ದ್ವಿಪ್ರತಿ ಬರೆದು, ಮನೆಗಳಿಗೆ ಹೋಗಿ ಹಣ ವಸೂಲಿಮಾಡಿ ಸುಲಭ ಜೀವನೋಪಾಯವನ್ನು ಮಾಡುವವರ ಆದೊಂದು ಪಂಗಡವಿದೆ.

ತಲೆಯಾಂತರದಿಂದ ಭಿಕ್ಷೆಬೇಡುವಿಕೆಯೇ ಒಂದು ಕಸಬಾಗಿ ನಿಸಿಕೊಂಡವರು ಇಂದು ಮಡಿಕೇರಿ, ನಳೆ ಮೂರ್ನಾಡು, ನಾಡಿದು ವೀರಾಜಪೇಟೆ ಇನ್ನೊಂದು ದಿನ ಅಮ್ಮತ್ತಿ ಎಂದು ಮುಂತಾದ ಸ್ಥಳಗಳಿಗೆ 'ಭಿಕ್ಷೆಯ ದಿನವೆಂದು' ಗೊತ್ತು ಮಾಡಿದ ದಿನ ಸಾಲುಗಟ್ಟಿ ಹೋಗುತ್ತಾರೆ. ಇವರು ಎಲ್ಲಾ ಕಡೆಗಳಿಗೂ ಗುಂಪು ಗುಂಪಾಗಿ ಸಾಗುವರು. ಈ ಪಂಗಡದಲ್ಲಿ ಒಬ್ಬ ನಾಯಕ ಮುಖಂಡನಿರುವನು. ಅವನ ಹುಕುಂ ಮೀರಿ ಇತರರು ವರ್ತಿಸತಕ್ಕದ್ದಲ್ಲ. ಇವರು ಪ್ರತಿದಿನ ಸಂಪಾದಿಸಿದ್ದನ್ನು ಸಾಯಂಕಾಲ ತಂದು ಮುಖಂಡನಿಗೆ ಒಪ್ಪಿಸುವರು. ಅದರಲ್ಲಿ ಒಂದು ಪಿಸೆ

ಯನ್ನು ಅವನು ತೆಗೆದುಕೊಂಡು, ಬಕಿಯನ್ನು ದುಡಿಸುವನಿಗೆ ಕೊಡುವನು. ಸಂಜೆಯ ಸಮಯದಲ್ಲಿ ಎಲ್ಲರೂ ಸುರಾಪಾನ, ಭಂಗಿ ಇತ್ಯಾದಿಗಳಲ್ಲಿ ಆನಂದಿಸುವರು. ರಾತ್ರಿವೇಳೆಯಲ್ಲಿ ಹಾಳುಬಿದ್ದ ಛತ್ರವೋ, ಯಾ ದೇವಸ್ಥಾನವೋ ಯಾ ಖಾಲಿಬಿದ್ದ ಮನೆಗಳಲ್ಲಿ ಮಲಗಿ ದೇವರು ಮೆಚ್ಚದ ಕಾರ್ಯಗಳನ್ನು ಮಾಡುವರು. ಅಂಥವರಲ್ಲಿ ಮಕ್ಕಳಾದರೆ, ಶಿಸುವು ಜನಿಸಿದೊಡನೆ ಅದರ ಕೈಕಾಲು ಯಾ ಕಣ್ಣು ಯಾ ಕಿವಿ, ಇಲ್ಲವೆ ಯಾವುದಾದರೂ ಅಂಗವನ್ನು ಮುರಿದು ಅಂಗಹೀನ ಮಾಡುವರು! ನಂತರ ಆ ಶಿಶುವನ್ನು ತಂದು ಸಂಗಡದ ಮುಖಂಡನಿಗೆ ಒಪ್ಪಿಸುವರು. ಅವನು ಅದನ್ನು ಅವರಲ್ಲಿಯೇ ಹರಾಜು ಮಾಡುವನು. ಅದು ಅಂಗಹೀನವಾದ್ದರಿಂದ ಅದರ ಬೆಲೆ ಹೆಚ್ಚುವುದು. ಇದರಿಂದ ಆ ಮಗುವನ್ನು ಪಡೆದವನು ಹೆಚ್ಚು ಸಂಪಾದಿಸುವನು. ಚಿಕ್ಕ ಶಿಶುವಿನ ವ್ಯಂಗ್ಯ ವಿಕಾರಗಳನ್ನು ಮತ್ತು ಕಷ್ಟವನ್ನು ನೋಡಲಾರದೆ ದಾರಿಹೋಕರು ಅದಕ್ಕೆ ಕಾಲಾಣೆ ಕೊಟ್ಟೇ ಕೊಡುವರು. ಈ ತರದ ಜೀವಿಗಳು ಕೊಳಕಾದ ಹಳೆ ಹರಕಲು ಚಿಂದಿಯುಟ್ಟು ಕೈಕಾಲು ಮುಖವನ್ನು ತೊಳೆಯದೆ ವಾಸನೆ ಬರುತ್ತಿದ್ದು ರೋಗಿಗಳಂತೆ ತೋರುವರು. ಇವರಲ್ಲಿ ಕೆಲವರು ಕೈಕಾಲುಗಳಲ್ಲಿ ಗಾಯಗಳನ್ನು ಮಾಡಿಕೊಂಡು ಜನರಿಗೆ ಪ್ರದರ್ಶಿಸುವರು. ಇನ್ನು ಕೆಲವರು ಕೈಕಾಲುಗಳಲ್ಲಿ ಗಾಯ ಹುಣ್ಣುಗಳಿವೆಯೆಂದು ಹರಕಲು ವಾಸನೆಯ ಬ್ಯಾಂಡೇಜ್ ಮಾಡಿಕೊಳ್ಳುವರು. ಹೆಂಗಸರು ಗರ್ಭಿಣಿಯರಂತೆ ಸೊಂಟಕ್ಕೆ ಬಟ್ಟೆಯನ್ನು ಸುತ್ತಿಕೊಂಡು ನಟಿಸುವರು. ಕಾಯಿಲೆಯಿಂದ ರಸ್ತೆಯಲ್ಲಿ ಬಿದ್ದು ಉರುಳುವರು. ಇನ್ನು ಹಲವರು, ಪ್ರತ್ಯಕ್ಷ ಬ್ರಹ್ಮನಿಂದಲೇ ಬಂದವರೆಂದು, ಶರೀರಕ್ಕೆಲ್ಲಾ ಬೂದಿ ಬಳಿದು ನೀಳವಾದ ಜಡೆಬಿಟ್ಟು ಜಪಮಾಲೆಯನ್ನು ಕೈಯಲ್ಲಿ ಹಿಡಿದು ಯೋಗಾಸನ ಮಾಡುವ ಕಪಟ ಸನ್ಯಾಸಿಗಳು.

ಕೊಡಗಿನಲ್ಲಿ ಭಿಕ್ಷುಕರ ಹಾವಳಿಯು ಹೆಚ್ಚದಂತೆ ಸಾರ್ವಜನಿಕರೂ ಮತ್ತು ಸರಕಾರವೂ ಸಹಕರಿಸಿ ಕೆಲಸ ಮಾಡಬೇಕು. ಮೊದಲಾಗಿ ಭಿಕ್ಷುಕರು ಪರ ದೇಶಗಳಿಂದ ನಮ್ಮ ದೇಶಕ್ಕೆ ಕಾಲಿಡದಂತೆ ಪ್ರತಿ ಗಡಿಯಲ್ಲೂ ಕಾವಲಿಡುವುದು. ಪಟ್ಟಣ ಮತ್ತು ಹಳ್ಳಿಗಳಲ್ಲಿ ಅಲೆಯುವವರನ್ನು ಹಿಡಿದು, ಅವರಲ್ಲಿ ಆಗುವಷ್ಟು ಮಟ್ಟಿಗೆ, ಪರವರ ದೇಶಕ್ಕೆ ಗಡಿ ಪಾರು ಮಾಡುವುದು. ಉಳಿದವರಲ್ಲಿ ಕೆಲಸಕ್ಕೆ ಯೋಗ್ಯರನ್ನು ಅವರ ಶಕ್ತಿಗನುಸಾರವಾಗಿ ತೋಟ ಇತ್ಯಾದಿಗಳಿಗೆ ಕೆಲಸಕ್ಕೆ ಕಳುಹಿಸುವುದು. ಯಾವ ಕೆಲಸವೂ ಮಾಡಲಿಕ್ಕಾಗದ ಅಂಗ ಹೀನರನ್ನು ಸರಕಾರವೇ ಅನ್ನ ಬಟ್ಟೆ ಕೊಟ್ಟು ಸಾಕುವುದು. ಇಲ್ಲವೇ ಅಂಥವರ ಹೆಸರುಗಳನ್ನು ಸರಕಾರವು ರಿಜಿಸ್ಟರ್ ಮಾಡಿ, ಅವರಿಗೆ ಭಿಕ್ಷೆಎತ್ತಲು ಲೈಸನ್ಸ್‌ಡ್ ಬ್ಯಾಡ್ಜ್ ಕೊಡುವುದು ಯೋಗ್ಯವಾಗಿದೆ.

ಪಿ. ಎಸ್. ಐಯ್ಯಪ್ಪ.

ರೈತನ ಪುಟ.

ಆಹಾರದ ಕೊರತೆಗೆ ಮರಗೆಣಸು.

ಲೇ:- ಶ್ರೀ ಬಿ. ಎಸ್. ಚಿನ್ನಪ್ಪಗೌಡ, ಭಾಗಮಂಡಲ

ಮನುಷ್ಯನು ಅನೇಕ ರೀತಿಯ ಆಹಾರಗಳನ್ನು ಉಪಯೋಗಿಸುತ್ತಾನೆ. ಪ್ರತಿಯೊಂದು ಪ್ರಾಂತದವರು ಬೇರೆ ಬೇರೆ ಆಹಾರ ಉಪಯೋಗಿಸುತ್ತಾರೆ. ನಮ್ಮ ಹಿಂದೂದೇಶದಲ್ಲಿ ಆಹಾರದ ಕೊರತೆಯು ಹೆಚ್ಚುವ ಈ ಕಾಲದಲ್ಲಿ ನಮ್ಮ ಆ ಹಿಂದಿನ ಪದ್ಧತಿಯನ್ನೇ ಇಟ್ಟುಕೊಂಡು ಸಾಗಲಾರೆವು. ಅಕ್ಕಿ ದೊರೆಯದ ಕಾಲದಲ್ಲಿ ಅಕ್ಕಿಯನ್ನೇ ತಿನ್ನುವ ಹಠಹಿಡಿದರೆ ಉಪವಾಸ ಬಿದ್ದು ಪ್ರಾಣ ಕಳಕೊಳ್ಳಬೇಕಾದೀತು. ಆದ್ದರಿಂದಲೇ ವಿವಿಧ ರೀತಿಯ ಆಹಾರವನ್ನು ಉಪಯೋಗಿಸುವ ಅವಶ್ಯಕತೆ ತುಂಬಾ ಇದೆ. ಪಂಡಿತ ಜವಾಹರ್‌ಲಾಲ್ ನೆಹರೂರವರಂಥಾವರೇ ತಮ್ಮ ಆಹಾರದ ಪದಾರ್ಥಗಳಲ್ಲಿ ಪರಿಸ್ಥಿತಿಗೆ ತಕ್ಕ ಬದಲಾವಣೆ ಮಾಡಿಕೊಂಡಿದ್ದಾಗ ಅದರಂತೆ ನಾವೂ ಕೂಡ ನಮ್ಮ ಆಹಾರದಲ್ಲಿ ಹೆಚ್ಚು ತರಕಾರಿ, ಗಡ್ಡೆ, ಗೆಣಸು ಮೊದಲಾದುವನ್ನು ಉಪಯೋಗಿಸಬೇಕು. ಗೆಡ್ಡೆ ಗೆಣಸು ಶರೀರಕ್ಕೆ ಅಹಿತವಾದವಲ್ಲ. ಅವುಗಳಲ್ಲೂ ಶರೀರಕ್ಕೆ ಶಕ್ತಿ ಪೋಷಕ ವಸ್ತುಗಳು ಸಾಕಷ್ಟಿವೆ.

ಕೃತ ಯುಗದಲ್ಲಿ ಶ್ರೀರಾಮನು ಗೆಡ್ಡೆ ಗೆಣಸು, ಕಂದಮೂಲ ಫಲಗಳನ್ನು ತಿಂದು ಜೀವಿಸಿ ಜಗತ್ತಿನಲ್ಲಿಯೇ ಹೆಸರಾಂತ ರಾವಣನನ್ನು ನಿಗ್ರಹಿಸಲಿಲ್ಲವೇ? ಒಂದು ಕಾಲಕ್ಕೆ ಮನುಷ್ಯನು ಗೆಡ್ಡೆ ಗೆಣಸು ಹಣ್ಣುಹಂಪಲುಗಳನ್ನೇ ತಿಂದು ಜೀವಿಸುತ್ತಿದ್ದಿರಬೇಕು. ಆ ಕಾಲದಲ್ಲಿಯ ಜನರು ಆರೋಗ್ಯವಂತರೂ, ದೃಢಕಾಯರೂ ಆಗಿದ್ದರೆಂಬುದರಲ್ಲಿ ಸಂಶಯವಿಲ್ಲ. ನಮ್ಮ ಆಧುನಿಕ ನಾಗರೀಕತೆ ಪ್ರಾರಂಭವಾಗಿ, ಆಹಾರ ಪದಾರ್ಥಗಳನ್ನು ಬೇಯಿಸಿ ತಿನ್ನುವದು ಪ್ರಾರಂಭವಾಗಿ ನಮ್ಮ ಹೊಟ್ಟೆ ಹಲ್ಲುಗಳಿಗೆ ಉಳಿಗಾಲವಿಲ್ಲದಾಗಿದೆ. ಆರೋಗ್ಯವೂ ಕೆಡಲು ಕಾರಣವಾಗಿದೆ. ಹಿಂದೆ ಅಂದರೆ ನಾವು ಹೆಚ್ಚಾಗಿ ಪರಿಷ್ಕರಿಸನ ಣುವದು ಅಪರೂಪವಾಗಿರಲಿಲ್ಲ. ಆದರೆ ಈಗ ಆಸ್ಪತ್ರೆಗಳ ಸಂಖ್ಯೆ ಹೆಚ್ಚಿದೆ. ಡಾಕ್ಟರುಗಳೂ ಬೇಕಾದಷ್ಟಿದ್ದಾರೆ. ನೂರು ವರ್ಷದ ಮಾತಿರಲಿ; ಭಾರತೀಯನ ಆಯುಸ್ಸಿನ ಸರಾಸರಿ ಅವಧಿ ೨೭ ವರ್ಷದಲ್ಲಿ ನಿಂತಿದೆ! ನೂರು ವರ್ಷದವರನ್ನು ಕಾಣುವದು ಬಹು ಅಪರೂಪ.

ಕೊಡಗಿನಲ್ಲಿ ಮರ ಗೆಣಸಿನ ಉಪಯೋಗವನ್ನು ಚೆನ್ನಾಗಿ ಮಾಡಬಹುದಾಗಿದೆ. ಇದನ್ನು ಬೆಳೆಸಲು ಹೆಚ್ಚಿನ ಶ್ರಮ ಅಂದರೆ ಇಂದಿನ ಕೋಕಿನ ಅಡಿಗೆಗೆ ಶರಣಾಗುವ ಮೊದಲು ನಾವು ತಿನ್ನುವ ಊಟ ಉಪಚಾರಗಳಲ್ಲಿ ಹೆಚ್ಚಾಗಿ ಗೆಡ್ಡೆ ಗೆಣಸು, ಹಣ್ಣು ಮೊದಲಾದವು ಸೇರಿರುತ್ತಿದ್ದವು. ಆಗ ದೇಶದಲ್ಲಿ ಆಸ್ಪತ್ರೆಗಳೂ ಕಡಿಮೆ ಇದ್ದುವು. ಡಾಕ್ಟರುಗಳಿಗೂ ಕೆಲಸ ಹೆಚ್ಚಿನದಿರಲಿಲ್ಲ. ಆಗ ನೂರು ವರ್ಷಕ್ಕಿಂತಾ ಹೆಚ್ಚಿಗೆ ವಯಸ್ಸಿನವರನ್ನು ಕಾ ಸಾಮಾನ್ಯವಾಗಲೀ, ಗೊಬ್ಬರ ಯಾ ಶ್ರಮವಾಗಲಿ, ಬೇಕಾಗಿಲ್ಲ. ಇದಕ್ಕೆ ಹೆಚ್ಚಿನ ಮಳೆಯೂ ಅಗತ್ಯವಿಲ್ಲ. ನಮ್ಮ ನೆರೆಯ ಪ್ರಾಂತಗಳಲ್ಲಿ ಇದನ್ನು ಮಾಡುತ್ತಿದ್ದಾರೆ. ಅಲ್ಲಿಯವರ ಜೀವನ ಧಾರವಾಗಿ ಇದು ಪರಿಣಮಿಸಿದೆ. ಹೆಚ್ಚಿನ ನೀರಿನ ತೇವವಿಲ್ಲದ ಬಾಣೆಗಳಲ್ಲಿ ಬಾಣೆಗಳನ್ನು ಹದದ ಮಾಡಿ ಒಂದು ಗೇಣುದ್ದದ ರೆಂಬೆಗಳನ್ನು ಮೂರು ಮೊಳ ದೂರದಲ್ಲಿ ನೆಡಬೇಕು. ಎಂಟು ಹತ್ತು ದಿನಗಳಲ್ಲಿಯೇ ಇವು ಚಿಗುರಲು ತೊಡಗುತ್ತವೆ. ಮೂರು ನಾಲ್ಕು ತಿಂಗಳಾದ ಮೇಲೆ ಅಗತೆ ಮಾಡಿ ಕಚರ ತೆಗೆದು ಹಂದಿ, ಮುಳ್ಳುಹಂದಿ, ಇಲಿ, ಹೆಗ್ಗಣಗಳು ಲೂಟಿ ಮಾಡದಂತೆ ಎಚ್ಚರವಹಿಸಬೇಕು. ಸುಮಾರು ಎಂಟು ತಿಂಗಳಲ್ಲಿ ಗಿಡವನ್ನು ಎಳೆದರೆ ಪ್ರತಿಯೊಂದು ಗಿಡದಲ್ಲಿ ಐದಾರರಂತೆ ಗೆಣಸುಗಳನ್ನು ಕಾಣಬಹುದು.

ಇದನ್ನು ಹಸಿಯಾಗಿಯೂ ತಿನ್ನಬಹುದು. ಇದರಿಂದ ರೊಟ್ಟಿ, ದೋಸೆ, ಪಾಯಸ, ಮೆಲ್ಲೋಗರ, ಉಪ್ಪಿಟ್ಟು ಇನ್ನೂ ತರತರದ ಭಕ್ಷ್ಯಗಳನ್ನು ಮಾಡಿ ಉಪಯೋಗಿಸಬಹುದು.

ಈ ವ್ಯವಸಾಯ ಅತೀ ಕಡಿಮೆ ಖರ್ಚಿನಿಂದ ಆಗುತ್ತದೆ. ಕೊಡಗಿನವರು ಈ ವ್ಯವಸಾಯವನ್ನು ಕೈ ಕೊಳ್ಳಬೇಕು. ನಮ್ಮ ನೆರೆ ಗ್ರಾಮವಾದ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ಕಳ್ಳಾರು ಎಂಬಲ್ಲಿ ಸಾವಿರ ಘಟ್ಟದ ಜನರು ತಿರುವನಂತಪುರದಿಂದ ಬಂದು ಬರೀ ಗುಡ್ಡ ಕಾಡುಗಳನ್ನು ಕ್ರಯಕ್ಕೆ ಪಡೆದು ಮರ ಗೆಣಸಿನ ಕೃಷಿ ಮಾಡಿ ಅದರಿಂದಲೇ ಬದುಕುತ್ತಿದ್ದಾರೆ. ಅವರಿಗೆ ಸಿಕ್ಕುವ ಒಂದು ಪಾವು ಪಡಿತರ ಅಕ್ಕಿಯನ್ನು ಉಪಯೋಗಿಸಿಕೊಂಡು ಈ ಗೆಣಸಿನ ಸಹಾಯದಿಂದ ಸುಖವಾಗಿ ಬದುಕುತ್ತಿದ್ದಾರೆ. ಕೊಡಗಿನ ಜನರು ತಮ್ಮ ಆಹಾರದಲ್ಲಿ ಮರಗೆಣಸನ್ನು ಉಪಯೋಗಿಸಿದರೆ ಬಹು ಪರಿಮಾಣದಲ್ಲಿ ಅಕ್ಕಿಯನ್ನು ಉಳಿಸಿ ನೆರೆ ಜಿಲ್ಲೆಗಳ ನೆರವಿಗೆ ಬರಬಹುದಾಗಿದೆ.

"ಸ್ವಪ್ನ"

೧

ತುಂಬಿದ ತಿಂಗಳ ಚಂದಿರ ಆಗ
ಕ್ಷಿತಿಗೆ ಬಂದಿತ್ತು
ಪಚ್ಚನೆ ಬೆಳದಿಂ ಹುಲ್ಲಿನ ಮೇಲೆ
ಶಾಂತಿಯು ಹರಡಿತ್ತು—ಗಗನದ
ಕಾಂತಿಯು ಬಿದ್ದಿತ್ತು

೨

ಸುಂದರ ಮಂದರ ಮಾರುತ ಆಗ
ಸುಯ್ಯನೆ ಬೀಸಿತ್ತು
ಕಾನನ ಮಧ್ಯದ ರಾತ್ರಿಯ ಭೀಕರ
ಎತ್ತಲು ಹರಡಿತ್ತು—ಮಧ್ಯದಿ
ಹೂವಿನ ವನವಿತ್ತು

೩

ಹೂವನು ಕೊಯ್ಯುತ ಬಂದಳು ನಲ್ಲೆ
ಹಾಡುತ ನಲಿಯುತ್ತ
ಕಣ್ಣನು ಹೊರಳಿಸಿ; ಮೈಯನು ನಿಮಿರಿಸಿ-
ಹಾಸವ ಸುರಿಸುತ್ತ—ಕುಳಿತಳು
ಸನ್ನಿಧಿ ಪಡೆಯುತ್ತ

೪

ಒಂದಕೊಂದು ಮಾತುಗಳಾದುವು
ಪ್ರೇಮದ ಮಾತುಗಳು
ಅಂದಿನ ಇಂದಿನ ಮಿಲನದ ವಿರಹದ
ಆತ್ಮದ ಸುದ್ದಿಗಳು—ಜೀವದ
ಶಾಂತಿಯ ಸುದ್ದಿಗಳು

೫

ಕೊರಳನ ಸುತ್ತಲು ಕೈಯನು ಸುತ್ತಿ
ಮುಖವನು ಮೇಲೆತ್ತಿ
ಪ್ರೇಮದಿ ದೇಹವ ದೇಹವು ಸುತ್ತಿ
ತುಟಿಯನು ತುಟಿಗೊತ್ತಿ—ಇದ್ದಳು
ವಿಸ್ಮಯ ಮನಸೋತು.

೬

ಎಡಗೈ ಕೇಸರ ಬಲಗೈ ಕೆನ್ನೆ
ಅಂದದಿ ಸವರುತ
ತುಟಿ ತುಟಿ ಕಣ್ಣಿಗೆ ಮನ ಮನ ಬೆಸೆದೆ
ಚಂದದಿ ಬೆರೆಯುತ್ತಾ—ಕಳೆದೆನು
ಮಂದದಲಿ ಬಹು ಹೊತ್ತು.

೭

ಆ ಸರಸದನಾಂತಿಕೇಳಿಯನು
ಕಂಡಿತು ಆ ವನವು
ಚಂದದಿ ಲೀಲೆಯ ನೋಡುತಲಿರಲೂ
ನಾದವು ತಾರೆಗಳು—ಕಣ್ಣನು
ಮಿಟುಕುತ ಲೀಲೆಯೊಳು.

೮

ಸಮಯವು ಸರಿಯಿತು ಹೋಗುವೆನೆಂದಳು
ನಲ್ಲೆಯು ಕಾತರದಿ
ಹೋಗುವೆನೆನ್ನುತ ಎದ್ದಳು ನಿಂದಳು
ಹೊರಟಳು ತಾ ಪದಲಿ—ತಡೆಯಲು
ಹಿಡಿದೆನು ಪ್ರೇಯಸಿಯ.

೯

ಸುಂದರ ಸ್ವಪ್ನದ ಪ್ರೇಮದ ರೂಪವ
ಬಾಹುವು ತಬ್ಬಿತ್ತು.
ನಿದ್ದೆಯು ಹಳ್ಳೇ ಬಿಡೆಚ್ಚರಿಸುತ್ತ
ಕೈಗಳು ತಬ್ಬಿತ್ತು—ಕಣ್ಣಿಡೆ
ದಿಂಬನು ತಬ್ಬಿತ್ತು!

'ಗೋರಾ'

THE WARDEN INSURANCE CO., Ltd.

Head Office: Bombay.

LIFE, FIRE, ACCIDENT, MOTOR & W. C. INSURANCES.

Managing Director: – **S. H. THAKER.**

Business in force	Rs. 5,00,00,000
Assets	,, 1,00,00,000
Income	,, 35,00,000

Also **LOCAL MANAGERS OF**

THE LONDON GUARANTEE & ACCIDENT CO., Ltd.
(Incorporated in England)

Assets Exceed Rs. 10,00,00,000

a Subsidiary Company of

THE PHOENIX ASSURANCE CO. Ltd.
(One of the Largest Assurance Companies in the World)

Assets Exceed Rs. 45,00,00,000

Transact **FIRE INSURANCE**

Enquiries for representation solicited.

Apply to:

Chief Agency Office *Virajpet (Coorg)* or **A. S. Aiyappa,** *Branch Secretary, Gandhinagar,* *BANGALORE CITY*

<u>ವಿದ್ಯಾರ್ಥಿಗಳ ಪುಟ.</u>

ವಿದ್ಯಾರ್ಥಿ ವೃಂದದಲ್ಲಿ ನೈತಿಕ ಪತನವೇ?

(ಲೇಖಕ:- ಶ್ರೀ "ಶ್ಯಾಮಲಾ ಸಹೋದರ",)

ಇತ್ತೀಚೆಗೆ ವಿದ್ಯಾರ್ಥಿ ವೃಂದದ ವರ್ತನೆಯಿಂದ ಯಾರಿಗಾದರೂ ಸರಿ ನಾಚಿಕೆಯುಂಟಾಗುತ್ತದೆ. 'ಇಂದು ವಿದ್ಯಾರ್ಥಿಗಳ ನೈತಿಕ ಪತನವಾಗಿದೆ' ಎಂದು ಹೇಳದೆ ವಿಧಿಯಿಲ್ಲ. ಕಳೆದ ವರ್ಷ ಕೇವಲ ದೃಶ್ಯಗಳಲ್ಲಿದ್ದ ನೈತಿಕ ಪತನವು ಈ ವರ್ಷ ಕಾರ್ಯ ರಂಗಕ್ಕಿಳಿದಿದೆ. ಇದನ್ನು ಸ್ಪಷ್ಟಪಡಿಸಲು ವಿದ್ಯಾರ್ಥಿಗಳ ನಡೆವಳಿಕೆಗಳಷ್ಟೇ ಅಲ್ಲದೆ ಕೆಲವಾರು ಘಟನೆಗಳೂ ಸಹ ಸಾಕಷ್ಟು ಉದಾಹರಣೆಗಳಾಗಿವೆ.

ಈ ನೈತಿಕ ಪತನದ ಪ್ರತಿಕ್ರಿಯೆಯಿಂದಾಗಿ ವಿದ್ಯಾರ್ಥಿನಿಯರು ಯಾವ ವಿಧವಾದ ಚಟುವಟಿಕೆಗಳಲ್ಲಿಯಾಗಲೀ, ಭಾಗವಹಿಸಲಾಗದಷ್ಟು ಪರಿಸ್ಥಿತಿ ಬೆಳೆದು ಹೋಗಿದೆ.

ವಿದ್ಯಾರ್ಥಿಗಳು ಸುಸಂಸ್ಕೃತರೂ, ಸಭ್ಯರೂ, ವಿನಯ ಸಂಪನ್ನರೂ, ವಿಶಾಲ ಹೃದಯಿಗಳೂ, ವಿಚಾರಣೆಯುಳ್ಳವರೂ, ವಿವೇಚನೆಯುಳ್ಳವರೂ, ಮಾನ್ಯತೆಯುಳ್ಳವರೂ ಎಂದು ಎಣಿಸುವವರ ಎಣಿಕೆ ಎಲ್ಲ ಕೇವಲ ಭ್ರಮೆಯಾಗಿದೆ. ವಿದ್ಯಾರ್ಥಿಗಳಲ್ಲಿ ಸುಸಂಸ್ಕೃತಿಯು ಮೂಡಿ ದೇಶವು ಆದರ್ಶವಾಗುವ ಬದಲು ವಿದ್ಯಾರ್ಥಿಗಳಲ್ಲಿ ಅಸಂಸ್ಕೃತಿ ಮೂಡಿ ನೈತಿಕ ಪತನವಾಗಿ ದೇಶವು ವಿನಾಶಕಾರಕ ಹಾದಿ ಹಿಡಿದು ಮುಂಬರುವ ದಿನಗಳು ಕಲಂಕಿತವಾಗಿ ಬರುವದು ಶುದ್ಧ ನಾಚಿಕೆಗೇಡು.

ಸ್ವಾಭಾವಿಕವಾಗಿ ವಿದ್ಯಾರ್ಥಿಗಳಲ್ಲಿ ವಿನಯ, ಸೌಜನ್ಯ, ವಿಧೇಯತೆ, ಮಾರ್ಗದರ್ಶನಗಳು ನೆಲೆಮಾಡುವದು ಹೋಗಿ ಇಂದು ಅವಿಧೇಯತೆ, ಅಹಂಭಾವ ಮತ್ತು ಅಸಹ್ಯಕರ ನಡತೆಗಳು ಮೂಡಿವೆ. ಈ ತರಹದ ದುರ್ಗುಣಗಳು ಅವರಲ್ಲಿ ಇತ್ತೀಚಿನ ಎರಡು ವರ್ಷಗಳಿಂದ ಮನೆ ಮಾಡಿಕೊಂಡಿವೆ.

'ಇಂದಿನ ವಿದ್ಯಾರ್ಥಿಯೇ ನಾಳಿನ ಪ್ರಜೆ' ಎಂಬುದನ್ನು ಮರೆತರೆಂದು ಕಾಣುತ್ತೆ ನನ್ನ ಸಹೋದರರು ನಾಳಿನ ಬಾಳನ್ನು ಇಂದು ರೂಪಿಸಿಕೊಳ್ಳಬೇಕಾದ ನಾವು, ನಾಳಿನ ನಾಡಿನ ಭವಿಷ್ಯತ್ತಿಗೆ ಕಾರಣರಾದ ವಿದ್ಯಾರ್ಥಿಗಳಲ್ಲಿ ಇಂಥಾ ಪಾಶವೀ ಶಕ್ತಿ ನೆಲೆಮಾಡಿಕೊಂಡು ಮುಂದಿನ ಭವಿಷ್ಯತ್ತಿಗೆ ಕೊಡಲಿ ಪೆಟ್ಟಾಗಿರುವದರಿಂದ ಹಿನ್ನೆಲೆಯಲ್ಲಿ ಏನೋ ಸ್ವಾರ್ಥವಿರಲೇಬೇಕು. ಅರಿವು ಇರುವ ವಿದ್ಯಾರ್ಥಿಗಳು ಇಂಥಾ ವಿಷಯಗಳ ಬಗ್ಗೆ ಬಹಳ ದೂರಾಲೋಚನೆಯಿಂದ ಕೆಲಸ ಮಾಡಿ ನಾಡಿನ ಉನ್ನತಿಗೆ ಕಾರಣವಾಗಲಿಯೆಂದು ಆಶಿಸುತ್ತೇನೆ.

ತಮ್ಮ ಸಹೋದರಿಯರ ಬಗ್ಗೆ ಇವರ ವರ್ತನೆಯನ್ನು ಕಂಡರೆ ಎಂಥವರಿಗಾದರೂ ಕರುಳು ಕತ್ತರಿಸಿದಂತಾಗುವದಲ್ಲದೆ, ತಡೆಬಡೆಯಿಲ್ಲದ ಕೋಪವೇರುವದು. ಪುರಾಣ ಇತಿಹಾಸಗಳ ಕಾಲದಿಂದಲೂ ತಿಳಿದು ಬಂದಿರುವಂತೆ ಅಲ್ಲದೆ ವಾಸ್ತವವಾಗಿಯೂ ನೋಡುತ್ತಿರುವಂತೆ ನಮ್ಮ ದೇಶವು ಸಹೋದರಿಯರ ಬಗ್ಗೆ ಬಹಳ ಗೌರವದಿಂದ ವರ್ತಿಸಿಕೊಂಡು ಬರುತ್ತಿರುವ ದೇಶ. ಎಂಥಾ ಅನಾಗರೀಕರೂ ಕೂಡ ಹೆಂಗಳೆಯರ ಬಗ್ಗೆ ಗೌರವದಿಂದ ವರ್ತಿಸುತ್ತಾರೆ. ಅಂಥಾದ್ದರಲ್ಲಿ ನಾಗರೀಕರೂ ಮತ್ತು ವಿದ್ಯಾವಂತರೂ ಎಂದು ಎನಿಸಿಕೊಂಡ ವಿದ್ಯಾರ್ಥಿ ವೃಂದದ ಇತ್ತೀಚಿನ ವರ್ತನೆಯನ್ನು (ನಮ್ಮ ಸಹೋದರಿಯರ ಬಗ್ಗೆ) ನೋಡಿದರೆ ಈಗಿನ ಕಾಲದ ವಿದ್ಯೆ ನಮಗೆ ಬೋಧಿಸುವದು ಇದನ್ನೇನೆಯೇ? ಎನಿಸುತ್ತದೆ. ಅಲ್ಲದೆ ನಾಗರೀಕತೆಯೆಂದರೆ ಹೆಂಗಸರನ್ನು ಅವಮಾನಗೊಳಿಸುವದಲ್ಲದೆ ಅಪವಿತ್ರ ಮಾಡುವದೇನೆಯೇ ಎನ್ನಿಸುತ್ತೆ.

ಸಹೋದರಿ 'ಶ್ಯಾಮಲ' ಕೆಲವು ಬಾರಿ ನನ್ನಲ್ಲಿ ವಿದ್ಯಾರ್ಥಿ ವೃಂದವು ಸಹೋದರಿಯರ ಬಗ್ಗೆ ವರ್ತಿಸುತ್ತಿರುವದನ್ನು ವಿವರಿಸಿ ನೊಂದಿರುವದಲ್ಲದೆ ಅತ್ತಿದ್ದಾಳೆ. ಯಾವದಾದರೊಂದು ಸಭೆ, ಚರ್ಚಾಕೂಟ ಮುಂತಾದವುಗಳಲ್ಲಿ ಭಾಗವಹಿಸಿ ತಮ್ಮ ಜ್ಞಾನ ಮತ್ತು ಧೈರ್ಯಗಳನ್ನು ಹೆಚ್ಚಿಸಿಕೊಳ್ಳಲು ವಿದ್ಯಾರ್ಥಿನಿಯರು ಯತ್ನಿಸಿದರೆ 'ಆಕ' ಕೂಗಿ ಗಳಿಂದ ಸಹೋದರಿಯರ ಉತ್ಸವ ಭಂಗ ಮಾಡಿ ಕಾರ್ಯಕ್ರಮಗಳನ್ನು ಕೆಡಿಸುವದರಲ್ಲಿ ತಮ್ಮ ಆತ್ಮತೃಪ್ತಿಯನ್ನು ವಿದ್ಯಾರ್ಥಿಗಳು ತೋರುತ್ತಿದ್ದಾರೆ. ಪರಿಸ್ಥಿತಿ ಹೀಗಿರುವಾಗ ಹೆಂಗಸರು ತಮ್ಮ ಹಕ್ಕಿಗಾಗಿ ಹೋರಾಡುತ್ತಿರುವದು ಶೋಭನವಾದದ್ದೇನಲ್ಲ.

ಕೆಲವು ದಿನಗಳಿಗೆ ಹಿಂದೆ ಸುಪ್ರಸಿದ್ಧ ಚಲನಚಿತ್ರ ದಿಗ್ದರ್ಶಕರವರೂ, ನಟರೂ ಮತ್ತು ಕಲಾವಿದರೂ ಆದ ಶ್ರೀ ವಿ. ಶಾಂತಾರಾಮರವರು ಬೆಂಗಳೂರಿಗೆ ಆಗಮಿಸಿದ್ದಾಗ ಇಂಟರ್‌ಮೀಡಿಯೆಟ್ ಕಾಲೇಜಿನ ವಿದ್ಯಾರ್ಥಿಗಳು ಏರ್ಪಡಿಸಿದ್ದ ಸಭೆಯಲ್ಲಿ ಭಾಷಣ ಮಾಡಲು ಬಂದಾಗ ವಿದ್ಯಾರ್ಥಿಗಳು ತುಂಬಾ ಗಲಾಟೆ ಮತ್ತು ಗಲಭೆಯನ್ನು ಮಾಡಿದ್ದಲ್ಲದೆ ಶುದ್ಧ ಅನಾಗರೀಕ ಜನಗಳಂತೆ ವರ್ತಿಸಿ ಅತಿಥಿಗಳನ್ನು ಅವಮಾನಿಸಿ ಅವರ ಪ್ರಾರ್ಥನೆಗೂ ಕೂಡ ಕಿವಿಗೊಡದೆ 'ಅಂಗವಿಹೀನ' ಎಂದು ಹೇಳಿ ಅವರು ಹೊರಕ್ಕೆ ಹೋಗಲೂ ಅಡ್ಡ ಕಟ್ಟಿದರಂತೆ.

ವಿದ್ಯಾರ್ಥಿಗಳ ಕೈಯಲ್ಲಿ ಸಿಕ್ಕಿದ ಶ್ರೀ ಶಾಂತಾರಾಮ ಮತ್ತು ಅವರ ಪತ್ನಿ ಶ್ರೀಮತಿ ಜಯಶ್ರೀಯವರು ಪಾರಾಗಬೇಕಾದರೆ ಕಷ್ಟವಾಯಿತೆಂದರೆ ವಿದ್ಯಾರ್ಥಿಗಳ ನೈತಿಕ ಮಟ್ಟದ ಅವನತಿ ಎಷ್ಟಾಗಿದೆಯೆಂಬುದನ್ನು ವಿವರಿಸಲಸಾಧ್ಯ. ಬೆಂಗಳೂರಿಗೆ ಅಲ್ಲದೆ ಮೈಸೂರು ದೇಶಕ್ಕೂ ಅತಿಥಿಗಳಾಗಿ ಬಂದಿದ್ದ ಶ್ರೀ ಶಾಂತಾರಾಮರವರ ವಿಷಯದಲ್ಲೂ ಈ ರೀತಿ ವರ್ತಿಸಿ ಮೈಸೂರು ವಿದ್ಯಾರ್ಥಿಗಳು ತಮ್ಮ ದುರ್ನಡತೆಯನ್ನು ಇಡೀ ಭಾರತಕ್ಕೆ ಹರಡಿ ತೋರಿಸಿದರು. (ಇದೇ ರೀತಿ ಕೊಡಗಿನ ವಿದ್ಯಾರ್ಥಿಗಳ ಮನೋಭಾವವೂ ಈ ದಾರಿಯಲ್ಲಿ ಸಾಗಿದೆ.)

ಇಂಥಾ ನಡತೆಯನ್ನು ಪ್ರತಿಯೊಬ್ಬನೂ ಖಂಡಿಸಬೇಕು. ಇನ್ನಾದರೂ ವಿದ್ಯಾರ್ಥಿ ವೃಂದವು ತಮ್ಮ ಅವನತಿಯನ್ನರಿತು ತಮ್ಮ ಈ ವರ್ತನೆಯು ಹರಿಣಾಮವೇ ನಾಗುವದೆಂಬುದನ್ನು ವಿವೇಚಿಸಿ ತಮ್ಮ ಜವಾಬ್ದಾರಿಯನ್ನರಿತು ಈ ತೆರನಾದ ಕುಹಕಗಳಿಗೆ ಮನಸ್ಸಾರದೆ ದೇಶದ ಉನ್ನತಿಗೆ ಬೇಕಾಗುವ ಕಾರ್ಯ ವರ್ತನೆಗೆ ಮನಗೊಟ್ಟು ಹಠೋಟಿಯಿಂದ, ಘನತೆಯಿಂದ ನಡೆದುಕೊಂಡು ನಾಡಿನ ಸರ್ವವಿಧ ಪ್ರಗತಿಗೆ ದುಡಿಯಬೇಕು. ಇಲ್ಲವಾದಲ್ಲಿ ಜನತೆಗೆ ಈಗಿನ ವಿದ್ಯಾರ್ಥಿಗಳ ವರ್ತನೆ ಬಗ್ಗೆ ಬೇಸರ ಹುಟ್ಟಿ ಮುಂಬರುವ ಮಕ್ಕಳಿಗೆ 'ಉಚ್ಚ ಶಿಕ್ಷಣ' ಕೊಡಲು ಹಿಂಜರಿದಾರು. ಉಚ್ಚ ಶಿಕ್ಷಣವೆಂದರೆ ಇದೇನೇಯೋ? ಎಂದಾರು ಜೋಕೆ.

ದೇಶದ ಏಳಿಗೆಗಾಗಿ ಸಾಧಕವಾದ ರೀತಿಯಲ್ಲಿ ವರ್ತಿಸಿ ನೀವು ಮಾಡಬೇಕಾದ ಅನೇಕ ರಚನಾತ್ಮಕ ಕಾರ್ಯಗಳಿವೆ. ದೇಶದ ಭವಿಷ್ಯ ನಿಮ್ಮ ಮೇಲಿನ ಜವಾಬ್ದಾರಿಯಾಗಿದೆ. ಜನತೆ ನಿಮ್ಮ ನಡತೆ ಬಗ್ಗೆ ಕಣ್ಣಿಟ್ಟು ನೋಡುತ್ತಿದ್ದಾರೆ. ಚಿಕ್ಕಿನ ಮೂದರಿ ಕಣ್ಣು ಮುಚ್ಚಿ ಹಾಲೆಂದು ನಂಬಿ ಹೆಂಡ ಕುಡಿಯಬೇಡಿ. ಎಲ್ಲರಿಗೂ ಮಾರ್ಗದರ್ಶಕರಾಗಿ ಆದರ್ಶವನ್ನು ಸಾಧಿಸಿ ತೋರಿಸಿ ನಿಮ್ಮ ನೈತಿಕ ಅವನತಿಯನ್ನರಿತು ಎಚ್ಚರಗೊಂಡು ಮುನ್ನಡೆಯಿರಿ.

ವಿದ್ಯಾರ್ಥಿಗಳೇ, ಸಹೋದರಿಯರ ಬಗ್ಗೆ ಬಹಳ ಎಚ್ಚರಿಕೆ ವಹಿಸಿ. ಅವರ ಮನಸ್ಸಿನಲ್ಲಿ ನಿಮ್ಮ ಬಗ್ಗೆ ನಾಟಿರುವ ಅಸಹ್ಯಭಾವವನ್ನು ದೂರಗೊಳಿಸಿ ನಿಮ್ಮಂತೆಯೇ ನಿಮ್ಮ ಸಹೋದರಿಯರನ್ನು ಭಾವಿಸಿ.

'ಶ್ಯಾ. ಸ.'

ಸಮಾಜ ದರ್ಪಣ.

(ಬರೆದವರು ಶ್ರೀ "ಕುಕ" ಇವರು)

(೧) ಕೈ ಗಡಿಯಾರವನ್ನು ಎಡಗೈಯಲ್ಲಿ ಕಟ್ಟುವದು ವಾಡಿಕೆ. ಬಲಗೈಗೆ ಕಟ್ಟಿಕೊಂಡು ಮೆರೆಯುವ 'ಸ್ಟೈಲು' ಈಗ ಹೆಚ್ಚುತ್ತಿದೆ! ವಿದ್ಯಾರ್ಥಿಗಳು 'ಕ್ರೈಟಿಸ್ಟ್' ಆಗುತ್ತಿರುವರೆನ್ನೋಣವೇ?

(೨) ಹಣವಿಲ್ಲದಿದ್ದರೂ ಸಾಲಮಾಡಿ ಸರ್ಜ್ ಸೂಟ್ ಮಾಡಬೇಕು. ಪುನಹ ಸಾಲದ ಬಾಧೆಗೆ ಅನ್ನ ಮಾರುವವರೂ ಇದ್ದಾರೆ. ಹೆಸರು ಕೆಟ್ಟರೂ ಶೋಕಿ ಮಾಡಬೇಕು ಅಲ್ಲವೇ?

(೩) ವ್ಯವಸಾಯ ಪರಿಶ್ರಮ ಕ್ಷೇತ್ರ ಹುಡುಗನೊಬ್ಬನು ಅಲ್ಲಿಯ ಅಧಿಕಾರಿಯೊಬ್ಬನನ್ನು ಸೀಬೆಕಾಯಿ ಬೇಕೆಂದು ಕೇಳಿದನು. ಇಲ್ಲವೆಂದ ಕಾರಣ ಬಾಲಕನು ಹಿಂದಕ್ಕೆ ಬಂದನು. ಸಾಯಂಕಾಲ ೪ ಗಂಟೆಗೆ ಅದೇ ಅಧಿಕಾರಿ ಒಂದು ಕಾಗದದ ಗಂಟನ್ನು ಚಿಕ್ಕ ಹುಡುಗಿಯೊಬ್ಬಳ ಕೈಗೆ ಕೊಟ್ಟು ನಿಮ್ಮ ಉಪಾಧ್ಯಾಯನಿಗೆ ಕೊಡೆಂದನು. ಎರಡು ಉಪಾಧ್ಯಾಯನಿರಿದ್ದ ಕಾರಣ ತಲುಪಬೇಕಿದ್ದವಳಿಗೆ ಗಂಟು ತಲುಪಲಿಲ್ಲ. ಸಿಕ್ಕಿದ ಉಪಾಧ್ಯಾಯನಿಯು ಬಿಚ್ಚಿ ನೋಡಲು ಹಣ್ಣಾದ ಸೀಬೆಕಾಯಿಗಳು!

(೪) ದೇಶಕ್ಕಾಗಿ ದುಡಿದವರೊಬ್ಬರು ಬಸ್ಸಿನ ಮುಂದಿನ ಸೀಟಿನಲ್ಲಿ ಕೂತಿದ್ದರು. ಬಸ್ಸಿನಲ್ಲಿ ತುಂಬಾ ಜನರಿದ್ದರು. ೨ನೇ ಸೀಟ್‌ನಲ್ಲಿ ತುಂಬಾ ಹೆಂಗಸರಿದ್ದರು. ಹತ್ತನೇ ಮೈಲಿನಲ್ಲಿ ಒಬ್ಬ ಹೆಂಗಸು ಬಂದಳು. ಅವಳಿಗೆ ಖಂಡಿತವಾಗಿ ಮುಂದಿನ ಸೀಟಿಗೆ ಹೋಗಬೇಕಿತ್ತು. ಸೀಟಿಲ್ಲದ ಕಡೆಗೆ ಹಿಂದಿನ ದೊಡ್ಡಿಗೆ ಬಂದು ಕಷ್ಟದಲ್ಲಿ ನಿಂತುಕೊಂಡಳು. ಆದರೂ ಮುಂದಿನ ಸೀಟಿನ ಮುಂದಾಳು ಕದಲಲಿಲ್ಲ.

(೫) ಹಿರಿಯ ಅಧಿಕಾರಿಯೊಬ್ಬರ ಕೈಕೆಳಗೆ ವಯಸ್ಸಾದವರಿಬ್ಬರು ಗುಮಾಸ್ತರಿದ್ದಾರೆ. ಅಧಿಕಾರಿ ಅವರ ವಯಸ್ಸಿಗೆ ಸಹ ಬೆಲೆಕೊಡದೆ ಅವರನ್ನು ಹೀಯಾಳಿಸುವದು ಅವರ ದಿನ ನಿತ್ಯದ ಕೆಲಸ. ಅಧಿಕಾರಕ್ಕೂ ಸಭ್ಯತೆಗೂ ಸಂಬಂಧವೇ ಇಲ್ಲವೆಂದು ತೋರುತ್ತೆ; ಅಲ್ಲವೇ?

ಪ್ರಶ್ನೋತ್ತರಗಳು.

(ಪ್ರಶ್ನೆ ಕೇಳಿ ಉತ್ತರಿಸಿದವರು ಶ್ರೀ ಎ. ಕೆ. ಸೋಮಯ್ಯ, ವಿದ್ಯಾರ್ಥಿ, ಹುದಿಕೇರಿ)

೧ ಪ್ರ:- ಕೊಡಗಿನಲ್ಲಿರುವ ಹೈಸ್ಕೂಲುಗಳಲ್ಲಿ ಯಾವದನ್ನು ಮೆಚ್ಚುವಿರಿ?

ಉ:- ಫಲಿತಾಂಶಕ್ಕಾಗಿ ಕಾನ್ವೆಂಟನ್ನು.

೨. ದೇಶದ ಏಳಿಗೆಗಾಗಿ ಮಾನವನು ಮಾಡಬೇಕಾದ ಮೊದಲ ಕರ್ತವ್ಯವೇನು?

ಮೊದಲು ತನ್ನ ಏಳಿಗೆ.

೩. ಮೇಲು ಕೀಳು ಎಂಬ ಬೇಧ ಭಾವ ಮಾಯವಾಗುವದು ಯಾವಾಗ?

ಪ್ರತಿಯೊಬ್ಬನೂ ಮಾವ, ಅಳಿಯ, ಭಾವ ನೆಂಟನಾದಾಗ.

೪. ನಿಮ್ಮ ಮನಸ್ಸಿಗೆ ಯಾವ ಸರಕಾರದ ಧೋರಣೆ ಹಿತವೆಂದು ಭಾಸವಾಗುವದು?

ಮಾತು ಕಡಿಮೆ ಮಾಡಿ ಕಾರ್ಯ ಹೆಚ್ಚು ಮಾಡುವ 'ಮೌನವ' ಸರಕಾರದ ಧೋರಣೆ.

೫. ಒಬ್ಬ ಗೆಳತಿಗೆ ಎಷ್ಟು ಮಂದಿ ಗೆಳೆಯರು ಆಗಬಹುದು?

ನೀತಿ ತಪ್ಪದೆ ಇದ್ದಲ್ಲಿ ಎಷ್ಟಾದರೇನು?

೬ ಚಿತ್ರ ನೋಡುವದು ಗಂಡಸರಿಗೆ ಹೆಚ್ಚೋ ಅಥವಾ ಹೆಂಗಸರಿಗೋ?

ಆಫೀಸಿನಿಂದ ಬಂದ ಗಂಡಸಿಗೆ, ಅಡಿಗೆ ಮನೆಯಿಂದ ಬಂದ ಹೆಂಗಸಿಗೆ.

೭ ಫೋಸ್ಟ್‌ಮಾಸ್ಟರ್ ಬಂದಾಗ ಯಾವ ಹೋಟೇಲಿನ 'ಫ' ಉತ್ತಮ?

ಶ್ರೀ ಶಾರದಾ ಆಶ್ರಮದ ಪವಿತ್ರ ತೀರ್ಥವೇ ಉತ್ತಮ.

೮ ಕಾಂಗ್ರೆಸ್ ಎಂದು ಹೇಳಿ ಖಾದಿ ಧರಿಸಿ ಒಳಗಿಂದೊಳಗೆ ಕಾಳಸಂತೆ ವ್ಯಾಪಾರ ಮಾಡುವವರಿಗೇನನ್ನಬೇಕು?

ಸಮಾಜದ ಪ್ರತಿಷ್ಠಿತ ಮುಂದಾಳುಗಳೆಂದು.

೯. ಕಾಗೆಗೂ ಕೋಗಿಲೆಗೂ ಇರುವ ವ್ಯತ್ಯಾಸವೇನು?

ಶಕುನಕ್ಕೆ ಕಾಗೆ, ಕವನಕ್ಕೆ ಕೋಗಿಲೆ.

೧೦ ಹಿಂದೂದೇಶದಲ್ಲಿ ಜನಸಂಖ್ಯೆಯು ವಿಪರೀತ ಹೆಚ್ಚುತ್ತಿರಲು ಕಾರಣವೇನು?

ಜನರು ಅತಿ ತಪ್ಪುತ್ತಿರುವದರಿಂದ.

೧೧. ಬಸ್ ಕಂಡಕ್ಟರುಗಳಲ್ಲಿ ಹೆಚ್ಚಿನವರು ತಮ್ಮ ಅಂಗಿಗಳಿಗೆ ಎರಡು ಕಿಸೆಗಳನ್ನೇಕೆ ಇಡುತ್ತಾರೆ?

ಅವರ ಕೆಲಸದಲ್ಲಿ ಎರಡೂ ಕೈ ಉಪಯೋಗಿಸುವದರಿಂದ.

೧೨. ಮನುಷ್ಯನ ಬಾಳು ಕನಸಿನದೇ ಯಾ ನೆನಸಿನದೇ?

ಹಣಕಾಸು ಕನಸಿನದು, ಕಸಿವು ಕ್ಷಸೆ ನೆನಸಿನದು.

ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್, ಫ್ರೇಜರ್ ಪೇಟೆ.

ಮಹಾಜನರಲ್ಲಿ ವಿನಂತಿ.

ಫ್ರೇಜರ್‌ಪೇಟೆಯ ನಮ್ಮ ಕಾರ್ಖಾನೆಯಲ್ಲಿ ಈಗಾಗಲೇ ಮಾಳಿಗೆ ಹೆಂಚು [illegible] ಯಾರು [illegible] ನಿಮ್ಮ ಗ್ರಾಮಗಳಲ್ಲಿ [illegible] ಸಾಧ್ಯವಾದಷ್ಟು ಮಟ್ಟಿಗೆ ಜಮಾಯಿಸಿ ಮೇಲಿನ ವಿಳಾಸಕ್ಕೆ ತಿಳಿಸಿದಲ್ಲಿ ಅದನ್ನು ಅದರ ಬೆಲೆ ಕೊಟ್ಟು ಸಾಗಿಸುವ ಏರ್ಪಾಡನ್ನು ಮಾಡುತ್ತೇವೆ. ಅಥವ ಅವರುಗಳ್ಳ ಜಮಾಯಿಸಿದವರು ನಮ್ಮ ಫ್ರೇಜರ್‌ಪೇಟೆ ಕಾರ್ಖಾನೆಗೆ ತಂದು ಕೊಟ್ಟಲ್ಲಿ ಮಣ 1ರ 0-12-0 ಯಂತೆ ಬೆಲೆಗೆ ತೆಗೆದುಕೊಳ್ಳಲಾಗುವುದು.

ಈಗಾಗಲೇ ತಯಾರಾಗಿರುವ ಮಾಳಿಗೆ ಹಂಚುಗಳಿಗೆ ಬೇಡಿಕೆ ಬಂದ ಕೂಡಲೇ ಅಗ್ರಸ್ಥಾನವನ್ನನುಸರಿಸಿ ಬಟವಾಡೆ ಮಾಡಲಾಗುವುದು.

ಸೂಚನೆ:—ನಮ್ಮ ಕಂಪೆನಿಯ ಶೇರುದಾರರಿಗೆ ಹೆಚ್ಚಿನ ರಿಯಾಯಿತಿ ಮತ್ತು ಮೊದಲಿನ ಹಕ್ಕು ಕೊಡಲಾಗುವುದು.

ಫ್ರೇಜರ್‌ಪೇಟೆ,
ತಾ. 19-5-49

ಕೆ ಕೆ. ತಿಮ್ಮಯ್ಯ,
ಮೇನೇಜಿಂಗ್ ಡೈರೆಕ್ಟರ್.

ವಿಮೆ ಮಾಡಲು ಇಲ್ಲವೇ ಪ್ರತಿನಿಧಿಸಲು

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.

ಇವರ ಸಲಹೆಗಿಂತ ಉತ್ತಮ ಮಾರ್ಗವಿಲ್ಲ.

ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದೂಸ್ಥಾನದ ಮದ್ರಾಸ್ ಬ್ರಾಂಚಿನ ಸಕ್ರೆಟರಿಗಳು.

ದಿ ಬೊಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

30 ಮೌಂಟ್ ರೋಡ್,
ಪೊ. ಬಾ. ನಂ. 337,
ಮದ್ರಾಸು 2.

ಬೊಂಬೆ ಲೈಫ್ ಬಿಲ್ಡಿಂಗ್,
ಪೊ. ಬಾ. ನಂ. 1,
ಉಡುಪಿ.

(ಟೆಲಿಫೋನ್ ನಂ. 8398)

ಇತರ ಆಫೀಸುಗಳು:— ಬೆಂಗಳೂರು, ತಿರುವೇಂದ್ರಂ, ಕಲ್ಲಿಕೋಟೆ, ಮಂಗಳೂರು, ಮಧುರೆ, ಮತ್ತು ಬೊಂಬಾಯಿ.

ದಿ ಟ್ರಾಪಿಕಲ್
ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:— ಲಾಲ ರಂಚಡ್ ಲಾಲ್.

ಮುಖ್ಯ ಖಚೇರಿ:— ಹೊಸ ಡೆಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು.
ಹಕೀಮ್ ಅಜಮಲಖಾನ್.
ಎಸ್. ಶ್ರೀನಿವಾಸ ಅಯ್ಯಂಗಾರ್
ಡಾ|| ಎಂ. ಎ. ಅನ್ಸಾರಿ.

Transacts:—Life, Fire, Motor and Marine.

ನಮ್ಮ ಹೊಸ ವಿಸ್ತೃತ ಯೋಜನೆಯಲ್ಲಿ ಆಕರ್ಷಕ ಕಮಿಷನ್ ಮೇಲೆ ಏಜನ್ಸಿಗೆ ದಯವಿಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಆರ್ಗನೈಜರ್
ದಕ್ಷಿಣ ಕೊಡಗು, ಪೊನ್ನಂಪೇಟೆ
ಅಥವಾ
ಯಂ ಯಂ. ಅಚ್ಚಣ್ಣ,
ಏಜನ್ಸಿ ಸೂಪರಿಂಟೆಂಡೆಂಟ್,
ಮಡಿಕೇರಿ, ಕೊಡಗು.

ಆರ್ಗನೈಜರ್
ಉತ್ತರ ಕೊಡಗು, ಮಡಿಕೇರಿ
ಅಥವಾ
ಎಂ. ಎ. ಬೆಳ್ಯಪ್ಪ,
ಬ್ರಾಂಚ್ ಸೆಕ್ರೆಟರಿ,
ಹಂಪನಕಟ್ಟೆ, ಮಂಗಳೂರು.

ಎಂಪೈರ್ ಆಫ್ ಇಂಡಿಯಾ
ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

48ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ವಾಸ್ಥ್ಯ ಸಂಗತಿಗಳು.	ಒಟ್ಟು ಆದಾಯ	1,07,09,000	ಮೀರಿದೆ
	ಚಾಲ್ತಿಯಿರುವ ವಿಮೆ	17,74,52,000	,,
	ಆಸ್ತಿ	6,67,60,000	,,
ಕಂಪೆನಿಯು ಅವಧಿಯಲ್ಲಿ ಕೊಟ್ಟ ಕ್ಲೈಮುಗಳು		8,83,62,000	,,

ಶಾಖಾ ಕಛೇರಿ:
ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್,
ಕೆಂಪೇಗೌಡರಸ್ತೆ, ಬೆಂಗಳೂರು.

ಏಜೆನ್ಸಿ ಅರ್ಜಿಗಳನ್ನು ಸ್ವಾಗತಿಸಿದೆ.

ಪ್ರಧಾನ ಕಛೇರಿ:
ಎಂಪೈರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ್, ಬೊಂಬಾಯಿ.

ಭದ್ರತೆ! 17 ವರ್ಷಗಳ ಪರಿಪಕ್ವ ಅನುಭವಶೀಲತೆ!! ಅನುಕೂಲತೆ!!

ದಿ ವಿಜಯ ಬ್ಯಾಂಕ್ ಲಿಮಿಟೆಡ್

ಮುಖ್ಯ ಖಚೇರಿ,
ಕದ್ರಿ ರೋಡ್, ಮಂಗಳೂರು.

ನಿರಖು ಠೇವಣಾತಿ ಬಡ್ಡಿದರ:—

3	ತಿಂಗಳು	3%
6	,,	3¼%
12	,,	3½%
24	,,	4 %

ರೂಪಾಯಿ ೧೦,೦೦೦ಕ್ಕೆ ಮೀರಿದ ಒಂದೇ ಡಿಪಾಜಿಟ್ಟಿಗೆ ಮೇಲಿನ ದರಕ್ಕಿಂತ ¼% ಹೆಚ್ಚಿಗೆ

ಶಾಖೆಗಳು:— ಸಿಟಿ ಮಂಗಳೂರು, ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಕಾಸರಗೋಡು, ಕಾಂಞಂಗಾಡ್, ಪುತ್ತೂರು, ಮಡಿಕೇರಿ ಮತ್ತು ಮುಂಬಾಯಿ.

ಒಟ್ಟು ವಹಿವಾಟು ಭಂಡವಾಳ ರೂ. ೪೦ ಲಕ್ಷಕ್ಕೂ ಮೀರಿದೆ.

ಎಲ್ಲಾ ವಿಧದ ಆಧುನಿಕ ಬೇಂಕಿಂಗ್ ವಹಿವಾಟುಗಳು ದಕ್ಷತೆಯಿಂದ ನಡೆಸಲ್ಪಡುವವು.

ಹೆಚ್ಚಿನ ವಿವರಗಳಿಗೆ ಬರೆಯಿರಿ:—

12-11

ಏಜಂಟ್,
ಮಡಿಕೇರಿ ಶಾಖೆ, ಮಡಿಕೇರಿ.

CRESCENT

FOR PROTECTION AND SERVICE.

It is best to represent and insure with The CRESCENT Insurance Co., Ltd,

H. O BOMBAY.] [Established 1919.

For particulars write to:

Sri B. A. Poovaiah
Organiser
Pollibetta, Coorg.

or

The Branch Manager,
22 B. Mahatma Gandhi Road,
Bangalore 1.

ಸುರಕ್ಷಿತವಾದ ಜೀವವಿಮೆ ಪಡೆಯಲು

ಕ್ರೆಸೆಂಟ್

ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾದ.)

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,65,000.
ಕ್ಷೇಮನಿಧಿ	ರೂ.	50,000.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಹುಂಡಿಯೂ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ,
ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C.
ಪ್ರೆಸಿಡೆಂಟ್ ಮತ್ತು ಖಜಾನ್ಜಿ.

Edited, Printed and Published by P. I. [illegible] at 'Kodagu' Press, Mercara, for 'Kodagu' Ltd.

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೨೮ | ತಾರೀಖು ೯-೯-೧೯೪೯ನೇ ಶುಕ್ರವಾರ | ಸಂಚಿಕೆ ೧೫

ಗಾಂಧೀಜಿಯವರ ಬಗೆಗೆ ಅಮೇರಿಕದ ಆಸಕ್ತಿ

ಲೇ:—ಶ್ರೀ ಮನ್ನಾರಾಯಣ ಅಗರ್‌ವಾಲಾ.

(ಸರ್ವೋದಯ ಸಮಾಜದ ವಿದೇಶಾಂಗ ಶಾಖೆಯ ಪ್ರಚಾರಕರಾದ ಗಾಂಧೀ ಶಿಷ್ಯ ಶ್ರೀ ಮನ್ನಾರಾಯಣ ಅಗರ್‌ವಾಲಾರವರು ಜಗತ್ತಿನ ದೇಶಗಳನ್ನು ಸುತ್ತಿ ಗಾಂಧಿ ಸಂದೇಶವನ್ನು ಸಾರುತ್ತಿದ್ದಾರೆ. ಗಾಂಧೀಜಿಯವರ ಬಗ್ಗೆ ಅಮೇರಿಕನರ ಅಭಿಪ್ರಾಯ ಹೇಗಿದೆಯೆಂಬುದನ್ನು ವಿವರಿಸಿ ಸೆಪ್ಟೆಂಬರ್ ತಿಂಗಳ 'ಮೋಡರ್ನ್ ರಿವ್ಯೂ' ಪತ್ರಿಕೆಯಲ್ಲಿ ಬರೆದ ಲೇಖನದ ಸಾರಾಂಶವನ್ನಿಲ್ಲಿ ಕೊಡಲಾಗಿದೆ.)

ಗಾಂಧೀಜಿಯವರ ವಿಚಾರ ತಿಳಿಯದ ಒಬ್ಬ ಮನುಷ್ಯನನ್ನು—ಗ್ರಾಮಾಂತರದಲ್ಲು ಕೂಡ—ಅಮೇರಿಕದ ನನ್ನ ಈ ಪ್ರವಾಸದಲ್ಲಿ ಇನ್ನೂ ಕಾಣಬೇಕಿದೆ. ಆತನು ಕೂಲಿ ಇರಲಿ, ಗಾಡಿಯವನಿರಲಿ ಯಾ ಮೂಟೆ ಹೊರುವವನಿರಲಿ ಪ್ರತಿಯೊಬ್ಬನೂ ನನ್ನನ್ನು ಹಿಂದೂದೇಶದವನೇ ಎಂದು ಪ್ರಶ್ನಿಸಿದೊಡನೆ 'ಗಾಂಧಿಯು ಮಹಾಪುರುಷ. ಆತನ ಧೈರ್ಯವನ್ನು ನಾನು ಮೆಚ್ಚುತ್ತೇನೆ.' 'ಗಾಂಧಿಯು ಹಿಂದೂದೇಶಕ್ಕೆ ಅಷ್ಟು ಹಿತವನ್ನು ಮಾಡಿದ್ದಾನೆ: ಆದರೆ ಆತನು ಕೊಲ್ಲಲ್ಪಟ್ಟನು. ಯಾರು ಕೊಂದರು? ಆತನು ಹುಚ್ಚನೇ?' ಎಂದು ಕೆಲವರು ಪ್ರಶ್ನಿಸಿದರೆ 'ಗಾಂಧಿಯು ಒಳ್ಳೆಯ ಮುದುಕ. ಆತನ ಗುಟ್ಟಿಲ್ಲದ ಸತ್ಯ ವರ್ತನೆಯನ್ನು ನಾನು ಮೆಚ್ಚುವೆನು, ಎಂದು ಹೇಳುವವರು ಕೆಲವರು.

ಗಾಂಧೀಜಿಯವರ ಕೊಲೆಯ ವಾರ್ತೆ ದೊರೆತೊಡನೆ ಅಮೇರಿಕಾದ ರೇಡಿಯೋ ಮತ್ತು ಪತ್ರಿಕೆಗಳು ಸ್ತಂಭಿತವಾದವು. ತರುವಾಯ ಪ್ರತಿ ದಿನ ಅವು ಗಾಂಧೀಜಿಯವರ ಮಹಾ ಜೀವನದ ವಿವರಗಳನ್ನು ಪ್ರಕಟಿಸುವುವು. ಅಮೇರಿಕದ ಬೀದಿಯ ಮನುಷ್ಯನೂ ಕೂಡ ಗಾಂಧೀಯವರ ಮೇಲಿನ ಪ್ರೀತಿಯಿಂದ ಅವರನ್ನು 'ಮಹಾತ್ಮಾ' ಎಂದು ಸಂಭೋಧಿಸುತ್ತಾನೆ. ಜಗತ್ತಿಗೆ ಇಂದು ಅತ್ಯಾವಶ್ಯವಾಗಿರುವ ಒಂದು ತತ್ವಕ್ಕಾಗಿ ಗಾಂಧಿ ಜೀವಿಸಿದನೆಂದು ಆತನಿಗೆ ಮನವರಿಕೆಯಾಗಿದೆ. ಬ್ರಿಟಿಷರೊಡನೆ ಯಾವುದೇ ಆಯುಧವಿಲ್ಲದೆ ಗಾಂಧೀಜಿ ನಡೆಸಿದ ಚಳವಳಿ, ಇದು ಸಾಧಾರಣ ಅಮೇರಿಕನಿಗೆ ಆಶ್ಚರ್ಯಕಾರಕವಾಗಿದೆ.

ಇವರಲ್ಲದೆ ಅಮೇರಿಕದ ಮಹಾಮೇಧಾವಿಗಳಾದ ಡಾ. ಜಾನ್ ಹೋಮ್ಸ್, ಪರ್ಲ್‌ಬಕ್, ಲೂವಿ ಫಿಶರ್, ಪ್ರೊ. ಐನ್‌ಸ್ಟೀನ್ ಮೊದಲಾದವರು ಗಾಂಧೀಜಿಯ ಬಗ್ಗೆ ಅಭಿಮಾನಪಡುತ್ತಾರೆ. ಇವರೆಲ್ಲರನ್ನೂ ಕಾಣುವ ಸಂದರ್ಭ ನನಗೆ ದೊರೆತಾಗ ಗಾಂಧೀಜಿಯ ಬಗ್ಗೆ ಹೆಚ್ಚಿನ ವಿವರಗಳನ್ನು ಓದುವ ಮತ್ತು ತಿಳಿದುಕೊಳ್ಳುವ ಆಸಕ್ತಿಯನ್ನು ಇವರು ತೋರಿದರು. ಅಮೇರಿಕದ ಫ್ರೆಂಡ್ಸ್ ಸರ್ವಿಸ್ ಸಮಿತಿ, ಅಂತರರಾಷ್ಟ್ರೀಯ ರಿಕನ್ಸಿಲಿಯೇಶನ್ ಮತ್ತು ಅಂತರಾಷ್ಟ್ರೀಯ ಯುದ್ಧ ವಿರೋಧಿ ಸಂಘ ಮೊದಲಾದ ಸಂಸ್ಥೆಗಳು ತಮ್ಮ ಜಗತ್ತಿನ ಸೌಹಾರ್ದ ಭಾವ ಮತ್ತು ಶಾಂತಿಯ ಕೆಲಸಕ್ಕಾಗಿ ಗಾಂಧೀಜಿಯವರ ಆಶೀರ್ವಾದ ಮತ್ತು ಸಲಹೆಗೆ ಕಾತರಿಸುತ್ತಾರೆ. ಗಾಂಧೀಜಿಯ ಹಿಂದೂದೇಶವೂ ಕೂಡ ಇತರ ರಾಷ್ಟ್ರಗಳಂತೆ ತನ್ನ ರಕ್ಷಣಾವ್ಯವಸ್ಥೆಗೆ ತನ್ನ ಆದಾಯದ ಅರ್ಧವನ್ನು ವ್ಯಯ ಮಾಡುತ್ತಿರುವುದನ್ನು ತಿಳಿದು ಅವರಲ್ಲಿ ಅನೇಕರು ನಿರಾಶೆಗೊಂಡಿರುವರು. ಆದರೂ ಹಿಂದೂದೇಶವು ಸರಿ ಪಥದಲ್ಲಿ ನಡೆದು ಗಾಂಧೀಜಿಯ ಅಹಿಂಸಾ ಮತ್ತು ಪ್ರೇಮದ ದಾರವು ಜಗತ್ತಿಗೆ ದೊರೆತು ಜಗತ್ತು ಹೆಚ್ಚು ವಾಸ ಯೋಗ್ಯವಾಗಲೆಂದು ಆಶಿಸುತ್ತಾರೆ.

ಹಿಂದೂದೇಶದ ಹಿತ ಬಯಸುವ ಅನೇಕ ವಿಶ್ವ ವಿದ್ಯಾಲಯಗಳ ಅಧ್ಯಾಪಕರನ್ನು ಭೇಟಿಯಾಗುವ ಅನುಕೂಲ ದೊರೆಯಿತು. ಹಿಂದೂದೇಶದಂಥಾ ಆರ್ಥಿಕ ಕೀರ್ತಿವೆತ್ತ ರಾಷ್ಟ್ರವು ಪಾಶ್ಚಿಮಾತ್ಯ ರಾಷ್ಟ್ರಗಳನ್ನು ಅನುಕರಿಸಲೆತ್ನಿಸಬಾರದೆಂಬುದು ಅವರ ಅಭಿಪ್ರಾಯವಿತ್ತು. ಬದಲು ಅದು ತನ್ನದೇ ಆದ ಸಂಸ್ಕೃತಿಯನ್ನು ಬೆಳೆಸಿ ಪಶ್ಚಿಮ ರಾಷ್ಟ್ರಗಳಿಗೆ ಅತ್ಯವಶ್ಯವಾಗಿರುವ ಆ ನವ ಜೀವನದ ಮಾರ್ಗವನ್ನು ತೋರಿಸಬೇಕು. ಅಮೇರಿಕಾದ ಮಹಾ ವಿದ್ಯಾತಜ್ಞರಾದ ೯೦ ವಯಸ್ಸಿನ ಪ್ರೊ. ಜಾನ್ ಡಿವಿಯವರೂ ಇದೇ ಅಭಿಪ್ರಾಯ ಉಳ್ಳವರು. ಹೊಸ ಮತ್ತು ತರುಣ ಜನಾಂಗಗಳಿಗೆ ಮಾರ್ಗದರ್ಶನ ಅತ್ಯಾವಶ್ಯವೆಂಬುದೇ ಅವರ ಅಭಿಮತ. ಹಾರ್ವರ್ಡ್ ವಿಶ್ವ ವಿದ್ಯಾಲಯದ ಅರ್ಥಶಾಸ್ತ್ರ ಶಾಖೆಯ ಪ್ರೊ. ಸ್ಲಿಚ್ಟರ್‌ರವರು 'ಅಮೇರಿಕವು ತನ್ನನ್ನೂ ಮಾನವ ಗಣವನ್ನೂ ಕಲುಷ ಮೇಲೋಗರ ಮಾಡಿಕೊಂಡಿತು. ಹಿಂದೂದೇಶವು ಅದನ್ನು ಅನುಸರಿಸುವದಾದರೆ ತನ್ನ ಹತ್ಯವನ್ನು ತಾನೇ ಮಾಡಿಕೊಳ್ಳುವದು' ಎಂದಿರುವರು.

ಅಮೇರಿಕದ ರಾಷ್ಟ್ರೀಯ ಜೀವನದಲ್ಲಿ ಹೆಚ್ಚು ಹೆಚ್ಚಾಗಿ ಕೇಂದ್ರಿಕೃತ ಒಲವು ತೋರಿದರೂ ಗಾಂಧೀಜಿಯವರು ತಮ್ಮ ಲೇಖನಗಳಲ್ಲಿ ಆಗಾಗ್ಗೆ ಹೇಳುತ್ತಿದ್ದ ವಿಕೇಂದ್ರಿಕರಣದ ಕಡೆಗಿನ ಒಲವು ತೋರುತ್ತದೆ. ಕೈಗಾರಿಕಾ ಕ್ಷೇತ್ರದಲ್ಲಿ ಫೋರ್ಡ್‌ನಂಥಾ ದೊಡ್ಡ ಸಂಸ್ಥೆಗಳುಕೂಡ ತಮ್ಮ ಕಾರ್ಖಾನೆಗಳನ್ನು ದೇಶದ ಒಳಭಾಗಗಳಿಗೆ ಹಂಚಿ ಕೂಲಿಗಳ ಕೊರತೆ ಮತ್ತು ಸ್ಥಳಾ ಭಾವಗಳನ್ನು ಹೋಗಲಾಡಿಸಿಕೊಳ್ಳುತ್ತಿದ್ದಾರೆ. ಗ್ರಾಮಗಳಿಗೆಲ್ಲಾ ವಿದ್ಯುಚ್ಛಕ್ತಿಯ ಸರಬರಾಯಿಯ ಯೋಜನೆಯಿಂದ ಗ್ರಾಮ ಕೈಗಾರಿಕೆಗಳು ಅಭಿವೃದ್ಧಿಯಾಗಲು ಹೊಸ ಅನುವಾಗಿದೆ. ವಿಶೇಷವಾಗಿಯೂ ಅಮೇರಿಕನರು ಹೆಮ್ಮೆಪಟ್ಟುಕೊಳ್ಳಬಹುದಾದ ಸಾಮೂಹಿಕ ಕೇಂದ್ರ (Community Centres) ಗಳನ್ನು ಅಲ್ಲಿಯ ತಜ್ಞರು ಕೆಲವರು ಏರ್ಪಡಿಸುತ್ತಿದ್ದಾರೆ. ಫಿಲಡೆಲ್ಫಿಯಾದ ಪೆಂಡಲ್ ಹಿಲ್ ಎಂಬಲ್ಲಿ ಒಂದು ಕೇಂದ್ರವಿದೆ. ಅದು ಆಶ್ಚರ್ಯಕಾರಕ ರೀತಿ ವಿದ್ಯೆಯಲ್ಲಿ ಮುಂದರಿದಿದೆ. ಅವರಲ್ಲಿ ಮೂರು ದಿನ ಉಳಿಯುವ ಅವಕಾಶ ದೊರೆತಿತ್ತು. ಅವರ ಸ್ವಾವಲಂಬಿ ದೈಹಿಕ ಪರಿಶ್ರಮ, ಸಹಕಾರ ಪ್ರಯತ್ನ ಇವು ನಮ್ಮ ದೇಶದ ಗಾಂಧಿ ಆಶ್ರಮದ ಕಾರ್ಯಕಲಾಪಗಳನ್ನೇ ಹೋಲುತ್ತವೆ. ಓಹಿಯೋದ ಎಲ್ಲೋ ಸ್ಪ್ರಿಂಗ್ ಎಂಬಲ್ಲಿ ಡಾ. ಆರ್ಥರ್ ಮಾರ್ಗನ್‌ರವರು ನಡೆಸಿರುವ ಸಾಮೂಹಿಕ ಜೀವನ ಪರಿಶೋಧನೆಗಳು ಆಶ್ಚರ್ಯಕಾರಕವಾಗಿವೆ. ವಿದ್ಯುಚ್ಛಕ್ತಿಯಿಂದ ಆಧುನಿಕ ಚಿಕ್ಕ ಯಂತ್ರಗಳಿಂದ ನಡೆಯುವ ವಿಕೇಂದ್ರಿಕೃತ ಗುಡಿಕೈಗಾರಿಕೆಗಳಿಂದ ಕೂಡಿದ ಆದರ್ಶ ಗ್ರಾಮ ಸಮೂಹಗಳನ್ನು ರಚಿಸುವ ಪ್ರಯತ್ನವನ್ನು ಇವರು ನಡೆಸುತ್ತಿದ್ದಾರೆ. ಆರ್ಥಿಕ ಕ್ಷೇತ್ರದಲ್ಲಿ ವಿಕೇಂದ್ರೀಕರಣವನ್ನು ಕಳೆದ ದಶಕದಿಂದ ಪ್ರಯತ್ನಿಸುತ್ತಿರುವ ಡಾ. ಬಾರ್ಸೋಡಿಯವರನ್ನೂ ಕಂಡೆನು. ವಿಕೇಂದ್ರೀಕೃತ ಕೈಗಾರಿಕೆಯ ಆವಶ್ಯಕತೆಯನ್ನು ಶಾಸ್ತ್ರೀಯ ಆಧಾರಗಳಿಂದ ಅವರು ವಿವರಿಸಿದರು. 'ಜೀವನಕ್ಕಾಗಿ ವಿದ್ಯೆ' ಎಂಬ ಒಂದು ಪುಸ್ತಕವನ್ನು ಅವರು ಇತ್ತೀಚೆಗೆ ಬರೆದಿದ್ದಾರೆ. ಈ ಅಭಿಪ್ರಾಯದವರು ಅಮೇರಿಕಾದಲ್ಲಿ ಇನ್ನೂ ಹಲವರಿದ್ದಾರೆ. ಅವರು ತಮ್ಮನ್ನು ವಿಕೇಂದ್ರವಾದಿಗಳೆಂದು ಕರೆದುಕೊಳ್ಳುತ್ತಾರೆ. ಅವರ ಸಂಖ್ಯೆ ಕಡಿಮೆಯಾದರೂ ಪ್ರಗತಿಶೀಲ ವಿದ್ಯಾತಜ್ಞರಲ್ಲಿ ಅವರಿಗೆ ನಿರ್ದಿಷ್ಟ ಸ್ಥಾನವಿದೆ. ನ್ಯೂಯಾರ್ಕ್ ನಗರದಲ್ಲಿ ಇಲಾಖಾ ಸ್ಟೋರುಗಳು ಹಬ್ಬುತ್ತಿದ್ದು ಗ್ರಾಮಾಂತರಗಳಿಗೂ ತಲುಪಿವೆ. ಗ್ರಾಹಕರು ಇವುಗಳನ್ನು ಸ್ವಾಗತಿಸುತ್ತಿದ್ದು ಪಟ್ಟಣದ ವ್ಯಾಪಾರಿಗಳಿಗೆ ಇದು ತಲೆನೋವು ಹಿಡಿಸಿದೆ. ಕೇಂದ್ರೀಕರಣದ ತುತ್ತ ತುದಿಯೆಂದರೆ ವಿಕೇಂದ್ರೀಕರಣ! ಅಮೇರಿಕವು ಈ ತುದಿಯನ್ನು ಮುಟ್ಟಿದೆ. ಆದ್ದರಿಂದ ಕ್ರಮಶಃ ವಿಕೇಂದ್ರಿಕರಣವು ಆದರ ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರ[illegible]

ಹಿಂದೂದೇಶದ ೩೩೫ ಮಿಲಿಯ ಜನಸಂಖ್ಯೆಯೊಡನೆ ಅಮೇರಿಕದ ೧೫೦ ಮಿಲಿಯವನ್ನು ತುಲನೆ ಮಾಡಿದರೆ ಅದರ ಜನಸಂಖ್ಯೆ ಬಹು ಕಡಿಮೆ ಎನ್ನಬಹುದು. ಆದರೂ ಅಲ್ಲಿ ಈಗ ಐದು ಮಿಲಿಯ ಜನರು ನಿರುದ್ಯೋಗಿಗಳಾಗಿದ್ದಾರೆ. ಈಗಾಗಲೇ ಅಲ್ಲಿ ಮುಗ್ಗಟ್ಟು ಕಾಲುಹಾಕಿದೆ. ಇದನ್ನು ಎದುರಿಸಬೇಕಾದರೆ ವಿಕೇಂದ್ರೀಕರಣದ ಮಾರೆಹೋಗದೆ ಅಮೇರಿಕಕ್ಕೆ ಸಾಧ್ಯವಿಲ್ಲ. ಪರಮಾಣುಬಾಂಬು ಕೂಡ ಬಹು ದಿನಗಳ ವರೆಗೆ ಕೇವಲ ಅಮೇರಿಕನರ ಕೈಯಲ್ಲಿ ಇರುವದಿಲ್ಲ. ಮತ್ತು ಈ ಬಾಂಬೇ ಆರ್ಥಿಕ ಮತ್ತು ಸಾಮಾಜಿಕ ಜೀವನವು ದೊಡ್ಡ ನಗರಗಳಲ್ಲಿ ಕೇಂದ್ರೀಕೃತವಾಗಿರುವದನ್ನು ಅಸಾಧ್ಯವಾಗಿ ಮಾಡ...

ಇಂದು ಅಮೇರಿಕವು ಒಂದು ವಿಶೇಷ ರೀತಿಯ ಉಗ್ರ ಸಮತಾವಾದ ಜ್ವರದಿಂದ ನರಳುತ್ತಿದೆ. ರೇಡಿಯೋ ಮತ್ತು ಪತ್ರಿಕೆಗಳು ಉಗ್ರಸಮತಾವಾದ ಮತ್ತು ರಷ್ಯದ ವಿರುದ್ಧ ದ್ವೇಷವನ್ನು ಹರಡಿವೆ. ವಿಶ್ವವಿದ್ಯಾಲಯಗಳಲ್ಲಿ ಪ್ರೊಫೆಸರುಗಳು ಕೂಡ ವಿಧೇಯತೆಯ ಪ್ರಮಾಣವಚನ ಕೊಡಬೇಕಾದ ಪರಿಸ್ಥಿತಿ ಬಂದಿದೆ. ಬಂಡವಾಳವಾದದ ಆಂತರಿಕ ನಿರ್ಬಲತೆಯನ್ನು ತಿಳಿದ ಬುದ್ಧಿವಂತರು ಅಮೇರಿಕದ ಆರ್ಥಿಕ ಜೀವನದ ಬಗ್ಗೆ ಕಾತುರರಾಗಿ ಉಗ್ರಸಮತಾವಾದ ಮತ್ತು ಬಂಡವಾಳವಾದದಕ್ಕೆ ಬೇರೆ ಮಧ್ಯ ಮಾರ್ಗವಿದೆಯೇ ಎಂದು ಹುಡುಕುತ್ತಿದ್ದಾರೆ. ಅವರು ಸ್ವಾಭಾವಿಕವಾಗಿ ಪೂರ್ವದತ್ತ ಅದರಲ್ಲೂ ಭಾರತದತ್ತ ಹೊಸ ಬೆಳಕು ಮತ್ತು ಜೀವನ ಮಾದರಿಗಾಗಿ ನೋಡುತ್ತಿದ್ದಾರೆ. ಗಾಂಧೀಜಿಯವರ ವಿಕೇಂದ್ರೀಕೃತ ಆಡಳಿತ ಕ್ರಮವು ಭಾರತಕ್ಕೆ ಮಾತ್ರವಲ್ಲ; ಜಗತ್ತಿನ ಹಿತಸಾಧಿಸಬಲ್ಲ ಮಹಾಶಕ್ತಿಯಿಂದ ಕೂಡಿದೆ ಎಂದು ಅವರ ನಂಬಿಕೆ ಇದೆ. ಆದರೆ ಭಾರತವೇ ಪಶ್ಚಿಮದ ಆರ್ಥಿಕ ಮತ್ತು ಕೈಗಾರಿಕಾ ಮಾದರಿಯನ್ನು ಅನುಸರಿಸುವದಾದರೆ ಭಾರತದ ಬಗ್ಗೆ ಈ ದೊಡ್ಡ ಆಶೆಯನ್ನಿಟ್ಟುಕೊಂಡವರ ಆಶೆ ನಿರಾಶೆಯಾಗದಿರದು.

ಅಮೇರಿಕವು ದೊಡ್ಡ ದೇಶ. ಅದು ಇನ್ನೂ ತರುಣದೇಶ. ಅದರಲ್ಲಿ ಉತ್ಸಾಹವಷ್ಟು ಚೇತನವಿದೆ. ಅದರ ವಿಜ್ಞಾನ ಪ್ರಗತಿಯು ಆಶ್ಚರ್ಯಕಾರಕವಾಗಿದೆ. ಯಂತ್ರಸಲಕರಣೆಗಳಿದ್ದರೂ ಜನರು ಕಷ್ಟಪಟ್ಟು ದುಡಿಯುವವರು. ಆದರೆ ಆತ್ಮಕ್ಕೆ ವಿಚಾರಗಳನ್ನು ತೂಗಿ ನಡೆಯುವ ಕಲೆಯ ಮತ್ತು ಜ್ಞಾನಪೂರ್ಣ ದೇಶಗಳ ಬುದ್ಧಿವಂತಿಕೆಯ ಪರಿಶೀಲನವು ಇಲ್ಲ. ಹಿಂದೂದೇಶವು ವಿಜ್ಞಾನ ಶಾಸ್ತ್ರ ಮತ್ತು ಇತರ ಕಲಾವಿಚಾರಗಳಲ್ಲಿ ಅಮೇರಿಕದಿಂದ ಕಲಿಯಬೇಕಾದುದು ಬಹಳ ಇದೆ. ಆದರೆ ಅಮೇರಿಕವು ಹಿಂದೂದೇಶದಿಂದ ಕೊಡಬಲ್ಲ ಜೀವನ ತತ್ವದ ಬಗ್ಗೆ ಅತೀ ಆಶೆಯಿಂದಿದೆ. ಆದ್ದರಿಂದ ಅಮೇರಿಕ ಮತ್ತು ಹಿಂದೂದೇಶಗಳಲ್ಲಿ ಇನ್ನೂ ಹೆಚ್ಚಿರದ ಸಾಂಸ್ಕೃತಿಕ ಸಂಬಂಧ ಬೆಳೆಯಬೇಕೆಂದು ನನಗನಿಸಿದೆ. ಅಮೇರಿಕವು ಗಾಂಧೀಜಿಯನ್ನು ಮೆಚ್ಚುತ್ತದೆ. ಗಾಂಧೀಜಿಯನ್ನು ಪಡೆದ ಹಿಂದೂದೇಶವು ಅದಕ್ಕೆ ತಕ್ಕಂತೆ ವರ್ತಿಸಲಿ.

ಭಾರತದ ಭಾಗ್ಯ ಭಂಡಾರ.

ಧರ್ಮಾತ್ಮ ಅಶೋಕ.

ಲೇ:—ಶ್ರೀ ಬಿ. ಎಸ್. ರಾಮಕೃಷ್ಣ ಬಿ ಎಸ್‌ಸಿ. (ಆನರ್ಸ್) ಬಿ. ಟಿ.

ಲೇಖನ ೧೫

ಆಧುನಿಕ ಸ್ವತಂತ್ರ ಭಾರತದ ರಾಜನೀತಿ ಧ್ಯೇಯಗಳಿಗೆ ಆದರ್ಶ ಪುರುಷನಾಗಿ ಅಖಂಡ ಭರತ ವರ್ಷದಲ್ಲಿ ಪ್ರಬಲತಮ ಕೇಂದ್ರ ಸರಕಾರವನ್ನು ಕಟ್ಟಿ ಅತುಲ ವಿಭವದಿಂದ ಆಳಿದ ಅಶೋಕ ಚಕ್ರವರ್ತಿಯು ಭಾರತದ ರಾಷ್ಟ್ರೀಯತೆಗೆ ಆದಿ ಪುರುಷನೆಂತಿರುವನು. ಅಶೋಕನ ತಂದೆಯಾದ ಬಿಂದುಸಾರನ ಕಾಲದಲ್ಲೂ ಪಿತಾಮಹನಾದ ಚಂದ್ರಗುಪ್ತನ ಕಾಲದಲ್ಲೂ ಮೌರ್ಯಸಾಮ್ರಾಜ್ಯವು ಬೆಳೆಯುತ್ತಾ ಇದ್ದು ಭಾರತವು ಅಂತರರಾಷ್ಟ್ರೀಯ ಪ್ರಪಂಚದಲ್ಲಿ ಖ್ಯಾತಿಗಳಿಸಿದ್ದಿತು. ಚಂದ್ರಗುಪ್ತ ಮೌರ್ಯನು ಸತ್ವದ ಪೂರ್ಣತೆಯ ಹದಿಯ ಮೇಲೆ ನಿರ್ಮಿಸಿದ ಭವ್ಯ ಸಾಮ್ರಾಜ್ಯವನ್ನು ಅಶೋಕನು ವಿಸ್ತೃತಗೊಳಿಸಿ ಮಹಾ ವೈಭವದಿಂದ ಆಳಿ ಸಾಮ್ರಾಜ್ಯ ಮಹಾ ಮಂದಿರದ ಕಳಶವನ್ನು ಸ್ಥಾಪಿಸಿ ಭಾರತೀಯ ಯಶೋದುಂದುಭಿಯು ದಿಗ್ದಿಗಂತಗಳಲ್ಲಿ ಮೊಳಗುವಂತೆ ಎಸಗಿದನು. ಭಾರತವು ಅಂತರರಾಷ್ಟ್ರೀಯ ಕೇಂದ್ರ ರಂಗವಾಗಲು ಬೌದ್ಧ ಧರ್ಮವು ನಾನಾದೇಶಗಳಲ್ಲಿ ಹರಡಿದುದೇ ಕಾರಣವಾಗಿದ್ದಿತು.

ಮೌರ್ಯ ಸಾಮ್ರಾಜ್ಯದ ರತ್ನ ಸಿಂಹಾಸನವನ್ನು ಅಶೋಕನು ಕ್ರಿ. ಪೂ. ೨೭೩ರಲ್ಲಿ ಅಲಂಕರಿಸಿದನು. ಸಿಂಹಾಸನವನ್ನು ಏರುವ ಮುನ್ನ ಅತನು ರಾಜ ಪ್ರತಿನಿಧಿಯಾಗಿ ವಾಯುವ್ಯ ಪ್ರಾಂತದ ವಿಶ್ವವಿಖ್ಯಾತ ವಿಶ್ವವಿದ್ಯಾನಿಲಯ ನಗರವಾದ ತಕ್ಷಶಿಲೆಯಲ್ಲಿ ಅಧಿಕಾರ ನಡೆಸಿದ್ದನು. ಆಗಲೇ ಮೌರ್ಯ ಸಾಮ್ರಾಜ್ಯವು ಭಾರತದ ದಕ್ಷಿಣವನ್ನುಳಿದು ಸಮಗ್ರ ಭಾರತವನ್ನಾಕ್ರಮಿಸಿ ಮಧ್ಯ ಏಶಿಯಾದ ವರೆಗೂ ಹಬ್ಬಿದ್ದಿತು. ಅಶೋಕನು ಸಾಮ್ರಾಟನಾದೊಡನೆ ದಕ್ಷಿಣದಲ್ಲಿ ಉಳಿದಿದ್ದ ಭಾಗಗಳನ್ನು ಗೆದ್ದು ಏಕಮಾತ್ರ ಪ್ರಭುತ್ವವನ್ನು ಕಟ್ಟುವ ತೀವ್ರಕಾಂಕ್ಷೆಯಿಂದ ಪ್ರದೀಪ್ತನಾದನು. ಈಗಿನ ಒರಿಸ್ಸ ಮತ್ತು ಆಂಧ್ರ ದೇಶಗಳನ್ನೊಳಗೊಂಡ ಕಳಿಂಗ ದೇಶದ ಮೇಲಾತನು ದಂಡೆತ್ತಿ ಸಮರವನ್ನು ಹೂಡಿದನು. ಧೈರ್ಯ ಶಾಲಿಗಳಾದ ಕಳಿಂಗರು ಅತಿ ಪರಾಕ್ರಮದಿಂದ ಹೋರಾಡಿದರು. ಕಡೆಯು ಅಶೋಕನ ಸೈನಿಕರೂ ಅತುಳ ಪರಾಕ್ರಮದಿಂದ ಕಾದಿ ವಿಜಯಶ್ರೀಯನ್ನು ಪಡೆದರಾದರೂ ಅಸಂಖ್ಯಾತ ಜನರು ಮಡಿದು ರೋಗರುಜೆಗಳುಂಟಾಗಿ ಕಳಿಂಗ ಯುದ್ಧ ಕ್ಷೇತ್ರವು ಭೀಕರ ನರಕವಾಯಿತು. ಕರುಣಾಜನಕವಾದ ಆ ವಾರ್ತೆಯನ್ನು ಕೇಳಿದೊಡನೆ ಅಶೋಕನು ಬೆಂದೆದೆಯುಳ್ಳವನಾಗಿ ಹಿಂಸಾತ್ಮಕವೂ ಯಾತನಾಪೂರ್ಣವೂ ಪೌರುಷ್ಯಯುತವೂ ಆದ ಯುದ್ಧವನ್ನು ಇನ್ನು ಮಾಡುವುದಿಲ್ಲವೆಂದು ನಿರ್ಧರಿಸಿ [illegible] ಉಳಿದ ಭರತ ವರ್ಷದ ಭಾಗವನ್ನು [illegible] ಕಳ್ಳನ ಅಶ್ರುಪಾತ[illegible]ಕ್ಕೆ ಒಡಂಬಡದೆ ಭವ್ಯವಾದ ಇತರ ಸಂದೇಶಗಳ ಸಾಧನೆಗೆ ಕೈ ಹಚ್ಚಿ ಬೌದ್ಧ ಧರ್ಮದ ದೀಕ್ಷೆಯನ್ನು ಪಡೆದು ಮಂಗಳ ಸ್ವರೂಪಿಯಾದ ಬುದ್ಧನ ದಿವ್ಯ ಸಂದೇಶವನ್ನು ದೇಶವಿದೇಶಗಳಲ್ಲಿ ಪ್ರಚಾರಪಡಿಸಲು ಬದ್ಧಕಂಕಣನಾದನು.

ಅಶೋಕನು ಯಾವ ಧ್ಯೇಯಕ್ಕಾಗಿ ಬಾಳಿದನು, ಯಾವ ತತ್ವವನ್ನು ಅನುಷ್ಠಿಸಿದನು, ಮತ್ತು ಏನನ್ನು ಜಗತ್ತಿಗೆ ಸಾರಿದನು, ಎಂಬೆಲ್ಲ ವಿಷಯಗಳನ್ನು ಅವನ ಸ್ವಶಬ್ದಗಳಿಂದಲೇ ಇಂದೂ ನಾವು ತಿಳಿಯಬಹುದು. ಲೋಹದಿಂದಲೂ ಕಲ್ಲುಗಳಿಂದಲೂ ಮಾಡಲ್ಪಟ್ಟ ದೇಶವಾದ್ಯಂತವೂ ಹರಡಿರುವ ಸ್ತೂಪಗಳು ಇನ್ನು ನಮ್ಮ ರಾಷ್ಟ್ರೀಯ ಸಂಪತ್ತುಗಳಾಗಿದ್ದು ಅಂದಿನ ಭಾರತೀಯರಿಗಲ್ಲದೆ ಇಂದಿನ ಹಾಗೂ ಮುಂದಿನ ಭಾರತೀಯರಿಗೂ ಅಳಿಯದ ಅಮರ ಸಂದೇಶವನ್ನು ಸಾರುತ್ತಿವೆ.

'ಕಳಿಂಗವು ೮ ವರ್ಷಗಳ ದೀರ್ಘ ಯುದ್ಧದ ಪರಿಣಾಮವಾಗಿ ಮಹಾ ಪ್ರಭುವಿನಿಂದ ಜಯಿಸಲ್ಪಟ್ಟು ಮೌರ್ಯ ಸಾಮ್ರಾಜ್ಯದಲ್ಲಿ ಸಮಾವೇಶಗೊಂಡಿತು. ಸಹಸ್ರಗಟ್ಟಲೆಯಲ್ಲಿ ವೀರರು ಮರಣ ದೇವತೆಗೆ ಬಲಿಯಾದರು; ಲಕ್ಷಗಟ್ಟಲೆಯಲ್ಲಿ ಸೆರೆ ಹಿಡಿಯಲ್ಪಟ್ಟರು. ಸಮರಾಂಗಣವು ಸ್ಮಶಾನ ಕಾಪಾಲಿಕನ ನಿವಾಸ ಸ್ಥಾನವಾಯಿತು.

ಕಳಿಂಗವು ಪದಾಕ್ರಾಂತವಾದೊಡನೆ ಮಹಾ ಪ್ರಭುವಿನ ಧರ್ಮಸ್ಪೃಹೆ ಪ್ರಜ್ವಲಗೊಂಡು ಪ್ರಭುವು ಧರ್ಮ ರಕ್ಷಕನಾದನು. ಧರ್ಮ ಪಾಲನೆಯೂ ಧರ್ಮಾನುಷ್ಠಾನವೂ ಪ್ರಭುವಿನ ಪರಮ ಮಂತ್ರಗಳಾದುವು. ಅಂದಿನ ವರೆಗೆ ಅಜೇಯವಾಗಿದ್ದ ಕಳಿಂಗವನ್ನು ಆಕ್ರಮಿಸಿದುದರ ಪರಿಣಾಮವಾಗಿ ಪ್ರಜೆಗಳಿಗುಂಟಾದ ದಾರುಣ ದುಃಖ ಪರಿತಾಪಗಳನ್ನು ಕೇಳಿ ಪ್ರಭುವು ಅತೀವ ವ್ಯಾಕುಲಚಿತ್ತನಾಗಿರುವನು' ಎಂದು ಒಂದು ಶಾಸನವು ಉಲ್ಲೇಖಿಸುತ್ತದೆ.

ಹಿಂಸಾಪೂರ್ಣವಾದ ಯುದ್ಧಕ್ಕೆ ಅಶೋಕನು ಒಡಂಬಡಲಿಲ್ಲ. ಮಾನವ ಕೋಟಿಯನ್ನು ಧರ್ಮ ಪ್ರೇಮಗಳಿಂದ ಗೆದ್ದು ಹೃದಯ ಕ್ರಾಂತಿಯನ್ನುಂಟು ಮಾಡುವುದೂ ನಿಜವಾದ ಅಮರವಾದ ಧಾರ್ಮಿಕ ಜಯವು. ಇಂಥಹ ಜಯವನ್ನು ಅಶೋಕನು ಸ್ವರಾಷ್ಟ್ರದಲ್ಲಿ ಮಾತ್ರವಲ್ಲದೆ ದೂರದೂರದ ವಿದೇಶಗಳಲ್ಲೂ ಕೂಡ ಗಳಿಸಿ ಅಂತರ ರಾಷ್ಟ್ರೀಯ ಮಾನವಗಣದ ಮನೋಸಾಮ್ರಾಜ್ಯದ ಪ್ರಭುವಾದನು. ತನ್ನ ಸಾಮ್ರಾಜ್ಯದಲ್ಲಿ ಬಾಳುವ ಸಕಲ ಪ್ರಾಣಿಪಕ್ಷಿಗಳು ಸಹ ಸುಖ ಸಂತೋಷದಲ್ಲಿ ನಲಿದಾಡುತ್ತಿರುವುದೇ ತನ್ನ ಸುಖವೆಂದು ಅಶೋಕನು ಭಾವಿಸಿದ್ದನು.

ಅಭೂತಪೂರ್ವವಾದ ಆ ಸಾಮ್ರಾಟನು ಭಾರತೀಯರಿಂದ ಮಾತ್ರವಲ್ಲದೆ ಸಮಗ್ರ ಏಶಿಯಾದ ನಿವಾಸಿಗಳಿಂದ ಇಂದು ಕೂಡ ಪ್ರೀತಿಸಲ್ಪಟ್ಟು ಮನ್ನಣೆಗೆ ಪಾತ್ರನಾಗಿದ್ದಾನೆ. [illegible] ಚಾರ ಸೌಹಾರ್ದಭಾವನೆಗಳನ್ನು ಪ್ರಚುರಪಡಿಸುವುದೇ ಅಶೋಕನ ಧ್ಯೇಯವಾಗಿದ್ದರೂ ಪ್ರಜೆಗಳ ಕಷ್ಟ ಕಾರ್ಪಣ್ಯಗಳನ್ನು ಗಮನಿಸುವುದು ಅವನ ಹಿರಿಯ ಕರ್ತವ್ಯವಾಗಿದ್ದಿತು. ಪ್ರಜೆಗಳು ತಪಿಸುತ್ತಿರುವಾಗ ತಾನು ಧ್ಯಾನಾಸಕ್ತನಾಗಿ ನಿಷ್ಕ್ರಿಯತ್ವವನ್ನು ಅನುಸರಿಸದೆ ತಾನು ಎಲ್ಲಿಯೇ ಇರಲಿ ಪ್ರಜೆಗಳ ಕೂಗನ್ನು ಮನ್ನಿಸುವುದೇ ತನ್ನ ಧರ್ಮವೆಂದು ಅಶೋಕನು ತಿಳಿದಿದ್ದನು.

ಅಶೋಕನು ಬೌದ್ಧ ಸಂದೇಶದ ಪ್ರಚಾರಕರನ್ನೂ ರಾಯಭಾರಿಗಳನ್ನೂ ಸಿರಿಯ, ಈಜಿಪ್ಟ್, ಗ್ರೀಸ್, ಮಧ್ಯ ಏಶಿಯ, ಸಿಲೋನ್, ಬರ್ಮ, ಸಯಾಂ ಮುಂತಾದ ವಿವಿಧ ದೇಶಗಳಿಗೆ ಕಳುಹಿಸಿದನು. ತನ್ನ ಮಗನಾದ ಮಹೇಂದ್ರನನ್ನೂ ಮಗಳಾದ ಸಂಘಮಿತ್ರೆಯನ್ನೂ ಸಿಂಹಳ ದ್ವೀಪಕ್ಕೆ ಕಳುಹಿಸಿದನು. ಸಂದೇಶಪ್ರಸಾರಕರು ಇತರರನ್ನು ಹೃದಯ ಪರಿವರ್ತನೆಯಿಂದ ಬದಲಾಯಿಸಬೇಕೇ ಹೊರತು ಬಲಾತ್ಕಾರದಿಂದ ಮತಾಂತರಗೊಳಿಸಬಾರದೆಂದು ಆಜ್ಞೆ ಮಾಡಿದ್ದನು. ತಾನು ಬೌದ್ಧ ಧರ್ಮದ ಕಟ್ಟಾ ನಿಷ್ಠಾವಂತ ಹಿಂಬಾಲಕನಾದರೂ ಇತರ ಧರ್ಮಗಳನ್ನು ಗೌರವಿಸಿ ಪ್ರೀತಿಸುವ ಮಹಾಮತಿಯಾಗಿದ್ದನು. 'ಎಲ್ಲ ಧರ್ಮಗಳನ್ನೂ ಪ್ರೀತಿಸಿ ಗೌರವಿಸುವುದರಿಂದಲೇ ಮಾನವನು ತನ್ನ ಸ್ವಧರ್ಮಕ್ಕೆ ಅಂತರ ಸೇವೆ ಸಲ್ಲಿಸಿ ತನ್ನನ್ನು ಉದ್ಧರಿಸಿಕೊಳ್ಳಬಹುದು' ಎಂದು ಅಶೋಕನು ಸಾರಿದನು.

ಬೌದ್ಧ ಧರ್ಮವು [illegible]ದಿಂದ ಸಿಂಹಳದ ವರೆಗೂ ಪ್ರಬಲಿಸಿ ನೇಪಾಳಕ್ಕೂ ಹರಡಿ ಟಿಬೇಟಿನ ಮೂಲಕ ಚೈನಾ ಮಂಗೋಲಿಯ ದೇಶಗಳಲ್ಲೂ ವಿಸ್ತರಿಸಿತು. ಭಾರತ ವರ್ಷದಲ್ಲಿ ಬೌದ್ಧ ಧರ್ಮದ ಪ್ರಬಲ ಪ್ರಭಾವದಿಂದಾಗಿ [illegible]ವೂ ಮದ್ಯಪಾನ ನಿರೋಧವೂ ಬೆಳೆಯಿತು. ಅಂದಿನ ವರೆಗೂ ಬ್ರಾಹ್ಮಣರೂ ಕ್ಷತ್ರಿಯರೂ ಮಾಂಸಾಹಾರಿಗಳಾಗಿದ್ದು ಸೋಮಪಾನಮಾಡುತ್ತಾ ಪಶು ಬಲಿಗಳಿಂದೊಡಗೂಡಿದ ಯಜ್ಞಯಾಗಾದಿಗಳಲ್ಲಿ ನಿರತರಾಗಿದ್ದರು.

ಅಶೋಕನು ಕಟ್ಟಡ ರಚನೆಯಲ್ಲಿ ತೀವ್ರಾಸಕ್ತಿಯುಳ್ಳವನಾಗಿದ್ದನು. ಅನ್ಯದೇಶದ ಶ್ರೇಷ್ಠ ಶಿಲ್ಪಿಗಳ ಸಹಾಯದಿಂದ ಮಹಾ ಪ್ರಾಸಾದಗಳನ್ನೂ ಸ್ತೂಪಗಳನ್ನೂ ಕೆತ್ತನೆ ಕೆಲಸಗಳನ್ನೂ ಮಾಡಿಸಿದನಾದರೂ ಅವುಗಳಲ್ಲಿ ಭಾರತೀಯ ಶಿಲ್ಪಕಲಾ ನೈಪುಣ್ಯವು ಸ್ವಯಂ ಪ್ರಕಾಶಗೊಳ್ಳುತ್ತಿತ್ತು. ಅಶೋಕನ ಸಹಸ್ರ ಕಂಭಗಳಿಂದ ಕೂಡಿದ್ದ ರಾಜಸ್ಥಾನವು ಭೂಗತವಾಗಿದ್ದು ೩೦ ವರ್ಷಗಳ ಹಿಂದೆ ಪ್ರಾಚೀನ ಅವಶೇಷ ಸಂಶೋಧನಾ ಇಲಾಖೆಯವರಿಂದ ಪರಿಶೋಧಿಸಲ್ಪಟ್ಟಿತು. ಇಪ್ಪತ್ತೆರಡು ಸಹಸ್ರ ವರ್ಷಗಳಿಂದ ಹಾಳಾಗದೆ ಕಾಪಾಡಲ್ಪಟ್ಟ ಮರಗಳ ಸ್ತಂಭಗಳು ಇಂದಿಗೆ ಕೂಡ ಹೊಸದಾಗಿ ಕಾಣುವುವೆಂದು ಸಂಶೋಧನಾ ಇಲಾಖೆಯವರು ಪ್ರಶಂಸಿಸಿರುವರು.

ಉಳಿದ ಪ್ರದೇಶಗಳಲ್ಲಿ ಅಗೆದ ತೆಗೆದ ಕಟ್ಟಡಗಳ ಅವಶೇಷಗಳಿಂದಲೂ ಮರಗಳ ತೊಲೆಗಳನ್ನು ಉತ್ತಮ ವಿಧಾನದಿಂದ ಕಾಪಾಡುವ ಕ್ರಮವು ತಿಳಿದಿತ್ತೆಂದು ವ್ಯಕ್ತವಾಗುವುದು. ಮರಗಟ್ಟುಗಳು ಕ್ರಿಮಿಕೀಟಗಳಿಂದಲೂ ಹವೆಯಿಂದಲೂ ಶೀಘ್ರವಾಗಿ ನಶಿಸಿಹೋಗುವುವು. ಅವುಗಳಿಂದ ಕಾಪಾಡಲು ಯಾವ ರೀತಿಯ ರಕ್ಷಣಾ ಸಾಮಗ್ರಿಗಳನ್ನು ಉಪಯೋಗಿಸುತ್ತಿದ್ದರೆಂಬುದು ಇಂದೂ ಗಹನ ವಿಷಯವಾಗಿಯೇ ಉಳಿದಿದೆ.

ಪಾಟಲೀಪುತ್ರಕ್ಕೂ ಗಯೆಗೂ ಮಧ್ಯೆ ಅಶೋಕನ ಕಾಲದ [illegible] ಖ್ಯಾತಿಗಳಿಸಿದ ನಲಂದ ವಿಶ್ವವಿದ್ಯಾನಿಲಯದ ಅವಶೇಷಗಳಿವೆ. ನಲಂದ ವಿಶ್ವವಿದ್ಯಾನಿಲಯವು ಅಶೋಕನ ಕಾಲದಲ್ಲೇ ಪ್ರಾರಂಭಿಸಿತೋ ಅಥವಾ ತರುವಾಯ ಪ್ರಾರಂಭಿಸಿತೋ ಸ್ಪಷ್ಟವಾಗಿ ಹೇಳಲು ಬರುವುದಿಲ್ಲ.

ಅಶೋಕನು ೪೧ ವರ್ಷಗಳ ದೀರ್ಘವಾಗಿ ಆಳಿ ಕ್ರಿ. ಪೂ. ೨೩೨ರಲ್ಲಿ ಮಡಿದನು. ಜಗತ್ತಿನ ಇತಿಹಾಸದಲ್ಲಿ ಕಾಣುವ ಸಹಸ್ರಾರು ರಾಜಾಧಿರಾಜ ಚಕ್ರವರ್ತಿಗಳ ಮಹಾಪ್ರಭುಗಳ ಶ್ರೇಣಿಯಲ್ಲೆಲ್ಲಾ ಅಶೋಕನು ದಿವ್ಯಪ್ರಭೆಯಿಂದ ರಂಜಿಸುವ ಧ್ರುವತಾರೆಯಾಗಿದ್ದಾನೆ. ವೋಲ್ಗಾ ನದಿಯಿಂದ ಜಪಾನಿನ ವರೆಗೂ, ಚೈನಾ, ಟಿಬೇಟ್, ಭಾರತ ದೇಶಗಳಲ್ಲೂ, ಅಶೋಕನು ಇಂದೂ ಪ್ರಾತಃಸ್ಮರಣೀಯನಾಗಿ ಪೂಜಾರ್ಹನಾಗಿದ್ದಾನೆ. ಆಧುನಿಕ ಭಾರತದ ರಾಜನೀತಿಗೆ ಮಹಾನುಭಾವನಾದ ಅಶೋಕನು ಪಥಪ್ರದರ್ಶಕನಾಗಿದ್ದು, ಸ್ವತಂತ್ರ ಭಾರತದ ಧವಳಕೀರ್ತಿಯನ್ನು ದೇಶವಿದೇಶಗಳಲ್ಲಿ ಮೊಳಗುವ ರಾಷ್ಟ್ರೀಯ ಧ್ವಜದ ಮಧ್ಯೆ ಅಶೋಕ ಚಕ್ರ ಲಾಂಛನವಿದ್ದು ಸದಾ ನವಪೌರುಷವನ್ನೀಯುತ್ತಿದೆ.

International Trucks & Hudson Cars.

ಕಳೆದ ನಲುವತ್ತು ವರ್ಷಗಳಿಂದ ಹೆಸರು ಪಡೆದ ಮೋಟಾರು ಮತ್ತು ಟ್ರಕ್ಕುಗಳ ತಯಾರಕರಾದ ಅಮೇರಿಕದ

ಇಂಟರ್‌ನೇಶನಲ್ ಹಾರ್ವೆಸ್ಟರ್ಸ್ ಎಕ್ಸ್‌ಪೋರ್ಟ್ ಕಂಪೆನಿ

ಯವರ ಟ್ರಕ್ಕು ಮತ್ತು ಹಡ್ಸನ್ ಕಾರುಗಳು ನಮ್ಮಲ್ಲಿ ದೊರೆಯುವವು. ಮಿತ ಖರ್ಚಿನಿಂದ ಉತ್ತಮ ಲಾಭ ಪಡೆಯಲು ಇವು ಉತ್ತಮ ಟ್ರಕ್ಕುಗಳು. ಪ್ರತಿ ಗೆಲನ್ ಪೆಟ್ರೋಲಿಗೆ ಅತಿ ಹೆಚ್ಚಿನ 'ಮೈಲೇಜ್' ಕೊಡುತ್ತವೆ. ಇವುಗಳ "ಸ್ಪೇರ್ ಪಾರ್ಟ್ಸ್" ಗಳೂ ನಮ್ಮಲ್ಲಿ ದೊರೆಯುವವು. ಹೆಚ್ಚಿನ ಮಾಹಿತಿಗೆ ಈ ಪತ್ತೆಗೆ ಬರೆಯಿರಿ ಅಥವಾ ಖುದ್ದು ವಿಚಾರಿಸಬಹುದು.

M. U. ACHANNA,
Manager,
"INDIAN AUTOMOBILES" (UDIPI)
Agents,
Hudson Cars and International Trcelm,
For
South Kamara & Coorg,
Branch Mercara-

12-8

ವಾಚಕರ ಪತ್ರ

ಓದುಗರ ಓಲೆಗಳು.

ಕೊಟ್ಟಿಗೆ ಶಾಲೆ

ಈ ಗ್ರಾಮದಲ್ಲಿ ಶಾಲೆ ಇರಲಿಲ್ಲ. ಸ್ವಸ್ಥರೇ ಸೇರಿ ಒಂದು ಶಾಲೆ ಕಟ್ಟಿದರು. ನಾಲ್ಕಾರು ವರ್ಷಗಳ ವರೆಗೆ ಅವರೇ ಅಧ್ಯಾಪಕರನ್ನಿಟ್ಟು ಮಕ್ಕಳಿಗೆ ವಿದ್ಯೆ ಹೇಳಿಸುತ್ತಿದ್ದರು. ಕಟ್ಟಡವನ್ನು ಡಿಸ್ಟ್ರಿಕ್ಟ್ ಬೋರ್ಡಿಗೆ ಬಿಟ್ಟುಕೊಟ್ಟು ಜಿಲ್ಲಾ ಬೋರ್ಡ್ ಇದನ್ನು ವಹಿಸಿಕೊಂಡಿತು. ಉಪಾಧ್ಯಾಯರನ್ನೂ ಕೊಟ್ಟರು. ಶಾಲೆಯಲ್ಲಿ ನೂರರಷ್ಟು ವಿದ್ಯಾರ್ಥಿ ಮಕ್ಕಳಿದ್ದಾರೆ. ನಾಲ್ಕನೇ ತರಗತಿಯ ವರೆಗಿದೆ. ಇವರನ್ನು ಒಬ್ಬ ಉಪಾಧ್ಯಾಯರು ನಿರ್ವಹಿಸುವದೆಂತು? ಬೇರೊಬ್ಬ ಅಧ್ಯಾಪಕರ ಕೊಡಬೇಕೆಂದು ಕೂಗಿ ಕೊಂಡರೂ ಜಿಲ್ಲಾ ಬೋರ್ಡ್ ಕಿವಿಗೊಡುತ್ತಿಲ್ಲ. ಆ ಬಳಿಕ ಗ್ರಾಮಸ್ಥರೇ ಎರಡು ಉಪಾಧ್ಯಾಯರನ್ನು ಸಂಬಳಕೊಟ್ಟು ಇಟ್ಟುಕೊಂಡಿರುವರು. ಶಾಲೆ ಇರುವ ಕಟ್ಟಡವು ರಿಪೇರಿಯಿಲ್ಲದೆ ದನದ ಕೊಟ್ಟಿಗೆಯಂತಾಗಿದೆ. ಜಿಲ್ಲಾ ಬೋರ್ಡ್ ಇನ್ನಾದರೂ ಇದರ ರಿಪೇರಿಗೆ ಎಡೆಮಾಡಿ ಒಬ್ಬ ಹೆಚ್ಚಿನ ಅಧ್ಯಾಪಕರನ್ನು ಕೊಡಬೇಕಾಗಿ ಕೇಳಿಕೊಳ್ಳಲಾಗಿದೆ.

ಎಂ. ಎಸ್. ಮುತ್ತಪ್ಪ.

ಹರಿಜನೋದ್ಧಾರ.

ಮಹಾತ್ಮಾ ಗಾಂಧೀಯವರಿಂದ ಪ್ರಾರಂಭವಾದ ಈ ಅಸ್ಪೃಶ್ಯತಾ ನಿವಾರಣಾ ಪ್ರಶ್ನೆಯು ಬಗೆ ಹರಿಯದೆ ಇದೆ. ಈ [illegible] ಭಾವ ಇರಕೂಡದೆಂದು ನಿಯಮಾಗ[illegible] ಸರಕಾರ ಮಾಡಿದೆ ನಿಜ. ಹಾಗಿದ್ದರೂ ಈ ದಳಿತ ವರ್ಗದ ಸ್ಥಿತಿ ಏನೂ ಸುಧಾರಿಸಿಲ್ಲವೆಂದು ಹೇಳಬೇಕಾಗುತ್ತದೆ. ಈಗಿನ ಚೀಫ್ ಕಮಿಷನರು ಬಂದನಂತರ ಕೊಡಗಿನಲ್ಲಿ ಈ ಪ್ರಶ್ನೆಗೆ ಹೊಸ ಚೇತನ ದೊರಕಿತು. ಆದರೆ ಆ ಚೇತನ ಇತ್ತೀಚೆಗೆ ಕಣ್ಮರೆಯಾಗುತ್ತಿದೆ. ಇದಕ್ಕೆ ಕಾರಣ ಈ ಬಗ್ಗೆ ಯೋಗ್ಯ ಕಾರ್ಯಯೋಜನೆ ಇಲ್ಲದಿರುವದೇ ಆಗಿದೆ. ಭಾಷಣದಲ್ಲಿ ಹರಿಜನೋದ್ಧಾರವಾಗಬೇಕೆಂದು ಹೇಳಿದರೆ ಆಗುವದೇ? ಕೆಲವೆಡೆ ಹರಿಜನರಿಗೆ ಮನೆ ಕಟ್ಟಿಕೊಳ್ಳಲು ಅರ್ಧ ಎಕರೆ, ಒಂದು ಎಕರೆಯಂತೆ ಭೂಮಿ ಕೊಟ್ಟಿದ್ದಾರೆ. ಇದರಿಂದ ಅವನು ಜೀವನ ಸಾಗಿಸುವದು ಶಕ್ಯವೇ? ಗ್ರಾಮಗಳ ಮಧ್ಯದಲ್ಲಿ ಅಲ್ಲೊಂದು ಇಲ್ಲೊಂದು ಎಕ್ರೆ ಕೊಟ್ಟು ಕಲಹಕ್ಕೆ ಆಸ್ಪದ ಮಾಡುವ ಬದಲು ಜಾಗ ಬಿಟ್ಟ [illegible] ಭೂಮಿಗಳನ್ನು [illegible] ವಸಾಹತುಗಳನ್ನು ನಿರ್ಮಿಸಬಾರದೇಕೆ? ಹಲವು ಲಕ್ಷ ರೂಪಾಯಿ ವೆಚ್ಚವಾಗಲಿ. ಈ ವೆಚ್ಚವು ಪ್ರಜೆಗಳಿಗಾಗಿ ಅಲ್ಲವೇ? ಕೊಡಗು ಸರಕಾರದ ಇಲ್ಲಿವರೆಗಿನ ಪ್ರಯತ್ನವು ಹರಿಜನರಲ್ಲಿ ಜಿಗುಪ್ಸೆಯನ್ನು ಹುಟ್ಟಿಸಿದೆ.

ಹರಿಜನರ ಬಗ್ಗೆ ಸಾರ್ವಜನಿಕರ ಮನೋವೃತ್ತಿಯೂ ಬದಲಾಗಿಲ್ಲ. ಹಿಂದಿನಂತೆ ಅವರು ಇಂದೂ ತಮ್ಮ ಜುಡಿತದ ಹಂಗಿನಲ್ಲಿಯೇ ಇರಬೇಕೆಂದು ಅಪೇಕ್ಷಿಸುವವರೇ ಹೆಚ್ಚು. ಹಾಸ್ಟೆಲ್ಲಿನ ವಿಷಯವೆಂದರೆ ಹರಿಜನರ ಹಿತರಕ್ಷಕರೆಂತೆ ವರ್ತಿಸುವ ಅನೇಕರು ತಮ್ಮ ಶಾಲೆಗಳಲ್ಲಿ ಉದಯೋನ್ಮುಖ ವ್ಯವಸಾಯಕ್ಕೆ ಕಡಿಮೆ ಇಲ್ಲ. ಹರಿಜನರ ಬಗ್ಗೆ ಸಾರ್ವಜನಿಕ ದೃಷ್ಟಿ ಬದಲಾಗಬೇಕು.

ಹರಿಜನರಲ್ಲಿಯೂ ತಪ್ಪಿದೆ. ಜಗಲಿ ಹಾರುವ ಮುನ್ನ ಗಗನ ಹಾರಲೆತ್ನಿಸಬಾರದು. ತಮ್ಮ ಸ್ಥಿತಿ ಉದ್ಧಾರವಾಗಲು ಯತ್ನಿಸಬೇಕೆನ್ನುವಾಗ ತಾವು ಮಾಡುತ್ತಿದ್ದ ಕೆಲಸಗಳನ್ನು ಬಿಡಬೇಕೆಂದಲ್ಲ. ಇಂದು ಹರಿಜನರು ಮಾಡುವ ಕೆಲಸವನ್ನು ಯಾರಾದರೂ ಮಾಡಲೇಬೇಕು. ಯಾವ ಕೆಲಸವೂ ಅದು ಕೀಳು, ಇದು ಮೇಲು ಎಂದಿಲ್ಲ. ರಸ್ತೆ ಗುಡಿಸುವವನು ಕೀಳು, ವಕೀಲನು ಮೇಲು ಎಂಬ ಭಾವನೆ ಹೋಗಬೇಕು. ಬದಲು ಸಮಾಜಕ್ಕೆ ಅವಶ್ಯವಿರುವ ಕೆಲಸ ಮಾಡುವವನು ಉತ್ತಮನೆಂಬ ಭಾವನೆ ಬರಬೇಕು. ಈ ದೃಷ್ಟಿ ಬಂದರೆ ಹರಿಜನರಿಗಿಂಥಾ ಉತ್ತಮರು ಯಾರು? ಆದ್ದರಿಂದ ಹರಿಜನರು ತಮ್ಮ ಸುಧಾರಣೆ ಎಂದಾಗ ತಮ್ಮ ಹುಟ್ಟು ವೃತ್ತಿಯನ್ನು ಬಿಡಬೇಕೆಂದಿಲ್ಲ. ಆ ವೃತ್ತಿ ಮಾಡುತ್ತಿರುವುದರಿಂದ ಅವರು ಕೀಳಲ್ಲ.

ಹರಿಜನರ ಉತ್ತಮಗೊಳಿಸಲು ತಾವು ನಿಶ್ಚಯಿಸಿ ಶಕ್ತಿ ಮೀರಿ ಹೆಣಗಬೇಕು. ಕೆಟ್ಟ ಸೋಗಿನ [illegible] ವ್ಯಸನಗಳಿಗೆ ತುತ್ತಾಗದೆ ತಮ್ಮ ಆತ್ಮ ಸ್ಥೈರ್ಯವನ್ನು ಉತ್ತಮಗೊಳಿಸಲು ಪ್ರಯತ್ನಿಸಬೇಕು. ತಮ್ಮ ಗುರಿಯನ್ನು ಕಾಪಾಡಿಕೊಂಡು ಪ್ರಾಮಾಣಿಕರಾಗಿ ಬಾಳಲಾಗದಂತೆ ಎಚ್ಚರವಹಿಸಬೇಕು. ಆದ್ದರಿಂದ ಹರಿಜನ ವಿಷಯದಲ್ಲಿ ಸರಕಾರವೂ ಸಾರ್ವಜನಿಕರೂ, ಹರಿಜನರೂ ಒಂದುಗೂಡಿ ದುಡಿಯಬೇಕು.

'ಹರಿಜನ ಹಿತಕಾಂಕ್ಷಿ'

ಜಿಲ್ಲಾಬೋರ್ಡ್ ಶಾಲೆಗಳು.

ಕೊಡಗಿನ ಜಿಲ್ಲಾ ಬೋರ್ಡ್ ಶಾಲೆಗಳಲ್ಲಿ ಹಲವು ಒಬ್ಬ ಉಪಾಧ್ಯಾಯರ ಶಾಲೆಗಳಿವೆ. ಈ ಶಾಲೆಗಳ ಅವಸ್ಥೆ ದೇವರಿಗೆ ಗೊತ್ತು. ಇವುಗಳಲ್ಲಿ ಹಲವು ದನದ ಕೊಟ್ಟಿಗೆಗಳಂತಿವೆ. ಎಲ್ಲಾ ತರಗತಿಗಳನ್ನು ಒಬ್ಬರೇ ಉಪಾಧ್ಯಾಯರು ಕಲಿಸಬೇಕಾಗಿದೆ. ನೂರಾರು ಮಕ್ಕಳು, ಒಬ್ಬ ಉಪಾಧ್ಯಾಯ. ಶಾಲೆಗಳನ್ನು ಪ್ರಾರಂಭಿಸಿ ನಡೆಸುವ ಉತ್ಸಾಹ ಇದ್ದರೆ ಸಾಲದು. ಅಧ್ಯಾಪಕರು ಎಷ್ಟಿದ್ದಾರೆ [illegible] ಅಧ್ಯಾಪಕರು ಎಲ್ಲ ತರಗತಿಗಳ [illegible] ಈ ವಿವಿಧ ತರಗತಿಗಳ ಮಕ್ಕಳಿಗೆ ಪಾಠ ಹೇಳಬೇಕಾದರೆ ಅವರು ಯಂತ್ರವಾಗಿ ಮಕ್ಕಳ ಚೇತನವನ್ನು ಹಾಳುಗೆಡಹುತ್ತಾರೆ. ಈ ಶಾಲೆಗಳಿಗೆ ಖರ್ಚಾಗುತ್ತಿರುವ ಹಣದ ಪ್ರತಿಫಲ ದೊರೆಯುತ್ತಿಲ್ಲ. ಇಂಥಾ ಶಾಲೆಗಳನ್ನು ಪರಿಶೀಲಿಸಿ ಹೆಚ್ಚಿನ ಅಧ್ಯಾಪಕರನ್ನು ಶೀಘ್ರ ಕೊಡಬೇಕು. ಬೋರ್ಡಿನಿಂದ ಇದು ಸಾಧ್ಯವಾಗದಿದ್ದರೆ ಈ ಕೋರಿಕೆಯ ಜವಾಬ್ದಾರಿ ಸರಕಾರದ್ದೇ?

ಎನ್. ಅಪ್ಪಚ್ಚು.

ಸರಕಾರದ ಪ್ರೋತ್ಸಾಹವೇ?

ಕೊಡಗಿನಲ್ಲಿ ಪಾನನಿರೋಧವನ್ನು ಜಾರಿಗೆ ತರುವ ನಿಮಿತ್ತ ಪ್ರಥಮ ಹೆಜ್ಜೆಯಾಗಿ ನಿಯಂತ್ರಣವು ಕೇವಲ ತೋರಿಕೆಯದೆಂದೇ ಹೇಳಬೇಕು. ಏಕೆಂದರೆ ಒಬ್ಬೊಬ್ಬರು ತಮ್ಮ ಮಕ್ಕಳು, ಆಳುಗಳ ಹೆಸರಿನಲ್ಲಿ ಬೇಕಾದಷ್ಟು ಕೂಪನ್‌ಗಳನ್ನು ಪಡೆದು ಇಟ್ಟುಕೊಂಡಿದ್ದಾರೆ. ಹೀಗೆ ಪಡೆದ ಕೆಲವರು ಒಳಗೊಳಗೇ ಕಳ್ಳವ್ಯಾಪಾರ ಮಾಡುತ್ತಿರುವರೆಂದು ವಾರ್ತೆ ಇದೆ. ಆದ್ದರಿಂದ ಈ ಕೂಪನ್ ಪದ್ಧತಿಯು ಕಳ್ಳವ್ಯಾಪಾರಕ್ಕೆ ಎಡೆಕೊಟ್ಟಿದೆ. ಸರಕಾರದವರು ಕೂಪನ್‌ಗಳನ್ನು ಕೊಟ್ಟಾಗ ಖುದ್ದು ಹಾಜರಾದವರಿಗೆ ಮಾತ್ರ ಕೊಡುವ ದೆಂದು ವಿಧಿಸಿ ಮಕ್ಕಳು, ಹೆಂಗಸರ ಹೆಸರಿನಲ್ಲಿ ಕೂಪನ್ ಕೊಡಬಾರದಿತ್ತು. ಈ ಶಿಥಿಲತೆಯ ಜೊತೆಗೆ ಕೈವಿಮೋಚನೆ [illegible] ಪ್ರತಿ ಕೂಪನ್‌ದಾರನಿಗೆ ಒಂದು ಬಾಟ್ಲಿ ಹೆಚ್ಚು ಸಾರಾಯಿ ಕೊಡುವ ಏರ್ಪಾಟನ್ನು ಸರಕಾರ ಮಾಡಿದ್ದು ಯೋಗ್ಯ ವರ್ತನೆಯಲ್ಲ. ಆದಷ್ಟು ಹಿಡಿತವನ್ನು ಬಿಗಿಮಾಡಿ ಕ್ರಮಶಃ ಪೂರ್ಣ ಪಾನ ನಿರೋಧವನ್ನು ಜಾರಿಗೆ ತರುವದನ್ನು ಬಿಟ್ಟು ಈ ರೀತಿಯ ವರ್ತನೆ ಖಂಡನಾರ್ಹವಾದುದು. ಇನ್ನಾದರೂ ಸರಕಾರದವರು ಈ ರೀತಿ ವರ್ತಿಸದೆ ಪೂರ್ಣ ಪಾನನಿರೋಧದ ಪಥದಲ್ಲಿ ಮುಂದರಿಯುವರಾಗಿ ಆಶಿಸಲಾಗಿದೆ.

ಪಿ. ಎಸ್. ಪಿ.

ಘಟನಾ ಸಭೆಯಲ್ಲಿ ಕೊಡಗಿನ ಪ್ರತಿನಿಧಿ.

ಹಿಂದೂಸ್ಥಾನದ ಸ್ವತಂತ್ರ ಸರಕಾರವು ಘಟನಾ ಸಭೆ ನಿರ್ಮಿಸಿ ಸಾಧಾರಣ 2½ ವರ್ಷ ಕಾಲವಾಯಿತು. ಈ ಪುಟ್ಟ ಕೊಡಗು ದೇಶಕ್ಕೂ ಪ್ರಾಂತ್ಯ ಚಿಕ್ಕದಾದರೂ ಪ್ರತ್ಯೇಕ ಸರಕಾರ ನಡೆಸುತ್ತಿರುವದರಿಂದ ಪ್ರತಿನಿಧಿತ್ವ ದೊರೆಯಿತು.

ಆ ಘಟನೆ ಸಭೆಗೆ ಕೊಡಗಿನ ಪ್ರತಿನಿಧಿ ಚುನಾವಣೆಯನ್ನು ನಡೆಸಿದ ಮೇಲೆ ರಿಯಾಸತು ದೇಶದ ಬಹುಪಕ್ಷಭಾಗಕ್ಕೆ ಅಸಮಾಧಾನವನ್ನುಂಟುಮಾಡಿತ್ತು. ದೇಶದ ಹಲವು ಭಾಗದಿಂದ ಘಟನಾ ಸಭೆಯ ಪ್ರೆಸಿಡೆಂಟರಿಗೂ, ಮುಖ್ಯ ಮಂತ್ರಿಯವರಿಗೂ ತಂತಿಗಳೂ ಪತ್ರಗಳೂ ಅಸಮಾಧಾನವನ್ನು ಸೂಚಿಸಿ ಹೋಗುತ್ತಾ ಇತ್ತು. ಹ್ಯಾಗೂ ಹಿಂದೂಸ್ಥಾನದ ಈ ಚಿಕ್ಕಬ್ಬನ ಸಮಯದಲ್ಲಿ ಕಾರ್ಯ ನಡಿಸಲೋಸುಗ ಬದಲಾವಣೆಯನ್ನು ಮಾಡದೆ ಕಾರ್ಯ ಜರಗುತ್ತಾ ಬಂತು.

ಈ ಚಿಕ್ಕ ಪ್ರಾಂತ್ಯದ ಮತ್ತು ಇದಕ್ಕೆ ಸನ್ನಿಹಿತವಿರುವ ಚೀಫ್ ಕಮಿಷನರ್ ಪ್ರಾಂತ್ಯಗಳ ವಿಷಯ ಘಟನಾ ಸಭೆಯಲ್ಲಿ ಈ ಕಳೆದ ಆಗಸ್ಟ ತಾರೀಕು 1 ಮತ್ತು 2ರಲ್ಲಿ ಚರ್ಚೆಗೆ ಬಂತೆಂದು ಪತ್ರಿಕೆಗಳ ಮೂಲಕ ವ್ಯಾಪಾರಗಳಿದ್ದ ಕೆಲವು ದೇಶ ಪ್ರೇಮಿಗಳ ಮನಸ್ಸಿಗೆ ನೋವುಂಟಾಯಿತು. ಆದರೆ ಈ ವಿಷಯಕ್ಕಾಗಿ 2½ ವರ್ಷದಿಂದ ಕಾದಿದ್ದ ಕೊಡಗು ದೇಶದ ಪ್ರತಿನಿಧಿಯು ಆ 2 ದಿನವು ಕಾನ್‌ಸ್ಟಿಟ್ಯುಯೆಂಟ್‌ನಲ್ಲಿ ಹಾಜರಿರಲಿಲ್ಲವೆಂದು ತಿಳಿಯಲು ಬಹಳ ಆಶ್ಚರ್ಯ. ಇವರ ಗೈರುಹಾಜರು ಯಾವ ಉದ್ದೇಶದಿಂದಾದರೂ ಇದು ದೇಶಕ್ಕೆ ದೊಡ್ಡ ನಷ್ಟವನ್ನುಂಟು ಮಾಡಿದೆ. ಇದೇ ತರದ ಬೇರೆ ಚೀಫ್ ಕಮಿಷನರ್ ಪ್ರಾಂತ್ಯಗಳ ಪ್ರತಿನಿಧಿಗಳು ಒಂದು ಗಂಟೆಗಿಂತಲೂ ಹೆಚ್ಚು ಸಭೆಯಲ್ಲಿ ಮಾತಾಡಿ ತಮ್ಮ ತಮ್ಮ ಪ್ರಾಂತ್ಯಗಳ ಹೇಳಿಕೆಗಳನ್ನು ಮುಂದಿಟ್ಟದ್ದು ಪತ್ರಿಕೆಗಳನ್ನು ಓದುವವರಿಗೆಲ್ಲಾ ಅರಿತದ್ದಾಗಿದೆ. ಆದರೆ ಬೇರೆ ಪ್ರಾಂತಗಳ ಪ್ರಮುಖರಿಂದ ಕೂಗಲ್ಪಡುವಂತ ಈ ನಮ್ಮ ಈ ಕೊಡಗು ದೇಶದ ಪರ ಒಂದು ಮಾತನ್ನಾದರೂ ಹೇಳಲು ದೇಶದ ಪ್ರತಿನಿಧಿಗೆ ದೇವರು ಮನಸ್ಸು ಕೊಡಲಿಲ್ಲವೇ?

'ಮೋಟ ಕೊಂಡಾಪ್ ವೋಲ್' ಎಂಬ ಇಂಗ್ಲೀಷ ಆದರೂ ಇವರ ಮನಸಿಗೆ ಹೋಗಲಿಲ್ಲವೇ? ಡೆಲ್ಲಿ ಪ್ರಾಂತ್ಯದ ಪ್ರತಿನಿಧಿ ಶ್ರೀ ಗುಪ್ತರವರು ಆ ರೀತಿ ಎಷ್ಟಷ್ಟು ನಿಮಿಷದ ವರೆಗೆ ಅವರ ಪ್ರಾಂತ್ಯದ ಹೇಳಿಕೆಗಳನ್ನು ಸಭೆಯಲ್ಲಿ ಸಾರಿದರೆಂದರಲ್ಲೇ ಮುಖ್ಯಮಂತ್ರಿ ಜವಾಹರ್‌ಲಾಲ್ ನೆಹರೂರವರು ಆ ಪ್ರಾಂತ್ಯದ ವಿಷಯ ಒಡನೆ ಡೊಮಿನಿಯನ್ ಪಾರ್ಲಿಮೆಂಟಿನಲ್ಲಿ ಆಲೋಚಿಸುತ್ತೇವೆಂದೂ ಆ ಬಗ್ಗೆ ಯೋಗ್ಯ ಆಡಳಿತ ಯೋಜನೆ ಮಾಡಲಾಗುವದೆಂದೂ ಭರವಸೆಯಿತ್ತಿರುವದಲ್ಲದೆ ಆ ಸ್ವೀಕಾರ ಇಲ್ಲ. ಈ ದೇಶದ ಪ್ರತಿನಿಧಿಯು ಇಂಥಾ ಪ್ರಾಮುಖ್ಯ ಸಮಯದಲ್ಲಿ ಘಟನಾ ಸಭೆಯಲ್ಲಿ ಗೈರುಹಾಜರಾಗಿ ತನ್ನ ಯಾವದೊಂದೂ ಅಭಿಪ್ರಾಯವನ್ನೂ ಹೇಳದೆ ಇರುವದು ದೇಶದ ಸರಿಯಾದ ಪ್ರತಿನಿಧಿ ಅಲ್ಲ ಎಂಬುದನ್ನು ವ್ಯಕ್ತಪಡಿಸಿದಂತಾಯಿತು.

ಪ್ರತಿನಿಧಿ ಶ್ರೀ. ಸಿ. ಎಂ. ಪೂಣಚ್ಚನವರು ಅವರ ವಿಜಯಕ್ಕಾಗಿ ಈ ರೀತಿ ದೇಶವನ್ನು ವಂಚಿಸಿದರೆಂದು ಯಾರೋ ಕೇಳಿದಿದ್ದರೂ ಅವರಾಗಿಯೇ ಪತ್ರಿಕೆಗಳ ಮೂಲಕ ಸಮಜಾಯಿಸಿಕೆಯನ್ನು ಹೇಳುತ್ತಿರುವರು. ತಪ್ಪು ಮಾಡಿ ತಪ್ಪಿಲ್ಲ ಎಂಬ ಸಮಜಾಯಿಸಿ ದೇಶದ ಯಾರನ್ನು ಸಮಾಧಾನಪಡಿಸುವರೋ ತಿಳಿಯದು.

ಚೀಫ್‌ಕಮಿಷನರ್ ಪ್ರಾಂತ್ಯಗಳ ವಿಷಯ ಕಾಂಗ್ರೆಸ್ ಪಾರ್ಟಿ ಮೀಟಿಂಗಿನಲ್ಲಿ ತೀರ್ಮಾನ ವಾಗಿದ್ದರಿಂದ ಕಾನ್‌ಸೆಂಬ್ಲಿಯಲ್ಲಿ ಹಾಜರಿಲ್ಲದಿದ್ದರೂ ತೊಂದರೆ ಇಲ್ಲವೆಂದು ಅವರ ಒಂದು ಸಮಜಾಯಿಸಿ. ಹಾಗಾದರೆ ಡೆಲ್ಲಿಯ ಪ್ರತಿನಿಧಿಗೂ ಅದು ಸಮ್ಮಂಧ ಪಡುವುದಿಲ್ಲವೇ? ಆದರೆ ಅವರೇಕೆ ಅಷ್ಟೊಂದು ಉದ್ದ ಭಾಷಣದಿಂದ ತನ್ನ ಅಭಿಪ್ರಾಯವನ್ನು ಕಾನ್‌ಸೆಂಬ್ಲಿಯಲ್ಲಿ ಹಾಕಬೇಕಾಗಿತ್ತು. ಎಲ್ಲಾ ವಿಷಯ ಪಾರ್ಟಿ ಮೀಟಿಂಗಿನಲ್ಲಿ ತೀರ್ಮಾನವಾಗುವ ಪಕ್ಷ ಪಂಡಿತ ನೆಹರುರವರು ಹಾಗೆ [illegible] ಕಳವಿರಕಕ್ಕಂಥವರು ಏಕೆ ಹಾಜರಿರುವರು. ಎಷ್ಟೋ ಸಂದರ್ಭದಲ್ಲಿ ಪಾರ್ಟಿಯಲ್ಲಿ ತೀರ್ಮಾನವಾದದ್ದು ಬದಲಾಗುತ್ತದೆ. ಹೀಗೆಲ್ಲಾ ಇರುವಾಗ ಇವರ ಸಮಜಾಯಿಸಿಕೆಗೆ ಏನು ಅರ್ಥವಿರಬಹುದು ?

ಈ ವಾತಾವರಣವನ್ನು ನೋಡುವಾಗ ಮುಂದಕ್ಕೆ ಡೊಮಿನಿಯನ್ ಪಾರ್ಲಿಮೆಂಟಿನಲ್ಲಿ ಡೆಲ್ಲಿಗೆ ಒಂದು ತಂಪಿನ ಕೊಡಗಿನ ಒಂದು ತರಹದ ರಚನೆಯು ಆಗಿ ಹೋಗುವದೋ ಎಂಬ ಸಂಶಯವು ಕಂಡು ಬರುತ್ತದೆ. ಆದರೆ ಪ್ರಜಾ ಸರಕಾರದ ತತ್ವವು ಜನಾಭಿಪ್ರಾಯ ದಂತೆ. ಬೇರೆ ತರ ಆಗಲಿಕ್ಕಿಲ್ಲವೆಂದು ವಿಧಿ ಬೇರೆಯವರೆಲ್ಲರೂ ತಮ್ಮ ತಮ್ಮ ಅಭಿಪ್ರಾಯವನ್ನು ಒಡನೆ ಡೊಮಿನಿಯನ್ ಪಾರ್ಲಿಮೆಂಟಿಗೆ ಪತ್ರಗಳ ಮೂಲಕ ಯಾ ಸಂಘಗಳ ಮೂಲಕ ತಿಳಿಸಿದರೆ ಇಂದಿಗೂ ಸ್ವಾತಂತ್ರವಿರುವ ಈ ಕಾವೇರಿ ಪುಣ್ಯಭೂಮಿಯಾದ ಕೊಡಗು ದೇಶವನ್ನು ಹಾಗೆಯೇ ಬಿಟ್ಟು ಜವಾಬ್ದಾರ ಸರಕಾರವನ್ನು ಕೊಡಿಸಲು ಯತ್ನಿಸಬೇಕಲ್ಲದೆ ದೇಶದ ಬಗ್ಗೆ ಅಭಿಪ್ರಾಯವನ್ನು ಕೊಡುವ ಪ್ರಾಮುಖ್ಯ ವಿಚಾರವನ್ನು ಕಾನ್‌ಸೆಂಬ್ಲಿಯಲ್ಲಿ ಹಾಜರಿಲ್ಲದಂಥಾ ಪ್ರತಿನಿಧಿಯು ಘಾಗಕ್ಕೆ ಬಿಡಬಾರದು.

ಬಿ. ಬೋಪಯ್ಯ.

(ಇನ್ನೂ ಪುಟಕ್ಕೆ ಸಾಗಿದೆ)

ಕೊಡಗು

ತಾ. ೯-೯-೧೯೪೯ನೇ ಶುಕ್ರವಾರ

ಹಾರ್ಮೋನಿಯಂ.

ಡೆಲ್ಲಿಯಲ್ಲಿ ನಡೆದ ಅಖಿಲ ಭಾರತ ಗಾಯನ ಗೋಷ್ಠಿಯಲ್ಲಿ ಮಾತಾಡುತ್ತಾ ಭಾರತದ ಸೇನಾನಾಯಕರಾದ ಜನರಲ್ ಕೆ. ಎಂ. ಕಾರ್ಯಪ್ಪನವರು ಹಾರ್ಮೋನಿಯಂ ವಾದ್ಯದ ಕುರಿತು 'ಅದೊಂದು ಗೊಗ್ಗರ ಧ್ವನಿಯ ಹೊಲಸು ವಾದ್ಯ. ದೇಶದಲ್ಲಿರುವ ಎಲ್ಲಾ ಹಾರ್ಮೋನಿಯಂಗಳನ್ನು ಒಟ್ಟು ಗೂಡಿಸಿ ಬೆಂಕಿ ಹಚ್ಚಿ ಬಿಡಬೇಕು' ಎಂದು ಹೇಳಿದರು. ಹಾರ್ಮೋನಿಯಮನ್ನು ದ್ವೇಶಿಸಿದವರು ಇವರೊಬ್ಬರೇ ಅಲ್ಲ. ಭಾರತದ ಪ್ರಧಾನ ಮಂತ್ರಿಗಳಾದ ಪಂಡಿತ ಜವಾಹರರೂ ತಮ್ಮ ಅಕ್ಷತೆಯಲ್ಲಿ ತಮ್ಮ ನಿಶೇಧವನ್ನು ವ್ಯಕ್ತಮಾಡಿದ್ದಾರೆ. ಭಾರತದ ನಿಷ್ಣಾತ ಸಂಗೀತಗಾರರು ಹಾರ್ಮೋನಿಯಮನ್ನು ತಿರಸ್ಕರಿಸಿದ್ದಾರೆ. ರೇಡಿಯೋ ಕಾರ್ಯಕ್ರಮಗಳಲ್ಲಿ ಹಾರ್ಮೋನಿಯಮಿಗೆ ಎಲ್ಲಿಯೂ ಸ್ಥಳ ಕೊಡಲ್ಪಟ್ಟಿರುವದಿಲ್ಲ. ಸಂಗೀತದ ಪರಿಜ್ಞಾನವಿಲ್ಲವರೂ ಹಾರ್ಮೋನಿಯಮನ್ನು ನಿಶೇಧಿಸುವವಲ್ಲದೆ ಶಾಸ್ತ್ರೀಯ ಸಂಗೀತದ ತಜ್ಞರೂ ವಿರೋಧಿಸುತ್ತಾರೆ.

ಹಾರ್ಮೋನಿಯಮಿನಲ್ಲಿ ಶಾಸ್ತ್ರೀಯ ಸಂಗೀತಕ್ಕೆ ಬೇಕಾದ ಎಲ್ಲಾ ಸ್ವರಗಳು ದೊರೆಯುವದಿಲ್ಲ. ಅತೀ ಸೂಕ್ಷ್ಮ ಸ್ವರಗಳ ಪ್ರಸಂಗ ಬಂದಾಗ ಹಾರ್ಮೋನಿಯಮಿನ ನ್ಯೂನತೆ ತಿಳಿಯುತ್ತದೆ. ಈ ನ್ಯೂನತೆ ಇರುವ ಹಾರ್ಮೋನಿಯಮಿನ ಸ್ವರಕ್ಕೆ ಧ್ವನಿಗೂಡಿಸಿ ಹಾಡುವವರ ರಾಗದ ಸೂಕ್ಷ್ಮತೆ ಹಾಳಾಗುವದು. ಹಾರ್ಮೋನಿಯಮನ್ನು ಅನುಸರಿಸಿ ಅವರಿಗೆ ತಪ್ಪು ಸ್ವರದ ಅಭ್ಯಾಸವೂ ಆಗುತ್ತದೆ.

ಹಾರ್ಮೋನಿಯಮು ಭಾರತೀಯ ಸಂಗೀತ ಸಾಹಿತ್ಯವಲ್ಲ. ಭಾರತೀಯರ ಸಂಗೀತ ಸಾಧನಗಳೆಂದರೆ ಪ್ರಾಮುಖ್ಯವಾಗಿ ವೀಣೆ. ಅದ್ದರಿಂದಲೇ ಸರಸ್ವತಿಯನ್ನು ವೀಣಾಧಾರಿಯಾಗಿ ಮಾಡಿರುವದಲ್ಲವೇ? ವೀಣೆಯಲ್ಲಿ ಅತಿ ಸೂಕ್ಷ್ಮವಾದ, ಅತಿ ಮನೋಹರವಾದ ಸ್ವರಗಳನ್ನೂ ಹೊರಗೆಡುಹುವದು ಸಾಧ್ಯವಿದೆ. ಪಾಶ್ಚಿಮಾತ್ಯರ ಸಂಪರ್ಕದಿಂದ ಭಾರತಕ್ಕೆ ಹಾರ್ಮೋನಿಯಮಿನ ಆಗಮನವಾಯಿತೆನ್ನುತ್ತಾರೆ.

ಹಾರ್ಮೋನಿಯಮಿನ ವಾದನವು ಶಾಸ್ತ್ರೀಯ ಸಂಗೀತಗಾರನ ಕಿವಿಗೆ ಕರ್ಕಶ ಪ್ರಾಯವಾಗಿದೆ. ಹಾರ್ಮೋನಿಯಮಿನಿಂದ ಶಾಸ್ತ್ರೀಯ ಭಾರತೀಯ ಗಾನಕಲೆಗೆ ಹಾನಿಯಾಗುತ್ತಿದೆಯೆಂದು ಜನರಲ್ ಕಾರ್ಯಪ್ಪನವರು ನುಡಿದುದರಲ್ಲಿ ಸತ್ಯಾಂಶವಿದೆ. ಈ ವಾದ್ಯವನ್ನು ಆದಷ್ಟು ಕಡಿಮೆ ಮಾಡುವದು ಉಚಿತವಾಗಿದೆ.

ಆದರೆ ಇದು ಹೇಳುವಷ್ಟು ಸುಲಭವಲ್ಲ. ಹಾರ್ಮೋನಿಯಮು ಪ್ರತಿ ಮನೆಯನ್ನು ಹೊಕ್ಕಿದೆ. ಅದೇ ಪರಮ ಸಂಗೀತದ ಸಾಧನವೆಂಬ ಭಾವನೆಯೂ ಹಲವರಲ್ಲಿ ಮೂಡಿದೆ. ಸಂಗೀತದಲ್ಲಿ ನುರಿತವರು ಹಾರ್ಮೋನಿಯಮನ್ನು ಆಶ್ರಯಿಸುವದಿಲ್ಲ. ವೀಣೆಯೇ ಅವರ ಸಾಧನವಾಗುತ್ತದೆ. ಅದೇ ರೀತಿಯ ಅಭಿಪ್ರಾಯ ಹೆಚ್ಚಿ ಕ್ರಮಶಃ ವೀಣೆಯ ಪ್ರಧಾನ್ಯತೆ ಏರಬೇಕಾಗಿದೆ.

ವರ್ತಮಾನ.

ತಾರೀಕು ೪-೯-೪೯ರಲ್ಲಿ ನಾಪೋಕ್ಲು ನಾಡಿನ ಸಾರ್ವಜನಿಕರು ಆ ಕಮಿಷನರ ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟರ ಹುದ್ದೆಯಿಂದ ತಾ. ೩೦-೮-೪೯ರಿಂದ ನಿವೃತ್ತರಾದ ಶ್ರೀ. ಕೆ. ಟಿ ಉತ್ತಪ್ಪನವರಿಗೆ ಶ್ರೀ. ಮೂವೆರ ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸತ್ಕಾರ ಕೂಟವನ್ನೇರ್ಪಡಿಸಿ ಒಂದು ಬಿನ್ನವತ್ತಳೆಯನ್ನು ಒಪ್ಪಿಸಿದರು.

ತಾ. ೩-೯-೪೯ರಲ್ಲಿ ನಲ್ಲೂರು ಗ್ರಾಮಸ್ಥರು ಕೈಲ್ ಮುಹೂರ್ತ ಹಬ್ಬವನ್ನು ಆಟೋಟಗಳ ಸ್ಪರ್ಧೆಗಳೊಡನೆ ನಡೆಸಿ ಜಯಶೀಲರಾದವರಿಗೆ ಶ್ರೀ. ಪಾಲಚಂಡ ನಂಜಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಬಹುಮಾನ ಹಂಚಲಾಯಿತು.

ಕೊಡಗು ವಿದ್ಯಾಭಿವೃದ್ಧಿ ನಿಧಿಯ ಮಹಾಸಭೆಯು ತಾ. ೨೫-೯-೪೯ನೇ ಆದಿತ್ಯವಾರ ಮಧ್ಯಾಹ್ನ ೩ ಗಂಟೆಗೆ ಮಡಿಕೇರಿಯ ಕೊಡವ ಸಮಾಜದ ಕಟ್ಟಡದಲ್ಲಿ ನಡೆಯುವದು.

ತಾ. ೩-೯-೪೯ರಲ್ಲಿ ಬೇರಳ ಶ್ರೀಮಂಗಲ ಗ್ರಾಮಸ್ಥರು ಆಟೋಟಗಳ ಸ್ಪರ್ಧೆಯೊಡಗೂಡಿ ಕೈಲ್ ಪೊಳ್ದನ್ನು ಆಚರಿಸಿದರು. ನಂತರ ಶ್ರೀ ಕೊಂಗೆಟ್ಟಿರ ಬಿದ್ದಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆ ಸೇರಿ ಕೊಡವರ ಆಚಾರ, ನೀತಿ, ಸಂಸ್ಕೃತಿಗಳ ವಿಚಾರ ಬೋಧೆ ಪ್ರದ ಭಾಷಣಗಳಾದವು. ನಂತರ ಶಾಲಾ ವಿದ್ಯಾರ್ಥಿಗಳಿಗೆ ಸಿಹಿ ತಿಂಡಿ ಹಂಚಲಾಯಿತು.

ವೆಟರ್ನರಿ ಡಾಕ್ಟರಾಗಿದ್ದ ಶ್ರೀ ಕೆ. ವೀರಪ್ಪಗೌಡರು ಸರಕಾರಿ ಹಣ ದುರುಪಯೋಗ ಪಡಿಸಿದರೆಂಬ ಕಾರಣ ಅವರನ್ನು ಕೆಲಸದಿಂದ ನಿವೃತ್ತಿ ಗೊಳಿಸಲಾಗಿದೆಯೆಂದೂ ಶ್ರೀಯುತರು ಕೇಂದ್ರ ಸರಕಾರಕ್ಕೆ ಅಪೀಲು ಮಾಡಲಿರುವರೆಂದೂ ವರ್ತಮಾನ.

ಕೊಡಗು ಏಂಟಿ ಮಲೇರಿಯಾ ಇಲಾಖೆಯಲ್ಲಿ ಇನ್ಸ್‌ಪೆಕ್ಟರಾಗಿರುವ ಶ್ರೀ ಬಲ್ಲಚಂಡ ಎನ್. ಕುಟ್ಟಪ್ಪನವರ ವರ್ತನೆ ಸರಕಾರದ ವಿರುದ್ಧವಿದೆಯೆಂಬ ಕಾರಣದಿಂದ (ಕಮ್ಯೂನಿಸ್ಟ್ ಚಟುವಟಿಕೆಗಳಲ್ಲಿ ಕೈ ಹಾಕಿರುವರೆಂಬ ಊಹನೆ) ಅವರನ್ನು ತಾ. ೧೬-೯-೪೯ರಿಂದ ಕೆಲಸದಿಂದ ನಿವೃತ್ತಿ ಪಡಿಸಲಾಗುವದೆಂದು ನೋಟೀಸು ಕೊಡಲಾಗಿದೆ.

ಮಡಿಕೇರಿಯಲ್ಲಿ ಕ್ಷಯ ರೋಗ ಆಸ್ಪತ್ರೆಯೊಂದನ್ನು ತೆರೆಯಲು ಕೇಂದ್ರ ಸರಕಾರವು ೧೦,೪೦,೦೦೦ ರೂಪಾಯಿಗಳನ್ನು ಮಂಜೂರು ಮಾಡಿದೆಯೆಂದೂ ಇದರಲ್ಲಿ ಅರ್ಧಭಾಗವನ್ನು ಕೇಂದ್ರ ಸರಕಾರವು ಕೊಡುವದೆಂದೂ, ಅರ್ಧವನ್ನು ಸ್ಥಳೀಯ ಸರಕಾರವು ಕೊಡತಕ್ಕದೆಂದೂ ನಿರ್ಧಾರವಾಗಿದೆ. ಅಲ್ಲದೆ ಮಡಿಕೇರಿ ಆಸ್ಪತ್ರೆಯ ಹೆರಿಗೆ ವಾರ್ಡಿಗಾಗಿ ೭೨ ಹಾಸಿಗೆಗಳ ಕಟ್ಟಡ ಒಂದನ್ನು ಕಟ್ಟಲೂ ಹಣ ಮಂಜೂರ್ಮಾಡಲಾಗಿದೆಯೆಂದು ತಿಳಿಯಲಾಗಿದೆ.

ತಾ. ೩-೯-೪೯ರಲ್ಲಿ ಕೈಲ್ ಮುಹೂರ್ತ ಹಬ್ಬದ ಉದ್ದಿಶ್ಯ ಕಾಕೋಟು ಪರಂಬು ಮೈದಾನದಲ್ಲಿ ಸಾರ್ವಜನಿಕರಿಗೂ, ಬಾಲಕ ಬಾಲಕಿಯರಿಗೂ ಆಟೋಟಗಳ ಸ್ಪರ್ಧೆ ಏರ್ಪಡಿಸಲಾಗಿತ್ತು. ಜನರು ಕಿಕ್ಕಿರಿದು ನೆರೆದು ಆಟೋಟಗಳು ಯಶಸ್ವಿಯಾಗಿ ನಡೆದು ಗೆದ್ದವರಿಗೆ ಬಹುಮಾನ ಹಂಚಲ್ಪಟ್ಟಿತು.

ತಾ ೩-೯-೪೯ ರಲ್ಲಿ ಮೂರ್ನಾಡು ಕೈಲ್ ಪೊಳ್ದು ಸಂಘದ ಬೆಳ್ಳಿಯ ಮಹೋತ್ಸವ ಶ್ರೀ ಪಾಂಡಾಣೆ ಮೈದಾನದಲ್ಲಿ ನಡೆಯಿತು. ಸಾವಿರಕ್ಕಿಂಥಾ ಹೆಚ್ಚು ಜನರು ನೆರೆದಿದ್ದರು. ಎಲ್ಲಾ ಕೋಮಿನ ಜನರು ಭಾಗವಹಿಸಿದ್ದರು. ಶ್ರೀ. ಬಲ್ಲಚಂಡ ಮಾದಪ್ಪನವರು ಬೆಳ್ಳಿಯ ಮಹೋತ್ಸವದ ಉದ್ಘಾಟನೆ ಮಾಡಿದರು. ಆಟೋಟಗಳ ಸ್ಪರ್ಧೆಯ ನಂತರ ಶ್ರೀ. ಆಪ್ಪಾರಂಡ ತಿಮ್ಮಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ನೆರೆದು ಬಹುಮಾನ ವಿತರಣೆಯಾಯಿತು. ಕಾರ್ಯದರ್ಶಿಯವರು ಸಂಘದ ಈ ೨೫ ವರ್ಷಗಳ ಕಾರ್ಯಕಲಾಪಗಳ ವರದಿಯನ್ನು ಓದಿದರು. ಅಧ್ಯಕ್ಷರು ಸೂಕ್ತ ಭಾಷಣ ಮಾಡಿದನಂತರ ಸಭೆ ಮುಕ್ತಾಯಗೊಂಡಿತು.

ಮಡಿಕೇರಿ ಮಹಿಳಾ ಸಮಾಜ ಕಟ್ಟಡಕ್ಕೆ ಕೊಡಗ ಸರಕಾರವು ರೂ ೫೦೦೦ ಮಂಜೂರ್ಮಾಡಿರುವದೆಂದು ತಿಳಿದು ಬರುತ್ತದೆ.

CAR FOR SALE.

Studebaker Commander 1940 Model in perfect running condition.

Apply-

Dr Raghunathan,
Thithimathi, COORG

(೩ ೧ ಪುಟದಿಂದ)

ಮರೆನಾಡಿನ ತೊಟ್ಟಿ ಪಾಲ, ಮತ್ತು ರಸ್ತೆ.

ಮರೆನಾಡಿಗೊಂದು ಸೇತುವೆ, ಮತ್ತು ರಸ್ತೆಗಾಗಿ ಕೆಲವು ವರ್ಷಗಳಿಂದ ಎಷ್ಟೋ ಸಾರಿ ಕೇಳಿಕೊಂಡರೂ ಇನ್ನೂ ಆ ದಿನವು ಹತ್ತಿರ ಬಂದಿರುವುದಿಲ್ಲ. ಬದಲು ೧೯೩೨-೩೪ರಲ್ಲಿ ಒಂದು ತೊಟ್ಟಿಪಾಲವೂ ಸಾಧಾರಣ ಒಂದು ರಸ್ತೆಯೂ ಆಯಿತು. ರಸ್ತೆಯು ಹೊಳೆಗೆ ನ್ಯಾಯವಾದ ಸೇತುವೆ ಇಲ್ಲದ್ದರಿಂದ ಬೇಸಿಗೆಯಲ್ಲಿ ಅಲ್ಲದೆ ವಹಿವಾಟಿಗೆ ಪ್ರಯೋಜನವಿಲ್ಲ. ತೊಟ್ಟಿ ಪಾಲವಾಗಿ ೧೬-೧೭ ವರ್ಷವಾಗಿ ಅದಕ್ಕೆ ಈ ವರೆಗೆ ೨-೩ ಸಲ ರಿಪೇರಿಯೂ ಆಯಿತು. ರಿಪೇರಿಯೂ ಸಮರ್ಪಕ ನಡೆಯಲಿಲ್ಲ. ಹೆಚ್ಚಿನ ಹಣ ಖರ್ಚು ಮಾಡಿದ್ದೇ ದೊರೆತು ಖರ್ಚಾದ ಹಣಕ್ಕೆ ಸರಿಯಾದ ರಿಪೇರಿ ಆಗಿಲ್ಲ. ಹಾಗೆ ಈ ವರ್ಷವೂ ರಿಪೇರಿಗಾಗಿ ಹಣ ಮಂಜೂರಾಗಿದೆಯೆಂದೂ, ಕಂಟ್ರಾಕ್ಟ್ ಕೊಟ್ಟರೆಂತಲೂ ಕೇಳಬಂದದಾಗಿಯೂ ತಿಳಿದು ತಿಂಗಳು ೨-೩ ಆಯಿತು. ಆದರೆ ರಿಪೇರಿಯ ಅವಶ್ಯಕತೆ ಕಳೆದ ಮಳೆಗಾಲಕ್ಕೋ, ಬರುವ ಮುಂದಿನ ಬೇಸಿಗೆಗೋ ತಿಳಿಯದು. ರಿಪೇರಿಯ ಬದಲು ಆದರ ಹಳೆ ಮುರುಕಲು ಹಲಿಗೆಗಳಿಗೆ ಹೊಡೆದಿದ್ದ ಮೊಳೆಗಳನ್ನು ಕಿತ್ತು ಪಾಲದ ಆ ಕಡೆ ಈ ಕಡೆಯಲ್ಲಿ ಒಂದೊಂದು ಬೋರ್ಡು ಇಟ್ಟು ಅದರಲ್ಲಿ 'ಪಾಲ ರಿಪೇರಿ, ಎಚ್ಚರಿಕೆ' ಎಂಬದಾಗಿ ಬರೆದು ತಿಂಗಳು ಒಂದು ಆಯಿತು. ಈಗ ರಿಪೇರಿಯಾಗಿದೆಯಂತೆ! ಎಂಥಾ ರಿಪೇರಿ. ಭಂಡಾರಿ ಮತ್ತು ಕಾಡು ಬಳ್ಳಿಗಳಿಂದ ಮೊಳೆ ಕಿತ್ತ ಹಲಗೆಗಳನ್ನೂ ಪಾಲವನ್ನೂ ಅದರ ಕೈತಾಂಗದ ಪೈಪ್ ಮತ್ತು ತಂತಿಗಳನ್ನೂ ಕಟ್ಟಲಾಗಿದೆ! ಪಾಲದ ಮೇಲೆ ದಾಟುವ ಸಾಹಸವು ಮರೆನಾಡಿನವರಿಗೂ ಪೋಲೀಸ್ ಇಲಾಖೆಯ ಕೆಳ ಅಧಿಕಾರಿಗಳಿಗೂ ಸಾಧ್ಯವಲ್ಲದೆ, ಬೇರೆಯವರಿಂದ ಸಾಧ್ಯವಿಲ್ಲ. ಕಂದಾಯ ವಸೂಲಿಗಾಗಿ ಬಂದಧಿಕಾರಿಗಳೊಬ್ಬರು ಇನ್ನೊಬ್ಬರ ಸಹಾಯದಿಂದ ಪಾಲ ದಾಟಿ ಬಂದು, ಇನ್ನು ಈ ಪಾಲಕ್ಕಾಗಿ ಆಚೆ ದಾಟುವುದು ಬೇಡವೆಂದು ಶಪಥವಿಟ್ಟು ಬಂದರಂತೆ! ಮರೆನಾಡಿನಲ್ಲಿ ಕಠಿಣ ಕಾಯಿಲೆಗೂ ಯಾ ಹೆರಿಗೆಯ ಕೇಸ್‌ಗಾಗಿಯೂ ಡಾಕ್ಟರನ್ನು ಕರೆದರೆ, ಪಾಲದ ಸಂಗ್ತಿ ಕೇಳಿ ಸಮಯವಿಲ್ಲವೆನ್ನುವರು. ಇನ್ನೂ ಹೆಚ್ಚು ಬರೆದು ಪತ್ರಿಕೆಯ ಸ್ಥಳ ಹಾಳುಮಾಡಲಾರೆ. ಆದರೆ ಮರೆನಾಡಿನವರಾದ ನಮ್ಮ ಬೇಡಿಕೆ ಇಷ್ಟೆ. ಚೀಫ್ ಕಮಿಷನರ್ ಸಾಹೇಬರವರು ನಮ್ಮ ನಾಡಿಗೆ ಬರುತ್ತೇವೆಂದು ಒಂದೆರಡು ಸಲ ಭರವಸೆ ಇತ್ತಿದ್ದರು. ನಮ್ಮ ಗ್ರಹಚಾರವಶಾತ್ ಅವರಿಗೆ ಬರಲಾಗಲಿಲ್ಲ. ಆದ್ದರಿಂದ ಅವರು ಈಗ ಒಡನೆ ಮೇಲ್ಕಂಡ ಪಾಲದ ವರೆಗೆ ಕಾರು ಬರಲು ಸಾಧ್ಯವಿದೆ; ಅಲ್ಲಿಯವರೆಗೆ ದಯವಿಟ್ಟು ಬಂದು ಸೇತುವೆಯನ್ನು ಸಮ್ಮಂದ ಪಟ್ಟ ಇಲಾಖೆಯವರೊಡನೆ ಖುದ್ದಾಗಿ ನೋಡಿ ಅದರಲ್ಲಿ ಮನುಷ್ಯರು ದಾಟಬಹುದೋ ಎಂಬವನ್ನು ಅಜಮಾಯಿಸಿ ಮರೆನಾಡಿನ ಗಡಿಯನ್ನು ಹೊಳೆ ದಡದಲ್ಲಿ ನಿಂತು ನೋಡಿ ಹೋಗಬೇಕಾಗಿ ಬಯ್ಯುತ್ತೇನೆ, ಬರುವ ತಿಂಗಳಲ್ಲಿ ಕೌನ್ಸಿಲ್ಲು ಮೀಟಿಂಗು ಇದೆಯಾದ್ದರಿಂದ ನಮ್ಮ ನಾಡಿನ ಕೌನ್ಸಿಲು ಮೆಂಬರುಗಳೂ ಒಮ್ಮೆ ದಯವಿಟ್ಟು ಬಂದು ಮೇಲ್ಕಂಡ ಪಾಲವನ್ನು ಖುದ್ದು ನೋಡಿಕೊಂಡು ಹೋಗಬೇಕಾಗಿಯೂ ವಿನಂತಿ.'

ಯಂ. ಕೆ. ಐಯ್ಯಪ್ಪ.

ನಮ್ಮ ಗ್ರಾಹಕರಿಗೆ

ನಮ್ಮ ವಿಸ್ತೃತ ಯೋಜನೆಗನುಕೂಲವಾಗಿ "ಜಾಸ ಪ್ರಕಾಶ" ದ ಎದುರು ಇದ್ದ ನಮ್ಮ ಅಂಗಡಿಯನ್ನು ಟೌನ್ ಹಾಲಿನ ಎದುರು ಇರುವ ಲಕ್ಷ್ಮೀ ಬಿಲ್ಡಿಂಗಿನ ವಿಶಾಲವಾದ ರೂಮಿನಲ್ಲಿ ತೆರೆಯಲಾಗಿದೆ. ಎಲ್ಲಾ ತರಹದ ಉಲನ್ ಮತ್ತು ಮಿಲ್ ಬಟ್ಟೆಗಳು ದೊರೆಯುತ್ತವೆ.

ಪಟ್ವೊ ಬ್ರದರ್ಸ್,
ಲಕ್ಷ್ಮೀ ಬಿಲ್ಡಿಂಗ್ಸ್,
ಟೌನ್ ಹಾಲಿನ ಎದುರು,
ಮೈಸೂರು.

ರೈತನ ಪುಟ.

ನಮ್ಮ ಸರಕಾರ.

ಲೇ:- ಓರ್ವ ರೈತ.

ಕಳೆದ ವಾರ ಕೊಡಗಿನಲ್ಲಿರುವ ಪಾರ್ಟಿಪಕ್ಷಗಳ ವಿಚಾರ ಬರೆದದ್ದಾಯಿತು. ನಮ್ಮ ಸರ್ಕಾರದ ಆಡಳಿತ ನೀತಿಯ ವಿಷಯ ಈ ವಾರ ಉಲ್ಲೇಖಿಸಲಾಗಿದೆ.

ರೈತರಾದ ನಾವು ಮರಣದ ಪರಿಯಂತ ಒಳ್ಳೆ ಬಟ್ಟೆ ಧರಿಸದೆ ಮಳೆಗಾಳಿ ಬಿಸಿಲು ಚಳಿಗೆ ಎರವಾಗಿ ಸರಿಯಾಗಿ ಊಟ ಮಾಡದೆ ಪಟ್ಟಣಗಳಲ್ಲಿ ದೊರಕುವ ನವನಾಗರೀಕತೆಯ ಅಂದಚಂದ ಮತ್ತು ಸೌಕರ್ಯಗಳನ್ನು ಅನುಭವಿಸದೆ ದುಡಿಯುತ್ತೇವೆ. ಇದೇ ರೀತಿ ನಮ್ಮ ಹಿಂದಿನವರು ದುಡಿದು ಶಾಂತಿಯನ್ನೈದಿದ್ದಾರೆ ಅದೇ ರೀತಿಯ ಶಾಂತಿ ನಮಗೂ ಕಾದಿಟ್ಟಿರುವಂತಿದೆ. ನಮ್ಮ ಬಾಳನ್ನು ಒಬ್ಬ ಕವಿವರ್ಯರು ಹೀಗೆ ವರ್ಣಿಸಿರುವರು.

'ನಾನಾ ಕೊಳಕಿನ ವಸ್ತ್ರಗಳಿಂದ ತುಂಬಿದ ನಗ್ನ ಮರಗಳ ನೆಲೆಯಾಶ್ರಯ ಪಡೆದ ಚಿಕ್ಕ ಕುಟೀರಗಳ ಬಳಿಗಳಲ್ಲಿ ಅವರು ಮಲಗುವರು. ಸುಗಂಧಯುಕ್ತ ಸುಪ್ರಭಾತ, ಪೊದರಿನ ಹಕ್ಕಿಯ ಹಾಡು, ಕಾಗೆಯ ಕಹಳೆ, ಇವಾವುವೂ ಕೂಡ ಅವರನ್ನು ಅವರ ನಿಕೃಷ್ಟ ಹಾಸಿಗೆಯಿಂದ ಎಚ್ಚರಿಸಲಾರವು. ಅವರ ಒಲೆಯ ಬೆಂಕಿ ಸತತ ಉರಿಯುವದೇ ಕಷ್ಟ. ಮನೆಯಾಳಿಯ ಸಂಧ್ಯಾ ಶುಶ್ರೂಷೆಗೂ ಅಷ್ಟು ಅವಕಾಶವಿಲ್ಲ. ಯಾವ ಮಕ್ಕಳೂ ತಂದೆಯು ಹಿಂತಿರುಗಿದನಂತರ ಅವನ ತೊಡೆಯನ್ನು ಅಲಂಕರಿಸುವದಿಲ್ಲ. ಇಲ್ಲಿಯ ಅತಿನ ಮುಕ್ತಿನಲ್ಲಿ ಪಾಲುಗೊಳ್ಳುವಲ್ಲಿ ಅವರಿಗೆ ಬೇಕಷ್ಟು ಆದಾಯ ಬರುವದಿಲ್ಲ ಆದರೂ ಅವರ ನೇಗಿಲು ಭೂಮಿಯನ್ನು ಹದಗೊಳಿಸುತ್ತದೆ. ಅವರು ಗದ್ದೆಯ ಕಷ್ಟದ ಹುಮ್ಮಸ್ಸಿನಿಂದ ದುಡಿಯುತ್ತಾರೆ ಅವರ ಉಪಯುಕ್ತ ದುಡಿತದಲ್ಲಿ ಅತ್ಯಾಶೆಯು ಇಣಕದಿರಲಿ; ಅವರ ಗೃಹ ಸಂತೋಷ ಮತ್ತು ಅದೃಷ್ಟವನ್ನು ಕಡೆಗಣಿಸದಿರಲಿ, ಬಡವನ ಸರಳ ಮತ್ತು ಚಿಕ್ಕ ಜೀವನವನ್ನು ಯಾವ ಘನತೆಯೂ ಶ್ರೀಮಂತಿಕೆಯೂ ಗರ್ವದ ಹುಸಿ ನಗೆಯಿಂದ ನೋಡದಿರಲಿ'

ಹೌದು, ಅಂದು ಆ ನೇಗಿಲಯೋಗಿಯ ಜೀವನಕ್ಕೆ ಆ ಘನತೆ, ಗೌರವವಿತ್ತು. ಆದೆ ಪರಿಸ್ಥಿತಿಯು ಇಂದು ಕಾಣುವುದಿಲ್ಲ. ಸತ್ಯನಿಷ್ಠೆ, ಪ್ರಾಮಾಣಿಕತನ ಸೇವಾ ತತ್ಪರತೆ ಇವುಗಳ ಮುಸುಕಿನಲ್ಲಿ ಎಲ್ಲಾ ವ್ಯವಹಾರಗಳೂ ಹಾದಿ ತಪ್ಪಿ ನಡೆಯುತ್ತಿರುವುದು ನಮ್ಮ ದೇಶದ ದೌರ್ಭಾಗ್ಯ.

ನಮಗೆ ಸ್ವಾತಂತ್ರ್ಯವು ಲಭಿಸಿ ಮೂರನೇ ವರ್ಷಕ್ಕೆ ಕಾಲಿಟ್ಟಿದ್ದೇವೆ. ಬ್ರಿಟಿಷರು ಇರುವಾಗ ನಮ್ಮ ಸ್ಥಿತಿಯು ಹೇಗಿತ್ತು ಅದೇ ಸ್ಥಿತಿಯು ಇಂದು ಕಂಡು ಬರುತ್ತಿ. 'ಯಾವ ರಾಜ ಬಂದರೇನು ಯಾವ ರಾಜ ಹೋದರೇನು ರೈತ ರಾಗಿ ಬೀಸುವುದು ತಪ್ಪೀತೆ?' ಎಂಬ ನಾಣ್ಣುಡಿಯು ಸರಿಯಾಗಿದೆ. ಇದಕ್ಕೆ ಕಾರಣರು ಯಾರು? ಸ್ವಲ್ಪ ಮಟ್ಟಿಗೆ ನಾವೇ ಕಾರಣರು ಮೊದಲನೆಯದಾಗಿ ನಮಗೆ ತಕ್ಕಷ್ಟು ವಿದ್ಯೆ ಇಲ್ಲ. ಶಿಕ್ಷಣದ ಅಭಾವದಿಂದ ನಮ್ಮ ಬುದ್ಧಿಯು ವಿಕಾಸವಾಗಲಿಲ್ಲ. ನಮ್ಮ ವೃತ್ತಿಯನ್ನು ನಾವು ಹೇಗೆ ಮುನ್ನಡೆಸಬೇಕು? ಅದರಲ್ಲಿ ಇರುವ ನ್ಯೂನತೆಗಳೇನ? ಇವುಗಳನ್ನೆಲ್ಲಾ ವಿಚಾರಿಸಿ ಅವನ್ನೆಲ್ಲಾ ಸುಧಾರಿಸಿಕೊಂಡು ಅಭಿವೃದ್ಧಿಯ ಪಥ ತೋರಿಸುವವರು ನಮಗೆ ದೊರೆಯುವದು ಬಹಳ ದುರ್ಲಭ. ತಮ್ಮ ಆದಾಯ ವೆಚ್ಚಗಳ ಜ್ಞಾನವನ್ನು ಪಡೆಯದೆ ದಿಕ್ಕೆಟ್ಟು ವರ್ತಿಸುವ ರೈತರೇ ಹೆಚ್ಚು. ಹೀಗಿರುವಾಗ ನಮ್ಮ ವೃತ್ತಿಯ ಬೆಳವಣಿಗೆಗೆ ಬೇಕಾಗುವಷ್ಟಾದರೂ ಶಿಕ್ಷಣ ಪಡೆಯುವದು ಅಗತ್ಯವಲ್ಲವೇ? ರೈತ ಬುದ್ಧಿವಂತನಾದರೆ ತನ್ನ ಉಪಯುಕ್ತವಾದ ಕೃಷಿಗಾರಿಕೆಗೆ ಒಂದು ಸ್ಥಾನಮಾನ ದೊರಕಿಸಬಹುದು. ಇದಕ್ಕಾಗಿ ನಾವು ನಿದ್ರೆಯಿಂದ ಎಚ್ಚರಗೊಳ್ಳಬೇಕು ನಾವು ದುಡಿದು ಸರ್ಕಾರಕ್ಕೆ ಕಂದಾಯ ಪಾವತಿ ಮಾಡುತ್ತಿದ್ದೇವೆ. ಈ ರೀತಿಯಲ್ಲಿ ವಸೂಲಾಗುವ ಕಂದಾಯ ಮಗ್ಗಿರಿಯ ವೆಚ್ಚವು ಯಾವ ರೀತಿ ನಡೆಯುತ್ತಿ. ರೈತರ ಪಾಲಿಗೆ ಸಿಗುವ ಪ್ರತಿ ಫಲವೇನು ಎಂಬುದನ್ನು ಅರಿತುಕೊಳ್ಳಬೇಕು. ಬ್ರಿಟಿಷರು ಇರುವಾಗ ಅಂಥಾ ಸೌಲಭ್ಯವು ನಮಗಿರಲಿಲ್ಲ ಈಗಿನ ವಾತಾವರಣವು ಬದಲಾಯಿಸಿದೆ. ಪ್ರಜಾಧಿಪತ್ಯ ತತ್ವದ ಮೇಲೆ ನಡೆಯುವ ಆಡಳಿತದಲ್ಲಿ ಸರ್ಕಾರದವರ ಆಡಳಿತ ಕ್ರಮವನ್ನು ತಿಳಕೊಳ್ಳುವ ಹಕ್ಕು ಬಾಧ್ಯತೆ ನಮಗೆ ಇದೆ.

ನಮ್ಮ ಸರ್ಕಾರದ ಆಡಳಿತವು ಸರಿಯಾಗಿರುವುದಿಲ್ಲವೆಂದು ಈ ಮೊದಲೇ ತಿಳಿಸಲಾಗಿದೆ ಪುನಹ ಅದನ್ನು ಬರೆಯುವ ಹೆಚ್ಚಿನ ಪ್ರಯೋಜನವಿಲ್ಲ ಯುದ್ಧನಂತರದ ಅನೇಕ ಯೋಜನೆಗಳನ್ನು ತಯಾರಿಸಲಾಯಿತು. ಕೆಲವು ಯೋಜನೆಗಳು ಇನ್ನೂ ತಯಾರಾಗುತ್ತಿವೆಯಂತೆ ಹೆಚ್ಚೆಚ್ಚು ಯೋಜನೆಗಳನ್ನು ಸಿದ್ಧಗೊಳಿಸುವುದಕ್ಕಿಂತ ಮಾಡಿದ ನಾಲ್ಕನ್ನು ಯೋಗ್ಯ ರೀತಿ ಜಾರಿಗೆ ತರುವದು ಯುಕ್ತವಾಗಿದೆ.

'ತಮ್ಮ ಪಕ್ಷಗಳನ್ನು ತೃಪ್ತಿಗೊಳಿಸುವ ಮತ್ತು ಭಾವನಾಪ್ರಚೋದಿತ ಯೋಜನೆಗಳಿಗಾಗಿ ಕೋಟ್ಯಂತರ ರೂಪಾಯಿಗಳನ್ನು ಎಸೆಯುವ ಮೊದಲು ಪ್ರಾಂತಗಳು ತಮ್ಮ ಆರ್ಥಿಕ ಸಂಪತ್ತನ್ನು ಹೆಚ್ಚಿಸಿಕೊಳ್ಳಲು ಕಲಿಯಬೇಕು. ಹತ್ತು ಯಾ ಹದಿನೈದು ವರ್ಷಗಳ ನಂತರ ಫಲಪ್ರದವಾಗುವ ಯೋಜನೆಗಳಿಗೆ ಖರ್ಚು ಮಾಡುವ ಬದಲು ಕ್ಷಿಪ್ರದಲ್ಲಿ ಫಲಕೊಡುವಲ್ಲ ಯೋಜನೆಗಳಿಗೆ ನಮ್ಮ ದೇಶದ ಅಲ್ಪ ಬಂಡವಾಳವನ್ನು ಉಪಯೋಗಿಸುವದು ಅತ್ಯವಶ್ಯ' ಎಂದು 'ಹಿಂದೂ' ಪತ್ರಿಕೆಯು ಬರೆದಿದೆ ಈ ಬುದ್ಧಿವಾದವನ್ನು ನಮ್ಮ ಸರಕಾರ ಗಮನಿಸಿದೆಯೇ?

ನಮ್ಮಲ್ಲಿ ಈ ವಿಚಾರಗಳಲ್ಲಿ ಸರಕಾರಕ್ಕೆ ತಕ್ಕ ಸಲಹೆ ಕೊಡುವ ತಜ್ಞರು ಇಲ್ಲದ ಕಾರಣ ಸರ್ಕಾರದ ಹಣವು ಯಾವ ರೀತಿಯಲ್ಲಿ ಪ್ರಯೋಜನಕ್ಕೆ ಬಾರದ ಯೋಜನೆಗಳಲ್ಲಿ ಮಾಯವಾಗುತ್ತಿದೆ ಎಂಬುದಕ್ಕೆ ಒಂದೆರಡು ಉದಾಹರಣೆಗಳನ್ನು ಕೊಡಬಯಸುತ್ತೇನೆ. ಹಳ್ಳಿಯಲ್ಲಿರುವ ನನಗೆ ಕೇಳಬಂದ ಈ ವಾರ್ತೆಗಳು ತಪ್ಪಾಗಿದ್ದರೆ ಸಂಬಂಧಿಸಿದವರು ಆ ರೀತಿ ಅಂಕೆಸಂಖ್ಯೆಗಳಿಂದ ತಿಳಿಸಿದರೆ ತಿದ್ದಿಕೊಳ್ಳಲಾಗುವದು.

(೧) ಹಂದಿ ಕೋಳಿಗಳನ್ನು ಸಾಕುವ ಬಗ್ಗೆ ಸರಕಾರವು ಒಂದು ಯೋಜನೆ ತಯಾರಿಸಿತಂತೆ ಅದನ್ನು ಕಾರ್ಯರೂಪಕ್ಕೂ ತರಲಾಯಿತು. ಆದರೆ ಅದು ಪ್ರಥಮ ಹೆಜ್ಜೆಯಲ್ಲೇ ಯಾವುದೋ ಕಾರಣದಿಂದ ನಿಲ್ಲಿಸಲ್ಪಟ್ಟಿತು ಇದರಿಂದ ಸರ್ಕಾರಕ್ಕೆ ಸುಮಾರು ರೂ ೧೦,೦೦೦ ಮೇಲ್ಪಟ್ಟು ನಷ್ಟವಾಗಿದೆಯಂತೆ.

(೨) ಕಳೆದ ವರ್ಷ ಹೊಟೇಲುಗಳಲ್ಲಿ ಎಮ್ಮೆ, ದನಗಳ ಹಾಲನ್ನು ಉಪಯೋಗಿಸಕೂಡದೆಂದು ಸರ್ಕಾರದವರ ಹುಕುಂ ಒಂದು ಹೊರಟಿತ್ತು. ಹೊರಪ್ರಾಂತ್ಯದಿಂದ ಹಾಲು ಪುಡಿ ತರಿಸಿ ಎಲ್ಲಾ ಹೊಟೇಲುಗಳಿಗೆ ಸರಬರಾಯಿ ಮಾಡುತ್ತಿದ್ದರು. ಸದರಿ ಹಾಲುಪುಡಿಯು ಮನುಷ್ಯರು ಸೇವಿಸಲಿಕ್ಕೆ ತಕ್ಕದಲ್ಲವೆಂದು ಗೊಂದಲವೆದ್ದ ಕಾರಣ ಸ್ಟಾಕಿನಲ್ಲಿದ್ದ ಹಾಲುಪುಡಿಯನ್ನು ನಾಶಮಾಡಲಾಯಿತೆಂದು ತಿಳಿಯುತ್ತೇನೆ ಇದರಿಂದ ಸರಕಾರಕ್ಕೆ ಅಂದಾಜು ೨೫,೦೦೦ ರೂಪಾಯಿಗಳ ನಷ್ಟವಾಯಿತಂತೆ.

(೩) ಮಡಿಕೇರಿಯಲ್ಲಿ ಒಂದು ಡೈರಿ ಫಾರಂ ಇದೆಯಂತೆ ಅಲ್ಲಿ ಕೆಲವು ತಿಂಗಳ ಹಿಂದೆ ೩೦-೩೫ ಎಮ್ಮೆಗಳು ಸತ್ತು ಹೋದವಂತೆ! ಡೈರಿಫಾರಂ ಸ್ಥಾಪಿತವಾದಂದಿನಿಂದ ನಮ್ಮ ಸರ್ಕಾರಕ್ಕೆ ಎಮ್ಮೆಗಳ ನಷ್ಟ ಸೇರಿಸಿಬಿಟ್ಟರೆ ರೂ ೫೦,೦೦೦ಕ್ಕೆ ಮೇಲ್ಪಟ್ಟು ನಷ್ಟವಿದೆಯಂತೆ!

ಅಲ್ಲದೆ ಡೈರಿಫಾರಮಿನಲ್ಲಿ ಒಳ್ಳೆ ಹಾಲನ್ನು ತಲೆನೋಡಿ ಸರಬರಾಯಿಮಾಡಿ ಆಸ್ಪತ್ರೆಯಲ್ಲಿರುವ ನಮ್ಮ ಸಹೋದರರುಗಳಿಗೂ ಪಟ್ಟಣವಾಸಿಗಳಿಗೂ ಹಾಲುಪುಡಿ ಬೆರಕೆ ಮಾಡಿದ ಹಾಲನ್ನು ಸರಬರಾಯಿ ಮಾಡುತ್ತಾರಂತೆ! ಆ ವಿಚಾರ ಸದ್ಯಕ್ಕೆ ಬೇಡ, ಇರಲಿ

ಬಯಲಿಗೆ ಬಾರದ ಇನ್ನೂ ಎಷ್ಟು ಯೋಜನೆಗಳು ಈ ರೀತಿಯಾಗಿ ಕುಸಿದು ಬಿದ್ದಿವೆಯೋ ಬಲ್ಲವರಾರು? ಈ ಮೇಲಿನ ರೀತಿಯಲ್ಲಿ ರೈತರ ರಕ್ತದ ಸೂರೆಮಾಡುತ್ತಿರುವುದು ನಮ್ಮ ಕೌನ್ಸಿಲು ಮೆಂಬರುಗಳಿಗೆ ತಿಳಿದಿದೆಯೋ? ಅವರಿಗೆ ಹೇಗೆ ತಾನೆ ತಿಳಿಯುವುದು, ಚುನಾವಣೆ ಸಮಯದಲ್ಲಿ ಗ್ರಾಮಕ್ಕೆ ಬಂದು ಇಲ್ಲಸಲ್ಲದ ಟೊಳ್ಳು ಭರವಸೆಗಳನ್ನು ಕೊಟ್ಟು ನಮ್ಮಿಂದ ಓಟು ಕಿತ್ತುಕೊಳ್ಳುವ ವರೆಗೆ ದೇಶಸೇವೆಯ ಮಾತು. ಆ ಮೇಲೆ ಅವರ ಸ್ವಾರ್ಥಸಾಧನೆ!

ಇದಲ್ಲದೆ ನಮಗಿರುವ ತಲೆಬಾರದ ಆಡಳಿತ ಬೇರೆ. ಇಷ್ಟು ಚಿಕ್ಕಪ್ರಾಂತ್ಯಕ್ಕೆ ಗಜೆಟೆಡ್ ಆಫೀಸರುಗಳೆಷ್ಟು ಮತ್ತು ಗಜೆಟೆಡ್ ಅಲ್ಲದ ಆಫೀಸರುಗಳೆಷ್ಟು? ಇವರಿಗೆ ಲೆಕ್ಕವಿಲ್ಲ. ಇವರಿಗೆ ಕೊಡುವ ಸಂಬಳವಲ್ಲದೆ, ಪ್ರಯಾಣ ಬತ್ಯ, ದಿನಭತ್ಯ ಮೊದಲಾಗಿ ಎಷ್ಟು ಖರ್ಚಾಗುತ್ತಿದೆ. ಮಧ್ಯಾಹ್ನದ ಮೇಲೆ ೩-೪ ಗಂಟೆಯ ವರೆಗೆ ಮಡಿಕೇರಿಯಲ್ಲಿಯೇ ಇದ್ದು ಹೋವುದೊ ಬಸ್ಸಿನಲ್ಲಿ ಪ್ರಯಾಣಮಾಡಿ ಅದೇ ಬಸ್ಸಿನಲ್ಲಿ ಸಾಯಂಕಾಲ ಮಡಿಕೇರಿಗೆ ತಲುಪಿ ಬತ್ಯ ಸಂಪಾದಿಸುವವರೂ ಇದ್ದಾರೆಂದು ವರ್ತಮಾನಗಳಿವೆ. ಸುಳ್ಳು ಡೈರಿ ಬರೆದು ಬತ್ಯ ಸಂಪಾದಿಸುವವರು ಅನೇಕ ಮಂದಿ ಇದ್ದಾರೆಂದು ಮಾತಿದೆ. ಇವೆಲ್ಲವೂ ಊಹನೆಯ ಮಾತಾಗಿರಲಿಕ್ಕಿಲ್ಲ. ಸಾಮಾನ್ಯವಾಗಿ ಉದ್ಯೋಗಸ್ಥರ ಸ್ಥಿತಿ ಸುಧಾರಿಸುತ್ತಿದೆ. ಕೆಲವರು ಅವರ ಹೆಸರಿನಲ್ಲಿ ಮತ್ತೆ ಕೆಲವರು ಅವರ ಹೆಂಗಸರ ಹೆಸರಿನಲ್ಲಿ ತುಂಬಾ ಆಸ್ತಿ ಮಾಡಿರುವುದು ಕಂಡುಬರುತ್ತೆ. ಇಂಥಾ ಉದ್ಯೋಗಸ್ಥರಿಗೆ ಸಿಗುವ ವರಮಾನವೆಷ್ಟು? ಸರ್ಕಾರದ ವೇತನದಿಂದ ದೊಡ್ಡ ಆಸ್ತಿಗಳನ್ನು ಮಾಡಲು ಶಕ್ಯವೇ? ಇಂಥಾ ಆಸ್ತಿ ಮಾಡಿದವರ ಆದಾಯ, ಅವರು ಸಂಪಾದಿಸಿದ ಆಸ್ತಿಯ ವಿವರಗಳನ್ನು ಪರಿಶೀಲಿಸಲು ಒಂದು ಸಮಿತಿಯನ್ನು ಏಕೆ ನೇಮಿಸಬಾರದು?

ಅಪ್ರಾಮಾಣಿಕ ನಾಗರಿಕರ ಅಮಾನುಷ ಕೃತಿಯೊಳಗಿಂದ ಪ್ರಾಮಾಣಿಕ ನಾಗರಿಕರನ್ನು ಸಂರಕ್ಷಿಸುವುದೇ ಸರ್ಕಾರದ ಮುಖ್ಯ ಉದ್ದೇಶ ಇದನ್ನು ಯಶಸ್ವಿಯಾಗಿ ಸಾಧಿಸಬೇಕಾದರೆ ಸರಕಾರಿ ಉದ್ಯೋಗಸ್ಥರು ಸಂಪೂರ್ಣವಾಗಿ ಪ್ರಾಮಾಣಿಕರಿದ್ದ ವಿನಹ ಪ್ರಯೋಜನವಿಲ್ಲ. ಆದ್ದರಿಂದ ಸರ್ಕಾರಿ ಉದ್ಯೋಗಸ್ಥರ ಪ್ರಾಮಾಣಿಕತೆಯು ನಿಜವಾಗಿಯೂ ಪರಿಣಾಮಕಾರಿಯಾಗಬೇಕಾದರೆ ಅವರು ಮೊಟ್ಟ ಮೊದಲು ಅನ್ಯಾಯ ರೀತಿಯ ಸಂಪಾದನೆಯನ್ನು ನಿಲ್ಲಿಸುವುದು ಅತ್ಯವಶ್ಯಕ.

ಈ ಲೇಖನ ಓದಿ ಕೆಲವರಿಗೆ ಕಣ್ಣು ಕೆಂಪಾಗಬಹುದು. ಆದರೆ ನಮ್ಮ ರಾಷ್ಟ್ರೀಯ ಸರ್ಕಾರದ ರಾಜಮುದ್ರೆಯಲ್ಲಿರುವ 'ಸತ್ಯ ಮೇವ ಜಯತೆ' ಎಂದರೆ 'ಸತ್ಯಕ್ಕೆ ಯಾವಾಗಲೂ ಜಯವಿದೆ' ಎಂಬ ಶ್ಲೋಕವನ್ನು ಪ್ರತಿಯೊಬ್ಬನೂ ಮನಸ್ಸಿನಲ್ಲಿಟ್ಟು ಅದರಂತೆ ವರ್ತಿಸಬೇಡವೇ?

ಇತ್ತೀಚೆಗೆ ಅನೇಕ ಇಲಾಖೆಗಳು ಅಣಬೆಗಳೋಪಾದಿಯಲ್ಲಿ ತಲೆಯೆತ್ತಿವೆ. ಇವುಗಳೆಲ್ಲವೂ ದೇಶದ ಉದ್ಧಾರಕ್ಕಾಗಿಯಲ್ಲವೆ? ತೋಟಗಾರಿಕೆ (Horticulture) ಆಫೀಸು, ಫಾಡರ್ (ದನಗಳ ಮೇವು) ಆಫೀಸು, ಚಿಕ್ಕ ಉಳಿತಾಯ ಆಫೀಸು, ಮೀನು ಸಾಕುವ ಇಲಾಖೆ, ಹಣ್ಣುಗಳ ರಸ ಇಳಿಸುವ ಇಲಾಖೆ ಮುಂತಾಗಿ ಹಲವು ಆಫೀಸುಗಳು. ಈ ಆಫೀಸುಗಳ ಉಸ್ತುವಾರಿ ಬಗ್ಗೆ ಆಫೀಸರುಗಳು. ಅವರ ಕೈ ಕೆಳಗೆ ಬೇರೆ ಸಿಬ್ಬಂದಿಗಳು! ಇವರುಗಳು ಮಾಡುವದೇನು? ಯಾರಿಗಾದರೂ ಪ್ರಯೋಜನ ಆಗಿದೆಯೇ? ಆಗಿದ್ದರೆ ಅದರ ವಿವರಗಳನ್ನು ಹಳ್ಳಿಗಳಲ್ಲಿರುವ ನಮಗೆ ತಿಳಿಸಲಿ. ಇಲ್ಲದಿದ್ದರೆ ಈ ರೀತಿಯ ಆಡಳಿತಕ್ಕೆ ಏನೆಂದು ಕರೆಯೋಣ? ಇದನ್ನೆಲ್ಲಾ ನೋಡುವಾಗ ನಮ್ಮಲ್ಲಿ ಜೀವ ಕಳೆಯನ್ನು ತುಂಬುವವರು ಯಾರೂ ಇಲ್ಲ. ನಮ್ಮ ಸರ್ಕಾರ ವಿಚಾರ ಮಾಡಿ, ಕೆಲಸಮಾಡುವಂತೆ ತೋರುವುದಿಲ್ಲ ಸರಕಾರದಲ್ಲೂ, ಸಾರ್ವಜನಿಕ ರಂಗದಲ್ಲೂ, ಸಂಪೂರ್ಣ ಹೊಸ ನೆತ್ತರಿಂದ ತುಂಬಿದ ಬಲಿಷ್ಠರಾದ ಕಾರ್ಯದಕ್ಷರಾದ ವ್ಯಕ್ತಿಗಳ ಆವಶ್ಯಕತೆ ಇಂದಿರುವಂತೆ ಎಂದೂ ಬಹುಶಃ ಇರಲಿಕ್ಕಿಲ್ಲ.

ವಾರ್ತೆಗಳು.

ಚೀನಾಕದನ

ಹಾಂಗ್‌ಕಾಂಗ್ ವರದಿಯ ಪ್ರಕಾರ ಚೀನೀ ಕಮ್ಯೂನಿಸ್ಟರು ಚೀನೀ ಸರಕಾರದ ರಾಜಧಾನಿಯಾದ ಕೆಂಟನ್ ನಗರವನ್ನು ಕೆಲವೇ ಗಂಟೆಗಳಲ್ಲಿ ಆ ಪ್ರದೇಶದಲ್ಲಿರುವ ಚೀನ ರಾಷ್ಟ್ರೀಯ ಸೇನಾಧಿಪತಿ ಜನರಲ್ ಪೈಚುಂಗ್ ಸ್ಸಿಯವರ ಸೇನೆಗಳಿಂದ ಬೇರ್ಪಡಿಸಬಹುದೆಂದು ಹೇಳಲಾಗಿದೆ.

ಉತ್ತರದಲ್ಲಿ ಕಮ್ಯೂನಿಸ್ಟರು ಲಿಮ್ಸೊ ದೀಪ ಮತ್ತು ಚೀನಿ ಭೂ ಪ್ರದೇಶದ ನಡುವೆ ಇರುವ ಸಣ್ಣ ದೀಪವಾದ ಕಾಪೊಚಿಯನ್ನು ಈಗಾಗಲೇ ಆಕ್ರಮಿಸಿದ್ದು ಇನ್ನು ಕೆಲವೇ ದಿನಗಳಲ್ಲಿ ಲಿಮ್ಸೊ ಕೂಡಾ ಕಮ್ಯೂನಿಸ್ಟರ ವಶವಾಗಬಹುದೆಂದು ಹೇಳಲಾಗಿದೆ.

ಕಮ್ಯೂನಿಸ್ಟ ಸೇನೆಗಳಿಗಿಂತಲೂ ಮುಂಭಾಗದಲ್ಲಿರುವ ಕಮ್ಯೂನಿಸ್ಟ ಗೊರಿಲ್ಲಾಗಳು ಕ್ವಾಂಗ್‌ಟುಂಗ್ ಪ್ರಾಂತದ ಕೆಂಟನಿನ ಬಳಿಯ ಪ್ರದೇಶಗಳನ್ನು ಆಕ್ರಮಿಸಿರುವರೆಂದು ಚೀನೀ ವರದಿಗಳಿಂದ ತಿಳಿಯುತ್ತದೆ. ಅಂತೂ ಈ ಕಮ್ಯೂನಿಸ್ಟ ಗೊರಿಲ್ಲಾಗಳು ನೆರವಾಗಿ ಕೆಂಟನಿನ ಮೇಲೆ ಅಭಿಯೋಗ ನಡೆಸಲಿರುವರು. ೨೦೦ ಮೈಲುಗಳಾದ್ಯಂತದಲ್ಲಿನ ರಣರಂಗದಲ್ಲಿ ಚೀನೀ ರಾಷ್ಟ್ರೀಯ ಸರಕಾರದ ಸೇನೆಗಳು ಹಿಮ್ಮೆಟ್ಟುತ್ತಿವೆಯೆಂದೂ ವರದಿಬಂದಿವೆ.

ದಕ್ಷಿಣ ಚೀನದಲ್ಲಿ ಮುಂಬರಿಯುತ್ತಿರುವ ಕಮ್ಯೂನಿಸ್ಟ ಸೇನೆಗಳನ್ನು ಎದುರಿಸಲು ಹಾಂಗ್‌ಕಾಂಗಿನಲ್ಲಿರುವ ಬ್ರಿಟಿಷ್ ಸೇನಾಧಿಪತಿಯು ಈಗಾಗಲೇ ಈ ವಸಾಹತಿನ ಸಂರಕ್ಷಣೆಯ ಬಗ್ಗೆ ಸರ್ವ ಸಿದ್ಧತೆಗಳನ್ನು ಮಾಡಿರುವರು. ಈಗಾಗಲೇ ಬ್ರಿಟನಿನಿಂದ ವಿಮಾನ ದಳಗಳು ಇಲ್ಲಿಗೆ ಬರಲಿದ್ದು ಅನೇಕ ವಿಮಾನ ನಿರೋಧಕ ತೋಪುಗಳೂ, ನೆಲ ಸೈನ್ಯಗಳೂ ಸದ್ಯದಲ್ಲೇ ಆಗಮಿಸಲಿವೆ. ಈ ವಿಮಾನ ನಿರೋಧಕ ಆಯುಧಗಳು ಹಾಂಗ್‌ಕಾಂಗಿಗೆ ತಲುಪಿದ ಕೂಡಲೇ ವಿಮಾನ ಯುದ್ಧದ ತಂಬೇತಿಯು ನಡೆಯುವುದೆಂದು ಹಾಂಗ್‌ಕಾಂಗಿನ ಸೈನ್ಯಾಧಿಕಾರಿಗಳಾದ ಲೆ. ಜನರಲ್ ಫೆಸ್ಟಿಂಗ್‌ರವರು ಹೇಳಿದರು. ಯಾವುದೇ ಪರಕೀಯ ದಾಳಿಯಿಂದ ಹಾಂಗ್‌ಕಾಂಗನ್ನು ರಕ್ಷಿಸಲು ತಮ್ಮ ಸೈನ್ಯಗಳು ಶಕ್ತವಿವೆ ಎಂಬುದಾಗಿ ಫೆಸ್ಟಿಂಗ್‌ರವರು ಹೇಳಿದಾರೆ.

ಅತಿಪ್ರಸರಣ ತಡೆಯಲು ಉಗ್ರ ಯೋಜನೆ

ಭಾರತದಲ್ಲಿ ಅತಿಪ್ರಸರಣ ತಡೆಯಲು, ಅಂದಾಜು ಪತ್ರದಲ್ಲಿ ಉಳಿತಾಯವನ್ನುಂಟು ಮಾಡಲು ಹಾಗೂ ಜೀವನದ ವೆಚ್ಚ ಇಳಿಸುವ ಬಗ್ಗೆ ಭಾರತ ಸರಕಾರವು ಶೀಘ್ರದಲ್ಲೇ ಕಾರ್ಯಕ್ರಮವನ್ನು ಕೈಗೆದುಕೊಳ್ಳುವದೆಂದು ತಿಳಿದು ಬರುತ್ತದೆ.

ಭಾರತ ಸರಕಾರದ ಈ ಸಲದ ಮುಂಗಡ ಪತ್ರದಲ್ಲಿ ೪೫,೦೦,೦೦,೦೦೦ ರೂಪಾಯಿಗಳ ಕೊರತೆಯು ಉದ್ಭವಿಸುವ ಪರಿಸ್ಥಿತಿ ಬಂದೊದಗಿದ್ದು ಈ ಸಂಸ್ಥಿತಿಯು ಇನ್ನಷ್ಟು ಹದಗೆಡದಂತೆ ಮಾಡಲು ಸರಕಾರವು ಉಗ್ರ ಕಾರ್ಯಕ್ರಮಗಳನ್ನು ಕೈಗೊಳ್ಳಲಿರುವುದು.

ಪ್ರಥಮವಾಗಿ ವಿರಿದ ಜೀವನ ವೆಚ್ಚವನ್ನು ಇಳಿಸುವುದಕ್ಕೆ ಮಹತ್ವವನ್ನು ಕೊಡಲಾಗುವುದು. ಈ ಬಗ್ಗೆ ಎಲ್ಲಾ ನಿಯಂತ್ರಿತ ವಸ್ತುಗಳ ಬೆಲೆಯನ್ನು ನೂರಕ್ಕೆ ಹತ್ತರಷ್ಟು ಇಳಿಸಲಾಗುವುದು. ಇವುಗಳಲ್ಲಿ ಆಹಾರಧಾನ್ಯಗಳು, ಬಟ್ಟೆ, ಸಕ್ಕರೆ, ಎಣ್ಣೆಯಕಾಳು, ಸಿಮೆಂಟು, ಕಬ್ಬಿಣ ಮೊದಲಾದುವು ಒಳಪಟ್ಟಿವೆ.

ಒತ್ತಾಯದ ಉಳಿತಾಯವು ಈ ಯೋಜನೆಯ ಒಂದು ಲಕ್ಷಣವಾಗಿದೆ. ೫೦ ಅಥವಾ ಹೆಚ್ಚು ತಿಂಗೆ ಕೊಡುವ ಕೈತನು ಅದಕ್ಕಿಂತ ಇನ್ನೂ ಸ್ವಲ್ಪ ಹೆಚ್ಚಿಗೆ ಕೊಡಬೇಕಾಗುವುದು. ನಿರ್ದಿಷ್ಟ ಮಿತಿಗಿಂತ ಹೆಚ್ಚಿನ ಆದಾಯವಿರುವ ಎಲ್ಲರಿಗೂ ಈ ಒತ್ತಾಯದ ಉಳಿತಾಯದ ಯೋಜನೆಯು ಅನ್ವಯಿಸುವುದು. ಪ್ರಥಮದಲ್ಲಿ ಈ ಹೊಸ ವ್ಯವಸ್ಥೆಯು ಜನರಿಗೆ ಸುಲಭವಾಗುವಂತೆ ಉಳಿತಾಯದ ನಿಧಿಯ ಪ್ರಮಾಣವನ್ನು ಕೆಳಮಟ್ಟದಲ್ಲಿ ನಿರ್ಧರಿಸಲಾಗುವುದು.

ಸರಕಾರದ ಆಡಳಿತೆಯ ವೆಚ್ಚದಲ್ಲಿ ಉಗ್ರ ಕಡಿತವನ್ನುಂಟುಮಾಡಬೇಕೆಂದು ಸರಕಾರವು ಯೋಚಿಸಿದ್ದು, ಈ ವಿಷಯದಲ್ಲಿ ಸಲಹೆಕೊಡಲು ಕಸ್ತೂರಭಾಯಿ ಲಾಲಭಾಯಿಯವರ ಅಧ್ಯಕ್ಷತೆಯಲ್ಲಿ ನೇಮಕಮಾಡಲ್ಪಟ್ಟಿರುವ ಸಮಿತಿಯು ೬ ಕೋಟಿ ರೂಪಾಯಿಗಳನ್ನು ಉಳಿತಾಯ ಮಾಡುವ ಸೂಚನೆ ಕೊಟ್ಟಿದೆ. ಸರಕಾರದ ಖಾತೆಗಳು ನೂರಕ್ಕೆ ೨೨ರಷ್ಟು ಇತರ ಚಿಲ್ಲರೆ ವೆಚ್ಚಗಳಲ್ಲಿ ನೂರಕ್ಕೆ ೧೦ರಷ್ಟು, ಸರಕಾರಿ ನೌಕರರ ಸಂಬಳದಲ್ಲಿ ಸೇಕಡಾ ೫೦ರಷ್ಟು ಕಡಿತ ಮಾಡಬೇಕೆಂದು ಸರಕಾರವು ನಿಶ್ಚಯಿಸಿದೆ.

ಸಕ್ಕರೆಯ ಮೇಲೆ ಪುನಃ ನಿಯಂತ್ರಣ

ಏರುತ್ತಿರುವ ಸಕ್ಕರೆಯ ಬೆಲೆಯನ್ನು ತಗ್ಗಿಸಲು ಕೇಂದ್ರ ಸರಕಾರದವರು ತಕ್ಕ ಕಾರ್ಯಕ್ರಮಗಳನ್ನು ಕೈಕೊಂಡಿರುವರೆಂದೂ ಈ ಬಗ್ಗೆ ಪ್ರಾಂತೀಕ ಮತ್ತು ಕೇಂದ್ರ ಸರಕಾರಗಳ ನಡುವೆ ಮಾತುಕತೆಗಳು ಜರಗುತ್ತಿವೆಯೆಂದು ತಿಳಿಯುತ್ತದೆ.

ಸಿಗರೇಟಿನ ಮನೋಶಾಸ್ತ್ರ

ಸಿಗರೇಟು ಸೇದುವವರು ಅದರ ಕೊನೆಯ ಅಂಶವನ್ನು ಆರಿಸುವ ವಿಧಾನವು ಸಾಮಾನ್ಯ ನೋಟಕ್ಕೆ ಮಹತ್ವದೆಂದು ಕಾಣದಿದ್ದರೂ ಮನೋಶಾಸ್ತ್ರಜ್ಞರೊಬ್ಬರ ದೃಷ್ಟಿಯಲ್ಲಿ ಅದರಲ್ಲಿ ಮಾನಸಿಕ ಲಕ್ಷಣದ ಚಿಹ್ನೆಗಳನ್ನು ತೋರಿಸುವಂತಹದಿದೆ. ಇದರಲ್ಲಿನ ಐದು ವಿಧಗಳಲ್ಲಿ ಐದು ತರದ ಸ್ವಭಾವ ಲಕ್ಷಣಗಳನ್ನು ತಿಳಿಯಬಹುದು.

ಸಿಗರೇಟ್ ಕುತ್ತಿಯನ್ನು ಒತ್ತಿ ಒರಸುತ್ತ ಆರಿಸುವವರು ಮನಸ್ಸಿನಲ್ಲಿ ಯಾರ ಮೇಲೂ ಆಳವಾದ ಹಗೆಯು ಕ್ರೂರವೆಂಬುದನ್ನು ತೋರಿಸುತ್ತದೆ.

ಮೇಜಿನ ಮೇಲಿಡಲ್ಪಡುವ ಸಿಗರೇಟ್ ತಟ್ಟೆಯಲ್ಲಿ ಅಲಕ್ಷ್ಯದಿಂದ ಕುತ್ತಿಯನ್ನು ಸಂಪೂರ್ಣ ಸುಟ್ಟು ಹೋಗುವಂತೆ ಹಾಗೇ ಬಿಡುವವರು 'ಲಾಭವಿಲ್ಲದ ಸ್ನೇಹಿತರು ಪ್ರಯೋಜನವಿಲ್ಲ' ವೆಂಬ ಭಾವನೆಯುಳ್ಳವರಾಗಿರುತ್ತಾರೆ.

ಸಿಗರೇಟ್ ಕೊನೆಯನ್ನು ನೆಲದ ಮೇಲೆ ಬಿಸಾಡುವವರು 'ದಂಗೆ ಏಳುವ, ಎಲ್ಲರನ್ನು ವಿರೋಧಿಸುವ' ಸ್ವಭಾವವುಳ್ಳವರು.

ಸೇದುವಾಗಲೆ ಸಿಗರೇಟಿನ ಕೊನೆಯನ್ನು ಕಚ್ಚಿ ಕಚ್ಚಿ ತುಂಡರಿಸುವವರು ತುಂಬಾ ಮನೋಭಗ್ನರಾಗಿದ್ದವರೆಂದು ತಿಳಿಸುತ್ತದೆ.

ವಿನೋದಕ್ಕಾಗಿ ಸಿಗರೇಟಿನ ಉರಿಯುವ ತುದಿಯನ್ನು, ಕುಡಿಯುವ ಕಾಫಿಯಲ್ಲಿ ಮುಳುಗಿಸುವವರು ಕ್ಷೀಣ ಮನೋಭಾವನೆಯನ್ನು ವ್ಯಕ್ತಪಡಿಸುತ್ತಾರೆ. ಅಂಥವರು ಸ್ವತಃ ತಮ್ಮನ್ನೂ ಇತರರನ್ನೂ ಜಿಗುಪ್ಸೆಯಿಂದ ಕಾಣುವರು.

ಚಂದ್ರಲೋಕ ಪ್ರಯಾಣ

ಕೆನಡದ ರೊಕೆಟ್ (ಆಕಾಶ ಬಾಣ) ಸಂಘದವರು ೧೯೬೦ರಲ್ಲಿ ಚಂದ್ರಲೋಕದತ್ತ ಪ್ರಯಾಣವನ್ನು ಮಾಡಲು ಸಿದ್ಧತೆ ನಡೆಸುತ್ತಲಿರುವರು. ಈ ಕುರಿತು ಇನ್ನೂ ಅನೇಕ ನಿರ್ಣಯಗಳೂ, ಯೋಜನೆಗಳೂ ತಯಾರಾಗಲಿವೆ ಎಂದು ಅವರ ಅಧ್ಯಕ್ಷರಾದ ಮಿ. ಮೊರಿಸ್ ಡ್ಯಾಕರವರು ತಿಳಿಸುತ್ತಾರೆ. 'ಇದರ ಖರ್ಚು ನೂರಾರು ಮಿಲಿಯ ಡಾಲರುಗಳಷ್ಟಾಗುವುದು. ಮತ್ತು ೧೯೬೦ನೇ ಇಸವಿಯು ಪ್ರಯಾಣದ ನಿಶ್ಚಿತ ವರ್ಷವೆಂದು ಅಂದಾಜು ಮಾಡಲಾಗಿದೆ' ಎಂದು ಅವರು ತಿಳಿಸಿದರು.

ಚಂದ್ರಲೋಕ ಯಾತ್ರೆಯ ಈ ಆಗಸ ಹಡಗು ಇನ್ನೂ ರಚಿತವಾಗಲಿದೆ. ಅದು ಬಾಣಾಕೃತಿಯಲ್ಲಿರುವುದು. ೨೦೦ ಅಡಿ ಉದ್ದವೂ, ೫೦ ಅಡಿ ಸುತ್ತಳತೆಯುದೂ ಮತ್ತು ೧೦೦೦ ಟನ್ ಭಾರವುಳ್ಳದ್ದೂ ಆಗಿರುವುದು.

ಭೂಮಿಯ ನಿರ್ದಿಷ್ಟವಾದ ಯಾವ ಪ್ರದೇಶದಿಂದ ಆಕಾಶ ಬಾಣವು ಎಸೆಯಲ್ಪಡಬೇಕೆಂಬ ವಿಷಯವು ಇನ್ನೂ ನಿಶ್ಚಿತವಾಗಿಲ್ಲ. ಆದರೆ ಭೂಮಧ್ಯರೇಖೆಯ ಬಳಿಯ ಯಾವದಾದರೊಂದು ಸ್ಥಳವು ಹೆಚ್ಚು ಅನುಕೂಲದ್ದೆಂದು ಪರಿಗಣಿಸಲಾಗಿದೆ. ಇದರಿಂದ ಆಕಾಶ ಬಾಣಕ್ಕೆ ಭೂಮಿಯ ತಿರುಗುವಿಕೆಯ ಸಂಪೂರ್ಣ ಅನುಕೂಲ ದೊರೆತು ಪ್ರಯಾಣ ಪ್ರಾರಂಭವು ಸುಲಭವಾಗುವುದು. ಚಂದ್ರಲೋಕದಿಂದ ಹಿಂದಕ್ಕೆ ಬರುವುದು ಇನ್ನೊಂದು ಸಮಸ್ಯೆ. ಆದರೆ ಆಕಾಶ ಬಾಣದ ಹಿಂಭಾಗಕ್ಕೆ ದೂರದರ್ಶಕ ಉಪಕರಣವು ಜೋಡಿಸಲ್ಪಟ್ಟು 'ಕಾಲು' ಗಳನ್ನು ಸಂಯೋಜಿಸುವ ವಿಧಾನವನ್ನು ಕಂಡುಹಿಡಿದಿರುವುದರಿಂದ ಈ ಸಮಸ್ಯೆ ನೀಗಬಹುದು. ಚಂದ್ರಗ್ರಹದ ನೆಲಕ್ಕೆ ಮುಟ್ಟಿದಾಗ ಈ 'ಕಾಲು' ಗಳಲ್ಲಿನ ಉಪಕರಣಗಳು ಹಿಂದಕ್ಕೆ ಬರುವ ಕೆಲಸವನ್ನಾರಂಭಿಸುವವು.

ಚಂದ್ರಲೋಕ ಪ್ರಯಾಣಕ್ಕೆ ಎರಡು ಹಾದಿಗಳಿವೆ. ಒಂದು ನೇರವಾದ ಹದಿನೈದು ಗಂಟೆಗಳ ದಾರಿ; ಇನ್ನೊಂದು ಅಡ್ಡ ಸುತ್ತಾಗಿ ಹಾದು ಹೋಗುವಂತಹದು. ಇದಕ್ಕೆ ನಾಲ್ಕು ದಿನಗಳು ಹಿಡಿಯುವವು.

ಬ್ರಿಟಿಷ್ ಗ್ರಹ ವಿಜ್ಞಾನ ತಜ್ಞರಾದ ಮಿ. ಕೆನೆಟ್ ಗುಟ್ಲೆಂಡರು ಹೀಗೆ ತಿಳಿಸುತ್ತಾರೆ. 'ಚಂದ್ರಗ್ರಹದ ನೆಲಪ್ರದೇಶವನ್ನು ತಲಪುವುದರಿಂದಲೆ ಯಾವ ವೈಜ್ಞಾನಿಕ ಉದ್ದೇಶ ಸಾಧನೆಯಾಗುವುದಿಲ್ಲ. ನಮ್ಮ ಆಕಾಶ ಬಾಣದ ಪಯಣವು ಚಂದ್ರಲೋಕದ ಆಕರ್ಷಣ ಶಕ್ತಿಯನ್ನು ಮೀರಿ ಅದರ ಸುತ್ತು ಬಳಸಿಕೊಂಡು ಹೋಗುವಂತಾಗಬೇಕು. ಇದರಿಂದ ಆಕಾಶಬಾಣದೊಳಗಿನ ದೃಶ್ಯ ಪ್ರಸಾರದ ಉಪಕರಣಗಳು ನಾವು ಈ ವರೆಗೆ ಕಾಣದ ಚಂದ್ರನ ಆ ಕಡೆಯ ಭಾಗದ ನೋಟವನ್ನೂ ಜಗತ್ತಿನ ಕಡೆಗೆ ಕಳುಹಿಸಲು ಸಹಾಯಕವಾಗುವುದು.' ಸ್ವ. ವಾ.

ವಾರ್ತೆ.

ಜಾತಿ, ಧರ್ಮಗಳ ಹೆಸರಲ್ಲಿ ಘೋಷಣೆ ಹೊರಡಿಸಿ ನ್ಯಾಯ ವಿಧಾಯಕ ಸಭೆಯಲ್ಲಿ ಚುನಾವಣೆ ಬಯಸುವವರಿಗೆ ಉಮೇದ್ವಾರಿಕೆಯ ಹಕ್ಕನ್ನು ನಿರಾಕರಿಸಲು ಸಂಯುಕ್ತ ಪ್ರಾಂತ್ಯ ಸರಕಾರ ನಿರ್ಣಯಿಸಿರುವದು.

ದೊಡ್ಡ ದೊಡ್ಡ ಜಮೀನ್ದಾರಿಗಳನ್ನು ಸ್ವಾಧೀನಪಡಿಸಲೋಸುಗ ಬಿಹಾರ್ ಸರಕಾರವು ೪ ಕೋಟಿ ರೂಪಾಯಿ ಮಂಜೂರು ಮಾಡಿರುವುದು.

ಪೋಸ್ಟ್ ಆಫೀಸ್ ಇನ್ಸೂರೆನ್ಸ್ ಫಂಡ್ ರೂಲ್ಸುಗಳನ್ನು ಭಾರತ ಸರಕಾರವು ಕೊಂಚ ತಿದ್ದುಪಡಿ ಮಾಡಿ ಇದೇ ಸಪ್ಟೆಂಬರ ತಾ. ೧೮ ರ ಮೊದಲ್ಗೊಂಡು ಪೋಸ್ಟ್ ಆಫೀಸ್ ಇನ್ಸೂರೆನ್ಸ್ ಪೋಲಿಸಿಗಳ ಮೇಲೂ ಸಾಲಗಳನ್ನು ಕೊಡಿಸುವ ಸವಲತ್ತಿಗೆ ಅವಕಾಶ ಮಾಡಿಕೊಟ್ಟಿದೆ.

ಗಾಂಧಿಸ್ಮಾರಕ ರಾಷ್ಟ್ರೀಯ ನಿಧಿಗೆ ಕಳೆದ ಜುಲೈ ತಿಂಗಳ ಅಂತದ ವರೆಗೆ ಸಂಗ್ರಹವಾದ ಹಣ ೯,೯೦,೨೦,೧೫೫-೭-೧೦. ಈ ಪೈಕಿ ರೂ. ೭೫,೩೫,೪೯೭-೧೫-೧೧ ಜುಲೈ ತಿಂಗಳಲ್ಲೇ ಸಂಗ್ರಹವಾದ ಹಾಗಿದೆ.

ಮುಂದಿನ ಜನವರಿ ತಾ. ೨೬ರಲ್ಲಿ ಭಾರತ ಪ್ರಜಾಪ್ರಭುತ್ವದ ಉದ್ಘಾಟನೆಯಾದೊಡನೆ ಹೊಸ ನಾಣ್ಯಗಳನ್ನು ಚಲಾವಣೆಗಿಳಿಸಲು ಭಾರತ ಸರಕಾರ ಸಂಕಲ್ಪಿಸಿರುವುದು. ಹೊಸ ನಾಣ್ಯಗಳಲ್ಲಿ ಈಗ ಅರಸನ ಮುಖಮುದ್ರೆಯಿರುವಲ್ಲಿ ಅಶೋಕ ಸ್ತಂಭದ ಮೂರು ಸಿಂಹಗಳ ಮುದ್ರೆ. ಹಿಂಬದಿಯಲ್ಲಿ ಪೈರಿನ ತೆನೆಗಳ ಮತ್ತು ಇನ್ನಿತರ ನಕಾಶೆಗಳ ಯೋಚನೆಯಾಗುತ್ತಿದೆ.

ಸರಕಾರಿ ಕೆಲಸದ ಸಂಬಂಧ ಸಂಚಾರ ಮಾಡುತ್ತಿರುವಾಗ ಪಶ್ಚಿಮ ಬಂಗಾಳದ ಮಂತ್ರಿಗಳಾರೂ ಅಪ್ತೇಷ್ಟರ ಅತಿಥಿ ಸತ್ಕಾರವನ್ನು ಸ್ವೀಕರಿಸಕೂಡದೆಂದು ಆಜ್ಞಾಪ್ತರಾಗಿದ್ದಾರೆ.

ವಿದ್ಯಾರ್ಥಿ ಪುಟ

ವಿದ್ಯಾರ್ಥಿಗಳಿಗೊಂದು ಐಕ್ಯ ರಂಗ.

ಲೇಖಕ:-ಶ್ರೀ ಎಂ. ಮೋಹನ್, ಬಿ. ಎ,

ಭಾರತದ ವಿದ್ಯಾರ್ಥಿಗಳೆಲ್ಲ ತಮ್ಮ ಏಕಮೇವ ಸಂಸ್ಥೆಯಾದ ಅಖಿಲ ಭಾರತ ವಿದ್ಯಾರ್ಥಿ ಕಾಂಗ್ರೆಸ್ಸಿನ ಧ್ವಜದಡಿಯಲ್ಲಿ ಸಂಘಟಿತರಾಗಿಬಿಡುಗಡೆಯ ಹೋರಾಟದಲ್ಲಿ ತಮ್ಮ ಪಾಲಿನ ತ್ಯಾಗಗಳನ್ನು ಮಾಡಿದ್ದಾರೆ. ಪಲವು ಬಗೆಗಳಿಂದ ಒಡಕನ್ನುಂಟು ಮಾಡಲೂ ಹವಣಿಸಿದ ಪ್ರತಿಗಾಮಿ ಶಕ್ತಿಗಳನ್ನೆಲ್ಲಾ ಹತ್ತಿಕ್ಕಿ ಹೋರಾಡಿದರು. ಆದರೆ ಸ್ವಾತಂತ್ರ್ಯ ಬಂದಂದಿನಿಂದ ವಿದ್ಯಾರ್ಥಿಗಳಲ್ಲಿ ನಿರ್ಲಕ್ಷ್ಯ, ಉದಾಸೀನತೆಗಳು ತಲೆದೋರಿವೆ. ಇನ್ನು ತಮ್ಮ ಹೊಣೆ ಮುಗಿಯಿತು, ತಾವಿನ್ನು ರಾಷ್ಟ್ರಕ್ಕಾಗಿ ಮಾಡಬೇಕಾದ ಕಾರ್ಯಗಳೇನೂ ಇಲ್ಲ ಎಂಬ ಮನೋಭಾವನೆಯು ಬೆಳೆಯುತ್ತಾ ಬಂದಿದೆ. ತತ್ಫಲವಾಗಿ ವಿದ್ಯಾರ್ಥಿ ಕಾಂಗ್ರೆಸ್ ಜೀವನ್ಮೃತಾವಸ್ಥೆಯಲ್ಲಿದೆ. ಅದನ್ನು ಪುನರುಜ್ಜೀವನಗೊಳಿಸಲು ಮಾಡಿದ ಹಲಕೆಲವು ಪ್ರಯತ್ನಗಳು ನಿಷ್ಫಲವಾದುವು.

ಸ್ವಾತಂತ್ರ್ಯದ ನಂತರ

ಸ್ವಾತಂತ್ರ್ಯದಾಹ ಹಾಗೂ ಸಾಮ್ರಾಜ್ಯಶಾಹಿ ವಿರೋಧಿ ಮನೋಭಾವಗಳೇ ವಿದ್ಯಾರ್ಥಿ ಕಾಂಗ್ರೆಸ್ಸಿನ ತಳಹದಿಯಾಗಿದ್ದವು; ಚಳವಳಿಯೇ ಅದರ ಕಾರ್ಯಕ್ರಮವಾಗಿದ್ದಿತು. ಆದರೆ ಸ್ವಾತಂತ್ರ್ಯದ ಬಳಿಕ ಅದರ ರೂಪವೇನಿರಬೇಕು ಎಂಬುದರ ಬಗ್ಗೆ ಯಾರೂ ವಿಚಾರಿಸಲಿಲ್ಲ. ಆ ಕೆಲಸ ಅನವಶ್ಯಕವೆಂಬುದೇ ಮನೋಭಾವವಿಂದಾಗಿ, ರಾಜಕೀಯ ಸ್ವಾತಂತ್ರ್ಯ ಲಭಿಸಿದೊಡನೆ, ಸಂಘಟನೆಯ ಆವಶ್ಯಕತೆಯನ್ನೊದಗಿಸಿದ ಸಾಮ್ರಾಜ್ಯಶಾಹಿಯು ದೂರವಾದೊಡನೆ ಸಂಸ್ಥೆ ಮುರಿಯಿತು; ವಿದ್ಯಾರ್ಥಿಗಳಲ್ಲಿ ಒಂದು ತರದ ಮಬ್ಬು ಕವಿಯಿತು; ವಿದ್ಯಾರ್ಥಿ ಜಗತ್ತು ಛಿನ್ನವಿಚ್ಛಿನ್ನವಾಗಿ ಹೋಯಿತು.

ಆದರೆ ರಾಷ್ಟ್ರನಾವೆಯನ್ನು ಪ್ರಗತಿಪಥದಲ್ಲಿ ಸಾಗಿಸುವ ಹೊಣೆ ನಮ್ಮ ನಾಯಕರ ಮೇಲೆ ಎಷ್ಟಿದೆಯೋ ಅಷ್ಟೇ ಪ್ರತಿಯೊಬ್ಬ ವಿದ್ಯಾರ್ಥಿಯ ಮೇಲೂ ಇದೆ. ರಾಷ್ಟ್ರವನ್ನು ಸುಸಂಸ್ಕೃತವನ್ನಾಗಿ ಮಾಡುವುದಲ್ಲದೆ, ಮುಂದೆ ಅದರ ಸೂತ್ರ ಚಾಲನೆಯನ್ನು ಇಂದಿನ ವಿದ್ಯಾರ್ಥಿಗಳೇ ಮಾಡಬೇಕಾಗುವುದು. ಈ ಹೊಣೆಯನ್ನು ಹೊರುವ ಶಕ್ತಿಯಾಗಲಿ, ಯೋಗ್ಯತೆಯಾಗಲಿ ನಮ್ಮಲ್ಲಿದೆಯೋ?

ಹೊಣೆಯರಿಯದ ಪದವೀಧರರು.

ಇಲ್ಲವೆಂದು ತಲೆ ತಗ್ಗಿಸಿ ಒಪ್ಪಿಕೊಳ್ಳಬೇಕಾಗಿದೆ. ವಿಶ್ವವಿದ್ಯಾಲಯವೆಂಬ ಯಂತ್ರಗಳಿಂದ ಪ್ರತಿ ವರ್ಷವೂ ಸಾವಿರಗಟ್ಟಲೆ ಪದವೀಧರರು ಸಿದ್ಧರಾಗಿ ಬರುತ್ತಾರೆ. ಆದರೆ ಇವರಲ್ಲಿ ಪೌರಬೋಧ (Civic Consciousness) ಉಳ್ಳವರೆಷ್ಟು ಮಂದಿ? ಸಾಮಾಜಿಕ ಹೊಣೆಯನ್ನು ಅರಿತವರು ಎಷ್ಟು ಮಂದಿ? ಎಲ್ಲರ ಮಾತಂತಿರಲಿ. ರಾಜಕಾರಣವೇ ಮೊದಲಾದ ಸಾರ್ವಜನಿಕ ಚಳವಳಿಗಳಲ್ಲಿ ಭಾಗವಹಿಸುತ್ತಿರುವ ಎಷ್ಟು ಮಂದಿ ವಿದ್ಯಾರ್ಥಿಗಳಿಗೆ ಯಥಾರ್ಥ ರಾಜಕೀಯ ಜ್ಞಾನ, ವಿವೇಕಪೂರ್ಣದೃಷ್ಟಿ ಇದೆ?

ಜಯಘೋಷಣೆ, ಅಂಧಾನುಕರಣೆ, ವೀರಪೂಜೆ-ಇವೇ ನಮ್ಮ ರಾಜಕಾರಣವಾಗಿದೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಇತ್ತಗಳಿಗೂ ಸ್ಥಾನವಿತ್ತೆಂಬುದೇನೋ ನಿಜ. ಆದರೆ ಇದೇ ನಮ್ಮ ಸರ್ವಸ್ವವಾಗಿದ್ದುದರಿಂದಲೇ, ಇಂದು ಸ್ವಾತಂತ್ರ್ಯ ರವಿ ಮೂಡಿದ್ದರೂ ಅತನ ಪ್ರಕಾಶ ದೇಶವನ್ನು ಬೆಳಗುತ್ತಿಲ್ಲ. ಇದೇ ಪರಿಸ್ಥಿತಿ ಇನ್ನೂ ಮುಂದುವರಿದರೆ ಬಾಪೂಜಿಯವರ ಕನಸ್ಸಿನ 'ರಾಮರಾಜ್ಯ' ನನಸಾಗುವ ದಿನವೇ ಬರಲಾರದು.

ಪಕ್ಷಾತೀತ ಸಂಸ್ಥೆ ಅಗತ್ಯ

ಪ್ರಜಾಸತ್ತೆಯು ಯಶಸ್ವಿಯಾಗಬೇಕಾದರೆ ಪ್ರತಿಯೊಬ್ಬ ವ್ಯಕ್ತಿಯೂ ರಾಷ್ಟ್ರದ ಕಾರ್ಯಕಲಾಪಗಳಲ್ಲಿ ಸಹಕರಿಸುವಂತಾಗಬೇಕು. ಇದು ಕೇವಲ ವಿಶ್ವವಿದ್ಯಾಲಯದ ಶಿಕ್ಷಣದಿಂದಾಗದು. ವಿದ್ಯಾರ್ಥಿಗಳಲ್ಲಿ ರಾಜಕೀಯ ಹಾಗೂ ಸಾಮಾಜಿಕ ಹೊಣೆಯ ಅರಿವನ್ನೂ, ಪ್ರಜಾಸತ್ತಾತ್ಮಕ ಮನೋಭಾವನೆಯನ್ನೂ ಉಂಟುಮಾಡಲು ಪಕ್ಷಾತೀತ ಸಂಸ್ಥೆಯೊಂದು ಅತ್ಯಾವಶ್ಯಕವಾಗಿದೆ.

ಇಂತಹ ಸಂಸ್ಥೆಯನ್ನು ಕಟ್ಟುವುದಕ್ಕಾಗಿಯೇ ಇತ್ತೀಚೆಗೆ ಅಲೀಗಡ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಡಾ|| ಝಕೀರ್ ಹುಸೇನರ ಅಧ್ಯಕ್ಷತೆಯಲ್ಲಿ 'ರಾಷ್ಟ್ರೀಯ ಸ್ವಾಗತ ಸಮಿತಿ' (National Preparatory Committee) ಒಂದು ರೂಪುಗೊಂಡಿದೆ. ಡಾ|| ಎಸ್. ರಾಧಾಕೃಷ್ಣನ್, ಆಚಾರ್ಯ ನರೇಂದ್ರ ದೇವ, ಪ್ರೊ|| ಹುಮಾಯೂನ್ ಕಬೀರ್ ಮುಂತಾದ ಪ್ರಸಿದ್ಧ ಶಿಕ್ಷಣ ತಜ್ಞರು ಈ ಸಮಿತಿಯ ಸದಸ್ಯರಾಗಿರುವರು. ದೇಶದ ಎಲ್ಲ ಕಾಲೇಜುಗಳ ವಿದ್ಯಾರ್ಥಿಗಳೊಡನೆ ಸಂಪರ್ಕ ಬೆಳೆಸಿ ರಾಷ್ಟ್ರೀಯ ವಿದ್ಯಾರ್ಥಿ ಸಂಘದ ಆವಶ್ಯಕತೆ ಮತ್ತು ಧ್ಯೇಯಗಳ ಕುರಿತು ಪ್ರಚಾರ ಕೈಗೊಳ್ಳುವುದಕ್ಕಾಗಿ ಮುಂಬಾಯಿ, ಮದರಾಸು, ಕಲ್ಕತ್ತಾ, ದಿಲ್ಲಿ- ಈ ನಾಲ್ಕು ಕಡೆಗಳಲ್ಲಿ ಪ್ರಾದೇಶಿಕ ಸಮಿತಿಗಳು ತೆರೆಯಲ್ಪಟ್ಟಿವೆ.

ಪ್ರತಿಗಾಮಿಗಳು

ಈ ಪ್ರಯತ್ನ ಕಾರ್ಯಗತವಾಗದಂತೆ ವಿಘ್ನಗಳನ್ನು ತಂದೊಡ್ಡಲು ಹಲವು ಪ್ರತಿಗಾಮಿ ಶಕ್ತಿಗಳು ಹೆಣಗುತ್ತಿವೆ. ಈ ಸಂಸ್ಥೆಯು 'ಭಂಡವಾಳ ಶಾಹಿ ಕಾಂಗ್ರೆಸಿನ ಕೈಗೂಸು, ಸಮತಾವಾದಿಗಳ ಕೈಗೊಂಬೆ' ಎಂಬಿವೇ ಮುಂತಾದ ದೂಷಣೆ, ಅಪಹಾಸ್ಯಗಳು ಕೆಲವೆಡೆಗಳಲ್ಲಿ ಕೇಳಿಬರುತ್ತಿವೆ. ಇನ್ನೊಂದೆಡೆಯಲ್ಲಿ, ಇತ್ತೀಚೆಗೆ ಜೀವದಾನ ಪಡೆದ ಜಾತೀಯ ಶಕ್ತಿಗಳು ತಮ್ಮದ್ದೇ ಆದೊಂದು 'ವಿದ್ಯಾರ್ಥಿ ಪರಿಷತ್ತ'ನ್ನು ಸಂಘಟಿಸ ತೊಡಗಿವೆ. ಆದರೆ ವಿದ್ಯಾರ್ಥಿಗಳ ಐಕ್ಯದ ಪ್ರಯತ್ನಗಳನ್ನು ಮುರಿಯಲು ಹವಣಿಸುತ್ತಿರುವ ಈ ಪ್ರತಿಗಾಮಿ ಶಕ್ತಿಗಳನ್ನು ಎದುರಿಸುವುದು, ಪ್ರಜಾಸತ್ತೆಯ ಆರಾಧಕನಾದ ಪ್ರತಿಯೊಬ್ಬ ವಿದ್ಯಾರ್ಥಿಯ ಕರ್ತವ್ಯವಾಗಿದೆ. ಆತಂಕಗಳು ಹೆಚ್ಚಿದಂತೆ ನಮ್ಮ ಉತ್ಸಾಹವು ತೀಕ್ಷ್ಣಗೊಳ್ಳಬೇಕು.

"ರಾಷ್ಟ್ರೀಯ ವಿದ್ಯಾರ್ಥಿ ಸಂಘ" (National Union of Students) ದ ಪ್ರಥಮ ಅಧಿವೇಶನವನ್ನು ಇದೇ ವರ್ಷ ಡಿಸೆಂಬರ್ ತಿಂಗಳಲ್ಲಿ ನೆರವೇರಿಸಲು ನಿಶ್ಚಯಿಸಲಾಗಿದೆ. ಅಷ್ಟರಲ್ಲೇ ಎಲ್ಲ ಪ್ರಾಂತಗಳಲ್ಲೂ ಶಾಖೆಗಳು ತೆರೆಯಲ್ಪಡಬೇಕಾಗಿದೆ. ಪ್ರತಿಯೊಂದು ಕಾಲೇಜಿನ ಸಂಘವೂ ಚೇತನಗೊಳ್ಳಬೇಕು. ಪ್ರತಿನಿಧ್ಯವನ್ನು ಕೇವಲ ಒಂದು ಸಮಿತಿಯಾಗಲಿ ಕೆಲವೇ ವಿದ್ಯಾರ್ಥಿಗಳಾಗಲಿ ಮಾಡುವುದು ಶಕ್ಯವಿಲ್ಲ. ದೇಶದ ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಪಾಲಿನ ಕೆಲಸವನ್ನು ಮಾಡಬೇಕು: ರಾ. ವಿ. ಸಂಘವನ್ನು ಸಂಘಟಿಸುವುದು ಸರ್ವರ ಪವಿತ್ರ ಕರ್ತವ್ಯವೆಂಬುದನ್ನು ನಾವು ಮನಗಾಣಬೇಕು.

ಕರ್ನಾಟಕದ ವಿದ್ಯಾರ್ಥಿಗಳೂ ಈ ಕಾರ್ಯದಲ್ಲಿ ಹಿಂದುಳಿಯದಿರಲೆಂದು ಆಶಿಸಬಹುದೇ? 'ಸ್ವದೇಶಿಯಂ'

ಪ್ರಶ್ನೋತ್ತರಗಳು.

ಕುಮಾರಿ ಕೆ ಎಂ ಲಿಲ್ಲಿ ಮಡಿಕೇರಿ

೧ ಸ್ವಾತಂತ್ರ್ಯ ದೊರೆತ ನಂತರ ಭಾರತೀಯರು ಪಡೆಯುತ್ತಿರುವ ವ್ಯತ್ಯಾಸವೇನು? ಆಡುತ್ತಿರುವ ಮಾತೇನು?

ಮಾಡುತ್ತಿರುವುದು ಸತ್ಯಾಗ್ರಹ ಘನಘಾತುತ್ತಿರುವುದು ಗಾಂಧೀ ಸ್ತುತಿ ಭಜನೆ

೨ ಮಹಾತ್ಮಾಗಾಂಧೀಯವರು ಸ್ವರ್ಗಸೇರಿರಬಹುದೇ ಯಾ ನರಕಕ್ಕೆ ಹೋಗಿರಬಹುದೇ?

ಸ್ವರ್ಗದಲ್ಲಿ ಮಾಡಬೇಕಾದ ಕೆಲಸ ಇಲ್ಲದ್ದನ್ನು ಮಾಡಿ ನರಕಕ್ಕೆ ಸೇರಿದ ಪಾಪಿಮುಖ್ಯವಾಗಿ ಕಾಂಗ್ರೆಸಿಗರ ಉದ್ಧಾರಕ್ಕಾಗಿ ನರಕದಲ್ಲಿ ದುಡಿಯುತ್ತಿರಬಹುದು.

೩ ನಾನೆಷ್ಟು ಸತ್ಯವನ್ನಾಡಿದರೂ ನನ್ನ ಗೆಳತಿಯರು ನಂಬದಿರಲು ಕಾರಣವೇನು?

ನಿಮ್ಮ ಸತ್ಯವು ಸುಳ್ಳಿನ ಬೆಲೆ ಹೊಂದಿರುವ ಕಾರಣ

೪. ಬಸ್ಸಿನವರಿಗೆ ಮೊದಲಿನಿಂದ ಬಾರದಿಂದ ಕಡಿಮೆಯಾಗಿರಲು ಕೊಂಡುಕೊಳ್ಳುತ್ತಾರೆ. ಆದರೆ ಸ್ಪೀಡು ಮಾತ್ರ ಕಡಿಮೆ ಇಲ್ಲ ಏಕೆ?

ಸೇದಿದರೆ ಏನೇನು ಒದಗುವ ಕಾರಣ.

೫ ಬಡವನ ಹೊಟ್ಟೆಗೂ ಶ್ರೀಮಂತನ ಹೊಟ್ಟೆಗೂ ಇರುವ ವ್ಯತ್ಯಾಸವೇನು?

ಹೊಟ್ಟೆಗೊಡುವ ಮೊದಲು ಬಡವನಿಗೆ ನಮಸ್ಕಾರ ದೊರೆಯುತ್ತದೆ. ಹೊಟ್ಟೆ ಮಾಡಿದ ನಂತರ ಶ್ರೀಮಂತನಿಗೆ ನಮಸ್ಕಾರ ದೊರೆಯುತ್ತದೆ.

೬. ಕವನ ಕಾವ್ಯಗಳ ಬೆಲೆ ಏರಲು ಕಾರಣವೇನು?

ಸ್ವತಂತ್ರರಾದ ಭಾರತೀಯರು ಭಾರದ ಅಭಿಪ್ರಾಯಗಳನ್ನು ಬರೆಯುತ್ತಿರಬೇಕು!

೭. ಹಿಂದೀ, ತಮಿಳು, ಇಂಗ್ಲಿಷ್ ಸಂಗೀತಗಳಲ್ಲಿ ನೀವು ಯಾವುದನ್ನು ಮೆಚ್ಚುವಿರಿ?

ಹಿಂದಿಯಲ್ಲಿ ಮುಖವನ್ನು; ತಮಿಳಿನಲ್ಲಿ ಪೋಷಾಕನ್ನು, ಇಂಗ್ಲಿಷಿನಲ್ಲಿ ಕಾಲುಗಳನ್ನು!

೮. ಈಗೀಗ ಹಳ್ಳಿ ಶಾಲೆಗಳಲ್ಲಿ ಪಾಠ ಹೇಳುವದಕ್ಕಿಂಥಾ ಮಕ್ಕಳಿಂದ ಕೆಲಸ ಮಾಡಿಸುವದೇ ಹೆಚ್ಚಾಗುತ್ತಿದೆ ಏಕೆ?

ಪುಸ್ತಕದ ಪಾಠಕ್ಕಿಂಥಾ ಜೀವನದ ನೋಟ ಉತ್ತಮವಲ್ಲವೇ?

೯ ಈಗೀಗ ರೋಗಗಳು ಹೆಚ್ಚಲು ಕಾರಣವೇನು?

ಹೊಟೇಲಿನಲ್ಲಿ ಹೊಸ ಹೊಸ ತಿಂಡಿಗಳ ಅವಿಷ್ಕಾರವಾಗುತ್ತಿರುವದರಿಂದ.

ಕುಮಾರ ನಾಗೇಶ. ವೀರಾಜಪೇಟೆ.

---

೧. ನನಗೆ ನಿಮ್ಮ ಕಂಪೆನಿಯಲ್ಲಿ ಒಂದು ಕೆಲಸ ಕೊಡುವಿರಾ?

ಖಂಡಿತವಾಗಿ. ನಿಮ್ಮ ಖರ್ಚಿನಲ್ಲಿ ಕೆಲಸ ಮಾಡಿ ನಮ್ಮ ಖರ್ಚಿನಲ್ಲಿ ಪಾಲುಗೊಳ್ಳುವದಾದರೆ!

೨. ಸರ್ದಾರರು ಸರ್ವೇಲರು ಖಾದಿಟೊಪ್ಪಿ ಏಕೆ ಹಾಕುವದಿಲ್ಲ?

ಸರ್ದಾರರು ಉಕ್ಕಿನ ಮನುಷ್ಯರಲ್ಲವೇ? ಖಾದಿ ಟೊಪ್ಪಿ ಒಹು ಮೃದುವೆಂದು ತೋರಿರಬೇಕು!

೩. ಯಾರಾದರೂ ಮುಸ್ಲಿಮರು ಗಾಂಧಿಯವರ ಕೊಲೆ ಮಾಡಿದ್ದರೆ ಏನಾಗುತಿತ್ತು?

ಹಿಂದೂ ಮುಸ್ಲಿಂ ಕದನದಲ್ಲಿ ಗಾಂಧಿಯವರೊಂದಿಗೇ ಗಾಂಧೀ ತತ್ವಗಳೂ ಮಾಯವಾಗುತ್ತಿದ್ದವು.

೪ ನೀವು ಕವನ ಬರೆಯುವಿರಂತೆ. ನನಗೂ ಕಲಿಸುವಿರಾ?

ಮಾಗಿಯ ಸೂರ್ಯನನ್ನೂ, ಕಾಡಿನ ಕೋಗಿಲೆಯನ್ನೂ ಕೇಳಿರಿ.

೫ ಭಿಕ್ಷೆ ಬೇಡುವ ಮುದುಕ ಮುದುಕಿಯರನ್ನು ಕಂಡಾಗ ಹೃದಯ ಕರಗಿ ನೀರಾಗುವದು ಏನು ಮಾಡಲಿ?

ಕರಗಿದ ವಸ್ತು ಹಿಂದಿನಂಥಾ ಗಟ್ಟಿಗೊಳ್ಳುವದು ಪ್ರಕೃತಿನಿಯಮ. ಆದುದರಿಂದ ಬೇಸರ ಪಡಬೇಡಿ.

ಕೈಲ್‌ಪೊಳ್ದು

೧

ಜಂಬಾನ್ಯಾಕಿ ಇವಿಸುಟು
ಪೂಜೆಯಾಟಗಳಾಟು
ಮುಡಿಪಾಗಿ ಶಾಂತಿಯಾಟು
ಗುಂಡುಮುಡಿಯುಡಿಸ್ಸೆರಾ
ಬಂದೂಕು ಪ್ರೀತಿ
ಮರ ನೀರ ಮಾಡಿಪ್ಪಂಟು

೨

ಮುಂದಿನ ಪರ ಪಡೆದ್ದು
ಅಮ್ಮಾನ ಮಂಡನ್ನೈದು
ಮನೆಯೊಳಗ ಸಾಪಿನಂದು
ಒಡಿಕತ್ತಿ ಬಿಲುಕೋಲ
ಕೈತರಾಯುಧ ಕೂಡಿ
ಹಿಡಿಯುವೇ ಮುಂದೆನಿಂದು

೩

ಸುರಜನಕೆ ವಂದಿಸುತ
ಅಗದವರ ನೆನೆಯುತ್ತ
ದೀಪನ್ನ ನೈವೇದ್ಯವಿರಿಸೀ
ತೋವಿಹೂವಿನ ಪೂಜೆ
ತುಡಿದುಂಡು ಹಾಡಾಡಿ
ನಲಿನಲಿದವರ ಭಜಿಸೀ

೪

ದಟ್ಟಿಕಾಪ್ಪು ಸತೆಯಟ್ಟು
ವಾದ್ಯಮೇಳದೊಳೊಟ್ಟು
ಮುದದಿಂದ ಮುಂದಿಟ್ಟಿದ್ದ
ನಂದ ಮುಂದಿನ ವೃಂದ
ಸೇರಿಹರು ಆನಂದ
ಆಟಗಳ ಸ್ಪರ್ಧೆಮಾಡೀ

೫

ಗುರಿಕಾರ ಗುಂಡುತೊಡಿ
ಭುಜಗಾವ 'ತಂಗ' ಹಿಡಿ

ಆಟೋಟ ಗಲ್ಲಿರಾಡೀ
ಚೆಲುವೆಯುದೊ ನಲಿಯುತ್ತಾ
ಮಕ್ಕಳವೋ ಹುಸುಳುತ್ತಾ
ಎಲ್ಲರಾನಂದಿಸುತ್ತಾ

೬

ಬಂಡದ್ದು ಬರಲಿಹುದು
ಬೇಕಾದು ಬೇಡದ್ದು
ವಿಧಿಲೀಲೆ ವಾಡಿಸುತ್ತಾ
ದಣುವದಾರಿಸಿ ತಮ್ಮ
ಒಮ್ಮತದ ಬೇರಿಳಿಸಿ
ತೆರಳುವರು ಪ್ರೀತಿಯುಂದಾ

೭

ಬಂಡವ್ವಾರು ಪದಿನೆಂಟು
ಸಕಲ ಜನತೆಗೆ ಉಂಟು
ಆಯುಧದ ಪೂಜೆಯುಂಟು
ದಳಿತ ಧನಿಕರಿಗೆಲ್ಲ
ಆಳು ಒಡೆಯರಿಗೆಲ್ಲ
ಸುಖಶಾಂತಿ ಕಾಂತಿಯುಂಟು

೮

ಇಂದು ಇಂದಿಗೆ ಚಂದ
ಒಗ್ಗಟ್ಟು ಆನಂದ
ಎಲ್ಲ ನಮ್ಮವರೆ ಅಂದಾ
ಪರ ದೇಶ ಕಂಡರಿಗೆ
ಬೇಡುವೆವು ಸುಖಶಾಂತಿ
ಭಾಗ್ಯನಿಧಿ ಪ್ರೀತಿಯುಂದಾ

—ಗೋರಾ.

ಐತಿಹಾಸಿಕ ಕಥೆ.

ದಳಿತ ಕುಸುಮಗಳು.

ಲೇ:—"ಪ್ರೇಮಯೋಗಿ" ಮಂಜೇಶ್ವರ.

'ಅರಮನೆ ಬಾಗಿಲಿನಲ್ಲಿ ಗುಲಾಬಿ ಪುಷ್ಪ ವಿಕಸಿತವಾಗಿದೆಯೋ ಎಂಬಂತಿದೆ' ಲಾಹೋರಿನ ಪ್ರಾಂತ್ಯಾಧಿಪ ಅಖಿಲಖಾನನು ಔರಂಗಜೇಬನ ಕುವರಿ ಜೆಬುನ್ನಿಸಳ ಬಗ್ಗೆ ಚಿಕ್ಕಂದಿನಿಂದಲೇ ತನಗಿದ್ದ ಪ್ರೇಮವನ್ನು ವ್ಯಕ್ತಪಡಿಸಿ ಹೇಳಿದನು. ಆತನ ಈ ಮಾತುಗಳಿಂದ ಜೆಬುನ್ನಿಸಳ ಹೃದಯ ತೀವ್ರ ಬಡಿಯತೊಡಗಿತು. ಆಕೆ ನಗುತ್ತಾ ನುಡಿದಳು: 'ನೀನು ಪ್ರೇಮದಿಂದ ನನ್ನ ಹೃದಯವನ್ನು ಗೆಲ್ಲಬಲ್ಲೆಯಲ್ಲದೆ ನಿನ್ನ ಶಕ್ತಿ ಯಾ ಸಂಪತ್ತಿನಿಂದ ಗೆಲ್ಲಲಾರೆ!'

ವಸಂತಋತು. ಔರಂಗಜೇಬ ಚಕ್ರವರ್ತಿಯು ಆರೋಗ್ಯದ ಕಾರಣಕ್ಕಾಗಿ ಡೆಲ್ಲಿಯಿಂದ ಲಾಹೋರಿಗೆ ಬಂದಿದ್ದನು. ಆತನ್ನ ಶುಶ್ರೂಷೆಗಾಗಿ ಜೆಬುನ್ನಿಸಳು ತಂದೆಯೊಡನಿದ್ದಳು. ಲಾಹೋರಿನ ಸಾಮಂತನಾದ ಅಖಿಲಖಾನನು ಬಾದಶಹನ ಉಸ್ತುವಾರಿ ನೋಡಿಕೊಳ್ಳುತ್ತಿದ್ದನು. ಈ ಸುಅವಸರವೇ ಆಗಾಗ್ಗೆ ಆತನಿಗೆ ಜೆಬುನ್ನಿಸಳ ಭೇಟಿಗೆ ಅನುಮಾಡುತ್ತಿತ್ತು.

ಅಖಿಲಖಾನನ ಕೀರ್ತಿಶೌರ್ಯ ಪ್ರತಾಪಗಳನ್ನು ಜೆಬುನ್ನಿಸಳು ಕೇಳಿದ್ದಳು. ಆತನನ್ನು ಪ್ರತ್ಯಕ್ಷ ನೋಡಿ ಆತನಿಗ ಮನಸೋತಳು.

ಒಂದು ದಿನ ಜೆಬುನ್ನಿಸಾ ಕೇಳಿದಳು. 'ನನ್ನೊಡನೆ ಮಾತಾಡುವುದನ್ನು ಬಾದಶಹನು ಕಂಡರೆ ಏನಾಗುವದೆಂಬುದರ ಭಯ ನಿನಗಾಗದೇ?'

'ನನಗೆ ರಾಜಕುಮಾರಿಯು ಭಯ ಹೆಚ್ಚು; ಚಕ್ರವರ್ತಿಯದ್ದಕ್ಕಿ. ನಿನ್ನ ಕೃಪೆ ಮತ್ತು ಪ್ರೇಮವಿದ್ದರೆ ಎಂಥಾ ಗಂಡಾಂತರವನ್ನು ಎದುರಿಸಲು ಸಿದ್ಧನು' ಅಖಿಲನೆಂದನು.

'ಹಾಗಾದರೆ ಆ ಪ್ರೇಮಕ್ಕೆ ಭಯವಿಲ್ಲವೇ?'

'ಪ್ರೇಮ, ಸಾಗರದಂತೆ; ಅದರ ಆಳ ಕಂಡವರಿಲ್ಲ. ಆಕಾಶದಂತೆ; ಅದರ ಅಂತ್ಯವನ್ನು ನೋಡಿದವರಿಲ್ಲ ಪ್ರೇಮಕ್ಕೆ ಚ್ಯುತಿಯಿಲ್ಲ. ಕೊಟ್ಟಷ್ಟು ಹೆಚ್ಚುವದು. ಕಷ್ಟವನ್ನೂ ಸಹಿಸುವದು' ಅಖಿಲನು ಉತ್ತರವಿತ್ತನು.

ಅವರ ಸ್ನೇಹದ ಈ ಸುದಿನಗಳು ಮುಗಿಯುತ್ತಾ ಬಂದವು. ಔರಂಗಜೇಬನ ಆರೋಗ್ಯ ಸುಧಾರಿಸಿತು. ಆತನು ಡೆಲ್ಲಿಗೆ ಹಿಂತಿರುಗುವ ಸಿದ್ಧತೆ ಮಾಡಿದನು. ಆ ಕಡೆಯ ದಿನ ಅಖಿಲನು ಜೆಬುನ್ನಿಸಾಳೊಡನೆ ಹೇಳಿದನು. 'ನಾಳೆಯಿಂದ ಪ್ರೇಮಮಂದಿರವು ಶೂನ್ಯವಾಗಲಿದೆ. ಅದನ್ನು ಸಹಿಸುವದೆಂತು?'

ಜೆಬುನ್ನಿಸಾ:—'ಯಾವ ಹೃದಯವು ದೃಢಪ್ರೇಮದಿಂದ ಬಂಧಿತವಾಗಿದೆಯೋ ಅದಕ್ಕೆ ದೂರದ ಗಣನೆ ಇಲ್ಲ. ಸಮಯದ ಅರಿವಿಲ್ಲ. ವಿಯೋಗದ ದುಃಖವಿಲ್ಲ.'

ಅಖಿಲ್:—'ಆದರೆ ಸಮಯವು ಶರೀರವನ್ನು ಶಿಥಿಲಗೊಳಿಸುತ್ತದೆ. ಆಯುಸ್ಸು ಮನುಷ್ಯನ ಪ್ರೇಮಜ್ಯೋತಿಯನ್ನು ಮಂದಗೊಳಿಸುತ್ತದೆ. ಅಂದವು ಒಬ್ಬರನ್ನೊಬ್ಬರು ಮರೆಯುವಂತೆ ಮಾಡುತ್ತದೆ. ನನ್ನ ಜೀವನವು ದೀಪಕ್ಕೆರಗುವ ಪತಂಗದಂತಾಗಬಹುದು. ನನ್ನಂಥಾವನಿಗೆ ರಾಜಕನ್ಯೆಯ ಭಾಗ್ಯವೆಲ್ಲಿ?'

ಜೆಬುನ್ನಿಸಾ:—'ಬುದ್ಧಿವಂತಿಕೆಯಿಂದ ಕಾರ್ಯ ಕೈಕೊಂಡರೆ ಮನುಷ್ಯನಿಂದ ಜೈಸಲಾಗದ್ದು ಯಾವದೂ ಇಲ್ಲ.'

ಸಂಧ್ಯಾಸೂರ್ಯನು ಅಸ್ತಂಗತನಾಗುತ್ತಿದ್ದನು. ಎರಡು ಪ್ರೇಮಿಗಳ ಒಂದಾದ ಹೃದಯಗಳು ಬೇರೆಯಾಗಬೇಕಿತ್ತು. ಹೋಗುವ ಸಮಯದಲ್ಲಿ ಅಖಿಲನು ನುಡಿದ, 'ನೀನು ಎಲ್ಲಿಯಾದರೂ ಇರು, ನಾನು ನಿನಗಾಗಿ ಜಗತ್ತಿನ ಯಾವ ಮೂಲೆಗೂ ತಲಪಬಲ್ಲೆ.'

ಜೆಬುನ್ನಿಸಳು ದೀರ್ಘ ನಿಟ್ಟುಸಿರೊಂದನ್ನು ಬಿಟ್ಟಳು. ಆಕೆಯ ಶರೀರ ಕಂಪಿಸುತ್ತಿತ್ತು. ಕಾಲು ನಡುಗುತ್ತಿತ್ತು. ಅಕೆ ಪ್ರಜ್ಞೆತಪ್ಪಿದಳು. ದಾಸಿಯರು ಆಕೆಯನ್ನು ಮಂಚದಲ್ಲಿ ಮಲಗಿಸಿದರು. ವೈದ್ಯರು ಬಂದರು ಆಕೆಯ ಸ್ಥಿತಿ ಪ್ರಯಾಣಕ್ಕೆ ಯೋಗ್ಯವಾಗಿಲ್ಲವೆಂದರು. ಬಾದಶಹನು ಆಕೆಯನ್ನು ಬಿಟ್ಟು ಡೆಲ್ಲಿಗೆ ಬಂದನು. ಆಕೆಯ ಚಿಕಿತ್ಸೆ ವೈದ್ಯರಿಂದ ನಡೆಯುತಿತ್ತು. ಉಸ್ತುವಾರಿ ನೋಡಿಕೊಳ್ಳಲು ಅಖಿಲನು ಅಲ್ಲಿ ಸ್ವಸ್ಥನಾಗಿದ್ದನು. ಎರಡು ತಿಂಗಳ ಗಳ ವರೆಗೆ ಆಕೆ ಲಾಹೋರಿನಲ್ಲಿರಬೇಕೆಂದು ವೈದ್ಯರು ನಿಶ್ಚಯಿಸಿದ್ದರು.

ಅಖಿಲಖಾನನು ನಿರ್ಭೀತಿಯಿಂದ ರಾಜಕುಮಾರಿಯಲ್ಲಿಗೆ ಬಂದು ಹೋಗುತ್ತಿದ್ದನು. ಆದರೆ ಈ ಆನಂದಮಯ ದಿನಗಳಿಗೂ ಅಂತ್ಯವಿಲ್ಲವೇ? ಔರಂಗಜೇಬನ ಕಾಲವೆಂದರೆ ಗೋಡೆಗಳಿಗೂ ಕಿವಿ ಇದ್ದ ಕಾಲ. ಆತನ ಗೂಢಾಚಾರರು ರಾಜಕುಮಾರಿ ಮತ್ತು ಅಖಿಲಖಾನನೊಳಗಿರುವ ಪ್ರೇಮದ ಸುದ್ದಿಯನ್ನು ಔರಂಗಜೇಬನ ಕಿವಿಗೆ ಹಾಕಿದರು. ಔರಂಗಜೇಬನು ಶೀಘ್ರ ಜೆಬುನ್ನಿಸಳನ್ನು ಡೆಲ್ಲಿಗೆ ಕರೆತರುವಂತೆ ಜನರನ್ನು ಕಳುಹಿಸಿದನು.

ಇದರ ವಿಷಯ ಅಖಿಲನಿಗೂ ತಿಳಿಯಿತು. ತನ್ನ ಜೀವನದ ಅಂತಿಮ ಪರ್ವವಿದೆಂದೂ ಔರಂಗಜೇಬನು ಎಂಥಾ ಶಿಕ್ಷೆ ವಿಧಿಸಬಹುದೆಂಬುದೂ ಆತನಿಗೆ ತಿಳಿದಿತ್ತು. ಆದ್ದರಿಂದ ಕಡೇ ಬಾರಿ ತನ್ನ ಪ್ರೇಯಸಿಯನ್ನೊಮ್ಮೆ ಕಾಣುವ ಹಂಬಲ ಆತನಲ್ಲಿ ತುಂಬಿತ್ತು. ಆ ದಿನ ರಾತ್ರಿ ಅಖಿಲನು ಪಾಳೆಯ ವೇಷದಲ್ಲಿ ಪಹರೆಯವರನ್ನು ತಪ್ಪಿಸಿ ಜೆಬುನ್ನಿಸಳ ಅಂತಃಪುರಕ್ಕೆ ಬಂದನು. ಅಖಿಲನನ್ನು ಕಂಡು ಆಕೆಯ ಕಂಣುಗಳಲ್ಲಿ ಅಶ್ರುಧಾರೆ ಹರಿಯತೊಡಗಿತು. ಇಬ್ಬರೂ ಮೌನವಾಗಿದ್ದರು. ಆ ಅರ್ಥಪೂರ್ಣ ಮೌನದಲ್ಲಿ ಇಬ್ಬರ ಎದೆಯೂ ಮಿಡಿಯುತಿತ್ತು.

ಮೌನವನ್ನು ಬೇಧಿಸಿ ಅಖಿಲನು ನುಡಿದ, 'ನಾವು ಧೈರ್ಯದಿಂದ ಈ ಕಷ್ಟವನ್ನು ಎದುರಿಸಬೇಕು. ಈ ಲೋಕದಲ್ಲಿ ಅಲ್ಲದಿದ್ದರೆ ಆ ಲೋಕದಲ್ಲಾದರೂ ಒಬ್ಬರನ್ನೊಬ್ಬರು ಹೊಂದುವೆವು.'

ಗದ್ಗದ ಕಂಠದಲ್ಲಿ ಜೆಬುನ್ನಿಸಳು ಅಖಿಲನ ಕ್ಷಮೆಯನ್ನು ಕೇಳಿದಳು. ತನ್ನಿಂದಾಗಿ ಅಖಿಲನಿಗೆ ಈ ಕಠಿಣ ಪ್ರಸಂಗ ಬಂದಿದೆಯೆಂದಳು. ಬಾದಶಹನು ಕಠಿಣ ಶಿಕ್ಷೆ ಅಖಿಲನಿಗೆ ಕೊಡಬಹುದೆಂದು ಆಕೆಗೂ ತಿಳಿದಿತ್ತು.

'ನೀನು ಆ ರೀತಿಯ ಮಾತಾಡಬಾರದು ರಾಣಿ, ತಪ್ಪು ಯಾರದೂ ಅಲ್ಲ. ಆದ್ದರಿಂದ ಯಾರೂ ಯಾರ ಕ್ಷಮೆಯನ್ನೂ ಕೇಳುವ ಅವಶ್ಯವಿಲ್ಲ. ದೇವರು ಯಾರ ಹೃದಯಗಳನ್ನು ಒಂದು ಮಾಡಿರುವನೋ ಆ ಹೃದಯಗಳನ್ನು ಬೇರ್ಪಡಿಸಲು ಮನುಷ್ಯನು ಯತ್ನಿಸುತ್ತಿದ್ದಾನೆ!'

ಜೆಬುನ್ನಿಸಳ ಅಳು ನಿಂತಿರಲಿಲ್ಲ. ಆಕೆಯ ಶರೀರ ಕಂಪಿಸುತಿತ್ತು. ಅಖಿಲನ ಭವಿಷ್ಯದ ಚಿಂತೆ ಆವಳಲ್ಲಿ ತುಂಬಿತ್ತು. ಜೆಬುನ್ನಿಸಾಳು ತಲೆ ಎತ್ತಿ ಅಖಿಲನನ್ನು ನೋಡಿದಳು. ದುಃಖಪೂರಿತ ಆಕೆಯ ಮುಖಮಂಡಲವು ದ್ವಿಗುಣಿತ ಸೌಂದರ್ಯದಿಂದ ಕೂಡಿತ್ತು. ಅಖಿಲನು ಅದನ್ನು ಹಿಡಿದಪ್ಪಿ ಚುಂಬಿಸಿದನು ರೋಧಿಸುತ್ತಿದ್ದ ಜೆಬುನ್ನಿಸಳ ಮುಖದಲ್ಲಿ ಲಜ್ಜಾಭರಿತ ಸುಮನಗೆಯೊಂದು ಚಿಮ್ಮಿತು. ಇಬ್ಬನಿಗಳು ನಿಮಿಷಗಳಂತೆ ಸಾಗಿದವು ಪೂರ್ವದಿಸೆಯು ಸೂರ್ಯನ ಆಗಮನದ ಸೂಚನೆಯನ್ನು ಸಾರಿತು. ತಮ್ಮ ಮಿಲನದ ವಿಷಯ ನಾವು ಪ್ರೇಮಿಗಳು ಯಾರು ಅಖಿಲನು ವಿದೀರ್ಣಹೃದಯದೊಡನೆ ಮನೆಗೆ ಬಂದನು.

ಔರಂಗಜೇಬನು ತನ್ನ ಪುತ್ರಿಯ ವಿವಾಹದ ಏರ್ಪಾಡು ಮಾಡತೊಡಗಿದನು. ಆದರೆ ಜೆಬುನ್ನಿಸಳು ಯಾರನ್ನೂ ಒಪ್ಪಲಿಲ್ಲ. ಎಲ್ಲರ ಭಾವಚಿತ್ರಗಳನ್ನು ತರಿಸಿ ತನಗೆ ಬೇಕಾದ ವರನನ್ನು ಜೆಬುನ್ನಿಸಾಳೇ ಆರಿಸಿದಳು. ಔರಂಗಜೇಬನ ಕ್ರೋಧಕ್ಕೆ ಎಣೆ ಇಲ್ಲದಂತಾಯಿತು. ಚಕ್ರವರ್ತಿಯ ಮಗಳನ್ನು ಒಬ್ಬ ಸಾಮಂತನಿಗೆ ಕೊಡುವದು ಆತನಿಗಿಷ್ಟವಿರಲಿಲ್ಲ. ಆದರೂ ತನ್ನ ಸಿಟ್ಟನ್ನು ಆತನು ತೋರಗೊಡಲಿಲ್ಲ. ಮಗಳ ಮುಂದೆ ಒಪ್ಪಿದಂತೆ ನಟಿಸಿ ಅಖಿಲನನ್ನು ಬರಹೇಳಿದನು. ನ್ನು ಉಪಾಯದಿಂದ ನಾಶಮಾಡುವ ಆಶೆ ಆತನಿಗಿತ್ತು. ಅಖಿಲನು ಔರಂಗಜೇಬನ ಆಮಂತ್ರಣವನ್ನು ಕೇಳಿ ಗಾಬರಿಯಿಂದ ತಲೆತಪ್ಪಿಸಿಕೊಂಡು ಓಡಿ ಹೋದನು. ತಂದೆಯ ವಿರುದ್ಧ ದಂಗೆ ಎದ್ದು ತಂದೆಯಿಂದ ಸಿಂಹಾಸನವನ್ನು ಕಿತ್ತುಕೊಳ್ಳಲು ಯತ್ನಿಸುತ್ತಿದ್ದ ಯುವರಾಜ ಅಕ್ಬರನ ಕೈಕೆಳಗೆ ಸೇನಾನಾಯಕನಾಗಿ ಸೇರಿದನು. ಆ ಮೂಲಕ ಔರಂಗಜೇಬನನ್ನು ಸೋಲಿಸಿ ನಂತರ ಜೆಬುನ್ನಿಸಾಳನ್ನು ಕೂಡಬೇಕೆಂದು ಆತನ ಆಶೆ ಇದ್ದಿತು.

ಅಖಿಲನು ಓಡಿಹೋದ ವಾರ್ತೆ ಕೇಳಿ ಜೆಬುನ್ನಿಸಳಿಗೆ ವಿಪರೀತ ದುಃಖವಾಯಿತು. ಬಾದಶಹನು ಒಪ್ಪಿ ಲಗ್ನವಾಗುವ ಕಾಲಕ್ಕೆ ಈ ರೀತಿ ವರ್ತಿಸಿದುದಕ್ಕೆ ತುಂಬಾ ವ್ಯಸನಪಟ್ಟಳು. ಅಖಿಲನ ದ್ರೋಹಕ್ಕಾಗಿ ನಿಂದಿಸಿದಳು.

ಅನೇಕ ತಿಂಗಳುಗಳು ಕಳೆದವು ಅಖಿಲಖಾನನು ಅಕ್ಬರನ ಸೇನೆಯಲ್ಲಿರುವ ವರ್ತಮಾನ ಗಟ್ಟಿಗ ಜೆಬುನ್ನಿಸಾಳಿಗೆ ತಿಳಿಯಿತು. ಕ್ರಮಶಃ ಇವರಲ್ಲಿ ಪತ್ರವ್ಯವಹಾರ ಪ್ರಾರಂಭವಾಯಿತು. ಆಗಾಗ ಅಖಿಲನು ಜೈಬುನ್ನಿಸಾಳ ತೋಟದ ಆಳಿನಂತೆ ವೇಷ ಬದಲಿಸಿ ಅವಳಲ್ಲಿಗೆ ಬಂದು ಹೋಗುತ್ತಿದ್ದನು. ಆಳಿನೊಬ್ಬನೊಡನೆ ರಾಜಕುಮಾರಿಯು ಸಲಿಗೆಯಲ್ಲಿರುವಳೆಂಬ ಮಾತು ಗೂಢಾಚಾರರ ಮೂಲಕ ಔರಂಗಜೇಬನಿಗೆ ದೊರೆಯಿತು.

ಅದೊಂದು ಮಧ್ಯಾಂರಾತ್ರಿ. ಜೈಬುನ್ನಿಸಳ ಕೋಣೆಯಲ್ಲಿ ಬೆಳಕಿದೆ. ಅಖಿಲನು ಆಕೆಯೊಡನಿದ್ದಾನೆ. ಯಾರೋ ಬಾಗಿಲು ತಟ್ಟಿದ ಹಾಗಾಯಿತು. ಕೋಣೆಗೆ ಬೇರೆ ಬಾಗಿಲುಗಳಿರಲಿಲ್ಲ. ಕೋಣೆಯ ಮೂಲೆಯಲ್ಲಿ ಒಲೆಯ ಮೇಲಿದ್ದ ಹಂಡೆಯೊಂದರೊಳಗೆ ಅಖಿಲನು ಅಡಗಿಕೊಂಡನು. ಜೆಬುನ್ನಿಸಾಳು ಬಾಗಿಲು ತೆರೆದಳು. ಔರಂಗಜೇಬನು ಕೆಲವು ಅಂಗರಕ್ಷಕರೊಡನೆ ಒಳಗೆ ಬಂದನು.

ಔರಂಗಜೇಬ್—'ಇಷ್ಟು ಹೊತ್ತು ಮಲಗದೆ ಏನು ಮಾಡುತ್ತಿರುವೇ?'

ಜೆಬುನ್ನಿಸಾ—'ಶರೀರ ಚೆನ್ನಾಗಿಲ್ಲ. ನಿದ್ರೆಬಾರದು. ಅದ್ದರಿಂದ ಕುರಾನ್ ಓದುತ್ತಿರುವೆನು.'

ಔರಂಗಜೇಬ್—ಯುವತಿಯಾದ ನೀನು ಈ ರೀತಿ ನಿದ್ರೆಗೆಡುವದು ಚೆನ್ನಾಗಿಲ್ಲ. (ಸ್ವಲ್ಪ ಯೋಚಿಸಿ) ಆ ಹಂಡೆಯೊಳಗೇನು?

ಜೆ:—'ಏನೂ ಇಲ್ಲ; ಕಾಲು ಮುಖ ತೊಳೆಯಲು ತಣ್ಣೀರು ತುಂಬಿಸಿದೆ.'

ಔ:—(ವ್ಯಂಗವಾಗಿ ನಕ್ಕು) ಶರೀರ ಚೆನ್ನಾಗಿಲ್ಲದವಳು ತಣ್ಣೀರೇಕೆ ಉಪಯೋಗಿಸುವೆ? (ಅಂಗರಕ್ಷಕರನ್ನು ಕುರಿತು) ಅದಕ್ಕೆ ಬೆಂಕಿ ಹಾಕಿ ನೀರನ್ನು ಕಾಸಿರಿ.'

ಜೆಬುನ್ನಿಸಾಳಿಗೆ ಗಾಬರಿಯಾಯಿತು. ತನಗೆ ಒಟ್ಟಿ ನೀರು ಬರಬಹುದೆಂದು ಆಕೆಗೆ ಆಶೆ ಇತ್ತು. ಬಾದಶಹನು ಆಳುಗಳನ್ನು ಬೆಂಕಿಮಾಡಲು ಬಿಟ್ಟಳು.

ಜೆಬುನ್ನಿಸಳು ಉಪಾಯದಿಂದ ನೆವನದಿಂದ ಆ ಹಂಡೆಯ ಹತ್ತಿರ ಒಂದು ಮೆಲ್ಲಗೆ ಹೇಳಿದಳು: 'ನೀನು ನಿಜವಾಗಿಯೂ ನನ್ನೊಡನೆ ಪ್ರೇಮಮಾಡುವೆಯಾದರೆ ನಮ್ಮಿಬ್ಬರ ಗೌರವಕ್ಕಾಗಿ ಯಾವದೇ ಸದ್ದು ಮಾಡದಿರಬೇಕು.'

ಅಖಿಲಖಾನನು ಮೆಲ್ಲಗೆ ನುಡಿದ—'ನಿನ್ನ ಮತ್ತು ನನ್ನ ಗೌರವಗಳಿಗಾಗಿ ನಾನು ಬೆಂಕಿಯಲ್ಲಿ ಉಸಿರೆತ್ತದೆ ಬೆಂದು ಸಾಯಲು ಸಿದ್ಧನಿರುವೆನು. ಆದರೆ ದೇವರಲ್ಲಿ ನನ್ನ ಪ್ರಾರ್ಥನೆ ಎಂದರೆ ಇಹದಲ್ಲಿ ಒಂದಾಗಲಾರದ ನಾವು ಪರದಲ್ಲಾದರೂ ಒಂದಾಗುವಂತೆ ಕರುಣಿಸಲೆಂದು.'

ಔರಂಗಜೇಬನು ಸ್ವಲ್ಪ ಹೊತ್ತಿನ ನಂತರ ಹೊರಟು ಹೋದನು. ಜೆಬುನ್ನಿಸಾಳು ಹಂಡೆಯಲ್ಲಿಯ ಅಖಿಲಖಾನನ ಶವವನ್ನು ತೆಗೆದು ತನ್ನ ತೋಟದಲ್ಲೇ ಶವಸಂಸ್ಕಾರ ಮಾಡಿದಳು. ಆಕೆ ಪ್ರತಿ ದಿನ ಆ ಸ್ಥಳದಲ್ಲಿ ಕುಳಿತು ಕಣ್ಣೀರು ಮಿಡಿಯುತ್ತಾ ಕುರಾನ್ ಪಠಿಸುತ್ತಿದ್ದಳು. ತನ್ನ ಸಮಯವನ್ನೆಲ್ಲಾ ಅಲ್ಲೇ ಕಳೆಯುತ್ತಿದ್ದಳು. ಅಲ್ಲೇ ಕುಳಿತು ತನ್ನ ಅಪೂರ್ಣ ಜೀವನದ ಕುರಿತು ಕವಿತೆ ಬರೆಯುತ್ತಿದ್ದಳು. ಈ ವರ್ತಮಾನವನ್ನು ತಿಳಿದ ಔರಂಗಜೇಬನು ಆಕೆಯು ಆ ರೀತಿ ವರ್ತಿಸುವದನ್ನೂ ನಿರ್ಬಂಧಿಸಿದನು. ಕೆಲವು ದಿನಗಳಲ್ಲಿ ಜೆಬುನ್ನಿಸಾಳು ಅಖಿಲಖಾನನಿಗೆ ಬರೆದ ಪತ್ರಗಳೂ ತಂದೆಗೆ ವಿರುದ್ಧ ಆಕೆಯ ಕಾರ್ಯಾಚರಣೆಯೂ ಗೊತ್ತಾಗಿ ಆಕೆಯನ್ನು ಜೈಲಿನಲ್ಲಿಡಲಾಯಿತು. ಆಕೆ ಜೈಲಿನಲ್ಲಿ ಬರೆದ ಕವನಗಳು ಹೊರಗಿನ ಜಗತ್ತಿನ ಸಾಹಿತ್ಯಕ್ಕೆ ಕಳೆ ಕೊಟ್ಟವು. ತನ್ನ ಪ್ರಿಯತಮನ ಧ್ಯಾನದಲ್ಲೇ ತಪಸ್ವಿ ಜೀವನ ನಡೆಸಿ ಜೈಲಿನಲ್ಲಿ ೨೦ ವರ್ಷಗಳ ನಂತರ ಆಕೆಯ ಪ್ರಾಣ ಪಕ್ಷಿಯು ಜೈಲುಗೋಡೆ ದಾಟಿ ಬಿಡುಗಡೆ ಹೊಂದಿತು.

(ಆಧಾರದಿಂದ)

ರಷ್ಯಾದ ವಿಚಾರ ನಿಮಗೇನು ಗೊತ್ತು?

ರಷ್ಯಾದ ಬಗ್ಗೆ ಇಪ್ಪತ್ತು ಮಹತ್ವದ ಪ್ರಶ್ನೆಗಳು.

ರಷ್ಯಾದ, ಜನಜೀವನದ ಬಗ್ಗೆ ಜನರು ನಾನಾ ರೀತಿ ಪ್ರಶ್ನೆ ಕೇಳುತ್ತಿರುವರು. ಆದಕಾರಣ ಪ್ಯಾರಿಸಿನ 'ಸಂಡೆ ಆರ್' ಎಂಬ ಪತ್ರಿಕೆಯ ವಿಶೇಷ ಪ್ರತಿನಿಧಿ ಜಾರ್ಜಸ್ ಸೋರಿಯಾರವರು ರಷ್ಯಾಕ್ಕೆ ಹೋಗಿ ಅಲ್ಲಲ್ಲಿ ಹತ್ತು ಸಂಚಾರ ಮಾಡಿ ಸುದ್ದಿಯನ್ನು ಕೂಡಿಸಿ ಪ್ರಕಟಿಸಿದ್ದಾರೆ. ಅದನ್ನಿಲ್ಲಿ ಕೊಡಲಾಗಿದೆ.

---

(೧) ಮಾಸ್ಕೋವಿನಲ್ಲಿ ಬಾಡಿಗೆ ಮೋಟಾರು (ಟ್ಯಾಕ್ಸಿ) ಗಾಡಿಗಳು ಇವೆಯೋ?

ಇವೆ. ಎಷ್ಟು ಬೇಕೋ, ಅಷ್ಟು ಇಲ್ಲ. ಆದರೂ ಈಗ ಹತ್ತು ಪಟ್ಟು ಹೆಚ್ಚಿವೆ. ಅಮೇರಿಕದ ಗಾಡಿಗಳಿಗಿಂತಲೂ ಹೆಚ್ಚು ಸುಖಕರವಾಗಿವೆ. 'ಜಿಸ್' ಎಂಬುದು ಒಳ್ಳೇ ಭವ್ಯ ಗಾಡಿ. ಅದರಲ್ಲಿ ೮ ಜನರು ಕೂಡಬಹುದು. ರೇಡಿಯೋ ಮೊದಲಾದ ಎಲ್ಲಾ ಸೌಕರ್ಯಗಳಿವೆ. ಕಿಡಿಕಿಗಳು ಗುಂಡಿ ಒತ್ತಿದರೆ ತೆರೆಯುವವು; ಮುಚ್ಚುವವು.

(೨) ರಷ್ಯಾದಲ್ಲಿ ರತ್ನಾಭರಣಗಳು ಮಾರಲಿಕ್ಕೆ ಸಿಗುತ್ತವೆಯೋ?

ರಷ್ಯಾದಲ್ಲಿರುವ ಸರಾಫ್ ಅಂಗಡಿಗಳಲ್ಲಿ ರತ್ನಾಭರಣಗಳು ದೊರೆಯುತ್ತವೆ. ಬಹು ಅಮೂಲ್ಯವಾದ ಪ್ರಕಾಶಮಯ ರತ್ನಗಳು ಕಾಣುವುದಿಲ್ಲ. ರಷ್ಯನ್ ಹೆಂಗಸರು ಕೆಲಸದ ಮೇಲೆ ಇರುವಾಗ ಆಭರಣಗಳನ್ನು ಧರಿಸುವುದಿಲ್ಲ. ಹಬ್ಬದ ದಿನಗಳಲ್ಲಿ ನಾಟಕ ಸಿನಿಮಾ ಗೃಹಗಳಿಗೆ ಹೋಗುವಾಗ ಮಾತ್ರ ಧರಿಸುವರು.

(೩) ರಷ್ಯಾದಲ್ಲಿ ಡಯಲ್ ಟೆಲಿಫೋನುಗಳಿವೆಯೋ?

ಇವೆ ಕಳೆದ ೨೮ ವರ್ಷಗಳಿಂದಲೂ ಇವೆ. ರಷ್ಯಾದಲ್ಲಿ ಟೆಲಿಫೋನ್ ಖರ್ಚು ಬಹಳ ಕಡಿಮೆ. ಸಾಧಾರಣ ಕೆಲಸಗಾರನ ತಿಂಗಳ ಉತ್ಪಾದನೆಯ ೫೦ ರಲ್ಲೊಂದು ಭಾಗ ಟೆಲಿಫೋನ್‌ಗಳು ಬಹಳ ಪ್ರಚಾರದಲ್ಲಿವೆ.

(೪) ರಷ್ಯನ್ ಕೆಂಪು ಸೈನಿಕರಿಗೆ ಸಂಬಳ ಸಿಗುತ್ತದೆಯೋ?

ಸಿಗುತ್ತದೆ. ಸೈನ್ಯವು ಸೈನಿಕ ಶಿಕ್ಷಣ ಕೇಂದ್ರವೊಂದೇ ಆಗಿಲ್ಲ ಅದಕ್ಕೊಂದು ಸಾಮಾಜಿಕ ಜೀವನವೂ ಉಂಟು. ಹೊಸದಾಗಿ ಸೈನ್ಯಕ್ಕೆ ಸೇರಿದ ತರುಣರ ಜ್ಞಾನ ಬೆಳೆಸಲಾಗುತ್ತಿದೆ. ಅವರಿಗೆ ಬರೀ ಶಾರೀರಕ ಶಿಕ್ಷಣವಲ್ಲದೆ, ಸಂಸ್ಕೃತಿ, ಅರ್ಥಶಾಸ್ತ್ರ, ಇತಿಹಾಸ ಮೊದಲಾದ ವಿಷಯಗಳಲ್ಲಿಯೂ ಶಿಕ್ಷಣ ದೊರೆಯುತ್ತಿದೆ.

(೫) ರಷ್ಯಾದ ಹೆಂಗಸಿಗೆ ಉಡಿಗೆಗಳ ಹುಚ್ಚು ಇದೆಯೋ?

ಉಳಿದ ದೇಶಗಳಂತೆ ರಷ್ಯಾದಲ್ಲಿ ಉಡುಗೆ ತೊಡಿಗೆಗಳ ಶೃಂಗಾರವೇ ಕಂಡು ಬರುವುದಿಲ್ಲ. ಅವರ ದೃಷ್ಟಿಕೋನವೇ ಬೇರೆ. ಕೆಲವು ಪ್ರಸಂಗಗಳಲ್ಲಿ ಉಡುಗೆಗಳ ಬಗ್ಗೆ ಲಕ್ಷ್ಯ ಕೊಡುವರು. ಸಾಧಾರಣವಾಗಿ ರಷ್ಯನ್ ಮಹಿಳೆಯರು ಉಡುಗೆ ತೊಡಿಗೆಗಳಲ್ಲಿ ವ್ಯಾವಹಾರಿಕ ದೃಷ್ಟಿಯುಳ್ಳವರಾಗಿದ್ದಾರೆ.

(೬) ರಷ್ಯಾದಲ್ಲಿ ಬೇಟೆಯಾಡುವುದಕ್ಕೆ ಅಪ್ಪರ ಇದೆಯೇ?

ಇದೆ. ರಷ್ಯನರು ಅದರಲ್ಲಿ ಮನಸ್ಸು ಹಾಕುತ್ತಾರೆ. ಅವರ ಭಾಷೆಯಲ್ಲಿ 'ಓಹೋಟಾ' ಅಂದರೆ ಬೇಟೆ, ಸುಖ ಎಂದೂ ಅರ್ಥವಾಗುತ್ತದೆ. ಬೇಟೆಯ ಕಾಲವು ಸಮೀಪಿಸುತ್ತಲೇ ಅವರು ಅದಕ್ಕೆ ಹೋಗಬೇಕೆನ್ನುತ್ತಾರೆ.

(೭) ಪ್ರಣಯದ ವಿಷಯವಾಗಿ ರಷ್ಯನ್ ಯುವಕರ ವಿಚಾರವೇನು?

ರಷ್ಯಾದಲ್ಲಿ ಹೆಂಗಸೇ ಪ್ರಣಯದಲ್ಲಿ ಮೊದಲು ಮುಂದಾಗುತ್ತಾಳೆ. ಸಮಾಜದಲ್ಲಿ ಆಕೆಗೆ ಸಮಾನ ದರ್ಜೆ ಇರುವದರಿಂದ ಆಕೆಗೆ ಯಾವ ಅಡ್ಡಿ ಆತಂಕಗಳೂ ಇರುವುದಿಲ್ಲ. ದುಡ್ಡಿನ ಮೇಲೆ ಮದುವೆಯಾಗುವುದು ಅಲ್ಲಿಯ ಜನರಿಗೆ ಗೊತ್ತೇ ಇಲ್ಲ. ಲೈಂಗಿಕ ಶಿಕ್ಷಣ ಕೊಡುವುದರಲ್ಲಿ ಅಲ್ಲಿಯ ಜನರು ಬಹಳ ಮುಂದೆ ಹೋಗಿದ್ದಾರೆ. ರಷ್ಯಾದಲ್ಲಿ ಮದುವೆಗಳು ರಿಜಿಸ್ಟರ್ ಪದ್ಧತಿಯಿಂದ ಜರುಗುವವು. ಆ ಸಮಾರಂಭವು ಬಹಳ ಸುಲಭವಾದುದು.

ಮದುವೆಗಾಗಿ ಅಪ್ಪಣೆ ಅಥವಾ ಲೈಸೆನ್ಸ್ ಅಲ್ಲಿ ಬೇಕಾಗಿಲ್ಲ. ನೆಟ್ಟಗೆ ರಿಜಿಸ್ಟ್ರರ ಕಚೇರಿಗೆ ಹೋಗಿ ತಮ್ಮ ಮದುವೆಯನ್ನು ರಿಜಿಸ್ಟರ್ ಮಾಡಿಸಿದರಾಯಿತು. ಆ ಅಧಿಕಾರಿಯು ಇಬ್ಬರ ವಿಷಯವನ್ನು ಪೂರ್ಣ ವಿಚಾರ ಮಾಡಿ, ಅವರ ಅನುಮತಿ ಅಂಕಿತ ಪಡೆಯುವನು. ಇಷ್ಟಾದರೆ ಅವರ ಮದುವೆಯಾಯಿತು. ಅಲ್ಲಿ ವಿವಾಹ ವಿಚ್ಛೇದಕ್ಕೆ ಅಪ್ಪಣೆಯ ಬೇರೆ ಕಡೆಯಿರುವಷ್ಟು ನಿಷ್ಠುರವಾದ ನಿಯಮಗಳೂ ಇಲ್ಲ.

ಬಿಡುಗಡೆಯ ಪ್ರಶ್ನೆ ಬಂದಾಗ ರಿಜಿಸ್ಟ್ರಾರನು ನ್ಯಾಯ ಬಗೆಹರಿಸಲು ಎರಡು ಸಾರಿ ಪ್ರಯತ್ನ ಮಾಡುವನು ಅದು ಯಶಸ್ವಿಯಾಗದಿದ್ದರೆ ಅವನು ಮುಂದೆ ಒಂದು ತಿಂಗಳಾದ ಮೇಲೆ ವಿವಾಹ ವಿಚ್ಛೇದನದ ನಿರ್ಣಯ ಪ್ರಕಟಿಸುವನು.

(೮) ಮಾಸ್ಕೋವಿನಲ್ಲಿ ಓಣಿ ಓಣಿ ತಿರುಗುವ ಅಂಗಡಿಕಾರರಿದ್ದಾರೆಯೇ?

ಇದ್ದಾರೆ. ಅವರು ಚಳಿಗಾಲದಲ್ಲಿ ೨೦ ಡಿಗ್ರಿಯಷ್ಟು ಶೈತ್ಯವಿರುವಾಗ ಚಾಕೊಲೆಟ್, ಐಸ್‌ಕ್ರೀಮ್ ಮೊದಲಾದುವನ್ನು ಮಾರುವರು. ಬೇಸಿಗೆಯಲ್ಲಿ ಬಾದಾಮಿ, ಕಲ್ಲಂಗಡಿ ಹಣ್ಣು ಮೊದಲಾದುವುಗಳನ್ನು ಮಾರುವರು. ಈ ಅಂಗಡಿಕಾರರು ಸಹಕಾರಿ ಸಂಘಕ್ಕೆ ಸೇರಿರುತ್ತಾರೆ. ಅಂಗಡಿಯಲ್ಲಿಟ್ಟು ಮಾರುವದಕ್ಕೆ ಬದಲು ಓಣಿಗಳಲ್ಲಿ ತಿರುಗಾಡಿ ಮಾರುತ್ತಾರೆ. ಸ್ವತಂತ್ರವಾಗಿ ಮಾರುವವರು ಬಹಳ ಕಡಿಮೆ.

(೯) ರಷ್ಯಾದಲ್ಲಿ ಮುಷ್ಕರಗಳಾಗುತ್ತವೆಯೋ?

ಕಾರ್ಮಿಕರ ವಿವಾದಗಳು ರಷ್ಯಾದಲ್ಲಿಯೂ ಆಗುತ್ತವೆ. ಕೂಲಿಕಾರರ ಕಾಯಿದೆಯ ಅಪಾರ್ಥ ಮಾಡಿದಾಗ, ಕೂಲಿಕಾರರಲ್ಲಿ ಶಿಸ್ತು ಭಂಗವಾದಾಗ ತಂಟೆಗಳು ಏಳುತ್ತವೆ. ಅನ್ಯಾಯ ಹೊಂದಿದ ಕೂಲಿಕಾರರು ಕಾರ್ಖಾನೆಯ ಮೇಲಾಧಿಕಾರದ ಬಗ್ಗೆ ಫಿರ್ಯಾದು ಮಾಡಬಹುದು. ಯೋಗ್ಯ ಆಹಾರ ಸಿಕ್ಕದಿದ್ದರೆ ಟ್ರಾಂಫ್ ಮತ್ತು ಕಾನ್‌ಫ್ಲಿಕ್ಟ್ ಕಮಿಷನ್ನಿಗೆ ಅಪೀಲು ಮಾಡಬಹುದು.

(೧೦) ರಷ್ಯಾದಲ್ಲಿ ಭಿಕ್ಷುಕರಿದ್ದಾರೆಯೇ?

ರಷ್ಯಾದಲ್ಲಿ ಭಿಕ್ಷುಕರೇ ಇರುವದಿಲ್ಲ. ಏಕೆಂದರೆ ಕೆಲಸ ಮಾಡಬಯಸುವವನಿಗೆ ಅಲ್ಲಿ ಕೆಲಸ ದೊರೆಯುವದು. ಕೆಲಸ ಮಾಡದ ಆಲಸಿಗೆ ಅಲ್ಲಿ ಸ್ಥಳವಿಲ್ಲ.

(೧೧) ರಷ್ಯಾದಲ್ಲಿ ಲಕ್ಷಾಧೀಶರಿದ್ದಾರೆಯೇ?

ಅಹುದು, ಕೆಲವರಿದ್ದಾರೆ. ಅವರು ಆಕಾಶ ವಿಮಾನ ನಡೆಸುವವರು. ರಷ್ಯಾದಲ್ಲಿ ಲಕ್ಷಾಧೀಶರು ಇಲ್ಲವೇ ಇಲ್ಲ. ೧೯೧೭ನೆಯ ಅಕ್ಟೋಬರಿನಲ್ಲಾದ ಕ್ರಾಂತಿ ನಂತರ ಅವರ ವಂಶವೇ ನಿರ್ಮೂಲನವಾಗಿದೆ. ಏಕೆಂದರೆ ಒಬ್ಬ ಮನುಷ್ಯನ ದುರ್ಲಾಭ ಪಡೆಯುವ ಪದ್ಧತಿಯನ್ನು ನಷ್ಟಗೊಳಿಸಲಾಗಿದೆ. ಎರಡನೆಯವರು ಕಷ್ಟಪಟ್ಟು ದುಡಿದುದರ ಪ್ರತಿಫಲವನ್ನು ಬೇರೆಯವನೊಬ್ಬನು ಪಡೆಯುವುದು ಅಲ್ಲಿ ಶಕ್ಯವೇ ಇಲ್ಲ.

(೧೨) ರಷ್ಯನ್ ಪೋಲೀಸರು ಅಲ್ಲಿಯ ಸಾರ್ವಜನಿಕರೊಡನೆ ಹೇಗೆ ವರ್ತಿಸುವರು?

ಎಲ್ಲಿ ಜನರಿಯ ಇಚ್ಛೆಯಂತೆ ಎಲ್ಲಾ ನಡೆಯುತ್ತದೆಯೋ, ಅಲ್ಲಿ ಪೋಲೀಸರ ಆವಶ್ಯಕತೆಗೆ ಆಸ್ಪದವೇ ಇಲ್ಲ. 'ಪೋಲೀಸ್' ಎಂಬ ಶಬ್ದವು ಅಲ್ಲಿರುವುದಿಲ್ಲ. 'ಪೋಲೀಸ್' ಎಂಬ ಶಬ್ದವು ಜನಪ್ರಿಯವಲ್ಲದ ಸಂಸ್ಥೆ ಆದ್ದರಿಂದ ಆ ಶಬ್ದ ರಷ್ಯನ್ ಶಬ್ದಕೋಶದಿಂದ ತೆಗೆದು ಹಾಕಲ್ಪಟ್ಟಿದೆ. ಸೈನ್ಯವೇ ಸಾರ್ವಜನಿಕ ವ್ಯವಹಾರ ನೋಡುತ್ತದೆ. ಮತ್ತು ನಾಗರೀಕರ ರಕ್ಷಣೆಯನ್ನು ಕಾಯುತ್ತ ರಷ್ಯನ್ ಸರ್ಕಾರದ ವಿರುದ್ಧವಿರುವ ವೈರಿಗಳು ತಮ್ಮ ಗೂಢಚಾರರನ್ನು ಕಳಿಸುವುದರಲ್ಲಿ ಯಶಸ್ಸು ಪಡೆಯದಂತೆ ನೋಡುವುದು ಸರ್ಕಾರದ ಭದ್ರತಾ ಮಂಡಲದ ಕೆಲಸ.

(೧೩) ರಷ್ಯಾದಲ್ಲಿ ಸಂಬಳದ ಮೇಲೆ ದುಡಿಯುವ ಮನೆಯಾಳುಗಳು ಇದ್ದಾರೆಯೇ?

ಇದ್ದಾರೆ. ಆದರೆ ಜಗತ್ತಿನ ಬೇರೆ ಕಡೆಯಿರುವ ಮನೆಯಾಳುಗಳಿಗೂ ರಷ್ಯಾದಲ್ಲಿರುವ ಮನೆಯಾಳುಗಳಿಗೂ ಬಹಳ ಅಂತರವಿದೆ. ರಷ್ಯಾದಲ್ಲಿ ಮನೆಯಾಳು ಅಂದರೆ ಮಾನಹೀನ ಮತ್ತು ಕೀಳು ಕೆಲಸ ಮಾಡುವವನಲ್ಲ.

(೧೪) ಮಾಸ್ಕೋವಿನ ಓಣಿಗಳಲ್ಲಿ ಜಾಹಿರಾತುಗಳ ಕುರುಹುಗಳು ಕಾಣಬರುತ್ತವೆಯೇ?

ಅಹುದು, ಆದರೆ ಬಹಳ ಕಡಿಮೆ. ಬಂಡವಾಳಗಾರರ ರಾಜ್ಯಗಳಲ್ಲಿ ಓಣಿ, ಕೂಟ ಮೊದಲಾದ ಕಡೆಗಳಲ್ಲಿ ನಾನಾ ತರದ ವಸ್ತುಗಳ ಜಾಹಿರಾತು ಪಟಗಳು ತುಂಬಿರುತ್ತವೆ. ಆದರೆ ಮಾಸ್ಕೋವಿನಲ್ಲಿ ಇವು ಇಲ್ಲ. ಮಾಸ್ಕೋವಿನಲ್ಲಿ ಬೆಂಕಿ ಅನಾಹುತದ ಮೇಲೆ ವಿಮೆ ಮಾಡುವ ಬಗ್ಗೆ ಬೆಳಕಿನ ಜಾಹಿರಾತುಗಳಿವೆ.

(೧೫) ರಷ್ಯಾದಲ್ಲಿ ಶಿಕ್ಷಣವು ಉಚಿತವಾಗಿರುವದೇ?

ರಷ್ಯಾದಲ್ಲಿ ಶಿಕ್ಷಣವು ಉಚಿತವಾಗಿರುವುದಲ್ಲದೆ ಎಲ್ಲರಿಗೂ ಸಮಾನವಾಗಿ ಸಿಗುತ್ತದೆ. ೧೬ನೆಯ ವರ್ಷದ ವರೆಗೆ ಅಲ್ಲಿ ಶಿಕ್ಷಣವು ಒತ್ತಾಯವಾಗಿ ಕೊಡಲಾಗುವುದು. ಜನರು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸಲಿಕ್ಕೆ ಅವರ ಸಂಬಳವು ಹೆಚ್ಚು ಅನುಕೂಲವಾಗಿದೆ. ಔದ್ಯೋಗಿಕ ಶಾಲೆಗಳಲ್ಲಿ ಕಲಿಯುವ ವಿದ್ಯಾರ್ಥಿಗಳ ಅನ್ನ, ಬಟ್ಟೆ, ವಸತಿಗಳ ಭಾರವನ್ನು ಸರ್ಕಾರವೇ ವಹಿಸುವುದು. ಅವರು ಮಾಡಿದ ಕೆಲಸಕ್ಕೆ ಹಣವೂ ಸಿಗುವುದು. ವಿದ್ಯಾರ್ಥಿಯ ಶಿಕ್ಷಣ ಕ್ರಮವು ಮುಗಿದೊಡನೆ ಅವನಿಗೊಂದು ನೌಕರಿಗೆ ಅಲೆದಾಡುವ ಕಾರಣವಿಲ್ಲ.

(೧೬) ರಷ್ಯಾದಲ್ಲಿ ವೇಶ್ಯಾ ವ್ಯವಸಾಯ ಇದೆಯೇ?

ಅನಿರ್ಬಂಧ ಅಥವಾ ನಿರ್ಬಂಧಿತ ವೇಶ್ಯಾ ವ್ಯವಸಾಯವೆಂಬುದೇ ರಷ್ಯಾದಲ್ಲಿಲ್ಲ. ಇದಕ್ಕೆ ನೈತಿಕ ಮತ್ತು ಆರ್ಥಿಕ ಕಾರಣಗಳೂ ಉಂಟು. ಹೆಂಗಸಿಗೆ ಗಂಡಸಿನಷ್ಟೇ ಸಮಾನ ಹಕ್ಕುಂಟು. [illegible] ಸಿನಂತೆ ಹೆಂಗಸಿಗೂ ವೇತನ [illegible] ತ್ತದೆ.

ಯಾರಾದರೂ ರಷ್ಯನ್ನನಿಗೆ [illegible] ವೇಶ್ಯಾ ವೃತ್ತಿಯ ಬಗ್ಗೆ ಪ್ರಶ್ನೆ [illegible] ದೊಂದು ವಿಕೋಪಕ್ಕೆ ಹೋದೀತು. ಬಂಡವಾಳಗಾರರ ರಾಜ್ಯದಲ್ಲಿ ಪ್ರ[illegible]ವಾಗಿರುವ ಈ ವೇಶ್ಯಾ ವೃತ್ತಿಯ [illegible] ನಿರ್ಮೂಲಗೊಳಿಸಲು [illegible] (೧೯೧೭) ಕ್ರಾಂತಿ ಏನೇನು [illegible] ಬುದನ್ನು ತಿಳಿಯಬೇಕಾಗುವುದು.

(೧೭) ರಷ್ಯಾದಲ್ಲಿ ವೈದ್ಯ[illegible] ಹಾಯವು ಯಾವ ರೀತಿ ಸಿಗುತ್ತ[illegible]

ರಷ್ಯಾದಲ್ಲಿ ವಯಸ್ಸು, ಲಿಂಗ, ಸಾಮಾಜಿಕ ದರ್ಜೆ ಮೊದಲಾದ ಭೇದ[illegible]ನ್ನಭಾವವಿಲ್ಲದೆ ಪ್ರತಿಯೊಬ್ಬನಿಗೂ ವೈದ್ಯಕೀಯ ಸಹಾಯವು ಉಚಿತವ[illegible]ತ್ತೆಯುವುದು. ಅದರ ವೆಚ್ಚವೆಲ್ಲ [illegible] ಸರ್ಕಾರವೇ ವಹಿಸುವುದು.

(೧೮) ರಷ್ಯನ್ ತರುಣರಿಗೆ ನೃತ್ಯದಲ್ಲಿ ಅಭಿರುಚಿ ಇರುವುದೇ? ಮಾಸ್ಕೋದಲ್ಲಿ ರಾತ್ರಿ ಕ್ಲಬ್ಬುಗಳಿವೆಯೇ?

ಅವರು ನೃತ್ಯದಲ್ಲಿ ಆಸಕ್ತಿಯುಳ್ಳವರಾಗಿದ್ದಾರೆ. ಆದಿತ್ಯವಾರ ತಮಗೆ ತೃಪ್ತಿಯಾಗುವ ವರೆಗೆ ಈ ನೃತ್ಯ ಸುಖವನ್ನು ಪಡೆಯುತ್ತಾರೆ. ಇತರ ಹಬ್ಬದ ದಿವಸಗಳಲ್ಲಿಯೂ ಕೂಡ ಕುಣಿದು ನಲಿಯುತ್ತಾರೆ.

(೧೯) ರಷ್ಯಾದಲ್ಲಿ ಶವಸಂಸ್ಕಾರದ ವೆಚ್ಚವನ್ನೆಲ್ಲ ಸರ್ಕಾರವೇ ವಹಿಸುವುದೇ?

ಇಲ್ಲ. ಸರ್ಕಾರವು ಸಮಾಧಿ ಮಾಡುವ ಖರ್ಚನ್ನು ಹೊರುವುದಿಲ್ಲ. ಆಲ್ಲೊಂದು ಪದ್ಧತಿಯು ರೂಢಿಯಲ್ಲಿ ಬಂದಿದೆ. ಸತ್ತವನು ಯಾವ ಕಾರ್ಖಾನೆ, ಆಫೀಸ ಅಥವಾ ಮತ್ತೆ ಯಾವುದಾದರೂ ಕೆಲಸದಲ್ಲಿ ಸೇರಿರುವನೋ, ಅದು ಅವನ ಸಮಾಧಿ ವೆಚ್ಚವನ್ನು ವಹಿಸುವುದು.

(೨೦) ರಷ್ಯಾದಲ್ಲಿ ಕೆಲಸಗಾರರು ಎಷ್ಟನೇ ವಯಸ್ಸಿನಲ್ಲಿ ನಿವೃತ್ತರಾಗುತ್ತಾರೆ?

ಎಲ್ಲ ಕೆಲಸಗಾರರಿಗೂ ನಿವೃತ್ತಿ ಹಕ್ಕು ಇರುವುದು. ಗಂಡಸರು ಕಾವು ೨೫ ವರ್ಷ ದುಡಿದಿದ್ದರೆ ೬೦ನೇ ವಯ. ವಯಸ್ಸಿನಲ್ಲಿ ನಿವೃತ್ತರಾಗಬಹುದು. ಹೆಂಗಸರು ೨೦ ವರ್ಷ ದುಡಿದು ೫೫ನೇ [illegible] ವಯಸ್ಸಿನಲ್ಲಿ ನಿವೃತ್ತರಾಗಬಹುದು. ನಿವೃತ್ತಿ ವೇತನವು ಅವರ ಸರಾಸರಿ ಸಂಬಳದಲ್ಲಿ ನೂರಕ್ಕೆ ೫೦ ರಿಂದ ೬೦ ರ ವರೆಗೆ ಅಂದರೆ ಅರ್ಧಕ್ಕಿಂತ ಹೆಚ್ಚು ಸಿಗುವುದು.

'ಶಾ. ಶಾ.'

ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್, ಫ್ರೇಜರ್ ಪೇಟೆ.

ಮಹಾಜನರಲ್ಲಿ ವಿನಂತಿ.

ಫ್ರೇಜರ್‌ಪೇಟೆಯ ನಮ್ಮ ಕಾರ್ಖಾನೆಯಲ್ಲಿ ಈಗಾಗಲೇ ಮೂಳೆಗೊಬ್ಬರ ತಯಾರಾಗುತ್ತಿರುವುದು ಎಲ್ಲರಿಗೂ ತಿಳಿದ ವಿಷಯ. ಈ ಸಂದರ್ಭದಲ್ಲಿ ನಿಮ್ಮ ನಿಮ್ಮ ಗ್ರಾಮಗಳಲ್ಲಿ ಸತ್ತ ದನಗಳ ಮತ್ತು ಇತರ ಪ್ರಾಣಿಗಳ ಮೂಳೆಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಜಮಾಯಿಸಿ ಮೇಲಿನ ವಿಳಾಸಕ್ಕೆ ತಿಳಿಸಿದಲ್ಲಿ ಅದನ್ನು ಅದರ ಬೆಲೆ ಕೊಟ್ಟು ಸಾಗಿಸುವ ನಿರ್ವಾಹವನ್ನು ಮಾಡುತ್ತೇವೆ. ಅಥವ ಲಾರಿಗಟ್ಟಲೆ ಜಮಾಯಿಸಿದವರು ನಮ್ಮ ಫ್ರೇಜರ್‌ಪೇಟೆ ಕಾರ್ಖಾನೆಗೆ ತಂದು ಕೊಟ್ಟಲ್ಲಿ ಮಣ 1ರ 0-12-0 ಯಂತೆ ಬೆಲೆಗೆ ತೆಗೆದುಕೊಳ್ಳಲಾಗುವುದು.

ಈಗಾಗಲೇ ತಯಾರಾಗಿರುವ ಮೂಳೆ ಗೊಬ್ಬರಕ್ಕೆ ಖಾಯಿಸ್‌ದಾರರು ಬರಕೊಂಡಲ್ಲಿ ಅಗ್ರಸ್ಥಾನವನ್ನನುಸರಿಸಿ ಬಟವಾಡೆ ಮಾಡಲಾಗುವುದು.

ಸೂಚನೆ:–ನಮ್ಮ ಕಂಪನಿಯ ಶೇರುದಾರರಿಗೆ ಹೆಚ್ಚಿನ ರಿಯಾಯಿತಿ ಮತ್ತು ಮೊದಲಿನ ಹಕ್ಕು ಕೊಡಲಾಗುವುದು.

ಫ್ರೇಜರ್‌ಪೇಟೆ,
ತಾ 19-5-49

ಕೆ. ಕೆ. ತಿಮ್ಮಯ್ಯ,
ಮೇನೇಜಿಂಗ್ ಡೈರೆಕ್ಟರ್.

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್ ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟೆಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. ·32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245 ರ ವರೆಗೆ.
2. ·32 ರಿವಾಲ್ವರುಗಳು (Revolvers) „ 262 „ 274 „
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott) ಕ್ರಯ ರೂ. 1492/-
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make) ಕ್ರಯ ರೂ. 700/-
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4-10-0
6. 12, 16, 20ನೇ ನಂಬರು ಕೋವಿಗಳ ತೋಟೆಗಳೂ ಪಿಸ್ತೂಲು ಮತ್ತು ರಿವಾಲ್ವರುಗಳ ತೋಟೆಗಳೂ ಸಹ ದೊರೆಯುತ್ತವೆ.

(ಅವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವವು)

52–6

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ

ವಿಮೆ ಮಾಡಲು ಇಲ್ಲವೇ ಪ್ರತಿನಿಧಿಸಲು ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.

ಇವರ ಸಲಹೆಗಿಂತ ಉತ್ತಮ ಮಾರ್ಗವಿಲ್ಲ.

ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದೂಸ್ಥಾನದ ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು.

ದಿ ಬೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

30 ಮೌಂಟ್ ರೋಡ್,
ಪೊ. ಬಾ. ನಂ. 337,
ಮದ್ರಾಸು 2.

ಬೋಂಬೆ ಲೈಫ್ ಬಿಲ್ಡಿಂಗ್,
ಪೊ. ಬಾ. ನಂ. 1,
ಉಡುಪಿ.

(ಟೆಲಿಫೋನ್ ನಂ. 8398)

ಇತರ ಆಫೀಸುಗಳು:—ಬೆಂಗಳೂರು, ತಿರುವೆಂಡರಂ, ಕಲ್ಲಿಕೋಟೆ, ಮಂಗಳೂರು, ಮಧುರೆ, ಮತ್ತು ಬೊಂಬಾಯಿ.

ದಿ ಟ್ರಾಪಿಕಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:— ಲಾಲ ಶಂಕರ್ ಲಾಲ್.

ಮುಖ್ಯ ಖಚೇರಿ:— ಹೊಸ ಡೆಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು.
ಹಕೀಮ್ ಅಜಮಲಖಾನ್.
ಎಸ್. ಶ್ರೀನಿವಾಸ ಅಯ್ಯಂಗಾರ್
ಡಾ॥ ಎಂ. ಎ. ಅನ್ಸಾರಿ.

Transacts:—Life, Fire, Motor and Marine.

ನಮ್ಮ ಹೊಸ ವಿಸ್ತರದ ಯೋಜನೆಯಲ್ಲಿ ಆಕರ್ಷಕ ಕಮಿಷನ್ ಮೇಲೆ ಏಜನ್ಸಿಗೆ ದಯವಿಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಆರ್ಗನೈಜರ್
ದಕ್ಷಿಣ ಕೊಡಗು, ಪೊನ್ನಂಪೇಟೆ
ಅಥವಾ
ಯಂ ಯಂ. ಅಚ್ಚಣ್ಣ,
ಏಜೆನ್ಸಿ ಸುಪರಿಂಟೆಂಡೆಂಟ್,
ಮಡಿಕೇರಿ, ಕೊಡಗು.

ಆರ್ಗನೈಜರ್
ಉತ್ತರ ಕೊಡಗು, ಮಡಿಕೇರಿ.
ಅಥವಾ
ಎಂ. ಎ ಬೆಳ್ಯಪ್ಪ,
ಬ್ರಾಂಚ್ ಸೆಕ್ರೆಟರಿ,
ಹಂಪನಕಟ್ಟಾ, ಮಂಗಳೂರು

ಎಂಪೈರ್ ಆಫ್ ಇಂಡಿಯಾ ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

48ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು.	ಒಟ್ಟು ಆದಾಯ	1,07,09,000	ಮೀರಿದೆ
	ಜಾರಿಯಿರುವ ವಿಮೆ	17,74,52,000	„
	ಆಸ್ತಿ	6,67,60,000	„
ಕಂಪೆನಿಯು ಆದಿಯಲ್ಲಿ ಕೊಟ್ಟ ಕ್ಲೈಮುಗಳು		8,83,62,000	„

ಶಾಖಾ ಕಛೇರಿ:
ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್,
ಕೆಂಪೇಗೌಡರಸ್ತೆ, ಬೆಂಗಳೂರು.

ಏಜೆನ್ಸಿ ಅರ್ಜಿಗಳನ್ನು ಸ್ವಾಗತಿಸಿದೆ.

ಪ್ರಧಾನ ಕಛೇರಿ:
ಎಂಪೈರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ್, ಬೊಂಬಾಯಿ.

CRESCENT

FOR PROTECTION AND SERVICE.

It is best to represent and insure with The CRESCENT Insurance Co., Ltd,

H: O: BOMBAY.] [*Established 1919.*

For particulars write to:

Sri B. A Poovaiah
Organiser
Pollibetta, Coorg.

or

The Branch Manager,
22 B. Mahatma Gandhi Road,
Bangalore 1.

ಸುರಕ್ಷಿತವಾದ ಜೀವವಿಮೆ ಪಡೆಯಲು

ಕ್ರೆಸೆಂಟ್

ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ.ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,65,000.
ಕ್ಷೇಮನಿಧಿ	ರೂ.	50,000.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ಯೂ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಸಟ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ,
ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C.
ಪ್ರೆಸಿಡೆಂಟ್ ಮತ್ತು ಖಜಾಂಚಿ.

Edited, Printed and Published by P. I. Belliappa at 'Kodagu Press,' Mercara, for 'Kodagu' Ltd.

Reg. No. M. 1550.
'KODAGU' MERCARA. (Coorg).

ಕೊಡಗು

ಸಂಪಾದಕರು—ಬಿ. ಡಿ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೨೮ | ತಾರೀಕು ೧೪-೯-೧೯೫೧ನೇ ಶುಕ್ರವಾರ | ಸಂಚಿಕೆ ೧೭

ಒಂದು ಹರಟೆ.

ಕಪ್ಪು

—ಶ್ರೀ. ಎಂ. ಎಸ್. ಮೊಣ್ಣಪ್ಪ, ಕಾನೂರು.

ಕಪ್ಪು ಅಂದರೆ ಜನರು ತಪ್ಪು ತಿಳಿದುಕೊಂಡು ಬಿಡುತ್ತಾರೆ. ಕಪ್ಪು ಬಣ್ಣವನ್ನು ಜನರು ಒಪ್ಪುವುದು ಬಹಳ ವಿರಳ. ಕಬ್ಬಿಣವು ಜನರ ಪ್ರತಿನಿತ್ಯದ ಉಪಯೋಗದಲ್ಲಿದ್ದರೂ ಅದರ ಮೇಲೆ ಜನರಿಗೆ ಪ್ರೇಮ ಕಡಿಮೆ. ಚಿನ್ನವು ಸಾಮಾನ್ಯ ಜನರಿಗೆ ನೋಡಸಿಗುವುದು ಕೂಡ ದುರ್ಲಭ! ಆದರೂ ಅದಕ್ಕೆ ಹಾತೊರೆಯುವವರು ಹೆಚ್ಚು. ಅದರಂತೆ ಕಪ್ಪು ಬಣ್ಣ ಬಣ್ಣಗಳಲ್ಲಿ ಕಡಿಮೆ ತರಗತಿಯದಾದರೂ ಅದರ ಮಹಿಮೆ ದೊಡ್ಡದು. ಇವತ್ತು ಪ್ರಪಂಚದಲ್ಲಿ ಬಿಳಿಯರ ಆಧಿಕ್ಯವು ಹೆಚ್ಚಿದ್ದರೆ ಕಾರಣವೇನು? ಅವರು ಮೊದಲು ಬಣ್ಣಕ್ಕೆ ಬೆಲೆ ಕಟ್ಟಿದವರು. ಅನಂತರ ಕ್ರಮೇಣ ಬಿಳಿಬಣ್ಣಕ್ಕಾಗಿ ಸರಿ ಹೊಂದುವಂತೆ ಅವರ ನಾಗರೀಕತೆ, ಆಚಾರ ವಿಚಾರ, ಹಾವಭಾವಗಳನ್ನು ಅವಲಂಭಿಸಿ ಬಿಳಿಯರಾಗಲು ಯತ್ನಿಸಿದರು ನಮ್ಮವರು. ಕೆಲವರು ಅವರ ಸ್ವಾರ್ಥಸಾಧಕ ಬಿಳಿಯರ ಮಾತಿಗೆ ಮಾರು ಹೋದರೂ ಆತ್ಮವನ್ನು ಬಿಳಿಯರಿಗೆ ಮಾರಿದ ಕಪ್ಪು ಜನರನ್ನು ತಮ್ಮ ಅಡಿಯಾಳುಗಳಾಗಿಯೇ ಇಟ್ಟುಕೊಂಡರು.

ಕಪ್ಪು ಜನರಿಗೆ ಬ್ರಿಟಿಷ್ ಆಧಿಪತ್ಯದಲ್ಲಿ ಸ್ಥಳವಿಲ್ಲ. ಬಿಳಿ ಬಣ್ಣಕ್ಕಾಗಿ ಬಯಸಿದ ತ್ರಿರಂಗ ಬಂದಗಳನ್ನು ಹಾಗೆ ಕಪ್ಪು ಜನರೇ ತಾರಿಸುತ್ತಿದ್ದರೆ. ಅವರು ವಾಸವಾಗಿದ್ದ ಖಂಡಕ್ಕೆ 'ಬ್ಲ್ಯಾಕ್ ಕಾಂಟಿನೆಂಟ್' ಎಂದು ಹೆಸರಾಗಿದೆ. ಆಫ್ರಿಕಾದ ಹಿಂದುಳಿಯುವಿಕೆಗಂತೂ ಅಲ್ಲಿಯ ಮೂಲಪುರುಷ ಕಾಲನಾಗಿ ಪರಿಣಮಿಸಿದ್ದಾನೆ. ಅವರೂ ನಮ್ಮಲ್ಲಿ ಕಪ್ಪು ಬಣ್ಣವೆಂದರೆ ಜಿಗುಪ್ಸೆ, ತಾತ್ಸಾರ. ಈಗಲೂ ಅನೇಕರು ಮುಖ ಚೂರ್ಣವನ್ನು ಹಚ್ಚಿ ಬಿಳಿದಾಗಲು ಪ್ರಯತ್ನಿಸುವರು. ಆದರೆ ಕಪ್ಪು ಬಣ್ಣ ನಮಗೆಷ್ಟು ಒಪ್ಪುತ್ತದೆ ನೋಡಿ!

ತಲೆಕೂದಲು ಕೊಂಚ ಕೆಂಚಗಾಗಿದ್ದರೆ ಅದು ಸೊಗಸು ಕಾಣದು. ಕೆಂಚ ಅಥವಾ ಕೆಂಚಿಯೆಂಬುದಾಗಿ ಜನರು ತಿರಸ್ಕಾರದ ಅನ್ವರ್ಥನಾಮದಿಂದ ಕರೆಯುವರು. ವೃದ್ಧಾಪ್ಯದಲ್ಲಿ ತಲೆಕೂದಲು ನೆರೆತು ಬಿಳಿ ಬಣ್ಣವಾದರೆ ಅದನ್ನು ಕಪ್ಪು ಮಸಿ ಹಚ್ಚಿ ಮರೆಸಿಟ್ಟು ಇನ್ನೂ ಲಕ್ಷ ವರ್ಷಗಳ ವರೆಗೆ ಬಾಳಲು ನೋಡಲು ಚೆನ್ನದಿದೆಯೆಂದು ಸರಕಾರದಲ್ಲಿ ಮನವಿ ಮಾಡುವರು. ಯುವಕರ ತಲೆಯಲ್ಲಿ ಬಿಳಿ ಕೂದಲಿದ್ದರೆ ಅವರನ್ನು ಮುಟ್ಟಿ ಮಾದಲಿಸುತ್ತಾರೆ. ಆಗ ಬಿಳಿ ಬಣ್ಣ ಅನೇಕರಿಗೆ ಬೇಕಾಗುವುದಿಲ್ಲ. ಕಪ್ಪು ತಲೆಕೂದಲನ್ನು ನವನಾಗರಿಕರೆಲ್ಲರೂ ಮೆಚ್ಚುತ್ತಾರೆ. ಪಾಶ್ಚಾತ್ಯ ಬಿಳಿಯರು ಕೂಡ ಮೋಹಿಸುತ್ತಾರೆ.

ಮುಖದಲ್ಲಿ ಕಣ್ಣು ಕಪ್ಪಾಗಿದ್ದರೆ ಅದು ವಿಶಿಷ್ಟ ಅಂದವನ್ನು ಕೊಡುತ್ತವೆ. ಅದಲ್ಲದೆ ಸ್ವಲ್ಪ ಬಿಳಿದಾಗಿದ್ದರೆ 'ಬೆಕ್ಕಿನ ಕಣ್ಣು' ಅನ್ನುತ್ತಾರೆ. ಕಣ್ಣು ಕಪ್ಪಾಗಿರಬೇಕೆಂದು ಅದರ ಸುತ್ತಲೂ ಕಾಡಿಗೆಯನ್ನು ಹಚ್ಚಿ ಸೌಂದರ್ಯವನ್ನು ಹೆಚ್ಚಿಸುವ ವನಿತೆಯರು ಹೆಚ್ಚೆ ಗೊಬ್ಬರಂತೆ ನಮಗೆ ಕಾಣುತ್ತೀವೆ. ಬಿಳಿ ಮುಖದವರು ಸರ್ವಸಾಮಾನ್ಯವಾಗಿ ಕಪ್ಪು ಉಡುಪನ್ನು ಇಷ್ಟಪಡುವರು. ಅವರ ಬಿಳಿಮುಖವು ಕರಿ ಉಡುಪಿನೊಳಗಿಂದ ಉದಯಿಸಿ ಬರುವ ಚಂದ್ರನಂತೆ ಕಾಣುತ್ತದೆಯೆಂದು ಅವರ ಭಾವನೆ. ಅದಕ್ಕಾಗಿ ಅವರಿಗೆ ಕಪ್ಪು ಬಣ್ಣ ಪ್ರಯೋಜನವಾಗುವುದು. ಒಂದು ತಲೆಗೆ ಎರಡು ಜಡೆಗಳನ್ನು ಹೆಣೆದು ಮುಖದ ಎಡೆ ಈಡೆ ತೂಗಿಸಿ ಮುಖದ ಅಂದವನ್ನು ಇಮ್ಮಡಿಸುವವರನ್ನು ನಾವೆಷ್ಟು ನೋಡುವುದಿಲ್ಲ?

ಸಮ್ಮಕರಿಯ ಮುಖದಲ್ಲಿ ಆಕಸ್ಮಿಕವಾಗಿ ಒಂದೊಂದು ಬಾರಿ ಮಸಿಯಿದ್ದರೆ ಅವಳನ್ನು ನಾವೆಷ್ಟು ಗೋಳಾಡಿಸುತ್ತೇವೆ? ಆಗ ಅವಳಿಗೆ ಕಪ್ಪು ಮುಖವೇ ಬೇಕೆನಿಸುವುದಿಲ್ಲವೆ? ಅಥವಾ ಕರಿ ಟೊಪ್ಪಿ ಹಾಕಿದ ಕಮ್ಯೂನಿಸ್ಟರ ಪ್ರೇರಣೆಯಿಂದ ಅಲ್ಲದಿದ್ದರೂ ಕಾರಣಾಂತರದಿಂದ ಅಧಿಗಮನೆಗೆ ಹೋಗದೆ ಸಂಸ್ಕಾರ ಹೊಡೆಯುವುದಿದೆ. ಆಗ ನಾವೇ ಅತಿಗ ಮಾನವು ಪಾಂಡಿತ್ಯಯನ್ನು ಮಾಡಬೇಕಾಗಿದೆ. ಆಗ ಯಾರಾದರು ಮೇಣಗಿನಿಂದ ಕರಿದರೆ ನಮ್ಮ ಮುಖದ ಮೇಲೆ ಮಸಿಯಿದ್ದರೆ ನಮಗೆಷ್ಟು ಗೌರವ ಕಡಿಮೆಯಾಗುವುದು ಬಲ್ಲಿರಾ? ಆಗ ನಮ್ಮ ಕರಿಮುಸುಡಿಯು ನಮಗೆಷ್ಟು ಸಹಾಯಕವಾಗುವುದು!

ಧ್ವಜಗಳಲ್ಲಿ ನೋಡಿ, ಶ್ವೇತಬಣ್ಣದ ಧ್ವಜವು ಶರಣಾಗತ, ಕೆಂಪು ಆಕಸ್ಮಿತ, ಕಪ್ಪು ವ್ಯಸನ ಸೂಚಕ. ಇವು ಮೂರರಲ್ಲಿ ಕಪ್ಪು ಧ್ವಜವೇ ಮೇಲು. ಶ್ವೇತ ಧ್ವಜವನ್ನು ಹಾರಿಸಿ ಜವಾನಿಗಳಂತೆ ಶರಣಾಗತರಾಗಿ ಕಿರುಕುಳಪಡುವುದಕ್ಕಿಂತ ಸಾಯುವುದೇ ಲೇಸು. ಜೀವವಿದ್ದರೂ ಸತ್ತವರಂತೇಕೆ ಬಾಳಬೇಕು? ಕೆಂಪು ಧ್ವಜವನ್ನು ನೋಡಿ ನಾವು ಎಷ್ಟು ಸಾರಿ ಹ[...]ವಿಸುವುದುಂಟು. ಯಾತಕೆಂದರೆ ಆಕಸ್ಮಿಕ ಸೂಚನೆ ಕಣ್ಣಿಗೆ ಬ[...] ಕಾಲಿಗೆ ಬರುತ್ತದೆ ಎಂಬುದಾಗಿ [...]ಕೊಂಡು ಗಳಿಗೆಗಳಿಗೂ ಸಾಯು[...]ಗುವುದು. 'ಇನ್ಸೂರ್' ಮಾಡಿದ್ದರೆ ಸರಿ, ಇಲ್ಲದಿದ್ದರೆ ನಮ್ಮನ್ನಾಧರಿಸಿದವರ ಜೀವನವೂ ಆಕಸ್ಮಿಕವಾಗುವುದರಲ್ಲಿ ಸಂದೇಹವಿಲ್ಲ. ಕಪ್ಪು ಧ್ವಜ ಎಲ್ಲರೂ ಕನಿಕರಿಸುವ ಸೂಚನೆ. ಸಲ್ಪ ಜನರು 'ಪಾಪ' ವೆಂದರೆ ಭಿಕ್ಷೆಯ ಪಾತ್ರೆ ತುಂಬುತ್ತೆ. ಇದರಿಂದ ಜೀವನ ದಾರಿಯು ಸುಗಮವಾಗುತ್ತದೆ. ಅದ್ದರಿಂದ ಇಲ್ಲಿಯೂ ಕಪ್ಪು ಮೇಲು.

ಇವೆಲ್ಲಾ ಲಾಭದಾಯಕವಲ್ಲದಿದ್ದರೂ ಜೀವದಾಯಕ ಸಾಕರ್ಯವಾಯಿತು. ಆದರೆ ಕಪ್ಪುಸಂತೆ! ಇದು ಹುಟ್ಟಿಕೊಂಡ ನಂತರ ಅದೆಷ್ಟು ಜನರು ನವಜೀವನವನ್ನು ಹೊಂದಿ ಸಮಾಜದಲ್ಲಿ ತಮ್ಮ ಅಂತಸ್ತನ್ನು ಗಗನಕ್ಕೆ ಮುಟ್ಟಿಸಲಿಲ್ಲ? ಇವರ ಅಂತರಾತ್ಮನು ಕಪ್ಪಾಗಿದ್ದರೂ ಬಾಹ್ಯಾಡಂಭರಕ್ಕೆ ಇವರೆಷ್ಟು ಗೌರವಸ್ಥಾನವನ್ನು ಪಡೆಯಲಿಲ್ಲ? ಹಣವು ಕಾಳಸಂತೆಯಲ್ಲಿ ಗಳಿಸಿದ್ದರೂ ಇವರಿಗೆ ಹೂವಿನ ಸರ ತೊಡಿಸಿ ಗಣ್ಯವ್ಯಕ್ತಿಗಳಾಗಿ ಮಾಡುವುದು. ಹಗಲು ಹೊತ್ತಿನಲ್ಲಿ ರೂಪಾಯಿಯ ಬಣ್ಣ ಬೆಳಗಿದ್ದರೂ ಅದರ ಸಂಪಾದನೆ ಕಪ್ಪುಸಂತೆಯಲ್ಲಿಯೆಂದು ಹೇಳುವವರಾರು? ಕಪ್ಪುಸಂತೆಯಲ್ಲಿ ಧನ ಗಳಿಸಿದವರಿಗೆ ಶಿಕ್ಷೆ ಸಹ ಸಿಗಬೇಕೆಂಬುದಾಗಿ ಕಾನೂನು ಮಾಡಿದ್ದರೆ? ಕಾನೂನೂ ಕಪ್ಪುಸಂತೆಯಿಂದ ನಿರ್ಲಕ್ಷ್ಯವಾಗಿದೆಯೇನು?

ಮೈ ಬಣ್ಣ ಕಪ್ಪಾಗಿದೆಯೆಂದು (ನವನಾಗರಿಕತೆಯ) ಸಿನೇಮಾ ಯುಗದ ಯುವಕ ಯುವತಿಯರು ಗಂಡ ಹೆಂಡತಿಯರಾಗಲು ಒಪ್ಪುವುದಿಲ್ಲ. ಆದರೆ ಇವರ ಬಿಳಿ ಹಣೆಯ ಮೇಲೆ ಗಂಧಾಕ್ಷತೆಗೆ ಬದಲು ಮೂರುಕಾಸಿನಷ್ಟು ಅಗಲದ ಕಪ್ಪು ಬೊಟ್ಟು ಹಾಕಿ ಅವರ ಅಂದ ಚಂದಕ್ಕೆ ಅವರೇ ಮರುಳಾಗುತ್ತಾರೆ. ದ್ವಾಪರ ಯುಗದಲ್ಲಿ ಕಪ್ಪು ಮೈ ಬಣ್ಣದ ಶ್ರೀಕೃಷ್ಣನಿಗೆ ಹದಿನಾರು ಸಾವಿರ ಹೆಂಡತಿಯರಿದ್ದರಂತೆ! ಒಬ್ಬ ಕರಿ ವ್ಯಕ್ತಿಯನ್ನು ಹದಿನಾರು ಸಾವಿರ ಸ್ತ್ರೀಯರು ಮೋಹಿಸಬೇಕಾದರೆ ಕಪ್ಪು ಬಣ್ಣದ ಪ್ರಭಾವವೇನಾದ್ದಾಗಿರಬೇಕು? ಅಕ್ಷಿ ಪ್ರೇಮವು ಕಪ್ಪನ್ನು ಹಾರಿಸಿ ಬಿಡಲಿಲ್ಲವೆ? ಮೈ ಬಣ್ಣ ಕಪ್ಪಾಗಿದ್ದರೂ ಅಂತರಾತ್ಮನ ಕಪ್ಪಾಗಿರಬಾರದು ಅಷ್ಟೆ.

ಇಂಗ್ಲೀಷಿನ ಬಿಳಿ ಬಿಳಿಯರು ಹೊರಟು ಹೋಗಿದ್ದರೂ ಹಿಂದೂಸ್ಥಾನದ 'ಕರಿ ಬ್ರಿಟಿಷರು' ಅದನ್ನು ತಿಳಿಯದೆ ಕಪ್ಪು ಬಣ್ಣವನ್ನು ಇನ್ನೂ ಕಡೆಗಣಿಸುತ್ತಿದ್ದಾರೆ. ಕಪ್ಪು ಬಣ್ಣವನ್ನು ನಮ್ಮಲ್ಲಿ ವೃದ್ಧಿಗೊಳಿಸಿ ನಾವು ಸ್ವಾವಲಂಬಿತನವನ್ನು ಬೇಗ ಬೇಕಾದರೆ ವಿಲಾಸ ತೆರಿಗೆ ಹೆಚ್ಚಿಸಬೇಕು. ಇನ್ನೂ ಮೈ ಹಿಂದಿನ ಗುಲಾಮ-ಬ್ರಿಟಿಷ್ ಗೊಂಬೆಗಳಾಗಿದ್ದವರು ತಮ್ಮ ಬಣ್ಣ ಬದಲಾಯಿಸಬೇಕು. ಬಿಳೀ ಬಣ್ಣಕ್ಕೆ ಬೆಲೆಯಿಲ್ಲವೆನ್ನುವುದನ್ನು ತಿಳಿಯಬೇಕು.

ನೆಂಟಸ್ತಿಕೆ ಬೆಳೆಸಲಿರುವ ಯುವಕ ಯುವತಿಯರಿಗೆ ನನ್ನದೊಂದೇ ಸಲಹೆ. ಸಂಗಾತಿಗಳನ್ನು ಆರಿಸುವಾಗ ಬಣ್ಣಕ್ಕೆ ಮಾರು ಹೋಗದೆ ಇರಬೇಕು. ಕಪ್ಪಾಗಿದ್ದರೂ ಚಿಂತೆಯಿಲ್ಲ; ದಪ್ಪಗಿರಬೇಕು. ಅಂದರೆ ಆರೋಗ್ಯವಂತರಾಗಿರಬೇಕು. ಅವರು ಗಾಳಿಗೆ ಹಾರುವಂತಿರಬಾರದು; ಬಿಸಿಲಿಗೆ ಕರಗುವಂತಿರಬಾರದು. ಹರಿಯುವ [...] ನೀರಿನಲ್ಲಿ ಕೊಚ್ಚಿ ಹೋಗ[...].

ಪ್ರಕಟಣೆ.

[...]ನೆ ಕೊಡಗಿನಲ್ಲಿ ಪ್ರಾರಂಭಿಸಿರುವ ಬೈನೆ ಮತ್ತು ತಾಳೆ ರಸದಿಂದ ಬೆಲ್ಲ ಮಾಡುವ ಬಗ್ಗೆ ಹೆಬ್ಬಾಲೆ ಮತ್ತು ಕೈಕೇರಿಯಲ್ಲಿ ಎರಡು ಕೇಂದ್ರಗಳು ತೆರೆಯಲ್ಪಟ್ಟಿವೆ. ಪ್ರತಿ ಕೇಂದ್ರದಲ್ಲಿ ೧೦ ಜನರಿಗೆ ಬೆಲ್ಲಮಾಡುವ ತರಬೇತನ್ನು ಕೊಡಲಾಗುವುದು; ಪ್ರತಿ ಕೇಂದ್ರದಲ್ಲಿ ಸೇರಿದವರಿಗೆ ತಿಂಗಳಿಗೆ ರೂ. ೩೦/- ವಿದ್ಯಾರ್ಥಿ ವೇತನ ಕೊಡಲಾಗುವುದು. ತರಬೇತು ಶಾಲೆಗೆ ಸೇರಲು ಇಚ್ಛಿಸುವವರು ಈ ಕೆಳಗಿನ ನಿಯಮಗಳಿಗೆ ಒಪ್ಪಿಗೆ ಇದ್ದವರು ವ್ಯವಸಾಯ ಅಧಿಕಾರಿಗೆ ಅರ್ಜಿ ದಾಖಲು ಮಾಡತಕ್ಕದ್ದು. ಕೇಂದ್ರವು ಅಕ್ಟೋಬರ್ ೧ನೇ ತಾರೀಕಿನಿಂದ ಪ್ರಾರಂಭಿಸಲ್ಪಡುವುದರಿಂದ ಅರ್ಜಿದಾಖಲು ಮಾಡತಕ್ಕವರು ಈ ತಿಂಗಳು ೩೦ನೇ ತಾರೀಕಿನೊಳಗೆ ತಮ್ಮ ಅರ್ಜಿಗಳನ್ನು ತಲುಪಿಸತಕ್ಕದ್ದು.

ತರಬೇತು ಶಾಲೆಯು ೪ ತಿಂಗಳ ಕಾಲ ನಡೆಯುವುದು.

1. ಸ್ವಂತವಾಗಿ ಬೈಲು ಯಾ ಬೈನೆ ಮರ ಇರುವವರ ಅರ್ಜಿಗೆ ಹೆಚ್ಚಿನ ಗಮನ ಕೊಡಲಾಗುವುದು.
2. ತರಬೇತಿಗೆ ಹೋದಲು ಬರುವವರು ಕಡಿಮೆ ಪಕ್ಷ ಕನ್ನಡ ಓದು ಬರಹವನ್ನು ಚೆನ್ನಾಗಿ ಕಲಿತಿರಬೇಕು.
3. ತರಬೇತು ಸಿಕ್ಕಿದನಂತರ ತಮ್ಮ ಸ್ವಂತ ಜವಾಬ್ದಾರಿಯಿಂದ ಫ್ಯಾಕ್ಟರಿಯನ್ನು ನಡೆಸುತ್ತೇನೆಂದು ಸರಕಾರಕ್ಕೆ ಬಾಂಡು ಬರೆದು ಕೊಡಬೇಕು.
4. ತರಬೇತು ಹೊಂದಿದ ಮೇಲೆ ಸರಕಾರಿ ಕೆಲಸ ಕೊಡುವ ಭರವಸೆ ಕೊಡಲಾಗುವುದಿಲ್ಲ.
5. ಸ್ವಂತ ಕೈಗಾರಿಕೆಯನ್ನು ನಡೆಸಲು ಸರಕಾರದಿಂದ ಸಾಕಷ್ಟು ಸಹಾಯ ಒದಗಿಸಿ ಕೊಡಲ್ಪಡುವುದು
6. ತರಬೇತು ಕೇಂದ್ರಗಳಲ್ಲಿ ಇರುವ ಅಧಿಕಾರಿಗಳ ಹೇಳಿಕೆಗೆ ಅನುಸರಿಸಿ ವಿದ್ಯಾರ್ಥಿಗಳು ನಡೆದುಕೊಳ್ಳತಕ್ಕದ್ದು.
7. ಗ್ರಾಮ ಉದ್ಯೋಗದ ಕಷ್ಟ ಜೀವನದ ಕೆಲಸವನ್ನು ಆಚರಣೆಗೆ ತರಲು ಸಿದ್ಧರಿರಬೇಕು.
8. ತರಬೇತಿಗೆ ಬರುವವರು ಅವರವರ ಆವಶ್ಯಕತೆಗೆ ಬೇಕಾದ ಪದಾರ್ಥಗಳನ್ನು ಅವರವರ ಜೊತೆಯಲ್ಲಿ ತರಬೇಕು. (ಚೆಂಬು, ಪ್ಲೇಟು, ಗ್ಲಾಸು, ಲ್ಯಾಂಪು)
9. ತರಬೇತಿಗೆ ಬರುವವರಿಗೆ ಊಟ ವಗೈರೆ ವಿಷಯವನ್ನು ಆಯಾ ಕೇಂದ್ರಗಳಲ್ಲಿ ಏರ್ಪಡಿಸಲಾಗುವುದು; ಮತ್ತು ಖರ್ಚುಗಳನ್ನು ವಿದ್ಯಾರ್ಥಿವೇತನದಿಂದ ಪಾಲು ಮೇಲೆ ಸಹಾ ಮಾಡಿ ನಿರ್ವಹಿಸಲಾಗುವುದು.
10. ಹುಕುಂ ವಿನಹ ಈ ಶಾಲೆಯನ್ನು ಬಿಟ್ಟು ಹೊರಗೆ ಹೋಗಲು ಅವಕಾಶ ಕೊಡಲಾಗುವುದಿಲ್ಲ.

ಬಿ. ಎಸ್. ವರದರಾಜನ್.
ವ್ಯವಸಾಯ ಇಲಾಖೆ ಅಧಿಕಾರಿ,
ವ್ಯವಸಾಯ ಇಲಾಖೆ, ಮಡಿಕೇರಿ

ವಾರದ ಕಥೆ.

ಪ್ರಾಣಿ ದೃಷ್ಟಿ.

ಲೇ:- ಶ್ರೀ ಕೆ. ಎಂ. ಕುಟ್ಟಪ್ಪ, ಬಿಟ್ಟಂಗಳ.

ಪ್ರಾಣಗಳ ಕೆಗೆಯುವನ
ಹೊಟ್ಟೆಗೆ ಒಡೆಯುವನ
ಮೋಹಕ್ಕೆ ಒಳಗಾಳುವನ
ಬಣ್ಣಿಸದೆ ಕೊಲುವ ಯಮನು ಸರ್ವಜ್ಞ |

ಎಲ್ಲಾ ರೈತರಂತೆಯೇ ಆತನೂ ಒಬ್ಬ ರೈತ. ಆದರೆ ಆತನ ವೈಶಿಷ್ಟ್ಯವೆಂದರೆ ಆ ದನ, ಕರು, ನಾಯಿ, ಹಂದಿ, ಕೋಳಿ ಮೊದಲಾದುವನ್ನು ಅಕ್ಕರೆಯಿಂದ ಸಾಕುವದು. ಪ್ರತಿಯೊಂದು ಪ್ರಾಣಿಯು ಹೊಟ್ಟೆಗೆ ಆಹಾರ, ವಾಸಕ್ಕೆ ಯೋಗ್ಯ ಸ್ಥಳಗಳನ್ನು ಏರ್ಪಡಿಸಿ ತನ್ನ ಮಕ್ಕಳಂತೆ ನೋಡುತ್ತಿದ್ದನು. ಈ ಪ್ರಾಣಿಗಳಿಗೆ ಹೊತ್ತಿಗೆ ಸರಿಯಾಗಿ ಆಹಾರ ದೊರೆಯುತ್ತಿದ್ದ ಕಾರಣ ಅವು ಹುಡುಕುವ ತೊಂದರೆ ಇರಲಿಲ್ಲ. ಒಂದು ದಿನ ಅವು ಒಂದನ್ನೊಂದು ಕುರಿತು ಮಾತಾಡಿ ಕೊಳ್ಳುತ್ತಿದ್ದವು. ಆ ಮಾತುಕತೆಯ ಸಾರಾಂಶವಿದು.

ಕರು:— 'ನಮ್ಮ ಯಜಮಾನನು ನಮ್ಮನ್ನು ಅತೀ ಪ್ರೀತಿಯಿಂದ ಸಾಕುತ್ತಾನೆ. ಒಮ್ಮೊಮ್ಮೆ ಅವರು ಕೊಡುವ ಆಹಾರ ಸಾಲದಿದ್ದರೆ ಗದ್ದೆ ಹೊಲ ತಿಂದು ಹಾನಿ ಮಾಡಿದರೂ ಅವರ ಪ ಮಣೆ ಕಡಿಮೆಯಾಗುವದಿಲ್ಲ. ನಮಗಳನ್ನು ಈ ರೀತಿ ಸಾಕಿ ಅವರಿಗೇನು ಲಾಭ?

ಕೋಳಿ:— ಲಾಭವಿಲ್ಲವೇ? ನಿನ್ನನ್ನು ಇಂದು ಮಾರಾಟಮಾಡಿದರೆ ಮೂವತ್ತು ರೂಪಾಯಿ ಬರುತ್ತದೆ. ಆ ರೂಪಾಯಿ ಯಾರಿಗೆ?

ಕರು:— ಹೌದು. ನಮ್ಮನ್ನು ಉದಾರ ಬುದ್ಧಿಯಿಂದ ಸಾಕುತ್ತಿರುವದರಿಂದು ಯಾರೂ ಭಾವಿಸಬೇಕು. ನಮ್ಮಿಂದ ಅವಿತ ಪ್ರತಿಫಲವನ್ನು ಹೊಂದಬೇಕೆಂದೇ ಅವರ ಇಚ್ಛೆ. ಮಕ್ಕಳನ್ನು ಸಾಕುವ ತಂದೆತಾಯಿಯಂತೇ ಮುದಿ ಪ್ರಾಯದಲ್ಲಿ ಮಕ್ಕಳು ತಮ್ಮನ್ನು ಸಾಕಬೇಕೆಂದು ಆಶಿಸುವಂತೆ ಈ ರೈತನು ಲಾಭ ಅಪೇಕ್ಷೆಯಿಲ್ಲದೆ ಪ್ರೇಮದ ನಿಷ್ಕಾಮ ಕರ್ಮ ಮಾಡುತ್ತಿರುವನೆಂದು ತಿಳಿದಿರಾ? ಇಂದು ನಮಗೆ ಆಹಾರ ಕೊಟ್ಟು ಪ್ರೀತಿಯಿಂದ ಸಾಕಿದ ಕೈಯೇ ನಾಳೆ ನಮ್ಮ ಕುತ್ತಿಗೆಗೆ ಕತ್ತಿ ಇಡುವದು!

ಕೋಳಿ:—ನೋಡು ಹಂದಿಅಣ್ಣಾ ನೀನು ಮನೆಪಕ್ಕದ ಕೆಸರಿನಲ್ಲಿ ಮಲಗಿದ್ದೆ ತಾನೆ. ನಾನು ಮನೆಯ ಅಂಗಳದಲ್ಲಿ ನಿಂತು ಕೊಂಡಿದ್ದೆನು. ನಮ್ಮ ಯಜಮಾನ ಯಜಮಾನಿಯ ರಿಬ್ಬರು ನಮ್ಮ ವಿಚಾರ ಮಾತಾಡುತ್ತಿದ್ದರು. ಅವರು ನನ್ನನ್ನು ನೋಡಿ ಅವರ ಮಾತುಗಳನ್ನು ಕೇಳಬಹುದು ದೆಂಬ ಅರಿವಿಲ್ಲದೆ ಏನೋ 'ಹುಚ್ಚ' ಎಂದು ನನ್ನನ್ನು ಓಡಿಸಿದರು ನಾನು ಮರೆಯಲ್ಲಿ ನಿಂತು ಅವರ ಮಾತುಗಳನ್ನು ಕೇಳುತ್ತಿದ್ದೆ. ಆವರ ಮಾತು ಹೀಗೆ ನಡೆದಿತ್ತು. 'ಬರುವ ತಿಂಗಳು ಮಗನ ಮದುವೆ ನಿಶ್ಚಯ ಮಾಡಿ ಬಿಡಬೇಕು. ಮದುವೆಯ ಖರ್ಚಿಗೆ ಸಾಕಷ್ಟು ಹಣ ಕೈಯಲ್ಲಿ ಇಲ್ಲ. ಮೊಂಕದ ಮಟ್ಟಿಗೆ ತೊಂದರೆ ಇಲ್ಲ. ಮನೆಯಲ್ಲಿರುವ ಗಡ್ಡದ ಹೋತ, ಸೊಕ್ಕಿರುವ ಸಲಗ, ಜೊತೆಗೆ ಹುಂಜ ಇರುವದರಿಂದ ಹೆದರಿ ಕೊಳ್ಳಬೇಕಾದುದಿಲ್ಲ' ಎನ್ನುತಿದ್ದರು.

ಆಡು:— ಅಯ್ಯೋ, ಹಾಗಾದರೆ ನಮಗೆ ಉಳಿಗಾಲವೆಲ್ಲಿ? ಇಷ್ಟರ ವರೆಗೆ ಮಕ್ಕಳೋಪಾದಿಯಲ್ಲಿ ಕರುಣೆಯಿಂದ ಸಾಕಿದ ಇವರು ನಮ್ಮ ಕುತ್ತಿಗೆ ಕುಯ್ಯುವರೇ?

ಹಂದಿ:— ಕೋಳಿಯಣ್ಣಾ ನಿನ್ನ ಮಾತು ನಂಬಲಾರೆ. ಮೊನ್ನೆ ನೆರೆಮನೆಯವನ ಹಿತ್ತಲಿಗೆ ಹೋದೆ ಹುಲುಸಾಗಿ ಗೆಣಸು ಬೆಳೆದಿರುವದನ್ನು ಕಂಡು ಬಾಯಲ್ಲಿ ನೀರೂರಿತು. ನಾನು ಸಂತೋಷದಿಂದ ತಿನ್ನುತ್ತಿರುವಾಗ ನೆರೆಮನೆಯ ಯಾರೋ ಗುಂಡು ಹೊಡೆದರು. ಅದು ನನ್ನ ಕಾಲಿಗೆ ತಗಲಿ ನಾನು ಕೂಗಿಕೊಂಡು ಓಡಿ ಬಂದೆನು. ಆಗ ನಮ್ಮ ಯಜಮಾನರು ಸಿಟ್ಟಿನಿಂದ 'ಯಾರೋ ದುಷ್ಟನು ನನ್ನ ಹಂದಿಗೆ ಗುಂಡಿಕ್ಕಿದ್ದಾನೆ. ಯಾರೆಂದು ಗೊತ್ತಾಗಿದ್ದರೆ ಬಾಳೆ ಕಡಿದ ಹಾಗೆ ಕಡಿದು ಹಾಕುತ್ತಿದ್ದೆ' ಎಂದು ಬಯ್ದು ನನ್ನ ಕಾಲಿಗೆ ಔಷಧಿಮಾಡಿ ಅದರಿಂದ ಬೇಗ ವಾಸಿಯಾಯಿತು. ಹಾಗೆ ಸಾಕಿದವರು ನಮ್ಮ ಕುತ್ತಿಗೆ ಕೊಯ್ಯುವರೆನ್ನುವಿಯೊ? ನಿನ್ನ ಮಾತು ನಿಜವಿರಲಾರದು.

ಆಡು:— ನೋಡು ಹೊಂಜಣ್ಣಾ, ನಿನ್ನ ಮಾತನ್ನು ಹೇಗೆ ನಂಬುವದು? ನೀನು ಪ್ರತಿದಿನ ಗಡಿಯಾರಕ್ಕಿಂತಾ ಮಿಗಿಲಾಗಿ ಸೂರ್ಯದೇವನ ಉದಯವನ್ನು ಮನೆಯವರಿಗೆ ಕೂಗಿ ಹೇಳುವದಿಲ್ಲವೇ? ಅದನ್ನು ಮರೆಯುವಷ್ಟು ಅವರು ಕೃತಘ್ನರೇ? ಆದರೆ ನಾವು ಆಡುಗಳು. ಅವರಿಗೆ ಹೆಚ್ಚಿನ ಉಪಕಾರ ಮಾಡುತ್ತಿಲ್ಲ. ಆದ್ದರಿಂದ ನಮ್ಮ ಸ್ಥಿತಿ ಸ್ವಲ್ಪ ಕಷ್ಟವೇ.

ಕೋಳಿ:— ನಿಮಗೆ ಮಾನವ್ಯರ ಸ್ವಭಾವ ತಿಳಿದಿಲ್ಲ. ನೋಡು ಆಡಣ್ಣಾ, ನೀನೊಂದೇ ಮನುಷ್ಯರಿಗೆ ಹೆಚ್ಚಿನ ಸಹಾಯ ಮಾಡುತ್ತಿಲ್ಲವೆನ್ನಬಹುದು. ಆದರೆ ನಿಮ್ಮ ಜಾತಿಯವರು ಮಹಾತ್ಮಾ ಗಾಂಧಿಯವರಿಂದವರನ್ನೇ ಹಾಲುಕೊಟ್ಟು ಸಾಕಿದ್ದಾರೆ! ಆದರೆ ಗಾಂಧಿಯವರನ್ನೇ ಮರೆತ ಜನರು ನಿಮ್ಮನ್ನು ನೆನೆಸಲಾರರು. ಆದ್ದರಿಂದ ನಿಮ್ಮ ಕೊಲೆ ದಿನವಹಿ ನಡೆಯುತ್ತಿದೆ. ಆದರೆ ನಮಗೆ ಉಳಿಗಾಲವಿದೆಯೆಂದು ಮಾತ್ರ ಭಾವಿಸದಿರು. ಈ ಕಾಲದಲ್ಲಿ ಸಹಾಯ ಮಾಡುವವರೂ ಒಂದೇ, ಮಾಡದವರೂ ಒಂದೇ! ನೋಡು, ಕರು ಹಣ್ಣಾಗಿದ್ದಾನಲ್ಲ. ಆತನು ಎಷ್ಟು ಸಹಾಯ ಮಾಡುತ್ತಿಲ್ಲ. ತಾನು ಬಳಿಯಲ್ಲಿ ನಡುಗಿ ಕಷ್ಟರೂ ತನ್ನ ಮೇಲಿನ ಉಣ್ಣೆಯನ್ನು ಕೊಟ್ಟು ಮನುಷ್ಯನನ್ನು ಬದುಕಿಸುವದಿಲ್ಲವೇ? ಆದರೆ ಕೃತಘ್ನ ಮನುಷ್ಯನು ಆ ಉಪಕಾರವನ್ನು ನೆನಸುವನೇ? ನಿಮ್ಮಂತೆಯೇ ಅವರ ಕುತ್ತಿಗೆಗೂ ಕತ್ತಿ ಸದಾ ಕಾದಿದೆ!

ಕುರಿ:— ಈ ಜನರು ಪಕ್ಷಪಾತ ದೃಷ್ಟಿಯವರು. ತಮ್ಮ ತಮ್ಮೊಳಗೇ ತಲೆ ನೋಡಿ ಮುಂಡ ಸು ಕಟ್ಟುವ ಜನ ತಮ್ಮ ಆ ನೀತಿಯನ್ನು ಇಲ್ಲಿಯೂ ಅನುಸರಿಸಿದ್ದಾರೆ. ಇಲ್ಲದಿದ್ದರೆ ನೋಡಿ. ನಮ್ಮಂತೆಯೇ ಮನೆಯಲ್ಲಿ ನಾಯಿ ಇಲ್ಲವೇ? ಅವನನ್ನು ಯಾರೂ ಕೊಲ್ಲುವದಿಲ್ಲ. ಆತನ ಮಾಂಸವೇನು ಕಹಿಯೇ? ಬದಲು ನಾಯಿ ಸ್ನೇಹಿತನಂತೆ! 'ನಾರಾಯಣ'ನಂತೆ

ಹಂದಿ:— ಇರಬಹುದು. ಪುರಾಣಗಳನ್ನು ಓದಿ ನೋಡಿ! ನಾರಾಯಣ ಮತ್ತು ಈಶ್ವರ ಈ ದೇವರು ಪುರಾತನ ಕಾಲದಲ್ಲಿ ಜಗತ್ತಿನ ಎಲ್ಲಾ ಪ್ರಾಣಿಗಳಿಗೂ ಹೆಸರಿಡುತ್ತಾ ಬಂದರಂತೆ. ನಾಯಿ ಗ ಹೆಸರು ದೊರೆಯದೆ ಅವರು ತಮ್ಮ ಹೆಸರಿನ ಪ್ರಥಮಾಕ್ಷರಗಳಾದ 'ನಾ' ಮತ್ತು 'ಈ' ಎರಡನ್ನು ಸೇರಿಸಿ 'ನಾಯಿ' ಎಂದು ಹೆಸರಿಟ್ಟರಂತೆ!

ಹುಂಜ:— ನಾಯಿಗೆ ಒಪ್ಪಲಾರೆ. ಈ ಜನಕ್ಕೆ ಧರ್ಮ, ನೀತಿ, ದೇವರು ಎಲ್ಲಿರುವದು? ಈಗ ನಿನ್ನ ಉದಾಹರಣೆಯನ್ನೇ ತೆಗೆದುಕೊಳ್ಳುವ ಭಗವಂತನು ನಿನ್ನ ಅವತಾರ (ವರಾಹ) ತೆಗೆದು ಮುಳುಗಿದ ಭೂಮಿಯನ್ನು ಮೇಲೆತ್ತಿದರೂ ನಿನ್ನ ಕೊಲೆಮಾಡುವದನ್ನು ಬಿಟ್ಟಿರುವರೇ? ಆದರೆ ಅಲ್ಲಿ ನೋಡು; ಕಾಡಿನ ಮಂಗನನ್ನು. ಅದು ರೈತನಿಗೆ ಕೊಡುವ ಉಪದ್ರವನ್ನು ಯಾರೂ ಕೇಳಲಾರರು. ನೆಟ್ಟ ಬೆಳೆ, ಹಣ್ಣು ಹಂಪಲ, ಕಿತ್ತಳೆ, ಬಾಳೆ ಕ್ಕೆ ಎಲ್ಲವನ್ನೂ ನಾಶಮಾಡುತ್ತದೆ. ಆದರೆ ಅದು ಹನುಮಂತನ ಅವತಾರವಂತೆ! ಗುಂಡು ಹೊಡೆಯುವದು, ಕೊಲ್ಲುವದು ಪಾಪವಂತೆ! ಈ ಜನರ ಅಭಿಪ್ರಾಯಕ್ಕೆ ಏನೆನ್ನುವೇ? ಅವರಿಗೆ ಒಂದು ನೀತಿ ಇಲ್ಲ, ಒಂದು ತತ್ವವಿಲ್ಲ.

ಆಡು:- ಅದೆಲ್ಲ ಹೋಗಲಿ, ನಮ್ಮ ಸ್ಥಿತಿಯನ್ನು ನೆನೆಯಿರಿ. ನಮಗೆ ರಕ್ಷಕರಾರು? ಪ್ರಾಣಿ ಹಿಂಸೆ ಮಾಡಬಾರದೆಂದು ಬುದ್ಧದೇವನು ಸಾರಿದನು ನಂತರ ಮಹಾತ್ಮರು 'ಅಹಿಂಸಾ ಪರಮೋಧರ್ಮ'ವೆಂದು ಸಾಧಿಸಿ ತೋರಿಸಿದರು. ಆ ವರ ಎದೆಗೇ ಗುಂಡಿಕ್ಕಿದ ಈ ಜನ ನಮ್ಮನ್ನು ಬಿಡುವರೆ! ನಮ್ಮ ಜೀವನ ಎಷ್ಟು ಕ್ಷಣಿಕ! ಮನೆಯಲ್ಲಿ ಮದುವೆಯಾದರೆ, ಊರಲ್ಲಿ ಹಬ್ಬವಾದರೆ, ಒಂದು ಕಂಬಳವಾದರೆ ನಮ್ಮ ಆಹುತಿ! ಮಕ್ಕಳು ಹುಟ್ಟಲಿ, ಮನೆ ಕಟ್ಟಲಿ, ಪ್ರತಿಯೊಂದಕ್ಕೂ ನಮ್ಮ ಕೊಲೆ. ದೆವ್ವ, ಭೂತ, ಮಾರಿ ಎಂದು ವಿವಿಧ ಕಲ್ಲುಗಳಿಗೆ ಹೆಸರು ಹಾಕಿ ಅವುಗಳ ಮುಂದೆ ನಿಲ್ಲಿಸಿ ನಮ್ಮ ಕತ್ತಿಗೆ ಕಡಿಯುವ ಈ ಪಿಶಾಚಿಗಳಿಂದ ಉಳಿಗಾಲವಿಲ್ಲ!

ಹಂದಿ:— ಈ ಜನರಿಗೆ ಕಿವಿ ಇಲ್ಲವೇ? ಜ್ಞಾನವಿಲ್ಲವೇ? ಕಠಮಾನಗಳಿಂದ ನಮ್ಮ ಕೊಲೆ ಮಾಡುತ್ತಿದ್ದಾರೆ. ಅಂದಿನಿಂದಲೂ ನಾವು ಕೂಗಿ ಕೊಳ್ಳುತ್ತೇವೆ ನಮ್ಮ ಆ ಜೀವ ಭಾಷೆ ಇವರಿಗೆ ಅರ್ಥವಾಗುವದಿಲ್ಲ. ಕಾಲು ಕೈ ಬಡಿದುಕೊಂಡರೂ ಇವರಿಗೆ ನಮ್ಮ ಯಾತನೆಯು ಕಾಣುವದಿಲ್ಲ.

ಹುಂಜ:— ಈ ಜನರ ಉಪದ್ರ ನಮಗೆ ಮಾತ್ರವಲ್ಲ; ನಮ್ಮನ್ನು ಸಾಕಿ ನಮ್ಮನ್ನು ಇವರು ಕೊಲ್ಲುವದು ಒಂದು ಪಾಪ ವಾದರೆ ಕಾಡಿನಲ್ಲಿ ಅಲ್ಲಿಯ ಹುಲ್ಲು, ಸೊಪ್ಪು ತಿಂದು ಯಾರಿಗೂ ತೊಂದರೆ ಮಾಡದ ಪ್ರಾಣಿಗಳನ್ನು ಕೊಲೆ ಮಾಡುತ್ತಾರೆ. ಒಣ್ಣ ಬಣ್ಣದ ಬೆಡಗಿನಿಂದ ಕೂಡಿ ಸುಶ್ರಾವ್ಯ ಸಂಗೀತ ಹಾಡಿ ಮನಸ್ಸಿಗೆ ಶಾಂತಿಯನ್ನು ಕೊಡುವ ಪಕ್ಷಿ ಸಂಕುಲವನ್ನೂ ಇವರು ಬಿಟ್ಟಿಲ್ಲ ಆದ್ದರಿಂದ ಎಲ್ಲರೂ ಕೂಡಿ ಅವರನ್ನು ಶಪಿಸಬೇಕು.

ಆಡು:—ಕೇವಲ ಸೊಪ್ಪು ಸದೆ ತಿನ್ನುವ ನಮ್ಮ ಕೊಲೆ ಮಾಡುವ ಈ ಜನರು ಹೊಟ್ಟೆಗೆ ಆಹಾರವಿಲ್ಲದೆ ಸೊಪ್ಪು ತಿನ್ನುವ ಸ್ಥಿತಿ ಬರಲಿ.

ಹಂದಿ:—ಪ್ರೀತಿಯಿಂದ ಸಾಕಿ ಕೊಲೆಗೆ ಅತ್ತ ಇಡುವ ಈ ಘಾತುಕರು ನನ್ನಂತೆಯೇ ಬರೇ ಗಂಜಿ ಕುಡಿಯುವಂತಾಗಲೀ.

ಕೋಳಿ:—ಈ ಜನರಿಗೆ ಆಹಾರಕ್ಕೆ ಬೀಗಾಲು ಬಂದು ಜೀವ ಉಳಿಸಿ ಕೊಳ್ಳಲೂ ಕೂಡ ನಾನು ತಿನ್ನುವ ಕಪ್ಪುದು ದೊರೆಯದಾಗಲಿ

ಕುರಿ:—ಅಸಿರೀಕ್ಷಿತವಾಗಿ ನಮ್ಮ ಆಯುಸ್ಸು ಮುಗಿಯುವ ಮೊದಲೇ ಕೊಲೆ ಮಾಡುವ ಜನರ ಆಯುಸ್ಸು ಕಡಿಮೆ ಯಾಗಲಿ. ಹಿಂದೆ ೧೦೦-೧೨೦ ವರ್ಷ ಬದುಕುತ್ತಿದ್ದರೆ ಈಗ ೫೦-೬೦ರಲ್ಲೇ ಇವರಿಗೆ ಅವಸಾನ ಬರಲಿ.

International Trucks & Hudson Cars

ಕಳೆದ ನಲವತ್ತು ವರ್ಷಗಳಿಂದ ಹೆಸರು ಪಡೆದ ಮೋಟಾರು ಮತ್ತು ಟ್ರಕ್ಕುಗಳ ತಯಾರಕರಾದ ಅಮೇರಿಕದ

ಇಂಟರ್‌ನೇಶನಲ್ ಹಾರ್ವೆಸ್ಟರ್ಸ್ ಎಕ್ಸ್‌ಪೋರ್ಟ್ ಕಂಪೆನಿ

ಯವರ ಟ್ರಕ್ಕು ಮತ್ತು ಹಡ್ಸನ್ ಕಾರುಗಳು ನಮ್ಮಲ್ಲಿ ದೊರೆಯುವವು ಮಿತ ಖರ್ಚಿನಿಂದ ಉತ್ತಮ ಲಾಭ ಪಡೆಯಲು ಇವು ಉತ್ತಮ ಟ್ರಕ್ಕುಗಳು. ಪ್ರತಿ ಗೆಲನ್ ಪೆಟ್ರೋಲಿಗೆ ಅತಿ ಹೆಚ್ಚಿನ 'ಮೈಲೇಜ್' ಕೊಡುತ್ತವೆ ಇವುಗಳ "ಸ್ಪೇರ್ ಪಾರ್ಟ್ಸ್" ಗಳೂ ನಮ್ಮಲ್ಲಿ ದೊರೆಯುವವು. ಹೆಚ್ಚಿನ ಮಾಹಿತಿಗೆ ಈ ಪತ್ರಿಕೆ ಒರೆಯ ಬಹುದು ಯಾ ಖುದ್ದು ವಿಚಾರಿಸಬಹುದು.

M. U. ACHANNA,
Manager,
"INDIAN AUTOMOBILES" (UDIPI)
Agents,
Hudson Cars and International Trucks,
For
South Kanara & Coorg,
Branch Mercara.

12-9

ವಾರ್ತೆಗಳು.

ಸೋವಿಯಟ್ ರಷ್ಯಕ್ಕೆ ಪಾಕಿಸ್ತಾನದ ಮೊದಲ ರಾಯಭಾರಿಯಾಗಿ ಬೇಗಮ್ ಶಾನವಾಜರ ಹೆಸರು ಸೂಚಿಸಲ್ಪಟ್ಟಿದೆ. ಮುಂದಿನ ನವಂಬರ್ ತಿಂಗಳಲ್ಲಿ ಪಾಕಿಸ್ತಾನದ ಪ್ರಧಾನ ಮಿ. ಲಿಯಾಖತ್ ಅಲಿಖಾನರು ಮೋಸ್ಕೋ ಸಂದರ್ಶಿಸುವಾಗ ಬೇಗಮ್ ಶಾನವಾಜರು ಅವರ ಜೊತೆಯಲ್ಲಿ ಹೋಗಬಹುದೆನ್ನಲಾಗಿದೆ.

ಆಗ್ನೇಯ ಏಷ್ಯದ ಕಮಿಶನರ್ ಜನರಲ್ ಹುದ್ದೆಗೆ ಉತ್ತರಾಧಿಕಾರಿಯಾಗಿ ಲಾರ್ಡ್ ಮೌಂಟ್ ಬ್ಯಾಟನರನ್ನು ನೇಮಿಸುವುದರ ಕುರಿತು ಬ್ರಿಟಿಷ್ ಪ್ರಧಾನರು ಯೋಚಿಸುತ್ತಿರುವರು.

ಸೋವಿಯಟ್ ಯೂನಿಯನಿಗೆ ಭಾರತದ ರಾಯಭಾರಿಯಾಗಿ ನೇಮಿಸಲ್ಪಟ್ಟ ಡಾ. ಎಸ್. ರಾಧಾಕೃಷ್ಣನ್‌ರವರು ರಷ್ಯಾಕ್ಕೆ ಹೋಗಿ ತಮ್ಮ ಅಧಿಕಾರವನ್ನು ವಹಿಸಿಕೊಂಡರು.

ಟೋಕಿಯೋ ನಗರದಿಂದ ಸುಮಾರು ೧೦೦ ಮೈಲು ವಾಯುವ್ಯದಲ್ಲಿರುವ ೮೦೦೦ ಅಡಿ ಎತ್ತರದ ಮೌಂಟ್ ಅಸಾಮಾದಲ್ಲಿ ಜ್ವಾಲಾಮುಖಿಯು ಆಸ್ಫೋಟಿಸಿ ಪರ್ವತದ ಅಂಚಿನಲ್ಲಿರುವ ಹಲವು ಹೊಟೇಲುಗಳು ಲಾವಾದಡಿಯಲ್ಲಿ ಮುಳುಗಿ ಹೋಗಿವೆ

ಭಾರತದ ವಸ್ತ್ರದ ಮೇಲೆ ಪಾಕಿಸ್ತಾನದ ವ್ಯಾಪಾರಿಗಳು ಬಹಿಷ್ಕಾರ ಹಾಕಲು ನಿಶ್ಚಯಿಸಿರುವ ಚಳವಳ ಬಲವಾಗುತ್ತಾ ಬರುವಂತೆ ತೋರುತ್ತಿದೆ. ಇಲ್ಲಿಂದ ಆಮದು ಮಾಡಿದ್ದ ವಸ್ತ್ರಗಳ ಮೂಟೆಗೆ ಬೆಂಕಿ ಕೊಟ್ಟು ಆ ಚಳವಳವನ್ನು ಪ್ರಾರಂಭಿಸಿರುವರೆಂದು ತಿಳಿದು ಬರುತ್ತಿದೆ. ಈ ಚಳವಳಕ್ಕೆ ಕಾರಣ ಭಾರತವು ಪಾಕಿಸ್ತಾನದ ಕಡೆಗೆ ವಿರೋಧಿಯ ದೃಷ್ಟಿಯಿಂದ ನೋಡುತ್ತಿರುವುದು ಎಂದು ಹೇಳಲಾಗಿದೆ. ಅವಶ್ಯಕ ವಸ್ತುಗಳ ಪರಸ್ಪರ ವ್ಯವಹಾರಕ್ಕಾಗಿ ಆಗಿರುವ ಅಂತರ್ ಡೊಮಿನಿಯನ್ ಒಪ್ಪಂದವನ್ನು ತತ್ಕಾಲಿಕವಾಗಿ ಪಾಕಿಸ್ತಾನವು ಬಳಸಕೂಡದೆಂದೂ ವ್ಯಾಪಾರಿಗಳ ಸಂಘವು ಪಾಕಿಸ್ತಾನವನ್ನು ಕೇಳಿಕೊಂಡಿದೆ.

ಹೈದರಾಬಾದಿನಲ್ಲಿ ಕೋಟುವಾಲ್ದಾರರವರ ಕೊಲೆ ವಿಷಯದಲ್ಲಿ ವಿಚಾರಣೆಯು ಬಲು ಭರದಿಂದ ಸಾಗುತ್ತಿದೆ. ಈ ವಿಚಾರದ ಮಧ್ಯದಲ್ಲಿ ಕಾಸಿಂ ರಜ್ವಿಯವರ ಮೇಲೆ ಇನ್ನೂ ಅನೇಕ ಆರೋಪಗಳನ್ನು ಅಲ್ಲಿಯ ಪೋಲೀಸರು ತಂದಿದ್ದಾರೆ. ಈ ಆರೋಪಗಳನ್ನು ಈ ಕೊಲೆಯ ವಿಚಾರಣೆಯ ನಂತರ ವಿಚಾರಿಸಬೇಕಾಗಿದೆಯೆಂದು ಅಲ್ಲಿಯ ವರ್ತಮಾನ ಪತ್ರಿಕೆಯೊಂದು ಹೇಳುತ್ತಿದೆ.

ಹೊಸ ನಾಣ್ಯಗಳ ಬಗ್ಗೆ ಹಿಂದೂಸ್ಥಾನ ಸರಕಾರದವರು ತಾತ್ಪೂರ್ತಿಕ ನಿರ್ಣಯ ಕೈಕೊಂಡಿದ್ದು ಭಾರತದ ಹೊಸ ಘಟನೆಯು ಘೋಷಿಸಲ್ಪಡುವ ದಿನವೇ ಅಂದರೆ ಬರುವ ಜನವರಿ ೨೬ಕ್ಕೆ ಇವುಗಳನ್ನು ಚಲಾವಣೆಯಲ್ಲಿ ತರಲಾಗುವುದೆಂದು ತಿಳಿದು ಬರುತ್ತದೆ. ಈಗಿನ ನಾಣ್ಯಗಳ ಮೇಲಿನ ಅರಸರ ಮುಖವನ್ನು ತೆಗೆದು ಹಾಕಿ ಅದರ ಬದಲು ಅಶೋಕ ಸ್ತಂಭ – ಸಿಂಹತ್ರಯವನ್ನು ಮುದ್ರಿಸಲಾಗುವುದು. ನಾಣ್ಯದ ಹಿಂಬದಿಯಲ್ಲಿ ಧಾನ್ಯದ ತೆನೆ, ನವಿಲ, ಅಶೋಕ ವೃಷಭ ಮತ್ತು ಇನ್ನಿತರ ಕೆಲ ಆಕಾರಗಳನ್ನೂ ಮುದ್ರಿಸಲಾಗುವುದು. ಆದರೆ ಇವುಗಳ ಬಗ್ಗೆ ಇನ್ನೂ ಕೊನೆಯ ನಿರ್ಣಯವಾಗಿಲ್ಲ.

ಮಯೂರಭಂಜ್ ಜಿಲ್ಲೆಯ ೧೨೪ ಹಳ್ಳಿಗಳಲ್ಲಿ ೫೪ಕ್ಕೆ ಗ್ರಾಮ ಪಂಚಾಯಿತ ಸಭೆಗಳ ಏರ್ಪಾಡಾಗಿದೆ. ಇವುಗಳ ಕಾರ್ಯವನ್ನು ಪರಿಶೀಲಿಸಿ ಮುಂದೆ ಬಾಕಿ ಇರುವ ಗ್ರಾಮಗಳಲ್ಲಿ ಪಂಚಾಯಿತಗಳನ್ನು ಏರ್ಪಡಿಸುವರಂತೆ.

ಹಿಂದುಸ್ತಾನ ಕುಂಬಾರಿಕೆಯ ಉದ್ದಿಮೆಯಲ್ಲಿ ಜಪಾನಿನ ತಾಂತ್ರಿಕ ವಿಧಾನಗಳನ್ನು ಸೂಚಿಸಲು ಜಪಾನದ ಅನೇಕ ತಜ್ಞರು ಬೇಗನೆ ಹಿಂದೂಸ್ಥಾನಕ್ಕೆ ಬರಲಿದ್ದಾರೆ. ಮುಂದಿನ ತಿಂಗಳಲ್ಲಿ ಅವರು ಹಿಂದೂಸ್ಥಾನಕ್ಕೆ ಬರುವ ನಿರೀಕ್ಷಣೆಯಿದ್ದು ಎರಡು ವರ್ಷಗಳ ವರೆಗೆ ಅವರು ಇಲ್ಲಿ ಇರಬಹುದೆಂದು ತಿಳಿದಿದೆ.

ಕಳೆದ ತಾ. ೨೬ರಂದು ಘಟನಾ ಸಮಿತಿಯಲ್ಲಿ ಪರಮಾತ್ಮ ಜೀವಾತ್ಮರುಗಳ ಸಂಬಂಧ ಸ್ವಾರಸ್ಯವಾದ ಚರ್ಚೆ ನಡೆಯಿತು. ಮಂತ್ರಿಗಳ, ಶಾಸನ ಸಭೆಯ ಸದಸ್ಯರು ಹಾಗೂ ನ್ಯಾಯಾಧೀಶರು ಪರಮಾತ್ಮನ ಹೆಸರಿನಲ್ಲಿ ಇಲ್ಲವೆ ಮನಸಾಕ್ಷಿಯಾಗಿ ಪ್ರತಿಜ್ಞೆ ಸ್ವೀಕರಿಸಬಹುದೆಂದು ಡಾ. ಅಂಬೇಡಕರರು ಸೂಚಿಸಿದ್ದರಿಂದ ಈ ಚರ್ಚೆ ಉದ್ಭೂತವಾಯಿತು. ಶ್ರೀ. ಎಚ್. ವಿ. ಕಾಮತರು ಇದಕ್ಕೆ ಆಕ್ಷೇಪವೆತ್ತಿ 'ಪರಮಾತ್ಮನಿಗೇ ಉಚ್ಚ ಸ್ಥಾನಕೊಡಬೇಕು' ಎಂದು ತಿದ್ದುಪಡಿ ಸೂಚಿಸಿದರು. ಮೇಲ್ಕಂಡ ಚರ್ಚೆಯ ಕಾಲದಲ್ಲಿ ಶ್ರೀ. ಮಹಾವೀರ ತ್ಯಾಗಿಯವರು ಹೀಗೆ ಹೇಳಿದರು: 'ಈ ದೇಶದಲ್ಲಿ ಅನೇಕರು ನಿರೀಶ್ವರವಾದಿಗಳು, ನಾಸ್ತಿಕರೂ ಇರುವರಾದರೂ, ಜನ ಸಾಮಾನ್ಯರಿಗೆ ಪರಮಾತ್ಮನಲ್ಲಿ ವಿಶ್ವಾಸವಿರುತ್ತದೆ. ಜಗತ್ತು ಇನ್ನು ಅನಾಗರೀಕ ಸ್ಥಿತಿಯಲ್ಲಿದ್ದಾಗ ಭಾರತವೇ ಪರಮಾತ್ಮನ ವಿಚಾರವನ್ನು ಹರಡಿತು. ಆದುದರಿಂದ ಪರಮಾತ್ಮನು ಮೂಲತಃ ಭಾರತೀಯನು, ಮತ್ತು ಇದು ಅವನ ದೇಶ.' ಕೊನೆಯಲ್ಲಿ ಸಭೆಯು ಶ್ರೀ. ಕಾಮತರ ತಿದ್ದುಪಡಿಯನ್ನು ಸ್ವೀಕರಿಸಿತು.

ಉತ್ತರ ಗುಜರಾತಿನ ಮತ್ತು ದಕ್ಷಿಣ ಸಿಂಧಿನ ಗಡಿಗಳು ಕೂಡುವಲ್ಲಿಂದ ಬಂದ ವರದಿಗಳಿಂದ ಹಿಂದೂಸ್ಥಾನದಲ್ಲಿ ದ್ವೇಷಾತ್ಮಕ ಪ್ರಚಾರವನ್ನು ಮಾಡಲು ಪೀರರ ಮತ್ತು ಫಕೀರರ ವೇಷದಲ್ಲಿ ಹಲವಾರು ಪಾಕಿಸ್ತಾನಿ ಗೂಢಚಾರರು ಈ ಕಡೆ ಬಂದಿರುವರೆಂದು ತಿಳಿಯುತ್ತದೆಯೆಂದು ಹಿಂದೂಸ್ಥಾನ್ ಸ್ಟೆಂಡಾರ್ಡ್ ಪತ್ರಿಕೆ ಪ್ರಕಟಿಸಿದೆ. 'ಈ ಬೇಹುಗಾರರು ತಾವು ಮಂತ್ರಗಾರರುಗಳೆಂದು ನಟಿಸುತ್ತ ಮಸೀದಿಗಳಲ್ಲಿ ಗುಪ್ತ ಸಭೆಗಳನ್ನು ಸೇರಿಸಿ ಪಾಕಿಸ್ತಾನದ ಪರವಾಗಿ ಪ್ರಚಾರ ಕಾರ್ಯವನ್ನು ಮಾಡುತ್ತಾರೆಂದು ವರದಿಗಳಾಗಿವೆ. ಆಜಾದ್ ಕಾಶ್ಮೀರ್ ಫೌಜಿನವರು ಕಾಶ್ಮೀರವನ್ನಷ್ಟೇ ಅಲ್ಲದೆ ಉತ್ತರ ಗುಜರಾತಿನ ಮುಸ್ಲಿಮರನ್ನೂ ರಕ್ಷಿಸುವರೆಂದು ಸಾರುತ್ತಿರುವರೆಂದೂ ಹೇಳಲಾಗಿದೆ.

ಜಮೀನ್ದಾರಿ ನಿರ್ಮೂಲನ ನಿಯಮಕ್ಕನುಸಾರ ಮದ್ರಾಸ್ ಸರಕಾರವು ತಮ್ಮ ಪ್ರಾಂತದ ವಿಜಯನಗರ, ಬೊಬ್ಬಿಲಿ, ವೆಂಕಟಗಿರಿ, ರಾಮನಾಡ, ಶಿವಗಂಗಾ ಮೊದಲಾದ ೩೩೩ ದೊಡ್ಡ ಜಮೀನ್ದಾರಿಗಳ ಭೂಮಿಗಳನ್ನು ವಶಪಡಿಸಿಕೊಂಡಿದೆ. ಬರುವ ಮೂರು ವರ್ಷಗಳಲ್ಲಿ ಆ ಪ್ರಾಂತದ ೨೪೦೦ ಜಮೀನ್ದಾರಿಗಳನ್ನೂ ೩೫೦೦ ಇನಾಮ್ದಾರಿಗಳನ್ನೂ ಸರಕಾರ ವಹಿಸಿಕೊಳ್ಳಲಿದೆ. ಇವುಗಳಿಗೆ ಸುಮಾರು ೧೫ ಕೋಟಿ ರೂಪಾಯಿ ಪರಿಹಾರ ಧನ ಕೊಡಬೇಕಾಗುವದಂತೆ.

ಸಮಾಜವಾದಿ ಪಕ್ಷವು ಅಧಿಕಾರಕ್ಕೆ ಬಂದರೆ ಪ್ರಾಪ್ತವಯಸ್ಕ ಮತದಾನ ಪದ್ಧತಿಯ ಮೇಲೆ ಹೊಸ ರಾಜ್ಯಘಟನಾ ಸಮಿತಿಯನ್ನು ಆರಿಸಿ ಹೊಸ ರಾಜ್ಯಘಟನೆಯನ್ನು ಸಿದ್ಧಪಡಿಸಲಾಗುವದೆಂದು ಶ್ರೀ. ಜಯಪ್ರಕಾಶನಾರಾಯಣರು ಹೇಳಿದರು.

ಹಿಮಾಲಯ ಶಿಖರವೇರಲು ಸ್ವಿಟ್ಝರ್ಲೆಂಡಿನಿಂದ ಬಂದ ಮೂವರು ಪ್ರವಾಸಿಗಳು ಸಿಂಪುಚ್ ಶಿಖರದ ವರೆಗೆ ಅಂದರೆ ೨೩೦೦೦ ಅಡಿ ಎತ್ತರ ಏರಿ ಹಿಂದೆ ಬಂದಿರುವರು. ಹಿಮಾಲಯದ ಅತ್ಯುಚ್ಚ ಶಿಖರದ ಎತ್ತರ ೨೯೧೪೧ ಅಡಿ.

ಸಧಾರಣ ೧ ಮಿಲಿಯ ಎರಡು ಲಕ್ಷ ಪ್ರಜೆಗಳು ಹೈದರಾಬಾದ ಸಂಸ್ಥಾನಿಕ ಕಾಂಗ್ರೆಸ್ ಚುನಾವಣೆಗಳಲ್ಲಿ ಭಾಗವಹಿಸಲಿರುವರು. ಈ ಚುನಾವಣೆಯು ಇದೇ ತಿಂಗಳು ೨೦ರಿಂದ ೩೦ರ ವರೆಗೆ ನಡೆಯುವುದೆಂದು ನಿಶ್ಚಿತವಾಗಿದ್ದರೂ, ಅದು ಒಂದು ಪಕ್ಷದ ವರೆಗೆ ಮುಂದುವರಿಸಲ್ಪಡಬಹುದೆಂದು ಊಹಿಸಲಾಗಿದೆ. ಆ ಚುನಾವಣೆಯಲ್ಲಿ ಸಂಸ್ಥಾನಿಕ ಕಾಂಗ್ರೆಸಿನ ಅಧ್ಯಕ್ಷರ ಪದವಿಗೆ ಸ್ವಾಮಿ ರಮಾನಂದ ತೀರ್ಥರ ಪ್ರತಿಯಾಗಿ ಕಾಂಗ್ರೆಸಿನೊಳಗಿನ ಇನ್ನೊಂದು ಪಕ್ಷದ ಶ್ರೀ. ಬಿ. ರಾಮಕೃಷ್ಣರಾಯರನ್ನು ಉಮೇದುವಾರರನ್ನಾಗಿ ನಿಲ್ಲಿಸಲು ಪ್ರಯತ್ನಿಸಿದೆ. ಇಷ್ಟೇ ಅಲ್ಲ, ಅಧ್ಯಕ್ಷಸ್ಥಾನಕ್ಕಾಗಿ ಕೇಂದ್ರ ಹಾಗೂ ಪ್ರಾಂತೀಯ [illegible] ಸಭೆಗಳ ಸದಸ್ಯರ ವರೆಗೂ ಪ್ರತಿಯೊಂದು ಸ್ಥಾನಕ್ಕೂ ತೀವ್ರ ಸ್ಪರ್ಧೆ ನಡೆಯುವದೆಂದೂ ನಿರೀಕ್ಷಿಸಲಾಗಿದೆ. ತಮ್ಮ ದೇಶದ ಘಟನೆ ತಯಾರಾಗುವ ಮುಂಚೆ ಘಟನಾ ಸಮಿತಿಗೆ ಹೈದರಾಬಾದ ಸಂಸ್ಥಾನದ ಪ್ರತಿನಿಧಿಗಳನ್ನು ಕಳುಹಿಸಬೇಕೆಂದು ರಮಾನಂದ ತೀರ್ಥರು ಅಭಿಪ್ರಾಯಪಟ್ಟಿರುವರು.

ರಾಷ್ಟ್ರಭಾಷೆ.

ಸ್ವತಂತ್ರ ಭಾರತದ ಅಧಿಕೃತ ಭಾಷೆಯಾವುದೆಂಬ ಕುರಿತು ನಡೆದಿರುವ ವಾದ ವಿವಾದಗಳು ಪ್ರಾಮುಖ್ಯವಾದವುಗಳು. ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಮತ್ತು ಘಟನಾ ಸಮಿತಿಯ ಕಾಂಗ್ರೆಸ್ ಸದಸ್ಯರ ಸಭೆಯು ಈ ಕುರಿತು ತನ್ನ ನಿರ್ಧಾರವನ್ನು ಇಷ್ಟರಲ್ಲೇ ಮಾಡಿದೆ. ಯಾವ ಅಂಕೆಯನ್ನು ಅಂಗೀಕರಿಸಿಕೊಳ್ಳಬೇಕೆಂಬ ಕುರಿತು ಸದಸ್ಯರ ಭಿನ್ನಾಭಿಪ್ರಾಯಗಳಿರುವುದರಿಂದ ಅದಕ್ಕಾಗಿ ಘಟನಾ ಸಮಿತಿಯ ತೀರ್ಮಾನವನ್ನೇ ಕಾಯಬೇಕಾಗಿದೆ. ದೇವನಾಗರಿ ಲಿಪಿಯುಳ್ಳ ಹಿಂದಿಯೇ ರಾಷ್ಟ್ರಭಾಷೆಯಾಗಬೇಕು; ಆದರೆ ಇನ್ನು ಹದಿನೈದು ವರುಷಗಳ ವರೆಗೆ ಇಂಗ್ಲಿಷನ್ನೇ ಸರಕಾರಿ ಭಾಷೆಯಾಗಿ ಇಟ್ಟುಕೊಳ್ಳಬೇಕು; ಈ ನಡುವೆ ಮತ್ತು ನಂತರ ಪ್ರಾಂತ್ಯಗಳು ತಮ್ಮ ಕ್ಷೇತ್ರಾಧಿಕಾರದೊಳಗಿನ ಕಾರ್ಯಕಲಾಪಗಳ ಮಟ್ಟಿಗೆ ತಮ್ಮ ಸ್ವಭಾಷೆಗಳನ್ನೇ ಅಂಗೀಕರಿಸಿಕೊಳ್ಳಬಹುದು ಎಂಬ ತೀರ್ಮಾನವು [illegible] ಆದಂತಿದೆ. ಘಟನಾ ಸಮಿತಿಯು ಬರುವ ವಾರದ ಸಭೆಯಲ್ಲಿ ಕೊನೆಯ ಸ್ಪಷ್ಟ ನಿರ್ಧಾರಗೊಳಿಸಲಿದೆ

ಸಾರ್ವಜನಿಕ ಸಭೆ

ತಾರೀಕು ೮-೯-೪೯ರಲ್ಲು ಹಾತೂರು ಶಾಲಾ ಬಳಿ ಸುತ್ತಮುತ್ತಲಿನ ಆರು ಗ್ರಾಮಗಳ ಜನರು ಸೇರಿ, ಮಿ. ಕಡೆಮಾಡ ಮಂದಣ್ಣನವರ ಅಧ್ಯಕ್ಷತೆಯಲ್ಲಿ ನಡೆಸಿದ ಮೀಟಿಂಗಿನಲ್ಲಿ ಈ ಕೆಳಗಿನ ಠರಾವುಗಳು ಸರ್ವಸಮ್ಮತವಾಗಿ ಮಂಜೂರು ಮಾಡಲಾದುವು.

(೧) ಈ ಪ್ರಾಂತ್ಯದಿಂದ ಪರ ಪ್ರಾಂತ್ಯಗಳಿಗೆ ಕೊಟ್ಟ ಭತ್ತ ಯಾನ ಅಕ್ಕಿಗಾಗಿ ಸಿಕ್ಕಿರುವ ಬೋನಸ್ಸು ಮೊಬಲಗನ್ನು ರೈತರಿಗೆ ಸಿಕ್ಕುವಂತೆ ಸರಕಾರವು ಗಮನವಿಡಬೇಕೇ ವಿನಹ ಇತರ ಯಾವ ಉಪಯೋಗಕ್ಕೂ ಕೊಡಕೂಡದು.

(೨) ಸ್ವರಾಜ್ಯ ಪೆಜ್ಜೆಯಾಗಿ ಉಪಯೋಗಿಸಲ್ಪಟ್ಟ ಡಿ. ಬೋರ್ಡನ್ನು ಇನ್ನು ಮುಂದಕ್ಕೆ ರದ್ದುಪಡಿಸಿ, ಅದರ ಆಡಳಿತವನ್ನು ಸರಕಾರದ ಮೂಲಕ ನಿಯೋಜಿಸಬೇಕು.

(೩) ಮುಂದಿನ ವರ್ಷದಲ್ಲಿ ಕೊಡಗಿನಿಂದ ರವಾನೆಯಾಗುವ ಆಹಾರ ಪದಾರ್ಥ (ಭತ್ತ–ಅಕ್ಕಿ) ವನ್ನು ಈ ವರ್ಷದಂತೆ ಅಕ್ಕಿಯ ರೂಪದಲ್ಲೇ ಹೊರತು ಅಕ್ಕಿ ಮತ್ತು ಭತ್ತವಾಗಿ [illegible] ಕೊಡತಕ್ಕದ್ದು.

(೪) ಹಾತೂರಿನಲ್ಲಿರುವ ಎಗ್ರಿಕಲ್ಚರಲ್ ಫೀಲ್ಡ್ ಮೇನನ್ನು ಯಾವ ಕಾರಣದಿಂದಲೂ, ಇಲ್ಲಿಂದ ವರ್ಗಮಾಡದೆ, ಅವರಿಂದ ನಮಗೆ ಸಿಕ್ಕುವ ಅತ್ಯುಪಕಾರದ ಸೇವೆಯನ್ನು ನಾವು ಸದುಪಯೋಗಿಸುವಂತೆ ಸಮ್ಮಂಧಪಟ್ಟ ಅಧಿಕಾರಿಗಳನ್ನು ಕೇಳಿಕೊಳ್ಳುವುದು.

ಕೊಡಗು

ತಾ. ೧೬-೯-೧೯೪೯ನೇ ಶುಕ್ರವಾರ

ಕಾಶ್ಮೀರ.

ಕಾಶ್ಮೀರ ಪ್ರಶ್ನೆಯನ್ನು ಬಗೆಹರಿಸಲು ಸಂಯುಕ್ತ ರಾಷ್ಟ್ರಸಮಿತಿಯವರು ಹಿಂದೂಸ್ಥಾನ ಮತ್ತು ಪಾಕಿಸ್ಥಾನಗಳ ಪ್ರತಿನಿಧಿಗಳ ಸಮ್ಮೇಳನವನ್ನು ಏರ್ಪಡಿಸಿದ್ದು ಆ ಸಮ್ಮೇಳನವು ಕೂಡದೆ ಮುರಿದುಬೀಳಲು ಕಾರಣವೇನೆಂಬುದಕ್ಕೆ ಇತ್ತಲಾಗಿ ಪ್ರಕಟವಾದ ಪತ್ರವ್ಯವಹಾರಗಳಿಂದ ಗೊತ್ತಾಗಿದೆ. ಈ ಸಮ್ಮೇಳನ ಕೂಡುವದಾದರೆ ಕಾಶ್ಮೀರದಲ್ಲಿರುವ ಅಝಾದ್ ಕಾಶ್ಮೀರ ಸೇನೆಯ ನಿಶಸ್ತ್ರೀಕರಣ ಮತ್ತು ವಿಸರ್ಜನೆಯ ವಿಚಾರವನ್ನು ಕಾರ್ಯಕ್ರಮ ಪಟ್ಟಿಯಲ್ಲಿ ಸೇರಿಸಬೇಕೆಂದು ಹಿಂದೂದೇಶದ ಪ್ರತಿನಿಧಿಗಳು ಸೂಚಿಸಿದ್ದರು. ಇದನ್ನು ಕಾರ್ಯಕ್ರಮ ಪಟ್ಟಿಯ 'ಸಂಬಂಧಿಸಿದ ವಿಷಯಗಳು' ಎಂಬಲ್ಲಿ ಸೇರಿಸಿಕೊಳ್ಳುವದೆಂದು ಕಾಶ್ಮೀರ ಸಮಿತಿಯವರು ಸೂಚಿಸಿದ್ದಕ್ಕೆ ಭಾರತವು ಒಪ್ಪಿಕೊಂಡಿತು. ಆದರೆ ಪಾಕಿಸ್ಥಾನವು 'ಸಂಬಂಧಿಸಿದ ವಿಷಯಗಳು' ಎಂಬ ಅಂಶವನ್ನು ಕಾರ್ಯಕ್ರಮ ಪಟ್ಟಿಯಲ್ಲಿಂದ ತೆಗೆಯಬೇಕೆಂದು ಆಗ್ರಹ ಪಡಿಸಿತು. ಈ ವಿಷಯದಲ್ಲಿ ತೀರ್ಮಾನವಾಗದೆ ಸಮ್ಮೇಳನವು ನಿಂತುಹೋಯಿತು. ಅಝಾದ್ ಕಾಶ್ಮೀರ ಸೇನೆಯು ಅಲ್ಲಿರುವ ವರೆಗೆ ನ್ಯಾಯಬದ್ಧವಾದ ಚುನಾವಣೆ ಸಾಧ್ಯವಿಲ್ಲವೆಂದೂ ಆ ಸೈನಿಕರಿರುವ ವರೆಗೆ ಭಯದಿಂದ ಹೊರಗೆ ಹೋದ ನಾಗರೀಕರು ಹಿಂದೆ ಬರುವದು ಸಾಧ್ಯವಾಗದೆಂದೂ ಈ ಹಿಂದೆ ನಾವು ಬರೆದಿದ್ದೆವು. ಆದ್ದರಿಂದ ಅಝಾದ್ ಕಾಶ್ಮೀರ ಸೈನ್ಯವನ್ನು ವಿಸರ್ಜಿಸಬೇಕೆಂಬ ಹಿಂದೂದೇಶದ ಕೇಳಿಕೆಯು ನ್ಯಾಯದೃಷ್ಟಿಯಿಂದ ಮತಗಣನೆಗೆ ಅತ್ಯವಶ್ಯವಾಗಿದೆ. ಆದರೆ ಪಾಕಿಸ್ಥಾನವು ತನ್ನ ಹಿಡಿತವನ್ನು ಬಿಡದ ಕಾರಣ ಸಂಯುಕ್ತ ರಾಷ್ಟ್ರಸಮಿತಿಯು ಈ ಪರಿಷತ್ತು ಕೂಡುವದರಿಂದ ಲಾಭವಿಲ್ಲವೆಂದು ನಿರ್ಣಯಿಸಿ ಪರಿಷತ್ತನ್ನು ರದ್ದು ಮಾಡಿದೆ.

ಈ ಪರಿಷತ್ತು ರದ್ದಾದ ನಂತರ ಕಾಶ್ಮೀರ ಪ್ರಶ್ನೆಯ ಬಗ್ಗೆ ಮುಂದೇನು ಎಂಬುದು ಎಲ್ಲರ ಪ್ರಶ್ನೆಯಾಗಿತ್ತು. ಈ ಬಿಕ್ಕಟ್ಟಿನ ಸಮಯದಲ್ಲಿ ಅಮೇರಿಕಾದ ಅಧ್ಯಕ್ಷ ಟ್ರೂಮನ್ ಮತ್ತು ಬ್ರಿಟನಿನ ಪ್ರಧಾನಿ ಅಟ್ಲಿಯವರು ಒಂದು ಮಧ್ಯಸ್ಥಿಕೆಗಾಗಿ ಮುಂದೆ ಬಂದಿದ್ದಾರೆ! ಕಾಶ್ಮೀರ ತೀರ್ಮಾನವು ಸಭೆ ಸಮ್ಮೇಳನಗಳಿಂದಾಗದು. ಮಧ್ಯಸ್ಥಿಕೆಯಿಂದ ತೀರ್ಮಾನವಾಗಬೇಕೆಂದೂ ಹಿಂದಿನ ಸಂಯುಕ್ತ ಸಮಿತಿಯ ಅಧ್ಯಕ್ಷರಾದ ಎಡ್ಮಿರಲ್ ನಿಮಿಟ್ಸ್‌ರವರು ಮಧ್ಯಸ್ಥಗಾರರಾಗಿರಬೇಕೆಂದೂ ಸೂಚನೆ ಬಂದಿದೆ.

ಈ ಸೂಚನೆಯನ್ನು ಹಿಂದೂದೇಶದ ಪ್ರಧಾನಿ ಪಂಡಿತ ಜವಾಹರರು ನಿರಾಕರಿಸಿರುವರು. ಕಾಶ್ಮೀರ ಸಮಸ್ಯೆಯಲ್ಲಿ ಅಟ್ಲಿ ಟ್ರೂಮನರು ಅನಗತ್ಯವಾಗಿ ಕೈಹಾಕಿದ್ದಕ್ಕೆ ಅವರನ್ನು ನೆಹರೂರವರು ಹಿಂದೂದೇಶವು ಏಕೆ ಮಧ್ಯಸ್ಥಿಕೆಗೆ ಒಪ್ಪಲಾರದೆಂಬುದನ್ನು ಹೀಗೆ ವಿವರಿಸಿದ್ದಾರೆ. 'ಯಾವ ಪ್ರಶ್ನೆಯ ಬಗ್ಗೆ ಮಧ್ಯಸ್ಥಿಕೆ ಎಂಬುದು ಸ್ಪಷ್ಟವಾಗಿಲ್ಲ. ತಮಗೆ ಬೇಕಾದ ಪ್ರಶ್ನೆಗಳನ್ನು ತೆಗೆದುಕೊಂಡು ಮಧ್ಯಸ್ಥಗಾರನು ನಿರ್ಣಯಕೊಡುವದು ವಿಲಕ್ಷಣವೂ ಹಾಸ್ಯಾಸ್ಪದವೂ ಆಗಿದೆ. ಅಝಾದ್ ಕಾಶ್ಮೀರ ಸೇನೆಯ ವಿಸರ್ಜನೆಯನ್ನು ಜನಮತಗಣನೆಯ ಮೊದಲು ಸಾಧಿಸಬೇಕೆಂಬುದನ್ನು ಸಂಯುಕ್ತ ರಾಷ್ಟ್ರ ಸಮಿತಿಯು ಒಪ್ಪಿಕೊಂಡಿದ್ದು ಅದನ್ನು ಜಾರಿಗೆ ತರುವದನ್ನು ಬಿಟ್ಟು ಈಗ ಮಧ್ಯಸ್ಥಿಕೆಯ ಮಾತಾಡುವದು ಸಮಂಜಸವಲ್ಲ.'

ಕಾಶ್ಮೀರ ಸಮಿತಿಯ ಪ್ರಯತ್ನವು ಆ ಕೈದಿಯಿಂದ ಸಾಗಿದೆಯೆಂದು ಈ ಮೊದಲೇ ನಾವು ಬರೆದಿದ್ದೆವು. ದಿನ ಕಳೆದಂತೆ ಅದಕ್ಕೆ ಹೆಚ್ಚಿನ ನಿದರ್ಶನಗಳು ದೊರೆಯುತ್ತಿವೆ. ಅಝಾದ್ ಕಾಶ್ಮೀರ ಸೇನೆಯನ್ನು ವಿಸರ್ಜಿಸುವದು ಅತ್ಯವಶ್ಯವೆಂದು ಒಮ್ಮೆ ಒಪ್ಪಿಕೊಂಡ ಸಮಿತಿಯು ಇಂದು ಅನುಸರಿಸುತ್ತಿರುವ ಮಾರ್ಗವು ಸಂಶಯಕ್ಕೆಡೆಕೊಟ್ಟಿದೆ. ಇವರಿಂದ ಕಾಶ್ಮೀರ ಸಮಸ್ಯೆಯು ಯೋಗ್ಯ ರೀತಿ ಬಗೆಹರಿಯುವದೇ ಎಂಬುದು ಸಂಶಯದ ಮಾತಾಗಿದೆ.

ಕಾಶ್ಮೀರ ಸಮಸ್ಯೆಯನ್ನು ಸಂಯುಕ್ತರಾಷ್ಟ್ರದ ಮುಂದೆ ತಂದುದು ಭಾರತದ ದೊಡ್ಡ ತಪ್ಪಾಯಿತು. ಮಹಾತ್ಮಾಗಾಂಧೀಜಿಯವರು ಅದನ್ನು ಆಗ ವಿರೋಧಿಸಿದ್ದರು. ಆದರೂ ಅಂತರಾಷ್ಟ್ರೀಯ ದೃಷ್ಟಿಯ ಪಂಡಿತ ಜವಾಹರರು ಸಂಯುಕ್ತರಾಷ್ಟ್ರ ಸಂಘವು ಯೋಗ್ಯ ನಿರ್ಣಯ ಕೊಡಬಹುದೆಂಬ ಭರವಸೆಯಿಂದ ಆಗಿನ ಅನಿವಾರ್ಯ ಪರಿಸ್ಥಿತಿಯನ್ನನುಲಕ್ಷಿಸಿ ಈ ಪ್ರಶ್ನೆಯನ್ನು ಸಂಯುಕ್ತ ರಾಷ್ಟ್ರ ಸಂಘದ ಮುಂದಿಟ್ಟರು. ಸಂಯುಕ್ತ ರಾಷ್ಟ್ರದ ಅಧಿಕಾರ ಲಾಲಸಿ ರಾಷ್ಟ್ರಗಳು ಈ ಅನುವನ್ನು ಉಪಯೋಗಿಸಿಕೊಂಡು ಪಾಕಿಸ್ಥಾನ ಹಿಂದೂಸ್ಥಾನಗಳ ಪ್ರಶ್ನೆಯಲ್ಲಿ ಹಸ್ತಕ್ಷೇಪ ಮಾಡಿ ತಮ್ಮ ಬೇಳೆ ಬೇಯಿಸಲು ಯತ್ನಿಸುತ್ತಿವೆ.

ಕಾಶ್ಮೀರದ ಪ್ರಶ್ನೆ ಹೈದರಾಬಾದಿನ ಪ್ರಶ್ನೆಗಿಂಥ ಭಿನ್ನವಾಗಿರಲಿಲ್ಲ. ಹೈದರಾಬಾದು ಭಾರತ ಒಕ್ಕೂಟಕ್ಕೆ ಸೇರದಿದ್ದರೂ ಅದರ ಪ್ರಶ್ನೆಯನ್ನು ಸಂಯುಕ್ತ ರಾಷ್ಟ್ರ ಸಂಘಕ್ಕೆ ಬಿಡದೆ 'ಪೋಲೀಸ್ ಧಾಳಿ'ಯಿಂದ ಅದರ ಪ್ರಶ್ನೆಯನ್ನು ಬಗೆಹರಿಸಲಾಯಿತು. ಕಾಶ್ಮೀರದ ಪ್ರಶ್ನೆಯು ಇದಕ್ಕಿಂಥಾ ಸುಲಭವಿತ್ತು. ಕಾಶ್ಮೀರವು ಭಾರತ ಒಕ್ಕೂಟಕ್ಕೆ ಸೇರಿತ್ತು. ಈ ಪ್ರಶ್ನೆಯನ್ನು ಸಂಯುಕ್ತ ರಾಷ್ಟ್ರ ಸಂಘಕ್ಕೆ ಬಿಡದೆ ಹೈದರಾಬಾದಿನಲ್ಲಿ ಅನುಸರಿಸಿದ ನೀತಿಯನ್ನು ಅನುಸರಿಸಿದ್ದರೆ ಕಾಶ್ಮೀರ ಪ್ರಶ್ನೆಯು ಎಂದೋ ಬಗೆಹರಿದು ಹೋಗುತ್ತಿತ್ತು. ಆದರೆ ಭಾರತವು ಸಂಯುಕ್ತ ರಾಷ್ಟ್ರ ಸಭೆಯ ಮೇಲೆ ಇರಿಸಿದ ನಂಬಿಕೆಗಾಗಿ ಇಂದು ತೊಂದರೆಗೊಳಗಾಗಬೇಕಾಗಿದೆ.

ಸದ್ಯದ ಪರಿಸ್ಥಿತಿಯಿಂದ ಹೇಳುವದಾದರೆ ಶಾಂತರೀತಿಯಿಂದ ಕಾಶ್ಮೀರ ಸಮಸ್ಯೆಯು ಬಗೆಹರಿಯುವಂತೆ ತೋರುವದಿಲ್ಲ. ಈ ಪ್ರಶ್ನೆಯನ್ನು ಉಪಯೋಗಿಸಿಕೊಂಡು ಪಶ್ಚಿಮ ರಾಷ್ಟ್ರಗಳು ಇಲ್ಲಿ ತಮ್ಮ ಕೈಹಾಕಲೆತ್ನಿಸುತ್ತಿರುವದು ಶುಭ ಚಿಹ್ನೆಯಲ್ಲ. ಈ ಪ್ರಶ್ನೆಯು ಸಂಯುಕ್ತ ರಾಷ್ಟ್ರ ಸಂಘದ ಮುಂದಿರುವಾಗ ಇದರ ತೀರ್ಮಾನಕ್ಕೆ ವ್ಯಕ್ತಿಗತವಾಗಿ ಅಮೇರಿಕಾ, ಬ್ರಿಟನುಗಳು ಕೈಹಾಕಬೇಕಾದ ಅವಶ್ಯಕತೆ ಇರಲಿ. ಸಂಯುಕ್ತ ರಾಷ್ಟ್ರಸಂಘವು ಈ ರೀತಿಯ ಅವ್ಯವಸ್ಥೆಗೆ ಅನುಕೊಡದೆ ತಾನು ಒಪ್ಪಿಕೊಂಡಿರುವಂತೆ ಅಝಾದ್ ಕಾಶ್ಮೀರ ಸೈನ್ಯದ ವಿಸರ್ಜನೆಯ ಬಗ್ಗೆ ತಾರ್ೕಾನ್ನು ಬೇಗನೆ ಕೊಡಬೇಕು. ಇಲ್ಲದಿದ್ದರೆ ಪಾಲೇಸ್ತೀನ್, ಗ್ರೀಸ್ ಮೊದಲಾದೆಡೆ ಸೋಲನ್ನು ಒಪ್ಪಿದ ಈ ಸಂಘವು ಇಲ್ಲಿಯೂ ತನ್ನ ಅಸಹಾಯ ಪರಿಸ್ಥಿತಿಯನ್ನು ಪ್ರದರ್ಶಿಸಬೇಕಾದೀತು.

ಜನರಲ್ ಕಾರ್ಯಪ್ಪನವರು

ತಾರೀಕ ೩೧-೮-೪೯ನೆ ಬುಧವಾರವು ಜನರಲ್ ಕಾರ್ಯಪ್ಪನವರಿಗೆ ಒಂದು ಸುದಿನ. ಅದು ಕಾರ್ಯಪ್ಪನವರ ಜನ್ಮ ಸ್ಥಳವಾದ ಕೊಡಗಿಗೂ ಗೌರವದ ದಿನ. ಅದೇ ಅಲ್ಲ ಹಿಂದೂದೇಶ ಮತ್ತು ಅಮೇರಿಕಾದ ಮೈತ್ರಿಯ ಸೂಚಕವಾದ ಚರಿತ್ರಾರ್ಹದಿನ. ಈ ದಿನದಂದು ಅಮೇರಿಕಾದ ಅಧ್ಯಕ್ಷರಾದ ಟ್ರೂಮನ್‌ರವರು ಅಮೇರಿಕದಲ್ಲಿ ತಮ್ಮ ಮಹಾಯೋಧರಿಗೆ ಕೊಡತಕ್ಕ ಎಲ್ಲಕ್ಕೂ ಹೆಚ್ಚಿನ ಬಹುಮಾನವನ್ನು ಅಂದರೆ ಚೀಫ್ ಕಮಾಂಡರ 'ಬೇಡ್ಜ'ನ್ನು ಭಾರತದಲ್ಲಿರುವ ತಮ್ಮ ರಾಯಬಾರಿ ಲಾಯ್ ಹೆಂಡರ್‌ಸನ್ನರ ಮೂಲಕ ಜನರಲ್ ಕಾರ್ಯಪ್ಪನವರಿಗೆ ಕೊಟ್ಟರು.

ಈ ಸಮಾರಂಭವು ಡೆಲ್ಲಿಯ ಇರ್ವಿನ್ ಸ್ಟೇಡಿಯಮಿನ ವಿಸ್ತೃತ ಕಟ್ಟಡದಲ್ಲಿ ನಡೆಯಿತು. ಹಿಂದೀ ಮಂತ್ರಿಮಂಡಲದ ಸೈನ್ಯ ಸಚಿವರಾದ ಬಲದೇವಸಿಂಗರೂ ಇತರ ಅನೇಕ ವಿದೇಶೀ ರಾಯಬಾರಿಗಳೂ ಹಾಜರಿದ್ದರು. ಸುಮಾರು ಅಂಗೈಯಷ್ಟು ಅಗಲದ ದೊಡ್ಡದಾಗಿದ್ದ ಹದಿಮೂರು ನಕ್ಷತ್ರಗಳಿಂದ ಅಂಕಿತವಾದ ಆ ಗೌರವಪೂರ್ವಕ 'ಬೇಡ್ಜನ್ನು' ಕಾರ್ಯಪ್ಪನವರ ಎದೆಯ ಮೇಲೆ ಅಮೇರಿಕಾದ ರಾಯಬಾರಿಯವರು ಶೃಂಗರಿಸಿದರು. ಆ ಕಾಲಕ್ಕೆ ಅಮೇರಿಕಾ ಮತ್ತು ಬ್ರಿಟನಿನ ಧ್ವಜಗಳು ಹಾರಿಸಲ್ಪಟ್ಟದ್ದವಲ್ಲದೆ ಎರಡೂ ದೇಶದ ರಾಷ್ಟ್ರ ಗೀತೆಗಳೂ ಹಾಡಲ್ಪಟ್ಟವು.

ಜನರಲ್ ಕಾರ್ಯಪ್ಪನವರು ಯುದ್ಧದಲ್ಲಿ ತೋರಿಸಿದ ಶೌರ್ಯ ಪ್ರತಾಪಗಳನ್ನೂ, ಯುದ್ಧಾನಂತರದ ಕಾರ್ಯದಕ್ಷತೆಯನ್ನೂ ಹೊಗಳಿ ಅಮೇರಿಕಾದ ಅಧ್ಯಕ್ಷ ಟ್ರೂಮನರು ಬರೆದ ಗುಣಗ್ರಾಹಕ ಸಂದೇಶವನ್ನು ರಾಯಬಾರಿ ಹೆಂಡರ್‌ಸನರು ಓದಿದರು.

ಜನರಲ್ ಕಾರ್ಯಪ್ಪನವರು ಕೊಡಗಿಗೆ ಯಾಕೆ ಹಿಂದೂದೇಶಕ್ಕೆ ಅನುಪಮ ಕೀರ್ತಿಯನ್ನು ತಂದಿದ್ದಾರೆ. ಇಂದು ಜಗತ್ತಿನ ಎಲ್ಲ ರಾಷ್ಟ್ರಗಳಿಗಿಂಥಲೂ ಶಕ್ತಿ ಸಂಪನ್ನವೂ, ಜಗತ್ತಿನ ಒಂದನೇ ರಾಷ್ಟ್ರವೂ ಎಂದೆನಿಸಿದ ಅಮೇರಿಕೆಯ ಪ್ರಶಸ್ತಿಯನ್ನು ಪಡೆದು ತಮ್ಮ ಕಾರ್ಯದಕ್ಷತೆಯನ್ನೂ ಸೈನ್ಯ ಕುಶಲತೆಯನ್ನೂ ಜಗತ್ತಿಗೇ ತೋರಿಸಿದ್ದಾರೆ. ಇದು ಕಾರ್ಯಪ್ಪನವರ ವಯಕ್ತಿಕ ಅಭಿಮಾನದ ಸಂಗತಿ ಹೇಗೋ ಹಾಗೆಯೇ ಭಾರತಕ್ಕೂ ಅಭಿಮಾನದ ಸಂಗತಿಯಾಗಿದೆ.

ಜನರಲ್ ಕಾರ್ಯಪ್ಪನವರು ಇನ್ನೂ ದಕ್ಷತೆಯಿಂದ ಅಖಂಡ ಭಾರತವನ್ನು ಕಟ್ಟುವ ಕಾರ್ಯಕ್ಕಾಗಿ ದುಡಿಯುವಂತೆ ಭಗವಂತನು ಅವರಿಗೆ ಚಿರಾಯುವನ್ನು ಕೊಡಲಿ.

ವರ್ತಮಾನ.

ವೆಟರ್‌ನರಿ ಡಾಕ್ಟರಾಗಿದ್ದ ಶ್ರೀ ಕೆ. ವೀರಪ್ಪಗೌಡರನ್ನು ಕೆಲಸದಿಂದ ನಿವೃತ್ತಿಗೊಳಿಸಿದ್ದು ಸರಕಾರಿ ಹಣ ದುರುಪಯೋಗಗೊಳಿಸಿದ್ದಕ್ಕಲ್ಲವೆಂದೂ ಬದಲು ಪ್ರಯಾಣ ಬತ್ತೆ ಪಡೆದಾಗ ತಾನು ಕೊಂಡೊಯ್ದೆನೆನ್ನುವ ಸಾಮಾನುಗಳ ಬಗ್ಗೆ ಯೋಗ್ಯ ಲಗ್ಗೇಜು ರಶೀತಿ ಹಾಜರ್ಮಾಡಲಿಲ್ಲವೆಂಬ ಕಾರಣದಿಂದ ಎಂದೂ ಶ್ರೀಯುತರು ತಿಳಿಸುತ್ತಾರೆ.

'ವಿಮಾನದಳಕ್ಕೆ ಸೇರಲು ಇಚ್ಛೆಯುಳ್ಳ (ಪ್ರಾಯ ೧೭ ರಿಂದ ೨೨ರ) ಎಸ್. ಎಸ್. ಎಲ್. ಸಿ. ಪಾಸಾದ ಯುವಕರು ತಾರೀಕು ೨೩ನೇ ಸೆಪ್ಟಂಬರ್‌ನ ಮುಂಚೆ ಬೆಂಗಳೂರು ರಿಕ್ರೂಟಿಂಗ್ ಆಫೀಸಿಗೆ ಹಾಜರಾಗಬಹುದು. ಹೆಚ್ಚಿನ ವಿಷಯಗಳನ್ನು ಡಿಸ್ಟ್ರಿಕ್ಟ್ ಎಂಪ್ಲಾಯಿಮೆಂಟ್ ಆಫೀಸ್ ಮಡಿಕೇರಿಯಿಂದ ತಿಳಿದುಕೊಳ್ಳಬಹುದೆಂದು ತಿಳಿಸುತ್ತಾರೆ.

ವೀರಾಜಪೇಟೆ ಮುನ್ಸಿಪಲ್ ಕೌನ್ಸಿಲಿನ ಚುನಾವಣೆಯು ತಾ. ೨೭-೯-೪೯ರಲ್ಲಿ ನಡೆಯುವದೆಂದು ತಿಳಿಯ ಬರುತ್ತದೆ.

ವೀರಾಜಪೇಟೆ ಕೊಡವ ಸಮಾಜದ ವಾರ್ಷಿಕ ಮಹಾಸಭೆಯೂ, ಕೈಲ್‌ಪೊಳ್ದು ಆಟೋಟಗಳ ಸ್ಪರ್ಧೆಯೂ ತಾರೀಕು ೧೮-೯-೪೯ರಲ್ಲಿ ನಡೆಯುವದು.

ಕಳೆದ ತಾರೀಕು ೮ರಲ್ಲಿ ದಕ್ಷಿಣ ಕೊಡಗಿನ ಕೆಲವು ಭಾಗಗಳಿಗೆ ಸುಮಾರು ೪ ಇಂಚು ಮಳೆಹೊಡೆದು ಗದ್ದೆಗಳಿಗೆ ನಷ್ಟವಾಗಿದೆಯೆಂದು ತಿಳಿಯಬರುತ್ತದೆ.

ಫ್ರೇಜರ್‌ಪೇಟೆಯಿಂದ ಶಿರಂಗಾಲ ನಲ್ಲೂರಿನ ವರೆಗಿನ ಹತ್ತು ಗ್ರಾಮಗಳ ಜನರು ತಮ್ಮ ಸಹಕಾರಿ ಸಂಸ್ಥೆಗಳ ಮೂಲಕ ಸಾಮೂಹಿಕವಾಗಿ ನಡೆಸಿದ ಗ್ರಾಮ ರಸ್ತೆ ರಿಪೇರಿ, ಲಂತಾನ ಸಸ್ಯೆರೆ ಕಾಡು ನಿರ್ಮೂಲ, ಮನೆ ಮ ರಗಳ ಶುಚಿತ್ವದ ಕುರಿತು ಮಾಡಿದ ಕೆಲಸಗಳನ್ನು ಈ ತಾ. ೧೩ರಲ್ಲಿ ಚೀಫ್ ಕಮಿಷನರು, ಹಲವು ಗಜೆಟೆಡ್ ಉದ್ಯೋಗಸ್ಥರು ಮತ್ತು ಕೆಲವು ಕೌನ್ಸಿಲ್ ಮೆಂಬರು ಪರಾಂಬರಿಸಿ ಶಿರಂಗಾಲದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಗ್ರಾಮಸ್ಥರ ಕೆಲಸವನ್ನು ಪ್ರಶಂಸಿದರು.

ಕೊಡಗಿನ ಖಾದಿ ಕೈಗಾರಿಕೆ ಸಲಹಾ ಸಮಿತಿಯ ಮೀಟಿಂಗ ತಾರೀಕು ೧೭-೯-೪೯ರಲ್ಲೂ, ಹರಿಜನೋದ್ಧಾರ ಸಲಹಾ ಸಮಿತಿಯ ಮೀಟಿಂಗು ತಾ. ೧೯ರಲ್ಲಿಯೂ ಮಡಿಕೇರಿ ಕೋಟೆಯಲ್ಲಿ ನಡೆಯುವದು.

ತಾತ್ಕಾಲಿಕ ಪಾರ್ಲಿಮೆಂಟ್

ಈಗಿನ ರಾಜ್ಯ ಘಟನಾ ಸಭೆಯು ರಾಜ್ಯಘಟನೆಯನ್ನು ಸಿದ್ಧಪಡಿಸಿದ ನಂತರ ನವಂಬರ್ ತಿಂಗಳಲ್ಲಿ ಮುಕ್ತಾಯಗೊಳ್ಳಬಹುದು. ನಂತರ ಈ ಘಟನೆಯಂತೆ ಹೊಸ ಪಾರ್ಲಿಮೆಂಟ್ ಸಭೆಯು ಚುನಾಯಿಸಲ್ಪಡುವವರೆಗೆ ತಾತ್ಕಾಲಿಕವಾಗಿ ಒಂದು ಪಾರ್ಲಿಮೆಂಟ್ ಸಭೆಯು ರಚಿಸಲ್ಪಡುವದು. ಈ ಸಭೆಯಲ್ಲಿ ೩೦೦ ಸದಸ್ಯರಿದ್ದು ಈ ಮೆಂಬರುಗಳನ್ನು ಬರುವ ಜನವರಿಯಲ್ಲಿ ದೊಡ್ಡ ಪ್ರಾಂತಗಳಲ್ಲೆಲ್ಲಾ ಸ್ಥಳೀಯ ನ್ಯಾಯವಿಧಾಯಕ ಸಭೆಗಳ ಸದಸ್ಯರು ಆರಿಸುವರು. ಆದರೆ ಚೀಫ್ ಕಮಿಷನರ ಪ್ರಾಂತಗಳಲ್ಲಿ ಈ ಮೆಂಬರುಗಳನ್ನು ಸೀದಾ ಮತದಾರರಿಂದಲೇ ಆರಿಸುವರು. ಈ ಹೊಸ ಪಾರ್ಲಿಮೆಂಟು ಜನವರಿ ೨೬ರಲ್ಲಿ ಪ್ರಥಮ ಸಭೆಸೇರಿ ಯೂನಿಯನಿನ ತಾತ್ಕಾಲಿಕ ಅಧ್ಯಕ್ಷರನ್ನು ಆರಿಸುವದು. ಈ ತರಹದ ಸೂಚನೆಯು ಆಲೋಚಿಸಲ್ಪಡುತ್ತಿದೆಯೆಂದೂ ಇದು ರಾಜ್ಯಘಟನಾ ಸಭೆಯು ಮುಂದೆ ಇಡಲ್ಪಡುವದೆಂದೂ ವರ್ತಮಾನ.

ಮಹಿಳೆಯರ ಜವಾಬ್ದಾರಿ.

ಶ್ರೀ ವಿನೋಬಾರ ಭಾಷಣ ಸಾರ.

ಸ್ತ್ರೀಯರು ಕೆಲವು ರೀತಿಯಲ್ಲಿ ಗಂಡಸರಿಗಿಂತ ಮುಂದೆ ನಡೆದಿದ್ದಾರೆ. ಹೇಳಬೇಕಾದರೆ, ನಾನು ಕಂಡ ಹಾಗೆ ಅವರು ಹಿಂದೀ ಭಾಷೆಯನ್ನು ಕಲಿಯುವುದರಲ್ಲಿ ಪುರುಷರಿಗಿಂತ ಹೆಚ್ಚು ಉತ್ಸಾಹವನ್ನು ತೋರಿಸುತ್ತಿದ್ದಾರೆ. ನಮ್ಮ ಸಂಸ್ಕೃತಿಯನ್ನು ಕಾಪಾಡಿಕೊಂಡು ಬಂದಿರುವವರು ಸ್ತ್ರೀಯರೇ ಆಗಿರುವುದರ ಕಾರಣ ಅಷ್ಟು ಉತ್ಸಾಹಶಾಲಿಗಳಾಗಿರುವುದು ಸಹಜವಾಗಿಯೇ ಇದೆ.

ಗಾರ್ಗಿ, ಮೈತ್ರೇಯಿ ಮುಂತಾದ ಮಹಾಪತಿವ್ರತೆಯರನ್ನು ಜ್ಞಾನಾರ್ಜನೆಗಾಗಿ ಗಂಡಸರು ಅಸ್ತಿತ್ವವನ್ನು ನಾವು ವೇದಗಳಿಂದ ತಿಳಿದಿದ್ದೇವೆ. ಇವರಂತೆ ತಮಿಳ ದೇಶದಲ್ಲೂ ಅವ್ವಯ್ಯಾರ್ ಎಂಬಾಕೆಯೂ ಪ್ರಸಿದ್ಧಳಾಗಿದ್ದಾಳೆ. ಎಂದು ಭಾರತವು ಪರಕೀಯರ ಆಡಳಿತೆಗೆ ಒಳಪಟ್ಟಿತೋ ಅಂದಿನಿಂದ ನಮ್ಮ ಸ್ತ್ರೀಯರ ಕಾರ್ಯಕ್ಷೇತ್ರವು ಕುಗ್ಗಿತು. ಗಾಂಧಿಯವರು ಸ್ವಾತಂತ್ರ್ಯ ಚಳವಳಿಯನ್ನು ಪ್ರಾರಂಭಿಸುವ ಕಾಲದಲ್ಲಿ ಮಹಿಳೆಯರು ಗಂಡಸರಿಗೆ ಸರಿಸಮಾನರು ಎಂದು ಸಾರಿದರು. ಇಂದು ಸರಿಸಮಾನತೆಯನ್ನು ಹಾಡಿ ಹರಸುತ್ತಾರೆ. ಗಂಡಸರ ಸರಿ ಕೆಲಸ ಮಾಡಲು ಮಹಿಳೆಯರಿಗೆ ಸರಿಯಾದ ತರಬೇತು ಕೊಡಬೇಕು ಎಂದು ಜನರೆನ್ನುತ್ತಾರೆ. ಇದೇ ವಿಷಯವನ್ನು ಪ್ರತಿಪಾದಿಸುತ್ತ ಕವಿಭಾರತಿ ಅವರು ಈ ರೀತಿ ಅಂದಿದ್ದಾರೆ. 'ಸರಿ ನಿಹರ ಸಮಾನ ಮಾಹ' (ಗಂಡಸರು ಮತ್ತು ಹೆಂಗಸರು ಸರಿಸಮಾನರು) ಹೆಂಗಸರು ಬರಿ ಸರಿಸಮಾನತೆಯನ್ನು ಹೊಂದುವುದೇ ಮುಖ್ಯವಲ್ಲ, ಗಂಡಸರು ಬುದ್ಧಿಶೂನ್ಯರಾಗಿದ್ದಾರೆ. ಅವರು ಈಗ ಕಳೆದ ೩೫ ವರ್ಷಗಳಲ್ಲಿ ಜಗತ್ತನ್ನು ಯುದ್ಧದಲ್ಲಿ ಮುಳುಗಿಸಿದ್ದಾರೆ. ಈಗಲೂ ಇನ್ನೊಂದು ಯುದ್ಧಕ್ಕೆ ಅವರು ಸನ್ನಾಹ ಮಾಡುತ್ತಲಿರುವರು. ಹೆಂಗಸರೂ ಈ ವಿಷಯದಲ್ಲಿ ಯೋಧರಂತೆ ತರಬೇತಾದರೆ ಅಂತಹ ಸಮಾನತೆಗೆ ನಮಸ್ಕಾರವಿರಲಿ. ಅದು ಕಾರಣ ಸ್ತ್ರೀಯರು ಸಮಾನತೆಯನ್ನು ಹೊಂದುವುದರ ಜೊತೆಗೆ ಗಂಡಸರಿಂದ ಇದು ವರೆಗೂ ಉಂಟಾಗಿರುವ ಕಷ್ಟನಷ್ಟಗಳನ್ನು ಪರಿಹರಿಸಿ ಅವರನ್ನು ಒಂದು ಅಂಕೆಯಲ್ಲಿಡುವುದು ಮುಖ್ಯವಾಗಿದೆ. ಇದು ಅಹಿಂಸಾಪ್ರಚಾರದಿಂದ ಸಾಧ್ಯ ಮತ್ತು ಇದೇ ಗಾಂಧಿಯವರು ಸ್ತ್ರೀಯರಿಂದ ನಿರೀಕ್ಷಿಸುವುದು.

ಜಗತ್ತು ಇಂದು ಹಿಂಸಾಕೃತ್ಯಗಳಿಂದ ಬಹಳ ಜರ್ಝರಿತವಾಗಿದೆ. ಹಿಂಸೆಯೇ ಮುಂದುವರಿದರೆ ವಿಶ್ವವು ನಾಶವಾಗುತ್ತದೆ. ಕೊನೆಯಲ್ಲಿ ಅಹಿಂಸೆಯು ಉದಯವಾಗುತ್ತದೆ. ಅನಂತರ ಸ್ತ್ರೀಯರೇ ಉನ್ನತಿಯ ಮಹತ್ಕಾರ್ಯಕ್ಕೆ ಮೊದಲಿಗರಾಗುತ್ತಾರೆ. ಎಂದಿನ ವರೆಗೂ ಸಮಾಜ ಹಿಂಸೆಯ ಅಡಿಗಲ್ಲಿನ ಮೇಲೆ ನಿಂತಿರುತ್ತದೆಯೋ ಅಂದಿನ ವರೆಗೂ ಸ್ತ್ರೀಯರು ಗಂಡಸರಿಗೆ ಸಮಾನರಾಗರು. ಏಕೆಂದರೆ ಗಂಡು; ಸ್ತ್ರೀ ಅಬಲೆ. ಸಮಾಜ ಅಹಿಂಸಾತತ್ವದ ಹಾದಿಹಿಡಿಯಿತೆಂದರೆ ಆಗ ಅಬಲೆ ಗಂಡಸಿಗಿಂತ ಬಲಿಷ್ಠಳಾಗುತ್ತಾಳೆ; ಆಗ ಆಕೆಗೆ ಮಾನವ ಕುಲದ ತಾಯಿ ಎಂಬ ಹೆಸರು ಸಾರ್ಥಕವಾಗುತ್ತದೆ ಮತ್ತು ಆಕೆ ಮಾನವ ಸಮಾಜದ ಗುರುವೂ ಆಗುತ್ತಾಳೆ.

ಬಲವು ಮತ್ತು ಸಹನೆಯ ಗುಣಗಳ ಜೊತೆಯಲ್ಲಿ ಸ್ತ್ರೀ ಧೀರತೆಯನ್ನು ಪಡೆಯಬೇಕು. ಇದಿಲ್ಲದೆ ಅಹಿಂಸೆಯು ಅಸಾಧ್ಯ. ಇದು ಬೆಳೆಯಬೇಕಾಗಿದೆ. ನೀವು ಹಳ್ಳಿಗಳಲ್ಲಿ ಗ್ರಾಮಸ್ಥರ ಜೊತೆಯಲ್ಲಿ ಒಂದಾಗಿ ಧೈರ್ಯದಿಂದ ಕೆಲಸ ಮಾಡಿದಾಗಲೇ ನಿಮ್ಮನ್ನು ನಾನು ಜಯಶಾಲಿಗಳೆಂದು ಗಣಿಸುತ್ತೇನೆ. ಎಷ್ಟೇ ಇತರ ಗುಣಗಳಿದ್ದರೂ ಹೆದರಿಕೆ ಉಂಟಾದರೆ ಎಲ್ಲಾ ವ್ಯರ್ಥ. ಧೀರತೆಯಿದ್ದರೇನೇ ಬಾಕಿ ಗುಣಗಳು ಶೋಭಿಸುತ್ತವೆ. ನೀವು ಗ್ರಾಮದಲ್ಲಿ ಹೋಗಿ ಅಲ್ಲಿರುವವರೊಡನೆ ಕೆಲಸ ಮಾಡಿದರೆ ಅವರು ನಿಮ್ಮನ್ನು ಗೌರವದಿಂದ ಬರಮಾಡಿಕೊಳ್ಳುತ್ತಾರೆ. ಅವರು ನಿಮ್ಮನ್ನು ಅಪಹಾಸ್ಯ ಮಾಡಬಹುದು ಮತ್ತು ಹಾಗೆ ಮಾಡಿ ನಿಮ್ಮ ನಡವಳಿಕೆಯನ್ನು ಸರಿಯಾಗಿ ಪರಿಶೀಲಿಸಲು ಪ್ರಯತ್ನಿಸಬಹುದು. ಅವರಿಗೆ ನೀವು ಧೈರ್ಯಶಾಲಿಗಳು ಎಂದು ತಿಳಿದರೆ ತಾನೆ ನಿಮಗೆ ಹಳ್ಳಿಯಲ್ಲಿ ಪ್ರವೇಶ, ಇಲ್ಲದಿದ್ದರೆ ಇಲ್ಲ. ಸ್ತ್ರೀಯರಿಗೆ ಲಜ್ಜೆಯೇ ಭೂಷಣ; ಆದರೆ ಧೈರ್ಯವಿಲ್ಲದೆ ಅದು ಶೋಭಿಸಲಾರದು. ಸಂಸ್ಕೃತ ಕವಿಗಳು ಹೆಂಗಸರು ಅಂಜುಬುರುಕರು ಎಂದು ತಿಳಿದು ಅಂತೆಯೇ ಕಾವ್ಯಗಳಲ್ಲಿ ವರ್ಣನೆಮಾಡಿದ್ದಾರೆ. ಅದು ದೌರ್ಬಲ್ಯ, ಒಂದು ಗುಣವಲ್ಲ. ಆದ್ದರಿಂದ ನೀವೆಲ್ಲರೂ ಹಳ್ಳಿಯಲ್ಲಿ ದುಡಿದದ್ದೇ ಆದರೆ ನಾವು ಗಾಂಧಿಯವರ ನಿರೀಕ್ಷಣೆಯನ್ನು ಪೂರ್ಣಮಾಡಿದಂತಾಗುತ್ತದೆ.

'ಹರಿಜನ'

ಚರಖಾ ಜಯಂತಿ.

ಆಚಾರ್ಯ ಕೃಪಲಾನಿಯವರು ಜಗನ್ನೇ ಚರಖಾ ಜಯಂತಿಯ ಬಗ್ಗೆ ಈ ರೀತಿ ಸಂದೇಶ ಕೊಡುತ್ತಾರೆ.

ಬಾಪೂವಿನ ಜಯಂತಿಯ ಕಾಲಕ್ಕೆ ರಚನಾತ್ಮಕ ಕಾರ್ಯವನ್ನು ಭರದಿಂದ ಸಾಗಿಸುವುದು ವಾಡಿಕೆಯಾಗಿದೆ. ಆ ಎಲ್ಲ ರಚನಾತ್ಮಕ ಚಟುವಟಿಕೆಗಳಲ್ಲಿ ಗಾಂಧೀಜಿಯು ಚರಖ ಮತ್ತು ಖಾದಿಗೆ ಮಹತ್ವದ ಸ್ಥಾನವನ್ನು ಕೊಟ್ಟಿದ್ದರು. ಪರಕೀಯ ಆಡಳಿತೆಯು ಹೋಗಿ ನಮ್ಮ ಜನರ ಕೈಯಲ್ಲಿಯೇ ಅಧಿಕಾರ ಸೂತ್ರಗಳು ಬಂದ ಕೂಡಲೆ ಆ ರಾಷ್ಟ್ರೀಯ ಸರಕಾರವು ಖಾದಿಯು ತನ್ನ ಸ್ವಂತದ ಹೊಣೆಯೆಂದೆ ಭಾವಿಸಿ ಪ್ರಸಾರ ಮಾಡುವದೆಂದು ತಿಳಿದಿದ್ದರು. ಆದರೆ ಅದು ರಾಜಕೀಯ ಗೊಂದಲದಲ್ಲಿ ಸಿಕ್ಕಿಬಿದ್ದಿರುವುದರಿಂದಲೊ ಏನೊ ಅದರಿಂದ ಖಾದಿಗೆ ಎಣಿಸಿದಷ್ಟು ಪ್ರೋತ್ಸಾಹ ದೊರೆಯದ್ದಾಗಿದೆ. ಆದುದರಿಂದ ಖಾದೀ ಪ್ರಸಾರಕಾರ್ಯದ ಭಾರವು ಜನತೆಯ ಮೇಲೆಯೇ ಹೆಚ್ಚು ಬಿದ್ದಿದೆ.

ಗಾಂಧೀಜಿಯವರ ಉಪದೇಶ ಮತ್ತು ತತ್ವಗಳನ್ನು ನಾವು ಬಿಡುತ್ತ ನಡೆದಂತೆ ನಮ್ಮ ದೇಶವು ಹೆಚ್ಚೆಚ್ಚು ಕಷ್ಟನಷ್ಟಗಳಿಗೊಳಗಾಗಹತ್ತಿದೆ. ಬಾಪೂ ನಮಗೆ ಕಲಿಸಿದ ಒಳ್ಳೆಯ ಸಂಗತಿಗಳನ್ನೆಲ್ಲ ಅವರ ಮರಣಾನಂತರ ನಾವು ಮರೆತುಬಿಟ್ಟವೆಂದಾಗಬಾರದು. ನಿಜವಾಗಿ ಹೇಳಬೇಕಾದರೆ ಅವರಿಲ್ಲದ್ದರಿಂದ ನಮ್ಮ ಹೊಣೆ ಮೊದಲಿಗಿಂತ ಹೆಚ್ಚಾಗಿದೆ. ಅವರ ಮರಣದ ಪಾಪದಿಂದ ಹಿಂದೂಸ್ಥಾನವು ಪರಿಶುದ್ಧವಾಗಬೇಕಾಗಿದ್ದರೆ ಅವರಿಗೆ ಅತ್ಯಂತ ಪ್ರಿಯವಾಗಿದ್ದ ಮತ್ತು ಯಾವದರ ಸಹಾಯದಿಂದ ಅವರು ಸ್ವರಾಜ್ಯ ಸಂಗ್ರಾಮವನ್ನು ಸಾಗಿಸಿದರೊ ಅಂಥ ರಚನಾತ್ಮಕ ಕಾರ್ಯವನ್ನು ಭರದಿಂದ ಸಾಗಿಸುವ ಮಾರ್ಗವೊಂದೆ ಯೋಗ್ಯ ಉಪಾಯವಾಗಿದೆ.

'ಹರಿಜನ'

ವಾರ್ತೆ.

ಕೆಲಿಫೋರ್ನಿಯದ ಕಾರ್ಲ್ ಸಿ. ಮೂಡಿ ಎಂಬವನಿಗೆ ಎರಡೂ ಕೈಗಳಿರಲಿಲ್ಲ. ಬಾಯಿಯಲ್ಲಿ ಲೇಖನಿ ಹಿಡಿದು ಅವನು ಬಹಳ ಸಲೀಸಾಗಿ ಬರೆಯಬಲ್ಲ. ಈಚೆಗೆ ಅವನು ಒಂದು ಚೆಕ್ಕಿನ ಮೇಲೆ ಇನ್ನೊಬ್ಬರ ದಸ್ಕತನ್ನು ಫೋರ್ಜರಿ ಮಾಡಿದನೆಂದು ವಿಚಾರಣೆಗೆ ಎಳೆಯಲ್ಪಟ್ಟಿದ್ದಾನೆ.

ಮಾತುಗಾರಿಕೆಗೆ ಬ್ರಿಟಿಷ್ ಪಾರ್ಲಿಮೆಂಟು ಪ್ರಖ್ಯಾತ. ಹಾಗಿದ್ದರೂ ಅದರ ಹೆಚ್ಚಿನ ಸದಸ್ಯರಿಗೆ ಇನ್ನೂ ಪರಿಣಾಮಕಾರಿ ಮಾತನ್ನಾಡಲು ಗೊತ್ತಿಲ್ಲವೆಂದು ಅಲ್ಲಿನ ಕನ್ಸರ್ವೆಟಿವ್ ಪಕ್ಷದವರು ತಮ್ಮ ಸದಸ್ಯರಿಗೆ ಭಾಷಣ ಕಲೆಯನ್ನು ಕಲಿಸಲು ಮಾರ್ಜೋರೀ ಹಿಲಿಯರ್ ಎಂಬ ತಜ್ಞೆಯನ್ನು ನೇಮಿಸಿದ್ದಾರೆ.

ಮಧ್ಯ ಕಲ್ಕತ್ತದ ಒಂದು ಮನೆಯಲ್ಲಿ ಮೋಸದ ರೇಶನು ಕಾರ್ಡುಗಳ ಸಂಬಂಧದಲ್ಲಿ ಶೋಧ ನಡೆಸುತಿದ್ದಾಗ ಪೋಲೀಸರಿಗೆ ೩೫ ಬಾಂಬುಗಳೂ, ೧೫೦೦ ಮದ್ದುಗುಂಡುಗಳೂ ದೊರಕಿದವು.

ಭಾರತ ಪ್ರಜಾಪ್ರಭುತ್ವದ ಘಟನೆಯನ್ನು ತಯಾರಿಸುವುದರ ಬಗ್ಗೆ ೧೯೪೬ನೇ ಡಿಸಂಬರ್ ತಾ. ೯ರಿಂದ ನಿಯೋಜಿತವಾದ ಕಾನ್ಸ್ಟಿಟ್ಯುಯೆಂಟ್ ಎಸೆಂಬ್ಲಿಯ ಬಗ್ಗೆ ಈ ವರೆಗೆ ತಗಲಿದ ವೆಚ್ಚ ಸುಮಾರು ೨ ಕೋಟಿ ರೂಪಾಯಿಗಳಾಗಬಹುದೆನ್ನಲಾಗಿದೆ.

ಭಾರತ ಡೊಮಿನಿಯನ್ನಲ್ಲಿರುವ ಎಲ್ಲಾ ಕಾರ್ಖಾನೆಗಳಲ್ಲಿನ ವಿಕ್ರಯವಾದ ಮತ್ತು ವಿಕ್ರಯವಾಗದ ಎಲ್ಲಾ ಸಕ್ಕರೆಯ ಸಂಗ್ರಹವನ್ನು ಎಕ್ಸ್ ಫೇಕ್ಟರಿ ಧಾರಣೆಗೆ ಸರಕಾರವು ಕೊಂಡುಕೊಳ್ಳುವ ನಿರ್ಣಯ ಮಾಡಿದೆ. ಮಾಗಿಲಿಗೀರುವ ಸಕ್ಕರೆ ಧಾರಣೆಗಳನ್ನು ಸಿಮಿತಕ್ಕೆ ತರುವುದರ ಕಡೆಗೆ ಇದು ಮೊದಲ ಹೆಜ್ಜೆಯಾಗಿದೆ.

ಕಬ್ಬಿಣ ಮತ್ತು ಉಕ್ಕಿನ ಪರ್ಮಿಟುಗಳನ್ನು ದುರುಪಯೋಗ ಪಡಿಸಿದರೆಂಬ ಆರೋಪದ ಮೇಲೆ ಪೂರ್ವ ಪಂಜಾಬ ಎಸೆಂಬ್ಲಿಯ ಸದಸ್ಯ ಸರ್ದಾರ್ ಜಗಜಿತ್ ಸಿಂಘರನ್ನು ದಸ್ತಗಿರಿ ಮಾಡಿ ೧೦,೦೦೦ ರೂಪಾಯಿ ಜಾಮೀನು ಮೇಲೆ ಬಿಡುಗಡೆಮಾಡಿರುವರು.

ಭಾರತದಿಂದ ಪಾಕಿಸ್ತಾನಕ್ಕೆ ಹರಿಯುವ ಪಂಜಾಬದ ಮೂರು ನದಿಗಳ ಸಂಬಂಧವಾದ ವಿವಾದವನ್ನು ಪಾಕಿಸ್ತಾನ ಸರಕಾರವು ಭದ್ರತಾಸಮಿತಿಗೆ ಕೊಂಡೊಯ್ಯುವ ಸಂಭವವಿದೆಯೆಂದು ಪಾಕಿಸ್ತಾನ ವಿದೇಶಾಂಗ ಕಚೇರಿಯ ಒಬ್ಬ ಅಧಿಕಾರಿಯು ವ್ಯಕ್ತಪಡಿಸಿರುವರು.

ಮಹಾತ್ಮಾಗಾಂಧಿಯವರ ಬಗೆಯೋಗ್ಯ ಸ್ಮಾರಕವೊಂದು ಈಜಿಪ್ಟಿನಲ್ಲಿ ಆದಷ್ಟು ಬೇಗ ರಚನೆಯಾಗಬೇಕೆಂದು ಪ್ರಸಿದ್ಧ ಕೈರೋ ಪತ್ರಿಕೆ 'ಅಲ್ ಮಿಸ್ರಿ' ತನ್ನ ಅಗ್ರಲೇಖನದಲ್ಲಿ ವಿನಂತಿಸಿಕೊಂಡಿದೆ.

ಅಮೇರಿಕದ ಕೊಲಂಬಿಯಾ ವಿಶ್ವವಿದ್ಯಾಲಯದ ಕಡೆಯಿಂದ ಸಮಾಜ ಶಾಸ್ತ್ರ ತಜ್ಞರ ಶಿಷ್ಟಮಂಡಲವೊಂದು ಭಾರತಕ್ಕೆ ಬಂದು ಎರಡು ವರ್ಷ ಇಲ್ಲಿ ನೆಲಸಿ ಇಲ್ಲಿಯ ಗ್ರಾಮ ಜೀವನ ಕ್ರಮವನ್ನು ಅಭ್ಯಸಿಸುವ ನಿರ್ಣಯ ಮಾಡಿರುವುದು.

ಬೇಕು !

ಕೊಡಗು ಜೇನು ಮತ್ತು ಮೇಣ ಕೃಷಿಕರ ಸಹಕಾರ ಸಂಘ, ವೀರರಾಜಪೇಟೆ

ಈ ಸಂಘಕ್ಕೆ ಹೇರಳ ಜೇನು ಮತ್ತು ಮೇಣ ಬೇಕಾಗಿದ. ತಾ. ೧-೯-೪೯ರಿಂದ ಶುದ್ಧೀಕರಿಸಿದ ಮೇಣ ರಾತ್ತಲಿಗೆ ರೂ ೨-೪-೦ ಕ್ರಯದಿಂದ, ಶುದ್ಧೀಕರಿಸದ ಮೇಣ ರಾತ್ತಲಿಗೆ ರೂ ೧-೧೨-೦ ಕ್ರಯದಿಂದ ಕೊಂಡುಕೊಳ್ಳಲಾಗುತ್ತದೆ. ಜೇನ ಸೇರು ಒಂದರ ರೂ ೧-೧೨-೦ ರಂತೆ ಕೊಂಡುಕೊಳ್ಳಲಾಗುತ್ತೆ. ಒದಗಿಸಿಕೊಡತಕ್ಕ ಏಜಂಟರುಗಳಿಗೆ ಕಮಿಷನ್ ಮತ್ತು ಮೆಂಬರುಗಳಿಗೆ ರಿಬೇಟ್ ಕೊಡಲಾಗುತ್ತೆ.

ಹೆಚ್ಚಿನ ಮಾಹಿತಿಗೆ ಪತ್ರ ಬರೆಯಬಹುದು.

ಟಿ. ಎಂ. ಕಾರ್ಯಪ್ಪ,
ಪ್ರೆಸಿಡೆಂಟ್.

ರಾ. ಬ. ಕೆ. ಟಿ. ಉತ್ತಪ್ಪ ಸತ್ಕಾರ ಸಮಿತಿ.

ಕೆಲಸದಿಂದ ನಿವೃತ್ತರಾದ ರಾ. ಬ. ಕೆ. ಟಿ. ಉತ್ತಪ್ಪನವರನ್ನು ಸತ್ಕರಿಸಲು ಮಡಿಕೇರಿ ಪುರಜನರಿಂದ ವಸೂಲು ಮಾಡಿದ ಹಣದ ಲೆಕ್ಕಪತ್ರದ ಮೀಟಿಂಗು ತಾ ೫-೯-೪೯ರಲ್ಲಿ ನಡೆದು ಈ ಕೆಳಗಿನ ಲೆಕ್ಕವನ್ನು ಸಾರ್ವಜನಿಕರ ಅವಗಾಹನೆಗೆ ಪ್ರಕಟಿಸಲಾಗಿದೆ.

ವಸೂಲಾದ ಒಟ್ಟು ಮೊಬಲಗು ರೂ. ೬೨೧, ಖರ್ಚಾದದ್ದು ರೂ. ೬೬೭-೧೦-೬ ಉಳಿಕೆ ರೂ. ೧೫೩-೫-೬. ಉಳಿಕೆಯೂ ಈ ಹಣದಿಂದ ಇಂಡಿಯನ್ ರೆಡ್ ಕ್ರಾಸ್ ಫಂಡಿನ ಕೊಡಗಿನ ಶಾಖೆಗೆ ರೂ. ೧೦೦/- ನ್ನೂ, ಸಂಯುಕ್ತ ರಾಷ್ಟ್ರಗಳ ಅನಾಥ ಮಕ್ಕಳ ಫಂಡಿಗೆ ರೂ ೫೩-೫-೬ ನ್ನೂ ಕೊಡಲಾಗಿದೆ

ಕೆ. ಬಿ. ಚಿಣ್ಣಪ್ಪ,
ಅಧ್ಯಕ್ಷ.

ವಂದನೆಗಳು.

ನನ್ನ ಅಳಿಯ ಶ್ರೀ. ಮಾಚಿಮಾಡ ಪೂಣಚ್ಚನವರ ಅಕಾಲ ಮರಣದಿಂದ ನನಗೂ ನನ್ನ ಮಗಳು ಪೊನ್ನಮ್ಮನಿಗೂ ಉಂಟಾದ ದುಃಖದಲ್ಲಿ ಖುದ್ದಾಗಿ ಬಂದು ಮತ್ತು ತಮ್ಮ ಪತ್ರಗಳ ಮೂಲಕ ಭಾಗಿಗಳಾದ ಬಂಧು ಸ್ನೇಹಿತರನ್ನು ಪ್ರತ್ಯೇಕ ಪ್ರತ್ಯೇಕ ಬರೆದು ವಂದಿಸಲು ಅಶಕ್ಯರಾದ ಕಾರಣ ಈ ಮೂಲಕ ಅವರೆಲ್ಲರಿಗೂ ನಮ್ಮ ಕೃತಜ್ಞತಾವಂದನೆಗಳನ್ನ ಸಲ್ಲಿಸುತ್ತೇವೆ

ಕಳ್ಳುಮಾಡಂಡ ಎಂ. ಚೆಳ್ಳಪ್ಪ,
ಮೂರ್ನಾಡು.

ವಿದ್ಯಾರ್ಥಿ ಕಾಂಗ್ರೆಸು.

ಲೇ:— ಶ್ರೀ. ಎ. ಪಿ. ಲಾಲ. ಮಂದ್ರಾಸು.

ತಾ. ೩-೯-೪೯ರ 'ಕೊಡಗು' ಪತ್ರಿಕೆಯಲ್ಲಿ 'ವಿದ್ಯಾರ್ಥಿ ಕಾಂಗ್ರೆಸು ಎಲ್ಲಿ?' ಎಂಬ ಶಿರೋನಾಮೆ ಹಾಕಿ ಶ್ರೀ. ಸಿ. ಕೆ. ಎಯವರು ಬರೆದಂತಹ ಲೇಖನವನ್ನು ಓದಿದೆನು. ಅವರು ಹೇಳಿದಂತೆ ವಿದ್ಯಾರ್ಥಿ ಕಾಂಗ್ರೆಸ್ ಸುಪ್ತಾವಸ್ಥೆಯಲ್ಲಿದೆ. ಇದು ಬರೀ ಕೊಡಗಿನಲ್ಲಿ ಅಲ್ಲ; ಇಡೀ ಭರತಖಂಡದಲ್ಲೇ ಇಂಥಾ ಅವಸ್ಥೆಯು ವಿದ್ಯಾರ್ಥಿ ಕಾಂಗ್ರೆಸಿಗೆ ಬಂದಿದೆಯೆಂದರೆ ತಪ್ಪಾಗಲಾರದು. ವಿದ್ಯಾರ್ಥಿ ಕಾಂಗ್ರೆಸ್ ರೂಪುಗೊಂಡದ್ದು ವಿದ್ಯಾರ್ಥಿಗಳಲ್ಲಿ ಶಿಸ್ತು, ಸಂಘಟನೆಗಳನ್ನು ಹೆಚ್ಚಿಸಿ, ಅವರ ಸಾಮಾಜಿಕ, ಶೈಕ್ಷಣಿಕ ಮತ್ತು ಬೌದ್ಧಿಕ ಮಟ್ಟವನ್ನು ಮೇಲೆತ್ತಲಿಕ್ಕಾಗಿ. ಯಾವ ಕೆಲಸದವರೇ ಆಗಲೀ, ಯಾವ ಪಂಗಡದವರೇ ಆಗಲಿ ಅವರವರ ಹಿತ ಸಾಧನೆಗೆ, ನೈತಿಕ ಬೆಳವಣಿಗೆಗೆ, ಆವರವರು ಒಂದೊಂದು ಸಂಸ್ಥೆಯನ್ನು ಸ್ಥಾಪಿಸಿಕೊಳ್ಳುತ್ತಾರೆ. ಕೂಲಿಗಾರರು, ರೈತರು, ನೌಕರರು ಎಲ್ಲರು ತಮ್ಮದೇ ಆದ ಒಂದೊಂದು ಸಂಸ್ಥೆಯನ್ನು ಸ್ಥಾಪಿಸಿಕೊಂಡರು. ಹಾಗೆಯೇ ದೇಶದ ಮುಂದಿನ ಜನಾಂಗವಾದ ವಿದ್ಯಾರ್ಥಿ ವರ್ಗವು ಸಹ ಒಂದು ಸಂಸ್ಥೆಯನ್ನು ಸ್ಥಾಪಿಸಿತು. ಅದೇ 'ವಿದ್ಯಾರ್ಥಿ ಕಾಂಗ್ರೆಸ್.' ವಿದ್ಯಾರ್ಥಿ ಕಾಂಗ್ರೆಸು ಸ್ವಾತಂತ್ರ್ಯ ಸಮರದಲ್ಲಿಯೂ, ಸಮಾಜ ಬೆಳವಣಿಗೆಯಲ್ಲಿಯೂ, ಗ್ರಾಮೋದ್ಧಾರ ಕೆಲಸಗಳಲ್ಲಿಯೂ ತನ್ನಿಂದ ಆಗುವಷ್ಟು ಸೇವೆಯನ್ನು ಸಲ್ಲಿಸಿದೆ. ದೇಶದ ಸ್ವಾತಂತ್ರ್ಯದ ೧೯೪೨ನೇ ಆಗಸ್ಟ್ ಹೋರಾಟದಲ್ಲಿ ವಿದ್ಯಾರ್ಥಿ ವರ್ಗವು ತನ್ನ ಶಕ್ತಿಗೆ ಮೀರಿ ದುಡಿದಿದೆ ಎಂದು ಧೈರ್ಯದಿಂದ ಹೇಳಬಹುದು. ಅವರು ಮಾಡಿದ ಸೇವೆ ನಿಜವಾಗಿಯೂ ಅಗಾಧವಾದುದು. ಆ ಸಮಯದಲ್ಲಿ ಪ್ರತಿಯೊಬ್ಬ ಮಾನವನು ಸ್ವಾರ್ಥವನ್ನು ಬಿಟ್ಟು ತನ ದೇಶಕ್ಕಾಗಿ ದುಡಿಯುತ್ತಿದ್ದನು. ವಿದ್ಯಾರ್ಥಿಗಳಿಗೆ ಸಾರ್ವಜನಿಕರಿಂದ ಬಹಳವಾದ ಪ್ರೋತ್ಸಾಹ ದೊರೆಯುತ್ತಿತ್ತು. ವಿದ್ಯಾರ್ಥಿಗಳು ಯಾವ ತರಹದ ಜವಾಬ್ದಾರಿಯನ್ನು ಹೊತ್ತಿಲ್ಲದ ಕಾರಣ ಅವರು ಗ್ರಾಮಾಭಿವೃದ್ಧಿ ಮೊದಲಾದ ಕಾರ್ಯಗಳಲ್ಲಿ ನಿಷ್ಕಾಮ ಭಾವದಿಂದ ದುಡಿಯಲು ಸಾಧ್ಯವಿದೆ. ಅದರಂತೆ ಕೊಡಗಿನಲ್ಲಿ ಮಾಡದಿದ್ದರೂ ಹಿಂದೂಸ್ಥಾನದ ಅನೇಕ ಕಡೆಗಳಲ್ಲಿ ಮಾಡಿದ್ದಾರೆ. ವಿದ್ಯಾರ್ಥಿಗಳು ಕೆಚ್ಚೆದೆಯಿಂದ ರಾಷ್ಟ್ರ ಸಂಗ್ರಾಮದಲ್ಲಿ ದುಡಿದರು. ಅನೇಕರು ತಮ್ಮ ಜೀವನವನ್ನೇ ಅರ್ಪಿಸಿದರು. ಈ ತ್ಯಾಗದ ಕಾಲಕ್ಕೆ ಸಾರ್ವಜನಿಕರ ಸಹಾಯವೂ ದೊರೆಯುತ್ತಿತ್ತು. ಅವರ ಹಿತ ಬೋಧನೆಯಿಂದ ಅವರ ನಿಸ್ವಾರ್ಥ ಉಪದೇಶಗಳಿಂದ ವಿದ್ಯಾರ್ಥಿ ಕಾಂಗ್ರೆಸು ದುಡಿಯಿತು.

ಅಂಥಾ ವಿದ್ಯಾರ್ಥಿ ಕಾಂಗ್ರೆಸು ಇಂದು ನಿದ್ರಾವಸ್ಥೆಯಲ್ಲಿರಲು ಕಾರಣ ಬಹಳ ಇವೆ. ಮೊದಲಿನ ಹಾಗೆ ಈಗ ವಿದ್ಯಾರ್ಥಿಗಳಿಗೆ ಸಾರ್ವಜನಿಕರ ಸಹಾಯವಿಲ್ಲ. ಯಾವ ಸಾರ್ವಜನಿಕರು ಹಿತಬೋಧನೆಯನ್ನು ಮಾಡುತಿದ್ದರೊ, ಯಾರು ನಿಸ್ವಾರ್ಥಿಗಳಾಗಿದ್ದರೋ ಅವರೇ ಇಂದು ಅಧಿಕಾರಕ್ಕಾಗಿ ಹೊಡೆದಾಡುವವರಾಗಿದ್ದಾರೆ. ಯಾವ ಉದ್ದೇಶಕ್ಕಾಗಿ ದುಡಿದರೋ ಆ ಉದ್ದೇಶವನ್ನೇ ಮರೆತು ಬಿಟ್ಟಿರುತ್ತಾರೆ. ಹಾಗಿರುವಾಗ ಬಾಲಕ ಬಾಲಕೀಯರಾದ ವಿದ್ಯಾರ್ಥಿಗಳು ತಮ್ಮ ಗುರಿಯನ್ನು ಮರೆತಿರುವುದರಲ್ಲಿ ವಿಶೇಷವೇನಿದೆ. ಯಾರು ಬಡವರಿಗಾಗಿ ದನಿಯ ಎತ್ತಿದ್ದರೊ ಅಂಥಾ ಮಹನಿಯರೇ ಇಂದು ಕೂಲಿಕಾರರಿಗೆ ಹೆಚ್ಚು ವೇತನವನ್ನು ಕೊಡಬಾರದು ಎಂದು ಹೇಳುತ್ತಿದ್ದಾರೆ. ಯಾವ ಮಹಾಮಹಿಮರು ದೇಶದ ಸ್ವಾತಂತ್ರ್ಯಕ್ಕಾಗಿ ದುಡಿದರೋ ಅವರೇ ಇಂದು ವ್ಯಕ್ತಿ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ವಿದ್ಯಾರ್ಥಿ ಕಾಂಗ್ರೆಸು ಯಾವ ರೀತಿ ವರ್ತಿಸಬೇಕು? ಯಾವ ಜನರು ಈ ವಿದ್ಯಾರ್ಥಿ ವರ್ಗವನ್ನು ನಡೆಸುತಿದ್ದರೊ ಅವರೇ ತಪ್ಪು ದಾರಿಯಲ್ಲಿ ಹೋಗುತ್ತಿರುವಾಗ ವಿದ್ಯಾರ್ಥಿಗಳು ಅವರನ್ನು ಹಿಂಬಾಲಿಸಬೇಕೂ ಬೇಡವೊ? ಎಂಬಂತಹ ಪ್ರಶ್ನೆಗಳು ತಲೆದೋರಿ ಯಾವ ಕಡೆಗೂ ಅಲುಗಾಡದೆ ವಿದ್ಯಾರ್ಥಿ ಕಾಂಗ್ರೆಸು ಸುಮ್ಮನೆ ನಿಲ್ಲಬೇಕಾಯಿತು.

ಈ ವಿದ್ಯಾರ್ಥಿ ಕಾಂಗ್ರೆಸಿನ ನಿದ್ರಾವಸ್ಥೆಯ ಪರಿಣಾಮವಾಗಿಯೇ ಅನೇಕ ಕಡೆಗಳಲ್ಲಿ ಕಮ್ಯೂನಿಷ್ಟ್ ಪಕ್ಷಕ್ಕೆ ಸೇರಿದಂತಹ 'ಸ್ಟುಡೆಂಟ್ಸ್ ಫೆಡರೇಶನ್' ಅಲ್ಲಲ್ಲಿ ತಲೆದೋರಿ ಬೆಳೆಯುತ್ತಾ ಬಂದಿದೆ. ಅವರು ತಪ್ಪು ದಾರಿಯಲ್ಲಿ ಹೋಗುತಿದ್ದರೂ ಕೂಡ ಬಡಬಗ್ಗರ ಮೇಲೆ ಕರುಣೆಯಿರುವಂತಹ ವಿದ್ಯಾರ್ಥಿವರ್ಗ ಅಂತಹ ಸಂಸ್ಥೆಗಳಿಗೆ ಸೇರಿ ತಮ್ಮ ಸೇವೆಯನ್ನು ಅಲ್ಲಿ ಸಲ್ಲಿಸಬೇಕಾಯಿತು. ಏನೆ ಇರಲಿ ಅಲ್ಲಿಗೆ ಸೇರಿದ್ದು ಸರಿಯೆಂದು ನಾನು ಹೇಳುವವನಲ್ಲ. ಅದು ಅವರವರಿಗೆ ಸಂಬಂಧಿಸಿದ್ದು. ಆದರೆ ಇಂದು ಅಧಿಕಾರಕ್ಕಾಗಿ, ಹೆಸರಿಗಾಗಿ, ಸ್ವಾರ್ಥಕ್ಕಾಗಿ ಹೊಡೆದಾಡುತ್ತಿರುವ ಈ ಭರತಖಂಡದಲ್ಲಿ ವಿದ್ಯಾರ್ಥಿಗಳು ಕೈಕೊಳ್ಳಬೇಕಾದಂಥಾ ಅನೇಕ ಕಾರ್ಯಗಳಿವೆ. ಗ್ರಾಮಾಭಿವೃದ್ಧಿ, ವಯಸ್ಕರ ಶಿಕ್ಷಣ ಈ ಮೊದಲಾದ ಕಾರ್ಯವನ್ನು ಮಾಡುವುದರಲ್ಲಿ ಯಾವತರದ ಅಡ್ಡಿಯಿಲ್ಲದ ಕಾರಣ ವಿದ್ಯಾರ್ಥಿಗಳು ಎಚ್ಚೆತ್ತು ನೋಡಬೇಕಾಗಿದೆ. ಭಾರತದ ಮುಂದಿನ ಜನಾಂಗವಾಗಿರುವ ವಿದ್ಯಾರ್ಥಿ ವರ್ಗವು ಇಂದು ತನ್ನ ಅಡಿಪಾಯವನ್ನು ಜೋಪಾನವಾಗಿ ಕಟ್ಟಬೇಕಾಗಿದೆ. ಸ್ವತಂತ್ರ ಭಾರತದ ಭವಿಷ್ಯತ್ತು ಈಗಿನ ವಿದ್ಯಾರ್ಥಿ ವರ್ಗದವರ ಕೈಯಲ್ಲಿದೆ ಎಂದರೆ ತಪ್ಪಾಗಲಾರದು. ಅಂತಹ ಭವಿಷ್ಯತ್ತನ್ನು ಹೊತ್ತಿರುವಂತಹ ವಿದ್ಯಾರ್ಥಿ ವಿದ್ಯಾರ್ಥಿನಿಯರು ತಮ್ಮ ಕರ್ತವ್ಯವೇನೆಂಬುದನ್ನು ತಿಳಿದುಕೊಳ್ಳುವುದು ಉಚಿತ. ಅಧಿಕಾರಕ್ಕಾಗಿ ಹೋರಾಡುತ್ತಿರುವ ಮಹನೀಯರ ಬಲೆಗೆ ಬೀಳದೆ ಅವರನ್ನು ಒಂದು ಮೂಲೆಗೆ ಒತ್ತಿ ದೇಶದ ಭವಿಷ್ಯತ್ತನ್ನು ಕಟ್ಟುವ ಭಾರ ವಿದ್ಯಾರ್ಥಿ ವೃಂದದ ಮೇಲೆ ನಿಂತಿದೆ.

ಆದುದರಿಂದ, ಪೂಜ್ಯ ಬಾಪೂಜಿಯವರು ಜನಿಸಿದಂತಹ, ಅವರು ತಮ್ಮ ಸೇವೆಯನ್ನು ಸಲ್ಲಿಸಿದಂತಹ ಈ ನಾಡಿನಲ್ಲಿ ಜನಿಸಿದ ವಿದ್ಯಾರ್ಥಿ ವೃಂದವು ತಲೆಯೆತ್ತಿ ಗಾಂಧೀಜಿಯವರ ತತ್ವಗಳನ್ನು ಹಿಡಿದು ದೇಶದ ಕಲ್ಯಾಣಕ್ಕಾಗಿ ದುಡಿಯದಿದ್ದರೆ ಮತ್ತಾರು ದುಡಿಯಬೇಕು? ಅವರು ಬಡ ಬಗ್ಗರಿಗಾಗಿ ತಮ್ಮ ಸೇವೆಯನ್ನು ಸಲ್ಲಿಸದಿದ್ದರೆ ಮತ್ತಾರು ಸೇವೆ ಸಲ್ಲಿಸುವರು?

'ವಿದ್ಯಾರ್ಥಿ ಕಾಂಗ್ರೆಸು' ಪುನಃ ಚಿಗುರಿ, ವೃಕ್ಷವಾಗಿ ಬೆಳೆದು, ಫಲವನ್ನು ಕೊಡಲಿ ಎಂದು ನಮ್ಮ ಹಾರೈಕೆ.

ಸಮಾಜ ದರ್ಪಣ.

ಕೆಲವು ಜನರನ್ನು ನೋಡಿದ್ದೇನೆ. ಎಲ್ಲೆಲ್ಲೂ ಅವರು ಪ್ರಥಮರಿರಬೇಕೆಂದು ಇಚ್ಛಿಸುತ್ತಾರೆ. ಬಸ್ಸಿನಲ್ಲಿ ಕೂರಬೇಕೆಂದರೆ ಪ್ರಥಮ ಸೀಟು ಬೇಕು. ದೇವಸ್ಥಾನದ ಪೂಜೆಗೆ ಬಂದರೆ ಪ್ರಥಮ ಸ್ಥಳ ಬೇಕು! ಸಾರ್ವಜನಿಕ ಸಭೆಗೆ ಬಂದರೆ ಭಾಷಣಕಾರರ ಪಕ್ಕದ ಕುರ್ಚಿ ಬೇಕು. ಎಲ್ಲದರಲ್ಲೂ ಪ್ರಥಮರು! ಅಂಗಡಿಯಲ್ಲಿ ಸಾಮಾನು ಕೊಂಡುಕೊಳ್ಳುವುದರೂ ಅಂಗಡಿಯವನು ಅನೇಕರು ಕಾದಿದ್ದರೂ ಇವರಿಗೆ ಕೊಡಬೇಕು. ಕ್ಷೌರಿಕನಲ್ಲಿ ಕ್ಷೌರವೂ ಇವರಿಗೇ ಮೊದಲಾಗಬೇಕು. ಒಂದು ವೇಳೆ ಇತರ ಬುದ್ಧಿಯಲ್ಲೂ ಪ್ರಥಮರಿದ್ದಿದ್ದರೆ ಇರಲಿ ಎಲ್ಲವರಲ್ಲೂ ಅವರ ಪ್ರಥಮರಿರಬೇಕು ಎನ್ನಬಹುದಿತ್ತು. ಆದರೆ ಇವರ ತಲೆಯಲ್ಲಿ ಹುಡಿಮಣ್ಣು ಎಂಬುದು ಈ 'ಪ್ರಥಮ' ಗಳ ಬೇಟೆಯಿಂದಲೇ ತಿಳಿಯುವುದು. ಯೋಗ್ಯತೆ ಇರುವವನಿಗೆ ಹಿಂದಾದರೇನು ಮುಂದಾದರೇನು? ಬೀಸುವ ಗಾಳಿಯಿಂದ ತೃಪ್ತಿಗೊಳ್ಳದವನು ಬೀಸಣಿಗೆ ಹಿಡಿದು ಗಾಳಿ ಹಾಕಿಕೊಳ್ಳುವಂತೆ ಸ್ವತಹ ತನ್ನ ಉದಾತ್ತ ವರ್ತನೆಯಿಂದ ಜನರಲ್ಲಿ ಪ್ರಥಮನಾಗಲು ಯೋಗ್ಯತೆ ಇಲ್ಲದವನು ಅಹಂವೃತ್ತಿಗಿಳಿಯುತ್ತಾನೆ!

* * *

ಹೊಗೆ ಬಿಡುವದೊಂದು ಸಾರ್ವತ್ರಿಕವಾಗಿ ಹಬ್ಬಿರುವ ರೋಗ. ಬಸ್ಸಿನಲ್ಲಿ ಕೂರಲಿ ಬೀಡಿ ಸಿಗರೇಟು ಹೊಗೆ. ಸಿನೆಮಾಕ್ಕೆ ಹೋಗಲಿ ಅಲ್ಲಿಯೂ ಹೊಗೆ. ಯಾವದೇ ಮೂಲೆಯ ಮನುಷ್ಯನನ್ನು ಪರೀಕ್ಷಿಸಿದರೂ ಒಂದು ಬೀಡಿ ಹಿಡಿದೇ ಇರುತ್ತಾನೆ. ಬೀಡಿ ದೊರೆಯದಲ್ಲಿ ಬತ್ತಿ ಮಾಡಿಕೊಳ್ಳುತ್ತಾನೆ. ಕೆಲವರಲ್ಲಿ ಇಂಥಾ ಸಿಗರೇಟು ಸೇದುವದು ಕಲೆಯಾಗಿ ಪರಿಣಮಿಸಿದೆ. ಸಿನೆಮಾ ಮಂದಿರದಲ್ಲಿ ನೋಡಬೇಕು. ಪ್ರತಿನಿಮಿಷ ಸಾವಿರಾರು ಬೀಡಿ ಸಿಗರೇಟುಗಳು ಖರ್ಚಾಗಿ ಆ ಹೊಗೆಯಿಂದ ವಾತಾವರಣವು ಹೊಲಸಾಗುತ್ತಿದೆ. ಬಸ್ಸಿನಲ್ಲಿ ಹೊಗೆಬತ್ತಿ ಸೇದಬಾರದೆಂದಿದೆ. ಆದರೆ ಕೇಳುವವರಾರು? ಇದನ್ನು ಸಾರ್ವಜನಿಕ ಸ್ಥಳಗಳಲ್ಲಿ ಖಡ್ಡಾಯ ನಿಲ್ಲಿಸಿ ಸೇದುವವರನ್ನು ತಕ್ಷೀರಿಗೆ ಗುರಿಮಾಡುವ ಒಂದು ಸರಕಾರ ಬರಬಾರದೆ!

* * *

(ಗಿರಿಗಟಿ)

ಗ್ರಾಮದ ಕಂಪೋಸ್ಟ್ ಯೋಜನೆ:

ಕೆಲವು ವರ್ಷಗಳಿಂದ ನಡೆದು ಬಂದ ರೀತಿ **ಈ ವರ್ಷವೂ (೧೯೪೯-೫೦) ಸಹ** ಕೊಡಗು ವ್ಯವಸಾಯ ಇಲಾಖೆಯು ಗ್ರಾಮದ ಕಂಪೋಸ್ಟ್ ಯೋಜನೆಯನ್ನು ಈ ಪ್ರಾಂತದಲ್ಲಿ ಮುಂದುವರಿಸುತ್ತದೆ. ಈ ಯೋಜನೆಯಲ್ಲಿ ಕಳೆದ ಎರಡು ವರ್ಷಗಳಲ್ಲಿ ಅನೇಕ ರೈತರು ಸಹಕರಿಸಿ ವ್ಯವಸಾಯ ಇಲಾಖೆಯಿಂದ ಬಹುಮಾನವನ್ನೂ ಮತ್ತು ಗೊಬ್ಬರದ ಉಪಯೋಗವನ್ನೂ ಪಡೆದಿದ್ದಾರೆ. ಈ ವರ್ಷ ಈ ಯೋಜನೆಯನ್ನು ಹೋದ ವರ್ಷಗಳಿಗಿಂತ ಉತ್ತಮ ಮತ್ತು ಹೆಚ್ಚಿನ ರೀತಿಯಲ್ಲಿ ನಡೆಸಬೇಕೆಂದು ತೀರ್ಮಾನಿಸಲಾಗಿದೆ. ಮತ್ತು ಇದಕ್ಕೆ ಇಂಡಿಯಾ ಸರಕಾರವು ಸಮ್ಮತಿಯನ್ನಿತ್ತಿದೆ. ಇಡೀ ಪ್ರಾಂತ್ಯವನ್ನು ಸುಮಾರು ೨೦೦ ಯೂನಿಟ್ ಗಳಾಗಿ ವಿಭಾಗಿಸಿ ಒಂದೊಂದು ಯೂನಿಟ್ಟಿಗೆ ಇಷ್ಟೇ ಗ್ರಾಮಗಳು ಸೇರಬೇಕೆಂದು ನಿರ್ಧರಿಸಿ, ಗ್ರಾಮ ಸಂಘಗಳನ್ನು ಏರ್ಪಡಿಸಿ, ಅವುಗಳ ಮುಖಾಂತರ ಲೆಕ್ಕಚಾರವನ್ನು ತೆಗೆಯುವುದನ್ನೂ ಬಹುಮಾನಗಳನ್ನು ನಿಷ್ಕರ್ಷಿಸುವುದನ್ನು ಕೈಕೊಳ್ಳಬೇಕೆಂದು ಏರ್ಪಾಡು ಮಾಡಲಾಗಿದೆ. ಇದಕ್ಕೆ ತಿಳುವಳಿಕೆಯುಳ್ಳ ರೈತರ ಮತ್ತು ಸಹಕಾರ ಸಂಘಗಳ ಒತ್ತಾಸೆಯೂ ಬಹಳವಾಗಿ ಅವಶ್ಯವಿದೆ. ಮತ್ತು ಸರ್ವರೂ ಸಹಕರಿಸುವರೆಂದು ನಂಬಲಾಗಿದೆ.

ಕಂಪೋಸ್ಟ್ ಗುಂಡಿಗಳನ್ನು ತೋಡುವುದಕ್ಕೂ ಮತ್ತು ಕಂಪೋಸ್ಟ್ ಸಂಗ್ರಹ ಮಾಡುವುದಕ್ಕೂ ಸುಸಮಯವೆಂದರೆ ಈಗಿನಿಂದ ಡಿಸೆಂಬರ್ ಅಂತ್ಯದೊಳಗೆ. ಈ ಸಮಯದಲ್ಲಿ ಹೆಚ್ಚಿನ ಕೆಲಸವಿಲ್ಲದಿರುವುದರಿಂದಲೂ, ನೆಲವು ಹದವಾಗಿರುವುದರಿಂದಲೂ ಗುಂಡಿ ತೆಗೆಯಲಿಕ್ಕೂ ಮತ್ತು ಸೊಪ್ಪು ಸದೆ ತಂದು ಸಂಗ್ರಹಿಸಲಿಕ್ಕೂ ತುಂಬಾ ಅನುಕೂಲ ಹೆಚ್ಚಾಗಿ ಈ ತಿಂಗಳುಗಳಲ್ಲಿ ಪ್ರತಿಯೊಬ್ಬ ರೈತನೂ ತನ್ನ ದನಗಳನ್ನು ಕೊಟ್ಟಿಗೆಯಲ್ಲಿ ಕಟ್ಟಿ ಕೊಳ್ಳುವುದರಿಂದ ಈ ಸಮಯವನ್ನು ಮೇಲಿನ ಕೆಲಸಕ್ಕಾಗಿ ಉಪಯೋಗಿಸಿ ತಮ್ಮಿಂದ ಸಾಧ್ಯವಾದಷ್ಟು ಕಂಪೋಸ್ಟ್ ಗೊಬ್ಬರವನ್ನು ತಯಾರು ಮಾಡಬೇಕೆಂದು ವ್ಯವಸಾಯ ಇಲಾಖೆಯು ಕೋರಿದೆ. ಕಂಪೋಸ್ಟ್ ಗುಂಡಿ ತೆಗೆಯುವ ವಿಚಾರದಲ್ಲಿಯೂ ಉತ್ತಮ ತರದ ಕಂಪೋಸ್ಟ್ ಸಂಗ್ರಹ ಮಾಡುವುದರಲ್ಲಿಯೂ ಬೇಕಾದ ಸಲಹೆಗಳನ್ನು ವ್ಯವಸಾಯ ಇಲಾಖಾ ಸಿಬ್ಬಂಧಿಗಳಿಂದ ತಿಳಿದು ಕೊಳ್ಳಬಹುದು.

ಬಹುಮಾನಗಳನ್ನು ಕೊಡುವುದಕ್ಕೆ ಈ ಕೆಳಗಿನ ವಿಷಯಗಳನ್ನು ಗಮನಿಸಲಾಗುತ್ತೆ.

೧. ಉತ್ತಮ ರೀತಿಯಲ್ಲಿ ದನದ ಕೊಟ್ಟಿಗೆಗಳನ್ನಿಟ್ಟುಕೊಳ್ಳುವುದು.

೨. ವೈಜ್ಞಾನಿಕ ರೀತಿಯಲ್ಲಿ ಕಂಪೋಸ್ಟ್ ಸಂಗ್ರಹ ಮಾಡುವುದು.

೩. ಒಂದು ಪ್ರಾಯದ ದನಗಳಲ್ಲಿ ಇಂತಿಷ್ಟು ಕಂಪೋಸ್ಟ್ ಮಾಡಲಾಗುವುದು.

೪. ದನಗಳ ಸಂಖ್ಯೆ ಎಷ್ಟು ಇದೆ.

ಈ ಮೇಲಿನವುಗಳನ್ನು ಮನದಟ್ಟು ಮಾಡಿಕೊಂಡು ಪ್ರತಿಯೊಬ್ಬ ರೈತನೂ ಗ್ರಾಮದ ಕಂಪೋಸ್ಟ್ ಯೋಜನೆಯಲ್ಲಿ ನಿರತರಾಗಬೇಕೆಂದು ಕೊಡಗು ವ್ಯವಸಾಯ ಇಲಾಖೆಯು ಕೋರುತ್ತದೆ.

ಬಿ. ಯಸ್. ವರದರಾಜನ್,
ವ್ಯವಸಾಯ ಇಲಾಖಾ ಅಫೀಸರು.

ವಾಚಕರ ಪುಟ

ಓದುಗರ ಓಲೆಗಳು.

'ಕೊಡಗು' ವಾಚಕರಲ್ಲಿ.

ತಾರೀಕು ೯-೯-೪೯ರ ಸಂಚಿಕೆಯಲ್ಲಿದ್ದ 'ನನ್ನ ವರ್ತನೆಯು ಸರಕಾರಕ್ಕೆ ವಿರುದ್ಧವೆಂಬ ಕಾರಣದಿಂದ ಕೆಲಸದಿಂದ ತಾರೀಕು ೧೭ರಿಂದ ನಿವೃತ್ತಿಪಡಿಸಲಾಗುವದೆಂದು ನೋಟೀಸು ಕೊಡಲ್ಪಟ್ಟಿದೆ' ಎಂಬ ವರ್ತಮಾನವು ಪೂರ್ಣ ಸರಿಯಲ್ಲ. ಸರಕಾರವು ನನ್ನ ನಿವೃತ್ತಿಯ ವಿಚಾರ ಕೊಟ್ಟ ನೋಟೀಸಿನಲ್ಲಿ '೧೯೪೯ನೇ ಸೆಂಟ್ರಲ್ ಸಿವಿಲ್ ಸರ್ವಿಸ್ ಕಾನೂನಿನ ಐನೇ ನಿಬಂಧನೆಯಂತೆ ನಿಮ್ಮ ಕೆಲಸವನ್ನು ತಾ. ೧೭ರಿಂದ ನಿವೃತ್ತಿಗೊಳಿಸಲಾಗುವದು' ಎಂದು ಮಾತ್ರ ಬರೆದಿದೆ. ನನ್ನ ವರ್ತನೆಯು ಸರಕಾರಕ್ಕೆ ವಿರುದ್ಧ ಪ್ರಸ್ತಾಪವಾಗಲೀ, ಬೇರೆ ತಪ್ಪಿನ ವಿವರವಾಗಲೀ ಕೊಡಲ್ಪಟ್ಟಿರುವದಿಲ್ಲ. ನಾನು ಈ ವರೆಗೆ ಯಾವ ರಾಜಕೀಯ ಪಕ್ಷಕ್ಕೂ ಸೇರಿಲ್ಲ ಮತ್ತು ಕಾಂಗ್ರೆಸ್ ಯಾ ಕಮ್ಯೂನಿಸ್ಟ್ ಯಾವದೇ ಚಟುವಟಿಕೆಯ ಸರಕಾರಕ್ಕೆ ವಿರುದ್ಧ ಭಾಗವಹಿಸಿರುವದಿಲ್ಲ. ಕೇವಲ ಕಾರಣ ಕೊಡದ ಯಾವದೋ ಆಜ್ಞೆಗೆ ಗುರಿಯಾಗಿದ್ದೇನೆ.

ಬಿ. ಎನ್. ಕುಟ್ಟಪ್ಪ.

ಕಲ್ಲುಗೋಡು ಶಾಲಾ ಸರಸ್ವತೀ ಸಂಘದ ಪ್ರೆಸಿಡೆಂಟರಲ್ಲಿ-

ನಮ್ಮ ಊರ ಶಾಲೆಯ ಅಭಿವೃದ್ಧಿ ದೃಷ್ಟಿಯಿಂದ ನಿಮ್ಮ ಮುಂದಾಳುತನದಲ್ಲಾಗ್ರಾಮಸ್ಥರಿಂದಲೂ, ಗ್ರಾಮಕ್ಕೆ ಸಂಬಂಧಪಟ್ಟ ಇತರರಿಂದಲೂ ಚಂದಾ ಹಾಗೂ 'ಡೊನೇಷನ' ರೂಪದಿಂದ ಸಾವಿರಾರು ರೂಪಾಯಿಗಳ ವರೆಗೆ ಧನ ಸಹಾಯ ಪಡೆದಿರುವಿರಿ. ನಿಮ್ಮ ಪ್ರಚಾರ ಪತ್ರದಲ್ಲಿ ಆ ನೇಕ ರೀತಿಯ ಬೋಧನೆಗಳನ್ನು ಕೊಟ್ಟು ಎಂದರೆ ಕಲವು ಪರಮಾವಧಿ 'ಡೊನೇಷನ್' ಬರೆ ಮಹಾನ ಭಾವರ ಹೆಸರನ್ನು ಶಿಲಾಶಾಸನದಲ್ಲಿ ಬರಾಯಿಸುವಂತೆ ಭರವಸೆಕೊಟ್ಟದ್ದು ಸರಿಯಷ್ಟೆ. ಆದರೆ ಸಮ್ಮಕ್ಕೆ ಶಾಲೆ ಕಟ್ಟಡವು ಮುಗಿದು ಎರಡು ಮೂರು ವರ್ಷಗಳಾದರೂ ಸದರಿ ಕಟ್ಟಡದ ಲೆಕ್ಕಾಚಾರವನ್ನಾಗಲೀ ಯಾವುದೊಂದು ಶಿಲಾಶಾಸನಗಳಾಗಲಿ ಕಾರ್ಯರೂಪದಲ್ಲಿ ಕಂಡು ಬರುವುದಿಲ್ಲ. ಸಾರ್ವಜನಿಕ ಕೆಲಸದ ಸಂದರ್ಭದಲ್ಲಿ ಈ ರೀತಿಯ ನಿಮ್ಮ ವರ್ತನೆಯು ಮುಂದಿನ ಶಾಲೆಯ ಏಳಿಗೆಗೆ ಧಕ್ಕೆ ತರುವುದೆಂಬುದನ್ನು ನೀವು ಮರೆಯಬಾರದು. ನಮ್ಮ ಗ್ರಾಮದ ಶಾಲೆಯ ಏಳಿಗೆಯ ದೃಷ್ಟಿಯಿಂದ ಸಾಧ್ಯವಾದಷ್ಟು ಬೇಗನೆ ಲೆಕ್ಕಾಚಾರವನ್ನು ಸಾರ್ವಜನಿಕರಿಗೆ ಒಪ್ಪಿಸಬೇಕಾಗಿಯೂ, ಮುಂದಿನ ಅಭಿವೃದ್ಧಿಗೆ ನಿಗವಿಡಬೇಕಾಗಿಯೂ ಕೇಳಿಕೊಳ್ಳುವೆ.

ಗ್ರಾಮಸ್ಥ.

ಕರ್ತವ್ಯ ನ್ಯೂನತೆಯಲ್ಲವೇ?

ಕೊಡಗಿನಲ್ಲಿ ಟಪಾಲು ಇಲಾಖೆಯ ಕಥೆ ಕರುಣ ಕಥೆ. ಇಲ್ಲಿ ಕಾಗದ ಪತ್ರಗಳು ಕಳವುವದು ಬಹುಸಿಧಾನ. ಕೆಲವೆಡೆ ಕಾಗದ ಪತ್ರಗಳೇ ದಾರಿತಪ್ಪಿ ಹೋಗಿ ಸೇರುವವು. ಪಟ್ಟಣಗಳಲ್ಲಿನ ಸ್ಥಿತಿ ಹೇಗೋ ನನಗೆ ತಿಳಿಯದು. ಆದರೆ ಗ್ರಾಮಗಳಲ್ಲಿರುವ ನಮ್ಮ ಪಾಡು ಹೇಳಬೇಡ. ಅದು 'ಅರ್ಜೆಂಟಲ್ಲ' 'ಎಕ್ಸ್‌ಪ್ರೆಸ್' ಕಾಗದವಾದರೂ ಬರುವದು ಮೂರುಮೂರಿ ಕಾಗದದಂತೆ. ಈ ಮೂರುಮೂರಿ ಕಾಗದಗಳು ವಾರಕ್ಕೊಮ್ಮೆ ದೊರೆತರೆ ಪುಣ್ಯ. ಪತ್ರಿಕೆಗಳನ್ನು ಓದುವದೇ ಬೇಡವೆನಿಸಿಹೋಗುತ್ತದೆ. ಈ ಕಾರಣಕ್ಕಾಗಿಯೇ ಗ್ರಾಮಾಂತರಗಳಲ್ಲಿರುವ ಯಾರೂ ತಮ್ಮ ಸ್ವಂತ ವ್ಯವಸ್ಥೆ ಮಾಡಿಕೊಳ್ಳಲಾಗದವರು ಹೆಚ್ಚಾಗಿ ಪತ್ರಿಕೆಗಳನ್ನೇ ತರಿಸುವದಿಲ್ಲ. ಈ ವಾರದ ಪತ್ರಿಕೆ ಎಂಟು, ಹದಿನೈದು ದಿನ ಕಳೆದು ದೊರೆಯುವದಾದರೆ ಪ್ರಯೋಜನವೇನು? ಕೆಲವು ವೇಳೆ ಇವು ದೊರೆಯುವದು ದುರ್ಲಭ. ಗ್ರಾಮದ ಪಂಚಾಯಿತಿ ವ ಯಾವನಾದರೆ [illegible]ನ ಕೈಯಲ್ಲಿ ಕೊಡುವದು ಅಂಚೆಯವನ ಅಭ್ಯಾಸ. ಅವ ಅಲ್ಲಿಲ್ಲದೆ ಮಾಯವಾಗಿ ಪತ್ರಿಕೆ ತರಿಸುವ ಪತ್ರಿಕಾ ಅಭಿಮಾನಿಗಳನ್ನು [illegible] ಭಿಕ್ಷುಕರನ್ನಾಗಿ ಮಾಡುತ್ತಾನೆ. ಈ ರೀತಿಯ ಅವ್ಯವಸ್ಥೆಯನ್ನು ನೀಗಬೇಕು. ಹೆಚ್ಚು ಸಂಖ್ಯೆಯಲ್ಲಿ ಅಂಚೆಯವರನ್ನು ನೇಮಿಸಿ ಕಾಗದ ಪತ್ರಗಳ ಬಟವಾಡೆಯು ಕ್ರಮವಾಗಿ ನಡೆಯುವ ಬಗ್ಗೆ ಸಂಬಂಧಿಸಿದ ಇಲಾಖೆಯವರು ಮಾಡುವರೇ?

C A A

ಹೆಗ್ಗಳ ಶಾಲೆ.

ಈ ಶಾಲೆಯು ಅತ್ಯವಶ್ಯಕವಾದುದಾದರೂ ಮಕ್ಕಳಿಗೆ ಶಾಲೆಯಿಂದ ಲಾಭವಾಗುತ್ತಿಲ್ಲ (೧) ಶಾಲೆಯನ್ನು ೧೯೩೩ರಲ್ಲಿ ಕಟ್ಟಿ ಈ ವರೆಗೆ ರಿಪೇರಿ ಇಲ್ಲದೆ ದನದ ಕೊಟ್ಟಿಗೆಯಂತಾಗಿದೆ (೨) ಶಾಲೆಯ ಹೊರಗೆ ಬಾವಿ ಇದ್ದರೂ ನೀರಿಲ್ಲದೆ [illegible] ಇಲ್ಲದೆ ಹತ್ತಿರದ ಕೊಳ್ಳ ಸೇರೀ ಇನ್ನೂ ಗತಿಯಾಗಿದೆ (೩) ಶಾಲೆಯಲ್ಲಿ ೯೦ ಮಕ್ಕಳಿದ್ದು ಎರಡು ಅಧ್ಯಾಪಕರಾಗಿ ಐದು ತರಗತಿಗಳಿದ್ದರೂ ಇವರಿಗೆ ಇರುವದು ಒಂದು ಕಪ್ಪು ಹಲಗೆ! (೪) ಶಾಲೆಯ ಉಪಕರಣಗಳನ್ನಿಡಲೂ ಒಂದು ಪೆಟ್ಟಿಗೆಯಿಲ್ಲ. ನಮ್ಮ ನಾಡಿಗೂ ಒಬ್ಬ [illegible] ಬೋರ್ಡ್ ಸದಸ್ಯರಿದ್ದಾರೆ. ಇವರ ಕಣ್ಣಿಗೆ ಇವಾವು ಬಿದ್ದಿಲ್ಲವೆ? [illegible] ಸ್ಥಿತಿಯಿಂದಲೇ ನೀಡಿದ [illegible] ಹೋಗಿ [illegible] ಜಿಲ್ಲಾ ಬೋರ್ಡಿನವರು ವಿದ್ಯಾಭಾಗವನ್ನು ಸರಕಾರಕ್ಕೆ ಬಿಡಲು ತಯಾರಿಲ್ಲ. ಅಕ್ಕಪಕ್ಕದ ಮುಂದೆ ಜನಹಿತಸಾಧನೆಗೆ ಅಸ್ಪದವಿಲ್ಲ?

ಬ. ಚ. ಮು.

ಮಲೇರಿಯಾ ಕಂಟ್ರೋಲ್ ಯೂನಿಟ್.

ಈ ಯೂನಿಟಿನವರು ಉಪಯುಕ್ತ ಕೆಲಸ ಮಾಡುತ್ತಿರುವರೆಂದು ಪತ್ರಿಕೆಗಳ ಮೂಲಕ ಓದುತ್ತಿದ್ದೇನೆ. ಆದರೆ ಇವರು ವಿರಾಜಪೇಟೆಯ ಬಾಡಗ ಗ್ರಾಮಕ್ಕೆ ಈ ವರೆಗೆ ಬಂದಿಲ್ಲವೆನ್ನಬೇಕಾಗಿದೆ. ಇಲಾಖೆಯಲ್ಲಿ ಸಾಕಷ್ಟು ಸಿಬ್ಬಂದಿ ಇಲ್ಲದ ಕಾರಣ ಕೃಷಿ ಗ್ರಾಮಗಳಿಗೆ ಹೋಗುವದು ಸಾಧ್ಯವಿಲ್ಲವೆಂದು ಇಲಾಖೆಯವರು ಅಭಿಪ್ರಾಯಪಟ್ಟ ವರ್ತಮಾನ ತಿಳಿದುಬಂತು. ಇದು ತಪ್ಪು ಏರ್ಪಾಡೆನ್ನಬೇಕಾಗಿದೆ. ಮಲೇರಿಯಾ ನಿವಾರಣೆಗೆ ಈ ರೀತಿಯ ಆಕ್ಷೇಪದ ಪ್ರಯತ್ನ ಸಾಲದು. ಯೋಗ್ಯ ಸಿಬ್ಬಂದಿಗಳನ್ನು ನೇಮಿಸಿ ಈ ಕೆಲಸ ದಕ್ಷತೆಯಿಂದ ನಡೆಯುವಂತೆ ಇನ್ನಾದರೂ ಇಲಾಖೆಯವರು ತಕ್ಕ ಏರ್ಪಾಡು ಮಾಡುವರೇ?

ಎಂ. ಕೆ. ಸೋಮಯ್ಯ.

ಅಂಚೆಕಟ್ಟೆ.

ಕಾಕೋಟುಪರಂಬಿನಲ್ಲಿ ಒಂದು ಅಂಚೆ ಆಫೀಸು ತೆರೆಯಬೇಕು; ಇದರಿಂದ ಸುತ್ತಮುತ್ತಲಿನ ಗ್ರಾಮಗಳಿಗೆ ತುಂಬಾ ಅನುಕೂಲವಾಗುವದೆಂದು ಕಳೆದ ಎರಡು ಮೂರು ವರ್ಷಗಳಿಂದ ಎಷ್ಟು ಕೂಗಿಕೊಂಡರೂ ಏನೂ ಪ್ರಯೋಜನವಾಗಿರುವದಿಲ್ಲ. ಜನತೆಯ ಕೂಗಿಗೆ ಈ ರೀತಿಯ ಅನಾಸಕ್ತಿ ಏಕೋ ನಮಗೆ ತಿಳಿಯದು. ಇನ್ನಾದರೂ ಸಂಬಂಧಿಸಿದ ಅಧಿಕಾರಿಗಳು ಕಾಕೋಟುಪರಂಬಿನಲ್ಲಿ ಒಂದು ಟಪಾಲು ಆಫೀಸನ್ನು ತೆರೆದು ನಾಡಿನ ಜನರ ಹಿತಸಾಧಿಸಬೇಕಾಗಿ ಪ್ರಾರ್ಥನೆ.

ಐ. ಪಿ. ಎಂ

ಬೊಂಬಾಯಿ ಕೊಡವ ಸಂಘ

೨-೯-೪೯ನೇ ತಾರೀಕಿನ 'ಕೊಡಗು' ಪತ್ರಿಕೆಯಲ್ಲಿ 'ಸಂತೋಷಿ'ಯು ಬರೆದ ಲೇಖನದಲ್ಲಿ ನಿಜವಲ್ಲದ ಅನೇಕ ಸಂಗತಿಗಳಿವೆ.

ವೀರರಾಗಿ ಹುಟ್ಟಿದ ಕೊಡಗರು ಎಲ್ಲಿ ತಾನೆ ಚರ್ಚಿಸುವುದಿಲ್ಲ? ಹಲವು ವರ್ಷಗಳಲ್ಲಿ ಎಷ್ಟು ಮೀಟಿಂಗುಗಳು ನಡೆದಿಲ್ಲ? ಎಷ್ಟು ಚರ್ಚೆಗಳು ಆಗಿಲ್ಲ? ಇದೆಲ್ಲ ವಾಡಿಕೆಯಾಗಿ ಎಲ್ಲೆಲ್ಲಿಯೂ ನಡೆಯುವದಾದರೆ 'ಒಬ್ಬರು ಇನ್ನೊಬ್ಬ ಯುವಕನ ಎದೆಗೆ [illegible]' ಬರೆದದ್ದು ನಿಜವಲ್ಲ. ಈ ಮಾತನ್ನು 'ಸಂತೋಷಿ'ಯು ಸಂಘದ ಹಿತೈಷಿಯಾಗಿದ್ದರೆ ಬರೆಯುತ್ತಿರಲಿಲ್ಲ. 'ಇನ್ನೊಂದು ಮೀಟಿಂಗಿನಲ್ಲಿ ನೋಡುತ್ತೇವೆ'ಂದು ಹೇಳಿದ್ದರ ಅರ್ಥವು ಯಾವದ್ವೇಷ ಪ್ರೇರಿತವಾದದ್ದೂ ಅಲ್ಲ. ಅದು ಕೇವಲ ರಚನಾತ್ಮಕಗಳ ವಿಷಯ. ಬಹಳ ವರ್ಷಗಳಿಂದ ನಡೆದು ಬಂದ ಸಂಘವನ್ನು ಒಡೆಯಲು ಯಾರು ತಾನೆ ನೆನಸುವರು! ಇದರಿಂದ ಸ್ಪಷ್ಟವಾಗಿ ತಿಳಿಯುವುದೇನೆಂದರೆ 'ಸಂತೋಷಿ'ಯು ಈ ಸಂಘವನ್ನು ಒಡೆಯಬೇಕೆಂದು ನೆನಸಿ ಬರೆದಿರುವುದಾಗಿ ತಿಳಿದು ಬರುತ್ತದೆ. ಇತ್ತೀಚೆಗೆ ಕೆಲದಿವಸಗಳಲ್ಲಿ ಕೆಲವು ಹಳೆಯ ಮೆಂಬರುಗಳು, ಯುವಕರು ಮುಂದುವರಿಯುವಂತೆಯೂ ಅವರು ಮಾಡುವದು ತಪ್ಪೆಂದೂ ನೆನಸಿ, ಅವರನ್ನು ಹೆಚ್ಚಿಗೆ ಸಂಘದ ಕಾರ್ಯಗಳಲ್ಲಿ ಭಾಗವಹಿಸಲು ಪ್ರೋತ್ಸಾಹ ಕೊಡದಂತೆ ಕಾಣುತ್ತದೆ. ಆದ ಕಾರಣ ಈ ವರ್ಷದ ಸಭೆಯ ಪ್ರೆಸಿಡೆಂಟರು ಮತ್ತು ಸಮಿತಿಯು ಅವರ ಹೊಸ ಯುವಕರ ಮೆಂಬರುತನಕ್ಕೆ ಬರೆಕೊಂಡ ಅರ್ಜಿಯನ್ನು ಅಂಗೀಕರಿಸಿರುವದಿಲ್ಲ. ಇದರ ಅರ್ಥವೇನೆಂದು ತಿಳಿಯಬರುವದಿಲ್ಲ.

ಮೇಲ್ಕಂಡ ಮೀಟಿಂಗಿನಲ್ಲಿ ಗಲಾಟೆಯಾಗಲು ಕೆಲವು ಹಳೆಯ ಅಂದರೆ ೧೯೩೯ ನೇ ಇಸವಿಗೆ ಮುಂಚಿತವಾಗಿ ಬಂದ 'ವೀರರ' ವರ್ತನೆ. ಇದರಲ್ಲಿ ಸ್ಥಾನತಪ್ಪಿದ ವಕೀಲರ ಸಿನಿಮಾ ನಟರನ ಟನೆ. ಪ್ರೆಸಿಡೆಂಟರ ಕರ್ತವ್ಯವನ್ನು ನೆರವೇರಿಸಲು ಅಶಕ್ತತೆ ಇವೇ ಕಾರಣ. ರಣಾವು ನಿರ್ಣಯವಾಗದೆ ಮುಂದರಿಸಲ್ಪಡಲು ಕಾರಣ ಬೇರೆ ಇಲ್ಲದಿರಲ್ಲ. ದರೆಯಿಸುವಗಳನ್ನು ಬರೆದ 'ಸಂತೋಷಿ'ಯು ಆ ಸಂತೋಷಕ್ಕೆ ಎಡೆಕೊಟ್ಟಿದ್ದಾನೆ.

'ಸಂಘದ ಹಿತಚಿಂತಕ'

ಹೀಗೇಕೆ?

ಸರಕಾರದ ಮೇಲಧಿಕಾರಿಗಳು, ತೋಟದ ಮಾಲಿಕರು ಮತ್ತು ಕೆಲಸಕ್ಕಿಟ್ಟುಕೊಂಡ ಯಜಮಾನರು ತಮ್ಮ ಕೈಕೆಳಗಿರುವವರ ಬಗ್ಗೆ ಹೀಗೆ ವರ್ತಿಸುವದೇಕೆ? ತಮ್ಮಧೀನದಲ್ಲಿರುವವರ ಯೋಗ್ಯಾಯೋಗ್ಯತೆಗಳನ್ನು ಲೆಕ್ಕಿಸದೆ ಕೀಳು ದೃಷ್ಟಿಯಿಂದ ಕಾಣುವದೇಕೆ?

ಕೆಲವು ಅಧಿಕಾರಿಗಳು ತಮ್ಮ ಅಧೀನದಲ್ಲಿರುವವರೊಡನೆ ಪ್ರಸ್ತಾಪಿಸಬೇಕಾದರೆ ಹುಬ್ಬು ಗಂಟಿಕ್ಕಿಕೊಂಡು ತಾವು ಅಧಿಕಾರಿಗಳೆಂಬ ದರ್ಪವನ್ನು ಮುಖ ಚರ್ಯೆಯ ಮೂಲಕ ತೋರಿಸುತ್ತ ಬೆದರಿಸಿ ಮಾತನಾಡುತ್ತಾರೆ. ಇಂಥಾ ಅಧಿಕಾರಿಗಳು ಹೆಚ್ಚಾಗಿ ವಿರೋಧವನ್ನು ಕಟ್ಟಿಕೊಳ್ಳುತ್ತಾರೆ. [illegible] ಹಾಳು ಮಾಡಿಕೊಳ್ಳುತ್ತಾರೆ. [illegible] ಮಾನವರಿಗೆ [illegible] ಕಟ್ಟಿಕೊಳ್ಳುತ್ತಾರೆ. [illegible] ಗುಣಗಳನ್ನು [illegible] ಹಾಗೂ [illegible] ನ್ಯಾಯವಾಗಿ [illegible] ಮಾತ್ರಕ್ಕೆ [illegible] ಸಬೇಕೆಂಬ ನಿಯಮವಿಲ್ಲವಾದರೂ [illegible] ಆಗಿನವರ [illegible] ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ [illegible] [illegible] ಎಲ್ಲಿದೆ? [illegible] ನೀಗಿಯೇ [illegible] ನಡೆಸಬೇಕೆಂ [illegible] ಎಲ್ಲಿದೆ? [illegible] ಮಾರ್ಗವನ್ನನುಸರಿಸಿ ನಡೆಸುವ ಅಧಿಕಾರಿ ಯಾದರೂ ಎಷ್ಟು ಪ್ರಾಮಾಣಿಕ [illegible] ತೆಯೂಗಿರಬಹುದು! ಹಾಗೂ ಎಷ್ಟು ದಕ್ಷತೆಯ ಅಡಳಿತೆಯಾಗಿರಬಹುದು!

ದರ್ಪವೆಂಬುದು ಒಂದು [illegible] ದಬ್ಬಾಳಿಕೆಯೆಂಬುದು ಗೂಢ ವ್ಯಕ್ತಿ ಬೇಧವೆಂಬುದು ಮಾತು. ಇದರಲ್ಲಿ ವಾಸ ಮಾಡುವವರಾದರೂ ಯಾರು? ಪರರ ಸಂಕಷ್ಟಗಳನ್ನು ತಿಳಿಯದ ಹಿತಾಹಿತಗಳ ಸ್ವಾರ್ಥಿ [illegible] ಸ್ವೇಚ್ಛೆಯಾಗಿ ವರ್ತಿಸುವ [illegible] ವ್ಯಕ್ತಿಗಳು. ಈ ಧೋರಣೆ [illegible] ಏನು? ಇದು ದರ್ಪ ದಬ್ಬಾಳಿಕೆಗಳ ಅತಿಶಯದ [illegible] ಎಂಬುದನ್ನು [illegible] ಕೊಂಡು ಮುನ್ನಡೆಯಬೇಕೆಂದ [illegible] ಇಂತಹ [illegible] ಅಧಿಕಾರಿಗಳಾಗಲಿ, ತೋಟದ ಮಾಲೀಕರಾಗಲಿ, ಭೂಮಾಲೀಕರಾಗಲಿ ತಮ್ಮ ಅಧೀನದಲ್ಲಿರುವವರನ್ನು ಪೂರ್ವಕಾಲದ ಜಮಾನದ ಅಧೀನದಲ್ಲಿರುತ್ತಿದ್ದ ಪರಿಚಾರಕರಂತೆ ಕಾಣಕೂಡದು. ಅವರ ಮೇಲೆ ಅಧಿಕಾರ ದರ್ಪವನ್ನು ಬೀರಕೂಡದು. ಅವರೂ ನಮ್ಮ ಸಹೋದರರೆಂದು ತಿಳಿದು ವಿಶ್ವಾಸ ಪ್ರೀತಿಯಿಂದ ಅವರ ಕಷ್ಟನಷ್ಟಗಳನ್ನು ಸವಿನುಡಿಗಳಿಂದ [illegible] ಅವರೊಡನೆ ಮಿಳಿತವಾಗಿರಬೇಕು. ಬದಲಾಗಿ ದರ್ಪದಿಂದ ಅಧಿಕಾರಿಯೆಂಬ ಹೆಮ್ಮೆಯ ಹೆಚ್ಚಳವನ್ನು ವ್ಯಕ್ತಪಡಿಸಬೇಕಾದ್ದಿಲ್ಲ. ಮಾನವ ಸಮಾಜದಲ್ಲಿ ಅಧಿಕಾರಿಯಾಗಲೀ, ಬಡವನಾಗಲೀ ವಿದ್ಯಾವಂತನಾಗಲೀ ಅವಿದ್ಯಾವಂತನಾಗಲಿ, ಹಾರುವನಾಗಲಿ, ಹರಿಜನನಾಗಲೀ ಎಲ್ಲರೂ ಮನುಷ್ಯರೇ. ಎಲ್ಲರಿಗೂ ಒಂದೇ ಸೂರ್ಯ, ಒಂದೇ ಚಂದ್ರ. ಎಲ್ಲರೂ ಗಾಳಿಸೇವಿಸದಿದ್ದಾಗ ಸಾಯುವರು. ಆಹಾರ ತಿಂದು ಜೀವಿಸುವರು. ಕಟ್ಟ ಕಡಗ ವ್ಯವಸ್ಥೆಯನ್ನೈದುವರು. ಇಂತಿರುವಾಗ ಆಳು ಬಂದಾಗ ಅದಾ [illegible] ದಸ ಬಂದಾಗ ಮಹಾರಾಜ, ಹಾರುವ ಬಂದಾಗ ಹಾಲು, ಹರಿಜನ ಬಂದಾಗ ನೀರು, ವಿದ್ಯಾವಂತ ಬಂದಾಗ ವಿಶೇಷ ಸಂಭ್ರಮ, ಅವಿದ್ಯಾವಂತ ಬಂದಾಗ [illegible] ಇಂತಹ ದರ್ಪದ ಭೇದ ಭಾವನೆ [illegible] ಇರಬೇಕು?

ಮೋಯಿಕ್

ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್,
ಫ್ರೇ ಜ ರ್ ಪೇ ಟೆ.

ಮಹಾಜನರಲ್ಲಿ ವಿನಂತಿ.

ಫ್ರೇಜರ್‌ಪೇಟೆಯ ನಮ್ಮ ಕಾರ್ಖಾನೆಯಲ್ಲಿ ಈಗಾಗಲೇ ಮೂಳೆಗೊಬ್ಬರ ತಯಾರಾಗುತ್ತಿರುವುದು ಎಲ್ಲರಿಗೂ ತಿಳಿದ ವಿಷಯ. ಈ ಸಂದರ್ಭದಲ್ಲಿ ನಿಮ್ಮ ನಿಮ್ಮ ಗ್ರಾಮಗಳಲ್ಲಿ ಸತ್ತ ದನಗಳ ಮತ್ತು ಇತರ ಪ್ರಾಣಿಗಳ ಮೂಳೆಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಜಮಾಯಿಸಿ ಮೇಲಿನ ವಿಳಾಸಕ್ಕೆ ತಿಳಿಸಿದಲ್ಲಿ ಅದನ್ನು ಅದರ ಬೆಲೆ ಕೊಟ್ಟು ಸಾಗಿಸುವ ಏರ್ಪಾಡನ್ನು ಮಾಡುತ್ತೇವೆ. ಅಥವ ಲಾರಿಗಟ್ಟಲೆ ಜಮಾಯಿಸಿದವರು ನಮ್ಮ ಫ್ರೇಜರ್‌ಪೇಟೆ ಕಾರ್ಖಾನೆಗೆ ತಂದು ಕೊಟ್ಟಲ್ಲಿ ಮಣ 1ರ 0-12-0 ಯಂತೆ ಬೆಲೆಗೆ ತೆಗೆದುಕೊಳ್ಳಲಾಗುವುದು.

ಈಗಾಗಲೇ ತಯಾರಾಗಿರುವ ಮೂಳೆ ಗೊಬ್ಬರಕ್ಕೆ ಖಾಯಿಸ್‌ದಾರರು ಬರೆಕೊಂಡಲ್ಲಿ ಅಗ್ರಸ್ಥಾನವನ್ನನುಸರಿಸಿ ಬಟವಾಡೆ ಮಾಡಲಾಗುವುದು.

ಸೂಚನೆ:—ನಮ್ಮ ಕಂಪೆನಿಯ ಶೇರುದಾರರಿಗೆ ಹೆಚ್ಚಿನ ರಿಯಾಯಿತಿ ಮತ್ತು ಮೊದಲಿನ ಹಕ್ಕು ಕೊಡಲಾಗುವುದು.

ಫ್ರೇಜರ್‌ಪೇಟೆ,
ತಾ. 19-5-49

ಕೆ. ಕೆ. ತಿಮ್ಮಯ್ಯ,
ಮೇನೇಜಿಂಗ್ ಡೈರೆಕ್ಟರ್.

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್ ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟೆಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ. 169 ರಿಂದ 245 ರ ವರೆಗೆ.
2. ·32 ರಿವಾಲ್ವರುಗಳು (Revolvers) „ 262 „ 274 „
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott) ಕ್ರಯ ರೂ. 1492/-
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make) ಕ್ರಯ ರೂ. 627-5-0
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4-10-0
6. 12, 16, 20ನೇ ನಂಬರು ಕೋವಿಗಳ ತೋಟೆಗಳೂ ಪಿಸ್ತೂಲು ಮತ್ತು ರಿವಾಲ್ವರುಗಳ ತೋಟೆಗಳೂ ಸಹ ದೊರೆಯುತ್ತವೆ.

(ಅವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವುದು.)

62-7

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

ವಿಮೆ ಮಾಡಲು ಇಲ್ಲವೇ ಪ್ರತಿನಿಧಿಸಲು
ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್.

ಇವರ ಸಲಹೆಗಿಂತ ಉತ್ತಮ ಮಾರ್ಗವಿಲ್ಲ.

ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಹಿಂದೂಸ್ಥಾನದ ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು

ದಿ ಬೊಂಬಾಯಿ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

30 ಮೌಂಟ್ ರೋಡ್,
ಪೋ. ಬಾ. ನಂ. 337,
ಮದ್ರಾಸು 2

ಬೊಂಬಾಯಿ ಲೈಫ್ ಬಿಲ್ಡಿಂಗ್,
ಪೋ. ಬಾ. ನಂ. 1,
ಉಡುಪಿ.

(ಟೆಲಿಫೋನ್ ನಂ. 8398)

ಇತರ ಆಫೀಸುಗಳು:—ಬೆಂಗಳೂರು, ತಿರುವೆಂಡರಂ, ಕಲ್ಲಿಕೋಟೆ, ಮಂಗಳೂರು, ಮಧುರೆ, ಮತ್ತು ಬೊಂಬಾಯಿ.

ದಿ ಟ್ರಾಪಿಕಲ್
ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:— ಲಾಲ ಶಂಕರ್ ಲಾಲ್.
ಮುಖ್ಯ ಕಛೇರಿ:— ಹೊಸ ಡೆಲ್ಲಿ.
ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್ ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮುಲಖಾನ್. ಡಾ|| ಎಂ. ಎ. ಅನ್ಸಾರಿ.

Transacts:—Life, Fire, Motor and Marine.

ನಮ್ಮ ಹೊಸ ವಿಸ್ತಾರದ ಯೋಜನೆಯಲ್ಲಿ ಆಕರ್ಷಕ ಕಮಿಷನ್ ಮೇಲೆ ಏಜನ್ಸಿಗೆ ದಯವಿಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ

ಆರ್ಗನೈಜರ್
ದಕ್ಷಿಣ ಕೊಡಗು, ಪೊನ್ನಂಪೇಟೆ
ಅಥವಾ
ಯಂ. ಯು. ಅಚ್ಚಣ್ಣ,
ಏಜೆನ್ಸಿ ಸುಪರಿಂಟೆಂಡೆಂಟ್,
ಮಡಿಕೇರಿ, ಕೊಡಗು.

ಆರ್ಗನೈಜರ್
ಉತ್ತರ ಕೊಡಗು, ಮಡಿಕೇರಿ.
ಅಥವಾ
ಎಂ. ಎ. ಬೆಳ್ಯಪ್ಪ,
ಬ್ರಾಂಚ್ ಸೆಕ್ರೆಟರಿ,
ಹಂಪನಕಟ್ಟಾ, ಮಂಗಳೂರು.

ಎಂಪೈರ್ ಆಫ್ ಇಂಡಿಯಾ
ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

48ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು.	ಒಟ್ಟು ಆದಾಯ ...	1,07,09,000	ಮೀರಿದೆ
	ಚಾಲ್ತಿಯಿರುವ ವಿಮೆ	17,74,52,000	„
	ಆಸ್ತಿ	6,67,60,000	„
ಕಂಪೆನಿಯು ಆದಿಯಲ್ಲಿ ಕೊಟ್ಟ ಕ್ಲೈಮುಗಳು	....	8,83,62,000	„

ಅಂಗ ಕಛೇರಿ: ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು.

ಏಜೆನ್ಸಿ ಅರ್ಜಿಗಳನ್ನು ಸ್ವಾಗತಿಸಿದೆ.

ಪ್ರಧಾನ ಕಛೇರಿ: ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ.

CRESCENT

FOR PROTECTION AND SERVICE.

It is best to represent and insure with The CRESCENT Insurance Co., Ltd.,

H. O: BOMBAY. [*Established 1919.*

For particulars write to:

Sri B. A. Poovaiah *Organiser* *Pollibetta, Coorg.* **or** **The Branch Manager,** *22 B. Mahatma Gandhi Road, Bangalore 1*

ಸುರಕ್ಷಿತವಾದ ಜೀವವಿಮೆ ಪಡೆಯಲು

ಕ್ರೆಸೆಂಟ್

ಇನ್ಶ್ಯೂರೆನ್ಸ್ ಕಂಪೆನಿಗೆ ಬರೆಯಿರಿ.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,65,000.
ಕ್ಷೇಮನಿಧಿ	ರೂ.	50,000.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಅಡವಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ಕು ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ ಮತ್ತು ವಾರ್ಡನ್ ಇನ್ಶ್ಯೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ,
ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C.
ಪ್ರೆಸಿಡೆಂಟ್ ಮತ್ತು ಏಜಂಟ್.

Edited, Printed and Published by P. I. Belliappa at 'Kodagu Press, Mercara, for 'Kodagu' Ltd.

Reg. No. M. 1550.
'KODAGU' MERCARA. (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೨೮ | ತಾರೀಕು ೭-೧೦-೧೯೪೯ನೇ ಶುಕ್ರವಾರ | ಸಂಚಿಕೆ ೨೦

ವಾರದ ವರದಿ.

ರೂಪಾಯಿಯ ಮೌಲ್ಯ ವಿಚ್ಛೇದನ.

ಇಂಗ್ಲೆಂಡಿಗೆ ಇದ್ದ ಅಮೇರಿಕದ ನಾಣ್ಯ ಡಾಲರುಗಳ ಕೊರತೆಯು ಬ್ರಿಟನಿನ ಪೌಂಡಿನ ಮೌಲ್ಯ ವಿಚ್ಛೇದನಕ್ಕೆ ಕಾರಣವಾಯಿತು. ಪೌಂಡಿಗೆ ಹೊಂದಿಕೊಂಡಿರುವ ಭಾರತವೂ ಅದರಲ್ಲಿ ಭಾಗವಹಿಸಲೇಬೇಕಾಯಿತು. ಅಂತರಾಷ್ಟ್ರೀಯ ಆರ್ಥಿಕ ವ್ಯೂಹ ರಕ್ಷಾ ಸೂತ್ರ ಇದು ಅನ್ವಯಿಸುವದೆಂದು ಹೇಳುತ್ತಿದ್ದರೂ ಪಂಡಿತ ಜವಾಹರರು ಈ ಬಗ್ಗೆ ಸ್ಪಷ್ಟ ಹೇಳಿಕೆಯಿತ್ತು ದೇಶದೊಳಗಿನ ವಸ್ತುಗಳ ಬೆಲೆ ಏರಲು ಬಿಡೆನೆಂದು ಹೇಳಿದ್ದರೂ ವ್ಯಾಪಾರಿ ವರ್ಗವು ಇದನ್ನು ಗಮನಿಸುವದೆಂಬುದು ಸಂಶಯದ ಮಾತು. ಅನಿವಾರ್ಯವಾಗಿ ಬಂದ ಮೌಲ್ಯ ವಿಚ್ಛೇದನದ ಕಾರಣ ದೇಶದಲ್ಲಿ ಸರಕುಗಳ ಬೆಲೆ ತಗ್ಗುವದೆಂಬ ವಿದ್ದ ಕಲ್ಪನೆ ಹಾರಿಹೋಯಿತು. ಯುದ್ಧಾನಂತರ ಜೀವನಾವಶ್ಯಕ ವಸ್ತುಗಳ ಬೆಲೆ ಇಳಿಯಬಹುದೆಂದು ನಾವು ನಿರೀಕ್ಷಿಸಿದ್ದೆವು. ಆದರೆ ಈಗ ನಾಲ್ಕೈದು ವರ್ಷಗಳಾದರೂ ಅದರ ಚಿಹ್ನೆ ಇಲ್ಲ. ರೂಪಾಯಿಯ ಬೆಲೆ ಇಳಿದ ಕಾರಣ ಇದರ ಸಾಧ್ಯತೆ ದೂರವೇ ಉಳಿಯಿತು. ಹೇಗೂ ಸಾಮಗ್ರಿಗಳ ಬೆಲೆ ಏರದಂತೆ ಸರಕಾರ ನೋಡತಕ್ಕದ್ದು ಕರ್ತವ್ಯವಾಗಿದೆ. ಈ ಬೆಲೆ ಇಳಿತದಿಂದ ಸಾಮಾನ್ಯಜೀವಿಯ ಜೀವನದ ಮೇಲೆ ಆಗುವ ಪರಿಣಾಮವನ್ನು ಮುಂದೆ ನೋಡಬೇಕಿದೆ. ವ್ಯಾಪಾರಿವರ್ಗವು ಮೌಲ್ಯವಿಚ್ಛೇದನದ ಅವಕಾಶವನ್ನು ಲಾಭದ ದೃಷ್ಟಿಯಿಂದ ಮಾಲುಗಳಿಗೆ ಬೆಲೆ ಏರಿಸುವ ಸಂದರ್ಭವಾಗಿ ಮಾಡಿಕೊಂಡರೆ ಬಡ ಜನರಿಗೆ ವಿಪರೀತ ಹಾನಿಯಾಗುವದು. ಸರಕಾರವು ಇಂಥಾದ್ದಕ್ಕೆ ಎಡೆ ಕೊಡಲೇಬಾರದು. ವ್ಯಾಪಾರಿಗಳು ಬೆಲೆ ಏರಿಸಿದರೂ ಜನತೆ ಹಿಂದಿನ ಬೆಲೆಗಿಂತ ಹೆಚ್ಚಿಗೆ ಕೊಡಬಾರದು.

ರಷ್ಯಾದ ಹತ್ತಿರ ಪರಮಾಣುಬಾಂಬು

ಜಗತ್ತನ್ನೇ ನಡುಗಿಸಿ ದ್ವಿತೀಯ ಮಹಾಯುದ್ಧದ ಸಮಾಪ್ತಿಗೆ ಕಾರಣವಾದ ಪರಮಾಣುಬಾಂಬು ಅಮೇರಿಕಾದ ಮಾತ್ರ ವಶವಿದ್ದು ಅದರ ಗುಟ್ಟನ್ನು ಬೇರೆ ರಾಷ್ಟ್ರಗಳಿಗೆ ಕೊಡದೆ ಭದ್ರವಾಗಿರಿಸಲಾಗಿತ್ತು. ಕೆಲವು ವರ್ಷಗಳಿಂದ ರಷ್ಯಾವೂ ತನ್ನಲ್ಲಿ ಪರಮಾಣು ಬಾಂಬಿದೆಯೆಂದಾಗ ಯಾರೂ ನಂಬಲಿಲ್ಲ. ಈ ಬಗ್ಗೆಯ ರಷ್ಯಾದ ಹೇಳಿಕೆಯು ಇತರ ರಾಷ್ಟ್ರಗಳನ್ನು ಪ್ರಾಮುಖ್ಯವಾಗಿ ಅಮೇರಿಕನರನ್ನು ಬೆದರಿಸಲಿಕ್ಕಾಗಿ ಎಂದು ಹೇಳಲಾಗಿತ್ತು. ಆದರೆ ರಷ್ಯಾದಲ್ಲಿ ಪರಮಾಣು ಬಾಂಬಿನ ಸ್ಫೋಟನದ ವಾರ್ತೆಯನ್ನು ಅಮೇರಿಕಾದ ಪ್ರಸಿಡೆಂಟ್ ಟ್ರೂಮನರು ಹೇಳಿದ ನಂತರ ಜಗತ್ತಿಗೆ ಈ ವಿಚಾರ ಅಧಿಕೃತವಾಗಿ ತಿಳಿದಂತಾಯಿತು. ಇತ್ತಲಾಗಿ ರಷ್ಯನರೂ ಇದರ ಅಸ್ತಿತ್ವವನ್ನು ಒಪ್ಪಿಕೊಂಡಿದ್ದಾರೆ.

ಅಮೇರಿಕಾದಲ್ಲಿ ಪರಮಾಣು ಬಾಂಬಿನ ತಯಾರಿಯು ವಿಸ್ತೃತ ರೀತಿಯಲ್ಲಿ ನಡೆಯುತ್ತಿದೆ. ಇದಕ್ಕಾಗಿಯೇ ಸುಮಾರು ೧೩೦೦ ಕಾರ್ಖಾನೆಗಳು ಕೆಲಸ ಮಾಡುತ್ತಿವೆಯಂತೆ. ಅಮೇರಿಕದ ಹತ್ತಿರ ೩೦೦ರಿಂದ ೬೦೦ರ ವರೆಗೆ ಈ ಬಾಂಬುಗಳಿರಬಹುದೆಂದು ಅಂದಾಜು ಮಾಡಲಾಗಿದೆ. ರಷ್ಯಾದಲ್ಲಿ ಎಷ್ಟಿವೆಯೆಂಬುದು ಯಾರಿಗೂ ತಿಳಿದಿಲ್ಲ. ಹೇಗೂ ಪರಮಾಣು ಬಾಂಬು ಹಾಕಿದರೆ ಅದರಿಂದಲೇ ಉತ್ತರ ಕೊಡುವ ಶಕ್ತಿ ರಷ್ಯಕ್ಕಿದೆಯೆಂಬುದು ಸ್ಪಷ್ಟವಾಯಿತು.

ರಷ್ಯವು ಈ ಬಾಂಬನ್ನು ಬಹಿಷ್ಕಾರ ಹಾಕಿ ಇರುವವೆಲ್ಲವನ್ನೂ ನಾಶಮಾಡಬೇಕೆಂಬ ಅಭಿಪ್ರಾಯವನ್ನು ಸೂಚಿಸಿದೆ. ಅಮೇರಿಕವು ಇದರ ಬಗ್ಗೆ ತಯಾರಿರಲಾರದು. ಹೇಗೂ ರಷ್ಯದಲ್ಲಿ ಪರಮಾಣು ಬಾಂಬಿನ ವಾರ್ತೆಯಿಂದ ಮೂರನೆ ಯುದ್ಧವು ದೂರ ಸರಿದು ಶಾಂತಿಸ್ಥಾಪನೆಯ ಸಾಧ್ಯತೆ ಹೆಚ್ಚಾಗಿದೆ.

ಕಮ್ಯೂನಿಷ್ಟರ ವರ್ತನೆ

ಕಮ್ಯೂನಿಷ್ಟರು ಭಾರತದಲ್ಲಿ ಕೈಕೊಂಡ ಹಿಂಸಾತ್ಮಕ ಚಟುವಟಿಕೆಗಳನ್ನು ಸ್ಪಷ್ಟಪಡಿಸಿ ಅದನ್ನು ನಿರೋಧಿಸುವ ಸುಮಾರು ೩೨ ಪುಟಗಳ ಕರಪತ್ರವನ್ನು ಕೇಂದ್ರ ಸರಕಾರವು ಪ್ರಕಟಿಸಿದೆ. ಕಮ್ಯೂನಿಷ್ಟ ಪಕ್ಷದ ವ್ಯಾಪಕವಾದ ಹಿಂಸಾ ಚಟುವಟಿಕೆಗಳನ್ನು ವಿವರಿಸಿರುವದಲ್ಲದೆ ಕಮ್ಯೂನಿಷ್ಟ ಪ್ರಕಟಣೆ, ಕರಪತ್ರಗಳಿಂದ ಅಂಶಗಳನ್ನು ಉದ್ಧರಿಸಿ ಕೊಟ್ಟಿದ್ದಾರೆ. ಕೇಂದ್ರ ಸರಕಾರವನ್ನು ಅಡಿಮೇಲುಮಾಡಲು, ಕೇಂದ್ರ ಸೈನ್ಯವನ್ನು ಸೋಲಿಸಲು ಜನತೆಗೆ ತರಬೇತುಕೊಟ್ಟು ಕೂಡಲೆ ಯುದ್ಧಕ್ಕೆ ಜನರನ್ನು ತರಬೇತುಗೊಳಿಸುವ ಸೂಚನೆಗಳನ್ನು ಕಮ್ಯೂನಿಷ್ಟ ಪಕ್ಷವು ಮಾಡಿದೆ. ಹೈದರಬಾದ್ ಮತ್ತು ಪಶ್ಚಿಮ ಬಂಗಾಳದಲ್ಲಿ ಇವರು ಹೆಚ್ಚು ಚಟುವಟಿಕೆಯ ಕಾರ್ಯಕ್ರಮ ಕೈಕೊಂಡಿರುವರೆಂದೂ, ಅಂಡಲ್ಲಿ ಕಾಂಗ್ರೆಸಿಗರನ್ನು, ಸರಕಾರಿ ಅಧಿಕಾರಿಗಳನ್ನು ಕೊಲೆಮಾಡುವ ಸೂಚನೆ ಇತ್ತಿರುವರೆಂದೂ ಈ ಪ್ರಕಟಣೆ ತಿಳಿಸುತ್ತದೆ. ತಮ್ಮ ಪಕ್ಷದ ಅಭಿಪ್ರಾಯವನ್ನು ನ್ಯಾಯರೀತಿಯಿಂದ ಅಹಿಂಸಾತ್ಮಕವಾಗಿ ಪ್ರಚಾರಮಾಡಲು ಯಾರಿಗೂ ಭಾರತದಲ್ಲಿ ಅತಂಕವಿಲ್ಲವೆಂದೂ, ಹಿಂಸಾಮಾರ್ಗವನ್ನು ಕೈಗೊಂಡು ದೇಶದ ಶಾಂತಿಯನ್ನೂ, ನಾಗರೀಕರ ಜೀವನವನ್ನೂ ಕೆಡಿಸುವ ವಿಧಾನಕ್ಕೆ ಸರಕಾರವು ಎಂದೂ ಆಸ್ಪದ ಕೊಡಲಾರದೆಂದೂ, ಈ ಬಗ್ಗೆ ಸಾರ್ವಜನಿಕರು ಸರಕಾರದೊಡನೆ ಸಹಕರಿಸಿ ದೇಶದ ಶಾಂತಿರಕ್ಷಣೆಗೆ ಸಹಾಯಕೊಡಬೇಕೆಂದೂ ಆ ಪ್ರಕಟಣೆಯಲ್ಲಿ ಕೋರಲಾಗಿದೆ.

ಕಾಸಿಂ ರೆಜ್ವಿ.

ಹೈದರಾಬಾದಿನ ರಝಾಕಾರ್ ಮುಂದಾಳಾಗಿದ್ದ ಕಾಸಿಂ ರೆಜ್ವಿಯ ವಿಚಾರಣೆ ನಡೆಯುತ್ತಿದೆಯಷ್ಟೆ, ಮೊನ್ನೆಯಾಗಿ ವಿಚಾರಣೆಯಲ್ಲಿ ಅವನು ತನ್ನ ಮೇಲೆ ಹೊರಿಸಿದ ತಪ್ಪನ್ನು ತಿರಸ್ಕರಿಸಿ ಹೇಳಿಕೆಯನ್ನು ಕೊಟ್ಟನು. ಆ ಹೇಳಿಕೆಯಲ್ಲಿ 'ಇಮ್ರೋಜ್' ಪತ್ರಿಕೆಯ ಸಂಪಾದಕರಾಗಿದ್ದ ಶೊಯಬುಲ್ಲಾಖಾನರ ಕೊಲೆಗೆ ತಾನು ಕಾರಣನಲ್ಲವೆಂದೂ ತಾನು ನಿರಪರಾಧಿ, ಇತರರ ತಪ್ಪಿಗಾಗಿ ತನ್ನ ಮೇಲೆ ಕಟ್ಟಿ ಹಾಕಿರುವದು ಯೋಗ್ಯವಲ್ಲವೆಂದೂ, ಶೊಯಬುಲ್ಲಾಖಾನನ್ನು ತಾನು ಕೊಲೆ ಮಾಡಿಸುವ ಅವಶ್ಯಕತೆ ಇರಲಿಲ್ಲವೆಂದೂ, ಹಾಗೆ ಇಚ್ಛಿಸಿದ್ದರೆ ಅವರ ಪತ್ರಿಕೆಯನ್ನು ನಿಲ್ಲಿಸಿ ಬಿಡಬಹುದಿತ್ತೆಂದೂ ಹೈದರಾಬಾದಿನ ಮೇಲೆ ಹಿಂದೂಸ್ಥಾನವು ಕೈಕೊಂಡ ನೀತಿಯನ್ನು ಸಮರ್ಥಿಸುವದಕ್ಕೆ ಈ ಕಟ್ಟಿ ಹಾಕಲಾಗಿದೆಯೆಂದೂ ಹೇಳಿದನು.

ರಜಾಕಾರರೆಂದರೆ ಸೈನಿಕರಲ್ಲವೆಂದೂ ಸ್ವಯಂ ಸೇವಕರೆಂದು ಅರ್ಥವೆಂದೂ ಅವರ ಧ್ಯೇಯವು ಕೇವಲ ಮಾನವ ಸೇವೆಯೆಂದೂ ತಾನು ತನ್ನ ಜೀವನದಲ್ಲಿ ಎಂದೂ ಅನೈತಿಕವಾಗಿ ವರ್ತಿಸಿಲ್ಲವೆಂದೂ ಹೇಳಿ ತನ್ನ ಮೇಲಿರುವ ಆರೋಪಗಳನ್ನು ಅಲ್ಲಗಳೆದರು. ವಿಚಾರ ಮುಂದರಿಯುತ್ತಿದೆ.

ತದ್ವಿರುದ್ಧ ವರ್ತನೆ.

ಮುಸ್ಲಿಂ ಲೀಗು ಪ್ರತಿಯೊಂದಕ್ಕೂ ವಿರೋಧಮಾಡಿ ಕಡೆಗೆ ಪಾಕಿಸ್ಥಾನವನ್ನು ಪಡೆಯಿತು. ಪಾಕಿಸ್ಥಾನವನ್ನು ಪಡೆದ ನಂತರವೂ ಅದು ತನ್ನ ಸ್ವಭಾವವನ್ನು ಬಿಟ್ಟಿಲ್ಲ. ಹಿಂದೂದೇಶವು ಏನಾದ ಮಾಡಿದರೆ ಅದಕ್ಕೆ ವಿರುದ್ಧ ಮತ್ತೊಂದು ಮಾಡುವದು ಅದರ ಸ್ವಭಾವವಾಗಿ ಹೊಂದಿದೆ. ಇದು ಇಂದಿನ ಮಾತಲ್ಲ; ಅನಾದಿಯಿಂದಲೂ ನಡೆದು ಬಂದಂತೆ ತೋರುತ್ತದೆ. ಹಿಂದೂದೇಶವು ರಷ್ಯಾಕ್ಕೆ ವಿಜಯಲಕ್ಷ್ಮಿಯವರನ್ನು ರಾಯಭಾರಿಯಾಗಿ ಕಳುಹಿಸಿತ್ತು. ಪಾಕಿಸ್ಥಾನ ಬೇಗಂ ಶ ನವಾಬರನ್ನು ಕಳುಹಿಸಲಿದೆಯಂತೆ. ಇತ್ತ ಮುಖ್ಯ ಮಂತ್ರಿ ಲಿಯಾಖತ್ ಅಲಿಖಾನರು ರಷ್ಯಾಕ್ಕೆ ಹೊರಟಿರುವರು. ಹಿಂದೂದೇಶವು ರೂಪಾಯಿಯ ಬೆಲೆ ಇಳಿಸಿದ್ದರೆ ರಷ್ಯಾವು ಇಳಿಸಿಲ್ಲ. ಹೀಗೆ ಪ್ರತಿಯೊಂದು ಕ್ಷೇತ್ರದಲ್ಲಿಯೂ ಭಾರತಕ್ಕೆ ವಿರುದ್ಧವಾಗಿ ಪಾಕಿಸ್ಥಾನವು ವರ್ತಿಸತೊಡಗಿದೆ.

ಕಾಶ್ಮೀರ ಸಮ್ಮೇಳನ.

ಕಾಶ್ಮೀರ ಸಮಸ್ಯೆಯು ದಿನ ಕಳೆದಂತೆ ಜಟಿಲವಾಗ ತೊಡಗಿದೆ. ಈ ಪ್ರಶ್ನೆಯನ್ನು ಭದ್ರತಾಮಂಡಳದ ಮುಂದೆ ತಂದುದೇ ಅಹಿತವಾಯಿತೆಂದು ಎಲ್ಲರಿಗೂ ಅನಿಸಿ ಹೋಗಿದೆ. ಕಾಶ್ಮೀರದ ಮುಖ್ಯ ಪಟ್ಟಣ ಶ್ರೀನಗರದಲ್ಲಿ ಮೊನ್ನೆಯಾಗಿ ಕಾಶ್ಮೀರ ರಾಷ್ಟ್ರೀಯ ಪರಿಷತ್ತು ಸೇರಿತ್ತು. ಈ ಪರಿಷತ್ತಿನವರು ಸಂಯುಕ್ತ ರಾಷ್ಟ್ರ ಸಂಘದ ಕಾಶ್ಮೀರ ಸಮಿತಿಯ ಕಾರ್ಯಕಲಾಪಗಳ ಬಗ್ಗೆ ತಮ್ಮ ಅತೃಪ್ತಿಯನ್ನು ಸ್ಪಷ್ಟಪಡಿಸಿ ಆ ಸಮಿತಿಯು ತನ್ನ ವರ್ತನೆಯಿಂದ ಜನತೆಯ ವಿಶ್ವಾಸವನ್ನು ಕಳಕೊಂಡಿದೆಯೆಂದೂ ಕಾಶ್ಮೀರ ಸಮಸ್ಯೆಯನ್ನು ಸಂಯುಕ್ತ ರಾಷ್ಟ್ರ ಸಂಘದಿಂದ ಹಿಂತೆಗೆದುಕೊಳ್ಳುವದು ಹಿತವೆಂದೂ ನಿರ್ಣಯಿಸಿರುವರು. ಕಾಶ್ಮೀರದ ಬಗ್ಗೆ ಬ್ರಿಟನ್ ಅಮೇರಿಕಾ ಸೂಚಿತ ಮಧ್ಯಸ್ಥಿಕೆಯು ತಮಗೆ ಬೇಕಿಲ್ಲವೆಂದೂ ಕಾಶ್ಮೀರವನ್ನು ವಿಭಜಿಸುವ ಯಾವದೇ ಸೂಚನೆಯನ್ನು ವಿರೋಧಿಸಲಾಗುವದೆಂದೂ ಕಾಶ್ಮೀರದ ಭವಿಷ್ಯವು ಕಾಶ್ಮೀರದ ಜನರಿಂದಲೇ ನಿರ್ಣಯವಾಗಬೇಕೆಂದೂ ಸ್ಪಷ್ಟವಾಗಿ ಹೇಳಿರುವರು. ಇಷ್ಟು ಸ್ಪಷ್ಟವಾಗಿ ಅವರು ಹೇಳಿರುವಾಗ ಇವುಗಳನ್ನು ಗಮನಿಸದೆ ಪಾಕಿಸ್ಥಾನದ ಬೆನ್ನು ತಟ್ಟುತ್ತಿರುವ ಕಾಶ್ಮೀರ ಸಮಿತಿಯಿಂದ ಈ ಪ್ರಶ್ನೆ ಬಗೆ ಹರಿಯುವಂತೆ ತೋರುವದಿಲ್ಲ. ಒಂದು ಸಮಿತಿಯಿಂದ ಆಗದ ಕೆಲಸವು ಒಬ್ಬ ಮಧ್ಯಸ್ಥಗಾರನಿಂದ ಎಂದೂ ಆಗಲಾರದು. ಆದ್ದರಿಂದ ಪರಿಸ್ಥಿತಿಯು ಹದಗೆಟ್ಟು ಕೈಮೀರುವಮುನ್ನ ಸಂಯುಕ್ತ ರಾಷ್ಟ್ರ ಸಂಘವು ಎಚ್ಚೆತ್ತು ವರ್ತಿಸಬೇಕು.

ಸಕ್ಕರೆಯ ಬೆಲೆ.

ಸಕ್ಕರೆಯ ಬೆಲೆಯು ಹದ್ದು ಮೀರಿ ಏರತೊಡಗಿದ ಕಾರಣ ಕೇಂದ್ರ ಸರಕಾರವು ಒಂದು ಪ್ರಕಟಣೆಯನ್ನು ಹೊರಡಿಸಿ ಗಿರಣಿಗಳಲ್ಲಿದ್ದ ಸಕ್ಕರೆಗಳನ್ನೆಲ್ಲಾ ತನ್ನ ವಶ ಮಾಡಿಕೊಂಡಿದೆ. ಕೆಲವು ಭಾಗಗಳಲ್ಲಿ ನಿಯಂತ್ರಿತ ರೀತಿಯಿಂದ ಸಕ್ಕರೆ ಸರಬರಾಯಿ ಆಗುತ್ತಿದೆ. ಆದರೂ ಸಕ್ಕರೆಯ ಬೆಲೆಯು ಕಡಿಮೆಯಾಗಿಲ್ಲ. ಬದಲು ಬೆಲೆ ಏರುವ ಲಕ್ಷಣಗಳೇ ತೋರುತ್ತಿವೆ. ಪೌಂಡಿಗೆ ಏಳಾಣೆ ಇದ್ದ ಸಕ್ಕರೆ ಬೊಂಬಾಯಿ ಪ್ರಾಂತದಲ್ಲಿ ಒಂದು ರೂಪಾಯಿಗೇರಿದೆ. ಕೆಲವೆಡೆ ಸಕ್ಕರೆ ದೊರೆಯುವದೇ ತೊಂದರೆಯಾಗಿದೆ. ಮುಂದೆ ಪರಿಸ್ಥಿತಿ ಇನ್ನೂ ಕೆಟ್ಟು ಹೋಗುವ ಚಿನ್ಹೆಗಳೇ ತೋರಿಬರುತ್ತಿವೆ. ಪ್ರಾಂತೀಯ ಸರಕಾರಗಳು ಈ ಬಗ್ಗೆ ಯೋಗ್ಯ ಏರ್ಪಾಡು ಮಾಡಬೇಕು.

ವಂದನೆಗಳು.

ನನ್ನ ಪ್ರಿಯ ಪತ್ನಿಯ ಅಕಾಲ ಮರಣದಿಂದ ನನಗೂ ನನ್ನ ಸಂಸಾರಕ್ಕೂ ಮತ್ತು ನನ್ನ ಪ್ರಿಯ ಪತ್ನಿಯ ಕಡೆಯವರಿಗೂ ಉಂಟಾಗಿರುವ ಅಪಾರವಾದ ದುಃಖದಲ್ಲಿ ಖುದ್ದಾಗಿಯೂ ಮತ್ತು ಪತ್ರ ಮುಖೇನ ಭಾಗಿಗಳಾದ ನನ್ನ ಬಂಧು ಬಳಗದವರಿಗೆ ಕೃತಜ್ಞತೆಗಳನ್ನು ಬರೆದು ಪೂರೈಸಲು ಅಸಾಧ್ಯವಾದ ಕಾರಣ ಈ ಮೂಲಕ ಸರ್ವರಿಗೂ ನನ್ನ ಕೃತಜ್ಞತೆಯನ್ನು ಅರ್ಪಿಸುವವನಾಗಿದ್ದೇನೆ.

ಐಚೆಟ್ಟಿರ ಜಿ. ಪೆಮ್ಮಯ್ಯ,
ಕೈತ್ ಎಸ್ಟೇಟ್, ಕುಟ್ಟ.

ರೈತನ ಪುಟ

ಆದರ್ಶ ಸಾಂಘಿಕ ದುಡಿಮೆ.

ತಾ. ೧೩-೯-೪೯ ರಲ್ಲಿ ನೊವಲೇ ಸ್ರೀಜರ್‌ಪೇಟೆ ಹೋಬಳಿಯ ಸಹಕಾರಿ ಯೂನಿಯನಿನವರು ಏರ್ಪಡಿಸಿದಂತೆ ಕೊಡಗಿನ ಚೀಫ್ ಕಮಿಷನರೂ, ಎಲ್ಲಾ ಇಲಾಖೆಯ ಅಧಿಕಾರಿಗಳೂ, ಅಂದರೆ ಅಸಿಸ್ಟೆಂಟ್ ಕಮಿಷನರು, ಡಿಸ್ಟ್ರಿಕ್ಟ್ ಸುಪರಿಂಟೆಂಡೆಂಟ್ ಆಫ್ ಪೊಲೀಸ್, ಸಹಕಾರಿ ಸಂಘಗಳ ರಿಜಿಸ್ಟ್ರಾರ್‌ರವರು, ಎಗ್ಸಿಕ್ಯೂಟಿವ್ ಇಂಜಿನಿಯರು, ಎಗ್ರಿಕಲ್ಚರಲ್ ಆಫೀಸರು, ಸಿವಿಲ್‌ಸರ್ಜನರು, ವಿದ್ಯಾ ಇಲಾಖಾಧಿಕಾರಿಗಳು ಚೀಫ್ ಪೆಟ್ರೋ ಆಫೀಸರು, ಸುಬೇದಾರರುಗಳೂ, ಇನ್ನಿತರ ಹಲವು ಅಧಿಕಾರಿಗಳೂ ಕೆಲವು ಶಾಸನ ಸಭಾ ಸದಸ್ಯರು ಅನೇಕ ಸಾರ್ವಜನಿಕರೂ ಹಾಜರಾಗಿ ಮಾಳ್ನೋಗೆ ಗ್ರಾಮದಿಂದ ಪ್ರಾರಂಭಿಸಿ ಪ್ರತಿಯೊಂದು ಗ್ರಾಮವನ್ನು ಸಂದರ್ಶಿಸಿದರು. ಚೀಫ್ ಕಮಿಷನರು ಗ್ರಾಮಗಳಲ್ಲಿ ಸಂಚರಿಸಿ ಒಂದೊಂದು ಗ್ರಾಮದಲ್ಲಿ ೩-೩ ಮೈಲಿ ರಸ್ತೆಗಳನ್ನು ಬಡಾಯಿಸಿದ್ದನ್ನೂ ಕೂಲಂಕಷವಾಗಿ ನೋಡಿಕೊಂಡರು. ಅನಂತರ ಅಪರಾಹ್ನ ೩ ಗಂಟೆಗೆ ಶಿರಂಗಾಲ ಗ್ರಾಮದ ಸಹಕಾರಿ ಕಟ್ಟಡದಲ್ಲಿ ಸಭೆ ಸೇರಿದಾಗ ಚೀಫ್ ಕಮಿಷನರೂ, ಎಲ್ಲಾ ಅಫೀಸರುಗಳೂ, ಕೌನ್ಸಿಲ್ ಮೆಂಬರುಗಳೂ ಈ ಹತ್ತು ಗ್ರಾಮಗಳಲ್ಲಿ ನಡೆಸಿದ ಉತ್ತಮ ರೀತಿಯ ಕೆಲಸಗಳನ್ನು ಪ್ರಶಂಸಿದರು. ಅಂದಿನ ಸಭೆಗೆ ಸಾಧಾರಣ ಎರಡು ಸಾವಿರ ಜನರು ನೆರೆದಿದ್ದರು. ಗ್ರಾಮಗಳ ಪ್ರವೇಶಭಾಗಗಳಲ್ಲಿ ದೊಡ್ಡ ದೊಡ್ಡ ಚಪ್ಪರಗಳನ್ನು ಹಾಕಿದ್ದು ಬೀದಿಗಳು ತಳಿರುತೋರಣಾದಿಗಳಿಂದ ಅಲಂಕರಿಸಲ್ಪಟ್ಟ ಸಣ್ಣ ಸಣ್ಣ ಪಟ್ಟಣಗಳಂತೆ ತೋರಿಬರುತ್ತಿದ್ದವು. ಹೊಸ ಚೈತನ್ಯ ತುಂಬಿತು.

ಸರ್ವರನ್ನು ಸ್ವಾಗತಿಸುತ್ತಾ ಶ್ರೀ. ಕಾಳೇಗೌಡರು ಈ ರೀತಿ ಕೆಲಸದ ವರದಿಯನ್ನೊಪ್ಪಿಸಿದರು.

ಕಳೆದ ವರ್ಷದಿಂದ ಪ್ರಾರಂಭಿಸಿ ಈ ವರ್ಷದ ವರೆಗೆ ಎರಡು ಸಾರಿ ಈ ಹಳೆಕಣಿವೆ ಹೋಬಳಿಯ ಹತ್ತು ಗ್ರಾಮಗಳಲ್ಲಿ ಅಲ್ಲಿಯ ಸಹಕಾರ ಸಂಘಗಳ ಆಶ್ರಯದಲ್ಲಿ ಸಾಮೂಹಿಕ ಕೆಲಸವನ್ನು ಮಾಡಿರುವುದು ನಿಮಗಳಿಗೆಲ್ಲರಿಗೂ ತಿಳಿದ ವಿಷಯವಾಗಿದೆ. ಅನೇಕ ವರ್ಷಗಳ ಹಿಂದೆ ಕೂಡಿಗೆ ಗ್ರಾಮದಲ್ಲಿಯೂ, ಗೀಳಟನೀ ಇಸವಿಯಲ್ಲಿ ಹೆಬ್ಬಾಲೆ ಗ್ರಾಮದಲ್ಲಿಯೂ ನಮ್ಮ ಸಹಕಾರ ಸಂಘಗಳ ರಿಜಿಸ್ಟ್ರಾರವರು ಈ ರೀತಿಯ ಕೆಲಸಗಳನ್ನು ಮಾಡಿ ಅನುಭವ ಪಡೆದ ನಂತರ ಕಳೆದ ವರ್ಷ ಮತ್ತು ಈ ವರ್ಷವೂ ಸಹ ಅವರ ಸಲಹೆಯಂತೆ ಹತ್ತು ಗ್ರಾಮಗಳಲ್ಲಿ ಕೆಲಸ ಮಾಡಿರುತ್ತೇವೆ. ನಮ್ಮ ಕೆಲಸಗಳನ್ನು ಸುಸೂತ್ರವಾಗಿ ನಡೆಸಲು ಸಹಾಯಕೊಟ್ಟ ರಿಜಿಸ್ಟ್ರಾರ್ ಮತ್ತು ಅವರ ಸಿಬ್ಬಂದಿಗಳಿಗೂ ಇತರ ಎಲ್ಲಾ ಆಫೀಸರುಗಳಿಗೂ ವಂದನೆಗಳು.

ಈ ವರ್ಷ ತಾ. ೨೯-೮-೪೯ರಿಂದ ಕೆಲಸ ಪ್ರಾರಂಭಿಸಿ ತಾ. ೫-೯-೪೯ರ ವರೆಗೆ ಕೆಲಸ ನಡೆಸಿದ್ದರ ಫಲಿತಾಂಶವು ಚೆನ್ನಾಗಿ ಕಂಡುಬಂದದ್ದರಿಂದ ರಿಜಿಸ್ಟ್ರಾರರವರ ಸಲಹೆಯಂತೆ ಪುನಃ ತಾ. ೧೨-೯-೪೯ರ ವರೆಗೆ ಕೆಲಸ ಮುಂದರಿಸಿದ್ದಾಗಿದೆ.

ಈ ವರ್ಷ ಒಟ್ಟು ಹತ್ತು ಗ್ರಾಮಗಳಲ್ಲಿ ೨೦ ಮೈಲು ೫ ಫರ್ಲಾಂಗ್ ರಸ್ತೆಯನ್ನೂ ೫೩ ಎಕರೆಗಳ ಕಾಡು ನಿರ್ಮೂಲವನ್ನೂ ಮಾಡಲು ಒಟ್ಟು ೫,೫೦೦ ಜನರ ಕೆಲಸವೂ ಆಗಿರುವುದು. ಈ ಕೆಲಸಗಳಿಗೆ ಹಣದ ಬೆಲೆ ಕಟ್ಟುವುದಾದರೆ ೮ ಸಾವಿರ ರೂಪಾಯಿ ಅಂದಾಜು ಕಟ್ಟಬಹುದು. ಇಂಥಾ ಕೆಲಸಗಳನ್ನು ಜಯಪ್ರದವಾಗಿ ಮಾಡುವುದೇ ವಿವಿಧೋದ್ದೇಶ ಸಹಕಾರ ಸಂಘಗಳ ಮುಖ್ಯ ಕೆಲಸನೆಂದು ಹೇಳಬಹುದು. ಮುಂದಿನ ವರ್ಷಗಳಲ್ಲಿ ಇದಕ್ಕಿಂತಲೂ ಇಮ್ಮಡಿಯಾಗಿ ಕೆಲಸ ನಡೆಸುವ ಭರವಸೆ ನಮಗೆ ಇದೆ. ಹೆಬ್ಬಾಲೆ ಗ್ರಾಮಸ್ಥರು ಮುಂದಿನ ವರ್ಷದಲ್ಲಿ ಹೆಚ್ಚಿನ ಉತ್ಸಾಹತೋರಿಸುವರೆಂದು ನಿರೀಕ್ಷಿಸಲಾಗಿದೆ.

ಚೀಫ್ ಕಮಿಷನರವರು ಕಳೆದ ವರ್ಷ ಹೆಬ್ಬಾಲೆಯಲ್ಲಿ ಕ್ಯಾಂಪ್‌ಮಾಡಿ ನಮ್ಮ ಗ್ರಾಮಗಳನ್ನು ಸಂದರ್ಶಿಸಿ ನಮಗೆ ತುಂಬಾ ಸಹಾಯಮಾಡಿದ್ದಕ್ಕೆ ನಾವು ಚಿರಋಣಿಗಳಾಗಿದ್ದೇವೆ. ಹೆಬ್ಬಾಲೆ ಆಸ್ಪತ್ರೆ, ಹೆಬ್ಬಾಲೆ, ತೊರೆನೂರು, ಸಿರಂಗಾಲ ಶಾಲಾ ಮತ್ತು ಪಂಚಾಯಿತಿ ಕಟ್ಟಡಗಳಿಗೂ ಚರಂಡಿಗಳಿಗೆ ಕಲ್ಲುಹಾಸಲಿಕ್ಕೂ ಸಹಾಯಕೊಟ್ಟದ್ದಕ್ಕೂ ಅವರಿಗೆ ಎಷ್ಟು ವಂದಿಸಿದರೂ ಸಾಲದು. ಇದರಂತೆಯೇ ಬಹು ಪ್ರಾಮುಖ್ಯವಾದ ನೀರಿನ ಸರಬರಾಯಿಯನ್ನೂ ಸಹ ಒದಗಿಸಿಕೊಡುವರಾಗಿ ನಂಬುತ್ತೇವೆ. ಮೂರು ಗ್ರಾಮಗಳ ಬಾಕಿ ಇರುವ ಚರಂಡಿ ಕೆಲಸವನ್ನು ಪೂರೈಸುವುದಕ್ಕೆ ತಕ್ಕಂಥ ಸಹಾಯ ಕೊಡಿಸಬೇಕಾಗಿ ಕೇಳಿಕೊಳ್ಳುತ್ತೇವೆ.'

ನಂತರ ಚೀಫ್ ಕಮಿಷನರು ಭಾಷಣಮಾಡುತ್ತಾ ರಿಜಿಸ್ಟ್ರಾರ್‌ರವರ ನಿ ರ್ದೇ ಶ ನ ದಿಂ ದ ಸಾಗಿದ ಸಾಮೂಹಿಕ ಕೆಲಸವು ಮಹತ್ತಾದುದೆಂದೂ, ಇದೇ ಮಾರ್ಗವನ್ನೂ ಪದ್ಧತಿಯನ್ನೂ ಅನುಸರಿಸಿ ಮುಂದಕ್ಕೆ ಕೆಲಸ ಮಾಡಬೇಕೆಂದೂ ಹೇಳಿ ಈ ವರೆಗೆ ಹೋಬಳಿಯ ಗ್ರಾಮಗಳು ಮಾಡಿದ ಕೆಲಸವನ್ನು ಶ್ಲಾಘಿಸಿದರು. ಅಲ್ಲದೆ ಹಾರಂಗಿ ಹೊಳೆಯಿಂದ ನಾಲೆಯ ಮೂಲಕ ವ್ಯವಸಾಯಕ್ಕೆ ನೀರು ಹಾಯಿಸುವ ಮತ್ತು ಹೆಬ್ಬಾಲೆ ಗ್ರಾಮಕ್ಕೆ ನೀರಿನ ಸರಬರಾಯಿಯ ಕಾರ್ಯವು ಇಂಡಿಯಾ ಸರಕಾರದ ಮಂಜೂರಾತಿ ದೊರೆತ ಕೂಡಲೆ ಆಚರಣೆಯಲ್ಲಿ ತರಲಾಗುವುದೆಂದೂ, ಗ್ರಾಮಾಭಿವೃದ್ಧಿ ಕೆಲಸಕ್ಕಾಗಿ ಇಬ್ಬರು ಆಫೀಸರುಗಳನ್ನು ನೇಮಿಸಲಾಗುವುದೆಂದೂ, ದೇಶದ ಅಭ್ಯುದಯಕ್ಕಾಗಿ ಅವಶ್ಯವಿರುವ ಕಾಲೇಜು ಸ್ಥಾಪನೆಯಾಗಿದೆಯೆಂದೂ ಮುಂದೆ ವಿದ್ಯುಚ್ಛಕ್ತಿಯ ನಿರಂತರ ಸರಬರಾಯಿಯು ವ್ಯವಸ್ಥೆಯಾಗುವುದೆಂದೂ, ಸಮಾಜ ಕಲ್ಯಾಣದೃಷ್ಟಿಯಿಂದ ಶಾಶ್ವತವಾಗಿ ಸಾಧನನಿರೋಧ ಕಾರ್ಯವನ್ನು ಕೈಗೊಳ್ಳಲಾಗಿದೆಯೆಂದೂ ಹೇಳಿದರು.

ಗ್ರಾಮ ಪುನರುಜ್ಜೀವನ.

ನಮ್ಮ ಹಳ್ಳಿಗಳು ಬಡತನದ ತವರು ಮನೆಗಳು. ಬೆಳಗಿನಿಂದ ಸಾಯಂಕಾಲದ ವರೆಗೆ ದುಡಿದರೂ ರೈತರಿಗೆ ಹೊಟ್ಟೆ ತುಂಬ ಆಹಾರವಿಲ್ಲ, ಮೈ ತುಂಬ ಬಟ್ಟೆ ಇಲ್ಲ. ವಾಸಿಸಲು ಯೋಗ್ಯವಾದ ಮನೆಗಳಿಲ್ಲ. ಹಳ್ಳಿಗಳ ಬಡತನವನ್ನು ವರ್ಣಿಸುವುದು ಅಸಾಧ್ಯವಾಗಿದೆ. ನಮ್ಮ ದೇಶದ ಹಳ್ಳಿಗಳಲ್ಲಿರುವಷ್ಟು ದಾರಿದ್ರ್ಯವು ಪ್ರಪಂಚದ ಮತ್ತಾವ ಭಾಗದಲ್ಲಿಯೂ ಇಲ್ಲ. ನಮ್ಮ ರೈತರು ಋಣದಲ್ಲಿಯೇ ಹುಟ್ಟಿ, ಋಣದಲ್ಲಿಯೇ ಬೆಳೆದು ಋಣದಲ್ಲಿಯೇ ಸಾಯುತ್ತಾರೆ.

ರೈತರ ಆರ್ಥಿಕ ಪರಿಸ್ಥಿತಿಯನ್ನು ನಿವಾರಿಸಲಸಾಧ್ಯವೆಂದು ತೋರುವ ರೋಗಗಳು. ಒಂದನೇ ಕಾರಣವೆಂದು ಹೇಳಬಹುದು ಈ ರೋಗಗಳಿಂದ ನಂಳಿ ನಮ್ಮ ಹಳ್ಳಿಯ ಜನರಲ್ಲಿ ಈಗ ಶಕ್ತಿ ಕುಂದಿದೆ. ಉತ್ಸಾಹ ಅಡಗಿದೆ. ಅವಿದ್ಯೆ, ಅಜ್ಞಾನ, ಅಂಧಕಾರ ಇವು ಜನರನ್ನು ಆವರಿಸಿದೆ. ಹಿಂದಿನ ಮೂಢ ಚಾರಗಳನ್ನೇ ಜನರು ಅಜ್ಞಾನದಿಂದ ಅನುಸರಿಸುತ್ತಿರುವರು. ಮೌಢ್ಯತೆ ಆರ್ಥಿಕ ಜೀವನವನ್ನು ಉತ್ತಮ ಪಡಿಸುವುದಕ್ಕೆ ಅವಕಾಶ ಕೊಡುತ್ತಿಲ್ಲ. ಯಾವ ಹಳ್ಳಿ ವಾಸವನ್ನು ಸ್ವರ್ಗ ಸಮಾನವೆಂದು ಸಾರಲಾಗುತ್ತಿದೆಯೋ ಅಂಥ ಹಳ್ಳಿಗಳು ಈಗ ಪಾಪ ಕೂಪಗಳಾಗಿ ಕೇವಲ ಅಶಕ್ತರಿಗೂ, ವೃದ್ಧರಿಗೂ, ಅಬಲೆಯರಿಗೂ ವಾಸ ಸ್ಥಾನಗಳಾಗಿವೆ. ಆಧುನಿಕ ನಾಗರೀಕತೆಯ ಮನಸೋತು ಹಳ್ಳಿಯ ತರುಣರು ನಗರಗಳಿಗೆ ಹೋಗಿ ಸಲಸುತ್ತಿದ್ದಾರೆ! ವಿದ್ಯಾವಂತರೂ, ಧನಿಕರೂ, ಸುಸಂಸ್ಕೃತರೂ ಆದ ಹಳ್ಳಿಯ ತರುಣರಿಗೆ ಹುಟ್ಟಿದ ಊರು ಅಸಹ್ಯವಾಗುತ್ತಿದೆ. ಹಳ್ಳಿಗಳಿಗೆ ಹೋಗಬೇಕೆಂದರೆ ಅವರಿಗೆ ಬೇಜಾರು. ಹೀಗಿರುವಾಗ ಹಳ್ಳಿಗಳು ಹೇಗೆ ಉದ್ಧಾರವಾಗಬೇಕು? ಕಷ್ಟಪಟ್ಟು ದುಡಿಯುತ್ತಿರುವ ಅವರ ಸೋದರರು ಸೋದರಿಯರು ಹೇಗೆ ಅಭಿವೃದ್ಧಿ ಹೊಂದಬೇಕು? ಹೀಗೆ ವಿದ್ಯಾವಂತರು [illegible] ದವರು ಹಳ್ಳಿಗಳನ್ನು ಬಿಟ್ಟಿರುವುದರಿಂದ ಹಳ್ಳಿಗಳು [illegible] ಹಳ್ಳಿಗಳ ಉದ್ಧಾರಕ್ಕಾಗಿ ಲು ವಿದ್ಯಾವಂತರು [illegible] ಉತ್ಸಾಹ [illegible] ಗ್ರಾಮಗಳಲ್ಲಿ ನೆಲೆಸಬೇಕಾಗಿದೆ. ಅವರು ಹಳ್ಳಿಯ ಜನರ [illegible] ಚೆನ್ನಾಗಿ [illegible] ವಂತೆ ವ್ಯವಸಾಯದ [illegible] ನಸುನಸು [illegible] ಮಾರಿ ತಮ್ಮ ನಷ್ಟಗಳನ್ನು [illegible] ಯಾವ ಉಪಾಯಗಳಿಂದ [illegible] ವರು ತಮ್ಮ ಸಂಪಾದನೆಯನ್ನು ಉತ್ತಮ ಪಡಿಸಿಕೊಳ್ಳಬಹುದೆಂಬ [illegible] ಬೇಕು. ಇಂಥಾ ಉತ್ತಮ ಪ್ರಚಾರ ಕಾರ್ಯವು [illegible] ಪ್ರೀತಿಯಿಂದ ಕೆಲಸ ಮಾಡುವ [illegible] ವಿದ್ಯಾವಂತರಿಂದಲೇ ಸಾಧ್ಯ.

ಪ್ರತಿ ಹಳ್ಳಿಯಲ್ಲಿಯೂ ಪ್ರಥಮ ಕ ವ್ಯವಸಾಯ [illegible] ಪ್ರತಿಯೊಂದು [illegible] ಶಾಲೆಯಲ್ಲಿಯೂ ವ್ಯವಸಾಯ ಬೋಧನಾ ಕ್ರಮವನ್ನು ಜಾರಿಗೆ ತರಬೇಕು. ಅನಂತರ ವ್ಯವಸಾಯಕ್ಕೆ ಸಂಬಂಧಪಟ್ಟ ಪ್ರತಿಯೊಂದು ಶಾಲೆಯಲ್ಲಿಯೂ ಹಬ್ಬ [illegible] ಗಳ [illegible] ರೆಸುವಂತೆ [illegible] ವಿಜ್ಞಾನದ ಕೃಪೆಯಿಂದ ಉತ್ತಮವಾಗಿ ಬೆಳೆ [illegible] ತೆಗೆಯುವ ವಿಧಾನಗಳನ್ನು ರೈತರಿಗೆ ಬೋಧಿಸಬೇಕು. [illegible] ವ್ಯವಸಾಯ ಕೃಪೆಯಲ್ಲಿ ಹೆಚ್ಚು ಅನುಭವವುಳ್ಳ ಅಧಿಕಾರಿಗಳು ಮತ್ತು [illegible] ಮನುಷ್ಯರುಗಳೂ ದೇಶದ ಅನೇಕ ಭಾಗಗಳಲ್ಲಿ ಸಂಚಾರ ಮಾಡಿ ಉದಾಹರಣೆ ಮತ್ತು ಪ್ರದರ್ಶನ ಮೂಲಕ ರೈತರಲ್ಲಿ ಹೆಚ್ಚು ಜ್ಞಾನ ಪ್ರಚಾರ ಮಾಡಬೇಕು.

ರೈತರು ವಿದ್ಯಾವಂತರಾದರೆ ಭೂಮಿಯಲ್ಲಿ ಹೆಚ್ಚು ಬೆಳೆಯನ್ನು ಬೆಳೆಯುವರು, [illegible] ತತ್ವ ಪ್ರಚಾರ ಯೋಗ್ಯವಾಗಿ ನಡೆದರೆ ಬೆಳೆದ ಪೈರಿಗೆ ಬೆಲೆಯನ್ನು ಅಧಿಕವಾಗಿ ತೆಗೆಯಲು ಅನೇಕ ಸಲ ಬೋಧನಾ ಮಾರ್ಗಗಳು ಗೊತ್ತಾಗುವುವು. ಗ್ರಾಮಗಳು ಈ ರೀತಿ ಸ್ವಾವಲಂಬಿಗಳಾಗಿ ದುಡಿದರೆ ಆದೇ ರಾಮರಾಜ್ಯದ ಅಡಿಗಲ್ಲಾಗುವದು.

ಪಿ. ಎಂ. ನರೇಂದ್ರ (ವಿದ್ಯಾರ್ಥಿ)

THE WARDEN INSURANCE CO., Ltd.

Head Office. Bombay

LIFE, FIRE, ACCIDENT, MOTOR & W. C. INSURANCES.

Managing Director; – S. H. THAKER.

Business in force	Rs. 5,00,00,000
Assets	,, 1,00,00,000
Income	,, 35,00,000

Also **LOCAL MANAGERS OF**

THE LONDON GUARANTEE & ACCIDENT CO, Ltd.

(Incorporated in England)

Assets Exceed Rs. 10,00,00,000

a Subsidiary Company of

THE PHOENIX ASSURANCE CO. Ltd.

(One of the Largest Assurance Companies in the World)

Assets Exceed Rs. 45,00 00,000

Transact **FIRE INSURANCE**

Enquiries for representation solicited.

Apply to,

Chief Agency Office *Virajpet (Coorg)* or **A. S. Aiyappa,** *Branch Secretary, Gandhinagar,* *BANGALORE CITY*

ಓದುಗರ ಓಲೆಗಳು.

ಬಸ್ ಲೈಸನ್ಸುಗಳು

ಬಸ್ ಲೈಸೆನ್ಸುಗಳು ನಿಶ್ಚಿತ ವೇಳೆಯಲ್ಲಿ ಸರಿಯಾಗಿ ಹೋಗಬೇಕು, ... ಯಾಗಿ ಬರಬೇಕು, ... ಅನುಕೂಲ. ಆದರೆ ... ಬಸ್ಸುಗಳು ... ಇಲ್ಲ. ನಾಪೋಕ್ಲಿನಿಂದ ಹೊರಡುವ ಬಸ್ಸು ೭-೪೫ಕ್ಕೆ ಹೊರಡಬೇಕು. ಸಾಯಂಕಾಲ ೫ಗಂಟೆಗೆ ಬರಬೇಕು. ವಾರದಲ್ಲಿ ಎಷ್ಟೋ ಸಲ ಬಸ್ಸು ರಾತ್ರೆ ೯-೧೦ ಗಂಟೆಗೆ ಬರುವದಿದೆ. ಇದರಿಂದ ಪ್ರಯಾಣಿಕರಿಗೆ ವಿಪರೀತ ತೊಂದರೆಯಾಗುತ್ತಿದೆ. ಬಸ್ಸುಗಳು ಹಳೆಯವಾಗಿ ಈ ರೀತಿ ತೊಂದರೆಯಾಗುವದಾದರೆ ಹಳೆ ಬಸ್ಸುಗಳನ್ನು ಓಡಿಸದಂತೆ ಅಜ್ಞಾಪಿಸುವದು ಯೋಗ್ಯ. ಸಂಬಂಧಿಸಿದ ಅಧಿಕಾರಿಗಳು ಇದನ್ನು ಸರಿಪಡಿಸುವರೇ ?

ಬಿ. ಕೆ. ಎಸ್.

ಖಾನೂನು ಕಾಗದದಲ್ಲಿ ?

ಸರಕಾರವು ಅಕ್ಕಿಯನ್ನು ಖಾಸಗಿಯಾಗಿ ಮಾರಾಟ ಮಾಡ ಕೂಡದೆಂದೂ, ಹರಿ, ಅವಲಕ್ಕಿ ಮಾಡಿ ಮಾರಾಟ ಮಾಡುವುದು ಅಪರಾಧ ದೆಂದೂ ವಿಧಿಸಿ ನಿಶ್ಚಿತ ಅಕ್ಕಿ ಡಿಪೋಗಳನ್ನಿಟ್ಟು ಅಕ್ಕಿ ನಿಯಂತ್ರಣ ಮಾಡುತ್ತಿರುವದು ಸರಿಯಷ್ಟೆ. ಆದರೆ ಅಲ್ಲಲ್ಲಿ ಅಕ್ಕಿ ಖ ಸಗಿಯಾಗಿ ಹಿಂದಿನ ಬೆಲೆಗೆ ಮಾರಾಟ ನಡೆಯುತ್ತಿದೆ. ಅವಲಕ್ಕಿ ಮಾರಾಟವೂ ಇದೆ. ಸರಕಾರಕ್ಕೆ ಈ ವರೆಗೆ ನಿಯಮ ಬಾಹಿರ ಮಾರಾಟ ಎತ್ತ ದೊರೆಯದಿರುವುದು ಆಶ್ಚರ್ಯಕರ. ಇನ್ನಾದರೂ ಇಂಥಾ ಕಳ್ಳ ಸಂತೆಗೆ ಎಡೆ ಕೊಡದಂತೆ ಮುತುವರ್ಜಿ ವಹಿಸುವಂತಾಗಿ ನಂಬಲಾಗಿದೆ.

'ಪಟ್ಟಣಿಗ'

ದನಕರುಗಳ ಮೇವು.

ಕೊಡಗಿನಲ್ಲಿ ದನಗಳಿಗೆ ಸರಿಯಾದ ಮೇವಿಲ್ಲದೆ ಬಡ ವಾಗುವದನ್ನು ಕಣ್ಣಾರೆ ಕಂಡಿದ್ದೇವೆ. ಫಾರೆಸ್ಟ್ ಬೆಳೆಯುವ ಪ್ರಯತ್ನವನ್ನೂ ಕೈಕೊಂಡಿದ್ದಲ್ಲಿಯೇ ಇವ ಕೆಲವು ಗ್ರಾಮಗಳಲ್ಲಿ ದನ ಮೇಯಿಸಲಿಕ್ಕೆ ಸ್ಥಳವೇ ಇಲ್ಲದ ಗಿದೆ. ಫಾರೆಸ್ಟಿನ ಸಮೀಪದಲ್ಲಿರುವವರ ದನಗಳು ಮೇಯುವುದಾಗಿ ಫಾರೆಸ್ಟ್ ಪ್ರವೇಶಿಸಿದರೆ ಅವಕ್ಕೆ ನಿರ್ಬಂಧ ಮುಖ್ಯವಾಯವಾಗಿ ಪ್ರತಿ ಗ್ರಾಮಗಳಲ್ಲಿ ಹುಲ್ಲುಗಾವಲು ದನಗಳಿಗೆ ಇರುವಂತೆ ಸರಕಾರ ಏರ್ಪಡಿಸಬೇಕು. ಇಲ್ಲದೆ ಫಾರೆಸ್ಟಿನಲ್ಲಾದ ದನಗಳನ್ನು ಮೇಯಿಸುವ ಅನು ಮಾಡಬೇಕು.

ಕೆ. ಎ. ಎಸ್.

ಕೊಡಗಿನ ಹೋಟೆಲುಗಳು.

ಹೋಟೆಲು ಎಂದು ಕರೆಸಿಕೊಳ್ಳುವ ಯೋಗ್ಯತೆ ಇರುವ ಭೋಜನ ಗೃಹಗಳು ಕೊಡಗಿನಲ್ಲಿ ಬಹು ವಿರಳ. ಮಡಿಕೇರಿ ಕೊಡಗಿನ ರಾಜಧಾನಿಯಾದರೂ ಉತ್ತಮ ಹೋಟೆಲೆಂಬುದಿಲ್ಲ. ಆದರೆ ಕೊಡಗಿನಲ್ಲಿರುವಷ್ಟು ಹೋಟೆಲುಗಳ ಸಮ್ಯೆ ಸಾಧಾರಣ ಬೇರೆಡೆ ಇರಲಾರದು. ಈ ಹೋಟೇಲುಗಳ ಜನರಿಗೆ ಯೋಗ್ಯ ಆಹಾರ ಪಾನೀಯಗಳ ಏರ್ಪಾಡು ಮಾಡುವ ಬದಲು ರೋಗಗಳ ತವರು ಮನೆಗಳಾಗಿವೆ. ಸರಕಾರದವರು ಹೋಟೇಲುಗಳ ಸಂಖ್ಯೆ ಹೆಚ್ಚಿಸಲು ಬಿಡದೆ ಪ್ರತಿ ಪೇಟೆಯಲ್ಲಿ ನಿಶ್ಚಿತ ಸಂಖ್ಯೆಯ ಕೆಲವು ಉತ್ತಮ ಹೋಟೇಲುಗಳಿರುವಂತೆ ನಿಯಂತ್ರಿಸಬೇಕಾಗಿದೆ. ಇಲ್ಲವೇ ಅಧಿಕಾರಿಗಳು ಶ್ರಮ ವಹಿಸಿ ಈಗಿರುವ ಹೋಟೆಲುಗಳು ಶುಚಿಯಾಗಿರುವಂತೆಯೂ, ಯೋಗ್ಯ ಆಹಾರ ಕೊಡಲ್ಪಡುವಂತೆಯೂ ನೋಡಬೇಕು. ಹಾಗೆ ಮಾಡುವರೇ?

ಎಮ್. ಎಸ್.

ಚೀಫ್ ಕಮೀಷನರಲ್ಲಿ

ನೀವು ಮೊನ್ನೆಯಾಗಿ ಪೊಳ್ಳಿಬೆಟ್ಟದ ಕೂಲಿಗಾರರ ಲೈನನ್ನು ಸಂದರ್ಶಿಸಿದ್ದೀರಷ್ಟೆ. ಗರೀಬರ ಮೇಲೆ ತಮಗೆ ಪ್ರೀತಿ ಇರುವ ನೀವು ದಯವಿಟ್ಟು ನಿಮ್ಮ ಅಧೀನದಲ್ಲಿ ದುಡಿಯುತ್ತಿರುವ ಪೋಲೀಸರ ವಾಸ ಸ್ಥಳವಾದ ಪೋಲೀಸ್ ಲೈನ್‌ಗಳನ್ನೊಮ್ಮೆ ಸಂದರ್ಶಿಸಬೇಕು. ನಿಮಗೆ ಆಗ ಅವರ ಕಷ್ಟ ಮತ್ತು ಜೀವನದ ಮಾದರಿ ತಿಳಿಯುವದು. ದೂರ ಹೋಗುವದು ಬೇಡ, ರಾಜಧಾನಿ ಮಡಿಕೇರಿಯ ಪೋಲೀಸ್ ಲೈನನ್ನು ನೋಡಿದರೆ ಸಾಕು. ಒಂದೇ ಕೊಟಡಿಯಲ್ಲಿ ಅಡಿಗೆ ಭೋಜನ, ಶಯನ ಮಾಡಿಕೊಂಡು ಸಂಸಾರ ನಡೆಸಬೇಕಾಗಿರುವ ಇವರ ಜೀವನವನ್ನು ನೀವು ನೋಡಿ ತಿಳಿಯಬೇಕಾಗಿ ವಿನಂತಿ.

'ನೋಡಿ ನೊಂದವ'

ವ್ಯವಸಾಯ ಇಲಾಖೆ.

ಈ ಇಲಾಖೆ ಸ್ವಲ್ಪ ಚೇತರಿಸಿಕೊಂಡಂತೆ ಕಾಣುತ್ತದೆ. ಆದರೆ ಇದರಿಂದ ಸಮರ್ಪಕ ಕೆಲಸ ನಡೆಯುತ್ತಿಲ್ಲ. ನೇಮಕವಾದ ಸಿಬ್ಬಂದಿಗಳಲ್ಲಿ ಹಲವರಿಗೆ ವ್ಯವಸಾಯದ ಮಾಹಿತಿ ಇಲ್ಲವೆಂದು ನನ್ನ ಅನುಭವಕ್ಕೆ ಬಂದಿದೆ. 'ಪ್ಲಾಂಟ್ ಪ್ರೊಟೆಕ್ಷನ್' ಯೋಜನೆಯಿಂದ ಸಂಬಳ ಪಡೆಯುವ ನೌಕರರನ್ನು ಬಿಟ್ಟು ಯಾರಿಗೆ ಲಾಭವಾಗಿದೆಯೋ ದೇವರೇ ಬಲ್ಲ. ಈಗ ಲೂ ಕಾಲಿಗೆ ಬೂಟ್ ಹಾಕಿಕೊಂಡು ಗದ್ದೆ ತಿರುಗುವದಾದರೆ ಹೇಗೆ? ಗದ್ದೆಯಲ್ಲಿರುವ 'ಪ್ಲೋಟ್'ಗಳನ್ನು ಪರೀಕ್ಷಿಸಲು ಗದ್ದೆಗೆ ಇಳಿಯಲಾರರು. ಈ ರೀತಿಯಾದರೆ ಪ್ರಯೋಜನವಿಲ್ಲ. ರೈತರೊಡನೆ ಬೆರೆತು ವರ್ತಿಸಬೇಕು. ಕಳೆದ ವರ್ಷ ಯೋಗ್ಯ ರೀತಿ ಗೊಬ್ಬರ ಹಾಕಿದ ಬಹುಮಾನಾರ್ಹರಾದವರಿಗೆ ಬಹುಮಾನ ದೊರೆಯದೆ ಬೇರೆಯವರಿಗೆ ದೊರೆತ ನಿದರ್ಶನಗಳಿವೆ. ಸ್ವಸ್ಥಿಕೆ ಹೊಂದಿದ್ದರಿಂದ ಕಾರಣದಿಂದ ವಿದ್ಯಾವಂತ ರೈತರನ್ನು ಇಲಾಖೆಯಲ್ಲಿ ಕೆಲಸಕ್ಕೆ ಸೇರಿಸಿಕೊಂಡರೆ ಅವರಿಗೆ ವ್ಯವಸಾಯದ ಮಾಹಿತಿ ಏನು ಗೊತ್ತು ?

ರೈತ.

ಪಾರಾಣೆಗೆ ಅಂಚೆ ಆಫೀಸು.

ಇಲ್ಲಿಗೊಂದು ಟಪಾಲು ಆಫೀಸು ಬೇಕೆಂದು ಕಳೆದ ಒಂದು ವರ್ಷದಿಂದ ಬೇಡಿಕೆಗಳು ಹೋಗುತ್ತಿದ್ದರೂ ಈ ವರೆಗೆ ಯಾವುದೊಂದೂ ಆಗಿರುವುದಿಲ್ಲ. ಪಾರಾಣೆಗುಲ್ಲಿ ಹೈ. ಎಲಿಮೆಂಟರಿ ಶಾಲೆ ಇದೆ. ಸಹಕಾರ ಇನ್ಸ್‌ಪೆಕ್ಟರ್ರು, ಯೂನಿಯನ್ ಆಫೀಸರುಗಳಿದ್ದು ಬಹಳ ಪಟ್ಟಣವಾಗಿದೆ. ಇಲ್ಲಿಗೆ ಒಂದು ಪೋಸ್ಟಾಫೀಸ್ ಅತ್ಯಗತ್ಯ. ಇನ್ನಾದರೂ ಸಂಬಂಧಿಸಿದ ಅಧಿಕಾರಿಗಳು ಇಲ್ಲಿ ಒಂದು ಆಫೀಸನ್ನು ತೆರೆದು ಜನರಿಗೆ ಹಿತಮಾಡಬೇಕಾಗಿ ಪ್ರಾರ್ಥನೆ.

'ಓ'

ಕೊಡಗಿನ ಆಸ್ಪತ್ರೆಗಳು.

ಯಾವ ಆಸ್ಪತ್ರೆ ನೋಡಿದರೂ ಸ್ಥಳಾಭಾವವಿದೆ. ನಡೆಯಲು ಸ್ಥಳವಿಲ್ಲದಷ್ಟು ಜನರನ್ನು ಆಸ್ಪತ್ರೆಯೊಳಗೆ ಸೇರಿಸಿಕೊಳ್ಳುತ್ತಾರೆ. ಅದಕ್ಕೆ ಸರಿಯಾದ ಸಿಬ್ಬಂದಿ ಇಲ್ಲದೆ ಕಾಯಿಲಸ್ಥರ ಗೋಳು ಹೇಳತೀರದು. ಈ ರೀತಿ ಸೇರಿಸಿಕೊಳ್ಳುವದ ಎರಡು ದೃಷ್ಟಿಯಿಂದಲೂ ಹಾನಿ. ಕಾಯಿಲಸ್ಥರಿಗೂ ಆಸ್ಪತ್ರೆಯಲ್ಲಿಯ ಇತರ ಕಾಯಿಲೆಯವರಿಗೂ ತೊಂದರೆ! ಆದ್ದರಿಂದ ಬೇರೆ ಖಾಸಗಿ ಆಸ್ಪತ್ರೆಗಳಿಂದ ವೈದ್ಯಕೀಯ ಸಹಾಯ ಪಡೆಯಲಾರದವರನ್ನೇ ಸೇರಿಸಿಕೊಳ್ಳುವ ಏರ್ಪಾಡು ಮಾಡುವದು ಹಿತವೆನಿಸದೆ?

ಎಂ. ಎ.

ತೂಕುಮಡಿಕೆ!

ಮಡಿಕೇರಿಯಲ್ಲಿರುವ ಡ್ಯಾಂ ಫಾರಮಿನಿಂದ ಜನಕ್ಕೆ ಖರ್ಚಾದ ಹಣಕ್ಕನುಗುಣ ಜನತೆಗೆ ಲಾಭವಾಗಿಲ್ಲ. ಅನೇಕ ರಾಸುಗಳು ಸತ್ತು ವಿಪರೀತ ನಷ್ಟವಾಗಿದೆಯೆಂದೂ ಈಗಲೂ ನಷ್ಟವಾಗುತ್ತಿದೆಯೆಂದೂ ವರ್ತಮಾನವಿದೆ. ಇದರಿಂದ ಸರಕಾರಕ್ಕೆ ಒಟ್ಟು ನಷ್ಟ ಕಡಿಮೆ ೨೫ ಸಾವಿರವಾಗಿದೆಯೆಂದು ಮಾತಿದೆ. ಹೀಗಿರುವಾಗ ಪುನಹ ದನಗಳನ್ನು ತರಲು ಬೆಂಗಳೂರಿಗೆ ಹೋಗಿರುವದಾಗಿ ವರ್ತಮಾನವೂ ತೂತು ಕೊಡಿಕೆಗೆ ನೀರು ಹಾಕಿದಂತೆ ಸಾವಿರಾರು ರೂಪಾಯಿ ನಷ್ಟವಾದುದರ ಜೊತೆಗೆ ಪುನಹ ನಷ್ಟ ಮಾಡುವ ಯತ್ನವೇ? ಸರಕಾರದವರು ಸಾರ್ವಜನಿಕ ಹಣದ ದುರುಪಯೋಗ ಮಾಡುತ್ತಿರುವರೆನ್ನಬೇಕಾಗಿದೆ. ಡ್ಯಾರಿ ಫಾರಮಿಗೆ ಒಟ್ಟು ದನ ಮತ್ತು ಎಮ್ಮೆಗಳನ್ನು ಎಷ್ಟು ಖರ್ಚಿನಿಂದ ತರಲಾಯಿತು. ಅವುಗಳಲ್ಲಿ ಸಾಕಲು ಖರ್ಚೇನಾಯಿತು. ಅವುಗಳಲ್ಲಿ ಸತ್ತುವೆಷ್ಟು? ಹಾಲಿನ ಉತ್ಪತ್ತಿ ಏನು? ಈ ಮಡಿಕೆಗಾದ ನಷ್ಟವೇನು ? ಈ ಬಗ್ಗೆ ಯೋಗ್ಯ ಮಾಹಿತಿಯನ್ನು ಸಾರ್ವಜನಿಕ ಅವಗಾಹನೆಗೆ ಸಂಬಂಧಿಸಿದ ಅಧಿಕಾರಿಗಳು ಪತ್ರಿಕೆ ಮೂಲಕ ಪ್ರಕಟಿಸುವರೆ?

ನಿರೀಕ್ಷಕ.

ಮಡಿಕೇರಿ ಮುನ್ಸಿಪಲ್ ಆಫೀಸ್,

ಪ್ರಕಟಣೆ.

ಎಲೆಕ್ಟ್ರಿಕ್ ಲೈಟಿಂಗ್ ಮತ್ತು ಕುಡಿಯುವ ನೀರಿನ ಸರಬರಾಯಿಯ ವಿಷಯವಾಗಿ ಮುನ್ಸಿಪಾಲಿಟಿಯವರು ಸಾಕಷ್ಟು ಜಾಗರೂಕತೆಯಿಂದ ಕೆಲಸ ಮಾಡುತ್ತಿಲ್ಲವೆಂಬದಾಗಿ ವರ್ತಮಾನ ಪತ್ರಿಕೆಗಳಲ್ಲಿ ಲೇಖನಗಳು ಕಂಡು ಬರುತ್ತಿವೆ. ಇಂಥಾ ಲೇಖನಗಳಿಂದ ಜನರಲ್ಲಿ ತಪ್ಪು ಅಭಿಪ್ರಾಯ ಉಂಟಾಗಬಾರದೆಂಬ ಉದ್ದೇಶದಿಂದ ಈ ಕೆಳಗಿನ ಹೇಳಿಕೆಯನ್ನು ಪ್ರಕಟಪಡಿಸಿದೆ.

ಮುನ್ಸಿಪಾಲಿಟಿಯಲ್ಲಿ ದೀಪಗಳನ್ನು ಹೆಚ್ಚಿಸುವದಾಗಿ ಮುನ್ಸಿಪಲ್ ಕಮಿಟಿಯು ಕಂಪೆನಿಯ ಕಂಟ್ರಾಕ್ಟನ್ನು ತಾರೀಕು ೨೫-೭-೪೯ರಲ್ಲು ನಡೆದ ಮೀಟಿಂಗಿನಲ್ಲಿ ರದ್ದು ಪಡಿಸಿರುವುದಲ್ಲದೆ ಕಂಪೆನಿಯವರಿಂದ ರೂ. ೧೫,೦೦೦ ನಷ್ಟ ವಸೂಲಿ ಮಾಡಬೇಕೆಂಬದಾಗಿಯೂ ನಿರ್ಣಯಿಸಿದ ಮೇರೆಗೆ ಕಂಪೆನಿಯವರಿಗೆ ನೋಟೀಸು ಮಾಡಿದ್ದಲ್ಲದೆ ಕಂಪೆನಿಯವರು 'ನಮ್ಮ ಯಂತ್ರಗಳು ಮುರಿದು ಹೋದ ಪ್ರಯುಕ್ತ ದೀಪಗಳನ್ನು ಹೆಚ್ಚಿಸಲಿಕ್ಕಾಗಲಿಲ್ಲ. ಯಂತ್ರಗಳನ್ನು ಸರಿಪಡಿಸುತ್ತಿದ್ದೇವೆ. ಅವುಗಳು ಸರಿಯಾದ ಕೂಡಲೆ ಬೇಗನೆ ದೀಪಗಳನ್ನು ಹೆಚ್ಚಿಸುತ್ತೇವೆ' ಎಂದು ತಿಳಿಸಿರುತ್ತಾರೆ. ಅಕ್ಟೋಬರ್ ತಿಂಗಳಿನ ತಾ. ೧೫ ರೊಳಗಾಗಿ ಕಂಪೆನಿಯವರು ದೀಪಗಳನ್ನು ಹೆಚ್ಚಿಸಬಹುದೆಂಬ ನಿರೀಕ್ಷಣೆ ಇದೆ. ಅವರು ಹೆಚ್ಚುದಿದ್ದಲ್ಲಿ ಪಟ್ಟಣದ ಮುಖ್ಯವಾದ ಸ್ಥಳಗಳಲ್ಲಾದರೂ ಸೀಮೆ ಎಣ್ಣೆ ದೀಪಗಳನ್ನುರಿಸಲು ಏರ್ಪಾಡುಗಳನ್ನು ಮಾಡಲಾಗುವುದು.

೧೯೪೯ನೆಯ ಇಸವಿಯ ಬೇಸಿಗೆಯಲ್ಲಿ ಕುಡಿಯುವ ನೀರಿನ ಸರಬರಾಯಿಯು ತೃಪ್ತಿಕರವಾಗಿದ್ದಿತು. ಜಲಾಶಯದಲ್ಲಾಗಲಿ ಯಾ ನಳ್ಳಿಗಳಲ್ಲಾಗಲಿ ನೀರು ನಷ್ಟವಾಗದಂತೆ ಸಕಾಲದಲ್ಲಿ ನಳಿಗೆಗಳ ಮತ್ತು ಜಲಾಶಯಗಳೂ ರಿಪೇರಿ ಮಾಡಲ್ಪಡುತ್ತಿವೆ. ಕುಡಿಯುವ ನೀರಿನ ಸರಬರಾಯಿಯನ್ನು ಉತ್ತಮಗೊಳಿಸುವ ಉದ್ದೇಶದಿಂದ ಈ ವರ್ಷ ಬಜೆಟ್ಟಿನಲ್ಲಿ ರೂ ೨೨,೫೦೦ ನ್ನು ನೀರಾವರಿ ಕೆಲಸಗಳಿಗೆ ಬೇರೆ ಇಟ್ಟಿರುವುದಾಗಿದೆ.

ಈ ವರ್ಷ ಈ ಕೆಳಗೆ ಕಾಣಿಸಿದ ಕೆಲಸಗಳನ್ನು ಕೈಕೊಳ್ಳಲಾಗುವುದು.

೧. ಒಂದು ಹೊಸ ಬಾವಿಯನ್ನು ಕಟ್ಟಿಸಿ ಪವರ್ ಪಂಪಿನ ಮೂಲಕ ನೀರನ್ನು ಎತ್ತಿ ಸರಬರಾಯಿ ಮಾಡುವುದು.

೨. ಹಳೆಯ ನಳಿಗೆಗಳನ್ನು ತೆಗೆದು ಅದರ ಬದಲಾಗಿ ಹೊಸ ನಳಿಗೆಗಳನ್ನು ಹಾಕುವುದು ಮತ್ತು,

೩. ಜಲಾಶಯಗಳನ್ನು ದನಕರುಗಳಾಗಲೀ ಅಥವಾ ಮನುಷ್ಯರಾಗಲೀ ಹಾಳುಮಾಡದಂತೆ ಅವುಗಳ ಸುತ್ತಲೂ ತಂತಿ ಬೇಲಿಯನ್ನು ಹಾಕಿ ಭದ್ರಪಡಿಸುವುದು. ಈ ಕೆಲಸಗಳನ್ನು ಮಳೆ ನಿಂತ ಕೂಡಲೇ ಕೈಕೊಳ್ಳಲಾಗುವದು.

ಆದರೆ ಈಗಿನ ಕಾಲದಲ್ಲಿ ನಳಿಗೆಗಳ ಅಭಾವದಿಂದ ಹೊಸ ನಳಿಗೆಗಳು ಸಿಕ್ಕುವುದೇ ದುರ್ಲಭವಾಗಿದೆ. ನಳಿಗೆಗಳಿಗಾಗಿ ತಾ. ೧೧-೧೧-೪೮ರಲ್ಲು ಮೀರಾ ಸ್ಟೇಟ್ ಮ್ ಫೆಡರೇಶನ್‌ಗೆ ಬರೆಯಲಾಯಿತು. ಅನಂತರ ತಾ. ೧೯-೩-೪೯ರಲ್ಲು ಪುನಃ ನಳಿಗೆಗಳನ್ನು ಸರಬರಾಯಿ ಮಾಡಬೇಕೆಂದು ಫೆಡರೇಶನ್‌ಗೆ ಬರೆಯಲಾಯಿತು. ತಾ. ೬-೮-೪೯ರಲ್ಲಿ ಫೆಡರೇಶನ್ನವರು ಈಗ ನಳಿಗೆಗಳನ್ನು ಸರಬರಾಯಿ ಮಾಡಲು ಸಾಧ್ಯವಾಗುವುದಿಲ್ಲವೆಂದು ಬರೆದರು. ಅನಂತರ ತಾ. ೧೩-೮-೪೯ರಲ್ಲು ಕಬ್ಬಿಣ ಮತ್ತು ಉಕ್ಕಿನ ಕಂಟ್ರೋಲರ್‌ರವರಿಗೆ ಬರೆದು ನಮಗೆ ನಳಿಗೆಗಳನ್ನು ಹೊಂದಿಸಿ ಕೊಡಬೇಕೆಂದು ಗಿ ಚೀಫ್ ಕಮಿಷನರವರಿಗೆ ಬರೆಯಲಾಗಿದೆ. ಚೀಫ್ ಕಮಿಷನರಿಂದ ಯಾವ ಜವಾಬೂ ಈ ವರೆಗೆ ಬಂದಿರುವುದಿಲ್ಲ. ನಳಿಗೆಗಳು ದೊರೆತ ಕೂಡಲೆ ನೀರು ಹರಿಯಲು ತೊಂದರೆ ಇರುವ ಸ್ಥಳಗಳಲ್ಲಿ ಅವುಗಳನ್ನು ಉಪಯೋಗಿಸುವೆವು.

ಕೆ. ಪೂವಣ್ಣ,
ಪ್ರೆಸಿಡೆಂಟರು.

ವಂದನೆಗಳು.

ನಮಗಳ ಪ್ರಿಯ ಸಹೋದರಿ ಪೂವಮ್ಮಳ ಅಕಾಲ ಮರಣದಿಂದ ನಮಗಳಿಗೂ ನಮಗಳ ಮಾತೋಶ್ರೀ ತಾಯಿಯವರಿಗೂ ಉಂಟಾಗಿರುವ ಅಪಾರ ದುಃಖದಲ್ಲಿ ಖುದ್ದಾಗಿ ಬಂದು ಮತ್ತು ಪತ್ರಗಳ ಮೂಲಕ ಭಾಗಿಗಳಾದ ಬಂಧು, ಸ್ನೇಹಿತರನ್ನು ಪ್ರತ್ಯೇಕ ಬರೆದು ವಂದಿಸಲು ಅಶಕ್ತರಾದ ಕಾರಣ ಅವರುಗಳೆಲ್ಲಾ ವರಿಗೂ ಈ ಮೂಲಕ ನಮಗಳ ಕೃತಜ್ಞತಾ ವಂದನೆಗಳನ್ನು ಅರ್ಪಿಸುತ್ತೇವೆ.

ಪಿ. ಜಿ. ಚಂಗಪ್ಪ & ಬ್ರದರ್ಸ್,
ಹೊಸೂರು ಗ್ರಾಮ,

ಕೊಡಗು

ತಾ. ೭-೧೦-೧೯೪೯ನೇ ಶುಕ್ರವಾರ

ಪಾನನಿರೋಧ.

ಪಾನನಿರೋಧವನ್ನು ಜಾರಿಗೆ ತರುವ ತತ್ವವನ್ನು ಕೇಂದ್ರ ಸರಕಾರವು ಒಪ್ಪಿದ್ದರೂ ಸದ್ಯದ ಹಣದ ಉಬ್ಬರದ ದೆಸೆಯಿಂದ ಈ ವಿಚಾರದಲ್ಲಿ ಸಾವಧಾನದಿಂದ ಸಾಗುವಂತೆ ಪ್ರಾಂತೀಯ ಸರಕಾರಗಳಿಗೆ ಸೂಚಿಸಿದೆ. ಆದ್ದರಿಂದ ಮದ್ರಾಸೊಂದನ್ನು ಬಿಟ್ಟು ಉಳಿದ ಪ್ರಾಂತಗಳು ಈ ಬಗ್ಗೆ ತೀವ್ರಗತಿಯಿಂದ ಸಾಗುತ್ತಿಲ್ಲ. ಕೊಡಗು ಕೇಂದ್ರದ ಆಡಳಿತಕ್ಕೊಳಪಟ್ಟಿರುವ ಕಾರಣ ಇಲ್ಲಿಯೂ ಪೂರ್ಣ ಪಾನನಿರೋಧದ ಬದಲು ಪಾನ ನಿಯಂತ್ರಣವನ್ನು ಮಾಡಲಾಗಿದೆ. ಈ ನಿಯಂತ್ರಣದ ಈ ಕಳೆದ ಸುಮಾರು ಆರು ತಿಂಗಳುಗಳ ಅನುಭವದಿಂದ ಕೆಲವು ವಿಚಾರಗಳು ತೋರಿಬಂದಿವೆ.

ನಿಯಂತ್ರಣದ ನಿಯಮಗಳಿಗೆ ವಿರುದ್ಧವಾಗಿ ಕೆಲವರು ಹೆಚ್ಚಿನ ಕೂಪನ್‌ಗಳನ್ನು ಪಡೆದಿದ್ದಾರಂತೆ. ಕುಡಿಯದ ಕೆಲವರೂ ಕೂಪನ್ ಪಡೆದು ಕಪ್ಪು ವ್ಯಾಪಾರಕ್ಕೆ ಎಡೆಕೊಟ್ಟಿದ್ದಾರಂತೆ. ಕೆಲವೆಡೆ ಸಾರಾಯಿ ಕಾಯಿಸುವ ಅಕ್ರಮ ಉದ್ಯಮ ಹೆಚ್ಚುತ್ತೊಡಗಿದೆಯಂತೆ. ಇವುಗಳನ್ನೆಲ್ಲಾ ಶೋಧಿಸಿ ಪತ್ತೆಹಚ್ಚಿ ಬಯಲಿಗೆಳೆದು ಶಿಕ್ಷಿಸಬೇಕಿರುವ ಅಧಿಕಾರಿವರ್ಗದವರ ಕೆಲಸವೂ ಪ್ರಶಂಸನೀಯವಾಗಿಲ್ಲವೆನ್ನುತ್ತಾರೆ. ಹೀಗಾಗಿ ಈ ನಿಯಂತ್ರಣ ದೇಶಕ್ಕೆ ಅತ್ಯವಶ್ಯವೆನಿಸಿದರೂ ಆಶಿಸಿದಷ್ಟು ಜಯಪ್ರದವಾಗುತ್ತಿಲ್ಲ.

ಸರಕಾರವು ಯಾವುದೇ ಕಾನೂನು ಮಾಡಿದರೂ ಅವನ್ನು ಜಾರಿಯಲ್ಲಿ ತರುವ ಅಧಿಕಾರಿಗಳು ಆದರ್ಶ ಮಾರ್ಗದಲ್ಲಿರದಿದ್ದರೆ ಕಾನೂನು ತೋರಿಕೆಯ ವಸ್ತುವಾಗುತ್ತದೆ. ಅಧಿಕಾರಿಗಳ ಈ ಶಿಥಿಲತೆಯು ಲಂಚ ಸ್ವಜನಪಕ್ಷಕರಿಗೆ ಆಸರೆ ಒದಗಿಸಿ ಕಾನೂನಿನ ಧ್ಯೇಯವೇ ಸೋಲಿಸಲ್ಪಡುತ್ತದೆ. ಆದ್ದರಿಂದ ಸರಕಾರಿ ಅಧಿಕಾರಿಗಳೂ ಸಾರ್ವಜನಿಕರೂ ಸಹಕರಿಸಿ ಕೆಲಸ ಮಾಡುವದು ಅತ್ಯವಶ್ಯವೆಂದು ಮೇಲಿಂದ ಮೇಲೆ ಹೇಳುವದಾಗಿದೆ. ಸ್ವತಂತ್ರ ದೇಶದಲ್ಲಿ ಸರಕಾರಿ ನೌಕರರು ಜನತೆಯ ಸೇವಕರು. ಜನತೆ ತನ್ನ ಸರಕಾರದ ಆಶಯಗಳಲ್ಲಿ ಸಹಕರಿಸದಿದ್ದರೆ ಜನಹಿತ ಹೇಗಾದೀತು? ಆದ್ದರಿಂದ ನಿಯಮಕ್ಕೆ ವಿರುದ್ಧ ವರ್ತಿಸುವದನ್ನು ನಿಲ್ಲಿಸಲು ಅಧಿಕಾರಿಗಳು ಪ್ರಯತ್ನಿಸುವದು ಕರ್ತವ್ಯವಿರುವಂತೆ, ನಿಯಮ ತಪ್ಪುವವರನ್ನು ಗುರ್ತಿಸಿ ಸರಕಾರಕ್ಕೆ ಸಹಾಯಮಾಡುವದು ಸಾರ್ವಜನಿಕರ ಕರ್ತವ್ಯ.

ಈಗ ಜಾರಿಯಲ್ಲಿರುವ ನಿಯಂತ್ರಣದಿಂದ ಕೊಡಗಿನ ಸರಕಾರದ ಆದಾಯದಲ್ಲಿ ಸುಮಾರು ಹಲವು ಲಕ್ಷದಷ್ಟು ನಷ್ಟವಾಗಲಿದೆ. ಈ ನಷ್ಟವನ್ನು ಭರ್ತಿಮಾಡುವದು ಅನಿವಾರ್ಯ. ಮುಂದೆ ಸಂಪೂರ್ಣ ಪಾನನಿರೋಧವನ್ನು ಜಾರಿಗೆ ತರುವ ಪದವಳಾಶವನ್ನು ಕಲ್ಪಿಸುವದು ಬೇಕಿದೆ. ಪಾನನಿರೋಧವನ್ನು ಜಾರಿಗೆ ತರುವದಾದರೆ ವ್ಯವಸಾಯ ಆದಾಯ ತೆರಿಗೆಯನ್ನು ಹಾಕಲು ದೇಶೀಯರ ವಿರೋಧವಿರಲಾರದು. ಕಳೆದ ಶಾಸನ ಸಭೆಯಲ್ಲಿ ಈ ಬಗ್ಗೆ ಒಂದು ಮಸೂದೆ ಬಂದಿದ್ದರೂ ಕಾರಣಾಂತರದಿಂದ ಅಗ ಅದು ಮಂಜೂರಾಗಲಿಲ್ಲ. ಮುಂದಿನ ಬರುವ ಶಾಸನ ಸಭೆಯಲ್ಲಿ ಪುನಃ ಆ ಮಸೂದೆಯು ಬರಲಿದೆ. ಆದ್ದರಿಂದ ಶಾಸನ ಸಭೆಯ ಸಭೆಯ ಸದಸ್ಯರೆಲ್ಲರೂ ಅದಕ್ಕೆ ಬೆಂಬಲವಿತ್ತು, ಕೊಡಗಿನಲ್ಲಿ ಸಂಪೂರ್ಣ ಪಾನನಿರೋಧವು ಜಾರಿಯಲ್ಲಿ ಬರಲು ಅವಕಾಶ ಮಾಡುವದು ಅಗತ್ಯವಿದೆ.

ವರ್ತಮಾನ.

ಭಾರತದ ಮುಖ್ಯ ಸೇನಾನಾಯಕರಾದ ಜನರಲ್ ಕಾರ್ಯಪ್ಪನವರು ತಾ. ೧೨-೧೦-೪೯ ರಲ್ಲಿ ಮಡಿಕೇರಿಗೆ ಬರುವರು. ಕೊಡಗಿನ ಪೋಲೀಸ್ ದಳದವರೂ, ನೇಶನಲ್ ಕೇಡೆಟ್ ಕೋರಿನವರೂ ಕೊಡುವ 'ಗಾರ್ಡ್ ಆಫ್ ಆನರ್' ನ್ನು ಪರಿಶೀಲಿಸುವರು.

ಕೊಡಗು ಸರಕಾರಿ ಕಾಲೇಜಿನ ಮೂವರು ವಿದ್ಯಾರ್ಥಿಗಳ ವರ್ತನೆಯು ಕಾಲೇಜಿನ ಶಿಸ್ತು ಮತ್ತು ಶಾಂತಿಗೆ ಹಿತಕರವಲ್ಲವೆಂದು ತಿಳಿದು ಬಂದ ಕಾರಣ ಅವರನ್ನು ಕಾಲೇಜಿನಿಂದ ಹಿಂದಕ್ಕೆ ಕರೆಸಿಕೊಳ್ಳಬೇಕೆಂದು ಆ ವಿದ್ಯಾರ್ಥಿಗಳ ಪೋಷಕರಿಗೆ ತಿಳಿಸಲಾಗಿದೆಯೆಂದು ತಿಳಿಯಬರುತ್ತದೆ.

ತಾರೀಕು ೨-೧೦-೪೯ ರಲ್ಲಿ ಗಾಂಧಿ ಜಯಂತಿಯನ್ನು ವೀರಾಜಪೇಟೆ ಮುನ್ಸಿಪಲ್ ಹಾಲ್‌ನಲ್ಲಿ ಶ್ರೀ. ಪಿ. ಎಂ. ನಾಣಯ್ಯನವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಮೆರವಣಿಗೆಯ ನಂತರ ಸಭೆ ಸೇರಲಾಯಿತು. ವಿದ್ಯಾರ್ಥಿನೀಭವನದ ಬಾಲಕಿಯರ ಪ್ರಾರ್ಥನೆಯೂ, ಶ್ರೀ ಚೆಕ್ಕೆರ ಅಪ್ಪಯ್ಯನವರ ಸಂಗೀತ ಕಚೇರಿಯೂ, ನಂತರ ಭಜನೆಯೂ ನಡೆಯಿತು. ನಂತರ ಶ್ರೀಮತಿ ನೆಲ್ಲಮಕ್ಕಡ ಅಕ್ಕವ್ವ, ಶ್ರೀಗಳಾದ ಪಿ. ಐ. ಬೆಳ್ಯಪ್ಪ, ಡಾ. ದೇಶಿಕಾಚಾರಿ ಮೊದಲಾದವರು ಗಾಂಧೀಜಿಯವರ ಗುಣಗಾನ ಮಾಡಿದರು.

ಭಾರತ ಕಮಾಂಡರ್-ಇನ್-ಚೀಫರಾದ ಜನರಲ್ ಕಾರ್ಯಪ್ಪನವರು ತಾ. ೧೨-೧೦-೪೯ ರಲ್ಲಿ ಕೊಡಗಿಗೆ ಬರುವ ಸಮಯದಲ್ಲಿ ಕೊಡಗಿನಲ್ಲಿರುವ ಮಾಜಿ ಸಿಪಾಯಿಗಳು ತಮ್ಮ ಮನ್ನಣೆಯನ್ನು ಅರ್ಪಿಸಲು ಏರ್ಪಾಡಾಗುತ್ತಿದೆಯೆಂದೂ ಎಲ್ಲಾ ಮಾಜಿ ಸಿಪಾಯಿಗಳು ಹಾಜರಾಗಿ ಸಹಕರಿಸಬೇಕೆಂದೂ ಸೂಚಿಸಿರುವರು.

ಗಾಂಧಿ ಜಯಂತಿಯ ಬಗ್ಗೆ ನಾಪೋಕ್ಲು ವಿದ್ಯಾರ್ಥಿ ಕಾಂಗ್ರೆಸಿನವರು ರಾಷ್ಟ್ರಗೀತೆಯೊಡಗೂಡಿ ಪ್ರಭಾತ ಫೇರಿ ನಡೆಸಿ ಹೈಸ್ಕೂಲಿನ ಮುಖ್ಯೋಪಾಧ್ಯಾಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿದರು. ವಾಕ್ ಸ್ಪರ್ಧೆ ಮತ್ತು ನೂಲುವ ಸ್ಪರ್ಧೆ ನಡೆಯಿತು. ಭಾಷಣಗಳಾದ ನಂತರ ಬಹುಮಾನ ವಿತರಣೆಯಾಯಿತು.

ಮಡಿಕೇರಿ ವಿದ್ಯಾರ್ಥಿ ಕಾಂಗ್ರೆಸಿನ ಆಶ್ರಯದಲ್ಲಿ ಗಾಂಧಿ ಜಯಂತಿಯು ನಡೆಯಿತು. ಹೈಸ್ಕೂಲು ಮುಖ್ಯೋಪಾಧ್ಯಾಯರು ಅಧ್ಯಕ್ಷತೆ ವಹಿಸಿದ್ದರು. ಗಾಂಧೀಜಿಯವರ ಅಮರ ಜೀವನವನ್ನು ವರ್ಣಿಸಿ ಭಾಷಣಗಳಾದವು.

ಸಿಹಿ ಹೆಂಡದಿಂದ ಬೆಲ್ಲ ಮಾಡುವ ತರಬೇತು ಪಡೆದು ಬಂದಿರುವ ಶ್ರೀ. ಮಂಡಿರ ಸಿ. ಸೋಮಣ್ಣನವರನ್ನು ಆರ್ಗನೈಜರಾಗಿಯೂ ಶ್ರೀ. ಆನಂದಾನಿಯವರನ್ನು ಸೀನಿಯರ್ ಇನ್ಸ್‌ಪೆಕ್ಟರಾಗಿಯೂ ನೇಮಿಸಿ ಶ್ರೀಮಂಗಲ ಮತ್ತು ಹೆಬ್ಬಾಲೆಗಳಲ್ಲಿ ಈ ಬಗ್ಗೆ ಎರಡು ತರಬೇತು ಕೇಂದ್ರಗಳನ್ನು ತೆರೆಯಲಾಗಿದೆ.

ಸೆಪ್ಟೆಂಬರ್ ತಾ. ೨೭ರಿಂದ ಅಕ್ಟೋಬರ್ ಒಂದರ ವರೆಗೆ ಉಡುಪಿಯಲ್ಲಿ ನಡೆದ ಕನ್ನಡ ಸಾಹಿತ್ಯೋತ್ಸವದಲ್ಲಿ ಮಡಿಕೇರಿ ಗವರ್ನಮೆಂಟ್ ಕಾಲೇಜಿನ ಜೀವಶಾಸ್ತ್ರ ಉಪನ್ಯಾಸಕರಾದ ಶ್ರೀ. ಎ. ಸತ್ಯನಾರಾಯಣರಾವ್‌ರವರು ವಿಕಾಸವಾದದ ವಿಷಯವಾಗಿಯೂ, ಹೈಸ್ಕೂಲ್ ಅಧ್ಯಾಪಕರಾದ ಶ್ರೀ ವಿ. ಎಸ್. ರಾಮಕೃಷ್ಣರವರು 'ವಿಜ್ಞಾನ ತತ್ವ ಮತ್ತು ಧರ್ಮ' ಎಂಬ ವಿಷಯವಾಗಿಯೂ ಶ್ರೀ. ಎಂ. ಎಸ್. ಅನಂತ ಪದ್ಮನಾಭರಾಯರು 'ದೇವಮ್ಮಾಜಿಯ ದುರಂತ' ಎಂಬ ವಿಷಯವಾಗಿಯೂ ಭಾಷಣ ಮಾಡಿದರು. ಶ್ರೀಮತಿ ಪ್ರವಿಸಳಾ ಬಾಯಿ ಮೆಂಕೋಬರಾಯರೂ ಕುಮಾರ ಎಂ. ಎ. ಜಯರಾಮರೂ ಕಾವ್ಯವಾಚನ ಮಾಡಿದರು.

ನಾಳೆ (೮-೧೦-೪೯) ಸಾಯಂಕಾಲ ಆರುವರೆ ಗಂಟೆಗೆ ಮಡಿಕೇರಿ ವೇದಾಂತಮಂದಿರದಲ್ಲಿ ಮೈಸೂರಿನ ಕೀರ್ತನ ಮನೋಹರ ಗಂಗಾಧರ ಶರ್ಮರು 'ಮುಕ್ತ ಕನಕದಾಸ' ಎಂಬ ಹರಿಕಥೆಯನ್ನು ಮಾಡುವರು.

ಮೂರ್ನಾಡು: ಹೈ. ಎಲಿಮೆಂಟರಿ ಶಾಲಾ ಮಕ್ಕಳು ರಾಷ್ಟ್ರಗೀತೆಯೊಡನೆ ಮೆರವಣಿಗೆ ನಡೆಸಿ ಶ್ರೀ ಎಚ್. ಎಸ್. ವೆಂಕಪಯ್ಯನವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಗಾಂಧಿ ಜಯಂತಿಯನ್ನು ಆಚರಿಸಿದರು.

ತಾ. ೨೭ರಲ್ಲಿ ನಡೆದ ವೀರಾಜಪೇಟೆ ಮುನ್ಸಿಪಲ್ ಚುನಾವಣೆಯಲ್ಲಿ ಶ್ರೀಗಳಾದ ರೆ. ಫಾ. ಜೆ. ಎಂ. ಡಿಸೂಜ, ಲಾರೆನ್ಸ್ ವಿನ್ಸೆಂಜಸ್, ಪಿ ಎಸ್. ನಂಜಪ್ಪ, ಸಿ. ಸಿ. ಉತಯ್ಯ, ಎನ್. ಬಿ. ಉತ್ತಪ್ಪ, ಎಂ. ಡಿ. ಅಪ್ಪಣ್ಣ, ವಿ ಆರ್. ಅಪ್ಪಣ್ಣ, ಎಸ್. ಎಸ್. ರಾಮಮೂರ್ತಿ, ಎಸ್. ನೇವಿ ರಾಜಯ್ಯ, ಸೀತಾರಾಮರಾವ್, ಪಿ. ಪಿ. ಕುಂಞಿಮಹಮ್ಮದ್, ಮಜೀದ್ ಖಾನ್, ಮಾಣಿ ಮನ್ಸೂರ್ ಸಾಹೇಬ್, ಡಿ. ಎಚ್. ಅಬ್ದುಲ್ ರಹಮಾನ್ ಇವರುಗಳು ಸದಸ್ಯರಾಗಿ ಆರಿಸಲ್ಪಟ್ಟಿರುವರು. ತಾ. ೪ರಲ್ಲಿ ನಡೆದ ಕಮಿಟಿ ಮೀಟಿಂಗಿನಲ್ಲಿ ಶ್ರೀ. ಎಸ್. ಎಸ್. ರಾಮಮೂರ್ತಿಯವರನ್ನು ಅಧ್ಯಕ್ಷರಾಗಿಯೂ ಶ್ರೀ ಸಿ ಸಿ ಉತ್ತಯ್ಯನವರನ್ನು ಉಪಾಧ್ಯಕ್ಷರಾಗಿಯೂ ಆರಿಸಲಾಗಿದೆ.

ಸೆಪ್ಟೆಂಬರ್ ತಿಂಗಳ ಪ್ರಾರಂಭದಲ್ಲಿ ಉತ್ತರ ಕೊಡಗಿನ ಕೆಲವು ಹರಿಜನರು ಭಾಗಮಂಡಲಕ್ಕೆ ಹೋಗಿ ಸಂಗಮದಲ್ಲಿ ಸ್ನಾನಮಾಡಿ ದೇವಸ್ಥಾನಕ್ಕೆ ಪ್ರವೇಶಿಸಿ ಪೂಜೆ ಪುನಸ್ಕಾರಗಳನ್ನು ಮಾಡಿಸಿಕೊಂಡು ಹೋದರೆಂದೂ, ಮಡಿಕೇರಿ ಓಂಕಾರೇಶ್ವರ ದೇವಸ್ಥಾನದಲ್ಲಿಯೂ ಕೂಡ ಹರಿಜನರು ಪ್ರವೇಶಿಸಿ ಪೂಜೆಮಾಡಿಕೊಂಡು ಹೋಗುತ್ತಿರುವರೆಂದೂ ತಿಳಿಯುತ್ತೇವೆ.

ದೇವಸ್ಥಾನಕ್ಕೆ ಹರಿಜನ ಪ್ರವೇಶ.

ಮಹಾತ್ಮಾ ಗಾಂಧಿಯವರ ಜನ್ಮದಿನದಂದು ಭಾಗಮಂಡಲ ದೇವಸ್ಥಾನಕ್ಕೆ ಹರಿಜನರನ್ನು ಪ್ರವೇಶಿಸುವ ಏರ್ಪಾಡು ಕೊಡಗು ಜಿಲ್ಲಾ ಕಾಂಗ್ರೆಸ್ ಸಮಿತಿಯಿಂದ ನಡೆದಿತ್ತು. ತಾರೀಕು ೨ರ ಬೆಳಗ್ಗೆ ಭಾಗಮಂಡಲದಲ್ಲಿ ಅನೇಕ ಸಾರ್ವಜನಿಕರು ಸೇರಿದ್ದರು. ಪೊನ್ನಂಪೇಟೆ, ನಾಪೋಕ್ಲು, ಮಡಿಕೇರಿ ಮೊದಲಾದ ಕಡೆಯಿಂದ ಸುಮಾರು ೩೦ ಹರಿಜನರು ಬಂದಿದ್ದರು. ಬೆಳಗ್ಗೆ ೧೧ ಗಂಟೆಗೆ ಸಂಗಮದಲ್ಲಿ ಎಲ್ಲರೂ ಸ್ನಾನಮಾಡಿ 'ರಘುಪತಿರಾಘವ' ಗೀತೆಯೊಂದಿಗೆ ಮೆರವಣಿಗೆ ಹೊರಟು ದೇವಸ್ಥಾನಕ್ಕೆ ಪ್ರವೇಶಿಸಲಾಯಿತು. ದೇವಸ್ಥಾನದ ಪ್ರದಕ್ಷಿಣೆಯ ನಂತರ ದೇವರಿಗೆ ಹಣ್ಣುಕಾಯಿ ಅರ್ಪಿಸಲಾಯಿತು. ಬ್ರಾಹ್ಮಣರು ಪೂಜೆ ಮಾಡಿದರು. ಮಂಗಳಾರತಿಯ ನಂತರ ನೆರೆದ ಸಭೆಯಲ್ಲಿ ಭಗವದ್ಗೀತೆಯಲ್ಲಿಯ ಸ್ಥಿತಪ್ರಜ್ಞನ ಲಕ್ಷಣವನ್ನು ಕುರಿತು ಡ. ಬಿ. ಕೆ. ನಂಜುಂಡೇಶ್ವರರು ವಾಚನ ಮಾಡಿದರು. ಶ್ರೀ. ಕೆ. ಸಿ. ಕರುಂಬಯ್ಯನವರು ಮಂದಿರ ಪ್ರವೇಶದ ವಿಚಾರದಲ್ಲಿ ಸೂಕ್ತವಾದ ನಾಲ್ಕು ಮಾತಾಡಿದರು. ಕಾರ್ಯಕ್ರಮವು ಸಮಾಪ್ತಿಗೊಂಡಿತು.

ಪ್ರಕಟಣೆ.

ಫ್ರೇಜರ್‌ಪೇಟೆ ಹೋಟೆಲ್ ಕೂಡಿಗೆ ವ್ಯವಸಾಯ ಪರೀಕ್ಷಾ ಕ್ಷೇತ್ರದ ವಾರ್ಷಿಕ ಫಾರಂ ಸಪ್ತಾಹವನ್ನು (Farm week) ಅಕ್ಟೋಬರು ತಾ. ೨೬ ರಿಂದ ೩೧ರ ವರೆಗೆ ಆಚರಿಸಲಾಗುವುದು. ಈ ಸಂಧರ್ಭದಲ್ಲಿ ಮೇಲಿನ ತಾರೀಕುಗಳಲ್ಲಿ ಪ್ರತಿ ದಿನವೂ ವ್ಯವಸಾಯ ಮತ್ತು ಇನ್ನಿತರ ವಿಷಯಗಳ ಮೇಲೆ ಭಾಷಣಗಳೂ ಸಾಯಂಕಾಲ ಸಿನಿಮಾ (ಮಾಯಾಲಾಂದ್ರ) ಭಾಷಣಗಳೂ ನಡೆಯುವುದಲ್ಲದೆ ಪರೀಕ್ಷಾ ಕ್ಷೇತ್ರದಲ್ಲಿ ನಡೆಯುತ್ತಿರುವ ಕೆಲಸಗಳನ್ನು ವಿವರಿಸಲಾಗುವುದು. ಅಲ್ಲದೆ ತಾ. ೩೧ರಲ್ಲಿ ರಾಗಿ, ಭತ್ತ, ನೆಲಗಡಲೆ, ತರಕಾರಿ, ಹಣ್ಣು ಹಂಪಲು ವಸ್ತುಗಳ ಮತ್ತು ಸೀಮೆಹಲ್ಲು ಮುಂತಾದವುಗಳ ಪ್ರದರ್ಶನವೂ ನಡೆಯುವದು. ಉತ್ತಮವಾದ ವಸ್ತುಗಳಿಗೆ ಇನಾಮು ಹಂಚಲಾಗುವುದು. ಸರ್ವರೂ ಭಾಗವಹಿಸಿ ಫಾರಂ ಸಪ್ತಾಹ ಮತ್ತು ಪ್ರದರ್ಶನದ ಪ್ರಯೋಜನವನ್ನು ಹೊಂದಿಕೊಳ್ಳಬೇಕಾಗಿ ಈ ಮೂಲಕ ಕೇಳಿಕೊಳ್ಳಲಾಗಿದೆ.

ಬಿ. ಎಸ್. ವರದರಾಜನ್,
ವ್ಯವಸಾಯ ಶಲಾಖೆ ಆಫೀಸರು.

ಬೇಕು.

ಕೊಡಗು ಜೇನು ನಾಕ್ರು ಮೇಣ ಕೃಷಿಕರ ಸಹಕಾರ ಸಂಘ, ವೀರರಾಜಪೇಟೆ:—

ಈ ಸಂಘವು ಶುದ್ಧೀಕರಿಸಿದ ಮೇಣ ರಾತ್ತಲ ೧ರ ರೂ. ೩-೮-೦ ದರದಲ್ಲಿಯೂ, ಶುದ್ಧೀಕರಿಸದ ಮೇಣ ರಾತ್ತಲ ೧ಕ್ಕೆ ರೂ. ೩-೦-೦ ರ ದರದಲ್ಲಿಯೂ ಕೊಂಡುಕೊಳ್ಳುತ್ತದೆ. ಹೆಚ್ಚಿನ ಮಾಹಿತಿಗೆ ಪತ್ರ ಬರೆಯಬಹುದು.

ಟಿ. ಎಂ. ಕಾರ್ಯಪ್ಪ,
ತಾ ೪-೧೦-೪೯. ಪ್ರೆಸಿಡೆಂಟ್.

WANTED

Trained and qualified Overseers and Surveyors for temporary posts for the Government of India, under the Central Water power Irrigation and Navigation Commission for Coorg Project Pay and allowances will be according to the sanctioned Scale of the Government of India. Applications will be received by the Sub-Divisional Officer, Coorg Projects C W I N C Mercara Coorg, upto 15-10-49.

ಕಾಂಗ್ರೆಸು ಮೆಂಬರುತನ.

ದೇಶದ ಪ್ರಾಯ ಪ್ರಬುದ್ಧರಾದ ಅಂದರೆ ೨೧ ವರ್ಷ ಪ್ರಾಯ ಮೀರಿದ ಪ್ರತಿಯೊಬ್ಬ ಸ್ತ್ರೀಯೂ, ಪುರುಷನೂ ಕಾಂಗ್ರೆಸ್ಸಿನ ಮೆಂಬರಾಗಬೇಕೆಂಬ ಉದ್ದೇಶದಿಂದ ಈ ಮೊದಲಿದ್ದ ನಾಲ್ಕಾಣೆ ಚಂದಾ ಹಣವನ್ನು ವಜಾಮಾಡಿ, ಕಾಂಗ್ರೆಸ್ಸಿನ ತತ್ವಕ್ಕೆ ಒಪ್ಪುವವರೆಲ್ಲರೂ ಸದಸ್ಯರಾಗುವ ಅನುಕೂಲ ಮಾಡಲಾಗಿದೆ. ಹಿಂದೂದೇಶದ ಎಲ್ಲಾ ಭಾಗಗಳಲ್ಲಿ ಮೆಂಬರುಗಳನ್ನು ಸೇರಿಸಲು ಪ್ರಾರಂಭವಾಗಿ ಸುಮಾರು ಮೂರು ವಾರಗಳು ಆಗಿಹೋದವು. ಕೊಡಗಿನಲ್ಲಿಯೂ ಎಡ್ ಹಾಕ್ ಜಿಲ್ಲಾ ಕಾಂಗ್ರೆಸ್ ಕಮಿಟಿಯು ಪ್ರತಿಜ್ಞಾ ಫಾರಮುಗಳನ್ನು ಅಚ್ಚು ಹಾಕಿಸಿ, ಬಹಳ ಹೆಚ್ಚಾಗಿ ಸಂಯೋಜನಾ ಪಕ್ಷದವರ ಮೂಲಕವೇ ಮೆಂಬರುತನ ಸೇರಿಸಲಾರಂಭಿಸಿದರು. ಹಾಗೆ ಸೇರಿಸಲು ಏರ್ಪಡಿಸಿದ ಸುಮಾರು ೭೫ ಪಂಚಾಯಿತರ ಪೈಕಿ ಬರೇ ನಾಲ್ಕೈದು ಜನರು ಪ್ರತ್ಯೇಕವಾದಿಗಳು ಗಿದ್ದಾರೆ. ಇದನ್ನು ನೋಡಿದ ನಾನು ಸೆಪ್ಟೆಂಬರು ತಾ. ೨೨ರಲ್ಲಿ ಈ ರೀತಿ ಸಂಯೋಜನಾ ಪಕ್ಷದವರಿಗೆ ಮಾತ್ರ ಮೆಂಬರುತನದ ಪುಸ್ತಕ ಕೊಟ್ಟದ್ದು ಸರಿಯಲ್ಲ. ಕೂಡಲೆ ನನಗೆ ೧೦೦ ಪುಸ್ತಕಗಳನ್ನು ಕಳುಹಿಸಿಕೊಡಬೇಕೆಂದು ಕೊಡಗು ಎಡ್ ಹಾಕ್ ಕಮಿಟಿಯ ಅಧ್ಯಕ್ಷರಾದ ಶ್ರೀ ಕೆ. ಸಿ. ಕರುಂಬಯ್ಯನವರಿಗೂ (ಪೊನ್ನಂಪೇಟೆಗೆ) ಕಳೆದನು. ಹಾಗೆಯೇ ಈಗಲೂ ಬರೇ ಒಂದು ಪಕ್ಷದವರ ಮೂಲಕ ಮಾತ್ರ, ಕಾಂಗ್ರೆಸು ಮೆಂಬರುತನ ಸೇರಿಸುತ್ತಾ, ಇನ್ನೊಂದು ಪಕ್ಷದವರು ಕಾಂಗ್ರೆಸ್ಸಿಗೆ ಸೇರಲು ಅವಕಾಶವಿಲ್ಲದಂತೆ ಮಾಡುವುದರಿಂದ ಕಾಂಗ್ರೆಸು ಸಂಸ್ಥೆಯ ಬಲವು ಕುಂದುವುದೆಂದೂ, ಕೂಡಲೆ ಪುಸ್ತಕಗಳನ್ನು ಕಳುಹಿಸಿಕೊಡಬೇಕು, ಇಲ್ಲವಾದರೆ ನಾನೇ ಇಲ್ಲಿ ಪ್ರಿಂಟು ಮಾಡಿಸಿಕೊಳ್ಳಲು ಅನುಮತಿ ಕೊಡಬೇಕೆಂದು ಕರ್ನಾಟಕ ಪ್ರಾಂತೀಯ ಕಾಂಗ್ರೆಸು ಕಮಿಟಿಯ ಸೆಕ್ರೆಟರಿಯವರಿಗೂ (ಹುಬ್ಬಳ್ಳಿಗೆ) ಇದೇ ಪತ್ರದ ನಕಲನ್ನು ಅಖಿಲ ಭಾರತ ಕಾಂಗ್ರೆಸು ಕಮಿಟಿಯ ಸೆಕ್ರೆಟರಿಯವರಿಗೂ, ಮತ್ತು ಕಾಂಗ್ರೆಸ್ಸಿನ ಅಧ್ಯಕ್ಷರಾದ ಡಾ. ಪಟ್ಟಾಭಿ ಸೀತಾರಾಮಯ್ಯನವರಿಗೂ, (ಡೆಲ್ಲಿಗೆ) ರಿಜಿಸ್ಟರ್ ಟಪ್ಪಾಲು ಮೂಲಕ ಕಳುಹಿಸಿದೆನು. ಕಾಂಗ್ರೆಸು ಪ್ರೆಸಿಡೆಂಟರಿಗೆ ಬರೆದ ಪತ್ರಕ್ಕೆ ಅ. ಭಾ. ಕಾ. ಕಮಿಟಿಯ ಆರ್ಗನೈಜಿಂಗ್ ಸೆಕ್ರೆಟರಿಯವರು 'ನಿಮಗೆ ಜಿಲ್ಲಾ ಕಮಿಟಿಯಿಂದ ಪುಸ್ತಕ ದೊರೆಯದಿದ್ದರೆ ನೀವೇ ಪ್ರಿಂಟುಮಾಡಿಸಿ, ಮೆಂಬರುಗಳನ್ನು ಸೇರಿಸಿ' ಎಂದು ತಾ. ೨೭-೯-೪೯ರಲ್ಲಿ ಬರೆದ ಜವಾಬನ್ನು ಇದರ ಕೆಳಗೆ ಕೊಡಲಾಗಿದೆ. ಕ. ಪ್ರಾ. ಕಾ. ಕಮಿಟಿಯು ಸೆಕ್ರೆಟರಿಯವರು 'ನಿಮಗೆ ಬೇಕಾದ ಪುಸ್ತಕಗಳನ್ನು ಕೊಡಲು ಜಿಲ್ಲಾ ಕಮಿಟಿಯ ಪ್ರೆಸಿಡೆಂಟರಿಗೆ ಬರೆದಿರುವೆನು. ಅವರು ನಿಮಗೆ ಹಾಗೆ ಪುಸ್ತಕ ಕೊಡದಿದ್ದರೆ ಒಂದು ವಾರದ ನಂತರ ನನಗೆ ಬರೆದು ತಿಳಿಸಿ' ಎಂದು ಮುಂಚೆಯಾಗಿ ತಾರೀಕು ೨೮-೯-೪೯ರಲ್ಲಿ ಉತ್ತರ ಬರೆದರು. ಪುನಹ ಅವರು ತಾ. ೩೦-೯-೪೯ರಲ್ಲಿ ಅ. ಭಾ. ಕಾ. ಕಮಿಟಿಯ ಆರ್ಗನೈಜಿಂಗ್ ಸೆಕ್ರೆಟರಿಯವರ ಪತ್ರದ ಮೇರೆ ಅವಶ್ಯವಿದ್ದರೆ ನೀವೇ ಪುಸ್ತಕ ಪ್ರಿಂಟುಮಾಡಿಸಿ, ಮೆಂಬರುಗಳನ್ನು ಸೇರಿಸಿ' ಎಂದು ಮೊದಲಾಗಿ ಉತ್ತರಕೊಟ್ಟಿರುವರು. ಮೆಂಬರುತನ ಸೇರಿಸುವ ಅವಧಿಯು ಸಮೀಪಿಸುತ್ತಿರುವಲ್ಲಿ ಕ. ಪ್ರಾ. ಕಾ. ಕಮಿಟಿಯವರು ತಮ್ಮ ಜವಾಬಿನಲ್ಲಿಯೂ ಕೂಡ ಹೀಗೇ ಸಾವಕಾಶ ಮಾಡಿದ್ದು ತುಂಬಾ ವ್ಯಸನಕರವೆಂದು ಅವರಿಗೆ ಪತ್ರ ಬರೆದಿರುವೆನು. ಡೆಲ್ಲಿ ಮತ್ತು ಹುಬ್ಬಳ್ಳಿಯಿಂದ ಜವಾಬು ಬಂದರೂ ನನ್ನ ಪತ್ರಕ್ಕೆ ಎಡ್ ಹಾಕ್ ಕಮಿಟಿ ಪ್ರೆಸಿಡೆಂಟರ ಪೊನ್ನಂಪೇಟೆಯಿಂದ ಇನ್ನೂ ಉತ್ತರವಾಗಲೀ ಯಾ ಪುಸ್ತಕವಾಗಲೀ ಬರಲಿಲ್ಲ. ಆದಕಾರಣ ನಾವು ಪುಸ್ತಕಗಳನ್ನು ಪ್ರಿಂಟು ಮಾಡಿಸಿ, ಮೆಂಬರುಗಳನ್ನು ಸೇರಿಸಲು ಅವುಗಳನ್ನು ದೇಶದ ಹಲವು ಕಡೆಗಳಲ್ಲಿ ಹಂಚುತ್ತಿರುವೆನು. ಹಿಂದೂದೇಶದಲ್ಲಿ ಶಾಂತರೀತಿಯ ರಾಜ್ಯಭಾರ ನಡಿಸಲು ಈಗ ಕಾಂಗ್ರೆಸು ಸಂಸ್ಥೆಯನ್ನು ಬಲಪಡಿಸಬೇಕಾದದ್ದು ಪ್ರಾಯಪ್ರಬುದ್ಧನಾದ ಪ್ರತಿಯೊಬ್ಬ ಓಟರ ಕರ್ತವ್ಯವಾಗಿದೆ. ಅದರಲ್ಲೂ ಕೊಡಗಿನವರಿಗೆ ಕೊಡಗಿನ ಭವಿಷ್ಯತ್ತನ್ನು ನಿರ್ಣಯಿಸುವ ವರ್ಷವಿದು. ಮೆಂಬರ ತನ ಸೇರಿಸುವ ಅವಧಿಯು ಈ ಅಕ್ಟೋಬರು ತಾ. ೩೧ಕ್ಕೆ ಮುಗಿಯುತ್ತದೆ. ಆದುದರಿಂದ ಪ್ರಾಯ ಪ್ರಬುದ್ಧರಾದವರೆಲ್ಲರೂ ಕೂಡಲೆ ಕಾಂಗ್ರೆಸು ಪ್ರತಿಜ್ಞೆಗೆ ಸಹಿಮಾಡಿ, ಕಾಂಗ್ರೆಸ್ ಸದಸ್ಯರಾಗಬೇಕಾಗಿ ಅತಿವಿನಯದಿಂದ ಬೇಡುತ್ತೇನೆ.

ತಾ ೫-೧೦-೪೯. ಪಿ. ಐ. ಬೆಳ್ಯಪ್ಪ,
(ಒಬ್ಬ ಕಾಂಗ್ರೆಸು ಕೆಲಸಗಾರ)

ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಡೆಲ್ಲಿ.
ತಾ ೨೭-೯-೪೯.

ಡೆಲ್ಲಿಯ ಪತ್ರ.

ಪ್ರಿಯ ಸ್ನೇಹಿತರೆ,

ಕಾಂಗ್ರೆಸಿನ ಪ್ರಾಥಮಿಕ ಮೆಂಬರುಗಳನ್ನು ಸೇರಿಸಲು ಬೇಕಾಗ ಫಾರಂಗಳು ದೊರೆಯುವುದಿಲ್ಲವೆಂದು ನೀವು ತಾರೀಕು ೨೨-೯-೪೯ ಕಾಂಗ್ರೆಸಿನ ಪ್ರೆಸಿಡೆಂಟರಿಗೆ ಬರೆದ ಪತ್ರಕ್ಕೆ ಜವಾಬಾಗಿ ಪ್ರಾಥಮಿಕ ಮೆಂಬರುತನದ ಫಾರಮುಗಳನ್ನು ಪ್ರಿಂಟು ಮಾಡಿಸಲು ಯಾ ಮೆಂಬರುಗಳನ್ನು ಸೇರಿಸಲು ಯಾವ ಅಡಚಣೆಯೂ ಇಲ್ಲವೆಂದು ನಾನು ನಿಮಗೆ ತಿಳಿಸಬೇಕಾಗಿದೆ. ಆದಕಾರಣ, ನಿಮಗೆ ಜಿಲ್ಲಾ ಕಮಿಟಿಯಿಂದ ಫಾರಮುಗಳು ಸಿಕ್ಕುವುದಿಲ್ಲವೆಂದಾದರೆ ನೀವೇ ಅವುಗಳನ್ನು ಅಚ್ಚು ಹಾಕಿಸಬಹುದು. ಯಾ ಸೈಕ್ಲೋಸ್ಟೈಲ್ ಮಾಡಿಸಬಹುದು. ಮತ್ತು ಮೆಂಬರರನ್ನು ಸೇರಿಸುವ ಕೆಲಸವನ್ನು ಮುಂದೆ ಸಾಗಿಸಬಹುದು.

ನಿಮ್ಮ ವಿಶ್ವಾಸದ
ಎಲ್. ಎನ್. ಕೌಶಿಕ,
(ಆರ್ಗನೈಸಿಂಗ್ ಸೆಕ್ರೆಟರಿ)

ಕೊಡಗಿನ ಭವಿಷ್ಯ.

ಜನರ ತೀರ್ಮಾನಗಳು.

ಈ ತಾರೀಕು ೩ನೇ ಸೋಮವಾರ ಬೇರಳಿ ನಾಡಿನವರು ರುದ್ರುಗಪ್ಪೆ ಭಗವತಿ ದೇವಸ್ಥಾನದಲ್ಲಿ ಸಭೆಸೇರಿದ್ದರು. ಶ್ರೀ ಕಾಳೇಂಗಡ ಚಿಣ್ಣಪ್ಪನವರು ಅಧ್ಯಕ್ಷರಾಗಿದ್ದರು. ಶ್ರೀಗಳಾದ ಪಿ. ಐ. ಬೆಳ್ಯಪ್ಪನವರು, ಪಿ. ಸಿ. ಉತ್ತಯ್ಯನವರು, ಬಿ. ಸಿ. ಬೋಪಯ್ಯನವರು, ಮಾಚೆಟ್ಟಿರ ಮುತ್ತಣ್ಣನವರು ಮತ್ತು ಮಳ್ಳಂಡ ಚಿಣ್ಣಪ್ಪನವರು ಭಾಷಣಮಾಡಿದರು. ನಂತರ ಈ ಕೆಳಗಿನ ಠರಾವುಗಳು ಸರ್ವಸಮ್ಮತದಿಂದ ಪಾಸಾದವು.

೧. 'ಇಂಡಿಯಾ ಪಾರ್ಲಿಮೆಂಟಿನಲ್ಲಿ ಕೊಡಗಿನ ಭವಿಷ್ಯತ್ತನ್ನು ನಿಶ್ಚಯಿಸುವಾಗ್ಯೆ ಕೊಡಗನ್ನು ಪ್ರತ್ಯೇಕ ಪ್ರಾಂತ್ಯವಾಗಿಯೇ ಇಟ್ಟು, ಸಂಪೂರ್ಣ ಜವಾಬ್ದಾರಿ ಸರ್ಕಾರ ಕೊಡತಕ್ಕದ್ದು, ಅಲ್ಲದೆ ಈ ಪ್ರಾಂತ್ಯವನ್ನು ಬೇರೆ ಪ್ರಾಂತ್ಯಕ್ಕೆ ಸೇರಿಸುವುದಾದರೆ ಇಲ್ಲಿಯ ಜನರ ಅಭಿಪ್ರಾಯವನ್ನು 'ರೆಫರೆಂಡಂ' ಮೂಲಕ ತೆಗೆಯದೆ ಹಾಗೆ ಸೇರಿಸಕೂಡದು.

೨ 'ಕೇಂದ್ರ ನ್ಯಾಯ ವಿಧಾಯಕ ಸಭೆಗೆ ಬೇಗನೆ ನಡೆಯಲಿಕ್ಕಿರುವ ಚುನಾವಣೆಯಲ್ಲಿ ಕೊಡಗಿನ ಪ್ರತಿನಿಧಿಯನ್ನು ಇಲ್ಲಿಯ ಕೌನ್ಸಿಲಿನ ಮೂಲಕ ಆರಿಸಕೂಡದು; ಬದಲು ಓಟರುಗಳ ನೇರ ಚುನಾವಣೆಯ ಮೂಲಕ ಆರಿಸತಕ್ಕದ್ದು.'

೩. 'ಈಗಿನ ಕೊಡಗು ನ್ಯಾಯ ವಿಧಾಯಕ ಸಭೆಯ ಅವಧಿಯು, ೧೯೪೬ರಲ್ಲೇ ಮುಗಿದು ಹೋಗಿರುವುದರಿಂದ ಸದ್ರಿ ಸಭೆಯ ಹೊಸ ಚುನಾವಣೆಯನ್ನು ಕೂಡಲೆ ನಡಿಸತಕ್ಕದ್ದು.'

೪ 'ಹೊಸರಾಜ್ಯ ಘಟನೆಯು ಅಮಲಿಗೆ ಬಂದು ಸಂಪೂರ್ಣ ಪ್ರಜಾ ಜವಾಬ್ದಾರಿ ಸರ್ಕಾರ ಪದ್ಧತಿ ಜಾರಿಗೆ ಬರುವವರೆಗೆ ತಾತ್ಕಾಲಿಕವಾಗಿ ಕೆಲವು ಮಟ್ಟಿಗಿನ ಜವಾಬ್ದಾರಿ ಸರ್ಕಾರವನ್ನಾದರೂ ಕೂಡಲೇ ಮಂಜೂರು ಮಾಡತಕ್ಕದ್ದು.'

ವೀರಾಜಪೇಟೆ.

ಈ ತಾ ೨ರಲ್ಲಿ ವೀರಾಜಪೇಟೆಯ ರೀಡಿಂಗ್ ರೂಂ ಬಳಿ ನಡೆದ ಪಬ್ಲಿಕ್ ಮೀಟಿಂಗಿನಲ್ಲಿ ಶ್ರೀ. ಕೋದಂಡ ನಂಜಪ್ಪನವರು ಅಧ್ಯಕ್ಷಸ್ಥಾನವಹಿಸಿದ್ದರು. ಶ್ರೀಗಳಾದ ಪಿ ಐ ಬೆಳ್ಯಪ್ಪ, ಬಿದ್ದಂಡ ಸುಬ್ಬಯ್ಯ, ಕೆ ಸಿ ಕರುಂಬಯ್ಯ, ಮತ್ತು ಬಿ ಪಿ ಬೋಪಯ್ಯನವರು ಭಾಷಣ ಮಾಡಿದರು. ನಂತರ ಮೇಲ್ಕಾಣಿಸಿದಂತೆ ನಾಲ್ಕು ಠರಾವುಗಳು ಯಾರ ವಿರೋಧವಿಲ್ಲದ ಮಂಜೂರಾದವು.

ಮೂರ್ನಾಡು.

ಮೂರ್ನಾಡಿನ ಸಭೆಯೊಂದು ಈ ತಾ. ೬ರಲ್ಲಿ ಮೂರ್ನಾಡಿನಲ್ಲಿ ನಡೆಯಿತು. ಶ್ರೀ ಬಡುವಂಡ ಗಣಪತಿಯವರು ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದರು. ಶ್ರೀಗಳಾದ ಪಿ ಐ ಬೆಳ್ಯಪ್ಪನವರು, ಬಲ್ಲಡಿಚಂಡ ಬೋಪಯ್ಯನವರು, ಕೊಂಬಂಡ ಮೊಣ್ಣಪ್ಪನವರು, ಪಳಂಗಂಡ ನಂಜಪ್ಪನವರೇ ಮೊದಲಾದವರು ಭಾಷಣ ಮಾಡಿದರು. ಮೇಲೆ ಕಾಣಿಸಿದ ಮೀಟಿಂಗುಗಳಲ್ಲಾದಂತೆಯೇ ನಾಲ್ಕು ಠರಾವುಗಳು ಪಾಸಾದವಲ್ಲದೆ, ಶ್ರೀ ಕೆ. ಯಂ. ಮೊಣ್ಣಪ್ಪನವರ ಸೂಚನೆಯಂತೆ 'ಬರುವ ಕೌನ್ಸಿಲು ಮೀಟಿಂಗಿನಲ್ಲಿ ಚರ್ಚೆಗೆ ಬರುವ ವ್ಯವಸಾಯ ಆದಾಯ ತೆರಿಗೆಯ ಮಸೂದೆಗೆ ಕೌನ್ಸಿಲಿನ ಚುನಾಯಿತ ಪ್ರತಿನಿಧಿಗಳೆಲ್ಲರೂ ಒತ್ತಾಸೆಕೊಡಬೇಕೆಂದು ಈ ಸಭೆಯು ಅವರನ್ನು ಕೇಳಿಕೊಳ್ಳುತ್ತದೆ' ಎಂಬ ಠರಾವೂ ಒಮ್ಮತದಿಂದ ಮಂಜೂರಾಯಿತು.

ಬಾಳೆಲೆ ಹೈಯರ್ ಎಲಿಮೆಂಟರಿ ಶಾಲೆ.

ಇದೇ ತಾರೀಕು ೨೧-೯-೪೯ನೇ ಬುಧವಾರ ದಿವಸ ಕೊಡಗಿನ ಚೀಫ್ ಕಮಿಷನರ್ ಸಾಹೇಬರವರ ಅಧ್ಯಕ್ಷತೆಯಲ್ಲಿ ಬಾಳೆಲೆ ಹೈಯರ್ ಎಲಿಮೆಂಟರಿ ಶಾಲೆಯ ಅಸ್ತಿಭಾರವನ್ನು ಹಾಕುವ ಪ್ರಯುಕ್ತ, ಸಾರ್ವಜನಿಕ ಸಭೆಯೊಂದು ಬಾಳೆಲೆ ಕೇಂದ್ರದಲ್ಲಿ ಜರುಗಿತು. ಆ ಸಭೆಗೆ ಕೊಡಗಿನ ಅಸಿಸ್ಟೆಂಟ್ ಕಮಿಷನರರವರೂ, ಕೊಡಗಿನ ಜಿಲ್ಲಾ ವಿದ್ಯಾಧಿಕಾರಿಗಳೂ, ಇಂಜಿನೀಯರರೂ, ಮತ್ತು ಕೆಲವು ಇತರ ಅಧಿಕಾರಿಗಳೂ ದಯಮಾಡಿಸಿದ್ದರು.

ಮೊದಲಾಗಿ ಅಲ್ಲಿಯ ಸಾರ್ವಜನಿಕರು ತಮ್ಮ ಕಷ್ಟನಷ್ಟಗಳನ್ನೂ, ಅನಾನುಕೂಲಗಳನ್ನೂ, ನಿವೇದಿಸಿಕೊಂಡ ಮೇಲೆ ಚೀಫ್ ಕಮಿಷನರ್ ಸಾಹೇಬರವರು ಬಾಳೆಲೆ ಕೇಂದ್ರದಲ್ಲೊಂದು ಅಂಚೆಯಾಫೀಸನ್ನು ತೆರೆಯುವಂತೆಯೂ, ಅಲ್ಲಿಯ ನಾಲೆ ಮತ್ತು ಹೊಳೆಗಳಿಗಿರುವ ಅವಶ್ಯಕತೆಯನ್ನು ಪರಿಶೀಲಿಸಿ, ಸಹಾಯ ಮಾಡುವುದಾಗಿಯೂ ಮೊದಲಾಗಿ ಮಾತು ಕೊಟ್ಟರು. ಅನಂತರ ತಮ್ಮ ಅಧ್ಯಕ್ಷ ಭಾಷಣದಲ್ಲಿ ಮಾತನಾಡುತ್ತಾ, 'ನೀವು ಜಾತಿ ಭೇದಗಳನ್ನಿಡಕೂಡದು. ದೇವರು ಜಾತಿಭೇದಗಳನ್ನು ಮಾಡಲಿಲ್ಲ; ಬದಲು ಅವುಗಳನ್ನು ನಿರ್ಮಿಸಿರುವುದು ಮನುಷ್ಯರೇ. ನನ್ನ ಅಭಿಪ್ರಾಯದಲ್ಲಿ ಪ್ರಪಂಚದಲ್ಲಿರುವುದು ಎರಡೇ ಜಾತಿ. ಯಾರು ಒಳ್ಳೆಯ ಗುಣ, ನಡತೆಗಳನ್ನಿಟ್ಟುಕೊಂಡು ಸಜ್ಜನರಾಗಿ ವರ್ತಿಸುವರೋ ಅವರೇ ಮೇಲು ಜಾತಿಯವರು. ಯಾರು ಕೆಟ್ಟ ನಡತೆ ದುರ್ಗುಣಗಳಿಂದೊಡಗೂಡಿ ದುರ್ಜನರಾಗಿ ವರ್ತಿಸುವರೋ ಅವರೇ ಕೀಳು ಜಾತಿಯವರು. ಇದಲ್ಲದೆ ಬೇರೆ ಜಾತಿಯಿಲ್ಲ.

ವಿದ್ಯಾರ್ಥಿಗಳು ಶಾಲಾ ಕಾಲೇಜುಗಳಲ್ಲಿ ಬರೇ ಪಾಠಗಳನ್ನು ಮಾತ್ರ ಅಭ್ಯಸಿಸಿದರೆ ಸಾಲದು. ಇದಕ್ಕಿಂತಲೂ ಮುಖ್ಯ ಕಲಿಯಬೇಕಾದುದೇನೆಂದರೆ ಒಳ್ಳೆಯ ಗುಣ, ನಡತೆ ಮತ್ತು ಶಿಸ್ತು. ಇವುಗಳಿಲ್ಲದ ವಿದ್ಯಾರ್ಥಿಯು ವಿದ್ಯಾರ್ಥಿಯೇ ಅಲ್ಲ. ಒಳ್ಳೆಯ ಗುಣ, ನಡತೆ, ಶಿಸ್ತು, ಇವುಗಳನ್ನೇ ಧ್ಯೇಯವಾಗಿಟ್ಟುಕೊಂಡು ನಮ್ಮ ಕೊಡಗಿನ ಹೊಸ ಕಾಲೇಜು ತನ್ನ ಕಾರ್ಯಕಲಾಪಗಳನ್ನು ಮಾಡುತ್ತಿದೆ. ಸುಗುಣರಾದ ಮತ್ತು ಸಜ್ಜನರಾದ ಪ್ರಜೆಗಳನ್ನು ಉತ್ಪಾದಿಸುವುದೇ ನಮ್ಮ ಕಾಲೇಜಿನ ಗುರಿಯಾಗಿದೆ. ಆದುದರಿಂದ ಇಂತಹ ಕಾಲೇಜಿಗೆ ಬರುವ ಶಾಲಾ ವಿದ್ಯಾರ್ಥಿಗಳೂ ಸಹ ಅದೇ ಮಾರ್ಗವನ್ನನುಸರಿಸಬೇಕು. ಇಂದಿನಿಂದಲೇ ಇಂತಹ ಮನೋಭಾವಗಳನ್ನಿಟ್ಟು ಮಾಡಿಕೊಂಡದ್ದೇ ಆದರೆ ಮುಂದಕ್ಕೆ ಅದು ಬಹಳ ಸಹಾಯಕವಾಗುವುದು. ಇದನ್ನು ಬಿಟ್ಟು ದುರ್ಗುಣಗಳಿಂದ ಕೂಡಿ, ಕೆಟ್ಟ ಕೆಲಸಗಳಲ್ಲಿ ಪ್ರವರ್ತರಾಗುವ ವಿದ್ಯಾರ್ಥಿಗಳೊಬ್ಬರನ್ನೂ ಶಾಲಾ ಕಾಲೇಜುಗಳಲ್ಲಿಟ್ಟುಕೊಳ್ಳದೆ ಹೊರಗಟ್ಟಬೇಕೆಂಬುದೇ ನನ್ನ ಅಪೇಕ್ಷೆ' ಎಂದು ಹೇಳಿದರು.

ಸರ್ಕಾರ ಮತ್ತು ಸಮಾಜದ ಒಂದು ಒಳನೋಟ.

ಲೇ:- "ಓರ್ವರೈತ"

ಸಹಕಾರ ಇಲಾಖೆ.

ಸಹಕಾರ ಚಳುವಳಿಯಿಂದ ರೈತರ ಮತ್ತು ಇತರರ ಉದ್ಧಾರವಾಗಬೇಕೆಂಬುದಾಗಿ ಕೇಂದ್ರ ಸರಕಾರದವರು ಮತ್ತು ಕಾಂಗ್ರೆಸ್ಸಿನ ದೊಡ್ಡ ಮುಂದಾಳುಗಳು ಸಾರುವಲ್ಲಿಯೆ ಅಖಿಲ ಭಾರತ ಕಾಂಗ್ರೆಸ್ಸು ಸಹಕಾರಿ ರಾಜ್ಯಪದ್ಧತಿಯನ್ನು ಜಾರಿಗೆ ತರುವುದೇ ತನ್ನ ಧ್ಯೇಯವೆಂದು ಸಾರಿದೆ. ಅದರಂತೆಯೇ ಅನೇಕ ಪ್ರಾಂತ್ಯಗಳು ಹೆಚ್ಚಿನ ಆಸಕ್ತಿ ವಹಿಸಿ ಹಲವು ವಿಧದಲ್ಲಿ ಸಹಕಾರ ಚಳುವಳಿಗೆ ಬೆಂಬಲಕೊಡುತ್ತಿವೆ. ಆದರೆ ಇಲ್ಲಿಯ ಸಹಕಾರ ಚಳುವಳಿಗೆ ಸರ್ಕಾರದವರ ತಕ್ಕ ಪುರಸ್ಕಾರವಿಲ್ಲ. ಕಟ್ಟಡ ಮತ್ತು ಗುದಾಮುಗಳನ್ನು ಕಟ್ಟಲು ಕೊಂಚ ಮಟ್ಟಿಗೆ ಸಹಾಯವನ್ನಿತ್ತಿರುವುದಲ್ಲದೆ ಬೇರೆ ಯಾವ ವಿಧದಲ್ಲಿ ಹೆಚ್ಚಿನ ಬೆಂಬಲಕೊಡಲಿಲ್ಲ. ಕೊಡಗಿನ ಸರಕಾರವು ಆರ್ಥಿಕವಾಗಿಯಾಗಲಿ, ಬೇರೆ ರೀತಿಯಿಂದಾಗಲೀ ಸಹಾಯಮಾಡಲಿಲ್ಲ. ನಿಯಂತ್ರಿತ ವಸ್ತುಗಳ ವಿತರಣೆಯಲ್ಲೂ ಕೂಡ ಸಹಕಾರ ಸಂಸ್ಥೆಗಳ ಪೂರ್ಣ ಸದುಪಯೋಗ ಮಾಡಿಕೊಳ್ಳದೆ ಖಾಸಗಿ ಜನರ ಬೆನ್ನುತಟ್ಟಿತು. ಈ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವವರ ವೇತನದಲ್ಲೂ ಏಕೀಕರಣೆ ಇಲ್ಲ. ಆರೇಳು ವರ್ಷ ಕೆಲಸ ಮಾಡಿದರೂ ಖಾಯಂ ಆಗದವರೂ ಇದ್ದಾರೆ. ಈ ಜನತೆಯ ಇಲಾಖೆಯ ಬಗ್ಗೆ ಈ ಮಲತಾಯಿ ವರ್ತನೆ ಏಕೋ ತಿಳಿಯದು.

ಸರಕಾರದವರು ಹೆಚ್ಚು ಬೆಳೆಸಬೇಕೆಂಬುದಾಗಿ ಸಾರುತ್ತಿದ್ದಾರೆ. ರೈತರಿಗೆ ಯಾವ ತರಹದ ಸುಧಾರಣೆಗಳನ್ನೂ ಕೊಡದಿದ್ದರೆ ಅವರಿಗೆ ಹೇಗೆ ಉತ್ಸಾಹವು ಬರಬೇಕು? ರೈತರ ಆರ್ಥಿಕ ಸ್ಥಿತಿಯ ಬಗ್ಗೆ ತಜ್ಞರಿಂದ ವಿಚಾರ ನಡೆಸಿ ಸಾಲನಿವಾರಣೆ ಬಗ್ಗೆ ತಕ್ಕ ಸುಧಾರಣೆಗಳನ್ನು ಜಾರಿಗೆ ತರಬೇಕು. ಭೂಮಿ ಅಡಮಾನದ ಬ್ಯಾಂಕೊಂದನ್ನು ಸ್ಥಾಪಿಸಬೇಕೆಂಬುದಾಗಿ ೨-೩ ವರ್ಷಗಳಿಂದೀಚೆಗೆ ಚಳವಳಿ ನಡೆಯುತ್ತಿದ್ದರೂ ಸ್ಥಾಪನೆಯ ವಿಚಾರದಲ್ಲಿಯೇ ಇದೆ.

ರೈತರು ಯಾವ ಯಾವ ರೀತಿಯಲ್ಲಿ ಕಷ್ಟಪಡುತ್ತಿದ್ದಾರೆ ಎಂಬುದು ಈ ಕೆಳಗಿನ ನಿದರ್ಶನಗಳಿಂದ ತಿಳಿಯಬಹುದು.

(೧) ಸಂಘಗಳು ಮೆಂಬರುಗಳಿಗೆ ಸಾಲಕೊಡುವ ಸಂದರ್ಭಗಳಲ್ಲಿ ರಿಜಿಸ್ಟ್ರೇಶನ್ ಕೊಡಿಸಿಟ್ಟು ಬಹಳ ಭಾರದಿಂದ ಬೀಳುತ್ತಿದೆ. ೧೦ ವರ್ಷಗಳ ಹಿಂದೆ ಒಂದು ಗಾಡಿ ಬತ್ತಕ್ಕೆ ರೂ. ೪೫ ಯಾ ೫೦ ಇದ್ದಾಗ ಭೂಮಿಗೆ ತರಂ ಪ್ರಕಾರ ಬೆಲೆ ಕಟ್ಟಿ ತರಂ ಬೆಲೆಯ ಅರ್ಧಾಂಶ ಸಾಲಕೊಡಬಹುದೆಂದು ಸರ್ಕ್ಯೂಲರೊಂದನ್ನು ಹೊರಡಿಸಿದ್ದರು. ಆದರೆ ಇತ್ತೀಚೆಗೆ ಎಲ್ಲಾ ಸಾಮಾನುಗಳ ಬೆಲೆಯು ೪-೫ ಪಟ್ಟು ಏರಿರುವ ಸಮಯದಲ್ಲಿ ಮೇಲಿನ ರೀತಿ ಕೊಡುತ್ತಿದ್ದ ಸಾಲಕ್ಕಿಂತಲೂ ಕಡಿಮೆಯೆಂದರೆ ರೈತನು ಖಾಸಗಿ ಸಾಲಗಾರನ ಬಳಿಗೆ ಬೀಳುವಂತಾಗಿದೆ. ಕಡಿಮೆ ಸಾಲದ ಜೊತೆಗೆ ಮಂಜೂರ್ಮಾಡಿದ ಹಣದಿಂದ ಬಡ್ಡಿಯು ಉಳಿತಾಯ ಬೇರೆ! ದವಸಧಾನ್ಯಗಳಿಗೆ ಹೆಚ್ಚು ಬೆಲೆ ಇರುವ ಈ ಸಮಯದಲ್ಲಿ ಸಾಲಮಾಡಬಾರದೆಂಬ ತತ್ವನ ಮೇಲೆ ಇರಬಹುದು. ಆದರೆ ಪ್ರಪಂಚದ ರೈತರ ಚರಿತ್ರೆಯನ್ನು ತೆಗೆದುಕೊಂಡರೆ ರೈತನಿಗೆ ಯಾವಾಗಲೂ ಸಾಲಮಾಡಬೇಕಾಗುವುದು. ಇಲಾಖಾಧಿಕಾರಿಗಳ ಈ ವರ್ತನೆಯಿಂದ ಸತ್ಯನಿಷ್ಠೆಯಿಂದ ನಡಕೊಳ್ಳುವ ಮೆಂಬರುಗಳಿಗೆ ಬಹಳ ತೊಂದರೆಯಾಗಿದೆ. ಇದರ ಪರಿಣಾಮವಾಗಿ ರೈತರ ಆರ್ಥಿಕ ಸ್ಥಿತಿಯು ಇನ್ನೂ ಹದಗೆಡುತ್ತಿದೆ. ಸಾಲ ಪಡಕೊಳ್ಳುವ ಮೆಂಬರುಗಳ ತೊಂದರೆಯು ಸ್ವಲ್ಪ ಮಟ್ಟಿಗಾದರೂ ಸುಧಾರಣೆಯಾಗುವ ರೀತಿ ನ್ಯಾಯವಾದ ಕಾರ್ಯಕ್ಕೆ ಸಾಲ ಸಿಗದಿದ್ದರೆ ಇಂಥಾ ಸಂಘಗಳಿಂದ ಪ್ರಯೋಜನವೇನು? ಕೇಳಿದಷ್ಟು ಸಾಲ ಮಂಜೂರ್ಮಾಡಬೇಕೆಂಬುದಾಗಿ ನನ್ನ ಅಭಿಪ್ರಾಯವಲ್ಲ. ಆದರೆ ಸಾಲದ ಸದುಪಯೋಗ ಮಾಡುವವರಿಗೆ ಸಾಕಷ್ಟು ಸಾಲ ದೊರೆಯಬೇಕು.

ಪ್ರಾಂತೀಕ ಬ್ಯಾಂಕಿನವರು ಕೈಗೊಂಡಿರುವ ಸಂಘಗಳ ಮೇಲ್ವಿಚಾರಣೆಯು ಬಹಳ ಕೆಳಮಟ್ಟಕ್ಕೆ ಇಳಿದಿದೆ. ಸುಪರ್‌ವಿಜನು ಫಂಡು ಕೊಡುವುದೊಂದೇ ಅಲ್ಲದೆ ಇದರಿಂದ ಯಾವ ಸರಿಯಾದ ಪ್ರತಿಫಲವು ದೊರಕುತ್ತಿಲ್ಲ. ಯೂನಿಯನುಗಳು ನಾಮಕಾವಸ್ಥೆಯ ಸಂಸ್ಥೆಗಳಾಗಿವೆ. ಯೂನಿಯನ್ ಚಂದಾ, ಯೂನಿಯನ್ ಕಟ್ಟಡ ಚಂದಾ, ಪ್ರಯಾಣ ಭತ್ಯ, ದಿನ ಭತ್ಯ ಮತ್ತು ಕೂಲಿಕ್ಕಾ ಭ... ಯೂನಿಯನ್ ಮೆಂಬರುಗಳು ಮಾಡುತ್ತಿರುವುದೇನು? ಇನ್ನು ಮೇಲೆ ಊಟಮಾಡಲಿಕ್ಕೂ ಭತ್ಯ ಕೊಡಬೇಕಾಗುತ್ತೋ ಎಂಬ ಸಂಶಯ. ಈ ಮೇಲ್ಕಂಡ ರೀತಿಯಿಂದ ಸಂಘಗಳ ಹಣ ದುರುಪಯೋಗವಾಗುವುದರಿಂದಲೇ ಕೊಡಗಿನಲ್ಲಿ ಸಹಕಾರ ಸಂಘಗಳಲ್ಲಿ ಸಾಲದ ಮೇಲೆ ವಸೂಲಾಗುವ ಬಡ್ಡಿಯು ಹೆಚ್ಚಾಗಿರುತ್ತದೆ. ಒಂದು ಸಲಹೆಯನ್ನು ಕೊಡಬಹುದು. ಎಲ್ಲಾ ಯೂನಿಯನ್‌ಗಳನ್ನು ರದ್ದುಪಡಿಸಿ ಕೊಡಗಿಗೊಂದು ಯೂನಿಯನ್ ಸಂಸ್ಥೆಯನ್ನಿಟ್ಟುಕೊಂಡು ಬ್ಯಾಂಕಿನವರು ಮೇಲ್ವಿಚಾರಣೆಯನ್ನು ಇಂಥಾ ಯೂನಿಯನ್ನಿಗೆ ವರ್ಗಾಯಿಸುವುದು ಸೂಕ್ತ. ಇಲ್ಲವೇ ಸಂಘದವರು ಕೊಡುತ್ತಿರುವ ಸುಪರ್‌ವಿಜನ್ ಫಂಡನ್ನು ಸರ್ಕಾರವೇ ವಸೂಲ್ಮಾಡಿ ಈಗಿರುವ ಸುಪರ್‌ವೈಜರುಗಳನ್ನು ಒಫಿಸಿಯಲ್ ಇನ್ಸ್‌ಪೆಕ್ಟರುಗಳನ್ನಾಗಿ ನೇಮಿಸುವುದಲ್ಲದೆ ಆಡಿಟನ್ನು ಪ್ರತ್ಯೇಕಿಸಿ ಸೀನಿಯರ್ ಇನ್ಸ್‌ಪೆಕ್ಟರುಗಳಿಗೆ ಒಪ್ಪಿಸಿದರೆ ಖಂಡಿತವಾಗಿಯೂ ಸಹಕಾರ ಚಳುವಳಿಯು ಸರಿಯಾದ ರೀತಿಯಲ್ಲಿ ಬೆಳೆಯಬಹುದೆಂದು ನನ್ನ ಭಾವನೆ.

ಬಿನ್ನಪತ್ತಿನ ಸಂಘಗಳು ವಿಶೇಷವಾಗಿ ಸ್ಟೋರು ಸಂಘಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಪ್ರಮಾಣಿಕತನದಿಂದ ಕೆಲಸ ಮಾಡುವ ಆಡಳಿತ ಮಂಡಳಿಯವರು ಮತ್ತು ತರಬೇತಾದ ಸಿಬ್ಬಂದಿಗಳು ದೊರಕದ್ದರಿಂದ ಇಲ್ಲಿಯ ಸ್ಟೋರು ಸಂಘಗಳು ಮಗ್ಗಲೆಗೆ ಬೀಳಲು ಕಾರಣವೆಂದು ಹೇಳಬಹುದು. ಮದ್ರಾಸು ಪ್ರಾಂತ್ಯದಲ್ಲಿ ದೊಡ್ಡ ದೊಡ್ಡ ಸಂಸ್ಥೆಗಳಿಗೆ ಸೀನಿಯರು ಇನ್ಸ್‌ಪೆಕ್ಟರುಗಳಿಂದ ಡಿಪ್ಯುಟಿ ರಿಜಿಸ್ಟ್ರಾರುಗಳವರೆಗೆ ಸಹಕಾರ ಇಲಾಖೆಯ ಉದ್ಯೋಗಸ್ಥರ ಸರ್ವಿಸನ್ನು ಕೊಡಲಾಗಿದೆ. ಇದರಿಂದಲೇ ಮದ್ರಾಸು ಪ್ರಾಂತ್ಯದಲ್ಲಿ ಸ್ಟೋರು ಸಂಸ್ಥೆಗಳು ಮತ್ತು ದೊಡ್ಡ ಸಂಸ್ಥೆಗಳು ಬಹಳ ಚೆನ್ನಾಗಿ ಕೆಲಸ ಮಾಡುತ್ತಿವೆ. ನಮ್ಮ ಸರ್ಕಾರದವರು ಒಂದು ಸಂಸ್ಥೆಗಾದರೂ ಮೇಲ್ಕಂಡ ರೀತಿಯಲ್ಲಿ ಸಹಾಯ ಮಾಡಿರುವುದಿಲ್ಲ.

ಪ್ರಾಂತೀಕ ಬ್ಯಾಂಕ ಸ್ಥಾಪನೆಯಾಗಿ ಸುಮಾರು ೨೭ ವರ್ಷಗಳಾದರೂ ಒಂದು ಬ್ಯಾಂಕು ಮಾಡಬೇಕಾದ ಕಾರ್ಯಕಲಾಪಗಳನ್ನು ಕೈಗೊಂಡಿಲ್ಲವೆಂಬುದಾಗಿ ಹೇಳಿದರೆ ಬೇಸರವಾಗುತ್ತೆ. ಬ್ಯಾಂಕಿನ ತತ್ವಗಳನ್ನು ಅರಿಯದವರು ಕೆಲವರು ಬ್ಯಾಂಕಿನ ಡೈರೆಕ್ಟರುಗಳಿರುತ್ತಾರೆ! ಕೇವಲ ಒಂದು ಸ್ಥಾನಕ್ಕಾಗಿ ಡೈರೆಕ್ಟರಾಗುವುದರಿಂದ ಯಾರ ಹಿತವೂ ಆಗಲಾರದು. ಇಂಥಾವರು ಮೀಟಿಂಗುಗಳಿಗೆ ಬೆಳಗ್ಗೆ ಹನ್ನೊಂದು ಗಂಟೆಗೆ ಬಂದು ಬಸ್ಸು ಖರ್ಚು, ಕೂತ ಭತ್ಯ ಹೊಂದಿಕೊಂಡು ಮೀಟಿಂಗು ಸೇರುವುದಕ್ಕೆ ಮುಂಚೆಯೇ ಒಂದು ಗಂಟೆ ಬಸ್ಸಿನಲ್ಲಿ ಪ್ರಯಾಣ ಬೆಳೆಸುತ್ತಾರೆಂದು ವರ್ತಮಾನ. ಇದೆಲ್ಲವೂ ನಿಜವಾಗಿದ್ದರೆ ಇಂಥಾ ಡೈರೆಕ್ಟರುಗಳಿಂದ ಬ್ಯಾಂಕಿನ ಕಾರ್ಯಕಲಾಪಗಳು ಉತ್ತಮ ಸ್ಥಿತಿಗೆ ಬರುವುದೆಂತು?

ಈ ಮೇಲ್ಕಂಡ ನ್ಯೂನತೆಗಳಿದ್ದರೂ ಕೊಡಗಿನಲ್ಲಿ ಸಹಕಾರ ಸಂಘಗಳು (ಸ್ಟೋರು ಸಂಘಗಳನ್ನು ಬಿಟ್ಟು) ಚೆನ್ನಾಗಿ ಕೆಲಸ ಮಾಡುತ್ತಿವೆ ಎಂದು ನನ್ನ ಇಲ್ಲಿಯ ಅನುಭವದಿಂದ ಹೇಳಬಲ್ಲೆ. ಇಲ್ಲಿಯ ಸಹಕಾರ ಚಳುವಳಿಯು ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷ ರೀತಿಯಲ್ಲಿ ಬಹಳ ಪ್ರಯೋಜನವನ್ನುಂಟುಮಾಡಿದೆ. ಉದಾಹರಣೆಗಾಗಿ ಗ್ರಾಮದಲ್ಲಿ ಜನಜಾಗೃತಿಯನ್ನುಂಟುಮಾಡಲು ಮತ್ತು ವಿದ್ಯೆಗೆ ಹೆಚ್ಚಿನ ಪ್ರೋತ್ಸಾಹ ಕೊಡಲು ಕೆಲವು ಮಟ್ಟಿಗೆ ಸಹಕಾರ ಸಂಘಗಳೇ ಕಾರಣವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಕೆಲವು ಸಂಘಗಳು ಗ್ರಾಮಾಭಿವೃದ್ಧಿ ಕಾರ್ಯದಲ್ಲೂ ಹೆಚ್ಚಿನ ಆಸಕ್ತಿ ವಹಿಸಿ ಕೆಲಸ ಮಾಡಿವೆ. ಇಂಡಿಯಾ ಸರ್ಕಾರದವರು ಕಡ್ಡಾಯವಾಗಿ ಎಲ್ಲರೂ ಉಳಿತಾಯ ಮಾಡಬೇಕೆಂಬ ಕಾನೂನನ್ನು ಜಾರಿಗೆ ತರುವ ಅಭಿಪ್ರಾಯದಲ್ಲಿದ್ದಾರೆ. ಆದರೆ ನಮ್ಮಲ್ಲಿಯ ಸಹಕಾರ ಸಂಘದವರು ಮೆಂಬರುಗಳಲ್ಲಿ ಕಡ್ಡಾಯ ಮಿತವ್ಯಯ ಡಿಪಾಜಿಟ್ಟನ್ನು ಎಷ್ಟೋ ವರ್ಷಗಳ ಹಿಂದೆಯೇ ಜಾರಿಗೆ ತಂದಿದ್ದಾರೆ. ಇಲ್ಲಿಯ ಸಹಕಾರ ಪ್ರಗತಿಗೆ ಇನ್ನೂ ಅನೇಕ ಉದಾಹರಣೆಗಳನ್ನು ಕೊಡಬಹುದು. ಕೆಲವು ಜನರು ಮಾತ್ರ ಸಹಕಾರ ಚಳವಳಿಯಿಂದ ಯಾವ ಪ್ರಯೋಜನವಾಗಿರುವುದಿಲ್ಲವೆಂದು ಪ್ರತಿಪಾದಿಸುತ್ತಿದ್ದಾರೆ. ಇವರು ಯಾರು ಮತ್ತು ಇವರ ಉದ್ದೇಶವೇನು? ಸ್ವಾರ್ಥಪರರು ಬಂಡವಾಳಗಾರರು ಮತ್ತು ಸಿಕ್ಷಿತ ರಾಜಕೀಯ ತತ್ವ ಮತ್ತು ಸಾರ್ವಜನಿಕ ಜೀವನವಿಲ್ಲದ ಕೆಲವು ಅಪೂರ್ವ ಜನರು ಊಹಿಸಲಿಕ್ಕಾಗದಂತ ಹೊಲಸು ಭಾಷೆಯಲ್ಲಿ ಸಹಕಾರ ಚಳವಳಿಯು ಇಲ್ಲದಂತೆ ಮಾಡಲು ಪತ್ರಿಕೆಯ ಮುಖಾಂತರವೂ ಬಹಿರಂಗವಾಗಿಯೂ ಪ್ರಯತ್ನಪಡುತ್ತಿದ್ದಾರೆ! ಸಹಕಾರದ ವಿಷಯದಲ್ಲೇ ಅಲ್ಲ; ಪ್ರತಿಯೊಂದು ಬಾಬಿನಲ್ಲಿಯೂ ಇಂಥವರ ರೀತಿಗಳು ಇದ್ದೇ ಇವೆ. ಗ್ರಾಮದ ಜನರು ಮುಂದಕ್ಕೆ ಬಂದರೆ ಕೆಲವರಿಗೆ ತಲೆನೋವು ಉಂಟಾಗುತ್ತದೆ. ಅದ್ದರಿಂದ ಈ ರೀತಿಯ ಪ್ರಚಾರ.

ಕಪ್ಪು ಸಂತೆ.

ಉದ್ಯೋಗಸ್ಥರು ಲಂಚ ತೆಗೆಯುವುದನ್ನು ಮತ್ತು ವ್ಯಾಪಾರಸ್ಥರ ಕಪ್ಪುಸಂತೆಯನ್ನು ನಿರ್ಮೂಲಮಾಡಲು ಬೇರೆ ಪ್ರಾಂತ್ಯಗಳು ಅನೇಕ ರೀತಿಯ ಕಾರ್ಯಕ್ರಮಗಳನ್ನು ಕೈಗೊಂಡು ಫಲಿತಾಂಶವನ್ನು ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ. ಇಲ್ಲಿಯ ಸರ್ಕಾರವು ಯಾವ ರೀತಿಯ ಕ್ರಮವನ್ನು ತೆಗೆದುಕೊಂಡಂತೆ ಕಾಣುವುದಿಲ್ಲ. ಒಬ್ಬನಿಗಾದರೂ ಒಂದು ಶಿಕ್ಷೆಯಾದದ್ದು ಕಾಣುವುದಿಲ್ಲ. ಅಂದ ಮಾತ್ರಕ್ಕೆ ಕಪ್ಪುಸಂತೆ ಮತ್ತು ಲಂಚ ತೆಗೆಯುವುದು ಇದು ಇಲ್ಲವೇ? ಚೀಫ್ ಕಮಿಷನರವರು ಒಂದು ಕಡೆ ಭಾಷಣದಲ್ಲಿ ಹೇಳಿದಂತೆ ಬೇಲಿಯೇ ಹೊಲ ಮೇಯುವುದೆಂಬುದರಿಂದ ಸರ್ಕಾರದವರು ಕೈಕೊಂಡ ಕಾರ್ಯಕ್ರಮವು ಸಫಲವಾಗಿಲ್ಲವೆಂದು ಅರ್ಥವಾಗುವುದು. ಪ್ರಮಾಣಿಕತನದಿಂದ ಮತ್ತು ಸೇವಾತತ್ಪರತೆಯಿಂದ ಕೆಲಸ ಮಾಡುವ ಹುದ್ದೇದಾರರನ್ನು ಇಟ್ಟು ಕೆಲಸ ಮಾಡಿಸಿದರೆ ಅದರಿಂದ ಸಾರ್ವಜನಿಕರಿಗೆ ಪ್ರಯೋಜನವಾದೀತು.

ಕಲಿಯುಗದ ಅಸುರರು.

ಹಿಂದಿನ ಕಾಲದಲ್ಲಿ ರಾಕ್ಷಸರು ಇದ್ದರೆಂದೂ ಅವರು ನರಮಾಂಸ ಭಕ್ಷಣ ಮಾಡುತ್ತಿದ್ದರೆಂದೂ ಹೇಳಲಾಗಿದೆ. ಕಲಿಯುಗದಲ್ಲೂ ಅಂಥಾ ರಾಕ್ಷಸ ವರ್ಗಕ್ಕೆ ಸೇರಿದವರು ಮನುಷ್ಯರಾಗಿದ್ದಾರೆ! ಇವರ ಆಹಾರವು ಎಲ್ಲರಂತೆ ಇದ್ದರೂ ದುಡಿಯುವವರ, ಬಡವರ ಮತ್ತು ಅಜ್ಞಾನಿಗಳ ರಕ್ತವನ್ನು ಹೀರುವುದು ಇವರ ಹೆಚ್ಚಿನ ಆಹಾರ. ಯಾರ್ಯಾರನ್ನು ಈ ರಾಕ್ಷಸ ಗುಂಪಿಗೆ ಸೇರಿಸಬಹುದೆಂದು ಒಂದು ಪಟ್ಟಿಯನ್ನು ಕೊಡಲಾಗಿದೆ.

೧. ಜನರನ್ನು ಉಪವಾಸಕ್ಕೆ ಬೀಳಿಸಿ ಸಿಕ್ಕಿರುವ ಸ್ವಾರ್ಥತೆಯಿಂದ ಕೆಲಸ ಮಾಡುವವರು ಬೆಲೆಗೆ ಮಾಡುವವರು ಕಪ್ಪುಸಂತೆಯವರು.

೨. ಜನರಲ್ಲಿ ಜ್ಞಾನಶಕ್ತಿ ಮತ್ತು ಪುರೋಭಿವೃದ್ಧಿಯ ಅಭಿಪ್ರಾಯ ಹರಡದಂತೆ ಮಾಡುವ ಕೋಮುವಾದ ತತ್ವದ ತಬ್ಬಂಕರು.

೩. ಜನರನ್ನು ಹಿಂಡಿ, ಸರ್ಕಾರಕ್ಕೆ ವಂಚನೆಮಾಡಿ ಹಣ ಶೇಖರಿಸುವ ಅಪ್ರಮಾಣಿಕ ಉದ್ಯೋಗಸ್ಥರು.

೪. ದುಡಿಯುವವರಿಗೆ ಅವರ ನ್ಯಾಯವಾದ ಹಕ್ಕು ಭಾಧ್ಯತೆಗಳನ್ನು ನಿರಾಕರಿಸುವ ಭಂಡವಾಳಗಾರರು ದೊಡ್ಡ ಜಮೀನುಗಳನ್ನು ಕೈಗೊಂಡವರು ಮತ್ತು ಕೆಲವು ಭೂಮಾಲೀಕರು.

ಈ ಮೇಲ್ಕಂಡ ರೀತಿಯಲ್ಲಿ ಇನ್ನೂ ಅನೇಕ ಜನರನ್ನು ಈ ಪಂಗಡಕ್ಕೆ ಸೇರಿಸಬಹುದು.

ದುಷ್ಟರನ್ನು ಶಿಕ್ಷಿಸಿ ಶಿಷ್ಟರನ್ನು ಪರಿಪಾಲಿಸುವುದಕ್ಕೆ ಪರಮಾತ್ಮನು ಅವತಾರ ಎತ್ತುತ್ತಾನೆಂದು ಹೇಳಿದ. ಈಗಲೂ ಅವತಾರ ಎತ್ತುವನೆಂದು ಹೇಳಬಹುದು. ಕಣ್ಣಿಗೆ ಗೋಚರವಾಗುವ ರೀತಿ ಮನುಷ್ಯರೂಪದಿಂದಿರದೆ ತತ್ವ ಮತ್ತು ಸ್ವಭಾವದ ಮೂಲಕ ಈ ಅವತಾರವಾಗಲಿದೆ. ಆ ತತ್ವ ಮಾರ್ಗಗಳೇ ಪ್ರಜಾಧಿಪತ್ಯ ಸಮಾಜವಾದ ಮತ್ತು ಸಮತಾವಾದ. ರಾಕ್ಷಸ ಪಂಗಡಕ್ಕೆ ಸೇರಿದವರು ತಮ್ಮ ವರ್ತನೆಯನ್ನು ಬದಲಾಯಿಸದಿದ್ದರೆ ಈ ಪ್ರವಾಹಿಗಳ ಪ್ರವಾಹಕ್ಕೆ ಸಿಕ್ಕಿ ಪ್ರಪಂಚ ತಮ್ಮ ಆತ್ಮಹತ್ಯೆಯನ್ನು ಮಾಡಿಕೊಳ್ಳುವ ಸಮಯ ಬಂದೀತೆಂಬುದನ್ನು ತಿಳಿದು ಎಚ್ಚರದಲ್ಲಿರಲಿ.

ಸಾರ್ವಜನಿಕ ಸಭೆಗಳು.

ಕುಂಜಿಲಗೇರಿ.

ತಾರೀಕು ೨೫-೯-೪೯ ರಲ್ಲು ಕುಂಜಿಲಗೇರಿ ಗ್ರಾಮಸ್ಥರು ಸಭೆಸೇರಿ ಶ್ರೀ ಮುಕ್ಕಾಟಿರ ಕರುಂಬಯ್ಯನವರ ಅಧ್ಯಕ್ಷತೆಯಲ್ಲಿ ನಡೆಸಿದ ಮೀಟಿಂಗಿನಲ್ಲಿ ಈ ಕೆಳಗಿನ ಠರಾವುಗಳು ಸರ್ವಸಮ್ಮತದಿಂದ ಮಂಜೂರಾದವು.

೧. ಈ ಪ್ರಾಂತದಿಂದ ಪರಪ್ರಾಂತ್ಯಗಳಿಗೆ ಕೊಟ್ಟ ಭತ್ತ ಯಾ ಅಕ್ಕಿಗಾಗಿ ಸಿಕ್ಕಿರುವ ಬೋನಸು ಮೊಬಲಗನ್ನು ರೈತರಿಗೆ ಸಲ್ಲುವಂತೆ ಸರಕಾರವು ನಿಗವಿಡಬೇಕೆಂದೂ ವಿನಹ ಇತರ ಯಾತ ಉಪಯೋಗಕ್ಕೂ ಕೊಡಕೂಡದು.

೨. ಸ್ವರಾಜ್ಯದ ಹೆಜ್ಜೆಯಾಗಿ ಉಪಯೋಗಿಸಲ್ಪಟ್ಟ ೫ ಬೋರ್ಡನ್ನು ಸರಕಾರದವರು ಯೋಗ್ಯ ನೀತಿಗೆಡೆಗೊಟ್ಟು ಬೋರ್ಡಿನ ಕಾರ್ಯಗಳಿಗೆ ನೆರವಾಗಬೇಕೇ ವಿನಹ ಸರಕಾರದೊಡನೆ ಈಗಿನ ಸ್ಥಿತಿಯಲ್ಲಿ ಸಂಯೋಜಿಸಲು ಈ ಸಭೆಯು ವಿರೋಧಿಸುತ್ತದೆ.

೩. ಕರ್ತಂಗೆರಿಂದ ಬಿಟ್ಟಂಗಾಲ ಪಾರಾಣೆಗಾಗಿ ನಾಪೋಕ್ಲಿಗೆ ಹೋಗುವ ರಸ್ತೆಯನ್ನು ಶೀಘ್ರದಲ್ಲಿಯೇ ಮೆಟ್ಲಿಂಗ್ ರಸ್ತೆಯಾಗಿ ಮಾಡಿ ಲಾರಿ ಸರ್ವೀಸುಗೆ ಅನುಕೂಲವಾಗುವಂತೆ ಗಮನವಿಡಬೇಕಾಗಿ ಸರಕಾರದವರನ್ನು ಈ ಸಭೆಯು ಪ್ರಾರ್ಥಿಸುತ್ತದೆ.

೪. ಕಳೆದ ಆಗಸ್ಟ್ ತಾ ೧೪ ತಾರೀಕಿನಲ್ಲಿ ನಡೆದ ರಾಜ್ಯಘಟನಾ ಸಭೆಯಲ್ಲಿ ಕೊಡಗಿನ ಭವಿಷ್ಯದ ಕುರಿತು ಕೊಡಗಿನ ಪ್ರತಿನಿಧಿಯು ಸಭೆಯಲ್ಲಿ ಗೈರು ಹಾಜರಾಗಿ ಅವರು ಪರಿಸ್ಥಿತಿಯಲ್ಲಿ ಕೊಟ್ಟ ಸವಾಲು ಯಾತಕೆಯು ನ್ಯಾಯವಾಗಿ ಕಂಡು ಬಾರದ್ದರಿಂದ ಈ ಜವಾಬ್ದಾರಿಯನ್ನು ಅವರಿಗೆ ಬಿಡದೆ ಪ್ರತ್ಯೇಕ ಜವಾಬ್ದಾರಿ ಸರಕಾರವನ್ನು ಪಡೆಯಲು ಸ್ವಂತ ಖರ್ಚಿನಿಂದ ಒಂದು ನಿಯೋಗ ಗೋಷ್ಠಿಯನ್ನು ಡೆಲ್ಲಿಗೆ ಕಳುಹಿಸುವದು ಅಗತ್ಯವೆಂದು ಅದಕ್ಕೆ ತಗಲುವ ಖರ್ಚಿನ ಕೆಲಭಾಗವನ್ನು ಗ್ರಾಮಸ್ಥರು ನೀಡಬೇಕೆಂದು ತೀರ್ಮಾನವಾಯಿತು.

೫. ಗ್ರಾಮದ ಪ್ರತಿ ಒಬ್ಬರು ಕಂಪೋಸ್ಟ್ ಗೊಬ್ಬರವನ್ನು ವೈಜ್ಞಾನಿಕ ರೀತಿಯಲ್ಲಿ ಶೇಖರಿಸಬೇಕೆಂದೂ ಮತ್ತು ಗದ್ದೆ ಕಟ್ಟೆಗಳನ್ನು ಕ್ರಮಪ್ರಕಾರವಾಗಿ ಕಟ್ಟಬೇಕೆಂದೂ ಈ ಮೇಲ್ಕಂಡ ಸಲಹೆಗಳನ್ನು ಪರಿಶೀಲಿಸಿ ವ್ಯವಸಾಯ ಫೀಲ್ಡ್ ಮೆನ್ನರಿಗೆ ರಿಪೋರ್ಟ್ ಮಾಡಲು ಒಂದು ಸಮಿತಿಯನ್ನು ಆರಿಸಲಾಯಿತು.

ಬಾಡಗ.

ತಾರೀಕು ೨೨-೯-೪೯ ರಲ್ಲು ವೀರಾಜಪೇಟೆ ನಾಡು ಬಾಡಗ ಗ್ರಾಮಸ್ಥರು ಈಶ್ವರ ಭವನಬಂಡಾರದ ಕಟ್ಟಡದಲ್ಲಿ ಸೇರಿ ಶ್ರೀ ಚೀಕಮಾಡ ಮೇದಪ್ಪನವರ ಅಧ್ಯಕ್ಷತೆಯಲ್ಲಿ ಮೀಟಿಂಗು ನಡಿಸಿ ಈ ಕೆಳಗಿನ ಠರಾವುಗಳನ್ನು ಪಾಸುಮಾಡಲಾಯಿತು.

೧. ನಮ್ಮ ಗ್ರಾಮವು ಸುತ್ತಲೂ ಹೊಳೆ ಬೆಟ್ಟಗಳಾಗಿ ಒಂದು ದ್ವೀಪದಂತಿದೆ. ವಿಪರೀತ ಕಾಡು ಪ್ರದೇಶವಾಗಿ ವರ್ಷಕ್ಕೆ ೨೦೦ ಇಂಚಿಗಿಂತಲೂ ಹೆಚ್ಚು ಮಳೆಬೀಳುವಂತಾಗಿ ಹವಾಗುಣವು ಬಹು ಶೀತವಾಗಿ ಮಲೇರಿಯಾದ ತವರು ಮನೆಯಾಗಿ ಈ ಗ್ರಾಮವು ಎಲ್ಲಾ ಬಾಬಿನಲ್ಲಿ ಹಿಂದೆ ಬಿದ್ದಿದೆ. ಮಲೇರಿಯಾ ಇಲಾಖೆ ಸ್ಥಾಪನೆಯಾದಂದಿನಿಂದ ಈ ವರೆಗೆ ಗ್ರಾಮಸ್ಥರು ಎಷ್ಟು ಮೊರೆ ಇಟ್ಟರೂ ಮತ್ತು ಕಳೆದ ವೀರಾಜಪೇಟೆ ಜಮಾಬಂದಿ ಆಫೀಸರವರಿಗೆ ಖುದ್ದು ಅರ್ಜಿಕೊಟ್ಟಲ್ಲೂ ಕೂಡ ಈ ವರೆಗೆ ಯಾವದೊಂದು ಏರ್ಪಾಡು ತೋರಲಿಲ್ಲ. ಆದುದರಿಂದ ದಯಾಳು ಚೀಫ್ ಕಮಿಷನರವರು ನಮ್ಮ ಮೇಲಿನ ಸಂಗತಿಗಳನ್ನು ಖುದ್ದು ಬಂದು ಪರಾಂಬರಿಸಿ ನೋಡಿ ತಕ್ಕ ಸಲಹೆಯನ್ನೀಯಬೇಕು.

೨. ನಮ್ಮ ಪ್ರಾಂತಕ್ಕೆ ಇಂಡಿಯಾ ಸರಕಾರದಿಂದ ದೊರೆತಿರುವ ಬತ್ತದ ಬೋನಸ್ಸು ಹಣವನ್ನು ಬತ್ತ ಬೆಳೆಸಿದ ಮಾಲೀಕರಿಗೆ ಕೊಡಬೇಕಲ್ಲದೆ ಬೇರೆ ಯಾವ ಬಾಬ್ತಿಗೂ ಕೊಡಕೂಡದಾಗಿ ಸ್ಥಳೀಯ ಸರಕಾರವನ್ನು ಕೇಳಿಕೊಳ್ಳುವಂತೆ ತೀರ್ಮಾನಿಸಿದೆ.

೩. ಬೋನಸು ರೂಪದಲ್ಲಿ ಬಂದಿರುವ ಹಣವನ್ನು ಬತ್ತ ಬೆಳೆಸಿದ ಮಾಲೀಕರಿಗೆ ದೊರೆಯುವುದಾದಲ್ಲಿ ಈ ಭಾಗದ ಗ್ರಾಮಗಳಿಗೆ ದೊರೆಯುವ ಹಣವನ್ನು ನಮಗೆ ಅತ್ಯಾವಶ್ಯವಾಗಿರುವ ರುದ್ರಗುಪ್ಪೆ ಹೊಳೆಗೆ ಸೇತುವೆ ಕಟ್ಟಲಿಕ್ಕಾಗಿ ವಿನಿಯೋಗಿಸುವಂತೆಯೂ ಸಾಲದ ಹಣವನ್ನು ಸರಕಾರ ಹಾಕಿಕೊಳ್ಳಬೇಕೆಂದೂ ನಿರ್ಣಯವಾಯಿತು.

ಕೊಡವ ಸಮಾಜ ಮಹಾಸಭೆ.

ವೀರಾಜಪೇಟೆ ಕೊಡವ ಸಮಾಜದ ಮಹಾಸಭೆಯು ತಾರೀಕು ೧೮-೯-೪೯ರಲ್ಲಿ ವೀರಾಜಪೇಟೆಯಲ್ಲಿ ನಡೆಯಿತು.

ಬೆಳಗ್ಗೆ ೯ ಗಂಟೆಯಿಂದ ೧೧-೩೦ ಗಂಟೆ ವರೆಗೆ ಆಟ ಓಟಗಳ ಸ್ಪರ್ಧೆಯು ಸ್ಕೂಲ್ ಮೈದಾನದಲ್ಲಿ ನಡೆಯಿತು.

ಪೂರ್ವಾಹ್ನ ೧೧ರಿಂದ ಸಭೆ ಸೇರಿ ಪ್ರಾರ್ಥನೆ ಮಾಡಲಾಯಿತು. ಕಳೆದ ವರ್ಷದ ಮಹಾಸಭೆಯ ಮತ್ತು ವಿಶೇಷ ಮಹಾಸಭೆಯ ನಡವಳಿಕೆಗಳನ್ನು ಓದಲಾಯಿತು. ಆಡಳಿತ ಮಂಡಳಿಯವರ ವರದಿಯನ್ನು ಓದಿದ ನಂತರ ಸಮಾಜದ ಮಹಿಳೆಯರು ಬರೆದ ಆಫೀಲು ಅರ್ಜಿಯನ್ನು ಓದಲಾಯಿತು. ದೀರ್ಘ ಚರ್ಚೆಯಾದ ನಂತರ ಶ್ರೀ. ಪಿ. ಐ ಬೆಳ್ಯಪ್ಪನವರ ಮಧ್ಯಸ್ಥಿಕೆ ಮೇರೆ ವೀರಾಜಪೇಟೆ ನಗರ ಸಭೆಗೆ ಮೆಂಬರುತನದ ವಿಷಯ ಎಲ್ಲರಿಗೂ ತೃಪ್ತಿಕರವಾಗುವಂತೆ ತೀರ್ಮಾನಿಸಲಾಯಿತು.

ಮಧ್ಯಾಹ್ನ ಊಟವಾದ ನಂತರ ಸಭೆಯು ಪುನಃ ಸೇರಿತು. ಶ್ರೀ. ಪಿ. ಐ ಬೆಳ್ಯಪ್ಪನವರು ೧೫ ನಿಮಿಷ ಈಗಿನ ಹಿಂದೂದೇಶದ ಹಾಗೂ ಕೊಡಗು ದೇಶದ ರಾಜಕೀಯ ಪರಿಸ್ಥಿತಿ ವಿಷಯ ಮಾತಾಡಬೇಕೆಂದು ಸಭೆಯವರು ಕೇಳಿಕೊಂಡ ಮೇರೆ ಮಾತಾಡಿದರು.

ಮಹಾಸಭೆಯಲ್ಲಿ ಸಮಾಜದ ಆಡಿಟ್ ಲೆಕ್ಕಗಳನ್ನು ಓದಲಾಯಿತು. ಕರಡು ಮರಣ ಫಂಡು ಬೈಲಾ ಓದಿ ಚರ್ಚೆಯಿಂದ ತಿದ್ದುಪಡಿಯೊಡನೆ ಮಂಜೂರು ಮಾಡಲಾಯಿತು.

ವೀರಾಜಪೇಟೆಯಲ್ಲಿ ಟೆಕ್ನಿಕಲ್ ಇನ್ಸ್ಟಿಟ್ಯೂಟ್ ಸ್ಥಾಪಿಸಬೇಕೆಂದು ಸರಕಾರವನ್ನು ಕೇಳಿಕೊಳ್ಳುವಂತೆಯೂ ಅದಕ್ಕೆ ಡೆಪ್ಯುಟೇಶನ್ ಹೋಗುವಂತೆಯೂ ತೀರ್ಮಾನಿಸಲಾಯಿತು. ಕೊಡಗಿನ ನಿವಾಸಿಗಳೆಲ್ಲಾ ಒಂದೇ ದಿನ ಕೈಲ ಪೊಳುದು ಮತ್ತು ಹುತ್ತರಿ ಹಬ್ಬವನ್ನು ಆಚರಿಸಲು ತಕ್ಕ ಏರ್ಪಾಡು ಮಾಡಬೇಕೆಂದು ಕೊಡವ ಸಭೆಯವರನ್ನು ಕೇಳಿಕೊಳ್ಳುವಂತೆ ತೀರ್ಮಾನಿಸಲಾಯಿತು. ಸಮಾಜಕ್ಕೆ ಸ್ವಂತ ಕಟ್ಟಡದ ಏರ್ಪಾಡು ಮಾಡಬೇಕೆಂದು ತೀರ್ಮಾನಿಸಲಾಯಿತು. ಇನ್ನು ಮುಂದೆ ಮುನಿಸಿಪಲ್ ಚುನಾವಣೆಗೆ ಓಟರ್ಸ್ ಪಟ್ಟಿ ಪ್ರಕಾರ ನೋಟೀಸು ಮೂಲಕ ಬರಮಾಡಿ ಸಮಾಜವು ನಗರ ಸಭೆಗೆ ಮೆಂಬರುಗಳನ್ನು ಆರಿಸಬೇಕೆಂದು ತೀರ್ಮಾನಿಸಲಾಯಿತು.

ಕಾಲೇಜು ವಿದ್ಯಾರ್ಥಿಗಳ ನಂಬರು ಹೊರಬಿದ್ದ ಕೂಡಲೆ ಮೆಡಿಕಲ್ ಕಾಲೇಜಿಗೆ ಕಳುಹಿಸುವ ವಿದ್ಯಾರ್ಥಿಗಳನ್ನು ಆರಿಸಬೇಕಾಗಿಯೂ ಈಗ ಕೊಡಗಿಗಿರುವ ಸೀಟುಗಳನ್ನು ಹೆಚ್ಚಿಸಬೇಕೆಂದೂ ಕೋರಿಯು ಮಾರು ತಕ್ಷದ ಮೇರೆ ಆರಿಸಕೂಡದಾಗಿಯೂ ವಿದ್ಯಾ ಯೋಗ್ಯತೆ ಮೇರೆ ತಕ್ಕ ಏರ್ಪಾಡು ಮಾಡಬೇಕಾಗಿಯೂ ಸರಕಾರವನ್ನು ಕೇಳುವಂತೆ ತೀರ್ಮಾನಿಸಲಾಯಿತು. ಮುನಿಸಿಪಾಲಿಟಿಯಲ್ಲಿ ಈಗ ಇದ್ದ ಲ್ಯಾಂಪು ದೀಪ ಸ್ಟ್ರೀಟ್ ಲೈಟ್‌ಗಳು ಇರುವ ಏರ್ಪಾಡು ಮಾಡುವಂತೆಯೂ, ಇನ್ನೂ ದೀಪದ ಕಂಬಗಳನ್ನು ಹೆಚ್ಚಿಸುವಂತೆಯೂ ನಗರ ಸಭೆಯವರನ್ನು ಕೇಳಿಕೊಳ್ಳುವಂತೆ ತೀರ್ಮಾನಿಸಲಾಯಿತು. ವೀರಾಜಪೇಟೆ ಸಿವಿಲ್ ಆಸ್ಪತ್ರೆಯಲ್ಲಿ ಎಕ್ಸ್ ರೇ ಏರ್ಪಾಡು ಮಾಡಬೇಕಾಗಿ ಚೀಫ್ ಕಮಿಷನರವರನ್ನು ಕೇಳಿಕೊಳ್ಳುವಂತೆ ತೀರ್ಮಾನಿಸಲಾಯಿತು. ವೀರಾಜಪೇಟೆಯಲ್ಲಿ ಹಾಲಿನ ಅಭಾವವಿರುವುದರಿಂದ ಬಸ್ಸು ಪಟ್ಟೆಯಲ್ಲಿ ತರಲು ಯಾವ ತೊಂದರೆಯೂ ಇಲ್ಲದಂತೆಯೂ ತಕ್ಕ ರಿಯಾಯಿತಿ ತೋರಿಸಿ ಹಾಲು ಸರಬರಾಯಿ ಮಾಡುವ ಏರ್ಪಾಡು ಮಾಡಬೇಕಾಗಿ ಚೀಫ್ ಕಮಿಷನರವರನ್ನು ಕೇಳಿಕೊಳ್ಳುವಂತೆ ತೀರ್ಮಾನಿಸಲಾಯಿತು. ವೀರಾಜಪೇಟೆ ಮುನಿಸಿಪಾಲಿಟಿಗೆ ಗೂಳಿ ಎತ್ತು ಇಲ್ಲದ್ದರಿಂದ ನಗರ ಸಭೆಯವರನ್ನು ಆ ಬಗ್ಗೆ ತಕ್ಕ ಏರ್ಪಾಡು ಮಾಡಬೇಕೆಂದು ಕೇಳಿಕೊಳ್ಳುವಂತೆ ತೀರ್ಮಾನಿಸಲಾಯಿತು. ಚೀಫ್ ಕಮಿಷನರ್ಸ್ ಪ್ರಾಂತ್ಯಗಳ ವಿಷಯ ಕಳೆದ ಆಗಸ್ಟ್ ತಿಂಗಳ ೨ ಮತ್ತು ೩ ರಲ್ಲು ಘಟನಾ ಸಭೆಯಲ್ಲಿ ಚರ್ಚಿಸಿದಾಗ ಕೊಡಗಿನ ಪ್ರತಿನಿಧಿಯು ಹಾಜರಿಲ್ಲದೆಯೂ, ಕೊಡಗಿಗೆ ಜವಾಬ್ದಾರಿ ಸರಕಾರ ಪಡನೆ ರಚಿಸಬೇಕೆಂದು ಕೇಳಿಕೊಳ್ಳಲಿಕ್ಕೆ ಈ ಸಭೆಯು ವಿಷಾದಿಸುತ್ತದೆಂದೂ ಕೊಡಗು ದೇಶಕ್ಕೆ ಬೇರೆ ಪ್ರಾಂತ್ಯಗಳಿಗೆ ಕೊಟ್ಟ ಹಾಗೆ ಜವಾಬ್ದಾರಿ ಸರಕಾರ ಒಡನೆ ರಚಿಸಬೇಕೆಂದೂ ಡೊಮಿನಿಯನ್ ಪಾರ್ಲಿಮೆಂಟ್ ಸಭೆಯನ್ನು ಕೇಳಿಕೊಳ್ಳುವಂತೆ ತೀರ್ಮಾನಿಸಲಾಯಿತು. ವೀರಾಜಪೇಟೆ ಮುಸ್ಲಿಂ ಶಾಲೆಯನ್ನು ಮುನಿಸಿಪಲ್ ಪಬ್ಲಿಕ್ ಶಾಲೆಯಾಗಿ ಮಾಡಿ ಅದನ್ನು ಹೈಸ್ಕೂಲ್ ಆಗಿ ಮಾಡುವ ಪ್ರಯತ್ನ ತೆಗೆಯಬೇಕೆಂದು ನಗರ ಸಭೆಯನ್ನು ಕೇಳಿಕೊಳ್ಳುವಂತೆ ತೀರ್ಮಾನಿಸಲಾಯಿತು.

ಕೊಡಗಿನಲ್ಲಿ ಸರಕಾರಿ ಕಾಲೇಜು ಸ್ಥಾಪಿಸಿದಕ್ಕೆ ಸ್ಥಳೀಯ ಸರಕಾರವನ್ನು ವಂದಿಸಲಾಯಿತು. ಶ್ರೀ. ಪಿ ಐ ಬೆಳ್ಯಪ್ಪನವರು ನಮ್ಮ ದೇಶದ ಕಾಲೇಜು ಸ್ಥಾಪನೆಗೆ ಡೆಲ್ಲಿಗೆ ಹೋಗಿ ಪ್ರಾಮುಖ್ಯವಾದ ಸಹಾಯವನ್ನು ಸಲ್ಲಿಸಿದಕ್ಕೆ ಅವರನ್ನೂ ಸಹ ವಂದಿಸಲಾಯಿತು.

ವೀರಾಜಪೇಟೆ ಮುನ್ಸಿಪಾಲಿಟಿಯವರನ್ನು ನೀರು ಸರಬರಾಯಿಯ ಯೋಜನೆಯನ್ನು ಪಡೆದುಕೊಳ್ಳುವಂತೆಯೂ, ಮುನ್ಸಿಪಾಲಿಟಿಯಲ್ಲಿ ಒಂದು ಪುಸ್ತಕ ಭಂಡಾರವನ್ನು ತೆರೆಯುವಂತೆಯೂ ನಗರ ಸಭೆಯನ್ನು ಕೇಳಿಕೊಳ್ಳುವಂತೆ ತೀರ್ಮಾನಿಸಲಾಯಿತು. ವೀರಾಜಪೇಟೆ ಹೈಸ್ಕೂಲ್‌ನಲ್ಲಿ ವ್ಯಾಯಾಮ ಶಾಲೆ ಕಟ್ಟಿ ಮಳೆಗಾಲದಲ್ಲಿ ವಿದ್ಯಾರ್ಥಿಗಳಿಗೆ ವ್ಯಾಯಾಮದ ಅನುಕೂಲ ಮಾಡಿಕೊಡಬೇಕೆಂದು ಸರಕಾರವನ್ನು ಕೇಳಿಕೊಳ್ಳುವಂತೆ ತೀರ್ಮಾನಿಸಲಾಯಿತು. ಮುನಿಸಿಪಾಲಿಟಿಗೆ ಬರುವ ಲಾರಿಗಳನ್ನು ರಾತ್ರಿ ಎಂಟು ಗಂಟೆಯ ವೇಳೆ ಸಹ ಬಿಟ್ಟುಕೊಡುವ ಏರ್ಪಾಡು ಮಾಡಬೇಕೆಂದು ನಗರ ಸಭೆಯನ್ನು ಕೇಳಿಕೊಳ್ಳುವಂತೆ ತೀರ್ಮಾನಿಸಲಾಯಿತು. ಪೇಟೆಯಲ್ಲಿ ಜನರು ಹೆಚ್ಚುತ್ತಿರುವದಲ್ಲದೆ ಮನೆಬಾಡಿಗೆಯು ಏರುತ್ತಿರುವದರಿಂದ ಬೇರೆ ಪ್ರಾಂತಗಳಲ್ಲಿ ಮಾಡುವ ರೀತಿ ನಗರ ಸಭೆಯೇ ತನ್ನ ಜಾಗದಲ್ಲಿಯೂ ಬೇರೆ ಜನರ ಜಾಗದಲ್ಲಿ ಇಂಡಿಯಾ ಸರಕಾರದ ಮನೆ ಕಟ್ಟುವ ಯೋಜನೆಯಿಂದ ಧನ ಸಹಾಯ ಪಡೆದು ಮನೆಗಳನ್ನು ಕಟ್ಟಿಸುವ ಕಾರ್ಯ ಕೈಕೊಳ್ಳಬೇಕಲ್ಲದೆ ಮನೆ ಕಟ್ಟಲು ನಗರ ಸಭೆಯೇ ಪ್ಲಾನು ತಯಾರಿಸಿ ಕೊಡಬೇಕೆಂದು ನಗರ ಸಭೆಯನ್ನು ಕೇಳಿಕೊಳ್ಳುವಂತೆ ತೀರ್ಮಾನಿಸಲಾಯಿತು. ಕುಟುಂಬದಲ್ಲಿ ಅಣ್ಣ ತಮ್ಮಂದಿರ ಪೈಕಿ ಒಬ್ಬರು ನಿಸಂತತಿಯಾಗಿ ಮೃತಪಟ್ಟರೆ ಅವನ ಅನುಭವದ ಜೀವನದ ಆಸ್ತಿಯ ಬಳಿಕ ಇರುವ ಅಣ್ಣ ತಮ್ಮಂದಿರಿಗೆ ಪಕ್ಕಲ್ಲದೆ ಮೃತಪಟ್ಟ ಅಣ್ಣ ತಮ್ಮಂದಿರ ಮಕ್ಕಳಿಗೆ ಹಕ್ಕಿಲ್ಲವೆಂದು ಹಿಂದಿನ ಬಳುವನ್ನು ಎಲ್ಲಾ ಸಂಬಂಧಿಕರಿಗೂ ಹಕ್ಕಾಗುವಂತೆ ತಿದ್ದುಪಡಿ ಸೂಚಿಸಲು ಸಬ್ ಕಮಿಟಿ ನೇಮಕ ಮಾಡಲಾಯಿತು.

ಮುಂದಿನ ವರ್ಷಕ್ಕೆ ಈ ಸಂಘಕ್ಕೆ ಪ್ರೆಸಿಡೆಂಟರಾಗಿ ಶ್ರೀಮಾನ್ ಚೇಂದಂಡ ನಂಜಪ್ಪನವರನ್ನು ವೈಸ್ ಪ್ರೆಸಿಡೆಂಟರಾಗಿ ಶ್ರೀ. ಕೆ. ಪಿ ಕರುಂಬಯ್ಯನವರೂ ಸೆಕ್ರೆಟರಿಯಾಗಿ ಶ್ರೀ ಪಿ ಯಂ ಕರುಂಬಯ್ಯನವರನ್ನೂ ಕಮಿಟಿ ಮೆಂಬರುಗಳಾಗಿ ಹಳೆಯವರನ್ನೇ ನೇಮಿಸಲಾಯಿತು. ಶ್ರೀ. ಪಿ ಸಿ ಉತ್ತಯ್ಯನವರು ಸಮಾಜದ ಅಭಿವೃದ್ಧಿ ವಿಷಯ ಭಾಷಣ ಮಾಡಿದ ನಂತರ ಸಭೆಯು ಬರಕಾಸ್ತಾಯಿತು.

ದಿ ಟ್ರಾಪಿಕಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:– ಲಾಲ ಶಂಕರ್ ಲಾಲ್.

ಮುಖ್ಯ ಖಚೇರಿ:– ಹೊಸ ಡೆಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್

ಹಕೀಮ್ ಅಜಮಲಖಾನ್. ಡಾ|| ಎಂ. ಎ. ಅನ್ಸಾರಿ.

Transacts.—Life, Fire, Motor and Marine.

ನಮ್ಮ ಹೊಸ ವಿಸ್ತಾರದ ಯೋಜನೆಯಲ್ಲಿ ಆಕರ್ಷಕ ಕಮಿಷನ್ ಮೇಲೆ ಏಜನ್ಸಿಗೆ ದಯವಿಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಆರ್ಗನೈಜರ್
ದಕ್ಷಿಣ ಕೊಡಗು, ಪೊನ್ನಂಪೇಟೆ.
ಅ ಥ ವಾ
ಸಿ.ಂ ಯು. ಅಚ್ಚಂಡ,
ಏಜೆನ್ಸಿ ಸುಪರಿಂಟೆಂಡೆಂಟ್,
ಮಡಿಕೇರಿ, ಕೊಡಗು.

ಆರ್ಗನೈಜರ್
ಉತ್ತರ ಕೊಡಗು, ಮಡಿಕೇರಿ.
ಅ ಥ ವಾ
ಎಂ. ಎ. ಬೆಳ್ಯಪ್ಪ,
ಬ್ರಾಂಚ್ ಸೆಕ್ರೆಟರಿ,
ಹಂಪನಕಟ್ಟೆ, ಮಂಗಳೂರು.

ಎಂಪೈರ್ ಆಫ್ ಇಂಡಿಯಾ

ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

48ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು.	ಒಟ್ಟು ಆದಾಯ	1,07,09,000	ಮಿಕ್ಕಿದೆ
	ಚಾಲ್ತಿಯಿರುವ ವಿಮೆ	17,74,62,000	”
	ಆಸ್ತಿ	6,67,60,000	”
ಕಂಪೆನಿಯು ಅದಿಯಲ್ಲಿ ಕೊಟ್ಟ ಕ್ಲೈಮುಗಳು		8,83,62,000	”

ಅಂಗ ಕಛೇರಿ: ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಬೆಂಪೇಗೌಡರಸ್ತೆ, ಬೆಂಗಳೂರು. — ಏಜೆನ್ಸಿ ಅರ್ಜಿಗಳನ್ನು ಸ್ವಾಗತಿಸಿದೆ. — ಪ್ರಧಾನ ಕಛೇರಿ: ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ ಬೊಂಬಾಯಿ

ನಮ್ಮ ಗ್ರಾಹಕರಿಗೆ

ನಮ್ಮ ವಿಸ್ತೃತ ಯೋಜನೆಗನುಕೂಲವಾಗಿ "ದಾಸ ಪ್ರಕಾಶ" ದ ಎದುರು ಇದ್ದ ನಮ್ಮ ಅಂಗಡಿಯನ್ನು ಟೌನ್ ಹಾಲಿನ ಎದುರು ಇರುವ ಲಕ್ಷ್ಮೀ ಬಿಲ್ಡಿಂಗಿನ ವಿಶಾಲವಾದ ರೂಮಿನಲ್ಲಿ ತೆರೆಯಲಾಗಿದೆ. ಎಲ್ಲಾ ತರ ಹದ ಉಲನ್ ಮತ್ತು ಮಿಲ್ ಬಟ್ಟೆಗಳು ದೊರೆಯುತ್ತವೆ.

ಷಟ್ರೂ ಬ್ರದರ್ಸ್,
ಲಕ್ಷ್ಮೀ ಬಿಲ್ಡಿಂಗ್ಸ್,
ಟೌನ್ ಹಾಲಿನ ಎದುರು,
ಮೈಸೂರು.

ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್, ಫ್ರೇಜರ್ ಪೇಟೆ.

ಬೇಕಾಗಿದ್ದಾರೆ.

ಕೊಡಗಿನ ಪ್ರತಿ ಗ್ರಾಮ ಮತ್ತು ಪಟ್ಟಣಗಳಲ್ಲಿ ಬಿದ್ದು ಮಣ್ಣುಪಾಲಾಗಿ ಹೋಗುತ್ತಿರುವ ಮೂಳೆಗಳನ್ನು ಶೇಖರಿಸಿಕೊಡಲು ಪ್ರತಿ ಹಳ್ಳಿ ಮತ್ತು ಪಟ್ಟಣಗಳಲ್ಲಿ ಏಜೆಂಟರುಗಳು ಬೇಕಾಗಿದ್ದಾರೆ. ಏಜೆಂಟರುಗಳಿಗೆ ಧಾರಾಳವಾದ ಕಮಿಷನ್ ಕೊಡಲಾಗುತ್ತದೆ.

ನೋಂದಾಯಿತವಾದ ಏಜೆಂಟರುಗಳು ಕಂಪೆನಿಯಿಂದ ಗೊತ್ತಾದ ಸ್ಥಳಕ್ಕೆ ಮೂಳೆಗಳನ್ನು ಸಾಗಿಸಿ ಕೊಟ್ಟಲ್ಲಿ ಮಣ ಒಂದರ ರೂ. 0–12–0 ಯಂತೆ ಕೊಡಲಾಗುವುದು.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಫ್ರೇಜರ್‌ಪೇಟೆ,
ತಾ. 3 2-9-49

ಕೆ. ಕೆ. ತಿಮ್ಮಯ್ಯ,
ಮೇನೇಜಿಂಗ್ ಡೈರೆಕ್ಟರ್.

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,65,000.
ಕ್ಷೇಮನಿಧಿ	ರೂ.	50,000.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಆಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ ಮತ್ತು ನಾರ್ದರ್ನ್ ಇನ್ಸೂರೆನ್ಸ್ ಕಂಪನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ,
ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C.
ಪ್ರಸಿಡೆಂಟ್ ಮತ್ತು ಏಜಾಸ್ಟ್.

CRESCENT

FOR PROTECTION AND SERVICE.

It is best to represent and insure with

The CRESCENT Insurance Co., Ltd.,

H. O: BOMBAY. *[Established 1919.*

For particulars write to:

Sri B. A. Poovaiah or **The Branch Manager,**
Organiser *22 B. Mahatma Gandhi Road,*
Pollibetta, Coorg. *Bangalore 1.*

ಸುರಕ್ಷಿತವಾದ ಜೀವವಿಮೆ ಪಡೆಯಲು

ಕ್ರೆಸೆಂಟ್

ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.

ಕೊಡಗು ಪ್ರಾಂತೀಯ ಸಹಕಾರಿ, ಮಾರ್ಕೆಟಿಂಗ್ ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245 ರ ವರೆಗೆ.
2. 32 ರಿವಾಲ್ವರುಗಳು (Revolvers) ,, 262 ,, 274 ,,
3. 12ನೇ ನಂಬರಿನ ಜೋಡು ನಳಿಗೆಯ ಕೋವಿ (Webley & Scott) ಕ್ರಯ ರೂ. 1492/-
4. 12ನೇ ನಂಬರಿನ ಜೋಡು ನಳಿಗೆಯ ಕೋವಿ (Spanish make) ಕ್ರಯ ರೂ. 627–5–0
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4-10-0
6. 12, 16, 20ನೇ ನಂಬರು ಕೋವಿಗಳ ತೋಟಗಳೂ ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಗಳೂ ಸಹ ದೊರೆಯುತ್ತವೆ.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

52–9

Edited, Printed and Published by P. I. Bellhappa at 'Kodagu Press, Mercara, for 'Kodagu' Ltd.

Reg. No. M. 1590.
'KODAGU' MERCARA. (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5–0–0.

ಸಂಪುಟ ೨೮ | ತಾರೀಖು ೬-೧೧-೧೯೪೯ನೇ ಶುಕ್ರವಾರ | ಸಂಚಿಕೆ ೨೪

ಕೊಡಗಿನ ರೈತರ ಕರ್ತವ್ಯ.

ಕೊಡಗು ವ್ಯವಸಾಯ ಇಲಾಖೆಯಿಂದ

ನಮ್ಮ ಹಿಂದೂದೇಶವು ಮುಖ್ಯವಾಗಿ ರೈತರ ದೇಶವಾಗಿದ್ದರೂ ಸಾಧಾರಣ ವರ್ಷಗಳಿಂದಲೂ ನಮ್ಮ ದೇಶದಲ್ಲಿ ನಮ್ಮ ಜನರಿಗೆ ಬೇಕಾಗುವಷ್ಟು ಆಹಾರ ಪದಾರ್ಥಗಳು ಉತ್ಪತ್ತಿಯಾಗುತ್ತಿಲ್ಲ. ನಮಗೆ ಬೇಕಾಗುವ ಆಹಾರ ಪದಾರ್ಥಗಳನ್ನು ನಾವು ಈ ವರೆಗೂ ಪರದೇಶಗಳಿಂದ ಆಮದು ಮಾಡುತ್ತಿದ್ದೇವೆ. ಇತ್ತೀಚಿಗೆ ನಮ್ಮ ಜನ ಸಂಖ್ಯೆಯು ಹೆಚ್ಚುತ್ತಿರುವುದರಿಂದ ಈ ತೊಂದರೆಯು ದಿನೇ ದಿನೇ ಹೆಚ್ಚುತ್ತಲೇ ಇದೆಯಲ್ಲದೆ ಕಡಿಮೆಯಾಗುತ್ತಿಲ್ಲ.

ಮುಖ್ಯವಾಗಿ ನಮ್ಮ ಆಹಾರ ಪರಿಸ್ಥಿತಿಯು ಕೆಡಲು ನಮ್ಮ ದೇಶದ ಪ್ರತಿ ಎಕ್ರೆ ಭೂಮಿಯಲ್ಲಿ ಬೆಳೆಯುವ ಸರಾಸರಿ ಬೆಳೆಯು ಭೂಲೋಕದ ಇತರ ಎಲ್ಲಾ ದೇಶಗಳಲ್ಲಿ ಬೆಳೆಯುವ ಬೆಳೆಗಿಂತ ಬಹು ಮಟ್ಟಿಗೆ ಕಡಿಮೆಯಾಗಿರುವುದೇ ಕಾರಣವಲ್ಲದೆ ವ್ಯವಸಾಯದಲ್ಲಿರತಕ್ಕ ಜಮೀನಿನ ವಿಸ್ತೀರ್ಣ ಕಡಿಮೆಯಾದುದರಿಂದಲ್ಲ. ಉದಾಹರಣೆಗಾಗಿ ಹೇಳುವುದಾದರೆ ಭತ್ತದ ಬೆಳೆ ಬೆಳೆಯುವ ಜಪಾನ್ ದೇಶದಲ್ಲಿ ಪ್ರತಿ ಎಕ್ರೆಗೆ ಸರಾಸರಿಯಾಗಿ ೩೦೦೦ ಪೌಂಡು ಭತ್ತವನ್ನೂ, ಅಮೇರಿಕಾ ದೇಶದಲ್ಲಿ ಸರಾಸರಿಯಾಗಿ ೨೦೦೦ ಪೌಂಡು ಭತ್ತವನ್ನೂ ಕೊಡುತ್ತಿರುವಾಗ ಹಿಂದೂ ದೇಶದಲ್ಲಿ ಇದರ ಉತ್ಪತ್ತಿಯು ಸರಾಸರಿಯಾಗಿ ಬರೇ ೮೧೦ ಪೌಂಡುಗಳಷ್ಟಿದೆ. ಇಡೀ ಹಿಂದೂ ದೇಶದಲ್ಲಿ ಇತರ ಪ್ರಾಂತ್ಯಗಳಿಗಿಂತಾ ಹುಲುಸಾಗಿ ಬೆಳೆಯುತ್ತಿರುವ ಕೊಡಗು ದೇಶದಲ್ಲಿ ಕೂಡ ಇದರ ಉತ್ಪತ್ತಿಯು ಸರಾಸರಿಯಾಗಿ ಎಕ್ರೆಗೆ ೧೫೦೦ ಪೌಂಡುಗಳಷ್ಟು ಮಾತ್ರ ಇದೆ. ಇದೇ ರೀತಿಯಲ್ಲಿ ನಮ್ಮ ಯಾವುದೇ ಬೆಳೆಯನ್ನು ತೆಗೆದುಕೊಂಡರೂ ಕೂಡ ನಮ್ಮ ಉತ್ಪತ್ತಿಯು ಬೇರೆ ಎಲ್ಲಾ ದೇಶಗಳಿಗಿಂತಲೂ ಅನೇಕ ಪಾಲು ಕಡಿಮೆಯಾಗಿ ಕಂಡು ಬರುತ್ತದೆ.

ಹಿಂದೂದೇಶದಲ್ಲಿ ಸಾಧಾರಣವಾಗಿ ವರ್ಷಕ್ಕೆ ೬೦೦ಲಕ್ಷ ಟನ್ನುಗಳಷ್ಟು ಆಹಾರ ಪದಾರ್ಥಗಳ ಅವಶ್ಯಕತೆಯು ಕಂಡು ಬರುತ್ತದೆ. ಈ ಪೈಕಿ ಹೆಚ್ಚುಕಡಿಮೆಯಾಗಿ ೧೦೦ ಲಕ್ಷ ಟನ್ನು ಆಹಾರ ಪದಾರ್ಥಗಳನ್ನು ನಮ್ಮ ಉತ್ಪತ್ತಿಯು ಸಾಲದೆ ಹೊರ ದೇಶಗಳಿಂದ ತರಿಸಬೇಕಾಗಿದೆ. ಇದಕ್ಕಾಗಿ ನಮ್ಮ ಸರಕಾರವು ಒಂದಕ್ಕೆ ನಾಲ್ಕರಷ್ಟು ಬೆಲೆಕೊಟ್ಟು ಸಾಲದಿರುವ ಆಹಾರ ಪದಾರ್ಥಗಳನ್ನು ತರಿಸಿ ಒದಗಿಸುತ್ತಿದೆ. ಹೆಚ್ಚಿನ ಬೆಲೆ ಕೊಟ್ಟು ತಂದ ಆಹಾರ ಪದಾರ್ಥಗಳನ್ನು ಅದೇ ಬೆಲೆಗೆ ಮಾರುವುದಾದರೆ ಜನರಿಗೆ ಅವನ್ನು ಕೊಂಡುಕೊಳ್ಳುವ ಶಕ್ತಿ ಇಲ್ಲ. ಕಾರಣ ಹೆಚ್ಚಿನ ಧಾರಣೆಯನ್ನು ಸರಕಾರದವರೇ ಹೊತ್ತುಕೊಂಡು ಸಾಮಾನ್ಯ ಬೆಲೆಗೆ ಇದನ್ನು ಮಾರುತ್ತಿದ್ದಾರೆ. ಇದರಿಂದಾಗಿ ನಾವು ಕೊಡುವ ತೆರಿಗೆಯಲ್ಲಿ ಕೋಟ್ಯಂತರ ರೂಪಾಯಿಗಳು ನಮ್ಮ ಜನರಿಗೆ ಆಹಾರ ಪದಾರ್ಥಗಳನ್ನು ಒದಗಿಸುವುದರಲ್ಲಿಯೇ ವೆಚ್ಚವಾಗಿ ಜನರ ಹಿತಕ್ಕಾಗಿ ನಮ್ಮ ಜನಾಂಗದ ಏಳಿಗೆಗೆ ಬೇಕಾದ ಇನ್ನಿತರ ಮುಖ್ಯ ವಸ್ತುಗಳನ್ನು ತರಿಸಿಕೊಳ್ಳಲು ದೇಶೋದ್ಧಾರಕ ಕೆಲಸಗಳ ಪೈಕಿ ಅನೇಕ ಕೆಲಸಗಳನ್ನು ಕೈಕೊಳ್ಳಲು ನಮ್ಮ ಸರಕಾರಕ್ಕೆ ಸಾಧ್ಯವಾಗದೆ ನಾವು ಅತ್ಯಂತ ಕಷ್ಟದಲ್ಲಿ ಸಿಕ್ಕಿರುತ್ತೇವೆ. ನಮ್ಮಲ್ಲಿ ಅನೇಕರು ನಮಗೆ ಸ್ವರಾಜ್ಯ ಸಿಕ್ಕಿ ಎರಡು ವರ್ಷಗಳು ಕಳೆದರೂ ನಮಗೆ ಇನ್ನೂ ನ್ಯಾಯವಾದ ಸುಧಾರಣೆ ಅಥವಾ ಸಲಕರಣೆಗಳಾವುದೂ ದೊರಕಿಲ್ಲವೆಂದು ಹೇಳುತ್ತಿದ್ದಾರೆ. ಯಾವ ಸುಧಾರಣೆಯನ್ನು ತರಬೇಕಾದರೂ ಹಣವು ಬಹಳ ಅವಶ್ಯಕ. ದೇಶದ ಹಣವೆಲ್ಲಾ ದೇಶದ ಜನರಿಗೆ ಬೇಕಾದ ಆಹಾರ ಪದಾರ್ಥಗಳನ್ನು ಒದಗಿಸುವುದರಲ್ಲೇ ಖರ್ಚು ಆಗುವಂತಿದ್ದರೆ ಸುಧಾರಣೆಗಳನ್ನೊದಗಿಸಲು ಹಣ ಇರಲಿಕ್ಕಿಲ್ಲವೆಂಬುದನ್ನು ನಾವು ಮೊದಲಾಗಿ ಜ್ಞಾಪಕದಲ್ಲಿಡಬೇಕು. ನಮಗೆ ಸುಧಾರಣೆಗಳು ಸಿಕ್ಕಿ ನಮ್ಮ ದೇಶವು ಮುಂದುವರಿಯಬೇಕೆಂಬ ಆಕಾಂಕ್ಷೆಯು ಪ್ರತಿಯೊಬ್ಬ ಹಿಂದಿಯನಲ್ಲಿಯೂ ಇದೆಯೆಂಬುದರಲ್ಲಿ ಯಾವ ಸಂಶಯವೂ ಇರುವುದಿಲ್ಲ. ಆದರೆ ನಾವು ಬರೀ ಆಕಾಂಕ್ಷೆಯನ್ನು ಮಾತ್ರ ಇಟ್ಟುಕೊಂಡರೆ ಸಾಲದು. ದೇಶದ ಪ್ರತಿಯೊಬ್ಬ ರೈತನೂ ತಾನು ಈಗ ಬೆಳೆಯುವ ಆಹಾರ ಪದಾರ್ಥಗಳನ್ನು ಹೊರದೇಶಗಳಿಂದ ತರಿಸುವ ಸಲುವಾಗಿ ಅನಾವಶ್ಯಕವಾಗಿ ಖರ್ಚು ಮಾಡುತ್ತಿರುವ ಕೋಟ್ಯಂತರ ರೂಪಾಯಿಗಳನ್ನು ಉಳಿಕೆ ಮಾಡುವ ಪ್ರಯತ್ನವನ್ನು ಮಾಡಿದರೆ ಮಾತ್ರ ನಮ್ಮ ದೇಶವು ಮುಂದುವರಿಯಲು ಸಾಧ್ಯವಿದೆ.

ಹೆಚ್ಚು ಬೆಳೆಗಳನ್ನು ಬೆಳೆಯಲು ನಾನಾ ದಾರಿಗಳಿವೆ. ಇವುಗಳಲ್ಲಿ ಮುಖ್ಯವಾದವುಗಳು ಯಾವುವೆಂದರೆ:—

(೧) ಹೆಚ್ಚು ಜಮೀನುಗಳನ್ನು ರೂಪಿತ ಮಾಡುವುದು. (೨) ನೀರಿನ ಸರಬರಾಯಿ ಸಾಕಷ್ಟಿಲ್ಲದ ಜಮೀನುಗಳಿಗೆ ನೀರನ್ನು ಒದಗಿಸುವ ಅಥವಾ ತೇವವು ಹೆಚ್ಚಾಗಿರುವ ಜಮೀನುಗಳಲ್ಲಿ ತೇವವನ್ನು ಆರಿಸುವ ತಕ್ಕ ಏರ್ಪಾಡುಗಳನ್ನು ಮಾಡುವುದು. (೩) ಹೆಚ್ಚು ಫಲಗಳನ್ನು ಕೊಡುವ ಉತ್ತಮ ತರದ ಬೀಜಗಳನ್ನು ಉಪಯೋಗಿಸುವುದು. (೪) ಸಾಕಷ್ಟು ಉತ್ತಮ ತರದ ಮತ್ತು ತಕ್ಕದಾದ ಗೊಬ್ಬರವನ್ನು ಉಪಯೋಗಿಸುವುದು. (೫) ಸುಧಾರಿಸಿದ ವ್ಯವಸಾಯದ ಹತ್ಯಾರುಗಳನ್ನು ಉಪಯೋಗಿಸುವುದು. (೬) ಸರಿಯಾದ ರೀತಿಯಲ್ಲಿ ಮತ್ತು ಕಾಲಕ್ಕೆ ಸರಿಯಾಗಿ ವ್ಯವಸಾಯಮಾಡುವುದು. (೭) ಕಳೆ ಮೊದಲಾದುವುಗಳನ್ನು ಕಾಲಕ್ಕೆ ಸರಿಯಾಗಿ ತೆಗೆಯುವುದು. (೮) ಬೆಳೆಗೆ ತಗಲುವ ರೋಗ ಹುಳು ಹಪ್ಪಟೆಗಳನ್ನು ಸಕಾಲದಲ್ಲಿ ನಾಶಮಾಡುವುದು. ಇವೇ ಮುಂತಾದವುಗಳು. ಆಹಾರ ಪದಾರ್ಥಗಳನ್ನು ಹೆಚ್ಚಿಸಲು ಮೇಲಿನ ದಾರಿಗಳಲ್ಲದೆ ಒಂದೊಂದು ಎಕ್ರೆಯಲ್ಲಿಯೂ ಹೆಚ್ಚು ಉತ್ಪತ್ತಿಯನ್ನು ಕೊಡುವ ಗಡ್ಡೆಗೆಣಸುಗಳನ್ನು ಬೆಳೆಯಬಹುದು.

ಹೆಚ್ಚಿನ ಜಮೀನುಗಳನ್ನು ರೂಪಿತಗೊಳಿಸುವ ವಿಧಾನವು ಎಲ್ಲಾ ಕಡೆಗಳಲ್ಲೂ ಮತ್ತು ಎಲ್ಲಾ ಸಮಯಗಳಲ್ಲೂ ಸಾಧ್ಯವಿಲ್ಲದಿರುವುದು ಮಾತ್ರವಲ್ಲದೆ ದೂರ ದೃಷ್ಟಿಯಲ್ಲಿ ಇದು ಸರಿಯಾದ ಕ್ರಮವೂ ಆಗಿರುವುದಿಲ್ಲ. ಕೊಡಗಿನಲ್ಲೇ ನಡೆದ ಸಂಗತಿಯನ್ನೇ ನಾವು ಕೆಲವು ಮಟ್ಟಿಗೆ ವಿಚಾರಿಸಿದಲ್ಲಿ ಈ ವಿಧಾನದಿಂದ ಎಷ್ಟರ ಮಟ್ಟಿಗೆ ಪ್ರಯೋಜನವಾಗಬಹುದು ಎಂಬುದು ಗೊತ್ತಾಗುವುದು. ಒಂದನೇ ಘೋರ ಯುದ್ಧದನಂತರ ಬತ್ತಕ್ಕೆ ಬೆಲೆ ಹೆಚ್ಚಾದುದರಿಂದ ಜನರೆಲ್ಲರೂ ಸಾಧ್ಯವಾದಷ್ಟು ಮಟ್ಟಿಗೆ ಹೊಸ ಜಮೀನುಗಳನ್ನು ರೂಪಿತಗೊಳಿಸಿ ಕೊಡಗಿನ ಬತ್ತದ ಬೆಳೆಯ ವಿಸ್ತೀರ್ಣವನ್ನು ಸುಮಾರು 80,000 ಎಕ್ರೆಗಳಿಗೆ ತಲಪಿಸಿದರು. ಅನಂತರ ಬೆಲೆಯು ಇಳಿದ ಕೂಡಲೇ ಇದು ಪುನಃ 72,000 ಎಕ್ರೆಗಳಿಗೆ ಇಳಿಯಿತು. ಈಗ ಪುನಃ ತಿರುಗಿ ಬೆಲೆ ಏರಿದ್ದರಿಂದ ಹೆಚ್ಚಿಗೆ ಬೆಳೆ ಬೆಳೆಯುವ ಯೋಜನೆಗಳ ಸಹಾಯದಿಂದ ಇದನ್ನು ಸುಮಾರು 90,000 ಎಕ್ರೆಗಳಷ್ಟು ವಿಸ್ತರಿಸುತ್ತಾರೆ. ಹೀಗೆ ವಿಸ್ತರಿಸಿದ ಜಮೀನುಗಳ ಪೈಕಿ ಅನೇಕವುಗಳಿಗೆ ನೀರಿನ ಸರಬರಾಯಿಯು ಸರಿಯಾಗಿಲ್ಲದಿರುವುದರಿಂದ ಇವುಗಳಲ್ಲಿ ಬಹು ಕಿಂಚಿತ ಬೆಳೆಯು ಮಾತ್ರ ಬೆಳೆಯುವುದಾಗಿದೆ. ಇಂಥಾ ಜಮೀನುಗಳನ್ನು ರೂಪಿತಗೊಳಿಸಲು ಎಷ್ಟೋ ಮಂದಿ ಎಕ್ರೆ ಒಂದಕ್ಕೆ ರೂ. 1,000ಕ್ಕೆ ಹೆಚ್ಚಾಗಿ ಖರ್ಚುಮಾಡಿರುತ್ತಾರೆ. ಬತ್ತದ ಬೆಲೆಯು ಇಳಿದ ಕೂಡಲೇ ಈ ತರದ ಜಮೀನುಗಳೆಲ್ಲವೂ ವ್ಯವಸಾಯವಿಲ್ಲದೆ ಪಾಳುಬೀಳುವುದರಲ್ಲಿ ಯಾವ ಸಂಶಯವೂ ಇರುವುದಿಲ್ಲ. ಇದರಿಂದ ಇದಕ್ಕಾಗಿ ಸರಕಾರದವರು ಮತ್ತು ರೈತರು ಖರ್ಚುಮಾಡಿದ ಹಣವೆಲ್ಲಾ ನಿಷ್ಪ್ರಯೋಜನವಾಗುವುದು. ಮಣ್ಣು ಫಲವತ್ತಾಗಿಯೂ ನೀರಿನ ಪುಷ್ಕಳ ಸೌಕರ್ಯವಾಗಿಯೂ ಇರುವ ಸ್ಥಳಗಳಲ್ಲಿ ಮಾತ್ರ ಹೊಸ ಜಮೀನುಗಳನ್ನು ರೂಪಿತಗೊಳಿಸಲು ಪ್ರೋತ್ಸಾಹ ಕೊಡಬೇಕಲ್ಲದೆ ಎಲ್ಲಾ ತರದ ಜಮೀನುಗಳನ್ನು ರೂಪಿತಗೊಳಿಸಲು ಪ್ರೋತ್ಸಾಹ ಕೊಡಬಾರದು. ಇದರ ಬದಲು ಈಗ ವ್ಯವಸಾಯದಲ್ಲಿರತಕ್ಕ ಜಮೀನುಗಳಿಗೆ ನೀರಿನ ಸರಬರಾಯಿಯು ಸಾಕಷ್ಟು ಇಲ್ಲದಿದ್ದರೆ ಅದನ್ನು ಒದಗಿಸುವುದರಿಂದಲೂ ಸಾಕಷ್ಟು ಯೋಗ್ಯ ಗೊಬ್ಬರಗಳನ್ನು ಹಾಕುವ ಏರ್ಪಾಡು ಮಾಡುವುದರಿಂದಲೂ, ಹೆಚ್ಚು ಬೆಳೆಕೊಡುವ ಉತ್ತಮ ಬೀಜಗಳನ್ನು ಉಪಯೋಗಿಸುವುದರಿಂದಲೂ, ಬೆಳೆಗೆ ತಗಲುವ ರೋಗರುಜಿನಗಳನ್ನು ನಿವಾರಿಸುವುದರಿಂದಲೂ, ದೇಶದಲ್ಲಿ ವ್ಯವಸಾಯದ ಉತ್ಪತ್ತಿಯನ್ನು ಶೇಕಡ ರೂ. 50 ರಷ್ಟು ಹೆಚ್ಚಿಸಬಹುದು. ಜಪಾನ್ ದೇಶದಲ್ಲಿ ಇದು ಸಾಧ್ಯವಾದ ವಿಷಯವನ್ನು ಕೊಡಗು ವ್ಯವಸಾಯ ಇಲಾಖೆಯವರು ತಮ್ಮ ಹಸ್ತಪತ್ರಿಕೆಯ ಮೂಲಕ ಕೆಲವು ದಿನಗಳ ಹಿಂದೆ ತಿಳಿಸಿರುತ್ತಾರೆ. ಆದ್ದರಿಂದ ನಮಗೂ ಇದು ಸಾಧ್ಯವಾಗಲೇ ಬೇಕು. ಭೂಮಿಯನ್ನು ವಿಸ್ತರಿಸಿ ಬೆಳೆಯನ್ನು ಬೆಳೆಯುವುದಕ್ಕಿಂತ ಉತ್ತಮ ರೀತಿಯ ವ್ಯವಸಾಯವನ್ನು ಮಾಡಿ ಆ ರೀತಿ ಉತ್ಪತ್ತಿಯನ್ನು ಹೆಚ್ಚಿಸುವುದೇ ಸುಲಭವೂ ಮತ್ತು ಹೆಚ್ಚಿನ ಪ್ರಯೋಜನಕಾರಿಯೂ ಆಗಿರುತ್ತದೆ.

ಕೊನೆಯದಾಗಿ ನಾವು ದವಸಗಳನ್ನು ಹೆಚ್ಚಾಗಿ ಬೆಳೆಸುವ ಪ್ರಯತ್ನವನ್ನು ಮಾಡುವುದರ ಜೊತೆಗೆ ಕೆಲವು ಮಟ್ಟಿಗೆ ಗಡ್ಡೆಗಳನ್ನು ಬೆಳೆಸುವ ಪ್ರಯತ್ನ ಮಾಡಬೇಕು. ದವಸದ ಬೆಳೆಯ ಉತ್ಪತ್ತಿಯು ಎಕ್ರೆಗೆ ಒಂದು ಟನ್ನಿಗಿಂತಲೂ ಕಡಿಮೆ ಇದೆ. ಆದರೆ ಒಂದು ಎಕ್ರೆ ಜಮೀನನ್ನು ಉತ್ತಮ ರೀತಿಯಲ್ಲಿ ವ್ಯವಸಾಯ ಮಾಡಿದ್ದಾದರೆ ಹೆಚ್ಚು ಕಡಿಮೆ 10 ಟನ್ನುಗಳಷ್ಟು ಗಡ್ಡೆಗಳನ್ನು ಬೆಳೆಯಬಹುದು. ಕೊಡಗಿನಲ್ಲಿ ಗೆಣಸು ಮತ್ತು ಮರಗೆಣಸು ಬಲು ಹುಲುಸಾಗಿ ಬೆಳೆಯುತ್ತದೆ. ನಮ್ಮ ಪ್ರತಿಯೊಬ್ಬ ವ್ಯವಸಾಯಗಾರನೂ ಕಾಲು ಎಕ್ರೆ ಜಮೀನಿನಲ್ಲಿ ಗೆಣಸು ಅಥವಾ ಮರಗೆಣಸನ್ನು ಬೆಳೆಯಬಹುದು. ಅಲ್ಲದೆ ಹೊಸದಾಗಿ ವ್ಯವಸಾಯ ಮಾಡಿದ ತೋಟಗಳಲ್ಲಿಯೂ ಹೆಚ್ಚಿನ ವ್ಯವಸಾಯವಿಲ್ಲದೆ ಗಡ್ಡೆಯ ಬೆಳೆಗಳನ್ನು ಬೆಳೆಯಬಹುದು. ಇದರಿಂದ ದೇಶದಲ್ಲಿ ಆಹಾರ ಪದಾರ್ಥಗಳ ಉತ್ಪತ್ತಿಯು ಹೆಚ್ಚುವುದಲ್ಲದೆ ರೈತನ ಉತ್ಪತ್ತಿಯೂ ಕೂಡ ಹೆಚ್ಚುವುದೆಂದು ಹೇಳಬೇಕಾಗಿಲ್ಲ. ಮೇಲಿನ ರೀತಿ ರೈತರೆಲ್ಲರೂ ಸಹಕರಿಸಿದಲ್ಲಿ ಕೊಡಗಿನಲ್ಲಿ ಕಡಿಮೆ ಪಕ್ಷಕ್ಕೆ ಐದು ಲಕ್ಷ ಟನ್ನುಗಳ ಉಳಿವರಿ ಆಹಾರ ಪದಾರ್ಥಗಳನ್ನು ಪ್ರತಿ ವರ್ಷವೂ ಉತ್ಪತ್ತಿ ಮಾಡಲು ಸಾಧ್ಯವಿದೆ. ಕೊಡಗಿನಂತ ಚಿಕ್ಕ ಪ್ರಾಂತ್ಯದಲ್ಲಿಯೇ ಇಷ್ಟು ಆಹಾರದ ಉತ್ಪತ್ತಿಯು ಸಾಧ್ಯವಿರುವಾಗ ಹಿಂದೂ ದೇಶದ ರೈತರೆಲ್ಲರೂ ಸಹಕರಿಸಿದ್ದೇ ಆದರೆ ದೇಶದಲ್ಲಿ ಆಹಾರದ ಮುಗ್ಗಟ್ಟು ಯಾವ ಕಾಲಕ್ಕೂ ಬರಲು ಕಾರಣವಿಲ್ಲದಿರುವುದು ಮಾತ್ರವಲ್ಲದೆ ನಾವು ಕೂಡ ಇತರ ದೇಶಗಳಿಗೆ ಆಹಾರ ಪದಾರ್ಥಗಳನ್ನು ರಫ್ತುಮಾಡಲೂ ಬಹುದು. ರೈತರೆಲ್ಲರೂ ಸಹಕರಿಸಿದಲ್ಲಿ ನಮ್ಮ ಮುಖಂಡರು ನೇಮಿಸಿದಂತೆ 1951ನೇ ಇಸವಿ ನಮಗೆ ಬೇಕಾದ

ಹಾರ ಪದಾರ್ಥಗಳನ್ನು ತಾವೇ ಉತ್ಪ ಮಾಡಿಕೊಳ್ಳುವ ಬದಲು 1950ನೇ ಇ ಯಲ್ಲಿ ಸಾಧಿಸಬಹುದು.

ಯುದ್ಧದಲ್ಲಿ ಗೆಲವು ಸಿಕ್ಕಲು ಶ ಸ್ತ್ರಾಸ್ತ್ರಗಳಿಗಿಂತಲೂ ಆಹಾರ ಪದಾರ್ಥಗ ೇ ಬಹು ಮುಖ್ಯ ವಸ್ತುಗಳಾಗಿರುತ್ತವೆ ಯುದ್ಧದಲ್ಲಿ ಗೆದ್ದ ಬಳಿಕ ಕೂಡ ಜಯವ ನ್ನು ಉಳಿಸಿಕೊಳ್ಳಲು ಆಹಾರ ಪದಾರ್ಥ ಳು ಅಷ್ಟೇ ಅವಶ್ಯಕ ಇವಕ್ಕಾಗಿಯೇ ಗ ಆಹಾರ ಪದಾರ್ಥಗಳನ್ನು ಹೆಚ್ಚು ಳೆಯುವ ದೇಶಗಳಿಗೆ ಅಧಿಕ ಮನ್ನಣೆ ದೊ ತಿವೆ ಹಾಗೆ ನೋಡುವುದಾದರೆ ಯಾ ದೇಶವು ಹೆಚ್ಚು ಆಹಾರವನ್ನು ಬೆಳೆಸಿ ಪು ಮಾಡಲು ಸಿದ್ಧವಾಗಿದೆಯೋ ಆ ಶಗಳು ಈಗ ಹೆಚ್ಚಿನ ಸ್ವಾತಂತ್ರ್ಯವನ್ನು ಳಿಸಿವೆ ಈಗಲಾದರೂ ನಾವು ಇದನ್ನು ಳಿದು ಕೊಂಡು ಎಷ್ಟು ಬೇಗನೇ ಈ ಆ ಹಾರ ಪದಾರ್ಥಗಳ ಅಭಾವವನ್ನು ದೂರ ಮಾಡುವವೂ ಅಷ್ಟು ಬೇಗನೆ ಅಮೇರಿಕಾ ದ ದೇಶಗಳಂತೆ ನಾವೂ ಕೂಡ ತಲೆಎ ತ್ತಿ ನಡೆಯ ಬಹುದು ಮತ್ತು ಆಗ ಮಾ ತ್ರ ನಾವು ಹೊಸದಾಗಿ ಗಳಿಸಿದ ಸ್ವರಾಜ್ಯ ವನ್ನು ಉಳಿಸಿಕೊಳ್ಳಲು ಸಾಧ್ಯವಾ ಗುವುದು.

ನಮ್ಮ ಉತ್ಪತ್ತಿಯನ್ನು ಶೇಕಡ ೫೦ ರಷ್ಟು ಹೆಚ್ಚಿಸಿ ಕೊಳ್ಳುವ ಸಾಧ್ಯತೆ ನಮಗೆ ಇರುವಾಗ ನಮ್ಮ ಶೇಕಡ ಹದಿನಾರರಷ್ಟು ಅಭಾವವನ್ನು ಹೋಗಲಾಡಿಸಲು ಯ ತ್ನಿಸಿ ನಮ್ಮ ಭಾರತ ಮಾತೆಯ ಗೌರವವ ನ್ನು ಹೆಚ್ಚಿಸುವ ಅನುಕೂಲತೆಯು ಕೊಡ ಗಿಗೆ ಇರುವಷ್ಟು ಇತರ ಪ್ರಾಂತ್ಯಗಳಿಗೆ ಇ ರುವುದಿಲ್ಲ ಹಿಂದೂದೇಶದ ಯಾವುದೇ ಹೋರಾಟದಲ್ಲಿ ಹಿಂದುಳಿಯದ ನಾವು, ನಮಗಿರುವ ಅನುಕೂಲತೆಗಳನ್ನು ಪೂರ್ತಿ ಯಾಗಿ ಉಪಯೋಗಿಸಿಕೊಂಡು ಆಹಾರದ ಹೋರಾಟದಲ್ಲಿಯೂ ಉಚ್ಚಸ್ಥಾನವನ್ನು ಪಡೆದು ನಮ್ಮ ಗೌರವವನ್ನು ಉಳಿಸಿಕೊ ಳ್ಳಲಾರೆವೇ? ಹಸಿದ ಹೊಟ್ಟೆಗೆ ಅನ್ನ ಹಾ ಕಲು ಎಂದೂ ತಪ್ಪದ ನಮ್ಮ ಕಾವೇರಮ್ಮ ನ ನಾಡು ಇಂದು ಹಸಿದಿರುವ ನಮ್ಮ ನೆ ರೆಯವರ ಹೊಟ್ಟೆಯನ್ನು ತುಂಬಿಸುವ ಪ್ರ ಯತ್ನವನ್ನು ಮಾಡಲಾರದೇ?

"ಕೊಡಗಿನ ಸೇವೆಯೇ ಮುರುಗನ ಸೇವೆ"

— ಸಿ ಟಿ ಮುದಲಿಯರ್

ಶ್ರೀ ಕಾವೇರಿ ಆಶ್ರಮದಲ್ಲಿ ಜಗನ್ಮಾತೆ ಆದ ಶ್ರೀ ಕಾವೇರಿಯ ಮಹೋತ್ಸವಪ್ರಾ ತೀರ್ಥಪೂಜೆಯೂ ತಾರೀಕು ೨೧ರಲ್ಲು ನಡೆದಾಗ ಕೊಡಗಿನ ಚೀಫ್ ಕಮಿಷನರ್ ಶ್ರೀ ಸಿ ಟಿ ಮೊದಲಿಯಾರವರು ಮಾಡಿದ ಭಾಷಣದ ಸಾರ.

'ಆಶ್ರಮಕ್ಕೆ ಬರುವ ಸಂದರ್ಭ ಒದಗಿಸಿಕೊಟ್ಟದಕ್ಕೆ ಬಹಳ ಸಂತೋಷಪಡು ತೇನೆ ಇಂಥಾ ಆಶ್ರಮಗಳು ದೇಶದ ಏಳಿಗೆಗೆ ತುಂಬಾ ಪ್ರಯೋಜನಕಾರಿಗಳಾಗಿರುವುದರಿಂದ ದೇಶದ ಎಲ್ಲಾ ಕಡೆಗಳಲ್ಲೂ ಇರಬೇಕು ಈ ಮಾದರಿಯ ಧಾರ್ಮಿಕ ಸಂಸ್ಥೆಗಳ ಮೂಲಕವಾಗಿ ಪ್ರಪಂಚದಲ್ಲಿರುವ ಯುದ್ಧವೇ ಮೊದಲಾದ ಕಷ್ಟನಷ್ಟಗಳು ನಿವಾರಣೆಯಾಗಬೇಕಾಗಿದೆ ದೇಶದಲ್ಲಿ ಶಾಂತಿಸ್ಥಾಪನೆಯು ಆಧ್ಯಾತ್ಮಿಕ ಸಂಸ್ಥೆಗಳ ಮೂಲಕವೇ ಆಗಬೇಕಾಗಿದೆ ದ್ದು ಕೊಡಗ ದೇಶವು ಪ್ರಕೃತಿ ಸೌಂದರ್ಯದಿಂದಲೂ ಸುಖಸಂಪತ್ತಿನಿಂದಲೂ ಕೂಡಿದ ದೇಶ. ಕೊಡಗು ದೇಶದಲ್ಲಿಲ್ಲದ ವಸ್ತುಗಳಿಲ್ಲ ಈ ದೇಶವು ಯೋಧರನ್ನೂ ರಾಜಕಾರಣಿಗಳನ್ನೂ ಕಳುಹಿಸಿ ಹೆಸರುವಾಸಿ ಪಡೆದಿದೆ ಭಾರತದ ಮುಖ್ಯ ಸೇನಾಧಿಪತಿಯ ಉ ದ್ಯೋಗದ ಹೆಮ್ಮೆಯು ಈ ಕೊಡಗು ದೇಶಕ್ಕಿದೆ. ಪಾರಮಾರ್ಥಿಕದಲ್ಲೂ ಈ ದೇಶವು ಗೌರವವನ್ನು ಪಡೆದಿದೆ ನಾನು ಇದೇ ಆಶ್ರಮದಲ್ಲಿರುವ ವಿಶ್ವಕ ಮಾರಿಯನ್ನು ನೋಡಿದೆನು ಮಾತುಕಥೆ ನಡೆಸಿದೆನು ಅವಳು ದೇವರಲ್ಲಿಯೇ ಮನಸು ಳ್ಳ ಸಮಾಧಿಸ್ಥಳಾಗಿದ್ದಳು ಶ್ರೀರಮಣ ಮಹರ್ಷಿಯಂತೆ ಶ್ರೀವಿಶ್ವಕ ಮಾರಿಯು ಸಹ ಇರುವಳು. ಅವಳಲ್ಲಿ ಗೌರವವೂ ಭಕ್ತಿಯೂ ಹೆಚ್ಚಿಗಿದೆ.

ನಮ್ಮ ಕುಟುಂಬದವರೆಲ್ಲಾ ದೈವಭಕ್ತರು. ಬೆಳಿಗ್ಗೆ ಸ್ನಾನ ... ಲ ನಾವು ದೇವರ ಪೂಜೆಯನ್ನು ತಪ್ಪದೆ ಮಾಡುತ್ತೇವೆ ವರ್ಷಕ್ಕೊಂದಾವೃತ್ತಿ ಪಳನಿಯಲ್ಲಿ ನಮ್ಮ ಕುಟುಂಬದವರೆಲ್ಲಾ ಜೊತೆಸೇರುವದಿದೆ ನಾನು ಪ್ರತಿ ವರ್ಷವೂ ತಪ್ಪದೆ ಪಳನಿಗೆ ಹೋಗಿ ಹೂಮಾಲೆಯನ್ನೂ ನನ್ನ ಭಕ್ತಿಯನ್ನೂ ಪಳನಿಯಲ್ಲಿರುವ ಮುರುಗಸ್ವಾಮಿಗೆ ಸಮರ್ಪಿಸುತ್ತಿದ್ದೇನೆ ನನಗೆ ಸುಬ್ರಹ್ಮಣ್ಯಸ್ವಾಮಿಯಲ್ಲಿ ಬಹಳ ನಂಬಿಕೆ ಇದೆ. ನನ್ನ ಕಿಂಚಿತ್ ಭಕ್ತಿಗೆ ಅವನ ಅಪಾರ ಸಹಾಯವು ದೊರೆಯುತ್ತಿದೆ ನಾನು ಸ್ವಾಮಿಯಲ್ಲಿ ಶರಣಾಗತನಾಗಿದ್ದೇನೆ ನನ್ನ ಕೆಲಸವನ್ನೆಲ್ಲಾ ಸ್ವಾಮಿಯ ಕೆಲಸವೆಂದು ಮಾಡುತ್ತಿದ್ದೇನೆ

ಈ ಕೊಡಗು ದೇಶವು ಸುಬ್ರಹ್ಮಣ್ಯ ಸ್ವಾಮಿಯ ಸ್ಥಾನ. ಶ್ರೀಮುರುಗಸ್ವಾಮಿಯ ಭಕ್ತನು ಅಗಸ್ತ್ಯೇಶ್ವರನ, ಲೋಪಾಮುದ್ರೆಯು ಅಗಸ್ತ್ಯೇಶ್ವರನ ಧರ್ಮಪತ್ನಿ ಅಗಸ್ತ್ಯೇಶ್ವರನ ದೇವಸ್ಥಾನ ಕೊಡಗಿನಲ್ಲಿ ಮಾತ್ರವಿದೆ ಶ್ರೀಸುಬ್ರಹ್ಮಣ್ಯ ಸ್ವಾಮಿಯ ವಿಷಯವಾಗಿ ನಾನು ಪರಿ ಶೋಧನೆ ಮಾಡುತ್ತ ಇದ್ದೇನೆ ವೇದದಲ್ಲಿ ಸ್ಕಂದವನವೆಂದಿದೆ ಸ್ಕಂದ ಎಂದರೆ ಸುಬ್ರಹ್ಮಣ್ಯ ಭಾಗಮಂಡಲದಲ್ಲಿ ಸ್ವಯಂಭು ವಾದ ಸುಬ್ರಹ್ಮಣ್ಯನ ವಿಗ್ರಹವನ್ನು ನೋಡಿದೆನು. ಅದರ ವಿಷಯವಾಗಿ ಅಲ್ಲಿರುವವರನ್ನು ಕೇಳಿ ಯಾರೂ ಅದಕ್ಕೆ ಸರಿಯಾದ ವಿವರವನ್ನು ಕೊಡಲಿಲ್ಲ. ಪೊಲಿಬೆಟ್ಟಿಗೆ ಹೋಗಿದ್ದಾಗ ಅಲ್ಲಿಯೂ ಶ್ರೀ ಸುಬ್ರಹ್ಮಣ್ಯಸ್ವಾಮಿಯ ದೇವಸ್ಥಾನ ನೋಡಿದೆನು ಕೊಡಗಿನ ಅಗ್ರ ತಪ್ಪದೇ ವರು ಸಹ ಸುಬ್ರಹ್ಮಣ್ಯಸ್ವಾಮಿಯೇ ಆಗಿದ್ದಾನೆ ಶ್ರೀಸುಬ್ರಹ್ಮಣ್ಯಸ್ವಾಮಿಯು ಕೊಡಗು ಮಲೆಯಲ್ಲಿಯೇ ವಾಸವಿದ್ದನೆಂಬುದನ್ನ ನಾನು ಓದಿರುವೆನ. ಈ ಕಾವೇರಿ ಭೂಮಿಯು ಮುರುಗಸ್ವಾಮಿಯ ಸ್ಥಾನ ಮುರುಗ ಎಂದರೆ ಚಂದ ಯಾ ಸುಂದರ ನಾನು ಮುರುಗಸ್ವಾಮಿಯ ಪ್ರೀತಿಗಾಗಿ ಅವನ ಸೇವೆಯಾಗಿ ಇಲ್ಲಿಯ ಉದ್ಯೋಗವನ್ನ ಮಾಡುತ್ತಿದ್ದೇನೆ ನನಗೆ ಅವನೇಗತಿ ಅವನನ್ನು ಮನಃಪೂರ್ತಿಯಾಗಿ ನಂಬಿದ್ದೇನೆ ಸ್ವಾಮಿಯು ನನ್ನನ್ನು ಹಲವು ಸಂಕಷ್ಟಗಳಿಂದ ಬಿಡುಗಡೆಮಾಡಿದ್ದಾನೆ

ಒಂದು ದಿನ ನಾನು ಸ್ವಾಮಿಯ ದರ್ಶನಕ್ಕೆ ಹೋಗುವಾಗ ಡಿಂಡಿಗಲ್ ಹತ್ತಿರ ರಾತ್ರಿಯಾಗಿತ್ತು ನನಗೊಬ್ಬ ಹೊಸ ಡ್ರೈವರನು ಇದ್ದನು ಅವನು ಕಾರನ್ನು ಓಡಿಸುತ್ತಿದ್ದನು ಹೊಸಬನಾದ್ದರಿಂದ ದಾರಿಯು ತಪ್ಪಿಹೋಯಿತು. ಕಾರನ್ನು ನಿಲ್ಲಿಸಿದೆವು. ಆಗ ಒಬ್ಬ ಹುಡುಗನು ನಮ್ಮ ಹತ್ತಿರ ಓಡಿಬಂದನು ನಮ್ಮನ್ನು ಮಾತಾಡಿಸಿದನು ದಾರಿಯನ್ನ ತೋರಿಸಿಕೊಟ್ಟನು ಇಲ್ಲಿಂದ ಒಂಭತ್ತು ಮೈಲು ದೂರದಲ್ಲಿ ಇಬ್ಬರು ಬಿಳಿ ಉಡುಪನ್ನು ಧರಿಸಿ ಕಾರನ್ನು ನಿಲ್ಲಿಸುತ್ತಾರೆ. ನೀವು ನಿಲ್ಲಿಸಬೇಡಿ, ದರೋಡೆಕಾರರು ಅಲ್ಲಿದ್ದಾರೆ. ನಿಮಗೆ ತೊಂದರೆಯಾಗಬಹುದು ಎಂದು ನಮ್ಮನ್ನು ಎಚ್ಚರಿಸಿದನು ಆ ಹುಡುಗನು ಯಾರು ಎಂದು ನಾವು ಗಣನೆಗೆ ತಾರಲಿಲ್ಲ ನನ್ನ ಡ್ರೈವರನು ಇದೆಲ್ಲಾ ಅಪಶಕುನ ಇಲ್ಲಿಯೇ ನಿಂತು ಬಿಡುವ ಎಂದು ಹೇಳಿದನು ಪುನಹ ಆ ಬಾಲಕನು ನಿನ್ನ ನನು ಇಲ್ಲಿಯೇ ಇರಲಿಕ್ಕೆ ಹೇಳಲಿಲ್ಲ ಹೇಡಿಗಳಾಗಿರಬಾರದು ಅವರವರ ಕರ್ತವ್ಯವನ್ನ ಅವರವರು ಮಾಡಬೇಕೆಂದು ಹೇಳಿದನು ನಾನು ಆ ಬಾಲಕನು ಯಾರೆಂದು ನಿಗಕೂಡದ ಕಾರನ್ನ ಬಿಡಲು ಹೇಳಿದೆನು ಆ ಹುಡುಗನ ಹೇಳಿದ ಜಾಗದಲ್ಲಿ ವರ್ಣಿಸಿದಂತೆ ಇಬ್ಬರು ಕಾರನ್ನು ನಿಲ್ಲಿಸಲು ಕೈತೋರಿಸಿದರು ನನಗೆ ಹುಡುಗನ ನೆನಪು ಬಂದು ಕಾರು ನಿಲ್ಲಿಸಬೇಡವೆಂದು ಹೇಳಿದೆನು ಕಾರು ಜೋರಾಗಿ ಹೋದೊಡನೆ ಮಾರ್ಗದ ಎರಡು ಬದಿಗಳಿಂದಲೂ ದೊಣ್ಣೆಗಳನ್ನು ಹಿಡಿದುಕೊಂಡು ದರೋಡೆಕಾರರು ಮಾರ್ಗಕ್ಕೆ ಹಾರಿದರು. ಆಗ ನನಗೆ ದೇವರ ಸಹಾಯವು ನೆನಪಾಯಿತು ಆ ಬಾಲಕನು ಶ್ರೀಸುಬ್ರಹ್ಮಣ್ಯಸ್ವಾಮಿಯೇ ಎಂದು ನಂಬಿದನು.

ವರ್ಷದ ಆದಿ ದಿನ ಪಳನಿಯಲ್ಲಿ ಶ್ರೀ ಮುರುಗಸ್ವಾಮಿಯ ದರ್ಶನಮಾಡುವ ಅಭ್ಯಾಸವಿದೆ ಆ ದಿನ ನನ್ನ ಡೈರಿಯನ್ನ ಸ್ವಾಮಿಯ ಮುಂದ ಒರಿಯಲ ಸರಿಯೂ ಡುವುದಾಗಿದೆ. ಒಂದು ಸಾರಿ ಮುರುಗಸ್ವಾಮಿಯ ಒಂದು ಕವಿತೆ ಬರೆಯುತ್ತಿದ್ದೆನು. ಒಂದು ಶಬ್ದದ ಅಕ್ಷರ ಸಂಯೋಜನೆಯಲ್ಲಿ ನನಗೆ ಅನುಮಾನ ಬಂತು ಎಷ್ಟು ಯೋಚನೆಮಾಡಿದರೂ ನನಗೆ ಅದನ್ನು ಹೇಗೆ ಬರೆಯಬೇಕೆಂದು ತಿಳಿಯಲಿಲ್ಲ ಸ್ವಲ್ಪ ಹೊತ್ತಿನಲ್ಲಿ ದೇವಸ್ಥಾನದಲ್ಲಿ ಮುರುಗಸ್ವಾಮಿಯ ಪೂಜೆಗೆ ಹೋಗುವಾಗ ಅದೇ ಶಬ್ದವು ಗೋಡೆಯ ಮೇಲೆ ಬರೆಯಲ್ಪಟ್ಟಿತ್ತು ನನಗೆ ಆಶ್ಚರ್ಯವಾಯಿತು ಯಾರು ಇದನ್ನು ಬರೆದದ್ದೆಂದು ಕೇಳಿ ತಿಳಿದೆನು ಒಬ್ಬ ಸಾಧು ಸ್ವಲ್ಪ ಹೊತ್ತಿನ ಮುಂಚೆ ಬರೆದು ಹೋದನೆಂದು ಅಲ್ಲಿಯವರು ಹೇಳಿದರು ಇದು ಸ್ವಾಮಿಯೇ ಮಾಡಿದ ಕೆಲಸವೆಂದು ಮನದಟ್ಟಾಯಿತು.

ಸರಕಾರ ಉದ್ಯೋಗದಿಂದ ಪರ್ಗವಾಗಿ ಕೊಯಮುತ್ತೂರಿನಲ್ಲಿ ಚಾರ್ಜು ಕೊಡುಕೊಂಡು ಮೂರು ದಿವಸವಾಗಿತ್ತು, ಆಫೀಸಿನೊಳಗೆ ಒಬ್ಬ ಮುದುಕಿ ಮತ್ತು ಮುದುಕಿ ಜೊತೆಗಿನ ಜವಾನರುಗಳು ತಡೆದರೂ ಕೇಳದೆ ಸೀದಾ ನನ್ನ ಹತ್ತಿರ ಬಂದಳು. ಮುದುಕಿಯು ನನ್ನ ಜೊತೆಯಲ್ಲಿ ಮಾತಾಡಿದಳು ನನಗೆ ಎಂಟು ದಿನದಲ್ಲಿ ಪುನಃ ವರ್ಗವಿದೆಯೆಂದು ತಿಳಿಸಿದಳು. ನನ್ನನ್ನು ಗುಟ್ಟಾಗಿ ಕರೆದು ಮಂತ್ರವನ್ನು ಹೇಳಿಕೊಟ್ಟಳು ಪ್ರತಿ ದಿವಸ ಜಪಿಸಬೇಕೆಂದು ಹೇಳಿದಳು ಇವರು ಹೋದನಂತರ ಸಂಗತಿಗಳನ್ನು ಆಫೀಸಿನವರ ಮೂಲಕ ವಿಚಾರಿಸಿದೆನು ಆ ಮುದುಕಿ ಒಬ್ಬ ದೊಡ್ಡ ಭಕ್ತೆ ಎಂದರು ಸರಕಾರದವರು ಆ ದಿವಸದಲ್ಲಿಯೇ ವರ್ಗ ಮಾಡಲಿಕ್ಕಿಲ್ಲ ಇದೆಲ್ಲಾ ಸುಳ್ಳು ಎಂದು ಯೋಚಿಸಿದೆನು ಆದರೆ ೮ನೇ ದಿನದಲ್ಲಿ ನನಗೆ ವರ್ಗದ ಹುಕುಂ ಸಿಕ್ಕಿತು. ವರ್ಗವಾಗಿ ಬೇರೆ ಕಡೆಗೆ ಹೋದೆನು. ಎರಡು ವರ್ಷದ ವರೆಗೆ ನಾನು ಆ ಮುದುಕಿ ಹೇಳಿದ ಮಂತ್ರ ಜಪಿಸಲಿಲ್ಲ. ಆಗ ನಾನು ನಾಸ್ತಿಕನಾಗಿದ್ದೆನ. ಎರಡನೇ ವರ್ಷಾಂತ್ಯದಲ್ಲಿ ಮುದುಕಿಯು ಹೇಳಿಕೊಟ್ಟ ಮಂತ್ರವನ್ನ ಜಪಿಸಬೇಕೆಂದು ಮನಸ್ಸಾಯಿತ ಅಂದಿನಿಂದ ಮಂತ್ರವನ್ನು ಹೇಳಲು ತೊಡಗಿದೆನು ನನಗೆ ಇಂಥ ಅನುಭವಗಳು ಅನೇಕ ಇವೆ

ಈ ಆಶ್ರಮದ ಪ್ರೆಸಿಡೆಂಟರು ನಾನು ಒಳ್ಳೆ ಕೆಲಸವನ್ನು ಮಾಡಿರುವೆನೆಂದು ಹೇಳಿದರು ನಾನು ನನ್ನ ಕೈಲಾದಷ್ಟು ಲೋಕದ ಸೇವೆಯನ್ನು ದೇವರ ಸೇವೆ ಎಂದು ಮಾಡುತ್ತಿದ್ದೇನೆ. ಆ ಮುರುಗಸ್ವಾಮಿಯ ವಾಸಸ್ಥಳವಾದ ಕೊಡಗಿನ ಸೇವೆಯನ್ನ ನನ್ನ ಸ್ವಾಮಿಯ ಸೇವೆ ಎಂದೇ ತಿಳಿದಿದ್ದೇನೆ

ನಮ್ಮ ಗವರ್ನರ್ ಜನರಲ್ ಶ್ರೀ. ರಾಜಗೋಪಾಲಚಾರಿಯವರು ಗೀತೆಗೆ ತಮಿಳಿನಲ್ಲಿ ಭಾಷ್ಯ ಬರೆದಿದ್ದಾರೆ ಅದು ಬಹಳ ಅರ್ಥಗರ್ಭಿತವಾಗಿದೆ. ಪ್ರತಿ ಒಬ್ಬರಿಗೂ ಸುಲಭವಾಗಿ ಅರ್ಥವಾಗುತ್ತದೆ ನಾವು ಈ ಲೋಕದ ಜೀವನಯಾತ್ರೆಯಲ್ಲಿ ಹೇಗೆ ಬ್ಯಾಂಕಿನಲ್ಲಿ ಹಣ ಡಿಪಾಜಿಟ್ಟು ಮಾಡಿ ಬೇಕಾದಾಗ ತೆಗೆದು ಖರ್ಚು ಮಾಡುತ್ತೇವೆಯೋ ಹಾಗೆಯೇ ಇಹಲೋಕದ ಮತ್ತು ಪರಲೋಕದ ಸಹಾಯಕ್ಕೆ ಡಿಪಾಜಿಟ್ಟು ಮಾಡಿಕೊಳ್ಳಬೇಕೆಂದು ಹೇಳಿದ್ದಾರೆ ಎಷ್ಟು ಯಾವಾಗಬೇಕಾದರೂ ಆ ಡಿಪಾಜಿಟ್ಟನ್ನು ತೆಗೆದುಕೊಳ್ಳಬಹುದೆಂದು ಹೇಳಿದ್ದಾರೆ ಅದು ಒಳ್ಳೆಯ ಗುಣಗಳಿಂದ ಸಂಪಾದಿಸುವ ಪುಣ್ಯಫಲಗಳು ಈ ಡಿಪಾಜಿಟ್ಟನ್ನು ಪ್ರತಿಯೊಬ್ಬನೂ ಸಂಪಾದಿಸಬೇಕು

ನಂತರ ರೆವರೆಂಡ್ ಫಾದರ್ ಜೆ. ಯಂ ಡಿಸೋಜರವರು ಬೈಬಲಿನ ವಿಷಯವಾಗಿ ಏಸುಕ್ರಿಸ್ತಸ್ವಾಮಿಯು ಬೋಧಿಸಿದ ತತ್ವಗಳನ್ನ ವಿವರಿಸಿದರು ಜನಾಬ್ ಜಿ ಅಬ್ದುಲ್ ಸತ್ತಾರ್‌ರವರು ಕುರಾನಿನ ವಿಷಯವಾಗಿ ಮಾನವನ ದೈನಂದಿನ ಆಚರಣೆಯನ್ನು ವಿವರಿಸಿದರು ಡಾಕ್ಟರ್ ಎಸ್ ವಿ ದೇಶಿಕ ಚಾರ್ಯರವರ ಶ್ರೀಮದ್ಭಗವದ್ಗೀತಾ ವಿಷಯವಾಗಿ ಮಾನವನ ಕರ್ತವ್ಯವನ್ನು ವರ್ಣಿಸಿದರು. ವಂದನೆ, ಪೂಜೆ, ಮಂಗಳ ರತಿ ಆದ ನಂತರ ಪ್ರಸಾದ ವಿನಿಯೋಗದಿಂದ ಉತ್ಸವ ಮುಕ್ತಾಯಗೊಂಡಿತು.

(ಶ್ರೀ ಕಾವೇರಿ ಆಶ್ರಮದವರಿಂದ)

ಕೊಡಗು

ತಾ. ೪-೧೧-೧೯೪೯ನೇ ಶುಕ್ರವಾರ

ಸರ್ದಾರ ಪಟೇಲರು.

ಪಂಡಿತ ಜವಾಹರಲಾಲ್ ನೆಹರೂರವರು ಅಮೇರಿಕಾಕ್ಕೆ ಹೋದಂದಿನಿಂದ ಭಾರತದ ತಾತ್ಕಾಲಿಕ ಮುಖ್ಯ ಮಂತ್ರಿಯಾಗಿರುವ ಸರ್ದಾರ್ ಪಟೇಲರಿಗೆ ತಾರೀಕು ೩೧-೧೦-೪೯ಕ್ಕೆ ೭೪ ವರ್ಷಗಳು ತುಂಬಿದವು. ಸರ್ದಾರರ ಹೆಸರನ್ನು ಹೇಳಿದಾಕ್ಷಣ ಭಾರತೀಯರಲ್ಲಿ ಉಕ್ಕಿನ ವಿಶ್ವಾಸ, ಅಚ್ಚಳಿಯದ ದೃಢತೆಯ ಮನುಷ್ಯನೊಬ್ಬನ ಕಲ್ಪನೆಯಾಗುತ್ತದೆ. ಬಾರ್ಡೋಲಿ ಸತ್ಯಾಗ್ರಹದಿಂದ ಇವರು ಸರ್ದಾರರಾದರು. ಸ್ವಾತಂತ್ರ್ಯ ಚಳವಳಿಕ್ಕೆ ಸಲ್ಲಿಸಿದ ಅಗಣಿತ ಸೇವೆಯಿಂದ ಮಹಾತ್ಮರ ಬಲಗೈಯಾದರು. ಹಿಂದೂದೇಶದ ಐಕ್ಯತೆಯನ್ನು ಸಾಧಿಸಿ ಏಷ್ಯಾದ ಬಿಸ್ಮಾರ್ಕ್‌ರಾದರು. ಭಾವವಾದಿ ನೆಹರೂರವರಲ್ಲಿಲ್ಲದ ಕರ್ಮಕುಶಲತೆ, ಆಡಳಿತ ದಕ್ಷತೆಯನ್ನು ತೋರಿ ಭಾರತದ ನಿರ್ಮಾಪಕರಾದರು. ಸರ್ದಾರ ಪಟೇಲರು ರೈತರ ಕುಟುಂಬದಲ್ಲಿ ಜನಿಸಿದವರು. ತಂದೆಯೊಡನೆ ಹೊಲದಲ್ಲಿ ಸಂಚರಿಸಿ ಪಡೆದ ಪ್ರತ್ಯಕ್ಷ ಅನುಭವವೇ ಅವರನ್ನು ಇಂದು ಕಾರ್ಯಧುರಂಧರರನ್ನಾಗಿ ಮಾಡಿದೆ. ಅವರ ಮಾತು ರೈತನಂತೇ ಒರಟು. ಹೇಳುವದನ್ನು ನೇರವಾಗಿ ಹೇಳುತ್ತಾರೆ. ರಾಜಕಾರಣಿಯ ನಯವಾಗಲೀ, ಭಾವವಾದಿಯ ಕಲ್ಪನೆಯಾಗಲೀ ಅವರಲ್ಲಿಲ್ಲ.

ಅವರಿಗೆ ಭಯವೆಂಬುದಿಲ್ಲವೆನ್ನಬಹುದು. ಸತ್ಯದ ಆರಾಧಕರಿಗೆ ಭಯವೆಲ್ಲಿಯದು. ಅವರ ಸಮ್ಮುಖದಲ್ಲಿ ಮಹಾವಾಚಾಳಿಯೂ ಎರಡೇ ಮಾತಿನಲ್ಲಿ ಮುಗಿಸಬೇಕಾಗುತ್ತದೆ. ರಾಜ್ಯಘಟನಾ ಸಭೆಯಲ್ಲಿ ಅವರು ಹಾಜರಿದ್ದರೆ ಸದಸ್ಯರ ಮಾತು ಕಡಿಮೆಯಾಗುತ್ತದೆ. ಪ್ರತಿಯೊಬ್ಬರೂ ಜವಾಬ್ದಾರಿ ತಿಳಿದು ವರ್ತಿಸುತ್ತಾರೆ. ಈ ವ್ಯಕ್ತಿತ್ವವೇ ರಾಜಮಹಾರಾಜರನ್ನು ಗದ್ದುಗೆಯಿಂದ ಇಳಿಸಿತು. ಮಹಾಮಹಾ ಸಂಸ್ಥಾನಗಳನ್ನು ವಿಲೀನಗೊಳಿಸಿತು. ಸರ್ದಾರರ ಮಾತಿಗೆ, ಅವರದೊಂದು ಸಂಕೇತಕ್ಕೆ ಆ ಭೀಮಬಲವಿದೆ.

ಹಿಂದೂದೇಶದ ಭವಿಷ್ಯದ ಜವಾಬ್ದಾರಿ ಮಹಾತ್ಮಾಗಾಂಧೀಜಿಯವರ ನಂತರ ಪಂಡಿತ ಜವಾಹರಲಾಲ್ ನೆಹರೂ ಮತ್ತು ಸರ್ದಾರರ ಮೇಲೆ ಬಿದ್ದಿದೆ. ಭಾವವಾದಿ ಜವಾಹರರು ಭಾರತದ ಕಣಾಗಿ ವಿಚಾರಗಳನ್ನು ನೋಡಿ, ಪರಿಸ್ಥಿತಿಯ ಅರುಹಿಕೆಕೊಟ್ಟು, ಯೋಜನೆಗಳ ರೂಪರೇಷೆ ಮಾಡಿದರೆ ಸರ್ದಾರರು ಭಾರತದ ಕೈಯಾಗಿ ಅದೆಲ್ಲವನ್ನು ಕಾರ್ಯರೂಪಕ್ಕೆ ತರುತ್ತಿದ್ದಾರೆ. ಈ ಅಮೂಲ್ಯ ಕಣ್ಣು ಮತ್ತು ಕೈಗಳ ಸಮ್ಮಿಲನ ಮತ್ತು ಹಾರ್ದಿಕ ವರ್ತನೆಯಿಂದಾಗಿ ಭಾರತ ದೇಶವು ಮಹಾಗಂಡಾಂತರಗಳನ್ನು ದಾಟಿ ಇಂದಿನ ಸ್ಥಿತಿಗೆ ಮುಟ್ಟಿದೆ. ಇವರ ಆದರ್ಶ ಮುಂದಾಳ್ತನದಲ್ಲಿ ಇದು ಇನ್ನೂ ಘನತೆಯ ಶಿಖರಕ್ಕೆ ಏರುವದೆಂಬುದರಲ್ಲಿ ಸಂಶಯವಿಲ್ಲ.

ಸರ್ದಾರ್ ಪಟೇಲರು ೭೪ರ ಇಳಿವಯಸ್ಸಿನಲ್ಲಿದ್ದಾರೆ. ಅವಕ್ಕಮಗುಣ ಅವರ ಶರೀರ ಪ್ರಕೃತಿಯೂ ಚೆನ್ನಾಗಿಲ್ಲ. ಮೊನ್ನೆಯಾಗಿ ಅವರು ಅಸ್ವಸ್ಥರಾಗಿದ್ದು ಬೊಂಬಾಯಿಯಲ್ಲಿ ಬಂದು ದಿನಗಳ ಚಿಕಿತ್ಸೆ ಪಡೆಯಬೇಕಾಯಿತು. ಈ ಇಳಿವಯಸ್ಸಿನಲ್ಲಿ ಅವರು ಹೊತ್ತಿರುವ ಜವಾಬ್ದಾರಿ ಮಹತ್ವಾದುದು. ಅವರು ಅದನ್ನು ತಮ್ಮ ಆತ್ಮಬಲದಿಂದ ಆದರ್ಶನೀಯವಾಗಿ ನಿರ್ವಹಿಸುತ್ತಿರುವರು. ಭಾರತದ ಸುಪುತ್ರ ರತ್ನ ಸರ್ದಾರರಿಗೆ ಶರೀರ ಆರೋಗ್ಯವೂ, ಚಿರಾಯುವೂ ದೊರೆಯಲೆಂದು ಇಡೀ ಭರತಖಂಡ ಪ್ರಾರ್ಥಿಸುತ್ತಿದೆ.

ತಮ್ಮ ಹುಟ್ಟುಹಬ್ಬದ ದಿನ ಸರ್ದಾರರು ಒಂದು ಸಂದೇಶವನ್ನು ಭಾರತೀಯರಿಗೆ ಕೊಟ್ಟರು. ಅದರಲ್ಲಿ 'ಹೆಚ್ಚು ಬೆಳೆಸಿರಿ, ಕಡಿಮೆ ಬಳಸಿರಿ; ಯಾವುದನ್ನೂ ಹಾಳುಮಾಡದಿರಿ' ಎಂದು ಹೇಳಿದ್ದಾರೆ. ಭಾರತೀಯರೆಲ್ಲರೂ ಗಮನಿಸಬೇಕಾದ ಮಾತುಗಳಿವು. ಇಂದು ಭರತಖಂಡದ ದುಃಖಕ್ಕೆ ಪ್ರಥಮ ಕಾರಣ ಆಹಾರದ ಕೊರತೆ. ಆದಕ್ಕಾಗಿ ಸರಕಾರವು ಶತಪ್ರಯತ್ನ ಮಾಡುತ್ತಿದೆ. ಸಾರ್ವಜನಿಕರು ಅದಕ್ಕೆ ಬೆಂಬಲವಿತ್ತು ಹೆಚ್ಚು ಬೆಳೆಸಿ, ಅನಾವಶ್ಯ ಖರ್ಚು ಕಡಿಮೆ ಮಾಡಬೇಕಾಗಿದೆ. ಉಳಿವರಿ ಪ್ರಾಂತದವರಾದ ನಮಗೆ ಅದರ ತೀವ್ರತೆಯು ಅರಿವಾಗದು. ಊಟದ ಎಲೆಯಲ್ಲಿ ಬಿಟ್ಟೇಳುವ ಹಿಡಿ ಅನ್ನ ನೆರೆಯ ಸಹೋದರನೊಬ್ಬನ ಪ್ರಾಣ ಉಳಿಸೀತು. ಆದ್ದರಿಂದ ಪ್ರತಿಯೊಬ್ಬನೂ ರಾಷ್ಟ್ರಹಿತವನ್ನು ನೆನೆದು ತನ್ನ ಕೈಲಾದ ಪ್ರಯತ್ನ ಮಾಡಬೇಕು. ಬೇರೆಡೆ ಒಂದು ಹೊತ್ತು ಉಪವಾಸವಿದ್ದು ಅನ್ನ ಉಳಿಸುವ ಚಳವಳಿಗಳು ಪ್ರಾರಂಭವಾಗಿವೆ. ಕೊಡಗಿನವರು ಪರಿಸ್ಥಿತಿಯನ್ನು ತಿಳಿದು ಸರ್ದಾರರ ಮಾತಿನಂತೆ ದೇಶದ ಹಿತ ಸಾಧಿಸಬೇಕಿದೆ.

ವರ್ತಮಾನ.

ಪೊನ್ನಂಪೇಟೆಯ ಸೀನ್ ಕ್ಲಬ್ಬಿಗೆ ತಮ್ಮ ಹೆಸರಿನಲ್ಲಿ ಕೆಲವು ಕಟ್ಟಡಗಳನ್ನು ಕೊಂಡುಕೊಳ್ಳಲು ಬೇಗೂರು ಗ್ರಾಮದ ಶ್ರೀ. ಚೋಡ ಮಾಚ ಕುಶಾಲಪ್ಪನವರು ನೂರು ರೂಪಾಯಿಗಳನ್ನು ಧರ್ಮಾರ್ಥ ಕೊಟ್ಟಿರುವರು.

ಕೇಂದ್ರೀ ಸರಕಾರದ ಗೃಹಖಾತೆಯವರು ಕೊಡಗಿನ ಭವಿಷ್ಯದ ವಿಚಾರ ಅಭಿಪ್ರಾಯ ತಿಳಿಯಲು ನವಂಬರ್ ೧೦ಕ್ಕೆ ಕೊಡಗಿನ ಒಂಭತ್ತು ಪ್ರತಿನಿಧಿಗಳನ್ನು ಆಹ್ವಾನಿಸಿದರಂತೆ. ಇದನ್ನು ಕಾರೀಕು ೧೭ಕ್ಕೆ ಮುಂದರಿಸಿರುವರೆಂದೂ ಹೊಸದಾಗಿ ಶ್ರೀ ಚಪ್ಪಾರಂಡ ತಿಮ್ಮಯ್ಯನವರನ್ನು ಆಹ್ವಾನಿಸಿರುವರೆಂದೂ ತಿಳಿಯ ಬರುತ್ತದೆ.

ಮೈಸೂರಿನ ಕೃಷ್ಣರಾಜ ಸಾಗರದಲ್ಲಿ ಕಾಂಗ್ರೆಸ್ ರಚನೆಗಳ ವಿದ್ಯಾ ಶಾಖೆಯ ಆಶ್ರಯದಲ್ಲಿ ಆರು ವಾರಗಳ ವರೆಗೆ ನಡೆಯುವ ವಿದ್ಯಾ ಸಮ್ಮೇಳನಕ್ಕೆ ಪ್ರೇಕ್ಷಕರಾಗಿ ಕೊಡಗಿನ ಜಿಲ್ಲಾ ವಿದ್ಯಾಧಿಕಾರಿಯವರು ಹೋಗಿರುವುದರಿಂದ ವೀರರಾಜಪೇಟೆ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಶ್ರೀ. ಗಣೇಶರಾಯರನ್ನು ಮಡಿಕೇರಿ ಹೈಸ್ಕೂಲಿಗೆ ವರ್ಗಾಯಿಸಿ ಅವರು ಮುಖ್ಯೋಪಾಧ್ಯಾಯ ವೃತ್ತಿಯ ಜೊತೆಗೆ ಜಿಲ್ಲಾ ವಿದ್ಯಾಧಿಕಾರಿಯ ಕೆಲಸ ನೋಡಿಕೊಳ್ಳುವಂತೆ ಏರ್ಪಡಿಸಲಾಗಿದೆ. ಮಡಿಕೇರಿ ಹೈಸ್ಕೂಲು ಮುಖ್ಯೋಪಾಧ್ಯಾಯರಾದ ಶ್ರೀ. ಎಂ. ಎ. ಚಂಗಪ್ಪನವರನ್ನು ವೀರರಾಜಪೇಟೆಗೆ ವರ್ಗಾಯಿಸಲಾಗಿದೆ.

ಕೇಂದ್ರ ಸರಕಾರದ ಸಿದ್ಧಿ ಮಂತ್ರಿ ಗಳು ನೂಲಿ ಖಾತೆಯ ಮಂತ್ರಿ ಶ್ರೀ ಆರ್. ಆರ್. ದಿವಾಕರರು ತಾ. ೧ರಲ್ಲಿ ಮಡಿಕೇರಿಗೆ ಬಂದು ಸರಕಾರದ ಅತಿಥಿಗಳಾಗಿದ್ದು ಮರುದಿನ ಬೆಳಿಗ್ಗೆ ಮಂಗಳೂರಿಗೆ ಹೋದರು.

ಶನಿವಾರಸಂತೆ ಗುಡುಗಳಲೆ ಜಯದೇವ ಬಾಣೆಯ ದನಗಳ ಜಾತ್ರೆಯು ಮಹಾ ಸಭೆಯು ತಾ. ೯-೧೧-೪೯ರಲ್ಲಿ ಮಧ್ಯಾಹ್ನ ೨ಗಂಟೆಗೆ ಶನಿವಾರಸಂತೆ ಹೊಸ ಶಾಲಾ ಆವರಣದಲ್ಲಿ ನಡೆಯುವದು.

ಪೊನ್ನಂಪೇಟೆ ಸರಕಾರಿ ಪ್ರೌಢ ಶಾಲೆಯ ಐದನೇ ಫಾರಮ್ಮಿನ ವಿದ್ಯಾರ್ಥಿಗಳು ತಮ್ಮ ಜೀವನವನ್ನು ಉತ್ತಮ ಪಡಿಸಿಕೊಳ್ಳುವ ದೃಷ್ಟಿಯಿಂದ ಸತ್ಯ, ಧರ್ಮ, ತ್ಯಾಗ, ಶಿಸ್ತು, ಸಂಘಟನೆ ಮೊದಲಾದ ತತ್ವಗಳನ್ನು ಆಚರಣೆಗೆ ತಂದು ವಿದ್ಯಾರ್ಥಿ ವೃಂದವು ಸತ್ಪಥದಲ್ಲಿ ನಡೆಯುವ ಅನುಕೂಲ ಮಾಡಲು ಆದರ್ಶ ಜೀವನ ಸಂಘವೆಂಬುದೊಂದು ಸಂಸ್ಥೆಯನ್ನು ಸ್ಥಾಪಿಸಿ ಮುಖ್ಯೋಪಾಧ್ಯಾಯ ಶ್ರೀ ರಾಮ ಭಟ್ಟರನ್ನು ಅಧ್ಯಕ್ಷರಾಗಿಯೂ, ಶ್ರೀ. ಕೆ. ಎಸ್. ಗೋಪಾಲ ಕೃಷ್ಣಯ್ಯನವರನ್ನು ಉಪಾಧ್ಯಕ್ಷರಾಗಿಯೂ ಶ್ರೀ ಬಿ ಎಸ್. ರಂಘು (ಕಾರ್ಯದರ್ಶಿ) ಕೆ. ಎಸ್. ಮಾದಪ್ಪಯ್ಯ, ಎಂ. ಎಸ್. ಪೊನ್ನಪ್ಪ, ಎ. ಕೆ. ನಾರಾಯಣ ಮೂರ್ತಿ ಮತ್ತು ಪಿ. ಪಿ ಬಾಲಕೃಷ್ಣ ಇವರಿಂದ ಕೂಡಿದ ಕಾರ್ಯಕಾರಿ ಮಂಡಲಿಯನ್ನೂ ಆರಿಸಲಾಗಿದೆ.

ಪೋಲೀಸ್ ಸಬ್ ಇನ್ಸ್‌ಪೆಕ್ಟರಾಗಿದ್ದ ಶ್ರೀ. ಚೊಟ್ಟೆಂಗಡ ಅಪ್ಪಣ್ಣನವರನ್ನು ಸರ್ಕಲ್ ಇನ್ಸ್‌ಪೆಕ್ಟರಾಗಿ ದಕ್ಷಿಣ ಕೊಡಗಿಗೆ ನೇಮಿಸಲಾಗಿದೆ

ತ್ಯಾಗ ಪುನೀತನ ಮಹಸೀಯರ ಭಾಗಮಂಡಲದಲ್ಲಿ ಹೊಸದಾಗಿ ಕಟ್ಟಿಸಿರುವ ರಾಮಮಂದಿರದ ಪ್ರಾರಂಭೋತ್ಸವವು ಕೊಡಗು ದೇಶದ ಅಸಿಸ್ಟೆಂಟ್ ಕಮಿಷನರಾದ ಶ್ರೀ. ಎನ್. ಸಿ. ಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ೩-೧೧-೪೯ರಲ್ಲಿ ನೆರವೇರಿತು. ಈ ಸಂದರ್ಭದಲ್ಲಿ ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ಉಪಾಧ್ಯಾಯರಾದ ಶ್ರೀ. ವಿ. ಎಸ್. ರಾಮಕೃಷ್ಣನವರೂ ತಲಕಾವೇರಿಯ ಶ್ರೀ ರಾಘವಾಚಾರ್ಯರೂ ಉಪನ್ಯಾಸ ಮಾಡಿದರು, ರಾಮಮಂದಿರದ ಪ್ರೆಸಿಡೆಂಟರಾದ ಶ್ರೀ. ದೇವಯ್ಯನವರು ವಂದನಾರ್ಪಣೆಯನ್ನು ಮಾಡಿದರು.

WANTED

Applications are invited for the post of a Inspector Organisers and Special Agents for the Province of Coorg, to represent the **Vishvabharati Insurance Co. Ltd.**, Bombay. Transacting life, fire marine accident etc, either on salary or commission or both.

Please apply to
E A PAIS Esq B. Sc.
Agency Manager, Hampankatta, Mangalore. S- K.

ಹಾಕಿ ಪಂದ್ಯಾಟ.

ಕೊಡಗು ಪಿ. ಟಿ. ಟ್ರ್ಯಾಕ್ ಸ್ಪೈನ್ಸ್‌ರಲ್ಲಿ ಹವಲ್ದಾರರಾಗಿರುವ ಶ್ರೀ ಕೊಕ್ಕಂಡ ಯಂ. ಅಂಣಯ್ಯನವರು ದಕ್ಷಿಣ ಕೊಡಗು ಮಾಧ್ಯಮಿಕ ಶಾಲಾ ಪಕ್ಕದ ಹಾಕಿ ಪಂದ್ಯಾಟದ ಚಟುವಟಿಕೆಯನ್ನು ಬೆಳೆಸುವ ಸಲುವಾಗಿ ಒಂದು ಬೆಳ್ಳಿಯ ಕಪ್ಪನ್ನು ಕೊಟ್ಟು ಪಂದ್ಯಾಟವನ್ನು ಹತ್ತೂರು ಮಾಧ್ಯಮಿಕ ಶಾಲೆಯ ಮೂಲಕ ನಡೆಸಲು ಕೇಳಿಕೊಂಡಿರುವರು. ಸದ್ರಿ ಕಪ್ಪನ್ನು ಯಾವ ಮಾಧ್ಯಮಿಕ ಶಾಲೆಯು ಎಡ್ಡೆ ಬಿಡದೆ ಮೂರು ವರ್ಷ ಗೆಲ್ಲುವುದೋ ಆ ಶಾಲೆಗೆ ಕಪ್ಪು ಶಾಶ್ವತವಾಗುವುದು. ಆದಕಾರಣ ಈ ಕಪ್ಪಿನ ಪಂದ್ಯಾಟದ ಸ್ಪರ್ಧೆಗೆ ಸೇರಲು ಇಚ್ಛಿಸುವ ದಕ್ಷಿಣ ಕೊಡಗಿನ ಮಾಧ್ಯಮಿಕ ಶಾಲೆಗಳು ರೂ. 6ನ್ನು ಪ್ರವೇಶ ಹಣ ಮತ್ತು ಒಪ್ಪಿಗೆ ಪತ್ರ ಸಮೇತ ಮೇಲ್ಕಂಡ ಶಾಲಾ ಹೆಡ್ ಮಾಸ್ತರವರಿಗೆ ನವಂಬರ್ 11 ರ ಒಳಗೆ ತಲ್ಪಿಸುವುದು. ನವಂಬರ್ 14ರ ಅಪರಾಹ್ನ 2 ಗಂಟೆಗೆ ಆಟದ ಲಾಟ್ರಿ ಗೆಸೆಯಲಾಗುವುದು. ನವಂಬರ್ ತಾ 21ರಿಂದ ಪಂದ್ಯಾಟ ಪ್ರಾರಂಭವಾಗ ಬಹುದು.

ಹಾತೂರು, ಕೆ. ಟಿ. ನಾರಾಯಣ
29-10-49. ಹೆಡ್ ಮಾಸ್ತರ್,
ಎಚ್. ಇ ಸ್ಕೂಲ್, ಹತ್ತೂರು.

ನೋಟೀಸು.

ಉತ್ತರ ಕೊಡಗ ತಾಲೋಕು ಸ್ಪೇಶಲ್ ಮಜೆಸ್ಟಿ ಹೋಬಳಿ ಮಾದಾಪುರ ನಗರ ಮತ್ತು ಸೀಮೆಯ ಪೇಟೆ ತಲೋಕು ಅಬ್ಬೀ ಮರದ ಅಧಿಕಾರಿಗಳು ಸ್ವಾಮಿ ಗಳು ಈ ವ್ಯಕ್ತಿತ್ವ ಸ ವ ಸ ಜನರಿಗೂ ತಿಳಿಯ ಪಡಿಸುವದೇನೆಂದರೆ-

ಮಾದಾಪುರ ನಗರ ಮತ್ತು ಅಬ್ಬೀ ಮರಕ್ಕೆ ಸೇರಿದ ಜಮೀನು ಪೈಕಿನಲ್ಲಿಯೂ ಭಾಗವನ್ನಾದರೂ ಈಗಿನ ಹಿಡುವಳಿದಾರರಿಂದ ಮೇಲ್ಕಂಡ ಮರಾಧಿಕಾರಿಗಳ ಅನುಮತಿ ವಿನಾಯಿ ಗ್ರಹಿಸುವ ಭೋಗ್ಯ ವಗೈರೆ ಯಾವ ರೀತಿಯಲ್ಲಿ ಗಲಾದರೂ ಪಡಕೊಳ್ಳತಕ್ಕದ್ದು ಮಾಡಿದಾಗ ಪಡಕೊಂಡ್ಡರೆ ಅದು ಅಂಧಾಗಿ ಕ್ರಯ ಭೋಗ್ಯ ವಗೈರೆ ಯಾವ ಕರದ ಪರಾಧೀನತೆಯೂ ಸಿಂಧುವಾಗಲಾರದೆಂದು ಈ ಮೂಲಕ ತಿಳಿಯ ಪಡಿಸಿದೆ.

1-11-49 ಸ್ವಾಮಿ ಸರ್ವಪ್ರತಿನಿಧಿ

ಕೊಡಗು ದೇಶದ ಮಹಾಜನರಲ್ಲಿ ವಿನಂತಿ.

ಕೊಡಗು ದೇಶದ ಭವಿಷ್ಯ ತೀರ್ಮಾನದ ಚರ್ಚೆಯು ಈ ತಾ 17ನೇ ಡೆಲ್ಲಿಯಲ್ಲಿ ನಡೆಯುವ ಕಾರಣ ಇದರ ಈ ದೇಶದ ಪ್ರತ್ಯೇಕತಾವಾದಿಗಳೆಲ್ಲರೂ ಈ ತಾ 14 ರಿಂದ 17ರ ವರೆಗೆ ಪ್ರತಿ ಗ್ರಾಮದ ದೇವಸ್ಥಾನದಲ್ಲಿ ಸೇರಿ ಈ ದೇಶವನ್ನು ಪ್ರತ್ಯೇಕವಾಗಿ ಉಳಿಸಬೇಕೆಂದೂ ಈ ವಿಷಯದಲ್ಲಿ ಕೇಂದ್ರ ಸರಕಾರಕ್ಕೆ ಸನ್ಮತಿ ಕೊಟ್ಟು ಪ್ರತಿಯೊಬ್ಬರಿಗೂ ಪ್ರತ್ಯೇಕವಾಗಿರುವಂತೆ ದೇವರನ್ನು ಕುರಿತು ಪ್ರಾರ್ಥನೆಮಾಡಬೇಕಾಗಿ ಕೇಳಿಕೊಳ್ಳಲಾಗಿದೆ.

ಕೆ. ಪಿ ಕರುಂಬಯ್ಯ
ಕಾರ್ಯದರ್ಶಿ
ಕೊಡಗು ಪ್ರತ್ಯೇಕ ಪಕ್ಷ

ಇಂಡಿಯಾ ಸರಕಾರದ ಸುದ್ದಿ ಮತ್ತು ಬಾನುಲಿ ಶಾಖೆಯ

ಕೇಂದ್ರ ಸರಕಾರದ ಸುದ್ದಿ ಖಾತೆಯ ಮಂತ್ರಿ ಶ್ರೀ. ರಂಗನಾಥ ರಾಮಚಂದ್ರ ದಿವಾಕರರು ತಾರೀಕು ೧–೧೧–೪೯ ರಲ್ಲಿ ಮಡಿಕೇರಿಗೆ ಬಂದರು. ಮಡಿಕೇರಿಯ ಪುರಜನರೂ, ಉದ್ಯೋಗಸ್ಥರೂ ಅವರನ್ನು ಟೋಲ್‌ಗೇಟ್ ಬಳಿ ಸ್ವಾಗತಿಸಿದರು. ಮಧ್ಯಾಹ್ನದ ವೇಳೆ ಪೊಲೀಸರ ಗಾರ್ಡ್ ಆಫ್ ಆನರ್ ಸ್ವೀಕರಿಸಿದರು. ೨–೩೦ ಗಂಟೆಗೆ ಕೊಡಗು ಕೌನ್ಸಿಲ್ ಹಾಲ್‌ನಲ್ಲಿ ಸಾರ್ವಜನಿಕ ಸಭೆ ನೆರೆದಿತ್ತು. ಕೊಡಗಿನ ಚೀಫ್ ಕಮಿಷನರು ಅಧ್ಯಕ್ಷತೆ ವಹಿಸಿದ್ದರು. ಮಡಿಕೇರಿ ಪುರಸಭೆಯು ಬಿನ್ನವತ್ತಳೆಯನ್ನರ್ಪಿಸಿತು. ಅದರ ಸಾರಾಂಶ ಹೀಗಿದೆ.

'ರಾಷ್ಟ್ರಪಿತ ಮಹಾತ್ಮಗಾಂಧಿಜಿಯವರ ಶಿಷ್ಯರಾದ ತಾವು ನಮ್ಮ ದೇಶದ ಸ್ವಾತಂತ್ರ್ಯದ ಹೋರಾಟದಲ್ಲಿ ಅವಿಶ್ರಾಂತರಾಗಿ ದುಡಿದು ಪೂಜ್ಯ ಗಾಂಧಿಜಿಯವರ ತತ್ವಗಳನ್ನು ಅಕ್ಷರಶಃ ಅನುಸರಿಸಿ ಅದರಂತೆ ಕರ್ನಾಟಕದ ಜನತೆಯನ್ನು ನಡೆಯಿಸಿಕೊಂಡು ಬಂದಿರುವಿರಿ. ಸತ್ಯ, ಅಹಿಂಸೆ, ಸರಳ ಜೀವನ, ಈ ಮಾರ್ಗಗಳಲ್ಲಿ ಸಂಚರಿಸಿ ಕೃತಕೃತ್ಯರಾಗಿರುವಿರಿ. ತಾವು ಅಖಿಲ ಕರ್ನಾಟಕ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ತಮ್ಮ ಅನೋಘವಾದ ಸೇವೆಯನ್ನು ಕರ್ನಾಟಕದ ಎಲ್ಲ ಭಾಗಕ್ಕೂ ನಿರ್ವಂಚನೆಯಿಂದಲೂ, ನಿಸ್ವಾರ್ಥತೆಯಿಂದಲೂ ಸಲ್ಲಿಸಿರುವಿರಿ. ತಾವು ಈ ಮೊದಲು ದೇಶಸೇವೆಯ ಸಲುವಾಗಿ ಕೊಡಗಿಗೂ ಬಂದು ತಮ್ಮ ಸಂದರ್ಶನವನ್ನಿತ್ತಿರುವಿರಿ.

ಇಂಗ್ಲಿಷ್, ಸಂಸ್ಕೃತ, ಕನ್ನಡ ಮತ್ತು ಹಿಂದಿ ಭಾಷಾ ಜ್ಞಾನಿಗಳಾದ ತಾವು, ಈ ಭಾಷಾ ಸಾಹಿತ್ಯಗಳಿಗೆ ಸಲ್ಲಿಸಿದ ಸೇವೆ ಅಪಾರವೂ, ಅತಿಶ್ರೇಷ್ಠವೂ ಆಗಿದೆ. ತಾವು ಸಂಪಾದಿಸಿದ ಸರ್ವಾರ್ಥಕ ಜ್ಞಾನವನ್ನು 'ಗೀತೆಯ ಗುಟ್ಟು' 'ಉಪನಿಷತ್ಪ್ರಕಾಶ' 'ವಚನ ಶಾಸ್ತ್ರ ರಹಸ್ಯ'ಗಳ ಮೂಲಕ ಸರ್ವರಿಗೂ ಹಂಚಿರುವಿರಿ. ಇಂಗ್ಲಿಷ್ ಭಾಷೆಯಲ್ಲಿ ತಾವು ರಚಿಸಿದ 'ಉಪನಿಷತ್ತಿನ ಕಥೆಗಳು' ಡಾ. ರಾಧಾಕೃಷ್ಣರವರಂಥಾ ವಿದ್ವಾಂಸರಿಂದಲೂ ಹೊಗಳಲ್ಪಟ್ಟಿರುವುವು. ತಮ್ಮ ಹೃದಯಾಂತರಾಳದಿಂದ ಮಿಡಿದು ಬಂದ ವಾಣಿಗಳನ್ನು 'ಅಂತರಾತ್ಮನಿಗೆ' ಸಮರ್ಪಿಸಿರುವಿರಿ. 'ಸ್ವಧರ್ಮೇ ಶ್ರೇಯಸ್ಕರ'ವೆಂದು ಭಾವಿಸಿದ ತಾವು ಶ್ರೀರಾಮಕೃಷ್ಣ ಪರಮಹಂಸರಿಗೆ' ದಿವ್ಯ ಕಾಣಿಕೆ ಇತ್ತು 'ಕರ್ಮವೀರರಾಗಿ' 'ಸಂಯುಕ್ತ ಕರ್ನಾಟಕ'ದ ಸಂಸ್ಥಾಪಕರಾಗಿರುವಿರಿ.

ತಾವು ಇಂಡಿಯಾ ದೇಶದ ನ್ಯಾಯಾಂಗ ಶಾಸನ ಸಭೆಯ ಸದಸ್ಯರಾಗಿ ಕೆಲಸ ಮಾಡಿ ಮಾನ್ಯ ವಲ್ಲಭಭಾಯಿ ಪಟೇಲರಂಥವರ ವಿಶ್ವಾಸಕ್ಕೆ ಪಾತ್ರರಾಗಿ ಇಂದಿನ ಈ ಮಂತ್ರಿ ಸ್ಥಾನವನ್ನು ಅಲಂಕರಿಸಿರುವುದು ದೇಶಕ್ಕೇ ಶ್ರೇಯಸ್ಕರವಾಗಿದೆ. ದೆಹಲಿಯ ಬಾನುಲಿಯಲ್ಲಿ ವಾರ್ತೆಗಳನ್ನು ಕನ್ನಡ ನುಡಿಯಲೂ ಪ್ರಸಾರ ಮಾಡಲು ತಾವು ಕಾರಣ ಪುರುಷರು. ಕರ್ನಾಟಕದ ಪ್ರಮುಖ ಕೇಂದ್ರಗಳಲ್ಲಿ ಅಖಿಲ ಭಾರತ ಆಕಾಶವಾಣಿಗಳನ್ನು ಸೃಷ್ಟಿಸಿ ಕರ್ನಾಟಕದ ಎಲ್ಲಾ ಬಗೆಯ ವಿದ್ವಾಂಸರಿಗೂ ಆಯಾ ಆಕಾಶವಾಣಿಗಳಲ್ಲಿ ಅವಕಾಶಗಳನ್ನು ಕಲ್ಪಿಸಿ ತನ್ಮೂಲಕ ಕನ್ನಡ ನಾಡಿನ ಗೌರವವನ್ನು ಹೆಚ್ಚಿಸಬೇಕಾಗಿ ನಮ್ಮ ಪ್ರಾರ್ಥನೆ.'

ಪುರಸಭೆಯವರು ಅರ್ಪಿಸಿದ ಬಿನ್ನವತ್ತಳೆಗೆ ಉತ್ತರವನ್ನೀಯುತ್ತಾ ದಿವಾಕರರು ಈ ರೀತಿ ಹೇಳಿದರು.

'ನನ್ನ ಅಲ್ಪಸೇವೆಯನ್ನು ಗಮನಿಸಿ ನೀವಿತ್ತ ಬಿನ್ನವತ್ತಳೆಗೆ ಕೃತಜ್ಞನು. ಸೇವೆಗೆ ಸರಿಯಾದ ಪುರಸ್ಕಾರ ಸಿಕ್ಕುವದಿಲ್ಲ. ನಿಷ್ಕಾಮಬುದ್ಧಿಯಿಂದ ಸೇವೆಮಾಡುವವನು ಪುರಸ್ಕಾರವನ್ನು ಬಯಸಲಾರ. ತಾನು ಮಾಡುತ್ತಿರುವ ಸೇವೆಯು ಸರಿಯಾದ ಸೇವೆಯೋ ಎಂಬ ಬಗ್ಗೆ ಅಂತಃಕರಣದಲ್ಲಿ ಪ್ರಶ್ನೆ ಇರುತ್ತದೆ. ನಾನು ಮಾಡಿರುವ ಸೇವೆ ತಮಗೆಲ್ಲರಿಗೂ ಹಿಡಿಸಿದೆ ಎಂಬ ಸಂತೋಷವನ್ನು ಈ ಬಿನ್ನವತ್ತಳೆ ಕೊಟ್ಟಿದೆ. ನಾನು ಸ್ವಯಂ ಸೇವೆಯ ಸಂಕೇತಧಾರಿಯಾಗಿ ೩೦ ವರ್ಷಗಳಿಂದ ನಡೆದುಬಂದಿದೆ. ಈ ಸೇವೆಯನ್ನು ಕೈಕೊಂಡಾಗ ಸುತ್ತಲೂ ಕತ್ತಲೆ ಕವಿದಿತ್ತು. [illegible] ಪ್ರಚಂಡವಾದ, [illegible] ೪೦ ಕೋಟಿ ಜನರುಳ್ಳ ನಮ್ಮ ದೇಶವು ಅತ್ಯಂತ ದಾಸ್ಯದಲ್ಲಿ ಇತ್ತು, [illegible] ಎಲ್ಲಿಯೂ ದಿಕ್ಕು ಕಾಣದ ಸಮಯ ಜನರಲ್ಲಿದ್ದಾಗ ಮಹಾತ್ಮಾಜಿಯವರ ಪ್ರವೇಶವಾಯಿತು. ಅವರನ್ನು [illegible] ಗುರುತಿಸಿ [illegible]. ನಮ್ಮ [illegible] ಇಂದು [illegible] ಪ್ರತ್ಯಕ್ಷ [illegible] ಅವರ ದಿವ್ಯ ಅಸ್ತ್ರ [illegible] ಮಹಾ ಸಾಮ್ರಾಜ್ಯಗಳ [illegible] ಬಂಧನಗಳಲ್ಲಿ [illegible] ಪಂಡಿತ ಜವಾಹರರು [illegible] ವರ್ಷಕ್ಕೆ ಕಾಲಿಟ್ಟು [illegible] ಮಹಾತ್ಮರ [illegible] ತತ್ವಗಳನ್ನು [illegible] 'ಇನ್ನು [illegible]' [illegible] ಸ್ವಾತಂತ್ರ್ಯ [illegible] ಹಿಂದೂಸ್ಥಾನ, ಪಾಕಿಸ್ತಾನ [illegible] ಇಂದಿನಂಥಾ ಆಡಳಿತ ಏಕತೆ ಎಂದೂ ಇರಲಿಲ್ಲ. ಸ್ವಾತಂತ್ರ್ಯದೊರೆತ [illegible] ಕಾಶ್ಮೀರದ ರಾಜನ ಬೆನ್ನುತಟ್ಟಿ, [illegible] ಅಧಿಕಾರ ಉಪಯೋಗಿಸಿ ಕಾಶ್ಮೀರದಿಂದ ಕನ್ಯಾಕುಮಾರಿಯ ವರೆಗೆ [illegible] ಮಾಡಿದ ವಲ್ಲಭಭಾಯಿ ಪಟೇಲರ ದಾನ [illegible] ವಲ್ಲಭಭಾಯಿಯವರದು ಹಿಂದೂ ದೇಶದೊಳಗೆ ದಿಗ್ವಿಜಯ ಮಾಡಿದ ಸೇನೆ [illegible]. ಇವರಿಂದಾಗಿ ಭಾರತದ ಘನತೆ ಮೇಲೇರುತ್ತಿದೆ.'

ಕತ್ತಲೆಯಲ್ಲಿ ಬೆಳಕು ಕಂಡ ಕೊಡಗಿನ [illegible] ಸೇವಾ ಸಂಸ್ಥೆಗಳಿಂದ ದೇಶ ಸೇವಕರು [illegible]. ಆ ಸಂದರ್ಭ ಕೊಡಗಿಗೂ ಸಾಹುಕಾರರು ಸಲ ಬರುವ ಅವಕಾಶ ದೊರಕಿತ್ತು. ಇಂದು ನಿಮ್ಮೆಲ್ಲರ ಪರಿಚಯ ಮಾಡಿಕೊಳ್ಳುವ ಈ ಅವಕಾಶ ದೊರೆತುದಕ್ಕೆ ಧನ್ಯ. ನೀವು ಬಿನ್ನವತ್ತಳೆಯೆಂಬ ಸರ್ಟಿಫಿಕೇಟುಕೊಟ್ಟು ಹೆಚ್ಚಿನ ಸೇವೆಗೆ ಉತ್ತೇಜನಕೊಟ್ಟಿರುವಿರಿ. ನನ್ನ ಬಗ್ಗೆ ತಾವು ಕಲ್ಪಿಸಿದ ಚಿತ್ರ ಸರಿಯೇ ಎಂದು ನನಗೇ ಗೊತ್ತಿಲ್ಲ. ನನ್ನಲ್ಲಿರುವ ದೋಷ ಎಷ್ಟು, ಮಾಡುವ ಶಕ್ತಿ, ದಿನಗಳಿದ್ದರೂ ಮಾಡದೆ ಉಳಿದ ಕಾರ್ಯವೆಷ್ಟು ಎಂಬುದು ನನಗೇ ಗೊತ್ತು. ಹೇಗಿದ್ದರೂ ಆ ಸೇವೆಗಾಗಿಯೇ ಈ ಜೀವನ ಮುಡಿಪು. ಸುತ್ತಲೂ ಕವಿದಿದ್ದ ಕತ್ತಲೆ ಕಳೆದು ದೇಶಕ್ಕೆ ಸ್ವಾತಂತ್ರ್ಯ ದೊರೆತು ನಮ್ಮ ಕೈಗೆ ಅಧಿಕಾರ ಬರಬಹುದೆಂದು ಯಾರೂ ಭಾವಿಸಿರಲಿಲ್ಲ. ೧೯೪೨ರ ಕಾಲಕ್ಕೆ ಯೂರೋಪಿನ [illegible] ನಮ್ಮ ದೇಶ ಗಂಡಾಂತರದಲ್ಲಿ ಬಿದ್ದೀತೋ ಎನ್ನುವಂತಿತ್ತು. ಜೈಲಿಗೆ ಹೋದವರು ಹೊರಗೆ ಬರುವರೋ ಎಂಬ ಸಂಶಯವಿತ್ತು. ಸ್ವಾತಂತ್ರ್ಯ ಬಂತು. ಅಕಸ್ಮಿಕವಾಗಿ ಮಂತ್ರಿಪದವೂ ಬಂತು. ಇದು ತಾತ್ಕಾಲಿಕ. ನನ್ನ ಜೀವನ ಸಿಪಾಯಿ ಯೋಧನ ಜೀವನ. ಮೇಲಿನವರು ನಿಯೋಜಿಸಿದಂತೆ ಕರ್ತವ್ಯಮಾಡುವುದು ಯೋಧನ ಧರ್ಮ.

ನನ್ನ ಇಚ್ಛೆಯ ಸೇವೆಯೆಂದರೆ ಸಾಹಿತ್ಯ ಸೇವೆ. ಪತ್ರಿಕೋದ್ಯೋಗ ನನ್ನ ಇಚ್ಛೆಯ ಕಲೆ. ಕೆಲವರು ಎನ್ನುತ್ತಾರೆ 'ನೀವು ಅಧಿಕಾರಿಯಾಗಿಲ್ಲ. ಜನರೊಡನೆ ಸಾಮಾನ್ಯರಂತೆ ವರ್ತಿಸುತ್ತೀರಿ. ಅಧಿಕಾರಕ್ಕೆ ನೀವು ಯೋಗ್ಯರಲ್ಲ'ವೆಂದು. ನನಗೂ ಹಾಗೆನಿಸುತ್ತದೆ. ನನ್ನ ಕ್ಷೇತ್ರ ಅಧಿಕಾರದ ಕ್ಷೇತ್ರವಲ್ಲ.

ನಮ್ಮ ಮುಂದೆ ಮಹಾ ಪ್ರಶ್ನೆಗಳಿವೆ. ಕಾಶ್ಮೀರದಿಂದ ನಾನೀಗ ತಾನೆ ಹಿಂದಿರುಗಿರುವೆನು. ರಾಷ್ಟ್ರೀಯ ಸಂಪತ್ತಿನ ಸಂಬಂಧ ಅಲ್ಲಿಗೆ ಹೋಗಿದ್ದಾಗ ಜನರಲ್ ತಿಮ್ಮಯ್ಯನವರು ಯುದ್ಧ ಸೀಮೆಗೆ ಹೋಗಿ ಯೋಧರ ವಿಚಾರ ತಿಳಿದುಕೊಳ್ಳುವಂತೆ ಆಹ್ವಾನಿಸಿದರು. ಅವರು ಸೈನ್ಯದ ವಿವಿಧ ಕ್ಷೇತ್ರಗಳನ್ನು ನೋಡುವ ಅವಕಾಶ ಮಾಡಿಕೊಟ್ಟರು. ಕಾಶ್ಮೀರ ಇಂದು ಅಂತರರಾಷ್ಟ್ರೀಯ ಸಮಸ್ಯೆಯಾಗಿದೆ. ಕಾಶ್ಮೀರದಲ್ಲಿನ ಸಲ್ಮಾನರು [illegible] ಬೇಕೆಂದು ಕೆಲವರು [illegible] ಪ್ರಚಾರಮಾಡುತ್ತಾರೆ. ಇದು ಕೇವಲ ಹಠವಾದ, ಹಠವಿರ್ಯ ಭಾವನೆ. ಕಾಶ್ಮೀರದ ಸ್ಥಿತಿ ಹಾಗಿಲ್ಲ. ಅಲ್ಲಿ ಮುಸ್ಲಿಂ, ಹಿಂದೂ, ಸಿಖ್ ಎಂಬ ಭಿನ್ನತೆಯಿಲ್ಲ. ಎಲ್ಲರೂ ರಾಷ್ಟ್ರೀಯ ಸಮ್ಮೇಳನದ [illegible]. ಮುಖ್ಯಮಂತ್ರಿ ಶೇಕ್ ಅಬ್ದುಲ್ಲರವರ ಶಕ್ತಿ ಅಸಾಧಾರಣ ದೈವಿಕ ದೃಷ್ಟಿಯಿಂದಾಗಿದೆ. ಕೋಮುವಾರು ತತ್ವವನ್ನು ವಿರೋಧಿಸಿ ರಾಷ್ಟ್ರೀಯ ಮನೋಭಾವದಲ್ಲಿ [illegible]. ಅವರ ಮತ್ತು ಪಂಡಿತ ಜವಾಹರರ ಸ್ನೇಹ ಗಾಢವಾದುದು. ಹಿಂದೂದೇಶವನ್ನು ವಿಭಾಗಿಸಿದ ಆ ತತ್ವಕ್ಕೆ ಒಂದು ಸ್ಪರ್ಧೆಕೊಡುವ ವಿಚಾರವೆಂದರೆ ಕಾಶ್ಮೀರದ ಸಮಸ್ಯೆ. ಕೋಮುವಾರು ತತ್ವದಿಂದ ರಾಷ್ಟ್ರ ಕಟ್ಟುವ ನೀತಿಗೆ ವಿರುದ್ಧವಾಗಿ ಕಾಶ್ಮೀರವಿದೆ. ಜಾತೀಯ ತತ್ವಕ್ಕೆ ಪಾಕಿಸ್ಥಾನವು ಒಪ್ಪುವದಾದರೆ ಆ ದೇಶ ಜಾತೀಯ [illegible] ಕಾಶ್ಮೀರದ ಮೇಲೆ ಧಾಳಿ ಮಾಡಲು ಕಾರಣವೇನೆಂಬುದೇ ಪ್ರಶ್ನೆ. ಕಾಶ್ಮೀರದ ಸ್ಥಿತಿ ಗಂಡಾಂತರದಲ್ಲಿತ್ತು. ಶ್ರೀನಗರ ಧಾಳಿಗಾರರ ವಶವಾಗುವಂತಿತ್ತು. ರಾಜರು ಓಡಿಹೋಗಿದ್ದರು. ಆ ಸಂದರ್ಭದಲ್ಲಿ ಹಿಂದೀ ಸೇನೆಯು ಸಹಾಯಮಾಡಿ ೮೦ ಮೈಲು ಉದ್ದ ೪೦ ಮೈಲು ಅಗಲದ ಆ ಸುಂದರ ಕಾಶ್ಮೀರ ಕಣಿವೆಯನ್ನು ರಕ್ಷಿಸಿತು. ನಾವಿಲ್ಲಿ ಸಕ್ಕರೆ, ಉಪ್ಪು, ದೊರೆಯುವದಿಲ್ಲವೆಂದರೆ ಬೊಬ್ಬೆ ಹಾಕುತ್ತೇವೆ. ಕಾಂಗ್ರೆಸ್ ಸರಕಾರ ಬಂದು ಏನು ಮಾಡಿದೆ. ಪಂಡಿತ ಜವಾಹರರು ಏನು ಮಾಡಿದ್ದಾರೆಂದು ಪ್ರಶ್ನಿಸಿ ಟೀಕಿಸುತ್ತೇವೆ. ಅಲ್ಲಿಯ ಯೋಧರ ಜೀವನ ನೋಡಬೇಕು. ಮೂಗು ತಿಂಗಳ ವರೆಗೆ ಮಂಜಿನ ಕಾರಣ ಸಂಬಂಧ, ಕಡಿದು ಉಪವಾಸ ಬೀಳುವ ಪ್ರಸಂಗ ಬಂದರೂ ನಗುಮುಖದಿಂದ ತ್ಯಾಗ ಮಾಡುತ್ತಿದ್ದಾರೆ. ಕಾಶ್ಮೀರ ಹೋಯಿತು ಎಂಬ ಅಪಪ್ರಚಾರ ಮಾಡುವುದು ಹಾನಿಕರ. ಈ ರೀತಿಯ ಬೇಜವಾಬ್ದಾರಿ ವರ್ತನೆ ಸಲ್ಲದು. ಇಂದು ಅಮೇರಿಕಾವು ಭಾರತದ ಬೆನ್ನು ತಟ್ಟುತ್ತಿರುವದು ಯಾವದೋ ನೆಂಟಸಿಕೆಯ ಕಾರಣವಲ್ಲ. ಇಂದು ಭಾರತದ ಸಹಾಯ ಅದಕ್ಕೆ ಬೇಕಿದೆ. ನಮ್ಮ ದೇಶದ ಆಡಳಿತ ನಡೆಸುವ ಮುಂದಾಳುಗಳಲ್ಲಿ ವಿಶ್ವಸಬೇಕು. ಜಾತಿ, ಅಸೂಯೆ, ಮತದ ಗೊಂದಲ ಇವುಗಳಿಂದ ರಾಷ್ಟ್ರ ನಿರ್ಬಲವಾಗುವದು. ನಮ್ಮ ಗಡಿ ಕೊಡಗಲ್ಲ; ಮೈಸೂರಲ್ಲ; ಕರ್ನಾಟಕವಲ್ಲ, ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ. ಇಲ್ಲಿ ನಾವು ಕಡಿದಾಟ ಮಾಡಿದರೆ ಅಲ್ಲಿ ಅವರಿಗೆ ತಗಲೀತು. ಜನರಲ್ ಕಾರಿಯಪ್ಪ, ತಿಮ್ಮಯ್ಯನವರುಗಳನ್ನು ನೋಡಿ. ಸೈನ್ಯದಲ್ಲಿ ನಾನಾ ಜಾತಿಯ ಜನರಿದ್ದರೂ ಎಲ್ಲರನ್ನೂ ಒಂದೇ ಕುಟುಂಬದವರಂತೆ ನೋಡಿಕೊಂಡು [illegible] ದರ್ಶನೀಯ. ಈ ಸಹಭಾವನೆ ನಮ್ಮನಿಮ್ಮಲ್ಲಿರಬೇಕು. ಜಗತ್ತು ಹಿಂದೂ ದೇಶದತ್ತ ನೋಡುತ್ತಿದೆ. ಸರಕಾರವೇನು ಮಾಡಿದೆ ಎಂಬುದು ಪ್ರಶ್ನೆಯಲ್ಲ. ಇಂಗ್ಲೆಂಡಿನಲ್ಲಿ ಲೇಬರ್ ಸರಕಾರ ಏನುಮಾಡಿದೆ [illegible]. ನ್ಯಾಯ [illegible] ಬಿಟ್ಟಿ ದೊರೆಯದು. ಆದರೂ? [illegible] ನೈತಿಕ ಮಟ್ಟ ಹೋಗಿದೆಯೋ [illegible] ಬಾರದು. [illegible] ಎನ್ನುವ ಮಾರ್ಗವಲ್ಲ.

ಮನೆಯ ಬಾಗಿಲಿಗೆ [illegible]. ಬೆಂಗಳೂರಿನಲ್ಲಿ ಏನೂ ಇಲ್ಲ. ಮನೆಯು [illegible] ಇಂಥ ಸ್ಥಿತಿಯಲ್ಲಿ ಮನೆಗೆ ಅತಿಥಿ ಬಂದಾಗ [illegible] ಭಾರತಖಂಡದ [illegible] ಬಗೆಹರಿಯುವ ವರೆಗೆ ಶಾಂತಿ ಬೇಕು. [illegible] ಸರಕಾರ ಏನು ಮಾಡಿದೆ ಎಂಬುದು ಪ್ರಶ್ನೆಯಲ್ಲ. [illegible] ಸಂಸ್ಥಾನಗಳ ವಿಲೀನೀಕರಣ ಇಷ್ಟು ಸೂರ ಹಿತಕ್ಕಾಗಿ? [illegible] ಸ್ವಲ್ಪ ವಿಚಾರಮಾಡಿದರೆ [illegible] ಗಂಡಾಂತರದಿಂದ ಪಾರಾಗುವ ಚೇತನ [illegible].

ಕನ್ನಡಪ್ರಾಂತ ಆಗಲಿಲ್ಲವೆಂದು ಮೇಲಿರುವವರನ್ನು ಬೈಯುತ್ತಾರೆ. ಪ್ರಾಂತ ಇಂದಾಗಬಹುದು. ಅದು ಉಪ್ಪು,

ಮಂತ್ರಿ ಶ್ರೀ ರಂಗನಾಥ ದಿವಾಕರರ ಎರಡು ಭಾಷಣಗಳು.

ಆಧಾರ ಇಲ್ಲದ ರಸಹೀನ ರೊಟ್ಟಿಯಂತಾಗಬಹುದು. ಸಾವಧಾನವಾದರೂ ಯೋಗ್ಯರೀತಿ ಸರ್ವ ನ್ಯೂನತೆಗಳನ್ನು ಪರಿಹರಿಸಿಕೊಂಡು ಪ್ರಾಂತ ರೂಪುಗೊಳ್ಳಲಿ. ಯಾರಿದ್ದರೆ ಜವಾಬ್ದಾರಿ ಹೊರುವ ಯೋಗ್ಯತೆ ಎಲ್ಲಿದೆ ಎನ್ನಬೇಡಿ. ಈಗ ಬೇಕಾದಷ್ಟು ಜನರಿದ್ದಾರೆ. ನಮ್ಮ ಕೈಯಲ್ಲಾದ ಸಹಾಯ ಮಾಡಬೇಕು. ಸಹಾಯ ಮಾಡಲಾಗದಿದ್ದರೆ ತಟಸ್ಥರಿರುವದಾದರೂ ಒಳಿತು. ಪುನಹ ನಿಮ್ಮ ಆತ್ಮೀಯ ಸ್ವಾಗತಕ್ಕಾಗಿ ವಂದಿಸುತ್ತೇನೆ."

ಶ್ರೀ ಸಿ. ಎಂ. ಪೂಣಚ್ಚನವರು ಅತಿಥಿಗಳಿಗೆ ವಂದನಾರ್ಪಣೆ ಮಾಡಿದರು.

೨

ಸಾಯಂಕಾಲ ೪-೪೦ ಗಂಟೆಗೆ ಕಾವೇರಿ ಮಹಲ್‌ನಲ್ಲಿ ಕೊಡಗು ಸರಕಾರಿ ಕಾಲೇಜಿನ ಕನ್ನಡ ಸಂಘದ ಆಶ್ರಯದಲ್ಲಿ ಶ್ರೀ ರಂಗನಾಥ ದಿವಾಕರರು 'ಜೀವನ ಮತ್ತು ಸಾಹಿತ್ಯ' ಎಂಬ ವಿಚಾರ ಭಾಷಣ ಮಾಡಿದರು. ಆಸರು ಸಭಾ ಸದಸ್ಯರು ಬಂದಾಗ ಪ್ಯೂಪಿಲ್ ನೇಶನಲ್ ಕ್ಯಾಡೆಟ್ ಕೋರಿನವರು ಗಾರ್ಡ್ ಆಫ್ ಆನರನ್ನು ಸಲ್ಲಿಸಿದರು. ಅಧ್ಯಕ್ಷತೆ ವಹಿಸಿದ್ದ ಕೊಡಗಿನ ಚೀಫ್ ಕಮಿಷನರು ಅವರನ್ನು ಸ್ವಾಗತಿಸುತ್ತ, ಅವರ ಕೊಡಗಿಗೆ ಹೊಸಬರಲ್ಲವೆಂದೂ, ಮಂತ್ರಿಯಾಗಿ ಇದೇ ಅವರ ಪ್ರಥಮ ಸಂದರ್ಶನವೆಂದೂ, ಸರಕಾರಿ ಕಾಲೇಜಿನ ಅನುಸಂಧಾನ ಸಂಸ್ಥೆ ನೆರವನಾಗಿಯೂ ಹೇಳಿದರು. ಗ್ರಂಥಕರ್ತ, ಪತ್ರಿಕೋದ್ಯೋಗಿ, ಈಗ ಆಡಳಿತಗಾರರಾಗಿರುವ ದಿವಾಕರರು, ಕನ್ನಡ, ಹಿಂದಿ, ಸಂಸ್ಕೃತ ಪಂಡಿತರೆಂದೂ, ಅವರು ಗವರ್ನರ್ ಜನರಲ್ ರಾಜಾಜಿಯವರಂತೆಯೇ ಉಪನಿಷತ್ತಿನ ಮೇಲೆ ವಿವರಣೆ ಬರೆದು ಅಮೂಲ್ಯ ಸೇವೆ ಮಾಡಿರುವರೆಂದೂ, ಹೇಳಿದರು. ಕೊಡಗಿನ ಜನರು ಕಾಲೇಜಿಗಾಗಿ ಹಾತೊರೆಯುತ್ತಿದ್ದು ಈ ವರ್ಷ ಕಾಲೇಜಾಗಿಯೆಂದೂ ಇದನ್ನು ಹೆಸರುವಾಸಿಯಾದ ಮಾದರಿ ಕಾಲೇಜಾಗಿ ಮಾಡಲು ಕೊಡಗು ಸರಕಾರವು ಯಾವ ಎಡರನ್ನೂ ಲೆಕ್ಕಿಸದೆಂದೂ, ಹಿಂದೂದೇಶಕ್ಕೆ ಪ್ರಥಮ ಸೇನಾನಾಯಕರನ್ನೂ, ಅವರ್ಣ ಜನರಲನ್ನೂ ಕೊಟ್ಟ ಈ ಶಾಲೆ ಮುಂದೆ ಪಂಡಿತ ಜವಾಹರರಂಥಾ, ಸರ್ದಾರ್ ಪಟೇಲರಂಥ, ಇಂದಿನ ಅತಿಥಿಗಳಂಥಾ ಮಹಾ ರಾಜಕಾರಣಿಗಳನ್ನು ಕೂಡ ಕೊಡುವಂತಾಗಲೆಂದೂ ಆಶಿಸಿದರು.

ದಿವಾಕರರ ಭಾಷಣದ ಸಾರಾಂಶ ಹೀಗಿದೆ.

"ಜೀವನ ಮತ್ತು ಸಾಹಿತ್ಯದ ಸಂಬಂಧವೇನಿದೆ, ಒಂದನ್ನೊಂದು ಹೇಗೆ ಹೊಂದಿಕೊಂಡಿದೆ ಎಂಬುದನ್ನು ಹೇಳಬೇಕೆಂದು ನನ್ನ ಬಯಕೆ. ನಾನು ಲೇಖಕ, ಸಂಪಾದಕ ಯಾ ಪಂಡಿತನು ಅಲ್ಲ. ಜೀವನ ಸಾಧಕನೆಂಬ ಆ ಒಂದು ದೃಷ್ಟಿಯಿಂದ ನಾನು ಮಾಡುತ್ತಿರುವ ಕರ್ಮಗಳಿವು. ಜೀವನವನ್ನು ರೂಪುಗೊಳಿಸುವ, ಶುದ್ಧಗೊಳಿಸುವ, ಜೀವನ ಧ್ಯೇಯವನ್ನು ಹಸ್ತಗತ ಮಾಡುವ ಪ್ರಯತ್ನವೇ ನನ್ನ ಜೀವನ ವ್ಯಾಪಾರ. ಜೀವನದಲ್ಲಿ ಅನೇಕ ತೊಂದರೆ, ತೊಡರು, ಪಾಪ, ಅತ್ಯಾಚಾರಗಳು ತಲೆದೋರಿ ಜೀವನ ಬಿಡಬೇಕೆನಿಸುವದುಂಟು. ಅವುಗಳನ್ನು ನಿವಾರಿಸಲು ಕೆಲಸಬೇಕು. ಸಾಹಿತ್ಯ ಜೀವನದ ಸಲೆ. ಜೀವನವು ಗಂಗಾ ನದಿಯಂತಾದರೆ ಲೇಖನ ಕಲೆಯು ಸಣ್ಣ ಕಾಲುವೆಯಂತೆ. ಸಾಹಿತ್ಯವನ್ನು ಓದಿ ಆನಂದಿಸುವದಕ್ಕಿಂತಾ ಸಾಹಿತ್ಯ ನಿರ್ಮಾಣ ಶಕ್ತಿಯು ಹಿರಿದು. ಜೀವನವನ್ನು ಶುದ್ಧಗೊಳಿಸುವ ಪ್ರಯತ್ನದಲ್ಲಿ ಸಾಧನೆಗೆ ಸಹಾಯಕವಾಗಿ ಬರೆಯುವದೇ ಸಾಹಿತ್ಯ ನಿರ್ಮಾಣ. ಆದರೆ ಇದು ಜೀವನ ಧ್ಯೇಯವಲ್ಲ. ಸಾಹಿತ್ಯ ನಿರ್ಮಾಣಕ್ಕಿಂಥಾ ಜೀವನ ನಿರ್ಮಾಣ ಮೊದಲಾಗಬೇಕು. ನಾನು ಪಂಡಿತನಲ್ಲ; ಸಾಧಕ. ಆ ದೃಷ್ಟಿಯಿಂದ ವಿನಹ ನನ್ನ ಬರಹಗಳಿಗೆ ಬೇರೆ ಅರ್ಥವಿಲ್ಲ. ಈ ಭೂಮಿಕೆಯು ಮನೋಭಾವ ಬೇಕು. ನಾವು ಕವಿಗಳಿರಬಹುದು. ಕಾವ್ಯ ಬರೆಯಬಹುದು. ಆದರೆ ಅವು ಮಹತ್ವಿನದಲ್ಲ. ಜೀವನವನ್ನು ಉಜ್ವಲಗೊಳಿಸಿ ಅವರ ಅಂಗವಾಗಿ ಸಾಹಿತ್ಯ ಬೆಳೆದರೆ ಅವರ ಸಾಮರ್ಥ್ಯವೇ ಬೇರೆ. ಜೀವನಯುಕ್ತ ಮಾಗೊಳ್ಳದಿದ್ದರೆ ಅದನ್ನು ಪವಿತ್ರೀಕರಿಸದಿದ್ದರೆ ಅದರಿಂದ ಹೊರತು ಸಾಹಿತ್ಯ ಪ್ರತಿಷ್ಠೆ ಇರಲಾರದು. ಸತತ ಕರ್ತನ, ಶೀಲನಾಗಿರುವದೇ ಜೀವನ. ಜಡ ಪದಾರ್ಥಗಳಿಗೆ ಚೇತನಕೊಟ್ಟು ಅವುಗಳ ಮೂಲಕ ಕೆಲಸ ಮಾಡುತ್ತಾನೆ ಮನುಷ್ಯ. ಡೈನಮೋ ಇಂಜಿನ್ ಇದೆಯೆನ್ನಿ. ಅದಕ್ಕೆ ಶಕ್ತಿ, ಬೆಳಕು ಅದಕ್ಕೆ ಕೊಡುವೊನು ಎಷ್ಟು ಆಧಾರ. ... ಇಂಜಿನ್ನು ಶಕ್ತಿ ... ಎಂಬುದು ನಮಗೆ ಗೊತ್ತು. ಎತ್ತು, ಕುದುರೆ ತಂದರೆ ಅದರ ಖರ್ಚಿನ ಭಯ ಲೆಕ್ಕ ಹಾಕುತ್ತೇವೆ. ಆದರೆ ನಮ್ಮ ಜೀವನದ ಕಡೆಗೆ ಈ ದೃಷ್ಟಿಯಿಂದ ನಾವು ನೋಡುತ್ತಿಲ್ಲ. ಮನುಷ್ಯನ ಪಾಂಡಿತ್ಯ ಪರೀಕ್ಷಿಸುವೇರ ಪಾಂಡಿತ್ಯವಾದಂತಿದೆ. ಬೆಳಗಿನಿಂದ ತಿಂದು, ಉಂಡು, ಸಂಜೆಯವರೆಗೆ ಹೊತ್ತು ಕಳೆದು ಮಾಡಿದ್ದೇನೆಂದು ನೋಡಿದರೆ ಎಲ್ಲವೂ 'ಓಂ ಟೈಸ್'! ಮಾಡಿದ್ದೇನು? ಪೋಷಾಕು, ಆರಾಮು, ಬೀಡಿ, ಸಿನೆಮಾ ಇದೆ! ಈ ರೀತಿಯು ಅಶಾಸ್ತ್ರೀಯ. ಜೀವನದ ಕಡೆಗೆ ಹೆಚ್ಚು ಶಾಸ್ತ್ರೀಯವಾಗಿ ನೋಡುವ ದಿನ ಬಂದಿದೆ. ರೇಶನ್ ಬಂದು ನಾವು ತಿನ್ನುವದೇನು? ಎಷ್ಟು ಎಂಬುದರ ಅರಿವಾಗತೊಡಗಿದೆ. ಈ ಶರೀರ ನಮಗೆ ದೊರೆತಿರುವ ಇಡಿಗಂಟು ನಮ್ಮ ಪುಣ್ಯದಿಂದ ಇದು ಬಂದಿದೆ. ನಮಗೆ ಒಳಿತು ಕೆಡುಕನ್ನು ತಿಳಿಯುವ ಶಕ್ತಿ ಇದೆ. ಅಧರ್ಮವನ್ನು ಗುರ್ತಿಸುವ ಜ್ಞಾನವಿದೆ. ಆದರೆ ಅಧರ್ಮವೆಂದು ತಿಳಿದು ಬಿಡುವವರು ಎಷ್ಟು ಜನ? ಧರ್ಮವೆಂದು ಅರಿತು ನಡೆಯುವವರೆಷ್ಟು? ಅನೇಕರು ಧಾರ್ಮಿಕ ಗ್ರಂಥಗಳನ್ನು ಬರೆದಿದ್ದಾರೆ. ಉಪನಿಷತ್ತುಗಳನ್ನು ಸುಲಭ ಭಾಷೆಯಲ್ಲಿ ಬರೆದಿದ್ದಾರೆ. ಓದಿ ತಿಳಿದುಕೊಂಡೆಯಿಷ್ಟು. ಆದರೆ ಜೀವನದಲ್ಲಿ ಇಳಿಸಿಕೊಂಡವರೆಷ್ಟು? ನಡೆಯಂತೆ ನುಡಿ, ನುಡಿಯಂತೆ ನಡೆ ಈ ಐಕ್ಯತೆ ಇದ್ದರೆ ಅದೇ ಸತ್ಯ. ಪಾಂಡಿತ್ಯ ಕೇವಲ ಬೌದ್ಧಿಕವಾದುದು. ಬುದ್ಧಿಗಿಂಥಾ ಬೇರೆ ವಿಚಾರವಿದೆ. ಮೋಟಾರು ನಡೆಯಲು ಪೆಟ್ರೋಲ್ ಬೇಕೋ ಹಾಗೆ ಅಂತರಾತ್ಮ. ಮೋಟಾರು ನಡೆಯುವದು ಡ್ರೈವರನ ಪ್ರಭಾವದಿಂದಲ್ಲ, ಒಳಗಿನ ಪೆಟ್ರೋಲಿನ ಬಲದಿಂದ. ಅಂಥಾ ಸಂಕಲ್ಪ ನಿರ್ಮಾಣ ಮೊದಲು ಆಗಬೇಕು. ನಂತರ ವೇದ, ಗೀತೆ ಉಪನಿಷತ್ತುಗಳೂ ಡ್ರೈವರನಂತೆ ಪಥದರ್ಶನ ಮಾಡುವಂಥಾವು. ರಸ್ತೆಗೆ ಗಾಡಿ ಬರುವ ಮೊದಲು ಮುಂದೆ ಓಡಲಾಗುವದೇ? ಮೊದಲು ತೀಕ್ಷ್ಣವಾಗಿದ್ದರೆ ಸಾಲದು. ಅದನ್ನು ಬೊಂಕು ಹಾದಿಯಲ್ಲಿ ಉಪಯೋಗಿಸುವವರೇ ಹೆಚ್ಚು. ನಮಗೆ ಹೆಸರು ಬರಬೇಕು. ಗೌರವ ದೊರೆಯಬೇಕು, ನನ್ನ ಗುಂಪು ಉದ್ಧಾರವಾಗಬೇಕು ಈ ದೃಷ್ಟಿಯಿಂದ ಬುದ್ಧಿಯನ್ನು ಉಪಯೋಗಿಸುವದು ಹೇಡಿತನ.

ಉಪನಿಷತ್ತಿನಲ್ಲಿ ಎರಡು ಮಾರ್ಗಗಳು ಹೇಳಲ್ಪಟ್ಟಿವೆ. ಒಂದು ಪ್ರೇಯೋಮಾರ್ಗ. ಆಶ, ಕಾಮನೆಗಳ ಮಾರ್ಗವಿದು. ಆ ಮಾರ್ಗದವರಿಗೆ ಎಲ್ಲ ಬೇಕು. ದೊಡ್ಡಸ್ತಿಕೆ, ಹಣ, ಭೋಗ, ಅಧಿಕಾರ ಸರ್ವವೂ ಬೇಕು. ಸುಖ ಬೇಕು, ಶಾಂತಿ ಬೇಕು, ಆರಾಮ ಬೇಕು. ಇದಕ್ಕಾಗಿ ಅವರ ಬುದ್ಧಿಯ ಉಪಯೋಗ ಮಾಡುತ್ತಾರೆ. ಮತ್ತೊಂದು ಶ್ರೇಯೋಮಾರ್ಗ. ಇದರಲ್ಲಿ ಯಾವ ಸೌಕರ್ಯ ... ಬೇಕೆಂಬುದಿಲ್ಲ. ಇಲ್ಲಿ ಸೇವೆಯಲ್ಲಿ ತೃಪ್ತಿ; ಅದರಲ್ಲೇ ಆನಂದ. ತ್ಯಾಗವೇ ಇಲ್ಲಿಯ ಸಂಕೇತ. ವಿಷಯ ತೃಪ್ತಿಗೆ ಇಲ್ಲಿ ಎಡೆ ಇಲ್ಲ, ಇಲ್ಲಿ ಆತ್ಮತೃಪ್ತಿಗೆ ಎಡೆ. ಮಿತ್ರನ ... ತೃಪ್ತಿಗೆ ಪ್ರಾಣ ಕೊಡುವವರಲ್ಲ, ತಾಯಿ ಮಗುವಿಗಾಗಿ ಪ್ರಾಣಕೊಡುವದರಲ್ಲಿ ಪರರಕ್ಕಾಗಿ ಸುಖವನ್ನು ಸಮರ್ಪಿಸುವದರಲ್ಲಿಯೇ ಈ ಮಾರ್ಗವಿದೆ. ಪ್ರೇಯೋಮಾರ್ಗದಲ್ಲಿ ಬುದ್ಧಿ ಉಪಯೋಗವಾದರೆ ಅದು ನಿರರ್ಥಕ. ಶ್ರೇಯೋಮಾರ್ಗದಲ್ಲಿ ಅದು ಸಾರ್ಥಕ.

ಈ ಶ್ರೇಯೋಮಾರ್ಗದಿಂದಲೆ ಮಾನವನ ಮಹಾತ್ಮನಾಗುತ್ತಾನೆ. ನೈತಿಕ ಶಕ್ತಿಯನ್ನು ಉಪಯೋಗಿಸಿ, ಬೆಳೆಸಿ, ಇಂದ್ರಿಯ ವಿಲಾಸಕ್ಕೆ ಸಿಕ್ಕದೆ ಮುಂದುವರಿಯುತ್ತಾನೆ. ಆನಂದ ಮೀಮಾಂಸೆಯನ್ನು ಉಪನಿಷತ್ತಿನಲ್ಲಿ ಹೀಗೆ ಕೊಡಲಾಗಿದೆ. ಒಬ್ಬ ಹೃಷ್ಟಪುಷ್ಟ ನಿರೋಗಿ, ಸುಂದರ ವ್ಯಕ್ತಿಯ ಆನಂದವನ್ನು ಒಂದು ಅಳತೆಯಾಗಿ ತೆಗೆದುಕೊಂಡರೆ ಅಷ್ಟೇ ಯೋಗ್ಯತೆಯ ಅರಸನ ಆನಂದ ಅದಕ್ಕಿಂಥಾ ನೂರು ಪಾಲು ಹೆಚ್ಚು. ಆ ಅರಸನಿಂಥಾ ನೂರು ಪಾಲು ಆನಂದ ಗಂಧರ್ವನಿಗೆ. ಗಂಧರ್ವನಿಗಿಂಥಾ ನೂರು ಪಾಲು ಆನಂದ ಗಂಧರ್ವರ ಜನಿಗೆ, ಅದರ ನೂರು ಪಾಲು ದೇವತೆಗೆ. ದೇವತೆಯ ನೂರು ಪಾಲು ಇಂದ್ರನಿಗೆ. ಆದರೆ ಇವರೆಲ್ಲರಿಗಿಂಥ ಕೋಟಿ ಪಾಲು ಆನಂದ 'ಶ್ರೋತ್ರಿಯಸ್ಯ ಅಕಾಮಹತಃ' ಜ್ಞಾನದ ಪರಮಾವಧಿಯನ್ನು ತಿಳಿದು ಕಾಮವನ್ನು ಗೆದ್ದವನಿಗೆ. ಅವನು ಇಂದ್ರಿಯಗಳಿಗೆ ಅಧೀನನಲ್ಲ. ಆತನಿಗೆ ಸುಖವಿಲ್ಲ; ದುಃಖವಿಲ್ಲ. ಬಡತನ ಸಿರಿತನಗಳಿಲ್ಲ. ಉದಾಹರಣೆಗೆ ತ್ಯಾಗ ಬುದ್ಧಿಯಿಂದ ಪರರ ಸೇವೆ ಮಾಡುವವನಿಗೆ ದೊರೆಯುವ ಆನಂದ ಉಪ್ಪರಿಗೆಯ ಸಿರಿವಂತನಿಗಿರಲಾರದು. ಸಕ್ಕರೆಯನ್ನು ತಿಂದವನಿಗೆ ಸಕ್ಕರೆಯ ಸವಿ ವಿನಹ ಸಕ್ಕರೆಯ ಹೆಸರು ಹೇಳಿದರೆ ಏನು ಬಂದೀತ?

ಜಡತೆಯು ಆನಂದವಲ್ಲ. ತತ್ವಜ್ಞಾನವು ನಿಷ್ಕ್ರಿಯ ಜಡತೆಯಲ್ಲ. ಕೆಸರೊಳಗಿನ ಹಂದಿಯ ಸುಖವೂ, ಸಿದ್ಧಿಸದ ತತ್ವಜ್ಞಾನಿಯ ಸುಖವೂ ಒಂದಲ್ಲ. ಎರಡೂ ತೋರುವಾಗ ಜಡತೆ ಎಂದು ತೋರಬಹುದು. ಒಂದು ದೈಹಿಕ ಸುಖ ಮತ್ತೊಂದು ಆತ್ಮದ ಆನಂದ ಸುಖ.

ನೀವು ಎಂ. ಎ ಓದಿದ್ದೀರಿ. ನಿಮಗೆ ಜೈಲು ಸೇರುವ ಪಾಡುಗಾಡು ದುಃಖವೇಕೆ! ಯೋಗ್ಯ ಉದ್ಯೋಗ ಪಡೆದು ಬದುಕ ಬಾರದೇ ಎಂದು ನನ್ನನ್ನು ನೋಡಿ ಕನಿಕರ ಪಟ್ಟವರೆಷ್ಟೋ ಇದ್ದಾರೆ. ಪಾಪ, ಬಿಳಿ ಟೋಪಿಯ ತ್ಯಾಗ ಮಾರ್ಗದ ಸುಖ ಅವರಿಗೇನು ಗೊತ್ತು. ನಾವು ನಮ್ಮ ಜೀವನವನ್ನು ವೈಜ್ಞಾನಿಕ ದೃಷ್ಟಿಯಿಂದ ನೋಡಬೇಕು. ಭೌತಿಕ ವಿಚಾರಗಳನ್ನು ಶಾಸ್ತ್ರೀಯವಾಗಿ ತಿಳಿದರೆ ಸಾಲದು. ಜೀವನವು ಆಧ್ಯಾತ್ಮ ಮಾರ್ಗವಾಗಬೇಕು. ಸಾಹಿತ್ಯವು ಜೀವನದ ಪ್ರತಿಬಿಂಬ ಎಂದರೆ ಅದು ಪ್ರಾಣ ಸಹಿತ್ಯವಾದೀತು. ಮಹಾತ್ಮಾ ಗಾಂಧೀಯವರು ಒಂದೇ ಗ್ರಂಥವನ್ನು ಬರೆಯಲಿಲ್ಲ. ಅವರ ತತ್ವಗಳು ಅವರ ಆದರ್ಶ ಜೀವನದಿಂದ ಹೊರಹೊಮ್ಮಿದವು. ಕಾಂಟ್, ಹೆಗೆಲರಂಥಾ ಬೌದ್ಧಿಕ ವಿಜ್ಞಾನಿಗಳ ತಾರ್ಕಿಕ ತತ್ವದಲ್ಲಿಲ್ಲ. ಆದರೆ ನಮ್ಮ ಉಪನಿಷತ್ತಿನಲ್ಲಿ ಕೇವಲ ಆ ಶ್ಲೋಕಗಳಿಂದಲೇ ಜಗತ್ತಿನ ಶ್ರೇಷ್ಠ ಸಾಹಿತ್ಯವಾಗಿ ಉಳಿದಿದೆ. ಅವರಲ್ಲಿ ಪ್ರೌಢತೆ ಇಲ್ಲದಿರಬಹುದು. ಅಲಂಕಾರವಿಲ್ಲದಿರಬಹುದು. ಆದರೆ ಆದ ಸತ್ಯದ ಪ್ರತ್ಯಕ್ಷ ರೂಪವಾಗಿದೆ. ಹಿಂದೂ ಧರ್ಮ ... ಎಲ್ಲಾ ಗ್ರಂಥಗಳು ನಾಶವಾದರೂ ಈ ಹದಿನೆಂಟು ಶ್ಲೋಕಗಳುಳಿದರೆ ವೈದಿಕ ಧರ್ಮ ... ಗದು. ಜೀವನದಲ್ಲಿಳಿದ ಸಾಹಿತ್ಯ ಸ್ಪೇಸ್ ಪೌಡರ್ ಕ್ರೀಂ ಹಚ್ಚಿದಂತೆ. ಜೀವನದ ಪ್ರತಿರೂಪವಾಗಿ ಸಾಹಿತ್ಯವಿದ್ದರೆ ಆರೋಗ್ಯ ತುಂಬಿ ನಡೆನಡತೆ ಧ್ಯೇಯವಾದಿ ಜೀವನಬೇಕು. ಈ ಸಾಧನೆಗಾಗಿ ಈ ಜೀವನ ಸಂದರ್ಶನವಾಗಿದೆ.

ಇಂದ ಒಂದು ಲೇಖನ ಬರೆದು ಆದು ಪತ್ರಿಕೆಯಲ್ಲಿ ಬರದಿದ್ದರೆ ಸಂಪಾದಕರನ್ನು ದೂರುತ್ತೇವೆ. ಹೆಸರು ಹಾಕದಿದ್ದರೆ ರೇಗುತ್ತೇವೆ. ಆದರ ನಮ್ಮ ಪವಿತ್ರ ಗ್ರಂಥಗಳನ್ನು ಬರೆದವರ ಹೆಸರೇ ಬಹಳಷ್ಟು ತಿಳಿದಿರಲಾರದು. ಸರ್ವಜ್ಞ ನಮ್ಮ ಅಮೂಲ್ಯ ಕೀರ್ತನೆಗಳನ್ನು ದೇವರ ಹೆಸರಿನಲ್ಲಿ ಬರೆದರು. ಯೋಗ್ಯತೆ ಇದ್ದರೆ ಹೆಸರು ಒಂದೇ ಬರುತ್ತದೆ. ದೀಪ ಹಚ್ಚಿದರೆ ಸಾಕು. ಬೆಳಕು ನಾಲ್ಕು ದಿಕ್ಕಿಗೆ ಹಬ್ಬುವದಿಲ್ಲವೇ? ದೀಪ ಹಚ್ಚಲ್ಪಟ್ಟಿದೆ ಯೆಂದು ಯಾರೂ ಸಾರಬೇಕಾದ ಅವಶ್ಯಕತೆ ಇಲ್ಲ.

ವೈಜ್ಞಾನಿಕ ಮತ್ತು ಭೌತಿಕ ಈ ಎರಡರ ಸಮ್ಮಿಲನವಾಗಬೇಕು. ಜಡ ಮತ್ತು ಚೈತನ್ಯದ ಮಿಲನವೇ ಜೀವನವಾಗುವದು. ಜೀವನ ಅರ್ಥಪೂರ್ಣವಾಗುವಂತೆ ಪುರೋಹಿತನ ಮಾಡಬೇಕು. ಭಾಷೆಯು ಮನುಷ್ಯನಿಗಿರುವ ಅಮೂಲ್ಯ ಸೌಕರ್ಯ. ಅದೆ ... ರೂಪವನ್ನು ಪಡೆದು ಕವಿತೆಯು ... ಇದರಿಂದಾಗಿ ... ಯು ಹೆಚ್ಚು ಗ್ರಾಹ್ಯವಾಗುತ್ತದೆ. ಜೀವನದ ಪ್ರತಿಬಿಂಬ ಸಾಹಿತ್ಯವಾದರೆ ಅದು ಪ್ರಭಾವಯುಕ್ತ ಸಾಹಿತ್ಯವಾಗುವದು."

ಸರಕಾರಿ ಕಾಲೇಜಿನ ಕನ್ನಡ ಪಂಡಿತರಾದ ಶ್ರೀ ಬುಡನರವರು ವಂದನಾರ್ಪಣೆಯನ್ನು ಮಾಡಿದರು. ದಿವಾಕರರು ತಾ. ೨ರ ಬೆಳಗ್ಗೆ ಮಂಗಳೂರಿಗೆ ಪ್ರಯಾಣ ಬೆಳೆಸಿದರು.

ಓದುಗರ ಓಲೆಗಳು.

ಶನಿವಾರಸಂತೆಯಲ್ಲಿ ನೀರು ಮತ್ತು ಬೆಳಕು.

ಜಿಲ್ಲಾ ಬೋರ್ಡ್ ಪ್ರೆಸಿಡೆಂಟರೇ! ಶನಿವಾರಸಂತೆ ಪೇಟೆಯಲ್ಲಿ ಜಿಲ್ಲಾ ಬೋರ್ಡಿಗೆ ಏನಾದರೂ ಉತ್ಪತ್ತಿ ಇದೆಯೇ? ಹಾಗಿದ್ದರೆ, ಪೇಟೆಯಲ್ಲಿ ತಾವು ಜನರು ತಿರುಗಾಡಲು ಏರ್ಪಡಿಸಿರುವ ರಸ್ತೆ ಹೇಗಿದೆ? ನೀರಿನ ಸೌಕರ್ಯ ಯಾವ ರೀತಿ ಇದೆ? ರಾತ್ರಿವೇಳೆ ಸಂಚರಿಸಲು ದೀಪದ ವ್ಯವಸ್ಥೆ ಹೇಗಿದೆ? ನೋಡಿರುವಿರಾ? ಕೇಳಿರುವಿರಾ? ಇದನ್ನೆಲ್ಲಾ ಕಂಡವರೇ ಬಲ್ಲರು. ಕೇಳುವವರ್ಯಾರು? ರಸ್ತೆಯಲ್ಲಿ ಬರಿಕಾಲಿನಲ್ಲಿ ನಡೆಯುವುದೆಂದರೆ ಅದು ಮನುಷ್ಯನಿಂದ ಸಾಧ್ಯವಿಲ್ಲ. ಕುಡಿಯುವ ನೀರಿನ ಅವಸ್ಥೆ ಎಂದರೆ ಈ ಸಮಯದಲ್ಲಿ ಸಾಧಾರಣ ೩ ಮೈಲಿಯಿಂದ ನೀರು ತರಬೇಕಿದೆ. ಬೇಸಿಗೆಯಲ್ಲಿ ಬಾವಿಗಳಲ್ಲಿ ನೀರೇ ಇಲ್ಲ. ನೀರಿದ್ದರೂ ಕ್ರಿಮಿಗಳಿಂದ ಕೂಡಿದ್ದು. ಇನ್ನು ಬೆಳಕಿನ ಅವಸ್ಥೆ ಹೇಳುವುದೇ ಬೇಡ. ರಾತ್ರಿ ಸಮಯದಲ್ಲಿ 'ಬ್ಲಾಕ್ ಔಟ್'; ಇಲ್ಲಿಯ ಸ್ಥಿತಿಯನ್ನು ನೋಡಿದರೆ ಜಿಲ್ಲಾ ಬೋರ್ಡ್, ನಮ್ಮ ಹಿತವನ್ನು ಎಷ್ಟರ ಮಟ್ಟಿಗೆ ಸಾಧಿಸುತ್ತಿರುವರೆಂದು ಹೇಳಲು ಸಾಧ್ಯವಿಲ್ಲ. ಈಗ ಸಧ್ಯ ಎರಡು ಪೆಟ್ರೋಮೆಕ್ಸ್ ಲೈಟುಗಳು ಉಂಟು. ಆದರೆ ಅವೆರಡರಲ್ಲಿ ಒಂದನ್ನು ಕಚೇರಿ ಚಾವಡಿಯಲ್ಲೂ ಮತ್ತೊಂದನ್ನು ಕೆಳಗೆ ಚಾವಡಿಯಲ್ಲೂ ಹಾಕುತ್ತಾರೆ. ಆದರೆ ಕಚೇರಿ ಚಾವಡಿಯ ಮೇಲೆ ವಾಸಿಸುವವರ ಅವಸ್ಥೆಯೇನು? ಅವರು ಮನುಷ್ಯರಲ್ಲವೇ? ಅವರಿಗೆ ಈ ಸೌಕರ್ಯ ಬೇಡವೇ? ಇನ್ನಾದರೂ ಕಣ್ದೆರೆದು ಸಮದೃಷ್ಟಿಯಿಂದ ಇನ್ನು ಮೂರು ಪೆಟ್ರೋಮೆಕ್ಸ್ ಲೈಟನ್ನು ಕೊಡುವದಲ್ಲದೆ ಕುಡಿಯುವ ನೀರಿನ ಮತ್ತು ನಡೆಯುವ ರಸ್ತೆಯ ಅನುಕೂಲತೆ ಮಾಡುವಿರಾಗಿ ಆಶಿಸಲಾಗಿದೆ.

ಬಿ. ಕೆ. ಶಾಂತವೀರಪ್ಪ.

ಪೊನ್ನಂಪೇಟೆ ಹೈಸ್ಕೂಲು.

ಈ ಹೈಸ್ಕೂಲು ಕಟ್ಟಡ ಎಲ್ಲಿ ಆಗಬೇಕೆಂದು ಪೊನ್ನಂಪೇಟೆ ಮತ್ತು ಶ್ರೀಮಂಗಲ ನಾಡಿನವರಲ್ಲಿ ಮತಭೇಧ ಬಂದು ಕಡೆಗೆ ಒಂದು ನಿರ್ಣಯಕ್ಕೆ ಬಂದು ಹೈಸ್ಕೂಲಿಗೆ ಬೇಕಾದ ಸುಮಾರು ೨೨ ಎಕ್ರೆ ಜಾಗವನ್ನು ರೈತರೇ ಕೊಟ್ಟು ಕಾಡು ಕಡಿದು ಸ್ಥಳ ಗೊತ್ತಾಗಿದೆ. ಇದರ ಹತ್ತಿರದಲ್ಲೇ ಇನ್ನೂ ಸುಮಾರು ಹತ್ತು ಎಕರೆ ಪೈಸಾರಿ ಜಾಗವಿದ್ದು ಆದರ್ಶ ಸ್ಥಳವಾಗಿದೆ. ಇಲ್ಲಿಯೇ ಸುಮಾರು ರೂ ೨೦,೦೦೦ ಖರ್ಚುಮಾಡಿ ಒಂದು ಕಟ್ಟಡವನ್ನು ಕಟ್ಟಲಾಗಿದೆ. ಈ ಹೈಸ್ಕೂಲನ್ನು ಸುಮಾರು ನಾಲ್ಕು ವರ್ಷಗಳ ವರೆಗೆ ಸಾರ್ವಜನಿಕರೇ ನಡೆಸಿ ಹೈಸ್ಕೂಲಿಗಾಗಿ ೬೩,೦೦೦ ನಿಧಿ ಶೇಖರಿಸಿ ಸರಕಾರಕ್ಕೆ ಒಪ್ಪಿಸಲಾಗಿದೆ. ಈಗ ಈ ಸ್ಥಳವನ್ನು ಬದಲಾಯಿಸಿ ಪೊನ್ನಂಪೇಟೆ ಪ್ರಯಾಣಿಕರ ಬಂಗ್ಲೆಯ ಹತ್ತಿರ ಕಟ್ಟಡ ಕಟ್ಟಲಾಗುವದೆಂಬ ವರ್ತಮಾನಗಳಿವೆ. ಇದು ನಿಜವಿದ್ದರೆ ಅದನ್ನು ಎಷ್ಟು ಖಂಡಿಸಿದರೂ ಸಾಲದು. ಮೊದಲೇ ಎರಡುನಾಡಿನ ಜನರು ಒಪ್ಪಿ ಸ್ಥಳ ನಿಶ್ಚಯಿಸಿರುವಾಗ ಅದನ್ನು ಬದಲಾಯಿಸುವ ಹಕ್ಕು ಸರಕಾರಕ್ಕೆ ಇರಲಾರದು. ಯಾವ ದೃಷ್ಟಿಯಿಂದಲೂ ಜನರು ನಿಶ್ಚಯಿಸಿದ ಸ್ಥಳವೇ ಹೈಸ್ಕೂಲ್ ನಿಲ್ಲಲು ಯೋಗ್ಯವೂ, ಆದರ್ಶವೂ ಆಗಿದೆ. ಸರಕಾರವು ಒಮ್ಮೆ ತೀರ್ಮಾನವಾದ ಪ್ರಶ್ನೆಯನ್ನು ಪುನಹ ಎಬ್ಬಿಸದೆ ಎಚ್ಚರಿಕೆಯಿಂದ ವರ್ತಿಸಬೇಕು. ಇಲ್ಲದಿದ್ದರೆ ಇದರಿಂದ ತುಂಬಾ ಹಾನಿಯಾಗದಿರದು.

ಕೆ. ಜಿ. ಕಾರ್ಯಪ್ಪ.

ಚೀಫ್ ಕಮಿಷನರ್ ಸಾಹೇಬರಲ್ಲಿ

ಶನಿವಾರಸಂತೆ ಹೋಬಳಿಯಲ್ಲಿ ಒಂದು ಇನ್ಸ್‌ಪೆಕ್ಷನ್ ಬಂಗ್ಲೆ ಇದೆಯೆಂಬುದು ತಮಗೆ ತಿಳಿಯದ ವಿಷಯವಲ್ಲ. ಈ ಬಂಗ್ಲೆ ಮೈದಾನಿನಲ್ಲಿ 'ಚನ್ನದ ಹುಲ್ಲು' ಬೆಳೆಯುತ್ತದೆಂದೂ, ಈ ಮೈದಾನಿನಲ್ಲಿ ಯಾವ ದನಕರುಗಳು ಅಡ್ಡಾಡಬಾರದೆಂದೂ ಆಜ್ಞೆಮಾಡಿರುವರಂತೆ! ಮಾಮೂಲಿನಿಂದ ಪೇಟೆಯವರು ದನಗಳನ್ನು ಕಾಲು ಬಂಗ್ಲೆ ಮೈದಾನಿನ ಒತ್ತಿನಲ್ಲಿರುವ ಸೈನಾರಿ ಜಾಗಕ್ಕೆ ಅಟ್ಟಿಕೊಂಡು ಬಂದು ಪೇಟೆಯ ಎಲ್ಲಾ ದನಗಳು ಒಟ್ಟುಗೂಡಿದ ನಂತರ ಕಾಯುವವರು ಹೊಡೆದು ಕೊಂಡು ಹೋಗುತ್ತಿದ್ದರು. ಈ ಸಮಯದಲ್ಲಿ ಎಲ್ಲಿಯಾದರೂ ದನಗಳು ತಪ್ಪಿಸಿಕೊಂಡು ಬ[illegible] ಮೈದಾನಿಗೆ ಹೋದರೆ ಸಾಕು [illegible] ಬಂಗ್ಲೆ ಮೈದಾನಿಗೆ ಬೇಲಿ ಇಲ್ಲ. ಈ ಹಿಂದೆ ಇದಕ್ಕೆ ತಂತಿ ಬೇಲಿ ಇತ್ತು. ಇದನ್ನು ಸಹ ಸರ್ಕಾರದವರು ಕಿತ್ತು ಹಾಕಿರುತ್ತಾರೆ. ಇದಕ್ಕಾಗಿ ಯಾವ ಬಂದೋಬಸ್ತು ಸಹ ಇರುವುದಿಲ್ಲ. ದನಗಳು ಮೈದಾನಿಗೆ ಹೋಗುವುದರಿಂದ ಯಾವ ನಷ್ಟವೂ ಕಾಣುವುದಿಲ್ಲ. ಹೂತೋಟವಲ್ಲ ಕಡೆಗೆ ಬೇಲಿಯೇ ಇಲ್ಲ. ದನಗಳು ಬರಬಾರದೆಂದರೆ ಬಂಗ್ಲೆ ಸುತ್ತಲೂ ಒಂದೂ ಬಸ್ತು ಬೇಲಿ ಮಾಡಿಸಬೇಕು. ಅದು ಅಸಾಧ್ಯವಿಲ್ಲದಿದ್ದರೆ ದನಗಳು ಹೋದರೆ ಈ ರೀತಿ ತೊಂದರೆ ಪಡಿಸದಂತೆ ಎಚ್ಚರಿಸಬೇಕು.

S. B. K.

ಹರಿಜನ ದಿನಾಚರಣೆ

ತಾ. ೩೦-೧೦-೪೯ರಲ್ಲಿ ಬೆಳಗ್ಗೆ ೮ ಘಂಟೆಗೆ ಮಹಾತ್ಮ ಗಾಂಧೀಜೀ ಮತ್ತು ಪಂಡಿತ ಜವಾಹರಲಾಲ್ ನೆಹರೂರವರ ಭಾವ ಚಿತ್ರ ಮತ್ತು ಭಾರತ ಧ್ವಜಗಳೊಡನೆ ಸೋಮವಾರಪೇಟೆ ನಾಡ ಸಾರ್ವಜನಿಕರೂ, ಹರಿಜನರೂ ಶಾಲಾ ವಿದ್ಯಾರ್ಥಿಗಳೂ ಎಲ್ಲಾ ಸ್ಥಳೀಯ ಉದ್ಯೋಗಸ್ಥರುಗಳೂ ಸೇರಿ ಸೋಮವಾರಪೇಟೆ ಹರಿಜನ ಕೇರಿಯನ್ನು ಸಂದರ್ಶಿಸಿ ಕೇರಿಯ ನೈರ್ಮಲ್ಯವನ್ನು ಪರೀಕ್ಷಿಸಲಾಯಿತು. ಅಲ್ಲಿನ ದೇವಾಲಯದಲ್ಲಿ ಪೂಜೆಯಾದ ನಂತರ ಸೋಮವಾರಪೇಟೆಯ ಎಲ್ಲಾ ಬೀದಿಗಳಲ್ಲಿ ಮೆರವಣಿಗೆ ಹೊರಟು ಪೇಟೆಯಲ್ಲಿನ ಎಲ್ಲಾ ಸಾರ್ವಜನಿಕ ಬಾವಿಗಳಲ್ಲಿ ಹರಿಜನರು ನೀರು ತೆಗೆದು ೧೧ ಘಂಟೆ ಸಮಯಕ್ಕೆ ಶಾಲೆಯಲ್ಲಿ ಸಭೆ ಸೇರಿದರು. ಸುಮಾರು ೪೦೦ ಜನರು ನೆರೆದಿದ್ದರು. ಸ್ಥಳೀಯ ಕೌನ್ಸಿಲ್ ಮೆಂಬರು ಶ್ರೀ. ಎಚ್. ಟಿ ಮುತ್ತಣ್ಣನವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಶಾಲಾ ಬಾಲಿಕೆಯರಿಂದ ಪ್ರಾರ್ಥನೆಯಾದ ನಂತರ ಹರಿಜನ ದಿನಾಚರಣೆ [illegible] ಕಾರ್ಯದರ್ಶಿಯಾದ ಶ್ರೀ. ಎಂ. ಟಿ. ಅಪ್ಪಯ್ಯನವರು ಹರಿಜನ ದಿನಾಚರಣೆಯ ಉದ್ದೇಶ ಮತ್ತು ಈ ದಿವಸಗಳಲ್ಲಿ ಸಾರ್ವಜನಿಕರೂ ಹಾಗೂ ಹರಿಜನರೂ ಮಾಡಬೇಕಾದ ಕಾರ್ಯಕ್ರಮಗಳನ್ನು ಕುರಿತು ವಿವರಿಸಿದರು. ಅನಂತರ ಶ್ರೀಗಳಾದ ಕೆ. ದೊರೆಸ್ವಾಮಿ, ಸಿ. ಕೆ. ಕಾಳಪ್ಪ, ಡಿ. ಯಸ್. ದೇವಯ್ಯ, ಎ. ಎಲ್. ಶಂಕರನಯ್ಯ, ಹರಿಜನ ದೇವಯ್ಯ, ಹರಿಜನ ಕೆಂಚಯ್ಯ, ಸಿ. ಡಿ. ಅಪ್ಪಯ್ಯ, ಶ್ರೀಮತಿ ಡಿ. ಸೀತಾ ದೇವಯ್ಯನವರುಗಳು ಹರಿಜನೋದ್ಧಾರದ ವಿಷಯವಾಗಿ ಭಾಷಣಗಳನ್ನು ಮಾಡಿದರು. ಶ್ರೀ. ಬಿ. ಜಿ. ಚೆನ್ನಬಸಪ್ಪನವರ ಸೂಚನೆಯಂತೆ ಇನ್ನು ಮುಂದೆ ಪ್ರತೀ ತಿಂಗಳ ೩೦ನೇ ತಾರೀಕು ಎಂಬುವುದನ್ನು ಪ್ರತೀ ತಿಂಗಳ ಕಡೆಯ ಆದಿತ್ಯವಾರಗಳಲ್ಲಿ ಹರಿಜನ ದಿನಾಚರಣೆ ಮಾಡಬೇಕೆಂದೂ ಹರಿಜನರು ಎಂಬುವುಗಳ ಬದಲು ದಳಿತ ವರ್ಗವೆಂದು ತಿದ್ದುಪಡಿ ಮಾಡಿಕೊಳ್ಳಬೇಕೆಂದೂ ತೀರ್ಮಾನಿಸಲಾಯಿತು. ಅಧ್ಯಕ್ಷರ ಭಾಷಣ, ವಂದನಾರ್ಪಣೆ, ಮಂಗಳಾರತಿ, ಮಂಗಳ ಗೀತೆ ಮತ್ತು ಉಪಹಾರ ಹಂಚುವಿಕೆಯಾದ ನಂತರ ಸಭೆಯು ಮುಕ್ತಾಯವಾಯಿತು.

ನಾಪೋಕ್ಲು.

ತಾರೀಕು ೩೧-೧೦-೪೯ರಲ್ಲಿ ನಾಪೋಕ್ಲು ನಾಡಿನವರು ಅಂಡ್ರು ನೂರಂಬಡ, ನಾಪೋಕ್ಲು, ಕೊಳಕೇರಿ ಮತ್ತು ಬೇತು ಗ್ರಾಮದವರು ಸೇರಿ ನಾಪೋಕ್ಲು ಟೌನು ಬಳಿ ನಡೆಸಿದ ಮೀಟಿಂಗಿನ ಸಾರಾಂಶ.

ಈ ದಿನದ ಮೀಟಿಂಗಿಗೆ ೨೦೦ ಜನರಿಗೆ ಮೇಲ್ಪಟ್ಟು ಹಾಜರಿದ್ದರು. ಶ್ರೀ ಮೂವೆರ ಬೆಳ್ಯಪ್ಪನವರು ಅಧ್ಯಕ್ಷರಾಗಿದ್ದರು. ಸಭೆಯು ಸೇರಿದುದರ ಉದ್ದೇಶವನ್ನು ವಿವರಿಸುತ್ತಾ ಕೊಡಗಿನ ಭವಿಷ್ಯತ್ತಿನ ವಿಷಯ ಜನರ ಅಭಿಪ್ರಾಯವನ್ನು ತಿಳಿಯದೆ ಯಾವ ನಿರ್ಣಯವನ್ನೂ ಕೇಂದ್ರವು ಮಾಡಬಾರದೆಂದೂ ಕೊಡಗು ದೇಶವು ಯಾ ದೇಶಕ್ಕೂ ಸೇರದೆ ಪ್ರತ್ಯೇಕವಾಗಿ ಇರಬೇಕೆಂದೂ ಮಾತಾಡಿದರು. ಇದಕ್ಕೆ ಉತ್ತರವಾಗಿ ಶ್ರೀ ಕಲ್ಲೆಟ್ಟಿರ ಮಾಚಯ್ಯನವರು ಮಾತನಾಡಿ, ಕೊಡಗು ಪ್ರತ್ಯೇಕ ಪ್ರಾಂತವಾಗಿದ್ದು ಜವಾಬ್ದಾರಿ ಸರಕಾರ ಪಡೆಯಬೇಕೆಂಬ ವಿಚಾರವನ್ನು ಮುಂದಿಟ್ಟು ವಿರೋಧವಿರುವವರು ಮಾತಾಡುವವರಿದ್ದರೆ ಮಾತಾಡಬಹುದಾಗಿ ಕೇಳಿದರು. ಯಾರೂ ವಿರೋಧ ಮಾಡಲಿಲ್ಲ. ನಂತರ ಶ್ರೀಗಳಾದ ಕಲಿಯಂಡ ನಂಜುಂಡನವರು, ಶಿವಚಾಳಿಯಂಡ ಸೋಮಪ್ಪನವರು ಮತ್ತು ನೇಚಂಡ ಮಂಗಣ್ಣನವರು ಪ್ರತ್ಯೇಕ ಇರಬೇಕಾದ ಅವಶ್ಯಕತೆಯನ್ನು ವಿವರಿಸಿದರು.

ಅಧ್ಯಕ್ಷರಾದ ಶ್ರೀ ಮೂವೆರ ಬೆಳ್ಯಪ್ಪನವರು ನಮ್ಮ ದೇಶವು ಬೇಕಾಗಿ [illegible]ಯಿಂದ ಕೂಡಿದ್ದಾಗಿದೆ. ಎಲ್ಲಾ [illegible]ರ ಅಭಿಪ್ರಾಯದಲ್ಲಿ ಕೊಡಗು ದೇಶವು ಪ್ರತ್ಯೇಕವೇ ಇರಬೇಕೆಂದು ಇದೆಯೆನ್ನಬಹುದು. ಪ್ರತೀ ನಾಡಿನವರು ಅವರವರ ಅಭಿಪ್ರಾಯವನ್ನು ರಾಜ್ಯ ಘಟನಾ ಸಭೆಗೆ ತಂತಿ ಮೂಲಕ ತಿಳಿಸಬೇಕೆಂದು ಹೇಳಿದರು. ನಂತರ ಸಭೆಯು ಸರ್ವಸಮ್ಮತದಿಂದ ಕೊಡಗು ದೇಶವನ್ನು ಪ್ರತ್ಯೇಕವಾಗಿಯೇ ಇಡಬೇಕೆಂದು ರಾಜ್ಯಘಟನಾ ಸಭೆಗೆ ತಿಳಿಸುವಂತೆಯೂ ಈ ವಿಷಯಗಳನ್ನು ಕೊಡಗು ಪತ್ರಿಕೆಯಲ್ಲಿಯೂ, ಜನ್ಮಭೂಮಿ ಪತ್ರಿಕೆಯಲ್ಲಿಯೂ ಪ್ರಕಟಿಸಬೇಕೆಂದು ಆಯಾಯ ಪತ್ರಿಕೆಯ ಎಡಿಟರುಗಳನ್ನು ಕೇಳಿಕೊಳ್ಳುವಂತೆಯೂ ತೀರ್ಮಾನವಾಯಿತು.

ಎಂ. ಬೆಳ್ಯಪ್ಪ,
ಅಧ್ಯಕ್ಷರು.

ಕೊಡಗಿನ ಜನರಿಗೆ ಇನ್ನೊಂದು ಅವಮಾನ.

ತಾ. ೧-೧೧-೪೯ರಲ್ಲಿ ಕೇಂದ್ರ ಸರ್ಕಾರದ ಸುದ್ದಿ ಮತ್ತು ಆಕಾಶವಾಣಿ ಇಲಾಖೆಯ ಮಂತ್ರಿಗಳಾದ ಶ್ರೀ. ದಿವಾಕರರವರಿಗೆ ಮಡಿಕೇರಿ ಮುನಿಸಿಪಾಲಿಟಿಯವರು ಬಿನ್ನವತ್ತಳೆಯನ್ನು ಅರ್ಪಿಸಿದ ಸಮಯದಲ್ಲಿ ಮಾನ್ಯ ಮಂತ್ರಿಗಳ ಭಾಷಣಾನಂತರ ಶ್ರೀ. ಸಿ. ಯಂ. ಪೂಣಚ್ಚನವರು ವಂದನೆಯನ್ನು ಅರ್ಪಿಸಿದರು. ವಂದನೆ ಅರ್ಪಿಸುವದರಲ್ಲಿ ಅವರು ಸ್ವಲ್ಪ ಮಿತಿಮೀರಿ ವರ್ತಿಸಿದರೆಂದು ನನಗೆ ಭಾಸವಾಯಿತು. ಇನ್ನುಳಿದವರಿಗೆ ಸಹ ಈ ರೀತಿ ಭಾಸವಾಗಿರಬಹುದು. ಕಳೆದ ಕೌನ್ಸಿಲು ಮೀಟಿಂಗಿನಲ್ಲಿ ಇಬ್ಬರು ಮೆಂಬರುಗಳನ್ನು ಮತ್ತು ಸಾವಿರಾರು ವೋಟರುಗಳನ್ನು ಹೀಯಾಳಿಸಿದಂತೆ ಈ ಸಂದರ್ಭದಲ್ಲೂ ಕೊಡಗಿನ ಜನರ ಮುಖಕ್ಕೆ ಕೆಸರೆರಚಿದರು. ಕೊಡಗು ಮೋಡಕವಿದ ದೇಶ. ಜ್ಞಾನದ ಬೆಳಕಿಲ್ಲ. ಸೂರ್ಯನ ಹೆಸರು ಪಡೆದ ದಿವಾಕರರು ಜ್ಞಾನದ ಪ್ರಕಾಶದಿಂದ ಎಂದರೆ ಭಾಷಣದಿಂದ, ಕೊಡಗಿನಲ್ಲಿ ಹೆಚ್ಚು ಮೋಡಯಿರುವುದು ಮಾಯವಾಗಿ ಬೆಳಕಾಗಲೀ ಎಂಬರ್ಥದ ಮಾತಾಡಿದರು. ಇದರ ಅರ್ಥವೇನು? ಪೂಣಚ್ಚನವರು ಬುದ್ಧಿವಂತರೆಂದೂ ಇನ್ನುಳಿದವರು ಮೋಡಕವಿದುಕೊಂಡಿರುವ ಹಾಗೆ ಇರುತ್ತಾರೆಂದು ಅರ್ಥವಾಗುವುದಿಲ್ಲವೇ? ಕೊಡಗಿನಲ್ಲಿ ಹೆಚ್ಚು ಮೋಡ ಕವಿದುಕೊಂಡಿರುವದರಿಂದಲೇ ಇವರಂಥವರು ರಾಜ್ಯಘಟನಾ ಸಭೆಯ ಒಬ್ಬ ಸದಸ್ಯರಾಗಿ ದಿನ ಒಂದರ ರೂ. ೪೦ ರಂತೆ ವೇತನ ಪಡೆಯಲು ಅನುವಾಯಿತೆಂಬುದನ್ನು ಇವರು ಮರೆತಂತೆ ಕಾಣುತ್ತೆ! ಬಲ್ಲಿಯಲ್ಲಿ ತಿಳಿದವರೊಡನೆ ಮಿಲನವಾಗಿ ಜ್ಞಾನಭಂಡಾರ ಹೆಚ್ಚಿಸಿಕೊಳ್ಳುವ ಅನುವು ದೊರೆತಿದ್ದರೆ ಸಾಮಾನ್ಯನೊಬ್ಬನೂ ತಿಳಿದವನೆನಿಸುತ್ತಿದ್ದನು. ಕೊಡಗಿನ ಜನರು ಯಾವ ಭಾಗದ ಜನರಿಗೂ ಕಡಿಮೆಯಿಲ್ಲ. ಬುದ್ಧಿಯಲ್ಲಿ, ಕಲಾಕೌಶಲದಲ್ಲಿ ವಿದ್ಯೆಯಲ್ಲಿ, ಯಾವದೇ ಕ್ಷೇತ್ರದಲ್ಲಿ ಕೊಡಗಿನವರು ಯಾರಿಗೂ ಹಿಂದೆ ಇಲ್ಲ.

ಜ್ಞಾನದ ಮಹಾ ಜಗತ್ತಿನಲ್ಲಿ ಪೂಣಚ್ಚನವರಾಗಲೀ, ದಿವಾಕರರಾಗಲೀ ಮಿಣುಕು ಹುಳಗಳಂತೆ! ಜಗತ್ತಿನಲ್ಲಿ ಯಾರೂ ಸರ್ವಜ್ಞರಿಲ್ಲ. ಒಬ್ಬರು ಒಂದು ಕ್ಷೇತ್ರದಲ್ಲಿ ಬುದ್ಧಿವಂತರಿದ್ದರೆ ಇನ್ನೊಬ್ಬರು ಇನ್ನೊಂದರಲ್ಲಿ! ಈ ಮಿಣುಕು ಹುಳಗಳಿಂದಲೇ ಜಗತ್ತಿಗೆ ಬೆಳಕಾಗುತ್ತಿದೆಯೆಂದು ಭಾವಿಸಿದರೆ ಅದು ಅವರ ಚಿಕ್ಕದೃಷ್ಟಿಯನ್ನು ತೋರಿಸುತ್ತದೆಯೇ ವಿನಹ ಬೇರಿಲ್ಲ. ಇಂಥಾ ಮಿಣುಕು ಹುಳಗಳು ಎಷ್ಟಿಲ್ಲ? ತಮ್ಮ ಸ್ವಕಲ್ಪಿತ ಬೆಳಕಿನ ಮೆರುಗಿನಿಂದ ಕುರುಡಾಗಿ ಹೊರಗೆ ನೋಡಲಾರದವರಿಗೆ ಬೇರೆ ಬೆಳಕು ಕಾಣದೆ ಜಗತ್ತೇ ಶೂನ್ಯವಾಗಿ ಕಂಡರೆ ಆಶ್ಚರ್ಯವಲ್ಲ. ರಾಜ್ಯಘಟನಾ ಸಭೆಯಲ್ಲಿ ನಿದ್ರೆಮಾಡಿ ಬಡ ಜನರ ಬೆವರಿನ ಹಣವನ್ನು ಉಪಯೋಗಿಸುವ ಮಿಣುಕು ಹುಳಗಳಿಗಿಂಥಾ ಹಳ್ಳಿಗಳಲ್ಲಿ ಕೆಸರಿನಲ್ಲಿ ದುಡಿದು ನೆರೆಯ ಹಸಿದವನ ಹೊಟ್ಟೆಗೆ ಅನ್ನ ಒದಗಿಸುವ ಕರ್ಮಯೋಗಿಯ ಬೆಳಕು ಹಿರಿದು! ಇನ್ನಾದರೂ ತಮ್ಮ ಅಹಂಭಾವವನ್ನು ಬಿಟ್ಟು ಆತ್ಮನಿರೀಕ್ಷೆ ಮಾಡಿಕೊಳ್ಳಬಾರದೇ?

'ಓರ್ವ ಕ್ಷತ್ರ'

ಈ ವಾರದ ಕಥೆ.

ಬಾನು.

ಲೇಖಕ:- ಶ್ರೀ ಬಿ. ಡಿ. ಸುಬ್ಬಯ್ಯ, ದೇವಲಾಲಿ.

ರಾಮಣ್ಣಶೆಟ್ಟರು ಊರಿಗೆಲ್ಲಾ ಬಹಳ ಹೆಸರು ಪಡೆದವರು. ಅವರಿಗೆ ಲಕ್ಷ್ಮಿ ಒಲಿದ, ಅವಳ ಐಶ್ವರ್ಯ ತೊಟ್ಟಿಲಲ್ಲಿ ಓಲಾಡುತ್ತಿದ್ದರು. ಲಕ್ಷ್ಮಿ ಒಲಿದಷ್ಟಕ್ಕೆ ಅವರು ತನ್ನನ್ನು ತಾನೇ ಮರೆತು, ಆನಂದಲೋಲುಪರಾಗಿರಲಿಲ್ಲ. ತಮ್ಮ ಕೈಯಲ್ಲಾಗುವ ಎಲ್ಲಾ ಸಹಾಯವನ್ನು, ಬಡವರಿಗಾಗಿ, ಸಮಾಜಕ್ಕಾಗಿ, ದೇಶಕ್ಕಾಗಿ ಮಾಡುತ್ತಿದ್ದರು. ಊರಿಗೆ ಏನಾದರೊಂದು ಸಹಾಯ ಸಂಧರ್ಭ ಬೇಕಾದರೆ ಅವರ ಕೈ ಹೇಗೆ ನೀಲಿಯೊ, ಹಾಗೆಯೇ ಅವರ ಮಾತೇ ಕಡೆಯ ತೀರ್ಪು! ಅವರ ಉದಾರ ಹಸ್ತಕ್ಕೆ ಜನರು ಮನಸೋತು ಅವರಿಗೆ 'ಉದಾರ ರಾಮಣ್ಣ'ನೆಂದು ಹೆಸರಿಟ್ಟಿದ್ದರು. ಎಲ್ಲಾ ಸಂಪತ್ತಿದ್ದರೂ, ಅವರಿಗೆ ಸಂತಾನಲಕ್ಷ್ಮಿಯು ಒಲಿದಿರಲಿಲ್ಲ. ಸಾಯುವ ಕಾಲ ಹತ್ತಿರ ಬಂದುದರಿಂದ, ಸ್ಥಿರಸ್ಥಾಯಿಯಾಗಿರುವಂತೆ, ಒಂದು ಸಾರ್ವಜನಿಕ ಆಸ್ಪತ್ರೆ ಕಟ್ಟಿಸಬೇಕೆಂಬುದು ಅವರ ಆಶೆಯಾಗಿ. ಮನಸ್ಸಿನಲ್ಲಿದ್ದುದು ಕಾರ್ಯರೂಪಕ್ಕೆ ಬರಲು ಹೆಚ್ಚು ಸಮಯ ಬೇಕಾಗಲಿಲ್ಲ.

ತಳಹದಿಯ ಮೇಲೆ, ಒಂದೊಂದು ಕಲ್ಲೆಂದು ಗೋಡೆಗಳೇಳಲಾರಂಭಿಸಿದುವು. ಕೆಲಸದ ಮೇಲ್ವಿಚಾರಣೆ ನೋಡಿಕೊಳ್ಳುವ ಭಾರ ನನ್ನ ಮೇಲಿತ್ತು. ನೂರಾರು ಹೆಂಗಸು, ಗಂಡಸು, ಕೂಲಿಯವರು, ಉತ್ಸಾಹದಿಂದ, ತಮ್ಮ ತಮ್ಮೊಳಗೆ ತಮಾಷೆ, ಜೋಕುಗಳನ್ನು ಮಾಡುತ್ತಾ, ಗೆಜ್ಜೆಯ ಹಕ್ಕಿಯನ್ನು ಕಟ್ಟಿದಂತೆ ಕಟ್ಟಡ ಕಟ್ಟುತ್ತಿದ್ದರು. ದಿನವಿಡೀ ರಕ್ತವನ್ನು ಬೆವರಾಗಿ ಹರಿಸುವ ಸಿಕ್ಕುವ ಅಲ್ಪ ವೇತನದಿಂದ ಸಂತೋಷಗೊಳ್ಳುವ, ಆ ನಿಷ್ಕಾಪಟ ಕರ್ಮಿಗಳಿಂದರೂ ಒಪ್ಪುವ, ಕೆಲಸಗಾರರನ್ನು ನೋಡಿ ನನ್ನ ದಿನಗಳೆಯುತಿದ್ದೆನು.

ಎಂದಿನಂತೆ, ಆಫೀಸಿನಲ್ಲಿ ಕೂತು ಏನೋ ಲೆಕ್ಕಚಾರ ನೋಡುತಿದ್ದೆನು. ನನ್ನ ಆಫೀಸು, ಆಸ್ಪತ್ರೆ ಕಟ್ಟುವ ಸ್ಥಳದಿಂದ, ನಾಲ್ಕುನೂರು ಗಜದಲ್ಲಿ, ನಾಲ್ಕು ಕಂಬಗಳಿಂದ ನಿರ್ಮಿಸಿದ ತಾತ್ಕಾಲಿಕ ಗುಡಿಸಲು. 'ಬಾಬೂಜಿ' ಎಂದು ಕರೆದ ಧ್ವನಿ ಕೇಳಿತು. ತಲೆಯೆತ್ತಿ ನೋಡಿದೆ. ಅಪರಿಚಿತ ಒಬ್ಬ ಕೂಲಿ ಯುವತಿ. ಹೃಷ್ಟಪುಷ್ಟವಾಗಿ ಬೆಳೆದ ದೇಹ. ಕೂಲಿಯಾದರೂ, ಕೆಂಬಣ್ಣ ಚೆನ್ನುಳ್ಳ, ನವಯೌವನದ ಮುದ್ದು ವದನ. ನಿಜವಾಗಿಯೂ, ಕೆಸರಿನಲ್ಲಿ ಹುಟ್ಟಿದ ಕಮಲ. 'ಏನು ಬೇಕು' ಎಂದು ಕೇಳಿದೆನು. 'ನಾನು ಗರೀಬಳಿದ್ದೇನೆ. ನನಗೂ, ನನ್ನ ತಾಯಿಗೂ ಹಾಸ್ಪತ್ರೆ ಕೆಲಸ ಕೊಡುವಿರಾ?' ನಿನ್ನೆಯಿಂದ ಜಿಜ್ಞಾಸೆಯಿತ್ತವನಂತೆ, 'ಆಗಲಿ ನಾಳೆಯಿಂದ ನೀವಿಬ್ಬರೂ ಬರಬಹುದು' ಎಂದೆನು. ಆಕೆಯ ಸಂತೋಷ ನೋಡಿ ನನ್ನ ಮನಸ್ಸೂ ಆನಂದಗೊಂಡಿತು. ಆಕೆಗೆ ಕೆಲಸ ಕೊಟ್ಟದ್ದು, ಆಕೆಯ ಬಡತನಕ್ಕಲ್ಲ; ಆಕೆಯ ಸೌಂದರ್ಯಕ್ಕೆ! ಹೀಗೆ ಮಾಡುವ ಸಾವಿರಾರು ಜನರಲ್ಲಿ ನಾನೂ ಒಬ್ಬ ಎಂದು ತೃಪ್ತಿಗೊಂಡೆನು. ಆಕೆಯ ಮುಖಕ್ಕೆ ತಕ್ಕಂತೆ, ಆಕೆಯ ಹೆಸರು 'ಬಾನು' ಎಂದಿತ್ತು. ಮರುದಿವಸದಿಂದ ಆಕೆಯೂ ಬೇರೆ ಕೂಲಿಗಳ ಮಧ್ಯೆ ಕೆಲಸ ಮಾಡತೊಡಗಿದಳು. ಆಕೆಯು ನಮಗೂ ರುಚಿಸುವಂತೆ ಕೆಲಸ ಮಾಡುತಿದ್ದಳು. ಪ್ರತಿ ದಿನ ಬೆಳಗ್ಗೆ ಬಂದು ನನಗೆ ನಮಸ್ಕರಿಸಿ, ಒಂದು ಹೂವಿನಂಥ ನಗುವನ್ನು ಚೆಲ್ಲಿ ಕೆಲಸಕ್ಕೆ ಹೋಗುತಿದ್ದಳು.

ಆ ದಿವಸ ಕೂಲಿಗಾರರಿಗೆ ಸಂಬಳ ಕೊಟ್ಟು, ಮಧ್ಯಾಹ್ನದ ಮೇಲೆ ನನ್ನ ಲೆಕ್ಕಚಾರವನ್ನೆಲ್ಲಾ ತಿರುಗಿ ನೋಡುತ್ತಾ ಆಫೀಸಿನಲ್ಲಿ ಕೂತಿದ್ದೆನು. 'ಬಾಬೂಜೀ ಒಳಗೆ ಬರಲೇ,' ಎಂದು ಕೇಳುತ್ತಾ, ಬಾನು, ಆಫೀಸಿನೊಳಗೆ ಬಂದಳು. ಆಕೆಯ ಕೈಯಲ್ಲಿ ಒಂದು ಗಂಟಿತ್ತು. ನಿಮ್ಮ ಉಪಕಾರಕ್ಕಾಗಿ ನನ್ನ ಮತ್ತು ತಾಯಿಯ ಪ್ರೀತಿಯ ಅಲ್ಪ ಕಾಣಿಕೆಯೆಂದು ಅದನ್ನು ಮೇಜಿನ ಮೇಲಿಟ್ಟಳು. ಬಿಚ್ಚಿ ನೋಡಲು ಬೇಕಾದಷ್ಟು ಬಾಳೆ ಹಣ್ಣು, ದ್ರಾಕ್ಷೆ ಮತ್ತೊಂದು ಸಣ್ಣ ಪೆಟ್ಟಿಗೆಯಿತ್ತು. 'ಬಾನು, ನಾನು ನಿನ್ನಿಂದ ಯಾವ ಪ್ರತಿಫಲವನ್ನೂ ಅಪೇಕ್ಷಿಸಲಿಲ್ಲ. ಏತಕ್ಕಾಗಿ ಈ ... ಕೊಡುವೆ? ಎನ್ನುತ್ತಾ ಪೆಟ್ಟಿಗೆಯ ಮುಚ್ಚಳ ತೆರೆದೆನು. ಅದರಲ್ಲಿ ಹತ್ತು ರೂಪಾಯಿಯ ನೋಟಿತ್ತು! 'ಈ ಜಗತ್ತು ಕಳ್ಳನನ್ನು, ಕೊಲೆಗಡುಕನನ್ನು ಕ್ಷಮಿಸಬಹುದು. ಆದರೆ ತನ್ನ ಪಾಲಿನದನ್ನೂ ಕೊಡದೆ ಇನ್ನೊಬ್ಬರದನ್ನು ತೆಗೆದುಕೊಳ್ಳುವವನನ್ನು ತೀವ್ರವಾಗಿ ನಿರೋಧಿಸುವದು (The world will forgive a thief and the assassin but bitterly resents the person who takes something for nothing) ಎಂದು ತಿಳಿದವರು ಹೇಳಿದ ವಾಕ್ಯ ನನ್ನನ್ನು ಎಚ್ಚರಗೊಳಿಸಿತು. ಹೀಗೆ ಬಡ, ಅಲ್ಪ ಸಹಾಯ ಮಾಡಿ, ಲಾಭ ಹೊಡೆಯುವ ಎಷ್ಟು ದರೋಡೆಗಾರರಿಲ್ಲ? ಮಾನವನು ಹುಟ್ಟಿದುದಕ್ಕೆ ಸಾರ್ಥಕವಾಗಿ, ತನ್ನ ಬಡ ಸಹೋದರ ಸಹೋದರಿಯರಿಗೆ ಕೈಲಾದ ಸಹಾಯ ನೀಡದಿದ್ದರೆ ಅದು ಮಾನವ ಜನ್ಮವಾದೀತೆ? ದಿನವಿಡೀ ರಕ್ತವನ್ನು ಬೆವರು ಹರಿಸಿ, ಸಿಕ್ಕುವ ಅಲ್ಪ ಪ್ರತಿಫಲದಿಂದ, ಹೊಟ್ಟೆಗಿಲ್ಲದಿದ್ದರೂ ನನ್ನನ್ನು ಸಂತೋಷಿಸಬೇಕೆಂದು ತಂದ ಈ ಕಾಣಿಕೆಯನ್ನು ನೋಡಿ ನನ್ನ ಉದ್ವೇಗಗೊಂಡಿತು. ಈ ತರಹದಲ್ಲಿ ಕಾಣಿಕೆ ಕೊಡುವ ಪದ್ಧತಿ ಆಡಿಯಿಂದ ತುದಿಯವರೆಗೆ, ಎಲ್ಲೆಲ್ಲೂ ಸಂಪ್ರದಾಯವಾಗಿರುವಾಗ ಆಕೆಯದು ತಪ್ಪು ಅದರಲ್ಲೇನಿದೆ? 'ಬಾನು, ನೀನು ತಂದಿದ್ದಕ್ಕಾಗಿ ಒಂದು ಹಣ್ಣು ತಿನ್ನುತ್ತೇನೆ. ಇನ್ನೆಲ್ಲವನ್ನೂ ಮನೆಗೆ ತೆಗೆದುಕೊಂಡು ಹೋಗು' ಎಂದೆನು. 'ಇಲ್ಲ, ಇದು ನಾವು ಪ್ರೀತಿಯಿಂದ ಕೊಟ್ಟಿದೆಂದು ತಿಳಿಯಿರಿ' ಎಂದಳು. 'ತೆಗೆದುಕೊಂಡು ಹೋಗದಿದ್ದರೆ, ಇವತ್ತಿನಿಂದ ನಿನಗೆ ಕೆಲಸವಿಲ್ಲ' ಎಂದು ಸ್ವಲ್ಪ ಏರಿಸಿದ ಧ್ವನಿಯಲ್ಲಿ ಹೇಳಿದೆನು. ಅವಳು ತಡಮಾಡುತ್ತಾ, ಗಂಟನ್ನು ಕಟ್ಟಿ, ನಮಸ್ಕರಿಸಿ, ಖಿನ್ನ ಮುಖದಿಂದ ಹೊರಟು ಹೋದಳು.

ಅಂದಿನಿಂದ, ಅವಳು ಎಂದಿನಂತೆ ಆಫೀಸಿಗೆ ಬರುವುದು ನಿಂತಿತು. ಆಕೆಯ ಚಟುವಟಿಕ, ಮಾತು ಕತೆಯೆಲ್ಲಾ ಕಡಿಮೆಯಾದದ್ದು ನನಗೆ ಗೊತ್ತಾಗುತಿತ್ತು. ಈ ಬದಲಾವಣೆ ನನ್ನ ಮನಸ್ಸನ್ನು ಯಾವಾಗಲೂ ಕೊರೆಯುತಿದ್ದಿತು. ತನ್ನ ಹೃದಯವನ್ನು ಬಿಚ್ಚಿ, ಆದ ನೋವು ಯಾ ಇಚ್ಛೆಯನ್ನು ನನ್ನಲ್ಲಿ ಹೇಳಲು ಆಕೆಗೆ ಧೈರ್ಯವಿರಲಿಲ್ಲ. ಅಧಿಕಾರ, ದರ್ಪವೆಲ್ಲಾ ನನ್ನ ಕೈಯಲ್ಲಿದ್ದುದ್ದೇ ಇದಕ್ಕೆ ಕಾರಣವೆಂದು ಹೇಳಬೇಕಾಗಿಲ್ಲ. ಆಕೆಯ ಮುಖದಲ್ಲಿ ಎಂದಿನಂತೆ ನಲಿಯುವ ಆನಂದ ಕಳೆಯಿರುತಿರಲಿಲ್ಲ. ಅದೇ ನನ್ನ ಮನಸ್ಸನ್ನು ಹಗಲು ರಾತ್ರಿ ಚುಚ್ಚುತ್ತಿದ್ದಿತು. ಅದಕ್ಕೆ ಸರಿಯಾಗಿ ಎರಡು ದಿವಸದಿಂದ ಕೆಲಸಕ್ಕೆ ಬರುವುದನ್ನು ಆಕೆ ನಿಲ್ಲಿಸಿದ್ದಳು.

ದಿನ ಕಳೆಯುತ್ತಾ ಸಂಬಳದ ದಿವಸ ಬಂತು. ಆಕೆಯ ಸಂಬಳ ತೆಗೆದುಕೊಳ್ಳಲು ಆಕೆಯ ತಾಯಿಯೇ ಬಂದಿದ್ದಳು. ಆವಳೇಕೆ ಬರಲಿಲ್ಲವೆಂದು ಕೇಳಲು, ಆಕೆಯ ವೈದ್ಯನ ವಿಷ್ಣುಮೇಲು ... ಅಂದು ಸಾಯಂಕಾಲ ಅವರ ಗುಡಿಸಲಿಗೆ ಹೋದೆನು. ಬಾಗಿಲು ಮುಚ್ಚಿತ್ತು. ಶಬ್ದಮಾಡಿದೊಡನೆ ಬಾಗಿಲು ತೆರೆಯಿತು. ನಾನು ಯೋಚಿಸಿದಂತೆ, ಬಾನುವೇ ಬಾಗಿಲು ತೆರೆದಳು. ಅವಳ ಮುಖ ಕಳೆಗುಂದಿದ್ದರೂ, ನನ್ನ ಆಗಮನ ಆಕೆಗೆ ಆಶ್ಚರ್ಯವನ್ನುಂಟುಮಾಡಿರಬೇಕು. 'ಬಾಬೂಜಿ, ಒಳಗೆ ಬನ್ನಿ ಕೂತುಕೊಳ್ಳಿ. ನಾನು ಕೆಲಸಕ್ಕೆ ಬಾರದ್ದರಿಂದ, ನೀವು ಸಿಟ್ಟಾಗಿ ಬಂದಿದ್ದೀರಾ? ಕ್ಷಮಿಸಿ ಇನ್ನು ಮುಂದಕ್ಕೆ ನಾನು ಕೆಲಸಕ್ಕೆ ಬರಲಾರೆ. ತಪ್ಪು ಮಾಡಿದ ಅಪರಾಧಕ್ಕೆ ನನ್ನ ಪ್ರಾಯಶ್ಚಿತ್ತವಾಗಿರುವುದು' ಎಂದಳು.

'ಬಾನು, ನಿನಗೆ ಸಾಕ್ಷಿಯಿಲ್ಲವೆಂದು ತಿಳಿದು ಒಂದು ಒಡವರ ದುಃಖದಲ್ಲಿ ಭಾಗಿಯಾಗುವದು ಮಾನವನಿಗೆ ದೊರೆಯಬಹುದಾದ ಸೌಭಾಗ್ಯಗಳಲ್ಲಿ ಒಂದು. ಕಾಡಿನ ಗಿಡ ಬಿಕ್ಕಾಡಿನಲ್ಲೇ ನಾಶವಾಗಬೇಕೆಂದು ಯಾವ ಕಟ್ಟುಪಾಡೂ ಇಲ್ಲ, ನಾಡಿಗೂ ಬರಬಹುದು... ದೇವರ ಪೂಜೆಗೂ ಅರ್ಪಿತವಾಗಬಹುದು" ಎಂದೆನು.

"ನಮ್ಮಂಥಾ ಕಡುಬಡವರನ್ನು ನಾಡಿನ ನಾಗರೀಕರಾಗಿ ಮಾಡುವದು ಸುಲಭವಲ್ಲ. ನಿಮ್ಮ ನೇತನ, ಮರ್ಯಾದೆ, ಎಲ್ಲವನ್ನೂ ಕಳೆದು ನಿಮ್ಮ ಜೀವನವನ್ನೂ ಹಾಳು ಮಾಡಬೇಕಾದೀತು. ಇಂಥಾ ಸುಧಾರಣೆಗೆ ನಮ್ಮವರೂ ಒಪ್ಪಲಾರರು. ದೇವರ ದಿಂಡರನ್ನು ಮರೆದು, ದುಷ್ಟವೃತ್ತಿಯಲ್ಲಿ ಜೀವಿಸುತ್ತಿದ್ದವರನ್ನು ಜೋಪಾನದಲ್ಲಿ ನಿಲ್ಲಿಸಿ ಪ್ರಾರ್ಥಿಸಂದರೆ ಯಾವ ರೀತಿ ಹೊಂದಿಕೆಯಾಗಲಾರದೋ ಅದೇ ರೀತಿ ಸಮಾಜದ ನಿಕೃಷ್ಟ ಅಂತಸ್ತಿನಲ್ಲಿದ್ದು ಮಾದರಿ ಜೀವನದ ಅನುಭವ, ಪರಿಚಯವಿಲ್ಲದ ನಮ್ಮನ್ನು ಒಂದೇ ಬಾರಿಗೆ ಸಾಧಾರಣಯ ಮೆಟ್ಟಲೇರಿಸಿದರೆ ಅನಾಹುತವಾದೀತು. ಕ್ರಮಶಃ ಮೆಟ್ಟಲೇರುತ್ತಾ ಮೇಲೆ ಬರುವ ಅನುವನ್ನು ನಿಮ್ಮಂಥವರು ಮಾಡಿದರೆ ಅದೇ ಸಾಕು. 'ಅಂಗಲಿ ಹಾಯಿದವನಿಗೆ ಗಗನ ಹಾರಲು' ಹೇಳಬಾರದು" ಎಂದಳು.

ನನಗೆ ಹೆಚ್ಚು ಮಾತಾಡಲಾಗಲಿಲ್ಲ. ಹಿಂತಿರುಗಿದೆ.

ಕೆಲವು ದಿನಗಳುರುಳಿದುವು. ಸಾಯಂಕಾಲ ಬಿಡುವಿತ್ತು. ಬಾನುವಿನ ಗುಡಿಸಲ ಕಡೆ ಹೋಗಿ ಬರೋಣವೆನಿಸಿತು. ಆ ಕಡೆ ಹೊರಟೆ. ಬಾನುವಿನ ಮನೆಯ ಮುಂದೆ ಚಪ್ಪರ ಹಾಕಲ್ಪಟ್ಟಿತ್ತು. ತೋರಣಗಳು ಎದ್ದು ಕಾಣುತ್ತಿದ್ದವು. ವಾದ್ಯದ ರಭಸ ಕೇಳುತಿತ್ತು. ಬಾನುವಿನ ಮದುವೆಯೆಂದು ತಿಳಿಯಲು ಹೆಚ್ಚು ಹೊತ್ತು ಬೇಕಾಗಿರಲಿಲ್ಲ. ನಾನು ಹಿಂತಿರುಗಿದೆ. ಎದೆಯಲ್ಲಿ ಹೇರಲಾರದ ಭಾರತುಂಬಿತ್ತು.

ಆಫೀಸಿನ ಜವಾನ ಶಿವು ಬೀಗದ ಕೈಗಳನ್ನು ತಂದಿದ್ದನು. ಬಾನುವಿನ ವಿಚಾರ ಕೇಳಿದೆ. ಆಕೆಯ ಮದುವೆ ಇಂಜಿನಿಯರಿಂಗ್ ಖಿಟೇರಿಯ ಜವಾನ ಇಪ್ಪತ್ತು ವರ್ಷದ ರಾಮುವಿನೊಡನೆ ಆಯಿತೆಂದನು.

ಆಸ್ಪತ್ರೆ ಕಟ್ಟಡವಾಗಿ ಆಸ್ಪತ್ರೆ ತೆರೆಯಲ್ಪಟ್ಟಿತ್ತು. ನೂರಾರು ರೋಗಿಗಳು ದಿನವೂ ಬರುತ್ತಿದ್ದರು. ಆಸ್ಪತ್ರೆಯಲ್ಲೇ ನನಗೂ ಜವಾಬ್ದಾರಿಯ ಹುದ್ದೆಯೊಂದು ದೊರೆತಿತ್ತು. ಅಂದು ಕೂಲಿಗಳು ಬಂದು ಆಸ್ಪತ್ರೆಯಲ್ಲಿ ತುಂಬಿದ್ದರು. ಅವರೆಲ್ಲರೂ ನನ್ನ ಪರಿಚಯದವರು. ವಿಚಾರಿಸಿದರೆ ಬಾನುವಿನ ಗಂಡನು ಆಸ್ಪತ್ರೆಯಲ್ಲಿ ಎರಡು ದಿನಗಳು ನರಳಿ ಪ್ರಾಣ ಬಿಟ್ಟನೆಂದೂ ಅವರು ಆತನ ಶವಸಂಸ್ಕಾರಕ್ಕೆ ಬಂದಿರುವರೆಂದೂ ತಿಳಿಯಿತು.

ಬಾನುವಿನ ಯೋಚನೆ ನನಗಾಗದಿರಲಿಲ್ಲ. ಪಾಪ! ಆಕೆಯ ಜೀವನವೇ ಹಾಳಾಯಿತು. ಆಕೆಯನ್ನು ಕೈಹಿಡಿದು ಆಕೆಯ ಹಾಗೂ ಆಕೆಯ ಸಮಾಜದ ಉದ್ಧಾರ ಮಾಡಲು ಯತ್ನಿಸಿದರೂ ಇಂದಿನ ಸಮಾಜದಲ್ಲಿ ಸಾಧ್ಯವಿಲ್ಲದ ಮಾತು. ಉದಾತ್ತ ಸಮಾಜದಲ್ಲಿ ಬಡವ, ಉಚ್ಚವರ್ಗದಲ್ಲಿ ಅಸಹಕಾರವು ಇನ್ನೂ ಇದೆ. ಅರಿತವರು ಹೇಳಿದ ಈ ಮಾತನ್ನು ಉಚ್ಚವರ್ಗದವರಾದರೂ ಎದೆ ಮುಟ್ಟಿ ನಿರೀಕ್ಷಿಸುವರೇ?

"ದೇವರಲ್ಲಿ ಉತ್ತಮರು ನೀಚರೆಂದಿಲ್ಲ. ಎಲ್ಲರೂ ಆತನಿಗೆ ಸಮಾನರು. ನಾನು ಉತ್ತಮ ಕುಲ ಸಂಜಾತನೆಂದೂ ನೆರೆಯವನು ಕೀಳು ತರಗತಿಯವನೆಂದೂ ಎಂದೂ ಭಾವಿಸಬಾರದು. ಉತ್ತಮ ಮತ್ತು ದಲಿತರು ಮಿಂದ ಮಾತ್ರದಿಂದ ಜೀವನ ಗಂಗೆ ಮಲಿನಗೊಳ್ಳುವುದಿಲ್ಲ. ಅವರು ಸೇವಿಸುವದರಿಂದ ಗಾಳಿಯು ಕೆಡಲಾರದು. ಅವರು ನನ್ನ ಮೇಲೆ ನಡೆಯುವರೆಂದು ಭೂಮಿಯು ಅಸ್ಪೃಶ್ಯವೆನಿಸದು."

(There is no high or low with God. All are alike to him. Never entertain the thought that I am high born and neighbour is low born. The Ganges is not polluted, nor is the wind tainted, nor the earth rendered untouchable because the low born or the high born bathe in one, or breath the other, or move on the back of the third.)

ದಿ ಟ್ರಾಪಿಕಲ್

ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:— ಲಾಲ ಶಂಕರ್ ಲಾಲ್.

ಮುಖ್ಯ ಕಚೇರಿ:— ಹೊಸ ಡೆಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್ ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮಲಖಾನ್. ಡಾ|| ಎಂ. ಎ. ಅನ್ಸಾರಿ.

Transacts:—Life, Fire, Motor and Marine.

ನಮ್ಮ ಹೊಸ ವಿಸ್ತಾರದ ಯೋಜನೆಯಲ್ಲಿ ಆಕರ್ಷಕ ಕಮಿಷನ್ ಮೇಲೆ ಏಜನ್ಸಿಗೆ ದಯವಿಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಆರ್ಗನೈಜರ್
ದಕ್ಷಿಣ ಕೊಡಗು, ಪೊನ್ನಂಪೇಟೆ.
ಅಥವಾ
ಯಂ ಯು. ಅಚ್ಚಣ,
ಏಜೆನ್ಸಿ ಸುಪರಿಂಟೆಂಡೆಂಟ್,
ಮಡಿಕೇರಿ, ಕೊಡಗು.

ಆರ್ಗನೈಜರ್
ಉತ್ತರ ಕೊಡಗು, ಮಡಿಕೇರಿ.
ಅಥವಾ
ಎಂ. ಎ ಬೆಳ್ಯಪ್ಪ,
ಬ್ರಾಂಚ್ ಸೆಕ್ರೆಟರಿ,
ಹಂಪನಕಟ್ಟೆ, ಮಂಗಳೂರು.

ಎಂಪೈರ್ ಆಫ್ ಇಂಡಿಯಾ

ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

48ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು.	ಒಟ್ಟು ಆದಾಯ	1,07,09,000	ಮೀರಿದೆ
	ಚಾಲ್ತಿಯಿರುವ ವಿಮೆ	17,74,52,000	,,
	ಆಸ್ತಿ	6,67,60,000	,,
ಕಂಪೆನಿಯು ಆದಿಯಲ್ಲಿ ಕೊಟ್ಟ ಕ್ಲೈಮುಗಳು		8,83,62,000	,,

ಅಂಗ ಕಛೇರಿ
ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್,
ಕೆಂಪೇಗೌಡರಸ್ತೆ, ಬೆಂಗಳೂರು

ಏಜೆನ್ಸಿ ಅರ್ಜಿಗಳನ್ನು ಸ್ವಾಗತಿಸಿದೆ.

ಪ್ರಧಾನ ಕಛೇರಿ
ಎಂಪೈರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ್, ಬೊಂಬಾಯಿ.

ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್,

ಫ್ರೇಜರ್ ಪೇಟೆ.

ಬೇಕಾಗಿದ್ದಾರೆ.

ಕೊಡಗಿನ ಪ್ರತಿ ಗ್ರಾಮ ಮತ್ತು ಪಟ್ಟಣಗಳಲ್ಲಿ ಬಿದ್ದು ಮಣ್ಣುಪಾಲಾಗಿ ಹೋಗುತ್ತಿರುವ ಮೂಳೆಗಳನ್ನು ಶೇಖರಿಸಿಕೊಡಲು ಪ್ರತಿ ಹಳ್ಳಿ ಮತ್ತು ಪಟ್ಟಣಗಳಲ್ಲಿ ಏಜೆಂಟರುಗಳು ಬೇಕಾಗಿದ್ದಾರೆ. ಏಜೆಂಟರುಗಳಿಗೆ ಧಾರಾಳವಾದ ಕಮಿಷನ್ ಕೊಡಲಾಗುತ್ತದೆ

ನೇಮಕವಾದ ಏಜೆಂಟರುಗಳು ಕಂಪನಿಯಿಂದ ಗೊತ್ತಾದ ಸ್ಥಳಕ್ಕೆ ಮೂಳೆಗಳನ್ನು ಸಾಗಿಸಿ ಕೊಟ್ಟಲ್ಲಿ ಮಣ ಒಂದರ ರೂ. 0–12–0 ಯಂತೆ ಕೊಡಲಾಗುವುದು.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಕೆ. ಕೆ. ತಿಮ್ಮಯ್ಯ,
ಮೇನೇಜಿಂಗ್ ಡೈರೆಕ್ಟರ್.

ಫ್ರೇಜರ್‌ಪೇಟೆ,
ತಾ 32-9-49

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್,

ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,66,000.
ಕ್ಷೇಮನಿಧಿ	ರೂ.	50,000.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯೂ ಹುಂಡಿಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ ಮತ್ತು ವಾರ್ಡನ್ ಇನ್ಶ್ಯೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ,
ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C.
ಪ್ರೆಸಿಡೆಂಟ್ ಮತ್ತು ಖಜಾಂಚಿ.

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್

ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 246 ರ ವರೆಗೆ.
2. ·32 ರಿವಾಲ್ವರುಗಳು (Revolvers) ,, 262 ,, 274 ,,
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott) ಕ್ರಯ ರೂ. 1492/-
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make) ಕ್ರಯ ರೂ. 627–5–0
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4-10-0
6. 12, 16, 20ನೇ ನಂಬರು ಕೋವಿಗಳ ತೋಟಗಳೂ ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಗಳೂ ಸಹ ದೊರೆಯುತ್ತವೆ.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವುದು)

ಎಂ ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

52–13

CRESCENT

FOR PROTECTION AND SERVICE.

It is best to represent and insure with

The CRESCENT Insurance Co., Lt.d,

H. O: BOMBAY] [*Established 1919.*

For particulars write to:

Sri B. A. Poovaiah
Organiser
Pollibetta, Coorg.

or

The Branch Manager,
22 B. Mahatma Gandhi Road,
Bangalore 1.

ಸುರಕ್ಷಿತವಾದ ಜೀವವಿಮೆ ಪಡೆಯಲು

ಕ್ರೆಸೆಂಟ್

ಇನ್ಶ್ಯೂರೆನ್ಸ್ ಕಂಪೆನಿಗೆ ಬರೆಯಿರಿ.

THE WARDEN INSURANCE CO., Ltd.

Head Office: Bombay.

LIFE, FIRE, ACCIDENT, MOTOR & W. C. INSURANCES.

Managing Director, – **S. H. THAKER.**

Business in force	Rs. 5,00,00,000
Assets	,, 1,00,00,000
Income	,, 35,00,000

Also **LOCAL MANAGERS OF**

THE LONDON GUARANTEE & ACCIDENT CO., Ltd.
(Incorporated in England)

Assets Exceed Rs. 10,00,00,000

a Subsidiary Company of

THE PHOENIX ASSURANCE CO. Ltd.
(One of the Largest Assurance Companies in the World)

Assets Exceed Rs. 45,00.00,000

Transact **FIRE INSURANCE**.

Enquiries for representation solicited.

Apply to:

Chief Agency Office
Virajpet (Coorg)

or

A. S. Aiyappa,
Branch Secretary,
Gandhinagar,
BANGALORE CITY

Edited, Printed and Published by P. I. Belliappa at 'Kodag Press, Mercara, for 'Kodagu' Ltd.

Reg. No. M. 1550.
'KODAGU' MERCARA. (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೨೮ | ತಾರೀಕು ೧೧-೧೧-೧೯೪೮ನೇ ಶುಕ್ರವಾರ | ಸಂಚಿಕೆ ೨೫

ಪ್ರಾಂತದ ಉತ್ಪತ್ತಿಯು ಬಹುಪಾಲ್ಗೆ ಹೆಚ್ಚಬಹುದು. ಜನರ ಸಬಲತೆ ಕೊಡಗಿನ ಜನಸಂಖ್ಯೆ ಮತ್ತು ವಿಸ್ತೀರ್ಣ ಚಿಕ್ಕದಾದರೂ ಅದರ ಆರ್ಥಿಕ ಸ್ಥಿತಿಯು ಇತರ ಅನೇಕ ದೊಡ್ಡ ಪ್ರಾಂತಗಳಿಗಿಂತಲೂ ಉತ್ತಮವಾಗಿದೆ. ಇತರ ಚೀಫ್ ಕಮಿಷನರ್ ಪ್ರಾಂತಗಳಂತೆ ಅದು ಕೇಂದ್ರದ ಸಹಾಯ ನಿರೀಕ್ಷಿಸಿ ಬದುಕಬೇಕಾಗಿಲ್ಲ. ಅದು ಸ್ವಾವಲಂಬಿಯಾಗಿ ದಿನನಿತ್ಯದ ಆಡಳಿತ ನಡೆಸುವದೇ ಅಲ್ಲ, ದಕ್ಷ ಆಡಳಿತದಿಂದ ಜನತೆಯ ಹಿತವನ್ನು ಎಲ್ಲಾ ದೃಷ್ಟಿಯಿಂದ ಸಾಧಿಸಿ, ರಾಷ್ಟ್ರ ರಚನಾ ಕಾರ್ಯಗಳಿಗೆ ಸಾಕಷ್ಟು ಆಸ್ಪದವುಂಟು ಮಾಡುವ ಸಮಯದಲ್ಲಿ ಕೊಡಗಿನಲ್ಲಿ ಒಂದೇ ಹಿಂದೂಸ್ಥಾನ ಸಂಯುಕ್ತರಾಜ್ಯದಲ್ಲಿ ಈ ಶಾಂತಿಯುತ ಮತ್ತು ತೃಪ್ತ ಜೀವನವನ್ನು ನಮ್ಮ ಗಣ ಇಲಾಖೆ ಸಂಸ್ಥೆಗಳ ಸರ್ದಾರ್ ಪಟೇಲರ ನೇತೃತ್ವದ ಹಿಂದೀ ಕೇಂದ್ರ ಶಾಸನ ಸಭೆಯ ಕೈಕೆಳಗೆ ಇಲ್ಲಿ 'ರಾಮರಾಜ್ಯ' ಏರ್ಪಡಿಸಿದರೆ ಅದು ಹಿಂದೂ ದೇಶದ ಇತರ ಭಾಗಗಳ ಆಡಳಿತದೊಂದಿಗೆ ತುಲನೆ ಮಾಡಿದರೆ ಇದು ಉತ್ಪ್ರೇಕ್ಷೆಯಾಗಲಾರದು. ಈಗಿನ ಪರಿಸ್ಥಿತಿಗೆ ಸರಿಹೊಂದುವಂತೆ ಈ ಹಳೇ ಸಂಪ್ರದಾಯಕ್ಕೆ ತಕ್ಕ ಸುಧಾರಣೆ ಮತ್ತು ಬದಲಾವಣೆ ಅವಶ್ಯವೆಂಬುದು ನಿಜ. ಶ್ರೀ

ಬಾಪುವಿನ ಕಲ್ಪನೆಯ ರಾಮರಾಜ್ಯ ಕೊಡಗಾಗಬಲ್ಲುದು.

ಲೇ:- ಶ್ರೀ ಪಿ. ಐ. ಬೆಳ್ಯಪ್ಪ, ಎಂ. ಎಲ್. ಸಿ

[ಡೆಕ್ಕನ್ 'ಇಂಡಿಯನ್ ನ್ಯೂಸ್ ಕ್ರಾನಿಕಲ್' ಪತ್ರಿಕೆಯಲ್ಲಿ ಶ್ರೀಯುತರು ಬರೆದ ಲೇಖನದ ಸಾರಾಂಶ]

ಮೈಸೂರು ಮದ್ರಾಸುಗಳಿಂದ ಪ್ರಾಕೃತಿಕವಾಗಿ ಬೇರ್ಪಟ್ಟಿರುವ ಕೊಡಗೆಂದು ಕರೆಸಿಕೊಳ್ಳುವ ಚಿಕ್ಕದೊಂದು ಪ್ರಾಂತವು ದಕ್ಷಿಣದಲ್ಲಿದೆ. ದಕ್ಷಿಣಗಂಗೆಯೆಂದೆನಿಸಿದ ವಿಖ್ಯಾತ ಕಾವೇರಿ ನದಿಯು ಈ ಸುಂದರ ದೇಶದಲ್ಲಿ ಹುಟ್ಟುತ್ತದೆ. ಸುಮಾರು ಎರಡು ಲಕ್ಷವಿರುವ ಅದರ ಜನಸಂಖ್ಯೆಯಲ್ಲಿ ಶೇಕಡ ೮೦ರಷ್ಟು ಜನರು ರೈತರು. ದೇಶದ ಮಧ್ಯಮವರ್ಗಗಳಲ್ಲಿ ಸಾಮಾನ್ಯ ಎಲ್ಲರೂ ಭೂಮಾಲೀಕರು. ಪ್ರಾಂತದ ೨೭೫ ಗ್ರಾಮಗಳು ಶತಮಾನಗಳಿಂದ ಬಾಳಿ ಬರುತ್ತಿರುವ ಕುಟುಂಬಗಳಿಂದ ಕೂಡಿವೆ. ೧೫೮೦ ಚದರ ಮೈಲು ವಿಸ್ತೀರ್ಣವಿರುವ ಈ ದೇಶದ ಸುಮಾರು ಮೂರನೇ ಒಂದಂಶದಷ್ಟು ಪ್ರದೇಶವು ಬೆಲೆಯುಳ್ಳ ಕಾಡಿನಿಂದ ಕೂಡಿದೆ. ಆಕ್ಷೇಯು ಈ ಪ್ರಾಂತದ ಪ್ರಾಮುಖ್ಯ ಆಹಾರವಾಗಿದ್ದು ಇದು ಆ ಬಗ್ಗೆ ಉಳಿತಾಯದ ಪ್ರಾಂತವಾಗಿದೆ. ಕೊಡಗಿನ ಕಿತ್ತಳೆ ಇಡೀ ಹಿಂದೂಸ್ಥಾನದಲ್ಲಿ ಖ್ಯಾತಿ ಪಡೆದಿದೆ. ಶಾಸ್ತ್ರೀಯ ರೀತಿಯಲ್ಲಿ ಕಾಫಿ ವ್ಯವಸಾಯ ನಡೆದ, ಕೊಡಗು ಹಿಂದೂದೇಶದ ಏಕಮಾತ್ರ ಕಾಫಿ ಬೆಳೆಯುವ ಸ್ಥಳವಾಗಿದೆ. ಒಳ್ಳೆ ಮೆಣಸು, ಏಲಕ್ಕಿ ಮುಖ್ಯ ಬೆಳೆಗಳು ಯೋಗ್ಯ ತಜ್ಞರು ಪರಿಶೀಲಿಸಿ ಕೊಡಗಿನ ಜೇನು ಅತ್ಯುತ್ತಮವಾದುದೆಂದು ಸಾರಿರುವರು. ಕೊಡಗಿಗೆ ವಿಪುಲ ಮಳೆ ಬೀಳುವದರಿಂದ ನೀರಾವರಿ ಯೋಜನೆಯು ಇತರೆ ಬೇರೆ ಪ್ರಾಂತಗಳಷ್ಟು ಜಟಿಲವಲ್ಲ.

ಈ ಪ್ರಾಂತವು ಮಲಬಾರು, ಕರ್ನಾಟಕದ ಭಾಗಗಳಿಂದ ಆವೃತವಾಗಿದ್ದರೂ ಕೊಡಗಿನ ಸಂಪ್ರದಾಯ, ನಡೆನುಡಿ ಪ್ರತ್ಯೇಕವುಳಿದಿದ್ದು ಅವರ ಸಂಸ್ಕೃತಿಯು ನೆರೆಯ ಜನರದಕ್ಕಿಂತಾ ವಿಶಿಷ್ಟವಾಗಿ ಉಳಿದಿದೆ. ಆರ್ಮ್ಸ್ ಆಕ್ಟಿನಿಂದ ವಿನಾಯಿತಿ ಇರುವ ಅಲ್ಲಿಯ ಜನರು ನಿಪುಣರಾದ ಒಳ್ಳೆ ಶಿಕಾರಿಗಳೆನಿಸಿದ್ದಾರೆ. ಹಿಂದೀ ಸೈನ್ಯಕ್ಕೆ ಅವರು ಸೇರಿ ತಮ್ಮ ಪಾಲಿನ ಕರ್ತವ್ಯವನ್ನು ದಕ್ಷರೀತಿ ಮಾಡಿದ್ದಾರೆ. ಇಂದು ಭಾರತ ಸೇನೆಯ ಮುಖ್ಯಸ್ಥರಾಗಿರುವ ಜನರಲ್ ಕೆ. ಎಂ. ಕಾರ್ಯಪ್ಪನವರಿಗಿಂತಾ ಬೇರೆ ಉದಾಹರಣೆ ಇದಕ್ಕೆ ಬೇಕಿಲ್ಲ. ಬೇರೆ ಪ್ರಾಂತಗಳ ಆಡಳಿತದಲ್ಲಿ ಅವರು ಒಳ್ಳೇ ಕೀರ್ತಿ ಪಡೆದಿರುವದೇ ಅಲ್ಲ, ಕೊಡಗಿನ ಆಡಳಿತವನ್ನು ಚೊಕ್ಕಟವಾಗಿ ನಡೆಸಲೂ ಅಂ

ಜಗುಳಿತನಕ್ಕೆ ಹೆಚ್ಚು ಅವಕಾಶ ಕೊಡದೆ ಯೂ ನಡೆಸಿಕೊಂಡು ಬಂದಿದ್ದಾರೆ.

ಸಹಕಾರ, ವಿದ್ಯೆ, ವೈದ್ಯಕೀಯ ಆದಿ ಕಲಕತೆ ಮತ್ತು ಸಾಮಾನ್ಯ ಜನ ಜಾಗೃತಿಯಲ್ಲಿ ಈ ಪ್ರಾಂತದ ಜನರು ನೆರೆಯವರಿಗಿಂತಾ ಮುಂದರಿದಿದ್ದಾರೆ. ಹಿಂದಿನ ಆರ್ಥಿಕ ಸಹಕಾರ ಚೇತನವು ಇಂದು ಹೊಸ ಮಾರ್ಗದಿಂದ ನಡೆಯುತ್ತಿದೆ. ಸಹಕಾರ ಚಳವಳದಲ್ಲಿ ಕೊಡಗು ಹಿಂದೂದೇಶದಲ್ಲಿ ಪ್ರಥಮ ಸ್ಥಾನ ಪಡೆದಿದೆಯೆಂದು ತಿಳಿಯ ಬಂದಿದೆ.

ಚರಿತ್ರೆಯ ದಾಖಲೆಯಂತೆ ಹಿಂದಿನ ಗ್ರಾಮ ಪಂಚಾಯಿತ ಪದ್ಧತಿಯು ಗಾಂಧಿ ಕಾಲದಲ್ಲೂ ಅಸ್ತಿತ್ವದಲ್ಲಿತ್ತೆನ್ನಬಹುದು. ಬ್ರಿಟಿಷರು ನ್ಯಾಯಾಲಯಗಳನ್ನು ನಿರ್ಮಿಸಿದನಂತರ ಈ ಪ್ರಾಮುಖ್ಯ ಮತ್ತು ಪ್ರಯೋಜನಕಾರಿ ಪದ್ಧತಿಯು ಹಿನ್ನಲೆಗೆ ಬಿತ್ತು. ಆದರೆ ಅದು ಪೂರ್ಣ ನಶಿಸಿಹೋಗದೆ ಇಂದೂ ಶಿಥಿಲರೂಪದಲ್ಲಿದ್ದು ಕೊಡಗಿನ ಜನರು ಅದರಲ್ಲಿಯ ನಂಬಿಕೆಯನ್ನು ಇನ್ನೂ ಇಟ್ಟಿದ್ದಾರೆ.

೧೮೩೪ರಲ್ಲಿ ಲಿಂಗಾಯತ ಅರಸರ ಆಳ್ವಿಕೆ ಕೊನೆಗೊಂಡು ಕೊಡಗು ಬ್ರಿಟಿಷರ ಆಧೀನಕ್ಕೆ ಬಂತು. ಅರ್ಥಿಕವಾಗಿ ಅದು ಎಂದೂ ಕೇಂದ್ರ ಸರಕಾರಕ್ಕೆ ಹೊರೆಯಾಗಿಲ್ಲ. ಜನತೆಯ ರಾಜಕೀಯ ಜಾಗೃತಿ ಮತ್ತು ಬೇಡಿಕೆಗಳ ಕಾರಣವಾಗಿ ೧೯೨೪ರಲ್ಲಿ ಶಿಫಾರಸಿನ ಕೌನ್ಸಿಲೊಂದು ಸ್ಥಾಪಿಸಲ್ಪಟ್ಟಿತು. ಆ ವರೆಗೆ ಉಳಿಕೆಯವೆಲ್ಲ ಕೇಂದ್ರದ ಬೊಕ್ಕಸಕ್ಕೆ ಸೇರಿಸಲ್ಪಟ್ಟು ಶಿಲ್ಕಿಲ್ಲದೆ ಕೊಂಡೊಯ್ಯಲಾಗುತ್ತಿತ್ತು. ಇಂದು ಕೊಡಗಿನ ಉಳಿತಾಯವು ೫೦ ಲಕ್ಷವನ್ನು ಮೀರಿದೆ. ಕಳೆದ ಕೆಲವು ವರ್ಷಗಳ ಸರಾಸರಿ ವರಿ ಕೊಡಗಿನ ವಾರ್ಷಿಕ ಉತ್ಪತ್ತಿಯು ೫೦ ಲಕ್ಷವಿದ್ದು ಖರ್ಚು ೩೫ ಲಕ್ಷವಾಗಿದೆ. ಕೊಡಗಿನ ಆರ್ಥಿಕ ಸ್ಥಿತಿಯು ಹಸನ್ನು ಬಲಗೊಳ್ಳುವ ಸಾಧ್ಯತೆ ಇದೆ. ವ್ಯವಸಾಯ ಆದಾಯ ತೆರಿಗೆ, ಮಾರಾಟ ತೆರಿಗೆ, ಸೆಂಟ್ರಲ್ ಎಕ್ಸೈಸ್ ಉತ್ಪತ್ತಿಯು ಮತ್ತು ಆದಾಯ ತೆರಿಗೆಯ ಅಂಶಗಳು ಇವಲ್ಲದೆ ಆದಾಯದ ಮಾರ್ಗಗಳು. ಇಂಡಿಯಾ ಸರಕಾರವು ಪರಿಶೀಲಿಸುತ್ತಿರುವ ವಿದ್ಯುಚ್ಛಕ್ತಿಯಿಂದ ಲಾಭವಾಗಬಹುದಲ್ಲದೆ ಗ್ರಾಮಕೈಗಾರಿಕೆಗಳಿಗೆ ಉತ್ತೇಜನ ದೊರೆತು ದೇಶದ ಉತ್ಪತ್ತಿ ಹೆಚ್ಚುವದು. ಯೋಗ್ಯ ರೀತಿಯ ಆಡಳಿತ ಮಾರ್ಗದಿಂದ ಪಡೆಯಲು ಶಕ್ಯವಾಗುವದು.

ಬ್ರಿಟಿಷರ ಅಸ್ತಿತ್ವದ ಮೊದಲು ಕೊಡಗಿನಲ್ಲಿ ಶಿಸ್ತಿನ ಸಹ ಪರಸ್ಪರ ವ್ಯಕ್ತಿಯು ಗಾಢ ಜೀವನವು ಸಂಬಂಧಿತ್ತು. ಕುಟುಂಬದ ಪ್ರತಿ ಸದಸ್ಯನೂ ಕುಟುಂಬಕ್ಕಾಗಿ, ಪ್ರತಿ ಕುಟುಂಬವು ಗ್ರಾಮ ಸಾಮೂಹಿಕ ಜೀವನಕ್ಕಾಗಿ ದುಡಿಯುತ್ತಿದ್ದವು. ಜಾತಿ ಮತಗಳ ಬೇಧವಿಲ್ಲದೆ ಪ್ರತಿ ಕುಟುಂಬಕ್ಕೂ ಗ್ರಾಮದ ಸಾಮೂಹಿಕ ಹಿತ ದೃಷ್ಟಿಯಿಂದ ಒಂದೊಂದು ಜವಾಬ್ದಾರಿ ಕೊಡಲ್ಪಟ್ಟಿತ್ತು. ಗ್ರಾಮದ ಹಬ್ಬಗಳ, ಮದುವೆ, ಶವಸಂಸ್ಕಾರ ವ್ಯಾಪಾರಗಳ? ವ್ಯವಸಾಯವೂ ಕೂಡ ಸಂಘ ಬುದ್ಧಿಯಿಂದ ನಡೆಸಲ್ಪಡುತ್ತಿತ್ತು. ಗ್ರಾಮದ ಪ್ರತಿಯೊಂದು ಕೆಲಸದಲ್ಲಿಯೂ ಸಹಕಾರ ಬುದ್ಧಿಯು ಎದ್ದುತ್ತಿದ್ದಿತು. ಭೂಮಿಯ ಮಾಲೀಕನು ಕಾವಲಿ ಇದ್ದು ಗಂಟೆನ್ನು ಕಾಯುವಂಥ ವನೆನಿಸಿದ್ದ ಗ್ರಾಮದ ಮತ್ತು ಕಟ್ಟೆಬದವರ ಹಿತಕ್ಕಾಗಿ ಅದರ ಉತ್ಪತ್ತಿ ವಿನಿಯೋಗವಾಗುತ್ತಿತ್ತು. ದನಗಳು ಇಲ್ಲವೆ ಕೆಲಸಗಾರರ ಪ್ರಶ್ನೆಯೂ ರನ್ನೂ ಬಾಧಿಸುತ್ತಿರಲಿಲ್ಲ. ಪರಸ್ಪರ ಸಹಾಯ ಮಾಡಲು ಎಲ್ಲರೂ ತಯಾರಾಗುತ್ತಿದ್ದರು. ಶಾಂತ ರೀತಿಯ ಗ್ರಾಮ ಪಂಚಾಯತರಿಂದಲೇ ತೀರ್ಮಾನಿಸಲ್ಪಡದ ಯಾವದೇ ಜಗಳವೂ ಜರಗುತ್ತಿರಲಿಲ್ಲ. ಗ್ರಾಮದ ಬೆಳೆ ಉಳಿಸಲು ಕಾಡುಪ್ರಾಣಿಗಳ ಬೇಟೆಯೂ ಕೂಡ ಒಗ್ಗಟ್ಟಿನಿಂದ ನಡೆಸಲ್ಪಡುತಿತ್ತು. ರೈತರು ಈಗ ಸ್ವದೃಷ್ಟಿಯವರು ಸಂಪನ್ನರೂ, ನಾಗರೀಕರೂ ಆಗಿದ್ದಿದ್ದರೆ ಅವರು ಶಾಂತಿ ಸುಖದಿಂದಿದ್ದರು. ಈ ನಡವಳಿಗಳಿಗೆ ಬ್ರಿಟಿಷ ಆಡಳಿತ ಕ್ರಮವು ತಡೆಯಾಯಿತು. ಆದರೆ ಇತರ ಪ್ರಾಂತಗಳಂತೆ ಕೊಡಗಿನಲ್ಲಿ ಇದು ಸರ್ವನಾಶವಾಗದೆ ಹಿಂದಿನ ಆಡಳಿತ ಕ್ರಮವು ಇನ್ನೂ ನಿರ್ಜೀವವಾಗಿಲ್ಲ.

ಕೊಡಗು ತನ್ನ ಸಾಂಸ್ಕೃತಿಕ ಮಹತ್ವದಿಂದ ಶಾಂತಿಯ ಜೀವನಕ್ಕೂ ಪ್ರಖ್ಯಾತವಾದುದು. ಅದು ಕೋಮುವಾದ ಭಾವನೆಯಿಂದ ನಿರ್ಲಿಪ್ತವಾಗಿದ್ದು, ಉಗ್ರವಾದಿಗಳ ಪ್ರಭಾವವೂ ಅಲ್ಲಿಲ್ಲ. ಆರ್ಮ್ಸ್ ಆಕ್ಟಿನಿಂದ ವಿನಾಯಿತಿ ಇದ್ದು ಜನರು ಕೋವಿಯನ್ನು ನಿರಂತರವಾಗಿ ಉಪಯೋಗಿಸಿದರೂ ಕ್ರಿಮಿನಲ್ ಕಕ್ಷಿಗಳು ಬಹು ಕಡಿಮೆ. ಅತ್ಯಗ್ರ

ಆಗರ್‌ಲಾವಾ ಮತ್ತು ಪ್ರೊ. ಕುಮಾರಪ್ಪರವರಂಥವರಿಗೆ ಗ್ರಾಮ ಜೀವನಗಳ ಪರಿಶೀಲನೆ ನಡೆಸಲು ಕೊಡಗು ಆದರ್ಶ ಸ್ಥಳವಾಗಿದೆ.

ಕೊಡಗನ್ನು ಪ್ರತ್ಯೇಕ ಆಡಳಿತ ಘಟಕವಾಗಿಟ್ಟರೆ ಮಾತ್ರ, ತನ್ನ ಗ್ರಾಮ ಕೌಟುಂಬಿಕ ಜೀವನಕ್ಕೆ ಚೇತನ ದೊರೆತು ಹಿಂದಿನ ಧ್ಯೇಯವಾದ ಸಮಾನತೆ, ಸಾಮಾಜಿಕ ನ್ಯಾಯದರ್ಶನದ ತತ್ವಗಳ ಮೇಲೆ ಗ್ರಾಮಗಳ ಪುನರುಜ್ಜೀವನವಾಗಿ ಭಾರತದ ಉದ್ಧಾರಕ್ಕೂ, ಜಗತ್ತಿನ ಶಾಶ್ವತ ಶಾಂತಿಗೂ ವಿಕೇಂದ್ರೀಕೃತ ಆಡಳಿತ ಕ್ರಮವೇ ಹಿತಕರ ಎಂಬುದನ್ನು ತೋರಿಸುವ ಅನುಭವ ದೊರೆಯಬಹುದೆಂದೂ ಕೊಡಗಿನ ಜನರು ಆಶಿಸುತ್ತಾರೆ.

ರಾಷ್ಟ್ರಪಿತ ಮಹಾತ್ಮಾಗಾಂಧೀಯವರು ಭಾರತಕ್ಕೆ ಸ್ವಾತಂತ್ರ್ಯವನ್ನು ಒದಗಿಸಿ ಭಾರತದಲ್ಲಿ ರಾಮರಾಜ್ಯವನ್ನು ಸ್ಥಾಪಿಸುವ ಮಹಾ ಜವಾಬ್ದಾರಿಯನ್ನು ಅವರ ಹಿಂಬಾಲಕರ ಮೇಲೆ ಬಿಟ್ಟಿರುವರು. ನಮ್ಮ ಮೇಲೆ ಹೊರಿಸಿರುವ ಈ ಜವಾಬ್ದಾರಿಯನ್ನು ನಾವು ಎಷ್ಟರ ಮಟ್ಟಿಗೆ ನಿರ್ವಹಿಸುತ್ತೇವೆ ಎಂಬುದರ ನಮ್ಮ ಆತ್ಮ ಪರೀಕ್ಷೆಯನ್ನು ನಾವು ಮಾಡಿಕೊಳ್ಳಬೇಕಾಗಿದೆ. ಗ್ರಾಮ ಪಂಚಾಯತ ತಳಹದಿಯ ಮೇಲೆ ನಿಲ್ಲುವ ಅವರ ಕಲ್ಪನೆಯ ರಾಮರಾಜ್ಯದ ಬಗ್ಗೆ ನಾವೇನು ಮಾಡಿರುವೆವು? ಇಂದೂ ಕೂಡ ಕೆಲವೆಡೆ ಅಸ್ತಿತ್ವದಲ್ಲಿರುವ ಗ್ರಾಮ ಯೋಜನೆಯಲ್ಲಿಯೇ ಹಿಂದೂದೇಶದ ಶ್ರೇಯಸ್ಸು ಇದೆ. ಆಹಾರ ಉತ್ಪನ್ನ ಮಾಡುವ ರಾಷ್ಟ್ರದ ಬೆನ್ನೆಲುಬಾದ ರೈತರ ಹಿತದೃಷ್ಟಿಯಿಂದ ಗ್ರಾಮ ಪಂಚಾಯತ ರಾಜ್ಯಕ್ರಮವು ರೈತರ ಸರಕಾರ ಸ್ಥಾಪಿಸಲ್ಪಡಬೇಕು. ವ್ಯಕ್ತಿಗತ ಪ್ರಯತ್ನ ಮತ್ತು ಸಾಮೂಹಿಕ ಸಹಕಾರದ ತಳಹದಿಯ ಮೇಲೆ ಆಶೀತಿಯು ಒಂದು ಸರಕಾರವನ್ನು ಕಟ್ಟಿಕೊಡುವದರಲ್ಲಿ ಕೊಡಗಿನ ಜನರಿಗೆ ನಮ್ಮ ಮುಂದಾಳುಗಳು ಅನುಮಾಡಿ ಕೊಡುವರೆಂದು ಆಶಿಸೋಣ!

ಉದ್ಧರೇ ಆತ್ಮನಾತ್ಮಾನಂ.

ಲೇ:-ಶ್ರೀ ನಾಯಕ ವಿ

"Let every man have equal liberty, to find his own level Head as high as you please, but always on the common ground; Never upon any body's Shoulder or necks even though he be weak or willing"

—Rama thirth

ತನ್ನ ಹಕ್ಕಿನ ಅಂತಸ್ಥನ್ನು ಪಡೆಯಲು ಪ್ರತಿಯೊಬ್ಬನಿಗೂ ಸಮಾನ ಸ್ವಾತಂತ್ರ್ಯವಿರಲಿ. ನೀವು ಇಷ್ಟಬಿದ್ದಷ್ಟು ಎತ್ತರದಲ್ಲಿ ತಲೆ ಇರಲಿ ಆದರೆ ಕಾಲು ಮಾತ್ರ ಅವರು ನಿರ್ಬಲರಾಗಲಿ, ಆಶಿಸುವವರಾಗಲಿ, ಇನ್ನೊಬ್ಬರ ಕತ್ತಿಗೆ ಯಾ ಭುಜದ ಮೇಲಿರದೆ ಸಾಮಾನ್ಯ ನೆಲದ ಮೇಲಿರಲಿ

—ರಾಮ ತೀರ್ಥ

ಜಗತ್ತಿನಲ್ಲಿ ಇಂದು ಎಲ್ಲೆಡೆಯೂ ಅಶಾಂತಿ ಕಾಣುತ್ತಿದೆ ಸುಭಿಕ್ಷ ಬರಲಿ ಎಂದು ಪ್ರಯತ್ನ ನಡೆಯುತ್ತಿದ್ದರೂ ಎಲ್ಲೂ ಸುಭಿಕ್ಷವಿಲ್ಲ ಶಾಂತಿ ಬೇಕೆಂದು ಪ್ರಾರ್ಥಿಸುತ್ತಿದ್ದರೂ ಎಲ್ಲೂ ಶಾಂತಿ ಇಲ್ಲ ಸುಖ ದೊರೆಯಲೆಂದು ಕಾತರಿಸುತ್ತಿದ್ದರೂ ಯಾರಿಗೂ ಸುಖವಿಲ್ಲ ಹೀಗಾಗಲು ಕಾರಣವೇನಿರಬಹುದು? ಸ್ವಾಮಿ ರಾಮತೀರ್ಥರ ಮೇಲಿನ ವಾಕ್ಯದ ಅರ್ಥ ಜನತೆಗೆ ತಿಳಿದಿಲ್ಲ!

ಹುಟ್ಟುವಾಗ ಮಾನವ ಜಾತಿ ಒಂದೇ ಎಂಬ ದಿವ್ಯ ಸಾಮ್ಯತ್ವ ಹುಟ್ಟುತ್ತಿದೆ ಅವನ ರಾಜ ಮನೆತನದವನಾಗಲಿ, ಸಿರಿವಂತನಾಗಲಿ ಹುಟ್ಟುವಾಗ ಕಡು ಬಡತನ ಅಂಗುವಿನಂತೆಯೇ ನಗ್ನನಾಗಿ, ನಿಸ್ಸಹಾಯಕನಾಗಿ ಅಳುತ್ತ ಹುಟ್ಟುತ್ತಾನೆ ಆದರೆ ಹುಟ್ಟಿದ ನಂತರ ಅವರವರಿಗೆ ತಕ್ಕಂತೆ ಅವರವರ ಸಿರಿತನ, ಮನೆತನಗಳನ್ನು ಅನುಸರಿಸಿ ಬೆಳೆಯುವಾಗ ಬಡತನದಲ್ಲಿ ಹುಟ್ಟಿದ ವ್ಯಕ್ತಿಯು ಬೆಳೆದಾಗ ತಾನು ಮೇಲು ಇತರರು ಕೀಳು, ತಾನು ಧನಿ, ಇತರರು ಕೆಲಸಗಾರರು, ತಾನು ಅಧಿಕಾರ ನಡೆಸುವವ, ಇತರರು ಅದರಂತೆ ನಡೆಯಬೇಕಾದವರು ಎಂಬ ಭೇದ ಭಾವ ಬೆಳೆಯುತ್ತದೆ. ಈ ಭೇದವೇ ವ್ಯಕ್ತಿ ವ್ಯಕ್ತಿಗಳೊಳಗೆ ಕಲಹಕ್ಕೆ ಕಾರಣವಾಗುತ್ತದೆ ವ್ಯಕ್ತಿಗಳಿಗೆ ಅನ್ವಯಿಸುವ ಈ ತತ್ವವೇ ಜನಾಂಗಗಳಿಗೂ ರಾಷ್ಟ್ರಗಳಿಗೂ ಅನ್ವಯಿಸುತ್ತದೆ ಜರ್ಮನರು ತಾವು ಆರ್ಯರೆಂದೂ, ಉಳಿದವರು ಕೀಳೆಂದೂ ಭಾವಿಸಿ ವರ್ತಿಸಿದುದೇ ದ್ವಿತೀಯ ಮಹಾಯುದ್ಧಕ್ಕೆ ಕಾರಣವಾಯಿತು ಈ ರೀತಿಯ ಭೇದ ಭಾವವೇ ಜಗತ್ತಿನ ಇಂದಿನ ಅಶಾಂತಿಗೆ ಕಾರಣವಾಗಿದೆ.

ಇಂದು ಜನತೆಯು ದೃಷ್ಟಿಯೇ ಬದಲಾಗಿ ಹೋಗಿದೆ ಮನೆತನದ, ದುಡ್ಡಿನ, ದೊಡ್ಡಸ್ತಿಕೆ ಅಡ್ಡಿಬಂದಿದೆ. ಆದ್ದರಿಂದ ಎಲ್ಲರೂ ನೀತಿ ತಪ್ಪಿ ದುಡ್ಡಿನ ಪೂಜೆಗೆ ಆರಂಭಿಸಿದ್ದಾರೆ. ನಿರ್ಬಲರನ್ನು, ತಿಳಿಯದವರನ್ನು ಸುಲಿಗೆ ಮಾಡಿದರೆ ಅದು ಮೋಸವಲ್ಲ; ವ್ಯಾಪಾರವೆಂಬ ಗಂಭೀರ ಹೆಸರನ್ನು ಪಡೆಯುತ್ತದೆ ಇನ್ನೊಬ್ಬನನ್ನು ದುಡಿಸಿ ಆತನ ಬೆವರಿನ ಫಲದಿಂದ ತಾನು ಜೀವಿಸಿದರೆ ಅದು ಅನಿವಾರ್ಯವಾದ ಆಳು ಮತ್ತು ಒಡೆಯನ ಸಂಬಂಧವೆನಿಸುತ್ತದೆ ನಿರ್ಬಲರನ್ನು ತುಳಿದು, ತಿಳಿಯದವರನ್ನು ಕೆಳಗೆ ಹಾಕಿ ಅವರ ಮೇಲೆ ನಿಂತು ತಲೆ ಎತ್ತಿ ಹೆಗ್ಗಳಿಕೆಯಿಂದ ಬದುಕುವ ಪ್ರಯತ್ನ ಯೋಗ್ಯ ಜೀವನವೆನಿಸುತ್ತದೆ. ವ್ಯಕ್ತಿಗಳು ತಮ್ಮ ತಮ್ಮೊಳಗೆ ಈ ನೀತಿಯನ್ನು ಅನುಸರಿಸಿ ಸಮಾಜವು ಕಾಳಗದ ಕಣವಾಗಿದ್ದರೆ, ರಾಷ್ಟ್ರರಾಷ್ಟ್ರಗಳು ಇದೇ ಪಥವನ್ನು ಅನುಸರಿಸಿ ಜಗತ್ತೇ ಅಶಾಂತಿಯ ಆಗರವಾಗಿದೆ

ದೂರದ ಮಾತೇಕೆ? ನಮ್ಮ ಕೊಡಗಿನ ರಾಜಕೀಯ ಮತ್ತಿತರ ರಂಗಗಳನ್ನು ಅವಲೋಕಿಸಿದರೂ ಇದೇ ಅಭಿಪ್ರಾಯ ಎತ್ತಿ ತೋರುತ್ತದೆ ಕೊಡಗಿನ ಭವಿಷ್ಯದ ಒಂದು ವಿಚಾರವನ್ನು ತೆಗೆದುಕೊಂಡು ಆಸಕ್ತ ದೃಷ್ಟಿಯನ್ನು ಬಿಟ್ಟು ನಿರ್ಲಿಪ್ತ ಭಾವದಿಂದ ನೋಡಿದರೆ ಮೇಲಿನ ಛಾಯೆಯೇ ಅದರಲ್ಲಿಯೂ ತೋರುವದು. ಕೊಡಗನ್ನು ಪ್ರತ್ಯೇಕ ಇಟ್ಟುಕೊಳ್ಳಬೇಕೆನ್ನುವ ಹಲವರಲ್ಲಿ ಕೊಡಗು ಫಲವತ್ತಾದ ದೇಶ, ಕೊಡಗಿನ ಜನರು ಸುಸಂಸ್ಕೃತರು, ಅವರ ಜೀವನ ಮಟ್ಟ ಉತ್ತಮವಾಗಿದೆ ಕೊಡಗು ಕೊಡಗಿನವರ ರಾಜ್ಯ ಅನಾದಿಕಾಲದಿಂದ ಉಳಿದು ಬಂದ ಈ ವ್ಯಕ್ತಿತ್ವ ಹಾಗೆಯೇ ಉಳಿಯಬೇಕು ಎಂದು ನನ್ನಂತೆ ನಂಬುವವರು ಇದ್ದಾರೆ ಸಂಯೋಜನೆಯಾದರೆ ಉತ್ತಮ ಆಡಳಿತ ಬಂದೀತು, ಬೃಹದ್ರಾಷ್ಟ್ರದ ರಚನೆಗೆ ಅನುಮಾಡಿದಂತಾದೀತು, ಇಂದಿನ ನಮ್ಮ ಸುಖ, ಸಂಪದ ಮೊದಲಾದುವನ್ನು ಇತರ ದುಃಖಿತರೊಡನೆಯೂ ಹಂಚಿಕೊಳ್ಳುವದು ಯೋಗ್ಯವೆಂದು ಬಗೆಯುವ ಸಂಯೋಜನವಾದಿಗಳು ಇದ್ದರೂ ಇರಬಹುದು ಕೊಡಗು ಕೊಡವರದು ಬೇರೆಯವರು ಇಲ್ಲಿಗೆ ಬಂದವರು ಕೊಡಗು ಕೊಡವರ ನಾಡಾಗಿಯೇ ಉಳಿಯಬೇಕು ಎನ್ನುವ ಸಂಕೀರ್ಣ ದೃಷ್ಟಿಯ ಪ್ರತ್ಯೇಕವಾದಿ ಜನರೂ ಇಲ್ಲವೆನ್ನಲಾಗುವುದಿಲ್ಲ ಕೊಡವರು ಕೊಡಗಿನಲ್ಲಿ ಮುಂಬರಿದಿದ್ದಾರೆ. ಅವರು ಎಲ್ಲೆಲ್ಲೂ ಅಧಿಕಾರ ನಡೆಸುತ್ತಾರೆ ಅವರೇ ಸುಶಿಕ್ಷಿತ ಮತ್ತು ಒಗ್ಗಟ್ಟಿನ ಪಕ್ಷವಾಗಿದ್ದುಕೊಂಡು ಉಳಿದವರ ಮೇಲೇರಬೇಕಾಗುತ್ತಿದ್ದಾರೆ ಆದ್ದರಿಂದ ಬೇರೆ ದೊಡ್ಡ ಭಾಗಗಳೊಡನೆ ಸೇರಿ ಇವರನ್ನು ಅಲ್ಪ ಪಕ್ಷದವರನ್ನಾಗಿ ಮಾಡಿ ಇವರ ಹಗ್ಗಳಿಕೆಯನ್ನು ಇಳಿಸಬೇಕು ಎಂಬ ಚಿಕ್ಕ ದೃಷ್ಟಿಯ ಸಂಯೋಜನವಾದಿಗಳೂ ಇಲ್ಲವೆನ್ನಲಾಗುವುದಿಲ್ಲ ಪ್ರತ್ಯೇಕವಿದ್ದರೆ ನಮ್ಮ ಕೈಗೆ ಅಧಿಕಾರ ಬಂದೀತು, ಸಂಯೋಜನೆಯಾದರೆ ನಾವು ಕೆಳಗೆ ಬೀಳಬಹುದೆಂಬ ಸ್ವಾರ್ಥ ದೃಷ್ಟಿಯವರೂ ಇಕ್ಕಡೆಯಲ್ಲೂ ಇಲ್ಲವೆಂದು ಹೇಳಲಾಗುವದಿಲ್ಲ ದೊಡ್ಡ ಪ್ರಾಂತದಲ್ಲಿ ನಾವು ಸಮುದ್ರಕ್ಕೆ ಹುಳಿ ಹಾಕಿದಂತಾದೇವೆಂದು ಕೆಲವರು, ಭಾವಿಸುತ್ತಿರಲೂಬಹುದು

ಕೊಡಗಿನ ಭವಿಷ್ಯದ ಬಗ್ಗೆ ಏನೇ ಅಭಿಪ್ರಾಯ ಇಕ್ಕಡೆಯವರಲ್ಲಿದ್ದರೂ ಜನತೆಯಿಂದ ದೇಶ ಹಿರಿದಲ್ಲದೆ ದೇಶದಿಂದ ಜನರು ಹಿರಿದಲ್ಲ. ಕೊಡಗು ಕೆಲವರು ಹೇಳಿಕೊಳ್ಳುವಂತೆ ಸರಿ ಹೊರೆಯುವರೆಗೆ ಆದರ್ಶವಾಗಿ ಒಂದು ವ್ಯಕ್ತಿತ್ವವನ್ನು ಪಡೆದು ಘನತೆಯ ಪಥದಲ್ಲಿದ್ದರೆ ಅದು ಕೊಡಗಿನ ಪ್ರಜಾ ಜನರ ವ್ಯಕ್ತಿತ್ವ, ಘನತೆಗಳ ಕಾರಣದಿಂದಲ್ಲದೆ ಕೊಡಗಿನ ಎತ್ತರದ ಪರ್ವತಗಳಿಂದಾಗಲೀ, ಸುಂದರ ಬೆಟ್ಟ ಗುಡ್ಡಗಳಿಂದಾಗಲೀ ಅಲ್ಲ ದೇಶದ ವಾಯುಗುಣ, ದೇಶದ ನೈಸರ್ಗಿಕ ಸಂಪತ್ತು ಜನತೆಯ ಸ್ವಭಾವದ ಮೇಲೆ, ಶರೀರದ ಮೇಲೆ ತಮ್ಮ ಪ್ರಭಾವವನ್ನು ಬೀರುವದೆಂಬುದು ನಿಜವೆನ್ನಬಹುದಾದರೂ ಉತ್ತಮ ಪ್ರಜೆಗಳಿಂದ, ನೀತಿವಂತ ಜನರಿಂದ, ಕಾರ್ಯಕ್ಷತ್ಪರ ಜನಾಂಗದಿಂದ ದೇಶವು ಕೀರ್ತಿಯನ್ನು ಪಡೆಯುವದು ದೇಶವು ಸಂಪತ್ತಿನಿಂದ ಕೂಡಿದ್ದು ಅದರ ಉಪಯೋಗ ಮಾಡಿಕೊಳ್ಳಲರಿಯದ ಜನರಿದ್ದರೆ ದೇಶಕ್ಕೆ ಘನತೆ ಬಾರದು ಆದ್ದರಿಂದ ಆಯಾಯ ದೇಶದ ಉತ್ಕರ್ಷ ಯಾ ಅಧಃಪತನ ಆಯಾಯ ಭಾಗದ ಜನರನ್ನು ಅವಲಂಬಿಸಿದೆ

ಕೊಡಗನ್ನು ಪ್ರತ್ಯೇಕವಿಡಬೇಕೆನ್ನುವವರಲ್ಲಿ ಕೆಲವರು ಯೋಗ್ಯ ದೃಷ್ಟಿಯವರಾಗಿದ್ದಾರೆಂದು ನನ್ನ ಅನುಭವಕ್ಕೆ ಬಂದಿದೆ ಅವರ ದೃಷ್ಟಿಯಲ್ಲಿ ಕೊಡಗನ್ನು ಪ್ರತ್ಯೇಕವಿಡುವದು ಕೊಡವರ ಇಲ್ಲವೇ ಬೇರೆ ಯಾವದೇ ಕೋಮಿನ ಹಿತಕ್ಕಾಗಿ ಅಲ್ಲ ಕೇಂದ್ರ ಸರಕಾರವಿರಲಿ, ರೂಪುಗೊಳ್ಳುವ ಕನ್ನಡನಾಡಿನ ಸರಕಾರವಾಗಲೀ ತನ್ನ ಆಡಳಿತದೊಳಗಿನ ಪ್ರತಿ ಭಾಗಕ್ಕೂ ಲಕ್ಷ್ಯ ಕೊಡುವ ದೃಷ್ಟಿ ಇಡಲಾಗದು ದೇಶವು ವಿಶಾಲವಾದಷ್ಟು ಆಡಳಿತ ಶಿಥಿಲವಾಗುತ್ತದೆ. ಒಂದು ಕೇಂದ್ರಕ್ಕೆ ಎಲ್ಲಾ ಭಾಗಗಳೂ ಕಟ್ಟಲ್ಪಡುವದರಿಂದ ಈ ವಿವಿಧ ಭಾಗಗಳ ಅಭಿವೃದ್ಧಿ ಆಗುವದು ಕಷ್ಟ. ಎಲ್ಲಾ ಭಾಗಗಳಿಗೂ ಒಂದೇ ರೀತಿಯ ಆಡಳಿತ ನಿಬಂಧನೆಗಳನ್ನು ಅನ್ವಯಿಸುವದರಿಂದ ಪ್ರಗತಿಯು ಸಾಧ್ಯವಾದಷ್ಟು ಆಗಬೇಕಾಗುವದು. ಬದಲು ಚಿಕ್ಕ ಚಿಕ್ಕ ಆಡಳಿತ ಘಟಕಗಳಾಗಿ ಅವುಗಳ ಆಡಳಿತ ಜವಾಬ್ದಾರಿ ಅವುಗಳ ಕೈಯಲ್ಲಿದ್ದು ಅವುಗಳ ಪ್ರಗತಿಯ ಬಗ್ಗೆ ಅವು ನಿರಾತಂಕವಾಗಿ ದುಡಿಯುವ ಅನುವಿದ್ದರೆ ಅದರಿಂದ ಘಟಕಗಳಿಗೂ ತತ್ಪರಿಣಾಮವಾಗಿ ಸಮಗ್ರ ಒಕ್ಕೂಟಕ್ಕೂ ಹಿತವೆನಿಸಿದಿರದು. ಈ ದೃಷ್ಟಿಯಿಂದ ಕೊಡಗು ಪ್ರತ್ಯೇಕವಿರಬೇಕೆನ್ನುವ ಕೆಲವರ ವಾದವು ಆಲೋಚನೆಗೆ ಡೆ ಕೊಡುವಷ್ಟು ತಿರುಳಿದೆ.

ಹೇಗಿದ್ದರೂ ಸಂಯೋಜನೆ ಆಗಲೀ, ಪ್ರತ್ಯೇಕವಿರಲೀ ತಮ್ಮ ನೀತಿ, ನಡತೆ, ವ್ಯಕ್ತಿತ್ವದ ಮೇಲೆ ವಿಶ್ವಾಸವಿರುವರಿಗೆ ಯಾವ ಹಾನಿಯೂ ಆಗದು ತಮ್ಮಲ್ಲಿ ನಿಜವಾದ ಯೋಗ್ಯತೆ ಇಲ್ಲದಿದ್ದರೂ ಇತರ ಹಿಂದುಳಿದವರ ಮೇಲೇರಿ ತಾವು ನಾಗರೀಕರು, ಉತ್ತಮ ಸಂಸ್ಕೃತಿಯವರು ಎಂದು ಕೊಡವ ಸಮಾಜವು ಎನಿಸಿಕೊಂಡಿದ್ದರೆ ಈ ತೋರಿಕೆಯ, ಯಾ ನಿಜವಲ್ಲದ ಗೌರವ ಎಂದಾದರೂ ಹೋಗಲೇಬೇಕು ಶೀಘ್ರ ಹೋದಷ್ಟು ಹಿತ ಬದಲು ನಿಜವಾಗಿಯೂ ಕೊಡವರಲ್ಲಿ ಯೋಗ್ಯತೆಯಿದ್ದರೆ ಸಂಯೋಜನೆಯಿಂದ ಅವರು ಹೆಚ್ಚಿನ ಲಾಭ ಪಡೆಯುವರು ಹಿಂದೂದೇಶದಲ್ಲಿರುವ ಕೆಲವೇ ಸಾವಿರವಿರುವ ಪಾರ್ಸಿಗಳಂತೆ ಅವರು ಹಿಂದೂದೇಶದ ಉದ್ಯಮಗಳಲ್ಲಿ ತಮ್ಮ ಪರ್ತಸ್ಸನ್ನು ಬೀರುವರು. ಆದ್ದರಿಂದ ಸಂಯೋಜನೆಯಿಂದ ಕೊಡವರಿಗೆ ಹಾನಿ ಇಲ್ಲ ಕೊಡವರು ಕೊಡಗು ಪ್ರತ್ಯೇಕವಿರಬೇಕೆನ್ನುವಾಗ ಕೊಡವರ ಹಿತದೃಷ್ಟಿಯಿಂದಲ್ಲ, ಬದಲು ಕೊಡಗಿನವರೆಲ್ಲರ ಸಾಮೂಹಿಕ ಹಿತ ದೃಷ್ಟಿಯಿಂದ ಎಂದು ಕಲವು ಪ್ರತ್ಯೇಕವಾದಿಗಳು ಹೇಳುತ್ತಿದ್ದರೆ ಅದು ತೋರಿಕೆಯ ಬಾಯಿ ಚಪಲವೆಂದು ನನಗನಿಸದು

ನಾನು ಕೊಡವ ಮತದವನಲ್ಲದಿದ್ದರೂ ಕೊಡವರ ಒಡನಾಡಿ ಅವರ ರೀತಿ ನೀತಿಗಳನ್ನು ತಿಳಿದವನು ಕೊಡವರ ಆಶ್ರಯದಲ್ಲೇ ಅನೇಕ ವರ್ಷ ಬೆಳೆದವನು ನನ್ನ ಅನುಭವದ ಮಟ್ಟಿಗೆ ಹೇಳುವದಾದರೆ ಕೊಡವರಲ್ಲಿ ಸಮನ್ವಯ ದೃಷ್ಟಿ, ವಿಶಾಲವಾದ ಮನೋಭಾವ, ಉದಾರತೆ, ಪರಸ್ಪರ ಹೊಂದಿಕೊಳ್ಳುವ ಗುಣ ಹೆಚ್ಚಿದೆ ಬೇರೆ ಕೋಮಿನಲ್ಲಿ ಕೆಲವರು ವಿರಾಸಗೊಳ್ಳಲು ಅನುವಿಲ್ಲದ ಹಿಂದೆ ಬಿದ್ದಿರಬಹುದು ಇವರಷ್ಟೇ ವಿಕಾಸಗೊಂಡ ಕೋಮಿನವರಾಗಿ ಇವರು ನೀತಿ ನಡತೆಯಲ್ಲಿ ಆದರ್ಶರು ಘನತೆ, ಹಿರಿಮೆಗಳಿರುವಲ್ಲಿ ಅವನ್ನು ಹೊಗಳಬೇಕಾದುದು ಧರ್ಮ. ವಿಕೇಂದ್ರೀಕೃತ ರಾಜ್ಯಭಾರ ಪದ್ಧತಿ ಅತ್ಯುತ್ತಮವಾದುದು. ಆದರಂತೆ ಕೊಡಗು ಪ್ರತ್ಯೇಕವಿದ್ದು ಇದರಿಂದ ಆಡಳಿತ ನಡೆದರೆ ಕೊಡಗಿನ ಹಿರಿಮೆ ಹೆಚ್ಚಬಹುದು ಕೊಡಗು ಸಂಯೋಜನೆಯಾದರೆ ಕೊಡವರಿಗೆ ಪರಿಸ್ಥಿತಿ ದೂರತೆ. ಕೊಡವರು ಹಿರಿಯ ಘನತೆಯನ್ನು ಒಡೆಯುವರಿಂದು.

ಆದ್ದರಿಂದ ಸಂಯೋಜನೆಯಾಗಲೀ, ದೇಶವು ಪ್ರತ್ಯೇಕವಿರಲಿ ಅದರಿಂದ ಅವರ ಉದ್ಧಾರವಾಗಲೀ ಕೇಡಾಗಲೀ ಬೇರೆ ಯಾರೂ ಸಾಧಿಸಿಕೊಡಲು ಸಾಧ್ಯವಿಲ್ಲ. ವ್ಯಕ್ತಿಯ ಉದ್ಧಾರವು ವ್ಯಕ್ತಿಯಿಂದಲೇ ಆಗಬೇಕು. ಜನಾಂಗದ ಉದ್ಧಾರ ಆ ಜನಾಂಗದಿಂದಲೇ ಆಗಬೇಕು ಆದ್ದರಿಂದ ಯಾವ ಸಂಯೋಜನೆ ವಿಭಜನೆಗಳಾದರೂ ಜನತೆಯು ತಮ್ಮ ಉದ್ಧಾರ ತಾವು ಮಾಡಿಕೊಳ್ಳಲೆತ್ನಿಸದಿದ್ದರೆ ಯಾವ ಪ್ರಾಂತ ರಚನೆಯಿಂದಲೂ ಪ್ರಯೋಜನವಿಲ್ಲ. ಜನತೆಯ ಉದ್ಧಾರವಾಗಬೇಕಾದರೆ ಆಡಳಿತ ಜವಾಬ್ದಾರಿ ಜನತೆಯ ಕೈಗೆ ಬರಬೇಕು. ಆದ್ದರಿಂದ ಆ ರಂಗದಲ್ಲಿ ಪ್ರಯತ್ನ ನಡೆಯಲಿ

ಈ ವಾರದ ಕಥೆ.

ಹಿಂದಿನ ನೆನಪು.

ಲೇಖಕಿ:- ಕುಮಾರಿ ಪಿ. ಐ ಸೀತಾ, ಕಾನ್ವೆಂಟ್, ಮಡಿಕೇರಿ

ಘಣ್ ಘಣ್ ಎಂಬೊಡನೆ ಶಾಲಾ ಮಕ್ಕಳು ಹತ್ತು ದಿಕ್ಕಿನಿಂದಲೂ ಬಂದು ಸೇರಿ ಪ್ರಾರ್ಥನೆ ಮುಗಿಸಿ ಅವರವರ ದರ್ಜೆಗೆ ತೆರಳಿದರು. ನಾವು ನಮ್ಮ ತರಗತಿಗೆ ಬಂದೆವು. ಯಾವಾಗಲೂ ತಡವಾಗಿ ಬರುತ್ತಿದ್ದ ಸೀತವ್ವ ಅಂದೂ ಬಂದಿರಲಿಲ್ಲ. ನಮ್ಮ ಕನ್ನಡ 'ಟೀಚರ್' ಗೆ ಆಕೆಯನ್ನು ಕಂಡರೆ ತಾತ್ಸಾರ. 'ಪಾಠ ನು ಕಲಿಯುವುದಿಲ್ಲ; ಶಾಲೆಗೆ ಯಾವಾಗಲೂ ಹೊತ್ತಾಗಿ ಬರುತ್ತಾಳೆ; ಬಂದರೂ ಆಯಿತು; ಬಾರದಿದ್ದರೂ ಆಯಿತು. ಇಂಥವರೇಕೆ ಬರಬೇಕು?' ಎಂದೇ ಅವರ ಕೂಗು.

ಸೀತವ್ವನ ಮನೆ ಶಾಲೆಯಿಂದ ನಾಲ್ಕು ಮೈಲು ದೂರದಲ್ಲಿ. ಮನೆಯಲ್ಲಿ ಪ್ರೀತಿಯ ತಂದೆ ಮತ್ತು ಮಲತಾಯಿ. ಮಲತಾಯಿ ಎಂದ ಮೇಲೆ ಹೇಳಬೇಕೆ? ಮನೆ ಕೆಲಸವೆಲ್ಲ ಸೀತವ್ವನ ಪಾಲಿಗೆ. ಮನೆ ಕೆಲಸ ಮುಗಿಸಿ ಶಾಲೆಗೆ ಬರಬೇಕಾದರೆ ಯಾವಾಗಲೂ ಕನ್ನಡ 'ಟೀಚರ್' ಅರ್ಧ ಆಗುತಿತ್ತು.

ಎಂದಿನಂತೆ ಅಂದೂ ಸೀತವ್ವ ತಡವಾಗಿ ಬಂದಳು. ಟೀಚರು ಹೇಳಿದರು, 'ನೋಡು ಸೀತವ್ವ, ನೀನು ಕ್ಲಾಸಿಗೆ ಈ ದಿನ ಕಾಲು ಹಾಕಬೇಕಾದರೆ 'ಮೇಡಂ' ಕೈಯಿಂದ ಚೀಟಿ ತರಬೇಕು.'

ಪಾಪ! ಕನ್ನಡ ಮಾತಾಡುವುದೇ ಕಷ್ಟವಾದ ಸೀತವ್ವ 'ಮೇಡಂ' ಜೊತೆಯಲ್ಲಿ ಇಂಗ್ಲೀಷಿನಲ್ಲಿ ಹೇಗೆ ಮಾತಾಡುವಳು! ಹೇಗೂ ಆಕೆಯ ಕಂಬನಿ ದುಂಬಿದ ಕಣ್ಣನ್ನು ನೋಡಿ 'ಮೇಡಂ'ಗೂ ಕನಿಕರವಾಗಿರಬೇಕು. ಆಕೆಗೆ ಮುಂದೆ ತಡಮಾಡಬಾರದೆಂದು 'ಟೀಚರ್' ಜೊತೆಯಲ್ಲಿ ಹೇಳಿದರು.

ಸೀತವ್ವನ ಬಗ್ಗೆ ನನಗೂ ನನ್ನ ಜೊತೆಗಾತಿ ಶೀಲಳಿಗೂ ತುಂಬಾ ಮರುಕ. ಸೀತವ್ವ ನಮ್ಮ ಕಡೆಯಿಂದ ಬರುವವಳಾದ್ದರಿಂದ ಆಗಾಗ್ಗೆ ನೆಲ್ಲಿಕಾಯಿ, ಬೇರೆ ಹಣ್ಣು ಹಂಪಲುಗಳನ್ನು ತರುತ್ತಿದ್ದಳು. ನಮ್ಮೆಲ್ಲರಲ್ಲಿ ಅದನ್ನು ಹಂಚಿ ಮಕ್ಕಳನ್ನು ನೋಡಿ ಆನಂದ ಪಡುವ ತಾಯಿಯಂತೆ ಆಕೆ ಆನಂದಿಸುತ್ತಿದ್ದಳು. ಆದರೆ ಶಾಲೆಯ ಬಹು ಮಕ್ಕಳಿಗೆ ಆಕೆಯನ್ನು ಕಂಡರೆ ಅಷ್ಟು ಉತ್ತಮವಾಗಿರುತ್ತಿರಲಿಲ್ಲ. ಅದ್ದರಿಂದ ಆಕೆಯೆಂದರೆ ನಿಕೃಷ್ಟವಾಗಿರುವುದು ತಮ್ಮ ಗೌರವಕ್ಕೆ ಹಾನಿ ಎಂದು ಕೆಲವರು ಭಾವಿಸುತ್ತಿದ್ದರು. ಆದರೆ ನೆಲ್ಲಿಕಾಯಿ ತಂದ ದಿನ ಈ ಭೇದಭಾವನೆ ಎಲ್ಲರೂ ಮೇಲೆ ಬಿದ್ದು ಕಿತ್ತುಕೊಳ್ಳುತ್ತಿದ್ದರು! ಉದಾರ ಮನಸ್ಸಿನ ಸೀತವ್ವನಿಗೆ ಅವರ ಪ್ರೀತಿ, ತಾತ್ಸಾರ ಎರಡೂ ಒಂದೇ!

ಪರೀಕ್ಷೆ ಬಂತು. ಓದಲು ಸಮಯವೇ ದೊರೆಯದ ಸೀತವ್ವ ಪರೀಕ್ಷೆಯಲ್ಲಿ ಹೇಗೆ ಚೆನ್ನಾಗಿ ಮಾಡಿಯಾಳು?

[illegible] ರಜೆ ಸಿಕ್ಕಿತು. ಆ ದಿನ ಸೀತವ್ವ ನನ್ನ ಹತ್ತಿರ ಬಂದು ಹೇಳಿದಳು. "ನಿಮ್ಮ ಜೊತೆಗಾತಿಯಾಗಿ ನಾನಿನ್ನು ಬರುವುದಿಲ್ಲ. ಈ ಜನ್ಮದಲ್ಲಿ ಇನ್ನು ಶಾಲೆಗೆ ಬರುವಂತೆ ಕಾಣುವುದಿಲ್ಲ. ನನ್ನ ವಿದ್ಯೆ ಇಲ್ಲಿಗೆ ಮುಗಿಯಿತೆಂದು ತೋರುತ್ತೆ. ಹೇಗೂ ಈ ವರೆಗೆ ನನ್ನನ್ನು ಸಹನೆಯಿಂದ ಕಂಡ ನಿಮ್ಮೆಲ್ಲರಿಗೆ ಚಿರ ಋಣಿ."

'ಪರೀಕ್ಷೆ ಮುಗಿದಿದೆ. ಇಂದು ನಾವೆಲ್ಲರೂ ಸಿನಿಮಾಕ್ಕೆ ಹೋಗುವ' ನಾನೆಂದೆ. ಆಕೆ ದುಃಖದಲ್ಲಿ ಅದು ಸಾಧ್ಯವಿಲ್ಲವೆಂದು ಹೇಳಿ ಹೊರಟು ಹೋದಳು.

ಆಕೆಯನ್ನು ಕಾಣದೆ ಅನೇಕ ತಿಂಗಳುಗಳು ಕಳೆದಿದ್ದವು. ಅಂದು ನಾವು ಗಾಳಿ ವಿಹಾರಕ್ಕೆ ಹೋಗಿದ್ದಾಗ ರಸ್ತೆಯಲ್ಲಿ ಯಾರೋ ಒಬ್ಬಳು ಹೋಗುತ್ತಿದ್ದಳು. ನನಗೆ ಪಕ್ಕನೆ ಗುರುತು ಹತ್ತಲಿಲ್ಲ. ನಂತರ ತಿಳಿಯಿತು. ನನ್ನ ಜೊತೆಗಾತಿ ಸೀತವ್ವ. ಆಕೆಯನ್ನು ಸ್ನೇಹದಿಂದ ಸಮಾಚಾರ, ಮನೆಯ ಜೀವನ ನೆಲ್ಲವನ್ನು ಕೇಳಿದೆ.

"ತಂದೆಗೆ ಕಾಯಿಲೆಯಾಗಿ ಆಸ್ಪತ್ರೆಯಲ್ಲಿದ್ದಾರೆ. ಅವರನ್ನು ನೋಡುವ ಕೆಲಸ ನನ್ನದು. ಈಗ ಊಟಕ್ಕೆ ಮನೆಗೆ ಹೋಗುತ್ತಿರುವೆನು. ಪ್ರತಿ ದಿನ ಮನೆಯಿಂದ ಆಸ್ಪತ್ರೆಗೆ, ಆಸ್ಪತ್ರೆಯಿಂದ ಮನೆಗೆ ನಡೆಯುವುದು ಹತ್ತಿ ಪೂರ್ತಿ ಮೈಲು ಆಗುತ್ತದೆ" ಎನ್ನುತ್ತ ನನ್ನ ಮುಖವನ್ನೇ ನೋಡಿದಳು. ಆಕೆಗೆ ವಿಪರೀತ ಕೆಲಸವೆಂದು ಎಂದಳು. ಆಕೆಯ ಕಣ್ಣುಗಳಲ್ಲಿ ಕಂಬನಿ ತುಂಬಿತ್ತು. ಎರಡು ದಿನಗಳ ನಂತರ ಆಕೆಯ ತಂದೆ ಆಸ್ಪತ್ರೆಯಲ್ಲಿ ಮೃತರಾದ ವಾರ್ತೆ ನನಗೆ ದೊರೆಯಿತು. ನನಗೆ ವಿಪರೀತ ದುಃಖವಾಯಿತು.

ಸೀತವ್ವ ನನ್ನನ್ನು ಕಂಡ ಮಾತಾಡಬೇಕೆಂದು ಮನಸ್ಸು ಕಾತರಿಸುತ್ತಿತ್ತು. ಆ ಆದಿತ್ಯವಾರ ಸೀತವ್ವನ ಮನೆಗೆ ಹೋದೆನು. ಆಕೆಗೆ ಆಶ್ಚರ್ಯವಾಗಿರಬೇಕು. ನಮ್ಮನ್ನು ಕಂಡು ಕಂಬನಿಯಿಂದ ಆಕ್ಕಳು. ತನ್ನ ದುಃಖವನ್ನು ತೋಡಿಕೊಳ್ಳುತ್ತಾ ಹೇಳಿದಳು. 'ನನ್ನ ತಾಯಿ ಸತ್ತಾಗಲೇ ನಾನು ಅನಾಥಳಾದೆ. ತಂದೆ ಪುನಹ ಮದುವೆಯಾದದ್ದು ನನ್ನ ದುರ್ಭಾಗ್ಯ ವಲ್ಲದೆ ಮತ್ತೇನು. ಮಲತಾಯಿ ಜೋಡಿಸಿ ತೋರುವ ನನ್ನ ಇನ್ನ ಅಲ್ಪ ಸ್ವಲ್ಪ ಸುಖವೂ ಮಾಯವಾಯಿತು. ಅವರೂ ಕಾಣುವ ನೆರವಿನಿಂದ ಎಲ್ಲಾ ಕಷ್ಟಗಳನ್ನು ಸಹಿಸಿದೆ. ಚಿಕ್ಕಮ್ಮನ ಕಿರುಕುಳವನ್ನು ಅನುಭವಿಸಿದೆ. ಹುಟ್ಟಿದಂದಿನಿಂದ ಇಂದಿನ ವರೆಗೂ ಜೀವನವು ದುಃಖಮಯವಾಗಿದೆ. ಭವಿಷ್ಯವೂ ದುಃಖದಿಂದಲೇ ತುಂಬಿದೆ. ಒಮ್ಮೊಮ್ಮೆ ಆತ್ಮಹತ್ಯ ಮಾಡಿ ಕೊಳ್ಳೋಣವೆನಿಸುತ್ತದೆ. ಆದರೆ ಅದಕ್ಕೂ ಧೈರ್ಯ ಬೇಕು.'

ಆಕೆಯ ಜೀವನವನ್ನು ಆಲೋಚಿಸುತ್ತಾ ದುಃಖಿತರಾಗಿ ನಾವು ಹಿಂತಿರುಗಿದೆವು. ಆಗಾಗ ಸೀತವ್ವನ ಯೋಚನೆ ನನಗೆ ಬರುತ್ತಿತ್ತು. ಆಕೆಯ ಸ್ಥಿತಿಯನ್ನು ನೆನೆದು ಕಣ್ಣೀರಿನ ಹನಿಗಳು ತುಂಬುತ್ತಿತ್ತು. ಆಗಾಗ ನನಗನಿಸುವುದು ಪ್ರಥಮ 'ಹೆಂಡತಿ ಸತ್ತ ಮೇಲೆ ಆಕೆಗೆ ಮಕ್ಕಳಿದ್ದರೆ ಪುನಹ ಮದುವೆಯಾಗಿ ಈ ಮಕ್ಕಳ ಜೀವನವನ್ನು ನರಕ ಸದೃಶವಾಗಿ ಮಾಡುವ ತಂದೆ ನಿಜವಾಗಿಯೂ 'ತಂದೆ' ಎನ್ನಲು ಅರ್ಹನೇ?'

ಸೀತವ್ವನಿಗೆ ತಂದೆಯಾದರೂ ಇದ್ದಿದ್ದರೆ ಯಾರಾದರೂ ಕೈಹಿಡಿಯುವ ಆಸರೆ, ಆಕೆಯ ಭವಿಷ್ಯವು ಚೆನ್ನಾಗುವ ಆಶೆಯಿತ್ತು. ಆದರೆ ಈಗ? ತಾಯಿ ಸತ್ತಾಗ ತಂದೆಯ ಮುಖ ನೋಡಿ ಆಕೆ ಕಷ್ಟಗಳನ್ನು ಸಹಿಸಿದಳು. ವಿದ್ಯೆಯ ಮೇಲೆ ಅಪಾರ ಪ್ರೇಮ. ವಿದ್ದರೂ ಮನೆಯ ಉಪಟಳ ಮತ್ತು ಬಡತನದ ಕಾರಣಗಳಿಂದ ಅದೂ ಆಕೆಯ ಕೈಗೂಡಲಿಲ್ಲ. ಯೋಗ್ಯ ಆಹಾರ, ಯೋಗ್ಯ ವಿಶ್ರಾಂತಿ ಇಲ್ಲದೆ ಕೊಳೆಯುವುದೆಂತೆ ವಿಕಾಸವಾಗಿ ಬೆಳೆಯಬೇಕಿದ್ದ ಆಕೆಯ ಶರೀರ, ಜ್ವಾಲೆಯ ಬಿಸಿಯಿಂದ ಒಣಗಿದ ಮೊಗ್ಗಿನಂತೆ ಬಾಡಿಹೋಗಿತ್ತು. ಇಂದಿನ ಸಮಾಜದಲ್ಲಿ ಒಂದೋ ವಿದ್ಯೆ ಇರಬೇಕು. ಇಲ್ಲವೇ ಹಣವಿರಬೇಕು; ಇಲ್ಲವೇ ಜನ ಬಲ ಸ್ವಾರ್ಥವಿರಬೇಕು. ಇವು ಎಷ್ಟೆಷ್ಟು ಇವೆಯೋ ಅಷ್ಟಷ್ಟು ಸಮಾಜದಲ್ಲಿ ಸ್ಥಾನ. ಮದುವೆ ಕಟ್ಟಿಗೆ ಎಲ್ಲಿ ಬೆಲೆ! ಅವಳಿ ಸೀತವ್ವನಿಗೇನಿದೆ? ಆಕೆಯ ಕೈಹಿಡಿಯುವವರಾರು? ಬಹುಶಃ ಆಕೆಯ ಜೀವನ ಆತ್ಮಹತ್ಯೆಯಲ್ಲಿ ಕೊನೆಗೊಳ್ಳಬಹುದು!

ಛೆ! ಹಾಗೆ ನಾನು ಆಲೋಚಿಸಬಾರದು. ಸೀತವ್ವನ ಧೈರ್ಯ ಕುಗ್ಗಿಯದಿರಲಿ, ಆತ್ಮಹತ್ಯ ಮಾಡಿಕೊಳ್ಳಬಾರದು. ಭಗವಂತನ ದಯೆಯು ಭವಿಷ್ಯ ಜೀವನವನ್ನು ಸುಗಮಗೊಳಿಸಲಿ.

ಓದುಗರ ಓಲೆಗಳು.

ಅಪ್ಪಾಜಿನಿತರಿಗೆ ಎಚ್ಚರಿಕೆ.

ಕೆಲ್ಲಿಗೆ ಅಪ್ಪಾಜಿನಿತರು ಇರುವ ಮುಂದ ಕಾಲು ಕಾಂಗ್ರೆಸ ಕಾರದ ಮುಂದೆ ಒಗ್ಗಟ್ಟದ ಅಭಿಪ್ರಾಯ ಇತಿಹಾಸದೊಳಕ. ದೇಶದ ಭವಿಷ್ಯ ನಿಜ ಯವು ಕಲವು ವ್ಯಕ್ತಿಗಳ ಜವಾಬ್ದಾರಿಯಲ್ಲಿ ಭವಿಷ್ಯವು ಜನತೆಯ ಸಂಪೂರ್ಣವಾಗಬೇಕು. ತನೂನುಗಳಿಂದ ಪ್ರತ್ಯೇಕವಿದ್ದ ಜಮಾನಾಳದ ಕೊಡಗನ್ನು ಬೇರೆ ಪ್ರಾಂತ್ಯಕ್ಕೆ ಸೇರಿಸುವ ಪ್ರಶ್ನೆಯನ್ನು ಕೊಡಗಿನ ಜನರಲ್ಲಿ ದ ನಾಲ್ಕರು ಜನರು ತೀರ್ಮಾನಿಸುವ ನಿರಂಕುಶ ವರ್ತನೆಯನ್ನು ಜನತೆ ಎಂದೂ ಸಹಿಸದು. ಸಂಯೋಜನವು ದೀಗೆ ಇರಲಿ, ಪ್ರತ್ಯೇಕವಾದಿಗಳೇ ಇರಲಿ, ಜನತೆಯ ಅಭಿಪ್ರಾಯ ತಿಳಿಯದೆ ಈ ದೇಶದ ಭವಿಷ್ಯ ತೀರ್ಮಾನಿಸಬೇಕೆಂಬ ಗಾಚನೆಯನ್ನು ಕೇಂದ್ರಕ್ಕೆ ಮುಂದಿಡಬೇಕು ಎಂಬುದೇ ಈ ಅಭಿಪ್ರಾಯ ತಿಳಿದಿದೆ ದೆಹಲಿಗೆ ಹೋದವರು ವಿಜೇಶನಿಕರ್ಯಕ್ಕೆ ಒಪ್ಪು ದಾದರೆ ಕೊಡಗಿನ ಜನತೆ ಇನ್ನು ಹಿಂಬದಿಯಿಂದ ತಿವಿಯಲಾಗದು. ಅದ್ದರಿಂದ ದೆಹಲಿಗೆ ಅಪ್ಪಾಜಿನಿಲ್ಪಟ್ಟವರು ತಮ್ಮ ಸ್ವಂತ ಅಭಿಪ್ರಾಯ ಕೊಡಬಲ್ಲರೇ ವಿನಹ ದೇಶದ ಅಭಿಪ್ರಾಯ ಕೊಡಲಾರರು. ಈ ಅಪ್ಪಾಜಿನಿತರು ಖಂಡಿತವನ್ನು ತಿಳಿದು ವರ್ತಿಸುವರೇ?

ತಿಮ್ಮಯ್ಯ.

ಸೆಂಟ್ರಲ್ ಪಿ ಡಬ್ಲ್ಯು. ಡಿ.

ಪಿ ಡಬ್ಲ್ಯು. ಡಿ ಇಲಾಖೆಯು ಕೇಂದ್ರ ಅಧೀನಕ್ಕೆ ಬಂದಂದಿನಿಂದ ಈ ಇಲಾಖೆಯಲ್ಲಿ ಹೊರಗಿನವರನ್ನೇ ಪ್ರತಿ ಸ್ಥಳಗಳಿಗೆ ನೇಮಿಸಲಾಗುತ್ತಿದೆ. ಕೊಡಗಿನವರಿಗೆ ಇವರಲ್ಲಿ ಪ್ರವೇಶ ದೊರೆಯುವುದೇ ಅಶಕ್ಯ ಕಷ್ಟವಾಗಿದೆ. ಮೊನ್ನೆಯಾಗಿ ಯಾವುದೋ ಕೆಲಸದ ನಿಮಿತ್ತ ಇಲ್ಲಿಗೆ ಬಂದ ನೇಮಕ ಗಳಿಗೂ ಕೆಲಸ ಕೊಡಲಾಗದೆಯೆಂದು ವರ್ತಮಾನ. ಇದೇ ಇಲಾಖೆಯಲ್ಲಿ ಈ ಹಿಂದೆ ಕೆಲಸಮಾಡಿ ಬಿಟ್ಟಿದ್ದವರಿಗೆ ಈಗ ನಿರುದ್ಯೋಗಿಗಳಾಗಿರುವ ಜನ ಕಲಸಕ್ಕೆ ಅರ್ಜಿ ಹಾಕಿದರೂ ಅರ್ಧ ಎನ್ನಿಸಿ ಬಿಟ್ಟು ತನ್ನ ಮನಸ್ಸಿನ ಇಚ್ಛೆಯ ಹಾಗೆ ಹೊರಗಿನವರನ್ನು ಕೆಲಸಕ್ಕೆ ನೇಮಿಸುವ ಪದ್ಧತಿ ಇಲ್ಲಿ ಎಷ್ಟು ಕಾಲ ಎಕ್ಸಿಕ್ಯೂಟಿವ್ ಇಂಜಿನಿಯರ್ ಆದವರ ಮೂಲಕ ಆಗುತ್ತಿರುವುದು? ಇನ್ನಾದರೂ ಸರಕಾರದ ಇಲಾಖೆಯಲ್ಲಿ ಈ ಬಗ್ಗೆ ಪ್ರೀತಿ ವರ್ತನೆಯನ್ನು ನಿಲ್ಲಿಸಬೇಕಾಗಿ ಸಂಬಂಧಪಟ್ಟವರಿಗೆ ಎಚ್ಚರಿಕೆ ಕೊಡಲಾಗಿದೆ.

'ನಿರೀಕ್ಷಕ'

ಕೊಡವರಲ್ಲಿ ವಿನಂತಿ.

ಈಗ ಜಾರಿಯಲ್ಲಿರುವ ಹಿಂದೂ ಲಾ ದ ಪ್ರಕಾರ ಒಂದೇ ತಂದೆ ತಾಯಿ ಗೆ ಮಕ್ಕಳು ಮಾಲೀಕರಾದ ಬ್ಯಾಂಕ್ ಪುತ್ರ ಸಂತತಿ ಇಲ್ಲದ ಪೌತಿ ದಲ್ಲಿ ಆಕನಕ ಜಂಟಿನ ದ ಪೂರ್ತಿ ಆಸ್ತಿಯ ಸ್ವಾಧೀನಕ್ಕೆ ಅಂಣ ಹಕ್ಕು ದಾರರಿಗೆ ಹಕ್ಕಿಲ್ಲದೆ ಆಸ್ತಿ ಪೌತಿ ದಾರರಿಗೆ ಹಕ್ಕಿಲ್ಲನೆಂದಿದೆ. ಇದನ್ನೇ ಕೊಡಗಿನವರಲ್ಲಿಯೂ ಅನುಸರಿಸಲ ಗುತ್ತಿದೆ. ಹೀಗಾಗಿ ಇದರಿಂದ ಅನೇಕ ದುರ್ಬಲ ಗಳು, ವ್ಯಾಜ್ಯಗಳು ಜಗಳಗಳಿಗೂ ಎಡೆಕೊಟ್ಟಿದೆ. ಈ ಬಗ್ಗೆ ಅನೇಕ ತಕರಾರುಗಳ ಊಡನ ಸರಕಾರದ ಮುಂದೆ ಬಂದಿದ್ದು ಅವರು ಹಿಂದೂ ಲಾ ವನ್ನು ಇಲ್ಲಿಗೆ ಅನ್ವಯಿಸದೆ ಕೊಡಗು ಕಸ್ಟಮರಿ ಲಾ ವನ್ನು ಜಾರಿ ಮಾಡುವಂತೆ ತಂದುಕೊಡುವ ಬಗ್ಗೆ ನಿರ್ಣಯಿಸಿ ಈ ಬಗ್ಗೆ ಸರಕಾರವು ತಕ್ಕ ತಿದ್ದುಪಡಿಗಳನ್ನು ಮಾಡಬೇಕೆಂದು ಸರಕಾರವನ್ನು ಕೇಳಿಕೊಂಡಿರುವರು. ಈ ವಿಷಯದಲ್ಲಿ ಕೌನ್ಸಿಲು ಸದಸ್ಯರು ಈ ರಾಜ್ಯ ತಂದು ಯೋಗ್ಯ ತಿದ್ದುಪಡಿಗೆ ಅವಕಾಶ ಮಾಡಬೇಕಾಗಿದೆ. ಕೊಡವರೆಲ್ಲರೂ ಈ ಬಗ್ಗೆ ಆಲೋಚಿಸಿ ತಮ್ಮ ಒಮ್ಮತದ ನಿರ್ಧಾರದಿಂದ ಹೀಗಿನ ಲಾ ವನ್ನು ಬದಲು ಮಾಡಿ ಕಷ್ಟನಿವಾರಣೆಯಲ್ಲಿ ಬರುವಂತೆ ಯತ್ನಿಸಬೇಕಾಗಿ ಕೇಳಿಕೆ.

ಕೆ. ಅಪ್ಪಯ್ಯ.

(ಅನಿವಾರ್ಯ ಮುಂದುವರಿದಿದೆ.)

ಕೊಡಗು

ತಾ. ೧೧-೧೧-೧೯೪೯ನೇ ಶುಕ್ರವಾರ

ನಾಚಿಕೆ ಕೇಡು.

ತಾರೀಕ ೬-೧೧-೪೯ರಲ್ಲಿ ಗೋಣಿಕೊಪ್ಪಲಿನಲ್ಲಿ ಕೊಡಗಿನ ಭವಿಷ್ಯದ ವಿಚಾರದ ಮೀಟಿಂಗೊಂದರಲ್ಲಿ ಹೊಡೆದಾಟವಾಗಿದೆಯೆಂದು ತಿಳಿದರೆ ಪ್ರತಿಯೊಬ್ಬನಿಗೂ ವ್ಯಸನವಾಗಬೇಕು. ಕೊಡಗಿನ ರಾಜಕೀಯವು ಈ ನಿಕೃಷ್ಟ ಅಂತಸ್ತಿಗೆ ಇಳಿದುದು ವಿಷಾದದ ಸಂಗತಿ. ಕೊಡಗಿನವರು ಹೆಚ್ಚು ವಿದ್ಯಾವಂತರು, ರಾಜಕೀಯ ಜಾಗೃತಿ ಇರುವವರೆಂದು ಹೇಳಲಾಗುತ್ತಿದೆ. ಮುಂದಿರುವ ರಾಜಕೀಯ ಪ್ರಶ್ನೆಗಳನ್ನು ಬಗೆಹರಿಸುವ ಬಗ್ಗೆ ಶಕ್ತಿ ಪ್ರಯೋಗವನ್ನು ಎಂದೂ ಶೋಭಿಸುವ ಮಾರ್ಗವಲ್ಲ. ಈ ಅನೀತಿಯ ಪಥವು ಯಾರಿಗೂ ಹಿತ ಮಾಡಲಾರದು.

ಕೊಡಗಿನ ಭವಿಷ್ಯದ ಪ್ರಶ್ನೆ ಯಾರೊಬ್ಬರ ತಲೆಯ ಮೇಲಿರುವ ಭಾರವಲ್ಲ. ಇಡೀ ಜನರ ಮೇಲಿರುವ ಜವಾಬ್ದಾರಿ ಅದು. ವಿವಿಧ ಜನರಲ್ಲಿ ಈ ಬಗ್ಗೆ ವಿವಿಧ ರೀತಿಯ ಅಭಿಪ್ರಾಯಗಳಿರಬಹುದು. ಒಬ್ಬನ ತದ್ವಿರುದ್ಧ ವಿರೋಧ ಅಭಿಪ್ರಾಯದವನಿರುವನೆಂದು ಆತನೊಡನೆ ಹೊಡೆದಾಡುವುದು ನಾಗರೀಕ ಮಾರ್ಗವಲ್ಲ. ಪ್ರತಿಯೊಬ್ಬನಿಗೂ ಸ್ವತಂತ್ರ ಅಭಿಪ್ರಾಯದ ಹಕ್ಕಿರುವ ಈ ಕಾಲದಲ್ಲಿ ಈ ರೀತಿಯ ಗುದ್ದಾಟಕ್ಕೆ ಎಡೆ ಎಲ್ಲಿದೆ?

ಕೊಡಗಿನ ಜನರು ಸುಸಂಸ್ಕೃತರು, ವಿದ್ಯಾವಂತರು, ಶಾಂತಿ ಪ್ರಿಯರು ಎಂದು ಹೊಗಳಿಸಿಕೊಂಡಿದ್ದಾರೆ. ಸರ್ದಾರ್ ಪಟೇಲರಂಥವರೇ ಕೊಂಡಾಡಿದ್ದಾರೆ. ಹೀಗಿದ್ದೂ ಈ ರೀತಿಯ ಅನಿಷ್ಟ ರಾಜಕೀಯ ಮೊಳೆಯಲು ಕಾರಣವೇನು? ಅದು ಜನತೆಯ ತಪ್ಪಲ್ಲ. ಸ್ವಾರ್ಥದ ಅಡಿಗಲ್ಲಿನಲ್ಲಿ ಪಕ್ಷಗಳನ್ನು ಕಟ್ಟಿ ತಮ್ಮ ತಮ್ಮ ಪಕ್ಷಗಳನ್ನು ಬೆಳೆಸಲು ಅನೀತಿಯ ಅಪಪ್ರಚಾರ ಮಾಡಿ, ತಮ್ಮ ಕಾರ್ಯಸಾಧನೆಗಾಗಿ ರಾಜಕೀಯಕ್ಕೆ ಕೋಮುವಾರು ಬಣ್ಣ ಬಳಿದು, ವ್ಯಕ್ತಿದೂಷಣೆಗಿಳಿಯುವ ಮುಂದಾಳುಗಳೇ ಇವರು ಇಂಥಾದ್ದಕ್ಕೆ ಕಾರಣರು.

ಸಧ್ಯ ಮಟ್ಟಿಗೆ ಗೋಣಿಕೊಪ್ಪಲಿನ ಗಲ್ಲಾದ ಘಟನೆಯನ್ನು ಸೂಕ್ಷ್ಮವಾಗಿ ಪರಿಶೀಲಿಸುವ. ಶ್ರೀಗಳಾದ ಸಿ. ಕೆ. ತಮ್ಮಯ್ಯ, ಕೆ. ಕೆ ಅಪ್ಪಯ್ಯ ಮತ್ತು ಕೆ. ಎ. ಚಿಣ್ಣಪ್ಪ ಇವರುಗಳು ಹಸ್ತಪತ್ರಿಕೆ ಹಂಚಿ ಮೀಟಿಂಗ್ ಕರೆಸಿದವರು. ಅವರು ಹಂಚಿದ ಹಸ್ತಪತ್ರಿಕೆಯಲ್ಲಿ "ಕೊಡಗು ದೇಶವನ್ನು ಈಗಿರುವ ರೀತಿಯಲ್ಲೇ ಬೇರೆ ಪ್ರಾಂತವಾಗಿ ಇಟ್ಟುಕೊಳ್ಳುವ" ವಿಷಯದ ಚರ್ಚೆಗೆಂದೂ "ಇದಕ್ಕೆ ಒಪ್ಪದಿರುವ ಪ್ರತಿಬಂಧಕರು ಹಾಜರಾಗಬೇಕೆಂದೂ" ಕೇಳಿದ್ದಾರೆ. ಹಾಗಿರುವಾಗ ಅದು ಕೇವಲ ಪ್ರತ್ಯೇಕವಾದಿಗಳ ಮೀಟಿಂಗಾಗಿತ್ತು. ಅಂಥಾ ಒಂದು ಮೀಟಿಂಗಿಗೆ ಬೇರೆ ರಾಜಕೀಯ ನಂಬಿಕೆ ಇರುವವರು ಹೋಗುವ ಅವಶ್ಯಕತೆ ಇರಲಿಲ್ಲ. ಹೋದರೂ ಅದರಲ್ಲಿ ಭಾಗವಹಿಸಿ ಗಲಾಟೆ ಹಬ್ಬಿಸುವ ಹಕ್ಕಿರಲಿಲ್ಲ. ಮೀಟಿಂಗನ್ನು ಕರೆಸಿದ ಕನ್ವೀನರ್‌ಗಳು ಸಭೆಗೆ ಅಧ್ಯಕ್ಷರನ್ನು ನಿಶ್ಚಯಿಸುವದೇ ವಿನಹ ಹೋದವರೆಲ್ಲರೂ, ಅವರಲ್ಲೂ ಮೀಟಿಂಗಿನ ಧ್ಯೇಯಕ್ಕೆ ವಿರುದ್ಧವಿರುವವರು ಅಧ್ಯಕ್ಷರನ್ನು ಸೂಚಿಸುವದು ನಿಯಮಬಾಹಿರ.

ಇದರಿಂದಾಗಿ ಬೇಕೆಂದೇ ಮೇಲ್ಕಂಡ ಮೀಟಿಂಗು ಆಗಗೊಡಬಾರದೆಂಬ ನಿಶ್ಚಿತ ದೃಷ್ಟಿಯಿಂದ ಕೆಲವು ಗೂಂಡಾ ಜನರು ನಿಷ್ಕಾರಣದ ಆತಂಕ ತಂದೊಡ್ಡಿ ಹೊಡೆದಾಟಕ್ಕೆ ಕಾರಣರಾಗಿದ್ದಾರೆಂದು ಊಹಿಸಲು ಆಸ್ಪದವಿದೆ. ಹೇಗೂ ಈ ಘಟನೆಯಿಂದ ನಮಗೆ ತುಂಬಾ ವಿಷಾದವಾಗಿದೆ. ಸರಕಾರವು ಕಾಲವಿಳಂಬ ಮಾಡದೆ ಕ್ಷಿಪ್ರವಾಗಿ ಈ ಹೊಡೆದಾಟದ ಕಾರಣವನ್ನು ವಿಚಾರಿಸಿ ಮುಂದೆ ಇಂಥಾ ಗಲಾಟೆ ಹೊಡೆದಾಟಗಳು ನಡೆಯದಂತೆ ಎಚ್ಚರವಹಿಸುವದು ಅತೀ ಅವಶ್ಯ.

ಹೊಡೆದಾಟದಿಂದ ಸಮಸ್ಯೆ ಬಗೆಹರಿಯುವದಿಲ್ಲವೆಂಬುದನ್ನು ದೇಶದ ಜನರು ತಿಳಿಯಬೇಕು. ಯೋಗ್ಯ ನಾಗರೀಕರಂತೆ ಶಾಂತಿ, ಶಿಸ್ತಿನಿಂದ ವರ್ತಿಸಬೇಕು. ಕೊಡಗಿನ ಭವಿಷ್ಯ ಸಮಸ್ಯೆಯ ಬಗ್ಗೆ ದೇಶದಲ್ಲಿ ರಾಜಕೀಯ ಕಾವು ಏರುವ ಈ ಸಂದರ್ಭದಲ್ಲಿ ಒಂದು ಅಲ್ಪ ಬೆಂಕಿ ಕಡ್ಡಿಯೇ ಮಹಾ ಜ್ವಾಲೆಗೆ ಕಾರಣವಾಗಬಹುದು. ಭವಿಷ್ಯವು ಹೇಗೆಯೇ ನಿರ್ಣಯವಾಗಲೀ ಸಂಯೋಜನೆಯಾದರೂ ಪ್ರತ್ಯೇಕವಿದ್ದರೂ ನಾವು ಇಂದಿನಂತೆ ಎಂದೂ ನೆರೆ ಕರೆಯರಾಗಿ ಜೀವಿಸಬೇಕಿರುವವರು. ಈ ಪರಸ್ಪರ ಸೌಹಾರ್ದವನ್ನು ಆಸಕ್ತ ಜನರ ಅಪಪ್ರಚಾರಕ್ಕೆ ಬಲಿಯಾಗಿ ಹಾಳು ಮಾಡಿಕೊಂಡು ಜೀವನವನ್ನು ಮುಳ್ಳಿನ ಹಾಸಿಗೆಯಾಗಿ ಮಾಡಿಕೊಳ್ಳಬಾರದು. ಜನತೆಯೂ, ಸರಕಾರವೂ ಎಚ್ಚರಿಕೆಯಿಂದ ವರ್ತಿಸಿ ಬೇಜವಾಬ್ದಾರಿಯ ವರ್ತನೆಯುಳ್ಳವರನ್ನು ನಿರೋಧಿಸಬೇಕಾಗಿದೆ.

ವರ್ತಮಾನ.

ಹುದಿಕೇರಿ ಗಾಂಧಿ ವಾಚನಾಲಯಕ್ಕೆ ಶ್ರೀ. ಚೋನಿರ ನಾಣಯ್ಯನವರು ಕೊಟ್ಟ ಜೈಹಿಂದ್ ನೆಹರೂ ಕಪ್ಪಿನ ಹಾಕಿ ಪಂದ್ಯಾಟವು ತಾ. ೨೬-೧೧-೪೯ ರಿಂದ ಹುದಿಕೇರಿಯಲ್ಲಿ ಪ್ರಾರಂಭವಾಗುವದು.

ಕಳೆದ ಮೇ ತಿಂಗಳಲ್ಲಿ ನಡೆದ ಸಿಟಿ ಎಂಡ್ ಗಿಲ್ಡ್ಸ್ ಲಂಡನ್‌ರವರ ಮೆಕಾನಿಕಲ್ ಇಂಜನಿಯರಿಂಗ್ ಪರೀಕ್ಷೆಯಲ್ಲಿ ಶ್ರೀ. ಮನೆಯಪಂಡ ಎಂ. ಸುಬ್ಬಯ್ಯನವರು ತೇರ್ಗಡೆಯಾಗಿ ಮದ್ರಾಸ್ ಪಿ ಡಬ್ಲ್ಯು ಡಿ ಯಲ್ಲಿ ಜನರಲ್ ಫೋರ್‌ಮೇನರಾಗಿರುವರು.

ಪೊನ್ನಂಪೇಟೆ ಸ್ವರಾಜ್ ಹಾಕಿಕಪ್ಪಿನ ಪಂದ್ಯಾಟವು ಪೊನ್ನಂಪೇಟೆಯಲ್ಲಿ ತಾ. ೨೧-೧೧-೪೯ರಿಂದ ಪ್ರಾರಂಭವಾಗುವದು.

ಕೊಡಗು ಮಾಧ್ಯಮಿಕ ಶಾಲಾ ಮಕ್ಕಳ ಹಾಕಿ ಪಂದ್ಯಾಟಕ್ಕಾಗಿ ಹುದಿಕೇರಿ ಮಾಧ್ಯಮಿಕ ಶಾಲೆಯ ಆಶ್ರಯದಲ್ಲಿ ಶ್ರೀ ಕಾಡ್ಯಮಾಡ ಐಯ್ಯಮ್ಮ ಸಹೋದರರು ಕೊಟ್ಟಿರುವ ಹಾಕಿ ಕಪ್ಪಿನ ಟೂರ್ನಮೆಂಟು ತಾ. ೧೬-೧೧-೪೯ರಿಂದ ಹುದಿಕೇರಿಯಲ್ಲಿ ಪ್ರಾರಂಭವಾಗುವದು.

ಕೊಡಗು ಎಡಿಷನಲ್ ಸುಬೆದಾರರಾಗಿ ಶ್ರೀ. ಎಂ. ಎನ್. ಗುಂಡೂರಾಯರನ್ನು ನೇಮಿಸಿ ರಿಸೆಟ್ಲ್‌ಮೆಂಟ್ ತರಬೇತಿಗೆ ಮದ್ರಾಸಿಗೆ ಕಳುಹಿಸಲಾಗುವದೆಂದೂ ತರಬೇತಾದ ನಂತರ ಅವರನ್ನು ಸೆಟ್ಲ್‌ಮೆಂಟ್ ಆಫೀಸರಾಗಿ ನೇಮಿಸಲಾಗುವದೆಂದೂ ತಿಳಿಯ ಬಂದಿದೆ.

ಮುನ್ಸೀಫರಾದ ಶ್ರೀ ಐ ಸಿ ಸುಬ್ಬಯ್ಯನವರು ಎರಡು ತಿಂಗಳು ರಜೆಯಲ್ಲಿರುವದರಿಂದ ಶ್ರೀ. ಮೇರಿಯಂಡ ಮಾದಪ್ಪನವರನ್ನು ಮುನ್ಸೀಫರಾಗಿ ನೇಮಿಸಲಾಗಿದೆ.

ಮಡಿಕೇರಿ ಹೈಸ್ಕೂಲ್ ವಿದ್ಯಾರ್ಥಿಗಳು ಕಳೆದ ವಾರ ಫ್ರೇಜರ್‌ಪೇಟೆಗೆ 'ಎಕ್ಸ್‌ಕರ್ಶನ್' ಹೋಗಿದ್ದಾಗ ಶ್ರೀಗಳಾದ ಅಪ್ಪಾರಂಡ ಅಪ್ಪಚ್ಚು, ಕೊಕ್ಕಲೆರ ನಂಜುಂಡ, ಐಚೆಟ್ಟಿರ ಮಾಂದಪ್ಪ, ದಾಸಂಡ ಚಂಗಪ್ಪ ಮತ್ತು ಕೊಡಂದೆರ ಬೋಪಯ್ಯ ಇವರುಗಳು ತೀರ್ಥ, ಊಟ ಉಪಚಾರ ಮತ್ತು ಇನ್ನಿತರ ಸವಲತ್ತುಗಳನ್ನು ಒದಗಿಸಿ ಸತ್ಕರಿಸಿದರು.

೨೭ನೇ ಅಖಿಲ ಭಾರತ ಸಹಕಾರ ದಿನಾಚರಣೆಯು ತಾ ೫-೧೧-೪೯ ರಲ್ಲಿ ಮೂರ್ನಾಡಿನಲ್ಲಿ ಶ್ರೀ ಎಸ್. ಸತ್ಯನಾರಾಯಣರವರ, ನಾಪೋಕ್ಲಿನಲ್ಲಿ ಶ್ರೀ ಪಿ. ಎಂ. ಉತ್ತಪ್ಪನವರ, ವೀರಾಜಪೇಟೆಯಲ್ಲಿ ಶ್ರೀ ಪಿ ಸಿ ಉತ್ತಯ್ಯನವರ, ಬೇರಣೆ ನಾಡಿನಲ್ಲಿ ಶ್ರೀ ಕೊಂಗಂಡ ಕಾಳಪ್ಪನವರ, ಫ್ರೇಜರ್‌ಪೇಟೆಯಲ್ಲಿ ಶ್ರೀ. ಕೆ. ಎಂ. ನಂಜುಂಡನವರ, ಮಡಿಕೇರಿಯಲ್ಲಿ ಶ್ರೀ. ಕೆ ಪಿ ಅಪ್ಪಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಹಿಂದೀ ಪರೀಕ್ಷಾ ಫಲಿತಾಂಶ.

ಕಳೆದ ಆಗಸ್ಟ್ ತಿಂಗಳಲ್ಲಿ ನಡೆದ ಹಿಂದೀ ಪರೀಕ್ಷೆಯಲ್ಲಿ ಮಡಿಕೇರಿ ಕೇಂದ್ರದಲ್ಲಿ ಈ ಕೆಳಗಿನವರು ಪಾಸಾಗಿದ್ದಾರೆ.

ಪ್ರಾಥಮಿಕ—ಎ ಕೆ. ಗಂಗಮ್ಮ, ಎಸ್ ಎ ಕಾಮುಮ್ಮ, ಎ ಕೆ ಅಕ್ಕಮ್ಮ. ಸಿ ಸಿ. ಕೇಚಮ್ಮ (ಪ್ರಥಮ ದರ್ಜೆ) ಎನ್. ಬಿ ಸೋಮಣ್ಣ (ಪ್ರಥಮ ದರ್ಜೆ) ಬಿ ಎ. ಮುತ್ತಮ್ಮ, ಎಂ ಕೆ. ಪೊನ್ನಪ್ಪ, ಡಬ್ಲ್ಯು. ಎ ಪಾರ್ವತಿ (ಪ್ರಥಮ ದರ್ಜೆ) ಎಂ ಪಿ. ಸುಬ್ಬಯ್ಯ, (ಪ್ರಥಮ ದರ್ಜೆ) ಟಿ ಟಿ ಚಿಣ್ಣಪ್ಪ, ಎಸ್ ಕೆ. ಮೇದಪ್ಪ, ಬಿ ಎ ಸೀತಮ್ಮ, ಎ ಎಂ ಮುತ್ತಮ್ಮ (ಪ್ರಥಮ ದರ್ಜೆ)

ಮಾಧ್ಯಮಿಕ—ಮಹಮದ್ ಇಕ್ಬಾಲ್ ಎ ಅಪ್ಪಯ್ಯ, ಎಂ ಎಂ ಪೂವಯ್ಯ, ಬಿ ಎಸ್ ಲಕ್ಷ್ಮೀಶ, ಬಿ. ಎಂ. ಮಂಜುನಾಥ, ಟಿ ಕೆ. ಅಮ್ಮವ್ವ, ಕೆ. ಎಂ ಭೀಮಯ್ಯ, ಕೆ. ಎ. ಕುಟ್ಟಯ್ಯ, ಕೆ. ಎಂ. ಗಣಪತಿ, ಪಿ. ಕೆ ಬೋಳ್ಳಮ್ಮ, ಎಂ. ಪಿ. ಅಕ್ಕಮ್ಮ, ಎಂ ಎಂ. ವಾರಿಜ, ಎಂ. ಪಿ ಗೌರಮ್ಮ.

ರಾಷ್ಟ್ರಭಾಷಾ— ಕೆ. ಎಸ್. ಗೋಪಾಲರಾವ್ (ಪ್ರಥಮ ದರ್ಜೆ) ಪಿ. ಸಿ ಪೂವಯ್ಯ, ಬಿ ಎ. ಈಶ್ವರಿ, ಬಿ. ಎಸ್. ಪದ್ಮನಾಭ, ಟಿ. ಸಿ ರಾಜಗೋಪಾಲ, ಎನ್. ಎಂ. ಬಿದ್ದಪ್ಪ,

ಪ್ರವೇಶಿಕ— ಸಿ ಎಸ್. ರಾಧಾ, ಎಂ. ಎ ಮುತ್ತಮ್ಮ,

ವಿಶಾರದ—ಬಿ ಆರ್. ಮಂದಕಿನಿ.

(೩ನೇ ಪುಟದಿಂದ ಸಾಗಿದ್ದು)

ಅನೀತಿಯ ರಾಜಕೀಯ.

ಶ್ರೀಯುತ ಗಣಪತಿಯವರೇ, ತಾ. ೯-೧೧-೪೯ರ 'ಜನ್ಮಭೂಮಿ' ಪತ್ರಿಕೆಯಲ್ಲಿ ನಿಮ್ಮ ಲೇಖನವನ್ನು ನೋಡಿದೆನು. ಕೆ. ಗಣಪತಿಯೆಂಬ ಬದಲು ನಿಮ್ಮ ಪೂರ್ಣ ಮನೆ ಹೆಸರನ್ನು ಕೊಟ್ಟಿದ್ದರೆ ಬಹು ಚೆನ್ನಾಗಿರುತಿತ್ತು. ಕೆ. ಗಣಪತಿಯೆಂಬುವರರು ಎಷ್ಟು ಜನರಿಲ್ಲ?

ನಿಶ್ಚಿತ ರಾಜಕೀಯ ತತ್ವ ಮತ್ತು ಸಾರ್ವಜನಿಕ ಜೀವನವಿಲ್ಲದ ಕಲವು ಅಪೂರ್ವ ಜನರು ಊಹನಾತೀತ ಹೊಲಸು ಭಾಷೆಯಲ್ಲಿ ಪತ್ರಿಕೆಯ ಮುಖಾಂತರವೂ ಬಹಿರಂಗವಾಗಿಯೂ ರೀತಿ ಮತ್ತು ಪ್ರಚಾರವನ್ನು ಮಾಡುತ್ತಾರೆ. ನೀವು ಅದೇ ಪಂಗಡದವರಲ್ಲೊಬ್ಬರಾಗಿರುತ್ತೀರೆಂದು ನಿಮ್ಮ ಲೇಖನದಿಂದ ಎಲ್ಲರಿಗೂ ವೇದ್ಯವಾಗುತ್ತದೆ. ಕೆರಳಿದ ರೀತಿಯ ಕಾಮಾಲೆ ರೋಗದಿಂದ ನೀವು ನರಳುತ್ತಿರುವ ಹಾಗೆ ಕಾಣುತ್ತೆ. ದಯವಿಟ್ಟು ನಿಮ್ಮ ಪರಿಚಯ ಮಾಡಿಕೊಡಿರಿ. ಅದರ ನಂತರ ನೀವು ಇಚ್ಛೆಸಿದರೆ ನಿಮ್ಮ ಮಟ್ಟಕ್ಕೆ ಇಳಿದು ನಿಮಗೆ ಸರಿಯಾದ ಉತ್ತರವನ್ನು ಕೊಡಲು ತಯಾರಾಗಿರುತ್ತೇನೆ.

ಅಯ್ಯಾ ಸಂಪಾದಕರೆ, ನಿಮ್ಮ ಪತ್ರಿಕೆಯಲ್ಲಿ ಸಂಯೋಜನವಾಗಳು, ಕೊಟ್ಟ ಭರವಸೆಯನ್ನು ಅಕ್ಷರಶಃ ಪಾಲಿಸುತ್ತಾರೆ. ಆದ್ದರಿಂದ 'ಕೊಡಗು' ಪತ್ರಿಕೆಯ ಎಡಿಟರವರಿಗೆ ಎಚ್ಚರಿಕೆ ಕೊಡಬೇಕೆಂಬದಾಗಿ ಸರಕಾರವನ್ನು ಬೇಡಿಕೊಂಡ ಅಗ್ರಲೇಖನವನ್ನು ನೋಡುವಾಗ ಎಲ್ಲರೂ ನಗಬೇಕಾಗಿದೆ. ಕಾರಣ ನಿಮ್ಮ ಪತ್ರಿಕೆಯಲ್ಲಿರುವ ಲೇಖನಗಳು ಮತ್ತು ವಿಷಯಗಳನ್ನು ನೋಡಿಕೊಂಡರೆ ಸಾಕು.

ಗೋಣಿಕೊಪ್ಪಲಿನಲ್ಲಿ ತಾರೀಕು ೬—೧೧—೪೯ ರಲ್ಲಿ ಆದ ಗಲಭೆಯ ವಿಷಯ ಬರೆದಿರುತ್ತಿರಿ. ಗಲಾಟೆಯಾಗಲು ನಿಜವಾದ ಕಾರಣವೇನು ಎಂಬವನ್ನು ಕೊಡದೆ ಬೇರೆ ಕಾರಣಗಳನ್ನು ಕೊಟ್ಟಿದ್ದಿರಿ. ಸದ್ರಿ ದಿನದ ಮೀಟಿಂಗಿಗ ಅಧ್ಯಕ್ಷ ಸ್ಥಾನವನ್ನು ವಹಿಸಲು ಸೂಚಿಸಲ್ಪಟ್ಟಂತ ವ್ಯಕ್ತಿಗಳು ಸಂಘದಗೆ ಸಮಾನ ಇಂಥವರಿಗೆ ಸಮಾನವೆಂದು ವ್ಯಕ್ತಿ ದೂಷಣೆಗಿಳಿದುದಲ್ಲವೇ ಗಲಭೆಗೆ ಕಾರಣ? ನಿಜವಾದ ವಿವರವನ್ನು ಜನರ ಮುಂದೆ ಇಡುವದು ಪತ್ರಿಕೆಯವರ ಕರ್ತವ್ಯವಾಗಿದೆ. ಹೇಗೂ ವಿಚಿತ್ರ ಪತ್ರಿಕೋದ್ಯೋಗ ನಡೆಯುತ್ತಿದೆ!

ಓರ್ವ ಪ್ರತ

FOR SALE.

10 H P Ford Prefect 1947 Model, run 18,500 Miles-in excellent condition one tyre and Battery new Rs 5,800/-. Owner going in for a big car. Apply Sampaji Estate, Sampaje Post. 2-2

ಕೊಡಗು ಪ್ರತ್ಯೇಕವಿರಬೇಕು.

ಕೊಡಗಿನ ಸಾರ್ವಜನಿಕರ ಏಕಕಂಠ ನಿರ್ಧಾರ.

ಪಾರಾಣೆ

ತಾರೀಕು ೩-೧೧-೪೯ ರಲ್ಲಿ ಕುಂಜಿಲಗೇರಿ, ಕೊಣಂಜಗೇರಿ, ಪಾವಲಿ, ಬಲಮುರಿ, ಕಿರುಂದಾಡು ಕೈಕಾಡು ಮತ್ತು ಬೆಳ್ಳುಮಾಡು ಗ್ರಾಮದ ಜನರ ಮೀಟಿಂಗು ಪಾರಾಣೆಯಲ್ಲಿ ಶ್ರೀ. ಮುಕ್ಕಾಟಿರ ಕರುಂಬಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಗಳಾದ ಮಾತಂಡ ಚಂಗಪ್ಪ, ಬಿದ್ದಂಡ ಸುಬ್ಬಯ್ಯ, ಕೆ. ಅಪ್ಪಯ್ಯ ಮೊದಲಾದವರು ಕೊಡಗಿನ ಭವಿಷ್ಯದ ಕುರಿತು ಮಾತಾಡಿದರು. ನಂತರ (೧) ಕೊಡಗನ್ನು ಪ್ರತ್ಯೇಕ ಪ್ರಾಂತವಾಗಿಟ್ಟು ಜವಾಬ್ದಾರಿ ಸರಕಾರ ಕೊಡಬೇಕೆಂದು ಈ ಸಭೆಯು ಕೇಂದ್ರ ಸರಕಾರವನ್ನು ಒತ್ತಿ ಕೇಳುತ್ತದೆ. (೨) ಆರ್ಥಿಕ ಸ್ಥಿತಿ ಉತ್ತಮವಾಗಿರುವ ಕೊಡಗನ್ನು ರೆಫರೆಂಡಮ್ ಮೂಲಕ ಜನರ ಅಭಿಪ್ರಾಯ ತೆಗೆಯದೆ ಬೇರೆ ಪ್ರಾಂತ್ಯದೊಂದಿಗೆ ಸಂಯೋಜನೆ ಮಾಡುವುದನ್ನು ಈ ಸಭೆಯು ಪೂರ್ಣ ವಿರೋಧಿಸುತ್ತದೆ ಎಂಬ ಠರಾವುಗಳು ಸರ್ವಾನುಮತದಿಂದ ಪಾಸಾದವು.

ಕಾರುಗುಂದ

ತಾರೀಕು ೫-೧೧-೪೯ ರಲ್ಲಿ ಕಾರುಗುಂದ, ಕಡಿಯತ್ತೂರು, ಕೊಳಗದಾಳು, ಬೇಡಗ ಮತ್ತು ಬೇಂಗೂರು ಗ್ರಾಮಗಳ ಜನರ ಸಾರ್ವಜನಿಕ ಸಭೆಯು ಕಾರುಗುಂದದಲ್ಲಿ ಶ್ರೀ. ಕಟ್ಟೆಂಟಿರ ತಿಮ್ಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಅಧ್ಯಕ್ಷರೂ, ಶ್ರೀಗಳಾದ ಪಟ್ಟಮಾಡ ಪೊನ್ನಪ್ಪನವರು, ಮುಂದಪಂಡ ಕಟ್ಟಪ್ಪನವರು ಕೊಡಗಿನ ಭವಿಷ್ಯದ ವಿಚಾರ ಮಾತಾಡಿದರು. ಮೇಲೆ ನಿರ್ಣಯವಾದ ಠರಾವುಗಳ ಅರ್ಥದ ಠರಾವು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟು ಅದರ ಅಭಿಪ್ರಾಯವನ್ನು ಸರ್ದಾರ್ ಪಟೇಲರಿಗೂ, ಪಿ. ಸಿ. ಮೆನನರಿಗೂ ತಂತಿ ಮೂಲಕ ಕಳುಹಿಸಲು ತೀರ್ಮಾನವಾಯಿತು.

ಬೆಟ್ಟಗೇರಿ

ತಾರೀಕು ೯-೧೧-೪೯ ರಲ್ಲಿ ಬೆಟ್ಟಗೇರಿ, ಅರ್ವತೊಕ್ಲು, ಹೆರವನಾಡು ಗ್ರಾಮಸ್ಥರ ಸಭೆಯು ಶ್ರೀ. ಮುಕ್ಕಾಟಿರ [illegible]ಮಯ್ಯನವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಶ್ರೀ. ಕಟ್ಟೇಟಿರ ತಿಮ್ಮಯ್ಯನವರು ಕೊಡಗಿನ ಭವಿಷ್ಯ ಪ್ರಶ್ನೆಯನ್ನು ವಿವರಿಸಿದರು. ಶ್ರೀಗಳಾದ ತಳೂರು ಕೃಷ್ಣಪ್ಪ, ಅಬುದುರಾಂ ಪೊಯಿಲಿಯೂರ್ ಮೊದಲಾದವರು ಕೊಡಗು ಪ್ರತ್ಯೇಕವಿರಬೇಕಾದ ಅವಶ್ಯಕತೆಯನ್ನು ವಿವರಿಸಿದರು. ನಂತರ ಮೇಲೆ ನಮೂದಿಸಿದ ಅರ್ಥದ ಠರಾವುಗಳು ಪಾಸಾಗಿ ಅವುಗಳ ನಕಲನ್ನು ಕೇಂದ್ರ ಸರಕಾರಕ್ಕೆ ಕಳುಹಿಸಲು ತೀರ್ಮಾನವಾಯಿತು.

ಗೋಣಿಕೊಪ್ಪಲು,

ತಾರೀಕು ೬-೧೧-೪೯ ರಲ್ಲಿ ಶ್ರೀಗಳಾದ ಸಿ. ಕೆ. ತಮ್ಮಯ್ಯ, ಕೆ. ಕೆ. ಅಪ್ಪಯ್ಯ ಮತ್ತು ಕೆ. ಎ. ಚಿಣ್ಣಪ್ಪನವರು ಹಸ್ತಪತ್ರಿಕೆ ಪ್ರಕಟಿಸಿ ಆಹ್ವಾನಿಸಿದ ಮೇರೆ ಕೊಡಗನ್ನು ಬೇರೆ ಪ್ರಾಂತವಾಗಬೇಕೆನ್ನುವವರ ಮೀಟಿಂಗು ಸಂತೆ ಮಾಳದಲ್ಲಿ ಏರ್ಪಟ್ಟಿತ್ತು. ಆ ಮೀಟಿಂಗಿಗೆ ಕೆಲವು ಸಂಯೋಜನಾವಾದಿಗಳೂ ಹಾಜರಿದ್ದರು. ಮೀಟಿಂಗಿಗೆ ಅಧ್ಯಕ್ಷರನ್ನು ಆರಿಸುವ ಬಗ್ಗೆ ತಕರಾರು ಪ್ರಾರಂಭವಾಯಿತು. ಕೆಲವರು ಶ್ರೀ ಕೊಂಗಂಡ ಗಣಪತಿ, ಇಲ್ಲವೇ ಹರಿಜನ ಚಿಣ್ಣ ಇವರ ಹೆಸರನ್ನೂ, ಮೀಟಿಂಗು ಕರೆಸಿದವರು ಶ್ರೀ. ಅಜ್ಜಿಕುಟ್ಟಿರ ಪೊನ್ನಪ್ಪ, ಅವರನ್ನು ತೃಪ್ತಿ ಇಲ್ಲದಿದ್ದರೆ ಶ್ರೀ. ಕೆ. ಪಿ ಕರುಂಬಯ್ಯ, ಇಲ್ಲದಿದ್ದರೆ ಕೊಂಡಿರ ಟಿ. ಉತ್ತಪ್ಪ ಇವರ ಹೆಸರುಗಳನ್ನು ಸೂಚಿಸಿದರು. ಸಭೆಯಲ್ಲಿ ಗಲಿಬಿಲಿ ಪ್ರಾರಂಭವಾಗಿ ಗದ್ದಲ ಪ್ರಾರಂಭವಾಯಿತು. ಕೆಲವರಿಗೆ ಪೆಟ್ಟು ಬಿದ್ದ ನಂತರ ಸಮಾಧಾನಗೊಂಡು ಶ್ರೀ. ಕೊಂಡಿರ ಉತ್ತಪ್ಪನವರ ಅಧ್ಯಕ್ಷತೆಯಲ್ಲಿ ಮೀಟಿಂಗು ನಡೆಯಿತು. ಶ್ರೀ. ಸಿ. ಎ. ಚಿಣ್ಣಪ್ಪನವರು ತನ್ನ ನೀತಿಯ [illegible] ಅಭಿಪ್ರಾಯ ತೆಗೆದು ಕೊಡಗಿನ ಭವಿಷ್ಯದ ಬಗ್ಗೆ ಯಾವ ನಿರ್ಣಯವೂ ಆಗಬೇಕೆಂದು ಮಾತಾಡಿದರು. ಶ್ರೀಗಳಾದ ಕೆ. ಪಿ ಕರುಂಬಯ್ಯ, ಪಿ ಸಿ ಉತ್ತಯ್ಯ, ಪಿ ಎಂ ನಾಣಯ್ಯ ಮತ್ತು ಕೆ ಕೆ. ಗಣಪತಿಯವರು ಮಾತಾಡಿದರು. ನಂತರ ಕೊಡಗಿನ ಜನರ ಅಭಿಪ್ರಾಯವನ್ನು ತೆಗೆಯದೆ ಕೊಡಗಿನ ಸಂಯೋಜನೆ ಮಾಡಕೂಡದು ಎಂಬ ಠರಾವು ಸರ್ವಾನುಮತದಿಂದ ಪಾಸಾಯಿತು.

ಹುದಿಕೇರಿ.

ತಾರೀಕು ೭-೧೧-೪೯ ರಲ್ಲಿ ಶ್ರೀಮಂಗಲನಾಡಿನ ಜನರ ಸಭೆಯೊಂದು ಶ್ರೀ ಕೆ. ಎಸ್ ನಂಜಪ್ಪನವರ ಅಧ್ಯಕ್ಷತೆಯಲ್ಲಿ ಹುದಿಕೇರಿಯಲ್ಲಿ ನಡೆಯಿತು. ಕೊಡಗನ್ನು ಪ್ರತ್ಯೇಕ ವಿರಿಸುವ ಅವಶ್ಯಕತೆಯನ್ನೂ ಯಾವುದೇ ನಿರ್ಣಯ ಮಾಡಲು ಜನರ ಅಭಿಪ್ರಾಯ ತೆಗೆದೇ ತೀರಬೇಕೆಂಬುದನ್ನೂ ವಿವರಿಸಿ ಶ್ರೀಗಳಾದ ಬಿ ಪಿ ಬೋಪಯ್ಯ, ಕೆ. ಕೆ ಗಣಪತಿ, ಮಂಜೆಟ್ಟಿರ ಮುತ್ತಣ್ಣ, ಪಳಂಗಂಡ ನಂಜಪ್ಪ, ಸೋಮಯಂಡ ಅಚ್ಚಯ್ಯ ಮತ್ತು ಎಚ್. ಸಿ. ನಂಜಪ್ಪ ಮೊದಲಾದವರು ಮಾತಾಡಿದರು. ಮೇಲಿನ ಅರ್ಥದ ಠರಾವುಗಳು ಸರ್ವಾನುಮತದಿಂದ ಪಾಸಾದವು.

ವೀರಾಜಪೇಟೆ.

ತಾರೀಕು ೯-೧೧-೪೯ ರಲ್ಲಿ ವೀರಾಜಪೇಟೆಯಲ್ಲಿ ವೀರಾಜಪೇಟೆ, ಬೆಪ್ಪುನಾಡು, ಅಮ್ಮತ್ತಿನಾಡು ಮತ್ತು ಕಡಿಯತ್ತನಾಡಿನವರ ಸಾರ್ವಜನಿಕ ಸಭೆಯೊಂದು ಶ್ರೀ. ಹಬಿಬುಲ್ಲಾಖಾನ್‌ರವರ ಅಧ್ಯಕ್ಷತೆಯಲ್ಲಿ ಜರಗಿತು. ಸಾವಿರಕ್ಕಿಂತಾ ಮಿಕ್ಕಿ ಜನರು ಹಾಜರಿದ್ದರು. ಕೊಡಗಿನ ಭವಿಷ್ಯ ಪ್ರಶ್ನೆಯನ್ನು ಕುರಿತು ಶ್ರೀಗಳಾದ ಐ. ಪಿ ಕಾರ್ಯಪ್ಪ, ಬಿ. ಪಿ ಬೋಪಯ್ಯ, ಪುಲಿಯಂಡ ಬೋಪಯ್ಯ, ಬಿ. ಎಂ. ಸುಬ್ಬಯ್ಯ, ಮಜೀದ್ ಖಾನ್, ಕೆ. ಎಂ. ಸೂಫಿ, ಪಳಂಗಂಡ ಪಂಜಪ್ಪ ಮೊದಲಾದವರು ಭಾಷಣ ಮಾಡಿದರು. ಕೊಡಗನ್ನು ಪ್ರತ್ಯೇಕ ಇಟ್ಟುಕೊಳ್ಳುವ, ಸಂಯೋಜನೆ ಮಾಡುವುದಾದರೆ ಜನತೆಯ ಅಭಿಪ್ರಾಯ ತಿಳಿಯದೆ ಮಾಡಕೂಡದೆನ್ನುವ ಠರಾವುಗಳು ಸರ್ವಾನುಮತದಿಂದ ಪಾಸಾದವು

ಬೇರಳಿನಾಡು

ತಾರೀಕ ೫-೧೧-೪೯ ರಲ್ಲಿ ರುದ್ರಗುಪ್ಪೆ ದೇವಸ್ಥಾನದಲ್ಲಿ ನಾಡಿನ ಹಾಜನರು ಮತ್ತು ನೆರೆಯ ಗ್ರಾಮಗಳ ಜನರು ಶ್ರೀ ಕೋಗಂಡ ಎಂ. ಕಾಳಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದರು. ಕೊಡಗಿನ ಭವಿಷ್ಯದ ಮೇಲಿನಂತೆ ಠರಾವು ಮಾಡಿ ಅಲ್ಲಿಯೇ ಸ್ವಲ್ಪ ಹಣ ಸಂಗ್ರಹಿಸಿಕೊಟ್ಟು ವಲ್ಲಭಭಾಯಿಯವರಿಗೆ ತಂತಿ ಮೂಲಕ ತಿಳಿಸುವಂತೆ ಶ್ರೀ ಕೋಗಂಡ ಮುದ್ದಪ್ಪನವರಿಗೆ ಅಧಿಕಾರ ಕೊಡಲಾಯಿತು.

ಮೂರ್ನಾಡು

ತಾರೀಕ ೧೦-೧೧-೪೯ ರಲ್ಲಿ ಶ್ರೀ. ಕೋದಂಡ ಮುದ್ದಪ್ಪನವರ ಅಧ್ಯಕ್ಷತೆಯಲ್ಲಿ ಪಾಂಡಾಣೆ ಮೈದಾನದಲ್ಲಿ ಸಾರ್ವಜನಿಕ ಸಭೆ ನಡೆದು ಕೊಡಗಿನ ಭವಿಷ್ಯದ ವಿಚಾರ ವಿವೇಚಿಸಲಾಯಿತು. ಶ್ರೀಗಳಾದ ಬಿದ್ದಂಡ ಸುಬ್ಬಯ್ಯ, ಕೆಂಬಡತಂಡ ಪೊನ್ನಪ್ಪ, ಪಾಂಡಂಡ ಕರ್ಯಪ್ಪ, ಮಡೆಯಂಡ ದೇವಯ್ಯ ಮೊದಲಾದವರು ಭಾಷಣ ಮಾಡಿದರು. ಕೊಡಗನ್ನು ಪ್ರತ್ಯೇಕವಿಟ್ಟು ಜವಾಬ್ದಾರಿ ಸರಕಾರ ಕೊಡಬೇಕೆಂಬ ಠರಾವು ಸರ್ವಾನುಮತದಿಂದ ಪಾಸಾಯಿತು.

ಚೆಪ್ಪುಡೀರ ಕುಟುಂಬ.

ಚೆಪ್ಪುಡೀರ ಕುಟುಂಬದ ಉತ್ತಮಜೀವನ ಸಂಘದ ಮಹಾಸಭೆಯು ಶ್ರೀ ಕೋಡೀರ ಉತ್ತಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಕಳೆದ ವರ್ಷ ಪ್ರೆಸಿಡೆಂಟರಾಗಿದ್ದ ಶ್ರೀ. ಚೆಪ್ಪುಡೀರ ಬೋಪಯ್ಯನವರನ್ನು ಈ ವರ್ಷಕ್ಕೂ ಪ್ರೆಸಿಡೆಂಟರಾಗಿ ಆರಿಸಲಾಯಿತು. ಈ ಮೀಟಿಂಗಿನಲ್ಲಿ ಕೊಡಗಿನ ಭವಿಷ್ಯದ ಬಗ್ಗೆ ವಿವೇಚಿಸಿ ಕೊಡಗನ್ನು ಬೇರೆ ಪ್ರಾಂತದೊಡನೆ ಸೇರಿಸಕೂಡದೆಂದೂ, ಇದು ಕೇಂದ್ರಕ್ಕೆ ನೇರವಾಗಿ ಸಂಬಂಧಿಸಿದ ಪ್ರಾಂತವಾಗಿ ಜವಾಬ್ದಾರಿ ಸರಕಾರ ಪಡೆಯಬೇಕೆಂದೂ ಠರಾವುಗಳಾದವು.

ಹರಿಜನ ದಿನ.

ಫ್ರೇಜರ್‌ಪೇಟೆಯಲ್ಲಿ ಹರಿಜನ ದಿನಾಚರಣೆಯು ಕೊಡಗಿನ ಜಿಲ್ಲಾ ನ್ಯಾಯಾಧೀಶರಾದ ಶ್ರೀ. ಎನ್. ಮುದ್ದಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರಥಮತಃ ಆಟೋಟಗಳ ಸ್ಪರ್ಧೆ, ಶುಚಿತ್ವ ಪೂಜೆ ನಡೆಸಲಾಯಿತು. ಈ ಕೂಟದಲ್ಲಿ ಪಾರುಪತ್ಯಗಾರರೂ, ಶ್ರೀ ಕೆ ಕೆ. ಐಯ್ಯಣ್ಣ, ಡಾ. ನಂಬೀಶನ್, ರಾಮರಾಯ, ಹೆಬ್ಬಾಲೆ ಈರಯ್ಯ, ಎನ್. ಸೋಮಣ್ಣ, ಮತ್ತು ಹರಿಜನ ಪೊನ್ನಯ್ಯನವರು ಭಾಷಣ ಮಾಡಿದರು. ಆಟೋಟಗಳಲ್ಲಿ ಜಯಶೀಲರಾದವರಿಗೆ ಬಹುಮಾನ ವಿತರಣೆ ಮಾಡಲಾಯಿತು. ಅಧ್ಯಕ್ಷರ ಬೋಧಪ್ರದ ಭಾಷಣದ ನಂತರ ವಂದನಾರ್ಪಣೆ, ಫಲಹಾರ ವಿತರಣೆ ಮತ್ತು ಮಂಗಳಾರತಿಯಿಂದ ಸಭೆ ಮುಕ್ತಾಯಗೊಂಡಿತು.

ತಿಳುವಳಿಕೆ.

ಮೈಸೂರು ಸಾರ್ವಜನಿಕ ಆರೋಗ್ಯದ ಕಾನೂನಿನ ಮೇರೆ ಮೈಸೂರು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಚಾಮರಾಜನಗರ, ಎಳಂದೂರು, ನಂಜೇಪುರ, ನಂಜನಗೂಡು ಮತ್ತು ಮೈಸೂರು ಮುನಿಸಿಪಾಲಿಟಿ ಸರಹದ್ದಿನ ಹೊರಗೆ ಹನ್ನೆರಡು ಸ್ಥಳಗಳೂ ಕಾಲರ ವಾಂತಿ ಬೇಧಿ ರೋಗವಿದೆ, ಎಂದು ತಿಳಿಸಿರುವರು.

ಮೇಲೆ ತಿಳಿಸಿರುವ ಸ್ಥಳಗಳಲ್ಲಿಂತಕ್ಕ ಎಲ್ಲಾ ಹೋಟೆಲುಗಳನ್ನು ಸಹ ೧೦ ದಿನಗಳ ಮುಚ್ಚಲು ಆಜ್ಞೆ ಮಾಡಿರುವರು.

ಈ ಸಂದರ್ಭದಲ್ಲಿ, ಕೊಡಗಿನಿಂದ ಈ ಪ್ರದೇಶಗಳಿಗೆ ಯಾರೂ ಹೋಗದೇ ಇರುವುದು ಉತ್ತಮ. ಹಾಗೆ ಹೋಗಲೇಬೇಕಾದಲ್ಲಿ, ಅವರುಗಳು ಇದಕ್ಕೆ ಸಂಬಂಧಪಟ್ಟ ಇನಾಕ್ಯುಲೇಷನ್ ಮಾಡಿಸಿಕೊಂಡು ಹೋಗಬೇಕು. ಮತ್ತು ಅಲ್ಲಿ ಸಿಗತಕ್ಕ ಆಹಾರ ಪದಾರ್ಥಗಳನ್ನು ಮತ್ತು ನೀರನ್ನು [illegible] ಸೇವಿಸಕೂಡದು. ಆಕಸ್ಮಾತ್, ಈ ವಿಷಯವನ್ನು ಓದಲು ಬಾರದ ಇರುವವರಿಗೆ ತಿಳಿಸಬೇಕೆಂದು ವಿನಂತಿ.

ಡಾ. ಸಿ. ಬಿ. ಕಾರ್ಯಪ್ಪ,
ಹೆಲ್ತ್ ಆಫೀಸರು, ಕೊಡಗು.

ಭಾಗಮಂಡಲ.

ತಾ ೧೫-೧೦-೪೯ನೇ ಶನಿವಾರ ದಿನ ಹಗಲು ೧೧ ಗಂಟೆಗೆ ಭಾಗಮಂಡಲ ದೇವಸ್ಥಾನದಲ್ಲಿ ಸಭೆಸೇರಿ ಶ್ರೀ. ನಂಜುಂಡಮಾಡ ಕಾಳಪ್ಪನವರ ಅಧ್ಯಕ್ಷತೆಯಲ್ಲಿ ಮೀಟಿಂಗ್ ನಡೆಸಿ ಈ ಕೆಳಗಿನ ಠರಾವುಗಳನ್ನು ಪಾಸುಮಾಡಲಾಯಿತು.

ದೇವಸ್ಥಾನಕ್ಕೆ ಹಲವಾರು ಕಡೆಗಳಿಂದ ಜಾತ್ರೆ ಸಮಯದಲ್ಲಿ ಜನರು ಬಂದು ಸೇರುವಲ್ಲಿ ಪೌಳಿಗಳ ಕೋಣೆಗಳಿಗೆ ಬೀಗ ಹಾಕಿರುವುದನ್ನು ಕಂಡು ಮ್ಯಾನೇಜರವರಿಗೂ ಪಾರುಪತ್ತೆಗಾರರಿಗೂ ತಿಳಿಸಿದಲ್ಲಿ ೬ ರೂಮ್‌ಗಳು ಪೋಲೀಸಿನವರಿಗೂ ಒಂದು ಶೀಲ್ದಾರ ತಂತ್ರಿಗೂ ಒಂದು ಭಜನೆ ಮಂದಿರವಾಗಿಯೂ ಇಡಲಾಗಿದೆಯೆಂದೂ ತಿಳಿಸಿದರು. ಆ ನಂತರ ಅವರವರ ನೆಂಟರುಗಳಿಗೆ ಬಿಟ್ಟು ಕೊಟ್ಟಿದ್ದಾರೆ! ಆದುದರಿಂದ ಇನ್ನು ಮುಂದೆ ಟೆಂಪಲ್ ಸಮಿತಿಯವರು ಬೀಗ ಹಾಕಿಕೊಳ್ಳುವುದನ್ನು ಬಾಕಿ ಮಾಡಬೇಕಾಗಿ ಕೇಳಿಕೊಳ್ಳುವಂತೆ ತೀರ್ಮಾನಿಸಿದೆ.

ದೇವಸ್ಥಾನದಲ್ಲಿ ತೀರ್ಥಬಾರದೆಂದು ಅಕ್ಕಿ ಮತ್ತು ಸಾಮಾನು ಕೊಡುವುದುಂಟು. ಈ ಕೊಟ್ಟಾರದಲ್ಲಿ ಪೇಟೆಯವರು ಭೋಜನ ಮಾಡುವುದು ಕಡಿಮೆಯೆಂದೂ ಇವರಲ್ಲಿ ಯಾತ್ರಿ ಮತ್ತು ಸಮಿತಿಯವರ ಸಿಟಿಂಗ್ಸ್‌ಗೆ ಅನುಕೂಲ ಸಾಧ್ಯವಿಲ್ಲದವ ದೇವರ ತೀರ್ಥ ಬಂದಿರುವ ಕಾರಣ ಇದನ್ನು ಸರಿಪಡಿಸಬೇಕೆಂದು ಸಮಿತಿಯನ್ನು ಕೇಳಿಕೊಳ್ಳಲು ನಿರ್ಣಯ ಮಾಡಿತು.

<u>ಪ್ರಹಸನ.</u>

ದಸರಾ ಹಬ್ಬ.

ಲೇ:- ಶ್ರೀ ಎಂ. ಎಸ್. ವೊಣ್ಣಪ್ಪ, ಕಾನೂರು.

ಮೈಸೂರ ನೋಡಬೇಕೆಂದು ಬಹಳ ದಿನದಿಂದಲೇ ನಾನು ಮನಸ್ಸು ಮಾಡಿದ್ದೆ. ದೂರ ಪ್ರಯಾಣ ಹೋಗುವಾಗ ಬರೀ ಕೈಯಲ್ಲಿ ಹೋಗಲಾಗುತ್ತದೆಯೆ? ಮನೆಯಲ್ಲಿ ಹಿಟ್ಟು ಬಟ್ಟೆಗೆ ಇಲ್ಲದಿದ್ದರೂ, ಕೊಂಡವನ್ನು ಕೊಡದಿದ್ದರೂ, ಯಾ ಉಪ್ಪಿಲ್ಲದೆ ಉಂಡರೂ ಯಾರಿಗೂ ಗೊತ್ತಾಗದು. ಆದರೆ ಹೊರಗೆ ಹೋಗುವಾಗ ನನ್ನ ಅಂತಸ್ತು, ಗೌರವ, ರೀತಿ ಎಲ್ಲಾ ಬೇಕಾಗುತ್ತವೆ ಅಂತ ಈ ವರ್ಷ ದಸರಾ ಹಬ್ಬಕ್ಕೆ ಹೋಗಬೇಕೆಂದು ನಿಶ್ಚಯಿಸಿದೆ. ಅದಕ್ಕಾಗಿ ಎಷ್ಟೋ ದಿನಗಳಿಂದ ಸಾಮಾನು ಸಲಕರಣೆಗಳನ್ನು ಒದಗಿಸಿದೆ. ಹೊರಡುವ ಮುಂಚಿನ ದಿನ ನನ್ನ ಸ್ತ್ರೀಯೂ ಹೊರಡಬೇಕೆ? ಎಂದವಳು, ಹಣವಿಲ್ಲವೆಂದು ಬಡವನಾಗಿ ನಟಿಸಿದೆ. ದಸರಾ ಹಬ್ಬದ ಕಾಗದ ಪತ್ರಿಯಾಗಳನ್ನೆಲ್ಲಾ ಉಸಿರಿದೆ, ಕಳ್ಳಕಾಕರ ಭಯ ಹುಟ್ಟಿಸಿದೆ, ಯಾವುದಕ್ಕೂ ಹೆದರುವ ಹಾಗೆ ಕಾಣಲಿಲ್ಲ. ಇದಕ್ಕಾಗಿ ನಮ್ಮಿಬ್ಬರೊಳಗೆ ಒಂದು ಚಿಕ್ಕ ಯುದ್ಧವೇ ನಡೆದು ಹೋಯಿತು. ಈ ಸ್ತ್ರೀ ಸ್ವಾತಂತ್ರ್ಯದ ಕಾಲದಲ್ಲಿ ಗಂಡ ಹೆಂಡಿರೊಳಗೆ ಯುದ್ಧ ನಡೆದರೆ ಸೋಲುವವರಾರು? ಕಡೆಗೆ ನಾನೇ ಶರಣಾಗತನಾಗಿ ಅವಳಿಗಾಗಿ ಐವತ್ತು ರೂಪಾಯಿ ಸಾಲ ಮಾಡಿ ಇಬ್ಬರೂ ಬಸ್ಸು ಹತ್ತಿದೆವು. ನಮ್ಮಿಬ್ಬರಿಗೂ ಮಾರನೆ ದಿನ ಇಳಿಯಬೇಕಾಗಿದ್ದರೂ ಇಬ್ಬರ ಸ್ಥಳದಲ್ಲಿ ನಾಲ್ಕು ಜನ ಕುಳಿತುಕೊಳ್ಳಬೇಕಾಗಿ ಬಂತು. ಆಗಲೇ ನನ್ನವಳಿಗೆ ದಸರಾ ಹಬ್ಬದ ಪ್ರಾರಂಭವಾಯಿತು. ಇವಳ 'ಇಸಿಪಿಸ್ಸಿ' ಕೇಳುವವರಾರು? ಸ್ತ್ರೀ ಸ್ವಾತಂತ್ರ್ಯಕ್ಕಾಗಿ ಗಂಡಂದಿರ ಜೊತೆ ಗುದ್ದಾಡುವವರು ಪುರುಷರಂತೆಯೇ ತೊಂದರೆಯನ್ನೂ ಸಹಿಸಿಕೊಳ್ಳಬೇಕೆಂದೆ!

ದಾರಿಯಲ್ಲಿ ಪರಿಚಿತರೆಲ್ಲರೂ 'ಏನಯ್ಯಾ ಎಲ್ಲಿಗೆ ಸವಾರಿ ಹೊರಟಿದ್ದಿಯಾ?' ಎಂದು ಕೇಳಿದಾಗ ಹೆಂಡತಿಯು, ಅರ್ಧಾಂಗಿಯೆಂಬುದಾಗಿ ಬಾಯಿಯಲ್ಲಿ ಹೇಳಿ ಅವರನ್ನು ಮನೆಗೆ ಕಳುಹಿಸಿ ಅ ರೀತಿ ಎನ್ನುವುದು ಪುರುಷ ಲಕ್ಷಣವಾಗಿದೆ. ನಾಗರಿಕ ಲಕ್ಷಣದಲ್ಲಿ ಅವರಿಗೂ ಸ್ವಾತಂತ್ರ್ಯ ಕೊಟ್ಟು ಹೊಸ ಹೊಸ ವಿಚಾರವನ್ನು ತಿಳಿಸುವ ಹೆಚ್ಚು ವಿಷಯಗಳನ್ನು ಅವರು ಕಲಿಯಲು ತಪ್ಪೇನು? ಸಂಸಾರ ಸೌಖ್ಯ ಸುಗಮವಾಗಿ ನಡೆದು ಇದ್ದ ಅತೃಪ್ತಿ ದೂರವಾಗುವುದು. ಇಷ್ಟು ವರ್ಷಗಳಿಂದ ಬರದಿದ್ದರೂ ಬಾಯಿಂದ ಉಸಿರು ಬಿಡದ ಸ್ತ್ರೀ ಜಾತಿಯವರೆಲ್ಲರ ಮೆಚ್ಚುಗೆಗೆ ಪಾತ್ರನಾದೆ. ಮುಂದಿನ ಚುನಾವಣೆಯಲ್ಲಿ ಸ್ತ್ರೀಯರಿಗೆ ಓಟು ಕೊಡುವ ಹಕ್ಕು ಸಿಕ್ಕಿದರೆ ನಾನು ಮಂತ್ರಿಯಾಗಬಹುದು.

ಮಧ್ಯಾಹ್ನ ಊಟದ ಹೊತ್ತಿಗೆ ಬಸ್ಸು ಮೈಸೂರು ತಲುಪಿತು. ಹೊಟೇಲು ಹುಡುಕ ಹತ್ತಿದೆವು. ನಡೆದು ನಡೆದು ಸಾಕಾಗಿ ಕಡೆಗೆ ಒಂದು ಜಟಕ ಗಾಡಿ ಹತ್ತಿದೆವು. ಪತ್ರಿಕೆಗಳಲ್ಲಿ ಜಾಹೀರಾತು ಕೊಡಿಸಿದ್ದ ಹೋಟೆಲುಗಳನ್ನೆಲ್ಲಾ ಹುಡುಕಿದೆವು. ಇಷ್ಟರಲ್ಲಿ ನಮ್ಮ ಗಾಡಿಗೆ ಮತ್ತೆ ನಾಲ್ವರನ್ನು ಗಾಡಿಯವನು ಹತ್ತಿಸಿಕೊಂಡ. ಅಂತೂ ಸ್ಥಳವಿದೆಯೆಂದೇ ಅತನ ಭಾವನೆ.

'ರುಚಿಕರ ಚಿಯಾದ ತಿಂಡಿಗೂ, ಬಿಸಿ ಬಿಸಿಯಾದ ಕಾಫಿಗೂ ನವೀನ ರೀತಿ ನೀತಿಯ ಊಟ, ವಸತಿಗೆ ನಮ್ಮಲ್ಲಿಗೆ ಬನ್ನಿ' ಎಂಬ ಜಾಹಿರಾತನ್ನು ನಂಬಿ ಹೋಟೆಲಿಗೆ ಹೋಗಿದರೆ ಸ್ಥಳವಿಲ್ಲ ಎಂಬ ಮಾತು ಎಲ್ಲೆಲ್ಲೂ ಕೇಳಿ ಬರುತಿತ್ತು. ಗಾಡಿ ಬಾಡಿಗೆ ಕೇಳಿದಷ್ಟು ಕೊಟ್ಟು ಒಂದು ಹೋಟೆಲಿನ ಹತ್ತಿರ ತಂಗಿದೆವು. ಊಟ ಕಾಫಿ ಬೇಕಾದರೆ ಟಿಕೇಟ್ ಹೊಂದಿಕೊಂಡು ಹೋಟೆಲೊಳಗೆ ಹೋಗಬೇಕು. ಇದನ್ನು ಸಂಪಾದಿಸಬೇಕಾದರೆ ಬಲ್ಯದಲ್ಲೇ ಗರಡಿ ಕಲಿಸಿರಬೇಕಾಗಿತ್ತು. ಸ್ತ್ರೀ ಸ್ವಾತಂತ್ರ್ಯಕ್ಕಾಗಿ ಹೋರಾಡುವ ನನ್ನ 'ಸ್ತ್ರೀ'ಯನ ಟಿಕೇಟು ತರಲು ಅವಳೊಬ್ಬಳನ್ನೇ ಬಿಟ್ಟು ಟಿಕೇಟಿಗೆ ಹೋಗಲು ನನಗೂ ಭಯ. ಕಾರಣ, ನಾವು ಮಾಡಿಸಿದ ಕಿಕ್ಕಿರಿದ ಆಭರಣಗಳು ಹೋದರೂ ಚಿಂತೆಯಿಲ್ಲವೆನ್ನಿ, ಆದರೆ ದೇವರು ಕೊಟ್ಟ ಕಿವಿ ಮೂಗುಗಳೇ ಕಳ್ಳರ ವಶವಾದರೆ!

ದಿನಕ್ಕೆ ಮೂರು ನಾಲ್ಕು ಹೊತ್ತು ಊಟ ತಿಂಡಿಯ ಪರಿಪಾಠವಾಗಿದ್ದ ನನಗೆ ಅನ್ನಕ್ಕೆ ಸೊನ್ನೆಯಾಯಿತು. ಹಣ್ಣು ಹಂಪಲು ತಿಂದು, ಗಲ್ಲಿ ಗಲ್ಲಿ ಸುತ್ತಿ, ನಲ್ಲಿ ನೀರು ಕುಡಿದು ತಲ್ಲಣಿಸಬೇಕಾಗಿ ಬಂತು. ರಾಜರ ಜಂಬೂ ಸವಾರಿ ಪ್ರಾರಂಭವಾಯಿತು. ಜನರ ನೂಕ ನುಗ್ಗಾಟದಲ್ಲಿ ನನ್ನಾಕೆಯು ಸೀರೆ ಸಿಕ್ಕಿ ಇದ್ದ ಒಂದು ಒಳ್ಳೆ ಸೀರೆ ಹರಿದು ಚಿತ್ರಗೆಟ್ಟಿತು. ಅದನ್ನು ಸೇರಿಸಿ ಅವಳು ಮೇಲೆ ಅಂಬಾರಿಯಲ್ಲಿ ಹೋಗುತ್ತಿರುವ ರಾಜನೆಲ್ಲಿ, ಹೊಟ್ಟೆಗೆ ಅನ್ನವಿಲ್ಲದೆ ಪರಿತಪಿಸುವ ನಾವೆಲ್ಲಿ? ನನ್ನ ಅಂತಸ್ತು, ಗೌರವ, ಗಾಂಭೀರ್ಯ ಏನಾಯಿತು? ಅಷ್ಟರಲ್ಲಿ ಮಳೆಯೂ ಬಂತು. ಎಲ್ಲಿ ತಲೆ ಮರೆಸಿಕೊಳ್ಳುವುದು? ಪ್ರತಿ ಮನೆಯ ಜಗಲಿಯಲ್ಲಿಯೂ ಜನರು ಕಿಕ್ಕಿರಿದು ನೆರೆದಿದ್ದರು. ನನ್ನಾಕೆಗೆ ಬಹಳ ಕಾಲೀನಷ್ಟ, ಯಾರೂ ಅವಳ ಪ್ಯಾರಿಸ ಕೂಡದು. ಕಾಲ ತುಳಿಯುಕೊಂಡರೆ; ಸಿಗರೆಟ್ಟು ಮಾನಯೆಂಗಾರೆ ಮಾಡಿ; ಮತ್ತೊಬ್ಬರು ಕುಡಿದ ಗ್ಲಾಸಿನಲ್ಲಿ ತಾನು ಕುಡಿಯಬಾರದೆಂಬ ಭಾವನೆ; ಗರ್ಭಿಣಿ ಮಾತಾಡಿದರೆ ಅವಳದೇ ಕಾಲ್ಪನಿಕೆ. ಎಲ್ಲವೂ ಹಳೆಯ ಕಾಲದ ನೆನಪಿನಲ್ಲಿಷ್ಟೆ. ಹಗಲು ಹೊತ್ತಿನಲ್ಲಿ ನಾನು ಕೂಡ ಅವನ ಮೈ ಮೇಲೆ ಕೈ ಬೀಳಕೂಡದೆಂದರೆ ಅತಿಶಯೋಕ್ತಿಯಾಗಲಾರದು. ಅದೆಲ್ಲಾ ಪರಗೇಶಕ್ಕೆ ಬಂದ ಮೇಲೆ ನಡೆಯುತ್ತದೆಯೇ? ನಾವು ನಿಂತ ಹೋಟೆಲು ಜಗಲಿಯಲ್ಲಿ ಸಾವಿರಾರು ಜನರ ಮಧ್ಯೆ ನಾವು ಸಿಲುಕಿ ಸೀದು ಹೋಗುವಂತಾಯಿತು. ಕಡೆಗೆ ಇಡೀ ರಾತ್ರಿಯನ್ನು ಸಿನೆಮಾ ಮಂದಿರದಲ್ಲಿ ಕಳೆಯಬೇಕಾಗಿ ಬಂತು. ಸಿನೆಮಾದಲ್ಲಿ ಹಳ್ಳಿಯ ಪ್ರಕೃತಿ ಸೌಂದರ್ಯವನ್ನು ತೋರಿಸಿದರು. ಹೌದು, ನಿಜವಾಗಿಯೂ ಮನೋಹರವಾದ ನೈಸರ್ಗಿಕ ಸೊಬಗನ್ನು ನೋಡಿ ಆನಂದ ಪಡಬೇಕಾದರೆ ಹಳ್ಳಿಗಳೇ ನಿಜವಾದ ಸ್ಥಳ. ಬೆಡಗು ಬಿಯ್ಯಾರಗಳಿಗೆ ಬಲಿ ಬೀಳದ ಸ್ತ್ರೀಯರ, ಸ್ವಾರ್ಥ ಸೂಯೆಗಳಿಗೆ ಎಡೆಯಿಲ್ಲದ ಮುಗ್ಧ ಹಳ್ಳಿಯ ಜನರು ಪ್ರತ್ಯಕ್ಷ ದೇವತೆಯರೆಂದೇ ಹೇಳಬೇಕು.

ಬೆಳಗಿನ ಜಾವದಲ್ಲಿ ಕಕ್ಕಸು ಹಿಡಿಕ ಹತ್ತಿದವು. ಸಾರ್ವಜನಿಕ ಕಕ್ಕಸುಗಳನ್ನು ಜನರು ಅರ್ಧ ಮೈಲಿನ ವರೆಗೂ ವಿಸ್ತರಿಸಿ ಬಿಟ್ಟಿದ್ದರು. ಅದಕ್ಕೂ ಸ್ತ್ರೀ ಪುರುಷರಿಸ್ಟದ ಕಾದು ನಿಲ್ಲಬೇಕಾಗಿತ್ತು. ಇದರೊಳಗೆ ನನ್ನಾಕೆ ಹೋಗುತ್ತಾಳೆಯೆ? ಮತ್ತೊಂದು ಹೊಸ ಕಕ್ಕಸಿಗೆ ಹೋದವು. 'ಒಮ್ಮೆ ನಮ್ಮ ಹೊಟೆಲನ್ನು ಸಂದರ್ಶಿಸಿ ಪರೀಕ್ಷಿಸಿರಿ' ಎಂಬ ಜಾಹೀರಾತಿನಂತೆ ನಾವು ಇದರ ಕಕ್ಕಸು ಮನೆಯನ್ನು ಸಂದರ್ಶಿಸಿದ ಅನಂತರ ನಗರದ ಸಾರ್ವಜನಿಕ ದಾರಿ ಬದಿಗೆ ಬಂದಿದ್ದರೆ ಎಂದು ಬಹಳ ತಿಳಿಯಿತು. ಎರಡು ದಿವಸದ ಊಟವಿಲ್ಲದಿದ್ದುದರಿಂದ ಮಲವಿಸರ್ಜನೆಯ ಅವಶ್ಯಕತೆಯು ಅಷ್ಟೇನು ಇರಲಿಲ್ಲ. ಉಪವಾಸ ಮತ್ತು ಜಾಗರಣೆಯಿಂದ ಇದೂ ಅನುಕೂಲವೇ ಅನ್ನಿಸಿತು.

ಅನಂತರ ಪಟ್ಟಣ ನೋಡಲು ಹೊರಟೆವು. ಸೇಂದಿ ಸಾರಾಯಿ ಕುಡಿಯಬಾರದೆಂದೂ ಬೀಡಿ ಸಿಗರೇಟು ಸೇದಬಾರದೆಂದೂ ಯಾವುದೊಂದು ಸಂಗ ಮಾಡಬಾರದೆಂದು ಗಾಂಧೀಜಿಯವರು ಹೇಳಿ, ಕೇಳಿ, ಉಪವಾಸ ಬಿದ್ದು ಜನರನ್ನು ಬೇಡಿಕೊಂಡಿದ್ದರೂ ಆ ಜನರಕಿವಿಗೆ ಬಿದ್ದ ಹಾಗೆ ಕಾಣಲಿಲ್ಲ. ಕಿಟಕಿಯಿಂದ ಸಾರಾಯಿ ತುಂಬಿದ ಗ್ಲಾಸುಗಳು ಹೊರಬೀಳುತ್ತಿದ್ದವು. ಅಲ್ಲಿ ಕಾಸಿನ ಅಡ್ಡಿ ಆತಂಕವೇನೂ ಇರಲಿಲ್ಲ. ಜನರು ಯಥೇಚ್ಛವಾಗಿ ಕುಡಿಯುತ್ತಿದ್ದರು. ಬೀಡಿ ವ್ಯಾಪಾರಿಗಳು ಅದನ್ನು ಅಲ್ಲಗಳೆದು 'ಶರೀರ ಪ್ರಕೃತಿ ಚೆನ್ನಾಗಿರಬೇಕಾದರೆ, ಮೆದುಳಿನ ಶಕ್ತಿ ಹೆಚ್ಚಬೇಕಾದರೆ, ನಿದ್ರೆಗೆಟ್ಟಿದ್ದರೆ ಪಿರ್ ಬೀಡಿ, ಗಂಗಾ ಬೀಡಿ, ಚಿಂಬೀಡಿಗಳನ್ನು ಸೇದಿ' ಅಲ್ಲಾನನ್ನು ನಂಬಿ ಉಲ್ಲಾಸ ಪಡಿರೆಂದು ಸಾವಿರಾರು ರೂಪಾಯಿ ವೆಚ್ಚ ಮಾಡಿ ಜಾಹಿರಾತು ಪಡಿಸುತ್ತಿದ್ದರು. ಹಿಂದೂ ದೇಶಕ್ಕೆ ಸ್ವಾತಂತ್ರ್ಯ ಗಳಿಸಿಕೊಟ್ಟ ಮಹಾತ್ಮರ ಮಾತನ್ನು, ಬೀಡಿ ಸಿಗರೇಟಿಗಾಗಿ ಹಣ ಸುಡುವ ಬುದ್ಧಿ ಸ್ವಾತಂತ್ರ್ಯ ಇಲ್ಲವೇ ಸುಳ್ಳು ಜಾಹಿರಾತುಗಳಿಗೆ ಬಲೀ ಬೀಳುವ ನಾಗರಿಕರೆಲ್ಲಿ? ಹೆಚ್ಚಿನ ಜ್ಞಾನವನ್ನು ಪಡೆಯಲೆಂದು ಬಂದ ನಮಗೆ ಈ ರೀತಿಯ ದುಶ್ಚಟಗಳನ್ನು ಪ್ರಚೋದಿಸುವುದನ್ನು ಕಂಡು ವಾಪಾಸು ಬಂದೆವು.

ದಾರಿಯಲ್ಲಿ ಅನೇಕ ಮೈಸೂರಿನ ಹಳ್ಳಿಗಳನ್ನು ದಾಟಿ ಬರುವಾಗ ಒಂದು ಹಳ್ಳಿಯಲ್ಲಿ ತಂಗಿದೆವು. ತಮ್ಮ ತಮ್ಮ ಹೊಲಗದ್ದೆಗಳಲ್ಲಿ ಉರಿಬಿಸಿಲಿನಲ್ಲಿ ಕೆಲಸ ಮಾಡುವ ವಿದ್ಯಾ ಬುದ್ಧಿಯಿಲ್ಲದ ಜನಸಾಮಾನ್ಯರನ್ನು ನೋಡಿದೆವು. ತಮ್ಮ ಮಕ್ಕಳನ್ನೂ ಶಾಲೆಗೆ ಕಳುಹಿಸದ ಅನಾಗರಿಕರು ದುಡಿಯಿಸಿ ಆಹಾರ ಧಾನ್ಯವನ್ನು ಬೆಳೆಸಿ, ಆಹಾರ ಧಾನ್ಯವನ್ನು ಬೆಳೆಸಿ ಮೈಸೂರು ಪಟ್ಟಣದಲ್ಲಿಯ ನಾಗರಿಕರ ಸೋಗಿನಲ್ಲಿರುವ ನಗರವಾಸಿಗಳಿಗೆ ಇವರ ಆಹಾರವನ್ನು ನೀಡುತ್ತಿರುವ ಇವರ ಬಾಳೇ ಶೋಚನೀಯ. ಇವರಿಗೆ ದಸರಾ ಹಬ್ಬವೇ ತಿಳಿಯದು. ಅವರ ಮನೆ ಮಾರುಗಳನ್ನು ವರ್ಣಿಸಲಸದಳ. ಅಷ್ಟು ಹೀನ ಸ್ಥಿತಿಯಲ್ಲಿದ್ದವು. ಕುಡಿಯುವ ನೀರಿನ ಸೌಕರ್ಯವಿಲ್ಲ, ರಾತ್ರಿ ಹೊತ್ತಿನಲ್ಲಿ ದೀಪವಿಲ್ಲ, ಮೈತುಂಬ ಬಟ್ಟೆಯಿಲ್ಲ. ಬೆಳೆಸಿದ ಆಹಾರವನ್ನು ತಿನ್ನಲೂ ಆಗಿಯರು. ರಾಜರ ಅರಮನೆಯಲ್ಲಿ ಗೊಣಗೊಂಡು ದೀಪಾವಳಿ ಹಳ್ಳಿಯಲ್ಲಿ ಊಗೊಂದು ದೀಪ. ಅರಮನೆ ಮೇಲಿನ ಮನೆಯಲ್ಲಿ ಇವನೊಬ್ಬ ಪರಪುಷ್ಟ ಜೀವಿ. ಈ ದೇಶಿ ಉದ್ದಕ್ಕೂ ಅಷ್ಟಕಷ್ಟ ಬೆಳೆಯಲು ಆಹಾರ ಸೌಕರ್ಯವಿದೆ.

ನನ್ನ ಕೋಟಿಯುಳ್ಳವರು ನನ್ನ ಧರ್ಮ, ನನ್ನ ಸಂಸಾರ ನಡೆಸಿಕೊಂಡು ಹೋಗುವುದೇ ನನ್ನ ಸತ್ಯಕರ್ಮ. ಪರರ ಸುಖದುಃಖಗಳ ಪ್ರಶ್ನೋತ್ತರಗಳೇ ನನ್ನ ವಿರಾಮ ಕಾಲದ ಸದುಪಯೋಗ. ನನ್ನ ಹಳ್ಳಿಯ ಹೊಲಗಳೇ ಆನಂದದಾಯಕ. ಇದು ಬಿಟ್ಟು ನಾವೇಕೆ ನಮ್ಮ ಹೊಲ ಮನೆಗಳನ್ನು ಬಿಟ್ಟು ಪಟ್ಟಣಕ್ಕೆ ಹೋಗಿ ನಿರ್ವಂತರ ಉತ್ಕಣ್ಣಗಳನ್ನು ನೋಡಬೇಕ? ಅವರ ಐಶ್ವರ್ಯ ಆಡಂಬರಗಳನ್ನು ನೋಡಿ ಮನಸ್ಸಿನ ಮಂಡಿಗೆಯನ್ನು ತಿನ್ನಬೇಕ? ಜೇನು ನೊಣಗಳು ಜೇನನ್ನು ಸಂಗ್ರಹಿಸಿದರೆ ತಿನ್ನುವುದು ಇತರರಲ್ಲವೆ? ಅವುಗಳೇನು ಮಾಡಬಲ್ಲವು? ಚಿಕ್ಕ ಮೀನುಗಳನ್ನು ತಿಂದೇ ದೊಡ್ಡ ಮೀನುಗಳು ಬದುಕಬೇಕು. ಬಡವರು ಬಲ್ಲಿದರ ಬಲಿಯಾಗುವುದು ಸಹಜವಾಗಿದೆ. ಲೋಕದಲ್ಲಿ ಏರುತಗ್ಗುಗಳಿರಬೇಕೆಂದು ದೇವರ ನೇಮವಿರಬೇಕು. ಮೈಸೂರ ಪ್ರಯಾಣ ಪಟ್ಟಣಗರ ಮೋಜ.

ಕೃತಜ್ಞತಾ ವಂದನೆ.

ತಾರೀಕು ೧೫-೯-೪೯ರಲ್ಲಿ ಶಿವೈಕ್ಯರಾದ ನನ್ನ ಪ್ರಿಯ ತಂದೆಯವರ ನಿಧನದ ಕಾಲದಲ್ಲಿ ನನಗುಂಟಾದ ದುಃಖದಲ್ಲಿ ಖುದ್ದಾಗಿ ಬಂದು ಮತ್ತು ತನ್ನ ಸಂತಾಪ ಸೂಚನಾ ಪತ್ರಗಳ ಮೂಲಕ ಭಾಗಿಗಳಾದ ನನ್ನ ಮಿತ್ರರಿಗೂ, ಬಂಧು ಬಳಗದವರಿಗೂ ಪ್ರತ್ಯೇಕ ಬರೆದು ವಂದಿಸಲು ಅಸಾಧ್ಯವಾದ ಕಾರಣ ಅವರೆಲ್ಲರಿಗೂ ಈ ಮೂಲಕ ನನ್ನ ಹೃತ್ಪೂರ್ವಕ ವಂದನೆಗಳನ್ನು ಅರ್ಪಿಸುತ್ತೇನೆ.

ಮರುವಂಡ ಬಿ ಕಾರ್ಯಪ್ಪ,
ಮಡಿಕೇರಿ

ಕೊಡಗಿನ ಭವಿಷ್ಯ ಮಥನ.

ಲೇ:– ಶ್ರೀ ಸಿ. ಎಂ ದೇವಯ್ಯನವರು.

(ಊನಲ್ಲಿ ಕೊಡಗಿನ ಭವಿಷ್ಯದ ವಿಚಾರ ದೊಡ್ಡ ಮೀಟಿಂಗು ನಡೆದು ಮನೆಗೆ ಬಂದ ಗಂಡ ಹೆಂಡತಿಯರೊಳಗೆ ಆದ ಸಂವಾದ.)

ಗಂಡ:–ಹೇಗಾಯ್ತು, ನನ್ನ ಭಾಷಣ? ನನ್ನ ಅಭಿಪ್ರಾಯಕ್ಕೆ ಜನರು ಏನೆನ್ನುತ್ತಾರೆ?

ಹೆಂಡತಿ–ಜನರನ್ನು ಬದಿರಲಿ. ನನಗೇ ನಿಮ್ಮ ಭಾಷಣದ ಅಭಿಪ್ರಾಯ ಸರಿ ಕಾಣಲಿಲ್ಲ

ಗಂಡ–ದೊಡ್ಡ ಪ್ರಾಂತದೊಡನೆ ಸೇರಿದರೆ ಕೊಡಗಿಗೆ ಬರುವ ಭಾಗ್ಯದ ವಿಚಾರದಲ್ಲಿ ನಿನಗೆ ಸಂಶಯವಿದೆಯೇ? ಕೊಡಗರು ಧನ್ಯರಾಗುವರು!

ಹೆಂಡತಿ–ಸ್ವಾತಂತ್ರ್ಯ ಬಂದು ಎರಡು ವರ್ಷವಾಗಿಲ್ಲ. ಶತಮಾನಗಳಿಂದ ಗುಲಾಮರಾಗಿ ಬದುಕಿದವರಿಗೆ, ಪರಕೀಯರ ಅಂಕುಶವೇ ಇಲ್ಲದಿದ್ದರೆ ರುಚಿಸುವುದು ಹೇಗೆ? ಕರುಬನಿಗೆ ಉನ್ನತ ಹಾಸಿಗೆ ಕೊಟ್ಟರೆ ನಿದ್ರೆ ಬಾರದ ಹಾಗೆ ಪರಾಧೀನತೆಯಲ್ಲಿ ಪಾಲಿಗೆ ಸಿದ್ಧಿಸಿದಂತೆ ಸಂದಾಯತೆಯಲ್ಲಿ ಮುಳುಗಿ ಬಾಳಿದ ನಿಮಗೆ ಸ್ವಾತಂತ್ರ್ಯ ಹೇಗೆ ಹಿಡಿಸೀತು? ನೀವಂತೂ ಹಾಗೆ ಬರಿ. ಮುಂದಿನ ಪೀಳಿಗೆಯಾದ ಸ್ವತಂತ್ರ್ಯದ ಮಕ್ಕಳಿಗೂ ನಿಮ್ಮ ಸಂಧೀನ ರೋಗವನ್ನು ಅಂಟಿಸದಿರಿ.

ಗಂಡ–ದೇಶದ ಹಲವಾರು ಪ್ರತ್ಯೇಕವಾದಿಗಳಂತೆ ನಿನಗೂ ತಲೆಇಲ್ಲ. ಬಾವಿಯೇ ಸಮುದ್ರವೆಂದು, ಹಾರಾಡುವ ಕಪ್ಪೆಗಳಂತೆ ನೀವು.

ಹೆಂಡತಿ–ಇರಬಹುದು. ಸಮುದ್ರದ ಮೊಸಳೆಗೆ ಆಹುತಿಯಾಗುವದಕ್ಕಿಂತ ಬಾವಿಯ ಕಪ್ಪೆಯ ಜೀವನ ಹಿತವೆನಿಸಬೇಕಲ್ಲವೇ? ಪ್ರತ್ಯೇಕವಾದಿಗಳು ಬಾವಿಯ ಕಪ್ಪೆಗಳಂತೆ ಎಂದು ತಿಳಿದಿದ್ದರೆ ಅದು ನಿಮ್ಮ ದೃಷ್ಟಿದೋಷ. ವಿಕೇಂದ್ರೀಕೃತ ಆಡಳಿತ ಕ್ರಮದಲ್ಲಿಯೇ ಜಗತ್ತಿನ ಶಾಂತಿ ಎಂಬುದನ್ನು ಬಾಪೂ ನುಡಿದಾಗ ಅಂದು ನೀವು ತಲೆ ತೂಗಿದಿರಿ. ಅದೇ ಬೇಕೆಂದಿರಿ. ಇಂದು ನೆರೆಯಲ್ಲಿ ನಿಮಗೆ ಕುರ್ಚಿ ದೊರೆಯುವದೆಂದಾಗ ಬಾಪುವಿನ ತತ್ವಗಳನ್ನು ಗಾಳಿಗೆ ಚೆಲ್ಲಿದಿರಿ. ಇಲ್ಲದಿದ್ದರೆ ಅಂದು ಪೂರ್ವ ಪ್ರತಿಭಾ ರಿಗಳಾಗಿದ್ದ ನೀವು ಇಂದು ಸ್ವದೇಶಿ ಪರದೇಶಿಗಳ ತ್ರಿಶಂಕುಸ್ವರ್ಗದಲ್ಲಿ ಸುತ್ತಿದ್ದಿರೇ?

ಗಂಡ–ಕೊಡಗು ಪ್ರತ್ಯೇಕ ರಾಜ್ಯವಾಗಿ ನಿಲ್ಲಲಾರದು. ಅದಕ್ಕೆ ಹಣದ ಬಲವಿಲ್ಲ. ಅವನ್ನೆಲ್ಲಾ ಆಲೋಚಿಸಿಯೇ ನಾನು ಈ ನಿರ್ಧಾರಕ್ಕೆ ಬಂದುದಲ್ಲವೇ?

ಹೆಂಡತಿ–ಶತಮಾನಗಳಿಂದ ಪ್ರತ್ಯೇಕವಿರಲು ಸಾಧ್ಯವಿದ್ದ ಕೊಡಗಿಗೆ ಇಂದು ಹಣವಿಲ್ಲದಾಯಿತೇ? ಕಾಲೇಜಿಗೆ ಹಣವಿಲ್ಲವೆಂದಿರಿ, ಕಾಲೇಜಾಯಿತು. ಅಣೆಕಟ್ಟುಗಳಿಗೆ ಹಣವಿಲ್ಲವೆಂದಿರಿ ಅವು ಆಗುತ್ತಿವೆ. ಬೇತರಿ ಸೇತುವೆಗೆ ಹಣವಿಲ್ಲವೆಂದಿರಿ. ಅದಕ್ಕೂ ಹಣ ಒದಗಿದೆ. ಇವನ್ನೆಲ್ಲಾ ಕಣ್ಣಾರೆ ಕಂಡೂ ಕುರುಡರಂತೆ ತಾವು ಹಿಡಿದ ಮೊಲಕ್ಕೆ ಮೂರೇ ಕಾಲೆಂದು ವಾದಿಸುವಿರೇಕೆ?

ಗಂಡ–ಮೈಸೂರಿನೊಡನೆ ಸಂಯೋಜನೆಯಾದರೆ ನಷ್ಟವೇನೆ? ಮೈಸೂರನ್ನು ನೀನು ಕಂಡಿಲ್ಲವೇ? ಸಂಪನ್ನ ದೇಶ.

ಹೆಂಡತಿ–ನಷ್ಟ ಒಬ್ಬಿಬ್ಬರಿಗಲ್ಲ; ಒಂದೆರಡು ವಿಧದಲ್ಲಲ್ಲ ಕೇಳಿ, ಮೈಸೂರಿನೊಡನೆ ಸೇರಿದರೆ ಕೊಡಗಿನ ನೌಕರರ ಸಂಖ್ಯೆ ಕಡಿಮೆಯಾಗುವದು. ಉಳಿದ ನೌಕರರ ವೇತನ ಕಡಿಮೆಯಾಗುವದು. ಮೈಸೂರಿನ ಉದ್ಯೋಗಸ್ಥರ ವೇತನ ದರ ತಿಳಿದಿರುವದೇ? ಲಂಚಗುಳಿತನ ಮೇರೆಮೀರಿ ಹಬ್ಬುವದು. ರೈತನ ಜೀವನ ಕಷ್ಟಪ್ರಾಯವಾಗುವದು. ಮೈಸೂರು ರೈತನ ಸ್ಥಿತಿಯನ್ನು ನೀವು ನೋಡಿಲ್ಲವೇ? ಹೊಟ್ಟೆ ಹೊರಲು, ಯೋಗ್ಯ ಆಹಾರ ಅನ್ನಲು ತಿಳಿಯದ ಅನಾಗರೀಕ ಸ್ಥಿತಿ!

ಗಂಡ:–ಆ ಸರಕಾರದಲ್ಲಿ ನನ್ನ ಕೈಯೂ ಇರುವದಿಲ್ಲವೇ? ಈಗಲೇ ಶಾಸನ ಸಭೆಗಳಲ್ಲಿ ಇಷ್ಟು ಸ್ಥಾನ, ಮಂತ್ರಿಮಂಡಳದಲ್ಲಿ ಇಷ್ಟು ಸ್ಥಾನ, ಇಂಥಾ ಹಕ್ಕುಬಾಧ್ಯತೆಗಳನ್ನು ಉಳಿಯುಗೊಡಲಾಗುವದೆಂದು ಭರವಸೆಗೊಡಲು ಅವರು ತಯಾರಿದ್ದಾರೆ.

ಹೆಂಡತಿ–ನೀವೂ ಪತ್ರಿಕೆ ಓದುವವರು! ರೆಡ್ಡಿ ಸರಕಾರದ ಮುಂದಿನ ಚುನಾವಣೆ ... ಸಾಧ್ಯತೆ ಇಲ್ಲದಿರುವಾಗ ... ಭರವಸೆ ಉಳಿದೀತೆ? ಕೂಡಿ ಸ ... ಜೀವನ ನಡೆಸುವ ಭಾಗ್ಯ ಮಾತ್ರ ನಿಮಗೆ ಬಂದೀತಲ್ಲದೆ ಬೇರೇನೂ ದೊರೆಯದು.

ಗಂಡ–ಹೆಂಗಸಿನ ಬುದ್ಧಿ ನನಗೆ ಗೊತ್ತಿಲ್ಲವೇ? ಪ್ರತ್ಯೇಕವಾದಿಗಳು ಕೊಚ್ಚಿಕೊಳ್ಳುವಂತೆ ನೀನು ಕೊಚ್ಚಿಕೊಳ್ಳುತ್ತಿರುವಿ. ಕೊಡಗಿನಲ್ಲಿ ಬತ್ತವಲ್ಲದೆ ಇನ್ನೇನುಂಟು. ಮೈಸೂರಿನವರು ಉದಾರ ಮನಸ್ಸಿನಿಂದ ಧನಗಳನ್ನು ಬಿಡದಿದ್ದರೆ ಅದಕ್ಕೂ ಸೊನ್ನೆ. ಅದಿಗೆ ಮನೆಯ ಪಾರುಪತ್ಯೆ ಮಾಡುವವರ ತಲೆ ಎಷ್ಟು? ಮೈಸೂರಿನ ಮಂತ್ರಿಗಳ ಆದರ ಸತ್ಕಾರ ವಿನಯಗಳನ್ನು ನೋಡಿದ್ದರೆ ತಿಳಿಯುತಿತ್ತು. ಕೊಡಗಿನ ಯೋಗ್ಯರು ತಮ್ಮ ಪ್ರತಿಭೆಯನ್ನು ಬೀರಲು ವಿಶಾಲ ಕ್ಷೇತ್ರವಾಗುವದು ಕಣೇ?

ಹೆಂಡತಿ–ಶತಮಾನಗಳಿಂದ ಪರಾಕ್ರಮಣ ನಡೆದ ಕಾಲಕ್ಕೂ ತಮ್ಮ ಭುಜಬಲದಿಂದ ಸ್ವಾತಂತ್ರ್ಯವನ್ನು ಉಳಿಸಿದ ವೀರಪುರುಷರ ಹೊಟ್ಟೆಯಲ್ಲಿ ನಿಮ್ಮಂಥಾ ಗುಲಾಮರಿಗಳು ಹುಟ್ಟಬೇಕಿತ್ತೆ? ಕಾಲು ಕಟ್ಟಿದರೆ ಮಾತ್ರ ಕತ್ತಿಗೆ ಮೇಯಲು ಮನಸ್ಸಂತೆ! ಅದರಂತೆ ಗುಲಾಮಗಿರಿಯಲ್ಲೇ ನಿಮ್ಮ ಧರ್ಮಕ್ಕೆ ಉದ್ಧಾರ ಕಲು ಇಚ್ಛೆ!

ಗಂಡ–ಪ್ರತ್ಯೇಕವಾದಿಗಳು ಎಷ್ಟೇ ಹಾರಾಡಿದರೂ ಅವರ ಹಾರಾಟ ತಾ. ೧೭ರ ವರೆಗೆ ಮಾತ್ರ. ಎಲ್ಲಿಯೂ ಅಂದು ನಿರ್ಣಯವಾಗದಿರದು.

ಹೆಂಡತಿ–ಡೆಲ್ಲಿಗೆ ಹೋಗುವ ಹತ್ತು ಜನರೇ ಕೊಡಗು ದೇಶವೆಂದು ನೀವು ಭಾವಿಸಿರಬೇಕು. ಆ ಮುಂದಾಳುಗಳು ಹೋಗಿ ಕೊಡುವ ಅಭಿಪ್ರಾಯವು ಜನರಿಗೆ ಹಿತವಾಗದಿದ್ದರೆ ಜನರೂ ತಟಸ್ಥ ಕುಳಿತಿರುವರೆಂದು ನೀವು ಭಾವಿಸಿರುವಿರೇನು? ಈ ಪ್ರತಿನಿಧಿಗಳನ್ನು ಕಳುಗಿಸಿ ಮುಂದಿನ ಕಾರ್ಯಕ್ರಮ ಮಾಡಲು ಜನತೆಗೆ ತಿಳಿದಿದೆ. ಬಲಾತ್ಕಾರದಿಂದ ಒಂದು ನಿರ್ಣಯವನ್ನು ಜನತೆಯ ಮೇಲೆ ಹೇರಲು ಇದು ಹಿಟ್ಲರನ ಜರ್ಮನಿ ಅಲ್ಲವಾತನೆ!

ಗಂಡ– ಹೈದರಾಬಾದಿನಂಥಾ ದೇಶವೇ ಮಣಿಗುತ್ತಿದೆ; ಇನ್ನು ಈ ಕೊಡಗು!

ಹೆಂಡತಿ–ಕೊಡಗೇನು ಹೈದರಾಬಾದಿನಂತೆ ಸ್ವತಂತ್ರವಾಗಿರಬೇಕೆಂದು ಕೂಗುತ್ತಿದೆಯೇನ? ಕೇಂದ್ರದ ಒಂದು ಸ್ವಾಮಂತ ಆಡಳಿತ ಘಟಕವಾಗಿ ಗಾಂಧೀಜಿಯವರ ಅಖಿಲ ಹುಮ ಗ್ರಾಮಪಂಚಾಯತ ರಾಜ್ಯಭಾರವನ್ನು ನಡೆಸಿ ಇಡೀ ಜಗತ್ತಿಗೆ ಮಾದರಿಯಾಗಬೇಕೆಂದಿರುವ ಕೊಡಗನ್ನು ಬಲಾತ್ಕಾರದಿಂದ ಸೇರಿಸುವವರಾರು?

ಗಂಡ–ಇತ್ತೀಚೆಗೆ ನನಗೂ ಒಮ್ಮೊಮ್ಮೆ ಗಡಿಬಿಡಿಯೆನಿಸುವದುಂಟು. ಯುವಕರಿಗೆ ಹಿತವಾಗಲೀ ಎಂದು ನಾವು ಸಂಯೋಜನೆಗೆ ಯತ್ನಿಸಿದರೆ ಅವರು ಕಿಡಿಯಾಗತೊಡಗಿದ್ದಾರೆ. ಮಹಮ್ಮದೀಯರು ಕೊಡಗು ಬೇರಿರಲಿ ಎಂಬ ಠರಾವು ಮಾಡಲಿರುವರೆಂಬ ವರ್ತಮಾನ ಕೇಳಿದೆ. ಪ್ಲಾಂಟರುಗಳ ಸಂಘವು ಹಾಗೆ ಠರಾವು ಮಾಡಿ ಕೇಂದ್ರಕ್ಕೆ ತಿಳಿಸಿದೆಯಂತೆ. ನಾವು ಎಷ್ಟೇ ಪ್ರಯತ್ನಪಟ್ಟರೂ ಗಾಳಿ ಇದಿರಾಗಿ ಬೀಸುತ್ತಿದೆಯಲ್ಲ. ನಮ್ಮೊಳಗೇ ಇದ್ದ ಕೆಲವರು ಅತ್ತ ಸಾಗತೊಡಗಿದ್ದಾರೆ. ಎಲ್ಲಾ ಮುಂದಾಳುಗಳಿಗೇ ಕಷ್ಟ. ನಮ್ಮ ನ್ಯಾಯದಂತೆ ನಾವು ಕೆಲಸ ಮಾಡಬೇಕಾಗಿ ಬಂದಿದೆ. ಸಂಯೋಜನೆಯಾಗದಿದ್ದರೆ ನಮಗೆ ಸ್ಥಳವೆಲ್ಲಿ? ಅದ್ದರಿಂದ ಹೇಗಾದರೂ ಹಿಡಿದ ಹಠದ ಧೀಲೆಂಬೆಂಕ.

ಹೆಂಡತಿ–ಇದನ್ನೆ ಮತ್ತೊಂದು ಮಾತಿನಿಂದ ದೇಶದ್ರೋಹವೆಂದು ಹೇಳಬಹುದು. ಬಹುಜನರ ಅಭಿಪ್ರಾಯ ತೆಗೆಯಬಾರದೆಂದೂ, ಹೇಗೂ ಬಲಾತ್ಕಾರದ ಸಂಯೋಜನೆ ಮಾಡಿ ನಿಮ್ಮ ಸ್ವಾರ್ಥಸಾಧನೆ ಮಾಡಿಕೊಳ್ಳಬೇಕೆಂದೂ ಯತ್ನಿಸುವ ನೀವು ಜನಮುಂದಾಳುಗಳೆ? ಯಾರಿಗೆ ಹಿತ ಮಾಡಲು ಹೊರಟಿರುವಿರಿ?

ಗಂಡ–ಏನು ಮಾಡುವದು? ಪ್ರತಿಷ್ಠೆಗೆ ಕಟ್ಟುಬಿದ್ದ ಮೇಲೆ ಸರಿಯೋ ತಪ್ಪೋ ಅದರಂತೆ ವರ್ತಿಸಲೇ ಬೇಕು. ಈಗ ಬೇರೆ ಉಪಾಯವಿಲ್ಲ.

ಹೆಂಡತಿ–ಇಲ್ಲವೆ ಏನು? ನಾನು ಉಪಾಯ ಹೇಳುತ್ತೇನೆ. ನಿಮ್ಮ ಮಾನವು ಉಳಿಯುವಂತೆ ಮಾಡುತ್ತೇನೆ. ತಾರೀಕು ೧೭ರಲ್ಲಿ ಡೆಲ್ಲಿಗೆ ಹೋಗುವ ಪ್ರತಿನಿಧಿಗಳೆಲ್ಲರೂ ಒಮ್ಮತದಿಂದ ದೇಶದ ಭವಿಷ್ಯ ನಿರ್ಣಯವು ಜನತೆಯ ಅಭಿಮತ ತೆಗೆದು ಆಗಬೇಕೆಂದು ಸೂಚಿಸಲಿ. ನೀವೇಕೆ ಜವಾಬ್ದಾರಿ ಹೆಗಲ ಮೇಲೆ ಹೊರಲೆತ್ತಿಸುವಿರಿ. ಭಾರವನ್ನು ಜನರ ಹೆಗಲಿಗೆ ಕೊಡಿರಿ. ಕೊಡಗಿನ ಜನರ ಅಭಿಪ್ರಾಯದಂತೆ ಕೊಡಗಿನ ಭವಿಷ್ಯ ತೀರ್ಮಾನವಾಗಬೇಕೆಂದೂ, ಅದ್ದರಿಂದ ಯಾಕ್ಕ ಮಾರ್ಗದಿಂದ ಜನಾಭಿಪ್ರಾಯ ತೆಗೆಯುವ ಏರ್ಪಾಟು ಮಾಡಬೇಕೆಂದೂ ಸಹ ಅಭಿಪ್ರಾಯ ಕೊಡಲಿ. ಜನರೇ ಭವಿಷ್ಯವನ್ನು ನಿರ್ಣಯಿಸುವಂತಾಗಿ ನೀವು ಜನಾನುರಾಗಿಗಳಾಗಿಯೇ ಉಳಿಯುವಂತಾಗಲಿ

ಗಂಡ–ಕಷ್ಟ ಕಾಲದಲ್ಲಿ ಯೋಗ್ಯ ಸಲಹೆ ಕೊಡುವವರೆಂದರೆ ಹೆಂಗಸರು. ಜನರಲ್ಲಿ ಉದ್ವೇಗವಿರದು. ಶಾಂತಿ, ಸಮಾಧಾನವಿರುತ್ತದೆ. ನೀನು ಕೊಟ್ಟ ಅಭಿಪ್ರಾಯ ಎರಡು ಕಡೆಗೂ ಸರಿಹೋಗುತ್ತೆ. ಹಾಗೆಯೇ ಎಲ್ಲಗೂ ಮಾಡುವಂತಾಗಲಿ.

ಮಧ್ಯಾಹ್ನ ೩ ಗಂಟೆ. ಹೊಟ್ಟೆ ಹಸಿಯುವದಿಲ್ಲವೇನೆ?

ಪಟ್ಟಣಗಳಲ್ಲಿ ಪೆಟ್ಟಿಗೆಯಲ್ಲಿ ತರಕಾರಿ ಬೆಳೆಯುವುದು.

ನಮ್ಮ ದೇಶದಲ್ಲಿ ಆಹಾರ ಪದಾರ್ಥಗಳ ಮುಗ್ಗಟ್ಟು ಎಷ್ಟರ ಮಟ್ಟಿಗೆ ಇದೆಯೆಂಬುದು ಈಗಾಗಲೇ ಎಲ್ಲರಿಗೂ ತಿಳಿದಿರಬೇಕಾದ ಸಂಗತಿಯಾಗಿದೆ. ಸೇಟೆಪಟ್ಟಣಗಳಲ್ಲಿ ಜನರಿಗೆ ಆಹಾರ ದವಸಧಾನ್ಯಗಳನ್ನು ಬೆಳೆಸುವ ಅನುಕೂಲತೆಯು ಬಹಳ ಕಡಿಮೆ. ಆದರೆ ಪ್ರತಿಯೊಬ್ಬ ಪಟ್ಟಣಿಗನು ತಮ್ಮ ತಮ್ಮ ಹಿತ್ತಲುಗಳಲ್ಲಿಯೂ, ಹೂವಿನ ತೋಟಗಳಲ್ಲಿಯೂ, ತರಕಾರಿಯನ್ನು ಬೆಳೆಯಬಹುದು. ತರಕಾರಿಯು ಒಂದು ಮುಖ್ಯ ಆಹಾರ ಪದಾರ್ಥವೇ ಆಗಿದೆ. ಅಲ್ಲದೆ ತರಕಾರಿಯನ್ನು ನಾವು ತುಂಬಾ ಉಪಯೋಗಿಸಿದ್ದೇ ಆದರೆ ದವಸಧಾನ್ಯಗಳ ಖರ್ಚು ಕೆಲವು ಮಟ್ಟಿಗೆ ಕಡಿಮೆಯಾಗುತ್ತದೆ. ಆದುದರಿಂದ ಪಟ್ಟಣಿಗರು ತಮತಮಗೆ ಸಾಧ್ಯವಾಗುವಷ್ಟು ತರಕಾರಿಯನ್ನು ಬೆಳೆಸಿದಲ್ಲಿ ತಮ್ಮ ಧವಸಧಾನ್ಯಗಳ ಅವಶ್ಯಕತೆಯನ್ನು ಕಡಿಮೆ ಮಾಡಿಕೊಳ್ಳುವುದು ಮಾತ್ರವಲ್ಲದೆ, ಅನ್ನ ತರಕಾರಿಯನ್ನು ಬೆಳೆಯಲು ಬೇಕಾಗುವ ಸ್ಥಳಗಳಲ್ಲಿ ಗ್ರಾಮಸ್ಥರು, ದವಸಗಳನ್ನು ಬೆಳೆಯಬಹುದು. ಅನೇಕ ಪಟ್ಟಣಿಗರಿಗೆ ತರಕಾರಿ ಬೆಳೆಯಲು ಸ್ಥಳವಿಲ್ಲದೆ ಇರಬಹುದು. ಅಂಥವರು ಪೆಟ್ಟಿಗೆಗಳಲ್ಲಿಯೂ, ಡಬ್ಬಿಗಳಲ್ಲಿಯೂ, ಹಿಂದೆ ಹೇಳಿದಂತೆ ಗೊಬ್ಬರ ಮಿಶ್ರಮಾಡಿದ ಮಣ್ಣನ್ನು ತುಂಬಿಸಿ, ಅವುಗಳಲ್ಲಿ ತರಕಾರಿಯನ್ನು ಬೆಳೆಯುವ, ಪ್ರಯತ್ನವನ್ನು ಮಾಡಬೇಕು. ಇಂಥ ಪೆಟ್ಟಿಗೆಗಳನ್ನು ಮನೆಯ ಜಗಲಿ, ಮುಂತಾದ ಕಡೆಗಳಲ್ಲಿ ಇಟ್ಟುಕೊಳ್ಳಬಹುದು. ಈ ರೀತಿಯ ಒಬ್ಬೊಬ್ಬ ಮನುಷ್ಯನ ಪ್ರಯತ್ನದಿಂದ ಸಿಕ್ಕುವ ಪ್ರಯೋಜನವು ಸ್ವಲ್ಪ ಕಡಿಮೆಯೆಂಬುದೇನೋ ನಿಜ. ಆದರೆ ಪಟ್ಟಣಿಗರು ಮಾಡುವ ಪ್ರಯತ್ನವೆಲ್ಲಾ ಒಟ್ಟುಗೂಡಿಸಿದರೆ 'ಹನಿಕೂಡಿದರೆ ಹಳ್ಳ, ತೆನೆಕೂಡಿದರೆ ಭತ್ತ'ವೆಂಬಂತೆ ದೇಶದಲ್ಲಿ ಒಟ್ಟರೆಯಾಗಿ ಅನೇಕ ಸಾವಿರ ಟನ್ನು ಜಮೀನು ದವಸಧಾನ್ಯ ಉತ್ಪತ್ತಿಗೆ ಉಳಿತಾಯವಾಗಿ ಸಿಕ್ಕುತ್ತದೆ. ಪಟ್ಟಣಗಳಿಗೆ ಬರುವ ಗ್ರಾಮಸ್ಥರು ಕೂಡ ಪಟ್ಟಣಿಗರು ಮಾಡುವ ಈ ರೀತಿಯ ಸಾಧನೆಯನ್ನು ಕಂಡು ತಾವು ಕೂಡ ಇನ್ನಷ್ಟು ಪ್ರಯತ್ನಪಡಬೇಕೆಂಬ ಮನಸ್ಸು ಅವರಲ್ಲಿ ತಾನಾಗಿಯೇ ಹುಟ್ಟುವುದು. ಇದನ್ನು ಮನಗಂಡೇ ನಮ್ಮ ಪ್ರಧಾನ ಮಂತ್ರಿಗಳು ಆಹಾರದ ಮುಗ್ಗಟ್ಟನ್ನು ಪರಿಹರಿಸುವ ವಿಧಾನಗಳನ್ನು ಚರ್ಚಿಸುತ್ತಾ ಪಟ್ಟಣಿಗರೆಲ್ಲರೂ ಪೆಟ್ಟಿಗೆ ಮತ್ತು ಬುಟ್ಟಿಗಳಲ್ಲಿ ತರಕಾರಿಯನ್ನು ಬೆಳೆಯಬೇಕೆಂದು ಹೇಳಿರುವುದಾಗಿದೆ. ಬದನೆ, ಬೆಂಡೆ, ನವಿಲುಕೋಸು, ಬೀಟ್‌ರೂಟ್, ಮೂಲಂಗಿ, ಟೊಮೇಟೊ, ಹಾಲುಗಡ್ಡೆ, ಮೆಣಸಿನ ಇವೇ ಮುಂತಾದವುಗಳನ್ನು ಪೆಟ್ಟಿಗೆಗಳಲ್ಲಿ ಬೆಳೆಯಬಹುದು. ಅದ್ದರಿಂದ ಪ್ರತಿಯೊಬ್ಬ ಪಟ್ಟಣಿಗನೂ ತಮ್ಮ ಶಕ್ತ್ಯಾನುಸಾರ ಪ್ರಯತ್ನಮಾಡಿ, ಆದಷ್ಟು ತರಕಾರಿ ಬೆಳೆಯಬೇಕೆಂದು ಪ್ರತಿಯೊಬ್ಬ ಪಟ್ಟಣಿಗರಲ್ಲಿಯೂ ವಿನಂತಿಸಲಾಗಿದೆ.

ದಿ ಟ್ರಾಪಿಕಲ್

ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:- ಲಾಲ ಶಂಕರ್ ಲಾಲ್.

ಮುಖ್ಯ ಕಚೇರಿ:- ಹೊಸ ಡಿಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮುಲಖಾನ್. ಡಾ|| ಎಂ. ಎ. ಅನ್ಸಾರಿ.

Transacts:—Life, Fire, Motor and Marine.

ನಮ್ಮ ಹೊಸ ವಿಸ್ತಾರದ ಯೋಜನೆಯಲ್ಲಿ ಆಕರ್ಷಕ ಕಮಿಷನ್ ಮೇಲೆ ಏಜನ್ಸಿಗೆ ದಯವಿಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ,

ಆರ್ಗನೈಸರ್	ಆರ್ಗನೈಸರ್
ದಕ್ಷಿಣ ಕೊಡಗು, ಪೊನ್ನಂಪೇಟೆ.	ಉತ್ತರ ಕೊಡಗು, ಮಡಿಕೇರಿ.
ಅಥವಾ	ಅಥವಾ
ಬಿ. ಬಿ. ಅಚ್ಚಣ್ಣ,	ಎಂ. ಎ. ಬೆಳ್ಯಪ್ಪ,
ಏಜೆನ್ಸಿ ಸುಪರಿಂಟೆಂಡೆಂಟ್,	ಬ್ರಾಂಚ್ ಸೆಕ್ರೆಟರಿ,
ಮಡಿಕೇರಿ, ಕೊಡಗು.	ತಂಪನಕಟ್ಟೆ, ಬೆಂಗಳೂರು.

ಎಂಪೈರ್ ಆಫ್ ಇಂಡಿಯಾ

ಲೈಫ್ ಎಸ್ಸೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

48ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು.		
ಒಟ್ಟು ಆದಾಯ	 1,07,09,000	ಮೀರಿದೆ
ಚಾಲ್ತಿಯಿರುವ ವಿಮೆ	 17,74,52,000	„
ಅಸ್ತಿ	 6,67,60,000	„
ಕಂಪೆನಿಯು ಆದಿಯಲ್ಲಿ ಕೊಟ್ಟ ಕ್ಲೈಮುಗಳು	 8,83,62,000	„

ಅಂಗ ಕಛೇರಿ:	ಏಜೆನ್ಸಿ	ಪ್ರಧಾನ ಕಛೇರಿ.
ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡರಸ್ತೆ, ಬೆಂಗಳೂರು.	ಅರ್ಜಿಗಳನ್ನು ಸ್ವಾಗತಿಸಿದೆ.	ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ.

ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್,

ಫ್ರೇಜರ್ ಪೇಟೆ.

ಬೇಕಾಗಿದ್ದಾರೆ.

ಕೊಡಗಿನ ಪ್ರತಿ ಗ್ರಾಮ ಮತ್ತು ಪಟ್ಟಣಗಳಲ್ಲಿ ಬಿದ್ದು ಮಣ್ಣುಪಾಲಾಗಿ ಹೋಗುತ್ತಿರುವ ಮೂಳೆಗಳನ್ನು ಶೇಖರಿಸಿಕೊಡಲು ಪ್ರತಿ ಹಳ್ಳಿ ಮತ್ತು ಪಟ್ಟಣಗಳಲ್ಲಿ ಏಜೆಂಟರುಗಳು ಬೇಕಾಗಿದ್ದಾರೆ. ಏಜೆಂಟರುಗಳಿಗೆ ಧಾರಾಳವಾದ ಕಮಿಷನ್ ಕೊಡಲಾಗುತ್ತದೆ.

ನೇಮಕವಾದ ಏಜೆಂಟರುಗಳು ಕಂಪೆನಿಯಿಂದ ಗೊತ್ತಾದ ಸ್ಥಳಕ್ಕೆ ಮೂಳೆಗಳನ್ನು ಸಾಗಿಸಿ ಕೊಟ್ಟಲ್ಲಿ ಮಣ ಒಂದರ ರೂ. 0–12–0 ಯಂತೆ ಕೊಡಲಾಗುವುದು.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಫ್ರೇಜರ್‌ಪೇಟೆ,
ತಾ. 32-9-49.

ಕೆ. ಕೆ. ತಿಮ್ಮಯ್ಯ,
ಮೇನೇಜಿಂಗ್ ಡೈರೆಕ್ಟರ್.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್,

ಲಿಮಿಟೆಡ್, ಮಡಿಕೇರಿ.

ಕೊಡಗು ಸಹಕಾರಿ ಸೆಂಟ್ರಲ್ ಬ್ಯಾಂಕ್ ಎಂದು ಪ್ರಖ್ಯಾತಿ ಪಡೆದಿತ್ತು. (1921ರಲ್ಲಿ ಸ್ಥಾಪಿಸಲಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,65,000.
ಕ್ಷೇಮನಿಧಿ	ರೂ.	50,000.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಜೋಯಿಂಟ್ ಸ್ಟಾಕ್ ಕಂಪೆನಿಗಳ ಡಿಸ್ಕೌಂಟು ಮಾಡಲ್ಪಡುವುದು. ಲೈಫ್ ಮತ್ತು ವಾಹನ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,

ಕೆ. ಟಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಏಜೆಂಟ್.

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್ ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟೆಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ 162 ರಿಂದ 245 ರ ವರೆಗೆ.
2. ·32 ರಿವಾಲ್ವರುಗಳು (Revolvers) „ 262 „ 274 „
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott) ಕ್ರಯ ರೂ. 1492/-
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make) ಕ್ರಯ ರೂ. 627–5–0
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4-10-0
6. 12, 16, 20ನೇ ನಂಬರು ಕೋವಿಗಳ ತೋಟೆಗಳೂ ಪಿಸ್ತೂಲು ಮತ್ತು ರಿವಾಲ್ವರುಗಳ ತೋಟೆಗಳೂ ಸಹ ದೊರೆಯುತ್ತವೆ.

(ಅವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ ಜಿಲ್ಲಾ ಮೆಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ,
52–14 ಗೌರವ ಕಾರ್ಯದರ್ಶಿ.

CRESCENT

FOR PROTECTION AND SERVICE.

It is best to represent and insure with The CRESCENT Insurance Co., Ltd.,

H. O: BOMBAY. [*Established 1919.*

For particulars write to:

Sri B. A. Poovaiah or **The Branch Manager,**
Organiser *22 B. Mahatma Gandhi Road,*
Pollibetta, Coorg. *Bangalore 1.*

ಸುರಕ್ಷಿತವಾದ ಜೀವವಿಮೆ ಪಡೆಯಲು

ಕ್ರೆಸೆಂಟ್

ಇನ್ಸೂರೆನ್ಸ್ ಕಂಪೆನಿಗೆ ಬರೆಯಿರಿ.

ಅಖಿಲ ಕೊಡಗು ಪಠೇಲರು

ತಾ ೨೯-೧೦-೪೯ರಲ್ಲಿ ವೀರಾಜಪೇಟೆಯಲ್ಲಿ ನಡೆದ ಅಖಿಲ ಕೊಡಗು ಪಠೇಲರುಗಳ ಸಂಘದ ಕಮಿಟಿ ಮೀಟಿಂಗಿನಲ್ಲಿ ಮಾಡಿದ ತೀರ್ಮಾನಗಳು.

ಹಜರತ್ ಚೀಫ್ ಕಮೀಷನರ್ ಸಾಹೇಬರವರ ತಾ. ೨೦-೧೦-೪೯ರ ಕೊಡಗು ಗಜೆಟಿನಲ್ಲಿ ಪ್ರಸಾದ (Draft amendment for rule 55) ದ ಸ್ಕೇಲ್ ರೀತಿ ಪಠೇಲರುಗಳ ಎಲೋವೆನ್ಸ್ ಏರಿಸಿದ ವಿಷಯಕ್ಕೆ ಅಭಿನಂದಿಸಲಾಯಿತು. ಆದರೂ ನಮಗಳ ಕೋರಿಕೆಯಂತೆ ಕೊಡಗಿನ ಇತರ ಉದ್ಯೋಗಸ್ಥರುಗಳಿಗೆ ಸಂಬಳ ಏರಿಸಿ ಮಾಡಿದ ರೀತಿ ೧೯೪೭ನೇ ಇಸ್ವಿಯಿಂದ ನಮಗಳಿಗೆ ಕೊಡದೆ ೧೯೪೯ನೇ ಏಪ್ರಿಲ್ ೧ರಿಂದ ಆಗುವಂತೆ ಈ ಮೇಲಿನ ಸ್ಕೇಲು ಕೊಟ್ಟದಕ್ಕೆ ವಿರೋಧಿಸುವುದಲ್ಲದೆ ಈ ಬಗ್ಗೆ ಪುನಃ ಮೇಲಧಿಕಾರಿಗಳನ್ನು ಬರೆದುಕೇಳಿಕೊಳ್ಳುವಂತೆ ತೀರ್ಮಾನಿಸಲಾಯಿತು. ಅಲ್ಲದೆ ತಾ ೨೯-೩-೪೯ರ ಮಹಾಸಭೆಯಲ್ಲಿ ಮಾಡಿದ ಠರಾವುಗಳ್ಯಾವುದಕ್ಕೂ ತಹಲ್ ವರೆಗೂ ಗೂಪ ಉತ್ತರವೂ, ದೊರಕದ್ದರಿಂದ ಇನ್ನೊಮ್ಮೆ ಈ ವಿಷಯವಾಗಿ ಸರಕಾರದಲ್ಲಿ ಈ ಕಮಿಟಿಯು ಬಿನ್ನವಿಸಿಕೊಳ್ಳುತ್ತದೆ.

ಈ ಠರಾವುಗಳ ಸಂಘದಿಂದ ಸರಕಾರಕ್ಕೆ ಬಿನ್ನವಿಸುವ ಮಾತ್ರವೇ ಸಾಕ್ರೀಯ ಸಂಘದ ಪ್ರಸಿಡೆಂಟು ಮಿ ಪಕ್ಕೀ ... ಕ್ರೆಕ ಜನಾಬ ... ಸ ಮ್ಯಾನೇಜರ್ ಸಾಹೇಬರವರನ್ನೂ ಅಸಿಸ್ಟೆಂಟ್ ಕಮೀಷನರ್ ಸಾಹೇಬರವರನ್ನೂ ... ಕೇಳಿಕೊಳ್ಳಲು ... ಮುಂದಿನ ಮೀಟಿಂಗನ್ನು ತಾ ೧೬-೩-೫೦ಕ್ಕೆ ಇಡಲಾಗಿದೆ.

Coorg Forest Department

TENDER NOTICE

Mercara, the 4th November 49

Tenders are invited for the sale of 1,018 teak poles of different classes lying at Sampaje in Bhagamandala Range. The last date and time for the receipt of tender is 12 noon on 10-12-49. For further particulars apply to the Chief Forest Officer, Coorg, Mercara.

C. M. Kushalappa,
Chief Forest Officer Coorg

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

Reg. No. M. 1880.
'KODAGU' MERCARA. (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೨೮ | ತಾರೀಖು ೧೮-೧೧-೧೯೪೯ನೇ ಶುಕ್ರವಾರ | ಸಂಚಿಕೆ ೨೬

ಅಮೇರಿಕೆಯು ಹಿಂದೂಸ್ಥಾನಕ್ಕಿತ್ತ ಸ್ವಾಗತ, ಅಂದು-ಇಂದು.

ಡಾ. ಹರ್ಡೀಕರ್ ಅವರಿಂದ

'ನೀವು ನನಗೆ ಕೊಟ್ಟ ಸೂಚಿತ ಗೊತ್ತುವಳಿಯ ವಿಷಯದಲ್ಲಿ ನಾನು ಏನನ್ನೂ ಮಾಡಲಿಚ್ಛಿಸುವುದಿಲ್ಲ. ಪರದೇಶದಲ್ಲಿ ನಡೆಯುವ ಎಲ್ಲ ಪ್ರಚಾರ ಕಾರ್ಯವನ್ನು ಮತ್ತು ಅದರ ಮೇಲೆ ಆಗುತ್ತಿರುವ ಖರ್ಚು ವೆಚ್ಚವನ್ನು ನಿಲ್ಲಿಸಬೇಕೆಂದು ನಾನು ಇಚ್ಛಿಸುತ್ತೇನೆ. ನಮ್ಮ ಗುಣವಿಶೇಷದಿಂದ ನಾವು ಪ್ರಕಾಶಿಸಬೇಕು. ನಮ್ಮ ಕೃತಿಗಳಿಂದಲೇ ನಾವು ಜಗತ್ತಿಗೆ ಪರಿಚಿತರಾಗಬೇಕು. ನಾವು ನಮ್ಮ ಕಾಲು ಮೇಲೆಯೇ ನಿಲ್ಲೋಣ ಮತ್ತು ನಮಗೂ ಕಲವು ಮಟ್ಟಿಗೆ ಬೆಲೆಯುಂಟೆಂಬುದನ್ನು ಜಗತ್ತಿಗೆ ತೋರಿಸೋಣ' ಎಂದು ಮಹಾತ್ಮಾ ಗಾಂಧಿಯವರು, ೧೯೨೧ನೇ ಇಸ್ವಿಯಲ್ಲಿ ಅಹಮ್ಮದಾಬಾದ ಕಾಂಗ್ರೆಸ್ ಅಧಿವೇಶನದ ಕಾಲಕ್ಕೆ, ಆ ಅಧಿವೇಶನದಲ್ಲಿ ನಾನು ತರಬೇಕೆಂದಿದ್ದ, ಪರದೇಶಗಳಲ್ಲಿಯ ಪ್ರಚಾರದ ವಿಷಯದ ಗೊತ್ತುವಳಿಯನ್ನು ಅವರ ಕೈಗೆ ಕೊಟ್ಟಾಗ, ಹೇಳಿದರು.

ಅಮೇರಿಕೆಯಲ್ಲಿಯ ನನ್ನ ಎಂಟು ವರ್ಷಗಳ ವಸ್ತವ್ಯದ ನಂತರ ನಾನು ಆಗಲೇ ಹಿಂದುಸ್ಥಾನಕ್ಕೆ ತಿರುಗಿ ಬಂದಿದ್ದೆನು. ಮತ್ತು ನನ್ನ ರಾಜಕೀಯ ಆಚಾರ್ಯರಾದ ಲಾಲಾ ಲಜಪತರಾಯರು, ಮಹಮ್ಮದಾಲಿಯವರ ಗುರುತನ್ನು ನನಗೆ ಮಾಡಿಸಿಕೊಟ್ಟರು. ಲಾಲಾ ಲಜಪತರಾಯರು ಮತ್ತು ಶ್ರೀ. ಎನ್. ಸಿ. ಕೇಳಕರು ಇವರ ಅಭಿಪ್ರಾಯದ ಮೇರೆಗೆ ನಾನು ಆ ಗೊತ್ತುವಳಿಯನ್ನು ಬರೆದಿದ್ದೆನು. ಅದನ್ನು ಮಹಾತ್ಮಾಜಿಯವರ ಕೈಗೆ ಕೊಟ್ಟಾಗ ಅವರು ಮೇಲೆ ಹೇಳಿದಂತೆ ನನ್ನನ್ನು ಆ ಕಾರ್ಯದಲ್ಲಿ ತಡೆದರು, ಮತ್ತು ಈಗ ಮಾಡುವಂಥ ಪರದೇಶಗಳಲ್ಲಿಯ ಪ್ರಚಾರದ ಬಗ್ಗೆ ಆಲೋಚಿಸಬೇಡ. ದೇಶದಲ್ಲಿಯೇ ಪರಿಶ್ರಮ ಪೂರ್ವಕವಾಗಿ ದುಡಿದು ಹಿಂದೀ ಜನತೆಯ ಮನಸ್ಸಿನಲ್ಲಿ ಸ್ವಾವಲಂಬನೆಯನ್ನು ಹುಟ್ಟಿಸು. ಅದರಿಂದ ಹೊರಗಿನ ದೇಶದ ಬಿನ್ನವತ್ತು, ನಮ್ಮ ಬಗ್ಗೆ ಗೌರವ ಉಂಟಾಗಿ ನಾವು ಪ್ರಚಾರ ನಡೆಸಬೇಕೆಂದೇ ಇಲ್ಲ. ದೇಶಗಳಿಗೆ ತಾನಾಗಿಯೇ ಹಬ್ಬುವುದು' ಎಂದು ಹೇಳಿದರು.

ಹಿಂದಿನ ನೆನಪು.

ಸುಮಾರು ಇಪ್ಪತ್ತು ವರುಷಗಳ ಹಿಂದೆ ಅಮೇರಿಕೆಯ ಸಂಯುಕ್ತ ಸಂಸ್ಥಾನಗಳಲ್ಲಿ ಎತ್ತಿ ಹಿಡಿದಲ್ಲಿ ದೊರೆತ ಸ್ವಾಗತದ ವರದಿಗಳನ್ನು ಓದುವಾಗ ನನಗೆ, ೧೯೨೧ನೇ ಇಸ್ವಿಯಲ್ಲಿ ಮಹಾತ್ಮಾ ಗಾಂಧಿಯವರು ಹೇಳಿದ ಆ ಉಪದೇಶದ ನೆನಪು ಆಯಿತು. ನಾವು ನಮ್ಮ ಕಾಲ ಮೇಲೆ ನಿಲ್ಲುವ ವರೆಗೆ ನಮಗೆ ಬೇಕಾದ ಮಾನವನ್ನು ನಮಗೆ ಯಾರೂ ಕೊಡುವುದಿಲ್ಲ ಎಂಬ ಮಾತು ಅದೆಷ್ಟು ಸತ್ಯಪೂರ್ಣವಾಗಿತ್ತು! ಮಹಾತ್ಮಾ ಗಾಂಧಿಯವರ ಕಾರ್ಯಗಳು—ಪ್ರತಿಯೊಂದೂ—ನಿಜವಾಗಿಯೂ ಭವಿಷ್ಯ ಸೂಚಕವಾಗಿದ್ದುವು. ಆದರಲ್ಲಿಯೂ, 'ಯಾವನೊಬ್ಬನು ತನ್ನ ಸಾಮರ್ಥ್ಯವನ್ನು ತೋರಿಸಲು ಶಕ್ತನಾಗದಿದ್ದರೆ ಅವನ ಈ ಜಗದಲ್ಲಿ ಪ್ರಕಾಶಿಸಲಾರನು.' ಎಂಬ ಅವರ ಮಾತು ಈಗ ಪ್ರತ್ಯಕ್ಷ ನಿದರ್ಶನಕ್ಕೆ ಬಂದಿರುವುದು.

ಅಮೇರಿಕೆಯ ಸಂಯುಕ್ತ ಸಂಸ್ಥಾನಗಳಲ್ಲಿ ಲಾಲಾ ಲಜಪತರಾಯರೊಡನೆ ನಾನು ನಾಲ್ಕು ವರ್ಷ ಇದ್ದೆ. ಅವರ ಕಾರ್ಯದರ್ಶಿಯಾಗಿ ಮತ್ತು 'ಇಂಡಿಯನ್ ಹೋಮ್‌ರೂಲ್ ಲೀಗ್ ಆಫ್ ಅಮೇರಿಕಾ' ಈ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಯಾಗಿ ನಾನು ಕಾರ್ಯಮಾಡಿದೆ. ಅವರು ನನ್ನನ್ನು ತಮ್ಮ ಮಗನಂತೆ ನಡೆಸಿಕೊಂಡರು. ಶ್ರೇಷ್ಠ ವಿಚಾರಿ, ಲೋಕಪ್ರಿಯ ಮುಖಂಡ, ಉತ್ತಮ ಬುದ್ಧಿಶಕ್ತಿಯ ನಿಷ್ಕಳಂಕ ದೇಶಪ್ರೇಮಿಯಾದ ಲಾಲಾ ಲಜಪತರಾಯರನ್ನು ಅಮೇರಿಕೆಯವರು ಹೇಗೆ ಕಾಣುತ್ತಿದ್ದರೆಂಬುದನ್ನು ನಾನು ಬಲ್ಲೆ. ಲೇಖನಗಳನ್ನು ಬರೆದು, ಪುಸ್ತಕಗಳನ್ನು ವಿತರಣೆಮಾಡಿ, ತಮ್ಮ ಪುಸ್ತಕಗಳನ್ನೇ ಪ್ರಕಟಿಸಿ ಮತ್ತು ಭಾಷಣಗಳನ್ನು ಮಾಡಿ ಅವರು ಹೊಟ್ಟೆ ತುಂಬಿಕೊಳ್ಳಬೇಕಾಗುತ್ತಿತ್ತು. ಅಮೇರಿಕೆಯವರು ಅವರನ್ನು ಮೆಚ್ಚುತ್ತಿದ್ದರೇ? ಇಲ್ಲ. ಅವರು ಹಿಂದೂಸ್ಥಾನ ಮತ್ತು ಹಿಂದೀಯರ ಬಗ್ಗೆ ಆಸ್ಥೆವಹಿಸುತಿದ್ದಿಲ್ಲ. ಆವೇಳೆ ತಾವಾಗಿ ಇದ್ದ ಅಮೇರಿಕನ್ನರಿಗೆ ಹಿಂದುಸ್ಥಾನದ ಬಗ್ಗೆ ಆದರವು ಎಳ್ಳಷ್ಟು ಇದ್ದಿಲ್ಲ ಮತ್ತು ಬ್ರಿಟಿಷರ ಹಿಡಿತದಿಂದಾಗಿ ಸ್ವತಂತ್ರವಾಗಲು ಹಿಂದುಸ್ಥಾನವು ನಡೆಸಿದ್ದ ಹೋರಾಟದ ವಿಷಯದಲ್ಲಿ ಅವರಿಗೆ ಏನೂ ಎನಿಸುತ್ತಿದ್ದಿಲ್ಲ.

೧೯೧೬ರಲ್ಲಿ ನಾನು ಅಮೇರಿಕೆಯ ಹಿಂದುಸ್ಥಾನ ಅಸೋಸಿಯೇಶನ್ನಿನ (ಸಂಯುಕ್ತ ಸಂಸ್ಥಾನದಲ್ಲಿಯ ಹಿಂದೀ ವಿದ್ಯಾರ್ಥಿಗಳ ಸಂಸ್ಥೆ) ಅಧ್ಯಕ್ಷನಾಗಿದ್ದಾಗ, ನನಗೂ ಇದೇ ಮಾದರಿಯ ಅನುಭವವು ಬಂದಿತು. ಸಂಯುಕ್ತ ಸಂಸ್ಥಾನದಲ್ಲಿ ಹಿಂದೀಯರ ಪ್ರವೇಶವನ್ನು ಪ್ರತಿಬಂಧಿಸುವ ಸೂಚನೆಯು ಅಮೇರಿಕೆಯ ಕಾಂಗ್ರೆಸಿನ ಮುಂದೆ ಬಂದಿದ್ದ ವಿಷಯವನ್ನು ವರ್ತಮಾನ ಪತ್ರಗಳಲ್ಲಿ ಓದಿದ ಆ ಸಂಸ್ಥೆಯ ಎಲ್ಲ ಸಭಾಸದರು ತಾಳ್ಮೆಗೆಟ್ಟರು. ಹಿಂದುಸ್ಥಾನವನ್ನು ದೂರವಿಡುವ ವಿಷಯದಲ್ಲಿ ಆ ದೇಶವು ಆಗ ಅಷ್ಟೊಂದು ಸಿದ್ಧವಾಗಿತ್ತು. ಮೂವತ್ತು ವರ್ಷಗಳ ಹಿಂದೆ ಅಮೇರಿಕನ್ನರು ಹಿಂದೂಸ್ಥಾನವನ್ನು ಯಾವ ದೃಷ್ಟಿಯಿಂದ ನೋಡುತ್ತಿದ್ದರೆಂಬುದು ಇದರಿಂದ ವ್ಯಕ್ತವಾಗುತ್ತದೆ.

ಸರ್ ರವೀಂದ್ರನಾಥ ಟಾಗೋರರನ್ನು ಅವರು ಸ್ವಾಗತಿಸಿ ಮನ್ನಣೆಯಿತ್ತುದೇನೋ ನಿಜ. ಆದಕ್ಕೆ ಟಾಗೋರರ ಕವಿತ್ವ, ಬಹುವಿಧ ಸಾಹಿತ್ಯ ಮತ್ತು ವ್ಯಕ್ತಿತ್ವವು ಕಾರಣವಾಗಿದ್ದುವು. 'ಓಹೋ ಇವರು ಏಸೂ ಕ್ರಿಸ್ತನಂತೆ ಕಾಣುತ್ತಿದ್ದಾರೆ. ಹಿಮದಂತೆ ಬೆಳ್ಳಗಿನ ಮತ್ತು ಹೊಳೆಯುವ ಅವರ ಗಡ್ಡವು ಎಷ್ಟು ಸುಂದರ!' ಎಂದು ಅವರನ್ನು ನೋಡಿದ ಮತ್ತು ಅವರ ಮಾತುಗಳನ್ನು ಕೇಳಿದ ಅಮೇರಿಕನ್ನರು ಉದ್ಗಾರ ತೆಗೆದರು. ಕೇವಲ ಅವರ ದರ್ಶನಕ್ಕಾಗಿಯೇ ಜನರು ಮುಗಿಬೀಳುತ್ತಿದ್ದರು. ಇದಕ್ಕೂ ಆ ಜನರು ಹಿಂದುಸ್ಥಾನದ ಬಗ್ಗೆ ಏನನ್ನೂ ಮಾಡಲಿಲ್ಲ. ಹೋದ ಶತಮಾನದ ಅಂತ್ಯದಲ್ಲಿ ಸ್ವಾಮಿ ವಿವೇಕಾನಂದರೂ, ಚಿಕಾಗೋದಲ್ಲಿಯ ಜಾಗತಿಕ ಸರ್ವಧರ್ಮ ಪರಿಷತ್ತಿನ ಕಾಲಕ್ಕೆ ಸ್ವಾಗತವನ್ನು ಹೊಂದಿದರು. ಆದರೆ ಅದು ಸ್ವಾಮಿಯವರ ಆಧ್ಯಾತ್ಮಿಕ ವ್ಯಕ್ತಿತ್ವ ಮತ್ತು ಹಿಂದೀ ವೇದಾಂತದ ಬಗ್ಗೆ ಅವರು ಕೊಟ್ಟ ಚಿತ್ರಗಳ ಮೂಲಕ ನಡೆಯಿತು. ಅಮೇರಿಕನ್ನರು ಹಿಂದುಸ್ಥಾನದ ರಾಜಕೀಯ ಕಥೆಯನ್ನು ಕೇಳಲು ನಿರಾಕರಿಸುತ್ತಿದ್ದರು ಮತ್ತು ಹಿಂದುಸ್ಥಾನದಲ್ಲಿ ನಡೆದ ಬ್ರಿಟಿಷರ ಹೊಣೆಗೆಟ್ಟ ಆಳಿಕೆಯ ಬಗ್ಗೆ ಅವರು ಕಣ್ಣು ತೆರೆಯುತ್ತಿದ್ದಿಲ್ಲ.

ಕಾನಡಾದ ಅಯೋಗ್ಯ ವರ್ತನೆ

ಹಿಂದಕ್ಕೆ ಹಿಂದೀಯರು ಅಮೇರಿಕೆಯಲ್ಲಿ ಅಲ್ಲಿಯವರಿಂದ ಹೇಗೆ ನಡೆಸಿಕೊಳ್ಳಲ್ಪಡುತ್ತಿದ್ದರು, ಮತ್ತು ಯಾವ ರೀತಿಯ ಅವರ ಪ್ರೇಮಗಳನ್ನು ಅವರಿಂದ ಹೊಂದುತ್ತಿದ್ದರು ಎಂಬ ಮಾತನ್ನು, ಅಲ್ಲಿ ಅನೇಕ ವರ್ಷಗಳ ವರೆಗೆ ಕಾಲ ಕಳೆದಂತಹ, ನನ್ನಂತಹ ಕೆಲವರು ಕಂಡುಕೊಂಡಿದ್ದರೆ. ಅಮೇರಿಕೆಯವರಾಗಲಿ ಕನಡದವರಾಗಲಿ ನಮ್ಮ ಬಗ್ಗೆ ಲಕ್ಷ್ಯಪೂರೈಸುವರೆಂಬ ಆಸೆಯು ಆ ಕಾಲಕ್ಕೆ ನಮಗೆ ಎಳ್ಳಷ್ಟು ಇದ್ದಿಲ್ಲ. ಕೆನಡದಲ್ಲಿ ಹಿಂದೀಯರ ಪ್ರವೇಶವನ್ನು ನಿಯಂತ್ರಿಸಿದ್ದಾಗ, ಸರ್ ರವೀಂದ್ರನಾಥ ಟಾಗೋರರು ನಿಲುಕದಂತೆ, ಕೆನಡವನ್ನು ಪ್ರವೇಶಿಸಲು ಆಮೇಲೂ ನಿರಾಕರಿಸಿದರು. ಕೆನಡದವರು ತಮ್ಮಲ್ಲಿರುವ ಹಿಂದೀಯರನ್ನು ನಡೆಸಿಕೊಳ್ಳುವ ರೀತಿಯು ಈ ಮಾತಿಗೆ ಕಾರಣವಾಗಿತ್ತು. ೧೯೧೩ನೇ ಇಸ್ವಿಯ 'ಕೋಮಗಾಟಾ-ಮಾರು' ಪ್ರಕರಣದ ನೆನಪು ಹಿಂದೀಯರ ಮತ್ತು ಆ ಮುಖಂಡರ ಮನಸ್ಸಿನಲ್ಲಿ ಇನ್ನೂ ಅಚ್ಚಳಿಯದೆ ಇತ್ತು. ಆ ವೇಳೆ ಈ ವರ್ಷದ ಮುಖ್ಯ ಬಗ್ಗೆ, ಕನಡ ಸರಕಾರವು ತನ್ನ ರೀತಿ ನೀತಿಗಳನ್ನು ಹಿಂದೀಯರ ವಿಷಯದಲ್ಲಿ ಸರಿಪಡಿಸಿಕೊಳ್ಳುವ ವರೆಗೆ ಆ ದೇಶದಲ್ಲಿ ಕಾಲಿಡಲು ಹಿಂಜರಿದರು. ಆದರೂ ಲಾಲಾ ಲಜಪತರಾಯರು ನನಗೆ, ಅಲ್ಲಿಗೆ ಹೋಗಲು ಮತ್ತು ಅಲ್ಲಿಯ ಹಿಂದೀ ಜನರ ಸ್ಥಿತಿಗತಿಗಳನ್ನು ಪ್ರತ್ಯಕ್ಷ ಕಂಡು ವರದಿ ಮಾಡಲು ಹೇಳಿದರು. ನಾನು ಅಲ್ಲಿಗೆ ಹೋದೆ ಮತ್ತು ಕೆಲವು ಕಟು ಅನುಭವಗಳನ್ನು ಪಡೆದೆ.

ಇವೆಲ್ಲವೂ ಮೂವತ್ತು ವರ್ಷಗಳ ಹಿಂದೆ ನಡೆದ ಮಾತು. ೧೯೧೬ರಿಂದ ೧೯೨೦ರ ವರೆಗೆ ಅಮೇರಿಕೆಯಲ್ಲಿ ಲಾಲಾ ಲಜಪತರಾಯರು ಅನುಭವಿಸಿದ್ದು ಆಶ್ಚರ್ಯದ್ದಲ್ಲ. ಹೀಗಿದ್ದರೂ ಅಯರ್ಲಂಡಿನ ಡಿ ವೆಲೆರಾ ಅವರಿಗೆ ನಾವು ಅಲ್ಲಿ ಇದ್ದಾಗಲೇ ದೊರೆತ ಸ್ವಾತಂತ್ರ್ಯ ಯೋಧನೆಂಬ ಮನ್ನಣೆಯು ಹಿಂದುಸ್ಥಾನದ ಲಾಲಾಜಿಗೆ ದೊರೆಯಲಿಲ್ಲ. ಇಂದು ೧೯೪೯ನೇ ಇಸ್ವಿಯಲ್ಲಿ ನಾವು ಈ ಚಿತ್ರವನ್ನು ನೋಡುತ್ತಿದ್ದೇವೆ. ಮೂವತ್ತು ವರ್ಷಗಳಲ್ಲಿ ಜಗತ್ತು ಬದಲಾವಣೆಗೊಂಡು ಮತ್ತು ಬೇರೆ ಹೊಸ ಸ್ವರೂಪದ್ದಾಗಿ ಮಾರ್ಪಾಡು ಹೊಂದಿದೆ. ಆ ಅಮೇರಿಕನ್ನರು ನಮ್ಮ ವಿಷಯದಲ್ಲಿ ತಮ್ಮ ಹಿಂದಿನ ವರ್ತನೆಯಲ್ಲವನ್ನೂ ಮರೆತು ಈಗ ಪಂಡಿತ ಜವಾಹರಲಾಲ ನೆಹರೂರವರ ರೂಪದಲ್ಲಿ ತಮ್ಮಲ್ಲಾದ ಪರಿವರ್ತನೆಯನ್ನು ವ್ಯಕ್ತಗೊಳಿಸಿದ್ದಾರೆ. ಇದರ ಕಾರಣವೇನು? ಅವರ ಇಂಗಿತವು ಎಲ್ಲಿದೆ?

ಅಮೇರಿಕನ್ನರ ಅಭೀಪ್ಸೆ.

ಕಾರಣವು ಸ್ಪಷ್ಟವಿದೆ. ಮಹಾತ್ಮ ಗಾಂಧೀಯವರು ನಮ್ಮನ್ನು ನಮ್ಮ ಕಾಲ ಮೇಲೆ ನಿಲ್ಲಿಸಿದರು. ನಮ್ಮ ಯೋಗ್ಯತೆಯಿಂದಲೇ ಪ್ರಕಾಶಿಸಲು ನಮಗೆ ಕಲಿಸಿದರು. ಎದುರಾಳಿಯ ಒಂದು ಹನಿ ರಕ್ತವನ್ನು ಕೂಡ ಚೆಲ್ಲದೆ ನಾವು ಗಳಿಸಿದ ಸ್ವಾತಂತ್ರ್ಯವು ಅಮೇರಿಕನ್ನರು ಈ ತರಹದ ಅಖಂಡ ಮಾನ ಮರ್ಯಾದೆಗಳನ್ನು ನಮಗೆ ಕೊಡಲು ಹಚ್ಚಿದೆ. ಇಷ್ಟೇ ಅಲ್ಲ, ಜಾಗತಿಕ ವಾತಾವರಣದಲ್ಲಿ ವ್ಯತ್ಯಾಸವಾದ ಕೆಲವು ಇವಾಗಿದೆ ಮತ್ತು ಅಮೇರಿಕೆಯ ಬಲಿಷ್ಠ ವ್ಯಾಪಾರದ ರಶಿಯಾ ಅದರ ಬಾಗಿಲನ್ನು ತಟ್ಟುತ್ತಿದೆ. ಅಮೇರಿಕೆಯು ಇಂದು ಜಗತ್ತಿನಲ್ಲಿ ಸ್ನೇಹಿತರನ್ನು ಹುಟ್ಟಿಸಿಕೊಳ್ಳಬೇಕಾಗಿದೆ. ಮತ್ತು ತನ್ನನ್ನು ಉಳಿಸಿಕೊಳ್ಳುವುದಕ್ಕಾಗಿ ಎಲ್ಲ ಕಡೆ ತನಗಾಗಿ ಸಹಾನುಭೂತಿಯನ್ನು ದೊರಕಿಸಿಕೊಳ್ಳಬೇಕಾಗಿದೆ. ಹಿಂದಕ್ಕೆ ಪೌರ್ವಾತ್ಯ ಭಾಗದಲ್ಲಿ ಅವರು ನಂಬಿಕೊಂಡಿದ್ದ ಚಿಯಾಂಗ್ ಕೈಶೇಕರು ಇಂದಿನ ರಂಗಭೂಮಿಯಿಂದ ಅದೃಶ್ಯರಾಗಿದ್ದಾರೆ. ಪೂರ್ವಭಾಗದಲ್ಲಿ, ಶಾಂತಿಯ ಸ್ಥಾನವನ್ನು ಉಳಿಸುವ ಕಾರ್ಯವು ಹಿಂದುಸ್ಥಾನದಿಂದಲೇ ಆಗಬೇಕಾಗಿದೆ. ಆದ್ದರಿಂದ ಅಮೇರಿಕನ್ನರು ಈಗ ಹಿಂದೀಯರ ಗಲ್ಲಗದ್ದಗಳನ್ನು ಹಿಡಿಯಹತ್ತಿದ್ದಾರೆ. ಹಿಂದುಸ್ಥಾನದ ಮುಖ್ಯ ಮಂತ್ರಿ, ಹಿಂದೀಯರ ಪ್ರೇಮ ಪುಷ್ಪ, ಶ್ರೇಷ್ಠ ಸಾಹಿತಿ ಹಾಗೂ ಮಹಾತ್ಮಾಜಿಯವರ ಉತ್ತರಾಧಿಕಾರಿಯಾದ ಪಂಡಿತ ಜವಾಹರಲಾಲರಿಗೆ ಇದೇ ಅಮೇರಿಕೆಯು ಸ್ನೇಹ ಹಸ್ತ ನೀಡಿದ್ದಾರೆ. ಇಂದಿನ ಸಮಯದ ನೀತಿ ನಿಲ್ಲದು. ತಮ್ಮ ಸ್ವಾರ್ಥವನ್ನು ರಕ್ಷಿಸಲು, ಬೇಕಾದ ಸಂಭವನೀಯ ಸಹಾನುಭೂತಿ ಮತ್ತು ಸಹಾಯವನ್ನು ಅಮೇರಿಕನ್ನರು ಇವರ ಮುಖಾಂತರವೇ ದೊರಕಿಸಲು ಇಚ್ಛಿಸುತ್ತಿದ್ದಾರೆ; ಎಂದೇ ಹಿಂದುಸ್ಥಾನಕ್ಕೆ ಈ ರೀತಿಯ ಅಭೂತ ಪೂರ್ವ ಸ್ವಾಗತ.

ಶ್ರೀಮದ್ಭಗವದ್ಗೀತೆ.

ಕರ್ಮದ ಸದ್ಭಾವನೆಯ ಫಲ.

(ಶ್ರೀ ಕಾವೇರಿ ಆಶ್ರಮ ವೀರಾಜಪೇಟೆ ಇವರಿಂದ)

ಫಲಾಪೇಕ್ಷೆ ಇಲ್ಲದೆ ಮಾಡಿದ ಕರ್ಮವು ವ್ಯರ್ಥವಾದುದಲ್ಲ. ಅದರಲ್ಲಿ ಫಲ ಸಿದ್ಧಿ ಖಂಡಿತವಾಗಿಯೂ ಇದೆ. ಅಲ್ಲದೆ ಸಾಮಾನ್ಯ ಮನುಷ್ಯನ ಕರ್ಮ ಫಲಕ್ಕಿಂತಲೂ ಕರ್ಮಯೋಗಿಯ ಕರ್ಮಕ್ಕೆ ಹೆಚ್ಚು ಫಲ ಇದೆ. ಅದಕ್ಕೆ ಅನೇಕ ಉದಾಹರಣೆಗಳು ಇವೆ. ಕರ್ಮ ಒಂದೇ ಸಾಲದು, ಇದರೊಡನೆ ಕರ್ಮ ಮಾಡಲು ಇಷ್ಟವಿರಬೇಕು. ಮತ್ತು ಸದ್ಭಾವನೆಯಿಂದ ಕೂಡಿದ್ದಾಗಿರಬೇಕು. ಕರ್ಮಕ್ಕಿಂತಲೂ ಭಾವನೆಗೇ ನಿಜವಾದ ಫಲವಿರುವುದು. ಕರ್ಮ ಒಂದೇ ಆಗಿದ್ದರೂ ಭಾವನಾಭೇದದಿಂದ ಫಲ ಭೇದವಾಗುತ್ತದೆ.

ಕರ್ಮಯೋಗವನ್ನು ಹೇಗೆ ಮಾಡಬೇಕು? ನಿರಾಶೆಯಾಗಿ, ನಿರ್ಮಮವಾಗಿ ಕರ್ತವ್ಯ ಕರ್ಮವನ್ನು ಮಾಡಬೇಕು; ಎಂದರೆ ಕರ್ಮದಲ್ಲಿ ತನ್ನದೆಂಬ ಸಂಗವಿಲ್ಲದೆ, ಫಲವು ನನಗೆಂಬ ಅಭಿಲಾಷೆ ಇಲ್ಲದ ಕರ್ಮ ಮಾಡಬೇಕು, 'ನನ್ನ ಕರ್ಮ ನನ್ನ ಫಲ' ಎಂಬ ಭಾವನೆಯನ್ನು ದೂರಮಾಡಬೇಕು. 'ಎಲ್ಲವೂ ಭಗವಂತನದೇ, ನನ್ನದ್ದೇನೂ ಇಲ್ಲ ಮಾಡುವ ಎಲ್ಲಾ ಕರ್ಮವೂ ಪರಮೇಶ್ವರನ ಆರಾಧನೆ' ಎಂದು ತಿಳಿಯಬೇಕು.

ಕರ್ಮವು ಘೋರವಾಗಿರುವುದು ತನಗಾಗಿ ಮಾಡುವಾಗ ಅದು ಬಂಧಕವಾಗುವುದು ಖಂಡಿತ. ಆದರೆ ದೇವರಿಗೆ ಪ್ರೀತ್ಯರ್ಥವಾಗಿ, ಸ್ವಧರ್ಮವಾಗಿರುವ ಕರ್ಮವನ್ನು ಮಾಡಿದರೆ ಅದು ಉತ್ಕೃಷ್ಟ ಕರ್ಮವಾಗುವುದು. ತನ್ನ ಘೋರತ್ವವನ್ನೂ ಬಂಧಕತ್ವವನ್ನೂ ಕಳೆದುಕೊಳ್ಳುವುದು. ಭಗವಂತನು ಉಪದೇಶಿಸಿ ಕರ್ಮದ ತಿರುಳೇ ಬೇರೆ, ಅದು ಅರ್ಜುನನು ತಿಳಿದುಕೊಂಡಿದ್ದ ಜಾತೀಯ ಕರ್ಮವಲ್ಲ. 'ಪೂಜಾರ್ಹರಾದ ಭೀಷ್ಮ ದ್ರೋಣರನ್ನು ಬಾಣದಿಂದ ಹೊಡೆದು ಹೇಗೆ ಯುದ್ಧ ಮಾಡಲಿ?' ಎಂದು ಕೇಳಿದ ಪ್ರಶ್ನೆಗೆ ಭಗವಂತನ ಉತ್ತರವಿದೆ. ಈ ಅರ್ಜುನನು ಮಾಡಿಕೊಂಡಿದ್ದ ಅರ್ಥದ ಯುದ್ಧವಲ್ಲ; ಇದು ಪರಮೇಶ್ವರನ ಆರಾಧನೆ. ಅವನು ಬಿಡುವ ಬಾಣಗಳು ಈಗ ಬಾಣಗಳಲ್ಲ; ಅದೊಂದು ಪುಷ್ಪಾಂಜಲಿ. ಸಾಧಾರಣ ಜನರು ಕರ್ಮವನ್ನು ಮಾಡಿದರೆಷ್ಟು, ಬಿಟ್ಟರೆಷ್ಟು? ಪರಮೇಶ್ವರನ ಭಕ್ತನಾಗಿ ಅವನ ಪ್ರೀತ್ಯರ್ಥವಾಗಿ ಮಾಡುವ ಕರ್ಮವೇ ನಿಜವಾದ ಕರ್ಮವು.

ಇಬ್ಬರು ಮನುಷ್ಯರು ಕಾವೇರಿ ನದಿಗೆ ಸ್ನಾನಕ್ಕೆ ಹೋಗುತ್ತಾರೆ. ಒಬ್ಬನು ಕಾವೇರಿ ನದಿಯ ನೀರನ್ನು ಸಾಧಾರಣ ನೀರಿನಂತೆ ಭಾವಿಸುತ್ತಾನೆ. ನೀರೆಂದರೆ ಒಂದು ಭಾಗ ಆಕ್ಸಿಜನ್, ಎರಡು ಭಾಗ ಹೈಡ್ರೋಜನ್ ಇದೇ ಕಾವೇರಿ ನದಿಯ ನೀರು ಎಂದು ಭಾವಿಸಿ ಮೈ ತೊಳೆದುಕೊಳ್ಳುತ್ತಾನೆ. ಮತ್ತೊಬ್ಬನು: ಶ್ರೀ ಕಾವೇರಿ ಮಾತೆಯ ತೀರ್ಥ ಬಹಳ ಪವಿತ್ರವಾದುದು, ಶ್ರೀ ವಿಷ್ಣುವಿನ ಪದತಲದಿಂದ ಹೊರಡುತ್ತದೆ. ಶ್ರೀ ಬ್ರಹ್ಮನು ನಿರ್ಮಿಸಿದ ಕುಂಡಿಕೆಯಿಂದ ಉಕ್ಕಿ ಬರುತ್ತಾಳೆ. ನಮ್ಮ ಪಾಪವನ್ನು ಹೋಗಲಾಡಿಸಿ ಉದ್ಧಾರ ಮಾಡಲಿಕ್ಕಾಗಿ ತೀರ್ಥ ರೂಪಿಣಿಯಾಗಿ ಹರಿಯುತ್ತಾಳೆ. ಅನೇಕ ಮಹರ್ಷಿಗಳು ತಪಸ್ಸು ಮಾಡಿದ ಪುಣ್ಯ ಫಲ ಈ ನದಿಯಲ್ಲಿದೆ ಎಂಬ ಭಾವನೆಯಿಂದ ಕಾವೇರಿ ಸ್ನಾನ ಮಾಡುತ್ತಾನೆ. ಈ ಇಬ್ಬರುವ ಮನುಷ್ಯರು ನದಿಯಲ್ಲಿ ಮಿಂದರು. ಇಬ್ಬರಿಗೂ ಮೈ ಕೊಳೆ ಹೋಯಿತು. ಒಂದು ದನವನ್ನು ತೊಳೆದರೂ ಅದರ ಮೈ ಕೊಳೆ ಹೋಗುತ್ತದೆ. ಮೊದಲಿನವನು ತನ್ನ ಮೈ ಕೊಳೆಯನ್ನು ಕಳಕೊಂಡು ದನವಂತೆ ಹೋದ. ಎರಡನೆಯವನ ಮೈ ಕೊಳೆ ಹೋದದ್ದಲ್ಲದೆ ಚಿತ್ತದ ಕೊಳೆಯನ್ನು ತೊಳೆದುಕೊಂಡನು. ಈ ಚಿತ್ತ ಶುದ್ಧಿಯ ಫಲ ಅವನ ಭಾವನೆಯಿಂದ ಬಂದ ಫಲ. ಇವರಿಬ್ಬರ ಕರ್ಮವು ಒಂದೇ ಆದರೂ ಫಲವು ಮಾತ್ರ ಭಾವನೆಯಿಂದ ಬೇರೆಯಾಯಿತು.

ಯಾವ ಕರ್ಮಕ್ಕೂ ಹೊರಗೆ ಕಾಣುವಂತೆ ಫಲವು ಎಲ್ಲರಿಗೂ ಸಿಕ್ಕಿಯೇ ಸಿಕ್ಕುತ್ತದೆ. ಹೆಚ್ಚು ಫಲವು ಭಾವನೆಯಿಂದ ಸಿಕ್ಕುತ್ತದೆ. ಇದು ಕರ್ಮಯೋಗಿಗೆ ಮಾತ್ರ ಸಿಕ್ಕುತ್ತದೆ. ಪ್ರತಿ ದಿನವು ಸೂರ್ಯನಮಸ್ಕಾರ ಮಾಡುವವರಿಗೆ ವ್ಯಾಯಾಮದ ಫಲ ಸಿಕ್ಕಿಯೇ ಸಿಕ್ಕುತ್ತದೆ. ಆದರೆ ಬರೇ ವ್ಯಾಯಾಮಕ್ಕಾಗಿ ಸೂರ್ಯ ನಮಸ್ಕಾರ ಮಾಡಬೇಕಾಗಿಲ್ಲ. ಉಪಾಸನೆಗಾಗಿ ಸೂರ್ಯ ನಮಸ್ಕಾರ ಮಾಡುತ್ತೇವೆ. ಇದರಿಂದ ಆರೋಗ್ಯದ ಜೊತೆಗೆ ಬುದ್ಧಿಯ ಪ್ರಭೆಯೂ ಅರಳುತ್ತದೆ. ಉಪಾಸಕನಿಗೆ ಮಾತ್ರ ಈ ಎರಡೂ ಫಲ, ಎಲ್ಲರಿಗೂ ಇದು ಸಿಕ್ಕುವುದಿಲ್ಲ.

ಪರಮಾರ್ಥಿ ಮನುಷ್ಯನ ಕರ್ಮ ಆತ್ಮ ವಿಕಾಸಕ್ಕೆ ಕಾರಣವಾಗುತ್ತದೆ. ಆದರೆ ಸಾಮಾನ್ಯ ಮನುಷ್ಯನ ಕರ್ಮ ಆತ್ಮ ಬಂಧಕವಾಗುತ್ತದೆ. ಈ ಇಬ್ಬರೂ ವ್ಯವಹಾರದಲ್ಲಿ ತೊಡಗಿರುತ್ತಾರೆ. ಯಾವಾಗಲೂ ಕರ್ಮ ಮಾಡುತ್ತಿರುತ್ತಾರೆ. ಆದರೂ ಒಬ್ಬೊಬ್ಬರ ಭಾವನೆ ಒಂದೊಂದು ರೀತಿಯದು. ಕರ್ಮಯೋಗಿಯೂ ಬೇಸಾಯ ಮಾಡುತ್ತಾನೆ. ಆದರೆ ಅವನು ತನ್ನ ಹೊಟ್ಟೆ ತುಂಬಿಸಲು ಇದನ್ನು ಮಾಡುವುದಿಲ್ಲ. ಅವನ ಕರ್ಮದಿಂದ ಅವನಿಗೆ ಧಾನ್ಯ ಸಿಕ್ಕಿಯೇ ಸಿಕ್ಕುತ್ತದೆ. ಅವನ ಹೊಟ್ಟೆ ತುಂಬಲೇ ಬೇಕು. ಹೀಗಿರುವಾಗ ಹೊಟ್ಟೆಗಾಗಿ ಅವನು ಬೇಸಾಯ ಮಾಡುವುದಿಲ್ಲ. ಧಾನ್ಯವನ್ನು ಬೆಳೆದು ಸಮಾಜಕ್ಕೆ ಕೊಡುವುದು ಇವನ ಉದ್ದೇಶ. ಕರ್ಮಯೋಗಿಯಾದ ಒಕ್ಕಲಿಗನಿಗೆ ಬೇಸಾಯ ಮಾಡುವುದು ಅವನ ಸ್ವಧರ್ಮ. ತನ್ನ ಸ್ವಧರ್ಮ ಆಚರಣೆಗಾಗಿ ಅವನು ಊಟ ಮಾಡುತ್ತಾನೆ. ಊಟಕ್ಕಾಗಿ ಸ್ವಧರ್ಮಾಚರಣೆಯಲ್ಲ. ಸ್ವಧರ್ಮಾಚರಣೆಯೇ ಅವನ ಗುರಿ. ಅನ್ನ ಅದಕ್ಕೆ ದಾರಿ. ಉಳಿದ ಬೇಸಾಯಗಾರರಿಗೆ ಇದಕ್ಕೆ ವಿರುದ್ಧವಾಗಿ ಆಗುತ್ತದೆ. ಇವರಿಗೆ ಹೊಟ್ಟೆ ತುಂಬಿಸುವುದೇ ಗುರಿ. ಸ್ವಧರ್ಮದ ಯೋಚನೆಯೇ ಇವರಿಗಿಲ್ಲ. ಗೇಣುದ್ದ ಹೊಟ್ಟೆಗೆ ಒಂದು ಹಿಡಿ ಅನ್ನಕ್ಕಾಗಿ ತಮ್ಮ ಧರ್ಮವನ್ನೇ ಬಿಟ್ಟರು. ವ್ಯವಸಾಯ ಮಾಡಲು ಕಷ್ಟ ಕಂಡರೆ ಬೇರೆ ರೀತಿಯಲ್ಲಿ ಅನ್ನವನ್ನು ಸಂಪಾದಿಸಲು ಹೋಗುತ್ತಾರೆ. ಸ್ವಧರ್ಮದ ಅರಿವೇ ಇವರಿಗಿಲ್ಲ. ಹೀಗೆ ಕರ್ಮಯೋಗಿಗೂ ಸಾಧಾರಣ ಮನುಷ್ಯನಿಗೂ ಒಂದಕ್ಕೊಂದು ವಿರೋಧವಾಗಿರುತ್ತದೆ. ಇಬ್ಬರೂ ಊಟ ಮಾಡುತ್ತಾರೆ. ಒಬ್ಬನು ಊಟ ಮಾಡುವಾಗ ಚಪ್ಪರಿಸಿಕೊಂಡು ರುಚಿ ನೋಡಿಕೊಂಡು ಆನಂದದಿಂದ ಇರುತ್ತಾನೆ. ಕರ್ಮಯೋಗಿಯು ಈ ಹೊಟ್ಟೆಗೆ ಏನಾದರೂ ತುಂಬಬೇಕಲ್ಲಾ ಎಂದು ತಿನ್ನುತ್ತಾನೆ. ಎಲ್ಲಿ ಇಂದ್ರಿಯವು ಆಹಾರದ ರುಚಿಗೆ ಮೋಹ ಹೋದೀತೋ ಎಂದು ಸಂಯಮ ತಂದುಕೊಳ್ಳುತ್ತಾನೆ. ಈ ಹೊಟ್ಟೆ ಎಂಬ ಗಡಿಗೆಗೆ ಏನಾದರೂ ತುಂಬಲೇ ಬೇಕಲ್ಲಾ ಎಂದು ತುಂಬುತ್ತಾನೆ. ಆದುದರಿಂದಲೇ ಒಬ್ಬನ ಇರುಳು ಇನ್ನೊಬ್ಬನಿಗೆ ಹಗಲು, ಒಬ್ಬನ ಹಗಲು ಇನ್ನೊಬ್ಬನಿಗೆ ಇರುಳು, ಎಂದು ಎರಡನೇ ಅಧ್ಯಾಯದಲ್ಲಿ ಹೇಳಿದೆ. ಒಬ್ಬನ ಆನಂದ ಇನ್ನೊಬ್ಬನ ದುಃಖ, ಒಬ್ಬನ ದುಃಖ ಇನ್ನೊಬ್ಬನ ಆನಂದ. ಕರ್ಮಯೋಗಿಯು ಫಲ ಶಕ್ತಿಯನ್ನು ಬಿಟ್ಟು ತನ್ನ ಕರ್ಮದಲ್ಲಿಯೇ ರಮಿಸುತ್ತಾನೆಂಬುದೇ ಮುಖ್ಯ. ಸಂಸಾರಿಯಂತೆ ಕರ್ಮಯೋಗಿಯು ತಿನ್ನುತ್ತಾನೆ. ಮಲಗುತ್ತಾನೆ. ಆದರೆ ಅವನ ಭಾವನೆಯೇ ಬೇರೆ.

ಯಾವ ಕರ್ಮ ಮಾಡಿದರೂ ಅದಕ್ಕೆ ಫಲ ಇದ್ದೇ ಇದೆ. ಕರ್ಮ ಒಂದೇ ಆದರೂ ಆ ಕರ್ಮ ಮಾಡುವವನ ಭಾವನೆಯ ಮೇಲೆ ಆ ಕೆಲಸದ ಫಲವು ವ್ಯತ್ಯಾಸವಾಗುತ್ತದೆ. ಆದುದರಿಂದ ಕರ್ಮ ಮಾಡುವವನು ಸದ್ಭಾವನೆಯಿಂದ ಕೂಡಿದರೇನೇ ಅವನ ಕರ್ಮಕ್ಕೆ ಒಳ್ಳೆಯ ಫಲ ಸಿಕ್ಕುತ್ತದೆ. ಇದನ್ನು ನಾವು ಹಿಂದೆಯೇ ತಿಳಿದದ್ದಾಯಿತು. ಕರ್ಮ ಮತ್ತು ಫಲ ಇವು ಒಂದನ್ನೊಂದು ಬಿಟ್ಟದ್ದಲ್ಲ. ಒಂದರೊಡನೆ ಒಂದು ಇದ್ದೇ ಇರುತ್ತದೆ. ಒಂದು ಮರದ ಕೊಂಬೆ ಅಲ್ಲಾಡಬೇಕಾದರೆ ಗಾಳಿ ಬೀಸಿರಬೇಕು. ಇಲ್ಲವೇ ಯಾರಾದರೂ ಅಲ್ಲಾಡಿಸಿರಲೇ ಬೇಕು. ಇಲ್ಲದೆ ಅದೇಕೆ ಅಲ್ಲಾಡುತ್ತದೆ. ಗಾಳಿ ಬೀಸಿದರೆ ಅಥವಾ ಯಾರಾದರೂ ಅಲುಗಾಡಿಸಿದರೆ ಮರ ಅಲ್ಲಾಡಲೇ ಬೇಕು. ಹೀಗೆ ಕರ್ಮವೂ ಫಲವೂ ಒಂದರೊಡನೊಂದು ಇರುತ್ತದೆ. ಒಂದು ಕೆಲಸದ ಫಲವು ಇಂದೇ ಆಗಲೇ ಆಗಬಹುದು. ಇನ್ನೊಂದು ಕೆಲಸದ ಫಲವು ಮುಂದಕ್ಕೆ, ಒಂದು ತಿಂಗಳಲ್ಲೋ, ಒಂದು ವರ್ಷದಲ್ಲೋ ಅಥವಾ ೧೦ ವರ್ಷದಲ್ಲೋ ಆಗಿಯೇ ತೀರುತ್ತದೆ. ನಾವು ಬೇಡವೆಂದರೂ ಆಗಿಯೇ ಆಗುವ ಈ ಕರ್ಮ ಮತ್ತು ಫಲಗಳು ಭಗವಂತನ ತೀರ್ಮಾನ. ಇದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ. ಆದುದರಿಂದ ಕರ್ಮ ಮಾಡುವುದೊಂದೇ ನಮ್ಮ ಕರ್ತವ್ಯ. ಆ ಕರ್ಮ ಮಾಡುವುದರ ಭಾವನೆಯ ಮೇಲೆ ಅದರ ಫಲವು ಹೊಂದಿಕೊಂಡು ಅದರಷ್ಟಕ್ಕೆ ಆದೇ ಆಗುತ್ತದೆ. ಇದಕ್ಕಾಗಿ ನಾವು ವ್ಯಸನ ಪಡುವುದಾಗಲೀ ಆವಶ್ಯವಿಲ್ಲ. ನಮ್ಮ ಕರ್ತವ್ಯಕ್ಕಾಗಿ ನಾವು ಪಡುವ ಪ್ರಯತ್ನ ಮತ್ತು ನಮ್ಮ ಭಾವನೆ ಇದು ಸರಿಯಾಗಿದ್ದರೆ ಅದಕ್ಕೆ ತಕ್ಕ ಪ್ರತಿ ಫಲ ಅದರಷ್ಟಕ್ಕೆ ಆದೇ ಆಗುತ್ತದೆ. ಇದಕ್ಕಾಗಿ ನಾವು ಫಲದ ಆಶೆ ಪಡುವುದು ಏಕೆ? ಒಂದು ಅಪೇಕ್ಷೆಯಿಂದ ಕರ್ಮ ಮಾಡಿ ಅದಕ್ಕೆ ತಕ್ಕ ಪ್ರಯತ್ನವಿಲ್ಲದಿದ್ದರೆ, ನಾವು ಉದ್ದೇಶಿಸಿ ಮಾಡಿದ ಫಲ ಅದರಿಂದ ಸಿಕ್ಕದಿರಬಹುದು. ಆಗಲೇ ನಮಗೆ ವ್ಯಸನ ಉಂಟಾಗುವುದು. ಇದೇ ನಮ್ಮನ್ನು ದುಃಖ ಸಮುದ್ರದಲ್ಲಿ ಮುಳುಗಿಸುವುದು. ನಮಗೆ ಈ ವ್ಯಸನವೇ ಮುಳ್ಳಿನಂತೆ. ಈ ವ್ಯಸನ ಅಥವಾ ದುಃಖವು ನಮ್ಮನ್ನು ಅಂಟಬಾರದು. ಅದಕ್ಕಾಗಿ ನಾವು ಆಶೆ ಅಥವಾ ಫಲಾಪೇಕ್ಷೆ ಇಟ್ಟುಕೊಳ್ಳಬಾರದು.

ನಾವು ಉದ್ದೇಶಿಸಿದ ಕಾರ್ಯವು ಆದರಂತೆಯೇ ಆಗಿ ಹೋದರೆ ನಮಗೆ ಸಂತೋಷವಾಗಬಹುದು. ಆದರೆ ಎಲ್ಲಾ ಕಾರ್ಯಗಳೂ ನಮ್ಮ ಉದ್ದೇಶದಂತೆ ನಡೆಯುವುದಿಲ್ಲ. ಆವಾಗ ನಮಗೆ ದುಃಖ ಉಂಟಾಗುತ್ತದೆ. ಈ ಸಂತೋಷ ಸೌಖ್ಯ ಮತ್ತು ದುಃಖ ಎರಡೂ ನಮಗೆ ಕೂಡದು. ಎರಡೂ ನಮ್ಮನ್ನು ಹಾಳುಮಾಡುತ್ತವೆ. ಸುಖದ ಹಿಂದೆ ದುಃಖ ದುಃಖದ ಹಿಂದೆ ಸುಖ ಇರುತ್ತವೆ. ಒಂದಿದ್ದರೆ ಅದರ ಜೊತೆಗೆ ಇನ್ನೊಂದಿದ್ದೇ ಇರುತ್ತದೆ. ಇವೆರಡರಿಂದಲೂ ನಾವು ದೂರವಾಗಿರಬೇಕು. ಸುಖದಿಂದ ನಾವು ಹಿಗ್ಗಿದರೂ ಕೆಟ್ಟೆವು. ದುಃಖದಿಂದ ಕುಗ್ಗಿದರೂ ನಾವು ಕೆಡುತ್ತೇವೆ. ಇವುಗಳಿಗೆ ನಾವು ತುತ್ತಾದರೆ ನಮ್ಮನ್ನು ನಾವು ಕೆಡಿಸಿಕೊಂಡಂತೆಯೇ ಸರಿ. ಫಲಾಪೇಕ್ಷೆ ಅಥವಾ ಫಲದ ಮೇಲೆ ಆಶೆ ನಾವು ಇಟ್ಟುಕೊಂಡರೆ ನಾವು ಈ ಸುಖ ದುಃಖಗಳಿಗೆ ಅವಕಾಶ ಕೊಟ್ಟಂತಾಗುತ್ತದೆ. ಆದುದರಿಂದ ಆ ಅಪೇಕ್ಷೆಯೇ ನಮಗೆ ಬೇಡ. ಅದರಿಂದಾಗುವ ಸುಖ ದುಃಖಗಳ ಗೊಡವೆಯೇ ನಮಗೆ ಬೇಡ.

ಕರ್ಮಯೋಗಿಯಾದ ವ್ಯವಸಾಯಗಾರನು ಸಮಾಜ ಸೇವೆಗೆಂದು ಅಫೀಮನ್ನು ಎಂದಿಗೂ ಬೆಳೆಯುವುದಿಲ್ಲ. ಅಫೀಮು ವಿಷವೆಂದು ತಿಳಿದ ಮೇಲೆ ಅದನ್ನು ಹೇಗೆ ಸಮಾಜಕ್ಕೆ ಬೆಳೆಸಿಕೊಟ್ಟಾನು? ಸಮಾಜಕ್ಕೆ ಬೇಕಾದ ಭತ್ತ, ರಾಗಿ ಮೊದಲಾದುವೇ ಇವನ ಕೃಷಿ. ದುಡ್ಡು ಹೆಚ್ಚು ಸಿಕ್ಕುತ್ತದೆಂದು ಅವಶ್ಯವಲ್ಲದ ವಸ್ತುವನ್ನು ಬೆಳೆಸುವವನು ಕರ್ಮಯೋಗಿಯಲ್ಲ. ಹಾಗೆಯೇ ದನಗಳನ್ನು ಸಾಕಿ ಸಮಾಜಕ್ಕೆ ಬೇಕಾದಷ್ಟು ಹಾಲನ್ನು ಒದಗಿಸಬೇಕೆಂದು ಇವನ ಮನಸ್ಸಿನಲ್ಲಿರುತ್ತದೆ. ದನ ಕಾಯುವುದು ಮರ್ಯಾದೆಗೆ ಕಮ್ಮಿಯೆಂದು ಇವನ ಮನಸ್ಸಿಗೆ ಆಗುವುದೇ ಇಲ್ಲ.

ಸಾವಿರಾರು ಮೈಲಿ ದೂರದ ಬಂದರದಲ್ಲಿ ತಯಾರಾದ ಬಟ್ಟೆಯನ್ನು ತರಿಸಿ ಸಮಾಜಕ್ಕೆ ಹಂಚುತ್ತೇನೆಂದು ಹೇಳುವವನು ಧರ್ಮ ಮಾರ್ಗದಲ್ಲಿ ವ್ಯಾಪಾರ ಮಾಡುವವನಲ್ಲ. ಇವನು ಸಮಾಜ ಸೇವೆಯ ಹೆಸರಿನಲ್ಲಿ ಲಾಭ ಸಂಪಾದಿಸುವ ಸಮಾಜ ದ್ರೋಹಿ.

ಸ್ವಾರ್ಥ ದೃಷ್ಟಿ ಇರುವವನು ಎಂದಿಗೂ ಸಮಾಜಕ್ಕೆ ಸೇವೆ ಮಾಡಲಾರನು. ವ್ಯಾಪಾರವೇ ಆಗಲಿ, ಒಕ್ಕಲುತನವೇ ಆಗಲಿ, ರಾಜಕೀಯವೇ ಆಗಲಿ, ಇತರ ಯಾವ ಕಸಬಾದರೂ ಸ್ವಾರ್ಥವಿಲ್ಲದಿದ್ದರೆ ಅವರಿಂದ ಸಮಾಜಕ್ಕೆ ಪ್ರಯೋಜನ ದೊರಕೀತು.

ಈ ವಾರದ ಕಥೆ.

ಸಂಸಾರ.

ಕಥೆಗಾರ್ತಿ:— ಶ್ರೀಮತಿ ಕೆ. ಪಿ. ಪೂವಮ್ಮ. (ಬೈಗೋಡು)

ನರೇಂದ್ರ:—ರಮಾ, ಇನ್ನೂ ಕಾಫಿಯೂ ಆಗಲಿಲ್ಲವೇ? ನಾನಿನ್ನು ಆಫೀಸಿಗೆ ಹೋಗಬೇಡವೆಂದು ನಿನ್ನ ಯೋಚನೆಯೇ?

ರಮ:—ಕಾಫಿ ಆಗಿದೆ. ನೀವು ಯಾವದೋ ಯೋಚನೆಯಲ್ಲಿದ್ದರಿ ಕರೆಯಲಿಲ್ಲ.

ನರೇಂದ್ರ:— ನನಗೇನೂ ಯೋಚನೆಯಿಲ್ಲ. ನಿಮ್ಮಿಬ್ಬರ ಸಮಸ್ಯೆಯನ್ನು ಹೇಗೆ ಬಿಡಿಸುವದೆಂಬುದೇ ಯೋಚನೆ. ಅಪ್ಪಾ ನೀನಾದರೂ ನೋಡಬಾರದೆ?

ಪದ್ಮಿನಿ:—ಅಯ್ಯೋ, ಮದುವೆಯಾದ ಮೇಲೆ ತಾಯಿಯು ಕೊಟ್ಟ ತಿಂಡಿ ರುಚಿಸುವದೇ? ನನ್ನ ಮಾತೇ ರುಚಿಸುವದಿಲ್ಲ ಮತ್ತೆ ತಿಂಡಿ!

* * *

ಪ:—ರಮಾ, ನರೇಂದ್ರನು ಕಾಫಿ ಕುಡಿದು ಹೊರಟು ಹೋಯಿತ. ಆ ಪಾತ್ರೆಗಳಲ್ಲಿ ನೊಣಗಳು ಝೇಂಕರಿಸುತ್ತಿವೆ. ನಿಮ್ಮ ಕೈ, ಕಾಲು, ಮುಖ ಪೃಂಗಾರದಲ್ಲಿ ಚಿನ್ನಾಣಗಿತ್ತಿಯಾಗಿ ಆಡಿದರೆ ಸಾಲದು. ಮನೆಯ ಗೃಹಿಣಿಯು ಲಕ್ಷಣಕ್ಕನುಗುಣ ಇಟ್ಟುಕೊಳ್ಳಬೇಕು. ನನ್ನ ವರದಿವರಕ್ಕೆ ನೀವು ಹೇಗೆ ಜೀವಿಸುತ್ತೀರೋ ತಿಳಿಯದು. ನಾನಿಲ್ಲದಿದ್ದರೆ ನರೇಂದ್ರನಿಗೆ ಅನ್ನವೇ ದೊರೆಯುತ್ತಿರಲಿಲ್ಲ!

ರ:— ಸಾಕತ್ತೆ, ನಿಮ್ಮ ಧಾವಂತದ ಈ ಕೇಳಿ ಕೇಳಿ ನನಗೆ ಸಾಕಾಗಿದೆ. ನಿಮ್ಮ ಕಾಲವೇ ಬೇರೆ ಇಂದಿನ ಕಾಲವೇ ಬೇರೆ. ನನ್ನ ರೂಪಲಾವಣ್ಯಕ್ಕೆ ನಿಮಗೆ ಹೊಟ್ಟೆ ಉರಿಯುವದೇಕೆ! ನಾನೇನು ಗತಿ ಇಲ್ಲದವಳಲ್ಲ. ಇದೇನ ಈ ನರಕ ಜೀವನ ಅತ್ತೆಯಿರುವವರ. ಯಾವಾಗಲೂ ಹೀಗೆ. ನಾವು ಸೊಸೆಯಾಗಿ ಬಂದಾಗ ಹೇಗಿದ್ದರೋ! ಈಗ ಎಲ್ಲಾ ಉಪದೇಶವೇ!

* * *

ಜಯ:—ಅಪ್ಪಾ ಹೊಟ್ಟೆ ಹಸಿಯುತ್ತೆ.

ನ:—ರಮಾ, ಮಗುವಿಗೆ ಅನ್ನ ಕೊಡಲಿಲ್ಲವೇ?

ರ:—ಅನ್ನ ಇನ್ನೂ ಬೇದಿಲ್ಲ.

ನ:— ಅತ್ತೆ ಸೊಸೆಯರು ಜಗಳ ಕಾದು ಅಕ್ಕಿ ಹಾಕಿ ಬೇಯಿಸಿದಂತೆ ಕಾಣುತ್ತೆ!

ಪ:— ನನ್ನ ಮಾತು ನೀನೆತ್ತಬೇಡ. ಪ:— ನನ್ನ ಮಾತು ನೀನೆತ್ತಬೇಡ. ಈಗಿನ ಸೊಸೆಯರು ಸೊಸೆಯರೇ ಅಲ್ಲ; ಹೆಂಡತಿ ದೊರೆತ ಮೇಲೆ ಮಕ್ಕಳು ನಮ್ಮವರು ಅಲ್ಲ. ಆಕೆಯೇ ಅತ್ಯಗಿಬಿಟ್ಟಿದ್ದಾಳೆ! ಸೊಸೆಯ ಮಾತು ಕೇಳಿ ನುಂಗಿ ಕೊಳ್ಳುವ ಈ ಜೀವನ ಏಕೆ ಆತ್ಮಹತ್ಯೆಗೊಳ್ಳುವದಿಲ್ಲವೋ ನಾ ಕಾಣೆ.

ರ:— ನಾನು ಬಿನ್ನಾಣಿಯಂತೆ! ಕೆಲಸ ಮಾಡುವದಿಲ್ಲವಂತೆ. ಪ್ರತಿ ಮಾತಿಗೂ ಹೆಜ್ಜೆ ಹೆಜ್ಜೆಗೂ ತಪ್ಪು ಹೇಳುತ್ತಾರೆ. ಒಂದೆರಡು ದಿನವೇ. ಇಂದು ಹರಿಯೂ ದಿನ; ನಾಳೆ ಹರಿಯದಿರುತ್ತ ಎಂದರೆ ಇದು ಶಾಶ್ವತವಾಗಿದೆ. ನನ್ನಿಂದಾಗಿ ಯಾರೂ ಕಷ್ಟಪಡುವದು ಬೇಡ. ತನಗಾದರೂ ಒಂದು ಹಿಡಿ ಅನ್ನ ಹಾಕುವವರಿಲ್ಲವೇ?

ನ:—ನಿಮ್ಮಿಬ್ಬರ ಜಗಳವನ್ನು ಬಿಡಿಸುವದು ನನ್ನಿಂದ ಈ ವರೆಗೆ ಆಗಿಲ್ಲ. ಎಂದು ಕೊನೆಗೊಳ್ಳುವದೋ ನನಗೆ ತಿಳಿಯದು. ತಾಯಿ ಏಕೆ ಹೀಗೆ ಹೇಳುತ್ತಾಳೆಂದು ನೀನು ರೇಗಿಸಬಾರದೇ ರಮಾ. ನನ್ನನ್ನು ಸಾಕಿಸಲಹಿದ ಆಕೆ ನಿನ್ನನ್ನೂ ಮಗಳಂತೆ ನೋಡಲಾರಳೆ? ಆಕೆಯು ಮಗಳಂತೆಯೇ ನಿನಗೆ ಬುದ್ಧಿ ಹೇಳುತ್ತಾಳೆ. ಸಹಿಸಿಕೊಳ್ಳಬೇಕು ರಮಾ. ಅವರದು ಪಳಿದ ಜೀವ ಅದಕ್ಕೆ ಹೊಂದಿಕೊಂಡು ನಡೆಸಬೇಕು. ಬದುಕಿದಷ್ಟು ಕಾಲ ಆಕೆ ಬದುಕುವಳೆ? ಪ್ರತಿಯೊಂದಕ್ಕೂ ಪ್ರಾಶಸ್ತ್ಯ ಕೊಡದಿರು. ನಿನ್ನ ತಾಯಿಯೆಂದೇ ಭಾವಿಸಿ ನಡೆಸು. ಹಾಗಾದರೆ ಎಲ್ಲವೂ ಸರಿಹೋಗುವದು.

ರ:—ನಾನೆಷ್ಟು ಸಹನೆಯಿಂದ ನಡೆದರೂ ಅವರಿಗೆ ತೃಪ್ತಿ ಇಲ್ಲ. ಮಗಳಂತೆ ಭಾವಿಸಿದರೆ ಅಲ್ಲವೇ ನಾನೂ ತಾಯಿಯಂತೆ ನೋಡುವದು. ಸಾಧ್ಯವೇ? ಮಗಳು ಮಗಳೇ, ಸೊಸೆಯು ಸೊಸೆಯೇ!

ನ:—ಸಿಟ್ಟು ಮಾಡಬೇಡ ರಮಾ. ಸಿಟ್ಟಿನಿಂದ ಅನೇಕ ಕುಟುಂಬಗಳು ಹಾಳಾಗಿವೆ. ಈ ರೀತಿ ಪ್ರತಿದಿನ ಜಗಳ ಮಾಡಿ ಮನೆ ಎಂದೂ ಉದ್ಧಾರವಾಗಲಾರದು. ಅದರಿಂದ ತುಂಬಿದ ಪಕ್ಷಿಯೇ ನನ್ನ ನಲಿಸ ಮನ.

ರ:— ನಿಮಗೆ ನನ್ನ ಕಷ್ಟವೇ ಕಾಣುತ್ತದೆ. ನನಗೇಕೆ ಪ್ರಾಣ ಇಟ್ಟುಕೊಳ್ಳಬೇಕೂ ನನಗೆ ತಿಳಿಯದು.

* * *

ನ:—ರಮಾ, ಊಟಕ್ಕಾಗಿದ್ದರೆ ಅನ್ನವನ್ನು ಕಡಿ.

ರ: ಹೊಟ್ಟೆ ಹಸಿದವರನ್ನ ಕರೆಯಬೇಕೆ?

ನ:—ಹಾಕಿದ್ದರೆ ಇದೇ ರೀತಿಯಲ್ಲವೇ? ನಿಮ್ಮಿಬ್ಬರಿಂದಾಗಿ ನಾನೇ ಆತ್ಮಹತ್ಯೆ ಮಾಡಿಕೊಂಡರೆ ಒಳಿತು.

ರ:—ನನಗಾಗಿ ಬೇಡಿ. ನಾಳೆ ತವರಿಗೆ ಹೋಗಿಬಿಡುತ್ತೇನೆ. ನೀವು ತಾಯಿಯೊಡನೆ ಸುಖವಾಗಿರಿ.

* * *

ಗಣೇಶ:—ಏನೋ ನರೇಂದ್ರ, ನಿನ್ನ ಕಥೆ ಗಂಭೀರವಲ್ಲಿಲ್ಲ ಇದೆ. ಮದುವೆಯಾದ ನಂತರ ಗಿ ಇಡೀ ಆಫೀಸಿನಿಂದ ಅಡ್ಡಕ್ಕಿಗೆಗಾಗಿ ಮಾದರಿ ಪುರುಷನೆನಿಸಿದೆ! ಒಂದು ಕುಟುಂಬವನ್ನು ಸುಧಾರಿಸಿಕೊಳ್ಳಲಾರದ ನೀನು ಹೀಗೆ ನುಡಿಯುವದ್ದೇ? ಇದು ಕುಟುಂಬದಲ್ಲಿ ರೋಗದ ರೀತಿಯಾಗಿರುವದ್ದಲ್ಲವೇ? ತಾಯಿ ಹೇಡತಿ! ಒಳ್ಳೆಗ್ರಹ ಸರಕಾರ ಕಡೋ ನಿನ್ನನ್ನ.

ನ:—ನೀವು ಮದುವೆಯಾಗದವರಿಗೆ ಅದೆಲ್ಲಾ ಏನು ತಿಳಿಯತ್ತೆ? ಭುವನವನ್ನಾಳಬಹುದು ಕಣೋ, ಆದರೆ ಭವನದಲ್ಲಿ ಆಟವಾಗದು.

ಗ:—ಹೇಗೂ ನೋಡು ನಿನ್ನಂಥಾ ಸಭ್ಯನ ಕುಟುಂಬದಲ್ಲಿ ಹೀಗಾಗಬಾರದು. ಹೆಂಡತಿಯನ್ನು ಕರೆಕೊಂಡು ಬಾ. ಸಂಸಾರ ಯಾವಾಗಲೂ ಕಷ್ಟ. ಒಮ್ಮೆ ಸಿಕ್ಕಿಕೊಂಡ ಮೇಲೆ ಹೇಗಾದರೂ ದಡ ಸೇರಲೇ ಬೇಕು.

* * *

ರಮೂಳ ತಂದೆ ರಾಮರಾಯರು ಪತ್ರ ಓದತೊಡಗಿದರು.

"ತೀರ್ಥರೂಪು ಮಾವಯ್ಯ ಮತ್ತು ಅತ್ತೆಯಮ್ಮನವರಿಗೆ, ನನ್ನ ನಮಸ್ಕಾರಗಳು.

ನಾನು ಆಫೀಸಿಗೆ ಹೋಗಿದ್ದಾಗ ತಾಯಿಯನ್ನವರಿಗೂ ಹೇಳದೆ ರಮೆಯು ಮಗುವಿನೊಡನೆ ಬಂದು ಬಿಟ್ಟಿದ್ದಾಳೆ. ನಿಮ್ಮ ಮತ್ತು ನನ್ನ ಕುಟುಂಬದ ಗೌರವದ ದೃಷ್ಟಿಯಿಂದ ಆಕೆಗೆ ಬುದ್ಧಿವಾದ ಹೇಳಿ ಕಳುಹಿಸಿ. ಇಲ್ಲವಾದರೆ ಶಾಶ್ವತವಾಗಿ ಹೇಳದ ಮಾತುಗಳನ್ನು ಜ್ಞಾಪಿಸಿಕೊಂಡು ಈ ಪತ್ರಕ್ಕೆ ರಮೆಯ ಸ್ವೀ ಉತ್ತರವನ್ನಾಗಿ ಮಾಡಿ ಕಳುಹಿಸಿ.

ನಿಮ್ಮ ಅಳಿಯ,
ನರೇಂದ್ರ."

ರಾಮರಾಯರ ಹೆಂಡತಿಯು ಈಗ ದವನ್ನು ಕೇಳಿ ಮಗಳು ಹೋಗಬರಲಂಗೂ ಮಗಳಿಗೆ ಮಾರಕವಾಗಿರುವ ಅತ್ತೆ ಇರುವವರಿಗೆ ಇಲ್ಲಿ ಇರಲೇಗೂ ವಾದಿಸಿದಳು. ಆದರೆ ರಾಮರಾಯರ ಉತ್ತರದಿಂದ ರಮೆ, ಗಂಡನೆಡೆಗೆ ಹೋಗಲು ಒಪ್ಪಿದಳು.

* * *

ಅರವತ್ತು ವಯಸ್ಸಾಗಿರುವ ಪದ್ಮಿನಿಗೆ ದಿನ, ಕಳೆದಂತೆ ಸೌಖ್ಯ ಕಡಿಮೆಯಾಗತೊಡಗಿತು. ಆಕೆ ಹಾಸಿಗೆ ಹಿಡಿದಳು. ನರೇಂದ್ರನೂ ವಿವಿಧ ಡಾಕ್ಟರುಗಳನ್ನು ಕರೆಸಿದನು. ರಮೆಯು ತನ್ನ ಹೊಂದಿದ ಚಟುವಟಿಕೆಯ 'ನನ್ನನ್ನು ಮರೆತು ಮಗಳಂತೆ ಶುಶ್ರೂಷೆ ಮಾಡಿದಳು.' ಆದರೂ ಪದ್ಮಿನಿಯ ಅಂತ್ಯ ದಿನ ಸನ್ನಿಹಿತವಾಯಿತು. ಆಕೆ ಅಂದು ರಮೂಳನ್ನು ಕರೆದು ಹೇಳಿದಳು 'ರಮಾ, ನನ್ನಿಂದ ನಿನಗೆ ಹಲವಾರು ತೊಂದರೆಗಳಾಗಿರಬಹುದು. ನಿನ್ನ ಸುಖಮಯ ಜೀವನಕ್ಕೆ ನಾನು ಮುಳ್ಳಿನಂತಿದ್ದೆ. ಅದು ಆಗ ನೀನು ನೆನಸಿದಂತೆ ಕೆಟ್ಟದಿಂದಲ್ಲ. ಸುಖದಿಂದ ಮನುಷ್ಯನು ಕೆಡುತ್ತಾನೆ. ಅದ್ದರಿಂದ ನೀವು ಎಚ್ಚರದಿಂದಿರಬೇಕೆಂದೇ ನಾನು ಹಾಗೆ ನಡೆದುಕೊಂಡೆ. ನಿನ್ನ ಮನಸ್ಸನ್ನು ನೋಯಿಸಿದ್ದರೆ ಕ್ಷಮಿಸು. ನರೇಂದ್ರನಿಗೆ ನೀನೇ ಪ್ರೀತಿಯ ಹೆಂಡತಿ ಮಾತ್ರವಲ್ಲ, ಮುಂದೆ ಪ್ರೀತಿಯ ತಾಯಿಯಂತೆ, ಪ್ರೀತಿಯ ಗೆಳತಿಯಂತೆ, ಮಂತ್ರಿಯಂತೆ ನಡೆ ಕಂ.. ನಿನ್ನ ಕೈಯಲ್ಲಿ ಈ ಕುಟುಂಬದ ಭವಿಷ್ಯವಿದೆ' ಎಂದು ಹೇಳಿ ಕಣ್ಮುಚ್ಚಿದಳು.

ರಮೆಯು ಕಣ್ಣೀರಿನ ಕಂಬನಿ ಕೋಡಿ ಹರಿಯುತ್ತಿತ್ತು.

ಪರದೇಶಿ ಜಲ.

ಲೇ:—ಕುಮಾರಿ ಕಮಲ ಪೊನ್ನಪ್ಪ.

ನನಗೂ ಪತ್ರಿಕೆಯಲ್ಲಿ ಏನಾದರೂ ಬರೆದು ಪ್ರಕಟಿಸಬೇಕೆಂಬಾಸೆ. ಏನು ಬರೆಯುವದೆಂದು ಹೊಳೆಯದೆ ರಾತ್ರಿ ಯೋಚಿಸಿ ರಾತ್ರಿ ಲೆಕ್ಕ ಮಾಡುವ ನೆನಪಿನಿಂದ ಕುಳಿತೆ, ಬರೆಯ ತೊಡಗಿದ್ದೆ, ಲೇಖನಿ ನಿಲ್ಲದೆ ಓಡುತ್ತಿತ್ತು. ಬಳಿಕ ಲೇಖನ ಮೇಲೆ ಕಣ್ಣಿಟ್ಟು ಅಕ್ಷರಗಳ ಮಾಲೆ ಪೋಣಿಸ್ಪಿಡುತ್ತಿದ್ದವು. ಅರ್ಧ ಪುಟ ಬರೆಯುವಷ್ಟರಲ್ಲಿ ಲೇಖನಿ ನಿಂತಿತ. ತಲೆಯೊಳಗಿನಿಂದ ಏನೂ ಹೊರಗೆ ಬರುವಂತೆ ತೋರಲಿಲ್ಲ. ಅಷ್ಟರಲ್ಲಿ ರಾತ್ರಿ ೧೧ ಗಂಟೆಯಾಗಿತ್ತು. ದೀಪ ಆರಿಸಿ ಮಲಗಿದೆ. ಹಾಗೆಯೇ ದೀಪ ಆರಿಸಿ ನಿದ್ರೆ ಹೋದೆ.

ಪತ್ರಿಕೆಯಲ್ಲಿ ಹೆಸರು ಬರಬೇಕೆಂಬ ಅತಿ ಸಾಧಾರಣ ಆಸೆಯೇನಲ್ಲ. ಅಂದು ಹಾಗೇ ನಳಿಯುವ ಸಿಕ್ಕಗಳನ್ನೂ, ಪತ್ರಿಕೆಗಳನ್ನೂ ಮಗುಚುತ್ತಿದ್ದ ೨೦ ವರ್ಷಗಳ ಹಿಂದಿನ ಒಂದು ಮಾಸಿಕ. ಅದರಲ್ಲಿ ಉತ್ತಮ ಕಥೆಯೊಂದಿತ್ತು. ನನಗೆ ಸಂತೋಷವಾಯಿತು. ಅದನ್ನು ಅಚ್ಚುಮೆಚ್ಚಾಗಿ ಹೊಸ ಕಾಗದದಲ್ಲಿ ಬರೆದೆ. ನನ್ನ ಹೆಸರು ಹಾಕಿಕೊಂಡೆ. ಸ್ವಾರಸ್ಯವಾಗಿ ದಲೇ ಅದನ್ನಲ್ಲಿಗೆ ಹೋಗಿ ... ಕಥೆ ಬರೆದೆ... ಹೇಳಿ ಓದತೊಡಗಿದ. ... ... ತಿಳಿಸಿ ... ಪತ್ರಿಕೆಯ ಸಂಪಾದಕರಿಗೆ ನನ್ನ ಹೇಳಲೇ ಬೇಕಾಯಿತು. ತಾಯಿ ಹೇಳಿದಳು 'ಪರದೇಶಿಗೆ ಆಶಿಸಬಾರದು. ಇದರಿಂದ ನಿನ್ನ ಜ್ಞಾನ ಬೆಳೆಯದು.'

ಅವರ ಮಾತಿನ ಅರ್ಥ ಅನ್ನಕ್ಕೆ ನಿಲ್ಲಲಾರದು! ಯಾರಿಗೂ ತಿಳಿಯದಂತೆ ಆ ಕಥೆಯನ್ನು ಒಂದು ಪತ್ರಿಕೆಯ ಸಂಪಾದಕರಿಗೆ ಕಳುಹಿಸಿದೆ. ಪ್ರತಿ ವಾರ ಪತ್ರಿಕೆ ಬರುವಾಗ ಆತುರದಿಂದ ನೋಡುತ್ತೇನೆ. ಆದರೆ ಆ ವರೆಗೂ ಪ್ರಕಟವಾಗಿಲ್ಲ. ನನಗೆ ಸಂಪಾದಕರ ಮೇಲೆ ಕೋಪಬಂದಿತು. ಅವರ ಪತ್ರಿಕೆ ಕರೆಸುವುದನ್ನೇ ನಿಲ್ಲಿಸಿಬಿಡಬೇಕೆಂದು ಮನದಲ್ಲಿ ಬಗೆದೆ.

ದಸರಾಕ್ಕೆ ರಜೆ ಇತ್ತು. ಮನೆಯವರೆಲ್ಲರೂ ಹೋಗಿದ್ದರು. ಮನೆಯಲ್ಲಿ ನಾನು, ಗಣೇಶ ಮತ್ತು ನಮ್ಮ ಅಜ್ಜಿ ಮಾತ್ರ. ಜನರಿಲ್ಲದೆ ಮನೆಯು ಕಳೆಯುವದೇ ಕಷ್ಟವಾಗಿತ್ತು. ಬೇಸರ ಪರಿಹಾರಕ್ಕೆಂದು ಪುಸ್ತಕಗಳನ್ನೆಲ್ಲಾ ಮಗುಚುತ್ತಿದ್ದೆ. ಅವುಗಳಲ್ಲಿ ಎಲ್ಲಾ ಪುಸ್ತಕಗಳೂ ನೀನು ಓದಿದವೇ! ಎಲ್ಲವರೊಂದು ಓದದ ಪುಸ್ತಕ ದೊರೆಯ ಬಹುದೆಂದು ನನ್ನ ಆಸೆ. ಮಗುಚುತ್ತಿದ್ದಂತೆ ಒಂದು ಮಾಸಿಕ ದೊರೆಯಿತು. ಅದನ್ನು ಓದತೊಡಗಿದೆ. ನನಗೆ ನನ್ನನ್ನೇ ನಂಬಲಾಗಲಿಲ್ಲ. ನಾನು ಬರೆದ ಕಥೆಯೇ ಅಲ್ಲಿ ಪ್ರಕಟವಾಗಿತ್ತು! ಆದರೆ ನನ್ನ ಹೆಸರಿಲ್ಲ! ಅದರಲ್ಲಿ ಬೇರೊಬ್ಬರ ಹೆಸರಿತ್ತು. ಅಲ್ಲಿ ಬರೆದಿದ್ದ ಇದು ಹೇಗಾಗಿರಬಹುದೆಂದು ಕಡೆಗೆ ಹೊಳೆಯಿತು. ನನ್ನ ಹಾಗೆಯೇ ಅವರೂ ಪರದೇಶಿ ಜಲ ಮುಟ್ಟಿದವರಿರಬೇಕು. ನನ್ನಂತೆಯೇ ಬೇರೊಬ್ಬರ ಆ ಕಥೆಯನ್ನು ಬರೆದು ತಮ್ಮ ಹೆಸರಿಟ್ಟು ಕಳುಹಿ ಪತ್ರಿಕೆಯಲ್ಲಿ ಪ್ರಕಟಿಸಿದ್ದರು.

ನನಗೆ ಜಿಗುಪ್ಸೆ ತೋರಿತು. ಪತ್ರಿಕೆಯಲ್ಲಿ ಈ ರೀತಿ ಪರರಿಂದ ಬನ್ನ ನೆಚ್ಚಿ ಪ್ರತಿ ದಿನೇ ದಿನೇ ಬೆಳೆದ ಬರುತ್ತಿದ್ದ ಇಂದು ನನ್ನ ಅನುಭವಕ್ಕೆ ಬಂದಿದೆ. ಆ ರೀತಿ ಮಾಡಬಾರದೆಂದು ನಿರ್ಧರಿಸಿದೆ. ನನ್ನ ಪರರ ಎಂಜಲನ್ನು ತಿನ್ನ ಬೇಕಾಗಿಲ್ಲ ಪತ್ರಿಕೆಯ ಸಹಕಾರದಿಂದ ಬೆಳೆದು ಸ್ವತಂತ್ರವಾಗಿ ಜ್ಞಾನೋದಯವಾಗಿ ಈ ಕಳ್ಳತನವನ್ನು ಬಿಟ್ಟೆಂದು ನನ್ನ ಸಾಹಿತ್ಯ ಬೆಳೆದು ಸ್ವತಂತ್ರವಾಗಿ ತನ್ನ ಕಾಲಿನ ಮೇಲೆ ತಾನು ನಿಲ್ಲಬಹುದು. ಇಂಥಾ ಚೇತನಯುಕ್ತ ಸಾಹಿತ್ಯವನ್ನು ಜೀವನ ಪೂರ್ತ ಯುಕ್ತಿಸುವನ?

ಕೊಡಗು

ತಾ ೧೮-೧೧-೧೯೪೯ನೇ ಶುಕ್ರವಾರ

ಜವಾಹರ್.

ನವಂಬರ್ ತಾರೀಕು ೧೪ಕ್ಕೆ ಭಾರತ ಪ್ರಧಾನ ಮಂತ್ರಿ ಪಂಡಿತ ಜವಾಹರಲಾಲರಿಗೆ ಅರುವತ್ತು ವರ್ಷಗಳು ತುಂಬಿದವು. ಭಾರತೀಯರಿಗೆ ಭಾರತದ ಸರ್ವಸ್ವವಾಗಿರುವ ನೆಹರೂರವರ ವಜ್ರಮಹೋತ್ಸವವು ಭಾರತೀಯರಿಗೆ ಆನಂದದಾಯಕ ದಿನ. ಅಲ್ಲದೆ ಈ ವರ್ಷದ ಜನ್ಮದಿನಕ್ಕೆ ಇನ್ನೂ ಹೆಚ್ಚಿನ ಕಾಂತಿ ಬಂದಿದೆ. ತನ್ನ ವ್ಯಕ್ತಿತ್ವ, ಪ್ರತಿಭೆ, ಗಾಂಭೀರ್ಯಗಳಿಂದ ಅಮೇರಿಕನರನ್ನು ಮುಗ್ಧಗೊಳಿಸಿ ಹಿಂತಿರುಗಿ ರಾಮಕೃಷ್ಣ ಪರಮಹಂಸರ ಪಟ್ಟಶಿಷ್ಯ ವಿವೇಕಾನಂದರಂತೆ, ತನ್ನ ಪ್ರೌಢಿಮೆ, ಸಮನ್ವಯದೃಷ್ಟಿ, ಅಂತರ್ ರಾಷ್ಟ್ರೀಯ ಶಾಂತಿಯ ಕಾಂಕ್ಷೆಗಳಿಂದ ಅಮೇರಿಕನರನ್ನು ಮುಗ್ಧಗೊಳಿಸಿ ಜಗತ್ತಿನ ಉದ್ಧಾರಕ್ಕೆ ಒಂದೇ ಮಾರ್ಗವಾದ ಗಾಂಧೀ ಮಾರ್ಗವನ್ನು ಎತ್ತಿ ಹೇಳಿ ಹಿಂತಿರುಗಿದ ಮಹಾತ್ಮರ ಉತ್ತರಾಧಿಕಾರಿ ನೆಹರೂರವರು ಅದೇ ದಿನ ಭಾರತಕ್ಕೆ ಬಂದರು.

ಭಾರತಿಯು ಎರಡೂ ಕೈಗಳಿಂದ ಸುಪುತ್ರನನ್ನು ಸ್ವಾಗತಿಸಿತು. ಭಾರತ ನಭೋಮಂಡಲದಲ್ಲಿ 'ಜವಹರ್‌ಲಾಲ್ ಕೀ ಜೈ' ಮೊಳಗಿತು. ಹಿಂದೂದೇಶದ ಮುಖ್ಯ ನಗರವಾದ ಬೊಂಬಾಯಿಯು ೭೫,೦೦೦ ಬೆಲೆ ಬಾಳುವ ಚಿನ್ನದ ಅಶೋಕ ಸ್ತಂಭವನ್ನು ನಿರ್ಮಿಸಿ ಉಡುಗೊರೆ ಇತ್ತಿತ್ತು. ಕಳೆದ ೨೦ ವರ್ಷಗಳಿಂದ ಚಿನ್ನದ ಚೂರು ಬೆಳ್ಳಿಯ ಯಾವುದೇ ವಸ್ತುವನ್ನಿಟ್ಟುಕೊಳ್ಳೆನೆಂಬ ವ್ರತಧಾರಿಯಾದ ನೆಹರೂ ಅದನ್ನು ಜನತೆಯ ಉಪಯೋಗಕ್ಕಾಗಿ ಬೊಂಬಾಯಿಗೇ ಮರಳಿಕೊಟ್ಟರು. ಬೊಂಬಾಯಿಯ ಪ್ರಚಂಡ ಸಭೆಯಲ್ಲಿ ಮಾತಾಡುತ್ತಾ ನೆಹರೂರವರು ಹೇಳಿದರು. "ಸರಕಾರಿ ಉದ್ಯೋಗಸ್ಥರು ೫೫ ವಯಸ್ಸಿಗೆ ನಿವೃತ್ತರಾಗುತ್ತಾರೆ. ಹೆಚ್ಚಾದರೆ ನ್ಯಾಯಾಧೀಶರು ೬೦ ವಯಸ್ಸಿನ ವರೆಗಿರಬಹುದು. ಆದರೆ ನಿಜವಾಗಿ ನೋಡಿದರೆ ನನಗೆ ೬೦ ವರ್ಷವಾಯಿತೇ ಎಂಬುದು ಸಂಶಯವಾಗುತ್ತದೆ. ನನ್ನ ಜಾತಕದಲ್ಲಿ ೬೦ ವಯಸ್ಸಾದುದು ಸತ್ಯ. ಆದರೆ ದೇಶದ, ಜನತೆಯ ಕಾರ್ಯಬಾಹುಳ್ಯದಲ್ಲಿ ಈ ವಯಸ್ಸಾದುದನ್ನು ಮರೆತು ಬಿಟ್ಟಿದ್ದೇನೆ". ಸರಾಸರಿ ೨೭ ವರ್ಷ ಜೀವಮಾನದ ಭಾರತೀಯನ ದೃಷ್ಟಿಯಿಂದ ೬೦ ವರ್ಷಗಳ ಹೆಚ್ಚೆಂದು ತೋರಿದರೂ, ಆ ದೃಷ್ಟಿಯಿಂದಲೆ 'ಅರುವತ್ತರಲ್ಲಿ ಅರುಳೋ ಮರುಳೋ' ಎಂಬ ನಾಣ್ಣುಡಿಯಾಗಿದ್ದರೂ ಮನುಷ್ಯನ ಜೀವನದಲ್ಲಿ ಅರುವತ್ತನೇ ವಯಸ್ಸು ಹರೆಯದ ಕಾಲವೆನ್ನಬಹುದು! ಶಾರೀರಕವಾಗಿ ೨೦ ವಯಸ್ಸಿನವರಲ್ಲಿರುವ ಶಕ್ತಿ ಚೇತನ ಬೌದ್ಧಿಕ ದೃಷ್ಟಿಯಲ್ಲಿ ೬೦ ವಯಸ್ಸಿನಲ್ಲಿರುತ್ತದೆಂದು ಶ್ರೀ. ಕೆ. ಜಿ ಮಶ್ರೂವಾಲಾ ಇವರು ಬರೆದಿರುವರು. ಮಹಾತ್ಮಗಾಂಧೀಜಿಯವರ ೬೦ನೇ ಜಯಂತಿಯ ಕಾಲಕ್ಕೆ ಜಗದ್ವಿಖ್ಯಾತ ಜಾರ್ಜ್ ಬರ್ನಾರ್ಡ್ ಶಾರವರು ೬೦ ನೇ ವಯಸ್ಸನ್ನು ಒಂದು ಮಹಾವಿಷಯವಾಗಿ ಆಚರಿಸುವದು ಸರಿಯಲ್ಲ. ಮಹಾತ್ಮರು ಈಗ ಬೆಳೆಯುತ್ತೊಡಗಿದ್ದಾರೆ ಎಂದಿದ್ದರಂತೆ. ಅವರ ಅಭಿಪ್ರಾಯದ ಪ್ರಕಾರ ೬೦ ವಯಸ್ಸಿಗೆ ಮೊದಲು ಜೀವನದಲ್ಲಿ ಪ್ರಾಮುಖ್ಯವಾದ ಯಾವುದೇ ಕೆಲಸ ಮಾಡಕೂಡದು!

ಪಂಡಿತ ನೆಹರೂರವರು ೬೦ ವಯಸ್ಸನ್ನು ಮುಟ್ಟಿದರೂ ಅವರು ಇನ್ನೂ ಹರೆಯದವರೇ! ಇಡೀ ಹಿಂದೂದೇಶ ಅವರನ್ನು ಸನ್ಮಾನಿಸುತ್ತಿರುವದು ಅವರು ಈ ವರೆಗೆ ಮಾಡಿದ ಮಹಾಕೆಲಸವನ್ನು ನೆನೆಸಿ ಅಲ್ಲ, ಬದಲು ಅವರು ಮುಂದೆ ಅದಕ್ಕಿಂತಾ ಹೆಚ್ಚಿನದನ್ನು ಸಾಧಿಸಿ ಭರತಖಂಡವನ್ನು ಜಗತ್ತಿನ ರಂಗದಲ್ಲಿ ಇನ್ನೂ ಮೇಲೆತ್ತಿ ನಿಲ್ಲಿಸುವರೆಂಬ ಕಾಂಕ್ಷೆಯಿಂದ. ಭವಿಷ್ಯದಲ್ಲಿ ನೆಹರೂರವರಿಗೆ ಇದು ಸಾಧ್ಯವಾಗಲು ಅವರಿಗೆ ಭಗವಂತನು ದೀರ್ಘಾಯುವನ್ನು ಕೊಡಲಿ

ವರ್ತಮಾನ.

ಅಖಿಲ ಕೊಡಗು ಉಪಾಧ್ಯಾಯರ ಸಮ್ಮೇಳನದ ಆಶ್ರಯದಲ್ಲಿ ಸಾರ್ವಜನಿಕರಿಗೂ, ಶಾಲಾ ವಿದ್ಯಾರ್ಥಿಗಳಿಗೂ ಆಟೋಟಗಳ ಸ್ಪರ್ಧೆಯು ಡಿಸಂಬರ್ ತಾ ೨೩ನೇ ಶುಕ್ರವಾರ ನಾಪೋಕ್ಲು ಹೈಸ್ಕೂಲು ಮೈದಾನದಲ್ಲಿ ನಡೆಯುವದು

ಬ್ರಿಗೇಡಿಯರ್ ಚೆಪ್ಪುಡೀರ ಪೊನ್ನಪ್ಪನವರ ಹಾಕಿ ಶಿಲ್ಡಿನ ಪಂದ್ಯಾಟವು ಇದೇ ತಾರೀಕು ೨೭-೧೧-೪೯ ರಿಂದ ಕೊಡಗಿನ ಐದು ಕೇಂದ್ರಗಳಲ್ಲಿ ಪ್ರಾರಂಭವಾಗುವದು.

ತಾರೀಕ ೫-೧೧-೪೯ರಲ್ಲಿ ಕೂಡಿಗೆ ಕೃಷ್ಣಾಶ್ರಮದಲ್ಲಿ ಶ್ರೀ ಕಾವೇರಿ ತೀರ್ಥಪೂಜೆಯ ಉತ್ಸವವು ಕೊಡಗು ಜಿಲ್ಲಾ ಮೇಜಿಸ್ಟ್ರೇಟರಾದ ಶ್ರೀ ಎನ್ ಸಿ ಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಗಳಾದ ದೊರೆಸ್ವಾಮಿ, ರುದ್ರಶೆಟ್ಟಿ, ಎನ್ ಅಕ್ಕಮ್ಮ, ಪುಟ್ಟಸ್ವಾಮಿ, ಕಾಶಿತಿಮ್ಮಯ್ಯ, ಪಿ ಕರುಂಬಯ್ಯ ಮೊದಲಾದವರು ಭಾಷಣ ಮಾಡಿದರು.

ದಕ್ಷಿಣ ಕೊಡಗು ಎತ್ಲೆಟಿಕ್ ಯೂನಿಯನ್ ಪೊಳ್ಳಿಬೆಟ್ಟ, ಇದರ ಆಶ್ರಯದಲ್ಲಿ ಬರುವ ಡಿಸೆಂಬರ್ ತಾ ೧೮ರಲ್ಲಿ ಆಟೋಟಗಳ ಸಾರ್ವಜನಿಕ ಸ್ಪರ್ಧೆಯು ನಡೆಯುವದು. ಸ್ಪರ್ಧೆಯಲ್ಲಿ ಭಾಗಗೊಳ್ಳಲಿಚ್ಛಿಸುವವರು ಯೂನಿಯನಿನ ಕಾರ್ಯದರ್ಶಿಯವರಿಗೆ ಒಂದು ವಾರಕ್ಕೆ ಮೊದಲೇ ತಿಳಿಸಬೇಕಾಗಿದೆ.

ಕಾಕೋಟು ಪರಂಬು ಗ್ರಾಮಾಭಿವೃದ್ಧಿ ಸಂಘದ ವಾರ್ಷಿಕ ಮಹಾಸಭೆಯು ತಾ ೨೮-೧೧-೪೯ರಲ್ಲಿ ಮಧ್ಯಾಹ್ನ ಒಂದು ಗಂಟೆಗೆ ಕಾಕೋಟುಪರಂಬು ಶಾಲೆಯಲ್ಲಿ ಶ್ರೀ ಎ ಸಿ ತಿಮ್ಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯುವದು.

ವೀರಾಜಪೇಟೆ ವ್ಯವಸಾಯ ಪರೀಕ್ಷಾ ಕ್ಷೇತ್ರದ ವಾರ್ಷಿಕ ಸಪ್ತಾಹವನ್ನು ನವೆಂಬರ್ ತಾ. ೨೯ನೇ ಮಂಗಳವಾರ ಆಚರಿಸಲಾಗುವದು. ಈ ಸಂದರ್ಭದಲ್ಲಿ ವ್ಯವಸಾಯ ಮಂತ್ರಿತ್ರಯರ ವಿಷಯಗಳಲ್ಲಿ ಭಾಷಣವೂ, ರಾತ್ರಿ ಮಾಯಾಲಾಂದ್ರ ಪ್ರದರ್ಶನವೂ ನಡೆಯುವದು. ಆ ದಿನ ಹಣ್ಣು ಹಂಪಲ ತರಕಾರಿ, ಬತ್ತ ಮೊದಲಾದುವುಗಳ ಪ್ರದರ್ಶನವೂ ನಡೆಯುತ್ತ ಉತ್ತಮ ವಸ್ತುಗಳಿಗೆ ಬಹುಮಾನ ಹಂಚಲ್ಪಡುವದು.

ಮೂರ್ನಾಡು ಹೈಯರ್ ಎಲಿಮೆಂಟರಿ ಶಾಲಾ ಮಕ್ಕಳ ಗಾಂಧಿ ಸಮಾಜದ ಆಶ್ರಯದಲ್ಲಿ ನೆಹರೂ ಜಯಂತಿಯನ್ನು ಮಕ್ಕಳು ಆಚರಿಸಿದರು. ಶ್ರೀ ಸಿ ಎಂ ಬಿದ್ದಪ್ಪನವರು ಅಧ್ಯಕ್ಷರಾಗಿದ್ದರು. ನೆಹರೂರವರ ಜೀವನವನ್ನು ಕುರಿತು ಕೆಲವು ಮಕ್ಕಳು ಭಾಷಣ ಮಾಡಿದರು.

ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ವಿದ್ಯಾರ್ಥಿಗಳು ಮುಖ್ಯೋಪಾಧ್ಯಾಯರಾದ ಶ್ರೀ ಗಣೇಶರಾಯರ ಅಧ್ಯಕ್ಷತೆಯಲ್ಲಿ ತಾ ೧೪ರಲ್ಲಿ ನೆಹರೂ ಜಯಂತಿಯನ್ನು ಆಚರಿಸಿದರು. ಬೋಧಪ್ರದ ಭಾಷಣಗಳಾದ ಮೇಲೆ ನೆಹರೂರವರಿಗೆ ಚಿರಾಯುವನ್ನು ಕೋರಲಾಯಿತು.

ಕೊಡಗು ಗವರ್ನ್‌ಮೆಂಟ್ ಕಾಲೇಜಿನ 'ನೆಚ್ಯುರಲ್ ಸಯನ್ಸ್ ಡೆಮಾನ್‌ಸ್ಟ್ರೇಟ'ರಾಗಿ ಶ್ರೀ ಜಿ. ರಾಘವೇಂದ್ರರಾವ್ ಬಿ ಎಸ್‌ಸಿ. ಇವರನ್ನೂ, 'ಕೆಮಿಸ್ಟ್ರಿ ಡೆಮಾನ್‌ಸ್ಟ್ರೇಟ'ರಾಗಿ ಶ್ರೀ ಕೆ. ವಿಶ್ವನಾಥನ್ ಬಿ ಎಸ್‌ಸಿ. ಇವರನ್ನೂ "ಫಿಸಿಕ್ಸ್ ಡೆಮಾನ್‌ಸ್ಟ್ರೇಟ"ರಾಗಿ ಶ್ರೀ ರಾಮಯ್ಯರ್ ಬಿ. ಎಸ್‌ಸಿ ಇವರನ್ನೂ ನೇಮಿಸಲಾಗಿದೆ.

ಕೊಡಗು ಸರಕಾರಿ ಕಾಲೇಜಿನ 'ಪ್ರಕೃತಿ ಶಾಸ್ತ್ರ' ಶಾಖೆಯ ವಿದ್ಯಾರ್ಥಿಗಳು ಕಳೆದ ತಾ ೧೨ರಲ್ಲಿ ಫ್ರೇಜರ್‌ಪೇಟೆ ಹೋಬಳಿಗೆ ವಿಹಾರಾರ್ಥವಾಗಿ ಹೋಗಿದ್ದರು. 'ಎಗ್ರಿಕಲ್ಚರಲ್ ಫಾರಂ' ಕೂಡಿಗೆ [illegible] ಕಾವೇರಿ ಆಶ್ರಮ, ಆನೆಕಾಡು, ಗಂಧದ ಕೋಟೆ ಮುಂತಾದ ಸ್ಥಳಗಳನ್ನು ನೋಡಿ ವಾಪಾಸು ಬಂದರು

ನೋಟೀಸು.

ಇದರಡಿ ಶೆಡ್ಯೂಲ್‌ನಲ್ಲಿ ವಿವರಿಸಿರುವ ಸ್ಥಿರ ಆಸ್ತಿಗಳು ಕೊಟ್ಟೋಳಿಗ್ರಾಮದ ಹೆಗ್ಗಡೆ ಚಂಗಚಂಡ ಉತ್ತಯ್ಯನವರ, ವಿಧವೆ ಸೀತವ್ವನ ಸ್ವಾಧೀನದಲ್ಲಿವೆ. ಆಕೆಯ ಜೀವಮಾನದ ನಂತರ ರುದ್ರಗುಪ್ಪೆ ಗ್ರಾಮದ ಹಗ್ಗಡ ಕೊಕ್ಕೇರ ಜೋಯಪ್ಪನಾದ ನನಗೆ ಸದರಿ ಆಸ್ತಿ ಬರಲಿದೆ. ನಾನೇ ಸದರಿ ಆಸ್ತಿಗಳಿಗೆ ಹಕ್ಕುದಾರನಾಗಿದ್ದೇನೆ. ಸೀತವ್ವನ ಮರಣದನಂತರ ಸದರಿ ಆಸ್ತಿಗಳು ಪೂರ್ತಿ ನನ್ನ ಸ್ವಾಧೀನ ಬರಬೇಕಾಗಿದೆ. ಬೇರೆ ಹಕ್ಕುದಾರರು ಯಾರೂ ಇರುವುದಿಲ್ಲ. ಸೀತವ್ವಗೆ ಆಕೆಯ ಜೀವಮಾನ ಕಾಲದಲ್ಲಿ ಅದನ್ನು ಯಾವ ರೀತಿಯಲ್ಲಿಯೂ ಗಿರ್ವಿ, ಭೋಗ್ಯ, ಕ್ರಯ ವಗೈರೆ ಪರಾಧೀನ ಮಾಡುವ ಹಕ್ಕು ಇನ್ನು ಮುಂದೆ ಎಂದಿಗೂ ಇರುವುದಿಲ್ಲ. ನಾನು ಹಕ್ಕುದಾರನಾಗಿ ಇದ್ದು ಹಾಗೆ ನನ್ನ ಅನುಮತಿ ವಿನಾ ಯಾ ಇತರರಿಗೆ ಯಾವ ತರಹದಲ್ಲಿಯಾದರೂ ಪರಾಧೀನ ಮಾಡಿದಲ್ಲಿ ಅಂಥ ಪತ್ರಗಳು ರದ್ದಾಗಿರತಕ್ಕದ್ದು ಮತ್ತು ಬರೆಸಿ ಕೊಂಡವರಿಗೆ ಸದರಿ ಆಸ್ತಿಗಳ ಮೇಲೆ ಯಾವ ಹಕ್ಕು ಬರುವುದಿಲ್ಲ. ಎಂಬ ಸಂಗತಿ ಸಹ ಈ ಮೂಲಕ ಸಮಸ್ತರಿಗೂ ತಿಳಿಸಿದೆ.

ಶೆಡ್ಯೂಲ್— ವೀರಾಜಪೇಟೆ ನಾಡು ನಾಲ್ಕೇರಿ ಗ್ರಾಮದಲ್ಲಿರುವ ಉಂಬಳಿ ಸ, ನಂ ೨೬, ೨೪, ೩೧, ೨೯, ೭೪, ಈ ಸರ್ವೆ ನಂಬರುಗಳಲ್ಲಿ ಅಡಗಿರುವ ಭೂಮಿ, ಬಾಣೆ, ಹುಲ್ಲು ಮತ್ತು ಜಾಗ ಸಹ,

ಕೊಕ್ಕೇರ ಜೋಯಪ್ಪ.

ತಾ ೧೭-೧೧-೧೯೪೯.

ಕೊಡಗು ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ ೧೯೪೯ನೇ ಇಸವಿ ಜಾರಿ ನಂ ೫೫

ಅರ್ಜಿದಾರ — ಹೆಚ್ ವಿ ನಂಜುಂಡಯ್ಯ,

VS

ಎದುರು ಅರ್ಜಿದಾರ ಕೊಟ್ಟುಕತ್ತಿರ ಕಾಳಪ್ಪ

ಮೇಲ್ಕಂಡ ಎದುರು ಅರ್ಜಿದಾರನೂ, ಮಿ. ಸಿ ಪೆರಿವಲ್ ಎಂಬವರು ದಿ ಕೂರ್ಗ್ ಟಿಂಬರ್ಸ್, ವೀರಾಜಪೇಟೆ, (*The Coorg Timbers Virajpet*) ಎಂಬ ಹೆಸರಿನಲ್ಲಿ ಮರದ ವ್ಯಾಪಾರ ಮಾಡುತ್ತಿದ್ದ ಸದ್ರಿ ಪಾರ್ಟನರ್‌ಶಿಪ್‌ನಲ್ಲಿ ಮೇಲ್ಕಂಡ ಎದುರು ಅರ್ಜಿದಾರನಿಗಿರುವ ಹಕ್ಕನ್ನು ಮೇಲ್ಕಂಡ ಡಿಕ್ರಿಯ ಸಮಾಧಾನಕ್ಕಾಗಿ ಮಡಿಕೇರಿ ಮೊಕ್ಕಾಂ ಈ ಕೋರ್ಟು ರೂಬರೂ ತಾರೀಕು ೨೩-೧೨-೧೯೪೯ನೇ ಶುಕ್ರವಾರ ದಿನ ಹಗಲು ೧೧ಗಂಟೆಗೆ ಬಹಿರಂಗವಾಗಿ ಹರಾಜು ಮಾಡಲ್ಪಡತಕ್ಕದ್ದು. ಖಯಿಸ್ ದಾರರು ಈ ಹರಾಜಿನಲ್ಲಿ ಕೊಳ್ಳಬಹುದಾಗಿ ಸಮಸ್ತ ಜನರಿಗೂ ಈ ಮೂಲಕ ತಿಳಿಯಪಡಿಸಿದೆ.

17-11-49, *By Order.*

Sd/ N G, Utheyya

Sheristedar.

THE WARDEN INSURANCE CO., Ltd.

Head Office Bombay.

LIFE, FIRE, ACCIDENT, MOTOR & W. C. INSURANCES.

Managing Director, – **S. H. THAKER.**

Business in force Rs. 5,00,00,000

Assets ,, 1,00,00,000

Income ,, 35,00,000

Also **LOCAL MANAGERS OF**

THE LONDON GUARANTEE & ACCIDENT CO., Ltd.

(Incorporated in England)

Assets Exceed Rs. 10,00,00,000

a Subsidiary Company of

THE PHOENIX ASSURANCE CO. Ltd.

(One of the Largest Assurance Companies in the World)

Assets Exceed Rs 45,00,00,000

Transact **FIRE INSURANCE**

Enquiries for representation solicited.

Apply to.

Chief Agency Office *Virajpet (Coorg)* or **A. S. Aiyappa,** *Branch Secretary, Gandhinagar,* **BANGALORE CITY**

ಓದುಗರ ಓಲೆಗಳು.

ಪತ್ರಿಕೋದ್ಯೋಗಿಗಳಲ್ಲೊಂದು ವಿನಂತಿ

ತಾ: ೯-೧೧-೪೯ರ 'ಜನ್ಮಭೂಮಿ' ಪತ್ರಿಕೆಯಲ್ಲಿ ಶ್ರೀ ಕೆ. ಗಣಪತಿಯವರು ಬರೆದ ಲೇಖನವನ್ನು ಓದಿ, ಮನಸಿಗುಂಟಾದ ಬೇಸರವನ್ನು ತಡೆಗಟ್ಟಲಾರದೆ, ಅದನ್ನು ಈ ಪ್ರಕಾರ ಲೇಖನಿಯ ಮೂಲಕ ಬರೆಯತೊಡಗಿದ್ದೇನೆ. ಉತ್ತಮ ಪತ್ರಿಕೆಗಳೇ ಅತ್ಯಲ್ಪವಾಗಿರುವ ನಮ್ಮ ಈ ಕನ್ನಡ ನಾಡಿನಲ್ಲಿ, ಇರುವ ಕೆಲವು ಪತ್ರಿಕೆಗಳ ಕೂಡ ಈ ರೀತಿ ತಮ್ಮ ಧ್ಯೇಯವಾಗಿರಬೇಕಾದ, ನಾಡಿನ ಹಾಗೂ ಭಾರತದ ಸೇವೆ, ಕನ್ನಡ ಕಲೆಯ ಸೇವೆಯನ್ನು ಬದಿಗೊತ್ತಿ, ಪತ್ರಿಕೆಯ ಸಂಪಾದಕರನ್ನೋ, ಇಲ್ಲವೇ ಲೇಖಕರನ್ನೋ ದೂಷಿಸುವುದನ್ನೇ ಧ್ಯೇಯವೆಂದು ತಿಳಿದು ವರ್ತಿಸುವುದು ಶೋಚನೀಯವಾದ ವಿಷಯವೆಂದು ಒತ್ತಿ ಹೇಳಬೇಕಾಗಿದೆ! ಇದೇ ಏನು ಪತ್ರಿಕೆಗಳ ಮುಖ್ಯ ಧ್ಯೇಯ? ಶ್ರೀ ಗಣಪತಿಯವರು ಹೇಳಿರುವ 'ಅಶ್ಲೀಲ' ರಾಜಕೀಯಕ್ಕಿಂತಲೂ ಇದು ಹೇಯ ವಿಷಯವಲ್ಲವೇ! ಕೇವಲ ನಾಲ್ಕು ಪುಟಗಳಿರುವ ಒಂದು ಪತ್ರಿಕೆಯಲ್ಲಿ ಒಂದೂವರೆ ಪುಟವನ್ನು ಈ ರೀತಿ ಹಾಳು ಮಾಡಿ, ಮತ್ತೆ ಕೆಲವು ಭಾಗಗಳನ್ನು ಜಾಹೀರಾತುಗಳಿಗೆ ಮೀಸಲಾಗಿಟ್ಟು ಇನ್ನುಳಿದ ಭಾಗದಲ್ಲಿ ಏನೋ ಅಲ್ಪ ಸ್ವಲ್ಪ ವಿಷಯಗಳನ್ನು ಅಲ್ಲಿ ಇಲ್ಲಿ ಕೊಟ್ಟರೆ, ಓದುಗರಿಗೆ ಸಂತೃಪ್ತಿಯಾದೀತೇ? ಅಂಥಾ ಪತ್ರಿಕೆಗಳು ಕನ್ನಡನಾಡಿನ ಸೇವೆಗಾಗಿ ದುಡಿಯುವಂಥವುಗಳಲ್ಲ, ಸೇವೆಯ ಸೋಗನ್ನು ಹಾಕಿಕೊಂಡು, ಉದರ ನಿಮಿತ್ತ ದುಡಿಯುವಂಥವುಗಳಲ್ಲವೇ? ಆದುದರಿಂದ ದಯವಿಟ್ಟು ಪತ್ರಿಕೋದ್ಯೋಗಿಗಳು ಈ ರೀತಿ ಓದುಗರ ಮನಸ್ಸನ್ನು ಬೇಸರಕ್ಕೀಡುಮಾಡುವಂಥ 'ಅಶ್ಲೀಲ' ಲೇಖನಗಳಿಗೆಡೆಕೊಡದೆ, ಪರಸ್ಪರ ಸ್ನೇಹ ಭಾವದಿಂದ ವರ್ತಿಸುವರೆ?

ಪ. ಕೆ.

ನಾಪೋಕ್ಲು ನಾಡಿನ ದುಸ್ಥಿತಿ.

ವರ್ತಮಾನ ಪತ್ರಿಕೆಗಳಿಗೆ ಜನರ ಕಷ್ಟ ಸುಖಗಳ ವಿಷಯ ಪತ್ರ ಬರೆಯುವುದು ರೂಢಿಯಾಗಿದೆ ಆದರೆ ಸರಕಾರದವರು ಇದನ್ನು ನೋಡಿಯೂ ಉದಾಸೀನದಿಂದಿರುವುದು ತುಂಬಾ ವ್ಯಸನಕರ. ಪತ್ರಿಕೆಗಳ ಕಲಮುಗಳನ್ನು ತುಂಬಿಸುವುದಕ್ಕಲ್ಲ. ಓಲೆಗಳನ್ನು ಬರೆಯುವುದು, ಅದರಿಂದೇನಾದರೂ ಪ್ರಯೋಜನವಾಗಬೇಕೆಂದು!

ನಮ್ಮ ನಾಡಿನ ಸ್ಥಿತಿ ದಿನೇ ದಿನೇ ಕೆಡುತ್ತಾ ಬರುತ್ತಿದೆ ಇಲ್ಲಿಯ ಬಡರೈತರ ಗೋಳನ್ನು ಸರಕಾರದವರು ಲವಲೇಶವೂ ಗಮನಿಸದೆ ಇರುವುದು ತುಂಬಾ ಶೋಚನೀಯ ಸಂಗತಿಯಾಗಿದೆ ಇಲ್ಲಿಗೆ ಹಾಸ್ಪಿಟಲ್ ಡಾಕ್ಟರಾಗಬೇಕೆಂದು ಸರಕಾರವನ್ನು ಕೇಳಿದೆವು ಆ ಬೇಡಿಕೆ ಗಾಳಿಯಲ್ಲಿ ತೂರಿಹೋಯಿತು. ಈಗ ಇದ್ದ ಒಬ್ಬ ವೈದ್ಯನೂ ಸಹ ಮಾಯವಾಗಿದ್ದಾನೆ. ಬರೀ ಒಬ್ಬ ಕಂಪೌಂಡರಿಂದ ಆಸ್ಪತ್ರೆಯು ನಡೆಸಲ್ಪಡುತ್ತಿದೆ! ಇಬ್ಬರಾಗಬೇಕೆಂದು ಕೇಳಿದ ನಮಗೆ ಈಗ ಒಬ್ಬರೂ ಇಲ್ಲ, ಪಶು ವೈದ್ಯನೂ ಸಹ ಇಲ್ಲ ಈಗ ಗಂಟಲು ಕಟ್ಟುವ ರೋಗದಿಂದ ದನಕರುಗಳು ಸಾಯಲು ಪ್ರಾರಂಭಿಸಿವೆ! ಆದರೆ ನೋಡುವವರಾರು?

ಮೀಟಿಂಗುಗಳಲ್ಲಿ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡು ಹಾಗೆ ಮಾಡುತ್ತೇವೆ ಹೀಗೆ ಮಾಡುತ್ತೇವೆಂದು 'ಬೊಗಳೆ' ಹರಟೆ ಹೇಳಿಕೊಂಡು, ಉಪಹಾರ ಮಾಡುವ ಅಧಿಕಾರಿಗಳಾಗಲೀ, ಆಡಳಿತಗಾರರಾಗಲೀ, ಇಂದು ನಮಗೆ ಬೇಕಿರುವುದಲ್ಲ ನಮ್ಮ ನಾಡಿಗೆ ಒಮ್ಮೆಯಾದರೂ ಚೀಫ್ ಕಮಿಷನರು ಬಂದುದಿಲ್ಲ ಬರೀ ರಾಜಮಾರ್ಗಗಳಲ್ಲಿ ತಿರುಗಾಡಿಕೊಂಡು ಆಡಳಿತ ಸಾಗಿಸಿದರೆ ಸಾಲದು ಈಗಿನ ಕಾಲದಲ್ಲಿ ಹಳ್ಳಿಗಳಲ್ಲಿ ಔಷಧೋಪಚಾರ ಹೆಚ್ಚಾಗುತ್ತಿರುವಲ್ಲಿ ನಮ್ಮ ಈ ನಾಡಿನಲ್ಲಿ ಈ ವಿಷಯ ಅವನತಿಯನ್ನು ಹೊಂದುತ್ತಿರುವುದನ್ನು ನೋಡಿದರೆ, ವ್ಯಸನವಾಗುತ್ತದೆ

ಕೊಟ್ಟಮುಡಿ ಸೇತುವೆಯನ್ನು ಈ [illegible] ಕಟ್ಟಿಸುವುದಾಗಿದ್ದಾರೆ ಸುಳ್ಳು ಹ[illegible] ವರ್ಷ ಆರು ಸಂದು ಹೋದವು ಮೂರ್ನಾಡು ನಾಪೋಕ್ಲು ರಸ್ತೆಗೆ ಕಲ್ಲುಗಳನ್ನು ಆನೆಗಳಿಂದ ತರಿಸುತ್ತಿರಬೇಕು! ಇಲ್ಲದಿದ್ದರೆ ಇಷ್ಟು ತಡವೇಕೆ? ಸರಿಯಾದ ಬಸ್ಸು ವಹಿವಾಟೂ ಇಲ್ಲ ಬೇರೆ ಸ್ಥಳದಿಂದ, ಒಂದು ದಿನದ ಕೆಲಸಕ್ಕೆಂದು ಬರುವವರು ಮೂರು ದಿವಸ ಇಲ್ಲಿ ಉಳಿಯಬೇಕಾಗುತ್ತದೆ ಇದರಿಂದ ಇಲ್ಲಿನ ಜನರ ಸಾಂಸ್ಕೃತಿಕ ಅಭಿವೃದ್ಧಿಗೆ ತುಂಬಾ ಅಡಚಣೆಯಾಗಿದೆ ಇಡೀ ಕೊಡಗೆಂಬ ಶರೀರದಲ್ಲಿ, ನಮ್ಮ ನಾಡು ಪಾರ್ಶ್ವವಾಯು ಹಿಡಿದ ಕಾಲಿನಂತಾಗಿದೆ ಸರಕಾರವನ್ನು ಟೀಕಿಸುವುದು ನನ್ನ ಕೆಲಸವಲ್ಲ ಆಡಳಿತಗಾರರು, ಸುಪ್ತಾವಸ್ಥೆಯನ್ನು ಬಿಟ್ಟು ಸ್ವಲ್ಪ ಜಾಗ್ರತೆಯಿಂದ, ಬಡವರ ಕಷ್ಟವನ್ನರಿಯಬೇಕೆಂದು ತಿಳಿಸಿದ್ದಾಗಿದೆ

ನಾಡಿನವ.

ಸಾರಾಯಿ ಕೂಪನ್

ಪಾನ ನಿರೋಧ ಶಾಸನವನ್ನು ಹಿಂದೂ ದೇಶದ ಅನೇಕ ಕಡೆ ಜಾರಿಗೆ ತಂದಿದ್ದಾರೆ. ಕೊಡಗಿನ ಸರಕಾರಕ್ಕೆ ಮನಸಿದ್ದೋ ಇಲ್ಲದೆಯೋ ಒಂದು ಅಳ್ವೆಯ ಪ್ರಯತ್ನವು ಕೊಡಗಿನಲ್ಲೂ ನಡೆದಿದೆ. ಇತರ ಪ್ರಾಂತಗಳು ಪ್ರಗತಿಶೀಲವಾಗಿ ಮುಂದರಿಯುತ್ತಿರುವಾಗ ಇಲ್ಲಿಯೂ ಹೆಸರಿರಲೀ ಎಂದು ಈ ಏರ್ಪಾಡೋ ನನಗೆ ತಿಳಿಯದು. ಸಾರಾಯಿಗೆ ಕೂಪನ್ ಕೊಡುವಾಗ ಎಚ್ಚರಿಕೆ ವಹಿಸದ ಕಾರಣ ಎಲ್ಲವೂ ಅವ್ಯವಸ್ಥೆಯಾಗಿದೆ. ಅನೇಕರು ಹೆಂಡತಿ, ಮಕ್ಕಳು, ಆಳುಗಳ ಹೆಸರಿನಲ್ಲಿ ಕೂಪನ್ ಪಡೆದಿದ್ದಾರೆ ಪರದೇಶದಲ್ಲಿರುವ ಅತಿಥಿ, ಸ್ನೇಹಿತರು ಕೂಪನ್ ಪಡೆಯುವ ಅವಧಿಯ ನಂತರವೂ ಕೊಡಗಿನ ಸ್ನೇಹಿತರಿಗೆ ಕೂಪನ್ ತೆಗೆದು ಕೊಡುವ ಸಹಾಯ ಮಾಡಿದರು ಹೀಗೆ ತಮ್ಮ ಅವಶ್ಯಕತೆಗಿಂತ ಹೆಚ್ಚು ಕೂಪನ್ ಸಂಗ್ರಹಿಸಿದವರು ಸಾರಾಯಿಯನ್ನು ಕಪ್ಪು ಸಂತೆಗೆ ತಂದರು ಇದರೊಂದಿಗೆ ಅನೇಕ ಮನೆಗಳಲ್ಲಿ ಕಳ್ಳ ಸಾರಾಯಿ ಮಾಡುವ ಉದ್ಯಮವೂ ಮೊದಲಾಯಿತು ಪರಿಣಾಮವಾಗಿ ನಿಯಂತ್ರಣವು ಹಾಸ್ಯಾಸ್ಪದವಾಗಿದೆ ನಿಯಂತ್ರಣ ಜಾರಿಯಲ್ಲಿ ತರಲು ನೇಮಿಸಲ್ಪಟ್ಟ ಅಧಿಕಾರಿಗಳ ಮೇಲೂ ದೂರು ಇದೆ ಸರಕಾರವು ಆದಷ್ಟು ಶೀಘ್ರ ಈಗಿರುವ ಕೂಪನ್‌ಗಳನ್ನು ರದ್ದು ಮಾಡಿ ಹೊಸದಾಗಿ ಒಬ್ಬನಿಗೆ ಒಂದರಂತೆ ವ್ಯಕ್ತಿಯನ್ನು ಖುದ್ದು ಪರಿಶೀಲಿಸಿ ಕೂಪನ್ ಕೊಡುವ ಏರ್ಪಾಡು ಮಾಡಬೇಕಾದುದು ಅವಶ್ಯ ಇಲ್ಲದಿದ್ದರೆ ಈಗಿನ ನಿಯಂತ್ರಣವು ಕೇವಲ ಒಂದು ಸೋಗಲ್ಲದೆ ಬೇರೇನಲ್ಲ

ಐ. ಎಂ. ಬೋಪಣ್ಣ.

ಕಾಲೇಜಿನಲ್ಲಿ ಶಿಸ್ತು.

ಜನರಲ್ ಕಾರ್ಯಪ್ಪನವರಿಂದ ಹಿಡಿದು ಅನೇಕರು ಕೊಡಗು ಸರಕಾರಿ ಕಾಲೇಜಿನ ವಿಚಾರದಲ್ಲಿ ಆಡಿದ ಮಾತು ಮತ್ತು ಬರೆದ ಲೇಖನಗಳನ್ನು ಓದಿದೆನು. ಶಿಸ್ತಿಗೆ ಬಾಗದ ವಿದ್ಯಾರ್ಥಿಗಳನ್ನು ಶಿಕ್ಷಿಸಬಾರದೆಂದು ನಾನು ಹೇಳುವುದಿಲ್ಲ. ಆದರೆ ಕೊಡಗಿನ ಕಾಲೇಜಿನಿಂದ ಮೂವರು ವಿದ್ಯಾರ್ಥಿಗಳನ್ನು ಶಾಲೆಯಿಂದ ಕಳುಹಿಸಿದುದು ಕಠಿಣ ಶಿಕ್ಷೆಯಾಯಿತೆನ್ನಬೇಕು. ಹುಡುಗರ ವರ್ತನೆ ತಪ್ಪು ಎಂಬುದರಲ್ಲಿ ಎರಡಭಿಪ್ರಾಯವಿಲ್ಲ ಆದರೆ ಹುಡುಗರು ಹಾಗೆ ವರ್ತಿಸಲು ಕಾರಣವೇನೆಂಬುದನ್ನೂ, ಹಾಗೆ ವರ್ತಿಸಿದವರಲ್ಲಿ ಮುಂದಾಳುಗಳಾರೆಂದೂ ಮೇಲಾಧಿಕಾರಿಗಳು ಪರಿಶೀಲಿಸಿರುವರೋ ತಿಳಿಯದು.

ಪ್ರತಿ ಕಾಲೇಜಿನಲ್ಲಿ ಶಿಸ್ತಿನ ಒಂದು ಪಟ್ಟಿ ತಯಾರಿಸಿ ಅದನ್ನು ಉಲ್ಲಂಘಿಸಿದರೆ ಶಿಕ್ಷೆಗೊಳಗಾಗುವದೆಂದು ಮುಂಚಿತವಾಗಿ ವಿಧಿಸಿ ಹೊಸ ವಿದ್ಯಾರ್ಥಿಗಳಿಗೆ ಕೊಡುವದುಂಟು. ಈ ಕಾಲೇಜಿನಲ್ಲಿ ಹಾಗಿಲ್ಲ. ಹೊಸ ಮಕ್ಕಳಿಗೆ ಕಾಲೇಜಿನ ಶಿಸ್ತುಗಳೆಲ್ಲ ಹೇಗೆ ತಿಳಿಯುವದು?

ಹೊರಗಿನ ಕಾಲೇಜುಗಳಲ್ಲಿ ತಪ್ಪು ಮಾಡಿದ ವಿದ್ಯಾರ್ಥಿಗಳ ಪೋಷಕರಿಗೆ ಆ ವಿಚಾರ ತಿಳಿಸುವ ಪದ್ಧತಿ ಇದೆ. ನಂತರವೂ ತಪ್ಪು ಮಾಡಿದರೆ ಅವರಿಗೆ ಶಿಕ್ಷೆವಿಧಿಸುತ್ತಾರೆ ಕೊಡಗಿನಲ್ಲಿ ಹಾಗೆ ಮಾಡುವರೋ ತಿಳಿಯದು ಹೇಗೂ ಇದು ಮಾದರಿ ಕಾಲೇಜಾಗಬೇಕೆಂಬ ಸದುದ್ದೇಶದಿಂದ ಮಾಡಿರಬೇಕು. ಆದರೆ ಈ ವಿದ್ಯಾರ್ಥಿಗಳಿಗೆ ಈ ವರ್ಷ ಬೇರೆಲ್ಲಿಯೂ ಸ್ಥಳ ದೊರೆಯದೆ ಅವರ ಜೀವನ ಹಾಳಾದಂತಾಯಿತು.

ನಾನಿದ್ದ ಕಾಲೇಜಿನಲ್ಲಿಯೂ ವಿದ್ಯಾರ್ಥಿಗಳು ಇದಕ್ಕಿಂತಾ ಮಹತ್ತರ ತಪ್ಪು ಮಾಡಿದ್ದಾರೆ ಆದರೆ ಈ ರೀತಿಯ ಆಕಸ್ಮಿಕ ಶಿಕ್ಷೆ ಅವರ್ಯಾರಿಗೂ ವಿಧಿಸಲ್ಪಟ್ಟಿಲ್ಲ

Another Collegian.

ಮಡಿಕೇರಿ ಮುನ್ಸಿಪಾಲಿಟಿ ಪ್ರೆಸಿಡೆಂಟರಲ್ಲಿ.

ಪುರನಿವಾಸಿಗಳ ಪ್ರತಿನಿಧಿಗಳಾಗಿ ತಾವು ಆರಿಸಲ್ಪಟ್ಟಿರುವಿರಿ. ಪುರವಾಸಿಗಳು ಈ ವಿಷಯದಲ್ಲಿ ತಮ್ಮ ಮೇಲೆ ಪೂರ್ಣ ಭರವಸೆಯನ್ನು ಇಟ್ಟಿರುವರು. ತಾವು ಈ ದೃಷ್ಟಿಯಿಂದಲೇ ಹಗಲಿರುಳೂ ಶ್ರಮಿಸುತ್ತಿರುವಿರಿ ಇದು ಶ್ಲಾಘನೀಯ ಸಂಗತಿಯೇ ಸರಿ ಇದಕ್ಕಾಗಿ ನಾವೆಲ್ಲರೂ ತಮಗೆ ಋಣಿಗಳು.

ತಾವು 'ಬಸ್‌ಸ್ಟ್ಯಾಂಡ್-ಕಾಲೇಜು' ರಸ್ತೆಯಲ್ಲಿ ಇತ್ತೀಚೆಗೆ ತಿರುಗಿರುವಿರಾ? ಈ ರಸ್ತೆಯು ಈ ಮೊದಲು ಹರಕು ಮುರುಕಾಗಿತ್ತೆಂಬುದು ಸಹಜ ಅದನ್ನು ತಾವು ಜನಹಿತ ದೃಷ್ಟಿಯಿಂದ ದುರುಸ್ತು ಮಾಡಿರುವುದೂ ನಿಜ ಈಗ ಜಲ್ಲಿ ಕಲ್ಲುಗಳಿಂದ ರಸ್ತೆಯು ಉತ್ತಮಗೊಂಡಿದೆ ಆದರೆ ಅದಕ್ಕೆ ಚೆಲ್ಲಿದ ಕೆಮ್ಮಣ್ಣು ವಾಹನಗಳ ಓಡಾಟದಿಂದ [illegible] ಈ ರಸ್ತೆಯಲ್ಲಿ ದಿನಕ್ಕೆ ಮೂರುಬಾರಿ ತಿರುಗುತ್ತಿರುವ ಶಾಲಾ ಹುಡುಗಿಗಳ ಹಾಗೂ ದೊಡ್ಡವರ ಉಸಿರಿನ ಸೇರುತ್ತಿದೆ ರಸ್ತೆಯ ದೀರ್ಘಾಯುಷ್ಯದ ದೃಷ್ಟಿಯಿಂದ ತಾವು ಮಾಡಿದ ಈ ಮಾಟವು ನಮಗೆಲ್ಲ ಕಂಟಕವಾಗಿ ಪರಿಣಮಿಸಿದೆ.

ಕೇಂದ್ರ ಸರಕಾರವು ಮಡಿಕೇರಿಯಲ್ಲಿ ಕ್ಷಯ ರೋಗಾಸ್ಪತ್ರೆಯನ್ನು ತೆರೆಯಲು ಏರ್ಪಡಿಸುವರೆಂಬುದನ್ನು ತಿಳಿದು ಅದಕ್ಕೆ ರೋಗಿಗಳನ್ನು ಒದಗಿಸುವ ಮಹಾಕಾರ್ಯವನ್ನು ಈಗಲೇ ಪ್ರಾರಂಭಿಸಿರುವಿರೇ? ಅಲ್ಲ, ತಮ್ಮ ಕಣ್ಣಿಗೆ ಬುದ್ಧಿಗೆ ಈ ದುರಂತವು ಹೊಳೆಯಲಿಲ್ಲವೇ? ಮಡಿಕೇರಿಯ ಪ್ರಧಾನ ಬೀದಿಗಿಂತಲೂ ಈ ರಸ್ತೆಯು ಪ್ರಮುಖವೆಂದು ತಿಳಿದು ಶಾಲಾ ಬಾಲಕರಿಗಾಗುವ ಹಾನಿಯನ್ನು ತಪ್ಪಿಸಲು ಈ ರಸ್ತೆಗೆ ಟಾರು ಹಾಕುವ ಏರ್ಪಾಡು ಮಾಡುವಿರಾಗಿ ನಂಬುತ್ತೇನೆ.

ಪುರನಿವಾಸಿ

ಭೈರನಾಡು ಚೆಂಬೆಬೆಳ್ಳೂರು ಹೊಸ ಹೈಯರ್ ಎಲಿಮೆಂಟರಿ ಶಾಲಾ ಕಟ್ಟಡಕ್ಕೆ ಇಷ್ಟರವರೆಗೆ (೧೦-೧೧-೪೯) ಧಾರಾಳಮತಿಯಾಗಿಯೂ ಮತ್ತು ಚಂದವಾಗಿಯೂ ಧನಸಹಾಯ ಮಾಡಿದ ಮಹನೀಯರುಗಳ ಹೆಸರು.

ಶ್ರೀ ಕುಟ್ಟಂಡ ಡಿ. ಅಪ್ಪಯ್ಯನವರು,	೧೦೦ ೦ ೦
,, ಸೋಮೆಯಂಡ ಮಾಚೈಯ್ಯ,	೧೦೦ ೦ ೦
,, ಕೇದಂಡ ಎಸ್ ದೇವಯ್ಯ,	೧೦೦ ೦ ೦
ಶ್ರೀಮತಿ ಮಚ್ಚಾರಂಡ ಸೋಮವ್ವ,	೧೦೦ ೦ ೦
,, ಬಿ. ಸಿ. ಕಾಯಮ್ಮ,	೧೦೦ ೦ ೦
,, ಮುದ್ದಿರ ಪಿ. ಚಿಟ್ಟಿಯಪ್ಪ,	೧೦೦ ೦ ೦
,, ಯಲ್. ರಾಮುಲಾಲ್,	೧೦೦ ೦ ೦
,, ಮುಕ್ಕಾಟಿರ ಪಿ. ಐಯ್ಯಪ್ಪ,	೨೫ ೦ ೦
,, ವಂಡೀಕೇರಂಡ ಪೊನ್ನಪ್ಪ,	೨೫ ೦ ೦
,, ಬಾಲ್ಸನ್ ಜ್ಯಾಕ್	೨೫ ೦ ೦
,, ಪಟ್ಟಚೆರುವಂಡ ಮುದ್ದಪ್ಪ,	೨೦ ೦ ೦
,, ಅಸ್ಟಿನ್,	೧೦ ೦ ೦
,, ಐತಿಚ್ಚಿರ ಸಿ. ಬೋಪಯ್ಯ,	೧೦ ೦ ೦
,, ಕೊಳುವಂಡ ಯಂ. ಪೂವಯ್ಯ,	೧೦ ೦ ೦
ಡಾ. ಪಾಡೆರಾಂಡ ಪಿ. ಸೋಮಪ್ಪ,	೧೦ ೦ ೦
ಶ್ರೀ ಕೇಂಗೆರಂಡ ಕಾರ್ಯಪ್ಪ,	೧೦ ೦ ೦
,, ಉಳ್ಳಿಯಡ ಎ. ಮುದ್ದಪ್ಪ,	೧೦ ೦ ೦
ಹತ್ತು ರೂಪಾಯಿಗಳಿಗೆ ಕಡಿಮೆಯಾಗಿ ಕೊಟ್ಟ ೧೫ ಜನರಿಂದ ಒಟ್ಟು	೬೭ ೦ ೦
ಭೈರನಾಡಿನವರಿಂದ	೧೬೫ ೮ ೦
ಚೆಂಬೆಬೆಳ್ಳೂರು ಗ್ರಾಮದವರಿಂದ	೧೪೨೧ ೬ ೦
ಒಟ್ಟು ರೂ	೪,೦೭೭ ೮ ೨

ಕೊಡಗು ಪ್ರತ್ಯೇಕವಿದ್ದು ಜವಾಬ್ದಾರಿ ಸರ್ಕಾರ ಪಡೆಯಲಿ.

ನೆಲ್ಯಹುದಿಕೇರಿ.

ತಾ. ೫-೧೧-೪೯ ರಲ್ಲಿ ನೆಲ್ಯಹುದಿಕೇರಿ ಗ್ರಾಮದ ಜನರು ನಾರಾಯಣದೇವಸ್ಥಾನದಲ್ಲಿ ರಾ. ಬ. ಕೆ ಟಿ. ಉತ್ತಪ್ಪನವರ ಅಧ್ಯಕ್ಷತೆಯಲ್ಲಿ ಸೇರಿದ್ದರು. ಕೊಡಗಿನ ಭವಿಷ್ಯ ಚರ್ಚೆಯ ಬಗ್ಗೆ ಹಕ್ಕು ಜನರನ್ನು ಕೇಂದ್ರಸರಕಾರವು ಕರೆಸಿದ್ದು, ಸರಕಾರವೇ ಕರೆಸಿದ ಈ ಜನರ ಅಭಿಪ್ರಾಯವು ಕೃತ್ರಿಮವಾದ ತನ್ನ ಅಭಿಪ್ರಾಯವಲ್ಲವೆಂದೂ, ದೇಶದ ಜನರ ಅಭಿಪ್ರಾಯ ತೆಗೆದೇ ಭವಿಷ್ಯ ನಿರ್ಣಯಕ್ಕೆ ಬರಬೇಕೆಂದೂ, ಕೊಡಗನ್ನು ಪ್ರತ್ಯೇಕವಿಟ್ಟ ಜವಾಬ್ದಾರಿ ಸರಕಾರ ಕೊಡಬೇಕೆಂದೂ ನಿರ್ಣಯಗಳಾದವು. ಶ್ರೀ ಚೇಂದಂಡ ಮೇದಪ್ಪನವರು ಭವಿಷ್ಯ ಸಮಸ್ಯೆಯನ್ನು ವಿವರಿಸಿದರು. ಈ ನಿರ್ಣಯದ ಠರಾವುಗಳ ನಕಲನ್ನು ಕೇಂದ್ರ ಸರಕಾರಕ್ಕೆ ಕಳುಹಿಸಲು ತೀರ್ಮಾನವಾಯಿತು.

ಅರೆಕಾಡು.

ತಾರೀಕ. ೭-೧೧-೪೯ ರಲ್ಲಿ ಅರೆಕಾಡು ಗ್ರಾಮಸ್ಥರು ಶ್ರೀ ಕಕ್ಕೆರ ಕಾರ್ಯಪ್ಪನವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಕೊಡಗನ್ನು ಯಾವ ಭಾಗದೊಡನೆಯೂ ಸಂಯೋಜನೆ ಮಾಡದೆ ಪ್ರತ್ಯೇಕ ಪ್ರಾಂತವಾಗಿಡಬೇಕೆಂಬ ಠರಾವು ಮಾಡಲಾಯಿತು. ದೇಶೀಯರ ಅಭಿಪ್ರಾಯವನ್ನು ತೆಗೆಯದೆ ಯಾವುದೇ ನಿರ್ಣಯ ಕೂಡದೆಂದು ಶ್ರೀ. ತೋಂಡಿಯಂಡ ಅಚ್ಚಯ್ಯ ಮತ್ತು ತೋಡಿಯಂಡ ಸೋಮಯ್ಯನವರು ಮಾತಾಡಿದರು. ಈ ಸಭೆಯ ಠರಾವುಗಳ ನಕಲನ್ನು ಕೇಂದ್ರ ಸರಕಾರದ ಗೃಹಮಂತ್ರಿಯವರಿಗೂ, ವಿ. ಪಿ. ಮೆನನರಿಗೂ ಕಳುಹಿಸಲು ತೀರ್ಮಾನವಾಯಿತು.

ಸಿದ್ದಾಪುರ.

ತಾ. ೭-೧೧-೪೯ ರಲ್ಲಿ ಸಿದ್ದಾಪುರದ ಸುತ್ತಮುತ್ತಲಿನ ಜನರು ಶ್ರೀ ಕೇಟೋಳಿರಂಡ ಮುದ್ದಪ್ಪನವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಕೊಡಗನ್ನು ಪ್ರತ್ಯೇಕವಿಡಬೇಕೆಂದೂ, ಭವಿಷ್ಯ ನಿರ್ಣಯವನ್ನು ದೇಶೀಯರ ಅಭಿಪ್ರಾಯ ತೆಗೆಯದೆ ಮಾಡಕೂಡದೆಂಬ ಠರಾವುಗಳಾದವು. ಶ್ರೀ. ದೇವಣಿರ ಸುಬ್ಬಯ್ಯನವರು ಮತ್ತು ಶ್ರೀ ಡಿ. ಮೃಗೇಶ ಪಿಳ್ಳೆಯವರು ಮಾತಾಡಿದರು. ಠರಾವುಗಳ ನಕಲನ್ನು ಕೇಂದ್ರಕ್ಕೆ ಕಳುಹಿಸಲು ನಿಶ್ಚಯಿಸಲಾಯಿತು.

ವಾಲ್ನೂರು ತ್ಯಾಗತ್ತೂರು.

ತಾ. ೮-೧೧-೪೯ರಲ್ಲಿ ಈ ಗ್ರಾಮಸ್ಥರು ಶ್ರೀ. ಎಚ್. ನಿಂಗಪ್ಪನವರ ಅಧ್ಯಕ್ಷತೆಯಲ್ಲಿ ಸಭೆಸೇರಿದ್ದರು. ಕೊಡಗಿನ ಭವಿಷ್ಯದ ಬಗ್ಗೆ ಯಾವುದೇ ನಿರ್ಣಯವನ್ನು ಜನತೆಯ ಅಭಿಪ್ರಾಯ ತೆಗೆಯದೆ ಮಾಡಕೂಡದೆಂದ ಶ್ರೀ. ಚೇಂದಂಡ ಮೇದಪ್ಪನವರು, ಮತ್ತು ಶ್ರೀ. ರುದ್ರಪ್ಪನವರು ಮಾತಾಡಿದರು. ಕೊಡಗು ಪ್ರತ್ಯೇಕ ಪ್ರಾಂತವಾಗಿಯೇ ಇರಬೇಕೆಂಬ ಠರಾವು ಸರ್ವಾನುಮತದಿಂದ ಪಾಸಾಯಿತು.

ಬಿಳ್ಳೂರು.

ತಾ. ೯-೧೧-೪೯ ರಲ್ಲಿ ಬಿಳ್ಳೂರು ಗ್ರಾಮಸ್ಥರು ಶ್ರೀ. ಮಲ್ಲಂಗಡ ನಂಜಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಕೊಡಗಿನ ಭವಿಷ್ಯದ ವಿಚಾರ ಚರ್ಚಿಸಿದರು. ಶ್ರೀಗಳಾದ ಬಿ. ಐ ಅಚ್ಚಪ್ಪ, ಇಟ್ಟಿರ ಕುಟ್ಟಪ್ಪ ಮತ್ತು ಮಲ್ಲಂಗಡ ಚಂಗಪ್ಪನವರು ಪರಿಸ್ಥಿತಿಯನ್ನು ವಿವರಿಸಿ ಭಾಷಣ ಮಾಡಿದರು. ಕೊಡಗನ್ನು ಪ್ರತ್ಯೇಕವಿಟ್ಟ ಜವಾಬ್ದಾರಿ ಸರಕಾರ ಕೊಡಬೇಕೆಂದೂ ಠರಾವು ಮಾಡಿದ್ದಲ್ಲದೆ ತಾ. ೧೭ ರಲ್ಲಿ ಡೆಲ್ಲಿಯಲ್ಲಿ ನಡೆಯುವ ಮಾತುಕತೆಗೆ ಕೊಡಗಿನಿಂದ ಆಹ್ವಾನಿತರಾದವರು ಈ ಬಗ್ಗೆ ಒಮ್ಮತದ ಅಭಿಪ್ರಾಯ ಕೊಡುವಂತೆ ಮನಸ್ಸು ಕೊಡಲೆಂದು ದೇವರನ್ನು ಪ್ರಾರ್ಥಿಸಲಾಯಿತು.

ಕಾಗುರ್ಂಡ.

ತಾ. ೯-೧೧-೪೯ ರಲ್ಲಿ ಕಾಗುರ್ಂಡದ ಅಂಬಲದಲ್ಲಿ ಶ್ರೀ ಬಿದ್ದಂಡ ಬೋಪಯ್ಯನವರ ಅಧ್ಯಕ್ಷತೆಯಲ್ಲಿ ಕೊಡಗಿನ ಭವಿಷ್ಯದ ಕುರಿತು ಆಲೋಚಿಸಲು ಸಾರ್ವಜನಿಕ ಸಭೆಯೊಂದು ನಡೆಯಿತು. ಶ್ರೀಗಳಾದ ಬೊಳಂದಂಡ, ಭೀಮಯ್ಯ, ಮೊಟ್ಟೆಯಂಡ ಉತ್ತಯ್ಯ, ಕೇಟೋಳಿರ ತಮ್ಮಯ್ಯ, ಗುಡ್ಡನ ರಾಮಯ್ಯ ಮೊದಲಾದವರು ಮಾತಾಡಿದರು. ಕೊಡಗು ಪ್ರತ್ಯೇಕವಿರಬೇಕೆಂಬ ವಿಚಾರಕ್ಕೆ ವಿರೋಧವಿರುವವರು ಯಾರಾದರೂ ಇದ್ದರೆ ತಿಳಿಸಬೇಕೆಂದು ಅಧ್ಯಕ್ಷರು ಕೇಳಿದರು. ಯಾರೂ ವಿರೋಧವಾಡದ ಕಾರಣ ಕೊಡಗನ್ನು ಪ್ರತ್ಯೇಕವಿಟ್ಟು ಜವಾಬ್ದಾರಿ ಸರಕಾರ ಕೊಡಬೇಕು. ಹೇಗೂ ಭವಿಷ್ಯ ತೀರ್ಮಾನದ ಬಗ್ಗೆ ದೇಶೀಯರ ಅಭಿಪ್ರಾಯವನ್ನು ತೆಗೆಯದೆ ಯಾವ ನಿರ್ಣಯವನ್ನೂ ಮಾಡಕೂಡದೆಂಬ ಠರಾವು ಸರ್ವಾನುಮತದಿಂದ ಪಾಸಾಯಿತು.

ಕಂಗಳತ್ ನಾಡು.

ತಾ. ೧೨-೧೧-೪೯ರಲ್ಲಿ ಮಾಯಮುಡಿ ಸ್ಕೂಲ್ ಮೈದಾನದಲ್ಲಿ ಶ್ರೀ. ಐ ಕೆ. ಮುದ್ದಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಶ್ರೀ. ಗಂಡುವಂಡ ನಂಜಪ್ಪನವರು ಕೊಡಗಿನ ಭವಿಷ್ಯದ ವಿಚಾರ ಮಾತಾಡಿದರು.

ತಾ. ೧೭ರ ವರೆಗೆ ಕೊಡಗಿನ ಭವಿಷ್ಯದ ವಿಚಾರ ಮಾತಾಡಬಾರದಾಗಿ ಚೀಫ್ ಕಮಿಷನರು ವಿಧಿಸಿರುವರೆಂದು ಸಿರಿ ಧಾರದ ವಾರ್ತೆಯನ್ನು ಶ್ರೀ. ಕೆ. ಎಂ. ಚೆಂಗಪ್ಪ ಮತ್ತು ಕೆ. ಎನ್ ಕುಶಾಲಪ್ಪನವರು ಹೇಳಿದರು. ಸರಕಾರವು ಹಾಗೆ ವಿಧಿಸಿಲ್ಲವೆಂದೂ, ಸಿರಿ ಧಾರವಾದ ಈ ವಾರ್ತೆ ನನಗೆ ಅನ್ವಯಿಸದೆಂದೂ ಶ್ರೀ. ಐಲ್ಲಿಯಂಡ ಅಪ್ಪಣ್ಣಯ್ಯನವರು ಮಾತಾಡಿದರು. ನಂತರ ಕೊಡಗು ಪ್ರತ್ಯೇಕ ಪ್ರಾಂತವಾಗಿಯೇ ಇರಬೇಕೆಂಬ ಠರಾವು ಒಮ್ಮತದಿಂದ ಪಾಸಾಯಿತು.

ಚೇರಂಬಾಣೆ.

ತಾ. ೧೩-೧೧-೪೯ರಲ್ಲಿ ಬಾಡಗ, ಕೋಪಟ್ಟಿ, ಕೊಳಗದಾಳು, ಕೊಟ್ಟೂರು ಗ್ರಾಮಗಳ ಜನರು ಶ್ರೀ. ಪಟ್ಟಮಾಡ ಮುತ್ತಣ್ಣನವರ ಅಧ್ಯಕ್ಷತೆಯಲ್ಲಿ ಸಭೆಸೇರಿದ್ದರು. ಕೊಡಗನ್ನು ಪ್ರತ್ಯೇಕ ಪ್ರಾಂತವಾಗಿಡುವ ಕುರಿತು ಶ್ರೀಗಳಾದ ಪಟ್ಟಮಾಡ ಪೊನ್ನಪ್ಪ, ಬಡ್ಡಿರ ಅಪ್ಪಣ್ಣ, ಮಣವಟ್ಟಿರ ಕಂಬಯ್ಯ ಮೊದಲಾದವರು ಭಾಷಣ ಮಾಡಿದರು. ಕೊಡಗನ್ನು ಪ್ರತ್ಯೇಕ ಪ್ರಾಂತವನ್ನಿಟ್ಟು ಜವಾಬ್ದಾರಿ ಸರ್ಕಾರ ಕೊಡಬೇಕೆಂಬ ಠರಾವು ಸರ್ವಾನುಮತದಿಂದ ಅಂಗೀಕೃತವಾಯಿತು.

ಕಡಿಯತ್ತೂರು.

ತಾ. ೧೩-೧೧-೪೯ ರಲ್ಲಿ ಶ್ರೀ. ನೆಲಯಣಿರ ಅಚ್ಚಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಶ್ರೀ. ಬೊಳಂದಂಡ ಮಾದಪ್ಪನವರು ಸಭೆಸೇರಿದ ಉದ್ದೇಶವನ್ನು ವಿವರಿಸಿದರು. ಶ್ರೀಗಳಾದ ಕುಂಜಿಲನ ಮುತ್ತಣ್ಣ, ಕಟ್ಟೇಟಿರ ಮೇದಪ್ಪ, ಮೊಟ್ಟೆಯಂಡ ಉತ್ತಯ್ಯ ಮೊದಲಾದವರು ಮಾತಾಡಿದರು. ಕೊಡಗು ಪ್ರತ್ಯೇಕವಿರಬೇಕೆಂಬ ಠರಾವು ಸರ್ವಾನುಮತದಿಂದ ಪಾಸಾಯಿತು.

ಬೇಂಗೂರು.

ತಾ. ೧೩-೧೧-೪೯ ರಲ್ಲಿ ಶ್ರೀ ಪಟ್ಟಮಾಡ ಮುತ್ತಣ್ಣನವರ ಅಧ್ಯಕ್ಷತೆಯಲ್ಲಿ ಸಭೆ ನೆರೆದಿತ್ತು. ಶ್ರೀಗಳಾದ ಪಟ್ಟಮಾಡ ಪೊನ್ನಪ್ಪ, ಕಲ್ಮಾಡಂಡ ಮೇದಪ್ಪ, ಪೊಡನೋಳಂಡ ಮಾದಪ್ಪ ಮೊದಲಾದವರು ಭಾಷಣ ಮಾಡಿದರು. ಕೊಡಗನ್ನು ಪ್ರತ್ಯೇಕ ಪ್ರಾಂತವಾಗಿಡಬೇಕೆಂದೂ, ಆಡಳಿತಕ್ಕೆ ಚಿಕ್ಕದೆಂದು ಕೇಂದ್ರ ಸರಕಾರ ಹೇಳುವುದಾದರೆ ಹಿಂದೆ ಕೊಡಗಿಗೆ ಸೇರಿದ್ದ ಪುತ್ತೂರು, ವೈನಾಡ, ಹುಣಸೂರು ತಾಲೂಕುಗಳನ್ನು ಕೊಡಗಿಗೆ ಸೇರಿಸಿ ಪ್ರತ್ಯೇಕ ಪ್ರಾಂತಮಾಡಬೇಕೆಂದೂ ಕೇಂದ್ರ ಸರಕಾರವನ್ನು ಕೇಳುವ ಠರಾವುಗಳು ಸರ್ವಾನುಮತದಿಂದ ಮಾಡಲ್ಪಟ್ಟವು.

ಪಾಡಿನಾಲ್ಕುನಾಡು

ಪಾಡಿನಾಲ್ಕುನಾಡಿನ ಶ್ರೀ ಸುಬ್ರಹ್ಮಣ್ಯ (ಇಗ್ಗುತಪ್ಪ) ದೇವರ ಆರಾಧನೆಗೆ ಸೇರಿದ ಸುಮಾರು ೧೨೦೦ ಜನರು ದೇವತಕ್ಕರಾದ ಶ್ರೀ ಪರದಂಡ ಪೂವಪ್ಪನವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಈ ನಿರ್ಣಯ ಮಾಡಿದರು.

ಕೊಡಗು ದೇಶವನ್ನು ಪ್ರತ್ಯೇಕ ಪ್ರಾಂತವಾಗಿಟ್ಟು, ಜವಾಬ್ದಾರಿ ಸರಕಾರ ಪಡೆದು ಆಡಳಿತ ನಡೆಸಬೇಕೇ ವಿನಹ ಬೇರೆ ಪ್ರಾಂತದೊಡನೆ ಸೇರಿಸ ಕೂಡದು. ಎಷ್ಟೋ ವರ್ಷಗಳಿಂದ ಪ್ರತ್ಯೇಕವಿದ್ದು ತನ್ನ ಆದಾಯದಿಂದಲೇ ಯೋಗ್ಯ ಆಡಳಿತ ನಡೆಸಿಕೊಂಡು ಬಂದಿರುವ ಈ ಪ್ರಾಂತವು ಯಾವುದೇ ರೀತಿಯಲ್ಲಿ ಕೇಂದ್ರಕ್ಕೆ ಭಾರರೂಪವಾಗದೆ ಆಡಳಿತ ನಡೆಸಿಕೊಂಡು ಹೋಗಬಲ್ಲುದು. ಆದರಿಂದ ಕೇಂದ್ರ ಸರಕಾರವು ಕೊಡಗನ್ನು ಪ್ರತ್ಯೇಕ ಪ್ರಾಂತವಾಗಿಯೇ ಇಡಬೇಕು.

ಕೊಡಗಿನಿಂದ ಭವಿಷ್ಯ ಚರ್ಚೆಯ ಬಗ್ಗೆ ಆಹ್ವಾನಿತರಾಗಿರುವ ಪ್ರತಿನಿಧಿಗಳು ಒಗ್ಗಟ್ಟಾಗಿ ಒಮ್ಮತದ ಅಭಿಪ್ರಾಯವನ್ನು ಕೇಂದ್ರ ಸರಕಾರಕ್ಕೆ ಕೊಡಬೇಕೆಂದು ಅವರನ್ನು ಕೇಳಿಕೊಳ್ಳುತ್ತದೆ. ಈ ನಿರ್ಣಯವನ್ನು ಕೇಂದ್ರ ಸರಕಾರಕ್ಕೆ ತಿಳಿಸಲು ನಿಶ್ಚಯವಾಯಿತು.

ಸುಂಟಿಕೊಪ್ಪ.

ತಾ. ೧೪-೧೧-೪೯ ರಲ್ಲಿ ಸುಂಟಿಕೊಪ್ಪ, ಅಂದಗೋವೆ, ಕೊಡಗರಹಳ್ಳಿ, ಅತ್ತೂರು ನಲ್ಲೂರು ಗ್ರಾಮದ ಜನರ ಸಾರ್ವಜನಿಕ ಸಭೆಯೊಂದು ನಂದೀಮರ ಮೈದಾನದಲ್ಲಿ ಶ್ರೀ ಮೊಳ್ಳೆರ ಮಾಚಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಗಳಾದ ಎ. ಎಂ. ಕಾಳಪ್ಪ, ಬಿ ಟಿ ವೆಂಕಟಸುಬ್ಬಯ್ಯ, ಬಿ. ರಾಮಯ್ಯ, ಮೊಳ್ಳೆರ ಕಾಳಪ್ಪ ಮೊದಲಾದವರು ಕೊಡಗಿನ ಭವಿಷ್ಯದ ವಿಚಾರ ಮಾತಾಡಿದರು. ಕೊಡಗನ್ನು ಪ್ರತ್ಯೇಕವಿಟ್ಟು ಜವಾಬ್ದಾರಿ ಸರಕಾರ ಕೊಡಬೇಕೆನ್ನುವ, ಆರ್ಥಿಕ ಸ್ಥಿತಿ ಚೆನ್ನಾಗಿದ್ದು ಪ್ರತ್ಯೇಕ ಆಡಳಿತ ನಡೆಸಲು ಶಕ್ಯವಾಗಿರುವ ಕೊಡಗನ್ನು ಬೇರೆ ಪ್ರಾಂತಕ್ಕೆ ಜನಾಭಿಪ್ರಾಯ ತೆಗೆಯದೆ ಸಂಯೋಜಿಸುವ ಪ್ರಯತ್ನವನ್ನು ವಿರೋಧಿಸುವ ಠರಾವುಗಳಾದವು. ಈ ಬಗ್ಗೆ ಕೇಂದ್ರ ಸರಕಾರಕ್ಕೆ ತಂತಿ ಕಳುಹಿಸಲು ನಿರ್ಣಯವಾಯಿತು.

ಹೊಸ ಶಾಲೆ.

ಪ್ರಾಮುಖ್ಯವಾಗಿ ಹರಿಜನರ ಮಕ್ಕಳಿಗೂ, ಗ್ರಾಮದ ಇತರರಿಗೂ ಎಂದು ಬೆಳ್ಳೂರು ಗ್ರಾಮಸ್ಥರೇ ಕಟ್ಟಿದ ಶಾಲೆಯನ್ನು ತೆರೆಯುವ ಉತ್ಸವವು ತಾರೀಕು ೯-೧೧-೪೯ ರಲ್ಲಿ ಶ್ರೀ. ಸಿ. ಬಿ ಗಣಪಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಶಾಲಾ ಸಮಿತಿಯ ಸದಸ್ಯರಾಗಿ ಶ್ರೀಗಳಾದ ಇಟ್ಟಿರ ಐಮ್ಮಣ್ಣ, ಇಟ್ಟಿರ ತಿಮ್ಮಯ್ಯ, ಮಲ್ಲಂಗಡ ಚಂಗಪ್ಪ, ನಾರಿರ ಉತ್ತಯ್ಯ ಮತ್ತು ನಾರಿರ ಚಂಗಪ್ಪನವರನ್ನು ಆರಿಸಲಾಯಿತು. ಶಾಲೆಯ ಶ್ರೀಗಳಾದ ಇಟ್ಟಿರ ನಂಜಪ್ಪನವರಿಂದ ತೆರೆಯಲ್ಪಟ್ಟಿತು. ಶಾಲಾ ಉಪಾಧ್ಯಾಯರಾಗಿ ಶ್ರೀ ಬಿ ಐ ಪೂವಯ್ಯನವರನ್ನು ನೇಮಿಸಲಾಯಿತು. ಒಡನೆ ಜಿಲ್ಲಾ ಬೋರ್ಡಿಗೆ ಒರೆದು ಉಪಾಧ್ಯಾಯರ ವೇತನವನ್ನು ಅವರು ಕೊಡಬೇಕೆಂದೂ, ಬೇರೆ ಶಾಲೆಗಳಲ್ಲಿ ಹರಿಜನ ಮಕ್ಕಳಿಗೆ ಕೊಡುವಂತೆ ಈ ಶಾಲೆಯ ಹರಿಜನ ಮಕ್ಕಳಿಗೂ ಬಟ್ಟೆ, ಸ್ಲೇಟು, ಪುಸ್ತಕ ಒದಗಿಸಿಕೊಡಬೇಕೆಂದು ಕೇಳುವ ನಿರ್ಣಯಗಳಾದವು.

ಸತ್ಕಾರ ನಿಧಿಲೆಕ್ಕ.

ಇಂಡಿಯಾ ಸರಕಾರದ ಮಾನ್ಯ ಮಂತ್ರಿಗಳಾದ ಶ್ರೀ, ಸಂತಾನಂ ಅವರು ಮತ್ತು ಮದರಾಸು ವಿಶ್ವವಿದ್ಯಾಲಯದ ಕಮಿಷನ್ ಸದಸ್ಯರು ಮಡಿಕೇರಿಗೆ ದಯಮಾಡಿಸಿದ ಸಂದರ್ಭದಲ್ಲಿ ಸಾರ್ವಜನಿಕರಿಂದ ಸಂಗ್ರಹಿಸಿದ ಸತ್ಕಾರ ನಿಧಿಯ ಲೆಕ್ಕ.

ಒಟ್ಟು ಚಂದಾ ವಸೂಲಿ ಆದದ್ದು ರೂ. ೧೯೬೭-೦-೦

ಶ್ರೀ ಮಾನ್ಯ ಮಂತ್ರಿ ಅವರ ಪ್ರವಾಸದ ಮತ್ತು ಅವರ ಸಮ್ಮಾನದ ಇತರ ಖರ್ಚುಗಳು ರೂ, ೯೭೭-೩-೦

ಮದ್ರಾಸ್ ವಿಶ್ವವಿದ್ಯಾನಿಲಯದ ಕಮಿಷನರರ ಪ್ರವಾಸದ ಮತ್ತು ಇತರ ಖರ್ಚುಗಳು, ರೂ, ೧೦೨೬-೪-೦

ಉಳಿಕೆ ಹಣ ...-೧೦-೦

ಈ ಉಳಿಕೆ ರೂ, ೪೪-೧೦-೦ ನ್ನು ಕೊಡಗು ಶಾಖೆಯ ಇಂಡಿಯನ್ ರೆಡ್ ಕ್ರಾಸ್ ಸೊಸೈಟಿಗೆ ಕೊಡಲಾಗಿದೆ.

ರಾ. ಬಾ. ಕಡೇಮಾಡ ಜ ಬೆಳ್ಳಪ್ಪ,
ಕಾರ್ಯದರ್ಶಿ, ಮಂಡಳಿ ಅಧ್ಯಕ್ಷರು.

ಅಶ್ಲೀಲ ರಾಜಕೀಯ ಯಾರದು ?

ಲೇ:– ಶ್ರೀ ಬಿ. ಡಿ. ಗಣಪತಿ.

ಕಳೆದ ವಾರದ 'ಜನ್ಮಭೂಮಿ' ಪತ್ರಿಕೆಯಲ್ಲಿ ಶ್ರೀ ಕೆ ಗಣಪತಿಯವರಾದ ನೀವು ಬರೆದ 'ಕೊಡಗಿನಲ್ಲಿ ಅಶಿಷ್ಟ ರಾಜಕೀಯಕ್ಕೆ ಕಾರಣರಾರು?' ಎಂಬ ಲೇಖನದಲ್ಲಿ 'ಗುಪ್ತ' 'ಗಣೇಶ' 'ದೇಶಪ್ರೇಮಿ' 'ಓರ್ವ ಕೃತ್ರಿ' ಎಂಬ ಹೆಸರಿನಿಂದ ಹೊರಟ ಲೇಖನಗಳನ್ನು ಬರೆದು ಅಶಿಷ್ಟ ರಾಜಕೀಯಕ್ಕೆ (ಕೊಡಗು ಉಪಸಂಪಾದಕರು) ಕಾರಣರಾಗಿದ್ದಾರೆ. ಹೊಟ್ಟೆಪಾಡಿಗಾಗಿಯೇ ರಾಜಕೀಯ ರಂಗದಲ್ಲಿ ತನಗೂ ಒಂದು ಸ್ಥಾನ ಸಿಕ್ಕುವದೆಂಬ ನಿರೀಕ್ಷೆಯಿಂದ ಲೋಭಪ್ರೇರಿತರಾಗಿ ಈ ಲೇಖನಗಳನ್ನು ಬರೆಯುತ್ತಿರುವದೆಂದೂ ಅದರಲ್ಲಿ ಉಲ್ಲೇಖಿಸಿದ್ದೀರಿ. ಕೊಡಗಿನಲ್ಲಿ ಹೊಲಸು ರಾಜಕೀಯ ಪ್ರಚಾರಣೆಗಾಗಿ ಸಂಬಳಕ್ಕೋ ಅಥವ ವಾಗ್ದಾನದಿಂದ ಯಾವದೋ ಒಂದು ರಾಜಕೀಯ ಪಾರಿತೋಷಕಕ್ಕೋ ಮಾರಿಕೊಂಡ ಪತ್ರಿಕೋದ್ಯಮದ ಸಾಮಾನ್ಯ ಶಿಷ್ಟಾಚಾರಗಳನ್ನು ಅರಿಯದವರೆಂದೂ ಆರೋಪಿಸಿದ್ದೀರಿ. ಪತ್ರಿಕೆಯಲ್ಲಿ ಕೆಳಮಟ್ಟದ ಲೇಖನಗಳಿಗೆ ಅನುಕೊಟ್ಟನ್ನ ತಪ್ಪಿಗಾಗಿ ವ್ಯಸನಪಟ್ಟಿದ್ದೀರಿ. 'ಗುಪ್ತ' 'ಗಣೇಶ' ಈ ಎರಡು ಹೆಸರಿನಲ್ಲಿ ಲೇಖನ ಬರೆಯುವವನು ನಾನು. ನನಗೆ ಸಂಬಂಧಿಸುವ ವಿಚಾರದಲ್ಲಿ ಉತ್ತರವೀಯಬೇಕಾದುದು ಅವಶ್ಯ. (ನೀವು ನಿರ್ದೇಶಿಸಿದ 'ಓರ್ವಕೃತ್ರಿ' 'ದೇಶಪ್ರೇಮಿ' ಇವರು ಅವರ ಮೇಲೆ ನೀವು ಹೇರಿದ ಆರೋಪಕ್ಕೆ ಸರಿಯಾದ ಉತ್ತರ ಕೊಡಬಹುದು.)

ನೀವೂ, ನಿಮ್ಮ ಸಂಪಾದಕರೂ ಯಾವ ರೀತಿ ಪತ್ರಿಕೋದ್ಯಮದ ಗೌರವವನ್ನು ತಿಳಿದವರು ಎಂಬುದಕ್ಕೆ ನಿಮ್ಮ ಸಂಪಾದಕರ ಪತ್ರಿಕೆಯು 'ಸ್ಟೈಲ್' ನಿಂದಲೇ ಉದಾಹರಣೆ ಕೊಟ್ಟು ನಿಮ್ಮ ಮತ್ತು ಅವರ ಬಾಯಿ ಮುಚ್ಚಿಸುವದು ನನಗೆ ಸಾಧ್ಯವಿದೆ. ಆದರೆ ಇದು ಮುಂದೆ ಅವಕಾಶ ದೊರೆತಾಗ ಆಗಲಿ. ಸದ್ಯಕ್ಕೆ ನಿಮಗೆ ನಿಮ್ಮ ಮಾನ್ಯ ಸಂಪಾದಕರ ಪರಿಚಯವನ್ನು ಸ್ವಲ್ಪ ಮಾಡಿ ಕೊಡಬೇಕಾಗಿದೆ. ನನ್ನನ್ನು ಉಲ್ಲೇಖಿಸಿ ನೀವು ಬರೆದ ಲೇಖನವನ್ನು ನೋಡಿದೊಡನೇ ನಿಮ್ಮ ಸಂಪಾದಕರಿಗೆ ನಾನು ಒಂದು ಪತ್ರ ಬರೆದು 'ಗಣೇಶ' 'ಗುಪ್ತ' ರ ಹೆಸರಿನಲ್ಲಿ ಪತ್ರಿಕೋದ್ಯೋಗಕ್ಕೆ ಯೋಗ್ಯವಲ್ಲದ, ಅಶ್ಲೀಲ ರಾಜಕೀಯಕ್ಕೆಡೆ ಕೊಡುವ ಯಾವುದೇ ಲೇಖನ ಪ್ರಕಟವಾಗಿದ್ದರೆ ಅಂಥಾದನ್ನು ಬಹಿರಂಗವಾಗಿ ತಮ್ಮ ಪತ್ರಿಕೆಯಲ್ಲಿ ನನ್ನ ಪತ್ರದೊಡನೆ ಪ್ರಕಟಿಸಬೇಕೆಂದೂ, ಅದು ಸಾಧ್ಯವಿಲ್ಲದಿದ್ದರೆ ತಾ. ೧೫ರೊಳಗೆ ನನಗೆ ಆ ವಿಚಾರದಲ್ಲಿ ಜವಾಬು ಬರೆಯಬೇಕೆಂದೂ ಬರೆದೆನು. ತಾ. ೯ರಲ್ಲಿ ಮಾನ್ಯ ಸಂಪಾದಕರಿಗೆ ಪತ್ರ ಮುಟ್ಟಿದ್ದರೂ ಪತ್ರಿಕೋದ್ಯಮವನ್ನು ತಿಳಿದ ಮಹನೀಯರು ಉತ್ತರವನ್ನು ಕೊಡಲು ಹಿಂಜರಿದರು. ಇಂದಿನ ವರೆಗೂ (ತಾ. ೧೮) ಕೊಟ್ಟಿಲ್ಲ.

೧೯೪೭ರಲ್ಲಿ 'ಕೊಡಗಿನ ಭವಿಷ್ಯ' ಎಂಬ ಒಂದು ಪುಸ್ತಕವನ್ನು ನಾನು ಬರೆದುದು ನಿಮಗೆ ತಿಳಿದಿರಬಹುದು. ಅದರ ಪ್ರತಿ ಒಂದನ್ನು ನಿಮ್ಮ ಸಂಪಾದಕರಿಗೆ ಕಳುಹಿಸಿ ಅದರ ವಿಮರ್ಶೆ ಮಾಡಬೇಕೆಂದು ಕೇಳಿಕೊಂಡಿದ್ದೆನು. ಅದಕ್ಕೂ ಆ ಬಗ್ಗೆ ನಂತರದ ನನ್ನ ಪತ್ರಕ್ಕೂ ಅಂದೂ ಕೂಡ ಮೂಕ ಮಾರ್ಗವನ್ನನುಸರಿಸಿದರು. ಆ ಪುಸ್ತಕವನ್ನು ಓದಿ ಅದಾಗಿಸಿ ಅದರ ನ್ಯೂನತೆ, ಇಲ್ಲವೇ ಉಪಯುಕ್ತತೆಯನ್ನು ಬರೆಯಲು ಹಿಂಜರಿದರು. ಪಕ್ಷ ರಾಜಕೀಯದ ರೋಗ ತಗಲಿದ ಕಾರಣವೇ ಹಾಗಾಗಿರಬೇಕೆಂದು ನಾನು ಊಹಿಸಲು ಆಸ್ಪದವಿದೆ. ಪುಸ್ತಕವನ್ನು ಪ್ರಶಂಸಿದರೆ ಅದೂ ತೊಂದರೆ, ಟೀಕೆ ಮಾಡಲು ಅದೂ ಅಪಾಯಕರವೆಂದು ಭಾವಿಸಿ ಶಿಖಂಡೀ ಮಾರ್ಗವನ್ನು ಅನುಸರಿಸಿದರು. ಆ ರೀತಿಯ ಪತ್ರಿಕೋದ್ಯೋಗ ನಾನು ಕಲಿತಿಲ್ಲವೆಂಬುದು ನಿಮಗೆ ತಿಳಿದಿರಲಿ.

ನೀವು ಮತ್ತು ನಿಮ್ಮ ಸಂಪಾದಕರು ಒಂದು ಮಾತನ್ನು ಜ್ಞಾಪಕದಲ್ಲಿಡಬೇಕು. ಪತ್ರಿಕೋದ್ಯೋಗ ಎಂದೂ ಹಣ ಸಂಪಾದನೆಯ ಮಾರ್ಗವಲ್ಲ. ಹಣಕ್ಕಾಗಿ ನಾ[illegible] ಹೆಚ್ಚು ವೇತನ [illegible] ಅನೇಕ ಮಾರ್ಗಗಳಿದ್ದವು. ಹಣ ಸಂಪಾದನೆ ಮಾಡಬಹುದಿತ್ತು. ಕಂಪೆನಿಯವರು ಹೆಚ್ಚಿನ ವೇತನ ಕೊಡಲು ತಯಾರಿದ್ದರೂ ನನ್ನ ಖರ್ಚಿಗೆ ತಿಂಗಳಿಗೆ ಕೇವಲ ೪೦ ರೂಪಾಯಿಗಳೇ ಸಾಕೆಂದು ವೇತನ ಹೊಂದಿಕೊಂಡ ನಿದರ್ಶನ ನಿಮಗಾಗಲೀ, ನಿಮ್ಮ ಸಂಪಾದಕರಿಗಾಗಲೀ ಏನು ಗೊತ್ತು? ರಾಜಕೀಯ ಸ್ಥಾನಕ್ಕಾಗಿ ನಾನು ಪ್ರಯತ್ನಿಸುತ್ತಿರುವೆನೆನ್ನುವಿರೇ? ನಿಮ್ಮಂತೆ ಯಾ ನಿಮ್ಮ ಮಾನ್ಯ ಸಂಪಾದಕರಂತೆ ಕಾಲ ಬಂದಂತೆ ವೇಷ ಬದಲಾಯಿಸುವ ಪದ್ಧತಿ ನನಗಿಲ್ಲ. ನಾನಿರುವಂತೆಯೇ ಅಧಿಕಾರಕ್ಕಾಗಲೀ, ಯಾವದೇ ಸ್ಥಳಕ್ಕಾಗಲೀ ಆರಿಸುತ್ತಿದ್ದರೆ ಇದು ಒಪ್ಪ. ಕೌನ್ಸಿಲು ಯಾ ಬೋರ್ಡ್‌ಗೆಂದು ಬಂದಾಗ 'ಜೂನಿಯರ್ ಬೋರಯ್ಯಗೌಡ' ನೆನಿಸಿಕೊಳ್ಳುವದು ಪ್ರಯೋಜನದ ವಿಚಾರವಾಗಿರಲಿಲ್ಲ. ನನ್ನ ಜೀವನಕ್ಕೂ, ನನ್ನ ಪತ್ರಿಕೋದ್ಯಮಕ್ಕೂ ಒಂದು ಧ್ಯೇಯ ಗುರಿಗಳಿವೆ. ಅದು ಕಾಲ ಬಂದಂತೆ ಬಣ್ಣ ಬದಲಾಯಿಸುವ ಧ್ಯೇಯವಲ್ಲವೆಂಬುದು ನಿಮಗೆ ತಿಳಿದಿರಲಿ ಸಾಕು.

ನಿಮ್ಮ ಸಂಪಾದಕರು ಮತ್ತು ಅವರ ಪಕ್ಷದವರು 'ಕೊಡಗು' ಪತ್ರಿಕೆಯ ಮೇಲೆ ನಾನಾ ಆರೋಪ ಹೊರಿಸಿದ್ದಾರೆ. ಕಡೆಗೆ ನೀವು ಅವರ ಸಹಾಯಕ್ಕೆ ಬಂದು "ಎಂದಿನವರೆಗೆ ಕೊಡಗು ಪ್ರತ್ಯೇಕವಿರುವದೋ ಅಂದಿನ ವರೆಗೆ 'ಕೊಡಗು' ಪತ್ರಿಕೆಯು 'ಗೋಣಿಕೊಪ್ಪ ಆರ ಸಾತನ' ಉಳಿಯುತ್ತದೆ. ಇಲ್ಲವಾದಾಗ ನೆರೆ ಪ್ರಾಂತದ ಉಚ್ಚ ವೃಂದದ ಪತ್ರಿಕೆಗಳ ಎದುರು ತನ್ನ ಈ ಹೊಲಸು ಬರವಣಿಗೆಯ ಕೃತ್ರಿಮ ನಡೆಯದು" ಎಂದು ಬರೆದಿರುವಿರಿ. ನಿಮ್ಮ ವಿಷಯ ಜ್ಞಾನಕ್ಕೆ ವ್ಯಸನ ಪಡಬೇಕು. ವೃಂದದ ಪತ್ರಿಕೆಗಳಿಗೂ ವಾರಪತ್ರಿಕೆಗಳಿಗೂ ಇರುವ ವ್ಯತ್ಯಾಸ ತಿಳಿಯದ ನೀವೂ ಬಾಲ ಬೀಸತೊಡಗಿರುವಿರಿ! ಈಗೇನು ಹೊರಗಿನ ಪತ್ರಿಕೆಗಳು ಕೊಡಗಿನೊಳಗೆ ಬರಲು ನಿರ್ಬಂಧವಿದೆಯೇ? ಅಯ್ಯೋ, ಮಸಿಕಪ್ಪಿನ ಮನುಷ್ಯನಿಗೆ ಸೂರ್ಯನಾರಾಯಣನೆಂದು ಹೆಸರಿರುವಂತೆ ನಿಮ್ಮಂಥವರಿಗೆ ಸರ್ವಜ್ಞನೆನಿಸಿದ ವಿನಾಯಕನ ಹೆಸರಿರಬೇಕಿತ್ತೆ?

'ಕೊಡಗು' ಪತ್ರಿಕೆ ಪ್ರತ್ಯೇಕವಾದಿಗಳ ಮುಖಪತ್ರ. ಅದರಲ್ಲಿ ಸಂಯೋಜನವಾದಿಗಳ ಅಭಿಪ್ರಾಯಕ್ಕೆ ಎಡೆ ಕೊಡಲಾರರು ಎಂಬ ಸುಳ್ಳು ಪ್ರಚಾರವನ್ನು ನಿಮ್ಮ ಗುಂಪು ಮಾಡಿತು. ನಿಮ್ಮ ಪಕ್ಷದಲ್ಲಿ ಲೇಖನ ಬರೆಯಬಲ್ಲ ಮುಂದಾಳುಗಳನ್ನು ನೋಡಿ ಅವರಿಗೆ ಸಂಯೋಜನೆಯ ವಿಚಾರ ಉತ್ತಮ ಲೇಖನ ಬರೆದು ಕೊಡಿ. 'ಕೊಡಗು' ಪತ್ರಿಕೆ ಪ್ರಕಟಿಸುವದೆಂದು ನಾನೇ ಸ್ವತಃ ಬರೆದಿದ್ದೆ. ಪತ್ರಿಕೆಯಲ್ಲಿಯೂ ಆ ರೀತಿ ಪ್ರಕಟಿಸಲಾಗಿತ್ತು. ಸಂಯೋಜನಾವಾದಿಗಳಿಗೆ ತಮ್ಮ ಅಭಿಪ್ರಾಯವನ್ನು ಜನತೆಯ ಮುಂದಿಡಲು ಹೆಬ್ಬಯಕೆ ಇದ್ದಿರಬೇಕು. ಯಾರು ಬರೆಯುವ ಗೋಜಿಗೆ ಹೋಗಲಿಲ್ಲ. ಬದಲು 'ಕೊಡಗು' ಪತ್ರಿಕೆಯಲ್ಲಿ ಸಂಯೋಜನವಾದಿಗಳ ಅಭಿಪ್ರಾಯಕ್ಕೆ ಎಡೆಯಿಲ್ಲವೆಂಬ ನಿರಾಧಾರ ಪ್ರಚಾರ ಈಗಲೂ ನಡೆಯುತ್ತಿದೆ! ಬಹುಶಃ ಇದು ನಿಮ್ಮ ದೃಷ್ಟಿಯಲ್ಲಿ ಶಿಷ್ಟರಾಜಕೀಯವಿರಬಹುದು.

ಪಕ್ಷರಾಜಕೀಯ ರೋಗದಿಂದ ಪೀಡಿತರಾದ ನೀವು ಪ್ರಾಯಶಃ 'ಕೊಡಗು' ಪತ್ರಿಕೆಯನ್ನು ಓದುತ್ತಿರಲಿಕ್ಕಿಲ್ಲ. ಕೊಡಗಿನ ಅಶ್ಲೀಲ ರಾಜಕೀಯದ ಕಾರಣವನ್ನು ವಿವರಿಸಿ ತಾ. ೨೧–೧–೪೯ರ 'ಕೊಡಗು' ಪತ್ರಿಕೆಯಲ್ಲಿ 'ಗಣೇಶ' ರು ಬರೆದ ಲೇಖನದಿಂದ ಈ ಕೆಳಗಿನದನ್ನು ಎತ್ತಿ ಕೊಡಲಾಗಿದೆ. "ಕೊಡಗಿನ ಅಶ್ಲೀಲ ರಾಜಕೀಯವು ಕಾಂಗ್ರೆಸಿಗೆ ಅಧಿಕಾರ ದೊರೆತಂದಿನಿಂದ ಪ್ರಾರಂಭವಾಗಿದೆ. ಜಿಲ್ಲಾ ಬೋರ್ಡ್ ಅಧ್ಯಕ್ಷರ ಪದವಿ ದೊರೆತ ಸಂದರ್ಭದಲ್ಲಿ ಕಾಂಗ್ರೆಸಿನಲ್ಲಿ ಗುದ್ದಾಟ ಪ್ರಾರಂಭವಾಯಿತು. ಕೊಡಗಿನ ಭವಿಷ್ಯದ ಪ್ರಶ್ನೆಯಲ್ಲಿ ಕಾಂಗ್ರೆಸು ಇಬ್ಭಾಗವಾಗಿ ಒಂದಕ್ಕೆ ಶ್ರೀ ಪಿ. ಐ. ಬೆಳ್ಯಪ್ಪನವರೂ ಇನ್ನೊಂದಕ್ಕೆ ಶ್ರೀ ಸಿ. ಎಂ. ಪೂಣಚ್ಚನವರೂ ಮುಂದಾಳುಗಳಾದರು. ಎರಡೂ ಪಕ್ಷಗಳು ಒಬ್ಬರೊಬ್ಬರ ಛಿದ್ರಾನ್ವೇಷಣೆಗೆ ಪ್ರಾರಂಭಿಸಿದವು. ಕಾಂಗ್ರೆಸ್ಸಿನ ಈ ಒಡಕಿನ ಸಂದರ್ಭವನ್ನು ಆ ವರೆಗೆ ಕಾಂಗ್ರೆಸ್ಸಿಗೆ ವಿರೋಧಮಾಡಿ ಹೊರಗಿದ್ದ ಸಂದರ್ಭಸಾಧಕರು ಉಪಯೋಗಿಸಿ ಹೊಸ ವೇಷದಿಂದ ಒಳನುಗ್ಗಿದರು." (ಆದಲೇ ನಿಮ್ಮಂಥವರು ನಾನಾ ಕಾಂಗ್ರೆಸ್ಸಿಂದು ಬಿಳಿಟೊಪ್ಪಿ ಹಾಕಿದ್ದು) ಶಿಸ್ತಿಲ್ಲದ, ತತ್ವಗಳ ಅನುಷ್ಠಾನವಿಲ್ಲದ, ಅಧಿಕಾರ ಲಾಲಸೆಯ ಜನರಿಂದಲೂ ಪರಸ್ಪರ ಸ್ಫೋಟಗಳು ತೊಡಗಿ ವ್ಯಕ್ತಿದೂಷಣೆ, ಪರನಿಂದೆ, ಅಸಭ್ಯ ಪ್ರಚಾರಕ್ಕೆಡೆಕೊಟ್ಟು ಕೊಡಗು ರಾಜಕೀಯವು ಹೊಲಸು ರಾಜಕೀಯವಾಗಿದೆ. ಕೆಸರಿನಲ್ಲಿ ಜೀವಿಸುವ ಸೂಕರಕ್ಕೆ ಕೆಸರೇ ಸ್ವರ್ಗವೆನಿಸಿದಂತೆ ಈ ಹೊಲಸು ರಾಜಕೀಯದಲ್ಲಿಯೇ ಬೆಳೆಯುವವರಿಗೆ ಅದರ ನ್ಯೂನತೆ, ಕಾರಣಗಳು ತಿಳಿಯುವದೆಂತು? ಈ ಹೊಲಸನ್ನು ಬಯಲಿಗೆಳೆದು ರಾಜಕೀಯ ರಂಗವನ್ನು ಪರಿಶುದ್ಧಗೊಳಿಸಲು 'ಗುಪ್ತ' 'ಗಣೇಶ' ರ ಲೇಖನಗಳು ಸತತ ಪ್ರಯತ್ನಮಾಡಿವೆ ಎಂಬುದನ್ನು ನೀವು ಕಣ್ಣಿದ್ದವರಾಗಿದ್ದರೆ ಕಾಣುತ್ತಿದ್ದಿರಿ.

ನೀವು ನಮ್ಮ ಶಿಷ್ಟರಾಜಕೀಯವಾದಿಗಳೆಂದು ಬರೆದ ಲೇಖನದ ಉದಾಹರಣೆಯನ್ನೇ ತೆಗೆದುಕೊಳ್ಳುವ. ಅದರಲ್ಲಿ ವ್ಯಕ್ತಿದೂಷಣೆ, ಅಸಭ್ಯ ಶೈಲಿಯಲ್ಲದೆ ಬೇರೇನಿದೆ? ನೀವು, ಮತ್ತು ನಿಮ್ಮ ಸಂಪಾದಕರಿಗೆ ಈ ವ್ಯಕ್ತಿ ದೂಷಣೆ ಪರನಿಂದೆಯ ಅಸ್ಪದವಿಲ್ಲದಿದ್ದರೆ ಲೇಖಕರೂ ಪತ್ರಿಕಾ ಕರ್ತರು ಎನಿಸಿಕೊಳ್ಳಲು ಸಾಧ್ಯವಿತ್ತೆ? ವ್ಯಕ್ತಿದೂಷಣೆಯನ್ನು ಬಿಟ್ಟದ್ದೇ ಆದರೆ ನಿಮಗೂ, ನಿಮ್ಮ ಆ ಪತ್ರಿಕೆಗೂ ಬಹುಶಃ ಕೆಲಸವಿರಲಾರದು!

ಕೊಡಗಿನ ಭವಿಷ್ಯದ ವಿಚಾರ ಪ್ರಚಾರ ಕಾರ್ಯ ಮಾಡುವದಿಲ್ಲವೆಂದು ಮಾತು ಕೊಟ್ಟವರಲ್ಲಿ ಶ್ರೀ ಪಿ ಐ ಬೆಳ್ಯಪ್ಪನವರು ಒಬ್ಬರು. ಅವರು ಆ ಮಾತನ್ನು ಉಳಿಸಿಲ್ಲ. ಕೊಡಗು ಸರಕಾರವು ಅವರಿಗೆ ಎಚ್ಚರಿಕೆ ಕೊಡುವದಲ್ಲದೆ ಗೋಣಿಕೊಪ್ಪಲು ಗುದ್ದಾಟದ ಕಾರಣಕ್ಕಾಗಿ ಮುಂದೆ ದೇಶದಲ್ಲಿ ೧೪೪ನೇ ಸೆಕ್ಷನನ್ನು ಜಾರಿಗೆ ತಂದು ಜನತೆ ಸಾರ್ವಜನಿಕ ಮೀಟಿಂಗು ಮಾಡಿ ತಮ್ಮಭಿಪ್ರಾಯ ವ್ಯಕ್ತಮಾಡಲು ಎಡೆಕೊಡಬಾರದೆಂಬ ಅರ್ಥದಲ್ಲಿ ನಿಮ್ಮ ಸಂಪಾದಕರು ಅಗ್ರಲೇಖನ ಬರೆದಿದ್ದಾರೆ. 'ಕೊಡಗು' ಪತ್ರಿಕೆ ನಿಮ್ಮ ಸಂಪಾದಕರ ಪತ್ರಿಕೆಯಂತೆ ಒಬ್ಬ ವ್ಯಕ್ತಿಯ ಕೈಗೂಸಲ್ಲ. ತಮ್ಮ ಇಚ್ಛೆಯಂತೆ ಬೇಕಾದುದನ್ನು ಮಾಡಿಕೊಳ್ಳಲು ಅಲ್ಲಿ ಆಸ್ಪದವಿಲ್ಲ. ಕೊಡಗಿನ ಜನರ ಪತ್ರಿಕೆ ಅದು. ಕೊಡಗಿನ ಜನತೆಗೆ ತೀರಾ ಸಂಬಂಧಿಸಿದ ಕೊಡಗಿನ ಭವಿಷ್ಯದ ವಿಚಾರದಲ್ಲಿ ಪತ್ರಿಕೆಯಲ್ಲಿ ಪ್ರಚಾರ ಮಾಡುವದಲ್ಲವೆಂದು ಹೇಳಲು ಯಾರೊಬ್ಬ ವ್ಯಕ್ತಿಗೂ ಸಾಧ್ಯವಿಲ್ಲ. ಯಾವ ಒಬ್ಬ ವ್ಯಕ್ತಿಗಿಂತಲೂ ದೇಶೀಯರ ಮುಖಪತ್ರವಾದ 'ಕೊಡಗು' ದೊಡ್ಡದು. ಕೊಡಗಿನ ಜನರ ಅಭಿಪ್ರಾಯವನ್ನು ಪ್ರತಿಬಿಂಬಿಸುವದು 'ಕೊಡಗು' ಪತ್ರಿಕೆಯ ಜೀವನ ಧ್ಯೇಯ.

'ಕೊಡಗು' ಪತ್ರಿಕೆಯ ಬಾಯಿಮುಚ್ಚಿಸಲು, ಚೀಫ್ ಕಮಿಷನರ, ಕೊಡಗಿನ ಜನರ ಬಾಯಿಯನ್ನು ಮುಚ್ಚಿಸಲು ಕ್ರಿಮಿನಲ್ ಪ್ರೊಸೀಜರ್ ಕೋಡಿನ ಮಾರಿಹೊಕ್ಕ ೧೪೪ನೇ ಸೆಕ್ಷನನ್ನು ಜಾರಿಗೆ ತರಬೇಕೆಂದು ಪಾಪದ ಸಂಪಾದಕರು ಬೇಡಿದ್ದಾರೆ. ಗೋಣಿಕೊಪ್ಪ ಮೀಟಿಂಗಿನಲ್ಲಿ ಗಲಾಟೆಯಾಗಿದ್ದರೆ ಯಾರಿಂದ, ಹೇಗೆ ಎಂಬುದನ್ನು ವಿಚಾರಮಾಡಿ ತಪ್ಪಿದ್ದವರನ್ನು ಶಿಕ್ಷಿಸಿ ಮುಂದೆ ಅಂಥಾ ಮೀಟಿಂಗುಗಳಲ್ಲಿ ಗಲಭೆ ನಡೆಯದಂತೆ ಶಿಸ್ತನ್ನು ನೋಡಿಕೊಳ್ಳುವದು ಸರಕಾರದ ಕರ್ತವ್ಯವಲ್ಲವೆ ಬ್ರ

(೮ ನೇ ಪುಟಕ್ಕೆ ಮುಂದುವರಿದಿದೆ.

ದಿ ಟ್ರಾಪಿಕಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:— ಲಾಲ ಶಂಕರ್ ಲಾಲ್.

ಮುಖ್ಯ ಕಚೇರಿ:— ಹೊಸ ಡೆಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. — ಎಸ್. ಶ್ರೀನಿವಾಸ ಅಯ್ಯಂಗಾರ್

ಹಕೀಮ್ ಅಜಮಲಖಾನ್. — ಡಾ|| ಎಂ. ಎ. ಅನ್ಸಾರಿ.

Tranoacts:—Life, Fire, Motor and Marine.

ನಮ್ಮ ಹೊಸ ವಿಸ್ತಾರದ ಯೋಜನೆಯಲ್ಲಿ ಆಕರ್ಷಕ ಕಮಿಷನ್ ಮೇಲೆ ಏಜನ್ಸಿಗೆ ದಯವಿಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಆರ್ಗನೈಜರ್
ದಕ್ಷಿಣ ಕೊಡಗು, ಪೊನ್ನಂಪೇಟೆ.
ಅಥವಾ
ಯಂ. ಯು. ಅಚ್ಚಣ್ಣ,
ಏಜೆನ್ಸಿ ಸುಪರಿಂಟೆಂಡೆಂಟ್,
ಮಡಿಕೇರಿ, ಕೊಡಗು.

ಆರ್ಗನೈಜರ್
ಉತ್ತರ ಕೊಡಗು, ಮಡಿಕೇರಿ
ಅಥವಾ
ಎಂ. ಎ. ಬೆಳ್ಯಪ್ಪ,
ಬ್ರಾಂಚ್ ಸೆಕ್ರೆಟರಿ,
ಹಂಪನಕಟ್ಟಾ. ಮಂಗಳೂರು.

ಎಂಪೈರ್ ಆಫ್ ಇಂಡಿಯಾ

ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

48ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು.	ಒಟ್ಟು ಆದಾಯ	1,07,09,000	ರೂಪಾಯಿ
	ಚಾಲ್ತಿಯಿರುವ ವಿಮೆ	17,74,52,000	,,
	ಆಸ್ತಿ	6,67,60,000	,,
ಕಂಪೆನಿಯು ಆದಿಯಲ್ಲಿ ಕೊಟ್ಟ ಕ್ಲೈಮುಗಳು		8,83,62,000	,,

ಅಂಗ ಕಛೇರಿ
ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್,
ಕೆಂಪೇಗೌಡರಸ್ತೆ, ಬೆಂಗಳೂರು.

ಏಜೆನ್ಸಿ ಅರ್ಜಿಗಳನ್ನು ಸ್ವಾಗತಿಸಿದೆ.

ಪ್ರಧಾನ ಕಛೇರಿ
ಎಂಪೈರ್ ಆಫ್ ಇಂಡಿಯ
ಲೈಫ್ ಬಿಲ್ಡಿಂಗ್, ಬೊಂಬಾಯಿ.

ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್,

ಫ್ರೇಜರ್ ಪೇಟೆ.

ಬೇಕಾಗಿದ್ದಾರೆ.

ಕೊಡಗಿನ ಪ್ರತಿ ಗ್ರಾಮ ಮತ್ತು ಪಟ್ಟಣಗಳಲ್ಲಿ ಬಿದ್ದು ಮಣ್ಣುಪಾಲಾಗಿ ಹೋಗುತ್ತಿರುವ ಮೂಳೆಗಳನ್ನು ಶೇಖರಿಸಿಕೊಡಲು ಪ್ರತಿ ಹಳ್ಳಿ ಮತ್ತು ಪಟ್ಟಣಗಳಲ್ಲಿ ಏಜೆಂಟರುಗಳು ಬೇಕಾಗಿದ್ದಾರೆ. ಏಜೆಂಟರುಗಳಿಗೆ ಧಾರಾಳವಾದ ಕಮಿಷನ್ ಕೊಡಲಾಗುತ್ತದೆ.

ನೇಮಕವಾದ ಏಜೆಂಟರುಗಳು ಕಂಪೆನಿಯಿಂದ ಗೊತ್ತಾದ ಸ್ಥಳಕ್ಕೆ ಮೂಳೆಗಳನ್ನು ಸಾಗಿಸಿ ಕೊಟ್ಟಲ್ಲಿ ಮಣ ಒಂದರ ರೂ. 0–12–0 ಯಂತೆ ಕೊಡಲಾಗುವುದು.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಫ್ರೇಜರ್‌ಪೇಟೆ,
ತಾ: 32-9-49

ಕೆ. ಕೆ. ತಿಮ್ಮಯ್ಯ,
ಮೇನೇಜಿಂಗ್ ಡೈರೆಕ್ಟರ್.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್,

ಲಿಮಿಟೆಡ್, ಮಡಿಕೇರಿ.

ಕೋ.-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,65,000.
ಕ್ಷೇಮನಿಧಿ	ರೂ.	50,000.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಆಧಾರದ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ಕು ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುವು. ಫೈರ್ ಮತ್ತು ಮಾರ್ಗ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಕೊಂಡೊಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ,
ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C.
ಪ್ರೆಸಿಡೆಂಟ್ ಮತ್ತು ಖಜಾನ್ಚಿ.

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್ ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟೆಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. ·32 ಪಿಸ್ತೂಲುಗಳ (Pistols) ಕ್ರಯ ರೂ. 162 ರಿಂದ 246 ರ ವರೆಗೆ.
2. ·32 ರಿವಾಲ್ವರುಗಳ (Revolvers) ,, 262 ,, 274 ,,
3. 12ನೇ ನಂಬರಿನ ಜೋಡು ನಳಿಗೆಯ ಕೋವಿ (Webley & Scott) ಕ್ರಯ ರೂ. 1492/-
4. 12ನೇ ನಂಬರಿನ ಜೋಡು ನಳಿಗೆಯ ಕೋವಿ (Spanish make) ಕ್ರಯ ರೂ. 627–5–0
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4-10-0
6. 12, 16, 20ನೇ ನಂಬರು ಕೋವಿಗಳ ತೋಟೆಗಳೂ ಪಿಸ್ತೂಲು ಮತ್ತು ರಿವಾಲ್ವರುಗಳ ತೋಟೆಗಳೂ ಸಹ ದೊರೆಯುತ್ತವೆ.

• (ಅವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವದು)

62–14

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

CRESCENT

FOR PROTECTION AND SERVICE.

It is best to represent and insure with The CRESCENT Insurance Co., Ltd,

H: O: BOMBAY-] [*Established 1919.*

For particulars write to:

Sri B. A. Poovaiah
Organiser
Pollibetta, Coorg.

or

The Branch Manager,
22 B. Mahatma Gandhi Road,
Bangalore 1.

ಸುರಕ್ಷಿತವಾದ ಜೀವವಿಮೆ ಪಡೆಯಲು

ಕ್ರೆಸೆಂಟ್

ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.

(೭ನೇ ಪುಟದಿಂದ ಸಾಗಿದ್ದು)

ಟಿಷರ ಆಳಿಕೆಯ ಕಾಲದ ೧೪೪ನೇ ಸೆಕ್ಷನಿನ ಪ್ರಯೋಗವಲ್ಲ. ಸಂಯೋಜನ ವಾದಿಗಳ ಅಪ್ರದುತ್ತನೆನಿಸಿದ ಕರ್ನಾಟಕ ಪ್ರಾಂತೀಯ ಕಾಂಗ್ರೆಸು, ಅಂದೊಮ್ಮೆ ಕೊಡಗಿನ ಕಾಂಗ್ರೆಸ್ಸಿಗರು ಕೊಡಗಿನ ಭವಿಷ್ಯದ ಬಗ್ಗೆ ಚಳವಳಿ ಮಾಡಬಾರದೆಂದು ತನ್ನೊಂದು ಆಜ್ಞೆಯನ್ನು ವಿಧಿಸಿತ್ತು. ಆ ಪರಂಪರೆಗನುಗುಣವಾಗಿ ಬ್ರಿಟಿಷರ ಕಾಲಕ್ಕೆ (ಜಿ ಹುಳ್ಳಿಗರಿಂದು ಬದಿಕಿದ, ಸಂಪೂರ್ಣ ಕ. ಪ್ರಾ. ಕಾ. ಸಮಿತಿಯು ಅಪ್ಪಿಯಂದಲ್ಲಿ ನತಮಸ್ತಕರಾಗಿ ಕಾಂಗ್ರೆಸಿಗರ ಬಾಯಿಗೆ ಬೀಗ ಹಾಕಿದುದನ್ನು ಸ್ವಾಗತಿಸಿದ ಜನರು ಇಂದು ೧೪೪ನೇ ಸೆಕ್ಷನು ಜಾರಿಯಲ್ಲಿ ಬರಬೇಕೆಂದು ಆಶಿಸಿದರೆ ಆಶ್ಚರ್ಯವಲ್ಲ. ಪಾರತಂತ್ರ್ಯದ ದುರ್ಗಂಧ ಕೋಣೆಯಲ್ಲಿ ಬದುಕಿದವರು ಹೊರಗಿನ ಸ್ವತಂತ್ರ ಗಾಳಿಯ ಬಿರುಸಿಗೆ ಉಸಿರುಕಟ್ಟಬೇಕಾದುದು ವಾಸ್ತವ ನಿರಂಕುಶವೃತ್ತಿಯವರಿಗೆ ಜನಾಭಿಪ್ರಾಯವೆಂದರೆ ಕಂಗಣ್ಣೇ ಅಲ್ಲವೆ? ಆದ್ದರಿಂದಲೇ ಜನಾಭಿಪ್ರಾಯ ಕೆಗಿಯ ದೇಶದ ಭವಿಷ್ಯ ನಿರ್ಣಯವೂ ಹಬೇಕೆಂದು ಇವರು ವಾದಿಸ ಬೇಕ! ಆದರೂ ಸ್ವತಂತ್ರ ದೇಶದಲ್ಲಿ ಜನತೆಯ ಬಾಯಿಗೆ ಬೀಗ ಹಾಕಲು ಅಂಗಲಾ ... ನಿಮ್ಮ ಸಂಪಾದಕರೂ, ಆ ... ಪತ್ರಿಕೆಯೂ ... ಭಗವಂತನ ಕೃಪೆಯಿಂದ ಚಿರಂಜೀವ ಬಾಳಬೇಕು.

ವ್ಯಕ್ತಿದೂಷಣೆಯು ಕೇವಲ ಕೀಳುತನದ ಅನ್ಯಾಯದ ಟೀಕೆಯಾದ ಪದು ನನ್ನ ಕೆಲಸವಲ್ಲ. ನನ್ನ ಲೇಖನಿಗೆ ಅದಕ್ಕಿಂತಾ ಉತ್ತಮ ಕೆಲಸವಿದೆ. ಕಾಸರಗೋಡಿನ ಹೆಸರು ನೀವು ಹೇಳಿದ್ದು ಉಚಿತವೇ! ಹಿಂದೂ ಸಂಸ್ಕಾರವನ್ನು ನಾನಾ ರೀತಿಯಲ್ಲಿ ತಿಳಿಸಿ ಪ್ರಸಿದ್ಧಗೊಳಿಸಿದ ಕಾಸರಗೋಡಿನ ದಾರಿಯನ್ನು ನೀವು ಅನುಸರಿಸಿದ್ದೀರೆಂದು ಹೇಳಿದರೆ ಸಹಿಸಿಕೊಳ್ಳಿರಿ. ನಿಮ್ಮ ಲೇಖನವು ಜವಾಬು ಕೊಡುವಷ್ಟು ಯೋಗ್ಯವೆಂದು ಭಾವಿಸಿ ಇದನ್ನು ಬರೆದಿಲ್ಲ. ಉತ್ತರ ಕೊಡಲೇ ಬೇಕೆಂಬ ಕೆಲವು ಮಿತ್ರರ ಒತ್ತಾಯಕ್ಕಾಗಿ ಈ ಲೇಖನ ಬರೆದಿರುವೆನು. ಪತ್ರಿಕೆಯು ಒಂದು ಪುಟ ಇದಕ್ಕಾಗಿ ವೆಚ್ಚವಾದುದಕ್ಕೆ ವ್ಯಸನಪಡುತ್ತೇನೆ.

Edited, Printed and Published by P. I. Bellinappa at 'Kodagu' Press, Mercara, for 'Kodagu' Ltd.

Reg. No. M. 1550.
'KODAGU' MERCARA. (Coorg).

ಕೊಡಗು

ಸಂಪಾದಕರು—ಬಿ. ಡಿ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0

ಸಂಪುಟ ೨೮ | ತಾರೀಕು ೩೦-೧೨-೧೯೪೯ನೇ ಶುಕ್ರವಾರ | ಸಂಚಿಕೆ ೩೧

ಖಗೋಳದಲ್ಲಿ

ಒಂದು ಕೌತುಕ.

ಲೇ:—ಶ್ರೀ ಜಿ. ಟಿ. ನಾರಾಯಣರಾವ್, ಎಂ. ಎ.

ಡಿಸಂಬರ್ ೨೨ರಲ್ಲಿ ಹಗಲು ಅತಿ ಚಿಕ್ಕದು, ರಾತ್ರಿ ಅತಿ ದೊಡ್ಡದು. ಜೂನ್ ೨೨ರಲ್ಲಿ ಇದರ ವಿರುದ್ಧ ಸ್ಥಿತಿಯು ನಮಗೆ ತಲೆದೋರುವುದು. ಆಗ ಹಗಲು ಅತಿ ದೊಡ್ಡದು, ರಾತ್ರಿ ಅತಿ ಚಿಕ್ಕದು. ಆದರೂ ಈ ವ್ಯತ್ಯಾಸಗಳು ನಮಗೆ ವಿಶೇಷವಾಗಿ ಅರಿವಾಗುವುದಿಲ್ಲ, ನಾವು ಉಷ್ಣವಲಯದಲ್ಲಿರುವುದರಿಂದ. ಒಂದು ಜ್ಯೋತಿಯಿಂದ ಸ್ವಲ್ಪ ದೂರದಲ್ಲಿ ಒಂದು ದೊಡ್ಡ ಗೋಲಕವನ್ನಿಡೋಣ. ಜ್ಯೋತಿಯೇ ಸೂರ್ಯನೆಂದೂ, ಗೋಲಕವೇ ಭೂಮಿಯೆಂದೂ ಊಹಿಸಬೇಕು. ಜ್ಯೋತಿಯ ಮತ್ತು ಗೋಲಕದ ಕೇಂದ್ರವನ್ನು ಸೇರಿಸುವ ಒಂದು ಸರಳ ರೇಖೆಯನ್ನೆಳೆಯೋಣ. ಈ ಸರಳರೇಖೆಯು ಗೋಲಕದ ಮೈಯನ್ನು ಸಂಧಿಸುವ ಪ್ರದೇಶದಲ್ಲಿ, ಅಥವಾ ಅದರ ಸಮೀಪದಲ್ಲಿ ಉಷ್ಣವಲಯದವರಾದ ನಾವಿದ್ದೇವೆ. ಜ್ಯೋತಿಗೆ ಅತಿ ಸಮೀಪವಾಗಿರುವುದರಿಂದ ನಮ್ಮ ಪ್ರದೇಶಕ್ಕೆ ಆ ಕಿರಣ [illegible]. ಈ ಜ್ಯೋತಿಯು ಸ್ಥಿರವಾಗಿ ನಿಂತಿಲ್ಲ. ಬೇರೆ ಹಲವು ಕಾರಣಗಳಿಂದ ಇದು ಸ್ವಲ್ಪ ಉತ್ತರಕ್ಕೂ ಅಷ್ಟೇ ದೂರ ದಕ್ಷಿಣಕ್ಕೂ ಚಲಿಸುವುದು. ನಮ್ಮಿಂದ ತುಂಬ ಉತ್ತರದಲ್ಲಿರುವವರಿಗೂ ದಕ್ಷಿಣದಲ್ಲಿರುವವರಿಗೂ ಇದರ ಪರಿಣಾಮ ವಿಶೇಷವಾಗಿ ತಿಳಿಯುವುದು.

ಉದಾಹರಣೆಗೆ ಮಡಿಕೇರಿಯ ಮೇಲೆ ಸೂರ್ಯನು ಸದಾ ಇರುವನೆಂದು ಊಹಿಸೋಣ. ಈ ಸೂರ್ಯನು ಒಂದು ವರ್ಷದಲ್ಲಿ ಒಂದು ಸಲ ವಿರಾಜಪೇಟೆಯ ಕಡೆಗೆ ಮತ್ತೊಂದು ಸಲ ಅದರ ವಿರುದ್ಧ ದಿಕ್ಕಿಗೆ ಚಲಿಸಲಿ. ಆದರೆ ಈ ಚಲನೆಯಿಂದ ಮಡಿಕೇರಿಯ ಜನಗೆ ವಿಶೇಷ ವ್ಯತ್ಯಾಸ ತೋರಿಬರುವುದಿಲ್ಲ. ವಿರಾಜಪೇಟೆಯವರಿಗೆ ಸೂರ್ಯನು ಅವರ ಕಡೆಗೆ ಬರಲಾರಂಭಿಸಿದಾಗ ಹಗಲು ಉದ್ದವಾಗುತ್ತಾ ಹೋಗುವುದು. ಕೊನೆಯಲ್ಲಿ ಕೆಲವು ದಿವಸ ನಿತ್ಯ ದಿವಾ ಆಗಬಹುದು. ಹಾಗೆಯೇ ಸೂರ್ಯನು ಅವರಿಂದ ದೂರ ಹೋದ ಹಾಗೆ ರಾತ್ರಿಯು ಏರುತ್ತಾ ಹೋಗಿ ಕೊನೆಯಲ್ಲಿ ನಿತ್ಯರಾತ್ರಿಯೂ ಸಂಭವಿಸಬಹುದು.

ಭೂಮಿಯು ಸೂರ್ಯನ ಸುತ್ತಲು ಅಂಡಾಕೃತಿಯ (ellipse) ಮಾರ್ಗದಲ್ಲಿ ತಿರುಗುತ್ತಿದೆ. ಸಮ ಭೂಮಿಯ ಮೇಲೆ ಎರಡು ಕಬ್ಬಿಣದ ಮೊಳೆಗಳನ್ನು ಹೊಡೆದು, ಅವುಗಳ ಅಂತರಕ್ಕಿಂತ ಹೆಚ್ಚು ಉದ್ದವಿರುವ ಒಂದು ನೂಲಿನ ಹಗ್ಗವನ್ನು ತೆಗೆದುಕೊಂಡು ಅದರ ಒಂದೊಂದು ತುದಿಯನ್ನು ಒಂದೊಂದು ಮೊಳೆಗೆ ಕಟ್ಟಬೇಕು. ಇನ್ನೊಂದು ಮೊಳೆಯನ್ನು ತೆಗೆದುಕೊಂಡು ಆ ಹಗ್ಗವನ್ನು ಬಿಗಿಯಾಗಿ ಎಳೆಯಬೇಕು. ಆಗ ಆ ಮೂರನೇ ಮೊಳೆಯು ಮೊದಲನೆರಡು ಮೊಳೆಗಳೊಡನೆ ಸೇರಿ ಒಂದು ತ್ರಿಭುಜವಾಗುವುದು. ಹಗ್ಗವು ಆ ತ್ರಿಭುಜದ ಎರಡು ಬಾಹುಗಳಾಗಬೇಕು. ಈ ರೀತಿ ಹಗ್ಗವನ್ನು ಬಿಗಿಯಾಗಿಯೇ ಹಿಡಿದು ಮೂರನೇ ಮೊಳೆಯನ್ನು ಚಲಿಸಬೇಕು. ಆಗ ಅದು ನೆಲದ ಮೇಲೆ ಒಂದು ರೇಖೆಯನ್ನು ಎಳೆಯುತ್ತದೆ. ಇಡೀ ಚಿತ್ರವನ್ನು ಬಿಡಿಸಿದರೆ ಅದು ಕೋಳಿ ಮೊಟ್ಟೆಯ ಆಕಾರವನ್ನು ಹೊಂದಿರುವುದು. ಈ ಚಿತ್ರಕ್ಕೆ ಅಂಡಾಕೃತಿ (ಅಥವಾ ದೀರ್ಘವೃತ್ತ) ಎಂದು ಹೆಸರು. ಮೊದಲಿನ ಎರಡು ಮೊಳೆಗಳಿಗೆ ನಾಭಿಗಳು (foci) ಎಂದು ಹೆಸರು. ಈ ನಾಭಿಗಳನ್ನು ಸೇರಿಸುವ ಸರಳ ರೇಖೆಯ ಮಧ್ಯಬಿಂದುವು ಅಂಡಾಕೃತಿಯ ಕೇಂದ್ರ. ಈ ರೇಖೆಗೆ ಮಹಾ ಅಕ್ಷ (major axis) ಎಂದು ಹೆಸರಿದೆ.

ಭೂಮಿಯ ವಾರ್ಷಿಕ ಯಾತ್ರಾಮಾರ್ಗ ಈ ಅಂಡಾಕೃತಿ, ಸೂರ್ಯನ ಸ್ಥಾನ ಒಂದು ನಾಭಿ (ಇನ್ನೊಂದು ನಾಭಿ ಶೂನ್ಯವಾಗಿ ಉಳಿಯುವುದು. ಆದರೆ ಈ ಅಂಡಾಕೃತಿಯ ಮಾರ್ಗದಲ್ಲಿ ಇಡೀ ಒಂದು ಕನ್ನಡಿಯ ದ್ವಾರಾ ಸೂರ್ಯಕಿರಣಗಳು ಪ್ರತಿಯೊಂದು ಭಾಗದಿಂದಲೂ ಪ್ರತಿಫಲಿತವಾಗಿ ಶೂನ್ಯನಾಭಿಯಲ್ಲಿ ಸಂಧಿಸುತ್ತವೆ. ಹೀಗೆ ಶೂನ್ಯನಾಭಿಯಲ್ಲಿ ಉಷ್ಣ, ಬೆಳಕು ಮುಂತಾದವುಗಳು ಇರುವವು. ಆದರೆ ಶೂನ್ಯನಾಭಿಯಲ್ಲಿರುವ ಸೂರ್ಯನು ಇರುತ್ತಿದ್ದನು!) ಭೂಮಿಗೂ ಸೂರ್ಯನಿಗೂ ಇರುವ ದೂರ ಭಿನ್ನ ಸಮಯಗಳಲ್ಲಿ ಭಿನ್ನವಾಗಿರುತ್ತದೆ. ಯಾವ ದಿವಸ ಯಾವ ಸಮಯದಲ್ಲಿಯೇ ಆಗಲಿ ಭೂಮಿಯು ಈ ಪಥದ ಯಾವ ಸ್ಥಳದಲ್ಲಿಯೇ ಇದೆಯೆಂದು ಖಂಡಿತವಾಗಿ ಹೇಳಲು ಗಣಿತದಿಂದ ಸಾಧ್ಯವಾಗುವುದು. ಜನವರಿ ೩ರಲ್ಲಿ ಭೂಮಿಯು ಸೂರ್ಯನಿಗೆ ಅತಿ ಸಮೀಪವಾಗಿದೆ. ಮಹಾ ಅಕ್ಷವು ಅಂಡಾಕೃತಿಯನ್ನು ಎರಡು ಬಿಂದುಗಳಲ್ಲಿ ಸಂಧಿಸುವುದಷ್ಟೆ. ಸೂರ್ಯನಿರುವ ನಾಭಿಯ ಸಮೀಪದ ಬಿಂದುವಿನಲ್ಲಿ (Perihelion) ಭೂಮಿಯು ಜನವರಿ ೩ರಲ್ಲಿರುವುದು; ಹಾಗೂ ಅತಿದೂರದ ಬಿಂದುವಿನಲ್ಲಿ (Aphelion) ಜುಲೈ ೩ರಲ್ಲಿರುವುದು. ಈ ತಾರೀಕುಗಳು ಸ್ವಲ್ಪ ಬದಲಾಗಬಹುದು. ಹಾಗೆಂದ ಮೇಲೆ ಸೂರ್ಯನಿಗೆ ನಾವು ಸಮೀಪವಿರುವಾಗ ಉಷ್ಣ ಹೆಚ್ಚು ಇರಬೇಕೆಂದೂ, ದೂರವಿರುವಾಗ ಚಳಿಯು ಹೆಚ್ಚು ಇರಬೇಕೆಂದೂ ನಾವು ಸ್ವಾಭಾವಿಕವಾಗಿ ಊಹಿಸುತ್ತೇವೆ. ಆದರೆ ನಿಜಸ್ಥಿತಿ ಹೀಗೆ ಇರುವುದಿಲ್ಲ, ಮಾತ್ರವಲ್ಲ, ಇದರ ವಿರುದ್ಧವೇ ಇದೆ. ಇದೊಂದು ಕೌತುಕದ ವಿಷಯ.

ಒಂದು ವರ್ಷದಲ್ಲಿ ದಿವಸದ ಉದ್ದವು ಹೆಚ್ಚು, ಕಡಿಮೆಯಾಗುತ್ತ ಇರುವುದು. ಉತ್ತರ ವಲಯಗಳಲ್ಲಿರುವವರಿಗೆ ಉತ್ತರಾಯಣದಲ್ಲಿ ಹಗಲು ಹೆಚ್ಚು, ದಕ್ಷಿಣಾಯನದಲ್ಲಿ ರಾತ್ರಿ ಹೆಚ್ಚು. ಈ ವ್ಯತ್ಯಾಸಗಳು ದೆಹಲಿ ಮುಂತಾದ ಉತ್ತರ ಪ್ರದೇಶಗಳಲ್ಲಿರುವವರಿಗೆ ತಿಳಿದಷ್ಟು ನಮಗೆ ತಿಳಿಯುವುದಿಲ್ಲ. ಹಿಂದೆ ಹೇಳಿದಂತೆ ಡಿಸಂಬರ್ ೨೨ರಲ್ಲಿ ನಮಗೆ ಹಗಲು ಅತಿ ಚಿಕ್ಕದು. ಡಿಸಂಬರಿನಿಂದ ಜನವರಿ ವರೆಗೆ ನಾವು ಸೂರ್ಯನಿಗೆ ಸಮೀಪ ಬರುತ್ತಾ ಇರುತ್ತೇವೆ. ಜನವರಿ ೩ರಲ್ಲಿ ಈ ದೂರ ಅತಿ ಕನಿಷ್ಠವಾಗುವುದು. ಆದರೂ ನಮಗೆ ಈ ಸಮಯದಲ್ಲಿ ಚಳಿಗಾಲವೇ ಇರುವುದು.

ಮೊದಲನೆಯದಾಗಿ ಸೂರ್ಯನಿಗೂ ನಮಗೂ ಇರುವ ದೂರದ ವ್ಯತ್ಯಾಸದಿಂದ ನಮಗೆ ಸಿಗುವ ಶಾಖದಲ್ಲಿ ಹೇಳತಕ್ಕಂಥಾ ಬದಲಾವಣೆಯಾಗುವುದಿಲ್ಲ. ಈ ದೂರವು ಬಹುಮಟ್ಟಿಗೆ ಸ್ಥಿರವಾಗಿಯೇ ಇರುವುದರಿಂದ ಭೂಮಿಯ ಮಾರ್ಗವು ವೃತ್ತದ ಪರಿಧಿಗೆ ಒಂದು ಮಾದರಿ [illegible] ಸಿಗುವ ಆಕೃತಿಯಲ್ಲಿದೆ. ಸ್ಥೂಲವಾಗಿ ಇದು ವೃತ್ತವೇ. ಸೂರ್ಯಸ್ಥಾನ ಇದರ ಕೇಂದ್ರವೇ. ನಮಗೆ ದೊರೆಯುವುದಾದರೊಂದು ದಿವಸ ಸೂರ್ಯನಿಂದ ಪಡೆಯುವ ಉಷ್ಣವು ಬೇರೆ ಎರಡು ಕಾರಣಗಳನ್ನು ಅವಲಂಬಿಸಿದೆ. (೧) ಸೂರ್ಯನು ಎಷ್ಟು ಹೊತ್ತು ಆ ದಿವಸ ಬೆಳಗುತ್ತಿರುತ್ತಾನೆ. (೨) ಸೂರ್ಯನು ಎಷ್ಟು ಎತ್ತರ ಮೇಲೇರಿರುತ್ತಾನೆ. ಸೂರ್ಯನಿಂದ ಬಿಸಿಲು ಬರುತ್ತಿರುವಾಗ, ಅಂದರೆ ಹಗಲು ಹೊತ್ತಿನಲ್ಲಿ ಮಾತ್ರ ನಮಗೆ ಶಾಖ ದೊರೆಯುವುದು ಎಂದು ಎಲ್ಲರಿಗೂ ತಿಳಿದಿದೆ. ಎರಡನೆಯ ಕಾರಣದ ವಿವರವು ಹೀಗೆ: ಸೂರ್ಯನು ಮಧ್ಯಾಹ್ನ ನೆತ್ತಿಯ ಮೇಲೆ (ಖಮಧ್ಯ, zenith) ಬಾರನಾದ್ದು ನಮಗಿಂತ ಉತ್ತರದಲ್ಲಿ ಅಥವಾ ದಕ್ಷಿಣದಲ್ಲಿ, ಮಾರಿಗ ಇದ್ದಾಗಿ ತಿಳಿಯುವುದು [illegible] (ಉತ್ತರ [illegible]) ನಾವು ಪೂರ್ವಾಭಿಮುಖವಾಗಿ ನಿಂತರೆ ಸೂರ್ಯನು ನಮ್ಮ ಸ್ವಲ್ಪ ಬಲಕ್ಕೋ ಎಡಕ್ಕೋ ಒಂದು ಕಡೆ ಉದಯಿಸಿ ಒಂದು ವಾಲಿಕೊಂಡಿರುವ ವೃತ್ತದಲ್ಲಿ ಚಲಿಸಿ ಮುಳುಗುತ್ತಾನೆ. ಆ ಸಮಯದಲ್ಲಿ ಅವನಿಂದ ಬರುವ ಕಿರಣಗಳೆಲ್ಲವೂ (ಶಾಖವೂ ಸಹ) ಓರೆಯಾಗಿ ನಮಗೆ ಬರುವುವು. ಹೀಗಾಗಿ ಉಷ್ಣವು ಪ್ರಖರವಾಗಿರುವುದಿಲ್ಲ. ಉದಾಹರಣೆಗೆ ಹಲವು ಕಿರಣಗಳ ಒಂದು ಗೊಂಚಲು ಲಂಬವಾಗಿ ನೆಲದ ಮೇಲೆ ಬಿದ್ದರೆ ಒಂದಿಷ್ಟು ಪ್ರದೇಶವನ್ನು ಬೆಳಗುತ್ತದೆ ಮತ್ತು ಕಾಯಿಸುತ್ತದೆ. ಅವೇ ಕಿರಣಗಳು ಓರೆಯಾಗಿ ನೆಲದ ಮೇಲೆ ಬಿದ್ದಲ್ಲಿ ಅವು ಹೆಚ್ಚು ಪ್ರದೇಶವನ್ನು ವ್ಯಾಪಿಸಬೇಕಾಗುವುದು. ಆದರೆ ಕಿರಣದ ಸಂಖ್ಯೆ, ಉಷ್ಣದ ಮೊತ್ತ ಏರಲಿಲ್ಲ. ಆದ್ದರಿಂದ ಮೊದಲಿದ್ದಷ್ಟೇ ಉಷ್ಣವು ಹೆಚ್ಚು ಪ್ರದೇಶವನ್ನು ಕಾಯಿಸಬೇಕು, ಅರ್ಥಾತ್ ಉಷ್ಣದ ಪ್ರಖರತೆಯು ಕಡಿಮೆಯಾಗುವುದು. ಇದೇ ಕಾರಣದಿಂದ ಬೆಳಗ್ಗೆ ಸಾಯಂಕಾಲ ಮಧ್ಯಾಹ್ನಕ್ಕಿಂತ ಶಾಖ ಕಡಿಮೆ.

ಡಿಸಂಬರ್ ೨೨ರ ಸಮಯದಲ್ಲಿ (ಚಳಿಗಾಲದಲ್ಲಿ) ಈ ಮೇಲಿನ ಎರಡು ಕಾರಣಗಳೂ ಸೇರಿ ನಮಗೆ, ನಿಜವಾಗಿ ನಾವೀಗ ಸೂರ್ಯನಿಗೆ ಸಮೀಪದಲ್ಲಿದ್ದರೂ, ಚಳಿಯನ್ನೇ ಉಂಟುಮಾಡುತ್ತವೆ. ಹಾಗೆಯೇ ಜೂನ ೨೨ರಲ್ಲಿ ನಾವು ಸೂರ್ಯನಿಂದ ದೂರದಲ್ಲಿದ್ದರೂ ನಮಗಾಗ ಸೆಕೆಗಾಲವಾಗಿರುವುದು. ಭೂಲೋಕದಲ್ಲಿರುವ ಎಲ್ಲಾ ಪ್ರದೇಶಗಳಿಗೂ ಹೀಗೆಯೇ ನಡೆಯುವುದಿಲ್ಲ. ಉಷ್ಣ ಮತ್ತು ಉತ್ತರ ವಲಯಗಳಲ್ಲಿ ಹೀಗಾಗುವುದು. ದಕ್ಷಿಣ ವಲಯದಲ್ಲಿ ನೀರಿನ ಅಂಶವೇ ಹೆಚ್ಚಾಗಿರುವುದರಿಂದ, ಅಲ್ಲಿಯೂ ಜನವಸತಿ ಕಡಿಮೆಯಾಗಿರುವುದರಿಂದ ಆ ವಿಷಯವನ್ನು ನಾವು ವಿಶೇಷವಾಗಿ ಚರ್ಚಿಸಬೇಕಾಗಿಲ್ಲ. ಅವರಿಗೆ ನಮ್ಮ ಚಳಿಗಾಲದಲ್ಲಿ ಸೆಕೆಗಾಲವೂ ನಮ್ಮ ಸೆಕೆಗಾಲದಲ್ಲಿ ಚಳಿಗಾಲವೂ ಇರುವವು. ಸ್ವಾಭಾವಿಕವಾಗಿ ತೋರುವುದಕ್ಕೆ [illegible] ದಿಲ್ಲದೂ ಆಗಿರುವುದು, ಆದರೆ [illegible] ಕಡಿಮೆಯಾಗುವುದು.

ಇಷ್ಟು ಹೇಳಿದ ಮೇಲೆ ಡಿಸಂಬರ್ ೨೨ ಅತೀ ಚಳಿಯ ದಿವಸವೇ? ಜೂನ್ ೨೨ ಅತೀ ಉಷ್ಣದ ದಿವಸವೇ? ಎಂಬ ಪ್ರಶ್ನೆಯು ಮೂಡುವುದು. ಹೀಗೂ ಇಲ್ಲ. ವಿಜ್ಞಾನವು ನಮ್ಮನ್ನು ಆಶ್ಚರ್ಯದಿಂದ ಆಶ್ಚರ್ಯಕ್ಕೆ ಒಯ್ಯುವುದು. ಅತೀ ಚಿಕ್ಕ ದಿವಸ ಅತಿ ಚಳಿಯ ದಿವಸವಲ್ಲ; ಅತೀ ಉದ್ದ ದಿವಸ ಅತೀ ಉಷ್ಣದ ದಿವಸವಲ್ಲ. [illegible] ಮೊದಲು ಭೂಮಿಯು ಉಷ್ಣವನ್ನು ಕಳೆದುಕೊಳ್ಳುತ್ತ ಇರುವುದು [illegible] ನಮಗೆ ದೊರೆ[illegible] ಉಷ್ಣ [illegible] (ಉ[illegible] – Radiation) [illegible] ಸೂರ್ಯನು ನಮಗಿಂತ [illegible] ನಮಗೆ ಪ್ರತಿ ದಿವಸವೂ [illegible] ಬೇರೆ ಧನಿಕರೋ, ಬೇಂಕುಗಳೋ [illegible] ದಿವಾಳಿಯಾಗಬೇಕು [illegible] ಡಿಸೆಂಬರ್ ೨೨ರಲ್ಲಿ ನಮಗೆ [illegible] ಬರುವ ಹಣವು ಅತಿ ಕಡಿಮೆ. ಒಂದನಿಂ

ದವಸಂದೆ ನಗವು ಹಣ ಸ್ವಲ್ಪ ಸ್ವಲ್ಪವಾಗಿ ಹೆಚ್ಚುತ್ತಾ ಬಂದರೂ ನಷ್ಟವು ಅಧಿಕವಾಗಿಯೇ ಇರುವುದರಿಂದ ಒಂದು ಸವತೆ ಬರಲು ಇನ್ನೂ ಕೆಲವು ದಿವಸಗಳು ಹಿಡಿಯುವುವು. ಆ ದಿವಸವು ಅತಿ ಶೀತವಾಗಿರುವುದು. (ಇದು ಜನವರಿಯಲ್ಲಿ ಬರುವುದು) ಅಂದಿನಿಂದ ಬಿಸಿಯೇರುತ್ತ ಹೋಗಿ ಜೂನ್ ೨೨ (ಅತಿ ಉದ್ದದ ದಿವಸ) ಅನಂತರ ಅತೀ ಉಷ್ಣದ ದಿವಸವು ಬರುವುವು. ಅಲೆಯ ಒಂದು ಹೊದು ಗ್ರಹಣವು ಎಳೆದು ಅದು ಕೆಳಗೆ ಹೋಗ ಬೇಗ ಚಳಿಯ ದಿವಸಗಳಿಂದೂ ಮೇಲೆ ಹೋಗುವಾಗ ಉಷ್ಣದ ದಿವಸಗಳಿಂದೂ ಊಹಿಸೋಣ. ಡಿಸೆಂಬರ್ ೨೨ರಲ್ಲಿ ಅಲೆಯು ಕೆಳಕ್ಕೆ ಬಿದ್ದಾಗಿಯೇ ಹೋಗುತ್ತಿರುತ್ತದೆ. ನವಗೆ ನಷ್ಟವೇ ಹೆಚ್ಚಾಗಿರುವುದರಿಂದ ಅದು ಮೇಲೆ ಏರಲು ಪ್ರಾರಂಭ ಮಾಡುವ ದಿವಸವೇ ಅತಿ ಚಳಿಯ ದಿವಸ. ಹೀಗೆಯೇ ಆ ಅಲೆಯು ಮೇಲೆ ಮೇಲೆ ಮೇಲೆ ಏರಿ ಕೆಳಗಿಳಿಯಲು ತೊಡಗುವ ದಿವಸ ಅತಿ ಉಷ್ಣದ ದಿವಸ. ಓಡುವ ಒಂದು ಉಗಿಬಂಡಿ ಬಿಂ ಒತ್ತಿದ ಗತಿಬಟ್ಟನೆ ನಿಲ್ಲುವದು, ಸ್ವಲ್ಪ ದೂರವಾದರೂ ಓಡಿ ಹೋಗಿ ನಿಲ್ಲುವದು. ಹೀಗೆಯೇ ಏರುತ್ತಿರುವ ಉಷ್ಣ ಸೂರ್ಯನು ಹಿಮ್ಮುಖನಾದೊಡನೆಯೇ ಇಳಿಯಲಾರಂಭಿಸುವುದಿಲ್ಲ. ಇದೇ ಉದಾಹರಣೆಯನ್ನು ವಿರುದ್ಧವಾಗಿ ಯೋಚಿಸಿದರೆ ಶೀತಕ್ಕೂ ಅನ್ವಯಿಸುವುದು.

ಇವು ಖಗೋಳ ಸಿದ್ಧಾಂತಗಳಿಂದ, ಪ್ರಯೋಗಗಳಿಂದ ತಿಳಿದು ಬರುವ ವಿಷಯ. ಆದರೆ ಭೌಗೋಲಿಕ ಕಾರಣಗಳಿಂದ ಇವುಗಳಲ್ಲಿ ವ್ಯತ್ಯಾಸವು ಬಂದೇ ಬರುವುದು. ಜೂನ್ ೨೨ರಲ್ಲಿ ಕೊಡಗಿನವರು ಮಳೆಗಳಿಯಿಂದ ನಡುಗುತ್ತಿರುತ್ತೇವೆ. ಜನವರಿಯಲ್ಲಿಯೂ ಮದ್ರಾಸ್, ಮಂಗಳೂರುಗಳಲ್ಲಿ ಸೆಕೆಯೇ ಪ್ರಧಾನವಾಗಿರುವುದು. ಇವೆಲ್ಲವುಗಳ ಸಮನ್ವಯತೆಯೇ ಪ್ರಾದೇಶಿಕ ಹವಾಮಾನ ತಪ್ಪು.

ಶ್ರೀಮದ್ ಭಗವದ್ಗೀತಾ

ತ್ರಿಕರಣ ಶುದ್ಧಿಯ ಜೀವನ.

(ಶ್ರೀ[illegible] ಆಶ್ರಮ ಇವರಿಂದ)

ನಿಷ್ಕಾಮ ಕರ್ಮದ ಬಹುಪರಿಚಯವನ್ನು ಕಳೆದ ಲೇಖನದಲ್ಲಿ ವಿವರಿಸಿದ್ದಾಯಿತು. ಮನುಷ್ಯನ ಜೀವನದಲ್ಲಿ ಮುಖ್ಯವಾದ ಮೂರು ಭಾಗಗಳಿವೆ. (೧) ಬಾಹ್ಯ ಕರ್ಮ, ಶಾರೀರಕವಾದುದು (೨) ಮಾತು (೩) ಮನಸ್ಸು. ಇದೇ ಕಾಯ, ವಾಕ್, ಮನಸ್ಸು ಎಂಬ ತ್ರಿಕರಣಗಳು.

ನಾವು ತ್ರಿಕರಣ ಶುದ್ಧಿಯಿಂದ ಜೀವನ ನಡೆಸಬೇಕು. ತ್ರಿಕರಣ ಶುದ್ಧಿ ಎಂದರೆ ಶುದ್ಧವಾದ ಬಾಹ್ಯ ಕರ್ಮ, ತನ್ನ ಸ್ವಧರ್ಮಾನುಸಾರವಾದುದು ಮೊದಲನೆಯದು; ನಮ್ಮ ಶುದ್ಧ ಬಾಹ್ಯ ಕರ್ಮಕ್ಕೆ ಅನುಗುಣವಾದ ಮಾತು ಎರಡನೆಯದು; ಇವುಗಳಿಗೆ ಅನುಗುಣವಾದ ಮನಸ್ಸು ಮೂರನೆಯದು; ಇವು ಮೂರೂ ಇರಬೇಕು.

ನಮ್ಮಿಂದ ನಡೆಯಬೇಕಾದ ಯಾವ ಕರ್ಮವೂ ಮೊದಲು ನಮ್ಮ ಮನಸ್ಸಿನಲ್ಲಿ ಆಗುತ್ತದೆ. ಶುದ್ಧವಾದ ಮನಸ್ಸಿದ್ದರೆ ಶುದ್ಧವಾದ ಕರ್ಮ ಮಾಡುತ್ತೇವೆ. ಆದ್ದರಿಂದ ನಾವು ಶುದ್ಧ ಮನಸ್ಕರಾಗಬೇಕು. ನಮ್ಮ ಮಾತು ಶುದ್ಧವಾಗಿರದ ಅನೇಕರಿಂದ ಬೈಗಳಸಿಕೊಂಡಿರಬಹುದು. ಬಾಯಲ್ಲಿ ಸಕ್ಕರೆ, ಕೈಯಲ್ಲಿ ಕೊಕ್ಕರೆಯಂಥಾ ಜೀವನದಿಂದ, ಬಾಳು ಹಾಳಾಗಬಹುದು. ನಮ್ಮ ಮಾತು ಮತ್ತು ಕೆಲಸಗಳು ಎಷ್ಟು ಶುದ್ಧವಾಗಿ ಕಂಡು ಬಂದರೂ, ಇವುಗಳಿಗಿಂತಲೂ ಮೊದಲು ಕರ್ಮ ಮಾಡಲು ಕಾರಣವಾದ ಮನಸ್ಸು ಶುದ್ಧವಿಲ್ಲವಿದ್ದರೆ, ನಮ್ಮ ಮಾತು ಮತ್ತು ಕೆಲಸಗಳಲ್ಲಿ ಶುದ್ಧತೆ ಉಂಟಾಗುವುದಿಲ್ಲ. ಮನಶ್ಶುದ್ಧಿ ಇಲ್ಲದ ಮಾನವನು ಮಾನ ಮರ್ಯಾದೆಯಿಂದ ಜೀವಿಸಲಾರ. ತನ್ನ ಮನಸ್ಸು ಹೇಗಿದೆ? ಅದರ ಗುಣಶೀಲಗಳೇನು? ಮನಸ್ಸಿನಲ್ಲಿ ಎಂಥ ಭಾವನೆಗಳು ಹುಟ್ಟುತ್ತವೆ? ಎಂದು ಮೊದಲಾಗಿ ನಾವು ನಮ್ಮ ಮನಸ್ಸನ್ನು ಪರೀಕ್ಷಿಸಬೇಕು. ಪರಿಶುದ್ಧವಾದ ಮನಸ್ಸಿಲ್ಲದಿದ್ದರೆ, ನಮ್ಮ ಕಾಯದ ಕಾರ್ಯಗಳು, ಬಾಯಿಯ ಮಾತುಗಳು ಅಬದ್ಧವಾಗಿ ಕಷ್ಟ ನಷ್ಟಗಳನ್ನು ಅನುಭವಿಸಬೇಕಾಗುತ್ತದೆ. ನಮ್ಮ ಮನಸ್ಸನ್ನು ಶುದ್ಧೀಕರಿಸಲು ಪ್ರಯತ್ನಪಡಬೇಕಾದದ್ದು ನಮ್ಮ ಮುಖ್ಯ ಕರ್ತವ್ಯವಾಗಿದೆ.

ಮಗುವು ಹೊಟ್ಟೆ ನೋವಿನಿಂದ ಅಳುತ್ತಿರುವಾಗ ಪ್ರೀತಿಯಿಂದ ತಾಯಿಯು ಅವನ ಬೆನ್ನನ್ನು ಸವರಿ ಸಮಾಧಾನ ಮಾಡಿದರೆ ಮಗುವು ಬಾಯಿ ಮುಚ್ಚಿಕೊಳ್ಳುತ್ತದೆ. ಅದರ ನೋವು ಮಾಯವಾಗುತ್ತದೆ. ಇದಕ್ಕೆ ಕಾರಣವಾದ ತಾಯಿಯ ಮನಸ್ಸು ನಿಷ್ಕಲ್ಮಷವಾದ [illegible] ಮಗುವಿಗಾಗಿ ತನ್ನ ಪ್ರಾಣವನ್ನೂ [illegible] ತ್ಯಾಗವು ತಾಯಿಯಲ್ಲಿದೆ. ಶುದ್ಧ ಮನಸ್ಸು ತಾಯಿಯಲ್ಲಿದೆ. ಅದರ ಪರಿಣಾಮವಾಗಿ ಮಗುವಿನ ನೋವು ಮಾಯವಾಗುತ್ತದೆ. ಬೇರೆಯವರು ಎಷ್ಟು ಸಮಾಧಾನ ಮಾಡಿದರೂ, ಔಷಧಿ ಹಚ್ಚಿದರೂ ಮಗುವಿಗೆ ನೋವು ಹೋಗಲಾರದು. ಶುದ್ಧ ಮನಸ್ಸಿನಿಂದ ಅದ್ಭುತ ಕಾರ್ಯವಾಗುತ್ತದೆ.

ರಾಮಾಯಣ ಯುದ್ಧದಲ್ಲಿ ವಾನರ ಸೈನ್ಯಗಳು ರಾಕ್ಷಸರೊಡನೆ ಹೋರಾಡಿ ಮೈಯಲ್ಲೆಲ್ಲಾ ಗಾಯಗಳಾಗಿ, ಮೂಳೆ ಮುರಿದುಕೊಂಡು ಬಂದರೆ, ಶುದ್ಧ ಮನಸ್ಕನಾದ ಶ್ರೀರಾಮನು, ಪ್ರೀತಿಯಿಂದ ಅವುಗಳ ಮೈಯನ್ನು ಸವರಿದರೆ ಸಾಕು, ಅವುಗಳ ಮೈನೋವು, ಗಾಯಗಳೆಲ್ಲಾ ಮಾಸಿಹೋಗುತ್ತಿದ್ದುವು. ಇದು ಶ್ರೀರಾಮಚಂದ್ರನಲ್ಲಿದ್ದ ತ್ರಿಕರಣ ಶುದ್ಧಿಯ ಪರಿಣಾಮ. ಶ್ರೀರಾಮಚಂದ್ರನು ಶುದ್ಧವಾದ ಮತ್ತು ನಿಷ್ಕಾಮವಾದ ಮನಸ್ಸಿನಿಂದ ಕೂಡಿದವನಾಗಿದ್ದನು. ಅವನಲ್ಲಿ ಅತುಳವಾದ ಪ್ರೀತಿಯೂ ತುಂಬಿತ್ತು. ಇದರ ಶಕ್ತಿಯಿಂದ ಪ್ರಚಂಡ ಪರಿಣಾಮವಾಯಿತು. ಬೇರೆ ಯಾರಾದರೂ ಆ ವಾನರಗಳ ಬೆನ್ನು ಸವರಿದ್ದರೆ ಅದು ಹಾಸ್ಯಾಸ್ಪದವಾದ ಒಂದು ನಾಟಕವಾಗುತ್ತಿತ್ತು. ಶುದ್ಧವಾದ ಮನಸ್ಸಿಲ್ಲದೆ ಯಾವ ಕಾರ್ಯ ಮಾಡಿದರೂ ಅದರ ಪರಿಣಾಮ ಸರಿಯಾಗುವುದಿಲ್ಲ.

ಹಾಗೆಯೇ 'ನಿಷ್ಕಾಮ ಕರ್ಮದಲ್ಲಿ' ಕರ್ಮಕ್ಕಿಂತಲೂ ನಿಷ್ಕಾಮಕ್ಕೇ ಹೆಚ್ಚು ಮಹತ್ವ. ನಿಷ್ಕಾಮತೆಯು ಮನಸ್ಸಿನ ಗುಣ. ಆದುದರಿಂದ ಮೊದಲು ನಮ್ಮ ಕರ್ಮದಲ್ಲಿ ನಿಷ್ಕಾಮದ ಮನಸ್ಸು ಇರಬೇಕು ಮತ್ತು ಅಂಥದೇ ಕರ್ಮವು ಆಗಬೇಕು. ಆಗಲೇ ನಿಜವಾದ ನಿಷ್ಕಾಮ ಕರ್ಮವಾಗುತ್ತದೆ. ದೇವರಿಗೆ ಅಭಿಷೇಕ ಪೂಜೆ, ನೈವೇದ್ಯ ಎಲ್ಲವನ್ನೂ ಮಾಡುತ್ತೇವೆ. ಇದರ ಜೊತೆಗೆ ಒಳಗೆ ಮನಸ್ಸಿನಲ್ಲಿ ದೇವರ ಚಿಂತೆ ಇಲ್ಲವಿದ್ದರೆ ಆ ಅಭಿಷೇಕವೇ ಮೊದಲಾದವುಗಳಿಂದ ಏನೂ ಫಲವಿಲ್ಲ. ನಿರಾಹಾರದಿಂದಿರುತ್ತೇವೆ. ಇದರಿಂದ ಮನಸ್ಸು ಸ್ಥಿರವಾಗಿ ದೇವರ ಕಡೆಗೇ ಇರಲಿ ಎಂದು. ಆದರೆ ಮನಸ್ಸಿನಲ್ಲಿ ಯಾವಾಗಲೂ ಊಟದ ಯೋಚನೆಯನ್ನೇ ಮಾಡುತ್ತಾ ಇದ್ದರೆ ಒಂದು ದೊಡ್ಡ ಸಮಾರಾಧನೆಯೇ ಮಾಡಿದಂತಾಯಿತು. ನಿರಾಹಾರದ ಫಲ ಸಿಕ್ಕುವುದಿಲ್ಲ. ದೇವರ ಎದುರಿಗೆ ಕೂತು ಪೂಜೆ ಮಾಡುವಾಗ ಮನಸ್ಸು ಊಟದ ಕಡೆಗಿದ್ದರೆ, ಉದರ ಪೋಷಣೆಯೇ ವಿನಹ ದೇವರ ಪೂಜೆಯಲ್ಲ.

ಮಕ್ಕಳನ್ನು ಶಿಕ್ಷಣಕ್ಕಾಗಿ ಆಶ್ರಮ, ಮಂದಿರಗಳಲ್ಲಿ ಸೇರಿಸುತ್ತಾರೆ. ಇಂಥ ಜಾಗಗಳಲ್ಲಿ ಸರಿಯಾದ ಶಿಕ್ಷಣ ದೊರೆತು ಮಕ್ಕಳು ಒಳ್ಳೆಯ ಮಾರ್ಗದಲ್ಲಿ ನಡೆಯಬೇಕೆಂದು ತಂದೆ ತಾಯಿಗಳ ಇಷ್ಟ. ಆಶ್ರಮಗಳಲ್ಲಿರುವ ತನಕ ಬೆಳಗ್ಗೆ ಏಳುತ್ತಾನೆ. ಅಲ್ಲಿ ಹೇಳಿಕೊಟ್ಟಂತೆಯೇ ನಡೆಯುತ್ತಾನೆ. ಅವನವನ ಕೆಲಸ ಅವನವನೇ ಮಾಡುತ್ತಾನೆ, ಕಾಫಿ ಕುಡಿಯುವುದು, ಕೆಟ್ಟ ಆಚಾರಗಳು ಯಾವುದೂ ಇರುವುದಿಲ್ಲ. ಆದರೆ ವಿದ್ಯಾಭ್ಯಾಸ ಮುಗಿದ ಮನೆಗೆ ಹಿಂದಿರುಗಿದನೆಂದರೆ ಮೊದಲಿನಂತೆಯೇ ೯ ಗಂಟೆಗೆ ಏಳುವುದು, ಎದ್ದರೆ ಕಾಫಿ ಕುಡಿಯುವ ಚಟ, ಸೇವಾಮೀತನ, ಸಿನಿಮಾ ನೋಡುವುದು ಇವೇ ಚೇಷ್ಟೆಗಳು ಮೊದಲಿನಂತೆಯೇ ಪ್ರಾರಂಭವಾಗುತ್ತವೆ. ಕೆಲವು ಮಕ್ಕಳು ನಾಲ್ಕು ದಿನ ಮನೆಗೆ ಹೋಗಿ ಆರಾಮವಾಗಿ ಇದ್ದು ಬರುತ್ತೇನೆಂದು ರಜ ಸಿಕ್ಕುವುದನ್ನೇ ಕಾದಿರುತ್ತಾರೆ. ಇದಕ್ಕೆ ಕಾರಣ ಒಂದೇ, ಅವನನ್ನು ಏನು ಮಾಡಬೇಕೆಂದು ಇದ್ದೇವೋ ಅದು ಅವನ ಮನಸ್ಸಿನಲ್ಲಿ ಆಗಿಲ್ಲ. ಮೊದಲು ಮನಸ್ಸಿನಲ್ಲಿ ಆಗಬೇಕು, ಆ ಮೇಲೆ ಕಾರ್ಯದಲ್ಲಿ. ಈಗಿನ ಬೋರ್ಡಿಂಗ ಗಳಲ್ಲಿಯೂ, ನಿಲಯಗಳಲ್ಲಿಯೂ, ಆ ಮನಸ್ಸಿನ ಶಿಕ್ಷೆಗೆ ಮೊದಲು ಪ್ರಾಧಾನ್ಯತೆ ಕೊಡಬೇಕು. ಮನಸ್ಸಿದ್ದರೆ ಕೆಲಸ ತನ್ನಷ್ಟಕ್ಕೇ ಆಗುತ್ತದೆ. ಮನಸ್ಸಿನಿಂದಲೇ ಮಾನವನು ಉದ್ಧಾರವಾಗುವುದು ಯಾ ಹಾಳಾಗುವುದಾಗಿದೆ. ಮನುಷ್ಯನಿಗೆ ಬಂಧಕ್ಕೂ ಮೋಕ್ಷಕ್ಕೂ ಮನಸ್ಸೇ ಕಾರಣವಾಗಿದೆ.

ಅಹಿಂಸೆಯು ಪರಮ ಧರ್ಮ. ಅಹಿಂಸಕನ ಮನಸ್ಸು ಅಹಿಂಸಕವಾಗಿರಬೇಕು. ಕತ್ತಿ, ಕೋವಿಯನ್ನು ಕೈಯಲ್ಲಿ ಹಿಡಿದು ಬಂದರೆ ಹಿಂಸೆ ಎನ್ನುವುದು ಪ್ರತ್ಯಕ್ಷವಾಗಿ ಕಾಣುತ್ತದೆ. ಆದರೆ ಇವುಗಳಿಲ್ಲದಿದ್ದರೆ ಅಹಿಂಸೆಯೆಂದು ಹೇಳಲಾಗುವುದಿಲ್ಲ. ಅವನ ಕರ್ಮವು ಹೊರಗಿನ ತೋರಿಕೆಗೆ ಅಹಿಂಸಕವಾಗಿದ್ದರೂ ಒಳಗೇ ಹಿಂಸಾವೃತ್ತಿಯವನಾಗಿರಬಹುದು. ನಾಲ್ಕು ಜನ ಕಳ್ಳರು ಕತ್ತಿ ಕೋವಿ ಹಿಡಿಯದೆ ಒಬ್ಬನ ಮನೆ ನುಗ್ಗಿ ಅವನನ್ನು ಹೆದರಿಸಿ ಮನೆಯನ್ನು ದೋಚಿಕೊಂಡು ಹೋದರೆ ಅದೂ ಹಿಂಸೆಯೇ. ಮಾತಿನಿಂದಲೇ ಒಬ್ಬನನ್ನು ಹಿಂಸೆಮಾಡಬಹುದು. ಮುಖ್ಯವಾದದು ಮನಸ್ಸು ಅದು ಅಹಿಂಸಕವಾಗಿರಬೇಕು. ಶಸ್ತ್ರ ಚಿಕಿತ್ಸೆ ಮಾಡುವ ವೈದ್ಯನ ಕೈಯಲ್ಲಿ ಸೂಜಿ, ಕತ್ತರಿ, ಚಾಕು ಇದ್ದರೂ, ಅವನು ಮನಸಾ ಅಹಿಂಸಕನು. ಅವನ ಕರ್ಮವೂ ಅಹಿಂಸಕವಾಗಿ ಕಾಣುತ್ತದೆ.

ಇವೆಲ್ಲವರ ಮುಖ್ಯ ಅಂಶವೇನೆಂದರೆ ನಮ್ಮ ಸ್ವಧರ್ಮಾಚರಣೆಗೆ ಶುದ್ಧ ಮನಸ್ಸು ಮುಖ್ಯವಾದುದು. ಅದು ಶುದ್ಧವಾಗಿದ್ದರೆ ಶುದ್ಧ ಜೀವನ ನಡೆಸಬಹುದು.

ಮನಸ್ಸಿನಂತೆಯೇ ಮಾತೂ ಶುದ್ಧವಾಗಿರಬೇಕು. ಮನಸ್ಸಿನಲ್ಲಿ ಏನಿದೆಯೋ ಅದು ಬಾಯಿಯಲ್ಲಿ ಬರಬೇಕು. ಬಾಯಿಯಿಂದ ಹೊರಡುವ ಮಾತು ಇನ್ನೊಬ್ಬರಿಗೆ ನೋವಾಗದಂತೆಯೂ, ಕಡಿಮೆಯಾಗದಂತೆಯೂ, ಹಿತವಾಗಿಯೂ, ನಯವಾಗಿಯೂ ಇರಬೇಕು. ಆಡುವ ಮಾತು ತನಗೂ ಮತ್ತು ಪರರಿಗೂ ಒಳ್ಳೆಯದನ್ನು ಮಾಡಬೇಕು. ವಾಕ್‌ಶುದ್ಧಿ ಇಲ್ಲದಿದ್ದರೆ ಕರ್ಮಶುದ್ಧಿ ಇರದು. 'ಮಾತೇ ನೋಕರಿಣವಾಗಿದ್ದರೆ, ಆದರೆ ಮನಸ್ಸು ಒಳ್ಳೇದು' ಎಂದರೆ ಆಗದು. ಆಡಬಾರದ ಮಾತಿನಿಂದ ಮಾಡಬಾರದ ಜಗಳಗಳಾಗಿವೆ. ಅಶುಭರ ಮಾತಿನಿಂದ ಪರಿಣಾಮವೂ ಕೆಡುತ್ತದೆ. 'ಮಾತು ಮನೆ ಕೆಡಿಸಿತು, ತೂತು ಒಲೆ ಕೆಡಿಸಿತು' ಎಂಬ ಗಾದೆಯಂತೆ ಮಾನವನ ಜೀವಿತವಾಗಿಬಿಡುತ್ತದೆ. 'ಮಾತು ಬಲ್ಲವನಿಗೆ ಜಗಳವಿಲ್ಲ, ಊಟ ಬಲ್ಲವನಿಗೆ ರೋಗವಿಲ್ಲ' ಎಂಬಂತೆ ಮಾತು ಮತ್ತು ಊಟ ಎಂಬ ಎರಡು ವಿಷಯಗಳಲ್ಲಿ ಮಾನವನಿಗೆ ಸರಿಯಾದ ತಿಳುವಳಿಕೆ ಇರಬೇಕಾಗುತ್ತದೆ. ಮೂಳೆ ಇಲ್ಲದ ನಾಲಿಗೆಯನ್ನು ಹೇಗೂ ಚಾಚಲೂಬಹುದು ಮಡಚಲೂಬಹುದು. ಆದ್ದರಿಂದ ನಾಲಿಗೆಯ ಉಪಯೋಗದಲ್ಲಿ ಅದರ ಪರಿಣಾಮವಿದೆ. ಮಾತಿನಿಂದ ಒಳ್ಳೆಯದೂ ಆಗುತ್ತದೆ, ಕೆಟ್ಟದ್ದೂ ಆಗುತ್ತದೆ. ಮಾತಾಡುವ ರೀತಿಯಿಂದ ಅದರ ಪ್ರಯೋಜನವನ್ನು ಹೊಂದಿಕೊಳ್ಳುವುದು ಅವರವರ ಜವಾಬ್ದಾರಿಯಾಗಿದೆ.

ಇನ್ನು ಬಾಹ್ಯ ಕರ್ಮ (ಶಾರೀರಕ ಕರ್ಮ) ವೂ ಶುದ್ಧವಾದದ್ದಾಗಿರಬೇಕು. ಇದರ ವಿಷಯ ಮೊದಲೇ ಹೇಳಲಾಗಿದೆ.

ಕಾಯಾ, ವಾಚಾ, ಮನಸಾ ಪೂರ್ಣ ಶುದ್ಧವಾದ ಕರ್ಮವೇ ನಿಜವಾದ ಕರ್ಮ ಇದರಿಂದಲೇ ನಮಗೆ ಮುಕ್ತಿ. ತ್ರಿಕರಣ ಶುದ್ಧಿಯಿಂದ ಈಶನ ಸೇವೆ ಗೈದು ಮುಕ್ತಿಗಳಿಸಬೇಕು. ಮನೋವಾಕ್ ಕಾಯಶುದ್ಧಿಯಿಂದ ಮಾನವನ ಶಕ್ತಿಯು ದೈವೀಕ ಶಕ್ತಿಗೆ ಮಾರ್ಪಡುತ್ತದೆ.

ಹರಟೆ.

ರಾಮರಾಜ್ಯ ಎಲ್ಲಿ?

ಲೇ:— 'ವಾಣಿ'

ನಮ್ಮ ಪುರಾಣಗಳು ದೇವಲೋಕದ ಮಾತನ್ನು ಪುಟ ಪುಟಗಳಲ್ಲಿಯೂ ಹೇಳುತ್ತವೆ. ರಾಜಕೀಯ ಧುರೀಣರು ರಾಮ ರಾಜ್ಯದ ಮಾತನ್ನೇ ಹೇಳುತ್ತಿದ್ದಾರೆ. ಧಾರ್ಮಿಕವಾದಿಗಳು ಸ್ವರ್ಗದ ಕಲ್ಪನೆಯದನ್ನು ಜನತೆಯ ಮುಂದಿಟ್ಟಿದ್ದಾರೆ. ಇಷ್ಟೆಲ್ಲ ಓದಿದ ನನಗೆ ಹೀಗೆ ಯೋಚನೆ ಆಯಿತು. ಎಲ್ಲಿದೆ ರಾಮ ರಾಜ್ಯ? ಎಲ್ಲಿದೆ ದೇವಲೋಕ? ಎಲ್ಲಿದೆ ಸ್ವರ್ಗ? ಸಾಧಾರಣ ಮಟ್ಟಿಗೆ ಖಗೋಳ ಶಾಸ್ತ್ರದ ಅರಿವಿರುವದರಿಂದ ಸ್ವರ್ಗವು ಆಕಾಶದಲ್ಲಿಲ್ಲವೆಂಬುದು ಗೊತ್ತಿದೆ. ಭೂಗೋಳದ ಅರಿವಿರುವದರಿಂದ ಇಂದು ಮಾನವನಿಗೆ ತಿಳಿದು ಬಂದಿರುವ ರಾಷ್ಟ್ರಗಳಲ್ಲಿ ಎಲ್ಲಿಯೂ ರಾಮರಾಜ್ಯ, ಸ್ವರ್ಗವಿರಲಾರದೆಂದೇ ನನ್ನ ಭಾವನೆ. ಏಕೆಂದರೆ ರಾಮರಾಜ್ಯ, ದೇವಲೋಕ ಎಂಬುದು ಹೆಚ್ಚಾಗಿ ಭಾರತೀಯರ ಕಲ್ಪನೆ. ಹಿಮಾಲಯದ ತಪ್ಪಲಿನಲ್ಲಿ ಕೈಲಾಸವಿರುವದೆಂದು ನಂಬಿದಂತೆ ಸ್ವರ್ಗವಾದರೂ ಕೂಡ ಇರುವುದಾದರೆ ಭರತಖಂಡದಲ್ಲೇ ಇರಬೇಕೆಂದು ನನ್ನ ನಂಬಿಕೆ! ಆದ್ದರಿಂದ ಭರತಖಂಡದ ಮೂಲೆ ಮೂಲೆಯನ್ನು ಹುಡುಕಿ ನೋಡಬೇಕೆಂದೆನಿಸಿತು.

ಆಧುನಿಕ ಯುಗದವನಾದ ನಾನು ಪ್ರಥಮತಃ ನೋಡುವದು ನಗರಗಳನ್ನು ತಾನೆ? ರಾಮರಾಜ್ಯ ಇಲ್ಲವೇ ಸ್ವರ್ಗ ಎತ್ತರದ ಮಹಲುಗಳಲ್ಲಿ, ಸುಂದರ ಉದ್ಯಾನಗಳಲ್ಲಿ ಕಡೆಗೆ ಸಿನೆಮಾಗಳಲ್ಲಿ ಎಂಬ ಭಾವನೆಯಿಂದ ನಾನು ಅಲ್ಲೆಲ್ಲಾ ಹುಡುಕಿದೆನೆಂದರೆ ನಗಬೇಡಿರಿ. ದೆಹಲಿಯನ್ನೇ ಪ್ರಥಮ ನೋಡಬೇಕೆನಿಸಿತು. ನಮ್ಮ ಪುರಾಣದ ರಾಮನು ಅಲ್ಲಿ ಸಂಚರಿಸಿರಬೇಕು. ಪಾಂಡವರ ಆಟದ ಮೈದಾನವದು! ಆದರೆ ಅಲ್ಲಿ ರಾಮರಾಜ್ಯ ಇಲ್ಲವೇ ಸ್ವರ್ಗದ ಕಲ್ಪನೆಯಿಲ್ಲ. ಬಡಿಯಾರಿಯಾದರೆ ಸೀರೆಗಳೊಂದರೆ, ಹೊಟ್ಟೆ ಹಸಿದರೆ ಅನ್ನಕ್ಕೆ ಅಧ್ವಾನ. ಗಾಳಿಯನ್ನಾದರೂ ಸೇವಿಸುವ ದೆಂದರೆ ಅದೂ ಕಷ್ಟ. ಕಡೆಗೆ ಗಾಳಿಗೇ ಆದರೂ 'ಫ್ಯಾನ್' ಬೇಕು. ಎಲ್ಲವೂ ಕೃತ್ರಿಮ! ಹೀಗೆ ತಿರುಗುತ್ತಾ ಬಂದೆ. ಬಿರ್ಲಾ ಭವನ! ರಾಮ ರಾಜ್ಯದ ಕನಸು ಕಟ್ಟುತ್ತಿದ್ದ ಬಾಪುವನ್ನೇ ಕೊಲೆ ಮಾಡಿದ ದೆಹಲಿಯಲ್ಲಿ ರಾಮರಾಜ್ಯ ಹೇಗೆ?

ಬೊಂಬಾಯಿ ಕಲ್ಕತ್ತಾಗಳಂಥ ನಗರಗಳನ್ನು ತಿರುಗಿದೆ. ಎಲ್ಲವೂ ವ್ಯಾಪಾರ ಸೃಷ್ಟಿ. ದುಡ್ಡಿದ್ದರೆ ರಾಮರಾಜ್ಯ. ಇನ್ನೊಬ್ಬರ ಗೊಡವೆ ಅವರಿಗಿಲ್ಲ. ಜೇಬಿನಲ್ಲಿ ನಾಲ್ಕು ರೂಪಾಯಿ ಚಿಲಿಗುಟ್ಟಿದರೆ ನಾಲ್ಕು ಸ್ನೇಹಿತರು ಜೊತೆಯಲ್ಲಿ ತಿರುಗುತ್ತಾರೆ. ಅಲ್ಲೂ ಬಡವನ ಬವಣೆ ಗೋಳು. ಎತ್ತರದ ಅರಮನೆಗಳು ಇರಬಹುದು. ಆದರೆ ಬಡ ಜನರಿಗೆ ಆಕಾಶವೇ ಮಾಡು. ಧಣಿಯೇ ದಾಸಿಗೆ ಪತಿ. ಒಬ್ಬನ ಕಣ್ಣೀರೊರಸಿ ಇನ್ನೊಬ್ಬನ ಹಿತದಲ್ಲಿಯೇ ತನ್ನ ಹಿತವೆಂದು ಬಗೆದ ರಾಮರಾಜ್ಯ ಇದಾಗದು. ರಾಮರಾಜ್ಯದಲ್ಲಿ ರಾಮನ ನ್ಯಾಯವೆ ಮೆರೆಯನ್ನು ಕೇಳಿ ಅದಕ್ಕೆ ನ್ಯಾಯ ಒದಗಿಸಿಕೊಡಲಿಲ್ಲವೇ?

ಹಟ್ಟಿನ್ ತಿರುವಾಂಕೂರು ಭಾರತದಲ್ಲಿ ವಿದ್ಯಾ ದೃಷ್ಟಿಯಿಂದ ಅತೀ ಮುಂದರಿದ್ದವು. ಬಹುಶಃ ಅಲ್ಲಿ ರಾಮರಾಜ್ಯವಿರಬಹುದೇ? ಅವೇ ನಮ್ಮ ಪುರಾಣಗಳ ಕಲ್ಪನೆಯ ದೇವಲೋಕವಾಗಿರಬಹುದೇ ಎಂದು ಅಲ್ಲಿಗೆ ಒಂದೆ ಪಾಸ್, ಅಲ್ಲಿಯ ಜನಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಜನಸಂಖ್ಯೆ. ಪದವೀಧರರಿಗೆ ಉಣ್ಣಲು ಬಳಸಲು ಇಲ್ಲ. ಮಾಡಲು ಕೆಲಸಕ್ಕಾಗಿ ಮಂದಿ ಬಂದರೂ ಕೊಡುವ ಧಣಿಯ ಕೆಲಸ ಕೊಡಬೇಕಲ್ಲ! ಹೀಗೆ ಜನರ ಹೊರವಣಿಗೆ ಹೊರಟಿತು. ಕೆಲಸ ಹುಡುಕುತ್ತಾ ತಂಡ ಹೊರಟಿತು! ಇವರಲ್ಲಿ ಹಲವರು ದೇವಲೋಕದ ಮಾತಿರಲಿ; ದೇವರೇ ಇಲ್ಲವೆನ್ನುವ ಕಮ್ಯೂನಿಸ್ಟರ ಪ್ರಭಾವಕ್ಕೆ ಬಿದ್ದಿದ್ದರು.

ಹತ್ತಿರದಲ್ಲಿಯೇ ಕಲ್ಪವೃಕ್ಷದ ನಾಡು. ಮಲೆಯಾಳ. ಆದರೆ ಅಲ್ಲಿಯೂ ಸುಖಶಾಂತಿ ಇಲ್ಲ. ರಾಮರಾಜ್ಯದ ಸುಳಿವಿಲ್ಲ. ಜನರು ಕೂಲಿಗಾಗಿ ಅಲ್ಲಿಂದಿತ್ತ ಓಡುತ್ತಾರೆ. ಉಡಲು ಬಟ್ಟೆ, ಉಣ್ಣಲು ಅನ್ನ ದೊರೆಯದ ಭಾಗವನ್ನು ರಾಮರಾಜ್ಯವೆಂದು ಹೇಗೆನ್ನೋಣ?

ಸಾಗರ ಬದಿಯಿಂದ ಹಿಡಿದು ಹಿಮಾಲಯದ ವರೆಗೆ ಪಶ್ಚಿಮದ ಒಂದು ಕಡೆಯಿಂದ ಪೂರ್ವದ ಕೊನೆಯವರೆಗೆ ಹುಡುಕಿದೆ. ಪ್ರಸಿದ್ಧ ದೇವಾಲಯಗಳನ್ನು, ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿದೆ. ಕಾಶಿ, ಪ್ರಯಾಗ, ಜಗನ್ನಾಥ, ಎಲ್ಲೆಡೆ ನೋಡಿದ ರಾಮರಾಜ್ಯ ಸ್ವರ್ಗವೆಂಬುದು ಕೇವಲ ಕಲ್ಪನೆ. ದೇವಲೋಕ ಎಂಬುದು ಭ್ರಾಂತಿ ಎಂಬ ನಿರ್ಧಾರಕ್ಕೆ ಬರುವವನ. ಅಷ್ಟರಲ್ಲಿ ದೆಹಲಿಯಿಂದ ವಾಣಿಯೊಂದು ಕೇಳಿತು. ಯಾರ ಮಾತು ಎಂದು ನೋಡಿದರೆ ಭಾರತದ ಗೃಹಮಂತ್ರಿ ಸರ್ದಾರ್ ಪಟೇಲರು! ಮಾತು ಕಡಿಮೆ, ಹೆಚ್ಚು ಕೃತಿಯ ಇವರು ಸ್ಪಷ್ಟವಾಗಿ ಹೇಳಿದರು 'ರಾಮರಾಜ್ಯ' ಇದ್ದರೆ ಅದು ಕೊಡಗಿನಲ್ಲಿ' ಎಂದು.

ನನಗೆ ಆಶ್ಚರ್ಯವಾಯಿತು. ಕಿರು ಆಶೆಯೊಂದು ಚಿಗುರಿತು. ಕೊಡಗನ್ನು ನೋಡಬೇಕೆನಿಸಿತು. ರಾಮರಾಜ್ಯದ ಸೊಬಗನ್ನು ಅರಿಯಬೇಕೆನಿಸಿತು. ಕೊಡಗಿಗೆ ಬಂದೆ. ಬಿಸಿಲಿನ ಝಳದಲ್ಲಿ ಬೆಂದ ನನ್ನ ಮೈಗೆ ತಂಗಾಳಿ ಬೀಸಿ ಬಂದಂತಾಯಿತು. ತಂಪು ಪ್ರದೇಶ. ಮರಗಿಡಗಳು ಹುಲುಸಾಗಿ ಬೆಳೆದು ಕಣ್ಣಿಗೆ ಆನಂದವನ್ನು ಕೊಡುತ್ತವೆ. ಕಾಡಿನ ಪ್ರಾಣಿಗಳು, ಪಕ್ಷಿಗಳೂ ನಿರ್ವಿಕಾರ ದೃಷ್ಟಿಯಿಂದ ಚಲಿಸುತ್ತವೆ. ಹಾಡುತ್ತವೆ. ಎಲ್ಲಾ ಗಾಬರಿ ಇಲ್ಲ. ನನಗೆ ಶಕುಂತಳೆಯ ಆಶ್ರಮದಲ್ಲಿ ಕಾಳಿದಾಸನು ವರ್ಣಿಸಿದ ಕಣ್ವರ ಆಶ್ರಮದ ನೆನಪು ಆಗದಿರಲಿಲ್ಲ. ಇದೇ ಹಿಂದೂದೇಶದಲ್ಲಿ ಅಲೆದು ಸುಸ್ತಾದ ನನಗೆ ಕಾಲ್ತೊಳೆಯಲು ನೀರು ಕೊಟ್ಟು, ಹೊಟ್ಟೆತುಂಬ ಉಣಬಡಿಸಿದ ಜನರೆಂದರೆ ಇಲ್ಲಿಯವರೇ. ನೋಡಲು ಆನಂದವಾದ ದೇಶ. ಹೊಟ್ಟೆಗೆ ಗಾಬರಿಪಡಬೇಕಾಗಿಲ್ಲ. ನನಗೆ ಕೆಲವು ದಿನ ಇಲ್ಲೇ ಇರೋಣವೆನಿಸಿತು. ಇಲ್ಲಿಯ ಜನರ ರೀತಿ ನೀತಿ, ರಾಜಕೀಯ ದೃಷ್ಟಿ, ಆರ್ಥಿಕ ಸ್ಥಿತಿಗಳನ್ನು ನೋಡೋಣವೆನಿಸಿತು. ಪರೀಕ್ಷಿಸುತ್ತಿದ್ದಂತೆಯೇ ಸರ್ದಾರ್ ಪಟೇಲರು ಹೇಳಿದ ಮಾತಿನ ನೆನಪಾಗದಿರಲಿಲ್ಲ. ಕೊಡಗು ಸುಖಶಾಂತಿಯ ನಾಡು. ಕೊಲೆ ಕೊಲೆಗಳ ಸುಳಿವಿಲ್ಲ. ಇತ್ತಲಾಗಿ ಕೆಲವರು ನೆರೆಹೊರೆಯ ಪ್ರಾಂತದ ಜನರ ತಳಕ್ಕೆ ಕಾಲಿತ್ತಿದ್ದರೂ ಗಿದ್ದಾರೆ ಎಂಬ ಮಾತು ಅಕ್ಷರಶಃ ನಿಜವೆಂದು ತೋರಿತು.

ಕೊಡಗಿನಲ್ಲಿ ನ್ಯೂನತೆ ಇಲ್ಲವೆಂದಲ್ಲ. ರಾಮನ ರಾಮರಾಜ್ಯ ಜಗತ್ತಿನಲ್ಲಿ ಎಲ್ಲಿಯೂ ಇಲ್ಲ; ಬಾಪುವಿನ ಕಲ್ಪನೆಯ ರಾಮರಾಜ್ಯ ಎಲ್ಲಿಯೂ ಇರಲಿಕ್ಕಿಲ್ಲ. ಕೊಡಗಿನಲ್ಲಿ ಪಕ್ಷ ರಾಜಕೀಯ, ದ್ವೇಷ, ಸ್ಪರ್ಧೆ, ಅನ್ಯಾಯಗಳು ನಡೆಯುತ್ತಿವೆ. ದೊಡ್ಡ ಪರಿಣಾಮಗಳಿಲ್ಲದಿದ್ದರೂ ಲಂಚ ಲಾಭ ಬಡತನ, ಇಲ್ಲಿಯೂ ಇದೆ. ಜೀವನ ಬ್ರಾಂದಿ ಸರಾಯಿ, ಜೂಜು ಬ್ಲಾಕ್ ಮಾರ್ಕೆಟ್ ಉದ್ಯೋಗಗಳು ಇಲ್ಲಿಯೂ ಇದ್ದಾರೆ. ಆದರೂ ಇಲ್ಲಿಯ ಸ್ಥಿತಿ ಇತರ ಭಾಗಗಳಂತಾಗಲಿಲ್ಲ. ಭಾರತ ಖಂಡವನ್ನು ನಿರಿಕ್ಷಿಸಿದ ಮೇಲೆ ಎಂದು ಭಾವಿಸಿದರೆ ಕೊಡಗು ಚಕ್ರವರ್ತಿಯಂತೆ ಹೊಳೆಯುತ್ತಿದೆ.

ಕೊಡಗು ಇಂದು ರಾಮರಾಜ್ಯವೆಂದು ಹೇಳಿದ ಸರ್ದಾರರ ಮಾತಿನಲ್ಲಿ ಉತ್ಪ್ರೇಕ್ಷೆ ಇರಬಹುದು. ಆದರೆ ರಾಮರಾಜ್ಯದ ಗುಣಗಳಿವೆ. ಎಲ್ಲಾ ಗುಣಗಳನ್ನೂ ಕೊಡಗು ಪಡೆದಿದೆ. ಭಾರತದ ಇಂದಿನ ಅವ್ಯವಸ್ಥೆಯ ಹಿನ್ನೆಲೆಯಲ್ಲಿ ಕೊಡಗನ್ನು ರಾಮರಾಜ್ಯವೆನ್ನುವದು ಉತ್ಪ್ರೇಕ್ಷೆಯಾದರೂ ತಪ್ಪಲ್ಲ.

ಒಂದೆಡೆ ನಿಲ್ಲದೆ ಸಂಚರಿಸುವ ನಾನು ನನಗೆ ತಿಳಿದ ದೇಶಗಳ ವರೆಗೆ ಕೊಡಗಿನಲ್ಲಿ ನಿಂತೆ. ಇಂದೂ ಕೂಡ ಹೋಗಮನಸ್ಸಿಲ್ಲ. ಜೀವನದಲ್ಲಿ ವಿಪರೀತ ಕಷ್ಟಗಳನ್ನನುಭವಿಸಿದ, ಭಾರತ ವಿಶಾಲ ಮಾತೃ ಕಣ್ಣೀರಿನ ನನಗೆ ಜಗತ್ತಿನಲ್ಲಿ ಎಲ್ಲಿಯಾದರೂ ಸ್ವರ್ಗ, ದೇವಲೋಕದಂಥ ರಾಮರಾಜ್ಯವಾದರೆ ಅದು ಕೊಡಗಿನಲ್ಲಿಯೇ ಎನಿಸಿತು. ಆದರೆ ಕೊಡಗನ್ನು ನಿಜವಾದ ರಾಮರಾಜ್ಯವನ್ನಾಗಿ ಸಾಧ್ಯತೆ ಇದೆ. ಇದನ್ನು ಸಾಧಿಸುವ ಜವಾಬ್ದಾರಿ ಮಾತ್ರ ಇಲ್ಲಿಯ ಜನರ ಮೇಲಿದೆ. ಬಾಪುವಿನ ಕಲ್ಪನೆಯ ರಾಮರಾಜ್ಯ ಇದಾಗಬೇಕು. ಅದಕ್ಕಿರುವ ಪಥವನ್ನು ಅವರು ತೋರಿಸಿದ್ದಾರೆ. ಆ ಪಥದಲ್ಲಿ ನಡೆದು ರಾಮರಾಜ್ಯ ನೋಡಲು ನಾನು ಇದ ನೋಡಬಯಸುವೆನು. ಮಹಾತ್ಮರ ಆ ದೇವಪಥವನ್ನು ಹಿಡಿದು ಕಾರ್ಯವೆಸಗಿ ಕೊಡಗು ರಾಮರಾಜ್ಯವಾಗಲಿ.

ಭಾರತದ ಅಧ್ಯಕ್ಷ ಪದವಿ.

ಹೊಸ ರಾಜ್ಯಾಂಗ ಘಟನೆ ಇದೇ ಬರುವ ಜನವರಿ ತಾರೀಕು ೨೬ನೇ ಸ್ವತಂತ್ರ ದಿನದಲ್ಲಿ ಜಾರಿಗೆ ತರಲಾಗುವುದು.

ಅಲ್ಲಿಂದ ಮುಂದೆ ನಮ್ಮ ಘಟನಾ ಸಮಿತಿಯೇ ಮುಂದಿನ ಚುನಾವಣೆಗಳ ತನಕ ನಮ್ಮ ಪಾರ್ಲಿಮೆಂಟ್ ಅಂದರೆ ಕೇಂದ್ರ ಶಾಸನ ಸಭೆಯಾಗಿ ಉಳಿಯುವುದು.

ಕೇಂದ್ರ ಮತ್ತು ಪ್ರಾಂತೀಯ ಶಾಸನ ಸಭೆ ಎರಡರಲ್ಲಿಯೂ ಸದಸ್ಯರಾಗಿ ಉಳ್ಳವರು ಕೇಂದ್ರ ಸಭೆಯ ಸದಸ್ಯತನ ಕಳೆದುಕೊಳ್ಳುವರು. ಇವರ ಸ್ಥಾನಗಳಿಗೆ ಪ್ರಾಂತೀಕ ಶಾಸನ ಸಭೆಗಳು ಹೊಸ ಸದಸ್ಯರನ್ನು ಆರಿಸುವರು. ಹೀಗೆ ಬರಿದಾದ ಸ್ಥಾನಗಳಿಗೆ ಹೊಸಬರನ್ನು ಚುನಾಯಿಸುವಾಗ ವ್ಯಕ್ತಿ ಸಂಬಂಧಿ ಪ್ರಮಾಣ ಪದ್ಧತಿ ಅವಲಂಬಿಸಲಿದ್ದಾರೆ. ಈ ಚುನಾವಣೆಗಳು ಇದೇ ಬರುವ ಜನವರಿ ತಾ. ೧೫ರ ಒಳಗೆ ನಡೆಯುವವು.

ಸಂಬಂಧಪಟ್ಟ ಪ್ರಾಂತೀಕ ಕಾಂಗ್ರೆಸ್ ಕಮಿಟಿಗಳೂ ಪ್ರಾಂತ್ಯದ ಶಾಸನ ಸಭೆಗಳಲ್ಲಿಯ ಕಾಂಗ್ರೆಸ್ ಪಕ್ಷವೂ ಸೇರಿ ಈ ಬಗ್ಗೆ ಉಮೇದ್ವಾರರನ್ನು ನೇಮಿಸುವರು.

ಆ ಬಳಿಕ ಜನವರಿ ತಾರೀಕು ೨೪ರಲ್ಲಿ ಭಾರತದ ಪ್ರಥಮ ಅಧ್ಯಕ್ಷರನ್ನು ಕೇಂದ್ರ ಶಾಸನ ಸಭೆಯಲ್ಲಿ ಆರಿಸುವ ಕಾರ್ಯಕ್ರಮ ನಡೆಯುವುದು.

ಆ ದಿನ ಆರಿಸಲ್ಪಡುವ ಅಧ್ಯಕ್ಷರು ಜನವರಿ ತಾ. ೨೬ರಲ್ಲಿ ಹೊಸ ರಾಜ್ಯಾಂಗ ಘಟನೆ ಜಾರಿಗೆ ಬರುವಾಗ ಗವರ್ನರ ಜನರಲರಿಂದ ಚಾರ್ಜು ವಹಿಸಿಕೊಳ್ಳುವರು.

ಈ ಅಧ್ಯಕ್ಷ ಪದವಿ ಯಾರ ಪಾಲಿಗೆ ಬಂದೀತು? ಘಟನಾ ಸಮಿತಿಯ ಅಧ್ಯಕ್ಷರಾಗಿ ನಡೆದ ಡಾ. ಬಾಬು ರಾಜೇಂದ್ರ ಪ್ರಸಾದರು ಅಥವಾ ಸ್ವತಂತ್ರ ಭಾರತದ ಪ್ರಥಮ ಗವರ್ನರ್ ಜನರಲಾಗಿ ನಡೆದ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರ್ಯರು ಇವರಿಬ್ಬರಲ್ಲೊಬ್ಬರನ್ನು ಈ ಪದವಿಗೆ ಆರಿಸಬಹುದೆಂದು ಊಹಿಸಬಹುದು.

ಇವರೊಳಗೆ ಯಾರೆಂಬ ಪ್ರಶ್ನೆ ಸದ್ಯಕ್ಕೆ ಅನಗತ್ಯ. ಇಬ್ಬರೂ ಈ ಪದವಿಗೆ ಅತ್ಯಂತ ಯೋಗ್ಯರಿದ್ದಾರೆಂಬುದು ನಿರ್ವಿವಾದದ ಸಂಗತಿ. ಕೇಂದ್ರ ಶಾಸನ ಸಭೆ ಏಕಮತದಿಂದ ಪ್ರಥಮ ಅಧ್ಯಕ್ಷರನ್ನು ಆರಿಸುವಂತಾದೀತೆಂದು ನಿರೀಕ್ಷಿಸುತ್ತೇವೆ.

ಪಠಾಣರಲ್ಲಿ ತೀವ್ರ ಅತೃಪ್ತಿ.

ಪಾಕಿಸ್ತಾನದ ಸರಕಾರದ ಧೋರಣೆಯಿಂದಾಗಿ ಪಾಕಿಸ್ತಾನದ ವಾಯುವ್ಯ ಗಡಿ ಪ್ರಾಂತ್ಯ ಹಾಗೂ ಗಡಿಯ ಬುಡಕಟ್ಟಿನವರ ಜನರಲ್ಲಿ ತೀವ್ರ ಅತೃಪ್ತಿ ಬೆಳೆಯುತ್ತಿದೆಯೆಂದು ಭಾರತದಲ್ಲಿಯ ಆಫಘಾನಿಸ್ಥಾನದ ರಾಯಭಾರಿ ಹೇಳಿದ್ದು, ಇದರ ಪರಿಣಾಮ ಪಾಕಿಸ್ತಾನದ ಅಸ್ತಿತ್ವಕ್ಕೆ ಪ್ರಸಂಗ ಬಂದೀತೆಂದು ಅವರು ಎಚ್ಚರಿಸಿದ್ದಾರೆ.

ಪಾಕಿಸ್ತಾನವು ಪಠಾಣರ ಹಕ್ಕುಗಳನ್ನು ಎತ್ತಿ ಹಿಡಿದೀತೆ? ಖಾನ್ ಅಬ್ದುಲ್ ಗಫಾರ್ ಖಾನರಂಥ ಪ್ರಮುಖರು ಸೆರೆಮನೆಗಳಲ್ಲಿ ಬಿದ್ದಿರುವಾಗ ಪಠಾಣ ಜನತೆ ಪಾಕಿಸ್ತಾನದ ಒಳಗೆ ಸ್ವತಂತ್ರರಾಗಿರಬಹುದೆನ್ನುವುದು ಸುಳ್ಳಾದೀತು ಎಂದು ಹೇಳಬಹುದು.

ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಪಠಾಣ ಸರಹದ್ದಿನ ಜನ ಇಂದು ಬಂಧನದಲ್ಲಿದ್ದಾರೆ. ಇದೀಗ ಭಾರತಕ್ಕೆ ದುಃಖವನ್ನುಂಟುಮಾಡುತ್ತಿದೆ.

ಕೊಡಗು

ತಾ. ೩೦-೧೨-೧೯೪೯ನೇ ಶುಕ್ರವಾರ

ಕೇಂದ್ರ ಪೋಲೀಸ್ ದಳ.

ಕೇಂದ್ರ ಪೋಲೀಸ್ ದಳವನ್ನು ಸ್ಥಾಪಿಸುವ ಬಗ್ಗೆ ಗೃಹ ಮಂತ್ರಿಯಾದ ಸರ್ದಾರ್ ಪಟೇಲರವರು ಒಂದು ಮಸೂದೆಯನ್ನು ಕೇಂದ್ರ ಶಾಸನ ಸಭೆಯ ಮುಂದೆ ಈ ತಾರೀಕು ೨೪ರಲ್ಲಿ ಮಂಡಿಸಿದರು. ಈ ವಿಚಾರವಾಗಿ ಮಾತಾಡುತ್ತಾ ಕೇಂದ್ರ ಸರಕಾರದ ಆಡಳಿತದಲ್ಲಿರುವ ಪೋಲೀಸ್ ಇಲಾಖೆಯನ್ನು ದಕ್ಷತೆಯಿಂದ ನಡೆಸಲು ಈ ನೆರೆ ಹೊರೆ ಪ್ರಾಂತ್ಯಗಳಿಂದ ದಕ್ಷ ಅಧಿಕಾರಿಗಳು ದೊರೆಯುತ್ತಿದ್ದರೆಂದೂ ಆದರೆ ಇತ್ತೀಚೆಗೆ ಅಂಥಾ ಅವಕಾಶವು ಕಡಿಮೆಯಾಗುತ್ತಿರುವದರಿಂದಲೂ ಒಂದೇ ಕಡೆ ಒಬ್ಬನೇ ಉದ್ಯೋಗಸ್ಥನು ದೀರ್ಘಕಾಲ ಇರುವದರಿಂದ ನ್ಯಾಯ ಶೀಲತೆಗೆ ಧಕ್ಕೆ ಬರುವ ಸಂಭವವಿದೆಯೆಂದೂ ಈ ದೃಷ್ಟಿಯಿಂದ ಚೀಫ್ ಕಮಿಷನರ್ ಪ್ರಾಂತಗಳೊಳಗೆ ಪೋಲೀಸ್ ಅಧಿಕಾರಿಗಳ ವರ್ಗಾವರ್ಗಿಗೆ ಅವಕಾಶ ಮಾಡುವದು ಆವಶ್ಯವೆಂದೂ ಈ ಉದ್ದೇಶದಿಂದಲೇ ಈ ಮಸೂದೆಯನ್ನು ತರಬೇಕಾಗಿದೆಯೆಂದೂ ಸರ್ದಾರರು ವಿವರಿಸಿದರು. ಈ ವಾದವನ್ನು ಎಲ್ಲರೂ ಒಪ್ಪಬೇಕಾಗಿದೆ.

ಸರ್ದಾರರು ಈ ಸಂಬಂಧ ಕೊಡಗಿನ ವಿಷಯ ಎತ್ತಿ ಹೇಳಿದಾಗ್ಯೂ ಇಲ್ಲಿ ಯಾವುದೇ ಕೊಲೆ ಪಾತಕ ಯಾ ಅವ್ಯವಸ್ಥೆಗಳು ಇಲ್ಲವೆಂದೂ ಹಿಂದೂ ದೇಶದಲ್ಲಿ ಕೊಡಗಿನಷ್ಟು ಸುಖದ ಯಾ ಶಾಂತಿ ಸ್ಥಳ ಬೇರೆಲ್ಲಿಯೂ ಇಲ್ಲವೆಂದೂ ಹೇಳಿದ ಅಪ್ರಮಾಣಿಕ ನಿಜವಾದ ಮಾತುಗಳು ಕೊಡಗಿನ ಚರಿತ್ರೆಯಲ್ಲಿ ಸುವರ್ಣಾಕ್ಷರಗಳಿಂದ ಕೆತ್ತಲ್ಪಡತಕ್ಕದ್ದಾಗಿದೆ. ಸ್ವಾರ್ಥದ ದೃಷ್ಟಿಯಿಂದಲೋ ಸತ್ತಾನ ಉದ್ದೇಶದಿಂದ ಕೆಲವು ಕೊಡಗಿನ ಜನಜೀವನಕ್ಕೆ ಮಸಿಬಳಿದು ಅಶಾಂತಿಯು ಹಬ್ಬಿದೆಯೆಂದು ಅನ್ನುತ್ತಿರುವ, ಈ ದೇಶದ ಶಾಂತಿ, ಅಶಾಂತಿಗಳ ನೈಜ ಚಿತ್ರವನ್ನು ಕೊಡಲು ಅಧಿಕಾರಿಯಾದ ಗೃಹಮಂತ್ರಿ ಸರ್ದಾರರ ಈ ಮಾತುಗಳನ್ನು ಕೇಳಿಯಾದರೂ ತಮ್ಮ ಹಿಡಿ ದುದ್ದೇಶದಿಂದ ಅಪಪ್ರಚಾರವನ್ನು ನಿಲ್ಲಿಸುವರೇ?

ಹಲವು ವರ್ಷಗಳ ಹಿಂದೆ ಕೊಡಗಿನ ಪೋಲೀಸ್ ಇಲಾಖೆಗೆ ಮೇಲಧಿಕಾರಿಗಳನ್ನು ಹೊರಗಿನಿಂದ ತರುವ ಪದ್ಧತಿ ಜಾರಿಯಲ್ಲಿತ್ತು. ಆದರೆ ಇತ್ತೀಚೆಗೆ ಹಾಗೆ ಹೊರಗಿನಿಂದ ತರಲು ಸಾಧ್ಯವಿಲ್ಲವೆಯೋ ಏನೋ ಇಲ್ಲಿಯ ಅನುಭವದ ಉದ್ಯೋಗಸ್ಥರನ್ನೇ ಆರಿಸಿ, ನಿವೃತ್ತರಾಗುವ ಕೆಲವು ವರ್ಷಗಳ ಮುಂಚೆ ಈ ಉದ್ಯೋಗಕ್ಕೆ ನೇಮಿಸಲಾಗುತ್ತಿತ್ತು. ಇಂಥವರು ಪೋಲೀಸು ಸುಪರಿಂಟೆಂಡೆಂಟರಾಗಿಯೇ ನಿವೃತ್ತರಾಗುತ್ತಿದ್ದರು. ಆದರೆ ಕೆಲವು ವರ್ಷಗಳಿಂದ ಕೆಲವು ಇಲಾಖೆಗಳಲ್ಲಿನ ಉದ್ಯೋಗಸ್ಥರನ್ನು ಈ ಉದ್ಯೋಗಕ್ಕೆ ನೇಮಿಸಿ ಅವರನ್ನು ಪುನಃ ಬೇರೆ ಇಲಾಖೆಯ ಮೇಲಿನ ಉದ್ಯೋಗಕ್ಕೆ ವರ್ಗಾಯಿಸುವ ಕ್ರಮವನ್ನು ಅನುಸರಿಸಲಾಗಿದೆ. ಇದರಿಂದ ದೇಶಕ್ಕೆ ಹಲವು ಹಿತಗಳೂ ಆಗಿವೆ.

ಇವುಗಳನ್ನೆಲ್ಲಾ ನಿವಾರಿಸಲು ಕೇಂದ್ರ ಸರಕಾರದ ಈಗಿನ ಮಸೂದೆಯು ಬಹು ಉಪಯುಕ್ತವಾಗಿದೆ. ಕೆಲವು ಸಮಯದ ಹಿಂದೆ ರಾಜ್ಯಘಟನಾ ಸಭೆಯ ಅಧ್ಯಕ್ಷರಿಂದ ನೇಮಿಸಲ್ಪಟ್ಟ ಚೀಫ್ ಕಮಿಷನರ್ ಪ್ರಾಂತಗಳ ಮಾದರಿ ಘಟನೆಯನ್ನು ಕುರಿತು ವರದಿ ಮಾಡಿದ ಎಡ್‌ಹಾಕ್ ಸಮಿತಿಯ ಸೂಚನೆಯನ್ನನುಸರಿಸಿ ಈ ಮಸೂದೆಯನ್ನು ತಯಾರಿಸಲಾಗಿದೆಯೆಂದು ತೋರುತ್ತದೆ. ಹೇಗೂ ಈ ಸಮಿತಿಯವರ ಸೂಚನೆಗಳನ್ನು ಇತರ ಇಲಾಖೆಗಳಲ್ಲೂ ಜಾರಿಗೆ ತರುವಂತೆ ಮಾಡಿದ್ದಾದರೆ ಕೊಡಗಿನಲ್ಲಿ ಇಂದು ಇರುವ ಒಂದು ಮುಖ್ಯವಾದ ಕೊರತೆ ಅರ್ಥಾತ್ ಗಜೆಟೆಡ್ ಉದ್ಯೋಗಸ್ಥರ ವರ್ಗಾವರ್ಗಿಯ ಅನಾನುಕೂಲತೆಯನ್ನು ನಿವಾರಿಸಿದಂತಾಗುವದು. ಕಾಲವು ಸರಿದಂತೆ ಈ ಅನುಕೂಲತೆಯು ಕೂಡ ಮಾಡಲ್ಪಡುವದೆಂದು ಆಶಿಸುತ್ತೇವೆ

ವರ್ತಮಾನ.

ತಾರೀಕು ೨೬-೧-೫೦ರಲ್ಲಿ ಭಾರತವನ್ನು 'ರಿಪಬ್ಲಿಕ್' ಎಂದು ಸಾರುವ ಕಾರಣ ಅದರ ಉದ್ಘಾಟನೆಯ ಮತ್ತು ದಿನಾಚರಣೆಯು ನಿವಿಶೇಷ ತಾ. ೨೬ನೆ ತ್ತಾರೀಖನ್ನು ರಜಾ ದಿನಗಳೆಂದು ಸಾರಲಾಗಿದೆ.

ಕೊಡಗಿನ ಗಡಿಯ ಅರ್ಧ ಮೈಲಿನ ದೂರದಲ್ಲಿರುವ ಅರಕಲಗೋಡು ತಾಲೋಕಿನ ಕೊಣನೂರ್‌ಹಳ್ಳಿ ಗ್ರಾಮದಲ್ಲಿ ದನಗಳ ದೊಡ್ಡ ರೋಗವಿದೆಯೆಂದು ಹಾಸನದ ವೆಟರ್ನರಿ ಡೈರೆಕ್ಟರರು ತಿಳಿಸಿರುವದರಿಂದ ಆ ಭಾಗದಿಂದ ಯಾರೂ ದನಗಳನ್ನು ತರಬಾರದಾಗಿಯೂ ಈ ಗಡಿ ಗ್ರಾಮಗಳಲ್ಲಿ ಈ ರೋಗ ಹರಡದಂತೆ ಎಚ್ಚರ ವಹಿಸಬೇಕಾಗಿದೆಯೆಂದೂ ಕೊಡಗು ಚೀಫ್ ವೆಟರ್ನರಿ ಅಧಿಕಾರಿಗಳು ತಿಳಿಸುತ್ತಾರೆ

ತಾ ೯-೧ ೧೯೫೦ನೇ ಸೋಮವಾರ ದಿನ ಪೊನ್ನಂಪೇಟೆ ಶಾಲಾ ಮೈದಾನದಲ್ಲಿ ದನಗಳ ಮತ್ತು ಕೋಳಿ ಹಂದಿಗಳ ಪ್ರದರ್ಶನವು ಕೊಡಗು ಚೀಫ್ ಕಮಿಷನರ ಅಧ್ಯಕ್ಷತೆಯಲ್ಲಿ ನಡೆಯುವದು.

ಇಂಡಿಯಾ ಸರಕಾರದ ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜ್ ಆಫೀಸರಾದ ಡ. ದಾಸ್ ಐ ಸಿ ಎಸ್. ಇವರು ತಾರೀಕು ೨೮ರಲ್ಲಿ ಮಡಿಕೇರಿ ಬಂದಿದ್ದರು. ಅವರಿಗೆ ಕೆಲವು ಅಧ್ಯಕ್ಷರು ಸೇರಿ ಒಂದು ಚಹ ಕೂಟವನ್ನು ಏರ್ಪಡಿಸಿದ್ದರು.

ಆರೋಗ್ಯ ಇಲಾಖೆಯ ಸಲಹೆಗಾರರಾದ ಶ್ರೀ ... ಸಿ ಮೆನನ್‌ರವರು ಕೊಡಗಿಗೆ ಬರುವದಿಲ್ಲವೆಂದು ತಿಳಿದು ಬಂದಿದೆ.

ಕೇಂದ್ರ ಸರಕಾರದ ಲೇಬರ್ ಮಂತ್ರಿ ಶ್ರೀ ಜಗಜೀವನ ರಾಮ್‌ರವರು ಕೊಡಗಿಗೆ ಬರುವ ತಮ್ಮ ಕಾರ್ಯಕ್ರಮವನ್ನು ರದ್ದು ಮಾಡಿರುವರು.

ಅಂತರಾಷ್ಟ್ರೀಯ ಲೇಬರ್ ಸಂಸ್ಥೆಯ ಸಮ್ಮೇಳನಕ್ಕಾಗಿ ಮೈಸೂರಿಗೆ ಬಂದಿರುವ ಅಂತರ್ ರಾಷ್ಟ್ರೀಯ ಲೇಬರ್ ಸಂಸ್ಥೆಯ ಪ್ರೆಸಿಡೆಂಟರಾದ ಮೋರಿಸ್ ಮುತಿ ಶರರು ಕೊಡಗಿಗೆ ಬರುವರೆಂದು ವರ್ತಮಾನ.

ವಂದನಾರ್ಪಣ ಮೀಟಿಂಗುಗಳು.

ಈ ತಾ. ೨೪ ರಲ್ಲಿ ನಾಲ್ಕುನಾಡಿನ ಹಲವು ಗ್ರಾಮಸ್ಥರು ಕಕ್ಕಬೆಯಲ್ಲಿ ಶ್ರೀ. ಉದಿಯಂಡ ಪೂಚಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದರು. ಅಧ್ಯಕ್ಷರ ಕೋರಿಕೆ ಮೇರೆ ಶ್ರೀ. ಸಿ. ಎ. ಬೆಳ್ಳಿಯಪ್ಪನವರು ಕೊಡಗಿನ ಭವಿಷ್ಯದ ತೀರ್ಮಾನವನ್ನು ಕುರಿತು ಡೆಲ್ಲಿಯ ಕಾನ್‌ಫರೆನ್ಸು ಮತ್ತು ಕೊಡಗಿನ ಜನರು ಮುಂದೆ ಮಾಡಬೇಕಾದ ಕಾರ್ಯಕ್ರಮಗಳು ಮುಂತಾದುವನ್ನು ಕುರಿತು ಭಾಷಣ ಮಾಡಿದರು. ಶ್ರೀ ಅಜ್ಜಿಕುಟ್ಟಿರ ಶಿವಯ್ಯನವರು ಭಾಷಣಕಾರರನ್ನು ವಂದಿಸಿ ದೇಶದವರ ಮುಂದಿನ ಕಾರ್ಯಕ್ರಮವನ್ನು ಕುರಿತು ಈ ಕೆಳಗಿನ ಮೂರು ರಠಾವುಗಳನ್ನು ಸೂಚಿಸಿದರು.

(೧) ಕೊಡಗನ್ನು ಪ್ರತ್ಯೇಕವಿಡಲು ನಿರ್ಧರಿಸಿದ ಕೇಂದ್ರ ಸರಕಾರವನ್ನು ಈ ಸಭೆಯು ವಂದಿಸುತ್ತದೆ

(೨) ಕೊಡಗು ಕೌನ್ಸಿಲಿಗೆ ಅವಧಿ ಮುಗಿದಿರುವದರಿಂದ ನಿಜವಾದ ಜನಪ್ರತಿನಿಧಿಗಳನ್ನು ಆರಿಸುವ ನಿಮಿತ್ತ ಶೀಘ್ರ ಹೊಸ ಚುನಾವಣೆಗಳನ್ನು ಮಾಡಬೇಕು.

(೩) ಕೇಂದ್ರ ಮತ್ತು ಪ್ರಾಂತೀಯ ಶಾಸನ ಸಭೆಗಳಲ್ಲಿ ಒಬ್ಬನೇ ಸದಸ್ಯನಾಗಿರುವದಕ್ಕೆ ಅವಕಾಶ ಮಾಡದೆ ಹೊರಪ್ರಾಂತಗಳಲ್ಲಿ ನಡೆಯುತ್ತಿರುವಂತೆ ಪ್ರತ್ಯೇಕ ಪ್ರತಿನಿಧಿಗಳ ಏರ್ಪಾಡು ಮಾಡುವ ಮತ್ತು ಕೇಂದ್ರ ಶಾಸನ ಸಭೆಯಲ್ಲಿ ಈಗ ಸದಸ್ಯರಾಗಿರುವ ಶ್ರೀ ಸಿ. ಎಂ ಪೂಣಚ್ಚನವರ ಮೇಲೆ ನಮಗೆ ವಿಶ್ವಾಸವಿಲ್ಲದಿರುವದರಿಂದ ಕೇಂದ್ರ ಶಾಸನ ಸಭೆಗೆ ಹೊಸ ಚುನಾವಣೆಯಾಗಬೇಕೆಂದೂ ಈ ಚುನಾವಣೆಯು ನೇರವಾಗಿ ಮತದಾರರಿಂದ ಆಗಬೇಕೆಂದೂ ಈ ಸಭೆಯು ಇಂಡಿಯಾ ಸರಕಾರವನ್ನು ಕೇಳಿಕೊಳ್ಳುತ್ತದೆ.

ಈ ರಠಾವುಗಳು ಅನುಮೋದಿಸಲ್ಪಟ್ಟು ಸರ್ವಾನುಮತದಿಂದ ಪಾಸಾದವು. ಅಧ್ಯಕ್ಷರು ಆಖೈರು ಭಾಷಣ ಮಾಡುತ್ತಾ ದೇಶೀಯರೆಲ್ಲರೂ ಒಗ್ಗಟ್ಟಾಗಿ ನಮ್ಮ ದೇಶವನ್ನು ಪ್ರತ್ಯೇಕ ಪ್ರಾಂತವಾಗಿಡಲು ಸರ್ವ ಪ್ರಯತ್ನ ಮಾಡಬೇಕೆಂದು ಅಪೀಲು ಮಾಡಿದರು.

ನಾಪೋಕ್ಲು.

ತಾರೀಕು ೨೫ರ ಮಧ್ಯಾಹ್ನ ನಾಪೋಕ್ಲು ಆಟದ ಮೈದಾನದ ಬಳಿ ಶ್ರೀ. ಬಿದ್ದಂಡ ಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಮೀಟಿಂಗು ನಡೆಯಿತು. ಕೊಡಗಿನ ಭವಿಷ್ಯತ್ತಿನ ನಿರ್ಧಾರ ಮತ್ತು ಇದಕ್ಕೆ ಸಂಬಂಧವಾಗಿ ಡೆಲ್ಲಿಯಲ್ಲಿ ನಡೆದ ವಿಚಾರಗಳನ್ನು ಕುರಿತು ಶ್ರೀ. ಸಿ ಎ ಬೆಳ್ಳಿಯಪ್ಪನವರು ಮಾತಾಡಿದರು. ಶ್ರೀ. ಬಿಟ್ಟೀರಂಡ ಪೂಚಯ್ಯನವರು ಮತ್ತು ಮಂಡೆಪಂಡ ಕರುಂಬಯ್ಯನವರು ಕೊಡಗನ್ನು ಪ್ರತ್ಯೇಕವಿಡಲು ಪ್ರಯತ್ನಿಸಿದ ಕೊಡಗಿನ ಪ್ರತಿನಿಧಿಗಳಿಗೆಲ್ಲಾ ವಂದಿಸಿ ಮೇಲೆ ಸೂಚಿಸಿದ ಅರ್ಥದ ಮೂರು ಠರಾವುಗಳನ್ನು ಸಭೆಯ ಮುಂದಿಟ್ಟರು. ಠರಾವುಗಳು ಸರ್ವಸಮ್ಮತದಿಂದ ಮಂಜೂರಾದವು. ಮುಂದಕ್ಕೂ ಒಗ್ಗಟ್ಟಿನ ಬಗ್ಗೆ ಅಧ್ಯಕ್ಷರು ವಿನಂತಿ ಮಾಡಿದರು.

ಹುದಿಕೇರಿ

ತಾ. ೨೬ರಲ್ಲಿ ಶ್ರೀಮಂಗಲ ನಾಡಿನವರು ಹುದಿಕೇರಿಯಲ್ಲಿ ಶ್ರೀ. ಕಿರಿಯಮಾಡ ನಂಜಪ್ಪನವರ ಕೋರಿಕೆಯಂತೆ ಶ್ರೀ. ಸಿ ಎ. ಬೆಳ್ಳಿಯಪ್ಪನವರು ಡೆಲ್ಲಿ ಕಾನ್‌ಫರೆನ್ಸ್ ಮತ್ತು ಇಂಡಿಯಾ ಸರಕಾರದವರು ಕೊಡಗಿನ ಭವಿಷ್ಯದ ಬಗ್ಗೆ ಕೊಟ್ಟ ತೀರ್ಮಾನದ ಮುಂತಾದುವನ್ನು ವಿವರಿಸಿ ಮಾತಾಡಿದರು. ಶ್ರೀ ಕಾಕೇರಮಾಡ ಗಣಪತಿಯವರು ಇಂಡಿಯಾ ಸರಕಾರದ ತೀರ್ಮಾನದ ಪ್ರಾಮುಖ್ಯತೆಯನ್ನು ವಿವರಿಸಿ ಹೇಳಿ ಇದಕ್ಕಾಗಿ ಶ್ರಮಿಸಿದ ಸರ್ವರಿಗೂ ವಂದಿಸಿ ದೇಶೀಯರು ಮುಂದೆ ಮಾಡಬೇಕಾದ ಕೆಲಸಗಳನ್ನು ಕುರಿತು ಮೂರು ಗೊತ್ತುವಳಿಗಳನ್ನು ಸಭೆಯ ಮುಂದಿಟ್ಟರು. ಅವು ಮೇಲಿನ ಅರ್ಥದ ಠರಾವುಗಳೇ ಆಗಿವೆ. ಇವು ಒಮ್ಮತದಿಂದ ಪಾಸಾದ ಮೇಲೆ ಅಧ್ಯಕ್ಷರು ದೇಶೀಯರು ಮುಂದಕ್ಕೂ ಒಗ್ಗಟ್ಟಿನಿಂದ ಕೆಲಸ ಮಾಡಿ ಕೊಡಗಿನ ವ್ಯಕ್ತಿತ್ವವನ್ನು ಉಳಿಸಿ ಕೊಳ್ಳುವದು ಎಲ್ಲರ ಪರಮ ಕರ್ತವ್ಯವೆಂದು ಹೇಳಿ ಮೀಟಿಂಗನ್ನು ಮುಕ್ತಾಯಗೊಳಿಸಿದರು.

ಹೆಂಡದಿಂದ ಬೆಲ್ಲ ತಯಾರಿ.

ಹೆಂಡದಿಂದ ಬೆಲ್ಲ ತಯಾರಿಸುವ ತರಬೇತು ಕೇಂದ್ರವು ತಾ. ೧೯-೧೨-೪೯ರಲ್ಲಿ ಹೆಬ್ಬಾಲೆಯಲ್ಲಿ ಕೊಡಗು ಚೀಫ್ ಕಮಿಷನರಿಂದ ತೆರೆಯಲ್ಪಟ್ಟಿತು. ಪ್ರಥಮವಾಗಿ ನೆರೆದಿದ್ದ ಜನರಿಗೆ ಬೆಲ್ಲ ಯಾವ ರೀತಿ ಮಾಡುವದೆಂಬುದನ್ನು ವಿವರಿಸಲಾಯಿತು. ಈ ವರೆಗಿನ ಕಾರ್ಯಕಲಾಪಗಳ ವರದಿಯನ್ನು ಮುಂದಿಡುತ್ತಾ ಸೀನಿಯರ್ ಇನ್ಸ್‌ಪೆಕ್ಟರು ಹೆಬ್ಬಾಲೆಯಲ್ಲಿರುವ ಸೇಂದಿ ಅಂಗಡಿಯನ್ನು ಮುಚ್ಚಬೇಕೆಂದೂ, ಇಲ್ಲಿಂದ ಸೋಮವಾರಪೇಟೆ, ಸಂಟಿಕೊಪ್ಪಗಳಿಗೆ ಕಳುಹಿಸುವ ಸೇಂದಿಯನ್ನು ಕಳ ಹಿಸದಂತೆ ಮಾಡಬೇಕೆಂದೂ, ಈ ಕೇಂದ್ರದ ವರೆಗೆ ರಸ್ತೆ ಬೇಕೆಂದೂ ಕೇಳಿಕೊಂಡರು. ನಂತರ ಕೆಲವರ ಭಾಷಣಗಳಾದವು. ಅಧ್ಯಕ್ಷರು ಈ ಶುಭ ಸನ್ನಿವೇಶದ ಮಹತ್ವವನ್ನು ಹೇಳುತ್ತ ಅದರ ಉಪಯುಕ್ತತೆಯನ್ನು ವಿವರಿಸಿದರು. ಅವಶ್ಯ ಕೋರಿದ ಸಹಾಯವನ್ನು ಸರಕಾರ ಮಾಡುವದೆಂಬ ಭರವಸೆಯನ್ನಿತ್ತರು. ನಂತರ ವಂದನಾರ್ಪಣೆಯ ಬಳಿಕ ಅಲ್ಪಾಹಾರದಿಂದ ಸಭೆ ಮುಕ್ತಾಯಗೊಂಡಿತು.

ಹೆಂಡದಿಂದ ಬೆಲ್ಲ ತಯಾರುಮಾಡುವ ಈ ತರಬೇತಿ ಶಾಲೆಯು ಸರಕಾರದಿಂದ ತೆರೆಯಲ್ಪಟ್ಟಿದೆ. ಇದರಿಂದ ಆಸಕ್ತ ವಿದ್ಯಾರ್ಥಿಗಳಿಗೆ ತರಬೇತು ಕೊಟ್ಟು ಸೇಂದಿಯಿಂದ ಬೆಲ್ಲ ಮಾಡುವ ಕೆಲಸವನ್ನು ದೇಶದ ವಿವಿಧ ಭಾಗಗಳಲ್ಲಿ ಕೈಕೊಳ್ಳುವ ಯೋಜನೆಯು ಸರಕಾರದ್ದಾಗಿದೆ.

ನೋಟೀಸು.

ಲಿಕ್ವಿಡೇಶನಿನಲ್ಲಿರುವ ಕೊಡಗು ಕ್ಲಾತ್ ಮರ್ಚೆಂಟ್ಸ್ ಕಂಪೆನಿಯಲ್ಲಿ ಶ್ರೀ. ಚೆಕ್ಕೆರ ಪೂಚಯ್ಯನವರು ಪಡಕೊಂಡ ನೂರು ಪಾಲುಗಳ ಅಂದರೆ ೧೧೧೩ರಿಂದ ೧೨೧೨ರ ವರೆಗಿನ ಪಾಲುಗಳ ಬಗ್ಗೆ ಕೊಡಲ್ಪಟ್ಟ ಶೇರ್ ಸರ್ಟಿಫಿಕೇಟು ಕಾಣೆಯಾಗಿದೆ. ದೊರೆತವರು ಈ ತಾರೀಕಿನಿಂದ ಒಂದು ವಾರದೊಳಗೆ ಈ ಕೆಳಗಿನ ವಿಳಾಸಕ್ಕೆ ಅದನ್ನು ಹಾಜರ್ಮಾಡಬೇಕು. ನಂತರ ಬಂದ ಸರ್ಟಿಫಿಕೇಟನ್ನು ಗಣಿಸಲಾಗುವದಿಲ್ಲ

ಲಿಕ್ವಿಡೇಟರ್.
ಕೊಡಗು ಕ್ಲಾತ್ ಮರ್ಚೆಂಟ್ಸ್ ಕಂಪೆನಿ,
ಮಡಿಕೇರಿ, ಕೊಡಗು.

ಚೀಫ್ ಕಮಿಷನರ್ ಪ್ರಾಂತಗಳ ವಿಲೀನೀಕರಣವಿಲ್ಲ.

ಕೇಂದ್ರ ಶಾಸನ ಸಭೆಯಲ್ಲಿ ಸರ್ದಾರ್ ಪಟೇಲರ ಹೇಳಿಕೆ.

ಕೇಂದ್ರ ಆಡಳಿತಕ್ಕೊಳಪಟ್ಟ ಭಾಗಗಳಿಗೆ ಪ್ರತ್ಯೇಕ ಪೋಲೀಸ್ ದಳ ಏರ್ಪಡಿಸುವ ಮಸೂದೆ.

ಕೇಂದ್ರ ಸರಕಾರವು ಸಂಸ್ಥಾನವಲ್ಲದ ಯಾವುದೇ ಕೇಂದ್ರಾಡಳಿತ ಭಾಗವನ್ನು ನೆರೆಯ ಪ್ರಾಂತ ಯಾ ಸಂಸ್ಥಾನಗಳೊಡನೆ ವಿಲೀನಗೊಳಿಸುವ ಸೂಚನೆಯನ್ನು ಆಲೋಚಿಸಲಿಲ್ಲ. ಎಂಬ ಸ್ಪಷ್ಟ ಹೇಳಿಕೆಯನ್ನು ಸರ್ದಾರ್ ಪಟೇಲರು ಕೇಂದ್ರ ಶಾಸನ ಸಭೆಯಲ್ಲಿ ಹೇಳಿದರು.

ಎಸ್. ಯಾ ಹೆಚ್ಚಿನ ಚೀಫ್ ಕಮಿಷನರ್ ಪ್ರಾಂತಗಳಿಗೆಂಬಂತೆ ಬೇರೆಯಾದ ಪೋಲೀಸ್ ದಳವನ್ನು ರಚಿಸುವ ಮಸೂದೆಯ ಚರ್ಚೆಯ ಕಾಲದಲ್ಲಿ ದೊಡ್ಡ ಭಾಗಗಳೊಡನೆ ಈ ಕೇಂದ್ರಾಡಳಿತ ಭಾಗಗಳ ವಿಲೀನೀಕರಣ ಪ್ರಶ್ನೆ ಬಗೆಹರಿಯುವವರೆಗೆ ಈ ಮಸೂದೆಯನ್ನು ಮುಂದರಿಸಬೇಕೆಂಬ ಮಾತಿಗೆ ಉತ್ತರವಾಗಿ ಸರ್ದಾರ್ ಪಟೇಲರು ಹೀಗೆ ಹೇಳಿದ್ದಾರೆ.

ವಿಲಯನದ ಸೂಚನೆಗಳನ್ನು ಕಡೆಗಣಿಸಿ, ಕೇಂದ್ರಾಡಳಿತಕ್ಕೊಳಪಟ್ಟ ಭಾಗದ ಕೆಲ ಜನರ ಚರ್ಚೆಗಳು ಅಥವಾ ವಿಲೀನೀಕರಣದ ಬಗ್ಗೆ ಇರುವ ಇತರರ ಕ್ರಿಯಾತ್ಮಕ್ಕೆ ಸರಕಾರದಿಂದ ಯಾವದೇ ಸಹಾನುಭೂತಿ ದೊರೆಯಲಾರದೆಂದು ಸರ್ದಾರ ಪಟೇಲರು ಸ್ಪಷ್ಟವಾಗಿ ಹೇಳಿರುವರು. ಕೇಂದ್ರ ಸರಕಾರದ ಮುಂದಿನ ಆಲೋಚನೆಯೆಂದರೆ ಆರ್ಥಿಕ ಮತ್ತು ರಾಜಕೀಯ ದೃಷ್ಟಿಯಿಂದ ದೇಶದ ಭದ್ರತೆಯನ್ನು ಕಾಯುವದು. ಪರಿಸ್ಥಿತಿ ಉಂಟಾದರೆ ಸರಕಾರವು ಯಾವದೇ ವಿಲೀನಗೊಳಿಸುವ ಯೋಜನೆಯನ್ನು ಆಲೋಚಿಸಲಾರದು ಮತ್ತು ಆ ವಿಚಾರದಲ್ಲಿ ಯಾವದೇ ... ಎಡಕೊಡದು.

ವಿವರ.

ತಾರೀಖು ೨೩ರಲ್ಲಿ ಕೇಂದ್ರ ಶಾಸನ ಸಭೆಯಲ್ಲಿ 'ಸೆಂಟ್ರಲ್ ರಿಸರ್ವ್ ಪೋಲೀಸ್ ಫೋರ್ಸ್' ಮಸೂದೆಯಿಂದನ್ನು ಸರ್ದಾರರು ಮುಂದಿಟ್ಟರು. ಈ ಮಸೂದೆಯ ಪ್ರಕಾರ ಕೇಂದ್ರದಿಂದ ಆಳಲ್ಪಡುವ ಚೀಫ್ ಕಮಿಷನರ್ ಪ್ರಾಂತಗಳಿಗೆ ಪ್ರತ್ಯೇಕ ಪೋಲೀಸ್ ಪಡೆ ಇದ್ದು ಈ ಪ್ರಾಂತಗಳಿಗೆ ಸರ್ವತ್ರ ಮಾಗ ನಡೆಸಬೇಕಾಗುವದು. ಈ ಮಸೂದೆಯ ಆವಶ್ಯಕತೆಯನ್ನು ವಿವರಿಸುತ್ತಾ ಸರ್ದಾರರು ಹೀಗೆ ಹೇಳಿದರು. ಈ ಸಭೆಗೆ ತಿಳಿದಂತೆ ಒಂದು ಚೀಫ್ ಕಮಿಷನರ್ ಪ್ರಾಂತ ಅಧಿಕ ... ಇದೊಂದು ಚಿಕ್ಕ ಹಿಡುವಳಿ ಆಗುವದು. ಕೇಂದ್ರದಿಂದ ಆಳಲ್ಪಡುವ ಪ್ರಾಂತಗಳಿಗೆ ಈ ವರೆಗೆ ನೆರೆಯ ಪ್ರಾಂತಗಳು ಅಧಿಕಾರಿಗಳನ್ನು ಒದಗಿಸುತ್ತಾ ಸಹಾಯ ಮಾಡುತ್ತಿದ್ದವು. ಕೇಂದ್ರಕ್ಕೆ ಕೆಲಸವಿದ್ದರೆ. ಆದರೆ ಈ ಯೋಜನೆಯು ಅತೃಪ್ತಿಕರವಾಗಿ ನೆರೆಯ ಪ್ರಾಂತಗಳಲ್ಲಿ ಯೋಗ್ಯ ಅಧಿಕಾರಿಗಳ ಅವಶ್ಯಕತೆ ಯೋಗ್ಯರನ್ನು ಬಿಟ್ಟುಕೊಡಲು ಆಗದಾಗ ಅದಕ್ಕಾಗಳು ಹಿಂಜರಿಯುವವು. ಕೇಂದ್ರ ಆಡಳಿತಕ್ಕೆ ಒಳಪಟ್ಟ ಭಾಗಗಳ ಚಿಕ್ಕದಾಗಿರುವದರಿಂದ ಅಲ್ಲಿಯ ಅಧಿಕಾರಿಗಳಲ್ಲಿ ಸ್ಥಳೀಯ ಸಂಬಂಧದ ವ್ಯಕ್ತಿಗತ ರೂಪದಲ್ಲಿ ಹೆಚ್ಚಾಗಿ ನ್ಯಾಯ ಮತ್ತು ಶಾಂತಿ ಪರಿಸ್ಥಿತಿಯು ಆಡಚಣೆಗೆ ಎಡೆಯಾಗಿದೆ. ಆದ್ದರಿಂದ ಎಲ್ಲಾ ಯಾ ಹೆಚ್ಚಿನ ಚೀಫ್ ಕಮಿಷನರ್ ಪ್ರಾಂತಗಳಿಗೆ ಅನ್ವಯಿಸುವಂತೆ ಒಂದು ಪೋಲೀಸ್ ಪಡೆಯನ್ನು ನಿರ್ಮಿಸುವದು ಈ ಮಸೂದೆಯ ಧ್ಯೇಯವಾಗಿದೆ.

ಈ ಮಸೂದೆಯ ಚರ್ಚೆಯಲ್ಲಿ ಪ್ರೊ. ಶಿಬನ್‌ಲಾಲ್ ಸಕ್ಸೇನಾ, ಬಿ. ದಾಸ್, ಚೌಧರಿ ರಣಬೀರ್‌ಸಿಂಗ್ ಮತ್ತು ಸಿ. ಎಂ. ಪೂಣಚ್ಚರವರು ಭಾಗವಹಿಸಿದ್ದರು.

ಕೇಂದ್ರದಿಂದ ಆಳಲ್ಪಡುವ ಈ ಚೀಫ್ ಕಮಿಷನರ್ ಪ್ರಾಂತಗಳನ್ನು ನೆರೆಯ ಪ್ರಾಂತಗಳೊಡನೆ ವಿಲೀನಗೊಳಿಸುವ ಸೂಚನೆ ಇರುವಾಗ ಈ ಮಸೂದೆಯು ಅವಶ್ಯವೇ ಎಂದು ಸಕ್ಸೇನಾರವರು ಕೇಳಿದ್ದಕ್ಕೆ ಉತ್ತರ ಕೊಡುತ್ತಾ ಸರ್ದಾರರು ಹೀಗೆ ಹೇಳಿದರು:

ಕೇಂದ್ರದಿಂದ ಆಳಲ್ಪಡುವ ಯಾವದೇ ಭಾಗವು ಯಾವದೇ ಸಂಸ್ಥಾನ ಇಲ್ಲವೇ ಪ್ರಾಂತದೊಡನೆ ಸದ್ಯಕ್ಕೆ ವಿಲೀನಗೊಳ್ಳಬೇಕೆಂದು ಕೇಂದ್ರ ಸರಕಾರವು ಆಲೋಚಿಸಿಲ್ಲ. ಇಂಥಾ ವಿಲೀನೀಕರಣವು ದೇಶದ ಅವ್ಯವಸ್ಥೆಯು ಬಗೆಹರಿಯುವಲ್ಲಿವರೆಗೆ, ದೇಶದ ಆರ್ಥಿಕ ಸ್ಥಿತಿಯು ಉತ್ತಮಗೊಳ್ಳುವ ವರೆಗೆ ನಿಲ್ಲಬೇಕಾಗುವದು.

ಮುಂದುವರಿಸುತ್ತಾ, ಸಕ್ಷಮ ಆಡಳಿತೆಯ ದೃಷ್ಟಿಯಿಂದ ಈ ಮಸೂದೆ ಆವಶ್ಯಕ. ಕೊಡಗಿನಂಥ ಚಿಕ್ಕ ಪ್ರದೇಶಗಳು ಇನ್ನೊಂದರಿಂದ ವ್ಯಕ್ತಿಗಳ ಅಭಿಲಾಷೆಯು ಮೇಲೆ ಅವಲಂಬಿತ ನಿಲ್ಲಬೇಕಾಗಿಲ್ಲ. ಅವಶ್ಯಬಿದ್ದಾಗ ಬೇಕಾದಲ್ಲಿಗೆ ಕಳುಹಿಸಲು ಅನುಕೂಲವಾಗುವಂತೆ ಪೋಲೀಸ್ ದಳ ಅವಶ್ಯ. ಹಿಂದಿನ ಕಾಲದಲ್ಲಿ ಕೊಡಗಿನಲ್ಲಿ ಶಾಂತಿಯು ಕೆಡಲಿಲ್ಲ. ಅಲ್ಲಿ ಅವ್ಯವಸ್ಥೆಗಳಾಗಲೀ, ಕೊಲೆ ಕೊಳ್ಳೆಗಳಾಗಲೀ ಇಲ್ಲ. ಆದರೆ ಇತ್ತೀಚೆಗೆ ನೆರೆಯ ಪ್ರಾಂತಗಳ ಸಂಬಂಧದ ಘಟನೆಗಳು ಸಾಧಾರಣವಾಗಿ ನಡೆಯುತ್ತಿರುವ ಅನೇಕ ವಿಚಾರಗಳಲ್ಲಿ ಮಾತಾಡಿಕೊಳ್ಳುತ್ತಿದ್ದಾರೆ. ಕೊಡಗಿನಲ್ಲಿ ಒಬ್ಬ ಪೋಲೀಸ್ ಅಧಿಕಾರಿ ನಿಷ್ಪಕ್ಷಪಾತನಾಗಲಾರ. ಆತನು ಅಲ್ಲಿ ಸಾಧಾರಣ ಜನರ ಕಾರ್ಯದ ... ಇಂಥಾ ಸ್ಥಿತಿ ಆರೋಗ್ಯಕರವಲ್ಲ. ಆದ್ದರಿಂದ ಎಚ್ಚರದಿಂದಿರಬೇಕು ಎಂದರು.

ಮಸೂದೆಯು ಅಂಗೀಕರಿಸಲ್ಪಟ್ಟಿತು.

Coorg Forest Department
Timber Sale Notice
Mercara the 28th December 49

In supersession of this office notification dated 19-12-1949, it is hereby notified that the sale has been postponed to Monday the 16th January, 1950

C M. Kushalappa,
Chief Forest Officer, Coorg

ಭದ್ರತೆ! 17 ವರ್ಷಗಳ ಪರಿಪಕ್ವ ಅನುಕೂಲತೆ !!
ಅನುಭವಶೀಲತೆ!!

ದಿ ವಿಜಯ ಬೇಂಕ್ ಲಿಮಿಟೆಡ್
ಮುಖ್ಯ ಆಫೀಸು,
ಕದ್ರಿ ರೋಡ್, ಮಂಗಳೂರು.

ನಿರಖು ಠೇವಣಾತಿ ಬಡ್ಡಿದರ:-

3	ತಿಂಗಳು	3%
6	,,	3¼%
12	,,	3½%
24	,,	4%

ರೂಪಾಯಿ ೧೫೦೦೦ಕ್ಕೆ ಮೀರಿದ ಒಂದೇ ಡಿಪಾಜಿಟ್ಟಿಗೆ ಮೇಲಿನ ದರಕ್ಕಿಂತ ¼% ಹೆಚ್ಚಿಗೆ.

ಶಾಖೆಗಳು – ಹಳೆ ಮಂಗಳೂರು, ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಕಾಸರಗೋಡು, ಕಾಞಂಗಾಡ್, ಪುತ್ತೂರು, ಮಡಿಕೇರಿ ಮತ್ತು ಮಂಜೇಶ್ವರ.

ಒಟ್ಟು ವರ್ಕಿಂಗ್ ಬಂಡವಾಳ ರೂ ೪೦ ಲಕ್ಷಕ್ಕೂ ಮೀರಿದೆ
ಎಲ್ಲಾ ವಿಧದ ಆಧುನಿಕ ಬೇಂಕಿಂಗ್ ವಹಿವಾಟುಗಳು ಅತೀ ಕಡಿಮೆ ದರದಲ್ಲಿ ದಕ್ಷತೆಯಿಂದ ನಡೆಸಲ್ಪಡುವವು.

ಹೆಚ್ಚಿನ ವಿವರಗಳಿಗೆ ಬರೆಯಿರಿ:– ಏಜಂಟ್,
ಮಡಿಕೇರಿ ಶಾಖೆ, ಮಡಿಕೇರಿ.

THE WARDEN INSURANCE CO., Ltd.
Head Office Bombay

LIFE, FIRE, ACCIDENT, MOTOR & W C INSURANCES-

Managing Director. - S. H THAKER.

Business in force	Rs. 5,00,00,000
Assets	,, 1,00,00,000
Income	,, 35,00,000

Also LOCAL MANAGERS OF
THE LONDON GUARANTEE & ACCIDENT CO, Ltd.
(Incorporated in England)
Assets Exceed Rs. 10,00,00,000
a Subsidiary Company of
THE PHOENIX ASSURANCE CO. Ltd.
(One of the Largest Insurance Companies in the World)
Assets Exceed Rs 45,00,00,000
Trustee FIRE INSURANCE
Enquiries for representation solicited.
Apply to,

Chief Agency Office or A. S Aiyappa,
Virajpet (Coorg) *Branch Secretary,*
Gandhinagar
BANGALORE CITY

ವೀರಾಜಪೇಟೆಗೆ 'ಕೊಡಗು' ಪತ್ರಿಕೆಯ ಏಜೆಂಟರು ಶ್ರೀ ಟಿ. ಎನ್. ಗೋವಿಂದರಾಜುರವರು.

ಓದುಗರ ಓಲೆಗಳು.

ಟಪ್ಪಾಲು ಬಸ್.

ವೀರರಾಜಪೇಟೆಯಿಂದ ಕುಟ್ಟಕ್ಕೆ ಹೋಗುವ ಟಪ್ಪಾಲು ಬಸ್ಸು ಈಗ ಎರಡು ವರ್ಷಗಳಿಂದ ಸಮಯಕ್ಕೆ ಸರಿಯಾಗಿ ಬಾರದೆ ಜನರಿಗೆ ವಿಪರೀತ ತೊಂದರೆಯಾಗುತ್ತಿದೆ. ಒಂದೊಂದು ದಿನ ಬಸ್ಸೇ ಬರುವುದಿಲ್ಲ. ಈ ಬಸ್ಸು ಹಳೆಯದಾಗಿರುವದರಿಂದ ಈ ತೊಂದರೆಯಾಗಿದೆ. ಆದ್ದರಿಂದ ಇದನ್ನು ಬದಲಾಯಿಸಿ ಟಪ್ಪಾಲು ಸಾಗಿಸಲು ಹೊಸ ಬಸ್ ಏರ್ಪಡಿಸಿ ಜನತೆಗೆ ಹಿತ ಮಾಡಬೇಕಾಗಿ ಸಂಬಂಧಿಸಿದ ಅಧಿಕಾರಿಗಳಲ್ಲಿ ಅರಿಕೆ. M. M. M.

ಬಸ್ಸು ಲೈಸನುಗಳು.

ಸರಕಾರವು ಲೈಸನುಗಳನ್ನು ಕೊಡುವಾಗ ಹೆಚ್ಚು ಬಸ್ಸುಗಳಿರುವ ಕಂಪೆನಿಗಳಿಗೇ ಕೊಡುವದು ತಪ್ಪಾಗಿದೆ. ಹೊಸದಾಗಿ ಲೈಸನ್ಸ್ ಪ್ರಯತ್ನಿಸುತ್ತಿರುವವರಿಗೆ ಕೊಟ್ಟರೆ ಲೈಸನು ದಕ್ಷತೆಯಿಂದ ನಡೆಯುವದು. ಉದಾಹರಣೆಗೆ ಕೊಡಗಿನಲ್ಲಿ ಸಿ. ಪಿ. ಸಿ. ಕಂಪೆನಿಯವರಿಗೆ ಅನೇಕ ಲೈಸನುಗಳಿವೆ. ಈ ಲೈಸನುಗಳು ದಕ್ಷರೀತಿಯಿಂದ ನಡೆಯುತ್ತಿಲ್ಲವೆಂದು ಹೇಳಿದರೆ ಅತಿಶಯೋಕ್ತಿಯಲ್ಲ. ನನ್ನ ಅನುಭವದ ಗೊತ್ತನ್ನು ಹೇಳಬೇಕಾದರೆ ವೀರರಾಜಪೇಟೆಯಿಂದ ಕುಟ್ಟಕ್ಕೆ ಹೋಗುವ ಮೈಲ್ ಬಸ್ಸು ಸರಿಯಾಗಿ ನಡೆಯದೆ ಜನರಿಗೆ ವಿಪರೀತ ನಷ್ಟವಾಗುತ್ತಿದೆ. ಮಡಿಕೇರಿಯಿಂದ ಸುಂಟಿಕೊಪ್ಪ ಮಡಿಕೇರಿಯಿಂದ ಕನ್ನಡೂರಿಗೆ ಹೋಗುವ ಬಸ್ಸು ಸರಿಯಾಗಿ ನಡೆಯದೆ ಅನೇಕ ದಿನಗಳವರೆಗೆ ನಿಂತು ಹೋಗಿ ನಿದರ್ಶನಗಳಿವೆ. ಗಣೇಶ ಬಸ್ಸಿನವರ ವೀರರಾಜಪೇಟೆ ಕುಟ್ಟ ಲೈನ ಮತ್ತು ಸೋಮವಾರಪೇಟೆಗೆ ಹೋಗುವ ಬಸ್ಸು ಕೂಡ ಸರಿಯಾಗಿ ಓಡುತ್ತಿಲ್ಲ. ಆದ್ದರಿಂದ ಒಬ್ಬರಿಗೆ, ಇಲ್ಲವೇ ಒಂದು ಕಂಪನಿಗೆ ಹತ್ತಾರು ಲೈಸನು ಕೊಡುವದನ್ನು ನಿಲ್ಲಿಸಬೇಕು. ಒಬ್ಬನಿಗೆ ಮೂರು ಲೈಸನುಗಳಿಗಿಂತ ಹೆಚ್ಚಿಗೆ ಇರದಂತೆ ಸರಕಾರ ವಹಿಸಬೇಕು. ಹೀಗಾದರೆ ಬಸ್ಸು ಲೈಸನುಗಳು ದಕ್ಷತೆಯಿಂದ ನಡೆದಾವು. K. K. G.

ಮರೆನಾಡು ಸೆಟ್ಟಿಗೇರಿ ರಸ್ತೆ

ಈ ರಸ್ತೆಯು ಇಪ್ಪತ್ತು ವರ್ಷಗಳವರೆಗೆ ಜಿಲ್ಲಾಬೋರ್ಡಿನ ಸ್ವಾಧೀನವಿತ್ತು. ಬೋರ್ಡಿನವರು ಇಷ್ಟು ಸ್ವಲ್ಪ ಸ್ವಲ್ಪ ಹಣ ದಿನ ಡಿಸೆಂಬರ್ ಗಡುವಿನೊಳಗೆ ಒಂದು ತಿಂಗಳಿನ ರಿಪೇರಿ ಮಾಡಿದರೂ ಗೂಡು ಗದ್ದೆ, ಇತ್ಯಾದಿ ಈ ರಸ್ತೆಯು ಸೆಂಟ್ರಲ್ ಪಿ. ಡಬ್ಲ್ಯು. ಡಿಯವರ ವಶಕ್ಕೆ ಬಾರದೆ ಅವರಿಗೆ ಈ ವರೆಗೆ ಈ ರಸ್ತೆಯು ರಿಪೇರಿಯ ಮಾತೇ ಇಲ್ಲ. ಈ ಯಾಲ್ಲ ಕೆಲಸ ಪ್ರಾರಂಭವಾಗಿ ರೈತರ ಬತ್ತದ ವಹಿವಾಟು ಆಗುತ್ತಿರುವ ಈ ಸಮಯದ ವರೆಗೂ ರಿಪೇರಿಯಾಗಿಲ್ಲವೆಂದರೆ ರಿಪೇರಿ ಇನ್ನಾವಾಗ? ಅನೇಕ ರೋಗಿಗಳು ಅಭದ್ರವಿದ್ದು ವಾಹನಗಳ ಓಡಾಟಕ್ಕೆ ಅನಾನುಕೂಲವಿದೆ. ಇನ್ನಾದರೂ ಶೀಘ್ರ ಈ ಇಲಾಖೆಯವರು ನಿದ್ರೆಯಿಂದೆಚ್ಚರಗೊಳ್ಳುವರೆ? . ಮಾಚಯ್ಯ.

ಸಾರಾಯಿ ನಿಯಂತ್ರಣ.

ಸಾರಾಯಿ ನಿಯಂತ್ರಣದ ಕ್ರಮವು ಹಾಲಿ ವರ್ಷದಲ್ಲು ನಮ್ಮ ಸರಕಾರವು ಎಣಿಸಿದಂತೆ ಶಿಸ್ತಿನಿಂದ ನಡೆಯುತ್ತಲಿಲ್ಲವೆಂಬುದು ನಿಜವಾದ ಸಂಗತಿಯಾಗಿದೆ. ಕಳ್ಳತನದ ಮಾರಾಟವು ಕಪ್ಪು ಸಂತೆಯಲ್ಲಿ ಬೇರೂರಿ ದಿನೇ ದಿನೇ ಬೆಳೆಯುತ್ತಲಿದರೂ, ಸರಕಾರವು ಅದನ್ನು ನಿಲ್ಲಿಸಲು ಆಗಿರುವ ಕಾನೂನುಗಳನುಗುಣವಾದ ದಸೆಯಿಂದಲೋ ಯಾ ಸಾಕಷ್ಟು ದಕ್ಷತೆಯಿಲ್ಲದ್ದರಿಂದಲೋ ಶಕ್ಯವಾಗುವಂತೆ ಕಂಡು ಬರುವುದಿಲ್ಲ. ಇನ್ನಾದರೂ ಎಚ್ಚರದಿಂದ ಕೆಲಸ ನಡೆಸದಲ್ಲಿ ಉಪಕಾರವಾದೀತು. ಮುಂದಿನ ವರ್ಷದಿಂದ ಸಾರಾಯಿಯ ಪರವಾನಗಿ ಕ್ರಮವು ಈ ಕೆಳಗಿನ ಕೆಲವು ಸಲಹೆಗಳನ್ನು ಗಣನೆಗೆ ತೆಗೆದುಕೊಂಡು ಏರ್ಪಡದಲ್ಲಿ ಸರಕಾರಕ್ಕೆ ಲಾಭವೂ ಜನತೆಗೆ ಉಪಕಾರವೂ ಆಗಬಹುದೆಂಬುದರಲ್ಲಿ ಸಂಶಯವಿರುವುದಿಲ್ಲ.

ಕಪ್ಪು ಸಂತೆಯಲ್ಲಿ ಈಗ ಸಾರಾಯಿ ಮಾರಾಟವಾಗುತ್ತಲಿದೆ ಎಂಬ ಸಂಗತಿಯು ಸತ್ಯ. ಕಪ್ಪು ಸಂತೆಯಲ್ಲಿ ಎರಡು ರೀತಿಯ ಮಾರಾಟಗಳಿವೆ ಎಂಬುದು ಅನುಭವದ ಮಾತಾಗಿದೆ. (೧) ಕೆಲವರು ಸರಕಾರಿ ಡಿಪ್ಪೋಗಳಿಂದ ಸಾರಾಯಿಯನ್ನು ಪರ್ಮಿಟ್ ಮೇರೆ ಹೊಂದಿ ಹೆಚ್ಚಿನ ಕ್ರಯಕ್ಕೆ ಮಾರುತ್ತಲಿರುವರು; ಇದರಿಂದ ಸರಕಾರಕ್ಕೆ ನಷ್ಟ ಬರುವುದಿಲ್ಲ, ಕಾರಣ, ಪ್ರತಿಯೊಂದು ಕುಪ್ಪಿಗೂ ಸರಕಾರಕ್ಕೆ ಬರಬೇಕಾದ ಡ್ಯೂಟಿ ಏನಿದೆಯೋ ಅದು ಬಂದೇ ಬರುತ್ತೆ. (೨) ಕೆಲವರಿಗೆ ಸರಕಾರಿ ಡಿಪ್ಪೋಗಳಲ್ಲಿ ಇಲ್ಲದೆ, ಸಾರಾಯಿ ಕಂಪೆನಿಯ ಗಡಂಗದಿಂದಲೇ ಕೇಳಿದಷ್ಟು ಸರಬರಾಜಿದೆ ಎಂಬ ಸಂಗತಿಯೂ ಕೇಳಿಬರುತ್ತಲಿದೆ. ಇದು ನಿಜವಾಗಿದ್ದರೂ, ಅಧಾರ್ಥವನ್ನು ಕಂಡು ಹಿಡಿದು ಈಗಿನ ಕಾನೂನಿನ ಮೇರೆ ಕೋರ್ಟುಗಳಲ್ಲಿ ವ್ಯವಹರಿಸಿ ರುಜು ಪಡಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಅನೇಕ ಅಡಚಣೆಗಳು ತೋರಿ ಬರುವುದರಿಂದಲೂ ಮತ್ತು ಜನರ ಸಹಕಾರವಿಲ್ಲದ್ದರಿಂದಲೂ ಸಾಧ್ಯವಾಗುವುದಿಲ್ಲ. ಈ ರೀತಿಯಲ್ಲಿ ಮಾರಾಟವಾಗುತ್ತಿರುವ ಪ್ರತಿಯೊಂದು ಕುಪ್ಪಿ ಸಾರಾಯಿಗೂ ಸರಕಾರಕ್ಕೆ ಎರಡುವರೆ ರೂಪಾಯಿ ನಷ್ಟವಿದೆ ಎಂದು ಮೇಲೆ ಇನ್ನು ತಡೆಗಟ್ಟಲು ಸರಕಾರವು ದೀರ್ಘವಾಗಿ ಆಲೋಚಿಸಬೇಕಾಗಿದೆ. ಈ ನ್ಯೂನತೆಗಳನ್ನು ನಿವಾರಿಸಲು ಈ ಕೆಳಗಿನ ಮಾರ್ಗ ಅನುಸರಿಸಬೇಕು.

(೧) ಮೊದಲನೆಯದಾಗಿ ಮಡಿಕೇರಿಯಲ್ಲಿರುವ ಸಾರಾಯಿ ಗಡಂಗವನ್ನು ಮುಚ್ಚಿಸುವುದು.

(೨) ಬ್ರಾಂಡಿ, ವಿಸ್ಕಿ ಇತ್ಯಾದಿ ಅಮಲಿನ ಕುಪ್ಪಿಗಳು ಪರದೇಶಗಳಲ್ಲಿ ಅಚ್ಚುಕಟ್ಟಾಗಿ ಸೀಲ್ ಆಗಿ ಬರುತ್ತಲಿರುವಂತೆ, ಸಾರಾಯಿಯ ಕುಪ್ಪಿಗಳನ್ನೂ ಸಹ ಪರಸ್ಥಳದಿಂದಲೇ ಸೀಲ್ ಮಾಡಿಸಿ ತರಿಸುವುದು ಒಳ್ಳೆಯದು.

(೩) ಪರಸ್ಥಳದಿಂದ ಪೀಪಾಯಿಗಳಲ್ಲಿ ತರಲ್ಪಟ್ಟು ಮಡಿಕೇರಿಯಲ್ಲಿ ನೀರನ್ನು ಬೆರಸಿ ಹದಮಾಡಿ ಕುಪ್ಪಿಗಳಿಗೆ ತುಂಬಿಸಲ್ಪಡುವ ಸಾರಾಯಿಯು ಬದಲು ಮೇಲೆ ಹೇಳಿದಂತೆ ಕುಪ್ಪಿಗಳಲ್ಲೇ ತುಂಬಿಸಿ ಸೀಲ್ ಮಾಡಿಸಿ ಹೊರಗಿನಿಂದ ತರಿಸುವುದರಿಂದ ಬಾಡಿಗೆಯ ರೂಪದಲ್ಲು ಸ್ವಲ್ಪ ಕ್ರಯ ಹೆಚ್ಚಾಗಬಹುದು. ಇದನ್ನು ಕುಪ್ಪಿ ಒಂದರ ರೂ. 3-11-3 ರ ಬದಲು ರೂ. ನಾಲ್ಕಕ್ಕೆ ಏರಿಸಿ ಸರಿಪಡಿಸಿಕೊಳ್ಳಬಹುದು.

(೪) ಕ್ರಮವನ್ನರಿಯದೆ ಪರ್ಮಿಟುಗಳನ್ನು ಎಲ್ಲರಿಗೂ ಯಾವ ಸಂದರ್ಭದಲ್ಲಿಯೂ ಕೊಡಕೂಡದು.

(೫) ಸ್ತ್ರೀಯರಿಗೆ ಪರ್ಮಿಟುಗಳನ್ನು ಈ ವರ್ಷ ಕೊಟ್ಟಂತೆ ಇನ್ನು ಮುಂದೆ ಕೊಡಬಾರದು. ಸ್ತ್ರೀಯರ ಹೆಸರುಗಳಲ್ಲಿ ಸಾರಾಯಿಯನ್ನು ಹೊಂದಿಕೊಂಡು ಕುಡಿಯುವುದು ಎಷ್ಟೋ ಸಂದರ್ಭಗಳಲ್ಲಿ ಗಂಡಸರ ಸ್ವಭಾವವಾಗಿದೆ. ಪಾನನಿರೋಧವನ್ನು ಜಾರಿಗೆ ತರಲಿರುವ ಸರಕಾರವು ಸ್ತ್ರೀಯರಿಗೆ ಪರ್ಮಿಟುಗಳನ್ನು ಕೊಡುವುದನ್ನು ನಿಲ್ಲಿಸಲೇಬೇಕು.

(೬) ಸಾರಾಯಿ ಪರ್ಮಿಟುಗಳಿಗೆ ಅರ್ಜಿಗಳು ಬಂದಾಗ್ಯೆ ಅರ್ಜಿದಾರರ ಪ್ರಾಯ ವಗೈರೆಗಳನ್ನು ಗಣನೆಗೆ ತೆಗೆದುಕೊಂಡು ಪರ್ಮಿಟುಗಳನ್ನು ಕೊಡಬೇಕು. ಈಗಿನಂತೆ ಮನಸ್ಸಿಗೆ ಹೊಳೆದವರಿಗೆಲ್ಲಾ ಪರ್ಮಿಟುಗಳನ್ನು ಕೊಡಬಾರದು.

(೭) ಪೋಲೀಸು ರಿಪೋರ್ಟಿನ ಆಧಾರದಲ್ಲಿ ಕುಡಿಯುವವರ ಸಂಗತಿಯನ್ನು ಅರ್ಜಿಗಳ ಬಗ್ಗೆ ಪ್ರತಿಯೊಬ್ಬನನ್ನು ಗಮನಿಸಿ ಪರ್ಮಿಟು ಕೊಡಬೇಕು. ಇಲ್ಲದಿದ್ದರೆ ಕುಡಿಯದವರು ಪರ್ಮಿಟುಗಳನ್ನು ಹೊಂದಿ ಸಾರಾಯಿಯನ್ನು ಕಳ್ಳಸಂತೆಯಲ್ಲಿ ಮಾರುತ್ತಲಿರುವುದು ಸರಕಾರಕ್ಕೆ ತಿಳಿದೇ ಇರುತ್ತದೆ. ಇಂಥಾ ಸಂದರ್ಭಗಳಲ್ಲಿ ದೇಶದ ಕಲ್ಯಾಣವನ್ನು ಬಯಸುವ ಜನರು ಸರಕಾರದೊಡನೆ ಸಹಕರಿಸಬೇಕು.

(೮) ಸಾರಾಯಿ ಪರ್ಮಿಟುಗಳನ್ನು ಹೊಂದಲು ಬರುವ ಅರ್ಜಿಗಳು ಒಂದೇ ಕ್ರಮದಲ್ಲಿರುವಂತೆ ಏರ್ಪಡಿಸಬೇಕು. ಇದರಿಂದ ಸರಕಾರಕ್ಕೆ ಆಗುವ ಅನೇಕ ಪ್ರಯೋಜನಗಳಿವೆ. ಕಾಲಗಳ ಕಾಗದದಲ್ಲಿ ಕೆಳಗೆ ನಮೂದಿಸಿರುವಂತೆ ಅರ್ಜಿ ಫಾರಂಗಳನ್ನು ಸರಕಾರದವರೇ ಅಚ್ಚು ಮಾಡಿಸಿ ಕೊಡುವುದು ಒಳ್ಳೆಯದು. ಈ ಬಗ್ಗೆ ತಗಲುವ ಎಲ್ಲಾ ಖರ್ಚುಗಳಿಗಾಗಿ ಅರ್ಜಿಗೆ ಎಂಟಾಣೆ ಕೋರ್ಟ್ ಫೀಸು ಸ್ಟಾಂಪನ್ನು ಅರ್ಜಿದಾರರು ಅರ್ಜಿಗೆ ಹಚ್ಚತಕ್ಕದ್ದು.

ಸಾರಾಯಿ ಪರಮಿಟಿನ ಅರ್ಜಿ ಫಾರಂ.
ಕೊಡಗು ಎಕ್ಸೈಜ್ ಅಧಿಕಾರಿಗಳಿಗೆ—
ಯಾರಿಂದ—

೧. ಕುಟುಂಬದ ಹೆಸರು, ೨. ತಂದೆಯ ಹೆಸರು, ೩. ತನ್ನ ಹೆಸರು, ೪. ಉದ್ಯೋಗ, ೫. ಪ್ರಾಯ, ೬. ಗ್ರಾಮ, ೭. ಹಾಲಿ ವಾಸಸ್ಥಳ.

ನಾನು ಸಾರಾಯಿ ಪರಮಿಟಿಗೆ ಈ ವರ್ಷ ಇದೇ ಮೊದಲಾಗಿ ಅರ್ಜಿಯನ್ನು ಬರಕೊಂಡದ್ದಾಗಿದೆ. ಈ ಅರ್ಜಿಯಲ್ಲದೆ ಬೇರೆ ಅರ್ಜಿಯನ್ನು ನನ್ನ ಹೆಸರಿನಲ್ಲಿ ಮಾಡಿರುವುದಿಲ್ಲ. ನನಗೆ ಸಾರಾಯಿ ಕುಡಿಯುವ ಅಭ್ಯಾಸವಿದೆ.

ಅರ್ಜಿದಾರನ ದಸ್ಕತ್ತು.

ಇವರು ನಮ್ಮ ಗ್ರಾಮದವರು. ಇವರಿಗೆ ಸಾರಾಯಿ ಕುಡಿಯುವ ಅಭ್ಯಾಸವಿದೆ.

ಗ್ರಾಮದ ಪಟೇಲರ ದಸ್ಕತ್ತು.

(೯) ಕೆಲವರು ಪರ್ಮಿಟುಗಳನ್ನು ಒಂದೆರಡು ಸಾರಿ ಸಾರಾಯಿಯನ್ನು ಪಡೆದನಂತರ, ಪರ್ಮಿಟು ಕಳೆದುಹೋಗಿದೆ ಎಂದು ಪುನಃ ಅರ್ಜಿಗಳನ್ನು ಬರಕೊಂಡು ಹೊಸ ಪರ್ಮಿಟುಗಳನ್ನು ಹೊಂದುತ್ತಾ ಎರಡು ಮೂರು ಪರ್ಮಿಟುಗಳನ್ನು ಒಂದೇ ಹೆಸರಿನಲ್ಲಿ ಬೇರೆ ಬೇರೆ ವಿಳಾಸಗಳಿಗೆ ಹೊಂದಿಕೊಂಡು, ಈ ಡಿಪ್ಪೋಗಳಿಂದ ಸಾರಾಯಿಯನ್ನು ಹೊಂದುತ್ತಲಿರುವರು. ಇದೆಂತಹ ಅನ್ಯಾಯ! ಹೊಸ ಪರ್ಮಿಟುಗಳನ್ನು ಕೊಡುವ ಅಧಿಕಾರಿಗಳು ಸಂಬಂಧಪಟ್ಟ ಸಾರಾಯಿ ಡಿಪ್ಪೋಗಳಿಗೆ ಈ ರೀತಿಯಲ್ಲಿ ಬಂದ ಹೊಸ ಅರ್ಜಿಗಳನ್ನು ಕಳುಹಿಸಿ, ಅವರು ಪರ್ಮಿಟುಗಳ ವಿಚಾರವನ್ನು ತಿಳಿಯದೆ, ಬಂದ ಅರ್ಜಿಗಳಿಗೆಲ್ಲಾ ಹೊಸದಾಗಿ ಪರ್ಮಿಟುಗಳನ್ನು ಕೊಡುವದು ನ್ಯಾಯವೇ? ಮುಂದಿನ ವರ್ಷದಿಂದಲಾದರೂ ಸರಕಾರ ಮರು ಈ ರೀತಿಯಾಗಿ ಮಾಡಲಾರದೆಂದು ನಂಬುತ್ತೇನೆ.

೧೦ ಸ್ಟೈಲು ಮಹಜೂರ್, ಹುತ್ತರಿ ದಸರಾ ಮತ್ತು ಕ್ರಿಸ್ಮಸ್ ಹಬ್ಬಗಳಿಗಾಗಿ ಸರಕಾರದವರು ಒಬ್ಬೊಬ್ಬನಿಗೆ ಮೇಲೆ ಒಂದೊಂದು ಕುಪ್ಪಿ ಸಾರಾಯಿಯನ್ನು ಜಾಸ್ತಿ ಕೊಡುವದಲ್ಲದೆ, ಆ ಹಬ್ಬಗಳನ್ನು ಆಚರಿಸುವರಿಗೆ ಮಾತ್ರ, ಆಯಾ ಹಬ್ಬಗಳ ಆಚರಣೆಗಳ ಪ್ರಾರಂಭದಲ್ಲೇ ಕೊಡುವಂತೆ ಸರಕಾರದ ಎಲ್ಲಾ ಡಿಪ್ಪೋಗಳವರಿಗೆ ತಿಳಿಸಲಾಗಿಯೇ ಇದ್ದರೆ ಒಳ್ಳೆಯದು. ಮುಂದೆ ಜಾಗ್ರತೆ ತೆಗೆದುಕೊಂಡಲ್ಲಿ ಈ ವರ್ಷ ನಡೆದ ರೀತಿ ಪ್ರಸಂಗಗಳು ಎಲ್ಲರಿಗೂ ಒಂದೇ ರೀತಿ ಸಾರಾಯಿ ಸಿಕ್ಕುವಂತೆ ಆಗಬಹುದು. ಹಿತೈಷಿ

ನೋಟೀಸು.

ಇದರಿಂದ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ:—

ವೀರರಾಜಪೇಟೆ ಕೆದಮುಳ್ಳೂರು ಗ್ರಾಮದ ಬ್ರಾಹ್ಮಣ ಕೆ. ಎಸ್. ಕೃಷ್ಣಯ್ಯನೆಂಬವರು ತನ್ನ ಬಾಪ್ತು 430 ಭಟ್ಟಿ ಭೂಮಿಯನ್ನೂ, ತನ್ನ ಅನುಭವ ಹಕ್ಕಿನ 41 ಚಿಲ್ರೆ ಎಕರೆ ಬಾಣೆಯನ್ನೂ ವಿಕ್ರಯಿಸುವುದಾಗಿ ಮಾಡಿದೆ.

ಸದ್ರಿ ಆಸ್ತಿಯು ಪಿತ್ರಾರ್ಜಿತದ್ದಾಗಿದ್ದು, ಸದ್ರಿ ಕೃಷ್ಣಯ್ಯನವರಿಗೆ ವಿಕ್ರಯಿಸುವ ಹಕ್ಕು ಇರುವುದಿಲ್ಲ. ಅಲ್ಲದೆ ವಿಕ್ರಯಿಸುವ ಏನೊಂದೂ ಆವಶ್ಯವೂ ಯಾ ಕಾರಣವೂ ಇರುವುದಿಲ್ಲ.

ಸದ್ರಿ ಆಸ್ತಿಗಳನ್ನು ಕೊಂಡುಕೊಳ್ಳುವವರಿಗೆ ಏನೊಂದೂ ಹಕ್ಕು ಆಸ್ತಿಗಳಲ್ಲಿ ಸಿಕ್ಕಲಾರದು.

ಸದ್ರಿ ಕೃಷ್ಣಯ್ಯನ ಮೈನರ್ ಮಗ ಜಯಪ್ರಕಾಶನಿಗಾಗಿ,
ಅಜ್ಜ ಕೆ. ಪಿ. ಸುಬ್ರಾಯ,
ಕೆದಮುಳ್ಳೂರು.

ಹಿರಿಯರ ಹೊಣೆಗಾರಿಕೆ.

ಲೇ:— ಶ್ರೀ ಕೆ ಆರ್ ನಾಗರಾಜ್, ವಿದ್ಯಾರ್ಥಿ, ಪೊನ್ನಂಪೇಟೆ

ಒಬ್ಬ ವಿದ್ಯಾರ್ಥಿಯ ಜೀವನವನ್ನು ಸಮರ್ಪಕವಾದ ಸ್ಥಿತಿಗೆ ತರಬೇಕಾದರೆ ಉಪಾಧ್ಯಾಯರ, ಅವರಿಗಿಂತಲೂ ತಂದೆ ತಾಯಿಗಳ ಹೊಣೆಗಾರಿಕೆ ತುಂಬ ಇದೆ. ಹಸುವ್ವ ಗೋವಳನಿಗೆ ಹೆವರಿ ವೈದ್ಯನು ದಲ್ಲಿ ಅವನಿಗೆ ತಕ್ಕಂತೆ ನಡೆದುಕೊಳ್ಳುವುದ, ಆದರೆ ಅವನು ಮನೆಗೆ ಬಂದ ನಂತರ ತನ್ನನ್ನು ಸಾಕಿ ಸಲಹುವ ಯಜಮಾನನಿಗೆ ಮಣಿಯುವನ್ನು ಇನ್ನಾರಿಗೂ ಮಣಿಯದು. ಹುಡುಗನು ಶಾಲೆಯಲ್ಲಿ ತನ್ನ ಉಪಾಧ್ಯಾಯರ ಹೆದರಿಕೆಗೆ ಅವರಿಗೆ ತಕ್ಕಂತೆ ನಡೆದುಕೊಳ್ಳುವನ, ಆದರೆ ಶಾಲೆಯ ಹೊರಗಡೆ ಆ ಹುಡುಗನು ತನ್ನ ತಂದೆಗೆ ಕೊಡುವಷ್ಟು ಮರ್ಯಾದೆ ಇನ್ನಾರಿಗೂ ಕೊಡನು. ಆದುದರಿಂದ ತಂದೆಯೇ ಒಬ್ಬ ಹುಡುಗನನ್ನು ಸರಿಗಿಸಲು ಸಮರ್ಥನಾದವನು.

ಮಕ್ಕಳನ್ನು ಹಡೆದ ಪ್ರತಿಯೊಬ್ಬ ತಂದೆಯ ಮುಖ್ಯ ಕರ್ತವ್ಯವೇನೆಂದರೆ ತನ್ನ ಮಗನಲ್ಲಿ ಸ್ವದೇಶಾಭಿಮಾನ, ಸ್ವಭಾಷಾಭಿಮಾನ ಮತ್ತು ಸ್ವಜನಾಭಿಮಾನವನ್ನು ಬಿತ್ತುವುದು. ಅಂತರಾಷ್ಟ್ರೀಯತೆಗಿಂತ ಪ್ರಾಮುಖ್ಯವಾದುದು ರಾಷ್ಟ್ರೀಯತೆಯು ಬೆಳೆಯದೆ ಅಂತರಾಷ್ಟ್ರೀಯತೆಯು ಬೆಳೆಯಲಾರದು. ತನ್ನ ದೇಶೋದ್ಧಾರವನ್ನೇ ಸಾಧಿಸದೆ ವಿಶ್ವೋದ್ಧಾರವನ್ನು ಹೊರಟರೆ 'ಜಗಲಿ ಹಾರದೆ ಗಗನ ಹಾರಿದಂತೆ' ಆಗುವುದು.

ಮನೆಯಲ್ಲಿ ಮಕ್ಕಳ ಎದುರಿಗೆ ತಂದೆ ತಾಯಿಗಳ ಅಥವಾ ಶಾಲೆಯ ತರಗತಿಯಲ್ಲಿ ವಿದ್ಯಾರ್ಥಿಗಳೆದುರಿಗೆ ಅಧ್ಯಾಪಕರೂ ದುರ್ವ್ಯಸನ ಮಾಡುವುದು ಅತೀ ದೂಷ್ಯ. ತಪ್ಪು 'ಗುರುವಿನಂತೆ ಶಿಷ್ಯ' ಎಂಬಂತೆ, ಬುದ್ಧಿವಾದವನ್ನು ಹೇಳುವ ಗುರು ಹಿರಿಯರು ತಪ್ಪನ್ನು ಮಾಡಿದರೆ, ವಿದ್ಯಾರ್ಥಿಗಳು ಅದನ್ನು ಅನುಸರಿಸುವುದು ಸಿದ್ಧವಾದ ವಿಷಯವಲ್ಲ. ತನ್ನ ತಂದೆ ತಂಬಾ ಅನುಭವವುಳ್ಳ ಮತ್ತು ತಿಳಿದಿರುವವನು. ಅವರೇ ದುರ್ವ್ಯಸನವನ್ನು ಮಾಡಬೇಕಾದರೆ, ನಾನೇಕೆ ಮಾಡಬಾರದು? ಎಂಬ ವಿಚಾರ ತರಂಗವು ಎಳೆ ಹುಡುಗನ ಎಳೆ ಮನಸ್ಸಿನಲ್ಲಿ ಹರಿವುದು. ಆದುದರಿಂದ ಗುರು ಹಿರಿಯರು 'ಹೇಳುವುದೆಲ್ಲಾ ಪುರಾಣ ಹಾಕುವುದು ಗೂಳಿ ಗಾಣ' ಎಂಬ ನಾಣ್ಣುಡಿಗೆಡೆಯಾಗದೆ, ತಮ್ಮ ನಡವಳಿಕೆಯನ್ನು ಮೊದಲು ಸುಧಾರಿಸಿ ಕೊಳ್ಳುವುದು ಅತ್ಯಗತ್ಯ.

ಹಿಂದೂ ಸಂಸ್ಕೃತಿಯ ಪೂರ್ಣ ಪರಿಚಯವನ್ನು ಭಾರತೀಯ ಬಾಲಕರಿಗೆ ಮಾಡಿಕೊಡುವುದು ಹಿರಿಯರ ಕರ್ತವ್ಯ. ಭಾರತೀಯ ಸ್ತ್ರೀಯರ ಮಹಿಮೆ ಎಂತಹದು, ಹಿಂದೂ ಧರ್ಮದ ವೈಶಿಷ್ಟ್ಯತೆ ಏನು ಎಂಬುದನ್ನು ಎಳೆ ಮೊದಲಾಗಿ ಬಾಲಕರಿಗೆ ತಿಳಿಸುವುದು ಅಗತ್ಯ. ಇಂಥ ವಿದ್ಯಾರ್ಥಿಗಳು 'ಪತ್ರೀದಾರಿ' ಕಾದಂಬರಿ ನೆ ದಲದ ಸಾಮಾನ್ಯ ವಿಷಯಗಳನ್ನು ಓದುವುದರಲ್ಲೇ ಹೆಚ್ಚಿನ ಗಮನ ಕೊಡುವರು. ಭಾರತೀಯ ಸಾಹಿತ್ಯೋದಧಿಯಲ್ಲಿ ಹುದುಗಿರುವ ರತ್ನಗಳಂತಿರುವ ಕಾಳಿದಾಸರನ್ನು, ರವೀಂದ್ರನಾಥ ಠಾಕೂರ್ ಮೊದಲಾದ ಜಗದ್ವಂದ್ಯ ಕವಿವರರ ಕಾವ್ಯಗಳನ್ನು ಓದುವಂತೆ, ತಂದೆ ತಾಯಿಗಳು ತಮ್ಮ ಮಕ್ಕಳಿಗೆ ಅವಕಾಶ ಒದಗಿಸಬೇಕು, ಓದಲಾರದವರಿಗೆ ಓದಿ ಹೇಳಿ ರುಚಿ ಹುಟ್ಟಿಸಬೇಕು. ಹೀಗೆ ಮಾಡಿದರೆ ಮಾತ್ರ ಭಾರತೀಯ ಬಾಲಕರಿಗೆ ಭಾರತದ ಕವಿತಾ ಪ್ರತಿಭೆಯ ಸಂಸ್ಕೃತಿಯ ಪರಿಚಯವಾಗುವುದು.

ವಿದ್ಯಾರ್ಥಿಗಳನ್ನು ಗಿಳಿಯಂತೆ ಪಂಜರದೊಳಗಿಟ್ಟು ಸಾಕುವುದು ಒಳಿತಲ್ಲ. ಅವರು ಹೊರ ಪ್ರಪಂಚದ ಜ್ಞಾನವನ್ನು ಹೆಚ್ಚಿಸಬೇಕು. ಆಟೋಟಗಳಲ್ಲಿಯೂ ಅವರು ಭಾಗಿಗಳಾಗುವಂತೆ ಮಾಡತಕ್ಕದ್ದು. ಆದರೆ ತಾಯಿ ತಂದೆಗಳು ತಮ್ಮ ಮಕ್ಕಳ ಸ್ನೇಹಿತರ ವಿಚಾರ ಬಹು ಜಾಗರೂಕರಾಗಿರಬೇಕು. ಹುಡುಗನ ಸ್ನೇಹಿತನ ಸಹಗಣಿಯೂ ಒಬ್ಬ ಸಂತನೂ ಆಗಿರುವಂತೆ ನೋಡತಕ್ಕದ್ದು. ಸ್ನೇಹಿತನೇ ಒಬ್ಬ ಹುಡುಗನ ಜೀವನದಲ್ಲಿ ಹೆಚ್ಚಿನ ಪರಿಣಾಮವನ್ನು ಬೀರುವನು.

ಯುವಕ ಅಧ್ಯಾಪಕರಲ್ಲಿ ಇದೊಂದು ಬನ್ನಹ ಯುವಕರು ಯುವಕರೊಂದಿಗೆ ಬೆರೆತುಕೊಳ್ಳಲು ಇಚ್ಛಿಸುವುದು ಸಹಜವಷ್ಟೆ. ಯುವಕ ಅಧ್ಯಾಪಕರು ವಿದ್ಯಾರ್ಥಿಗಳೊಂದಿಗೆ ಆಟೋಟಗಳಲ್ಲಿ ಭಾಗಿಗಳಾಗತಕ್ಕದ್ದು. ಆದರೆ ವಿದ್ಯಾರ್ಥಿಗಳೊಂದಿಗೆ ತುಂಬ ಸ್ನೇಹದಿಂದ ವರ್ತಿಸಬಾರದು. ಏಕೆಂದರೆ ಅಧ್ಯಾಪಕರು ವಿದ್ಯಾರ್ಥಿಗಳಲ್ಲಿ ಬಹು ಸಲಿಗೆಯಿಂದಿದ್ದರೆ, ವಿದ್ಯಾರ್ಥಿಗಳು ಅವರನ್ನು ಸ್ನೇಹಿತರೆಂದೇ ಭಾವಿಸುವರು. ಅಲ್ಲದೆ, ವಿದ್ಯಾರ್ಥಿಗಳು ಅಧ್ಯಾಪಕರಿಗೆ ಸಲ್ಲಿಸಬೇಕಾದ ಗೌರವ ಸಲ್ಲಿಸುವುದಿಲ್ಲ. ವಿದ್ಯಾರ್ಥಿಗಳು ತಪ್ಪು ಮಾಡಿದಲ್ಲಿ, ಅಧ್ಯಾಪಕರಿಗೆ ಮಿತ್ರರೆಂಬ ಭಾವನೆಯಿಂದ ಅವರನ್ನು ಖಂಡಿಸಲೂ ಸಂಕೋಚವಾಗುವುದು. ಇದು ಮುಂದೆ ಅನರ್ಥಕ್ಕೆ ಕಾರಣವಾಗುವುದು.

ಹಿರಿಯರು ತಮ್ಮ ಮಕ್ಕಳನ್ನು ಒಂದು ಶಿಸ್ತಿನ ಜೀವನಕ್ಕೊಳಪಡಿಸುವುದು ಅಗತ್ಯ. ಶಿಸ್ತಿಲ್ಲದ ಜನ ಸ್ವತಂತ್ರನನ್ನು ಮಾನ್ಯತೆ ಕಾಣಲಿಕ್ಕಿಲ್ಲ. ಶಿಸ್ತೇ ಒಂದು ಜನಾಂಗದ ಏಳಿಗೆಗೂ ಕಾರಣ.

ಜನಾಂಗಗಳಿಗೆ ರಾಜೇಂದ್ರ ಪ್ರಸಾದರ ಪ್ರಾರ್ಥನೆ.

'ಪ್ರಪಂಚದಲ್ಲಿ ಪ್ರತಿಯೊಬ್ಬ ಗಂಡಸೂ ಹೆಂಗಸೂ ಶಾಂತಿ ಸುಖಗಳನ್ನು ಹೊಂದಲಿ, ಶಾಂತಿಯಿಂದ ಇರಲಿ. ಎಲ್ಲಾ ಜನಾಂಗಗಳೂ ಶಾಂತಿಯಿಂದ ಬಾಳಲಿ. ಶಾಂತಿಯಿಂದಲೇ ಸರ್ವ ಶ್ರೇಯಸ್ಸು. ಸರ್ವ ಅಭಿವೃದ್ಧಿ' ಎಂಬುದಾಗಿ ಮಹಾತ್ಮಾ ಗಾಂಧಿಯವರಿದ್ದ ಪವಿತ್ರ ಕುಟೀರದಿಂದ ಅವರ ಪ್ರಿಯ ಅನುಯಾಯಿಗಳಲ್ಲೊಬ್ಬರಾದ ಡಾ॥ ರಾಜೇಂದ್ರ ಪ್ರಸಾದರು ಈ ರಾತ್ರಿ ತಮ್ಮ ಅನೋಪಚಾರಿಕವಾದ ಬ್ರಾಡ್‌ಕ್ಯಾಸ್ಟ್ ಭಾಷಣವನ್ನು ಮಾಡಿದರು.

ಈ ಭಾಷಣವನ್ನು ರಾಜೇಂದ್ರ ಪ್ರಸಾದರು ಮಹತ್ತರವಾದ ಸನ್ನಿವೇಶಕ್ಕೆ ಸರಿಯಾಗಿ ಮಾಡಿದರು. ನಾಳೆ ಭಾನುವಾರ ದಯೇಸುಕ್ರಿಸ್ತ ಜನ್ಮದಿನ. ಯೇಸುಕ್ರಿಸ್ತನು ಶಾಂತಿಯ ದೇವಪುತ್ರನಾಗಿ ಜನ್ಮವೆತ್ತಿದನು. ಆ ಮಹಾಶಯನ ಜ್ಞಾಪಕಾರ್ಥವಾಗಿಯೂ ಸೇವಾಗ್ರಾಮದಲ್ಲಿ ನಡೆಯುತ್ತಿರುವ ಶಾಂತಿ ಪ್ರೇಮಿಗಳ ಸಮ್ಮೇಳನದ ಸಿರಿಕೆಯಾಗಿಯೂ ರಾಜೇಂದ್ರಬಾಬುಗಳು ಈ ಭಾಷಣವನ್ನು ಮಾಡಿದರು.

ಯುದ್ಧ ಮತ್ತು ಹಿಂಸಾ ಮಾರ್ಗದಿಂದ ಜನರಿಗೆ ಮತ್ತು ಪ್ರಪಂಚಕ್ಕೆ ಸರ್ವನಾಶವುಂಟಾಗುತ್ತೆಂದೂ ಮಹಾ ಕಷ್ಟವಾಗುತ್ತೆಂದೂ ಮಹಾತ್ಮ ಗಾಂಧಿಯವರ ಶಾಂತಿ ಮತ್ತು ಅಹಿಂಸೆ ತತ್ವಗಳಿಂದ ಪ್ರಪಂಚಕ್ಕೆ ಸುಖವುಂಟಾಗುತ್ತೆಂದೂ ರಾಜೇಂದ್ರ ಬಾಬುಗಳು ಒತ್ತಿ ಹೇಳಿದರು.

'ಪ್ರಬಲರು ಅಬಲರ ಸುಲಿಗೆ ಮಾಡುವುದನ್ನು ನಿಲ್ಲಿಸಬೇಕು. ಜನಜನಾಂಗಗಳೂ ತಮ್ಮ ಶಕ್ತಿ ಸಾಹಸ ಮತ್ತು ಸಂಪತ್ತು ಸಾಧನಗಳನ್ನು ಎಲ್ಲರ ಹಿತಸಾಧನೆ ಮತ್ತು ಶಾಂತಿ ಸ್ಥಾಪನೆಗಾಗಿ ವಿನಿಯೋಗಿಸಬೇಕು. ಕ್ರಿಸ್ತನ ಶಾಂತಿ ಉಪದೇಶಗಳಿಂದಲೂ, ಮಹಾತ್ಮ ಗಾಂಧಿಯವರ ಅಹಿಂಸೆ, ಶಾಂತಿ ಮತ್ತು ಸತ್ಯ ತತ್ವಗಳ ಅನುಸರಣೆಯಿಂದಲೂ ಪ್ರಪಂಚಕ್ಕೆ ಸುಖವುಂಟಾಗುತ್ತದೆ. ಸೇವಾಗ್ರಾಮದ ಈ ಪವಿತ್ರ ಕುಟೀರದಲ್ಲಿದ್ದ ಮಹಾತ್ಮ ಗಾಂಧಿಯವರ ಉಪದೇಶಗಳನ್ನು ಎಲ್ಲರೂ ಅನುಸರಿಸಲಿ' ಎಂದು ರಾಜೇಂದ್ರ ಪ್ರಸಾದರು ನುಡಿದರು.

ಸೇವಾಗ್ರಾಮದ ಈ ಶಾಂತಿ ಸಮ್ಮೇಳನಕ್ಕೆ ಪ್ರಪಂಚದ ನಾನಾ ಭಾಗಗಳಿಂದ ಸುಮಾರು ಒಂದು ನೂರು ಮಂದಿ ಶಾಂತಿ ಪ್ರೇಮಿಗಳು ಮಹಾಶಯರು ಆಗಮಿಸಿದ್ದಾರೆ. ಇಲ್ಲಿ ದೇಶಗಳಿಂದ ಈ ಮಹಾಶಯರು ಆಗಮಿಸಿದ್ದಾರೆ. ಎಲ್ಲಾ ಜನಾಂಗಗಳೂ ಶಾಂತಿಯಿಂದಿರಬೇಕೆಂಬ ಸಾಧಿಸುವುದೇ ಈ ಸಮ್ಮೇಳನದ ಉದ್ದೇಶವಾಗಿದೆ.

ನಿರ್ಗತಿಕ ಹಸುಳೆಗಳು.

ಪೇಟೆ ಪಟ್ಟಣಗಳಲ್ಲಿ ಹಳ್ಳಿನಾಡಿನಲ್ಲಿ ಚಿಕ್ಕ ಚಿಕ್ಕ ಮಕ್ಕಳು ಬೀದಿಬೀದಿಗಳಲ್ಲಿ, ಮಾರ್ಗದ ಧೂಳಿನಲ್ಲಿ ಅಡ್ಡಾಡುವ ದೃಶ್ಯವನ್ನು ನಾವು ಕಾಣುತ್ತೇವೆ. ಕಸದ ಬುಟ್ಟಿಗಳಿಂದ ಏನನ್ನಾದರೂ ಹೆಕ್ಕಿ, ಸಿಕ್ಕಿದವರಿಂದ ಬೇಡಿ ಬಂದ ಹಣದಿಂದ ಹೊಟ್ಟೆ ಹೊರೆಯುವ ಜೀವಿಸುವ ಮಕ್ಕಳು ನಮ್ಮ ದೇಶದಲ್ಲಿ ಹೊಸತಲ್ಲ. ಇಂಥ ಮಕ್ಕಳು ಉತ್ತಮ ಆಹಾರವನ್ನು ಸೇವಿಸಿದುದಿಲ್ಲ. ಒಳ್ಳೆ ಉಡುಪನ್ನು ಧರಿಸಿದುದಿಲ್ಲ. ಸರಿಯಾಗಿ ಸ್ನಾನವನ್ನೂ ಮಾಡಿಲ್ಲ. ಮುಂದೆ ಅವಿದ್ಯಾವಂತರಾಗಿ ಬಾಳುವುದೇ ಈ ಮಕ್ಕಳ ಹಣೆಯಲ್ಲಿ ಬರೆದಿದೆ. ಆದರೆ ನಮ್ಮ ಪರಿಸ್ಥಿತಿ ವಿಚಾರದಲ್ಲಿ ಈ ಮಕ್ಕಳಿಗೆ ಸರಿಯಾದ ಯಾವ ಸಹಾಯವೂ ಸಿಗದೆ ಹೀಗೆಯೇ ಬಾಳುತ್ತಿವೆ.

ಇಂಥ ಮಕ್ಕಳನ್ನು ಕಂಡು ಕೂಡಲೇ ಯಾರಿಗೂ ಕನಿಕರ ಹುಟ್ಟದೆ ಇರದು. ಯಾವ ಸ್ತ್ರೀಯಾದವಳೂ ವೇದನೆಗೊಳಗಾಗದೆ ಇರಳು. ಆದರೆ ನಮ್ಮ ದೇಶದಲ್ಲಿ ಇದೊಂದು ಅಪೂರ್ವವಾದ ನೋಟವಲ್ಲ. ಎಲ್ಲೆಡೆಗಳಲ್ಲೂ ಇಂಥಾ ದೃಶ್ಯಗಳನ್ನು ಕಂಡು ಹೃದಯ ಕಲ್ಲಾಗಿದೆ. ನಮ್ಮ ಜೀವನದ ದಿನಚರಿಯಲ್ಲಿ ಅವೆಲ್ಲ ಸ್ವಾಭಾವಿಕವೆಂದು ನಮ್ಮ ಮನೋಭಾವನೆ. ನಿತ್ಯವೂ ಇಂಥ ಮಾರ್ಗದ ಬದಿಗಳಲ್ಲಿ ಕೊಳೆಯುವ ಆ ಮಕ್ಕಳ ದೀನಾವಸ್ಥೆ ನಮ್ಮ ಕಣ್ಣಿಗೆ ಗೋಚರವಾಗುವುದಿಲ್ಲ. ಹಾಗೆ ಅಂಥಾ ದುರಂತವೊಂದು ಪಕ್ಕನೆ ಕಣ್ಣಿಗೆ ಬಿದ್ದರೂ ನಮ್ಮ ದೃಷ್ಟಿ ಬೇರೆ ಕಡೆಗೆ ಚಲಿಸುತ್ತದೆ. ನಾವು ಹೊಟೇಲೊಂದಕ್ಕೆ ಹೋಗುವಾಗ ಬಾಗಿಲ ಬಳಿ ಮಕ್ಕಳು ಕೈಯೆತ್ತಿ 'ಒಂದು ಕಾಸು ಕೊಡಿ' ಎಂದು ಬೇಡುತ್ತಿರುವುದನ್ನು ನಾವು ಗಮನಿಸಿಲ್ಲ. ವಸ್ತ್ರದಂಗಡಿಗೆ ಹೋಗಿ ನೂರಾರು ರೂಪಾಯಿಗಳನ್ನು ವೆಚ್ಚಮಾಡುವವರಿಗೆ ಬೀದಿ ಮಕ್ಕಳನ್ನು ಹಳೆಯ ಬಟ್ಟೆಗಳನ್ನು ನೀಡಲು ಕೈ ಬರುವುದಿಲ್ಲ. ಆದರೆ ಈ ಮಕ್ಕಳು ಪ್ರಕೃತಿಯ ಸಹಾಯದಿಂದ ಬೆಳೆಯುತ್ತಿವೆ.

ಈ ಪರಿಸ್ಥಿತಿ ಕೇವಲ ಭಾರತದಲ್ಲಿ ಮಾತ್ರವಲ್ಲ. ಸಕಲ ಜಗತ್ತಿನಲ್ಲೇ ಇದೆ. ಲಂಡನ ನಗರದಲ್ಲಿ ಅನೇಕ ಶಹರಗಳಲ್ಲಿ ಇಂಥಾ ಮಕ್ಕಳು ತಮ್ಮ ಹೊಟ್ಟೆ ಹೊರೆಯುವ ಒಗ್ಗೆ ಪ್ರಯತ್ನಿಸುವುದು ಹೊಸತಲ್ಲ. ಆದರೆ ನಮ್ಮ ದೇಶದಲ್ಲಿ ಬಡವನ ಮಕ್ಕಳ ಸಂಖ್ಯೆ ಅಪಾರ. ಬೇರೆ ದೇಶಗಳಲ್ಲಿ ಈ ಮಕ್ಕಳ ಸಂರಕ್ಷಣೆಗೆ ಸಂಸ್ಥೆಗಳು ಈ ಒಗ್ಗಿ ಮಾಡಿಯಲ್ಲಿವೆ. ಇಂಥಾ ಸಂಸ್ಥೆಗಳು ಈ ಮಕ್ಕಳ ರಕ್ಷಣೆ ಒಗ್ಗಿ ವಿಶೇಷ ಶ್ರಮವಹಿಸುತ್ತಿವೆ. ನರಕದ ಅನೇಕ ಶಹರಗಳನ್ನು ಬೊರ ಬೇಕಿಲ್ಲ. ದರಿದ್ರ ಯಾವುದನ್ನಾದರೂ ಸಾಧಿಸಬೇಕೆಂದು ಸರ್ಕಾರ ಜನಸಾಮಾನ್ಯರು ಸಹಕರಿಸಬೇಕು. ಜನತೆಯ ಬೆಂಬಲ ದೊರೆಯದೇ ಸರ್ಕಾರವೂ ಏನೂ ಮಾಡಲಾರದು. ಯಾವ ಯೋಗದಲ್ಲೂ ಸಂಶಯವಿಲ್ಲ.

ನಮ್ಮಲ್ಲಿ ಅನೇಕ ಸಮಾಜ ಸುಧಾರಕ ಸಂಘಗಳು, ಅನೇಕ ಸೇವಾ ಸಂಸ್ಥೆಗಳು ಇವೆ. ಆದರೆ ಈ ಸಂಘ ಸಂಸ್ಥೆಗಳ ಸೇವೆ ಈ ಪ್ರಬಲ ಸಮಸ್ಯೆಯ ಕಡೆ ಗಮನ ಹರಿಯದು. ಇದು ಕಾರ್ಯ ವಿಚಾರ. ನಮ್ಮ ದೇಶದ ನಗರಗಳಲ್ಲೇ ಪ್ರಾರಂಭಗೊಳ್ಳಬೇಕಾಗಿದೆ. ನಮ್ಮ ದೇಶ ನಾಗರಿಕರ ಕರ್ತವ್ಯ.

(ಜನ್ಮ ಭೂಮಿ)

ದಿ ಟ್ರಾಪಿಕಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:- ಲಾಲ ಶಂಕರ್ ಲಾಲ್.

ಮುಖ್ಯ ಕಚೇರಿ:- ಹೊಸ ಡೆಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್

ಹಕೀಮ್ ಅಜಮಲಖಾನ್. ಡಾ|| ಎಂ. ಎ. ಅನ್ಸಾರಿ.

Transacts:—Life, Fire, Motor and Marine.

ನಮ್ಮ ಹೊಸ ವಿಸ್ತಾರದ ಯೋಜನೆಯಲ್ಲಿ ಆಕರ್ಷಕ ಕಮಿಷನ್ ಮೇಲೆ ಏಜನ್ಸಿಗೆ ದಯವಿಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಆರ್ಗನೈಜರ್	ಆರ್ಗನೈಜರ್
ದಕ್ಷಿಣ ಕೊಡಗು, ಪೊನ್ನಂಪೇಟೆ.	ಉತ್ತರ ಕೊಡಗು, ಮಡಿಕೇರಿ.
ಅಥವಾ	ಅಥವಾ
ಯು. ಯು. ಅಚ್ಚಣ್ಣ,	ಎಂ. ಎ. ಬೆಳ್ಯಪ್ಪ,
ಏಜೆನ್ಸಿ ಸುಪರಿಂಟೆಂಡೆಂಟ್,	ಬ್ರಾಂಚ್ ಸೆಕ್ರೆಟರಿ,
ಮಡಿಕೇರಿ, ಕೊಡಗು.	ಚಿಂತಾಮಣಿಪೇಟೆ, ಬೆಂಗಳೂರು.

ಮತ್ತೊಂದು ಉಜ್ವಲ ವರ್ಷ.

1948ನೇ ವರ್ಷದ ವಾರ್ಷಿಕ ವರದಿಯ ಪ್ರಾಮುಖ್ಯಾಂಶಗಳು.

ಹೊಸ ಉದ್ಯಮ ರೂ.	6,13,00,000	ಮೀರಿದೆ
ಚಾಲ್ತಿಯಲ್ಲಿರುವ ಒಟ್ಟು ಉದ್ಯಮ ರೂ.	27,73,00,000	,,
ಒಟ್ಟು ನಿಧಿ ರೂ.	8,30,00,000	,,
ಸ್ಥಾಪಿತವಾದಂದಿನಿಂದ ಪಾವತಿಯಾದ ಕ್ಲೈಮುಗಳು	10,96,00,000	,,

1,28,000 ಕ್ಕೆ ಮೀರಿದ ತೃಪ್ತಿ ಪಡೆದ ಪಾಲಿಸಿದಾರರು

ಶಕ್ತಿ. ಸೇವೆ. ಭದ್ರತೆ.

ಎಂಪೈರ್ ಆಫ್ ಇಂಡಿಯಾ

ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

ರೋಶನ್‌ಲಾಲ್, ಜನರಲ್ ಮೇನೇಜರ್.

ಪ್ರಧಾನ ಕಛೇರಿ	ಶಾಖಾ ಕಛೇರಿ
ಎಂಪೈರ್ ಹೌಸ್, ಫಾರ್ಟ,	ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್,
ರೋಡ್, ಪೋರ್ಟ್, ಬೊಂಬಾಯಿ.	ಕೆಂಪೇಗೌಡರಸ್ತೆ, ಬೆಂಗಳೂರು.

ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್,

ಫ್ರೇಜರ್‌ಪೇಟೆ.

ಬೇಕಾಗಿದ್ದಾರೆ.

ಕೊಡಗಿನ ಪ್ರತಿ ಗ್ರಾಮ ಮತ್ತು ಪಟ್ಟಣಗಳಲ್ಲಿ ಬಿದ್ದು ಮಣ್ಣುಪಾಲಾಗಿ ಹೋಗುತ್ತಿರುವ ಮೂಳೆಗಳನ್ನು ಶೇಖರಿಸಿಕೊಡಲು ಪ್ರತಿ ಹಳ್ಳಿ ಮತ್ತು ಪಟ್ಟಣಗಳಲ್ಲಿ ಏಜೆಂಟರುಗಳು ಬೇಕಾಗಿದ್ದಾರೆ. ಏಜೆಂಟರುಗಳಿಗೆ ಧಾರಾಳವಾದ ಕಮಿಷನ್ ಕೊಡಲಾಗುತ್ತದೆ.

ನೇಮಕವಾದ ಏಜೆಂಟರುಗಳು ಕಂಪನಿಯ ಗೊತ್ತಾದ ಸ್ಥಳಕ್ಕೆ ಮೂಳೆಗಳನ್ನು ಸಾಗಿಸಿ ಕೊಟ್ಟಲ್ಲಿ ಮಣ ಒಂದರ ರೂ 0-12-0 ಯಂತೆ ಕೊಡಲಾಗುವುದು.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಫ್ರೇಜರ್‌ಪೇಟೆ, ತಾ 22-9-49 — ಕೆ. ಕೆ. ತಿಮ್ಮಯ್ಯ, ಮೇನೇಜಿಂಗ್ ಡೈರೆಕ್ಟರ್.

(೭ನೇ ಪುಟದಿಂದ ಸಾಗಿದ್ದು)

ಪಾರತಂತ್ರ್ಯದಿಂದ ಈ ಪ್ರಜಾ ಪ್ರಭುತ್ವದ ಘಟನೆಗಳಲ್ಲಿ ರೂಪಿಸಿದ ಚೌಕಟ್ಟನ್ನು ನಿವಿರಿಸಿರುವರು. ಆ ಚೌಕಟ್ಟಿನಲ್ಲಿ ನಾವು ಪ್ರತಿಯೊಬ್ಬರೂ ಸಮಾನರಾಗಿ ಸುಖ ಶಾಂತಿಯಿಂದ ಬಾಳಬೇಕಾಗಿದೆ. ನಮ್ಮ ಸಂವಿಧಾನಗಳಿಗೆ ನಾವು ಜೋಕೆ. ನಮ್ಮ ಸಹೋದರ ಸಹೋದರಿಯರ ಸಹಕಾರಕ್ಕೆ ಕಾರಣರು. ಈ ಸಂವಿಧಾನದಲ್ಲಿ ಕಷ್ಟ ಯಾವುದೇ ಇಲ್ಲದ ನಿ.ಕಯಾ ತನ್ನ ತನ್ನ ಅನುಭವಿಸುವ ಕಡೆಗೆ ಗಮನಗೊಡದೆ ನಿರ್ವಹಿಸಲ್ಲ ನಮ್ಮ ಅದನ್ನು ಲಕ್ಷ್ಯವಿರಿಸಿ ಪ್ರಜಾಪ್ರಭುತ್ವದ ಪ್ರತಿ [illegible] ಕರ್ತವ್ಯವನ್ನು ಮರೆಯಬಾರದು. ನಮ್ಮವರ ಹಿತವನ್ನು ಲಕ್ಷ್ಯವಿಟ್ಟು ಅವರ ಧ್ವನಿ ನಮ್ಮ ಕಲೆಯ ಮೇಲೆ ಬೀಳುವ ಇತರರ ಸುಖದಲ್ಲಿ ಬಾಳುವಂತೆ ಮಾಡಿದ ಪಾಲಕರ ನಮ್ಮ ಮೇಲಿಲ್ಲದೆ ಆಗುವುದು.

ಸಮಾಜದ ಸೇವಕರು, ಸಾರ್ವಜನಿಕರು, ಸಾರ್ವಜನಿಕ ಹಿತಪ್ರೇಮಿಗಳು ಹಾಗೂ ಸರ್ವರೂ ಈ ವಿಷಯದಲ್ಲಿ ಮುಂದಾಗಬೇಕು. ಸ್ವಾತಂತ್ರ್ಯದೊಡನೆ ದೇಶದಲ್ಲಿ ಸುಖವು ನೆಲಗೊಳ್ಳುವಂತೆ ಎಲ್ಲರೂ ಮುಂದೊತ್ತಬೇಕು. ಹೀಗೆ ಮಾಡಿದರೆ ಮಾತ್ರ ಭಾರತದ ರಾಷ್ಟ್ರಪಿತ ಮಹಾತ್ಮಗಾಂಧೀಜಿಯವರ ಆತ್ಮಕ್ಕೆ ನಾವು [illegible] ಶಾಂತಿಕೊಟ್ಟಂತಾಯಿತು.

ಕೊಡಗು ಪ್ರಾಂತೀಯ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245 ರ ವರೆಗೆ.
2. 32 ರಿವಾಲ್ವರುಗಳು (Revolvers) ,, 162 ,, 274 ,,
3. 12ನೇ ನಂಬರಿನ ಜೋಡು ನಳಿಗೆಯ ಕೋವಿ (Webley & Scott) ಕ್ರಯ ರೂ. 1492/-
4. 12ನೇ ನಂಬರಿನ ಜೋಡು ನಳಿಗೆಯ ಕೋವಿ (Spanish make) ಕ್ರಯ ರೂ. 627-5-0
5. 6 ಗಂಡ (Hard Iron) ಗುಂಡುಗಳ ಸೀಸದ ಕ್ರಯ ರೂ. 4-10-0
6. 12, 16, 20ನೇ ನಂಬರು ಕೋವಿಗಳ ತೋಟೆಗಳೂ ಪಿಸ್ತೂಲು ಮತ್ತು ರಿವಾಲ್ವರುಗಳ ತೋಟೆಗಳೂ ಸಹ ದೊರೆಯುತ್ತವೆ.

(ಅವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ ಜಿಲ್ಲಾ ಮೆಜಿಸ್ಟ್ರೇಟರಿಂದ [illegible] "Special permit" [illegible])

ಎಂ. ಎಸ್. ಸೋಮಯ್ಯ,

52–19 ಗೌರವ ಕಾರ್ಯದರ್ಶಿ

CRESCENT

FOR PROTECTION AND SERVICE.

It is best to represent and insure with

The CRESCENT Insurance Co., Ltd,

H. O: BOMBAY.] *[Established 1919.*

For particulars write to

Sri B. A. Poovaiah *Organiser* Pollibetta, Coorg. or The Branch Manager *22 B Mahatma Gandhi Road, Bangalore 1*

ಸುರಕ್ಷಿತವಾದ ಜೀವವಿಮೆ ಪಡೆಯಲು

ಕ್ರೆಸೆಂಟ್

ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

(ಕೊಡಗು ಸಹಕಾರಿ ಸಂಘಗಳ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ) (1913ರಲ್ಲಿ ಸ್ಥಾಪಿಸಲಾಗಿದೆ.)

ಅಧಿಕೃತ ಷೇರು ಭಂಡವಾಳ	ರೂ.	10,00,000.
ವಸೂಲಾದ ಷೇರು ಮೊಬಲಗು	ರೂ.	1,65,000.
ಕ್ಷೇಮನಿಧಿ	,, ರೂ.	50,000.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟ್‌ಗಳ ಡಿಸ್ಕೌಂಟ್ ಮಾಡಲ್ಪಡುವುದು. ಟ್ರಿನಿಟಿ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪನಿಗಳ ಪ್ರೀಮಿಯಂ ಹಣವನ್ನು ಕೊಡಲು ಕಳುಹಿಸಲಾಗುವುದು. ಹೆಚ್ಚಿನ ವಿವರಗಳನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ. — ಸಿ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಖಜಾಂಚಿ.

ಮಹಾತ್ಮರ ಕನಸು ನೆನಸಾಗುವಂತೆ ಗುಡ್ಡ ನೆಲಗೊಳಿಸಬೇಕಾಗುವುದು. ರು. ನಿಜವಾದ ರಾಮರಾಜ್ಯವು ಭಾರತ — 'ಸ. ಭ.'

Edited, Printed and Published by I. I. Belliappa at 'Kodagu Press, Mercara, for 'Kodagu Ltd.'